START

KARNATAKA
STATE
ARCHIVES

START

KARNATAKA
STATE
ARCHIVES

ARS 3 APP 2013

ಬಸವ ಸಮಿತಿಯ ಪತ್ರದ ಸಂಖ್ಯೆ: ಬಸ/ಗ್ರಂಥಾಲಯ/2012-13 ದಿನಾಂಕ 18-2-2013

ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ಮರು

ದಿನಾಂಕ 2.1.1911 ರಿಂದ 26.12.1932 ರ ವರೆಗೆ ಒಟ್ಟು 17 ಸಂಪುಟಗಳು.

(Retakes of Mysore Star weekly News paper)

35/9

ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ಪಟ್ಟಿ

ಕ್ರಮ ಸಂ.	ವರ್ಷ	ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ದಿನಾಂಕ (ದಿಂದ ವರೆಗೆ)	ಪರಿಗ್ರಹಣ ಸಂಖ್ಯೆ
1	1911	2.1.1911 – 25.12.1911	N11.24
2	1912	1.1.1912 – 23.12.1912	N12.25
3	1914	5.1.1914 – 27.12.1914	N14.27
4	1915	3.1.1915 – 15.08.1915	N15.28
5	1916	2.1.1916 – 31.12.1916	N16.29
6	1917	7.1.1917 – 30.12.1917	N17.30
7	1918	6.1.1918 – 29.12.1918	N18.31
8	1919	9.2.1919 – 28.12.1919	N19.32
9	1920	4.1.1920 – 26.12.1920	N20.33
10	1921	9.1.1921 – 25.12.1921	N21.34
11	1922	1.1.1922 – 31.12.1922	N22.35
12	1923	14.1.1923 – 23.12.1923	N23.36
13	1923	21.1.1923 – 30.12.1923	N23.36
14	1924	6.1.1924 – 28.12.1924	N24.37
15	1925	4.1.1925 – 26.12.1925	N25.38
16	1926	2.1.1926 – 25.12.1926	N26.39
17	1929	5.1.1929 – 28.12.1929	N29.42
18	1932	4.1.1931 – 26.12.1932	N32.45

7/3/13

ಗ್ರಂಥಪಾಲಕರು
ಬಸವ ಸಮಿತಿ ಗ್ರಂಥಾಲಯ
ಬಸವ ಭವನ
ಬೆಂಗಳೂರು-560 001

Administrative Officer
Basava Samithi,
Basaveshwara Road,
Bangalore - 560 001.

ಪ್ರ-ಪ್ರ
ಸ್ವೀಕೃತಿ ಪಡೆ-
ಸಂಬಂಧಪಟ್ಟ
ಕಡತದಲ್ಲಿ
ಇರಿಸಿ.

7/3/12

ಡಾ|| ಶಿ. ಶಿವಮೂರ್ತಿಶಾಸ್ತ್ರಿ ಪುಸ್ತಕ ಭಂಡಾರ
ಬಸವ ಸಮಿತಿ
ಬೆಂಗಳೂರು.

PADMASHREE DR. SHIVAMURTHY SHASTRY
LIBRARY
Basava Samithi, Basava Bhavana,
Sri Basaveshwara Road,
Bangalore-560 001

BANGALORE.

REGISTERED NO. M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜ್ಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪]   ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಜನವರಿ ತಾರೀಖು ೨ ನೇ ಸೋಮವಾರ.   [ಸಂಚಿಕೆ ೧

೧೯೧೧ ಪಾಕೆಟ್‌ಡೈರಿ. ೧೯೧೧


ಎ.


ಬಿ.


ಸಿ.


ಡಿ.

ಜಿ ನಂ॥ ೧.


ಜಿ ನಂ॥ ೨.

ಈ ಡೈರಿಗಳನ್ನು ಬಹು ಸುಂದರವಾಗಿರುವಂತೆ ನುಣುಪಾದ ದಪ್ಪಕಾಗದದಲ್ಲಿ ಮುದ್ರಿಸಿ, ಪ್ರತಿಪುಟಕ್ಕೂ ರೂಲುಹಾಕಿ ಬಹಳ ಸೊಗಸಾದ ಸೀಮೆ (ಕ್ಯಾಲಿಕೊ) ಬಟ್ಟೆಯಿಂದ ವಿಲಾಯಿತಿ ಯಂತ್ರಗಳಲ್ಲಿ ಬೈಂಡುಮಾಡಿ ಮೇಲು ಗಡೆಯಲ್ಲಿ ಪ್ರಕಾಶವಾಗಿ ಹೊಳೆಯುವ ಹಾಗೆ ಭಂಗಾರದ ರೇಖನಂತಿರುವ ಅಕ್ಷರಗಳನ್ನು ಬಿಡಿಸಿ ಗಿಲೀಟುಮಾಡಿದೆ.

ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟುದಾರರು, ಸರ್ಕಾರಿ ಉದ್ಯೋಗಸ್ಥರು, ಹುದ್ದೇದಾರರು, ಜಮೀನ್‌ದಾರರು, ಸ್ಕೂಲ್ ಕಾಲೇಜು ವಿದ್ಯಾರ್ಥಿಗಳು, ಪೋಲೀಸು ಇಲಾಖೆಯವರು ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ.

ಎ. ನಂ॥ ಪೆನ್ಸಿಲ್ ಇಷತಕ್ಕ ಚಿಕ್ಕ ಡೈರಿ ೧ ಕ್ಕೆ ೩ ಆಣೆ. } { ಸಿ. ನಂ॥ ಪೆನ್ಸಿಲ್ ಇಷತಕ್ಕ ದೊಡ್ಡ ಡೈರಿ ೧ ಕ್ಕೆ ೬ ಆಣೆ
ಬಿ. „ ಪೆನ್ಸಿಲ್ ಇಟ್ಟಿರುವ ಚಿಕ್ಕಫ್ಲಾಪ್ ಡೈರಿ೧ಕ್ಕೆ ೫ ಆ. } { ಡಿ. „ ಪೆನ್ಸಿಲ್‌ಇಟ್ಟಿರುವ ದೊಡ್ಡಫ್ಲಾಪ್ ಡೈರಿ೧ಕ್ಕೆ ೮ ಆ

ಸರ್ಕಾರದಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಹೊಂದಿರುವ

"ಜನಿವಾ" ಡೈರಿ.

ಈ ಡೈರಿಯು ಮೇಲ್ಕಂಡ ಡೈರಿಗಳಿಗಿಂತ ಹೆಚ್ಚಾದ ಸಮಾಚಾರಗಳನ್ನೂ, ದಪ್ಪ [illegible] ನೂತನವಾದ ಬೈಂಡನ್ನೂ, ಒಂದೂವರೆಯಷ್ಟು ಗಾತ್ರವನ್ನೂ, ಉಪಯೋಗಿಸಿರುವ ಸಾಮಾನುಗಳಲ್ಲಿ ಹೆಚ್ಚಾದ ಬೆಲೆಯುಳ್ಳ ಪದಾರ್ಥಗಳನ್ನೂ ಒಳಗೊಂಡಿದೆ. ಆದ್ದರಿಂದ ಈ ಡೈರಿಯ ಕ್ರಯವೂ ಹೆಚ್ಚಾಗಿದೆ.

"ಜನಿವಾ" ನಂ॥ ೧. ಚಿಕ್ಕಡೈರಿ ೧ ಕ್ಕೆ ೪ ಆಣೆ. | "ಜನಿವಾ" ನಂ॥ ೨. ಚಿಕ್ಕ ಫ್ಲಾಪ್ ಡೈರಿ ೧ ಕ್ಕೆ ೬ ಆಣೆ.

೧೨ ಪ್ರತಿಗಳು ಒಟ್ಟಾಗಿ ತರಿಸಿಕೊಂಡರೆ ೧ ಪ್ರತಿ ಉಚಿತವಾಗಿ ಕೊಡಲ್ಪಡುವುದು.

ಎ. ಆರ್. ಕೃಷ್ಣಸ್ವಾಮಿಶೆಟ್ಟಿ ಅಂಡ್ ಕಂಪೆನಿ,
೧೫೫, ಗೋವಿಂದನಾಯ್ಕರ್ ಬೀದಿ, ಮದರಾಸ್.

2

ಉತ್ತಮ ಗ್ರಂಥಗಳು.

101

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವ ಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನ ರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವ[illegible]ಶಿರೋಮಣಿ.— ೧-೩-೦. ಸವ್ಯಾಖ್ಯಾನ. [illegible] ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— [illegible]ಪ್ರಕರಣ[illegible] ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. [illegible] ಒಬ್ಬರಚರಿತ್ರೆ. ಮತವಿಷಯವೂ ಪುರಾತನ[illegible]

ಸೌಂದರ ಪುರಾಣ. — ೦-೧-೩-೦. ಲಲಿತ[illegible] ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗ[illegible] ಅನೇಕ ಉಪಕಥೆಗಳುಳ್ಳ ಗ್ರಂ[illegible]

ತತ್ತ್ವಪ್ರಕಾಶಿಕಾ.— ೬ [illegible] ತಾತ್ಪರ್ಯ[illegible]ಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗ[illegible] ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆ[illegible] ರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾ[illegible]ಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಆಣೆ. ಪ್ರಾಣಾ[illegible] ನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

4

ಲೋಕಾಮಯಹಾರ ಕಸ್ತೂರೀ ಮಾತ್ರೆ.

ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆ[illegible]
ಪದಾರ್ಥಗಳ ಮಿಶ್ರದಿಂದ ತ[illegible]
ಳಿಜ್ವರ, ಜ್ವರ. ಹೊಟ್ಟೆ[illegible]
ನೋವು, ಮೈ ಕ[illegible]

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
ಮೈಸೂರು.

22

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಷೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಷೆ ೦—೪—೦., ೨೪ ಮಾತ್ರೆ ಸೀಷೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಷೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರ [illegible]ತ್ರೆ.— ಇದರಿಂದ ಗರ್ಭವೆಟ್ಟೆಯೂ ಕ[illegible]ಂಟಾಗುತ್ತದೆ. ೧೨ ಮಾತ್ರೆ ಸೀಷೆ ೦—೪—೦. [illegible]ಡಿಕೊಡಬೆ[illegible]

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ದೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧—೨ ಮಾತ್ರೆಗಳನ್ನು ಸೇವಿಸುವುದರಿಂದ ೩—೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕ[illegible] ಏಳುವಾಗ್ಗೆ ಒಂದೆರಡಾವೃತ್ತಿ ಮ[illegible]ತ್ರೆ ಸೀಷೆ ೦—೮—೦ [illegible]ನೆ ಉಪಯೋ

ಸೌಗಂಧಿಕಾಪರಿಣಯ.

(ಕಳೆದವಾರದ ಶೇಷ.)

ಶುಭ್ರವಾದ ಸೊಂಡಿಲೂ, ಕಿರಿದಾದ ಕಿವಿಯೂ, ಪೃಷ್ಠವೂ ಉಳ್ಳ ಬೃಹದ್ಗಜಗಳು ಸಾರ್ವಭೌಮಗಜದ ವಂಶದಲ್ಲಿ ಪುಟ್ಟಿದುವು. ಶರೀರದಲ್ಲಿ ಶುಭ್ರವಾದ ಕಾಂತಿಯೂ, ದಪ್ಪವಾದ ಶರೀರವೂ, ಕೆಂಪಾದ ಕಣ್ಣುಗಳೂ, ಕಪ್ಪಾಗಿ ಉದ್ದವಾದ ಸೊಂಡಿಲ ಕೊನೆಯೂ ಉಳ್ಳ ಗಜವು ಮುದಗಜದ ವಂಶದಲ್ಲಿ ಪುಟ್ಟಿದುದು. ಹತ್ತುವರ್ಷ ಮೊದಲುಗೊಂಡು, ಹದಿನಾಲ್ಕುವರ್ಷ ಪರ್ಯಂತವೂ ಗಜಗಳಿಗೆ ಉತ್ತಮವಯಸ್ಸೆನಿಸುವುದು. ಈ ವಯಸ್ಸಿನಲ್ಲೇ ಯುದ್ಧ ಮೊದಲಾದ ಕೌಶಲ್ಯವಂ ಕಲಿಸಬೇಕು. ಹದಿನಾಲ್ಕು ವರ್ಷ ಮೊದಲಾಗಿ ಮೂವತ್ತುವರ್ಷ ಪರ್ಯಂತವೂ ಮಧ್ಯಮವಯಸ್ಸೆಂದು ತಿಳಿಯತಕ್ಕದು. ಮೂವತ್ತು ವರ್ಷ ಮೊದಲುಗೊಂಡು ಎಪ್ಪತ್ತು ವರ್ಷ ಪರ್ಯಂತವೂ ಅಧಮವಯಸ್ಸೆಂದು ತಿಳಿಯತಕ್ಕದು. ಎಪ್ಪತ್ತು ವರ್ಷದ ಮೇಲೆ ಆನೆಗಳು ಯಾವ ಕೆಲಸಕ್ಕೂ ಯೋಗ್ಯವಾಗಲಾರವು. ಉತ್ತಮವಯಸ್ಸು, ಮಧ್ಯಮವಯಸ್ಸು, ಅಧಮವಯಸ್ಸುಗಳಲ್ಲಿ ಆನೆಗಳಂ ಕಾರ್ಯಗಳಲ್ಲಿರಿಸಬೇಕು. ಮನೋಹರವಾದ ನೀಲರೂಪವೂ, ಮುಖದಲ್ಲಿ ಸುವಾಸನೆಯೂ, ತುಂಬಿಕೊಂಡಿರುವ ಶರೀರವೂ, ಉನ್ನತವಾದ ಕುಂಭಸ್ಥಳಗಳೂ, ಚಂದ್ರನಂತೆ ಉಗುರುಗಳೂ, ಕೆಂಪಾದ ಬಿಂದುಗಳೂ, ಜೇನುತುಪ್ಪದ ವರ್ಣವುಳ್ಳ ಕೊಂಬುಗಳೂ, ಅತ್ಯಂತ ಧೈರ್ಯವೂ ಉಳ್ಳ ಗಜವು ಯಾವ ಅರಸಿನಿಂದ ಪೂಜಿಸಲ್ಪಡುತಲಿದೆಯೋ ಆ ಅರಸು ನಾಲ್ಕು ಸಮುದ್ರ ಮಧ್ಯಭೂಮಿಯನ್ನೆಲ್ಲವಂ ಏಕಚ್ಛತ್ರಾಧೀಶ್ವರನಾಗಿ ಆಳುವನು. ಕಾಲವಿಶೇಷದಿಂದ ಮದಿಸಿರುವ ಹೆಣ್ಣಾನೆಯಲ್ಲಿ ಮದಿಸಿದ ಗಂಡಾನೆಯ ಸಂಗದಿಂದ ಪುಟ್ಟುವ ಗಜವು ಗಂಧಹಸ್ತಿಯೆನಿಸಿಕೊಳ್ಳುವುದು. ಗಂಧವೆಂಬುದು ಜೇನುತುಪ್ಪದಂತೆ ವಾಸನೆಯುಳ್ಳುದಾಗಿ, ಮೂತ್ರಪುರೀಷಗಳಲ್ಲಿ ಬೆವರಿನಲ್ಲಿ ಕೂಡ ಇರುವುದು. ಯಾವ ಗಜಕ್ಕೆ ಮೂತ್ರಪುರೀಷಮೊದಲಾದುದರಲ್ಲಿ ಸುವಾಸನೆಯಿರುವುದೋ ಆ ಗಜವು ಗಂಧಹಸ್ತಿಯೆನಿಸಿಕೊಳ್ಳುವುದು. ಇಂಥ ಗಂಧಹಸ್ತಿಯಂ ಸಂರಕ್ಷಿಸುವ ಅರಸಿಗೆ ಯುದ್ಧದಲ್ಲಿ ವಿಜಯವುಂಟಾಗುವುದು. ವ್ಯಕ್ತವಾಗಿ ಕಾಣುವ ಹೆಗಲುಗಳೂ, ಉನ್ನತವಾದ ವಕ್ಷಸ್ಸೂ, ಜೇನುತುಪ್ಪದಂತೆ ಪಿಂಗಳ ವರ್ಣಗಳಾದ ದಂ[illegible] ಕೋಣವೂ, [illegible] ಯುಪಾರ್ಶ್ವಗಳೂ ತುಂಬಿಕೊಂಡಿರೋಣವೂ, ಬೆನ್ನು ದಪ್ಪವಾಗಿರೋಣವೂ, ದೃಢವಾದ ದೇಹವೂ, ಸಮವಾದಸಂಧಿಗಳೂ, ಮನೋಹರವಾದ ಕಾಂತಿಯೂ, ದೀರ್ಘವಾಗಿ ವಿಸ್ತಾರವಾದ ಶರೀರವೂ, ಸೌಂದರ್ಯವೂ ಇವುಗಳು ಗಜಗಳಿಗೆ ಶರೀರಗುಣಗಳೆನಿಸಿಕೊಳ್ಳುವುವು. ಸೊಂಡಿಲು, ಮುಖವು, ದಂತಗಳು, ಶಿರಸ್ಸು, ನೇತ್ರಗಳು, ಕಿವಿಗಳು, ಕತ್ತು, ಗಂಡಸ್ಥಲವು, ಎದೆಯು, ಶರೀರವು, ಗುಹ್ಯವು ಅಂಡದ್ವಯವು, ಈ ಹನ್ನೆರಡೂ ಕ್ಷೇತ್ರಗಳೆನಿಸಿಕೊಳ್ಳುವುವು. ಇವುಗಳಿಗೆ ಒಂದೊಂದಕ್ಕೆ ಹತ್ತುಹತ್ತು ವರ್ಷದ ಮೇಲೆ ನೂರಿಪ್ಪತ್ತು ವರ್ಷಗಳು ಗಜಗಳಿಗೆ ಪರಮಾಯುಸ್ಸೆಂದು ತಿಳಿಯತಕ್ಕದು. [illegible] ರಡು ಕ್ಷೇತ್ರಗಳೂ ಯಾವ ಗಜಕೆ [illegible] ಆ ಗಜವು ಪೂರ್ಣಾ[illegible]

ಯಂ, ಧಾನ್ಯಕೋಶಗಳ ವೃದ್ಧಿಯಂ, ಶತ್ರುನಾಶವಂಕೂಡ ಉಂಟುಮಾಡುವುದು. ಕುಂದಣ, ತಾಳೇಹೂವು, ತುಪ್ಪ, ಜೇನುತುಪ್ಪ, ಚಂದ್ರ, ಕಾಡುಮಲ್ಲಿಗೆ ಹೂವು, ಇವುಗಳಿಗೆ ಸಮಾನವಾಗಿರುವ ಕಾಂತಿಯುಳ್ಳದ್ದಾಗಿ, ಸ್ಥೌಲ್ಯವೂ, ರೇಖೆಗಳಿಲ್ಲದೆ ಇರೋಣವೂ, ನುಣುಪೂ, ಮಂಡಲಾಕಾರವಾದ ರೇಖೆಯಿಂದೊಡಗೂಡಿದ ಮೂಲಪ್ರದೇಶವೂ ಉಳ್ಳುದಾಗಿ, ಸಮವಾಗಿ, ದೃಢಗಳಾಗಿ, ದೀರ್ಘಗಳಾಗಿ, ಶತ್ರುಗಳಂ ಸಂಹರಿಸುವುದರಲ್ಲಿ ಸಮರ್ಥಗಳಾದ ಕೊಂಬುಗಳುಳ್ಳ ಗಜವು ಉತ್ತಮವು. ಈ ಕೊಂಬುಗಳ ಮಧ್ಯದಲ್ಲಿ ಬಿಲ್ವವೃಕ್ಷದಂತೆಯೂ ವರ್ಧಮಾನ, ಛತ್ರ, ಚಾಮರ, ಧ್ವಜ, ಇವುಗಳಿಗೆ ಸಮಾನಗಳಾದ ರೇಖೆಗಳಿದ್ದರೆ ಶುಭವು. ಮತ್ತೂ ದಂಡ, ಹೆಂಟೇಗೊದ್ದ, ಗೃಧ್ರ, ಗೂಬೆ ಮೊದಲಾದುದಕ್ಕೆ ಸಮಾನವಾದ ರೇಖೆಗಳಿದ್ದರೆ ಶುಭವಲ್ಲ. ಕುಂಭಸ್ಥಳದ ಮೂಲವು ಬಿಂದುಗಳಿಂ ಸಹಿತವಾಗಿ, ನುಣುಪಾಗಿ, ಕಾಂತಿಯುಕ್ತವಾಗಿದ್ದರೆ ಶುಭವು. ಮುಖವು ನೀಟವಾಗಿ ಪಾಟಲೀ ಪುಷ್ಪದಂತೆ ಪರಿಮಳಯುಕ್ತವಾಗಿದ್ದರೆ ಶುಭವು. ನೇತ್ರಗಳು ಕೊನೆಗಳಲ್ಲಿ ಕೆಂಪಾಗಿ, ಸುತ್ತಲೂ ಬಿಳುಪಾಗಿ, ಮಧ್ಯದಲ್ಲಿ ನೀಲವರ್ಣವಾಗಿಯೂ ಮತ್ತೂ ಮಂಡಲಾಕೃತಿಯುಳ್ಳುದಾಗಿ ಮೃದುವಾದ ರೋಮಗಳುಳ್ಳ ರೆಪ್ಪೆಗಳಿಂದೊಡಗೂಡಿದ್ದರೆ ಶುಭವು. ದುಂದುಭಿಗಳಂತೆ ಧ್ವನಿಯೂ, ಮೃದುವಾದ ಚರ್ಮವೂ, ಮಚ್ಚೆಗಳೂ, ಛಿದ್ರವಿಲ್ಲದೆ ಇರೋಣವೂ ಉಳ್ಳುದಾಗಿ ಸರ್ವದಾ ಚಲಿಸುತಲಿರುವ ಕರ್ಣಗಳು ಶುಭಕರಗಳು. ಇವುಗಳು ಸ್ವಾಮಿಗೆ ಜಯವನ್ನುಂಟುಮಾಡುವುವು. ಉಬ್ಬಿಕೊಂಡು ರೋಮಯುಕ್ತಗಳಾಗಿ ವ್ಯಕ್ತಗಳಾದ ಕುಂಭಸ್ಥಳಗಳೂ, ಮತ್ತೂ ಉನ್ನತವಾದ ಇಂಥ ಕುಂಭಸ್ಥಳಗಳುಳ್ಳ ಶಿರಸ್ಸೂ ಉತ್ತಮವು. ಕೃಶವಾಗಿ, ದೀರ್ಘವಾಗಿ, ಜೋಲುವ ಕತ್ತೂ, ಬಗ್ಗಿದ ಹೆಗಲೂ ಉಳ್ಳುದಾಗಿದ್ದರೆ ಶುಭವಲ್ಲ. ಇದಕ್ಕೆ ವ್ಯತಿರಿಕ್ತವಾದರೆ ಶುಭವನ್ನುಂಟುಮಾಡುವುದು. ಹಿಂಭಾಗವು ಸಮವಾಗಿ, ಗಟ್ಟಿಯಾಗಿ ವಕ್ರವಿಲ್ಲದೆಯಿದ್ದರೆ, ಶುಭವು. ಬಾಳೆಯಲೆಯ ಮೂಲದ ದಿಂಡಿನಂತೆ ಮನೋಹರವಾಗಿ ಧನುಸ್ಸಿನಂತೆ ಬೊಗ್ಗಿದ ಬೆನ್ನುಮೂಳೆಯು ಶುಭಕರವಾದುದು. ವಿಸ್ತಾರವಾಗಿ ಋಜುವಾದ ಹೆಗಲು ಶುಭಕರವು. ಇಂಥ ಹೆಗಲು ಸ್ವಾಮಿಗೆ ಬಹುಕಾಲ ಸಿಂಹಾಸನಸ್ಥಿತಿಯನ್ನುಂಟುಮಾಡುವುದು. ಶರೀರಕಾಂತಿಗೆ ಸಮಾನವಾದ ಕಾಂತಿಯುಳ್ಳ ಸೂಕ್ಷ್ಮ[illegible]ವಾದ ರೋಮ[illegible], ಒಂದೊಂದು ರೋಮಕೂಪಗಳಲ್ಲಿ ಎರಡೆರಡಾಗಿದ್ದರೆ ಶುಭಕರವು. ಆಸನದಲ್ಲಿ, ಹೆಗಲಿನಲ್ಲಿ ಕಾಂಕುಳುಗಳಲ್ಲಿ ರೋಮಗಳಲ್ಲಿ ಶಿಶ್ನದಲ್ಲ ಕೂಡ ಕೆಂಪು ವರ್ಣವುಳ್ಳ ಆನೆಯು, ರೋಮಕೂಪಗಳಲ್ಲಿ ಎರಡೆರಡು ರೋಮಗಳಿಂದೊಡಗೂಡಿದ್ದರೆ ಸ್ವಾಮಿಗೆ ಕುಲನಾಶವಂ ಮಾಡುವುದು. (ಸಶೇಷ.)

ರಾಷ್ಟ್ರೀಯ ಸಾರ್ವಜನಿಕ ಮಹಾಸಭೆ.

ಈಸಲದ ಈ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸುವುದಕ್ಕಾಗಿ ಸೀಮೆಯಿಂದ ದಯಮಾಡಿಸಿರುವ ಸರ್. ವಿಲಿಯಂ ವೆಡರ್‌ಬರ್ನರವರು ಆ॥ ಗೋಖಲೆ ಮೊದಲಾದ ಬೊಂಬಾಯಿ ಪ್ರತಿನಿಧಿಗಳೊಡನೆ ಹೆಚ್ಚುಗಟ್ಟಲೆಯ ಹೊಗೆ ಬಂಡಿಯಲ್ಲಿ ಹೊರಟು, ತಾ॥ ೨೪ರ ಬೆಳಗ್ಗೆ ಅಲಹಾಬಾದ್ ನಿಲ್ದಾ[illegible]ಳಿದರು. ಸ್ವಾಗತಸಂಘಾಧ್ಯಕ್ಷರಾದ ಪಂಡಿತ ಸುಂದ[illegible]ವರೇ ಮೊದಲಾದ ಹಲವರು ಪ್ರಮುಖರು ಇದಿ[illegible] ಮಾಲೆಯನ್ನು ಹಾಕಿ ರಥಾರೂಢರನ್ನು [illegible]ಭವದೊಡನೆ ಪುರವೀಧಿಯಲ್ಲಿ ಉ[illegible] ಕ್ಕೂ ಪುರ[illegible]ರೆಂದರೆ— ಆ॥ ವಿ॥ ಗೋಖಲೆ, ಸರ್ ವಿಠಲದಾಸ ದಾಮೋದರದಾಸಠಾಕರ್ಸೆ, ವಿ॥ ಡಿ. ಇ. ವಾಛಾ, ವಿ॥ ಡಿ. ಎ. ಖರೆ, ಸರ್. ಬಾಲಚಂದ್ರಕೃಷ್ಣ, ಆ॥ ವಿ॥ ಎಚ್. ಎಸ್. ದೀಕ್ಷಿತ, ಆ॥ ವಿ॥ ಎನ್. ಸುಬ್ಬರಾವುಪಂತಲು, ವಿ॥ ಅಂಬಿಕಾಚರಣ ಮುಜುಂದಾರ್, ವಿ॥ಸಿ. ವಿಜಯರಾಘವಾಚಾರ್, ವಿ॥ ಜಿ. ಬಿ. ಪೇಟಿಟ್, ಬಾಬು ಸುರೇಂದ್ರನಾಥಬಾನರ್ಜಿ, ಪಂಡಿತ ಸುಂದರಲಾಲ್, ವಿ॥ ಹಸನ್ ಇಮಾಮ್, ಪಂಡಿತ ಮದನಮೋಹನಮಾಳವ್ಯ, ಆ॥ಎಸ್.ಸಿನ್ಹ, ಆ॥ವಿ॥ಎಂ. ಎ. ಜಿನ್ನಾ, ರಾಮನಾಡು ರಾಜಾ, ದಿ॥ ಬ॥ ಸಿ. ಕರುಣಾಕರಮೆನನ್, ವಿ॥ ಗಂಗಾಪ್ರಸಾದವರ್ಮ, ಆ॥ ವಿ॥ ಬಿ ಎನ್. ಬಾಸು, ಮ॥ ಲಾಲಾ ಹರಿಕೃಷ್ಣಲಾಲ್, ಆ॥ ವಿ॥ ಹರಿಚಂದನದಾಸ ವಿಷ್ಣುದಾಸ್, ಆ॥ ವಿ॥ ಎಂ. ಹಕ್, ಪಲವರಂ ಜಮೀನ್ದಾರ್, ಆ॥ ವಿ॥ ಆರ್. ಎಂ. ಮುಧೋಳ್ಕರ್, ಆ॥ ವಿ॥ ಟಿ. ವಿ. ಶೇಷಗಿರಿ ಅಯ್ಯರ್, ಆ॥ ವಿ॥ ಕೇಶವ ಪಿಳ್ಳೆ, ರಾ॥ ಬ॥ ಆದಿನಾರಾಯಣಯ್ಯ, ಆ॥ವಿ॥ ಜಿ. ರಾಘವರಾವ್, ಆ॥ ವಿ॥ ರಾಮಚಂದ್ರರಾವ್, ವಿ॥ ಜಿ. ಶ್ರೀನಿವಾಸರಾವ್, ವಿ॥ ಎ. ವಿ. ಜೋಗಯ್ಯಪಂತುಲು, ವಿ॥ ಜೆ. ಘೋಷಾಲ್, ವಿ॥ ಜಿ. ಎ. ನಟೇಶನ್, ಡಾ॥ ಕೃಷ್ಣಸ್ವಾಮಿ ಅಯ್ಯರ್, ವಿ॥ ವಿ. ಮಾಸಿಲಾಮಣಿಪಿಳ್ಳೆ, ವಿ॥ ಸಿ. ಪಿ. ರಾಮಸ್ವಾಮಿ ಅಯ್ಯರ್ ವಿ॥ ವಿ. ಎಸ್. ಶ್ರೀನಿವಾಸಶಾಸ್ತ್ರಿಯರ್, ವಿ॥ ಎ. ಪಿ. ಪತ್ರೋ, ವಿ॥ ಜಿ. ಪಿ. ಕೋಟಿಲಿಂಗಂ, ವಿ॥ ಸಿ. ವಿ. ಚಿಂತಾಮಣಿ, ವಿ॥ ಎನ್. ಗುಪ್ತ ಮೊದಲಾದ ಎಲ್ಲ ಆಧಿಪತ್ಯದ ಅನೇಕ ಪ್ರಜಾಪ್ರಮುಖರು ನೆರೆದಿದ್ದರು.

ಬಳಿಕ ಸತ್ಕಾರಕ ಸಂಘಾಧ್ಯಕ್ಷರಾದ ಪಂಡಿತ ಸುಂದರಲಾಲ್‌ರವರು ಸ್ವಾಗತಪರವಾದ ತಮ್ಮ ಉಪನ್ಯಾಸವನ್ನು ಮಾಡಿದರು. ಅದರಲ್ಲಿ ತಮ್ಮ ಸತ್ಕಾರದೇರ್ಪಾಟಿನಲ್ಲಿರಬಹುದಾದ ಲೋಪಗಳಿಗಾಗಿ ಪ್ರತಿನಿಧಿಗಳ ಕ್ಷಮೆಯನ್ನು ಮೊದಲು ಕೋರಿ, ಬಳಿಕ ಸರ್ ವಿಲಿಯಂ ವೆಡರ್‌ಬರ್ನರವರು ಈ ದೇಶದ ಹಿತಕ್ಕಾಗಿ ಆಚರಿಸಿದ ಮಹೋಪಕಾರಗಳನ್ನು ವರ್ಣಿಸಿ, ಇವರಷ್ಟು ಯಾವ ಐರೋಪ್ಯರೂ ಈ ದೇಶದ ಹಿತಾಚರಣೆಗಾಗಿ ಕಷ್ಟಪಟ್ಟವರಿಲ್ಲವೆಂದೂ, ಇವರನ್ನು ಈ ಸಭೆಯ ಅಧ್ಯಕ್ಷರನ್ನಾಗಿ ಆರಿಸುವುದು ನಮ್ಮಿ ಊರಿಗೂ, ಸಂಯುಕ್ತ ಆಧಿಪತ್ಯಕ್ಕೂ ಸಹ ಗೌರವದಾಯಕವಾದುದೆಂದೂ ಹೇಳಿದುದಲ್ಲದೆ, ೫ ನೆಯ ಜಾರ್ಜ್ ಪ್ರಭುಗಳು ಸಿಂಹಾಸನಾರೋಹಣ ಮಾಡಿದುದಕ್ಕೂ, ಅವರು ಪ[illegible]ಮ್ಮೊತ್ತರಾಗಿ ಈ ದೇಶಕ್ಕೆ ದಯಮಾಡಿಸಿ, ಮಕುಟಾಭಿಷೇಕವನ್ನು ನೆರವೇರಿಸಿಕೊಳ್ಳುವುದಕ್ಕೆ ಅಪ್ಪಣೆ ಮಾಡಿರುವುದಕ್ಕೂ, ತಮ್ಮ ಅತ್ಯಂತಾನಂದವನ್ನು ಸೂಚಿಸಿ, 'ರಿಫಾರಂಸ್ಕೀಮನ್ನು' ಏರ್ಪಡಿಸಿದ ಲಾರ್ಡ್ ಮಾರ್ಲೆ, ಲಾರ್ಡ್ ಮಿಂಟೋರವರಿಗೆ ಕೃತಜ್ಞತಾಪೂರ್ವಕ ವಂದನೆಯನ್ನರ್ಪಿಸಿ, ಆ ನೂತನ ಸುಧಾರಣೆಯಲ್ಲಿ ಜಾತಿಭೇದಪಕ್ಷಪಾತದ ಏರ್ಪಾಟಿನಿಂದುಂಟಾಗಿರುವ ನ್ಯೂನಾತಿರೇಕಕ್ಕಾಗಿ ಅಸಮಾಧಾನವನ್ನು ಹೊರಗೆಡಹಿ, ಭರತಖಂಡದ ಸಾಮಾನ್ಯವಿದ್ಯೆ-ಸಾಂಕೇತಿಕವಿದ್ಯೆಗಳ ಅಭಿವೃದ್ಧಿಯನ್ನು ಮಾಡುವುದಕ್ಕಾಗಿ ಪಾಡುಪಟ್ಟ ಲಾರ್ಡ್ ಕ್ರೂರವರೂ, ಲಾರ್ಡ್ ಹಾರ್ಡಿಂಜ್‌ರವರೂ ಸಹ ಈಗ ಏಕಕಾಲದಲ್ಲೇ ಸ್ಟೇಟ್ ಸೆಕ್ರೆಟರಿ-ವೈಸ್ರಾಯರಾಗಿ ನಿಯಮಿಸಲ್ಪಟ್ಟಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಗೊಳಿಸಿ, ಶಾಸನನಿರ್ಮಾಣಸಭೆಯ ಪ್ರತಿನಿಧಿಗಳನ್ನಾರಿಸುವುದರಲ್ಲಿ ಜಾತಿಭೇದದ ಏರ್ಪಾಟನ್ನು ಮಾಡಿದಂದಿನಿಂದ ಮಹಮ್ಮದೀಯರು ತಮ್ಮೊಡನೆ ಸೇರಿ ವರ್ತಿಸದಿರುವ ಸ್ಥಿತಿಯು ಪ್ರಾಪ್ತವಾಗಿರುವುದೆಂದೂ, ವೈಸ್ರಾಯರ ಸಭೆಯಲ್ಲಿ $\frac{1}{3}$ ಭಾಗದಷ್ಟು ಸ್ಥಲವು ಮಹಮ್ಮದೀಯರದೇ ಆಗಿರುವುದೆಂದೂ, ಈ ಬೇಬೆಗೆ ಹಿಂದೂ ಮಹಮ್ಮದೀಯರ ಮಧ್ಯದ ಅವಕಾಶವು
[illegible]ಚ್ಚುತ್ತಿರುವುದೆಂದೂ, ಅವ[illegible]
[illegible]ತಿಯೂ ಹೆಚ್ಚುಪರಸ್ಪರ ಭಿನ್ನಭಾವವು ಮಾ[illegible]
[illegible] ಅವಶ್ಯಕವೆಂದೂ, ಐಕಮತ್ಯವು ದೇಶವು
[illegible] ಹೇಳಿ ಕುಳಿ
[illegible] ಅತ್ಯಂತ ಮುಖ್ಯಕಾರಣವೆಂದೂ
[illegible]ರು.
[illegible]ಬಾಬುಸುರೇಂದ್ರನಾಥಬಾನರ್ಜಿಯವರು, ಸರ್.
[illegible]ರ ಗುಣಕಥನವನ್ನು ಮಾಡಿ, ಈ ಸಭೆಗೆ
[illegible] ಅಧ್ಯಕ್ಷರನ್ನಾಗಿ ಕೋರುವ ತಮ್ಮ ಸೂಚನೆಯ
[illegible]ದರು. ಅದಕ್ಕೆ ಆ॥ ಮುಧೋಳ್ಕರ್‌ರವರು ಅನು
[illegible]ಪರ ಭಾಷಣಮಾಡಿದರು. ಆ॥ ಎನ್. ಸುಬ್ಬರಾ
[illegible] ಹರಿಕೃಷ್ಣಲಾಲ್, ಪಂಡಿತ ಮದನಮೋಹನಮಾ
[illegible]ರು ಸಹ ಅದೇ ರೀತಿಯಾಗಿ ಭಾಷಣವನ್ನು ಮಾಡಿ
[illegible]ರ ಸರ್. ವೆಡರ್‌ಬರ್ನರವರು ಅಧ್ಯಕ್ಷಪೀಠವನ್ನಲಂ
[illegible]ದರು. ಅನಂತರ ಅಧ್ಯಕ್ಷರು ಎದ್ದುನಿಂತು ತಮ್ಮ
[illegible]ಣದಲ್ಲಿ ಸ್ವಲ್ಪ ಭಾಗವನ್ನು ಓದಿ, ಬಳಿಕ ಆ॥ ಗೋಖಲೆ
[illegible]ರ ವಶಕ್ಕೆ ಕೊಟ್ಟು, ಉಳಿದುದನ್ನು ಅವರಿಂದ ಓದಿಸಿ
[illegible]. (ಅದರ ಮುಖ್ಯ ಸಾರಾಂಶವನ್ನು ಮತ್ತೊಂದು ಕಡೆ
[illegible]ಲ್ಲಿ ಮುದ್ರಿಸಿದ್ದೇವೆ.) ಅಂದಿನ ಕೆಲಸವು ಅಲ್ಲಿಗೆ ಮು
[illegible]ತು.

ತಾ॥ ೨೭ ರಲ್ಲಿ ಸಭೆಯು ಮತ್ತೆ ಕೂಡಿತು. ಎಡ್ವರ್ಡ್
[illegible]ಕ್ರವರ್ತಿಯವರ ಮೃತಿಯಿಂದುಂಟಾದ ದುಃಖವನ್ನು [illegible]

ರ್ಶಿಸುವುದು, ೫ ನೆಯ ಜಾರ್ಜ್ ಪ್ರಭುಗಳಿಗೆ ರಾಜ್ಯಾಧಿಕಾರವು ದೊರೆದುದರಿಂದುಂಟಾದ ಸಂತೋಷವನ್ನು ತೋರ್ಪಡಿಸುವುದು, ಅವರು ಪತ್ನೀಸಮೇತರಾಗಿ ಈ ದೇಶಕ್ಕೆ ದಯಮಾಡಿಸುವರೆಂಬ ವಾರ್ತೆಯನ್ನು ಕೇಳಿ ತಮಗುಂಟಾಗಿರುವ ಸಂತೋಷವನ್ನು ರಾಜಭಕ್ತಿಪೂರ್ವಕವಾಗಿ ಅವರಿಗೆ ಅರಿಕೆಮಾಡುವುದು, ವೈಸ್‌ರಾಯ್ ಹಾರ್ಡಿಂಜ್ ಪ್ರಭುಗಳಿಗೆ ಸುಸ್ವಾಗತವನ್ನು ಮಾಡುವುದು, ಈ ದೇಶೀಯರ ಮೇಲ್ಮೆಗಾಗಿ ಮಾಡಲ್ಪಡುವ ಕಾರ್ಯಗಳಲ್ಲಿ ರಾಷ್ಟ್ರೀಯ ಸಾರ್ವಜನಿಕ ಮಹಾಸಭೆಯವರು ಭಕ್ತಿಪೂರ್ವಕವಾಗಿ ತಮಗೆ ಸಹಾಯಭೂತರಾಗಿರುವರೆಂಬುದನ್ನು ವೈಸ್ರಾಯರಿಗೆ ಶ್ರುತಪಡಿಸುವುದು, ಸಾರ್ವಜನಿಕಸಭೆಯ ಪಕ್ಷದಿಂದ ಹೊರಡುವ "ಡೆಪುಟೇಷನಿನವರು" ವೈಸ್‌ರಾಯರಿಗೆ ಸಮರ್ಪಿಸುವುದಕ್ಕಾಗಿ ಒಂದು ವಿಜ್ಞಾಪನ ಪತ್ರಿಕೆಯನ್ನು ರಚಿಸುವುದಕ್ಕಾಗಿ ಒಂದು ಉಪಸಂಘವನ್ನೇರ್ಪಡಿಸುವುದು.—ಈ ಪ್ರಕಾರವಾದ ೩ ನಿರ್ಧಾರಗಳು ಮಾಡಲ್ಪಟ್ಟುವು. ೪ ನೆಯ "ಕೌನ್ಸಿಲ್‌ರಿಫಾರಂ ರೆಗ್ಯುಲೇಷನ್" ಸಂಬಂಧದ ನಿರ್ಧಾರವನ್ನು ಮರುದಿವಸಕ್ಕೆ ಇಟ್ಟುಕೊಂಡರು. ೫ ನೆಯದು—ವೈಸ್‌ರಾಯರ ನಿಯಮನಿರ್ಮಾಣ ಸಭೆಯಲ್ಲಿ ನ್ಯಾಯವಾದಿಗಳ ಪ್ರತಿನಿಧಿಯಾಗಿ ಪಾಶ್ಚಾತ್ಯದೇಶದಲ್ಲಿ ಬ್ಯಾರಿಸ್ಟರಾಗಿ ಬಂದವರನ್ನೇ ಸೇರಿಸಬೇಕೆಂಬ ನಿರ್ಬಂಧವಿರುವುದನ್ನು ತಪ್ಪಿಸಿ, ಭರತಖಂಡದ ಹೈಕೋರ್ಟುಗಳ ವಕೀಲರೊಬ್ಬರನ್ನು ಪ್ರತಿನಿಧಿಯಾಗಿ ಸೇರಿಸಿಕೊಳ್ಳುವಂತೆ ಮಾಡಬೇಕೆಂಬ ಸೂಚನೆಯನ್ನು ಆ॥ ಎಸ್. ಸಿಹ್ನರವರು ತಂದರು. ಅದಕ್ಕೆ ಮಿ॥ ಬಿ. ಎನ್. ಶರ್ಮರವರು ಪುಷ್ಟೀಕರಣ ಮಾಡಿದರು. ಬಳಿಕ ಸರ್ವಾನುಮತದಿಂದ ನಿರ್ಧಾರವಾಯಿತು.

೬ ನೆಯದು—ಆಂಗ್ಲಸ್ವಾಸ್ಥ್ಯಗಳಲ್ಲಿರುವ ಭಾರತೀಯರನ್ನು ಅಲ್ಲಿನ ಮೂಲನಿವಾಸಿಗಳು ತೊಂದರೆಪಡಿಸುತ್ತಿರುವುದನ್ನು ತಪ್ಪಿಸುವುದಕ್ಕೆ ಆಂಗ್ಲಪ್ರಭುತ್ವದವರನ್ನು ಪ್ರಾರ್ಥಿಸಬೇಕೆಂಬ ಸೂಚನೆಯನ್ನು ಮಿ॥ ಜಿ. ಎ. ನಟೇಶನ್‌ರವರು ತಂದರು. ಅದಕ್ಕೆ ಮಾರಿಷಸ್ಸಿನ ಡಾ॥ ಮಣಿಲಾಲ್‌ರವರು ಪುಷ್ಟೀಕರಣ [illegible] ಣಮಾಡಿದ ತರುವಾಯ ಸರ್ವಾನುಮತಿಯಿಂದ ನಿರ್ಧಾರವಾಯಿತು.

೭ ನೆಯದಾಗಿ "ಸ್ವದೇಶೋದ್ಯಮವು" ಚರ್ಚೆಗೆ ಬಂದಿತು. ಇದನ್ನು ಸೂಚಿಸಿದ ಮಿ॥ ಸಿ. ವೈ. ಚಿಂತಾಮಣಿಯವರು—ಸ್ವದೇಶೋದ್ಯಮವನ್ನು ನಾವು ಬಿಡುವಿಲ್ಲದೆ ನಡೆಸುತ್ತ ಬರಬೇಕು. ಸಾಧ್ಯವಾದಮಟ್ಟಿಗೂ ಭರತಖಂಡದ ವಸ್ತುಗಳನ್ನೇ ನಾವು ಉಪಯೋಗಿಸುತ್ತ, ಇಲ್ಲಿನ ಪದಾರ್ಥಗಳಿಗೆ ಪ್ರೋತ್ಸಾಹವನ್ನು ಕೊಡುತ್ತ ಬರಬೇಕು. ಎಂದು ಹೇಳಿದರು. ಅದಕ್ಕೆ ಮಿ॥ ಜ್ಯೋತೀಂದ್ರಲಾಲಬಾನರ್ಜಿ, ಮಿ॥ ಬಿ. ವಿ. ಕೃಷ್ಣರಾವ್, ಮಿ॥ ಎಸ್. ವಿ. ಬಾಸು—ಇವರುಗಳು ಪುಷ್ಟೀಕರಣದ ಭಾಷಣವನ್ನು ಮಾಡಿದ ತರುವಾಯ ಸರ್ವಾನುಮತಿಯಿಂದ ನಿರ್ಧಾರವಾಯಿತು.

೮ ನೆಯದು—"ಜ್ಯುಡಿಷಿಯಲ್-ಎಗ್ಸಿಕ್ಯುಟಿವ್" ಶಾಖೆಗಳನ್ನು ಬೇರ್ಪಡಿಸುವುದಕ್ಕೆ ಗೌರ್ನಮೆಂಟಿನವರು ಆಶೆ ತೋರಿಸಿದ್ದರೂ, ಇನ್ನೂ ಅದನ್ನು ನೆರವೇರಿಸಿಕೊಟ್ಟಿಲ್ಲವಾದ ಕಾರಣ, ಅದನ್ನು ಕೂಡಲೇ ನೆರವೇರಿಸಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ಸೂಚನೆಯನ್ನು ಬಾಬು ಜೋಗೀಂದ್ರನಾಥ ಮುಕರ್ಜಿಯವರು ತಂದರು. ಅದಕ್ಕೆ ಬಾಬು ವಜ್ರಕಿಶೋರಪ್ರಸಾದ್, ಮತ್ತೂ ಮಿ॥ ಸಿ. ಪಿ. ರಾಮಸ್ವಾಮಿಯವರು ಅನುಮೋದನವನ್ನೀಯಲು ನಿರ್ಧಾರವಾಯಿತು.

೯ ನೆಯದು— ಸಂಯುಕ್ತಪ್ರಾಂತಕ್ಕೂ ಪಂಜಾಬಿಗೂ ಒಂದೊಂದು ಎಕ್ಸಿಕ್ಯುಟಿವ್‌ಕೌನ್ಸಿಲನ್ನು ಸ್ಥಾಪಿಸಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ಸೂಚನೆಯನ್ನು ಪಂಡಿತ ಗೋಕರ್ಣನಾಥಮಿಶ್ರಯವರು ತಂದರು. ಮಿ॥ಪಿ.ಎಲ್. ರಾಜಪಾಲರು ಅನುಮೋದನವನ್ನೀಯಲು ನಿರ್ಧಾರವಾಯಿತು. ಅಲ್ಲಿಗೆ ಆ ದಿನದ ಸಭಾಕಾರ್ಯವು ಮುಗಿದಿತು.

ಆದಿನದ ರಾತ್ರಿ ಸಬ್‌ಜಕ್ಟ್ ಕಮಿಟಿಯು ನೆರೆದಿದ್ದಾಗ್ಗೆ ಸೀಮೆಯಲ್ಲಿ ಪ್ರಕಟವಾಗುತ್ತಿರುವ ಸಾರ್ವಜನಿಕ ಮಹಾಸಭೆಗೆ ಸಂಬಂಧಿಸಿದ "ಇಂಡಿಯಾ" ಎಂಬ ಪತ್ರಿಕೆಯು ಸೀಮೆಯಲ್ಲಿರುವ ರಾಜನೀತಿವಿಶಾರದರು ಮೊದಲಾದವರಿಗೆಲ್ಲಾ ಉಚಿತವಾಗಿ ಹಂಚಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಒಂದು ಧನನಿಧಿಯನ್ನು ಕೂಡಿಸುವ ಅವಶ್ಯಕತೆಯನ್ನು ಕುರಿತು ಸರ್. ವಿಲಿಯಂ. ವೆಡರ್‌ಬರ್ನರವರು ಒಂದು ದೀರ್ಘವಾದ ಭಾಷಣವನ್ನು ಮಾಡಿದರು. ಕೂಡಲೆ ಬೊಂಬಾಯಿಯ ಮಿ॥ ಎಸ್. ಆರ್. ಬೊಮಂಜಿಯವರು ೫ ಸಹಸ್ರ ರೂಪಾಯಿಗಳನ್ನು ಕೊಡುವುದಕ್ಕೂ, ಇತರ ಪ್ರಾಂತಗಳಿಂದ ಬಂದಿದ್ದ ೬೦ ಮಂದಿಗಳು ವರ್ಷ ೧ ಕ್ಕೆ ಒಂದು ನೂರು ರೂ. ಗಳ ಮೇರೆ ೩ ವರ್ಷದವರೆಗೆ ಸಹಾಯ ಮಾಡುವುದಕ್ಕೂ, ಮಿ॥ ಸೇಲಂ ವಿಜಯರಾಘವಾಚಾರ್, ಮಿ॥ ಟಿ. ವಿ. ಶೇಷಗಿರಿ ಅಯ್ಯರು, ಪೋಲವರಂ ಜಮೀನ್ದಾರ್, ಮಿ॥ ಜಿ. ಎ. ನಟೇಶನ್, ಮಿ॥ ಜಿ. ಶ್ರೀನಿವಾಸರಾವ್ ಮಿ॥ ಎ. ಎಸ್. ಕೃಷ್ಣರಾವ್, ಮಿ॥ ಬಿ. ಎನ್. ಶರ್ಮ, ಮಿ॥ ಸಿ. ರಾಮಚಂದ್ರರಾವ್, ಮಿ॥ ಎನ್. ಸುಬ್ಬರಾವ್, ಮಿ॥ ಕೆ. ವೆಂಕಟಪ್ಪಯ್ಯ, ಮಿ॥ ಎಸ್. ವೆಂಕಟನರಸಿಹ್ಮರಾವ್, ಮಿ॥ ಟಿ. ವಿ. ನರಸಿಹ್ಮಯ್ಯರ್, ಮಿ॥ ಸಿ. ಪಿ. ರಾಮಸ್ವಾಮಿ ಅಯ್ಯರ್, ಮಿ॥ ಎಂ. ರಾಮಚಂದ್ರರಾವ್—ಈ ಮದ್ರಾಸಾಧಿಪತ್ಯದ ಜನರು ಸಹ ೩ವರ್ಷದವರೆಗೆ ವರ್ಷಕ್ಕೆ ೧ ನೂರು ರೂಪಾಯಿಗಳಂತೆ ಸಹಾಯಮಾಡುತ್ತ ಬರುವುದಕ್ಕೂ ವಾಗ್ದಾನ ಮಾಡಿದರು.

ತಾ॥ ೨೮ ರಲ್ಲಿ ಮಧ್ಯಾಹ್ನ ೧೧॥ ಗಂಟೆಗೆ ಮಹಾಸಭೆಯು ಯಥಾಪ್ರಕಾರ ಕೂಡಿತು. ಸ್ವಪ್ರಜಾಪಾಲನದ ನಿರ್ಧಾರವನ್ನು ಕುರಿತು ಮಿ॥ ಎಚ್. ಎಸ್. ಗೌರ್‌ರವರು ಸೂಚನೆಯನ್ನು ತಂದು, ಹೀಗೆ ಮಾತನಾಡಿದರು—ಸ್ವಪ್ರಜಾಪರಿಪಾಲನ ಪದ್ಧತಿಯು ಗ್ರಾಮಾಂತರಗಳಿಂದ ಆರಂಭಿಸಲ್ಪಡಬೇಕು. ಗ್ರಾಮಪಂಚಾಯತಿಯನ್ನು ಅಲ್ಲಿನ ಜನರೇ ಏರ್ಪಡಿಸಿಕೊಂಡು ಸ್ಥಳಿಕವಾದ ಸಾಧಾರಣ ವಿದ್ಯಮಾನಗಳಲ್ಲಿ ಅವರವರೇ ತೀರ್ಮಾನ ಮಾಡಿಕೊಳ್ಳುವ ಪದ್ಧತಿಯನ್ನು ಸರ್ಕಾರದವರು ಏರ್ಪಡಿಸಿಕೊಡುವುದು ಅವಶ್ಯಕವು. ಇದಕ್ಕೆ ಆ॥ ಜಿ. ರಾಘವರಾವ್‌ರವರೂ, ಮಿ॥ ಎನ್. ರಾಮಚಂದ್ರರಾವ್‌ರವರೂ ಅನುಮೋದಿಸಲು, ಸರ್ವಾನುಮತದಿಂದ ನಿರ್ಧಾರವಾಯಿತು.

ವಂಗವಿಭಂಗ— ಈ ವಿಷಯವನ್ನು ಕುರಿತು ಬಾಬು ಅಂಬಿಕಾಚರಣಮಜುಂದಾರ್‌ರವರು ಸೂಚನೆ ತಂದಾಗ ಹೇಳಿದುದೇನೆಂದರೆ—ವಂಗ ವಿಭಂಗವನ್ನು ತಪ್ಪಿಸಿಕೊಡಬೇಕೆಂದು ಪ್ರಜೆಗಳು ಪ್ರಾರ್ಥಿಸಿದುದಕ್ಕೆ ಗೌರ್ನಮೆಂಟಿನವರು ಒಂದಾವೃತ್ತಿ ಮಾಡಿದುದನ್ನು ತಪ್ಪಿಸಲಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಅಷ್ಟುಮಾತ್ರಕ್ಕೇ ನಾವು ಅದನ್ನು ಬಿಟ್ಟುಬಿಡತಕ್ಕದ್ದಲ್ಲ. ಇದನ್ನು ಸ್ಟೇಟ್‌ಸೆಕ್ರೆಟರಿಯವರೂ, ವೈಸ್‌ರಾಯರೂ ಮತ್ತೆ ಪರ್ಯಾಲೋಚಿಸಿ, ವಂಗಭಾಷೆಯನ್ನಾಡತಕ್ಕವರನ್ನೆಲ್ಲಾ ಒಂದು ಆಧಿಪತ್ಯಕ್ಕೆ ಒಳಗಾಗಿರುವಂತೆಯಾದರೂ ಮಾಡಿಕೊಡಬೇಕೆಂಬ ವಿಷಯದಲ್ಲಿ ನಾವು ಅವರನ್ನು ಪ್ರಾರ್ಥಿಸಿಕೊಳ್ಳಬೇಕು. ಎಂದರು. ಇದರಮೇಲೆ ಮ. [illegible] ರ್ ಕರುಣಾಕರಮೇನನ್‌ರವರೂ, ಬಾಬು [illegible] ಣ್ಣಿಂದ ನಡೆಸಲ್ಪ [illegible] ಮಾಡಲು, [illegible] ಷಣವನ್ನು [illegible]

ಭಾರತೀ [illegible] ವರು ದುತ್ತ [illegible] ವೈದ್ಯರನ್ನು ಭರತ [illegible] ನ್ನತಾಧಿಕಾರಗಳಿಗೆ ತರಬೇಕೆಂಬ ವಿಷಯದಲ್ಲಿ ಸ್ಟೇಟ್‌ಸೆಕ್ರೆಟರಿಗಳು ಅಪ್ಪಣೆ ಮಾಡಿರುವುದರಿಂದ, ಅದಕ್ಕಾಗಿ ಕೃತಜ್ಞತೆಯಿಂದ ವಂದನೆಯನ್ನು ಸರ್ಕಾರಕ್ಕೆ ಸಮರ್ಪಿಸಬೇಕಲ್ಲದೆ, ಕೂಡಲೇ ಆ ಅಪ್ಪಣೆಯನ್ನು ಅನುಷ್ಠಾನಕ್ಕೆ ತರುವಂತೆ ಪ್ರಾರ್ಥಿಸಬೇಕು ಎಂದು ಸರ್. ಬಾಲಚಂದ್ರಕೃಷ್ಣರವರು ಸೂಚನೆಯನ್ನು ತಂದರು. ಇದನ್ನು ಡಾ॥ ರಣಪತ್‌ಸಿಂಗ್, ಡಾ॥ ಎಚ್. ಆರ್. ಪತ್ರೋರವರು ಅನುಮೋದಿಸಲು ನಿರ್ಧಾರವಾಯಿತು.

ರಾಜದ್ರೋಹ ನಿರೋಧಕವಿಧಿ— ರಾಜದ್ರೋಹ ನಿರೋಧಕ ವಿಧಿಗಾಗಿ ಒಂದು ಕಾಲಕ್ಲೃಪ್ತಿಯನ್ನು ಮಾಡುತ್ತ ಅದು ಮುಗಿದನಂತರ ಅವಧಿಯನ್ನು ಮತ್ತೆ ಹೆಚ್ಚಿಸುತ್ತ ಇರುವ ಏರ್ಪಾಟನ್ನು ತಪ್ಪಿಸಿಬಿಡುವಂತೆಯೂ, "ಪ್ರೆಸ್ ಆಕ್ಟನ್ನು" ತಪ್ಪಿಸಿಯೇಬಿಡುವಂತೆಯೂ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ಸೂಚನೆಯನ್ನು ಮಿ॥ ಜೆ. ಚೌಧುರಿಯವರು ತಂದರು. ಅದಕ್ಕೆ ಮಿ॥ ಕೃಷ್ಣರಾವ್, ಬಾಬು ದ್ವಾರಕನಾಥ್, ಮಿ॥ ಯುಸೂಫ್‌ಅಲಿಖಾನ್‌ರವರೂ ಅಭಿಮತಿಸಿದ ಮೇಲೆ ಸರ್ವಾನುಮತದಿಂದ ನಿರ್ಧರವಾಯಿತು.

ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿಯೂ, ಬಲಾತ್ಕಾರವಾಗಿಯೂ, ಮಾಡಿಸುವುದು.— ಇದರ ಸೂಚನೆಯನ್ನು ಮಿ॥ ಜೋಗಯ್ಯಪಂತುಲುಯವರು ತಂದರು. ಮಿ॥ ಚೆತ್ತಾಲಾ, ಪಂಡಿತ ಹರಿದಾಯ್‌ನಾಥ್ ಕಿಂಸ್ರುಯವರು ಅಭಿಮತಿಸಲು ಸರ್ವಾನುಮತಿಯಿಂದ ನಿರ್ಧಾರವಾಯಿತು.

ಸರ್ಕಾರದ ವ್ಯಯ.— ಸರ್ಕಾರದವರು ಮಾಡುವ ವೆಚ್ಚವು ವಿಪರೀತವಾಗಿ ಹೆಚ್ಚಿದೆ. ಇದನ್ನು ಪರಿಶೋಧಿಸಿ, ಮಿತವ್ಯಯಕ್ಕೆ ತರುವಂತೆ ಮಾಡಿಸಲು, ಸರ್ಕಾರದ ಉದ್ಯೋಗಿಗಳೂ ಅನುದ್ಯೋಗಿಗಳೂ ಸೇರಿರುವ ಒಂದು ಸಂಘವನ್ನೇರ್ಪಡಿಸುವುದಕ್ಕಾಗಿ ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ಸೂಚನೆಯನ್ನು ಮಿ॥ ಎನ್. ಎ. ದ್ರಾವಿಡರವರು ಅಭಿಮತಿಸಲು, ಸರ್ವಾನುಮತಿಯಿಂದ ನಿರ್ಧಾರವಾಯಿತು.

"ಕೌನ್ಸಿಲ್‌ರಿಫಾರಂ'— ನೂತನ ಸುಧಾರಣೆಯಲ್ಲಿ ಕೌನ್ಸಿಲ್ಲುಗಳಿಗೆ ಜಾತಿವಾರು ಪ್ರತಿನಿಧಿಗಳನ್ನಾರಿಸುವ ಏರ್ಪಾಟಿಟ್ಟಿರುವುದನ್ನು ತಪ್ಪಿಸಿಕೊಡಬೇಕು. ಆರಿಸಲ್ಪಡುವ ಸಭಾಸ್ತಾರರಲ್ಲಿ ಗುಣಯೋಗ್ಯತಾಂಶಗಳ ನಿರ್ಬಂಧವನ್ನಿಟ್ಟಿರುವುದನ್ನು ತಪ್ಪಿಸಿಕೊಡಬೇಕು. ಎಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ಸೂಚನೆಯನ್ನು ಬಾಬು ಸತೀಶಚಂದ್ರ ಬಾನರ್ಜಿಯವರು ತಂದರು. ಡಾ॥ ಜೇಜ್ ಬಹದೂರ್ ಸಪ್ರುಯವರು, ರಾ॥ ಬ॥ ಆದಿನಾರಾಯಣಯ್ಯ, ಮಿ॥ ಹರಿಚಂದ್ರವಿಷ್ಣುದಾಸ್, ಮಿ॥ ನವಾಬ್ ಸದ್ದಿಕ್ ಅಲ್ಲಿಖಾನ್ ಮಿ॥ ಸಯ್ಯದ್ ಹುಸೇನ್, ಬಾಬು ಸುರೇಂದ್ರನಾಥ ಬಾನರ್ಜಿ-ಇವರು ಅನುಮೋದನಪರ ಭಾಷಣಮಾಡಿದ ಬಳಿಕ ಸರ್ವಾನುಮತಿಯಿಂದ ನಿರ್ಧಾರವಾಯಿತು.

ಲೋಕಲ್‌ಬೋರ್ಡು, ಡಿಸ್ಟ್ರಿಕ್ಟ್ ಬೋರ್ಡು ಮೊದಲಾದುವುಗಳಲ್ಲಿ ಜಾತಿವಾರು "ಓಟು" ಗಳನ್ನು ಕೊಟ್ಟು ಪ್ರತಿನಿಧಿಗಳನ್ನಾರಿಸುವ ಏರ್ಪಾಟನ್ನು ಮುಂದೆ ಅಲ್ಲಿಗೂ ಕಲ್ಪಿಸದಂತೆ ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ಸೂಚನೆಯನ್ನು ಆ॥ ಜಿಹ್ನಾರವರು ತಂದರು. ಆ॥ ಮಿ॥ ಹಕ್ ರವರೂ, ಮಿ॥ ಹಸನ್ ಇಮಾಂರವರೂ ಅಭಿಮತಿಸಲು, ಸರ್ವಾನುಮತದಿಂದ ನಿರ್ಧಾರವಾಯಿತು.

ಶಾಂತಿಕಾರಕ ಸಂಘ.— ಮತವಿಷಯಕವಾದ ವಿಶೇಷ ದಿನಗಳಲ್ಲಿ ಜನಗಳೊಳಗೆ ಗದ್ದಲ ಕಲಹ ಮೊದಲಾದುವುಗಳುಂಟಾಗದಂತೆ ನೋಡಿಕೊಳ್ಳಲೂ, ಸಮಾಧಾನಪಡಿಸಲೂ ಸಾಧಕವಾದ ಒಂದು ಸಂಘವನ್ನೇರ್ಪಡಿಸಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ಸೂಚನೆಯನ್ನು ಮಿ॥ ದಿವಾಕರ್‌ರವರು ತಂದುದಕ್ಕೆ, ಮಿ॥ ರಾಮಕುಮಾರ ಗುಹಾಂಕರವರು ಅಭಿಮತಿಸಲು, ಸರ್ವಾನುಮತದಿಂದ ನಿರ್ಧಾರವಾಯಿತು.

ಮಧ್ಯಪ್ರಾಂತಕ್ಕೂ, ಪಂಜಾಬಿಗೂ ಒಂದೊಂದು ನಿಯಮನಿರ್ಮಾಣ ಸಭೆಯ ಏರ್ಪಾಟನ್ನು ಮಾಡಿಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ನಿರ್ಧಾರವು ಸಭಾಧ್ಯಕ್ಷರಿಂದ ಸೂಚಿಸಲ್ಪಟ್ಟು ಸರ್ವರಿಂದಲೂ ಅನುಮೋದಿತವಾಯಿತು.

ಭರತಖಂಡಕ್ಕೂ, ಸೀಮೆಗೂ ಈಗ ಇರುವ ತಂತ್ರೀವಾರ್ತೆಯ ಛಾರ್ಜನ್ನು ಕಡಿಮೆ ಮಾಡಿಕೊಡಬೇಕೆಂದು ಪ್ರಾರ್ಥಿಸುವ ಸೂಚನೆಯು ಸಭಾಧ್ಯಕ್ಷರಿಂದಲೇ ಮಾಡಲ್ಪಟ್ಟು ನಿರ್ಧಾರವಾಯಿತು. ಆ ದಿನದ ಸಭಾಕಾರ್ಯವು ಅಲ್ಲಿಗೆ ಮುಗಿದಿತು.

ತಾ॥ ೨೯ ರ ಬೆಳಿಗ್ಗೆ ಸಭೆಯು ಯಥಾವತ್ತು ಕೂಡಿತು ಮಧ್ಯಮ ಪ್ರೌಢ ವಿದ್ಯಾಭ್ಯಾಸಗಳಿಗೆ ವಿಶೇಷ ದ್ರವ್ಯವ್ಯಯವನ್ನು ಮಾಡಬೇಕು. ಕೈಗಾರಿಕೆ ಕಲಾಶಿಕ್ಷಣಗಳ ಪ್ರಸಾ [illegible] ನನ್ನುಂಟುಮಾಡಬೇಕು ಈಗಿನ ವಿಪಕ್ಷ [illegible] ಗಗಳಲ್ಲಿ [illegible] ನುಕೂಲವಾಗುವಂತೆ [illegible] ದವಲ್ಲವೆಂ [illegible] ಣಿಗಳನ್ನು ಮಾಡಿಕೊಡ [illegible] ಕಾರದವರನ್ನು ಪ್ರಾರ್ಥಿಸ [illegible] ಯನ್ನು ಮಿ॥ ಪತ್ರೋಯವರು ತರಲು, ಬಾಬು ಪುಳಿನಚಂದ್ರದಾಸ್, ಮಿ॥ ದೇವಪ್ರಸಾದ ಶುಕ್ಲ, ಮಿ॥ ಎ. ಆರ್. ದೀಕ್ಷಿತ, ಮಿ॥ ಕಾಮಕಾಂತಮಾಳವ್ಯ— ಇವರುಗಳು ಅಭಿಮತಿಸಲು, ನಿರ್ಧಾರವಾಯುತು.

ಬಳಿಕ 'ಸಿವಿಲ್ ಸರ್ವಿಸ್' ಪರೀಕ್ಷೆಯು ಇಂಗ್ಲೆಂಡಿನಲ್ಲೂ ಭರತಖಂಡದಲ್ಲೂ ಏಕಕಾಲದಲ್ಲಾಗಬೇಕು.— ಪೋಲೀಸ್ ಶಾಖೆಯಲ್ಲಿ ದೊಡ್ಡ ಅಧಿಕಾರಸ್ಥಾನಗಳು ಭಾರತೀಯರಿಗೂ ದೊರೆಯುವಂತೆ ಮಾಡುವುದಕ್ಕೆ ಪೋಲೀಸ್ ಪೋಟಾಪೋಟಿ ಪರೀಕ್ಷೆಯಲ್ಲಿ ಭಾರತೀಯರಿಗೂ ಪ್ರವೇಶವುಂಟಾಗುವಂತೆ ಮಾಡಬೇಕು.— ವರ್ಷವರ್ಷ ಸೈನ್ಯಶಾಖೆಗೆ ಮಾಡಲ್ಪಡುವ ವೆಚ್ಚವು ಹೆಚ್ಚಾಗುತ್ತಿರುವುದನ್ನು ಕಡಿಮೆಮಾಡಬೇಕು.— ಈಗ ನೂತನ ರಾಜ್ಯಭಾರವಹನೋತ್ಸವವು ನಡೆದಿರುವುದರಿಂದ ಇದರ ಜ್ಞಾಪಕಾರ್ಥವಾಗಿ ರಾಜಕೀಯ ಬಂದಿಗಳನ್ನು ಸೆರೆಯಿಂದ ಬಿಡಿಸಿಕೊಡುವಂತೆ ಮಾಡಬೇಕು.— ಎಂಬ ನಿರ್ಧಾರಗಳು ಮಾಡಲ್ಪಟ್ಟುವು. ತರುವಾಯ ಬಂಗಾಳಾ ಪ್ರಾಂತಿಕ ಸಭೆಯವರು ರಾಷ್ಟ್ರೀಯ ಕಾರ್ಯಕ್ರಮದ ವಿಷಯದಲ್ಲಿ ಕೊಟ್ಟಿದ್ದ ಸೂಚನೆಯನ್ನು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರು ಪರ್ಯಾಲೋಚಿಸಿ, ಮುಂದಿನ ಕಾಂಗ್ರೆಸ್ ಕಾಲದೊಳಗಾಗಿ ತಮ್ಮ ಅಭಿಪ್ರಾಯವನ್ನು ವರದಿ ಮಾಡಬೇಕೆಂದು ನಿರ್ಧಾರವಾಯಿತು.

ಕಡೆಗೆ ಬಾಬು ಸುರೇಂದ್ರನಾಥ ಬಾನರ್ಜಿಯವರು ಸರ್. ವಿಲಿಯಂ ವೆಡರ್‌ಬರ್ನರವರು ಭರತಖಂಡದ ಹಿತಚಿಂತನೆಗಾಗಿ ಬಹುದೂರ ಪ್ರಯಾಣಮಾಡಿ ಬಂದು ಈ ಮಹಾಸಭಾಕಾರ್ಯವನ್ನು ನೆರವೇರಿಸಿದುದಕ್ಕಾಗಿ ಸಭಿಕರ ಪರವಾಗಿ ಕೃತಜ್ಞತಾಪುರಸ್ಸರವಾದ ವಂದನೆಯನ್ನು ತಿಳಿಸಿದರು. ಅದರಂತೆ ಕಾಂಗ್ರೆಸ್ ಅಭಿಮಾನಿಗಳಾದ ಮಿ॥ಹ್ಯೂಂ ಮೊದಲಾದ ಬ್ರಿಟಿಷ್ ಮಹಾಜನಗಳಿಗೆಲ್ಲಾ ವಂದನೆಯನ್ನು ತಿಳಿಸಿದರು. ಮುಂದಿನ ಸಭೆಯು ಕಲ್ಕತ್ತಾದಲ್ಲಿ ನೆರವೇರಬೇಕೆಂದು ನಿರ್ಧರಿಸಲ್ಪಟ್ಟಿತು.

ಸಾರ್ವಜನಿಕ ಮಹಾಸಭೆಯ ಅಧ್ಯಕ್ಷರ ಭಾಷಣದ ಸಾರಾಂಶ:—

ನೀವು ನನ್ನನ್ನು ಈ ಸಾರ್ವಜನಿಕ ಮಹಾಸಭೆಗೆ ೨ ನೆ ಅವೃತ್ತಿ ಅಗ್ರಾಸನಾಧಿಪತಿಯನ್ನಾಗಿ ಆರಿಸಿಕೊಂಡುದನ್ನು ನೋಡಲಾಗಿ, ನನ್ನಮೇಲೆ ನಿಮಗೆ ದೊಡ್ಡ ನಂಬುಗೆಯಿದೆಯೆಂದು ಹೇಳಬೇಕಾಗುತ್ತದೆ. ನನಗೆ ನೀವು ಈಗ ಮಾಡಿರುವ ಗೌರವವು ಅತ್ಯಂತ ಘನವಾಗಿರುವಂತೆಯೇ ನಾನಾಚರಿಸಬೇಕಾದ ಕರ್ತವ್ಯವೂ ದೊಡ್ಡದಾಗಿಯೇ ಇರುವುದು,

ನನ್ನಲ್ಲಿ ಅನೇಕ ಲೋಪಗಳಿರಬಹುದಾದರೂ ನಿಮಗೆ ಮೇಲನ್ನುಂಟುಮಾಡಬೇಕೆಂಬ ಕೋರಿಕೆಯುಮಾತ್ರ ನನ್ನಲ್ಲಿ ಸಂಪೂರ್ಣವಾಗಿರುವುದು. ನಿಮ್ಮ ಇಷ್ಟಾರ್ಥಗಳ ವಿಷಯದಲ್ಲಿ ನನ್ನ ಮನಃಪೂರ್ವಕವಾದ ಸಹಾನುಭೂತಿಯು ಸಮಗ್ರವಾಗಿರುವುದು. ಇನ್ನು ಮುಂದೆ ಭರತಖಂಡಕ್ಕೆ ಕ್ಷೇಮವುಂಟಾಗುವುದೆಂಬ ನಂಬುಗೆಯಿದೆ. ಕಾಲಗತಿಯ ಫಲಾಫಲವು ಅನುಭವಿಸಿಯೇ ತೀರಬೇಕಾದುದರಿಂದ, ಪ್ರತಿಯೊಬ್ಬರೂ ಅದೃಷ್ಟವನ್ನು ಅನುಭವಿಸದೆ ಮುಗಿಯದು. ಭಾರತೀಯರು ಯೋಗ್ಯತಾಸಂಪನ್ನರು ; ನ್ಯಾಯಶಾಸನಗಳಿಗೆ ಒಳಪಟ್ಟು ನಡೆಯತಕ್ಕ ಸ್ವಭಾವದವರು. ಮತ್ತೂ ಅವರು ಸೈರಣೆಯುಳ್ಳವರೂ, ಸಾಹಸಿಗಳೂ ಸೌಮ್ಯರೂ ಆಗಿರುವರು. ಅವರು ತಮ್ಮ ವ್ಯವಹಾರಗಳನ್ನು ತಾವೇ ನೆರವೇರಿಸಿಕೊಳ್ಳತಕ್ಕ ಸಾಮರ್ಥ್ಯವುಳ್ಳವರೂ ಆಗಿರುವರು. ಆದುದರಿಂದ ಮುಂದಣ ಶುಭಸೂಚನೆಗಳಿಗೆ ನೀವೇ ಕಾರಣಭೂತರು. ನೀವು ವಿದ್ಯಾವಂತರೂ, ಬುದ್ಧಿಶಾಲಿಗಳೂ ಆಗಿ ನ್ಯಾಯವಿಧಿಗೆ ಬದ್ಧರಾಗಿದ್ದುಕೊಂಡು ದೇಶಸೇವೆಯನ್ನು ಮಾಡುವುದಕ್ಕೆ ಕುತೂಹಲವುಳ್ಳವರಾಗಿದ್ದೀರಿ. ಭಾರತೀಯರು ಸ್ವರಾಜ್ಯಪರಿಪಾಲನೆಯನ್ನು ಮಾಡಿಕೊಳ್ಳಲು ಅರ್ಹರಾಗುವಂತೆ ಮಾಡುವುದಕ್ಕೆ ಈ ಮಹಾಸಭೆಯು ಸುಲಭೋಪಾಯವನ್ನು ಬೋಧಿಸಿಕೊಡಬಲ್ಲುದೆಂದು ನನ್ನ ನಂಬುಗೆಯು. ನಾವು ಇಷ್ಟಾರ್ಥಗಳನ್ನು ಕೋರುತ್ತಲೇ ಇದ್ದು ಪ್ರತಿಫಲವನ್ನು ನಿರೀಕ್ಷಿಸದೆಯೇ ಇದ್ದರೆ, ನಮಗೆ ಅತೃಪ್ತಿಯೆಂಬುವುದು ಸಂಭವಿಸುವುದೇ ಇಲ್ಲ. ಭಾರತೀಯರ ಮಿತ್ರರಿಗೂ ಸಹ ಇಷ್ಟಾರ್ಥಗಳನ್ನು ಕೋರುವುದಕ್ಕೆ ೨೦ ವರ್ಷಗಳಿಂದಲೂ ಅವಕಾಶವಿಲ್ಲದೆ ಇದ್ದಿತು. ಮಾನವಕೋಟಿಯು ಅನುಭವಿಸಬೇಕಾದ ಪಡುಪಾಟುಗಳೇ ಭರತಖಂಡಕ್ಕೊ ಸಂಪ್ರಾಪ್ತವಾಗಿವೆ. ಯುದ್ಧ, ಕ್ಷಾಮ, ಭೂಕಂಪ ಅತಿವೃಷ್ಟಿ ಮೊದಲಾದುವುಗಳಿಂದ ಭಾರತೀಯರು ಹಿಂಸಿತರಾಗಿರುವುದರಿಂದ ಅವರು ನಿರಾಶರಾಗಿದ್ದಾರೆ. ಈಗತಾನೇ ಸ್ವಲ್ಪ ಬೆಳಕು ತೋರಿದೆ. ನಮ್ಮ ಇಷ್ಟಾರ್ಥವನ್ನು ಕೋರುವ ಕಾಲವು ಸನ್ನಿಹಿತವಾಗಿದೆ. ನೀವು ಈಗ ನಿಮ್ಮ ಒಳಗಿನ ಭೇದಗಳನ್ನು ಮರೆತುಬಿಟ್ಟು, ನ್ಯಾಯಮಾರ್ಗದಿಂದ ನಿಮ್ಮ ಕೋರಿಕೆಗಳನ್ನು ಕೋರಿ [illegible] ಲಸಗಳೆಷ್ಟೋ [illegible], ಜೇನುತುಪ್ಪದಂತೆ ಹಿಂಗಳ [illegible] ಆದ ದಂ [illegible] ರೋಣವ [illegible] ಷಮಾಡಿ ಫಲವನ್ನನುಭವಿಸಿರಿ. ನನ್ನ ಸಂಕ್ಷಿಪ್ತವಾದ ಉಪದೇಶವೇನೆಂದರೆ– ಕೋರಿಕೆ ಮತ್ತೂ ಸಮಾಧಾನಗಳು. ಏಕಕಾರ್ಯಸಾಧನೆಗಾಗಿ ಎಲ್ಲರೂ ಏಕೀಭವಿಸಿ, ಪ್ರಯತ್ನಿಸಬೇಕು. ೧೮೫೮ ನೇಯ ವರ್ಷದಲ್ಲಿ ಶ್ರೀ ವಿಕ್ಟೋರಿಯಾ ಮಹಾರಾಣಿಯವರು ದಯಪಾಲಿಸಿದ ಪ್ರಕಟನ ಪತ್ರಿಕೆಯನ್ನನುಸರಿಸಿ, ಭಾರತೀಯರು ಯೋಗ್ಯತಾನುಸಾರ ಉನ್ನತಾಧಿಕಾರಗಳಲ್ಲಿ ನಿಯಮಿಸಲ್ಪಡುವುದಕ್ಕೂ, ನಿಯಮನಿರ್ಮಾಣ ಸಭಿಕರ ಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಸಹ ಸ್ವರ್ಗವಾಸಿ ಎಡ್ವರ್ಡ್ ಚಕ್ರವರ್ತಿಯವರು ಭಾಷೆಯನ್ನಿತ್ತಿದ್ದರು. ಅವನ್ನು ಲಾರ್ಡ್ ಮಾರ್ಲೆಯವರು ನೆರವೇರಿಸಿಕೊಟ್ಟರು. ಆದುದರಿಂದ ಇನ್ನಷ್ಟು ಹೆಚ್ಚಿನ ಕೋರಿಕೆಗಳನ್ನು ಕೋರುವುದಕ್ಕೆ ಹೆಚ್ಚಿನ ಅವಕಾಶವು ದೊರೆದಿರುತ್ತದೆ. ಈಗ ನಿರಾಶರಾಗಕೂಡದು. ರಾಜ್ಯತಂತ್ರದಲ್ಲಿರುವ ಲೋಪಗಳನ್ನು ತೋರಿಸಿದರೆ ಅಧಿಕಾರಿಗಳಿಗೆ ಕೋಪ ಬರುತ್ತದೆ. ಪ್ರಭುತ್ವ ಮಾಡತಕ್ಕವರಿಗೆ ಅವರ ಲೋಪಗಳನ್ನು ತಿಳಿಯಪಡಿಸದಿದ್ದರೆ ವಿಧಿಯಿಲ್ಲ. ಪ್ರಜೆಗಳು ಅಧಿಕಾರಿಗಳ ನಿಷ್ಠುರಕ್ಕೆ ಪಾತ್ರರಾಗಕೆಲಸವಿಲ್ಲ. ಪ್ರಜೆಗಳ ಕ್ಷೋಭೆಗಳನ್ನು ಪ್ರಭುತ್ವದವರಿಗೆ ತಿಳಿಯಪಡಿಸುವುದಕ್ಕೆ ನಿಯಮನಿರ್ಮಾಣಸಭಿಕರು ಇರುವರು. ವಿದ್ಯಾಭಿವೃದ್ಧಿಯನ್ನು ಕುರಿತು ಶ್ರದ್ಧೆಯಿಂದ ಕೆಲಸಮಾಡತಕ್ಕವರು ಬೇಕಾಗಿರುವುದರಿಂದ ಸರ್ಕಾರದಧಿಕಾರಿಗಳೂ, ಪ್ರಜಾಪ್ರತಿನಿಧಿಗಳೂ, ಪ್ರಮುಖರೂ, ಸಮಾಧಾನದಿಂದ ಕಲೆತು ಕೆಲಸಮಾಡುವುದು ಅವಶ್ಯಕವು. ಅದಕ್ಕಾಗಿ ಕಲಹಗಳೆಲ್ಲವನ್ನೂ ಮರೆತುಬಿಡಬೇಕು. ಐರೋಪ್ಯರಿಗೂ, ಭಾರತೀಯರಿಗೂ–ಹಿಂದುಗಳಿಗೂ ಮಹಮ್ಮದೀಯರಿಗೂ– ಸೌಮ್ಯಪಕ್ಷದವರಿಗೂ ಉಗ್ರಪಕ್ಷದವರಿಗೂ–ಇರುವ ಅಂತರವು ತಪ್ಪಿಹೋಗಬೇಕು. ಕಳೆದ ೨೫ ವರ್ಷಗಳಿಂದಲೂ ಪ್ರಜೆಗಳು ಮಹಾಸಭೆಯ ಮೂಲಕವಾಗಿ ತಮ್ಮ ಸ್ಥಿತಿಗಳನ್ನು ತಿಳಿದುಕೊಳ್ಳುತ್ತಿದ್ದರು. ಅವೆಲ್ಲವನ್ನೂ ಪ್ರಭುತ್ವದವರು ಅಲಕ್ಷೀಕರಿಸಿ, ಅತ್ಯಂತ ಕಠಿಣಗಳಾದ ಶಾಸನಗಳನ್ನು ನಿರ್ಮಿಸುತ್ತ ಬಂದುದರಿಂದ ಪ್ರಜೆಗಳಿಗೂ ಅಧಿಕಾರಿಗಳಿಗೂ ಮಧ್ಯದಲ್ಲಿ ಸಮಾಧಾನವಿರುವುದಕ್ಕೆ ಅವಕಾಶವಿಲ್ಲದೆ ಹೋಯಿತು. ಕಷ್ಟಪ್ರದವಾದ ಅಂಥ ಕಠಿನವಿಧಿಗಳನ್ನು ತೆಗೆದುಹಾಕಿ ಬಿಟ್ಟರೆ, ಇವರವರಲ್ಲಿ ಸಖ್ಯವು ಬೆಳೆಯುವುದು. ಮಹಮ್ಮದೀಯರಿಗೂ ಹಿಂದುಗಳಿಗೂ ಕಲಹಗಳು ಸಂಭವಿಸುತ್ತಿವೆ. ಅದರ ನಿವೃತ್ತಿಗಾಗಿ ಮಿ॥ ಆಗಾಖಾನ್ ಮೊದಲಾದವರು ಹಿಂದೂ ಮಹಮ್ಮದೀಯ ಸಭೆಯೊಂದನ್ನೇರ್ಪಡಿಸಿ, ಇವರಿಬ್ಬರಿಗೂ ಐಕಮತ್ಯವುಂಟಾಗುವಂತೆ ಮಾಡಬೇಕೆಂದಿದ್ದಾರೆ. ಇದೇ ಭರತಖಂಡದ ಅಭಿವೃದ್ಧಿಗೆ ಕಾರಣವು. ಮಿ॥ ಸಯಾನಿಯವರು ಹೇಳಿರುವ ಲೋಪಗಳನ್ನು ಈ ಎರಡು ಜನವರ್ಗದವರೂ ಏಕೀಭವಿಸಿ ಪರಿಹರಿಸಿಕೊಳ್ಳತಕ್ಕದು ಅವಶ್ಯಕವು. ದೇಶೀಯ ಮಹಾಸಭೆಗಳನ್ನು ನೆರವೇರಿಸಿ, ವಿಜ್ಞಾಪನಪತ್ರಿಕೆಗಳ ಮೂಲಕ ಇಷ್ಟಾರ್ಥಗಳನ್ನು ಪೂರ್ತಿಮಾಡಿಕೊಳ್ಳಬಹುದೆಂದು ಕೆಲವರು ವಾದಿಸುವರು. ಇಂತಹ ಯಾಚಕಪದ್ಧತಿಯು ಪ್ರಯೋಜಕವಾದುದಲ್ಲವೆಂದು ಇನ್ನು ಕೆಲವರು ಅಭಿಪ್ರಾಯಪಡುತ್ತಾರೆ. ಈಗ್ಗೆ ೩೦೦ ವರ್ಷಗಳ ಹಿಂದೆ ಇಂಗ್ಲೆಂಡಿನಲ್ಲಿ ಪ್ರಜೆಗಳು " ಪಿಟಿಷನ್ ಆಫ್ ರೈಟ್ " ಎಂಬ ಸ್ವಾತಂತ್ರ್ಯವನ್ನು ಸಂಪಾದಿಸಿದರು. ಅವರು ಯಾಚಕಪದ್ಧತಿಯನ್ನು ಅವಲಂಬಿಸಿದವರಲ್ಲ. ಅವರು ಆಗ ದೊರಕಿಸಿಕೊಂಡ ಸ್ವಾತಂತ್ರ್ಯವನ್ನು ನಾವು ಈಗ ಅನುಭವಿಸುತ್ತಿದ್ದೇವೆ. ಬರೆದ ಕಾಗದಗಳ ಅಡಿಯಲ್ಲಿ ಹಸ್ತಾಕ್ಷರವನ್ನು ಹಾಕುವಾಗ " ನಿಮ್ಮ ವಿಧೇಯ, ಸೇವಕನಾದ ಇಂಥವನು" ಎಂದು ಬರೆದುಕೊಳ್ಳುತ್ತಿರುತ್ತೇವೆ. ಹಾಗೆ ಬರೆದ ಮಾತ್ರದಿಂದಲೇ ಅವರ ಸೇವಕರಾಗಿ ಹೋಗುತ್ತೇವೆಯೆ? ಅಧಿಕಾರಿಗಳಿಗೆ ನಮ್ಮ ಇಷ್ಟಾರ್ಥಗಳನ್ನು ತಿಳುಹಿಸುವಾಗ ನಮ್ರತೆಯಿಂದಿರುವುದು ಒಂದು ಪದ್ಧತಿಯು. ಆದುದರಿಂದ ಓ ಹಿಂದುಗಳಿರಾ ? ನೀವು ಇಂತಹ ಭಿನ್ನಾಭಿಪ್ರಾಯಗಳನ್ನು ಬಿಟ್ಟು, ಐಕಮತ್ಯದಿಂದ ಕೆಲಸಮಾಡಿರಿ. ಪ್ರಜೆಗಳೂ ಪ್ರಭುತ್ವದ ಅಧಿಕಾರಿಗಳೂ ಕಲೆತು, ಒಬ್ಬರ ಅಭಿಪ್ರಾಯವನ್ನು ಮತ್ತೊಬ್ಬರು ತಿಳಿದುಕೊಂಡು, ಸ್ನೇಹಭಾವದಿಂದ ವರ್ತಿಸಿದರೆ ಅತ್ಯಂತ ಕ್ಷೇಮಕರವಾಗಿರುವುದು. ಮೊದಮೊದಲು ೧೮೮೮ ನೇಯ ವರ್ಷಕ್ಕೆ ಹಿಂದೆಯೂ, ೧೯೦೪ ನೇಯ ವರ್ಷದಲ್ಲೂ ನಾನು ಹೇಳಿದ ವಿಷಯವು ಎಂದರೆ– " ಬ್ರಿಟನ್ನಿನವರಿಗೆ ಭರತಖಂಡದ ವಿಷಯವು ಚೆನ್ನಾಗಿ ತಿಳಿಯದು. ಆದುದರಿಂದ ಅವರ ತಿಳಿವಿಕೆಗಾಗಿ ಇಂಗ್ಲೆಂಡಿನಲ್ಲಿ ದೇಶೀಯ ಮಹಾಸಭೆಯನ್ನು ನೆರವೇರಿಸಬೇಕು." ಎಂದು ಹೇಳಿದುದನ್ನು ನೀವು ಮರೆತಿರಬಹುದು. ಆದುದರಿಂದ ಈಗಲೂ ಅದೇ ಮಾತನ್ನು ಹೇಳುತ್ತೇನೆ. ಲಾಲಮೋಹನಗೋಸ್–ಮದನಮೋಹನಗೋಸ್ ಮೊದಲಾದವರು ಇಂಗ್ಲಾಂಡಿಗೆ ಬಂದು ತಮ್ಮ ವಾಗ್ಝರಿಯಿಂದ ಅಲ್ಲಿನ ಪ್ರಜೆಗಳಿಗೆ ಭರತಖಂಡದ ವಿಷಯವನ್ನು ತಿಳುಹಿಸಿಕೊಟ್ಟರು. ಅದು [illegible]

ಗಲು ಸ್ವಾಮಿಗೆ ಬಹುಕಾಲ ಸಿಂಹಾಸನಸ್ಥಿತಿಯನ್ನು [illegible]ಯನ್ನು ಮಾಡುವುದು. ಶರೀರಕಾಂತಿಗೆ ಸಮಾನವಾದ ಕಾ[illegible]ಹುಟ್ಟಿರುವುದು [illegible]ವಾದ ಕೋ[illegible], ಒಂದೊಂದು [illegible]ಬೇಡಿ. ಸ್ವಪ್ರಜಾಪರಿಪಾಲನಕ್ಕೆ ಬೇಕಾದ ಜ್ಞಾನವೂ, ಶಾಂತಿ ಮೊದಲಾದ ಸದ್ಗುಣಗಳೂ ನಿಮ್ಮಲ್ಲಿವೆ. ಅವನ್ನು ಹೇಗೆ ಉಪಯೋಗಪಡಿಸಿಕೊಳ್ಳಬೇಕೋ ಅದು ನಿಮಗೆ ತಿಳಿಯದು. ಆದುದರಿಂದ ಅವನ್ನು ನೀವು ಅರಿತುಕೊಳ್ಳಿರಿ. ಆಂಗ್ಲಜನರೊಡನೆ ಕಲೆತು ಪ್ರವರ್ತಿಸಿದರೆ ನೀವು ಕ್ಷೇಮಗೊಳ್ಳುವಿರಿಯೆಂಬುದೇ ನಾನು ಈಗ ನಿಮಗೆ ಮಾಡುವ ಹಿತೋಪದೇಶವು.

ಚಂದಾದಾರರು ಅಗತ್ಯ ಗಮನಿಸತಕ್ಕದು.

ಚಂದಾ ಹಣವನ್ನು ಕಳುಹುವಂತೆ ಎಷ್ಟು ವಿಧವಾಗಿ ಪ್ರಾರ್ಥಿಸಿ ಕಾಗದಗಳನ್ನು ಬರೆದಾಗ್ಯೂ ಅನೇಕರು ಗಮನಿಸದೆ ಮೌನರಾಗಿರುವುದರಿಂದಲೂ, ಕಳೆದ ತಿಂಗಳ ಕಡೆಗೆ ವರ್ಷವು ಪೂರೈಸಿದುದರಿಂದಲೂ ಚಂದಾಕೊಡಬೇಕಾದ ಪ್ರತಿಯೊಬ್ಬರಿಗೂ ಪತ್ರಿಕೆಯನ್ನು ವಿ. ಪಿ. ದ್ವಾರಾ ಕಳುಹಲು ಯತ್ನಿಸಿರುತ್ತೇವೆ. ಮಹನೀಯರು ತಮಗೆ ಪ್ರತ್ಯೇಕ ಕಾಗದಗಳನ್ನು ಬರೆಯಲಿಲ್ಲವೆಂದು ಉದಾಸೀನರಾಗಿ ವಿ. ಪಿ. ಯನ್ನು ಹಿಂತಿರುಗಿಸದೆ ಇದೇ ಅನೇಕ ಪ್ರಾರ್ಥನಾ ಪತ್ರಿಕೆಯೆಂದು ಭಾವಿಸಿ, ಹಣವನ್ನು ಕೊಟ್ಟು ತೆಗೆದುಕೊಳ್ಳುವರೆಂದು ಪೂರ್ಣವಾಗಿ ನಂಬಿರುತ್ತೇವೆ. ಹಣವನ್ನು ಮನಿಯಾರ್ಡರ್ ದ್ವಾರಾ ಕಳುಹುವಾಗ್ಗೆ ಪ್ರತಿಯೊಬ್ಬರೂ ತಪ್ಪದೆ ತಮ್ಮ ರಿಜಿಸ್ಟರ್ ನಂಬರನ್ನು ತಿಳುಹಬೇಕು. ಹಾಗಲ್ಲದಿದ್ದಲ್ಲಿ ಹಣವು ಲೆಕ್ಕಕ್ಕೆ ಸೇರಲು ಮಾರ್ಗವಿಲ್ಲದೆ ಕೈಬಿಟ್ಟು ಹೋಗುವ ಸಂಭವವುಂಟು. ಮ್ಯಾನೇಜರ್.

ಮೈಸೂರ್ ಸ್ಟಾರ್.

೧೯೧೧ ನೇ ಜನವರಿ ತಾ॥ ೨ ನೇ ಸೋಮವಾರ.

೨೬ ನೇಯ ರಾಷ್ಟ್ರೀಯ ಸಾರ್ವಜನಿಕ ಮಹಾಸಭೆ.

ಈ ವರ್ಷದ ಮಹಾಸಭೆಯು ಅಲಹಾಬಾದಿನಲ್ಲಿ (ಪ್ರಯಾಗ) ಸಾಂಗವಾಗಿ ನೆರವೇರಿದ ಸಂಗತಿಯನ್ನು ಈ ಪತ್ರಿಕೆಯ ಬೇರೆ ಕಡೆಯಲ್ಲಿ ವಿವರಿಸಿದ್ದೇವೆ. ಈ ಸಭೆಗೆ ಅಧ್ಯಕ್ಷರಾಗಲು, ಸರ್ ವಿಲಿಯಂ ವೆಡ್ಡರ್ಬರ್ನರವರು ಸೀಮೆಯಿಂದ ಪ್ರಯಾಣ ಮಾಡಿ ಬಂದುದರಿಂದಲೂ, ಪ್ರಯಾಗದಲ್ಲೇ ಈವರ್ಷದ ವಸ್ತುಪ್ರದರ್ಶನವು ಘನತರವಾಗಿ ಇದೇ ಸಮಯದಲ್ಲಿ ನಡೆಯುತ್ತಿದ್ದುದರಿಂದಲೂ, ಸಭೆ ಕೂಡಿದ ಪಟ್ಟಣವು ಗಂಗಾ ಯಮುನಾ ಸರಸ್ವತಿಯ ಸಂಗಮಸ್ಥಲವಾದುದರಿಂದ ಪುಣ್ಯಕ್ಷೇತ್ರವಾಗಿರುವುದರಿಂದಲೂ, ಈ ಸಲದ ಮಹಾಸಭೆಗೆ ಪ್ರತಿನಿಧಿಗಳೂ, ಪ್ರೇಕ್ಷಕರೂ ವಿಶೇಷವಾಗಿಯೇ ಬರುವರೆಂಬ ನಿರೀಕ್ಷಣೆಯಿಂದ ಕಾರ್ಯನಿರ್ವಾಹಕಸಂಘದವರು ಅದಕ್ಕೆ ತಕ್ಕಂತೆ ಸಭಾಮಂದಿರವನ್ನು ಕೋಟೆ ಮಗ್ಗುಲ ನದೀತೀರದ ಬಯಲಿನಲ್ಲಿ ವಿಶಾಲವಾಗಿ ರಚಿಸಿರು. ಇದರ ಒತ್ತಿನಲ್ಲೇ ವಸ್ತುಪ್ರದರ್ಶನಾಲಯವೂ ಏರ್ಪಡಿಸಲ್ಪಟ್ಟಿರುವುದು. ಇವೆರಡೂ ಸೇರಿ ಎರಡು ಮೈಲಿಗಳವರೆಗೂ ವ್ಯಾಪಿಸಿರುವುವು. ಸೂರತ್ತಿನಲ್ಲಿ ಈ ಮಹಾಸಭೆಯು ಅವ್ಯವಸ್ಥೆಯಾದಂದಿನಿಂದೀಚೆಗೆ ಈಸಲದಷ್ಟು ವಿಶೇಷ ವಿಜೃಂಭಣೆಯಿಂದಲೂ, ಶಾಂತರೀತಿಯಿಂದಲೂ ಈ ಮಹಾಸಭೆಯು ನೆರವೇರಿರಲಿಲ್ಲ. ಎಲ್ಲಪ್ರಾಂತದ ಪ್ರತಿನಿಧಿಗಳೂ ತಕ್ಕಮಟ್ಟಿಗೆ ಈಸಲ ಕೂಡಿದ್ದುದಲ್ಲದೆ, ಮದ್ರಾಸು ಆಧಿಪತ್ಯದ ಪ್ರತಿನಿಧಿಗಳು ವಿಶೇಷವಾಗಿದ್ದರು. ಆದರೆ ಪಂಜಾಬು ಆಧಿಪತ್ಯದಿಂದ ಬಂದಿದ್ದವರು ಮಾತ್ರ ಸ್ವಲ್ಪವೇ ಆಗಿದ್ದರು.

ಈ ಸಭೆಯ ಅಧ್ಯಕ್ಷರು ಸ್ವಸ್ಥಾನವನ್ನು ಬಿಟ್ಟು ಹೊರಡುವಾಗ್ಗೆ ಹಿಂದೂ ಮಹಮ್ಮದೀಯರ, ಉಗ್ರಸೌಮ್ಯಪಕ್ಷದವರ, ಹಿಂದೂ ಐರೋಪ್ಯರ–ಮಧ್ಯದ ಅಂತರವನ್ನು ಕಡಿಮೆಮಾಡಿ ಐಕ್ಯವನ್ನು ಬೆಳೆಸುವ ಸಂಕಲ್ಪವನ್ನು ವಹಿಸಿ ಬಂದುದಕ್ಕೆ ಅನುಸಾರವಾಗಿ ಅವರ ಭಾಷಣವಲ್ಲಾದರೂ ಅದೇ ತತ್ವವನ್ನು ತೋರಿಸಿರುವರು. ಈಗಿನ ಸಮಯದಲ್ಲಿ ರಾಜ್ಯಹಿತಚಿಂತಕರು ಯಾವರೀತಿಯಿಂದ ತಮ್ಮ ಇಷ್ಟಾರ್ಥವನ್ನು ಸಾಧಿಸಬೇಕೆಂಬ ವಿಷಯದಲ್ಲಿ ಮಾರ್ಗದರ್ಶನವನ್ನು ಮಾಡುವ ಭಾಗವೇ ಇವರ ಉಪನ್ಯಾಸದಲ್ಲಿ ವಿಶೇಷವಾಗಿರುವುದು. ಮತ್ತೂ ಉಗ್ರಪಕ್ಷ ಸೌಮ್ಯಪಕ್ಷದವರೀರ್ವರಿಗೂ ಸಮನಾದ ಹಿತಬೋಧೆಯನ್ನು ಮಾಡಿ, ಅವೆರಡು ಪಕ್ಷದವರ ಇಷ್ಟಕ್ಕೂ ವಿರೋಧವಿಲ್ಲದಂತೆ ಸ್ವದೇಶೋದ್ಯಮ-ವಂಗಭಂಗ-ಸ್ವಪರಿಪಾಲನ ಮೊದಲಾದ ವಿಷಯಗಳಲ್ಲಿ ನಿರ್ಧಾರಗಳಾಗುವುದಕ್ಕೆ ಅವಕಾಶವನ್ನು ಕೊಟ್ಟು, ಉಭಯತಃ ಮನಃಕಾಲುಷ್ಯವು ಕಡಿಮೆಯಾಗುವುದಕ್ಕೆ ಮಾರ್ಗಮಾಡಿರುತ್ತಾರೆ. ಅಲ್ಲದೆ ಪಾಶ್ಚಾತ್ಯಜನರನ್ನು ದ್ವೇಷಭಾವದಿಂದ ಕಾಣದೆ ಅವರಲ್ಲಿ ಹೊಂದಿ ನಡೆದು ತಮ್ಮ ಕ್ಷೇಮವನ್ನು ಸಾಧಿಸಿಕೊಳ್ಳುವುದೇ ಭಾರತೀಯರಿಗೆ ಶ್ರೇಯಸ್ಕರವಾದುದೆಂಬ ಅವರ ಹಿತಪ್ರೋ[illegible] ಸಂ[illegible]ಯು ಅತ್ಯಂತ ಪ್ರಶಸ್ತವಾಗಿರುತ್ತದೆ. ಮಹಮ್ಮದೀಯರ ವಿಷಯದಲ್ಲಾದರೂ ಹಿಂದೂಗಳೊಡನೆ ಕಲತು ನಡೆದಲ್ಲದೆ ದೇಶದ ಮತ್ತೂ ಹಿಂದೂ ಮಹಮ್ಮದೀಯರ ಅಭ್ಯುದಯವಾಗುವುದಿಲ್ಲವೆಂಬ ಸಂಗತಿಯನ್ನಾದರೂ ಮನಗಾಣಿಸಿಕೊಟ್ಟಿರುತ್ತಾರೆ. ಅಲ್ಲದೆ ಅವರು ಅಲಹಾಬಾದನ್ನು ಸೇರಿದ ದಿನವೇ ತಾವಿಳಿದಿದ್ದ ಭೋಜನಶಾಲೆಯಲ್ಲಿ ಒಂದು ಕೂಟವನ್ನು ಕೂಡಿಸಿ, ಹಿಂದೂ ಮಹಮ್ಮದೀಯರಲ್ಲಿ ಐಕಮತ್ಯವನ್ನು ಬೆಳೆಯಿಸುವ ಒಂದು ಸಂಘವನ್ನು ಸ್ಥಾಪಿಸುವುದಕ್ಕಾಗಿ ಕಳೆದ ತಾ॥ ೩೧ ರಲ್ಲಿ ಒಂದು ಮಹಾಸಭೆಯನ್ನು ಕೂಡಿಸಬೇಕೆಂದು ಸಹ ನಿರ್ಧರಿಸಿದ್ದರು. ಇದಲ್ಲದೆ ಆಂಗ್ಲಸಾಮ್ರಾಜ್ಯಕ್ಕೆ ದಿಗ್ದರ್ಶನವನ್ನು ಮಾಡುವ ಪಾರ್ಲಿಮೆಂಟ್ ಮಹಾಸಭೆಯ ಜನರು ಯಾವಲ್ಲಿ ವಾಸಮಾಡುತ್ತಿದ್ದಾರೋ ಅಂಥ ಕಡೆಯಲ್ಲೇ (ಲಂಡನ್ನಿನಲ್ಲೇ) ಈ ದೇಶೀಯ ಮಹಾಸಭೆಯನ್ನು ನೆರವೇರಿಸಿ, ಈ ದೇಶದವರ ಯೋಗ್ಯತೆಯನ್ನೂ, ಕೋರಿಕೆಗಳನ್ನೂ ಅವರುಗಳ ಮುಂದೆ ಚೆನ್ನಾಗಿ ವಿವರಿಸಿಕೊಟ್ಟು, ಅವರ ಮೂಲಕ ತಮ್ಮ ಇಷ್ಟಾರ್ಥಪೂರಣವನ್ನು ಮಾಡಿಕೊಳ್ಳಲು ಪ್ರಯತ್ನಿಸುವುದು ಅತ್ಯಾವಶ್ಯಕವೆಂಬ ಸಂಗತಿಯನ್ನಾದರೂ ಒತ್ತಿ ಹೇಳಿರುತ್ತಾರೆ. ಇವೆಲ್ಲ ಹಿತಬೋಧೆಗಳು ಭಾರತೀಯರಿಗೆ ಉಪಾದೇಯವಾಗಿರುತ್ತವೆ. ಏಕೆಂದರೆ–ಸರ್ ವೆಡ್ಡರ್ಬರ್ನರವರು ಜಾತಿಯಲ್ಲಿ ಐರೋಪ್ಯರಾದರೂ ಕಾರ್ಯತಃ ಭಾರತೀಯರೇ ಆಗಿದ್ದಾರೆ. ಅವರು ನಮ್ಮ ಭರತಖಂಡದಲ್ಲಿ ಬಹುಕಾಲ ಸರ್ಕಾರದಧಿಕಾರವನ್ನು ಮಾಡಿ, ಈ ದೇಶೀಯರ ಕಷ್ಟಸುಖಗಳನ್ನೆಲ್ಲಾ ಚೆನ್ನಾಗಿ ಅರಿತವರಾಗಿದ್ದಾರೆ. ಈ ದೇಶೀಯರಿಗೆ ರಾಜಕೀಯ ಕಾರ್ಯಭಾಗದಲ್ಲಿ ಪ್ರವೇಶವನ್ನು ಹುಟ್ಟಿಸುವ ಪಾಠಶಾಲೆಯಂತಿರುವ ಸಾರ್ವಜನಿಕ ಮಹಾಸಭೆಯನ್ನು ಮೊತ್ತಮೊದಲು ಸ್ಥಾಪಿಸಲು ಸಾಹಸಪಟ್ಟ ಮಹಾಶಯರಲ್ಲಿ ಇವರೂ ಒಬ್ಬರಾಗಿರುತ್ತಾರೆ. ಅಲ್ಲದೆ ಸೀಮೆಗೆ ತೆರಳಿದವೇಳಲೂ ಇವರು ಸದಾಕಾಲವೂ ಭರತಖಂಡದ ಶ್ರೇಯಶ್ಚಿಂತನೆಗಾಗಿಯೇ ಪಾಟುಪಡುವವರಾಗಿರುತ್ತಾರೆ. ಅದುಕಾರಣ ಇಂಥ ಹಿತಚಿಂತಕರ ಬುದ್ಧಿವಾದವು ಭಾರತೀಯರೆಲ್ಲರಿಗೂ ಕ್ಷೇಮಕರವಾದುದೆಂಬುದರಲ್ಲಿ ಅಡ್ಡಿಯೇ ಇಲ್ಲ. ಸ್ವದೇಶದಲ್ಲೇ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸುವುದಕ್ಕೆ ಸಮರ್ಥರಾದವರು ಬೇಕಾದಷ್ಟು ಜನರಿರುವಲ್ಲಿ ಅಷ್ಟು ದೂರದಿಂದ ಇವರನ್ನೇಕೆ ಕರಿಸಬೇಕಾಗಿತ್ತೆಂದು ಕೆಲವರು ಮಾಡುವ ಆಕ್ಷೇಪವು ಅಷ್ಟು ಸಮಂಜಸವಾದುದಲ್ಲ. ಎಂಥ ಪ್ರಾಜ್ಞರಿಗೂ ಒಂದೊಂದು ಸಮಯದಲ್ಲಿ ಆಪ್ತವಚನಶ್ರವಣದ ಅವಶ್ಯಕತೆಯು ಇದ್ದೇ ಇರುತ್ತದೆ.

ಇವರು ಸಂಕಲ್ಪಿಸಿ ಬಂದಂತೆಯೂ, ಉಪದೇಶ ಮಾಡಿದಂತೆಯೂ ಇಲ್ಲಿನ ಉಗ್ರ ಸೌಮ್ಯಪಕ್ಷದವರೂ, ಹಿಂದೂ ಮಹಮ್ಮದೀಯರೂ ಏಕೀಭವಿಸಿ ತಮ್ಮ ಭವಿಷ್ಯತ್ಕಾರ್ಯದಲ್ಲಿ ತೊಡಗುವುದಕ್ಕೆ ಮುಂದಾದರೂ ಅನುಕೂಲಿಸಿದರೆ, ಇವರ

ಆಗಮನದ ಪ್ರಯೋಜನವು ಸಾಮಾನ್ಯತವುವೆಂದಿಗೂ ಆಗುವುದಿಲ್ಲ. ಇವರು ಈ ದೇಶವನ್ನು ಬಿಟ್ಟು ಹೊರಡುವುದರೊಳಗಾಗಿ ಅವರ ಉದ್ದಿಷ್ಟಕಾರ್ಯಕ್ಕೆಲ್ಲಾ ಸುಮುಖವುಂಟಾಗಲೆಂದು ಕೋರುವೆವು.

ಕಾಂಗ್ರೆಸ್ ಪರವಾದ ಡೆಪ್ಯುಟೇಷನ್ನಿನವರನ್ನು ವೈಸ್‌ರಾಯರು ಈ ತಾ॥ ೫ ರಲ್ಲಿ ಬರಮಾಡಿಕೊಂಡು ಅವರೊಪ್ಪಿಸುವ ವಿಜ್ಞಾಪನಪತ್ರಿಕೆಯನ್ನು ಸ್ವೀಕರಿಸುವುದಾಗಿ ಗೊತ್ತಾಗಿರುವುದು. ಈ ಡೆಪ್ಯುಟೇಷನ್ನಿನಲ್ಲಿ ಸರ್ ವಿಲಿಯಂ ವೆಡರ್‌ಬರ್ನ್‌ರವರು, ಡಾಕ್ಟರ್ ರಸವಿಹಾರಿಘೋಷ್‌ರವರು, ಆ॥ ಮಿ॥ ಜಿ. ಕೆ. ಗೋಖಲೆಯವರು, ಆ॥ ಮಿ॥ ಎಂ. ಎ. ಜಿನ್ನಾಯವರು, ಆ॥ ಮಿ॥ ಎಂ. ಹಕ್‌ರವರು, ಮಿ॥ ಡಿ. ಇ. ವಾಚಾಯವರು, ಮಿ॥ ಡಿ ಎ. ಖಾರೆಯವರು, ಆ॥ಮಿ॥ ಮದನಮೋಹನಮಾಳವ್ಯರವರು, ಆ॥ ಮಿ॥ ಗಂಗಾಪ್ರಸಾದವರ್ಮರವರು, ಡಾ॥ ಗೌರ್‌ರವರು, ಆ॥ ಮಿ॥ ಎನ್. ಸುಬ್ಬರಾಯರು, ಮಿ॥ ಹರಿಕೃಷ್ಣಲಾಲ್‌ರವರು, ಮಿ॥ ಸುರೇಂದ್ರನಾಥ ಬಾನರ್ಜಿಯವರು, ಆ॥ಮಿ॥ ಭೂಪೇಂದ್ರನಾಥ ಬಾಸುಯವರು, ಆ॥ ರಾ॥ ಬ॥ ಆರ್. ಎನ್. ಮುಧೋಳ್ಕರ್‌ರವರು ಮತ್ತೂ ಆ॥ ನವಾಬ್ ಸಯ್ಯದ್ ಮಹಮ್ಮದ್‌ರವರು ಇಂತಿಷ್ಟು ದೊಡ್ಡಮನುಷ್ಯರುಗಳು ಮಾತ್ರ ಹೋಗಬೇಕೆಂದು ನಿರ್ಧರವಾಗಿರುವುದು.

ಹಿಂದೂ ಮಹಮ್ಮದೀಯರ ಮಧ್ಯೆ ಹುಟ್ಟಿರುವ ಮನಸ್ತಾಪವನ್ನು ಹೋಗಲಾಡಿಸಿ, ಮಿತ್ರತ್ವವನ್ನುಂಟುಮಾಡಲು ಕೂಡಿಸಬೇಕೆಂದು ಸರ್ ವಿಲಿಯಂ ವೆಡರ್‌ಬರ್ನರವರು ಸಂಕಲ್ಪಿಸಿದ್ದ ಹಿಂದೂ ಮಹಮ್ಮದೀಯರ ಮಹಾಸಭೆಯು ಅಲಹಾಬಾದಿನಲ್ಲಿ ಈ ದಿವಸ ಕೂಡುವುದಾಗಿ ಗೊತ್ತಾಗಿರುವುದು.

ಒಳದೇಶದ ವೃತ್ತಾಂತ.

ನಾವು ಪದ್ಧತಿಯ ಪ್ರಕಾರ ಪ್ರಕಟಿಸುವ ಈ ವರ್ಷದ ಕ್ಯಾಲಂಡರು ಈ ಸಂಚಿಕೆಯ ಕೂಡ ಹಂಚಲ್ಪಟ್ಟಿರುತ್ತದೆ.

ಕೋಲಾರ ಡಿ॥ ಸಿಡ್ಲಘಟ್ಟದಲ್ಲಿ ಮ್ಯುನಿಸಿಪಾಲಿಟಿಯನ್ನೇರ್ಪಡಿಸಲು ಸರ್ಕಾರದಪ್ಪಣೆಯಾಗಿದೆ.

ಶ್ರೀ ಶೃಂಗೇರಿ ಸ್ವಾಮಿಗಳು ಕಳೆದವಾರ ಚಿಕ್ಕಬಳ್ಳಾಪುರಕ್ಕೆ ದಯಮಾಡಿಸಿದ್ದಾಗ್ಗೆ ಅವರ ದರ್ಶನಕ್ಕೆ ಅಲ್ಲಿಯ ವೈಶ್ಯರಾರೂ ಹೋಗಿರಲಲ್ಲವಂತೆ.

ಶ್ರೀ ಶೃಂಗೇರಿಸ್ವಾಮಿಗಳು ಈ ತಾ॥ ೫ ನೇ ಗುರುವಾರ ಚಿಕ್ಕಬಳ್ಳಾಪುರದ ಮಾರ್ಗವಾಗಿ ಬೆಂಗಳೂರಿಗೆ ದಯಮಾಡಿಸುವರು. ಬೆಂಗಳೂರ ಡೆ॥ ಕಮಿಷನರು ಸ್ವಾಮಿಗಳನ್ನು ಮರ್ಯಾದೆಯಿಂದ ಬರಮಾಡಿಕೊಳ್ಳಲು ವಿಶೇಷವಾದ ಏರ್ಪಾಟುಗಳನ್ನು ಮಾಡಿಸುತ್ತಿರುವುದಾಗರಿತೆವು.

ಕಳೆದ ತಾ॥ ೩೧ ರಲ್ಲಿ ಬೆಂಗಳೂರ ರೈಲ್ವೆ ಸ್ಟೇಷನ್ನಿನಲ್ಲಿ ಪೋರ್ಟರುಗಳ ಮೇಸ್ತ್ರಿಯು ಒಂದು ಬ್ರೇಕುಬಂಡಿಯಿಂದ ಕೆಳಗೆ ದುಮಿಕಿ ಮಾರ್ಗವನ್ನು ದಾಟಿ ಬರುವಾಗ್ಗೆ ಒಂದು ಯಂತ್ರವು ಅಕಸ್ಮಾತ್ತಾಗಿ ಅವನ ಮೇಲೆ ಬಂದುಬಿಟ್ಟಿತು. ಅವನು ಅದರ ಕೆಳಗೆ ಸಿಕ್ಕಿ ಅವನ ಕಾಲು-ಕೈ ಮುರಿದು ಹೋಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟ ಕೊಂಚ ಹೊತ್ತಿನಲ್ಲಿ ಸತ್ತುಹೋದನು.

ಬೆಂಗಳೂರ ಸಿಟಿ ಮಾರ್ಟಿನವರು ಪ್ರಕಟಿಸಿರುವ ಈ ವರ್ಷದ ಕ್ಯಾಲಂಡರನ್ನೂ ರಾಜಧಾನಿಯ ಕೋಟೆಯಲ್ಲಿರುವ ಮೆಸರ್ಸ್ ಎಸ್. ಕೃಷ್ಣರಾವ್ ಬ್ರದರ್ಸ್‌ರವರಿಂದ ಒಂದು ಭಾಗನಲ್ಲಿ ಸುಂದರವಾದ ಭಾವಚಿತ್ರವೂ, ಮತ್ತೊಂದು ಕಡೆ ಕ್ಯಾಲಂಡರೂ ಸಹ ಮುದ್ರಿತವಾಗಿರುವ ಕಾರ್ಡುಗಳನ್ನೂ ಸಂತೋಷದಿಂದ ಸ್ವೀಕರಿಸಿದೆವು. ಈ ಸಣ್ಣ ಕಾರ್ಡುಗಳು ೫ ಕ್ಕೆ ೨॥ ಆಣೆ.

ರಾಜಧಾನಿಯಿಂದ ಬೆಂಗಳೂರಿಗೆ ಬೆಳಗ್ಗೆ ೯-೪೦ ಕ್ಕೆ ಹೊರಡುತಲಿದ್ದ ರೈಲು ಬಂಡಿಯು ಪ್ರಯಾಣಿಕರ ಅನುಕೂಲಕ್ಕಾಗಿ ೧೦-೩೦ ಕ್ಕೆ ಹೊರಡುವಂತೆ ಮಾಡಲ್ಪಟ್ಟದೆಯೆಂದು ಹಿಂದೆ ತಿಳಿಸಿದ್ದೆವು. ಆದರೆ ರೈಲ್ವೆಯಧಿಕಾರಿಗಳು ಈ ಬೆಳಗಿನ ಬಂಡಿಯು ೯-೩೦ ಕ್ಕೆ ಬದಲು ೮-೩೦ ಕ್ಕೆ ಹೊರಡುವಂತೆ ಈ ತಾ॥ ೧ ರಿಂದ ಏರ್ಪಡಿಸಿದ್ದಾರೆ. ಇದರಿಂದ ಶ್ರೀರಂಗಪಟ್ಟಣಕ್ಕೆ ಕೋರ್ಟಿನ ಕೆಲಸಕ್ಕಾಗಿ ಹೋಗುವವರಿಗೆ ಬಹು ಅನುಕೂಲವಾಗಿದೆ.

ಕಳೆದ ಸೋಮವಾರ ಶ್ರೀಮನ್ಮಹಾರಾಜರವರೂ, ರಾಣೀವಾಸದವರೂ ಮೋಟಾರುಬಂಡಿಯಲ್ಲಿ ನಂದಬೆಟ್ಟದವರೆಗೆ ಪ್ರಯಾಣಮಾಡಿ ಅಲ್ಲಿಂದ ಮಹಾರಾಜರು ಕುದುರೆಯಮೇಲೂ, ರಾಣೀವಾಸದವರು ಮ್ಯಾನಾಗಳಲ್ಲೂ ಬೆಟ್ಟದ ಮೇಲಕ್ಕೆ ದಯಮಾಡಿಸಿ, ಅಲ್ಲಿ ಬುಧವಾರದವರೆಗೂ ಇದ್ದು ಶ್ರೀ ಶೃಂಗೇರಿ ಸ್ವಾಮಿಗಳ ದರ್ಶನಾಶೀರ್ವಾದವನ್ನು ಆಗಲು ಕೊಂಡು ಬುಧವಾರ ಮಧ್ಯಾಹ್ನ ಮೋಟಾರಿನಲ್ಲಿ ಹೊರಟು ಸಾಯಂಕಾಲ ಬೆಂಗಳೂರನ್ನು ಸುರಕ್ಷಿತವಾಗಿ ತಲುಪಿದರು.

ಕಳೆದ ತಾ॥ ೨೬ ರಲ್ಲಿ ರಾಜಧಾನಿಯ ಮಹಾಜನ ಸಭೆಯವರು ಟವುನ್ ಹಾಲಿನಲ್ಲಿ ಕೂಡಿದ್ದು ಪ್ರತಿಯೊಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿನಲ್ಲೂ ಇಂಥ ಸಭೆಗಳನ್ನೇರ್ಪಡಿಸಿಕೊಂಡು ಪ್ರಜೆಗಳಿಗಿರತಕ್ಕ ತೊಂದರೆಯ ವಿಚಾರಗಳನ್ನು ಚರ್ಚಿಸಿ ಈ ಮುಖ್ಯ ಸಭೆಯದ್ವಾರಾ ಸರ್ಕಾರಕ್ಕೆ ಬಿನ್ನೈಸಿಕೊಳ್ಳಬಹುದೆಂದೂ, ಈಗಿರತಕ್ಕ ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ತೆಗೆದುಬಿಡತಕ್ಕದು ಅಥವಾ ಮೈಸೂರಿನವರಿಗೆ ಮಾತ್ರ ಇಟ್ಟುಕೊಳ್ಳಬೇಕೆಂದು ಸರ್ಕಾರಕ್ಕೆ ಬಿನ್ನೈಸಿಕೊಳ್ಳಬೇಕೆಂದೂ ನಿರ್ಧರಿಸಿದರು.

ಪೋಲೀಸು ಇ॥ ಜನರಲ್‌ರವರು ಎಲ್ಲ ಡಿ॥ ಗಳಿಂದಲೂ ವ್ಯಾಯಾಮಾಸಕ್ತರಾದ ಪೋಲೀಸು ಅಧಿಕಾರಿಗಳನ್ನೂ, ಆಳುಗಳನ್ನೂ ಬೆಂಗಳೂರಿಗೆ ಬರಮಾಡಿಕೊಂಡು ಕಳೆದ ತಾ॥ ೨೯, ೩೦ ಮತ್ತೂ ೩೧ ರಲ್ಲಿ ಓಡುವುದು, ಕುದುರೆ ಸ್ವಾರಿ ಮಾಡುವುದು, ಅಂಗಸಾಧನೆಮಾಡುವುದು ಮೊದಲಾದ ಆಟಗಳನ್ನು ಅವರಿಂದ ಮಾಡಿಸಿ, ಅವುಗಳಲ್ಲಿ ಗೆದ್ದವರಿಗೆ ಶ್ರೀಮನ್ಮಹಾರಾಜರವರ ಹಸ್ತದಿಂದ ಬಹುಮಾನಗಳನ್ನು ಕೊಡಿಸಿದರು. ಈ ಬಹುಮಾನಗಳಿಗಾಗಿ ದಿವಾನರು, ಕೌನ್ಸಿಲರುಗಳು, ಪೋ॥ ಇ॥ ಜ॥ ರವರು ಮೊದಲಾದವರಿಂದ ೮೦೦ ಹಣವು ಕೊಡಿಸಲ್ಪಟ್ಟಿದ್ದಿತು.

ಕಳೆದ ತಾ॥ ೨೫ ನೇ ಭಾನುವಾರ ರಾತ್ರಿ ಶ್ರೀ ಚಾಮರಾಜೇಂದ್ರ ನಾಟಕ ಸಂಘದವರು ಷೇಕ್ಸ್‌ಪಿಯರ್ ಮಹಾಕವಿ ರಚಿತ ಒಥೆಲೋ ನಾಟಕವನ್ನು ಅಭಿನಯಿಸಿದರು. ಪ್ರೇಕ್ಷಕರ ಸಂಖ್ಯೆಯು ಸಾಕಷ್ಟಿದ್ದಿತು. ಐಯಾಗೋ (ವಿದೇಶೀಯ) ಪಾತ್ರದವಿನಾ ಉಳಿದ ಪಾತ್ರಪ್ರಯೋಗವೆಲ್ಲವೂ ಚೆನ್ನಾಗಿದ್ದಿತು. ಕ್ರೌರ್ಯವನ್ನು ಚೆನ್ನಾಗಿ ಪ್ರದರ್ಶಿಸತಕ್ಕವರಾಗಿಯೂ, ಸ್ಫುಟವಾಗಿಯೂ ಮತ್ತೂ ಗಟ್ಟಿಯಾಗಿಯೂ ಮಾತನಾಡುವ ಮ॥ ಮಹಾಲಿಂಗಪ್ಪನಂಥವರು ವಿದೇಶೀಯ ಪಾತ್ರವನ್ನು ವಹಿಸಿದರೆ ಸಲ್ಲುವುದು. ಈ ಸಂಘದವರು ಉಡುಪಿನಲ್ಲೂ, ಸೀನರಿಗಳಲ್ಲೂ ವಿಶೇಷವಾಗಿ ಸುಧಾರಿಸಿರುವರು.

ಕಳೆದ ತಾ॥ ೨೬, ೨೭ ಮತ್ತೂ ೨೮ ರಲ್ಲಿ ಬೆಂಗಳೂರ ಕಬ್ಬನ್ ಉದ್ಯಾನದಲ್ಲಿ ಕ್ರಿಸ್ತಮಸ್ ಹಬ್ಬದ ಉದ್ದಿಶ್ಯ ವಿನೋದೋತ್ಸವಗಳೂ, ದೇಶೀಯ ವಸ್ತುಪ್ರದರ್ಶನವೂ ನಡೆ[illegible] ದ ಪ್ರಕಟನೆಗಳನ್ನೂ ಬಹುಮಾನಗಳು ಕೊಡಲ್ಪಟ್ಟುವು. [illegible] ಸ್ತುಪ್ರ[illegible] ಪ್ರತ್ಯೇಕವಾಗಿ [illegible] ದ್ಯುವರಾಜರಿಂದ ನಡೆಸಲ್ಪ[illegible] ಯುಕ್ತವಾದ ಭಾಷಣವನ್ನು ಮಾ[illegible] ಗಳನ್ನು ಸಾವಿರಾರು ಜನರು ದು[illegible] ಕೊಂಡು ಬಂದರು. ಈ ವಿಧವಾದ ವಿನೋದೋತ್ಸವಗಳು ಮದ್ರಾಸು ಮೊದಲಾದ ದೊಡ್ಡ ಪಟ್ಟಣಗಳಲ್ಲಿ ಪ್ರತಿವರ್ಷವೂ ನಡೆಯುತ್ತಿರುವುದಾದರೂ ಈ ಬೆಂಗಳೂರಲ್ಲಿ ನಡೆದುದು ಇದೇ ಮೊದಲು. ಇನ್ನುಮುಂದೆ ಇನ್ನೂ ಅತಿಶಯವಾಗಿ ನಡಿಸಲ್ಪಡುವುದೆಂದು ನಿರೀಕ್ಷಿಸುತ್ತೇವೆ.

ಮೈಸೂರ ಡಿ॥ ಹೆಗ್ಗಡದೇವನಕೋಟೆಯ ಕಾಡಿನಲ್ಲಿ ಆನೆಗಳು ವಿಶೇಷವಾಗಿ ವಾಸಮಾಡಿಕೊಂಡಿರುವುವು. ಇವುಗಳನ್ನು ನಮ್ಮ ಸರ್ಕಾರದವರು ಆಗಾಗ್ಗೆ ಹಿಡಿಯಲು ಸಮರ್ಥರಾದ ಮಾವುತರನ್ನು, ಕಾಡುಕುರುಬರನ್ನು ಮತ್ತೂ ಸೋಲಿಗರನ್ನು ನೇಮಿಸಿಕೊಂಡಿರುವುದಲ್ಲದೆ, ಅಸ್ಸಾಮಿನಿಂದಲೂ ಸಮರ್ಥರಾದ ಕೆಲ ಜನ ಮಾವುತರನ್ನು ಕರೆಯಿಸಿರುವರು. ಹೊಸಾನೆಗಳನ್ನು ಕೊಪ್ಪಕ್ಕೆ ಕೆಡವಿ ಅವುಗಳನ್ನು ಪಳಗಿದ ಆನೆಗಳ ಸಹಾಯದಿಂದ ಸ್ವಾಧೀನಪಡಿಸಿಕೊಂಡು ಬೇರೆ ಕಡೆಗೆ ಸಾಗಿಸುವ ಕ್ರಮವು ಅತ್ಯಂತ ಪ್ರೇಕ್ಷಣೀಯವಾದುದು. ವೈಸ್‌ರಾಯರುಗಳು ನಮ್ಮ ಸೀಮೆಗೆ ದಯಮಾಡಿಸಿದ ವೇಳೆಯಲ್ಲಿ ಅವರುಗಳಿಗೆ ಈ ವಿನೋದವನ್ನು ತೋರಿಸಲು ಲಕ್ಷಾಂತರ ರೂಪಾಯಿಗಳನ್ನು ನಮ್ಮ ಸರ್ಕಾರದವರು ವ್ಯಯಮಾಡುವರು. ಈ ಆನೆಗಳನ್ನು ಹಿಡಿಯುವ ಕ್ರಮವನ್ನು ನೋಡಲು ಪ್ರತಿಯೊಬ್ಬರೂ ಕುತೂಹಲವುಳ್ಳವರಾಗಿದ್ದಾಗ್ಗೂ ಎಲ್ಲರಿಗೂ ಸಾಧ್ಯವಲ್ಲವಾದುದರಿಂದ ಇವುಗಳನ್ನು ಹಿಡಿಯುವಕ್ರಮದ ಭಾವಚಿತ್ರಗಳು ೧೮ ಕಾರ್ಡುಗಳ ಮೇಲೆ ನಾನಾ ಬಣ್ಣಗಳಿಂದ ಅತ್ಯಂತ ನೇತ್ರಾನಂದಕರವಾಗಿ ಪ್ರಸಿದ್ಧವಾದ ರಾಜಾರವಿವರ್ಮ ಚಿತ್ರಶಾಲೆಯಲ್ಲಿ ಮುದ್ರಿಸಲ್ಪಟ್ಟಿವೆ. ಈ ಕಾರ್ಡುಗಳ ಮತ್ತೊಂದು ಕಡೆಯಲ್ಲಿ ಯೋಗಕ್ಷೇಮ ಸಮಾಚಾರವನ್ನೂ ವಿಳಾಸವನ್ನೂ ಬರೆದು ಅಂಚೆಗೆ ಹಾಕಲನುಕೂಲವಾಗಿದೆ. ಈ ೧೮ ಕಾರ್ಡುಗಳನ್ನುಳ್ಳ ೧ ಪ್ಯಾಕೆಟ್ಟಿಗೆ ೧ ರೂಪಾಯಿ ಬೆಲೆ ಇಡಲ್ಪಟ್ಟಿದೆ. ದಕ್ಷಿಣ ಇಂಡ್ಯಾಕ್ಕೆ ಸೋಲ್ ಏಜಂಟರಾದ ಮೈಸೂರಿನ ಮೆಸರ್ಸ್. ಎಚ್. ಜಿ. ಲಿಂಗಣ್ಣ ಅಂಡ್ ಸನ್ ಯವರಿಂದ ಈ ಕಾರ್ಡುಗಳನ್ನು ನಾವು ವಿಶ್ವಾಸಪೂರ್ವಕವಾಗಿ ಸ್ವೀಕರಿಸಿದೆವು. ಈ ಕಾರ್ಡುಗಳ ಭಾವಚಿತ್ರಗಳನ್ನೂ, ಅವುಗಳ ವರ್ಣನೆಯನ್ನು ಕೊಟ್ಟಿರುವ ಸಣ್ಣ ಪುಸ್ತಕವನ್ನೂ ನೋಡಿದಮೇಲೆ ಆನೆಗಳನ್ನು ಹಿಡಿಯುವುದರ ಕ್ರಮವೆಲ್ಲಾ ಮನೋರಂಜಕವಾಗಿ ಇದರಿಂದ ತೋರುವುದು.

ವರ್ತಮಾನ ಸಂಗ್ರಹ.

ಮದ್ರಾಸಿನಲ್ಲಿ ಒಬ್ಬರ ಪಾದರಕ್ಷೆಯನ್ನು ಕದ್ದ ೩ ವರ್ಷದ ಒಬ್ಬ ಮಹಮ್ಮದೀಯ ಬಾಲಕನಿಗೆ ೫ ವರ್ಷದವರೆಗೂ ರಿಫಾರ್ಮೆಟರಿ ಪಾಠಶಾಲೆಯಲ್ಲಿರುವುದಕ್ಕೆ ದಂಡಾಧಿಕಾರಿಯ ಅಪ್ಪಣೆಯಾಯಿತು.

ಬಂಗಾಳಾಬೆಲ್ಲಿಯ ಘಾಟಿನಲ್ಲಿ ಬಕರೀದ್‌ಹಬ್ಬದದಿನ ಗದ್ದಲವನ್ನು ಮಾಡಿದ ರೇಲ್ವೆ ಪೋಲೀಸ್ ಆಳುಗಳು ೬ ಮಂದಿಗೆ ೨ ವರ್ಷ ಕಾರಾಗೃಹವಾಸಶಿಕ್ಷೆಯೂ, ಇನ್ನು ೨೮ ಮಂದಿ ಪೋಲೀಸಾಳುಗಳಿಗೆ ಪೋಲೀಸ್ ಶಾಖೆಯ ಶಿಕ್ಷೆಯೂ ವಿಧಿಸಲ್ಪಟ್ಟಿತು.

ಈಗ ಸೀಮೆಯಲ್ಲಿರುವ ಇಂದೂರಿನ ಹೋಲ್ಕರ್ ಮಹಾರಾಜರು ಈಗ ಲಂಡನ್ನಿನಿಂದ ದಕ್ಷಿಣಫ್ರಾನ್ಸಿಗೆ ಪ್ರಯಾಣಮಾಡಿರುತ್ತಾರೆ. ಇವರು ಜೂನ್ ತಿಂಗಳಲ್ಲಿ ಲಂಡನ್ನಿನಲ್ಲಿ ನಡೆಯುವ ಕಿರೀಟಧಾರಣಮಹೋತ್ಸವಕ್ಕೆ ಮರಳಿ ಲಂಡನ್ನಿಗೆ ಬರುವವರಾಗಿರುವರು.

ಬೋಲ್ಟನ್ ಕಲ್ಲಿದ್ದಲ ಗಣಿಯಲ್ಲಿ ಸಂಭವಿಸಿದ ಆಕಸ್ಮಿಕದಿಂದ ವಿಪನ್ನರಾದವರ ಸಹಾಯಾರ್ಥವಾಗಿ ಜಾರ್ಜ್ ಚಕ್ರವರ್ತಿಯವರು ೫೦೦ ಪೌನುಗಳನ್ನೂ, ಚಕ್ರವರ್ತಿನಿಯವರು ೧೦೦ ಪೌನುಗಳನ್ನೂ, ಬ್ಯಾರನ್ ಡಿ. ಫಾರೆಸ್ಟರವರು ೧೦೦೦ ಪೌನುಗಳನ್ನೂ ದಾನಮಾಡಿದರು.

ಅಲಹಾಬಾದಿನ ವಸ್ತುಪ್ರದರ್ಶನಾಲಯದಲ್ಲಿ ನಡೆಯುವ ಕುಸ್ತಿಯಲ್ಲಿ ಇಮಾಂಭಕ್ಷನು ಪಂಜಾಬಿನ ಪ್ರಸಿದ್ಧನಾದ ಹಸೇನ್‌ಭಕ್ಷನನ್ನು ಅತಿ ಚಮತ್ಕಾರದಿಂದ ಸೋಲಿಸಿದನು. ಈ ಇಮಾಂಭಕ್ಷನು ಸೀಮೆಯಲ್ಲಿ ತನ್ನ ಅಣ್ಣನಾದ ಗಾಮ ಪೈಲ್ವಾನಿನ ಮೇಲೆ ಕುಸ್ತಿ ಮಾಡಿ ಸೋತುಹೋದ ಸ್ವಿಟ್ಜರ್‌ಲೆಂಡಿನ ಲೆಮರ್ ಎಂಬುವನನ್ನು ಸೋಲಿಸಿದ್ದನು. ಈ ಕುಸ್ತಿಯನ್ನೋಡಲು ೨೦೦೦೦ ಜನರಮೇಲೇ ಸೇರಿದ್ದರು.

ಶ್ರೀ ಶೃಂಗಗಿರಿ ಸ್ವಾಮಿಗಳು ಕೋಲಾರಕ್ಕೆ ದಯಮಾಡಿಸಿದಾಗ ಅಲ್ಲಿನ ಮಹಮ್ಮದೀಯರು ಹೈದರ್‌ದರ್ಗಾದ ಬಳಿಯಲ್ಲಿ ಕಾದಿದ್ದು ಸ್ವಾಮಿಗಳನ್ನು ಗೌರವಿಸಿದರು. ಆಗ ಸ್ವಾಮಿಗಳು- ಎಲ್ಲ ಮತಗಳೂ ಮುಕ್ತಿಯನ್ನು ಹೊಂದುವುದಕ್ಕೆ ಬೇರೆ ಬೇರೆ ದಾರಿಗಳನ್ನು ತೋರಿಸತಕ್ಕವಾಗಿವೆಯೆಂದೂ, ಪ್ರತಿಯೊಬ್ಬರೂ ಅವರವರ ಮತವನ್ನು ಅವಲಂಬಿಸಿರುವುದು ಅವಶ್ಯಕವಾದುದೆಂದೂ ಹೇಳಿ, ಖಾಜಿಬಾದರ್ ಹುಸೇನ್‌ಷರೀಫರವರಿಗೆ ಕಿಲ್ಲತನ್ನು ದಯಪಾಲಿಸಿದರು.

ಪ[illegible] ಕರ್ಪೂ[illegible]ಗಳಲ್ಲಿ ಜರುಗುವ ವಸ್ತು[illegible] ಸಾಮಾನ್ಯತಃ ಅಷ್ಟು ಪ್ರಸಿದ್ಧವಲ್ಲವೆಂದು ತೋರಿಬಂದಿದೆ. ತದ್ವತು ಈಗ ಅಲಹಾಬಾದಿನಲ್ಲಿ[illegible]ತಲಿರುವ ಪ್ರದರ್ಶನವೂ ಆಗುವುದೆಂದು ಊಹಿಸಲ್ಪಟ್ಟಿದ್ದಿತು. ಆದರೆ ಅದು ಹಾಗಿರದೆ ಪ್ರೇಕ್ಷಕರ ಮನಸ್ಸನಾಕರ್ಷಿಸುತ್ತಿದೆ. ಕಳೆದ ಮಂಗಳವಾರ ೨೫೦೦೦ ಜನರೂ, ಬುಧವಾರ ಅರ್ಧಛಾರ್ಜಿಗಿಳಿಸಲ್ಪಟ್ಟುದುದರಿಂದ ೪೫೦೦೦ ಜನರೂ ಹೋಗಿ ನೋಡಿಕೊಂಡು ಬಂದರು. ಹೀಗೆ ಪ್ರೇಕ್ಷಕರ ಸಂಖ್ಯೆಯು ಹೆಚ್ಚಲು ಆಕಾಶಯಾನ ಪ್ರದರ್ಶನವೇ ಕಾರಣವೆಂದು ಕೆಲರು ಹೇಳುತ್ತಾರೆ.

ಪೋರ್ಚುಗಲ್ಲಿನ ರಾಜಧಾನಿಯಾದ ಲಿಸ್ಬನ್ನಿನಲ್ಲಿರುವ ಭೂಸ್ಥಿತಿಯನ್ನೊತ್ತೆಯಿಟ್ಟುಕೊಂಡು ಹಣವನ್ನು ಸಾಲಕೊಡುವ ಬ್ಯಾಂಕಿನಲ್ಲಿ ದ್ರವ್ಯಾಪಹರಣವು ಆಗಿರುವುದರಿಂದ, ಆ ಬ್ಯಾಂಕಿನ ಅಧಿಕಾರಿಯಾದ ಕೆಲಸದಿಂದ ನಿವೃತನಾಗಿರುವ ಗೌರ್ನರು ಸೆರೆಹಿಡಿಯಲ್ಪಟ್ಟಿರುತ್ತಾನೆ. ಮತ್ತೂ ಹಿಂದೆ ಮಂತ್ರಿಯಾಗಿದ್ದ ಸಿನ್ಯಾಲ್ ಲ್ಯೂಕಿನೋಕ್ಯಾಸ್ಟರ್ ಎಂಬಾತನು ಸೆರೆಹಿಡಿಯಲ್ಪಟ್ಟಿದ್ದು ೬೦೦೦೦೦ ರೂ. ಗಳ ಹೊಣೆಯಮೇಲೆ ಬಿಡಲ್ಪಟ್ಟಿರುತ್ತಾನೆ. ಇವರಿಬ್ಬರಲ್ಲದೆ ಹಿಂದೆ ಮಂತ್ರಿಗಳಾಗಿದ್ದವರೂ, ದೊಡ್ಡ ಮನುಷ್ಯರುಗಳೂ ಸೆರೆಹಿಡಿಯಲ್ಪಟ್ಟಿರುತ್ತಾರೆ.

ಸರ್ ವಿಲಿಯಂ ವೆಡರ್‌ಬರ್ನ್‌ರವರು ಈ ತಾ॥ ೭ ರಲ್ಲಿ ಕಲಕತ್ತಾ ಪಟ್ಟಣವನ್ನು ಬಿಟ್ಟು ತಾ॥ ೯ ರಲ್ಲಿ ಬೊಂಬಾಯನ್ನು ತಲುಪಿ ಮೆ॥ ಜೆ. ಪೆಟಿಟ್ಟರ ಅತಿಥಿಗಳಾಗಿದ್ದು ತಾ॥ ೧೦ ರಲ್ಲಿ ಪೂನಾಕ್ಕೆ ಹೋಗಿ ಅಬಲಾಶ್ರಮವನ್ನೂ ಬಾಲಿಕಾಪಾಠಶಾಲೆಯನ್ನೂ ಫರ್ಗೂಸನ್ ಕಾಲೇಜನ್ನೂ ಪರಾಮರಿಸಿ ಹೀರಾಬಾಗಿನಲ್ಲಿ ವಿನೋದೋತ್ಸವನ್ನು ಮುಗಿಸಿಕೊಂಡು ತಾ॥ ೧೨ ರಲ್ಲಿ ಬೊಂಬಾಯಿಗೆ ಹಿಂತಿರುಗಿ ತಾ॥ ೧೪ ರಲ್ಲಿ ಸೀಮೆಗೆ ಪ್ರಯಾಣ ಮಾಡುವರು. ಇವರಿಗೆ ಕಲಕತ್ತಾದಲ್ಲಿ ಒಂದು ಸಂಘದವರೂ, ಆನರಬಲ್ ಆಲಿ ಇಮಾಂರವರೂ ಔತಣವನ್ನು ಮಾಡಿಸುವರು.

ಆಕಾಶನಾವೆಯಲ್ಲಿ ತಿರಗತಕ್ಕ ಮೂರು ಪಂಗಡದವರು ಈಗ ಭರತಖಂಡಕ್ಕೆ ಬಂದಿರುತ್ತಾರೆ. ಇವರಲ್ಲೊಂದು ಪಂಗಡದವರು ಅಲಹಾಬಾದಿನ ವಸ್ತುಪ್ರದರ್ಶನದಲ್ಲಿ ತಮ್ಮ ನಾವೆಯನ್ನು ಹಾರಿಸಿ ತೋರಿಸುತ್ತಿರುವರು. ಉಳಿದೆರಡು ಪಂಗಡದವರು ಈಗ ಕಲಕತ್ತಾದಲ್ಲಿ ಪ್ರದರ್ಶಿಸುತ್ತಿರುವರು. ಇವೆರಡರಲ್ಲಿ ಬ್ರಿಸ್ಟರ್ ಆಕಾಶನಾವೆಯ ಕಂಪನಿಯವರೂ ಮತ್ತೊಂದು ಕಂಪೆನಿಯ ನಾವೆಯೂ ಜನರನ್ನು ಕುಳ್ಳಿರಿಸಿಕೊಂಡು ಅಡಚಣೆಯಿಲ್ಲದೆ ದೂರಪ್ರಯಾಣ ಮಾಡಿ ತಮ್ಮ ನಾವೆಯನ್ನು ಮಾರಿಸಿದುದಾದರೆ ೧೦೦೦೦ ರೂಪಾಯಿಗಳನ್ನು ಕೊಡುತ್ತೇವೆಂದು ಪಂದ್ಯಕಟ್ಟಿರುವರು.

ರಷ್ಯಾದಲ್ಲಿ ರಾಜಕೀಯ ಬಂದಿಗಳಿಗೆ ಚಡಿಯೇಟಿನ ಶಿಕ್ಷೆಯನ್ನು ವಿಧಿಸುವ ಸಂಗತಿಯನ್ನು ಕುರಿತು ವಿದ್ಯಾರ್ಥಿಗಳು ಬಲವಾಗಿ ಆಕ್ಷೇಪಿಸುತ್ತಿರಲು, ಅವರಿಗೂ, ಪೋಲೀಸರಿಗೂ ಜಗಳಹುಟ್ಟಿ ಗದ್ದಲವಾಯಿತು. ಪರಸ್ಪರ ತುಪಾಕಿಗಳಿಂದ ಹೊಡೆದಾಡಿದರು. ೩೦ ಮಂದಿಗಳು ಸೆರೆಯಲ್ಲಿಡಲ್ಪಡಲ್ಪಟ್ಟಿದ್ದಾರೆ.

ಸಾರ್ವಜನಿಕ ಮಹಾಸಭೆಗೆ ಹೋಗುವುದಕ್ಕೆ ತಮಗೆ ಅಪ್ಪಣೆಯಾಗಬೇಕೆಂದು ಕಾಶಿಯ ಸೆಂಟ್ರಲ್ ಹಿಂದೂ ಕಾಲೇಜಿನ ವಿದ್ಯಾರ್ಥಿಗಳು ಕೆಲರು ಅಲ್ಲಿನ ಪ್ರಿನ್ಸಿಪಾಲರಾದ ಮಿ|| ಅರಂಡೇಲ್‌ರವರನ್ನು ಪ್ರಾರ್ಥಿಸಲು, ಅವರು ಗೌರ್ನಮೆಂಟಿನ ವಿಧಿಯು ಸಾಧಾರಣ ಶಾಲೆಗಳ ಹುಡುಗರನ್ನು ಹೋಗಕೊಡದೆಂದು ನಿರ್ಬಂಧಿಸುವುದೇಹೊರತು ಪ್ರಾಂತವಿದ್ಯಾಶಾಲೆಗಳ ವಿದ್ಯಾರ್ಥಿಗಳಿಗೆ ಅಟಂಕಪಡಿಸುವುದಾಗಿಲ್ಲವಾದ ಕಾರಣ, ಈ ವಿಷಯದಲ್ಲಿ ಪ್ರತ್ಯೇಕವಾಗಿ ಗೌರ್ನಮೆಂಟಿನ ಅಪ್ಪಣೆಯನ್ನು ಕೋರುವುದು ಅನವಶ್ಯಕವೆಂದು ಹೇಳಿದರಂತೆ.

ನಾಸಿಕದ ಕೊಲೆಯ ವ್ಯವಹಾರದಲ್ಲಿ ಸಂಬಂಧಿಸಿದ್ದ ಸವಾರ್ಕರನ ವಿಚಾರಣೆಯೆಲ್ಲವೂ ಮುಗಿದು, ಅವನಿಗೆ ಯಾವಜ್ಜೀವ ದ್ವೀಪಾಂತರವಾಸ ಶಿಕ್ಷೆಯು ವಿಧಿಸಲ್ಪಟ್ಟು, ಅವನ ಆಸ್ತಿಯೆಲ್ಲವನ್ನೂ ಸರ್ಕಾರಕ್ಕೆ ಸೇರಿಸಿಕೊಳ್ಳುವುದಕ್ಕೆ ಅಪ್ಪಣೆಯಾಯಿತು. ಉಳಿದ ಅಪರಾಧಿಗಳಲ್ಲಿ ಒಬ್ಬನಿಗೆ ೧೫ ವರ್ಷ ದ್ವೀಪಾಂತರವಾಸ ಶಿಕ್ಷೆಯೂ, ಇನ್ನು ಮೂವರಿಗೆ ೧೦ ವರ್ಷ ಕಾರಾಗೃಹವಾಸಶಿಕ್ಷೆಯೂ, ಒಬ್ಬನಿಗೆ ೭ ವರ್ಷ, ಮತ್ತೊಬ್ಬನಿಗೆ ೬ ವರ್ಷ, ೫ ಮಂದಿಗೆ ೫ ವರ್ಷ, ನಾಲ್ವರಿಗೆ ೪ ವರ್ಷ, ಇನ್ನು ನಾಲ್ವರಿಗೆ ೩ ವರ್ಷ, ಮೂವರಿಗೆ ೨ ವರ್ಷ ಇನ್ನು ಮೂವರಿಗೆ ೬ ತಿಂಗಳು—ಕಾರಾಗೃಹವಾಸ ಶಿಕ್ಷೆ ವಿಧಿಸಲ್ಪಟ್ಟಿತು. ಉಳಿದವರೆಲ್ಲಾ ನಿರ್ದೋಷಿಗಳೆಂದು ಬಿಡಲ್ಪಟ್ಟರು.

ಬೊಂಬಾಯಿಯಲ್ಲಿ ಶ್ರೀ ಬದೋಡಾ ಮಹಾರಾಣಿಯವರ ಗೌರವಾರ್ಥವಾಗಿ ಜಾಮ್ಜೀಭವನದಲ್ಲಿ ಕ್ಷೀಣದಶಾಕ್ರಾಂತ ಹಿಂದೂನಾರಿಯರ ಸಭೆಯೊಂದು ಕೂಡಿದ್ದಿತು. ಬಹುಶಃ ೫೦೦ ಮಂದಿ ಸ್ತ್ರೀಯರು ಸಭೆಯನ್ನಲಂಕರಿಸಿದ್ದರು. ಇಂದಿರಾರಾಜಾ ಎಂಬ ರಾಜಕುಮಾರಿಯೊಡನೆ ಕೂಡಿ ಸಭೆಗೆ ದಯಮಾಡಿಸಿದ್ದ ಬರೋ[illegible]ಜ್ಞೀನುತ್ತಿದ್ದಂತೆ ಹಿಂಗಳನ್ನು ಸಭೆಯವಳ[illegible]ಲ್ಲರೂ ಅಟ್ಟಹಾಸದಿಂದ ಸತ್ಕರಿಸಿದರು. ಅ[illegible] ಮಂದಿ ಬಾಲೆಯರು ರಾಜ್ಞಿಯವರ ಮೇಲೆ ಪುಷ್ಪವೃಷ್ಟಿಯನ್ನು ಕರೆದರು. ಜೇಜೀಬಾಯಿ, ತುಕ್ಕಾರಾಂಜೀ ಮೊದಲಾದ ನಾರೀಮಣಿಯರು ಶ್ರೀ ಮಹಾರಾಜ್ಞಿಯವರಿಗೂ, ರಾಜಕುಮಾರಿಯವರಿಗೂ, ಅವರ ವರ್ಗದವರಿಗೂ ಬೆಲೆ ಬಾಳುವ ವಸ್ತ್ರಗಳನ್ನು ಬಹುಮಾನ ಮಾಡಿದರು. ಬಳಿಕ ಶ್ರೀ ಮಹಾರಾಣಿಯವರು ಸಭಿಕರಿಗೆ ವಂದಿಸಿ, ಮಹಾರಾಷ್ಟ್ರಭಾಷೆಯಲ್ಲಿ ಉತ್ತಮವಾದ ಉಪನ್ಯಾಸವೊಂದನ್ನು ಮಾಡಿ, ಅದರಲ್ಲಿ ಸ್ತ್ರೀವಿದ್ಯೆಯ ಪ್ರಯೋಜನವನ್ನು ಕುರಿತು ಚೆನ್ನಾಗಿ ವಿವರಿಸಿ ಹೇಳಿದರು.

ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವವು ೧೯೧೨ನೆಯ ಜನವರಿ ಮೊದಲತೇದಿಯಲ್ಲಿ ದಿಲ್ಲಿಪಟ್ಟಣದಲ್ಲಿ ನೆರವೇರಿಸತಕ್ಕದೆಂದು ಮೊದಲು ಗೊತ್ತಾಗಿದ್ದಿತಷ್ಟೆ. ಆ ಕಾಲದಲ್ಲಿ ಮೊಹರಂ ಹಬ್ಬವು ನಡೆಯುತ್ತಿರುವುದರಿಂದ ನೈಜಾಮರೇ ಮೊದಲಾದ ಮಹಮ್ಮದೀಯ ಪ್ರಭುಗಳೂ ತನ್ಮತಸ್ಥರೂ ವಿಶೇಷವಾಗಿ ಆ ಉತ್ಸವದಲ್ಲಿ ಸೇರಿರುವುದಕ್ಕೆ ಅನನುಕೂಲವಾಗುವುದೆಂದು ಬಿನ್ನವಿಸಲ್ಪಟ್ಟುದರಮೇಲೆ ಇದೇ ವರ್ಷದ ಬರುವ ಡಿಶಂಬರ್ ೧೨ ರಲ್ಲಿ ಆ ಉತ್ಸವವನ್ನು ನೆರವೇರಿಸತಕ್ಕದೆಂದು ಈಚೆಗೆ ಗೊತ್ತಾಗಿದೆ. ಆದರೆ ಕಲ್ಕತ್ತಾ ಪಟ್ಟಣವು ಭರತಖಂಡದ ಮುಖ್ಯ ರಾಜಧಾನಿಯಾಗಿರುವುದರಿಂದ ಈ ಉತ್ಸವವನ್ನು ಕಲ್ಕತ್ತಾ ಪಟ್ಟಣದಲ್ಲೇ ನೆರವೇರಿಸುವಂತೆ ಮಾಡಬೇಕೆಂದು ಅಲ್ಲಿನ ಕಾರ್ಪೊರೇಷನ್ನಿನವರು ವೈಸ್ರಾಯರಿಗೆ ಬಿನ್ನಯಿಸಿಕೊಂಡಿದ್ದರು. ಅದಕ್ಕೆ ವೈಸ್‌ರಾಯರು ಕೊಟ್ಟಿರುವ ಉತ್ತರದಲ್ಲಿ—ದಿಲ್ಲಿಯಲ್ಲೇ ಆ ಉತ್ಸವವು ನಡೆಸಲ್ಪಡತಕ್ಕದಾಗಿದೆಯೆಂದೂ, ಆದರೂ ಚಕ್ರವರ್ತಿ ದಂಪತಿಗಳ ಸ್ವಾರಿಯು ಕಲ್ಕತ್ತಾಕ್ಕೂ ದಯಮಾಡಿಸಿ ತೆರಳುವುದೆಂದೂ ತಿಳುಹಿಸಲ್ಪಟ್ಟಿದೆ. ಅಂತೂ ಚಕ್ರವರ್ತಿ ದಂಪತಿಗಳು ಸೀಮೆಯಿಂದ ಬೊಂಬಾಯಿ ತೀರದಲ್ಲಿ ಬಂದಿಳಿದು, ಹಿಂತಿರುಗುವಾಗಲೂ ಬೊಂಬಾಯಿಮಾರ್ಗದಿಂದಲೇ ಪ್ರಯಾಣಮಾಡುವವರಾಗಿದ್ದಾರೆ.

ಸೀಮೆಯಲ್ಲಿ ಕ್ರಿಸ್ತಮಸ್‌ಹಬ್ಬದ ವಿನೋದಾರ್ಥವಾಗಿ ಪ್ರಯಾಣಿಕರನ್ನು ಸಾಗಿಸಿಕೊಂಡು ಲಂಡರ್ನ ಪಟ್ಟಣದಿಂದ ಬರುತ್ತಿದ್ದ ಒಂದು ಹೊಗೆ ಬಂಡಿಯು ಕಾರ್ಲ್ಯಿಲ್ ಬಳಿಯಲ್ಲಿ ಇದಿರಿಗೆ ಬಂದ ೨ ಇಂಜನ್ನುಗಳಿಗೆ ಡಿಕ್ಕಿ ಹೊಡೆದು ಧ್ವಂಸವಾಗಿಹೋಯಿತು. ಈ ಆಪತ್ತಿನಲ್ಲಿ ಸತ್ತವರಲ್ಲಿ ೯೦ ಹೆಣಗಳು ದೊರೆದುವು. ಈ ಹೊಗೆಬಂಡಿಯಿಂದ ಇದಿರಿಗೆ ಡಿಕ್ಕಿ ಹೊಡೆದ ಇಂಜನ್ನುಗಳು ೧೫೦ ಗಜದ ದೂರಕ್ಕೆ ಎಸೆಯಲ್ಪಟ್ಟಿದ್ದುವು. ಆ ಬಂಡಿಗಳಲ್ಲಿ ೫೦೦ ಮಂದಿ ಪ್ರಯಾಣಿಕರಿದ್ದರು. ಎರಡುಕಡೆಯ ಬಂಡಿಗಳಿಗೂ ಒಂದಕ್ಕೆರಡೆರಡರಂತೆ ತಗುಲಿಸಲ್ಪಟ್ಟಿದ್ದ ೪ ಇಂಜನ್ನುಗಳೂ ಕಂಬಿಗಳಿಂದ ಜಾರಿ ಬಿದ್ದುವು ಪ್ರಯಾಣಿಕರು ಕುಳಿತಿದ್ದ ಹಲವು ಬಂಡಿಗಳು ಶಿಥಿಲವಾಗಿಹೋದುವು. ಈ ಆಕಸ್ಮಿಕವು ನಿರ್ಜನಪ್ರದೇಶದಲ್ಲಿ ಗಾಢಾಂಧಕಾರವಿರುವಾಗ ಸಂಭವಿಸಿರುತ್ತದೆ. ಕಡೆಗೆ ಬಂಡಿಗಳಿಗೆಲ್ಲಾ ಬೆಂಕಿಯು ಹೊತ್ತಿಕೊಂಡು ಬ್ರೇಕು ಬಂಡಿಯು ಹೊರತು ಉಳಿದುವೆಲ್ಲಾ ಸುಟ್ಟುಹೋದುವು. ಗಾಯ ತಗುಲದೆ ತಪ್ಪಿಸಿಕೊಂಡ ಪ್ರಯಾಣಿಕರು ಹಳ್ಳಗಳಲ್ಲಿ ಬಿದ್ದಿರಲು, ಅವರನ್ನು ಸಾಹಸದಿಂದ ಮೇಲಕ್ಕೆ ತೆಗೆದರು. ಒಂದು ಹೆಚ್ಚುಗಟ್ಟಲೆ ಬಂಡಿಯು ಆ ಸ್ಥಲಕ್ಕೆ ಬಂದು ಗಾಯಗೊಂಡಿದ್ದವರನ್ನೆಲ್ಲಾ ಕಾರ್ಲ್ಯಿಲ್ಗೆ ಸಾಗಿಸಿಕೊಂಡು ಹೋಯಿತು. ನುಚ್ಚುನುರಿಯಾಗಿದ್ದ ಕೆಲವು ಬಂಡಿಗಳಲ್ಲಿ ಹಲವು ಹೆಣಗಳು ಸಿಕ್ಕಿದುವು: ಹಲವು ಹೆಣಗಳ ಆಕೃತಿಯೆಲ್ಲಾ ಕೆಟ್ಟು ಗುರ್ತೇ ಸಿಕ್ಕದಂತಿವೆ. ಹಲವು ಮಂದಿ ಪ್ರಯಾಣಿಕರು ಪ್ರಾಣಾಪಾಯದಿಂದ ತಪ್ಪಿಸಿಕೊಂಡರು. ಗ್ಯಾಸನ್ನು ತುಂಬಿದ್ದ ತೊಟ್ಟಿಯು ಒಡೆದು ಹೊತ್ತಿಕೊಂಡುದರಿಂದ ಅಗ್ನಿಯಾಪತ್ತು ಸಂಭವಿಸಿತೆಂದು ರೈಲ್ವೆ ಉದ್ಯೋಗಿಗಳು ಹೇಳುತ್ತಿದ್ದಾರೆ. ಬೆಂಕಿಯು ಬಲುಬೇಗನೆ ಬಂಡಿಗಳಿಗೆಲ್ಲಾ ವ್ಯಾಪಿಸಿದರೂ ಅಂಚೆ ಕಾಗದಗಳಿದ್ದ ಬಂಡಿಯನ್ನು ಮಾತ್ರ ಸಾಹಸದಿಂದ ಪ್ರತ್ಯೇಕಗೊಳಿಸಿದ್ದರು. ಇಂಥ ಭಯಂಕರವಾದ ಲೋಹಮಾರ್ಗದ ವಿಪತ್ತು ಗ್ರೇಟ್‌ಬ್ರಿಟನ್ನಿನೊಳಗೇ ಯಾವಾಗಲೂ ಸಂಭವಿಸಿರಲಿಲ್ಲವಂತೆ.

ಶೈವಸಿದ್ಧಾಂತಿ ಸಭಾ. (ರಾಮನಾಡು.)

ಈ ಸಭೆಗಾಗಿ ಮೈಸೂರು ದೇಶದಿಂದ ಪ್ರಯಾಣಮಾಡಿದ ಮ|| ಕೆ. ಪಿ. ಪುಟ್ಟಣ್ಣಸೆಟ್ಟರು ಮೊದಲಾದವರು ತಾ|| ೨೫ ನೇ ಭಾನುವಾರ ಸಾಯಂಕಾಲ ರಾಮನಾಥನ್ನು ಸೇರಿದರು. ನಿಲ್ದಾಣದಲ್ಲಿ ಸತ್ಕಾರಕ ಸಂಘದ ಅಧ್ಯಕ್ಷರಾದ ರಾಜಾ ದಿನಕರಸ್ವಾಮಿ ದೇವಾರ್ ಮೊದಲಾದವರು ಇದಿರ್ಗೊಂಡು ಮರ್ಯಾದಿಸಿ, ಉತ್ಸವಪೂರ್ವಕವಾಗಿ ಬಾಣ ಬಿರುಸುಗಳ ದೀಪಾವಳಿಗಳ ವೈಭವದಿಂದ ಅರಮನೆಗೆ ಕರೆದುಕೊಂಡು ಹೋಗಿ ಇಳಿಸಿದರು. [illegible] ಅದು [illegible] ನಾಡದಿಂ[illegible] ಅಂಥ [illegible]ಯಿತು. ಆ ದಿನ ಬೆಳಿಗ್ಗೆ [illegible]ಗಲು ಸ್ವಾಮಿಗೆ ಬಹುಕಾಲ ಸಿಹಾ[illegible] ನಡುವುದು. ಶರೀರಕಾಂತಿಗೆ [illegible]ಜೋತ್ಸವವಾಯಿತು. ಮಧ್ಯಾಹ್ನದ ವಿಶಾಲ [illegible] ಕೊಡಿತು. ಸತ್ಕಾರಕ ಸಂಘಾಧ್ಯಕ್ಷರು ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಸುಖಾಗಮನವನ್ನು ಬಯಸಿದ ತರುವಾಯ ಸಂಘದವರ ಕಳೆದ ವರ್ಷದ ವರದಿಯು ಓದಲ್ಪಟ್ಟಿತು. ಬಳಿಕ ಸಭಾಧ್ಯಕ್ಷರು ಈ ಕೆಳಗೆ ಹೇಳುವ ಮೇರೆ ಭಾಷಣವನ್ನು ಮಾಡಿದರು. ಭಾಷಣದ ಸಾರಾಂಶ:—

"ನನ್ನಂತೆ ಶೈವಮತಸ್ಥರಾದ ವಿದ್ಯಾವಂತರುಗಳು ಕೂಡಿರುವ ಈ ಸಭೆಗೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿ ಅಪಾರವಾದ ಮರ್ಯಾದೆ ಮಾಡಿದುದಕ್ಕಾಗಿ ನಾನು ಕೃತಜ್ಞತಾಪೂರ್ವಕವಾಗಿ ನಿಮ್ಮನ್ನು ವಂದಿಸುತ್ತೇನೆ. ನಾನು ನಿಮ್ಮೆಲ್ಲರಿಗೂ ಕೇವಲ ಅಪರಿಚಿತನಾದರೂ ಅಸಾಧಾರಣವಾದ ಮರ್ಯಾದೆಯನ್ನು ನನಗೆ ಮಾಡಿರುತ್ತೀರಿ. ನಾನು ವೀರಶೈವನಾಗಿರುವುದರಿಂದಲೂ ಭರತಖಂಡದಲ್ಲೆಲ್ಲಾ ಶೈವಪ್ರಾಶಸ್ತ್ಯವು ಎಲ್ಲಿ ಹೆಚ್ಚಾಗಿದೆಯೋ ಅಂಥ ದೇಶಭಾಗಕ್ಕೆ ನಾನು ಸೇರಿದವನಾದುದರಿಂದಲೂ ನನಗೆ ಈ ಮರ್ಯಾದೆಯನ್ನು ಕೊಟ್ಟಿರುತ್ತೀರೆಂದು ಭಾವಿಸುತ್ತೇನೆ. ಇದರಿಂದ ನಮ್ಮ ಜನವರ್ಗಕ್ಕೇ ಒಂದು ಮರ್ಯಾದೆಯನ್ನಿತ್ತಂತಾಯಿತೆಂದು ನಮ್ಮ ಮತದವರು ಭಾವಿಸುವರೆಂದು ನಾನು ನಂಬುತ್ತೇನೆ. ಈ ಸಭೆಗೆ ಅಧ್ಯಕ್ಷತೆಯನ್ನು ವಹಿಸುವುದಕ್ಕೆ ವಿಶೇಷ ಪಾಂಡಿತ್ಯವು ನನಗಿರುವುದೆಂದು ನಾನು ತಿಳಿಯದಿದ್ದರೂ ನೀವಾಗಿ ಅಂತಹ ಸಾಮರ್ಥ್ಯವು ನನ್ನಲ್ಲಿರುವುದೆಂದು ಅಭಿಮಾನಿಸಿ ಈ ಅಧ್ಯಕ್ಷತ್ವಕ್ಕೆ ಆರಿಸಿಕೊಂಡಿರುತ್ತೀರಿ. ಈ ಕೃತ್ಯವು ದ್ರಾವಿಡದೇಶದ ಮತ್ತೂ ಕರ್ನಾಟದೇಶದ ಶೈವರುಗಳ ಪರಸ್ಪರ ಸಂಬಂಧವು ಅಭಿವೃದ್ಧಿಗೊಳ್ಳುವುದೆಂಬುದಕ್ಕೆ ಗುರ್ತಾಗಿದೆ.

ನಾನು ದೇವತಾಸಾರ್ವಭೌಮನಾದ ಮಹಾದೇವನೊಬ್ಬನನ್ನೇ ನಂಬಿ ಆರಾಧಿಸುವವನಾಗಿದ್ದರೂ, ಪರಮತದ್ವೇಷಿಯಲ್ಲ. ನಮ್ಮ ಹಿಂದೂ ಮತಕ್ಕೆ ಸೇರಿದ ಅನ್ಯದೇವತೆಗಳನ್ನೂ ನಾನು ಗೌರವಿಸದೆ ಇಲ್ಲ. ಕ್ರೈಸ್ತಮಹಮ್ಮದೀಯಾದಿ ಮತಗಳನ್ನೆಲ್ಲಾ ಪುರಸ್ಕರಿಸುತ್ತಿರುವ ಈಗಿನ ಕಾಲದಲ್ಲಿ ನಮ್ಮ ಹಿಂದೂಮತದ ಪ್ರಾಚೀನ ಮಹರ್ಷಿಗಳಿಂದ ಅನುಸರಿಸಲ್ಪಟ್ಟ ದೇವತೆಗಳನ್ನು ನಾವೇಕೆ ದೂರೀಕರಿಸಬೇಕು? ಪ್ರಪಂಚದಲ್ಲಿರುವ ದೊಡ್ಡದೊಡ್ಡ ಮತಗಳೆಲ್ಲಾ ಈಶ್ವರನಿರ್ಮಿತವಾದ ಒಂದೇ ಒಂದು ಕರುವಿನಲ್ಲಿ ಎರಕವೆರೆಯಲ್ಪಟ್ಟವುಗಳು. ಆದರೂ ಮನುಷ್ಯರ ಸ್ವಭಾವವು ಪರಸ್ಪರ ಭಿನ್ನವಾಗಿರುವಂತೆಯೇ ಅಮತಗಳ ಧರ್ಮವು ಮಾತ್ರ ಭಿನ್ನಭಿನ್ನವಾಗಿರುತ್ತದೆ. ಎಲ್ಲ ಮನುಷ್ಯರ ಆಲೋಚನೆಯೂ ಒಂದೇ ವಿಧವಾಗಿರುವುದು ಹೇಗೆ ಅಸಂಭವವೋ ಅದರಂತೆಯೇ ಎಲ್ಲ ಮತಗಳ ಧರ್ಮವೂ ಒಂದೇ ಆಗಿರುವುದು ಅಸಂಭವ. ಪ್ರತಿಯೊಂದು ಮತಕ್ಕೂ ಸತ್ಯವೇ ಮೂಲಬೀಜವಾಗಿರುವುದು. ಆದರೆ ಆ ಸತ್ಯಸ್ವರೂಪವನ್ನು ತಿಳಿದುಕೊಳ್ಳುವುದರಲ್ಲಿ ಏರ್ಪಟ್ಟಿರುವ ವಿಧಾನಗಳು ಮಾತ್ರ ಆಯಾ ಮತದಲ್ಲಿ ಭಿನ್ನಭಿನ್ನಗಳಾಗಿರುತ್ತವೆ. ಹೇಗೆಂದರೆ—ಬೆಂಗಳೂರಿನ ಬಳಿಯಲ್ಲಿ ಶಿವಗಂಗಾ ಅಥವಾ ಕಕುದ್ಗಿರಿ ಎಂಬುವ ಒಂದು ಬೆಟ್ಟವಿದೆ. ಅಲ್ಲಿನ ಸ್ಥಲ ಪುರಾಣದಲ್ಲಿ ಹೇಳಲ್ಪಟ್ಟಿರುವ ಸಂಗತಿಯು ಪ್ರತ್ಯಕ್ಷತಃ ನಿಜವಾಗಿಯೂ ಇದೆ. ಹೇಗೆಂದರೆ ಆ ಬೆಟ್ಟವನ್ನು ಪೂರ್ವದಿಕ್ಕಿನಿಂದ ನೋಡುವವರಿಗೆ ವೃಷಭಾಕಾರವಾಗಿಯೂ, ಪಶ್ಚಿಮದಿಂದ ಲಿಂಗಾಕಾರವಾಗಿಯೂ ಉತ್ತರದಿಂದ ಸರ್ಪಾಕಾರವಾಗಿಯೂ, ದಕ್ಷಿಣದಿಂದ ವಿನಾಯಕಾಕಾರವಾಗಿಯೂ ಕಾಣಿಸಿಕೊಳ್ಳುತ್ತಿದೆ. ಈ ಭಿನ್ನಾಕಾರದಿಂದ ತೋರುವಿಕೆಯು ಸುಳ್ಳೇನೂ ಅಲ್ಲ. ನಾವು ನಮ್ಮ ಧರ್ಮದಲ್ಲೇ ತತ್ಪರರಾಗಿ, ಅದೇ ಸರ್ವೋತ್ಕೃಷ್ಟವಾದ ಮೋಕ್ಷಸಾಧನಮಾರ್ಗವೆಂದು ತಿಳಿದುಕೊಂಡಿದ್ದರೂ ಪ್ರಪಂಚದ ಇತರ ಮುಖ್ಯಮತಗಳ ವಿಷಯಗಲ್ಲಿಯೂ ಸಹಾನುಭೂತಿಯುಳ್ಳವರಾಗಿ ಮೈತ್ರಿಯಿಂದಿರಬೇಕು. ವೈಷ್ಣವ-ಶಾಕ್ತೇಯ-ಜೈನ-ಬೌದ್ಧಾದಿ ಮತಗಳೆಲ್ಲವೂ ಒಂದೇ ಬುಡದಿಂದ ಹುಟ್ಟಿರುವುದರಿಂದ ಅವೆಲ್ಲವುಗಳಲ್ಲೂ ನಾವು ಸ್ನೇಹಭಾವದಿಂದ ವರ್ತಿಸಬೇಕು. ಈ ಭರತಖಂಡದಲ್ಲಿ ಇತರ ಮತಗಳ ಪ್ರಾಬಲ್ಯವು ಹೆಚ್ಚಿ ನಮ್ಮ ಶೈವಮತದ ಅಭಿವೃದ್ಧಿಯು ಕಡಿಮೆಯಾಗುತ್ತ ಬಂದಿರುವುದೆಂಬುದರಲ್ಲಿ ಸಂಶಯವೇನೂ ಇಲ್ಲ. ಪರಮತಗಳು ವೃದ್ಧಿಗೊಳ್ಳುವ ಆ ಸಂದರ್ಭದಲ್ಲೇ ಶೈವಮತದ ವಿಷಯದಲ್ಲಿ ಇಲ್ಲದ ದುರ್ಬೋಧನೆಗಳನ್ನೆಲ್ಲಾ ಮಾಡಿ, ಇದರ ಪ್ರಾಶಸ್ತ್ಯವನ್ನು ಕುಂದಿಸುವ ಪ್ರಯತ್ನಗಳು ಸಹ ಮಾಡಲ್ಪಡದೆ ಹೋಗಲಿಲ್ಲ. ಅಂಥ ಪ್ರಯತ್ನಗಳನ್ನು ಸಹ ನಾವು ದ್ವೇಷಬುದ್ಧಿಯಿಂದ ನೋಡದೆ, ಮತಶ್ರದ್ಧೆಯು ನಮ್ಮ ಮತದ ಜನರಲ್ಲಿ ಕಡಿಮೆಯಾಗದೆ ಹೋಗುವಂತೆ ಮಾಡುವುದಕ್ಕೆ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡದೆ ಹೋಗುವುದು ನಮ್ಮ ತಪ್ಪು. ಭಾರತೀಯರೊಳಗೆ ಈ ಮತದ ಧರ್ಮದ ವಿಷಯವಾಗಿ ಜನರಲ್ಲಿ ದುರ್ಬುದ್ಧಿಯನ್ನು ಹುಟ್ಟಿಸುವ ಮತವೈರಿಗಳೂ, ನಿಜಸ್ಥಿತಿಯನ್ನರಿಯ[illegible]ದ ಪಾಶ್ಚಾತ್ಯರೂ ಈ ಶೈವಮತದ ಪ್ರಥ[illegible]ಧರ್ಮವಾದ ಲಿಂಗಪೂಜೆಯ ವಿಷಯದಲ್ಲಿ ಹುಟ್ಟಿಸಿರುವ ಅಪವಾದವೇನೆಂದರೆ—"ಅದು ಶಿಶ್ನಪೂಜೆ" ಎಂಬುದಾಗಿ. ಪೂರ್ವಾತ್ಯರಾದ ಅನೇಕ ಪ್ರಸಿದ್ಧಪಂಡಿತರು ಬರೆದಿರುವ ಆಧಾರಗಳಿಂದ ಶೈವಮತಧರ್ಮವು ಭರತಖಂಡಕ್ಕೆ ಸನಾತನವಾದುದೆಂದು ನಿಸ್ಸಂಶಯವಾಗಿ ಎಂಥವರ ಮನಸ್ಸಿಗೂ ದೃಢವಾಗಿ ತೋರುವುದು. ಭರತಖಂಡದಲ್ಲೆಲ್ಲಾ ಅನೇಕ ಶಿವಾಲಯಗಳಿರುವುದರಿಂದಲೂ, ಶಿವನ ವಾಸಸ್ಥಾನವಾದ ಹಿಮಾಲಯಕ್ಕೆ ವಿಶೇಷವಾದ ಗೌರವವಿರುವುದರಿಂದಲೂ, ಕಾಶೀರಾಮೇಶ್ವರಾದಿ ಶಿವಕ್ಷೇತ್ರಗಳ ವಿಷಯದಲ್ಲಿ ಭಾರತ ರಾಮಾಯಣಾದಿ ಗ್ರಂಥಗಳಲ್ಲಿ ವರ್ಣನೆಯಿರುವುದರಿಂದಲೂ, ಭರತಖಂಡಕ್ಕೆ ಒಂದಾನೊಂದು ಕಾಲದಲ್ಲಿ ಶೈವವೇ ಸರ್ವಸಾಮಾನ್ಯವಾದ ಮುಖ್ಯಧರ್ಮವಾಗಿದ್ದಿತೆಂದು ಹೇಳುವುದರಲ್ಲಿ ಸಂಶಯವೇ ಇಲ್ಲ. ಶೈವಮತದ ಕೊನೆಯ ಹಂತದಲ್ಲಿ ಕರ್ಮವು ಅಳಿದುಹೋಗಿ ಭಕ್ತಿಜ್ಞಾನವೈರಾಗ್ಯಗಳೇ ಉಪಾದೇಯಗಳಾಗಿರುತ್ತವೆ. ಈ ತತ್ತ್ವವೇ ವೀರಶೈವ ಮತದಲ್ಲಿರುತ್ತದೆ. ಆ ಮತಕ್ಕೇ ನಾನು ಸೇರಿದವನು. ಪಂಚಾಚಾರ್ಯರಿಂದ ಸ್ಥಾಪಿತವಾದ ಈ ವೀರಶೈವ ಮತವನ್ನು ೧೨ ನೆ ಶತಮಾನದಲ್ಲಿ ಅವತರಿಸಿದ್ದ ಬಸವಸ್ವಾಮಿಯು ವಿಸ್ತರಿಸಿದನು. ಈ ಬಸವೇಶ್ವರನು ಮತಪ್ರಮುಖನಾಗಿದ್ದುದು ಮಾತ್ರವೇ ಅಲ್ಲದೆ ದೊಡ್ಡ ಮತಸುಧಾರಕನೂ ಆಗಿ, ಮುಖ್ಯತತ್ತ್ವಗಳನ್ನು ಸ್ವತಃ ಆಚರಣೆಗೆ ತಂದವನೂ ಆಗಿದ್ದನು. ಆತನು ಕನಿಷ್ಠವರ್ಗದ ಜನರನ್ನೆಲ್ಲಾ ಮೇಲಕ್ಕೆತ್ತುವುದಕ್ಕೆ ತನ್ನ ಸರ್ವಪ್ರಯತ್ನವನ್ನೂ ಮಾಡಿದನು. ಸಕಲರಲ್ಲೂ ಭ್ರಾತೃಭಾವವೂ ಸರ್ವಸಮಾನ ಪ್ರೀತಿಯೂ ಇರಬೇಕೆಂಬ ತತ್ತ್ವವನ್ನು ಬೋಧಿಸಿದನು. ಆ ತತ್ತ್ವವನ್ನು ತನ್ನ ಆಚರಣೆಯಲ್ಲೇ ಇಟ್ಟುಕೊಂಡು, ಕನಿಷ್ಠ ಜನವರ್ಗದವರನ್ನೆಲ್ಲಾ ತನ್ನ ಮತಕ್ಕೆ ಸೇರಿಸಿಕೊಂಡು, ಅಭೇದಭಾವದಿಂದ ಅವರೊಡನೆ ನಡೆದುಕೊಂಡು ಜಗತ್ತಿಗೆ ಉದಾಹರಣೆಯಾಗಿ ತೋರಿಸಿದನು. ಬಸವೇಶ್ವರನ ಕಾಲದಲ್ಲಿ ನಡೆದ ಆ ದೊಡ್ಡ ಸುಧಾರಣೆಯೇ ಈಗಲೂ ವೀರಶೈವರ ಆಚರಣೆಗೆ ಆಧಾರವಾಗಿರುತ್ತದೆ. ಈಗಿನ ನಮ್ಮ ವೀರಶೈವರಿಗೆ ನಾನು ಮನಸ್ಸಿಗೆ ತಗಲುವ ಹಾಗೆ ಒತ್ತಿ ಹೇಳುವುದೇನೆಂದರೆ—ಬಸವೇಶ್ವರನು ಅತ್ಯುತ್ಸಾಹದಿಂದ ಸ್ಥಾಪಿಸಿದ ಆ ಐಕಮತ್ಯದ ತತ್ತ್ವವನ್ನೇ ನೀವು ಅನುಸರಿಸಿ ಉದ್ಧರಿಸಬೇಕಲ್ಲದೆ, ಹಿಂದೂಮತಕ್ಕೆ ಅನುಸರಿಸಿಬಂದಿರುವ—ಮತ್ತೂ ಬಸವೇಶ್ವರನ ಕಾಲಕ್ಕೆ ಹಿಂದೆ ಇದ್ದಂತಹ—ಭೇದ ಒಳಭೇದಗಳಿಗೆ ನೀವು ಅವಕಾಶವನ್ನು ಕೊಡಬಾರದು. ಶೈವರೆಲ್ಲರೂ ಭ್ರಾತೃಭಾವದಿಂದೈಕ್ಯಗೊಳ್ಳುತ್ತಬಂದರೆ, ಅದರಿಂದ ಸಾಮಾಜಿಕ ಬಲವು ಎಷ್ಟು ದೃಢತರವಾಗುವುದೆಂಬುದನ್ನು ನೀವೇ ಆಲೋಚಿಸಿರಿ. ಅಂಥ ಐಕಮತ್ಯವನ್ನು ನಾವುಗಳು ಹೊಂದಬೇಕಾದರೆ, ನಿಮ್ಮ ಜ್ಞಾನಚಕ್ಷುಸ್ಸಿನಿಂದ ಈ ಭರತಖಂಡದ ಸ್ಥಿತಿಯನ್ನು ನಿರೀಕ್ಷಿಸಿರಿ. ಅದನ್ನು ನಿಮ್ಮ ಗಮನಕ್ಕೆ ನಾನು ತರುತ್ತೇನೆ.

ಏನೆಂದರೆ—ಕೋಟ್ಯಂತರ ಜನಸಂಖ್ಯೆಯುಳ್ಳ ಈ ಭರತಖಂಡವು ಹಿಮವತ್ಪರ್ವತದ ಪಾದತಲದಲ್ಲಿದೆ. ಆ ಪರ್ವತವು ಪ್ರಪಂಚದಲ್ಲೆಲ್ಲಾ ಉನ್ನತವಾದುದು. ಅದರಮೇಲೆ ಕೈಲಾಸವಿದೆ. ಅದರಲ್ಲಿ ದೇವತಾಸಾರ್ವಭೌಮನಾದ ಪರಶಿವನು ಈ ಜಗತ್ತಿನ ಕ್ಷೇಮವನ್ನೆಲ್ಲಾ ಕೋರಿ ತಪಸ್ಸನ್ನಾಚರಿಸುತ್ತಿದ್ದಾನೆ. ಆತನು ತನ್ನ ಮಕ್ಕಳಾದ ನಮ್ಮ ಮೇಲೆಲ್ಲಾ ಎಷ್ಟು ಪ್ರೀತಿಯನ್ನಿಟ್ಟಿರುವನೆಂಬುದನ್ನು ನಾವು ತಿಳಿದುಕೊಂಡು ಆತನನ್ನೇ ನಾವು ತ್ರಿಕರಣಪೂರ್ವಕವಾಗಿ ಸದಾ ಧ್ಯಾನಿಸಿ, ಅವನಲ್ಲೇ ನಾವೆಲ್ಲಾ ಐಕ್ಯರಾಗಬೇಕೆಂಬುದು ಆತನ ಅಪೇಕ್ಷೆಯಾಗಿರುತ್ತದೆ. ಈ ಒಳತತ್ತ್ವವನ್ನು ತಿಳಿದುಕೊಂಡು ನಾವೆಲ್ಲರೂ ನಮ್ಮ ಮುಕ್ತಿಸಾಧನೆಗಾಗಿ ಪ್ರಯತ್ನಪಡಬೇಕಾಗಿದೆ.

ಈ ಸಂದರ್ಭದಲ್ಲಿ ನಮ್ಮ ವೀರಶೈವ ಮತದ ಮುಖ್ಯಧರ್ಮವೊಂದನ್ನು ತಮಗೆ ತಿಳಿಸಲು ಕುತೂಹಲಪಡುತ್ತೇನೆ. ಮಾಂಸಾಹಾರ ಮದ್ಯಪಾನಗಳು ನಮ್ಮ ಮತದಲ್ಲಿ ಸಂಪೂರ್ಣವಾಗಿ ನಿಷಿದ್ಧವಾದುವುಗಳು. ಇದರಿಂದ ಅವರ ದೇಹವು ಶುಚಿಯಾಗಿಯೂ, ಮನಸ್ಸು ನಿರ್ಮಲವಾಗಿಯೂ ಇರುತ್ತದೆ. ಅಂಥ ಅಂತರ್ಬಹಿರ್ನೈರ್ಮಲ್ಯವು ಪಾರಮಾರ್ಥಿಕೋನ್ನತಿಗೆ ಅತ್ಯಂತ ಸಹಾಯಕವಾಗಿರುತ್ತದೆ. ಈ ವೀರಶೈವ ಮತಸ್ಥನಾದವನು ತಾನು ಯಾವ ಅಂತಸ್ತಿನವನಾಗಿದ್ದರೂಸರಿಯೆ ಪ್ರತಿಯೊಬ್ಬನೂ ಈ ಮದ್ಯಪಾನ ಮಾಂಸಭಕ್ಷಣನಿಷೇಧರೂಪಧರ್ಮವನ್ನು ಖಂಡಿತವಾಗಿ ಆಚರಿಸಿಯೇ ಆಚರಿಸುತ್ತಾನೆ. ಈ ವೀರಶೈವರ ಪಾರಮಾರ್ಥಿಕ ಪ್ರಗತಿಯಲ್ಲಿ ಜೀವಕಾರುಣ್ಯಸ್ಥಲವೆಂಬುದು ಒಂದು ಮೆಟ್ಟಲು. ಆ ಸ್ಥಲದಲ್ಲಿರುವವನು ಪ್ರಾಣಿಮಾತ್ರದಲ್ಲಿ ದಯೆಯುಳ್ಳವನಾಗಿರಬೇಕೆಂದೂ, ಪ್ರಾಣಿಹಿಂಸೆಯನ್ನು ಮಾಡದೆ ಅವುಗಳನ್ನು ಪ್ರೀತಿಸಬೇಕೆಂದೂ ಹೇಳಲ್ಪಟ್ಟಿದೆ. ದಕ್ಷಿಣ ಹಿಂದೂಸ್ಥಾನದಲ್ಲಿರುವ ಅನೇಕ ಶೈವರು ಇದೇ ನಿಯಮವುಳ್ಳವರಾಗಿ ಧಾನ್ಯಾಹಾರಿಗಳಾಗಿಯೇ ಇದ್ದಾರೆ. ಶೈವರೆಂಬುವರು ಯಾವ ಜಾತಿಗೆ ಸೇರಿದವರಾಗಿದ್ದರೂ ಅವರೆಲ್ಲರೂ ಇಂಥ ನಿಯಮವನ್ನೇ ಅನುಸರಿಸುವವರಾಗಬೇಕೆಂದು ನಾನು ಒತ್ತಿ ಹೇಳುತ್ತೇನೆ. ಏಕೆಂದರೆ—ಅದು ಜಗತ್ಸಾಮಾನ್ಯವಾಗಿ ಆರೋಗ್ಯವರ್ಧಕ ನಿಯಮವಾಗಿರುತ್ತದೆ. ಶೈವಸಿದ್ಧಾಂತ ಸಭೆಯನ್ನು ಸ್ಥಾಪಿಸಿ ಅದನ್ನು ಅವಿಚ್ಛಿನ್ನವಾಗಿ ನಡೆಯಿಸಿಕೊಂಡು ಬರುತ್ತಿರುವವರೆಲ್ಲಾ ನಮ್ಮ ವಂದನೆಗೆ ಪಾತ್ರರಾಗಿರುತ್ತಾರೆ....—”

ಊದಬತ್ತಿಗಳು.

44

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ವಿವೇಕಮುಡರಿ.

ನೈತಿಕ, ಸಾಮಾಜಿಕ, ಲೌಕಿಕ ಇತ್ಯಾದಿ ಆವಶ್ಯಕವಿಷಯಗಳಮೇಲೆ ಅಂತ್ಯಂತೋಪಯುಕ್ತ ಲೇಖನಗಳನ್ನು ಈ ಸ್ಟಾರ್ ಪತ್ರದಲ್ಲಿ ಬರೆದು ಗ್ರಾಹಕರ ಮನಸ್ಸನ್ನು ಆನಂದಗೊಳಿಸುತಲಿರುವ ಕ್ಲೋಸ್‌ಪೇಟೆಯ ಮ॥ ಆರ್. ಶ್ರೀನಿವಾಸರಾಯರಿಂದ ರಚಿಸಲ್ಪಟ್ಟಿದೆ. ಇದರ ಬೆಲೆ ೨ ಆಣೆ. ವಿ. ಪಿ. ಇಂದ ೪ ಆಣೆ. ಬಹು ಸ್ವಲ್ಪ ಪ್ರತಿಗಳು ಮಾತ್ರ ವುಳಿದಿರುವುದರಿಂದ ಮೈಸೂರ್ ಸ್ಟಾರಾಫೀಸಿಗೆ ಕೂಡಲೇ ಬರೆದು ತರಿಸಿಕೊಳ್ಳಿ. 19

60

ಪದ್ಮರಾಜ ಪುರಾಣಂ.

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಅಣೆ.

ಬಿ. ಮಲ್ಲಾರಾಧ್ಯರು,
ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ ಬಿ. ಬಸವಾರಾಧ್ಯರು,
ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್, ಬೆಂಗಳೂರು.

ಚಾರುಶೀಲ್ ಚರಿತ್ರ.

(ದ್ವಿತೀಯ ಮುದ್ರಣ)

ಈ ಗ್ರಂಥವು ಸಾಮಾನ್ಯಸ್ತ್ರೀಪುರುಷರಿಗೂ ತಿಳಿಯುವಂತೆ ಸುಲಭಶೈಲಿಯಿಂದ ಅತಿ ಮನೋರಂಜಕವಾಗಿ ಬರೆಯಲ್ಪಟ್ಟಿರುವುದಲ್ಲದೆ ರಂಗಸ್ಥಳದಲ್ಲಿ ಅಭಿನಯಿಸುವುದಕ್ಕನುಕೂಲವಾಗಿರುವಂತೆ ಕಂದ, ವೃತ್ತ ಮತ್ತೂ ಮನೋಹರವಾದ ಹಾಡುಗಳಿಂದ ಗರ್ಭಿತವಾಗಿರುತ್ತದೆ. ಇದರಲ್ಲಿ ಪತಿವ್ರತಾ ಸ್ತ್ರೀಯು ತನ್ನ ಪತಿಗೆ ಪ್ರಾಪ್ತವಾಗುವ ಕಷ್ಟನಿವಾರಣೆಗಾಗಿ ಸಹಿಸಲಶಕ್ಯವಾದ ಕಷ್ಟಗಳನ್ನೆಲ್ಲ ಅನುಭವಿಸಿಕೊಂಡು ಕಡೆಗೆ ಪತಿನಾಮಸ್ಮರಣೆಯಲ್ಲೇ ಪರಂಧಾಮವನ್ನೈದುವುದೂ, ಇಂಥ ಪತ್ನಿಯ ಹಿತೋಕ್ತಿಯನ್ನೆಲ್ಲಂ ಮೀಸಿ ದುರ್ಮಾರ್ಗಪ್ರವರ್ತಕನಾದ ಪತಿಗೆ ಪ್ರಾಪ್ತವಾಗುವ ದುರ್ಗತಿಯು ಚೆನ್ನಾಗಿ ವರ್ಣಿಸಲ್ಪಟ್ಟಿರುತ್ತದೆ. ಈ ಚರಿತ್ರೆಯನ್ನೋದಲು ಪ್ರಾರಂಭಿಸಿದವೇಳೆ ಅದು ಮುಗಿಯುವವರೆಗೂ ಬಿಡಲು ಮನಸ್ಸಾಗುವುದಿಲ್ಲ. ಡೆಮ್ಮಿ ಅಷ್ಟಪತ್ರದಾಕೃತಿಯಲ್ಲಿ ಒಳ್ಳೇ ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಮುದ್ರಿಸಲ್ಪಟ್ಟಿರುತ್ತದೆ. ಇದರ ಬೆಲೆ ೬ ಆಣೆ ವಿ. ಪಿ. ಯಿಂದ ೭ ಆಣೆ.

ಮ್ಯಾನೇಜರ್,
ಮೈಸೂರ್ ಸ್ಟಾರ್.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕು ಪತ್ರಿಕೆಗೂ ೧-೧೦-೦ ಯಂತೆ

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲ[illegible] ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಿ[illegible] ದ್ವಿಗುಣವಾಗಿ ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

33

ಗುಣವಾಗದಿದ್ದರೆ ಹಣಪರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ವಿ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ. ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಹೊಸ ಪುಸ್ತಕಗಳು.

17

ವೀರಶೈವಷಟ್ಸ್ಥಲ ಸಿದ್ಧಾಂತವು.– ಇದರಲ್ಲಿ ೩ ಪ್ರಕರಣಗಳಿರುತ್ತವೆ. ೧ ನೆಯ ಪ್ರಕರಣದಲ್ಲಿ ಅಷ್ಟಾವರಣಮಹಿಮೆಯೂ ೨ ನೆಯ ಪ್ರಕರಣದಲ್ಲಿ ಪಂಚಾಚಾರವಿಚಾರವೂ. ೩ ನೆಯ ಪ್ರಕರಣದಲ್ಲಿ ಧರ್ಮಾಚಾರವಿಚಾರವೂ ಪ್ರತಿಪಾದಿಸಲ್ಪಟ್ಟಿರುತ್ತೆ. ವಾರ್ಧಿಕಷಟ್ಪದಿ ರೂಪವಾಗಿ ಸರಳವಾಗಿದೆ. ಇದರ ಕ್ರಯ ವಿ. ಪಿ. ಮೂಲಕ ೪ ಆಣೆ.

ಪುರುಷಸೂಕ್ತವು.– ನಿರಂಜನ ಜಂಗಮಪರವಾದ ಕರ್ನಾಟ ಟೀಕಾಸಮೇತವಾಗಿದೆ. ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಬೆಲೆ ವಿ. ಪಿ. ಯಿಂದ ೪ ಆಣೆ.

ವೇದಸಂಜೀವಿನಿಯು.— ಇದು ಕನ್ನಡವಾಕ್ಯಗ್ರಂಥವು. ೧೦ ಅಧ್ಯಾಯಗಳಿಂದ ಕೂಡಿರುತ್ತದೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಪ್ರತಿಪಾದಿತವಾಗಿದೆ. ಬೆಲೆ ವಿ. ಪಿ. ಮೂಲಕ ೧೦ ಆಣೆ.

ಶಿವಪಂಚಸ್ತವವು.— ಸಂಸ್ಕೃತ ವ್ಯಾಖ್ಯಾನದಿಂದಲೂ ಕನ್ನಡ ಟಿಪ್ಪಣದಿಂದಲೂ ಕೂಡಿದ ಮಲ್ಹಣ, ಮಹಿಮ್ನ, ಮಲಯರಾಜ, ಅನಾಮಯ, ಹಲಾಯುಧವೆಂದು ಪ್ರಖ್ಯಾತಗಳಾದ ಪಂಚಸ್ತೋತ್ರಗಳು ಇದರಲ್ಲಿರುತ್ತವೆ. ಬೆಲೆ ವಿ. ಪಿ. ಮೂಲಕ ೧-೪-೦.

ಬಸವಲಿಂಗಸ್ವಾಮಿಗಳು,
ಹೊಸಮಠ ಮೈಸೂರು.

ಅಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!
ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

ರಾಸ್ಕೋಪ್‌ಸಿಸ್ಟಂ ಪೇಟಂಟ್ ಲೀವರ್ ಜ್ಯೂವೆಲ್ಡ್ ವಾಚ



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಎರಡು (೨) ವರುಷಗಳು ಗ್ಯಾರೆಂಟು.

ಕ್ರಯ ರೂ. ೨-೮-೦ ವಿ. ಪಿ. ಚಾರ್ಜು ರೂ. ೦-೪-೦.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದ. ಕ್ರಯ ೦-೮-೦ ವಿ. ಪಿ. ಚಾರ್ಜು ೦-೪-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ.
ಪಚ್ಚ ಕರ್ಪೂರಮಾತ್ರ).—[illegible]ಲ್ಲಾಟಾಕ್ಸ್ ರೋಡು,
[illegible]ಹಕ್ಕೆ ತಂ[illegible]ದರಾಸು.

ಮೊದಲು ಇದನ್ನು ಓದಿರಿ.

19

ಅಂಜೀರಾರ್ಕಮಧು:— ಇದರ ಸೇವನದಿಂದ ಮೊಯೊಳಗಿನ ಉಷ್ಣತೆಯು ಹೋಗಿ ಧಾತುಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿಧಾರಣಕ್ಕೆ ಯೋಗ್ಯವಾದ ಧಾತು ಆಗುತ್ತದೆ. ನಡುವೇ ಯಾವದಾದರೊಂದು ಕಾರಣದಿಂದ ನಪುಂಸಕತ್ವವಾದರೆ ಇದರಿಂದ ಖಾತ್ರಿಯಿಂದ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ ಅನ್ನ ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ, ಅನ್ನ, ಹಾಲು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತವಾಗುತ್ತಾರೆ. ಕ್ರಯ ೧ ಬಾ, ೧॥= ರೂ. ೨ ಬಾ. ೨।॥ ರೂ. ೩ ಬಾ. ೩।॥= ಟ.ಖ.ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡ. ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು. ಟ. ಖ. ಬೇರೆ.

ಸಾರ್ಸಾಪರಿಲಾ:—ಇದರಿಂದ ಪರಮಾ, ಗರಿಮಿ ಹೊಗುತ್ತದೆ. ಉಷ್ಣದಿಂದ ಆದ ಯಾವದಾದರು ವಿಕಾರಗಳು ರಸಾಯನ ಶೇವನ ಮಾಡಿದ್ದರಿಂದ ಉಂಟಾದ ರೋಗಗಳು ಮತ್ತು ಉಷ್ಣವು ಬಡೆದು ಆದ ಬಿಳೇಕರೇಕಲೆಗಳು, ಭಗೇಂದ್ರ, ಪಿನಸಿ, ಇತ್ಯಾದಿರೋಗಗಳು ಖಾತ್ರಿಯಿಂದ ನೆಟ್ಟಗಾಗುವವು. ಕ್ರಯ ೧ ಬಾ. ೧॥ರೂ. ೩ ಬಾ. ೪ರೂ. ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು. ಖಜ್ಜಿ, ತದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು. ಟ. ಖ. ಬೇರೆ.

“ ಪಾಚಕ. ”

(“ ಪಚನ ಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರತೇಗುಗಳು ಬರುವದಿಲ್ಲ. ೧ ಬಾ. ೯ ಆಣಿ ಟ. ಖ. ಬೇರೆ.

ನಂ. ೫೫ “ ಅಂಜೀರಾರ್ಕಮಧುಕಂಪನಿ ”
ಧಾರವಾಡ ಮತ್ತು ಮಿರಜ. (ಇಂಡಿಯಾ)

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

21

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ.

ಸರ್ವಮೇಹರಾಜಾಂಗ ರಬ್ಬರ್‌ಎಣ್ಣೆ.—ಈ ಎಣ್ಣೆಯನ್ನು ಬೆಳಿಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರೆಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೆಬ್ಬು, ವ್ರಣ, ಕುಷ್ಠ, ಮಹೋದರ, ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೨. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೩. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೪. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೫. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. [illegible] ಪಾಯಿ ೫. ಬಹಳ ಅಷ್ಟ ಕಾಸದಿಂದ [illegible] ೬ ಆಣೆ.

೬. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂತಿಮೇಹ, ಮೂತ್ರಕೃಚ್ಛ್ರ ಅಸ್ತಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ, ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ—ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟಪ್ಪಾಲ್‌ಖರ್ಚು ೬ ಆಣೆ.

೯. ಮಹಾಕುಂಡಲ್ಯಾದಿರಸಾಯನ— ಇದರಿಂದ ಕ್ಷಯ ಕಾಶಿ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟಲ್ಲಿ ಉರಿಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳೆವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶ ನೀರು ಎರೆಯುವಾಗ ಜ್ಞಾನ ತಪ್ಪುವುದು, ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚೆನ್ನೆಗಳು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಪುರಬತ್ತುಗಳೂ, ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚನ್ನಬಸಪ್ಪ ಅಂಡ್‌ಸನ್ಸ್,
ಚೆನ್ನಪಟ್ಟಣ, ಬೆಂಗಳೂರು ಡಿಸ್ಟ್ರಿಕ್ಟ್.

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳ್ತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಮೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದ ವ್ಹಿ.ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಸುಲಭ ಕ್ರಯ! ಸುಲಭಕ್ರಯ!!

ರಾಸ್ಕೋಪ್ ಲೀವರ್ ವಾಚ್.

2



ಇದು ರಾಸ್ಕೋಪ್ ಸಿಸ್ಟಂ ಆಗಿಯೂ, ಪೇಟೆಂಟ್ ಕೆಲಸದಿಂದ ಕೂಡಿದ್ದಾಗಿಯೂ, ತಲೆಯಲ್ಲಿ ಬೀಗವುಳ್ಳದ್ದಾಗಿಯೂ ಇರುತ್ತೆ. ಸರಿಯಾದ ಕಾಲವನ್ನು ತೋರಿಸುವಂಥಾದ್ದು. ದಪ್ಪವಾದ ಕನ್ನಡಿಯಿಂದ ಮುಚ್ಚಿರುತ್ತೆ. ಇದಕ್ಕೆ ಗ್ಯಾರೆಂಟಿ ೫ವರ್ಷ. ಇದರ ಕ್ರಯ ೧ಕ್ಕೆ ೨-೮-೦ ಮಾತ್ರ.

N. B.—ನಮ್ಮಲ್ಲಿ ಎಲೆಕ್ಟ್ರಿಂಕ್ ಗಿಲ್ಟು ಭಂಗಾರದ ನಗಗಳು, ಜರ್ಮನ್ ಬೆಳ್ಳಿ ಸಾಮಾನುಗಳು ಮುಂತಾದ್ದು ವ್ಯಾಪಾರಸ್ತರು ವಿಕ್ರಯಿಸಿ ಲಾಭ ಹೊಂದುವಷ್ಟು ಸುಲಭ ಕ್ರಯದಲ್ಲಿ ದೊರಿಯುತ್ತೆ.

ವಿಳಾಸ:—
ಬಿ. ಆರ್. ವೆಂಕಟರಮಣ ಅಂಡ್‌ಕಂಪೆನಿ,
ನಂಬರು ೩, ಕೋಪ್ ವೆಂಕಟಾಚಲೈಯ್ಯರ್ ಬೀದಿ,
ಮದರಾಸು.

43

ಹೊಸ ಪುಸ್ತಕಗಳು.

ನೂತನಗೃಹಪ್ರವೇಶ, ಪಟ್ಟಾಧಿಕಾರ, ಲಿಂಗಧಾರಣ ಈ ಮೂರು ವಿಧಿಗಳು ಟೀಕಾ ಸಮೇತವಾಗಿ ಒಂದು ಪುಸ್ತಕದಲ್ಲಿ ಮುದ್ರಿತಗಳಾಗಿರುತ್ತವೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೨ ಆಣೆ. ಶ್ರೀಚೆನ್ನಬಸವೇಶ್ವರವಿರಚಿತಮಾದ ಶಿವಾನುಭವಶಾಸ್ತ್ರ ಕನ್ನಡ ವಾಕ್ಯರೂಪಾಗಿದೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೫ ಆಣೆ. ವೀರಶೈವದಶಕರ್ಮವಿಧಿ ಬೆಲೆ ಪ್ರತಿ ೧ಕ್ಕೆ ವಿ. ಪಿ. ೮ ಆಣೆ. ಶಿವಸ್ತುತಿಮಣಿಮಾಲಾ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೬ ಆಣೆ. ರಾಜಶೇಖರ ೧೩-೧೪ ಆಶ್ವಾಸ ಪ್ರತಿಪದಾರ್ಥ ತಾತ್ಪರ್ಯಸಹಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಇದೆ.

ಕ್ರಯ— ಪ್ರತಿ ೧ ಕ್ಕೆ ವಿ. ಪಿ. ೧-೩-೦.

ಸಟೀಕ ವೀರಶೈವ ಅಂತ್ಯೇಷ್ಟಿವಿಧಿ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೮ ಆಣೆ. ವಿಳಾಸ:— **ಕೆ. ಶಾಂತವೀರಪ್ಪ,**
ದೊಡ್ಡಪೇಟೆ, ಬೆಂಗಳೂರು.

33

ಜೇರಿಗೆ ಬಸವಲಿಂಗಪ್ಪನ ಪುಸ್ತಕಗಳು.

ಬೆಲೆ ಬಹುಳ ಕಡಿಮೆ. ನೋಡಿ. ನೋಡಿ. ಬಿಡಬೇಡಿ.

ಪದ್ಮಾವತಿಕಥೆ:- ವೀರಶೈವವಚನನಾಟಕ. ೯೮ ಡೆಮ್ಮಿ ಪುಟ. ಕ್ರಯ. ೦-೨-೦. ವಿ. ಪಿ. ಯಿಂದ ೦-೪-೦

ವೀರಶೈವಮತವಿಷಯಸಾರ (೨ ನೇ ಭಾಗ) ಕ್ರಯ ೦-೨-. ವಿ. ಪಿ. ಯಿಂದ ೦-೪-೦.

ಷಟ್‌ಸ್ಥಲಚಿಂತಾರತ್ನ. - ಕ್ರಯ ೦-೨-೦. ವಿ. ಪಿ. ಯಿಂದ ೦-೪-೦.

ವಿಳಾಸ.—ಬೆಂಗಳೂರು ಸಿಟಿ ಅರಳೇಪೇಟೆ ಜೇರಿಗೆ ನಂಜಪ್ಪನವರ ಮಗ ಬಿ. ಜಿ. ಬಸವಲಿಂಗಪ್ಪನವರಿಗೆ.

೧೯೧೧ನೇ ಇಸವಿ ಜನವರಿ ತಾ॥ ೨ ರಿಂದ ೧೯೧೧ನೇ ಜನವರಿ ತಾ॥ ೮ ರವರೆಗೆ ಸಲ್ಲುವ ಶಾಲಿವಾಹನ ಶಕೆ ೧೮೩೨ ನೇ ಸಾಧಾರಣ ಸಂವತ್ಸರದ ಪುಷ್ಯ ಶು॥ ಬಿದಿಗೆಯಿಂದ ಪುಷ್ಯ ಶು॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ತೇದಿ
2	ಸೋ	ಬಿ	41-8	ಪೂ	28-38	19
3	[1]ಮಂಗ	ತ	42-10	ಶ್ರ	31-24	20
4	[2]ಬುಧ	ಚ	42-8	ಧ	53-2	21
5	ಗುರು	ಪಂ	40-52	ಶ	33-2	22
6	[3]ಶುಕ್ರ	ಷ	38-33	ಪೂಭಾ	32-39	23
7	ಶನಿ	ಸ	34-10	ಪೂ	31-2	24
8	ಭಾನು	ಅ	30-50	ರೆ	28-16	25

(1) ಮೊಹರಂ ತುರುಷ್ಕದೇವೋತ್ಸವಃ (2) ದೂರ್ವಾಗಣಪತೀವ್ರತಂ, ಗೃಹಜನನಯೋಗಃ, ಕೊಠಾರೋತ್ಸವಃ. (3) ತುಳಷಷ್ಟೀವ್ರತಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಜನವರಿ ತಾರೀಖು ೯ ನೇ ಸೋಮವಾರ. [ಸಂಚಿಕೆ ೨

೧೯೧೧ ಪಾಕೆಟ್‌ಡೈರಿ. ೧೯೧೧

ಎ.

ಬಿ.

ಸಿ.

ಡಿ.


ಜಿ ನಂ॥ ೧.

ಜಿ ನಂ॥ ೨.

ಈ ಡೈರಿಗಳನ್ನು ಬಹು ಸುಂದರವಾಗಿರುವಂತೆ ಗುಣವಾದ ದಪ್ಪಕಾಗದದಲ್ಲಿ ಮುದ್ರಿಸಿ, ಪ್ರತಿಪುಟಕ್ಕೂ ರೂಲುಹಾಕಿ ಬಹಳ ಸೊಗಸಾದ ಸೀಮೆ (ಕ್ಯಾಲಿಕೊ) ಬಟ್ಟೆಯಿಂದ ವಿಲಾಯಿತಿ ಯಂತ್ರಗಳಲ್ಲಿ ಬೈಂಡುಮಾಡಿ ಮೇಲು ಗತೆಯಲ್ಲಿ ಪ್ರಕಾಶವಾಗಿ ಹೊಳೆಯುವ ಹಾಗೆ ಭಂಗಾರದ ರೇಖನಂತಿರುವ ಅಕ್ಷರಗಳನ್ನು ಬಿಡಿಸಿ ಗಿಲೀಟುಮಾಡಿದೆ.

ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟುದಾರರು, ಸರ್ಕಾರಿ ಉದ್ಯೋಗಸ್ಥರು, ಹುದ್ದೇದಾರರು, ಜಮೀನ್‌ದಾರರು, ಸ್ಕೂಲ್ ಕಾಲೇಜು ವಿದ್ಯಾರ್ಥಿಗಳು, ಪೊಲೀಸು ಇಲಾಖೆಯವರು ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ.

ಎ. ನಂ॥ ಪೆನ್ಸಿಲ್ ಇಡತಕ್ಕ ಚಿಕ್ಕ ಡೈರಿ ೧ ಕ್ಕೆ ೩ ಆಣೆ.
ಬಿ. „ ಪೆನ್ಸಿಲ್ ಇಟ್ಟಿರುವ ಚಿಕ್ಕಫ್ಲಾಪ್ ಡೈರಿ೧ಕ್ಕೆ ೫ ಆ.
ಸಿ. ನಂ॥ ಪೆನ್ಸಿಲ್ ಇಡತಕ್ಕ ದೊಡ್ಡ ಡೈರಿ ೧ ಕ್ಕೆ ೬ ಆಣೆ
ಡಿ. „ ಪೆನ್ಸಿಲ್‌ಇಟ್ಟಿರುವ ದೊಡ್ಡಫ್ಲಾಪ್ ಡೈರಿ೧ಕ್ಕೆ ೮ ಆ

ಸರ್ಕಾರದಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಹೊಂದಿರುವ

"ಜನಿವಾ" ಡೈರಿ.

ಈ ಡೈರಿಯು ಮೇಲ್ಕಂಡ ಡೈರಿಗಳಿಗಿಂತ ಹೆಚ್ಚಾದ ಸಮಾಚಾರಗಳನ್ನೂ ದಪ್ಪನಾದ ಕಾಗದವನ್ನೂ ಅತಿ ನೂತನವಾದ ಬೈಂಡನ್ನೂ, ಒಂದೂವರೆಯಷ್ಟು ಗಾತ್ರವನ್ನೂ, ಉಪಯೋಗಿಸಿರುವ ಸಾಮಾನುಗಳಲ್ಲಿ ಹೆಚ್ಚಾದ ಬೆಲೆಯುಳ್ಳ ಪದಾರ್ಥಗಳನ್ನೂ ಒಳಗೊಂಡಿದೆ. ಆದ್ದರಿಂದ ಈ ಡೈರಿಯ ಕ್ರಯವೂ ಹೆಚ್ಚಾಗಿದೆ.

"ಜನಿವಾ" ನಂ॥ ೧. ಚಿಕ್ಕಡೈರಿ ೧ ಕ್ಕೆ ೪ ಆಣೆ. | "ಜನಿವಾ" ನಂ॥ ೨. ಚಿಕ್ಕ ಫ್ಲಾಪ್ ಡೈರಿ ೧ ಕ್ಕೆ ೬ ಆಣೆ.

೧೨ ಪ್ರತಿಗಳು ಒಟ್ಟಾಗಿ ತರಿಸಿಕೊಂಡರೆ ೧ ಪ್ರತಿ ಉಚಿತವಾಗಿ ಕೊಡಲ್ಪಡುವುದು.

ಎ. ಆರ್. ಕೃಷ್ಣಸ್ವಾಮಿಸೆಟ್ಟಿ ಅಂಡ್ ಕಂಪೆನಿ,
೧೨೫, ಗೋವಿಂದನಾಯ್ಕರ್ ಬೀದಿ, ಮದರಾಸ್.

3

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
23 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

ಉತ್ತಮ ಗ್ರಂಥಗಳು.

102

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನ ರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ —೦.೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿಃ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.
ಶಂಕರಲಿಂಗಕದಂ.— ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

5

ಲೋಕಾಪಮ್ರಯಹಾರ ಕಸ್ತೂರೀ ಮಾತ್ರೆ.



ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕಾಲು ಹೂಡತ(ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ,ಅರೋಚಕ ಇನ್ನೂಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನುಸೇವಿಸುತಿರುವವರು ಖಂಡಿತವಾಗಿಯೂ ಪ್ಲೇಗಿನಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.

೨೦೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೮ ಕುಪ್ಪಿವರೆಗೆ ಪೋಸ್ಟೇಜು ೪ ಆ.

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ;— ಸೀತಾರಾಘವವೈದ್ಯಶಾಲಾ,
ಮೈಸೂರು.

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦—೧೦—೦
ಸಟೀಕ ವಿವಾಹವಿಧಿ	೦—೬—೦
ಪರವಾದಿಗಜಾಂಕುಶತಾರಾವಳಿ	೦—೮—೦
ಕರಸ್ಥಾಂಡೆನ್ನು	೦—೪—೦
ಮೂಲದೀಕ್ಷಾವಿಧಿ	೦—೨—೦
ವ್ರತಪಂಚಕ	೦—೨—೦
ಸಟೀಕಕರ್ನಾಟಕಶಬ್ದಮಂಜರಿ	೦—೪—೦
ಸಟೀಕನಂದೀವ್ರತ	೦—೪—೦
ಗುರುಶಂಕರೇಶ್ವರಶತಕಂ	೦—೧—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦—೨—೦

ಅಂಚೆ ವೆಚ್ಚ ಬೇರೆ.

ಸೌಗಂಧಿಕಾಪರಿಣಯ.

(ಕಳೆದವಾರದ ಶೇಷ.)

ಶುಭ್ರವರ್ಣವೂ, ಹೊಂಬಣ್ಣವೂ, ಕಮಲದಂತೆ ವರ್ಣವೂ ಉಳ್ಳ ಮಚ್ಚೆಗಳಿಂದೊಡಗೂಡಿದ ಆನೆಯು ಸ್ವಾಮಿಗೆ ವಂಶಾಭಿವೃದ್ಧಿಯಂ ಕೊಡುವುದು. ನವಿಲಿನಂತೆ, ಗಾರ್ದಭದಂತೆ ಕಪಿಯಂತೆ, ಕಾಗೆಯಂತೆ, ಹದ್ದಿನಂತೆ ಬಿಂದುವುಳ್ಳ ಆನೆಯಂ ದೂರದಲ್ಲಿ ಬಿಟ್ಟುಬಿಡಬೇಕು. ಸರ್ವಲಕ್ಷಣಗಳಿಂದಲೂ ಒಡಗೂಡಿ, ದಂತಹೀನವಾದ ಆನೆಯು ಮೋಕಳೀಯೆನಿಸಿಕೊಳ್ಳುವುದು. ಆ ಆನೆಯು ಯುದ್ಧದಲ್ಲಿ ಪ್ರಾಣವಂ ಕೊಲ್ಲುವುದು. ಯಾವ ಆನೆಗೆ ನಡೆಯುವಾಗ ಕಾಲುಗಳು ಕೂಡುವುವೋ ಆ ಆನೆಯು ನಪುಂಸಕವೆಂಬ ಪೆಸರುಳ್ಳದ್ದು ಇದು ಯೋಗ್ಯವಲ್ಲ. ಎಡದ ಕೊಂಬು ಬಂದೇವುಳ್ಳ ಆನೆಯು ಸ್ವಾಮಿಗೆ ಕುಲನಾಶವಂ ಮಾಡುವುದು. ಬಲದಕಡೆ ಓರೆಯಾಗಿ, ಅಧೋಮುಖಗಳಾದ ಕೊಂಬುಗಳುಳ್ಳ ಆನೆಯೂ ಎಡದ ಕೊಂಬುಮಾತ್ರ ಅಧೋಮುಖವಾಗಿ ಕುರಿಯ ಕೊಂಬುಗಳಂತೆ ಮೊಟಕಾದ ಕೊಂಬುಗಳುಳ್ಳ ಆನೆಯೂ ಯುದ್ಧದಲ್ಲಿ ಸ್ವಾಮಿಯನ್ನೇ ಕೊಲ್ಲುವುದು. ಸೊಂಡಿಲಿನಲ್ಲಿ ತಿಗಣೆಯಂತೆ ದುರ್ವಾಸನೆಯುಳ್ಳ ಆನೆಯು ಸ್ವಾಮಿಯಿಂದ ಗರ್ಭಿಣಿಯಾಗಿರುವ ಸ್ತ್ರೀಯಂ ಕೊಲ್ಲುವುದು. ಕಣ್ಣು ಮೊದಲಾದ ಅವಯವಗಳಿಂದ ಹೀನಗಳಾದ ಆನೆಗಳು ವ್ಯಾಳಹಸ್ತಿಗಳೆನಿಸಿಕೊಳ್ಳುವುವು. ಇದು ಸ್ವಾಮಿಯ ನೇತ್ರವಂ ಅಪಹರಿಸುವುದು. ಒಂದು ಕಿವಿ, ಒಂದು ಕಣ್ಣು, ಒಂದು ಪಾರ್ಶ್ವದಿಂದಲೂ ಹೀನವಾಗಿ, ಕರಿಮೋಘದಂತೆ ಶರೀರಕಾಂತಿಯೂ ಕಾವೀಕಲ್ಲಿನಂತೆ ಕೆಂಪಾದ ಉಗುರುಗಳೂ ಉಳ್ಳ ಆನೆಯು ಪೂತನಗಜವೆನಿಸಿಕೊಳ್ಳುವುದು. ಈ ಆನೆಯು ಸ್ವಾಮಿಯ ಮೂಲನಾಶನವಂ ಮಾಡುವುದು. ಇಂಥ ಆನೆಯಂ ಶತ್ರುವಿನ ಪಟ್ಟಣದ ಮಧ್ಯದಲ್ಲಿ ಬಿಡಬೇಕು. ಹ್ರಸ್ವವಾಗಿ ಸೂಕ್ಷ್ಮವಾದ ಕಿವಿಯೂ, ಬಾಲವೂ, ಶಿಶ್ನವೂ, ಉದ್ದವಾದ ಸೊಂಡಿಲೂ, ಸಣ್ಣವಾದ ಕತ್ತೂ, ದುಷ್ಟವಾದ ಮನಸ್ಸೂ, ಕಪ್ಪಾದ ಶರೀರವು, ಕಪ್ಪಾದ ನಾಲಿಗೆಯು ಉಳ್ಳ ಗಜವು ಮಾಯುಕವೆನಿಸಿಕೊಳ್ಳುವುದು. ಈ ಗಜವು ಸೇನಾಪತಿಯಂ, ರಾಜ್ಯವಂ ಕೂಡ ನಾಶಮಾಡುವುದು. ಎಲೈ ಸುಗಂಧಮಹಾರಾಜನೆ! ಇದುವರೆಗೆ ಉತ್ತಮ, ಮಧ್ಯಮ, ಅಧಮ ಗಜಗಳ ಲಕ್ಷಣ [illegible] ಷು. ಇನ್ನು ಗಜಗಳಲ್ಲಿರುವ ಸುಳಿ [illegible] ನೆಗಳ ಶುಭಾಶುಭ ಫಲಗಳಂ ಪೇಳ್ವೆನು [illegible] ಗಳಿಗೆ ಚರ್ಮದಲ್ಲಿ, ಮುರಿದ ದಂತಗಳ ಕೊನೆಯಲ್ಲಿ, ಮಸ್ತಕದ ಕೂದಲುಗಳಲ್ಲಿ, ಬಿಂದುಗಳಲ್ಲಿ, ರೋಮಗಳಲ್ಲಿ, ಬಾಲದಲ್ಲಿ ಸಹ ಸುಳಿಗಳು ಕಾಣುವುವು. ಇದರಲ್ಲಿ ಮಸ್ತಕದ ಕೂದಲುಗಳಲ್ಲಿಯೂ, ದಂತಗಳ ಕೊನೆಯಲ್ಲಿಯೂ, ರೋಮಗಳಲ್ಲಿಯೂ ಇರುವ ಸುಳಿಗಳು ಶುಭಫಲವನೀವುವು. ಚರ್ಮದಲ್ಲಿಯೂ, ಬಿಂದುಗಳಲ್ಲಿಯೂ, ಬಾಲದಲ್ಲಿಯೂ ಇರುವ ಸುಳಿಗಳು ಅಶುಭಫಲವಂ ಕೊಡುವುವು. ಇವುಗಳಲ್ಲಿ ಪ್ರದಕ್ಷಿಣಾಕಾರವಾದ ಸುಳಿಯು ಶುಭವಂ ಕೊಡುವುದು. ಅಪ್ರದಕ್ಷಿಣವಾದ ಸುಳಿಯು ಅಶುಭವಂ ಕೊಡುವುದು. ಪೀತವರ್ಣವಾದ ಕೂದಲುಗಳೂ, ಮೃದುವಾದ ಸೊಂಡಿಲೂ ಉಳ್ಳ ಆನೆಯ ಎಡಭಾಗದಲ್ಲಿ ಪ್ರದಕ್ಷಿಣಾಕಾರವಾದ ಸುಳಿಯೂ ಬಲದಭಾಗದಲ್ಲಿ ಅಪ್ರದಕ್ಷಿಣಾಕಾರವಾದ ಸುಳಿಯೂ ಇದ್ದರೆ ಆ ಸುಳಿಗಳು ಶುಭಫಲಗಳಂ ಕೊಡುವವು. ಅಸ್ಥಾನದಲ್ಲಿ ಹುಟ್ಟಿದ ಸುಳಿಯು ಶುಭಕರವಾದಾಗ್ಯೂ ಶುಭವಂ ಕೊಡಲಾರದು. ವಿಹಿತಸ್ಥಾನದಲ್ಲಿರುವ ಸುಳಿಯು ಅಶುಭವಾದಾಗ್ಯೂ ಶುಭಫಲವಂ ಕೊಡುವುದು. ಹಣೆಯಲ್ಲಿ, ಸ್ತನಗಳ ಮಧ್ಯದಲ್ಲಿ, ಕಣ್ಣುಗಳ ಮೇಲೆ, ಕುಂಭಸ್ಥಳಗಳ ಮಧ್ಯದಲ್ಲಿ, ಇದರ ಕೆಳಗೆ, ದಂತಗಳ ಕೊನೆಗಳಲ್ಲಿ, ಕಿವಿಗಳ ಮಧ್ಯದಲ್ಲಿ ಸಹ ಇರುವ ಸುಳಿಗಳು ಸ್ವಾಮಿಗೆ ಜಯವಂ ಕೊಡುವುವು. ಸ್ತನಗಳ ಮಧ್ಯದಲ್ಲಿ, ಶಿರಸ್ಸಿನಲ್ಲಿ, ಕುಂಭಸ್ಥಳದ ಮಧ್ಯದಲ್ಲಿ, ಕಿವಿಗಳ ಕೆಳಗೆ, ಎದೆಯಲ್ಲಿ ಈ ಸ್ಥಾನಗಳಲ್ಲಿ ಸುಳಿಯುಳ್ಳ ಗಜವು ಪಂಚಮಂಗಳವೆನಿಸಿಕೊಂಬುದು. ಶಿರಸ್ಸಿನಲ್ಲಿರುವ ಸುಳಿಯು ಪಟ್ಟಾಭಿಷೇಕವಂ, ಸ್ತನಗಳ ಮಧ್ಯದಲ್ಲಿರುವ ಸುಳಿಯು ಜಯವಂ, ಕಿವಿಗಳ ಮಧ್ಯದಲ್ಲಿರುವ ಸುಳಿಯು ಸುಖವಂ, ಕುಂಭಸ್ಥಳದಲ್ಲಿರುವ ಸುಳಿಯು ಸಂ[illegible]ಷವಂ ಸಹ ಕ್ರಮವಾಗಿ ಕೊಡುವುವು. ಗಲ್ಲದ ಕೆಳಗೆ, ತುಟಿಗಳಲ್ಲಿ, ಕೊರಳಿನಲ್ಲಿ, ಕಿವಿಗಳಲ್ಲಿ, ನೇತ್ರಸಮೀಪದಲ್ಲಿ, ನಾಭಿಯಲ್ಲಿ, ಕಾಂಕುಳಲ್ಲಿ, ಎರಡು ಪಾರ್ಶ್ವದಲ್ಲಿ, ಭುಜ, ಶಿರಸ್ಸುಗಳಲ್ಲಿ, ಬಾಲದಲ್ಲಿ, ವೃಷಣಗಳ ಸಮೀಪದಲ್ಲಿ, ಕೀಲುಗಳಲ್ಲಿಯೂ ಇರುವ ಸುಳಿಗಳು ಶ್ರೇಷ್ಠಗಳಾಗಲಾರವು. ಬಲದ ಕೊಂಬು ಬಿರಿದುಯಿದ್ದರೆ ಸ್ವಾಮಿಯ ಸೇವೆಗೆ ಭಯವುಂಟಾಗುವುದು. ಎಡದ ಕೊಂಬುಪೊಡೆದಿದ್ದರೆ ಪುತ್ರನು—ಪುರೋಹಿತನು—ಇವರುಗಳಂ ಸಹಿತವಾಗಿ ಸ್ವಾಮಿಯಂ ಕೊಲ್ಲುವುದು. ಎರಡು ಕೊಂಬುಗಳೂ ಬಿರಿದುಯಿದ್ದರೆ ಸ್ವಾಮಿಗೆ ಕುಲನಾಶವಾಗುವದು. ಮತ್ತೂ ಆನೆಗಳಿಗೆ ಮದೋದಕವು ಸ್ರವಿಸುವ ಸ್ಥಳಗಳಂ ಪೇಳುವೆನು:—ಗಂಡಸ್ಥಳವು, ಕರ್ಣಗಳು, ನೇತ್ರಗಳು, ವಕ್ಷಸ್ಥಳವು, ವೃಷಣಗಳು, ಸೊಂಡಿಲು ಸ್ತನವು, ಪಾದವು ಸಹ—ಈ ಎಂಟು ಸ್ಥಾನಗಳಲ್ಲಿ ಮದವು ಸ್ರವಿಸುವುದು. ವಾಸೆಯು, ನಾಗರವು, ಶೀಧು, ಘರ್ಮ, ಮದ, ಶೀಕರವು, ಚಕ್ಕೆಯು, ಮುಖವು ಯೆಂಬುದಾಗಿ ಗಜಗಳ ಮದಕ್ಕೆ ಎಂಟು ಹೆಸರುಗಳು. ಮತ್ತೂ ಯುದ್ಧದಲ್ಲಿ ಕೊಂಬುಗಳಿಂದ ಪ್ರಹರಿಸುವ ಕ್ರಮಗಳಂ ಪೇಳುವೆನು:— ಪ್ರಹರಿಸುವುದನ್ನರಿಯದೆಯಿರುವ ಗಜವು ಯುದ್ಧಕ್ಕೆ ಯೋಗ್ಯವಲ್ಲವಾದುದರಿಂದ ಶತ್ರುಗಳಂ ತಿವಿಯುವಂತೆ ಗಜಗಳಿಗೆ ಅಭ್ಯಾಸವಂ ಮಾಡಿಸಬೇಕು. ಸಂಘಾತವು, ಉಲ್ಲೇಖವು, ಪರಿಲೇಖವು, ಕರ್ತರಿಯು, ತಲಘಾತವು, ಪಾರ್ಶ್ವಘಾತವು, ಆರಾಘಾತವು, ಸೂಚೀಮಂತವು, ತಾಡಿತವು, ಸಂಧಿತವು ಸಹ- ಇವುಗಳು ಯುದ್ಧದಲ್ಲಿ ಕೊಂಬುಗಳ ಯುದ್ಧಭೇದಗಳು. ಇವುಗಳಲ್ಲಿ ಗಜಗಳು ಪರಸ್ಪರವಾಗಿ ಮುಖಗಳಂ ತಾಡಿಸಿದರೆ ಅದು ಸಂಘಾತವೆನಿಸಿಕೊಳ್ಳುವುದು. ಕೊಂಬುಗಳಿಂದ ಮೇಲಕ್ಕೆ ಎತ್ತಿಹಾಕುವದು ಉಲ್ಲೇಖವೆನಿಸಿಕೊಳ್ಳುವುದು. ಅಡ್ಡಲಾಗಿಯೂ, ಮೇಲಕ್ಕಾಗಿಯೂ ದಂತಗಳಿಂದ ಎತ್ತಿಹಾಕುವದು ಪರಿಲೇಖವೆನಿಸಿಕೊಳ್ಳುವುದು. ಉಭಯ ಪಾರ್ಶ್ವಗಳಲ್ಲಿಯೂ ಕೊಂಬುಗಳಿಂದ ತಿವಿದರೆ ಅದು ಕರ್ತರಿಯೆನಿಸಿಕೊಳ್ಳುವುದು. ಕೊಂಬುಗಳ ಮಧ್ಯಪ್ರದೇಶದಲ್ಲಿ ಮುಖದಿಂ ತಿವಿದರೆ ಅದು ತಲಾಘಾತವೆನಿಸಿಕೊಳ್ಳುವುದು. ಪಾದಮೂಲದಿಂದ ಅಡ್ಡಲಾಗಿ ತಿರುಗಾಡೋಣವೇ ಪಾರ್ಶ್ವಘಾತವೆನಿಸಿಕೊಳ್ಳುವುದು. ಪರಸ್ಪರ ಅಭಿಮುಖಗಳಾಗಿ ಸಮೀಪದಲ್ಲಿ ಪ್ರಹರಿಸೋಣವೇ ಆರಾಘಾತವೆನಿಸಿಕೊಂಬುದು. ಸೊಂಡಿಲ ಮಧ್ಯಪ್ರದೇಶದಲ್ಲಿ ತಿವಿಯೋಣವೇ ಸೂಚೀಘಾತವೆನಿಸಿಕೊಳ್ಳುವುದು. ಪರಸ್ಪರವಾಗಿ ಕೊಂಬುಗಳಂ ಮಸೆಯೋಣದರಿಂದ ಪುಟ್ಟಿದ ಪ್ರಹಾರವು ತಾಡಿತವೆನಿಸಿಕೊಂಬುದು. ಮೇಲೆಮೇಲೆ ಪರಸ್ಪರವಾಗಿ ತಿವಿಯೋಣವೇ ಸಂಧಿತವೆನಿಸಿಕೊಂಬುದು. ಇಂತಲ್ಲದೆ ಹೆಣ್ಣಾನೆಗಳ ಲಕ್ಷಣಗಳಂ ಪೇಳುವೆನು:—ಬಟುವಾದ ಕುಂಭಸ್ಥಳವೂ, ಸ್ತನಗಳೂ, ಮನೋಹರವಾದ ರೋಮಗಳು, ಗುಬ್ಬಚ್ಚಿಯ ನೇತ್ರದಂತೆ ವರ್ಣವುಳ್ಳ ನೇತ್ರಗಳು, ಶುಭ್ರವಾಗಿ ನುಣುಪಾದ ಮುಖವು, ವಿಸ್ತಾರವಾದ ಎದೆಯು, ಮಹತ್ತಾದ ಕಟಿಪಶ್ಚಾದ್ಭಾಗವು, ಮನೋಹರವಾದ ಗಮನವು ಸಹ ಉಳ್ಳುವಾಗಿ ಸೌಂದರ್ಯವೂ, ಕೆಂದಾವರೆಯಂತೆ ಕೆಂಪುವರ್ಣವುಳ್ಳ ದಂತಪಙ್ಕ್ತಿಯೂ ಉಳ್ಳುದಾಗಿಯೂ ಇರುವ ಹೆಣ್ಣಾನೆಯು ಯೂಥಪತಿಯಾದ ಗಜವಂ ಪ್ರಸವಿಸುವುದು. ಇಂಥಾ ಹೆಣ್ಣಾನೆಯು ಯಾವ ಅರಸಿಗೆ ಇರುವುದೊ ಆ ಅರಸು ಸ್ತ್ರೀಸಂಪತ್ತುಳ್ಳುವನಾಗುವನು. ಇಂಥ ಆನೆಯಂ ಸರ್ವಕಾಲದಲ್ಲಿಯೂ ಗಂಧಪುಷ್ಪಾದಿಗಳಿಂದ ಪೂಜಿಸಬೇಕು. ಪುರುಷ ಗಜಗಳಿಗೆ ಯಾವ ಲಕ್ಷಣಗಳು ಪೇಳಲ್ಪಟ್ಟುವೋ ಆ ಲಕ್ಷಣಗಳೇ ಸ್ತ್ರೀಗಜಗಳಿಗೂ ಇರಬೇಕೆಂದು ಋಷಿಗಳು ಪೇಳುವರು.

ಸಶೇಷ.

ಆರೋಗ್ಯಸೂತ್ರ.

(ಪ್ರಶ್ನೋತ್ತರಗಳು.)

ಪ್ರ— ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು?

ಉ— ನಿನ್ನ ಮನೆಯ ಕಿಟಕಿಗಳನ್ನು ಹಗಲೂ ರಾತ್ರಿಯೂ ತೆರೆದಿಡು. ಮನೆಯಲ್ಲಿ ಕಸ ಕುಪ್ಪೆಯನ್ನು ಹಾಕಬೇಡ. ಯಾವಾಗಲೂ ಬಾಯನ್ನು ಮುಚ್ಚಿಕೊಂಡು ಮೂಗಿನಿಂದ ಉಚ್ಛ್ವಾಸವನ್ನು ಮಾಡು. ಪರಿಶುದ್ಧವಾದ ನೀರನ್ನುಮಾತ್ರವೇ ಕುಡಿ. ಪದಾರ್ಥಗಳದ್ನು ಚೆನ್ನಾಗಿ ಅಗಿದು ತಿನ್ನು. ಚೆನ್ನಾಗಿ ಬೆಂದ ಪದಾರ್ಥಗಳನ್ನೇ ತಿನ್ನು. ಪ್ರತಿದಿನವೂ ಕ್ಲ್ಪಪ್ತವಾದ ಸಮಯಕ್ಕೆ ಊಟಮಾಡು. ಬಟ್ಟೆಗಳನ್ನು ಬಿಗಿಯಾಗಿ ತೊಡಬೇಡ. ಪ್ರತಿದಿನವೂ ಬಹಿರಂಗಸ್ಥಲಗಳಲ್ಲಿ ಉತ್ತಮವಾದ ಗಾಳಿಯು ಬೀಸುತ್ತಿರುವಾಗ ದೇಹವ್ಯಾಯಾಮವನ್ನು ಮಾಡು. ಸೂರ್ಯರಶ್ಮಿಯು ಬಿದ್ದಿರುವಾಗ ನಡೆದಾಡುವುದು ಒಳ್ಳೆಯದು. ಪ್ರತಿದಿನವೂ ತಪ್ಪದೆ ಸ್ನಾನವನ್ನು ಮಾಡು. ಅದರಲ್ಲೂ ಶಿರಸ್ನಾನವು ಉತ್ತಮವು. ನಿನ್ನ ಕರ್ತವ್ಯಕಾರ್ಯವನ್ನು ಚೆನ್ನಾಗಿಯೂ ಮನಶ್ಶಾಂತಿಯಿಂದಲೂ ಮಾಡು. ಮನಶ್ಚಾಂಚಲ್ಯಪಡುವುದು ದುಃಖಕ್ಕೆ ಕಾರಣವು. ಮನಶ್ಶಾಂತಿಯಿದ್ದವರಿಗೆ ಆರೋಗ್ಯವಿರುವುದು. ಆದುದರಿಂದ ಯಾವಾಗಲೂ ಮನಶ್ಶಾಂತಿಯನ್ನು ಸಂಪಾದಿಸುವುದಕ್ಕೆ ಪ್ರಯತ್ನಿಸು.

ಪ್ರ— ನಿದ್ರಿಸುವುದಕ್ಕೆ ಯಾವ ಪಕ್ಕವಾಗಿ ಮಲಗಿಕೊಳ್ಳಬೇಕು?

ಉ— ಬಲಪಕ್ಕದಲ್ಲಿ ಮಲಗಿಕೊಳ್ಳುವುದು ಶ್ರೇಷ್ಠವಾದರೂ, ಯಾವಾಗಲೂ ಆ ಪಕ್ಕವಾಗಿಯೇ ಮಲಗಿಕೊಳ್ಳಬೇಕಾದುದಿಲ್ಲ. ಎಡಪಕ್ಕವಾಗಿಯೂ, ಅಂಗತಾಕನಾಗಿಯೂ, ಬೋರ್ಲಾಗಿಯೂ ಕೂಡ ಮಲಗಿಕೊಳ್ಳಬಹುದು.

ಪ್ರ— ನಾನು ಅಜೀರ್ಣದಿಂದ ಬಾಧೆಪಡುತ್ತಿದ್ದೇನೆ. ಅದರ ಪರಿಹಾರಕ್ಕೇನು ಮಾಡಬೇಕು?

ಉ— ೧ ತಿಂಗಳಾಗಲಿ ಪಕ್ಷವಾಗಲಿ ರಾತ್ರಿಕಾಲದ ಭೋಜನವನ್ನು ಪರಿತ್ಯಜಿಸು. ಮಧ್ಯಾಹ್ನ ೧-೨ ಗಂಟೆಗೊಂದು ಸಲ ಬೇಳೆತೊವೆ ಮೊದಲಾದುವನ್ನು ಬಿಟ್ಟು ಸುಲಭವಾಗಿ ಜೀರ್ಣಿಸುವ ಅನ್ನಾಹಾರವನ್ನು ಮಾಡು. ರಸವತ್ತಾದ ಹಣ್ಣುಗಳನ್ನು ತಕ್ಕಷ್ಟು ತಿನ್ನು. ದೇಹವ್ಯಾಯಾಮವನ್ನು ಮಿತವಾಗಿ ಮಾಡು.

ಪ್ರ— ನಿದ್ರೆಯಿಂದೆದ್ದ ಕೂಡಲೇ ಎಂಥ ನೀರನ್ನು ಕುಡಿಯಬೇಕು? ಬಿಸಿನೀರನ್ನೆ? ತಣ್ಣೀರನ್ನೆ?

ಉ— ತಣ್ಣೀರನ್ನೇ ಕುಡಿಯಬೇಕು.

ಪ್ರ— ಪ್ರತಿದಿನವೂ ಎಷ್ಟು ನೀರನ್ನು ಕುಡಿಯಬೇಕು?

ಉ— ೮-೯ ಪಂಚಪಾತ್ರೆಗಳ ನೀರನ್ನು ಕುಡಿಯಬಹುದು. ಆದರೆ ಕಿತ್ತಳೆ-ದಾಳಿಂಬೆ-ಚಕ್ಕೋತ್ತ-ಸೇಬು ಮೊದಲಾದ ಹಣ್ಣುಗಳನ್ನು ತಿನ್ನುವವರಿಗೆ ಇಷ್ಟು ನೀರಿನ ಅವಶ್ಯಕತೆಯಿಲ್ಲದೆ ಹೋಗಬಹುದು.

ಪ್ರ— ತೇಯಿಲೆ ಕಾಫಿಗಳ ನೀರು ದೇಹಕ್ಕೆ ಒಳ್ಳೆಯದೆ? ಅಭ್ಯಾಸವಿರುವವರು ಅವನ್ನು ಹೇಗೆ ಬಿಡಬಹುದು?

ಉ— ಆಗಾಗ್ಗೆ ಉಲ್ಲಾಸಾರ್ಥವಾಗಿ ಮಾತ್ರ ಇವುಗಳನ್ನು ಕುಡಿಯಬಹುದು. ಪ್ರತಿದಿನವೂ ಕುಡಿಯುವ ಅಭ್ಯಾಸವು ಶರೀರದ ಆರೋಗ್ಯಕ್ಕೆ ಭಂಗಕಾರಿಯು. ತೇಯಲೆ-ಕಾಫಿ-ಇವುಗಳಲ್ಲಿ ಹೊಗೆಸೊಪ್ಪಿನಲ್ಲಿರುವಂತೆಯೇ ವಿಷಪದಾರ್ಥವಿರುವುದು. ಇವುಗಳ ಅಭ್ಯಾಸವು ಅಜೀರ್ಣಕ್ಕೆ ಮೂಲಕಾರಣವು. ಅಜೀರ್ಣಬಾಧೆಯಿರತಕ್ಕವರು ಕಾಫಿ ತೇಯಲೆಗಳ ಪಾನವನ್ನು ಸಂಪೂರ್ಣವಾಗಿ ಪರಿತ್ಯಜಿಸಬೇಕು. ಕುತಕುತನೆ ಕಾದು ಮರಳುತ್ತಿರುವ ನೀರಿನಲ್ಲಿ ನಿನಗಿಷ್ಟವಿದ್ದರೆ ಸ್ವಲ್ಪ ಹಾಲನ್ನೂ ಹಾಕಿ ಸಕ್ಕರೆಯನ್ನು ಮಿಶ್ರಮಾಡಿ ಕುಡಿಯುವುದು ಸರ್ವೋತ್ತಮವು. ಕಾಫಿ ತೇಯೆಲೆಯಂತೆಯೇ ಇದೂನೂ ಕುಡಿದರೆ ಉಲ್ಲಾಸವನ್ನೀಯುವುದು.

ಪ್ರ— ಭೋಜನ ಸಮಯದಲ್ಲಿ ನೀರನ್ನು ಏತಕ್ಕೆ ಕುಡಿಯಕೂಡದು?

ಉ— ಇದಕ್ಕೆ ಎರಡು ಕಾರಣಗಳುಂಟು. ಚೆನ್ನಾಗಿ ಪದಾರ್ಥಗಳನ್ನಗಿಯದೆ ನೀರನ್ನು ಕುಡಿದು ಗಂಟಲಲ್ಲಿ ಅಡ್ಡಲಾಗಿ ನಿಂತಿರುವ ಕಬಳವನ್ನು ಹಾಗೆಯೇ ಜೀರ್ಣಕೋಶಕ್ಕೆ ಸಾಗಿಸಿಬಿಟ್ಟಂತಾಗುವುದು. ಹಲ್ಲುಗಳು ಮಾಡಬೇಕಾದಷ್ಟು ಕೆಲಸವನ್ನು ಮಾಡದೆ ಹೋಗುವುದರಿಂದ ಜೀರ್ಣಕೋಶದ ಕೆಲಸವು ಹೆಚ್ಚಿ, ಅದು ಬಲಹೀನವಾಗುವುದು. ತಿಂದ ಪದಾರ್ಥವು ನಮ್ಮ ಬಾಯಲ್ಲಿರುವ ಜೊಲ್ಲಿನಿಂದ ಮಿಶ್ರವಾಗಿ ಸ್ವಲ್ಪಭಾಗ ಅರಗಿಹೋಗುವುದು. ಆದರೆ ಭೋಜನ ಮಧ್ಯದಲ್ಲಿ ನೀರನ್ನು ಕುಡಿಯುವುದರಿಂದ ಜೊಲ್ಲು ತಕ್ಕಷ್ಟು ಹುಟ್ಟಿ ಮಿಶ್ರವಾಗುವುದಕ್ಕಿಲ್ಲದೆ, ಜೀರ್ಣಶಕ್ತಿಯನ್ನು ಸ್ವಲ್ಪಮಟ್ಟಿಗೆ ಕುಗ್ಗಿಸಿಬಿಡುವುದಲ್ಲದೆ, ಜೀರ್ಣಕೋಶಕ್ಕೆ ಭಾರವನ್ನೂ ಹೆಚ್ಚಿಸಿಬಿಡುವುದು.

ಪ್ರ— ಹಣ್ಣುಹಂಪಲುಗಳು ಶರೀರಕ್ಕೆ ಉಂಟುಮಾಡುವ ಪ್ರಯೋಜನವೇನು?

ಉ— ರಸವತ್ತಾದ ಹಣ್ಣುಗಳು ಅಜೀರ್ಣವನ್ನು ಹುಟ್ಟಿಸುವ ಹುಳುಗಳನ್ನು ಕೊಂದುಬಿಡುವುವು. ಭುಂಜಿಸಿದ ಪದಾರ್ಥಗಳನ್ನು ಜೀರ್ಣಕೋಶದಲ್ಲಿ ಕೊಳೆಯದಂತೆ ಮಾಡುವುವು. ಪಿತ್ಥವನ್ನು ಶಮನಮಾಡುವುವು ಜೀರ್ಣಶಕ್ತಿಯನ್ನು ಹೆಚ್ಚಿಸುವುವು. ಹಣ್ಣುಗಳಲ್ಲಿ ಆಸಿಡ್ ಎಂಬ ಗಂಧಕದ್ರಾವಕವಿರುತ್ತದೆ. ಈ ದ್ರಾವಕವೇ ಮೇಲಿಕಂಡ ಸುಗುಣವನ್ನುಂಟುಮಾಡುವುದು.

ಪ್ರ— ಬರಣಿಗಳಲ್ಲಿ ತುಂಬಿ ಬರುವ ಹಾಲು ಸೇವಿಸಲರ್ಹವಾದುದೆ?

ಉ— ಸಾಧ್ಯವಾದಮಟ್ಟಿಗೂ ಆರೋಗ್ಯವುಳ್ಳ ಹಸುಗಳ ಮತ್ತೂ ಮೇಕೆಗಳ ಹಾಲನ್ನು ಕುಡಿಯುವುದು ಶ್ರೇಷ್ಠವು. ಬರಣಿಯಲ್ಲಿ ಬಂದ ಹಾಲನ್ನು ಮಿತವಾಗಿ ಕುಡಿಯಬಹುದು. ಆದರೆ ಪ್ರಸಿದ್ಧರಾದ ವ್ಯಾಪಾರಿಸಂಘದವರಿಂದ ಬರುವ ಬರಣಿಗಳನ್ನೇ ತೆಗೆದುಕೊಳ್ಳಬೇಕು. ಬರಣಿಯ ಮುಚ್ಚಳವನ್ನು ತೆರೆದ ಬಳಿಕ ಅದಕ್ಕೆ ಯಾವ ತರದ ಕ್ರಿಮಿಯೂ ಸೇರದಂತೆ ಜಾಗರೂಕತೆಯಿಂದ ನೋಡಿ ಕಾಪಾಡಿಕೊಳ್ಳಬೇಕು. ಮಕ್ಕಳಿಗೆ ತಾಯ ಹಾಲಿಗಿಂತಲೂ ಯೋಗ್ಯವಾದ ಹಾಲು ಮತ್ತೊಂದಿಲ್ಲ.

ಪ್ರ ಯಾವಾಗಲೂ ಉಗುಳುತ್ತಿರಬಹುದೆ?

ಉ— ಯಾವಾಗಲೂ ಉಗುಳುತ್ತಿರುವುದರಿಂದ ಜೀರ್ಣಶಕ್ತಿಯನ್ನು ವೃದ್ಧಿಗೊಳಿಸುವ ಪದಾರ್ಥವನ್ನು ವ್ಯರ್ಥವಾಗಿ ಹಾಳ್ಮಾಡಿಕೊಳ್ಳುವೆವಾದುದರಿಂದ ಹಾಗೆ ಉಗುಳುತ್ತಲೇ ಇರಬಾರದು.

ಪ್ರ- ಪ್ರಾತಃಕಾಲಸ್ನಾನವು ಯಾರಿಗೆ ಆರೋಗ್ಯಕರವು?

ಉ— ಇದು ಎಲ್ಲರಿಗೂ ಆರೋಗ್ಯಕರವೇ. ಆದರೂ ಮುದಿಕರೂ ಮಕ್ಕಳೂ ಸಹ ಸೂರ್ಯೋದಯವಾದ ಬಳಿಕ ಸ್ನಾನವನ್ನು ಮಾಡಬಹುದು. ಯೌವನಸ್ಥರು ಸೂರ್ಯೋದಯಕ್ಕೆ ಮುಂಚೆಯೇ ಸ್ನಾನವನ್ನಾಚರಿಸುವುದು ಶ್ರೇಷ್ಠವು. ಉತ್ತಮವಾದ ನೀರಿನಲ್ಲಿ (ಮುಖ್ಯವಾಗಿ ಹರಿಯುತ್ತಿರುವ ಕಾಲ್ವೆ ಹೊಳೆಗಳ ನೀರಿನಲ್ಲಿ) ಮುಳುಗಿ ಸ್ನಾನವನ್ನು ಮಾಡುವುದು ಉತ್ತಮವು. ಮೊದಲೇ ತಲೆಯಮೇಲೆ ನೀರನ್ನು ಹುಯ್ದುಕೊಳ್ಳಬೇಕು. ದೇಹಕ್ಕೆ ಎಣ್ಣೆಯನ್ನು ಸವರಿಕೊಂಡು ಸ್ನಾನವನ್ನು ಮಾಡಿದರೆ ಚರ್ಮವು ಮೃದುವಾಗಿ ಒಣಗದೆ ಇರುವುದು. ಇಂಥ ಅಭ್ಯಂಗಸ್ನಾನದಿಂದ ದೇಹದಲ್ಲಿ ಹೃದಯಕ್ಕೂ ನರಗಳಿಗೂ ಮೂಳೆಗಳಿಗೂ ಬಲವು ಹೆಚ್ಚುವುದು. ರಕ್ತವು ಚೆನ್ನಾಗಿ ಪ್ರಸರಿಸುತ್ತಿರುವುದು.

ಅಂಡಮಾನ್ ದ್ವೀಪಗಳು.

ಆಂಗ್ಲಾಧಿಪತ್ಯದವರು ಯಾರಿಗೆ ದ್ವೀಪಾಂತರವಾಸ ಶಿಕ್ಷೆಯನ್ನು ವಿಧಿಸುವರೊ ಅಂಥವರನ್ನು ಅಂಡಮಾನ್ ದ್ವೀಪಕ್ಕೆ ಕಳುಹಿಸುವರೆಂಬುದು ಸುಪ್ರಸಿದ್ಧವಷ್ಟೆ. ಆ ದ್ವೀಪಗಳು ಕಲ್ಕತ್ತಾಪಟ್ಟಣಕ್ಕೆ ೮೦೦ ಮೈಲಿಗಳ ದೂರದಲ್ಲಿಯೂ ರಂಗೂನಿಗೆ ೪೦೯ ಮೈಲಿಗಳಲ್ಲಿಯೂ ಬಂಗಾಳಾ ಸಮುದ್ರ ಶಾಖೆಯಲ್ಲಿರುತ್ತವೆ. ಈ ದ್ವೀಪಗಳೊಳಗೆ ಪೂರ್ವದಲ್ಲಿ ಮೃಗಸಮಾನರಾದ ಒಂದು ತರದ ಕಪ್ಪುಜನರು ವಾಸಮಾಡುತ್ತಿದ್ದರು. ಅತ್ಯಂತ ಕ್ರೂರರಾದ ಈ ಜನರು ಗ್ರಹಚಾರವಶಾತ್ ದಾರಿತಪ್ಪಿ ಕಾಡಿಗೆ ಬಿದ್ದ ಜನರನ್ನೂ, ದೋಣಿಗಳಲ್ಲಿ ಹೋಗುತ್ತಿದ್ದ ಪ್ರಯಾಣಿಕರನ್ನೂ ಹಿಡಿದು ಕೊಂದು ಭಕ್ಷಿಸುತ್ತಿದ್ದರು. ದ್ವೀಪಾಂತರವಾಸ ಶಿಕ್ಷೆ ವಿಧಿಸಲ್ಪಟ್ಟವರನ್ನು ಈ ದ್ವೀಪಗಳಿಗೆ ಕಳುಹಿಸುವುದಕ್ಕೆ ಆಂಗ್ಲಪ್ರಭುತ್ವದವರು ೧೭೮೦ ನೆಯ ವರ್ಷದಿಂದ ಏರ್ಪಡಿಸಿದರು. ಈ ದ್ವೀಪಗಳಲ್ಲಿ ರೋಗವ್ಯಾಪನೆಯು ವಿಶೇಷವಾಗಿರುತ್ತಿದ್ದರೂ ಅಲ್ಲಿನ ನಿವಾಸಿಗಳಿಗೆ ಅದರಿಂದ ಉಪಹತಿಯೇನೂ ಇಲ್ಲವಂತೆ. ೧೮೫೭ ರಲ್ಲಿ ಹುಟ್ಟಿದ ದಂಗೆಯಲ್ಲಿ ಹಿಡಿಯಲ್ಪಟ್ಟ ಪ್ರಬಲ ದುರ್ಮಾರ್ಗಿಗಳಾದ ಅನೇಕರನ್ನು ಸೆರೆಯಲ್ಲಿಡುವುದಕ್ಕೆ ಕಾರಾಗೃಹಗಳಲ್ಲಿ ಸ್ಥಲವು ಸಾಲದಿದ್ದುದರಿಂದ ಅವರೆಲ್ಲರೂ ಈ ಅಂಡಮಾನ್ ದ್ವೀಪಗಳಿಗೆ ಸಾಗಿಸಲ್ಪಟ್ಟಿದ್ದರು. ಅತ್ಯಂತ ವಿಶಾಲವಾದ ಈ ದ್ವೀಪಗಳಲ್ಲಿ ಈಗ ಭರತಖಂಡದ ಎಲ್ಲ ಭಾಗಗಳಿಂದಲೂ ಕಳುಹಿಸಲ್ಪಟ್ಟ ಶಿಕ್ಷಿತರುಗಳು ವಾಸಮಾಡಿಕೊಂಡಿದ್ದಾರೆ. ಸಿಂಗಳಿಯ ನರಹಂತಕರೂ, ಬರ್ಮಾದೇಶದ ಸುಲಿಗೆಗಾರರೂ, ಬಂಗಾಳದ ರಾಜದ್ರೋಹಿಗಳೂ, ಹಿಮಾಲಯಪ್ರಾಂತದ ಕಾಡುಜನರೂ ಸಹ ಅಲ್ಲಿರುತ್ತಾರೆ. ದೊಡ್ಡ ಲಂಕೆಯಂತಿರುವ ಈ ದ್ವೀಪಗಳ ಕಾರಾಗೃಹವು ಪ್ರಪಂಚದಲ್ಲಿರುವ ಎಲ್ಲ ಕಾರಾಗೃಹಗಳಿಗಿಂತಲೂ ದೊಡ್ಡದಾಗಿರುವುದಲ್ಲದೆ, ಅನೇಕ ವಿಷಯಗಳಲ್ಲಿ ಪ್ರಶಸ್ತವಾದ ಏರ್ಪಾಟುಗಳುಳ್ಳುದಾಗಿರುತ್ತದೆ. ಅಲ್ಲಿಗೆ ಸೇರಿದ ಬಂದಿಗಳು ಉತ್ತಮಮಾರ್ಗಕ್ಕೆ ತಿರುಗಿಸಲ್ಪಟ್ಟು, ಉತ್ತಮರಾದ ಬೇಸಾಯಗಾರರಾಗಿಯೂ, ಕಾರೀಗಾರರಾಗಿಯೂ ಪರಿಣಮಿಸುತ್ತಾರೆ. ಶಿಕ್ಷಿತರಾಗಿ ಬಂದ ಅಪರಾಧಿಗಳನ್ನು ಮೊತ್ತಮೊದಲು ೬ ತಿಂಗಳವರೆಗೂ ಕಟ್ಟುನಿಟ್ಟಿನಿಂದ ಇಟ್ಟು, ಸಣ್ಣ ಕೋಣೆಗಳಲ್ಲಿ ಏಕಾಂತವಾಗಿ ಕೆಲಸವನ್ನು ಮಾಡಿಸುವರು. ಆ ಬಂದಿಗಳು ವಿಧೇಯತೆಯಿಂದ ನಡೆದುಕೊಳ್ಳುತ್ತ ಬಂದರೆ, ಅಲ್ಲಿಂದ ಮತ್ತೊಂದು ಸ್ಥಳಕ್ಕೆ ಕಳುಹಿಸಿ, ಅಲ್ಲಿ ದೀರ್ಘಾನುಭವಸ್ಥರಾದ ಅಧಿಕಾರಿಗಳ ಮೇಲ್ವಿಚಾರಣೆಯ ಕೆಳಗೆ ಇತರ ಬಂದಿಗಳ ಜತೆಯಲ್ಲಿ ಕೆಲಸ ಮಾಡುವುದಕ್ಕೆ ಕಳುಹಿಸಲ್ಪಡುವರು. ಹೀಗೆ ಅವರು ೫ ವರ್ಷದವರೆಗೂ ಮೇಲಿನ ಪ್ರತಿಫಲವೇನೂ ಇಲ್ಲದೆ ಕಷ್ಟಪಟ್ಟು ಕೆಲಸಮಾಡಬೇಕಾಗುವುದು. ಆದರೆ ಆ ಕಾಲದಲ್ಲಿ ಅವರಿಗೆ ಉತ್ತಮವಾದ ಆಹಾರವನ್ನು ಕೊಡುತ್ತ, ವಾಸಕ್ಕೂ ತಕ್ಕ ಸ್ಥಲಾನುಕೂಲ್ಯವನ್ನುಂಟುಮಾಡಿಕೊಟ್ಟು, ಚೆನ್ನಾಗಿ ಕಾಪಾಡುವರು. ಅವರು ಆಗ ತೃಪ್ತಿಕರವಾಗಿ ಕೆಲಸಮಾಡಿ ಒಳ್ಳೇ ನಡೆನುಡಿಯುಳ್ಳವರಾಗಿ ತೋರಿಬಂದರೆ, ಅವರನ್ನು ದೊಡ್ಡ ಕೆಲಸದ ಮೇಲೆ ನಿಯಮಿಸಿ, ಸ್ವಲ್ಪ ಸಂಬಳವನ್ನೂ ಕೊಡುವರು. ಆ ಹಣವನ್ನು ಅವರು ಸ್ವಂತಕ್ಕೆ ವೆಚ್ಚಮಾಡಿಕೊಳ್ಳಬಹುದು. ಅಥವಾ ಸೇವಿಂಗ್ಸ್ ಬ್ಯಾಂಕಿನಲ್ಲಿ ಶೇಖರಗೊಳಿಸಬಹುದು. ಹೀಗೆ ೧೦ ವರ್ಷಗಳವರೆಗೆ ವಿಧೇಯತೆಯಿಂದ ತೃಪ್ತಿಕರವಾಗಿ ಕೆಲಸಮಾಡಿದರೆ, ಅವರು ಬಂಧವಿಮೋಚನವನ್ನು ಹೊಂದುವುದಕ್ಕೆ ಅರ್ಹರಾಗುವರು. ಅವರಿಗೆ ಹೆಂಡತಿಯರಿದ್ದರೆ ಆಗ ಅವರನ್ನು ತಮ್ಮಲ್ಲಿಗೆ ಬರಮಾಡಿಕೊಳ್ಳಬಹುದು. ಇಲ್ಲದೆಹೋದರೆ ಮದುವೆಯಾಗುವುದಕ್ಕೆ ಅಪ್ಪಣೆಯನ್ನು ಪಡಕೊಳ್ಳಬಹುದು.

ಶಿಕ್ಷಿತರಾದ ಸ್ತ್ರೀಯರುಗಳು ಬೇರೊಂದು ದ್ವೀಪದಲ್ಲಿ ಇಡಲ್ಪಟ್ಟಿರುವರು. ಮದುವೆಯಾಗುವುದಕ್ಕೆ ಅಪ್ಪಣೆಪಡೆದ ಪುರುಷಬಂದಿಗಳನ್ನು ಒಂದು ಶನಿವಾರದ ದಿನ ಹಗಲು ಸ್ತ್ರೀ ಬಂದಿಗಳಿರುವ ದ್ವೀಪಕ್ಕೆ ಕರಕೊಂಡು ಹೋಗುವರು. ಮದುವೆಯಾಗುವುದಕ್ಕೆ ಇಷ್ಟವುಳ್ಳ ಹೆಂಗುಸರನ್ನೂ ಒಂದು ಸಾಲಾಗಿ ಅಲ್ಲಿ ನಿಲ್ಲಿಸಿರುವರು. ವರನು ಅವರಿದಿರಿಗೆ ಹೋಗಿ ಆ ಸಾಲಿನಲ್ಲಿ ತನಗೆ ಇಷ್ಟಳಾದ ಸ್ತ್ರೀಯನ್ನು ಗುರ್ತುಮಾಡಿ, „ನನಗೆ ಇವಳ ಮೇಲೆ ಇಚ್ಛೆಯಿದೆ, ಇವಳನ್ನು ಮದುವೆ ಮಾಡಿಕೊಡಿ” ಯೆಂದು ಅಧಿಕಾರಿಗಳಿಗೆ ತಿಳುಹುವನು. ಅವನ ಸಂಬಂಧಕ್ಕೆ ಸ್ತ್ರೀಯೂ ಒಪ್ಪಿದರೆ ಸಂತೋಷಪಡುವಳು. ಅವಳಿಗೆ ಒಪ್ಪಾಗದಿದ್ದರೆ „ನನಗೆ ಅವನು ಬೇಡ, ಅವನು ಕುರೂಪಿಯಾಗಿದ್ದಾನೆ, ಅವನು ನನಗೆ ಅನುರೂಪನಲ್ಲ.” ಎಂದು ಮೊದಲಾಗಿ ಅಧಿಕಾರಿಗಳೊಡನೆ ಹೇಳಿಬಿಟ್ಟರೆ, ವರನು ಮತ್ತೊಬ್ಬಳನ್ನು ವರಿಸಬೇಕಾಗುವುದು. ವಧೂವರರಿಬ್ಬರೂ ಪರಸ್ಪರ ಇಷ್ಟಪಟ್ಟರೆ, ಬಹಿರಂಗವಾಗಿಯೇ ಅವರವರ ಉಪಸರ್ಪಣವು ೧ ಗಂಟೆಯ ಕಾಲದವರೆಗೂ ನಡೆಯುವುದು. ಮುಂದಿನ ವಾರದಲ್ಲಿ ಅವರೀರ್ವರಿಗೂ ಮದುವೆಯಾಗುವುದು. ಬಳಿಕ ಅಧಿಕಾರಿಗಳು ಅವರಿಗೆ ಸ್ವಲ್ಪ ಭೂಮಿಯನ್ನು ಕೊಡುವರು. ಅವರು ದನಕರುಗಳನ್ನು ಸಾಕಿಕೊಂಡು, ಗದ್ದೆ ಹೊಲಗಳಲ್ಲಿ ಬೇಸಾಯ ಮಾಡುತ್ತ ವೃದ್ಧಿಗೊಳ್ಳುವರು. ಅವರ ಮಕ್ಕಳಿಗೆ ಸರ್ಕಾರದವರು ವಿದ್ಯಾಭ್ಯಾಸ ಮಾಡಿಸಿ, ೨ ಭಾಷೆಗಳಲ್ಲೂ, ಒಂದು ತರದ ಉದ್ಯೋಗದಲ್ಲೂ ಸಮರ್ಥರನ್ನು ಮಾಡಿ ಕಳುಹಿಕೊಡುವರು. ಬಹುಶಃ ೬೦೦ ಮಂದಿ ಅತ್ಯಂತ ದುರ್ಮಾರ್ಗಿಗಳಾದ ಬಂದಿಗಳು ಪ್ರತ್ಯೇಕವಾದ ಒಂದು ದ್ವೀಪದಲ್ಲಿ ಇಡಲ್ಪಟ್ಟಿರುತ್ತಾರೆ. ಉತ್ತಮಮಾರ್ಗಕ್ಕೆ ತಿರುಗದಿರುವ ಬಂದಿಗಳಿಗೆ ಆಗಾಗ್ಗೆ ಶಿಕ್ಷೆಯನ್ನು ಮಾಡುತ್ತಿರುತ್ತಾರೆ. ತಮ್ಮ ಮೇಲಿನ ಕಾವಲಿನವರನ್ನು ಪ್ರತಿಭಟಿಸಿ ಹೊಡೆಯುವುದೇ ಮೊದಲಾದ ದುರಾಗತವನ್ನು ನಡೆಯಿಸುವ ಬಂದಿಗಳನ್ನು ಉರುಲುಹಾಕಿ ಕೊಂದುಬಿಡುತ್ತಾರೆ.

ವ್ಯವಸಾಯಕ ವಿಷಯಗಳು.

೧. ಟಿಯೋಸಿಂಟಿ ಎಂಬುವ ಜೋಳ.– ಇದು ಪ್ರತಿಯೊಂದು ಪೈರಿನಲ್ಲೂ ಬೇಣಿಕಬ್ಬಿನಂತೆ ೩೦–೪೦ ಕವಲುಗಳು ಒಡೆದು ಸುಮಾರು ಬೇಣಿಕಬ್ಬಿನಂತೆಯೇ ಎತ್ತರವಾಗಿ ಬೆಳೆಯುತ್ತದೆ. ಮೇಲೆ ತೆನೆಹೊರಡುವ ಸಮಯದಲ್ಲಿ ಕುಯಿದು ದನಗಳಿಗೆ ಮೇವಾಗಿ ಹಾಕಿ, ಪುನಃ ಅಗತೆಕೊಟ್ಟು, ನೀರು ಕಟ್ಟಿ ಆರೈಕೆ ಮಾಡುತ್ತಾ ಬಂದರೆ ವರ್ಷಕ್ಕೆ ನಾಲ್ಕು ಬೆಳೆ ಮಾಡಬಹುದು. ಒಂದೇ ಗಿಡದ ಸೊಪ್ಪು ಒಂದು ಜತೆ ದನಕ್ಕೆ ಮೇವಾಗುತ್ತದೆ.

೨. ಬಕ್‌ವ್ಹೀಟ್ ಅಥವಾ ರಾಜಗಿರಿ ಎಂಬುವ ಧಾನ್ಯ ಗೋಧಿಗಿಂತಲೂ ಮೂರರಷ್ಟು ಪುಷ್ಟಿಕರವಾದುದು. ನೋಡುವುದಕ್ಕೆ ಹಾರಕದಂತೆ ಕಾಳುಗಳು ಇರುತ್ತವೆ. ಆವರೆ ದಪ್ಪನಾಗಿರುತ್ತವೆ. ಹುಟ್ಟುಹಾಕಿದ ೧೦ ವಾರದೊಳಗಾಗಿ ಫಸಲು ಕೈಗೆ ಬರುತ್ತದೆ. ಎಕರೆ ೧ಕ್ಕೆ ೫ ರ ಲಾಗಾಯಿತು ೫೦ ಬುಷಲ್‌ವರೆಗೂ ಕಾಳಾಗುತ್ತದೆ. ೨॥ ಟನ್ ವರೆಗೂ ದನವಿನ ಹೊಟ್ಟು ಆಗುತ್ತದೆ. ಇದರ ಹಿಟ್ಟಿನಿಂದ ರೊಟ್ಟಿಯೂ, ನುಚ್ಚಿನಿಂದ ಅನ್ನವೂ ಸಹ ಮಾಡಿಕೊಂಡು ತಿನ್ನುತ್ತಾರೆ. ಕರೆಯುವ ಹಸುಗಳಿಗೆ ಬಹಳ ಒಳ್ಳೆಯದು.

೩. ಹನುಮಾನ್ ಜಾತಾ ಎಂಬುವ ಭತ್ತ. ಚೌಳು ಭೂಮಿಯಲ್ಲಿ ಚೆನ್ನಾಗಿ ಹುಲುಸಾಗಿ ಬೆಳೆಯುತ್ತವೆ.

೪. ದೀಪಿಯ ಭತ್ತವೆಂಬುದರ ಅಕ್ಕಿ ಬೇಯಿಸಿ ಅನ್ನಮಾತಕ್ಕ ಅವಶ್ಯಕವಿಲ್ಲ. ಬಿಸಿನೀರಿನಲ್ಲಿ ಅಕ್ಕಿ ಹಾಕಿ ಇಟ್ಟರೆ ಅವಲಕ್ಕಿನೆಂದಂತೆ ನೆಂದು ಅನ್ನವಾಗುತ್ತದೆ.

೫. ಬಾದಷಾಬೋಗ ಎಂಬುವ ಭತ್ತ ಬಿಳೀಸಣ್ಣದು, ಬಿಳೀ ಬಣ್ಣ, ನೀರು ಕಡಿಮೆಯಾದರೂ ತಡಿಯುತ್ತೆ. ತಿಂಗಳಲ್ಲಿ ಫಸಲು ಬರುತ್ತೆ. ಹುಲುಸು ಬಹಳ ಚೆನ್ನಾಗಿ ಆಗುತ್ತೆ.

೬. ಬಸುಮತೀಭತ್ತ ಬಹಳ ಹುಲುಸಾದುದು. ಒಂದು ಗಿಡಕ್ಕೆ ಅನೇಕ ತೆಂಡೆ ಹೊರಡು ಕಾಳಾಗುತ್ತೆ. ಒಂದು ಎಕರೆಗೆ ೧೦ ಖಂಡಿ ಬೀಜ ಆಗುತ್ತೆ.

೭. ಗೋಪಾಲಭೋಗಿ ಭತ್ತ. ಇದು ಒಳ್ಳೇ ಸಣ್ಣ ಭತ್ತ. ಮಳೆ ಕಡಿಮೆಯಾದರೂ ತಡಿಯುತ್ತೆ.

೮. ಸಿ. ಪಿ. ಪೈನಾಸ್ ಭತ್ತ. ಒಳ್ಳೇ ಸಣ್ಣ ಭತ್ತ. ಹುಲುಸಾಗುತ್ತೆ. ಮಳೆ ಇಲ್ಲದಲೆ ಖುಷ್ಕಿ ಜಮೀನಿನಲ್ಲಿ ಮುರಡಗನ ಭತ್ತದಂತೆ ಬೆಳೆಯಬಹುದು.

೯. ರಾಜಭೋಗ ಸಾಟೀಭತ್ತ. ಇವು ಒಳ್ಳೇ ಉತ್ತಮ ಜಾತಿಯವಾಗಿರುತ್ತವೆ. ೬೦ ದಿವಸಕ್ಕೇನೇ ಫಸಲು ಬರುತ್ತವೆ.

೧೦. ಮೂರಿಭತ್ತವೆಂಬುದರ ಅಕ್ಕಿಯನ್ನ ಎಂಥ ಅಜೀರ್ಣ ರೋಗದವರೂ ಅನ್ನಮಾಡಿಕೊಂಡು ತಿಂದಲ್ಲಿ ಅಜೀರ್ಣ ರೋಗ ವಾಸಿಯಾಗುತ್ತೆ.

ಈ ಮೇಲ್ಕಂಡ ಬೀಜಗಳು ಬೇಕಾದವರು ನಮಗೆ ಮುಂಗಡ ಕೊಟ್ಟು ಬರೆದಲ್ಲಿ ತರಿಸಿಕೊಡುತ್ತೇವೆ.

(ಸಾ.) ಬಾದಾಮಿ ಕೃಷ್ಣರಾವ್.

ಸಂಘಪರಿಷ್ಕರಣ ಸಭೆ.

ಅಲಹಾಬಾದಿನಲ್ಲಿ ಕಳೆದ ತಿಂಗಳು ತಾ॥ ೨೯ ರಲ್ಲಿ ಶ್ರೀ ರಾಜಾ ರಾಮಪಾಲಸಿಂಹರ ಅಧ್ಯಕ್ಷತೆಯಲ್ಲಿ ನೆರೆದ ಈ ಸಭೆಯಲ್ಲಿ ಆದ ನಿರ್ಧಾರಗಳೇನೆಂದರೆ– (೧) ವಿದ್ಯಾವಂತರಾದವರು ಸ್ತ್ರೀ ವಿದ್ಯಾಭಿವೃದ್ಧಿಗಾಗಿ ಪ್ರಯತ್ನಪಡಬೇಕು. ಸರ್ಕಾರದವರೂ ಇದಕ್ಕಾಗಿ ಹೆಚ್ಚು ವೆಚ್ಚವನ್ನು ಮಾಡುತ್ತ ಬರಬೇಕು. (೨) ಬಾಲಕರಿಗೆ ೨೦ ವರ್ಷಗಳ ವರೆಗೂ, ಬಾಲಿಕೆಯರಿಗೆ ೧೪ ವರ್ಷಗಳ ವರೆಗೂ ವಿವಾಹ ಮಾಡದಿರುವಂತೆ ಅವರ ತಾಯ್ತಂದೆಗಳಿಗೆ ಬೋಧಿಸಿ ಪ್ರೋತ್ಸಾಹಿಸಬೇಕು. (೩) „ಘೋಷಾ” ಪದ್ಧತಿಯನ್ನು ತಪ್ಪಿಸಿಬಿಡುವುದಕ್ಕೆ ತಕ್ಕ ಸಮಯವು ಬಂದಿರುವುದೆಂದು ಬೋಧಿಸಬೇಕು. (೪) ನೀಚಜಾತಿಯವರಿಗೆ ತಕ್ಕಷ್ಟು ಮರ್ಯಾದೆಯನ್ನು ಕೊಡುವುದಕ್ಕೆ ಇನ್ನೂ ಹೆಚ್ಚುಹೆಚ್ಚಾಗಿ ಜನರು ಪ್ರಯತ್ನಿಸುವಂತೆ ಮಾಡಬೇಕು. (೫) ಜನಪರಿಗಣತಿಯಲ್ಲಿ ನೀಚಜಾತಿಯವರನ್ನು ಬೇರೆಯಾಗಿ ಗಣಿಸದಂತೆ ಮಾಡಬೇಕು. (೬) ಇದುವರೆಗೆ ವಿತಂತುರಕ್ಷಣಾಲಯಗಳು ಎಲ್ಲೆಲ್ಲಿವೆಯೋ ಅವನ್ನು ವೃದ್ಧಿಪಡಿಸುತ್ತ ಇಲ್ಲದ ಕಡೆಯಲ್ಲಿ ಅವನ್ನು ಸ್ಥಾಪಿಸುತ್ತ, ಬಾಲವಿಧವೆಯರ ಈ ಜೀವನಾಧಾರಕ್ಕೆ ಅನುಕೂಲವಾದ ಕೆಲಸಗಳನ್ನು ಕಲ್ಪಿಸಿಕೊಡಬೇಕಲ್ಲದೆ, ಇಷ್ಟಪಟ್ಟವರು ಪುನರ್ವಿವಾಹ ಮಾಡಿಕೊಳ್ಳುವುದಕ್ಕೆ ಅಭ್ಯಂತರವಿಲ್ಲದಂತೆ ಮಾಡಿಕೊಡಬೇಕು. (೭) ಮತವಿವಕ್ಷತೆಯಿಲ್ಲದೆ ವಿವಾಹಮಾಡಿಕೊಳ್ಳತಕ್ಕ ವರ ಮದುವೆಯು ದೂಷ್ಯವಾದುದಲ್ಲವೆಂದು ಶಾಸನದಲ್ಲಿ ಮಾರ್ಪಾಟನ್ನು ಕಲ್ಪಿಸಬೇಕು. (೮) ಆಯಾ ವರ್ಗಗಳಲ್ಲಿನ ಒಳಭೇದದವರು ಪರಸ್ಪರ ಭೋಜನವನ್ನೂ ವಿವಾಹಸಂಬಂಧವನ್ನೂ ಮಾಡಿಕೊಳ್ಳಬಹುದು. (೯) ಪ್ರತಿ ಸಂವತ್ಸರದಲ್ಲೂ ಸಂಘಪರಿಷ್ಕರಣ ಸಭೆಯನ್ನು ಜರುಗಿಸುವುದಕ್ಕೆ ಒಂದು ವಿಧಿಯನ್ನೇರ್ಪಡಿಸಬೇಕು. (೧೦) ಪರದೇಶಗಳಿಗೆ ಹೋಗಿ ಬಂದವರನ್ನು ಪುನಃ ಕುಲಕ್ಕೆ ಸೇರಿಸಿಕೊಳ್ಳುವುದಕ್ಕೆ ತಕ್ಕ ಅವಕಾಶವನ್ನು ಏರ್ಪಡಿಸಿಕೊಳ್ಳಬೇಕು. (೧೧) ಧರ್ಮಾದಾಯಗಳನ್ನು ಕಾಪಾಡಿಕೊಳ್ಳುವುದಕ್ಕೆ ಒಂದು ಶಾಸನವನ್ನೇರ್ಪಡಿಸಬೇಕು.

ಮದ್ಯಪಾನ ನಿರೋಧಕಸಭೆ.

ಅಲಹಾಬಾದಿನಲ್ಲಿ ನೆರೆದ ಈ ಸಭೆಯಲ್ಲಿ ಮಾಡಲ್ಪಟ್ಟ ತೀರ್ಮಾನಗಳೇನೆಂದರೆ– (೧) ಮದ್ಯದಂಗಡಿಗಳನ್ನಿಡುವ ವಿಷಯದಲ್ಲಿ ಹೆಚ್ಚು ಮಂದಿಗಳು ಕೂಡದೆಂದು ಹೇಳುವ ಸ್ಥಲದಲ್ಲಿ ಸರ್ಕಾರದವರು ಆ ಅಂಗಡಿಗಳನ್ನು ಇಡಿಸದಂತೆ ಮಾಡಬೇಕು. (೨) ಸೋಲ್ಜರುಗಳ ಸೇನೆಯಲ್ಲಿ ಮದ್ಯಪಾನವನ್ನು ಮಾಡಕೂಡದೆಂದು ಅದಕ್ಕೆ ನಿರುತ್ಸಾಹಪಡಿಸುವಂತೆಯೇ ಹಿಂದೂ ಸೈನಿಕರಿಗೂ ಬೋಧಿಸಬೇಕು, (೩) ಮದ್ಯಪಾನದಿಂದ ಸಂಭವಿಸುವ ನಷ್ಟವನ್ನು ಕುರಿತು ಜನರಿಗೆ ಬೋಧಿಸುವುದಕ್ಕೆ ಮತಸಂಘದವರು ದೃಢಪ್ರಯತ್ನಗಳನ್ನು ಮಾಡಬೇಕು. (೪) ದೇಶದಲ್ಲೆಲ್ಲಾ ಇರುವ ಮದ್ಯಪಾನ ನಿರೋಧಕ ಸಭೆಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಈ ಹಿಂದೂ ದೇಶವಾದ್ಯಂತಕ್ಕೂ ಸಂಬಂಧಿಸಿದ ಸಂಘವೊಂದನ್ನೇರ್ಪಡಿಸಬೇಕು. (೫) ಉದ್ದೇಶನಿರ್ವಾಹಕ್ಕಾಗಿ ೧ ಲಕ್ಷ ರೂ. ನ ಮೂಲಧನವನ್ನು ಸ್ಥಾಪಿಸಬೇಕು. (೬) ಅಫೀಮಿನ ಸೇವನೆಯನ್ನು ಮೂಲೋತ್ಪಾಟನಮಾಡಬೇಕು. (೭) ಮದವೇರುವ ವಸ್ತುಗಳ ಸೇವನೆಯ ಪದ್ಧತಿಯಿಂದ ಬರುವ ಕೇಡುಗಳನ್ನು ಕುರಿತು ಪಾಠಶಾಲೆಗಳಲ್ಲಿ ಶಾಸ್ತ್ರೀಯವಾಗಿ ಬೋಧಿಸಬೇಕು. (೮) ಅಮಲೇರುವ ಪದಾರ್ಥಗಳ ಉಪಯೋಗದಿಂದ ಪ್ರಾಪ್ತವಾಗುವ ಕಷ್ಟವನ್ನು ಸೂಚಿಸುವ ಪ್ರಸಿದ್ಧಿಪತ್ರಿಕೆಗಳನ್ನು ನಿಲ್ದಾಣಗಳಂತಹ ಬಹಿರಂಗ ಸ್ಥಳಗಳಲ್ಲಿ ಅಂಟಿಸಲು ಏರ್ಪಡಿಸಬೇಕು.

ಮಹಮ್ಮದೀಯ ವಿದ್ಯಾವರ್ಧಕ ಸಭೆಯು

ಕಳೆದ ಡಿಸೆಂಬರ್ ತಾ॥ ೨೭ ರಲ್ಲಿ ನಾಗಪುರದಲ್ಲಿ ಮೌ॥ ಅಬ್ದುಲ್ಲಾ ಯುಸೂಫ್ ಆಲಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದು ತಮ್ಮ ಜನರ ವಿದ್ಯಾಭ್ಯಾಸಕ್ಕಾಗಿ ತಕ್ಕ ಯತ್ನವನ್ನು ಮಾಡಬೇಕೆಂದೂ, ಆಲಿಗರಿನಲ್ಲಿ ಮಹಮ್ಮದೀಯ ಸರ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದೂ, ಕೈಗಾರಿಕೆಯ ವಿದ್ಯೆಯನ್ನು ಪ್ರೋತ್ಸಾಹಿಸಬೇಕೆಂದೂ ಮೊದಲಾಗಿ ನಿರ್ಧಾರಗಳು ಮಾಡಲ್ಪಟ್ಟುವು. ಇದೇ ಸಂದರ್ಭದಲ್ಲಿ ಮಹಮ್ಮದೀಯರ ಸ್ತ್ರೀಯರಿಂದ ಮಾಡಲ್ಪಟ್ಟ ಪದಾರ್ಥಗಳ ಪ್ರದರ್ಶನವೂ ನಡೆಸಲ್ಪಟ್ಟಿತು.

ನಾಡರ್ ಮಹಾಜನಸಭೆಯು

ಮದ್ರಾಸಿನ ವಿಕ್ಟೋರಿಯಾ ಮಂದಿರದಲ್ಲಿ ಕಳೆದ ತಾ॥ ೨೬ ರಲ್ಲಿ ಜಸ್ಟೀಸ್ ಶಂಕರನ್‌ನಾಯರ್‌ರವರ ಅಧ್ಯಕ್ಷತೆಯಲ್ಲಿ ಕೂಡಿದ್ದು ಆ ಜನರ ಏಳಿಗೆಯನ್ನು ಕುರಿತು ಉಪನ್ಯಾಸಗಳು ಮಾಡಲ್ಪಟ್ಟು ಒಂದು ಕಾರ್ಯಾಲಯಸ್ಥಾಪನೆಯನ್ನು ಮಾಡಬೇಕೆಂದು ನಿರ್ಧರವಾಯಿತು. ಈ ಜನರು ರಂಗೂನ್ ಶಿವಕಾಶಿ, ಚೆಂಗಲ್ಪಟ್, ಕಂಬೆ ಮೊದಲಾದ ಸ್ಥಳಗಳಲ್ಲಿ ವ್ಯಾಪಾರಸ್ಥರಾಗಿದ್ದಾರೆ.

ಮಹಮ್ಮದೀಯರ ರಾಜಕೀಯ ಸಭೆಯು

ಕಳೆದ ತಾ॥ ೨೮ ರಲ್ಲಿ ನಾಗಪುರದಲ್ಲಿ ಸೇರಿದ್ದು ಲೋಕಲ್ ಮತ್ತೂ ಡಿ॥ ಬೋರ್ಡುಗಳಲ್ಲೂ, ಮ್ಯುನಿಸಿಪಾಲಿಟಿಗಳಲ್ಲೂ ತಮ್ಮ ಜನರ ಪ್ರತಿನಿಧಿಸ್ಥಾನವನ್ನು ಹೆಚ್ಚಿಸಿಕೊಡಲು ಸರ್ಕಾರದವರ ನ್ಯಾಯತೀರ್ಮಾನಕಾಲದಲ್ಲಿ ಖುರಾನಿಗೆ ವಿರೋಧವಿಲ್ಲದಂತೆ ಮಾಡಲು, ಪಂಜಾಬಿನಲ್ಲೂ ಸಂಯುಕ್ತಪ್ರಾಂತಗಳಲ್ಲೂ ಉರುದು ಭಾಷೆಯನ್ನು ತಪ್ಪಿಸಿ ಹಿಂದ್ವಿ ಮತ್ತೂ ಪಂಜಾಬಿ ಭಾಷೆಯನ್ನು ರೂಢಿಸಬಾರದೆಂತಲು ಮಹಮ್ಮದೀಯ ಧರ್ಮಫಂಡು ದುರ್ವಿನಿಯೋಗವಾಗದಂತೆ ಏರ್ಪಡಿಸಲು, ಸಕಲಪ್ರಜೆಗಳಿಗೂ ಬಾಲವಿದ್ಯಾಭ್ಯಾಸವನ್ನು ದುಡ್ಡಿಲ್ಲದೆ ಬಲತ್ಕಾರವಾಗಿ ಕಲಿಸಲು, ಅಕ್ಷರಸ್ಥರಾದ ಮಹಮ್ಮದೀಯರನ್ನು ಹೆಚ್ಚಾಗಿ ಸರ್ಕಾರದ ಕೆಲಸಕ್ಕೆ ನೇಮಿಸಿಕೊಳ್ಳಲು, ಟ್ರಾನ್ಸ್‌ವಾಲಿನಲ್ಲಿ ಹಿಂದೂಗಳಿಗುಂಟಾಗಿರುವ ತೊಂದರೆಯನ್ನು ತಪ್ಪಿಸಿಕೊಡಲು ಮತ್ತೂ ಮಧ್ಯಪ್ರಾಂತಗಳ ಮಹಮ್ಮದೀಯರು ವೈಸ್ರಾಯರ ಮಂತ್ರಾಲೋಚನಾ ಸಭೆಗೆ ಒಬ್ಬ ಪ್ರತಿನಿಧಿಯನ್ನಾರಿಸಿ ಕಳುಹುವ ಅಧಿಕಾರವನ್ನು ಕೊಡಲು ಸರ್ಕಾರಕ್ಕೆ ಬಿನ್ನೈಸಿಕೊಳ್ಳತಕ್ಕದೆಂದು ನಿರ್ಧಾರಗಳಾದುವು.

ಭಾರತಮಹಿಳೆಯರ ಸಭೆಯು

ತಾ॥ ೨೭ ರಲ್ಲಿ ಅಲಹಾಬಾದಿನಲ್ಲಿ ವಿಜಯನಗರದ ರಾಣಿಯವರ ಅಧ್ಯಕ್ಷತೆಯಲ್ಲಿ ಕೂಡಿದ್ದು, ಸ್ತ್ರೀವಿದ್ಯಾಪ್ರೋತ್ಸಾಹ ಮತ್ತೂ ಅವರಿಗಿರತಕ್ಕ ತೊಂದರೆಗಳ ನಿವಾರಣೆ ಇತ್ಯಾದಿ ವಿಷಯಕವಾಗಿ ಕೆಲ ನಿರ್ಧಾರಗಳಾದುವು.

ಏಕಲಿಪಿ ಪ್ರಸಾರಕ ಸಭೆಯು

ಕಳೆದ ತಾ॥ ೨೯ ರಲ್ಲಿ ಅಲಹಾಬಾದಿನಲ್ಲಿ ಮದ್ರಾಸ್ ಹೈಕೋರ್ಟ ಜಡ್ಜರಾದ ಮ॥ ಕೃಷ್ಣಸ್ವಾಮಯ್ಯರ್‌ರವರ ಅಧ್ಯಕ್ಷತೆಯಲ್ಲಿ ನೆರೆದಿದ್ದು, ಭರತಖಂಡದಲ್ಲಿರುವ ೨೦ ಕೋಟಿಯೂ ೯೦ ಲಕ್ಷ ಪ್ರಜೆಗಳು ಮಾತನಾಡುವ ೧೪೭ ಭಾಷೆಗಳ ಮತ್ತೂ ಬರೆಯುವ ೨೦ ವಿಧವಾದ ಲಿಪಿಗಳ ಬದಲಾಗಿ ಎಲ್ಲರೂ ಒಂದೇ ಭಾಷೆಯನ್ನು ಆಡುತ ಒಂದೇ ಲಿಪಿಯನ್ನು ಬರೆಯುವುದಕ್ಕಾಗಿ ದೇವನಾಗರಿಯನ್ನು ಎಲ್ಲರೂ ಪ್ರಸಾರಕ್ಕೆ ತರುವಂತೆ ಪ್ರೋತ್ಸಾಹಿಸತಕ್ಕದು ಅವಶ್ಯಕವೆಂದು ನಿರ್ಧರವಾಯಿತು.

ಇವಲ್ಲದೆ ಬ್ರಹ್ಮಜ್ಞಾನ ಸಭೆಯು ಮದ್ರಾಸಿನಲ್ಲಿ ಅನಿಬೆಸೆಂಟ್ ಅಮ್ಮನವರ ಅಧ್ಯಕ್ಷತೆಯಲ್ಲೂ, ಬ್ರಹ್ಮ ಸಮಾಜ (ಏಕದೇವಾರಾಧಕ ಸಭೆಯು) ಅಲಹಾಬಾದಿನಲ್ಲಿ ಪಂಡಿತ ಶಿವನಾಥ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲೂ, ವೈಶ್ಯಮಹಾಜನರ ಸಭೆಯು ಅಲಹಾಬಾದಿನಲ್ಲಿ ಲಾಲಾ ಸುಖವೀರಸಿಂಗ್‌ರವರ ಅಧ್ಯಕ್ಷತೆಯಲ್ಲೂ ಸೇರಿದ್ದು ಕೆಲ ನಿರ್ಧಾರಗಳು ಮಾಡಲ್ಪಟ್ಟುವು.

ಚಂದಾದಾರರು ಅಗತ್ಯ ಗಮನಿಸತಕ್ಕದು.

ಚಂದಾ ಹಣವನ್ನು ಕಳುಹುವಂತೆ ಎಷ್ಟು ವಿಧವಾಗಿ ಪ್ರಾರ್ಥಿಸಿ ಕಾಗದಗಳನ್ನು ಬರೆದಾಗ್ಗೂ ಅನೇಕರು ಗಮನಿಸದೆ ಮೌನರಾಗಿರುವುದರಿಂದಲೂ, ಕಳೆದ ತಿಂಗಳ ಕಡೆಗೆ ವರ್ಷವು ಪೂರೈಸಿದುದರಿಂದಲೂ ಚಂದಾಕೊಡಬೇಕಾದ ಪ್ರತಿಯೊಬ್ಬರಿಗೂ ಪತ್ರಿಕೆಯನ್ನು ವಿ. ಪಿ. ದ್ವಾರಾ ಕಳುಹಲು ಯತ್ನಿಸಿರುತ್ತೇವೆ. ಮಹನೀಯರು ತಮಗೆ ಪ್ರತ್ಯೇಕ ಕಾಗದಗಳನ್ನು ಬರೆಯಲಿಲ್ಲವೆಂದು ಉದಾಸೀನರಾಗಿ ವಿ. ಪಿ. ಯನ್ನು ಹಿಂತಿರುಗಿಸದೆ ಇದೇ ಅನೇಕ ಪ್ರಾರ್ಥನಾ ಪತ್ರಿಕೆಯೆಂದು ಭಾವಿಸಿ, ಹಣವನ್ನು ಕೊಟ್ಟು ತೆಗೆದುಕೊಳ್ಳುವರೆಂದು ಪೂರ್ಣವಾಗಿ ನಂಬಿರುತ್ತೇವೆ. ಹಣವನ್ನು ಮನಿಯಾರ್ಡರ್ ದ್ವಾರಾ ಕಳುಹುವಾಗ್ಗೆ ಪ್ರತಿಯೊಬ್ಬರೂ ತಪ್ಪದೆ ತಮ್ಮ ರಿಜಿಸ್ಟರ್ ನಂಬರನು ತಿಳುಹಬೇಕು. ಹಾಗಲ್ಲದಿದ್ದಲ್ಲಿ ಹಣವು ಲೆಕ್ಕಕ್ಕೆ ಸೇರಲು ಮಾರ್ಗವಿಲ್ಲದೆ ಕೈಬಿಟ್ಟು ಹೋಗುವ ಸಂಭವವುಂಟು.

ಮ್ಯಾನೇಜರ್.

ಮೈಸೂರ್ ಸ್ಟಾರ್.

೧೯೧೧ ನೇ ಜನವರಿ ತಾ॥ ೯ ನೇ ಸೋಮವಾರ.

ಹಿಂದೂ ಮಹಮ್ಮದೀಯರ ಐಕ್ಯಸಾಧನದ ಕೂಟ.

ನಾವು ಕಳೆದವಾರ ತಿಳುಹಿದ್ದಂತೆ ಮಹಮ್ಮದೀಯರಿಗೂ ಹಿಂದೂಗಳಿಗೂ ಇರತಕ್ಕ ಮನಸ್ತಾಪವನ್ನು ಹೋಗಲಾಡಿಸಿ ಪರಸ್ಪರ ಮೈತ್ರಿಯನ್ನುಂಟುಮಾಡಲು ತಕ್ಕುಪಾಯವನ್ನು ಆಳೋಚಿಸತಕ್ಕ ಬಗೆಗೆ ಉಭಯಪಕ್ಷದ ಮುಖಂಡರೂ ಕಳೆದ ತಾ॥ ೧ ರ ಬೆಳಿಗ್ಗೆ ಅಲಹಾಬಾದಿನಲ್ಲಿ ಸರ್ ವಿಲಿಯಂ ವೆಡರ್‌ಬರ್ನರವರ ಅಧ್ಯಕ್ಷತೆಯಿಂದ ಸಭೆ ಸೇರಿದ್ದರು. ಮಹಮ್ಮದೀಯರ ಪಕ್ಷದಲ್ಲಿ ಎಚ್. ಎಚ್. ಆಗಾಖಾನರವರು, ನವಾಬ್ ವಿಕಾರಲುಲ್ ಮುಲ್ಕ್ ಬಹದ್ದೂರ್‌ರವರು, ಆರ್ಕಾಟ್ ಪ್ರಿನ್ಸ್‌ರವರು, ಮುಸ್ಲಿಂಲೀಗಿನ ಆ॥ ಸೆಕ್ರೆಟರಿ ಮುರ್ಷಿ ಅಜೀಜ್ ಮಿರ್ಜಾಯವರು ಮೊದಲಾದ ಪ್ರಮುಖರೂ, ಹಿಂದೂಗಳ ಪಕ್ಷದಲ್ಲಿ ದರ್ಭಾಂಗಮಹಾರಾಜರವರು, ಮಿ॥ ಶಾರದಾಚರಣಮಿತ್ರರು, ಮಿ॥ ಸುರೇಂದ್ರನಾಥ ಬಾನರ್ಜಿಯವರು, ಗಂಗಾಪ್ರಸಾದ ವರ್ಮರವರು, ಆ॥ ಗೋಖಲೆಯವರು ಮೊದಲಾದ ಪ್ರಮುಖರೂ ದಯಮಾಡಿದ್ದರು. ಅಧ್ಯಕ್ಷರು ಸಭಾಕಾರ್ಯವನ್ನು ಆರಂಭಿಸುವುದಕ್ಕೆ ಪೂರ್ವ ಮಾಡಿದ ಭಾಷಣದ ಮುಖ್ಯಾಂಶವೇನೆಂದರೆ— ನನಗೆ ಹಿಂದೂ ಮಹಮ್ಮದಿಯರೀರ್ವರ ಶ್ರೇಯಃಕಾಂಕ್ಷೆಯೂ ಇರುವುದರಿಂದ ಈ ಉಭಯಪಕ್ಷದವರನ್ನೂ ಒಟ್ಟುಗೂಡಿಸಲು ಪ್ರಯತ್ನಿಸಿದೆನು. ಈ ಉಭಯಪಕ್ಷದವರಲ್ಲಿ ಬಳೆಯುತ್ತಿರುವ ಮನಸ್ತಾಪವು ಈ ದೇಶದ ಪುರೋವೃದ್ಧಿಗೆ ದೊಡ್ಡ ಅಡಚಣೆಯಾಗಿರುತ್ತದೆ. ಹಿಂದೂ ಮಹಮ್ಮದೀಯರು ಜನರ ಹಿತಕ್ಕಾಗಿ ಒಟ್ಟುಗೂಡಿ ಸ್ನೇಹದಿಂದ ಕೆಲಸಮಾಡಿದುದೇಯಾದರೆ, ಭರತಖಂಡಕ್ಕೆ ಮುಂದೆ ಕಲ್ಯಾಣವು ಖಂಡಿತವಾಗಿ ಸಿದ್ಧಿಸುವುದು. ಹಾಗಲ್ಲದೆ ಹೋದರೆ ದೇಶಾಭ್ಯುದಯಕ್ಕಾಗಿ ಮಾಡತಕ್ಕ ಪ್ರಯತ್ನವೆಲ್ಲವೂ ಬಹುಶಃ ನಿಷ್ಪ್ರಯೋಜಕವಾಗುವುದು. ಈ ಪ್ರಯತ್ನದಲ್ಲಿ ನಿಮಗಿರತಕ್ಕ ಕಷ್ಟಗಳನ್ನು ಸಾಮಾನ್ಯವಾಗಿ ಗಣಿಸಕೂಡದು. ಆದರೆ ಇಷ್ಟೊಂದು ಹಿಂದೂ ಮಹಮ್ಮದೀಯ ಪಕ್ಷಗಳ ಪ್ರಮುಖರು ಈ ಕಷ್ಟಗಳ ನಿವಾರಣೋಪಾಯವನ್ನು ಕಂಡುಹಿಡಿಯುವ ವಿಚಾರದಲ್ಲಿ ಸಮಾನೇಚ್ಛೆಯಿಂದ ಇಲ್ಲಿ ಕೂಡಿರುವುದು ಈ ದೇಶದ ಭವಿಷ್ಯದಭಿವೃದ್ಧಿಗೆ ಶುಭಸೂಚಕವೆಂದು ನನಗೆ ತೋರುತ್ತದೆ. ನಾವು ಈ ದಿವಸ ಇಲ್ಲಿ ನೆರೆದಿರುವುದು ಉದ್ದಿಷ್ಟಕಾರ್ಯವನ್ನು ಈ ದಿನವೇ ಕೊನೆಮುಟ್ಟಿಸಲಿಕ್ಕಾಗದೆ ಹೋದರೂ, ವಿಷಯಗಳನ್ನು ಮೈತ್ರಿಭಾವದಿಂದ ಚರ್ಚಿಸಿ ಉಭಯಪಕ್ಷದವರ ಭಿನ್ನಭಾವಗಳಿಗೇನುಕಾರಣವೆಂಬುದನ್ನೂ, ಎರಡು ವರ್ಗದವರ ಏಕೀಕರಣಕ್ಕೆ ಯಾವ ಉಪಾಯವನ್ನು ಕಲ್ಪಿಸಬೇಕೆಂಬುದನ್ನೂ ಗೊತ್ತುಮಾಡುವುದಕ್ಕಾಗಿ. ಮತ್ತೂ ಉಭಯ ಪಕ್ಷದವರ ಅಭಿಪ್ರಾಯಗಳಲ್ಲಿ ವ್ಯತ್ಯಾಸಬಂದರೆ, ಪರಸ್ಪರ ವೈಷಮ್ಯವನ್ನಿಡದೆಯೂ, ಉಭಯ ಪಕ್ಷಕ್ಕೂ ಅನ್ಯಾಯವಾಗದಂತೆಯೂ ಬಗೆಹರಿಸಬೇಕಾಗಿದೆ. ನಾನು ಇಂಗ್ಲೆಂಡಿನಿಂದ ಇಲ್ಲಿಗೆ ಹೊರಡುವುದಕ್ಕೆ ಮುಂಚೆಯೇ ಅಲ್ಲಿ ಎಚ್. ಎಚ್. ಆಗಾಖಾನ್, ಸರ್ ಫಿರೋಜ್‌ಷಾ ಮೆಹತಾ, ಮಿ॥ ಅಮೀರಾಲಿಯವರ ಸಂಗಡ ಈ ವಿಷಯವಾಗಿ ಆಲೋಚನೆ ಮಾಡಿದ್ದೇನೆ. ಇಲ್ಲಿಗೆ ಬಂದಮೇಲೂ ಇಲ್ಲಿನ ಉಭಯಪಕ್ಷದ ಪ್ರಮುಖಜನರೊಡನೆಯೂ ಈ ವಿಷಯವಾಗಿ ಮಾತನಾಡಿ ಅವರವರ ಅಭಿಪ್ರಾಯವನ್ನು ಕೇಳಿ ತಿಳಿದುಕೊಂಡಿದ್ದೇನೆ. ಈ ಉಭಯವರ್ಗದ ವೈಷಮ್ಯವು ಅನರ್ಥಕಾರಿಯೆಂದೂ, ಇದನ್ನು ಹುಟ್ಟಿಸುವವರು ಸಾಧಾರಣಜನರೇ ಆಗಿರುವರೆಂದೂ ಅದಕ್ಕಾಗಿ ಅವರೆಲ್ಲರೂ ಪರಿತಾಪಪಟ್ಟಿರುತ್ತಾರೆ. ಇಬ್ಬರ ಐಕ್ಯವನ್ನೂ ಸಾಧಿಸುವುದವಶ್ಯಕವೆಂದು ಅವರೆಲ್ಲರೂ ಒಪ್ಪಿಕೊಳ್ಳುತ್ತಾರೆ. ನಿಮ್ಮಗಳಿಗೆಲ್ಲಾ ಇದು ಯುಕ್ತವಾಗಿ ತೋರಿದರೆ ಈ ವಿಷಯದಲ್ಲಿ ಮುಂದೆ ಮಾಡಬೇಕಾದುದನ್ನು ಕುರಿತು ಪರಸ್ಪರ ಮೈತ್ರಿಯಿಂದ ಆಲೋಚಿಸಿ ನಿರ್ಧರಿಸಬೇಕೆಂದು ನನ್ನ ಕೋರಿಕೆ. ಹಾಗೆ ಮಾಡಿದರೆ ನಮ್ಮ ಉದ್ದೇಶ ಚರಿತಾರ್ಥವು ಸ್ವಲ್ಪಕಾಲದಲ್ಲಿಯೇ ಆಗುವುದು. ಈ ದಿನವೇ ಅದನ್ನು ಕುರಿತು ಪರಿಣಾಮದ ನಿರ್ಧಾರವನ್ನು ಮಾಡುವುದಕ್ಕೆ ಆಗದಿದ್ದರೆ, ಅದನ್ನು ಗೊತ್ತುಮಾಡುವುದಕ್ಕಾಗಿ ಒಂದು ಚಿಕ್ಕ ಸಂಘವನ್ನು ಏರ್ಪಡಿಸಬಹುದು" ಎಂದು ಹೇಳಿದರು.

ಬಳಿಕ ಹಿಂದೂ ಮಹಮ್ಮದೀಯರ ಮಧ್ಯದಲ್ಲಿ ಮನಸ್ತಾಪ ಹುಟ್ಟುವುದಕ್ಕೆ ಯಾವಯಾವ ಕಾರ್ಯಗಳು ಕಾರಣಗಳಾಗಿರುವುವೋ ಅವುಗಳನ್ನೆಲ್ಲಾ ಕುರಿತು ಆ ಸಭೆಯಲ್ಲಿ ಚರ್ಚಿಗಿಟ್ಟುಕೊಂಡರು. ಮಹಮ್ಮದೀಯರನ್ನು ಕುರಿತು ಎಚ್. ಎಚ್. ಆಗಾಖಾನರವರೂ, ಹಿಂದುಗಳನ್ನು ಕುರಿತು ಶ್ರೀ ಮಾನ್ ಶಾರದಾಚರಣ ಮಿತ್ರರೂ, ಪ್ರಸಕ್ತವಿಷಯದ ಅವಶ್ಯಕತೆಯನ್ನು ಕುರಿತು ಹಿತಬೋಧೆಯನ್ನು ಮಾಡಿದರು.

ಅನಂತರ ಅನೇಕರು ಇದೇ ವಿಷಯವನ್ನು ಕುರಿತು ಭಾಷಣಗಳನ್ನು ಮಾಡಿದರು. ಕಡೆಗೆ ಒಂದು ಸಂಘವನ್ನೇರ್ಪಡಿಸಿ, ಅವರು ಚರ್ಚಾಸ್ಪದ ಸಂಗತಿಗಳನ್ನು ಪೂರ್ಣವಾಗಿ ವಿಚಾರಮಾಡಿ, ಉಭಯ ಸಮ್ಮತವಾದ ನಿರ್ಧಾರವನ್ನುಮಾಡಿ ವರದಿ ಮಾಡಬೇಕೆಂದು ಗೊತ್ತುಮಾಡಿದರು. ಅವರ ಚರ್ಚೆಗೆ ಮುಖ್ಯವಿಷಯವಾದವುಗಳು ಯಾವುವೆಂದರೆ:-(೧) ಗೋವಧೆ (೨) ಮಸೀದಿಯಮುಂದೆ ವಾದ್ಯಮಾಡುವುದು. (೩) ಭಾಷಾವಿಷಯ (೪) ಕೌನ್ಸಿಲ್ಲುಗಳಲ್ಲಿ ಜಾತಿ ಪ್ರತಿನಿಧಿಗಳನ್ನು ಆರಿಸುವುದು. ಈ ಸಂಘದ ಸಭಾಸ್ತರರುಗಳು ಹಿಂದುಗಳ ಪಕ್ಷದಲ್ಲಿ ೭ ಮಂದಿಯೂ, ಮಹಮ್ಮದೀಯರ ಪಕ್ಷದಲ್ಲಿ ೭ ಮಂದಿಯೂ ಗೊತ್ತುಮಾಡಲ್ಪಟ್ಟಿದ್ದಾರೆ. ಯಾರೆಂದರೆ—ಹಿಂದುಗಳಕಡೆ ಶ್ರೀಯುತರಾದ ಮದನಮೋಹನಮಾಳವ್ಯ, ಗಂಗಾಪ್ರಸಾದವರ್ಮ, ಹರಿಕೃಷ್ಣಲಾಲ, ದರ್ಭಾಂಗಮಹಾರಾಜರು, ಶಾರದಾಚರಣ ಮಿತ್ರ, ಸುರೇಂದ್ರನಾಥಬಾನರ್ಜಿ, ಲಾಲಾಮುರ್ಷಿರಾಮ, ಹರಿಚಂದ್ರರಾಯವಿಷ್ಣುದಾಸ್, ಗೋಖಲೆ. ಮಹಮ್ಮದೀಯರಕಡೆ—ನವಾಬ್ ಸಯ್ಯದ್ ಮಹಾಮ್ಮದ್—ಅಜೀಜ್‌ಮಿರ್ಜಾ—ನವಾಬ್ ಅಬ್ದುಲ್‌ಮಜೀಜ್—ಇಬ್ರಾಹಿಂರಹಿಮತ್ತುಲ್ಲಾ—ಮೌಲ್ವಿಷಾಂಸುಲ್‌ಹುದಾ—ರಫಿಯುರ್ದಿ ಅಹಮ್ಮದ್—ಮಿಯಾನ್ ಮಹಾಮ್ಮದ್‌ಸಾಫಿ—ನಬೀಉಲ್ಲಾ, ಇವರುಗಳು.

ಈ ಸಂಘದವರು ಎರಡುಪಕ್ಷಕ್ಕೂ ಪ್ರಮುಖರಾದ ಮಹಾಜನರಾದುದರಿಂದ ಇವರ ಕೊನೆಯ ಅಭಿಪ್ರಾಯವು ಎರಡು ಕಡೆಯವರಿಗೂ ಅಂಗೀಕಾರಾರ್ಹವಾಗುವಂತೆ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ಭರತಖಂಡದ ರಾಷ್ಟ್ರೀಯ ಸುಖದುಃಖಕ್ಕೆ ಹಿಂದೂ ಮಹಮ್ಮದೀಯರೀರ್ವರೂ ಸಮಭಾಗಿಗಳಾಗಿದ್ದಾರೆ. ಹೀಗಿರುವಲ್ಲಿ ಒಬ್ಬರನ್ನೊಬ್ಬರು ಮತ್ಸರಿಸುತ್ತ ಒಕ್ಕಟ್ಟನ್ನು ಒಡೆದುಕೊಂಡರೆ, ಇಬ್ಬರಿಗೂ ಅಕ್ಷೇಮವುಂಟಾಗುವುದು ನಿಜ. ಇದನ್ನು ತಿಳಿದುಕೊಂಡು ಇಬ್ಬರೂ ಸವರಿಸಿಕೊಂಡು ನಡೆವುದು ಅವಶ್ಯಕವಾದುದು. ಭರತಖಂಡದಲ್ಲಿ ಮತ ಜಾತಿಪ್ರಯುಕ್ತವಾದ ಧಾರ್ಮಿಕ ವಿಷಯಗಳಲ್ಲಿ ಮಾತ್ಸರ್ಯವು ಬಲುಬೇಗನೆ ಎಂಥವರಿಗೂ ಹುಟ್ಟುವುದು. ಅದು ಆಸೇತು ಹಿಮಾಚಲಾಂತವಾದ ಭೂಮಿಯ ಪ್ರಭಾವವೇ ಆಗಿರಬೇಕು. ಅದುಕಾರಣ ಯಾರೊಬ್ಬರೂ ಧರ್ಮವಿಷಯದಲ್ಲಿ ಪರರಿಗೆ ನೋವನ್ನುಂಟುಮಾಡುವಂಥ ಕೆಲಸಕ್ಕೆ ಕೈಹಾಕದೆ ಎಚ್ಚರದಿಂದಿರಬೇಕಾದುದು ಅವಶ್ಯಕವಾಗಿದೆ. ಸದ್ಯಃ ಅಲ್ಲಲ್ಲಿ ತಲೆದೋರುತ್ತಿರುವ ಹಿಂದೂ ಮಹಮ್ಮದೀಯರ ಕಲಹಗಳಿಗೆ ಬೀಜವು ಬಹುಶಃ ಧರ್ಮಸಂಬಂಧವಿಚಾರವೇ ಎಂದು ತಿಳಿದುಬಂದಿದೆ. ಇಂತಹ ಕಲಹವು ಪದೇಪದೆ ಹುಟ್ಟುತ್ತಿರುವುದು ಅನಿಷ್ಟವಾದುದೆಂಬುದನ್ನು ಉಭಯಪಕ್ಷದ ಪ್ರಮುಖರೂ ಅರಿತುಕೊಂಡಿದ್ದಾರೆ. ಆದರೆ ಈ ಕಲಹದ ಬೀಜವು ಮೊದಲು ಎಲ್ಲಿ ಅಂಕುರಿಸುವುದೋ ಆ ಸ್ಥಲವು ಅದೂರದರ್ಶಿಗಳಾದ ಸಾಮಾನ್ಯಜನರ ಅಸಂಸ್ಕೃತ ಮನಸ್ಸಾಗಿರುತ್ತದೆ. ಅಂಥ ಸಾಧಾರಣ ಜನರಿಗೆ ಆ ದುಷ್ಟಬೀಜದ ಅನರ್ಥಪರಿಣಾಮವನ್ನು ತಿಳುಹಿಕೊಟ್ಟು, ಅದರ ಮೂಲವನ್ನೇ ತೆಗೆದುಹಾಕಿಬಿಡುವಂತೆ ಮಾಡುವುದು ಆಯಾವರ್ಗದ ಜನರ ಮುಂದಾಳುಗಳ ಪ್ರಥಮಕರ್ತವ್ಯವಾಗಿದೆ. ಇದುವರೆಗಿನ ವಿದ್ಯಮಾನವನ್ನು ನೋಡುವುದರಲ್ಲೂ, ಪ್ರಸಕ್ತಸಭೆಯ ಚರ್ಚೆಗೆ ಬಂದಿದ್ದ ಏತತ್ಸಂಬಂಧವಾದ ಸಂಗತಿಗಳನ್ನು ಪರಿಶೀಲಿಸುವುದರಲ್ಲೂ ಹಿಂದೂಗಳ ಮನಃಖೇದಕ್ಕೆ ಅತ್ಯಂತ ಕಾರಣಭೂತವಾದುದು "ಗೋವಧೆ" ಯೆಂದೂ, ಮಹಮ್ಮದೀಯರ ಮನಃಖೇದಕ್ಕೆ ಕಾರಣಭೂತವಾದುದು "ಅವರ ಮಸೀದಿಗಳ ಮುಂದೆ ಇತರರು ವಾದ್ಯಘೋಷವನ್ನು ಮಾಡುವುದು" ಎಂದೂ ಸ್ಪಷ್ಟವಾಗುತ್ತದೆ. ಈ ಕಲಹಬೀಜಗಳನ್ನು ಮೊದಲು ಸುಟ್ಟುಬಿಡುವಂತೆ ಮಾಡುವುದು ಅವಶ್ಯಕ. ನಮ್ಮ ಮೈಸೂರಿನಲ್ಲಿ ಇದೇ ತೆರದ ಕಲಹದಿಂದ ಹಿಂದೆಯೊಂದಾವೃತ್ತಿ ಮಹಾನರ್ಥವುಂಟಾಗಲಾಗಿ, ಇಲ್ಲಿನ ಸರ್ಕಾರದವರು ಉತ್ಸವಾದಿಗಳನ್ನು ಬೀದಿಯಲ್ಲಿ ಮಾಡತಕ್ಕವರು ದೇವಾಲಯಗಳ ಮುಂದೆ ವಾದ್ಯವನ್ನು ನಿಲ್ಲಿಸಿಬಿಟ್ಟು ಹೋಗಬೇಕೆಂದು ಶಾಶ್ವತವಾದ ನಿಯಮವನ್ನು ಮಾಡಿಟ್ಟಿದ್ದಾರೆ. ಅದರಿಂದ ಇಲ್ಲಿ ಹಿಂದೂ ಮಹಮ್ಮದೀಯರ ಮಧ್ಯದ ಕಲಹವು ಸ್ವಪ್ನದಲ್ಲೂ ಕಾಣದಂತಾಗಿದೆ. ಅಲ್ಲದೆ ಮೈಸೂರಿನ ಹಿಂದೂ ಮಹಮ್ಮದೀಯರ ಭ್ರಾತೃಭಾವವು ಇತರ ಸ್ಥಲದವರಿಗೆಲ್ಲಾ ಮಾರ್ಗದರ್ಶಕದಂತಿರುತ್ತದೆ. ದೇವಾಲಯವೆಂಬುದು ಪವಿತ್ರಸ್ಥಾನವು. ಅದು ಇತರರದಾದರೂ ಎಲ್ಲರಿಂದಲೂ ಸಮ್ಮಾನಿಸಲರ್ಹವಾದುದು. ಅದುಕಾರಣ ಮಹಮ್ಮದೀಯರ ಮಸೀದಿಯ ಮುಂದೆ ವಾದ್ಯಗಳನ್ನು ನಿಲ್ಲಿಸಿ ಹಿಂದುಗಳು ಉತ್ಸವಗೊಳ್ಳುವುದು ಕೊರತೆಯೇನೂ ಅಲ್ಲ. ಅದು ಅವಶ್ಯಾಚರಣೀಯವಾದುದು. ಅದರಂತೆಯೇ ಜಗತ್ಸಾಮಾನ್ಯಕ್ಕೂ ಉಪಯೋಗಕಾರಿಯಾದ ಗೋವನ್ನು ಹಿಂಸಿಸುವುದು ಹಿಂದೂಗಳಿಗೆ ಮಾತ್ರವೇ ಅಲ್ಲ, ವಿಚಾರಪರರಿಗೆಲ್ಲರಿಗೂ ಮನಃಖೇದಕಾರಿಯಾದುದು. ಅದುಕಾರಣ ಅದರ ವಧೆಯ ಕೆಲಸವನ್ನು ನಿಲ್ಲಿಸಿಬಿಡುವುದಕ್ಕೆ ಮಹಮ್ಮದೀಯರು ಒಪ್ಪಿಕೊಳ್ಳತಕ್ಕದು ಅವರಿಗೊಂದು ಕೊರತೆಯೂ ಅಲ್ಲ. ಆದುದರಿಂದ ಪ್ರಸಕ್ತಸಮಯದಲ್ಲಿ ಈ ವಿಷಯದ ನಿರ್ಧಾರವನ್ನು ಮಾಡುವುದಕ್ಕೆ ನಿಯುಕ್ತರಾಗಿರುವ ಉಭಯಪಕ್ಷ ಪ್ರಮುಖಸಂಘದವರು ದೇಶಕ್ಕೆಲ್ಲಾ ಚಿರಸ್ಮರಣೀಯವಾದ ಸುಕ್ಷೇಮವನ್ನುಂಟುಮಾಡುವ ಶಾಶ್ವತವಾದಒಡಂಬಡಿಕೆಯ ನಿಯಮಗಳನ್ನು ನಿರ್ಧರಿಸಿ ವ್ಯವಹಾರಕ್ಕೆ ಬರುವಂತೆ ಮಾಡಲೆಂದೂ ಈ ವಿಷಯದಲ್ಲಿ ದೈವಸಹಾಯವೂ, ಪ್ರಭುತ್ವದವರ ಸಹಾಯವೂ ಉಂಟಾಗಲೆಂದೂ ನಾವು ಕೋರುವೆವು.

ದೇಶೀಯ ಮಹಾಸಭೆಯ ಪ್ರತಿನಿಧಿಗಳು.

ಮಹಾಸಭೆಯಲ್ಲಿ ನಿರ್ಧಾರವಾಗಿದ್ದ ಮೇರೆಗೆ ಅದರ ಪ್ರತಿನಿಧಿಗಳಾದ ಸರ್ ವೆಡರ್‌ಬರ್ನ ಮೊದಲಾದವರು ವೈಸ್‌ರಾಯರ ದರ್ಶನಕ್ಕಾಗಿ ಕಳೆದ ತಾ॥ ೫ ರ ಬೆಳಿಗ್ಗೆ ಹೋಗಿದ್ದರು. ವೈಸ್‌ರಾಯರ ಪ್ರತಿನಿಧಿಯಾಗಿ ಕ್ಯಾಪ್ಟನ್ ಕೆಡರ್ಗ ಮಿ॥ ಡುಬೋಲೆ ಇವರಿಬ್ಬರೂ ಇದಿರ್ಗೊಂಡು ಒಳಕ್ಕೆ ಕರಕೊಂಡು ಹೋಗಿ ಉಚಿತಾಸನಗಳಲ್ಲಿ ಕುಳ್ಳಿರಿಸಿದರು. ಬಳಿಕ ವೈಸ್‌ರಾಯರು ಆ ಮಂದಿರಕ್ಕೆ ದಯಮಾಡಿಸಲು, ಸರ್ವರೂ ಪ್ರತ್ಯುತ್ಥಾನದಿಂದ ಮರ್ಯಾದಿಸಿದರು. ಬಳಿಕ ಪ್ರತಿನಿಧಿಗಳ ಪರವಾದ ವಿಜ್ಞಾಪನ ಪತ್ರಿಕೆಯು ಸರ್ ವೆಡರ್‌ಬರ್ನರವರಿಂದ ಓದಿ ವೈಸ್‌ರಾಯರಿಗೆ ಒಪ್ಪಿಸಲ್ಪಟ್ಟಿತು. ಅದು ಜರತಾರಿ ರೇಶ್ಮೆಯ ಮೇಲೆ ಅಚ್ಚಾಗಿ, ಭಂಗಾರದ ಕೆಲಸದ ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಲ್ಪಟ್ಟಿತು. ಅದರಲ್ಲಿ ಕೈ॥ ವಿಕ್ಟೋರಿಯಾ ಚಕ್ರವರ್ತಿನಿಯವರು ಮತ್ತೂ ಎಡ್ವರ್ಡ್ ಚಕ್ರವರ್ತಿಯವರು ಕೊಟ್ಟ ಶಾಸನಗಳಲ್ಲಿ ಕಂಡಮೇಲೆ ಭಾರತೀಯರ ಅಭ್ಯುದಯಕ್ಕಾಗಿ ಕೌನ್ಸಿಲ್ ಸುಧಾರಣೆ ಮೊದಲಾದ ಏರ್ಪಾಟನ್ನು ಮಾಡಿದುದರ ಅಭಿನಂದನೆ—ಮತ್ತೂ ಕೌನ್ಸಿಲುಗಳ ಏರ್ಪಾಟಿನಲ್ಲಿರತಕ್ಕ ಕೆಲ ನ್ಯೂನಾತಿರೇಕಗಳನ್ನು ಅನುಭವಕ್ರಮೇಣ ಸರಿಪಡಿಸಿಕೊಡಬೇಕೆಂಬುದು— ಬಲಾತ್ಕಾರ ವಿದ್ಯಾಭ್ಯಾಸ ಕ್ರಮವನ್ನು ಏರ್ಪಡಿಸಬೇಕೆಂಬುದು—ಬಾಲವಿದ್ಯಾಭ್ಯಾಸ ಕೈಗಾರಿಕೆಗಳ ಅಭಿವೃದ್ಧಿಗೆ- ಹೆಚ್ಚು ವೆಚ್ಚವನ್ನು ಮಾಡಬೇಕೆಂಬುದು ಮೊದಲಾದ ಪ್ರಾರ್ಥನೆಗಳು ಕಾಣಿಸಲ್ಪಟ್ಟಿದ್ದುವು.

ಇದಕ್ಕೆ ವೈಸ್‌ರಾಯರು ಉತ್ತರ ಕೊಡುವುದರಲ್ಲಿ— ಸರ್ಕಾರದವರು ಮಾಡತಕ್ಕ ರಾಜ್ಯಕಾರ್ಯನಿರ್ವಾಹದಲ್ಲಿ ನೀವೂ ಸಹಾಯಕರಾಗಿರುತ್ತೀರೆಂದು ಹೇಳಿರುವುದು ಸಂತೋಷಕರವಾಗಿದೆ. ಕಳೆದ ೧೦೦ ವರ್ಷಗಳ ಭರತಖಂಡದ ಚರಿ

ತ್ರವನ್ನೋದಿದ ಪ್ರತಿಯೊಬ್ಬ ವಿದ್ಯಾರ್ಥಿಗೂ ಭರತಖಂಡದ ಪುರೋವೃದ್ಧಿಯನ್ನುಂಟುಮಾಡಬೇಕೆಂಬುದೇ ಇಂಗ್ಲಂಡಿನ ಉದ್ದೇಶವಾಗಿದ್ದಿತೆಂದು ಗೊತ್ತಾಗುತ್ತದೆ. ಈ ದೇಶದ ಎಲ್ಲ ಕಡೆಯೂ ಕಂಡುಬರುತ್ತಿರುವ ಅಭಿವೃದ್ಧಿಯು ಇಂಗ್ಲೆಂಡಿನ ಉದ್ದೇಶವು ಸಾರ್ಥಕಗೊಂಡಿರುತ್ತದೆಂಬುದನ್ನು ದೃಷ್ಟಾಂತಪಡಿಸುತ್ತಿದೆ. ಭಾರತೀಯರ ಅಭಿವೃದ್ಧಿಗಾಗಿಯೇ ರಾಜಕೀಯ ವಿಷಯಗಳಲ್ಲಿ ಅವರ ಪ್ರವೇಶವನ್ನು ಹೆಚ್ಚಿಸುವುದಕ್ಕಾಗಿ ನಿಯಮನಿರ್ಮಾಣ ಸಭೆಗಳಲ್ಲಿ ಅವರ ಪ್ರತಿನಿಧಿಗಳನ್ನು ಹೆಚ್ಚಾಗಿ ಸೇರಿಸುವುದಕ್ಕೂ, ಸ್ಥಳೀಯ ಸರ್ಕಾರಗಳಲ್ಲೂ ಮತ್ತೂ ಎಗ್ಜಿಕ್ಯೂಟೀವ್ ಕೌನ್ಸಿಲ್ಲುಗಳಲ್ಲೂ, ಸ್ಟೇಟ್ ಸೆಕ್ರಟರಿ ಕೌನ್ಸಿಲ್ಲಿನಲ್ಲೂ ಭಾರತೀಯರನ್ನು ಸೇರಿಸುವುದಕ್ಕೂ ಅವಕಾಶವನ್ನು ಕಲ್ಪಿಸಿದೆ. ಈ ನೂತನ ಸುಧಾರಣೆಗಳೆಲ್ಲಾ ಬಾಲ್ಯಾವಸ್ಥೆಯಲ್ಲಿವೆ. ಎಚ್ಚರಿಕೆಯಿಂದ ಅವನ್ನು ಸ್ಥಿರಗೊಳಿಸಬೇಕಾಗಿದೆ. ಇವುಗಳ ಚಲನೆಯನ್ನು ನಾನು ಎಚ್ಚರಿಕೆಯನ್ನಿಟ್ಟು ನೋಡಿ, ಅವುಗಳ ಏರ್ಪಾಟಿನ ಮೂಲೋದ್ದೇಶವು ಸಾರ್ಥಕವಾಗುವಂತೆ ಮಾಡುತ್ತೇನೆ. ನಿಮ್ಮ ವಿಜ್ಞಾಪನೆಯಲ್ಲಿ ಪ್ರಜೆಗಳಿಗಿರತಕ್ಕ ಕೊರತೆಗಳನ್ನು ಕುರಿತು ತಿಳುಹಿಸಿರುತ್ತೀರಿ. ಇವುಗಳೆಲ್ಲಾ ಸರ್ಕಾರದವರ ಗಮನಕ್ಕೆ ಬಂದಿರುತ್ತವೆಯೆಂದು ನಾನು ಖಂಡಿತವಾಗಿ ಹೇಳುತ್ತೇನೆ. ನಿಮ್ಮ ಕೆಲ ಸೂಚನೆಗಳಂತೆ ಸರ್ಕಾರದವರು ಕೆಲಸ ಮಾಡಬೇಕಾದರೆ, ಈಗಿಂತಲೂ ಹೆಚ್ಚಾಗಿ ಸರ್ಕಾರದವರು ವೆಚ್ಚ ಮಾಡಬೇಕಾಗುತ್ತದೆ. ಆಗ್ಗೆ ಉತ್ಪತ್ತಿಯೂ ಹೆಚ್ಚಬೇಕು. ವಿದ್ಯಾಭ್ಯಾಸ ಸಂಬಂಧದ ವಿಚಾರಕ್ಕೆ ಸರ್ಕಾರದವರು ಈಗ ಕೈಹಾಕಿದ್ದಾರೆ. ಅದಕ್ಕೇ ಬೇರೊಂದು ಕಾರ್ಯಭಾಗದ ಶಾಖೆಯನ್ನು ವಿಂಗಡಿಸಬೇಕೆಂದಿದ್ದಾರೆ. ಈಗ ಬಂದಿರುವ ಪ್ರತಿನಿಧಿಗಳಾದ ನಿಮ್ಮಲ್ಲಿ ಅನೇಕರು ನಿಯಮನಿರ್ಮಾಣಸಭೆಯ ಸಭಾಸ್ತರರಾಗಿದ್ದಾರೆ. ಅವರ ಮೂಲಕವಾಗಿ ದೇಶೀಯ ಮಹಾಸಭೆಯ ಅಭಿಪ್ರಾಯಗಳನ್ನು ಪ್ರಾಂತಿಕ ನಿಯಮನಿರ್ಮಾಣ ಸಭೆಗಳಲ್ಲಿ ವಿಚಾರಕ್ಕೆ ತರುವಂತೆ ಮಾಡಬಹುದಾಗಿದೆ. ಆ ಸಂದರ್ಭದಲ್ಲಿ ಅವಕ್ಕೆ ವಿಶೇಷ ಗಮನವು ಕೊಡಲ್ಪಡುವುದೆಂದು ನಂಬುತ್ತೇನೆ. ಭಾರತೀಯರ ಸಂಪನ್ನೀತಿಗಳ ಅಭಿವೃದ್ಧಿಯನ್ನು ಮಾಡಬೇಕೆಂಬುದೂ, ಎಲ್ಲ ಮತಜಾತಿಗಳನ್ನೂ ಒಂದೇ ನ್ಯಾಯದಿಂದ ಪರಿಪಾಲಿಸಬೇಕೆಂಬುದೂ ಆಂಗ್ಲಪ್ರಭುತ್ವದವರ ಸಂಕಲ್ಪವಾಗಿರುತ್ತದೆ. ನಿಮ್ಮ ಅಧ್ಯಕ್ಷರಾದ ಸರ್ ವೆಡರ್‌ಬರ್ನವರು ಹಿಂದೂ ಮಹಮ್ಮದೀಯರಲ್ಲಿ ಐಕ್ಯವನ್ನುಂಟುಮಾಡಲು ಪ್ರಯತ್ನಿಸಿರುವುದನ್ನು ಕೇಳಿ ನನಗೆ ಸಂತೋಷವಾಯಿತು. ಆ ಪ್ರಯತ್ನಕ್ಕೆ ಜಯವುಂಟಾಗಲೆಂದು ನಾನು ಕೋರುತ್ತೇನೆ. ಶ್ರೀ॥ ಚಕ್ರವರ್ತಿಯವರು ನನ್ನನ್ನು ಈ ದೊಡ್ಡ ಪದವಿಗೆ ನಿಯಮಿಸಿದುದಕ್ಕೆ ನೀವು ಆನಂದಿಸಿ ವಿಜ್ಞಾಪನ ಪತ್ರಿಕೆ ಕೊಟ್ಟುದಕ್ಕಾಗಿ ನಾನು ನಿಮ್ಮನ್ನು ವಂದಿಸುತ್ತೇನೆ.

ಒಳದೇಶದ ವೃತ್ತಾಂತ.

ಕಳೆದ ಗುರುವಾರ ಬೆಂಗಳೂರ ತಾಲ್ಲೋಕು ಕಚೇರಿ ಮಾರ್ಗದಲ್ಲಿ ವಾಸವಾಗಿದ್ದ ೩ ವರ್ಷದ ಹುಡುಗಿಯು ಬೇಳಿನಿಂದ ಕಡಿಯಲ್ಪಟ್ಟಿದ್ದು ಮೃತಳಾದಳು.

ರಾಜಧಾನಿಯ ಜಿ. ಟಿ. ಎ., ಪ್ರೆಸ್ಸಿನವರು ಪದ್ಧತಿಯಂತೆ ಈ ವರ್ಷದ ಕ್ಯಾಲಂಡರನ್ನು ೨-೩ ಬಣ್ಣಗಳಲ್ಲಿ ಅತ್ಯಂತ ಮನೋಹರವಾಗಿ ಮುದ್ರಿಸಿರುವರು. ಇದರ ಪ್ರತಿಯೊಂದನ್ನು ನಾವು ವಿಶ್ವಾಸದಿಂದ ಸ್ವೀಕರಿಸಿದೆವು.

ಕೊಲಾರ ಡಿ॥ ಫಾರೆಸ್ಟ್ ಆಫೀಸರಾದ ಮ॥ ರಾಮಯ್ಯನವರ ಮಗ ಶ್ರೀನಿವಾಸಮೂರ್ತಿಯೆಂಬಾತನು ಕಳೆದ ತಾ॥ ೨೪ ರಲ್ಲಿ ಕೋಲಾರದ ಸೋಮೇಶ್ವರ ದೇವಸ್ಥಾನದ ಬಳಿಯಿರುವ ಕೊಳದಲ್ಲಿ ಅಕಸ್ಮಾತ್ ಬಿದ್ದು ಸತ್ತುಹೋದನು. ಈತನು ಮೆಟ್ರಿಕ್ಯುಲೇಷನ್ ತರಗತಿಯಲ್ಲಿ ಓದುತಲಿದ್ದು ಒಳ್ಳೇ ಚುರುಕಾಗಿದ್ದನು.

ಮೊದಲೇ ಗೊತ್ತಾಗಿದ್ದಂತೆ ಶ್ರೀಮನ್ಮಹಾರಾಜರವರೂ ಯುವರಾಜರೂ ತುಮಕೂರು ಮತ್ತೂ ಚಿತ್ರದುರ್ಗ ಡಿ॥ಗಳಲ್ಲಿ ಸಂಚರಿಸಿ ಬರಲು ಕಳೆದ ತಾ॥ ೭ ರಲ್ಲಿ ಪರಿವಾರ ಸಮೇತ ದಯಮಾಡಿಸಿದರು. ಇವರುಗಳ ಸ್ವಾರಿಯು ಈ ತಾ॥ ೨೩ ರಲ್ಲಿ ಬೆಂಗಳೂರಿಗೆ ಹಿಂತಿರುಗಿ ಚಿತ್ತೈಸಿ, ಅಲ್ಲಿಂದ ಫೆಬ್ರವರಿಯ ಮೊದಲನೆ ವಾರದಲ್ಲಿ ಬೊಂಬಾಯಿಗೆ ತೆರಳಬಹುದಾಗಿ ಕೇಳುತ್ತೇವೆ.

ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಿಯವರೂ ಮಹಾರಾಣಿಯವರೂ, ಪ್ರಥಮರಾಜಕುಮಾರಿಯವರೂ ಕಳೆದ ತಾ॥ ೭ ರ ಬೆಳಿಗ್ಗೆ ಬೆಂಗಳೂರಿಂದ ಮೊಟಾರು ಬಂಡಿಯಲ್ಲಿ ಹೊರಟು ೧೧ ಗಂಟೆಗೆ ರಾಜಧಾನಿಗೆ ದಯಮಾಡಿಸಿದರು. ಇವರುಗಳ ಸ್ವಾರಿಯು ಇನ್ನೂ ೩-೪ ದಿನಗಳಿಲ್ಲಿದ್ದು ಅನಂತರ ಹಿಂತಿರುಗಿ ಬೆಂಗಳೂರಿಗೆ ಚಿತ್ತೈಸುವುದಾಗಿದೆ.

ಕಳೆದ ತಾ॥ ೧ ರಲ್ಲಿ ಬೆಂಗಳೂರ ಅರಮನೆಯಲ್ಲಿ ಕೈ॥ ಶ್ರೀ ಚಾಮರಾಜೇಂದ್ರ ಒಡೆಯರವರ ಎಡೆಕಟ್ಟಲೆಯು ನಡೆಯಿತು. ತತ್ಸಂಬಂಧವಾಗಿ ಆ ದಿವಸ ಸಾವಿರಾರು ಬ್ರಾಹ್ಮಣರಿಗೆ ತುಳಸಿತೋಟ, ಪೂರ್ಣಯ್ಯನವರ ಸತ್ರ ಮತ್ತೂ ವ್ಯಾಸರಾಯರ ಸತ್ರ ಈ ಮೂರು ಸ್ಥಳಗಳಲ್ಲೂ ಸುಖಭೋಜನವು ಮಾಡಿಸಲ್ಪಟ್ಟು ದೊಡ್ಡವರಿಗೆ ೧ ರೂ. ನಂತೆಯೂ, ಚಿಕ್ಕವರಿಗೆ ೮ ಆಣೆಯಂತೆಯೂ ದಕ್ಷಿಣೆಯು ಕೊಡಲ್ಪಟ್ಟಿತು.

ಡಿಸ್ಟ್ರಿಕ್ಟ್ ಜಡ್ಜ್ ಉದ್ಯೋಗದಿಂದ ನಿವೃತ್ತರಾಗಿರುವ ಮ॥ ಬಿ. ತಿರುಮಲಾಚಾರರ ಮಕ್ಕಳು ಮ॥ ಬಿ. ರಾಘವಾಚಾರರು ಬೊಂಬಾಯಿಯ ಸರ್ವವಿದ್ಯಾಲಯದ ಎಲ್‌ಎಲ್. ಬಿ., ಪರೀಕ್ಷೆಯಲ್ಲಿ ಮೊದಲನೆ ವರ್ಷ ಮೊದಲನೆಯವರಾಗಿ ಉತ್ತೀರ್ಣರಾಗಿ ೪೦೦ ರೂ. ಬೆಲೆಯ ಭಂಗಾರದ ಪದಕವನ್ನು ಪಡೆದುದಲ್ಲದೆ ೨ ನೆಯ ವರ್ಷದ ಪರೀಕ್ಷೆಯಲ್ಲೂ ಒಂದನೆಯವರಾಗಿ ತೇರ್ಗಡೆಯನ್ನು ಹೊಂದಿ ೧೫೦ ರೂ. ನ ಬಹುಮಾನವನ್ನು ಪಡೆದರೆಂದು ತಿಳುಹಲು ಸಂತೋಷವಾಗುತ್ತದೆ. ನಮ್ಮ ಮೈಸೂರು ಸೀಮೆಯವರಲ್ಲಿ ಇದೇ ಪರೀಕ್ಷೆಯಲ್ಲಿ ಈ ವಿಧವಾದ ಬಹುಮಾನವನ್ನು ಮೊದಲು ಪಡೆದಿದ್ದವರು ಚೀಫ್ ಕೋರ್ಟಿನ ಜಡ್ಜಿಯರಾಗಿದ್ದು ನಿವೃತ್ತರಾಗಿರುವ ಮ॥ ಸೆಟ್ಲೂರವರು.

ರಾಜಧಾನಿಯ ಹಳ್ಳದಕೇರಿಯ ವಾಸಸ್ಥರಾಗಿದ್ದು ಗತಿಸಿದ ಮ॥ ಮಿರ್ಲೆ ಕೃಷ್ಣಪ್ಪನವರು ತಮ್ಮ ಅವಸಾನಕಾಲದಲ್ಲಿ ೮-೧೦ ಸಾವಿರ ರೂ. ಬೆಲೆ ಬಾಳುವ ಮತ್ತೂ ೮೦-೮೫ ಖಂಡಗ ಬತ್ತಬರುವ ಗದ್ದೆಯನ್ನು ಧರ್ಮಕಾರ್ಯಕ್ಕೆ ಬಿಟ್ಟು ಅದರುತ್ಪತ್ತಿಯಿಂದ ಕೆಲ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡಬೇಕೆಂದು ವಿಲ್ಲನ್ನು ಬರೆದು ಮೈಸೂರ ಡಿ॥ ಜಡ್ಜರ ಮೇಲ್ವಿಚಾರಣೆಗೊಳಪಡಿಸಿದ್ದರು. ಡಿ॥ ಜಡ್ಜರಾದ ಮ॥ ಟಿ. ಪರಮಶಿವಯ್ಯರ್ರವರು ಇಲ್ಲಿಯ ಡಿ॥ ಜ॥ ಉದ್ಯೋಗವನ್ನು ವಹಿಸುವುದಕ್ಕೆ ಪೂರ್ವ ಮಿರ್ಲೆ ಕೃಷ್ಣಪ್ಪನವರ ಧರ್ಮದಾಸ್ತಿಯಿಂದ ಬರತಕ್ಕುತ್ಪತ್ತಿಯನ್ನು ರಾಜಧಾನಿಯಲ್ಲಿ ಮ॥ ಎಂ. ವೆಂಕಟಕೃಷ್ಣಯ್ಯನವರಿಂದ ಸ್ಥಾಪಿಸಲ್ಪಟ್ಟು ಅವರ ಪ್ರಯತ್ನವಿಶೇಷದಿಂದ ನಡೆಸಲ್ಪಡುತ್ತಿರುವ ಅನಾಥಾಲಯದ ಪೋಷಣೆಗುಪಯೋಗಿಸಲ್ಪಡುವಂತೆ ಮಾಡಿಕೊಟ್ಟರೆಂದು ಕೇಳುತ್ತೇವೆ.

ಕಳೆದವಾರ ರಾಜಧಾನಿಯ ಟಲಿಗ್ರಾಫ್ ಮಾಸ್ಟರು ನಗದು ೫೦೦ ರೂ. ಗಳನ್ನೂ, ೨೦೦ ರೂ. ಗಳ ಸ್ಟಾಂಪುಗಳನ್ನೂ ಡಿ॥ ಟ್ರಜರಿಯಿಂದ ತರಲು ತಮ್ಮ ಕೈಕೆಳಗಣ ಕೆಲಸಗಾರನಾದ ಲೈನ್ ಓವರ್ಸಿಯರ್ ಇಬ್ರಾಹಿಂ ಎಂಬುವನ ವಶಕ್ಕೆ ಚಕ್ಕನ್ನೂ ಹಣವನ್ನೂ ಕೊಟ್ಟಿದ್ದರು. ಅವನು ನಗದುರೂಪಾಯಿನ ಚಕ್ಕನ್ನು ಖಜಾನೆಗೆ ಕೊಟ್ಟು ಮುರಿಸಿ ಹಣವನ್ನು ತೆಗೆದುಕೊಂಡು ತಂತೀಆಫೀಸಿಗೆ ಬಾರದೆ ಹಾಗೆಯೇ ಫಲಾಯನವಾದನು. ಇದರಮೇಲೆ ತಂತಿಯ ಮಾಸ್ಟರಿಗೆ ಅನುಮಾನವು ಹುಟ್ಟಿ ಪೋಲೀಸಿಗೆ ತಿಳುಹಿದರು. ಲಷ್ಕರ್ ಪೋಲೀಸಿನವರು ಇಬ್ರಾಹಿಂ ಮನೆಯನ್ನೂ ಅನುಮಾನದಮೇಲೆ ಅವನ ಅಪ್ತನ ಮನೆಯನ್ನು ಶೋಧಿಸುವಾಗ್ಗೆ ಸ್ನೇಹಿತನಲ್ಲಿ ೫೦೦ ರೂ. ಗಳು ಮತ್ತೆ ಕೆಲ ಬಟ್ಟೆಬರೆಗಳು ದೊರೆದುವು. ಆದರೆ ಇಬ್ರಾಹಿಮನು ಮಾತ್ರ ಊರನ್ನು ಬಿಟ್ಟು ರೈಲನ್ನು ಹತ್ತಿ ಯಲಿಯೂರು ಸ್ಟೇಷನ್ನಿನಲ್ಲಿಳಿದು ಯಾರಿಗೂ ಗೋಚರವಾಗದಂತಿದ್ದು ತಾನು ಕೊಟ್ಟಿದ್ದ ೫೦೦ ರೂ. ಗಳನ್ನೂ, ಬಟ್ಟೆಬರೆ ಮೊದಲಾದ ಪದಾರ್ಥಗಳನ್ನೂ ಕಳುಹಿಸಿಕೊಡುವುದೆಂದು ತನ್ನ ಅಪ್ತನ ಹೆಸರಿಗೆ ಕಾಗದವನ್ನು ಬರೆದು ಒಬ್ಬ ಮನುಷ್ಯನ ಕೈಲಿ ಕೊಟ್ಟು ಅವನನ್ನು ಮೈಸೂರಿಗೆ ಕಳುಹಿದನು. ಪೋಲೀಸರು ಅವನನ್ನು ಅನುಮಾನದ ಮೇಲೆ ಹಿಡಿದು ಅವನ ಹೆಸರು ಉದ್ಯೋಗ ಮೊದಲಾದುದನ್ನು ಬೆದರಿಸಿ ಕೇಳುವಲ್ಲಿ ನಿಜವಾದ ಸಂಗತಿಯನ್ನು ಹೇಳಿ ಕಾಗದವನ್ನು ಪೋಲೀಸರ ವಶಕ್ಕೊಟ್ಟುಬಿಟ್ಟನು. ಪೋಲೀಸರು ಅವನನ್ನು ಹಾಗೆಯೇ ಹಿಂತಿರುಗಿ ಯಲಿಯೂರಿಗೆ ಕರೆದುಕೊಂಡು ಹೋಗಿ ಅವನ ಮೂಲಕ ಇಬ್ರಾಹಿಮನನ್ನು ಗೊತ್ತುಮಾಡಿ ಸೆರೆ ಹಿಡಿದು ರಾಜಧಾನಿಗೆ ತಂದು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಿರುವರು.

ನೂತನ ವರ್ಷದ ಪ್ರಶಸ್ತಿಯನ್ನು ಪಡೆದಂಥ ಭಾರತೀಯರ ಹೆಸರುಗಳೆಲ್ಲವೂ ಕಳೆದ ಸೋಮವಾರ ಪ್ರಕಟವಾದುವು. ಇವರಲ್ಲಿ ನಮ್ಮ ಮೈಸೂರ ಸೀಮೆಯ ರೆವಿನ್ಯೂ ಕಮಿಷನರ್ ರಾಜಕಾರ್ಯಪ್ರವೀಣ ಮ॥ ಆಸೂರು ರಂಗಸ್ವಾಮಯ್ಯಂಗಾರ್ ಬಿ. ಎ., ಬಿ. ಎಲ್., ರವರಿಗೂ, ಸರ್ವೆ ಸೂಪರಿಂಟೆಂಡೆಂಟ್ ದೇಶಮುಖ ಶ್ಯಾಮರಾಯರಿಗೂ "ರಾವ್ ಬಹದ್ದೂರ್" ಪ್ರಶಸ್ತಿಯೂ, ಬೆಂಗಳೂರ ದಂಡಿನಲ್ಲಿ ಭಾರಿ ವರ್ತಕರಾಗಿ ಪ್ರಖ್ಯಾತರಾಗಿರುವ ಮೆ॥ ಹಾಜಿ ಇಸ್ಮಾಯಿಲ್ ಸೇಟ್‌ರವರಿಗೆ ಖಾನ್ ಬಹದ್ದೂರ್ ಪ್ರಶಸ್ತಿಯೂ ಲಭ್ಯವಾಗಿರುತ್ತವೆ. ಮ॥ ರಂಗಸ್ವಾಮಯ್ಯಂಗಾರ್ಯರು ೧೮೭೫ ರಲ್ಲಿ ತಾವು ೨೪ ವರ್ಷ ವಯಸ್ಕರಾಗಿದ್ದಾಗ್ಗೆ ಮೈಸೂರ ಸರ್ಕಾರದಲ್ಲಿ ಕೋಲಾರದ ಜುಡಿಷಿಯಲ್ ಅ॥ ಕಮಿಷನರ ಕೋರ್ಟಿನಲ್ಲಿ ಒಬ್ಬ ಲೇಖಕ (ರೈಟರ) ರಾಗಿ ಸೇರಿದರು. ಅಲ್ಲಿಂದ ಮುನ್ಸೀಫ್, ಸಬ್‌ಜಡ್ಜ್, ಅ॥ಕಂಟ್ರೋಲರ್, ಕಂಟ್ರೋಲರ್, ಡೆಪ್ಯುಟಿ ಕಮಿಷನರ್, ಪೋಲೀಸು ಇನ್ಸ್‌ಪೆಕ್ಟರ್ ಜನರಲ್ ಈ ಉದ್ಯೋಗಗಳನ್ನು ಬಹು ಸಮರ್ಥತೆಯಿಂದ ನಿರ್ವಹಿಸಿ, ಚೀಫ್ ಕೋರ್ಟಿನ ಜಡ್ಜಿಯರ ಸ್ಥಾನವನ್ನು ಹೊಂದಿ ಒಳ್ಳೇ ನ್ಯಾಯಶೀಲರೆಂದು ಖ್ಯಾತರಾಗಿ ಅಲ್ಲಿಂದ ರೆವಿನ್ಯೂ ಕಮಿಷನರ್ ಪದವಿಯನ್ನು ಹೊಂದಿ ರೆವಿನ್ಯೂ ವಿಚಾರದಲ್ಲಿ ನಿಪುಣರೆಂದೆನ್ನಿಸಿಕೊಂಡಿರುವರು. ಇವರಿಗೆ ೬೦ ವರ್ಷ ವಯಸ್ಸಾಗಿದ್ದಾಗ್ಯೂ ಒಳ್ಳೇ ಯುವಕರಿಗಿಂತಲೂ ಅತಿಶಯವಾದ ಚಟುವಟಿಕೆಯಿಂದಲೂ, ಸ್ಥಿರಬುದ್ಧಿಯಿಂದಲೂ ಕೆಲಸವನ್ನು ಮಾಡುತ್ತಿದ್ದಾರೆ. ಇಂಥ ಸಮರ್ಥರಿಗೆ ರಾವ್ ಬಹದ್ದೂರ್ ಪ್ರಶಸ್ತಿಯು ಲಭ್ಯವಾದುದು ಸಂತೋಷಕರವಾದುದಲ್ಲದೆ ಇದಕ್ಕಿಂತಲೂ ಮಿಗಿಲಾದ ಪ್ರಶಸ್ತಿಯು ಲಭ್ಯವಾಗಲೆಂದು ಇಚ್ಛೆಸುತ್ತೇವೆ.

ವರ್ತಮಾನ ಸಂಗ್ರಹ.

ಪ್ಯಾರಿಸ್ ನಗರದಲ್ಲಿ ಒಬ್ಬ ಆಕಾಶಯಾನಿಯು ವಿಮಾನದಿಂದ ೬೦ ಅಡಿಗಳ ಎತ್ತರದಿಂದ ಬಿದ್ದು ಮೃತನಾದನು.

ಹೊಸದಾಗಿ ಏರ್ಪಡಿಸಲ್ಪಡುವ ಮುಸ್ಲೀಂ ವಿದ್ಯಾಪೀಠಕ್ಕೆ ಹಿ॥ ಆಗಾಖಾನರವರು ೧ ಲಕ್ಷ ರೂ. ಗಳ ಚಂದಾವನ್ನು ಕೊಟ್ಟಿರುತ್ತಾರೆ.

ವೈಸ್‌ರಾಯ್ ದಂಪತಿಗಳು ವಸ್ತುಪ್ರದರ್ಶನವನ್ನೋಡಲೋಸುಗ ಈ ತಿಂಗಳ ಮಧ್ಯಭಾಗದಲ್ಲಿ ಅಲಹಾಬಾದಿಗೆ ಹೋಗುವವರಾಗಿರುವರು.

ಸರ್ ವಿಲಿಯಂ ವೆಡರ್‌ಬರ್ನರವರು ಕಳೆದ ತಾ॥ ೩ ರಲ್ಲಿ ಕಲ್ಕತ್ತಾಪಟ್ಟಣವನ್ನು ಸೇರಿದರು. ಅವರ ದೇಹಸ್ಥಿತಿಯು ಸ್ವಲ್ಪ ವ್ಯತ್ಯಾಸವಾಗಿದೆ. ತಾ॥ ೮ ರಲ್ಲಿ ಅಲ್ಲಿಂದ ಸೀಮೆಗೆ ಪ್ರಯಾಣ ಮಾಡುವವರಾಗಿದ್ದರು.

ಕೇಪ್‌ಕಾಲನಿಯಲ್ಲಿ ಹೊಗೆಬಂಡಿಯು ಲಂಡನ್ನಿನಿಂದ ಕ್ರಿಸ್ತ್‌ಮಸ್ ರಜವನ್ನನುಭವಿಸಲು ಬಂದಿದ್ದ ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಹೋಗುತ್ತಿರುವಾಗ್ಗೆ ಮಧ್ಯರಾತ್ರಿಯ ಅಂಧಕಾರದಲ್ಲಿ ಒಂದು ದಡದಮೇಲಿಂದುರುಳಿ ೧೫ ಜನರು ಸತ್ತರು. ಮತ್ತೂ ೪೦-೫೦ ಜನರು ಗಾಯಪಡೆದರು.

ಅಲಹಾಬಾದಿನಲ್ಲಿ ಕಳೆದ ತಿಂಗಳು ತಾ॥ ೨೯ ರಲ್ಲಿ ಜರಗಿದ ಮಹಿಳಾಪರಿಷತ್ತಿನಲ್ಲಿ ಅಧ್ಯಕ್ಷತೆಯನ್ನು ವಹಿಸಿದ್ದ ವಿಜಯನಗರದ ಮಹಾರಾಣಿಯವರು ಸ್ತ್ರೀವಿದ್ಯಾಭ್ಯಾಸದ ಅವಶ್ಯಕತೆಯನ್ನೂ, ತತ್ಸಂಬಂಧವಾದ ಇತರ ವಿಷಯಗಳನ್ನೂ ಕುರಿತು ಇಂಗ್ಲೀಷು ಭಾಷೆಯಲ್ಲಿ ಉಪನ್ಯಾಸ ಮಾಡಿದರು.

ರಷ್ಯಾದೇಶದಲ್ಲಿ ಒಂದುಕಡೆ ಒಂದು ರೋಮನ್‌ಕೆಥೋಲಿಕರ ದೇವಾಲಯದಲ್ಲಿ ಒಂದು ಕೂಟವು ಕೂಡಿದ್ದು, ಮಾತೆಲ್ಲಾ ಮುಗಿದನಂತರ ೩೨ ಜನರು ಒಂದು ಸೀಸೆಯಲ್ಲಿದ್ದ ಗಂಧಕದ್ರಾವಕ ಮಿಶ್ರವಾದ ಪದಾರ್ಥವನ್ನು ಮದ್ಯವೆಂದು ತಿಳಿದು ಕುಡಿದುಬಿಟ್ಟುದರಿಂದ ಕೂಡಲೇ ಎಲ್ಲರೂ ಅಸ್ವಸ್ಥರಾದರಂತೆ.

ಕಲಿಕರ್ಣನೆನಿಸಿರುವ ಆಂಡ್ರುಕಾರ್ನಿಗಿಯು ಯುದ್ಧಕಾಲದಲ್ಲಲ್ಲದೆ ಪ್ರಾಣಿರಕ್ಷಣಾರ್ಥವಾಗಿ ಧೈರ್ಯವನ್ನು ಪ್ರದರ್ಶಿಸತಕ್ಕವರಿಗೆ ಬಹುಮಾನವನ್ನು ಕೊಡುವುದಕ್ಕಾಗಿ ಒಂದು ಫಂಡನ್ನೇರ್ಪಡಿಸಲು ಅಮೇರಿಕಾದ ಸಂಯುಕ್ತಪ್ರಾಂತಗಳ ಅಂಬಾಸಿಡರ ವಶಕ್ಕೆ ೧೮೩೫೦೦೦೦ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿರುವನು.

ಸರ್ವಿಯಾದ ಕೌಂಟ್ ಮಿಲೊರಾಡ್ ರೇಬ್ ಎಚ್ ಎಂಬ ವಿದ್ಯಾರ್ಥಿಯು ಮೊಟಾರು ಬೈಸಕಲ್ಲಿನ ಮೇಲೆ ಪ್ರಪಂಚವನ್ನೆಲ್ಲ ೨ ವರ್ಷಗಳ ಕಾಲದಲ್ಲಿ ಸಂಚರಿಸಿಕೊಂಡು ಬಂದು ೬೦೦೦೦ ರೂ. ಗಳ ಬಹುಮಾನವನ್ನು ಪಡೆಯಯತ್ನಿಸಿ ಹೊರಟಿರುತ್ತಾನೆ. ಇವನು ದಿನ ೧ ಕ್ಕೆ ೧೦೦ ಮೈಲಿ ಪ್ರಕಾರ ಪ್ರಯಾಣಮಾಡುತ್ತಾನೆ. ಇಷ್ಟರಲ್ಲೇ ಕಲತ್ತಾಕ್ಕೆ ಬಂದು ಅಲ್ಲಿಂದ ಸಂಯುಕ್ತಪ್ರಾಂತಮಾರ್ಗವಾಗಿ ಪಶ್ಚಿಮ ಆಫ್ರಿಕಾ ಮತ್ತೂ ಆಸ್ಟ್ರೇಲಿಯಾಕ್ಕೆ ಹೋಗುವನು.

ಈಗ ಪಾರ್ಲಿಮೆಂಟ್ ಸಭೆಗೆ ಹೊಸದಾಗಿ ಮೆಂಬರುಗಳಾಗಿರತಕ್ಕವರಲ್ಲಿ ಬ್ಯಾರಿಸ್ಟರುಗಳು ಮತ್ತೂ ಸಾಲಿಸಿಟರು (ವಕೀಲರು) ಗಳು ೧೫; ಬ್ಯಾಂಕಿಟ್ಟಿರುವವರು, ವರ್ತಕರು ಮತ್ತೂ ಕಸಬುಗಾರರು ೧೬೦; ಗ್ರಂಥಕರ್ತರು, ವರ್ತಮಾನಪತ್ರಿಕಾಧಿಪರು, ಮಾಸಿಕಪುಸ್ತಕಕರ್ತರು, ಕೃಷಿಕರು ಮತ್ತೂ ಇತರ ಬೇಸಾಯಗಾರರು ೫೩; ಇಂಜನಿಯರುಗಳು, ಶಿಲ್ಪಿಗಳು ಮತ್ತೂ ಸರ್ವೆಯರುಗಳು ೪೦; ನಾವೆಯಲ್ಲೂ, ಸೇನೆಯಲ್ಲೂ ಕೆಲಸಮಾಡಿರುವವರು ೨೦; ಶ್ರೀಮಂತರ (ಪೀರ್ಸ್) ಮಕ್ಕಳು ೮೫; ಪಾದ್ರಿಗಳ ಮಕ್ಕಳು ೪೫; ರಾಜಧರ್ಮವನ್ನನುಸರಿಸಿದ ಮಂತ್ರಿಗಳು ೨; ಕೆಲ ವೈದ್ಯರುಗಳು ಮತ್ತೂ ಬಾಲ್ಯದಲ್ಲ ಗಣಿಗಳಲ್ಲೂ, ಕಾರ್ಯಾಲಯದಲ್ಲೂ ಕೆಲಸಕ್ಕೆ ಸೇರಿದ್ದಂಥ ಕಸಬುದಾರರು (ಲೇಬರು ಮೆಂಬರುಗಳು) ೪೨೦ ಜನರಿರುತ್ತಾರೆ. ೨೪ ವರ್ಷ ವಯಸ್ಸಿನ ವೈಕೌಂಟ್ ಉಲ್ಮರ್ ಎಂಬಾತನೇ ಎಲ್ಲ ಸಭಾಸ್ತರರಿಗಿಂತಲೂ ಚಿಕ್ಕವಯಸ್ಸಿನವನು. ಸಲ್‌ಬೋರ್ನಅರ್ಲ್ ರವರ ಮಗ ಮತ್ತೆ ೯ ಜನ ಮೆಂಬರುಗಳು ೩೦ ವರ್ಷ ವಯಸ್ಸಿನೊಳಗಿದ್ದಾರೆ. ೮೮ ವರ್ಷ ವಯಸ್ಸಿನ ಸ್ಯಾಮ್ಯುಯಲ್ ಯಂಗ್ ಎಂಬಾತನೇ ಎಲ್ಲ ಸಭಾಸ್ತರರಿಗಿಂತಲೂ ವಯಸ್ಕನಾದವನು. ೮೦ ವರ್ಷದವನೊಬ್ಬನೂ ೭೦ ವರ್ಷದ ೬ ಜನರೂ ಇರುತ್ತಾರೆ.

ಡಿಲ್ಲಿಯಲ್ಲಿ ಈ ವರ್ಷದ ಕೊನೆಗೆ ನಡೆಯುವ ಕಿರೀಟ ಧಾರಣ ಮಹೋತ್ಸವಕ್ಕೆ ವಿಶೇಷವಾಗಿ ಪ್ರೇಕ್ಷಕರು ಬರುವರೆಂಬ ನಿರೀಕ್ಷಣೆಯಿಂದ ಅಲ್ಲಿನ ಜನರು ಮನೆಗಳನ್ನು ಈಗಿನಿಂದಲೂ ಬಾಡಿಗೆಗೆ ಕುದುರಿಸಿಕೊಂಡು, ಆ ಸಮಯದಲ್ಲಿ ಹೆಚ್ಚಿನ ಬಾಡಿಗೆಗೆ ಕೊಟ್ಟು ಧನಸಂಪಾದನೆ ಮಾಡಬೇಕೆಂದು ಯತ್ನಿಸಿರುವರು.

ಬರಖ್‌ಪುರದಲ್ಲಿ ಒಬ್ಬ ಸೋಲ್ಜರು ಒಂದು ಮನೆಗೆ ನುಗ್ಗಿ ಕಳುವನ್ನು ಮಾಡಿದುದರಿಂದ ೧೦ ವಾರಗಳ ಕಾರಾಗೃಹಶಿಕ್ಷೆಗೆ ಗುರಿಯಾದನು. ರಂಗೂನಿನಲ್ಲಿ ಒಬ್ಬ ಸೋಲ್ಜರು ಕ್ರಿಸ್ತಮಸ್ ಹಬ್ಬದ ದಿನ ವಿಪರೀತವಾಗಿ ಕುಡಿದು ಬುದ್ಧಿ ತಪ್ಪಿ ಒಂದು ಮನೆಗೆ ನುಗ್ಗಿ ಗದ್ದಲ ಮಾಡಿದುದರಿಂದ ಪೋಲೀಸರ ಸೆರೆಯಲ್ಲಿದ್ದಾನೆ.

ಸೂರತ್ತಿನಲ್ಲಿ ಒಬ್ಬ ಬನಿಯಾ ಮಾರ್ವಾಡಿಯು ತನ್ನ ಹೆಂಡತಿಯನ್ನು ವ್ಯಭಿಚಾರದ ಸಂಶಯದ ಮೇಲೆ ಕೊಂದು, ಕಳ್ಳರು ತನ್ನ ಮನೆಗೆ ನುಗ್ಗಿ ಸೊತ್ತುಗಳನ್ನು ಅಪಹರಿಸಿದುದಲ್ಲದೆ, ತನ್ನ ಹೆಂಡತಿಯನ್ನೂ ಕೊಂದುಬಿಟ್ಟಿರುವರೆಂದೂ ಸುದ್ದಿಹುಟ್ಟಿಸಿದನು. ಕಡೆಗೆ ಅವನ ಕಾಪಟ್ಯವು ಹೊರಬಿದ್ದು ಈಗ ಅವನು ಪೋಲೀಸರ ಸೆರೆಯಲ್ಲಿದ್ದಾನೆ.

ಪಿಷಾವರು ಪ್ರಾಂತದಲ್ಲಿ ಕೆಲ ತುಂಟರು ಟಾಂಗಾದ ಮೇಲೆ ಬರುತ್ತಿದ್ದ ಅಂಚೆಯನ್ನು ತಡೆದು ೬ ಕುದುರೆಗಳನ್ನೂ ಒಬ್ಬ ಬಂಡಿ ಹೊಡೆಯುವವನನ್ನೂ ಸೆಳೆದುಕೊಂಡು ಹೋದರು. ಆದರೆ ಕುದುರೆಯ ಯಜಮಾನರು ಬಲಾತ್ಕಾರದಿಂದ ಆ ಕುದುರೆಗಳನ್ನು ತಾವು ಸೆಳೆದು ದಕ್ಕಿಸಿಕೊಂಡರು. ಬಂಡಿ ಹೊಡೆಯುವವನೂ ತಪ್ಪಿಸಿಕೊಂಡು ಬಂದನು.

ಲಂಕೆಗೆ ಸಮುದ್ರದ ಮೇಲೆ ಲೋಹಮಾರ್ಗವನ್ನು ಹಾಕುವುದಕ್ಕಾಗಿ ಪಾಂಬನ್ ಕಾಲುವೆ ಮೇಲೆ ಕಮಾನುಗಳ ಸೇತುವನ್ನು ಕಟ್ಟಬೇಕೆಂದು ಯೋಚಿಸಿದ್ದರು. ಆದರೆ ಮಳಲಿನ ಪ್ರದೇಶದಲ್ಲಿ ಸೇತುವನ್ನು ಕಟ್ಟುವುದು ಗಟ್ಟಿಯಲ್ಲವಾದುದೆಂದು ತೀರ್ಮಾನಿಸಿ, ಹೌರಾದ ಬಳಿಯಲ್ಲಿ ಗಂಗಾನದಿಗೆ ಕಟ್ಟಿರುವಂತೆ ತೇಲುವ ಸೇತುವನ್ನು ಕಟ್ಟಬೇಕೆಂದೂ ಅದಕ್ಕೆ ೪೦ ಕಣ್ಣುಗಳಿರಬೇಕೆಂದೂ ಗೊತ್ತುಮಾಡಿರುವರು.

ಮದ್ರಾಸಿನ ಮೈಲಾಪುರದೊಳಗೆ ತಮ್ಮ ಗೃಹದಲ್ಲಿ ಆ॥ ಡಿ॥ ಬ॥ ಸುಬ್ರಹ್ಮಣ್ಯಂರವರು ಕಳೆದ ತಾ॥ ೪ ರ ಬೆಳಿಗ್ಗೆ ಸ್ವರ್ಗಸ್ಥರಾದರು. ಇವರು ಬಡಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದರೂ ಚಿಕ್ಕಪ್ರಾಯದಲ್ಲೇ ವಿದ್ಯಾಭ್ಯಾಸ ಮಾಡಿ ೧೮ ನೆಯ ವಯಸ್ಸಿನಲ್ಲಿ ಕ್ರಿಸ್ತಮತವನ್ನುಸೇರಿ, ಬಿ.ಎ. ಬಿ. ಎಲ್. ಪರೀಕ್ಷೆಗಳಲ್ಲೂ, ಬ್ಯಾರಿಸ್ಟರ್ ಪರೀಕ್ಷೆಯಲ್ಲೂ ಉತ್ತೀರ್ಣರಾಗಿ ನ್ಯಾಯವಾದಿಗಳಾಗಿಯೂ, ನ್ಯಾಯಾಧೀಶರಾಗಿಯೂ ಇದ್ದು ಕಟ್ಟಕಡೆಗೆ ಅಫಿಷಲ್ ಟ್ರಸ್ಟ್-ಅಡ್ಮಿನಿಸ್ಟ್ರೇಟರ್ ಜನರಲ್ ಪದವಿಯಲ್ಲಿದ್ದರು.

೧೯೧೧-೧೨ ನೆಯ ವರ್ಷದಲ್ಲಿ ಭರತಖಂಡದ ಸರ್ಕಾರದವರು ಲೋಹಮಾರ್ಗದ ಅಭಿವೃದ್ಧಿಗಾಗಿ ೧॥ ಕೋಟಿ ರೂಪಾಯಿಗಳನ್ನು ವೆಚ್ಚಮಾಡುವವರಾಗಿದ್ದಾರೆ. ಇದರಿಂದ ಹೊಸದಾಗಿ ೧೨ ಮಾರ್ಗಗಳನ್ನು ಏರ್ಪಡಿಸುವುದಕ್ಕೆ ಸಾಧ್ಯವಾಗುವುದು, ಅದರಮೇಲೆ ಪಂಜಾಬು ಪಶ್ಚಿಮೋತ್ತರ ಲೋಹಮಾರ್ಗ ಸಂಘದವರು ಕೆಲ ನೂತನ ಮಾರ್ಗಗಳನ್ನು ಸ್ಥಾಪಿಸುವುದಕ್ಕೆ ಯತ್ನಿಸಿದ್ದಾರೆ. ಅದರಂತೆ ಮದ್ರಾಸಾಧಿಪತ್ಯದಲ್ಲಿ ರೇಪೂರು-ವಿಜಯನಗರಕ್ಕೆ ಉತ್ತರದಲ್ಲಿ ೩೩ ಮೈಲಿಗಳ ಒಂದು ಮಾರ್ಗವು ಸ್ಥಾಪಿಸಲ್ಪಡುವುದು.

ಮದ್ರಾಸಿನ ಪೋಲೀಸ್ ಇನ್ಸ್‌ಪೆಕ್ಟರಲ್ಲಿ ಅತ್ಯಂತ ಸತ್ಯಸಂಧರೆಂದೂ, ಖಂಡಿತವಾದಿಯೆಂದೂ, ನಿರ್ದಾಕ್ಷಿಣ್ಯಪರನೆಂದೂ ಪ್ರಸಿದ್ಧಿಗೊಂಡು, ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್ ಅಧಿಕಾರದಲ್ಲಿದ್ದ ಮಿ॥ ಬ್ರಾಡ್‌ಬರಿಯವರು ಕಳೆದವಾರ ತೀರಿಕೊಂಡರು. ಇವರು ಅಂತಹ ಗುಣಾಢ್ಯರಾಗಿದ್ದುದರಿಂದಲೇ ಪೋಲೀಸು ಕಮಿಷನರು-ಡಿ॥ ಕಮಿಷನರು-ಇನ್ಸ್‌ಪೆಕ್ಟರು-ಸಾರ್ಜೆಂಟರು-ಮೊದಲಾದವರೆಲ್ಲಾ ಅಶ್ವಾರೂಢರಾಗಿ ತಮ್ಮ ಪೋಲೀಸ್ ಸೈನ್ಯದೊಡನೆ ಮಿ॥ ಬ್ರಾಡ್‌ಬರಿಯವರ ಶವದಜತೆಗೆ ಸ್ಮಶಾನದವರೆಗೆ ಹೋಗಿ ಗೌರವಿಸಿ ಬಂದರು.

ಕಲಿಭೀಮನೆಂದು ವಿಖ್ಯಾತವಾಗಿರುವ ಪ್ರೊಫೆಸರ್ ರಾಮಮೂರ್ತಿನಾಯುಡುಯವರು ಅಲಹಾಬಾದಿನಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದಾಗ ಅಸ್ಮತ್ತುಲ್ಲಾ ಎಂಬ ಡಾಕ್ಟರು ಇವರನ್ನು ಮಲ್ಲಗಾಳಗಕ್ಕೆ ಕರೆದನು. ಈ ಕಾಳಗವು ವಸ್ತುಪ್ರದರ್ಶನಾಲಯದ ಬಳಿಯಲ್ಲಿ ಜರುಗುವುದೆಂದು ತಿಳಿದು ಸಾವಿರಾರು ಪ್ರಜೆಗಳು ಟಿಕೀಟನ್ನು ಪಡೆದು ಅಲ್ಲಿಗೆ ಸೇರಿದರು. ಆಗ ರಾಮಮೂರ್ತಿಯವರು ತಮ್ಮ ಶಿಷ್ಯರಮೂಲಕವಾಗಿ ಆ ಡಾಕ್ಟರಿಗೆ “ನೀವು ಈ ಕಬ್ಬಿಣದ ಸರಪಳಿಯನ್ನು ಕಿತ್ತುಬಿಟ್ಟರೆ ನಿಮಗೆ ೧ಸಾವಿರ ರೂ. ಗಳನ್ನು ಪಂಧ್ಯವಾಗಿ ಕೊಡುವೆನು” ಎಂದು ಹೇಳಿ ಕಳುಹಿದರು. ಡಾಕ್ಟರು ಸರಪಳಿಯನ್ನು ಕೀಳದೆ ಹೋದರು. ಆಗ ರಾಮಮೂರ್ತಿಯ ಶಿಷ್ಯರು-ಅದು ಹೋಗಲಿ, ನಮ್ಮಲ್ಲಿ ಯಾರಾದರೂ ಈ ಸರಪಳಿಯನ್ನು ಕಿತ್ತುಹಾಕಿದರೆ ನೀವು ೧ಸಾವಿರ ರೂ. ಗಳನ್ನು ಕೊಡುತ್ತೀರಾ? ಎಂದು ಕೇಳಲು, ಅದಕ್ಕೂ ಅವನು ಒಪ್ಪಲಿಲ್ಲ. ಬಳಿಕ ಡಾಕ್ಟರು ೧೨ ಕುದುರೆಗಳ ಶಕ್ತಿಯುಳ್ಳ ಮೋಟಾರನ್ನು ತಡೆಯುವುದಕ್ಕೆ ಪ್ರಯತ್ನಿಸಿ, ಅದನ್ನು ತಡೆಯಲಾರದೆ ಕೆಲವು ಗಜಗಳದೂರ ಬಂಡಿಯಿಂದೆಳೆಸಿಕೊಂಡು ಹೋಗಬೇಕಾಯಿತು. ಈ ಕಾರಣದಿಂದ ದೊಡ್ಡ ಸಭೆಯಲ್ಲಿ ಡಾಕ್ಟರಿಗೆ ತೇಜೋವಧೆಯಾಯಿತಂತೆ.

ಈಗಿನ ನಮ್ಮ ಚಕ್ರವರ್ತಿಯವರು ತಮ್ಮ ಬಾಲ್ಯಾರಭ್ಯದಿಂದಲೂ ಭರತಖಂಡದ ಪ್ರಜೆಗಳ ಮೇಲೆ ವಿಶೇಷ ವಾತ್ಸಲ್ಯವುಳ್ಳವರಾಗಿದ್ದರು. ಈಗ ತಾವು ಆಂಗ್ಲಸಾಮ್ರಾಜ್ಯಕ್ಕೆಲ್ಲಾ ಅಧಿಪತಿಗಳಾಗಿರುವುದರಿಂದ ತಮ್ಮ ಕಿರೀಟಧಾರಣ ಮಹೋತ್ಸವವನ್ನು ಇಲ್ಲಿನ ದಿಲ್ಲಿ ಪಟ್ಟಣದಲ್ಲಿ ನೆರವೇರಿಸುವುದಕ್ಕೆ ತಮ್ಮ ಮನೋಭೀಷ್ಟವನ್ನು ಅವರೇ ವ್ಯಕ್ತಪಡಿಸುವುದರಿಂದ ಅವರಿಗೆ ನಮ್ಮಾದೇಶದ ಮೇಲಿರುವ ಅನುರಾಗವು ಚೆನ್ನಾಗಿ ವ್ಯಕ್ತವಾಗಿರುವುದು. ಇವರು ೨೧ ನೆಯ ವಯಸ್ಸಿನವರಾಗಿರುವಾಗ ೧೮೮೬ ನೆಯ ವರ್ಷದಲ್ಲಿ ಒಂದು ದಿವಸ ಲಂಡನ್ ಪಟ್ಟಣದಲ್ಲಿ ಜರುಗಿದ “ಇಂಡಿಯನ್ ಕಲೋನಿಯಲ್” ವಸ್ತುಪ್ರದರ್ಶನಾಲಯಕ್ಕೆ ತಮ್ಮ ಸಹೋದರರಾದ ಡ್ಯೂಕ್ ಆಫ್ ಕ್ಲಾರೆನ್ಸ್-ಡ್ಯೂಕ್ ಆಫ್ ಕೇಂಬ್ರಿಡ್ಜ್‌ರವರೊಡನೆ ಹೋಗಿದ್ದು, ಅಲ್ಲಿ ಪ್ರದರ್ಶನಕ್ಕಿಟ್ಟಿದ್ದ ಪರಿಪೂರ್ಣ ಪ್ರಮಾಣದಲ್ಲಿದ್ದ ಭಾರತೀಯ ಪ್ರತಿಮೆಗಳನ್ನು ನೋಡಿ, ಅತ್ಯಂತವಾಗಿ ಸಂತೋಷಿಸಿ, ಮಗುವನ್ನು ತನ್ನ ಕೈಯಲ್ಲಿ ಹಿಡಿದುಕೊಂಡಂತಿದ್ದ ಒಂದು ಬೊಂಬಾಯಿ ಬ್ರಾಹ್ಮಣಸ್ತ್ರೀ ವಿಗ್ರಹದ ತಲೆಯಮೇಲೆ ಮುಸುಕು ಹಾಕಲ್ಪಟ್ಟಿದ್ದುದನ್ನು ನೋಡಿ, ಅದನ್ನು ಪೂರ್ಣವಾಗಿ ಓರೆಮಾಡಿ, “ಇದು ನಿಜವಾಗಿಯೂ ಸುಂದರವಾದ ಮುಖವು” ಎಂದು ಮುಗುಳ್ನಗೆಯಿಂದ ನುಡಿದಿದ್ದರಂತೆ.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು. ಪ. ಪ್ರ.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ !

“ಧರ್ಮಾಧಿಕಾರಿ ಪಂಡಿತರತ್ನಂ ಸುಂದರಶಾಸ್ತ್ರಿ” ಎಂಬ ಹೆಸರಿನ ರುಜುವಿರುವ ಒಂದು ನೋಟೀಸಿನಲ್ಲಿ ಸಮುದ್ರಯಾನಮಾಡಿದವರಿಗೆ ಪ್ರಾಯಶ್ಚಿತ್ತವಾದಾಗ್ಯೂ ಸಹ ಅವರು ಸವ್ಯವಹಾರಕ್ಕೆ ಅನರ್ಹರೆಂದು ಶಾಸ್ತ್ರಗಳ ಅಭಿಪ್ರಾಯವೆಂದು ಪ್ರಕಟಿಸಲ್ಪಟ್ಟಿದೆಯಷ್ಟೆ.

ಆ ನೋಟೀಸನ್ನು ಓದಿದವರಿಗೆ ಬರಬಹುದಾದಂಥಾ “ಶಾಸ್ತ್ರವಿರುದ್ಧವಾದ” ಈ ಮೇಲಿನ ಅಭಿಪ್ರಾಯವನ್ನು ಹೋಗಲಾಡಿಸುವದಕ್ಕೋಸ್ಕರ ನಾನೂ ನನ್ನ ಕೆಲವು ಮಿತ್ರರೂ ಸಹಾ ಆ ನೋಟೀಸಿನಲ್ಲಿ ಹೇಳಿರುವದು ಶಾಸ್ತ್ರಗಳಿಗೆ ಸರ್ವಥಾ ವಿರುದ್ಧವೆಂದೂ, ಸಮುದ್ರಯಾನದಿಂದ ಲೇಶಮಾತ್ರವೂ ದೋಷ ಬರುವದಿಲ್ಲವೆಂದೂ, ಸದರಿ ಆ ಶಾಸ್ತ್ರಿಗಳ ಮತ್ತು ಇತರ ಯಾವಜನಗಳ ಸಂಗಡ, ಸರ್ವಜನ ಸಮಕ್ಷವಾಗಿ ವಾದವನ್ನು ನಡಿಸುವುದಕ್ಕೆ ಸಿದ್ಧರಾಗಿದ್ದೇವೆ.

ಈ ವಿಷಯದಲ್ಲಿ ವಾದವನ್ನು ನಡಿಸಲು ಸಿದ್ಧರಾಗಿರುವವರು ಮೈಸೂರು ಥಿಯಸಾಫಿಕಲ್‌ಸೊಸೈಟಿ ಸೆಕ್ರೆಟರಿಯವರಿಗೆ ತಿಳಿಸಿದಲ್ಲಿ ಅವರು ಇದಕ್ಕೆ ಏರ್ಪಾಡನ್ನು ಮಾಡುವುದಕ್ಕೆ ದಯವಿಟ್ಟು ಒಪ್ಪಿಕೊಂಡಿರುತ್ತಾರೆ.

ಎ. ವೆಂಕಟರಾಮಾ ಪಂಡಿತ್.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ದೇಶಸಂಚಾರ.

ಮಹಾಸ್ವಾಮಿಗಳವರ ಖಾಸಸ್ವಾರಿಯು ಸಕಲ ಅಜಬಾಬು ಸಮೇತ ಬೆಳಗಾಂ ಜಿಲ್ಲ ಅಥಣಿ ಮೊಕ್ಕಾಂನಿಂದ ಕಳೆದ ಮಾಹೆ ತಾ॥ ೨೩ ನೇ ಶುಕ್ರವಾರ ಪ್ರಾತಃಕಾಲ ೬ ಗಂಟೆಯಿಂದ ಬಿಜಯಮಾಡಿ ಕೃಷ್ಣಾತೀರದಲ್ಲಿರುವ ದರೂರು ಮೊಕ್ಕಾಮಿಗೆ ದಯಮಾಡಿಸಿ, ಅಲ್ಲಿನ ಭಕ್ತರ ಪ್ರಾರ್ಥನೆಯಂತೆ ಎರಡು ದಿವಸಗಳು ಮೊಕ್ಕಾಂ ಆಗಿ, ಸಮಸ್ತ ಭಕ್ತಾದಿಗಳಿಂದ ಕಪ್ಪಕಾಣಿಕೆಗಳನ್ನೊಪ್ಪಿಸಿಕೊಂಡು ತದ್ಭಕ್ತಾದಿಗಳಿಗೆ ಆಶೀರ್ವಾದವಂ ದಯಪಾಲಿಸಿ, ೨೬ ನೇ ತಾರೀಖಿನ ಸೋಮವಾರ ಪ್ರಾತಃಕಾಲ ೯ ಗಂಟೆಗೆ ಸಂಸ್ಥಾನ ಸಾಂಗ್ಲಿ ಇಲಾಖಾಪೈಕಿ ತಾಲ್ಲೂಕು ಕೇರವಾಳ ಮೊಕ್ಕಾಮಿಗೆ ದಿಗ್ವಿಜಯಂಗೈಸಿದ್ದರಿಂದ ಸ್ಥಳದ ಮತ್ತು ಅಜೂಬಾಜು ಸ್ಥಳದ ಭಕ್ತಮಾಹೇಶ್ವರರುಗಳು ಹತ್ತು ಸಾವಿರದವರೆಗೂ ಸೇರಿ ಅಡ್ಡಪಾಲಿಕಿ, ಪಂಚಕಲಶ, ಮಕರತೋರಣ, ಹಗಲುದೀವಟಿಗೆ, ಪಂಚದೀವಟಿಗೆ ಮುಂತಾದ ಸಮಸ್ತ ಬಿರುದಾವಳಿ ಸಮೇತ ಉತ್ಸವ ನಡೆಸಿದ್ದಲ್ಲದೆ ತಾಲ್ಲೂಕು ಅಮಲ್ದಾರರು ಫೌಜುದಾರರು ಮುಂತಾದ ಆಫೀಸರು ಸರಿಯಾದ ಪೋಲೀಸ್ ಅರೇಂಜ್‌ಮೆಂಟ್ ಮಾಡಿಸಿ ಬಹು ಮರ್ಯಾದೆಯೊಡನೆ ಮಹಾಸಂಸ್ಥಾನದ ಬ್ರಾಂಚು ಮಠವಾದ ವಿರಕ್ತಮಠದಲ್ಲಿ ಹಂದರ ಚಪ್ಪರ ಸದರುಮಂಟಪ ಶೃಂಗರಿಸಿರ್ದ ಸಿಂಹಪೀಠದೋಳ್ ಮಹಾಸ್ವಾಮಿಗಳು ಮುಹೂರ್ತಂಗೈದನಂತರ ಮಂಗಲ ಅಧ್ಯಯನ ನಡೆದು ಮಹಾಸ್ವಾಮಿಗಳವರ ಅಪ್ಪಣೆಯನ್ನು ಕೈಕೊಂಡು ಆಫೀಸರವರು ತೆರಳಿದರು. ಭಕ್ತಮಾಹೇಶ್ವರರುಂ ಅಪ್ಪಣೆ ಪಡೆದರು. ಈ ತೀರದಾಳು ಗ್ರಾಮದ ಮತ್ತೂ ಈ ಪ್ರಾಂತದ ಅಶೇಷ ಭಕ್ತಾದಿಗಳಿಗೆ ದರ್ಶನಾಶೀರ್ವಾದವನ್ನಿತ್ತು ೩-೪ ದಿವಸಗಳಲ್ಲಿ ರಬಕಾವಿ ಮೊಕ್ಕಾಮಿಗೆ ದಯಮಾಡಿಸಿ ಅಲ್ಲಿಂದ ಒಂದು ವಾರದೊಳಗಾಗಿ ಮಹಾಲಿಂಗಪುರ ಮೊಕ್ಕಾಮಿಗೆ ದಯಮಾಡಿಸುತ್ತೆ.

ಲಿಂಗಪ್ಪ, ಏಜಂಟ್.

ದಳವಾಯಿಯವರ ಆಂಗ್ಲೋಸ್ಯಾನ್ಸ್ಕ್ರಿಟ್ ಸ್ಕೂಲ್ ಮೈಸೂರು.

“ಶ್ರೀಮಹಾಲಕ್ಷ್ಮೀ ಪ್ರಾಸಾದಿಕ ಸಿರಹಟ್ಟಿ ಕರ್ನಾಟಕ ಸಂಗೀತನಾಟಕ ಕಂಪೆನಿ” ಎಂಬ ಹೆಸರುಳ್ಳ ಧಾರ್ವಾಡಜಿಲ್ಲಾ ಸಿರಹಟ್ಟಿ ಗ್ರಾಮದ ನಾಟಕ ಕಂಪೆನಿಯವರು ಈಗ ಕೆಲವುದಿವಸಗಳಿಂದ ಈ ಮೈಸೂರು ರಾಜಧಾನಿಯಲ್ಲಿ ವಿವೇಕಾಭಿವರ್ಧಕವಾದ ನಾಟಕಗಳನ್ನು ಆಡಿ ತೋರಿಸುತ್ತಾ ಜನರ ಪ್ರೀತಿಗೌರವಗಳಿಗೆ ಪಾತ್ರರಾಗಿರುತ್ತಾರಷ್ಟೆ. ಈ ಕಂಪೆನಿಯ ಪ್ರೊಪ್ರೈಟರಾದ ಮ॥ ಎಚ್. ವೆಂಕೋಬರಾಯರವರು ತಾ॥ ೨೪-೧೨-೧೦ ನೇ ಶನಿವಾರದ ದಿನ ಟೌನ್‌ಹಾಲಿನಲ್ಲಿ “ಭೋಜಪ್ರಬಂಧ” ವೆಂಬ ನಾಟಕವನ್ನು ಆಡಿಸಿ, ಉತ್ಪತ್ತಿಯಾದ ಮೊಬಲಗಿನಲ್ಲಿ ಖರ್ಚು ಜಾತಾ ಉಳಿದ ೮೧ ರೂಪಾಯಿಗಳನ್ನು ಮೇಲ್ಕಂಡ ಸ್ಕೂಲ್ ಕಟ್ಟಡಕ್ಕೋಸ್ಕರ ಕೊಟ್ಟಿರುತ್ತಾರೆ. ನಾಟಕ ಕಂಪೆನಿಯವರು ಕೇವಲ ಸ್ವಪ್ರಯೋಜನಾರ್ಥವಾಗಿ ದೇಶಸಂಚಾರ ಮಾಡುವವರಾದಾಗ್ಯೂ, ಈ ಕಂಪೆನಿಯವರು ವಿದ್ಯಾಭಿವೃದ್ಧಿಗೆ ಅನುಕೂಲತೆಯನ್ನು ಉಂಟುಮಾಡುವದು ಪ್ರತಿಯೊಬ್ಬರ ಕರ್ತವ್ಯವೆಂದು ಭಾವಿಸಿ, ಈ ರೀತಿಯಾಗಿ ಸಹಾಯ ಮಾಡಿರುವುದಕ್ಕಾಗಿ ಇವರಿಗೂ ಈ ಸಂದರ್ಭದಲ್ಲಿ ಟೌನ್‌ಹಾಲನ್ನು ಬಾಡಿಗೆಯಿಲ್ಲದೆ ಉಪಯೋಗಿಸಿಕೊಳ್ಳಲು ಅಪ್ಪಣೆ ಮಾಡಿದ್ದಕ್ಕಾಗಿ ಮ॥ ರಾ॥ ವೈಸ್ ಪ್ರಸಿಡೆಂಟ್ ಸಾಹೇಬರವರಿಗೂ, ಪ್ರಸಿದ್ಧಿಪತ್ರಿಕೆ ಮುಂತಾದ್ದನ್ನು ಉಚಿತವಾಗಿ ಅಚ್ಚುಹಾಕಿಸಿ ಕೊಟ್ಟದ್ದಕ್ಕಾಗಿ ಮ॥ ಕೆ. ನರಸಸಿಂಹಯ್ಯ ಕಂಪೆನಿಯವರಿಗೂ ಸ್ಕೂಲಿನವರು ಕೃತಜ್ಞರಾಗಿರುತ್ತೇವೆ.

ಇದಕ್ಕೆ ಮುಂಚೆ ಬೊಂಬಾಯಿನ “ರಾಯಲ್ ಬಯಾಸ್ಕೋಪ್” ಕಂಪೆನಿಯ ರಿಪ್ರಸೆಂಟೇಟೀವ್ ಮ॥ ಬಿ. ವಿ. ಅವರ್ಧಾ ಯವರು ಇದೇ ರೀತಿಯಾಗಿ ಒಂದು ಪ್ರದರ್ಶನದ ಉತ್ಪತ್ತಿಯನ್ನು ಸ್ಕೂಲಿಗೋಸ್ಕರ ಕೊಟ್ಟಿರತಕ್ಕದ್ದನ್ನೂ ಮತ್ತೂ ಇತರ ದೊಡ್ಡಮನುಷ್ಯರುಗಳು ಸಹಾಯ ಮಾಡಿರತಕ್ಕದ್ದನ್ನೂ ಸಹ ಹಿಂದೆಯೇ ಪ್ರಕಟಿಸಿ ಇರುತ್ತೇವೆ. ಈಚೆಗೆ, ನಮ್ಮ ಶ್ರೀಮನ್ಮಹಾರಾಜರವರಿಂದ “ಧರ್ಮಪ್ರವೃತ್ತ” ರೆಂಬ ಬಿರುದನ್ನು ಪಡೆದಿದ್ದ ಮ॥ ರಾ॥ ಲೇಟ್ ಗುಂಜಾ ನರಸಿಹ್ಮಯ್ಯನವರು, ಸ್ಕೂಲಿಗೋಸ್ಕರ ೨೦೦೦ ಅಡಿ ಮರವನ್ನು ಕೊಟ್ಟರಲ್ಲದೆ, ಮ॥ ರಾ॥ ಸಾಹುಕಾರ್ ಬನುಮಯ್ಯನವರು ಡಿಟೋ ಮರವನ್ನು ಸ್ವಂತವಾಗಿ ರೂ. ೪೧೫-೧೪-೩ ನ್ನು ಕೊಟ್ಟು ಇಲ್ಲಿಗೆ ಸಾಗಿಸಿಕೊಟ್ಟಿರುತ್ತಾರೆ. ಮತ್ತೂ ಹಿಂದೆ ಈ ಸ್ಕೂಲಿನಲ್ಲಿ ಓದುತ್ತಿದ್ದ ಶ್ರೀರಂಗಪಟ್ಟಣದ ತಾ॥ ಕ್ಯಾತನಹಳ್ಳಿಯಲ್ಲಿ ಇರುವ ಜಮೀನ್ದಾರ್ ಮ॥ ರಾ॥ ಕೆ. ಎ. ತಿರುಮಲಾಚಾರ್ ಮೊದಲಾದವರು ಸಹ ಕೆಲವು ಸಹಾಯಗಳನ್ನು ಮಾಡಿರುತ್ತಾರೆ.

ಮುಖ್ಯವಾಗಿ ಇದು ಬಹಳ ದೊಡ್ಡಕೆಲಸವಾಗಿದೆ. ಸದ್ಯಕ್ಕೆ ಸ್ಕೂಲಿನಲ್ಲಿ ೨೫೦-೩೦೦ ಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾಯಿದ್ದಾರೆ. ಸರಿಯಾದ ಕಟ್ಟಡವಾದರೆ ಇನ್ನೂ ಹೆಚ್ಚು ಜನರು ಸ್ಕೂಲಿಗೆ ಬರತಕ್ಕವರಾಗಿದ್ದಾರೆ. ಉದ್ದೇಶ ಮಾಡಿರತಕ್ಕ ಕಟ್ಟಡಕ್ಕೆ (೧೫೦೦೦) ರೂಪಾಯಿಗಳು ಅಂದಾಜಾಗಿರುತ್ತವೆ. ಇಷ್ಟು ಭಾರೀ ಮೊಬಲಗನ್ನು ಒದಗಿಸುವ ವಿಚಾರದಲ್ಲಿ ಯಾರು ಎಷ್ಟು ಸಹಾಯವನ್ನು ಕೊಟ್ಟಾಗ್ಯೂ ಕೃತಜ್ಞತಾ ಪುರಸ್ಸರವಾಗಿ ಸ್ವೀಕರಿಸುತ್ತೇವೆ.

ಅಂತೂ ಯಾರೊಬ್ಬರೂ-“ನಮ್ಮನೇ ಗೊತ್ತಾಗಿ ಕೇಳಿಲ್ಲವಷ್ಟೆ” ಎಂದು ಯೋಚಿಸದೆ, ಎಲ್ಲರೂ ತಮ್ಮ ತಮ್ಮ ಕೈಯಲ್ಲಾಗುವ ಸಹಾಯವನ್ನು ಮಾಡಿ, ಶಾಶ್ವತವಾದ ಧರ್ಮಕೀರ್ತಿಗಳಿಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

ಎನ್. ಕೃಷ್ಣರಾವ್,
ತಾ॥ ೩-೧-೧೯೧೧. ಹೆಡ್ಡ್ ಮಾಸ್ಟರ್.

ಮಹನೀಯರ ಅವಸಾನವು.

ಬೆಳಗಾಂ ಡಿ॥ ಸವದತ್ತಿಯಲ್ಲಿ ಬೆಟ್ಟಸೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಗುರುಸಿದ್ಧಸ್ವಾಮಿದೇಶಿಕೇಂದ್ರ ಪಟ್ಟದಾರ್ಯರು ಕಳೆದ ಕಾರ್ತಿಕ ಶು॥ ೫ ಯ ದಿವಸ ಶಿವೈಕ್ಯರಾದರು. ಈ ಗುರುವರ್ಯರು ಇಂದ್ರಿಯಜಯವನ್ನು ಮಾಡಿದವರಾಗಿಯೂ, ವೈರಾಗ್ಯಶೀಲರಾಗಿಯೂ, ಧರ್ಮನಿಷ್ಠರಾಗಿಯೂ

ಶಾಂತಿಮೂರ್ತಿಗಳಾಗಿಯೂ, ಸದಾಚಾರಪರಾಯಣರಾಗಿಯೂ, ಉತ್ತಮ ಬೋಧಕರಾಗಿಯೂ, ಮುಖ್ಯವಾಗಿ ನುಡಿಯಂತೆ ನಡೆಯುವವರಾಗಿಯೂ ಇದ್ದರು. ಇಷ್ಟೇ ಅಲ್ಲದೆ ಇವರು ಯಾವುದೊಂದು ಶಾಲೆಯಲ್ಲಿಯೂ ಅಭ್ಯಾಸಮಾಡಿದವರಲ್ಲವಾದರೂ ಸಂಗೀತಪ್ರವೀಣರಾಗಿಯೂ, ಚಿತ್ರಕಲಾಕುಶಲರಾಗಿಯೂ, ಕರ್ನಾಟಕ-ಮಹಾರಾಷ್ಟ್ರ-ಸಂಸ್ಕೃತ ಹಿಂದೂಸ್ಥಾನಿ-ಭಾಷೆಗಳನ್ನು ಅರಿತವರಾಗಿಯೂ ಇದ್ದರು. ವೇದಾಂತಸಿದ್ಧಾಂತಗಳ ತತ್ತ್ವವನ್ನು ಹಿಡಿದು ಸಮಯೋಚಿತವಾದ ಪ್ರಮಾಣಗಳನ್ನು ಜೋಡಿಸಿ ಶ್ರೋತೃವೃಂದದ ಮನಸ್ಸಂಶಯೋನ್ಮೂಲನವಾಗುವಂತೆ ಅವರು ಮಾಡುತ್ತಿದ್ದ ಬೋಧೆಯು ಎಂಥವರನ್ನೂ ಭಕ್ತಿತತ್ಪರರನ್ನಾಗಿಯೂ ಜ್ಞಾನವಂತರನ್ನಾಗಿಯೂ ಮಾಡಲು ಸಮರ್ಥವಾಗಿರುತ್ತಿತ್ತು. ಇವರ ಪರಿಚಯವಿದ್ದ ಯಾವೊಬ್ಬ ಮನುಷ್ಯನೂ ಅವರನ್ನು ಸಾಕ್ಷಾತ್ಪರಶಿವಾವತಾರವೆಂದೇ ತಿಳಿಯುತ್ತಿದ್ದನು. ಕೈ. ಸಿರಸಂಗಿ ದೇಶಾಯಿರವರು ಇವರನ್ನು ಇಷ್ಟದೈವದಂತೆ ಭಾವಿಸಿದ್ದರು. ೧೦ ಸಾವಿರ ರೂ. ಗಳವರೆಗೆ ವೆಚ್ಚಮಾಡಿ ಅವರು ಸಾಗಿಸಿದ ಕಾಶೀಯಾತ್ರೆಯ ಕಾಲದಲ್ಲಿ ಈ ಸ್ವಾಮಿಗಳನ್ನು ಸಂಗಡಲೇ ಕರಕೊಂಡು ಪ್ರಯಾಣ ಮಾಡಿದ್ದರು. ಮತ್ತೂ ಸದರಿ ದೇಸಾಯರು ತಮ್ಮ ಅವಸಾನಕಾಲಕ್ಕೆ ಈ ಸ್ವಾಮಿಗಳನ್ನು ದರ್ಶನಾರ್ಥವಾಗಿ ತಮ್ಮಲ್ಲಿಗೆ ಬರಮಾಡಿಕೊಂಡರು. ಆಗ್ಗೆ ಸ್ವಾಮಿಗಳು ತಮ್ಮ ಆ ಭಕ್ತಿವಂತ ಶಿಷ್ಯರಿಗೆ ಪಾರಮಾರ್ಥಿಕಸಾಧನದ ವಿಷಯದಲ್ಲಿ ತಕ್ಕ ಎಚ್ಚರಿಕೆಯನ್ನು ಹೇಳಿ, ಸರ್ವಬಂಧಗಳನ್ನೂ ಮನಸ್ಸಿನಿಂದ ತೊಲಗಿಸಿ, ಶಿವೈಕಾಯತ್ತಚಿತ್ತರಾಗಿರಬೇಕೆಂದು ಬೋಧಿಸಿ, ಹಾಗೆಯೇ ಮಾಡಿಸಿದರು. ಆದರೆ ಆ ತಮ್ಮ ನಂಬುಗೆಯ ಸ್ವಾಮಿಗಳಿಗೆ ಮಠದ ದಾಸೋಹದ ಕಾರ್ಯದ ಸಹಾಯಕ್ಕಾಗಿ ಏನಾದರೊಂದಿಷ್ಟು ಭೂಮಿಯನ್ನು ದಾನಮಾಡಿ ಮುಕ್ತರಾಗಬೇಕೆಂಬ ಇಚ್ಛೆಯು ದೇಶಾಯರಿಗೆ ಹುಟ್ಟಲು, ಆ ಸಂಕಲ್ಪವನ್ನು ಸ್ವಾಮಿಗಳಿಗೆ ತಿಳಿಸಿದರು. ಅದಕ್ಕೆ ಇವರು—"ಅಯ್ಯಾ! ಮನಸ್ಸಿನ ಎಲ್ಲ ಬಂಧವನ್ನೂ ಕಳೆಯಬೇಕೆಂದು ಈಗಲೇ ನಾನು ನಿನಗೆ ಬೋಧಿಸಿರುವೆನು. ನನಗೆ ಅಂಥ ಬಂಧವನ್ನು ತೊಡಗಿಸುವದಕ್ಕೇ ನೀನು ಯೋಚಿಸಬಾರದು." ಎಂದು ಹೇಳಿ, ತಮ್ಮ ಘನತರ ವಿರತಿಯನ್ನು ಪ್ರದರ್ಶನಪಡಿಸಿದರು. ಈ ಸ್ವಾಮಿಗಳ ಮತಾಭಿಮಾನವು ಅಸಾಧಾರಣವಾಗಿತ್ತು. ತಮ್ಮ ಭಕ್ತರ ಪರಿಪಾಲನಾರ್ಥವಾಗಿ ಮನಮುಟ್ಟಿ ಕೆಲಸ ಮಾಡುತ್ತಿದ್ದರು. ತಮ್ಮ ಮಠದಲ್ಲೇ ಒಂದು ಜ್ಯೋತಿಷ ಪಾಠಶಾಲೆಯನ್ನು ಸ್ಥಾಪಿಸಿ, ತಕ್ಕ ಅಧ್ಯಾಪಕರನ್ನಿಟ್ಟು, ವಿದ್ಯಾರ್ಥಿಗಳಿಗೆ ಅನ್ನವಸ್ತ್ರವನ್ನಿತ್ತು, ಹೀಗೆ ಭಕ್ತಕಲ್ಯಾಣವನ್ನು ಮಾಡುತ್ತಿದ್ದರು. ಮತ್ತೂ ಕೆಲವು ತಿಂಗಳಿಂದ ಪುರಾಣಶ್ರವಣವನ್ನು ಮಾಡಿಸುತ್ತಿದ್ದು ೧೫ ದಿವಸಗಳಿಂದಲೂ ತಮ್ಮ ಅವತಾರ ಸಮಾಪ್ತಿಯ ಸೂಚನೆಯನ್ನು ಕೊಡುತ್ತಲೂ ಇದ್ದು, ಆ ಸೋಮವಾರದ ರಾತ್ರಿ ನಿತ್ಯದಂತೆ ಸ್ನಾನ ಶಿವಾರ್ಚನೆಗಳನ್ನು ತೀರಿಸಿ, ಆಸನಾಸೀನರಾಗಿ, ಹಸ್ತಕಮಲದಲ್ಲಿ ಲಿಂಗಮೂರ್ತಿಯನ್ನಿಟ್ಟು, ಅದರಲ್ಲಿ ದೃಷ್ಟಿಯನ್ನೂ, ಆ ದೃಷ್ಟಿಯಲ್ಲಿ ಮನಸ್ಸನ್ನೂ, ಮನಸ್ಸಿನಲ್ಲಿ ಭಾವವನ್ನೂ, ಅದರಲ್ಲಿ ಆತ್ಮಲಿಂಗವನ್ನೂ ಐಕ್ಯಗೊಳಿಸಿ, ಈ ಪ್ರಾಕೃತ ಮಂಡಲವನ್ನು ಪರಿತ್ಯಜಿಸಿದರು. ಬೆಳಗಾದನಂತರ ಪೂಜಾಗ್ರಹಕ್ಕೆ ಹೋದ ಶಿಷ್ಯರು ಅಚ್ಚಳಿಯದೆ ಕೊಂಕಾಗದೆ, ಗಾತ್ರ ಪಲ್ಲಟವಿಲ್ಲದೆ ಸ್ತಬ್ಧವಾಗಿ ಮೂರ್ತಿಗೊಂಡಿದ್ದ ತಮ್ಮ ಗುರುಮೂರ್ತಿಯ ಕೈವಲ್ಯಪ್ರಾಪ್ತಿಯನ್ನು ಕಂಡು, ದುಃಖಸಮುದ್ರದಲ್ಲಿ ಮುಳುಗಿದರು. ಈ ವೃತ್ತಾಂತವನ್ನು ಕೇಳಿದ ಅವರ ಸದ್ಭಕ್ತರು ಸಾವಿರಾರು ಮಂದಿಗಳು ಒಟ್ಟುಗೂಡಿ, ಶ್ರೀಮಠದಲ್ಲೇ ಅವರ ಪವಿತ್ರದೇಹಕ್ಕೆ ಸಮಾಧಿಯನ್ನು ವೈಭವದಿಂದ ಮಾಡಿಸಿದರು. ಇಂಥ ಕಲಿಗಾಲದಲ್ಲೂ ಜಗದ್ರಕ್ಷಣಾರ್ಥವಾಗಿ ಪರಶಿವನ ಅವತಾರವಾದ ಇಂಥ ಮೂರ್ತಿಗಳು ಅಲ್ಲಲ್ಲಿ ಅಪೂರ್ವವಾಗಿ ಗೋಚರಿಸುತ್ತಿರುವುದರಿಂದಲೇ ಜಗದ್ರಕ್ಷಣವಾಗುತ್ತಿರುವುದು. ಭಕ್ತರ ಚೈತನ್ಯದಂತಿದ್ದ ಇಂಥ ಮೂರ್ತಿಗಳು ನಮ್ಮನ್ನಗಲಿ ತೆರಳಿದ್ದಕ್ಕಾಗಿ ಅವರಂಥವರು ಮತ್ತೊಬ್ಬರನ್ನು ಕಾಣುವವರೆಗೂ ಅವರ ವಿಯೋಗದುಃಖವನ್ನು ನಾವು ಮರೆಯಲಾರೆವು. ಸದರಿ ಶ್ರೀಗಳು ಮೊದಲೇ ಗೊತ್ತುಮಾಡಿದ್ದ ಶ್ರೀ॥ ಅನ್ನದಾನಿಸ್ವಾಮಿಗಳೆಂಬ ಶಿಷ್ಯರು ಇನ್ನೂ ೧೦ ವರ್ಷದ ಸಣ್ಣ ವಯಸ್ಸಿನವರಾಗಿದ್ದರೂ ಚಟುವಟಿಕೆಯಿಂದ ಅಭ್ಯಾಸಮಾಡುತ್ತಿದ್ದಾರೆ. ಗುರುಗಳ ತಪಃಪ್ರಭಾವದಿಂದಲೂ, ನಮ್ಮೆಲ್ಲರ ಆಶೆಯಿಂದಲೂ, ಆ ಪವಿತ್ರವಾದ ಮಠದ ಪೀಠಕ್ಕೆ ತಕ್ಕ ಯೋಗ್ಯತಾಸಂಪನ್ನರಾಗಿ ಇವರು ಪರಿಣಮಿಸುವರಾಗಲೆಂದು ನಾವು ಕೋರುತ್ತೇವೆ. ಪತ್ರವಿಸ್ತಾರಕ್ಕೆ ಕ್ಷಮೆಯಿರಲಿ. ಗುರುಭಕ್ತ.

ಊದಬತ್ತಿಗಳು.

45

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೬—೦—೦ ೫—೦—೦; ೩—೦—೦; ೨—೮—೦; ೧—೪—೦; ಕಸ್ತೂರಿ ಬಲಿ ತೊಲಾ ೧ ಕ್ಕೆ ೧—೦—೦; ಹಸಿ ಗಂಧ ತೊಲಾ ೧ ಕ್ಕೆ ೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,

ಮೈಸೂರು, ಸುಗಂಧಕಾರಿ.

---

61 **ಪದ್ಮರಾಜ ಪುರಾಣಂ.**

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಅಣೆ.

ಬಿ. ಮಲ್ಲಾರಾಧ್ಯರು,

ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.

ಅಥವಾ ಬಿ. ಬಸವಾರಾಧ್ಯರು,

ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್, ಬೆಂಗಳೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.

೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

34 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೊತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ. ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್‍ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೨೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಹೊಸ ಪುಸ್ತಕಗಳು.

18

ವೀರಶೈವಷಟ್ಸ್ಥಲ ಸಿದ್ಧಾಂತವು.— ಇದರಲ್ಲಿ ೩ ಪ್ರಕರಣಗಳಿರುತ್ತವೆ. ೧ ನೆಯ ಪ್ರಕರಣದಲ್ಲಿ ಅಷ್ಟಾವರಣಮಹಿಮೆಯೂ ೨ ನೆಯ ಪ್ರಕರಣದಲ್ಲಿ ಪಂಚಾಚಾರವಿಚಾರವೂ. ೩. ನೆಯ ಪ್ರಕರಣದಲ್ಲಿ ಧರ್ಮಾಚಾರವಿಚಾರವೂ ಪ್ರತಿಪಾದಿಸಲ್ಪಟ್ಟಿರುತ್ತೆ. ವಾರ್ಧಿಕಷಟ್ಪದಿ ರೂಪವಾಗಿ ಸರಳವಾಗಿದೆ. ಇದರ ಕ್ರಯ ವಿ. ಪಿ. ಮೂಲಕ ೪ ಆಣೆ.

ಪುರುಷಸೂಕ್ತವು.— ನಿರಂಜನ ಜಂಗಮಪರವಾದ ಕರ್ನಾಟಕ ಟೀಕಾಸಮೇತವಾಗಿದೆ. ಸುಲಭವಾಗಿ ಓದಿ ತಿಳಿದುಕೊಳ್ಳಬಹುದು. ಬೆಲೆ ವಿ. ಪಿ. ಯಿಂದ ೪ ಆಣೆ.

ವೇದಸಂಜೀವಿನಿಯು.— ಇದು ಕನ್ನಡವಾಕ್ಯಗ್ರಂಥವು. ೧೦ ಅಧ್ಯಾಯಗಳಿಂದ ಕೂಡಿರುತ್ತದೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಪ್ರತಿಪಾದಿತವಾಗಿದೆ. ಬೆಲೆ ವಿ. ಪಿ. ಮೂಲಕ ೧೦ ಆಣೆ.

ಶಿವಪಂಚಸ್ತವವು.— ಸಂಸ್ಕೃತ ವ್ಯಾಖ್ಯಾನದಿಂದಲೂ ಕನ್ನಡ ಟಿಪ್ಪಣದಿಂದಲೂ ಕೂಡಿದ ಮಲ್ಹಣ, ಮಹಿಮ್ನ, ಮಲಯರಾಜ, ಅನಾಮಯ, ಹಲಾಯುಧವೆಂದು ಪ್ರಖ್ಯಾತಗಳಾದ ಪಂಚಸ್ತೋತ್ರಗಳು ಇದರಲ್ಲಿರುತ್ತವೆ. ಬೆಲೆ ವಿ. ಪಿ. ಮೂಲಕ ೧-೪-೦.

ಬಸವಲಿಂಗಸ್ವಾಮಿಗಳು,

ಹೊಸಮಠ ಮೈಸೂರು.

ಅಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

ರಾಸ್ಕೋಪ್‌ಸಿಸ್ಟಂ ಪೇಟಂಟ್ ಲೀವರ್ ಜ್ಯೂವೆಲ್ಡ್ ವಾಚ್

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸ ತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಎರಡು (೫) ವರುಷಗಳು ಗ್ಯಾರೆಂಟು.

ROSKOPF
SYSTEM
PATENT
SWISS MADE

ಕಯ್ರ ರೂ. ೨-೮-೦ ವಿ. ಪಿ. ಚಾರ್ಜು ರೂ. ೦-೪-೦.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದ. ಕ್ರಯ ೦-೮-೦ ವಿ. ಪಿ. ಚಾರ್ಜು ೦-೪-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ. ನಂಬರು ೨೦ ಸಿಂಗಣ್ಣರ್‌ಬೀದಿ, ವಾಲಾಟಾಕ್ಸ್ ರೋಡು,

2 ಮದರಾಸು.

ಮೊದಲು ಇದನ್ನು ಓದಿರಿ.

20

ಅಂಜೀರಾರ್ಕಮಧು:— ಇದರ ಸೇವನದಿಂದ ಮೊಯೊಳಗಿನ ಉಷ್ಣತೆಯು ಹೋಗಿ ಧಾತುಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿಧಾರಣಕ್ಕೆ ಯೋಗ್ಯವಾದ ಧಾತು ಆಗುತ್ತದೆ. ನಡುವೇ ಯಾವದಾದರೊಂದು ಕಾರಣದಿಂದ ನಪುಂಸಕತ್ವವಾದರೆ ಇದರಿಂದ ಖಾತ್ರಿಯಿಂದ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ ಅನ್ನ ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ, ಅನ್ನ, ಹಾಲು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತವಾಗುತ್ತಾರೆ. ಕ್ರಯ ೧ ಬಾ, ೧॥= ರೂ. ೨ ಬಾ. ೨॥। ರೂ. ೩ ಬಾ. ೩॥।= ಟ.ಖ.ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡ. ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು. ಟ. ಖ. ಬೇರೆ.

ಸಾರ್ಸಾಪರಿಲಾ:—ಇದರಿಂದ ಪರಮಾ, ಗರಿಮಿ ಹೊಗುತ್ತದೆ. ಉಷ್ಣದಿಂದ ಆದ ಯಾವದಾದರು ವಿಕಾರಗಳು ರಸಾಯನ ಶೇವನ ಮಾಡಿದ್ದರಿಂದ ಉಂಟಾದ ರೋಗಗಳು ಮತ್ತು ಉಷ್ಣವು ಬಡೆದು ಆದ ಬಿಳೇಕರೇಕಲೆಗಳು, ಭಗೇಂದ್ರ, ಪಿರಸಿ, ಇತ್ಯಾದಿರೋಗಗಳು ಖಾತ್ರಿಯಿಂದ ನೆಟ್ಟಗಾಗುವವು. ಕ್ರಯ ೧ ಬಾ. ೧॥ರೂ. ೩ ಬಾ. ೪ರೂ. ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ತದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು. ಟ. ಖ. ಬೇರೆ.

"ಪಾಚಕ."

("ಪಚನ ಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚೆನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರತೇಗುಗಳು ಬರುವದಿಲ್ಲ. ೧ ಬಾ. ೯ ಆಣೆ ಟ. ಖ. ಬೇರೆ.

ನಂ. ೫೫ "ಅಂಜೀರಾರ್ಕಮಧುಕಂಪನಿ"

ಧಾರವಾಡ ಮತ್ತು ಮಿರಜ. (ಇಂಡಿಯಾ)

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

22

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂಬೆಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ.

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ.— ಈ ಎಣ್ಣೆಯನ್ನು ಬೆಳಿಗ್ಗೆ ಮತ್ತೂ ಸಾಯಂಕಾಲ ೧ ತೋಲದಂತೆ ೨೦ ದಿನಗಳವರಿಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೆಬ್ಬು, ವ್ರಣ, ಕುಷ್ಠ. ಮಹೋದರ, ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂತಿಮೇಹ, ಮೂತ್ರಕೃಚ್ಛ್ರ ಅಸ್ತಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕುಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ, ರೂಪಾಯಿ ೩. ಟಪ್ಪಾಲ್ ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ—ಈ ಲೇಹ್ಯಸೇವನೆಯಿಂದ ಹೊಟ್ಟಿ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್ ಖರ್ಚು ೬ ಆಣೆ.

೯. ಮಹಾಕುಂಡಲ್ಯಾದಿರಸಾಯನ— ಇದರಿಂದ ಕ್ಷಯಕಾಶಿ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟಲ್ಲು ಉರಿಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶ ನೀರು ಎರೆಯುವಾಗ ಜ್ಞಾನ ತಪ್ಪುವುದು, ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಷರಬತ್ತುಗಳೂ, ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚನ್ನಬಸಪ್ಪ ಅಂಡ್‌ಸನ್ಸ್,
ಚನ್ನಪಟ್ಟಣ, ಬೆಂಗಳೂರು ಡಿಸ್ಟ್ರಿಕ್ಟ್.

2

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.

ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. । ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಮೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರೆಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಸುಲಭ ಕ್ರಯ! ಸುಲಭಕ್ರಯ!!

ರಾಸ್ಕೋಪ್ ಲೀವರ್ ವಾಚ್.

3

ಇದು ರಾಸ್ಕೋಪ್ ಸಿಸ್ಟಂ ಆಗಿಯೂ, ಪೇಟೆಂಟ್ ಕೆಲಸದಿಂದ ಕೂಡಿದ್ದಾಗಿಯೂ, ತಲೆಯಲ್ಲಿ ಬೀಗವುಳ್ಳದ್ದಾಗಿಯೂ ಇರುತ್ತೆ. ಸರಿಯಾದ ಕಾಲವನ್ನು ತೋರಿಸುವಂಥಾದ್ದು. ದಪ್ಪವಾದ ಕನ್ನಡಿಯಿಂದ ಮುಚ್ಚಿರುತ್ತೆ. ಇದಕ್ಕೆ ಗ್ಯಾರೆಂಟಿ ೫ ವರ್ಷ. ಇದರ ಕ್ರಯ ೧ ಕ್ಕೆ ೨-೮-೦ ಮಾತ್ರ.

N. B.— ನಮ್ಮಲ್ಲಿ ಎಲಿಕ್ಟ್ರಿಕ್ ಗಿಲ್ಟು ಭಂಗಾರದ ನಗಗಳು, ಜರ್ಮನ ಬೆಳ್ಳಿ ಸಾಮಾನುಗಳು ಮುಂತಾದ್ದು ವ್ಯಾಪಾರಸ್ತರು ವಿಕ್ರಯಿಸಿ ಲಾಭ ಹೊಂದುವಷ್ಟು ಸುಲಭ ಕ್ರಯದಲ್ಲಿ ದೊರಿಯುತ್ತೆ.

ವಿಳಾಸ:—
ಬಿ. ಆರ್. ವೆಂಕಟರಮಣ ಅಂಡ್‌ಕಂಪೆನಿ,
ನಂಬರು ೭, ಕೋಪ್ ವೆಂಕಟಾಚಲೈಯ್ಯರ್ ಬೀದಿ,
ಮದರಾಸು.

44

ಹೊಸ ಪುಸ್ತಕಗಳು.

ನೂತನಗೃಹಪ್ರವೇಶ, ಪಟ್ಟಾಧಿಕಾರ, ಲಿಂಗಧಾರಣ ಈ ಮೂರು ವಿಧಿಗಳು ಟೀಕಾ ಸಮೇತವಾಗಿ ಒಂದು ಪುಸ್ತಕದಲ್ಲಿ ಮುದ್ರಿತಗಳಾಗಿರುತ್ತವೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೨ ಆಣೆ. ಶ್ರೀಚೆನ್ನಬಸವೇಶ್ವರವಿರಚಿತಮಾದ ಶಿವಾನುಭವಶಾಸ್ತ್ರ ಕನ್ನಡ ವಾಕ್ಯರೂಪವಾಗಿದೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೫ ಆಣೆ. ವೀರಶೈವದಶಕರ್ಮವಿಧಿ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೮ ಆಣೆ. ಶಿವಸ್ತುತಿಮಣಿಮಾಲಾ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೬ ಆಣೆ. ರಾಜಶೇಖರ ೧೩-೧೪ ಆಶ್ವಾಸ ಪ್ರತಿಪದಾರ್ಥ ತಾತ್ಪರ್ಯಸಹಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಇದೆ.

ಕ್ರಯ— ಪ್ರತಿ ೧ ಕ್ಕೆ ವಿ. ಪಿ. ೧-೩-೦.

ಸಟೀಕ ವೀರಶೈವ ಅಂತ್ಯೇಷ್ಟಿವಿಧಿ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೮ ಆಣೆ. ವಿಳಾಸ:— **ಕೆ. ಶಾಂತವೀರಪ್ಪ,**
ದೊಡ್ಡಪೇಟೆ, ಬೆಂಗಳೂರು.

34

ಜೇರಿಗೆ ಬಸವಲಿಂಗಪ್ಪನ ಪುಸ್ತಕಗಳು.

ಬೆಲೆ ಬಹುಳ ಕಡಿಮೆ. ನೋಡಿ. ನೋಡಿ. ಬಿಡಬೇಡಿ.

ಪದ್ಮಾವತಿಕಥೆ:— ವೀರಶೈವವಚನನಾಟಕ. ೯೮ ಡೆಮ್ಮಿ ಪುಟ. ಕ್ರಯ ೦-೨-೦. ವಿ. ಪಿ. ಯಿಂದ ೦-೪-೦

ವೀರಶೈವಮತವಿಷಯಸಾರ (೨ ನೇ ಭಾಗ) ಕ್ರಯ ೦-೨-. ವಿ. ಪಿ. ಯಿಂದ ೦-೪-೦.

ಷಟ್‌ಸ್ಥಲಚಿಂತಾರತ್ನ. – ಕ್ರಯ ೦-೨-೦. ವಿ. ಪಿ. ಯಿಂದ ೦-೪-೦.

ವಿಳಾಸ.—ಬೆಂಗಳೂರು ಸಿಟಿ ಅರಳೇಪೇಟೆ ಜೇರಿಗೆ ನಂಜಪ್ಪನವರ ಮಗ ಬಿ. ಜಿ. ಬಸವಲಿಂಗಪ್ಪನವರಿಗೆ.

೧೯೧೧ನೇ ಇಸವಿ ಜನವರಿ ತಾ॥ ೯ ರಿಂದ ೧೯೧೧ನೇ ಜನವರಿ ತಾ॥ ೧೫ ರವರಿಗೆ ಸಲ್ಲುವ ಶಾಲಿವಾಹನ ಶಕ ೧೮೩೨ ನೇ ಸಾಧಾರಣ ಸಂವತ್ಸರದ ಪುಷ್ಯ ಶು॥ ನಾಮಿಯಿಂದ ಪುಷ್ಯ ಶು॥ ಅಮಾವಾಸ್ಯೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಧನು ತೇದಿ
9	ಸೋ	ನಾ	26-2	ಶ್ವಿ	25-14	26
10	ಮಂಗ	ದ	20-26	ಭ	21-20	27
11	ಬುಧ	ಏ	14-18	ಕೃ	17-34	28
12	[1] ಗುರು	ದ್ವಾ	8-50	ರೊ	13-12	29
13	[2] ಶುಕ್ರ	ತ್ರ	2-58	ಮೃಗಶಿ	54-20	30
14	[3] ಶನಿ	ಚ	52-40	ದ್ರಾ	5-20	31
15	[4] ಭಾನು	ಅ	48-20	ಪುನ	2-12	1

(1) ಮೂಗೂರು ಹೊದೆವುತ್ಸಾಪಯೋಗ ವೈಕುಂಠ ದ್ವಾರದರ್ಶನಂ (2) ಸಂಕ್ರಾಂತಿದೀಪಂ ಶಿವಗಂಗೆಯಲ್ಲಿ ಗಂಗೋತ್ಪತ್ತಿಃ. (3) ಮೂಗೂರು ಭಂಡೀವುತ್ಸವ ಬನಶಂಕರೀವ್ರತಂ. (೪) ಚುಂಚನಕಟ್ಟೆ ರಾಮಸ್ವಾಮಿರಥಃ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾಧ್ವಗ್ರ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಜನವರಿ ತಾರೀಖು ೧೬ ನೇ ಸೋಮವಾರ. [ಸಂಚಿಕೆ ೩.

೧೯೧೧ **ಪಾಕೆಟ್‌ಡೈರಿ.** ೧೯೧೧



ಈ ಡೈರಿಗಳನ್ನು ಬಹು ಸುಂದರವಾಗಿರುವಂತೆ ನುಣುಪಾದ ದಪ್ಪಕಾಗದದಲ್ಲಿ ಮುದ್ರಿಸಿ, ಪ್ರತಿಪುಟಕ್ಕೂ ರೂಲುಹಾಕಿ ಬಹಳ ಸೊಗಸಾದ ಸೀಮೆ (ಕ್ಯಾಲಿಕೊ) ಬಟ್ಟೆಯಿಂದ ವಿಲಾಯಿತಿ ಯಂತ್ರಗಳಲ್ಲಿ ಬೈಂಡುಮಾಡಿ ಮೇಲುಗಡೆಯಲ್ಲಿ ಪ್ರಕಾಶವಾಗಿ ಹೊಳೆಯುವ ಹಾಗೆ ಭಂಗಾರದ ರೇಖೆಯಂತಿರುವ ಅಕ್ಷರಗಳನ್ನು ಬಿಡಿಸಿ ಗಿಲೀಟುಮಾಡಿದೆ.

ಇವು ವರ್ತಕರು, ಲಾಯರುಗಳು, ಕಂಟ್ರಾಕ್ಟುದಾರರು, ಸರ್ಕಾರಿ ಉದ್ಯೋಗಸ್ಥರು, ಹುದ್ದೆದಾರರು, ಜಮೀನ್‌ದಾರರು, ಸ್ಕೂಲ್ ಕಾಲೇಜು ವಿದ್ಯಾರ್ಥಿಗಳು, ಪೊಲೀಸು ಇಲಾಖೆಯವರು ಮೊದಲಾದ ಸಮಸ್ತ ಜನರಿಗೂ ಉಪಯೋಗವಾಗಿರುವ ಅನೇಕ ವಿಷಯಗಳನ್ನು ಸಂಗ್ರಹಿಸಿಕೊಂಡಿವೆ.

ಏ. ನಂ॥ ಪೆನ್ಸಿಲ್ ಇಡತಕ್ಕ ಚಿಕ್ಕ ಡೈರಿ ೧ ಕ್ಕೆ ೩ ಆಣೆ.
ಬಿ. „ ಪೆನ್ಸಿಲ್ ಇಟ್ಟಿರುವ ಚಿಕ್ಕಫ್ಲಾಪ್ ಡೈರಿ೧ಕ್ಕೆ೫ ಆ.
ಸಿ. ನಂ॥ ಪೆನ್ಸಿಲ್ ಇಡತಕ್ಕ ದೊಡ್ಡ ಡೈರಿ ೧ ಕ್ಕೆ ೬ ಆಣೆ
ಡಿ. „ ಪೆನ್ಸಿಲ್‌ಇಟ್ಟಿರುವ ದೊಡ್ಡಫ್ಲಾಪ್ ಡೈರಿ೧ಕ್ಕೆ೮ ಆ

ಸರ್ಕಾರದಲ್ಲಿ ರಿಜಿಸ್ಟರಾಗಿ ಪ್ರಖ್ಯಾತಿಹೊಂದಿರುವ

"ಜನಿವಾ" ಡೈರಿ.

ಈ ಡೈರಿಯು ಮೇಲ್ಕಂಡ ಡೈರಿಗಳಿಗಿಂತ ಹೆಚ್ಚಾದ ಸಮಾಚಾರಗಳನ್ನೂ ದಪ್ಪನಾದ ಕಾಗದವನ್ನೂ ಅತಿ ನೂತನವಾದ ಬೈಂಡನ್ನೂ, ಒಂದೂವರೆಯಷ್ಟು ಗಾತ್ರವನ್ನೂ, ಉಪಯೋಗಿಸಿರುವ ಸಾಮಾನುಗಳಲ್ಲಿ ಹೆಚ್ಚಾದ ಬೆಲೆಯುಳ್ಳ ಪದಾರ್ಥಗಳನ್ನೂ ಒಳಗೊಂಡಿವೆ. ಆದ್ದರಿಂದ ಈ ಡೈರಿಯ ಕ್ರಯವೂ ಹೆಚ್ಚಾಗಿದೆ.

"ಜನಿವಾ" ನಂ॥ ೧. ಚಿಕ್ಕ ಡೈರಿ ೧ ಕ್ಕೆ ೪ ಆಣೆ. | "ಜನಿವಾ" ನಂ॥ ೨. ಚಿಕ್ಕ ಫ್ಲಾಪ್ ಡೈರಿ ೧ ಕ್ಕೆ ೬ ಆಣೆ.

೧೨ ಪ್ರತಿಗಳು ಒಟ್ಟಾಗಿ ತರಿಸಿಕೊಂಡರೆ ೧ ಪ್ರತಿ ಉಚಿತವಾಗಿ ಕೊಡಲ್ಪಡುವುದು.

ಎ. ಆರ್. ಕೃಷ್ಣಸ್ವಾಮಿಶೆಟ್ಟಿ ಅಂಡ್ ಕಂಪೆನಿ,
೧೨೫, ಗೋವಿಂದನಾಯ್ಕರ್ ಬೀದಿ, ಮದರಾಸ್.

4

ಪಂಡಿತ ಎಸ್. ಗರಳಪುರಿ ಇವರ
ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
24 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

ಉತ್ತಮ ಗ್ರಂಥಗಳು.

103

ಬಸವರಾಜವಿಜಯಂ.– ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.– ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.– ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.–(೧ನೆಯಪ್ರಕರಣ) ೧-೩-೦. ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂಸೇರಿವೆ.

ಸೌಂದರ ಪುರಾಣ –೦.೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.– ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.– ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿಃ.– ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.– (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.– ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಗ

ಲೋಕಾಮಯಹಾರ ಕಸ್ತೂರೀ ಮಾತ್ರೆ.



ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳನೋವು, ಮೈ ಕಾಲು ಹೊಡತ(ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ,ಅರೋಚಕ ಇನ್ನೂಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತಿರುವವರು ಖಂಡಿತವಾಗಿಯೂ ಪ್ಲೇಗಿನಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ

೨೦೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೮ ಕುಪ್ಪಿವರೆಗೆ ಪೋಸ್ಟೇಜು ೪ ಆ.

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ;— ಸೀತಾರಾಘವವೈದ್ಯಶಾಲಾ,
ಮೈಸೂರು.

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ಪಾಂಡೆನ್ಸ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಸೌಗಂಧಿಕಾ ಪರಿಣಯ.

(ಕಳೆದವಾರದ ಶೇಷ.)

ಗಜದ ಶೂರತ್ವವೂ, ಭಯಶೀಲತ್ವವೂ ಸಹಾ ಮಾವುತನ ಅಧೀನವಾದುದರಿಂದ ತನ್ನ ಸ್ವಾಧೀನದಲ್ಲಿ ಶೂರನಾದ ಮಾವುತನನ್ನಿರಿಸಬೇಕು. ಸನ್ನಾಹಯುಕ್ತವಾಗಿಯೂ, ಶೌರ್ಯವೂ, ಶೂರನಾದ ಮಾವುತನೂ, ಪ್ರತಾಪವೂ ಉಳ್ಳ ಒಂದು ಗಜವು ಆರುಸಾವಿರ ಅಶ್ವಂಗಳಂ ಜಯಿಸುವುದು. ಗಜವು ಯುದ್ಧದಲ್ಲಿ ನೂರು ಪ್ರಹಾರಗಳನ್ನಾದರೂ ಸಹಿಸುವುದು. ಗಜಗಳು ಸಂತೋಷಯುಕ್ತಗಳಾದರೆ, ಸ್ವಪಕ್ಷದಲ್ಲಿರುವವರಂ ಸಂರಕ್ಷಿಸುವುವು. ಕೋಪಯುಕ್ತಗಳಾದರೆ ಶತ್ರುಸೇನೆಯಂ ಚೂರ್ಣವಂ ಮಾಡಿ, ಸ್ವಾಮಿಗೆ ಹಿತವನ್ನೇ ಮಾಡುವುವು. ಆದುದರಿಂದ ಗಜಗಳಿಗೆ ಸಮಾನವಾದ ಬಲವು ಯಾವ ಪ್ರಾಣಿಗಳಿಗೂ ಇಲ್ಲ. ಈ ಪರಿಯಾಗಿ ಪೇಳಲ್ಪಟ್ಟ ಲಕ್ಷಣಗಳಂ ಚೆನ್ನಾಗಿ ತಿಳಿದು, ಪರೀಕ್ಷಿಸಿ, ಉತ್ತಮ ಮಧ್ಯಮಾಧಮ ಗಜಗಳಂ ತಿಳಿಯಬೇಕೆಂದು ವಿಸ್ತಾರವಾಗಿ ಪೇಳಿದ ವಿದ್ಯಾಸಾಗರನ ವಚನವಂ ಕೇಳಿ ಸಂತೋಷಭರಿತನಾಗಿ, ಸುಗಂಧ ಮಹಾರಾಜೇಂದ್ರನು- ಎಲೈ ಗುರುವಾದ ವಿದ್ಯಾಸಾಗರನೆ! ಭೂಲೋಕದಲ್ಲಿ ಪುಟ್ಟಿರುವ ಗಜಗಳ ಲಕ್ಷಣಗಳಂ ನಿಮ್ಮಿಂದ ಕೇಳಿ ಅತ್ಯಂತ ಸಂತೋಷವಾಯಿತೆಂದು ಪೇಳಿ, •ಮತ್ತೂ ಗಜಗೌರೀ ವ್ರತಕ್ಕೆ ಯೋಗ್ಯವಾಗಿ, ಶುಭ್ರವರ್ಣವಾಗಿ, ಚತುರ್ದಂತಗಳಿಂದೊಪ್ಪುತ, ಮನೋನುಸಾರಿಯಾದ ಗಜವು ನಿಮ್ಮಿಂದ ಹೇಳಲ್ಪಡಲಿಲ್ಲ. ಸೌಗಂಧಿಕಾದೇವಿಯು ಅಪೇಕ್ಷಿಸುವುದು ಈ ಗಜವೇ ಹೊರತು, ನಿಮ್ಮಿಂದ ಹೇಳಲ್ಪಟ್ಟ ಗಜಗಳಲ್ಲಿ ಒಂದೂ ಅಲ್ಲ. ನಾನು ಸೌಗಂಧಿಕಾದೇವಿಯು ಪೇಳಿದ ಗಜವನ್ನೇ ತಂದುಕೊಡುವೆನೆಂದು ಪಣವಂ ಒಪ್ಪಿಕೊಂಡು ಬಂದಿರುವೆನು. ಆ ಗಜವು ಯಾವುದು? ಎಲ್ಲಿರುವುದೆಂದು ಕೇಳಿದ ಸುಗಂಧಮಹಾರಾಜನಂ ಕುರಿತು ವಿದ್ಯಾಸಾಗರನು- ಎಲೈ ರಾಜೇಂದ್ರನೆ! ಈ ಲೋಕದಲ್ಲಿ ಚತುರ್ದಂತಗಳುಳ್ಳ ಗಜವು ಯಾವರಾಯರಲ್ಲಾದರೂ ಇರುವುದೆ? ಮತ್ತೂ ಶುಭ್ರವರ್ಣವಾಗಿ ಎರಡು ಕೊಂಬುಗಳುಳ್ಳ ಆನೆಯು ಲಭಿಸೀತು. ಸುಲಕ್ಷಣ ಬಿಂದುಗಳುಳ್ಳ ಗಜವು ನಿನ್ನಲ್ಲಿಯೇ ಇರುವುದಲ್ಲವೆ ಚತುರ್ದಂತಗಳುಳ್ಳ, ಅತಿ ಶುಭ್ರವಾದ, ಸುಲಕ್ಷಣ ಬಿಂದುಗಳಂ ಯುಕ್ತವಾದ ಗಜವು ದೇವಲೋಕದಲ್ಲಿಯೇ ಹೊರತು ಭೂಮಿಯಲ್ಲಿ ಪುಟ್ಟಲರಿಯದು. ಇಂಥ ಗಜವಂ ಶಾಸ್ತ್ರದಲ್ಲಿ ತಿಳಿದಿರುವುದುಂಟು. ಎಂದು ಪೇಳಲು, ಆ ಮಾತಂ ಕೇಳಿ ಸುಗಂಧಮಹಾರಾಜನು ಹಾಗಾದರೆ ಸೌಗಂಧಿಕಾದೇವಿಯು ಅಪೇಕ್ಷಿಸಿದ ಗಜವು ದುರ್ಲಭವಾಗಿರುವುದೆಂದು ನುಡಿದು, ಉಪಾಧ್ಯಾಯಂಗೆ ವೀಳೆಯವಂ ಕೊಟ್ಟು ಕಳುಹಿಸಿ, ಬಳಿಕ ಏಕಾಂತ ಸದನವಂ ಹೊಂದಿ, ತನಗೆ ಅನುಚರನಾದ ಛಾಯಾಗುಪ್ತನಂ ಸ್ಮರಿಸಲಾಕ್ಷಣದಲ್ಲಿಯೇ ಆ ಯಕ್ಷನು ಬಂದು ರಾಯನಿಗಭಿವಂದಿಸಿ, ರಾಜಾಧಿರಾಜನೆ! ನನ್ನಂ ಸ್ಮರಿಸಿದುದು ಯಾವಕಾರ್ಯಕ್ಕೋಸುಗ? ಅಪ್ಪಣೆಯಾಗಬೇಕೆಂದು ವಿಜ್ಞಾಪಿಸಲಾ ಸುಗಂಧರಾಜೇಂದ್ರನು- ಎಲೈ ಜಗದೀಶ್ವರಿಯ ಆಜ್ಞಾನುಸಾರವಾಗಿ ತ್ರಿಲೋಕ ಸಂಚಾರದಲ್ಲಿ ಸಮರ್ಥನಾಗಿ, ಕಾಮರೂಪನಾದ ಯಕ್ಷಾಧಿಪನೆ! ಒಂದು ಮಹಾಕಾರ್ಯವಂ ಕುರಿತು ನಿನ್ನಂ ಸ್ಮರಿಸಿದೆನು. ಅದೆಂತೆನೆ- ಕಳಿಂಗರಾಜಪುತ್ರಿಯಾದ ಸೌಗಂಧಿಕಾ ದೇವಿಯು ತಾನು ಮಾಡುವ ನೋಹಿಗೆ ಚತುರ್ದಂತಗಳುಳ್ಳ ಅತಿ ಶುಭ್ರವಾದ ಸುಲಕ್ಷಣ ಬಿಂದುಗಳಿಂದೊಡಗೂಡಿದ ಮದ್ದಾನೆಯು ಬೇಕೆಂದು ಪೇಳಿರುವುದರಿಂ ಅಂಥ ಮಹಾಗಜವು ಯಾವ ಲೋಕದಲ್ಲಿ ಯಾವ ದ್ವೀಪ ಪರ್ವತಗಳಲ್ಲಿರುವುದೊ ಅದಂ ತಿಳಿದು ಬಂದು ಪೇಳುವುದು ನನಗೆ ಅವಶ್ಯಕವು. ಇದು ನಿನಗೆ ಲೀಲಾಮಾತ್ರವೆಂದು ತಿಳಿದಿರುವೆನು. ಮತ್ತೂ ನಿನಗೆ ಮಾರ್ಗದಲ್ಲಿ ಶುಭವುಂಟಾಗಲಿ ಪೋಗಿಬಾರೆನಲು, ಅದಂ ಕೇಳಿ ಯಕ್ಷನು-ಆಜ್ಞಾಪಿಸಿದಂತೆ ನಡೆದುಕೊಳ್ಳುವೆನೆಂದು ಪೇಳಿ, ರಾಯನಿಗೆ ಅಭಿವಂದಿಸಿ, ಆಗಲೇ ಅಂತರಿಕ್ಷಮಾರ್ಗವನ್ನೈದಿ ಅತಿ ವೇಗದಿಂ ಪೋಗುತ, ವಿದ್ಯಾಧರಸ್ಥಾನವಾದ ಭುವರ್ಲೋಕವಂ ಹೊಂದಿ, ಹುಡುಕುತ, ಅಲ್ಲಿಂದ ಸ್ವರ್ಗಲೋಕವನ್ನೈದಿ, ಆ ಲೋಕವು ರಾಕ್ಷಸರಿಂದಾಕ್ರಾಂತವಾಗಿ ದೇವತಾಪ್ರಚಾರವಿಲ್ಲದೆ ಶೂನ್ಯವಾಗಿರುವುದಂ ಕಂಡು, ಗಜಶಾಲೆಯಂ ಹೊಂದಿ, ರಾಕ್ಷಸರ ಗಜಗಳಂ ನಿಬಿಡಮಾದ ಆ ಶಾಲೆಯಂ ಬಿಟ್ಟು, ಹಾಗೇ ನಂದನವನವಂ ಪೊಕ್ಕು, ಆ ವನವು ರಾಕ್ಷಸರಿಂ ರಕ್ಷಿತಮಾಗಿರುವುದನ್ನೋಡಿ, ಆ ಲೋಕವಂ ಬಿಟ್ಟು, ಮನೋವೇಗದಿಂ ಬಂದು ಜಂಬೂದ್ವೀಪದ ವರ್ಷಂಗಳಲ್ಲಿಯೂ ಹುಡುಕುತ, ನಾನಾ ಪರ್ವತಪ್ರಾಂತಗಳೊಳ್ ಯಥೇಚ್ಛವಾಗಿ ಕರಿಣೀಕದಂಬಗಳೊಡನೆ ವಿಹರಿಸುತ್ತಿರುವ ಮದಗಜಗಳ ತಂಡಗಳನ್ನೋಡುತ, ಹಾಗೇ ಲವಣಸಮುದ್ರವಂ ದಾಂಟಿ, ಪ್ಲಕ್ಷದ್ವೀಪವಂ ಸೇರಿ, ಮಹಾಪ್ಲಕ್ಷವೃಕ್ಷದ ಸುತ್ತಲೂ ನಿರೀಕ್ಷಿಸುತ, ವೈನತೇಯ ಸರೋವರದ ಪ್ರಾಂತದಲ್ಲಿ ಹುಡುಕುತ, ಅಲ್ಲಿ ಮಹಾಗಜವು ಕಿತ್ತು ಬಿಸುಟಿರುವ ಗಿರಿಶಿಖರವಂ ನೋಡುತ, ಭೂಮಿಗೆ ಇಳಿದಿರುವ ಗಜಪಾದಗಳ ಖಾತವನ್ನಿರೀಕ್ಷಿಸಿ, ಇಲ್ಲಿ ಯಾವುದೋ ಒಂದು ಮಹಾಗಜ ವಿರುವುದೆಂದು ತಿಳಿದು, ಅಲ್ಲಿ ಉದುರಿರುವ ಸರಪಳಿಗಳಂ ಕಂಡು, ಯಾರೋ ಮಹಾಗಜವಂ ಹಿಡಿದುಕೊಂಡು ಹೋಗಿರಬೇಕೆಂದು ಭಾವಿಸಿ, ಅದು ಎಲ್ಲಿರುವುದೋ ನೋಡಬೇಕೆಂಬ ಕುತೂಹಲದಿಂದ ಅದರ ಹೆಜ್ಜೆಯ ಮಾರ್ಗವಂ ಪಿಡಿದು ಬರುತ, ಮಹಾನದಿಗಳಂ ದಾಂಟಿ, ಇಕ್ಷುಸಮುದ್ರ ತೀರದಲ್ಲಿ ಇಕ್ಷುವನವು ಗಜದಿಂ ಸೂರೆಯಾಗಿರುವುದನ್ನೋಡಿ, ರಾಕ್ಷಸಾಕ್ರಾಂತವಾಗಿರುವ ಆ ದ್ವೀಪವಂ ಕಂಡು, ತಾನು ನಿಜರೂಪವಂ ಬಿಟ್ಟು, ಅಲ್ಲಿಯ ಜನರಂತೆ ಕಾಣಿಸಿಕೊಂಡು, ಚಂದ್ರಪುರಿಯಂ ಪೊಕ್ಕು, ಆ ಪುರಿಯು ರಾಕ್ಷಸಾಧೀನವಾಗಿ ಧರ್ಮಲೋಪವಾಗಿರುವುದಂ ತಿಳಿದು, ಅಲ್ಲಿಂದ ಮಣಿಕೂಟ ಪರ್ವತವನ್ನೈದಿ, ಅಲ್ಲಿಯೂ ರಾಕ್ಷಸರ ಮಂದಿರಗಳನ್ನೋಡುತ, (ಸಶೇಷ.)

• ಪಟ್ಟಕ್ಕೆ ಅಯೋಗ್ಯವಾದ ಗಜದ ಲಕ್ಷಣ.

ಕೃಶವಾಗಿ, ದೀರ್ಘವಾಗಿ, ವಿಸ್ತಾರವಾಗಿಜೋಲುವ ಕತ್ತು, ಬಗ್ಗಿದ ಹೆಗಲುಳ್ಳದ್ದಾಗಿ, ನಡೆಯುವಾಗ ಕಾಲುಗಳು ಮಸೆಯುವದಾಗಿ, ಎಡದಕೊಂಬು ಒಂದೇಉಳ್ಳುದಾಗಿ, ಮತ್ತೂ ಒಂದುಕಿವಿ-ಒಂದು ಕಣ್ಣು-ಒಂದುಪಾರ್ಶ್ವದಿಂದಲೂ ಹೀನವಾಗಿ ಕರೀಮೋಘದಂತೆ ಶರೀರಕಾಂತಿಯೂ, ಕಾವೀಬಣ್ಣದಂತೆ ಕೆಂಪಾದ ಹದಿನಾರು ಉಗುರುಗಳು ಉಳ್ಳುದಾಗಿಯೂ, ಹ್ರಸ್ವವಾಗಿ ಸೂಕ್ಷ್ಮವಾದ ಕಿವಿಯೂ, ಬಾಲವೂ, ಶಿಶ್ನವೂ, ಉದ್ದವಾದ ಸೊಂಡಿಲೂ, ಸಣ್ಣವಾದ ಕತ್ತೂ, ಕಪ್ಪಾದ ನಾಲಗೆಯೂ ಈ ಲಕ್ಷಣಗಳುಳ್ಳ ಆನೆಯು ಪಟ್ಟಕ್ಕೆ ಅಯೋಗ್ಯವಾದುದು.

ಪಟ್ಟಕ್ಕೆ ಯೋಗ್ಯವಾದ ಗಜದಲಕ್ಷಣ.

ಜಲಬಿಂದುಗಳಿಂದೊಡಗೂಡಿದ ಫೂತ್ಕಾರದಿಂ ಮೇಘದಂತೆ ಗರ್ಜಿಸುತ, ಸುಕ್ಕುಯಿಲ್ಲದೆ ದಪ್ಪವಾದ ಶರೀರವೂ, ಸಿಲುವಾದ ಚರ್ಮವೂ, ಅಂಜನದಂತೆ ಕಪ್ಪುವರ್ಣವೂ, ಸರ್ವಾಂಗಗಳಲ್ಲಿಯೂ ರೋಮಗಳೂ, ತಾಳೇ ಹುವ್ವಿನಂತೆ ಹೊಂಬಣ್ಣವಾದ ಕೊಂಬುಗಳೂ, ಸಮವಾದ ದವಡೆಗಳೂ, ತಾಳಪತ್ರದಂತೆಯೂ ನಗಾರಿಯಂತೆಯೂ ಧ್ವನಿಯುಳ್ಳ ಕರ್ಣಗಳೂ, ಉನ್ನತವಾಗಿ ವರ್ತುಳವಾದ ಕುಂಭಸ್ಥಳಗಳೂ, ಹ್ರಸ್ವವಾಗಿ ದಪ್ಪವಾದ ಕಂಠವೂ, ಸಜ್ಜುಮಾಡಿದ ಧನುಸ್ಸಿನಂತೆ ಬಗ್ಗಿರುವ ಬೆನ್ನುಮೂಳೆಯೂ, ವರ್ತುಳವಾದ ಹೆಜ್ಜೆಗಳೂ, ಶುಭಕರಗಳಾದ ಇಪ್ಪತ್ತು ನಖಗಳೂ ವಿಸ್ತಾರವಾದ ಎದೆಯೂ, ಸಣ್ಣನಾದ ಹೊಟ್ಟೆಯೂ, ಸೂಕ್ಷ್ಮಂಗಳಾದ ಕುಚಗಳೂ, ಶಂಖಚಕ್ರ ಗದಾಕಾರವಾದ ಬಿಂದು ರೂಪವಾದ ಸುಳಿಗಳೂ—ಇಂತು ಸುಲಕ್ಷಣಗಳಂ ಕೂಡಿರುವ ಗಜವು ವಿಷ್ಣ್ವಂಶದಿಂ ಜನಿಸಿರುವುದರಿಂದ ಪಟ್ಟಕ್ಕೆ ಯೋಗ್ಯವಾಗಿ ಸಕಲ ಶುಭಕಾರ್ಯಂಗಳಂ ತನ್ನ ಒಡೆಯನಿಗೆ ಐಶ್ವರ್ಯವಂ, ಜಯಲಕ್ಷ್ಮಿಯಂ ಕೊಡ ಉಂಟುಮಾಡುವುದು.

ಸ್ತ್ರೀ ವಿದ್ಯಾಭ್ಯಾಸ.

ಪ್ರಪಂಚವೆಂಬ ಮನೆಗೆ ಪ್ರತಿ ಸಂಸಾರವನ್ನೂ ಕಟ್ಟಡದ ಒಂದೊಂದು ಕಲ್ಲಿನಂತೆ ಭಾವಿಸಿದರೆ, ಪ್ರತಿಯೊಬ್ಬರ ಸುಖದುಃಖವೂ ಪ್ರಪಂಚದ ಸುಖದುಃಖದ ಅಂಶವಾಗಿರುವುದು. ಲೋಕದಲ್ಲಿ ಜ್ಞಾನವೂ, ಸೌಖ್ಯವೂ, ನಾಗರಿಕತೆಯೂ ನೆಲೆಗೊಳ್ಳಬೇಕಾದರೆ ವಿದ್ಯಾಭ್ಯಾಸವು ಆವಶ್ಯಕವಾಗಿ ಬೇಕಾಗಿರುವುದು. ಮನುಷ್ಯರಲ್ಲಿ ಪ್ರತಿಯೊಬ್ಬರೂ ವಿದ್ಯೆಯನ್ನು ಅಭ್ಯಾಸಿಸಿದಹೊರತು ಜ್ಞಾನಸೌಖ್ಯಾದಿಗಳನ್ನು ಪಡೆಯಲಾಗುವುದಿಲ್ಲ. ಮನುಷ್ಯರೆಂದರೆ ಸ್ತ್ರೀಪುರುಷರಿಬ್ಬರೂ ಎಂಬರ್ಥವೇ ಹೊರತು ಪುರುಷರು ಮಾತ್ರವಲ್ಲ. ಆದುದರಿಂದಲೇ ಇಬ್ಬರಿಗೂ ವಿದ್ಯಾಭ್ಯಾಸವು ಆವಶ್ಯಕವಾಗಿದೆ. ಏಕೆಂದರೆ- ಲೌಕಿಕವ್ಯಾಪಾರದಲ್ಲಿ ವರ್ತಿಸಿ ಕುಟುಂಬಪೋಷಣೆಗೆ ತಕ್ಕ ಸಂಪಾದನೆಯ ಭಾರವು ಹೇಗೆ ಗಂಡುಸಿನ ಮೇಲೆ ಬಿದ್ದ ಹೊರೆಯಾಗಿದೆಯೋ, ಅದರಂತೆಯೇ ಮನೆಗೆಲಸಗಳನ್ನು ವಿವೇಕದಿಂದನೋಡಿಕೊಳ್ಳುವ ಕರ್ತವ್ಯವು ಹೆಂಗುಸಿನಮೇಲೆ ಬಿದ್ದ ಹೊರೆಯಾಗಿರುವುದು. ಪತಿಯ ಆಯಕ್ಕೆ ತಕ್ಕ ವ್ಯಯಮಾಡುವಿಕೆ—ಸವಿಯಾದ ಪಾಕದಸಿದ್ಧತೆ—ಅತಿಥ್ಯಭ್ಯಾಗತಸತ್ಕಾರ—ಗೃಹ ನಿರ್ಮಲೀಕರಣ—ಶಿಶುರಕ್ಷಣಶಿಕ್ಷಣಗಳು—ತನ್ನ ಜನ್ಮಸಾರ್ಥಕತೆಗೆ ತಕ್ಕ ಪತಿಭಕ್ತಿ ದೈವಭಕ್ತಿಗಳು—ಇವೇ ಮೊದಲಾದುವೆಲ್ಲವೂ ಹೆಂಗುಸಿನ ಮುಖ್ಯಕರ್ತವ್ಯಗಳಾಗಿವೆ. ಇಂತಹ ಸಂಸಾರನಿರ್ವಾಹವೆಲ್ಲವೂ ಒಂದೆರಡು ದಿವಸಗಳಲ್ಲಿ ಮುಗಿಸಲ್ಪಡಲಾರದುವುಗಳಾಗಿವೆ. ಆಮರಣಾಂತವೂ ಹೆಂಗುಸು ನಿರ್ವಹಿಸಬೇಕಾಗಿದೆ. ಇಂತಹ ನಿರ್ವಾಹಶಕ್ತಿಯನ್ನು ವಿದ್ಯಾಸಂಸ್ಕಾರವಿಲ್ಲದ ಹೆಂಗುಸು ಹೇಗೆ ವಿವೇಕದಿಂದ ನಿರ್ವಹಿಸುವಳು? ವಿದ್ಯವಿಲ್ಲದ ಸ್ತ್ರೀಯರು ಈಗ ಸಂಸಾರವನ್ನು ನಿರ್ವಹಿಸುತ್ತಿಲ್ಲವೆ? ಎಂದು ಕೆಲವರು ಆಕ್ಷೇಪಿಸಬಹುದು. ಇದಕ್ಕೆಷ್ಟೋ ಸಮಾಧಾನಗಳನ್ನು ಹೇಳಬಹುದು. ಒಂದೂರಿಗೆ ಹೋಗಲು ಅನೇಕ ಮಾರ್ಗಗಳಿರುವುವಲ್ಲವೆ? ಕಂಟಕಾವೃತವಾಗಿಯೂ, ಹಳ್ಳದಿಣ್ಣೆಗಳಿಂದ ಕೂಡಿಯೂ, ಗಟ್ಟಬೆಟ್ಟಗಳ ಪ್ರದೇಶವಾಗಿಯೂ ಇರುವ ಮಾರ್ಗದಲ್ಲಿ ಪ್ರಯಾಣಮಾಡುವುದುತ್ತಮವೊ? ಇಲ್ಲವೇ ಸಾಲುಮರಗಳಿಂದ ಕೂಡಿಯೂ, ಸಮತಲವಾಗಿಯೂ ಇರುವ ರಾಜಮಾರ್ಗದಲ್ಲಿ ಪ್ರಯಾಣ ಮಾಡುವುದು ಉತ್ತಮವೋ? ಎಂಬುದನ್ನು ನಾವು ಯೋಚಿಸಬೇಕು. ಊರು ಸೇರುವುದಕ್ಕೆ ಎರಡು ಮಾರ್ಗಗಳಿದ್ದರೂ ಕಂಟಕಾದಿಗಳಿಲ್ಲದೆ ಸುಖಕರವಾಗಿರುವ ರಾಜಮಾರ್ಗಪ್ರಯಾಣವು ಉತ್ತಮವೆಂದು ಎಂತಹರೂ ಯೋಚಿಸಬಹುದು. ರಾಜಮಾರ್ಗಕ್ಕಿಂತಲೂ ಹೊಗೆಯ ಬಂಡಿಯಲ್ಲಿ ಹೊರಡುವುದು ಇನ್ನೂ ಉತ್ತಮವಲ್ಲವೆ! ಇದರಂತೆಯೇ ಸಂಸಾರವು ಹೇಗಾದರೂ ನಡೆಯಬಹುದಾಗಿದ್ದರೂ, ವಿದ್ಯಾಸಂಸ್ಕಾರದಿಂದ ಸಂಸಾರವನ್ನು ನಿರ್ವಹಿಸುವುದು ಹೊಗೆಬಂಡಿಯ ಸುಖಪ್ರಯಾಣಕ್ಕೆ ಸದೃಶವಾಗಿರುವುದು. ಆದುದರಿಂದಲೇ ವಿದ್ಯಾವತಿಯ ಸಂಸಾರದ ಸುಖವು ಇತರ ಸುಖಕ್ಕೆ ಸರಿಹೋಲುವುದಿಲ್ಲ. ಇದನ್ನು ನಮ್ಮ ಪ್ರಾಚೀನಾರ್ಯರು ಪೂರ್ವದಲ್ಲಿಯೇ ತಿಳಿದು ಆಗಿನಿಂದಲೂ ಸ್ತ್ರೀ ಶಿಕ್ಷಣವನ್ನು ಆಚರಣೆಗೆ ತಂದಿರುವರು. ಈ ಕಾಲದಲ್ಲಿ ಹಲವರು ಈ ಮಾತನ್ನೊಪ್ಪದೆ ಸ್ತ್ರೀ ವಿದ್ಯಾಭ್ಯಾಸವು ಅನಾದಿಸಿದ್ಧವಾದುದಲ್ಲವೆಂದೂ ಸ್ತ್ರೀಗೆ ವಿದ್ಯಾಭ್ಯಾಸವು ಆವಶ್ಯಕವಾಗಿಲ್ಲವೆಂದೂ, ಇದರಿಂದ ನಾನಾಕಷ್ಟಗಳೊದಗುವುವೆಂದೂ ಆಕ್ಷೇಪಿಸುವರು. ಇದು ಎಷ್ಟರಮಟ್ಟಿಗೆ ನಿಜವೆಂಬುದನ್ನು ಈಗ ವಿಚಾರಮಾಡುವ.

ಪೂರ್ವದಿಂದಲೂ ಸ್ತ್ರೀ ವಿದ್ಯಾಭ್ಯಾಸವು ಇರಲಿಲ್ಲವೆಂಬುದು ನಿರಾಧಾರವಾದ ವಿಷಯವಾಗಿದೆ. ಇದಕ್ಕೆ ಶ್ರುತಿಸ್ಮೃತೀತಿಹಾಸಾದಿಗಳಲ್ಲಿ ಅನೇಕ ಆಧಾರಗಳನ್ನು ಪಂಡಿತರು ಶೋಧಿಸಿ ಪ್ರಕಟಿಸಿರುವರು. ಇಷ್ಟವಿರುವವರು ಪುದುಕೋಟೆಯ “ಸಂಸ್ಕೃತ ಜರ್ನಲ್” ಎಂಬ ಮಾಸಿಕವಹಿಯ “ವಧೂ ವಿದ್ಯಾವಿಚಾರ” ಎಂಬ ಸಂಸ್ಕೃತದಘನವಾದ ಉಪನ್ಯಾಸವನ್ನು ನೋಡಬಹುದಾಗಿದೆ. ಇಲ್ಲವೆ ಕನ್ನಡಿಗರಾದವರು “ಸ್ತ್ರೀ ಶಿಕ್ಷೆಯ ಸಮಸ್ಯೆ” ಎಂಬ ಪುಸ್ತಕವನ್ನು ನೋಡಬಹುದು. ಇವುಗಳನ್ನು ನೋಡಿದರೆ, ನಮ್ಮ ಆರ್ಯಮಹಿಳೆಯರು ಅನಾದಿಯಿಂದಲೂ ನಾನಾವಿಧವಾದ ಕಲೆಗಳಲ್ಲಿ ಪರಿಣತೆಯರಾಗಿರುವುದು ಸ್ಪಷ್ಟವಾಗುವುದು. ಋಗ್ವೇದದ ೧-೮-೫-೩-೧೦ ನೆಯ ಮಂಡಲಗಳಲ್ಲಿ ೩೭-೧೬-೨೭-೧೦-೧೦೭ ನೆಯ ಸೂತ್ರಗಳಲ್ಲಿ ಇಳೆಯು ಧರ್ಮೋಪದೇಶಕರ್ತೆಯೂ, ತಾಯಿಯು ಮಕ್ಕಳಿಗೆ ಶಿಕ್ಷಕಳಾಗಿಯೂ ವಿಶ್ವವತಿಯು ಯಜ್ಞವನ್ನು ಮಾಡಿ ಆ ಕ್ರಮವನ್ನು ಇತರರಿಗೆ ಬೋಧಿಸಿದವಳಾಗಿಯೂ, ಮಮತೆಯೆಂಬಳು ವೇದೋಚ್ಚಾರಣೆಯಲ್ಲಿ ಅತಿ ಕುಶಲಳಾಗಿಯೂ, ಸರಮಾ ಎಂಬಳು ಚೋರಗ್ರಹಣಚತುರೆಯಾಗಿಯೂ ಇದ್ದರೆಂದು ಆ ಋಕ್ಕುಗಳಿಂದ ವ್ಯಕ್ತವಾಗುವುದು. ಇದಲ್ಲದೆ ವ್ಯೋಮಸಂಹಿತೆ-ಆಪಸ್ತಂಬಗೃಹ್ಯಸೂತ್ರ- ಶತಪಥಬ್ರಾಹ್ಮಣ ಗೋಭಿಲಗೃಹ್ಯಸೂತ್ರ-ಲಾಪ್ಯಾಯನಶ್ರೌತಸೂತ್ರ-ಕಾತ್ಯಾಯನಶ್ರೌತಸೂತ್ರ ಮುಂತಾದುವುಗಳಲ್ಲಿ ಬೇಕಾದಷ್ಟು ಆಧಾರಗಳು ಕೊಡಲ್ಪಟ್ಟಿರುವುವು. ಪುರಾಣೇತಿಹಾಸಾದಿಗಳಲ್ಲಿ ನಮ್ಮ ವಾಚಕರು ಪ್ರಸಿದ್ಧವಾಗಿ ತಿಳಿದಿರುವ ಎಷ್ಟೋ ಮಂದಿ ವಿದ್ಯಾವತಿಯರಿರುವರು. ದಮಯಂತಿ—ಲೀಲಾವತೀ—ಅನಸೂಯಾ-ದ್ರೌಪದೀ-ಕುಂತೀ- ಪ್ರಮೀಲಾ- ಸುಕನ್ಯಾ- ಮುಂತಾದ ನೂರಾರುಮಂದಿ ವಿದ್ಯಾಪರಿಣತೆಯರಿದ್ದಂತೆ ಪ್ರಸಿದ್ಧವಾಗಿರುವುದನ್ನು ಸರ್ವರೂ ನೋಡಬಹುದು. ಈಚೆಗೆ ಭೋಜನ ಆಸ್ಥಾನದಲ್ಲಿದ್ದ ಸೀತೆ—ಶಾಲೀವಾಹನನ ತಾಯಿಯಾದ ಸುಮಿತ್ರೆ—ಮಂಡನಮಿಶ್ರರ ಪತ್ನಿಯಾದ ಸರಸವಾಣೀ— ವರರುಚಿ ಪತ್ನಿಯಾದ ಉಪಕೇಶೆ—ಅಪ್ಪಯ್ಯದೀಕ್ಷಿತರ ಪುತ್ರಿ, ಕುಂಬಾರಳಾದ ಬಂಕೆ—ಖನೆ—ಮಲ್ಲನಾಥೆ—ಮುಕ್ತಾಬಾಯಿ—ಮೀರಾಬಾಯಿ—ಅಹಲ್ಯಾಬಾಯಿ—ಮಹಾಲಕ್ಷ್ಮಿ—ಹೊನ್ನಮ್ಮ—ಅನಿಬೆಸೆಂಟ್ ಮೊದಲಾದ ಪ್ರಖ್ಯಾತವಿದುಷಿಯರು ಚರಿತಪ್ರಸಿದ್ಧರಾಗಿರುವರು. ಇವರಲ್ಲಿ ಬ್ರಾಹ್ಮಣರು ಮಾತ್ರವೇ ಅಲ್ಲ. ನಾನಾ ವರ್ಣೀಯರು ಇರುವರು. ಆದುದರಿಂದ ಸರ್ವಮತದ ಸ್ತ್ರೀಯರಿಗೂ ವಿದ್ಯಾಭ್ಯಾಸ ಮಾಡಿಸುವುದು ಶಾಸ್ತ್ರಸಿದ್ಧವೂ, ಅನಾದಿಸಿದ್ಧವೂ ಆಗಿರುವುದರಿಂದ, ಈಬಗೆಯ ಆಕ್ಷೇಪವು ತಿರಸ್ಕರಿಸಲ್ಪಡತಕ್ಕದಾಗಿದೆ.

ಸ್ತ್ರೀಶಿಕ್ಷಣವೇ ಆವಶ್ಯಕವಾಗಿಲ್ಲವೆಂಬ ಆಕ್ಷೇಪಣೆಯಾದರೂ ಯುಕ್ತವಾಗಿದೆಯೆ? ಎಂದು ಯೋಚಿಸಿನೋಡುವ. ಈ ಆಕ್ಷೇಪಕ್ಕೆ ಕೆಲವು ಕಾರಣಗಳಿರಬಹುದು. ಯಾವುವೆಂದರೆ, ಸ್ತ್ರೀಯು ಹೊರಗೆ ಹೋಗಿ ಲೌಕಿಕಾಧಿಕಾರವನ್ನು ನಿರ್ವಹಿಸಬೇಕಾಗಿಲ್ಲ; ಸಂಪಾದನೆಯನ್ನು ಮಾಡಬೇಕಾಗಿಲ್ಲ. ಕಸವನ್ನು ಗುಡಿಸಿ ಮುಸುರೆಯನ್ನು ತೊಳೆದು ಅಡಿಗೆ ಮಾಡುವ ಹೆಂಗಸಿಗೆ ವಿದ್ಯೆಯೇಕೆ? ಇವೇ ಮೊದಲಾದುವನ್ನುದ್ದೇಶಿಸಿ ಹೀಗೆ ಆಕ್ಷೇಪಿಸುವರು. ವಿದ್ಯಾಭ್ಯಾಸವು ಲೌಕಿಕಾಧಿಕಾರಕ್ಕೆ ಮಾತ್ರವಾಗಲೀ, ಸಂಪಾದನೆಗೆ ಮಾತ್ರವಾಗಲೀ ಸಾಕಾಗಿದ್ದರೆ, ಅಂತಹ ವಿದ್ಯಾಭ್ಯಾಸವು ನಮ್ಮ ಆರ್ಯಮಹಿಳೆಯರಿಗೆ ಬೇಕಾಗಿಲ್ಲ. ಆದರೆ ವಿದ್ಯೆಯು ಅಷ್ಟು ಮಾತ್ರ ಫಲವನ್ನೇ ಮುಂದುಮಾಡಿಲ್ಲ. ದಿವ್ಯವಾದ ಜ್ಞಾನವನ್ನೂ, ಒಳ್ಳೆಯದು ಕೆಟ್ಟುದೆಂಬ ವಿವೇಕವನ್ನೂ ಕೊಡುವದಕ್ಕೆ ತಕ್ಕ ಮುಖ್ಯಸಾಧನವೆನಿಸಿದೆ. ಸ್ತ್ರೀಯು ತನ್ನ ಕರ್ತವ್ಯಾಕರ್ತವ್ಯವನ್ನು ವಿವೇಕದಿಂದಲೇ ತಿಳಿಯಬೇಕಲ್ಲವೆ? ನಮ್ಮ ಪ್ರಾಚೀನಾರ್ಯರಮಣಿಯರು ಜ್ಞಾನವಿವೇಕಾಭಿವೃ

ಗೋಸುಗವೇ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಈಗಿನವರೂ ಇದಕ್ಕಾಗಿಯೇ ಮಾಡಬೇಕೆಂದು ನಮ್ಮ ಆಶೆಯು. ಅಲ್ಲದೆ ನಮ್ಮ ಆರ್ಯಧರ್ಮದಪ್ರಕಾರ ಪ್ರತಿಯೊಬ್ಬರೂ ಅವರವರ ಜನ್ಮಾಂತರಕರ್ಮದಂತೆ ವರ್ತಿಸುವರೆಂದು ತಿಳಿಯಬರುವುದರಿಂದ, ಸ್ತ್ರೀಯರೂ ತಂತಮ್ಮ ಜನ್ಮಸಾರ್ಥಕತೆಯನ್ನು ಮಾಡಿಕೊಳ್ಳಲು ತಾವುತಾವೇ ಪ್ರವರ್ತಿಸಬೇಕಾಗಿರುವುದು. ಸ್ತ್ರೀಯು ಪತಿಭಕ್ತಿಯನ್ನುಪದೇಶಿಸುವ ಶಾಸ್ತ್ರಗಳನ್ನೂ, ದೈವಮಹಿಮೆಯನ್ನೂ ತಿಳಿಯಲು ಶಾಸ್ತ್ರಾಭ್ಯಾಸದಿಂದಹೊರತು ಸಾಧ್ಯವಿಲ್ಲ. ಇದೂ ಅಲ್ಲದೆ ಮನೆಗೆಲಸಗಳಿಗೆ ವಿದ್ಯವೇ ಬೇಕಾಗಿಲ್ಲವೆಂಬುದೂ ಸರಿಯಾದುದಲ್ಲ. ತನ್ನ ಮತ್ತೂ ಮಕ್ಕಳ ಪಾಲನೆಯು ತಾಯಿಗೆ ಅವಶ್ಯಕವಾಗಿದೆ.

(ಸಶೇಷ)

ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ಆಮಂತ್ರಣ ಪತ್ರಿಕೆಯು.

ಪರಮಪ್ರಿಯ ಮಹಾನುಭಾವರೇ!

ನಮ್ಮ ದಕ್ಷಿಣಮಹಾರಾಷ್ಟ್ರ ಜೈನ ಸಭೆಯ ೧೩ ನೇ ವಾರ್ಷಿಕೋತ್ಸವದ ಸಮಾರಂಭವು ಬರುವ ಮಾಘಮಾಸದಲ್ಲಿ ಅಂದರೆ ತಾರೀಖು ೫ ಮಾಹೆ ಫೆಬ್ರವರಿ ಸನ್ ೧೯೧೧ ಇಸ್ವಿದಿವಸ ಸಾಂಗಲಿಯಲ್ಲಿ ಪ್ರಾರಂಭವಾಗತಕ್ಕದ್ದದೆ. ಈ ಸಮಾರಂಭದ ಮುಖ್ಯ ಅಂಗಾಂಗಗಳು ಯಾವುವೆಂದರೆ:— ೧. ಜೈನಪರಿಷತ್ತು, ೨. ಸ್ತ್ರೀಯರ ಕೈಕೆಲಸದ ಪ್ರದರ್ಶನವು ೩. ಕೀರ್ತನ, ೪. ಶ್ರೀಲಘುಪಂಚಕಲ್ಯಾಣಪೂಜೆ, ೫ ರಥೋತ್ಸವವು, ೬ ಜೈನಮಹಿಳಾ ಪರಿಷತ್ತು ಮುಂತಾದುವುಗಳು.

ಈ ಕಾರ್ಯಗಳಿಗಾಗಿ ಮಹಾರಾಷ್ಟ್ರದಲ್ಲಿಯ ಜೈನ ಸಮಾಜದೊಳಗಿನ ಪ್ರಮುಖರಾದ ಸ್ತ್ರೀಪುರುಷರು ಕೂಡುತ್ತಾರೆ. ಈ ಸಮಯದಲ್ಲಿ ಜೈನರ ಹೊರತು ಬೇರೆ ಕೆಲವು ವಿದ್ವಾಂಸರು ಸಹ ತಮ್ಮ ಆಗಮನದಿಂದ ಜೈನಪರಿಷತ್ತನ್ನು ಅಲಂಕರಿಸತಕ್ಕವರಿದ್ದಾರೆಂಬುದನ್ನು ತಿಳಿಸುವುದಕ್ಕೆ ನಾವು ಸಂತೋಷಪಡುತ್ತೇವೆ. ಈ ಬಗ್ಗೆ ತಮಗೆ ಸ್ವಾಗತ ಕಮಿಟಿಯ ವತಿಯಿಂದ ಬಹು ವಿನಯಪೂರ್ವಕವಾಗಿ ವಿಜ್ಞಾಪನೆಮಾಡಿಕೊಳ್ಳುವುದೇನೆಂದರೆ:— ತಾವು ಈ ಸಮಾರಂಭಕ್ಕೋಸ್ಕರ ಸಾಂಗಲಿಗೆ ತಮ್ಮ ಆಪ್ತ ಇಷ್ಟರೊಡನೆ ಅವಶ್ಯವಾಗಿ ಬರಬೇಕು. ತಾವು ಈ ಪ್ರಾರ್ಥನೆಯನ್ನು ಮಾನ್ಯಮಾಡಿ, ಸಭೆಯಮೇಲೆ ಉಪಕಾರಮಾಡುವಿರೆಂದು ತುಂಬಾ ಕೋರುತ್ತೇವೆ.

ಸಾಂಗಲಿ-ಇದು ರಾಜಧಾನಿಯೂ, ನೋಡತಕ್ಕಂಥ ಅತ್ಯುತ್ತಮ ಸ್ಥಳವೂ ಇದ್ದು, ಇಲ್ಲಿಯ ಹವೆ, ನೀರು ಮುಂತಾದುವುಗಳು ಚೆನ್ನಾಗಿರುತ್ತವೆ. ಆದದರಿಂದ ತಾವು ಅಗತ್ಯ ದಯಮಾಡಬೇಕು. ಲೋಭವಿರಲಿ ಇತಿ ವಿಜ್ಞಾಪನೆ.

ತಮ್ಮ ವಿಧೇಯ,
ಬೆಳಗಾಂವಿ
ತಾ॥ ೫-೧-೯೧೧.
ಬಾಬಾಜಿರಾವ ಬಿರವಾತೆ,
ಸ್ವಾಗತಕಮಿಟಿಯ ಅಧ್ಯಕ್ಷರು
ಸಾಂಗಲಿ.

ಬಹುಮಾನೋತ್ಸವವು.

ನಾವು ಮೊದಲು ತಿಳಿಸಿದ್ದಂತೆ ರಾಜಧಾನಿಯ ನಿವಾಸಿಗಳು ವೈಣಿಕಶಿಖಾಮಣಿ ಮ॥ ಶೇಷಣ್ಣನವರಿಗೆ ರತ್ನಖಚಿತವಾದ ಬಾಜುಬಂದನ್ನು ಕೊಟ್ಟು ಬಹುಮಾನಿಸಲು ಕಳೆದ ತಾ॥ ೯ ನೇ ಸೋಮವಾರ ಸಾಯಂಕಾಲ ೬ ಗಂಟೆಯಲ್ಲಿ ರಾಜಧಾನಿಯ ಟೌನ್‌ಹಾಲಿನಲ್ಲಿ ಒಂದು ದೊಡ್ಡ ಸಭೆಯನ್ನು ಸೇರಿಸಿದ್ದರು. ಡಿ॥ ಕ॥ ಸರದಾರ್ ಎಂ. ಕಾಂತರಾಜ ಅರಸಿನವರು, ವೈಸ್‌ಪ್ರೆಸಿಡೆಂಟ್ ಮ॥ ಎಂ. ಜಿ. ಕೃಷ್ಣಸ್ವಾಮಿರಾಯರು, ಸಿವಿಲ್‌ಸರ್ಜನ್ ಮ॥ ಕೃಷ್ಣಸ್ವಾಮಯ್ಯರ್ರವರು, ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ಮಾಸ್ಟರ್ ಮ॥ ಎಂ. ವೆಂಕಟಕೃಷ್ಣಯ್ಯನವರು ಮೊದಲಾದ ಅಧಿಕಾರಿಗಳೂ, ರಾಜವರ್ಗದವರೂ, ಲಾಯರುಗಳೂ, ವರ್ತಕರೂ ದಯಮಾಡಿಸಿದ್ದರು. ಗ್ಯಾಲರಿ ಮೇಲೆ ವಿದ್ಯಾರ್ಥಿಗಳಿಗೂ ಮಹಡಿಯ ಮೇಲೆ ಸ್ತ್ರೀಯರಿಗೂ ಸ್ಥಳವೇರ್ಪಡಿಸಲ್ಪಟ್ಟಿದ್ದಿತು. ಹೊರಗಡೆ ತಿಮ್ಮದಾಸಪ್ಪನ ಓಲಗವು ಶ್ಲಾಘ್ಯತರವಾಗಿ ಆಗುತಲಿದ್ದಿತು. ಮ॥ ಶೇಷಣ್ಣನವರು ಶ್ರೀಮದ್ಯುವರಾಜರ ವಿವಾಹ ಮಹೋತ್ಸವದಲ್ಲಿ ಅರಮನೆಯಿಂದ ಕೊಡಲ್ಪಟ್ಟ ಛತ್ರ ಚಾಮರ ಬಾಲ್ಯ ಕಟ್ಟಿಗೆ ಕೊಂಬು ಕಹಳೆ ವಾದ್ಯ ಮೊದಲಾದ ಬಿರುದುಗಳೊಡನೆ ಮ್ಯಾನಾದಲ್ಲಿ ಕುಳಿತು, ಕೋಟೆಯಿಂದ ಸಂತೇಬೀದಿ ದೊಡ್ಡಪೇಟೆ ಮೊದಲಾದ ಮಾರ್ಗಗಳಲ್ಲಿ ಉತ್ಸವಗೊಂಡು ೬ ಗಂಟೆಗೆ ಸರಿಯಾಗಿ ಟೌನ್‌ಹಾಲಿಗೆ ಬಂದರು. ಆ ಕೂಡಲೆ ಬಹುಮಾನಸಂಘದ ಪ್ರೆಸಿಡೆಂಟರಾದ ಮ॥ ಕೆ. ಎನ್. ಶ್ರೀಕಂಠಯ್ಯನವರು ಮೊದಲಾದವರು ಶಿಖಾಮಣಿಯವರನ್ನು ಅವರ ಮುಖ್ಯಾಧಾರವಾದ ವೀಣೆಯ ಸಮೇತ ಬಾಗಿಲಿನಲ್ಲಿ ಇದಿರ್ಗೊಂಡು ಒಳಗೆ ಕರೆದುಕೊಂಡು ಬಂದು ಉಚಿತಾಸನದಲ್ಲಿ ಕುಳ್ಳಿರಿಸಿದರು. ಅನಂತರ ಮ॥ ವೀಣೆ ಭಕ್ಷಿ ಸುಬ್ಬಣ್ಣನವರು ೧೦ ನಿಮಿಷಕಾಲ ವೀಣೆಯನ್ನು ನುಡಿಸುತ ಗಾನಮಾಡಿದರು. ಇವರ ಕೂಡ ಮ॥ ಚಿಕ್ಕರಾಮಯ್ಯನವರು ಹಾಡಿದರು. ಮತ್ತೂ ನಾರ್ಮಲ್ ಸ್ಕೂಲಿನ ಸಂಗೀತೋಪಾಧ್ಯಾಯರಾದ ಮ॥ ಎಚ್. ವಿ. ಕೃಷ್ಣರಾವ್, ಬಿ. ಎ., ಯವರು ವೀಣೆಯನ್ನು ನುಡಿಸಿದರು. ಮ॥ ಸುಬ್ಬಣ್ಣನವರ ವೀಣಾವಾದನವೂ, ಗಾನವೂ ಶ್ಲಾಘ್ಯವಾಗಿದ್ದುವು. ಅನಂತರ ಸಂಗೀತವಿದ್ವಾನ್ ಮ॥ ವಾಸುದೇವಾಚಾರ್ಯರು ೧೦ ನಿಮಿಷದವರೆಗೆ ಗಾನಮಾಡಿದರು. ಇವರು ಈ ಸಂಗೀತ ವಿದ್ಯೆಯನ್ನು ಶಾಸ್ತ್ರೋಕ್ತವಾಗಿ ಅಭ್ಯಾಸಮಾಡಿರುವರಲ್ಲದೆ ಸಾಹಿತ್ಯವನ್ನೂ ಬಲ್ಲವರಾಗಿ ತಕ್ಕಮಟ್ಟಿಗೆ ಕವಿತೆಯನ್ನೂ ಮಾಡಬಲ್ಲರು. ಅನಂತರ ಸುಪ್ರಸಿದ್ಧರಾದ ಸಂಗೀತ ವಿದ್ವಾನ್ ಮ॥ ಬಿ. ಕೃಷ್ಣಪ್ಪನವರು ೪೫ ನಿಮಿಷಗಳವರೆಗೆ ಗಾನಮಾಡಿ ಸಭಿಕರೆಲ್ಲರನ್ನೂ ತಮ್ಮ ಗಾನಾನಂದಸಾಗರದಲ್ಲಿ ಮುಳುಗಿಸಿದರು. ಈ ವಿದ್ವಾಂಸರ ಕೂಡ ಹಾಡಿದ ಅವರ ಶಿಷ್ಯರಾದ ಮ॥ ರಾಚಪ್ಪನವರ ಸ್ವರವೂ ಬಹು ಇಂಪಾಗಿದ್ದಿತು. ಕಡೆಯಲ್ಲಿ ಮ॥ ಶಿಖಾಮಣಿಯವರೇ ಸ್ವಲ್ಪಕಾಲ ವೀಣೆಯನ್ನು ನುಡಿಸಿ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿದರು. ತರುವಾಯ ಬಹುಮಾನ ವಿನಿಯೋಗಸಂಘದ ಪ್ರೆಸಿಡೆಂಟರ ಪ್ರಾರ್ಥನೆಯ ಮೇರೆಗೆ ಮ॥ ಎಂ. ವೆಂಕಟಕೃಷ್ಣಯ್ಯನವರು ಮ॥ ಶಿಖಾಮಣಿಗಳ ಗುಣಕಥನವನ್ನು ಮಾಡುವಾಗ್ಗೆ ಅವರು ಸ್ವಸಾಮರ್ಥ್ಯದಿಂದ ಅದ್ಭುತವಾದ ಪಾಂಡಿತ್ಯವನ್ನು ಸಂಪಾದಿಸಿ ಕನ್ಯಾಕುಮಾರಿಯಿಂದ ಬರೋಡಾ ಸಂಸ್ಥಾನದವರೆಗೂ ಸಂಚರಿಸಿ, ಮಹಾರಾಜರುಗಳಿಂದಲೂ, ರಾಜರುಗಳಿಂದಲೂ, ಭೂಸ್ವಾಮಿಗಳಿಂದಲೂ ದೊಡ್ಡ ದೊಡ್ಡ ಅಧಿಕಾರಿಗಳಿಂದಲೂ ಬಂಗಾರದ ತೋಡ, ಪದಕ,ಕಂಠಿ, ಗಂಟೆ ಮೊದಲಾದ ಬಹುಮಾನಗಳನ್ನು ಪಡೆದು ನಮ್ಮ ದೇಶಕ್ಕೇ ಅಪಾರವಾದ ಕೀರ್ತಿಯನ್ನು ಸಂಪಾದಿಸಿರುವುದಲ್ಲದೆ, ನಮ್ಮ ಶ್ರೀಮನ್ ಮಹಾರಾಜರವರಿಂದಲೂ ಅತಿಶಯವಾದ ಮರ್ಯಾದೆಗಳನ್ನು ಹೊಂದಿರುವ ವಿಚಾರವನ್ನು ವಿಶದವಾಗಿ ಹೇಳಿದರು. ಮತ್ತೂ ನಮ್ಮ ಮೈಸೂರ ಸೀಮೆಯವರು ಒಳ್ಳೇ ಮೇಧಾವಿಗಳೆಂದು ಭರತಖಂಡದಲ್ಲಲ್ಲದೆ ಪ್ರಪಂಚದ ಬಹುಭಾಗದಲ್ಲೂ ಪ್ರಖ್ಯಾತರಾಗಿರುತ್ತಾರೆ. ಈಗ ನಮ್ಮ ಚೀಫ್ ಇಂಜನೀರಾದ ಮ॥ ವಿಶ್ವೇಶ್ವರಯ್ಯನವರಂತೆ ನಮ್ಮ ಯುವಕರನೇಕರು ಪರದೇಶಗಳಿಗೆ ಹೋಗಿ ಶ್ಲಾಘ್ಯವಾದ ಪ್ರಶಸ್ತಿಗಳನ್ನು ಪಡೆದು ಖ್ಯಾತಿಯನ್ನು ಸಂಪಾದಿಸಿಕೊಂಡು ಬರುತಲಿರುವರು. ಒಬ್ಬ ಕವಿಯು ಪರದೇಶಗಳನ್ನೆಲ್ಲ ಸುತ್ತಿ ತನ್ನ ದೇಶಕ್ಕೆ ಬಂದು ಸ್ವಸ್ಥಳಕ್ಕಿಂತ ಅತಿಶಯವಾದುದು ಬೇರೊಂದು ಸ್ಥಳವಿಲ್ಲವೆಂದು ಹೇಳಿರುವಪ್ರಕಾರ ಮ॥ ಶಿಖಾಮಣಿಯವರಿಗೆ ಸ್ವದೇಶೀಯರಾದ ರಾಜಧಾನಿಯವರು ಮರ್ಯಾದಿಸುವುದು ಶ್ಲಾಘ್ಯವಾದುದೇಸರಿ. ನಮ್ಮ ಪ್ರಭುಗಳು ದೇಶಕ್ಕೆಲ್ಲ ಹೇಗೆ ಮುಖ್ಯರೋ ಹಾಗೆ ನಮ್ಮ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಸರದಾರ್ ಎಂ. ಕಾಂತರಾಜ ಅರಸಿನವರು ಈ ಪಟ್ಟಣಕ್ಕೆ ಮುಖ್ಯರಾದುದರಿಂದ ಅವರು ಈ ಬಹುಮಾನವನ್ನು ಪುರನಿವಾಸಿಗಳ ಪರವಾಗಿ ಕೊಡತಕ್ಕದು ಯುಕ್ತವಾದುದೆಂದು ತಿಳಿಸಿದರು. ತರುವಾಯ ಮ॥ ವಾಸುದೇವಾಚಾರ್ಯರು ಮ॥ ಶೇಷಣ್ಣನವರ ಪರವಾಗಿ ರಚಿಸಿದ್ದ ಸಂಸ್ಕೃತ ಶ್ಲೋಕಗಳನ್ನು ಹೇಳಿ ಅದರ ಅರ್ಥವನ್ನು ಕನ್ನಡದಲ್ಲಿ ತಿಳಿಸಿದರು. ಈ ಶ್ಲೋಕಗಳು ಸಾಕ್ಷಾತ್ ಕೃಷ್ಣಾವತಾರವಾದ ಶ್ರೀ ಕೃಷ್ಣರಾಜಪ್ರಭುಗಳನ್ನು ಸೇವಿಸಲು ಆದಿಶೇಷನು ಈ ಶೇಷಣ್ಣನಾಗಿ ಅವತರಿಸಿ ತನ್ನ ವೀಣಾಗಾನದಿಂದ ಸೇವಿಸುತ್ತಿರುವನು ಎಂದು ಮೊದಲಾದ ಉತ್ಪ್ರೇಕ್ಷೆಗಳು ಮನೋರಂಜಕವಾಗಿ ಮಾಡಲ್ಪಟ್ಟಿದ್ದುವು. ಮ॥ ರಾಚಪ್ಪನವರು ಕನ್ನಡ ಪದ್ಯಗಳನ್ನು ಸುಸ್ವರದಿಂದ ಹಾಡಿದರು. ಆಮೇಲೆ ಒಬ್ಬ ವೈದಿಕರು ವೈದಿಕಮಂಡಲಿಯಪರವಾಗಿ ವಂದನಾಶ್ಲೋಕಗಳನ್ನು ಹೇಳಿದರು. ತರುವಾಯ ಮ॥ ಕಾಂತರಾಜ ಅರಸಿನವರು ಅಗ್ರಾಸನವನ್ನು ಅಲಂಕರಿಸಿ, "ಈ ಸಂಗೀತವಿದ್ಯೆಯು ವೇದೋಕ್ತವಾದುದು. ದೇವಾಧಿದೇವತೆಗಳೆಲ್ಲರಿಗೂ ಇದು ಬೇಕಾದುದರಿಂದಲೇ ಈಶ್ವರನು ಸಾಮಗಾನಲೋಲನೆಂದು ಹೇಳಲ್ಪಟ್ಟಿದ್ದಾನೆ. ಇಂಥ ಉತ್ಕೃಷ್ಟವಾದ ವಿದ್ಯೆಯು ದುರ್ಮಾರ್ಗದಲ್ಲಿ ಪ್ರಯೋಗಿಸಲ್ಪಟ್ಟಿರುವುದರಿಂದ ಇದಕ್ಕೆ ಅಪಪ್ರಥೆಯು ಬಂದು ಅನೇಕರು ಈ ವಿದ್ಯೆಯನ್ನು ಅಭ್ಯಾಸಮಾಡಲು ಹಿಂಜರಿಯುವರು. ಅದುಕಾರಣ, ಇದನ್ನು ಸನ್ಮಾರ್ಗದಲ್ಲಿ ಪ್ರಯೋಗಿಸಿ, ಅಭಿವೃದ್ಧಿಗೆ ತರುವುದು ಅತ್ಯವಶ್ಯಕವು. ಮ॥ ಶಿಖಾಮಣಿಯವರ ಗುಣಕಥನವನ್ನು ಹಿಂದೆ ಭಾಷಣ ಮಾಡಿದ ಮ॥ ವೆಂಕಟಕೃಷ್ಣಯ್ಯನವರು ಮೊದಲಾದವರು ವಿಶದವಾಗಿ ತಿಳಿಸಿರುತ್ತಾರೆ. ನಮ್ಮ ಸೀಮೆಯಲ್ಲಿರತಕ್ಕ ಪಂಡಿತರುಗಳ ಸಂಖ್ಯೆಯು ಬೆರಲುಗಳನ್ನು ಮಡಿಸಿ ಎಣಿಸುವಷ್ಟು ಇಲ್ಲವು. ಇಂಥದುರಲ್ಲಿ ಇರುವ ಅಲ್ಪಸ್ವಲ್ಪದವರೂ ಒಬ್ಬರಿಗೊಬ್ಬರು ಮೈತ್ರಿಯಿಂದಿಲ್ಲದಿರುವುದು ಅತ್ಯಂತ ಶೋಚನೀಯವಾದುದೇ ಸರಿ. ಆದರೆ ಈಗ ಮ॥ ಶಿಖಾಮಣಿಯವರಿಗೆ ಬಹುಮಾನವನ್ನು ಮಾಡಲು ಇಲ್ಲಿಯ ವಿದ್ವಾಂಸರೆಲ್ಲರೂ ಪ್ರಮುಖರಾಗಿರುವುದು ವಿಶೇಷ ಸಂತೋಷಪ್ರದವಾದುದು. ಸ್ಥಳಪರಸ್ಥಳಗಳಲ್ಲಿ ರಾಜಾಧಿರಾಜರುಗಳಿಂದ ಅಪಾರವಾದ ಮರ್ಯಾದೆಯನ್ನು ಹೊಂದಿರುವ ಮ॥ ಶೇಷಣ್ಣನವರಿಗೆ ರಾಜಧಾನಿಯ ನಿವಾಸಿಗಳು ಈ ದಿವಸ ರತ್ನಖಚಿತವಾದ ಬಾಜುಬಂದನ್ನು ಬಹುಮಾನಿಸುವುದು ಭೂಷಣವಾದುದಲ್ಲದೆ, ಅವರ ಶಿಷ್ಯನಾದ ನನಗೆ ಈ ಬಹುಮಾನವನ್ನು ಪುರನಿವಾಸಿಗಳ ಪರವಾಗಿ ಕೊಡುವ ಕಾರ್ಯವು ಬಂದುದಕ್ಕಾಗಿ ನಾನು ತುಂಬಾ ಸಂತುಷ್ಟನಾಗಿರುತ್ತೇನೆ." ಎಂದು ಮೊದಲಾಗಿ ಭಾಷಣಮಾಡಿ, ಮ॥ ಶಿಖಾಮಣಿಗಳನ್ನು ಬಾಜುಬಂದಿನಿಂದ ಅಲಂಕರಿಸಿ, ೧ ಜತೆ ಶಾಲನ್ನೂ, ಶಲ್ಯವನ್ನೂ, ವೀಣೆಯಮೇಲೆ ಹೊದ್ದಿಸಲು ಕಿನಕಾಪಿನ ಗೌಸನ್ನೂ ದಯಪಾಲಿಸಿ ಹೂಮಾಲಿಕೆಯನ್ನು ಹಾಕಿದರು. ತರುವಾಯ ಅಡ್ವೋಕೇಟರೂ ಲೆ॥ ಕೌನ್ಸಿಲ್ ಮೆಂಬರರೂ ಆದ ಮ॥ ಎಂ. ಸಿ. ರಂಗಯ್ಯಂಗಾರರು— ಮ॥ ಕಾಂತರಾಜ ಅರಸಿನವರು ಅಗ್ರಾಸನವನ್ನು ವಹಿಸಿ, ಸಭಾಕಾರ್ಯವನ್ನು ಸಭಿಕರ ಪ್ರಾರ್ಥನೆಯ ಮೇರೆಗೆ ನೆರವೇರಿಸಿದುದಕ್ಕಾಗಿ ಸಭಿಕರ ಪರವಾಗಿ ವಂದಿಸಿದಮೇಲೆ, ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಮ॥ ಶಿಖಾಮಣಿಗಳು ಪುರನಿವಾಸಿಗಳಿಗೆ ತಮ್ಮ ಕೃತಜ್ಞತೆಯನ್ನರ್ಪಿಸಿದರು. ಗಂಧಪುಷ್ಪವಿನಿಯೋಗದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಬಹುಮಾನ ಕಾರ್ಯಕ್ಕಾಗಿ ೫೧೦-೦-೩ ಪೈ ಚಂದಾ ಎತ್ತಲ್ಪಟ್ಟಿದ್ದು ಬಾಜುಬಂದಿಗೆ ೩೩೦-೬-೦ ಮನಿಪರ್ಸಿಗೆ ೧೦೦ ರೂ., ವೀಣೆ ಗೌಸಿಗೆ ೫೭-೧೩-೬ ರೂ. ವಾದ್ಯ ಗಂಧ-ಪುಷ್ಪ ಮೊದಲಾದುವುಗಳಿಗೆ ೧೩-೯-೯ ರೂ. ವೆಚ್ಚವಾಗಿರುವುದು. ಈ ಬಹುಮಾನ ಸಮಾರಂಭವು ನಿರ್ವಿಘ್ನವಾಗಿಯೂ, ವಿಜೃಂಭಣೆಯಿಂದಲೂ ನಡೆಯಲು, ಮತ್ತೂ ಚಂದಾಹಣವನ್ನು ಕೂಡಿಸಲು ಬಹುಮಾನ ವಿನಿಯೋಗ ಸಂಘದ ಅಧ್ಯಕ್ಷರಾದ ಮ॥ ಕೆ. ಎನ್. ಶ್ರೀಕಂಠಯ್ಯನವರು ಮತ್ತೂ ಮೆಂಬರುಗಳೂ ಕಾರಣಭೂತರು.

ಶ್ರೀಮನ್ ಮಹಾರಾಜರವರ ಸಂಸ್ಥಾನದ ಸಂಚಾರ.

ಕಳೆದ ತಾ॥ ೭ ರ ಮಧ್ಯಾಹ್ನ ೧ ಗಂಟೆಯಲ್ಲಿ ಶ್ರೀಮನ್ ಮಹಾರಾಜರವರು, ಯುವರಾಜರು, ಪ್ರೈವೆಟ್ ಸೆಕ್ರೆಟರಿ ಮೆ॥ ಆರ್. ಎಚ್. ಕ್ಯಾಂಬಲ್‌ರವರು, ರೆ॥ ಕಮಿಷನರ್ ರಾವ್‌ಬಹದ್ದೂರ್ ಮ॥ ಎ. ರಂಗಸ್ವಾಮಯ್ಯಂಗಾರ್ರು ಹುಜೂರು ಸೆಕ್ರೆಟರಿ ಮ॥ ಪಿ. ರಾಘವೇಂದ್ರರಾಯರು, ಅ॥ ಸೆಕ್ರೆಟರಿ ಮೆ॥ ಮಿರ್ಜಾ ಇಸ್ಮಾಯಿಲ್‌ರವರು, ಮ॥ ಎ. ವಿ. ಸುಬ್ರಹ್ಮಣ್ಯರಾಜ ಅರಸಿನವರು ಮತ್ತೂ ಪರಿವಾರದೊಡನೆ ೩ ಮೋಟಾರು ಬಂಡಿಗಳಲ್ಲಿ ಬೆಂಗಳೂರಿಂದ ಹೊರಟು ನಿಟ್ಟೂರನ್ನು ಸಾಯಂಕಾಲ ೫ ಗಂಟೆಗೆ ತಲುಪಿದರು. ತುಮಕೂರ ಡೆ॥ ಕ॥ ಮ॥ ಕೆ. ಎಸ್. ದೊರಸಾಮಯ್ಯರು ತಮ್ಮ ಎಲ್ಲೆಯಿಂದ ಮಹಾರಾಜರ ಸ್ವಾರಿಯ ಕೂಡ ಹೊರಟರು. ಶ್ರೀಮನ್ಮಹಾರಾಜ ಸಹೋದರರ ಸ್ವಾರಿಯು ಬೆಂಗಳೂರನ್ನು ಬಿಟ್ಟು ನಿಟ್ಟೂರನ್ನು ತಲುವ ವರೆಗೂ ದಾರಿಯುದ್ದಕ್ಕೂ ಮುಖ್ಯವಾದ ಗ್ರಾಮಗಳ ಮುಂಗಡೆ ಗ್ರಾಮಸ್ಥರು ಚಪ್ಪರಗಳನ್ನೂ ಕಮಾನುಗಳನ್ನೂ ಹಾಕಿ ಅಲಂಕರಿಸಿ ನಿರೀಕ್ಷಿಸಿಕೊಂಡಿದ್ದು ಮಹಾಸ್ವಾಮಿಯವರ ಸ್ವಾರಿಯು ಬಿತ್ತೈಸುತ್ತಲೇ ಫಲಪುಷ್ಪಾದಿಗಳನೊಪ್ಪಿಸಿ, ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು. ಪ್ರಭುಗಳ ದರ್ಶನಕ್ಕಾಗಿ ಹೆಣ್ಣು ಗಂಡು ಮಕ್ಕಳಾದಿಯಾಗಿ ಸರ್ವರೂ ಮುಂದಾಗಿ ಬಂದು ನಿರೀಕ್ಷಿಸಿಕೊಂಡಿದ್ದರು. ಮಹಾಸ್ವಾಮಿಗಳ ಸ್ವಾರಿಯು ನಿಟ್ಟೂರಿಗೆ ಬರುವಲ್ಲಿ ಅವರ ಮೋಟಾರು ಬಂಡಿಯು ನೂರಾರು ಹೂಮಾಲೆ ಮತ್ತೂ ಗುಚ್ಛಗಳಿಂದ ತುಂಬಿಹೋಗಿದ್ದಿತು. ನಿಟ್ಟೂರು ಗ್ರಾಮದಲ್ಲಿ ಎಕ್ಸಿಕ್ಯುಟೀವ್ ಇಂಜನಿಯರೂ, ಎಕ್ಸೈಜ್ ಅ॥ ಕಮಿಷನರೂ, ಪೋಲೀಸು ಸೂಪರಿಂಟೆಂಡೆಂಟರೂ, ಡಿ॥ ಫಾರೆಸ್ಟಾಫೀಸರೂ, ಸ್ಕೂಲುಗಳ ಡಿ॥ ಇನ್‌ಸ್ಪೆಕ್ಟರೂ ಮೊದಲಾದ ಡಿಸ್ಟ್ರಿಕ್ಟ್ ಅಧಿಕಾರಿಗಳು ಮುಂದಾಗಿ ಬಂದಿದ್ದು ಊರಹೊರಗೆ ಗ್ರಾಮದ ಮುಖಂಡರ ಸಮೇತ ಕಾದುಕೊಂಡಿದ್ದು ಪ್ರಭುಗಳ ಸ್ವಾರಿಯು ಬಿತ್ತೈಸುತ್ತಲೇ ಫಲಪುಷ್ಪಾದಿಗಳನ್ನರ್ಪಿಸಿ, ಮರ್ಯಾದಿಸಿದ ಮೇಲೆ ಅಧಿಕಾರಿಗಳ ಪರಿಚಯವು ಮಾಡಿಸಲ್ಪಟ್ಟಿತು. ಅನಂತರ ಮಹಾಸ್ವಾಮಿಯವರುಗಳು ಧ್ವಜಪತಾಕೆಗಳಿಂದಲೂ, ತಳಿರು ತೋರಣಗಳಿಂದಲೂ ಮನೋಹರವಾಗಲಂಕರಿಸಲ್ಪಟ್ಟಿದ್ದ ಟ್ರಾವಲರ್ಸ್ ಬಂಗಲಿಯ ಬಿಡಾರಕ್ಕೆ ದಯಮಾಡಿಸಿದರು. ಇತರರು ಗುಡಾರಗಳಲ್ಲಿಳಿದುಕೊಂಡರು. ಮಾರನೆ ಬೆಳಿಗ್ಗೆ ಶ್ರೀಮನ್ಮಹಾರಾಜ ಸಹೋದರರು ಪ್ರೈವೇಟ್ ಸೆಕ್ರೆಟರಿ ಮತ್ತೂ ರೆ॥ ಕಮಿಷನರುಗಳೊಡನೆ ೨ ಕುದುರೆಯ ರಥದಲ್ಲಿ ಕುಳಿತು ೩ ಮೈಲಿ ದೂರದಲ್ಲಿರುವ ಗುಬ್ಬಿಗೆ ದಯಮಾಡಿಸಿದರು. ಡಿ॥ ಕಮಿಷನರು ಮತ್ತೂ ಇತರ ಅಧಿಕಾರಿಗಳು ಮಹಾಸ್ವಾಮಿಯವರ ಸ್ವಾರಿಯ ಕೂಡ ಹೊರಟರು. ಗುಬ್ಬಿಯ ನಿವಾಸಿಗಳು ಪ್ರಭುಗಳನ್ನಿದಿರ್ಗೊಂಡು ಸತ್ಕರಿಸುವುದಕ್ಕಾಗಿ ಊರಿನಲ್ಲಿ ಮುಖ್ಯವಾದ ಮಾರ್ಗವನ್ನು ಸಾರಣೆಕಾರಣೆಗಳಿಂದಲೂ, ತಳಿರುತೋರಣ ಕದಳೀಸ್ತಂಭಗಳಿಂದಲೂ, ಧ್ವಜಪತಾಕೆಗಳಿಂದಲೂ, ಕಮಾನು

ಗಳಿಂದಲೂ, ದಿವ್ಯವಾದ ಚಪ್ಪರದಿಂದಲೂ ಅತ್ಯಂತ ವೈಭವದಿಂದ ಅಲಂಕರಿಸಿ, ಮಹಾಸ್ವಾಮಿಗಳ ಆಗಮನವನ್ನೇ ಇದಿರುನೋಡುತಲಿದ್ದರು. ಸ್ಥಳದವರಲ್ಲದೆ ಪರಸ್ಥಳದಿಂದ ಸಾವಿರಾರು ಜನರು ಪ್ಲೇಗಿನ ಹಾವಳಿಯನ್ನೂ ಲಕ್ಷಿಸದೆ ಬಂದು ಮಾರ್ಗದ ಇಕ್ಕೆಲದಲ್ಲೂ ಕಿಕ್ಕಿರಿದು ನಿಂತಿದ್ದರು. ಚಪ್ಪರದಲ್ಲಿ ಮ|| ಗಳಾದ ಕಪ್ಪಣ್ಣಸೆಟ್ಟರು ಯಜಮಾನ್ ರೇವಣ್ಣನವರು ಯಜಮಾನ್ ಹುಚ್ಚೀರಪ್ಪನವರು, ಶಿವರಾತ್ರಪ್ಪನವರು, ಮುರುಗಪ್ಪನವರು, ಚಿಕ್ಕವೀರಪ್ಪನವರು, ಕೃಷ್ಣಸ್ವಾಮಿ ಸೆಟ್ಟರು ಗೋವಿಂದ ಸೆಟ್ಟರು, ಮಹಮ್ಮದ್ ಅಲಿಸಾಬರು, ಮದಾರ್ ಸಾಬರು, ವೆಂಕಟರಾಮಯ್ಯನವರು ಮತ್ತೂ ವೈದಿಕರು ಫಲಪುಷ್ಪಾದಿಗಳೊಡನೆ ನಿರೀಕ್ಷಿಸಿಕೊಂಡಿದ್ದು, ಪ್ರಭುಗಳ ಸವಾರಿಯು ಚಿತ್ತೈಸುತಲೆ ವೈದಿಕರು ಸ್ವಸ್ತಿವಚನವನ್ನು ಮಾಡಿದರು. ಅನಂತರ ವೆಸ್ಲಿಯನ್ ಮಿಷನ್ ಸ್ಕೂಲಿನ ಹೆಡ್ಮಾಸ್ಟರ್ ಮ|| ಮುರಿಗಪ್ಪನವರು ಸಂಕ್ಷೇಪವಾಗಿಯೂ, ಸ್ವಾರಸ್ಯವಾಗಿಯೂ ಬರೆದಿದ್ದ ವಿಜ್ಞಾಪನಪತ್ರಿಕೆಯನ್ನೋದಿದಮೇಲೆ ಮ|| ಕಪ್ಪಣ್ಣಸೆಟ್ಟರು ಅದನ್ನು ಸಾಗರದಲ್ಲಿ ಬಹು ಮನೋಹರವಾಗಿ ಮಾಡಿಸಲ್ಪಟ್ಟಿದ್ದ ಗಂಧದ ಮರದ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಈ ವಿಜ್ಞಾಪನ ಪತ್ರಿಕೆಯಲ್ಲಿ ಯಾವ ಕುಂದುಕೊರತೆಯೂ ಕಾಣಿಸಲ್ಪಡದೆ, ಮಹಾಪ್ರಭುಗಳು ಗುಬ್ಬಿ ನಿವಾಸಿಗಳ ಮೇಲೆ ಅಂತಃಕರಣವಿಟ್ಟು ಅಲ್ಲಿ ಪ್ಲೇಗು ರೋಗ ಪ್ರಾಪ್ತಿಯಾಗಿದ್ದಾಗ್ಗೂ ಚಿತ್ತೈಸಿದುದಕ್ಕಾಗಿ ತಮ್ಮ ಅಪಾರವಾದ ವಂದನೆಯು ಸೂಚಿಸಲ್ಪಟ್ಟಿತ್ತು. ಪ್ರಭುಗಳು ವಿಜ್ಞಾಪನಪತ್ರಿಕೆಯನ್ನು ವಿಶ್ವಾಸದಿಂದ ಸ್ವೀಕರಿಸಿ, ಈ ವರ್ಷವು ಸುಭಿಕ್ಷವಾಗಿರುವುದೆಂದು ಕೇಳಿ ಸಂತೋಷಿಸುತ್ತೇವೆಂದೂ, ಮುಂದೆ ಇದೇ ರೀತಿ ಸುಭಿಕ್ಷವಾಗಿರಲೆಂದು ದೇವರನ್ನು ಪ್ರಾರ್ಥಿಸುತ್ತೇವೆಂದೂ ಕನ್ನಡದಲ್ಲೇ ಅಪ್ಪಣೆಯನ್ನು ಕೊಡಿಸಿದರು. ಮಹಾಸ್ವಾಮಿಯವರ ಸವಾರಿಯು ಅಲ್ಲಿಂದ ಮುಂದೆ ಶ್ರೀ ಗುಬ್ಬಿಯಪ್ಪನ ದೇವಸ್ಥಾನಕ್ಕೆ ಚಿತ್ತೈಸಿತು. ಅಲ್ಲಿ ಮ|| ಚಿಕ್ಕಮಲ್ಲಪ್ಪ ತಮ್ಮಯ್ಯ ಮುಂತಾದ ವೀರಶೈವರು ಮಹಾಸ್ವಾಮಿಯವರುಗಳನ್ನು ದೇವಸ್ಥಾನದ ಸಕಲ ಮರ್ಯಾದೆಯೊಡನೆ ಇದಿರ್ಗೊಂಡು ಒಳಗೆ ಕರೆದುಕೊಂಡು ಹೋದರು. ಅಲ್ಲಿ ದೇವರ ಪೂಜೆಯು ನಡೆದು ಮಂಗಳಾರತಿಯೊಪ್ಪಿಸಲ್ಪಟ್ಟಿತು. ಅಲ್ಲಿಂದ ತಾಲ್ಲೂಕ್ ಕಚೇರಿಗೆ ದಯಮಾಡಿಸಿ, ಅಲ್ಲಿಯ ರಿಕಾರ್ಡ್, ಖಜಾನೆ, ಪೋಲೀಸಾಫೀಸು, ಸಬ್ ರಿಜಿಸ್ಟ್ರಾರಾಫೀಸು ಇತ್ಯಾದಿ ಆಫೀಸುಗಳನ್ನು ಪರಾಮರಿಸಿದರು. ಮಿ|| ಕ್ಯಾಂಬಲ್‌ರವರು ಅಮಲ್ದಾರರ ಕೂಡ ಆಡಳಿತದ ವಿಚಾರವಾಗಿ ಪ್ರಸ್ತಾಪಿಸುತ್ತ, ಬ್ರಿಟಿಷ್ ಸರ್ಕಾರದ ಜಮಾಬಂದಿ ಪದ್ಧತಿಗೂ, ಮೈಸೂರ ಸೀಮೆಯ ಜಮಾಬಂದಿ ಪದ್ಧತಿಗೂ ಇರುವ ತಾರತಮ್ಯವನ್ನೂ, ಕಂದಾಯವನ್ನೆತ್ತುವ ಪದ್ಧತಿಯನ್ನೂ, ಅಮಲ್ದಾರರಿಗೆ ಮ್ಯಾಜಿಸ್ಟ್ರೇಟು ಮತ್ತೂ ರೆವಿನ್ಯೂ ಅಧಿಕಾರಗಳೆರಡೂ ಇರುವುದರ ಸಾಧಕ ಬಾಧಕಗಳನ್ನೂ ವಿಚಾರಿಸಿದರು. ಅಲ್ಲಿಂದ ಸವಾರಿಯು ೧೧ ಗಂಟೆ ಸಮಯಕ್ಕೆ ನಿಟ್ಟೂರಿಗೆ ಚಿತ್ತೈಸಿತು. ಸಾಯಂಕಾಲ ೪ ಗಂಟೆಯಲ್ಲಿ ಶ್ರೀಮನ್ ಮಹಾರಾಜರೂ, ಯುವರಾಜರೂ ಡೆ|| ಕಮಿಷನರು ಮತ್ತೆ ಕೆಲಪರಿವಾರದೊಡನೆ ಅಶ್ವಾರೂಢರಾಗಿ ಕೆರೆಯೇರಿಯಮೇಲೆ ವಿಹಾರಾರ್ಥವಾಗಿ ಹೊರಟು ಸಂಚರಿಸಿಕೊಂಡು ಬಂದರು.

ತಾ|| ೯ ನೇ ಸೋಮವಾರ ಸಾಯಂಕಾಲ ಶ್ರೀಮನ್ಮಹಾರಾಜ ಸಹೋದರರು ಪರಿವಾರ ಸಮೇತ ನಿಟ್ಟೂರಿಗೆ ೩೩ ಮೈಲಿ ದೂರದಲ್ಲಿರುವ ಕಿಬ್ಬನಹಳ್ಳಿಗೆ ಮೋಟಾರು ಬಂಡಿಯಲ್ಲಿ ಪ್ರಯಾಣಮಾಡಿ ದಾರಿಯುದ್ದಕ್ಕೂ ಸಿಕ್ಕುವ ಹಳ್ಳಿಗಳನ್ನು ಪರಾಮರಿಸಿಕೊಂಡು, ಕಡಬ, ಮಾಯಸಂದ್ರ ತುರುವೆಕೆರೆ ಈ ಸ್ಥಳಗಳಲ್ಲಿ ಕೊಂಚಹೊತ್ತು ನಿಂತು, ಜನಗಳ ಕಷ್ಟಸುಖಗಳನ್ನು ವಿಚಾರಿಸಿದರು. ಮಾಯಸಂದ್ರ ಗ್ರಾಮದವರು ತಮ್ಮ ಬೇಸಾಯಕ್ಕೆ ಸಾಕಷ್ಟು ನೀರು ಒದಗಿಸಲ್ಪಡದಿರುವ ಕೊರತೆಯನ್ನು ಬಿನ್ನೈಸಿಕೊಂಡುದರ ಮೇಲೆ ಡೆ|| ಕಮಿಷನರು ವಿಚಾರಣೆಯ ಬಗೆಗೆ ಗುರ್ತು ಮಾಡಿಕೊಂಡಿದ್ದ ಆಗ್ರಾಮಸ್ಥರ ಕೊರತೆಯ ಭಾಗವನ್ನು ಮಹಾರಾಜರವರಿಗೆ ವಿವರಿಸಿ ಹೇಳಿದರು. ಕಡಬ ಗ್ರಾಮಸ್ಥರು ತಮ್ಮ ಕೆರೆಯಲ್ಲಿ ಎಲ್ಲಕಾಲದಲ್ಲೂ ನೀರು ದೊರೆಯುವಂತೆ ಕೆರೆಯನ್ನು ದೊಡ್ಡದು ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಮತ್ತೂ ಕೊಡಜ್ಜಿ ಕೆರೆಕೆಳಗೆ ಭೂಮಿಯನ್ನು ಮಾಡಿರುವಂಥವರು ಆ ಕೆರೆಯಲ್ಲಿ ಬೇಸಾಯಕ್ಕೆ ಸಾಕಷ್ಟು ನೀರು ಇಲ್ಲದಿರುವ ಅಂಶವನ್ನು, ಮಹಾರಾಜರ ಗೋಚರಕ್ಕೆ ತಂದರು. ತುರುವೆಕೆರೆಯಲ್ಲಿ ಅಮಲ್ದಾರರು ಮ್ಯು|| ಕಮಿಷನರೊಡನೆ ಚಪ್ಪರದಲ್ಲಿ ನಿರೀಕ್ಷಿಸಿಕೊಂಡಿದ್ದು ಮಹಾಸ್ವಾಮಿಯವರ ಸವಾರಿಯು ಚಿತ್ತೈಸುತಲೇ ಫಲಪುಷ್ಪಗಳನ್ನೊಪ್ಪಿಸಿದರು. ಅಲ್ಲಿಂದ ಸವಾರಿಯು ತಿಪ್ಟೂರು ತಾ|| ಕಿಬ್ಬನಹಳ್ಳಿಗೆ ಹೊರಟು ಟ್ರಾವಲರ್ಸ್ ಬಂಗಲೆಯಲ್ಲಿ ನಿಂತಿತು.

ತಾ|| ೧೦ ರ ಬೆಳಿಗ್ಗೆ ಶ್ರೀಮನ್ಮಹಾರಾಜ ಸಹೋದರರೂ ಪ್ರೈವೇಟ್ ಸೆಕ್ರೆಟರಿ ಮತ್ತೂ ಡೆ|| ಕಮಿಷನರೊಡನೆ ತಿಪ್ಟೂರಿಗೆ ದಯಮಾಡಿಸಿ, ತಾಲ್ಲೂಕು ಕಚೇರಿ ಮೊದಲಾದ ಆಫೀಸುಗಳನ್ನು ಪರಾಮರಿಸಿಕೊಂಡು ಹಿಂತಿರುಗುವಾಗ್ಗೆ, ಅಲ್ಲಿನ ಜನರು ಪ್ಲೇಗು ಹಾವಳಿಯಿಂದ ತಿಪ್ಟೂರನ್ನು ಬಿಟ್ಟು ಹೊರಗೆ ವಾಸಮಾಡುತಲಿದ್ದುದರಿಂದ ಮ್ಯು|| ಕಮಿಷನರು ಕರಡಿಯೆಂಬಲ್ಲಿ ನಿರೀಕ್ಷಿಸಿಕೊಂಡಿದ್ದು ವಿಜ್ಞಾಪನಪತ್ರಿಕೆಯನ್ನು ಒಂದು ಸುಂದರವಾದ ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಅನಂತರ ಸಾಯಂಕಾಲದಲ್ಲಿ ಮಹಾಸ್ವಾಮಿಯವರ ಸವಾರಿಯು ಇಂದಿಸ್ಕೆರೆ ಗ್ರಾಮಕ್ಕೆ ದಯಮಾಡಿಸಿ, ಅಡಿಕೆ ತೋಟಗಳನ್ನೂ, ಭೂಮಿಗಳನ್ನೂ, ಸಾಹಣೆ ಕಲ್ಲುಗಳನ್ನೂ ಬಾಂದುಗಳನ್ನೂ ಪರಾಮರಿಸಿಕೊಂಡು ಬಿಡಾರಕ್ಕೆ ಹಿಂತಿರುಗಿತು.

ಮೈಸೂರ್ ಸ್ಟಾರ್.

೧೯೧೧ ನೇ ಜನವರಿ ತಾ|| ೧೬ ನೇ ಸೋಮವಾರ.

ವೈಸ್ರಾಯರು ಮತ್ತೂ ನಿಯಮನಿರ್ಮಾಣ ಸಭೆ.

ಹೊಸ ವೈಸ್ರಾಯರಾದ ಲಾರ್ಡ್ ಹಾರ್ಡಿಂಜ್ ಪ್ರಭುಗಳು ಬಂದನಂತರ ಅವರ ಅಧ್ಯಕ್ಷತೆಯಲ್ಲಿ ಪ್ರಮುಖ ನಿಯಮನಿರ್ಮಾಣ ಸಭೆಯು ಮೊದಲಾವೃತ್ತಿ ಕೂಡಿದುದು ಕಳೆದ ತಾ|| ೩ ರಲ್ಲಿ. ಅದರ ಆರಂಭ ಸಮಯದಲ್ಲಿ ಅಧ್ಯಕ್ಷರು ಈ ಕೆಳಗೆ ಹೇಳುವಂತೆ ಉಪನ್ಯಾಸಮಾಡಿದರು. "ಲಾರ್ಡ್ ಮಿಂಟೋರವರ ಅಸಾಧಾರಣವಾದ ವಿವೇಕಾನುಭವಗಳ ಫಲರೂಪವಾಗಿ ಸುಧಾರಣೆಗೊಂಡಿರುವ ಈ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸುವುದಕ್ಕೆ ನನಗೆಷ್ಟೋ ಸಂತೋಷವಾಗಿದೆ. ಸಭಾಸ್ತಾರರನ್ನಾರಿಸುವ ವಿಷಯದಲ್ಲಿ ಸೌಕರ್ಯವನ್ನುಂಟುಮಾಡಿ ಆ ಸಭಿಕರ ಅಧಿಕಾರ ಸ್ವಾತಂತ್ರ್ಯಗಳು ಹೆಚ್ಚಿಸಲ್ಪಟ್ಟಿವೆ. ಇದರಿಂದ ಸಭೆಯ ಪರ್ಯಾಲೋಚನೆಗಳಿಗೆ ವಿಶಿಷ್ಟತೆಯು ಪ್ರಾಪ್ತವಾಗಿದೆ. ಈ ದೇಶದ ಕೋಟ್ಯಂತರ ಪ್ರಜೆಗಳ ಕ್ಷೇಮಲಾಭಗಳು ಈ ಸಭೆಯ ಪರ್ಯಾಲೋಚನೆಯ ಫಲವನ್ನನುಸರಿಸಿರುತ್ತವೆ. ನಾವು ಈ ಸಭೆಯಲ್ಲಿ ಅನೇಕ ವಿಷಯಗಳನ್ನು ಚರ್ಚಿಸುತ್ತೇವೆ. ಆ ಸಂದರ್ಭದಲ್ಲಿ ಒಬ್ಬರ ಅಭಿಪ್ರಾಯವನ್ನು ಮತ್ತೊಬ್ಬರು ಸ್ಪಷ್ಟವಾಗಿ ತಿಳಿಯಲಿಕ್ಕಾಗದೆ ಹೋಗಬಹುದು. ಅದರಿಂದ ಮನಸ್ತಾಪಗಳಿಗೆ ಮಾರ್ಗವಾಗುವುದು. ಆದರೆ ಅಂಥ ಅನಿಷ್ಟವಾದ ಆತಂಕಗಳು ಅಂಕುರಿಸದಿರುವಂತೆ ಮಾಡುವುದಕ್ಕಾಗಿ ನಮ್ಮ ಅಭಿಪ್ರಾಯಗಳನ್ನು ಅತ್ಯಂತ ಸ್ಪಷ್ಟವಾಗಿ ವಿವರಿಸುತ್ತ ಬರಬೇಕು. ಹಾಗೆ ಮಾಡಿದರೆ ನಮ್ಮೆಲ್ಲರ ಅಭಿಪ್ರಾಯಗಳೂ ವಿವರವಾಗಿ ತಿಳಿಯುವುದಕ್ಕೆ ಅನುಕೂಲವಾಗುವುದು. ಚರ್ಚನೀಯಾಂಶಗಳನ್ನು ನಾವೆಲ್ಲರೂ ಅನ್ಯೋನ್ಯ ಸಹಾಯದಿಂದ ನೆರವೇರಿಸಿ, ಈ ಮಹಾಸಭೆಯ ಗೌರವಾತಿಶಯಗಳಿಗೆ ಯಾವ ಕೊರತೆಯೂ ಬರದಂತೆ ಮಾಡುವುದಕ್ಕೆ ತಾವೆಲ್ಲರೂ ನನಗೆ ಸಹಾಯಮಾಡುವಿರೆಂದು ನಂಬುತ್ತೇನೆ."

ಲಾರ್ಡ್ ಮಿಂಟೋರವರ ಕಾಲದಲ್ಲಿ ಆರಂಭಿಸಲ್ಪಟ್ಟ ರಾಜ್ಯಕಾರ್ಯಧೋರಣೆಯನ್ನು ಇವರು ಸಂಪೂರ್ಣವಾಗಿ ಅನುಮೋದಿಸಿರುತ್ತಾರೆಂಬುದು ಇವರು ಭರತಖಂಡಕ್ಕೆ ಬರುವುದಕ್ಕೆ ಮುಂಚೆಯಿಂದಲೂ ಇವರು ಮಾಡಿದ ಭಾಷಣಗಳಲ್ಲಿ ವ್ಯಕ್ತವಾಗಿರುತ್ತದೆ. ಈ ದೇಶದ ಭೂಮಿಯಮೇಲೆ ಕಾಲಿಟ್ಟ ಮೊದಲ ದಿನವೂ, ಶಾಸನಸಭೆಯ ಯಾಜಮಾನ್ಯವನ್ನು ವಹಿಸಿದ ಮೊದಲ ದಿನವೂ ಅದೇ ಅಭಿಪ್ರಾಯವನ್ನು ಇವರು ಹೊರಗೆಡಹಿದ್ದಾರೆ. ಲಾರ್ಡ್ ಮಿಂಟೋರವರ ಕಾಲದಲ್ಲಿ ಗಿಡುವಾದ ನವೀನ ಸುಧಾರಣೆಯು ಈ ಪ್ರಭುಗಳ ಕಾಲದಲ್ಲಿ ಸ್ವಾದುವಾದ ಫಲವನ್ನು ಭಾರತೀಯ ಪ್ರಜೆಗಳಿಗೆ ಉಂಟುಮಾಡಿಕೊಡಲು ಸಾಧಕವಾಗಿ ಪರಿಣಮಿಸುವುದೆಂಬ ಆಶೆಯನ್ನು ಇದುವರೆಗಿನ ಲಾರ್ಡ್ ಹಾರ್ಡಿಂಜ್‌ರವರ ಪ್ರವರ್ತನವು ಚೆನ್ನಾಗಿ ಉಂಟುಮಾಡಿರುತ್ತದೆ. ಮೊನ್ನೆತಾನೇ ರಾಷ್ಟ್ರೀಯ ಸಾರ್ವಜನಿಕ ಸಭೆಯ ಪ್ರತಿನಿಧಿಗಳ ಮೊರೆಯನ್ನು ಕೇಳುವುದಕ್ಕೆ ಇವರು ತೋರಿಸಿದ ಮಟ್ಟಿಗೆ ಆದರವನ್ನು ಹಿಂದೆ ಯಾವ ವೈಸ್ರಾಯರೂ ತೋರಿಸಿರಲಿಲ್ಲ. ಇದೇ ತೆರದ ಆದರವು ಇವರ ಅಧಿಕಾರದ ಕೊನೆಯವರೆಗೂ ಇವರಲ್ಲಿ ನೆಲಸಿರಲೆಂದೂ, ಅದು ಕೃತ್ಯರೂಪವಾಗಿ ಶುಭಫಲವನ್ನು ನಮ್ಮ ದೇಶಕ್ಕೆ ಉಂಟುಮಾಡಲು ಸಾಧಕವಾಗಲೆಂದೂ ನಾವು ಹಾರೈಸುತ್ತೇವೆ.

ಇದೇ ಸಭೆಯಲ್ಲಿಯೇ ಭಾರತೀಯರಿಗೆ ಹಿತಕರವಾದ ಒಂದು ಸಂಗತಿಯು ಪರ್ಯವಸನ್ನವಾಯಿತು. ಏನೆಂದರೆ– ದಕ್ಷಿಣಆಫ್ರಿಕಾದಲ್ಲಿ ಭಾರತೀಯರಿಗೆ ಉಂಟಾಗಿರುತ್ತಿರುವ ತೊಂದರೆಗಳು ಸರ್ವವಿದಿತವಾಗಿವೆಯಷ್ಟೆ. ಈ ವಿಷಯವಾಗಿ ಭಾರತೀಯರಿಗೆ ಕ್ಷೇಮವನ್ನುಂಟುಮಾಡುವುದಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡಬೇಕೆಂಬುವುದು ಲಾರ್ಡ್ ಮಿಂಟೋರವರ ಮನಸ್ಸಿನಲ್ಲಿಯೇ ಉಂಟಾಗಿದ್ದಿತು. ಅದು ಈಗ ಲಾರ್ಡ್ ಹಾರ್ಡಿಂಜ್‌ರವರ ಕಾಲದಲ್ಲಿ ಹೊರಬಿದ್ದಿತು. ಆ ಚಿಕಿತ್ಸೆಯ ಕ್ರಮವೇನೆಂದರೆ– ತಮಗೆ ಅನಿರ್ವಚನೀಯವಾದ ತೊಂದರೆಗಳನ್ನು ಕೊಡತಕ್ಕ ಆ ದೇಶಕ್ಕೆ ಈ ದೇಶದ ಜನರನ್ನು ಕೂಲಿ ಮೊದಲಾದುವುಗಳಿಗಾಗಿ ಕಳುಹಿಸಿಕೊಡುವುದನ್ನೇ ತಪ್ಪಿಸಿಬಿಡಬೇಕೆಂಬುದಾಗಿರುತ್ತದೆ. ಇದಕ್ಕಾಗಿ ಒಂದು ವಿಧಿಯನ್ನು ನಿರ್ಮಿಸಿ, ಬರುವ ಜುಲೈ ತಿಂಗಳಿಂದ ಅದು ವ್ಯವಹಾರಕ್ಕೆ ಬರುವಂತೆ ಮಾಡುವವರಾಗಿದ್ದಾರೆ. ತತ್ಸಂಬಂಧವಾದ ಪ್ರಕಟನವನ್ನು ಬರುವ ಏಪ್ರಿಲ್ ತಾ|| ೧ ರಲ್ಲಿ ಪ್ರಕಟಿಸವೆಂದು ಸರ್ಕಾರದವರಿಂದ ಅದೇ ಸಭೆಯಲ್ಲಿಯೇ ಹೇಳಲ್ಪಟ್ಟಿತು. ಆಫ್ರಿಕಾದ ಜನರ ನಿಷ್ಕಾರುಣ್ಯಪೂರಿತವಾದ ಗರ್ವವನ್ನು ತಿದ್ದಿ, ದಾರಿಗೆ ತರಿಸುವುದಕ್ಕೆ ಈ ವಿಧಿಯು ಏರ್ಪಾಟು ಸಮರ್ಪಕವಾಗಿರುತ್ತದಾದಕಾರಣ ಇದನ್ನು ಕೇಳಿ ಭಾರತಪಕ್ಷಪಾತಿಗಳೆಲ್ಲರೂ ಸಂತೋಷಿಸುವರೆಂಬುದಕ್ಕೆ ಸಂಶಯವಿಲ್ಲ. ಲಾರ್ಡ್ ಹಾರ್ಡಿಂಜ್‌ರವರ ಅಧಿಕಾರಶುಭಪರಂಪರೆಗೆ ಈ ವಿಧಿನಿರ್ಮಾಣವೇ ಆರಂಭದ 'ಸ್ವಸ್ತಿಶ್ರೀ' ಯಾಗಿರುವುದೆಂದು ಹೇಳಬಹುದು.

ಚೆನ್ನಪಟ್ಟಣದಲ್ಲಿ ಕೊಲೆಮೇಲೆ ಕೊಲೆ.

ಬೆಂಗಳೂರ ಡಿ|| ಚೆನ್ನಪಟ್ಟಣದಲ್ಲಿ ಕಳೆದ ೩–೪ ತಿಂಗಳಿಂದಲೂ ಬಹು ಹಾವಳಿಯನ್ನು ಮಾಡುತಲಿದ್ದ ಪ್ಲೇಗು ರೋಗವು ಈಗೀಗ ಶಾಂತವಾಗುತ್ತಲಿರುವುದಾಗಿ ಕೇಳುತ್ತೇವೆ. ಈ ತಾ||ನ ಉಳಿದಕತೆ ಈಗ ಪ್ರಬಲಿಸುತ್ತಿದೆ. ಈ ರೋಗದಿಂದ ಅನೇಕ ಮರಣವಾದುದಲ್ಲದೆ ಘಾತುಕರ ಕೊಲೆಗಳೂ ಇತ್ತೀಚೆಗೆ ವಿಶೇಷವಾಗಿ ನಡೆಯಲಾರಂಭವಾಗಿವೆ. ಕಳೆದ ನವಂಬರಿನಲ್ಲಿ ಚನ್ನಪಟ್ಟಣದ ರೇಷ್ಮೆ ವ್ಯಾಪಾರಿ ಬುಡ್ಡೆಸಾಬಿ ಎಂಬುವನನ್ನು ಯಾರೋ ಕೊಂದು ಅವನ ಶವವನ್ನು ಗೋಣಿಚೀಲದಲ್ಲಿ ಹಾಕಿ ಅದನ್ನು ತಿಮ್ಮಸಂದ್ರದ ಹತ್ತಿರ ತಿಬ್ಬೇಗೌಡನ ಕಟ್ಟೆಯಲ್ಲಿ ಬಿಸುಡಿದ್ದರು. ಪೋಲೀಸರು ಘಾತುಕರನ್ನು ಇನ್ನೂ ತಡಕುತಲಿದ್ದಾರೆ. ಇದೇ ಊರಿನ ಸಯ್ಯದ್‌ವಾಡಿಯಲ್ಲಿ ವಾಸವಾಗಿದ್ದ ೨೦ ವರ್ಷ ವಯಸ್ಸಿನ ಕೆಂಚಿಯೆಂಬುವಳು ಕಳೆದ ನವಂಬರ್ ತಾ|| ೧೯ ರಲ್ಲಿ ಕೊಲೆಮಾಡಲ್ಪಟ್ಟು ಹೂಣಲ್ಪಟ್ಟಿರುವಳೆಂದು ಡಿಸೆಂಬರ್ ತಾ|| ೧೯ ರಲ್ಲಿ ಪೋಲೀಸರಿಗೆ ವರ್ತಮಾನ ಬಂದಿತು. ಅವರು ಅನುಮಾನದ ಮೇಲೆ ಹೂವಾಡಿಗರ ಚೆನ್ನತಿಮ್ಮಯ್ಯನೆಂಬುವನನ್ನು ಹಿಡಿದು ಸೆರೆಗಿಟ್ಟಿದ್ದರು. ಮಾರನೆ ಬೆಳಿಗ್ಗೆ ಅವನಿಗೆ ಆ ಸೆರೆಮನೆಯಲ್ಲೇ ಜ್ವರವು ಕಾಣಿಸಿಕೊಳ್ಳಲು ಪೋಲೀಸರು ಪ್ಲೇಗು ತಗಲಿರಬಹುದೆಂದು ತಿಳಿದು ವೈದ್ಯರ ಅಭಿಪ್ರಾಯವನ್ನು ತೆಗೆದುಕೊಂಡು ಅವನ ಮನೆಗೆ ಕಳುಹಿಸಿ ಕಾವಲಿದ್ದರು. ಮತ್ತೂ ಅಮಲ್ದಾರ್ ಮ್ಯಾಜಿಸ್ಟ್ರೇಟರ ಅಪ್ಪಣೆಯನ್ನು ಪಡೆದು ಆ ಹೆಂಗುಸಿನ ಶವವನ್ನು ಗುಣಿಯಿಂದ ತೆಗೆದು ವೈದ್ಯರಿಂದ ಪರೀಕ್ಷಿಸುವಲ್ಲಿ ಪೂರಾ ಪೆಟ್ಟುಬಿದ್ದು ಉಸಿರಾಡದೆ ಸತ್ತಳೆಂದು ಗೊತ್ತಾದುದರಮೇಲೆ ಚೆನ್ನತಿಮ್ಮಯ್ಯನೇ ಈ ಕೃತ್ಯ ನಡೆಸಿದನೆಂದು ಪೋಲೀಸರಿಗೆ ಅವನ ಮೇಗಣ ಅನುಮಾನವು ಪ್ರಬಲವಾಗಿ, ಅವನ ಮನೆಯ ಬಳಿ ಹೆಚ್ಚು ಕಾವಲುಗಾರರನ್ನಿಟ್ಟರು. ಅದೇ ತಾ|| ೨೧ ರಲ್ಲಿ ಚೆನ್ನತಿಮ್ಮಯ್ಯನ ಅಣ್ಣ ಗುರುವಯ್ಯನು ತನ್ನ ತಮ್ಮ ಪ್ಲೇಗುರೋಗಪೀಡಿತನಾಗಿಲ್ಲ, ಆದರೆ ಪೋಲೀಸರ ಹಿಂಸೆಯಿಂದ ಮೂರ್ಛೆಹೋಗಿದ್ದು ಅಸ್ವಸ್ಥನಾಗಿದ್ದಾನೆ. ಆದುದರಿಂದ ಪರೀಕ್ಷಿಸಬೇಕೆಂದು ಡಿ|| ಮೆಡಿಕಲ್ ಆಫೀಸರಿಗೆ ತಂತಿಯನ್ನು ಕೊಟ್ಟನು. ತಾ|| ೨೮ ರಲ್ಲಿ ಚೆನ್ನತಿಮ್ಮಯ್ಯನ ಶವವು ಕುಂಬಾರಗುಂಡಿಬಳಿ ಒಂದು ಬಾವಿಯಲ್ಲಿ ತೇಲುತ್ತಿದ್ದಿತು. ಮ್ಯಾಜಿಸ್ಟ್ರೇಟರೂ, ಪಂಚಾಯಿತರೂ ವೈದ್ಯರ ಪರೀಕ್ಷೆಯಿಂದ ಅವನು ನೀರಿನಲ್ಲಿ ಮುಳುಗಿ ಸತ್ತನೆಂದು ನಿರ್ಧರಿಸಿದರು. ಆಗ ಅವನ ಬಾವನು ಪೋಲೀಸರು ಹೊಡೆದು ಸಾಯಿಸಿದರೆಂದು ಈ ತಾ|| ೩ ರಲ್ಲಿ ಸಬ್‌ಡಿವಿಜನ್ನಿಗೆ ಅರ್ಜಿ ಕೊಟ್ಟನು. ಪೋ|| ಸೂಪರಿಂಟೆಂಡೆಂಟರು ಬಂದು ಶವವನ್ನು ತೆಗಿಸಿ ನೋಡುವಲ್ಲಿ ಅದು ಕೊಳೆತುಹೋಗಿದ್ದಿತು. ಅಂತೂ ವಿಚಾರಣೆಗಿಟ್ಟುಕೊಂಡಿರುವರು. ಇದರ ಪರಿಣಾಮವೇನಾಗುತ್ತದೋ ನಿರೀಕ್ಷಣೀಯವಾಗಿದೆ. ಈ ಕೊಲೆಗಳಲ್ಲದೆ ಇದೇ ತಾ|| ಕೊಂಡಾಪುರದಲ್ಲಿ ಮುಂಬೇಗೌಡನ ಮಗ ಗತಿಸಿದ ಪುಟ್ಟೇಗೌಡನ ದತ್ತುಮಗನು ಕಳೆದ ಡಿಸೆಂಬರ್ ತಾ|| ೨೪ ರಲ್ಲಿ ತನ್ನ ತಾಯಿಯ ಮಗ್ಗುಲಲ್ಲಿ ಮಲಗಿರುವಾಗ್ಗೆ ಅವನ ಕತ್ತು ಕತ್ತರಿಸಿಹಾಕಲ್ಪಟ್ಟು ಸತ್ತನು. ಈ ತಾ|| ನಲ್ಲಿ ವರ್ಷಕ್ಕೊಂದೆರಡು ಕೊಲೆಗಳಾಗುತ್ತಿದ್ದುವು. ಆದರೆ ಈಗ ೨ ತಿಂಗಳ ಕಾಲದಲ್ಲಿ ೩ ಕೊಲೆಗಳಾಗಿರುವುದು ಬಹು ಶೋಚನೀಯವಾಗಿದೆ. ಪೋಲೀಸರು ತಕ್ಕ ಸಾಹಸಮಾಡಿ ಪುಂಡರನ್ನು ಹಿಡಿದು ದಂಡಿಸದಿದ್ದರೆ ಇನ್ನೂ ವಿಪರೀತವಾಗಬಹುದು.

ಬೊಂಬಾಯಲ್ಲಾದ ಮೊಹರಂ ಗದ್ದಲ.

ಕಳೆದ ವರ್ಷ ಇದೇ ಮೊಹರಂ ಹಬ್ಬದಲ್ಲಿ ಮಹಮ್ಮದೀಯರ ಎರಡು ಪಂಗಡದವರಿಗೆ ಕಲಹವುಂಟಾಗಿ ದೊಡ್ಡ ಗೊಂದಲವಾಯಿತಷ್ಟೆ. ಈ ವರ್ಷವೂ ಬೋರಾಜನರು ಮಹಮ್ಮದೀಯರ ಒಂದು ಪಂಗಡದವರು ತಾಬೂತುಗಳನ್ನು ಡಾಕ್ಟರ ಬೀದಿಯಲ್ಲಿ ತೆಗೆದುಕೊಂಡು ಬರಕೂಡದೆಂದು ಅಡ್ಡಿಮಾಡಿದುದರಿಂದಲೇ ಉಭಯ ಪಕ್ಷದವರಿಗೂ ವಿಶೇಷ

ಮನಸ್ತಾಪವು ಹುಟ್ಟಿ ಅನರ್ಥಕ್ಕವಕಾಶವಾಯಿತು. ಪೊಲೀಸರು ಈ ಸಂದರ್ಭವನ್ನು ಮುಂದಾಗಿ ತಿಳಿದು ಗದ್ದಲವು ನಡೆಯಬಹುದಾದಕಡೆ ಬಲವಾದ ಕಾವಲನ್ನಿರಿಸಿ ಎಚ್ಚರದಿಂದಿದ್ದರು. ಆದರೆ ತಾ॥ ೧೧ರ ರಾತ್ರಿ ತಾಬೂತುಗಳು ಬೀದಿಗಳಲ್ಲಿ ಉತ್ಸವ ಹೊರಡುತಲಿ ಡಾಕ್ಟರ ಬೀದಿಯಲ್ಲಿ ಕೆಲ ತುಂಟರು ಪೊಲೀಸರ ಮೇಲೆ ಕಲ್ಲುಗಳನ್ನು ಎಸೆಯಲಾರಂಭಿಸಿ, ೨ ಗಂಟೆ ಕಾಲ ಪೊಲೀಸರು ತಮ್ಮ ಪಿಸ್ತೋಲುಗಳನ್ನು ಹಾರಿಸಲೂ ಅವಕಾಶವನ್ನು ಕೊಡದೆಹೋದರು. ಮತ್ತೂ ಒಂದು ತಾಬೂತಿನ ಸಂಗಡ ೫-೬ ಸಾವಿರ ಜನರು ನುಗ್ಗಿಬಿಟ್ಟರು. ಆಗ ಪೊಲೀಸ್ ಕಮಿಷನರೂ, ಇತರ ಅಧಿಕಾರಿಗಳೂ ಕಲ್ಲನ್ನು ಎಸೆಯದಂತೆ ಎಷ್ಟು ವಿಧವಾಗಿ ತುಂಟರಿಗೆ ಸಮಾಧಾನವನ್ನು ಹೇಳಿದಾಗ್ಯೂ, ಅವರು ಕಲ್ಲನ್ನೆಸೆಯುವುದನ್ನು ನಿಲ್ಲಿಸಲ್ಲಿಲ್ಲವಾಗಿ ೩ ನೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಬರಮಾಡಲ್ಪಟ್ಟರು. ಅವರು ಜನರು ಪೊಲೀಸರ ಮೇಲೆ ಇನ್ನೂ ಕಲ್ಲುಗಳನ್ನೆಸೆಯುತ್ತಿದ್ದುದನ್ನೋಡಿ, ಇನ್ನು ನೀವು ತಟಸ್ಥರಾಗದಿದ್ದರೆ ದುರಾಗತಕ್ಕೆ ತಕ್ಕ ಶಿಕ್ಷೆಯಾಗುತ್ತದೆಂದು ಎಚ್ಚರಿಸಿದರು. ಮ್ಯಾಜಿಸ್ಟ್ರೇಟರ ಮಾತೂ ಲಕ್ಷಿಸಲ್ಪಡದೆ ಹೋದವೇಳೆ ಮತ್ತೊಂದು ಕಡೆ ಸಿದ್ಧವಾಗಿ ನಿಂತಿದ್ದ ೨ ಕಂಪೆನಿ ವಾರ್ವಿಕ್ ಸೇನೆಯು ಬರಮಾಡಲ್ಪಟ್ಟು, ಗುಂಡನ್ನು ಹಾರಿಸಲು ಅಪ್ಪಣೆಕೊಡಲ್ಪಟ್ಟಿತು. ಆಗ ಸೈನಿಕರು ಗುಂಡುಗಳನ್ನು ಹಾರಿಸಿ ಗುಂಪನ್ನು ಚದರಿಸಿದರು. ಗುಂಡೇಟಿನಿಂದ ೧೮ ಜನರು ಸತ್ತರು. ಮತ್ತೂ ೨೪ ಜನರು ಗಾಯವಡೆದರು. ಜನರು ಇನ್ನೂ ರೇಗಿ ಮಾರ್ಗಗಳಲ್ಲಿ ಟ್ರಾಂಬಂಡಿಗಳಿಗೂ, ಪೊಲೀಸು ಮತ್ತೂ ಸೈನಿಕರಿಗೂ ಕಲ್ಲುಗಳನ್ನೆಸೆಯುತ್ತಿದ್ದರು. ಹೆಚ್ಚು ಪೊಲೀಸರು ಸೇನೆಯವರ ಸಹಾಯಕ್ಕೆ ಬಂದು ಜನರು ಒಂದುಕಡೆಯಿಂದ ಮತ್ತೊಂದು ಕಡೆಗೆ ಹೋಗದಂತೆ ತಡೆದು ನಿಲ್ಲಿಸಿದರು. ಆ ರಾತ್ರಿ ೧೦ ಗಂಟೆ ಸಮಯಕ್ಕೆ ಗದ್ದಲವಡಗಿ ಸಮಾಧಾನಸ್ಥಿತಿಗೆ ಬಂದಿತು. ಅನಂತರ ಸೇನೆಯವರು ತಮ್ಮ ವಾಸಸ್ಥಳಕ್ಕೆ ಹಿಂತಿರುಗಿದರು. ಜನರು ಆಗ ಬೀರಿದ ಕಲ್ಲುಗಳು ಮಾರ್ಗದಲ್ಲಿ ಕಣಕಾಲುದ್ದ ಬಿದ್ದಿದ್ದುವೆಂದು ಒಬ್ಬ ಪೊಲೀಸಧಿಕಾರಿಯು ವರದಿಮಾಡಿದ್ದಾರೆ. ಮತ್ತೂ ಈಗ ತುಂಟರನ್ನು ಹಿಡಿಯುತ್ತಿಸಿದ್ದಾರೆ.

ದಿಲ್ಲಿಯಲ್ಲಿ ನಡೆಯುವ ಕಿರೀಟಧಾರಣ ಮಹೋತ್ಸವವು.

೧೯೧೨ ನೇ ಜನವರಿ ತಾ॥ ೧ ರಲ್ಲಿ ಶ್ರೀಮದಿಂಡ್ಯಾ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವವು ದಿಲ್ಲಿಯಲ್ಲಿ ನಡೆಯುವುದಾಗಿ ಮೊದಲು ಗೊತ್ತಾಗಿದ್ದಿತು. ಆದರೆ ಆ ದಿವಸ ಮೊಹರಂ ಹಬ್ಬದ ಹತ್ತನೆಯ ದಿನವಾದುದರಿಂದ ಚಕ್ರವರ್ತಿಯವರು ತಮ್ಮ ಮಹಮ್ಮದೀಯ ಪ್ರಜೆಗಳಿಗೆ ಆ ದಿವಸ ಕಿರೀಟಧಾರಣ ಮಹೋತ್ಸವವು ಜರಗುವುದು ಅನುಕೂಲವಾಗುವುದಿಲ್ಲವೆಂಬುದನ್ನು ತಿಳಿದು, ತಾ॥ ೧ ರಲ್ಲಿ ನಡೆಯುವುದನ್ನು ತಪ್ಪಿಸಿ, ಡಿಶಂಬರ್ ತಿಂಗಳಲ್ಲಿ ಅಥವಾ ಜನವರಿಯಲ್ಲಿ ಮತ್ತೊಂದು ದಿವಸ ಜರಗುವಂತೆ ನಿರ್ಧರಿಸಿರುವರು. ಈಮಹೋತ್ಸವದಲ್ಲಿ ನಡೆಯುವ ಮುಖ್ಯವಾದ ವಿನೋದಗಳಲ್ಲಿದೊಡ್ಡ ಸೇನೆಯ ಪ್ರದರ್ಶನವೊಂದಾಗಿರುವುದು. ಬ್ರಿಟಿಷ್ ಸೇನೆಯ ಪ್ರತಿನಿಧಿಗಳಲ್ಲದೆ ಪ್ರಪಂಚದ ಪ್ರತಿಯೊಂದು ಪ್ರಬಲರಾಜ್ಯದ ಸೇನೆಯ ಪ್ರತಿನಿಧಿಗಳೂ ಆಗ್ಗೆ ಬರುವರು.

ಒಳದೇಶದ ವೃತ್ತಾಂತ.

ಶ್ರೀ ಶೃಂಗಗಿರಿ ಸ್ವಾಮಿಗಳು ಈ ದಿವಸ ಬೆಳಿಗ್ಗೆ ಬೆಂಗಳೂರಿಗೆ ದಯಮಾಡಿಸುವವರಾಗಿರುವರು.

ಬೆಂಗಳೂರಲ್ಲಿ ಆಕಾಶನಾವೆಯ ಪ್ರದರ್ಶನವನ್ನು ನಡಿಸುವುದಕ್ಕಾಗಿ ಆಸಂಘದವರೊಬ್ಬರು ಅಲ್ಲಿಗೆ ಬಂದಿರುತ್ತಾರೆ. ಈ ಪ್ರದರ್ಶನವು ಪ್ರಾಯಶಃ ಈ ತಾ॥ ೩೦ ರಲ್ಲಿ ಬೆಂಗಳೂರಲ್ಲಿ ಜರಗಬಹುದಾಗಿದೆ.

ರಾಜಸ್ಥಾನಿಯ ಟೆಲಿಗ್ರಾಫ್ ಆಫೀಸ್ ಹಣವನ್ನು ಅಪಹರಿಸಿದ್ದ ಇಬ್ರಾಹಿಂಸಾಬಿಗೆ ಇಲ್ಲಿಯ ಸಿಟಿ ಮ್ಯಾಜಿಸ್ಟ್ರೇಟರು ೨ ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ಕೊಟ್ಟು ಆ ಅವಧಿಯಲ್ಲಿ ೩ ತಿಂಗಳಕಾಲ ಏಕಾಂತವಾಸವಾಗಿರಬೇಕೆಂದು ವಿಧಿಸಿರುವರು.

ಅಫಿಷಿಯೇಟಿಂಗ್ ಸೀನಿಯರ್ ಸರ್ಜನರಾದ ಮ॥ ಪಿ. ಎಸ್. ಅಚ್ಯುತರಾಯರ ಜ್ಯೇಷ್ಠಪುತ್ರರಾದ ಬೊಂಬಾಯಿನಲ್ಲಿ ಎಂ. ಬಿ. ಸಿ. ಎಂ. ಪರೀಕ್ಷೆಗೋದುತಲಿರುವ ಮ॥ ಶ್ರೀನಿವಾಸರಾಯರ ಪತ್ನಿಯು ಪ್ಲೇಗ್‌ರೋಗ ಪೀಡಿತರಾಗಿ ಕಳೆದ ತಾ॥ ೩ ರಲ್ಲಿ ಮಾಗಡಿ ಮಾರ್ಗದ ಆರೋಗ್ಯದಕ್ಯಾಂಪಿನಲ್ಲಿ ಕಾಲವಾದರೆಂದು ತಿಳಿಯಲು ತುಂಬಾ ವಿಷಾದವಾಗುತ್ತದೆ.

ಕಳೆದ ತಾ॥ ೧೧ ರ ಪ್ರಾತಃಕಾಲ ೭ ಗಂಟೆ ಸಮಯದಲ್ಲಿ ಮಹಾಮಾತೃಶ್ರೀಯವರೂ, ಮಹಾರಾಣಿಯವರೂ ಕೆ॥ ದೇಶರಾಜ ಅರಸಿನವರ ಮಕ್ಕಳುಗಳೊಡನೆ ರಾಜಧಾನಿಯಿಂದ ಮೋಟಾರುಬಂಡಿಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು. ಆದರೆ ಬಿಡದಿ ಸಮೀಪದಲ್ಲಿ ಅವರು ಕುಳಿತಿದ್ದ ಬಂಡಿಯ ಕ್ರಮವು ತಪ್ಪಿಹೋಗಿ ಬಹುಳ ತೊಂದರೆಯನ್ನು ಕೊಟ್ಟದರಿಂದ ಆ ದಿವಸ ಮಧ್ಯಾಹ್ನದೊಳಗೆ ಬೆಂಗಳೂರನ್ನು ತಲುಪುವುದಕ್ಕೆ ಬದಲು ಸಾಯಂಕಾಲ ೪-೫ ಗಂಟೆಗೆ ತಲುಪಿದರಾಗಿ ಕೇಳುತ್ತೇವೆ.

ಕಳೆದ ಭಾನುವಾರ ಬೆಂಗಳೂರ ಲಾಲ್‌ಬಾಗಲ ಬಳಿಯಿರುವ ಮಾವಳ್ಳಿಯಲ್ಲಿ ಒಬ್ಬ ತಿಗುಳಹುಡುಗಿಯು ೩ ತಿಂಗಳ ಮಗುವನ್ನು ಎತ್ತಿಕೊಂಡು ಮನೆಯ ಹಿತ್ತಲಿಗೆ ಹೋಗಿ ಒಂದು ನೆಲಬಾವಿಯ ಮೇಲೆ ಮುಚ್ಚಿದ ಚಾಪೆಯು ನೆಲದ ಮೇಲೆ ಹಾಸಲ್ಪಟ್ಟಿದೆಯೆಂದು ತಿಳಿದು ಕೂತುಕೊಳ್ಳಲು ಹೋದಾಗ ಮಗುವಿನ ಸಮೇತ ಬಾವಿಯೊಳಕ್ಕೆ ಬಿದ್ದು ಕೂಗಿಕೊಂಡಿತು. ಅವುಗಳ ತಾಯಿಯು ಇದನ್ನು ಕೇಳಿ ಬಂದು, ಅವು ಭಾವಿಯೊಳಗೆ ಬಿದ್ದಿರುವುದನ್ನೋಡಿ ಗದ್ದಲ ಮಾಡಿದಳು. ಅಷ್ಟರಲ್ಲಿ ಆ ಮಾರ್ಗವಾಗಿ ಹೋಗುತಲಿದ್ದ ಒಬ್ಬ ವೆಲ್ಲೂರಿನವನು ಮನೆಯೊಳಗೆ ಬಂದು ಬಾವಿಯೊಳಗಿಳಿದು ಆ ಮಗು ಸಮೇತ ಹುಡುಗಿಯನ್ನು ಹೊರಗೆ ತೆಗೆದು ನೋಡುವಲ್ಲಿ ಅವೆರಡಕ್ಕೂ ಅಷ್ಟೇನೂ ಅಪಾಯವಾಗಿರಲಿಲ್ಲ.

ಸೆನ್ಸಸ್ಸು ಮತ್ತೂ ವೀರಶೈವರು.

ಈ ವರ್ಷದ ಜನಪರಿಗಣಿತಿಯ ಕಾಲವು ಸನ್ನಿಹಿತವಾಯಿತು. ಪ್ರತಿಯೊಬ್ಬರಿಗೂ ಕೇಳತಕ್ಕ ಪ್ರಶ್ನೆಗಳ ಕಾಲಮು ೧೫ ಇರುವುವು. ಅವುಗಳಲ್ಲಿ ಕಂಡ ಪ್ರಶ್ನೆಗೆ ಸರಿಯಾದ ಉತ್ತರಗಳನ್ನು ಹೇಳಿ ಬರೆಯಿಸಬೇಕಾದುದು ಪ್ರಜೆಗಳ ಕರ್ತವ್ಯವು.

ಈ ಪ್ರಶ್ನೆಗಳ ಕಾಲಮುಗಳಲ್ಲಿ ಮತ ಜಾತಿಯನ್ನು ಕುರಿತ ಪ್ರಶ್ನೆಗಳ ಕಲಮುಗಳು ೨ ಇರುವುವು. ಅವುಗಳಲ್ಲಿ ೩ ನೆಯದು ಹಿಂದು ಅಥವಾ ಮುಸಲ್ಮಾನ ಕ್ರೈಸ್ತ ಮೊದಲಾದ ಭೇದಗಳನ್ನು ಹೇಳಿ ಬರೆಯಿಸತಕ್ಕದು. ೭ ನೆಯ ಕಲಮು ಜಾತಿಗೋಸ್ಕರ ಏರ್ಪಟ್ಟಿರುವುದು. ಇದರಲ್ಲೂ ಎ. ಬಿ. ಯೆಂದು ಎರಡು ಭಾಗವಿರುವುದು. ಈ ಜಾತಿಸ್ಥಾನದಲ್ಲಿ ಲಿಂಗಧಾರಿಗಳು ಬರೆಯಿಸಬೇಕಾದ ವಿಷಯದಲ್ಲಿ ಸರ್ಕಾರದವರು ಕೊಟ್ಟಿರುವ ಉದಾಹರಣೆಯಲ್ಲಿ ಆ ಕಾಲಮಿನಲ್ಲೂ "ಲಿಂಗಾಯಿತ" ಎಂದು ಬರೆಯಿಸಬೇಕೆಂದು ಕಾಣಿಸಲ್ಪಟ್ಟಿದೆ. ಇದು ಅಸಮಂಜಸವಾಗಿದೆ.

ಲಿಂಗಾಯುತ—ವೀರಶೈವ—ಲಿಂಗಧಾರಿ—ಶಿವಾಚಾರ ಇತ್ಯಾದಿ ನಾಮಗಳು ಮತದ ಹೆಸರುಗಳೇ ಹೊರತು ಜಾತಿನಾಮವಲ್ಲ. ಈ ಮತದಲ್ಲಿ ಅನೇಕ ಜಾತಿ-ಒಳಭೇದಗಳು ತುಂಬಿಕೊಂಡಿವೆ. ಅವೆಲ್ಲವನ್ನೂ ಒಂದು ಜಾತಿಯೆಂದು ಹೇಳುವುದು ಸಮಂಜಸವಲ್ಲವೆಂಬುದು ಅದರ ಒಳಗನ್ನು ನೋಡಿ ತಿಳಿಯಬೇಕೆನ್ನುವವರಿಗೆಲ್ಲಾ ಗೊತ್ತಾಗುತ್ತದೆ. ಆದುದರಿಂದ ಮತದ ಹೆಸರನ್ನು ೭ ನೆಯ "ಎ" ಕಲಮಿನಲ್ಲಿ ಬರೆಯಿಸುವುದು ವಿಹಿತವಲ್ಲ. ಜಾತಿಯನ್ನು ತಿಳಿಯಬೇಕೆಂಬುದಕ್ಕಾಗಿಯೇ ಏರ್ಪಟ್ಟಿರುವ ಆ ಕಾಲಮಿನಲ್ಲಿ ಮುಖ್ಯವಾದ ಬ್ರಾಹ್ಮಣ ಕ್ಷತ್ರಿಯಾದಿ ವರ್ಣಗಳನ್ನೂ ೭ ನೆಯ "ಬಿ" ಕಲಮಿನಲ್ಲಿ ಆರಾಧ್ಯ-ಜಂಗಮ ಮೊದಲಾದ ಅವರವರ ಒಳಭೇದದ ಹೆಸರುಗಳನ್ನೂ ಬರೆಯಿಸುವುದು ಯುಕ್ತವಾಗಿದೆ.

ಈಸಲದ ಸೆನ್ಸಸ್ ಚೆಡ್ಡುಗಳಲ್ಲಿ "ಮತಭೇದ" ದ ಕಲಮನ್ನು ಪ್ರತ್ಯೇಕವಾಗಿ ಕೊಟ್ಟಿಲ್ಲ. ಅದುಕಾರಣ, ಅಲಿಂಗಿಗಳಲ್ಲಿ ಬ್ರಾಹ್ಮಣಾದಿ ವರ್ಣಗಳವರಿಗೂ ಲಿಂಗಧಾರಿಗಳಾದ ಬ್ರಾಹ್ಮಣಾದಿ ವರ್ಣಗಳವರಿಗೂ ವ್ಯತ್ಯಾಸ ತೋರುವುದಕ್ಕೆ ಸರ್ಕಾರದವರಿಗೂ ಸಾಧಕವಾಗಿಯೂ, ಲಿಂಗಧಾರಿಗಳಿಗೂ ತಮ್ಮ ಮತಭೇದ ಜಾತಿ ಮೊದಲಾದುವುಗಳ ವಿವರಣೆಯನ್ನು ಬರಸುವುದಕ್ಕೆ ಸಾಧಕವಾಗಿಯೂ ಇರುವಂತೆ ಈಗಿನ ಕಲಮುಗಳಲ್ಲೇ ಬರೆಯಿಸಬೇಕಾದರೆ— ೩ ನೆಯ ಕಲಮಿನಲ್ಲಿ "ಹಿಂದೂ" ಎಂತಲೂ, ೭ ನೆಯ ಕಲಂ "ಎ" ಯಲ್ಲಿ "ಲಿಂಗಧಾರಿ ಅಥವಾ ವೀರಶೈವಬ್ರಾಹ್ಮಣ" "ಲಿಂಗಧಾರಿಕ್ಷತ್ರಿಯ" ಇತ್ಯಾದಿಯಾಗಿಯೂ—ಕಲಂ "ಬಿ" ಯಲ್ಲಿ ಅವರವರ ಒಳಭೇದಗಳ ಹೆಸರುಗಳನ್ನೂ ಹೇಳಿ ಬರೆಯಿಸಬಹುದು.

ಉದಾಹರಣೆಯ ಪಟ್ಟಿಯಲ್ಲಿ ಕಂಡ ಹೆಸರುಗಳನ್ನೇ ಬರೆಯಿಸಬೇಕೆಂದೂ, ಅದರಲ್ಲಿ ಕಾಣದಿರುವ ಹೆಸರುಗಳನ್ನು ಬರೆಯಿಸಿದರೆ ಪ್ರಾಸಿಕ್ಯೂಷನ್ ಮಾಡುತ್ತೇವೆಂದೂ ಸ್ಥಲದ ಅಧಿಕಾರಿಗಳು ಹೆದರಿಸುತ್ತಿರುವರೆಂದು ನಮಗೆ ಹೊರಗಿನಿಂದ ಕಾಗದಗಳು ಬಂದಿರುತ್ತವೆ. ಕೇಳಿದ ಪ್ರಶ್ನೆಗೆ ಏನು ಉತ್ತರವನ್ನು ಕೊಡುತ್ತಾರೋ ಅದನ್ನು ಬರೆದುಕೊಳ್ಳಬೇಕಾದುದು ಎಣಿಕೆಗಾರರ ಕರ್ತವ್ಯವಾಗಿದೆ. ಆ ವಿಷಯವನ್ನು ಎಣಿಕೆಗಾರರ ತಿಳುವಳಿಕೆಗಾಗಿ ಸರ್ಕಾರದವರು ಪ್ರಕಟಿಸಿರುತ್ತಾರೆ. ಹೇಗೆಂದರೆ—ಇದೇ ವರ್ಷದ ಸೆನ್ಸಸ್ ಬುಕ್ಕಿನ ಕವರಿನಲ್ಲಿ ಮಾದ್ರಿ ಎಣಿಕೆಪತ್ರ ನಮೂನೆ ನಂ. ೧೧ ರಲ್ಲಿ "ಕಳೆದ ೧೯೦೧ನೆ ಇಸವಿ ಸೆನ್ಸಸ್ಸು ಪ್ರಕಾರ ಆಯಾ ಮತಸ್ಥರ ಜಾತಿ ಕುಲಭೇದಗಳನ್ನು ಎಣಿಕೆದಾರರುಗಳ ತಿಳುವಳಿಕೆ ಬಗ್ಗೆ ಇದರ ಕೆಳಗೆ ನಮೂದು ಮಾಡಿರುತ್ತೆ. ಇವುಗಳಲ್ಲದೆ ಹೊಸದಾಗಿ ಜಾತಿ-ಯಾ ಕುಲ ಯಾರಾದರೂ ಹೇಳಿದರೆ ಆ ಹೇಳಿಕೆಯನ್ನೂ ತಿರಸ್ಕರಿಸದೆ ಆ ಜಾತಿ-ಯಾ ಕುಲದ ಹೆಸರನ್ನು ಈ ಕಲಂನಲ್ಲಿ ಬರೆಯಬೇಕು" ಎಂದು ಸ್ಪಷ್ಟವಾಗಿ ಪ್ರಕಟಮಾಡಿರುತ್ತಾರೆ. ಆದುದರಿಂದ ಮೇಲೆ ವಿವರಿಸಿರುವಂತೆ ೭ ನೆಯ ಕಲಂ—ಎ-ಬಿ. ಸ್ಥಾನಗಳಲ್ಲಿ ಮತಭೇದ ಜಾತಿ-ಜಾತಿಭೇದಗಳೆಲ್ಲಾ ಸ್ಪಷ್ಟಪಡುವಂತೆ ಯಾವೊಬ್ಬ ವೀರಶೈವರೂ ಹೇಳಿ ಬರೆಯಿಸಬಹುದು. ಗೋತ್ರಸೂತ್ರಾದಿಗಳನ್ನು ಕೇಳುವುದೂ ಹೇಳುವುದೂ ಸಹ ಈ ಸಲದ ಸೆನ್ಸಸ್ಸಿನ ಏರ್ಪಾಟಿನಲ್ಲಿರುವುದಿಲ್ಲ.

ವೀರಶೈವಮತಸಂವರ್ಧಿನೀ ಸಭಾಧ್ಯಕ್ಷ.

ವರ್ತಮಾನ ಸಂಗ್ರಹ.

ಗೋರಕ್‌ಪೂರಿನ ರಾಜಾಸಾಹೇಬರು ಧರಿಸಿದ್ದ ಬಟ್ಟೆಗಳಿಗೆ ಬೆಂಕಿಯು ಹೊತ್ತಿ, ದೇಹವು ಸುಟ್ಟದರಿಂದ ಅವರು ಮೃತರಾದರು.

ಅಮೆರಿಕಾದಲ್ಲಿ ಚೈನಾ ದೇವಾಲಯಗಳು ೬೨, ಜರ್ಮ ದೇವಾಲಯಗಳು ೧೨ ಇರುತ್ತಿವೆ. ಈಗ ಕೃಷ್ಣದೇವಾಲಯವನ್ನು ಪ್ರತಿಷ್ಠಿಸುವ ಯತ್ನವು ನಡೆದಿದೆ.

ಆಕಾಶಯಾನ ಪ್ರದರ್ಶಕರು ಈಗ ಕಲಕತ್ತಾದಿಂದ ಮದ್ರಾಸಿಗೆ ಬಂದಿರುತ್ತಾರೆ. ಅಲ್ಲಿಂದ ಹೈದರಾಬಾದಿಗೆ ಹೋಗಿ ಅಲ್ಲಿ ಕೆಲ ಪ್ರದರ್ಶನಗಳನ್ನು ನೈಜಾಮರಿದಿರಿಗೆ ಮಾಡಿ ತೋರಿಸುವವರಾಗಿದ್ದಾರೆ.

ಅಮೇರಿಕಾದ ನ್ಯೂಯಾರ್ಕ್ ಪಟ್ಟಣದ ಸಿಟಿ ಕಾಲೇಜಿನಲ್ಲಿರುವ ಪರಿಶೋಧನ ಶಾಲೆಯಲ್ಲಿ ಭೂಮಿಯ ಭಾರವೆಷ್ಟೆಂಬುದನ್ನು ಕಂಡು ಹಿಡಿದರಂತೆ. ಅವರ ಶೋಧನದ ಪ್ರಕಾರ ಅದರ ಭಾರವು ೩೦,೦೦,೦೦,೦೦,೦೦,೦೦೦ ಟನ್ನುಗಳಷ್ಟು.

ಫ್ರಾನ್ಸ್ ದೇಶದಲ್ಲಿ ಈ ವರ್ಷ ಗೋದುಮೆಯ ಬೆಳಸು ಕೆಟ್ಟುಹೋದುದರಿಂದ ಅಲ್ಲಿನ ಬೇಸಾಯಗಾರರಿಗೆ ೧। ಕೋಟಿ ಸವರನ್ನುಗಳ ನಷ್ಟವೂ, ಒಟ್ಟು ಎಲ್ಲ ಪೈರುಗಳ ನಷ್ಟದಿಂದ ೩ ಕೋಟಿ ಸವರನ್ನುಗಳ ನಷ್ಟವೂ ಸಂಭವಿಸಿರುವುದು

ಜಲಾಲಾಬಾದು ಜಿಲ್ಲೆಗೆ ಸೇರಿದ ೧ ಗ್ರಾಮದಲ್ಲಿ ಒಬ್ಬ ಹಿಂದುವು ೪ ತಿಂಗಳ ಕೆಳಗೆ ಕೊಲ್ಲಲ್ಪಟ್ಟನು. ಅಪರಾಧಿಗಳು ಸಿಕ್ಕದೆಹೋದುದರಿಂದ ಕಾಬೂಲಿನ ಅಮೀರರು ಕೋಪಗೊಂಡು, ಆ ಗ್ರಾಮನಿವಾಸಿಗಳೆಲ್ಲರ ಮೇಲೂ ೭ ಸಾವಿರ ರೂ. ಗಳನ್ನು ದಂಡರೂಪವಾಗಿ ವಿಧಿಸಿದರು.

ಅರ್ಜಂಟೈನ್ ರಿಪಬ್ಲಿಕ್ಕಿನಲ್ಲಿ ಈಗ ಬಹುಶಃ ೩ ಕೋಟಿ ದನಕರುಗಳಿರುತ್ತವೆ. ಇದರಲ್ಲಿ ವಿಶೇಷವೇನೆಂದರೆ– ೧೬ ನೆ ಶತಮಾನದಲ್ಲಿ ಆ ದೇಶದಲ್ಲಿ ಪಶುಗಳೇ ಇರಲಿಲ್ಲ. ಆಗ ಬ್ರಜಿಲಿನಿಂದ ೮ ಹಸುಗಳನ್ನೂ ೧ ಹೋರಿಯನ್ನೂ ಅಲ್ಲಿಗೆ ತಂದುಕೊಂಡರು. ಅವುಗಳ ಸಂತತಿಯೇ ಇದುವರೆಗೆ ಇಷ್ಟು ವೃದ್ಧಿಗೊಂಡಿದೆ.

ಶ್ರೀ ಜಾರ್ಜ್ ಚಕ್ರವರ್ತಿಯವರು ಕಿರೀಟಧಾರಣ ಮಹೋತ್ಸವಕ್ಕಾಗಿ ಭರತಖಂಡಕ್ಕೆ ದಯಮಾಡಿಸುವಾಗ್ಗೆ ಲಾರ್ಡ್ ಕರ್ಜನರವರೂ ಅವರ ಸಂಗಡ ಬರುವರೆಂದು ಸುದ್ದಿ ಹುಟ್ಟಿದೆ. ಇದು ನಿಜವಾಗಿದ್ದರೆ ಕರ್ಜನರವರ ಪ್ರಯಾಣವು ನಿಲ್ಲಿಸಲ್ಪಡುವುದು ಎಂದು ವಸುಮತಿಯೆಂಬ ಪತ್ರಿಕೆಯು ಹೇಳುತ್ತದೆ.

ಬಾಬು ವಿಪಿನಚಂದ್ರಪಾಲರು ಲಂಡನ್ ಪಟ್ಟಣದಲ್ಲಿ ೨ ಉಪನ್ಯಾಸಗಳನ್ನು ಮಾಡಿದರು. ಆಗ ಭರತಖಂಡದಲ್ಲಿ ಉಗ್ರಪಕ್ಷದ ಕೆಲವರು ದೇಹಬಲವನ್ನುಪಯೋಗಿಸಿ ರಾಜ್ಯಾಧಿಕಾರವನ್ನು ಸಂಪಾದಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಈ ಪದ್ಧತಿಯನ್ನು ನಾನು ಎಷ್ಟು ಮಾತ್ರಕ್ಕೂ ಒಪ್ಪುವುದಿಲ್ಲ. ಲಾರ್ಡ್ ಮಾರ್ಲೆಯವರು ಬಲಗೈಯಲ್ಲಿ ಪ್ರಜೆಗಳನ್ನು ಅನೇಕ ನಿರ್ಬಂಧದಿಂದ ಅಣಗಿಸುವುದನ್ನೂ, ಎಡಗೈಯಿಂದ ರಾಜ್ಯಪರಿಪಾಲನೆಯಲ್ಲಿ ಕೆಲ ಸುಧಾರಣೆಗಳನ್ನೂ ಮಾಡಿದರು. ಎಂದು ನುಡಿದರು.

ಪಾರ್ಲಿಮೆಂಟು ಮಹಾಸಭೆಯ ಸಭಾಸ್ತಾರರು ಆರಿಸಲ್ಪಡುವಾಗ ಪ್ರಜೆಗಳಿಂದ ಮತವನ್ನು ಸಂಪಾದಿಸುವುದಕ್ಕಾಗಿ ಹೇರಳವಾಗಿ ದ್ರವ್ಯವು ವಿನಿಯೋಗಿಸಲ್ಪಡಬೇಕಾಗುತ್ತದೆ. ಕಳೆದ ೧೯೦೬ ನೆಯ ವರ್ಷದಲ್ಲಿ ಆರಿಸಲ್ಪಡುವ ಕಾರ್ಯದಲ್ಲಿ ೬೬೬೭೩೯೪ ಮತಗಳಿಗಾಗಿ ೧೯೬೩೮೨ ಪೌನುಗಳು ವೆಚ್ಚವಾಯಿತು. ಅಂದರೆ ಒಂದು ಮತ "ಓಟಿಗೆ" ರೂ. ೩-೫-೦ ಯಂತೆಯೂ, ಐರ್ಲಾಂಡಿನ ೧ಓಟಿಗೆ ರೂ. ೨-೧-೦ ಯಂತೆಯೂ, ಸ್ಕಾಟ್ಲಾಂಡಿನಲ್ಲಿ ೧ ಓಟಿಗೆ ರೂ. ೪ ರಂತೆಯೂ ವ್ಯಯಮಾಡಲ್ಪಟ್ಟಿತು.

ಕಳೆದ ತಾ॥ ೭ ರಲ್ಲಿ ಕರಾಚಿಯಲ್ಲಿ ಚೌಕಿದಾರನಾದ ಒಬ್ಬ ಮಹಮ್ಮದೀಯನೂ, ಆತನ ಪತ್ನಿಯೂ ಬೇರೆ ಬೇರೆ ಮಂಚದಮೇಲೆ ಒಂದು ಕೋಣೆಯಲ್ಲಿ ಮಲಗಿಕೊಂಡು, ಚಳಿಯನ್ನು ಸಹಿಸಲಾರದೆ ಒಳಗೆ ಕಲ್ಲಿದ್ದಲ ಬೆಂಕಿಯನ್ನು ಹಾಕಿಕೊಂಡಿದ್ದರು. ಕೋಣೆಯ ಬಾಗಿಲು ಮುಚ್ಚಲ್ಪಟ್ಟಿದ್ದಿತು. ಬೆಳಗಾಗುವುದರೊಳಗೆ ಹೆಂಡತಿಯು ಪ್ರಸವಿಸಿ ಮಂಚದ ಕೆಳಗೆ ಸತ್ತು ಬಿದ್ದಿದ್ದಳು. ಮಗುವೂ ಸತ್ತಿದ್ದಿತು. ಗಂಡನೂ ನೆಲದಮೇಲೆ ಬಿದ್ದು ಸತ್ತಿದ್ದನು. ಕಲ್ಲಿದ್ದಲ ಹೊಗೆಯೇ ಇಂಥ ಅಪಾಯಕ್ಕೆ ಕಾರಣವಾಗಿರಬೇಕು.

ರಷ್ಯಾರಾಜ್ಯದಲ್ಲಿ ಕ್ರಿಸ್ತ್‌ಮಸ್ ಹಬ್ಬವನ್ನಾಚರಿಸುವಾಗ್ಗೆ ಆತ್ಮಹತ್ಯೆಯನ್ನು ಮಾಡಿಕೊಂಡವರು ಮತ್ತೂ

ಮಾಡಿಕೊಳ್ಳ ಯತ್ನಿಸಿದವರು ೨೭, ಮತ್ತೂ ಮಾದಕಪದಾರ್ಥಗಳ ಸೇವನೆಯಿಂದ ಸತ್ತವರು ೩೦. ಮದ್ಯಸೇವನೆ ಮಾಡಿದುದಕ್ಕಾಗಿ ಸೆರೆ ಹಿಡಿಯಲ್ಪಟ್ಟವರು ೩೯೦೦ ಮಂದಿ. ಇದರಲ್ಲಿ ೧೦೦ ಕ್ಕೆ ೧೪ ರಂತೆ ಹೆಂಗುಸರ ಸಂಖ್ಯೆಯಿದ್ದಿತು.

ಕಳೆದ ತಾ॥ ೭ ರಲ್ಲಿ ಕಲಕತ್ತಾ ಪ್ರಮುಖರು ಸರ್ ವಿಲಿಯಂ ವೆತರ್‌ಬರ್ನರವರನ್ನು ಸಾಗಗಳಿಸುವ ಸಮಾರಂಭವನ್ನು ವಿಜೃಂಭಣೆಯಿಂದ ನೆರವೇರಿಸಿದರು. ಆಗ ರಸವಿಹಾರಿಘೋಸ್‌ರವರು ಸಭಾಧ್ಯಕ್ಷರಾಗಿದ್ದರು. ಉಪೇಂದ್ರನಾಥಬಾಸುರವರು ಒಂದು ಔತನವನ್ನು ಮಾಡಿಸಿದರು. ಅಗ್ಗೆ ಸರ್ ಎಡ್ವರ್ಡ್‌ಬೇಕರ್‌ರವರೇ ಮೊದಲಾದ ಆಂಗ್ಲ ಪ್ರಮುಖರನೇಕರು ಬಂದಿದ್ದರು.

ದೇಹದಿಂದ ಪ್ರಾಣವು ಸಂಪೂರ್ಣವಾಗಿ ತೊಲಗುವುದಕ್ಕೆ ಮುಂಚೆಯೇ ಅನೇಕರು ಭ್ರಮೆಯಿಂದ ಮರಣವಾಯ್ತೆಂದು ತಿಳಿದು, ದೇಹವನ್ನು ಸುಡುವುದನ್ನೋ ಖನನವನ್ನೋ ಮಾಡಿಬಿಡುತ್ತಾರೆ. ಲಂಡನ್ನಿನ ಹ್ಯೂಮೇನ್ ಸಂಘದವರು ಕಳೆದ ೨೦ ವರ್ಷಗಳ ಕಾಲದಲ್ಲಿ ಇಂಥ ಸಂದರ್ಭಗಳೊಳಗೆ ತಮ್ಮ ಪರೀಕ್ಷಾದಿಗಳಿಂದ ೨೧೨೩ ಜನರನ್ನು ಕಾಪಾಡಿರುವರಂತೆ. ಆಮ್‌ಷ್ಟರ್ಡ್ಯಾದಲ್ಲಿರುವ ಇಂಥ ಮತ್ತೊಂದು ಸಂಘದವರು ೨೪ ಸಂವತ್ಸರಗಳ ಕಾಲದಲ್ಲಿ ೯೯ ಮಂದಿಗಳನ್ನೂ ಹೇಂಬರ್ಗನಲ್ಲಿರುವ ಸಂಘದವರು ೫ ವರ್ಷಗಳ ಕಾಲದಲ್ಲಿ ೧೦೩ ಮಂದಿಗಳನ್ನೂ ಕಾಪಾಡಿರುವರು.

ಲಾಹೋರು ಪಟ್ಟಣದಲ್ಲಿ ಜರಗಿದ ಆರ್ಯ ಸಮಾಜದ ಸಾಂವತ್ಸರಿಕೋತ್ಸವ ಸಮಯದಲ್ಲಿ ಕುಮಾರಿ ಕೌಸಲ್ಯಾದೇವಿಯೆಂಬ ಯುವತಿಯು ಸಂಸ್ಕೃತಭಾಷೆಯಲ್ಲಿ ಒಂದು ಉಪನ್ಯಾಸವನ್ನು ಮೃದುಮಧುರವಾಗಿ ಮಾಡಿದರು. ಈಕೆಯು ಜಲಂಧರ ಪಟ್ಟಣದಲ್ಲಿ ವಿದ್ಯಾಭ್ಯಾಸವನ್ನು ಮಾಡಿದವರು. ಪೂರ್ವಕಾಲದಲ್ಲಿ ಭೋಜರಾಜನ ಕುಮಾರಿಯು ದಂಡಿಕವಿಯಲ್ಲಿ ವಿದ್ಯಾಭ್ಯಾಸವನ್ನು ಮಾಡಿ, ವಿದ್ವತ್ಸಭೆಯೊಳಗೆ ಕಾಳಿದಾಸಾದಿಗಳೊಡನೆ ಸಮಸ್ಯಾಪೂರಣ ಮೊದಲಾದುವುಗಳನ್ನು ಅತಿ ಚಮತ್ಕಾರವಾಗಿ ಮಾಡುತ್ತಿದ್ದಳೆಂದು ಕೇಳುತ್ತಿದ್ದೆವು. ಈಗಿನ ಸ್ತ್ರೀವಿದ್ಯಾಪ್ರಚುರಕಾಲವು ಆಗಿನ ಸ್ಥಿತಿಯನ್ನು ಪ್ರತ್ಯಕ್ಷವಾಗಿ ಮಾಡುವಂತೆ ಕಾಣುತ್ತಿದೆ.

ಇಂಗ್ಲಂಡಿಗೆ ಅಮೇರಿಕಾ ಕಾನಡಾ ದೇಶಗಳಿಂದ ಗೋದುಮೆಯ ಹಿಟ್ಟು ವಿಶೇಷವಾಗಿ ಕಳುಹಿಸಲ್ಪಡುತ್ತದೆ. ಭರತಖಂಡದಿಂದಲಾದರೋ ಗೋದುಮೆಯನ್ನೇ ಪರದೇಶಗಳಿಗೆ ಕಳುಹಿಸಿಕೊಡುತ್ತಾರೆ. ಇದಕ್ಕಿಂತಲೂ ಈ ದೇಶದಲ್ಲೇ ಯಂತ್ರಸಹಾಯದಿಂದ ಗೋದುಮೆಯ ಹಿಟ್ಟನ್ನು ಮಾಡಿಸಿ, ಅನ್ಯದೇಶಕ್ಕೆ ಕಳುಹುತ್ತ ಬಂದರೆ ಲಾಭವು ಹೆಚ್ಚಾಗುವುದಲ್ಲದೆ ರೈಲ್ವೆಯ ಮತ್ತೂ ಹಡಗಿನ ಬಾಡಿಗೆಯೂ ಕಡಿಮೆಯಾಗುವುದೆಂದೂ, ಭರತಖಂಡದಿಂದ ಇಂಗ್ಲಂಡಿಗೂ ಸ್ಕಾಟ್ಲಂಡಿಗೂ ಪ್ರತಿವಾರವೂ ತಪ್ಪದೆ ಹಡಗುಗಳು ಹೋಗಿ ಬರುವಂತೆ ಮಾಡಬೇಕೆಂದೂ, ಲಾಹೋರಿನಲ್ಲಿರುವ ಮಿ॥ ಹರಿಕಿರ್ಷಲಾಲರವರು ಕರಾಚಿಯಲ್ಲಿರುವ ವರ್ತಕ ಸಂಘದವರಿಗೆ ತಿಳುಹಿಸಿರುತ್ತಾರೆ.

ಕಲಕತ್ತಾದಲ್ಲಿ ರೈಲ್ವೆ ಟ್ರಾಫಿಕ್ ಸೂಪರಿಂಟಂಡೆಂಟರ ಆಫೀಸಿಗೆ ಒಬ್ಬ ಕಳ್ಳನು ಬೆಳಕಿಗಾಗಿಟ್ಟಿರುವ ಕಿಟಿಕಿಯಲ್ಲಿ ಅದಕ್ಕೆ ಕಟ್ಟಿರುವ ಹಗ್ಗವನ್ನು ಹಿಡಿದು ಒಳಗಿಳಿದು ಕೊಠಡಿಯಲ್ಲಿ ಎಲ್ಲವನ್ನೂ ಹುಡುಕಿ ದುಡ್ಡನ್ನೇನನ್ನೂ ಕಾಣದೆ ಇತರ ಪದಾರ್ಥಗಳನ್ನು ತೆಗೆದುಕೊಂಡು ಪುನಃ ಬಂದ ಮಾರ್ಗದಲ್ಲೇ ಹಿಂತಿರುಗಲು ಪ್ರಯತ್ನಿಸಿದನು. ಆದರೆ ತಾನು ಹಿಡಿದಿದ್ದ ಹಗ್ಗವನ್ನು ಬಿಟ್ಟುಬಿಟ್ಟುದರಿಂದ ಅದು ಗಾಜಿನಬಾಗಿಲ ಚಲನೆಯಿಂದ ಮೇಲಕ್ಕೆ ಹೊರಟುಹೋಗಿ ಅವನಿಗೆ ಸಿಕ್ಕಲಿಲ್ಲವಾಗಿ ಹೊರಗೆ ಬರಲು ಬೇರೊಂದುಪಾಯವನ್ನು ಕಾಣದೆ ರಾತ್ರಿಯೆಲ್ಲಾ ಅಲ್ಲೇ ಇದ್ದನು. ಬೆಳಿಗ್ಗೆ ಕಾವಲುಗಾರನು ಬಂದು ಬಾಗಿಲನ್ನು ತೆಗೆದು ಇವನನ್ನು ಕಂಡು ಹಿಡಿದು ಪೊಲೀಸರ ವಶಮಾಡಿದನು.

ಈ ತಿಂಗಳು ತಾ॥ ೭ ರಲ್ಲಿ ಅಲಹಾಬಾದಿನಲ್ಲಿ ಸಿಕ್ ಜನರು ತಮ್ಮ ಗುರುವಿನ ಜನ್ಮದಿನೋತ್ಸವವನ್ನು ಜರುಗಿಸುವುದಕ್ಕೆ ಉತ್ಸವಗೊಂಡು ಬೀದಿಯಲ್ಲಿ ಬರುತ್ತಿರಲು ಕೆಲ ಮಹಮ್ಮದೀಯರು ಹಿಂದೆ ಬಂದು ಕಲ್ಲುಗಳನ್ನು ಬೀರುವುದಕ್ಕೂ, ದೊಣ್ಣೆಗಳಿಂದ ಹೊಡೆಯುವುದಕ್ಕೂ ಪ್ರವರ್ತಿಸಿದರು. ಸಿಕ್ಕರು ಸ್ವಲ್ಪಹೊತ್ತು ಸೈರಣೆಗೊಂಡಿದ್ದು, ಕಡೆಗೆ ಮಹಮ್ಮದೀಯರ ಮೇಲೆ ತಿರುಗಿಬೀಳಲು, ಮಹಮ್ಮದೀಯರು ಪಲಾಯನಗೊಂಡರಂತೆ. ದೇಶಹಿತಚಿಂತಕರು ದೂರದೃಷ್ಟಿಯಿಂದ ಶ್ರಮಪಟ್ಟು ಪರಸ್ಪರ ಐಕಮತ್ಯಸಾಧನೆಗೆ ಒಂದುಕಡೆ ಪ್ರಯತ್ನಪಡುತ್ತಿರುವಲ್ಲಿ ಸಾಮಾನ್ಯ ಜನರು ಹೀಗೆ ದಿಕ್ಕುದಿಕ್ಕಿಗೆ ಗದ್ದಲವನ್ನೆಬ್ಬಿಸಿ ವೈಮನಸ್ಸನ್ನು ಹೆಚ್ಚಿಸುತ್ತಿರುವುದು ಎಂಥ ಅವಿವೇಕವು !

ಸರ್ ವಿಲಿಯಂ ವೆಡರ್‌ಬರ್ನರವರು ಕಲಕತ್ತಾದಿಂದ ಬೊಂಬಾಯಿಗೆ ಬಂದು ಅಲ್ಲಿಂದ ಸೀಮೆಗೆ ಪ್ರಯಾಣಮಾಡುವಂತೆ ಮೊದಲು ಏರ್ಪಾಟಾಗಿದ್ದಿತು. ಆದರೆ ಕಲಕತ್ತಾದಲ್ಲೇ ಅವರ ದೇಹವು ಅಸ್ವಸ್ಥವಾಗಿ, ವೈದ್ಯರು ಕೊಟ್ಟ ಅಭಿಪ್ರಾಯದ ಮೇರೆಗೆ ಅವರು ಲೋಹಮಾರ್ಗಸಂಚಾರವನ್ನು ಮಾಡದೆ ಹಡಗಿನಮೂಲಕವಾಗಿ ತಾ॥ ೧೧ ರಲ್ಲಿ ಮದ್ರಾಸಿಗೆ ಬಂದರು. ಮದ್ರಾಸಿನಲ್ಲಿರುವ ದೇಶೀಯ ಪ್ರಮುಖರುಗಳಾದ ಆ॥ ಜಸ್ಟೀಸ್ ಶಂಕರ್ರನಾಯರ್, ಆ॥ ಶೇಷಗಿರಿ ಅಯ್ಯರು, ದಿ॥ ಬ॥ ಗೋವಿಂದರಾಘವಯ್ಯರು ಮೊದಲಾದ ಕೆಲವರು ಹಡಗಿಗೇ ಹೋಗಿ ಇದಿರ್ಗೊಂಡು ಸ್ವಾಗತಪ್ರಶ್ನೆವನ್ನು ಮಾಡಿ, ಅಲ್ಲಿಂದ ಮಹಾಜನ ಸಭಾಸದನಕ್ಕೆ ಕರಕೊಂಡುಹೋಗಿ, ಒಂದು ವಿಜ್ಞಾಪನ ಪತ್ರಿಕೆಯನ್ನೊಪ್ಪಿಸಿದರು. ಮರುದಿನ ಬೆಳಿಗ್ಗೆ ಒಂದು ಔತಣವನ್ನು ಪುರಪ್ರಮುಖರು ಮಾಡಿಸಿದರು. ಆ ದಿನವೇ ಅವರು ಹಡಗಿನಮೂಲಕ ಕೊಲಂಬೊ ಮಾರ್ಗವಾಗಿ ಪ್ರಯಾಣಮಾಡಿದರು.

ಬರ್ದ್ವಾನಿನಲ್ಲಿ ಕತ್ವಾಸಬ್‌ಡಿವಿಜನ್ನಿಗೆಸೇರಿದ ಸಿತಹಟ್ಟಿ ಎಂಬ ಹಳ್ಳಿಯ ಬಾಬು ವಿದ್ಯಾನಾಥಚಕ್ರವರ್ತಿಯವರಿಗೆ ಸೇರಿದ ೧೦ ಎಕರೆ ಬಂಜರ್ ಭೂಮಿಯನ್ನು ಬೇಸಾಯಕ್ಕಣಿ ಮಾಡಿಸಲು ೨ ತಿಂಗಳ ಕೆಳಗೆ ಅಗೆಸುತ್ತಿರುವಾಗ್ಗೆ ಬೆಳ್ಳಿ ಭಂಗಾರದ ಹಲಗೆಗಳು ವಿಶೇಷವಾಗಿ ದೊರೆದುವು. ಪುನಃ ಅಗೆಯುವಾಗ್ಗೆ ೧೩ ಸೇರು ತೂಕವುಳ್ಳ ಮತ್ತೊಂದು ಭಂಗಾರದ ಹಲಗೆಯು ದೊರೆದಿತು. ಇದರಮೇಲೆ ೨ ಹಿಂದೂ ದೇವತಾ ವಿಗ್ರಹಗಳು ಕೆತ್ತಲ್ಪಟ್ಟಿರುವುದಲ್ಲದೆ ಅಲ್ಲಿ ನಯರಾಜನು ತನ್ನ ಅರಮನೆಯ ಶಂಕುಸ್ಥಾಪನೆಯನ್ನು ಮಾಡಿದನು ಎಂದು ಬರೆಯಲ್ಪಟ್ಟಿರುವುದು. ಸ್ಥಳೀಯಾಧಿಕಾರಿಗಳು ಈ ಅಪೂರ್ವವಾದ ಪದಾರ್ಥಗಳು ದೊರೆದ ಸಂಗತಿಯನ್ನು ತಿಳಿದು ಕೆಲಸಗಾರರು ಅಪಹರಿಸಲವಕಾಶವಿಲ್ಲದಂತೆ ಪೊಲೀಸರ ಕಾವಲನ್ನಿಟ್ಟಿದ್ದರು. ಮುಂದೆ ಅಗೆದುದರಲ್ಲಿ ಪೂರ್ವಕಾಲದ ಕಂಬಗಳು ಸಿಕ್ಕಿದುವು. ಇದರಮೇಲೆ ಇನ್ನೂ ಕೆಳಗಡೆ ಒಂದು ದೊಡ್ಡ ಕಟ್ಟಡವು ಇರಬೇಕೆಂದೂಹಿಸಲ್ಪಟ್ಟಿರುತ್ತದೆ. ಭೂಸ್ವಾಮಿಯು ಮುಂದೆ ಅಗೆಯುವುದನ್ನು ನಿಲ್ಲಿಸಿಬಿಟ್ಟಿರುತ್ತಾರೆ ಆ ಪ್ರಾಂತದಲ್ಲಿ ಕೆರೆ ಬಾವಿಗಳನ್ನು ತೋಡುವಾಗ್ಗೆ ಇಟಿಗೆರಾಸಿಯೂ, ಗೋತೆಗಳ ಮಣ್ಣೂ ದೊರೆಯುವುವು. ಇದರಿಂದ ಆ ಪ್ರಾಂತದಲ್ಲಿ ಶಿಥಿಲವಾದ ಕಟ್ಟಡದ ಶೇಷವು ಇರಬಹುದೆಂದು ತೋರಿಬರುತ್ತದೆ.

ಇಂಗ್ಲಂಡಿಗೆ ಸೇರಿದ ಕೇಂಬ್ರಿಡ್ಜಿನಲ್ಲಿ ಕಳೆದ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಅಲ್ಲಿರುವ ಹಿಂದೂ ಮಹಮ್ಮದೀಯ ವಿದ್ಯಾರ್ಥಿಗಳು ಸಂತೋಷೋತ್ಸವವನ್ನು ನಡೆಯಿಸಿ, ಸಪಜ್ತಿಭೋಜನವನ್ನು ಮಾಡಿದರು. ವಿದ್ಯಾವಂತರಾದ ಹಿಂದೂ ಮಹಮ್ಮದೀಯರು ಪರಸ್ಪರ ಐಕಮತ್ಯವನ್ನು ವೃದ್ಧಿಗೊಳಿಸುವುದಕ್ಕಾಗಿ ಅವಿದ್ಯಾವಂತರಾದ ತಮ್ಮ ತಮ್ಮ ಜನರನ್ನು ಸದ್ಬೋಧೆಯಿಂದ ದಾರಿಗೆ ತರಬೇಕೆಂಬುವುದೇ ಈ ಕೂಟದ ಉದ್ದೇಶವಾಗಿದ್ದಿತು. ಆಗ ವಿದ್ಯಾರ್ಥಿಗಳು ಐಕಮತ್ಯ–ಮತತತ್ವ–ಸೋದರಭಾವ–ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸಮಾಡಿ, ಹಿಂದೂ ಮಹಮ್ಮದೀಯರಿಗೆ ಮತವಿಷಯವಾಗಿ ಭಿನ್ನಾಭಿಪ್ರಾಯಗಳಿದ್ದರೂ, ಕಲಹಗಳು ಹುಟ್ಟುತ್ತಿದ್ದರೂ ಅವಿದ್ಯಾಪ್ರಾಬಲ್ಯದಿಂದಲೇ ಅವು ಹುಟ್ಟುತ್ತಿರುವುವೆಂತಲೂ, ವಿದ್ಯಾಪ್ರಾಬಲ್ಯದಿಂದ ಅವು ಅಡಗಿಹೋಗತಕ್ಕವಾಗಿರುವುವೆಂತಲೂ, ಒಟ್ಟಿಗೆ ನೋಡಿದರೆ ಹಿಂದೂ ಮಹಮ್ಮದೀಯರಿಬ್ಬರಿಗೂ ಸ್ನೇಹಭಾವವಿರುವುದೆಂತಲೇ ಹೇಳಬೇಕಾಗಿದೆಯೆಂತಲೂ, ರಾಜಕೀಯಾದಿ ವ್ಯವಹಾರಗಳಲ್ಲಿ ಅವರಿಬ್ಬರ ಐಕ್ಯವು ಅವಶ್ಯಕವಾದುದೆಂತಲೂ, ತಾವುಗಳು ಭರತಖಂಡಕ್ಕೆ ಬಂದಮೇಲೆ ಈರ್ವರ ಐಕಮತ್ಯದ ಸಾಧನೆಗಾಗಿ ಪಾಟುಪಡಬೇಕೆಂತಲೂ ಹೇಳಿ, ಕಲಕತ್ತಾದಲ್ಲಿ ಜರಗಿದ ಗದ್ದಲವನ್ನು ಕುರಿತು ತಮ್ಮ ಪರಿತಾಪವನ್ನು ಪ್ರದರ್ಶಿಸಿ ಸಭೆಯನ್ನು ಮುಗಿಸಿದರು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು. ಪ. ಪ್ರ.

ಪತ್ರವ್ಯವಹಾರ.

ಶ್ರೀ॥ ಶಿವಲಿಂಗರಾವ ದೇಶಮುಖ ಆಲವೇಲ ಇವರಿಗೆ ರಾವಸಾಹೇಬ ಎಂಬ ಬಹುಮಾನಪದವಿಯು ದೊರೆದದ್ದು.

ಶ್ರೀ ಶಿವಲಿಂಗ ದೇಶಮುಖ ಇವರ ಸಾರ್ವಜನಿಕ ಮತ್ತೂ ಸರ್ಕಾರಿ ಕೆಲಸಗಳ ವಿಷಯವಾಗಿ ಇವರಲ್ಲಿದ್ದ ಪ್ರೀತಿ ಮತ್ತೂ ಉತ್ಸುಕತೆಗಳ ಜ್ಞಾಪಕಾರ್ಥವಾಗಿ ರಾವಸಾಹೇಬ ಎಂಬ ಪದವಿಯನ್ನು ಸರ್ಕಾರದವರು ಕೊಟ್ಟದ್ದು ವೀರಶೈವ ಸಮಾಜಕ್ಕೆಲ್ಲ ಅತ್ಯಾನಂದವನ್ನು ಉಂಟುಮಾಡಿದೆ. ಅವರು ಸಮಾಜಸುಧಾರಣೆಯ ವಿಷಯವಾಗಿ ಎಷ್ಟು ಪ್ರಯತ್ನಪಡುತ್ತಿರುವರೆಂಬುದನ್ನು ಹೇಳಲಶಕ್ಯವು. ಅವರ ಕೂಡ ಒಂದು ತಾಸು ಸಂಭಾಷಣೆಮಾಡಿದವರಿಗೆ ಅವರು ಸಮಾಜವಿಷಯಕ್ಕೆ ತೋರಿಸುವ ಮಮತೆ ಮತ್ತೂ ದೀರ್ಘಪ್ರಯತ್ನಗಳ ಬಗ್ಗೆ ಮನವರಿಕೆಯಾಗಿ ಅವರ ಬಗ್ಗೆ ವಿಶ್ವಾಸವೂ, ಪ್ರೇಮವೂ ಹುಟ್ಟುವುದಲ್ಲದೆ ಮನಸ್ಸಿಗೆ ಬಹಳೇ ಉಲ್ಲಾಸವಾಗಿ ಇಂಥ ಸುಪುತ್ರರನ್ನು ವೀರಶೈವ ಸಮಾಜವು ಹೆತ್ತಮೇಲೆ ಊರ್ಜಿತಸ್ಥಿತಿಯು ಸಮೀಪಿಸಿತೆಂದು ತೋರುತ್ತದೆ. ಸರಕಾರದವರು ಕೊಟ್ಟ ಈ ಪದವಿಯನ್ನು ಉಪಭೋಗಿಸಲಿಕ್ಕೂ ಸಮಾಜ ಮತ್ತೂ ಸರಕಾರದ ಸೇವೆಯನ್ನು ಮಾಡಲಿಕ್ಕೂ ದೇವರು ಇವರಿಗೆ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲೆಂದು ಅನನ್ಯಭಾವದಿಂದ ಪ್ರಾರ್ಥಿಸುತ್ತೇನೆ. ತಮ್ಮ ಸಮಾಜ ಹಿತಚಿಂತಕ.

ಕಾನಕಾನಹಳ್ಳಿ ತಾ॥ ಹಾರೋಹಳ್ಳಿ ಗ॥ಕ॥ಸ್ಕೂಲಿನಲ್ಲಿ ನಡೆದ ಬಹುಮಾನ ಸಭೆ.

ಕಳೆದ ಡಿಶಂಬರ್ ತಾ॥ ೨೪ ನೇ ಶನಿವಾರ ಪ್ರಾತಃಕಾಲ ಹಾರೋಹಳ್ಳಿ ಸ್ಕೂಲ್ ಕಟ್ಟಡದಲ್ಲಿ ಸದರಿ ಸ್ಕೂಲ್ ಬಾಲಕಬಾಲಿಕೆಯರಿಗೆ ಬಹುಮಾನ ಕೊಡುವುದಕ್ಕಾಗಿ ಸಭೆಯು ಸೇರಿತು. ಕಟ್ಟಡವನ್ನು ನೇತ್ರಾನಂದಕರವಾಗಿ ಅಲಂಕರಿಸಿದ್ದರು. ಮಧ್ಯಭಾಗದಲ್ಲಿ ನಮ್ಮ ಮಹಾರಾಜರವರ ಭಾವಚಿತ್ರವನ್ನೂ ಈಗಿನ ಜಾರ್ಜ್ ಚಕ್ರವರ್ತಿಗಳ ಭಾವಚಿತ್ರವನ್ನೂ ಮತ್ತೂ ಲೇಟ್ ವಿಕ್ಟೋರಿಯಾ ಚಕ್ರವರ್ತಿನಿ ಎಡ್ವರ್ಡ್ ಚಕ್ರವರ್ತಿಗಳ ಕಿರೀಟಧಾರಣಾಮಹೋತ್ಸವದ ದರ್ಬಾರು ಪಟಗಳನ್ನೂ ಕಟ್ಟಿದ್ದರು. ಈ ಊರಲ್ಲಿರುವ ಜಮೇದಾರ್ ದಫೇದಾರ್, ಸೇಕದಾರ್ ಶಾನುಭೋಗ್, ಪಟೇಲಗುಗಳೂ, ಪೋಸ್ಟ್ ಮತ್ತೂ ಎಕ್ಸೈಜು ಇಲಾಖಾ ನೌಕರರೂ, ಸಾಹುಕಾರರೂ ಸೆಟ್ಟಿವರ್ತಕರೂ ಮುಂತಾದವರೆಲ್ಲಾ ಸಭೆಗೆ ಬಂದಿದ್ದರು. ಮತ್ತೂ ಈ ಸ್ಕೂಲು ಇನ್ಸ್ಪೆಕ್ಷನ್‌ಗಾಗಿ ಮುಂಚಿತವಾಗಿ ಈ ಊರಿಗೆ ದಯಮಾಡಿಸಿದ್ದ ಬೆಂಗಳೂರು ಡಿ॥ ಸ್ಕೂಲುಗಳ ೧ ನೇ ತ॥ ಅ॥ ಡೆಪ್ಯುಟಿ ಇನ್ಸ್ಪೆಕ್ಟರಾದ ಪಿ. ಅನಂತಸುಬ್ಬರಾವ್ ಯಸ್ಕ್ವೈರ್: ಬಿ.ಎ. ಎಲ್. ಟಿ. ಯವರು ಅಗ್ರಾಸನವನ್ನು ವಹಿಸಿದ್ದರು. ಪ್ರಥಮದಲ್ಲಿ ಸ್ಕೂಲ್ ಹೆಡ್ಮಾಸ್ಟರ್ ಮ॥ ಸಿ. ಚಂದ್ರಶೇಖರಯ್ಯನವರು ಭಗವತ್ಪ್ರಾರ್ಥನೆಯನ್ನು ಮಾಡಿದರು. ಅನಂತರ ಬಾಲಕ ಬಾಲಿಕೆಯರುಗಳು ದೇವತಾಪ್ರಾರ್ಥನೆಯನ್ನು ಮಾಡಿದರು. ನಾಲ್ಕುಜನ ವಿದ್ಯಾರ್ಥಿಗಳು ಹಾರ್ಮೋನಿಯಂ ಸ್ವರಕ್ಕೆ ಅನುಸಾರವಾಗಿ ಗಣೇಶನ ಪ್ರಾರ್ಥನೆ ಮಹಾರಾಜರ ಪ್ರಾರ್ಥನೆಗಳನ್ನು ಮಾಡಿದರು. ಒಂದುಕಡೆ ಬಾಲಕಬಾಲಿಕೆಯರ ಇಂಪಾದ ಗಾನವೂ ಮತ್ತೊಂದುಕಡೆ ಹಾರ್ಮೋನಿಯದ ಸಂಗೀತವೂ ಸಭಿಕರಿಗೆ ಕರ್ಣಾನಂದವನ್ನುಂಟುಮಾಡುತ್ತಿತ್ತು. ಇಬ್ಬರು ಬಾಲಕರು ವಿದ್ಯಾಭ್ಯಾಸದ ವಿಷಯವಾಗಿ ಬಹು ಸ್ವಾರಸ್ಯವಾಗಿ ವಾಗ್ವಾದವನ್ನು ಮಾಡಿದರು. ಇದರಲ್ಲಿ ವಿದ್ಯೆಯು ಸರ್ವರಿಗೂ ಅವಶ್ಯಕವೆಂಬುದೂ, ದೈವಭಕ್ತಿ ರಾಜಭಕ್ತಿಗಳು ಅವಶ್ಯಕವೆಂಬುದೂ ಸ್ಪಷ್ಟವಾಗಿ ತಿಳಿಯಬಂತು. ಅನಂತರ ಇಬ್ಬರು ಬಾಲಕರು ಮಾತಾಪಿತೃಗಳ ವಿಷಯವಾಗಿಯೂ, ಮತ್ತಿಬ್ಬರು ಗುರುಭಕ್ತಿ ವಿಷಯವಾಗಿಯೂ ಇನ್ನು ಕೆಲವರು ಪ್ರಾಣಿಗಳಲ್ಲಿ ದಯೆತೋರಿಸಬೇಕಾದುದು ಅವಶ್ಯಕವೆಂಬುದಾಗಿಯೂ ಹೇಳಿದರು. ನಂತರ ಇಬ್ಬರು ವಿದ್ಯಾರ್ಥಿಗಳು ಸ್ತ್ರೀವಿದ್ಯಾಭ್ಯಾಸದವಿಷಯವಾಗಿ ಸಂಭಾಷಣೆ ಮಾಡಿದರು. ಕೆಲವು ವಿದ್ಯಾರ್ಥಿಗಳು ಗೋವು, ಕಾವೇರೀ ನದಿ ಇವುಗಳಿಂದ ಉಂಟಾಗುವ ಪ್ರಯೋಜನವನ್ನು ಕುರಿತು ಹಾಡಿದರು. ಮತ್ತೆ ಕೆಲವು ವಿದ್ಯಾರ್ಥಿಗಳು ವಿನೋದಕರವಾದ ನಕಲಿಯನ್ನು ಮಾಡಿದರು. ನಂತರ ಹೆಡ್ಮಾಸ್ಟರವರು ಶಾಲಾ ರಿಪೋರ್ಟನ್ನು ಓದಿದರು. ಇದರಿಂದ ತಿಳಿದ ಮುಖ್ಯಸಂಗತಿ ಏನೆಂದರೆ– ಹಾಲಿ ಸ್ಕೂಲಿನಲ್ಲಿ ಎಲ್ಲಾ ತರಗತಿಗಳೂ ಏರ್ಪಟ್ಟು ೪ ಜನ ಮಾಸ್ಟರುಗಳು ಕೆಲಸಮಾಡುತ್ತಿರುವುದಾಗಿಯೂ ಹಾಲಿ ನಡೆದ ಇನ್ಸ್ಪೆಕ್ಷನ್ ಕಾಲದಲ್ಲಿ ೧೦೩ ಜನ ವಿದ್ಯಾರ್ಥಿಗಳಲ್ಲಿ ೯೭ ಜನ ಹಾಜರಿದ್ದಂತೆಯೂ, ಇವರಲ್ಲಿ ಬಹುಮಂದಿ ತೇರ್ಗಡೆಯಾಗಿರುವುದರಿಂದ ವಿದ್ಯಾಭಿವೃದ್ಧಿಯ ಸ್ಥಿತಿಯನ್ನು ತಿಳಿಯಬಹುದೆಂಬುದಾಗಿಯೂ, ಇದಲ್ಲದೆ ಈ ಸ್ಕೂಲಿನಿಂದ ಮೈಸೂರು ಲೋ॥ ಸೆ॥ ಪರೀಕ್ಷೆಗಾಗಿ ಹೋದವರ್ಷ (೧೯೦೯) ಹೋಗಿದ್ದ ೬ ಜನ ವಿದ್ಯಾರ್ಥಿಗಳಲ್ಲಿ ೪ ಜನ ತೇರ್ಗಡೆಯಾಗಿರುತ್ತಾರೆಂತಲೂ ಈ ವರ್ಷವೂ ಸದರಿ ಪರೀಕ್ಷೆಗಾಗಿ ೪ ಜನ ವಿದ್ಯಾರ್ಥಿಗಳು ದರಖಾಸ್ತು ಮಾಡಿರುತ್ತಾರೆಂತಲೂ ಈ ಸಲವೂ ಸ್ಕೂಲಿಗೆ ಕೀರ್ತಿ ಬಂದೀತೆಂಬ ನಿರೀಕ್ಷಣೆಯಲ್ಲಿರುವುದಾಗಿಯೂ ತಿಳಿಸಿದರು.

ಅನಂತರ ಸಭಾಧ್ಯಕ್ಷರು ಬಹುಮಾನವನ್ನು ವಿದ್ಯಾರ್ಥಿಗಳಿಗೆ ಹಂಚಿಕೊಟ್ಟರು. ನಂತರ ಸಭಾಧ್ಯಕ್ಷರು ಅಪ್ಪಣೆಕೊಡಿಸಿದ್ದೇನೆಂದರೆ– ಈ ಸ್ಕೂಲ್ ಮಾಸ್ಟರುಗಳು ಅನ್ಯೋನ್ಯವಾಗಿಯೂ, ಶ್ರದ್ಧೆಯಾಗಿಯೂ ಕೆಲಸಮಾಡುತ್ತಿರುವುದರಿಂದ ಇಷ್ಟು ಅಭಿವೃದ್ಧಿಗೆ ಬರಲು ಕಾರಣವಾಯಿತು. ಒಟ್ಟು ಶಾಲಾಸ್ಥಿತಿಯು ಬಹು ತೃಪ್ತಿಕರವಾಗಿದೆ. ಈ ಸ್ಕೂಲನ್ನು ಮಾಡಲ್ (ಮಾದರಿ) ಸ್ಕೂಲಾಗಿ ಮಾಡಬೇಕೆಂಬ ಉದ್ದೇಶವಿರುತ್ತೆ. ಇದಕ್ಕೆ ತಕ್ಕ ಸಲಕರಣೆಗಳನ್ನೆಲ್ಲಾ ಒದಗಿಸಿಕೊಡಬೇಕೆಂತ ಮೇಲಕ್ಕೆ ರಿಪೋರ್ಟು ಮಾಡಿರುತ್ತೆ. ಈ ಸ್ಕೂಲ್ ವಿಷಯದಲ್ಲಿ ಗ್ರಾಮಸ್ಥರು ಬಹಳ ಅನುರಾಗವುಳ್ಳವರಾಗಿರಬೇಕು ಎಂಬದಾಗಿ ಸೂಚಿಸಿದರು. ಅದಕ್ಕೆ ಗ್ರಾಮಸ್ಥರು– ನಮ್ಮಗಳಿಗೆ ಈ ಸ್ಕೂಲ್ ಮೇಲೆ ಇರತಕ್ಕ ಅಭಿಮಾನವು ಈದಿನ ಸೇರಿರುವ ಸಭೆಯಿಂದಲೇ ವೇದ್ಯವಾಗುತ್ತೆ. ಮಾಸ್ಟರುಗಳು ಒಳ್ಳೆಯವರಾಗಿ ಈ ಸ್ಕೂಲನ್ನು

ಇಷ್ಟು ಉತ್ತಮಸ್ಥಿತಿಗೆ ತಂದಿರುವುದು ನಮ್ಮಗಳಿಗೆ ತುಂಬಾ ಸಂತೋಷವಾಗಿದೆ. ಈ ಸ್ಕೂಲನ್ನು ಎ. ವಿ. ಸ್ಕೂಲಾಗಿ ಮಾಡಿಸಿಕೊಡಬೇಕು. ಹೀಗಾಗದಿದ್ದಲ್ಲಿ ತಾಲ್ಲೋಕು ಸ್ಕೂಲಾಗಿಯಾದರೂ ಮಾಡಿಸಿಕೊಡಬೇಕು ಎಂಬದಾಗಿ ಕೇಳಿಕೊಂಡರು. ಅನಂತರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೂ, ಮಂಗಳವೂ ನಡೆಯಿತು. ಅನಂತರ ಸರ್ವರಿಗೂ ಮಿಠಾಯಿಯನ್ನು ಹಂಚಿದ್ದಾದಮೇಲೆ ಸಭೆಯು ಬರಖಾಸ್ತಾಯಿತು. ಇದೇ ರೀತಿಯಾಗಿ ಈ ಸ್ಕೂಲು ಅಭಿವೃದ್ಧಿಯಾಗಲೆಂದು ಅಪೇಕ್ಷಿಸುತ್ತೇನೆ.

ಹೊನ್ನಪ್ಪ (ವಿದ್ಯಾರ್ಥಿ.)

ಶೈವಸಿದ್ಧಾಂತ ಮಹಾಸಭೆ.

(ನಮ್ಮ ಒಬ್ಬ ಪತ್ರವ್ಯವಹಾರಕರಿಂದ.)

ಈ ಸಭೆಯು ೧೯೧೦ನೆ ಡಿಶಂಬರ್ ತಿಂಗಳ ೨೬, ೨೭, ೨೮ ಈ ಮೂರುದಿನಗಳು ನಡೆದವು. ಈ ಸಭೆಗೆ ಶ್ರೀಮನ್ಮಹಾರಾಜರವರ ಒಂದನೆ ಕೌನ್ಸಿಲರಾದ ಮ॥ ರಾ॥ ರಾ॥ ಕೆ. ಪಿ. ಪುಟ್ಟಣ್ಣಸೆಟ್ಟರವರು ಅಧ್ಯಕ್ಷರಾಗಿದ್ದರು. ಈ ಸಭೆಗೆ ಕೆಲವುಜನ ವೀರಶೈವವಿದ್ಯಾವಂತರನ್ನೂ ಮತ್ತೂ ಕೆಲವುಜನ ಇತರ ಶೈವವಿದ್ಯಾವಂತರನ್ನು ಸಹ ಮ॥ ರಾ॥ ಪುಟ್ಟಣ್ಣಸೆಟ್ಟರು ತಮ್ಮ ಜತೆಗೆ ಕರೆದುಕೊಂಡುಹೋಗಿದ್ದರು. ಇಲ್ಲಿಂದ ಸಭೆಗೆ ಹೋದ ಮೊದಲ್ಗೊಂಡು ಪುನಃ ಬರುವವರೆಗೂ ತಮ್ಮ ಜತೆಗೆ ಬಂದಿದ್ದವರೆಲ್ಲರನ್ನು ಮ॥ ರಾ॥ ಪುಟ್ಟಣ್ಣಸೆಟ್ಟರು ತಮ್ಮ ಕುಟುಂಬದವರಂತೆ ಪರಿರಕ್ಷಿಸಿದರು. ಈ ಸಭೆಗೆ ಹೋದುದರದೆಸೆಯಿಂದ ಎಲ್ಲರಿಗೂ ಮಹಾಕ್ಷೇತ್ರವೆನಿಸಿದ ಶ್ರೀ ರಾಮೇಶ್ವರದ ಸಂದರ್ಶನಕ್ಕವಕಾಶವಾಯಿತು. ಯಾತಕ್ಕೆಂದರೆ— ಸಭೆ ನಡದ ರಾಮನಾಥಪುರಕ್ಕೆ ರಾಮೇಶ್ವರ ಕ್ಷೇತ್ರವು ಬಹುಳ ಸಮೀಪವಾಗಿತ್ತು. ಆದುದರಿಂದ ಮ॥ ರಾ॥ ಪುಟ್ಟಣ್ಣಸೆಟ್ಟರು ಜತೆಗೆ ಬಂದಿದ್ದ ಶೈವ ವೀರಶೈವರಿಗೆಲ್ಲ ಬಹುಳವಾದ ಪ್ರೋತ್ಸಾಹವನ್ನುಂಟುಮಾಡಿ, ಶ್ರೀ ರಾಮೇಶ್ವರಕ್ಕೆ ಕರೆದುಕೊಂಡುಹೋಗಿ, ಎಲ್ಲರಿಗೂ ರಾಮೇಶ್ವರ ದರ್ಶನವನ್ನು ಮಾಡಿಸಿದರು. ರಾಮೇಶ್ವರದಿಂದಾಚೆ ಧನುಷ್ಕೋಟಿಯೆಂಬ ಮಹಾತೀರ್ಥದಲ್ಲಿ ಶೈವ ವೀರಶೈವರೆಲ್ಲರಿಗೂ, ಸ್ನಾನವಾಯಿತು. ಇದರ ಮಾತು ಹಾಗಿರಲಿ. ಸಭೆನಡೆದ ರಾಮನಾಥಪುರಕ್ಕೆ ಮ॥ ರಾ॥ ಪುಟ್ಟಣ್ಣಸೆಟ್ಟರು ಮತ್ತು ಪರಿವಾರವು ಹೊಗೆಬಂಡಿಯಲ್ಲಿ ಬರುವದರ ಒಳಗಾಗಿ, ಮರ್ಯಾದಾರ್ಥವಾಗಿ, "ಗಡಾಬಾಜೆಂಬ" ಮದ್ದುಗಳು ಹಾರಿಸಲ್ಪಟ್ಟವು. ಪ್ರಸಿದ್ಧರಾದ ಮ॥ ರಾ॥ ವಿ. ವಿ. ರಮಣಶಾಸ್ತ್ರಿಗಳೆಂಬುವರು, ಮ॥ ರಾ॥ ಶೆಟ್ಟರು ಮಧುರೆಯಲ್ಲಿ ಹೊಗೆಬಂಡಿಯನ್ನು ಹತ್ತುವಾಗಲೇನ ಇದಿರ್ಗೊಂಡು ಅವರ ಜತೆಗೆ ಹೊಗೆಬಂಡಿಯಲ್ಲಿ ಹತ್ತಿ ರಾಮನಾಥಪುರಕ್ಕೆ ಬಂದು, ಮುಂದಣ ಮರ್ಯಾದೆಗಳನ್ನೆಲ್ಲ ಮಾಡಿದರು. ಮ॥ ರಾ॥ ಸೆಟ್ಟರೂ ಮತ್ತೂ ಪರಿವಾರವೂ ರಾಮನಾಥಪುರದಲ್ಲಿ ಹೊಗೆಬಂಡಿಯಿಂದ ಇಳಿಯುವಾಗ್ಗೆ ರಾಮನಾಥಪುರದ ರಾಜಕುಮಾರರು ಮತ್ತೂ ಪ್ರಸಿದ್ಧರಾದ ಮ॥ ರಾ॥ ನಲ್ಲಸ್ವಾಮಿಪಿಳ್ಳೆಯವರು ನಿಲ್ದಾಣಕ್ಕೆ ಬಂದು ಮ॥ ರಾ॥ ಸೆಟ್ಟರವರಿಗೆ ಪುಷ್ಪಹಾರಗಳನ್ನು ಹಾಕಿ, ಉಚಿತೋಕ್ತಿಗಳಿಂದ ಮಾತನಾಡಿಸಿದರು. ಆಮೇಲೆ ಸಾಯಂಕಾಲದಲ್ಲಿ ಛತ್ರ ಪತಾಕಾದಿಗಳಿಂದಲೂ, ವಿವಿಧವಾದ ದೀಪರಾಜಿಗಳಿಂದಲೂ, ಬಾಣಗಳಪ್ರದರ್ಶನದಿಂದಲೂ, ಉತ್ತಮವಾದ ವಾದ್ಯಘೋಷದಿಂದಲೂ, ವೈಭವದಿಂದ ಮ॥ ರಾ॥ ಸೆಟ್ಟರನ್ನು ಎರಡು ಕುದುರೆಯ ಬಂಡಿಯಲ್ಲಿ, ಕುಳ್ಳಿರಿಸಿ, ರಾಮನಾಥಪುರದ ವೀಧಿಯಲ್ಲಿ ಉತ್ಸಾಹದಿಂದ ಕರೆದುಕೊಂಡುಹೋಗಿ, ರಾಮನಾಥವಿಳಾಸವೆಂಬ ಮಂದಿರದಲ್ಲಿ, ಇಳಿಸಿ, ಅಲ್ಲಿಯೇ ಎಲ್ಲರಿಗೂ ಬಿಡಾರವನ್ನು ಮಾಡಿಸಿದರು. ಮ॥ ರಾ॥ ಸೆಟ್ಟರಿಗೂ ಮತ್ತು ಪರಿವಾರಕ್ಕೂ ರಾಮನಾಥಪುರದ ರಾಜಕುಮಾರರು, ಭೋಜನವೊದಲಾದ ಎಲ್ಲ ಏರ್ಪಾಟುಗಳನ್ನೂ, ಬಹುಳ ಶ್ಲಾಘ್ಯತರವಾಗಿ ಮಾಡಿದ್ದರು. ಆ ವೇಳೆ ೨೬, ೨೭, ೨೮ ಈ ಮೂರುದಿನಗಳು ನಡೆದ ವಿದ್ಯಾಮಾನಗಳನ್ನು ಸವಿಸ್ತಾರವಾಗಿ ಬರೆಯಲು, ಲೇಖನವಿಸ್ತಾರವಾಗುವದರಿಂದ ಮುಖ್ಯವಾದ ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ, ಬರೆಯುತ್ತೇನೆ. ೨೬ನೆ ತಾರೀಖಿನದಿನ ದೇವಿಯರದೇವಸ್ಥಾನದಲ್ಲಿ ಮಂಗಳಾರತಿಯು ತಾಯುಮಾನವಾರ್ ಎಂಬ ಶರಣರ ದೇವಸ್ಥಾನದಲ್ಲಿ "ತೇವಾರಂ" ಎಂಬ ಗ್ರಂಥಪಠನವೂ ನಡೆದವು. ಇವು ಬೆಳಿಗ್ಗೆ ೯ ಗಂಟೆಯೊಳಗಾಗಿ ನಡೆದವು. ಆಮೇಲೆ ಮಧ್ಯಾಹ್ನಕ್ಕೆ ಸಭೆಯು ಪ್ರಾರಂಭವಾಯಿತು. ಸಭೆಯು ನಡೆಯುವುದಕ್ಕೆ ಮೊದಲು ಮೈಸೂರು ದೇಶದಿಂದ ಬಂದಿದ್ದ ವೇ॥ ಗುರುಲಿಂಗಶಾಸ್ತ್ರಿಗಳು ಮತ್ತೂ ವೇ॥ ನಂಜಯ್ಯನವರು ಸಭಾಮುಖದಲ್ಲಿ ಶತರುದ್ರೀಯವೆಂಬ ವೇದಪಠನವನ್ನು ಮಾಡಿದರು. ಈ ಪಠನವನ್ನು ಮಾಡುವಾಗ್ಗೆ ಸಭೆಯೆಲ್ಲವೂ ಸ್ತಂಭೀಭೂತವಾಗಿತ್ತು. ಸಮಸ್ತ ಜನರೂ ಶಾಸ್ತ್ರಿಗಳಿಬ್ಬರನ್ನು ಬಹುಳವಾಗಿ ಕೊಂಡಾಡಿದರು. ಆಮೇಲೆ ಮ॥ ರಾ॥ ವಿ. ವಿ. ರಮಣಶಾಸ್ತ್ರಿಗಳು "ಅಡ್ರೆಸ್" ಎಂಬ ವಿಜ್ಞಾಪನಪತ್ರವನ್ನು ಓದಿದರು. ಈ ಮ॥ ರಾ॥ ವಿ, ವಿ. ರಮಣಶಾಸ್ತ್ರಿಗಳು ವೀರಶೈವಮತದ ಶ್ರೇಷ್ಠತ್ವವನ್ನು ಬಹುಳವಾಗಿ ಹೇಳಿದರು. ಅನಂತರ ಅಧ್ಯಕ್ಷರು ತಮ್ಮ ಭಾಷಣವನ್ನು ಮಾಡಿದರು. ಅಧ್ಯಕ್ಷರ ಭಾಷಣವು ಬಹುಳ ಪ್ರೌಢತರವಾಗಿದ್ದಿತು. ತಮಿಳುದೇಶದ ಶೈವರೆಲ್ಲರೂ ಅಧ್ಯಕ್ಷರ ಭಾಷಣವನ್ನೇ ಬಹುಳವಾಗಿ ಕೊಂಡಾಡಿದರು. ಈ ಅಧ್ಯಕ್ಷರ ಭಾಷಣದಲ್ಲಿ ಶೈವಮತದ ಶ್ರೇಷ್ಠತ್ವವೂ ಮತ್ತು ಪ್ರಾಚೀನತೆಯೂ ಚೆನ್ನಾಗಿ ವಿವರಿಸಲ್ಪಟ್ಟಿದ್ದವು. ವೀರಶೈವರಲ್ಲಿ ಮದ್ಯಪಾನ ಮಾಂಸಭಕ್ಷಣ ವಿವರ್ಜನೆಯು ಮುಖ್ಯತತ್ವವಾಗಿರುವುದರ ಶ್ರೇಷ್ಠತ್ವವು ಹೇಳಲ್ಪಟ್ಟಿತ್ತು. ಇದಾದಮೇಲೆ ಮೂರು ದಿನಗಳವರೆಗೂ ಇಂಗ್ಲೀಷಿನಲ್ಲಿ ಕೆಲವು ಜನರು, ತಮಿಳಿನಲ್ಲಿ ಬಹಳ ಲೇಖಕರು ಬೇರೆ ಬೇರೆ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದರು. ದ್ರಾವಿಡ ದೇಶದ ಇಬ್ಬರುಹೆಂಗುಸರು ಶ್ಲಾಘ್ಯತರವಾಗಿ ತಮಿಳು ಭಾಷೆಯಲ್ಲಿ ಉಪನ್ಯಾಸ ಮಾಡಿದರು. ಸಭೆಯ ಸಂಬಂಧವಾದ ಕೆಲವು "ಬೈಲಾಗಳು" ಅಂದರೆ ವಿಧಿಗಳು ಏರ್ಪಡಿಸಲ್ಪಟ್ಟವು ಈ ವಿಧಿಗಳ ಏರ್ಪಾಟಿನ ಕೆಲಸದಲ್ಲಿ ಮ॥ ರಾ॥ ಶೆಟ್ಟರು ಬಹುಳವಾದ ಸಾಮರ್ಥ್ಯವನ್ನು ತೋರ್ಪಡಿಸಿದರು.

ಊದಬತ್ತಿಗಳು.

46

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಪಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ಶಾದಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಪದ್ಮರಾಜ ಪುರಾಣಂ.

62

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಅಣೆ.

ಬಿ. ಮಲ್ಲಾರಾಧ್ಯರು,
ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ **ಬಿ. ಬಸವಾರಾಧ್ಯರು,**
ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್, ಬೆಂಗಳೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

35 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್‍ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಅಲಕ್ಷ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

ರಾಸ್ಕೋಪಸಿಸ್ಟಂ ಪೇಟೆಂಟ ಲೀವರ್ ಜ್ಯೂವೆಲ್ಡ್ ವಾಚ್



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಐದು (೫) ವರುಷಗಳು ಗ್ಯಾರೆಂಟು.

ಕ್ರಯ ರೂ. ೨-೮-೦ ವಿ. ಪಿ. ಚಾರ್ಜ ರೂ. ೦-೪-೦.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ ೦-೮-೦ ವಿ. ಪಿ. ಚಾರ್ಜ ೦-೪-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ.
ನಂಬರು ೨೦ ಸಿಂಗಣ್ಣಾಣಬೀದಿ, ವಾಲಟಾಕ್ಸ್ ರೋಡು,
3 ಮದರಾಸು.

ಮೊದಲು ಇದನ್ನು ಓದಿರಿ.

21

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತುಪುಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿಧಾರಣಕ್ಕೆ ಯೋಗ್ಯವಾದ ಧಾತು ಆಗುತ್ತದೆ. ನಡುವೇ ಯಾವದಾದರೊಂದು ಕಾರಣದಿಂದ ನಪುಂಸಕತ್ವವಾದರೆ ಇದರಿಂದ ಖಾತ್ರಿಯಿಂದ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ ಅನ್ನ ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ, ಅನ್ನ, ಹಾಲು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತವಾಗುತ್ತಾರೆ. ಕ್ರಯ ೧ ಬಾ. ೧॥= ರೂ. ೨ ಬಾ. ೨॥। ರೂ. ೩ ಬಾ. ೩॥।= ಟ.ಖ.ಬೇರೆ.

ಪಚ್ಯಾಂಗಪಿಜೂರ್ರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡ. ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು. ಟ. ಖ. ಬೇರೆ.

ಸಾರ್ಸಾಪರಿಲಾ:—ಇದರಿಂದ ಪರಮಾ, ಗರಮಿ ಹೋಗುತ್ತದೆ. ಉಷ್ಣದಿಂದ ಆದ ಯಾವದಾದರು ವಿಕಾರಗಳು ರಸಾಯನ ಸೇವನ ಮಾಡಿದ್ದರಿಂದ ಉಂಟಾದ ರೋಗಗಳು ಮತ್ತು ಉಷ್ಣವು ಬಡೆದು ಆದ ಬಳೇಕರೇಕಲಿಗಳು, ಭಗೇಂದ್ರ, ಪಿನಸಿ, ಇತ್ಯಾದಿರೋಗಗಳು ಖಾತ್ರಿಯಿಂದ ನೆಟ್ಟಗಾಗುವವು. ಕ್ರಯ ೧ ಬಾ. ೧॥ರೂ. ೩ ಬಾ. ೪ರೂ. ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ತದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು. ಟ. ಖ. ಬೇರೆ.

"ಪಾಚಕ."

("ಪಚನ ಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರಡೇಗುಗಳು ಬರುವದಿಲ್ಲ. ೧ ಬಾ. ೫ ಆಣೆ ಟ. ಖ. ಬೇರೆ.

ನಂ. ೫೫ "ಅಂಜೀರಾರ್ಕಮಧುಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯಾ)

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

28

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾ ಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ.

ಸರ್ವಮೇಹರಾಜಾಂಗ ರಬ್ಬರ್‌ಎಣ್ಣೆ.—ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೋಲದಂತೆ ೨೦ ದಿನಗಳವರೆಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೆಬ್ಬು, ವ್ರಣ, ಕುಷ್ಠ. ಮಹೋದರ, ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂತಿಮೇಹ, ಮೂತ್ರಕೃಚ್ಛ್ರ ಅಸ್ತಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕುಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ, ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ—ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚ ೬ ಆಣೆ.

೯. ಮಹಾಕುಂಡಳ್ಯಾದಿರಸಾಯನ— ಇದರಿಂದ ಕ್ಷಯ ಕಾಶಿ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟ್ಲು ಉರಿಸುಸ್ತು ಸಂಕಟ, ವಮನವಿಲ್ಲದೆ ೪–೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶ ನೀರು ಎರೆಯುವಾಗ ಜ್ಞಾನ ತಪ್ಪುವುದು, ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಷರಬತ್ತುಗಳೂ, ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚನ್ನಬಸಪ್ಪ ಅಂಡ್‌ಸನ್ಸ್,
ಚನ್ನಪಟ್ಟಣ, ಬೆಂಗಳೂರು ಡಿಸ್ಟ್ರಿಕ್ಟ್.

3

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.



ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧–೨–೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧–೨–೦. ಪೋಸ್ಟ್ ಖರ್ಚು ೦–೪–೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳ್ತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಸುಲಭ ಕ್ರಯ! ಸುಲಭಕ್ರಯ!!

ರಾಸ್ಕೋಪ್ ಲೀವರ್ ವಾಚ್.

4

ಇದು ರಾಸ್ಕೋಪ್ ಸಿಸ್ಟಂ ಆಗಿಯೂ, ಪೇಟೆಂಟ್ ಕೆಲಸದಿಂದ ಕೂಡಿದ್ದಾಗಿಯೂ, ತಲೆಯಲ್ಲಿ ಬೀಗವುಳ್ಳದ್ದಾಗಿಯೂ ಇರುತ್ತೆ. ಸರಿಯಾದ ಕಾಲವನ್ನು ತೋರಿಸುವಂಥಾದ್ದು. ದಪ್ಪವಾದ ಕನ್ನಡಿಯಿಂದ ಮುಚ್ಚಿರುತ್ತೆ. ಇದಕ್ಕೆ ಗ್ಯಾರೆಂಟಿ ೫ವರ್ಷ. ಇದರ ಕ್ರಯ೧ಕ್ಕೆ ೨–೮–೦ ಮಾತ್ರ.

N. B.— ನಮ್ಮಲ್ಲಿ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಗಗಳು, ಜರ್ಮನ್ ಬೆಳ್ಳಿ ಸಾಮಾನುಗಳು ಮುಂತಾದ್ದು ವ್ಯಾಪಾರಸ್ತರು ವಿಕ್ರಯಿಸಿ ಲಾಭ ಹೊಂದುವಷ್ಟು ಸುಲಭ ಕ್ರಯದಲ್ಲಿ ದೊರಿಯುತ್ತೆ.

ವಿಳಾಸ:—
ಬಿ. ಆರ್. ವೆಂಕಟರಮಣ ಅಂಡ್‌ಕಂಪೆನಿ,
ನಂಬರು ೭, ಕೋಪ್ ವೆಂಕಟಾಚಲೈಯ್ಯರ್ ಬೀದಿ,
ಮದರಾಸು.

45

ಹೊಸ ಪುಸ್ತಕಗಳು.

ನೂತನಗೃಹಪ್ರವೇಶ, ಪಟ್ಟಾಧಿಕಾರ, ಲಿಂಗಧಾರಣ ಈ ಮೂರು ವಿಧಿಗಳು ಟೀಕಾ ಸಮೇತವಾಗಿ ಒಂದು ಪುಸ್ತಕದಲ್ಲಿ ಮುದ್ರಿತಗಳಾಗಿರುತ್ತವೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೨ ಆಣೆ. ಶ್ರೀಚೆನ್ನಬಸವೇಶ್ವರವಿರಚಿತಮಾದ ಶಿವಾನುಭವಶಾಸ್ತ್ರ ಕನ್ನಡ ವಾಕ್ಯರೂಪವಾಗಿದೆ. ಬೆಲೆ ಪ್ರತಿ೧ ಕ್ಕೆ ವಿ. ಪಿ. ೧೫ ಆಣೆ. ವೀರಶೈವದಶಕರ್ಮವಿಧಿ ಬೆಲೆ ಪ್ರತಿ ೧ಕ್ಕೆ ವಿ. ಪಿ. ೮ ಆಣೆ. ಶಿವಸ್ತುತಿಮಣಿಮಾಲಾ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೬ ಆಣೆ. ರಾಜಶೇಖರ ೧೩–೧೪ ಆಶ್ವಾಸ ಪ್ರತಿಪದಾರ್ಥ ತಾತ್ಪರ್ಯಸಹಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಇದೆ.

ಕ್ರಯ— ಪ್ರತಿ ೧ ಕ್ಕೆ ವಿ. ಪಿ. ೧–೩–೦.

ಸಟೀಕ ವೀರಶೈವ ಅಂತ್ಯೇಷ್ಟಿವಿಧಿ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೮ ಆಣೆ. ವಿಳಾಸ:— **ಕೆ. ಶಾಂತವೀರಪ್ಪ,**
ದೊಡ್ಡಪೇಟೆ, ಬೆಂಗಳೂರು.

35

ಜೇರಿಗೆ ಬಸವಲಿಂಗಪ್ಪನ ಪುಸ್ತಕಗಳು.

ಬೆಲೆ ಬಹಳ ಕಡಿಮೆ. ನೋಡಿ. ನೋಡಿ. ಬಿಡಬೇಡಿ.

ಪದ್ಮಾವತಿಕಥೆ:— ವೀರಶೈವವಚನನಾಟಕ. ೯೮ ಡೆಮ್ಮಿ ಪುಟ. ಕ್ರಯ. ೦–೨–೦. ವಿ. ಪಿ. ಯಿಂದ ೦–೪–೦

ವೀರಶೈವಮತವಿಷಯಸಾರ (೨ ನೇ ಭಾಗ) ಕ್ರಯ ೦–೨. ವಿ. ಪಿ. ಯಿಂದ ೦–೪–೦.

ಷಟ್‌ಸ್ಥಲಚಿಂತಾರತ್ನ.–ಕ್ರಯ ೦–೨–೦. ವಿ. ಪಿ. ಯಿಂದ ೦–೪–೦.

ವಿಳಾಸ.—ಬೆಂಗಳೂರು ಸಿಟಿ ಅರಳೇಪೇಟೆ ಜೇರಿಗೆ ನಂಜಪ್ಪನವರ ಮಗ ಬಿ. ಜಿ. ಬಸವಲಿಂಗಪ್ಪನವರಿಗೆ.

೧೯೧೧ನೇ ಇಸವಿ ಜನವರಿ ತಾ॥ ೧೬ ರಿಂದ ೧೯೧೧ನೇ ಜನವರಿ ತಾ॥ ೨೨ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ಸಾಧಾರಣ ಸಂವತ್ಸರದ ಪುಷ್ಯ ಬ॥ ಬಿದಿಗೆಯಿಂದ ಪುಷ್ಯ ಬ॥ ಅಷ್ಟಮಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ತೇದಿ
16	[1] ಸೋ	ಬಿದಿ	45-6	ಆಶ್ಲೇಷ	58-8	3
17	ಮಂಗ	ತದಿ	42-40	ಮಖ	57-40	4
18	[2] ಬುಧ	ಚೌ	41-21	ಪುಬ್ಬ	57-52	5
19	[3] ಗುರು	ಪಂ	41-24	ಉತ್ತರ	60-0	6
20	ಶುಕ್ರ	ಷ	42-40	ಉತ್ತರ	20-28	7
21	[4] ಶನಿ	ಸ	45-12	ಹಸ್ತ	2-50	8
22	ಭಾನು	ಅ	48-56	ಚಿತ್ತ	7-2	9

(1) ಮೂಗೂರು ತ್ರಿಪುರಸುಂದರೀ ರಥಃ. (2) ಮೂಗೂರು ಬೆಗರುಕಡಿಯುವುದು. (3) ಗ್ರಹಜನಯೋಗಃ. (4) ತಿಸ್ರೋಷ್ಟಕಾಃ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಬಿತ್ತ್ಳಿಯಿಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಜನವರಿ ತಾರೀಖು ೨೩ ನೇ ಸೋಮವಾರ. [ಸಂಚಿಕೆ ೪.

ಊದಬತ್ತಿಗಳು.

47

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦ ; ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ಶಾದಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರ.

80 ಜೇರಿಗೆ ಬಸವಲಿಂಗಪ್ಪನ ಪುಸ್ತಕಗಳು.

ಬೆಲೆ ಬಹಳ ಕಡಿಮೆ. ನೋಡಿ. ನೋಡಿ. ಬಿಡಬೇಡಿ.

ಪದ್ಮಾವತಿಕಥೆ:- ವೀರಶೈವವಚನನಾಟಕ. ೯೮ ಡೆಮ್ಮಿಪುಟ. ಕ್ರಯ. ೦-೨-೦. ವಿ. ಪಿ. ಯಿಂದ ೦-೪-೦

ವೀರಶೈವಮತವಿಷಯಸಾರ (೨ ನೇ ಭಾಗ) ಕ್ರಯ ೦-೨-. ವಿ. ಪಿ. ಯಿಂದ ೦-೪-೦.

ಷಟ್‌ಸ್ಥಲಚಿಂತಾರತ್ನ. - ಕ್ರಯ ೦-೨-೦. ವಿ. ಪಿ. ಯಿಂದ ೦-೪-೦.

ವಿಳಾಸ.—ಬೆಂಗಳೂರು ಸಿಟಿ ಅರಳೇಪೇಟೆ ಜೇರಿಗೆ ನಂಜಪ್ಪನವರ ಮಗ ಬಿ. ಜಿ. ಬಸವಲಿಂಗಪ್ಪನವರಿಗೆ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೧-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಬಾರುಶೀಲೆ ಚರಿತ್ರೆ	೦-೫-೦
ಕೆರಸ್ಥಾಂತಿನಸ್ಸಿ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕು ಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಂಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಂಕ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

48 ಹೊಸ ಪುಸ್ತಕಗಳು.

ನೂತನಗೃಹಪ್ರವೇಶ, ಪಟ್ಟಾಧಿಕಾರ, ಲಿಂಗಧಾರಣ. ಈ ಮೂರು ವಿಧಿಗಳು ಟೀಕಾ ಸಮೇತವಾಗಿ ಒಂದು ಪುಸ್ತಕದಲ್ಲಿ ಮುದ್ರಿತಗಳಾಗಿರುತ್ತವೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೨ ಆಣೆ. ಶ್ರೀಚೆನ್ನಬಸವೇಶ್ವರವಿರಚಿತಮಾದ ಶಿವಾನುಭವಶಾಸ್ತ್ರ ಕನ್ನಡ ವಾಕ್ಯರೂಪವಾಗಿದೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೫ ಆಣೆ. ವೀರಶೈವದಶಕರ್ಮವಿಧಿ ಬೆಲೆ ಪ್ರತಿ ೧ಕ್ಕೆ ವಿ. ಪಿ. ೮ ಆಣೆ. ಶಿವಸ್ತುತಿಮಣಿಮಾಲಾ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೬ ಆಣೆ. ರಾಜಶೇಖರ ೧೩-೧೪ ಆಶ್ವಾಸ ಪ್ರತಿಪದಾರ್ಥ ತಾತ್ಪರ್ಯಸಹಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಇದೆ.

ಕ್ರಯ— ಪ್ರತಿ ೧ ಕ್ಕೆ ವಿ. ಪಿ. ೧-೩-೦.

ಸಟೀಕ ವೀರಶೈವ ಅಂತ್ಯೇಷ್ಟಿವಿಧಿ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೮ ಆಣೆ. ವಿಳಾಸ:— **ಕೆ. ಕಾಂತವೀರಪ್ಪ,**
ದೊಡ್ಡಪೇಟೆ, ಬೆಂಗಳೂರು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ .

86 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

7

ಲೋಕಾಮಯಹಾರ ಕಸ್ತೂರೀ ಮಾತ್ರೆ.

ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕಾಲು ಜೋಡತ(ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಯಕ್ತಿ,ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನುಸೇವಿಸುತಿರುವವರು ಖಂಡಿತವಾಗಿಯೂ ಪ್ಲೇಗಿನಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೮ ಕುಪ್ಪಿವರೆಗೆ ಪೋಸ್ಟೇಜು ೪ ಆ.

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ;— ಸೀತಾರಾಘವವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
25 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಷೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಷೆ ೦—೪—೦., ೨೪ ಮಾತ್ರೆ ಸೀಷೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಷೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಷೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಷೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಷೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಷೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦—೮— ೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦—೧೨—೦.

ದಂತಶುದ್ಧಿ ಚೂರ್ನ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕೆ, ಬರೆಯಿರಿ.

ಸೌಗಂಧಿಕಾಪರಿಣಯ.

(ಕಳೆದವಾರದ ಶೇಷ.)

ಅರುಣಾನದಿಯಂ ದಾಂಟಿ ಯಶಸ್ವಿಖಂಡವನ್ನೈದಿ, ಯಕ್ಷಸದನವಂ ನೋಡುತ, ವಿಮಲಾನದಿಯಂ ದಾಂಟಿ ವಜ್ರಕೂಟಪರ್ವತವನ್ನೈದಿ ಸಮುದ್ರಖಂಡದಲ್ಲಿ ರಾಕ್ಷಸರ ಪುರವನ್ನೋಡಿ, ಹಾಗೆಯೇ ಸುಗುಣಾನದಿಯಂ ದಾಂಟಿ ಶಾಂತಿಖಂಡವನ್ನೈದಿ, ಸಾವಿತ್ರೀನದೀ ತೀರದಲ್ಲಿ ಪುರವಂ ರಚಿಸಿಕೊಂಡು ವಾಸಗೊಂಡಿರುವ ರಾಕ್ಷಸರ ಸಂಘವನ್ನೋಡಿ, ಧರ್ಮವು ನಷ್ಟವಾಯಿತೆಂದು ತಿಳಿಯುತ, ಈ ರಾಕ್ಷಸರಿಗೆ ಯಾವನಧಿಪತಿಯಾಗಿರುವನೋ ಅವನಲ್ಲಿ ಒಂದು ಮಹಾಗಜವಿರಬಹುದೆಂದು ನಿಶ್ಚೈಸಿ ಬರುತ, ಕ್ಷೇಮಾಖಂಡವನ್ನೈದಿ, ಧೂಮ್ರಪರ್ವತಪ್ರಾಂತದಲ್ಲಿ ಸುಪ್ರಭಾನದೀ ತೀರದೊಳ್ ಎರಡನೇ ಅಮರಾವತಿಯೋ ಎಂಬಂತಿರುವ ವಿಮಲಪುರವಂ ಕಂಡು, ಅಲ್ಲಿಯ ಹರ್ಮ್ಯಪ್ರಾಸಾದ ಚಿತ್ರಶಾಲೆಗಳನ್ನೋಡಿ, ರತ್ನತೋರಣ ಸಹಸ್ರಕಲಶಧ್ವಜಪತಾಕೆಗಳಿಂ ಕಂಗೊಳಿಸುವ ಕನಕಮಯವಾದ ರಾಜಭವನವಂ ನಿರೀಕ್ಷಿಸುತ, ಕುಬೇರಭವನದಂತೆ ನಾನಾರತ್ನರಾಶಿಗಳಿಂ ನಿಬಿಡವಾದ ಕೋಶಗೃಹಗಳಿಂ, ಮಹೋರಗನಿಕರದಿಂ ಕೂಡಿದ ಮಂದರಗುಹೆಯಂತೆ ಅತಿಭೀಷಣವಾದ ಆಯುಧಾಗಾರಗಳಂ ಸಹ ನೋಡುತ, ಅಪರಿಮಿತವಾದ ರಾಕ್ಷಸರಿಂ ನಿಋತಿಯ ಪಟ್ಟಣದಂತೆ ಭೀಷಣವಾಗಿಯೂ, ತೀಕ್ಷ್ಣದಂಡನೆಯಂಗೈವ ರಾಕ್ಷಸರ ಸಂಘದಿಂ ಸಂಯಮಿನೀ ಪಟ್ಟಣದಂತೆ ಭಯಂಕರವಾಗಿಯೂ, ಬಹುರತ್ನಪ್ರಭಾನಿಕರದಿಂ ರಜೋಲೋಕದಂತೆ ಭಾಸಮಾನವಾಗಿಯೂ ಇರುವ ವಿಮಲಪುರಿಯ ತುರಂಗಶಾಲೆಯನ್ನೋಡುತ, ಹಾಗೇ ಗಜಶಾಲೆಯನ್ನೈದಿ, ಅಲ್ಲಿ ಸಾಧಾರಣವಾಗಿ ಚತುರ್ದಂತಗಳಿಂ ಕೂಡಿರುವ ಮದಗಜಗಳಂ ಕಂಡು, ಅಲ್ಲಿಂದ ಪುರೋದ್ಯಾನವನ್ನೈದಿ ಅಲ್ಲಿ ರಚಿಸಿರುವ ಇಕ್ಷುವನದಲ್ಲಿ ಇಚ್ಛಾನುಸಾರವಾಗಿ ಕರಿಣೀಕದಂಬಗಳಿಂ ಕೂಡಿ ವಿಹರಿಸುತ, ಸಲ್ಲಕೀಪಲ್ಲವಗಳಂ ಮೆಲ್ಲುತ, ಹಿಮಾಚಲವೇ ಪ್ರತ್ಯಕ್ಷವಾಗಿ ಬಂದಿರುವುದೋ ಎಂಬಂತೆ ಕಾಣುವ ಮಹೋನ್ನತವಾಗಿ, ಅತಿಶುಭ್ರವಾಗಿ, ಚತುರ್ದಂತಯುಕ್ತವಾಗಿ, ಸುಲಕ್ಷಣಲಕ್ಷಿತಬಿಂದುಗಳಿಂ ಕೂಡಿರುವ ಮಹಾಗಜವಂ ಕಂಡು ಅಚ್ಚರಿಗೊಳುತ, ನಮ್ಮ ರಾಯನ ಸಂಕಲ್ಪವು ಅನ್ಯಥಾ ಆಗುವುದುಂಟೆ? ಮುಂದೆ ರಾಯನಿಗೆ ರಾಣಿಯಾಗುವ ತರುಣಿಯ ಅದೃಷ್ಟಫಲವೊದಗಿತೆಂದು ತಿಳಿಯುತ, ಇದಂ ಈಗಲೇ ಯಾವ ಸಾಹಸದಿಂದಲಾದರೂ ತೆಗೆದುಕೊಂಡು ಅಂತರ್ಧಾನವಾಗಿ ಪೋಗಿ ರಾಯನಿಗೆ ಒಪ್ಪಿಸಬೇಕೆಂದು ಚಾಪಲ್ಯಪಡುತ, ಮಧ್ಯೆ ರಾಕ್ಷಸರು ಇದಿರಾದರೆ ಅವರೊಡನೆ ಯುದ್ಧವಂ ಮಾಡುವಲ್ಲಿ ಗಜವು ಸಮುದ್ರಗತಮಾದೊಡೆ ಸ್ವಾಮಿಕಾರ್ಯವು ಕೆಟ್ಟು, ನಾನೂ ಅಪಯಶಸ್ಸಿಗೆ ಪಾತ್ರನಾಗಿ, ಸ್ವಾಮಿಗೆ ಉಂಟಾಗುವ ಯಶಸ್ಸಿಗೂ ವಿಘ್ನನಾಗಿ, ಧರ್ಮಕಂಟಕರಾದ ರಾಕ್ಷಸರೂ ನಷ್ಟರಾಗದೆ ಕಾರ್ಯವೆಲ್ಲವೂ ಕೆಡುವುದೆಂದಾಲೋಚಿಸಿ, ಸ್ವಾಮಿಯು ಹೇಳಿದ ರೀತಿಗೆ ಮಾಡಬೇಕಲ್ಲದೆ, ಹುಚ್ಚು ಹಿಡಿದಂತೆ ಹೆಚ್ಚು ನಡತೆಯನ್ನಡೆಯುವುದು ಭೃತ್ಯಧರ್ಮವಲ್ಲವೆಂದು ನಿಶ್ಚೈಸಿ, ಅಡಿಗಡಿಗೂ ಆ ಗಜದ ಸೌಂದರ್ಯಲಕ್ಷಣಗಳನ್ನೋಡುತ, ಈ ಗಜವು ಯಾವ ಪುರುಷನಿಗೆ ವಶವಾಗಿ ಅವನಲ್ಲಿ ಅನುರಾಗದಿಂದಿರುವುದೋ ಆತನಿಗೆ ತ್ರೈಲೋಕ್ಯಾಧಿಪತ್ಯವು ದೊರೆಯುವುದರಲ್ಲಿ ಸಂಶಯವಿಲ್ಲ. ಇದರ ಮಾಹಾತ್ಮ್ಯದಿಂದಲೇ ಇಲ್ಲಿಯ ರಾಕ್ಷಸಾಧಿಪತಿಯು ಈ ದ್ವೀಪವನ್ನಾಳುವನು. ಈ ರಾಕ್ಷಸನಿಗೆ ಧರ್ಮಬುದ್ಧಿಯು ಉಂಟಾದರೆ ಸಕಲ ಅಭ್ಯುದಯಗಳಿಗೂ ಪಾತ್ರನಾಗುವನೆಂದು ಆಲೋಚಿಸುತ, ಸುತ್ತಲೂ ಆ ವನದಲ್ಲಿ ಆ ಮಹಾಗಜವಂ ರಕ್ಷಿಸುತಲಿರುವ ರಾಕ್ಷಸರ ಸಂಘವನ್ನೋಡಿ, ಆ ದ್ವೀಪಾಧಿಪತ್ಯವು ರಾಕ್ಷಸನಿಗೆ ಉಂಟಾಗಿರುವುದಕ್ಕೆ ಕಾರಣವಂ ವಿಚಾರಿಸಿಕೊಂಡು, ಅಲ್ಲಿಂದ ಹೊರಟು ಅಮೃತಾಖ್ಯಖಂಡವನ್ನೋಡುತ, ಋತುಭವಾನದಿಯಂ ದಾಂಟಿ, ಹಿರಣ್ಮಯ ಪರ್ವತಕ್ಕೆ ಬಂದು, ಅಭ್ರಖಂಡವಂ ಸೇರಿ, ಸತ್ಯಂಭರಾನದಿಯಂ ದಾಂಟಿ, ಲವಣಸಮುದ್ರವನ್ನತಿಕ್ರಮಿಸಿ, ಜಂಬೂದ್ವೀಪದೊಳ್ ಗಂಧಮಾದನಪರ್ವತವನ್ನೈದಿ, ಅಲ್ಲಿಂದ ಭರತಖಂಡದೊಳ್ ಪೂರ್ವಸಮುದ್ರ ತೀರದಲ್ಲಿರುವ ಮಹೇಂದ್ರಪರ್ವತಪ್ರಾಂತದೊಳ್ ಕಂಗೊಳಿಸುವ ಕಳಿಂಗದೇಶಕ್ಕೆ ರಾಜಧಾನಿಯಾದ ವಿಜಯನಗರದ ಪುರೋದ್ಯಾನದ ಬಳಿಯಲ್ಲಿರುವ ಸುಗಂಧರಾಜೇಂದ್ರನ ಬಿಡಾರದ ಸಮೀಪದಲ್ಲಿಳಿದು, ರಾಜಭವನವಂ ಪೊಕ್ಕು, ಅಲ್ಲಿ ಸ್ನಾನಭೋಜನಾದಿಗಳಂ ಮಾಡಿ, ರಾಜಕುಮಾರರೊಡನೆ ಸಲ್ಲಾಪವಂ ಗೈಯುತ್ತಿರುವ ಸುಗಂಧರಾಜನಂ ನೋಡಿ, ತಾನು ತಿಳಿದಿರುವ ಅರ್ಥವಂ ಮೆಲ್ಲನೆ ಸೂಚಿಸಲು, ಅದಂ ಕೇಳಿ ಸುಗಂಧರಾಯನು ಝುಗ್ಗನೆಯೆದ್ದು, ಸುಮತಿಯ ಹಸ್ತಲಾಘವದಿಂ ಏಕಾಂತಸದನಕ್ಕೆ ಬರಲು, ಆಗ ಛಾಯಾಗುಪ್ತನು ರಾಯನಿಗೆ ಅಭಿವಂದಿಸಿ, ಕೈಕಟ್ಟಿ ನಿಂದಿರಲಾಗ, ರಾಯನು– ಎಲೈ ಯಕ್ಷಾಧಿಪನೆ! ಕ್ಷೇಮದಿಂ ಬಂದೆಯಾ? ಕುಳ್ಳಿರು, ನೀನು ತಿಳಿದಿರುವ ಅರ್ಥವಂ ಹೇಳುವವನಾಗೆನಲಾ ಯಕ್ಷನು–“ ಅಯ್ಯಾ ರಾಜಾಧಿರಾಜನೆ! ನಿನ್ನ ಆಜ್ಞಾನುಸಾರವಾಗಿ ಸ್ವರ್ಗವನ್ನೈದಿ, ಆ ಲೋಕವು ದೇವೇಂದ್ರನಿಂದಲೂ, ದೇವತೆಗಳಿಂದಲೂ ರಹಿತವಾಗಿ, ರಾಕ್ಷಸಾಕ್ರಾಂತವಾಗಿ, ಕಾಲಿಡುವುದಕ್ಕೆ ಅವಕಾಶವಿಲ್ಲದೆ, ಅಶುಚಿಯಾಗಿದ್ದರೂ, ಗೋಷ್ಪಾದ ಪ್ರದೇಶವುಳಿಯದಂತೆ ಹುಡುಕಿ, ಅಲ್ಲಿ ಗಜವಂ ಕಾಣದೆ, ಅಲ್ಲಿಂದ ಹೊರಟು ಜಂಬೂದ್ವೀಪ ವರ್ಷವನಂಗಳಲ್ಲಿ ಹುಡುಕಿ, ಅಲ್ಲಿಯೂ ಇಲ್ಲದೆ, ಹಾಗೆಯೇ ಲವಣಸಮುದ್ರವಂ ದಾಂಟಿ, ಪ್ಲಕ್ಷದ್ವೀಪದಲ್ಲಿ ಹುಡುಕುತ ಹೋಗುತ್ತಿರುವಲ್ಲಿ” ಎಂದು ಪೇಳುತ್ತಿರುವಷ್ಟರೊಳ್ ಸುಗಂಧರಾಜನು ಸುಮತಿಯಂ ನೋಡಿ, ಅಲ್ಲಿ ಆನೆಯು ಇರಬಹುದೆಂದು ಪೇಳಿ, ಮತ್ತೂ ಯಕ್ಷಾಧಿಪನಂ ಕುರಿತು, ಪ್ಲಕ್ಷದ್ವೀಪದೊಳೇನಾಯಿತು? ಎಂದು ಕೇಳಲು, ಆ ಯಕ್ಷನು– ಜೀಯಾ! ಆ ಪ್ಲಕ್ಷದ್ವೀಪದಲ್ಲಿ ಧೂಮ್ರವಂತ ಪರ್ವತದ ಬಳಿಯೊಳ್ ಕ್ಷೇಮಾಖಂಡದಲ್ಲಿ ಸುಪ್ರಭಾನದೀತೀರದೊಳ್ ಉಗ್ರಬಾಹುವೆಂಬ ರಾಕ್ಷಸಾಧಿಪತಿಯು ಎರಡನೆ ಅಮರಾವತಿಯಂತಿರ್ಪ ವಿಮಲಪುರವೆಂಬ ಪಟ್ಟಣದ ಬಹಿರುದ್ಯಾನದ ಇಕ್ಷುವನದಲ್ಲಿ ತಾವು ಅಪ್ಪಣೆಯಂ ಕೊಟ್ಟಂತಿರ್ಪ ಒಂದು ಮಹಾಗಜವು ಚತುರ್ದಂತಗಳಿಂ ಕೂಡಿ, ಶುದ್ಧ ಸ್ಫಟಿಕಸದೃಶವಾದ ಪರಮೇಶ್ವರನೇ ಗಜರೂಪವಂ ಧರಿಸಿರುವಂತೆ ಅತಿ ಶುಭ್ರವಾಗಿ, ಮಹಾ ಸುಲಕ್ಷಣ ಬಿಂದುಗಳಿಂ ಕೂಡಿ, ಇಚ್ಛಾನುಸಾರವಾಗಿ ಕರಿಣೀ ಕದಂಬದೊಡಗೂಡಿ, ರಾಕ್ಷಸಸಂಘದಿಂ ರಕ್ಷಿತವಾಗಿ, ರಾಕ್ಷಸಾಧಿಪತಿಯ ವಶವಾಗಿರುವುದರಿಂದ ಆ ರಾಕ್ಷಸನು ಆ ದ್ವೀಪಾಧಿಪತ್ಯವಂ ಪಡೆದು, ಅನೇಕಕೋಟಿ ರಾಕ್ಷಸರಿಂ ಕೂಡಿ, ಭೂಲೋಕ ದೇವೇಂದ್ರನೆಂದು ಹೊಗಳಿಸಿಕೊಳ್ಳುತ, ಧರ್ಮಮಾರ್ಗಕ್ಕೆ ಕಂಟಕನಾಗಿರುವನೆಂದು, ಮತ್ತೂ ಅಲ್ಲಿಯ ರೀತಿಯನ್ನೆಲ್ಲವಂ ವಿಸ್ತಾರವಾಗಿ ವಿಜ್ಞಾಪಿಸಲಾವಾಕ್ಯವಂ ಕೇಳಿ, ಶ್ಲಾಘಿಸುತ, ರಾಜೇಂದ್ರನು– ಎಲೈ ಯಕ್ಷಾಧಿಪನೆ! ನೀನು ಹೇಳಿದುದೆಲ್ಲವೂ ತಿಳಿಯಲಾಯಿತು. ನಿನಗೆ ಬಹಳ ಶ್ರಮವಾಗಿರುವುದು; ಆದುದರಿಂ ಮನಕೆ ಬಂದ ಆಹಾರವಂ ಮಾಡಿಕೊಂಡು ವಿಶ್ರಮಿಸಿಕೊಳ್ಳುತ ನೆನದಾಗ ಬರುವುದೆಂದು ನುಡಿದು, ಅವನಂ ಕಳುಹಿ, ಸುಮತಿಗಿಂತೆಂದನು:– ಎಲೈ ಮಂತ್ರಿಯೆ! ಛಾಯಾಗುಪ್ತನು ಹೇಳಿದ ಮಾತಿನಲ್ಲಿ ಸ್ವರ್ಗಲೋಕವೂ ರಾಕ್ಷಸಾಕ್ರಾಂತವಾಗಿ, ದಾನವಾಂತಕನಾದ ದೇವೇಂದ್ರನ ಪ್ರಯತ್ನವೇನೂ ಸಾಗದೆ ಎಲ್ಲಿಯೋ ಮರೆಯಾಗಿರುವಂತೆ ಕಾಣುತಲಿದೆ, ಇದಕ್ಕೆ ಏನು ನಿಮಿತ್ತವಿರುವುದೊ? ಭೂಲೋಕದಲ್ಲಿಯೂ ಪ್ಲಕ್ಷದ್ವೀಪವನ್ನಾಶ್ರಯಿಸಿದ ರಾಕ್ಷಸಸಂಘಕ್ಕೆ ಲವಣಸಮುದ್ರವೆಂಬುದು ಕಾಲುಕೆಡಲಾಗುವುದು; ಹಾಗೆಯೇ ಮೇರುಮಂದರಾದಿಗಳು ಕ್ರೀಡಾಪರ್ವತಗಳಾಗುವುವು. ಬಳಿಕ ಭರತಖಂಡವೆಂಬುದು ಎಷ್ಟುಮಾತ್ರವು?

(ಸಶೇಷ.)

ಶ್ರೀಮನ್ಮಹಾರಾಜರವರ ಸಂಸ್ಥಾನಸಂಚಾರ.

ಕಳೆದ ತಾ॥ ೧೧ರ ಬೆಳಿಗ್ಗೆ ೧೧ ಗಂಟೆ ಸಮಯದಲ್ಲಿ ಶ್ರೀಮನ್ಮಹಾರಾಜಸಹೋದರರು, ಸೆಕ್ರೆಟರಿಗಳು ರೆವಿನ್ಯೂ ಕಮೀಷನರು ಮತ್ತೂ ಡೆ॥ ಕಮೀಷನರುಗಳೂ ಇವರೊಡನೆ ಕಿಬ್ಬನಹಳ್ಳಿಯನ್ನು ಬಿಟ್ಟು, ಮೋಟಾರು ಬಂಡಿಯಲ್ಲಿ ಹುಳಿಯಾರಕ್ಕೆ ಪ್ರಯಾಣವೆಳಸಿದರು. ಸ್ವಾರಿಯು ಮಾರ್ಗದಲ್ಲಿ ಬಾಣಸಂದ್ರ, ಸೆಟ್ಟಿಹಳ್ಳಿ, ಹಲಗೊನೆ ಮೊದಲಾದ ಮುಖ್ಯವಾದ ಹಳ್ಳಿಗಳನ್ನೂ, ಅವುಗಳ ಮುಂಗಡೆ ಹಾಕಿದ್ದ ಚಪ್ಪರಕಮಾನುಗಳನ್ನು ಪರಾಮರಿಸಿಕೊಂಡು, ಆ ಸ್ಥಳಗಳಲ್ಲಿ ಕಾದುಕೊಂಡಿದ್ದ ಸಾವಿರಾರು ಹಳ್ಳಿಯ ಜನರಿಗೆ ದರ್ಶನವನ್ನಿತ್ತು ಚಿಕ್ಕನಾಯಕನಹಳ್ಳಿಗೆ ಚಿತ್ತೈಸಿ, ಅಲ್ಲಿಯ ಅಮಲ್ದಾರರೂ, ಪುರಪ್ರಮುಖರೂ ತಾಲ್ಲೋಕ್ ಕಚೇರಿಯ ಮುಂಗಡೆ ಬಹು ಅಟ್ಟಹಾಸದಿಂದ ಹಾಕಿಸಿದ್ದ ಚಪ್ಪರದ ಬಳಿ ಕೊಂಚಹೊತ್ತು ನಿಂತಿತು. ಇಲ್ಲಿ ಮ್ಯು॥ ಕಮೀಷನರುಗಳು ಬಾಲಿಕೆಯರೊಡನೆ ಫಲಪುಷ್ಪಾದಿಗಳ ಸಮೇತ ನಿರೀಕ್ಷಿಸಿಕೊಂಡಿದ್ದರು. ಮ್ಯು॥ ಕಮೀಷನರೂ ಮತ್ತೂ ದೊಡ್ಡ ಭೂಸ್ವಾಮಿಯೂ ಆದ ಮ॥ ಸೀನಪ್ಪನವರು ಮ್ಯುನಸಿಪಾಲಿಟಿಯ ವಿಜ್ಞಾಪನಪತ್ರಿಕೆಯನ್ನೋದಿ, ಮದ್ರಾಸಿನಿಂದ ಬಹು ಸುಂದರವಾಗಿ ಮಾಡಿಸಿ ತರಿಸಿದ್ದ ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಈ ಪತ್ರಿಕೆಯಲ್ಲಿ– “ ಈ ಊರಿಗೆ ಇದುವರೆಗೆ ಯಾವ ಮಹಾರಾಜರೂ ದಯಮಾಡಿಸಿರಲಿಲ್ಲವಾದುದರಿಂದ ಚಾತಕಪಕ್ಷಿಗಳು ಮೇಘೋದಯವನ್ನಿರೀಕ್ಷಿಸಿಕೊಂಡಿರುವಂತೆ ಮಹಾಸ್ವಾಮಿಯವರ ದಿವ್ಯಾಗಮನವನ್ನು ನಾವು ನಿರೀಕ್ಷಿಸಿಕೊಂಡಿದ್ದು, ಈಗ ಈ ಗ್ರಾಮಕ್ಕೆ ದಯಮಾಡಿಸಿ, ಗೌರವಿಸಿದುದಕ್ಕಾಗಿ ನಾವು ನಮ್ಮ ಆನಂದದಿಂದೊಡಗೂಡಿದ ಕೃತಜ್ಞತೆಯನ್ನು ಮಹಾಸ್ವಾಮಿಯವರಿಗೆ ಅರ್ಪಿಸುತ್ತೇವೆ. ಕ್ಷಾಮ, ಪ್ಲೇಗು ಮುಂತಾದ ಈತಿಬಾಧೆಗಳು ಸಂಪೂರ್ಣವಾಗಿ ನಿಂತು ಹೋಗಿರುವುದು ಮಹಾಸ್ವಾಮಿಯವರ ದಿವ್ಯಾಗಮನದ ಶುಭಸೂಚಕಗಳಾಗಿರುವುವು.” ಎಂದು ಮೊದಲಾಗಿ ಹೇಳಲ್ಪಟ್ಟಿದ್ದಿತು. ಪ್ರಭುಗಳು ವಿಜ್ಞಾಪನಪತ್ರಿಕೆಯನ್ನು ಸ್ವೀಕರಿಸಿ, ಕಾಲೋಚಿತವಾದಪ್ಪಣೆಯನ್ನಿತ್ತು, ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿದ್ದ ಆ ಊರಿನ ೪ ಬೀದಿಗಳಲ್ಲಿಯೂ ಹೊರಟು, ಬಹು ದೂರಗ್ರಾಮಗಳಿಂದ ಬಂದು ಮಾರ್ಗಗಳ ಇಕ್ಕೆಲದಲ್ಲೂ ಕಿಕ್ಕಿರಿದು ನಿಂತಿದ್ದ ಜನಗಳಿಗೆ ದರ್ಶನವನ್ನಿತ್ತು, ಹುಳಿಯಾರಿಗೆ ಪ್ರಯಾಣವನ್ನು ಬಳಸಿದರು. ನೆರೆಯಲ್ಲಿರು ೧೯ ತಾಂಡಗಳ ಲಂಬಾಣಿಗರು ಒಂದು ಚಪ್ಪರವನ್ನು ಹಾಕಿ, ಅದನ್ನು ತಮ್ಮ ಸ್ತ್ರೀಯರು ಧರಿಸುವ ಉಡುಪುಗಳಿಂದಲೂ, ಕವಕಿಗಳಿಂದಲೂ ಅಲಂಕರಿಸಿ, ಬಹು ಪ್ರೇಕ್ಷಣೀಯವಾಗಿ ಮಾಡಿದ್ದರು. ನಂದ್ಯನಾಯಕ, ತಂಡ್ಯನಾಯಕ, ವೀರನಾಯಕ, ತೇಜನಾಯಕ ಮೊದಲಾದ ಲಂಬಾಣಿ ಪ್ರಮುಖರು ಪ್ರಭುಗಳ ಸ್ವಾರಿಯು ಚಪ್ಪರದ ಬಳಿಗೆ ಚಿತ್ತೈಸುತ್ತಲೇ ಪುಷ್ಪಹಾರವನ್ನೊಪ್ಪಿಸಿ, ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು. ಶ್ರೀಮನ್ಮಹಾರಾಜರವರು ಲಂಬಾಣಿಗರ ಚಪ್ಪರದ ಬಳಿ ೫ ನಿಮಿಷಗಳವರೆಗೆ ನಿಂತು ಅದರ ವೈಚಿತ್ರ್ಯವನ್ನೋಡಿ ಸಂತೋಷಗೊಂಡು, ಲಂಬಾಣಿಗರೊಪ್ಪಿಸಿದ ಪುಷ್ಪಹಾರವನ್ನು ಸ್ವೀಕರಿಸಿ, ಹುಳಿಯಾರಕ್ಕೆ ತೆರಳಿದರು. ಹುಳಿಯಾರದಲ್ಲಿ ಅ॥ ಕಮೀಷನರುಗಳು, ಮ್ಯು॥ ಕಮೀಷನರುಗಳು ಮತ್ತೂ ಯೂನಿಯನ್ನು ಮೆಂಬರುಗಳೊಡನೆ ಊರಹೊರಗೆ ಕಾದಿದ್ದು ಮಹಾಸ್ವಾಮಿಯ ಸ್ವಾರಿಯು ಚಿತ್ತೈಸುತಲೆ ಇದಿರ್ಗೊಂಡು, ಫಲಪುಷ್ಪವನ್ನರ್ಪಿಸಿ ಟ್ರಾವಲರ್ಸ್ ಬಂಗಲೆಯಲ್ಲಿಳಿಸಿದರು. ಪ್ರಭುಗಳು ಅಶ್ವಾರೂಢರಾಗಿ ಸಮೀಪದಲ್ಲಿದ್ದ ಕೆಲ ಹೊಲಗಳಿಗೆ ದಯಮಾಡಿಸಿ, ನಿಂತಿದ್ದ ಬೆಳೆಯನ್ನು ಪರಾಮರಿಸಿಕೊಂಡು ಬಂದರು. ಸಾಯಂಕಾಲ ಶ್ರೀಮನ್ಮಹಾರಾಜ ಸಹೋದರರು, ಪ್ರೈವೇಟ್ ಸೆಕ್ರೆಟರಿ, ರೆ॥ ಕಮಿಷನರು ಒಂದು ಮೋಟಾರು ಬಂಡಿಯಲ್ಲೂ, ಹುಜೂರು ಮತ್ತೂ ಅ॥ ಸೆಕ್ರೆಟರಿಗಳು, ಡೆ॥ ಕಮೀಷನರು ಮತ್ತೊಂದು ಬಂಡಿಯಲ್ಲೂ ಕುಳಿತು, ಬೋರನ ಕಣಿವೆಗೆ ದಯಮಾಡಿಸಿದರು. ಅಲ್ಲಿ ಎಕ್ಸಿಕ್ಯುಟೀವ್ ಇಂಜನಿಯರ್ ಮ॥ ಅನಂತಾಚಾರರು ಅಣೆಕಟ್ಟೆಯ ಬಳಿ ನಿರೀಕ್ಷಿಸಿಕೊಂಡಿದ್ದು ಮಹಾಸ್ವಾಮಿಗಳು ಚಿತ್ತೈಸುತಲೆ ಅಲ್ಲಿಯ ಎಲ್ಲ ವಿದ್ಯಮಾನಗಳನ್ನೂ ವಿವರಿಸಿ ತಿಳಿಸಿದರು. ಆ ಕೆರೆಯ ಕೆಳಗೆ ಅಪಾರವಾದ ಭೂಮಿಯನ್ನುಳ್ಳ ಮ॥ ವಸಂತಪ್ಪನವರ ಮಕ್ಕಳುಗಳು ಅಧಿಕಾರಿಗಳಿಂದ ಪರಿಚಯಮಾಡಿಸಲ್ಪಟ್ಟರು. ಪ್ರಭುಗಳು ಕೆರೆಯನ್ನು ಪರಾಮರಿಸಿಕೊಂಡು ಹುಳಿಯಾರಿಗೆ ಸಾಯಂಕಾಲ ೭॥ ಗಂಟೆಗೆ ಹಿಂತಿರುಗಿ ದಯಮಾಡಿಸಿದರು.

ಬೋರನಕಣಿವೆ ಕೆರೆ.

ತುಮಕೂರು ಡಿ॥ ಕಮಿಷನರ್ ಮ॥ ಕೆ. ದೊರೆಸಾಮಯ್ಯರ ತಂದೆಗಳಾದ ಆ ಪ್ರಸಿದ್ಧ ರಾಜನೀತಿ ಕುಶಲರಾದ ಕೈ॥ ಸರ್. ಕೆ. ಶೇಷಾದ್ರಿಅಯ್ಯರ ಮಂತ್ರಿತ್ವದಲ್ಲಿ ಈ ಕೆರೆಯು ಉದ್ಯೋಗದಿಂದ ನಿವೃತ್ತರಾಗಿರುವ ಇಂಜನಿಯರ್ ಮಿ॥ ದಲಾಲ್‌ರವರಿಂದ ಕಟ್ಟಲ್ಪಟ್ಟಿತು. ಈ ಕೆರೆಯ ಕಟ್ಟುವಿಕೆಯು ೧೮೮೮ರಲ್ಲಿ ಆರಂಭವಾಗಿ ೧೮೯೨ ರಲ್ಲಿ ಪೂರೈಸಿತು. ಸುವರ್ಣಾವತಿ ನದಿಯ ನೀರು ಈ ಕೆರೆಗೆ ಬಂದು ಬೀಳುತ್ತದೆ. ಈ ಕೆರೆಯ ಅಚ್ಚುಗಟ್ಟು ೧೮೦೦ ಎಕರೆಗಳು. ಇದರ ನೀರು ೩೭೮೪ ಎಕರೆಗಳ ಅಗಲಕ್ಕೆ ನಿಲ್ಲುವುದು. ಮತ್ತೂ ಈ ಕೆರೆಯು ೩೩೪ ಚದರಮೈಲಿ ವಿಸ್ತೀರ್ಣದ ನೀರನ್ನು ಹಿಡಿಯುವುದು. ಈ ಕೆರೆಯಿಂದ ೨೧೩೮ ಎಕರೆ ಭೂಮಿಗಳಿಗೆ ನೀರನ್ನು ಹಾಯಿಸಬಹುದಾದರೂ ಸದ್ಯದಲ್ಲಿ ೮೦೨ ಎಕರೆ ಭೂಮಿಯು ಮಾತ್ರ ತರಿಮಾಡಲ್ಪಡುತ್ತಿದೆ. ಅಣೆಕಟ್ಟೆಯು ನದಿಯಮಟ್ಟದಮೇಲೆ ೩೪ ಅಡಿ ಎತ್ತರ ಕಟ್ಟಲ್ಪಟ್ಟಿದೆ. ಮತ್ತೂ ೧೩ ಅಡಿ ಉದ್ದವಿದೆ. ಇದಕ್ಕಾಗಿ ೨ ಲಕ್ಷವೂ ೨೯೦೦೦ ರೂ. ವ್ಯಯವಾಗಿರುತ್ತದೆ.

ಆ ರಾತ್ರಿ ಮಹಾಸ್ವಾಮಿಗಳವರಿಗೆ ಭೋಜನವಾದ ನಂತರ ಬಿಡಾರದಿದಿರಿಗೆ ಚಿತ್ರವಿಚಿತ್ರವಾಗಿ ಮದ್ದು ಸುಡಲ್ಪಟ್ಟಿತು. ಪ್ರಭುಗಳ ದರ್ಶನಕ್ಕಾಗಿ ತಮ್ಮ ಕಷ್ಟಗಳನ್ನೆಲ್ಲ ಒತ್ತಟ್ಟಿಗಿಟ್ಟು ಬಂದಿದ್ದ ಗ್ರಾಮಸ್ಥರು ಮದ್ದಿನ ವಿನೋದವನ್ನೋಡಿ ಆನಂದಭರಿತರಾಗಿ ಮಹಾಪ್ರಭುಗಳು ಬಹು ಶ್ರಮವನ್ನು ವಹಿಸಿ, ರಾಜಧಾನಿಯಿಂದ ಇಲ್ಲಿಗೆ ದಯಮಾಡಿಸಿ ದರ್ಶನವನ್ನಿತ್ತುದಕ್ಕಾಗಿ ಸ್ತುತಿಸಿದರು. ಅನೇಕ ಜನರು ಪ್ರಭುಗಳಿಗೆ ನಜರನ್ನೊಪ್ಪಿಸಿ ರಾಜಭಕ್ತಿಯನ್ನು ಪ್ರದರ್ಶಿಸುವುದಕ್ಕಾಗಿ ದರ್ಬಾರು ಉಡುಪುಗಳನ್ನು ಧರಿಸಿಕೊಂಡು ಬಂದು ಕಾದಿದ್ದರು. ಆದರೆ ಅಪ್ಪಣೆಯು ದೊರೆಯಲಿಲ್ಲವು.

ತಾ॥ ೧೨ ರ ಬೆಳಿಗ್ಗೆ ಚಿಕ್ಕನಾಯಕನ ಹಳ್ಳಿಯ ಮ್ಯು॥ ಕಮೀಷನರುಗಳೂ, ಹುಳಿಯಾರದ ಯೂನಿಯನ್ ಮೆಂಬರುಗಳೂ ಪ್ರಭುಗಳಿಗೆ ಫಲಪುಷ್ಪಗಳನ್ನೊಪ್ಪಿಸಿ, ಪರಿಚಯಮಾಡಿಸಲ್ಪಟ್ಟರು. ಅನಂತರ ೧೧॥ ಗಂಟೆಯಲ್ಲಿ ಮಹಾಸ್ವಾಮಿಗಳು ಮೋಟಾರು ಬಂಡಿಯಲ್ಲಿ ಕುಳಿತು ಮಾರಿಕಣಿವೆಗೆ ಪ್ರಯಾಣಮಾಡಿದರು. ಬಂಡಿಯು ಬಂಗಲೆಯನ್ನು ಬಿಡುತಲೆ ಮುಂದೆ ಕೊಂಚ ದೂರದಲ್ಲಿ ಸಾಲುಸಾಲಾಗಿ ನಿಲ್ಲಿಸಲ್ಪಟ್ಟಿದ್ದ ಬಾಲಕ ಬಾಲಿಕೆಯರುಗಳು ಮಂಗಳವನ್ನು ಹಾಡಿ ಪುಷ್ಪವನ್ನೆರಚಿದರು. ಪ್ರಭುಗಳು ಅವರುಗಳನ್ನೋಡಿ ಆನಂದಪಟ್ಟು, ಅವರುಗಳಿಗೆ ಮಿಠಾಯಿಯನ್ನು ಕೊಡಿಸಲು ೪೦ ರೂ. ಗಳನ್ನು ದಯಪಾಲಿಸಿದರು. ಪ್ರಭುಸಹೋದರರ ಆಗಮನದ ಜ್ಞಾಪಕಾರ್ಥವಾಗಿ ಆ ದಿವಸ ಪಾಠಶಾಲೆಗಳು ಮುಚ್ಚಲ್ಪಟ್ಟಿದ್ದುವು. ಬಂಡಿಯು ಅಲ್ಲಿಂದ ದೊಡ್ಡಮಾರ್ಗಕ್ಕೆ ತಿರುಗುವಾಗ್ಗೆ ಕೆಲಜನರು ದುರ್ಗ, ಚಿಕ್ಕನಾಯಕನ

ಹಳ್ಳಿ ಮತ್ತೂ ಹುಳಿಯಾರ ಈ ಸ್ಥಳಗಳ ಕೆರೆಗಳನ್ನು ಅಭಿವೃದ್ಧಿಪಡಿಸಿಕೊಡಬೇಕೆಂದೂ, ಬೇತರಿಗೂ ಬೆಸ್ತರಿಗೂ ಉಂಟಾಗಿರುವ ಮತಸಂಬಂಧವಾದ ಕಲಹವನ್ನು ಬಗೆಹರಿಸಿಕೊಡಬೇಕೆಂದೂ ಪ್ರಾರ್ಥಿಸಿ, ಅರ್ಜಿಗಳನ್ನು ಕೊಟ್ಟರು. ಅಲ್ಲಿಂದ ಮುಂದೆ ೩೦ ಗಜದ ದೂರದಲ್ಲಿ ೩೦ ಜನ ಲಂಬಾಣಿಗರು ತಮ್ಮ ಹೆಂಗುಸರೊಡನೆ ಕಾದಿದ್ದು ತಮ್ಮ ಕಷ್ಟಗಳನ್ನು ವಿಚಾರಿಸಬೇಕೆಂದು ಕೂಗಿಕೊಂಡರು. ಮಹಾರಾಜರವರು ಅದನ್ನು ಕೇಳಿ ಬಂಡಿಯನ್ನು ನಿಲ್ಲಿಸಿ, “ನಮ್ಮ ಜನರನ್ನು ಊರೂರಲ್ಲಲೆಯುವ ಜನರನ್ನಂತೆ ಗ್ಯಾಂಗಿಗೆ ಸೇರಿಸಿ ಪೋಲೀಸು ಕಾವಲಿಗೊಳಪಡಿಸುವುದನ್ನು ತಪ್ಪಿಸಿಕೊಡಬೇಕು.” ಎಂಬ ಅವರ ಪ್ರಾರ್ಥನೆಯನ್ನು ಲಾಲಿಸಿ, ಈ ವಿಚಾರದಲ್ಲಿ ಆಲೋಚಿಸುತ್ತೇವೆಂದು ಅಪ್ಪಣೆಯನ್ನು ಕೊಡಿಸಿ, ಮುಂದಕ್ಕೆ ತೆರಳಿದರು. ಪ್ರೈವೇಟ್ ಸೆಕ್ರೆಟರಿ ಮೆ॥ ಕ್ಯಾಂಬಲ್‌ರವರು ಲಂಬಾಣಿಗರು ಎಲೆ ಅಡಿಕೆಯನ್ನಿಡಲು ಕವತೆಯನ್ನು ಸೇರಿಸಿ ಹೊಲಿದಿರುವ ಚೀಲವನ್ನೂ ಮತ್ತೂ ಅವರ ಹೆಂಗುಸರು ಇಟ್ಟುಕೊಳ್ಳುವ ವಿಚಿತ್ರವಾದ ಆಭರಣಗಳನ್ನೂ ಕೊಂಡುಕೊಂಡರು. ತುಮಕೂರಿನ ಡಿ॥ ಕಮಿಾಷನರು ತಮ್ಮ ಎಲ್ಲೆಯವರೆಗೆ ಹೋಗಿದ್ದು ಹಿಂತಿರುಗಿದರು. ಆಗ ಚಿತ್ರಕಲ್ ದುರ್ಗದ ಡಿ॥ ಕಮಿಾಷನರ್ ಮೆ॥ ಕೆ. ಚಾಂಡಿಯವರು ತಮ್ಮ ಎಲ್ಲೆಕಟ್ಟಿನಿಂದ ಮಹಾಸ್ವಾಮಿಯ ಸ್ವಾರಿಯ ಕೂಡ ಹೊರಟರು. ಸ್ವಾರಿಯು ಹೊಸದುರ್ಗಕ್ಕೆ ಬರುತಲೆ ಅಲ್ಲಿಯ ಅಮಲ್ದಾರರೂ ಪುರಪ್ರಮುಖರೂ ಫಲಪುಷ್ಪಗಳನ್ನೊಪ್ಪಿಸಿದರು. ಅಲ್ಲಿಂದ ಮುಂದೆ ಕೊಂಚ ದೂರದಲ್ಲಿ ದೇವಾಂಗದವರು ಒಂದು ಚಪ್ಪರದಲ್ಲಿ ಜೋಡಿಸಿದ್ದ ನೇಗೆಯ ಸಾಮಗ್ರಿಗಳನ್ನು ಪರಾಮರಿಸಿ ಕೆಲ ವಿಷಯಗಳನ್ನು ಕೇಳಿ ತಿಳಿದುಕೊಂಡು ತೆರಳುವಷ್ಟರಲ್ಲಿ ಹೊಳಲ್ಕೆರೆ ತಾ॥ ತಾಳಿಕಟ್ಟೆಯ ರೈತರು ಅಡ್ಡಬಿದ್ದು ತಮ್ಮ ತಾ॥ ಗೆ ಸೇರಿದ ಅಮೃತಮಹಲ್ ಕಾವಲಿನಲ್ಲಿ ತಮ್ಮ ದನಗಳನ್ನು ಉಚಿತವಾಗಿ ಮೇಯಿಸಲು ಮತ್ತೂ ಬೇಸಾಯಮಾಡಲು ಅಪ್ಪಣೆಯಾಗಬೇಕೆಂದು ಬಿನ್ನೈಸಿಕೊಂಡುದಕ್ಕೆ ಕ್ರಮಪ್ರಕಾರ ಅರ್ಜಿಬರೆದುಕೊಳ್ಳತಕ್ಕದೆಂದು ಅಪ್ಪಣೆಯಾಯಿತು. ಅಲ್ಲಿಂದ ಮುಂದೆ ಕಾಚಪುರದಲ್ಲಿ ಅ॥ ಚೀಫ್ ಇಂಜನಿಯರ್ ಮ॥ ವೈ. ಶ್ರೀನಿವಾಸರಾಯರು, ಎಕ್ಸಿಕ್ಯೂಟೀವ್ ಇಂಜನಿಯರ್ ಮ॥ ಲಕ್ಷ್ಮಣರಾಯರು ಮೊದಲಾದ ಅಧಿಕಾರಿಗಳು ಇದಿರ್ಗೊಂಡು ಮರ್ಯಾದಿಸಿದ ವೇಳೆ ಮೋಟಾರು ಬಂಡಿಯಿಂದಿಳಿದು ಪರ್ಣಶಾಲೆಯಲ್ಲಿ ಅಲ್ಪಾಹಾರವನ್ನು ಮಾಡಿಕೊಂಡು ಸಿದ್ಧವಾಗಿದ್ದ ಮೋಟಾರು ದೋಣಿಗಳನ್ನು ಹತ್ತಿ ಮಾರೀ ಕಣಿವೆಯನ್ನು ಪರಾಮರಿಸಿಕೊಂಡು ಹಿಂತಿರುಗಿ ಟ್ರಾವಲರ್ಸ್ ಬಂಗಲೆಗೆ ದಯಮಾಡಿಸಿದರು. ಮಾರನೆಯ ಬೆಳಗ್ಗೆ ಶ್ರೀಮನ್ಮಹಾರಾಜ ಸಹೋದರರೂ, ಇತರರೂ ಮೋಟಾರಿನಲ್ಲಿ ಕುರುಬರಹಳ್ಳಿಯವರೆಗೆ ದಯಮಾಡಿಸಿ ಅಲ್ಲಿಂದ ಕಾತರ್ಕೇನನಹಳ್ಳಿಗೆ ದೋಣಿಯಮೂಲಕ ಚಿತ್ತೈಸಿ, ಅಣೆಕಟ್ಟು, ಮುಖ್ಯವಾದ ತೂಬು ಇವುಗಳನ್ನೋಡಿಕೊಂಡು, ಅನಂತರ ಕೋಡಿಗೆ ಹೋಗಿ ಅದನ್ನೂ ಪರಾಮರಿಸಿಕೊಂಡು, ಬಿಡಾರವಾದ ಟ್ರಾವಲರ್ಸ್ ಬಂಗಲೆಗೆ ಹಿಂತಿರುಗಿದರು. ಮಧ್ಯಾಹ್ನದಲ್ಲಿ ಹಿರಿಯೂರು ತಾ॥ ನ ಪ್ರಮುಖಜನರು ವಿಜ್ಞಾಪನಪತ್ರಿಕೆಯನ್ನೋದಿ, ಬೆಂಗಳೂರ ಗೋವಿಂದಪ್ಪ ಅಂಡ್ ಸನ್ಸ್‌ರವರಲ್ಲಿ ಮಾಡಿಸಿದ್ದ ಸುಂದರವಾದ ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಇವರಲ್ಲದೆ ಅಲ್ಲಿಗೆ ಬರಮಾಡಲ್ಪಟ್ಟಿದ್ದ ಆ ಡಿ॥ ನ ಮುಖಂಡರೂ ತಂತಮ್ಮ ಕಷ್ಟಸುಖಗಳನ್ನರಿಕೆಮಾಡುವ ಕಾಲದಲ್ಲಿ ಮಾರಿಕಣಿವೆಯ ಕೆರೆಯು ತಮಗಷ್ಟುಪಯೋಗವಾಗಿಲ್ಲವೆಂದೂ, ಅದರ ಕೆಳಗಣ ಭೂಮಿಯ ಮಣ್ಣು ಉತ್ಕೃಷ್ಟವಾಗಿಲ್ಲವೆಂದೂ, ಈ ಕೆರೆಯಲ್ಲಿ ಇಷ್ಟೊಂದು ನೀರು ಶೇಖರವಾಗಿರುವುದರಿಂದ ಮಲೇರಿಯಾ ರೋಗವು ಪ್ರಾಪ್ತವಾಗಿದೆಯೆಂದೂ, ಇದರ ದೆಸೆಯಿಂದ ೩೦ ಗ್ರಾಮಗಳು ಹಾಳಾಗಬೇಕಾಯಿತೆಂದೂ, ಈ ಅಗಾಧವಾದ ಕೆರೆಯ ನಿರ್ಮ್ಮಾಣದಿಂದ ನೆರೆಯ ಬ್ರಿಟಿಷ್ ಪ್ರಜೆಗಳಿಗೇನೋ ಉಪಯೋಗವಾಯಿತೆಂಬುದರಲ್ಲಿ ಸಂದೇಹವಿಲ್ಲವೆಂದೂ, ಕಾಲುವೆಗಳ ಕೆಳಗೆ ಭೂಗಂದಾಯವು ಬಹು ಹೆಚ್ಚಾಗಿದೆಯೆಂದೂ ಮೊದಲಾಗಿ ಬಿನ್ನೈಸಿಕೊಂಡರು. ಸಾಯಂಕಾಲ ಮಹಾಸ್ವಾಮಿಗಳ ಸ್ವಾರಿಯು ದೋಣಿಯಲ್ಲಿ ಕುಳಿತು ವಿಹರಿಸಿಕೊಂಡು ಬಂದು, ರಾತ್ರಿ ಮದ್ದಿನ ವಿನೋದವನ್ನೂ, ದೀಪೋತ್ಸವವನ್ನೂ, ಲಂಬಾಣಿಗರ ನರ್ತನವನ್ನೂ ಪರಾಮರಿಸಿ ಆನಂದಪಟ್ಟರು. ಮಹಾಸ್ವಾಮಿಯವರು ಕುರುಬರ ಮತ್ತೂ ಬೇಡರ ದೇವರಾದ ಮರಿಯಮ್ಮನ ಪೂಜೆಗೆ ಸಾಮಗ್ರಿಗಳನ್ನು ಕಳುಹಿಸಿಕೊಟ್ಟುದಲ್ಲದೆ, ಆ ದೇವರಿಗೆ ಸರ್ಕಾರದಿಂದ ಮಾನಾಶನವೇನೂ ಇಲ್ಲದಿರುವುದರಿಂದ ಭಕ್ತಾದಿಗಳು ಕಟ್ಟಿಸುತ್ತಿರುವ ತೇರಿನ ಖರ್ಚಿಗೆ ೧೦೦ ರೂ. ಗಳನ್ನು ದಯಪಾಲಿಸಿದರು. ಮಾರನೆಯ ಬೆಳಗ್ಗೆ ಊಟವಾದವೇಳೆ ಮೋಟಾರುಬಂಡಿಯನ್ನು ಹತ್ತಿ ಪ್ರಯಾಣಮಾಡುವಷ್ಟರಲ್ಲಿ ಅಮಲ್ದಾರರು ಅಡಿಗೆಗಾಗಿ ಹಾಕಿಸಿಕೊಂಡಿದ್ದ ಗುಡಿಸಲಿಗೆ ಬೆಂಕಿಯು ಬಿದ್ದುದನ್ನು ಕಂಡು ಮಹಾರಾಜರು ಖಿನ್ನಮನಸ್ಕರಾಗಲು, ಸಮಿಾಪದಲ್ಲಿದ್ದ ರೆ॥ ಕಮಿಾಷನರು ಇದು ಅಕಸ್ಮಾತ್ತಾಗಾದುದರಿಂದ ಅಪಶಕುನವಲ್ಲವೆಂದು ಅರಿಕೆ ಮಾಡಿದುದರವೇಳೆ ಮುಂದಕ್ಕೆ ಪ್ರಯಾಣವನ್ನು ಬೆಳಸಿ, ಹಿರಿಯೂರನ್ನು ಪರಾಮರಿಸಿಕೊಂಡು ಅದೇ ಸಾಯಂಕಾಲ ಸೀರ್ಯವನ್ನು ತಲುಪಿದರು.

ಗೋವಧೆ.

ವಿಚಾರಮಾಡಿನೋಡಿದರೆ ಗೋವಧೆಯು ದುಷ್ಕೃತ್ಯವೆಂದು ಎಂಥವರಿಗೂ ತೋರುವುದು. ಯಾವ ಮತಶಾಸ್ತ್ರವೂ ಗೋವಧೆಯನ್ನು ಸತ್ಕೃತ್ಯವೆಂದು ಸಾಧಿಸುವುದಕ್ಕೆ ಸಮ್ಮತಿಸಲಾರದು. ಚತುಷ್ಪಾದ ಜಂತುಗಳೆಲ್ಲಲ್ಲಾ ಗೋವುಗಳೇ ಮುಖ್ಯವಾದುವೆಂದು ಹೇಳುವುದಕ್ಕೆ ಅನೇಕ ಕಾರಣಗಳಿರುವುವು. ಯಾವುವೆಂದರೆ– ಹುಲಿ ಮೊದಲಾದುವುಗಳಂತೆ ಗೋವುಗಳು ಜೀವಹಿಂಸೆ ಮಾಡತಕ್ಕವುಗಳಲ್ಲ. ಮನುಷ್ಯನಿಗೆ ಜೀವನಾಧಾರವಾದ ಸಸ್ಯಾದಿಗಳನ್ನು ಬೆಳೆಯುವುದಕ್ಕೆ ಅವಶ್ಯಕವಾದ ಉಳುಮೆಯ ಕೆಲಸವನ್ನು ಮಾಡುವ ಎತ್ತುಗಳು ಈ ಗೋವುಗಳಿಂದಲೇ ಹುಟ್ಟತಕ್ಕವು. ದೇಹರಕ್ಷಣೆಗೂ ಆರೋಗ್ಯಕ್ಕೂ ಸಾಧಕವೆಂದು ಹೇಳಲ್ಪಡುವ ಹಾಲು ಮೊಸರು, ತುಪ್ಪಗಳು ಈ ಗೋವುಗಳಿಂದಲೇ ಲಭಿಸುವುವು. ಶುಚಿಯನ್ನು ಮಾಡುವುದಕ್ಕೆ ಅವಶ್ಯಕವೆಂದು ಶಾಸ್ತ್ರದಲ್ಲಿ ಹೇಳಲ್ಪಡುವ ಗೋಮಯ ಗೋಮೂತ್ರಗಳು ಇವುಗಳಿಂದಲೇ ದೊರೆಯಬೇಕು. ಮಾನವ ಜನ್ಮವನ್ನೆತ್ತುವುದಕ್ಕೆ ಪೂರ್ವೆ ಗೋಜನ್ಮವನ್ನೆತ್ತಬೇಕೆಂತಲೂ, ದೇಹಾಂತದಲ್ಲಿ ವೈತರಣೀ ನದಿಯನ್ನು ದಾಟಬೇಕಾದರೆ ಗೋದಾನವನ್ನು ಮಾಡಿರಬೇಕೆಂತಲೂ ಪುರಾಣಗಳಲ್ಲಿ ಹೇಳಲ್ಪಟ್ಟಿದೆ. ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿಗಳು ಇಷ್ಟಾರ್ಥವನ್ನು ಕೊಡತಕ್ಕವು. ಅಂಥ ಕಾಮಧೇನು ಸಂತತಿಗೆ ಈ ಪಶುಗಳು ಸೇರಿರುವುವು. ಇದಲ್ಲದೆ ಪರಶಿವನಿಗೆ ವಾಹನವಾಗಿರುವುದು ವೃಷಭವು. ಇವೆಲ್ಲ ಕಾರಣಗಳಿಂದಲೂ ಈ ಪಶುಜಾತಿಗೆ ಪ್ರಾಮುಖ್ಯವು ಬಂದಿದೆ. ಕೇಳುವೇಳೆಂಬುದನ್ನು ತಿಳಿಯುವುದಕ್ಕೆ ತಕ್ಕ ಜ್ಞಾನವು ಈ ಪಶುಜಾತಿಗೆ ಇಲ್ಲದೆಹೋದರೂ, ಮನುಷ್ಯರಂತೆ ಸ್ವಕಾರ್ಯಸಾಧನವನ್ನೇ ನೋಡಿಕೊಳ್ಳುವ ದುಸ್ಸ್ವಭಾವವು ಇವಕ್ಕಿಲ್ಲದ, ಯಾವಾಗಲೂ ಪರರ ಹಿತವನ್ನು ಕೋರುತ್ತ, ಸರ್ವಪ್ರಕಾರದಿಂದಲೂ ಪರರಿಗೆ ಉಪಕಾರವನ್ನು ಮಾಡುತ್ತಿರುವ ಈ ಪಶುಗಳನ್ನು ಮನುಷ್ಯರಿಗಿಂತಲೂ ಉತ್ತಮವೆಂದು ಏತಕ್ಕೆ ಹೇಳಬಾರದು? ಹಿಮವತ್ಪರ್ವತದಿಂದ ಸಿಂಧು–ಗಂಗಾ–ಯಮುನಾ–ಬ್ರಹ್ಮಪುತ್ರಾ ಎಂಬ ನದಿಗಳು ಹುಟ್ಟಿರುತ್ತವೆ. ಅವುಗಳಲ್ಲಿ ಬ್ರಹ್ಮಪುತ್ರೆಯು ಪ್ರಜೆಗಳ ಉಪಯೋಗಕ್ಕೆ ಬರದೆ ಕಾಡುಮೇಡುಗಳಲ್ಲಿ ಹರಿದು, ಸಮುದ್ರಸಂಗಮವಾಗುತ್ತದೆ. ಉಳಿದ ನದಿಗಳು ಅನರ್ಘವಾದ ಬೆಳಸನ್ನು ಮಾಡುವುದಕ್ಕೆ ಉಪಯುಕ್ತವಾಗಿ ಪ್ರಜೆಗಳ ಜೀವನಾಧಾರವಾಗಿ ಪರೋಪಕಾರವನ್ನೆಸಗುತ್ತಿರುವುದರಿಂದ ಗಂಗಾ–ಯಮುನಾ–ಸರಯೂ ನದಿಗಳು ಮಹಾಪುಣ್ಯನದಿಗಳೆಂದು ಕೊಂಡಾಡಲ್ಪಡುತ್ತಿವೆ. ಅಗಣಿತವಾದ ಪರೋಪಕಾರ ಗುಣದಿಂದಲೇ ಅವುಗಳಿಗೆ ಪುಣ್ಯನದಿಗಳೆಂಬ ಹೆಸರು ಬಂದಿರುವುದೆಂದು ಹೇಳುವುದಕ್ಕೆ ಮನಸ್ಸು ಸಂತೋಷಗೊಳ್ಳುತ್ತದೆ. ಆ ನದಿಗಳಂತೆಯೇ ಪರೋಪಕಾರಾರ್ಥವಾಗಿರುವ ಪಶುಗಳನ್ನು ಮಹಮ್ಮದೀಯರು ಪೂಜಿಸಿ, ಕೃತಜ್ಞತೆಯನ್ನು ತೋರಿಸುವುದಕ್ಕೆ ಪ್ರತಿಯಾಗಿ ಬಕ್ರೀದ್ ಹಬ್ಬದಲ್ಲಿ ಅವುಗಳನ್ನು ಕೊಲ್ಲುವುದಕ್ಕ ಉತ್ಸಾಹಗೊಳ್ಳುತ್ತಿರುವರಲ್ಲಾ! ಏನಾಶ್ಚರ್ಯ! ಇದೆಂತಹ ವಿಷಾದಸ್ಥಾನ! ಮಹಮ್ಮದೀಯರಲ್ಲಿ ಗೋವುಗಳನ್ನು ಬಲಿಕೊಡುವ ಪದ್ಧತಿಯು ಶಾಸ್ತ್ರೀಯವೆಂದು ಹೇಗೆ ತಿಳಿಯಲ್ಪಡುವುದೋ ಕಾಣೆವು. ದೇವತೆಗಳ ಪ್ರೀತ್ಯರ್ಥವಾಗಿ ಪ್ರಾಣಿಗಳ ಬಲಿಯನ್ನು ಕೊಡುವುದು ಕೆಲ ಹಿಂದೂಗಳಲ್ಲಿ ಪದ್ಧತಿಯಾಗಿರುವುದು. ಹಿಂದೂಗಳ ವಿಗ್ರಹಾರಾಧನೆ ಮೊದಲಾದ ಆಚಾರಗಳನ್ನೆಲ್ಲಾ ತಿರಸ್ಕರಿಸುತ್ತಲಿರುವ ನಿರ್ಗುಣೋಪಾಸಕರಾದ ಮಹಮ್ಮದೀಯರಲ್ಲಿ ಇಂಥ ಗೋಬಲಿಯ ಪದ್ಧತಿಯು ಹೇಗೆ ಸ್ಥಾಪಿತವಾಯಿತೋ ತಿಳಿಯದು. ಏಬ್ರಾಹಾಂರವರು ಅಲ್ಲಾಹುತಾಲಾಯವರ ಆಜ್ಞೆಯನ್ನು ಮೀರಿ ನಡೆಯಕೂಡದೆಂದು ತನ್ನ ಮಗನನ್ನು ಬಲಿಕೊಡುವುದಕ್ಕೆ ಸಿದ್ಧರಾಗಿ ಪುತ್ರವಾತ್ಸಲ್ಯವು ತನ್ನನ್ನು ಬಾಧಿಸುವುದೇನೋ ಎಂಬ ಕಾರಣದಿಂದ ಕಣ್ಣನ್ನು ಮುಚ್ಚಿಕೊಂಡು ತನ್ನ ಕುಮಾರನ ಶಿರಶ್ಛೇದವನ್ನು ಮಾಡುವುದಕ್ಕ ಕತ್ತಿಯನ್ನೆತ್ತಿದನು. ಆಗ ಭಗವಂತನು ಆ ಮಗನನ್ನು ಓರೆಮಾಡಿ, ಆ ಸ್ಥಾನದಲ್ಲಿ ಒಂದು ಮೇಕೆಯನ್ನು ನಿಲ್ಲಿಸಿಬಿಟ್ಟನಂತೆ. ಆಗ ಏಬ್ರಾಹಾಮರು ಆ ಮೇಕೆಯನ್ನೇ ಕಡಿದುಹಾಕಿದರು ಎಂದು ಖುರಾನಿನಲ್ಲಿ ಒಂದು ಕಥೆಯಿರುವುದಂತೆ. ಈ ಕಾರಣದಿಂದ ಮೇಕೆಗೆ ಪ್ರತಿಯಾಗಿ ಶಕ್ತಿವಂತರಾದವರು ಕೊಬ್ಬಿದ ಗೋವನ್ನು ಬಲಿಯಾಗಿ ಕೊಡುವರೆಂದು ಕೆಲ ಮಹಮ್ಮದೀಯರು ಹೇಳುತ್ತಾರೆ. ಪುತ್ರನ ಸ್ಥಾನಕ್ಕೆ ಮೇಕೆಯನ್ನು ನಿಲ್ಲಿಸಿದ ದೈವವು ಗೋವನ್ನೇನೂ ನಿಲ್ಲಿಸಿ ವಧೆಮಾಡಿಸಲಿಲ್ಲವಷ್ಟೆ? ಹೀಗಿರುವಾಗ ಮಹಮ್ಮದೀಯರು ಗೋವನ್ನು ವಧಿಸುವುದು ತಮ್ಮ ಭಗವತ್ಪ್ರೀತಿಕರವಾದುದೆಂದು ಹೇಗೆ ನಂಬಬಹುದು? ಏಬ್ರಾಹಾಮನ ಮಗನನ್ನು ಕೊಲ್ಲಿಸುವುದೇ ಭಗವಂತನಿಗೆ ಇಷ್ಟವಿಲ್ಲದಿರುವಾಗ ಮಾತೃಸಮಾನವಾದ ಗೋವನ್ನು ಕೊಲ್ಲಿಸುವುದು ಆ ಭಗವಂತನ ಚಿತ್ತಕ್ಕೆ ಒಪ್ಪುವುದೆಂದು ಹೇಗೆ ತಾನೇ ಹೇಳಬಹುದು? ತಮ್ಮ ದೈವವೇ ಒಪ್ಪಿಕೊಳ್ಳಿಸಿದ ಮೇಕೆಗಳನ್ನೋ ಕುರಿಗಳನ್ನೋ ಅದೇಕೆ ಬಲಿಯಾಗಿ ಒಪ್ಪಿಸಬಾರದು? ಇಷ್ಟೇ ಅಲ್ಲದೆ ಹಿಂದೂಗಳೆಲ್ಲರೂ ಅತಿಶ್ರೇಷ್ಠವಾದುದೆಂದು ತಿಳಿದು ಅಭಿಮಾನಿಸುವ ಗೋವುಗಳನ್ನು ಅವರ ಕಣ್ಣುಮುಂದೆಯೇ ಕೊಲ್ಲಬೇಕೆಂದು ಮಹಮ್ಮದೀಯರು ಪ್ರವರ್ತಿಸುವುದು ಸೌಜನ್ಯವೆನಿಸಿಕೊಳ್ಳುವುದೆ? ಇದು ಜಗಳಕ್ಕೆ ತಾನಾಗಿ ಕಾಲುಕೆರೆದಂತಾಗುವುದಿಲ್ಲವೆ? ಭರತಖಂಡದಲ್ಲಿ ಗೋವಧೆಯನ್ನು ಮಾಡುವ ಕೆಲಸವು ಮಹಮ್ಮದೀಯರಿಗೆ ಎಂದಿಗೂ ತಕ್ಕದಲ್ಲವೆಂಬುದನ್ನು ಹಿಂದೂಗಳು ಮಾತ್ರವೇ ಹೇಳುವುದಿಲ್ಲ. ಮಹಮ್ಮದೀಯ ಜಗತ್ತಿಗೆಲ್ಲಾ ಸಮ್ಮಾನ್ಯರಾಗಿರುವ ಆಫ್ಘಾನಿಸ್ಥಾನದ ಅಮಿಾರರಾಗಿರುವ ಹಬೀಬುಲ್ಲಾರವರೇ ಘಂಟಾಘೋಷವಾಗಿ ಅಪ್ಪಣೆಮಾಡಿರುತ್ತಾರೆ. ಅವರು ಭರತಖಂಡಕ್ಕೆ ದಯಮಾಡಿಸಿದಾಗ್ಗೆ ದಿಲ್ಲಿ ನಗರದ ಮಹಮ್ಮದೀಯರೆಲ್ಲಾ ಮುಂದಾಗಿ ಒಂದು ವಿಜ್ಞಾಪನಪತ್ರಿಕೆಯನ್ನು ಬರೆದು, ನಿಮ್ಮ ಸನ್ಮಾನಾರ್ಥವಾಗಿ ನೂರು ಗೋವುಗಳನ್ನು ಕೊಲ್ಲುವವರಾಗಿದ್ದೇವೆಂದು ವಿಜ್ಞಾಪಿಸಿಕೊಂಡಿದ್ದರು. ಇದಕ್ಕೆ ಪ್ರತ್ಯುತ್ತರವನ್ನು ಅಮಿಾರರು ಕೊಡುವಾಗ್ಗೆ ತಿಳುಹಿಸಿದುದೇನೆಂದರೆ— “ನಾನು ಆಡುವ ಮಾತನ್ನು ಕಿವಿಗೊಟ್ಟು ಕೇಳಿ, ನಾನು ಸ್ನೇಹಭಾವವನ್ನಿಟ್ಟು ಭರತಖಂಡಕ್ಕೆ ಬರುತ್ತೇನೆ. ಅದೇ ಭಾವದಿಂದಲೇ ಅಲ್ಲಿಂದ ಹಿಂತಿರುಗತಕ್ಕವನಾಗಿದ್ದೇನೆ. ನನ್ನನ್ನು ಯಾವಜಾತಿಯವರಿಗೆ ಮಾತ್ರವೇ ಸ್ನೇಹಿತನೆಂದು ತಿಳಿಯುತ್ತೀರಿ? ಈ ಜಾತಿಯವರೊಡನೆ-ಅಥವಾ ಆ ಜಾತಿಯವರೊಡನೆ–ಎಂದು ತಿಳಿದಿದ್ದೀರಾ? ಹಾಗಲ್ಲ. ಎಲ್ಲ ಮತದವರಿಗೂ ಎಲ್ಲ ಜಾತಿಯವರಿಗೂ ನಾನು ಸ್ನೇಹಿತನು. ನೀವು ನನಗೆ ಶತ್ರುತ್ವವನ್ನುಂಟುಮಾಡಬೇಕೆಂದು ಯೋಚಿಸಿರಬಹುದು! ನಾನು ಯಾರೊಡನೆ ಉಲ್ಲಾಸದಿಂದಿರಬೇಕೆಂದು ಯೋಚಿಸಿರುವೆನೋ ಅವರಿಗೂ, ನನಗೂ ಭೇದವನ್ನು ಹುಟ್ಟಿಸಬೇಕೆಂದು ಯೋಚಿಸಿದ್ದೀರಾ? ಭಗವಂತನು ಅಂಥ ಕೆಲಸವನ್ನು ನಿವಾರಿಸಿಬಿಡಲಿ. ನನ್ನ ಗೌರವಾರ್ಥವಾಗಿ ನೀವು ನೂರು ಗೋವುಗಳನ್ನು ಕೊಲ್ಲಬೇಕೆಂದು ಅಪೇಕ್ಷೆಪಟ್ಟಿರುವಿರಾ? ಕೂಡದು. ಒಂದು ಹಸುವನ್ನೂ ನೀವು ಕೊಲ್ಲಕೂಡದು. ಇಷ್ಟೇ ಅಲ್ಲ. ಶ್ರೀಮಚ್ ಎಡ್ವರ್ಡ್ ಚಕ್ರವರ್ತಿಯವರ ರಾಷ್ಟ್ರದಲ್ಲಿ ವಾಸಮಾಡುವ ಭಾರತೀಯರ ಮನಸ್ಸಿಗೆ ಸಂಕಟವನ್ನುಂಟುಮಾಡುವ ಮತಸಂಬಂಧವಾದ ಕಾರ್ಯಗಳನ್ನು ನನ್ನ ಗೌರವಾರ್ಥವಾಗಿ ಯೆಂದು ಈ ದಿಲ್ಲಿ ಪಟ್ಟಣದಲ್ಲಾಗಲಿ, ಇತರ ಯಾವ ಸ್ಥಲದಲ್ಲೇ ಆಗಲಿ ನೀವು ಆಚರಿಸಕೂಡದು. ಏನು ನಿಮಗೆ ಬೇಕಾದಷ್ಟು ಮೇಕೆಗಳಿಲ್ಲವೆ? ಬಲಿ ಕೊಡುವುದಕ್ಕೆ ಬೇಕಾದಷ್ಟು ಒಂಟೆಗಳಿಲ್ಲವೆ? ನಿಮ್ಮೊಡನೆ ಬಕ್ರೀದ್ ಹಬ್ಬವನ್ನು ಆಚರಿಸುವುದಕ್ಕಾಗಿ ನಾನು ಜುಮ್ಮಾ ಮತ್ಸಿದ್ದಿಗೆ ಬರುತ್ತೇನೆ. ರಕ್ತಬಿಂದುಗಳ ಪ್ರವಾಹವನ್ನು ಹರಿಯಿಸಬೇಕಾಗಿದ್ದರೆ ಮೇಕೆಗಳನ್ನು ಬಲಿಕೊಡಿರಿ. ಅದನ್ನು ಹಿಂದೂಗಳು ಲಕ್ಷೀಕರಿಸುವುದಿಲ್ಲ. ನೀವು ಒಂದು ಗೋವನ್ನಾದರೂ ಸರಿಯೆ ಕೊಂದುದೇ ಆದರೆ ನಾನು ನಿಮ್ಮ ಮುಖಾವಲೋಕನವನ್ನು ಮಾಡುವುದಿಲ್ಲ. ತತ್‌ಕ್ಷಣವೇ ನಾನು ದಿಲ್ಲಿಯನ್ನು ಬಿಟ್ಟು ಹೊರಟುಹೋಗುತ್ತೇನೆ. ನಾನು ನಿಮಗೆ ಆಜ್ಞಾಪಿಸತಕ್ಕವನೆಂದು ನೀವು ತಿಳಿಯುತ್ತಿದ್ದರೆ ನನ್ನ ಈ ಆಜ್ಞೆಯನ್ನು ಶಿರಸಾವಹಿಸಿರಿ. ನನ್ನನ್ನು ಮನಶ್ಶಾಂತಿಯಿಂದ ದಿಲ್ಲಿ ಪಟ್ಟಣಕ್ಕೆ ಪ್ರವೇಶಿಸುವಂತೆ ಮಾಡಿರಿ. ಹಾಗೆಯೇ ಅಲ್ಲಿಂದ ಕಲ್ಕತ್ತಾಕ್ಕೆ ಕಳುಹಿಸಿಕೊಡಿ. ಬಕ್ರೀದ್ ಹಬ್ಬದಲ್ಲಿ ಹಸುಗಳನ್ನು ಕೊಲ್ಲುವ ವಿಷಯದಲ್ಲಿ ನಿಮಗಿರುವ “ಹಕ್ಕು” ಗಳನ್ನು ಕುರಿತು ನಾನೀಗ ಚರ್ಚಿಸುವುದಿಲ್ಲ. ನನ್ನ ಮನೋಭಾವವನ್ನು ಮಾತ್ರ ನೀವು ಗಮನಿಸಿರಿ. ಅಲ್ಲಾನು ನಮ್ಮ ದೈವವಾಗಿದ್ದಾನೆ. ಮಹಮ್ಮದನು ಆ ಭಗವಂತನಿಂದ ನಿಯುಕ್ತನಾದ ಪ್ರವಾದಿಯಾಗಿದ್ದಾನೆ. ನಮ್ಮೆಲ್ಲರಿಗೂ ಖುರಾನು ವೇದವಾಗಿದೆ. ಹೊಸದಾಗಿಯಾಗಲಿ ಅಥವಾ ಪ್ರಾಚೀನವಾಗಿಯಾಗಲಿ ಇರುವ ನಿಬಂಧನೆಗಳನ್ನು ನಾನು ನಿಮಗೆ ಬೋಧಿಸುವುದಿಲ್ಲ. ನಿಮ್ಮ ನಿಮ್ಮ ಮತಾಚಾರಗಳು ನಿಮ್ಮ ನಿಮ್ಮ ಮನಸ್ಸೌಖ್ಯಕ್ಕೆ ತಕ್ಕಂತೆ ಇರುತ್ತವೆ. ನಾನು ಮುಖ್ಯವಾಗಿ ಹೇಳುವುದೇನೆಂದರೆ—ನಾನು ಈಗ ಅತಿಥಿ. ನಾನು ಯಾವ ಗೃಹಸ್ಥನ ಮನೆಯಲ್ಲಿರುವೆನೋ ಆತನ ಇದಿರಿಗೆ ನನಗೆ ಮನೋವ್ಯಥೆಯುಂಟಾಗುವಂತೆ ಮಾಡಬೇಡಿ. ನನ್ನ ಮಾರ್ಗದಲ್ಲಿ ಹೋರಾಟವನ್ನು ಹುಗಿಸಬೇಡಿ”

ಈ ರೀತಿಯಾದ ಹಿತಬೋಧೆಯನ್ನು ಮಹಮ್ಮದೀಯ ಜನವರ್ಗಕ್ಕೆಲ್ಲಾ ಕಾಬೂಲಿನ ಅಮಿಾರರೇ ಮಾಡಿರುತ್ತಾರೆ. ಇದು ಕಲ್ಪಾಂತವಾಗಿ ಮರೆಯತಕ್ಕದಲ್ಲ. ೪ ದಿನದಮಟ್ಟಿಗೆ ಭರತಖಂಡಕ್ಕೆ ಬಂದು ಹೋಗತಕ್ಕವರಾಗಿದ್ದ ಅಮಿಾರರೇ ಗೋವಧೆಯು ಭರತಖಂಡದಲ್ಲಿ ಕರ್ತವ್ಯವಲ್ಲವೆಂದು ಸಿದ್ಧಾಂತಮಾಡಿ ಹೀಗೆ ಹೇಳಿರುವಾಗ, ತಲೆತಲಾಂತರವಾಗಿ ಇಲ್ಲೇ ತಮ್ಮ ಭಾರತೀಯ ಸಹೋದರರೊಡನೆಯೇ ವಾಸಮಾಡಬೇಕಾಗಿರುವ ಮಹಮ್ಮದೀಯರುಗಳು ಅಂಥ ಅಕರಣೀಯವಾದ ಕಾರ್ಯವನ್ನು ಆಚರಿಸಬಹುದೆ? ಹಿಂದೂಗಳ ಕಣ್ಣಿದಿರಿಗೇ ಅಂಥಾ ಕಾರ್ಯವನ್ನಾಚರಿಸಲು ಪ್ರಯತ್ನಿಸಿ ಮೊನ್ನೆತಾನೇ ಕ

ಲ್ಕತ್ತಾದಲ್ಲಿ ನಡೆದಂಥ ಅನರ್ಥಗಳಿಗೆ ಅವಕಾಶವನ್ನು ಕಲ್ಪಿಸಬಹುದೆ? ಉಭಯಪಕ್ಷಕ್ಕೂ ಮತ್ತೂ ದೇಶಹಿತಕ್ಕೂ ವಿಘಾತಕವಾದ ಇಂಥ ಕಾರ್ಯವನ್ನು ಪರಿತ್ಯಾಗಮಾಡಿಬಿಡುವುದು ಮಹಮ್ಮದೀಯರಿಗೆ ಒಂದು ಅಗಾಧವಾದ ಕೆಲಸವೆ? ಈ ಅಲ್ಪವಿಷಯದಲ್ಲಿ ಸ್ಥಿರಚಿತ್ತತೆಯನ್ನು ತೋರಿಸದೆ ಹೋಗುವುದರಿಂದ ಎಷ್ಟು ಅನರ್ಥಲಾಭವಾಗುವುದೆಂಬುದನ್ನು ಮಹಮ್ಮದೀಯ ಬಾಂಧವರ ಮುಂದಾಳುಗಳೆಲ್ಲರೂ ಪರ್ಯಾಲೋಚಿಸದೆ ಇರಬಾರದು. ಪ್ರತಿ ಪ್ರಾಣಿಯಮೇಲೂ ದಯೆಯನ್ನು ತೋರಿಸಬೇಕೆಂಬ ನೀತಿಯು ಪ್ರಪಂಚದ ಮೇಲಿರುವ ಯಾವ ಮತದಲ್ಲೂ ತಿರಸ್ಕರಿಸಲ್ಪಟ್ಟಿರುವಂತೆ ಕಾಣುವುದಿಲ್ಲ. ಹಿಂದೆ ಇದ್ದ ಮಹಮ್ಮದೀಯ ಚಕ್ರವರ್ತಿಗಳು ಸಹ ಗೋವಧೆಯನ್ನು ನಿಷೇಧಿಸಿಬಿಟ್ಟಿದ್ದರು. ಅಕ್ಬರ್ ಚಕ್ರವರ್ತಿಯು ಗೋಮಾಂಸಭಕ್ಷಣೆಯನ್ನೇ ಮಾಡಿದವನಲ್ಲವಂತೆ. ಜಹಾಂಗೀರ್ ಷಾಜಹಾನ್ ಚಕ್ರವರ್ತಿಗಳು ಕೂಡ ಆ ಅಕ್ಬರನ ಪದ್ಧತಿಯನ್ನೇ ಅನುಸರಿಸಿ ನಡೆದು ಹಿಂದೂ ಜನರಿಗೆ ಪ್ರಿಯರಾಗಿದ್ದರು. ಈಗಲೂ ಕೂಡ ದೂರದರ್ಶಿಗಳಾದ ಎಷ್ಟೋ ಮಂದಿ ಮಹಮ್ಮದೀಯ ದೊಡ್ಡಮನುಷ್ಯರು ಗೋವಧೆಗೂ, ಗೋಮಾಂಸಭಕ್ಷಣೆಗೂ ಎಷ್ಟೋ ದೂರಸ್ಥರಾಗಿ ವರ್ತಿಸುತ್ತಿರುವರು. ಆದರೆ ಔರಂಗ್‌ಜೇಬ್ ಚಕ್ರವರ್ತಿಯು ಮಾತ್ರ ಹಿಂದೂಗಳಮೇಲಣ ದ್ವೇಷದಿಂದ ಗೋವಧೆಗೆ ಅನುಮತಿಸಿದ್ದನು. ಈಗಿನ ಮಹಮ್ಮದೀಯ ಬಾಂಧವರೆಲ್ಲರೂ ಅಕ್ಬರ್-ಜಹಾಂಗೀರ್ ಮೊದಲಾದವರಂತೆ ನಡೆದು ಅವರಂತೆ ಸತ್ಕೀರ್ತಿಯನ್ನು ಗಳಿಸುವರಾಗಬೇಕಲ್ಲದೆ, ಔರಂಗ್‌ಜೇಬನಂತೆ ನಡೆದು ಅಪಕೀರ್ತಿಗೂ, ಅನರ್ಥಕ್ಕೂ ಆಶ್ರಯಭೂತರಾಗಕೂಡದೆಂಬುದೇ ನಮ್ಮ ಪ್ರಾರ್ಥನೆ.

ಮೈಸೂರ್ ಸ್ಟಾರ್.

೧೯೧೧ ನೇ ಜನವರಿ ತಾ॥ ೨೩ ನೇ ಸೋಮವಾರ.

ರಾವಬಹದ್ದೂರ್ ಶ್ರೀಮಂತ ಮಲ್ಲಪ್ಪ ಬಸವಪ್ಪ ವಾರದ ಸೊಲ್ಲಾಪುರ, ಇವರ ಕೈಲಾಸಪ್ರಾಪ್ತಿ.

ವೀರಶೈವ ಜಗತ್ತನ್ನೆಲ್ಲಾ ದುಃಖಾಂಬುಧಿಯಲ್ಲಿ ಮುಳುಗಿಸುವ ಕ್ರೂರವಾದ ವಾರ್ತೆಯನ್ನು ನಮ್ಮ ಪತ್ರಿಕಾವಾಚಕರ ಮುಂದಿಡುವ ಅನಿಷ್ಟವಾದ ಕಾರ್ಯವು ಈ ವಾರದಲ್ಲಿ ನಮಗೆ ತಟಸ್ಥವಾಗಿರುವುದಕ್ಕಾಗಿ ಅತ್ಯಂತ ವಿಷಾದಿಸುತ್ತೇವೆ. ನಮ್ಮ ಪರಮಸಮ್ಮಾನ್ಯರಾದ ಸೊಲ್ಲಾಪುರದ ರಾ॥ ಬ॥ ವಾರದ ಮಲ್ಲಪ್ಪಣ್ಣನವರನ್ನು ಹತಭಾಗ್ಯರಾದ ನಾವು ಕಳೆದುಕೊಂಡೆವೆಂಬುದೇ ಆ ದುಃಖವಾರ್ತೆಯಾಗಿರುವುದು. ಕಳೆದ ತಾ॥ ೧೯ ನೆಯ ಗುರುವಾರ ಬೆಳಿಗ್ಗೆ ಈ ಸುದ್ದಿಯು ನಮಗೆ ವಿದ್ಯುತ್ತಂತ್ರಿಯಮೂಲಕವಾಗಿ ಬಂದು, ಸಾಕ್ಷಾತ್ತಾದ ವಿದ್ಯುತ್ತೇ ಬಡಿದಂತೆ ಹೃದಯವನ್ನು ಭೇದಿಸಿತು. ಇವರ ಮೃತಿಯ ಸಂಬಂಧವಾದ ಸಾಂಗವಾದ ಲೇಖನವು ನಮಗೆ ಇನ್ನೂ ಬಂದಿಲ್ಲ. ಇದುವರೆಗೆ ತಿಳಿದುಬಂದಿರುವ ಸಂಗತಿಯಮೇಲಿಂದ ಗೊತ್ತಾಗುವುದೇನೆಂದರೆ-ಅವರು ಕಳೆದ ನವೆಂಬರ್ ತಿಂಗಳಲ್ಲಿ ಬೊಂಬಾಯಿಗೆ ಹೋದವರು ಅಲ್ಲೇ ವಾಸಮಾಡುತ್ತಿದ್ದರು. ಒಂದು ಪಕ್ಷದಿಂದೀಚೆಗೆ ದೇಹದಲ್ಲಿ ಸ್ವಲ್ಪ ಅಸ್ವಸ್ಥತೆಯು ಕಾಣಿಸಿತು. ತೊಡೆಗಳಿಂದ ಕೆಳಭಾಗದಲ್ಲಿ ಪಾರ್ಶ್ವವಾಯುವಿನ ಬಾಧೆಯು ಗೋಚರಿಸಿದಂತಾಯಿತು. ಬರಬರುತ್ತ ನಿಶ್ಚೈತನ್ಯವು ಹುಟ್ಟಿ ಶ್ವಾಸಕೋಶಸಂಬಂಧವಾದ ರೋಗವು ತೋರಿ, ಪ್ರಸಿದ್ಧರಾದ ವೈದ್ಯರಿಗೆಲ್ಲಾ ಅಪಾಯದ ಭೀತಿಯನ್ನು ಹುಟ್ಟಿಸಿತು. ಜನವರಿ ತಾ॥ ೧೫ ರ ರಾತ್ರಿ ಅವರನ್ನು ಬೊಂಬಾಯಿಯಿಂದ ಸೊಲ್ಲಾಪುರಕ್ಕೆ "ಸ್ಪೆಷಲ್ ಟ್ರೇನಿನಲ್ಲಿ" ಕರತಂದರು. ಎಲ್ಲ ವಿಧದ ಚಿಕಿತ್ಸೆಗಳೂ, ಸಾಹಸವೂ ವ್ಯರ್ಥವಾಗಿ ಕಡೆಗೆ ಅವರು ೧೯ ನೆಯ ಗುರುವಾರ ಉಷಃಕಾಲಕ್ಕೆ ಈ ಭೌತಿಕಮಂಡಲದ ಸಂಬಂಧವನ್ನು ಪರಿತ್ಯಜಿಸಿ ಪರಮಪದವನ್ನೈದಿದರು.

ಇವರಿಗೆ ಅಂತ್ಯಕಾಲದಲ್ಲಿ ಬಹುಶಃ ೫೫ ವರ್ಷಗಳಾಗಿರಬಹುದು. ಇಷ್ಟು ಮಧ್ಯವಯಸ್ಸಿನಲ್ಲೇ ಇವರಿಗೆ ಆಯುಃಪೂರ್ತಿಯಾಗುವುದೆಂದು ಯಾರೊಬ್ಬರ ಕನಸು ಮನಸಿನಲ್ಲಿಯೂ ತೋರಿರಲಿಲ್ಲ. ಇವರ ವಿಯೋಗವು ನಮ್ಮ ಸಮಾಜಕ್ಕೆ ಅಪರಿಮಿತವಾದ ನಷ್ಟವನ್ನು ತಂದಿಕ್ಕಿತು. ಯೋಗ್ಯವಾಗಿ ದಿಗ್ದರ್ಶನವನ್ನು ಮಾಡಿ, ಸಮಾಜದವರನ್ನೆಲ್ಲಾ ಉನ್ನತಮಾರ್ಗಕ್ಕೆ ತೆಗೆದುಕೊಂಡುಹೋಗುವ ಸಮರ್ಥರಾದ ಮುಂದಾಳುಗಳ ಅವಶ್ಯಕತೆಯು ವೀರಶೈವ ಮತಕ್ಕೆ ಅತಿಶಯವಾಗಿರುತ್ತದೆ. ಪ್ರಕೃತದಲ್ಲಿ ಅಂಥವರ ಸಂಖ್ಯೆಯು ನಮ್ಮಲ್ಲಿ ಅತ್ಯಲ್ಪವಾಗಿದೆ. ಹೀಗಿರುವಲ್ಲಿ ನಮ್ಮ ಮುಂದಾಳುಗಳಲ್ಲೆಲ್ಲಾ ಅಗ್ರಗಣ್ಯರಂತಿದ್ದ ಈ ಮಹಾಶಯರನ್ನು ಕಳಕೊಂಡುದು ನಮಗೆ ಸಾಮಾನ್ಯವಾದ ನಷ್ಟವಲ್ಲ. ಇವರು ವೀರಶೈವ ಮತದಲ್ಲಿ ಒಬ್ಬ ಮಹಾಪ್ರಭುವಿನಂತೆ ಸಮ್ಮಾನಿಸಲ್ಪಡುತ್ತಿದ್ದರು. ಹಾಗಾಗುವುದಕ್ಕೆ ಇವರ ಅಪಾರವಾದ ಧನಸಂಪತ್ತಿ ಮಾತ್ರವೇ ಕಾರಣವಲ್ಲ. ಅನನ್ಯಸಾಧಾರಣವಾದ ಮತಾಭಿಮಾನ-ಅಪಾರವಾದ ದೂರದರ್ಶಿತೆ-ಅನುಪಮವಾದ ಕರ್ತವ್ಯದಕ್ಷತೆ-ಕಾಲೋಚಿತವಾದ ಧೀರತೆ-ಅನುಕರಣೀಯವಾದ ಮಹೌದಾರ್ಯ-ಸದಾಚಾರ ಸಂಪ್ರೀತಿ-ನಿರ್ಮಲವಾದ ಗುರುದೈವಭಕ್ತಿ-ಅತುಲವಾದ ತ್ರಿಕರಣಶುದ್ಧಿ-ನಯವಿನಯ ಗಾಂಭೀರ್ಯ—ಮೊದಲಾದ ಸದ್ಗುಣಗಳೆಲ್ಲಾ ಇವರಲ್ಲಿ ಮೂರ್ತೀಭವಿಸಿದಂತಿದ್ದುದೇ ಮುಖ್ಯಕಾರಣವು. ಮತದ ಯೋಗ್ಯತೆಯು ಇತರರಿಗೆ ಗೋಚರಿಸಬೇಕಾದರೂ ಮತದ ಜನರಲ್ಲಿ ಸದಾಚಾರಪ್ರೀತಿ-ದುರಾಚಾರನಿವೃತ್ತಿಗಳುಂಟಾಗಬೇಕಾದರೂ ಮತಗ್ರಂಥಾವಲೋಕನದ ಹೊರತು ಅನ್ಯಥಾ ಸಾಧ್ಯವಲ್ಲವೆಂಬುದನ್ನು ಇವರು ಚೆನ್ನಾಗಿ ನಿರ್ಧರಿಸಿ, ಇದುವರೆಗೆ ೩೦ ಸಾವಿರ ರೂ. ಗಳ ಮೇಲಿನ ವ್ಯಯವನ್ನು ಮಾಡಿ ೪-೩ ಪಂಡಿತರನ್ನು ಹತ್ತಿರದಲ್ಲಿಟ್ಟುಕೊಂಡು ಮತದ ಸಂಸ್ಕೃತ ಗ್ರಂಥಗಳನ್ನು (ಬಹುಶಃ ೪೦) ಮಹಾರಾಷ್ಟ್ರ ಟೀಕಾ ಸಮೇತವಾಗಿ ಬಾಲಬೋಧಾಕ್ಷರದಲ್ಲಿ ಮುದ್ರಣ ಮಾಡಿಸಿ, ಅವುಗಳಲ್ಲಿ ಎಷ್ಟೋ ಗ್ರಂಥಗಳನ್ನು ಉಚಿತವಾಗಿ ಹಂಚಿಸಿರುವರು. ೨೫ ವರ್ಷಗಳಿಂದಲೂ ಇವರು ಮಾಡಿದ ಧನಸಹಾಯದಿಂದ ಎಷ್ಟೋ ವಿದ್ಯಾರ್ಥಿಗಳು ಸಂಸ್ಕೃತಾಂಗ್ಲ ವಿದ್ಯೆಗಳಲ್ಲಿ ಪಂಡಿತರಾಗಿರುವರು. ಈಗ್ಗೂ ಅವರು ಸೊಲ್ಲಾಪುರದಲ್ಲಿ ಏರ್ಪಡಿಸಿರುವ ಪಾಠಶಾಲೆಯಲ್ಲಿನ ೩೦ ಮಂದಿ ವಿದ್ಯಾರ್ಥಿಗಳಿಗೆ ಅಶನವಸನಾದಿ ಸಹಾಯಗಳೆಲ್ಲಾ ಇವರಿಂದಲೇ ನಡೆಯುತ್ತಿದ್ದುವು. ಇತ್ತೀಚೆಗೆ ಮತಸಂಬಂಧವಾದ ಯಾವುದೊಂದು ಮಹಾಕಾರ್ಯವೂ ಇವರ ಸಂಬಂಧ ಸಹಾಯಗಳನ್ನು ಹೊಂದದೆ ನೆರವೇರುತ್ತಿರಲಿಲ್ಲವೆಂತಲೇ ಹೇಳುವ ಸ್ಥಿತಿಯು ಪ್ರಾಪ್ತವಾಗಿದ್ದಿತು. ಸೊಲ್ಲಾಪುರದಲ್ಲಿ ಒಂದು ವಿದ್ಯಾಭಿವೃದ್ಧಿಫಂಡಿನ ಸ್ಥಾಪನೆ, ಬೊಂಬಾಯಿಯಲ್ಲಿ ಒಂದು ವೀರಶೈವಾಶ್ರಮದ ಸ್ಥಾಪನೆ ಮೊದಲಾದ ಕಾರ್ಯಗಳಿಗಾಗಿ ಇವರು ಉದಾರವಾದ ಸಹಾಯಮಾಡಿ ಸಮಾಜಬಾಂಧವರಿಗೆ ಹೇಗೆ ಮೇಲ್ಪಂಕ್ತಿಯನ್ನು ಹಾಕಿಕೊಡುತ್ತಿದ್ದರೆಂಬುದನ್ನು ಆಗಿಂದಾಗ್ಗೆ ನಾವು ಇದೇ ಪತ್ರಿಕೆಯಲ್ಲಿ ಪ್ರಸ್ತಾಪಿಸುತ್ತಲೇ ಬಂದಿರುವೆವು. ಮತಸುಧಾರಣೆಯ ಕಾರ್ಯವು ಅನಂತವಾಗಿರುವುದರಿಂದ ಅವುಗಳಿಗೆಲ್ಲಾ ಬೇಕಾದ ಧನಸಹಾಯಕ್ಕಾಗಿ ಒಂದು ವೀರಶೈವ ಮತದ ಹತ್ತಿಯ ಕಾರ್ಖಾನೆಯನ್ನು ದೊಡ್ಡದಾಗಿ ಸ್ಥಾಪಿಸಿ, ಅದರಲ್ಲಿ ಬರುವ ಲಾಭದ ಅರ್ಧಭಾಗವನ್ನು ಮತದ ಕಾರ್ಯಕ್ಕೆ ವಿನಿಯೋಗಿಸಿಕೊಳ್ಳುವುದು ಯೋಗ್ಯವೇ ಹೊರತು ಪದೇಪದೆ ಜನರನ್ನು ಯಾಚಿಸಿ ಮತದ ಕಾರ್ಯವನ್ನು ಸಾಧಿಸುವುದು ಶಕ್ಯವಲ್ಲವೆಂಬ ತತ್ತ್ವವು ಮೊದಲು ಹುಟ್ಟಿದುದೇ ಇವರಲ್ಲಿ. ಅದನ್ನು ಬಾಗಲಕೋಟೆಯಲ್ಲಾದ ಮಹಾಸಭೆಯ ಕಾಲದಿಂದಲೂ ಹೊರಗೆಡಹಿ, ಅದರ ಆಲೋಚನೆಯಲ್ಲೇ ತೊಡಗಿದ್ದರು. ಮತ್ತೂ ವ್ಯವಸಾಯ ವ್ಯಾಪಾರೋದ್ಯೋಗಗಳಲ್ಲು ಕೂಡ ಇವರು ಅತ್ಯಂತವಾಗಿ ವ್ಯಾಪಕರಾಗಿದ್ದರು. ಬಟ್ಟೆಯನ್ನು ನೇಯುವ ದೊಡ್ಡ ಗಿರಣಿಯನ್ನು ಸ್ಥಾಪಿಸಿದವರಲ್ಲಿ ನಮ್ಮ ಮತಸ್ಥರೊಳಗೆ ಇವರೇ ಮೊತ್ತಮೊದಲಿನವರು. ಈಗ್ಗೂ ಸೊಲ್ಲಾಪುರದಲ್ಲಿರುವ ಇವರ ಗಿರಣಿಯಲ್ಲಿ ೫-೩ ಸಹಸ್ರ ಜನರು ಕೂಲಿ ಮಾಡಿ ಜೀವಿಸುತ್ತಿದ್ದಾರೆ. ವರ್ಷ ೧ಕ್ಕೆ ಲಕ್ಷಾಂತರ ರೂ.ನ ದವಸ ಕಬ್ಬು ಮೊದಲಾದುವುಗಳನ್ನು ಬೆಳಸನ್ನು ಮಾಡಿಸುತ್ತಿದ್ದರು. ಇವರ ವ್ಯಾಪಾರದ ಮಳಿಗೆಗಳು ಬೊಂಬಾಯಿ-ಹೈದರಾಬಾದು-ಮೈಸೂರು ಸಂಸ್ಥಾನದ ಅನೇಕ ಪಟ್ಟಣಗಳಲ್ಲಿರುತ್ತ ಲಕ್ಷಾಂತರ ರೂ.ನ ಆಡಳಿತವು ಪ್ರತಿಯೊಂದರಲ್ಲೂ ನಡೆಯುತ್ತಿರುವುವು. ವ್ಯಾಪಾರ ಕ್ರಮದಲ್ಲಿ ಇವರು ತೋರಿಸುತ್ತಿದ್ದ ಚಟುವಟಿಕೆ, ಧರ್ಮಬುದ್ಧಿ ಮೊದಲಾದುವುಗಳು ಇವರಿಗೆ "ಮರ್ಚಂಟ್ ಪ್ರಿನ್ಸ್" (ವರ್ತಕರಾಜ) ನೆಂಬ ವಿಖ್ಯಾತಿಯನ್ನುಂಟುಮಾಡಿದ್ದುವು. ದೀನ ಜನರಲ್ಲಿ ಇವರು ನಿರ್ವ್ಯಾಜವಾಗಿ ತೋರಿಸುತ್ತಿದ್ದ ಕೃಪೆಗಾಗಿ ರಿಕ್ತ ಜನರೆಲ್ಲರೂ ಇವರನ್ನು ತಂದೆಯಂತೆಯೂ, ಪ್ರಭುವಂತೆಯೂ ಕಂಡು "ಅಪ್ಪಾಸಾಹೇಬ-ಅಪ್ಪಾಸಾಹೇಬ" ಎಂದು ಕರೆಯುತ್ತ, ಅವರ ದರ್ಶನವನ್ನು ತಮ್ಮ ಭಾಗ್ಯದೇವತೆಯ ಸಂದರ್ಶನವೆಂದು ತಿಳಿದು ಆನಂದಿಸುತ್ತಿದ್ದರು. ಇವರ ಉದ್ಯೋಗಪ್ರಿಯತೆಯೂ, ದೇಶಹಿತಾಚರಣ ಸಂಕಲ್ಪವೂ, ವಿನಯಸ್ನೇಹಭಾವವೂ ಸಹ ಪರಮತದ ಜನರಲ್ಲೆಲ್ಲಾ ಅತಿಶಯವಾದ ಮೈತ್ರಿಗೌರವಗಳನ್ನುಂಟುಮಾಡಿಕೊಂಡಿದ್ದುವು. ಸರ್ವತೋಮುಖವಾಗಿ ಕಾಣುತ್ತಿದ್ದ ಇವರ ಪ್ರಾಭವವನ್ನು ಅರಿತು ಇಂಡ್ಯಾ ಗೌರ್ನಮೆಂಟಿನವರು ಇವರಿಗೆ ಮೊದಲು "ರಾವ್‌ಸಾಹೇಬ" ಎಂಬ ಪ್ರಶಸ್ತಿಯನ್ನು ಕೊಟ್ಟಿದ್ದು, ನೆನ್ನೆಯ ವರ್ಷದಲ್ಲಿ "ರಾವ್‌ಬಹದ್ದೂರ್" ಎಂಬ ಬಿರುದನ್ನು ಸಹಾ ದಯಪಾಲಿಸಿದ್ದರು. ಸ್ವಮತದವರಾದರೋ ಬಳ್ಳಾರಿಯಲ್ಲಿ ನೆರೆದ ಮಹಾಸಭೆಗೆ ಇವರನ್ನೇ ಅಧ್ಯಕ್ಷರನ್ನಾಗಿ ಮಾಡಿ, ಇವರಲ್ಲಿ ತಮಗಿರುವ ಅಪಾರವಾದ ಗೌರವ ಬುದ್ಧಿಯನ್ನು ವ್ಯಕ್ತಗೊಳಿಸಿದರು. ಇವರ ಸಾದ್ಗುಣ್ಯವನ್ನು ಕುರಿತು ವಿಸ್ತರಿಸಿ ಬರೆದು ಈ ದುಃಖದಾಯಕ ವಾರ್ತಾಲೇಖನವನ್ನು ಲಂಬಿಸುವುದಕ್ಕೆ ನಮ್ಮ ಲೇಖನಿಯೇ ಸಾಗದು. ಮುಖ್ಯವಾಗಿ ಧನಸಂಪತ್ತಿ-ಮತಾಭಿಮಾನ-ವಿದ್ಯಾಬಿಮಾನ ಮೊದಲಾದ ಒಂದೊಂದು ಗುಣಗಳಲ್ಲಿ ಇವರಿಗಿಂತಲೂ ಮಿಗಿಲಾದವರು ನಮ್ಮ ಸಮಾಜದವರಲ್ಲಿ ಕೆಲವರು ದೊರೆಯಬಹುದು. ಆದರೆ ಸಂಪತ್ತಿ-ಉಚಿತೌದಾರ್ಯ-ಮತಾಭಿಮಾನ-ವಿದ್ಯಾಭಿಮಾನ ಇವುಗಳೆಲ್ಲಾ ಒಂದೇ ಕಡೆ ಸೇರಿರುವಂತಹ ಮಹಾವಿಭೂತಿಯು ನಮ್ಮ ಕಾಲಕ್ಕೆ ಇದೊಂದೇ ಆಗಿದ್ದಿತೆಂಬ ಸಂಗತಿಯನ್ನು ಸ್ಮರಿಸಿಕೊಂಡರೆ ಮಾತ್ರ ಅವರ ವಿಯೋಗದುಃಖವನ್ನು ತಾಳಿಕೊಳ್ಳುವುದೇ ದುಸ್ತರವಾಗುವುದು. ಇನ್ನೂ ಹತ್ತಾರುವರ್ಷಕಾಲ ಈ ಮಹಾಪುರುಷರು ನಮ್ಮ ಮಧ್ಯದಲ್ಲಿದ್ದರೆ ಸಮಾಜಕ್ಕೆ ಎಷ್ಟೋ ಹಿತವನ್ನು ಮಾಡಿ ನಮ್ಮನ್ನು ಮುಂದರಿಸುತ್ತಿದ್ದರು. ಇವರ ಮೃತಿಯು ಸಮಾಜದ ಭವಿಷ್ಯತ್ಸುಖದ ಅಂಥ ಆಶಾಂಕುರವನ್ನೇ ಕದಿದಿಕ್ಕಿತು. ಇವರ ಅವಸಾನದಿಂದ ವೀರಶೈವ ಸಮಾಜದ ಅವಸ್ಥೆಯು 'ಎಂಜಿನ್' ಕಳಚಿದ 'ಟ್ರೇನಿನ' ಅವಸ್ಥೆಯಂತೆ ನಮಗೆ ಕಾಣುತ್ತಿರುವುದು. ಈಗ ವೀರಶೈವ ಮತದಪಂಚಪ್ರಾಣದಲ್ಲಿ ಒಂದು ಪ್ರಾಣವೇ ಹೋಯಿತೆಂದರೂ ಸಲ್ಲುವುದು. ಈ ವಿಧಿವಿಲಾಸವು ವೀರಶೈವರ ಹತಭಾಗ್ಯವನ್ನು ಸೂಚಿಸಿಕೊಡುತ್ತಿರುವುದು. ೧೯೦೯ ನೆಯ ಸಂವತ್ಸರದಲ್ಲಿ ಇವರಿಗೆ ಪುತ್ರೋತ್ಸವವಾದಾಗ್ಗೆ ವೀರಶೈವಮಂಡಲವೆಲ್ಲವೂ ತಂತಮ್ಮ ಗೃಹೋತ್ಸವವಾದಂತೆ ಸಂತೋಷವನ್ನು ವ್ಯಕ್ತಗೊಳಿಸಿದರು. ಈಗ ಈ ಸುದ್ದಿಯು ಅವರುಗಳ ಮೇಲೆಲ್ಲಾ ಪರ್ವತವೇ ಕಳಚಿಬಿದ್ದಂತೆ ಮಹಾವ್ಯಸನವನ್ನುಂಟುಮಾಡುವುದೆಂಬುದಕ್ಕೆ ಸಂಶಯವಿಲ್ಲ. ಈ ಮಹಾಪುರುಷರೇನೋ ತಮ್ಮ ಜೀವಿತಯಾತ್ರವನ್ನು ಲೋಕಶ್ಲಾಘ್ಯವಾಗಿ ನಡೆಸಿ, ಅವಿನಾಶವಾದ ಯಶಶ್ಶರೀರವನ್ನು ನಮ್ಮ ಮಧ್ಯದಲ್ಲುಳಿಸಿ, ಎಂದಾದರೂ ಒಂದು ದಿವಸ ಅಳಿಯಲೇ ಬೇಕಾದ ಭೌತಿಕ ಶರೀರವನ್ನು ಪರಿತ್ಯಜಿಸಿದರು. ಪರಮ ಪವಿತ್ರಚರಿತ್ರರಾದ ಆ ಮಹಾಪುರುಷರ ಯಶಃಕಾಯಶೋಭೆಯು ಸದಾ ನಮ್ಮೆಲ್ಲರನ್ನೂ ಬೆಳಗುತ್ತ ಸ್ಥಿರವಾಗಿ ವಿರಾಜಿಸುತ್ತಿದ್ದರೂ. ಅವರ ಭೌತಿಕ ಶರೀರ ಭಾವಸಂದರ್ಶನವು ಯಾವಾಗಲೂ ನಮ್ಮ ಸಮಾಜಕ್ಕೆ ಮಾರ್ಗದರ್ಶನವನ್ನುಂಟುಮಾಡುತ್ತಿರಲೆಂಬ ಸಂಕಲ್ಪದಿಂದಲೂ, ಅವರು ನಮ್ಮ ಮತಕ್ಕೆ ಮಾಡಿದ ಮಹೋಪಕೃತಿಯ ಕೃತಜ್ಞತೆಯಿಂದಲೂ ಸಹ ಅವರ ಭಾವಚಿತ್ರವನ್ನು ಈ ಪತ್ರಿಕೆಯ ಸಂಗಡ ನಮ್ಮ ವಾಚಕ ವರ್ಗಕ್ಕೆಲ್ಲಾ ಹಂಚಿರುವೆವಲ್ಲದೆ, ಗತಿಸಿದ ಶ್ರೀಮಂತರ ಕುಟುಂಬದವರಿಗೆ ಉಂಟಾಗಿರುವ ಅಗಾಧವಾದ ಮಹಾದುಃಖದಲ್ಲಿ ನಮ್ಮ ಸಹಾನುತಾಪವನ್ನು ಈ ಮೂಲಕ ಪ್ರದರ್ಶಿಸಿ,

> ಶ್ಲೋ॥ ಪೌರಾಣೀಂ ಶಿವಸಂಕಥಾಂಶ್ರುತಿಮತಾಂ ಸರ್ವಾಗಮಾರ್ಥಾನ್ವಿತಾಂ ತಾಂಯೋರಕ್ಷತಿತೇನರಕ್ಷಿತಮಿದಂ ತ್ರೈಲೋಕ್ಯಮಾಶೋಹಿಸಃ । ಶರ್ವಸ್ಯಾಪ್ರಿಯಕೃತ್ಸದಾಭವತಿ ಸಶ್ಶ್ರೀಮಾ ಸದಾನಂದಚಿತ್ಸಂಜ್ಞೋಭಾಸತಏವ ಸರ್ವಸುಖದಶ್ಶ್ರೀನಂದಿಮುಖ್ಯಪ್ರಿಯಃ ॥

ಎಂಬ ಶಂಕರಸಂಹಿತಾವಚನಾನುಸಾರವಾಗಿ ಈ ಮಹಾಪುರುಷರಿಗೆ ಶ್ರೀಸಾಂಬಮೂರ್ತಿಯು ಪುನರಾವೃತ್ತಿರಹಿತ ಶಾಶ್ವತಶಿವಸಾಯುಜ್ಯವನ್ನನುಗ್ರಹಿಸಲೆಂದು ಪ್ರಾರ್ಥಿಸುವೆವು.

ಕೊಯಮತ್ತೂರಿನಲ್ಲಾದ ಮೊಹರಂ ಗದ್ದಲ.

ಮೊಹರಂ ಹಬ್ಬದ ಕಡೆಯ ದಿನವಾದ ಕಳೆದ ತಾ॥ ೧೧ ರಲ್ಲಿ ಕೊಯಮತ್ತೂರಿನಲ್ಲಿ ವೇಷಗಳು ಬೀದಿಯಲ್ಲಿ ಹೋಗುತ್ತಿರುವಾಗ್ಗೆ ಪೋಲೀಸರು ೩ ಜನ ಹುಲಿ ವೇಷವನ್ನು ಹಾಕಿಕೊಂಡಿರುವವರನ್ನು ಲೈಸೆನ್ಸನ್ನು ತೋರಿಸಬೇಕೆಂದು ಕೇಳಿ ಅವರಲ್ಲಿ ಲೈಸನ್ಸು ಇಲ್ಲದಿದ್ದುದರಮೇಲೆ ಅವರ ಬಾಲಗಳನ್ನು ಕಿತ್ತು ಮಡಗಿಕೊಂಡರು. ಮತ್ತೂ ಆ ಹುಲಿಗಳ ಕೂಡ ಇದ್ದ ಮುಖಂಡ ಮನುಷ್ಯನು ಹೊಣೆಯನ್ನು ಕೊಡುತ್ತೇನೆ; ವೇಷಗಳು ಮುಂದೆ ಹೋಗಲಪ್ಪಣೆಯನ್ನು ಕೊಡಬೇಕೆಂದು ಕೇಳಿಕೊಂಡರೂ ಪೋಲೀಸರೊಪ್ಪಲಿಲ್ಲವು. ಹೀಗೆ ಪೋಲೀಸರೊಪ್ಪದೆಹೋಗಲು ಮಹಮ್ಮದೀಯರು ಹೊತ್ತುಕೊಂಡಿದ್ದ ತಾಬೂತು (ಬಾಬಯ್ಯನ ಮಂಟಪ) ಗಳನ್ನು ಪೋಲೀಸು ಠಾಣದ ಮುಂಗಡೆ ಮಾರ್ಗ ಮಧ್ಯದಲ್ಲಿರಿಸಿ ಹುಲಿಯ ಬಾಲಗಳನ್ನು ಕೊಟ್ಟಹೊರ್ತು ಮುಂದಕ್ಕೆ ಹೆಜ್ಜೆಯನ್ನಿಡುವುದಿಲ್ಲವೆಂದು ಹಟಮಾಡಿ ನಿಂತರು. ಇಷ್ಟರಲ್ಲಿ ಕೆಲ ಮಹಮ್ಮದೀಯರು ಡಿ॥ ಮ್ಯಾಜಿಸ್ಟ್ರೇಟರಿಗೆ ದೂರನ್ನ ಹೇಳಲು ಅವರ ಬಂಗಲೆಗೆ ಹೋದರು. ಆದರೆ ಮ್ಯಾಜಿಸ್ಟ್ರೇಟರು ಪರಸ್ಥಳಕ್ಕೆ ಹೋಗಿದ್ದುದರಿಂದ ಹಿಂತಿರುಗಿ ಬಂದುಬಿಟ್ಟರು. ಈ ಮಧ್ಯೆ ಪೋಲೀಸು ಠಾಣದಬಳಿ ಜನರ ಗುಂಪು ವಿಶೇಷವಾಗಿ ಸೇರಿ, ಗದ್ದಲವು ಹೆಚ್ಚಿತು. ಪೋಲೀಸರು ಉತ್ಸವವನ್ನು ಮುಂದಕ್ಕೆ ಹೊರಡಿಸಲು ಎಷ್ಟು ಪ್ರಯತ್ನಿಸಿದಾಗ್ಯೂ ಹುಲಿಗಳ ಬಾಲಗಳನ್ನು ಕೊಟ್ಟವಿನಾ ಹೋಗುವುದಿಲ್ಲವೆಂದು ಜನರು ಮುಷ್ಕರಹಿಡಿದು ನಿಂತರು. ಇದರ ಮೇಲೆ ಉಭಯರಿಗೂ ನೂಕಾಟವಾಗಿ ಜನರು ರೇಗಿ ಠಾಣದೊಳಗೆ ನುಗ್ಗಿ ತಮ್ಮ ಕಣ್ಣೆದಿರಿಗೆ ಸಿಕ್ಕಿದ ಕಾಗದಪತ್ರಗಳು, ಕುರ್ಚಿ ಬೆಂಚು, ಮೇಜಾಗಳು, ಬೈಸಿಕಲ್ಲುಗಳು, ಗಡಿಯಾರ ಮೊದಲಾದವುಗಳ ಮೇಲೆ ಸೀಮೆಯಣ್ಣೆಯನ್ನು ಸುರಿದು

ಬೆಂಕಿಯನ್ನು ಹೊತ್ತಿಸಿ, ಎಲ್ಲವನ್ನೂ ಸುಟ್ಟುಬಿಟ್ಟರು. ಆ ಠಾಣದಲ್ಲಿ ಕೆಲ ಪೋಲೀಸಿನವರು ಮಾತ್ರ ಇದ್ದರು. ಅವರಲ್ಲಿ ಮರದ ತುಂಡು ದೊಣ್ಣೆಗಳ ವಿನಾ ಮತ್ತಾವ ಆಯುಧವೂ ಇರಲಿಲ್ಲವಾಗಿ ಅವರುಗಳು ಆತ್ಮರಕ್ಷಣೆಗಾಗಿ ಓಡಿದರು. ಒಳಗಿದ್ದ ಇನ್ಸ್ಪೆಕ್ಟರು ಕೂಡಲೆ ಮಾಡದ ಮೇಲಕ್ಕೆ ಹತ್ತಿಹೋಗಿ ತನ್ನ ಹತ್ತಿರಕ್ಕೆ ದಂಗೆಯ ಜನರು ಬಾರದಂತೆ ಗುಂಡನ್ನು ಅಂತರಿಕ್ಷಕ್ಕೆ ಹಾರಿಸಿದನು. ಜನರು ಹೆದರಿ ಕೆಳಗೆ ಬಂದು ಮಾಡದ ಹಂತಕ್ಕೂ, ಕೈಸಾಲೆಗೂ ಸೀಮೆಯೆಣ್ಣೆಯನ್ನು ಹಾಕಿ ಬೆಂಕಿಯನ್ನು ಹೊತ್ತಿಸಿಬಿಟ್ಟರು. ಇನ್ಸ್ಪೆಕ್ಟರು ಮಾಡದಿಂದಲೇ ಮಗ್ಗುಲಮನೆಗೆ ಹೋಗಿ ತಲೆಯನ್ನು ತಪ್ಪಿಸಿಕೊಂಡನು. ಇತ್ತಲಾಗಿ ದಂಗೆಯವರು ಇನ್ಸ್ಪೆಕ್ಟರು ಮನೆಗೆ ತಪ್ಪಿಸಿಕೊಂಡು ಹೋಗಿದ್ದಾನೆಂಬುದರ ಮೇಲೆ ಅರ್ಧಮೈಲಿ ದೂರದಲ್ಲಿದ್ದ ಅವನ ಮನೆಗೆ ನುಗ್ಗುವುದಕ್ಕೆ ಬಂದರು. ಅಷ್ಟರಲ್ಲಿ ಮನೆಯೊಳಗಿದ್ದ ಇನ್ಸ್ಪೆಕ್ಟರ ತಮ್ಮನು ಜನರು ಮನೆಗೆ ನುಗ್ಗುವುದನ್ನು ಕಂಡು, ಕೂಡಲೆ ಒಳಗಿನಿಂದ ಬಾಗಿಲನ್ನು ಬದ್ರಪಡಿಸಿಕೊಂಡನು. ಆದರೂ ದಂಗೆಯವರು ಬಾಗಿಲನ್ನೊಡೆದು ಒಳಗೆ ನುಗ್ಗಿ, ಇನ್ಸ್ಪೆಕ್ಟರ ಕೊಠಡಿಯಲ್ಲಿದ್ದ ಬಟ್ಟೆಬರೆ ಕಾಗದಪತ್ರ ಮೊದಲಾದ ಪದಾರ್ಥಗಳನ್ನು ಸೂರೆಮಾಡಿದರು. ಮತ್ತೆ ಕೆಲರು ಹಿತ್ತಲಕಡೆ ನುಗ್ಗಿ ಧಾನ್ಯದ ರಾಶಿಯನ್ನೂ, ದನದ ಕೊಟ್ಟಿಗೆ ಮತ್ತೂ ಹಿತ್ತಲು ಮನೆಗಳನ್ನೂ ಸುಟ್ಟುಬಿಟ್ಟರು. ಆದರೆ ದೇವಾಂಗದವರು ಅಷ್ಟರಲ್ಲಿ ಬಂದು, ದಂಗೆಯವರು ಹೆಚ್ಚು ಅನರ್ಥ ಮಾಡದಂತೆ ಅಡ್ಡಿಮಾಡಿದರು. ೫೦ ಜನ ರಿಜರ್ವ್ ಪೋಲೀಸಿನವರು, ಒಬ್ಬ ಇನ್ಸ್ಪೆಕ್ಟರು ಇಬ್ಬರು ಸಾರ್ಜಂಟರುಗಳೊಡನೆ ಬರಲು ದೊಂಬಿಯ ಜನರು ಓಡಿಹೋಗಲಾರಂಭಿಸಿದರು. ಮತ್ತೂ ೫ ತಾಬೂತುಗಳನ್ನು ಸುಟ್ಟುಹಾಕಿಬಿಟ್ಟರು. ರಿಜರ್ವ್ ಪೋಲೀಸಿನವರಲ್ಲಿ ಕೆಲರು ನೆರೆಯ ಮನೆಗಳಿಗೆ ನುಗ್ಗಿ ಒಳಗಿದ್ದ ಜನರನ್ನು ಕ್ರೂರವಾಗಿ ಶಿಕ್ಷಿಸಿದ ಹಾಗೆ ವರ್ತಮಾನವಿದೆ. ಈ ಗೊಂದಲವು ನಡೆದ ಕಾಲದಲ್ಲಿ ಡೆಪ್ಯುಟಿ ಮ್ಯಾಜಿಸ್ಟ್ರೇಟರೂ, ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟರೂ, ಡಿ॥ ಪೋಲೀಸು ಸೂಪರಿಂಟೆಂಡೆಂಟರೂ ಊರಲ್ಲಿರಲಿಲ್ಲ. ಆದರೆ ಈ ಸುದ್ದಿಯನ್ನು ಕೇಳಿ, ಆ ರಾತ್ರಿ ಮತ್ತೂ ಮಾರನೆ ಬೆಳಿಗ್ಗೆ ಎಲ್ಲರೂ ಬಂದು ಸೇರಿದರು. ೨೧ ಜನರು ಸೆರೆಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾರೆ

ಒಳದೇಶದ ವೃತ್ತಾಂತ.

ಬೆಂಗಳೂರ ಶಂಕರಪುರದಲ್ಲಿ ಶೃಂಗೇರಿ ಮಠದ ಇದಿರಿಗೆ ೨ ಪ್ಲೇಗು ಮರಣಗಳಾದುದರಿಂದ ಆರೋಗ್ಯಶಾಖೆಯವರು ಮಠದ ನೆರೆಯ ಜನರಿಗೂ, ಮಠದಲ್ಲಿರುವ ಸ್ವಾಮಿಗಳ ಪರಿವಾರದವರಲ್ಲಿ ಕೆಲರಿಗೂ ಇನಾಕ್ಯುಲೇಷನ್ ಮಾಡಿಸಯುತ್ತಿಸಿದ್ದಾರೆ.

ಶ್ರೀಮನ್ ಮಹಾರಾಜ ಸಹೋದರರು ಚಿತ್ರದುರ್ಗ ಮತ್ತೂ ತುಮಕೂರು ಡಿ॥ ಗಳಲ್ಲಿ ಕೆಲಕಡೆ ಪ್ಲೇಗು ಇರುವುದರಿಂದ ಅಲ್ಲಿಗೆ ಹೋಗುವುದನ್ನು ನಿಲ್ಲಿಸಿ ಕಳೆದ ತಾ॥ ೧೯ ರ ಸಾಯಂಕಾಲ ಪರಿವಾರ ಸಮೇತ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು.

ಶ್ರೀಮನ್ ಮಹಾರಾಜರು, ಮಾತೃಶ್ರೀಯವರು ಮತ್ತೂ ಮಹಾರಾಣಿಯವರೊಡನೆ ಕಳೆದ ತಾ॥ ೨೧ ನೇ ಶನಿವಾರ ಬೆಳಿಗ್ಗೆ ೧೧ ಗಂಟೆ ಸಮಯದಲ್ಲಿ ಬೆಂಗಳೂರಿಂದ ಮೋಟಾರು ಬಂಡಿಯಲ್ಲಿ ರಾಜಧಾನಿಗೆ ದಯಮಾಡಿಸಿದರು. ಇವರುಗಳ ಸ್ವಾರಿಯು ಪುನಃ ಬೆಂಗಳೂರಿಗೆ ಈಹೊತ್ತು ನಾಳೆಯಲ್ಲಿ ಹಿಂತಿರುಗುವುದಾಗಿ ತಿಳಿದಿದೆ.

ಕಳೆದ ತಾ॥ ೨೧ ರಲ್ಲಿ ರಾಜಧಾನಿಯ ಪ್ರಾಣಿಪ್ರದರ್ಶನ ಶಾಲೆಯಲ್ಲಿರುವ ಕಾಡುಕೋಣಕ್ಕೆ ನೆಳಲಿಗಾಗಿ ಚಪ್ಪರವನ್ನು ಹಾಕುತ್ತಿರುವಾಗ್ಗೆ ಕೋಣವು ಒಬ್ಬ ಕೆಲಸಗಾರನನ್ನಟ್ಟಿಕೊಂಡು ಬಂದು ಕೊಂಬುಗಳಿಂದ ಅವನ ಹೊಟ್ಟೆಯನ್ನು ತಿವಿದು ಅವನ ಎಡದಪಕ್ಕೆಲಬೊಂದನ್ನು ಮುರಿದುಹಾಕಿತು. ಈಗ ಅವನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತಲಿದ್ದಾನೆ. ಪ್ರಾಣಾಪಾಯದ ಚಿಹ್ನೆಯೇನೂ ತೋರುವುದಿಲ್ಲ.

ದಿವಾನರು ಶಿವಮೊಗ್ಗ ಡಿ॥ ನಲ್ಲಿ ಸಂಚರಿಸಿ ಬರಲು ಕಳೆದ ತಾ॥ ೧೬ ರಲ್ಲಿ ಬೆಂಗಳೂರಿಂದ ಪ್ರಯಾಣ ಮಾಡಿದರು. ತಾ॥ ೨೦ ರಲ್ಲಿ ತೀರ್ಥಹಳ್ಳಿಗೆ ಬಂದು ತಾ॥ ೨೨ ರಲ್ಲಿ ಅಲ್ಲಿಂದ ಶಿವಮೊಗ್ಗೆಗೆ ಬಂದು ಅಲ್ಲಿ ೨೪ ರವರೆಗಿರುವರು. ಶ್ರೀ ಶೃಂಗೇರಿ ಸ್ವಾಮಿಗಳು ಬೆಂಗಳೂರಿಗೆ ಬರುವುದಕ್ಕೆ ಪೂರ್ವ ತಮ್ಮ ಸಂಚಾರವನ್ನು ಗೊತ್ತುಪಡಿಸಿದ್ದುದರಿಂದ ಹೊರಡಬೇಕಾಗಿಲ್ಲವಾಗಿ ಶ್ರೀಗಳವರ ಪಾದಪೂಜೆಯನ್ನು ಮಾಡಿ ೧೫೦೦ ರೂ. ಗಳ ಭಿಕ್ಷೆಯನ್ನು ಕೊಡಲು ಗೊತ್ತುಮಾಡಿ ದಯಮಾಡಿಸಿರುವುದಾಗಿ ತಿಳಿದಿದೆ.

ಕಳೆದ ಸೋಮವಾರ ಪ್ರಾತಃಕಾಲ ಶ್ರೀ ಶೃಂಗಗಿರಿ ಸ್ವಾಮಿಗಳ ಸ್ವಾರಿಯು ಸಕಲ ರಾಜಮರ್‍ಯಾದೆಯೊಡನೆ ಬೆಂಗಳೂರಿಗೆ ಚಿತ್ತೈಸಿತು. ಸಂಸ್ಥಾನದ ಎಲ್ಲ ಅಧಿಕಾರಿಗಳೂ, ವೈದಿಕ ಲೌಕಿಕಮಂಡಲಿಯೂ, ವರ್ತಕರೂ ಸ್ವಾಮಿಗಳನ್ನು ಇದಿರ್ಗೊಂಡು ಮರ್‍ಯಾದಿಸಿ, ಉತ್ಸವದಿಂದ ಕರೆದುಕೊಂಡು ಬಂದು ಶಂಕರಪುರದಲ್ಲಿ ನೂತನವಾಗಿ ಕಟ್ಟಿರುವ ಅವರ ಸ್ವಂತಮಠದಲ್ಲಿಳಿಸಿದರು. ಮಹಮ್ಮದೀಯರು ಒಂದು ವಿಜ್ಞಾಪನ ಪತ್ರಿಕೆಯನ್ನೊಪ್ಪಿಸಿ, ತಮ್ಮ ವಿಶ್ವಾಸವನ್ನು ಪ್ರದರ್ಶಿಸಿದರು. ಶ್ರೀಮನ್ ಮಹಾರಾಜರು ರಾಣಿವಾಸದವರೊಡನೆ ಕಳೆದ ಶುಕ್ರವಾರ ಶ್ರೀಗಳ ಮಠಕ್ಕೆ ದಯಮಾಡಿ ಪಾದಪೂಜೆಯನ್ನು ನೆರವೇರಿಸಿಕೊಂಡು ಬಂದರು.

ಕಳೆದ ತಾ॥ ೨೦ ರ ಸಾಯಂಕಾಲ ಬೆಂಗಳೂರ ನಿವಾಸಿಗಳಾದ ವೀರಶೈವರು ಚೀಫ್‌ಕೋರ್ಟು ಡಿ॥ ರೆಜಿಸ್ಟ್ರಾರ್ ಮ॥ ಬಿ. ಬಸವಾರಾಧ್ಯ, ಬಿ. ಎ., ಬಿ. ಎಲ್., ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು, ನಮ್ಮ ಮತೋದ್ಧರಣ ಕಾರ್ಯದಲ್ಲಿ ಕಂಕಣಬದ್ಧರಾಗಿದ್ದು ಮಹದುಪಕಾರಗಳನ್ನು ಮಾಡಿ, ವಿಖ್ಯಾತರಾಗಿ ಮತಕ್ಕೆ ತಿಲಕಪ್ರಾಯರಾಗಿದ್ದ ರಾವ್ ಬಹದ್ದೂರ್ ಶ್ರೀಮಂತ ಮಲ್ಲಪ್ಪ ಬಸಪ್ಪ ವಾರದ ಇವರು ಅಕಾಲಮರಣವನ್ನು ಹೊಂದಿದುದರಿಂದ ತಮಗೂ, ತಮ್ಮ ಮತಕ್ಕೂ ಉಂಟಾದ ಅಪಾರವಾದ ದುಃಖವನ್ನು ಮತ್ತೂ ಸಾನುಭೂತಿಯನ್ನು ಅವರ ಕುಟುಂಬಕ್ಕೆ ತಂತಿಯ ಮೂಲಕ ತಿಳುಹುವ ನಿರ್ಧಾರವನ್ನುಮಾಡಿದುದಲ್ಲದೆ ತಾ॥ ೨೨ ನೇ ಭಾನುವಾರದ ದಿವಸಸಮಸ್ತ ವೀರಶೈವರೂ ತಮ್ಮ ಅಂಗಡಿಗಳನ್ನು ಮುಚ್ಚಿ ವ್ಯಾಪಾರವನ್ನು ನಿಲ್ಲಿಸಿಬಿಟ್ಟಿದ್ದು ದುಃಖಪ್ರದರ್ಶನಮಾಡಿದರು.

ಕಳೆದ ತಾ॥ ೧೪ ರ ರಾತ್ರಿ ರಾಜಧಾನಿಯ ನಜರ್‌ಬಾದಿನಲ್ಲಿ ಒಬ್ಬ ಮರಾಟಿಯವರ ೩ ವರ್ಷದ ಮಗುವು ಸಂಕ್ರಾಂತಿ ಹಬ್ಬಕ್ಕಾಗಿ ತಟ್ಟೆಯಲ್ಲಿಟ್ಟಿದ್ದ ಬಾಳೆ ಹಣ್ಣನ್ನು ತೆಗೆದುಕೊಳ್ಳಲು ಹೋದಾಗ್ಗೆ ಅದು ತೊಟ್ಟಿದ್ದ ಬಟ್ಟೆಯು ಹತ್ತಿರವಿದ್ದ ದೀಪಕ್ಕೆ ಸೋಂಕಿ ಹೊತ್ತಿಕೊಂಡಿತು. ಮಗುವು ಹೆದರಿ ಅರಚಿಕೊಳ್ಳಲು ನೆರೆಯವರು ಓಡಿಬಂದು ಹೊತ್ತಿಕೊಂಡುರಿಯುತಲಿದ್ದ ಬಟ್ಟೆಯನ್ನು ಬಿಚ್ಚುವಷ್ಟರಲ್ಲಿ ಮಗುವಿನ ಮೈಯು ತುಂಬಾ ಸುಟ್ಟುಹೋಗಿದ್ದಿತು. ಆಗ ನೆರೆಮನೆಗೆ ಕಾರ್‍ಯಾರ್ಥವಾಗಿ ಹೋಗಿದ್ದ ಅದರ ತಾಯಿಯು ಬಂದು ವ್ಯಸನಪಟ್ಟು ಜೇನುತುಪ್ಪದ ಲೇಪಮೊದಲಾದ ಕೈಕರಣವನ್ನು ಮಾಡಿದಾಗ್ಯೂ ಗುಣವಾಗದೆ ಮಾರನೆಯ ಸಾಯಂಕಾಲ ಸತ್ತಿತು. ಆ ಸಮಯದಲ್ಲಿ ಗಂಡುಸರಾರೂ ಊರಲ್ಲಿರಲಿಲ್ಲವಾದುದರಿಂದ ಆ ಹೆಂಗುಸು ಹೆದರಿ ಆಸ್ಪತ್ರೆಗೂ ಚಿಕಿತ್ಸೆಗಾಗಿ ತೆಗೆದುಕೊಂಡು ಹೋಗಲಿಲ್ಲವಂತೆ. ತಾಯಿತಂದೆಗಳು ಮಕ್ಕಳಿಗೆ ಬೆಂಕಿಯು ಸಿಲ್ಕದಂತೆ ಎಚ್ಚರವಾಗಿ ನೋಡಿಕೊಳ್ಳುವುದು ಕ್ಷೇಮವು.

ಕಳೆದ ಶನಿವಾರ ರಾತ್ರಿ ಶ್ರೀಚಾಮರಾಜೇಂದ್ರ ಕರ್ನಾಟಕ ನಾಟಕಸಭೆಯವರು ಷೇಕ್ಸ್‌ಪಿಯರ್ ಮಹಾಕವಿಯಿಂದ ರಚಿಸಲ್ಪಟ್ಟ ಮರ್ಚಂಟ್ ಅಫ್ ವೆನಿಸ್ (ಪ್ರಜ್ಞಾವತೀ ವಿಜಯ) ನಾಟಕವನ್ನು ಟವರ್‌ಹಾಲಿನಲ್ಲಿ ಅಭಿನಯಿಸಿದರು. ಈ ಪ್ರಯೋಗವು ಶ್ಲಾಘ್ಯವಾಗಿದ್ದಿತು. ಸಮಯೋಚಿತವಾದ ಸೀನರಿಗಳೂ ಅಮೋಘವಾದ ಉಡುಪುಗಳೂ ಮನೋಹರವಾಗಿದ್ದುವು. ಈ ನಾಟಕದಲ್ಲಿ ಪ್ರತಿಯೊಂದು ಪಾತ್ರದವರೂ, ಸಮರ್ಪಕವಾಗಭಿನಯಿಸಿ ಪ್ರೇಕ್ಷಕರ ಶ್ರೋತ್ರನೇತ್ರೇಂದ್ರಿಯಗಳಿಗೆ ಆನಂದವನ್ನುಂಟುಮಾಡಿದರು. ಧನಪಾಲಸೆಟ್ಟಿಯ ಪಾತ್ರವನ್ನು ವಹಿಸಿದ್ದ ಮ॥ ಶಿವರಾಯರ ಮತ್ತೂ ಪ್ರಜ್ಞಾವತೀ ಪಾತ್ರವನ್ನು ವಹಿಸಿದ್ದ ಮ॥ ಶಾಮಣ್ಣನವರ ಅಭಿನಯವೂ, ವಾಕ್ಸರಣಿಯೂ ಬಹುಶ್ಲಾಘ್ಯವಾಗಿದ್ದುವಲ್ಲದೆ, ಧನಪಾಲಸೆಟ್ಟಿಯ ಸೇವಕನ ಪಾತ್ರವನ್ನು ವಹಿಸಿದ್ದ ಮ॥ ಪುಟ್ಟಾರಿಯವರೂ ತಮ್ಮ ಹಾಸ್ಯರಸದಿಂದ ಪ್ರೇಕ್ಷಕರನ್ನಾನಂದಗೊಳಿಸಿದರು. ಸರದಾರ್ ಗೋಪಾಲರಾಜ ಅರಸಿನವರು ಈ ನಾಟಕ ಸಭೆಯ ಮೇಲ್ವಿಚಾರಣೆಯನ್ನು ವಹಿಸಿಕೊಂಡಾರಭ್ಯ, ಪ್ರತಿಯೊಂದು ನಾಟಕಾಭಿನಯಕಾಲದಲ್ಲಿಯೂ ನವೀನ ಸುಧಾರಣೆಗಳು ಕಂಡುಬರುತ್ತಿರುವುವು. ಈ ವೇಳೆ ಹಾಡುವವರ ಕೂಡ ಹಾರ್ಮೋನಿಯಂ ವಾದ್ಯವನ್ನು ನಿಯೋಜಿಸಿದ್ದುದರಿಂದ ನಾಟಕವು ಬಹು ರಂಜನೀಯವಾಗಿದ್ದುದಲ್ಲದೆ ಪ್ರೇಕ್ಷಕರ ಮನಸ್ಸನ್ನಾಕರ್ಷಿಸತಕ್ಕದಾಗಿತ್ತು. ದೊಡ್ಡ ನ್ಯಾಯಸ್ಥಾನದಲ್ಲಿ ವಾದಿಸಲು ಬರುವ ವಕೀಲರುಗಳು ತಮ್ಮ ಬಿರುದಾದ ಗೌನು (ನಿಲುವಂಗಿ) ಗಳನ್ನು ಧರಿಸದೆ ಬರುವುದು ಯುಕ್ತವಲ್ಲವಾಗಿಂದವನ್ನು ಈ ಸಭೆಯವರು ಗಮನಿಸತಕ್ಕದಾಗಿದೆ.

೧ ನೇ ಕೌನ್ಸಿಲರು ಮ॥ ಕೆ. ಪಿ. ಪುಟ್ಟಣ್ಣಸೆಟ್ಟರು ಹಾಸನ, ಕಡೂರು, ಶಿವಮೊಗ್ಗ ಮತ್ತೂ ಚಿತ್ರಕಲ್‌ದುರ್ಗ ಡಿಸ್ಟ್ರಿಕ್ಟುಗಳಲ್ಲಿ ಸಂಚರಿಸಿಕೊಂಡು ಬರಲು ಕಳೆದ ತಾ॥ ೧೯ ರಲ್ಲಿ ಬೆಂಗಳೂರಿಂದ ಅರಸೀಕೆರೆಗೆ ಹೊಗೆಬಂಡಿಯಲ್ಲಿ ಪ್ರಯಾಣ ಮಾಡಿದರು. ಇವರು ತಾ॥ ೨೦ ರಲ್ಲಿ ಅರಸೀಕೆರೆಯನ್ನು ಬಿಟ್ಟು ಮೋಟಾರು ಬಂಡಿಯಲ್ಲಿ ಚೆನ್ನರಾಯಪಟ್ಟಣವನ್ನು ತಲಪಿ ತಾ॥ ೨೧ ರಲ್ಲಿ ಅಲ್ಲಿಂದ ಹೊಳೇನರಸೀಪುರ ಮತ್ತೂ ಹಾಸನಕ್ಕೆ ಹೋಗಿ ಅಲ್ಲಿ ೨ ದಿನಗಳು ನಿಲ್ಲುವರು. ಅಲ್ಲಿಂದ ತಾ॥ ೨೪ ರಲ್ಲಿ ಮೋಟಾರು ಬಂಡಿಯಲ್ಲಿ ಪ್ರಯಾಣ ಮಾಡಿ ಬೇಲೂರನ್ನೋಡಿಕೊಂಡು ಚಿಕ್ಕಮಗಳೂರಿಗೆ ಬಂದು ಅಲ್ಲಿ ತಾ॥ ೨೬ ರವರೆಗೆ ನಿಲ್ಲುವರು. ಅಲ್ಲಿಂದ ತಾ॥ ೨೭ ರಲ್ಲಿ ಹೊರಟು ಎಡೆಹಳ್ಳಿಗೆ ಬಂದು ತಾ॥ ೨೮ ರಲ್ಲಿ ಶಿವಮೊಗ್ಗೆಗೆ ಪ್ರಯಾಣ ಮಾಡಿ, ತಾ॥ ೩೦ ರವರೆಗಲ್ಲಿ ನಿಂತು ತಾ॥ ೩೧ ರಲ್ಲಿ ಅಲ್ಲಿಂದ ಹೊರಟು ಸಾಗರವನ್ನು ಸೇರಿ ಅಲ್ಲಿ ೧ ದಿನವಿದ್ದು ಫೆಬ್ರುವರಿ ತಾ॥ ೨ ರಲ್ಲಿ ಸಾಗರವನ್ನು ಬಿಟ್ಟು ಸೊರಬ ಮತ್ತೂ ಶಿರಾಳಕೊಪ್ಪಗಳಿಗೆ ಬಂದು ಅಲ್ಲಿಂದ ತಾ॥ ೩ ರಲ್ಲಿ ಶಿಕಾರಿಪುರಕ್ಕೆ ಬಂದು, ಅಲ್ಲಿಂದ ಮೋಟಾರು ಬಂಡಿಯಲ್ಲಿ ಹೊನ್ನಾಳಿಯನ್ನು ಸೇರಿ ತಾ॥ ೪ ರಲ್ಲಿ ಹರಿಹರಕ್ಕೆ ಹೊರಟು ಅಲ್ಲಿಂದ ದಾವಣಗೆರೆಗೆ ಬಂದು ತಾ॥ ೫ ರವರೆಗೆ ಅಲ್ಲಿದ್ದು ತಾ॥ ೬ ರಲ್ಲಿ ದಾವಣಗೆರೆಯನ್ನು ಬಿಟ್ಟು ಚಿತ್ರದುರ್ಗಕ್ಕೆ ಬಂದು ತಾ॥ ೮ ರವರೆಗಲ್ಲಿರುವರು. ತಾ॥ ೯ ರಲ್ಲಿ ದುರ್ಗವನ್ನು ಬಿಟ್ಟು ಚಳ್ಳಕೆರೆಗೆ ಬಂದು ತಾ॥ ೧೦ ರಲ್ಲಿ ಅಲ್ಲಿಂದ ಮೊಳಕಾಲ್ಮುರುವಿಗೆ ಹೋಗಿ ನೋಡಿಕೊಂಡು ಅದೇ ದಿವಸ ಹಿಂತಿರುಗಿ ಬಂದು ತಾ॥ ೧೧ ರಲ್ಲಿ ಚಳ್ಳಕೆರೆಯನ್ನು ಬಿಟ್ಟು ಹಿರಿಯೂರಿಗೆ ಬಂದು ತಾ॥ ೧೨ ರಲ್ಲಿ ಮಾರಿಕಣಿವೆಗೆ ಮೋಟಾರಿನಲ್ಲಿ ಹೋಗಿ ನೋಡಿಕೊಂಡು ಹಿಂತಿರುಗಿ ಬಂದು ತಾ॥ ೧೩ ರಲ್ಲಿ ಹೊಸದುರ್ಗ ರೋಡಿಗೆ ಬಂದು ತಾ॥ ೧೪ ರಲ್ಲಿ ಅಲ್ಲಿಂದ ರೈಲುಬಂಡಿಯನ್ನು ಹತ್ತಿ ಬೆಂಗಳೂರನ್ನು ಸಾಯಂಕಾಲ ತಲಪುವರು.

ವರ್ತಮಾನ ಸಂಗ್ರಹ.

ಬಾಬು ಸುರೇಂದ್ರನಾಥ ಬಾನರ್ಜಿಯವರು ಮಣಿರಾಮಪುರದಲ್ಲಿ ಅಸ್ವಸ್ಥರಾಗಿರುವರೆಂದು ಸುದ್ದಿ ಬಂದಿದೆ.

ಶ್ರೀಮನ್ ಬರೋಡಾ ಮಹಾರಾಜರವರು ಪತ್ನೀ ಸಮೇತರಾಗಿ ಅಲಹಾಬಾದಿನ ವಸ್ತುಪ್ರದರ್ಶನಕ್ಕೆ ದಯಮಾಡಿಸಿದ್ದರು.

ಬೆಂಗಲಾವು ಪೇಟೆಯಲ್ಲಿ ಒಂದು ನಾಯಿಯು ೪ ಮರಿಗಳನ್ನು ಈದಿತು. ಅವುಗಳಲ್ಲಿ ಒಂದಕ್ಕೆ ಮೂರು ಕಣ್ಣುಗಳು ಎರಡುಮೂಗು ಎರಡು ಬಾಯಿಗಳುಳ್ಳುದಾಗಿದ್ದು ಅದು ಮೃತವಾಯಿತು.

ಮಲಬಾರ್ ಜಿಲ್ಲಾದಲ್ಲಿ ಒಬ್ಬ ಸಬ್‌ರಿಜಿಸ್ಟ್ರಾರು ತನ್ನ ಮನೆಯ ಮದುವೆಗಾಗಿ ಕೆಲ ದೊಡ್ಡ ಮನುಷ್ಯರಿಂದ ಸ್ವಲ್ಪ ಹಣವನ್ನು ಬರಮಾಡಿಕೊಂಡುದಕ್ಕಾಗಿ ಇನ್ಸ್ಪೆಕ್ಟರ್ ಜನರಲ್‌ರವರು ೧೦ ರೂ. ದಂಡವನ್ನು ಆ ಇನ್ಸ್ಪೆಕ್ಟರಿಗೆ ವಿಧಿಸಿದರು.

ಮದ್ರಾಸಿನ ಮಹಮ್ಮದೀಯರು ಕಳೆದ ತಾ॥ ೧೫ ರಲ್ಲಿ ಸಭೆಗೂಡಿ, ಹಬ್ಬಗಳ ದಿನದಲ್ಲಿ ಸರ್ಕಾರದ ಅಪ್ಪಣೆಯ ಅವಶ್ಯಕತೆಯಿಲ್ಲದೆ ಬಲಿ ಜಂತುಗಳನ್ನು ಕೊಲ್ಲುವುದಕ್ಕೆ ಅಪ್ಪಣೆ ಕೊಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ತೀರ್ಮಾನಿಸಿದರಂತೆ.

ಮದ್ರಾಸು ಗೌರ್ನರ ಕಾರ್‍ಯಾಲೋಚನ ಸಭೆಯಿಂದ ನಿವೃತ್ತಿಗೊಂಡ ಶ್ರೀ॥ ಬೊಬ್ಬಲಿ ಮಹಾರಾಜರವರ ಸ್ಥಾನಕ್ಕೆ ಹೈಕೋರ್ಟ್ ಜಡ್ಜರಾದ ಆ॥ ಕೃಷ್ಣಸ್ವಾಮಿ ಅಯ್ಯರು ನಿಯಮಿಸಿಕೊಳ್ಳಲ್ಪಟ್ಟಿರುವರು. ಅವರ ಸ್ಥಾನಕ್ಕೆ ಮ॥ ಪಿ. ಆರ್. ಸುಂದರಂ ಅಯ್ಯರು ಹೈಕೋರ್ಟು ಜಡ್ಜರಾಗಿ ನಿಯಮಿಸಲ್ಪಟ್ಟರು.

೧೯೧೧ ನೆಯ ವರ್ಷದ ಬಿ. ಎ. ಪರೀಕ್ಷೆಯಲ್ಲಿ ಇಂಗ್ಲೀಷಿನಲ್ಲಿ ಉತ್ತಮತರವಾಗಿ ಉತ್ತೀರ್ಣನಾದ ಮಹಮ್ಮದೀಯ ವಿದ್ಯಾರ್ಥಿಯೊಬ್ಬನಿಗೆ ಬಹುಮಾನ ಮಾಡುವುದಕ್ಕಾಗಿ ಅನಂತಪುರದ ಇಮಾಮುದ್ದೀನ್ ಸಾಹೇಬ್ ಬಹದ್ದೂರ್‌ರವರು ವಿದ್ಯಾಪೀಠದ ಚಾನ್ಸಿಲರ ವಶಕ್ಕೆ ಒಂದು ಚಿನ್ನದ ಪದಕವನ್ನು ಕೊಟ್ಟಿರುತ್ತಾರೆ.

ಹಿಂದೆ ಒಂದಾನೊಂದು ಕಾಲದಲ್ಲಿ ಅಮೃತಬಜಾರು ಪತ್ರಿಕೆಯ ಸಂಪಾದಕರಾಗಿದ್ದು, ಈಚೆಗೆ ಮತವಿಷಯದಲ್ಲಿ ಪ್ರವೇಶಿಸಿ, ಅನೇಕ ವೈಷ್ಣವ ಮತಗ್ರಂಥಗಳನ್ನು ಆಂಗ್ಲಭಾಷೆಗೆ ಪರಿವರ್ತಿಸಿ, ವಂಗಭಾಷೆಯಲ್ಲಿ ಒಂದು ಮತವಿಷಯಕ ಮಾಸಪುಸ್ತಕವನ್ನು ಹೊರಡಿಸುತ್ತಿದ್ದ ಬಾಬು ಶಿಶಿರಕುಮಾರಘೋಸ್‌ರವರು ಕಳೆದ ತಾ॥ ೧೦ ರಲ್ಲಿ ತಮ್ಮ ೭೧ ನೆಯ ವಯಸ್ಸಿನಲ್ಲಿ ಸ್ವರ್ಗಸ್ಥರಾದರು.

ಸ್ಪೇಯಿನ್‌ದೇಶದಲ್ಲೆಲ್ಲಾ ಮಂಜು ವಿಪರೀತವಾಗಿ ಸುರಿಯುತ್ತಿರುವುದರಿಂದ ಹೊಗೆ ಬಂಡಿಗಳ ತಿರುಗಾಟವೇ ನಿಂತುಹೋಗಿದೆ. ಹ್ಯಾಲಪ್ವಾದ ತಾಮ್ರದ ಗಣಿಯ ಹತ್ತಿರ ೨ ಲಕ್ಷ ಘನಅಡಿಯ ನೀರು ನಿಂತುಕೊಂಡಿರುವುದರಿಂದ ಸಮೀಪದಲ್ಲಿರುವ ಪಟ್ಟಣವು ಹಾಳಾಯಿತು; ತೀರದಲ್ಲಿ ೮ ದೋಣಿಗಳು ಮುಳುಗಿರುವುವು. ಫ್ರಾನ್ಸ್ ದೇಶದಲ್ಲೂ ಸಹ ಮಂಜಿನ ಮಳೆಯಿಂದ ಕೆಲವುಕಡೆ ಸಂಚಾರಕ್ಕೆ ಆತಂಕವಾಗಿದೆ.

ಪೋರ್ಚುಗೀಸ್‌ರ ತಮ್ಮ ರಾಜ್ಯದಲ್ಲಿ ಪ್ರಾಪ್ತವಯಸ್ಕರಾದ ಯುವಕರೆಲ್ಲರೂ ಸೇನೆಗೆ ಸೇರಬೇಕೆಂಬ ಸರ್ಕಾರದ ನಿರ್ಬಂಧದಂತೆ ನಿಜಾಂ ಎಂಬ ಪಟ್ಟಣದ ಯುವಕರು ನಡಿಯದೆ ಹೋದುದರ ಮೇಲೆ ಕಲಹವುಂಟಾಗಿ ಸೈನಿಕರು ಗುಂಡಿನಿಂದ ಸುಡಲು ಆಜ್ಞಾಪಿಸಲ್ಪಟ್ಟರು. ಸೈನಿಕರ ಪಟನ್ನು ತಾಳಲಾರದೆ ಕೆಲ ಯುವಕರು ಬೆಟ್ಟಗಳಿಗೆ ಹೋಗಿ ಸೇರಿಕೊಂಡರು. ಆದರೆ ಅನೇಕರು ಗುಂಡೇಟನ್ನು ತಿಂದು ಸತ್ತರು.

ಮಿ॥ ಸಿಹ್ಮರವರು ವೈಸ್‌ರಾಯರ ಸಭೆಯಲ್ಲಿ ಸಭಾಸ್ತಾರರಾಗಿದ್ದು ಆ ಕಾರ್‍ಯದಿಂದ ಬಿಡುಗಡೆ ಮಾಡಿಕೊಂಡರಷ್ಟೆ. ಆಗ್ಗೆ ಅವರಿಗೆ ತಿಂಗಳೊಂದಕ್ಕೆ ೬೬೬೬ ರೂ. ಗಳ ವೇತನವು ದೊರೆಯುತ್ತಿದ್ದಿತು. ಈಗ ಇವರು ತಮ್ಮ ವಕೀಲತನದಲ್ಲಿರುತ್ತ ಬೊಂಬಾಯಿಯ ಒಂದು ೩೦ ಲಕ್ಷ ರೂ. ನ

ವ್ಯವಹಾರದಲ್ಲಿ ಪ್ರತಿವಾದಿಯ ಪಕ್ಷವಾಗಿ ವಾದಿಸುವುದಕ್ಕೆ ನಿಂತಿದ್ದಾರೆ. ದಿನ ೧ ಕ್ಕೆ ೨ ಸಾವಿರ ರೂ. ಗಳ "ಫೀ" ಯು ಕೊಡಲ್ಪಡುತ್ತಿದೆ.

ವಿಲಾಯತಿಯ ಯುವರಾಜರು ಡಾರ್ಟ್‌ಮೌತಿನಲ್ಲಿ ತಮ್ಮ ನೌಕಾ ವಿಷಯಕವಾದ ಶಿಕ್ಷಣವನ್ನು ಪೂರೈಸಿಕೊಂಡು, ಏಪ್ರಿಲ್ ತಿಂಗಳಿಂದಾಚೆಗೆ ೨ ವರ್ಷಗಳ ಕಾಲ ಆಕ್ಸ್‌ಫರ್ಡ್ ವಿದ್ಯಾಪೀಠದಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಪ್ರಿನ್ಸ್ ಆಲ್ಬರ್ಟರ ಸಮೇತ ಸಪರಿವಾರರಾಗಿ ೧ ವರ್ಷ ಕಾಲ ತಮ್ಮ ರಾಜ್ಯವನ್ನೆಲ್ಲಾ ಅವಲೋಕಿಸಿಕೊಂಡು ಬರಲು ಸಂಚರಿಸಿ, ಬಳಿಕ ಒಂದು ಸೇನಾಶಾಖೆಯಲ್ಲಿ ಸೇರಿರುವರೆಂದು ಪ್ರಕಟವಾಗಿದೆ.

ದಿಲ್ಲಿಯಲ್ಲಿ ಮುಂದೆ ನಡೆಯುವುದಕ್ಕಿರುವ ಕಿರೀಟಧಾರಣ ಮಹೋತ್ಸವವನ್ನು ನೋಡುವುದಕ್ಕೆ ಬರುವ ಪ್ರಜೆಗಳ ಸೌಕರ್ಯಾರ್ಥವಾಗಿಯೂ, ಸಾಮಾನು ಮೊದಲಾದುವುಗಳು ಹೋಗಿ ಬರುವುದರ ಸೌಕರ್ಯಾರ್ಥವಾಗಿಯೂ ಸಹ ದಿಲ್ಲಿ ಪಟ್ಟಣಕ್ಕೆ ಸುತ್ತುಮುತ್ತಿನಿಂದ ಅನೇಕ ಶಾಖಾ ಲೋಹಮಾರ್ಗಗಳನ್ನು ಏರ್ಪಡಿಸುವುದಕ್ಕೂ ಅಂಬಾಲಾ ಸ್ಟೇಷನ್ ಮುಂಗಿಲಿಯಲ್ಲಿ ಲಕ್ಷ ರೂ. ಗಳ ವೆಚ್ಚದಿಂದ ಹೊಸ ಕಟ್ಟಡಗಳನ್ನು ಕಟ್ಟಿಸುವುದಕ್ಕೂ ಈಗಿನಿಂದಲೇ ಏರ್ಪಾಟಾಗಿದೆ.

ಮೈಸೂರು ದೇಶದ ರೇಷ್ಮೆಯು ಚೀನಾದ ರೇಷ್ಮೆಗಿಂತ ಉತ್ತಮವಾದುದೆಂತಲೂ, ಪ್ಯಾರಿಸ್ ಮೊದಲಾದ ಸ್ಥಲದವರು ಇದನ್ನು ಅತ್ಯಂತವಾಗಿ ಶ್ಲಾಘಿಸುತ್ತಿರುವರೆಂದೂ ತಿಳಿಯಬರುತ್ತದೆ. ಈ ಕಾರಣದಿಂದ ಮೈಸೂರು ದೇಶದಲ್ಲಿ ಇದರ ವ್ಯಾಪಾರವು ಲಾಭಕರವಾಗಿ ನಡೆಯುತ್ತದೆ. ಆದುದರಿಂದ ಶೀಘ್ರವಾಗಿ "ಇಂಡಿಯನ್ ಸಿಲ್ಕ್‌ಲೀಗ್" ಏರ್ಪಡಿಸಲ್ಪಡುವುದರಲ್ಲಿದೆಯೆಂದು ಸಾಲ್ವೇಷನ್ ಆರ್ಮಿ ಕಮಿಷನರಾದ ಮಿ॥ ಬೂತ್‌ಟಕರ್‌ರವರು ಒಂದುಕಡೆ ಭಾಷಣ ಮಾಡಿದರು.

ಜರ್ಮನ್‌ಚಕ್ರವರ್ತಿಯನ್ನು ಕೊಲ್ಲಲು ಸಂಚು ನಡೆಸುತಲಿದ್ದವರ ವಿಚಾರಣೆ ಮುಗಿದು ಕಟಕು ಎಂಬ ದಂಪತಿಗಳಿಗೂ ಮತ್ತೆ ೨೩ ಜನರಿಗೂ ಮರಣದಂಡನೆಯು ವಿಧಿಸಲ್ಪಟ್ಟು ಬೇರೆ ಇಬ್ಬರಿಗೆ ೧೧-೮ ವರ್ಷಗಳ ಕಾರಾಗೃಹವಾಸ ಶಿಕ್ಷೆಯು ಕೊಡಲ್ಪಟ್ಟಿತು. ಇವರ ವಿಚಾರಣೆಯು ಬಹು ಗುಪ್ತವಾಗಿ ನಡೆಯುತಲಿದ್ದಿತು. ಮರಣಶಿಕ್ಷೆಗೆ ಗುರಿಯಾದ ಕಟಕು ಎಂಬುವನು ಎದ್ದು, "ಅನಾಯಕತ್ವವು ಬಹುಕಾಲವಿರಲಿ" ಎಂದು ಕೂಗಿಕೊಂಡನು. ಮತ್ತೂ ಶಿಕ್ಷೆಯನ್ನು ಹಸನ್ಮುಖದಿಂದ ಅಂಗೀಕರಿಸಿದನು.

ಕಳೆದ ತಾ॥ ೩ ರ ರಾತ್ರಿ ೨೪ ಪರಗಣೆಗಳ ಜಿಲ್ಲೆಯಲ್ಲಿ ಕೆಲ ಕಳ್ಳರು ಒಬ್ಬ ಮಹಮ್ಮದೀಯ ಸ್ತ್ರೀಯ ಮನೆಗೆ ನುಗ್ಗಿ ಕೆಲ ಸೊತ್ತುಗಳನ್ನು ಅಪಹರಿಸಿಕೊಂಡು ಓಡಿಹೋಗುತ್ತಿರಲು, ಗ್ರಾಮಸ್ಥರು ಆಯುಧಪಾಣಿಗಳಾಗಿ ಕಳ್ಳರನ್ನು ಅಡ್ಡಗಟ್ಟಿದರು. ಎರಡು ಪಕ್ಷದವರಿಗೂ ಜಗಳವಾಗಿ ಒಬ್ಬ ಕಳ್ಳನು ಬಲವಾದ ಏಟಿನಿಂದ ಸ್ಮೃತಿ ತಪ್ಪಿ ಬಿದ್ದನು. ಉಳಿದ ಕಳ್ಳರೆಲ್ಲಾ ಓಡಿಹೋದರು. ಗಾಯಗೊಂಡು ಬಿದ್ದಿದ್ದ ಕಳ್ಳನನ್ನು ಪೊಲೀಸರ ವಶಪಡಿಸಲಾಗಿ, ಆತನು ತನ್ನ ಜತೆಯ ಐವರ ಗುರ್ತನ್ನು ಹೇಳಿದನು. ಅವರನ್ನೂ ಕಳುವಿನ ಸೊತ್ತುಗಳನ್ನೂ ಪೊಲೀಸರು ಹಿಡಿದು ವಿಚಾರಣೆಗೆ ಗುರಿಪಡಿಸಿದ್ದಾರೆ.

ಅಲಹಾಬಾದಿನಲ್ಲಿ ನಡೆದ ರಾಷ್ಟ್ರೀಯ ಮಹಾಸಭೆಗೆ ವಂಗದೇಶದ ಜನರು ಅಧಿಕವಾಗಿ ಹೋಗಿದ್ದುದಕ್ಕೆ ಕಾಂಗ್ರೆಸ್ಸಿನ "ಕ್ರೀಡ" ನಿಬಂಧನೆಯ ವಿಷಯದಲ್ಲಿದ್ದ ಭಿನ್ನಾಭಿಪ್ರಾಯಗಳು ತೊಲಗಿ, ತತ್ಸಂಬಂಧವಾದ ಮನಸ್ತಾಪಗಳು ಅಡಗಿಹೋದುದೇನೂ ಕಾರಣವಲ್ಲ; ಮತ್ತೇನೆಂದರೆ-ಭಾರತೀಯರೆಲ್ಲರಿಂದಲೂ ಅತ್ಯಂತವಾಗಿ ಪ್ರೀತಿಸಲ್ಪಡುತ್ತಿರುವ ಸರ್ ವಿಲಿಯಂ ವೆಡರ್‌ಬರ್ನರವರು ಆ ಸಭೆಯ ಅಧ್ಯಕ್ಷರಾಗಿದ್ದುದೂ, ದೊಡ್ಡ ವಸ್ತುಪ್ರದರ್ಶನವು ಅಲಹಾಬಾದಿನಲ್ಲಿ ನಡೆದುದೂ, ಮತ್ತೂ ಆ ಪಟ್ಟಣವು ಬಂಗಾಳಕ್ಕೆ ಸಮೀಪದಲ್ಲಿರುವುದೂ-ಇವೇ ಮೊದಲಾದುವುಗಳೇ ಕಾರಣವೆಂದು ಅಮೃತಬಜಾರ್ ಪತ್ರಿಕೆಯು ಹೇಳಿರುತ್ತದೆ.

ಲಾರ್ಡ್ ಮಿಂಟೋರವರು ಈ ದೇಶದ ವೈಸ್‌ರಾಯಿರಾಗಿದ್ದಾಗ ಒಂದು ದಿನ ಬೆಳಿಗ್ಗೆ ಸರ್ವಸೇನಾಪತಿಯಾಗಿದ್ದ ಲಾರ್ಡ್ ಕಿಚನರ್‌ರವರನ್ನು ಕಾಣುವುದಕ್ಕೆ ಅವರ ಮನೆಗೆ ಹೋದರು. ದ್ವಾರಪಾಲಕನಾದರೊ ಅವರನ್ನು ಇಂಥವರೆಂದು ತಿಳಿಯದಕಾರಣ ಒಳಕ್ಕೆ ಬಿಡದೆಹೋದನು. ಅದರ ಮೇಲೆ ಅವರು "ತಾನು ವೈಸ್‌ರಾಯಿ" ಯೆಂದು ಹೇಳಿದರು. ಆಗಲೂ ದ್ವಾರಪಾಲಕನು-"ಹೀಗೆಯೇ ಎಷ್ಟೋ ಜನರು ತಾವು ಇಂಥವರು-ಅಂಥವರು ಎಂದು ಹೇಳಿಕೊಂಡು ಬರುತ್ತಿರುವರು. ಹೋಗಿ ಹೋಗಿ" ಎಂದು ಔದಾಸೀನ್ಯದಿಂದ ಮಾತನಾಡುತ್ತಿರುವಷ್ಟರಲ್ಲಿ ಲಾರ್ಡರ ಗುರ್ತನ್ನು ಬಲ್ಲ ಅಧಿಕಾರಿಯೊಬ್ಬನು ಅಲ್ಲಿಗೆ ಬರಲಾಗಿ ನಿರಾತಂಕವಾಗಿ ವೈಸ್‌ರಾಯರು ಒಳಕ್ಕೆ ಪ್ರವೇಶಿಸಲು ಸಾಧ್ಯವಾಯಿತಂತೆ.

ದಿಲ್ಲಿಯಲ್ಲಿ ಜರುಗುವ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವ ಕಾರ್ಯನಿರ್ವಾಹಕ ಸಭೆಯವರು ದಿಲ್ಲಿಯಲ್ಲಿ ಕಳೆದವಾರ ಸಭೆಗೂಡಿದ್ದು, ಮುಂದೆ ನಡೆಯುವ ಕಾರ್ಯಕ್ರಮದ ಏರ್ಪಾಟುಗಳನ್ನು ಕುರಿತು ಪರ್ಯಾಲೋಚಿಸಿ, ಅದರ ಸಮ್ಮತಿಯ ಬಗೆಗೆ ಚಕ್ರವರ್ತಿಯವರಲ್ಲಿಗೆ ಇಷ್ಟರಲ್ಲೇ ಕಳುಹುವವರಾಗಿರುವರು. ಈಗಣ ಏರ್ಪಾಟಿನಲ್ಲಿ ಚಕ್ರವರ್ತಿಯವರು ಕಲಕತ್ತಾದಲ್ಲಿ ಕ್ರಿಸ್ತಮಸ್ ಹಬ್ಬವನ್ನಾಚರಿಸಲನುಕೂಲಿಸುವಂತೆ ಕಿರೀಟಧಾರಣ ಮಹೋತ್ಸವ ಸಂಬಂಧವಾದ ದರ್ಬಾರು ಡಿಶಂಬರ್ ತಿಂಗಳಲ್ಲಿಯೇ ಜರುಗುವಂತೆಯೂ, ಕಿರೀಟಧಾರಣ ಸಂಸ್ಕಾರಕ್ಕೆ ಮೊದಲೂ ಅನಂತರವೂ ಉತ್ಸವವು ಆಗುವುದೆಂತಲೂ, ಈ ಮಹೋತ್ಸವ ಕಾರ್ಯವು ಒಂದು ಪಕ್ಷದ ವರೆಗೆ ಜರುಗುವುದೆಂತಲೂ ಗೊತ್ತಾಗುತ್ತದೆ.

ಮದ್ರಾಸು ಗೌರ್ನಮೆಂಟ್ ಕಾರ್ಯಾಲೋಚನ ಸಭೆಯಲ್ಲಿ ಸಭಾಸ್ತಾರರಾಗಿದ್ದ ಶ್ರೀಮಾನ್ ಬೊಬ್ಬಿಲಿ ಮಹಾರಾಜರವರು ಆ ತಮ್ಮ ಕೆಲಸವನ್ನು ತಾವಾಗಿ ಬಿಟ್ಟುಕೊಟ್ಟರು. ಕಳೆದವರ್ಷದಲ್ಲಿ ತಾನೇ ಇವರು ಈ ಸ್ಥಾನಕ್ಕೆ ನವೀನ ಸುಧಾರಣೆಯ ಪ್ರಕಾರ ನಿಯಮಿತರಾಗಿದ್ದರು. ಇವರು ಇಷ್ಟು ಬೇಗನೆ ಉದ್ಯೋಗವನ್ನು ಬಿಡುವುದಕ್ಕೆ ಏನುಕಾರಣವೋ ಅಗೋಚರವು. ಮಿ॥ ಸಿಂಹರವರು ಇದಕ್ಕೆ ಮುಂಚೆಯೇ ವೈಸ್ರಾಯರ ಕಾರ್ಯಾಲೋಚನಸಭೆಯ ಸಭಾಸ್ತಾರ ತನದಿಂದ ಅವರಾಗಿ ನಿವೃತ್ತಿಯನ್ನು ಸ್ವಲ್ಪಕಾಲದಲ್ಲಿಯೇ ಕೋರಿಕೊಂಡರು. ಚಕ್ರವರ್ತಿಯವರು ಸ್ಟೇಟ್ ಸೆಕ್ರೆಟರಿಯವರ ಮೂಲಕ ಏರ್ಪಡಿಸಿದ ನವೀನ ರಾಜಕೀಯ ಸುಧಾರಣೆಗಳ ಉದ್ದೇಶವು ಭಾರತೀಯರನ್ನು ರಾಜಕಾರ್ಯನಿರ್ವಾಹದಲ್ಲಿ ಮುಂದುಮುಂದಕ್ಕೆ ತರಬೇಕೆನ್ನುವುದಾಗಿರುವಲ್ಲಿ,ಹೊಸದಾಗಿ ಇಂಥ ಕಾರ್ಯಾಲೋಚನ ಸಭೆಗಳಿಗೆ ತರಲ್ಪಟ್ಟ ಭಾರತೀಯರು ಹೆಚ್ಚು ಕಾಲ ಬಾಳದೆ ತಾವಾಗಿ ಕೆಲಸವನ್ನು ಬಿಡುವಂತಾಗುವುದಕ್ಕೆ ಏನುಕಾರಣವಿರಬಹುದೆಂಬುದನ್ನು ಮೇಲ್ಪಟ್ಟ ಅಧಿಕಾರಿಗಳು ವಿಚಾರಮಾಡಿ ಪರಿಹರಿಸಿಕೊಡದಿದ್ದರೆ ಕೊಟ್ಟ ವರವೂ ನಿಷ್ಫಲವಾದಂತಾಗುವುದು.

ಬಣಜಿ ಫ್ರಾಂಜಿ ಮರ್ಷಿಯೆಂಬುವನು ಕಳೆದ ಜುಲೈ ತಿಂಗಳಲ್ಲಿ ಬೊಂಬಾಯಿಗೆ ಬಂದು ಒಂದು ಹೋಟಲಿನಲ್ಲಿಳಿದುಕೊಂಡು "ತನಗೆ ಮಧ್ಯಪ್ರಾಂತಗಳಿಗೆ ಸೇರಿದ ನಾಗಪುರದಲ್ಲಿ ೮ ಮ್ಯಾಂಗನೀಸ್ ಗಣಿಗಳಿವೆ. ಅವುಗಳ ಮೇಲ್ವಿಚಾರಣೆಗೆ ಕೆಲವರು ಬೇಕಾಗಿದ್ದಾರೆ. ಕೆಲಸಮಾಡಲಿಷ್ಟವುಳ್ಳವರು ಬಂದು ತನ್ನನ್ನು ಕಂಡು ಸಂಬಳ ಮೊದಲಾದುದನ್ನು ಗೊತ್ತುಮಾಡಿಕೊಳ್ಳುವುದು." ಎಂದು ಪ್ರಸಿದ್ಧಿಪಡಿಸಿದನು. ಅದರ ಮೇಲೆ ಕೆಲವರು ಸಂಬಳವನ್ನು ಗೊತ್ತುಮಾಡಿಕೊಂಡು ಒಬ್ಬೊಬ್ಬರು ೫೦೦ ರೂ.ಗಳಂತೆ ಹೊಣೆಯ ಹಣವನ್ನು ಕೊಟ್ಟರು. ಈ ಮನುಷ್ಯನು ಇದಲ್ಲದೆ ಕಳೆದ ಆಗಸ್ಟಿನಲ್ಲಿ ಫ್ರಾಂಜಿ ಮತ್ತೂ ಕಂಪೆನಿ ಎಂಬ ಹೆಸರಿನಿಂದ ಒಂದು ಕುದುರೆಯಬಂಡಿಯ ಶಾಲೆಯನ್ನು ಜಾರ್ಜ್ ಜೋನ್ಸ್ ಎಂಬುವನ ಕೂಡ ಪಾಲಿಗೇರ್ಪಡಿಸಿ, ತಾನು ತನ್ನ ಬಂಡಿಯನ್ನೂ ಕುದುರೆಗಳನ್ನೂ ಕೊಡುವಂತೆಯೂ, ಜೋನ್ಸ್ನು ಒಂದು ಬಂಡಿಯನ್ನೂ ೫ ಕುದುರೆಗಳನ್ನೂ ಕೊಡುವಂತೆಯೂ, ಗೊತ್ತುಮಾಡಿ, ೩ ದಿನಗಳ ಮೇಲೆ ಆ ಕುದುರೆ ಬಂಡಿಗಳನ್ನು ೫೦೦ ರೂ. ಗಳಿಗೆ ಒತ್ತೆಯಿಟ್ಟು ದುಡ್ಡನ್ನು ಸ್ವಂತಕ್ಕುಪಯೋಗಿಸಿಕೊಂಡನು. ಇವನು ದಿನ ೧ ಕ್ಕೆ ೧೦ ರೂ. ಬಾಡಿಗೆಯ ಮೇಲೆ ೨ ಕುದುರೆಗಳ ಬಂಡಿಯನ್ನು ತೆಗೆದುಕೊಂಡು ಬೀದಿಗಳಲ್ಲಿ ಬಹು ಅಟ್ಟಹಾಸದಿಂದ ತಿರುಗುತಲಿದ್ದುದರ ಮೇಲೆ ಪೊಲೀಸರಿಗೆ ಅನುಮಾನಹುಟ್ಟಿ, ಅವನನ್ನು ಹಿಡಿದು ವಿಚಾರಿಸುವಲ್ಲಿ ತಾನು ನಾಗಪುರದ ಒಂದು ದೊಡ್ಡ ಕಂಪೆನಿಯ ಭಾಗದಾರನು ಮತ್ತೂ ಅನೇಕ ಲೋಹದ ಗಣಿಗಳ ಯಜಮಾನನು ಎಂದು ಹೇಳಿದನು. ಆದರೆ ಕಡೆಗೆ ಅವನ ಮೋಸಗೆಲಸವು ಹೊರಬಿದ್ದುದಲ್ಲದೆ ಅವನಿಗೆ ಹಿಂದೆ ಮೋಸದಾಚರಣೆಗಾಗಿ ಮೂರಾವೃತ್ತಿ ಕಾರಾಗೃಹವಾಸ ಶಿಕ್ಷೆಯಾಗಿತ್ತೆಂಬುದು ಗೊತ್ತಾಗಿ ಈ ವೇಳೆಯೂ ಕಠಿಣಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು. ಪ. ಪ್ರ.

ಪತ್ರವ್ಯವಹಾರ.

ದಾವಣಗೆರೆ.

ಸಮಸ್ತಸದ್ಗುಣ ಕಲಾನಿಧಿಗಳಾದ ರಾ॥ಬ॥ ಶ್ರೀಮಾನ್ ವಾರದ ಮಲ್ಲಪ್ಪನವರು (ಅಪ್ಪಾಸಾಹೇಬರು) ಈ ದಿನ ಬೆಳಿಗ್ಗೆ ೫ ಗಂಟೆಗೆ ಶಿವಾಧೀನರಾದರೆಂಬ ವಾರ್ತೆಯು ಅವರ ಅಳಿಯಂದಿರಾದ ಮ॥ರಾ॥ರಾ॥ ಚೆನ್ನಬಸಪ್ಪ ಅಣ್ಣಾ ಮಡ್ಕಿ ಇವರಿಂದ ಇಲ್ಲಿನ ರಾ॥ ದೊಡ್ಡಬಸವಪ್ಪ ಸಂಗಪ್ಪ ಮಾಗಾನಹಳ್ಳಿ ಇವರಿಗೆ ಈ ದಿನ ಬೆಳಿಗ್ಗೆ ೮॥ ಗಂಟೆಗೆ ತಾರಿನಿಂದ ತಿಳಿದೊಡನೆಯೆ ಈ ಸಹಿಸಲಸಾಧ್ಯವಾದ ದುಃಖವಾರ್ತೆಯು ವ್ಯಾಪಿಸಿ ದಾವಣಗೆರೆಯೆಲ್ಲವೂ ದುಃಖಾಬ್ಧಿಯಲ್ಲಿ ಮುಳುಗಿ ಸಂತಾಪಬಡಬಾಗ್ನಿಯಿಂದ ದಹಿಸಲ್ಪಟ್ಟಿತು. ಪ್ರಮುಖ ವರ್ತಕರು ತಮ್ಮ ವ್ಯವಹಾರೋದ್ಯೋಗಗಳನ್ನು ನಿಲ್ಲಿಸಿದರು. ನಂತರ ಇಲ್ಲಿನ ಮ॥ ರಾ॥ ರಾ॥ ಹೆಚ್. ಸುಬ್ಬರಾಯರವರ ಅಧ್ಯಕ್ಷತೆಯಿಂದ ಪುರನಿವಾಸಿಗಳು ಸಭೆಸೇರಿ ದೇಶಬಾಂಧವ ಶಿರೋಮಣಿಗಳೂ, ಸದಾಚಾರ ಸುಜ್ಞಾನಗಳೆಂಬ ಕಿರಣಗಳಿಂದ ಪ್ರಕಾಶಿಸುವ ಸೂರ್ಯಪ್ರಾಯರೂ ಆದ ಸದರಿ ಅಪ್ಪಾಸಾಹೇಬರು ಲಿಂಗೈಕ್ಯರಾದ್ದರಿಂದುಂಟಾದ ವಿಯೋಗದುಃಖದಿಂದ ಪರಿತಪಿಸಿ, ತಮ್ಮ ಸಾನುತಾಪವನ್ನು ತಾರಿನಿಂದ ಸದರಿ ಅಪ್ಪಾಸಾಹೇಬರ ಕುಟುಂಬದವರಿಗೆ ಅರ್ಪಿಸಿದರು.

೧೯-೧-೧೧. ಪ್ರತ್ಯಕ್ಷದರ್ಶಿ.

ಪ್ರಕಟನೆ.

೨೦೦ ರೂಪಾಯಿಗಳ ಬಹುಮಾನ.

ಕೈ. ವಾಸಿ ರಾವಸಾಹೇಬ ಚೆನ್ನಬಸವಪ್ಪ ಬಸಲಿಂಗಪ್ಪ ಅಣ್ಣಾ ಧಾರವಾಡ ಡಿಪ್ಯೂಟಿ ಎ. ಇನ್ಸ್‌ಪೆಕ್ಟರ್ ಜಿ॥ ಧಾರವಾಡ ಇವರು ನಮ್ಮ ವೀರಶೈವ ಸಮಾಜದ ಮೇಲೆ ಮಾಡಿರುವ ಅನಂತ ಉಪಕಾರಗಳನ್ನು ಎಷ್ಟು ಬಣ್ಣಿಸಿದರೂ ತೀರದು. ಇವರು ಮಾಡಿದ ದೀರ್ಘೋದ್ಯೋಗಗಳೇ ಉತ್ತರಕರ್ನಾಟಕದಲ್ಲಿ ವಿಶೇಷವಾಗಿ ವಿದ್ಯಾಪ್ರಸಾರವಾಗಲಿಕ್ಕೂ ನಮ್ಮ ವೀರಶೈವ ಸಮಾಜದ ಉತ್ಕರ್ಷವು ಪ್ರಾರಂಭವಾಗಲಿಕ್ಕೂ ಮುಖ್ಯಕಾರಣಗಳಾದವೆಂದು ಹೇಳಲು ಏನೂ ಸಂದೇಹವಿಲ್ಲ. ಇದಲ್ಲದೆ ಇವರಲ್ಲಿ ವಾಸಿಸುತ್ತಿದ್ದ ಉತ್ತಮೋತ್ತಮಗುಣಗಳು ಎಲ್ಲರಿಗೂ ಅನುಕರಣೀಯವಾದಂಥವುಗಳಾಗಿವೆ. ಆದರೆ ಇಂಥ ಮಹಾನುಭಾವರ ಚರಿತ್ರಲೇಖನದ ಪ್ರಯತ್ನಗಳು ಅವರು ಕೈಲಾಸವಾಸಿಗಳಾಗಿ ಇಂದಿಗೆ ೨೯ ವರ್ಷಗಳಾದರೂ ಏನೂ ನಡೆದಿಲ್ಲವೆಂಬುದನ್ನು ನೋಡಿದರೆ ಸಖೇದಾಶ್ಚರ್ಯವಾಗುವಂತೆ ಇದೆ. ಆದರೆ ಈ ಕಾರ್ಯವನ್ನು ಅವರು ದೇಹವಿಟ್ಟ ಕೆಲವು ದಿವಸಗಳಲ್ಲಿಯೇ ನಮ್ಮ ಸಮಾಜದವರು ಪ್ರಾರಂಭಿಸಿದ್ದರೆ, ಅವರ ಚರಿತ್ರೆಯನ್ನು ಅರಿತಂಥವರು ಹೇರಳವಾಗಿ ದೊರೆಯುತ್ತಿದ್ದರು. ಆದರೆ ಈ ವಿಷಯದಲ್ಲಿ ನಾವು ಉದಾಸೀನರಾದುದರಿಂದ ಆ ಜನರ ಸಂಖ್ಯೆಯು ವಿರಳವಾಗುತ್ತ ನಡೆದದೆ. ಮತ್ತೂ ಇನ್ನು ಮೇಲೆಯೂ ಸಹ ಹೀಗೆಯೇ ನಾವು ಉದಾಸೀನರಾಗಿ ಉಳಿದರೆ ಅವರ ಚರಿತ್ರಲೇಖನದ ದ್ವಾರವೇ ಕಟ್ಟಾಗುವ ಭೀತಿಯುಂಟು.

ಈ ಸಂಗತಿಯನ್ನು ಲಕ್ಷಿಸಿ ಕೈ. ವಾ. ಚೆನ್ನಬಸವಪ್ಪನವರ ಸ್ಮರಣವು ನಮ್ಮ ಸಮಾಜದಲ್ಲಿ ಸದಾ ಉಳಿಯಬೇಕೆಂದು ಯೋಚಿಸಿ, ಅವರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಉತ್ತೇಜನಕೊಟ್ಟು, ಈ ಮೇರೆಗೆ ದೊರೆದ ಸಂಗತಿಗಳ ಆಧಾರದಿಂದ ಅವರ ಸಮಗ್ರ ಚರಿತ್ರೆಯನ್ನು ಬರೆಯಿಸಬೇಕೆಂತಲೂ, ಈ ಪ್ರಕಾರ ಸಹಾಯಮಾಡಿದ ಸದ್ಗೃಹಸ್ಥರಿಗೆ ೨೦೦ ರೂಪಾಯಿಗಳಲ್ಲಿ ಬಹುಮಾನವಾಗಿ ಕೊಡಬೇಕೆಂತಲೂ ೨೩ ನೇ ಅಕ್ಟೋಬರ ೧೯೧೦ ನೆಯ ತಾರೀಖಿನ ದಿವಸ ವಿಜಾಪುರದಲ್ಲಿ ನೆರೆದ ೨ ನೆಯ ವೀರಶೈವ ಜಿಲ್ಲಾ ಸಭೆಯಲ್ಲಿ ನಿರ್ಣಯಿಸಲ್ಪಟ್ಟಿರುತ್ತದೆ. ಆ ಪ್ರಕಾರ ಅವರ ಬಗ್ಗೆ ಮಾಹಿತಿಯುಳ್ಳವರು ತಮಗೆ ಗೊತ್ತಿದ್ದ ಸಂಗತಿಗಳನ್ನು ನಮ್ಮ ಕಡೆಗೆ ಬರೆದು ಕಳುಹಬೇಕೆಂದು ನಮ್ಮ ವಿನಂತಿಯುಂಟು. ಇಂಥವರು ತಮ್ಮ ಲೇಖಗಳನ್ನು ಕಳಿಸುವ ಪೂರ್ವದಲ್ಲಿ ಕೆಳಗೆ ಕಾಣಿಸಿದ ಸೂಚನೆಗಳಿಗೆ ಲಕ್ಷಕೊಡತಕ್ಕದ್ದು.

೧. ತಮ್ಮ ಲೇಖನದಲ್ಲಿ ಆ ಮಹನೀಯರ ಜನನ, ಬಾಲ್ಯ ವಿದ್ಯಾಭ್ಯಾಸ, ಉದ್ಯೋಗ, ಅಂತ್ಯ, ಸ್ವಭಾವ, ಅವರ ವಿದ್ವತ್ತೆ, ಅವರ ಅಭಿಪ್ರಾಯಗಳು, ಅವರ ಗುಣಗಳನ್ನು ನಿರ್ದೇಶಿಸತಕ್ಕ ಸಂಗತಿಗಳು ಇವೇ ಮೊದಲಾದುವುಗಳನ್ನು ಶುದ್ಧ ಕನ್ನಡದಲ್ಲಿ ವಿವರಿಸತಕ್ಕದ್ದು.

೨. ಎಲ್ಲರೂ ತಮ್ಮ ಲೇಖನಗಳನ್ನು ಒಂದೇಮಗ್ಗಲು ಸುವಾಚ್ಯ ಅಕ್ಷರಗಳಿಂದ ಬರೆಯತಕ್ಕದ್ದು.

೩. ಲೇಖನವು ನಮ್ಮ ಕಡೆಗೆ ೧೯೧೧ನೇ ಡಿಸೆಂಬರ ೧ನೇ ತಾರೀಖಿನ ಒಳಗಾಗಿ ಬಂದು ಮುಟ್ಟುವಂತೆ ರಿಜಿಸ್ಟರ್ ಪೋಸ್ಟಿನಿಂದ ಕಳುಹಿಸತಕ್ಕದ್ದು.

೪. ಮೇಲಿನ ತಾರೀಖಿನ ಒಳಗಾಗಿ ಬಂದ ಲೇಖಗಳನ್ನು ಒಂದು "ಪುಸ್ತಕಪರೀಕ್ಷಾ ಕಮಿಟಿ" ಎಂಬ ಹೆಸರಿನ ಕಮಿಟಿಯನ್ನು ಏರ್ಪಡಿಸಿ, ಅವರ ಕಡೆಗೆ ಅವು ಕಳುಹಿಸಲ್ಪಡುವುವು. ಅವರು ಅವುಗಳನ್ನು ಪರೀಕ್ಷಿಸಿದ ತರುವಾಯ ಅವುಗಳ ಯೋಗ್ಯತೆಯ ಮೇರೆಗೆ ಲೇಖಕರಿಗೆ ಬಹುಮಾನಗಳು ಕೊಡಲ್ಪಡುವುವು.

೫. ಬಹುಮಾನ ಪಡೆದ ಲೇಖಗಳಿಗೆ ಅವುಗಳ ಲೇಖಕರ ಸ್ವಾಮಿತ್ವವಿಲ್ಲವು.

ಬೆಳಗಾವ, ವಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ಕೈಲಾಸವಾಸಿಗಳ ಆಪ್ತರೂ, ಮಿತ್ರರೂ, ಅವರ ಕೈಕೆಳಗೆ ಕೆಲಸಮಾಡಿದವರೂ, ಅವರ ಸಹಾಯದಿಂದ ಘನತೆಗೊಂಡವರೂ ಬಹುಜನರಿರುವರು. ಇವರು ತಮಗೆ ಗೊತ್ತಿದ್ದ ಸಂಗತಿಗಳನ್ನು ಬರೆದು ನಮ್ಮ ಕಡೆಗೆ ಕಳುಹಿಸಿಕೊಟ್ಟರೆ ಈ ಚರಿತ್ರಲೇಖನದ ಕಾರ್ಯವು ಸಹಜವಾಗಿಯೇ ಕೈಗೂಡುವಂತೆ ಇದೆ. ಕಾರಣ ಕೈ. ವಾಸಿ ಚೆನ್ನಬಸವಪ್ಪನವರ ಬಗ್ಗೆ ಪೂಜ್ಯಭಾವ

ವನ್ನು ವಹಿಸಿದ ಸರ್ವರೂ ಈ ವಿಷಯದ ಬಗ್ಗೆ ಉದಾಸೀನತೆಯನ್ನು ವಹಿಸದೆ ತಮಗೆ ಗೊತ್ತಿದ್ದ ಸಂಗತಿಗಳನ್ನು ನಮ್ಮ ಕಡೆಗೆ ಆದಷ್ಟು ತೀವ್ರ ಬರೆದು ಕಳುಹಿಸಿಕೊಟ್ಟಲ್ಲಿ ನಾವು ಅವರಿಗೆ ಅತ್ಯಂತ ಆಭಾರಿ ಆಗುವೆವು.

ಫ. ಗು. ಹಳಕಟ್ಟಿ ಸೆಕ್ರೆಟರಿ,
ವಿಜಾಪುರ ಜಿಲ್ಲಾ ಸಭೆ.

ನೆಲಮಂಗಲದ ತಾ|| ಎಲೆಕ್ಯಾತನಹಳ್ಳಿ.

ಚಾಲ್ತಿ ಜನವರಿ ಮಾಹೆ ೧೧ ನೇ ತಾ|| ಬುಧವಾರ ಈ ಗ್ರಾಮದ ಗೌರ್ನಮೆಂಟ್ ವಿ. ಇ. ಸ್ಕೂಲ್ ಇನ್ಸ್ಪೆಕ್ಷನ್ನಿಗಾಗಿ ದಯಮಾಡಿಸಿದ್ದ ಘನವನ್ನು ಹೊಂದಿದ ಬೆಂಗಳೂರು ಡಿ|| ವಿ. ಇ. ಸ್ಕೂಲ್‌ಗಳ ಹಜರತ್ ೨ ನೆಯ ಅಸಿಸ್ಟೆಂಟ್ ಡೆಪ್ಯುಟಿ ಇನ್ಸ್ಪೆಕ್ಟರ್ ಸಾಹೇಬ್‌ಬಹದ್ದರವರು ಮೆ|| ಟಿ. ವಿ. ಕೃಷ್ಣರಾಯರು ತಮ್ಮ ಸ್ಕೂಲ್ ಇನ್ಸ್ಪೆಕ್ಷನ್ ಕೆಲಸಗಳನ್ನೆಲ್ಲಾ ಘನವಾದ ಚಿತ್ತಕ್ಕೆ ತೃಪ್ತಿಕರವಾಗುವಂತೆ ಪೂರೈಸಿಕೊಂಡನಂತರ ಈ ಗ್ರಾಮದ ದಿಗಂಬರ ಜೈನಮಹಾಜನಗಳಿಂದ ಪ್ರಾರ್ಥಿಸಲ್ಪಟ್ಟ ಮೇರೆ ತಾ|| ೨೩ ನೇ ಶನಿವಾರ ಸದರಿ ಜನಗಳಿಂದ ಶ್ರೀಯುತ ಮೆ|| ವೈ. ಡಿ. ಕೆ. ಆದಿರಾಜಯ್ಯನವರು ನೂತನವಾಗಿ ಕಟ್ಟಿಸಿರುವ ದೇವಾಲಯದಲ್ಲಿ ನಡೆಸಲ್ಪಟ್ಟ ಸಭೆಯಲ್ಲಿ ಅಗ್ರಾಸನವನ್ನು ವಹಿಸಿದ್ದರು. ದೇವರ ಪ್ರಾರ್ಥನೆಯು ಗಾನರೂಪವಾಗಿ ನೆರವೇರಿದನಂತರ ಮೆ|| ವೈ. ಡಿ. ಶಾಂತರಾಜಯ್ಯನವರು ಮೇಲ್ಕಂಡ ಮಹನೀಯರು ಅಗ್ರಾಸನವನ್ನು ವಹಿಸಿದುದಕ್ಕಾಗಿ ತಮಗುಂಟಾದ ಅನಂತಾನಂತ ಸಂತೋಷವನ್ನು ವ್ಯಕ್ತಪಡಿಸಿದರು. ನಂತರ ಮೆ|| ವೈ. ಡಿ. ವಜ್ರನಾಭಯ್ಯನವರು ಗುಣದ ವಿಷಯವಾಗಿ ಇಂಗ್ಲೀಷಿನಲ್ಲಿಯೂ, ಮೆ|| ಟಿ. ಆದಿರಾಜಯ್ಯನವರು ಪರೋಪಕಾರದ ವಿಷಯವಾಗಿ ಕನ್ನಡದಲ್ಲಿಯೂ ಉಪನ್ಯಾಸ ಮಾಡಿದರು. ನಂತರ ಮೆ|| ವೈ. ಡಿ. ಕೆ. ನಾಭಿರಾಜಯ್ಯನವರು ವಾಚನಾಲಯದ ರಿಪೋರ್ಟನ್ನು ಓದಿದರು. ಮೆ|| ವೈ. ಡಿ. ವಜ್ರನಾಭಯ್ಯನವರು ಸದರಿ ಇನ್ಸ್ಪೆಕ್ಟರ್ ಸಾಹೇಬ್‌ಬಹದರವರು ಅಗ್ರಾಸನವನ್ನು ವಹಿಸಿದ ವಿಷಯದಲ್ಲಿ ತಮಗೆ ಉಂಟಾದ ಸಂತೋಷವನ್ನು ಮುಂದೆ ಸೂಚಿಸುವ ರೀತಿ ವ್ಯಕ್ತಪಡಿಸಿದರು.

ಘನವನ್ನು ಹೊಂದಿದ ನಮ್ಮ ದಯಾಳುಗಳಾದ ಖಾವಂದರವರು ಹಜರತ್ ಅ. ಡೆ. ಇನ್ಸ್ಪೆಕ್ಟರ್ ಸಾಹೇಬರವರು ಈ ಸರ್ಕಲ್ಲಿಗೆ ದಯಮಾಡಿಸಿದ ಲಾಗಾಯಿತು ತಮ್ಮ ರೇಂಜಿನಲ್ಲಿ ವಿದ್ಯಾಭಿವೃದ್ಧಿಯು ದಿನೇ ದಿನೇ ಹೆಚ್ಚುವಂತೆ ತಕ್ಕ ಏರ್ಪಾಡುಗಳನ್ನು ಮಾಡಿಸಿ ಗ್ರಾಮಸ್ಥರ ಅಹವಾಲುಗಳನ್ನು ಘನವಾದ ಚಿತ್ತಕ್ಕೆ ತಂದು ಅವರ ಪ್ರಾರ್ಥನೆಯಂತೆ ವಿದ್ಯಾಭಿವೃದ್ಧಿಯ ವಿಷಯದಲ್ಲಿ ತಕ್ಕ ಸಲಕರಣೆಗಳನ್ನು ಒದಗಿಸಿಕೊಟ್ಟು ಪ್ರೋತ್ಸಾಹಗೊಳಿಸುತ್ತಾ ಗ್ರಾಮಸ್ಥರುಗಳ ಭಕ್ತಿವಿಶ್ವಾಸಗಳಿಗೆ ಪಾತ್ರರಾಗಿ ತುಂಬಾ ಸಹಾಯಮಾಡುತ್ತಾ ಇರುವ ಸಂಗತಿಯು ಸದರಿಯವರ ರೇಂಜಿಗೆ ಸೇರಿದ ಸರ್ವರಿಗೂ ವ್ಯಕ್ತವಾಗಿದೆ ಎಂದು ನಾನು ದೃಢವಾಗಿ ನಂಬಿದ್ದೇನೆ. ನಿಷ್ಪಕ್ಷಪಾತಿಗಳಾದ ಈ ಧರ್ಮಪ್ರಭುಗಳವರು ಈ ರೇಂಜಿಗೆ ದಯಮಾಡಿಸಿದ್ದು ಎಲ್ಲಾ ಗ್ರಾಮಸ್ಥರ ಬಾಲಕ ಮತ್ತೂ ಬಾಲಕಿಯರುಗಳ ಅಪೂರ್ವಪುಣ್ಯೋದಯವೆಂಬ ವಿಷಯದಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಈ ಮಹನೀಯರಿಗೆ ಸರ್ವಾಂತರ್ಯಾಮಿಯಾದ ಭಗವಂತನು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳನ್ನು ದಯಪಾಲಿಸಿ ಚಿರಕಾಲ ಇದೇ ರೇಂಜಿನಲ್ಲಿ ಇಟ್ಟು ನಮ್ಮಗಳ ಮನೋಭೀಷ್ಟಗಳನ್ನು ನೆರವೇರಿಸಬೇಕಾಗಿ ಪ್ರಾರ್ಥಿಸುತ್ತೇನೆ.

ನಂತರ ಅಗ್ರಾಸನಾಧಿಪತಿಗಳು ಸಭೆಯವರಿಗೆಲ್ಲಾ ಅಪ್ಪಣೆ ಕೊಡಿಸಿದ ವಿಷಯಗಳ ಮುಖ್ಯ ಸಾರಾಂಶವೇನೆಂದರೆ:— ಈ ದಿವಸ ನೀವುಗಳು ನನಗೆ ಅಗ್ರಾಸನವನ್ನು ವಹಿಸಿದುದಕ್ಕಾಗಿ ತುಂಬಾ ಸಂತೋಷಪಡುತ್ತೇನೆ. ನೀವುಗಳು ಈ ಗ್ರಾಮದ ಸ್ಕೂಲ್ ವಿಷಯವಾಗಿ ವಹಿಸಿರುವ ಮುತುವರ್ಜಿಯಿಂದಲೂ ಮತ್ತು ಮ್ಯಾಷ್ಟರುಗಳ ಶ್ರದ್ಧೆಯಿಂದಲೂ ವಿದ್ಯಾಭಿವೃದ್ಧಿಯು ಬಹಳಮಟ್ಟಿಗೆ ತೃಪ್ತಿಕರವಾಗಿರುತ್ತೆ. ಈ ಸ್ಕೂಲ್‌ವಿಚಾರದಲ್ಲಿ ಮುಂದೆಯೂ ಇದೇ ರೀತಿ ಮುತುವರ್ಜಿಯನ್ನು ವಹಿಸಿದಪಕ್ಷದಲ್ಲಿ ಮತ್ತಷ್ಟು ಅಭಿವೃದ್ಧಿಗೆ ಬರುವ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಈಗ ನೀವುಗಳು ಸ್ಥಾಪಿಸಿರುವ ವಾಚನಾಲಯವು ನಿಮ್ಮಗಳಿಗೆ ಅನೇಕ ವಿಷಯದಲ್ಲಿ ಅನುಭವವುಂಟಾಗಿ ಅಭಿವೃದ್ಧಿಗೆ ಬರುವುದಕ್ಕೆ ಕಾರಣವಾಗಿರುತ್ತೆ. ಈ ವಾಚನಾಲಯದ ವಿಷಯದಲ್ಲಿ ಕೆಲವು ಬದಲಾವಣೆಗಳು ಅತ್ಯವಶ್ಯಕವಾಗಿರುವುದರಿಂದ ಅವುಗಳನ್ನು ಸರಿಪಡಿಸುವುದು ಮುಖ್ಯ ಕೆಲಸವೆಂದು ತೋರುತ್ತೆ. ಈ ಗ್ರಾಮದಲ್ಲಿ ಜೈನನಿವಾಸಿಗಳು ಬಹಳವಾಗಿದ್ದು ಈ ವಾಚನಾಲಯಕ್ಕೆ ಕೊಂಚ ಜನಗಳು ಮಾತ್ರ ಪೋಷಕರಾಗಿರುವುದು ವಿಷಾದಕರವಾಗಿದೆ. ಆದುದರಿಂದ ಕೂಡಿದಮಟ್ಟಿಗೂ ಹೆಚ್ಚು ಜನಗಳನ್ನು ಒದಗಿಸಿಕೊಂಡು ಅಭಿವೃದ್ಧಿಗೊಳಿಸತಕ್ಕದ್ದು ನಿಮ್ಮಗಳ ಮುಖ್ಯಕರ್ತವ್ಯವಾಗಿದೆ. ಮೆ|| ವೈ. ಡಿ. ವಜ್ರನಾಭಯ್ಯನವರು ಕೊಟ್ಟ ಉಪನ್ಯಾಸದಲ್ಲಿ ಒಬ್ಬ ವಿದ್ಯಾವತಿಯಾದ ತಾಯಿಯು ನೂರುಜನ ಸ್ಕೂಲ್‌ಮ್ಯಾಸ್ಟರುಗಳಿಗೆ ಸಮನಾಗಿರುತ್ತಾಳೆಂಬುದಾಗಿ ವ್ಯಕ್ತವಾಗುತ್ತೆ. ಇದರಿಂದ ಸ್ತ್ರೀ ವಿದ್ಯಾಭ್ಯಾಸವು ಅತ್ಯಂತ ಅವಶ್ಯಕವೆಂಬುದು ನಿದರ್ಶನವಾಗುವುದರಿಂದ ಈ ಮೈಸೂರು ಸಂಸ್ಥಾನದಲ್ಲಿ ಬಾಲಿಕಾ ಪಾಠಶಾಲೆಗಳನ್ನು ಅನೇಕ ಸ್ಥಳಗಳಲ್ಲಿ ಏರ್ಪಡಿಸಿ ಸ್ತ್ರೀ ವಿದ್ಯಾಭ್ಯಾಸವನ್ನು ಅಭಿವೃದ್ಧಿಗೊಳಿಸುತ್ತಿದ್ದಾರೆ. ಈ ಗ್ರಾಮದಲ್ಲಿ ವರ್ತಕರು ಬಹಳ ಜನಗಳಿರುವುದರಿಂದ ಒಂದು ಬಾಲಿಕಾ ಪಾಠಶಾಲೆಯನ್ನು ಏರ್ಪಡಿಸಿ ನಿಮ್ಮ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸತಕ್ಕಂಥಾದ್ದು ಅತ್ಯವಶ್ಯಕವಾಗಿರುತ್ತದೆ. ಈ ಗ್ರಾಮದಲ್ಲಿ ಇದುವರೆಗೂ ನಡೆದಿರತಕ್ಕ ಮುಂದೆ ನಡೆಯತಕ್ಕ ಎಲ್ಲಾ ಒಳ್ಳೇ ಏರ್ಪಾಡುಗಳಿಗೂ ವಜ್ರನಾಭಯ್ಯನವರೇ ಕಾರಣರಾಗಿರುತ್ತಾರೆ. ಮುಂದೆಯೂ ಇವರು ಹಾಕತಕ್ಕ ಮೇಲ್ಪಂಕ್ತಿಯನ್ನು ಅನುಸರಿಸಿ ನೀವುಗಳೆಲ್ಲರೂ ನಡೆದುಕೊಂಡರೆ ನಿಮ್ಮ ಬಾಲಕ ಬಾಲಿಕೆಯರುಗಳು ಬಹಳಮಟ್ಟಿಗೆ ಅಭಿವೃದ್ಧಿಸ್ಥಿತಿಗೆ ಬರಲು ಯಾವ ಸಂದೇಹವೂ ಇರುವುದಿಲ್ಲ. ಇವರಿಗೆ ಭಗವಂತನು ವಿದ್ಯಾಭಿವೃದ್ಧಿಯನ್ನು ಕೊಟ್ಟು ಚಿರಕಾಲ ಇಡಬೇಕಾಗಿ ಹಾರೈಸುತ್ತೇನೆ. ನಂತರ ಸಭೆಯವರು ಅಗ್ರಾಸನಾಧಿಪತಿಗಳಿಗೆ ಶ್ರೇಯಃಪ್ರಾರ್ಥನೆ ಮಾಡಿದನಂತರ ಕಾಳೇನಹಳ್ಳಿ ಸಂಗೀತಕಲಾಗ್ರಗಣ್ಯರಾದ ಎಸ್. ಪೊಮ್ಮಯ್ಯನವರು ತಮ್ಮ ಮನೋಹರವಾದ ಗಾನದಿಂದ ಸಭೆಯವರನ್ನು ಅತ್ಯಾನಂದಪಡಿಸಿದರು. ನಂತರ ಸಭೆಯು ಭರಕಾಸ್ತಾಯಿತು.

ಹಜರತ್ ಅ. ಡೆ. ಇನ್ಸ್ಪೆಕ್ಟರ್ ಸಾಹೇಬರವರು ವಾಚನಾಲಯದ ಹೊಸ ಏರ್ಪಾಡುಗಳ ವಿಷಯದಲ್ಲಿ ಅಪ್ಪಣೆ ಕೊಡಿಸಿದಂತೆ ಬದಲಾವಣೆ ಮಾಡುವ ಉದ್ದೇಶ್ಯ ತಾ|| ೧೪ನೇ ಶನಿವಾರ ಈ ಗ್ರಾಮದ ಗೌರ್ನಮೆಂಟ್ ಸ್ಕೂಲಿನಲ್ಲಿ ನೆರೆದಿದ್ದ ಸಭೆಯಲ್ಲಿ ಮ|| ರಾ|| ವೈ. ಡಿ. ಕೆ. ನಾಭಿರಾಜಯ್ಯನವರು ಅಗ್ರಾಸನವನ್ನು ವಹಿಸಿದ್ದರು.

ಮೇಲೆ ಹೇಳಿದಂತೆ ವಾಚನಾಲಯದ ಕಾರ್ಯನಿರ್ವಾಹಕರ ಬದಲಾವಣೆಗಳು ಏನಂದರೆ— ಮ|| ರಾ|| ವೈ. ಡಿ. ಕೆ. ಆದಿರಾಜಯ್ಯನವರನ್ನು ಪ್ರೆಸಿಡೆಂಟರನ್ನಾಗಿಯೂ, ಮ|| ರಾ|| ವೈ. ಡಿ. ಶಾಂತರಾಜಯ್ಯನವರನ್ನು ವೈಸ್‌ಪ್ರೆಸಿಡೆಂಟರನ್ನಾಗಿಯೂ, ಮ|| ರಾ|| ವೈ. ಡಿ. ಕೆ. ನಾಭಿರಾಜಯ್ಯನವರನ್ನು ಸೆಕ್ರಟರಿಗಳನ್ನಾಗಿಯೂ, ಮ|| ರಾ|| ಸ್ಕೂಲ್ ಹೆಡ್ಮ್ಯಾಸ್ಟರ್ ಟಿ. ಶ್ರೀನಿವಾಸಯ್ಯನವರನ್ನು ಜಾಯಿಂಟ್ ಸೆಕ್ರಟರಿಗಳನ್ನಾಗಿಯೂ, ಮ|| ರಾ|| ವೈ. ಡಿ. ವಜ್ರನಾಭಯ್ಯನವರನ್ನು ಡೈರಕ್ಟರನ್ನಾಗಿಯೂ, ಮ|| ರಾ|| ಎಸ್. ಪೊಮ್ಮಯ್ಯನವರನ್ನು ಖಜಾಂಚಿಯರನ್ನಾಗಿಯೂ, ಮ|| ರಾ|| ಕೆ. ಜಯಕುಮಾರಯ್ಯನವರನ್ನು ಡಿಬೇಟಿಂಗ್ ಸೊಸೈಟಿ ಸೆಕ್ರಟರಿಗಳನ್ನಾಗಿಯೂ, ಮ|| ರಾ|| ಬಿ. ಶಿರಸಣ್ಣನವರನ್ನು ಪುಸ್ತಕಭಂಡಾರದ ಸೆಕ್ರಟರಿಗಳನ್ನಾಗಿಯೂ, ಮ|| ರಾ|| ಸ್ಕೂಲ್ ಅ|| ಮಾಸ್ಟರ್ ಯನ್. ನರಸಿಹ್ಮಯ್ಯನವರನ್ನು ರಿಕಾರ್ಡುಕೀಪರನ್ನಾಗಿಯೂ, ಮ|| ರಾ|| ಟಿ. ಅಂಬಣ್ಣನವರು, ಮ|| ರಾ|| ವೈ. ಡಿ. ಭುಜಬಲಯ್ಯನವರು, ಮ|| ರಾ|| ಕೆ. ಚಿಕ್ಕಾಳಯ್ಯನವರು, ಮ|| ರಾ|| ವೈ. ಡಿ. ಗಂಗಪ್ಪನವರು, ಮ|| ರಾ|| ಎಂ. ಸಿ. ನಾಗಕುಮಾರಯ್ಯನವರು, ಮ|| ರಾ|| ವೈ. ಡಿ. ಪದ್ಮಶೆಟ್ಟಯ್ಯನವರು, ಮ|| ರಾ|| ಕೆ. ದೇವರಾಜಯ್ಯನವರು ಇವರುಗಳನ್ನು ಎಗ್ಜಿಕ್ಯೂಟಿವ್ ಮೆಂಬರುಗಳನ್ನಾಗಿಯೂ ಮುಕರೂರ್ ಮಾಡಿರುತ್ತೆ.

ತರುವಾಯ ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ಉಪನ್ಯಾಸಗಳು ನಡೆಸಲ್ಪಟ್ಟು ಈ ಗ್ರಾಮವು ಜೈನಮಹಾಜನಗಳಿಗೆ ಆವಾಸಸ್ಥಾನವಾಗಿರುವುದರಿಂದ ಇಲ್ಲಿ ಹಾಲಿ ಇರುವ ಬಾಲಕರ ಪಾಠಶಾಲೆ ಜತೆಗೆ ಒಂದು ಬಾಲಿಕೆಯರ ಪಾಠಶಾಲೆಯನ್ನು ಕ್ಷಿಪ್ರದಲ್ಲಿಯೇ ಸ್ಥಾಪನೆ ಮಾಡುವುದರಿಂದ ತಮ್ಮ ಬಾಲಕಿಯರನ್ನು ವಿದ್ಯಾವತಿಯರನ್ನಾಗಿ ಮಾಡಿ ಅವರಿಗೆ ತುಂಬಾ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂಬ ದೃಢವಾದ ಆಶೆಯಿಂದ ಸಭೆಯವರೆಲ್ಲರೂ ಚರ್ಚೆ ನಡಿಸುತ್ತಿರುವ ಕಾಲದಲ್ಲಿ ಮ|| ರಾ|| ಕಠಾರಿ ಜಯಕುಮಾರಯ್ಯನವರು ಬಾಲಿಕಾಪಾಠಶಾಲೆಗೋಸ್ಕರ ಒಂದು ಕಟ್ಟಡವನ್ನು ಕ್ಷಿಪ್ರದಲ್ಲಿಯೇ ಏರ್ಪಡಿಸಿಕೊಡುವುದಾಗಿ ವಾಗ್ದಾನ ಮಾಡಿದರು. ಇವರು ತಮ್ಮ ವಾಗ್ದಾನವನ್ನು ಕ್ಷಿಪ್ರದಲ್ಲಿಯೇ ನೆರವೇರಿಸಿ ತಮ್ಮ ಕೀರ್ತಿಯನ್ನು ಇಹಪರಲೋಕಗಳಲ್ಲಿ ಸ್ಥಿರಪಡಿಸಿಕೊಳ್ಳಬೇಕೆಂಬ ಅಭಿಪ್ರಾಯವನ್ನು ಸಕಾಲದಲ್ಲಿ ಭಗವಂತನು ಇವರಿಗೆ ಪ್ರೇರೇಪಿಸಿದ್ದಕ್ಕಾಗಿ ಸಭೆಯವರೆಲ್ಲರೂ ಅತ್ಯಾನಂದಭರಿತರಾಗಿ ತಮಗುಂಟಾದ ಅಪಾರವಾದ ಸಂತೋಷವನ್ನು ಈ ಮಹನೀಯರಿಗೂ ಅಗ್ರಾಸನಾಧಿಪತಿಗಳಿಗೂ ಶ್ರೇಯಃಪ್ರಾರ್ಥನೆಯನ್ನು ಮಾಡುವುದರಮೂಲಕ ವ್ಯಕ್ತಪಡಿಸಿದರು. ಉದಾರಸ್ವಭಾವವುಳ್ಳ ಧರ್ಮಪ್ರವರ್ತಕರಾದ ಮ|| ರಾ|| ಕಠಾರಿ ಜಯಕುಮಾರಯ್ಯನವರು ವಾಗ್ದಾನಮಾಡಿರುವಂತೆ ಬಾಲಿಕಾಪಾಠಶಾಲೆಗೆ ಅನುಕೂಲವಾದ ಮತ್ತೂ ಉತ್ತಮವಾದ ಕಟ್ಟಡವನ್ನು ಕ್ಷಿಪ್ರದಲ್ಲಿಯೇ ಏರ್ಪಡಿಸಿಕೊಟ್ಟು ಇದರಿಂದುಂಟಾಗುವ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆದು ಬಾಲಿಕೆಯರ ಪುರೋಭಿವೃದ್ಧಿಗೆ ಇವರೇ ಮುಖ್ಯಕಾರಣರಾಗಿರುತ್ತಾರೆಂಬ ಶಾಶ್ವತವಾದ ಯಶಸ್ಸನ್ನು ಶೀಘ್ರದಲ್ಲಿ ಈ ಕಾರ್ಯವನ್ನು ಸಫಲಗೊಳಿಸುವುದರಿಂದ ಹೊಂದುತ್ತಾರೆಂದು ದೃಢವಾಗಿ ನಂಬಿದ್ದೇನೆ.

"ಶುಭಸ್ಯ ಶೀಘ್ರಂ" ಎಂಬ ನಾಣ್ಣುಡಿಯಂತೆ ಮೆ|| ಜಯಕುಮಾರಯ್ಯನವರು ಈ ಸತ್ಕಾರ್ಯವನ್ನು ಕ್ಷಿಪ್ರದಲ್ಲಿಯೇ ಪ್ರಾರಂಭಿಸಿದರೆ ಅವರಿಗೆ ಈ ವಿಷಯದಲ್ಲಿ ಬೇಕಾದ ಸಲಹೆಗಳನ್ನು ಕೊಟ್ಟು ಸದರಿ ಸತ್ಕಾರ್ಯವನ್ನು ಕ್ಷಿಪ್ರದಲ್ಲಿಯೇ ಸಫಲಗೊಳಿಸಲು ನಾನು ತುಂಬಾ ಕುತೂಹಲವುಳ್ಳವನಾಗಿರುವುದ್ದರಿಂದ ಈ ಸಂಗತಿಯನ್ನು ನನ್ನ ಮನಃಪೂರ್ವಕವಾಗಿ ಸಭೆಯಲ್ಲಿ ವ್ಯಕ್ತಪಡಿಸಿರುತ್ತೇನೆ. ಮತ್ತೂ ಈ ಕಾರ್ಯವನ್ನು ಯಾವಾಗ ಪ್ರಾರಂಭಿಸುವರೊ ಎಂದು ಹಾರೈಸುತ್ತೇನೆ ಎಂಬುದಾಗಿ ಈ ವಾಚನಾಲಯದ ಎಗ್ಸಿಕ್ಯೂಟಿವ್ ಮೆಂಬರಾದ ಎಂ. ಸಿ. ನಾಗಕುಮಾರಯ್ಯನವರು ತಮ್ಮ ಸಂತೋಷವನ್ನು ಈರೀತಿ ವ್ಯಕ್ತಪಡಿಸಿದರು. ಇದು ಒಂದು ಶ್ಲಾಘನೀಯವಾದ ಕಾರ್ಯವೆಂಬುದನ್ನು ವಾಚಕಮಹಾಶಯರು ಯೋಚಿಸದೆ ಇರಲಾರರು.

ಟಿ. ಆದಿರಾಜಯ್ಯ, ಮೆಂಬರು.

ಅಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

ರಾಸ್ಕೋಪಸಿಸ್ಟಂ ಪೇಟಂಟ್ ಲೀವರ್ ಜ್ಯೂವೆಲ್ಡ್ ವಾಚ್



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಐದು (೫) ವರುಷಗಳು ಗ್ಯಾರೆಂಟು.

ಕ್ರಯ ರೂ. ೨-೮-೦ ವಿ. ಪಿ. ಚಾರ್ಜು ರೂ. ೦-೪-೦.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ ೦-೮-೦ ವಿ. ಪಿ. ಚಾರ್ಜು ೦-೪-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ.
ನಂಬರು ೨೦ ಸಿಂಗಣ್ಣಬೀದಿ, ವಾಲಾಟಾಕ್ಸ್ ರೋಡು,
4 ಮದರಾಸು.

ಉತ್ತಮ ಗ್ರಂಥಗಳು.

104

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ — ೦.೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೦ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕಂದಂ.— ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ, ಮೈಸೂರು.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

24

೧. ಸ್ವರ್ಣಗಂಗಾಧರಮಾತ್ರೆ.— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ.

ಸರ್ವಮೇಹರಾಜಾಂಗ ರಬ್ಬರ್‌ಎಣ್ಣೆ.—ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರಿಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಚಿಬ್ಬು, ವ್ರಣ, ಕುಷ್ಠ. ಮಹೋದರ, ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂತಿಮೇಹ, ಮೂತ್ರಕೃಚ್ಛ್ರ ಅಸ್ತಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕುಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ, ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ—ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚು ೬ ಆಣೆ.

೯. ಮಹಾಕುಂಡಳ್ಯಾದಿರಸಾಯನ— ಇದರಿಂದ ಕ್ಷಯ ಕಾಶಿ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟ್ಲು ಉರಿ ಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶ ನೀರು ಎರೆಯುವಾಗ ಜ್ಞಾನ ತಪ್ಪುವುದು, ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳಿಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಬಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಶರಬತ್ತುಗಳೂ, ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚೆನ್ನಬಸಪ್ಪ ಅಂಡೆಸನ್ಸ್,
ಚೆನ್ನಪಟ್ಟಣ, ಬೆಂಗಳೂರು, ಡಿಸ್ಟ್ರಿಕ್ಟ್.

4

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.

ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳ್ತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಪ್ಕರ, ಮರ್ಚಂಟ,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಪದ್ಮರಾಜ ಪುರಾಣಂ. 63

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಅಣೆ.

ಬಿ. ಮಲ್ಲಾರಾಧ್ಯರು,
ಗರ್ಲ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ ಬಿ. ಬಸವಾರಾಧ್ಯರು,
ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್, ಬೆಂಗಳೂರು.

ಮೊದಲು ಇದನ್ನು ಓದಿರಿ.

22

ಅಂಜೀರಾರ್ಕಮಧು:— ಇದರ ಸೇವನದಿಂದ ಮೊಯೊಳಗಿನ ಉಷ್ಣತೆಯು ಹೋಗಿ ಧಾತುಪೌಷ್ಠಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿಧಾರಣಕ್ಕೆ ಯೋಗ್ಯವಾದ ಧಾತು ಆಗುತ್ತದೆ. ನಡುವೇ ಯಾವದಾದರೊಂದು ಕಾರಣದಿಂದ ನಪುಂಸಕತ್ವವಾದರೆ ಇದರಿಂದ ಖಾತ್ರಿಯಿಂದ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ ಅನ್ನ ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ, ಅನ್ನ, ಹಾಲು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತವಾಗುತ್ತಾರೆ. ಕ್ರಯ ೧ ಬಾ. ೧॥= ರೂ. ೨ ಬಾ. ೨॥। ರೂ. ೩ ಬಾ. ೩॥= ಟ.ಖ.ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡ. ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು. ಟ. ಖ. ಬೇರೆ.

ಸಾರ್ಸಾಪರಿಲಾ:—ಇದರಿಂದ ಪರಮಾ, ಗರಿಮಿ ಹೋಗುತ್ತದೆ. ಉಷ್ಣದಿಂದ ಆದ ಯಾವದಾದರು ವಿಕಾರಗಳು ರಸಾಯನ ಶೇವನ ಮಾಡಿದ್ದರಿಂದ ಉಂಟಾದ ರೋಗಗಳು ಮತ್ತು ಉಷ್ಣವು ಬಡೆದು ಆದ ಬಿಳೇಕರೇಕಲೆಗಳು, ಭಗೇಂದ್ರ, ಪಿನಸಿ, ಇತ್ಯಾದಿರೋಗಗಳು ಖಾತ್ರಿಯಿಂದ ನೆಟ್ಟಗಾಗುವವು. ಕ್ರಯ ೧ ಬಾ. ೧॥ರೂ. ೩ ಬಾ. ೪ರೂ. ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ತದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು. ಟ. ಖ. ಬೇರೆ.

“ಪಾಚಕ.”

(“ಪಚನ ಮಾಡುವ ಔಷಧವು.”)

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರತೇಗುಗಳು ಬರುವದಿಲ್ಲ. ೧ ಬಾ. ೮ ಆಣಿ ಟ. ಖ. ಬೇರೆ.

ನಂ. ೫೫ “ಅಂಜೀರಾರ್ಕಮಧುಕಂಪನಿ”
ಧಾರವಾಡ ಮತ್ತು ಮಿರಜ. (ಇಂಡಿಯಾ)

೧೯೧೧ನೇ ಇಸವಿ ಜನವರಿ ತಾ॥ ೨೩ ರಿಂದ ೧೯೧೧ನೇ ಜನವರಿ ತಾ॥ ೨೯ ರವರಿಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ಸಾಧಾರಣ ಸಂವತ್ಸರದ ಪುಷ್ಯ ಬ॥ ನವಮಿಯಿಂದ ಪುಷ್ಯ ಬ॥ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕರೆ ತೇದಿ
23	ಸೋ	ನ	53-43	ಸ್ವಾತಿ	12-30	10
24	ಮಂಗ	ದ	58-40	ವಿಶಾಖ	18-48	11
25	ಬುಧ	ಏ	60-0	ಅನೂರಾ	25-3	12
26	¹ಗುರು	ಏ	4-18	ಜ್ಯೇಷ್ಠ	1-32	13
27	ಶುಕ್ರ	ದ್ವಾ	9-36	ಮೂಲ	37-35	14
28	ಶನಿ	ತ್ರ	13-53	ಪೂ ಷಾ	41-34	15
29	²ಭಾನು	ಚ	17-13	ಉಷಾ	47-17	16

(1) ಸರ್ವತ್ರೈಕಾದಶಿ, ಗುರುವಾರೈಕಾದಶಿ. (2) ಸರ್ವತ್ರ ಅಮಾವಾಸ್ಯಾ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಜನವರಿ ತಾರೀಖು ೩೦ ನೇ ಸೋಮವಾರ. [ಸಂಚಿಕೆ ೫.

ಊದಬತ್ತಿಗಳು.

48

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦ ; ಕಸ್ತೂರಿ ಬಿಲಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ಶಾದಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

87 ಜೇರಿಗೆ ಬಸವಲಿಂಗಪ್ಪನ ಪುಸ್ತಕಗಳು.

ಬೆಲೆ ಬಹುಳ ಕಡಿಮೆ. ನೋಡಿ. ನೋಡಿ. ಬಿಡಬೇಡಿ.

ಪದ್ಮಾವತಿಕಥೆ:– ವೀರಶೈವವಚನನಾಟಕ. ೯೮ ಡೆಮ್ಮಿ ಪುಟ. ಕ್ರಯ. ೦-೨-೦. ವಿ. ಪಿ. ಯಿಂದ ೦-೩-೦

ವೀರಶೈವಮತವಿಷಯಸಾರ (೨ ನೇ ಭಾಗ) ಕ್ರಯ ೦-೨-೦. ವಿ. ಪಿ. ಯಿಂದ ೦-೪-೦.

ಷಟ್ಸ್ಥಲಚಿಂತಾರತ್ನ. – ಕ್ರಯ ೦-೨-೦. ವಿ. ಪಿ. ಯಿಂದ ೦-೪-೦.

ವಿಳಾಸ.—ಬೆಂಗಳೂರು ಸಿಟಿ ಅರಳೇಪೇಟಿ ಜೇರಿಗೆ ನಂಜಪ್ಪನವರ ಮಗ ಬಿ. ಜಿ. ಬಸವಲಿಂಗಪ್ಪನವರಿಗೆ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಡೆನ್ಸ್	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

47

ಹೊಸಪುಸ್ತಕಗಳು.

ನೂತನಗೃಹಪ್ರವೇಶ, ಪಟ್ಟಾಧಿಕಾರ, ಲಿಂಗಧಾರಣ ಈ ಮೂರು ವಿಧಿಗಳು ಟೀಕಾ ಸಮೇತವಾಗಿ ಒಂದು ಪುಸ್ತಕದಲ್ಲಿ ಮುದ್ರಿತಗಳಾಗಿರುತ್ತವೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೨ ಆಣೆ. ಶ್ರೀಚೆನ್ನಬಸವೇಶ್ವರವಿರಚಿತಮಾದ ಶಿವಾನುಭವಶಾಸ್ತ್ರ ಕನ್ನಡ ವಾಕ್ಯರೂಪಾಗಿದೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೫ ಆಣೆ. ವೀರಶೈವದಶಕರ್ಮವಿಧಿ ಬೆಲೆ ಪ್ರತಿ ೧ಕ್ಕೆ ವಿ. ಪಿ. ೮ ಆಣೆ. ಶಿವಸ್ತುತಿಮಣಿಮಾಲಾ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೬ ಆಣೆ. ರಾಜಶೇಖರ ೧೩–೧೪ ಆಶ್ವಾಸ ಪ್ರತಿಪದಾರ್ಥ ತಾತ್ಪರ್ಯಸಹಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಇದೆ.

ಕ್ರಯ— ಪ್ರತಿ ೧ ಕ್ಕೆ ವಿ. ಪಿ. ೧-೩-೦.

ಸಟೀಕ ವೀರಶೈವ ಅಂತ್ಯೇಷ್ಟಿವಿಧಿ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೮ ಆಣೆ. ವಿಳಾಸ:— ಕೆ. ಶಾಂತವೀರಪ್ಪ,
ದೊಡ್ಡಪೇಟೆ, ಬೆಂಗಳೂರು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ.

87 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷದಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

8

ಲೋಕಾಮಯಹಾರ ಕಸ್ತೂರೀ ಮಾತ್ರೆ.



ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ(ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ,ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನುಸೇವಿಸುತಿರುವವರು ಖಂಡಿತವಾಗಿಯೂ ಪ್ಲೇಗಿನಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೮ ಕುಪ್ಪಿವರೆಗೆ ಪೋಸ್ಟೇಜು ೪ ಆ.

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರುಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ;— ಸೀತಾರಾಘವವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
21 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಷೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಷೆ ೦—೪—೦., ೨೪ ಮಾತ್ರೆ ಸೀಷೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಷೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಷೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಷೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಷೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಷೆ ೨—೦—೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧—೦—೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦—೮—೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦—೧೨—೦.
ದಂತಶುದ್ಧಿ ಚೂರ್ನ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕೆ. ಬರೆಯಿರಿ.

ಸೌಗಂಧಿಕಾಪರಿಣಯ.

(ಕಳೆದವಾರದ ಶೇಷ.)

ಈಪರಿಯಲ್ಲಿ ಧರ್ಮಕಂಟಕರಾದ ದುಷ್ಟರಾಕ್ಷಸರು ಲೋಕಗಳನೆಲ್ಲವನ್ನಾಕ್ರಮಿಸಿ ಬರುತಲಿದ್ದರೆ, ಅದಂ ನೋಡುತ ಅವಮಾನವಿಲ್ಲದೆ ಯಿರುವ ನನ್ನಂಥವರು ಭೂಮಿಯಲ್ಲಿದ್ದುದಕ್ಕೆ ಫಲವೇನು? ನಾವು ಸಾಧಾರಣರಂತೆ ಅಶನವಸನಕ್ಕೋಸುಗಲೇ ಇರುವಂತಾಯಿತೆಂದು ನುಡಿಯಲಾ ರಾಯನ ವಾಕ್ಯವಂ ಕೇಳಿ, ಸುಮತಿಯು-ಅಯ್ಯಾ ರಾಜಾಧಿರಾಜನೆ! ಪ್ರಾಕೃತ ಜನರಂತೆ ನೀನು ಪೇಳುವುದುಂಟೆ? ಪೂರ್ವದಲ್ಲಿ ಈಗಿನಂತೆ ಪಾತಾಳವಾಸಿಗಳಾದ ರಾಕ್ಷಸರಿಂದ ಲೋಕಗಳು ಆಕ್ರಾಂತವಾಗಿ, ಧರ್ಮವು ಲುಪ್ತವಾಗುವುದಂ ತಿಳಿದು, ದೇವತೆಗಳು ಮನುಷ್ಯರೂಪದಿಂದವತರಿಸಿ, ದುಷ್ಟರಂ ನಿಗ್ರಹಿಸಿ, ಧರ್ಮಸಂಸ್ಥಾಪನೆಯಂಗೈದರೆಂದು ಬಹುವಾಗಿ ಕೇಳಿರುವೆವಷ್ಟೆ. ಈಗಲೂ ದುಷ್ಟನಿಗ್ರಹಕ್ಕೋಸುಗ ದೇವತಾಂಶರಾದ ನಿಮ್ಮಂಥ ಮಹಾಪುರುಷರು ಉದಯಿಸಿರುವಲ್ಲಿ, ಜಂಬೂದ್ವೀಪವಂ ರಾಕ್ಷಸರು ಆಕ್ರಮಿಸುವರೆಂಬುವುದು ಸಂಭವಿಸಲಾರದೆಂದು ಪೇಳಲು, ಅದಂ ಕೇಳಿ ರಾಜೇಂದ್ರನು-ಅಯ್ಯಾ ಮಂತ್ರಿಯೆ! ಧರ್ಮಕ್ಕೆ ಲೋಪವು ರಾಕ್ಷಸರಿಂದ ಉಂಟಾಗುವುದೆಂದು ಕೇಳಿದಮಾತ್ರಕ್ಕೇ ಅನ್ನೋದಕಗಳನ್ನಾದರೂ ತ್ಯಜಿಸಿ, ಶಕ್ತರಾದವರು ತತ್‌ಕ್ಷಣದಲ್ಲಿಯೇ ದುಷ್ಟನಿಗ್ರಹಕ್ಕೆ ಯತ್ನವಂ ಮಾಡಬೇಕಲ್ಲದೆ, ಮಾತೃಪಿತೃ ಗುರು ದೇವತೆಗಳಿಗಿಂತಲೂ ಅಧಿಕವಾಗಿ ಸ್ವರ್ಗಾಪವರ್ಗವಂ ಕೊಡುವ ಧರ್ಮದ ವಿಷಯದಲ್ಲಿ ಉಪೇಕ್ಷಾವಂತರಾದವರು ನರಕಭಾಜನರಾಗುವರೆಂದು ಕೇಳಿರುವೆಯಷ್ಟೆ. ದೇವತಾಕಟಾಕ್ಷದಿಂದೊದಗಿರುವ ಮಹಾಸಾಧನಗಳಲ್ಲಿ ಈಗಲೇ ಒಂದು ಮಹಾಸ್ತ್ರಪ್ರಯೋಗವಂ ಮಾಡಿ ರಾಕ್ಷಸವಂಶವನ್ನಾಶಗೊಳಿಸದಿದ್ದರೆ, ಪಾಪಿಷ್ಠರ ಗತಿಯಂ ಹೊಂದುವೆನೆಂದು ಧನುಸ್ಸಿಗೆ ನಾರಿಯಂ ಕಟ್ಟುವುದಕ್ಕೆ ಯತ್ನವಂ ಮಾಡಲಾರಾಯನನ್ನೋಡಿ, ಅಯ್ಯಾ ರಾಕ್ಷಸವನದಾವಾನಲನೆ! ನೀನು ಧರ್ಮಸ್ಥಾಪನವಂ ಮಾಡುವುದಕ್ಕೆ ದಕ್ಷನೆಂದು ತಿಳಿದು ಅದಕ್ಕೋಸುಗವೇ ಬಹು ಸಾಧನಗಳಂ ಕೊಟ್ಟು, ಯಕ್ಷಾಧಿಪತಿಯಂ ನಿಯಮಿಸಿ, ಶ್ರೇಯೋವಂತನಾಗಿರೆಂದು ಹೇಳಿದ ದೇವಿಯ ವಾಕ್ಯಕ್ಕೆ ಅರ್ಥವೇನೆಂದರೆ-ತಾವು ಪಾಲಿಸಿರುವ ಸಾಧನಗಳಿಂದ ದುಷ್ಟರನ್ನಿಗ್ರಹಿಸಿ, ಭೂಭಾರವನ್ನಿಳುಹಿಸಿ ಯಶೋವಂತನಾಗಿರೆಂದು ಹೇಳಿದಂತಾಯಿತು. ಹೀಗಲ್ಲದೆ, ತಾಳುಮೆಯಿಲ್ಲದವನ ಜೀವನಾರ್ಥವಾಗಿ ಮಹಾಸಾಧನಂಗಳಂ ದೇವಿಯು ಕೃಪೆಮಾಡಿ ಕೊಡಲಿಲ್ಲ. ಹೀಗೆ ದೇವತಾನುಗ್ರಹಕ್ಕೆ ಪಾತ್ರನಾಗಿ ಬಹುಸಾಧನಗಳಂ ಕೊಡಿದ್ದಾಗ್ಯೂ ಆ ಸಾಧನಗಳು ಕಾಲದೇಶಾನುಗುಣವಾಗಿ ಫಲವಂ ಕೊಡುವುವು. ವಿಮರ್ಶೆಯಿಲ್ಲದೆ ದುಡುಕುವವರಿಗೆ ಫಲಿಸಲಾರವು. ಪ್ರಭುವಾದವನು ಆಪದ್ಧನವಂ ರಕ್ಷಿಸಿಕೊಂಡಿರುವಂತೆ ಸಾಧನಗಳಂ ರಕ್ಷಿಸಿಕೊಂಡು ಆವಶ್ಯಕವಾಗಿ ಬಂದೊದಗಿದ ಕಾರ್ಯವಂ ಆ ಸಾಧನಮೂಲಕದಿಂ ಗೆಲ್ಲಬೇಕು; ಆದುದರಿಂ ದೈವಸಹಾಯದಿಂದುಂಟಾದ ಯಶಸ್ಸು ಪೌರುಷದಿಂದುಂಟಾದ ಯಶಸ್ಸಿಗೆ ಸಮಾನವಾಗಲಾರದು; ಆದುದರಿಂ ಕಾಲ ದೇಶ ವಸ್ತುವಿಮರ್ಶಾಪೂರ್ವಕವಾಗಿ ಯತ್ನವಂ ಮಾಡಿದರೆ, ಕಾರ್ಯಕೈಗೂಡುವುದರಲ್ಲಿ ಸಂಶಯವಿಲ್ಲ. ಇದರಲ್ಲಿ ಕಾಲನಿರ್ಣಯವೆಂತೆಂದರೆ- ನೆನ್ನೆದಿನ ಪ್ರಹರಿಸಿ ಹೊರಟುಹೋದ ಶತ್ರುವಿನ ಮೇಲೆ ಈ ಖಡ್ಗವಂ ಪ್ರಯೋಗಿಸುವುದೆಂಬುದು ನಿಷ್ಫಲವಾಗುವುದರಿಂದ ದ್ವಂದ್ವಯುದ್ಧವನ್ನಪೇಕ್ಷಿಸುವುದು, ಸಮಕಾಲನಿರೀಕ್ಷಣವಂ ಮಾಡುವುದೇ ಕಾಲನಿರೀಕ್ಷಣೆಯೆಂದು ಹೇಳಬೇಕಾಯಿತು. ದೇಶವೆಂದರೆ- ಲಕ್ಷ್ಯವಂ ಹಿಂಭಾಗದಲ್ಲಿ ಮಾಡಿಕೊಂಡು ಮುಂಭಾಗದಲ್ಲಿ ಬಾಣವಂ ಪ್ರಯೋಗಿಸಿದರೆ ಅದು ನಿಷ್ಫಲವಾಗುವುದರಿಂದ ಅಭಿಮುಖವನ್ನಪೇಕ್ಷಿಸುವುದೆಂಬುದೇ ದೇಶವಿಮರ್ಶೆಯೆಂದು ಹೇಳಬೇಕಾಯಿತು. ವಸ್ತುವಿಮರ್ಶೆಯೆಂತೆಂದರೆ- ಲಕ್ಷ್ಯ, ಸಾಧನ, ಪೌರುಷವೆಂದು ವಸ್ತುವು ತ್ರಿವಿಧವು. ಇದಕ್ಕೆ ಅನುರೂಪವಾಗಿ ಯತ್ನವಂ ಮಾಡದಿದ್ದರೆ ಕಾರ್ಯ ಸಫಲವಾಗಲಾರದು. ಏನೆಂದರೆ-ಶತ್ರುವಿನ ಗಜಸಹ್ಮಾರಕ್ಕೆ ಶುಷ್ಕಪರ್ಣವಂ ಬಹುಬಲದಿಂ ಬೀಸಿ ಬಿಸುಟರೆ ಸಾಧನವು ಅಲ್ಪವಾದುದರಿಂ ಕಾರ್ಯ ನಿಷ್ಫಲವು; ಮತ್ತೂ ಬಾಹುಬಲದಿಂದ ಭಲ್ಯವಂ ತೂಗಿ ಮಕ್ಷಿಕದಮೇಲೆ ಎಸೆದರೆ ಲಕ್ಷ್ಯವು ಅಲ್ಪವಾದುದರಿಂದ ಅದು ಸಫಲವಲ್ಲ: ಮತ್ತೂ ದುರ್ಬಲನಾದ ಬಾಲಕನು ಎತ್ತಲಾರದ ಪರಶುವಿನಿಂದ ಮಹಾವೃಕ್ಷವಂ ಛೇದಿಸುವೆನೆಂದು ಪರಶುವನ್ನೆತ್ತಲಾರದೆ ಯಿರುವಲ್ಲಿ ಪೌರುಷವು ಸ್ವಲ್ಪವಾದುದರಿಂದ ಅದೂ ನಿಷ್ಫಲವಾಗುವುದು; ಆದುದರಿಂದ ಲಕ್ಷ್ಯ, ಸಾಧನ, ಪೌರುಷಾನುಗುಣವಾಗಿ ಕಾರ್ಯಯತ್ನವಂ ಮಾಡಿದರೆ, ಬಹುಬಲದಿಂ ಖಡ್ಗವನ್ನೆತ್ತಿ ಕದಳೀಸ್ತಂಭದಮೇಲೆ ಬಿಟ್ಟಂತೆ ಕಾರ್ಯ ಸಫಲವಾಗುವುದು; ಇದೇ ದೇಶಕಾಲವಸ್ತು ವಿಮರ್ಶೆಯೆನಿಸುವುದು. ಈ ಅರ್ಥದಲ್ಲಿ ರಾಮಾದಿಗಳ ಚರಿತ್ರೆಯೇ ನಿದರ್ಶನವು. ಹೀಗಲ್ಲದೆ ಛಾಯಾಗುಪ್ತನು ಹೇಳಿದುದಂ ಕೇಳಿ ಒಮ್ಮಿಂದೊಮ್ಮೆಯೇ ದ್ವೀಪಾಂತರವಾಸಿಗಳಾದ ರಾಕ್ಷಸರ ಮೇಲೆ ಇದ್ದಬಳಿಯೇ ಮಹಾಸ್ತ್ರವಂ ಪ್ರಯೋಗಿಸಲೆಣಿಸಿದರೆ ಅದು ಯೇನುತೆರನಾಗುವುದೊ? ಅದರಲ್ಲಿ ಅಪರಾಧಿಗಳೂ ಉಂಟು, ನಿರಪರಾಧಿಗಳೂ ಉಂಟು. ನಿರಪರಾಧಿಗಳಲ್ಲಿ ಅಸ್ತ್ರದೇವತೆಗಳಿಗೆ ಸಹ್ಮಾರವು ಸಮ್ಮತವಾಗಲಾರದು; ತಿರುಗಿ ಅದು ಕೈಸೇರದು. ರಾಕ್ಷಸರೆಲ್ಲರೂ ಧರ್ಮಕಂಟಕರೆಂದು ಹೇಳಿದರೆ ಧರ್ಮಸ್ಥಾಪಕರಾದ ದೇವತೆಗಳಿಗೆ ಸಹಾಯರಾದ ನೈಋತ್ಯದಿಕ್ಪತಿಯೂ, ವಿಭೀಷಣಾದಿಗಳೂ ಇರುವರು. ಇದರಿಂದ ಪೂರ್ವಿಕರಾದ ಮಹಾರಾಯರು ಅಪರಾಧಿಗಳಂ ದಂಡಿಸಿದರಲ್ಲದೆ ಜಾತಿವೈರವಂ ಮಾಡಿದವರಲ್ಲ; ಹಾಗೆಯೇ ಮಹಾಶೂರನಾದ ನೀನು ವಿಮರ್ಶೆಯಿಂದ ಕಾರ್ಯಾರಂಭವಂ ಮಾಡಬೇಕು. ಸೇವಕನಾದ ನನಗೆ ನೀನು ಸಂರಕ್ಷಕನಾದ ಸ್ವಾಮಿಯು; ಮಂತ್ರೋಪದೇಶವಂ ಮಾಡಿದುದರಿಂದ ಪೂಜ್ಯನಾದಗುರುವು. ಆದಾಗ್ಯೂ ಮಂತ್ರಿತ್ವವೆಂಬ ಭೃತ್ಯಪದದಲ್ಲಿರುವಂತೆ ಅಪ್ಪಣೆಯಾಗಿರುವುದರಿಂದ ಸಮಯಾನುಗುಣವಾಗಿ ವಿಜ್ಞಾಪಿಸಿದೆನು. ಚಿತ್ತಕ್ಕೆ ಒಪ್ಪಿದಂತೆ ನಡಸಬಹುದೆಂಬ ಮಂತ್ರಿಯ ವಾಕ್ಯವಂ ಕೇಳಿ, ಎಲೈ ಮಿತ್ರನೆ! ಕಾಲದೇಶವನ್ನರಿತು ಖಂಡಿತವಾಗಿ ಕಾರ್ಯವಂ ತಿಳುಹಿಸಬೇಕೆಂದು ನಿನ್ನಂ ಮಂತ್ರಿಪದದಲ್ಲಿ ನಿಯಮಿಸಿರುವೆನು; ಪ್ರಭುಗಳಾದವರು ಎಷ್ಟು ನೀತಿಜ್ಞರಾದಾಗ್ಯೂ ಸಮಯ ವಿಶೇಷದಲ್ಲಿ ಖಂಡಿತವಾಗಿ ಉಚಿತವಂ ಹೇಳುವವನಾಗಿ, ಆಪ್ತನಾಗಿ, ದಕ್ಷನಾಗಿ ಶುಚಿಯಾದ ಪುರುಷನು ಮಂತ್ರಿಪದಸ್ಥನಾಗಿರಬೇಕೆಂದು ಮಹಾತ್ಮರಾದ ಕಾಮಂದಕಾದಿಗಳ ವಚನವಿರುವುದು. ಮುಂದೆ ಮಾಡತಕ್ಕ ಕಾರ್ಯವೇನು? ಯೆನಲು, ಸುಮತಿಯು-ಅಯ್ಯಾ ರಾಜಶಿರೋಮಣಿಯೆ! ಛಾಯಾಗುಪ್ತನು ಹೇಳಿದ ವಾಕ್ಯದಿಂದ ಉಗ್ರಬಾಹುವೆಂಬ ರಾಕ್ಷಸನು ಮಹಾಗಜಮೂಲಕದಿಂದ ಪ್ಲಕ್ಷದ್ವೀಪಾಧಿಪತ್ಯವಂ ಮಾಡುತ, ಧರ್ಮಕಂಟಕನಾಗಿರುವುದು ಸಿದ್ಧವಾದುದರಿಂದವನ ನಿಗ್ರಹವು ನಮಗೆ ಅತ್ಯಾವಶ್ಯಕವು; ಅದಕ್ಕೆ ಪಣವೆಂಬ ನಿಮಿತ್ತ ವುಂಟಾಗಿ ಇದೂ ಆವಶ್ಯಕವಾದುದರಿಂದ ಆ ದುಷ್ಟನಿಗ್ರಹಪೂರ್ವಕವಾಗಿ ಆ ಮಹಾಗಜವು ನಮಗೆ ಲಭಿಸಬೇಕು; ಇದಕ್ಕೆ ಅನಾಯಾಸದಿಂ ಪ್ಲಕ್ಷದ್ವೀಪವನ್ನೈದಲೋಸುಗ ಛಾಯಾಗುಪ್ತನು ಸೇವಕನಾಗಿರುವುದರಿಂದ, ಹತ್ತಿಯ ರಾಶಿಗೆ ಅಗ್ನಿಕಣ ಸೋಂಕಿದಂತೆ ನಿನ್ನ ಬಾಣಾಗ್ನಿಯಿಂದ ರಾಕ್ಷಸಸಂಘವು ನಷ್ಟವಾಗುವುದರಲ್ಲಿ ಸಂಶಯವಿಲ್ಲ; ಈ ಯೆರಡು ಕಾರ್ಯವನ್ನಿರ್ವಹಿಸಿದರೆ ಅಪ್ರಾರ್ಥಿತವಾಗಿ ಯಶಸ್ಸು ಲಭಿಸುವುದು. ಆ ಪ್ಲಕ್ಷದ್ವೀಪವಂ ನಾವು ಹೊಂದಿದಬಳಿಕ ಅಲ್ಲಿಯ ಪ್ರಕೃತವಿದ್ದಂತೆ ಕಾರ್ಯೋದ್ಯೋಗವಂ ಮಾಡಬೇಕೆಂದು ವಿಜ್ಞಾಪಿಸಲಾ ಮಂತ್ರಿಯ ಬಿನ್ನಪವಂ ಕೇಳಿ ಸುಗಂಧಮಹಾರಾಯನು ಹಾಗೇ ಆಗಲೆಂದು ನುಡಿದು ಸುಖದಿಂದಾರಾತ್ರಿಯಂ ಕಳೆದು,

ಸಶೇಷ.

ಶ್ರೀಮನ್ಮಹಾರಾಜರ ಸಂಸ್ಥಾನ ಸಂಚಾರ.

ಮಾರಿಕಣಿವೆಕೆರೆ.

ಈ ಕೆರೆಯು ಪ್ರಪಂಚದಲ್ಲಿರತಕ್ಕ ಕಲ್ಪಿತವಾದಕೆರೆಗಳಲೆಲ್ಲಾ ಬಲು ದೊಡ್ಡದು. ಈ ಕೆರೆಯಿರುವ ಪ್ರದೇಶದಲ್ಲಿ ನದಿ, ಬೆಟ್ಟ ಗುಡ್ಡಗಳ ಪ್ರದೇಶದಿಂದ ಅಪಾರವಾದ ನೀರು ಹರಿದು ವೃಥಾ ಹೋಗುತಲಿದ್ದುದನ್ನು ಕೈ॥ ಶೇಷಾದ್ರಯ್ಯರು ನೋಡಿ, ಗುಡ್ಡಗಳನ್ನನುಸರಿಸಿ ದೊಡ್ಡ ಅಣೆಯನ್ನು ಕಟ್ಟಿ ನೀರನ್ನು ತಡೆದಲ್ಲಿ ಲಕ್ಷಾಂತರ ಎಕರೆ ಭೂಮಿಯು ತರೀ ವ್ಯವಸಾಯಕ್ಕನುಕೂಲವಾಗಿ, ಮೈಸೂರ ಸೀಮೆಯ ಆಯವು ಬಹುವಾಗಿಹೆಚ್ಚಿ ಪ್ರಜೆಗಳೂ ಶ್ರೀಮಂತರಾಗುವರೆಂಬ ದೀರ್ಘಾಲೋಚನೆಯಿಂದ ಲಕ್ಷಾಂತರ ರೂಪಾಯಿಗಳ ವ್ಯಯವನ್ನು ಮಾಡಿ, ಪ್ರಸಿದ್ಧರಾದ ಇಂಜನೀರುಗಳ ಸಹಾಯದಿಂದ ಈ ಅದ್ವಿತೀಯವಾದ ಕೆರೆಯನ್ನು ಕಟ್ಟಿಸಿದರು. ಇದರ ಕೆಲಸವು ೧೮೯೭ ರಲ್ಲಿ ಆರಂಭಿಸಲ್ಪಟ್ಟು ೧೯೦೭ ರಲ್ಲಿ ಮುಗಿದಿತು. ನಮ್ಮ ಮೈಸೂರ ಸೀಮೆಯೊಳಗಿರತಕ್ಕ ಈ ಕೆರೆಯ ವಿಸ್ತೀರ್ಣವು ೫೦೯೦ ಚದರ ಮೈಲಿಗಳಿರುವುದು. ಮತ್ತೂ ಇದಕ್ಕೆ ೮೦೩೫ ಚದರಮೈಲಿ ವಿಸ್ತೀರ್ಣ ಪ್ರದೇಶದಿಂದ ನೀರು ಹರಿದು ಬರುವುದು. ವೇದಾವತೀನದಿಯು ಕೆರೆಯ ಮೇಲ್ಭಾಗದಲ್ಲಿ ೬೫ ಮೈಲಿವರೆಗೂ ಕೆಳಭಾಗದಲ್ಲಿ ೯೫ ಮೈಲಿವರೆಗೂ ಹರಿಯುವುದು. ಬಾಬಾಬುಡರ್ ಬೆಟ್ಟದೆತ್ತರವು ಭೂಮಟ್ಟದಿಂದ ೬೨೦೦ ಅಡಿ ಯಿರುವುದು. ಆದರೆ ಈ ಕೆರೆಯ ಎತ್ತರವು ೨೦೫೦ ಅಡಿ ಯಿರುವುದು. ಬಾಬಾಬುಡರ್ ಬೆಟ್ಟದಲ್ಲಿ ವರ್ಷವೊಂದಕ್ಕೆ ಸರಾಸರಿ ೧೫೦ ಅಂಗುಲ ಮಳೆಯಾದರೆ, ಈ ಕೆರೆಯ ಪ್ರದೇಶದಲ್ಲಿ ಸರಾಸರಿ ೩೪ ಅಂಗುಲ ಮಳೆಯಾಗುವುದು. ಮತ್ತೂ ಹಿರಿಯೂರಿನಲ್ಲಿ ೧೫ ಅಂಗುಲ ಮಳೆಯಾಗುವುದು. ಈ ಕೆರೆಯಲ್ಲಿ ಚೆನ್ನಾಗಿ ಮಳೆಯಾಗದವರ್ಷ ೧೮೦೦೦ ಯೂನಿಟ್ಟು ನೀರು ಮತ್ತೂ ಚೆನ್ನಾಗಿ ಮಳೆಯಾದ ವರ್ಷದಲ್ಲಿ ೬೮೦೦೦ ದಿಂದ ೧೦೦೦೦೦ ಯೂನಿಟ್ಟು ನೀರು ನಿಲ್ಲಲು ಅನುಕೂಲಿಸುವುದು. ಈ ಕೆರೆಗೆ ಕಟ್ಟಿರುವ ಅಣೆಯು ಕೆರೆಯ ಭೂಮಟ್ಟದಿಂದ ೧೫೮ ಅಡಿಯೂ, ಕೋಡಿಯು ೧೩೦ ಅಡಿಯೂ ಎತ್ತರವಿರುವುವು. ಈ ಅಣೆಯ ಉದ್ದವು ೧೫೩೦ ಅಡಿಗಳು. ಇದರ ತಳದ ಅಗಲವು ೧೫೦ ರಿಂದ ೧೬೦ ಅಡಿಯೂ, ತಲೆಯ ಅಗಲವು ೧೬ ಅಡಿಯೂ ಇರುವುದು. ಮತ್ತೂ ತಳಹದಿಯು ತಳದಿಂದ ೯೦ ಅಡಿಯ ಮೇಲಿರುವುದು. ೬ ಅಡಿ ತೂಬಿನಲ್ಲಿ ೧೦೦೦ ಘನಅಡಿ ನೀರು ಹೊರಗೆ ಹೋಗುವುದು. ಪ್ರತಿಯೊಂದು ತೂಬೂ ೮ ಟನ್ ತೂಕವಿರುವುದು. ದೊಡ್ಡ ಕೋಡಿಯು ೪೬೮ ಅಡಿಯುದ್ದವಿರುವುದು ಮತ್ತೂ ೬೦೦೦೦ ಘನಅಡಿ ನೀರು ೬॥ ಇಂದ ೧೦ ಅಡಿಯ ಎತ್ತರದವರೆಗೆ ಹರಿದುಹೋಗುವುದು. ಈ ಕೆರೆಯಲ್ಲಿ ನೀರು ೮ ಮೈಲಿ ಅಗಲಕ್ಕೂ ೧೮ ಮೈಲಿ ಉದ್ದಕ್ಕೂ ನಿಲ್ಲುವುದು. ಈ ಕೆರೆಯನ್ನು ಕಟ್ಟಿದುದಕ್ಕಾಗಿ ೩೦ ಗ್ರಾಮಗಳು ತೆಗೆಯಲ್ಪಟ್ಟು ೬೦೦೦೦ ರೂಪಾಯಿಗಳು ಪರಿಹಾರವಾಗಿ ಕೊಡಲ್ಪಟ್ಟುವು. ಈ ಕೆರೆಯ ಮೇಲ್ಭಾಗದಲ್ಲಿ ೮೮ ದೊಡ್ಡ ಮತ್ತೂ ೮೮೦ ಸಣ್ಣ ಕೆರೆಗಳಿರುವುವು. ಇವುಗಳಲ್ಲಿ ೮೬೦೦೦ ಯೂನಿಟ್ ನೀರು ಶೇಖರವಾಗುವುದು. ಈ ಕೆರೆಯನ್ನು ಕಟ್ಟಲು ಆದವ್ಯಯದ ವಿವರ-ಅಣೆಕಟ್ಟಿಗೆ ೧೮೩೫೦೦೦ ರೂ ; ಕೋಡಿಗೆ ೫೬೦೦ ರೂ ; ತೂಬುಗಳಿಗೆ ೧೬೫೦೦೦ ರೂ ; ಇತರ ಭಾಗಗಳಿಗೆ ೪೦೮೫೦೦ ರೂ ; ಕಾಲುವೆಗಳಿಗೆ ೧೬೩೨೦೦೦ ; ಕೆಲಸಗಾರರಿಗೆ ೫೬೪೦೦೦ ರೂ. ಮುಟ್ಟುಗಳು ಮೊದಲಾದ ಸಾಮಾನುಗಳಿಗೆ ೨೧೮೯೧೧ ರೂ. ಒಟ್ಟು ೪೮೩೬೯೧೧ ರೂಪಾಯಿಗಳು ಮುಟ್ಟಿರುತ್ತವೆ. ಆದರೆ ೧೯೧೦ ನೇ ನವಂಬರ್ ಕಡೆಯವರೆಗೆ ಈ ಕೆರೆಗಾಗಿ ಒಟ್ಟು ೪೮೯೧೦೦೦ ರೂ. ವ್ಯಯವಾಗಿದೆ. ಮತ್ತೂ ೧೯೦೯-೧೦ ರಲ್ಲಿ ೩೦೩೮ ಎಕರೆ ಪ್ರದೇಶದಲ್ಲಿ ಮಾತ್ರ ಬೇಸಾಯವಿಡಲ್ಪಟ್ಟಿದ್ದು ೨೩೩೮೫ ರೂ. ಉತ್ಪನ್ನವಾಗಿದೆ. ಈ ಕೆರೆಯ ನೀರಿನಿಂದ ೨೫೦೦೦ ಎಕರೆ ಪ್ರದೇಶದಲ್ಲಿ ವ್ಯವಸಾಯವನ್ನು ಮಾಡಬಹುದಾಗಿದೆ. ಆದರೆ ಭೂಮಿಯು ಕೆಲುಬುರ್ಜಿಯಿಂದ ಕೂಡಿ ಮಣ್ಣು ಉತ್ತಮವಾಗಿಲ್ಲದಿರುವುದರಿಂದಲೂ, ಮಲೇರಿಯಾಜ್ವರ ಪ್ರಾಪ್ತವಾಗಿರುವುದರಿಂದಲೂ ರೈತರ ವಸತಿಯು ಕಡಿಮೆಯಾಗಿ ಭೂಮಿಯನ್ನು ಮೋಹಿಸತಕ್ಕವರಿಲ್ಲವು. ಇದರ ನಿರ್ಮಾಣಕ್ಕೆ ಕಾರಣಭೂತರಾದ ಕೈ॥ ಶೇಷಾದ್ರಯ್ಯರು ಮಾತ್ರ ಜೀವಿಸಿದ್ದರೆ ತಮ್ಮ ಸಂಕಲ್ಪವು ನೆರವೇರಲು ಯಾವ ಉಪಾಯವನ್ನು ಕಂಡುಹಿಡಿಯುತ್ತಿದ್ದರೊ?

ಕಳೆದ ತಾ॥ ೧೫ ರಲ್ಲಿ ಮಹಾಸ್ವಾಮಿಗಳು ಮಾರಿಕಣಿವೆಯಿಂದ ಹಿರಿಯೂರಿಗೆ ಬಂದು ಅಲ್ಲಿ ನೋಡಿಕೊಂಡು ೨ ಕುದುರೆಗಳ ರಥವನ್ನು ಹತ್ತಿ ಸೀರ್ಯವನ್ನು ಅದೇ ಸಾಯಂಕಾಲ ತಲಪಿದರು. ತಾ॥ ೧೬ ರ ಬೆಳಿಗ್ಗೆ ಮಹಾಸ್ವಾಮಿಯವರು ಚಿಕ್ಕನಹಳ್ಳಿಗೆ ದಯಮಾಡಿಸಿ ಅಲ್ಲಿ ಧನಿಕರಾದ ಮ॥ ಪಟೇಲ್ ಉಗ್ರೇಗೌಡರು ಕಟ್ಟಿಸಿದ್ದ ಧರ್ಮದ ಅನ್ನಸತ್ರವನ್ನು ಪರಾಮರಿಸಿಕೊಂಡು ಹಿಂತಿರುಗಿದರು. ಅದೇ ಸಾಯಂಕಾಲದಲ್ಲಿ ಡಿ॥ ಬೋರ್ಡು ಮೆಂಬರು ಮ॥ ವೆಂಕಟರಾಮಯ್ಯನವರು ಪುರವಾಸಿಗಳ ಪರವಾಗಿ ಒಂದು ವಿಜ್ಞಾಪನಪತ್ರಿಕೆಯನ್ನೋದಿ ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟೊಪ್ಪಿಸಿದರು. ಮಹಾಸ್ವಾಮಿಯವರುಗಳು ಶೃಂಗರಿಸಲ್ಪಟ್ಟಿದ್ದ ವೀಧಿಗಳಲ್ಲಿ ಸಂಚರಿಸಿಕೊಂಡು ಬರುತ ಮೋಟಾರುಬಂಡಿಯನ್ನು ನಿಲ್ಲಿಸಿ ಚಿತ್ರಕಲ್‌ದುರ್ಗದಿಂದ ಮಹಾಸ್ವಾಮಿಯವರ ದರ್ಶನಕ್ಕಾಗಿ ಬಂದಿದ್ದ ಅಂತ್ಯಜ (ಮಾದಿಗ) ರ ಗುರುವಾದ ಜಾಂಬವಶಿವಮುನಿಯು ಅಡ್ಡಬಿದ್ದು ಒಪ್ಪಿಸಿದ ವಿಜ್ಞಾಪನ ಪತ್ರಿಕೆಯನ್ನು ಬಹು ವಿಶ್ವಾಸದಿಂದ ಸ್ವೀಕರಿಸಿದರು. ಪ್ರಭುವು ಜಾತಿಭೇದವನ್ನೆಣಿಸದೆ ಎಲ್ಲ ಮತದ ಮತ್ತೂ ಜಾತಿಯ ಪ್ರಜೆಗಳನ್ನು ಸಮಾನ ದೃಷ್ಟಿಯಿಂದ ಕಾಣುವರೆಂಬುದು ನಿದರ್ಶನವಾಗುವಂತೆ, ಮಹಾರಾಜರು ಮಾದಿಗರೊಪ್ಪಿಸಿದ ಪತ್ರಿಕೆಯನ್ನು ಸ್ವೀಕರಿಸಿದುದನ್ನು ಜನರು ಕಂಡು ಅಚ್ಚರಿಗೊಂಡರು. ಸಾಯಂಕಾಲದಲ್ಲಿ ಮದ್ದಿನ ವಿನೋದವು ನಡೆದಿತು. ಹಳ್ಳಿಯಜನರು ನೋಡಿ ಆನಂದಪರವಶರಾದರು. ತಾ॥ ೧೭ ರ ಬೆಳಿಗ್ಗೆ ಮೋಟಾರು ಬಂಡಿಯಲ್ಲಿ ಪ್ರಯಾಣ ಮಾಡಿ ೨೪ ಮೈಲಿ ದೂರದಲ್ಲಿರುವ ಮದ್ದಿಗಿರಿಯನ್ನು ತಲಪಿದರು. ಅಮಲ್ದಾರು ಮ॥ ಎಂ. ಎಸ್. ರಾಮಚಂದ್ರರಾಯರು ಪುರವನ್ನು ನಾನಾವಿಧವಾಗಲಂಕರಿಸಿ ಊರ ಪ್ರಮುಖರೊಡನೆ ಪ್ರಭುಗಳನ್ನಿದಿರ್ಗೊಂಡು ಸತ್ಕರಿಸಿದ ತರುವಾಯ ಪ್ಲೀಡರ್, ಮ॥ ರಾಮಸ್ವಾಮಯ್ಯರು ಒಂದು ವಿಜ್ಞಾಪನಪತ್ರಿಕೆಯನ್ನೋದಿ ಬೆಳ್ಳಿಯಪೆಟ್ಟಿಗೆಯಲ್ಲಿಟ್ಟೊಪ್ಪಿಸಿದರು. ಸಾಯಂಕಾಲದಲ್ಲಿ ಮಹಾಸ್ವಾಮಿಯವರು ೧೦ ಮೈಲಿದೂರದಲ್ಲಿರುವ ಕೊರಟಗೆರೆಗೆ ದಯಮಾಡಿಸಿ, ಡಿ॥ ಅಮಲ್ದಾರ್ ಮ॥ ಟಿ. ಟಿ. ರಾಮಚಂದ್ರರಾಯರು ಮತ್ತೂ ಪ್ರಮುಖಜನರಿಂದ ಸತ್ಕರಿಸಲ್ಪಟ್ಟು ಮ॥ ವೀರಣ್ಣದೇವರಿಂದೋದಲ್ಪಟ್ಟು ಮ॥ ರೇವಣ್ಣರುದ್ರಸೆಟ್ಟರಿಂದ ಬೆಳ್ಳಿಯಪೆಟ್ಟಿಗೆಯಲ್ಲಿಡಲ್ಪಟ್ಟು ಒಪ್ಪಿಸಲ್ಪಟ್ಟ ವಿಜ್ಞಾಪನ ಪತ್ರಿಕೆಯನ್ನು ಸ್ವೀಕರಿಸಿ, ಆ ಸಾಯಂಕಾಲವೇ ಮದ್ದಗಿರಿಗೆ ಹಿಂತಿರುಗಿ ದಯಮಾಡಿಸಿದರು. ಕೊರಟಗೆರೆಯ ತಾ॥ ಕಚೇರಿಯಿದಿರಿಗೆ ಬರೀ ತೇಗದಮರದಿಂದಲೇ ಅಷ್ಟಕೋಣಾಕೃತಿಯಲ್ಲಿ ಒಂದು ಚಪ್ಪರವು ಹಾಕಲ್ಪಟ್ಟು ಬಹು ರಮಣೀಯವಾಗಲಂಕರಿಸಲ್ಪಟ್ಟಿದ್ದಿತು. ಪ್ರೈ॥ ಸೆಕ್ರೆಟರಿಯವರು ಈ ಮಂಟಪದ ಭಾವಚಿತ್ರ

ವನ್ನು ತೆಗೆದುಕೊಂಡರಲ್ಲದೆ ಇತರ ಪರಿವಾರದವರು ತಾವುಗಳು ಸಂಚರಿಸಿದಕಡೆ ಹಾಕಿದ್ದ ಚಪ್ಪರಗಳಾವುವೂ ಇಷ್ಟು ಶ್ಲಾಘ್ಯವಾಗಿರಲಿಲ್ಲವೆಂದೂ ಅಭಿಪ್ರಾಯಪಟ್ಟರು. ಪ್ರಭುಗಳು ಕೊರಟಗೆರೆಯಿಂದ ಮದ್ಗಿರಿಗೆ ಹಿಂತಿರುಗುವ ಮಾರ್ಗದಲ್ಲಿ ಶಿರಸ್ತೆಕೆಲಸದಿಂದ ನಿವೃತ್ತರಾದ ಮ|| ಸುಬ್ಬಣ್ಣನವರು ಮತ್ತೂ ದೊಡ್ಡರಂಗಣ್ಣನವರು ಕುಂಬಾಡಿಕೆರೆಯನ್ನು ಪುನಃ ಕಟ್ಟಿಸಿಕೊಡಬೇಕೆಂದು ಪ್ರಾರ್ಥಿಸಿ ಒಪ್ಪಿಸಿದ ಅರ್ಜಿಯನ್ನು ತೆಗೆದುಕೊಂಡು ವಿಚಾರಿಸುತ್ತೇವೆಂದು ಅಪ್ಪಣೆಕೊಡಿಸಿದರು. ತಾ|| ೧೮ ರ ಬೆಳಿಗ್ಗೆ ಮಹಾರಾಜ ಸಹೋದರರು ಮದ್ಗಿರಿಯ ಬೆಟ್ಟದಮೇಲಕ್ಕೆ ಹತ್ತಿ ಸೃಷ್ಟಿಯ ವೈಚಿತ್ರ್ಯವನ್ನು ಪರಾಮರಿಸಿಕೊಂಡು ದಯಮಾಡಿಸಿದರು.

ಈ ಮದ್ಗಿರಿ ಬೆಟ್ಟವು ಮಧು ಬೆಟ್ಟವೆಂದೂ ಕರೆಯಲ್ಪಟ್ಟು ಸಮುದ್ರಮಟ್ಟಕ್ಕಿಂತ ೩೯೩೫ ಅಡಿ ಯೆತ್ತರವಿರುತ್ತದೆ. ಮೇಲ್ಭಾಗದಲ್ಲಿ ಪೂರ್ವದಲ್ಲಿ ಪಾಳ್ಯಗಾರರು ಕಟ್ಟಿದ್ದ ಮಣ್ಣಿನ ಕೋಟೆಯು ಹೈದರಾಲಿಯಿಂದೊಡೆದು ಹಾಕಲ್ಪಟ್ಟು ಕಲ್ಲಿನಿಂದ ಕಟ್ಟಲ್ಪಟ್ಟಿರುವುದು. ಮತ್ತೂ ಬಂಡೆಗಳ ಮಧ್ಯೆ ಅನೇಕ ನೀರಿನ ಚಿಲುಮೆಗಳೂ ಕಣಜಗಳೂ ಇರುವುವು.

ತಾ|| ೧೮ ರ ಮಧ್ಯಾಹ್ನಾತ್ಪರ ಶ್ರೀಮನ್ಮಹಾರಾಜಸಹೋದರರು ಸೆಕ್ರೆಟರಿಗಳು ಮೊದಲಾದವರೊಡನೆ ಮೋಟಾರುಬಂಡಿಗಳಲ್ಲಿ ಪಾವಗಡಕ್ಕೆ ದಯಮಾಡಿಸಿದರು. ಅಲ್ಲಿ ಸ|| ಡಿವಿಜನ್ ಆಫೀಸರು ಅಮಲ್ದಾರರು ಪುರ ಪ್ರಮುಖರುಗಳಿಂದ ಸತ್ಕರಿಸಲ್ಪಟ್ಟು ತಾಲ್ಲೋಕು ಕಚೇರಿಯನ್ನು ಪರಾಮರಿಸಿಕೊಂಡು ಸಾಯಂಕಾಲದೊಳಗೆ ಮದ್ಗಿರಿಗೆ ಹಿಂತಿರುಗಿ ಬಂದು ಅಲ್ಲಿಯ ಎ. ವಿ. ಸ್ಕೂಲಿಗೆ ದಯಮಾಡಿಸಿ, ಬಾಲಕಬಾಲಿಕೆಯರುಗಳಿಗೆ ಪಾರಿತೋಷಕಗಳನ್ನು ದಯಪಾಲಿಸಿದರು. ಆರಾತ್ರಿ ಮದ್ದಿನ ವಿನೋದವು ನಡೆದಿತು. ಶ್ರೀಮನ್ಮಹಾರಾಜಸಹೋದರರು ಸಕಲ ಪರಿವಾರದೊಡನೆ ತಾ|| ೧೯ರ ಬೆಳಿಗ್ಗೆ ೧೧|| ಗಂಟೆಯಲ್ಲಿ ಗೋರಿಬಿದನೂರು ಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣಮಾಡಿ ಮಾರ್ಗದಲ್ಲಿ ಗೋರಿಬಿದನೂರು ತಾ|| ಸೇರಿದ ಹೊಸೂರು ಗ್ರಾಮದ ಹತ್ತಿರ ಮಹಮ್ಮದೀಯರೊಪ್ಪಿಸಿದ ವಿಜ್ಞಾಪನಪತ್ರಿಕೆಯನ್ನು ಸ್ವೀಕರಿಸಿ ಸಾಯಂಕಾಲದೊಳಗೆ ಬೆಂಗಳೂರನ್ನು ಸುರಕ್ಷಿತವಾಗಿ ತಲುಪಿದರು.

ಭಾರತೀಯ ಜನಾಂಗ.

ಭರತಖಂಡದಲ್ಲಿ ಈಗ ಅನೇಕ ಮತಸ್ಥರು ಇರುತ್ತಾರೆ. ಆದುದರಿಂದ ಭಾರತೀಯರು ಒಂದು ಜನಾಂಗವಲ್ಲವೆಂದು ಅನೇಕರು ನುಡಿಯುತ್ತಾರೆ. ಈ ಮಾತುಗಳಲ್ಲಿ ಎಷ್ಟು ನಿಜವಿರುವುದೋ ಅದನ್ನು ತಿಳಿಯುವುದು ಅವಶ್ಯಕವು. ಈ ಭರತಖಂಡದಲ್ಲಿ ಈಗ ೬ ಕೋಟಿ ಮಹಮ್ಮದೀಯರಿದ್ದಾರೆ. ಆದರೂ ಕೆಲವು ಶತಕಗಳಹಿಂದೆ ಈ ದೇಶದಲ್ಲಿ ಅನ್ಯದೇಶೀಯರು ಇರಲೇ ಇಲ್ಲವೆಂದು ಚರಿತ್ರೆಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಮಹಮ್ಮದೀಯರಿಗೆ ವಾಸಸ್ಥಾನವಾಗಿದ್ದ ಪರ್ಷಿಯಾ–ಅರೇಬಿಯಾ–ಆಫ್ಘಾನಿಸ್ಥಾನ್ ದೇಶಗಳಲ್ಲಿದ್ದವರೆಲ್ಲರೂ ಈ ದೇಶಕ್ಕೆ ಬಂದುದರಿಂದ ಈ ದೇಶದಲ್ಲಿ ಈಗ ಸಾಂಕರ್ಯವಿಲ್ಲದ ಮಹಮ್ಮದೀಯರು ೬ ಕೋಟಿ ಜನರಿರುವರೆಂದು ಹೇಳುವುದಕ್ಕಾಗುವುದೆ? ತಮ್ಮ ಮತಕ್ಕೆ ಸೇರಿಸಿಕೊಳ್ಳುವುದಕ್ಕೆ ಹಿಂದೂಗಳನ್ನು ಮಹಮ್ಮದೀಯ ಪ್ರಭುಗಳು ನಾನಾವಿಧವಾಗಿ ಹಿಂಸಿಸಿದುದನ್ನು ಚರಿತ್ರೆಗಳನ್ನೋದಿದವರೆಲ್ಲಾ ಕಾಣರೆ? ತುರುಷ್ಕ ದೇಶದಿಂದ ಮಹಮ್ಮದೀಯರೆಲ್ಲರೂ ಈ ದೇಶಕ್ಕೆ ಬಂದು, ಸ್ಥಿರವಾಸಿಗಳಾಗಿರುವುದು ಸಾಧ್ಯವೆ? ಅಥವಾ ಹಿಂದೂಗಳು ಮಹಮ್ಮದೀಯ ಮತದಲ್ಲಿ ಸೇರಲಿಲ್ಲವೆಂದು ಹೇಳಿ ಭರತಖಂಡದಲ್ಲಿರುವ ಮಹಮ್ಮದೀಯರೆಲ್ಲರೂ ವರ್ಣಸಾಂಕರ್ಯವುಳ್ಳವರಲ್ಲವೆಂದು ಹೇಳುವುದು ಸಾಧ್ಯವೆ? ಇವೆರಡೂ ಅಸಾಧ್ಯಗಳೇ. ಭರತೀಯರೆಷ್ಟೋ ಜನರು ಕ್ರೈಸ್ತಮತಕ್ಕೆ ಸೇರಿಕೊಳ್ಳುವರು. ಹಾಗೆ ಸೇರಿದಮಾತ್ರದಿಂದಲೇ ಅವರೆಲ್ಲಾ ಆಂಗ್ಲೇಯರೆನಿಸಿಕೊಳ್ಳುವರೆ? ಒಂದುವೇಳೆ ಅವರುಗಳನ್ನು ಆಂಗ್ಲೇಯರೇ ಎಂದು ಹೇಳಿದರೂ ಅವರು ಇಂಗ್ಲಂಡಿನಲ್ಲೇನೂ ಜನಿಸಲಿಲ್ಲವಷ್ಟೆ? ಭರತಖಂಡದಲ್ಲೇ ಹುಟ್ಟಿದವರನ್ನು ಆಂಗ್ಲೇಯರೆಂದು ಹೇಗೆ ಹೇಳಬಹುದು? ಭಾರತೀಯರು ಈಗ ಇಂಗ್ಲಂಡು–ಫ್ರಾನ್ಸು–ಜರ್ಮನಿ–ಅಮೇರಿಕಾ–ಜಪಾನ್ ಮೊದಲಾದ ದೇಶಗಳಲ್ಲಿ ಹೋಗಿ ಸೇರಿದ್ದಾರೆ. ಅಲ್ಲಲ್ಲಿ ಸೇರಿರುವ ಭಾರತೀಯರನ್ನು ಆಂಗ್ಲೇಯರೆಂದೂ, ಫ್ರೆಂಚರೆಂದೂ, ಜರ್ಮನಿಯವರೆಂದೂ, ಅಮೇರಿಕನರೆಂದೂ, ಜಪಾನೀಯರೆಂದೂ ಹೇಳಬಹುದೆ? ಜನಾಂಗವೆಂಬ ಸಂಕೇತವು ಜಾತಿಯೆಂಬುದರ ಪರ್ಯಾಯವಲ್ಲ. ಒಂದು ಮಾತೃ ಭೂಮಿಯಲ್ಲಿ ಹುಟ್ಟಿದವರೆಲ್ಲಾ ಒಂದು ಜನಾಂಗದವರಾಗುವರು. ಭರತಖಂಡದಲ್ಲಿ ಅನೇಕ ಮತಗಳಿದ್ದಾಗ್ಯೂ ಇಲ್ಲಿ ಹುಟ್ಟಿದವರೆಲ್ಲರಿಗೂ ಭಾರತೀಯರೆಂದು ಹೆಸರು ತಪ್ಪುವುದಿಲ್ಲ. ಆದುದರಿಂದ ಭರತಖಂಡದಲ್ಲಿ ಜನಿಸಿದ ಜನರೆಲ್ಲರೂ ಒಂದು ಜನಾಂಗದವರೆಂದು ಹೇಳಲ್ಪಡುವುದರಲ್ಲಿ ಸಂಶಯವೇನು? ಇಂಥ ನಿಜಸಂಗತಿಯನ್ನು ತಿಳಿದುಕೊಂಡು ಭಾರತೀಯರು ಪ್ರವರ್ತಿಸದುದರಿಂದಲೇ ಇವರನ್ನು ಒಂದು ಜನಾಂಗದವರೆಂದು ನಂಬುವುದಕ್ಕು ಕೂಡ ಇತರರು ಹಿಂದೆಗೆಯುವ ಅವಸ್ಥೆಯು ಪ್ರಾಪ್ತವಾಗಿರುವುದು. ಒಂದೇ ಮಾತೃ ಭೂಮಿಯಲ್ಲಿ ಹುಟ್ಟಿದ ಜನರೆಲ್ಲಾ ಸಹೋದರರೆಂಬ ಭಾವದಿಂದ ಪರಸ್ಪರ ಕಾಣಲ್ಪಡುವ ಸ್ಥಿತಿಯು ನಮ್ಮ ದೇಶಕ್ಕೆ ಪ್ರಾಪ್ತವಾದರೆ ಪರಸ್ಪರ ಮತಕಲಹಗಳಿಗೆ ಆಸ್ಪದವೆಲ್ಲಿರುವುದು? ಒಂದು ತಾಯಿಗೆ ಹುಟ್ಟಿದ ಮಕ್ಕಳಲ್ಲಿ ಸಹೋದರ ವಾತ್ಸಲ್ಯವಿರುವಂತೆ ಭರತಖಂಡದಲ್ಲಿ ಹುಟ್ಟಿದವರೆಲ್ಲರಿಗೂ ಭಾರತಭೂಮಿಯು ತಾಯಿಯೆಂದು ತಿಳಿದುಕೊಂಡು, ಸರ್ವರೂ ಪ್ರಯತ್ನಿಸಿದರೆ, ಆ ಐಕಮತ್ಯದ ಬಲದಿಂದ ಐಹಿಕಸುಖಗಳೆಲ್ಲವೂ ಸುಲಭಸಾಧ್ಯವಾಗುವುವು. ಮತಗಳು ಭಿನ್ನಭಿನ್ನವಾಗಿದ್ದ ಮಾತ್ರಕ್ಕೇ ಜನಾಂಗ ವೊಂದಾಗುವುದರಲ್ಲಿ ಅಭ್ಯಂತರವೇನು? ನನ್ನ ಮತ ದೊಡ್ಡದು–ನಿನ್ನ ಮತ ಚಿಕ್ಕದು; ಅವನು ನೀಚ–ಇವನು ಉತ್ತಮ ಎಂಬ ದುಷ್ಟಜ್ಞಾನವು ಯಾವಾಗ ಯಾರಿಂದ ಉದ್ಭವಿಸಿತೋ ಅಂದಿನಿಂದಲೂ ಈ ದೇಶದ ಐಕ್ಯವು ಹಾಳಾಗಿ ವಿಪತ್ಪರಂಪರೆಗಳು ಈ ದೇಶದ ಬೆನ್ನಂಟಿದುವು. ಅದುಕಾರಣ ಈಗಲಾದರೂ ಜನರು ತಮ್ಮ ಅಜ್ಞಾನವನ್ನು ತಿಳಿದುಕೊಂಡು ಐಕ್ಯವೃದ್ಧಿಗಾಗಿ ಪರಸ್ಪರ ದ್ವೇಷವನ್ನು ಪರಿತ್ಯಜಿಸಿ ತಾವು ಒಂದು ಜನಾಂಗವೆಂಬುದನ್ನು ದೃಢಗೊಳಿಸಿ, ಭ್ರಾಂತರಾದ ಇತರರ ಕಣ್ಣಿಗೆ ಅಂಜನವನ್ನು ಹಾಕಬೇಕು. ಹಾಗಾಗುವುದಕ್ಕೆ ಎಲ್ಲ ಭರತಖಂಡದ ಜನವರ್ಗದಲ್ಲೂ ಭ್ರಾಂತಿತಮೋನಿವಾರಕವಾದ ವಿದ್ಯಾಪ್ರಭೆಯು ಪ್ರಸರಿಸಬೇಕಾದುದು ಅತ್ಯವಶ್ಯಕವು. ಆಳ್ವ ಪ್ರಭುಗಳು ಈ ತತ್ತ್ವವನ್ನರಿತು ಪ್ರಜೆಗಳಲ್ಲಿ ವಿದ್ಯಾಪ್ರಾಚುರ್ಯವನ್ನುಂಟುಮಾಡುವುದಕ್ಕೆ ವಿಶೇಷ ಪ್ರಯತ್ನಗಳನ್ನು ಮಾಡುತ್ತ ಬಂದರೆ ಇಷ್ಟಾರ್ಥಸಿದ್ಧಿಯಾಗುವುದು.

ಆರೋಗ್ಯವು.

ಡಾಕ್ಟರ್ ಕೃಷ್ಣಸ್ವಾಮಿಅಯ್ಯರ್, ಬಿ. ಎ., ಎಂ. ಬಿ. ಸಿ. ಎಂ. ರವರು ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳನ್ನು ಕುರಿತು ಮಾಡಿದ ಒಂದಾನೊಂದು ಉಪನ್ಯಾಸದಲ್ಲಿ ಅಪ್ಪಣೆಕೊಡಿಸಿದಸಂಗತಿಯು ಪ್ರತಿಯೊಬ್ಬ ವಿದ್ಯಾರ್ಥಿಗೂ ಶ್ರೋತವ್ಯವಾಗಿದೆ. ಏನೆಂದರೆ–ಆರೋಗ್ಯವು ದೇಹಸಂಬಂಧವೆಂತಲೂ, ನಗರಸಂಬಂಧವೆಂತಲೂ ಎರಡುವಿಧವು. ದೇಹಸಂಬಂಧವಾದ ಆರೋಗ್ಯವೆಂದರೆ–ಅವಯವಗಳೆಲ್ಲವೂ ಅವುಗಳ ಕೆಲಸವನ್ನು ಕ್ರಮಪ್ರಕಾರವಾಗಿಯೂ, ಅವಿರೋಧವಾಗಿಯೂ ಮಾಡುತ್ತಿರುವುವು. ಜನ್ಮಾರಭ್ಯ ಮುಪ್ಪಿನವರೆಗೂ ದೇಹದ ಆರೋಗ್ಯವು ಒಂದೇ ವಿಧವಾಗಿರುವುದಿಲ್ಲ; ವಯಸ್ಸಿನಲ್ಲಿ ಮಾರ್ಪು ಉಂಟಾಗುತ್ತ ಬಂದಂತೆ ಆರೋಗ್ಯವೂ ಮಾರ್ಪಡುತ್ತಿರುವುದು. ಮನುಷ್ಯನ ಜೀವಿತವು, ಗರ್ಭನಿವಾಸ–ಶೈಶವ–ಬಾಲ್ಯ–ಕೌಮಾರ–ಯೌವನ–ವಾರ್ಧಕವೆಂಬುದಾಗಿ ವಿಭಾಗಿಸಲ್ಪಟ್ಟಿದೆ. ಯೌವನಾವಸ್ಥೆಯೇ (೭ ವಯಸ್ಸಿನಿಂದ ೨೦ ನೆಯ ವಯಸ್ಸಿನವರೆಗೆ) ವಿದ್ಯಾರ್ಜನೆಗೆ ಉಪಯುಕ್ತವಾದ ಕಾಲವು. ವಿದ್ಯೆಗೂ ದೇಹಾರೋಗ್ಯಕ್ಕೂ ಸಮೀಪ ಸಂಭಂಧವಿರುತ್ತದೆ. ಅನೇಕ ಪರೀಕ್ಷೆಗಳಿಗೆ ಓದುವುದೂ, ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂದು ಅತ್ಯಂತವಾಗಿ ಒರಲುವುದೂ, ಅನ್ಯಭಾಷೆಯ ಅನೇಕ ಗ್ರಂಥಗಳನ್ನು ವಿಚಾರವಿಲ್ಲದೆ ಸುಮ್ಮನ ಓದುತ್ತಲೇ ಇರುವುದೂ, ಮಟಮಟಮಧ್ಯಾಹ್ನದಲ್ಲಿ ಓದುತ್ತಿರುವುದೂ, ಸರಿಯಾದ ಆಹಾರವಿಲ್ಲದೆ ಉಪವಾಸಮಾಡುವುದೂ, ಅನಾರೋಗ್ಯಾಸ್ಪದವಾದ ಮನೆಗಳಲ್ಲಿ ವಾಸಮಾಡುವುದೂ, ತಕ್ಕಷ್ಟು ದೇಹವ್ಯಾಯಾಮವಿಲ್ಲದೆ ಓದುತ್ತಲೇ ಇರುವುದೂ, ಇವುಗಳೆಲ್ಲಾ ದೇಹಾರೋಗ್ಯಕ್ಕೆ ಭಂಗವನ್ನುಂಟುಮಾಡತಕ್ಕವುಗಳು. ಓದುವುದಕ್ಕಾಗಿ ಶಾಲೆಗೆ ಬಂದ ಹುಡುಗರನ್ನು ಮೊದಲು ವೈದ್ಯರಿಂದ ಪರೀಕ್ಷೆ ಮಾಡಿಸಿ, ಯಾರು ದೇಹದೌರ್ಬಲ್ಯವುಳ್ಳವರಾಗಿದ್ದಾರೋ ಅಂಥವರನ್ನು ವಿದ್ಯಾಭ್ಯಾಸ ಮಾಡಗೊಡಿಸದೆ ಯಿರಬೇಕು. ಶರೀರವು ಆರೋಗ್ಯವಾಗಿರುವುದಕ್ಕೆ ಮಿತಭೋಜನವೂ, ಶುದ್ಧವಾದ ಗಾಳಿಯೂ, ನಿರ್ಮಲವಾದ ಜಲವೂ, ಬಯಲಿನಲ್ಲಿ ದೇಹಕ್ಕೆ ಬಲವನ್ನುಂಟುಮಾಡುವ ವ್ಯಾಯಾಮವನ್ನಾಚರಿಸುವುದೂ, ಸಿಗರೆಟ್ಟು–ಚುಟ್ಟ–ಮದ್ಯ ಇವುಗಳ ಸೇವನೆಯನ್ನು ಸಂಪೂರ್ಣವಾಗಿ ಪರಿತ್ಯಜಿಸಿರುವುದೂ ಅತ್ಯವಶ್ಯಕವು. ದೇಹದ ನರಗಳಿಗೆ ಶಕ್ತಿಯನ್ನೂ ಬುದ್ಧಿಗೆ ವಿಕಾಸವನ್ನೂ ಉಂಟುಮಾಡಲು ಅನುಕೂಲಿಸುವ ಆಟಗಳನ್ನು ಆಡುವುದು ವಿದ್ಯಾರ್ಥಿಗಳಿಗೆ ಅವಶ್ಯಕವು. ಪ್ರತಿಯೊಂದು ವಿಷಯದಲ್ಲೂ ಮಿತಿಯನ್ನು ಮಾತ್ರ ತಪ್ಪದೆ ಅನುಸರಿಸಬೇಕು. ಪ್ರತಿಯೊಬ್ಬನೂ ಪ್ರತಿದಿವಸವೂ ತಪ್ಪದೆ ಸ್ನಾನವನ್ನು ಮಾಡಬೇಕು. ಶುಭ್ರವಾಗಿ ದಂತಧಾವನವನ್ನು ಮಾಡಿ, ಕೈಕಾಲುಗಳನ್ನು ನಿರ್ಮಲವಾಗಿ ತೊಳೆದುಕೊಂಡು ಶುಚಿಯಾಗಿರಬೇಕು. ಕ್ರಮತಪ್ಪದೆ ಕಾಲಪ್ರವೃತ್ತಿಯು ಚೆನ್ನಾಗಿ ಆಗುವಂತೆ ಮಾಡಿಕೊಂಡಿರಬೇಕು. ಮಕ್ಕಳು, ಮುದಿಕರು, ಸ್ತ್ರೀಯರು ಇವರ ಹೊರತು ಉಳಿದವರೆಲ್ಲರೂ ರಾತ್ರಿಯಹೊತ್ತು ಮಾತ್ರವೇ ಕಾಲಕ್ರಮವನ್ನು ತಪ್ಪದಂತೆ ನಿದ್ರಿಸಬೇಕು. ಆರೋಗ್ಯಸಂಬಂಧವಾದ ವಿಷಯಗಳು ಮಕ್ಕಳು–ಯೌವನಸ್ಥರು–ಮುದಿಕರು ಇವರುಗಳಿಗೆಲ್ಲಾ ಅನ್ವಯಿಸುವಂತೆ ಮಾಡುವ ವಿಷಯದಲ್ಲಿ ಸ್ವಲ್ಪಸ್ವಲ್ಪ ಭೇದವಿರುತ್ತಿದ್ದರೂ ನಿಯಮವೇನೊ ಎಲ್ಲರಿಗೂ ಒಂದೇ. ಆರೋಗ್ಯರಕ್ಷಣಕ್ರಮವು ಸರ್ವರಿಂದಲೂ ತಿಳಿಯಲ್ಪಟ್ಟು ಅನುಷ್ಠಾನದಲ್ಲಿ ತಂದುಕೊಳ್ಳಬೇಕಾದುದು ಅವಶ್ಯಕವಾಗಿರುವಕಾರಣ ಶಾರೀರಕಶಾಸ್ತ್ರಪಠನವನ್ನು ಎಲ್ಲರೂ ಸ್ವಲ್ಪಮಟ್ಟಿಗಾದರೂ ಮಾಡಿರುವುದು ಅತ್ಯವಶ್ಯಕವು.

ಮೈಸೂರು ಶ್ರೀಕೃಷ್ಣರಾಜ ಕೃಷಿಶಿಲ್ಪಾಭಿವರ್ಧಕ ಸಮಾಜ.

ಮುಂದಿನ ಫೆಬ್ರವರಿ ಮಾಹೆ ೧೧ ನೇ ತಾ|| ಶನಿವಾರ ಮಧ್ಯಾಹ್ನ ೫ ಗಂಟೆಗೆ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಈ ಸಮಾಜದ ಜನರಲ್ ಮೀಟಿಂಗು ನಡೆಯೋಣದರಿಂದ ಮೆಂಬರುಗಳಾದ ಎಲ್ಲರೂ ದಯವಿಟ್ಟು ದಯಮಾಡಿಸಬೇಕಾಗಿ ಸೂಚಿಸಿಧೆ.

ಮೀಟಿಂಗಿನಲ್ಲಿ ನಡೆಯತಕ್ಕ ವಿಷಯಗಳು.

೧. ಈ ಸಮಾಜಕ್ಕೆ ಸಂಬಂಧಪಟ್ಟ ಕಳೆದ ಸಂವತ್ಸರದ ರಿಪೋರ್ಟು.—

೨. ಈ ಸಮಾಜಕ್ಕೆ ಚಾಲ್ತಿ ನಡೆಯುತ್ತಿರುವ ಸಾಲಿನ ಬಗ್ಗೆ ಪ್ರೆಸಿಡೆಂಟರು, ವೈಸ್ ಪ್ರೆಸಿಡೆಂಟರು, ಸೆಕ್ರಟರಿಗಳು ಮತ್ತು ಮ್ಯಾನೇಜಿಂಗ್ ಕಮಿಟಿ ಮೆಂಬರುಗಳನ್ನು ಚುನಾಯಿಸತಕ್ಕದು.

೩. ಈ ಸಂವತ್ಸರದಲ್ಲಿ ನಡೆಯಬೇಕಾದ ಸಮಾಜಕ್ಕೆ ಸಂಬಂಧಪಟ್ಟ ಇತರ ಕೆಲಸಗಳು.

(ಸೈನ್ಡ್) ಎಚ್. ನರಸಿಂಗರಾವ್,
ಬಿ. ಕೃಷ್ಣರಾವ್,
ಸೆಕ್ರಟರಿಗಳು.

ಮೈಸೂರ್ ಗೆಜೆಟ್ ಸಂಗ್ರಹ.

ಮೈರೂರ ಸಿಟಿ ಇಂಪ್ರೂವ್‌ಮೆಂಟ್ ಡಿವಿಜನ್ನಿನ ಸಬ್ ಅ|| ಇಂಜನೀರ್ ಮೆ|| ಎಚ್. ಎಫ್. ಮಾರ್ಕರ್, ಎಲ್. ಸಿ. ಇ., ಯವರಿಗೆ ಅವರುಪಯೋಗಿಸಿಕೊಳ್ಳುವಾರಭ್ಯ ೩ ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುತ್ತದೆ.

ಕೋಲಾರ ಡಿ|| ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮ|| ಎಚ್. ರಾಮಯ್ಯನವರಿಗೆ ಅವರುಪಯೋಗಿಸಿಕೊಳ್ಳುವಂದನಿಂದ ೨೦ ದಿನಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುತ್ತದೆ.

ಹೊಸದುರ್ಗ ತಾ|| ಅಮಲ್ದಾರ್ ಮ|| ಜಿ. ನಾರಾಯಣರಾಯರಿಗೆ ೧೯೧೧ ನೇ ಜನವರಿ ೧೨ ರಿಂದ ೬ ವಾರಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟಿರುತ್ತದೆ. ಈ ಅವಧಿಯಲ್ಲಿ ಅಥವಾ ಮತ್ತೊಂದು ಅಪ್ಪಣೆಯಾಗುವವರೆಗೆ ಹೊಸದುರ್ಗ ತಾ|| ಷಿರಸ್ತೆದಾರ್ ಎಂ. ರಾಘವೇಂದ್ರರಾಯರು ತಮ್ಮ ಕೆಲಸದೊಡನೆ ೩ ನೆ ತ|| ಮ್ಯಾಜಿಸ್ಟ್ರೇಟ್ ಅಧಿಕಾರದಿಂದ ಆ ತಾಲ್ಲೋಕಿನ ಛಾರ್ಜಿನಲ್ಲಿರತಕ್ಕದು.

ಎಸ್. ವೆಂಕಟರಂಗಯ್ಯಂಗಾರ್ ಬಿ. ಎ., ಯವರು ಅಭಿವೃದ್ಧಿಯನ್ನು ಹೊಂದಿದ ಎಲ್. ಕೃಷ್ಣರಾಯರ ಸ್ಥಾನದಲ್ಲಿ ೪ ನೇ ತರಗತಿಯ ಸಬ್ ರಿಜಿಸ್ಟ್ರಾರಾಗಿ ನೇಮಿಸಲ್ಪಟ್ಟಿರುತ್ತಾರೆ.

೧೯೦೯–೧೦ ನೆಯ ವರ್ಷದಲ್ಲ ಇಂಡ್ಯಾ ಗೌರ್ನಮೆಂಟಿಗೆ ಉಪ್ಪಿನಮೇಲಿನ ಕಂದಾಯವು ೧೦೬೩೪ ಲಕ್ಷ ರೂ. ಗಳು ಬಂದವೆ ಹೊರಗಿನಿಂದ ಬಂದ ಉಪ್ಪಿನ ಕಂದಾಯವೂ ಸೇರಿ ೧೦೯·೬೩ ಲಕ್ಷ ರೂ. ಗಳಾಯಿತು. ಹಿಂದಿನ ವರ್ಷದಲ್ಲಿ ಒಟ್ಟು ೧೦೬·೯೫ ಲಕ್ಷವಾಗಿದ್ದಿತು. ವೆಚ್ಚ ಕಳೆದು ಹಿಂದಿನ ವರ್ಷದಲ್ಲಿ ೯೧ ಲಕ್ಷ ರೂ. ಆದಾಯವೂ, ಈ ವರ್ಷದಲ್ಲಿ ೯೫·೪೯ ಲಕ್ಷ ರೂ. ಆದಾಯವೂ ಆಗಿರುತ್ತದೆ.

ಒಬ್ಬ ಐರೋಪ್ಯನು ತನ್ನ ನಾಯಿಗಾಗಿ ವರ್ಷ ೧ ಕ್ಕೆ ೨೫ ಪೌನುಗಳನ್ನೂ, ಸ್ಪೇನಿನಲ್ಲಿ ಒಬ್ಬಸ್ತ್ರೀಯು ತನ್ನ ಸಾಕಿದ ಗಿಣಿಗೆ ವರ್ಷ ಕ್ಕೆ ೨೦೦ ಪೌನುಗಳನ್ನೂ, ಚಿಕಾಗೊವಿನಲ್ಲಿ ಒಬ್ಬ ದೊಡ್ಡಮನುಷ್ಯನು ತನ್ನ ನಾಯಿಗಾಗಿ ವರ್ಷಕ್ಕೆ ೪೦೦ ಪೌನುಗಳನ್ನೂ, ಪೋರ್ಚುಗಲ್ಲಿನಲ್ಲಿ ಒಬ್ಬನು ತಾನು ಸಾಕಿದ ಪಕ್ಷಿಗಳಿಗಾಗಿ ವರ್ಷಕ್ಕೆ ೧೦೦೦ ಪೌನುಗಳನ್ನೂ, ಪ್ರತಿ ವರ್ಷಾರಂಭಕಾಲದಲ್ಲಿ ಒಂದು ಬೆಕ್ಕಿಗೆ ಔತಣ ಮಾಡುವುದಕ್ಕೆ ಅಬರ್ಡೀನಿನಲ್ಲಿರುವ ಒಬ್ಬ ಮುದುಕಿಯು ೨೦೦೦ ಪೌನುಗಳನ್ನೂ ವೆಚ್ಚ ಮಾಡಬೇಕೆಂದು ಮರಣಶಾಸನವನ್ನು ಬರೆದಿರುವರು.

ಮೈಸೂರ್ ಸ್ಟಾರ್.

೧೯೧೧ ನೇ ಜನವರಿ ತಾ|| ೩೦ ನೇ ಸೋಮವಾರ.

ಚೈನಾದೇಶದ ಉನ್ನತಿ ಪ್ರಯತ್ನ.

ಅರ್ಧಶತಮಾನದಹಿಂದೆ ಅಜ್ಞಾನಾಂಧಕಾರದಲ್ಲಿ ಮುಳುಗಿ ದಾರಿಕಾಣದೆ ಬಿದ್ದಿದ್ದ ಜಪಾನ್‌ದೇಶವು, ಗರ್ವಾಂಧವಾಗಿದ್ದ ರಷ್ಯಾ ದೇಶವನ್ನು ಜಯಿಸಿ, ಪ್ರಪಂಚವನ್ನೆಲ್ಲಾ ಆಶ್ಚರ್ಯದಲ್ಲಿ ಮುಳುಗಿಸಿ, ಪಾಶ್ಚಾತ್ಯರನ್ನು ಮೂಗಿನ ಮೇಲೆ ಬೆರಳಿಟ್ಟು ಮುಕುಟವನ್ನು ತೂಗುವಂತೆ ಮಾಡಿತಷ್ಟೆ. ರಷ್ಯಾ ಜಪಾನ್ ಯುದ್ಧವಾದೀಚೆಗೆ ಪ್ರಪಂಚದ ದೇಶಗಳಲ್ಲಿ ವಿಚಿತ್ರವಾದ ಬದಲಾವಣೆಯು ಕಾಣ್ಬರುತ್ತಿರುವುದು. ಜಪಾನಿನ ನೆರೆಯ ಚೀನಾದೇಶವು ಮೊನ್ನೆ ನೆನ್ನೆಯವರೆಗೂ ಅಫೀಮನ್ನು ನುಂಗಿ ಗಾಢನಿದ್ರೆಯಲ್ಲಿರುತ್ತಿದ್ದು, ಈಗ ಥಟ್ಟನೆ ತನ್ನ ಗಾಢನಿದ್ರೆಯಿಂದೆದ್ದು ಉನ್ನತಿಯ ಶಿಖರವನ್ನೇರಬೇಕೆಂದು ಸಿದ್ಧವಾಗುತ್ತಲಿದೆ. ಆ ದೇಶದವರು ದೇಹಶಕ್ತಿಯಿಂದಲೂ, ವಿದ್ಯೆ-ವ್ಯಾಪಾರ-ಕೈಗಾರಿಕೆ ಮೊದಲಾದುವುಗಳಿಂದಲೂ ಉನ್ನತಿಯನ್ನು ಪಡೆಯುವುದಕ್ಕಾಗಿ ಪರದೇಶಗಳಲ್ಲೂ ಸ್ವದೇಶದಲ್ಲೂ ವಿಧವಿಧವಾದ ಸಾಹಸಗಳನ್ನು ಮಾಡುತ್ತಿದ್ದಾರೆ. ತಮ್ಮನ್ನು ಅತಿಶಯವಾದ ಸೋಂಬೇರಿಗಳನ್ನಾಗಿಸುವುದಕ್ಕೆ ಮುಖ್ಯ ಮೂಲವಾದ ಅಫೀಮಿನ ಸೇವನೆಯ ದುರಭ್ಯಾಸವನ್ನು ದೂರಮಾಡಿದ್ದಾರೆ. ಆ ದೇಶದಲ್ಲಿ ಅಫೀಮಾಗುವ ಗಿಡವನ್ನು ಬೆಳೆಯುವವರಿಗೂ ಅದನ್ನು ಅನ್ಯದೇಶದಿಂದ ತರಿಸಿಕೊಂಡವರಿಗೂ ಮರಣದಂಡನೆಯಾಗತಕ್ಕದೆಂದು ಅಲ್ಲಿನ ಸರ್ಕಾರದವರು ವಿಧಿಸಿದ್ದಾರೆ. ಇಷ್ಟು ಕಠಿನತರವಾದ ವಿಧಿಯನ್ನು ಮಾಡದಿದ್ದರೆ ಬಹುಕಾಲದಿಂದ ಮೈಯುಂಡು ಬಂದಿರುವ ದುರಭ್ಯಾಸವು ಆ ದೇಶದಲ್ಲಿ ತಪ್ಪುವುದು ಅಸಾಧ್ಯವಾಗುತ್ತಿದ್ದಿತು. ಅನೇಕಮಂದಿ ತರುಣರು ಪರದೇಶಗಳಿಗೆ ಹೋಗಿ ಎಲ್ಲ ತರದ ವಿದ್ಯೆಗಳನ್ನೂ ಕಲಿತು ತಮ್ಮ ದೇಶಾಭ್ಯುದಯಕ್ಕಾಗಿ ಶ್ರಮಪಡುತ್ತಿದ್ದಾರೆ. ಸ್ವಾರ್ಥಮಾತ್ರ ಸಂಸಿದ್ಧಿಯುಳ್ಳ ಮೂರ್ಖಾಚಾರಗಳನ್ನು ಒಂದು ಕಡೆಯಿಂದ ಮೂಲೋತ್ಪಾಟನ ಮಾಡುತ್ತಿದ್ದಾರೆ. ದೇಶವಾದ್ಯಾಂತವೂ ತಮ್ಮ ಕ್ಷೇಮಕ್ಕಾಗಿ ಯಾವ ನವೀನ ಸುಧಾರಣೆಗಳನ್ನಾದರೂ ಕೈಕೊಳ್ಳುವುದಕ್ಕೆ ಸಿದ್ಧವಾಗಿದೆ. ಪಟ್ಟಣಗಳಲ್ಲಿ ಮಾತ್ರವೇ ಅಲ್ಲದೆ ಗ್ರಾಮಾಂತರಗಳಲ್ಲು ಕೂಡ ಜನರು ಅಪ್ಪಹಾಕಿದ ಆಲದಮರವೆಂದು ನೇಣುಹಾಕಿಕೊಳ್ಳುವ ಮೂರ್ಖತನವನ್ನು ವಹಿಸದೆ, ಅಭಿಜ್ಞರು ಹೇಳುವ ಸಂಸ್ಕರಣಗಳಿಗೆ ಬದ್ಧರಾಗಿ ನಡೆಯಲು ಕುತೂಹಲಗೊಂಡಿದ್ದಾರೆ. ಇಂಥ ಅಸಾಧಾರಣವಾದ ಮಾರ್ಪು ಆ ದೇಶದಲ್ಲಿ ಇಷ್ಟುಬೇಗನೆ ಉಂಟಾಗುವುದೆಂದು ಯಾರೊಬ್ಬರೂ ಊಹಿಸಿರಲಿಲ್ಲ. "ಇಂಥ ವ್ಯತ್ಯಯವುಂಟಾಗುವುದೆಂದು ಈಗ್ಗೆ ೫ ವರ್ಷಗಳ ಹಿಂದೆ ಯಾರಾದರೂ ಭವಿಷ್ಯತ್ತನ್ನು ಹೇಳಿದ್ದರೆ, ನಾವು ಎಂದಿಗೂ ನಂಬುತ್ತಿರಲಿಲ್ಲ" ಎಂದು ಮುಕ್ಡೆನ್ ಪಟ್ಟಣದಲ್ಲಿರುವ ವೃದ್ಧರುಗಳು ಹೇಳಿಕೊಂಡು ಆಶ್ಚರ್ಯಪಡುತ್ತಿದ್ದಾರೆ. ಎಲ್ಲ ಪಾಠಶಾಲೆಗಳಲ್ಲೂ ನವೀನ ಪದ್ಧತಿಯಿಂದ ಪಾಠಪ್ರವಚನಗಳು ಸಾಗುತ್ತಲಿವೆ. ಕಾರಾಗೃಹವಾಸಿಗಳು ಅನಾಗರಿಕತೆಯಿಂದ ಅನುಭವಿಸಬೇಕಾಗಿದ್ದ ದುಸ್ಸ್ಥಿತಿಯೆಲ್ಲವೂ ಈಗ ತೊಲಗಿಸಲ್ಪಟ್ಟಿದೆ, ಭೂಜಲ ಸೈನ್ಯವೆಲ್ಲವೂ ಪ್ರಸಿದ್ಧಯುದ್ಧವಿದ್ಯೆಯಲ್ಲಿ ಶಿಕ್ಷಿತವಾಗಿ ಅಭಿವೃದ್ಧಿಗೊಂಡಿದೆ. ಸ್ಥಳಿಕಸರ್ಕಾರವು ಎಲ್ಲಕಡೆಯೂ ಏರ್ಪಟ್ಟು ಆರೋಗ್ಯ ರಕ್ಷಣಾರ್ಥವಾಗಿ ಸಮಗ್ರವಾದ ಏರ್ಪಾಟುಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಸಂಘ ಸಂಸ್ಕರಣವಿಷಯಗಳು ಸಹ ಚುರುಕಾಗಿನಡೆಯುತ್ತಿವೆ. ಉನ್ನತಿಮಾರ್ಗಕ್ಕೆ ವಿಘ್ನರೂಪಗಳಾಗಿದ್ದ ಪದ್ಧತಿಗಳೆಲ್ಲಾ ದೂರೀಕರಿಸಲ್ಪಡುತ್ತಿವೆ. ಜನವರ್ಗದೊಳಗಿದ್ದ-ವೈಷಮ್ಯಹೇತುವಾದ-ಪಂಗಡಗಳೆಲ್ಲಾ ನಶಿಸಿಹೋಗುತ್ತಿವೆ. ಚೈನಾ-ಮಾಂಚೂರಿಯಾ ಒಳಭೇದದವರು ಪರಸ್ಪರ ಭೋಜನಪ್ರತಿಭೋಜನವನ್ನು ಮಾಡದೆ ಇಬ್ಭಾಗವಾಗಿದ್ದವರು ಈಗ ಕಲಸಿ ಒಂದುಗುಂಪಿನವರಂತೆ ಎಲ್ಲಕಾರ್ಯವನ್ನೂ ಮಾಡುವುದಕ್ಕೆ ಪಕ್ರಮಿಸಿದ್ದಾರೆ. ಪುರುಷರಲ್ಲಿ ಮಾತ್ರವೇ ಅಲ್ಲದೆ ಸ್ತ್ರೀಯರಲ್ಲಿಯೂ ನಾಗರಿಕತೆಯು ವೃದ್ಧಿಯಾಗುತ್ತಿದೆ. ಅವರಲ್ಲಿಯೂ ವಿದ್ಯಾಭ್ಯಾಸವು ತೀವ್ರವಾಗಿ ವೃದ್ಧಿಗೊಳ್ಳುತ್ತಿದೆ. ಉತ್ತಮಗೃಹಿಣಿಯರಾಗಿಯೂ, ಪುರುಷಸಹಾಯಕಿಯರಾಗಿಯೂ, ದೇಶೋದ್ಧಾರಿಣಿಯರಾಗಿಯೂ ಪರಿಣಮಿಸುವುದಕ್ಕೆ ತಕ್ಕ ಏರ್ಪಾಟುಗಳು ಮಾಡಲ್ಪಟ್ಟಿವೆ. ಹೆಂಗುಸರ ಪಾದಗಳು ಎಷ್ಟು ಚಿಕ್ಕವಾಗಿದ್ದರೆ ಅಷ್ಟು ಸಲ್ಲಕ್ಷಣವೆಂದು ತಿಳಿದು, ಸಣ್ಣದರಿಂದಲೂ ಕಟ್ಟಿ; ಹಜ್ಜೆಗಳನ್ನು ಕಿರಿದು ಮಾಡಿಕೊಳ್ಳುತ್ತಿದ್ದ ಆ ದೇಶಿಯರ ಪುರಾತನಪದ್ಧತಿಯು ಅನರ್ಥಕಾರಿಯೆಂಬುದು ತಿಳಿಯಲ್ಪಟ್ಟಕಾರಣ, ಅದನ್ನು ತಪ್ಪಿಸುವುದಕ್ಕೆ ಮಹಾಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ತೆರದ ಸಂಸ್ಕಾರಗಳು ಮಾತ್ರವೇ ಅಲ್ಲದೆ ದೇಶದ ಪ್ರಭುತ್ವವು ಪ್ರಜಾಪರಿಪಾಲನ ಪದ್ಧತಿಯಂತಿರುವುದೇ ಶ್ರೇಷ್ಠವಾದುದೆಂದು ಗೊತ್ತುಮಾಡಿ, ಅದಕ್ಕಾಗಿ ಒಂದು ಪಾರ್ಲಿಮೆಂಟನ್ನು ಏರ್ಪಡಿಸಬೇಕೆಂದು ದೇಶಾಭಿಮಾನಿಗಳು ಗೌರ್ನಮೆಂಟಿನವರನ್ನು ಪ್ರಾರ್ಥಿಸುತ್ತಿದ್ದಾರೆ. ಅವರ ಪ್ರಾರ್ಥನೆಯು ದೇಶಾಭ್ಯುದಯಕ್ಕೋಸುಗ ಮಾಡಲ್ಪಡುತ್ತಿರುವುದೆಂಬುದನ್ನು ಸರ್ಕಾರದವರು ತಿಳಿದುಕೊಂಡು, ಅವರ ಕೋರಿಕೆಯನ್ನು ತಿರಸ್ಕರಿಸದೆ, ೩ ವರ್ಷಗಳೊಳಗಾಗಿ ಪಾರ್ಲಿಮೆಂಟನ್ನು ಏರ್ಪಡಿಸಿಕೊಡುವೆವೆಂಬುದಾಗಿಯೂ, ಯಾವ ಪದ್ಧತಿಯ ಪ್ರಕಾರ ಅದನ್ನು ಏರ್ಪಡಿಸಿದರೆ ಕಾರ್ಯಗಳು ಸುಲಲಿತವಾಗಿ ನಡೆಯುವುವೋ ಅದನ್ನು ಆಲೋಚಿಸಿ, ಗೊತ್ತುಮಾಡಲು ತಕ್ಕವಿಧಿಯೊಂದನ್ನು ವಿರಚಿಸುವುದಕ್ಕಾಗಿ ಒಂದು ಸಂಘವನ್ನೇರ್ಪಡಿಸುವೆವೆಂತಲೂ, ಅಷ್ಟರವರೆಗೆ ಪ್ರಜಾ ಪ್ರಮುಖರು ಪಾರ್ಲಿಮೆಂಟಿನಲ್ಲಿ ಸೇರಿ ಕೆಲಸ ಮಾಡುವುದಕ್ಕೆ ತಕ್ಕ ಸಾಮರ್ಥ್ಯವನ್ನು ಸಂಪಾದಿಸುವುದಕ್ಕೆ ಪ್ರಯತ್ನಿಸಬೇಕೆಂತಲೂ ಅಪ್ಪಣೆ ಮಾಡಿದ್ದಾರೆ. ಅದರ ಮೇಲೆ ಪ್ರಜೆಗಳು ತಮಗೆ ಈಗಲೇ ಪಾರ್ಲಿಮೆಂಟನ್ನು ಸ್ಥಾಪಿಸಿಕೊಡಬೇಕೆಂದುಒತ್ತರವನ್ನು ಮಾಡುತ್ತಲಿದ್ದಾರೆ. ಅಂತೂ ಇಂದಲ್ಲ ನಾಳೆ ಅಲ್ಲಿ ಪಾರ್ಲಿಮೆಂಟುಕೂಡ ಸ್ಥಾಪಿಸಲ್ಪಡುವುದು ನಿಜ. ಎಲ್ಲ ತರದಲ್ಲೂ ಪುರಾತನವಾಗಿ, ಪ್ರಾಚೀನಪದ್ಧತಿಗಳಿಗೆ ತವರಾಗಿದ್ದ ಚೈನಾದೇಶದಲ್ಲಿ ಈಗ ಸಕಲ ರೀತಿಯಿಂದಲೂ ಹೀಗೆ ಮಾರ್ಪುಗಳುಂಟಾಗಿ ಅದು ಉಜ್ವಲಕ್ಕೆ ಬರುತ್ತಿರುವಾಗ, ನಮ್ಮ ಭರತಖಂಡವು ಪಾಶ್ಚಿಮಾತ್ಯರ ಆಳಿಕೆಗೊಳಗಾಗಿ ೧|| ಶತಮಾನದ ಮೇಲೇ ಆಗಿದ್ದರೂ, ಇನ್ನೂ ಈ ದೇಶದ ಅವನತಿಗೆ ಕಾರಣಗಳಾದ ಭಿನ್ನಭಾವಗಳೂ, ಮೂರ್ಖಪದ್ಧತಿಗಳೂ, ಕೆಟ್ಟ ಪಟ್ಟುಗಳೂ ಕೊನೆಗಾಣದಿರುವುದಕ್ಕೆ ಈ ದೇಶದ ದೌರ್ಭಾಗ್ಯವೇ ಕಾರಣವಾಗಿರಬೇಕು. ನಮ್ಮಂತೆಯೇ ಆಸ್ಯಾಖಂಡಕ್ಕೆಸೇರಿ ಅವನತಿಯಲ್ಲಿ ಬಿದ್ದಿದ್ದ ನೆರೆಯ ಚೈನಾದೇಶದವರ ಮೇಲಿಕಂತ ಸಾಹಸಗಳನ್ನಾದರೂ ಕೇಳಿ ನಮ್ಮ ದೇಶೀಯರು ತಕ್ಕ ಸಂಘಸಂಸ್ಕರಣಮೊದಲಾದುವುಗಳನ್ನು ಮಾಡಿಕೊಂಡು ಉನ್ನತಿಯನ್ನೈದುವುದು ಅವಶ್ಯಕವಲ್ಲವೆ?

ಸೆನ್ಸಸ್ಸು, ಮತ್ತೂ ವೀರಶೈವರು.

ಗೌರ್ನಮೆಂಟಿನವರು ೧೦ ವರ್ಷಕ್ಕೊಂದಾವೃತ್ತಿ ನಡೆಯಿಸುವ ಜನಪರಿಗಣನೆಯ ಕೆಲಸದಲ್ಲಿ ಬರಿಯ ಜನಸಂಖ್ಯೆಯನ್ನು ಮಾತ್ರವೇ ಕೇಳಿ ಬರೆದುಕೊಳ್ಳುವುದಿಲ್ಲ. ಮತ-ಜಾತಿ-ಕುಲ ಮೊದಲಾದುವುಗಳನ್ನು ಕೂಡ ಕೇಳಿ ಬರೆದುಕೊಳ್ಳುವ ಏರ್ಪಾಟನ್ನು ಇಟ್ಟಿದ್ದಾರೆ. ಈ ಸಂದರ್ಭದಲ್ಲಿ ಗೌರ್ನಮೆಂಟಿನವರ ಉದ್ದೇಶವು ಪರಿಶುದ್ಧವಾಗಿದ್ದರೂ, ಕಾರ್ಯವು ನಡೆಯುವಾಗ ಪ್ರಜೆಗಳಿಗೂ ಲೆಕ್ಕವನ್ನು ಬರೆಯುವವರಿಗೂ ಹಲವು ತೊಂದರೆಗಳು ಸಂಪ್ರಾಪ್ತವಾಗುತ್ತಿರುವುದು ಸರ್ವವಿದಿತವಾಗಿದೆ. ಸದ್ಯಃ ಈಸಲದ ಸೆನ್ಸಸ್ಸಿನ ಪಟ್ಟಿಯಲ್ಲಿ ಕೊಟ್ಟಿರುವ "ಹೆಡ್ಡಿಂಗ್" ಗಳಲ್ಲಿ ಮತ-ಜಾತಿಗಳಿಗಾಗಿ ಎರಡು ಸಾಲುಗಳು ಕೊಡಲ್ಪಟ್ಟಿವೆ. ಮತಭೇದವನ್ನು ವಿವರಿಸುವ ಕಾಲಂ ಇರುವುದಿಲ್ಲ. ಇದರಿಂದ ಮತದಲ್ಲಿ "ಹಿಂದೂ" ಎಂಬ ವ್ಯಾಪಕನಾಮವೊಂದನ್ನು ಹಿಂದೂಗಳ ವಿಷಯದಲ್ಲಿ ಬರೆಯಿಸುವುದಕ್ಕೆ ಸಾಧ್ಯವೇ ಹೊರತು ಸ್ಮಾರ್ತ-ವೈಷ್ಣವ-ವೀರಶೈವಾದಿ ಮತಭೇದಗಳನ್ನು ಬರೆಯಿಸುವುದಕ್ಕೆ ಅನುಕೂಲ್ಯವಿರುವುದಿಲ್ಲ. ಅದಲ್ಲದೆ ೭ ನೆಯ ಜಾತಿಯ ಸಾಲಿನಲ್ಲಿ ವೀರಶೈವರನ್ನು ಒಂದು ಜಾತಿಯನ್ನಾಗಿ "ಲಿಂಗಾಯಿತ" ಎಂದು ಬರೆಯಿಸಬೇಕೆಂದು ಸರ್ಕಾರದವರು ಉದಾಹರಣದ ಪಟ್ಟಿಯಲ್ಲಿ ನಿರ್ದೇಶಿಸಿದ್ದರು. ಅದು ತೀರ ಅಸಂಗತವಾಗಿದ್ದಿತು. ಏಕೆಂದರೆ—ವೀರಶೈವ-ಲಿಂಗಾಯತ-ಲಿಂಗಧಾರಿ-ಶಿವಾಚಾರ ಎಂಬುದು ಮೊದಲಾದುವುಗಳು ಮತದ ಹೆಸರುಗಳು. ಇದು ಅನೇಕ ಜಾತಿ ಕುಲಗಳನ್ನೊಳಗೊಂಡಿರುವ ಒಂದು ಮತವೇ ಹೊರತು ಜಾತಿಯಲ್ಲ. ಇದನ್ನು ಒಂದು ಜಾತಿಸ್ಥಾನದಲ್ಲಿ ಸೇರಿಸುವುದು ಅಸಂಗತವಾಗಿದ್ದುದರಿಂದ ಈ ವಿಷಯವು ವೀರಶೈವಮಂಡಲಿಗೆಲ್ಲಾ ಅಸಮಾಧಾನಕರವಾಗಿದ್ದಿತು. ಸೆನ್ಸಸ್ ಸೂಪರಿಂಟೆಂಡೆಂಟರ ಬಳಿಗೆ ಈ ವಿಷಯವಾಗಿ ಮೈಸೂರ ವೀರಶೈವರಿಂದ ದೂರು ಬರೆದುಕೊಳ್ಳಲ್ಪಟ್ಟಿದ್ದಿತು. ಮುಡುಕುದೊರೆ ವೀರಶೈವ ಮತಸಂವರ್ಧಿನೀ ಸಭೆಯವರೂ ಒಂದು ವಿಜ್ಞಾಪನ ಪತ್ರಿಕೆಯನ್ನು ಬರೆದುಕೊಂಡಿದ್ದರು. ಈ ವಿಷಯದಲ್ಲಿ ಪ್ರತ್ಯಕ್ಷವಾಗಿ ತಮ್ಮ ಅರಿಕೆಗಳನ್ನು ಶ್ರುತಪಡಿಸುವುದಕ್ಕಾಗಿ ಮೈಸೂರು ಡಿಸ್ಟ್ರಿಕ್ಟ್ ಸೆನ್ಸಸ್ ಆಫೀಸರಾದ ಸರ್‌ದಾರ್ ಎಂ. ಕಾಂತರಾಜಅರಸ್, ಬಿ. ಎ., ಯವರ ಅನುಮತಿಯನ್ನು ಕೇಳಿಕೊಂಡಿರಲು, ಅವರು ಒಪ್ಪಿದಪ್ರಕಾರ, ಇದೇ ತಿಂಗಳು ತಾ|| ೧೨ ರ ಬೆಳಿಗ್ಗೆ ಮೈಸೂರಿನ ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳೂ, ವೇ|| ಎಸ್. ಆರ್. ಕರಿಬಸವಶಾಸ್ತ್ರಿಗಳೂ ಸಹ ಡಿಸ್ಟ್ರಿಕ್ಟ್ ಆಫೀಸಿಗೆ ಹೋಗಿದ್ದರು. ಆಗ್ಗೆ ಮ|| ಅರಸಿನವರು, ಮ|| ಎ. ಮಹಾದೇವಶಾಸ್ತ್ರಿ ಬಿ. ಎ., ಯವರು, ವೈಸ್ ಪ್ರೆಸಿಡೆಂಟರು ಮ|| ಎಂ. ಜಿ. ಕೃಷ್ಣಸ್ವಾಮಿರಾಯರು, ಅಮಲ್ದಾರ್ ಮ|| ಹನುಮಂತರಾಯರು-ಇವರುಗಳ ಪ್ರತ್ಯಕ್ಷದಲ್ಲಿ ವೀರಶೈವ ಮತಲಕ್ಷಣವನ್ನು ಸಪ್ರಮಾಣವಾಗಿಯೂ ವ್ಯವಹಾರ ನಿರೂಪಣದಿಂದಲೂ ಮನವೊಪ್ಪುವಂತೆ ವಿವರಿಸಿದುದಲ್ಲದೆ, ಈಗಿನ ಸೆನ್ಸಸ್ ಏರ್ಪಾಟಿನಿಂದ ಜಾತಿಸ್ಥಾನಕ್ಕೆ ಮತದಹೆಸರನ್ನುಬರೆಯಿಸಬೇಕಾಗಿ ಬಂದಿರುವ ನಿರ್ಬಂಧದ ತೊಂದರೆಯನ್ನೂ ಶ್ರುತಪಡಿಸಿ, ಮತದ ಹೆಸರನ್ನೂ ಜಾತಿ ಕುಲಗಳ ಭೇದದ ಹೆಸರನ್ನೂ ಬರೆಯಿಸಿಕೊಳ್ಳಲು ಅನುಕೂಲವಾಗುವಂತೆ ಮಾಡಬೇಕೆಂದು ಪ್ರಾರ್ಥಿಸಿದುದಲ್ಲದೆ ಆ ವಿಷಯಕ್ಕೆ ಒಂದು ಅರ್ಜಿಯನ್ನೂ ಕೊಟ್ಟರು. ಅದು ಮೇಲೆ ಕಂಡ ಅಧಿಕಾರಿಗಳಿಗೆ ಸೂಕ್ತವಾಗಿ ತೋರಲು, ಗೌರ್ನಮೆಂಟಿನೊಡನೆ ಕರಸ್ಪಾಂಡೆನ್ಸನ್ನು ನಡೆಯಿಸಿದರು. ಅದರ ಮೇಲೆ ಈ ಕೆಳಗೆ ಕಂಡ ಪ್ರೊಸಿಡಿಂಗ್ಸ್ ಆಗಿರುತ್ತದೆ.

Proceedings of the Government of H. H. the Maharaja of Mysore.

No. Fb. 3961/ Census 31–10 dated 25th January 1911.

× × × × × ×

Government consider that there is no objection to allowing the Lingayets to return themselves as Hindus by religion in col. 3 of the schedule and Lingadhari or Veerasaiva Brahmin, Lingadhari or Veerasaiva Kshatria etc. as the case may be by caste in col. 7 (a) provided they give the names of the sub-castes as ordinarily known such as Aradhya, Gurusthala, Punchachara Gowda etc. for entry in col. 7 (b), provided for the purpose and provided also that such answers are "to the best of the knowledge or belief" (sec. 7 of the Census Regulation) of the person giving the answers.

× × × × × ×

× × × × × ×

ಇದರ ಅಭಿಪ್ರಾಯವೇನೆಂದರೆ—

ಲಿಂಗಾಯಿತರು ಷೆಡ್ಯೂಲಿನ 3 ನೇ ಕಲಮ್ಮಿನಲ್ಲಿ ಹಿಂದೂಮತದವರೆಂದೂ, 7 (a) ಕಲಮ್ಮಿನಲ್ಲಿ ಲಿಂಗಧಾರಿ ಅಥವಾ ವೀರಶೈವಬ್ರಾಹ್ಮಣ, ಲಿಂಗಧಾರಿ ಅಥವಾ ವೀರಶೈವ ಕ್ಷತ್ರಿಯ ಇತ್ಯಾದಿಜಾತಿಯವರೆಂದೂ, 7 (b) ಕಲಮ್ಮಿನಲ್ಲಿ ಸಾಧಾರಣವಾಗಿ ಪ್ರಚಾರದಲ್ಲಿರುವ ಆರಾಧ್ಯ,ಗುರುಸ್ಥಲ, ಪಂಚಾಚಾರ ಗೌಡ ಎಂದು ಮೊದಲಾದ ಒಳಭೇದದವರೆಂದೂ ಬರೆಯಿಸುವಲ್ಲಿ ಸರ್ಕಾರದವರ ಆಕ್ಷೇಪಣೆಯೇನೂ ಇಲ್ಲವು........"

ಇದನ್ನು ವೀರಶೈವಮಂಡಲಿಯೆಲ್ಲವೂ ತಿಳಿದುಕೊಂಡು, ಅಪೇಕ್ಷೆಪಟ್ಟ ಇನ್ಯೂಮರೇಟರಿಗೆ ಈ ಪ್ರೊಸೀಡಿಂಗ್ಸನ್ನು ತೋರಿಸಿ, ವಿವಾದವಿಲ್ಲದಂತೆ ಕಾಲಂ ೩ ರಲ್ಲಿ ಹಿಂದೂಯೆಂತಲೂ, ಕಾಲಂ ೭ (ಎ) ಯಲ್ಲಿ ಲಿಂಗಧಾರಿ ಬ್ರಾಹ್ಮಣ, ಲಿಂಗಧಾರಿ ಕ್ಷತ್ರಿಯ ಇತ್ಯಾದಿಯಾಗಿಯೂ, ಅದೇ ಕಾಲಂ ಬಿ. ಯಲ್ಲಿ ಅವರವರ ಒಳಪ್ರಭೇದಗಳ ಹೆಸರನ್ನೂ ಹೇಳಿ ಬರೆಯಿಸಬಹುದು. ಈ ಮೇಲೆ ಕಂಡ ಪ್ರೊಸಿಡಿಂಗ್ಸಿನ ಅಪ್ಪಣೆಯನ್ನು ಸೆನ್ಸಸ್ ಉದ್ಯೋಗಿಗಳ ತಿಳಿವಿಕೆಗೆ ಗೌರ್ನಮೆಂಟಿನವರು ಕೂಡ ತಂದಿರಬಹುದು.

ಕೈ|| ಆಬ್ಕಾರಿ ರುದ್ರಪ್ಪನವರು.

ರಾಜಧಾನಿಯ ವೀರಶೈವರಲ್ಲಿ ಹಳಬರಾಗಿದ್ದ ಮ|| ಆಬ್ಕಾರಿ ರುದ್ರಪ್ಪನವರು ಕಳೆದ ಶುಕ್ರವಾರದ ದಿನ ಕೈಲಾಸವಾಸಿಗಳಾದರೆಂಬ ವರ್ತಮಾನವನ್ನು ತಿಳುಹುವುದಕ್ಕೆ ಅತಿಶಯವಾಗಿ ವಿಷಾದಿಸುತ್ತೇವೆ. ಇವರು ಮತಾಭಿಮಾನಿಗಳೂ, ಪೂರ್ಣವಾಗಿ ಧರ್ಮಾತ್ಮರೂ ಆಗಿದ್ದರು. ಕಳೆದ ಧಾತು-ಈಶ್ವರ ಸಂವತ್ಸರದ ವೀರಕ್ಷಾಮಕಾಲದಲ್ಲಿ ಇವರ ಭೂತದಯೆಯಿಂದ ರಾಜಧಾನಿಯ ಅನೇಕ ಕುಟುಂಬಗಳು ಪೋಷಿತವಾದುವು. ಇಲ್ಲಿನ ಪ್ರತಿಯೊಂದು ಮಠಕ್ಕೂ ಆ ಕಾಲದಲ್ಲಿ ಇವರು ಪಡಿಯನ್ನು ನಡೆಸುತ್ತಿದ್ದರು. ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿರುವರು. ಇವರಿಗೆ ಆಬ್ಕಾರಿಯ ಕಂಟ್ರಾಕ್ಟು ಇದ್ದಾಗ್ಗೆ ಬಹು ಜನರು ಇವರಿಂದ ಉದ್ಧಾರವಾದರು. ಕಡೆಯವರೆಗೂ ಇವರ ದಾನಧರ್ಮಬುದ್ಧಿಯು ಕಡಿಮೆಯಾಗಿರಲಿಲ್ಲ. ಇವರ ಹಿರಿಯರು ಟಿಪ್ಪು ನವಾಬರ ಕಾಲದಲ್ಲಿ ರಾಜಾಸ್ಥಾನದಲ್ಲಿದ್ದು, ಶ್ರೀರಂಗಪಟ್ಟಣವು ಹಾಳಾದನಂತರ ಶ್ರೀಮಂತ ಪೂರ್ಣಯ್ಯನವರ ಪ್ರೇರಣೆಯಿಂದ ರಾಜಧಾನಿಗೆ ಬಂದು ನೆಲಸಿದವರು. ಇವರಿಗೆ ಅಂತ್ಯಕಾಲದಲ್ಲಿ ೬೩ ವರ್ಷಗಳಾಗಿದ್ದುವು. ೩ ಮಂದಿ ಗಂಡುಮಕ್ಕಳೂ, ೨ ಹೆಣ್ಣು ಮಕ್ಕಳೂ, ೨ ಮೊಮ್ಮಕ್ಕಳೂ ಇರುತ್ತಾರೆ. ಮಕ್ಕಳುಗಳೆಲ್ಲಾ ಗೃಹಸ್ಥಾಶ್ರಮದಲ್ಲಿದ್ದಾರೆ. ಇವರು ತಾವಾಗಬರೆದಿಟ್ಟಿದ್ದ ಮರಣಶಾಸನವನ್ನು ಕಳೆದ ತಾ||

೨೬ ನೆಯ ಗುರುವಾರ ತಾವೇ ರಿಜಸ್ಟ್ರಾರ್ ಆಫೀಸಿಗೆ ತೆಗೆದುಕೊಂಡುಹೋಗಿ ರಿಜಸ್ಟರ್ ಮಾಡಿಸಿ ಬಂದಿರುತ್ತಾರೆ. ಶುಕ್ರವಾರ ಬೆಳಿಗ್ಗೂ ತಾವೇ ಹೋಗಿ ತಮ್ಮ ಮಿತ್ರಮಂಡಲಿಯನ್ನೆಲ್ಲಾ ಮಾತನಾಡಿಸಿ ಬಂದು, ಬೆಂಗಳೂರು ಕಂಟೋನ್ಮೆಂಟ್‌ಕ್ಲಿ ವಿಲಾಂಡ್ ಟವರಿನಲ್ಲಿರುವ ತಮ್ಮಪುತ್ರಿಯ ಮನೆಯಲ್ಲಿ ಸ್ನಾನ ಶಿವಾರ್ಚನೆಯನ್ನು ತೀರಿಸಿ, ಭೋಜನ ಮಾಡಿ, ಯಾಕೋ ಆಯಾಸವಾಗುವುದೆಂದು ಹೇಳಿ ಮಲಗಿಕೊಂಡು ಹಾಗೆಯೇ ಶಿವಲೋಕವನ್ನು ಸಾರ್ದರೆಂದು ತಿಳಿಯುತ್ತೇವೆ. ಅವರ ಸದ್ಧರ್ಮ ಬುದ್ಧಿಯೂ ಸತ್ಪ್ರವೃತ್ತಿಯೂ ಮಹನೀಯರಿಗೆ ಮಾತ್ರ ಸಾಧ್ಯವಾದ ಇಂಥ ಅನಾಯಾಸ ಮರಣವನ್ನುಂಟುಮಾಡಿತು. ಜಗದೀಶನು ಅವರ ಆತ್ಮಕ್ಕೆ ಶಾಂತಿಯನ್ನೀಯಲೆಂದೂ, ಅವರ ಕುಮಾರರುಗಳು ತಂದೆಯ ಹಜ್ಜೆಯನ್ನನುಸರಿಸಿ ನಡೆದು ವಂಶದ ಯಶಸ್ಸನ್ನು ಕಾಯ್ದುಕೊಳ್ಳುವವರಾಗಲೆಂದೂ ಕೋರುತ್ತೇವೆ.

ಒಳದೇಶದ ವೃತ್ತಾಂತ.

ಶ್ರೀಮತ್ ಮಹಾರಾಜರೂ ಯುವರಾಜರೂ ರಾಣಿವಾಸದವರೊಡನೆ ಈ ಫೆಬ್ರುವರಿ ತಾ॥ ೩ ರಲ್ಲಿ ಬೊಂಬಾಯಿಗೆ ದಯಮಾಡಿಸುವವರಾಗಿರುವರು.

ಬೆಂಗಳೂರ ದಂಡಿನಲ್ಲಿ ಸ್ಥಾಪಿತವಾಗಿರುವ ಆರ್ಯಸಹೋದರಿಯರ ಸಂಘದ ೨ ನೇ ವಾರ್ಷಿಕೋತ್ಸವವು ೧ ನೇ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರವರ ಪತ್ನಿಯವರ ಅಧ್ಯಕ್ಷತೆಯಲ್ಲಿ ಬರುವ ಫೆಬ್ರುವರಿ ತಾ॥ ೧೧ ರಲ್ಲಿ ಬೆಂಗಳೂರ ದಂಡಿನಲ್ಲಿರುವ ರಾ॥ ಬ॥ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರರ ಹೈ ಸ್ಕೂಲ್ ಕಟ್ಟಡದಲ್ಲಿ ಜರಗುವುದು.

ಬೆಂಗಳೂರಲ್ಲಿರುವ ತಾತಾಯವರ ಶಾಸ್ತ್ರಶೋಧನಾಲಯದ ಡೈರೆಕ್ಟರಾದ ಡಾಕ್ಟರ್ ಟ್ರವರ್ಸ್‌ಯವರು ಪತ್ನೀಸಮೇತ ಶ್ರೀಶೃಂಗೇರಿ ಸ್ವಾಮಿಗಳ ದರ್ಶನ ಸಂಭಾಷಣಗಳಿಗಾಗಿ ಹೋಗಿದ್ದಾಗ್ಗೆ ಶ್ರೀಗಳವರು ಬಹುಳ ಆದರದಿಂದ ಕಂಡು ೧ ಗಂಟೆಯವರೆಗೆ ಸಂಭಾಷಣೆಯನ್ನು ಮಾಡಿದರಂತೆ. ಮತ್ತೂ ಡಾಕ್ಟರವರು-ಶ್ರೀಗಳವರು ವಿಶೇಷ ಮೇಧಾವಿಗಳೆಂದೂ, ತಾವು ಇಂಥವರನ್ನು ಬಹು ಸ್ವಲ್ಪ ಜನರನ್ನು ಮಾತ್ರವೇ ನೋಡಿರುವೆನೆಂದೂ ಹೇಳಿದರಂತೆ.

ಸ್ವಲ್ಪಕಾಲದ ಹಿಂದೆ ಸಿಡುಬನ್ನು ಹಾಕಿಸಿಕೊಂಡವರಲ್ಲಿ ೧೨ ಮರಣಗಳಾದುವಕ್ಕೆ ಡಿ॥ ಸ್ಯಾನಿಟರಿ ಕಮೀಷನರಾದ ಡಾ॥ ಪಲ್ಪುಯವರು ರಸವನ್ನು ಮಾಡುವುದರ ಕ್ರಮದಲ್ಲಿ ದೋಷವಿರುವುದೇ ಕಾರಣವೆಂದು ಅಭಿಪ್ರಾಯಪಟ್ಟಿದ್ದುದರ ಮೇಲೆ ಸರ್ಕಾರದವರು ಅದರ ನಿಜಸ್ಥಿತಿಯನ್ನು ಕಂಡುಹಿಡಿಯಬೇಕೆಂದು ಈಚೆಗೆ ಅಪ್ಪಣೆಮಾಡಿದ್ದರು. ಸ್ಯಾ॥ ಕಮಿಷನರ್ ಡಾ॥ ಸ್ಮೈತ್‌ರವರು ಡಾ॥ ಪಲ್ಪುಯವರ ಹೇಳಿಕೆಯು ನಿರಾಧಾರವಾದುದೆಂದು ವರದಿ ಮಾಡಿರುತ್ತಾರಂತೆ. ಆದರೆ ಹಿಂದೆ ಆದ ಮರಣಗಳಿಗೆ ಕಾರಣವಿಂತಹದೆಂಬುದು ಮಾತ್ರ ಗೊತ್ತಾಗಲಿಲ್ಲವು.

ಕಳೆದ ತಾ॥ ೨೦ ರಲ್ಲಿ ಮಾಗಡಿಯಲ್ಲಿ ಫಾತಿಮಾಬಾಯಿ ಎಂಬ ೧೩ ವಯಸ್ಸಿನ ಮಹಮ್ಮದೀಯ ಯುವಕಳು ಮುದ್ದಿ ಎಂಬ ೩ ವರ್ಷದ ಹಿಂದೂ ಹುಡುಗಿಯನ್ನು ಉಪಾಯಮಾಡಿ ಏಕಾಂತಸ್ಥಲಕ್ಕೆ ಕರೆದುಕೊಂಡು ಹೋಗಿ ಅವಳ ಕುತ್ತಿಗೆಯನ್ನು ಹಿಸುಗಿ ಕೊಂದು ಅವಳ ಮೈಮೇಲಿದ್ದ ಪ್ರಾಯಶಃ ೩೦ ರೂ. ಬೆಲೆಯ ಆಭರಣಗನ್ನಪಹರಿಸಿಕೊಂಡಳು. ಇದು ಪೋಲೀಸರಿಗೆ ಗೊತ್ತಾಗಿ ಕೊಲೆಗಾರಳಾದ ಫಾತಿಮಾಬಾಯಿಯನ್ನು ಹಿಡಿದು ಸಬ್ ಡಿವಿಜನ್ ಆಫೀಸರಲ್ಲಿ ವಿಚಾರಣೆಗೆ ಗುರಿಮಾಡಿದರು. ಈಗ ಅಲ್ಲಿಂದ ಶಷನ್ಸ್ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾಳೆ.

ಕಳೆದ ಸೋಮವಾರ ಬೆಂಗಳೂರಲ್ಲಿ ಪೋಲೀಸ್ ಇ॥ ಜನರಲ್ ಮ॥ ಡಿ॥ ದೇವರಾಜ ಅರಸಿನವರು ಫಲಪುಷ್ಪಾದಿಗಳೊಡನೆ ಶ್ರೀ ಶೃಂಗೇರಿಸ್ವಾಮಿಗಳ ದರ್ಶನಕ್ಕಾಗಿ ಮಠಕ್ಕೆ ದಯಮಾಡಿಸಿದ್ದು ಸ್ವಾಮಿಗಳ ಸ್ವಾರಿಯು ತಮ್ಮ ಮನೆಗೆ ಚಿತ್ತೈಸಿ ಪಾದಪೂಜೆಯನ್ನು ಅಂಗೀಕರಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದ ಪ್ರಕಾರ ಶ್ರೀಗಳವರು ಸಕಲ ರಾಜಮರ್ಯಾದೆಯೊಡನೆ ಕಳೆದ ತಾ॥ ೨೫ ರ ಬೆಳಿಗ್ಗೆ ಮ॥ ದೇವರಾಜ ಅರಸಿನವರ ಬಂಗಲೆಗೆ ದಯಮಾಡಿಸಿ ಅರಸಿನವರಿಂದಲೂ ಅವರ ಕುಟುಂಬದವರಿಂದಲೂ ಪಾದಪೂಜೆಯಿಂದ ಸತ್ಕರಿಸಲ್ಪಟ್ಟು ಮಠಕ್ಕೆ ಹಿಂತಿರುಗಿದರು. ಸ್ವಾಮಿಗಳು ಈ ತಾ॥ ೪ ರಲ್ಲಿ ಸ್ವಸ್ಥಳಕ್ಕೆ ತೆರಳುವರಂತೆ.

ರಾಜಧಾನಿಯ ಕ್ಯಾರ್ ಪ್ರೆಸ್ಸಿನವರೂ. ಬೆಂಗಳೂರ ಕಮರ್ಷಿಯಲ್ ಹೈಸ್ಕೂಲಿನವರೂ ವಿಶ್ವಾಸದಿಂದ ಕಳುಹಿಸಿದ ೧೯೧೧ ರ ಕ್ಯಾಲಂಡರುಗಳನ್ನು ಸಂತೋಷದಿಂದ ಸ್ವೀಕರಿಸಿದೆವು. ಇವುಗಳಲ್ಲಿ ಕ್ಯಾರ್ ಪ್ರೆಸ್ಸಿನವರು ಪ್ರಕಟಿಸಿರುವ ಕ್ಯಾಲಂಡರು ೪-೫ ಬಣ್ಣಗಳ ಶಾಯಿಯಿಂದ ನೇತ್ರಾನಂದಕರವಾಗಿ ಮುದ್ರಣ ಮಾಡಲ್ಪಟ್ಟು ಮಧ್ಯಭಾಗದಲ್ಲಿ ಶ್ರೀಮನ್ಮಹಾರಾಜರವರ ಭಾವಚಿತ್ರದಿಂದ ಪರಿಶೋಭಿಸುತ್ತಿರುವುದು. ಕಮರ್ಷಿಯಲ್ ಸ್ಕೂಲಿನವರು ಪ್ರಕಟಿಸಿರುವ ಕ್ಯಾಲೆಂಡರು ಪೋಸ್ಟ್ ಕಾರ್ಡಿನ ಒಂದು ಭಾಗದಲ್ಲಿ ತಿಂಗಳು, ವಾರ, ತಾರೀಖು ಮತ್ತೂ ಆ ಸ್ಕೂಲಿನಲ್ಲಿ ಸಂಕ್ಷೇಪ ಲಿಪಿಯನ್ನು ಬೋಧಿಸುವವರ ಮತ್ತೂ ಕಲಿಸುವವರ ಭಾವಚಿತ್ರದಿಂದಕೂಡಿರುವುದು.

ಆಕಾಶವಿಮಾನದಲ್ಲಿ ಕುಳಿತು ಪ್ರಯಾಣಮಾಡುವ ಕ್ರಮವು ಬರುವ ತಾ॥ ೨ ನೇ ಗುರುವಾರ ಸಾಯಂಕಾಲ ಬೆಂಗಳೂರ ದಂಡಿನಲ್ಲಿ ಪ್ರದರ್ಶಿಸಲ್ಪಡುವುದು. ಇದನ್ನೋಡಲು ೧೦, ೫, ೩, ೧, ॥, । ರೂಪಾಯಿಗಳ ಟಿಕೆಟ್ಟು ಗೊತ್ತುಮಾಡಲ್ಪಟ್ಟಿರುವುದು. ರಾಜಧಾನಿಯಿಂದ ಹೋಗತಕ್ಕವರು ೩ ರೂಪಾಯಿಗಳನ್ನು ಒಟ್ಟಿಗೆಕೊಟ್ಟು ೩ ನೇ ತರಗತಿಯ ಟಿಕೆಟ್ಟನ್ನು ತೆಗೆದುಕೊಂಡಲ್ಲಿ ಇಲ್ಲಿಂದ ಬೆಂಗಳೂರಿಗೆ ಹೋಗಿ ಪುನಃ ಹಿಂತಿರುಗಲು ರೈಲು ಛಾರ್ಜೂ ನೋಟದ ಛಾರ್ಜೂ ಸಹ ಆ ಟಿಕೆಟ್ಟುಗಳಲ್ಲೇ ಸೇರಿರುವುದಲ್ಲದೆ ಬೇರೆಕೊಡಬೇಕಾಗಿಲ್ಲವು. ಆದರೆ ಹೋಗತಕ್ಕವರು ಬುಧವಾರರಾತ್ರಿ ರೈಲಿನಲ್ಲಿ ಪ್ರಯಾಣಮಾಡಬೇಕಾಗಿದೆ.

ಕಳೆದ ತಾ॥ ೨೩ ರ ಬೆಳಿಗ್ಗೆ ರಾಜಧಾನಿಯಿಂದ ಆಲನಹಳ್ಳಿ ಬಂಗಲೆಗೆ ಹೋಗುವ ದಾರಿಯಲ್ಲಿ ಉಕ್ಕಡದ ಹತ್ತಿರವಿರುವ ಒಡ್ಡರಪಾಳ್ಯದಿಂದಾಚೆಗೆ ಇಬ್ಬರು ಮಹಮ್ಮದೀಯ ಯುವಕರು ಬರುತ್ತ ಶಿವನಸಮುದ್ರದಿಂದ ರಾಜಧಾನಿಗೆ ತರಲ್ಪಟ್ಟಿರುವ ವಿದ್ಯುಲ್ಲತೆಯ ತಂತಿಗಳನ್ನೋಡಿ ಅವರಿಬ್ಬರಲ್ಲೊಬ್ಬನು ಈ ತಂತಿಯನ್ನು ಮುಟ್ಟಿದರೆ ಸಾಯುತ್ತಾರೆಂದೂ ಮತ್ತೊಬ್ಬನು ಮುಟ್ಟಿದರೆ ಸಾಯುವುದಿಲ್ಲವೆಂದೂ ಜಿಜ್ಞಾಸೆ ನಡೆದು ೨ ನೆಯವನು ತಾನು ತಂತಿಯನ್ನು ಮುಟ್ಟಿ ಬಂದರೆ ೧೧ ರೂಪಾಯಿಗಳನ್ನು ಕೊಡಬೇಕೆಂದು ಮೊದಲನೆಯವನ ಕೂಡ ಪಂಥಮಾಡಿ, ಅವನು ಬೇಡವೆಂದು ತಡೆದರೂ ಕೇಳದೆ ಕಂಬದ ಮೇಲೆ ಹತ್ತಿ ತಂತಿಯನ್ನು ಹಿಡಿದುಕೊಂಡ ಕೂಡಲೆ ಕೆಳಗೆ ಬಿದ್ದು ಪೆಟ್ಟನ್ನು ತಿಂದು ಆಸ್ಪತ್ರೆಗೆ ಬಂದು ಚಿಕಿತ್ಸೆಯನ್ನು ಹೊಂದುತಲಿರುವನು.

ಕಳೆದ ತಾ॥ ೨೬ ರ ಸಾಯಂಕಾಲ ರಾಜಧಾನಿಯ ಜನರಲ್ ಆಸ್ಪತ್ರೆಗೆ ಹಾಲನ್ನು ಕೊಡುತ್ತಿದ್ದ ೨೩-೨೫ ವರ್ಷ ವಯಸ್ಸಿನ ಒಬ್ಬ ಒಕ್ಕಲಿಗರವನು ಅಕಸ್ಮಾತು ಅಸ್ವಸ್ಥನಾಗಲು, ಅವನ ಮನೆಯಲ್ಲಿ ಗದ್ದಲವಾದ ಸಂದರ್ಭವನ್ನು ಪೊ॥ ಇನ್ಸ್‌ಪೆಕ್ಟರು ತಿಳಿದು, ಬಂದು ಅವನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆತಂದು ಬಿಟ್ಟರು. ಅವನು ಅಲ್ಲಿಯೇ ಆರಾತ್ರಿ ಪ್ರಾಣವನ್ನು ಬಿಟ್ಟನು. ಅವನು ತಾನು ಮಾರ್ಗದಲ್ಲಿ ಬರುತ್ತಿದ್ದಾಗ್ಗೆ ಗಡ್ಡವನ್ನು ಬಿಟ್ಟುಕೊಂಡು ಕಾವಿ ಬಟ್ಟೆಯನ್ನು ಹೊದ್ದಿದ್ದ ಒಬ್ಬ ಬೈರಾಗಿಯು ತನಗೆ ತಿನ್ನಲಿಕ್ಕೆ ಕೊಂಚ ಸಕ್ಕರೆಯನ್ನು ಕೊಟ್ಟನೆಂದೂ ಅದನ್ನು ಸೇವಿಸಿದಾಗಿನಿಂದ ಆರೋಗ್ಯ ತಪ್ಪಿತೆಂದೂ ಸಾಯುವುದಕ್ಕೆ ಮೊದಲೇ ಹೇಳಿದನಂತೆ. ಪೋಲೀಸಿನವರು ಬೆಳಿಗ್ಗೆ ಆಸ್ಪತ್ರೆಗೆ ಬಂದು ಮೃತನ ತಂದೆ ಮೊದಲಾದವರ ಹೇಳಿಕೆಯನ್ನು ಬರೆದುಕೊಂಡು ಅವನ ಕರುಳು, ಜೊಲ್ಲು ಮೊದಲಾದುವುಗಳನ್ನು ರಸಾಯನ ಶಾಸ್ತ್ರಜ್ಞರ ಪರೀಕ್ಷಾರ್ಥವಾಗಿ ಬೆಂಗಳೂರಿಗೆ ಕಳುಹಿಕೊಟ್ಟರು. ಮರಣದ ಕಾರಣವು ಮುಂದೆ ಗೊತ್ತಾಗಬೇಕಾಗಿದೆ.

ಮ॥ ರಾ॥ ಗಳಾದ ೧ ನೇ ಕೌನ್ಸಿಲರ್ ಕೆ. ಪಿ. ಪುಟ್ಟಣ್ಣಸೆಟ್ಟರೂ, ರೆ॥ ಕಮಿಷನರು ಎ. ರಂಗಸ್ವಾಮಯ್ಯಂಗಾರರೂ ಬರುವ ಮಾರ್ಚಿ ತಿಂಗಳ ಕಡೆಯಲ್ಲಿ ಉದ್ಯೋಗದಿಂದ ನಿವೃತ್ತರಾಗಿ, ಎಚ್. ವಿ. ನಂಜುಂಡಯ್ಯನವರು ೧ ನೇ ಕೌನ್ಸಿಲರಾಗಿಯೂ, ಪೊ॥ ಇ॥ ಜನರಲ್ ಡಿ. ದೇವರಾಜ ಅರಸಿನವರು ೨ ನೇ ಕೌನ್ಸಿಲರಾಗಿಯೂ, ತುಮಕೂರ ಡಿ॥ ಕ॥ ಕೆ. ದೊರಸಾಮಯ್ಯರು ಪೊ॥ ಇ॥ ಜನರಲ್ಲಾಗಿಯೂ, ಆಗುತ್ತಾರೆ. ಮತ್ತೂ ಹುಜೂರು ಸೆಕ್ರೆಟರಿ ಮ॥ ಪಿ. ರಾಘವೇಂದ್ರರಾಯರು ಮುಂದೆ ದೊಡ್ಡ ಉದ್ಯೋಗಕ್ಕೆ ಬರಲು ರೆ॥ ಕಮಿಷನರಾಗಿ ಮಾಡಲ್ಪಡುವರು. ಅರಮನೆಯ ಇನ್‌ಛಾರ್ಜ್ ಆಫೀಸರ್ ಮ॥ ಬಿ. ರಾಮಕೃಷ್ಣರಾಯರು ಕೆಲಸದಿಂದ ನಿವೃತ್ತರಾಗಿ ಅವರ ಸ್ಥಾನದಲ್ಲಿ ಸಬ್ ಡಿವಿಜನ್ ಆಫೀಸರ್ ಮ॥ ರಂಗನಾಥರಾವ್ ಸಾಹೇಬ್‌ರವರೂ, ಖಾಲಿಬೀಳುವ ಡೆಪ್ಯುಟಿ ಕಮಿಷನರುಗಳ ಸ್ಥಾನಗಳಿಗೆ ಗ॥ ಅ॥ ಸೆಕ್ರೆಟರಿ ಬಾಲಸುಂದರಂಅಯ್ಯರೂ, ಮ॥ ಹಂಜಾಹುಸೇನರವರೂ, ಮ॥ ಬಾಲಸುಂದರಂಅಯ್ಯರ ಬದಲು ಗೌರ್ನಮೆಂಟ್ ಸೆಕ್ರೆಟರಿ ಸ್ಥಾನಕ್ಕೆ ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರಾದ ಮ॥ ಎಂ. ಶಾಮರಾವ್, ಎಂ.ಎ., ಯವರೂ ಬರುವರೆಂದು ನಂಬಲರ್ಹವಾದ ಮುಖದಿಂದ ತಿಳಿದಿರುತ್ತೇನೆಂದು ಒಬ್ಬರು ಕಳೆದ ತಾ॥ ೨೫ ರ ಮದ್ರಾಸ್ ಮೇಲ್ ಪತ್ರಿಕೆಗೆ ಬರೆದಿರುತ್ತಾರೆ. ಇದು ಎಷ್ಟರಮಟ್ಟಿಗೆ ನಿಶ್ಚಯವೆಂಬುದನ್ನು ಮುಂದೆ ನೋಡಬೇಕು.

ವರ್ತಮಾನ ಸಂಗ್ರಹ.

ಇನ್ನು ಮುಂದೆ ಅರವಿಂದಘೋಷರು ಪಾಂಡುಚರಿಯಲ್ಲೇ ವಾಸವಾಗಿರಲು ನಿರ್ಧರಿಸಿರುವರಂತೆ.

ಸ್ತ್ರೀಯರು ವಿದ್ಯಾವತಿಯರಾದರೆ ದೇಹದೌರ್ಬಲ್ಯವುಳ್ಳವರಾಗುವರೆಂದು ಒಬ್ಬ ಲೇಖಕರು ಅಭಿಪ್ರಾಯಪಡುತ್ತಾರೆ.

ಪೋರ್ಟ್ ಸಯಾದಿನಿಂದ ಭರತಖಂಡಕ್ಕೆ ೨ ಲಕ್ಷದ ೧೦ ಸಾವಿರ ಸವರನ್ನುಗಳ ಬೆಲೆಯ ಭಂಗಾರವು ಬಂದಿಳಿದಿರುವುದು.

ಹಸುಗಳನ್ನು ಸಾಕಿ ಹಾಲುಬೆಣ್ಣೆಗಳನ್ನು ಮಾರುವುದಕ್ಕಾಗಿ ೫೦ ಸಾವಿರ ರೂ. ಬಂಡವಾಳದ ವರ್ತಕ ಸಂಘವೊಂದು ಕಲ್ಕತ್ತಾದಲ್ಲಿ ಸ್ಥಾಪಿಸಲ್ಪಟ್ಟಿದೆ.

ಒಬ್ಬ ಭಾರತಸ್ತ್ರೀಯು ಆಂಗ್ಲಭಾಷೆಯನ್ನು ತಿಳಿಯದವಳೆಂಬ ಕಾರಣದಿಂದ ಟ್ರಾನ್ಸ್‌ವಾಲಿನಲ್ಲಿ ೧೫೦ ರೂ. ಅರ್ಥದಂಡಕ್ಕೂ ೧ ವಾರ ಕಾರಾಗೃಹವಾಸ ಶಿಕ್ಷೆಗೂ ಗುರಿಯಾದಳು.

ಪೋರ್ಚುಗೀಸರ ಯುವಕನೊಬ್ಬನು ಮ್ಯಾಂಚಸ್ಟರಿನ ಹುಡುಗಿಯೊಬ್ಬಳನ್ನು ಮದುವೆಯಾಗುವುದಕ್ಕೆ ಕೋರಿಕೊಂಡನು. ಆಕೆಯು ಒಪ್ಪಲಿಲ್ಲ. ಯುವಕನು ತುಪಾಕಿಯಿಂದ ಹೊಡೆದುಕೊಂಡು ಸತ್ತನು.

ಇಟಲಿಯಲ್ಲಿ ವಾಂತಿಭೇಧಿ ರೋಗವು ವ್ಯಾಪಿಸಿ, ಪೋಲೀಸರು ಮಾಡಿದ ನಿರೋಧಕವಾದ ಏರ್ಪಾಟುಗಳು ಪ್ರಜೆಗಳಿಗೆ ಸರಿಬೀಳದಿರಲು, ಪ್ರಜೆಗಳಿಗೂ ಪೋಲೀಸರಿಗೂ ದೊಡ್ಡ ಕಲಹವು ನಡೆದು, ಕಡೆಗೆ ಪ್ರಜಾಪಕ್ಷದಲ್ಲಿ ಮೂವರು ಸತ್ತರು.

“ಬಾಲಗಂಗಾಧರತಿಲಕ” ಎಂಬ ಹೆಸರಿನ ಗ್ರಂಥವೂ “ತಿಲಕೇಯಾಂಚವ್ಯಾಕ್ಟಿರ್ನ” ಎಂಬ ಗ್ರಂಥವೂ ಸಹ ಇಂಡ್ಯಾ ಗೌರ್ನಮೆಂಟಿನ ಅಧೀನಗೊಳಿಸಿಕೊಳ್ಳಲ್ಪಟ್ಟಿವೆ. ಇವುಗಳಲ್ಲಿ ರಾಜದ್ರೋಹ ಬೋಧಕ ವಾಕ್ಯಗಳು ಅಡಗಿವೆಯಂತೆ.

ಮಾರಿಷ್ ದ್ವೀಪದಲ್ಲಿ ಪ್ರಜೆಗಳಿಗೂ ಪ್ರಭುತ್ವದವರಿಗೂ ಹೋರಾಟವಾಗಿ, ಪ್ರಜೆಗಳು ಅಂಗಡಿಗಳಿಗೆ ನುಗ್ಗಿ ಹಾವಳಿಯನ್ನು ಮಾಡುವುದಕ್ಕಾರಂಭಿಸಲು, ಸರ್ಕಾರದವರು ಆಯುಧಪಾಣಿಗಳಾದ ಭಟರನ್ನು ತಂದು ನಿಲ್ಲಿಸಿ, ಗದ್ದಲವನ್ನಣಗಿಸಿದರು.

ಬೊಂಬಾಯಿಯ ಬಳಿಯಲ್ಲಿ ಒಬ್ಬ ಕುಲೀನರಾದ ಹಿಂದೂ ಬ್ಯಾರಿಸ್ಟರೊಬ್ಬರು ಒಬ್ಬ ವಿತಂತುವನ್ನು ಮದುವೆಮಾಡಿಕೊಂಡರು. ಈ ಉತ್ಸವಕ್ಕೆ ಬರೋಡಾ ಮಹಾರಾಜರವರು, ಸರ್ ಚಂದ್ರವಾರ್ಕರ್‌ರವರೇ ಮೊದಲಾದ ಅನೇಕ ಪ್ರಮುಖರು ದಯಮಾಡಿಸಿದ್ದರು.

ಅಲಹಾಬಾದಿನ ವಸ್ತುಪ್ರದರ್ಶನಶಾಲೆಯಲ್ಲಿ ಹಿಕೆಲ್ ಎಂಬ ಆಕಾಶನಾವಿಕಳು ಕಳೆದ ತಾ॥ ೨೫ ರಲ್ಲಿ ೧ ಗಂಟೆ ೨ ನಿಮಿಷಗಳವರೆಗೆ ನಾವೆಯನ್ನು ಆಕಾಶದಲ್ಲಿ ನಡೆಸುತ್ತಿರುವಾಗ್ಗೆ ಮುಂದೆ ನೂಕುವ ಯಂತ್ರಭಾಗವು ಒಡೆದುಹೋದುದರಿಂದ ಕೊಂಚ ಶ್ರಮಪಟ್ಟು ಕೆಳಕ್ಕಿಳಿಯಬೇಕಾಯಿತು.

ಈಗಿನ ಮದ್ರಾಸ್ ಗೌರ್ನರಾದ ಸರ್, ಆರ್ಥರ್, ಲಾಲಿಯವರ ಅಧಿಕಾರದವಧಿಯು ಬರುವ ಮಾರ್ಚಿ ತಾ॥ ೨೩ಕ್ಕೆ ಮುಗಿಯುವುದು. ಆದರೆ ಇನ್ನೂ ೪ ತಿಂಗಳವರೆಗೆ ಅವರು ಅದೇ ಅಧಿಕಾರದಲ್ಲಿರುವುದಕ್ಕೆ ಸ್ಟೇಟ್ ಸೆಕ್ರಟರಿಗಳಿಂದ ಉತ್ತರ ಬಂದಿರುವುದೆಂದು ಕೇಳಿ ಅಲ್ಲಿನ ಪ್ರಜಾಕೋಟಿಯೆಲ್ಲವೂ ಸಂತೋಷಿಸುತ್ತಿದೆ.

ದಕ್ಷಿಣ ಆಫ್ರಿಕಾದವರ ಸೊಕ್ಕನ್ನಡಗಿಸುವುದಕ್ಕಾಗಿ ಈ ದೇಶದ ಕೂಲಿಯವರನ್ನು ಆ ದೇಶಕ್ಕೆ ಕಳುಹಿಸಿಕೊಡದಂತೆ ಒಂದು ವಿಧಿಯನ್ನು ನಮ್ಮ ಇಂಡ್ಯಾ ಸರ್ಕಾರದವರು ಮಾಡುವುದರಲ್ಲಿದ್ದಾರಷ್ಟೆ, ಇದನ್ನು ಅಲ್ಲಿನವರು ಕೇಳಿ, ಇಲ್ಲಿನ ಕೂಲಿಯವರು ಬರುವುದನ್ನು ತಡೆಯಕೂಡದೆಂದು ನೇಟಾಲಿನ ಸಕ್ಕರೆ ಕಾರ್ಖಾನೆಯವರು ಅಧಿಕಾರಿಗಳಿಗೆ ಮೊರೆಯಿಟ್ಟುಕೊಂಡಿದ್ದಾರೆ.

ತಿರುವಾಂಕೂರು ಸ್ವದೇಶಾಭಿಮಾನಿ ಪತ್ರಿಕಾ ಕರ್ತರಾದ ಮಿ॥ ರಾಮಕೃಷ್ಣಪಿಳ್ಳೆಯವರಿಗೆ ಸೀಮಾಂತ ಶಿಕ್ಷೆ ವಿಧಿಸಲ್ಪಟ್ಟ ವಿಷಯದಲ್ಲಿ ಇಂಡಿಯನ್ ಪೆಟ್ರಿಯಟ್ ಪತ್ರಿಕೆಯೊಳಗೆ ದೂಷಣಕರವಾ ಲೇಖನವು ಬಂದಿದ್ದುದರಿಂದ ಆ ಪತ್ರಿಕೆಯ ಸಂಪಾದಕರಾದ ದಿ॥ ಬ॥ ಕರುಣಾಕರಮೆನನ್‌ರವರಮೇಲೆ ಮಿ॥ ಪಿಳ್ಳೆಯವರು ೧೫ ಸಾವಿರ ರೂ. ಗಳಿಗೆ ಮಾನನಷ್ಟದ ವಿವಾದವನ್ನು ಹೂಡಿದ್ದಾರೆ.

ಜಾರ್ಜ್‌ಚಕ್ರವರ್ತಿಯವರ ಕಿರೀಟಧಾರಣಮಹೋತ್ಸವವು ಭರತಖಂಡದಲ್ಲಿ ಬರುವ ಡಿಶಂಬರ್ ತಾ॥ ೧೦ ಮೇಲೆ ೨೦ರೊಳಗೆ ಯಾವುದೋ ಒಂದುದಿನ ದಿಲ್ಲಿಯಲ್ಲಿ ನಡೆಯುವುದಾಗಿದೆ. ಅಲ್ಲಿಂದ ಕ್ರಿಸ್‌ಮಸ್‌ಹಬ್ಬಕ್ಕೆ ಅವರು ಕಲ್ಕತ್ತಾಕ್ಕೆ ದಯಮಾಡಿಸುತ್ತಾರೆ. ಆದರೆ ಈ ಸಂದರ್ಭದಲ್ಲಿ ಅವರು ಬೊಂಬಾಯಿಗೂ ಕಲ್ಕತ್ತಾಕ್ಕೂ ದರ್ಶನವನ್ನಿತ್ತಂತಾಗುವುದು. ಹಾಗೆಯೇ ಮದ್ರಾಸಿಗೂ ದಯಮಾಡಿಸಿ ದರ್ಶನವನ್ನಿತ್ತು ಅಲ್ಲಿನ ಪ್ರಜೆಗಳ ರಾಜಭಕ್ತಿಯನ್ನು ಅಂಗೀಕರಿಸುವಂತೆ ಅನುಗ್ರಹಿಸಬೇಕೆಂದು ಅಲ್ಲಿನ ಮಹಾಜನರು ತಮ್ಮ ಗೌರ್ನರಮುಖೇನ ಚಕ್ರವರ್ತಿಯವರನ್ನು ಪ್ರಾರ್ಥಿಸಿಕೊಳ್ಳುವುದರಲ್ಲಿದ್ದಾರೆ.

ಕಳೆದ ವರ್ಷದ ಜೂನ್ ತಿಂಗಳ ಕಡೆಯವರೆಗೆ ಮುಗಿದ ೬ ತಿಂಗಳ ಕಾಲದಲ್ಲಿ ಮದ್ರಾಸು ಮತ್ತೂ ಸದರ್ನ್‌ಮರಾಟಾ ರೇಲ್ವೆಸಂಘದವರಿಗೆ ೧೩೧೯೪೮೦೩ ರೂ. ಗಳು ಅಂ

ದರೆ ಅದರ ಹಿಂದಿನ ವರ್ಷದ ಅಷ್ಟೇ ಕಾಲದಲ್ಲಿ ಆಗಿದ್ದ ಉತ್ಪತ್ತಿಗಿಂತ ೧೪೨೦೬೩೬ ರೂ. ಗಳು ಹೆಚ್ಚಾಗಿ ಉತ್ಪನ್ನವಾದುವು. ಇದರೊಳಗೆ ದೊಡ್ಡ ರೇಲ್ವೆಯಲ್ಲಿ ೧೨೪೬೬೪ ರೂ. ಗಳು ಹೆಚ್ಚಿನ ಆದಾಯವೂ, ಉಳಿದುದು ಸಣ್ಣ ರೇಲ್ವೆಯಲ್ಲೂ ಹುಟ್ಟುವಳಿಯಾಗಿರುವುದು. ವೆಚ್ಚವು ಅದೇ ಕಾಲದಲ್ಲಿ ೧೪೭೩೧೬೩ ರೂ. ಹಿಂದಿನ ವರ್ಷದ ಅದೇ ಕಾಲದಲ್ಲಿ ೧೯೩೯೦೦೩೦ ರೂ. ಗಳಾಗಿದ್ದುವು.

ಗುಂಟೂರು ಪ್ರಾಂತವಿದ್ಯಾಲಯದಲ್ಲಿ ಕಳೆದ ತಾ|| ೨೪ ರಿಂದ ೨೯ ರವರೆಗೆ ವಿದ್ಯಾವಿಷಯಕ ಪ್ರದರ್ಶನವೊಂದು ಜರುಗಿತು. ಸುತ್ತಣ ಜಿಲ್ಲೆಗಳೊಳಗೆ ಉತ್ತಮ ಪದ್ಧತಿಯನ್ನನುಸರಿಸಿ ವಿದ್ಯಾಭ್ಯಾಸ ಮಾಡಿಸುವಂತಾಗಬೇಕೆಂಬುದೇ ಈ ಪ್ರದರ್ಶನದ ಉದ್ದೇಶವು. ಕೃಷ್ಣಾ-ನೆಲ್ಲೂರು-ಗುಂಟೂರು ಈ ಮೂರು ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳೂ ಉಪಾಧ್ಯಾಯರೂ ರಚಿಸಿದ್ದ ಉತ್ತಮವಾದ ವಸ್ತುಗಳಿಗೆ ಬಹುಮಾನಗಳೂ ಪದಕಗಳೂ ಕೊಡಲ್ಪಡುವುವು. ಅಮೇರಿಕಾ-ಇಂಗ್ಲೆಂಡು-ಹಾಲೆಂಡು-ಇಂಡ್ಯಾ ಈ ಪ್ರದೇಶಗಳಿಂದೆಲ್ಲಾ ಪ್ರದರ್ಶನೀಯ ವಸ್ತುಗಳು ಅಲ್ಲಿಗೆ ಬಂದಿರುವುವು.

ಈಚೆಗೆ ಹತ್ತಿಯ ಬೆಲೆಯು ಹೆಚ್ಚಿ ಅದರ ಸಾಗುವಳಿಯು ಲಾಭಕರವಾಗುತ್ತ ಬಂದುದರಿಂದ ಬೀರಾರಿನಲ್ಲಿ ಎರೆಯ ಭೂಮಿಗಳಲ್ಲಿ ಪ್ರತಿವರ್ಷವೂ ಹತ್ತಿಯಪೈರನ್ನೇ ಮಾಡುತ್ತ ಬಂದುದರಿಂದ ಭೂಮಿಯು ನಿಸ್ಸಾರವಾಗುತ್ತ ಬಂದಿತು. ಅದರ ಸಾರವು ಯಥಾಪ್ರಕಾರ ಇರುವಂತೆ ಮಾಡಬೇಕಾದುದು ಅವಶ್ಯಕವಾದುದರಿಂದ ಹತ್ತಿಯ ಪೈರಿನ ಜತೆಯಲ್ಲೇ ಮಧ್ಯೆಮಧ್ಯೆ ಹುರುಳಿಯ ಪೈರನ್ನು ಎಬ್ಬಿಸುವುದರಿಂದ ಸಾರವು ಭೂಮಿಯಲ್ಲಿ ಕಡಿಮೆಯಾಗದೆ ಯಿರುವುದಂತೆ ಈ ಪೈರಿನಿಂದ ಹತ್ತಿಪೈರಿಗೆ ಯಾವ ನಷ್ಟವೂ ಆಗುವುದಿಲ್ಲ. ಇಷ್ಟೇಅಲ್ಲದೆ ಹತ್ತಿಯು ಹುಲುಸಾಗುವುದು. ಹುರುಳಿ ಪೈರಿಗೂ ನಷ್ಟ ಸಂಭವಿಸುವುದಿಲ್ಲ.

ಬಾಬುರಾಯ್ ನರೇಂದ್ರನಾಥಸೇನರವರು ಇಷ್ಟರಲ್ಲೇ ವಂಗಭಾಷೆಯಲ್ಲಿ ಒಂದಾನೊಂದು ವರ್ತಮಾನ ಪತ್ರಿಕೆಯನ್ನು ಪ್ರಕಟಿಸುವವರಾಗಿರುವರು. ಇದರಲ್ಲಿ ರಾಜಕೀಯ ವಿಷಯವು ಕೂಡ ಶುದ್ಧವಾಗಿ ಬರೆಯಲ್ಪಡುವುದು. ಬಂಗಾಳಾಗೌರ್ನಮೆಂಟಿನವರು ಈ ಪತ್ರಿಕೆಯ ೨೪ ಸಾವಿರ ಪ್ರತಿಗಳನ್ನು ವರ್ಷ ೧ ಕ್ಕೆ ೨|| ರೂ. ಚಂದಾಪ್ರಕಾರ ಕೊಟ್ಟು ತೆಗೆದುಕೊಂಡು, ಅವುಗಳನ್ನು ಆ ಆಧಿಪತ್ಯದಲ್ಲಿರುವ ಪಾಠಶಾಲೆಗಳಿಗೂ ನ್ಯಾಯಸ್ಥಾನಗಳಿಗೂ ಅಧಿಕಾರಿಗಳಿಗೂ ಕಳುಹಿಸಿಕೊಡುವರು. ಈಗಾಗಲೇ ಆ ಗೌರ್ನಮೆಂಟಿನವರು ೩ ತಿಂಗಳ ಚಂದಾ ೧೪೩೬೪ ರೂ. ಗಳನ್ನು ಮುಂಗಡವಾಗಿ ಆ ಪತ್ರಿಕಾಸಂಪಾದಕರಿಗೆ ಕೊಟ್ಟಿರುವರು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು. ಪ. ಪ್ರ.

ಪತ್ರವ್ಯವಹಾರ.

ದಾವಣಗೆರೆ ತಾ|| ಬೇತೂರು.

ಸ್ವಮತಾಭಿಮಾನದಲ್ಲಿಯೇ ಕಾಲವನ್ನು ಕಳೆದ ಮ|| ಸೋಲಾಪುರದ ವಾರದ ಮಲ್ಲಪ್ಪನವರ ಕೈಲಾಸವಾಸಕ್ಕೂ ಈ ಪ್ರಾಂತದಲ್ಲಿ ಗಂಗನರಸಿ ಮಠದ ಮಲ್ಲಿಕಾರ್ಜುನಪ್ಪನವರ ಮತ್ತು ಇವರ ಜ್ಯೇಷ್ಠ ಪುತ್ರ ಮುರಿಗೇಂದ್ರಪ್ಪನವರ ಕೈಲಾಸವಾಸಕ್ಕೂ ನಮ್ಮ ಗ್ರಾಮದ ಸ್ವಮತ ಪ್ರಮುಖರು ಒಂದು ದಿವಸ ಯಾವ ಕೆಲಸಕ್ಕೂ ಹೋಗದೆ ಚಿಂತಾರ್ಣವದಲ್ಲಿ ಮುಳುಗಿದ್ದರು. ಮತ್ತು ದಾವಣಗೆರೆಯಲ್ಲಿ ಅಂಗಡಿಗಳು, ಗಿರಿಣಿಗಳು ಬಂದಾಗಿದ್ದವು.

ಅಯ್ಯಾ ವೀರಶೈವ ಮಹನೀಯರೆ ಈ ವರ್ಷವೆಲ್ಲ ಸ್ವಮತಕಾರ್ಯದ ಮುಂದಾಳುಗಳನ್ನು ಕಳೆದುಕೊಂಡು ದುಃಖಪಡುವುದೇ ನಮ್ಮಗಳ ದುರದೃಷ್ಟವಾಯಿತು.

ಪಟೇಲ್ ಮುರಿಗೆಪ್ಪ, ಬೇತೂರು.

ಸೊಲ್ಲಾಪುರದ ರಾವ್‌ಬಹದ್ದೂರ್ ವಾರದ ಮಲ್ಲಪ್ಪಣ್ಣನವರು ಕೈಲಾಸವಾಸಿಗಳಾದರೆಂಬ ವಾರ್ತೆಯನ್ನು ಕೇಳಿ ಮೈಸೂರು ಟವುನ್ ನಿವಾಸಿಗಳಾದ ವೀರಶೈವ ಪ್ರಮುಖರು ಸನ್ ೧೯೧೧ ನೆ ಇಸವಿ ಜನವರಿ ತಾ|| ೨೨ ರಲ್ಲೂ ಮ|| ಯಜಮಾನ್ ವಿರೂಪಾಕ್ಷಯ್ಯನವರ ಮನೆಯಲ್ಲಿ ಕೂಡಿ ನಡೆಯಿಸಿದ ಪ್ರೊಸಿಡಿಂಗ್ಸ್:—

ಈ ಸಭೆಗೆ ಮ|| ರಾ|| ಪತ್ರೆ ಚಂ|| ವೀರಪ್ಪನವರು ಅಧ್ಯಕ್ಷರಾಗಿರಬೇಕೆಂದು ಮ|| ಪಿ. ಮಹಾದೇವಯ್ಯನವರು ತಮ್ಮ ಪ್ರಪೋಜನ್ನು ತರುವಾಗ್ಗೆ, ಈ ದೊಡ್ಡಮನುಷ್ಯರು ನಮ್ಮ ದಕ್ಷಿಣದೇಶಕ್ಕೆ ಕೈ|| ವಾರದ ಮಲ್ಲಪ್ಪಣ್ಣನವರಂತೆ ಶ್ರೀಮಂತರೂ ಉಚಿತಜ್ಞರೂ ಕರ್ತವ್ಯತತ್ಪರರೂ ಆಗಿರುತ್ತಾರೆ. ಮನಸ್ಕರಿಸಿದರೆ ಅವರ ದಾರಿಯನ್ನೇ ಅನುಸರಿಸಿ ಮತೋನ್ನತಿಗೆ ಅವಶ್ಯಕವಾದ ಅನೇಕ ಕಾರ್ಯಗಳನ್ನು ಮಾಡಬಲ್ಲವರು. ಇಂಥ ದೊಡ್ಡಮನುಷ್ಯರು ಈಗ ನಮ್ಮ ರಾಜಧಾನಿಯಲ್ಲೇ ಇದ್ದು ಈದಿನದ ಸಭೆಗೆ ದಯಮಾಡಿಸಿರುತ್ತಾರೆ. ಇವರಿಗೆ ಈ ದಿನದ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಡಬೇಕೆಂದು ನಾನು ಪ್ರಪೋಜ್ ಮಾಡುತ್ತೇನೆ ಎಂದರು.

ಇದಕ್ಕೆ ಮ|| ರಾ|| ಬೀರೂರು ಸಂ|| ಪರ್ವತಪ್ಪನವರು ಅನುಮೋದನ ಕೊಡಲು, ಸರ್ವರೂ ಒಪ್ಪಿದರು.

ಬಳಿಕ ಕೈ|| ವಾರದ ಮಲ್ಲಪ್ಪಣ್ಣನವರ ಮತಾಭಿಮಾನವು ವೀರಶೈವ ಜನವರ್ಗಕ್ಕೆಲ್ಲಾ ಚೆನ್ನಾಗಿ ವಿದಿತವಾಗಿಯೇ ಇದೆ. ಅವರು ವರ್ತಕತನದಲ್ಲಿ ಮಾತ್ರವೇ ಹೆಸರಾಂತವರಾಗಿರದೆ, ಸಮಾಜದ ಕಲ್ಯಾಣಕ್ಕಾಗಿಯೇ ಅಹರ್ನಿಶಿಯೂ ಪಾಡುಪಡುತ್ತ ಸ್ವಧರ್ಮರಕ್ಷಣಾರ್ಥವಾಗಿ ಧನವ್ಯಯ ಮಾಡುವುದರಲ್ಲಿ ಅತ್ಯಂತ ಉದಾರಿಗಳಾಗಿದ್ದು, ಮತಗ್ರಂಥಗಳನೇಕವನ್ನು ಇದುವರೆಗೆ ಮುದ್ರಣ ಮಾಡಿಸಿದ್ದರು. ಮತ್ತೂ ವಿದ್ಯಾಪಕ್ಷಪಾತಿಗಳಾಗಿದ್ದುಕೊಂಡು ಪವಿತ್ರಚರಿತ್ರರಾಗಿದ್ದರು. ಇಂಥವರು ಇನ್ನೂ ಕೆಲವುಕಾಲ ನಮ್ಮ ಮಧ್ಯದಲ್ಲಿರುತ್ತಿದ್ದರೆ ಸಮಾಜಕ್ಕೆ ವಿಶೇಷ ಕಲ್ಯಾಣವಾಗುತ್ತಿತ್ತು. ವಿಧಿವಿಲಾಸವು ಮೀರಲಶಕ್ಯವಾದುದರಿಂದ ಅವರು ಇಷ್ಟುಬೇಗನೆ ಮೃತ್ಯುವಶರಾದದ್ದು ನಮಗೆಲ್ಲಾ ತುಂಬಾ ನಷ್ಟವನ್ನುಂಟುಮಾಡಿದಂತಾಗಿ ಅತ್ಯಂತ ಪರಿತಾಪಕರವಾಗಿದೆ. ಎಂದುಮೊದಲಾಗಿ ವೇ|| ಪಿ. ಆರ್. ಕರಿಬಸವಶಾಸ್ತ್ರಿಗಳು ಉಪನ್ಯಾಸಮಾಡಿದರು.

ಬಳಿಕ ರಾವ್ ಬಹದ್ದೂರರವರ ಮೃತಿಯಿಂದ ರಾಜಧಾನಿಯ ನಿವಾಸಿಗಳಾದ ನಮ್ಮಗಳಿಗೆಲ್ಲಾ ಉಂಟಾಗಿರುವ ಪರಿತಾಪವನ್ನು ತಂತಿಯಮೂಲಕ ಅವರ ಕುಟುಂಬದವರಿಗೆ ತಿಳಿಯಪಡಿಸಬೇಕೆಂಬ ಸೂಚನೆಯನ್ನು ಮ|| ಅತ್ತಿಗೋಡು ಬಸಪ್ಪನವರು ತಂದರು. ಸರ್ವಾನುಮತಿಯಿಂದ ಅದು ಪ್ಯಾಸಾಯಿತು.

ವೀರಶೈವಮತಕ್ಕೆ ಶಿರೋಭೂಷಣದಂತಿದ್ದ ಆ ಮಹಾಪುರುಷರ ವಿಯೋಗವು ಈ ವೀರಶೈವ ಜಗತ್ತಿಗೇ ಅಪಾರವಾದ ದುಃಖವನ್ನುಂಟುಮಾಡಿರುವಲ್ಲಿ ಅವರ ಧರ್ಮಪತ್ನಿಯರು ಮೊದಲಾದ ಕುಟುಂಬದವರಿಗೆ ಎಷ್ಟು ದುಃಖವು ಆವರಿಸಿರಬಹುದೆಂಬುದನ್ನು ಹೇಳಬೇಕಾಗಿಲ್ಲ. ಜಗದೀಶ್ವರನು ಅವರುಗಳಿಗೆ ಈ ದುಃಖಭಾರವನ್ನು ಸಹಿಸಿಕೊಳ್ಳುವ ಧೈರ್ಯವನ್ನು ಕೊಡಬೇಕೆಂತಲೂ, ಗತಿಸಿದವರ ಆತ್ಮಕ್ಕೆ ಶ್ರೀಸಾಂಬಮೂರ್ತಿಯು ಶಾಂತಿಯನ್ನೀಯಬೇಕೆಂತಲೂ ಪ್ರಾರ್ಥಿಸುವ ಸೂಚನೆಯನ್ನು ಮ|| ದಾಸಪ್ಪನವರು ತಂದರು. ಅದಕ್ಕೆ ಮ|| ಕೋ|| ಗುಬ್ಬಣ್ಣನವರು ಅನುಮೋದನವನ್ನಿತ್ತರು.

ಬೀರೂರು ಪತ್ರೆ ಚಂ|| ವೀರಪ್ಪ.
ಪ್ರೆಸಿಡೆಂಟ್.

ದುಃಖಪ್ರದರ್ಶನ.

ಈ ನಮ್ಮ ೩೪ ಲಕ್ಷ ವೀರಶೈವ ಜನಾಂಗವುಳ್ಳ ಪ್ರದೇಶದಲ್ಲಿನ ಉತ್ತರದೇಶಕ್ಕೆ ಸೂರ್ಯಪ್ರಾಯರಂತಿದ್ದ ಶ್ರೀಮಂತ ಲಿಂಗಪ್ಪ ಜಾಯಪ್ಪ ಶಿರಸಂಗಿ ದೇಶಾಯಿಗಳನ್ನು ಕಳೆದುಕೊಂಡದ್ದು ನಮ್ಮಗಳಿಗೆ ಒಂದು ದೊಡ್ಡ ನಷ್ಟವುಂಟಾದಂತೆ ಆಯಿತು. ಅಲ್ಲದೆ ಚಂದ್ರಪ್ರಾಯರಂತಿದ್ದ ಶ್ರೀಮಂತ ರಾವ್ ಬಹದ್ದೂರ್ ಮಲ್ಲಪ್ಪಾ ಅಣ್ಣಾ ವಾರದ ಇವರನ್ನು ಕಳೆದುಕೊಂಡದ್ದು ಇನ್ನೊಂದು ದೊಡ್ಡ ನಷ್ಟವುಂಟಾದಂತೆ ಆಯ್ತು. ಈ ನಮ್ಮ ಮೈಸೂರು ಸೀಮೆಯಲ್ಲಂತೂ ಚಂದ್ರಪ್ರಾಯರಂತಿದ್ದ ಬೆಂಗಳೂರ್ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರನ್ನು ಕಳೆದುಕೊಂಡದ್ದು ಇದೊಂದು ದೊಡ್ಡನಷ್ಟ. ಈ ಪುಣ್ಯಾತ್ಮರುಗಳನ್ನು ಇನ್ನು ಕೆಲವುಕಾಲ ಜನರ ಸಂರಕ್ಷಣೆಗಾಗಿಯಿಡದೆ ಕಾಲಮೃತ್ಯುದೇವತೆಯು ತೆಗೆದುಕೊಂಡು ಹೋದದ್ದಕ್ಕಾಗಿ ಎಷ್ಟು ಚಿಂತಿಸಿದರೂ ಸಾಲದಾಗಿದೆ. ಸದರಿ ರಾವ್ ಬಹದ್ದೂರ್ ವಾರದ ಮಲ್ಲಪ್ಪ ಅಣ್ಣಾ ಇವರು ಇದೇ ತಿಂಗಳು ತಾ|| ೧೯ ನೇ ಗುರುವಾರ ಬೆಳಿಗ್ಗೆ ೪ ಗಂಟೆ ಸಮಯದಲ್ಲಿ ಸೊಲ್ಲಾಪುರದಲ್ಲಿ ಶಿವಸಾಯುಜ್ಯ ಹೊಂದಿದಕೂಡ್ಲೆ ಪೋಸ್ಟ್ ಆಫೀಸಿಗೆ ಪುರುಸತ್ತುಯಿಲ್ಲದಂತೆ ಟೇಲಿಗ್ರಾಂಗಳು ಓಡಾಡಿರಬಹುದು. ಬೆಂಗಳೂರಿಗೆ ತಂತಿ ಬಂದಕೂಡ್ಲೆ ೨೦ ನೇ ತಾ|| ಶುಕ್ರವಾರ ಸಾಯಂಕಾಲ ೪-೩೦ ಗಂಟೆಗೆ ದುಃಖಪ್ರದರ್ಶನದ ಸಭೆಯು ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಸತ್ರದಲ್ಲಿ ಸೇರುವಂತೆ ನೋಟೀಸ್ ಹಂಚಲ್ಪಟ್ಟಿತು. ಸಭೆಗೆ ಬೆಂಗಳೂರು ದೇಶದ ಶೆಟ್ಟರು ಯಜಮಾನರು ಮೊದಲಾದ ಅನೇಕ ದೊಡ್ಡಮನುಷ್ಯರು ಸೇರಿದ್ದರು. ಮೆ|| ಛೀಫ್‌ಕೋರ್ಟು ಡಿಪ್ಯುಟಿ ರಿಜಿಸ್ಟ್ರಾರ್ ಬಿ. ಬಸವಾರಾಧ್ಯ ಬಿ.ಎ., ಬಿ. ಎಲ್., ರವರು ಸಭೆಗೆ ಅಧ್ಯಕ್ಷರಾಗಬೇಕೆಂದು ಆರಿಸಲ್ಪಟ್ಟರು. ನಂತರ ಮೆ|| ಅಡ್ವೊಕೇಟ್ ಎಚ್. ಕೆ. ವೀರಬಸವಯ್ಯರವರು, ಬಿ. ಎ., ಬಿ. ಎಲ್., ಸದರಿ ವಾರದವರ ಗುಣಾತಿಶಯಗಳನ್ನು ವರ್ಣಿಸಿ, ಕಲ್ಪಾಂತರದವರೆಗೂ ಈ ಪುಣ್ಯಾತ್ಮರ ನಾಮವಂ ಮರೆಯದಂತೆ ಸಭಿಕರ ಹೃದಯದಲ್ಲಿ ನಾಟುವಂತೆ ಹೇಳಿದರು. ಅದನ್ನೇ ಮೆ|| ಜಿ. ಶಾಂತವೀರಪ್ಪ ಬಿ.ಎ., ಯವರು ಜಿ. ಕೆ. ರುದ್ರಾರ್ಯರು, ಬಿ. ಜಿ. ಬಸವಲಿಂಗಪ್ಪನವರು, ಬೆಟ್ಟ ಹಲಸೂರು ಬಸವಣ್ಣನವರು ಸಹ ಪುಷ್ಟೀಕರಿಸಿ ಹೇಳಿದರು. ಅಂಥಾ ಮತಸುಧಾರಕರನ್ನು ೨ ನೇ ಬಸವೇಶ್ವರನ ಅವತಾರದ ಪುಣ್ಯಾತ್ಮರನ್ನು ನಮ್ಮ ಸಮಾಜದಿಂದ ಕಳೆದುಕೊಂಡೆವಲ್ಲಾ ಎಂದು ಸಭೆಯೆಲ್ಲಾ ನಿಶ್ಶಬ್ದವಾಗಿ ದುಃಖಸಾಗರದಲ್ಲಿ ಮುಳುಗಿತು. ಬೊಂಬಾಯಿಯಲ್ಲಿಯೇ ಸದರಿ ವಾರದವರು ಅಸ್ವಸ್ಥರಾಗಿ ಸ್ಪೆಷಲ್ ಟ್ರೇನಿನಲ್ಲಿ ೧೩ ಜನ ಡಾಕ್ಟರೊಂದಿಗೆ ಸೊಲ್ಲಾಪುರಕ್ಕೆ ಬಂದು ಚಿಕಿತ್ಸೆ ಮಾಡಿಸಿಕೊಳ್ಳುತ್ತಿದ್ದಾಗ್ಗೂ ಈ ಪುಣ್ಯಾತ್ಮರನ್ನು ಕಾಲಮೃತ್ಯುವು ಅಪಹರಿಸಿಕೊಂಡು ಹೋಯಿತಲ್ಲಾ. ಅಯ್ಯೋ! ಈ ಮಹಾಪುರುಷರು ಸತ್ಯಸಂಧ, ನಿಷ್ಪಕ್ಷಪಾತಿ, ಪುಣ್ಯಾತ್ಮ, ಧೀರ, ಸಾಹಸಿ, ವ್ಯಾಪಾರಕುಶಲ, ಮತಸುಧಾರಕ ಎಂಬ ಖ್ಯಾತಿಯನ್ನು ಹೊಂದಿದ್ದರಲ್ಲದೆ, ಸೊಲ್ಲಾಪುರದಲ್ಲಿನ ವೀರಶೈವ ಮಹಾಸಭೆಗೆ ರಿಸಪ್ಷನ್ ಕಮಿಟಿ ಅಧ್ಯಕ್ಷರಾಗಿಯೂ, ಬಳ್ಳಾರಿಯಲ್ಲಿನ ವೀರಶೈವಮಹಾಸಭೆಗೆ ಅಧ್ಯಕ್ಷರಾಗಿಯೂ ಇದ್ದ ಪ್ರಖ್ಯಾತಿಗೊಂಡ ಇವರ ವಿಷಯದಲ್ಲಿ ಯಾರುತಾನೇ ಚಿಂತಿಸುವುದಿಲ್ಲ? ಧನಸಂಪತ್ತಿಯಲ್ಲಿ ಇವರಂತೆಯೇ ಅನೇಕರಿದ್ದಾಗ್ಗೂ ಧರ್ಮಬುದ್ಧಿ, ಸತ್ಯಸಂಧತೆ; ಮತಾಭಿಮಾನ ಇವರಲ್ಲಿ ಸಂಪೂರ್ಣವಾಗಿದ್ದುದರಿಂದ ಪೂರ್ಣಯಶಸ್ಸಿಗೆ ಕಾರಣಭೂತರಾಗಿದ್ದರು. ಮತ್ತು ಅವರು ಭೂಲೋಕದಿಂದ ಮರೆಯಾದಾಗ್ಗೂ ಅವರ ನಾಮಖ್ಯಾತಿಯು ಕಲ್ಪಾಂತದವರೆಗೂ ಬೆಳಗುತ್ತಿರುವಂತೆ ಮಾಡಿದರು. ಅವರ ಜೀವಿತ ಚರಿತ್ರವನ್ನು ಈಗಲೇ ಯಾರಾದರೂ ಬರೆಯುವುದಕ್ಕೆ ಪ್ರಾರಂಭಿಸಿದರೆ ಲೋಕೋಪಕಾರವಾಗುತ್ತೆ. ಅಲ್ಲದೆ ತಿಲಕಪ್ರಾಯರಾಗಿದ್ದ ಮೈಸೂರು ಕೈ|| ವೈ|| ವೀರಸಂಗಪ್ಪನವರು ಮತಾಭಿಮಾನಕ್ಕೋಸ್ಕರ ಹೊತೆದಾಡಿ ತಮ್ಮ ಆಸ್ತಿಯನ್ನೆಲ್ಲಾ ನೀಗಿದ ಆ ಮಹಾಪುರುಷರ ಮತಾಭಿಮಾನ ಪೀಠಿಕೆಯೇ ಇತರರಲ್ಲಿ ಅಂಕುರಿಸುವುದಕ್ಕೆ ಪ್ರಾರಂಭಿಸಿತು. ಇವರ ಮತ್ತು ವಾರದವರ ಮತಾಭಿಮಾನವೆಂಬುದು ಇವರು ಪ್ರಿಂಟ್ ಮಾಡಿಸಿರುವ ಪುಸ್ತಕಗಳಿಂದಲೇ ತಿಳಿಯಬರುತ್ತೆ. ಅಧ್ಯಕ್ಷರಾದ ಮೆ|| ಬಿ. ಬಸವಾರಾಧ್ಯರು ಸಭಿಕರಿಗೆಲ್ಲ ಆ ದುಃಖಪ್ರದರ್ಶನದ ವಿಷಯವಾಗಿಯೇ ಬಹಳ ಸಾಮ್ಯಗಳಿಂದ ಉದಾಹರಣೆಗೆ ಕೊಟ್ಟು, ಆ ದುಃಖವು ನಮಗೆಲ್ಲಾ ಪೂರ್ಣವಾಗಿ ಉಂಟಾಗಿರುತ್ತದೆಯೆಂದು ತೋರಿಸುವುದಕ್ಕಾಗಿ ಈ ಎರಡು ರೆಜುಲ್ಯೂಷನ್‌ಗಳನ್ನು "ಸದರಿ ವಾರದವರ ಕುಟುಂಬದವರಿಗೆ ನಮಗುಂಟಾಗಿರುವ ಪರಿತಾಪವನ್ನು ತಂತ್ರಿ ಮುಖಾಂತರ ತಿಳಿಸತಕ್ಕದ್ದೆಂತಲೂ, ೨೨ ನೇ ತಾ|| ಭಾನುವಾರ ಬೆಂಗಳೂರಲ್ಲಿರುವ ಎಲ್ಲಾ ವೀರಶೈವರ ಅಂಗಡಿಗಳೆಲ್ಲಾ ಈ ದುಃಖಪ್ರದರ್ಶನಕ್ಕಾಗಿ ಮುಚ್ಚಲ್ಪಡಬೇಕೆಂತಲೂ" ಸಭಿಕರ ಅನುಮತಿಮೇರೆಗೆ ನಿರ್ಧರಿಸಿದರು. ಅದರಂತೆಯೇ ಆಕೂಡ್ಲೆ ತಂತಿಯು ಸೊಲ್ಲಾಪುರಕ್ಕೆ ಕಳುಹಿಸಲ್ಪಟ್ಟಿತು. ನಂತರ ಸಭೆಯು ವಿಸರ್ಜಿಸಲ್ಪಟ್ಟಿತು. ಬೆಂಗಳೂರಿನ ದೇಶದ ಸೆಟ್ಟರ ಯಜಮಾನರ ಹೇಳಿಕೆ ಮೇರೆಗೆ ೨೨ ನೇ ಭಾನುವಾರ ವೀರಶೈವರ ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟಿದ್ದುವು. ಪೇಟೆಯೊಳಗೆಲ್ಲಾ ವಿಶೇಷವಾಗಿ ವೀರಶೈವರ ಅಂಗಡಿಗಳೇ ಹೆಚ್ಚಾಗಿರುವುದರಿಂದ ಆ ಅಂಗಡಿಗಳೆಲ್ಲಾ ಬಾಗಿಲು ಹಾಕಿದ್ದು ನೋಡಿದರೆ ಏನೋ ಒಂದು ವಿಕಾರವಾಗಿ ದುಃಖಾಬ್ಧಿಯಲ್ಲಿಯೇ ಪಟ್ಟಣವೆಲ್ಲ ಮುಳಿಗಿದೆಯೋ ಏನೋ ಯೆಂಬುವಹಾಗೆ ಕಾಣುತ್ತಿತ್ತು. ಯಾವುದೋ ಒಂದು ದೇಶದಲ್ಲಿ ಒಬ್ಬರು ಮೃತಪಟ್ಟರೆ ಈ ದೇಶದಲ್ಲಿ ಈರೀತಿ ದುಃಖಪ್ರದರ್ಶನ ಮಾಡುತ್ತಿದ್ದಾರಲ್ಲಾ! ಇವರಲ್ಲಿ ಎಷ್ಟರಮಟ್ಟಿಗೆ ಐಕ್ಯಮತ್ಯವಿದೆಯೆಂದು ಅನೇಕರು ಆಶ್ಚರ್ಯಪಟ್ಟರು. ೩೪ ಲಕ್ಷ ವೀರಶೈವ ಸಮಾಜವು ದುಃಖಾಗ್ನಿಯಲ್ಲಿ ಕುಳಿತು ಅಂಥಾ ಮತಸುಧಾರಕ, ಪುಣ್ಯಾತ್ಮರಾಗಿ ಈಗಿರುವವರಲ್ಲಿ ಯಾರು ಮುಂದುವರಿದು ಬರುವರೋ ಎಂದು ಚಿಂತಿಸುತ್ತಾ ಇರುವುದಲ್ಲದೆ ಈಗಿರುವ ಸದರಿ ವಾರದವರ ಸುಪುತ್ರನಿಗೆ ದೀರ್ಘಾಯುರಾರೋಗ್ಯ ಸಂಪತ್ತನ್ನು ಶ್ರೀಪರಮೇಶ್ವರನು ದಯಪಾಲಿಸಲೆಂದು ಧ್ಯಾನಿಸುತ್ತಿರುವುದಾಗಿದೆ.

ಒಬ್ಬ ಮತಾಭಿಮಾನಿ.

ಅತಿ ಶೋಚನೀಯಮೃತ್ಯು.

(ಬರೆದು ಬಂದುದು.)

ಶ್ರೀಮಂತ ರಾವಬಹದ್ದೂರ ಮಲ್ಲಪ್ಪ ಬಸಪ್ಪ ಅಪ್ಪಾಸಾಹೇಬ ವಾರದ ಇವರು ತಾ||೧೯-೧-೧೯೧೧ ಗುರುವಾರ ಪ್ರಾತಃಕಾಲ ೪ ಗಂಟೆಗೆ ಶಿವೈಕ್ಯರಾದರು. ಇವರು ಹೋದ ವರ್ಷದ ಮೇ ತಿಂಗಳಲ್ಲಿ ಸಾತಾರೆಯಲ್ಲಿ ಕೂಡಿದ್ದ ಧರ್ಮಪರಿಷತ್ತಿನ ಕಾರ್ಯವನ್ನು ಪೂರೈಸಿಕೊಂಡು ಪೂನಾಕ್ಕೆ ಬಂದ ಕೂಡಲೆ ರೋಗವು ಪ್ರಾದುರ್ಭವಿಸಿ ಅನೇಕೌಷಧೋಪಾಯಗಳಿಂದ ಉಪಶಮವಾದಂತೆ ತೋರಿದರೂ ದೇಹದ ಬಲವನ್ನು ಮುರಿದಿಟ್ಟು ಕಾಲಾಗ್ನಿಯಂತೆ ಆಗಾಗ್ಗೆ ತಲೆದೋರುತಲೇಯಿತ್ತು. ಕಡೆಗೆ ಇದೇ ಹೋದ ಡಿಶಂಬರದ ಅಂತ್ಯಭಾಗದಲ್ಲಿ ಅಲರ್ಕವಿಷದಂತೆ ಪ್ರಾದುರ್ಭವಿಸಿ ಪ್ರಬಲವಾಯಿತು. ಮುಂಬಯಿಯಲ್ಲಿ ಪ್ರಸಿದ್ಧ ಡಾಕ್ಟರರ ಕೂ

ಫೊಂದನ್ನು ಕೂಡಿಸಿ ಅವರ ಸಮ್ಮತಿಯಂತೆ ಅನೇಕ ಔಷಧೋಪಚಾರಗಳನ್ನು ಮಾಡಿಸಿದಾಗ್ಯೂ ಗುಣಮುಖವಾಗದೆ ದಿನೇದಿನೆ ಹೆಚ್ಚುತ್ತ ಬರಲು, ತಾ॥ ೯-೧-೧೧ ಸೋಮವಾರ ಸ್ಪೆಶಲ್ ರೈಲಿನಲ್ಲಿ ಕುಳಿತು ಸಾಯಂಕಾಲ ೭ ಗಂಟೆಗೆ ಸೋಲಾಪುರ ಸ್ಟೇಶನನ್ನು ಸೇರಿದರು. ಆ ಸಮಯದಲ್ಲಿ ೩೦೦೦ ರ ಕ್ಕಿಂತ ಹೆಚ್ಚು ಜನರು ಕೂಡಿದ್ದರು. ಶ್ರೀಮಂತರನ್ನು ಮೇಣೆಯಲ್ಲಿ ಬಂಗಲಿಗೆ ಕರತಂದರು. ೩ ರಾತ್ರಿಯೂ ೨ ಹಗಲೂ ಅವರ ಸಮೀಪದಲ್ಲಿ ೫ ಜನ ಪಂಡಿತರು ೬ ಜನ ವಿದ್ಯಾರ್ಥಿಗಳು ಸಮಯವನ್ನು ನಿಯಮಿಸಿ ಸತತವೇದಘೋಷವನ್ನು ಮಾಡುತ್ತಿದ್ದರು. ಗುರುವಾರ ಪ್ರಾತಃಕಾಲ ೫ ಗಂಟೆಗೆ ಶಿವಧಾಮವನ್ನು ಸೇರಿದರು. ೯ ನಿಮಿಷಗಳಲ್ಲಿಯೇ ಗ್ರಾಮದಲ್ಲಿ ಎಲ್ಲಿನೋಡಿದರೂ ಹಾಹಾಕಾರಧ್ವನಿಯು ವ್ಯಾಪಿಸಿತು. ನೂರಾರು ತಾರುಗಳು ಆಯಾ ಸ್ಥಲಗಳಿಗೆ ಕಳುಹಲ್ಪಟ್ಟುವು. ಆ ದಿವಸ ಸೋಲಾಪುರದ ಕಲೆಕ್ಟರ, ಜಡ್ಜಿ ಮೊದಲಾದವರ ಕಚೇರಿಗಳು, ಗಿರಣಿಗಳು, ಎಲ್ಲ ಅಂಗಡಿಗಳೂ ಬಂದಮಾಡಲ್ಪಟ್ಟಿದ್ದುವು. ದುದನಿ, ಕಲಬುರ್ಗಿ, ಘಂಡರಾಪೂರು, ಬಾರಸಿ ಮೊದಲಾದ ಗ್ರಾಮಗಳ ಅಂಗಡಿಗಳು ಮುಚ್ಚಲ್ಪಟ್ಟವೆಂದು ತಂತೀಮೂಲಕ ದುಃಖಸೂಚಕ ವಾರ್ತೆಯು ಆಯಾ ಪುರಪ್ರಮುಖರಿಂದ ತಿಳುಹಲ್ಪಟ್ಟಿತು. ಮತ್ತೂ ಕಲಕತ್ತಾದಿಂದ ಆ॥ ಗೋಖಲೆ ಮೊದಲಾದ ಪ್ರಮುಖರಿಂದ ಮುಂಬಯಿಯ ಜಡ್ಜಿ ಮೊದಲಾದ ಅಧಿಕಾರಿಗಳಿಂದ ಇವರಂತೆ ಅನೇಕ ಗ್ರಾಮಗಳಿಂದ ದುಃಖಸೂಚಕ ತಾರುಗಳು ಬಂದುವು. ಇಲ್ಲಿ ಪ್ಲೇಗಿನ ಉಪಟಳವು ಇದ್ದರೂ ರೈಲುಮಾರ್ಗದಿಂದ ಸಾವಿರಾರು ಜನರು, ಸಮೀಪ ಗ್ರಾಮಗಳಿಂದ ಸಾವಿರಾರು ಜನರು ಬಂದಿದ್ದರು. ವಿಮಾನಯಾತ್ರೆಗೆ ೨೦೦೦೦ ಮೇಲೆಯೇ ಜನರು ಕೂಡಿದ್ದರು. ಬಂಗಲಿಯಿಂದ ವಿಮಾನವು ಹಗಲು ೨॥ ಗಂಟೆಗೆ ಹೊರಟು ಸಮಾಧಿಯ ಸ್ಥಲಕ್ಕೆ ಪುರವೀಧಿಯಲ್ಲಿ ಮೆರೆಯುತ್ತ ಸೇರುವುದರಲ್ಲಿ ಸಾಯಂಕಾಲ ೬ ಗಂಟೆಯಾಯಿತು. ಹೋಗುವ ಕಾಲದಲ್ಲಿ ಅಲ್ಲಲ್ಲಿ ಗುಂಪುಗುಂಪಾಗಿ ಕೂಡಿರುವ ಸ್ತ್ರೀಯರು, ಪುರುಷರು ಕಣ್ಣೀರುಗಳೊಡನೆ ಪುಷ್ಪಾಂಜಲಿಯನ್ನು ಮಾಡುತ್ತ, ಅಯ್ಯೋ ಈ ಪುರದ ಸಿರಿಯು ಸರಿಹೋಯಿತೆ! ಎಂದೂ ಹಲವರು ವೀರಶೈವರ ತೇಜೋರಾಶಿಯು ಬಯಲಾಯಿತೆ! ಎಂದೂ ಗಟ್ಟಿಯಾಗಿ ನಿಟ್ಟುಸುಗನ್ನು ಬಿಡುತ್ತಿದ್ದರು. ಕೆಲವರು ನಮ್ಮನ್ನು ಮರ್ಯಾದೆಯಿಂದ ಕಾಪಾಡುವ ದೊರೆಯು ಕೈಬಿಟ್ಟು ಹೋದನೇ! ಎಂದು ಗಟ್ಟಿಯಾಗಿ ರೋದನವದ್ನು ಮಾಡುತ್ತಿದ್ದರು. ಪುರದ ಸರ್ವ ಜಾತೀಯ ಸರ್ವ ಜನಗಳ ಮುಖಗಳೂ ನಿಸ್ತೇಜಸ್ಕಗಳಾಗಿದ್ದುವು. ಶ್ರೀಮಂತರ ಸಮಾಧಿಯು ಪುರದ ಉತ್ತರದಲ್ಲಿರುವ ಸ್ವಕೀಯೋದ್ಯಾನದಲ್ಲಿ ಸ್ವಪಿತೃಗಳ ಸಮಾಧಿಗಳ ಮಧ್ಯದಲ್ಲಿಯೇ ಮಾಡಲ್ಪಟ್ಟಿತು. ಅಲ್ಲಿ ಕೂಡಿದ್ದ ಯಾಚಕವೃಂದಕ್ಕೆ ಮಡಿ ಸೀರೆ, ಕುಪ್ಪಸವೂ ಪ್ರತಿಯೊಬ್ಬರಿಗೊಂದೊಂದು ರೂಪಾಯಿಯಂತೆದಾನವನ್ನೂ ಮಾಡಿದರು. ಈ ಮಹನೀಯರಾದ ಶ್ರೀಮಂತರು ಔದಾರ್ಯ, ಚಾತುರ್ಯ, ಸದಾಚಾರದಕ್ಷತೆ, ಕಾರ್ಯನೈಪುಣ್ಯ, ಪತ್ನೀವ್ರತಪಾಲನ, ಸ್ವಮತೋತ್ತೇಜನ ಸ್ಥಿತಿಗೆ ಮುಂದಾಳುತನ ಇವೇ ಮೊದಲಾದ ಅಸಾಧಾರಣ ಧರ್ಮಗಳೊಂದೊಂದರಿಂದ ಶ್ರೀಬಸವೇಶ, ರಾಮ, ಕೃಷ್ಣ ಮೊದಲಾದ ಪ್ರಸಿದ್ಧ ಪುರುಷಸಿಹ್ಮರನ್ನು ಸರ್ವದಾ ಸ್ಮೃತಿಮಾರ್ಗವನ್ನು ಹೊಂದಿಸುತ್ತಿದ್ದರು. ಇವರ ಜನ್ಮವು ಶಕ ೧೭೬೪ ಜ್ಯೇಷ್ಠ ಬ॥ ೬ ಸನೆ ೧೮೪೨ ಜೂನ ತಿಂಗಳ ತಾ॥ ೧೩ ರಲ್ಲಿ ಆಯಿತು. ತಮ್ಮ ೧೬ ನೆ ವರ್ಷದಲ್ಲಿ ದುಕಾನುಗಳ ಕೆಲಸಗಳನ್ನು ದಕ್ಷತೆಯಿಂದ ನೋಡಲಾರಂಭಿಸಿದರು. ಅದೇ ಕಾಲದಲ್ಲಿಯೇ ದೊಡ್ಡದೊಡ್ಡ ಸರಕಾರಿಯ ಅಧಿಕಾರಿಗಳ ಸ್ನೇಹವು ಬೆಳೆಯಲಾರಂಭಿಸಿತು. ಇವರ ಜ್ಯೇಷ್ಠ ಪಿತೃಗಳಾದ ಚನ್ನಬಸಪ್ಪನವರು ಶಕ ೧೭೮೩ ಶ್ರಾವಣ ಮಾಸದಲ್ಲಿ ಶಿವೈಕ್ಯವನ್ನು ಹೊಂದಿದರು. ತರುವಾಯ ೨ ವರ್ಷಗಳಲ್ಲಿ ನಿಜಪಿತೃಗಳಾದ ಬಸಪ್ಪನವರು ಶಿವಾಧೀನರಾದರು. ಆವಾಗ್ಗೆ ಇವರಿಗೆ ೨೬ ವರ್ಷಗಳ ವಯಸ್ಸಿದ್ದಿತು. ಪಿತೃಗಳ ಅತ್ಯಂತ ವಿಯೋಗವಾದ ಸ್ವಲ್ಪಕಾಲದಲ್ಲಿಯೇ ಹಿರಿಯಪ್ಪನವರ ಪುತ್ರಿಯರ (ತಂಗಿಯ) ವಿವಾಹಸಮಯದಲ್ಲಿ ೧೦೮ ಧರ್ಮಲಗ್ನಗಳನ್ನು ಅತಿವಿಜೃಂಭಣೆಯಿಂದ ಇವರು ನೆರವೇರಿಸಿದರು. ಅದಕ್ಕೆ ೪೧೦೦೦ ರೂ. ಗಳು ಖರ್ಚಾದುವು. ಒಂದು ಲಕ್ಷದ ಮೇಲೆ ಖರ್ಚಾಯಿತೆಂದು ಜನರು ಹೇಳುತ್ತಿದ್ದರು. ಇವರ ಯಶಶ್ಚಂದ್ರಿಕೆಯು ದಿಗಂತದಲ್ಲಿ ವ್ಯಾಪಿಸುವುದಕ್ಕೆ ಇದೇ ಮೊದಲನೇದು. ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ ಇಲ್ಲಿಗೆ ೩೪ ವರ್ಷಗಳಾದುವು. ಶಾಲೆಯಲ್ಲಿ ಯಾವಾಗಲೂ ೪೦ ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇರುತ್ತಿದ್ದರು. ಈವರೆಗೂ ಪಾಠಶಾಲೆಯ ಸಂಬಂಧವಾದ ಖರ್ಚು ೩ ಲಕ್ಷಗಳ ಮೇಲಾಗಿರುವುದು. ೫-೬ ಪಂಡಿತರನ್ನಿಟ್ಟು ಆಯಾ ದೇಶಗಳಿಂದ ಮತಗ್ರಂಥಗಳನ್ನು ತರಿಸಿ ಪರಿಶೋಧಿಸಿ ಮುದ್ರಣ ಮಾಡಿಸಲಾರಂಭಿಸಿ ಇಲ್ಲಿಗೆ ೧೦ ವರ್ಷಗಳಾದುವು. ಇದರ ಖರ್ಚು ೪೦೦೦೦ ಮೇಲಾಗಿರುವುದು. ಕಲಬುರ್ಗಿ, ಹುಮನಾಬಾದ್, ಪರಳಿ ಈ ಮೂರು ಗ್ರಾಮಗಳಲ್ಲಿಯ ಶಾಸ್ತ್ರಿಗಳಿಗೆ ಸಂಪೂರ್ಣ ವೇತನವನ್ನು ಕೊಡುತ್ತಿದ್ದುದಲ್ಲದೆ ರಾಯಚೂರು, ವಿಜಾಪೂರು ಮೊದಲಾದ ಹಲವು ಗ್ರಾಮಗಳಲ್ಲಿರುವ ಸಂಸ್ಕೃತ ಪಾಠಶಾಲೆಗಳಿಗೆ ೫ ರೂಪಾಯಿಗಳಿಂದ ೧೦ ರೂಪಾಯಿಗಳವರೆಗೂ ಪ್ರತಿ ತಿಂಗಳಲ್ಲಿ ಚಂದಾಹಣವನ್ನು ಕೊಡುತ್ತಿದ್ದರು. ಇಂಗ್ಲೀಷು ಮತ್ತು ಚಿತ್ರ ಮೊದಲಾದ ಕಲೆಗಳನ್ನು ಅಭ್ಯಾಸ ಮಾಡುವ ಅನಾಥರಿಗೆ ಸ್ಕಾಲರ್‌ಷಿಪ್ಪನ್ನು ಕೊಟ್ಟು ಅನೇಕರನ್ನು ತನ್ನಿಪುಣರನ್ನಾಗಿ ಮಾಡಿರುವುದಲ್ಲದೆ, ಇದುವರೆಗೂ ಅನೇಕರಿಗೆ ಸ್ಕಾಲರ್‌ಷಿಪ್ಪನ್ನು ಕೊಡುತ್ತಿದ್ದರು. ಕಾಶಿಗೆ ಕಳುಹಿಸಿ ೩-೮ ಜನರಿಗೆ ಮಾಸಿಕವನ್ನು ಕೊಟ್ಟು ಪಂಡಿತರನ್ನು ಮಾಡಿಸಿದುದಲ್ಲದೆ ಇನ್ನೂ ಮಾಸಿಕವನ್ನು ಕೊಡುತ್ತಿದ್ದರು. ಕೇವಲ ಸ್ವಮತೀಯ ಜನರಿಗೆ ಇಂಥ ಪ್ರೋತ್ಸಾಹವನ್ನು ಕೊಡುತ್ತಿದ್ದರೆಂಬಂತಿಲ್ಲ. ಉಳಿದ ಬ್ರಾಹ್ಮಣ, ಮರಾಠಿ, ಮುಸಲ್ಮಾನ ಮೊದಲಾದ ಪರಮತೀಯ ಅನಾಥ ವಿದ್ಯಾರ್ಥಿಗಳನ್ನು ಇಂಗ್ಲೀಷ ಮೊದಲಾದ ವಿದ್ಯೆಗಳಲ್ಲಿ ಸ್ವಂತ ಹಣದಿಂದ ಪಂಡಿತಗನ್ನಾಗಿ ಮಾಡಿರುವರು. ಇನ್ನೂ ಅನೇಕರಿಗೆ ಸ್ಕಾಲರ್‌ಷಿಪ್ಪನ್ನು ಕೊಡುತ್ತಲಿದ್ದರು. ಮುಂಬಯಿ ಇಲಾಖೆಯಲ್ಲಿರುವ ಸರ್ವಮತೀಯ ಸಂಸ್ಥೆಗಳಿಗೂ ಇವರ ವರ್ಗಣಿಯು ಇದ್ದೇಯಿರುವುದು. ಇಲ್ಲದ ಸಂಸ್ಥೆಯು ಪ್ರಾಯಶಃ ಇಲ್ಲವೇಯಿಲ್ಲ. ಇವರು ಯಾವ ಸಂಸ್ಥೆಗೂ ವರ್ಗಣಿಯನ್ನು ಹಾಕಿದರೂ ಆ ಹಣದ ಸಂಖ್ಯೆಯು ಎಲ್ಲದಕ್ಕಿಂತಲೂ ಮೇಲುತರದ್ದೇ ಇರುತ್ತಿದ್ದಿತು. ಕುರುಡರು, ಕುಂಟರು ಮೊದಲಾದ ಅಂಗವಿಕಲರಾದ ನೂರಾರು ಅನಾಥರಿಗೆ ಪ್ರಸಿದ್ಧ ರಾಮೇಶ್ವರದೇವಾಲಯದ ಒಂದು ಭಾಗದಲ್ಲಿ ಪ್ರತಿದಿನವೂ ಅನ್ನದಾನವನ್ನು ಮಾಡಿಸುತ್ತಿದ್ದರು. ಇಂಥ ಲೋಕೋತ್ತರೌದಾರ್ಯವನ್ನು ತಾವು ತೋರಿಸಿದ್ದರೂ ಇದೇ ಡಿಶಂಬರಿನಲ್ಲಿ ಮುಂಬಯಿಗೆ ಹೋಗಿದ್ದಾಗ್ಗೆ ಸಾಯಂಕಾಲ ಸಮಯದಲ್ಲಿ ಸಂಚರಿಸುವಾಗ್ಗೆ, ಮಕ್ಕಾಕ್ಕೆ ಹೋಗುವ ಮುಸಲ್ಮಾನರಾದ ಯಾತ್ರಿಕರಿಗೆ ಹಡದರೂ ರೋಗಗ್ರಸ್ತರಾದರೂ ಆಯಾ ಅನುಗುಣೋಪಚಾರ ಸಾಮಗ್ರಿಗಳಿಂದ ಕೂಡಿದ ಭವ್ಯಧರ್ಮಶಾಲೆಯನ್ನು ಮಾಡಿ ಇಂಥ ಸತ್ಕಾರ್ಯವೊಂದನ್ನು ನಾನು ಮಾಡಲಿಲ್ಲ; ಈ ಜನ್ಮವು ನಿರರ್ಥಕವೆಂದು ತಮ್ಮ ಜೊತೆಯಲ್ಲಿ ಬಂದವರೊಡನೆ ಕಳಕಳಿಯಿಂದ ಹೇಳಿದರು. ಇಂಥ ಮಹನೀಯರಾದ ನಿರ್ವ್ಯಾಜಬಾಂಧವರನ್ನು ಅಕಾಲದಲ್ಲಿ ಕಳೆದುಕೊಂಡು ದುಃಖಕ್ಕೀಡಾಗುವ ಸಮಯವು ನಮ್ಮ ವೀರಶೈವ ಸಮಾಜಕ್ಕೆ ಬಂದೊದಗಿತು. "ದಿವಾಂಧಾಃಪ್ರಾಣಿನಃ ಕೇಚಿದ್ರಾತ್ರಾವಂಧಾಸ್ತಥಾಪರೇ। ಪ್ರಾಣಿನಸ್ತುಲ್ಯದೃಷ್ಟಯಃ" ಸಪ್ತಶತಿಯಲ್ಲಿ ಹೇಳಿರುವ ಪ್ರಾಣಿಗಳ ಅಂಧ್ಯತಾರತಮ್ಯವು ಶ್ರೀಮಂತರೆಂಬ ಸೂರ್ಯನು ಅಹೋರಾತ್ರಿಯಲ್ಲಿ ಒಂದೇರೀತಿ ಪ್ರಕಾಶಿಸುವುದರಿಂದ ಸರ್ವದಾ ಸ್ಥಾಯಿಯಾದ ಅಂಧತಮಸ್ಸಿನ ದುಃಖವನ್ನು ಅನುಭವಿಸುವದೊದಗಿತು. ಇವರು ಸಂಪತ್ತಿನಿಂದಲೂ ತನ್ಮೂಲಕವಾದ ಔದಾರ್ಯದಿಂದಲೂ ಮತಾಭಿಮಾನದಿಂದಲೂ ಪುಣ್ಯಾತ್ಮರೆಂದೂ ಸರ್ವವಂದ್ಯರೆಂದೂ ಹೇಳಬೇಕಾಗಿಲ್ಲ. ಕೇವಲ ಮಹಾಯೋಗಿಗಳಿಗಿರುವ ಸರ್ವೇಂದ್ರಿಯನಿಗ್ರಹವು ಇವರಲ್ಲಿ ಸ್ಥಿರವಾಗಿ ನೆಲೆಗೊಂಡಿದ್ದಿತು. ಸೋಲಾಪುರದಲ್ಲಿ ಕೆಲವುದಿನಕ್ಕೆಪೂರ್ವ ಓರ್ವ ಐರೋಪ್ಯಸ್ತ್ರೀಯು ದಿನದುಂಬಿ ಹಡೆಯಲಾರದೆ ಬಹು ವ್ಯಥೆಯನ್ನು ಹೊಂದುತ್ತಿರುವಾಗ್ಗೆ ಅನೇಕೋಪಚಾರಗಳನ್ನು ಮಾಡಿಸಿದರೂ ಗುಣೋನ್ಮುಖವು ಕಾಣಲಿಲ್ಲ. ಆವಾಗ ಒಬ್ಬ ನೇಟೀವ ನೌಕರನು ವಾರದ ಅಪ್ಪಾಸಾಹೇಬರ ಕಚ್ಚೆಯನ್ನು ತೊಳೆದ ನೀರನ್ನು ಕುಡಿಸಿದರೆ ಸುಖಪ್ರಸವವಾಗುವುದೆಂದು ಹೇಳಿದನು. ಐರೋಪ್ಯನು ಅದರಲ್ಲಿ ಅವಿಶ್ವಾಸಿಯಾಗಿದ್ದರೂ ಇದೊಂದು ಉಪಚಾರವೆಂದು ಭಾವಿಸಿ ತರಕಳುಹಿಸಲು ಶ್ರೀಮಂತರು ಪ್ರಯಾಸದಿಂದ ಅಂಗೀಕರಿಸಿ ಅದೇಪ್ರಕಾರ ನೀರನ್ನು ಕೊಟ್ಟರು. ಅದನ್ನು ಕುಡಿದ ಒಂದು ಕ್ಷಣದಲ್ಲಿಯೇ ಸುಖವಾಗಿ ಹೆತ್ತಳು. ಹೋದವರ್ಷ ವಿಜಾಪೂರದಲ್ಲಿ ಓರ್ವ ಹಿಂದೂಸ್ತ್ರೀಯಳು ಅದೇರೀತಿ ಪ್ರಸವಬಾಧೆಯಿಂದ ದುಃಖಪಡುತ್ತಿರಲು ಶ್ರೀಮಂತರು ಅಲ್ಲಿ ಇಲ್ಲದಮೂಲಕ ಅವರ ಭಾವಚಿತ್ರದ ಕಾಗದವನ್ನು ತೊಳಸಿ ಕುಡಿಸಲು ತೀವ್ರವೇ ಹೆತ್ತಳೆಂದು ಅಲ್ಲಿಯವರೋರ್ವರು ಹೇಳಿದರು. ವಾಕ್ಸತ್ಯತೆಯಲ್ಲಿಯೂ ಇಂಥ ಉದಾಹರಣೆಗಳನೇಕಗಳುಂಟು. ಅವೆಲ್ಲವನ್ನೂ ಇಲ್ಲಿ ಒಂದೊಂದನ್ನಾಗಿ ಕಾಣಿಸಲು ಪತ್ರವಿಸ್ತಾರಭೀತಿಯಿಂದಲೂ ದುಃಖಾತಿಶಯದಿಂದಲೂ ಲೇಖನಿಯು ಹಿಮ್ಮುಖವಾಗುತ್ತದೆ. ಈ ಮಹನೀಯರ ಜೀವನಚರಿತ್ರವು ಸ್ವಲ್ಪಕಾಲದಲ್ಲಿಯೇ ಹೊರಬೀಳುವುದು. ಆದುದರಿಂದ ಈ ಮಹಾನುಭಾವರ ನೈಜಗುಣಗಳಲ್ಲೊಂದೊಂದರ ಉದಾರತ್ವವನ್ನು ತಿಳಿದು ವಿಯೋಗದ ದುಃಖವು ವಾಚಕರಿಗೆ ಇಮ್ಮಡಿಯಾಗದಿರಲಾರದು. "ಜಾತಸ್ಯಮರಣಂಧೃವಂ" ಎಂಬ ಉಕ್ತಿಯಂತೆ ಭೌತಿಕಶರೀರವನ್ನು ಜಗನ್ನಿಯಂತೃವಿನ ನಿಯಮಕ್ಕನುಸರಿಸಿಬಿಟ್ಟು ಆಚಂದ್ರತಾರಕವಾದ ನಿರ್ಮಲ ಯಶಶ್ಶರೀರವನ್ನು ಉಳಿಸಿ ಪರಶಿವನ ಸನ್ನಿಧಿಯನ್ನು ಇವರು ಸೇರಿದರು. ಇವರ ಆತ್ಮನಿಗೆ ಸರ್ವದಾ ಶಾಂತಿಯಿರಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ.

ಉತ್ತಮ ಗ್ರಂಥಗಳು.

1

ಶಿವಪಂಚಸ್ತವಃ— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ, ಕೂಡಿಧೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.— ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿಧೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಧೆ.

ಪುರುಷಸೂಕ್ತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿಧೆ.

ಬಸವಲಿಂಗಸ್ವಾಮಿಗಳು,
ಹೊಸಮಠ ಮೈಸೂರು.

ಅಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

ರಾಸ್ಕೋಪಸಿಸ್ಟಂ ಪೇಟಂಟ ಲೀವರ್ ಜ್ಯೂವೆಲ್ಡ್ ವಾಚ್

ROSKOPF
SYSTEM
PATENT
SWISS MADE.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಅಯಿದು (೫) ವರುಷಗಳು ಗ್ಯಾರೆಂಟು.

ಕ್ರಯ ರೂ. ೨-೮-೦ ವಿ. ಪಿ. ಚಾರ್ಜ ರೂ. ೦-೪-೦.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದು, ಕ್ರಯ ೦-೮-೦ ವಿ. ಪಿ. ಚಾರ್ಜು ೦-೪-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ.
ನಂಬರು ೨೦ ಸಿಂಗಣ್ಣಬೀದಿ, ವಾಲಾಟಾಕ್ಸ್ ರೋಡು,
5 ಮದರಾಸು.

ಉತ್ತಮ ಗ್ರಂಥಗಳು.

105

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦. ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ —೦.೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ, ಮೈಸೂರು.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

25

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ.

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ.—ಈ ಎಣ್ಣೆಯನ್ನು ಬೆಳಿಗ್ಗೆ ಮತ್ತೂ ಸಾಯಂಕಾಲ ೧ ತೋಲದಂತೆ ೨೦ ದಿನಗಳವರಿಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಚಿಬ್ಬು, ವ್ರಣ, ಕುಷ್ಠ. ಮಹೋದರ, ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂತಿಮೇಹ, ಮೂತ್ರಕೃಚ್ಛ್ರ ಅಸ್ತಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ, ರೂಪಾಯಿ ೩. ಟಪ್ಪಾಲ್ ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ—ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಪುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್ ಖರ್ಚು ೬ ಆಣೆ.

೯. ಮಹಾಕುಂಡಲ್ಯಾದಿರಸಾಯನ— ಇದರಿಂದ ಕ್ಷಯ ಕಾಶಿ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟ್ಲು ಉರಿ ಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶ ನೀರು ಎರೆಯುವಾಗ ಜ್ಞಾನ ತಪ್ಪುವುದು, ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಬಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಷರಬತ್ತುಗಳೂ, ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚನ್ನಬಸಪ್ಪ ಅಂಡ್ ಸನ್ಸ್,
ಚನ್ನಪಟ್ಟಣ, ಬೆಂಗಳೂರು, ಡಿಸ್ಟ್ರಿಕ್ಟ್.

5

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. **ಮಿಂಚಿನ ಉಂಗುರವೂ.**



ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರೆಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District·

64

ಪದ್ಮರಾಜ ಪುರಾಣಂ.

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಅಣೆ.

ಬಿ. ಮಲ್ಲಾರಾಧ್ಯರು,
ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ ಬಿ. ಬಸವಾರಾಧ್ಯರು,
ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್, ಬೆಂಗಳೂರು.

ಮೊದಲು ಇದನ್ನು ಓದಿರಿ.

23

ಅಂಜೀರಾರ್ಕಮಧು:— ಇದರ ಸೇವನದಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತುಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿಧಾರಣಕ್ಕೆ ಯೋಗ್ಯವಾದ ಧಾತು ಆಗುತ್ತದೆ. ನಡುವೇ ಯಾವದಾದರೊಂದು ಕಾರಣದಿಂದ ನಪುಂಸಕತ್ವವಾದರೆ ಇದರಿಂದ ಖಾತ್ರಿಯಿಂದ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ ಅನ್ನ ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ, ಅನ್ನ, ಹಾಲು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತವಾಗುತ್ತಾರೆ. ಕ್ರಯ ೧ ಬಾ. ೧॥= ರೂ. ೨ ಬಾ. ೨॥। ರೂ. ೩ ಬಾ. ೩॥।= ಟ.ಖ.ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡ. ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು. ಟ. ಖ. ಬೇರೆ.

ಸಾರ್ಸಾಪರಿಲಾ:—ಇದರಿಂದ ಪರಮೂ, ಗರಿಮಿ ಹೋಗುತ್ತದೆ. ಉಷ್ಣದಿಂದ ಆದ ಯಾವದಾದರು ವಿಕಾರಗಳು ರಸಾಯನ ಶೇವನ ಮಾಡಿದ್ದರಿಂದ ಉಂಟಾದ ರೋಗಗಳು ಮತ್ತು ಉಷ್ಣವು ಬಡೆದು ಆದ ಬಿಳೇಕರೇಕಲೆಗಳು, ಭಗೇಂದ್ರ, ಪಿನಸಿ, ಇತ್ಯಾದಿರೋಗಗಳು ಖಾತ್ರಿಯಿಂದ ನೆಟ್ಟಗಾಗುವವು. ಕ್ರಯ ೧ ಬಾ. ೧॥ರೂ. ೨ ಬಾ. ೪ರೂ. ಟ. ಖ. ಬೇರೆ.

ಮಲಮು:— ಇದರಿಂದ ಹಳೇ ಗಜಕರ್ಣ, ಇಸಬು, ಖಜ್ಜಿ, ತದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು. ಟ. ಖ. ಬೇರೆ.

"ಪಾಚಕ."

("ಪಚನ ಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚೆನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರತೇಗುಗಳು ಬರುವದಿಲ್ಲ. ೧ ಬಾ. ೯ ಆಣಿ ಟ. ಖ. ಬೇರೆ.

ನಂ. ೫೫ "ಅಂಜೀರಾರ್ಕಮಧುಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯಾ)

೧೯೧೧ನೇ ಇಸವಿ ಜನವರಿ ತಾ॥ ೩೦ ರಿಂದ ೧೯೧೧ನೇ ಫೆಬ್ರುವರಿ ತಾ॥ ೫ ರವರಿಗೆ ಸಲ್ಲುವ ಶಾಲಿವಾಹನ ಶಕ ೧೮೩೨ ನೇ ಸಾಧಾರಣ ಸಂವತ್ಸರದ ಪುಷ್ಯ ಬ॥ ಅಮಾವಾಸ್ಯೆಯಿಂದ ಮಾಘ ಶು॥ ಷಷ್ಠಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ತೇದಿ
30	ಸೋ	ಅ	19-54	ಶ್ರವಣ	50-30	17
31	ಮಂಗ	ಪಾ	21-13	ಧನಿಷ್ಠ	52-22	18
1	ಬುಧ	ಬಿ	21-4	ಶತಭಿ	53-10	19
2	ಗುರು	ತ	19-40	ಪೂಭಾ	52-18	20
3	ಶುಕ್ರ	ಚೌ	17-9	ಉಭಾ	51-2	21
4	ಶನಿ	ಪಂ	13-20	ರೇವತಿ	49-0	22
5	[1] ಭಾನು	ಷ	8-48	ಅಶ್ವಿನಿ	45-35	23

(1) ಕುಮಾರಷಷ್ಠಿವ್ರತಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಕೆಯಿಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ಗ ೧೯೧೧ ನೇ ಇಸವಿ ಫೆಬ್ರವರಿ ತಾರೀಖು ೬ ನೇ ಸೋಮವಾರ. [ಸಂಚಿಕೆ ೬

ಊದಬತ್ತಿಗಳು.

40

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ಶಾದಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

88 ಜೇರಿಗೆ ಬಸವಲಿಂಗಪ್ಪನ ಪುಸ್ತಕಗಳು.

ಬೆಲೆ ಬಹಳ ಕಡಿಮೆ. ನೋಡಿ. ನೋಡಿ. ಬಿಡಬೇಡಿ.

ಪದ್ಮಾವತಿಕಥೆ:– ವೀರಶೈವವಚನನಾಟಕ. ೯೮ ಡೆಮ್ಮಿ ಪುಟ. ಕ್ರಯ ೦-೨-೦. ವಿ. ಪಿ. ಯಿಂದ ೦-೪-೦

ವೀರಶೈವಮತವಿಷಯಸಾರ (೨ ನೇ ಭಾಗ) ಕ್ರಯ ೦-೨-. ವಿ. ಪಿ. ಯಿಂದ ೦-೪-೦.

ಷಟ್‌ಸ್ಥಲಚಿಂತಾರತ್ನ.– ಕ್ರಯ ೦-೨-೦. ವಿ. ಪಿ. ಯಿಂದ ೦-೪-೦.

ವಿಳಾಸ.—ಬೆಂಗಳೂರು ಸಿಟಿ ಅರಳೇಪೇಟೆ ಜೇರಿಗೆ ಸಂಜಪ್ಪನವರ ಮಗ ಬಿ. ಜಿ. ಬಸವಲಿಂಗಪ್ಪನವರಿಗೆ.

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಡೆನ್ಸ್	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗಿ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

48 ಹೊಸಪುಸ್ತಕಗಳು.

ನೂತನಗೃಹಪ್ರವೇಶ, ಪಟ್ಟಾಧಿಕಾರ, ಲಿಂಗಧಾರಣ ಈ ಮೂರು ವಿಧಿಗಳು ಟೀಕಾ ಸಮೇತವಾಗಿ ಒಂದು ಪುಸ್ತಕದಲ್ಲಿ ಮುದ್ರಿತಗಳಾಗಿರುತ್ತವೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೨ ಆಣೆ. ಶ್ರೀಚೆನ್ನಬಸವೇಶ್ವರವಿರಚಿತವಾದ ಶಿವಾನುಭವಶಾಸ್ತ್ರ ಕನ್ನಡ ವಾಕ್ಯರೂಪವಾಗಿದೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೫ ಆಣೆ. ವೀರಶೈವದಶಕಕರ್ಮವಿಧಿ ಬೆಲೆ ಪ್ರತಿ ೧ಕ್ಕೆ ವಿ. ಪಿ. ೮ ಆಣೆ. ಶಿವಸ್ತುತಿಮಣಿಮಾಲಾ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೬ ಆಣೆ. ರಾಜಶೇಖರ ೧೩-೧೪ ಆಶ್ವಾಸ ಪ್ರತಿಪದಾರ್ಥ ತಾತ್ಪರ್ಯಸಹಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಇದೆ.

ಕ್ರಯ— ಪ್ರತಿ ೧ ಕ್ಕೆ ವಿ. ಪಿ. ೧-೩-೦.

ಸಟೀಕ ವೀರಶೈವ ಅಂತ್ಯೇಷ್ಟಿವಿಧಿ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೮ ಆಣೆ. ವಿಳಾಸ:— **ಕೆ. ಕಾಂತವೀರಪ್ಪ,**
ದೊಡ್ಡಪೇಟೆ, ಬೆಂಗಳೂರು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ .

88 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಟ್ಟಿಗೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ–
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

9

ಲೋಕಾಮಯಹಾರ ಕಸ್ತೂರೀ ಮಾತ್ರೆ.

ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕಾಲು ಜೋಡತ(ಭಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ,ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಏಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನರೋಗಕ್ಕೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೮ ಕುಪ್ಪಿವರೆಗೆ ಪೋಸ್ಟೇಜು ೪ ಅ.

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ;— ಸೀತಾರಾಘವವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ
27 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವಿಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಬಾಧ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕೆ, ಬರೆಯಿರಿ

ಸೌಗಂಧಿಕಾಪರಿಣಯ.

(ಕಳೆದವಾರದ ಶೇಷ.)

ಮಾರನೇ ದಿವಸ ಅರುಣೋದಯದೊಳೆದ್ದು ಆಪ್ತರಾದ ಸೇನಾಪತಿ ವೀರಸೇನ ಮೊದಲಾದ ಅಧಿಕಾರಿಗಳಂ ಕರಸಿ ಸೇನಾಕಟಕದೊಳ್ ಜಾಗ್ರತೆಯಿಂದಿರುವಂತೆ ನಿಯಮಿಸಿ, ಕಳುಹಿ, ಬಳಿಕ ಸ್ನಾನಾಹ್ನಿಕಾದಿಗಳನ್ನೆರವೇರಿಸಿ, ಛಾಯಾಗುಪ್ತನಂ ಸ್ಮರಿಸಲವನು ಆಕ್ಷಣದಲ್ಲಿಯೇ ಸನ್ನಿಹಿತನಾಗಿ ಅಭಿವಂದಿಸಿ ನಿಂದಿರಲು, ಯುದ್ಧಕ್ಕೆ ಬೇಕಾದ ಶಸ್ತ್ರಾಸ್ತ್ರಂಗಳಂ ಮತ್ತೂ ಉಪಯುಕ್ತವಾದ ವಸ್ತುಗಳಂ ಕೊಡ ಅವನ ಕೈಯೊಳು ಕೊಟ್ಟು, ಇಷ್ಟದೇವತೆಯನ್ನಭಿವಂದಿಸಿ, ಸುಮತಿ ಸಮೇತನಾಗಿ ಹೊರಟು, ಕೆಲವುದೂರ ಕಾಲುನಡೆಯಿಂದಲೇ ತೆರಳುತ, ಸಂಗಡ ಬಂದವರಂ ಹಿಂದಕ್ಕೆ ಕಳುಹಿ. ಛಾಯಾಗುಪ್ತನ ಭುಜಪೀಠಗಳಲ್ಲಿ ಮಂತ್ರಿಯೊಡನೆ ಕುಳಿತು, ಎಲೈ ಯಕ್ಷಾಧಿಪನೇ! ಪ್ಲಕ್ಷದ್ವೀಪವಂ ಕುರಿತು ತೆರಳುವನಾಗು ಎಂದು ನಿಯಮಿಸಲವನು ಮಹಾಪ್ರಸಾದವೆಂದು ಮೆಲ್ಲಮೆಲ್ಲನೆ ಆಕಾಶವನ್ನವಲಂಬಿಸಿದನು. ಕೆಲವುದೂರ ಮಂದಗಮನದಿಂದ ಹಂಸೆಯಂತೆ, ಮತ್ತೆ ಕೆಲವು ದೂರ ಅಲಸದೆ ಚಲಿಸುವ ವಿಮಾನದಂತೆ ತೆರಳುತ, ಕೆಲವು ಹೊತ್ತು ಎತ್ತಿದ ಸತ್ತಿಗೆಯಂತಿರ್ದ ಮೇಘದ ಮೊತ್ತದೊಳ್ ಸುತ್ತುತ, ಇತ್ತರವಾದ ಮಾರುತದಿಂ ರಾಯನಿಗೆ ಶ್ರಾಂತಿಯಿಲ್ಲದಂತೆ ಮಾಡುತ, ಸ್ಕಂಧಪೀಠದೊಳ್ ಕುಳಿತಿರ್ಪ ರಾಯ ಸುಮತಿಗಳಂ ಮಹಾಸತ್ವಶಾಲಿಗಳೆಂದು ಮೆಚ್ಚುತ, ಅಲ್ಲಲ್ಲಿರುವ ವಿಶೇಷಗಳಂ ತೋರಿಸಿ ವಿಜ್ಞಾಪಿಸುತ, ಬಳಿಕ ಗರುಡನಂತೆ ಅತಿವೇಗದಿಂ ಹೊರಟು, ಪಾರಿಯಾತ್ರ ಹಿಮಾಚಲಂಗಳಂ ದಾಂಟಿ, ಗಂಧಮಾದನವೆಂಬ ಮಹಾಪರ್ವತವನೈದಲು, ಅಲ್ಲಿ ರಾಜಮಂತ್ರಿಗಳೀರ್ವರೂ ಕೆಲವು ಹೊತ್ತು ವಿಶ್ರಮಿಸಿಕೊಳ್ಳುತ ವಿನೋದದಿಂದಿರುತ್ತಿರಲು; ಆಗ ಛಾಯಾಗುಪ್ತನು ಸುಗಂಧರಾಜನಂ ಕುರಿತು, ಎಲೈ—ರಾಜಾಧಿರಾಜನೆ! ಇಲ್ಲಿ ಕಾಣಿಸುವುದು ಯಕ್ಷಾಧಿಪತಿಯಾದ ಕುಬೇರನ ಅಳಕಾಪುರಿಯ ಬಹಿರುದ್ಯಾನವನದಲ್ಲಿರುವ ಸೌಗಂಧಿಕಾಸರೋವರವೆಂದು ಪೇಳಿ, ಇದುಕೋ ವಿಕಸಿಸಿದ ಕುಮುದಕಲ್ಹಾರಪರಿಮಳಗಳಂ ಕೂಡಿ, ತರಂಗಸಂಬಂಧದಿಂದ ಪಾಟೀರಪಂಕದಂತೆ ಅತಿಶೀತಳಮಾಗಿ ಮೆಲ್ಲಮೆಲ್ಲನೆ ಸಂಚರಿಸುವ ಮಂದಮಾರುತಗಳಂ ಸ್ನೇಹದಿಂದಾಲಂಗಿಸಿಕೊಂಡು ಇದಿರ್ಗೊಳ್ಳಲು ಕಳುಹಿಸುವಂತೆ ಕಮಲವು ಧ್ಯಾನದಿಂ ಮತ್ತಮಾದ ಭ್ರಮರವಾರದ ರವದಿಂ ಪಥಿಕರಂ ಬಾರೆಂದು ಕರೆಯುವಂತೆ, ಮುನಿಜನಮನಸ್ಸಿನಿಂ ನಿರ್ಮಿಸಿರುವುದೋ ಯೆಂಬಂತೆ ಮುಕ್ತಾಫಲಪ್ರಭೆಗಳಂ ರಚಿಸಿರುವದೊ ಯೆಂಬಂತೆ, ಸಜ್ಜನಗುಣಗಳಂ ತುಂಬಿರುವಂತೆ, ವರುಣನ ವಿಹಾರಾರ್ಥವಾದ ದರ್ಪಣಗೃಹದಂತೆ, ಶರತ್ಕಾಲ ಮೇಘವೇ ದ್ರವೀಭೂತವಾಗಿರುವುದೋಯೆಂಬಂತೆ, ವೈಡೂರ್ಯಾಚಲವೇ ಉದಕರೂಪಮಾಗಿರುವುದೋಯೆಂಬಂತೆ, ತ್ರಿಲೋಕ ಪುಣ್ಯರಾಶಿಯೇ ಸರೋವರರೂಪಮಾಗಿರುವಂತೆ ಚಂದ್ರಕಿರಣಗಳೇ ಪಾನೀಯರೂಪಮಂ ವಹಿಸಿರುವುದೋಯೆಂಬಂತೆ, ಕೈಲಾಸಪರ್ವತವೇ ರಸರೂಪಮಂ ಪ್ರವರ್ತಿಸಿರುವುದೋಯೆಂಬಂತೆ, ಸೌಗಂಧಿಕಾಕುಸುಮಗಳ ಪರಿಮಳದಿಂ ಘುಮಘುಮಿತಮಾದುದರಿಂ ಕರ್ಪೂರರಾಶಿಯೇ ಜಲರೂಪಂ ತಾಳಿರುವಂತೆ, ಭೂದೇವಿಯ ಸ್ಫಟಿಕನಿರ್ಮಿತ ಧಾರಾಗೃಹಮೋಯೆಂಬಂತೆ ಕಂಗೊಳಿಸುವ ಈ ಸರೋವರವು, ಅನೇಕಪ್ರಕಾರದಿಂ ಜಲಕೇಳಿಯಂ ಮಾಡುತ, ಉಮಾದೇವಿಯ ಕರಸರೋರುಹ ಜಲಗಳಂ ತಳಿಯುತಲಿರುವ ಪರಮೇಶ್ವರನ ಶಿರೋಭೂಷಣ ಚಂದ್ರಶಕಲದಿಂ ಜಾರಿದ ಅಮೃತರಸದಿಂ ಕೂಡಿದುದರಿಂದ ಅತ್ಯಂತ ಮಧುರವಾದ ಜಲದಿಂ ಕೂಡಿರ್ಪುದು; ಮತ್ತೂ ಇದರೊಳ್ ಪ್ರತಿಬಿಂಬಿಸಿರುವ ತೀರವನದಿಂದ ತಿನೀಲಮಾಗಿ, ದಿವದಲ್ಲಿಯೂ ನಿಶಾಸಮಯದಂತೆ ತೋರುತಲಿರುವುದರಿಂ ನೀಲೋತ್ಪಲದಿಂ ಮರೆಯಾಗಿರುವ ಪತಿಯಂ ಕಾಣದೆ ವ್ಯಾಕುಲಪಡುತಲಿರುವ ಚಕ್ರವಾಕ ವನಿತಾನಿಕರದಿಂ ನೋಡುವವರ್ಗೆ ವಿನೋದವನ್ನುಂಟುಮಾಡುತ, ಪ್ರದೋಷಕಾಲ ತಾಂಡವದರ್ಶನಕ್ಕೋಸುಗ ಕೈಲಾಸಪರ್ವತವಂ ಕುರಿತು ಮಾರ್ಗವಿಡಿದು ಬಂದ ಬ್ರಹ್ಮದೇವನು ಸಂಧ್ಯೋಪಾಸನೆಯಂಗೈದು ಬಳಿಕ ಸಶೇಷ.

ವ್ಯವಸಾಯದ ವಿಷಯಗಳು.

ತೆಂಗಿನಮರ.

ಮಿ॥ ಜಾರ್ಜ ಕೆನ್ನೆ ಎಂಬ ಪಂಡಿತರೊಬ್ಬರು ತೆಂಗಿನ ಮರಗಳನ್ನು ಫಲವತ್ತಾಗಿ ಮಾಡುವ ವಿಚಾರವನ್ನು ಕುರಿತು ಬರೆದಿರುವ ಪುಸ್ತಕದಲ್ಲಿ ಕೆಲವು ಸಂಗತಿಗಳನ್ನು ಕೆಳಗೆ ವಿವರಿಸಿರುತ್ತೇವೆ.

ಮರಗಳು ಒಳ್ಳೇ ಫಲವನ್ನು ಕೊಡಬೇಕಾದರೆ ಅವುಗಳ ಬುಡಗಳ ಸುತ್ತಲೂ ಭೂಮಿಯನ್ನು ಚನ್ನಾಗಿ ನೇಗಲಿನಿಂದಾಗಲಿ ಗುದ್ದಲಿಯಿಂದಾಗಲಿ ಕದಲಿಸಿ ಹೆಂಟೆಯನ್ನು ಒಡೆದು ಪುಡಿಮಾಡಿ ಮಳೆ ನೀರೆಲ್ಲಾ ಬಿದ್ದಲ್ಲಿಯೇ ಬತ್ತಿಹೋಗುವಹಾಗೆ ಮಾಡತಕ್ಕದ್ದು.

ಜಮೀನು ಇಳಿಜಾರಾಗಿರುವ ಪಕ್ಷದಲ್ಲಿ ಅದನ್ನು ಅಲ್ಲಲ್ಲಿಗೆ ಮಟ್ಟಕಟ್ಟಿಕೊಂಡು ಬಿದ್ದ ಮಳೆ ನೀರು ಕೊಂಚವಾದರೂ ಹರಿದು ಹೋಗದಂತೆ ಮಾಡಿಕೊಳ್ಳಬೇಕು.

ಉಪ್ಪನ್ನು ತೆಂಗಿನ ತೋಟದ ಜಮೀನಿಗೆ ಉಪಯೋಗಿಸುತ್ತಾ ಬರುವುದರಿಂದ ಕೆಲವು ರಸವರ್ಧಕ ಮತ್ತು ಇತರ ಬದಲಾವಣೆಗಳು ಉಂಟಾಗುವವು. ಹೇಗೆಂದರೆ:—ಉಪ್ಪು ಬೆರಸಲ್ಪಟ್ಟ ಮಣ್ಣಿಗೆ ಗಾಳಿಯಲ್ಲಿರುವ ತಂಪನ್ನು ಹೀರಿ ಆ ತಂಪನ್ನು ಸುಲಭವಾಗಿ ಬಿಟ್ಟುಕೊಡದೆ ಇಟ್ಟುಕೊಳ್ಳುವ ಶಕ್ತಿ ಬರುತ್ತದೆ. ಆದ್ದರಿಂದ ಹಾಳತದಷ್ಟು ಉಪ್ಪನ್ನು ಜಮೀನಿಗೆ ಗೊಬ್ಬರವಾಗಿ ಉಪಯೋಗಿಸುವುಧರಿಂದ ಅನಾವೃಷ್ಟಿಯಿಂದಾಗುವ ನೀರಿನ ಪೇಚಾಟವನ್ನು ಕಮ್ಮಿಪಡಿಸಿಕೊಳ್ಳಬಹುದು.

ಅಗೆಯಿಂದ ಎತ್ತಿದ ಸಸಿಗಳನ್ನು ಕೊಂಚಕಾಲ ಉಪ್ಪು ಕರಗಿಸಿದ ನೀರಿನಲ್ಲಿ ಇಳಿ ಮುಳುಗಿಸಿ ನಂತರ ಅವುಗಳನ್ನು ಭೂಸ್ಥಾಪನೆ ಮಾಡುವುದರಿಂದ ಮುಂದೆ ಅವುಗಳಿಗೆ ಗೆದ್ದಲು ಹತ್ತುವುದಿಲ್ಲ, ಮತ್ತು ರೋಗಾದಿಗಳ ಕಾಟಗಳೂ ಕೂಡ ಇಲ್ಲದೆ ಪ್ರಬಲವಾಗಿ ಬೆಳೆಯುತ್ತವೆ.

ಸಸಿಗಳನ್ನು ಹೂಳುವುದಕ್ಕಾಗಿ ಮಾಡಿರುವ ಗುಣಿಗಳೊಳಗೆ ಸ್ವಲ್ಪಸ್ವಲ್ಪ ಉಪ್ಪನ್ನು ಹಾಕುವುದರಿಂದ ಅವುಗಳಲ್ಲಿನ ಹುಳುಹುಪ್ಪಟೆಗಳೆಲ್ಲಾ ಸತ್ತುಹೋಗುತ್ತವೆ. ಆ ಮೇಲೆ ಸಸಿಗಳನ್ನು ಇಟ್ಟು ಮುಚ್ಚಬಹುದು.

ಉಪ್ಪಿನೊಳಗೆ ಮೂರರಲ್ಲೆರಡುಪಾಲು ಕ್ಲೋರೈತ್ ಎಂಬ ಧಾತು ಒಂದು ಪಾಲು ಸೋಡಾ ಎಂಬ ಕ್ಷಾರ ಇರುವವು. ಈ ಕ್ಲೋರೈತ್ ಎಂಬ ಧಾತುವಿಗೆ ಮಳೆ ನೀರಿಗಿರುವುದಕ್ಕಿಂದ ಎಷ್ಟೋ ಪಾಲು ಅಧಿಕವಾಗಿ ಭೂಮಿಯಲ್ಲಿನ ಇತರ ಧಾತುಗಳನ್ನು ಕರಗಿಸುವ ಶಕ್ತಿ ಇರುತ್ತೆ. ಆದ್ದರಿಂದ ಗಿಡದ ಅಭಿವೃದ್ಧಿಗೆ ಬೇಕಾಗಿರುವ ಆಹಾರ ಪದಾರ್ಥಗಳೆಲ್ಲಾ ಸುಲಭವಾಗಿ ಕರಗಿ ನೀರಾಗಿ ಸದಾ ಕಾಲವೂ ಬೇರುಗಳಿಗೆ ಒದಗುತ್ತಲೂ ಮತ್ತು ಅವುಗಳನ್ನು ಪೋಷಿಸುತ್ತಲೂ ಇರುವವು.

ಜಮೀನು ಬೇಸಾಯಕ್ಕೆ ಬಹಳ ಕಠಿಣವಾಗಿ ಇರುವಾಗಲೂ ಕೂಡ ಉಪ್ಪನ್ನು ಉಪಯೋಗಿಸಿಕೊಳ್ಳುವುದರಿಂದ ಆ ಕೆಡಕನ್ನು ಹೋಗಲಾಡಿಸಿಕೊಂಡು ಬೇಸಾಯದಕಾರ್ಯಗಳನ್ನೆಲ್ಲಾ ಸುಲಭಪಡಿಸಿಕೊಳ್ಳಬಹುದು. ಜಮೀನಿನಲ್ಲಿರುವ ಹುಪ್ಪಟೆಗಳೂ ಸಹ ಸತ್ತುಹೋಗುವವು.

ತೆಂಗಿನ ಮರಕ್ಕೆ ಹದವರಿತು ಗೊಬ್ಬರವನ್ನೂ ನೀರನ್ನೂ ಒದಗಿಸುತ್ತಾ ಬಂದಲ್ಲಿ ಒಳ್ಳೇ ಜಮೀನಾಗಿದ್ದರೆ ಐದು ವರುಷಗಳೊಳಗಾಗಿಯೇ ಅದು ಫಲಕ್ಕೆ ಬರುವುದು. ಕೀಳು ತರಹೆ ಜಮೀನುಗಳಲ್ಲಿ ತೆಂಗಿನ ಮರಗಳು ೮ ರಿಂದ ೧೦ ವರುಷಗಳೊಳಗಾಗಿ ಫಲಕ್ಕೆ ಬರುತ್ತವೆ.

ತೆಂಗಿನ ಗಿಡಗಳಿಗೆ ಗೊಬ್ಬರ ಕೊಡುವುದರಲ್ಲಿ ಅದನ್ನು ಜಮೀನಿಗೆಲ್ಲಾ ಒಂದೇ ಸಮನಾಗಿ ಹರಡುವ ವಿಧಾನವನ್ನು ಅನುಸರಿಸಬೇಕೇ ವಿನಾ ಗಿಡಗಳ ಬೇರುಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಕೊಡುವ ಪ್ರಯತ್ನವನ್ನು ಮಾಡಲಾಗದು. ಏಕೆಂದರೆ ಹೀಗೆ ಮಾಡುವುದರಲ್ಲಿ ಕೆಲವು ಅಪಾಯಗಳಿರುವವು.

ಸಾಮಾನ್ಯವಾಗಿ, ಕೆಲವು ಜಮೀನುಗಳಲ್ಲಿ ಬೆಳೆಯುವ ಹುಲ್ಲು ರುಚಿಕರವಾಗಿರದೆ ಹುಳಿಹುಳಿಯಾಗಿ ಇರುವದರಿಂದ ದನಕರುಗಳು ಅದನ್ನು ತಿನ್ನುವುದಿಲ್ಲ ಅಂಥಾ ಸಂದರ್ಭದಲ್ಲಿ ಸದರಿ ಜಮೀನುಗಳಿಗೆ ಉಪ್ಪನ್ನು ಕೊಟ್ಟಲ್ಲಿ ಮೊದಲಿದ್ದ ದುರ್ಗುಣವು ಹೋಗಿ ಒಳ್ಳೆ ಮಧುರವಾದ ಹುಲ್ಲು ಬೆಳೆಯುತ್ತಾ ಬರುತ್ತದೆ ಒ. ಪ.

ದಂತವು.

ಭರತಖಂಡವು ಕೈಗಾರಿಕೆಗೆ ಪ್ರಸಿದ್ಧವಾದುದೆಂಬುದನ್ನು ನಿದರ್ಶನಪಡಿಸುವುದಕ್ಕೆ ಕೈಗಾರಿಕೆಗಳಲ್ಲೆಲ್ಲಾ ಪ್ರಮುಖವಾದ ದಂತದ ಕೆಲಸಗಳೇ ಪ್ರತ್ಯಕ್ಷ ದೃಷ್ಟಾಂತವು. ಮರದಮೇಲೆ ದಂತವನ್ನು ಕೆತ್ತಿ ಚಿತ್ರಗೆಲಸ ಮಾಡುವ ಕೈಗಾರಿಕೆಯು ಭರತಖಂಡದಂತೆ ಮತ್ತಾವ ದೇಶದಲ್ಲೂ ಮಾಡಲ್ಪಡುವುದಿಲ್ಲ. ಬಾಯಿ ಅಗಲವಾಗಿರುವ ಪಾತ್ರದಲ್ಲಿ ಫಾಸ್ಫರಿಕ್ ದ್ರಾವಕವನ್ನು ಹಾಕಿ, ಅದರೊಳಗೆ ದಂತವನ್ನು ಇಟ್ಟುಮೇಲೆ ಮುಚ್ಚಿಟ್ಟದ್ದರೆ ದಂತದಲ್ಲಿರುವ ಬಿರಿಸು ಸ್ವಲ್ಪಮಟ್ಟಿಗೆ ಮೃದುವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾದ ಸ್ಥಿತಿಗೆ ಬರುವುದು. ಆಗ್ಗೆ ಅದನ್ನು ದ್ರಾವಕದಿಂದ ತೆಗೆದು, ಒಳ್ಳೆಯನೀರಿನಲ್ಲಿ ತೊಳೆದು, ಗಾಳಿಯಲ್ಲಿ ಆರಹಾಕಬೇಕು. ಗಾಳಿಯಿಂದ ಆರಿದಮೇಲೂ ಅದು ಬಿರಿಸಾಗುವುದಿಲ್ಲ. ಸ್ವಲ್ಪ ಬಿರಿಸಾಗಿ ಕಾಣುತ್ತ ಬಂದಾಗಲೆಲ್ಲ ಅದನ್ನು ಬಿಸಿನೀರಿನಲ್ಲಿ ಅದ್ದುತ್ತಬಂದರೆ ಮತ್ತೆ ಸ್ವಲ್ಪ ಸ್ವಲ್ಪ ಮೃದುವಾಗುವುದು. ದಂತವನ್ನು ಮೆತ್ತಗೆ ಮಾಡುವುದಕ್ಕೆ "ನೈಟ್ರೇಟ್" ಎಂಬ ೧ ಔನ್ಸು ಸ್ಪಿರಿಟ್ಟನ್ನು ೪ ಔನ್ಸು ನೀರಿನಲ್ಲಿ ಬೆರಸಿ, ಅದರಲ್ಲಿ ದಂತವನ್ನು ೪–೫ ದಿನಗಳವರೆಗೆ ಮಡಗಿದ್ದರೆ ಮೆತ್ತಗಾಗ ವುದು. ಈ ಪದ್ಧತಿಯನ್ನನುಸರಿಸಿ, ಮೆತ್ತಗೆ ಮಾಡಿದ ದಂ ತವನ್ನು ಮತ್ತೆ ಬಿರಿಸುಮಾಡಬೇಕಾಗಿದ್ದರೆ, ಆ ದಂತ ನ್ನು ಒಂದು ಕಾಗದದ ಮೇಲಿರಿಸಿ, ಉಪ್ಪಿನ ಲೇಪವನ್ನು ಹಾಕಿ, ೨೪ ಗಂಟೆಗಳಕಾಲ ಇಟ್ಟಿದ್ದರೆ ಸಾಕು. ದಂತದಮೇ ಚಿತ್ರವನ್ನು ಕೆತ್ತಬೇಕಾಗಿದ್ದರೆ, ಮೊದಲು ದಂತದಮೇ ವಾರ್ನೀಸನ್ನು ಹಚ್ಚಿ, ಬಳಿಕ ಚಿತ್ರದ ಅಚ್ಚನ್ನು ಅದರಮೇ ಒತ್ತಿದರೆ ಅಲ್ಲಿ ಚಿತ್ರರೂಪವು ಅಂಟಿಕೊಳ್ಳುವುದು. ಬಳಿ ಅದನ್ನನುಸರಿಸಿ ಕೆತ್ತನೆ ಗೆಲಸವನ್ನು ಮಾಡಿಕೊಳ್ಳಬಹುದು. ಚಿತ್ರದ ಅಂಚಿನಲ್ಲಿ ಕಪ್ಪುಗೆರೆಯನ್ನು ಕಾಣಿಸಬೇಕಾದರೆ, ಸಲ್ಫರಿಕ್ ದ್ರಾವಕವೊಂದು ಭಾಗಕ್ಕೆ ೪ ಭಾಗ ನೀರನ್ನು ಸೇರಿಸಿ, ದಂತದ ಅಂಚಿನಲ್ಲಿ ಮೇಣದಿಂದ ಕಾಲ್ವೆಯಂತೆ ಕಟ್ಟಿ ಆ ಕಾಲ್ವೆಯಲ್ಲಿ ಈ ನೀರನ್ನು ಹರಿಯಿಸಿದರೆ ಕಪ್ಪುಗೆರೆಯು ಏರ್ಪಡುವುದು. ಅಂಚಿನಲ್ಲಿ ಧೂಮ್ರವರ್ಣದ ರೇಖೆಯು ಬರಬೇಕಾಗಿದ್ದರೆ, ಒಂದು ಭಾಗ ಸಿಲ್ವರ್ ನೈಟ್ರೇಟಿಗೆ ೪ ಭಾಗ ನೀರನ್ನು ಕಲಸಿ, ಅದನ್ನು ಮೇಲೆ ಹೇಳಿದಂತೆ ಮಾಡಿದ ಕಾಲ್ವೆಯಲ್ಲಿ ಹರಿಯಿಸಿ, ಸ್ವಲ್ಪ ಹೊತ್ತು ಬಿಸಿಲಿನಲ್ಲಿಡಬೇಕು. ನೈಕಾಟಿವ್‌ಸ್ ಎಂಬ ದ್ರವಪದಾರ್ಥದಲ್ಲಿ ಚಿತ್ರಲೇಖನಿಯನ್ನು ಅದ್ದಿ, ಅದರಿಂದ ಚಿತ್ರದರೂಪಿನಮೇಲೆ ಅಂದಕ್ಕನುಸಾರವಾಗಿ ಬರೆದು, ಬಿಸಿನೀರಿನಲ್ಲಿ ಒಣಗಿಸಿ, ಅದರಮೇಲೆ ಭಂಗಾರದ ಬಣ್ಣದ ರೇಕುಗಳನ್ನಿಟ್ಟು ಬಿಸಿಲಿನಲ್ಲಿ ಸ್ವಲ್ಪಹೊತ್ತಿರಿಸಿದ್ದರೆ ಭಂಗಾರದ ಗಿಲ್ಟು ಹತ್ತಿಕೊಳ್ಳುವುದು. ದಂತಕ್ಕೆ ಕೆಂಪುರಂಗನ್ನು ಕಟ್ಟಿಸಬೇಕಾದರೆ, ಅದನ್ನು ೨೪ ಗಂಟೆಗಳ ಕಾಲ ನೀರಿನಲ್ಲಿಟ್ಟು, ಬಳಿಕ ೧೦ ಭಾಗ ನೀರನ್ನು ೧ ಪಾಲು ವಿನಿಗರಿನೊಡನೆ ಬೆರಸಿ, ೪ ಭಾಗ ನೀರಿಗೆ ಒಂದು ಭಾಗ ಅನಿಲಿಯಿನ್ ಎಂಬ ವಸ್ತುವನ್ನು ಬೆರಸಿ, ಇದನ್ನೆಲ್ಲಾ ಒಟ್ಟಿಗೆ ಸೇರಿಸಿ, ಅದರಲ್ಲಿ ದಂತವನ್ನು ಇರಿಸಿ, ಅದಕ್ಕೆ ರಂಗು ಹಿಡಿದ ಬಳಿಕ ಹೊರಕ್ಕೆ ತೆಗೆದು ತೊಳೆಯಬೇಕು. ಕಪ್ಪುಬಣ್ಣವನ್ನು ಕಚ್ಚಿಸಬೇಕಾದರೆ, ದಂತವನ್ನು ಸೋಡಾಉಪ್ಪಿನಿಂದ ಸವರಿ, ಸಿಲ್ವರ್ ನೈಟ್ರೇಟ್ ದ್ರಾವಕದಲ್ಲಿಟ್ಟು ರಂಗು ಹಿಡಿದ ಬಳಿಕ ಒರಸಿ ಬಿಸಿಲಿನಲ್ಲಿಡಬೇಕು. ದಂತಕ್ಕೆ ಊದಾಬಣ್ಣವನ್ನು ಕಚ್ಚಿಸಬೇಕಾದರೆ, ಟ್ರಿಪಲ್‌ಗೋಲ್ಡ್ ಕ್ಲೋರೈಡ್ ಎಂಬ ದ್ರಾವಕವನ್ನು ನೀರಿನಲ್ಲಿ ಮಿಶ್ರಮಾಡಿ, ಅದರಲ್ಲಿ ದಂತವನ್ನಿಟ್ಟು ರಂಗು ಕಚ್ಚಿದ ಬಳಿಕ ಮೊದಲಿನಂತೆ ಬಿಸಿಲಿನಲ್ಲಿರಬೇಕು. ಹಸಿರು ಬಣ್ಣವನ್ನು ದಂತಕ್ಕೆ ಕಟ್ಟಬೇಕಾಗಿದ್ದರೆ, ಲೆಡ್ ಅಸಿಟೇಟ್ ಎಂಬ ದ್ರಾವಕದಲ್ಲಿ ಸ್ವಲ್ಪಕಾಲ ಇಟ್ಟಿದ್ದು, ಅದರಿಂದ ತೆಗೆದು ಬಿಸಿಲಿನಲ್ಲಿರಿಸಿ, ಬಳಿಕ ಪೊಟಾಸಿಯಂ ಕ್ರೋಮೇಟ್ ಎಂಬ ದ್ರಾವಕದಲ್ಲಿ ಅದ್ದಿ ರಂಗು ಹಿಡಿಸಿದ ಬಳಿಕ ಬಿಸಿಲಿನಲ್ಲಿರಿಸಬೇಕು. ಚಿತ್ರವನ್ನು ಕೆತ್ತಿದ ಸ್ಥಲಗಳಲ್ಲಿ ದಂತವು ಮುರಿದುಹೋಗದಂತೆ ಮಾಡುವುದಕ್ಕಾಗಿ ಸ್ವಲ್ಪಹೊತ್ತು ಫಾಸ್ಫರಿಕ್ ಆಸಿಡ್ ಡಿಲ್ಯೂಟಿನಲ್ಲಿರಿಸಿದ್ದು, ಬಳಿಕ ಸೋಪು ಮೊದಲಾದ ನಿರ್ಮಲೀಕರಣ ವಸ್ತುಗಳಿಂದ ಬೆರೆದ ನೀರಿನಲ್ಲಿ ದಂತವನ್ನಿಟ್ಟು ಬ್ರಷ್ಷಿನಿಂದ ಉಜ್ಜಿ, ಶುದ್ಧಿಗೊಳಿಸಬೇಕು. ದಂತದಮೇಲಿನ ಕೊಳೆಯೆಲ್ಲಾ ಹೋಗಿ ಶುಭ್ರವಾದ ಬಳಿಕ ಜರ್ಮವುಡ್ ಪಮೋಮೇಡ್ ಎಂಬ ವಸ್ತುವಿನಿಂದ ಉಜ್ಜಿದರೆ ದಂತವು ಥಳಥಳಿಸುತ್ತಿರುವುದು.

ಪಂಚಮರು.

(ಬರೆದುಬಂದುದು.)

ಬ್ರಾಹ್ಮಣ–ಕ್ಷತ್ರಿಯ–ವೈಶ್ಯ ಈ ಮೂವರೂ ದ್ವಿಜರು. ೪ ನೆಯವನು ಶೂದ್ರನು ಎಂದು ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಉಪನಯನಾಧಿಕಾರವಿರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೇ ದ್ವಿಜರೆಂದು ಹೇಳಲ್ಪಡುತ್ತಾರೆ. ಶೂದ್ರರಿಗೆ ದ್ವಿಜಸಂಸ್ಕಾರವಿಲ್ಲ. ಇವು ನಾಲ್ಕು ಹೊರತು ಮತ್ತಾವ ಮುಖ್ಯ ಜಾತಿಯೂ ಇಲ್ಲ. ಹೀಗಿದ್ದರೂ ಈ ದೇಶದಲ್ಲಿ ಪಂಚಮರು ಎಂದು ಹೇಳಲ್ಪಡುವ ಜನರು ಕೋಟಿಗಟ್ಟಲೆಯಾಗಿದ್ದಾರೆ. ಇವರಿಗೆ ಚಂಡಾಲರೆಂದು ವಾಡಿಕೆಯುಂಟು. ಶೂದ್ರನಿಗೆ ಬ್ರಾಹ್ಮಣ ಸ್ತ್ರೀಯಲ್ಲಿ ಹುಟ್ಟಿದವರು ಚಂಡಾಲರೆಂದು ಧರ್ಮಶಾಸ್ತ್ರಗಳು ನಿರ್ಣಯಿಸಿವೆ. ಪೂರ್ವಕಾಲದಲ್ಲಿ "ಶ್ವಪಾಕರು" ಎಂಬ ನಿಂದ್ಯವಾದ ಹೆಸರಿನಿಂದ ಕರೆಯಲ್ಪಡುತ್ತಿದ್ದ ಚಂಡಾಲರು ಸ್ವಪ್ರಯೋಜನಕ್ಕಾಗಿ ಉತ್ತಮ ವರ್ಣಗಳಲ್ಲಿ ನಿರಾತಂಕವಾಗಿ ಸೇರಿಕೊಳ್ಳುತ್ತಿದ್ದಂತೆ ದೃಷ್ಟಾಂತಗಳು ಕಂಡುಬರುತ್ತಿವೆ. ವ್ಯಾಸನ ತಾಯಿಯೂ, ಪರಾಶರನೂ ನೀಚಸ್ತ್ರೀಯಿಂದ ಹುಟ್ಟಿ ಬ್ರಾಹ್ಮಣರಾದರು. ವೇಶ್ಯೆಗೆಹುಟ್ಟಿ ನೀಚಜಾತಿಸ್ತ್ರೀಯನ್ನು ಮದುವೆಯಾದ ವಸಿಷ್ಠನು ಬ್ರಹ್ಮರ್ಷಿಯಾದನು. ಹಿಂದೂಗಳು ಉಪಾಸಿಸುವ ದೇವತೆಗಳ ಸಮೂಹದಲ್ಲಿ ಮಾತಂಗಕನ್ಯೆಯೊಬ್ಬಳು ಸೇರಿದ್ದಾಳೆ. ಹರಿಶ್ಚಂದ್ರನ ಸಭೆಯಲ್ಲಿ ಮಾತಂಗಕನ್ಯೆಯರು ನರ್ತನವನ್ನು ಮಾಡಿ ಮೆಚ್ಚಿಕೆಗೊಂಡರು. ಜನ್ಮತಃ ಕ್ಷತ್ರಿಯನಾಗಿದ್ದು ಬಳಿಕ ಬ್ರಾಹ್ಮಣ್ಯವನ್ನು ಪಡೆದ ವಿಶ್ವಾಮಿತ್ರನು ಮಾತಂಗಕನ್ಯೆಯರನ್ನು ತನ್ನ ಅಭಿಮಾನಪುತ್ರಿಕೆಯರನ್ನಾಗಿ ಅಂಗೀಕರಿಸಿದನು. ಸ್ಮಶಾನಾಧಿಕಾರಿಯಾದ ವೀರಬಾಹುವಿನಿಂದ ವಿಕ್ರೀತನಾದ ಹರಿಶ್ಚಂದ್ರನಿಗೆ ವರ್ಣಭ್ರ

ತೆಯು ಪ್ರಾಪ್ತವಾಗಲಿಲ್ಲ. ದಿಕ್ಕಿಲ್ಲದ ಹೆಣಗಳನ್ನು ಚಂಡಾಲರು ಹೊರಬೇಕೆಂದು ಧರ್ಮಶಾಸ್ತ್ರವು ಹೇಳುತ್ತದೆ. ವೈಷ್ಣವರ ಆಳ್ವಾರುಗಳಲ್ಲಿ ಕೆಲವರು ಮಾದಿಗರು. ತಿರುವಳ್ಳೂರಿನಲ್ಲಿ ಮಾದಿಗನಿಗೆ ಹುಟ್ಟಿದ ಕಪಿಲನು ಋಷಿಸಂಪ್ರದಾಯಸ್ಥನೆಂದು ತಿಳಿಯಲ್ಪಡುತ್ತಾನೆ. ಮಾರೋಪಂತ ಎಂಬ ಮಹಾರಾಷ್ಟ್ರ ದೇಶಭಕ್ತನು ಚಂಡಾಲ ಸ್ತ್ರೀಯನ್ನು ಮದುವೆಯಾಗಿದ್ದರೂ ಭಕ್ತಸಮೂಹದಲ್ಲಿ ಸೇರಿಸಲ್ಪಟ್ಟನು. ಚಿದಂಬರದಲ್ಲಿ ಮಾದಿಗರ ಕೈಂಕರ್ಯವು ಪ್ರಸಿದ್ಧವಾಗಿಯೇ ಇದೆ. ಮೈಸೂರಿಗೆ ಸೇರಿದ ಮೇಲುಕೋಟೆಯ ವೈಷ್ಣವದೇವಾಲಯದಲ್ಲಿ ವರ್ಷಕ್ಕೆ ೩ ದಿವಸ ಮಾದಿಗರು ದೇವಾಲಯದಲ್ಲಿ ಪ್ರವೇಶಿಸಿ, ಪ್ರಸಾದ ದಾನಪರಿಗ್ರಹಾದಿಗಳನ್ನು ಮಾಡುವರೆಂದು ಪ್ರಸಿದ್ಧಿಯುಂಟು. ಏಕನಾಥಸಾಧುವು ತನ್ನ ಮನೆಯಲ್ಲಿ ಬ್ರಾಹ್ಮಣ ಸಮಾರಾಧನೆ ಮಾಡಿದಾಗ ಮೊದಲು ಹೊಲೆಯ ಮಾದಿಗರಿಗೇ ಉಣಬಡಿಸುತ್ತಿದ್ದನು. ಪಂಡರಪುರದ ದೇವಾಲಯದಲ್ಲಿನ ಪೂಜಾವಿಗ್ರಹಗಳೊಳಗೆ ಹೊಲೆಮಾದಿಗರ ವಿಗ್ರಹಗಳೂ ಕೆಲವು ಇರುವುವು.

ಈ ದೇಶದಲ್ಲಿ ರಾಜ್ಯಾಧಿಕಾರಮಾಡಿದವರೊಳಗೆ ಚತುರ್ವರ್ಣದವರು ಮಾತ್ರವೇ ಅಲ್ಲದೆ ಹೀನಜಾತಿಯವರೂ ಇದ್ದರು. ಪಶ್ಚಿಮದೇಶದಲ್ಲಿರುವ ಮಲಯಾಳದ ತೀರದಲ್ಲಿ ಸ್ವಲ್ಪ ಭಾಗವನ್ನು ತುಳುವದೇಶವೆನ್ನುವರು. ೧ ಸಾವಿರ ವರ್ಷಗಳಹಿಂದೆ ಉತ್ತರಕನ್ನಡ ದೇಶದ ಬನವಾಸಿಯಿಂದ ಜೈನರಾದ ಕದಂಬರಾಜರು ಬಂದು, ತುಳುವ ದೇಶದ ರಾಜರಾದ ಅಂತ್ಯಜರನ್ನು ಬಾಧಿಸುತ್ತಿದ್ದರು. ಆ ಕದಂಬರಾಜರಲ್ಲಿ ಮಯೂರವರ್ಮನೇ ಮುಖ್ಯನು. ಆಗ ಹಬಶಿಕನೆಂಬ ರಾಜನು ತುಳುವ ದೇಶಕ್ಕೆ ಸಹಾಯಕನಾಗಿ, ಕಾಸರಗೋಡು ರಾಜನ ಸೈನ್ಯದ ಸಹಾಯದಿಂದ ಮಯೂರವರ್ಮನನ್ನು ಓಡಿಸಿದನು. ಸ್ವಲ್ಪಕಾಲದಮೇಲೆ ಮಯೂರವರ್ಮನ ಮಗ ಲೋಕಾದಿತ್ಯನು ಗೋಕರ್ಣದಿಂದ ದೊಡ್ಡ ಸೈನ್ಯದೊಡನೆ ಬಂದು, ಹಬಶಿಕನನ್ನು ಓಡಿಸಿ, ಪಂಚಮರಿಗಿಂತಲೂ ನೀಚಜಾತಿಯವನಾದ ಆ ಹಬಶಿಕನ ಕುಟುಂಬದ ಒಂದು ಹೆಣ್ಣನ್ನು ಮದುವೆಯಾಗಿ ಅಲ್ಲೇ ವಾಸವಾಗಿದ್ದನು. ಅವರಿಗೆ ಬ್ರಾಹ್ಮಣರು ಮಂತ್ರಿಗಳಾಗಿದ್ದರು. ಹೀನಜಾತಿಯವರೆಂದು ತಿಳಿಯಲ್ಪಡುತ್ತಿದ್ದ ಆ ಹಬಶಿಕನ ಜಾತಿಯವರು ಬಾಣಿ ಮಂಗಳೂರು ಸಮೀಪದ ನಂದವರದಿಂದ ದೊಡ್ಡ ಸೇನೆಯೊಡನೆ ಬಂದು, ಲೋಕಾದಿತ್ಯನನ್ನು ಜಯಿಸಿ, ಅವನನ್ನೂ ಅವನ ಜನರನ್ನೂ ತಮ್ಮ ದೇಶದಿಂದ ಓಡಿಸಿ, ತಮ್ಮ ಪ್ರಭುತ್ವವನ್ನು ಮರಳಿ ಸ್ಥಾಪಿಸಿಕೊಂಡರು. ಬಳಿಕ ಇನ್ನೂರು ವರ್ಷಗಳವರೆಗೆ ಆ ವಂಶೀಯರೇ ತುಳುವ ರಾಜ್ಯವನ್ನು ನಿರಾತಂಕವಾಗಿ ಪರಿಪಾಲಿಸುತ್ತಿದ್ದರು. ಆಗ ಮಯೂರವರ್ಮನ ವಂಶಿಕನಾದ ಕಾಮದೇವನೆಂಬುವನು ಬನವಾಸಿಯಿಂದ ಮತ್ತೆ ದಂಡೆತ್ತಿ ಬಂದು, ತುಳುವರಾಜ್ಯವನ್ನು ಜಯಿಸಿ, ಅಲ್ಲಿನ ಮೂಲನಿವಾಸಿಗಳಾದ ಕೊರವರನ್ನು ಹೀನಸ್ಥಿತಿಗೆ ತಂದನು. ಅಲ್ಲಿನ ಪುರಾತನವಾದ ಅರಮನೆಯ ಅವಶೇಷವು ಈಗಲೂ ನಂದವರಮಿನಲ್ಲಿ ಕಾಣುತ್ತಿರುವುದು. ಅಂತಹ ಕೀಳುಜನರಲ್ಲೇ ಕನಕನೆಂಬ ಸುಪ್ರಸಿದ್ಧನಾದ ಕವಿಯು ಹುಟ್ಟಿದ್ದನು. ಆದುದರಿಂದ ಈ ದೇಶದಲ್ಲಿ ಚಂಡಾಲರೆಂದು ಕರೆಯಲ್ಪಡುತ್ತಿರುವ ಜನರು ರಾಜ್ಯಭಾರವನ್ನು ಮಾಡಿದುದುಕೂಡ ಉಂಟು.

ದೇಶವನ್ನಾಳಿದ ರಾಜರಿಗೂ, ಜ್ಞಾನಪ್ರದರಾದ ಕವಿಗಳಿಗೂ, ಮೋಕ್ಷಮಾರ್ಗಪ್ರದರ್ಶಕರಾದ ಮುನಿಗಳಿಗೂ ಸುಖಜೀವನ ಮಾರ್ಗಸೂಚಕರಾದ ಲೌಕಿಕರಿಗೂ ಸಹ ಸೇರಿದ್ದ ಚಂಡಾಲಜಾತಿಯು ಈಗ ದೂಷ್ಯಸ್ಥಿತಿಗೆ ಬಂದಿರುತ್ತದೆ. "ಚಂಡಾಲೋಜಾಯತೇಯಜ್ಞಕಾರಣಾಚ್ಛೂದ್ರಭಿಕ್ಷಿತಾತ್" ಎಂಬ ಯಾಜ್ಞವಲ್ಕ್ಯ ವಚನಪ್ರಕಾರ ಶೂದ್ರನನ್ನು ಯಾಚಿಸಿ, ಧನವನ್ನು ತಂದು, ಯಜ್ಞವನ್ನು ಮಾಡಿದ ಬ್ರಾಹ್ಮಣನು ಸಂಕರಜಾತಿಯಲ್ಲಿ ಹುಟ್ಟುವನೆಂದು ಅವರಭಿಪ್ರಾಯವೇಹೊರತು ಈ ಕಾಲದ ಚಂಡಾಲನಾಗಿ ಹುಟ್ಟುವನೆಂದು ಅಲ್ಲ. ಅಪ್ರಮಾಣಿಕನೂ-ಕಳ್ಳನೂ-ಮದ್ಯಪಾನಮತ್ತನೂ-ದ್ರೋಹಿಯೂ-ವಿಶ್ವಾಸಘಾತಕನೂ-ಕೊಳಕನೂ ಸಹ ಹೊಲೆಯನೆಂದು ನಿಂದಿಸಲ್ಪಡುವ ವಾಡಿಕೆಯು ನಮ್ಮಲ್ಲೆಲ್ಲಾ ಸಾಧಾರಣವಾಗಿ ಉಂಟು. ಅಂತ್ಯಜರಾದ ಚಂಡಾಲರಿಗೆ ಪಂಚಮರೆಂಬ ಹೆಸರನ್ನು ಪ್ರಭುತ್ವದವರು ಕೊಟ್ಟರು. ಈ ಪಂಚಮರ ದುರವಸ್ಥೆಯು ಅವರ್ಣನೀಯವಾಗಿದ್ದಿತು. ಈಗಲೂ ಎಷ್ಟೋ ಕಡೆ ಅವರ ಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಅವರ ವಾಸಸ್ಥಲವನ್ನು ನೋಡಿದರೂ, ಅವರ ಕಷ್ಟಗಳನ್ನು ನೋಡಿದರೂ, ಅವರು ತಿನ್ನುವ ಪದಾರ್ಥಗಳನ್ನು ಪರಿಶೀಲಿಸಿದರೂ, ಮನುಷ್ಯಧರ್ಮವುಳ್ಳವರೆಲ್ಲರಿಗೂ ಕನಿಕರ ಹುಟ್ಟದೆ ಹೋಗುವುದಿಲ್ಲ. ಎಂಥ ದುರವಸ್ಥೆಯನ್ನು ತೊಲಗಿಸುವುದಕ್ಕೂ ತೊಲಗಿಸಿಕೊಳ್ಳುವುದಕ್ಕೂ ವಿದ್ಯೆಯೇ ಪರಮೌಷಧವಾಗಿರುವುದು. ಆದುದರಿಂದ ಈ ಅಂತ್ಯಜರಿಗೆ ವಿದ್ಯಾದಾನವನ್ನು ಮಾಡಿದಪಕ್ಷದಲ್ಲಿ ಸ್ವಗೌರವವೂ, ನ್ಯಾಯವರ್ತನವೂ, ಪಾರಿಶುದ್ಧ್ಯವೂ, ಸ್ವಾಭಿವೃದ್ಧಿಪ್ರಯತ್ನವೂ, ತಮ್ಮಷ್ಟಿಗೆತಾವೇ ಉಂಟಾಗುವುವೆಂದು ತಿಳಿದು, ಪ್ರಭುತ್ವದವರೂ, ಮಿಷನರಿಗಳೂ, ದಿವ್ಯಜ್ಞಾನಸಮಾಜದವರೂ, ವಿವೇಕಾನಂದ ರಾಮಕೃಷ್ಣ ಸಮಾಜಿಕರೂ, ಆರ್ಯ ಸಮಾಜಿಕರೂ, ಬ್ರಹ್ಮಸಮಾಜಿಕರೂ ಸಹ ಪಂಚಮರ ವಿದ್ಯಾಭಿವೃದ್ಧಿಗಾಗಿ ಪಾಟುಪಡುತ್ತಲಿದ್ದಾರೆ. ಬರೋಡಾ ಮಹಾರಾಜರವರಂಥ ಸ್ವದೇಶಸಂಸ್ಥಾನಾಧಿಪರುಗಳು ಕೂಡ ಮಾಡುತ್ತಿರುವ ಪ್ರಯತ್ನಗಳು ಶುಭಸೂಚಕಗಳಾಗಿವೆ. ಅಗ್ರವರ್ಣದವರಿಗೂ ಪಂಚರಿಗೂ ಒಂದೇರೀತಿಯಾದ ಶಾಸನಗಳನ್ನೇರ್ಪಡಿಸಿದರೆ, ಪ್ರಭುತ್ವದವರ ಮೇಲೆ ಪಕ್ಷಪಾತಬುದ್ಧಿಯುಳ್ಳವರೆಂಬ ಆಕ್ಷೇಪವನ್ನು ಹೊರಿಸುವುದಕ್ಕೆ ಅವಕಾಶವಿರುವುದಿಲ್ಲ. ರೆವಿನ್ಯೂ, ಕ್ರಿಮಿನಲ್, ಸಿವಿಲ್‌ಕೋರ್ಟುಗಳೂ, ಟಪ್ಪಾಲು ಟೆಲಿಗ್ರಾಫು ಆಫೀಸುಗಳೂ ಸಹ ಬ್ರಾಹ್ಮಣರಿಗೂ ಪಂಚಮರಿಗೂ ಸಹ ಸಾಮಾನ್ಯವೇ. ಶಿಕ್ಷೆಗಳೂ ಕಂದಾಯಗಳೂ ಸಹ ಉಭಯರಿಗೂ ಸಮನಾಗಿಯೇ ಇವೆ. ಪಂಚಮರ ಪಾಠಶಾಲೆಗಳಿಗಾಗಿಯೂ ಸರ್ಕಾರದವರು ಹಣವನ್ನು ವೆಚ್ಚಮಾಡುತ್ತಾರೆ. ಕರ್ನಲ್ ಆಲ್ಕಾಟ್‌ರವರು ಪಂಚಮರಿಗೆ ಪಾಠಶಾಲೆಯನ್ನೇರ್ಪಡಿಸಿ, ದಿವ್ಯಜ್ಞಾನಸಮಾಜದವರ ಗಮನವನ್ನು ಅತ್ತ ತಿರುಗಿಸಿದರು. ತಾನು ಬದುಕಿದ್ದರೆ ಪಂಚಮರಲ್ಲಿ ೪ ಮಂದಿಯನ್ನಾದರೂ ಬ್ರಾಹ್ಮಣರನ್ನಾಗಿ ಮಾಡಿ ದೇಹವನ್ನು ಬಿಡುವೆನೆಂದು ವಿವೇಕಾನಂದ ಸ್ವಾಮಿಗಳು ಪ್ರತಿಜ್ಞೆಯನ್ನು ಮಾಡಿದ್ದರು. ಪಂಚಮರಿಗೆ ವಿದ್ಯಾದಾನವನ್ನು ಮಾಡಿ, ಅವರನ್ನು ಗುಂಪುಗುಂಪಾಗಿ ಕ್ರೈಸ್ತಮತಕ್ಕೆ ಸೇರಿಸಿಕೊಂಡು, ಮಿಷನರಿಗಳು ಅವರನ್ನು ಹಿಂದು ಮತದಿಂದ ತೊಲಗಿಸುತ್ತಿದ್ದಾರೆ. ಪಂಚಮರೆಲ್ಲರೂ ಕೆಲವು ಕಾಲದೊಳಗಾಗಿ ಕ್ರೈಸ್ತರಾಗುವುದು ನಿಜವೆಂದು ನಂಬಿ, ಅವರಂತೆ ಶೂದ್ರರನ್ನುಕೂಡ ತಮ್ಮಲ್ಲಿ ಸೇರಿಸಿಕೊಳ್ಳುವುದಕ್ಕೆ ಪ್ರಯತ್ನಿಸುವುದು ಅವಶ್ಯಕವೆಂದು ಮದ್ರಾಸಿನ ಬಿಷಪರು ಕೆಲವು ದಿನಗಳ ಹಿಂದೆ ಒಂದುಕಡೆ ಉಪನ್ಯಾಸ ಮಾಡಿದರು. ಬಂಗಾಳಾದೇಶದಲ್ಲಿ ನಾಮಶೂದ್ರರೆಂಬವರು ಅನೇಕರಿದ್ದಾರೆ. ಅವರು ಅಂತ್ಯಜರು. ಸ್ವಪ್ರಯತ್ನದಿಂದ ಅವರು ಗೌರವಸ್ಥಿತಿಗೆ ಬಂದು, ಈಗ ಶೂದ್ರರನ್ನೂ ಧಿಕ್ಕರಿಸುತ್ತಿದ್ದಾರೆ. ಬಂಗಾಳಾದೇಶದ ಪಂಚಮರಲ್ಲಿ ಬಹುಭಾಗದವರು ಎಷ್ಟೋಕಾಲಕ್ಕೆ ಹಿಂದೆಯೇ ಮಹಮ್ಮದೀಯ ಮತದಲ್ಲಿ ಸೇರಿಹೋದರು. ಬಂಗಾಳಾ ವಿಭಜನವಾದನಂತರ ಅಲ್ಲಿ ಉಂಟಾದ ಹಿಂದೂ ಮಹಮ್ಮದೀಯರ ಹೋರಾಟದಲ್ಲಿ ಭುಜಬಲಪರಾಕ್ರಮವುಳ್ಳ ನಾಮಶೂದ್ರರು ತಟಸ್ಥರಾಗಿದ್ದುದಕ್ಕೆ ಹಿಂದೂಗಳು ಅವರ ವಿಷಯದಲ್ಲಿ ಬಹುಕಾಲದಿಂದ ತೋರ್ಪಡಿಸುತ್ತ ಬಂದ ನಿರಾದರಣೆಯೇ ಕಾರಣವೆಂದು ಪ್ರಾಜ್ಞರು ಊಹಿಸಿದರು. ಅಂಥ ಗತಿಯೇ ದೇಶದ ಎಲ್ಲ ಭಾಗದಲ್ಲಿಯೂ ಸಮಯಬಿದ್ದಾಗ ಸಂಭವಿಸುವುದು ನಿಜ. ಆದುದರಿಂದ ನಮ್ಮ ಕ್ಷೇಮವನ್ನು ಪರ್ಯಾಲೋಚಿಸಿ, ದೇಶದ ಮೇಲ್ಮೆಯ ಚಿಂತೆಯನ್ನು ಮರೆಯದೆ, ದಯಾಸ್ವಭಾವವನ್ನು ಬಿಡದೆ, ಶರೀರದ ಪ್ರತಿಯೊಂದು ಅಂಗವೂ ಪ್ರಧಾನವಾದುವುಗಳೇ ಎಂಬ ತಿಳಿವಿಕೆಯನ್ನು ಕಳಕೊಳ್ಳದೆ, ಸಂಘಾಭಿವೃದ್ಧಿಗೆ ಪಂಚಮರೂ ಮುಖ್ಯರೇ ಎಂದು ನಂಬಿ, ಅವರನ್ನು ಸೃಷ್ಟಿಸುವುದರಲ್ಲಿಯೂ ಭಗವಂತನಿಗೆ ಮಹತ್ತರವಾದ ಸಂಕಲ್ಪವಿದ್ದಿತೆಂಬುದರ ಗುರ್ತನ್ನು ಅರಿತು ನಾವು ಅವರನ್ನು ಕೈಬಿಡದೆ ಮುಂದಕ್ಕೆ ತರಬೇಕು. ಹಾಗೆ ಮಾಡದೆ ನಾವು ಸುಮ್ಮನೆ ಇದ್ದುಬಿಟ್ಟರೂ ಪಂಚಮರು ವೃದ್ಧಿಗೆ ಬಂದು, ತಮ್ಮ ಹಕ್ಕುಗಳನ್ನು ಸ್ಥಿರಪಡಿಸಿಕೊಂಡು, ನಮ್ಮೊಡನೆ ಸಮಾನರಾಗುವುದೇನೋ ನಿಜ. ಅವರು ಪಂಚಮರಾಗಿರುವವರೆಗೂ ನಾವು ಅವರನ್ನು ನಮ್ಮ ಸಮೀಪಕ್ಕೆ ಸೇರಗೊಡಿಸೆವು. ಅವರು ಮತಾಂತರವನ್ನು ಹೊಂದಿದ ಮಾತ್ರದಿಂದಲೇ ಅವರು ನಮ್ಮ ಸತ್ಕಾರಕ್ಕೆ ಅರ್ಹರಾಗುತ್ತಾರೆ. ಅನೇಕ ಶಾಲೆಗಳಲ್ಲಿ ಉಪಾಧ್ಯಾಯರಾಗಿರುವ ಕ್ರೈಸ್ತರುಗಳು ಪೂರ್ವದಲ್ಲಿ ಹೊಲೆಯ ಮಾದಿಗರಾಗಿದ್ದವರೇ. ಅನೇಕ ದ್ವಿಜಬಾಲಬಾಲಿಕೆಯರುಗಳು ಅವರ ಬಳಿಯಲ್ಲೇ ವಿದ್ಯಾಭ್ಯಾಸ ಮಾಡುತ್ತಾರೆ. ಆ ಉಪಾಧ್ಯಾಯ ಉಪಾಧ್ಯಾಯಿನಿಯರೇ ಹಿಂದೂಮತದ ತಮ್ಮ ಪೂರ್ವಕುಲದಲ್ಲೇ ಇರುತ್ತಿದ್ದರೆ ಅವರು ೧ ಕಾಸನ್ನೂ ಬಾಳುತ್ತಿರಲಿಲ್ಲವಲ್ಲವೆ? ಈಗಲಾದರೊ ಪಂಚಮರುಗಳು ವಕೀಲರಾಗಿಯೂ, ವೈದ್ಯರಾಗಿಯೂ, ಉಪಾಧ್ಯಾಯರಾಗಿಯೂ, ಅನ್ಯಮತಬೋಧಕರಾಗಿಯೂ ಇದ್ದಾರೆ. ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಫಲಾಹಾರಗಳನ್ನು ಒದಗಿಸಿಕೊಡುತ್ತಲಿದ್ದಾರೆ. ಕೆಲವು ಪಟ್ಟಣಗಳಲ್ಲಿ ಮ್ಯು॥ ಕೌನ್ಸಿಲರುಗಳಾಗಿಯೂ ಇದ್ದಾರೆ. ಅವರ ಬುದ್ಧಿಕೌಶಲವು ಉತ್ತಮವರ್ಣೀಯರಂತೆಯೇ ಇರುವುದು ಪ್ರತ್ಯಕ್ಷವಾಗಿದೆ. ಇಷ್ಟಾಗಿದ್ದರೂ ನಾವು ಅವರನ್ನು ಮೇಲಕ್ಕೆ ಹತ್ತಿಸಿ, ಆದರಿಸಿ, ಅವರನ್ನು ನಮ್ಮ ಸಹೋದರರನ್ನಾಗಿ ತಿಳಿದು, ಅವರನ್ನು ಕ್ರಮವಾಗಿ ಸೇರಿಸಿಕೊಳ್ಳದಿದ್ದರೆ ನಮ್ಮ ದೇಶಕ್ಕೆ ನಾವೇ ಬುದ್ಧಿಪೂರ್ವಕವಾಗಿ ಮುಪ್ಪನ್ನು ತಂದಿಕ್ಕಿದವರಾಗುವೆವು.

ಪೂರ್ವಾಚಾರಪರಾಯಣರೂ, ನವನಾಗರಿಕರೂ ಸಹ ಎಷ್ಟೋಮಂದಿ ಪಂಚಮರ ಸ್ಥಿತಿಯನ್ನು ಸುಧಾರಿಸಬೇಕಾದ ಕಾಲವೊದಗಿರುವುದೆಂದು ಏಕಕಂಠ್ಯದಿಂದ ನುಡಿಯುತ್ತಿರುವರು. ಪಶ್ಚಿಮತೀರದ ಕೆಲ ಮಠಾಧಿಪತಿಗಳು ಸಹ ತಾವು ಈ ವಿಷಯದಲ್ಲಿ ಅನುಕೂಲಾಭಿಪ್ರಾಯವುಳ್ಳವರಾಗಿದ್ದೇವೆಂದು ಬಹಿರಂಗವಾಗಿ ತಿಳಿಯಪಡಿಸಿರುವರು. ಪಂಚಮರ ಹೀನಸ್ಥಿತಿಯನ್ನು ಪ್ರತಿಯೊಬ್ಬರಿಗೂ ತಿಳುಹಿಸಿ, ಅವರ ಮನಸ್ಸಿನಲ್ಲಿ ಕನಿಕರವೂ ಆದರವೂ ಹುಟ್ಟುವಂತೆ ಮಾಡುವುದಕ್ಕೆ ದೇಶದಲ್ಲಿ ಹಲವುಕಡೆ ಸಭೆಗಳು ಸ್ಥಾಪಿಸಲ್ಪಟ್ಟಿವೆ. ವಿದ್ಯಾಭ್ಯಾಸ ಮಾಡುವ ಪಂಚಮರ ಬಾಲರಿಗೆ ಬಹುಮಾನ ಕೊಡುವುದಕ್ಕೆ ಏರ್ಪಾಟಾಗಿದೆ. ಮಹಾರಾಷ್ಟ್ರ ದೇಶದಲ್ಲಿರುವ ಇಂಥ ಸಭೆಗಳಿಗೆ ಪಂಚಮರ ದಂಪತಿಗಳನ್ನು ಬರಮಾಡಿಕೊಂಡು, ಅವರ ಸ್ತ್ರೀಯರಿಗೆ ದೇಶೀಯ ಮರ್ಯಾದೆಯಂತೆ ಕುಂಕುಮದ ಬೊಟ್ಟನಿಟ್ಟು ತಾಂಬೂಲವನ್ನು ಕೊಟ್ಟು ಸತ್ಕರಿಸುತ್ತಲಿದ್ದಾರೆ. ಪಂಚಮರ ವಿವಾಹಮಹೋತ್ಸವಗಳಲ್ಲಿ ಅವರನ್ನು ಬ್ರಾಹ್ಮಣರ ಬೀದಿಯಲ್ಲಿ ಮೆರವಣಿಗೆ ಬರುವುದಕ್ಕೆ ಅವಕಾಶವಿತ್ತು, ಅವರು ಕೊಡುವ ಅರಿಸಿನ ಕುಂಕುಮಗಳನ್ನು ಶೂದ್ರರಿಂದ ಪರಿಗ್ರಹಿಸುವ ರೀತಿಯಲ್ಲೇ ನಿರಾಕ್ಷೇಪವಾಗಿ ಉತ್ತಮ ವರ್ಣೀಯರು ಪರಿಗ್ರಹಿಸುತ್ತಿದ್ದಾರೆ. ಸ್ವಲ್ಪ ಶುಭ್ರವಾಗಿಯೂ ಶುಚಿಯಾಗಿಯೂ ಇದ್ದರೆ ಅಂಥ ಚಂಡಾಲರನ್ನು ನಮ್ಮ ಮನೆಗೆ ಬರಗೊಡಿಸಿ, ಇತರ ಶೂದ್ರರೊಡನೆಯೂ ಕ್ರೈಸ್ತರೊಡನೆಯೂ ಮಾತನಾಡುವಂತೆಯೇ ಇವರೊಡನೆಯೂ ಮಾತನಾಡಿ ಕಳುಹಿಸುವುದೇ ಅವರಿಗೆ ದೊಡ್ಡ ಸತ್ಕಾರಮಾಡಿದಂತಾಗುವುದು. ಹಿಂದಿನ ಮತಾಚಾರ್ಯರಲ್ಲಿ ರಾಮಾನುಜಾಚಾರ್ಯರೂ, ವೀರಶೈವ ಮತಜೀರ್ಣೋದ್ಧಾರಕನಾದ ಬಸವೇಶನೂ ಉದಾತ್ತಚಿತ್ತದಿಂದಲೂ ಘನತರವಾದ ದೀರ್ಘಾಲೋಚನೆಯಿಂದಲೂ, ಅಂತ್ಯಜರ ಉದ್ಧಾರಕ್ಕೆ ಪ್ರಶಸ್ತವಾದ ಮೇಲುಪಂಕ್ತಿಯನ್ನು ಹಾಕಿ, ತಾವೇ ನಡೆದು ತೋರಿಸಿದರು. ಇತರ ವಿಷಯದಲ್ಲೆಲ್ಲ ತಮ್ಮ ತಮ್ಮ ಮೂಲಪುರುಷರ ಹಜ್ಜೆಯನ್ನು ತುಳಿಯುವ ಆ ಆ ಮತದ ಈಗಿನ ಜನರು ಈ ವಿಷಯದಲ್ಲಿ ಮಾತ್ರ ಅವರಿಗೆ ದ್ರೋಹಿಗಳಾಗಿ ವರ್ತಿಸುವಂತೆ ಕಾಣುತ್ತಿರುವರು. ಈ ಪೂರ್ವೋಕ್ತ ವಿಷಯಗಳನ್ನೆಲ್ಲಾ ಪರ್ಯಾಲೋಚನೆಗೆ ತಂದುಕೊಂಡು ದೇಶದ ಭವಿಷ್ಯದನಿಷ್ಟವನ್ನು ನಿವಾರಣೆ ಮಾಡುವ ಸಂಕಲ್ಪದಿಂದಲಾದರೂ ಪಂಚಮರ ವಿಷಯದಲ್ಲಿ ಸ್ವಲ್ಪಸ್ವಲ್ಪವಾಗಿ ನಾವು ಉದಾರಚಿತ್ತವನ್ನೂ ಆದರಣವನ್ನೂ ತೋರಿಸಿ, ಮಾರ್ಗಪ್ರದರ್ಶನ ಮಾಡುತ್ತ ಬಂದರೆ, ಕಾಲೋಚಿತವಾದ ಪುರೋವೃದ್ಧಿಯನ್ನು ಅವರೇ ಹೊಂದಿಕೊಳ್ಳುವುದಕ್ಕೆ ಸ್ವಲ್ಪಕಾಲದೊಳಗಾಗಿಯೇ ಸಮರ್ಥರಾಗುವರು.

ಚೆನ್ನಗಿರಿಯ ಕೈಗಾರಿಕೆಯ–ವ್ಯವಸಾಯದ–ಮತ್ತೂ ದನಗಳ ಪ್ರದರ್ಶನ.

ಈ ಪ್ರದರ್ಶನವು ಅಲ್ಲಿನ ತಾ॥ ಅಮಲ್ದಾರರಾದ ಮ॥ ನರಸಿಹ್ಮಶಾಸ್ತ್ರಿಗಳ ಪ್ರೋತ್ಸಾಹದಿಂದಲೂ ತಾಲ್ಲೂಕಿನ ಪ್ರಮುಖರ ಮುತವರ್ಜಿಯಿಂದಲೂ ಇದೇ ಫೆಬ್ರುವರಿ ತಾ॥ ೧೦ ರಿಂದ ೧೪ ರವರೆಗೆ ಪ್ರಜೆಗಳ ಉಪಯೋಗಾರ್ಥವಾಗಿ ನಡೆಯುವಂತೆ ಏರ್ಪಡಿಸಲ್ಪಟ್ಟಿರುವುದು. ಇದರ ಕಾರ್ಯನಿರ್ವಾಹಕ್ಕೆ ಒಂದು ಕಮಿಟಿಯು ಏರ್ಪಟ್ಟಿದೆ. ಅವರು ಅದರ ಸಂಬಂಧವಾದ ಪ್ರಕಟನಗಳನ್ನು ನಮಗೆ ಕಳುಹಿಸಿಕೊಟ್ಟಿರುತ್ತಾರೆ. ಎಲ್ಲವನ್ನೂ ಪ್ರಕಟಿಸುವುದಕ್ಕೆ ಸ್ಥಲವು ಸಾಲದುದರಿಂದ ಏರ್ಪಾಟಿನ ಮುಖ್ಯಾಂಶವನ್ನು ಇಲ್ಲಿ ವಿವರಿಸಿ, ಪ್ರಜಾಪ್ರಮುಖರೇ ತಮ್ಮ ಏಳ್ಗೆಗೆ ಸಾಧಕವಾದ ಇಂಥ ಕಾರ್ಯಗಳಲ್ಲಿ ಮುಂದಾಗುತ್ತ ಬರುತ್ತಿರುವುದನ್ನು ಕಂಡು ಸಂತೋಷಿಸಿ, ಅವರು ಹಿಡಿದ ಕಾರ್ಯದಲ್ಲಿ ಜಯಶೀಲರಾಗಲೆಂದು ಕೋರುತ್ತೇವೆ.

ಈ ಪ್ರದರ್ಶನಕ್ಕೆ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಎಲ್ಲ ತಾಲ್ಲೂಕುಗಳಿಂದಲೂ ಕೈಗಾರಿಕೆ ವ್ಯವಸಾಯಕ್ಕೆ ಸಂಬಂಧಪಟ್ಟ ಪದಾರ್ಥಗಳನ್ನೂ ದನ ಕರು ಹೋರಿ ಎಮ್ಮೆಗಳನ್ನೂ ಸಹ ಪ್ರದರ್ಶನಾರ್ಥವಾಗಿ ಯಾರುಬೇಕಿದ್ದರೂ ಸೆಕ್ರೆಟರಿಯವರ ಹೆಸರಿಗೆ ಕಳುಹಿಸಬಹುದು. ದವಸಗಳು ವ್ಯವಸಾಯದ ಸಾಧನಗಳು ಶಿಲ್ಪವಸ್ತುಗಳು ಮೊದಲಾದುವೆಲ್ಲಾ ಫೆಬ್ರುವರಿ ತಾ॥ ೮ ರೊಳಗೂ, ಫಲ ಪುಷ್ಪ ಮೊದಲಾದುವುಗಳು ತಾ॥ ೧೧ ರ ಸಾಯಂಕಾಲದೊಳಗೊ ತಲುಪಿಸಿರಬೇಕು.

ದನಗಳ ಪ್ರದರ್ಶನವು ಫೆಬ್ರುವರಿ ತಾ॥ ೧೦ ರಿಂದ ೧೪ ರ ವರೆಗೆ ನಡೆಯುವುದು. ಬಂದ ದನಗಳಿಗೆ ಸ್ಥಲಾನುಕೂಲ್ಯವನ್ನು ಮಾತ್ರ ಕಮಿಟಿಯವರು ಮಾಡಿಕೊಡುವರು. ಪ್ರದರ್ಶನೀಯ ವಸ್ತುಗಳನ್ನು ತಂದಿರಿಸಿ, ಜೋಪಾನ ಮಾಡಿ, ಪ್ರದರ್ಶನವು ಮುಗಿದುಹೋದನಂತರ ಹಿಂತಿರುಗಿ ತೆಗೆದುಕೊಂಡು ಹೋಗುವ ಕೆಲಸವು ಆಯಾ ಪದಾರ್ಥಗಳ ಯಜಮಾನರಿಗೆ ಸೇರಿರುವುದು. ಉತ್ತಮವಾದ ವಸ್ತುಗಳಿಗೆ ಪಂಚಾಯಿತರು ನಿಷ್ಕರ್ಷಿಸಿದ ಪ್ರಕಾರ ಬಹುಮಾನರೂಪವಾಗಿ ಪದಕಗಳನ್ನೂ ಧನವನ್ನೂ ಕೊಡುವುದಕ್ಕೆ ಏರ್ಪಡಿಸಿರುವರು. ದುಡ್ಡನ್ನು ಕೊಡದೆ ಯಾರುಬೇಕಿದ್ದರೂ ಬಂದು ನೋಡುವಂತೆ ಈ ಪ್ರದರ್ಶನವನ್ನು ಏರ್ಪಡಿಸಿರುವರು.

ಮೈಸೂರ್ ಸ್ಟಾರ್.

೧೯೧೧ ನೇ ಫೆಬ್ರುವರಿ ತಾ॥ ೬ ನೇ ಸೋಮವಾರ.

ಹೊಗೆ ಹಡಗಿನ ವ್ಯಾಪಾರವು.

ಬೊಂಬಾಯಿಯ ಸರ್, ಬಾಲಚಂದ್ರಕೃಷ್ಣರವರು. ದರ್ಭಾಂಗ ಮಹಾರಾಜರು, ಮೊರ್ವಿ ಠಾಕೂರ್ ಸಾಹೇಬರು—ಸ್ವದೇಶಮಿತ್ರನ್‌ಎಂಬ ದ್ರಾವಿಡ ಪತ್ರಿಕೆಯ ಸಂಪಾದಕರಾದ ಸುಬ್ರಹ್ಮಣ್ಯಯ್ಯರ್ ಮೊದಲಾದ ಕೆಲ ಪ್ರಮುಖರು ಸೇರಿ, ಬೊಂಬಾಯಿಪಟ್ಟಣದಲ್ಲಿ "ದಿಇಂಡಿಯನ್ ಆಂಡ್ ಪೆನಿನ್ಸುಲರ್‌ಸ್ಟೀಮ್ ನಾವಿಗೇಷನ್ ಕಂಪೆನಿ ಲಿಮಿಟೆಡ್" ಎಂಬ ಹೆಸರಿನಿಂದ ಒಂದು ವ್ಯಾಪಾರಸಂಘವನ್ನು ಸ್ಥಾಪಿಸಿದ್ದಾರೆ. ಈ ಸಂಘದವರು ಹೊಗೆ ಹಡಗುಗಳನ್ನು ಕ್ರಯಕ್ಕೆ ಕೊಂಡು, ಅವನ್ನು ಬೊಂಬಾಯಿಯಿಂದ ಇಂಗ್ಲೆಂಡು ಮೊದಲಾದ ಸ್ಥಲಗಳಿಗೆ ನಡೆಯಿಸುವರು. ಈ ಪ್ರಯತ್ನವು ಅತ್ಯಂತ ಶ್ಲಾಘ್ಯವಾದುದು. ಪಾಶ್ಚಾತ್ಯರು ತತ್ರಾಪಿ ಆಂಗ್ಲರು ಭೂಮಂಡಲದಲ್ಲಿ ಸಮುದ್ರನಾಯಕರೆಂದು ವಿಖ್ಯಾತರಾಗುವುದಕ್ಕೂ, ಅವರ ಜೀವಿತಚರಿತಾರ್ಥವೆಲ್ಲಾ ನಡೆಯುವುದಕ್ಕೂ ಈ ಹೊಗೆ ಹಡಗುಗಳೇ ಆಧಾರಗಳು. ಭರತಖಂಡವು ವ್ಯಾಪಾರಸಂಪತ್ತಿಯಲ್ಲಿ ತಲೆಯೆತ್ತಬೇಕಾದರೂ ಈ ಸಾಧನವು ಅತ್ಯವಶ್ಯಕವಾದುದು. ನಮ್ಮ ದೇಶವು ವಿದ್ಯೆ ನಾಗರಿಕತೆ—ಸಂಘಸುಧಾರಣೆ—ಮೊದಲಾದುವುಗಳಲ್ಲೆಲ್ಲಾ ಮುಂದುವರಿಯುವುದಕ್ಕೆ ಹಡಗಿನ ವ್ಯಾಪಾರವು ಬೇಕೇ ಬೇಕು. ಈ ಹಡಗಿನ ವ್ಯಾಪಾರವು ನಮ್ಮವರಿಗೆ ಹೊಸದೇನೂ ಅಲ್ಲ. ಬಹು ಪುರಾತನಕಾಲದಿಂದಲೂ ನಮ್ಮವರು ಗಾಳಿಯ ಸಹಾಯದಿಂದ ನಡೆಯುವ ಹಡಗುಗಳನ್ನು ಕಟ್ಟಿಕೊಂಡು ದೂರದೂರದ ದೇಶಗಳಿಗೆ ಹೋಗಿ ಇಲ್ಲಿನ ಸರಕುಗಳನ್ನು ಅಲ್ಲಿ ಮಾರಿ, ಅಲ್ಲಿನ ಪದಾರ್ಥಗಳನ್ನು ಇಲ್ಲಿಗೆ ತಂದು ವಿಕ್ರಯಿಸಿ ಧನಿಕರಾಗುತ್ತಿದ್ದರು. ಪೂರ್ವ ಪಶ್ಚಿಮತೀರದ ರಾಜರುಗಳು ತಮ್ಮ ಬಳಿಯಲ್ಲಿ ಸಾವಿರಾರು ಹಡಗುಗಳನ್ನಿಟ್ಟುಕೊಂಡು ಯುದ್ಧಾದಿ ಸಮಯಗಳಲ್ಲೂ ಉಪಯೋಗಿಸಿಕೊಳ್ಳುತ್ತಿದ್ದರು. ನಮ್ಮ ದೇಶೀಯರು ಮಾಡುತ್ತಿದ್ದ ಹಡಗಿನ ವ್ಯಾಪಾರವೇ ಪರದೇಶಿಯರನ್ನು ಈ ದೇಶಕ್ಕೆ ತಂದಿಳಿಸಲು ಸಾಧಕವಾಯಿತು. ಈಗಲಾದರೊ ಅದು ಯುಗಾಂತರದ ಮಾತಿನಂತೆ ಯಿರುತ್ತ, ನಮ್ಮ ಪೂರ್ವಿಕರು ಹಾಗೂ ಇದ್ದರೆ? ಎಂದು ನಾವೇ ಆಶ್ಚರ್ಯ ಪಡುವಂತಾಗಿರುತ್ತದೆ. ಈಗಿನ ಕಾಲದಲ್ಲಿ ನೌಕಾ ಸಾಧನಗಳು ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿಯೂ ಸಂಪಾದಿಸಿಕೊಳ್ಳಲ್ಪಟ್ಟವೆ. ಭೂಜಲಮಾರ್ಗಯಾನಗಳನ್ನೇ ತುಚ್ಛೀಕರಿಸಿ, ಆಕಾಶಯಾನೋದ್ಯಮದಲ್ಲಿ ಪಾಶ್ಚಾತ್ಯರು ಮುಳುಗಿತೇಲುತ್ತಿರುವ ಈವಾಗ ನಮ್ಮ ದೇಶಿಯರು ಅವರು ಕಳೆದುಳಿವಸಾಧನಗಳನ್ನಾದರೂ ಸಂಪಾದಿಸಿಕೊಳ್ಳದಿರುವುದು ಪ್ರಗತಿಗೆ ವಿರುದ್ಧವಾದುದಲ್ಲವೆ? ಸದ್ಯಃ ಭರತಖಂಡದಲ್ಲಿ ಉಂಟಾಗಿರುವ ನವೀನ ಚೈತನ್ಯದ ಸ್ಫುರಣರೂಪವಾಗಿ ಈ ತೆರದ ಪ್ರಯತ್ನಗಳು ಮಾಡಲ್ಪಡುತ್ತಿರುವುದು ನಮ್ಮದೇಶದ ಭವಿಷ್ಯಚ್ಛುಭಸೂಚನೆ ಯೆಂದು ತಿಳಿಯಬೇಕಾಗಿದೆ. ನಮ್ಮವರು ಈಗಿನ ನವೀನರೀತಿಯನ್ನನುಸರಿಸಿ ಹೊಗೆಹಡಗುಗಳ ನಿರ್ಮಾಣವನ್ನೂ, ಅವುಗಳನ್ನು ನಡೆಯಿಸುವ ರೀತಿಯನ್ನೂ ಕೂಡ ಅರಿತುಕೊಂಡು, ಅವುಗಳ ಮೂಲಕ ನಮ್ಮ ದೇಶದ ವ್ಯಾಪಾರವನ್ನುದೂರದೇಶಗಳಲ್ಲಿ ನಡೆಯಿಸಿ, ಅಲ್ಲಿನಸಂಪತ್ತಿಯನ್ನು ತಾವು ಗಳಿಸುವಸಾಹಸವನ್ನು ಅವಶ್ಯಕವಾಗಿ ಮಾಡಬೇಕು. ಈಗಿನ ಕಾಲದಲ್ಲಿ ಹಡಗಿನ ವ್ಯಾಪಾರದಿಂದಲ್ಲದೆ ಮನೆಮುಂದಣ ಸಂತೆಯ ವ್ಯಾಪಾರಗಳಿಂದ ಯಾರೂ ಕೋಟ್ಯಧಿಕಾರಿಗಳಾಗುವುದು ಅಸಂಭವ. ಹಡಗಿನ ಸಂಬಂಧವು ವ್ಯಾಪಾರವಿಷಯ ವೊಂದರಲ್ಲೇ ಲಾಭಕರವಾದುದಲ್ಲ. ಸಮಾಜಧರ್ಮಗಳ ರಕ್ಷಣೆಯ ವಿಷಯದಲ್ಲೂ ಇದು ನಮಗೆ ಅತ್ಯಂತ ಸಹಾಯಕವಾಗುವುದು. ಹೇಗೆಂದರೆ—ಈಗ ಪರದೇಶೀಯರ ಹಡಗುಗಳಲ್ಲೇ ಭಾರತೀಯರು ವಿದೇಶಗಳಿಗೆ ಹೋಗಿ ಬರಬೇಕಾಗಿರುವುದರಿಂದ, ಅವುಗಳಲ್ಲಿ ಪ್ರಯಾಣ ಮಾಡಿದರೆ ತಮ್ಮ ಆಹಾರ ಆಚಾರ ಮೊದಲಾದುವುಗಳ ವಿಷಯದಲ್ಲಿ ವಿರೋಧವು ಸಂಭವಿಸಿ, ತಮಗೆ ಭ್ರಷ್ಟತ್ವವು ಪ್ರಾಪ್ತವಾಗುವುದೆಂಬ ಭೀತಿಯು ಬಹುಳವಾಗಿದೆ. ಈ ಕಾರಣದಿಂದಲೇ ಸಮುದ್ರಯಾನವು ನಿಷೇಧಿಸಲ್ಪಡುತ್ತ, ತನ್ಮೂಲಕವಾಗಿ ದೇಶದ ಏಳ್ಗೆಗೆ ದೊಡ್ಡ ವಿಘ್ನವು ಪರ್ವತದಂತೆ ಅಡ್ಡಬಿದ್ದಿರುತ್ತದೆ. ಸ್ವದೇಶಿಯರೇ ಹಡಗುಗಳನ್ನೇರ್ಪಡಿಸಿ, ಅವುಗಳಲ್ಲಿ ಉತ್ತಮ ವರ್ಣೀಯರಿಂದ ಆಹಾರ ಮೊದಲಾದುವುಗಳು ದೊರೆಯುವಂತೆಯೂ ಭಾರತೀಯರಾದ ಉತ್ತಮವರ್ಣದ ಪ್ರಯಾಣಿಕರಿಗೆ ಪ್ರತ್ಯೇಕವಾದ ಕೋಣೆಗಳು ಅವುಗಳಲ್ಲಿ ದೊರೆಯುವಂತೆಯೂ, ಅವರ ನಿತ್ಯಕ್ರಿಯೆಗಳಿಗೆ ನಿರಾತಂಕವಾಗಿರುವಂತೆಯೂ, ಏರ್ಪಡಿಸಿಕೊಟ್ಟರೆ, ಸಮುದ್ರಯಾಣವು ಈಗಿನ ಲೋಹಮಾರ್ಗಸಂಚಾರದಂತೆಯೇ ಭಾರತೀಯರಿಗೆ ಸಾಮಾನ್ಯತರವಾಗಿ ಏರ್ಪಡುವುದು. ವಿದ್ಯಾರ್ಥಿಗಳೂ ವ್ಯಾಪಾರಿಗಳೂ ಯಾತ್ರಿಕರುಗಳೂ ಸಹ ಧರ್ಮಚ್ಯುತಿಯಿಲ್ಲದೆ ಮಿತವ್ಯಯದಿಂದ ದೇಶಾಂತರ ಸಂಚಾರವನ್ನೆಲ್ಲಾ ಮಾಡಿ ತಮಗೂ ತಮ್ಮ ದೇಶಕ್ಕೂ ಎಷ್ಟೋ ಮೇಲ್ಮೆಯನ್ನುಂಟು ಮಾಡಿಕೊಳ್ಳಬಲ್ಲರು. ಈ ತೆರದ ಲಾಭವನ್ನು ಸಾಧಾರಣವಾದುದೆಂದು ಹೇಳಲಾಗುವುದಿಲ್ಲ. ಈಗ ಸರ್ ಬಾಲಚಂದ್ರಕೃಷ್ಣರೇಮೊದಲಾದ ಮಹನೀಯರು ಹಿಡಿದಿರುವ ಕಾರ್ಯವು ಜಯಶೀಲವಾಗಲೆಂದು ಕೋರುವುದು ಭಾರತೀಯರೆಲ್ಲರಿಗೂ ಅವಶ್ಯಕವಾಗಿದೆ. ಇದಕ್ಕೆ ಮುಂಚೆಯೇ ತುತ್ತುಕುಡಿಯಲ್ಲಿ ಇಂಥ ಸಂಘವೊಂದು ಏರ್ಪಟ್ಟಿದ್ದು, ಅದು ನಾನಾವಿಧದಬಿಕ್ಕಟ್ಟುಗಳಿಂದ ಬೇಗನೆ ಅಸ್ತವನ್ನೈದಬೇಕಾಗಿಬಂದಿತು. ಈಗ ಏರ್ಪಟ್ಟಿರುವ ಸಂಘದ ಪ್ರಮುಖರು ಅದರ ಪೂರ್ವೋತ್ತರವನ್ನೆಲ್ಲಾ ಅರಿತವರಾಗಿಯೇ ಇರುವರು. ಆ ಸಂಘಕ್ಕೆ ಒದಗಿದಂತಹ ವಿಪತ್ತು ತಮ್ಮ ಸಂಘಕ್ಕೆ ಒದಗದಿರುವುದಕ್ಕೆ ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡಿಕೊಳ್ಳಲು ತಕ್ಕ ಸಾಮರ್ಥ್ಯವು ಇವರಲ್ಲಿರುವುದೆಂದು ನಂಬಿಕೆ ಯಿದೆ. ಇವರು ಹಿಡಿದ ಕಾರ್ಯದಲ್ಲಿ ಜಯಶೀಲರಾದರೆ, ಭರತಖಂಡದಲ್ಲಿ ಇಂಥಸಂಘಗಳು ಇನ್ನೂ ಕೆಲವಾದರೂ ಹುಟ್ಟುವುದಕ್ಕೆ ಅವಕಾಶವಾಗುತ್ತದೆ. ದೇಶೀಯರೆಲ್ಲರೂ ತಮ್ಮ ಸರಕುಗಳನ್ನು ಈ ಹಡಗುಗಳಲ್ಲೇ ತರಿಸುವುದಕ್ಕೂ ಕಳುಹುವುದಕ್ಕೂ, ಪ್ರಯಾಣವನ್ನು ಇದರಲೇ ಮಾಡುವುದಕ್ಕೂ ಬದ್ಧಸಂಕಲ್ಪರಾಗಿ ಪ್ರೋತ್ಸಾಹಿಸುತ್ತ ಬಂದರೆ, ಬಲುಬೇಗನೆ ಈ ಸಂಘವು ವೃದ್ಧಿಗೆ ಬರುವುದರಲ್ಲಿ ಸಂಶಯವಿರುವುದಿಲ್ಲ. ಈ ಹಡಗಿನ ವ್ಯಾಪಾರದಲ್ಲಿ ಅನ್ಯದೇಶೀಯರಿಗಿಂತ ನಮ್ಮದೇಶೀಯರಿಗೆ ಒಂದು ತೊಂದರೆಯಿದೆ. ಅದೇನೆಂದರೆ— ಸಮುದ್ರದ ದಾರಿಯಲ್ಲಿ ಅಲ್ಲಲ್ಲಿಗೆ ಪೈರೇಟ್ಸ್ ಎಂಬ ಕಳ್ಳರ ಹಾವಳಿಯು ಇರುತ್ತದೆ. ಹಡಗಿನವರು ತಮ್ಮ—ಮತ್ತೂ ತಮ್ಮಹಡಗಿನ ರಕ್ಷಣೆಯನ್ನೆಲ್ಲಾ ಮಾಡಿಕೊಳ್ಳಬೇಕಾದರೆ ಆ ಕಳ್ಳರನ್ನು ಇದಿರಿಸುವಷ್ಟು ಸಮರ್ಥರಾಗಿರಬೇಕಾಗುತ್ತದೆ. ಭಾರತೀಯರಿಗಾದರೊ, ಸ್ವತಃ ಆಯುಧಗಳನ್ನುಪಯೋಗಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲ. ಪಾಶ್ಚಾತ್ಯರಿಗೆ ಅದುಂಟು. ಈ ಸಂಬಂಧದಲ್ಲಿ ಹಡಗಿನ ವರ್ತಕರಾದ ಭಾರತೀಯರಿಗೆ ತಕ್ಕ ಸೌಲಭ್ಯಗಳನ್ನೆಲ್ಲಾ ಇಂಡ್ಯಾಸರ್ಕಾರದವರು ಕಲ್ಪಿಸಿಕೊಡುವುವಾದರೆ ಭಾರತೀಯರನ್ನು ಮುಂದಕ್ಕೆ ತರುವುದರಲ್ಲಿ ಆಂಗ್ಲ ಪ್ರಭುಗಳಿಗಿರುವ ಇಚ್ಛೆಯು ನೆರವೇರುವುದಕ್ಕೆ ಇದೊಂದು ದಾರಿಯಾಗುವುದು.

ಆಕಾಶ ನಾವೆ.

ನಾವು ಕಳೆದವಾರ ತಿಳುಹಿದ್ದಂತೆ ಈ ಆಕಾಶನಾವೆಯಲ್ಲಿ ಕುಳಿತು ಸಂಚರಿಸುವುದು ಕಳೆದ ತಾ॥ ೨ ನೇ ಗುರುವಾರ ಸಾಯಂಕಾಲ ೫ ಗಂಟೆಯ ವೇಳೆ ಬೆಂಗಳೂರ ದಂಡಿನ ಸೋಲ್ಜರುಗಳು ಸಾಧನವನ್ನು ಮಾಡುವ ದೊಡ್ಡ ಬಯಲಿನಲ್ಲಿ ಪ್ರದರ್ಶಿಸಲ್ಪಟ್ಟಿತು. ಈ ಅಪೂರ್ವವಾದ ಪ್ರದರ್ಶನವನ್ನೋಡಲು ಕೋಲಾರ, ತುಮಕೂರು, ಚೆನ್ನಪಟ್ಟಣ, ಮೈಸೂರು ಮೊದಲಾದ ಸ್ಥಳಗಳಿಂದ ಸಾವಿರಾರು ಜನರು ಕುತೂಹಲಪಟ್ಟು ತಾ॥ ೧ರ ಬೆಳಗಿನ ಮತ್ತೂ ರಾತ್ರಿಯ ರೈಲುಬಂಡಿಗಳ ಮತ್ತೂ ಎತ್ತಿನ ಬಂಡಿಗಳ ಮೂಲಕ ಬಂದು ಬೆಂಗಳೂರ ಯಾವ ಬೀದಿಗಳಲ್ಲೂ ಸ್ವಲ್ಪವೂ ಅವಕಾಶವಿಲ್ಲದಂತೆ ಸೇರಿದ್ದರು. ತಾ॥ ೧ ರಲ್ಲಿ ಬಂದಂಥ ರೈಲುಬಂಡಿಗಳಲ್ಲಿ ಪ್ರಯಾಣಿಕರು ವಿಶೇಷವಾಗಿದ್ದುದರಿಂದ ಕೆಲ ನಿಲ್ದಾಣಗಳಲ್ಲಿ ನೂರಾರು ಜನರು ಸ್ಥಳದೊರೆಯದೆ ನಿಂತುಬಿಟ್ಟರು. ಬೆಂಗಳೂರ ದಂಡಿನಲ್ಲಿ ನಿಲ್ಲಿಸಲ್ಪಟ್ಟಿರುವ ಕ್ವೀ॥ ವಿಕ್ಟೋರಿಯಾ ಮಹಾರಾಣಿಯವರ ಪ್ರತಿಮೆಗೆ ಈಶಾನ್ಯದಿಕ್ಕಿನಲ್ಲಿರುವ ಬಯಲಿನ ದಕ್ಷಿಣಭಾಗದಲ್ಲಿ ಮಧ್ಯೆ ಚೌಕನಾಗಿ ಪ್ರಾಕಾರಹಾಕಲ್ಪಟ್ಟು ಒಳಗಡೆ ನಾವೆಗಳಿಡಲ್ಪಟ್ಟಿದ್ದುವು. ಅದರ ಬಲಗಡೆ ಕೊಂಚದೂರದಲ್ಲಿ ಮಹಾಮಾತೃಶ್ರೀ ಮೊದಲಾದ ರಾಣಿವಾಸದವರಿಗೊಂದು ಗುಡಾರವೂ,ಅದರಾಚೆಗೆ ಶ್ರೀಮನ್ಮಹಾರಾಜ ಸಹೋದರರಿಗೊಂದು ಗುಡಾರವೂ ಹಾಕಲ್ಪಟ್ಟಿದ್ದುವು. ಇವುಗಳ ಮುಂಗಡೆ ನಾವೆಯು ಹಾರುವುದಕ್ಕಾಗಿ ೧೦೦ ಗಜ ಅಗಲದ ಸ್ಥಲಬಿಟ್ಟು ಎರಡು ಪಕ್ಕದಲ್ಲೂ ಟಿಕೆಟ್ಟನ್ನು ಪಡೆದಿರುವ ಪ್ರೇಕ್ಷಕರಿಗೆ ಸ್ಥಳಗಳೇರ್ಪಡಿಸಲ್ಪಟ್ಟಿದ್ದುವು. ಇದರಲ್ಲಿ ಮುಂಭಾಗದಲ್ಲಿ ೧೦ ರೂ.ನ ತರಗತಿಯವರು, ಅವರ ಹಿಂಗಡೆ ೫ ರೂ. ಅವರ ಹಿಂಗಡೆ ೩ ರೂ. ಈ ಪ್ರಕಾರವಾಗಿ ಕುರ್ಚಿಗಳು ಹಾಕಲ್ಪಟ್ಟಿದ್ದು ೧ ಮತ್ತೂ ॥ ರೂ. ತರಗತಿಯವರಿಗೆ ಬೆಂಚು । ರೂಯವರಿಗೆ ನೆಲ, ಈ ಪ್ರಕಾರ ಕ್ರಮವಾಗಿ ಸ್ಥಳಾನುಕೂಲ್ಯಪಡಿಸಲ್ಪಟ್ಟಿದ್ದುದಲ್ಲದೆ ಹೆಂಗುಸರಿಗೆ ಪ್ರತ್ಯೇಕವಾದ ಸ್ಥಳವನ್ನೇರ್ಪಡಿಸಿದ್ದು ಸುತ್ತಲೂ ಚಾಪೆಗಳು ಕಟ್ಟಲ್ಪಟ್ಟಿದ್ದುವು. ಹೊರಗೂ ಒಳಗೂ ಕೊಂಚವೂ ಗದ್ದಲಕ್ಕೆ ಅವಕಾಶವಿಲ್ಲದಂತೆ ಸೋಲ್ಜರುಗಳ ಮತ್ತೂ ಪೋಲೀಸರ ಕಾವಲಿಡಲ್ಪಟ್ಟಿದ್ದಿತು. ದುಡ್ಡನ್ನು ಕೊಟ್ಟು ಟಿಕೆಟ್ಟನ್ನು ಪಡೆದಿದ್ದ ಜನರು ಒಳಗಡೆಯಲ್ಲಿಯೂ ಇತರರು ಹೊರಗಡೆಯಲ್ಲಿಯೂ ಅನುಕೂಲವಾದ ಸ್ಥಳಗಳನ್ನು ಆಕ್ರಮಿಸಿಕೊಳ್ಳಲು ಆ ದಿವಸ ಮಧ್ಯಾಹ್ನ ೧೨ ಗಂಟೆಯಿಂದಲೇ ಮೋಟಾರು ಬಂಡಿಯಲ್ಲೂ ಕುದುರೆಯ ಬಂಡಿಯಲ್ಲೂ ನಡೆದುಕೊಂಡೂ, ಬರುತಲಿದ್ದರು. ಆ ದಿವಸ ಪೇಟೆಯಲ್ಲೂ ದಂಡಿನಲ್ಲೂ ಅನೇಕ ಅಂಗಡಿಗಳು ಮುಚ್ಚಲ್ಪಟ್ಟಿದ್ದುವು. ಯಾವ ಮಾರ್ಗದಲ್ಲಿ ನೋಡಿದರೂ ಎಳ್ಳನ್ನು ಹಾಕಿದರೆ ನೆಲದಮೇಲೆ ಬೀಳದಹಾಗೆ ಜನರು ತುಂಬಿದ್ದರು. ೪॥ ಗಂಟೆಯ ಸಮಯಕ್ಕೆ ಮಹಾರಾಣಿಯವರು ಮೊದಲಾದ ರಾಜಸ್ತ್ರೀಯರು ದಯಮಾಡಿಸಿದರು. ತರುವಾಯ ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ಸೆಕ್ರೆಟರಿಗಳೊಡನೆ ದಯಮಾಡಿಸಿ ನಾವೆಗಳಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಲ್ಪಟ್ಟು ಅವುಗಳ ನಿರ್ಮಾಣ ಮೊದಲಾದುವುಗಳನ್ನು ಪರಾಮರ್ಶಿಸಿ ಅವುಗಳ ಹಾರುವಿಕೆಯನ್ನು ತಾವೂ ಕುತೂಹಲದಿಂದ ನಿರೀಕ್ಷಿಸಿಕೊಂಡಿದ್ದರು. ಇತ್ತಲಾಗಿ ಒಳ ಆವರಣದಲ್ಲಿ ಕುಳಿತಿದ್ದ ಪ್ರೇಕ್ಷಕರು ಸೂರ್ಯಕಿರಣದ ತಾಪದಿಂದ ಬಳಲಿ ಬೆಂಡಾಗಿದ್ದಾಗ್ಯೂ ಅಭೂತಪೂರ್ವವಾದ ಅಂತರಿಕ್ಷ ಸಂಚಾರವನ್ನು ನೋಡಬೇಕೆಂಬ ಕಾಂಕ್ಷೆಯಿಂದ ಬೆವರನ್ನು ಒರಸಿಕೊಳ್ಳುತ ಸೂರ್ಯನನ್ನು ಕೆಲರು ಬೈದರು, ಮತ್ತೆ ಕೆಲರು ದೂರದಲ್ಲಿರುವ ಮೋಡವಾದರೂ ಬಂದು ಸೂರ್ಯನನ್ನು ಮುಸಿಕಿಕೊಳ್ಳಬಾರದೆ? ಎನ್ನುತಲಿದ್ದರು. ಪ್ರಾಯಶಃ ೪॥—೪॥। ಗಂಟೆಯಲ್ಲಿ ಚಪ್ಪರದೊಳಗಡೆಯಿದ್ದ ನಾವೆಗಳೆರಡರಲ್ಲಿ ಬ್ಲೈರ್ಲೀ ಎಂಬ ಇಬ್ಬರು ಕೂತುಕೊಳ್ಳಬಹುದಾದ ದೊಡ್ಡ ನಾವೆಯು ಹೊರಗಡೆಗೆ ತರಲ್ಪಟ್ಟು ಹಾರುವುದಕ್ಕೆ ಸಿದ್ಧಮಾಡಲ್ಪಡುತ್ತಿರುವಾಗ್ಗೆ ಪ್ರೇಕ್ಷಕರ ಬೇಸರಿಕೆಯು ಕಡಿಮೆಯಾಗಿ ಅವರ ವದನಗಳು ಪ್ರಫುಲ್ಲವಾದುವು. ಬ್ಯಾರನ್‌ಡಿಕೇಟರ್ ಎಂಬಾತನು ಆ ನಾವೆಯ ಮೋಟಾರನ್ನು ಸಿದ್ಧಪಡಿಸುವಾಗ್ಗೆ ಮೋಟಾರು ಬಂಡಿಗಳಲ್ಲಿ ಆಗುವುದಕ್ಕಿಂತ ೧೦—೨೦ ರಷ್ಟು ಹೆಚ್ಚಾಗಿ ಶಬ್ದವಾದುದನ್ನು ಪ್ರೇಕ್ಷಕರು ಕೇಳಿ ಕಣ್ಣುಗಳನ್ನು ಕಿಸಿಕೊಂಡು ನೋಡುವವರಾದರು. ಬ್ಯಾರನ್‌ಡಿಕೆಟ್ಟರು ಮೊದಲನೆಯಾವೃತ್ತಿ ಒಬ್ಬನೇ ಕುಳಿತುಕೊಂಡು ನಾವೆಯು ನಡೆಸುತ ೧೦—೨೦ ಗಜದವರೆಗೆ ನೆಲದ ಮೇಲೆ ಹೋಗಿ ಅನಂತರ ಸ್ವಲ್ಪಸ್ವಲ್ಪವಾಗಿ ೫೦—೬೦ ಅಡಿಯವರೆಗೆ ಮೇಲಕ್ಕೆ ಹೊರಟು ಆ ಬೈಲಿನಲ್ಲಿ ಸುತ್ತಿಕೊಂಡು ಹಿಂತಿರುಗಿ ಬಂದನು. ೨ ನೇ ಆವೃತ್ತಿ ಒಬ್ಬ ಐರೋಪ್ಯರನ್ನು ಕುಳ್ಳಿರಿಸಿಕೊಂಡು ೨೦೦ ಅಡಿಯೆತ್ತರಕ್ಕೆ ಹೋಗಿದ್ದು ಬಂದನು. ಅನಂತರ ಮಾನೋಪ್ಲೇನ್‌ಎಂಬ ಒಬ್ಬನುಮಾತ್ರ ಕೂತುಕೊಳ್ಳುವ ನಾವೆಯಲ್ಲಿ ಮಾನ್ಸ್ ಟಿಕ್ ಎಂಬಾತನು ಗಂಟೆಗೆ ೪೦ ಮೈಲಿಯಂತೆ ನಡಿಸಿಕೊಂಡು ೧೦೦೦ ಅಡಿ ಎತ್ತರಕ್ಕೆಹೋಗಿ ಸುತ್ತಿಕೊಂಡುಬಂದನು. ಈ ನಾವೆಯಂತೂ ಮೇಲಕ್ಕೆ ಹೋದಾಗ ಪಕ್ಷಿಯೋಪಾದಿಯಲ್ಲಿ ಕಾಣಿಸಿತು. ಮತ್ತೂ ಇದನ್ನುಎಷ್ಟು ವೇಗವಾಗಿ ಬೇಕಾದರೂ ನಡಿಸಬಹುದಲ್ಲದೆ ಬಹು ಸರಾಗವಾಗಿ ತಿರುಗಿಸಬಹುದು. ಮಾ॥ ಟಿಕ್ಕು ಇದನ್ನು ಎರಡನೇ ವೇಳೆ ೫೦೦ ಅಡಿ ಎತ್ತರಕ್ಕೆ ಹಾರಿಸಿಕೊಂಡು ಹೋಗಿ ಅಂತರಿಕ್ಷದಲ್ಲಿ ಸ್ವೇಚ್ಛೆಯಾಗಿ ಸಂಚರಿಸುವ ಹದ್ದುಗಳೋಪಾದಿಯಲ್ಲಿ ಬಹು ನಿದಾನವಾಗಿ ೩ ಸುತ್ತನ್ನು ಸುತ್ತಿಸಿ ತೋರಿಸಿದನು. ಜನರೆಲ್ಲರೂ ನೋಡಿ ಆಶ್ಚರ್ಯಪರವಶರಾಗಿ ಅದನ್ನು ನಡಿಸುವವರ ಸಾಹಸ ಮತ್ತೂ ಧೈರ್ಯವನ್ನು ಕೊಂಡಾಡಿ ಬಾರಿಬಾರಿಗೂ ಕರತಾಡನವನ್ನು ಮಾಡುತ್ತಿದ್ದರು. ಬ್ಯಾ॥ ಕೇಟರು ದೊಡ್ಡ ನಾವೆಯನ್ನು ೩ ನೆಯಾವೃತ್ತಿ ನಡೆಸಿಕೊಂಡು ಹೋಗಿ ತಿರುಗಿಸಿಕೊಂಡು ಬಂದು ೪ ನೆಯಾವೃತ್ತಿ ಮತ್ತೊಬ್ಬ ಐರೋಪ್ಯನನ್ನು ಕುಳ್ಳಿರಿಸಿಕೊಂಡು ಹೊರಟನು. ಆದರೆ ೧—೧॥ ಫರ್ಲಾಂಗು ದೂರ ಹೋಗಿ ಕೆಳಗಿಳಿದುಬಿಟ್ಟರು. ಜತೆಯಲ್ಲಿ ಕುಳಿತಿದ್ದ ಐರೋಪ್ಯನು ಅಧೈರ್ಯಪಟ್ಟುದುದರಿಂದಲೂ,ಕತ್ತಲೆಯಾದುದರಿಂದಲೂ ಕೆಳಗಿಳಿದುಬಿಟ್ಟರೆಂದು ಹೇಳುತ್ತಾರೆ. ತರುವಾಯ ನಾನಾವಿಧವಾದ ಮದ್ದುಗಳು ಸುಡಲ್ಪಟ್ಟುವು. ಅಷ್ಟುಹೊತ್ತಿಗೆ ೬—೬॥ ಗಂಟೆಯಾಗಿದ್ದಿತು. ಜನರು ಹಿಂತಿರುಗಿ ಹೋಗುವಾಗ್ಗೆ ತಾವು ನೋಡಿದ ಪರಮಾಶ್ಚರ್ಯವನ್ನು ಕುರಿತು ವಿಧವಿಧವಾಗಿ ಶ್ಲಾಘಿಸುತ್ತಿದ್ದರು. ಆ ದಿವಸವೂ ಮಾರನೆಯ ದಿವಸವೂ ಬೆಂಗಳೂರ ಯಾವ ಭಾಗದಲ್ಲೂ ಯಾರ ಬಾಯಿಯಲ್ಲೂ ಈ ನಾವೆಯ ಪ್ರಸ್ತಾಪವೇ ಆಗಿದ್ದಿತು. ತರಗತಿಗಳಲ್ಲಲ್ಲದೆ ಹೊರಗಡೆ ಇದ್ದ ೬೦—೭೦ ಸಾವಿರ ಜನರಿಗೂ ಊರ ಮಧ್ಯಭಾಗದಲ್ಲಿದ್ದವರಿಗೂ ಚಿಕ್ಕನಾವೆಯು ಮೇಲಕ್ಕೆ ಹೋಗಿದ್ದಾಗ್ಗೆ ಕಂಡುಬಂದಿತು. ಆ ದಿವಸ ಟಿಕೆಟ್ಟಿನ ಮಾರಾಟದಿಂದ ೧೦ ಸಾವಿರ ರೂಪಾಯಿಗಳ ಮೇಲೆಯೇ ಉತ್ಪನ್ನವಾಗಿರಬಹುದೆಂದೂ ಹೊರಗೂ ಒಳಗೂ ಸೇರಿದ್ದ ಜನಸಂಖ್ಯೆಯು ೧ ಲಕ್ಷದವರೆಗಿದ್ದಿತೆಂದೂ ತೋರುತ್ತದೆ. ಈ ನಾವೆಗಳ ಪ್ರದರ್ಶಕರಿಗೆ ಶ್ರೀಮನ್ಮಹಾರಾಜರವರೂ ೨—೩ ಸಾವಿರ ರೂಪಾಯಿಗಳನ್ನು ಬಹುಮಾನಿಸಿದರೆಂಬ ವಾರ್ತೆಯಿದೆ. ಈ ನಾವೆಯ ವಿಚಿತ್ರವನ್ನು ಕೇಳಿದವರೆಲ್ಲರೂ ನಾವು ನೋಡದೆ ಹೋದುದು ನಮ್ಮ ದುರದೃಷ್ಟವೆಂದು ತಾವುತಾವೇ ನಿಂದಿಸಿಕೊಳ್ಳಹತ್ತಿದರು. ಈ ನಾವೆಗಳಿಗಿಟ್ಟಿರತಕ್ಕ ಮೋಟಾರುಗಳ ಶಕ್ತಿಯು ೩೦ ಕುದುರೆ ಬಲದಿಂದ ೫೦ ಕುದುರೆಯ ಬಲದವರೆಗೆ ಇರುವುದು. ಮತ್ತೂ ಒಂದೊಂದು ೧೫೦೦೦ ರೂ, ಯಿಂದ ೩೦೦೦೦ ರೂ. ಗಳ ಬೆಲೆ

ಯು ಮೇಲ್ಪಟ್ಟಿರುವುವು. ಇವುಗಳಲ್ಲಿ ೨೦ ಕುದುರೆಯ ಬಲದ ನಾವೆಯು ೨೫೦೦ ರೂ. ಬೆಲೆಗೂ ದೊರೆಯುವುದಂತೆ. ಬ್ಯಾರನ್ ಡಿಕೇಟರ್ಸ್ ಎಂಬಾತನು ಬೆಲ್ಜಿಯಂ ದೇಶಸ್ಥನು. ಮತ್ತೂ ಒಳ್ಳೇ ಶ್ರೀಮಂತ ಕುಟುಂಬಕ್ಕೆ ಸೇರಿದವನು. ಜರ್ಮನಿ, ತುರ್ಕಿ, ರಷ್ಯ ಮತ್ತೂ ಬೆಲ್ಜಿಯಂ ದೇಶಗಳಲ್ಲಿ ಆಕಾಶನಾವೆಯನ್ನು ಮೊದಲು ನಡೆಸಿದವನು ಈತನೇ. ಈತನಿಗೆ ಈ ನಾವೆಯ ಪ್ರದರ್ಶನಗಳಲ್ಲಿ ಬಹುಮಾನಗಳು ದೊರೆದಿವೆ. ಮಾನ್ಸ್ಟಿಕ್ ಎಂಬಾತನು ಯೂರೋಪಿನಲ್ಲೆಲ್ಲಾ ಆಕಾಶನಾವೆಯನ್ನು ಗಂಭೀರವಾಗಿ ನಡಿಸತಕ್ಕವನೆಂದು ಪ್ರಸಿದ್ಧನಾಗಿರುತ್ತಾನಲ್ಲದೆ ಅನೇಕ ಬಹುಮಾನಗಳನ್ನು ಹೊಂದಿರುತ್ತಾನೆ. ಈತನು ಬ್ರಸಲ್ಲಿನಿಂದ ೩೮ ಮೈಲಿ ದೂರದಲ್ಲಿರುವ ಆಂಟ್ವರ್ಪಿಗೆ ೨ ಆವೃತ್ತಿ ನಾವೆಯನ್ನು ಹಾರಿಸಿಕೊಂಡು ಹೋಗಿದ್ದಾನೆ. ಮತ್ತೂ ಕಲಕತ್ತಾದಲ್ಲಿ ೬೦೦೦ ಅಡಿ ಎತ್ತರದವರೆಗೆ ಹೋಗಿದ್ದಾನೆ. ತಾ|| ೨ ರಲ್ಲಿ ತಾನು ಮೇಲಕ್ಕೆ ಹೋಗುವಾಗ್ಗೆ ಚಳಿಯು ಸಹಿಸಲಶಕ್ಯವಾದುದರಿಂದ ೫೫೦೦ ಅಡಿ ಎತ್ತರದಿಂದ ಕೆಳಗಿಳಿಯಬೇಕಾಯಿತೇ ವಿನಾ ಇಲ್ಲದಿದ್ದರೆ ೬೦೦೦ ಅಡಿ ಎತ್ತರಕ್ಕೆ ಆ ದಿವಸವೂ ಹೋಗುತ್ತಿದ್ದೆನೆಂದು ಹೇಳಿದನು

ಒಳದೇಶದ ವೃತ್ತಾಂತ.

ಶ್ರೀ ಶೃಂಗೇರಿಸ್ವಾಮಿಗಳು ಈ ದಿವಸ ೨ ನೇ ಕೌನ್ಸಿಲರ್ ಮ|| ಎಚ್. ವಿ. ನಂಜುಂಡಯ್ಯನವರ ಮನೆಯಲ್ಲಿ ಭಿಕ್ಷೆಯನ್ನು ತೀರಿಸಿಕೊಂಡು ನಾಳೆಯ ದಿನ ಸ್ವಸ್ಥಳಕ್ಕೆ ಪ್ರಯಾಣಮಾಡುವವರಾಗಿರುವರು.

ಬೆಂಗಳೂರಲ್ಲಿ ಪರಿಮಳ ವ್ಯಾಪಾರಿಗಳಾದ ಸ್ಟಾರ್ ಟ್ರೇಡಿಂಗ್ ಅಸೋಸಿಯೇಷನ್ನಿನವರು ಸೀಮೆಯಲ್ಲಿ ಮುದ್ರಣ ಮಾಡಿಸಿ ತರಿಸಿರುವ ೧೯೧೧ ನೇ ಸಂವತ್ಸರದ ಸುಂದರವಾದ ಕ್ಯಾಲಂಡರನ್ನು ನಾವು ವಿಶ್ವಾಸದಿಂದ ಅಂಗೀಕರಿಸಿದೆವು.

ಸೋಲ್ಲಾಪುರದ ರಾ|| ಬ|| ಮಲ್ಲಪ್ಪಣ್ಣನವರ ಮೃತಿಯ ಕುರಿತು ದಃಖಪ್ರದರ್ಶನಾರ್ಥವಾಗಿ ನೆರೆದಿದ್ದ ಹಲವು ಕಡೆಯ ಸಭೆಗಳ ಲೇಖನಗಳು ನಮ್ಮಲ್ಲಿಗೆ ಬಂದಿವೆ. ಎಲ್ಲವನ್ನೂ ಪ್ರಕಟಿಸಲು ಸ್ಥಲವು ಸಾಲದುದರಿಂದ ಕೆಲವನ್ನು ಮಾತ್ರ ಈ ಪತ್ರದಲ್ಲಿ ಮುದ್ರಿಸಿದ್ದೇವೆ.

ಕಳೆದ ತಾ|| ೩ ರಲ್ಲಿ ಬೆಂಗಳೂರ ದೊಡ್ಡಪೇಟೆಯಲ್ಲಿರುವ ಮಿಠಾಯಂಗಡಿ ಮಾಂಧಾತನಲ್ಲಿ ಒಬ್ಬ ಮಹಮ್ಮದೀಯನು ಮಿಠಾಯಿಯನ್ನು ತೆಗೆದುಕೊಂಡು ೧೮೩೯ ನೆ ಇಸವಿಯಿರುವ ಒಂದು ಕೃತ್ರಿಮದ ರೂಪಾಯಿಯನ್ನು ಕೊಟ್ಟನು. ಇದು ಪೋಲೀಸರಿಗೆ ತಿಳಿದು ಅವರು ಆ ನಾಣ್ಯವು ಹೇಗೆ ಬಂದಿತೆಂಬುದನ್ನು ಕಂಡುಹಿಡಿಯುತ್ತಿರುವರು.

ಶ್ರೀಮನ್ಮಹಾರಾಜರೂ ಶ್ರೀಮದ್ಯುವರಾಜರೂ ರಾಣೀವಾಸದವರೊಡನೆ ಕಳೆದ ತಾ|| ೨೯ ನೇ ಭಾನುವಾರ ಬೆಳಿಗ್ಗೆ ಶಂಕರಮಠಕ್ಕೆ ದಯಮಾಡಿಸಿ ಶ್ರೀ ಶೃಂಗೇರಿಸ್ವಾಮಿಗಳ ಪಾದಪೂಜೆಯನ್ನು ಮಾಡಿ ೮೫೦೦ ರೂಪಾಯಿಗಳ ಕಾಣಿಕೆಯನ್ನೂ ಅಮೌಲ್ಯವಾದ ವಸ್ತ್ರಗಳನ್ನೂ ಒಪ್ಪಿಸಿ ಪ್ರತಿಯಾಗಿ ಶ್ರೀಗಳವರಿಂದ ಮರ್ಯಾದೆ ಪಡೆದು ಬಂದು, ಕಳೆದ ತಾ|| ೩ ರ ರಾತ್ರಿ ೯|| ಗಂಟೆಗೆ ಹೆಚ್ಚು ಗಟ್ಟಲೆಯ ಬಂಡಿಯಲ್ಲಿ ಗುಂತುಕಲ್ಲು ಮಾರ್ಗವಾಗಿ ಬೊಂಬಾಯಿಗೆ ಸಕಲ ಪರಿವಾರದೊಡನೆ ಪ್ರಯಾಣ ಮಾಡಿದರು.

ಮೈಸೂರ ಪೋಲೀಸುಶಾಖೆಯಲ್ಲಿ ಕ್ರಿಮಿನಲ್ ಇನ್ವೆಸ್ಟಿಗೇಷನ್ ಎಂಬುದಾಗಿ ಒಂದು ಭಾಗವು ಹೊಸದಾಗಿ ಕಲ್ಪಿಸಲ್ಪಟ್ಟಿರುವುದಷ್ಟೆ. ಬೊಂಬಾಯಲ್ಲಿರುವ ಈ ಭಾಗದ ಪೋಲಿಸು ಕಾರ್ಯವಿಧಾನವನ್ನು ತಿಳಿದುಕೊಂಡು ಬರಲು ಇ|| ಜನರಲ್ ಮ|| ಡಿ. ದೇವರಾಜಅರಸಿನವರು ಬೊಂಬಾಯಿಗೆ ಪ್ರಯಾಣಮಾಡಿ ಅಲ್ಲಿ ೨-೩ ವಾರಗಳ ವರೆಗಿದ್ದು ಕಾರ್ಯಕ್ರಮವನ್ನು ತಿಳಿದುಕೊಂಡು ಹಿಂತಿರುಗುವವರಾಗಿರುವರು. ಇವರ ಕೂಡ ಇನ್ಸ್ಪೆಕ್ಟರ್ ಮ|| ಕೆ. ಸಿದ್ಧರಾಮಪ್ಪ, ಬಿ. ಎ.. ಯವರೂ ಹೋಗಲು ಗೊತ್ತಾಗಿರುವುದಾಗರಿಯುತ್ತೇವೆ,

ಕಳೆದ ಶುಕ್ರವಾರ ಸಾಯಂಕಾಲ ಬೆಂಗಳೂರ ಶಂಕರಮಠದಲ್ಲಿ ಶ್ರೀ ಶೃಂಗೇರಿಸ್ವಾಮಿಗಳು ಒಂದು ಸಭೆಯನ್ನು ಸೇರಿಸಿ ಮತವಿಷಯಕವಾದ ಉಪನ್ಯಾಸವನ್ನು ಮಾಡಿದ ಮೇಲೆ ಶಂಕರಮಠ ಸ್ಥಾಪನೆಯ ಕಾರಣವನ್ನೂ, ಸಂಸ್ಕೃತ ವಿದ್ಯಾಪೀಠ (ಯೂನಿವರ್ಸಿಟಿ)ಯನ್ನು ಆ ಮಠದಲ್ಲಿ ಸ್ಥಾಪಿಸಬೇಕಾದವಶ್ಯಕತೆಯನ್ನೂ ಚೆನ್ನಾಗಿ ಹೇಳಿ, ಮ|| ವಿ. ಪಿ. ಮಾಧವರಾಯರು ಬ್ರಾಹ್ಮಣರವಾಸಕ್ಕಾಗಿ ಕಟ್ಟಿಸಿರುವ ಅಗ್ರಹಾರವನ್ನು ಮಠಕ್ಕೊಪ್ಪಿಸಿದುದಕ್ಕಾಗಿ ಅವರ ಧರ್ಮಬುದ್ಧಿಯನ್ನು ಕೊಂಡಾಡಿ, ಅನಂತರ "ಭಾರತೀಯ ಗೀರ್ವಾಣ ವಿದ್ಯಾವರ್ಧಿನಿ" ಯೆಂಬ ನಾಮಕರಣವನ್ನು ಆ ಮಠಕ್ಕೆ ಮಾಡಿದರು. ಈ ಸಭೆಗೆ ಶ್ರೀಮನ್ಮಹಾರಾಜರೂ, ಮ|| ಗಳಾದ ವಿ. ಪಿ. ಮಾಧವರಾಯರು, ಎಚ್. ವಿ. ನಂಜುಂಡಯ್ಯನವರು, ಎ. ರಂಗಸ್ವಾಮಯ್ಯಂಗಾರರು, ಪಿ. ರಾಘವೇಂದ್ರರಾಯರು, ಡಿ. ಶ್ಯಾಮರಾಯರು, ಬಿ. ಜಿ. ಕುಮಾರಸ್ವಾಮಿನಾಯಕರು ಮೊದಲಾದ ಅಧಿಕಾರಿಗಳೂ ದೊಡ್ಡಮನುಷ್ಯರೂ ದಯಮಾಡಿಸಿದ್ದರು. ಶ್ರೀಗಳವರು ಶ್ರೀಮನ್ಮಹಾರಾಜರನ್ನು ಸತ್ಕರಿಸಿ ಕಳುಹಿಕೊಟ್ಟರು.

ಕಳೆದ ತಾ|| ೪ ನೇ ಶನಿವಾರ ರಾತ್ರಿ ರಾಜಧಾನಿಯ ಟವ್ನಹಾಲಿನಲ್ಲಿ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕಸಭೆಯವರು ಶೂದ್ರಕಕವಿ ವಿರಚಿತವಾದ ಮೃಚ್ಛಕಟಕ ನಾಟಕವನ್ನಭಿನಯಿಸಿ ತೋರಿಸಿದರು. ಪ್ರತಿಯೊಂದು ಪಾತ್ರದವರೂ ಕಾಲೋಚಿತವಾದ ಗಾನಾಭಿನಯಗಳಿಂದ ಪ್ರೇಕ್ಷಕರ ಮನಸ್ಸನ್ನಾನಂದಗೊಳಿಸಿದರು. ಉಜ್ಜಯಿನೀ ನಗರವಾಸಿಯಾದ ಚಾರುದತ್ತನೆಂಬ ಬ್ರಾಹ್ಮಣನು ವಿಶೇಷ ದಾತನಾಗಿದ್ದು ತನ್ನ ಆಸ್ತಿಯನ್ನೆಲ್ಲಾ ಕಳೆದುಕೊಂಡು ತನ್ನ ಪ್ರೇಮಪಾತ್ರಳಾದ ವೇಶ್ಯೆಯು ಕೊಟ್ಟಿದ್ದ ಆಭರಣಗಳು ಚೋರನಿಂದಪಹರಿಸಲ್ಪಟ್ಟುದರಿಂದ ಆಕೆಗೆ ಮುಖವನ್ನು ತೋರಿಸಲು ಲಜ್ಜಿತನಾಗಿರುವನು. ಆಗ ಆ ನಗರದ ದೊರೆಯ ಭಾವಮೈದುನನಾದ ಶಕಾರನೆಂಬ ಹಸಿದತ್ತನು ಆ ವೇಶ್ಯೆಯನ್ನು ಮೋಹಿಸಿ ಅವಳು ತನ್ನ ವಶಳಾಗದೆ ಹೋದುದರಮೇಲಣ ದ್ವೇಷದಿಂದ ಆ ವೇಶ್ಯೆಯನ್ನು ವ್ಯಾಜಾಂತರದಿಂದ ಉದ್ಯಾನದಲ್ಲಿ ಕೊಲ್ಲಯತ್ನಿಸಿ ಅವಳ ಕುತ್ತಿಗೆಯನ್ನು ಮಿಸುಕಿ ಸತ್ತಳೆಂದು ತಿಳಿದು, ಚಾರುದತ್ತನಮೇಲೆ ಅಪರಾಧವನ್ನಾರೋಪಿಸಿ ನ್ಯಾಯಸ್ಥಾನದಲ್ಲಿ ಮರಣ ದಂಡನೆಗೆ ಗುರಿಮಾಡಿಸುವನು. ಅಷ್ಟರಲ್ಲಿ ಆ ವೇಶ್ಯೆಯು ಶೈತ್ಯೋಪಚಾರದಿಂದ ಚೇತರಿಸಿಕೊಂಡು ಬಂದು ತನ್ನ ಪ್ರಾಣನಾಥನಾದ ಚಾರುದತ್ತನನ್ನು ಮರಣದಂಡನೆಯಿಂದ ಬಿಡಿಸಿಕೊಂಡು ಬರುವಳು. ಕಡೆಗೆ ಶಕಾರನ ಮೋಸಕೃತ್ಯವು ಬೈಲಾಗಿ ಚಾರುದತ್ತನಿಂದ ಮನ್ನಿಸಲ್ಪಡುವನು. ಇದೇ ಈ ನಾಟಕದ ಮುಖ್ಯ ಕಥಾಭಾಗವು. ಚಾರುದತ್ತನ ಮನೆಗೆ ಕಳ್ಳನು ಕನ್ನವನ್ನು ಹಾಕುವಾಗ್ಗೆ ಗೋಡೆಯಿಂದ ಇಟಿಗೆಗಳು ವಾಸ್ತವ್ಯವಾಗಿ ಕಳಚಿ ಬೀಳುವಂತೆ ಮಾಡಿದ್ದುದು ಬಹು ಚಮತ್ಕಾರವಾಗಿದ್ದಿತು.

ಕಳೆದ ತಾ|| ೧ರ ಸಾಯಂಕಾಲ ಬೆಂಗಳೂರಲ್ಲಿ ಗತಿಸಿದ ತಾತಾಸೇಟರ ಹೆಸರಿನಲ್ಲಿ ಸ್ಥಾಪಿಸಲ್ಪಡುವ ಭರತಖಂಡದ ಶಾಸ್ತ್ರಶೋಧನಾಲಯದ ಶಂಕುಸ್ಥಾಪನೆಯು ಶ್ರೀಮನ್ಮಹಾರಾಜರವರಿಂದ ಮಾಡಲ್ಪಟ್ಟಿತು. ಆಕಾಲದಲ್ಲಿ ತಾತಾಸೇಟರ ಮಕ್ಕಳಾದ ಸರ್ ದೊರಾಬ್ಜಿ ತಾತಾಯವರು ಭಾಷಣ ಮಾಡುವಾಗ್ಗೆ ಶ್ರೀಮನ್ ಮಹಾರಾಜಾ ಸರ್ಕಾರದವರು ತಮ್ಮ ತಂದೆಯವರ ಸಂಕಲ್ಪದಂತೆ ಶೋಧನಾಲಯವನ್ನು ಕಟ್ಟಲು ೩೭೧ ಎಕರೆ ಭೂಮಿಯನ್ನೂ ಕಟ್ಟಡದ ವೆಚ್ಚಕ್ಕಾಗಿ ೫ ಲಕ್ಷ ರೂ. ಗಳನ್ನೂ ೫೦೦೦೦ ರೂ. ಗಳ ವರ್ಷಾಶನವನ್ನೂ ಕೊಡಲು ವಾಗ್ದಾನ ಮಾಡಿದುದಕ್ಕಾಗಿಯೂ ಕೈ|| ಸರ್ ಕೆ. ಶೇಷಾದ್ರಯ್ಯರು ಮಾಡಿದ ಕಾಲೋಚಿತವಾದ ಸಹಾಯಕ್ಕಾಗಿಯೂ, ಇದರಂತೆ ಇಂಡ್ಯಾ ಸರ್ಕಾರದವರೂ ಸಹಾಯ ಮಾಡಲೊಪ್ಪಿರುವುದಕ್ಕಾಗಿಯೂ ತಮ್ಮ ಕೃತಜ್ಞತೆಯನ್ನು ತಿಳಿಸಿದರು. ಅದಕ್ಕೆ ಶ್ರೀಮನ್ಮಹಾರಾಜರವರು ಉತ್ತರವನ್ನು ಕೊಡುವಾಗ್ಗೆ ತಮ್ಮ ಮಾತೃಶ್ರೀಯವರು ರೀಜಂಟರಾಗಿರುವ ಕಾಲದಲ್ಲಿ ತಮ್ಮ ದೇಶೀಯರು ದೇಶಾಭಿವೃದ್ಧಿಗೆ ಸಾಧಕವಾದ ವಿದ್ಯೆಯನ್ನು ಕಲಿಯಲವಕಾಶವಿರುವ ಇಂಥ ವಿದ್ಯಾಪೀಠವನ್ನು ತಮ್ಮ ಸಂಸ್ಥಾನದಲ್ಲಿ ಸ್ಥಾಪಿಸುವುದಕ್ಕಾಗಿ ಉದಾರವಾದ ಸಹಾಯವನ್ನು ಮಾಡಿದರು. ಈ ಔದಾರ್ಯಕ್ಕೆ ತಕ್ಕಂತೆ ಮೈಸೂರುಸೀಮೆಯು ಬಹುಮಾನವನ್ನು ಪಡೆಯುವುದೆಂದು ನಾನು ದೃಢವಾಗಿ ಹೇಳುತ್ತೇನೆ. ನಮ್ಮ ಮಾತೃಶ್ರೀಯವರಿಗೆ ಈ ವಿಚಾರದಲ್ಲೂ ಸಂಸ್ಥಾನಾಭಿವೃದ್ಧಿಯ ವಿಚಾರದಲ್ಲೂ ತಕ್ಕ ಆಲೋಚನೆಯನ್ನು ಹೇಳುತಲಿದ್ದ ಸರ್ ಶೇಷಾದ್ರಯ್ಯರಿಗೆ ಸರ್ ಡಿ|| ತಾತಾಯವರು ವಂದನೆಯನ್ನರ್ಪಿಸಿರುವುದು ಸಹಜವಾಗಿದೆ. ಎಂದು ಮೊದಲಾಗಿ ತಕ್ಕ ಉತ್ತರವನ್ನು ದಯಪಾಲಿಸಿದರು.

ವರ್ತಮಾನ ಸಂಗ್ರಹ.

ಕಾಶಿಯಲ್ಲಿ ಪ್ಲೇಗುರೋಗವು ಪ್ರಬಲವಾಗಿದೆ.

ಅಲೆಗ್ಜಾಂಡ್ರಿಯಾ ಪಟ್ಟಣದಲ್ಲಿ ಹತ್ತಿಯ ಮಂಡಿಗಳಿಗೆ ಬೆಂಕಿ ಬಿದ್ದು ೧೫ ಲಕ್ಷ ರೂ. ನಷ್ಟವಾಯಿತು.

ಕಾಶ್ಮೀರದಲ್ಲಿ ಈಗ ಮಳೆಯು ಹೆಚ್ಚಾಗಿ ಕೆಲವು ಕಡೆ ಮಾರ್ಗಗಳ ಮೇಲೆ ಮಂಜಿನ ಗಡ್ಡೆಗಳು ಬಿದ್ದು ಸಂಚಾರವೇ ಕಟ್ಟಾಗಿದೆ.

ನಮ್ಮ ಚಕ್ರವರ್ತಿಯವರು ಪತ್ನೀಸಮೇತರಾಗಿ ಬರುವ ಜುಲೈ ತಿಂಗಳಲ್ಲಿ ಡಬ್ಲಿನ್ಪಟ್ಟಣಕ್ಕೂ ಎಡಿಂಬರ್ಗಗೂ ಹೋಗಿ ಬರುವರು.

ಆರಂಭದಿಂದ ಕಳೆದ ಜನವರಿ ತಾ|| ೩೦ ರವರೆಗೆ ಅಲಹಾಬಾದಿನ ವಸ್ತುಪ್ರದರ್ಶನ ಶಾಲೆಗೆ ನೋಡಲು ಬಂದಿದ್ದ ಪ್ರಜೆಗಳು ೫ ಲಕ್ಷವೆಂದು ಗೊತ್ತಾಗಿದೆ.

ನಮ್ಮ ಚಕ್ರವರ್ತಿಯವರು ತಮ್ಮ ಚಿಕ್ಕಪ್ಪಂದಿರಾದ ಡ್ಯೂಕ್ ಆಫ್ ಕನ್ನಾಟ್ರವರನ್ನು ಕನಡಾ ದೇಶದ ವೈಸ್ರಾಯರಾಗಿ ಕಳುಹಿಸುವುದಕ್ಕೆ ಒಪ್ಪಿರುತ್ತಾರೆ.

ಎಣ್ಣೆಯ ರಾಜನೆಂದು ಜಗತ್ಪ್ರಖ್ಯಾತನಾಗಿರುವ ಮೆ|| ಜಾನ್. ಡಿ. ರಾಕ್‌ಫೆಲರಿನ ಆಸ್ತಿಯು ೧೫೦ ಕೋಟಿಗಿಂತಲೂ ಮಿಗಲಾಗಿಯೇ ಇದೆಯೆಂದು ಗೊತ್ತಾಗಿದೆ.

ಜಪಾನ್ದೇಶದಲ್ಲಿ ಉತ್ಪತ್ತಿಯಾಗುವ ಕರ್ಪೂರಕ್ಕೂ ಜರ್ಮನಿಯಲ್ಲಿ ಕಲ್ಪಿತವಾಗುವ ಕರ್ಪೂರಕ್ಕೂ ಈಗ ಬೆಲೆಯಲ್ಲಿ ಪೋಟಾಪೋಟಿಯು ವಿಪರೀತವಾಗಿ ನಡೆಯುತ್ತಿದೆ.

ಬರ್ಮಾ ಎಣ್ಣೆ ಕಂಪೆನಿಯ ಉದ್ಯೋಗಿಯಾದ ಮೆ|| ಹೆಂಡರ್ಸನ್ ಎಂಬಾತನು (೨೧ ವಯಸ್ಸಿನವನು) ಹಡಗಿನಲ್ಲಿ ಪ್ರಯಾಣಮಾಡಿ ಬರುತ್ತ ಕೆಂಪುಕಡಲಿನಲ್ಲಿ ದುಮಿಕಿದನು. ಕೂಡಲೇ ಒಂದು ತಿಮಿಂಗಿಲವು ಅವನನ್ನು ನುಂಗಿ ಸಮಾಪ್ತಿಗೊಳಿಸಿತು.

ವಿನಾಯಕ ದಾಮೋದರ ಸವಾರ್ಕರನು ನಾಸಿಕದ ಜಾಕ್ಸನ್ರವರ ಕೊಲೆಯಲ್ಲಿ ಸಹಾಯಕನಾಗಿದ್ದನೆಂಬ ಮತ್ತೊಂದಪರಾಧಕ್ಕೆ ಮರಳಿ ಬೊಂಬಾಯಿ ಸ್ಪೆಷಲ್ ಕೋರ್ಟಿನಲ್ಲಿ ವಿಚಾರಣೆಗೊಂಡು ಯಾವಜ್ಜೀವ ದ್ವೀಪಾಂತರವಾಸಶಿಕ್ಷೆಗೆ ಗುರಿಯಾದನು.

ಕಳೆದ ತಾ|| ೨೫ ರಲ್ಲಿ ಬಳ್ಳಾರಿಯ ಸಮೀಪದಲ್ಲಿ ವಾಸವಾಗಿದ್ದ ಒಬ್ಬ ವೀರಶೈವನಮನೆಗೆ ರಾತ್ರಿಯಹೊತ್ತು ಪಂಜಿನಕಳ್ಳರು ೩೦ ಮಂದಿಯವರೆಗೆ ನುಗ್ಗಿ ಮನೆಯವರಿಬ್ಬರನ್ನು ಚೆನ್ನಾಗಿ ಹೊಡೆದು ೩ ಸಾವಿರದ ಸೊತ್ತುಗಳನ್ನು ಅಪಹರಿಸಿಕೊಂಡು ಹೋಗಿರುವರು

ನಮ್ಮ ಜಾರ್ಜ್ ಚಕ್ರವರ್ತಿಯವರು ಮತ್ತೊಬ್ಬಾಕೆಯನ್ನು ಮದುವೆಯಾಗಿದ್ದರೆಂದು ಬರೆದು ಅವರ ಗೌರವಕ್ಕೆ ಚ್ಯುತಿಯನ್ನುಂಟುಮಾಡಿದ ಅಪರಾಧಕ್ಕಾಗಿ ಒಂದು ಪ್ಯಾರಿಸ್ಸಿನ ಪತ್ರಿಕೆಯ ಸಂಪಾದಕನು ಈ ತಿಂಗಳು ತಾ|| ೧ ರಿಂದ ವಿಚಾರಣೆಗಳೊಳಪಟ್ಟಿದ್ದಾನೆ.

ಕಳೆದ ತಾ|| ೨೫ ರಲ್ಲಿ ಅಲಹಾಬಾದಿನ ಪ್ರದರ್ಶನ ಶಾಲೆಯಲ್ಲಿ ಮಾನ್ಸಿಯರ್ ಪಿಕೆಟ್ಯವರು ತಮ್ಮ ವಿಮಾನದಲ್ಲಿ ಕುಳಿತು ಆಕಾಶಯಾನ ಮಾಡುತ್ತಿರುವಾಗ ಯಂತ್ರವು ಕೆಟ್ಟುಹೋಗಲಾಗಿ ಕೂಡಲೇ ಕೆಳಕ್ಕೆ ಇಳಿಯಬೇಕಾಯಿತು. ಅಪಾಯವೇನೂ ಆಗಲಿಲ್ಲ.

ಟ್ರಿನಿಡಾಡ್ ಸ್ವಾಸ್ಥ್ಯಕ್ಕೆ ಕೂಲಿಮಾಡಿ ಜೀವಿಸಲು ಹೋಗಿದ್ದ ಭಾರತೀಯರಲ್ಲಿ ೬೦೦ ಜನರು ೧೬೦೮೩೩-೮-೦ ರೂ. ಗಳನ್ನು ಮಿಗಿಸಿಕೊಂಡು ಕಳೆದ ತಾ|| ೩೦ ರಲ್ಲಿ ಕಲಕತ್ತಾದಲ್ಲಿ ಬಂದಿಳಿದರು. ಇವರಲ್ಲಿ ಒಬ್ಬೊಬ್ಬರು ೧೫೫೦, ೫೬೭೫ ರೂ. ಮತ್ತೂ ೨೧೩೩ ರೂ. ಪ್ರಕಾರ ಕೆಲವರು ಸಂಪಾದಿಸಿಕೊಂಡು ಬಂದಿರುತ್ತಾರೆ.

ತನ್ನನ್ನು ಸುಳ್ಳುಮಾತನಾಡುವನೆಂದು ಬಹಿರಂಗವಾಗಿ ಕೋರ್ಟಿನಲ್ಲಿ ಹೇಳಿ ತನ್ನನ್ನು ಅಗೌರವಪಡಿಸಿದರೆಂದು ಬಳ್ಳಾರಿಯ ವಕೀಲರಾದ ಮ|| ಕೋ|| ವೆಂಕಟರಾವ್ರವರು ಅಲ್ಲಿನ ಡಿ|| ಮುನಸೀಫರಾದ ಮೆ|| ಪಿ. ಆದಿನಾರಾಯಣಯ್ಯರಮೇಲೆ ಮಾನನಷ್ಟದ ವ್ಯಾಜ್ಯವನ್ನು ಹೂಡಿದ್ದರು. ವಿಚಾರಣೆ ನಡೆದು ವ್ಯಾಜ್ಯವು ತಿರಸ್ಕರಿಸಲ್ಪಟ್ಟಿತು.

ಇಂಡ್ಯಾ ಗೌರ್ನಮೆಂಟಿನ ವೆಚ್ಚವು ಹೆಚ್ಚೆಂಬ ವಿಷಯವನ್ನು ಕುರಿತು ವೈಸ್ರಾಯರ ಸಭೆಯಲ್ಲಿ ಮ|| ಮುಧೋಳ್ಕರ್ರವರು ಮಾತನಾಡುತ್ತಿರುವಾಗ ಇಂಗ್ಲಂಡಿನಲ್ಲಿ ಪ್ರತಿಯೊಬ್ಬ ಮನುಷ್ಯನ ವರಮಾನವೂ ವರ್ಷಕ್ಕೆ ೪೦ ಸವರನ್ನಗಳನ್ನಗಳಾಗುವುವೆಂತಲೂ, ಪ್ರತಿಯೊಬ್ಬ ಭಾರತೀಯನ ವರಮಾನವು ವರ್ಷಕ್ಕೆ ೨ ಸವರನ್ನಗಳಾಗುವುವೆಂತಲೂ ಉದಹರಿಸಿದರು.

ಕಳೆದ ಜನವರಿ ತಾ|| ೨೮ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೨೫೫೧ ಜನರಿಗೆ ಪ್ಲೇಗುರೋಗವು ತಗಲಿ ೨೧೯೨ ಜನರ ಸತ್ತರು. ಇದರಲ್ಲಿ ಸಂಯುಕ್ತ ಪ್ರಾಂತಗಳಲ್ಲಿ ೧೨೬೨, ಬಂಗಾಳಾದಲ್ಲಿ ೨೩೧೩, ಪಂಜಾಬಿನಲ್ಲಿ ೧೩೮೦, ಮಧ್ಯಪ್ರಾಂತಗಳಲ್ಲಿ ೧೪೫೫, ಬೊಂಬಾಯಾಧಿಪತ್ಯದಲ್ಲಿ ೧೯೯೬, ರಾಜಪೂಟಾಣದಲ್ಲಿ ೬೩೯, ಮದ್ರಾಸಾಧಿಪತ್ಯದಲ್ಲಿ ೩೮೮, ಮೈಸೂರ ಸಂಸ್ಥಾನದಲ್ಲಿ ೨೮೨, ಹೈದರಾಬಾದ್ ಸಂಸ್ಥಾನದಲ್ಲಿ ೨೩೦, ಬರ್ಮ್ಮದಲ್ಲಿ ೨೩೩, ಕಾಶ್ಮೀರ ಮತ್ತು ಎಲ್ಲೆ ಪ್ರಾಂತಗಳಲ್ಲಿ ೪ ಈ ಪ್ರಕಾರವಾಗಿ ಮರಣವಾಗಿರುತ್ತದೆ.

ಆಗ್ರಾದಲ್ಲಿ ಪ್ರೊಫೇಸರ್ ದೊರಸ್ವಾಮಿಯೆಂಬುವರೊಬ್ಬರು ಅದ್ಭುತವಾದ ತಮ್ಮ ಅಂಗಸಾಧನವನ್ನು ಪ್ರದರ್ಶಿಸುತ್ತಿದ್ದಾರೆ. ವೇಗವಾಗಿ ಓಡುತ್ತಿರುವ ೨೦-೨೫ ಕುದುರೆಗಳ ಶಕ್ತಿಯುಳ್ಳ ಮೋಟಾರನ್ನು ಇವರು ಒಂದು ಕೈ ಒಂದು ಕಾಲಿನಿಂದ ತಡೆದು ನಿಲ್ಲಿಸುವರಂತೆ. ೨೦ ಮಂದಿಗಳು ಕುಳಿತಿರುವ ಎತ್ತಿನ ಬಂಡಿಯನ್ನು ತಮ್ಮ ಎದೆಯ ಮೇಲೂ ತೊಡೆಯಮೇಲೂ ಹರಿಸಿಕೊಳ್ಳುವರು. ದಪ್ಪ ಸರಪಳಿಯನ್ನು ಮೈಗೆ ಬಿಗಿಸಿಕೊಂಡು ಉಬ್ಬಿ ಕಿತ್ತು ಪುಡಿಮಾಡುವರು. ೪ ಕಡೆಗಳಿಂದಲೂ ಬರುವ ೪ ಮೋಟಾರುಗಳನ್ನು ಒಂದೇಕಾಲದಲ್ಲಿ ತಡೆದು ನಿಲ್ಲಿಸಬಲ್ಲರಂತೆ.

ವೈಸ್ರಾಯರ ಸಭೆಯಲ್ಲಿ ಆ|| ಗೋಖಲೆಯವರು ಸರ್ಕಾರದ ದುಂದುವೆಚ್ಚವನ್ನು ಕುರಿತು ಖಂಡಿಸುವ ಸಂದರ್ಭದಲ್ಲಿ ಆಧಾರಪೂರ್ವಕವಾಗಿ ಉಪನ್ಯಾಸ ಮಾಡಿದುದನ್ನು ನೋಡಿ, ಆಶ್ಚರ್ಯಪಟ್ಟು ಮೆ|| ಮೆಸ್ಟನ್ರವರು ಹೀಗೆಹೇಳಿದರು—ಇವರ ವಾಚಾಲಕತ್ವವನ್ನು ಕುರಿತು ನಾನು ಸಂತೋಷಿಸುತ್ತೇನೆ. ಇವರು ವಿಷಯವನ್ನು ಹಿಡಿದು ಸಭೆಯಲ್ಲಿ ವಿಶದೀಕರಿ

ಸುವ ರೀತಿಯು ಚೆನ್ನಾಗಿರುತ್ತದೆ. ಇವರು ಗತಿಸಿದ ಗ್ಲಾಡ್ಸ್ಟನರವರಂತೆ ತಾವು ಪ್ರತಿಪಾದಿಸಬೇಕಾದ ಪ್ರತಿಯೊಂದು ವಿಷಯವನ್ನೂ ತಕ್ಕ ಆಧಾರಗಳ ನಿರೂಪಣದಿಂದ ಸಿದ್ಧಾಂತಗೊಳಿಸುವ ಶಕ್ತಿಯುಳ್ಳವರಾಗಿರುತ್ತಾರೆ. ಇದರಿಂದಲೇ ಜೀವಚ್ಛವದಂತೆ ಇದ್ದ ಶಾಸನಗಳನ್ನು ಬರೆದಿಡುತ್ತಿದ್ದ ಪುಸ್ತಕಗಳಿಗೆ ಪ್ರಾಣವು ಬರುತ್ತಲಿದೆ” ಎಂದು ನುಡಿದರು.

ಜರ್ಮನಿಯ ಯುವರಾಜರು ಕಳೆದ ಜನವರಿ ತಿಂಗಳು ತಾ॥ ೨೪ ರಲ್ಲಿ ಅಲಹಾಬಾದಿನ ವಸ್ತು ಪ್ರದರ್ಶನಾಲಯಕ್ಕೆ ಹೋಗಿದ್ದು ಸರ್ವವನ್ನೂನೋಡಿ ಆನಂದಿಸಿ, ತಾ॥ ೨೮ ರ ಬೆಳಗ್ಗೆ ಕಾಶೀ ಪಟ್ಟಣಕ್ಕೆ ಹೋದರು. ಅಲ್ಲಿ ಮುಖ್ಯವಾದ ದೇವಾಲಯಗಳನ್ನೂ ಘಟ್ಟಗಳನ್ನೂ ಪರಾಮರಿಸಿ, ಮಧ್ಯಾಹ್ನದಲ್ಲಿ ರಾಮನಗರ ಮೊದಲಾದವುಗಳನ್ನವಲೋಕಿಸಿ, ಕಾಶೀ ಮಹಾರಾಜರ ಅತಿಥ್ಯವನ್ನಂಗೀಕರಿಸಿ, ಮರುದಿನ ಅಲ್ಲಿಂದ ಪ್ರಯಾಣಮಾಡಿ ಅದೇ ಸಾಯಂಕಾಲ ಲಕ್ನೋವನ್ನು ಸೇರಿದರು. ಅವರು ಕಲಕತ್ತಾಕ್ಕೆ ತಾ॥ ೩೦ ರಲ್ಲಿ ಬಂದು ವೈಸರಾಯರ ಅತಿಥ್ಯದಲ್ಲಿದ್ದು ಈದಿನ ಡಾರ್ಜಿಲಿಂಗಿಗೆ ಹೋಗುವರು. ಅಲ್ಲಿಂದ ಮರಳಿ ತಾ॥ ೧೧ ರಲ್ಲಿ ಕಲಕತ್ತಾಕ್ಕೆ ಬಂದು ತಾ॥ ೧೨ ರಲ್ಲಿ ಜರ್ಮನ್ ರಾಯಭಾರಿಯ ಮನೆಯಲ್ಲಿ ಔತಣವನ್ನು ತೀರಿಸಿಕೊಂಡು, ತಾ॥ ೧೩ ರಲ್ಲಿ ಭರತಖಂಡವನ್ನು ಬಿಟ್ಟು ಪೂರ್ವ ದೇಶ ಸಂಚಾರಕ್ಕೆ ತೆರಳುವರು.

ಪ್ರಸಿದ್ಧ ವಂಗಕವಿಗಳಾದ ಬಾಬು ಶಶಿಕುಮಾರ ಘೋಷರವರು ಕಟ್ಟಕಡೆಯಲ್ಲಿ ರಚಿಸಿದುದು ಚೈತನ್ಯ ಸ್ವಾಮಿಯ ಜೀವಿತ ಚರಿತ್ರವೆಂಬ ದೊಡ್ಡ ಗ್ರಂಥವಾಗಿರುವುದು. ಇವರು ಈ ಪ್ರಾಕೃತಮಂಡಲವನ್ನು ಪರಿತ್ಯಜಿಸುವುದಕ್ಕೆ ೨ ಗಂಟೆಗಳಿಗೆ ಮುಂಚೆ “ಇದೇ ನಾನು ಮಾಡಿದ ಕೊನೆಯ ಗ್ರಂಥ” ಎಂದುನುಡಿದರು. ಇವರು ಆರೋಗ್ಯ ತಪ್ಪಿ ಅಸ್ವಸ್ಥರಾಗಿದ್ದಾಗ ಆ ಚೈತನ್ಯಜೀವಚರಿತ್ರವು ಮುದ್ರಿತವಾಗುತ್ತಿದ್ದಿತು. ಮೃತರಾಗುವುದಕ್ಕೆ ಸ್ವಲ್ಪ ಹೊತ್ತಿಗೆ ಮುಂಚೆ ಇವರೇ ಕಡೆಯ “ಪ್ರೂಫನ್ನು” ತಿದ್ದಿ, ಮುಗುಳ್ನಗೆಯಿಂದ “ಈಶ್ವರಾ ! ಈಜನ್ಮದಲ್ಲಿ ನಾನು ರಚಿಸಿದುವುಗಳಲ್ಲಿ ಇದೇ ಕಡೆಯ ಗ್ರಂಥವು. ಈ ಪುಷ್ಪವನ್ನು ನಿನ್ನ ಪಾದಕಮಲಕ್ಕೆ ಭಕ್ತಿಯಿಂದ ಸಮರ್ಪಿಸುತ್ತೇನೆ.” ಎಂದು ಹೇಳಿ, ತನ್ನ ದೇಹವನ್ನೂ ಆತ್ಮವನ್ನೂ ಸಮರ್ಪಿಸಿ, ಅಂಜಲಿಬದ್ಧರಾಗಿ ಹಾಗೆಯೇ ನಿರ್ವಾಣವನ್ನು ಹೊಂದಿದರಂತೆ. ಶರಣನಯೋಗ್ಯತೆ ಮರಣದಲ್ಲಿ ಕಾಣುವುದಲ್ಲವೆ !

ಕಲಿಭೀಮನೆಂದು ವಿಖ್ಯಾತರಾಗಿರುವ ಪ್ರೊ॥ ರಾಮಮೂರ್ತಿನಾಯಡು ಯವರಿಗೆ ಉತ್ತರ ಹಿಂದೂಸ್ಥಾನದಲ್ಲಿ ಅಭೂತಪೂರ್ವವಾದ ಮರ್ಯಾದೆಗಳು ನಡೆಯುತ್ತಿವೆ. ಅವರು ಪಾಟಿಯಾಲಾ ಸಂಸ್ಥಾನಕ್ಕೆ ಹೋದಾಗ ನಿಲ್ದಾಣದಿಂದಲೇ ಅವರ ಸತ್ಕಾರಸನ್ಮಾನಗಳು ವಿಜೃಂಭಣೆಯಿಂದ ನಡೆದುವು. ಮಹಾರಾಜರ ಅರಮನೆಯಲ್ಲಿ ಇವರ ಅದ್ಭುತ ಅಂಗ ಸಾಧನೆಗಳು ೨ ದಿವಸ ಪ್ರದರ್ಶಿಸಲ್ಪಟ್ಟುವು. ನೋಡಿದ ಮಹಾರಾಜರು ಒಂದು ಸ್ವರ್ಣಪದಕವನ್ನು ಬಹುಮಾನ ಮಾಡಿದುದಲ್ಲದೆ, ತಮ್ಮ ಆನೆಯಮೇಲೆ ಚಿನ್ನದ ಅಂಬಾರಿಯನ್ನು ಕಟ್ಟಿಸಿ, ಅದರಮೇಲೆ ರಾಮಮೂರ್ತಿಯವರನ್ನು ಕುಳ್ಳಿರಿಸಿ, ಪಟ್ಟಣದಲ್ಲೆಲ್ಲಾ ಉತ್ಸವಮಾಡಿಸಿದರು. ರಾಜವರ್ಗದ ಅನೇಕಜನರು ಬೆಲೆಬಾಳುವ ಉಂಗುರಗಳನ್ನೂ ಪದಕಗಳನ್ನೂ ಬಹುಮಾನ ಮಾಡಿದರು. ಅನೇಕ ಸಹಸ್ರ ರೂಪಾಯಿಗಳೂ ದೊರೆದವು. ಅಲ್ಲಿಂದ ನಭಾಸಂಸ್ಥಾನದ ಪ್ರಭುಗಳು ಇವರನ್ನು ಕರೆಯಿಸಿಕೊಂಡು, ಅಂಗಸಾಧನಗಳನ್ನು ಮಾಡಿಸಿನೋಡಿ, ಮೆಚ್ಚಿ ೪ ಸಾವಿರ ರೂ. ಬೆಲೆ ಬಾಳುವ ಉಂಗುರವನ್ನೂ ೪ ಸಾವಿರ ರೂ. ಗಳನ್ನೂ ಬಹುಮಾನ ಮಾಡಿದರು. ಸಾಗಗಳಿಸುವಾಗ ವಾದ್ಯ ವೈಭವದೊಡನೆ ನಿಲ್ದಾಣದವರೆಗೆ ಹೋಗಿ ಕಳುಹಿಸಿಕೊಟ್ಟರು. ಇವರು ಬರುವ ಏಪ್ರಿಲ್ ತಿಂಗಳಲ್ಲಿ ಇಂಗ್ಲಂಡು ಅಮೇರಿಕಾ ಮೊದಲಾದ ದೇಶಗಳಿಗೆ ಪ್ರಯಾಣಮಾಡುವವರಾಗಿರುವರು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು.

ಪ. ಪ್ರ.

ಪತ್ರವ್ಯವಹಾರ.

ಶ್ರೀ ದುರ್ಗಾಪರಮೇಶ್ವರಿ ಪರಸ್ಪರ ಸಹಾಯಕ ಸಂಘ.

ಹೆಗ್ಗಡದೇವನಕೋಟೆ ತಾಲ್ಲೋಕು ಹೊಮ್ಮರಗಳ್ಳಿ ಶ್ರೀ ದುರ್ಗಾಪರಮೇಶ್ವರಿ ಪರಸ್ಪರ ಸಹಾಯಕಸಂಘವು ತಾ॥ ೬–೧–೧೯೧೧ ರಲ್ಲಿ ಸ್ಥಾಪಿಸಲ್ಪಟ್ಟಿತು. ಆ ಕಾಲದಲ್ಲಿ ತಾಲ್ಲೋಕು ಅಮಲ್ದಾರರು, ಫಾರೆಸ್ಟ್ ಸಬ್ ಡಿವಿಜನ್ ಆಫೀಸರವರು, ಸ್ಕೂಲುಗಳ ಅಸಿಸ್ಟೆಂಟ್ ಡೆಪ್ಟಿ ಇನ್ಸ್ಪೆಕ್ಟರವರು, ಕೋ॥ ಆ॥ ಸೊಸೈಟಿಗಳ ಇನ್ಸ್ಪೆಕ್ಟರವರು ಇನ್ನೂ ಮುಂತಾದ ಅಧಿಕಾರಿಗಳು ಸಭೆಯನ್ನು ಅಲಂಕರಿಸಿದ್ದರು. ಮೆ॥ ಅಮಲ್ದಾರ್ರವರು ಸಭೆಯ ಅಗ್ರಾಸನವನ್ನು ವಹಿಸಿದ್ದರು. ಕೋ॥ ಆ॥ ಸೊ॥ ಇನ್ಸ್ಪೆಕ್ಟರಾದ ಮ॥ ಪುಟ್ಟಸಾಮಯ್ಯ, ಬಿ ಎ., ಯವರು ಸಂಘದಿಂದ ಉಂಟಾಗತಕ್ಕ ಪ್ರಯೋಜನವನ್ನು ಜನಗಳ ಮನಸ್ಸಿಗೆ ಚೆನ್ನಾಗಿ ಗೊತ್ತಾಗುವಂತೆ ಉಪನ್ಯಾಸ ಮಾಡಿದನಂತರ ಮೆ॥ ಅಮಲ್ದಾರವರು ಇದೇ ವಿಷಯವನ್ನು ಕುರಿತು ಸರ್ಕಾರದವರಿಗೆ ಸೊಸೈಟಿಯಮೇಲೆ ಇರತಕ್ಕ ಅಭಿಮಾನವನ್ನೂ ಅದಕ್ಕೋಸ್ಕರ ಅವರು ರಿಜಿಸ್ಟ್ರೇಷನ್ ಫೀ ಸ್ಟಾಂಪು ಡ್ಯೂಟಿ ವಗೈರೆಗಳನ್ನು ಮನ್ನಾಮಾಡಿರುವುದನ್ನುಸಹ ವಿಶದೀಕರಿಸಿದರು. ತದನಂತರ ಸಂಘದ ಸೆಕ್ರೆಟರಿಗಳಾದ ಮ॥ ಎಂ. ಪುಟ್ಟಯ್ಯನವರು ರಿಜಿಸ್ಟ್ರಾಗಿ ಬಂದಿರುವ ಬೈಲಾಗಳನ್ನು ಓದಿದನಂತರ ದಯಮಾಡಿಸಿದ್ದ ಅಧಿಕಾರಿಗಳಿಗೂ ಅಲ್ಲಿ ನೆರೆದಿದ್ದ ಮೆಂಬರುಗಳಿಗೂ ಇತರ ಜನಗಳಿಗೂ ಹಾರ ತಾಂಬೂಲಾದಿಗಳು ಹಂಚಲ್ಪಟ್ಟನಂತರ ಮೈಸೂರಿಂದ ದಯಮಾಡಿಸಿದ್ದ ಮ॥ ರಾಜೋಟಪ್ಪನವರ ಸಂಗೀತವೂ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯು ಮಂಗಳವೂ ನಡೆದನಂತರ ಸಭೆಯು ಭರಕಾಸ್ತಾಯಿತು.

ದಾವಣಗೆರೆ ತಾ॥ ಕಿತ್ತೂರುಗ್ರಾಮಕ್ಕೆ ಸರ್ಕಾರದವರು ಸರ್ಕಾರಿಸ್ಕೂಲನ್ನು ದಯಪಾಲಿಸಿದ್ದು ಅಮೌಲ್ಯವಾಗಿರುತ್ತದೆ. ಈ ಸ್ಕೂಲು ಹುಟ್ಟಿ ಸುಮಾರು ಹತ್ತು ವರ್ಷಗಳಾಗುತ್ತಾ ಬಂದಾಗ್ಗೂ ಅಷ್ಟೊಂದು ಪ್ರಬಲಸ್ಥಿತಿಯನ್ನೈದಲಿಲ್ಲ. ಹಾಲಿಸ್ಕೂಲ್ಮಾಸ್ಟರಾಗಿರುವ ಆರ್. ಸಿದ್ಧಲಿಂಗಯ್ಯನವರು ಈ ಸ್ಕೂಲಿಗೆ ವರ್ಗಪಟ್ಟು ಬಂದಾಗ ರಿಜಿಸ್ಟರು ದಾಖಲೆ ೩೦ ಜನ ಹುಡುಗರಿದ್ದು ಸರಾಸರಿ ೨೩–೨೪ ಜನ ಬಾಲಕರು ಬರುತ್ತಾ ಇದ್ದರು. ಈ ನ್ಯೂನತೆಯನ್ನು ಪರಿಹರಿಸುವುದಕ್ಕಾಗಿ ಆಗಾಗ್ಗೆ ಸಭೆಯನ್ನು ಕೂಡಿಸಿ ಸಭೆಯವರಿಗೆ ವಿದ್ಯೆಯಿಂದುಂಟಾಗುವ ಫಲಗಳನ್ನೂ ಮರ್ಯಾದೆಯನ್ನೂ ತಿಳಿಸಿ, ತಮ್ಮ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲೇ ಬೇಕೆಂಬ ಸಂಕಲ್ಪವನ್ನುಂಟುಮಾಡುತ್ತಾ ಬಂದಮೇಲೆ ಈ ಗ್ರಾಮದ ಪ್ರಜಾಸಂಖ್ಯೆಗೆ ಸರಿಯಾಗಿ ೩೦ ಬಾಲಕರು ಜಮಾಯಿಸಿದುದಲ್ಲದೆ ಪರಸ್ಥಳದಿಂದ ೧೩ ಜನ ಬಾಲಕರು ಬಂದರು. ಇಷ್ಟೊಂದು ಜನ ಬಾಲಕರು ಜಮಾಯಿಸಿದ್ದು ಈ ಮಾಸ್ಟರ ಸಹನಾ ಗುಣದಿಂದಲೂ ಬೋಧನಾಶಕ್ತಿಯಿಂದಲೂ ಉಂಟಾಯಿತಲ್ಲವೆ. ಅಯ್ಯಾ ಮಹನೀಯರೆ ಇಂಥಾ ಉನ್ನತಸ್ಥಿತಿಯಲ್ಲಿದ್ದ ಸ್ಕೂಲಿಗೆ ಮ॥ ರಾ॥ ಸ್ಕೂಲ್‌ಗಳ ಅ॥ ಡೆ॥ ಇ॥ ರವರಾದ ಕೆ. ನಾರಾಯಣ ರಾಯರವರು ಪರೀಕ್ಷೆಗೆ ದಯಮಾಡಿಸಿ ೬–೩ ನೇ ಕ್ಲಾಸ್‌ಗಳನ್ನು ವಜಾ ಮಾಡಬೇಕೆಂತಲೂ, ಲಿಂಗಾಯತರಿಗೆ ೩ ನೇ ಕ್ಲಾಸಿಗಿಂತ ಹೆಚ್ಚಾದ ವಿದ್ಯಾಭ್ಯಾಸವು ಬೇಕಿಲ್ಲವೆಂತಲೂ ಹೇಳಿ (ಇದು ನಿಜವೆ?) ಅದರಂತೆಯೇ ಆ ಕ್ಲಾಸುಗಳನ್ನು ವಜಾಮಾಡುವಂತೆ ಬಹು ಕಠಿನವಾದ ಹುಕುಮನ್ನು ಮಾಡಲು ಅದನ್ನು ಅನುಸರಿಸಿ ಸ್ಕೂಲ್ಮಾಸ್ಟರು ಸದರಿ ಕ್ಲಾಸುಗಳನ್ನು ವಜಾಮಾಡಿದ್ದರಿಂದ ಗ್ರಾಮದಲ್ಲಿ ಬೇರೆ ಸ್ಕೂಲು ಗೊತ್ತುಮಾಡಿಕೊಂಡರಲ್ಲದೆ ಸ್ಥಳದ ಮತ್ತು ಪರಸ್ಥಳದ ಬಾಲಕರು ಬಿಟ್ಟರು. ಅಂದರೆ ಲಿಂಗಾಯಿತರಿಗೆ ೩ ನೇ ಕ್ಲಾಸಿಗಿಂತ ಜಾಸ್ತಿ ವಿದ್ಯಾಭ್ಯಾಸ ಬೇಡವೋ? ಮೇಲ್ದಣಿಗಳೇ ಇಷ್ಟೊಂದು ಪಕ್ಷಪಾತವುಳ್ಳವರಾದರೆ ಲಿಂಗಾಯಿತರ ಮಕ್ಕಳು ವಿದ್ಯಾಭ್ಯಾಸ ಮಾಡಿ ವೃದ್ಧಿಹೊಂದುವ ಬಗೆ ಹೇಗೆ? ಊಟಮಾಡುವ ಕಾಲದಲ್ಲಿ ತಾಯಿಯು ತನ್ನ ಮಕ್ಕಳಲ್ಲೊಬ್ಬನಿಗೆ ಪರಮಭಕ್ಷ್ಯಗಳನ್ನೂ ಮತ್ತೊಬ್ಬನಿಗೆ ಕೀಳುತರದ ಭಕ್ಷ್ಯಗಳನ್ನೂ ನೀಡಿದಂದಾಯಿತು. ಸರ್ಕಾರದವರು ಈ ನಿರ್ಭಾಗ್ಯರಿಗೆ ಅವೂಕೊಡ ಲಭಿಸದಂತೆ ಮಾಡಬಹುದು. ದಯಾಳು ಸರ್ಕಾರದವರು ಇಷ್ಟಕ್ಕಾಸ್ಪದ ಕೊಡದೆ ಕಣ್ದೆರದು ನೋಡಿದರೆ ಬತ್ತಿದ ಸರೋವರಕ್ಕೆ ನೀರು ಬಂದಂತೆಯೂ, ಕತ್ತಲೆಮನೆಗೆ ದೀಪ ಹತ್ತಿಸದಂತೆಯೂ ಆಗುವುದು.

ಸ್ಥಳವಾಸಿ

[ಇದು ನಿಜವಾಗಿದ್ದರೆ ಸ್ಥಲನಿವಾಸಿಗಳು ಈ ವಿಷಯವನ್ನು ವಿಧ್ಯಾಭ್ಯಾಸದ ಶಾಖಾ ಮುಖ್ಯಾಧಿಕಾರಿಗಳ ಗಮನಕ್ಕೆ ತಂದರೆ ಅವರು ಅನುಕೂಲ್ಯವನ್ನುಂಟುಮಾಡಿಕೊಡುವರು. ಪ. ಪ್ರ.]

ಮೈಸೂರು ಡಿ॥ ಕಮಿಷನರ ಸಂಚಾರ.

ಮೈಸೂರು ಡಿ॥ ಡೆ॥ ಕಮಿಷನರ್ ಸಾಹೇಬರಾದ ಮೆ॥ ಎಂ. ಕಾಂತರಾಜಅರಸ್, ಬಿ. ಎ., ಯವರು ಪ್ರಜೆಗಳ ಅಹವಾಲುಗಳನ್ನು ವಿಚಾರಿಸಿಕೊಳ್ಳತಕ್ಕ ಬಗ್ಗೆ ಮೊದಲು ಗೊತ್ತಾಗಿದ್ದ ಮೇರೆ ಹೆಗ್ಗಡದೇವನಕೋಟೆ ತಾಲ್ಲೋಕು ಮಲೆನಾಡುಪ್ರಾಂತ್ಯ ಸಂಚಾರ ದಯಮಾಡಿಸಿ, ತಾ॥ ೨೧–೧–೧೧ ನೇ ಶನಿವಾರದ ದಿವಸ ಬೀರ್ವಾಳು ಮ॥ ರಾ॥ ಪುಟ್ಟಸ್ವಾಮಿರಾಜಅರಸಿನವರ ಮಂದಿರದಲ್ಲಿ ಮಧ್ಯಾಹ್ನದ ಭೋಜನ ತೀರಿಸಿಕೊಂಡು, ಆ ಸರಹದ್ದು ಪ್ರಜೆಗಳ ಅಹವಾಲ್ ವಿಚಾರಿಸಿಕೊಳ್ಳುತ್ತ ಸಾಯಂಕಾಲಕ್ಕೆ ಹಾದನೂರು ಮೊಕ್ಕಾಂ ಮಾಡಿದ್ದು, ತಾ॥ ೨೨–೧–೧೧ ನೇ ಭಾನುವಾರ ದಿವಸ ಭೋಜನಾನಂತರ ಆನೆಯಮೇಲೆ ಯಥಾವತ್ತು ಸಂಚಾರ ದಯಮಾಡಿಸಿ, ಎತ್ತಗದ ಗ್ರಾಮದ ಸರಹದ್ದನ್ನು ಪರಾಮರ್ಶಿಸಿ ಗ್ರಾಮಕ್ಕೆ ಚಿತ್ತೈಸುತ್ತಲೆ ಶ್ರೀ॥ ಮೈ॥ ಕೆ॥ ಆ ವಿ॥ ಕೆ॥ ಎತ್ತಗದ ಮಠಕ್ಕೆ ದಯಮಾಡಿಸಿ, ಮಠಾಧಿಕಾರಿಗಳಾದ ಶ್ರೀ॥ ವೇ॥ ದೊಡ್ಡರಾಮಾರಾಧ್ಯರು ಮತ್ತು ಚಿಕ್ಕರಾಮಾರಾಧ್ಯರು ಸಹ ಒಪ್ಪಿಸಿದ ವಿಜ್ಞಾಪನ ಪತ್ರಿಕೆಗೆ ಕಾಲೋಚಿತವಾದ ಉತ್ತರವನ್ನಿತ್ತು ಶ್ರೀ ಮಠದ ಸನ್ನದ್ದುಗಳನ್ನೆಲ್ಲಾ ಪರಾಮರ್ಶಿಸಿ ಸಂತೋಷಪಟ್ಟು, ಅಲ್ಲಿ ಅಲ್ಪಾಹಾರಸ್ವೀಕಾರದಿಂದ ವಿಶ್ರಾಂತಿಯನ್ನು ಹೊಂದಿ, ಮಠಾಧಿಕಾರಿಗಳು ಒಪ್ಪಿಸಿದ ಹಾರ ತಾಂಬೂಲ ಅತ್ತರ್ ಮೊದಲಾದ ಮರ್ಯಾದೆಯನ್ನು ಕೈಗೊಂಡು, ಸರ್ಕಾರದ ದ್ರವ್ಯಸಹಾಯದಿಂದ ನೀರು ಉಪಯೋಗಿಸುವ ಕೆರೆಯನ್ನು ಆಬಾದು ಹೂಳುಮಟ್ಟಿ ಮೊದಲಾದದ್ದನ್ನು ಮಾಡಿಸತಕ್ಕ ಬಗ್ಗೆ ಎತ್ತಗದ ಗ್ರಾಮಸ್ಥರು ಒಪ್ಪಿಸಿದ ಅರ್ಜಿಯನ್ನೂ, ಫಾರೆಸ್ಟ್ ಇಲಾಖೆಯವರು, ಸ್ಟೇಟ್ ಫಾರೆಸ್ಟಿಗೆ ಗ್ರಾಮಾಂತರಗಳ ಗೋಮಾಳಗಳನ್ನು ಸೇರಿಸಿಕೊಳ್ಳುವುದಕ್ಕೆ ನೂತನವಾಗಿ ಹಾಕತಕ್ಕ ರಸ್ತೆಯನ್ನು ತಪ್ಪಿಸಿಕೊಡಬೇಕು ಎಂಬ ವಗೈರೆ ದನ್ನೈಸಿದ ಎತ್ತಗ, ಅಳಲಹಳ್ಳಿ, ಚನ್ನಗುಂಡಿ, ಚಿಕ್ಕತಳಲು, ಮುತ್ತಿಗೆ ಮೊದಲಾದ ಗ್ರಾಮಗಳ ಪ್ರಜೆಗಳ ಅಹವಾಲ್ ಅರ್ಜಿಗಳನ್ನೂ ಸ್ವೀಕರಿಸಿಕೊಂಡು ಜತೆಯಲ್ಲಿ ದಯಮಾಡಿಸಿದ್ದ ಮ॥ರಾ॥ರಾ॥ ಭಕ್ಷಿ ಚಾಮಪ್ಪರಾಜಅರಸಿನವರು, ಮ॥ ರಾ॥ ತಾಲ್ಲೋಕ್ ಅಮಲ್ದಾರ್ರವರು ಮತ್ತು ಸರಗೂರು ರೇಂಜ್ ಆಫೀಸರು ಮೊದಲಾದ ಇನ್ನೂ ಸರ್ಕಾರ ನೌಕರರ ಮತ್ತು ಬಡಗಲ್‌ಪುರದ ಲಿಂಗೇಗೌಡರು ಮೊದಲಾದ ಪ್ರಜೆಗಳ ಜತೆಯಲ್ಲಿ ಮೇಲ್ಕಂಡ ಗ್ರಾಮಗಳ ಸಂಚಾರವನ್ನೆಲ್ಲಾ ತೀರಿಸಿಕೊಂಡು ಮಧ್ಯಾಹ್ನ ೩ ಗಂಟೆಗೆ ಚಿಕ್ಕತಳಲು ಅಣಕಟ್ಟಿಗೆ ದಯಮಾಡಿಸಿ ಕಟ್ಟೆಯನ್ನು ಪರಾಮರ್ಶಿಸಿ, ಅಲ್ಲಿ ಮ॥ ರಾ॥ ಪುಟ್ಟಸ್ವಾಮಿರಾಜ ಅರಸಿನವರು ಏರ್ಪಡಿಸಿದ್ದ ಬಿಡಾರದಲ್ಲಿ ಫಲಾಹಾರವನ್ನು ತೀರಿಸಿಕೊಂಡು ಅಲ್ಲಿಂದ ಹೊರಟು ಲೊಕ್ಕಸೋಗೆ ಮೊದಲಾದ ಸರಹದ್ದುಗಳ ಮೇಲೆ ಸಾಯಂಕಾಲಕ್ಕೆ ಹಾದನೂರು ಮೊಕ್ಕಾಂ ಮಾಡಿದರು. ತಾ॥ ೨೩–೧–೧೧ ನೇ ಸೋಮವಾರ ದಿವಸ ಪ್ರಾತಃಕಾಲ ಅದೇಮೇರೆ ಸಂಚಾರಹೊರಟು ನೋಡತಕ್ಕ ಸ್ಥಳಗಳನ್ನೆಲ್ಲಾ ಅಜಮಾಯಿಸಿ, ಪುನಃ ಹಾದನೂರು ಮೊಕ್ಕಾಮಿನಲ್ಲಿ ಮಧ್ಯಾಹ್ನದ ಭೋಜನ ತೀರಿಸಿ ನಂತರ ಸರಗೂರು ಪ್ರಾಂತ್ಯ ಸಂಚಾರ ದಯಮಾಡಿಸಿದರು.

ಡಿ॥ ಕಮಿಷನರ್ ಸಾಹೇಬರವರು ಈರೀತಿಯಾಗಿ ಸ್ವತಃ ಸಂಚಾರಮಾಡಿ ಬಡಪ್ರಜೆಗಳ ಅಹವಾಲ್ ವಿಚಾರಿಸಿ ಇರುವುದರಿಂದ ಪ್ರಜೆಗಳಿಗೆ ತುಂಬಾ ಸಂತೋಷವಾಗಿರುವುದಲ್ಲದೆ ಸಾವಿರಾರು ದನಗಳು ಮೇಯತಕ್ಕ ಗೋಮಾಳಗಳಿಗೆ ನೂತನವಾದ ಫಾರೆಸ್ಟ್ ಇಲಾಖಾ, ರಸ್ತೆ ಮೊದಲಾದ ನಿರ್ಬಂಧಗಳನ್ನು ತಪ್ಪಿಸಿಕೊಡುತ್ತಾರೆಂದು ತುಂಬಾ ನಂಬಿರುತ್ತಾರೆ.

ಒಬ್ಬ ಪ್ರಜಾಹಿತಚಿಂತಕ.

ಕೈ॥ ಶ್ರೀಮಂತ ರಾವ ಬಹದ್ದೂರ ವಾರದ ಅಪ್ಪಾಸಾಹೆಬರ ಮರಣ ಪ್ರಯುಕ್ತ ದುಃಖಪ್ರದರ್ಶನ ಸಭಾ.

ಕುರುಕೋಟಿ.

ಪು॥ ಬ॥ ೪ ದಿನದಲ್ಲಿ ಶ್ರೀಮಂತ ರಾವ್‌ಸಾಹೇಬ ಬಸಪ್ಪ ಅಪ್ಪಾಸಾಹೇಬ ವಾರದ ಸೊಲ್ಲಾಪುರ ಇವರು ಶಿವೈಕ್ಯರಾದರೆಂಬ ವೃತ್ತಾಂತವನ್ನು ಕೇಳಿದ ಕೂಡಲೆಅತ್ಯಂತ ವಿಷಾದಪಟ್ಟು ಪುರಪ್ರಮುಖರಿಂದ ಪು॥ ಬ॥ ೯ ಯಲ್ಲಿ ಮ॥ ರಾ॥ ಸಂಗನ ಬಸವಣ್ಣಪ್ಪನವರ ಅಧ್ಯಕ್ಷತೆಯಮೇರೆಗೆ ದುಃಖಪ್ರದರ್ಶನಸಭಾ ನೆರವೇರಿಸಲ್ಪಟ್ಟಿತು. ಆ ಕಾಲದಲ್ಲಿ ಗುಲ್ಬರ್ಗಾ ಮಂಗಶೆಟ್ಟಿ ಬಸವಣ್ಣಪ್ಪ, ಯಕ್ಕಂಚಿ ಪ್ರೊ॥ ಪಾ॥ ರೇವಶೆಟ್ಟಿ, ಮ॥ ಭೀಮರಾವ್, ಮಹಮ್ಮದ್ ಸದರೋದ್ದೀನ ಅಹಮದ್ ಖಾನ್ಸಾಹೇಬ, ತಹಸೀಲ್ದಾರ ಸಾಹೇಬರು, ಚಿ॥ ಮಹಮ್ಮದ ಅಹಮ್ಮದ ಯಾರಖಾಸಾಹೇಬ, ಹೆ॥ ಮಾ॥ ಕೀರಣಗಿ ಅಂಕಲಗಿ ಶಾನಭೋಗ ಅಮೃತರಾವ್, ಯಳಸಂಗಿ ತು॥ ಸದಾಶಿವರಾವ್ ಮುಂತಾದ ಮಹನೀಯರು ದಯಮಾಡಿಸಿದ್ದದಲ್ಲದೆ ಅನೇಕ ಗ್ರಾಮದ ಪ್ರಮುಖಜನರು ಅಗಮಿಸಿದ್ದರು. ನಂತರ ಸದರಿ ಶ್ರೀಮಂತರ ಪಾಠಶಾಲೆಯಲ್ಲಿ ಅಭ್ಯಾಸಮಾಡಿ ಉತ್ತೀರ್ಣರಾದ ನಾಯಿಕಲ್ಲ ಬಸವರಾಜಶಾಸ್ತ್ರಿಗಳು ಸದರಿಯವರು ಮತಕ್ಕಾಗಿ ಮಾಡಿದ ಮಹದುಪಕಾರವನ್ನು ಆದ್ಯಂತವಾಗಿ ವಿವರಿಸಿ ಇಂಥಾ ಮಹನೀಯರು ಶಿವೈಕ್ಯರಾದರೆಂದು ಹೇಳಲುಅತ್ಯಂತ ದುಃಖವಾಗುತ್ತದೆಂದು ಸೂಚಿಸಿದ ಕೂಡಲೆ ಎಷ್ಟೋ ಜನರು ಹಾಹಾಕಾರ ಪಟ್ಟುದಲ್ಲದೆ ಕಣ್ಣೀರನ್ನು ಸುರಿಸಿದರು. ಕೀರಣಗಿ ಹೆ॥ ಮ್ಯಾ॥ ಸಾಹೇಬರು ಮಲ್ಲಪ್ಪನವರ ಸನ್ನೀತಿಯನ್ನೂ, ಪರೋಪಕಾರವನ್ನೂ ಪಂಡಿತಪಾಮರರಿಗೆ ಒಪ್ಪುವಂತೆ ಬಹು ಸೊಗಸಾಗಿ ಮಾತನಾಡಿದ ಬಳಿಕ ಗುರುಸುಣಗಿ ಮಾ॥ ಶರಣಯ್ಯನವರು ಇಂಥಾ ಸತ್ಪುರುಷರ ನಾಮವು ವಾರಂವಾರ ಸ್ಮರಣೆಬರುವುದಕ್ಕಾಗಿ ಕೈ॥ ಮ॥ ರಾ॥ ಮಲ್ಲಪ್ಪನವರ ಸ್ಮಾರಕಫಂಡನ್ನು ಸ್ಥಾಪಿಸಿ ಆ ಹ ಬಡ್ಡಿಯನ್ನು ಸತ್ಪಾತ್ರಕ್ಕೆ ಉಪಯೋಗಿಸಬೇಕೆಂದು ಸೂಚಿಸಿದ ಕೂಡಲೆ, ಅಧ್ಯಕ್ಷರು ೧೪ ಯಕ್ಕಂಚಿ ರೇವಶೆಟ್ಟಿ

ಪಾ॥ ೧೦, ಗುಂಡ ಬರಪ್ಪಾ ೮, ಗಿರಿಯಪ್ಪ ಬಸವಣ್ಣನವರ ೮, ಶಿವಮೂರ್ತ್ಯಪ್ಪ ಪೊ॥ ಪಾ॥ ೮, ಶಿವಮೂರ್ತ್ಯಪ್ಪ ಸಲಗರ ೮ ವೀರಶೆಟ್ಟೆಪ್ಪ ಗೋಣಿ ೮, ಮಲಶೆಟ್ಟೆಪ್ಪ ಗೋಣಿ ೮, ಲಿಂಗಪ್ಪ ಕಲ್ಲಶೆಟ್ಟಿ ೮, ಶಂಕರಪ್ಪ ತೋಣಿ ೮, ಶರಣಪ್ಪ ಹಿದಿಮನಿ ೮, ಶರಣಪ್ಪ ಕೊಂತಾರಿ ೮, ಸಂಗನಬಸವಪ್ಪ ಗೌಡಪ್ಪನವರ ೮, ಮಲ್ಲಪ್ಪ ಮಮ್ಮ ೮, ಬಸವಪ್ಪಪೂಜಾರಾ ೮ ಮುಂತಾದ ಮಹನೀಯರು ವರ್ಗಣಿ ಕೊಡುವುದಕ್ಕೆ ವಾಗ್ದಾನ ಮಾಡಿದುದಲ್ಲದೆ ತತ್ಕಾಲಕ್ಕೆ ಕೂಡಿದ ಹಣವು ಗುಂಡಬಸವಪ್ಪನವರಿಗೆ ಒಪ್ಪಿಸಲ್ಪಟ್ಟಿತು. ಅನಂತರ ಸರ್ವರ ಅನುಮತಿಯಮೇರೆಗೆ ಈಹಣದಬಡ್ಡಿಯನ್ನು ಈಶ್ವರನ ನಂದಾದೀಪೋತ್ಸವಕ್ಕೆ ವಿನಿಯೋಗಿಸಬೇಕೆಂದು ನಿಶ್ಚಯಿಸಿದ ಬಳಿಕ ಸದರಿ ಶಾಸ್ತ್ರಿಗಳು ಶ್ರೀಮಂತರ ಪುತ್ರರತ್ನಕ್ಕೆ ಜಗದೀಶನು ದೀರ್ಘಾಯುಷ್ಯವನ್ನುಂಟುಮಾಡಲೆಂದು ಶ್ರೀಮಂತರ ಭಾವಚಿತ್ರಕ್ಕೆ ಪೂಮಾಲೆಯನ್ನು ಸಮರ್ಪಿಸಿದರು. ನಂತರ ಮಂಗಲವನ್ನು ಮಾಡಿ ಸರ್ವರೂ ಈ ಮಹನೀಯರಿಗೆ ಶಿವನು ಗಣಪದವಿಯನ್ನು ಕೊಟ್ಟು ಕಾಪಾಡಲಿಯೆಂದು ಪುಷ್ಪವೃಷ್ಟಿ ಸುರಿಸಿದ ಬಳಿಕ ಸಭೆಯು ವಿಸರ್ಜಿಸಲ್ಪಟ್ಟಿತು.

ಒಬ್ಬ ಪ್ರೇಕ್ಷಕ.

ಅಬ್ಬಿಗೇರಿ.

ತಾ॥ ೨೩-೧-೧೧ ಇಸವಿ ದಿವಸ ರಾತ್ರಿ ೩ ಗಂಟೆಗೆ ಅಬ್ಬಿಗೇರಿ ಸಂಸ್ಕೃತ ಪಾಠಶಾಲೆಯಲ್ಲಿ ದುಃಖಪ್ರದರ್ಶನ ಸಭೆಯು ನೆರೆಯಿತು. ಶಿರೋಭಾಗದಲ್ಲಿ ಕಂಗೊಳಿಸುವ ನಾಮದ ಮಹನೀಯರು ತಮ್ಮ ಸಮಾಜದಮೇಲೂ ತಮ್ಮ ಮೇಲೂ ತೋರಿಸುತ್ತಿದ್ದ ಅನುಪಮ ಪ್ರೀತಿ ಪ್ರೋತ್ಸಾಹ ಸಹಾಯಾದಿಗಳನ್ನು ಅವರಲ್ಲಿ ಕುಸುಮಗಂಧನ್ಯಾಯದಂತೆ ಸ್ವಾಭಾವಿಕವಾಗಿ ನೆಲೆಗೊಂಡಿದ್ದ ಶಿವಾರ್ಚನ ಪ್ರೀತಿ, ಮತಾಭಿಮಾನ, ವಿದ್ಯಾಭಿಮಾನ, ಔದಾರ್ಯ, ಧೈರ್ಯ, ದೀರ್ಘಾಲೋಚನೆ, ಔದ್ಯೋಗಿಕಜ್ಞಾನ ಕಾರ್ಯದಕ್ಷತೆ ಮುಂತಾದ ಮತೋತ್ಕರ್ಷಸಾಧನಗಳಾದ ಅನೇಕ ಸದ್ಗುಣಗಳನ್ನೂ ಸ್ಮರಿಸಿಕೊಂಡು ಇವೇ ಸಂಸ್ಕೃತ ಪಾಠಶಾಲಾಧ್ಯಾಪಕರಾದ ಬ್ರಹ್ಮಶ್ರೀ ವೇ॥ ರೇವಣಸಿದ್ಧಶಾಸ್ತ್ರಿಗಳು ಮತ್ತು ಅವರ ಸಂಸ್ಕೃತ ವಿದ್ಯಾರ್ಥಿಗಳು ಉತ್ಕಂಠಿತ ಶೋಕವನ್ನು ಸಭಿಕರ ಮುಂದಿಟಿಸಿ ಹಾಹಾಕಾರಪಡಿಸಿದರು. ಇಂಥಾ ಅನಿವಾರ್ಯ ದುಃಖವನ್ನು ಜಗತ್ಪಾಲಕನಾದ ಶಿವನು ಅನಾಥ ವೀರಶೈವರಾದ ನಮ್ಮ ಮೇಲೆ ಹೊರಿಸಿದ್ದು ಪರಮ ಅನ್ಯಾಯವಾದುದೆಂಬ ಬಗ್ಗೆ ರೋಣ ತಾ॥ ಕಮಿಟಿ ಬೋಧಕರಾದ ದ್ಯಾಂಪುರ ಚನ್ನಯ್ಯನವರು ಹೇಳಿದ ತಮ್ಮ ಉಪನ್ಯಾಸದಲ್ಲಿ ಶಿವನನ್ನು ಕುರಿತು ಆರ್ತಸ್ವರದಿಂದ ಪದ್ಯರೂಪವಾಗಿ ಪ್ರಾರ್ಥಿಸಿದ್ದೇನೆಂದರೆ—

॥ ಮತ್ತೇಭವಿಕ್ರೀಡಿತ ವೃತ್ತ ॥

ಗಣನಾಥಂ ಶಿಖಿವಾಹನಂ ಪರಮವೀರಂ ನಂದಿಭೃಂಗೀಶ್ವರಂ । ಗಣವರ್ಯರ್ ಶರಣರ್ಕಳುಂ ಮುನಿಗಳಿರ್ದುಂ ಶೂಲಿನಿನ್ನೋಲಗಂ ॥ ಘನಚೆಲ್ವಂ ಬಡಲಿಲ್ಲವೇ ಶರಣನಾದಪ್ಪಯ್ಯಮಲ್ಲಾಖ್ಯನಂ । ಮನವೊಲ್ದೊಯ್ದುದ ರಂದವಂ ನೆಗಳ್ದೆಯೋ ನಿನ್ನಿಷ್ಟವೇಂತೀರಿತೋ ॥

ಅರ್ಥ:—ಓ ಶೂಲಪಾಣಿ! ವಿಘ್ನೇಶ, ಷಣ್ಮುಖ, ವೀರಭದ್ರ, ನಂದಿ, ಭೃಂಗಿ ಇನ್ನು ಅನೇಕ ಪ್ರಮಥರು, ಶಿವಶರಣರು, ಮುನಿಗಳು, ಸಮಸ್ತ ದೇವತೆಗಳು ಇವರಿಂದ ಕೂಡಿದ್ದರೂ ನಿನ್ನ ಸಭೆಯು ಶೋಭಿಸಲಿಲ್ಲವೆ? ನಮ್ಮ ತಂದೆಯಾದ ಶ್ರೀಮಂತ ರಾವ ಬಹದ್ದೂರ ಮಲ್ಲಪ್ಪನವರನ್ನು ಲೋಭದಿಂದ ಕರದೊಯ್ದು ಶರಣಾಗ್ರೇಸರ ಪೀಠದಲ್ಲಿ ಕುಳ್ಳಿರಿಸಿ ನಿನ್ನೋಲಗವನ್ನು ಚಂದಮಾಡಿಕೊಂಡೆಯಾ? ನಿನ್ನ ಬಯಕೆಯು ತೀರಿತೆ? ಅಯ್ಯಾ ಬಡವರ ಮನೆಯು ದಿಪವನ್ನು ಬಲ್ಲಿದನು ಬಲಾತ್ಕಾರದಿಂದ ಒಯ್ದು ತನ್ನ ಮನೆಗೆ ಬೆಳಕು ಮಾಡಿಕೊಂಡಂತೆ ಭೂಮಿಯಲ್ಲಿ ವೀರಶೈವ ಸಮಾಜವೆಂಬ ಜೀರ್ಣಗೃಹವನ್ನು ಬೆಳಗುವಂಥ ನಮ್ಮ ಧರ್ಮತಂದೆಯೆಂಬ ತೇಜಃಪುಂಜರತ್ನವನ್ನು ಒಡೆಯನಾದ ನೀನು ಅಂತಃಕರಣವಿಲ್ಲದೆ ಒಯ್ದು ನಿನ್ನ ಸಭೆಯನ್ನು ಅಲಂಕರಿಸಿಕೊಳ್ಳಬೇಕೆ? ಇಂಥಾ ಭಯಂಕರ ಕೃತ್ಯಕ್ಕೊಳಗಾದ ನಿನಗೆ ಶಂಕರನೆಂಬ ನಾಮವು ಸಲ್ಲದೆ ಹರನೆಂಬ ಹೆಸರೇ ತಕ್ಕದ್ದು.

ನಾವಂತೂ ದುರ್ಭಾಗ್ಯರಾಗಿ ಅಜ್ಞಾನವೆಂಬ ಕತ್ತಲೆ ಕೋಣೆಯೊಳಗೆ ಬಿದ್ದು ಅವಿದ್ಯಾ, ಅನಾಚಾರ, ದಾರಿದ್ರ್ಯ ಮುಂತಾದುವುಗಳ ರೂಪವಾದ ಚೆಕ್ಕಾಡಿಗಳ ಕಡತಕ್ಕೆ ಗುರಿಯಾಗಿ ಅಹೋರಾತ್ರಿ ನರಳುವವರಾದೆವು. ದೀನಹಸ್ತರತ್ನಾಪಹಾರಿಯಾದ ನೀನು ಮಾಡಿದ ಅಸಾಧಾರಣವಾದ ತಪ್ಪಿನ ಸಹಸ್ರಾಂಶ ನಿವಾರಣೆಗಾಗಿ ನಮ್ಮ ಅಪ್ಪಾಸಾಹೇಬರ ಆತ್ಮಕ್ಕೆ ಶಾಂತಿಯನ್ನು ಮತ್ತು ವೀರಶೈವರ ಕಲ್ಪವೃಕ್ಷಾಂಕುರದಂತಿರುವ ಇವರ ಕೋಮಲ ಸುಕುಮಾರ ಬಸಪ್ಪನವರಿಗೆ ಆಯುರಾರೋಗ್ಯ ಸಂಪತ್ಸಮೃದ್ಧಿಯನ್ನು ದಯಪಾಲಿಸು ಎಂದು ಸೂಚಿಸಿದ ಬಳಿಕ ದುಃಖಾಶ್ರುಗಳ ವೃಷ್ಟಿಯು ಸಭೆಯುವರಿಂದ ಕರಿಸಲ್ಪಟ್ಟಿತು.

ಹುಬ್ಬಳ್ಳಿ.

ವಾಚಕರಾದ ನೀವು ದಿನಂಪ್ರತಿ ಯಾರ ವಿಷಯವಾಗಿ ಮಾತಾಡುತ್ತಿದ್ದಿರೊ ಮತ್ತೂ ಯಾರಿಂದ ನಮ್ಮ ಮತವೂ ಮತಗ್ರಂಥಗಳೂ ಊರ್ಜಿತಸ್ಥಿತಿಯನ್ನು ಪಡೆಯ ಹತ್ತಿರುತ್ತವೋ ಮತ್ತೂ ಮತದ ಸಂಬಂಧವಾಗಿ ಸಂಕಟಗಳು ಬಂದಾಗ ಯಾರಿದ್ದರೆಂದು ಧೈರ್ಯಗೊಳ್ಳುತ್ತಿದ್ದಿರೋ ಅಂಥ ಮಹಾಪುರುಷರೂ ನಿಸ್ಸೀಮದೇಶಭಕ್ತರೂ ಆದ ಶ್ರೀಯುತ ರಾವಬಹದ್ದೂರ ಮಲ್ಲಪ್ಪಾ ಬಸಪ್ಪಾ ಅಣ್ಣಾ ವಾರದ ಇವರ ಮರಣದ ಸುದ್ದಿಯು ಗುರುವಾರ ಸುಮಾರು ೧೦ ಗಂಟೆಗೆ ಭೂಪುರಿ (ಹುಬ್ಬಳ್ಳಿ) ಗೆ ತಲುಪಿತು. ತಾರು ಬಂದಕೂಡಲೇ ಜನರ ಮೋರೆಗಳು ಬಾಡಿದವು. ವಿದ್ಯಾರ್ಥಿಗಳಂತೂ ಆ ದಿವಸ ಶಾಲೆಗೆ ಹೋಗಲಿಲ್ಲ. ಇಲ್ಲಿಯ ಉಭಯ ಇಂಗ್ಲೀಷಶಾಲೆಯ ವಿದ್ಯಾರ್ಥಿಗಳೂ ಅದೇ ದಿವಸ ಸಂಜೆಯ ೩ ಗಂಟೆಗೆ ತ್ರಿಸಹಸ್ರ (ಮೂರುಸಾವಿರ) ಮಠದ ಉದ್ಯಾನದಲ್ಲಿ ವೇ॥ ಚರಂತಸ್ವಾಮಿಯವರ ಅಧ್ಯಕ್ಷತೆಯ ಕೆಳಗೆ ಸಭೆಯನ್ನು ಕೂಡಿಸಿದ್ದರು. ಅದರಲ್ಲಿ ಮಿ॥ ಉಮಚಗಿ, ಮಿ॥ ಹುರಕಡ್ಲಿ ಮತ್ತೂ ಮಿ॥ ಶೆಟ್ಟಿ ಇವರು ಇಂಗ್ಲೀಷಿನಲ್ಲಿ ಭಾಷಣಮಾಡಿದ ನಂತರ ವೇ॥ ಶಾಂತವೀರಸ್ವಾಮಿ, ರಾ॥ ಬಸಪ್ಪ, ಅನ್ನದಾನಪ್ಪಾ, ಸೋಮಲಿಂಗಪ್ಪಾ ಮತ್ತೂ ವೇ॥ ವೀರಯ್ಯಾಪುರಾಣಿಕ ಇವರು ಕನ್ನಡದಲ್ಲಿ ಭಾಷಣವನ್ನು ಮಾಡಿದರು. ನಂತರ ವೇ॥ ಶಿವಮೂರ್ತಯ್ಯಾ ಹಿರೇಮಠ ಮತ್ತೂ ವೇ॥ ವೀರಭದ್ರಯ್ಯನವರಿಂದ ಸುಸ್ವರದಿಂದ ದುಃಖಗೀತೆಯು ಅನ್ನಲ್ಪಟ್ಟ ತರುವಾಯ ಜಗನ್ನಿಯಾಮಕನು ಶ್ರೀಮಂತರಿಗೆ ನಿರಂತರವಾದ ಸೌಖ್ಯವನ್ನೂ ಪತ್ನೀಪುತ್ರರಿಗೆ ಮನಶ್ಶಾಂತಿಯನ್ನೂ ಆಯುರಾರೋಗ್ಯವನ್ನೂ ಕೊಡಲೆಂದು ಆ ಸರ್ವಶಕ್ತನಾದ ಪರಮೇಶ್ವರನನ್ನು ಧ್ಯಾನಿಸಿದ ತರುವಾಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸಭೆಯು ವಿಸರ್ಜನ ವಾಯಿತು.

ಓರ್ವ ಪ್ರತ್ಯಕ್ಷದರ್ಶಿ.

ಧಾರವಾಡ ಜಿಲ್ಲಾ ಬಂಕಾಪೂರ.

ತಾ॥ ೨೫-೧-೧೯೧೧ ಬುಧವಾರ ಪ್ರಾತಃಕಾಲ ೮ ಗಂಟೆ ಸಮಯದಲ್ಲಿ ಸಂಸ್ಕೃತ ಪಾಠಶಾಲಾದಲ್ಲಿ ಇಲ್ಲಿನ ವೀರಶೈವ ಪ್ರಮುಖರು ಸಂಸ್ಕೃತ ಪಾಠಶಾಲಾ ವ ಇಂಗ್ಲೀಷ ಸ್ಕೂಲ ಪ್ರೆಸಿಡೆಂಟರಾದ ಗುರಪ್ಪ ಅಣ್ಣ ಅಂಕಲಕೋಟಿ ಇವರ ಅಧ್ಯಕ್ಷತೆಯಿಂದ ಸಭೆಯನ್ನು ಕೂಡಿಸಿ ವೀರಶೈವ ಮತಾಬ್ಧಿ ಸುಧಾರಕರರಾದಂಥ—ಸ್ವಮತೀಯ ಕಾರ್ಯಕ್ಕಾಗಿ ತನುಮನಧನಗಳನ್ನು ಸೂರೆಗೊಟ್ಟ ಶ್ರೀಮಂತ ರಾವ ಬಹದ್ದೂರ ಮಲ್ಲಪ್ಪ ಬಸಪ್ಪ ವಾರದ ಸೊಲ್ಲಾಪುರ ಇವರ ಅಕಾಲಮರಣವನ್ನು ಕುರಿತು ಈ ಸಭೆಯು ಅಧ್ಯಕ್ಷರಾದ ಗುರಪ್ಪ ಅಣ್ಣಾ ಅಂಕಲಕೋಟಿ ಇವರು ತುಂಬಾ ಕಳವಳಪಟ್ಟು ಹೇಳಿದುದಲ್ಲದೆ ಈ ಅಪಾರವಾದ ದುಃಖವಾರ್ತೆಯನ್ನು ತಿಳಿಸಲು ಅತ್ಯಂತ ಗದ್ಗದ ಕಂಠರಾದರು. ಅಷ್ಟರಲ್ಲಿ ಮಹಾರಾಜಶ್ರೀ ಮುರಿಗೆಪ್ಪ ಅಣ್ಣಾ ಬೆಕ್ಕೇರಿ ಇವರು ತಮಗುಂಟಾದ ದುಃಖವನ್ನು ಸಹಿಸಿಕೊಂಡು ಅಪ್ಪಾಸಾಹೇಬರ ಮರಣದಿಂದುಂಟಾದ ಸಮಾಜದ ಹಾನಿಯನ್ನೂ ಸಹಾನುಭೂತಿಯನ್ನೂ ಅವರ ಕುಟುಂಬಕ್ಕೆ ತಂತೀಮೂಲಕ ಅಧ್ಯಕ್ಷರು ತಿಳಿಸಬೇಕೆಂದು ನಿರ್ಧರಿಸಿದ್ದಲ್ಲದೆ ವೀರಶೈವ ಸಂಸ್ಕೃತ ಪಾಠಶಾಲಾ ವ ಇಂಗ್ಲೀಷ ಸ್ಕೂಲನ್ನು ಬಂದು ಮಾಡಿಸಿ ಮತ್ತು ವರ್ತಕರ ವ್ಯಾಪಾರವನ್ನು ಸಹ ಬಂದಿಡಿಸಿ ದುಃಖಪ್ರದರ್ಶನವನ್ನು ಮಾಡಿದರು.

ಬಾಗಲಕೋಟಿ.

ಸೋಲಾಪುರದ ರಾ॥ ಬ॥ ಶ್ರೀಮಂತ ಅಪ್ಪಾಸಾಹೇಬವಾರದ ಇವರು ತಾ॥ ೧೯-೧-೧೧ ಗುರುವಾರ ಬೆಳಗ್ಗೆ ಶಿವೈಕ್ಯರಾದ ವರ್ತಮಾನವು ತಾರಿನಿಂದ ಇಲ್ಲಿಗೆ ೮ ಗಂಟೆಗೆ ಬಂದು ಯಾವತ್ತು ಪುರನಿವಾಸಿಗಳನ್ನು ದುಃಖಸಮುದ್ರದಲ್ಲಿ ಮುಳುಗಿಸಿಬಿಟ್ಟಿತು. ಯಾವತ್ತು ವ್ಯಾಪಾರಸ್ಥರು ತಮ್ಮತಮ್ಮ ಅಂಗಡಿಗಳನ್ನು ಬಂದ ಮಾಡಿದರು. ಸದರಿ ಮಹಾನುಭಾವರ ಶೋಚನೀಯ ಮರಣದಬಗ್ಗೆ ಊರಲ್ಲೆಲ್ಲಾ ಹಾಹಾಕಾರವು ಹುಟ್ಟಿತು.

ಮಧ್ಯಾಹ್ನದ ೪ ಗಂಟೆಗೆ ಎಲ್ಲಾ ಜಾತಿಯ ಪ್ರಮುಖ ಜನರು ಸಭೆಸೇರಿ ರಾ॥ಸಾ॥ ಸಾನೆ ಸ॥ ಜ॥ ವಗೈರೆ ಸರಕಾರಿ ಅಧಿಕಾರಸ್ಥರೂ, ವಕೀಲರೂ ಮತ್ತು ವ್ಯಾಪಾರಸ್ಥರೂ ರಾ॥ಸಾ॥ ಕಿತ್ತೂರ ಮಾಮಲೇದಾರ ಇವರ ಅಧ್ಯಕ್ಷತೆಯ ಕೆಳಗೆ ಕೂಡಿ, ಸಭೆ ಕೆಲಸವು ಪ್ರಾರಂಭವಾಗಿ ಶ್ರೀಮಂತರಲ್ಲಿದ್ದ ಅಸಾಧಾರಣವಾದ ಕರ್ತವ್ಯದಕ್ಷತೆ, ಔದಾರ್ಯ, ಸದಾಚಾರ, ಪ್ರೀತಿ ಮುಂತಾದ ಗುಣಗಳಕಥನವನ್ನು ಅಧ್ಯಕ್ಷರೂ ಮತ್ತು ಇನ್ನು ಕೆಲವು ಸಭ್ಯಗೃಹಸ್ಥರೂ ಮಾಡಿದ ತರುವಾಯ ಯಾವತ್ತು ಪುರನಿವಾಸಿಗಳು ರಾವ ಬಹದ್ದೂರರವರ ವಿಯೋಗದುಃಖದಿಂದ ಸಂತಪಿಸಿ, ತಮ್ಮ ದುಃಖವನ್ನು ತಾರಿನಿಂದ ರಾ॥ ಬ॥ ರವರ ಕುಟುಂಬದವರಿಗೆ ತಿಳಿಸಿದರು.

ಪ್ರತ್ಯಕ್ಷದರ್ಶಿ.

ಉತ್ತಮ ಗ್ರಂಥಗಳು.

2

ಶಿವಪಂಚಸ್ತವಃ— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ, ಕೂಡಿಧೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.— ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿಧೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಧೆ.

ಪುರುಷಸೂಕ್ತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿಧೆ.

ಬಸವಲಿಂಗಸ್ವಾಮಿಗಳು,
ಹೊಸಮಠ ಮೈಸೂರು.

ಅಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು. 6

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

ರಾಸ್ಕೋಪಸಿಸ್ಟಂ ಪೇಟಂಟ ಲೀವರ್ ಜ್ಯೂವೆಲ್ಡ್ ವಾಚ್

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಅಯಿದು (೫) ವರುಷಗಳು ಗ್ಯಾರೆಂಟು.

ROSKOPF
SYSTEM
PATENT
SWISS MADE

ಕೆಯ್ರ ರೂ. ೨-೮-೦ ವಿ. ಪಿ. ಚಾರ್ಜು ರೂ. ೦-೪-೦.

ಘುಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದು, ಕ್ರಯ ೦-೮-೦ ವಿ. ಪಿ. ಚಾರ್ಜು ೦-೪-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ. ನಂಬರು ೨೦ ಸಿಂಗಣ್ಣಚಟ್ಟಿಬೀದಿ, ವಾಲಾಟಾಕ್ಸ್ ರೋಡು, ಮದರಾಸು.

ಉತ್ತಮ ಗ್ರಂಥಗಳು.

106

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ —೦.೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿಃ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ, ಮೈಸೂರು.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

26

೧. ಸ್ವರ್ಣಗಂಗಾಧರಮಾತ್ರೆ.— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ.

ಸರ್ವಮೇಹರಾಜಾಂಗ ರಬ್ಬರ್‌ಎಣ್ಣೆ.— ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರಿಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೆಬ್ಬು, ವ್ರಣ, ಕುಷ್ಠ. ಮಹೋದರ, ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ.— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ.— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂತಿಮೇಹ, ಮೂತ್ರಕೃಛ್ರ ಅಸ್ತಿಸ್ರಾವ, ಅಸೃಗ್ದರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ, ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ.—ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚು ೬ ಆಣೆ.

೯. ಮಹಾಕುಂಡಲ್ಯಾದಿರಸಾಯನ.— ಇದರಿಂದ ಕ್ಷಯ ಕಾಶಿ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟಲ್ಲ ಉರಿಸುಸ್ತು ಸಂಕಟ, ವಮನವಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶಃ ನೀರು ಎರೆಯುವಾಗ ಜ್ಞಾನ ತಪ್ಪುವುದು, ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೊಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಪುರಬತ್ತುಗಳೂ, ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚನ್ನಬಸಪ್ಪ ಅಂಡ್‌ಸನ್ಸ್,
ಚನ್ನಪಟ್ಟಣ, ಬೆಂಗಳೂರು, ಡಿಸ್ಟ್ರಿಕ್ಟ್.

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

6

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. **ಮಿಂಚಿನ ಉಂಗುರವೂ.**

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳ್ತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಮೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

65

ಪದ್ಮರಾಜ ಪುರಾಣಂ.

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಅಣೆ.

ಬಿ. ಮಲ್ಲಾರಾಧ್ಯರು,
ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ ಬಿ. ಬಸವಾರಾಧ್ಯರು,
ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್, ಬೆಂಗಳೂರು.

ಮೊದಲು ಇದನ್ನು ಓದಿರಿ.

24

ಅಂಜೀರಾರ್ಕಮಧು:— ಇದರ ಸೇವನದಿಂದ ಮೊಯೊಳಗಿನ ಉಷ್ಣತೆಯು ಹೋಗಿ ಧಾತುಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿಧಾರಣಕ್ಕೆ ಯೋಗ್ಯವಾದ ಧಾತು ಆಗುತ್ತದೆ. ನಡುವೇ ಯಾವದಾದರೊಂದು ಕಾರಣದಿಂದ ನಪುಂಸಕತ್ವವಾದರೆ ಇದರಿಂದ ಖಾತ್ರಿಯಿಂದ ನೆಟ್ಟಗಾಗುತ್ತದೆ. ಸಣ್ಣಹುಡುಗರಿಗೆ ಅನ್ನ ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ, ಅನ್ನ, ಹಾಲು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತವಾಗುತ್ತಾರೆ. ಕ್ರಯ ೧ ಬಾ. ೧॥= ರೂ. ೨ ಬಾ. ೨॥। ರೂ. ೩ ಬಾ. ೩॥= ಟ.ಖ.ಬೇರೆ.

ವಜ್ರಾಂಗಖರ್ಜೂರವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡ. ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು. ಟ. ಖ. ಬೇರೆ.

ಸಾಸಾರ್ಪರಿಲಾ:—ಇದರಿಂದ ಪರಮ್ಯಾ, ಗರಮಿ ಹೋಗುತ್ತದೆ. ಉಷ್ಣದಿಂದ ಆದ ಯಾವದಾದರು ವಿಕಾರಗಳು ರಸಾಯನ ಶೇವನ ಮಾಡಿದ್ದರಿಂದ ಉಂಟಾದ ರೋಗಗಳು ಮತ್ತು ಉಷ್ಣವು ಬಡೆದು ಆದ ಬಳೇಕರೇಕಲೆಗಳು, ಭಗೇಂದ್ರ, ಪಿನಸಿ, ಇತ್ಯಾದಿರೋಗಗಳು ಖಾತ್ರಿಯಿಂದ ನೆಟ್ಟಗಾಗುವವು. ಕ್ರಯ ೧ ಬಾ. ೧॥ರೂ. ೩ ಬಾ. ೪ರೂ. ಟ. ಖ. ಬೇರೆ

ಮಲಹರ:— ಇದರಿಂದ ಹಳೇ ಗಜಕರ್ಣ, ಇಸಬು ಖಜ್ಜಿ, ತದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿ ೪ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು. ಟ. ಖ. ಬೇರೆ.

"ಪಾಚಕ."

("ಪಚನ ಮಾಡುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ. ಬಾಯ ಒಂದು ತರದ ಉತ್ತಮ ರುಚಿ ಬರುತ್ತದೆ. ಕಮರತೇಗುಳು ಬರುವದಿಲ್ಲ. ೧ ಬಾ. ೯ ಆಣೆ ಟ. ಖ. ಬೇರೆ.

ನಂ. ೫೫ "ಅಂಜೀರಾರ್ಕಮಧುಕಂಪನಿ"
ಧಾರವಾಡ ಮತ್ತು ಮಿರಜ. (ಇಂಡಿಯ

೧೯೧೧ನೇ ಇಸವಿ ಪೆಬ್ರವರಿ ತಾ॥ ೬ ರಿಂದ ೧೯೧೧ನೇ ಪೆಬ್ರವರಿ ತಾ॥ ೧೨ ರವರಿಗೆ ಸಲ್ಲುವ ಶಾಲಿವಾಹನ ೧೮೩೨ ನೇ ಸಾಧಾರಣ ಸಂವತ್ಸರದ ಮಾಘ ಬ॥ ಸ ಮಿಯಿಂದ ಮಾಘ ಶು॥ ತ್ರಯೋದಶಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮ ತೇ
6	[1] ಸೋ	ಸ	8-46	ಭರಣಿ	54-30	24
7	ಮಂಗ	ಅ	52-20	ಕೃತ್ತಿಕ	30-17	25
8	[2] ಬುಧ	ನ	47-46	ರೋಹಿಣಿ	38-50	26
9	ಗುರು	ದ	41-20	ಮೃಗಶಿ	29-18	27
10	ಶುಕ್ರ	ಏ	28-40	ಆರಿದ್ರ	25-54	28
11	ಶನಿ	ದ್ವಾ	30-38	ಪುನ	22-36	29
12	[3] ಭಾನು	ತ್ರ	26-4	ಪುಷ್ಯ	19-52	30

(1) ರಥಸಪ್ತಮಿ ಶ್ರೀರಂಗಪಟ್ಟಣದಲ್ಲಿ ಹೇಮಗಿರಿರ ನಾಥರಥಃ ಯಡತೊರೆಯಲ್ಲಿ ಅರ್ಕೇಶ್ವರರಥಃ (೨) ಮ ಡುಕುತೊರೆಮಲ್ಲಿಕಾರ್ಜುನರಥಃ (೩) ತ್ರಿನೇತ್ರೇಶ್ವರಸ್ವಾಮಿ

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M-124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೮] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಫೆಬ್ರವರಿ ತಾರೀಖು ೧೩ ನೇ ಸೋಮವಾರ. [ಸಂಚಿಕೆ ೭

ಕ್ಷಮೆ.

ಅನಿವಾರ್ಯದಶೆಯಿಂದ ಈವಾರ ಸ್ಟಾರ್ ಪತ್ರಿಕೆಯು ೮ ಪುಟಗಳನ್ನು ಹೊರಡಿಸಲಾಗಲಿಲ್ಲವಾಗಿ ಚಂದಾದಾರರ ಕ್ಷಮೆಯನ್ನು ಬೇಡುವೆವು. ಪ. ಪ್ರ.

ಮೈಸೂರ್ ಸ್ಟಾರ್.

೧೯೧೧ ನೇ ಫೆಬ್ರವರಿ ತಾ॥ ೧೩ ನೇ ಸೋಮವಾರ.

ಕೈಗಾರಿಕೆಯಭಿವೃದ್ಧಿ.

ನಮ್ಮ ದೇಶದ ಕೈಗಾರಿಕೆಯನ್ನಭಿವೃದ್ಧಿಗೊಳಿಸಲು ಯಾವ ಉಪಾಯಗಳನ್ನು ಮಾಡಬೇಕೆಂಬುದನ್ನು ಚರ್ಚಿಸಿ ನಿರ್ಧರಿಸಿ ದಿಗ್ದರ್ಶನ ಮಾಡುವುದಕ್ಕಾಗಿ "ಇಂಡಸ್ಟ್ರಿಯಲ್ ಕಾನ್ಫರೆನ್ಸ್" ಎಂಬುವುದೊಂದು ಸ್ಥಾಪಿತವಾಗಿ ೪ ವರ್ಷಗಳಾದುವು. ಈ ಸಭೆಯು ಪ್ರತಿವರ್ಷವೂ ಒಂದೊಂದು ಸ್ಥಲದಲ್ಲಿ ಕೂಡುತ್ತ, ಈಸಲ ಅಲಹಾಬಾದಿನಲ್ಲಿ ಜರುಗಿತು. ಅದರ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಯುತ ಆರ್. ಎನ್. ಮುಕರ್ಜಿಯವರು ಸಾರವತ್ತಾದ ದೊಡ್ಡ ಉಪನ್ಯಾಸವೊಂದನ್ನು ಮಾಡಿದರು. ಅವರು ಸೂಚಿಸಿದ ಮುಖ್ಯಾಂಶಗಳಲ್ಲಿ—ಮಾಂಚೆಸ್ಟರ್—ಬರ್ಮಿಂಗ್‌ಹ್ಯಾಂ—ಲೀಡ್ಸ್ ಮೊದಲಾದ ಪಟ್ಟಣಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಕೈಗಾರಿಕೆಯ ಪ್ರೌಢವಿದ್ಯಾಶಾಲೆಗಳಂತಹ ವಿದ್ಯಾಲಯವೊಂದನ್ನು ನಮ್ಮ ದೇಶದಲ್ಲಿ ಸ್ಥಾಪಿಸಿಕೊಡಬೇಕೆಂದು ಗೌರ್ನವೆಂಟಿನವರನ್ನು ಪ್ರಾರ್ಥಿಸಬೇಕೆಂಬ ವಿಷಯವೊಂದಾಗಿದ್ದಿತು. ಇದು ಪ್ರಶಸ್ತವಾದ ಸೂಚನೆಯೇ ಸರಿ. ಕೈಗಾರಿಕೆಯ ಪ್ರೌಢಶಿಕ್ಷಣೆಗಾಗಿ ನಮ್ಮ ದೇಶದ ವಿದ್ಯಾರ್ಥಿಗಳು ಈಗ ಅನ್ಯಗಳಿರುವ ಪರದೇಶಗಳಿಗೆ ಹೋಗಬೇಕಾಗಿರುವುದು. ಈ ಏರ್ಪಾಟಿನಿಂದ ಅಂಥ ತೊಂದರೆಯು ತಪ್ಪಿ, ನಮ್ಮ ದೇಶದಲ್ಲಿ ಕೈಗಾರಿಕೆಯ ಬೆಳವಣಿಗೆಯಾಗಬಹುದು. ಆದರೆ ಇಂಥ ಪ್ರೌಢವಿದ್ಯಾಲಯವನ್ನು ಈ ದೇಶದಲ್ಲಿ ಸ್ಥಾಪಿಸುವುದಾದರೆ, ಭರತಖಂಡದಲ್ಲಿ ವ್ಯಾಪಿಸಿರುವ ಆಂಗ್ಲವರ್ತಕರ ವ್ಯಾಪಾರವು ಕುಗ್ಗುವುದಕ್ಕವಕಾಶವಾಗುವುದು. ಲಾರ್ಡ್ ಮಿಂಟೋರವರಂತೆಯೇ ಭರತಖಂಡದ ಏಳ್ಗೆಯಲ್ಲಿ ಅತ್ಯಂತ ಅಭಿಮಾನವನ್ನು ತೋರಿಸುತ್ತಿರುವ ಈಗಿನ ನಮ್ಮ ವೈಸ್‌ರಾಯರು ಸಹ ಇಂತಹ ಪ್ರಯತ್ನಕ್ಕೆ ಒಪ್ಪಿ ನಮ್ಮ ದೇಶಕ್ಕೆ ಒಂದು ಕೈಗಾರಿಕೆಯ ಪ್ರೌಢವಿದ್ಯಾಲಯವನ್ನು ಸ್ಥಾಪಿಸಿಕೊಡುವುದಕ್ಕೆ ಸನ್ನದ್ಧರಾದರೂ ಪಶ್ಚಿಮ ರಾಷ್ಟ್ರದಲ್ಲಿರುವ ಆಂಗ್ಲವರ್ತಕರು ಅದನ್ನು ಸಾಗಗೊಡುವರೆಂಬುದು ಮಾತ್ರ ಸಂದೇಹವೆ. "ಇಂಡಿಯಾ ಗೌರ್ನವೆಂಟಿನವರ ಸಂಕಲ್ಪಗಳನ್ನು ಆಂಗ್ಲವರ್ತಕರು ಸಾಗಗೊಡರು" ಎಂದು ಲಾರ್ಡ್ ಮಿಂಟೋರವರೇ ಒಬ್ಬ ಪತ್ರಿಕಾಲೇಖಕರೊಡನೆ ಅಪ್ಪಣೆ ಕೊಡಿಸಿರುವರು. ಅದುಕಾರಣ ದೇಶದ ವೃದ್ಧಿಗೆ ಅವಶ್ಯಸಾಧನವೆಂದು ತೋರುವವುಗಳಿಗಾಗಿ ಪ್ರಜೆಗಳು ಸರ್ಕಾರದ ಕೈಯನ್ನೇ ಕಾಯುತ್ತ ಕುಳಿತುಕೊಳ್ಳುವುದಕ್ಕಿಂತಲೂ, ತಮ್ಮ ಕಾಲಿನಮೇಲೆ ತಾವು ನಿಂತುಕೊಳ್ಳುವಂತಹ ಪ್ರಯತ್ನದಲ್ಲಿ ಮನಸ್ಸು ಹಾಕುವುದೇ ವಿಹಿತವು. ಅದರಮೇಲೆ ಗೌರ್ನವೆಂಟಿನ ಸಹಾಯವೂ ಆದರೆ ಕಬ್ಬಿನಮೇಲೆ ಜೇನಿಟ್ಟಂತೆಯೇ ಆಗುವುದು.

ಮತ್ತೂ ಆಂಗ್ಲವ್ಯಾಪಾರಿಗಳು ಕಳುಹಿಸುವ ಪದಾರ್ಥಗಳ ಮೇಲೆ ನಮ್ಮ ದೇಶೀಯರು ಸ್ಪರ್ಧಿಸುವುದು ಅಸಾಧ್ಯವಾದುದೆಂದೂ, ಪರದೇಶಗಳಿಂದ ಬರುವಂತಹ ವಸ್ತುಗಳನ್ನು ನಿರ್ಮಿಸುವುದಕ್ಕೆ ನಮಗೆ ಯಂತ್ರೋಪಕರಣಗಳಿಲ್ಲದುದರಿಂದ ಹೆಚ್ಚು ವೆಚ್ಚವು ತಗಲುವುದರಿಂದ ಪರದೇಶದವರ ಬೆಲೆಯಷ್ಟು ಸುಲಭವಾಗಿ ನಮ್ಮ ವಸ್ತುಗಳನ್ನು ಮಾರಲಾಗುವುದಿಲ್ಲವೆಂದೂ, ಅದುಕಾರಣ ವಿದೇಶವಸ್ತುಗಳ ಮಾರಾಟವನ್ನು ಈ ದೇಶದಲ್ಲಿ ಕಡಿಮೆ ಮಾಡಿಸಿ, ಸ್ವದೇಶದ ವಸ್ತುಗಳ ಪ್ರಚಾರವನ್ನು ಹೆಚ್ಚಿಸಬೇಕಾದರೆ, ಗೌರ್ನವೆಂಟಿನವರು ವಿದೇಶದ ವಸ್ತುಗಳು ಸುಲಭವಾಗಿ ಈ ದೇಶದಲ್ಲಿ ಬಂದಿಳಿಯದಂತೆ ಆಗದಿರುವುದಕ್ಕೆ ತಕ್ಕ ಕೋಡನ್ನು ಮಾಡುವುದು ಅವಶ್ಯಕವೆಂದು ಸಹ ಅಧ್ಯಕ್ಷರು ಅಪ್ಪಣೆ ಕೊಡಿಸಿರುವರು. ಸುಲಭವಾಗಿ ಬಂದಿಳಿಯದಂತೆ ಮಾಡುವುದು ಎಂದರೆ ವಿದೇಶದ ಸರಕುಗಳ ಮೇಲೆ ಇಂಡ್ಯಾ ಗೌರ್ನವೆಂಟಿನವರು ಹೆಚ್ಚು ಸುಂಕವನ್ನು ಹಾಕಿಬಿಟ್ಟರೆ, ಆಗ ಅದರ ಬೆಲೆಯು ಹೆಚ್ಚಿಕೊಂಡು, ಈ ದೇಶದ ವ್ಯಾಪಾರವು ಅವರಿಗೆ ಲಾಭಕರವಾಗದೆ ಹೋಗುವುದು ಎಂಬುದೇ ಅವರಭಿಪ್ರಾಯವಾಗಿರಬೇಕು. ಇದು ಕೂಡ ಮೇಲಿನ ವಿಷಯದಂತೆಯೇ ಇರುವುದು. ಒಂದುವೇಳೆ ನಮ್ಮ ವೈಸ್ರಾಯರು ಭರತಖಂಡದ ಕ್ಷೇಮಾರ್ಥವಾಗಿ ವಿದೇಶದ ಸರಕುಗಳ ಮೇಲೆ ೧ ಕ್ಕೆ ಹತ್ತರಷ್ಟು ಸುಂಕವನ್ನು ಏರುವುದಕ್ಕೆ ಅಭಿಪ್ರಾಯಪಟ್ಟರೂ, ಅದಕ್ಕೆ ಸ್ಟೇಟ್ ಸೆಕ್ರೆಟರಿಗಳೂ ಜಾರ್ಜ್ ಚಕ್ರವರ್ತಿಯವರೂ ಸಹ ಅನುಮತಿಕೊಟ್ಟರೂ ಸೀಮೆಯಲ್ಲಿರುವ ಆಂಗ್ಲಜನರು ಅದನ್ನು ಸಾಗಗೊಡುವುದುಂಟೋ? ಎಂದಿಗೂ ಇಲ್ಲ. ಅಂಥ ಆ ಕಾಂಕ್ಷೆಯು ಎಲವದಕಾಯಿ ಹಣ್ಣಾಗುವುದೆಂದು ಗಿಳಿ ಕಾದುಕೊಂಡಿದ್ದಂತೆ ವಿಫಲವಾಗುವುದೇ ಸರಿ. ಇಂಥ ಪ್ರಾರ್ಥನೆಗಳಿಂದ ಗೌರ್ನವೆಂಟಿನವರ ಕುತುಗ್ಯೆಯನ್ನು ನಿರೀಕ್ಷಿಸಿಕೊಂಡಿರುವುದಕ್ಕಿಂತಲೂ, ಪ್ರತಿಯೊಂದು ಕಾರ್ಯಕ್ಕೂ ಈಗ ಯಂತ್ರಸಾಧನಗಳು ದೊರೆಯುತ್ತಿರುವಾಗ, ವಿದೇಶೀಯರು ಯಂತ್ರಗಳಿಂದ ನಿರ್ಮಿಸುತ್ತಿರುವ ವಸ್ತುಗಳನ್ನು ನಾವುಗಳೇ ಈ ದೇಶದಲ್ಲೇ ಯಂತ್ರಗಳ ಮೂಲಕ ಏತಕ್ಕೆ ನಿರ್ಮಿಸಬಾರದು? ಹತ್ತಿ—ಎಣ್ಣೆಯ ಕಾಳು—ಚರ್ಮ ಮೊದಲಾದ ಅನೇಕ ವಸ್ತುಗಳು ನಮ್ಮ ದೇಶದಿಂದಲೇ ಪರದೇಶಗಳಿಗೆ ಹೋಗಿ, ಅಲ್ಲಿನ ಯಂತ್ರಗಳಿಂದ ರೂಪಾಂತರವನ್ನೈದಿ, ೧ ಕ್ಕೆರಡರಷ್ಟು ಬೆಲೆಯಿಂದ ತಿರಿಗಿ ನಮ್ಮ ದೇಶಕ್ಕೇ ಬಂದು ಮಾರಲ್ಪಡುತ್ತಿರುವುವು. ಹೋಗಬರುವ ದಾರಿಯ ಬಾಡಿಗೆಗಳನ್ನೂ ಆ ದೇಶದ ಹೆಚ್ಚು ಕೂಲಿಗಳನ್ನೂ ತೆತ್ತು ಪಾಶ್ಚಿಮಾತ್ಯರು ಆ ವಸ್ತುಗಳನ್ನು ನಮ್ಮ ದೇಶದಲ್ಲಿ ಸುಲಭವಾದ ಬೆಲೆಗೆ ಮಾರುತ್ತಿರುವಾಗ ನಮ್ಮ ದೇಶದಲ್ಲೇ ಬೆಳೆದ ವಸ್ತುಗಳನ್ನು ಯಾವುದೊಂದು ಬಾಡಿಗೆಯನ್ನೂ ಸುಂಕವನ್ನೂ ತೆರದೆ ಸುಲಭವಾದ ನಮ್ಮ ದೇಶದ ಕೂಲಿಯನ್ನು ತೆತ್ತು, ಯಂತ್ರಗಳಿಂದ ವಸ್ತುಗಳನ್ನು ನಿರ್ಮಿಸಿ, ಪಾಶ್ಚಾತ್ಯರ ಬೆಲೆಗಿಂತಲೂ ಕಡಿಮೆಯಾದ ಬೆಲೆಯಿಂದ ಇಲ್ಲೇ ಮಾರುವುದು ಏತಕ್ಕೆ ಸಾಧ್ಯವಲ್ಲ? ಧೈರ್ಯಸಾಹಸಗಳಿಂದ ನಮ್ಮ ದೇಶೀಯರೇ ಪ್ರತಿಯೊಂದು ಪದಾರ್ಥಗಳ ನಿರ್ಮಾಣವನ್ನೂ ಯಂತ್ರಗಳಿಂದಲೇ ಮಾಡಿಕೊಳ್ಳುತ್ತ ಬಂದರೆ, ಪರದೇಶದ ವಸ್ತುಗಳಿಗಿಂತಲೂ ನಮ್ಮ ದೇಶದ ಸರಕುಗಳೇ ಅಗ್ಗವಾಗಿ ದೊರೆಯುವುವು. ವೃಥಾ ವಾಗಾಡಂಬರದಿಂದ ಪರದೇಶವಸ್ತು ಬಹಿಷ್ಕಾರ ಮೊದಲಾದ ಚೇಷ್ಟೆಗಳನ್ನು ಮಾಡುವುದಕ್ಕಿಂತಲೂ ನಿಜವಾಗಿ ದೇಶಕ್ಕೆ ಕ್ಷೇಮವನ್ನು ಮಾಡಿಕೊಳ್ಳುವುದಕ್ಕೆ ಇದೇ ಸಮೀಚೀನವಾದ ಉಪಾಯವು. ಏಕೆಂದರೆ ತಮಗೆ ಗಿಟ್ಟದ ವ್ಯಾಪಾರವನ್ನು ಪರದೇಶಿಯರು ಹೇಗೆತಾನೇ ಮಾಡುವರು? ತಮ್ಮ ಸರಕುಗಳನ್ನು ಕಳುಹಿಸುವುದನ್ನು ಅವರಾಗಿ ನಿಲ್ಲಿಸಿಬಿಡಲೇ ಬೇಕಾಗುವುದು. ನಮ್ಮ ದೇಶವು ಕೈಗಾರಿಕೆಗೆ ಪ್ರಸಿದ್ಧವಾದುದಾದರೂ ಈಗಿನ ಯಂತ್ರೋಪಕರಣ ಪ್ರಭಾವದ ಯುಗದಲ್ಲಿ ಬರಿಯ ಕೈಗಾರಿಕೆಯ ಸಾಧನವು ಲಾಭಕರವಾಗುವುದಿಲ್ಲ. ಅದು ಕಾರಣ ನಮ್ಮ ಕೈಗಾರಿಕೆಯ ವಸ್ತುಗಳ ಅಭಿವೃದ್ಧಿಗೆ ಯಂತ್ರೋಪಕರಣಗಳ ಅಭಿವೃದ್ಧಿಯ ಹೊರತು ಬೇರೆ ಯೋಚನೆಯೊಂದೂ ಅಷ್ಟು ಪ್ರಯೋಜಕವಾಗಲಾರವು. ಅದುಕಾರಣ ನಮ್ಮ ದೇಶಕ್ಷೇಮವನ್ನೂ ಹಾರೈಸುವ ಧೀಮಂತರುಗಳಿಗೆ ಸರ್ಕಾರದ ಸಹಾಯವನ್ನೇ ಹಾರೈಸಿಕೊಂಡಿರುವುದಾಗಲಿ, ಸರ್ಕಾರದಯುದ್ಯೋಗಗಳನ್ನೂ ಬಯಸಿಯೇ ತಮ್ಮ ವಿದ್ಯಾಬುದ್ಧಿಶಕ್ತಿಗಳನ್ನೂ ವಿನಿಯೋಗಿಸುವುದಾಗಲಿ, ಸರ್ಕಾರದ ಮೇಲೆ ಸುಮ್ಮನೆ ಆಕ್ಷೇಪವನ್ನು ಮಾಡುತ್ತಿರುವುದಾಗಲಿ ಇಷ್ಟಾರ್ಥಲಾಭಕ್ಕೆ ಸಾಧಕವಲ್ಲ. ನಮ್ಮ ನಮ್ಮ ದೇಶದ ಶ್ರೀಮಂತರುಗಳು ತಮ್ಮ ಹಣವನ್ನು ಯಂತ್ರಾಲಯಗಳ ಸ್ಥಾಪನೆಗೆ ಉಪಯೋಗಿಸಿ, ಅವುಗಳಿಂದ ದೇಶೋಪಯುಕ್ತ ಪದಾರ್ಥಗಳನ್ನು ನಿರ್ಮಿಸಿ, ಸುಲಭವಾದ ಬೆಲೆಗೆ ಪ್ರಜೆಗಳಿಗೆ ದೊರೆಯುವಂತೆ ಮಾಡುವುದೇ ಉಪಯುಕ್ತವಾದ ಉಪಾಯವಾಗಿರುವುದು. ಅಂಥ ಸಹಾಸವು ಈಗೀಗ ನಮ್ಮ ದೇಶದಲ್ಲಿ ತಲೆಯೆತ್ತುತ್ತಿದೆ. ಆ ವಿಧವಾದ ಪ್ರಯತ್ನವೇ ಇನ್ನೂ ಗರಿಗಟ್ಟಿಕೊಳ್ಳುವಂತೆ ಮಾಡುವುದಕ್ಕೆ ಎಲ್ಲ ಸಭೆಗಳೂ ಉಪನ್ಯಾಸಕರೂ ಪ್ರೋತ್ಸಾಹಪಡಿಸುತ್ತ ಬಂದರೆ ಅವರುಗಳ ಶ್ರಮವೂ ಸಾರ್ಥಕವಾದೀತು.

ಪಾರ್ಲಿಮೆಂಟ್ ಸಭೆಯನ್ನು ದೊರೆಗಳು ಆರಂಭಿಸಿದುದು.

೫ ನೇ ಜಾರ್ಜ್ ದೊರೆಗಳು ರಾಜ್ಯಭಾರವನ್ನು ವಹಿಸಿಕೊಂಡಮೇಲೆ ಮೊದಲಿದ್ದ ಸಭೆಯು ವಿಸರ್ಜಿಸಲ್ಪಟ್ಟು ಹೊಸದಾಗಿ ನೇಮಿಸಲ್ಪಟ್ಟ ಸಭೆಯು ಕಳೆದ ತಾ॥ ೬ ನೇ ಸೋಮವಾರ ದೊರೆಗಳಿಂದ ಆರಂಭಿಸಲ್ಪಟ್ಟಿತು. ಆ ದಿವಸ ದೊರೆಗಳು ನೌಕಾಸೈನಿಕರ ಉಡುಪನ್ನು ಧರಿಸಿಕೊಂಡು, ಕಪ್ಪುಬಣ್ಣದ ಉಡುಪಿನಿಂದಲೂ ನಕ್ಷತ್ರಗಳೋಪಾದಿಯಲ್ಲಿ ಪ್ರಕಾಶಿಸುವ ವಜ್ರಾಭರಣಗಳಿಂದಲೂ ಸುಶೋಭಿತರಾದ ರಾಣಿ ಮೇರಿಯವರೊಡನೆ ದಿವ್ಯವಾದ ಎಂಟು ಕುದುರೆಗಳನ್ನೂಡಿದ ರಥದಲ್ಲಿ ಕುಳಿತು ಸಮಸ್ತ ರಾಜಮರ್ಯಾದೆಯೊಡನೆ ರಾಜವೀಧಿಯಲ್ಲಿ ಉತ್ಸವಗೊಂಡು ಪಾರ್ಲಿಮೆಂಟ್ ಸಭಾಮಂದಿರಕ್ಕೆ ದಯಮಾಡಿಸಿದರು. ಮಾರ್ಗದ ಇಕ್ಕೆಲದಲ್ಲಿ ಜನರು ಕಿಕ್ಕಿರಿದು ನಿಂತು ರಾಜದಂಪತಿಗಳನ್ನೋಡಿ ಆನಂದಭರಿತರಾಗಿ ಕೋಲಾಹಲಧ್ವನಿಯನ್ನು ಮಾಡಿದರು. ರಾಜದಂಪತಿಗಳು ಸಭಾಮಂದಿರಕ್ಕೆ ಬರುತ್ತಲೆ ಮಂತ್ರಿಗಳೂ, ಸಭಾಸ್ತರರೂ ಮರ್ಯಾದಿಸಿ ಕರೆದುಕೊಂಡು ಬಂದು ಸಿಂಹಾಸನದ ಮೇಲೆ ಕುಳ್ಳಿರಿಸಿ ತಂತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರು. ರಾಜಬಂಧುಗಳಲ್ಲಿ ಡ್ಯೂಕ್ ಆಫ್ ಕನಾಟ್ ದಂಪತಿಗಳು ಮಾತ್ರ ಸಭೆಗೆ ದಯಮಾಡಿಸಿದ್ದರು. ಸಭಾಕಾರ್ಯಾರಂಭದಲ್ಲಿ ದೊರೆಗಳು ಮಾಡಿದ ಭಾಷಣದ ಮುಖ್ಯಾಂಶವೇನೆಂದರೆ:—ನನ್ನ ಪ್ರಿಯತಂದೆಯವರ ಮರಣದಿಂದ ರಾಜ್ಯಕ್ಕುಂಟಾದ ಅಶಕ್ಯವಾದ ನಷ್ಟವು ನನ್ನ ಧ್ಯಾನದಲ್ಲಿ ಅತಿಶಯವಾಗಿರುತ್ತದೆ. ಆದರೆ ದೈವಾಜ್ಞೆಗೆ ಶಿರಬಾಗಿ ಧೈರ್ಯವನ್ನವಲಂಬಿಸಿರುತ್ತೇನೆ. ಮತ್ತೂ ನನ್ನ ರಾಜ್ಯದ ಎಲ್ಲ ಭಾಗದ ಜನರು ತೋರಿಸಿದ ಸಾನುಭೂತಿಯಿಂದ ದುಃಖವು ಕಡಿಮೆಯಾಗಿರುತ್ತದೆ. ರಾಜಕಾರ್ಯದ ಮೇಲೆ ದಕ್ಷಿಣ ಆಫ್ರಿಕಾಕ್ಕೆ ಹೋಗಿದ್ದ ಡ್ಯೂಕ್ ಆಫ್ ಕನಾಟರನ್ನು ಹಿಂದಕ್ಕೆ ಬರಮಾಡಿಕೊಂಡಿರುತ್ತೇನೆ. ನಮಗೆ ಸೇರಿದ ದಕ್ಷಿಣಾಫ್ರಿಕಾ ರಾಜ್ಯದ ಪ್ರತಿಯೊಂದು ಭಾಗದ ಜನರೂ ವಿಶೇಷವಾದ ರಾಜಭಕ್ತಿ ವಿಶ್ವಾಸದಿಂದ ಅವರನ್ನು ಕಂಡು ಮನ್ನಿಸಿದರೆಂದು ತಿಳಿದು ನನಗೆ ಪರಮಾನಂದವಾಗಿರುತ್ತದೆ. ಇತರ ರಾಜ್ಯದವರ ಕೂಡ ನಮಗಿರತಕ್ಕ ಸಂಬಂಧವು ಮೈತ್ರಿಭಾವದಿಂದ ನಡೆದುಕೊಂಡು ಬರುತ್ತಿದೆ. ವ್ಯಾಪಾರ ಮತ್ತೂ ನೌಕಾಸಂಬಂಧವಾಗಿ ನಾವು ಜಪಾನ್ ರಾಜ್ಯದವರೊಡನೆ ೧೮೯೪ ರಲ್ಲಿ ಮಾಡಿಕೊಂಡಿದ್ದ ಒಡಂಬಡಿಕೆಯ ಅವಧಿಯು ಮುಗಿದುಹೋದುದರಿಂದ, ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳಲು ಪ್ರಯತ್ನವು ನಡೆದಿದೆ. ಇದು ಅನುಕೂಲವಾಗಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ದಕ್ಷಿಣ ಪರ್ಷಿಯ ರಾಜ್ಯದಲ್ಲಿ ವ್ಯಾಪಾರಕ್ಕಾಗಿ ಗೊತ್ತಾಗಿರತಕ್ಕ ಮಾರ್ಗಗಳ ಸ್ಥಿತಿಯು ಈಚೆಗೆ ಕೊಂಚ ಉತ್ತಮವಾಗಿರುತ್ತದೆ. ಪರ್ಷಿಯ ಸರ್ಕಾರದ ಅಧಿಕಾರವು ಸುದಾರಿಸಲ್ಪಟ್ಟು ವ್ಯಾಪಾರವು ರಕ್ಷಿಸಲ್ಪಡಬೇಕೆಂಬುದೇ ನಮ್ಮ ಮಂತ್ರಿಗಳ ಅಭಿಪ್ರಾಯವಾಗಿರುವುದು. ನಮ್ಮ ಅಧಿಕಾರಕ್ಕೊಳಪಟ್ಟ ಬೇರೆಬೇರೆ ಸರ್ಕಾರದವರು ಸೂಚಿಸಿರುವ ಅವಶ್ಯಕವಾದ ವಿಷಯಗಳನ್ನು ಪರ್ಯಾಲೋಚಿಸಲು ಬರುವ ಮೇ ತಿಂಗಳಲ್ಲಿ ನನ್ನ ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳು ಸಭೆ ಸೇರುವರು. ಅದರ ಫಲಿತಾಂಶವನ್ನು ನಾನು ಆತುರದಿಂದ ನಿರೀಕ್ಷಿಸುತಲಿದ್ದೇನೆ. ನನ್ನ ಕಿರೀಟಧಾರಣ ಮಹೋತ್ಸವವು ನಡೆದ ಮೇಲೆ ಭರತಖಂಡಕ್ಕೆ ಹೋಗಿ ಭರತಖಂಡದ ಚಕ್ರಾಧಿಪತ್ಯವನ್ನು ವಹಿಸಿಕೊಂಡಿರುವೆನೆಂದು ಪ್ರತ್ಯಕ್ಷತಃ ಅಲ್ಲಿಯ ಪ್ರಜೆಗಳಿಗೆ ತಿಳಿಯಪಡಿಸಲು ಒಂದು ದರ್ಬಾರ

ನ್ನ ನಡೆಸಬೇಕೆಂಬುದು ನನ್ನ ಅಭಿಲಾಷೆಯಾಗಿದೆ. ಹೌಸ್ ಆಫ್ ಲಾರ್ಡ್ಸ್ ಮತ್ತೂ ಹೌಸ್ ಆಫ್ ಕಾಮನ್ಸ್ ಸಭೆಗಳಿಗಿರತಕ್ಕ ಪರಸ್ಪರ ವಿರೋಧಾಭಿಪ್ರಾಯವು ಹೋಗಿ ಸುಲಲಿತವಾಗಿ ಕಾರ್ಯಗಳು ನಡಿಯಲು ತಕ್ಕ ಸೂಚನೆಗಳು ಕೂಡಲೇ ನಿಮ್ಮ ಮುಂದಿಡಲ್ಪಡುವುವು."

ಮೇಲ್ಕಂಡ ಭಾಷಣದಲ್ಲಿ ಮಹತ್ತಾದ ವಿಷಯಗಳೇನೂ ಇಲ್ಲದಿದ್ದಾಗ್ಯೂ ಚಕ್ರವರ್ತಿಯವರು ಭರತಖಂಡಕ್ಕೆ ದಯಮಾಡಿಸಲು ಸಂಕಲ್ಪಿಸಿರುವ ಅಂಶವು ಮಾತ್ರ ಭಾರತೀಯರಿಗೆ ಪರಮಾನಂದದಾಯಕವಾಗಿದೆ. ಈರೀತಿ ಭರತಖಂಡದ ಚಕ್ರಾಧಿಪತ್ಯವನ್ನು ವಹಿಸಿಕೊಂಡ ಆಂಗ್ಲ ಪ್ರಭುಗಳಲ್ಲಿ ಯಾರೂ ಈವರೆಗೆ ಭರತಖಂಡಕ್ಕೆ ಪ್ರತ್ಯಕ್ಷವಾಗಿ ಬಂದು ಇಲ್ಲಿಯ ಪ್ರಜೆಗಳ ಮೇಲೆ ತಮಗಿದ್ದ ವಿಶ್ವಾಸವನ್ನು ತೋರ್ಪಡಿಸ ಯತ್ನಿಸಿರಲಿಲ್ಲ. ಆದರೆ ಜಾರ್ಜ್ ಪ್ರಭುಗಳು ಕಿರೀಟಧಾರಣವನ್ನು ಮಾಡಿದ ಕೊಂಚಕಾಲದಲ್ಲೇ ಭರತಖಂಡಕ್ಕೆ ದಯಮಾಡಿಸಿ ಡಿಲ್ಲಿಯಲ್ಲಿ ಒಂದು ದೊಡ್ಡ ದರ್ಬಾರನ್ನು ನಡಿಸಿ ಈ ದೇಶೀಯರೂ ಉತ್ಸವದಲ್ಲಿ ಭಾಗಿಗಳಾಗಲು ಅವಕಾಶವನ್ನುಂಟುಮಾಡಿ ಕೊಟ್ಟಿರುವುದರಿಂದ ಪ್ರಭುಗಳು ತಮ್ಮ ಭಾರತ ಪ್ರಜೆಗಳನ್ನು ಎಷ್ಟರಮಟ್ಟಿಗೆ ಪ್ರೀತಿಸುವರೆಂಬುದು ವ್ಯಕ್ತವಾಗುತ್ತದೆ. ಭಾರತೀಯರಾದರೊ ತಮ್ಮ ಪ್ರಭುಗಳು ಪ್ರಜಾಭಿಮಾನದಿಂದ ದೇಹಶ್ರಮವನ್ನೂ ಲಕ್ಷಿಸದೆ ಬಹುದೂರ ಪ್ರಯಾಣ ಮಾಡಿ ತಮಗೆ ದರ್ಶನವನ್ನೀಯಲು ಅಭೂತಪೂರ್ವವಾದ ಸಂಕಲ್ಪವನ್ನು ಮಾಡಿರುವುದಕ್ಕಾಗಿ ಆನಂದಭರಿತರಾಗಿ ಪ್ರಭುಗಳ ಪ್ರಜಾವಾತ್ಸಲ್ಯವನ್ನು ಕುರಿತು ಕೊಂಡಾಡುವರು. ಕಪುರ್ಥಲಾ ಮಹಾರಾಜರು ತಮ್ಮ ಪುತ್ರರ ವಿವಾಹಮಹೋತ್ಸವಕಾಲದಲ್ಲಿ ಅನೇಕ ರಾಜರುಗಳೂ ದೊಡ್ಡಮನುಷ್ಯರುಗಳೂ ನೆರದಿರುವಾಗ್ಗೆ ಚಕ್ರವರ್ತಿಗಳಿಗೆ ತಮ್ಮ ಭಾರತಪ್ರಜೆಗಳಲ್ಲಿ ವಿಶೇಷವಾದ ಪ್ರೀತಿಯು ಇರುತ್ತದೆಂಬುದಕ್ಕೆ ಅವರ ಭರತಖಂಡದ ಆಗಮನವೆ ಒಳ್ಳೇ ನಿದರ್ಶನವಾಗಿದೆಯೆಂದು ಈ ದೇಶೀಯರಿಂದ ಭಾವಿಸಲ್ಪಟ್ಟಿರುತ್ತದೆಂದು ಹೇಳಿರುವರು.

ವೀರಶೈವರ ಸಂಸ್ಕೃತ ಕಾಲೇಜು.

ಮೈಸೂರ್ ದೇಶದ ವೀರಶೈವ ವಿದ್ಯಾರ್ಥಿಗಳಿಗೆ ಸರ್ಕಾರಿ ಸಂಸ್ಕೃತ ಪಾಠಶಾಲೆಗಳಲ್ಲಿ ಪ್ರವೇಶವು ದೊರೆಯದಿರುವುದರಿಂದ ಅವರ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಇರತಕ್ಕ ತೊಂದರೆಯು ಬೀರೂರು ಮ॥ ರಾ॥ ಶ್ರೀಮಂತ ಪತ್ರೆ ವೀರಪ್ಪನವರ ಗಮನಕ್ಕೆ ಬಂದು ಅವರು ಕಳೆದ ದಸರಾ ಮಹೋತ್ಸವಕಾಲದಲ್ಲಿ ರಾಜಧಾನಿಗೆ ದಯಮಾಡಿಸಿದ್ದಾಗ್ಗೆ ಇಲ್ಲಿಯ ವೀರಶೈವ ಪ್ರಮುಖರ ಸಭೆಯೊಂದನ್ನು ಕೂಡಿಸಿ ವೀರಶೈವರಿಗಾಗಿ ಒಂದು ಸಂಸ್ಕೃತ ಕಾಲೇಜನ್ನು ಸ್ಥಾಪಿಸಲು ಒಂದು ಧನರಾಶಿಯನ್ನು ಕೂಡಿಸಬೇಕೆಂದು ಹೇಳಿದುದಲ್ಲದೆ ಅದಕ್ಕಾಗಿ ತಾವು ೩೦ ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದಂಶವು ಈ ಮೊದಲೆ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ಈ ವಿದ್ಯಾಭಿಮಾನಿಗಳಾದ ಧರ್ಮಾತ್ಮರು ಕಳೆದ ತಾ॥ ೩ ರಲ್ಲಿ ಬೆಂಗಳೂರು ರಾ॥ ಬ॥ ಗುಬ್ಬಿತೋಟದಪ್ಪನವರ ಛತ್ರಕ್ಕೆ ಅಲ್ಲಿಯ ಸೆಟ್ಟಿ ಯಜಮಾನರು ಮೊದಲಾದ ವೀರಶೈವ ಪ್ರಮುಖರನ್ನು ಬರಮಾಡಿಕೊಂಡು ತಮ್ಮ ಸಂಕಲ್ಪವನ್ನು ಅವರಿಗೆ ತಿಳುಹಿಸಿ ಅವರ ಅಭಿಪ್ರಾಯದಂತೆ ಬೆಂಗಳೂರಿನಲ್ಲಿ ಸಂಸ್ಕೃತ ಕಾಲೇಜನ್ನು ಸ್ಥಾಪಿಸತಕ್ಕದೆಂದು ನಿರ್ಧರಿಸಿದುದಲ್ಲದೆ ತಾವು ವಾಗ್ದಾನ ಮಾಡಿರುವ ೩೦೦೦೦ ರೂಪಾಯಿಗಳನ್ನು ಕೂಡಲೆ ಮೈಸೂರು ಲಿಂಗಾಯಿತ ವಿದ್ಯಾವರ್ಧಕ ಫಂಡಿನ ಅಧ್ಯಕ್ಷರಾದ ಒಂದನೇ ಕೌನ್ಸಿಲರ್ ಮ॥ ರಾ॥ ಪುಟ್ಟಣ್ಣಸೆಟ್ಟರ ವಶಕ್ಕೆ ಸಲ್ಲಿಸಿಬಿಡುತ್ತೇನೆಂದು ಹೇಳಿ, ಆ ಪ್ರಕಾರ ಈಗ ಸಂಸ್ಥಾನ ಸಂಬಾರದಲ್ಲಿರುವ ಮ॥ ರಾ॥ ಸೆಟ್ಟರಿಗೂ ಕಾಗದದ ಮೂಲಕ ಶೃತಪಡಿಸಿದರು. ಮ॥ ವೀರಪ್ಪನವರು ಪೂರ್ಣ ಶ್ರೀಮಂತರು, ಒಳ್ಳೇ ಆಚಾರಶೀಲರು, ದೈವಭಕ್ತರು, ಸಾಧುಗಳು, ಸರಳಹೃದಯರು, ಮಿತಭಾಷಿಗಳು ಮತ್ತೂ ನಿಗರ್ವಶಿರೋಮಣಿಗಳು. ಈ ದೊಡ್ಡಮನುಷ್ಯರು ತಮ್ಮ ಸದ್ಗುಣಕ್ಕೆ ತಕ್ಕಂತೆ ಸದ್ಧರ್ಮವನ್ನು ಮಾಡಬೇಕೆಂಬ ಸಂಕಲ್ಪವನ್ನು ಸ್ವಮತೀಯರ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಉದಾರ ಬುದ್ಧಿಯಿಂದ ೩೦೦೦೦ ರೂಪಾಯಿಗಳನ್ನು ಕೊಡಲು ವಾಗ್ದಾನ ಮಾಡಿರುವುದು ಬಹು ಸ್ತುತ್ಯವಾದುದೇ ಸರಿ. ಮತ್ತೂ ಇವರು ಸಂಸ್ಕೃತ ಕಾಲೇಜು ಸ್ಥಾಪಿತವಾದ ಮೇಲೆ ಅದರ ಪುರೋವೃದ್ಧಿಯನ್ನು ನೋಡಿ ಕೊಂಡು ಈಗ ಕೊಡುವುದಕ್ಕಿಂತ ಎರಡು ಮೂರರಷ್ಟು ಹೆಚ್ಚಾಗಿ ಧನಸಹಾಯ ಮಾಡುವರೆಂಬುದರಲ್ಲಿ ಸಂದೇಹವಿಲ್ಲವು. ಈ ಧರ್ಮಿಷ್ಠರು ಹಾಕಿಕೊಟ್ಟ ಮೇಲುಪಙ್ಕ್ತಿಯನ್ನನುಸರಿಸಿ ಇತರ ವೀರಶೈವ ಬಂಧುಗಳು ಈ ಸಂಸ್ಕೃತ ಕಾಲೇಜಿನ ಸ್ಥಾಪನೆಗಾಗಿ ತಮ್ಮ ಶಕ್ತಿಮೀರಿ ನಿರ್ವಂಚನೆಯಿಂದ ದ್ರವ್ಯಸಹಾಯ ಮಾಡಿ ಕೀರ್ತಿಭಾಜನರಾಗಬೇಕೆಂದು ಇಚ್ಛಿಸುತ್ತೇವೆ.

ಕಿರೀಟಧಾರಣಮಹೋತ್ಸವ ಸಂಬಂಧವಾದ ದರ್ಬಾರು ದೆಹಲಿಯಲ್ಲಿ ಬರುವ ಮೊಹರಂ ಹಬ್ಬಕ್ಕೆ ಮೊದಲು ಅಂದರೆ ಡಿಶಂಬರ್ ತಾ॥ ೧ ರೊಳಗೆ ನಡೆಯಬಹುದಾಗಿದೆ. ಚಕ್ರವರ್ತಿ ದಂಪತಿಗಳು ಸೀಮೆಯಿಂದ ಹೊರಟು ನೆಟ್ಟಗೆ ಬೊಂಬಾಯಿಗೆ ಬಂದು ಇಳಿದು ಅಲ್ಲಿಂದ ದಿಲ್ಲಿಗೆ ಪ್ರಯಾಣ ಮಾಡಿ ಅಲ್ಲಿ ದರ್ಬಾರನ್ನು ತೀರಿಸಿಕೊಂಡು ನೇಪಾಳಕ್ಕೆ ಹೋಗಿ ಅಲ್ಲಿಂದ ಕಲ್ಕತ್ತಾಕ್ಕೆ ಬಂದು ಜನವರಿ ಮಧ್ಯಭಾಗದಲ್ಲಿ ಸೀಮೆಗೆ ಹಿಂತಿರುಗಿ ಪ್ರಯಾಣ ಮಾಡುವವರಾಗಿರುವರು. ಚಕ್ರವರ್ತಿಯವರು ಮಹೋತ್ಸವವನ್ನು ತೀರಿಸಿಕೊಂಡು ಸ್ವದೇಶಕ್ಕೆ ಹಿಂತಿರುಗುವಾಗ್ಗೆ ತಮ್ಮ ಸಂಸ್ಥಾನಗಳಿಗೆ ಬಂದು ಹೋಗಬೇಕೆಂದು ಅನೇಕ ದೇಶೀಯ ರಾಜರು ಕುತೂಹಲಪಡುತ್ತಿದ್ದಾರೆ. ಆ ಪ್ರಕಾರ ಹೈದರಾಬಾದಿನ ನೈಜಾಂರವರು ಚಕ್ರವರ್ತಿಯವರಿಗೆ ನಿಮಂತ್ರಣವನ್ನು ಕೊಟ್ಟಿರುವುದಾಗಿಯೂ, ಬರೋಡಾ ಮತ್ತೂ ಕೆಲ ಸಂಸ್ಥಾನಾಧೀಶರು ಇಷ್ಟರಲ್ಲೇ ಕೊಡುವವರಾಗಿರುವುದಾಗಿಯೂ ವರ್ತಮಾನವಿದೆ. ಆದರೆ ಈ ದೇಶೀಯ ರಾಜರುಗಳ ಪ್ರಾರ್ಥನೆಯನ್ನು ಚಕ್ರವರ್ತಿಯವರು ನೆರವೇರಿಸಲು ವ್ಯವಧಾನವಿರುವುದೊ ಇಲ್ಲವೊ ? ತಿಳಿಯಬೇಕಾಗಿದೆ.

ಒಳದೇಶದ ವೃತ್ತಾಂತ.

೧ ನೇ ಕೌನ್ಸಿಲರ್ ಮ॥ ಎಚ್. ವಿ. ನಂಜುಂಡಯ್ಯನವರು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಸಂಚರಿಸಿಕೊಂಡು ಬರಲು ನೆನ್ನೆಯ ಬೆಳಗ್ಗೆ ಪೂನಾಕ್ಕೆ ಹೊರಟ ಬಂಡಿಯಲ್ಲಿ ಪ್ರಯಾಣ ಮಾಡಿದರು. ಇವರು ಈ ತಾ॥ ೨೮ ರಲ್ಲಿ ಬೆಂಗಳೂರಿಗೆ ಹಿಂತಿರುಗಿ ಬರುವವರಾಗಿರುವರು.

ಚಿಕ್ಕಮಗಳೂರಲ್ಲಿ ಶ್ರೀಮದ್ಯುವರಾಜರ ವಿವಾಹಮಹೋತ್ಸವದ ಜ್ಞಾಪಕಾರ್ಥವಾಗಿ ಅವರ ಹೆಸರಿನಮೇಲೆ ಒಂದು ಟವರ್‌ಹಾಲನ್ನು ಕಟ್ಟಲು ಚಂದಾಹಣವು ಕೂಡಿಸಲ್ಪಡುತ್ತಿರುವುದು. ವೀರಶೈವರ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ೩೦೦೦೦, ರೂ. ಗಳನ್ನು ಸಹಾಯ ಮಾಡಿದಂಥ ವೀರೂರಿನ ಮ॥ ಶ್ರೀಮಂತ ಪತ್ರೆ ವೀರಪ್ಪನವರು ಈ ಟವರ್ ಹಾಲ್ ಕಟ್ಟಡಕ್ಕಾಗಿ ೩೦೦೦ ರುಪಾಯಿಗಳನ್ನು ಕೊಟ್ಟಿರುವರೆಂದು ತಿಳುಹಲು ಹರ್ಷವಾಗುತ್ತದೆ.

ಕಳೆದ ತಾ॥ ೩ ರಲ್ಲಿ ಅರಸೀಕೆರೆಯ ರೈಲ್ವೆ ಸ್ಟೇಷನ್ನಿನಿಂದ ಒಬ್ಬ ಬಂಡಿಯವನು ಸಾಮಾನನ್ನು ತುಂಬಿಕೊಂಡು ಒಬ್ಬ ವರ್ತಕನ ಮನೆಗೆ ಹೋಗುತ್ತಿರುವಾಗ್ಗೆ ಬಂಡಿಯ ಚಕ್ರವು ಮಾರ್ಗದಲ್ಲಿ ಒಂದು ಹಳ್ಳಕ್ಕೆ ಬಿದ್ದು ಬಂಡಿಯು ಮಗುಚಿಕೊಂಡಿತು. ಮತ್ತೂ ಬಂಡಿಯನ್ನು ಹೊಡೆಯುತಲಿದ್ದವನ ಬಲಗಾಲು ಚಕ್ರದೊಳಗೆ ಸಿಕ್ಕಿ ಮುರಿದುಹೋಯಿತು. ಅವನ ಬಂಧುಗಳು ಅವನನ್ನು ಆ ಕೂಡಲೆ ಬೆಂಗಳೂರ ವಿಕ್ಟೋರಿಯಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದರು. ಈಗ ಅವನಿಗೆ ಗುಣಮುಖವಾಗಿದೆ.

ಕಳೆದ ತಾ॥ ೮ ರಲ್ಲಿ ಬೆಂಗಳೂರಿಂದ ಪೂನಾಕ್ಕೆ ಹೊರಟ ರೈಲುಬಂಡಿಯಲ್ಲಿ ಪ್ರಯಾಣ ಮಾಡುತಲಿದ್ದ ಒಬ್ಬ ಮಹಮ್ಮದೀಯ ಹುಡುಗನು ದೊಡ್ಡಬಳ್ಳಾಪುರದ ರೈಲ್ವೆ ಸ್ಟೇಷನ್ನಿನಿಂದಾಚೆ ಕೊಂಚದೂರದಲ್ಲಿ ಬಂಡಿಯಿಂದ ಹೊರಗೆ ಬಿದ್ದುಬಿಟ್ಟನು. ಅವನ ಕೂಡ ಪ್ರಯಾಣ ಮಾಡುತಲಿದ್ದ ಯಜಮಾನನು ಈ ಅನಾಹುತವನ್ನು ಕಂಡು ಕೂಡಲೆ ಅಪಾಯ ಸೂಚಕವಾದ ತಂತಿಯನ್ನು ಹಿಡಿದೆಳೆದು ಬಂಡಿಯನ್ನು ನಿಲ್ಲಿಸಿ ಆ ಹುಡುಗನನ್ನು ಎತ್ತಿಕೊಂಡು ಬಂಡಿಯಲ್ಲಿ ಕುಳಿತುಕೊಂಡನು. ಆದರೆ ದೈವಾನುಗ್ರಹದಿಂದ ಅಪಾಯವೇನೂ ಆಗಲಿಲ್ಲವು.

ಮೈಸೂರ ಸರ್ಕಾರದವರು ಸಂಸ್ಥಾನದಲ್ಲಿರುವ ಕೈಗಾರಿಕೆಯ ಪಾಠಶಾಲೆಗಳನ್ನು ಅಭಿವೃದ್ಧಿಗೆ ತರಲು ತಕ್ಕ ಉಪಾಯವನ್ನು ಆಲೋಚಿಸತಕ್ಕ ಬಗೆಗಾಗಿ ಒಂದು ಸಂಘವನ್ನೇರ್ಪಡಿಸಿ ಅದಕ್ಕೆ ಮ॥ ರಾ॥ ಗಳಾದ ಚೀಫ್ ಇಂಜನೀರ್ ಎಂ. ವಿಶ್ವೇಶ್ವರಯ್ಯನವರನ್ನು ಪ್ರೆಸಿಡೆಂಟರನ್ನಾಗಿಯೂ, ವಿದ್ಯಾಭ್ಯಾಸದ ಇ॥ ಜ॥ ಮೆ॥ ಪೀರ್‌ರವರು, ಎಕ್ಸಿಕ್ಯೂಟಿವ್ ಇಂಜನೀರ್ ವಿ. ರಂಗಸ್ವಾಮಯ್ಯಂಗಾರರು, ಬೆಂಗಳೂರ ಗ॥ ಸ್ಕೂಲ್ ಹೆಡ್ಮಾಸ್ಟರ್ ಸಿ. ಕೃಷ್ಣರಾಯರು ಮತ್ತೂ ಮೈಸೂರ ಇಂಡಸ್ಟ್ರಿಯಲ್ ಸ್ಕೂಲಿನ ಸೂಪರಿಂಟೆಂಟ್ ಜಿ. ಸುಬ್ಬಸ್ವಾಮಯ್ಯರು ಇವರುಗಳನ್ನು ಮೆಂಬರುಗಳನ್ನಾಗಿಯೂ ಗೊತ್ತು ಮಾಡಿರುತ್ತಾರೆ.

ಶ್ರೀಶೃಂಗೇರಿಸ್ವಾಮಿಗಳು ಸಮುದ್ರಯಾನಮಾಡಿ ಬಂದವರನ್ನು ಪ್ರಾಯಶ್ಚಿತ್ತಮೂಲಕ ಜಾತಿಗೆ ಸೇರಿಸಿಕೊಳ್ಳುವ ವಿಷಯದಲ್ಲಿ ಮೈಸೂರ ಸಂಸ್ಥಾನದಲ್ಲಿರುವ ತ್ರಿಮತಸ್ಥಮಠೀಯರುಗಳಭಿಪ್ರಾಯವನ್ನು ತೆಗೆದುಕೊಂಡು, ಸಮುದ್ರಯಾನ ಮಾಡಿಬಂದಂಥಾವರು ಪ್ರಾಯಶ್ಚಿತ್ತವನ್ನು ಹೊಂದಿದಾಗ್ಯೂ ಸವ್ಯವಹಾರಕ್ಕರ್ಹರಲ್ಲವೆಂದು ಬರೆದು ಕಳುಹಿರುವ ಶ್ರೀಮುಖವು ರಾಜಧಾನಿಯ ತ್ರಿನಯನೇಶ್ವರ ದೇವಸ್ಥಾನದಲ್ಲಿ ಕೂಡಿದ್ದ ಬ್ರಾಹ್ಮಣ ಸಭೆಯಲ್ಲಿ ವೇ॥ ವಿಭಾಗಶಾಸ್ತ್ರಿಗಳಿಂದೋದಲ್ಪಟ್ಟು ಅಲ್ಲಿ ನೆರದಿದ್ದವರೆಲ್ಲರೂ ಆ ರೀತಿ ನಡೆದುಕೊಳ್ಳುವುದಾಗಿ ಒಪ್ಪಿಕೊಂಡಂತೆ ಕೇಳುತ್ತೇವೆ, ಈ ವಿಧವಾದ ಅಭಿಪ್ರಾಯದಿಂದ ಸಮುದ್ರಯಾನವು ಶ್ರೀಗಳವರಿಗೆ ಸಮ್ಮತವಲ್ಲವೆಂದು ವ್ಯಕ್ತವಾಗುತ್ತದೆಯೆವಿನಾ ಸಮುದ್ರಯಾನವು ಶಾಸ್ತ್ರರೀತ್ಯಾನಿಷಿದ್ಧವೆಂದು ಸಿದ್ಧಾಂತಗೊಳಿಸಿದಂತಾಗಲಿಲ್ಲವು.

ಮೈಸೂರ್ ಗೆಜೆಟ್ ಸಂಗ್ರಹ.

ಹೊಳಲ್ಕೆರೆ ತಾ॥ ಅಮಲ್ದಾರ್ ಮೆ॥ ಅಬ್ದುಲ್ ಹಕೀಂರವರಿಗೆ ಹಿಂದೆ ಕೊಟ್ಟಿದ್ದ ಪ್ರಿವಿಲೇಜ್ ರಜದೊಡನೆ ೩ ತಿಂಗಳ ಫರ್ಲೋ ರಜವು ಕೊಡಲ್ಪಟ್ಟಿದೆ. ಈ ರಜಾಕಾಲದಲ್ಲಿ ಮೆ॥ ಕೆ. ವೇದಾಂತ ಅಯ್ಯಂಗಾರ್, ಬಿ. ಎ. ಯವರು ಆ॥ ಅಮಲ್ದಾರರಾಗಿರತಕ್ಕದು.

ಚೀಫ್‌ಕೋರ್ಟಿನ ಡೆಪ್ಯುಟಿಕ್ಲಾರ್ಕ್ ಮ॥ ಡಿ. ಅಳಸಿಂಗ್ರಾಚಾರ್ ಬಿ. ಎ. ಬಿ. ಎಲ್., ರವರು ಕಡೇ ತರಗತಿಯ ಅಡಿಷನಲ್ ಮುನಸೀಫರಾಗಿ ಒಂದು ವರ್ಷಕಾಲ ಅನಿತ್ಯವಾಗಿ ನೇಮಿಸಲ್ಪಟ್ಟಿರುತ್ತಾರೆ. ಇವರು ೧೯೧೧ ಫೆಬ್ರವರಿ ತಾ॥ ೨೫ ರಿಂದ ತಮ್ಮ ಅ॥ ಮುನಸೀಫ್ ಕೋರ್ಟನ್ನು ಚಿಕ್ಕಬಳ್ಳಾಪುರದಲ್ಲಿ ಮಾಡತಕ್ಕದು. ಮತ್ತೂ ಚಿಕ್ಕಬಳ್ಳಾಪುರದ ಮುನಸೀಫರಿಗೆ ಅಧಿಕಾರವಿರತಕ್ಕ ತಾಲೋಕುಗಳ ಮೇಲೆ ತಮ್ಮಧಿಕಾರವನ್ನಡೆಸತಕ್ಕದು. ಈ ಉಭಯ ಮುನಸೀಫರುಗಳು ಮಾಡಬೇಕಾದ ಕೆಲಸವು ಆಗಾಗ್ಗೆ ಚೀಫ್ ಕೋರ್ಟಿನವರಿಂದ ಹಂಚಾಕಲ್ಪಡುವುದು.

ಬೆಂಗಳೂರ ಡಿ॥ ನಲ್ಲಿ ಇನಾಕ್ಯುಲೇಷನ್ ಉದ್ಯೋಗದ ಮೇಲೆ ನೇಮಿಸಲ್ಪಟ್ಟಿದ್ದ ಸ॥ ಅ॥ ಸರ್ಜನ್ ಮ॥ ಪಿ. ಎಸ್., ರಾಮಚಂದ್ರಯ್ಯರು ಚಿತ್ರದುರ್ಗ ಡಿ॥ ನಲ್ಲಿ ಇನಾಕ್ಯುಲೇಷನ್ ಉದ್ಯೋಗದ ಮೇಲೆ ನೇಮಿಸಲ್ಪಟ್ಟಿರುತ್ತಾರೆ.

ಸ॥ ಅ॥ ಸರ್ಜನ್ ಮೆ॥ ಸಿ. ಕುಪ್ಪುಸ್ವಾಮಿಪಿಳ್ಳೆಯವರು ಬೆಂಗಳೂರ್‌ಸಿಟಿ ಹೆಲ್ತಾಫೀಸರ ಅಧೀನದಲ್ಲಿ ಇನಾಕ್ಯುಲೇಷನ್ ಕೆಲಸ ಮಾಡಲು ನೇಮಿಸಲ್ಪಟ್ಟಿರುತ್ತಾರೆ.

ವರ್ತಮಾನ ಸಂಗ್ರಹ.

ಕಳೆದ ತಿಂಗಳು ತಾ॥ ೨೩ ರಲ್ಲಿ ಕಾಶಿಯಲ್ಲಿ ಬಿದ್ದ ಮಳೆಯಿಂದ ಪೈರಿಗೆ ತುಂಬಾ ನಷ್ಟವಾಗಿದೆ.

ಕಳೆದ ತಿಂಗಳು ತಾ॥ ೨೩ ರಲ್ಲಿ ವೈಸ್‌ರಾಯರು ಆ॥ ಗೋಖಲೆ, ಸಿನ್ಹ, ಮಾಳವ್ಯರವರಿಗೆ ಸಂದರ್ಶನವನ್ನಿತ್ತು ಸಂಭಾಷಿಸಿದರು.

ಕಳೆದ ತಾ॥ ೩೧ ರಲ್ಲಿ ಸಿಂಲಾದಲ್ಲಿ ಮಂಜು ೩ ಅಂಗುಲದ ಮಂದಕ್ಕೆ ಭೂಮಿಯ ಮೇಲೆ ಸುರಿದಿದ್ದಿತು. ಅಲ್ಲಿ ಈಗ ಚಳಿಯು ವಿಪರೀತವಾಗಿದೆ.

ಅಲಹಾಬಾದಿನ ವಸ್ತುಪ್ರದರ್ಶನಶಾಲೆಯಲ್ಲಿ ನಡೆಯುವ ನಾನಾ ವಿಧವಾದ ವಿನೋದವನ್ನು ನೋಡಲು ಕಳೆದ ತಾ॥ ೩ ರವರೆಗೆ ೪೧೦೦೦೦, ಜನರು ಬಂದಿದ್ದರು.

ಫ್ರಾನ್ಸಿನಲ್ಲಿ ಇಬ್ಬರು ಆಕಾಶನಾವಿಕರು ಸೇನೆಗೆ ಸಂಬಂಧಪಟ್ಟ ನಾವೆಯಲ್ಲಿ ಕುಳಿತು ಪರೀಕ್ಷಿಸುತಿರುವಾಗ್ಗೆ, ಅದರ ರೆಕ್ಕೆಗಳು ಬಿದ್ದುಹೋಗಿ, ಇಬ್ಬರೂ ಕೆಳಗೆ ಬಿದ್ದು ಹತರಾದರು.

ಈಗಿನ ಸರ್ ಆರ್ಥರ್‌ಲಾಲೆಯವರ ಸ್ಥಾನಕ್ಕೆ ಸರ್ ಥಾಮಸ್ ಡೇವಿಡ್ ಗಿಬ್ಸನ್ ಕಾರ್ಮೈಕೇಲ್‌ರವರು ಮದ್ರಾಸ್ ಗೌರ್ನರಾಗಿ ಬರುವರು. ಅವರು ವಿಕ್ಟೋರಿಯಾ ಸೀಮೆಗೆ ಗೌರ್ನರಾಗಿದ್ದರು.

ಪೂರ್ವದೇಶಗಳಲ್ಲಿ ಪ್ಲೇಗು ವ್ಯಾಪಿಸಿರುವುದೆಂದು ಕೇಳಿದಕಾರಣ, ಜರ್ಮನಿಯ ಯುವರಾಜರು ಆ ದೇಶದ ಪ್ರಯಾಣವನ್ನು ನಿಲ್ಲಿಸಿ, ಕಲ್ಕತ್ತಾದಿಂದ ಹಿಂತಿರುಗಿ ಜರ್ಮನಿಗೇ ಹೋಗುವವರಾಗಿದ್ದಾರೆ.

ಹರಳೆಣ್ಣೆ ಬೀಜದ ಹಿಂಡಿಯು ಆಲೂಗೆಡ್ಡೆಗಳನ್ನು ಬೆಳೆಯುವ ಭೂಮಿಗೆ ಬಹಳ ಉತ್ಕೃಷ್ಟವಾದ ಗೊಬ್ಬರವಾಗಿರುತ್ತೆಂದೂ ಈ ಬಗ್ಗೆ, ಸದರಿ ಹಿಂಡಿಯನ್ನು ಉಪಯೋಗಿಸುವುದು ಪಂಜಾಬಿನಲ್ಲಿಯೂ, ಸಂಯುಕ್ತ ಪ್ರಾಂತಗಳಲ್ಲಿಯೂ ಮೂರು ವರ್ಷಗಳಿಂದೀಚೆಗೆ ಬರಬರುತ್ತಾ ಹೆಚ್ಚುತ್ತಿರುತ್ತೆಂತಲೂ, ಪಂಜಾಬಿನ ವ್ಯವಸಾಯ ಇಲಾಖಾ ಮತ್ತೀಸರರಾದ ಮೆ॥ ಮಿನೋಪ್ ಎಂಬುವರು ತಿಳಿಸುತ್ತಾರೆ.

ಮುಂಡಗಳ್ಳಿ (ಪಾಪಾಸುಕತ್ತಾಳಿ) ಯು ದನಗಳಿಗೆ ಒಳ್ಳೇ ಆಹಾರವಾಗಿರುತ್ತೆ ಮುಂಡಗಳ್ಳಿಯ ಮೇಲಿರುವ ಮುಳ್ಳುಗಳನ್ನು ಸವರಿಹಾಕಿ ಆಮೇಲೆ ಅದನ್ನು ಚೂರುಚೂರಾಗಿ ಕತ್ತರಿಸಿ ಇತರ ಮೇವುಗಳೊಂದಿಗೆ ಕರೆಯುವ ಹಸುಗಳಿಗೂ ಕೂಡ ಆಹಾರವಾಗಿ ಕೊಡಬಹುದು. ೩೦ ಪೌಂಡು ಮುಂಡಗಳ್ಳಿಯೊಂದಿಗೆ ೪ ಪೌಂಡು ಹತ್ತಿಬೀಜದ ಹಿಟ್ಟನ್ನು ಸೇರಿಸಿ ಸ್ವಲ್ಪ ಹುಲ್ಲಿನೊಂದಿಗೆ ಕರೆಯುವ ಹಸುಗಳಿಗೆ ಕೊಟ್ಟಲ್ಲಿ ಉತ್ತಮೋತ್ತಮ ಆಹಾರವಾಗುವುದೆಂತ ಕೆಲವರಿಂದ ಸೂಚಿಸಲ್ಪಟ್ಟಿರುತ್ತೆ.

ಸ್ತ್ರೀಯರಲ್ಲಿ ನವಯೌವನ ಸೌಂದರ್ಯಲಾವಣ್ಯಗಳು ಸದಾ ಸ್ಥಿರವಾಗಿ ಸಮೃದ್ಧವಾಗಿರುವುದಕ್ಕೆ ಮುತ್ತಿನ ಪುಡಿಯು ಅತ್ಯಂತೋಪಕಾರಿಯಾಗಿರುವುದೆಂದು ಫ್ರಾನ್ಸ್ ದೇಶಿಯನೊಬ್ಬನು ಅಭಿಪ್ರಾಯಪಟ್ಟಿರುವನು.

ಚಕ್ರವರ್ತಿಯವರು ಕಲ್ಕತ್ತಾ ಪಟ್ಟಣಕ್ಕೆ ದಯಮಾಡಿಸಿದಾಗ ಅವರಿಗೆ ಒಪ್ಪಿಸುವ ವಿಜ್ಞಾಪನ ಪತ್ರಿಕೆಯನ್ನಿಡುವ ಭರಣಿಗೆ ೨೫ ಸಾವಿರ ರೂಪಾಯಿಗಳನ್ನು ವೆಚ್ಚಮಾಡಲು ಅಲ್ಲಿನ ಕಾರ್ಪೊರೇಷನ್ನಿನವರು ನಿರ್ಧರಿಸಿರುವರು.

ಕಲ್ಕತ್ತಾದಿಂದ ದಿಲ್ಲಿಗೆ ಹೋಗುತ್ತಿದ್ದ ಒಬ್ಬ ಬೆಲ್ಜಿಯಂ ದೇಶೀಯನು ಹೊಗೆಬಂಡಿಯೊಳಗೆ ತನ್ನಲ್ಲಿದ್ದ ೩ ಸಾವಿರ ರೂಪಾಯಿಗಳನ್ನೂ, ೩ ಸಾವಿರದ ಬೆಲೆಯ ನಗಗಳನ್ನೂ ಕಳಕೊಂಡಿರುವನು. ಕಳ್ಳರನ್ನು ಪೋಲೀಸರು ತಡಕುತ್ತಿರುವರು.

ಇಂದೂರು ಸಂಸ್ಥಾನದ ಹೈಕೋರ್ಟ್ ಜಡ್ಜರಾದ ಬ್ಯಾರಿಸ್ಟರ್ ಡಿ. ವಿ. ಕೀರ್ತನೆಯವರು ಸುಂದರಬಾಯಿ ಜೋಶಿ ಎಂಬ ವಿತಂತುವನ್ನು ವಿವಾಹ ಮಾಡಿಕೊಂಡರು. ಈಕೆಯು ಮದುವೆಯಾಗುವುದಕ್ಕೆ ಮೊದಲು, ತನ್ನ ಆಸ್ತಿಯನ್ನೆಲ್ಲಾ ಧರ್ಮಕಾರ್ಯಕ್ಕಾಗಿ ವಿನಿಯೋಗಿಸಿಬಿಟ್ಟಿದ್ದಳು.

ಪೂರ್ವಬಂಗಾಳದಲ್ಲಿ ಕುಲ್ನಾ ಸಬ್ ಡಿವಿಜನ್ನಿಗೆ ಸೇರಿದ ಕೆಲ ಗ್ರಾಮಗಳಲ್ಲಿ ಕಳೆದ ತಾ॥ ೨೩ ರಲ್ಲಿ ಪ್ರಚಂಡಮಾರುತವೆದ್ದು ಮರಗಳು ಬುಡಸಮೇತ ನೆಲದಮೇಲುರುಳಿದುವು; ಗುಡಿಸಿಲುಗಳು ಮುರಿದುಬಿದ್ದುವು ಮತ್ತೂ ಗೋಡೆಗಳು ಬಿದ್ದು ೧೦ ಜನರು ಸತ್ತರು ಮತ್ತೂ ೩೦ ಜನರು ಗಾಯವಡೆದರು.

ಕಳೆದ ತಾ॥ ೩೧ ರಲ್ಲಿ ಜರ್ಮನಿಯ ಯುವರಾಜರು ಲಕ್ನೋದಿಂದ ಮೊಟಾರು ಬಂಡಿಯಲ್ಲಿ ಕುಳಿತು ದೂರ ಪ್ರಯಾಣಮಾಡಿದ್ದರು. ಮಾರ್ಗಮಧ್ಯದಲ್ಲಿ ಬಂಡಿಯು ಮುರಿಯಿತು. ಹೋಗಬೇಕಾಗಿದ್ದ ಸ್ಥಲಕ್ಕೆ ಹೋಗಲು ಸಾಧ್ಯವಿಲ್ಲದೆ, ಹೊಗೆಬಂಡಿಯನ್ನೇರಿ ಅಲಹಾಬಾದಿಗೆಹೋಗಿ, ಅಲ್ಲಿಂದ ಲಕ್ನೋವನ್ನು ಸೇರಬೇಕಾಯಿತು.

ಬಲ್ಗೇರಿಯಾದಲ್ಲಿ ಪೋಲೀಸ ಮುಖ್ಯಾಧಿಕಾರಿಯು ಜೂಜಾಡತಕ್ಕ ಮನೆಗಳಿಗೆ ನುಗ್ಗಿ ಅಲ್ಲಿದ್ದ ಕಾಗದ ಪತ್ರಗಳನ್ನು ತೆಗೆದುಕೊಂಡು ಅವುಗಳನ್ನು ಪರೀಕ್ಷಿಸುವಲ್ಲಿ, ಅನೇಕ ಐರೋಪ್ಯ ಮತ್ತು ದೇಶೀಯ ಪೋಲೀಸಿನವರು ಜೂಜಿನ ಮನೆಯ ಯಜಮಾನರುಗಳಿಂದ ಮಾಸಾಶನವನ್ನು ಪಡೆಯುತ್ತಿದ್ದರೆಂಬುದು ಹೊರಬಿದ್ದಿತು.

ಗ್ರಾಮೋಫೋನ್ ರಿಕಾರ್ಡುಗಳ ಮೂಲಕ ತನ್ನ ವಿದ್ವತ್ಪ್ರಭಾವವನ್ನು ಜಗತ್ತಿಗೆಲ್ಲಾ ಹರಡಿರುವ ಮಿಸ್ ಗೋಹರ್‌ಜಾನ್ ಎಂಬ ಸಂಗೀತವಿದುಷಿಯು ಅಲಹಾಬಾದಿನಲ್ಲಿ ತನ್ನ ಪ್ರಾವೀಣ್ಯವನ್ನು ಚೆನ್ನಾಗಿ ತೋರ್ಪಡಿಸಿದುದಕ್ಕಾಗಿ ಇಂಡಿಯನ್ ಮ್ಯೂಸಿಕ್ ಕಮಿಟಿಯವರು ಆಕೆಗೆ ಒಂದು ಭಂಗಾರದ ಪದಕವನ್ನು ಕೊಟ್ಟರು.

ಆಕಾಶನಾವಿಕರು ಈಗ ಭರತಖಂಡಕ್ಕೆ ಬಂದು ಅಲ್ಲಲ್ಲಿ ತಮ್ಮ ನಾವೆಯ ಪ್ರದರ್ಶನವನ್ನು ಮಾಡುತ್ತಿರುವರಷ್ಟೆ. ಇವರು ರಂಗೂನಿಗೆ ಹೋಗಬೇಕೆಂದಿರುವಷ್ಟರಲ್ಲಿ ಆ ದೇಶಸ್ಥರು ಈ ಪರದೇಶದ ನಾವಿಕರು ತಮ್ಮ ದೇಶಕ್ಕೆ ಬಾರದಂತೆ ಮಾಡಲು ತಾವೇ ಸ್ವಂತವಾಗಿ ಸೀಮೆಯಿಂದ ಆಕಾಶನಾವೆಯನ್ನು ತರಿಸಿ ಪ್ರದರ್ಶಿಸಬೇಕೆಂದು ಯತ್ನಿಸಿರುವರು.

ಅಲಿಘರಿನಲ್ಲಿ ಸ್ಥಾಪಿಸಬೇಕೆಂದಿರುವ ಮಹಮ್ಮದೀಯ ಸರ್ವವಿದ್ಯಾಪೀಠಕ್ಕೆ ಒಂದು ಧನರಾಶಿಯನ್ನೇರ್ಪಡಿಸಲು ಆಗಾಖಾನರವರು ಮತ್ತೆ ಕೆಲಮಹಮ್ಮದೀಯ ದೊಡ್ಡ ಮನುಷ್ಯರುಗಳೊಡನೆ ದೊಡ್ಡ ದೊಡ್ಡ ಸಂಸ್ಥಾನಗಳಮೇಲೆ ಸಂಚಾರ ಹೊರಟಿರುತ್ತಾರೆ. ಈ ಧನರಾಶಿಗೆ ಈಗಾಗಲೆ ೧೦ ಲಕ್ಷ ರೂಪಾಯಿಗಳನ್ನು ಕೊಡಲು ವಾಗ್ದಾನವಾಗಿರುವುದಂತೆ.

ರಷ್ಯಾಪ್ರಭುತ್ವಕ್ಕೊಳಪಟ್ಟ ಪೋಲೀಸ್ ಮುಖ್ಯೋದ್ಯೋಗಿಯೊಬ್ಬನು ಪರ್ಷ್ಯಾದಲ್ಲಿ ಒಬ್ಬ ಗೌರ್ನರನ್ನೂ ಅವರ ಅಳಿಯನನ್ನೂ ತುಪಾಕಿಯಿಂದ ಹೊಡೆದನು. ಅವರಿಬ್ಬರೂ ಅಪಾಯಸ್ಥಿತಿಯಲ್ಲಿದ್ದಾರೆ. ಆ ಘಾತುಕನು ರಷ್ಯಾದವರ ಶರಣನ್ನು ಕೋರುತ್ತಿರುವನೆಂತಲೂ, ಅವರು ಅವನ್ನು ಪರ್ಷಿಯನ್ನರವಶಕ್ಕೆ ಒಪ್ಪಿಸುತ್ತೇವೆಂದು ಹೇಳುತ್ತಿರುವರೆಂತಲೂ ಸುದ್ದಿ ಬಂದಿದೆ.

ಬರೈಲಿಯಲ್ಲಿ ಉಲ್ಲಾಸರಾಯ್ ಎಂಬ ಒಬ್ಬ ಶ್ರೀಮಂತರ ಮನೆಗೆ ಕಳ್ಳರು ನುಗ್ಗಿ ಸುಮಾರು ೧॥ ಲಕ್ಷ ರೂ. ಬೆಲೆಬಾಳುವ ಪದಾರ್ಥಗಳನ್ನು ಸೂರೆಮಾಡಿಕೊಂಡು ಹೋಗಿರುತ್ತಾರೆ. ಈ ಶ್ರೀಮಂತನ ೨೫ ವರ್ಷದ ಮಗನು ಆ ಕಳ್ಳರಕೂಡ ಹೋರಾಡಿ ಪೂರ ಪೆಟ್ಟನ್ನು ತಿಂದಿರುವನು. ಎಲ್ಲೋ ಪ್ರಾಂತದ ಸೈನಿಕರಲ್ಲಿ ಕೆಲವರು ಈ ಸುಲಿಗೆಯಲ್ಲಿ ಸೇರಿದ್ದುದಾಗಿ ಆ ಯುವಕನು ಹೇಳುತ್ತಾನೆ.

ಪೂನಾಪ್ರಾಂತದಲ್ಲಿ ಈಚೆಗೆ ವಿಶೇಷವಾಗಿ ಮಂಜು ಬಿದ್ದು ಅನೇಕ ಡಿಸ್ಟ್ರಿಕ್ಟುಗಳಲ್ಲಿ ನಿಂತಿದ್ದ ಬೆಳೆಯು ಬಹಳವಾಗಿ ನಷ್ಟವಾಗಿರುತ್ತದೆ. ಇದರಲ್ಲಿ ಕಬ್ಬು ಮತ್ತೂ ಜೋಳದ ಪೈರು, ಕಡೆಯಲ್ಲಿ ಬಿತ್ತಿದ ಹತ್ತಿಯ ಬೆಳಸು ಸಂಪೂರ್ಣವಾಗಿ ಕೆಟ್ಟುಹೋಗಿರುತ್ತವೆ. ಹಣ್ಣು ಮತ್ತೂ ತರಕಾರಿ ಕೊಂಚ ಕೆಟ್ಟುಹೋಗಿರುವುವು. ಆದರೆ ಹುಲ್ಲು ಮತ್ತು ಜವೆಗೋಧಿ ಮಾತ್ರ ಚೆನ್ನಾಗಿರುತ್ತವೆ.

ಮಾಸ್ಕೋ ಪಟ್ಟಣದ ಸರ್ವವಸ್ತು ಪ್ರದರ್ಶನಶಾಲೆಗೆ ಒಬ್ಬ ರೈತನು ಯಾವುದೋ ಒಂದು ಅದ್ಭುತವಾದ ಪ್ರಾಣಿಯ ಹಲ್ಲನ್ನು ಮತ್ತೂ ತಲೆಬುರುಡೆಯ ಒಂದು ಚೂರನ್ನು ಕೊಟ್ಟಿರುತ್ತಾನೆ. ಈ ಹಲ್ಲು ೯ ಪೌಂಡು ತೂಕವಿರುವುದು ಮತ್ತೂ ಬುರುಡೆಯ ಚೂರು ೭೦ ಅಂಗುಲ ಉದ್ದವೂ ೧೪ ಅಂಗುಲ ಅಗಲವೂ ಉಳ್ಳುದಾಗಿರುವುದು. ಇವು ಆ ರೈತನು ಭೂಮಿಯನ್ನು ಅಗೆಯುತ್ತಿರುವಾಗ್ಗೆ ದೊರೆತವು.

ಗುತ್ತಿಯಲ್ಲಿ ಪ್ಲೀಡರಾಗಿದ್ದ ತಿಮ್ಮರಡ್ಡಿಯೆಂಬುವರು ಬಡ್ಡಿಯ ವ್ಯಾಪಾರವನ್ನು ನಡೆಯಿಸುತ್ತಿದ್ದುದರಿಂದ ಅವರಿಗೆ ಕೊಡಲ್ಪಟ್ಟಿದ್ದ ವಕೀಲತನದ ಸನ್ನದನ್ನು ಹೈಕೋರ್ಟಿನವರು ರದ್ದು ಮಾಡಿರುವರು. ಆ ತೀರ್ಮಾನವನ್ನು ಪುನರ್ವಿಮರ್ಶೆ ಮಾಡಬೇಕೆಂದು ಕೇಳಲ್ಪಟ್ಟಿದ್ದರೂ ಅದುಕೂಡ ತಿರಸ್ಕೃತವಾಯಿತು. ಅಂಥ ವ್ಯಾಪಾರವನ್ನು ಅವರು ತ್ಯಜಿಸಿಬಿಟ್ಟರೆಂದು ಗೊತ್ತಾದರೆ ಪುನಃ ಸನ್ನದು ಕೊಡಲ್ಪಡುವುದು.

ಕಳೆದ ತಾ॥ ೪ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೨೩೦೧೧ ಜನರಿಗೆ ಪ್ಲೇಗು ತಗಲಿ, ೨೦೨೩೯ ಜನರು ಸತ್ತರು. ಇದರಲ್ಲಿ ಸಂಯುಕ್ತಪ್ರಾಂತಗಳಲ್ಲಿ ೧೧೪೩, ಪಂಜಾಬಿನಲ್ಲಿ ೯೩೫, ಬಂಗಾಳದಲ್ಲಿ ೨೦೯೦, ಬೊಂಬಾಯಿಯಾಧಿಪತ್ಯದಲ್ಲಿ ೧೫೯, ಮಧ್ಯಪ್ರಾಂತಗಳಲ್ಲಿ ೧೧೩೯, ಮಧ್ಯಹಿಂದುಸ್ಥಾನದಲ್ಲಿ ೧೧೧೩, ರಾಜಪುಟಾನದಲ್ಲಿ ೬೪೩, ಹೈದರಾಬಾದ್ ಸಂಸ್ಥಾನದಲ್ಲಿ ೩೨೯, ಮದ್ರಾಸ್ ಅಧಿಪತ್ಯದಲ್ಲಿ ೩೧೦, ಬರ್ಮಾದಲ್ಲಿ ೨೫೦, ಮೈಸೂರ್ ಸಂಸ್ಥಾನದಲ್ಲಿ ೨೨, ಕಾಶ್ಮೀರದಲ್ಲಿ ೧, ಪೂರ್ವ ಬಂಗಾಳದಲ್ಲಿ ೫, ಮತ್ತೂ ಅಸ್ಸಾಮಿನಲ್ಲಿ ೪ ಈಪ್ರಕಾರ ಮರಣಗಳಾಗಿರುತ್ತವೆ.

ಪ್ಯಾರಿಸ್ ಪಟ್ಟಣದಲ್ಲಿ ಒಬ್ಬ ಪ್ರಸಿದ್ಧ ಆಕಾಶನಾವಿಕನು ನಾವೆಯಲ್ಲಿ ಕುಳಿತು ಆಕಾಶದಲ್ಲಿ ಸಂಚರಿಸುತ್ತಿರುವಾಗ್ಗೆ, ನಾವೆಯು ಜನರು ತಿರುಗಾಡುವ ಮಾರ್ಗದಲ್ಲಿ ಬಿದ್ದು ಒಬ್ಬ ಹೆಂಗುಸನ್ನು ಕೊಂದ ಅಪರಾಧಕ್ಕೆ ಗುರಿಮಾಡಲ್ಪಟ್ಟು ೬೦೦೦ ರೂಪಾಯಿಗಳ ದಂಡವನ್ನು ವಿಧಿಸಲ್ಪಟ್ಟನು. ಮತ್ತೊಬ್ಬ ನಾವಿಕನು ಹೀಗೆಯೇ ನಾವೆಯನ್ನು ಆಕಾಶದಲ್ಲಿ ನಡೆಸುತ್ತಿರುವಾಗ್ಗೆ ಕೆಳಗೆ ಬಿದ್ದು ಒಂದು ಹುಡುಗಿಯನ್ನು ಕೊಂದು ಮತ್ತೆ ಮೂವರಿಗೆ ಅಪಾಯವನ್ನುಂಟುಮಾಡಿದ ಅಪರಾಧಕ್ಕಾಗಿ ೧ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟನು.

ಭರತಖಂಡದ ಮೊದಲನೇ ಶ್ರೀ ವೈಷ್ಣವ ಮಹಾಸಭೆಯು ಅಲಹಾಬಾದಿನ ಮೇಯೊಹಾಲಿನಲ್ಲಿ ಕಳೆದ ತಾ॥ ೧ ರಲ್ಲಿ ಶ್ರೀ॥ ಪ್ರತಿವಾದಿ ಭಯಂಕರಸ್ವಾಮಿ ಅನಂತಾಚಾರ್ಯರವರ ಅಧ್ಯಕ್ಷತೆಯಲ್ಲಿ ಆರಂಭವಾಗಿ ತಾ॥ ೪ ರಲ್ಲಿ ನಿರ್ವಿಘ್ನವಾಗಿ ಕೊನೆಗಂಡಿತು. ಭರತಖಂಡದ ಎಲ್ಲ ಭಾಗಗಳಿಂದಲೂ, ಪ್ರಾಯಶಃ ೭೦೦ ಪ್ರತಿನಿಧಿಗಳೂ, ರಿವ, ಚತರ್ಪುರ, ಬಾರಾ, ದರಿಯಾ, ಈ ಸಂಸ್ಥಾನಗಳ ರಾಜರುಗಳೂ, ಆ॥ ಪಂಡಿತ ಮದನಮೋಹನಮಾಳವ್ಯ ಮೊದಲಾದ ದೊಡ್ಡಮನುಷ್ಯರೂ ಬಂದಿದ್ದರು. ಉದಾರವಾಗಿ ಚಂದಾದ್ರವ್ಯವು ವಾಗ್ದಾನಮಾಡಲ್ಪಟ್ಟಿತು.

ಕಲಿಯುಗ ಕರ್ಣನೆನಿಸಿದ ಆನ್ಡ್ರೂಕಾರ್ನಿಗಿಯು ವಾಷಿಂಗಟನ್ನಲ್ಲಿ ತನ್ನ ಹೆಸರಿನಮೇಲೆ ಸ್ಥಾಪಿಸಿರುವ ಧರ್ಮಸಂಸ್ಥೆಗೆ ಈಚೆಗೆ ೩ ಕೋಟಿ ರೂ. ಗಳನ್ನು ಕೊಟ್ಟಿರುವನು. ಈ ಸಂಸ್ಥೆಯ ಫಂಡಿಗೆ ಈವರಿಗೆ ಕೊಟ್ಟಿರುವ ಒಟ್ಟು ೩॥ ಕೋಟಿ ರೂ. ಗಳಿಂದಲೂ ಮತ್ತೂ, ಜನಗಳ ಉಪಯೋಗಾರ್ಥವಾಗಿ ಧರ್ಮಮಾಡಿರುವ ಒಟ್ಟು ೬೦ ಕೋಟಿ ರೂ. ಗಳಿಂದಲೂ ನೂರಕ್ಕೆ ೫ ರೂ. ಬಡ್ಡಿ ಪ್ರಕಾರ ವರ್ಷ ಒಂದಕ್ಕೆ ೩ ಕೋಟಿ ರೂ., ಅಥವಾ ತಿಂಗಳಿಗೆ ೨೫೦೦೦೦೦ ದಿನಕ್ಕೆ ೮೩೫೦೦೦ ರೂ., ಒಂದು ಸೆಕೆಂಡಿಗೆ ೬೦೦ ರೂ., ಈಪ್ರಕಾರ ಬಡ್ಡಿಯು ಉತ್ಪನ್ನವಾಗುವುದು.

ಅಲಹಾಬಾದಿನ ಪ್ರದರ್ಶನಕ್ಕೆ ಹೋಗಿ ಅಲ್ಲಿ ದರ್ಶನೀಯವಾದ ವಸ್ತುಗಳನ್ನು ಕಣ್ಣಾರ ನೋಡಿ, ಅವುಗಳ ಮೂಲಕ ಲಭ್ಯವಾಗುವ ಫಲವನ್ನೈದಿ ಅಭಿವೃದ್ಧಿಗೊಳ್ಳುವುದಕ್ಕಾಗಿ ಸರ್ಕಾರದ ವೆಚ್ಚದಿಂದ ಪ್ರತಿಜಿಲ್ಲೆಗೂ ಒಬ್ಬೊಬ್ಬ ಬೇಸಾಯಗಾರನನ್ನೂ ಒಬ್ಬೊಬ್ಬ ಚಿತ್ರಗಾರನನ್ನೂ ಕಳುಹಿಸಿಕೊಡಬೇಕೆಂದು ನೇಷನಲ್ ಫಂಡಿನ ಮತ್ತೂ ಇಂಡಸ್ಟ್ರಿಯಲ್ ಅಸೋಸಿಯೇಷನ್ನಿನ ಪ್ರೆಸಿಡೆಂಟರಾದ ದಿ॥ ಬ॥ ಕಂಚಿಕೃಷ್ಣಸ್ವಾಮಿರಾವ್ ರವರು ಮದ್ರಾಸ್ ಗೌರ್ನಮೆಂಟಿಗೆ ಬರೆದಿದ್ದರು. ಅದಕ್ಕೆ ಕೊಯಮತ್ತೂರು ವ್ಯವಸಾಯ ಕಲಾಶಾಲೆಯಿಂದ ೧೦ ಮಂದಿ ವಿದ್ಯಾರ್ಥಿಗಳನ್ನೂ ಸೇಲಂನಿಂದ ನೇಯ್ಗೆಯವರು ಕೆಲರನ್ನೂ ಪಂಪಿಂಗ್ ಡಿಪಾರ್ಟ್‌ಮೆಂಟಿನ ಕೆಲವರನ್ನೂ ಕಳುಹಿಸುವುದಕ್ಕೆ ಇದಕ್ಕೆ ಮುಂಚೆಯೇ ತಾವು ಏರ್ಪಡಿಸಿರುವುದಾಗಿ ಉತ್ತರವನ್ನೂ ಕೊಟ್ಟಿರುವರು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು.

ಪ. ಪ್ರ.

ಪತ್ರವ್ಯವಹಾರ.

ಶ್ರೀಮದ್ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯ ಆಲೋಚನಾ ಸಭೆಯು.

ವಿಜಾಪುರ.

೬ ನೇ ಶ್ರೀಮದ್ವೀರಶೈವ ಮಹಾಸಭೆಯನ್ನು ೧೯೧೦ ನೇ ಇಸವಿಯಲ್ಲಿ ಕೆಲವು ಅನಿವಾರ್ಯ ಕಾರಣಗಳಿಗೋಸ್ಕರ ನೆರಿಸಲಿಕ್ಕೆ ಆಗಲಿಲ್ಲೆಂದು ಕೇಳಿ, ವೀರಶೈವ ಸಮಾಜದವರಿಗೆ ವಿಶೇಷ ಖೇದವಾಗಿತ್ತು. ಆದರೆ ಆ ಖೇದವನ್ನು ಕೆಲವು ಅಂಶದಿಂದ ನಿವಾರಿಸುವ ಶ್ರೇಯಸ್ಸನ್ನು ವಿಜಾಪುರದ ವೀರಶೈವ ಬಂಧುಗಳು ಪಡೆದದ್ದನ್ನುನೋಡಿ ಸಂತೋಷವಾಗುತ್ತದೆ. ವಿಜಾಪುರ ಜಿಲ್ಲೆಯವರು ಮಹಾಸಭೆಯ ಕಾರ್ಯಕ್ಕೆ ತಕ್ಕಷ್ಟು ಸಹಾನುಭೂತಿಯನ್ನು ತೋರಿಸಲಿಲ್ಲೆಂದು ಆರಂಭದಲ್ಲಿ ಬಹು ಜನರು ಆಡಿಕೊಳ್ಳುತ್ತಿದ್ದರು. ಆದರೆ ಆ ಜಿಲ್ಲೆಯವರು ಬಾಗಲಕೋಟಿಯಲ್ಲಿ, ೪ ನೇ ಮಹಾಸಭೆಯನ್ನು ಸಮಾಧಾನಕರವಾಗಿ ನೆರೆಯಿಸಿ, ಇಡೀ ಸಮಾಜದ ಮನ್ನಣೆಗೆ ಪಾತ್ರರಾದರು ಮಾತ್ರವಲ್ಲ, ಅಂದರೆ ಮಹಾಸಭೆಯ ನಿರ್ಣಯಗಳಲ್ಲಿ, ಕೆಲವುಗಳನ್ನು ತಮ್ಮ ಜಿಲ್ಲೆಯಲ್ಲಿ ಅನುಷ್ಠಾನಕ್ಕೆತಂದು, ವೀರಶೈವ ಸಮಾಜಕ್ಕೆಲ್ಲ ಮಾರ್ಗದರ್ಶಕರಾಗಿರುವರೆಂದು ಹೇಳಿದರೆ, ಅದು ಅತಿಶಯೋಕ್ತಿಯಾಗಲಾರದು. ಈ ವರ್ಷ ಮಹಾಸಭೆಯನ್ನು ನೆರೆಯಿಸುವ ಲಕ್ಷಣಗಳು ಎಲ್ಲಿಯೂ ಕಾಣದಂತಾಗಲು ಇಡಿ ಸಮಾಜವು ಈ ವಿಷಯದಲ್ಲಿ ತಟಸ್ಥವೃತ್ತಿಯನ್ನು ಧರಿಸಿರಲು, ವಿಜಾಪುರದ ನಮ್ಮ ಬಂಧುಗಳು ಸುಮ್ಮನಿರದೆ, ಸ್ಟ್ಯಾಂಡಿಂಗ್ ಕಮಿಟಿಯ ಸಮಸ್ತ ಮೆಂಬರುಗಳಿಗೆ ಆಮಂತ್ರಣ ಕೊಟ್ಟು, ಅವರನ್ನು ಬರಮಾಡಿಕೊಂಡು, ಮಹಾಸಭೆಯ ಕಟ್ಟಳೆಗಳಲ್ಲಿ, ತಕ್ಕ [illegible] ಮಾಡುವ ಸುಯೋಗವನ್ನು ತಂದುಕೊಟ್ಟದಕ್ಕಾಗಿ, ಅವರನ್ನು ಎಷ್ಟು ಹೊಗಳಿದರೂ ಅಲ್ಪವೇ ಅದೆ. ವಿಜಾಪುರದಲ್ಲಿ ನೆರೆದ ಆಲೋಚನಾ ಸಭೆಯವರು ನಡಿಸಿದ ಕಾರ್ಯಗಳನ್ನು ನೋಡಿದರೆ, ಈ ಸಭೆಯು ಸ್ಟ್ಯಾಂಡಿಂಗ್ ಕಮಿಟಿಯು ಮಾತ್ರವಲ್ಲ ಅಂದರೆ ನಿಜವಾಗಿ ಅದೊಂದು ಮಹಾಸಭೆಯೇ ಅನ್ನುವಷ್ಟು ಅಚ್ಚುಕಟ್ಟಾಗಿ ಸಮಸ್ತ ಕಾರ್ಯಗಳು ಜರಿಗಿದವು; ಮತ್ತು ಎಷ್ಟೋ ಮಹತ್ವದ ನಿರ್ಣಯಗಳು ಮಾಡಲ್ಪಟ್ಟವು.

ಸಭಾಮಂದಿರದ ಸಲುವಾಗಿ ಮ॥ ರಾ॥ ರಾ॥ ರೇವಣಸಿದ್ಧಪ್ಪ ಅಣ್ಣಾ ಜಮ್ಮಾ ಸೊಲ್ಲಾಪುರದ ಇವರ ವಿಸ್ತೀರ್ಣವಾದ ವರ್ತಕ ಶಾಲೆಯು ನೇಮಿಸಲ್ಪಟ್ಟಿತ್ತು. ಸಭಾಸದರ ಭೋಜನಾಲಯಕ್ಕಾಗಿ ಮ॥ ರಾ॥ ರಾ॥ ಮುದಿಗೌಡಪ್ಪ ಅಣ್ಣಾ ಪಾಟೀಲ ಬಬಲಾದಿ ಇವರ ಮಂದಿರವು ನೇಮಕವಾಗಿತ್ತು. ಸಭಾಮಂದಿರವು ಧ್ವಜಪತಾಕೆಗಳಿಂದಲೂ ತಳಿರುತೋರಣಗಳಿಂದಲೂ, ತೆಂಗು, ಕದಳಿಮುಂತಾದ ಸುಂದರ ಸ್ತಂಭಗಳಿಂದಲೂ ಶೃಂಗರಿಸಲ್ಪಟ್ಟಿತ್ತು. ಸಭಾಧ್ಯಕ್ಷರಸಲುವಾಗಿ ಎತ್ತರವಾದ ಜಗಲಿಯು ನಿರ್ಮಿಸಲ್ಪಟ್ಟಿತ್ತು. ಇದಲ್ಲದೆ ಮಾಹೇಶ್ವರರಸಲುವಾಗಿ, ದೇಶಾಯಿ ದೇಶಮುಖ ಮುಂತಾದ ಶ್ರೀಮಂತರ ಸಲುವಾಗಿ ಉಚಿತಾಸನಗಳು ಸಜ್ಜುಗೊಳಿಸಲ್ಪಟ್ಟಿದ್ದವು. ಸಭೆಯ ಮೂರು ದಿವಸಗಳಲ್ಲಿಯೂ ಮಹಾದ್ವಾರದಲ್ಲಿ ಬ್ಯಾಂಡುಬಾಜಿಗಳ ಸುನಾದಗಳು ಸದ್ಗೃಹಸ್ಥರ ಆಗಮನಗಳನ್ನು ಆಗಾಗ್ಗೆ ಸೂಚಿಸುತ್ತಿದ್ದವು. ವಿಜಾಪುರದ ಬಂಧುಗಳು ಈ ಪ್ರಸಂಗದಲ್ಲಿ, ಸಭಾಕಾರ್ಯವನ್ನು ಅತಿ ಸಮರ್ಪಕವಾಗಿ ನೆರವೇರಿಸಿದರೆಂಬಲ್ಲಿ, ಲೇಶಮಾತ್ರವೂ ಸಂಶಯವಿಲ್ಲ.

ಈ ಆಲೋಚನಾ ಸಭೆಗೆ ಅಲಿಬಾಗ, ಸೊಲ್ಲಾಪುರ. ಅಥಣಿ, ಗೋಕಾಕ, ಸಂಕೇಶ್ವರ, ಬೆಳಗಾವ, ಧಾರವಾಡ, ಹುಬ್ಬಳ್ಳಿ, ನವಲಗುಂದ, ಗದಗ, ಬಂಕಾಪುರ, ರಬಕವಿ, ಬನಹಟ್ಟಿ ಮುಂತಾದ ದೂರ ದೂರದ ಸ್ಥಳಗಳಿಂದ ಮೆಂಬರರು ಬಂದಿದ್ದರು. ಇವರಲ್ಲದೆ ವಿಜಾಪುರ ಜಿಲ್ಲೆಯೊಳಗಿ ಯಾವತ್ತೂ ಮೆಂಬರರೂ ಮಹಾಸಭೆಯ ಹಿತಚಿಂತಕರೂ ವಿಶೇಷ ಉತ್ಸುಕತೆಯಿಂದ ಆಗಮಿಸಿದ್ದರು. ಒಟ್ಟಿಗೆ ೬೦ ಜನರೂ ಸಭೆಗೆ ಬಂದಿದ್ದರು. ಕೆಲವು ಜನ ದೇಶಾಯರು ತಮ್ಮ ಆಗಮನದಿಂದ ಸಭಾಮಂಟಪವನ್ನು ಅಲಂಕರಿಸಿದ್ದರು ಇಷ್ಟೇಅಲ್ಲ ಆದರೆ ಅವರು ಸಭೆಯ ಕಾರ್ಯಕ್ಕೆ ಮನಮುಟ್ಟಿ ಸಹಾಯ ಮಾಡಿದರು. ಅವರಲ್ಲಿ ಶ್ರೀಮಂತ ಶಿವಲಿಂಗ ಜಗದೇವರಾವ ದೇಶಮುಖ, ಆಲಮೇಲ; ಶ್ರೀಮಂತ ಬಾಬಾಸಾಹೇಬ ಮಾಮಲೇದೇಶಾಯಿ ಹುಂದಿಗನೂರ; ಶ್ರೀಮಂತ ಶಿವಸಿದ್ಧಪ್ಪ ಸರನಾಯಕ ಹಲಗಲಿ; ಶ್ರೀಮಂತ ಮುರಗೆಪ್ಪ ಅಣ್ಣಾ ದೇಶಾಯಿ ಹುಂದಿಗನೂರ ಇವರು ವಿಶೇಷ ಸ್ತೋತ್ರಕ್ಕೆ ಪಾತ್ರರಾಗಿರುವರು.

ಸಭೆಯ ಕಾರ್ಯವು ೨೮ ನೇ ತಾರೀಖಿನ ದಿವಸ ಪ್ರಾರಂಭವಾಗತಕ್ಕದ್ದಿದ್ದರೂ, ಅದರ ಮುನ್ನಾದಿನವೇ ಮೆಂಬರ ಜನರು ಬಂದು ಬಿಟ್ಟರು. ಆದ್ದರಿಂದ ಯಾವತ್ತು ಮೆಂಬರರು ೨೮ನೇ ತಾರೀಖಿನ ದಿವಸ ಪ್ರಾತಃ ಕಾಲದ ೭ ಗಂಟೆಗೆ ಸಭೆಗೂಡಿ, ೧೦ ಗಂಟೆಯ ವರೆಗೆ ಚರ್ಚಿಸಿ, ಅವತ್ತಿನ ಕಾರ್ಯಕ್ರಮವನ್ನು ಸಿದ್ಧಪಡಿಸಿ, ಭೋಜನಕ್ಕೆ ತೆರಳಿದರು. ಭೋಜನೋತ್ತರ ೧ ಗಂಟೆಗೆ ಸಭೆಯ ಕೆಲಸಕ್ಕೆ ಆರಂಭವಾಯಿತು. ಈ ಪೂರ್ವದಲ್ಲಿಯೇ ಪರಸ್ಥಳಗಳಿಂದ ಬಂದ ಮೆಂಬರರೂ ವಿಜಾಪುರದೊಳಗಿನ ಸಾವುಕಾರರೂ ಸದ್ಗೃಹಸ್ಥರೂ ಸಭಾಮಂಟಪದಲ್ಲಿ ಕುಳಿತುಕೊಂಡಿದ್ದರು. ನೇಮಕವಾದ ವೇಳೆಗೆ ಸ್ಟ್ಯಾಂಡಿಂಗ್ ಕಮಿಟಿಯ ಚೇರಮನ್ನರಾದ ರಾವ ಬಹಾದ್ದೂರ ಶಾಂತವೀರಪ್ಪಾ ವೀರಸಂಗಪ್ಪಾ ಅಣ್ಣಾ ಮೆಣಸಿನಕಾಯಿ ಇವರು ಸಭಾಸ್ಥಾನಕ್ಕೆ ದಯಮಾಡಿಸಿದರು. ಕೂಡಲೆ ಮಹಾದ್ವಾರದಲ್ಲಿ, ಅವರ ಆಗಮನ ಸೂಚಕ ಬ್ಯಾಂಡು ಬಾಜಿಯು ಭೋರ್ಗರೆಯಲಾರಂಭಿಸಿತು. ಸಭೆಯೊಳಗಿನ ಎಲ್ಲಾ ಜನರು ಎದ್ದು ನಿಂತು ಜಯ ಘೋಷದೊಡನೆ ಅವರ ಸ್ವಾಗತ ಮಾಡಿದರು. ಅವರು ಬಂದು ಸಭಾಧ್ಯಕ್ಷ ಪೀಠವನ್ನು ಅಲಂಕರಿಸಿದ ಬಳಿಕ ಎಲ್ಲ ಸಭಾಸದರು ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಂಡರು.

ಆಮೇಲೆ ಸ್ವಾಗತ ಕಮಿಟಿಯ ಚೇರಮನ್ನರಾದ ಶ್ರೀಯುತ ಫಕೀರಪ್ಪಾ ಗು. ಹಳಕಟ್ಟಿ ಬಿ. ಎ, ಎಲ್, ಎಲ್, ಬಿ. ವಕೀಲ ವಿಜಾಪುರ ಇವರು ಸಭೆಗೆ ಬರಲಿಕ್ಕೆ ಆಗದಂಥ ಮಹೇಶ್ವರರಿಂದಲೂ ಮಿಕ್ಕ ಸದ್ಗೃಹಸ್ಥರಿಂದರೂ ಬಂದ ಪತ್ರಗಳನ್ನೂ ತಾರುಗಳನ್ನೂ ಸಭೆಯಲ್ಲಿ ಓದಿ ಹೇಳಿದನಂತರ ಸಮಯೋಚಿತವಾಗಿ ಸ್ವಾಗತಪರ ಭಾಷಣಮಾಡಿದರು. ಅವರ ಭಾಷಣದ ತಾತ್ಪರ್ಯವೇನೆಂದರೆ:—ಈ ವರ್ಷದ ಮಹಾಸಭೆಯನ್ನು ರಾಯಚೂರಲ್ಲಿ ನೆರೆಯಿಸಬೇಕೆಂಬ ಯೋಚನೆ ಯಿತ್ತು. ಆದರೆ ಕೆಲವು ಅಪರಿಹಾರ್ಯ ಕಾರಣಗಳ ಸಲುವಾಗಿ ಈ ವರ್ಷದ ಮಹಾಸಭೆಯನ್ನು ನಿಲ್ಲಿಸಬೇಕಾಯಿತೆಂದು ತಮಗೆ ತಿಳಿಸಲಿಕ್ಕೆ ಖೇದವಾಗುತ್ತದೆ. ಆದರೆ ವಿಜಾಪುರ ಜಿಲ್ಲೆಯೊಳಗಿನ ಕೆಲವು ಜನ ಪ್ರಮುಖರು ೬ ನೇ ಮಹಾಸಭೆಯನ್ನು ನೆರೆಯಿಸದಿದ್ದರೂ, ಕನಿಷ್ಟಪಕ್ಷಕ್ಕೆ ಸ್ಟ್ಯಾಂಡಿಂಗ ಕಮಿಟಿಯ ಮೆಂಬರರನ್ನಾದರೂ ಕೂಡಿಸಿ ಮಹಾಸಭೆಯ ಈಗಿನ ನೇಮಗಳ ವಿಷಯವಾಗಿ ಚೆನ್ನಾಗಿ ಚರ್ಚಿಸಿ, ಅವುಗಳಲ್ಲಿ ಯೋಗ್ಯ ತಿದ್ದುಪಡಿಯನ್ನು ಮಾಡುವದು ತಕ್ಕದಾಗಿದೆ, ಈ ಕಾರ್ಯವನ್ನು ನಾವು ಕೈಕೊಳ್ಳಲಿಕ್ಕೆ ಬೇಕೆಂದು ಸೂಚಿಸಿದ್ದರಿಂದ, ಈ ಸೂಚನೆಗೆ ಸ್ಟ್ಯಾಂಡಿಂಗ ಕಮಿಟಿಯ ಚೇರಮನ್ನರ ಒಪ್ಪಿಗೆಯನ್ನು ಪಡೆದುಕೊಂಡು ಎಲ್ಲ ಮೆಂಬರ ಜನರಿಗೆ ವಿನಂತಿ ಪತ್ರಗಳನ್ನು ಕಳುಹಿಸಲಾಯಿತು. ನಮ್ಮ ವಿನಂತಿಪತ್ರಕ್ಕೆ ಮಾನಕೊಟ್ಟು, ದೂರದ ಪ್ರವಾಸಮಾಡಿ, ಇಲ್ಲಿಯವರೆಗೆ ದಯಮಾಡಿಸಿದ್ದಕ್ಕಾಗಿ ವಿಜಾಪುರದ ವೀರಶೈವರ ಪರಿಯಿಂದ ನಾನು ನಿಮ್ಮ ಉಪಕಾರವನ್ನು ನೆನಸುತ್ತೇನೆ. ಈ ತರದ ಕಾರ್ಯಕ್ಕೆ ನಾವು ಕೈಹಾಕಿದ್ದು ಇದೇ ಮೊದಲು, ಇದಲ್ಲದೆ ಯೋಗ್ಯವ್ಯವಸ್ಥೆಯನ್ನು ಮಾಡಲಿಕ್ಕೆ ನಮಗೆ ಸಾಕಷ್ಟು ವೇಳೆಯಾದರೂ ದೊರೆಯಲಿಲ್ಲ, ಆದ್ದರಿಂದ ತಮ್ಮ ಆದರಾತಿಥ್ಯದಲ್ಲಿ ನಮ್ಮಿಂದ ಆಗಬಹುದಾದ ಕುಂದು ಕೊರತೆಗಳನ್ನು ಲಕ್ಷಕ್ಕೆ ತಾರದೆ ನಾವು ಮಾಡುವ ಅಲ್ಪ ಸೇವೆಯನ್ನೇ ಘನವಾದದ್ದೆಂದು ಗ್ರಹಿಸಿ, ಈ ಸಭೆಯ ಮುಂದಿನ ಕಾರ್ಯಗಳು ಸುಲಲಿತವಾಗಿ ಜರಗುವಂತೆ ಅನುಗ್ರಹಿಸಬೇಕೆಂದು ತಮ್ಮೆಲ್ಲರನ್ನು ಪ್ರಾರ್ಥಿಸುತ್ತೇನೆ.

ಆಮೇಲೆ ಸಭೆಯ ಅಧ್ಯಕ್ಷರು ಕೆಳಗಿನ ಸೂಚನೆಯನ್ನು ಸಭೆಯ ಮುಂದಿಟ್ಟರು.

(೧.) ಇಂಗ್ಲಂಡ ದೇಶದ ಅರಸರೂ ಹಿಂದುಸ್ಥಾನದ ಚಕ್ರವರ್ತಿಗಳೂ ಆದ ಸಪ್ತಮ ಎಡ್ವರ್ಡ್ ಪ್ರಭುಗಳು ಸನ್ ೧೯೧೦ ನೇ ಇಸ್ವಿಯ ಮೇ ತಿಂಗಳ ೬ ನೇ ತಾರೀಖಿನ ದಿವಸ ಗತಿಸಿದ್ದರಿಂದ, ನಮ್ಮ ಸಮಸ್ತ ವೀರಶೈವ ಸಮಾಜಕ್ಕೆ ಅತ್ಯಂತ ದುಃಖವಾಗಿದೆ. ಇದನ್ನು ನಮ್ಮ ಸಮಾಜದ ಪಕ್ಷದಿಂದ ಶ್ರೀಮದ್ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ ಕಮಿಟಿಯವರು ಮುಂಬಯಿ ಸರಕಾರಕ್ಕೆ ದುಃಖ ಪ್ರದರ್ಶನ ಪತ್ರವನ್ನು ಕಳುಹಿಸತಕ್ಕದ್ದು.

ಈ ಸೂಚನೆಗೆ ಶ್ರೀಯುತ ತಮ್ಮಪ್ಪಾ ಸತ್ಯಪ್ಪಾ ಚಿಕ್ಕೋಡಿ, ಮೆಂಬರ ಜಮಖಂಡಿ ಸಂಸ್ಥಾನ ಇವರು ಅನುಮೋದನಕೊಡಲು, ಈ ಸೂಚನೆಗೆ ಸಭಾಸದರೆಲ್ಲರೂ ತಮ್ಮ ಮೌನವೃತ್ತಿಯಿಂದ ಒಪ್ಪಿಗೆಯನ್ನು ಕೊಡಲು, ಅದು ಸರ್ವಾನುಮತದಿಂದ ಮಂಜೂರಿಯಿತು.

ಬಳಿಕ ೨ ನೇ ಸೂಚನೆಯನ್ನು ಅಧ್ಯಕ್ಷರೇ ಸಭೆಯ ಮುಂದಿಟ್ಟರು ಅದೇನೆಂದರೆ:—

(೨.) ಇಂಗ್ಲಂಡದ ಈಗಿನ ಸಾರ್ವಭೌಮ ಅರಸರೂ ಹಿಂದೂಸ್ಥಾನದ ಚಕ್ರವರ್ತಿಗಳೂ ಆದ ಪಂಚಮ ಜಾರ್ಜ ಪ್ರಭುಗಳವರ ಸಿಂಹಾಸನಾರೋಹಣ ಸಮಾರಂಭದ ಕಾಲಕ್ಕೆ ವೀರಶೈವ ಸಮಾಜದ ಪರಿಯಿಂದ ಸಂತೋಷ ಪ್ರದರ್ಶಕವಾದ ಒಂದು ಮಾನಪತ್ರವನ್ನು ಬೆಳ್ಳಿಯ ಕರಂಡಕದಲ್ಲಿರಿಸಿ, ಸ್ಟ್ಯಾಂಡಿಂಗ ಕಮಿಟಿಯ ಚೇರಮನ್ನರವರ ಸಹಿಯಿಂದ ಕಳುಹಿಸುವದು.

ಈ ಸೂಚನೆಗೆ ಶ್ರೀಯುತ ತಮ್ಮಣ್ಣಪ್ಪಾಸಾ॥ ಚಿಕ್ಕೋಡಿ ಇವರು ಅನುಮೋದಿಸಿ ಹೇಳಿದ್ದೇನಂದರೆ:—

ಇಂಗ್ಲಿಷ ಸಾಮ್ರಾಜ್ಯದಲ್ಲಿ, ವೀರಶೈವ ಸಮಾಜದ ಏಳ್ಗೆಗೆ ಎಲ್ಲ ಬಗೆಗಳಿಂದಲೂ ಸಹಾಯವು ದೊರಕುತ್ತಿದೆ. ನಮ್ಮ ವಿದ್ಯಾಭಿವೃದ್ಧಿಗೆ ವಿಶೇಷ ಸಹಾಯಕಾರಿಯಾಗಿರುವ "ಲಿಂಗಾಯಿತ ಎಜ್ಯುಕೇಶನ್ ಫಂಡಿಗೆ" ಸರಕಾರದವರು ತಮ್ಮಿಂದಾದಷ್ಟು ಸಹಾನುಭೂತಿಯನ್ನು ತೋರಿಸುತ್ತಿರುವರು. ನಮ್ಮ ಧಾರ್ಮಿಕ, ನೈತಿಕ, ವ್ಯವಹಾರಿಕ, ಔದ್ಯೋಗಿಕ ಪ್ರಗತಿಗಳಿಗೆ ಕಾರಣವಾಗಿರುವ ಮಹಾಸಭೆಗೆ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಹೆಚ್ಚು ಹೆಚ್ಚಾಗಿ ಬೆನ್ನುಬಲವು ದೊರೆಯುತ್ತಲಿದೆ. ವಿದ್ಯದಲ್ಲಿ ಹಿಂದುಳಿದಿರುವ ನಮ್ಮ ಸಮಾಜಕ್ಕೆ ಇಷ್ಟು ಸಹಾನುಭೂತಿಯನ್ನು ತೋರಿಸುತ್ತಿರುವ ಇಂಗ್ಲೀಷ್ ರಾಜ್ಯವು ಹಿಂದುಸ್ಥಾನದಲ್ಲಿ ಸ್ಥಿರವಾಗಿರುವಂತೆಯೂ ಜಾರ್ಜಪ್ರಭುಗಳಿಗೆ ಉದ್ದಂಡಾಯುಷ್ಯವನ್ನು ಕರುಣಿಸುವಂತೆಯೂ ಶ್ರೀ ಪರಮೇಶ್ವರನನ್ನು ಬೇಡಿಕೊಂಡು ಈ ಸೂಚನೆಗೆ ನಾನು ಅನುಮೋದನವನ್ನು ಕೊಡುತ್ತೇನೆ.

ಆಮೇಲೆ ಈ ಸೂಚನೆಗೆ ಸಭೆಯೊಳಗಿನ ಎಲ್ಲ ಜನರು ಚಪ್ಪಾಳೆಗಳಿಂದ ಒಪ್ಪಿಗೆ ಕೊಡಲು ಈ ಸೂಚನೆಯು ಸರ್ವಾನುಮತದಿಂದ ಪಾಸಾಯಿತು.

(ಅ) ಈ ೨ ನೇ ನಿರ್ಣಯದ ಮೇರೆಗೆ ಕಳುಹಿಸಬೇಕಾದ ಸಂತೋಷ ಪ್ರದರ್ಶಕ ಮಾನಪತ್ರವನ್ನು ಬರೆದು ಸಿದ್ಧಪಡಿಸುವುದಕ್ಕಾಗಿ ಕೆಳಗಿನ ಸದ್ಗೃಹಸ್ಥರದೊಂದು ಸಬ್-ಕಮಿಟಿಯು ನೇಮಿಸಲ್ಪಡಬೇಕೆಂದು ಶ್ರೀಯುತ ಫಕೀರಪ್ಪಾ ಹಳಕಟ್ಟಿ ವಕೀಲ ಇವರು ಸೂಚಿಸಲು, ಅದಕ್ಕೆ ಶಿವಮೂರ್ತಿ ಗದಿಗೆಯ್ಯಸ್ವಾಮಿ ಹೊನ್ನಾಪುರಮಠ ವಕೀಲ ಇವರು ಅನುಮೋದನ ಕೊಡಲು, ಈ ಸೂಚನೆಯು ಸರ್ವಾನುಮತದಿಂದ ಮಂಜೂರಾಯಿತು.

ಈ ಸಬ್-ಕಮಿಟಿಯ, ಚೇರಮನ್ನರು— ರಾ. ಬ. ಶಾಂತವೀರಪ್ಪಾ ಅಣ್ಣಾ ಮೆಣಸಿನಕಾಯಿ, ಮೆಂಬರರು—(೧) ಶ್ರೀಮಂತ ಶಿವಸಿದ್ಧಪ್ಪಾ ಸರನಾಯಿಕ ಹಲಗಲಿ, (೨) ಶ್ರೀಮಂತ ಬಾಬಾಸಾಹೇಬ ದೇಸಾಯಿ ಹಂದಿಗನೂರ. (೩) ಶಿವಮೂರ್ತಿ ಗದಿಗೆಯಸ್ವಾಮಿ ಹೊನ್ನಾಪುರಮಠ ವಕೀಲ ಧಾರವಾಡ. (೪) ರಾ॥ ರಾ॥ ಕರವೀರಪ್ಪಾ ಅಂದಾನಪ್ಪಾ ಕುಲಕರ್ಣಿ ವಕೀಲ ಧಾರವಾಡ, (೫) ರಾ॥ ರಾ॥ ಸಿದ್ಧರಾಮಪ್ಪಾ ದು. ಪಾವಟೆ ಬಿ. ಎ. ಎಲ್‌ಎಲ್ ಬಿ., ವಕೀಲ ಹುಬ್ಬಳ್ಳಿ, (೬) ರಾ॥ ರಾ॥ ವೀರಪ್ಪ ಬಸಪ್ಪ ಬಿಳೇ ಅಂಗಡಿ ಬಿ. ಎ. ಎಲ್‌ಎಲ್ ಬಿ., ವಕೀಲ ಹುಬ್ಬಳ್ಳಿ (೭) ರಾ॥ ರಾ॥ ಸಿದ್ಧಪ್ಪಾ ತೋಟಪ್ಪಾ ಕೆಂಬಳಿ ಬಿ. ಎ. ಎಲ್‌ಎಲ್ ಬಿ., ವಕೀಲ ಹುಬ್ಬಳ್ಳಿ (೮) ರಾ॥ ರಾ॥ ಶಿವಬಸಪ್ಪಾ ಅಯ್ಯಪ್ಪಾ ಶೀಲವಂತ ವಕೀಲ, ಸೊಲ್ಲಾಪುರ.

(ಬ) ಎರಡನೆಯ ನಿರ್ಣಯದಂತೆ ಸಂತೋಷ ಪ್ರದರ್ಶಕ ಮಾನ ಪತ್ರವನ್ನು ಕಳುಹಿಸುವುದಕ್ಕೆ ಬೇಕಾಗುವ ಬೆಳ್ಳಿಯ ಕರಂಡಕ ಮೊದಲಾದ ವೆಚ್ಚಕ್ಕಾಗಿ ೨೦೦ ರೂಪಾಯಿಗಳವರೆಗೆ ಹಣವನ್ನು ಸಮಾಜದಿಂದ ಸ್ಟ್ಯಾಂಡಿಂಗ್ ಕಮಿಟಿಯವರು ಮುಂದಿನ ಫೆಬ್ರುವರಿ ತಿಂಗಳ ಅಂತ್ಯದೊಳಗಾಗಿ ವರ್ಗಣಿಯಿಂದ ಕೂಡಿಸಬೇಕೆಂದು ಈ ಸಭೆಯವರು ನಿರ್ಣಯಿಸುತ್ತಾರೆ.

ಕೆಳಗಿನ ೩ ನೇ ಠರಾವನ್ನು ಮಿ॥ ತಮ್ಮಪ್ಪಾ ಚಿಕ್ಕೋಡಿ ಇವರು ಸೂಚನಾರೂಪದಿಂದ ಸಭೆಯ ಮುಂದಿಟ್ಟರು. ಅದಕ್ಕೆ ಮಿ॥ ಬಸೆಟ್ಟೆಪ್ಪಾ ಅಣ್ಣಾ ಮೂತ್ತೂರ ಮತ್ತು ಶ್ರೀಮಂತ ಸಿವಲಿಂಗ ಜಗದೇವರಾವ ದೇಶಮುಖ ಇವರು ಅನುಮೋದನಕೊಡಲು, ಅದು ಸರ್ವಾನು ಮತದಿಂದ ಪಾಸಾಯಿತು.

೩ ನೇ ಠರಾವು—ವೀರಶೈವ ಸಮಾಜವು ಬೇರೆಬೇರೆ ಭಾಗಗಳಲ್ಲಿ ಹರಡಿಕೊಂಡಿರುವದರಿಂದ ಮಹಾಸಭೆಯ ಕೆಲಸದ ಸೌಕರ್ಯಕ್ಕಾಗಿ ಎಂಟು ವಿಭಾಗಗಳೂ ಅವುಗಳ ಮುಖ್ಯಸ್ಥಾನಗಳೂ ಕೆಳಗೆ ಬರೆದಂತೆ ಮಾಡಲ್ಪಟ್ಟಿರುತ್ತವೆ. ಮತ್ತು ಆಯಾ ವಿಭಾಗಗಳಿಗೆ, ಇಬ್ಬಿಬ್ಬರಂತೆ ಸಕ್ರೆಟರಿಗಳು ನೇಮಿಸಲ್ಪಟ್ಟಿದ್ದಾರೆ.

೧. ಮುಂಬಯಿ ಬ್ರಿಟಿಷ್ ಕರ್ನಾಟಕ ಹುಬ್ಬಳ್ಳಿ—(೧) ಮಿ॥ ಸಿದ್ದಪ್ಪ ತೋಟಪ್ಪ ಕೆಂಬಳಿ, ಬಿ. ಎ., ಎಲ್‌ಎಲ್. ಬಿ. ವಕೀಲ ಹುಬ್ಬಳ್ಳಿ, (೨) ಮಿ॥ ಫಕೀರಪ್ಪ ಗು. ಹಳಕಟ್ಟಿ, ಬಿ. ಎ., ಎಲ್‌ಎಲ್. ಬಿ., ವಕೀಲ ವಿಜಾಪೂರ. ೨. ಮುಂಬಯಿ ಬ್ರಿಟಿಷ್ ಮಹಾರಾಷ್ಟ್ರ ಸೊಲ್ಲಾಪುರ—(೧) ಮಿ॥ ಮಲ್ಲಿಕಾರ್ಜುನ ಅಪ್ಪಾರಾವ ಪಾಟೀಲ ಸೊಲ್ಲಾಪುರ, (೨) ಮಿ॥ ಶಿವಬಸಪ್ಪ ಅಯ್ಯಪ್ಪ ಶೀಲವಂತ ವಕೀಲ ಸೊಲ್ಲಾಪುರ. ೩. ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳು ರಬಕವಿ—(೧) ಮಿ॥ ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿ ಬನಹಟ್ಟಿ, (೨) ಮಿ॥ ವೀರಬಸಪ್ಪ ಸಿ. ಶ್ರೇಷ್ಠಿ, ಬಿ. ಎ., ಕೊಲ್ಲಾಪುರ. ೪. ಮೈಸೂರ ಸಂಸ್ಥಾನ ಬೆಂಗಳೂರ—(೧) ಮಿ॥ ಎಚ್. ಕೆ. ವೀರಬಸವಯ್ಯ, ಬಿ. ಎ., ಬಿ. ಎಲ್., (೨) ಮಿ॥ ಜಿ. ಶಾಂತವೀರಪ್ಪ, ಬಿ. ಎ. ೫. ಮದ್ರಾಸ್ ಇಲಾಖಾ ಬಳ್ಳಾರಿ—(೧) ಮಿ॥ ಅಲ್ಲಂಬಸಪ್ಪಅಣ್ಣ ಬಳ್ಳಾರಿ, (೨) ಮಿ॥ ಎ. ಸಂಗಪ್ಪಅಣ್ಣ ಬಿ.ಎ., ಬಿ.ಎಲ್., ಹೈಕೋರ್ಟ ವಕೀಲ, ಮದ್ರಾಸ್. ೬. ಹೈದರಾಬಾದ್ ಸಂಸ್ಥಾನ ಹೈದರಾಬಾದ್—(೧) ಮಿ॥ ಬಾಪುರಾವ ದೇಶಮುಖ ಹೈಕೋರ್ಟ ವಕೀಲ ಹೈದರಾಬಾದ್, (೨) ಮಿ॥ ಶಂಕಪ್ಪಾ ನೀರಡಗುಂಭ ವಕೀಲ ರಾಯಚೂರ. ೭. ವರಾಡ ಮತ್ತು ಮಧ್ಯಪ್ರಾಂತ ಉಮರಾವತಿ—(೧) ಮಿ॥ ಬಾಪುರಾವ ದೇಶಾಯಿ, (೨) ಮಿ॥ *. ೮. ಕೊಂಕಣ ರತ್ನಗಿರಿ—(೧) ಮಿ॥ *, ಮಿ॥ *.

೪ನೇ ಠರಾವ—ಸ್ಟ್ಯಾಂಡಿಂಗ ಕಮಿಟಿಯ ಕಾರ್ಯಗಳನ್ನು ಮಾಡಲಿಕ್ಕೆ ಆಯಾ ಪ್ರಾಂತಿಕ ಸೆಕ್ರೆಟರಿಗಳುಳ್ಳ ಒಂದು ಮ್ಯಾನೇಜಿಂಗ ಕಮಿಟಿ ಇರತಕ್ಕದ್ದು. ಮತ್ತು ಸ್ಟ್ಯಾಂಡಿಂಗ್ ಕಮಿಟಿಯ ಚೇರಮನ್ನರ ಸಹಾಯಕ್ಕೆ ಶಿವಮೂರ್ತಿ ಗದಿಗಯ್ಯಾ ಹು. ಹೊನ್ನಾಪುರಮಠ ಇವರನ್ನು ಜನರಲ್ ಸೆಕ್ರೆಟರಿಗಳನ್ನಾಗಿಯೂ, ಮಿ॥ ಕರವೀರಪ್ಪ ಅಂದಾನಪ್ಪ ಕುಲಕರ್ಣಿ ವಕೀಲ ಧಾರವಾಡ ಇವರನ್ನು ಜಾಯಿಂಟ್ ಸೆಕ್ರೆಟರಿಗಳನ್ನಾಗಿಯೂ ನೇಮಿಸತಕ್ಕದ್ದು.

ಈ ಠರಾವನ್ನು ಸೂಚನಾರೂಪದಿಂದ ಮಿ॥ ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿ ಇವರು ಸಭೆಯ ಮುಂದಿಡಲು ಅದಕ್ಕೆ ಮಿ॥ ಸಿದ್ಧರಾಮಪ್ಪ ದುಂಡಪ್ಪ ಅಣ್ಣಾ ಪಾವಟೆ ಇವರು ಅನುಮೋದನ ಕೊಡಲು ಇದು ಸರ್ವಾನುಮತದಿಂದ ಪಾಸಾಯಿತು.

೫ ನೇ ಠರಾವ—ಸ್ಟ್ಯಾಂಡಿಂಗ್ ಕಮಿಟಿಯಲ್ಲಿ ಒಟ್ಟು ೧೦೦ ಜನ ಮೆಂಬರುಗಳು ಇದ್ದು, ಮೇಲ್ಕಂಡ ೮ ಭಾಗಗಳಲ್ಲಿ ಕ್ರಮದಿಂದ ೩೦, ೧೨, ೧೨, ೧೬, ೮, ೯, ೮, ೫ ಜನ ಮೆಂಬರುಗಳು ಇರತಕ್ಕದ್ದು.

ಈ ಠರಾವನ್ನು ಮಿ॥ ರಾ॥ ರಾ॥ ತಮ್ಮಣ್ಣಪ್ಪ ಅಣ್ಣ ಚಿಕ್ಕೋಡಿ ಇವರು ಸೂಚನಾರೂಪದಿಂದ ಸಭೆಯ ಮುಂದಿಟ್ಟರು. ಅದಕ್ಕೆ ಶ್ರೀಮಂತ ಶಿವಸಿದ್ಧಪ್ಪ ಸರನಾಯಿಕ ಹಲಗಲಿ ಇವರು ಅನುಮೋದಿಸಲು ಅದು ಸರ್ವಾನುಮತದಿಂದ ಮಂಜೂರಾಯಿತು.

೬ನೇ ಠರಾವ— ಶ್ರೀಮದ್ವೀರಶೈವ ಮಹಾಸಭೆಯ ೧ನೇ ನೇಮದಲ್ಲಿ "ಸಭಾಸದರು" ಎಂಬ ೫ ನೇ ವರ್ಗವನ್ನು ಮಾಡಿ, ಈ ವರ್ಗದಲ್ಲಿ ಸೇರಲಪೇಕ್ಷಿಸುವವರು ಪ್ರತಿವರ್ಷ ೫ ರೂಪಾಯಿ ವರ್ಗಣಿ ಕೊಡತಕ್ಕದು.

(ಅ) ಮಹಾಸಭೆಯ ೧ನೇ ನೇಮದಲ್ಲಿ ಹೇಳಿರುವ ಆಯಾ ತರಗತಿಯ ಸಭಾಸದರೊಳಗಿಂದಲೇ ಸ್ಟ್ಯಾಂಡಿಂಗ ಕಮಿಟಿಯು ೧೦೦ ಮೆಂಬರರನ್ನು ಆರಿಸಿಕೊಳ್ಳತಕ್ಕದ್ದು.

(ಶೇಷ)

---

* ಈ ವಿಭಾಗಗಳ ಮೆಂಬರರು ಸಭೆಗೆ ಬಾರದ್ದರಿಂದ, ಅವರ ಹೆಸರುಗಳನ್ನು ಪತ್ರವ್ಯವಹಾರದಿಂದ ಗೊತ್ತುಪಡಿಸಬೇಕೆಂದು ನಿರ್ಣಯಿಸಲ್ಪಟ್ಟಿದೆ.

೧೯೧೧ನೇ ಇಸವಿ ಫೆಬ್ರುವರಿ ತಾ॥ ೧೩ ರಿಂದ ೧೯೧೧ನೇ ಫೆಬ್ರುವರಿ ತಾ॥ ೧೯ ರವರಿಗೆ ಸಲ್ಲುವ ಶಾಲಿವಾಹನ ಶಕೆ ೧೮೩೨ ನೇ ಸಾಧಾರಣ ಸಂವತ್ಸರದ ಮಾಘ ಬ॥ ಚತುರ್ದಶಿಯಿಂದ ಮಾಘ ಶು॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ತೇದಿ
13	ಸೋ	ಚ	23-8	ಶ್ಲೇ	18-4	1
14	ಮಂಗ	ಅ	20-46	ಮ	18-18	2
15	ಬುಧ	ಪಾ	19-58	ಪುಬ	17-33	3
16	¹ಗುರು	ಬಿ	19-49	ಉತ್ತ	19-12	4
17	ಶುಕ್ರ	ತ	21-1	ಹಸ್ತ	21-58	5
18	ಶನಿ	ಚಾ	23-38	ಚಿತ್ತ	25-55	6
19	²ಭಾನು	ಪಂ	28-20	ಸ್ವಾ	30-58	7

(1) ಶೂನ್ಯತಿಥಿ ಗ್ರಹಣಯೋಗಃ ಸಂಕಷ್ಟಚತುರ್ಥಿ ಕೆರಿಷುಟ್ಟದಲ್ಲಿ, ಶ್ರೀನಿವಾಸಸ್ವಾಮಿರಥಃ (೨) ಮಾರಿಹಾಳ ಉತ್ತನಹಳ್ಳಿಜಾತ್ರೆ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ‖
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ‖
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ‖

ಸಂಪುಟ ೨೪] ಮೈಸೂರ ಸ್ಟಾರ ಸನ್ ೧೯೧೧ ನೇ ಇಸವಿ ಫೆಬ್ರವರಿ ತಾರೀಖು ೨೦ ನೇ ಸೋಮವಾರ. [ಸಂಚಿಕೆ ೮

ಊದಬತ್ತಿಗಳು.

50

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೨-೦ ೫-೦-೦; ೩-೦-೦; ೨-೮-೦; ೧-೪-೦ ; ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ಶಾದಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

39 ಜೇರಿಗೆ ಬಸವಲಿಂಗಪ್ಪನ ಪುಸ್ತಕಗಳು.

ಬೆಲೆ ಬಹುಳ ಕಡಿಮೆ. ನೋಡಿ. ನೋಡಿ. ಬಿಡಬೇಡಿ.

ಪದ್ಮಾವತಿಕಥೆ:- ವೀರಶೈವವಚನನಾಟಕ. ೯೮ ಡೆಮ್ಮಿ ಪುಟ. ಕ್ರಯ. ೦-೨-೦. ವಿ. ಪಿ. ಯಿಂದ ೦-೪-೦

ವೀರಶೈವಮತವಿಷಯಸಾರ (೨ ನೇ ಭಾಗ) ಕ್ರಯ ೦-೨-. ವಿ. ಪಿ. ಯಿಂದ ೦-೪-೦.

ಷಟ್‌ಸ್ಥಲಚಿಂತಾರತ್ನ. - ಕ್ರಯ ೦-೨-೦. ವಿ. ಪಿ. ಯಿಂದ ೦-೪-೦.

ವಿಳಾಸ.--ಬೆಂಗಳೂರು ಸಿಟಿ ಅರಳೇಪೇಟೆ ಜೇರಿಗೆ ನಂಜಪ್ಪನವರ ಮಗ ಬಿ. ಜಿ. ಬಸವಲಿಂಗಪ್ಪನವರಿಗೆ.

ಮೈಸೂರ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾನಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೨-೫-೦
ಕೆರಸ್ಪಾಂತೆನ್ಸ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಬಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧--೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ. ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕಾಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

49 ಹೊಸ ಪುಸ್ತಕಗಳು.

ನೂತನಗೃಹಪ್ರವೇಶ, ಪಟ್ಟಾಧಿಕಾರ, ಲಿಂಗಧಾರಣ ಈ ಮೂರು ವಿಧಿಗಳು ಟೀಕಾ ಸಮೇತವಾಗಿ ಒಂದು ಪುಸ್ತಕದಲ್ಲಿ ಮುದ್ರಿತಗಳಾಗಿರುತ್ತವೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೨ ಆಣೆ. ಶ್ರೀಚೆನ್ನಬಸವೇಶ್ವರವಿರಚಿತಮಾದ ಶಿವಾನುಭವಶಾಸ್ತ್ರ ಕನ್ನಡ ವಾಕ್ಯರೂಪಾಗಿದೆ. ಬೆಲೆ ಪ್ರತಿ ೧ ಕ್ಕೆ ವಿ. ಪಿ. ೧೫ ಆಣೆ. ವೀರಶೈವದಶಕರ್ಮವಿಧಿ ಬೆಲೆ ಪ್ರತಿ ೧ಕ್ಕೆ ವಿ. ಪಿ. ೮ ಆಣೆ. ಶಿವಸ್ತುತಿಮಣಿಮಾಲಾ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೬ ಆಣೆ. ರಾಜಶೇಖರ ೧೩-೧೪ ಆಶ್ವಾಸ ಪ್ರತಿಪದಾರ್ಥ ತಾತ್ಪರ್ಯಸಹಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಇದೆ.

ಕ್ರಯ— ಪ್ರತಿ ೧ ಕ್ಕೆ ವಿ. ಪಿ. ೧-೩-೦.

ಸಟೀಕ ವೀರಶೈವ ಅಂತ್ಯೇಷ್ಟಿವಿಧಿ ಬೆಲೆ ಪ್ರತಿ ೧ ಕ್ಕೆ ವಿ. ಪಿ. ೮ ಆಣೆ. ವಿಳಾಸ:— ಕ. ಶಾಂತವೀರಪ್ಪ,
ದೊಡ್ಡಪೇಟೆ, ಬೆಂಗಳೂರು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ .

39 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ_
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

10

ಲೋಕಾಮಯಹಾರ ಕಸ್ತೂರೀ ಮಾತ್ರೆ.

ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ(ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ. ನಿಶ್ಶಕ್ತಿ,ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲವೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನುಸೇವಿಸುತಿರುವವರು ಖಂಡಿತವಾಗಿಯೂ ಪ್ಲೇಗಿನಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೮ ಕುಪ್ಪಿವರೆಗೆ ಪೋಸ್ಟೇಜು ೪ ಆ.

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ;— ಸೀತಾರಾಘವವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
28 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕನೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.
ದಂತಶುದ್ಧಿ ಚೂರ್ನ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಸು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕೆ ಬರೆಯಿರಿ.

ಸೌಗಂಧಿಕಾಪರಿಣಯ.

(ಕಳೆದವಾರದ ಶೇಷ.)

ಕಮಂಡಲದಿಂ ಜಲವಂ ತುಂಬಿಕೊಳ್ಳುತ್ತಿದ್ದರೂ ಎಂದಿನಂತೆ ತುಂಬಿ ತುಳುಕುವುದರಿಂದ ಅಪೂರ್ವಾಂಭೋನಿಧಿಯೋ ಎಂಬಂತೆ ಅಪರಿಮಿತ ಸಿದ್ಧಾಂಗನಾ ಕರಗಳಿಂದರ್ಚಿತಮಾದ ಜಲದೇವತಾ ಪೂಜಾಕುಸುಮಂಗಳಿಂ ರಮಣೀಯಮಾಗಿ ಸೋಮವಾರ ದರ್ಶನಾಪೇಕ್ಷಿಗಳಾಗಿ ಬರುವ ಸಪ್ತರ್ಷಿಗಳಿಂದುಚ್ಚರಿಸುವ ಅಬ್ಲಿಂಗಾಘಮರ್ಷಣ ಸೂಕ್ತಗಳಿಂದ ಪವಿತ್ರತಮಮಾಗಿ, ಬಹುವಿಲಾಸದಿಂ ಜಲಕ್ರೀಡೆಯಂಗೈವ ಯಕ್ಷೇಶ್ವರನ ನಿತಂಬಿನೀಕುಚಕುಡ್ಮಲ ಕುಂಕುಮಪತ್ರಕ್ಷಾಳನದಿಂ ಕೆಲವೆಡೆಯೊಳ್ ಪಾಟಲವರ್ಣಮಾಗಿ, ಮತ್ತೊಂದೆಡೆಯೊಳ್ ಹರವೃಷಭ ವಿಷಾಣಾಗ್ರಘಾತದಿಂ ಝರ್ಝರಿತಮಾದ ಶಿಲಾಶಕಲಗಳಿಂ, ಒಂದೆಡೆಯೊಳ್ ವರುಣಹಂಸಗಳಿಂ ಭಕ್ಷಿಸಿದ ಮೃಣಾಳಕೇಸರಶೇಷದಿಂ, ಒಂದೆಡೆಯೊಳ್ ಯಮಮಹಿಷಮುಖದಿಂ ಜಾರಿದ ಫೇನಪುಂಜದಿಂದೊಪ್ಪಿ, ಸ್ನಾನಾರ್ಥಮಾಗಿ ಬಂದು ತೆರಳಿದ ಸಪ್ತಮಾತೃಕಾ ಚರಣಮುದ್ರಾಂಕಿತಮಾಗಿ, ಇನ್ನೊಂದೆಡೆಯೊಳ್ ಪ್ರಮಥಗಣಗಳಿಂದುದ್ಧೂಳನಂಗೈದು ಅವಯವಗಳಿಂದುದುರಿದ ಭಸ್ಮರಾಜಿಗಳಿಂ ಧೂಸರಮಾದ ಮಣಿಸೋಪಾನಗಳಿಂ, ಒಂದೆಡೆಯೊಳ್ ಜಲಾವಗಾಹನಂಗೈದು ಪೊಳಲೆ ಬರುವ ಹೇರಂಬಮೂರ್ತಿಯ ಗಂಡಸ್ಥಳದಿಂ ಜಾರಿದ ಮದೋದಕ ಧಾರೆಗಳಿಂ ಸಿಕ್ತಮಾಗಿ, ಅತಿ ಎತ್ತರಮಾದ ಪಾದಮುದ್ರೆಗಳಿಂ, ಇದೇ ಶರ್ವಾಣಿಯ ಸ್ನಾನಾವತರಣಮಾರ್ಗವೆಂದು ಬೆಂಬಿಡಿದು ಬರುವ ವಿಜಯಾದಿ ಸಖಿಯರುಗಳ ತುರುಬುಗಳಿಂ ಜಗುಳಿದ ಮಂದಾರಪುಷ್ಪಗಳಿಂ, ವಿದ್ಯಾಧರರಿಂದರ್ಚಿತಮಾದ ಶಿವಪೂಜಾ ಬಿಲ್ವದಳಗಳಿಂ ಶೋಭಿಸುತ, ಅಮೃತದಂತೆ ಸರ್ವೇಂದ್ರಿಯಗಳಿಂ ಆಹ್ಲಾದಗೊಳಿಸುತ, ಅತಿ ನೈರ್ಮಲ್ಯದಿಂ ಚಕ್ಷುಸ್ಸಿಗೆ ಪ್ರೀತಿಯನ್ನುಂಟುಮಾಡುತ, ಶೀತಳಮಾದುದರಿಂ ಸ್ಪರ್ಶಸುಖವನ್ನುಂಟುಮಾಡುತ, ಸೌಗಂಧಿಕಾ ಕುಸುಮಂಗಳಿಂ ಘ್ರಾಣೇಂದ್ರಿಯಮಂ ತೃಪ್ತಿಗೊಳಿಸುತ, ಹಂಸಾದಿ ರವದಿಂ ಶ್ರೋತ್ರಮಂ ಸುಖಗೊಳಿಸುತ, ಸ್ವಾದುವಾದುದರಿಂ ರಸನೇಂದ್ರಿಯಕ್ಕೆ ರುಚಿಯನ್ನುಂಟುಮಾಡುತ, ಪುರಾಣಪುರುಷನ ಚರಿತ್ರೆಯಂತೆ ಪ್ರಕಟಮಾದ ಮೀನಕೂರ್ಮ ಲಕ್ಷಣಯುಕ್ತಮಾಗಿ, ಶ್ರೀನಗರದಂತೆ ಲಲಿತಾಯತನಶೋಭಿತಮಾಗಿ, ಷಣ್ಮುಖಲೀಲೆಯಂತೆ ಕ್ರೌಂಚವನಿತಾಪ್ರಳಾಪಸಂಯುತಮಾಗಿ, ಭಾರತಸಮರಸಮಯದಂತೆ ಧಾರ್ತರಾಷ್ಟ್ರಕುಲಗಳ ಪಕ್ಷಶೋಭೆಯಿಂ ಕೂಡಿ, ಮನ್ಮಥಧ್ವಜದಂತೆ ಮಕರಾಧಿಷ್ಠಿತಮಾಗಿ, ಅರಣ್ಯದಂತೆ ವಿಜೃಂಭಿಸುತ್ತಿರುವ ಪುಂಡರೀಕನಿಕರಗಳಿಂ ಕೂಡಿ, ಕದ್ರೂಸ್ತನದಂತೆ ನಾಗಸಹಸ್ರಗಳಿಂ ಪಾನಮಂಗೈವ ಯುವತಿಯರ ಪಯೋಧರದಿಂ ಕೂಡಿ, ನಯನಗಳಿಗಾನಂದದಾಯಕಮಾಗಿ, ನೋಡತಕ್ಕ ವಸ್ತುಗಳೆಲ್ಲ ಇದೇ ಅತ್ಯತಿಶಯಮಾಗಿರುವುದರಿಂದ ಈ ಜಲದಿಂದಲೇ ಬ್ರಹ್ಮನು ಅಮೃತವಂ ಸೃಜಿಸಿದನೋ ಎಂಬಂತೆ ಇರುವ ಈ ಸೌಗಂಧಿಕಾ ಸರೋವರವು ಅತ್ಯಾಹ್ಲಾದಕರಮಾದುದು ಎಂದು ವಿಜ್ಞಾಪಿಸಲು, ಆ ವಾಕ್ಯಮಂ ಕೇಳಿ, ಸುಗಂಧರಾಜೇಂದ್ರನು ಮಂತ್ರಿಯುಂ ಕುರಿತು, ಅಯ್ಯಾ ಸುಮತಿಯೇ— ಈ ದೇವತಾಸರೋವರವನ್ನೋಡಿದಬಳಿಕ ಇದಕ್ಕೆ ಸದೃಶವಾದ ವಸ್ತುವು ಯಾವ ಲೋಕದಲ್ಲಿಯೂ ಇರುವುದಾಗಿ ತೋರುವುದಿಲ್ಲ; ಇಲ್ಲಿ ವಾಸಮಂಗೈವ ಮಹಾತ್ಮರಿಗೆ ಸಾಲೋಕ್ಯಮುಕ್ತಿಯೆಂಬುದು ಬೇರೆಯುಂಟೆ? ಸಕಲ ದೇವರ್ಷಿಗಳ ಮಜ್ಜನದಿಂದತಿಪಾವನಮಾದ ಈ ಜಲದಲ್ಲಿ ಸ್ನಾನಮಂ ಮಾಡಿದವರಿಗೆ ತಿರಿಗಿ ಕರ್ಮಲೇಪವೆಂಬುದಾವುದಿರುವುದು? ಇದರ ರಮಣೀಯತೆಯನ್ನೋಡಿ ಸದಾಶಿವನು ಸಮೀಪಗತಮಾದ ಕೈಲಾಸಪರ್ವತದಲ್ಲಿಯೇ ವಾಸವಂ ಮಾಡುತ, ಈ ಸರೋವರದಲ್ಲಿ ಜಲಕೇಳಿಯನ್ನಾಡುತಲಿರುವುದರಿಂ ಬಹುಕಾಲ ಅನುಭವಿಸುವ ಸಾರ್ವಭೌಮಪದವಿಯು ಇಲ್ಲಿಯ ಕ್ಷಣವಾಸಕ್ಕೆ ಸಮಾನವಾಗಲಾರದು; ಇದು ಭೂಲೋಕಾತಿಶಯಮಾದ ಸ್ಥಾನವೆಂದು ಪೇಳಲಾಗ, ಯಕ್ಷಾಧಿಪನಾದ ಛಾಯಾಗುಪ್ತನು—ರಾಜಾಧಿರಾಜನಾದ ಸುಗಂಧರಾಜ ಸಾರ್ವಭೌಮನೆ, ರಮಣೀಯಮಾದ ಈ ಸರೋವರದಲ್ಲಿ ಸ್ನಾನಾಹ್ನಿಕ ಮೊದಲಾದುದಂ ನೆರವೇರಿಸಿಕೊಂಡು ಬಳಿಕ ಚಿತ್ತಬಂದಂತೆ ಮುಂದೆ ತೆರಳಬಹುದು; ಲವಣಸಮುದ್ರವು ಸನ್ನಿಹಿತಮಾಗಿರುವುದೆಂದು ವಿಜ್ಞಾಪಿಸಲದಂ ಕೇಳಿ, ಸುಗಂಧರಾಜೇಂದ್ರನು ಅಲ್ಲಿಯ ರಮಣೀಯತೆಯನ್ನೋಡುವ ಕುತೂಹಲದಿಂದ ಮಂತ್ರಿಯೊಡನೆ ಆ ಸರೋವರದ ಸಮೀಪವನ್ನೈದಿ, ಯಕ್ಷಾಧಿಪನ ಭುಜದಿಂದಿಳಿದು, ಆ ಸರೋವರ ಪ್ರಾಂತದಲ್ಲಿರುವ ನಾನಾ ವೃಕ್ಷಕದಂಬಗಳಿಂ ಮತ್ತೂ ಶುಕಪಿಕಮಯೂರಾದಿಗಳಿಂ ಕೂಡಿ, ಮನೋಹರಮಾದ ಉದ್ಯಾನಂಗಳಿಂ ನೋಡುತ ವಿಸ್ಮಿತನಾಗಿ, ಮನುಷ್ಯ ಸಾರ್ವಭೌಮಪದವಿಯು ಈ ಸರೋವರದ ಉದಕಲೇಶಕ್ಕೆ ಸಮಾನವಾಗಲಾರದೆಂದು ಶ್ಲಾಘಿಸುತ, ಆ ಸರೋವರದಲ್ಲಿ ಸ್ನಾನಾಹ್ನಿಕಗಳನ್ನೆರವೇರಿಸಿ, ಛಾಯಾಗುಪ್ತನು ತಂದು ಒಪ್ಪಿಸಿದ ಫಲಪುಷ್ಪಗಳನ್ನೋಡಿ, ಇದು ಎಲ್ಲಿಯದೆಂದು ಕೇಳಲು, ಆ ಯಕ್ಷಾಧಿಪನು— ಎಲೈ ರಾಜಕುಲೋತ್ತಂಸನಾದ ಸುಗಂಧಮಹಾರಾಜೇಂದ್ರನೇ, ಇವು ದೇವತಾಯೋಗ್ಯಂಗಳಾದ ಫಲಂಗಳಾದುದರಿಂದ ಇದರಲ್ಲಿ ಮಹಾಪರಿಮಳದಿಂ ಯುಕ್ತಮಾಗಿರುವ ಈ ಒಂದು ಫಲವು ಒಂದು ಮಾಸದ ಹಸಿವು ತೃಷೆಗಳಿಂ ಶಮನಗೊಳಿಸುವುದು; ಮನೋಹರಮಾದ ಈ ಫಲವು ೬ ಮಾಸದ ಕ್ಷುತ್ಪಿಪಾಸಾದಿಗಳಿಂ ಪರಿಹರಿಸುವುದು; ಸರಸಮಾದ ರಸಾಲಫಲದ ಸೌರಭ್ಯವಂತಿರಸ್ಕರಿಸುವ ಪರಿಮಳದಿಂ ಮನೋಹರಮಾದ ಈ ಫಲವು ಮನುಷ್ಯರಿಗೆ ಒಂದು ಸಂವತ್ಸರದ ಹಸಿವು ಬಾಯಾರಿಕೆಗಳಿಂ ಪರಿಹರಿಸುವುದು; ಈ ಕುಸುಮವು ತನ್ನ ಸೌರಭ್ಯದಿಂ ಶ್ರಾಂತರಾಗಿ ಬರುವ ಜನರ ಶ್ರಮವಂ ಪರಿಹರಿಸುವುದು; ಈ ಕುಸುಮವಂ ಆಘ್ರಾಣಿಸಿದರೆ ಯುದ್ಧದಲ್ಲಿ ಶಸ್ತ್ರಾಸ್ತ್ರಘಾತಗಳಿಂದುಂಟಾದ ವೇದನೆಯು ತೋರುವುದಿಲ್ಲ; (ಸಶೇಷ).

ದಕ್ಷಿಣ ಮಹಾರಾಷ್ಟ್ರ ಜೈನಸಭೆಯು.

೧೩ ನೇ ಅಧಿವೇಶನವು.

ಮೊದಲು ಪ್ರಸಿದ್ಧ ಮಾಡಿದಂತೆ ತಾ॥ ೫ ನೇ ಫೆಬ್ರುವರಿ ಹಿಡಿದು ತಾ॥ ೧೦ ನೇ ಫೆಬ್ರುವರಿ ತನಕ ದಕ್ಷಿಣ ಮಹಾರಾಷ್ಟ್ರದಲ್ಲಿ ಹೆಸರುವಾಸಿಯಾದ ಸಾಂಗಲಿ ಪಟ್ಟಣದಲ್ಲಿ ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ೧೩ ನೇ ಅಧಿವೇಶನವು ಬಹಳ ವಿಜೃಂಭಣೆಯಿಂದ ಮತ್ತು ಆನಂದದಿಂದ ಜರಗಿಸಲ್ಪಟ್ಟಿತು. ಈ ಅಧಿವೇಶನದ ಸಂಗಡವೇ ಜೈನ ಸ್ತ್ರೀಪುರುಷರ ಅತ್ಯಂತ ಭಕ್ತಿವಿಷಯಕವಾದ ಶ್ರೀ ತೀರ್ಥಂಕರರ ಪಂಚಕಲ್ಯಾಣ ಪೂಜಾಮಹೋತ್ಸವವಾದರೂ ಬಹಳ ಸಂತೋಷದಿಂದ ನೆರವೇರಿಸಲ್ಪಟ್ಟಿತು. ಈ ಮಹೋತ್ಸವದ ಸಲುವಾಗಿ ಮುಂಬೈ ಪಟ್ಟಣದಿಂದ ಯಂತ್ರ ಸಹಾಯದಿಂದ ತನ್ನಿಂದತಾನೇ ನಡೆಯುವ ಎರಡು ಕುದುರೆಯ (ಕೃತ್ರಿಮ) ಸುಂದರವಾದ ರಥವು ತರಲ್ಪಟ್ಟಿತ್ತು. ಈ ಅಪೂರ್ವವಾದ ರಥವನ್ನೇ ನೋಡುವುದಕ್ಕೆ ದಿನಾಲು ಸಾವಿರ ಎರಡು ಸಾವಿರ ಜನರು ಕುತೂಹಲಾಪೇಕ್ಷೆಯಿಂದ ಬರುತ್ತಿದ್ದರು. ಈ ಮಹೋತ್ಸವವನ್ನು ನೋಡಲಿಕ್ಕೆ ದಕ್ಷಿಣ ಮಹಾರಾಷ್ಟ್ರದಲ್ಲಿಯ ೫-೬ ಸಾವಿರ ಜೈನ ಜನರು ಸಾಂಗಲಿ ಪಟ್ಟಣದಲ್ಲಿ ಕೂಡಿದ್ದರು. ಮುಂಬೈ, ಸೋಲಾಪುರ, ಜಯಪುರ ಬೆಳಗಾಂವ, ಶಹಾಪುರ. ಕೊಲ್ಹಾಪುರ ಮುಂತಾದ ದೊಡ್ಡ ದೊಡ್ಡ ಪಟ್ಟಣದಿಂದ ದಾನವೀರ ಜೈನಕುಲಭೂಷಣ ಶೇಟ ಮಾಣಿಕಚಂದ ಹಿರಾಚಂದ ಜೆ. ಪಿ., ಶೇಠ ವಾಲಚಂದ ರಾಮಚಂದ ಗಾಂಧಿ, ಶೇಠ ಹಿರಾಚಂದ ಅಮೀಚಂದ (ಅಧ್ಯಕ್ಷ) ಪಂಡಿತ ಅರ್ಜುನಲಾಲಜಿ ಶೇಠಿ, ಬಿ. ಎ. (ಜಯಪುರ), ಮ॥ ಚೌಗುಲೆ, ಪ್ರೊಫೇಸರ ಲಠ್ಠೆ, ರಾವ ಸಾಹೇಬ ಪಾಟೀಲ ಮಾಮಲೆದಾರ, ಪಂಡಿತ ನಿಬವೆ ಮುಂತಾದ ವಿದ್ವಾನ ಮತ್ತು ಶ್ರೀಮಂತ ಸದ್ಗೃಹಸ್ಥರು ಈ ಮಹೋತ್ಸವದಲ್ಲಿ ಸೇರಿದ್ದರು. ಅದರಂತೆ ಜೈನಜನರ ಶಿಕ್ಷಣ ವಿಷಯಕ ಪ್ರಯತ್ನಕ್ಕೆ ತಮ್ಮ ಸಹಾನುಭೂತಿಯನ್ನು ತೋರಿಸುವ ಅನೇಕ ಜೈನೇತರ ಗೃಹಸ್ಥರಾದರೂ ಈ ಸಭೆಗೆ ಬಂದಿದ್ದರು. ಅವರಲ್ಲಿ ಆನರಬಲ್ ಗೋಖಲೆಯವರು ಪುಣೆಯಲ್ಲಿ ಸ್ಥಾಪನ ಮಾಡಿದ "ಸರ್ವಂಟ್ಸ್ ಆಫ್ ಇಂಡಿಯಾ ಸೊಸೈಟಿ" ಯ ಮೆಂಬರರಾದ ಮಿ॥ ಗೋಪಾಳ ಕೃಷ್ಣ ದೇವಧರ, ಎಂ. ಎ., ಲಕ್ಷ್ಮಣರಾವ ಕೈಕಿಣಿ ಮತ್ತು ಪಟವರ್ಧನ ಮುಂತಾದವರು, ಹಾಗೂ ಪ್ರಸಿದ್ಧ ನಾಟಕಕಾರರಾದ ರಾ॥ ರಾ॥ ಗೋವಿಂದ ಬಲ್ಲಾಳ ದೇವಲ, ಪ್ರೊಫೇಸರ ಮಹಾದೇವ ಗಣೇಶ ಡೊಂಗರೆ, ರಾ॥ ಬ॥ ಜಾಧವರಾವ, ಎಂ. ಎ., ಎಲ್‌ಎಲ್. ಬಿ. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ (ಕೊಲ್ಹಾಪೂರ), ಶ್ರೀಮಂತ ಭಾವು ಸಾಹೇಬ ಘೋಸರಪಾಡಕರ, ಶ್ರೀಮಂತ ಅಪ್ಪಾಸಾಹೇಬ ದೇಸಾಯಿ ಕೆಲ್ಲೂರಕರ, ಸಾಂಗಲಿ ಪಟ್ಟಣದ ಡಾಕ್ಟರ ದೇವ, ನ್ಯಾಯಾಧೀಶ ಮಿ॥ ಪಾಟಕರ, ಕಾರಭಾರಿ ಸಾಹೇಬ ಮಿ॥ ಬಾಪಟ ಮುಂತಾದವರು ಮುಖ್ಯರಿದ್ದರು. ಸಾಂಗಲಿ ಸಂಸ್ಥಾನದ ತರುಣ ಮತ್ತು ಉದಾರ ಹೃದಯ ಅಧಿಪತಿಗಳಾದ ಶ್ರೀಮಂತ ಅಪ್ಪಾಸಾಹೇಬ ಪಟವರ್ಧನ ಇವರಾದರೂ ಸಭೆಯ ಒಂದು ದಿವಸದ ಬೈಠಕಿಗೆ ತಮ್ಮ ಆಗಮನದಿಂದ ಶೋಭೆಯನ್ನು ತಂದಿದ್ದರು.

ಸಭೆಯ ಅಧಿವೇಶನಕ್ಕಾಗಿ ಸಾಂಗಲಿ ಹೈಸ್ಕೂಲದ ಸುಂದರವಾದ ಕಟ್ಟಡದ ಸಮೀಪದ ಪ್ರಶಸ್ತವಾದ ಪಟಾಂಗಣದಲ್ಲಿ ಭವ್ಯವಾದ ಸಭಾಮಂಟಪವನ್ನು ವಿಚಿತ್ರವಾದ ತೋರಣ ಪತಾಕಗಳಿಂದ ನಿರ್ಮಿಸಿದ್ದರು. ಅದರ ಮುಂದೆಯೇ ಸ್ತ್ರೀಯರ ಕೈಗಾರಿಕೆಯ ಕೆಲಸದ ಪ್ರದರ್ಶನವನ್ನು ಇಡುವುದಕ್ಕೆ ಒಂದು ಕಟ್ಟಡವನ್ನು ಗೊತ್ತುಮಾಡಿ ಅದರ ಮುಂದೆ ಸುಂದರವಾದ ಕಮಾನುಗಳನ್ನು ಏರ್ಪಡಿಸಿದ್ದರು.

ಈ ಪ್ರದರ್ಶನದಲ್ಲಿ ಜೈನ ಮತ್ತು ಜೈನೇತರ ಸ್ತ್ರೀಯರಿಂದ ಮಾಡಲ್ಪಟ್ಟ ಕೈಗಾರಿಕೆಯ ಕೆಲಸಗಳು ಇಡಲ್ಪಟ್ಟಿದ್ದವು. ಅದರಲ್ಲಿ ಕೊಲ್ಹಾಪುರದ ಶ್ರೀಮತಿ ಯಮುನಾಬಾಯಿ ದೇಶಪಾಂಡೆಯೆಂಬ ಸ್ತ್ರೀಯು "ಹಂಸಸಂದೇಶ"ವೆಂಬ ಒಬ್ಬ ಹೆಂಗಸಿನ ಚಿತ್ರವು ರೇಶ್ಮೆಯಿಂದ ಕಸೂತಿಯ ಮೂಲಕ ತಯಾರಿಸಲ್ಪಟ್ಟಿದ್ದು ಅತ್ಯಂತ ಪ್ರೇಕ್ಷಣೀಯವಿತ್ತು. ಇದಕ್ಕೇನೇ "ಫರ್ಸ್ಟ ಪ್ರೈಜ್" ಸಿಗುವ ಹಾಗೆ ತೋರುತ್ತದೆ. ಈ ಪ್ರದರ್ಶನವನ್ನು ತೆರೆಯುವ ಸಮಾರಂಭವು ತಾ॥ ೫ ಫೆಬ್ರುವರಿ ರವಿವಾರ ದಿವಸ ಸಾಯಂಕಾಲ ೫ ಗಂಟೆಗೆ ಸಾಂಗಲಿ ಸಂಸ್ಥಾನದ ಸುಶಿಕ್ಷಿತ ರಾಣಿ ಸಾಹೇಬರಾದ ಸೌ॥ ಸರಸ್ವತಿಬಾಯಿ ಸಾಹೇಬ ಇವರ ಶುಭಹಸ್ತದಿಂದ ಬಹಳ ಆನಂದದೊಡನೆ ನೆರವೇರಿಸಲ್ಪಟ್ಟಿತು. ಸೌ॥ ಜ್ಞಾನಮತಿಬಾಯಿ ಲಠ್ಠೆ ಇವರು ಜೈನಸ್ತ್ರೀಯರ ಸ್ವಾಗತಮಾಡಿ ಜೈನಸ್ತ್ರೀಯರಿಂದ ಕೊಡಿಸಲ್ಪಟ್ಟ ಈ ಪ್ರದರ್ಶನವನ್ನು ತಾವು ಉದ್ಘಾಟಿಸಬೇಕೆಂದು ವಿನಂತಿ ಮಾಡಿಕೊಂಡರು. ನಂತರ ರಾಣಿ ಸಾಹೇಬರು ಜೈನಸ್ತ್ರೀಯರ ಶಿಕ್ಷಣ ವಿಷಯಕ ಪ್ರಯತ್ನವನ್ನು ನೋಡಿ ತಮಗೆ ಉಂಟಾದ ಆನಂದವನ್ನು ವ್ಯಕ್ತಪಡಿಸಿ, ಜೈನಸ್ತ್ರೀಯರು ತಮ್ಮ ಇತರ ಮತಸ್ಥ ಭಗಿನಿಗಳನ್ನು ಕೂಡಿಕೊಂಡು ತಮ್ಮ ಉನ್ನತಿಯ ಪ್ರಯತ್ನ ನಡೆಸಿದ್ದು ನೋಡಿ ತಮಗೆ ಬಹಳ ಸಂತೋಷವಾಗಿದೆ ಎಂದು ಹೇಳಿ ಪ್ರದರ್ಶನವನ್ನು ತೆರೆದದ್ದು ಜಾಹೀರಮಾಡಿದರು. ನಂತರ ಪ್ರದರ್ಶನದಲ್ಲಿ ಇಡಲ್ಪಟ್ಟಿದ್ದ ಎಲ್ಲ ವಸ್ತುಗಳ ನಿರೀಕ್ಷಣೆಯನ್ನು ಮಾಡಿದ ಬಳಿಕ ಈ ಸಮಾರಂಭವು ಮುಗಿಯಿತು.

ಇದೇ ದಿವಸ ಮುಂಜಾನೆ ೧೦ ಗಂಟೆಯ ಹೊಗೆಬಂಡಿಯಿಂದ ಸಭೆಯ ಅಧ್ಯಕ್ಷರಾದ ಸೋಲಾಪುರದ ಪ್ರಸಿದ್ಧ ಜೈನಗೃಹಸ್ಥರು—ಶೇಠ ಹಿರಾಚಂದ ಅಮೀಚಂದ ಶಹಾ ಎಂಬುವರು ಸಾಂಗಲಿ ಪಟ್ಟಣದ ನಿಲ್ದಾಣಕ್ಕೆ ಬಂದರು. ಅವರ ಸ್ವಾಗತವನ್ನು ಮಾಡುವುದಕ್ಕೆ ನಿಲ್ದಾಣದ ಮೇಲೆ ೨೦೦-೩೦೦ ಜೈನಪ್ರಮುಖರು ಮೊದಲೇ ಕಾದುಕೊಂಡಿದ್ದರು. ನಿಯತಕಾಲಕ್ಕೆ ಹೊಗೆಬಂಡಿ ಬಂದಕೂಡ್ಲೆ ಅಧ್ಯಕ್ಷರ ಕೊರಳಲ್ಲಿ ಪುಷ್ಪಹಾರವನ್ನು ಹಾಕಿ ಸಂಸ್ಥಾನಿಕರಿಂದ ಬಂದ ರಥದಲ್ಲಿ ಅವರನ್ನು ಕೂಡಿಸಿ, ಸಮಾರಂಭದೊಡನೆ ಅವರಿಗಾಗಿ ಗೊತ್ತುಪಡಿಸಲ್ಪಟ್ಟ ಬಂಗಲೆಗೆ ಕರೆದುಕೊಂಡುಬಂದರು.

ನಂತರ ತಾ॥ ೬ ನೇ ಫೆಬ್ರುವರಿ ದಿವಸ ಮಧ್ಯಾಹ್ನಕ್ಕೆ ಸಭಾಕಾರ್ಯಕ್ಕೆ ಪ್ರಾರಂಭವಾಯಿತು. ಮೊದಲು ಈಶಸ್ತುತಿ ಪರ ಮತ್ತು ಸಮಾಜೋತ್ಕರ್ಷ ಪರವಾದ ಪದ್ಯಗಳು ಕೊಲ್ಹಾಪುರ ಜೈನ ಬೋರ್ಡಿಂಗದ ಮತ್ತು ಭಿಲವಡಿ (ಡಿ॥ ಸಾತಾರ) ಯ ಜೈನಕೀರ್ತನಾಲಯದ ವಿದ್ಯಾರ್ಥಿಗಳಿಂದ ಇಂಪಾದ ಧ್ವನಿಯಲ್ಲಿ ಹಾಡಲ್ಪಟ್ಟವೇಳೆ ಸ್ವಾಗತ ಕಮಿಟಿಯ ಅಧ್ಯಕ್ಷರಾದ ರಾ॥ ರಾ॥ ಬಾಬಾಜಿರಾವ ಚಿರವಾಡೆ ಇವರು ಸ್ವಾಗತಪರ ಭಾಷಣ ಮಾಡಿ ಎಲ್ಲ ಜನರ ಸ್ವಾಗತ ಮಾಡಿದರು. ನಂತರ ರಾವ ಸಾಹೇಬ ಬಾಪು ಅಣ್ಣಾ ಪಾಟೀಲ, ಬಿ. ಎ., ಮಾಮಲೇದಾರ (ಶಿರೋಳಪೇಟಾ) ಇವರು ಈ ಅಧಿವೇಶನದ ಅಧ್ಯಕ್ಷಸ್ಥಾನವನ್ನು ಸೋಲಾಪುರದ ವಿದ್ವಾನ ಗೃಹಸ್ಥರಾದ ಮ॥ ರಾ॥ ಶೇಠ ಹಿರಾಚಂದ ಅಮೀಚಂದಜಿಯವರು ಸ್ವೀಕರಿಸಬೇಕೆಂದು ವಿನಂತಿ ಮಾಡಿದವೇಳೆಗೆ ಶೇಠ ಹಿರಾಚಂದರವರು ಕರತಾಡನದ ಧ್ವನಿಯಲ್ಲಿ ಅಧ್ಯಕ್ಷ ಪೀಠವನ್ನು ಅಲಂಕರಿಸಿ ತಮ್ಮ ಭಾಷಣವನ್ನು ಮಾಡಿದರು. ಅದರಲ್ಲಿ ಜೈನಜನರ ಶಿಕ್ಷಣ ವಿಷಯಕ, ವ್ಯಾಪಾರ ವಿಷಯಕ, ಕೃಷಿವಿಷಯಕ, ಉನ್ನತಿಬಗ್ಗೆ ಯೋಗ್ಯವಿವೇಚನ ಮಾಡಿ, ಅಮೇರಿಕೆಯಲ್ಲಿ ಡಾ॥ ಬುಕರ ವಾಷಿಂಗ್ಟನರವರು ತಮ್ಮ ನೀಗ್ರೋಬಾಂಧವರಲ್ಲಿ ವಿದ್ಯಾವಿಷಯಕ ರುಚಿಯನ್ನು ಉತ್ಪನ್ನಮಾಡಿ ಅವರ ಉನ್ನತಿಯ ಬಗ್ಗೆ ಸದ್ಯಕ್ಕೆ ಅಮೇರಿಕೆಯಲ್ಲಿ ಒಂದು ಶಿಕ್ಷಣಸಂಸ್ಥೆಯನ್ನು ಸ್ಥಾಪನ ಮಾಡಿ ಅದರಲ್ಲಿ ಅವರಿಗೆ ಎಲ್ಲ ವಿಷಯದ ವ್ಯಾಪಾರಿಕ ಶಿಕ್ಷಣ ಹೇಗೆ ಕೊಡಲ್ಪಡುತ್ತಿದೆ ಎಂಬುದನ್ನು ವಿಶೇಷ ವಿಚಾರದಿಂದ ಶ್ರುತಪಡಿಸಿ, ಅದರಂತೆ ನಮ್ಮ ಜೈನಜನರಾದರೂ ಪ್ರಯತ್ನಪಡಬೇಕೆಂದು ಆಗ್ರಹಪೂರ್ವಕ ಹೇಳಿದರು. ಮತ್ತೂ ಜೈನಜನರು ತಮ್ಮ ಧರ್ಮಗ್ರಂಥದ ಸಂರಕ್ಷಣಮಾಡಿ ಅವುಗಳ ಪ್ರಸಿದ್ಧಿಮಾಡುವುದು, ಗ್ರಂಥಾಲಯಗಳನ್ನು ಸ್ಥಾಪನ ಮಾಡುವುದು ಮತ್ತೂ ಉಪದೇಶಕರಿಂದ ಅಜ್ಞಾನಿಜನರಿಗೆ ಉಪದೇಶ ಮಾಡಿಸುವುದು ಇತ್ಯಾದಿ ವಿಷಯಗಳನ್ನು ತಮ್ಮ ಭಾಷಣದಲ್ಲಿ ವಿಶೇಷ ವಿವೇಚನದಿಂದ ಸಭಾಜನರ ಮುಂದೆ ಇಟ್ಟರು. ಮತ್ತು ಹಿಂದೂಸ್ಥಾನದ ಶಾಂತತಾಪ್ರಿಯ ಬಾದಷಹರಾದ ಸಪ್ತಮ ಎಡ್ವರ್ಡ, ಸೋಲಾಪುರದ ಪ್ರಸಿದ್ಧ ನಾಗರಿಕರಾದ ಶ್ರೀಮಂತ ಅಪ್ಪಾಸಾಹೇಬ ವಾರದ ಮತ್ತು ಬಂಗಾಲಪ್ರಾಂತದ ಪ್ರಖ್ಯಾತ ಪುಢಾರಿಗಳಾದ ಬಾಬು ಶಿಶಿರಕುಮಾರಘೋಷ ಮುಂತಾದವರ ಮರಣದಿಂದ ತಮ್ಮ ಸಮಾಜಕ್ಕೆ ಆದ ದುಃಖವನ್ನು ವ್ಯಕ್ತಪಡಿಸಿ ತಮ್ಮ ಭಾಷಣವನ್ನು ಮುಗಿಸಿದರು.

ಈ ಪ್ರಕಾರ ಅಧ್ಯಕ್ಷರ ಭಾಷಣವಾದ ವೇಳೆ ಪ್ರೊ॥ ಲಠ್ಠೆ, ಎಂ. ಎ., ಯವರು ಸಭೆಗೆ ಬಂದ ಸಹಾನುಭೂತಿಪರ ತಾರುಗಳನ್ನು ಮತ್ತು ಪತ್ರಗಳನ್ನು ಓದಿ ತೋರಿಸಿದರು. ಅದರಲ್ಲಿ ಕೊಲ್ಹಾಪುರದ ಜಗದ್ಗುರುಗಳಾದ ಶ್ರೀಶಂಕರಾಚಾರ್ಯರು, ಪೊಲಿಟಿಕಲ್ ಏಜಂಟ ಮಿ॥ ಉಡಹಾವುಸ, ಶ್ರೀಮನ್ಮಹಾರಾಜ ಛತ್ರಪತಿ ಸರಕಾರ ಕರವೀರ, ಡಾಕ್ಟರ ಮ್ಯಾನ (ಪುಣೆ ಅಗ್ರಿಕಲ್ಚರಲ್ ಕಾಲೇಜ್), ಶೇಠ ಹಿರಾಚ

ದ ನೇಮಚಂದ ಸೋಲಾಪುರ, ಸ್ವಸ್ತಿ ಶ್ರೀ ಜಿನಸೇನ ಭಟ್ಟಾರಕ ಪಟ್ಟಾಚಾರ್ಯ (ಮಠನಾಂದಣಿ) ಮುಂತಾದವರ ಸಂದೇಶಗಳು ಮುಖ್ಯವಿದ್ದುವು. ನಂತರ ದಕ್ಷಿಣ ಮಹಾರಾಷ್ಟ್ರ ಜೈನಸಭೆಯು ಸನ್ ೧೯೧೦ ನೇ ಇಸವಿಯ ವಾರ್ಷಿಕ ರಿಪೋರ್ಟನ್ನು ಮಹಾಮಂತ್ರಿಗಳಿಗಾಗಿ ಮ॥ ರಾ॥ ಭರಮಪ್ಪ ಪದ್ಮಪ್ಪಾ ಪಾಟೀಲ, ಹೊಸೂರ (ಬೆಳಗಾಂವ) ಇವರು ಓದಿ ತೋರಿಸಿದರು. ನಂತರ ಅದನ್ನು ಮಂಜೂರ ಮಾಡುವಬಗ್ಗೆ ಸಭೆಯ (೧) ಮೊದಲನೇ ಠರಾವು ಪಾಸಾಯಿತು. ತದನಂತರ ಸಾಯಂಕಾಲವಾದಕಾರಣ ಸಬ್‌ಜಕ್ಟ್ ಕಮಿಟಿ (ವಿಷಯ ನಿಯಾಮಕ ಮಂಡಳಿ) ಯ ನಿವಡಣೂಕಿಯನ್ನು ಮಾಡಿ ಸಭೆಯ ಕೆಲಸವು ತಡೆಯಲ್ಪಟ್ಟಿತು.

ನಂತರ ರಾತ್ರಿ ೯ ಗಂಟೆಗೆ ಜಯಪುರದಲ್ಲಿ ಸ್ಥಾಪಿತವಾದ ಜೈನ ಶಿಕ್ಷಾಪ್ರಚಾರಕ ಸಮಿತಿಯ ಉತ್ಪಾದಕರಾದ ಪಂಡಿತ ಅರ್ಜುನಲಾಲಜಿ ಶೇಠಿ, ಬಿ. ಎ., ಯವರ ಧಾರ್ಮಿಕ ಭಾಷಣವು ಹಿಂದಿ ಭಾಷೆಯಲ್ಲಿ ಉತ್ಕೃಷ್ಟವಾಗಾಯಿತು. ತದನಂತರ ಭಿಲವಾಡಿಯಲ್ಲಿ ರಾ॥ ರಾ॥ ಬೋಪಶೆಯವರಿಂದ ಸ್ಥಾಪಿತವಾದ, 'ಜೈನಕೀರ್ತನಾಲಯ' ದಲ್ಲಿ ಶಿಕ್ಷಣ ಹೊಂದಿದ ಕೊಲ್ಲಾಪುರ ಜೈನಪಾಠಶಾಲೆಯ ವಿದ್ಯಾರ್ಥಿಗಳಾದ ಪಂಡಿತ ಬಾಬುರಾವ ಸ್ತವನೇಶ ಉಪಾಧ್ಯಾಯರ ಕೀರ್ತನವಾದ ಮೇಲೆ ಈ ದಿವಸದ ಸಭಾಕಾರ್ಯವು ಮುಗಿಯಿತು. (ಸಶೇಷ)

ಶ್ರೀ ವೀರಶೈವ ಮತ ಸಂವರ್ಧನೀಸಭಾ.

(ಮುಡುಕುಂದೊರೆ)

ಈ ಸಭೆಯು ಸ್ಥಾಪಿತವಾಗಿ ೩ ವರ್ಷಗಳಾದುವು. ಈ ಯಾವೃತ್ತಿ ೪ ನೇಯ ಅಧಿವೇಶನವು ಪದ್ಧತಿಯಂತೆ ಕಳೆದ ತಾ॥ ೧೦-೧೧--೧೦ ರಲ್ಲಿ ನೆರವೇರಿತು. ಈ ವರ್ಷದ ಸಭೆಗೆ ಕೊಳ್ಳೆಗಾಲದ ಶ್ರೀಮಾನ್ ಮ॥ ಜಿ. ಪಿ. ಸುಬ್ಬಯ್ಯನವರು ಅಧ್ಯಕ್ಷರಾಗಿದ್ದರು. ಮೊದಲದಿನ ಸತ್ಕಾರಕ ಸಂಘಾಧ್ಯಕ್ಷರ ಮತ್ತೂ ಸಭಾಧ್ಯಕ್ಷರ ಭಾಷಣಗಳಾದುವು. ಅಧ್ಯಕ್ಷರಭಾಷಣದಲ್ಲಿ ಸಭಾಪ್ರಯೋಜನವೂ, ಅದರ ವಿಷಯದಲ್ಲಿ ಮತಸ್ಥರು ತೋರಿಸಬೇಕಾದ ಪ್ರೋತ್ಸಾಹದ ಸಂಗತಿ ಮೊದಲಾದ ವಿಷಯಗಳೂ ಗರ್ಭೀಕೃತವಾಗಿದ್ದುವು. ೨ ನೇಯ ದಿವಸ ತತ್ಪ್ರಾಂತದಲ್ಲಿ ಮತಸ್ಥರು ಮಾಡಬೇಕಾದ ಧರ್ಮಸುಧಾರಣೆ–ವಿದ್ಯಾಭಿವೃದ್ಧಿ ಮೊದಲಾದ ಸಂಗತಿಗಳನ್ನು ಕುರಿತು ಚರ್ಚೆಗಳೂ ನಿರ್ಧಾರಗಳೂ ಆದುವು. ೩ ನೇಯ ದಿವಸ ಮುಡುಕುಂದೊರೆಯಲ್ಲಿ ಬಹುಮಾನಸಭೆಯು ನೇರವೇರಿತು. ಸಭಾಮಂಟಪದಲ್ಲಿ ಸ್ವಲ್ಪವೂ ಸ್ಥಲವುಳಿಯದಂತೆ ಮತಸ್ಥರು ಉತ್ಸಾಹದಿಂದ ಸೇರಿದ್ದುದು ಸಭಾ ವಿಷಯದಲ್ಲಿ ಜನರಿಗಿರುವ ಅಕ್ಕರೆಯನ್ನು ವ್ಯಕ್ತಪಡಿಸುತ್ತಿದ್ದಿತು. ಆಹ್ವಾನ ಮಾಡಲ್ಪಟ್ಟಿದ್ದ ಸಬ್ ಡಿವಿಜನ್ ಆಫೀಸರ್ ಮ॥ ಸುಂದರರಾಜಯ್ಯಂಗಾರರು, ತಾ॥ ಅಮಲ್ದಾರ್ ಮ॥ ವೆಂಕಟರಮಣ ಶಾಸ್ತ್ರಿಯವರು ಇನ್ನೂ ಕೆಲ ಸರ್ಕಾರದ ಉದ್ಯೋಗಿಗಳು ದಯಮಾಡಿಸಿದ್ದರು. ಮೈಸೂರಿನಿಂದ ವೇ॥ ಗಳಾದ ಪಿ. ಆರ್. ಕರಿಬಸವಶಾಸ್ತ್ರಿಗಳು, ಎನ್. ಆರ್. ಕರಿಬಸವಶಾಸ್ತ್ರಿಗಳು, ಎಂ. ಬಸವಲಿಂಗಶಾಸ್ತ್ರಿಗಳು ಸು॥ ಶಾಂತವೀರಶಾಸ್ತ್ರಿಗಳು ಸಿ॥ ಗುರುಶಾಂತಶಾಸ್ತ್ರಿಗಳು ಗುಬ್ಬಿ ವೀರಪ್ಪಶಾಸ್ತ್ರಿಗಳುಸಹ ದಯಮಾಡಿಸಿದ್ದರು. ಉಪಾಧ್ಯಕ್ಷರಾಗಿದ್ದ ಮ॥ ಬಿ. ಮಾದಪ್ಪನವರು ಕಳೆದವರ್ಷದಲ್ಲಿ ಸಭೆಯವರು ಆಚರಿಸಿದ ಮತ್ತೂ ಆಚರಿಸಬೇಕಾಗಿರುವ ಸಂಗತಿಗಳಿಂದಲೂ, ಆಯವ್ಯಯದ ವಿವರಣೆಯಿಂದಲೂ ಗರ್ಭಿತವಾದ ವರದಿಯನ್ನೋದಿದರು. ಬಳಿಕ ಮತವಿಷಯಕವಾದ ೨-೩ ಉಪನ್ಯಾಸಗಳು ಜರುಗಿದವು. ಸಭಿಕರೆಲ್ಲರಿಗೂ ಗಂಧ ತಾಂಬೂಲಗಳು ಹಂಚಲ್ಪಟ್ಟುವು. ಉಪನ್ಯಾಸಕರಿಗೆ ಸಬ್ ಡಿವಿಜನ್ ಆಫೀಸರ ಹಸ್ತದಿಂದ ಬಹುಮಾನಗಳು ಕೊಡಿಸಲ್ಪಟ್ಟುವು. ಕಡೆಯಲ್ಲಿ ಸಬ್ ಡಿವಿಜನ್ ಆಫೀಸರವರು ಸಭಾ ವಿಷಯದಲ್ಲಿ ಮಾತನಾಡುವಾಗ್ಗೆ–ಇಂಥ ಪ್ರಯತ್ನಗಳು ಶ್ಲಾಘ್ಯವಾದುವೆಂದೂ, ಈ ದಿನ ತಾವು ಕೇಳಿದ ಉಪನ್ಯಾಸಗಳಿಂದ ವೀರಶೈವಮತವಿಷಯವಾದ ಎಷ್ಟೋಸಂಗತಿಗಳು ತಮಗೆ ಗೋಚರವಾದುವೆಂದೂ, ಮತಸ್ಥರೆಲ್ಲರೂ ಅಭಿಮಾನವಿಟ್ಟು ಈ ಸಭೆಯನ್ನು ಸ್ಥಿರವಾಗಿ ನಡೆಸಿಕೊಂಡು ಹೋದರೆ ತುಂಬಾ ಪ್ರಯೋಜನವುಂಟೆಂದೂ, ಪ್ರತಿವರ್ಷವೂ ಜನರಿಂದ ಹಣವನ್ನು ಎತ್ತುತ್ತಿರುವುದಕ್ಕಿಂತಲೂ ಶಾಶ್ವತವಾದ ಮೂಲಧನವನ್ನು ಕೂಡಿಸಿ, ಯಾರ ಶ್ರಮವೂ ಇಲ್ಲದ ಬಡ್ಡಿಯು ಬರುವಂತೆ ಏರ್ಪಡಿಸಿಬಿಟ್ಟರೆ, ಸಭೆಯಉದ್ದೇಶಗಳನ್ನು ನೆರವೇರಿಸಿಕೊಳ್ಳಲು ಸಾಧಕವಾಗುವುದೆಂತಲೂ, ಅನೇಕಮಂದಿ ಶ್ರೀಮಂತರುಗಳು ಈ ಸುತ್ತಿನಲ್ಲಿರುವಾಗ್ಗೆ ಹಾಗೆ ಕಾರ್ಯಮಾಡುವುದು ಅಸಾಧ್ಯವೇನೂಅಲ್ಲವೆಂತಲೂ, ಇಂಥ ಸಭೆಯು ಈ ಸುತ್ತಿನಲ್ಲಿ ೨೦-೩೦ ವರ್ಷಗಳಿಗೆಮುಂಚೆಯೇ ಸ್ಥಾಪಿಸಲ್ಪಡಬೇಕಾಗಿತ್ತೆಂತಲೂ, ಹಾಗಿದ್ದರೆ ಅದರ ಫಲವು ಇಷ್ಟರೊಳಗೇ ಎಷ್ಟೋಚೆನ್ನಾಗಿ ಗೋಚರವಾಗುತ್ತಿತ್ತೆಂತಲೂ, ಈಗಲೂ ಮತಸ್ಥರೆಲ್ಲರೂ ಶ್ರದ್ಧೆಯಿಂದ ಕೆಲಸಮಾಡಿದರೆ ಬಹು ಮಟ್ಟಿಗೆ ಧಾರ್ಮಿಕ ಸುಧಾರಣೆಗೂ ವಿದ್ಯಾಭಿವೃದ್ಧಿಗೂ ಅವಕಾಶವಾಗುವುದೆಂತಲೂ, ಸಭೆಯ ವಿದ್ಯಮಾನಗಳನ್ನು ನೋಡುವಲ್ಲಿ ತಮಗೆ ತುಂಬಾ ಸಂತೋಷವಾಗಿದೆಯೆಂತಲೂ, ಇದು ಬೇಗನೆ ಅಭಿವೃದ್ಧಿಗೆ ಬರುವಂತೆ ಶ್ರೀ ಭ್ರಮರಾಂಬಾ ಸಮೇತ ಮಲ್ಲಿಕಾರ್ಜುನಸ್ವಾಮಿಯು ಅನುಗ್ರಹಿಸಬೇಕೆಂತಲೂ ಅಪ್ಪಣೆ ಕೊಡಿಸಿದರು. ತಾ॥ ಅಮಲ್ದಾರರವರು ಸಹ "ಕಳೆದವರ್ಷದಲ್ಲಿ ನಡೆದ ಉಪನ್ಯಾಸಗಳಿಗಿಂತಲೂ ಈ ವರ್ಷದ ಉಪನ್ಯಾಸಗಳು ಪ್ರೌಢವಾಗಿವೆ. ಪ್ರತಿಯೊಂದು ಮತವೂ ಪಾರಮಾರ್ಥಿಕ ಫಲಸಾಧನೆಗಾಗಿ ಏರ್ಪಟ್ಟಿವೆ. ಆ ಆ ಮತದಧರ್ಮಗಳು ಅವರವರ ಉದ್ದೇಶಕ್ಕೆ ತಕ್ಕಂತೆ ಸಮೀಚೀನಗಳಾಗಿಯೇ ಇರುತ್ತವೆ. ಆಸ್ತಿಕಬುದ್ಧಿಯಿಂದ ಅವರವರ ಮತಧರ್ಮದಲ್ಲಿ ಅವರವರಿರುವುದು ಕ್ಷೇಮಕರವಾದುದು. ಪರಮತ ಗ್ರಂಥಗಳನ್ನು ನೋಡುತ್ತ ಬರುವುದರಿಂದ ಇತರರ ವಿಷಯದಲ್ಲಿ ತಮಗಿರುವ ದುರ್ಭಾವಗಳು ನಿವಾರಣೆಗೊಳ್ಳುವುದಕ್ಕವಕಾಶವಾಗುತ್ತದೆ. ಈ ಸಭೆಯವರು ಆಸ್ತಿಕ್ಯವೃದ್ಧಿಗಾಗಿ ಮಾಡಿರುವ ಪ್ರಯತ್ನಗಳು ಸಮೀಚೀನವಾಗಿರುತ್ತವೆ. ಇದು ಹೀಗೆಯೇ ದಿನಕ್ರಮೇಣ ವೃದ್ಧಿಗೆ ಬರಲೆಂದು ನಾನು ಕೋರುತ್ತೇನೆ" ಎಂದು ಮೊದಲಾಗಿ ಅಪ್ಪಣೆಕೊಡಿಸಿದರು. ಅಲ್ಲಿಗೆ ಸಭಾಕಾರ್ಯಗಳು ಪೂರ್ಣವಾದುವು.

ಈ ಸಭೆಯು ಸ್ಥಾಪಿತವಾದೀಚೆಗೆ ಆ ಸುತ್ತಿನಲ್ಲಿ ಸ್ವಧರ್ಮಾದರವು ವಿಶೇಷವಾಗುತ್ತಲಿದೆ. ಸಂಸ್ಕೃತ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವುಂಟಾಗಿದೆ. ಸೆನ್ಸಸ್ಸಿನಲ್ಲಿ ವೀರಶೈವಮತಜಾತಿಗಳು ಕ್ರಮವಾಗಿ ಬರೆಯಲ್ಪಡುವುದಕ್ಕೆ ಅವಕಾಶವಾದುದು ಈ ಸಭೆಯ ಮುಖ್ಯ ಪ್ರಯತ್ನದಿಂದಲೇ. ಮತದ ವೈದಿಕಾಚರಣಗಳ ಉದ್ಧಾರಕ್ಕಾಗಿ ಯಾವ ಯಾವ ಪ್ರಯತ್ನಗಳನ್ನು ಮಾಡಬೇಕೋ ಅವುಗಳನ್ನೆಲ್ಲಾ ಕಾಲದೇಶವಿದ್ಯಮಾನಾನುಗುಣವಾಗಿ ಮಾಡುವುದಕ್ಕೆ ಸಭೆಯ ಮುಂದಾಳುಗಳು ಅತ್ಯಂತ ಶ್ರದ್ಧಾಳುಗಳಾಗಿರುವುದು ತುಂಬಾ ಸಂತೋಷಪ್ರದವಾಗಿದೆ. ಇಂಥ ಅಭಿಮಾನವು ಆ ಸುತ್ತಿನ ಎಲ್ಲ ಶ್ರೀಮಂತರಲ್ಲೂ ದಿನಕ್ರಮೇಣ ಬೇರೂರುವಂತೆ ಶ್ರೀಮದ್ಭ್ರಮರಾಂಬಾ ಸಮೇತ ಮಲ್ಲಿಕಾರ್ಜುನಸ್ವಾಮಿಯು ಅನುಗ್ರಹಿಸಿದರೆ ಮತಸ್ಥರಾದ ಅವರಿಗೂ ಅವರಿಂದ ಸಭೆಗೂ ಕೀರ್ತಿಯುಂಟಾಗುವುದರಲ್ಲಿ ಸಂಶಯವಿಲ್ಲ. ದಿನಕ್ರಮೇಣ ಈ ಸಭೆಯು ಊರ್ಜಿತಾವಸ್ಥೆಗೆ ಬರಲೆಂದು ಕೋರುತ್ತೇವೆ.

ಈ ಸಭೆಯಲ್ಲಾದ ನಿರ್ಧಾರಗಳು:–

೧. ಸ್ವಮತದ ವಿದ್ಯಾಭಿವೃದ್ಧಿಗಾಗಿ ೧ ಲಕ್ಷ ರೂಪಾಯಿಗಳನ್ನು ದಾನಮಾಡಿ, ಲಕ್ಷ ರೂಪಾಯಿಗಳನ್ನು ಮುಟ್ಟಿಸಿ, ಬೆಂಗಳೂರಲ್ಲಿ ಒಂದು ಧರ್ಮಸತ್ರವನ್ನು ಸ್ಥಾಪಿಸಿ, ಅದರಲ್ಲಿ ವೀರಶೈವ ವಿದ್ಯಾರ್ಥಿಗಳಿಗೆ ಅನ್ನದಾನವು ಶಾಶ್ವತವಾಗಿ ನಡೆಯುವಂತೆ ಮಾಡಿ, ವೀರಶೈವ ಮತಕ್ಕೆ ಅಸಾಧಾರಣವಾದ ಉಪಕಾರವನ್ನು ಮಾಡಿ, ಶ್ರೀಮನ್ಮಹಾರಾಜರವರ ಅನುಗ್ರಹಕ್ಕೆ ಪಾತ್ರರಾಗಿ, ಧರ್ಮಪ್ರವರ್ತಕ ಎಂಬ ಬಿರುದನ್ನೂ, ಇಂಡಿಯಾ ಗೌರ್ನಮೆಂಟಿನವರ ಮೆಚ್ಚಿಕೆಗೆ ಪಾತ್ರರಾಗಿ ರಾವ್ ಬಹದ್ದೂರ್ ಎಂಬ ಪ್ರಶಸ್ತಿಯನ್ನೂ ಪಡೆದು ವೀರಶೈವ ಮಂಡಲಿಗೆಲ್ಲಾ ಭೂಷಣದಂತಿದ್ದು, ಮತಕ್ಕೆ ಇನ್ನೂ ಅತಿಶಯವಾದ ಪ್ರಯೋಜನವನ್ನು ಉಂಟುಮಾಡಬಲ್ಲವರಾಗಿದ್ದ ರಾ॥ ಬ॥ ಗುಬ್ಬಿ ತೋಟದಪ್ಪನವರು ನಮ್ಮ ಸಮಾಜವನ್ನಗಲಿ ಕಳೆದ ವರ್ಷದ ನಮ್ಮ ಸಭೆಯು ನೆರವೇರಿದ ಸ್ವಲ್ಪ ಕಾಲದೊಳಗೇ ಕೈಲಾಸವಾಸಿಗಳಾದುದರಿಂದ, ಅಂಥ ಮತಾಭಿಮಾನಿಗಳನ್ನು ಕಳೆದುಕೊಂಡುದರಿಂದ ನಮ್ಮೀ ಸಭೆಗೆ ಉಂಟಾಗಿರುವ ಅಸಾಧಾರಣವಾದ ವ್ಯಸನವನ್ನು ಈ ಮೂಲಕ ಪ್ರದರ್ಶನಪಡಿಸುತ್ತೇವೆ.

೨. ನಮ್ಮ ಮತದ ಪಂಚಪ್ರಾಣದಲ್ಲಿ ಒಂದು ಪ್ರಾಣದಂತೆ ಇದ್ದು ಮತಧರ್ಮರಕ್ಷಣೆಗಾಗಿ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ಸಂಸ್ಕೃತ ಪಾಠಶಾಲೆಯನ್ನಿಟ್ಟು ವಿದ್ಯಾದಾನ ಮಾಡಿಸುತ್ತಲೂ, ಅನೇಕ ಮತಗ್ರಂಥಗಳನ್ನು ಅಚ್ಚುಮಾಡಿಸಿಯೂ, ಸರ್ವ ವಿಧದಲ್ಲಿಯೂ ಮತಸ್ಥರ ಪುರೋವೃದ್ಧಿಯುಂಟಾಗಬೇಕೆಂದು ಅಹರ್ನಿಶಿಯೂ ಚಿಂತಿಸುತ್ತ ಪಾಡುಪಡುತ್ತಲೂ, ನಮ್ಮೀ ಸಭೆಯ ಮೇಲೂ ಅಭಿಮಾನವನ್ನಿಟ್ಟು ಧನಸಹಾಯ ಗ್ರಂಥಸಹಾಯಗಳನ್ನು ಮಾಡಿ, ಇನ್ನೂ ಅನಂತೋಪಕಾರವನ್ನು ಮಾಡುವವರಾಗಿಯೂ ಇದ್ದ ಸೊಲ್ಲಾಪುರದ ರಾ॥ ಬ॥ ವಾರದ ಮಲ್ಲಪ್ಪನವರು ಕಳೆದ ತಿಂಗಳಲ್ಲಿ ಶಿವೈಕ್ಯರಾದ್ದರಿಂದ ನಮ್ಮ ಸಮಾಜಕ್ಕೆ ಅಪರಿಹಾರ್ಯವಾದಂಥ ನಷ್ಟವುಂಟಾಗಿರುತ್ತದೆ. ಚಿರಸ್ಮರಣೀಯರೂ ಮಾರ್ಗದರ್ಶಕರೂ ಆಗಿದ್ದ ಆ ಮಹಾಪುರುಷರು ಕೈಲಾಸವಾಸಿಗಳಾದುದರಿಂದ ನಮಗುಂಟಾದ ಅಗಣಿತವಾದ ದುಃಖವನ್ನು ಈ ಮೂಲಕ ಅವರ ಕುಟುಂಬದವರಿಗೆ ಶ್ರುತಪಡಿಸಿಕೊಳ್ಳುತ್ತೇವಲ್ಲದೆ, ಮತಧರ್ಮೋದ್ಧಾರದ ವಿಷಯದಲ್ಲಿ ಅವರು ತೋರಿಸುತ್ತಿದ್ದ ಅಭಿಮಾನವು ಸರ್ವಾನುಸರಣೀಯವಾದ ಗುಣಪಾತವಾಗಿದ್ದುದರಿಂದ ಅವರ ಚರಿತೆಯು ಸರ್ವರಿಗೂ ಗೋಚರವಾಗಿ ಮಾರ್ಗದರ್ಶಕವಾಗಲೆಂಬುದ್ದೇಶದಿಂದ ಮರಾಟಾ ಭಾಷೆಯಲ್ಲಿ ಬರೆಯಲ್ಪಡುತ್ತಿರುವ ಅವರ ಜೀವಿತಚರಿತ್ರೆಯನ್ನು ನಾವು ಕರ್ನಾಟಭಾಷೆಯಲ್ಲಿ ರಚಿಸಿ, ಸಭೆಯಿಂದ ಮುದ್ರಣ ಮಾಡಿಸಿ, ಪ್ರಚುರಪಡಿಸಿ, ಆ ಸತ್ಪುರುಷರ ವಿಷಯದಲ್ಲಿನ ನಮ್ಮ ಕೃತಜ್ಞತೆಯನ್ನು ಈ ರೀತಿಯಾಗಿ ಪ್ರದರ್ಶನಪಡಿಸುವವರಾಗಿದ್ದೇವೆ.

೩. ನಮ್ಮ ಮತದವರಲ್ಲಿ ಧರ್ಮಜಾಗರೂಕತೆಯನ್ನು ಹೆಚ್ಚಿಸುವುದಕ್ಕೆ ಧರ್ಮಗ್ರಂಥಗಳ ಪ್ರಚಾರವೂ, ಅವುಗಳ ಆಲೋಡನೆಯೂ ಹೆಚ್ಚಬೇಕಾಗಿದೆ. ಅದಕ್ಕೆ ಸಂಸ್ಕೃತ ವಿದ್ಯಾಭ್ಯಾಸವು ಅವಶ್ಯಕವಾಗಿದೆ. ಅಂಥ ವಿದ್ಯೆಯ ಅಭಿವೃದ್ಧಿಗಾಗಿ ಮಹಾಪ್ರಯತ್ನವನ್ನು ಮಾಡುವುದಕ್ಕಾಗಿ ಒಂದು ದೊಡ್ಡ ಫಂಡನ್ನು ಕಲ್ಪಿಸಲು, ಬೀರೂರಿನ ಮ॥ ಪತ್ರಿಚಂ ವೀರಪ್ಪನವರು ೩೦೦೦೦ ರೂಪಾಯಿಗಳನ್ನು ಚಂದಾದ್ರವ್ಯವಾಗಿ ಕೊಡಲು ವಾಗ್ದಾನ ಮಾಡಿ, ಅಸಾಧಾರಣವಾದ ಉಚಿತೌದಾರ್ಯವನ್ನು ತೋರ್ಪಡಿಸಿರುವುದರಿಂದ ಈ ಸಭೆಯವರು ಅವರನ್ನು ಅಭಿನಂದಿಸುವುದಲ್ಲದೆ, ಮತಬಾಂಧವರೆಲ್ಲರೂ ಅವರನ್ನು ಹಿಂಬಾಲಿಸಿ, ಆ ಕಾರ್ಯವನ್ನು ಶೀಘ್ರವಾಗಿ ವ್ಯವಹಾರಕ್ಕೆ ಬರುವಂತೆ ಮಾಡುವರೆಂದು ನಿರೀಕ್ಷಿಸುತ್ತಾರೆ.

೪. ಘನತೆಯನ್ನೈದಿದ ನಮ್ಮ ಗೌರ್ನಮೆಂಟಿನವರು ಜನಪರಿಗಣನೆ ಮೊದಲಾದ ಸಮಯಗಳಲ್ಲಿ ವೀರಶೈವ ಮತವನ್ನು ಒಂದು ಜಾತಿಯನ್ನಾಗಿ ಯೋಚಿಸಿ, ಹಾಗೆಯೇ ಬರೆದುಕೊಳ್ಳಲು ಏರ್ಪಾಡು ಮಾಡುತ್ತಿದ್ದುದರಿಂದ ನಮ್ಮ ಮತದವರಿಗೆ ತೊಂದರೆಯುಂಟಾಗಿರಲು, ನಮ್ಮ ಪ್ರಾರ್ಥನೆಯಪ್ರಕಾರ ಮತಸ್ವರೂಪವನ್ನು ನಮ್ಮ ಮೂಲಕ ಕೇಳಿ, ಇದೊಂದು ಮತವೆಂಬುದನ್ನೂ ಇದರಲ್ಲಿ ಬ್ರಾಹ್ಮಣಾದಿ ವರ್ಣಗಳುಂಟೆಂಬುದನ್ನೂ ಒಪ್ಪಿ, ಹಾಗೆಯೇ ಸೆನ್ಸಸ್ಸಿನಲ್ಲಿ ಬರೆದುಕೊಳ್ಳುವುದಕ್ಕೆ ಗೌರ್ನಮೆಂಟಿನವರು ಈ ವರ್ಷದಲ್ಲಿ ಅಪ್ಪಣೆ ಮಾಡಿದುದರಿಂದ ಈ ಸಭೆಯವರು ಕೃತಜ್ಞತಾಪೂರ್ವಕವಾಗಿ ವಂದನೆಯನ್ನರ್ಪಿಸುತ್ತಾರೆ.

೫. ಕಳೆದ ರಿಪ್ರಜೆಂಟೇಟೀವ್ ಅಸೆಂಬ್ಲಿಯಲ್ಲಿ ವೀರಶೈವರ ಸಂಸ್ಕೃತಾಭ್ಯಾಸ ವಿಷಯಕವಾದ ಅರಿಕೆಗೆ ನಮ್ಮ ಮೈಸೂರು ಗೌರ್ನಮೆಂಟಿನವರು ಈ ವಿಷಯವನ್ನು ಇನ್ನು ೫ ವರ್ಷಗಳವರೆಗೂ ವಿಚಾರಕ್ಕೆ ತೆಗೆದುಕೊಳ್ಳುವದಿಲ್ಲವೆಂದು ಅಪ್ಪಣೆ ಮಾಡಿರುವುದು ನಮ್ಮ ಸಮಾಜಕ್ಕೆಲ್ಲಾ ವಿಷಾದಾಸ್ಪದವಾಗಿದೆ. ಈ ವಿಷಯವನ್ನು ಗೌರ್ನಮೆಂಟಿನವರು ಪುನರ್ವಿಚಾರಕ್ಕೆ ತಂದುಕೊಳ್ಳುವವರಾಗಬೇಕೆಂದೂ ವೀರಶೈವರ ಸಂಸ್ಕೃತಾಭ್ಯಾಸಕ್ಕೆ ತಕ್ಕ ಆನುಕೂಲ್ಯವನ್ನುಂಟುಮಾಡಿಕೊಡಬೇಕೆಂದೂ, ಈ ವಿಷಯದಲ್ಲಿ ನಮ್ಮಸಭೆಯ ಪ್ರತಿನಿಧಿಗಳು ಮಾಡಿಕೊಳ್ಳುವ ಅರಿಕೆಗಳನ್ನು ಪ್ರತ್ಯಕ್ಷವಾಗಿ ಕೇಳುವುದಕ್ಕೆ ಅವಕಾಶವನ್ನು ಕೊಡಬೇಕೆಂದೂ, ಗೌರ್ನಮೆಂಟಿಗೆ ಶ್ರುತಪಡಿಸಿಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ.

೬. ಸಭೆಯ ಉದ್ದೇಶಗಳಲ್ಲೆರಡನೆಯದರ ಚರಿತಾರ್ಥಕ್ಕಾಗಿ ಸಿದ್ಧಾಂತಸ್ವರೂಪಾದಿ ನಿರೂಪಕವಾದ ಸಣ್ಣಸಣ್ಣ ಗ್ರಂಥಗಳನ್ನು ಸಭೆಯಿಂದಲೇ ಮುದ್ರಣ ಮಾಡಿಸಿ, ಪ್ರಕಟಿಸುವುದು ಅವಶ್ಯಕವೆಂದು ಈಗ ನಿರ್ಧಾರ ಮಾಡಿರುತ್ತಾರೆ. ಮತ್ತೂ ಮುಂದಣ ವರ್ಷದ ಸಭಾಕಾಲದೊಳಗೆ ಅದ್ವೈತ–ಶಕ್ತಿ ವಿಶಿಷ್ಟಾದ್ವೈತ ಇವೆರಡು ಮತಗಳ ಸಿದ್ಧಾಂತದ ತಾರತಮ್ಯವನ್ನು ಅಳೆಯುವ ಉತ್ತಮವಾದ ಉಪನ್ಯಾಸಕ್ಕೆ ೨೫ ರೂ. ಗಳನ್ನು ಬಹುಮಾನಕೊಡತಕ್ಕದೆಂದು ಈ ಸಭೆಯವರು ಅಭಿಪ್ರಾಯ ಪಟ್ಟಿರುತ್ತಾರೆ.

೭. ಮುಂದಣ ವರ್ಷದ ಸಭೆಯ ಸತ್ಕಾರಕ ಸಂಘದ ಅಧ್ಯಕ್ಷತೆಯು ಕೊಳ್ಳೇಗಾಲದ ಮ॥ ಜಿ. ಪಿ. ಸುಬ್ಬಯ್ಯನವರು ವಹಿಸಿಕೊಳ್ಳುವ ವಿಷಯದಲ್ಲಿ ಸಭೆಯವರು ಸಂತೋಷದಿಂದ ಒಪ್ಪಿ, ಅವರು ಅದಕ್ಕೆ ತಕ್ಕ ಕಮಿಟಿಯನ್ನು ಏರ್ಪಡಿಸಿಕೊಂಡು ಕಾರ್ಯನಿರ್ವಾಹ ಮಾಡುವರೆಂದು ಭರವಸವುಳ್ಳವರಾಗಿದ್ದಾರೆ.

೮. ಸಭೆಯ ಮೂಲಧನಕ್ಕೆ ದಸ್ತೈವಜುಗಳನ್ನು ಬರೆದುಕೊಟ್ಟಿರುವವರಿಂದ ಆ ದಸ್ತೈವಜು ಬಾಬತು ಹಣವನ್ನು ೫ ಕಂತುಗಳಿಗೆ ಹೆಚ್ಚಿಲ್ಲದಂತ ವಸೂಲ್ಮಾಡಲು ಆರಂಭಿಸಿ, ಸೇರಿದ ಹಣದಿಂದ ಅನುಕೂಲವಾದ ಬಡ್ಡಿಯು ಶಾಶ್ವತವಾಗಿ ಬರುವಂತೆ ಏರ್ಪಡಿಸಬೇಕೆಂತಲೂ, ಆ ಧನವಿಷಯಕವಾದ ಏರ್ಪಾಡಿನ ಮ್ಯಾನೇಜ್‌ಮೆಂಟಿಗೆ ಒಂದು ಮ್ಯಾನೇಜಿಂಗ್ ಕಮಿಟಿಯು ಸ್ಥಾಪಿಸಲ್ಪಡಬೇಕೆಂತಲೂ ಸಭೆಯ ಮೂಲಧನಕ್ಕಾಗಿ ಬಂದ ಹಣದಲ್ಲ ಒಂದು ಕಾಸನ್ನೂ ವೆಚ್ಚಮಾಡದೆ, ಅದರ ವೃದ್ಧ್ಯಂಶವನ್ನು ಮಾತ್ರ ವೆಚ್ಚಕ್ಕೆ ಉಪಯೋಗಿಸಿಕೊಳ್ಳಬೇಕೆಂತಲೂ, ವಾರ್ಷಿಕ ಚಂದಾ ಬಹುಮಾನದ್ರವ್ಯ ಮೊದಲಾದುವುಗಳ ರೂಪವಾಗಿ ಬಂದ ಹಣವನ್ನೂ ಸಹ ಸಭೆಯ ಕೆಲಸಗಳಿಗೆ ವೆಚ್ಚಮಾಡಿಕೊಳ್ಳಬಹುದೆಂತಲೂ ಈ ಸಭೆಯವರು ಅಭಿಪ್ರಾಯ ಪಟ್ಟಿದ್ದಾರೆ.

೯. ಸಭೆಗೆ ಸಂಬಂಧಪಟ್ಟ ಕಾರ್ಯಗಳು ಸದಾಕಾಲವೂ ನೆರವೇರುತ್ತ ಇರಬೇಕಾಗಿರುವುದರಿಂದ, ಅದಕ್ಕಾಗಿ ಒಂದು ವರ್ಕಿಂಗ್ ಕಮಿಟಿಯು ಇರಬೇಕೆಂದೂ, ಅದಕ್ಕೆ ಈ ಕೆಳಗೆ ವಿವರಿಸಿರುವವರು ಮೆಂಬರುಗಳಾಗಿರಬೇಕೆಂದೂ ನಿರ್ಧಾರ ಮಾಡಿದೆ.... ... ...

೧೦. ಸಭೆಯ ಮೂಲಧನಕ್ಕೆ ೫೦ ರೂ. ಗಳಿಗೆ ಕಡಿಮೆಯಿಲ್ಲದೆ ಸಹಾಯ ಮಾಡಿದವರು ಸಭೆಗಾಗಿ ವಾರ್ಷಿಕ ಚಂದಾ ಹಣವನ್ನು ಕೊಡಬೇಕಾದ ನಿರ್ಬಂಧವಿರಬೇಕಾಗಿಲ್ಲವೆಂದು ನಿರ್ಧಾರ ಮಾಡಿದ್ದೇವೆ.

೧೧. ಮುಂದಣ ವರ್ಷದ ಸಭೆಗೆ ಅಧ್ಯಕ್ಷರಾಗುವುದಕ್ಕೆ ಕಡೂರು ಡಿಸ್ಟ್ರಿಕ್ಟ್ ಎಡೆಹಳ್ಳಿಯಲ್ಲಿರುವ ಮ|| ರಾ|| ಇಂಗಳಗುಂದಿ ಶಾಂತಪ್ಪಸೆಟ್ಟರನ್ನು ಪ್ರಾರ್ಥಿಸಬೇಕೆಂದು ನಿರ್ಧರಿಸಿದ್ದೇವೆ.

೧೨. ಸಭೆಯು ಸ್ಥಾಪಿತವಾದಲಾಗಾಯ್ತು ಇದುವರೆಗೆ ಅದನ್ನು ಅಭಿವೃದ್ಧಿಸ್ಥಿತಿಗೆ ಬರುವುದಕ್ಕೆ ಅನುಗ್ರಹಿಸಿದ ಶ್ರೀ ಭ್ರಮರಾಂಬಾ ಸಮೇತ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರಿಗೆ (ಉತ್ಸವಮೂರ್ತಿಗೆ) ಹಿತ್ತಾಳೆಯ ಪ್ರಭಾವಳಿಯನ್ನು ಕೂಡಲೇ ಮಾಡಿಸಿ, ಸಭಾಸೇವಾರೂಪವಾಗಿ ಒಪ್ಪಿಸಬೇಕೆಂದು ನಿರ್ಧಾರಮಾಡಿದೆ.

ಜಿ. ಪಿ. ಸುಬ್ಬಯ್ಯ,
ಅಧ್ಯಕ್ಷರು.

ಸೂಚನೆ.

ಪದ್ಧತಿಯ ಪ್ರಕಾರ ಶಿವರಾತ್ರಿಯ ಉದ್ದಿಶ್ಯ ಮುಂದಣವಾರದ ಸ್ಟಾರ್ ಪತ್ರಿಕೆಯು ಹೊರಡುವುದಿಲ್ಲವು. ಪ. ಪ್ರ.

ಮೈಸೂರ್ ಸ್ಟಾರ್.

೧೯೧೧ ನೇ ಫೆಬ್ರವರಿ ತಾ|| ೨೦ ನೇ ಸೋಮವಾರ.

ಸಮುದ್ರಯಾನ.

ಇದರ ವಿಷಯಕವಾದ ಚರ್ಚೆಯು ಈಗ ಮೈಸೂರಿನಲ್ಲಿ ಪ್ರಬಲವಾಗಿದೆ. ಕೆಲವು ಸ್ಮಾರ್ತಜನರು ಶ್ರೀ|| ಶೃಂಗಗಿರಿ ಸ್ವಾಮಿಗಳಿಗೆ ಇದರ ವಿಷಯವಾಗಿ ಬಿನ್ನಯಿಸಿಕೊಂಡಿದ್ದರವೇಳೆ ಅವರು ತಮ್ಮ ಆ ಶಿಷ್ಯಮಂಡಳಿಗೆ ಒಂದು ಶ್ರೀಮುಖವನ್ನು ಕಳುಹಿಸಿರುತ್ತಾರೆ, ಅದರಲ್ಲಿ "ದ್ವಿಜರಿಗೆ ಸಮುದ್ರಯಾನವು ದೂಷ್ಯವಾದದ್ದೆಂತಲೂ, ಹಾಗೆ ನಿಂದಿತವಾಗಿರುವ ಸಮುದ್ರಯಾನವನ್ನು ಮಾಡಿದವರು ಯಥೋಕ್ತ ಪ್ರಾಯಶ್ಚಿತ್ತಾನುಷ್ಠಾನವನ್ನು ಮಾಡಿದಾಗ್ಯೂ ಪಾಪನಿವೃತ್ತಿಪೂರ್ವಕ ಇಹಲೋಕದಲ್ಲಿ ಸ್ವಸ್ವ ಕರ್ಮಾನುಷ್ಠಾನಾರ್ಹರಾಗುವರೇ ಶಿವಾಯಿ ಸವ್ಯವಹಾರಾರ್ಹರಾಗುವುದಿಲ್ಲವಾಗಿ ಪರಂಪರಾಗತವಾಗಿ ಈ ಭರತಖಂಡದಲ್ಲಿ ಶಿಷ್ಟರಿಂದ ಅನುಸರಿಸಲ್ಪಡುತ್ತಾ ಬರುತ್ತಲಿರುವ ಧರ್ಮಶಾಸ್ತ್ರಗಳು ಸ್ಪಷ್ಟವಾಗಿ ಉದ್ಘೋಷಿಸುತ್ತಲಿರುವುದರಿಂದ ಶಾಸ್ತ್ರೈಕಶರಣ್ಯರಾದವರು ಶಾಸ್ತ್ರವಿರುದ್ಧವಾಗಿ ಎಷ್ಟುಮಾತ್ರವೂ ಆಚರಿಸೋಣವು ಶ್ರೇಯಸ್ಕರವಾದದ್ದಲ್ಲವೆಂಬ ವಿಷಯವನ್ನು ಸ್ವತಏವ ತಿಳಿದು ವರ್ತಿಸುತ್ತಲಿರುವ ಶಿಷ್ಯರಿಗೆ ಪತ್ರಿಕಾ ಮೂಲಕ ಅಪ್ಪಣೆಕೊಡಿಸತಕ್ಕದ್ದೇನಿದೆ?" ಎಂದು ಉತ್ತರ ಕೊಟ್ಟಿರುತ್ತಾರೆ. ಈ ಅಪ್ಪಣೆಯು ದೇಶಾಭಿಮಾನಿಗಳ ಮನಸ್ಸಿಗೆಲ್ಲಾ ನೋವನ್ನುಂಟುಮಾಡಿದೆ. ಏಕೆಂದರೆ–ಪ್ರಕೃತದ ಭರತಖಂಡದ ಸ್ಥಿತಿಯನ್ನು ಗಮನಿಸಿದರೆ, ನಾವು ಅಸಮಸಾಹಸಗಳನ್ನು ಮಾಡಿದಲ್ಲದೆ ನಮ್ಮ ದೇಶದಲ್ಲಿ ವಿದ್ಯೆ–ವ್ಯಾಪಾರ–ಶಿಲ್ಪಗಳನ್ನು ಪಾಶ್ಚಾತ್ಯರಂತೆ ಅಭಿವೃದ್ಧಿಗೊಳಿಸುವುದು ಸಾಧ್ಯವಲ್ಲ. ಹಾಗೆ ಆಗದಿದ್ದರೆ ಪ್ರಪಂಚದಲ್ಲಿ ನಡೆಯುತ್ತಿರುವ ಸಂಪದಾರ್ಜನೆಯ ಹೋರಾಟದಲ್ಲಿ ನಾವು ಸೇರುವುದಕ್ಕೆ ಶಕ್ತರಾಗುವುದಿಲ್ಲ. ಅಂಥ ಶಕ್ತಿಯಿಲ್ಲದಬಳಿಕ ನಮ್ಮ ದೇಶವು ಅಧೋಗತಿಗಿಳಿಯುವುದೇ ಸಿದ್ಧ. ಅಂಥ ಅವನತಿಯೇ ನಮಗಿರಲೆಂದು ಕೋರುವುದು ಪುರುಷಸ್ವಭಾವವೇ ಅಲ್ಲ. ಅದು ಕಾರಣ, ನಾವು ಲೌಕಿಕ ಸಂಪತ್ತಿಯ ಅಭಿವೃದ್ಧಿಗೆ ದಾರಿಮಾಡಿಕೊಳ್ಳಬೇಕಾದರೆ, ಆ ವಿಷಯದಲ್ಲಿ ಯಾರು ಹೆಚ್ಚಾಗಿ ಮುಂದರಿದಿರುವರೊ ಅವರ ಸಹವಾಸ ಶಿಕ್ಷೆ ಮೊದಲಾದುವುಗಳನ್ನು ಪಡೆಯುವುದು ಅತ್ಯವಶ್ಯಕವಾಗಿದೆ. ವಿದೇಶಕ್ಕೆ ಹೋಗಿ ಬಂದಲ್ಲದೆ ಪಾಶ್ಚಾತ್ಯರಂತೆ ನಮ್ಮ ದೇಶವನ್ನು ನಾವು ಮುಂದರಿಸಲಾರೆವು. ಏಕೆಂದರೆ—ಲೌಕಿಕ ಶಾಸ್ತ್ರಗಳಿಗೆಲ್ಲಾ ವಿದೇಶಗಳೇ ನಿಧಿಗಳಾಗಿವೆ. ನಮ್ಮ ದೇಶದಲ್ಲಿ ಅಂಥ ವಿದ್ಯೆಗಳನ್ನು ಕಲಿಯುವುದಕ್ಕೆ ನಮಗೆ ಆನುಕೂಲ್ಯವಿಲ್ಲ. ನಮ್ಮ ದೇಶದಲ್ಲಿ ಯಾವವಿಧದ ವೈದುಷ್ಯವನ್ನಾರ್ಜಿಸುವುದಕ್ಕೂ ಉತ್ತಮವರ್ಣೀಯರೇ ಮುಂದಾಳುಗಳು. ಸಮುದ್ರಯಾನದ ನಿರ್ಬಂಧವು ಅವರಿಗೇ ಇರುವುದು. ಮುಂದಾಗಿ ಪ್ರವರ್ತಿಸುವವರ ಕಾಲಿಗೇ ನಿರ್ಬಂಧದ ಸಂಕೋಲೆಯು ತೊಡಿಸಲ್ಪಟ್ಟರೆ ದೇಶ ಕ್ಷೇಮದ ದ್ವಾರವನ್ನೇ ಮುಚ್ಚಿಬಿಟ್ಟಂತಾಗುವುದು. ದೇಶಾಭಿಮಾನ ದೃಷ್ಟಿಯಿಂದ ನೋಡುವವರಿಗೆ ಇದರ ನಿಜಾಂಶವು ಗೊತ್ತಾಗದೆ ಹೋಗುವುದಿಲ್ಲ. ಧರ್ಮಶಾಸ್ತ್ರಗಳು ದೇಶೋದ್ಧಾರಕ್ಕೆ ಹುಟ್ಟಿದುವುಗಳೇ ಹೊರತು ದೇಶದ ನಾಶಕ್ಕಾಗಿ ಹುಟ್ಟಿಲ್ಲ. ಹಲವರು ಶಾಸ್ತ್ರೋದ್ಧಾರಕ್ಕಾಗಿಯೇ ತಾವು ಜನ್ಮಿಸಿ ಬದುಕಿರುವಂತೆ ವಿಜೃಂಭಿಸುತ್ತಿರುವುದುಂಟು. ವಿಚಾರಮಾಡಿನೋಡಿದರೆ ನಮಗಾಗಿ ಶಾಸ್ತ್ರಗಳೇ ಹೊರತು ಶಾಸ್ತ್ರಗಳಿಗಾಗಿ ನಾವಲ್ಲ. ದೇಶಕ್ಕೆಲ್ಲಾ ಸಂಬಂಧಪಡುವ ಇಂಥ ಮಹತ್ತರವಾದ ವಿಷಯಗಳನ್ನು ನಿರ್ಧರಿಸುವುದಕ್ಕೆ ದೇಶ ಕ್ಷೇಮವನ್ನೆಲ್ಲಾ ಕೋರುವ ವಿಶಾಲ ಹೃದಯಗಳೇ ತಕ್ಕುವುಗಳು. ತಾವೇ ಜಗತ್ತೆಂದು ತಿಳಿಯುವ ಜನರು ಇಂಥ ಮಹದ್ವಿಷಯವನ್ನು ವಿಮರ್ಶಿಸುವುದಕ್ಕೆ ತಕ್ಕವರಲ್ಲ. ತಮ್ಮ ಮಾತು ಗೆದ್ದರೆ ತೀರಿತೆಂದು ತಾವನ್ಮಾತ್ರದಲ್ಲಿ ಪರಿತೃಪ್ತರಾಗತಕ್ಕ ಹಟವಾದಿಗಳ ಪಾಡಿಗೆ ಇಂಥ ವಿಷಯದಲ್ಲಿ ಯಾಜಮಾನ್ಯವು ದೊರೆತರೆ, ಅದು ದೇಶವಿಘಾತಕವಾದ ಪರ್ಯವಸಾನವನ್ನು ಈಯುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಶ್ರೀ|| ಶೃಂಗಗಿರಿ ಪೀಠವು ಜಗದ್ಗುರುತ್ವವನ್ನು ವಹಿಸಿದುದೆಂಬ ಕೀರ್ತಿಯನ್ನು ಪಡೆದಿರುತ್ತದೆ. ಅಂದಬಳಿಕ ಜಗತ್ತಿನ ಕ್ಷೇಮಚಿಂತನೆಯೆಲ್ಲಾ ಅದರ ಧರ್ಮಾಚಾರ್ಯತ್ವಕ್ಕೆ ಅಂಕಿತವಾಗಿಯೇ ಇರಬೇಕು. ಆ ಪೀಠದ ಈಗಿನ ಸ್ವಾಮಿಗಳಾದರೂ ಆ ಸ್ಥಾನಕ್ಕೆ ತಕ್ಕವರಾಗಿಯೇ ಇರುವರೆಂದು ಅವರ ಇದುವರೆಗಿನ ಕಾಲದ ಆಧಿಪತ್ಯದಿಂದ ಪ್ರಸಿದ್ಧಪಡಿರುತ್ತಾರೆ. ಅವರು ಕೇವಲ ತಪಸ್ವಿಗಳಾಗಿ ಮಠದ ಒಂದು ಕೋಣೆಯಲ್ಲಿ ಕುಳಿತುಕೊಂಡಿರದೆ, ಪೀಠಾಧಿಕಾರನಿರ್ವಾಹಕ್ಕಾಗಿ ಇತರ ಗುರುಗಳೆಲ್ಲಕ್ಕಿಂತಲೂ ವಿಶೇಷವಾಗಿ ದೇಶಾಟನಮಾಡುತ್ತ ಪ್ರಕೃತಕಾಲಸ್ಥಿತಿಯನ್ನೆಲ್ಲಾ ಅರಿತವರಾಗಿರುತ್ತಾರೆ. ಮಠದ ಸರ್ವಾಧಿಕಾರಿಗಳುಸಹ ಕೂಪ ಕೂರ್ಮದ ಸ್ವಭಾವದವರಂತಿರದೆ ಆಧುನಿಕ ವೈಲಕ್ಷಣ್ಯಗಳನ್ನೆಲ್ಲಾ ಅರಿತ ಕುಶಲಮತಿಗಳಾಗಿರುವರೆಂದು ಕೇಳುತ್ತೇವೆ. ಹೀಗಿದ್ದರೂ ದೇಶಕ್ಷೇಮಕ್ಕೆ ಅತ್ಯವಶ್ಯಕವಾದ ಸಮುದ್ರಯಾನದ ವಿಷಯದಲ್ಲಿ ಅನಿರೀಕ್ಷಿತವಾಗಿದ್ದ ಇಂಥ ಉತ್ತರವನ್ನು ಆ ಮಠದಿಂದ ಕೊಟ್ಟಿರುವರೆಂಬುದನ್ನು ಕೇಳಿದರೆ ಪರಮಾಶ್ಚರ್ಯವಾಗುತ್ತದೆ.

ವಿದೇಶಯಾನವು ಕಷ್ಟತರವೂ, ಅಪಾಯಮಯವೂ ದುಸ್ಸಂಸರ್ಗಸಾಧನವೂ ಎನಿಸಿಕೊಂಡಿದ್ದ ಪೂರ್ವಕಾಲದಲ್ಲಿ ಧರ್ಮಶಾಸ್ತ್ರವಚನಗಳು ತನ್ನಿಷೇಧಕವಾಗಿ ಹುಟ್ಟಿರಬಹುದು. ಈಗ ಆ ಭಯಗಳೊಂದೂ ಇರುವುದಿಲ್ಲ. ಮತ್ತೂ ಆಗಿಂತಲೂ ಈಗ ಸಮುದ್ರಯಾನದ ಅವಶ್ಯಕತೆ ಹೆಚ್ಚಾಗಿದೆ. ತತ್ಕಾಲಾನುಗುಣವಾಗಿ ಹುಟ್ಟಿದ್ದ ವಚನಗಳನ್ನು ಈಗಿನ ಕಾಲಕ್ಕೆ ಅನುಸಾರವಾಗಿ ಹೊಂದಿಸಿಕೊಳ್ಳದೆ ಹೋದರೆ,ದೇಶ ಕ್ಷೇಮಕ್ಕೆ ಹುಟ್ಟಿದ ಆಚಾರವನ್ನೇ ದೇಶವಿನಾಶಕ್ಕಾಗಿ ಉಪಯೋಗಿಸಿಕೊಂಡಂತಾಗುವುದು. ಮಠಾಚಾರ್ಯರಿಗೆ ಶಾಸ್ತ್ರೈಕಶರಣ್ಯರೆಂಬ ಹೆಸರೊಂದೇ ಇದ್ದರೆ ಪ್ರಯೋಜನವಿಲ್ಲ; ಶಿಷ್ಯ ಮಂಡಲಿಯ ಉದ್ಧಾರದ ಚಿಂತನೆಯೂ ಅವಶ್ಯಕವಾಗಿರಬೇಕು. ಉಣ್ಣುವರಿಲ್ಲದ ಬೆಳೆಯೂ, ಕುಡಿಯುವರಿಲ್ಲದ ಕೆರೆಯನೀರೂ ಸಮೃದ್ಧವಾಗಿದ್ದರೆ ಅದರಿಂದ ಪ್ರಯೋಜನವೇನು? ಮಠಾಚಾರ್ಯರುಗಳು ಇಂಥ ವಿಷಯದಲ್ಲಿ ಕಾಲದೇಶ ವಿದ್ಯಮಾನಗಳನ್ನನುಸರಿಸಿ, ದೇಶಕ್ಷೇಮಚಿಂತನೆಯನ್ನು ದೂರೀಕರಿಸದೆ ಏರಿ ನೀರುಗಳೆರಡೂ ಉಳಿಯುವಂತೆ ಕಾರ್ಯನಡಸುವುದೇ ಅವರ ಘನತೆಗೆ ಸಂರಕ್ಷಕವೂ, ಭೂಷಣವೂ ಆಗಿರುವುದು. ಮುಖ್ಯಾಚಾರ್ಯಪದಸ್ಥರು ಸಾಮಾನ್ಯಜನರಂತೆ ನಡೆದುಕೊಳ್ಳುವುದು ಅನಿಷ್ಟವಾದುದು. ಲೌಕಿಕ ಪ್ರವೃತ್ತಿಯು ಜನರ ಮನಸ್ಸೆಲ್ಲಾ ಈಗ ದೇಶಕ್ಷೇಮಸಾಧನದ ಕಡೆಗೆ ವಿಶೇಷವಾಗಿ ಪ್ರಸರಿಸುತ್ತಿದೆ. ಅದಕ್ಕಾಗಿ ಅವರು ಅನಂತ ಸಾಹಸಗಳನ್ನು ಮಾಡುತ್ತಿದ್ದಾರೆ. ಮಠಾಚಾರ್ಯರು ಅತ್ತಕಡೆಗೆ ದೃಷ್ಟಿಕೊಡದಿದ್ದರೂ ಅವರ ವಿಷಯದಲ್ಲಿ ಔದಾಸೀನ್ಯವನ್ನು ತೋರಿಸಬೇಕೆಂಬ ಬುದ್ಧಿಯು ಇನ್ನೂ ಲೌಕಿಕರಲ್ಲಿ ಹುಟ್ಟಿರುವುದಿಲ್ಲ. ವರ್ಧಿಷ್ಣುಗಳಾದ ಅಂಥವರ ಕೈಕಾಲುಗಳನ್ನು ಕಟ್ಟಹಾಕುವಂತಹ ನಿರ್ಬಂಧಗಳನ್ನು ಮಠಾಚಾರ್ಯರು ನಿರ್ಘೃಣತೆಯಿಂದಲೂ ನಿರ್ವಿಚಾರದಿಂದಲೂ ಮಾಡುತ್ತ ಬಂದರೆ ಅಂಥ ಕಟ್ಟುಗಳು ಲೌಕಿಕರಉತ್ಸಾಹಶಕ್ತಿಯಿಂದ ಕಿತ್ತುಹೋಗುವುದರಲ್ಲಿ ಸಂದೇಹವಿಲ್ಲ. ಆಗ್ಗೆ ಲೌಕಿಕರಲ್ಲಿ ಅಲ್ಪಸ್ವಲ್ಪವಾಗಿದ್ದ ಗುರುಜನ ಶಾಸ್ತ್ರವಚನಗಳಲ್ಲಿನ ಶ್ರದ್ಧೆಯನ್ನು ನಿರ್ನಾಮಗೊಳಿಸಿದ–ಮತ್ತೂ ಅತ್ಯಾಚಾರಕ್ಕೆ ಅವಕಾಶಮಾಡಿದ ದೋಷವು ಪೀಠಾಚಾರ್ಯರುಗಳಿಗೆ ಸಂಘಟಿಸಿದಂತಾಗುತ್ತದೆ. ಹಾಗೆ ಮಾಡಗೊಡುವುದು ವಿಚಕ್ಷಣರಾದ ಮಠಪತಿಗಳಿಗೆ ಯೋಗ್ಯವಲ್ಲ. ಜನರಲ್ಲಿ ಗುರುಭಕ್ತಿ ದೇವತಾಶ್ರದ್ಧೆ ಆಚಾರಾಸಕ್ತಿಗಳು ಅನಿರ್ವಾಹಸಂದರ್ಭದಿಂದ ಶೋಷಿಸಿಹೋಗುವುದಕ್ಕೆ ಮುಂಚೆಯೇ ಕಾಲಗತಿಯನ್ನನುಸರಿಸಿ, ದೇಶಕ್ಕೂ ತಮಗೂ ಹಿತಕರವಾಗಿರುವಂತೆ ಆಚಾರ ನಿರ್ಬಂಧಗಳಲ್ಲಿ ಕೆಲವನ್ನು ಸಡಿಲಮಾಡಿ ಕೊಡಬೇಕು. ಹಾಗಲ್ಲದೆ ಹೋದರೆ ಅಂಧಪರಂಪರೆಯಂತೆ ಅವಿಚಾರ ಪೂರ್ವಕವಾಗಿ ಹಿಡಿದ ಮುಷ್ಟಿಯನ್ನೇ ಹಿಡಿಯುವವರಿಗೆ ಇನ್ನು ಮುಂದೆ ವಿದ್ಯಾವಂತರಾದ ಲೌಕಿಕರ ಮಂಡಲಿಯಲ್ಲಿ ಗೌರವವು ತಪ್ಪಿಹೋಗುತ್ತದೆ. ಶಾಸ್ತ್ರನಿಷಿದ್ಧಗಳಾದ ಅನೇಕ ಪಾಪಾಚರಣೆಗಳಲ್ಲಿ ಬದ್ಧದೀಕ್ಷಿತರಾಗಿರುವ ಗೋಮುಖವ್ಯಾಘ್ರಗಳು ಗೂಳಿಗಳಂತೆ ನಿರಾತಂಕವಾಗಿ ಒಳಗೂ ಹೊರಗೂ ವ್ಯಾಪಿಸಿಕೊಂಡು ಪಾಪದ ಸೋಂಕನ್ನು ಎಲ್ಲ ಕಡೆಗೂ ವ್ಯಾಪಿಸುತ್ತಿದ್ದರೂ, ಅವರ ಅಪಚಾರಕ್ಕೆ ತಡೆಗಟ್ಟದೆ, ದೇಶಕ್ಷೇಮಾರ್ಥವಾಗಿ ವಿದೇಶಯಾನ ಮಾಡಬೇಕೆನ್ನುವ ಶ್ರದ್ಧಾಳುಗಳಿಗೆ ತಡೆಗಟ್ಟಬೇಕೆನ್ನುವುದು ಮಾನುಷಸ್ವಭಾವಕ್ಕೆ ಉಚಿತವಾದ ಕೃತ್ಯವೆ? ಉತ್ತರ ಹಿಂದೂಸ್ಥಾನದಲ್ಲಿ ಸಮುದ್ರಯಾನವು ಸರ್ವವರ್ಣೀಯರಲ್ಲೂ ನಿರಾತಂಕವಾಗಿ ಅನುಷ್ಠಿಸಲ್ಪಡುತ್ತಿರುವಾಗ ಅಲ್ಪವಾದ ಈ ನಮ್ಮ ದಕ್ಷಿಣದೇಶದಲ್ಲಿ ಇದರ ಜಂಜಾಟವು ಇನ್ನೂ ಮುಗಿಯದಿರುವುದು ಸಂತಾಪಕರವಾಗಿದೆ.

ಈಗಿನ ಕಾಲದಲ್ಲಿ ವಿದೇಶಸಂಚಾರದಲ್ಲೂ ಧರ್ಮಕರ್ಮಾದಿಗಳಿಗೆ ಲೋಪವಿಲ್ಲದಂತೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಅದು ಕಾರಣ, ಸಮುದ್ರಯಾನ ಮಾಡಿ ಬರಬೇಕೆನ್ನುವವರು ಮುಂದಾಗಿ ಮಠಾಚಾರ್ಯ ಪೀಠಸ್ಥರ ಬಳಿಗೆ ಬಂದು, ಧರ್ಮಚ್ಯುತಿಗೆ ಅವಕಾಶ ಕೊಡುವುದಿಲ್ಲವೆಂಬ ವಿಷಯಕ್ಕೆ ಪ್ರತಿಜ್ಞೆಯನ್ನು ಮಾಡಿ, ಅಪ್ಪಣೆ ಪಡೆದು ಹೋಗಿ, ಅಲ್ಲಿಂದ ಬಂದನಂತರ ವಾಗ್ದಾನದಂತೆ ನಡೆದಿರುವರೆಂಬುವರಿಗೆ ಮಾತ್ರ ಸವ್ಯವಹಾರಕ್ಕೆ ಆಜ್ಞೆಯನ್ನು ಕೊಡುವಷ್ಟರ ನಿರ್ಬಂಧವನ್ನಿಟ್ಟರೂ ಇಡಬಹುದು.

ಈಗಿನ ಶ್ರೀಮಠದ ಉತ್ತರವು ದೂರಪರ್ಯಾಲೋಚನೆಯಿಂದ ಮಾಡಲ್ಪಟ್ಟಹಾಗೆ ತೋರುವುದಿಲ್ಲ. ಕಾರ್ಯಕಾರಿಯಲ್ಲದ ಒಂದಪ್ಪಣೆಯನ್ನು ಮಾಡುವುದು ಅಧಿಕಾರ ಗೌರವದ ರಕ್ಷಣೆಗೆ ಸಾಧನವಾಗುವುದಿಲ್ಲ. ಅದುಕಾರಣ, ಈ ವಿಷಯದಲ್ಲಿ ಪುನರ್ವಿಮರ್ಶೆ ಮಾಡಿಸುವುದಕ್ಕಾಗಿ ಲೌಕಿಕ ಮಂಡಲಿಯೇ ಮತ್ತೊಂದು ವಿಜ್ಞಾಪನವನ್ನು ಸ್ವಾಮಿಗಳಿಗೆ ಮಾಡಿಕೊಳ್ಳುವುದು ವಿಹಿತವಾಗಿರುತ್ತದೆ. ಅಲ್ಲದೆ ಇದು ದೇಶಕ್ಷೇಮಕ್ಕೆ ಸಂಬಂಧಿಸಿದ ಮುಖ್ಯ ವಿಷಯವಾದುದರಿಂದ ಧರ್ಮಾದಿಗಳ ರಕ್ಷಣೆಗೆ ಸಹಾಯಕರಾಗಿರುವ ನಮ್ಮ ಶ್ರೀಮನ್ಮಹಾರಾಜರು ಸಹ ಇಂಥ ವಿಷಯದಲ್ಲಿ ಪ್ರವೇಶಿಸಿ, ತಮ್ಮ ಅರಮನೆಯಲ್ಲೇ ವೈದಿಕ ಲೌಕಿಕ ಪಂಡಿತ ಪ್ರಮುಖರು ಕೆಲರನ್ನು ಸೇರಿಸಿ, ಒಂದು ಸಭೆಯನ್ನು ಮಾಡಿ, ಅಲ್ಲಿಗೆ ಮುಖ್ಯಾಚಾರ್ಯಪೀಠಗಳ ಪ್ರತಿನಿಧಿಗಳನ್ನೂ ಬರಮಾಡಿಸಿ, ಅವರ ಮಧ್ಯದಲ್ಲಿ ಇದರ ಚರ್ಚೆಯೂ ಪರ್ಯವಸಾನವೂ ಆಗುವಂತೆ ಮಾಡಿದರೆ, ಈ ವಿಷಯವು ನಿರಾಕ್ಷೇಪವಾಗಿ ಕೊನೆಮುಟ್ಟಬಹುದು. ಪ್ರಜಾಕ್ಷೇಮೈಕಚಿಂತಕರಾದ ನಮ್ಮ ಶ್ರೀಮನ್ಮಹಾರಾಜರವರು ಈ ವಿಷಯವನ್ನು ಅವಶ್ಯಕವಾಗಿ ಗಮನಿಸುವವರಾಗಬೇಕೆಂದು ಕೋರುತ್ತೇವೆ.

ಮದ್ರಾಸಿನ ಪ್ರಸಿದ್ಧರಾದ ಡಾಕ್ಟರ್ ಟಿ. ಎಂ. ನಾಯರ್‌ರವರು ಈಚೆಗೆ ಪಾಲಘಾಟಿನಲ್ಲಿ ಮಾಡಿದ ಒಂದು ಭಾಷಣದಲ್ಲಿ "ಸರ್ಕಾರಿಯ ಮತ್ತೂ ಇತರ ಪಾಠಶಾಲೆಗಳಲ್ಲಿ ಮತಬೋಧೆಯು ಮಾಡಲ್ಪಡಬೇಕೆಂಬ ವಿಚಾರವು ನಡೆಯುತಲಿದೆ. ಈ ವಿಧವಾದ ಅಭಿಪ್ರಾಯವು ಮೊದಲು ಕೆಲ ಹಿಂದೂ ದೊಡ್ಡಮನುಷ್ಯರಿಂದ ಹೊರಟಿತು. ಈಗ ಈ ಸಾಂಕ್ರಾಮಿಕವು ಕೆಲ ಐರೋಪ್ಯಾಧಿಕಾರಿಗಳಿಗೂ ತಗುಲಿದೆ. ನಮ್ಮ ಭರತಖಂಡದಂತೆ ಇಂಗ್ಲೆಂಡಿನಲ್ಲಿ ಬಹು ಮತಗಳಿರದೆ ಕ್ರೈಸ್ತಮತ ಒಂದೇ ಇದ್ದಾಗ್ಯೂ ಅಲ್ಲಿಯ ಪಾಠಶಾಲೆಗಳಲ್ಲಿ ಮತಬೋಧೆಯನ್ನು ಮಾಡತಕ್ಕ ವಿಚಾರದಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ. ಇಂಥದರಲ್ಲಿ ಅನೇಕ ಮತಗಳ ಮಯವಾಗಿರುವ ಈ ಭರತಖಂಡದಲ್ಲಿ ಪಾಠಶಾಲೆಗಳಲ್ಲಿ ಮತಬೋಧೆಯನ್ನು ಮಾಡತಕ್ಕ ವಿಚಾರದಲ್ಲಿ ಈ ದೇಶದ ಸ್ಥಿತಿಯು ಇನ್ನೆಷ್ಟರಮಟ್ಟಿಗೆ ಇರಬಹುದು? ಅಂದರೆ ಸರ್ಕಾರಿಯ ಪಾಠಶಾಲೆಗಳಲ್ಲಾಗಲಿ, ಸರ್ಕಾರದ ಸಹಾಯದಿಂದ ನಡೆಯುವ ಇತರ ಪಾಠಶಾಲೆಗಳಲ್ಲಾಗಲಿ ಈ ವಿಧವಾದ ಬೋಧೆಯನ್ನು ಮಾಡುವುದು ಸುತರಾಂ ಸಾಧ್ಯವಲ್ಲವು. ಅದುಕಾರಣ ಈಗಣಂತೆ ಮಕ್ಕಳಿಗೆ ಮನೆಯಲ್ಲೇ ಮತಬೋಧೆಯನ್ನು ಮಾಡತಕ್ಕದು ಯುಕ್ತವಾಗಿದೆ. ನಮ್ಮ ಭರತಖಂಡದ ಪಾಠಶಾಲೆಗಳಲ್ಲಿ ಮತಬೋಧೆಯನ್ನು ಮಾಡಬೇಕೆಂದು ಬಹು ಸುಲಭವಾಗಿ ಮಾತನಾಡುವ ದೊಡ್ಡಮನುಷ್ಯರ ಸ್ಥಿತಿಯಾದರೂ ಜೇನಿನ ಗೂಡನ್ನು ಮೃದುವಾದ ಗದ್ದಿಗೆಯೆಂದು ಭ್ರಮಿಸಿ ಕೂತುಕೊಂಡ ತತ್‌ಕ್ಷಣವೇ ಮೇಲಕ್ಕೇಳುವಂಥ ಮನುಷ್ಯನಂತಾಗುವುದು." ಎಂದು ಹೇಳಿದರು.

ಒಳದೇಶದ ವೃತ್ತಾಂತ.

ರೆವಿನ್ಯೂ ಕಮಿಷನರು ನಾಳೆಯ ದಿನ ಮಳವಳ್ಳಿಗೆ ಬರುತ್ತಾರಾದುದರಿಂದ, ಅವರನ್ನು ಕಾಣಲು ಮೈಸೂರ ಡೆ|| ಕಮಿಷನರು ಈ ದಿವಸ ಅಲ್ಲಿಗೆ ಪ್ರಯಾಣ ಮಾಡುವವರಾಗಿರುವರು.

ಡೆ|| ಕ|| ಮ|| ಕಾಂತರಾಜ ಅರಸಿನವರು ನೆಲ್ಲಿಗೆರೆಗೆ ಮೊಟಾರಿನಲ್ಲಿ ದಯಮಾಡಿಸಿದ್ದು ಆ ಮಾರ್ಗವಾಗಿ ಶೃಂಗೇರಿಗೆ ಪ್ರಯಾಣ ಮಾಡಿದ್ದ ಶ್ರೀ ಶೃಂಗೇರಿ ಸ್ವಾಮಿಗಳನ್ನು ಸಾಗಗೊಳಿಸಿಕೊಟ್ಟು ಕಳೆದ ತಾ|| ೧೭ ರ ಬೆಳಿಗ್ಗೆ ರಾಜಧಾನಿಗೆ ಹಿಂತಿರುಗಿ ದಯಮಾಡಿಸಿದರು.

೧ನೇ ಕೌನ್ಸಿಲರ್ ಮ|| ಕೆ. ಪಿ. ಪುಟ್ಟಣ್ಣಸೆಟ್ಟರು ಕಳೆದ ಜನವರಿ ತಾ|| ೧೯ ರಲ್ಲಿ ಬೆಂಗಳೂರನ್ನು ಬಿಟ್ಟು ಹಾಸನ ಶಿವಮೊಗ್ಗ ಮತ್ತೂ ಚಿತ್ರಕಲ್‌ದುರ್ಗ ಈ ಡಿಸ್ಟ್ರಿಕ್ಟುಗಳಲ್ಲಿ ಸಂಚರಿಸಿಕೊಂಡು ಕಳೆದ ತಾ|| ೧೭ ರಲ್ಲಿ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು.

ಅರಕಲಗೂಡಿನಲ್ಲಿ ಪೂರ್ಣವೃದ್ಧನಾದ ಒಬ್ಬ ಮಹಮ್ಮದೀಯನು ಸತ್ತುಹೋದನು. ಇವನಿಗೆ ಸಾಯುವಾಗ್ಗೆ ೧೧೫ ವರ್ಷಗಳ ವಯಸ್ಸಾಗಿತ್ತೆಂದೂ ಹಿಂದೆ ನಡೆದ ಮೈಸೂರು-ಮರಾಟ ಯುದ್ಧದ ವಿಷಯವು ಇವನಿಗೆ ಚೆನ್ನಾಗಿ ಗೊತ್ತಿದ್ದಿತೆಂದೂ, ಟೀಪುಸುಲ್ತಾನರ ಕಾಲದಲ್ಲಿ ಸೈನಿಕನಾಗಿದ್ದನೆಂದೂ ಗೊತ್ತಾಗುತ್ತದೆ.

ಒಂದನೇ ಕೌನ್ಸಿಲರ ಪರ್ಸನಲ್ ಅಸಿಸ್ಟೆಂಟರಾದ ಮ॥ ಗಂಗಾಧರಪ್ಪ, ಬಿ. ಎ., ಯವರು ೩ ತಿಂಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವ ಮಾಲೂರ ತಾ॥ ಅಮಲ್ದಾರ್ ಮ॥ ಗೋಪಾಲಾಚಾರರ ಬದಲು ಅಕ್ಟಿಂಗ್ ಅಮಲ್ದಾರರಾಗಿಯೂ, ೩ ನೇ ತರಗತಿ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುವುದಾಗಿ ಕೇಳುತ್ತೇವೆ.

ಸೀಮೆಗೆ ಹೋಗಿದ್ದು ಡಾಕ್ಟರ್ ಪರೀಕ್ಷೆಯನ್ನು ಕೊಟ್ಟು ಬಂದಿರುವ ಮ॥ ಕೃಷ್ಣಸ್ವಾಮಯ್ಯಂಗಾರರೂ, ಮ॥ ಕಸ್ಪಿಯವರೂ ಅಸಿಸ್ಟೆಂಟ್ ಸರ್ಜನರುಗಳಾಗಿ ನೇಮಿಸಲ್ಪಟ್ಟು ಮೊದಲನೆಯವರು ಡಾ॥ ಶ್ರೀನಿವಾಸರಾಯರ ಕೈಕೆಳಗೆ ಕ್ರಿಮಿಶೋಧನಾಲಯದಲ್ಲೂ, ಎರಡನೆಯವರು ರಾಜಧಾನಿಯ ಜನರಲ್ ಆಸ್ಪತ್ರೆಯಲ್ಲೂ ಕೆಲಸ ಮಾಡಲು ಹಾಕಲ್ಪಟ್ಟಿರುತ್ತಾರೆ.

ಶ್ರೀಮನ್ಮಹಾರಾಜರವರು ಪರಿವಾರ ಸಮೇತ ಬೊಂಬಾಯಿನಿಂದ ಅಲಹಾಬಾದಿಗೆ ಚಿತ್ತೈಸಿ ಅಲ್ಲಿನ ವಸ್ತುಪ್ರದರ್ಶನವನ್ನು ಪರಾಮರಿಸಿಕೊಂಡು ಅಲ್ಲಿಂದ ಬೆಂಗಳೂರಿಗೆ ಹಿಂತಿರುಗಿ ಅಲ್ಲಿ ಸ್ವಲ್ಪ ದಿನಗಳು ಮಾತ್ರವಿದ್ದು ಅನಂತರ ರಾಜಧಾನಿಗೆ ದಯಮಾಡಿಸಿ ಮುಂದಣ ತಿಂಗಳ ಕಡೆಯ ವಾರದಲ್ಲಿ ನೀಲಗಿರಿಗೆ ಬೇಸಗೆಯ ಉದ್ದಿಶ್ಯ ದಯಮಾಡಿಸುವವರಾಗಿರುವರೆಂದು ಕೇಳುತ್ತೇವೆ.

ಕಳೆದ ತಾ॥ ೧೫ ರಲ್ಲಿ ಬೆಂಗಳೂರ ರಿಜರ್ವ್ ಪೋಲೀಸ್ ಲೈನ್ ಮುಂಭಾಗದಲ್ಲಿ ಒಬ್ಬ ೪೮ ವರ್ಷ ವಯಸ್ಸಿನ ಹಿಂದುವು ಧಾನ್ಯದ ಮೂಟೆಯನ್ನು ಹೊತ್ತಿಕೊಂಡು ಹೋಗುವಾಗ್ಗೆ ಒಂದು ಕುದುರೆಯ ಬಂಡಿಯು ಅವನ ಮೇಲೆ ನುಗ್ಗಿ ಅದರ ಚಕ್ರವು ಹರಿದು ಅವನ ಒಂದು ತೋಳು ಮುರಿದುಹೋಯಿತು. ಅವನು ಈಗ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತಲಿದ್ದಾನೆ. ಪೋಲೀಸರು ಬಂಡಿಯನ್ನು ಹೊಡೆಯುತಲಿದ್ದ ಮಹಮ್ಮದೀಯ ಹುಡುಗನನ್ನು ಹುಡುಕುತಲಿದ್ದಾರೆ.

ಬರುವ ಮಾರ್ಚಿ ತಾ॥ ೧೦ ರ ರಾತ್ರಿ ನಡೆಯುವ ಜನರ ಕೊನೆಯ ಎಣಿಕೆಯ ಮತ್ತೂ ತತ್ಸಂಬಂಧವಾದ ಬರವಣಿಗೆಯ ಕಾರ್ಯಗಳ ಅನುಕೂಲ್ಯಕ್ಕಾಗಿ ಸಂಸ್ಥಾನದಲ್ಲಿ ಪಬ್ಲಿಕ್ ಆಫೀಸುಗಳೂ, ಕೋರ್ಟುಗಳೂ, ಸ್ಕೂಲುಗಳೂ ಮಾರ್ಚಿ ತಾ॥ ೯, ೧೦, ೧೧ ರಲ್ಲಿ ಮುಚ್ಚಲ್ಪಡತಕ್ಕದೆಂದೂ ಸೆನ್ಸಸ್ಸಿಗೆ ಸಂಬಂಧಪಟ್ಟ ಎಣಿಕೆ, ಮೊದಲಾದ ಕಾರ್ಯಗಳಲ್ಲಿ ಸಹಾಯ ಮಾಡುವುದಕ್ಕಾಗಿ ಎಲ್ಲ ಶಾಖೆಗಳ ಮತ್ತೂ ಆಫೀಸುಗಳ ಅಧಿಕಾರಿಗಳು ತಕ್ಕಷ್ಟು ಉದ್ಯೋಗಸ್ಥರನ್ನು ಹವಣಿಸಿ ಕೊಡತಕ್ಕದೆಂದೂ ಸರ್ಕಾರದ ಅಪ್ಪಣೆಯಾಗಿರುತ್ತದೆ.

ಕಳೆದ ತಾ॥ ೧೫ ರ ಸಾಯಂಕಾಲ ರಾಜಧಾನಿಯ ಮಾರ್ಕೆಟ್ಟಿನಬಳಿ ಸಯಾಜಿರಾವ್ ಮಾರ್ಗದಲ್ಲಿ ಒಬ್ಬ ಮುದುಕನು ಬರುತ್ತಿರುವಾಗ್ಗೆ ಹಿಂದಣಿಂದ ಅತಿವೇಗವಾಗಿ ಓಡಿಬರುತಲಿದ್ದ ಜಟಕಾಬಂಡಿಗೆ ಸಿಕ್ಕಿ ಕೆಳಗೆಬಿದ್ದು ಮೈಮೇಲೆ ಚಕ್ರಹರಿದು ರಕ್ತವನ್ನು ಕಾರಿ ಮೂರ್ಛಿತನಾದನು. ಅಷ್ಟರಲ್ಲಿ ಪೋಲೀಸರು ಬಂದು ಅವನನ್ನು ಅದೇ ಬಂಡಿಯಲ್ಲಿ ಮಲಗಿಸಿ ದೊಡ್ಡ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಯನ್ನು ಮಾಡಿಸಿದರು, ಆದರೆ ಮುದುಕನು ಕೊಂಚಹೊತ್ತಿನಲ್ಲಿ ಪ್ರಾಣವನ್ನು ಬಿಟ್ಟನು. ಆ ಬಂಡಿಯವನು ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾನೆ.

ಟಿ॥ ನರಸೀಪುರದ ಮಾರ್ಗದಲ್ಲಿರುವ ಹೊರಣದ ಕೆರೆಯೇರಿಗೆ ಇಕ್ಕೆಲಗಳಲ್ಲಿ ಕಟಕಟ್ಟೆಗಳಿಲ್ಲ. ಅದರ ಮೇಲೆ ಹೋಗುವ ಬಂಡಿಗಳಿಗೆ ಆಗಾಗ್ಗೆ ಅಪಾಯವಾಗುವುದುಂಟು. ಕಳೆದ ಬುಧವಾರ ರಾತ್ರಿ ಮುಡುಕುದೊರೆಯಿಂದ ಬರುತ್ತಿದ್ದ ಒಬ್ಬ ಪುಸ್ತಕ ವ್ಯಾಪಾರಿಯ ಬಂಡಿಯು ತಿರುವಿನಲ್ಲಿ ಕೆರೆಯೊಳಕ್ಕೆ ಬಿದ್ದುಕೊಂಡು ತಲೆಕೆಳಗಾಯಿತು. ದೈವಕೃಪೆಯಿಂದ ನೀರಿಲ್ಲದ ಸ್ಥಲದಲ್ಲಿ ಬಿದ್ದಕಾರಣ ಅಪಾಯವೇನೂ ಆಗಲಿಲ್ಲ. ಉಳಿದ ಬಂಡಿಯವರೆಲ್ಲಾ ಬಂಡಿಯನ್ನು ಮೇಲಕ್ಕೆ ಸೆಳೆದರು. ಡಿಸ್ಟ್ರಿಕ್ಟ್ ಬೋರ್ಡಿನವರು ಇತ್ತ ಗಮನಿಸಿ ಮುಂದೆ ಇಂಥ ಅಪಾಯವಾಗದಂತೆ ಮಾಡುವುದುತ್ತಮ.

ಮೈಸೂರ ಸೀಮೆಯ ಮತ್ತೂ ಇತರ ಕಡೆಯ ವೈಶ್ಯರು ತಮಗೆ ವೇದೋಕ್ತ ಕರ್ಮಗಳು ಮಾಡಿಸಲ್ಪಟ್ಟ ಹೊರತು ಶ್ರೀ ಶೃಂಗೇರಿ ಸ್ವಾಮಿಗಳಿಗೆ ತಾವು ಕಾಣಿಕೆಯನ್ನು ಕೊಡುವುದಿಲ್ಲವೆಂದು ಸಂಕಲ್ಪವನ್ನು ಮಾಡಿಕೊಂಡಿರುವರೆಂತಲೂ, ಈಸಲ ಶ್ರೀ ಸ್ವಾಮಿಗಳು ಕೋಲಾರಕ್ಕೆ ದಯಮಾಡಿಸಿದ್ದಾಗ್ಗೆ ಕಂಚಿ ಸೀತಪ್ಪ ಮುನಿರಾಯಶೆಟ್ಟಿ ಮೊದಲಾದ ಕೆಲ ವೈಶ್ಯರು ಸ್ವಾಮಿಗಳ ಪಾದಪೂಜೆಯನ್ನು ಮಾಡಿದರೆಂದು ವೈಶ್ಯರ ಮುಖಂಡರು ಬೆಂಗಳೂರಲ್ಲಿ ಸಭೆ ಸೇರಿದ್ದು ಅವರಿಬ್ಬರೂ ಕ್ಷಮಾಪಣೆಯನ್ನು ಕೇಳಿಕೊಳ್ಳುವವರೆಗೂ ದೂರಸ್ಥರಾಗಿರತಕ್ಕದೆಂದು ನಿರ್ಧರಿಸಿರುವುದಾಗಿಯೂ ಕೇಳುತ್ತೇವೆ.

ಸಾಹುಕಾರ್ ಪದ್ಮಶೆಟ್ಟರು ಶ್ರವಣಬೆಳಗೊಳದಲ್ಲಿ ೧೦ ಸಾವಿರ ರೂಪಾಯಿಗಳನ್ನು ಮುಟ್ಟಿಸಿ ಕಟ್ಟಿಸಿರುವ ಪಾಠಶಾಲೆಯ ಕಟ್ಟಡವನ್ನು ಸರ್ಕಾರದವರ ವಶಕ್ಕೊಪ್ಪಿಸಿರುವರು ಈ ಕಟ್ಟಡದಲ್ಲಿ ಈಗ ಸಂಸ್ಕೃತ, ಇಂಗ್ಲೀಷು ಮತ್ತೂ ಕನ್ನಡ ಪಾಠಶಾಲೆಗಳಿಡಲ್ಪಟ್ಟಿರುವುವು. ಆ ಊರಿನ ಸಾಹುಕಾರ್ ಪೊಮ್ಮಯ್ಯನವರು ತಮ್ಮ ಜೈನವಿದ್ಯಾರ್ಥಿಗಳಿಗಾಗಿ ಒಂದು ನಿಲಯವ (ಸ್ಟೂಡೆಂಟ್ಸ್ ಹೋಂ) ನ್ನು ಧರ್ಮಾರ್ಥವಾಗಿ ಕಟ್ಟಿಸಿರುವರು ಇದರಲ್ಲಿ ಈಗ ೧೧-೧೨ ವಿದ್ಯಾರ್ಥಿಗಳು ಪೋಷಿಸಲ್ಪಡುತ್ತಿರುವರು. ಮತ್ತೂ ಸಾಹುಕಾರ್ ಪದ್ಮರಾಜಯ್ಯನವರು ವೈದ್ಯಶಾಲೆಯನ್ನಿಡಲು ೫೦೦೦ ರೂಪಾಯಿಗಳನ್ನು ವ್ಯಯಮಾಡಿ ಒಂದು ಕಟ್ಟಡವನ್ನು ಕಟ್ಟಿಸಿರುವರು.

ಆಸ್ಪತ್ರೆಗಳ ಡೈರೆಕ್ಟರ್ ಜನರಲ್‌ರವರಾದ ಸರ್ಜನ್ ಜನರಲ್ ಲ್ಯೂಕಿಸ್‌ರವರು ಕಳೆದ ತಾ॥ ೧೨ ರಲ್ಲಿ ಬೆಂಗಳೂರ ವಿಕ್ಟೋರಿಯಾ ಆಸ್ಪತ್ರೆಗೆ ಅ॥ ಸೀನಿಯರ್ ಸರ್ಜನ್ ರಾ॥ ಅಚ್ಯುತರಾಯರಕೂಡ ಹೋಗಿದ್ದು ಅಲ್ಲಿಯ ಕಾರ್ಯಕ್ರಮಗಳನ್ನು ಡಾಕ್ಟರುಗಳಾದ ಆರ್ಮುಗಂ ಮೊದಲಿಯಾರರಿಂದಲೂ, ಸಿ. ಎ. ನಂಜಪ್ಪನವರಿಂದಲೂ ತಿಳಿದು ಅಲ್ಲಿಯ ಏರ್ಪಾಟು ಬಹು ಸಮರ್ಪಕವಾಗಿದೆಯೆಂದು ಹೇಳಿದುದಲ್ಲದೆ, ಮದ್ರಾಸಿನ ಆಸ್ಪತ್ರೆಯಲ್ಲಿ ವೈದ್ಯಪಾಠಶಾಲೆಯುಳ್ಳಿಟ್ಟಿರುವಂತೆ, ಈ ಸೀಮೆಯವರಿಗಾಗಿ ಈ ಆಸ್ಪತ್ರೆಯಲ್ಲಿ ಒಂದು ಶಾಲೆಯನ್ನೇರ್ಪಡಿಸುವುದುತ್ತಮವೆಂದು ಸೂಚಿಸಿ ಅಲ್ಲಿಂದ ಕಣ್ಣಾಸ್ಪತ್ರೆಗೆ ಹೋಗಿ ಅಲ್ಲಿಯ ಕಾರ್ಯಕ್ರಮಗನ್ನು ಡಾ॥ ರಾಮಸ್ವಾಮಯ್ಯಂಗಾರರಿಂದ ತಿಳಿದು ತಮ್ಮ ತೃಪ್ತಿಯನ್ನು ತಿಳಿಸಿಬಂದರು.

ಸುಭಾಷಿತಗಳು.

ಪ್ರಪಂಚದಲ್ಲಿ ಕ್ರೂರತ್ವಕ್ಕೆ ಅವಿವೇಕವು ಸ್ವಲ್ಪಭಾಗವೂ ಸ್ವಾರ್ಥಪರತ್ವವು ಸ್ವಲ್ಪಭಾಗವೂ ಕಾರಣಗಳು. “ರಾಬಿನ್ಸನ್.”

ಪತ್ರಿಕಾಸಂಪಾದಕರೇ ನಿಜವಾಗಿಯೂ ರಾಜರೂ ಮತಾಚಾರ್ಯರೂ ಆಗಿರುವರು. “ಕಾರ್ಲಯಿಲ್.”

ಜಾತ್ಯಭಿಮಾನ ದೇಶಾಭಿಮಾನಗಳುಳ್ಳವನೇ ಮನುಷ್ಯನು. ಉಳಿದವರು ಮನುಷ್ಯರೆಂದು ಹೇಳಲ್ಪಡುವುದಕ್ಕೆ ಅವಕಾಶವಿಲ್ಲ. “ಸುವರ್ಣಲೇಖ.”

ಸತ್ಯವಾದ ತತ್ವಜ್ಞಾನಿಯು ಯಾವುದನ್ನೂ ವ್ಯರ್ಥವಾಗಿ ನಾಶಗೊಳಿಸಲು ಅಪೇಕ್ಷಿಸುವುದಿಲ್ಲ. ಆದುದರಿಂದ ಪ್ರತಿಯೊಬ್ಬರಿಗೂ ತನ್ನ ಕೈಲಾದಷ್ಟು ಸಹಾಯವನ್ನು ಮಾಡಬೇಕು. “ವಿವೇಕಾನಂದ.”

ದೇಶಹಿತೈಕಾರ್ಥವಾಗಿ ಶ್ರಮವನ್ನು ಹೊಂದಿ, ಪ್ರಾಣವನ್ನು ಸಹಿತ ಸಮರ್ಪಿಸಿದ ವೀರರ ಸಚ್ಚರಿತ್ರಗಳನ್ನು ಹೊಂದದಿರುವ ದೇಶವು-ದೇಶವಲ್ಲ “ಕೇಶವಚಂದ್ರಸೇನ್.”

ಮಾನವಕೋಟಿಯನ್ನು ಸದಾ ಉದ್ಯೋಗ ಪರಾಯಣರನ್ನಾಗಿ ಪ್ರೇರಿಸುವ ಮಹಾ ಶಕ್ತಿಗಳು ಈ ಭೂಮಂಡಲದಲ್ಲಿ ಯಾವುವೆಂದರೆ-ಸ್ತ್ರೀ-ಧನ. “ಎಂಗ್,”

ನಮ್ಮ ಆಯುಷ್ಕಾಲವನ್ನು ಸ್ವಲ್ಪವೇ ಎಂದು ತಿಳಿಯುವವರು ಸ್ವರ್ಗ ಸೌಖ್ಯವನ್ನು ಅನಂತವಾದುದೆಂದು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. “ಬಿಷಪ್‌ಕೆನ್.”

ಈಶ್ವರಜ್ಞಾನವು ಪುರುಷನಂತಹುದು. ಭಕ್ತಿಯು ಸ್ತ್ರೀಯಂತಹುದು. ಜ್ಞಾನವು ಭಗವಂತನ ಮನೆಯ ಮುಂಬಾಗಿಲಿಗೆ ಕರೆದುಕೊಂಡು ಹೋಗುವುದು. ಭಕ್ತಿಯಾದರೊ ಆ ಮನೆಯ ಒಳಗತೆಗೆ ತೆಗೆದುಕೊಂಡು ಹೋಗುವುದು. “ರಾಮಕೃಷ್ಣಪರಮಹಂಸ.”

ಮಹಾಪುರುಷನ ಮುಖ್ಯವಾದ ಗುರ್ತು ಯಾವುದೆಂದರೆ-ನಮ್ರತೆ. “ರಸ್ಕಿನ್.”

ದುರ್ಮಾರ್ಗನಿಗೆ ಪ್ರಪಂಚದಲ್ಲಿರುವ ಪ್ರಯೋಜನಗಳೆಲ್ಲವೂ ನೀಚಗಳಾಗಿಯೇ ಇರುವುವು. ಸನ್ಮಾರ್ಗನು ನಾನಾ ಪ್ರಕಾರದಿಂದ ಬಾಧಿಸಲ್ಪಟ್ಟರೂ ಕ್ಲೇಶವನ್ನೈದುವುದಿಲ್ಲ. ಎಷ್ಟು ತೊಂದರೆ ಪಟ್ಟರೂ ನಿರಾಶೆಗೊಳ್ಳುವುದಿಲ್ಲ. ಎಷ್ಟು ಪೀಡಿತನಾದರೂ ತನ್ನ ಸನ್ಮಾರ್ಗವನ್ನು ಪರಿತ್ಯಜಿಸುವುದಿಲ್ಲ. ಅಧಃಪತಿತನಾದರೂ ನಾಶವನ್ನೈದುವುದಿಲ್ಲ. “ಪ್ಲಾಟೊ.”

ಅಪರಾಧ ಕ್ಷಮೆಯಿಲ್ಲದೆ ಹೋದರೆ ಪ್ರೇಮವೇ ನರಕವಾಗುವುದು. ಪರಸ್ಪರಾಪರಾಧ ಕ್ಷಮೆಯೇ ಸ್ವರ್ಗದ್ವಾರವು. “ವಿಲಿಯಂಬ್ಲೇಲ್.”

ನಮ್ಮ ನಡತೆಯ ಉತ್ಕೃಷ್ಟವಾದ ಧರ್ಮವಾವುದೆಂದರೆ—ಸ್ವಾರ್ಥಪರಿತ್ಯಾಗ. “ವಿವೇಕಾನಂದ.”

ನೀರಿನಲ್ಲಿ ಒಂದು ಪಾತ್ರವನ್ನಿಟ್ಟು ಮುಳುಗಿಸಿದರೆ ಅದರೊಳಗೂ ಹೊರಗೂ ಸುತ್ತಲೂ ನೀರೇ ತುಂಬಿಕೊಂಡಿರುವುದಲ್ಲವೆ? ಹಾಗೆಯೇ ಭಗವಂತನಲ್ಲಿ ಐಕ್ಯವಾಗಿಹೋದವರು ತಮ್ಮ ಸುತ್ತಲೂ ಎಲ್ಲ ಕಡೆಯೂ ಭಗವಂತನೇ ವ್ಯಾಪಿಸಿರುವನೆಂದು ತಿಳಿಯುವರು. “ರಾಮಕೃಷ್ಣಪರಮಹಂಸ.”

ಮನುಷ್ಯನ ಅಂತರ್ಯವನ್ನು ಆಳವಾಗಿ ತೆಗೆದು ನೋಡು. ದೈವವು ನಿನಗೆ ಅಲ್ಲಿ ಪ್ರತ್ಯಕ್ಷವಾಗುವುದು. “ಜೇಸಸ್”

ಸ್ವಲಾಭವನ್ನು ನೋಡಿಕೊಳ್ಳುತ್ತಿರುವುದೇ ನಮ್ಮ ತಪ್ಪಿತವು ಭ್ರಾಂತಿಯು ಸ್ವಪ್ನಸದೃಶವಾದುದು. ನಿನ್ನ ಕಣ್ಣನ್ನು ತೆರೆ. ಮೇಲೆ ದೃಷ್ಟಿಯಿಟ್ಟು ಪ್ರತಿ ವಿಷಯದ ನಿಜಸ್ವರೂಪವನ್ನು ಅರಿ. ನೀನು ಸೌಖ್ಯವಂತನಾಗುವೆ. “ಬುದ್ಧ.”

ವರ್ತಮಾನ ಸಂಗ್ರಹ.

ಮದ್ರಾಸು ಪ್ರಾಂತಿಕ ಸಭೆಯು ಬರುವ ಮೇ ತಿಂಗಳು ತಾ॥ ೩-೯-೧೦ ರಲ್ಲಿ ಮದರಾಸಿನಲ್ಲಿ ಜರುಗುವುದು.

ಇಂಗ್ಲಂಡಿನಲ್ಲಿ ಹೊಗೆಸೊಪ್ಪನ್ನೂ ಸೆಣಬುನಾರನ್ನೂ ಬೆಳೆಯುವುದಕ್ಕೆ ಕೆಲವರು ವಿಶ್ವಪ್ರಯತ್ನ ಮಾಡುತ್ತಿದ್ದಾರೆ.

ಲಂಡನ್ ಪಟ್ಟಣದಲ್ಲಿದ್ದ ಚಾರಿಂಗ್‌ಕ್ರಾಸ್ ಎಂಬ ಬ್ಯಾಂಕು ದಿವಾಳಿಯಾಯಿತು. ಅದರ ಆಸ್ತಿ ೧೬೯೪೪೪೪ ರೂ. ಸಾಲವು ೬೨೮೪೨೬೮೦ ರೂ. ಗಳು.

ಕಳೆದ ವರ್ಷದ ಏಪ್ರಿಲ್ ತಾ॥ ೧ ರಿಂದ ಡಿಶಂಬರ್ ತಾ॥ ೨೪ ರವರೆಗೆ ಭರತಖಂಡದ ಎಲ್ಲ ಲೋಹಮಾರ್ಗಗಳಿಂದಲೂ ಬಂದಿರುವ ಲಾಭವು ೧೮೨೫೯೧೨ ರೂ.

ಈ ವರ್ಷದಲ್ಲಿ ಭರತಖಂಡದ ಸರ್ಕಾರಕ್ಕೆ ವೆಚ್ಚವನ್ನು ಕಳೆದು ೧ ಕೋಟಿ ರೂ. ಗಳವರೆಗೂ ಮಿಗುವುದು. ಆ ಹಣವೆಲ್ಲಾ ದಿಲ್ಲಿಯ ದರ್ಬಾರಿಗೆ ಉಪಯೋಗಿಸಲ್ಪಡುವುದಂತೆ.

ಭಾರತೀಯರು ಈ ವರ್ಷದ ಫೆಬ್ರುವರಿ ತಿಂಗಳಾರಂಭದಿಂದ ತುಪಾಕಿ ಮದ್ದು ಗುಂಡುಗಳನ್ನು ಅನ್ಯದೇಶದಿಂದ ಅಂಚೆಯ ಮೂಲಕ ತರಿಸಿಕೊಳ್ಳಲಾಗಲೆಂದು ಸರ್ಕಾರದಪ್ಪಣೆಯಾಗಿದೆ.

ಸವಾರ್ಕರರನ್ನು ಫ್ರೆಂಚ್ ದೇಶದಲ್ಲಿ ಬಿಟ್ಟುಬಿಡಬೇಕೆ? ಅಥವಾ ಆಂಗ್ಲರು ಅವನನ್ನು ಸಂರಕ್ಷಿಸಬೇಕೆ? ಎಂಬ ಸಂಗತಿಯನ್ನು ಕುರಿತು ಈ ತಿಂಗಳು ತಾ॥ ೧೪ ರಲ್ಲಿ ಆ ಉಭಯ ದೇಶದ ಪ್ರತಿನಿಧಿಗಳೂ ಹೇಗ್ ಪಟ್ಟಣದಲ್ಲಿ ಸೇರಿ ಚರ್ಚಿಸುವವರಾಗಿದ್ದರು.

ಈಜಿಪ್ಟಿನಲ್ಲಿ ರಾಜದ್ರೋಹ ಬೋಧಕವಾದ ಪದಗಳನ್ನು ಬರೆದು ಪ್ರಕಟಿಸಿದ ದೇಶಭಕ್ತ ಸಂಘದ ಅಧ್ಯಕ್ಷನಾದ ಮಹಮ್ಮದ್ ಫರೀದ್ ಎಂಬುವನಿಗೆ ಅಲ್ಲಿನ ಸರ್ಕಾರದವರು ಆರು ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿರುವರು.

ಈ ವರ್ಷದ ಜೂನ್ ತಿಂಗಳಲ್ಲಿ ನಮ್ಮ ಚಕ್ರವರ್ತಿಯವರ ಪಟ್ಟಾಭಿಷೇಕಮಹೋತ್ಸವವು ಜರುಗುವುದಷ್ಟೆ. ಆ ಸಮಯದಲ್ಲಿ ಒಂದು ದೊಡ್ಡ ಕುದುರೆಗಳ ಪ್ರದರ್ಶನವೂ ಜರುಗುವುದು. ಉತ್ತಮವಾದ ಕುದುರೆಗಳಿಗೆ ಬಹುಮಾನ ಕೊಡುವುದಕ್ಕಾಗಿ ೧೯೫೦೦೦ ರೂ. ಗಳು ವಿನಿಯೋಗಿಸಲ್ಪಡುವುವು.

ಲಂಡನ್‌ಪಟ್ಟಣದಲ್ಲಿ ಪ್ರಕಟಿಸಲ್ಪಡುವ ಸುಪ್ರಸಿದ್ಧವಾದ ಪತ್ರಿಕೆಗಳೊಳಗೆ ಒಂದಾದ “ಡೇಲಿ ಗ್ರಾಫಿಕ್” ಎಂಬ ಪತ್ರಿಕೆಯ ೨೧ ನೆಯ ವರ್ಧಂತ್ಯುತ್ಸವವು ಅತ್ಯಂತ ವೈಭವದಿಂದ ಜರುಗಿತು. ಆಗ ೫ ನೆಯ ಜಾರ್ಜ್ ಚಕ್ರವರ್ತಿಯವರು ತಂತೀವಾರ್ತೆಯನ್ನು ಕಳುಹಿಸಿ, ಆ ಪತ್ರಿಕಾಸಂಬಂಧಿಗಳನ್ನು ಅಭಿನಂದಿಸಿದರು.

ಭೂಮಿಯ ವಯಸ್ಸನ್ನು ಕಂಡುಹಿಡಿಯುವುದಕ್ಕೆ ಹಾಲಿಯೆಂಬ ಶೋಧಕರು ಯತ್ನಿಸಿದರು. ಯಾವ ಯಾವ ಕಡೆಯಲ್ಲಿ ಸಮುದ್ರಕ್ಕೆ ನದಿಗಳು ಸಂಗಮವಾಗುವುವೋ ಆ ಆ ಸ್ಥಾನಗಳಲ್ಲಿ ವರ್ಷ ೧ ಕ್ಕೆ ಎಷ್ಟು ಎತ್ತರದ ಮಣ್ಣು ಗರಿಗಟ್ಟಿಕೊಳ್ಳುವುದೋ ಅದನ್ನು ನೋಡಿ, ಬಳಿಕ ೧ ನೂರು ವರ್ಷಗಳಲ್ಲಿ ಅಂಥ ಪರೆಯು ಎಷ್ಟಾಗುವುದೋ ಅದನ್ನು ಗೊತ್ತುಮಾಡಿ, ಅದೇ ಅಳತೆಯಮೇರೆ ಅಗೆದು ಶೋಧಿಸುವಲ್ಲಿ ಭೂಮಿಯ ವಯಸ್ಸು ೬೦೦ ಅಥವಾ ೬೫೦ ಲಕ್ಷ ವರ್ಷಗಳಾಗಿರುವುದೆಂದು ಗೊತ್ತಾಗಿದೆಯಂತೆ.

೧೯೦೧ ನೆಯ ವರ್ಷದಲ್ಲಿ ಮಾಡಲ್ಪಟ್ಟ ಲೆಕ್ಕದ ಪ್ರಕಾರ ಭರತಖಂಡದಲ್ಲಿ ೫ ವರ್ಷ ವಯಸ್ಸಿನೊಳಗೆ ವಿವಾಹಗೊಂಡಿದ್ದ ಗಂಡುಮಕ್ಕಳ ಸಂಖ್ಯೆ ೧೨೧೫೦೧, ಅಷ್ಟೇ ವಯಸ್ಸಿನೊಳಗೆ ಮದುವೆಯಾಗಿದ್ದ ಹೆಣ್ಣು ಮಕ್ಕಳ ಸಂಖ್ಯೆ ೨೪೩೫೦೦. ೫ ವರ್ಷ ವಯಸ್ಸಿನೊಳಗೆ ವಿತಂತುಗಳಾಗಿದ್ದ ಹೆಣ್ಣು ಮಕ್ಕಳ ಸಂಖ್ಯೆ ೯೬೦೦೦. ೫ ರ ಮೇಲ್ಪಟ್ಟು ೧೦ ವರ್ಷದೊಳಗೆ ವಿತಂತುಗಳಾಗಿರುವವರ ಸಂಖ್ಯೆ ೯೬೦೦೦. ೧೦ ರ ಮೇಲೆ ೧೫ ವರ್ಷಗಳೊಳಗಿನ ವಿತಂತುಗಳು ೨೪೬೯೦ ಮಂದಿಯೆಂದು ಗೊತ್ತಾಗಿದೆ.

ಅಫೀಮಿನ ವ್ಯಾಪಾರವನ್ನೇ ನಿಲ್ಲಿಸಿಬಿಡುವುದಕ್ಕಾಗಿ ಇಂಗ್ಲಂಡು-ಸಂಯುಕ್ತರಾಷ್ಟ್ರ-ಫ್ರಾನ್ಸು-ಜರ್ಮನಿ-ಇಟಲಿ-ಓಲಾಂಡು-ರಷ್ಯಾ-ಜಪಾನು-ಚೇನಾ-ಸಯಾಂ ಈ ದೇಶಗಳ ಪ್ರತಿನಿಧಿಗಳೆಲ್ಲಾ ಹೇಗ್ ಪಟ್ಟಣದಲ್ಲಿ ಕೂಡಿ ಆಲೋಚಿಸುವರು. ಅಫೀಮಿನ ಜತೆಗೆ ಮೋರ್ಫೈನು-ಕೋಕ್ಯೆನು ಪದಾರ್ಥಗಳ ಮಾರಾಟವನ್ನು ಸಹ ನಿಲ್ಲಿಸಿಬಿಡಬೇಕೆಂದು ಇಂಗ್ಲಂಡು ದೇಶದ ಪ್ರತಿನಿಧಿಗಳು ಸೂಚಿಸಿರುವರಂತೆ. ನಮ್ಮ ಭರತಖಂಡದಲ್ಲಾದರೊ ಮಾದಕದ್ರವ್ಯಗಳ ಮಾರಾಟವು ಬೆಳೆಯುತ್ತಲೇ ಇದೆ. ತನ್ನ ಅಧಿಕಾರಕ್ಕೆ ಅಂಕಿತವಾಗಿರುವ ಈ ದೇಶದಲ್ಲಿಯೂ ಆ ಮದದ್ರವ್ಯಗಳ ಮಾರಾಟವನ್ನು ಅಣಗಿಸುವುದಕ್ಕೆ ಇಂಗ್ಲಂಡು ಅದೇಕೆ ಪ್ರವರ್ತಿಸುವುದಿಲ್ಲ?

ಚಕ್ರವರ್ತಿ ದಂಪತಿಗಳು ದಿಲ್ಲಿ ಪಟ್ಟಣಕ್ಕೆ ಬಂದು ಕಿರೀಟಧಾರಣ ಮಹೋತ್ಸವವನ್ನು ನೆರವೇರಿಸಿದ ಬಳಿಕ ಸ್ವದೇಶಕ್ಕೆ ಹಿಂತಿರುಗುವುದರೊಳಗಾಗಿ ಮದ್ರಾಸಿಗೂ ಬಂದು ಹೋಗುವ ವಿಷಯದಲ್ಲಿ ಆಲೋಚನೆ ಮಾಡುತ್ತಿರುವರಂತೆ.

ವೇಷಾಂತರವನ್ನು ಧರಿಸಿ ನೈಝಾಬಾದು ಕೈರಟಾಬಾದು ಪ್ರಾಂತಗಳಲ್ಲಿ ಸಂಚರಿಸುತ್ತ ಮಾರ್ಗಸ್ಥರನ್ನು ಹೆದರಿಸಿ, ಸುಲಿಗೆ ಮೊದಲಾದವುಗಳನ್ನು ನಡೆಸಿ, ಹಿಂಸೆಕೊಡುತ್ತಿರುವ ದುಷ್ಟನನ್ನು ಹಿಡಿದು ತಂದೊಪ್ಪಿಸಿದವರಿಗೆ ೫೦೦ ರೂ.ಗಳನ್ನು ಬಹುಮಾನವಾಗಿ ಕೊಡುತ್ತೇವೆಂದು ನೈಜಾಂ ಸರ್ಕಾರದವರು ಸೂಚಿಸಿದ್ದಾರೆ.

ಮೊನ್ನೆ ಆದಿತ್ಯವಾರ ಶ್ರೀರಾಮಪುರದ ಬಳಿಯಲ್ಲಿ ಕೆಲ ಮಹಮ್ಮದೀಯರು ಹಿಂದೂಗಳ ಮೇಲೆ ಬಿದ್ದು, ಅವರ ಸರಸ್ವತೀಪೂಜಾ ವಿಗ್ರಹವನ್ನು ನಾಶಗೊಳಿಸಿದರು. ಇದಕಾಗಿ ಷೇಕ್‌ಪೀರ್ ಎಂಬುವನು ತಪ್ಪಿತಸ್ಥನೆಂದು ಸೆರೆಯಲ್ಲಿಡಲ್ಪಟ್ಟಿದ್ದಾನೆ. ತಾಂಗೇಲ್ ಬಳಿಯಲ್ಲಿ ಇನ್ನು ಕೆಲ ತುರುಕರು ಒಂದು ವೈಷ್ಣವ ವಿಗ್ರಹವನ್ನು ಒಡೆದು ದೇವಾಲಯವನ್ನು ಕೆಡಿಸಿರುವರೆಂದು ನ್ಯಾಯಸ್ಥಾನಕ್ಕೆ ವ್ಯಾಜ್ಯವು ಬಂದಿದೆ.

ತಾವು ವರ್ತಕರೆಂಬುದಾಗಿಯೂ, ಮಿಲ್ಲಿನ ಏಜಂಟರೆಂಬುದಾಗಿಯೂ, ದಳ್ಳಾಳಿಗಳೆಂಬುದಾಗಿಯೂ, ಸಂಸ್ಥಾನಗಳ ಉದ್ಯೋಗಿಗಳೆಂಬುದಾಗಿಯೂ ವಿಧವಿಧವಾಗಿ ಹೇಳಿಕೊಂಡು ಲಾಹೋರಿನ ಪ್ರಜೆಗಳನ್ನು ಮೋಸಗೊಳಿಸುತ್ತಿದ್ದ ಹೀರಾ-ಧರಂಚಂದ್, ಮೊದಲಾದ ಕಳ್ಳರ ಗುಂಪಿನ ಕೆಲವರು ಈಗ ಪೋಲೀಸರಿಂದ ಹಿಡಿಯಲ್ಪಟ್ಟು ದಂಡಾಧಿಕಾರಿಯಿಂದ ವಿಧವಿಧವಾದ ಶಿಕ್ಷೆಗೆ ಗುರಿಮಾಡಲ್ಪಟ್ಟರು. ಇನ್ನು ಕೆಲವರು ಆ ಗುಂಪಿನವರು ಸಿಕ್ಕದೆ ಇದ್ದಾರೆ.

ಸರ್ವಿಯಾದೇಶದ ವಿದ್ಯಾರ್ಥಿಯೊಬ್ಬನು ಮೋಟಾರ್ ಸೈಕಲ್ಲಿನಮೇಲೆ ಕುಳಿತು ಪ್ರಪಂಚವನ್ನೆಲ್ಲಾ ಸುತ್ತಿ ಬರಬೇಕೆಂದು ಸಂಕಲ್ಪಿಸಿರುವನು. ಈತನು ೧೯೧೦ ನೇ ಇಸವಿ ಮಾರ್ಚಿ ತಾ॥ ೧೩ ರಲ್ಲಿ ಬೆಲ್‌ಗ್ರೇಟಿನಿಂದ ಹೊರಟು ಯೂರೋಪು-ಸ್ಟ್ರೇಟ್ಸ್ ಸೆಟಿಲ್‌ಮೆಂಟ್ಸು ದೇಶಗಳಲ್ಲಿ ಸಂಚರಿಸಿದನು. ಈತನ ಸಂಚಾರವೆಲ್ಲಾ ೨ ವರ್ಷದೊಳಗಾಗಿ ಮುಗಿಯಬೇಕಂತೆ. ಈತನು ೧ ದಿನದಲ್ಲಿ ೧೦೦ ಮೈಲಿಗಳವರೆಗೆ ಪ್ರಯಾಣಮಾಡಿದನು. ಈತನು ಪರ್ಷಿಯಾ-ಆಫ್ರಿಕಾದೇಶಗಳನ್ನು ಸಂಚರಿಸಿಕೊಂಡು ಇಷ್ಟರಲ್ಲೇ ಆಸ್ಟ್ರೇಲಿಯಾಕ್ಕೆ ಹೋಗುವುದರಲ್ಲಿರುವನು.

ಇಂಡಿಯನ್ ಪೋಲೀಸ್ ಶಾಖೆಯ ಸಹಾಯಾರ್ಥವಾಗಿ ಚಂದಾವನ್ನು ಎತ್ತುತ್ತಿರುವೆನೆಂದು ಹೇಳಿಕೊಂಡು ತಿಂಗಳಿಗೆ ಸಾವಿರಾರು ರೂಪಾಯಿಗಳವರೆಗೆ ಸಂಪಾದಿಸುತ್ತ ಕಲಕತ್ತಾ ಪ್ರಾಂತದಲ್ಲಿ ಸಂಚರಿಸುತ್ತಿದ್ದ ಮಲ್ಲಿಕ್ ಎಂಬುವನನ್ನು ಪೋಲೀಸರು ಹಿಡಿದಿರುವರು, ಈ ಮೋಸಗಾರನು ದೊಡ್ಡದೊಡ್ಡ ವ್ಯಾಪಾರ ಸಂಘದವರನ್ನೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರನ್ನೂ, ಇನ್ನೂ ಹಲವು ದೊಡ್ಡ ಮನುಷ್ಯರನ್ನೂ ಅತ್ಯಂತ ಚಮತ್ಕಾರದಿಂದ ಮೋಸಗೊಳಿಸಿ, ಅವರಿಂದೆಲ್ಲಾ ಹಣವನ್ನು ಗಳಿಸಿರುವನು. ಚಂದ್ರನಗರದಲ್ಲಿ ಒಂದು ದಿವ್ಯವಾದ ಬಂಗಲೆಯನ್ನು ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದನು.

ಮದರಾಸಿನಲ್ಲಿರುವ ಪೋಸ್ಟ್ ಮ್ಯಾಸ್ಟರ್ ಜನರಲ್‌ರವರಿಗೆ ನೀಲಗಿರಿಯಿಂದ ಕಳುಹಿಸಲ್ಪಟ್ಟ ಅಂಚೆಯ ಚೀಲದಲ್ಲಿ ಕೆಲವು ಕಾಗದಗಳ ಸಂಗಡ ಒಂದು ಸತ್ತ ಇಲಿಯೂ ಸೇರಿಸಿ ಕಳುಹಿಸಲ್ಪಟ್ಟಿದ್ದಿತು. ಈ ಚೀಲವನ್ನು ಬಿಚ್ಚಿದ ಪರ್ಸನಲ್ ಅಸಿಸ್ಟಂಟರೇ ಮೊದಲಾದ ಉದ್ಯೋಗಿಗಳು ಭಯಪಟ್ಟು ಅದರ ದುರ್ಗಂಧವನ್ನು ಪರಿಹರಿಸುವುದಕ್ಕೆ ಔಷಧಗಳನ್ನುಪಯೋಗಿಸಿ, ಇಲಿಯನ್ನು ಪರೀಕ್ಷಾರ್ಥವಾಗಿ ಶೋಧನಾಲಯಕ್ಕೆ ಕಳುಹಿಸಿಕೊಟ್ಟರು. ಆ ಇಲಿಯು ತಾನಾಗಿ ಚೀಲದೊಳಗೆ ಹೇಗೋ ಸೇರಿ ಸತ್ತಿತೋ, ಅಥವಾ ಯಾರಾದರೂ ಕುಚೇಷ್ಟೆಗಾಗಿ ಹಾಗೆ ಮಾಡಿದರೋ ಮುಂದೆ ವಿಚಾರಣೆಯಿಂದ ಗೊತ್ತಾಗಬಹುದು.

ಅಮೇರಿಕಾದೇಶದ ವಾಷಿಂಗ್‌ಟನ್ ಪಟ್ಟಣದಲ್ಲಿ ಒಬ್ಬ ಶಾಸ್ತ್ರಜ್ಞನು ಕಳೆದವರ್ಷ ಫೋಟೋಗ್ರಾಫಿನ ಸಹಾಯದಿಂದ ಮೇಘಗಳು ಎಷ್ಟು ಅಡ್ಡಗಲವೂ ಎತ್ತರವೂ ಉಳ್ಳುವಾಗಿವೆಯೆಂಬುದನ್ನು ಕಂಡುಹಿಡಿಯಲು ಪ್ರಯತ್ನಿಸಿದನು. ಟೆಲಿಗ್ರಾಫ್ ತಂತಿಗಳಿಂದ ಜಂಟಿಸಿದ ಎರಡು ಫೋಟೋಗ್ರಾಫ್ ಪೆಟ್ಟಿಗೆಗಳನ್ನು ೩೦೦ ಅಡಿಗಳ ದೂರದಲ್ಲಿಟ್ಟು, ಒಂದು ಮೇಘದ ಎರಡು ಭಾಗಗಳ ಭಾವವನ್ನೂ ಗ್ರಹಿಸಿದನು. ಇವೆರಡರ ಭೇದವನ್ನೂ ನೋಡಿ, ಅವುಗಳ ಅಳತೆಯನ್ನು ಮಾಡಲಾಗಿ, ಕೆಲವು ಮೇಘಗಳು ೭ ಮೈಲಿ ೨ ಫರ್ಲಾಂಗುಗಳ ಉದ್ದವಾಗಿಯೂ ಕೆಲವುಗಳ ಎತ್ತರವು ೧೭ ಮೈಲಿಗಳಿಗಿಂತ ಹೆಚ್ಚಾಗಿಯೂ ಇರುವುದೆಂದುಗೊತ್ತಾಯಿತು.

ಶ್ರೀ ತ್ಯಾಗರಾಜಯ್ಯನವರ ೬೪ ನೆಯ ಪುಣ್ಯದಿನ ಮಹೋತ್ಸವವು ತಿರುವಾಡಿಪುರದಲ್ಲಿ ೫ ದಿನಗಳವರೆಗೆ ಅತ್ಯಂತ ವೈಭವದಿಂದ ಆಚರಿಸಲ್ಪಟ್ಟಿತು. ಗೀತವಿದ್ಯಾ ಬ್ರಹ್ಮನಂತಿದ್ದ ಆ ಮಹನೀಯನ ಸಮಾಧಿಯು ಅದೇ ಊರಲ್ಲಿರುವುದು. ಸನ್ಯಾಸಿಯಾಗಿದ್ದ ಆತನ ಸಮಾಧಿಯ ಪೂಜೆಗಾಗಿ ದಕ್ಷಿಣ ಇಂಡಿಯಾದಿಂದ ೧೫ ಸಾವಿರ ಜನರು ಬಂದು ಸೇರಿದ್ದರು. ಗಾನವಿದ್ಯಾಕೋವಿದರು ಅನೇಕ ಮಂದಿ ಬಂದಿದ್ದು ತಮ್ಮ ನೈಪುಣ್ಯವನ್ನು ನಾನಾ ಪ್ರಕಾರವಾಗಿ ತೋರಿಸಿದರು. ಅನೇಕ ಭಾಗವತರು ಹರಿಕಥಾ ಕಾಲಕ್ಷೇಪವನ್ನು ಮಾಡಿದರು. ೫ ದಿನವೂ ೧೦೦೦೦ ಜನರಿಗೆ ಸಂತರ್ಪಣೆ ನಡೆಯಿತು. ತ್ಯಾಗರಾಜಯ್ಯನವರ ಭಾವಚಿತ್ರವನ್ನು ಊರಿನ ಸುತ್ತಲೂ ಉತ್ಸವಗೊಳಿಸಿದರು. ಆ ಸಮಾಧಿಯ ಮೇಲೆ ಒಂದು ಮಂಟಪವನ್ನು ಕಟ್ಟಿಸಬೇಕೆಂದು ಆಗ ನೆರೆದಿದ್ದ ಪ್ರಜೆಗಳು ಸಂಕಲ್ಪಿಸಿದರು.

ರಾಷ್ಟ್ರೀಯ ಸಾರ್ವಜನಿಕ ಮಹಾಸಭೆಯ ಅಧ್ಯಕ್ಷರಾದ ಸರ್ ವಿಲಿಯಂ ವಿಡರ್‌ಬರ್ನರವರು ವೈಸ್‌ರಾಯರನ್ನು ಸಂದರ್ಶನ ಮಾಡಿದ ಸಂದರ್ಭವನ್ನು ಕುರಿತು ಮಿಸ್॥ ಆನಿಬೆಸೆಂಟ್‌ರವರು ಹೀಗೆ ಬರೆದಿರುತ್ತಾರೆ—"ದೇಶಾಭಿವೃದ್ಧಿಗೆ ಮತ್ತೊಂದು ಸೂಚನೆಯೇನೆಂದರೆ— ದೇಶೀಯ ಮಹಾ ಸಭಾಪ್ರತಿನಿಧಿಗಳಿಗೆ ವೈಸ್‌ರಾಯರು ದರ್ಶನವನ್ನಿತ್ತು ಅವರೊಡನೆ ಉತ್ಸಾಹದಿಂದ ಸಂಭಾಷಿಸಿದುದೇ ಎಂಬುದಾಗಿ ಹೇಳಬಹುದು. ಈರೀತಿಯಾಗಿ ರಾಷ್ಟ್ರೀಯ ಸಭೆಯವರಿಗೂ ಪ್ರಭುತ್ವದವರಿಗೂ ಸಂಯೋಗವುಂಟಾಗುವುದು ಎಷ್ಟುಮಟ್ಟಿಗೆ ಐಕ್ಯ ಸೂಚಕವಾಗಿರುವುದೋ ಅಷ್ಟುಮಟ್ಟಿಗೆ ಅದು ರಾಜ್ಯನೀತಿ ಧುರಂಧರತ್ವಕ್ಕೆ ನಿರೂಪಕವಾಗಿರುವುದು. ಸಭಾಪ್ರತಿನಿಧಿಗಳ ಈ ರಾಯಭಾರವು ದೇಶಾಭಿಮಾನಿಗಳು ಕೋರಿಕೊಳ್ಳುತ್ತಿರುವಂತೆ ಸಾಮ್ರಾಜ್ಯದವರಿಗೂ, ವಿಧಿವಿಧೇಯರಾಗಿ ಭಾರತ ಕ್ಷೇಮವನ್ನು ಕೋರುತ್ತಿರುವ ಪ್ರಜೆಗಳಿಗೂ ಸಹ ಸಾಮರಸ್ಯವನ್ನುಂಟು ಮಾಡತಕ್ಕುದಾಗಿರುವುದು"

ಮದ್ರಾಸಿಗೆ ಈಗ ಕೊಪ್ಪರದ ನಿವಾಸಿಗಳಾದ ಇಬ್ಬರು ಸಹೋದರರು ಬಂದಿರುವರು. ಶತಾವಧಾನಿ ವೆಂಕಟಸುಬ್ಬರಾಯ ಕವಿ-ವೆಂಕಟರಮಣಕವಿ ಯೆಂದು ಅವರ ಹೆಸರು. ಇವರುಗಳು ೧ ಗಂಟೆಯಕಾಲದಲ್ಲಿ ಮೂರುನೂರು ಪದ್ಯಗಳನ್ನು ರಚಿಸಿ, ಗಡಗಡನೆ ಹೇಳುತ್ತಿರುವರು. ೩-೪ ಕಡೆ ಮಹಾವಿದ್ವತ್ಸಭೆಗಳು ನಡೆದು, ಸಭಿಕರು ಹೇಳಿದ ವಿಷಯದಮೇಲೆ ಕಂಠಪಾಠ ಮಾಡಿದ್ದುವುಗಳನ್ನು ಹೇಳುವಂತೆ ತಡೆ ಬಿಡುವಿಲ್ಲದೆ ಲಕ್ಷಣಬದ್ಧವಾಗಿಯೂ ಸರಸವಾಗಿಯೂ ಮೂರುನೂರು ಪದ್ಯಗಣನ್ನು (ಕಂದ-ವೃತ್ತ-ಸೀಸಗೀತ) ಮೊದಲಾದುವುಗಳ ರೂಪವಾಗಿ ತೆನುಗಿನಲ್ಲಿ ರಚಿಸಿ ಹೇಳಿ, ಹೈಕೋರ್ಟ್ ಜಡ್ಜಿಗಳು-ಬ್ಯಾರಿಸ್ಟರುಗಳು-ಆಂಧ್ರ ಪಂಡಿತರುಗಳು-ಕವಿಗಳು ಮೊದಲಾದವರಿಂದೆಲ್ಲಾ ಮೆಚ್ಚುಗೆಗೊಂಡು ಸುವರ್ಣಪದಕ ಧನರಾಶಿ ಮೊದಲಾದುವುಗಳಿಂದ ಬಹುಮಾನಿಸಲ್ಪಡುತ್ತಿರುವರು. ಅನೇಕ ಕವಿಗಳು ಇವರ ಆಶುಕವಿತಾಶಕ್ತಿಯನ್ನು ಕುರಿತು ನಾನಾ ಪ್ರಕಾರವಾಗಿ ಕವಿತೆಯನ್ನು ರಚಿಸಿ, ಧನ್ಯವಾದವನ್ನು ಮಾಡುತ್ತಿರುವರು. ಇವರು ಉಪಾಸಕರೂ ವರ ಕವಿಗಳೂ ಎಂದು ತೋರುವುದು. ಆಂಧ್ರ ಕವಿತಾಲಕ್ಷ್ಮಿಯ ಸೊಬಗು ಈಗಿನ ಕಾಲದಲ್ಲೂ ಇಷ್ಟು ಪ್ರಶಂಸನೀಯವಾಗಿರುತ್ತಿರುವುದು ಆಂಧ್ರ ದೇಶೀಯರ ಭಾಗ್ಯವೇ ಸರಿ ಕನ್ನಡದ ದಶೆಯು ಆ ಸ್ಥಿತಿಗೆ ಬರುವಂತಹ ಕಾಲವೂ ಮುಂದೆ ಸಂಭವಿಸುವುದುಂಟೆ?

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು. ಪ. ಪ್ರ.

ಪತ್ರವ್ಯವಹಾರ. ✓

ಶ್ರೀಮದ್ವೀರಶೈವ ಶಿವಯೋಗ ಮಂದಿರದ ಸಂಸ್ಥೆಯಿಂದ.

ಸಮಸ್ತ ವೀರಶೈವ ಮಹಾಜನಗಳಿಗೆ ಸೂಚಿಸುವುದೇನೆಂದರೆ—ಇದೇ ಸಂವತ್ಸರದ ಮಾಘ ಬ॥ ೧೩ ಮಹಾಶಿವರಾತ್ರಿಯ ದಿವಸ ಮಲಾಪಹಾರೀ ತೀರ ಮಹಾಕೂಟ (ದಕ್ಷಿಣಕಾಶೀ) ಕ್ಷೇತ್ರೋಪಾಂತ್ಯ (ಪಂಚಕ್ರೋಶದೊಳಗೆ) ಸ್ಥಾಪಿತವಾದ ಶಿವಯೋಗಮಂದಿರದಲ್ಲಿ ಅನೇಕ ವೀರಶೈವರು ಕೂಡತಕ್ಕವರಿದ್ದು, ಈ ಸುಸಮಯದಲ್ಲಿ ಶಿವಯೋಗಮಂದಿರ ಮತ್ತು ಸ್ವಮತ ವಿಷಯಗಳನ್ನು ಕುರಿತು ಆಲೋಚಿಸತಕ್ಕ ಅವಶ್ಯವಿದೆ. ಆದ್ದರಿಂದ ತಾವು ದಯವಿಟ್ಟು ಸ್ವಮತಾಭಿಮಾನಿಗಳೊಡನೆ ಆಗಮಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುವೆವು.

ಇಲ್ಲಿ ನಡೆಯತಕ್ಕ ವಿಷಯಗಳು.

೧. ಭಾಷಣಾದಿಗಳು:—ಶಿವಯೋಗಮಂದಿರ ಮತ್ತೂ ಸ್ವಮತ ಇವುಗಳ ಸುಧಾರಣೆಯ ಬಗ್ಗೆ ವಕ್ತೃತ್ವ ಕಲೆಯುಳ್ಳ ವಿದ್ಯಾವಂತರ ಉಪನ್ಯಾಸಗಳು ಜರುಗುವುವಲ್ಲದೆ, ಶಿವಾದ್ವೈತ ಮತ್ತೂ ಅದ್ವೈತ ಮತಗ್ರಂಥಗಳ ಪರೀಕ್ಷೆ, ಶಿವಕೀರ್ತನ, ಶಿವಭಜನೆ ಮುಂತಾದ ಮುಮುಕ್ಷುಗಳ ಮತಿಗೆ ಮಂಗಲವನ್ನೀಯುವ ಮಹಾಕಾರ್ಯಗಳು ಮಾಘ ಬ॥ ೧೪ ಸೋಮವಾರ, ೩೦ ಮಂಗಳವಾರ ಮತ್ತೂ ಫಾಲ್ಗುಣ ಶು॥ ೧ ಬುಧವಾರ ಈ ೩ ದಿನಗಳಲ್ಲಿ ಅಂದರೆ, ಫೆಬ್ರವರಿ ೨೭,೨೮ ನೇ ತಾರೀಖು ಹಾಗು ಮಾರ್ಚಿ ೧ ನೇ ತಾರೀಖು ಸನ್ ೧೯೧೧ ಈ ೩ ದಿನಗಳಲ್ಲಿ ಜರಗುವುವು.

ಪರೀಕ್ಷಾ-ಗ್ರಂಥಗಳು.

(೧) ವೀರಶೈವಾಚಾರ ಪ್ರದೀಪಿಕಾ, (೨) ವಿಶೇಷಾರ್ಥ ಪ್ರಕಾಶಿಕಾ, (೩) ಶಿವಾದ್ವೈತಮಂಜರಿ ಅಥವಾ ವೀರಮಾಹೇಶ್ವರಾಚಾರ ಸಂಗ್ರಹ, ೧-೧೬ ಅಧ್ಯಾಯಗಳವರೆಗೆ, (೪) ಲಿಂಗಧಾರಣಚಂದ್ರಿಕೆ, (೫) ಶತಕತ್ರಯ, (೬) ಕೈವಲ್ಯಪದ್ಧತಿ ಅಥವಾ ಪರಮಾರ್ಥ ಪ್ರಕಾಶಿಕಾ, (೭) ಪಂಚದಶಿ, (೮) ವಾಸಿಷ್ಠಸಾರ, (೯) ಆತ್ಮಪುರಾಣ, (೧೦) ವಿಚಾರಸಾಗರ.

ಈ ಮೇಲ್ಕಂಡ ಗ್ರಂಥಗಳ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಿಗೆ ೫ ರಿಂದ ೧೦ ರೂಪಾಯಿಗಳವರೆಗೆ ಸಂಭಾವನೆಯು ಕೊಡಲ್ಪಡುವುದಲ್ಲದೆ, ಸಂಸ್ಥೆಯಿಂದ ಅಭಿನಂದನಪತ್ರಿಕೆಯು ಕೊಡಲ್ಪಡುವುದು. ಈ ಗ್ರಂಥಗಳಲ್ಲಿ ಪರೀಕ್ಷೆಯನ್ನು ಕೊಡತಕ್ಕವರು ತಾವು ತೆಗೆದುಕೊಂಡ ಗ್ರಂಥದ ಹೆಸರು ಮತ್ತು ತಮ್ಮ ಹೆಸರು ಇವನ್ನು ಶಿವಯೋಗಮಂದಿರದ ಅಧ್ಯಾಪಕರಾದ ವೇ॥ ರಾ॥ ರಾ॥ ಸೋಮನಾಥ ಶಾಸ್ತ್ರಿಗಳ ಕಡೆಗೆ ಮಾರ್ಗಶೀರ್ಷ ಮಾಸದೊಳಗಾಗಿ ತಿಳಿಸಬೇಕು.

ರೇಲ್ವೆಯ ಮಾರ್ಗಗಳು.

ಸೊಲ್ಲಾಪುರ ಮಾರ್ಗವಾಗಿ ಬರತಕ್ಕವರು, ಬಾದಾಮಿಯ ಸ್ಟೇಶನಕ್ಕೆ ಇಳಿಯಬೇಕು. ಅಲ್ಲಿಂದ ಶಿವಯೋಗಮಂದಿರವು ೯ ಮೈಲಿ ಆಗುವುದು. ಗದಗ ಮಾರ್ಗವಾಗಿ ಬರತಕ್ಕವರು, ಆಲೂರ ಸ್ಟೇಷನಕ್ಕೆ ಇಳಿಯಬೇಕು. ಅಲ್ಲಿಂದ ಶಿವಯೋಗಮಂದಿರವು ೮ ಮೈಲು ಆಗುವುದು. ಇದು ಮಹಾಕ್ಷೇತ್ರವಾಗಿದ್ದು, ಮಹನೀಯರ ದರ್ಶನಾದಿ ಲಾಭವಾಗುವುದರಿಂದ ಉಳಿವಿ ಮೊದಲಾದ ಕ್ಷೇತ್ರಗಳಿಗೆ ಸಕಲ ಸನ್ನಾಹದೊಡನೆ ಕುಟುಂಬಸಹಿತವಾಗಿ ಹೋಗುವಂತೆ, ಇಲ್ಲಿಗೆ ಬಂದು, ಸೇವಾಮಾಡಿ, ತತ್ಫಲಭಾಗಿಗಳಾಗಿ ಸ್ವಮತಾಭಿಮಾನವನ್ನು ವ್ಯಕ್ತಗೊಳಿಸಬೇಕೆಂಬೀ ವಿಷಯವನ್ನು ಸಮಸ್ತರಿಗೂ ಪ್ರಸಿದ್ಧಪಡಿಸುವೆವೆಂದು ಸವಿನಯ ಪ್ರಾರ್ಥನೆಯುಂಟು.

ಮುಕ್ಕಾಮ ಶಿವಯೋಗಮಂದಿರ, | ಶಿವಯೋಗಮಂದಿರದ
ತಾ॥ ೨೦-೯-೧೯೧೦. | ವ್ಯವಸ್ಥಾಪಕ.

ಶ್ರೀಮದ್ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯ ಆಲೋಚನಾ ಸಭೆಯು.

ವಿಜಾಪುರ. ✓

(ಕಳೆದವಾರದಶೇಷ.)

(ಬ) ಶ್ರೀಮದ್ವೀರಶೈವ ಮಹಾಸಭೆಯ ಧನರಾಶಿಗೆ ವಾರ್ಷಿಕ ಚಂದಾಹಣವನ್ನು ಕೊಡತಕ್ಕವರೆಲ್ಲರೂ ಏಪ್ರಿಲ್ ತಿಂಗಳಿನ ೧ನೇ ತಾರೀಖಿನ ಒಳಗಾಗಿ ಕೊಡಲಿಕ್ಕೆ ಬೇಕು. ಒಂದುವೇಳೆ ಕೊಡದಿದ್ದರೆ, ಅವರ ಹೆಸರುಗಳನ್ನು ಸ್ಟ್ಯಾಂಡಿಂಗ್ ಕಮಿಟಿಯ ಚೇರಮನ್ನರು, ಲಿಸ್ಟಿನೊಳಗಿಂದ ತೆಗೆದುಹಾಕಬೇಕು.

ಈ ಠರಾವನ್ನು ಸೂಚನಾರೂಪದಿಂದ ಶ್ರೀಮಂತ ಶಿವಲಿಂಗರಾವ ಜಗದೇವರಾವ ದೇಶಮುಖ ಇವರು ಸಭೆಯ ಮುಂದಿಡಲು, ಇದಕ್ಕೆ ಮಿ॥ ತಮ್ಮಣ್ಣಪ್ಪಾ ಸತ್ಯಪ್ಪಾ ಚಿಕ್ಕೋಡಿ ಮತ್ತು ಮಿ॥ ಬಸೆಟ್ಟೆಪ್ಪಾ ಅಣ್ಣಾ ಮುತ್ತೂರ ಇವರು ಅನುಮೋದನಕೊಡಲು, ಸರ್ವಾನುಮತದಿಂದ ಪಾಸಾಯಿತು.

೨ ನೇ ಠರಾವು:—ಮಹಾಸಭೆಯ ಸ್ಟ್ಯಾಂಡಿಂಗ್-ಕಮಿಟಿಯ ಚೇರಮನ್ನರ ಸಹಾಯಕ್ಕಾಗಿ ಲೆಖ್ಖಪತ್ರ ಇಡಲಿಕ್ಕೂ ಮಹಾಸಭೆಯ ಕೆಲಸದ ಸಲುವಾಗಿ ಪರಸ್ಥಳಗಳಿಗೆ ಹೋಗುವ ಸಲುವಾಗಿಯೂ ತಿಂಗಳಿಗೆ ೪೦ ರೂಪಾಯಿಗಳವರೆಗೆ ಒಬ್ಬ ಕಾರಕೂನನನ್ನೂ ೮ ರೂಪಾಯಿಗಳವರೆಗೆ ಒಬ್ಬ ಸಿಪಾಯಿಯನ್ನೂ ಚೇರಮನ್ನರು ಇಟ್ಟುಕೊಳ್ಳಬೇಕು. ಈ ಕಾರಕೂನನೂ ಸಿಪಾಯಿಯೂ ಪ್ರಸಂಗವಶಾತ್ ಪರಸ್ಥಳಗಳಿಗೆ ಹೋದಲ್ಲಿ, ಅವರ ಹಾದೀವೆಚ್ಚವನ್ನೂ ಅವರ ಊಟದ ವೆಚ್ಚಕ್ಕಾಗಿ ಪ್ರತಿ ಒಬ್ಬರಿಗೆ ಪ್ರತಿ ಒಂದು ದಿವಸಕ್ಕೆ ೨ ಆಣೆಗಳಂತೆ ಊಟದ ವೆಚ್ಚವನ್ನೂ ಚೇರಮನ್ನರು ಕೊಡತಕ್ಕದ್ದು.

ಈ ಠರಾವನ್ನು ಸೂಚನಾರೂಪದಿಂದ ಮ॥ ರಾ॥ ರಾ॥ ಸಿದ್ಧರಾಮಪ್ಪಅಣ್ಣಾ ಪಾವಟೆ ವಕೀಲ ಹುಬ್ಬಳ್ಳಿ ಇವರು ಸಭೆಯ ಮುಂದಿಟ್ಟರು. ಇದಕ್ಕೆ ಮ॥ ರಾ॥ ರಾ॥ ಶಿವಬಸಪ್ಪಾ ಅಯ್ಯಪ್ಪಾ ಶೀಲವಂತ ವಕೀಲ ಸೊಲ್ಲಾಪುರ ಇವರು ಅನುಮೋದಿಸಲು ಸರ್ವಾನುಮತದಿಂದ ಪಾಸಾಯಿತು.

ಇಷ್ಟುವೇಳೆಗೆ ಸಾಯಂಕಾಲದ ೫ ಘಂಟೆಯು ಹೊತ್ತಾಗಲು ಮೊದಲನೇ ದಿವಸದ ಕೆಲಸವು ಮುಗಿಯಿತು.

೨ ನೇ ದಿವಸ ತಾ|| ೨೯-೧೨-೧೦ ಬೃಹಸ್ಪತಿವಾರ.

ಈ ದಿವಸ ಪ್ರಾತಃಕಾಲದ ೭ ಘಂಟೆಗೆ ಯಾವತ್ತು ಸಭಾಸದರು ನೆರೆದು ಹತ್ತು ಘಂಟೆಯುವರೆಗೆ ಚರ್ಚಿಸಿ, ಅವತ್ತಿನದಿವಸ ಸಭೆಯಲ್ಲಿ ಜರಗತಕ್ಕ ಕಾರ್ಯಕ್ರಮವನ್ನು ಸಿದ್ಧಪಡಿಸಿದರು.

ಮಧ್ಯಾಹ್ನದ ೨ ಘಂಟೆಗೆ ಸಭೆಯು ಕೆಲಸಕ್ಕೆ ಆರಂಭವಾಯಿತು.

೮ ನೇ ತರಾವು:—ಮಹಾಸಭೆಯ ೪ ನೇ ನೇಮದ ಬದಲು ಕೆಳಗಿನ ನೇಮವನ್ನು ಹಾಕತಕ್ಕದ್ದು:—

ಮಹಾಸಭೆಯನ್ನು ನೆರಿಸತಕ್ಕವರು ತಮ್ಮಲ್ಲಿ 'ವರ್ಕಿಂಗ್-ಕಮಿಟಿ' ಮತ್ತು 'ಸ್ವಾಗತ ಕಮಿಟಿ' ಗಳನ್ನು ಸ್ಥಾಪಿಸಿಕೊಂಡು, ಮಹಾಸಭೆಗೆ ಬೇಕಾಗುವಷ್ಟು ಹಣವನ್ನು ತಮ್ಮ ಪ್ರಾಂತದಲ್ಲಿ ಕೂಡಿಸತಕ್ಕದ್ದು; ಮತ್ತು ಪ್ರತಿ ಒಬ್ಬ ಪ್ರತಿನಿಧಿಗಳಿಂದ ೫ ರೂಪಾಯಿ ಮತ್ತು ಪ್ರತಿ ಒಬ್ಬ ಪ್ರೇಕ್ಷಕರಿಂದ ೨ ರೂಪಾಯಿಗಳನ್ನು ತೆಗೆದುಕೊಂಡು ಅವರಿಗೆ ಪಾಸುಗಳನ್ನು ಕೊಡತಕ್ಕದ್ದು. ಪ್ರತಿನಿಧಿಗಳಿಗೆ ಮಾತ್ರ ಭೋಜನದ ಮತ್ತು ವಾಸಸ್ಥಳಗಳ ವ್ಯವಸ್ಥೆಯನ್ನು ರಿಸೆಪ್ಷನ್ ಕಮಿಟಿಯವರು ಮಾಡತಕ್ಕದ್ದು. ಸ್ವಯಂಸೇವಕರಿಂದ ಭೋಜನದ ಮತ್ತು ಪಾಸುಗಳ ಫೀಯನ್ನು ತೆಗೆದುಕೊಳ್ಳಕೂಡದು. ಪ್ರತಿನಿಧಿಗಳಿಂದ ಮತ್ತು ಪ್ರೇಕ್ಷಕರಿಂದ ಉತ್ಪನ್ನವಾದ ಹಣವೊಳಗಿಂದ ¼ ಹಣವನ್ನು ರಿಸೆಪ್ಶನ್ನ ಕಮಿಟಿಯ ಛೇರಮನ್ನರು ಸ್ಟ್ಯಾಂಡಿಂಗ ಕಮಿಟಿಯ ಛೇರಮನ್ನರ ಕಡೆಗೆ ಮಹಾಸಭೆಯ ಕೆಲಸವು ತೀರುವದರೊಳಗಾಗಿಯೇ ಕೊಡತಕ್ಕದು.

ಮೇಲಿನ ತರಾವನ್ನು ಮ|| ರಾ|| ರಾ|| ಸಿದ್ದಪ್ಪಾ ಅಣ್ಣಾ ಕಂಬಳಿ ವಕೀಲ ಹುಬ್ಬಳ್ಳಿ ಇವರು ಸೂಚನಾರೂಪದಿಂದ ಸಭೆಯ ಮುಂದಿಟ್ಟರು. ಇದಕ್ಕೆ ಮಿ|| ಸಂಗನಗೌಡಾ ಅಣ್ಣಾ ಪಾಟೀಲ ವಕೀಲ ಗದಗ, ಮಿ|| ಸಿದ್ಧರಾಮಪ್ಪಾ ಅಣ್ಣಾ ಪಾವಟೆ ವಕೀಲ ಹುಬ್ಬಳ್ಳಿ, ಮಿ|| ಬಸಟ್ಟೆಪ್ಪಾ ಅಣ್ಣಾ ಮುತ್ತೂರ ರಬಕವಿ, ಮಿ|| ಫಕೀರಪ್ಪಾ ಹಳಕಟ್ಟಿ ವಕೀಲ ವಿಜಾಪುರ ಇವರು ಅನುಮೋದನ ಕೊಟ್ಟರು. ಆ ವೇಳೆ ಈ ತರಾವು 'ಒಂದು ಓಟಿನಿಂದ' ಮಂಜೂರಾಯಿತು.

೯ ನೇ ತರಾವು:—ಶ್ರೀ ಶಿವಯೋಗ ಮಂದಿರದ ಮತ್ತು ವೀರಶೈವ ಪಾಠಶಾಲೆಗಳ ಈಗಿನ ಅಭ್ಯಾಸಕ್ರಮಗಳನ್ನು ತರಿಸಿಕೊಂಡು ಅಥವಾ ತಮಗೆ ಇಷ್ಟಪಟ್ಟ ಪಾಠಶಾಲೆಗಳನ್ನು ಸ್ವತಃ ನೋಡಿ, ಈಗಿನ ಪರಿಸ್ಥಿತಗೆ ಸರಿಯಾಗಿ ಅಭ್ಯಾಸಕ್ರಮವನ್ನು ಸಿದ್ಧಪಡಿಸುವದಕ್ಕಾಗಿ ಯೋಗ್ಯ ಸೂಚನೆಗಳನ್ನು ಮಾಡುವದು, ಮತ್ತು ಈ ಕಾರ್ಯಕ್ಕಾಗಿ ಕೆಳಗಿನ ಒಂದು ಸಬ್ ಕಮಿಟಿಯನ್ನು ನೇಮಿಸುವದು.

೧ ರಾ ಬ ಅಪ್ಪಾಸಾಹೇಬ ಸೂಲಾಪೂರ, ೨ ಮಿ ಸಿದ್ಧರಾಮಪ್ಪಾ ಅಣ್ಣಾ ಪಾವಟೆ ವಕೀಲ ಹುಬ್ಬಳ್ಳಿ, ೩ ಮಿ ಸಿದ್ದಪ್ಪಾ ಅಣ್ಣಾ ಕಂಬಳಿ ವಕೀಲ ಹುಬ್ಬಳ್ಳಿ, ೪ ಮಿ ತಮ್ಮಣ್ಣಪ್ಪಾ ಸತ್ಯಪ್ಪ ಅಣ್ಣಾ ಚಿಕ್ಕೋಡಿ, ೫ ಶಿವಮೂರ್ತಿ ಶಿವಮೂರ್ತಿಯ್ಯಸ್ವಾಮಿ ಕಣಬರ್ಗಿ ಗೋಕಾಕ, ೬ ಮಿ ಫಕೀರಪ್ಪಾ ಅಣ್ಣಾ ಹಳಕಟ್ಟಿ ವಕೀಲ ವಿಜಾಪುರ ೭ ಶಿವಮೂರ್ತಿ ರೋಹಿಹಳ್ಳಿ ಪಟ್ಟದದೇವರು, ೮ ವೇ|| ಎನ್. ಆರ್. ಕರಿಬಸವ ಶಾಸ್ತ್ರಿಗಳು ಮೈಸೂರ, ೯ ಮಿ ವೀರಬಸಪ್ಪಾ ಅಣ್ಣಾ ಶೆಟ್ಟಿ ಬಿ. ಎ. ಕೊಲ್ಹಾಪೂರ.—

ಈ ಸಬ್ ಕಮಿಟಿಗೆ ಮಿ|| ಸಿದ್ಧರಾಮಪ್ಪಾ ಅಣ್ಣಾ ಪಾವಟೆ ಇವರು ಅಧ್ಯಕ್ಷರಾಗಿ ಇರತಕ್ಕದ್ದು. ಈ ಕಮಿಟಿಯವರು ತಮ್ಮ ರಿಪೋರ್ಟನ್ನು ಮುಂದಿನ ಜೂನ ೧ ನೇ ತಾರೀಖಿನ ಒಳಗಾಗಿ ಸ್ಟ್ಯಾಂಡಿಂಗ್ ಕಮಿಟಿಯ ಛೇರಮನ್ನರ ಕಡೆಗೆ ಕಳುಹಿಸತಕ್ಕದ್ದು.

ಈ ತರಾವನ್ನು ಸೂಚನಾರೂಪದಿಂದ ಮಿ|| ಸಿದ್ಧರಾಮಪ್ಪಾ ಅಣ್ಣಾ ಪಾವಟೆ ಇವರು ಸಭೆಯ ಮುಂದಿಟ್ಟರು. ಇದಕ್ಕೆ ಮಿ|| ಶಿವಬಸಪ್ಪಾ ಅಣ್ಣಾ ವಕೀಲ ಸೊಲ್ಲಾಪುರ ಇವರು ಅನುಮೋದಿಸಲು, ಸರ್ವಮತದಿಂದ ಮಂಜೂರಾಯಿತು.

೧೦ ನೇ ತರಾವು:—ಮಹಾಸಭೆಯ ೬ ನೇ ಮತ್ತು ೭ ನೇ ನೇಮದಂತೆ ಎಂಟು ವಿಭಾಗಗಳ ಸೆಕ್ರೆಟರಿಗಳು ಜಿಲ್ಹಾ ಕಮಿಟಿಗಳನ್ನು ಬೇಗನೆ ಸ್ಥಾಪನಮಾಡತಕ್ಕದ್ದು. ಮತ್ತು ತಾಲೂಕ ಮತ್ತು ಗ್ರಾಮಕಮಿಟಿಗಳನ್ನು ತಮ್ಮ ಅನುಕೂಲತೆಯ ಮೇರೆಗೆ ಸ್ಥಾಪಿಸತಕ್ಕದ್ದು.

ಈ ತರಾವನ್ನು ಸೂಚನಾರೂಪದಿಂದ ಶಿವಮೂರ್ತಿ ಶಿವಮೂರ್ತಿಸ್ವಾಮಿ ಕಣಬರ್ಗಿ ಗೋಕಾಕ ಇವರು ಸಭೆಯ ಮುಂದಿಟ್ಟರು, ಅದಕ್ಕೆ ಶ್ರೀಮಂತ ಶಿವಲಿಂಗರಾವ ಜಗದೇವರಾವ ದೇಶಮುಖ ಇವರು ಅನುಮೋದನ ಕೊಡಲು, ಅದು ಸರ್ವಾನುಮತದಿಂದ ಪಾಸಾಯಿತು.

೧೧ ನೇ ತರಾವು:—ಧಾರ್ಮಿಕ, ನೈತಿಕ, ಔದ್ಯೋಗಿಕಗಳ ಸಣ್ಣ ಸಣ್ಣ ಗ್ರಂಥಗಳನ್ನು ಮುದ್ರಿಸಿ ಜನರಲ್ಲಿ ಪ್ರಸಾರ ಮಾಡುವ ಅವಶ್ಯವು ಬಹಳೇ ಉಂಟು. ಒಂದುವೇಳೆ ಇಂಥ ಸಂಘಗಳು ಸ್ಥಾಪನವಾದಲ್ಲಿ, ಅವಕ್ಕೆ ಪ್ರತಿಯೊಬ್ಬ ವೀರಶೈವನೂ ಅವಶ್ಯಕವಾಗಿ ಸಹಾಯ ಮಾಡಬೇಕು.

ಈ ತರಾವನ್ನು ಸೂಚನಾರೂಪದಿಂದ ಮಿ|| ತಮ್ಮಣ್ಣಪ್ಪಾ ಚಿಕ್ಕೋಡಿ ಇವರು ಸಭೆಯಲ್ಲಿ ತರಲು, ಅದಕ್ಕೆ ಶಿವಮೂರ್ತಿಸ್ವಾಮಿ ಕಣಬರ್ಗಿ ಮತ್ತು ಗುರುಶಾಂತಪ್ಪ ಅಣ್ಣಾ ಉಮರ್ಜಿ ಸೊಲ್ಲಾಪೂರ ಇವರು ಅನುಮೋದಿಸಲು, ಸರ್ವಾನುಮತದಿಂದ ಪಾಸಾಯಿತು.

೧೨ ನೇ ತರಾವು:—ರಾ|| ಬ|| ಧರ್ಮಪ್ರವರ್ತಕ ಗುಬ್ಬೀ ತೋಟದಪ್ಪನವರ ಮೃತ್ಯುವಿನ ಬಗ್ಗೆ ದುಃಖ ಪ್ರದರ್ಶನ ಮಾಡುವದು ಮತ್ತು ಅವರ ಕುಟುಂಬದವರಿಗೆ ದುಃಖ ಪ್ರದರ್ಶಕ ಪತ್ರವನ್ನು ಕಳುಹಿಸಿಕೊಡುವದು.

ಈ ತರಾವನ್ನು ಸೂಚನಾರೂಪದಿಂದ ಶ್ರೀಮಂತ ಶಿವಸಿದ್ದಪ್ಪಾ ಅಣ್ಣಾ ಸರನಾಯಿಕ ಗಲಗಲಿ ಇವರು ಸಭೆಯ ಮುಂದಿಡಲು, ಅದಕ್ಕೆ ಶ್ರೀಮಂತ ಶಿವಲಿಂಗರಾವ ದೇಶಮುಖ ಅಲವೋಲ ಇವರು ಅನುಮೋದನಕೊಡಲು, ಅದು ಸರ್ವಾನುಮತದಿಂದ ಪಾಸಾಯಿತು.

ಇಲ್ಲಿಗೆ ೨ ನೇ ದಿವಸದ ಕೆಲಸಗಳು ಸಂಪೂರ್ಣವಾದುದರಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

೩ ನೇ ದಿವಸ ತಾ|| ೩೦-೧೨-೧೦ ಶುಕ್ರವಾರ.

ಈ ದಿವಸ ಗೊತ್ತಾಗಿದ್ದಂತೆ ಮುಂಜಾನೆ ೭ ಘಂಟೆಗೆ ಎಲ್ಲ ಮೆಂಬರರು ಕೂಡಿ, ಚರ್ಚಿಸಿ, ಕಾರ್ಯಕ್ರಮವನ್ನು ಸಿದ್ಧಪಡಿಸಿ ೧೧ ಘಂಟೆಗೆ ಭೋಜನಕ್ಕೆ ತೆರಳಿದರು.

ಮಧ್ಯಾಹ್ನದ ೧ ಘಂಟೆಗೆ ಸಭೆಯು ಪ್ರಾರಂಭವಾಯಿತು.

೧೩ ನೇ ತರಾವು:—ಧಾರವಾಡ ಲಿಂಗಾಯತ ಎಜ್ಯುಕೇಶನ್ ಫಂಡು ಈಗಿನ ವೀರಶೈವ ವಿದ್ಯಾರ್ಥಿಗಳಿಗೆ ಕಡಿಮೆ ಬೀಳುವದರಿಂದ, ಸ್ಟ್ಯಾಂಡಿಂಗ ಕಮಿಟಿಯೊಳಗಿನ ಪ್ರತಿಯೊಬ್ಬ ಮೆಂಬರು ಈ ವರ್ಷದ ವೆಚ್ಚದದೆಸೆಯಿಂದ ತಮ್ಮ ತಮ್ಮ ಪ್ರಾಂತಗಳಲ್ಲಿ ೧೦೦ ರೂಪಾಯಿಗಳನ್ನು ವರ್ಗಣಿಯಿಂದ ಕೂಡಿಸಿ, ಮುಂದಿನ ಜ್ಯಾನವರಿ ತಿಂಗಳಿನ ಅಂತ್ಯದೊಳಗಾಗಿ ಧಾರವಾಡ ಲಿಂಗಾಯತ ಎಜ್ಯುಕೇಶನ್ ಫಂಡಿನ ಸೆಕ್ರೆಟರಿಗಳ ಕಡೆಗೆ ಕಳುಹಿಸಿಕೊಡತಕ್ಕದ್ದು.

ಈ ತರಾವನ್ನು ಮಿ|| ಸಿದ್ಧಪ್ಪಾ ತೋಟಪ್ಪಾ ಕಂಬಳಿ ವಕೀಲ ಹುಬ್ಬಳ್ಳಿ ಇವರು ಸೂಚನಾರೂಪದಿಂದ ಸಭೆಯಲ್ಲಿ ತರಲು, ಇದಕ್ಕೆ ಮಿ|| ಗುರುಶಾಂತಪ್ಪ ಅಣ್ಣಾ ಉಮ್ಮರಜಿ ಸೊಲ್ಲಾಪೂರ ಮತ್ತು ಮಿ|| ಸಂಗನಗೌಡ ಪಾಟೀಲ ವಕೀಲ ಗದಗ ಇವರು ಅನುಮೋದನ ಕೊಡಲು, ಅದು ಸರ್ವಾನುಮತದಿಂದ ಪಾಸಾಯಿತು.

೧೪ ನೇ ತರಾವು:—ಮುಂದಿನ ಖಾನೇಸುಮಾರಿಯ ಕಾಲಕ್ಕೆ ೪ ನೇ ಕಾಲಮ್ಮಿನಲ್ಲಿ, ಧರ್ಮ ಎಂಬ ಸದರಿನ ಕೆಳಗೆ ಲಿಂಗಾಯತ ಅಥವಾ ವೀರಶೈವ ಎಂದು “ಮತ್ತು ೮ ನೇ ಕಾಲಮಿನಲ್ಲಿ, ಜಾತ ಈ ಸದರಿನ ಕೆಳಗೆ ತಮ್ಮಲ್ಲಿ ರೂಢವಿದ್ದ ವರ್ಗಗಳ ಹೆಸರುಗಳನ್ನು ಬರೆಯಬೇಕು” ಮತ್ತು ಆಯಾ ಸರಕಾರದವರಿಗೆ ಈ ಸಂಗತಿಯನ್ನು ತಿಳಿಸಬೇಕು ಈ ಬಗ್ಗೆ ಯೋಗ್ಯ ಪ್ರಯತ್ನಗಳನ್ನು ಆಯಾ ಪ್ರಾಂತದ ಸೆಕ್ರೆಟರಿಗಳು ತಮ್ಮ ತಮ್ಮ ಭಾಗಗಳಲ್ಲಿ ಮಾಡತಕ್ಕದ್ದು.

ಈ ತರಾವನ್ನು ಸೂಚನಾರೂಪದಿಂದ ಮಿ|| ಸಿದ್ಧರಾಮಪ್ಪಾ ಅಣ್ಣಾ ಪಾವಟೆ ವಕೀಲ ಹುಬ್ಬಳ್ಳಿ ಇವರು ಸಭೆಯಮುಂದೆ ತರಲು, ಅದಕ್ಕೆ ಮಿ|| ತಮ್ಮಣ್ಣಪ್ಪ ಅಣ್ಣಾ ಚಿಕ್ಕೋಡಿ ಇವರು ಅನುಮೋದನ ಕೊಡಲು, ಅದು ಸರ್ವಾನುಮತದಿಂದ ಮಂಜೂರಾಯಿತು.

ಈ ಮೇರೆಗೆ ೧೪ ತರಾವುಗಳು ಪಾಸಾದ ಮೇಲೆ, ರಾ|| ರಾ|| ಬಸಟ್ಟೆಪ್ಪ ಮುತ್ತೂರು, ತಮ್ಮಣ್ಣಪ್ಪ ಚಿಕ್ಕೋಡಿ ಇವರು ವ್ಯಾಪಾರ ಈ ವಿಷಯದ ಮೇಲೆ ಭಾಷಣಮಾಡಿದರು. ಮತ್ತೂ ಇನ್ನು ಕೆಲವು ವಿಷಯಗಳು ಚರ್ಚೆಗೆ ತರಲ್ಪಡತಕ್ಕವಿದ್ದು, ಅವುಗಳ ಬಗ್ಗೆ ನಿಶ್ಚಯಾತ್ಮಕ ತರಾವುಗಳು ಆಗ ಮಾಡಲವಕಾಶವಿಲ್ಲದುದರಿಂದ ಅವು ಮುಂದೆ ಹಾಕಲ್ಪಟ್ಟವು. ಮತ್ತು ಮುಂದಿನ ಮಹಾಸಭೆಯ ಬಗ್ಗೆ ಬೇರೆ ಬೇರೆ ಭಾಗಗಳ ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರರು ತಮ್ಮಲ್ಲಿ ಯತ್ನಮಾಡಿ ಜೂನ ತಿಂಗಳಿನ ಆರಂಭದೊಳಗಾಗಿ ಅದರಬಗ್ಗೆ ನಿರ್ಧರಿಸಬೇಕೆಂದು ಗೊತ್ತಾಯಿತು.

ತರುವಾಯ ಸಭೆಯ ಅಧ್ಯಕ್ಷರು, ಈ ಸಭೆಯನ್ನು ವಿಜಾಪುರಸ್ಥರು ವಿಶೇಷ ಉತ್ಸುಕತೆಯಿಂದ ನೆರೆಯಿಸಿ, ಸಭೆಯ ಕೆಲಸಗಳನ್ನು ಸಮರ್ಪಕವಾಗಿ ಜರುಗಿಸಿ, ಬಂದ ಸಭಾಸದರನ್ನು ಒಳ್ಳೇ ಆದರಣೆಯಿಂದ ಮನ್ನಿಸಿ, ಜಯಶೀಲರಾದದ್ದನ್ನು ನೋಡಿ ನಮಗೆ ಅತಿಶಯ ಆನಂದವಾಗುತ್ತದೆ. ಮತ್ತು ಶ್ರೀಯುತ ಫಕೀರಪ್ಪ ಗು. ಹಳಕಟ್ಟಿ ಇವರು ಸಭೆಯ ಕೆಲಸಗಳನ್ನು ಮನಃಪೂರ್ವಕವಾಗಿ ಮಾಡಿದ್ದನ್ನು ನೋಡಿ ಅತಿಶಯ ಸಂತೋಷವಾಗುತ್ತಿದೆ. ಇವರಲ್ಲದೆ ವಿಜಾಪುರ ಜಿಲ್ಹೆಯಲ್ಲಿರುವ ಶ್ರೀಮಂತರು ಈ ಕೆಲಸಕ್ಕೆ ನೆರವಾಗುವುದನ್ನು ಕಂಡು ನಮಗೆ ಇಮ್ಮಡಿ ಹರ್ಷವಾಗುತ್ತದೆ ಎಂದು ಹೇಳಿ, ಸಭೆಯ ಕೆಲಸಕ್ಕಾಗಿ ತಮ್ಮ ಈ ವಿಶಾಲವಾದ ಮತ್ತು ಭವ್ಯವಾದ ಕಟ್ಟಡವನ್ನು ಕೊಟ್ಟುದಕ್ಕಾಗಿ ಮ|| ರಾ|| ರಾ|| ರೇವಣಸಿದ್ದಪ್ಪ ಅಣ್ಣ ಜಮ್ಮಾ ಸೊಲ್ಲಾಪುರ ಇವರ ಉಪಕಾರವನ್ನು ನೆನಿಸಿ, ಮತ್ತು ಈ ಸಭೆಯನ್ನು ನೆರೆಯಿಸಿದ್ದಕ್ಕಾಗಿ ರಾ|| ರಾ|| ಮುದಿಗೌಡಪ್ಪ ಪಾಟೀಲ ಮೊದಲಾದ ಸಮಸ್ತ ವಿಜಾಪುರ ವೀರಶೈವ ಸದ್ಗೃಹಸ್ಥರ ಉಪಕಾರವನ್ನು ಸ್ಟ್ಯಾಂಡಿಂಗ್ ಕಮಿಟಿಯವರ ವತಿಯಿಂದ ಮತ್ತೊಮ್ಮೆ ಸ್ಮರಿಸಿ, ಇಂಗ್ಲೆಂಡಿನ ಪ್ರಭುಗಳೂ ಮತ್ತೂ ಹಿಂದೂಸ್ಥಾನದ ಬಾದಶಹರೂ ಆದ ಪಂಚಮ ಜಾರ್ಜ್ ದೊರೆಗಳವರ ಹೆಸರಲ್ಲಿ ಮೂರಾವೃತ್ತಿ ಜಯಘೋಷಮಾಡಿ ಸಭೆಯ ಕಾರ್ಯವನ್ನು ಸಮಾಪ್ತಿಗೊಳಿಸಿದರು.

ಮೇಲೆ ವಿವರಿಸಿದ ಮೇರೆಗೆ ಸ್ಟ್ಯಾಂಡಿಂಗ್ ಕಮಿಟಿಯ ಕಾರ್ಯಗಳು ತೀರಿದ ಬಳಿಕ, ಮ|| ರಾ|| ರಾ|| ಸಿದ್ಧರಾಮಪ್ಪ ದುಂಡಪ್ಪ ಅಣ್ಣ ಪಾವಟೆ, ಬಿ. ಎ., ಎಲ್‌ಎಲ್. ಬಿ., ವಕೀಲ ಹುಬ್ಬಳ್ಳಿ ಇವರ ಅಧ್ಯಕ್ಷತೆಯ ಕೆಳಗೆ ಶ್ರೀಮದ್ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯ ಸಭಾಸದರ ಸ್ಪೆಷಲ್ ಮೀಟಿಂಗ್ ಕೂಡಿಸಲ್ಪಟ್ಟಿತು. ಆಕಾಲಕ್ಕೆ ಮೈಸೂರಿನ ದಿವಾನರು ನಮ್ಮ ವೀರಶೈವ ಸಮಾಜಕ್ಕೆ ಒಂದು ನಿಂದ್ಯತಮವಾದ ಉಪಮೆಯನ್ನು ಕೊಟ್ಟು ಅವರ ಮನಸ್ಸಿಗೆ ನೋವನ್ನುಂಟುಮಾಡಿದ್ದರ ಸಂಬಂಧವಾಗಿ ೩ ನಿರ್ಣಯಗಳು ಮಾಡಲ್ಪಟ್ಟವು. (೧) ಈ ತೆರದ ನಿಂದ್ಯ ಉಪಮೆಯನ್ನು ಕೊಟ್ಟು ವೀರಶೈವ ಸಮಾಜಕ್ಕೆಲ್ಲಾ ನೋವನ್ನುಂಟು ಮಾಡಿದ್ದಕ್ಕೆ ದಿವಾನರಿಗೆ ಒಂದು ನಿಷೇಧ ಪತ್ರವನ್ನು ಕಳುಹಿಸುವುದು. (೨) ದಿವಾನರ ಈ ಬಗೆಯ ವರ್ತನದ ಬಗ್ಗೆ ಮಹಾರಾಜರವರು ಯೋಗ್ಯ ವಿಚಾರಣೆ ಮಾಡಬೇಕೆಂದು ಅವರನ್ನು ಪ್ರಾರ್ಥಿಸುವುದು. (೩) ಮೈಸೂರು ಮತ್ತು ಬೆಂಗಳೂರು ಸಂಸ್ಕೃತ ಕಾಲೇಜುಗಳಲ್ಲಿ ವೀರಶೈವ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಬಗ್ಗೆ ಮೈಸೂರು ಸರಕಾರದವರನ್ನು ಪ್ರಾರ್ಥಿಸುವುದು.

ಈ ಮೇರೆಗೆ ೩ ನಿರ್ಣಯಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು.

ಈ ಪ್ರಕಾರ ನಿರ್ಣಯಗಳಾದ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು.

ಉತ್ತಮ ಗ್ರಂಥಗಳು.

3

ಶಿವಪಂಚಸ್ತವ:- ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ, ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.- ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.- ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.- ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು,
ಹೊಸಮಠ ಮೈಸೂರು.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು. 7

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

ರಾಸ್ಕೋಪ ಸಿಸ್ಟಂ ಪೇಟೆಂಟ ಲೀವರ ಜ್ಯೂವೆಲ್ಡ ವಾಚ್



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಅಯಿದು (೫) ವರುಷಗಳು ಗ್ಯಾರೆಂಟು.

ಕ್ರಯ ರೂ. ೨-೮-೦ ವಿ. ಪಿ. ಚಾರ್ಜ ರೂ. ೦-೪-೦.

ಘುಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ ೦-೮-೦ ವಿ. ಪಿ. ಚಾರ್ಜ ೦-೪-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ. ನಂಬರು ೨೦ ಸಿಂಗಣ್ಣರ್ ಬೀದಿ, ವಾಲಾಟಾಕ್ಸ್ ರೋಡ್ಡು, ಮದರಾಸು.

ನೇಟೀವ್ ಡಾಕ್ಟರ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

27

೧. ಸ್ವರ್ಣಗಂಗಾಧರಮಾತ್ರೆ.— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೩ ಆ.

ಸರ್ವಮೋಹರಾಜಾಂಗ ರಬ್ಬರ್ ಎಣ್ಣೆ.— ಈ ಎಣ್ಣೆಯನ್ನು ಬೆಳಿಗ್ಗೆ ಮತ್ತೂ ಸಾಯಂಕಾಲ ೧ ತೋಲದಂತೆ ೨೦ ದಿನಗಳವರಿಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೆಬ್ಬು, ವ್ರಣ, ಕುಷ್ಠ, ಮಹೋದರ, ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೩ ಆಣೆ.

೩. ಬಾಲಸಂಜೀವಿನೀಮಾತ್ರೆ.— ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೩ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ.— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೩ ಆಣೆ.

೭. ಮಹಾದ್ರಾಕ್ಷಾದಿರಸಾಯನ.— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂತಿಮೇಹ, ಮೂತ್ರಕೃಚ್ಛ್ರ ಅಸ್ತಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕುಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ, ರೂಪಾಯಿ ೩. ಟಪ್ಪಾಲ್‌ಖರ್ಚು ೩ ಆ ಆಣೆ.

೮. ಮರೀಚಾದಿಲೇಹ್ಯ.— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚು ೩ ಆಣೆ.

೯. ಮಹಾಕುಂಡಳ್ಯಾದಿರಸಾಯನ.— ಇದರಿಂದ ಕ್ಷಯ ಕಾಶಿ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೩ ಆ.

೧೦. ವಿಳಂಗಸಾರಾವಲ್ಲಿಕೆ.— ಇದರಿಂದ ಗಂಟಲು ಉರಿಸುಸ್ತು ಸಂಕಟ, ವಮನವಿಲ್ಲದೆ ೪–೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶಃ ನೀರು ಎರೆಯುವಾಗ ಜ್ಞಾನ ತಪ್ಪುವುದು, ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಬಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಪುರಬತ್ತುಗಳೂ, ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚೆನ್ನಬಸಪ್ಪ ಅಂಡ್‌ಸನ್ಸ್,
ಚೆನ್ನಪಟ್ಟಣ, ಬೆಂಗಳೂರು, ಡಿಸ್ಟ್ರಿಕ್ಟ್.

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕ ವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲ ದಿಂದ ವಿದ್ಯಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂ ವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀ ರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊ ಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧–೨–೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧–೨–೦ ಪೋಸ್ಟ್ ಖರ್ಚು ೦–೪–೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸು ವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪ ಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಮೈ ಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗ ತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾ ಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District

66 ### ಪದ್ಮರಾಜ ಪುರಾಣಂ.

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಅಣೆ.

ಬಿ. ಮಲ್ಲಾರಾಧ್ಯರು,
ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ ಬಿ. ಬಸವಾರಾಧ್ಯರು,
ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್,
ಬೆಂಗಳೂರು.

ಉತ್ತಮ ಗ್ರಂಥಗಳು.

107

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧–೪–೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧–೮–೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧–೩–೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧–೩–೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂಸೇರಿವೆ.

ಸೌಂದರ ಪುರಾಣ — ೦–೧೩–೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಆಣೆ. ಪ್ರಾಣಾ ನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡ
ಮೈಸ

೧೯೧೧ನೇ ಇಸವಿ ಫೆಬ್ರುವರಿ ತಾ॥ ೨೦ ರಿಂದ ೧ ಫೆಬ್ರುವರಿ ತಾ॥ ೨೬ ರವರಿಗೆ ಸಲ್ಲುವ ಶಾಲಿವಾಹ ೧೮೩೩ ನೇ ಸಾಧಾರಣ ಸಂವತ್ಸರದ ಮಾಘ ಬ॥ ಸ ಯಿಂದ ಮಾಘ ಬ॥ ತ್ರಯೋದಶಿವರೆಗಿನ ಸಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
20	ಸೋ	ಸ	32-2	ವಿಶಾಖ	36-58
21	1 ಮಂಗ	ಅ	37-15	ಅನೂರಾ	43-26
22	ಬುಧ	ನ	42-40	ಜ್ಯೇಷ್ಠ	59-56
23	ಗುರು	ದ	47-44	ಮೂಲ	54-45
24	2 ಶುಕ್ರ	ಏ	50-8	ಪೂರ್ವಾ	60-10
25	3 ಶನಿ	ದ್ವಾ	55-32	ಪೂರ್ವಾ	1-2
26	4 ಭಾನು	ತ್ರ	57-47	ಉತ್ತರಾ	6-22

(1) ಸೀತಾದೇವಿವ್ರತಂ, (೨) ಕುಳ್ರಾಂ ಕಾದಶಿ (೩) ಹರಿವಾಸರ ಜೀಯಾರ್ ತಿರುವಕ್ಷ (೪) ಪ್ರದೋಷಃ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಣೋದ್ಯತಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸದ್ಭಾಗ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾಸ್ಯಕಂಪ್ರೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ಗ ೧೯೧೧ ನೇ ಇಸವಿ ಮಾರ್ಚಿ ತಾರೀಖು ೬ ನೇ ಸೋಮವಾರ. [ಸಂಚಿಕೆ ೧೦

ಊದಬತ್ತಿಗಳು.

52

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲೆ ತೊಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕ್ಕೆ ೧೨ ಆಣೆ; ಶಾದಂಗ ಪೊಟ್ಣ ೧ಕ್ಕೆ ೪ ಆಣೆ; ಧೂಪದ ಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

41 ಜೇರಿಗೆ ಬಸವಲಿಂಗಪ್ಪನ ಪುಸ್ತಕಗಳು.

ಬೆಲೆ ಬಹುಳ ಕಡಿಮೆ. ನೋಡಿ. ನೋಡಿ. ಬಿಡಬೇಡಿ.

ಪದ್ಮಾವತಿಕಥೆ:— ವೀರಶೈವವಚನನಾಟಕ. ೯೮ ಡೆಮ್ಮಿ ಪುಟ. ಕ್ರಯ ೦-೨-೦. ವಿ. ಪಿ. ಯಿಂದ ೦-೪-೦

ವೀರಶೈವಮತವಿಷಯಸಾರ (೨ ನೇ ಭಾಗ) ಕ್ರಯ ೦-೨. ವಿ. ಪಿ. ಯಿಂದ ೦-೪-೦.

ಷಟ್‌ಸ್ಥಲಚಿಂತಾರತ್ನ.- ಕ್ರಯ ೦-೨-೦. ವಿ. ಪಿ. ಯಿಂದ ೦-೪-೦.

ವಿಳಾಸ.— ಬೆಂಗಳೂರು ಸಿಟಿ ಅರಳೇಪೇಟೆ. ಜೇರಿಗೆ ನಂಜಪ್ಪನವರ ಮಗ ಬಿ. ಜಿ. ಬಸವಲಿಂಗಪ್ಪನವರಿಗೆ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೨-೫-೦
ಕರಸ್ಪಾಂಡೆನ್ಸ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರಿಗೆ ೧-೧೦-೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ಕ್ಕೆ ೧। ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

51 ಹೊಸ ಪುಸ್ತಕಗಳು.

ನೂತನಗೃಹಪ್ರವೇಶ, ಪಟ್ಟಾಧಿಕಾರ, ಲಿಂಗಧಾರಣ ಈ ಮೂರು ವಿಧಿಗಳು ಟೀಕಾ ಸಮೇತವಾಗಿ ಒಂದು ಪುಸ್ತಕದಲ್ಲಿ ಮುದ್ರಿತಗಳಾಗಿರುತ್ತವೆ. ಬೆಲೆ ಪ್ರತಿ ೧ಕ್ಕೆ ವಿ. ಪಿ. ೧೨ ಆಣೆ. ಶ್ರೀಚೆನ್ನಬಸವೇಶ್ವರವಿರಚಿತಮಾದ ಶಿವಾನುಭವಶಾಸ್ತ್ರ ಕನ್ನಡ ವಾಕ್ಯರೂಪಾಗಿದೆ. ಬೆಲೆ ಪ್ರತಿ ೧ಕ್ಕೆ ವಿ. ಪಿ. ೧೫ ಆಣೆ. ವೀರಶೈವದಶಕರ್ಮವಿಧಿ ಬೆಲೆ ಪ್ರತಿ ೧ಕ್ಕೆ ವಿ. ಪಿ. ೮ ಆಣೆ. ಶಿವಸ್ತುತಿಮಣಿಮಾಲಾ ಬೆಲೆ ಪ್ರತಿ ೧ಕ್ಕೆ ವಿ. ಪಿ. ೬ ಆಣೆ. ರಾಜಶೇಖರ ೧೩-೧೪ ಆಶ್ವಾಸ ಪ್ರತಿಪದಾರ್ಥ ತಾತ್ಪರ್ಯಸಹಿತವಾಗಿದೆ. ಸರ್ವರಿಗೂ ಸುಲಭವಾಗಿ ತಿಳಿಯುವಂತೆ ಇದೆ.

ಕ್ರಯ— ಪ್ರತಿ ೧ಕ್ಕೆ ವಿ. ಪಿ. ೧-೩-೦.

ಸಟೀಕ ವೀರಶೈವ ಅಂತ್ಯೇಷ್ಟಿವಿಧಿ ಬೆಲೆ ಪ್ರತಿ ೧ಕ್ಕೆ ವಿ. ಪಿ. ೮ ಆಣೆ. ವಿಳಾಸ:— **ಕೆ. ಶಾಂತವೀರಪ್ಪ,**
ದೊಡ್ಡಪೇಟೆ, ಬೆಂಗಳೂರು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

41 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ_

ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

12

ಲೋಕಾಮಯಹಾರ ಕಸ್ತೂರೀ ಮಾತ್ರೆ.

ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ(ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ ಇನ್ನೂಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನುಸೇವಿಸುತಿರುವವರು ಖಂಡಿತವಾಗಿಯೂ ಪ್ಲೇಗಿನಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೮ ಕುಪ್ಪಿವರೆಗೆ ಪೋಸ್ಟೇಜು ೪ ಆ.

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರೆಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ;— ಸೀತಾರಾಘವವೈದ್ಯಶಾಲಾ,
ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
30 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬ ೦-೪-೦. ತೊಲೆ ೧ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

ಸೌಗಂಧಿಕಾಪರಿಣಯ.

(ಕಳೆದವಾರದ ಶೇಷ.)

ಈ ಕುಸುಮಮಂ ಮುಡಿಯಲ್ಲಿ ಮುಡಿದರೆ ಯಕ್ಷ ರಾಕ್ಷಸ ಪಿಶಾಚಾದಿಗಳ ಭಯವು ಪರಿಹೃತವಾಗುವುದು; ಈ ಕುಸುಮವು ಯೆಂದಿಗೂ ಕೆಂದದೆ ಸೌರಭ್ಯಗುಣಗಳಿಂ ಯುಕ್ತವಾಗಿರುವುದರಿಂ ಅಳಕಾದೇವಿಯು ಮುಡಿಯುವುದಕ್ಕೆ ಯೋಗ್ಯವಾಗಿರುವುದು; ಈ ಕುಸುಮವು ಇಂದ್ರಾದಿಗಳ ಅಂತಃಪುರಕ್ಕೆ ಯೋಗ್ಯವಾದುದು ಯೆಂದು ಹೇಳಿದ ವಾಕ್ಯಮಂ ಕೇಳಿ, ಸುಗಂಧರಾಜನು ಅವುಗಳಂ ಸ್ವೀಕರಿಸಿ, ವಿಶ್ರಮಿಸಿಕೊಂಡು ಮನದಣಿವಂತೆ ಸರೋವರವನ್ನೀಕ್ಷಿಸುತ, ಅಲ್ಲಿಯ ವನದಲ್ಲಿ ಮೆಲ್ಲಮೆಲ್ಲನೆ ಸಂಚರಿಸುತ, ಮೃಗಪಕ್ಷಿಗಳನ್ನವಲೋಕಿಸುತ ಮಧುರವಾದ ಶುಕಶಾರಿಕಾದಿ ಧ್ವನಿಗಳಂ ಕಿವಿಗಿಂಪಾಗಿ ಕೇಳುತಲಿರುವ ಸಮಯದೊಳ್ ಯಕ್ಷಾಧಿಪನು ಎಲೈ ರಸಿಕಶಿಖಾಮಣಿಯಾದ ರಾಜೇಂದ್ರನೆ—ಇದು ಕುಬೇರನು ವಿಹರಿಸುವ ರತ್ನಶಾಲೆಯು, ಇದು ದೇವಿಯರು ಯಿಳಿಯುವ ಗೃಹವು, ಇದು ನಳಕೂಬರನ ಕ್ರೀಡಾಸದನವು, ಇವೆಲ್ಲವೂ ದೇವಿಯರ ಲೀಲಾಹಂಸೆಗಳು, ಇದು ಸಖೀಯರುಗಳ ವಿಲಾಸಸ್ಥಾನವು, ಇವು ಮಣಿಭದ್ರಾದಿ ಭೃತ್ಯರುಗಳಿಳಿಯುವ ಕೈಸಾಲೆಗಳು, ಇವು ನರ್ತನವಂ ಮಾಡುವುದಕ್ಕೆ ಬರುವ ರಂಭಾದಿ ಅಪ್ಸರಸ್ತ್ರೀಯರುಗಳಿಳಿಯುವ ಬಿಡದಿಗಳು, ಈ ವೃಕ್ಷಗಳು ಸಂತಾನವೃಕ್ಷದ ಸಂತತಿಯಲ್ಲಿ ಸಂಭೂತವಾದುದರಿಂ ಬೇಡಿದವರಿಗೆ ದಿವ್ಯಾನುಲೇಪನಮಾಲ್ಯ ತಾಂಬೂಲಾದಿಗಳಂ ಕೊಡುವುವು, ಇವು ದೇವಿಯರ ಅಲಕ್ತಕ ರಂಜಿತವಾದ ಚರಣಸ್ಪರ್ಶದ ಮಹಿಮೆಯಿಂದ ಸರ್ವದಾ ಪುಷ್ಪಯುಕ್ತವಾಗಿ ಪರಿಮಳದಿಂ ಕೂಡಿರುವುವು, ಮತ್ತೂ ಮಂದಾರಶಾಖೆಯಿಂದುದಯಿಸಿರುವ ಈ ವೃಕ್ಷಗಳು ಬೃಂದಾರಕ ನಿತಂಬಿನೀ ಬೃಂದದ ಆಲಿಂಗನದಿಂ ಪರವಶಗಳಾಗಿ, ಅವರ ಅಂಗರಾಗದಿಂದನುಲಿಪ್ತಗಳಾಗಿ ಸಡಿಲುತಿರುವ ಪುಷ್ಪಗಳನ್ನರಿಯದೆ ಸ್ತಬ್ಧಗಳಾಗಿರುವುವು. ಇತ್ತಲಾ ದೂರದಲ್ಲಿ ಕಾಣಿಸುವುದೇ ನರನಾರಾಯಣಾಶ್ರಮವು, ಇದುಕೋ ಪೂರ್ವದಿಕ್ಕಿನಲ್ಲಿ ಪೊಂಬಣ್ಣದಿಂ ಥಳಥಳಿಸುವುದೇ ಆಂಜನೇಯ ನಿವಾಸಯೋಗ್ಯವಾದ ಸುವರ್ಣ ಕದಳೀವನವು, ಇದರ ಮೇಲುಭಾಗದಲ್ಲಿ ನಿಂತು ನೋಡಿದರೆ ಪರಮೇಶ್ವರನಿಗೆ ನಿವಾಸಸ್ಥಾನವಾದ ಕೈಲಾಸಪರ್ವತವು ಕಾಣಿಸುವುದು, ಇವೆಲ್ಲವೂ ಹರಿವರ್ಷವೆಂಬುವುದು ಯೆಂದು ಹೇಳುವ ಸಮಯದಲ್ಲಿಯೇ ಸೂರ್ಯ್ಯನ ರಥವು ಅಸ್ತಾಚಲಶಿಖರವನ್ನಲಂಕರಿಸುತ್ತಿರಲಾ ತರುಣಿಯ ತನುಕಾಂತಿಯಿಂದಲ್ಲದ್ದ ವಜ್ರಮಣಿನಿಕರಂಗಳು ಮರಕತರಾಶಿಯಂತಾಗಲು, ಮರಕತಂಗಳು ಮಹಾನೀಲಮಣಿಗಳಂತೆ ಕಾಣಿಸಲು, ಪುಷ್ಪರಾಗವು ಗೋಮೇಧಿಕ ವರ್ಣವಾಗಲು, ಗೋಮೇಧಿಕವು ಗಾರುತ್ಮತರತ್ನಮಂ ಪೋಲುತ್ತಿರಲು ಗೈರಿಕಭೂಮಿಯು ಶಾದ್ವಲಭೂಮಿಯಂತಾಗಲು, ಗಿರಿನದೀಜಲಂಗಳು ಎಳೆಹಸರಾಗಲು, ಆಗ ತರುಣಿಯು ಸಂಧ್ಯಾರಾಗಲಕ್ಷ್ಮಿಯೊಡನೆ ಕೇಳಿಯಂ ಮಾಡಿದುದರಿಂದ ಸಂಧ್ಯಾಲಕ್ಷ್ಮಿಯು ಕುಚಕುಂಭಕುಂಕುಮಂಗಳಿಂ ಪಂಕಿಲವಾದ ತನ್ನ ತನುವಂ ಮಜ್ಜನವಂ ಗೈಸಲೋಸುಗವೋ ಯೆಂಬಂತೆ ಸಮುದ್ರದೊಳ್ ಮಗ್ನನಾಗಲು; ಇಂತಿರುವಲ್ಲಿ ಸುಗಂಧಮಹಾರಾಜೇಂದ್ರನು ಮಹಾಮಾತ್ಯನಾದ ಸುಮತಿಯಿಂದೊಡಗೂಡಿ, ಸುಗಂಧಯುಕ್ತನಾದ ಗಂಧವಹನಿಂದತಿಶೀತಳವಾದ ಗಂಧಮಾದನವೆಂಬ ಮಹಾಪರ್ವತದ ಪ್ರಾಂತದಲ್ಲಿರುವ ಸೌಗಂಧಿಕಾ ಸರೋವರದಲ್ಲಿ ಸಾಯಂಕಾಲದ ಸಂಧ್ಯಾನಿಯಮಗಳನ್ನೆರವೇರಿಸಿ, ಇಷ್ಟದೇವತೆಯಾದ ಜಗದೀಶ್ವರಿಯ ಪಾದಪಂಕಜಗಳಂ ಧ್ಯಾನಿಸಿ, ಛಾಯಾಗುಪ್ತನು ತಂದು ಒಪ್ಪಿಸಿದ್ದ ಅಮೃತಸದೃಶವಾದ ದಿವ್ಯಫಲಗಳಂ ಸವಿದು, ಯಕ್ಷಾಧಿಪನಿಂ ರಚಿಸಲ್ಪಟ್ಟ ತಳಿರುಗಳ ತಲ್ಪದಲ್ಲಿ ಸುಖನಿದ್ರೆಯಂಗೈಯುತ ಆ ರಾತ್ರಿಯಂ ಕಳೆದನೆಂಬಲ್ಲಿಗೆ ಹದಿನಾಲ್ಕನೆಯ ಆಶ್ವಾಸವು ಸಂಪೂರ್ಣವು.

—:ಹದಿನೈದನೆಯ ಆಶ್ವಾಸವು:—

ಅನಂತರದಲ್ಲಿ ಅತ್ತಲಾ ಪ್ಲಕ್ಷದ್ವೀಪದೊಳ್ ವಿಮಲಪುರಿಯಲ್ಲಿ ಅರಿಷ್ಟಸೂಚಕವಾದ ಭೂಕಂಪವೂ, ಕೆಂಡಗಳ ಮಳೆಯೂ, ಮತ್ತೂ ಧೂಮಕೇತುಗಳ ಆವಿರ್ಭಾವವೂ ಈಪರಿಯಾಗಿ ಪರಿಪರಿಯಾದ ಅಪಶಕುನಗಳು ಉಂಟಾದುದಂ ಆ ಪುರದಲ್ಲಿ ವಾಸಗೊಂಡಿರುವ ರಾಕ್ಷಸರುಗಳೆಲ್ಲರೂ ಕಂಡು, ಅಚ್ಚರಿಗೊಂಡು ಭಯಸಂಭ್ರಾಂತರಾಗುತ್ತಿರಲದನ್ನೋಡಿ, ಆ ದ್ವೀಪವನ್ನಾಕ್ರಮಿಸಿಕೊಂಡಿರುವ ಉಗ್ರಬಾಹುವು ತನ್ನ ಮಂತ್ರಿಯಾದ ಶಂಕುಕರ್ಣನಂ ಕುರಿತು, ಎಲೈ ಮಂತ್ರಿವರ್ಯ್ಯನೇ ಇಷ್ಟು ದಿನವೂ ಇಲ್ಲದ ಅಪಶಕುನಂಗಳು ಇಂದು ಕಾಣುತ್ತಲಿರುವುದು: ಇದರ ಪರಿಯಂ ಆಲೋಚಿಸಿ ಪೇಳುವನಾಗು ಯೆನಲು, ಅದಂ ಕೇಳಿ ಶಂಕುಕರ್ಣನು,—ಎಲೈ ರಾಕ್ಷಸರಾಯನೆ ಅಪಶಕುನಗಳ ವಿವರವಂ ಆಲೋಚಿಸಿ ನೋಡಿದರೆ ನಮ್ಮ ರಾಕ್ಷಸರ ಕುಲಕ್ಕೆ ಮಹದ್ವಿಪತ್ಸೂಚಕವಾಗಿ ಕಾಣುತ್ತಲಿದೆ; ಆದುದರಿಂ ಯಾವ ಕಾರ್ಯ್ಯವಂ ಮಾಡಬೇಕಾದರೂ ಸಾವಧಾನಚಿತ್ತನಾಗಿ ಆಲೋಚಿಸಿ ಮಾಡಬೇಕಲ್ಲದೆ ದುಡುಕಲಾಗದು; ಇದರಿಂದ ಆ ಅಪಶಕುನಗಳು ಶಾಂತವಾಗುವುವೆಂದು ಬಿನ್ನವಿಸಿ, ತನ್ನ ಮನದಲ್ಲಿ ನಾನಾವಿಧವಾದ ವಿಕಲ್ಪಗಳನ್ನೆಣಿಸುತ್ತಿರಲು,

(ಸಶೇಷ.)

ಸ್ತ್ರೀವಿದ್ಯಾಭ್ಯಾಸ.

(ಹಿಂದಣ ಶೇಷ.)

ಇಂತಹ ರಕ್ಷಣೆಯ ಕ್ರಮವನ್ನು ತಿಳಿಯುವುದಕ್ಕೆ ಆರೋಗ್ಯಶಾಸ್ತ್ರಾಭ್ಯಾಸವು ಬೇಡವೆ? ನಮ್ಮ ಭರತಖಂಡದಲ್ಲಿ ವಿದ್ಯಾವಿಹೀನೆಯರಾದ ಅನೇಕ ಸ್ತ್ರೀಯರ ಅವಿವೇಕದಿಂದಲೇ ಎಷ್ಟೋ ಶಿಶುಗಳು ಅಕಾಲಮೃತ್ಯುವಿಗೆ ತುತ್ತಾಗಿ ಲೋಕನಾಶಕ್ಕೆ ಹೇತುವಾಗಿದೆ. ಪತಿಯ ಆಯವ್ಯಯದ ವಿಚಾರವೇ ಗೊತ್ತಿಲ್ಲದವಳು ಪತಿಯ ಮನೋವರ್ತಿನಿಯಾಗಿ ಹೇಗೆ ವರ್ತಿಸುವಳು? ಇದಕ್ಕಾಗಿ ಅವಳಿಗೆ ಲೆಕ್ಕದ ವಿಷಯವು ಗೊತ್ತಿರಬೇಡವೆ? ತಾರತಮ್ಯ—ಮರ್ಯ್ಯಾದೆ ಮುಂತಾದುವೆಲ್ಲವೂ ವಿದ್ಯಾವತಿಗೇ ತಿಳಿಯತಕ್ಕವುಗಳಾಗಿವೆ. ಆದುದರಿಂದ ಇಹದ ಸಂಸಾರ ಸುಖದ ನೆಲೆಗೂ, ಪರಗತಿಸಾಧನೆಗೂ ವಿದ್ಯಾಭ್ಯಾಸವು ಬೇಕು. ಇದು ಬೇಡವೆಂದು ತಿಳಿದಿರುವುದು ಕೇವಲ ಮೂಢತನವೇ ಸರಿ.

ಇನ್ನು ಸ್ತ್ರೀವಿದ್ಯಾಭ್ಯಾಸದಿಂದ ಅನೇಕ ನಷ್ಟವುಂಟೆಂದು ವಾದಿಸುವ ಆಕ್ಷೇಪಣೆಯಾದರೂ ಸಯುಕ್ತವಾಗಿರುವುದೇ ಎಂಬುದನ್ನು ವಿಮರ್ಶಿಸುವ. ಈ ಆಕ್ಷೇಪಕ್ಕೆ ಕಾರಣವೇನೆಂದರೆ—ವಿದ್ಯಾವತಿಯಾದ ಸ್ತ್ರೀಯು ಸಾಮಾನ್ಯವಾಗಿ ಸ್ವತಂತ್ರತೆಯನ್ನು ಅಪೇಕ್ಷಿಸಿ ಪತಿಧಿಕ್ಕಾರವನ್ನು ಮಾಡುವುದರಲ್ಲಿಯೇ ತನ್ನ ಪ್ರತಿಭೆಯನ್ನು ವ್ಯಕ್ತಪಡಿಸುವಳೆಂದೂ ದುಷ್ಕಾರ್ಯ್ಯಪ್ರವರ್ತಕಳಾಗುವಳೆಂದೂ ಊಹಿಸಿ ಈ ಆಕ್ಷೇಪಣೆಯನ್ನು ಮಾಡುವರು. ಇದು ನ್ಯಾಯವಾದ ಆಕ್ಷೇಪಣೆಯಾಗಿದ್ದರೂ “ನಸ್ತ್ರೀಸ್ವಾತಂತ್ರ್ಯಮರ್ಹತಿ” ಎಂಬುದನ್ನು ನಾವು ಮರೆಯುವುದಿಲ್ಲ. ಆದರೆ ಸ್ತ್ರೀಯರು ಪಶ್ವಾದಿಗಳಂತೆ ನಮ್ಮ ಅಧೀನದಲ್ಲಿರಬೇಕೆಂದಾಗಲೀ, ಅವರು ನಮ್ಮಲ್ಲಿ ಕುತ್ಸಿತವಾಸಿಯರಂತೆ ವರ್ತಿಸಬೇಕೆಂಬುದಾಗಲೀ ನಮ್ಮ ಉದ್ದೇಶವಾಗಿರುವುದಿಲ್ಲ. ನಮ್ಮ ಸ್ತ್ರೀಯರನ್ನು ನಾವು ನಮ್ಮ ಸ್ನೇಹಿತರಂತೆ ಸಂತೋಷದಿಂದ ಕಾಣಬೇಕೆಂಬುದೇ ನಮ್ಮ ಆರ್ಯ್ಯಧರ್ಮದ ಸಾರವಾಗಿದೆ. ಗೃಹಕ್ಕೆ ಲಕ್ಷ್ಮಿಯ ಸ್ವರೂಪಳಾಗಿಯೂ, ಕೆಲಸಗಳಿಗೆ ಆಚಾರ್ಯ್ಯಸ್ವರೂಪಳಾಗಿಯೂ, ಧರ್ಮಾರ್ಥಕಾಮಂಗಳಲ್ಲಿ ಸುಖವನ್ನು ಅನುಭವಿಸಲು ಸಮಭಾಗಿನಿಯಾಗಿಯೂ ಇರುವ ನಮ್ಮ ರಮಣಿಯರು ದಾಸಿಯರಂತೆ ಕಡೆಗಣಿಸಲ್ಪಡುವುದು ಬಹು[illegible]ವಾಗಿದೆ. ಆದುದರಿಂದಲೇ “ನಸ್ತ್ರೀಸ್ವಾತಂತ್ರ್ಯಮರ್ಹತಿ” ಎಂಬುದರ ಅರ್ಥವು ಬೇರೆ ವಿಧವಾಗಿದೆ. ವಿನಯದಿಂದಲೂ ಲಜ್ಜೆಯಿಂದಲೂ ವರ್ತಿಸಬೇಕೆಂಬುದೇ ಅದರ ತತ್ವಾರ್ಥವು. ಪುರುಷರು ಹಿರಿಯರ ಅನುಜ್ಞೆಯನ್ನು ಶಿರಸಾವಹಿಸಿ ವಿಧೇಯತೆಯಿಂದಿರಬೇಕಾದುದು ನ್ಯಾಯವೆನಿಸಿದ್ದರೆ, ಸ್ತ್ರೀಯು ವಿಧೇಯಳಾಗಿರಬೇಕಾದುದು ನ್ಯಾಯವೇ ಅಲ್ಲವೆ? ಇಂತಹ ಉತ್ತಮ ಗುಣವೆಲ್ಲವೂ ವಿದ್ಯಾಲಾಭದಿಂದಲೇ ಲಭಿಸತಕ್ಕುದಾಗಿರುವುದು. ವಿದ್ಯೆಯಿಂದ ಕೆಟ್ಟಗುಣಗಳು ಬರುವುದಿಲ್ಲ. ವಿದ್ಯಾವಂತರಾದ ಪುರುಷರೂ ಅನೇಕಾವೃತ್ತಿ ತಪ್ಪುದಾರಿಯಲ್ಲಿ ಹೋಗುವರಲ್ಲವೆ? ಹಾಗೆಯೇ ಸ್ತ್ರೀಯರಲ್ಲಿಯೂ ಕೆಲವರು ಹೋಗಬಹುದು. ಇವರು ವಿದ್ಯಾಭ್ಯಾಸದಿಂದ ಕಿಡುಕರಾಗಲಿಲ್ಲ. ಅವರ ಸ್ವಭಾವವೇ ಅದಕ್ಕೆ ಕಾರಣವೆನಿಸಿರುವುದು. ಅಥವಾ ಅಲ್ಪವಿದ್ಯೆಯ ಸಂಸ್ಕಾರದಿಂದಲೂ, ಇಲ್ಲವೇ ಕುತ್ಸಿತವಾದ ಪುಸ್ತಕಾವಲೋಕನದಿಂದಲೂ, ಇಲ್ಲದಿದ್ದರೆ ತಕ್ಕ ಶಿಕ್ಷಣವಿಲ್ಲದುದರಿಂದಲೂ, ಹಾಗಲ್ಲದೆ ಇದ್ದರೆ ದುಸ್ಸಹವಾಸದಿಂದಲೂ ದುರುಳರಾಗಬಹುದು. ಇದನ್ನು ವಿದ್ಯಾಭ್ಯಾಸದಮೇಲೆ ಆರೋಪಿಸುವುದು ತಪ್ಪಾಗಿದೆ. ಪತಿಯನ್ನು ಧಿಕ್ಕರಿಸಿ ಸ್ವೇಚ್ಛೆಯಾಗಿ ವರ್ತಿಸುವುದು ಕುಲಸ್ತ್ರೀಯ ಲಕ್ಷಣವಲ್ಲ. ಅವಳು ನಾರಿಯೂ ಅಲ್ಲ; ಮಾರಿಯೇ ಸರಿ. ಇಂತಹರನ್ನು ದೂರುವುದು ನ್ಯಾಯವೆಂದು ಯಾರುತಾನೇ ಹೇಳಲಾರರು? ಉತ್ತಮವಾದ ವಿದ್ಯಾಭ್ಯಾಸದಲ್ಲಿ ಪತಿಭಕ್ತಿಯನ್ನು ವೃದ್ಧಿಮಾಡುವ ವಿಷಯಗಳ ಉಪದೇಶವಿರುವುದೇ ಹೊರತು, ಗಂಡಸರಿಗೆ ಹಿಂಸೆಯನ್ನುಂಟುಮಾಡಬೇಕೆಂದಾಗಲೀ, ಗಂಡನನ್ನು ತಿರಸ್ಕರಿಸಬೇಕೆಂದಾಗಲೀ ಹಾಸ್ಯಮಾಡಬೇಕೆಂದಾಗಲೀ, ಮನೆಯಲ್ಲಿ ಅವನು ಅಡಿಗೆಯನ್ನು ಮಾಡಿಕೊಂಡು, ಸ್ವೇಚ್ಛೆಯಾಗಿ ತಿರಿಗಿ ಮನೆಗೆ ಬರುವ ನಾರಿಯನ್ನು ಇದಿರುಗೊಂಡು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಬೇಕೆಂದಾಗಲೀ ಹೇಳಿಲ್ಲ. ವಿದ್ಯಾವತಿಯರು ದುಷ್ಕಾರ್ಯ್ಯಪ್ರವರ್ತಕರಾಗುವರೆಂದು ಸಾಧಿಸಲಾಗುವುದಿಲ್ಲ. ವಿದ್ಯಾವತಿಯರಾದ ಸ್ತ್ರೀಯರು ಎಷ್ಟೋ ಪತಿವ್ರತೆಯರಾಗಿ ಮಹನೀಯರಾಗಿರುವುದನ್ನು ನಾವು ಕಾಣಬಹುದು. ವಿದ್ಯಾಹೀನರು ಎಷ್ಟೋ ದುಷ್ಕಾರ್ಯ್ಯದಲ್ಲಿಲ್ಲವೆ? ಒಬ್ಬಿಬ್ಬರು ನೀಚಸ್ತ್ರೀಯರು ವಿದ್ಯಾವತಿಯರಾಗಿ ದುಷ್ಟೆಯರಾಗಬಹುದು. ಆದಮಾತ್ರದಿಂದಲೇ ಸ್ತ್ರೀ ವಿದ್ಯಾಭ್ಯಾಸವನ್ನೇ ದೂಷಿಸುವುದು ಸಹಜವಲ್ಲ. ಸುಖಪ್ರಯಾಣ ಸಾಧನವಾದ ಹೊಗೆಯಬಂಡಿಯು ಯಾರೋ ಒಬ್ಬ ನಡೆಸುವವನ ಅಜಾಗರೂಕತೆಯಿಂದಲೋ ಇಲ್ಲವೆ ಇನ್ನಾವ ಅಪಾಯದಿಂದಲೋ ಒಂದೊಂದುಬಾರಿ ಜನರಿಗೆ ಕೇಡುಕಾಗಿ ಪರಿಣಮಿಸುವುದನ್ನು ನೋಡಿ ಹೊಗೆಯ ಬಂಡಿಯನ್ನೇ ತೆಗೆದುಹಾಕಬೇಕೆಂಬುದು ಉತ್ತಮವಾದ ಅಭಿಪ್ರಾಯವಾಗುವುದಿಲ್ಲ. ಆದುದರಿಂದ ಸ್ತ್ರೀವಿದ್ಯಾಭ್ಯಾಸದಿಂದ ನಷ್ಟವುಂಟೆಂಬುದನ್ನು ನಾವು ಅಂಗೀಕರಿಸಲಾರೆವು. ಉತ್ತಮ ವಿದ್ಯಾಭ್ಯಾಸದಿಂದ ಬೇಕಾದ ಉತ್ತಮ ಫಲಗಳನ್ನು ಪಡೆಯಬಹುದಾಗಿದೆ.

ಇನ್ನು ಕೆಲವು ವಿಚಾರಶೀಲರು ಈ ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ಸ್ವಲ್ಪ ಸಂದೇಹಗ್ರಸ್ತರಾಗಿರುವರು. ಹೇಗೆಂದರೆ—ಸ್ತ್ರೀಯ ದೇಹರಚನೆಯೂ, ಪುರುಷನ ದೇಹರಚನೆಯೂ ಬೇರೆಬೇರೆಯಾಗಿದೆ. ಇಬ್ಬರೂ ಮನುಷ್ಯರೆನಿಸಿದ್ದರೂ, ದೇಹರಚನೆಯ ವ್ಯತ್ಯಾಸದಿಂದ ಪುರುಷರಂತೆ ಸ್ತ್ರೀಯೂ ವಿದ್ಯಾಭ್ಯಾಸಕ್ಕೆ ಹೇಗೆ ಅರ್ಹಳಾಗುವಳು? ಕಲ್ಲು ಎಂಬ ಮಾತ್ರದಿಂದಲೇ ಎಲ್ಲ ಕಲ್ಲುಗಳಲ್ಲಿಯೂ ವಿಗ್ರಹವನ್ನು ಕೆತ್ತುವುದು ಹೇಗೆ ಸಾಧ್ಯವಲ್ಲವೋ ಹಾಗೆಯೇ ಮನುಷ್ಯರೆಂದರೆ ಎಲ್ಲ ಸ್ತ್ರೀಪುರುಷರೂ ವಿದ್ಯಾಸಂಸ್ಕಾರಕ್ಕೆ ಅರ್ಹರೆನಿಸುವುದಿಲ್ಲ. ಆದುದರಿಂದ ಪುರುಷರೇ ವಿದ್ಯಾಧಿಕಾರಿಗಳೆನಿಸಿರುವರು. ಸ್ತ್ರೀಯರು ಗೃಹಿಣಿಯರಾಗಿ ಪುತ್ರರನ್ನು ಪಡೆಯುವ ಸ್ವಭಾವವುಳ್ಳವರಾಗಿರುವರು ಎಂದು ಶಂಕಿಸುವರು. ಆದರೆ ದೇಹರಚನೆಯಲ್ಲಿ ಸ್ತ್ರೀಪುರುಷ ವ್ಯಕ್ತಿಗಳನ್ನು ಬೇರೆಬೇರೆ ಗಣಿಸುವುದು ಸಹಜವಾಗಿದ್ದರೂ, ಯಾವುದರಲ್ಲಿ ಒಂದಾಗಿದೆ, ಯಾವುದರಲ್ಲಿ ಬೇರೆಯಾಗಿದೆ ಎಂಬುದನ್ನು ನಾವು ವಿಚಾರ ಮಾಡಬೇಕು. ಗರ್ಭಧಾರಣಗಳಲ್ಲಿ ಸ್ತ್ರೀಯು ಪುರುಷರಿಂದ ಪ್ರತ್ಯೇಕಿಸಲ್ಪಟ್ಟರೂ, ಬುದ್ಧಿವಿಚಾರಶಕ್ತಿಗಳಲ್ಲಿ ಪುರುಷರಿಂದ ಪ್ರತ್ಯೇಕಳಾಗುವಂತಿಲ್ಲ. ಹೇಗೆಂದರೆ ಸ್ತ್ರೀಗೆ ಬುದ್ಧಿಯೂ, ವಿಚಾರಶಕ್ತಿಯೂ ಇರುವುವು. ಇಂತಹ ಶಕ್ತಿಯು ದೇವರಿಂದಲೇ ಲಭ್ಯವಾಗಿರುವುದು. ಈ ಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾದ ಉದ್ದೇಶದಿಂದಲೇ ದೇವರು ಅದನ್ನು ಅನುಗ್ರಹಿಸಿರುವನು. ಇಲ್ಲದಿದ್ದರೆ ಪಶುಪಕ್ಷಿಗಳಂತೆ ಸ್ತ್ರೀಯರನ್ನೂ ಸೃಷ್ಟಿಸಬಹುದಾಗಿತ್ತಲ್ಲವೆ? ಅವುಗಳಿಗೆ ದುಡಿಯುವುದಕ್ಕಾಗಿ ಬುದ್ಧಿಯ ಆವಶ್ಯಕವಿಲ್ಲವೆಂದು ನಾವು ಊಹಿಸಬಹುದು. ಹೇಗೆಂದರೆ ಬುದ್ಧಿವಿಚಾರಶಕ್ತಿ ಇಲ್ಲದ ಪಶುಗಳಿಂದ ನಾವು ದುಡಿಯಿಸಿಕೊಳ್ಳುತ್ತಿರುವೆವು. ಎತ್ತಿನಿಂದ ಉಳುವೆವು. ಅದರ ಮೇಲೆ ಭಾರವನ್ನು ಹೇರುವೆವು. ಕುದುರೆಯ ಮೇಲೇರುವೆವು. ನಾಯಿಯಿಂದ ರಕ್ಷಣೆಯನ್ನು ಕೋರುವೆವು. ಹಾಗೆಯೇ ಬುದ್ಧಿವಿಚಾರಶಕ್ತಿಯಿಲ್ಲದ ಹೆಂಗುಸರಿಂದಲೂ ನಮಗೆ ಬೇಕಾದ ಕೆಲಸಗಳನ್ನು ನಾವು ಮಾಡಿಸಿಕೊಳ್ಳಲು ಸಮರ್ಥರಾಗಿರುತ್ತಿದ್ದೆವು. ದೇವರು ಹೀಗೆ ಮಾಡದೆ ಬುದ್ಧಿವಿಚಾರಶಕ್ತಿಗಳ ಅಭಿವೃದ್ಧಿಗಾಗಿಯೇ ಅವರಿಗೆ ಅವುಗಳನ್ನು ಕೊಟ್ಟು ಸೃಷ್ಟಿಸಿರುವನು. ಇದರಿಂದ ಸ್ತ್ರೀಯರು ವಿದ್ಯಾಭ್ಯಾಸಸಂಸ್ಕಾರಕ್ಕೆ ಅರ್ಹವಾದ ದೇಹರಚನೆಯುಳ್ಳವರೆಂದು ನಾವು ಅರಿಯಬೇಕಾಗಿದೆ. ಆದುದರಿಂದ ಪುರುಷರಂತೆಯೇ ಸ್ತ್ರೀಯರೂ ವಿದ್ಯಾಧಿಕಾರಿಣಿಗಳೆನಿಸಿರುವರು.

ಇನ್ನು ಸ್ವಲ್ಪ ವಿಮರ್ಶಶೀಲಿಗಳಾಗಿರುವ ಕೆಲರು ಮತ್ತೊಂದು ಬಗೆಯಿಂದ ಸ್ತ್ರೀವಿದ್ಯಾಭ್ಯಾಸವು ಪ್ರಾಧಾನ್ಯವಲ್ಲವೆಂದು ಶಂಕಿಸುವರು. ಹೇಗೆಂದರೆ—ಗರ್ಭವತಿಯಾಗುವ ಸ್ತ್ರೀಯು ಕ್ರಮಕ್ರಮವಾಗಿ ದುರ್ಬಲೆಯಾಗುವುದರಿಂದ, ಅಂತಹ ಸ್ತ್ರೀಗೆ ಬುದ್ಧಿಕ್ಲೇಶವನ್ನು ಹೆಚ್ಚಿಸುವ ವಿದ್ಯಾಭ್ಯಾಸವನ್ನು ಮಾಡಿಸುವುದು ಆಕೆಯ ಆರೋಗ್ಯಕ್ಕೂ ಆಯುಷ್ಯಕ್ಕೂ ನ್ಯೂನತೆಯನ್ನುಂಟುಮಾಡಬಹುದಲ್ಲವೆ ಎಂಬುದೇ ಅವರ ಆಶಂಕೆಯು. ಇದು ಸಹಜವಾದ ಆಕ್ಷೇಪಣೆಯೇ ಸರಿ. ಹೆಂಗುಸಿನ ದೇಹವು ಬೇಗಬೇಗನೆ ಹೇಗೆ ಬೆಳೆವುದೂ ಹಾಗೆಯೇ ಕೊಳೆಯುವುದೂ ಸ್ವಭಾವವೆಂಬುದು ಅನುಭವಸಿದ್ಧವಾಗಿದೆ. ಈ ದಿವಸ ನವಯೌವನ ರೂಪಸಂಪನ್ನೆಯಾಗಿರುವವಳು ಇನ್ನೊಂದು ವರ್ಷಕ್ಕೆ ಪುತ್ರವತಿಯೆನಿಸಿ ತನ್ನ ಯೌವನವನ್ನೂ, ರೂಪವನ್ನೂ ಕಡಮೆ ಮಾಡಿಕೊಳ್ಳುವಳು. ಇದರ ಜತೆಗೆ ಶಕ್ತಿಯೂ ಸ್ವಲ್ಪಮಟ್ಟಿಗೆ ಕುಂದುವುದು. ಇದರ ಆಧಾರದಿಂದಲೇ “ಪ್ರಸೂತಿಕಾಂತಾನಿ ಯೌವನಂ” ಎಂಬ ನೀತಿವಚನವೂ ಹುಟ್ಟಿದೆ. ಇಂತಹಳು ನಾಲ್ಕಾರು ಮಕ್ಕಳನ್ನು ಪಡೆದಮೇಲೆ, ಅವಳ ಶಕ್ತಿಯು ಕನಿಷ್ಠಪಕ್ಷ ಅರ್ಧದವರೆಗಾದರೂ ಕುಂದಿಹೋಗುವುದರಲ್ಲಿ ಸಂದೇಹಿಸಲಾಗುವುದಿಲ್ಲ. ಆದುದರಿಂದಲೇ ನಮ್ಮ ಪ್ರಾಚೀನ ಮಹನೀಯರು ಸ್ತ್ರೀಯರಿಗೆ ಅಬಲೆಯರೆಂದು ಹೆಸರಿತ್ತರು. ಹೀಗೆ ಕ್ರಮಕ್ರಮವಾಗಿ ದೇಹ ದುರ್ಬಲತೆಗೆ ಗುರಿಯಾಗುವ ಸ್ತ್ರೀಗೆ ವಿದ್ಯಾಭ್ಯಾಸದಿಂದ ಕ್ಲೇಶವನ್ನು ಹೆಚ್ಚಿಸಿ ಬುದ್ಧಿಗೆ ಆಯಾಸವನ್ನುಂಟುಮಾಡಿದರೆ, ಅವಳು ಇನ್ನೂ ಕಂದಿ, ಕುಂದಿ ಅನಾರೋಗ್ಯಕ್ಕೆ ಗುರಿಯಾಗಿ ಅಕಾಲಮೃತ್ಯುವಿಗೂ ತುತ್ತಾಗಬಹುದು. ಈ ವಿಷಯದಲ್ಲಿ ಬುದ್ಧಿಗೂ, ದೇಹದ ಆರೋಗ್ಯಾನಾರೋಗ್ಯಗಳಿಗೂ ಸಂಬಂಧವಿಲ್ಲವೆನ್ನುವುದನ್ನು ಒಪ್ಪತಕ್ಕುದಾಗಿಲ್ಲ. ಆರೋಗ್ಯವಂತನಿಗೆ ಬುದ್ಧಿವಿಚಾರವು ಸುಲಲಿತವಾಗಿ ಸಾಧ್ಯವಾಗುವಂತೆ ರೋಗಿಗೆ ಸಾಧ್ಯವೆನಿಸದು. ಇದರಿಂದಲೇ ದುರ್ಬಲರ ಬು

ಸೌಗಂಧಿಕಾ ಪರಿಣಯ.

(ಕಳೆದವಾರದ ಶೇಷ.)

ಈ ಕುಸುಮಮಂ ಮುಡಿಯಲ್ಲಿ ಮುಡಿದರೆ ಯಕ್ಷ ರಾಕ್ಷಸ ಪಿಶಾಚಾದಿಗಳ ಭಯವು ಪರಿಹೃತವಾಗುವುದು; ಈ ಕುಸುಮವು ಯೆಂದಿಗೂ ಕೆಂದದೆ ಸೌರಭ್ಯಗುಣಗಳಿಂ ಯುಕ್ತವಾಗಿರುವುದರಿಂ ಅಳಕಾದೇವಿಯು ಮುಡಿಯುವುದಕ್ಕೆ ಯೋಗ್ಯವಾಗಿರುವುದು; ಈ ಕುಸುಮವು ಇಂದ್ರಾದಿಗಳ ಅಂತಃಪುರಕ್ಕೆ ಯೋಗ್ಯವಾದುದು ಯೆಂದು ಹೇಳಿದ ವಾಕ್ಯಮಂ ಕೇಳಿ, ಸುಗಂಧರಾಜನು ಅವುಗಳಂ ಸ್ವೀಕರಿಸಿ, ವಿಶ್ರಮಿಸಿಕೊಂಡು ಮನದಣಿವಂತೆ ಸರೋವರವನ್ನೀಕ್ಷಿಸುತ, ಅಲ್ಲಿಯ ವನದಲ್ಲಿ ಮೆಲ್ಲಮೆಲ್ಲನೆ ಸಂಚರಿಸುತ, ಮೃಗಪಕ್ಷಿಗಳನ್ನವಲೋಕಿಸುತ ಮಧುರವಾದ ಶುಕಶಾರಿಕಾದಿ ಧ್ವನಿಗಳಂ ಕಿವಿಗಿಂಪಾಗಿ ಕೇಳುತಲಿರುವ ಸಮಯದೊಳ್ ಯಕ್ಷಾಧಿಪನು ಎಲೈ ರಸಿಕಶಿಖಾಮಣಿಯಾದ ರಾಜೇಂದ್ರನೆ—ಇದು ಕುಬೇರನು ವಿಹರಿಸುವ ರತ್ನಶಾಲೆಯು, ಇದು ದೇವಿಯರು ಯಿಳಿಯುವ ಗೃಹವು, ಇದು ನಳಕೂಬರನ ಕ್ರೀಡಾಸದನವು, ಇವೆಲ್ಲವೂ ದೇವಿಯರ ಲೀಲಾಹಂಸೆಗಳು, ಇದು ಸಖೀಯರುಗಳ ವಿಲಾಸಸ್ಥಾನವು, ಇವು ಮಣಿಭದ್ರಾದಿ ಭೃತ್ಯರುಗಳಿಳಿಯುವ ಕೈಸಾಲೆಗಳು, ಇವು ನರ್ತನವಂ ಮಾಡುವುದಕ್ಕೆ ಬರುವ ರಂಭಾದಿ ಅಪ್ಸರಸ್ತ್ರೀಯರುಗಳಿಳಿಯುವ ಬಿಡದಿಗಳು, ಈ ವೃಕ್ಷಗಳು ಸಂತಾನವೃಕ್ಷದ ಸಂತತಿಯಲ್ಲಿ ಸಂಭೂತವಾದುದರಿಂ ಬೇಡಿದವರಿಗೆ ದಿವ್ಯಾನುಲೇಪನಮಾಲ್ಯ ತಾಂಬೂಲಾದಿಗಳಂ ಕೊಡುವುವು, ಇವು ದೇವಿಯರ ಅಲಕ್ತಕ ರಂಜಿತವಾದ ಚರಣಸ್ಪರ್ಶದ ಮಹಿಮೆಯಿಂದ ಸರ್ವದಾ ಪುಷ್ಪಯುಕ್ತವಾಗಿ ಪರಿಮಳದಿಂ ಕೂಡಿರುವುವು, ಮತ್ತೂ ಮಂದಾರಶಾಖೆಯಿಂದುದಯಿಸಿರುವ ಈ ವೃಕ್ಷಗಳು ಬೃಂದಾರಕ ನಿತಂಬಿನೀ ಬೃಂದದ ಆಲಿಂಗನದಿಂ ಪರವಶಗಳಾಗಿ, ಅವರ ಅಂಗರಾಗದಿಂದನುಲಿಪ್ತಗಳಾಗಿ ಸಡಿಲುತಿರುವ ಪುಷ್ಪಗಳನ್ನರಿಯದೆ ಸ್ತಬ್ಧಗಳಾಗಿರುವುವು. ಇತ್ತಲಾ ದೂರದಲ್ಲಿ ಕಾಣಿಸುವುದೇ ನರನಾರಾಯಣಾಶ್ರಮವು, ಇದುಕೋ ಪೂರ್ವದಿಕ್ಕಿನಲ್ಲಿ ಪೊಂಬಣ್ಣದಿಂ ಥಳಥಳಿಸುವುದೇ ಆಂಜನೇಯ ನಿವಾಸಯೋಗ್ಯವಾದ ಸುವರ್ಣ ಕದಳೀವನವು, ಇದರ ಮೇಲುಭಾಗದಲ್ಲಿ ನಿಂತು ನೋಡಿದರೆ ಪರಮೇಶ್ವರನಿಗೆ ನಿವಾಸಸ್ಥಾನವಾದ ಕೈಲಾಸಪರ್ವತವು ಕಾಣಿಸುವುದು, ಇವೆಲ್ಲವೂ ಹರಿವರ್ಷವೆಂಬುವುದು ಯೆಂದು ಹೇಳುವ ಸಮಯದಲ್ಲಿಯೇ ಸೂರ್ಯನ ರಥವು ಅಸ್ತಾಚಲಶಿಖರವನ್ನಲಂಕರಿಸುತ್ತಿರಲಾ ತರಣಿಯ ತನುಕಾಂತಿಯಿಂದಲ್ಲಿದ್ದ ವಜ್ರಮಣಿನಿಕರಂಗಳು ಮರಕತ ರಾಶಿಯಂತಾಗಲು, ಮರಕತಂಗಳು ಮಹಾನೀಲಮಣಿಗಳಂತೆ ಕಾಣಿಸಲು, ಪುಷ್ಪರಾಗವು ಗೋಮೇಧಿಕ ವರ್ಣವಾಗಲು, ಗೋಮೇಧಿಕವು ಗಾರುತ್ಮತರತ್ನಮಂ ಪೋಲುತ್ತಿರಲು ಗೈರಿಕಭೂಮಿಯು ಶಾದ್ವಲಭೂಮಿಯಂತಾಗಲು, ಗಿರಿನದೀಜಲಂಗಳು ಎಳೆಹಸುರಾಗಲು, ಆಗ ತರಣಿಯು ಸಂಧ್ಯಾರಾಗಲಕ್ಷ್ಮಿಯೊಡನೆ ಕೇಳಿಯಂ ಮಾಡಿದುದರಿಂದ ಸಂಧ್ಯಾಲಕ್ಷ್ಮಿಯ ಕುಚಕುಂಭಕುಂಕುಮಂಗಳಿಂ ಪಂಕಿಲವಾದ ತನ್ನ ತನುವಂ ಮಜ್ಜನಮಂ ಗೈಸಲೋಸುಗವೋ ಯೆಂಬಂತೆ ಸಮುದ್ರದೊಳ್ ಮಗ್ನನಾಗಲು; ಇಂತಿರುವಲ್ಲಿ ಸುಗಂಧಮಹಾರಾಜೇಂದ್ರನು ಮಹಾಮಾತ್ಯನಾದ ಸುಮತಿಯಿಂದೊಡಗೂಡಿ, ಸುಗಂಧಯುಕ್ತನಾದ ಗಂಧವಹನಿಂದತಿಶೀತಳವಾದ ಗಂಧಮಾದನವೆಂಬ ಮಹಾಪರ್ವತದ ಪ್ರಾಂತದಲ್ಲಿರುವ ಸೌಗಂಧಿಕಾ ಸರೋವರದಲ್ಲಿ ಸಾಯಂಕಾಲದ ಸಂಧ್ಯಾನಿಯಮಗಳನ್ನೆರವೇರಿಸಿ, ಇಷ್ಟದೇವತೆಯಾದ ಜಗದೀಶ್ವರಿಯ ಪಾದಪಂಕಜಗಳಂ ಧ್ಯಾನಿಸಿ, ಛಾಯಾಗುಪ್ತನು ತಂದು ಒಪ್ಪಿಸಿದ್ದ ಅಮೃತಸದೃಶವಾದ ದಿವ್ಯಫಲಗಳಂ ಸವಿದು, ಯಕ್ಷಾಧಿಪನಿಂ ರಚಿಸಲ್ಪಟ್ಟ ತಳಿರುಗಳ ತಲ್ಪದಲ್ಲಿ ಸುಖನಿದ್ರೆಯಂಗೈಯುತ ಆ ರಾತ್ರಿಯಂ ಕಳೆದನೆಂಬಲ್ಲಿಗೆ ಹದಿನಾಲ್ಕನೆಯ ಆಶ್ವಾಸವು ಸಂಪೂರ್ಣವು.

—:ಹದಿನೈದನೇಯ ಆಶ್ವಾಸವು:—

ಅನಂತರದಲ್ಲಿ ಅತ್ತಲಾ ಪ್ಲಕ್ಷದ್ವೀಪದೊಳ್ ವಿಮಲಪುರಿಯಲ್ಲಿ ಅರಿಷ್ಟಸೂಚಕವಾದ ಭೂಕಂಪವೂ, ಕೆಂಡಗಳ ಮಳೆಯೂ, ಮತ್ತೂ ಧೂಮಕೇತುಗಳ ಆವಿರ್ಭಾವವೂ ಈಪರಿಯಾಗಿ ಪರಿಪರಿಯಾದ ಅಪಶಕುನಗಳು ಉಂಟಾದುದರಿಂ ಆ ಪುರದಲ್ಲಿ ವಾಸಗೊಂಡಿರುವ ರಾಕ್ಷಸರುಗಳೆಲ್ಲರೂ ಕಂಡು, ಅಚ್ಚರಿಗೊಂಡು ಭಯಸಂಭ್ರಾಂತರಾಗುತ್ತಿರಲದನ್ನೋಡಿ, ಆ ದ್ವೀಪವನ್ನಾಕ್ರಮಿಸಿಕೊಂಡಿರುವ ಉಗ್ರಬಾಹುವು ತನ್ನ ಮಂತ್ರಿಯಾದ ಶಂಕುಕರ್ಣನಂ ಕುರಿತು, ಎಲೈ ಮಂತ್ರಿವರ್ಯನೇ ಇಷ್ಟು ದಿವಸವೂ ಇಲ್ಲದ ಅಪಶಕುನಂಗಳು ಇಂದು ಕಾಣುತ್ತಲಿರುವುದು: ಇದರ ಪರಿಯಂ ಆಲೋಚಿಸಿ ಪೇಳುವನಾಗು ಯೆನಲು, ಅದಂ ಕೇಳಿ ಶಂಕುಕರ್ಣನು,—ಎಲೈ ರಾಕ್ಷಸರಾಯನೆ ಅಪಶಕುನಗಳ ವಿವರಮಂ ಆಲೋಚಿಸಿ ನೋಡಿದರೆ ನಮ್ಮ ರಾಕ್ಷಸರ ಕುಲಕ್ಕೆ ಮಹದ್ವಿಪತ್ಸೂಚಕವಾಗಿ ಕಾಣುತ್ತಲಿದೆ; ಆದುದರಿಂ ಯಾವ ಕಾರ್ಯಮಂ ಮಾಡಬೇಕಾದರೂ ಸಾವಧಾನಚಿತ್ತನಾಗಿ ಆಲೋಚಿಸಿ ಮಾಡಬೇಕಲ್ಲದೆ ದುಡುಕಲಾಗದು; ಇದರಿಂದ ಆ ಅಪಶಕುನಗಳು ಶಾಂತವಾಗುವುವೆಂದು ಬಿನ್ನವಿಸಿ, ತನ್ನ ಮನದಲ್ಲಿ ನಾನಾವಿಧವಾದ ವಿಕಲ್ಪಗಳನ್ನೆಣಿಯುತ್ತಿರಲು,

(ಸಶೇಷ.)

ಸ್ತ್ರೀ ವಿದ್ಯಾಭ್ಯಾಸ.

(ಹಿಂದಣ ಶೇಷ.)

ಇಂತಹ ರಕ್ಷಣೆಯ ಕ್ರಮವನ್ನು ತಿಳಿಯುವುದಕ್ಕೆ ಆರೋಗ್ಯಶಾಸ್ತ್ರಾಭ್ಯಾಸವು ಬೇಡವೆ? ನಮ್ಮ ಭರತಖಂಡದಲ್ಲಿ ವಿದ್ಯಾವಿಹೀನೆಯರಾದ ಅನೇಕ ಸ್ತ್ರೀಯರ ಅವಿವೇಕದಿಂದಲೇ ಎಷ್ಟೋ ಶಿಶುಗಳು ಅಕಾಲಮೃತ್ಯುವಿಗೆ ತುತ್ತಾಗಿ ಲೋಕನಾಶಕ್ಕೆ ಹೇತುವಾಗಿದೆ. ಪತಿಯ ಆಯುಷ್ಯಾದ ವಿಚಾರವೇ ಗೊತ್ತಿಲ್ಲದವಳು ಪತಿಯ ಮನೋವರ್ತಿನಿಯಾಗಿ ಹೇಗೆ ವರ್ತಿಸುವಳು? ಇದಕ್ಕಾಗಿ ಅವಳಿಗೆ ಲೆಕ್ಕದ ವಿಷಯವು ಗೊತ್ತಿರಬೇಡವೆ? ತಾರತಮ್ಯ—ಮರ್ಯಾದೆ ಮುಂತಾದುವೆಲ್ಲವೂ ವಿದ್ಯಾವತಿಗೇ ತಿಳಿಯತಕ್ಕವುಗಳಾಗಿವೆ. ಆದುದರಿಂದ ಇಹದ ಸಂಸಾರ ಸುಖದ ನೆಲೆಗೂ, ಪರಗತಿಸಾಧನೆಗೂ ವಿದ್ಯಾಭ್ಯಾಸವು ಬೇಕು. ಇದು ಬೇಡವೆಂದು ತಿಳಿದಿರುವುದು ಕೇವಲ ಮೂಢತನವೇ ಸರಿ.

ಇನ್ನು ಸ್ತ್ರೀವಿದ್ಯಾಭ್ಯಾಸದಿಂದ ಅನೇಕ ನಷ್ಟವುಂಟೆಂದು ವಾದಿಸುವ ಆಕ್ಷೇಪಣೆಯಾದರೂ ಸಯುಕ್ತವಾಗಿರುವುದೇ ಎಂಬುದನ್ನು ವಿಮರ್ಶಿಸುವ. ಈ ಆಕ್ಷೇಪಕ್ಕೆ ಕಾರಣವೇನೆಂದರೆ—ವಿದ್ಯಾವತಿಯಾದ ಸ್ತ್ರೀಯು ಸಾಮಾನ್ಯವಾಗಿ ಸ್ವತಂತ್ರತೆಯನ್ನು ಅಪೇಕ್ಷಿಸಿ ಪತಿಧಿಕ್ಕಾರವನ್ನು ಮಾಡುವುದರಲ್ಲಿಯೇ ತನ್ನ ಪ್ರತಿಭೆಯನ್ನು ವ್ಯಕ್ತಪಡಿಸುವಳೆಂದೂ ದುಷ್ಕಾರ್ಯಪ್ರವರ್ತಕಳಾಗುವಳೆಂದೂ ಊಹಿಸಿ ಈ ಆಕ್ಷೇಪಣೆಯನ್ನು ಮಾಡುವರು. ಇದು ನ್ಯಾಯವಾದ ಆಕ್ಷೇಪಣೆಯಾಗಿದ್ದರೂ “ನಸ್ತ್ರೀಸ್ವಾತಂತ್ರ್ಯಮರ್ಹತಿ” ಎಂಬುದನ್ನು ನಾವು ಮರೆಯುವುದಿಲ್ಲ. ಆದರೆ ಸ್ತ್ರೀಯರು ಪಶ್ವಾದಿಗಳಂತೆ ನಮ್ಮ ಅಧೀನದಲ್ಲಿರಬೇಕೆಂದಾಗಲೀ, ಅವರು ನಮ್ಮಲ್ಲಿ ಕುತ್ಸಿತವಾಸಿಯರಂತೆ ವರ್ತಿಸಬೇಕೆಂಬುದಾಗಲೀ ನಮ್ಮ ಉದ್ದೇಶವಾಗಿರುವುದಿಲ್ಲ. ನಮ್ಮ ಸ್ತ್ರೀಯರನ್ನು ನಾವು ನಮ್ಮ ಸ್ನೇಹಿತರಂತೆ ಸಂತೋಷದಿಂದ ಕಾಣಬೇಕೆಂಬುದೇ ನಮ್ಮ ಆರ್ಯಧರ್ಮದ ಸಾರವಾಗಿದೆ. ಗೃಹಕ್ಕೆ ಲಕ್ಷ್ಮಿಯ ಸ್ವರೂಪಳಾಗಿಯೂ, ಕೆಲಸಗಳಿಗೆ ಆಚಾರ್ಯಸ್ವರೂಪಳಾಗಿಯೂ, ಧರ್ಮಾರ್ಥಕಾಮಂಗಳಲ್ಲಿ ಸುಖವನ್ನು ಅನುಭವಿಸಲು ಸಮಭಾಗಿನಿಯಾಗಿಯೂ ಇರುವ ನಮ್ಮ ರಮಣಿಯರು ದಾಸಿಯರಂತೆ ಕಡೆಗಣಿಸಲ್ಪಡುವುದು ಬಹು ಪರಿತಾಪವಾಗಿದೆ. ಆದುದರಿಂದಲೇ “ನಸ್ತ್ರೀಸ್ವಾತಂತ್ರ್ಯಮರ್ಹತಿ” ಎಂಬುದರ ಅರ್ಥವು ಬೇರೆ ವಿಧವಾಗಿದೆ. ಭಯದಿಂದಲೂ ಲಜ್ಜೆಯಿಂದಲೂ ವರ್ತಿಸಬೇಕೆಂಬುದೇ ಅದರ ತತ್ವಾರ್ಥವು. ಪುರುಷರು ಹಿರಿಯರ ಅನುಜ್ಞೆಯನ್ನು ಶಿರಸಾವಹಿಸಿ ವಿಧೇಯತೆಯಿಂದಿರಬೇಕಾದುದು ನ್ಯಾಯವೆನಿಸಿದ್ದರೆ, ಸ್ತ್ರೀಯೂ ವಿಧೇಯಳಾಗಿರಬೇಕಾದುದು ನ್ಯಾಯವೇ ಅಲ್ಲವೆ? ಇಂತಹ ಉತ್ತಮ ಗುಣವೆಲ್ಲವೂ ವಿದ್ಯಾಲಾಭದಿಂದಲೇ ಲಭಿಸತಕ್ಕದಾಗಿರುವುದು. ವಿದ್ಯೆಯಿಂದ ಕೆಟ್ಟಗುಣಗಳು ಬರುವುದಿಲ್ಲ. ವಿದ್ಯಾವಂತರಾದ ಪುರುಷರೂ ಅನೇಕಾವೃತ್ತಿ ತಪ್ಪುದಾರಿಯಲ್ಲಿ ಹೋಗುವರಲ್ಲವೆ? ಹಾಗೆಯೇ ಸ್ತ್ರೀಯರಲ್ಲಿಯೂ ಕೆಲವರು ಹೋಗಬಹುದು. ಇವರು ವಿದ್ಯಾಭ್ಯಾಸದಿಂದ ಕೆಡುಕರಾಗಲಿಲ್ಲ. ಅವರ ಸ್ವಭಾವವೇ ಅದಕ್ಕೆ ಕಾರಣವೆನಿಸಿರುವುದು. ಅಥವಾ ಅಲ್ಪವಿದ್ಯೆಯ ಸಂಸ್ಕಾರದಿಂದಲೂ, ಇಲ್ಲವೇ ಕುತ್ಸಿತವಾದ ಪುಸ್ತಕಾವಲೋಕನದಿಂದಲೂ, ಇಲ್ಲದಿದ್ದರೆ ತಕ್ಕ ಶಿಕ್ಷಣವಿಲ್ಲದುದರಿಂದಲೂ, ಹಾಗಲ್ಲದಿದ್ದರೆ ದುಸ್ಸಹವಾಸದಿಂದಲೂ ದುಶ್ಶೀಳರಾಗಬಹುದು. ಇದನ್ನು ವಿದ್ಯಾಭ್ಯಾಸದಮೇಲೆ ಆರೋಪಿಸುವುದು ತಪ್ಪಾಗಿದೆ. ಪತಿಯನ್ನು ಧಿಕ್ಕರಿಸಿ ಸ್ವೇಚ್ಛೆಯಾಗಿ ವರ್ತಿಸುವುದು ಕುಲಸ್ತ್ರೀಯ ಲಕ್ಷಣವಲ್ಲ. ಅವಳು ನಾರಿಯೂ ಅಲ್ಲ; ಮಾರಿಯೇ ಸರಿ. ಇಂತಹರನ್ನು ದೂರುವುದು ನ್ಯಾಯವೆಂದು ಯಾರುತಾನೇ ಹೇಳಲಾರರು? ಉತ್ತಮವಾದ ವಿದ್ಯಾಭ್ಯಾಸದಲ್ಲಿ ಪತಿಭಕ್ತಿಯನ್ನು ವೃದ್ಧಿಮಾಡುವ ವಿಷಯಗಳ ಉಪದೇಶವಿರುವುದೇ ಹೊರತು, ಗಂಡಸರಿಗೆ ಹಿಂಸೆಯನ್ನುಂಟುಮಾಡಬೇಕೆಂದಾಗಲೀ, ಗಂಡನನ್ನು ತಿರಸ್ಕರಿಸಬೇಕೆಂದಾಗಲೀ ಹಾಸ್ಯಮಾಡಬೇಕೆಂದಾಗಲೀ, ಮನೆಯಲ್ಲಿ ಅವನು ಅಡಿಗೆಯನ್ನು ಮಾಡಿಕೊಂಡು, ಸ್ವೇಚ್ಛೆಯಾಗಿ ತಿರುಗಿ ಮನೆಗೆ ಬರುವ ನಾರಿಯನ್ನು ಇದಿರುಗೊಂಡು ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಬೇಕೆಂದಾಗಲೀ ಹೇಳಿಲ್ಲ. ವಿದ್ಯಾವತಿಯರು ದುಷ್ಕಾರ್ಯಪ್ರವರ್ತಕರಾಗುವರೆಂದು ಸಾಧಿಸಲಾಗುವುದಿಲ್ಲ. ವಿದ್ಯಾವತಿಯರಾದ ಸ್ತ್ರೀಯರು ಎಷ್ಟೋ ಪತಿವ್ರತೆಯರಾಗಿ ಮಹನೀಯರಾಗಿರುವುದನ್ನು ನಾವು ಕಾಣಬಹುದು. ವಿದ್ಯಾಹೀನರು ಎಷ್ಟೋ ದುಷ್ಕಾರ್ಯದಲ್ಲಿಲ್ಲವೆ? ಒಬ್ಬೊಬ್ಬರು ನೀಚಸ್ತ್ರೀಯರು ವಿದ್ಯಾವತಿಯರಾಗಿ ದುಷ್ಟೆಯರಾಗಬಹುದು. ಆದಮಾತ್ರದಿಂದಲೇ ಸ್ತ್ರೀ ವಿದ್ಯಾಭ್ಯಾಸವನ್ನೇ ದೂಷಿಸುವುದು ಸಹಜವಲ್ಲ. ಸುಖಪ್ರಯಾಣ ಸಾಧನವಾದ ಹೊಗೆಯಬಂಡಿಯು ಯಾರೋ ಒಬ್ಬ ನಡೆಸುವವನ ಅಜಾಗರೂಕತೆಯಿಂದಲೋ ಇಲ್ಲವೆ ಇನ್ನಾವ ಅಪಾಯದಿಂದಲೋ ಒಂದೊ ದುಬಾರಿ ಜನರಿಗೆ ಕೆಡುಕಾಗಿ ಪರಿಣಮಿಸುವುದನ್ನು ನೋಡಿ ಹೊಗೆಯ ಬಂಡಿಯನ್ನೇ ತೆಗೆದುಹಾಕಬೇಕೆಂಬುದು ಉತ್ತಮವಾದ ಅಭಿಪ್ರಾಯವಾಗುವುದಿಲ್ಲ. ಆದುದರಿಂದ ಸ್ತ್ರೀ ವಿದ್ಯಾಭ್ಯಾಸದಿಂದ ನಷ್ಟವುಂಟೆಂಬುದನ್ನು ನಾವು ಅಂಗೀಕರಿಸಲಾರೆವು. ಉತ್ತಮ ವಿದ್ಯಾಭ್ಯಾಸದಿಂದ ಬೇಕಾದ ಉತ್ತಮ ಫಲಗಳನ್ನು ಪಡೆಯಬಹುದಾಗಿದೆ.

ಇನ್ನು ಕೆಲವು ವಿಚಾರಶೀಲರು ಈ ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ಸ್ವಲ್ಪ ಸಂದೇಹಗ್ರಸ್ತರಾಗಿರುವರು. ಹೇಗೆಂದರೆ—ಸ್ತ್ರೀಯ ದೇಹರಚನೆಯೂ, ಪುರುಷನ ದೇಹರಚನೆಯೂ ಬೇರೆಬೇರೆಯಾಗಿದೆ. ಇಬ್ಬರೂ ಮನುಷ್ಯರೆನಿಸಿದ್ದರೂ, ದೇಹರಚನೆಯ ವ್ಯತ್ಯಾಸದಿಂದ ಪುರುಷರಂತೆ ಸ್ತ್ರೀಯೂ ವಿದ್ಯಾಭ್ಯಾಸಕ್ಕೆ ಹೇಗೆ ಅರ್ಹಳಾಗುವಳು? ಕಲ್ಲು ಎಂಬ ಮಾತ್ರದಿಂದಲೇ ಎಲ್ಲ ಕಲ್ಲುಗಳಲ್ಲಿಯೂ ವಿಗ್ರಹವನ್ನು ಕೆತ್ತುವುದು ಹೇಗೆ ಸಾಧ್ಯವಲ್ಲವೋ ಹಾಗೆಯೇ ಮನುಷ್ಯರೆಂದರೆ ಎಲ್ಲ ಸ್ತ್ರೀಪುರುಷರೂ ವಿದ್ಯಾಸಂಸ್ಕಾರಕ್ಕೆ ಅರ್ಹರೆನಿಸುವುದಿಲ್ಲ. ಆದುದರಿಂದ ಪುರುಷರೇ ವಿದ್ಯಾಧಿಕಾರಿಗಳೆನಿಸಿರುವರು. ಸ್ತ್ರೀಯರು ಗೃಹಿಣಿಯರಾಗಿ ಪುತ್ರರನ್ನು ಪಡೆಯುವ ಸ್ವಭಾವವುಳ್ಳವರಾಗಿರುವರು ಎಂದು ಶಂಕಿಸುವರು. ಆದರೆ ದೇಹರಚನೆಯಲ್ಲಿ ಸ್ತ್ರೀಪುರುಷ ವ್ಯಕ್ತಿಗಳನ್ನು ಬೇರೆಬೇರೆ ಗಣಿಸುವುದು ಸಹಜವಾಗಿದ್ದರೂ, ಯಾವುದರಲ್ಲಿ ಒಂದಾಗಿದೆ, ಯಾವುದರಲ್ಲಿ ಬೇರೆಯಾಗಿದೆ ಎಂಬುದನ್ನು ನಾವು ವಿಚಾರ ಮಾಡಲೇಬೇಕು. ಗರ್ಭಧಾರಣಗಳಲ್ಲಿ ಸ್ತ್ರೀಯು ಪುರುಷರಿಂದ ಪ್ರತ್ಯೇಕಿಸಲ್ಪಟ್ಟರೂ, ಬುದ್ಧಿಬಲಶಕ್ತಿಗಳಲ್ಲಿ ಪುರುಷರಿಂದ ಪ್ರತ್ಯೇಕಿಸಲ್ಪಡುವಂತಿಲ್ಲ. ಏಕೆಂದರೆ ಸ್ತ್ರೀಗೆ ಬುದ್ಧಿಯೂ, ಬಲಶಕ್ತಿಯೂ ಇರುವುವು. ಇಂತಹ ಶಕ್ತಿಯು ದೇವರಿಂದಲೇ ಲಭ್ಯವಾಗಿರುವುದು. ಈ ಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾದ ಉದ್ದೇಶದಿಂದಲೇ ದೇವರು ಅದನ್ನು ಅನುಗ್ರಹಿಸಿರುವನು. ಇಲ್ಲದಿದ್ದರೆ ಪಶ್ವಾದಿಗಳಂತೆ ಸ್ತ್ರೀಯರನ್ನೂ ಸೃಷ್ಟಿಸಬಹುದಾಗಿತ್ತಲ್ಲವೆ? ಅವುಗಳಿಗೆ ದುಡಿಯುವುದಕ್ಕಾಗಿ ಬುದ್ಧಿಯು ಆವಶ್ಯಕವಿಲ್ಲವೆಂದು ನಾವು ಊಹಿಸಬಹುದು. ಹೇಗೆಂದರೆ ಬುದ್ಧಿ ಬಲಶಕ್ತಿ ಇಲ್ಲದ ಪ್ರಾಣಿಗಳಿಂದ ನಾವು ದುಡಿಯಿಸಿಕೊಳ್ಳುತ್ತಿರುವೆವು. ಎತ್ತಿನಿಂದ ಉಳುವೆವು. ಅದರ ಮೇಲೆ ಭಾರವನ್ನು ಹೇರುವೆವು. ಕುದುರೆಯ ಮೇಲೇರುವೆವು. ನಾಯಿಯಿಂದ ರಕ್ಷಣೆಯನ್ನು ಕೋರುವೆವು. ಹಾಗೆಯೇ ಬುದ್ಧಿಬಲಶಕ್ತಿಯಿಲ್ಲದ ಹೆಂಗುಸಿನಿಂದಲೂ ನಮಗೆ ಬೇಕಾದ ಕೆಲಸಗಳನ್ನು ನಾವು ಮಾಡಿಸಿಕೊಳ್ಳಲು ಸಮರ್ಥರಾಗುತ್ತಿದ್ದೆವು. ದೇವರು ಹೀಗೆ ಮಾಡದೆ ಬುದ್ಧಿವಿಚಾರಶಕ್ತಿಗಳ ಅಭಿವೃದ್ಧಿಗಾಗಿಯೇ ಅವರಿಗೆ ಅವುಗಳನ್ನು ಕೊಟ್ಟು ಸೃಷ್ಟಿಸಿರುವನು. ಇದರಿಂದ ಸ್ತ್ರೀಯರು ವಿದ್ಯಾಭ್ಯಾಸ ಸಂಸ್ಕಾರಕ್ಕೆ ಅರ್ಹವಾದ ದೇಹರಚನೆಯುಳ್ಳವರೆಂದು ನಾವು ಅಂಗೀಕರಿಸಬೇಕಾಗಿದೆ. ಆದುದರಿಂದ ಪುರುಷರಂತೆಯೇ ಸ್ತ್ರೀಯರೂ ವಿದ್ಯಾಧಿಕಾರಿಣಿಗಳೆನಿಸಿರುವರು.

ಇನ್ನು ಸ್ವಲ್ಪ ವಿವೇಕಶಾಲಿಗಳಾಗಿರುವ ಕೆಲರು ಮತ್ತೊಂದು ಬಗೆಯಿಂದ ಸ್ತ್ರೀವಿದ್ಯಾಭ್ಯಾಸವು ಪ್ರಾಧಾನ್ಯವಲ್ಲವೆಂದು ಶಂಕಿಸುವರು. ಹೇಗೆಂದರೆ—ಗರ್ಭವತಿಯಾಗುವ ಸ್ತ್ರೀಯು ಕ್ರಮಕ್ರಮವಾಗಿ ದುರ್ಬಲೆಯಾಗುವುದರಿಂದ, ಅಂತಹ ಸ್ತ್ರೀಗೆ ಬುದ್ಧಿಕ್ಲೇಶವನ್ನು ಹೆಚ್ಚಿಸುವ ವಿದ್ಯಾಭ್ಯಾಸವನ್ನು ಮಾಡಿಸುವುದು ಆಕೆಯ ಆರೋಗ್ಯಕ್ಕೂ ಆಯುಷ್ಯಕ್ಕೂ ನ್ಯೂನತೆಯನ್ನುಂಟುಮಾಡಬಹುದಲ್ಲವೆ? ಎಂಬುದೇ ಅವರ ಆಶಂಕೆಯು. ಇದು ಸಹಜವಾದ ಆಕ್ಷೇಪಣೆಯೇ ಸರಿ. ಹೆಂಗುಸಿನ ದೇಹವು ಬೇಗಬೇಗನೆ ಬೇಗ ಬೆಳೆವುದೂ ಹಾಗೆಯೇ ಕೊಳೆಯುವುದೂ ಸ್ವಭಾವವೆಂಬುದು ಅನುಭವಸಿದ್ಧವಾಗಿದೆ. ಈ ವಯಸು ನವಯೌವನ ರೂಪಸಂಪನ್ನೆಯಾಗಿರುವವಳು ಇನ್ನೊಂದು ವರ್ಷಕ್ಕೆ ಪುತ್ರವತಿಯೆನಿಸಿ ತನ್ನ ಯೌವನವನ್ನೂ, ರೂಪವನ್ನೂ ಕಡಮೆ ಮಾಡಿಕೊಳ್ಳುವಳು. ಇದರ ಜತೆಗೆ ಶಕ್ತಿಯೂ ಸ್ವಲ್ಪಮಟ್ಟಿಗೆ ಕುಂದುವುದು. ಇದರ ಆಧಾರದಿಂದಲೇ “ಪ್ರಸೂತಿಕಾಂತಂ ನಿಯೌವನಂ” ಎಂಬ ನೀತಿವಚನವೂ ಹುಟ್ಟಿದೆ. ಇಂತಹಳು ನಾಲ್ಕಾರು ಮಕ್ಕಳನ್ನು ಪಡೆದಮೇಲೆ, ಅವಳ ಶಕ್ತಿಯು ಕನಿಷ್ಠಪಕ್ಷ ಅರ್ಧದಷ್ಟಾದರೂ ಕುಂದಿಹೋಗುವುದರಲ್ಲಿ ಸಂದೇಹಿಸಲಾಗುವುದಿಲ್ಲ. ಆದುದರಿಂದಲೇ ನಮ್ಮ ಪ್ರಾಚೀನ ಮಹನೀಯರು ಸ್ತ್ರೀಯರಿಗೆ ಅಬಲೆಯರೆಂದು ಹೆಸರಿತ್ತರು. ಹೀಗೆ ಕ್ರಮಕ್ರಮವಾಗಿ ದೇಹದುರ್ಬಲತೆಗೆ ಗುರಿಯಾಗುವ ಸ್ತ್ರೀಗೆ ವಿದ್ಯಾಭ್ಯಾಸದಿಂದ ಕ್ಲೇಶವನ್ನು ಹೆಚ್ಚಿಸಿ ಬುದ್ಧಿಗೆ ಆಯಾಸವನ್ನುಂಟುಮಾಡಿದರೆ, ಅವಳು ಇನ್ನೂ ಕುಂದಿ, ಕುಂದಿ ಅನಾರೋಗ್ಯಕ್ಕೆ ಗುರಿಯಾಗಿ ಅಕಾಲಮೃತ್ಯುವಿಗೂ ತುತ್ತಾಗಬಹುದು. ಈ ವಿಷಯದಲ್ಲಿ ಬುದ್ಧಿಗೂ, ದೇಹದ ಆರೋಗ್ಯಾನಾರೋಗ್ಯಗಳಿಗೂ ಸಂಬಂಧವಿಲ್ಲವೆನ್ನುವುದನ್ನು ಒಪ್ಪತಕ್ಕದಾಗಿಲ್ಲ. ಆರೋಗ್ಯವಂತನಿಗೆ ಬುದ್ಧಿವಿಚಾರವು ಸುಲಲಿತವಾಗಿ ಸಾಧ್ಯವಾಗುವಂತೆ ರೋಗಿಗೆ ಸಾಧ್ಯವೆನಿಸದು. ಇದರಿಂದಲೇ ದುರ್ಬಲರ ಬು

ದ್ಧಿಶಕ್ತಿಗೆ ಆಯಾಸವನ್ನು ಕೊಡಬಾರದೆಂದು ವೈದ್ಯಶಾಸ್ತ್ರಜ್ಞರು ನಿಶ್ಚೈಸಿರುವರು. ಇದನ್ನೆಲ್ಲಾ ಯೋಚಿಸದೆ ಪುರುಷರಂತೆಯೇ ಸ್ತ್ರೀಯರೂ ಸಮವಾಗಿ ವಿದ್ಯಾಭ್ಯಾಸಕ್ಕೆ ಅರ್ಹರೆಂದು ಹೇಳಿಬಿಟ್ಟರೆ ಒಪ್ಪಲಾಗುವುದಿಲ್ಲ. ಕಾಲಾನುಕಾಲದಲ್ಲಿ ಮೇಲಿಗಾಗಿ ಪ್ರಯತ್ನಿಸಿದುದು ಮೂಲನಾಶಕ್ಕೇ ಕಾರಣವಾಗುವ ಸಂಭವಬರಬಹುದು. ಈ ಬಗೆಯ ತೊಂದರೆಯನ್ನು ನಾವು ಸಾವಧಾನವಾಗಿ ವಿಚಾರಮಾಡಿದರೆ ಪ್ರೌಢವಿದ್ಯಾಭ್ಯಾಸವು, ಅವಿವಾಹಿತಳು-ಜಿತೇಂದ್ರಿಯಳಾದ ಪರಿವ್ರಾಜಿಕೆ-ಅಪುತ್ರವತಿ-ವಿಧವೆ ಇಂತಹರಿಗೆ ಮಾತ್ರ ಯುಕ್ತವೆಂದು ನಾವು ತಿಳಿಯಬೇಕು. ಉಳಿದ ಪುತ್ರವತಿಯರಾಗುವ ಗೃಹಿಣಿಯರಿಗೆ ಇಹಪರದಲ್ಲಿ ಸುಖಸಾಧನವಾದ ವಿಷಯಗಳನ್ನು ಸಂಗ್ರಹರೂಪವಾಗಿ ಬೋಧಿಸಿ ಯಥೋಚಿತ ವಿದ್ಯಾಭ್ಯಾಸವನ್ನು ಮಾಡಿಸುವುದು ಸಾಕಾಗಿದೆಯೆಂದು ಅಭಿಪ್ರಾಯಪಡುವುದುತ್ತಮವು. ಸ್ತ್ರೀವಿದ್ಯಾಭ್ಯಾಸವೇ ಕೂಡದೆಂದು ಹೇಳುವುದು ಎಂದಿಗೂ ಉಚಿತವಲ್ಲ. ಏಕೆಂದರೆ ಸ್ತ್ರೀಯು ಪಶುವಲ್ಲ; ಮನುಷ್ಯಳಾಗಿ ಪುರುಷನ ಅರ್ಧಾಂಗಿಯೆನಿಸಿರುವಳು. (ಸಶೇಷ.)

ಅವಶ್ಯಕ ಸೂಚನೆಯು.

ಸಮಸ್ತ ಜೈನಬಂಧುಗಳಿಗೆ ವಿನಯಪೂರ್ವಕವಾಗಿ ಬಿನ್ನೈಸುವುದೇನೆಂದರೆ- ಬರುವ ೧೯೧೧ ನೆಯ ಇಸವಿಯಲ್ಲಿ ಎಲ್ಲ ಹಿಂದೂಸ್ಥಾನದ ಮನುಷ್ಯ ಗಣನೆಯು (ಖಾನೇಸುಮಾರಿಯು) ಸರಕಾರದವರಿಂದ ಆಗತಕ್ಕದ್ದಿದೆ. ಆ ಕಾಲಕ್ಕೆ ಲಿಕ್ಕಿಗರು (ಮಾಹಿತಿಯನ್ನು ಬರೆದುಕೊಳ್ಳುವವರು) ಬಂದು, ನಿಮ್ಮ ಧರ್ಮ, ಜಾತಿಗಳನ್ನು ಕೇಳಿದರೆ, ಅವರಿಗೆ ನಮ್ಮ ಧರ್ಮವು "ದಿಗಂಬರ ಜೈನ" ಎಂದು ಹೇಳಬೇಕು. ಜಾತಿಯ ವಿಷಯವಾಗಿ ಹುಮ್ಮಡ, ಕಾಸಾರ (ಬೋಗಾರ), ಸೇತವಾಳ, ಚತುರ್ಥ, ಪಂಚಮ, ಅಗ್ರವಾಲ, ಖಂಡೇಲವಾಲ, ಬಕೈಯಾ, ಜೈಸವಾಲ, ಪರವಾರ, ಲಮೇಚೂ ಇವುಗಳಲ್ಲಿ ಯಾವದು ಅದೆ, ಅದನ್ನು ಹೇಳಬೇಕು. ಹೀಗೆ ಹೇಳಿದ ಧರ್ಮ ಅಂದರೆ ಸಾಮಾನ್ಯವಾಗಿ "ಹಿಂದು" ಎಂದೂ, ಜಾತಿ ಅಂದರೆ ಗೋತ್ರ ಇಲ್ಲವೆ ವೈಶ್ಯ ಎಂದೂ ಈ ಮೇರೆಗೆ ವ್ಯಾಪಕ ಶಬ್ದಗಳನ್ನು ಹೇಳಬಾರದು. ಹೀಗೆ ಮಾಡುವುದರಿಂದ ಅನಾಯಾಸವಾಗಿ ಖಾನೇಸುಮಾರಿಯ ಯೋಗದಿಂದ ನಮ್ಮ ಸಮಾಜದ ಜನಸಂಖ್ಯೆ ಎಷ್ಟೆಂಬುದು ನಿಜವಾಗಿ ಗೊತ್ತಾಗುವುದು ಅದರಲ್ಲಿ ಯಾವ ಪ್ರಕಾರದ ತಪ್ಪಾಗುವ ಸಂಭವವಿಲ್ಲ.

ಸಮಾಜಹಿತೈಷಿ,
ಮಾಣಿಕಚಂದ ಹಿರಾಚಂದ ಜೆ. ಪಿ.
ಹಿರಾಬಾಗ-ಮುಂಬಯಿ.

ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ಹದಿಮೂರನೇ ಅಧಿವೇಶನವು.

(ಹೋದಸಂಚಿಕೆಯ ಶೇಷ.)

ಎರಡನೇ ದಿವಸ (ತಾ|| ೨೧-೨-೧೯೧೧) ಮುಂಜಾನೆ ಸಬ್‌ಜೆಕ್ಟ್ ಕಮಿಟಿಯು ಸಭೆಯು ಕೂಡಿ ಸಭೆಯ ಮುಂದೆ ಇಡುವ ಠರಾವಗಳ ವಿಚಾರ ಮಾಡಲ್ಪಟ್ಟು ಮಧ್ಯಾಹ್ನ ೨|| ಗಂಟೆಗೆ ಸಭಾಕಾರ್ಯಕ್ಕೆ ಪ್ರಾರಂಭವಾಯಿತು. ಈ ದಿವಸ ಸಾಂಗಲಿ ಸಂಸ್ಥಾನದ ಪ್ರಭುಗಳು ಸಭೆಗೆ ಬರುವುದು ಮೊದಲೇ ಗೊತ್ತಾದ ಮೂಲಕ ಸಭಾಗೃಹವು ಪ್ರೇಕ್ಷಕರಿಂದ ತುಂಬಿ ತುಳುಕುತ್ತಿತ್ತು. ಮೊದಲು ಮಂಗಲ ಪದ್ಯಗಳು ಹಾಡಲ್ಪಟ್ಟಮೇಲೆ ಅಧ್ಯಕ್ಷರು ಕೆಳಗೆ ಬರೆದ ಠರಾವುಗಳನ್ನು ಸಭೆಯ ಮುಂದೆ ಇಟ್ಟರು. (೧) ಹಿಂದೂಸ್ಥಾನದ ಶಾಂತತಾಪ್ರಿಯ ಬಾದಷಹರಾದ ಸಪ್ತಮ ಎಡ್ವರ್ಡರವರ ಮರಣವು ಜೈನಸಮಾಜದ ದುಃಖಕ್ಕೆ ಕಾರಣವಾಗಿದೆ. ಆದುದರಿಂದ ಈ ಸಭೆಯು ಈ ಠರಾವದ ಮೂಲಕ ದುಃಖಪ್ರದರ್ಶನ ಮಾಡುತ್ತದೆ. (೨) ಹಿಂದೂಸ್ಥಾನದ ಪರಮಪೂಜ್ಯ ಬಾದಷಹರಾದ ಪಂಚಮ ಜಾರ್ಜರವರ ಸಿಂಹಾಸನಾರೋಹಣದ ಮೊದಲನೇ ವರ್ಷದಲ್ಲಿ ಈ ಸಭೆಯು ಎಲ್ಲ ಜೈನಸಮಾಜದ ವತಿಯಿಂದ ರಾಜನಿಷ್ಠಾಪೂರ್ವಕವಾಗಿ (ನಮ್ರತ್ವದಿಂದ) ಅಭಿನಂದನ ಮಾಡುತ್ತದೆ. ಮತ್ತು ಇವರ ಶಾಸನಕಾಲವು ದೇಶಕ್ಕೆ ಸುಖಕರ ಮತ್ತು ವೈಭವಸಂಪನ್ನವಾಗಲೆಂದು ಹಾರೈಸುತ್ತದೆ. (೩) ಸೊಲ್ಲಾಪುರದ ಪ್ರಸಿದ್ಧ ನಾಗರಿಕ ಮತ್ತು ಲಿಂಗಾಯತ ಸಮಾಜದ ಪ್ರಮುಖಪುಢಾರಿಗಳಾದ ರಾವ್‌ಬಹದ್ದೂರ್ ಅಪ್ಪಾಸಾಹೇಬ ವಾರದ ಹಾಗೂ ಕುರಲಿಯ ಪ್ರಸಿದ್ಧ ಲಿಂಗಾಯತ ಸಾವಕಾರ ರಾ|| ರಾ|| ಅಪ್ಪಯ್ಯಅಣ್ಣ ಶಂತ್ರಿ ಮತ್ತು ಕೊಲ್ಲಾಪುರದ ಪ್ರಖ್ಯಾತ ಜೈನವ್ಯಾಪಾರಿಗಳಾದ ರಾ|| ರಾ|| [illegible] ಇವರ ಮರಣಕ್ಕಾಗಿ ಈ ಸಭೆಗೆ ಬಹಳ ದುಃಖವಾಗುತ್ತದೆ.

ಈಪ್ರಕಾರ ಠರಾವು ಸರ್ವಾನುಮತಿಯಿಂದ ಪಾಸಾದನಂತರ ಸೊಲ್ಲಾಪುರದ ರಾ|| ರಾ|| ಶೇಠ ವಾಲಚಂದ ರಾಮಚಂದ ಗಾಂಧಿಯವರು ೪ ನೇ ಠರಾವನ್ನು ಈ ಪ್ರಕಾರ ಇಟ್ಟರು.— "ಪ್ರಸಿದ್ಧ ಜೈನಕ್ಷೇತ್ರವಾದ ಶ್ರೀ ಸಮ್ಮೇದಶಿಖರಜೀ ಪವಿತ್ರ ಗುಡ್ಡದ ಮೇಲೆ ಯಾವ ಪ್ರಕಾರದ ಅನಾಚಾರ ಆಗದಹಾಗೆ ಹಿಂದೂಸ್ಥಾನ ಸರಕಾರದವರು ತಜವೀಜು ಮಾಡಿದ್ದಕ್ಕಾಗಿ ಈ ಸಭೆಯು ಅವರ ಆಭಾರಮನ್ನಿಸಿ, ಹೀಗೆ ಸೂಚನಾಮಾಡುತ್ತದಲ್ಲ– ಈ ಕ್ಷೇತ್ರದ ಸಲುವಾಗಿ ಶ್ವೇತಾಂಬರ ಮತ್ತು ದಿಗಂಬರ ಜೈನರಲ್ಲಿ ಬಂದ ವಿರೋಧವನ್ನು ನಿರ್ಮೂಲ ಮಾಡುವುದಕ್ಕಾಗಿ ಒಂದು ಕಮಿಶನವನ್ನು ನಿಯಮಿಸಿ ಆ ಮೂಲಕ ಸರಕಾರದವರು ಅವರ ವಿರೋಧವನ್ನು ಹೋಗಲಾಡಿಸಬೇಕಾಗಿ ಈ ಸಭೆಯು ಪ್ರಾರ್ಥನೆ ಮಾಡುತ್ತದೆ."

ಈ ಠರಾವ ಪಾಸಾದನಂತರ ಸೊಲ್ಲಾಪುರದ ರಾ|| ರಾ|| ಶೇಠ ಮಾಣಿಕಚಂದ ಮಿಯಾಚಂದರವರು ೬ ನೇ ಠರಾವನ್ನು ಸಭೆಯ ಮುಂದೆ ಇಟ್ಟದ್ದು ಹೇಗೆಂದರೆ–"ಪ್ರಾಣಿವಧ ಬಂದುಮಾಡುವುದರ ಸಲುವಾಗಿ ಮೊದಲಿನ ಕೆಲ ಬಾದಷಹರು ಮತ್ತು ಈಗಿನ ಕೆಲ ಸಂಸ್ಥಾನಿಕರು ಕೊಟ್ಟ ಹುಕುಮ್ಮಿಗಾಗಿ ಈ ಸಭೆಯು ಅವರ ಅಭಿನಂದನ ಮಾಡುತ್ತದೆ. ಮತ್ತು ಇದೇ ಮೇಲುಪಟ್ಟಿಯನ್ನು ಅನುಸರಿಸಿ ನಮ್ಮ ದಯಾಳು ಬಾದಷಹರಾದ ಪಂಚಮ ಜಾರ್ಜರವರಾದರೂ ತಮ್ಮ ರಾಜ್ಯದಲ್ಲಿ ವಿಶಿಷ್ಟಕಾಲಕ್ಕೆ ಯಾವ ಬಗೆಯ ಜೀವಹಿಂಸೆಯೂ ಆಗದಹಾಗೆ ಕಟ್ಟಳೆಯನ್ನು ಮಾಡುವರೆಂದು ಈ ಸಭೆಯು ನಂಬಿರುತ್ತದೆ. ಈಬಗ್ಗೆ ಬಾದಷಹರ ಕಡೆಗೆ ಅರ್ಜಿಯ ಮೂಲಕ ವಿನಂತಿ ಮಾಡುವುದಕ್ಕಾಗಿ (೧) ಶೇಠ ಮಾಣಿಕಚಂದ, (೨) ರಾ|| ಸಾ|| ಚೌಗುಲೆ ವಕೀಲ ಮತ್ತು (೩) ರಾ|| ಭರಮಗೌಡ ಪಾಟೀಲ ಇವರ ಕಮಿಟಿಯು ಸ್ಥಾಪಿಸಲ್ಪಡುತ್ತದೆ." ಈ ಠರಾವಕ್ಕೆ ಅನುಮೋದನ ಕೊಡುವಾಗ್ಗೆ ಧುಳೇ (ಖಾನದೇಶ) ಯಲ್ಲಿ ಸ್ಥಾಪಿತವಾದ ಪ್ರಾಣಿರಕ್ಷಕ ಸಂಸ್ಥೆಯ ಇನ್ಸ್ಪೆಕ್ಟರಾದ ರಾ|| ಸಖಾರಾಮ ವಿಷ್ಣುಗುರ್ಜರವರು ತಮ್ಮ ಸಂಸ್ಥೆಯ ಪ್ರಯತ್ನದಿಂದ ದಸರಾ ಮುಂತಾದ ಸಾರ್ವಜನಿಕ ಜಾತ್ರೆಯಲ್ಲಿ ಆಗುತ್ತಿದ್ದ ಸುಮಾರು ೨೦೦೦ ಪಶುಗಳ ಜೀವಹಿಂಸೆಯು ನಿಲ್ಲಿಸಲ್ಪಟ್ಟಿತೆಂದು ಹೇಳಿದರು.

ನಂತರ ೭ ನೇ ಠರಾವನ್ನು ರಾ|| ರಾವಜಿ ಸಖಾರಾಮ ದೋಶಿ ಸೊಲ್ಲಾಪುರ ಇವರು ಮುಂದೆ ಕಾಣಿಸಿದಂತೆ ಸೂಚಿಸಿದರು.— "ಯಾವುದೊಂದು ಸಮಾಜದ ಸುಧಾರಣೆಯೂ ಪ್ರಾಥಮಿಕ ಶಿಕ್ಷಣದಮೇಲೆ ಅವಲಂಬಿಸಿರುತ್ತದೆ. ಆದುದರಿಂದ ಜೈನಸಮಾಜದವರು ತಮ್ಮಲ್ಲಿ ಒಬ್ಬ ಮನುಷ್ಯನಾದರೂ ನಿರಕ್ಷರನಿರಬಾರದೆಂದು ಪ್ರಯತ್ನ ಮಾಡಬೇಕು ಮತ್ತು ಈ ಸಂದರ್ಭದಲ್ಲಿ ಮುಂದಿನ ವರ್ಷದ ತನಕ ಎಷ್ಟು ಪ್ರಯತ್ನ ಮಾಡಲ್ಪಟ್ಟಿತು. ವಗೈರೆ ಮಾಹಿತಿಯನ್ನು ಮಹಾರಾಷ್ಟ್ರದಲ್ಲಿಯ ಪ್ರತಿಯೊಂದು ಗ್ರಾಮದಿಂದ ತರಿಸಿ ರಿಪೋರ್ಟ ತಯಾರುಮಾಡುವುದಕ್ಕಾಗಿ ರಾ|| ರಾವಜಿ ಸಖಾರಾಮ ದೋಶಿ (ಸೋಲಾಪೂರ) ಇವರನ್ನು ಸೆಕ್ರೆಟರಿಯಾಗಿ ನಿಯಮಿಸಬೇಕು." ಈ ಠರಾವಾದಮೇಲೆ ರಾ|| ದೇವಧರ (ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಮೆಂಬರ) ಇವರ ಸುವ್ಯಕ್ತಭಾಷಣವಾಯಿತು. ಅವರು ಕೆಲ ರಾಷ್ಟ್ರದ ಪ್ರಾಥಮಿಕ ಶಿಕ್ಷಣದ ಇತಿಹಾಸವನ್ನು ಹೇಳಿ ಅದರ ಮಹತ್ವವನ್ನು ಜೈನ ಸಮಾಜದವರ ಮುಂದೆ ಚನ್ನಾಗಿ ಇಟ್ಟರು.

ಇಷ್ಟಾದಬಳಿಕ ಸಾಂಗಲಿ ಸಂಸ್ಥಾನದ ಅಧಿಪತಿಗಳಾದ ಶ್ರೀಮಂತ ಅಪ್ಪಾಸಾಹೇಬರವರ ಸ್ವಾರಿಯು ತಮ್ಮ ಅಧಿಕಾರಿವರ್ಗದ ಸಮೇತ ಸಭಾಗೃಹದಲ್ಲಿ ಪ್ರವೇಶಿಸಿತು. ಆಗ್ಗೆ ಎಲ್ಲ ಸಭಾಸದರೂ ಉತ್ಥಾಪನಪೂರ್ವಕ ಚಪ್ಪಾಳಿಯ ಧ್ವನಿಯಿಂದ ಅವರ ಸ್ವಾಗತಮಾಡಿದರು. ನಂತರ ಪ್ರೊ|| ಲಠ್ಠೆ ಎಂ. ಎ, (ಕೊಲ್ಲಾಪುರ ಇಲಾಖೆಯ ಎಜ್ಯುಕೇಶನಲ್ ಇನ್ಸ್ಪೆಕ್ಟರ) ಇವರು ೮ ನೇ ಠರಾವನ್ನು ಈ ಪ್ರಕಾರ ಮುಂದೆ ಇಟ್ಟರು.—"ಸಾಂಗಲಿಯಲ್ಲಿ ಈ ಸಲದ ಜೈನಸಭೆಯನ್ನು ಕೂಡಿಸುವ ಕೆಲಸದಲ್ಲಿ ಶ್ರೀಮಂತ ಚಿಂತಾಮಣಿರಾವ ಅಪ್ಪಾಸಾಹೇಬ ಸಾಂಗಲಿಕರ ಇವರು ಜೈನಜನರ ಮೇಲೆ ಪ್ರೇಮಭಾವವನ್ನು ಇಟ್ಟು ಎಲ್ಲಪ್ರಕಾರದಿಂದ ಸಹಾಯ ಮಾಡಿದರು. ಅದಕ್ಕಾಗಿ ಎಲ್ಲ ಜೈನಸಮಾಜವು ಅವರಿಗೆ ಕೃತಜ್ಞವಾಗಿರುತ್ತದೆ."

ಈ ಪ್ರಕಾರ ಠರಾವ ಪಾಸಾದನಂತರ ಶ್ರೀಮಂತ ಅಪ್ಪಾಸಾಹೇಬರು ಇಂಗ್ಲೀಷಿನಲ್ಲಿ ಒಂದು ಅಸ್ಖಲಿತ ಭಾಷಣ ಮಾಡಿ ಜೈನಸಮಾಜದ ಉನ್ನತಿಯ ಪ್ರಯತ್ನದಲ್ಲಿ ತಮಗೆ ಇದ್ದ ಸಹಾನುಭೂತಿಯನ್ನು ತೋರಿಸಿದರು. ಮತ್ತು ತಮ್ಮಿಂದ ಆದಷ್ಟುಮಟ್ಟಿಗೆ ತಮ್ಮ ರಾಜ್ಯದ ಜೈನಪ್ರಜೆಗಳಲ್ಲಿ ಶಿಕ್ಷಣಪ್ರಸಾರವು ಶೀಘ್ರದಲ್ಲಿ ಆಗುವಹಾಗೆ ಯತ್ನಿಸುವೆವು ಎಂದು ಆಶ್ವಾಸನಕೊಟ್ಟರು. ನಂತರ ಅವರಿಗೆ ಪುಷ್ಪಹಾರ ಮುಂತಾದುವನ್ನು ಹಾಕಿ ತಾಂಬೂಲವು ಕೊಡಲ್ಪಟ್ಟಮೇಲೆ ಅವರ ಸ್ವಾರಿಯು ಆನಂದದಿಂದ ಸ್ವಸ್ಥಾನಕ್ಕೆ ತೆರಳಿತು.

ನಂತರ ಶ್ರೀಯುತ ತಾತ್ಯಾರಾವ ಬೋಪಳೆ (ಜೈನಕೀರ್ತನಕಾರ, ಭಿಲವಡಿ) ಇವರು ೯ ನೇ ಠರಾವ ಮುಂದೆ ಇಟ್ಟದ್ದೇನೆಂದರೆ— "ಸ್ತ್ರೀಯರಿಗೆ ಸಂಸಾರಸುಧಾರಣೆಯ

ದ ಅವರಿಗೆ ಯೋಗ್ಯವಾದ ವ್ಯವಹಾರಿಕ ಮತ್ತು ಧಾರ್ಮಿಕ ಶಿಕ್ಷಣ ಕೊಡಲ್ಪಡಬೇಕು." ಈ ಠರಾವದಮೇಲೆ ಪುಣೆ ಸೇವಾಸದನದಿಂದ ಬಂದಂಥ ಶ್ರೀಮತಿ ಅನ್ನಪೂರ್ಣಾಬಾಯಿ ಆಪಟೆಯವರ ಉತ್ಸಾಹಪೂರ್ಣ ಭಾಷಣವಾಯಿತು. ತರುವಾಯ ಪಂಡಿತ ಕಲ್ಲಪ್ಪ ಭರಮಪ್ಪ ನಿಟವೆ (ಕೊಲ್ಲಾಪುರ) ೧೦ ನೇ ಠರಾವ ಇಟ್ಟದ್ದು ಈಮೇರೆಗೆ— "ವಿವಾಹವೆಂದರೆ ಸಂಸಾರದ ಮೂಲಾಧಾರವು. ಆದುದರಿಂದ ಜೈನಸಮಾಜದವರು ವಿವಾಹದ ಕಾಲಕ್ಕೆ ಮುಂದೆ ಕಾಣಿಸಿದ ನಿಯಮಗಳನ್ನು ಅನುಷ್ಠಾನಕ್ಕೆ ತರಬೇಕು. (೧) ವಧೂವರರು ಪ್ರೌಢವಯಸ್ಕರಾಗದ ಹೊರತು ಅವರ ವಿವಾಹ ಮಾಡಬಾರದು. (೨) ವಿವಾಹಪ್ರಸಂಗದಲ್ಲಿ ಮದ್ದುಹಾರಿಸುವುದು, ವೇಶ್ಯಾನೃತ್ಯಮಾಡಿಸುವುದು ನಿಲ್ಲಿಸಬೇಕು. (೩) ವೃದ್ಧವಿವಾಹ ಮತ್ತು ಅದರಲ್ಲಿಯೂ ಜರಠಕುಮಾರೀ ವಿವಾಹ ಮಾಡಕೂಡದು. (೪) ವರದಕ್ಷಿಣೆಯ ಬಗ್ಗೆ ದುರಾಗ್ರಹ ಹಿಡಿಯಬಾರದು. ಮತ್ತು ವಧೂದಕ್ಷಿಣೆ (ತೆರವು) ಯನ್ನು ತಕ್ಕೊಳ್ಳಬಾರದು." (ಸಶೇಷ.)

ನ್ಯಾಯವ್ಯವಸ್ಥೆ.

ಗಂಡನ ಸೊತ್ತನ್ನು ಅಡುವಿಡುವುದಕ್ಕೆ ಹೆಂಡತಿಗೆ ಅಧಿಕಾರ.

ಕೊಯಮತ್ತೂರು ಜಿಲ್ಲಾದಲ್ಲಿ ಒಬ್ಬ ಹಿಂದುವಿನ ಮೇಲೆ ವಾರಂಟು ಹುಟ್ಟಲಾಗಿ, ಅವನು ತನ್ನ ಹೆಂಡತಿಯ ಮತ್ತು ಅಪ್ರಾಪ್ತವಯಸ್ಕನಾದ ಮಗನ ಜೀವನಾಂಶಕ್ಕೆ ಯಾವ ಏರ್ಪಾಟನ್ನೂ ಮಾಡದೆ ತಲೆತಪ್ಪಿಸಿಕೊಂಡು ಹೋದನು. ಮಗನಿಗೆ ಪೋಷಕಳಾಗಿದ್ದ ತಾಯಿಯು ಕುಟುಂಬ ರಕ್ಷಣಾರ್ಥವಾಗಿ ತನ್ನ ಗಂಡನ ಸೊತ್ತುಗಳನ್ನು ಮತ್ತೊಬ್ಬನಲ್ಲಿ ಅಡುವಿಟ್ಟು ಸಾಲ ತೆಗೆದಳು. ಸ್ವಲ್ಪಕಾಲದ ಮೇಲೆ ಗಂಡನು ಬಂದು, ತನ್ನಮೇಲೆ ಹುಟ್ಟಿದ್ದ ಕ್ರಿಮಿನಲ್ ವಾರಂಟಿನ ವ್ಯಾಜ್ಯದಲ್ಲಿ ಸಮಾಧಾನ ಮಾಡಿಕೊಂಡು, ಆ ವ್ಯಾಜ್ಯವನ್ನು ತಂದಿದ್ದವಳ ಗಂಡನಿಗೆ ತನ್ನ ಸೊತ್ತುಗಳನ್ನು ಕ್ರಯಮಾಡಿದನು. ಅದೇ ಸೊತ್ತು ಮೊದಲು ಹೆಂಡತಿಯಿಂದ ಈಡುಮಾಡಲ್ಪಟ್ಟಿದ್ದುದರಿಂದ, ಅಡುವಿಟ್ಟುಕೊಂಡಿದ್ದವನನ್ನೂ ಪಾರ್ಟಿಯಾಗಿ ಸೇರಿಸಿ, ಕ್ರಯದಾರನು ಸೊತ್ತಿನ ಸುಪರ್ದಿಗಾಗಿ ವ್ಯಾಜ್ಯವನ್ನು ತಂದನು. ಅಪ್ರಾಪ್ತವಯಸ್ಕನಾದ ಮಗನ ಹಕ್ಕುಬಾಧ್ಯತೆಗಳನ್ನು ಪ್ರತ್ಯೇಕಪಡಿಸದೆಯೂ, ಕುಟುಂಬನಿರ್ವಹಣಾರ್ಥವಾಗಿ ಅಡುಮಾನಮಾಡಿದ ಸೊತ್ತುಗಳನ್ನು ಮೊದಲು ಬಿಡಿಸಿಕೊಳ್ಳದೆಯೂ, ಅಂಥ ಸೊತ್ತುಗಳನ್ನು ಬರಮಾಡಿಕೊಳ್ಳಲು ಆಗುವುದಿಲ್ಲವೆಂದು ಡಿ|| ಮುನ್ಸೀಫರು ತೀರ್ಮಾನಿಸಿದರು. ಇದರಮೇಲೆ ಜಿಲ್ಲಾ ಕೋರ್ಟಿಗೆ ಅಪ್ಪೀಲಾಯಿತು. ಗಂಡನಿಲ್ಲದಿರುವಾಗ ಹೆಂಡತಿಯು ಅಪ್ರಾಪ್ತವಯಸ್ಕನಾದ ಮಗನಿಗೆ ಕ್ರಮವಾದ ಪೋಷಕಳಾಗುವುದಿಲ್ಲವೆಂದೂ, ಸೊತ್ತುಗಳನ್ನು ಅಡುವಿಡುವುದಕ್ಕೆ ಅವಶ್ಯಕತೆಯಿದ್ದರೂ ಇಲ್ಲದೆಹೋದರೂ, ಆಕೆಯು ಗಂಡನ ಸೊತ್ತುಗಳನ್ನು ಅಡುಮಾನವಿಡಕೂಡದೆಂತಲೂ, ಅಲ್ಲಿ ತೀರ್ಮಾನವಾಯಿತು. ಇದರ ಮೇಲೆ ಹೈಕೋರ್ಟಿಗೆ ಅಪ್ಪೀಲಾಯಿತು. ಅಲ್ಲಿ ತಾಯಿಯು ಮಗನಿಗೆ ಸಹಜವಾದ ಪೋಷಕಳೆಂತಲೂ, ಗಂಡನಿಲ್ಲದಿರುವ ಕಾಲದಲ್ಲಿ ಕುಟುಂಬ ರಕ್ಷಣಾರ್ಥವಾಗಿ ಸೊತ್ತುಗಳನ್ನು ಅಡುಮಾನವಿಡುವುದಕ್ಕೆ ಹೆಂಡತಿಗೆ ಅಧಿಕಾರವುಂಟೆಂತಲೂ, ವಕೀಲರಿಂದ ವಾದಿಸಲ್ಪಡಲು, ಅದಕ್ಕೆ ನ್ಯಾಯಾಧಿಪತಿಗಳು ಒಪ್ಪಿ, ಡಿ|| ಮುನ್ಸೀಫರ ತೀರ್ಮಾನವನ್ನು ಸ್ಥಿರಗೊಳಿಸಿ, ಜಿಲ್ಲಾ ಜಡ್ಜಿಯರ ಅಭಿಪ್ರಾಯವನ್ನು ತಿರಸ್ಕರಿಸಿ, ತೀರ್ಮಾನವನ್ನು ಕೊಟ್ಟರು.

ಕಲ್ಲರು.

ತಂಜಾವೂರು ಜಿಲ್ಲೆಯಲ್ಲಿ ಕಲ್ಲರು ಎಂಬ ಹೆಸರಿನ ಒಂದು ಜಾತಿಯ ಜನರಿರುವರು. ಅವರು ತಮ್ಮ ಹೆಣ್ಣುಮಕ್ಕಳಿಗೆ ೧೬ ವರ್ಷ ತುಂಬುವವರೆಗೂ ಮದುವೆಯನ್ನೇ ಮಾಡುವುದಿಲ್ಲ. ಆ ಜಾತಿಯ ಗಂಡುಮಕ್ಕಳು ೨೦-೨೪ ವರ್ಷದವರೆಗೂ ಮದುವೆಯಾಗಿರುವುದಿಲ್ಲ. ಅವರಲ್ಲಿ ವಿತಂತು ವಿವಾಹವು ಪರಿತ್ಯಜಿಸಲ್ಪಟ್ಟಿರುವುದಿಲ್ಲ. ಆದರೆ ಬಾಲವಿತಂತುಗಳು ಆ ಜಾತಿಯಲ್ಲಿ ಹುಡುಕಿದರೂ ಕಣ್ಣಿಗೆ ಒಬ್ಬರೂ ಸಿಕ್ಕುವಹಾಗಿಲ್ಲ. ಅವರು ಬಲಶಾಲಿಗಳಾಗಿದ್ದಾರೆ. ಬ್ರಾಹ್ಮಣರ ಮಕ್ಕಳನ್ನೂ ಈ ಜಾತಿಯವರ ಮಕ್ಕಳನ್ನೂ ದೇಹಬಲದ ವಿಷಯದಲ್ಲಿ ಹೋಲಿಸುವುದಾದರೆ ಸೊಳ್ಳೆಗೂ ಆನೆಗೂ ಎಷ್ಟು ತಾರತಮ್ಯವಿರುವುದೊ ಹಾಗೆ ತೋರುವುದು. ಆದುದರಿಂದ ವಿವಾಹವಿಷಯದಲ್ಲಿ ಇವರ ಪದ್ಧತಿಯನ್ನನುಸರಿಸುವುದು ಎಲ್ಲರಿಗೂ ಕರ್ತವ್ಯವು. ಇವರು ಹಿಂದುಗಳೇ ಆಗಿರುವರು. ಇಂಥ ಸಂಪ್ರದಾಯವಿರುವುದನ್ನು ನೋಡಿದರೆ ನಮ್ಮ ಶಾಸ್ತ್ರಗಳಲ್ಲಿ ಯುವಕವಿವಾಹವಾಗಲೀ ಬಾಲವಿತಂತು ವಿವಾಹವಾಗಲೀ ನಿಷೇಧಿಸಲ್ಪಟ್ಟಿಲ್ಲವೆಂದು ತಿಳಿದುಕೊಳ್ಳಬಹುದಾಗಿದೆ. ಈ ಜಾತಿಯವರೇ ಅಲ್ಲ; ಕ್ಷತ್ರಿಯ ಶೂದ್ರಾದಿ ಎಷ್ಟೋ ವರ್ಗದವರಲ್ಲಿ

ವಿಷಯದಲ್ಲಿ ನಮ್ಮವರಿಗೆ ಈಗ ಧೈರ್ಯವುಂಟಾಗಬೇಕು. ಪ್ರತಿಯೊಬ್ಬ ವಿದ್ಯಾವಂತನೂ ಶ್ರೀಯುತ ವೀರೇಶಲಿಂಗರಂತಹವರನ್ನು ಅನುಕರಿಸುವುದಕ್ಕೆ ಪ್ರಯತ್ನಿಸಬೇಕು. ಮಾನುಷತ್ವವು (ಅಂದರೆ ಜೀವಕಾರುಣ್ಯವು) ಇಲ್ಲದವರು ಎಷ್ಟು ಓದಿ ಪಂಡಿತರಾಗಿದ್ದರೂ ಅವರು ಮೃಗಪ್ರಾಯರೇ. ಹಿಂದೂ ನಾರೀಮಣಿಗಳ ಮೇಲೆ ಬಂಧುಗಳು ದಯೆಯುಳ್ಳವರಾಗಿದ್ದರೆ, ಪರರ ಪರಿಹಾಸಕ್ಕೆ ಬೆದರದೆ, ಮುಂದಾಗಿ ಬಂದು ತಮ್ಮ ಮನಸ್ಸಿಗೆ ಸರಿಯೆಂದು ತೋರಿದ ಸದ್ವಿಷಯಗಳನ್ನು ತಮ್ಮ ಅನುಷ್ಠಾನಕ್ಕೆ ಸಂಪೂರ್ಣವಾಗಿ ತಂದು, ಇತರರಿಗೆ ಮಾರ್ಗದರ್ಶಕರಾಗುತ್ತ ಬರಬೇಕು. ದೇ.

ಮೈಸೂರ್ ಸ್ಟಾರ್.

೧೯೧೧ ನೇ ಮಾರ್ಚಿ ತಾ॥ ೬ ನೇ ಸೋಮವಾರ.

ಮಾದಕದ್ರವ್ಯ ಪ್ರಸಾರಣವು.

ಭರತಖಂಡದಲ್ಲಿ ದಿನೇದಿನೇ ಮದದ್ರವ್ಯಗಳ ಪ್ರಸಾರವು ಹೆಚ್ಚುತ್ತಲೇ ಬರುತ್ತಿರುವುದು ದೇಶಾಭಿಮಾನಿಗಳಿಗೆಲ್ಲಾ ಮನಸ್ಸಂಕಟಕರವಾಗಿದೆ. ಯಾವ ದೇಶಗಳಲ್ಲಿ ಮದದ್ರವ್ಯ ಸೇವನೆಯು ಸರ್ವಸಾಮಾನ್ಯ ಸಂಪ್ರದಾಯವಾಗಿ ಬಂದಿದ್ದಿತೊ ಅಂಥ ದೇಶಗಳೆಲ್ಲಾ ಈಚೀಚೆಗೆ ಮದದ್ರವ್ಯ ಸೇವನಾಪರಿಣಾಮಫಲದ ಭೀಕರತ್ವವನ್ನು ಕಂಡು, ಅದರ ನಿರೋಧಕ್ಕೆ ಅಸಮಸಾಹಸವನ್ನು ಮಾಡುತ್ತಿದ್ದಾರೆ. ಅಫೀಮಿನ ಗುಳಿಗೆಯನ್ನು ನುಂಗುವುದರಲ್ಲೇ ಮುಳುಗಿ ತೇಲುತ್ತಿದ್ದ ಚೀನಾದೇಶದಲ್ಲಿ ಅದರ ಸೇವನೆ ಮಾಡುವವರಿಗೆ ಶಿರಶ್ಛೇದ ರೂಪವಾದ ಭೀಕರದಂಡವು ವಿಧಿಸಲ್ಪಡುವುದೆಂದು ಅಲ್ಲಿನ ಸರ್ಕಾರದಿಂದ ಆಜ್ಞೆ ಮಾಡಲ್ಪಟ್ಟಿರುವುದು. ಅಷ್ಟು ಕಠಿನವಾದ ವಿಧಿಯನ್ನಾದರೂ ಮಾಡಿ ಆ ದುರ್ವ್ಯಸನವನ್ನು ನಿಲ್ಲಿಸಲು ಪ್ರಯತ್ನಿಸುವುದಕ್ಕೆ ಆ ಸರ್ಕಾರದವರಿಗೆ ಸ್ವಪ್ರಜೆಗಳ ಉದ್ಧಾರದ ವಿಷಯದಲ್ಲಿ ಇರುವ ಮಮಕಾರವೇ ಮುಖ್ಯಕಾರಣವು. ನಮ್ಮ ಭರತಖಂಡವಾದರೊ ಆಂಗ್ಲಪ್ರಭುಗಳ ಅಧಿಕಾರಕ್ಕೆ ಒಳಪಟ್ಟೀಚೆಗೆ ಮದದ್ರವ್ಯ ಸೇವನೆಯು ದಿನಕ್ರಮೇಣ ಮುಂದುಮುಂದಕ್ಕೆ ಅಡಿಯಿಡುತ್ತ ಬಂದಿರುವುದೇ ಹೊರತು ಪೂರ್ವದಲ್ಲಿದ್ದ ಸ್ಥಿತಿಯಲ್ಲಾದರೂ ಇರುತ್ತಿರುವುದಿಲ್ಲ. ಮದ್ಯಪಾನ ಮಾಂಸಭಕ್ಷಣಗಳು ತಾಮಸಾಹಾರಗಳೆಂದೂ, ಅವುಗಳನ್ನು ಸೇವಿಸುವವರು ಕನಿಷ್ಠವರ್ಣದವರೆಂದೂ, ಅವರ ಸಂಪರ್ಕ ಸಹವಾಸಗಳು ಉತ್ತಮರಿಗೆ ಯೋಗ್ಯವಲ್ಲವೆಂದೂ ಈ ದೇಶದಲ್ಲಿ ಪುರಾತನಕಾಲದಿಂದಲೂ ಧರ್ಮಶಾಸ್ತ್ರದ ಕಟ್ಟಲೆಗಳು ನಡೆದು ಬಂದಿರುವುವು. ಅದರಂತೆಯೇ ಪೂರ್ವಕಾಲದಲ್ಲಿ ದುಷ್ಪಾನದ ಅಭ್ಯಾಸವು ಈ ದೇಶದಲ್ಲಿ ಇರುತ್ತಿದ್ದರೂ ಕೀಳುಜನರಲ್ಲಿ ಮಾತ್ರ ಕಾಣ್ಬರುತ್ತಿದ್ದಿತು. ಈಗಲಾದರೊ ಉತ್ತಮವರ್ಣೀಯರಲ್ಲೂ ಅದು ನಾನಾವಿಧವಾಗಿ ಪ್ರಸರಿಸಿ ದೇಶವನ್ನೇ ಆಹುತಿ ತೆಗೆದುಕೊಳ್ಳುವ ಸ್ಥಿತಿಗೆ ಬರಬಹುದೆಂದು ಕಾಣುತ್ತಿದೆ. ಪೂರ್ವಕಾಲದಲ್ಲಿ ವಿದ್ಯಾವಂತರಾದ ಜನರು ಈ ದುರ್ವ್ಯಸನದ ನಿರೋಧಕ್ಕೆ ಸಹಾಯಕರಾಗಿ ವರ್ತಿಸುತ್ತಿದ್ದರು. ಈಗಿನ ಕಾಲದ ರಾಜಭಾಷಾಕೋವಿದರಲ್ಲಾದರೊ ಅದರ ಪ್ರೋತ್ಸಾಹಕ್ಕೆ ಸಹಾಯಕಾರಿಗಳಾಗಿರುವವರೇ ಹೆಚ್ಚು. ಪಾಮರರಿಗೆಲ್ಲಾ ವಿವೇಕವನ್ನು ಹೇಳಿ ಸನ್ಮಾರ್ಗಕ್ಕೆ ತಿರುಗಿಸಬಲ್ಲ ವಿದ್ಯಾವಂತರ ಪಾಡೇ ಹೀಗಾಗಿರುವುದು. ಇದರ ಮೇಲೆ ದೇಶವನ್ನಾಳುವ ಪ್ರಭುಗಳಾದರೂ ಪ್ರಜೆಗಳನ್ನು ಈ ದುರ್ವ್ಯಸನದಿಂದ ವಿಮುಖರನ್ನು ಮಾಡುವುದಕ್ಕೆ ಪ್ರಯತ್ನಿಸುವರೆ? ಎಂದು ಯೋಚಿಸಿದರೆ, ಈ ಮೂಲಕವಾಗಿ ಬರುವ ಉತ್ಪತ್ತಿಯನ್ನು ಅವರು ಬಿಡಲಾರದವರಾಗಿರುವ ಕಾರಣ, ಅವರ ಮೂಲಕವಾಗಿಯೂ ಇದರ ತಡೆಯುಂಟಾಗುವುದಕ್ಕೆ ಅವಕಾಶವಿಲ್ಲದೆ ಹೋಗಿರುವುದು. ಭರತಖಂಡದ ಸರ್ಕಾರಕ್ಕೆ ಕಳೆದ ೨೫ ವರ್ಷಗಳ ಕಾಲದಲ್ಲಿ ಮದದ್ರವ್ಯ ಶಾಖೆಯ ವರಮಾನದಲ್ಲಿ ಎಷ್ಟು ಹೆಚ್ಚು ಕಡಿಮೆಯುಂಟಾಗಿರುವುದೆಂಬ ಸಂಗತಿಯನ್ನು ಕುರಿತು ಕಾಮನ್ಸ್ ಸಭೆಯಲ್ಲಿ ಕೆಲ ತಿಂಗಳ ಕೆಳಗೆ ಒಬ್ಬ ಸಭಾಸತ್ತರರು ಪ್ರಶ್ನೆಮಾಡಲಾಗಿ, ಸರ್ಕಾರದ ಪಕ್ಷದಿಂದ ಕೊಡಲ್ಪಟ್ಟ ಉತ್ತರದಿಂದ ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಈ ಭಾಗದ ಉತ್ಪತ್ತಿಯು ವೃದ್ಧಿಯಾಗುತ್ತಲೇ ಇರುವುದೆಂದು ಗೊತ್ತಾಯಿತು.

ಹೇಗೆಂದರೆ:—

೧೮೭೪—೧೮೭೫ … …	೧೫೬೧೦೦೦
೧೮೮೪—೧೮೮೫ … …	೨೫೩೮೦೦೦
೧೮೯೪—೧೮೯೫ … …	೩೬೨೦೦೦೦
೧೯೦೪—೧೯೦೫ … …	೫೨೯೫೦೦೦
೧೯೦೫—೧೯೦೬ … …	೫೬೨೧೦೦೦
೧೯೦೬—೧೯೦೭ … …	೫೮೩೫೦೦೦
೧೯೦೭—೧೯೦೮ … …	೬೧೬೩೦೦೦
೧೯೦೮—೧೯೦೯ … …	೬೩೪೨೦೦೦
೧೯೦೯—೧೯೧೦ … …	೬೩೧೩೧೦೦

ವರ್ಷವರ್ಷ ಹೆಚ್ಚಬೇಕಾದರೆ, ಪ್ರಜೆಗಳಲ್ಲಿ ಕುಡಿಕತನವೂ ಅದರಂತೆಯೇ ಹೆಚ್ಚಾಗಿರಬೇಕೆಂದು ಸಿದ್ಧವಾಗುವುದಲ್ಲದೆ, ಇತರ ಕಾರಣಗಳೂ ಸಹ ಇರಬಹುದು. ಈ ವಿಷಯವನ್ನು ನಿಜವೆಂದು ಅನೇಕರಾಜನೀತಿ ಧುರಂಧರರು ಒಪ್ಪಿಕೊಂಡಿರುವರು. ೧೯೦೭ ನೆಯ ವರ್ಷದ ಆಗಸ್ಟ್ ತಿಂಗಳಲ್ಲಿ ಸ್ಟೇಟ್ ಸೆಕ್ರೆಟರಿಯವರಿಗೆ ಈ ವಿಷಯವಾಗಿ ಒಂದು ವಿಜ್ಞಾಪನ ಪತ್ರಿಕೆಯು ಹೋಗಿರಲು, ಅದಕ್ಕೆ ಅವರು ಕೊಟ್ಟ ಉತ್ತರದಲ್ಲಿ "ಜನಸಾಮಾನ್ಯದಲ್ಲಿ ಕೆಲವು ಜಾತಿಯವರೊಳಗೆ ಕುಡಿಕತನವು ಬೆಳೆಯುತ್ತಿದೆಯೆಂಬ ಸೂಚನೆಯನ್ನು ಸಮ್ಮತಿಸದೆ ಇರುವುದಕ್ಕಾಗುವುದಿಲ್ಲ. ನನ್ನ ಅಭಿಪ್ರಾಯದ ಪ್ರಕಾರವೇ ಈ ಸೂಚನೆಯ ಕಾರಣಗಳು ಸಾಧ್ಯವಾದಮಟ್ಟಿಗೆ ಕಂಡುಕೊಳ್ಳಲ್ಪಟ್ಟಿವೆ. ಅವೇನೆಂದರೆ— ಜನರಲ್ಲಿ ಭೌತಿಕಸಂಪದಭಿವೃದ್ಧಿಯಾಗಿರುವುದೂ, ಕೈಗಾರಿಕೆಯ ಬೆಳವಣಿಗೆಯೂ, ಕೂಲಿಗಾರರಿಗೆ ಹೆಚ್ಚು ಕೂಲಿ ಸಿಕ್ಕುತ್ತಿರುವುದೂ, ಪಾಶ್ಚಾತ್ಯವಿದ್ಯೆಯ ಅಭಿವೃದ್ಧಿಯಿಂದ ಜನಸಾಮಾನ್ಯದಲ್ಲಿ ಮಾದಕದ್ರವ್ಯ ಸೇವನೆಯ ವಿಷಯದಲ್ಲಿ ಸಾಮಾಜಿಕ ನಿರ್ಬಂಧಗಳು ಸಡಿಲವಾಗುತ್ತ ಬರುತ್ತಲಿರುವುದೂ ಸಹ ಕಾರಣಗಳಾಗಿವೆ" ಯೆಂದು ಹೇಳಿರುತ್ತಾರೆ. ಪಾಶ್ಚಾತ್ಯ ದೇಶಗಳನ್ನು ನೋಡಿದರೆ, ನಮ್ಮ ದೇಶದ ಭೌತಿಕಸಂಪದಭಿವೃದ್ಧಿಯೆಂಬುವುದು ಹಸ್ತಿಮಶಕನ್ಯಾಯವಾಗಿದೆ. ಹೆಚ್ಚು ಸಂಪತ್ತುಳ್ಳ ದೇಶಗಳೇ ಈ ದುರ್ವ್ಯಸನದ ಭಾರವನ್ನು ತಾಳಿಕೊಳ್ಳಲಾರದೆ ಪರಿತಪಿಸುತ್ತಿರುವಾಗ, ಬಡತನದಲ್ಲಿರುವ ಈ ದೇಶದ ಅವಸ್ಥೆಯನ್ನು ಹೇಳಬೇಕಾದುದೇನಿದೆ? ಕೂಲಿಗಳು ನಮ್ಮ ದೇಶದಲ್ಲಿ ಪೂರ್ವಕ್ಕಿಂತಲೂ ಈಗ ಸ್ವಲ್ಪಮಟ್ಟಿಗೆ ಹೆಚ್ಚಿರುವುದು ನಿಜ. ಆದರೂ ಪಾಶ್ಚಾತ್ಯ ರಾಷ್ಟ್ರಗಳ ಕೂಲಿಯನ್ನು ನೋಡಿದರೆ ಅಲ್ಲಿನ ೧೦ ನೇ ೧ ಭಾಗದಷ್ಟು ಇಲ್ಲಿನ ಕೂಲಿಯಾಗುತ್ತದೆ. ಜನಸಾಮಾನ್ಯನ ವರಮಾನವಾದರೂ ಅಲ್ಲಿ ಒಬ್ಬನಿಗೆ ೨೦ ರೂ. ವರಮಾನವಿದ್ದರೆ ಇಲ್ಲಿ ಒಬ್ಬನಿಗೆ ೧ ರೂ. ನಷ್ಟು ಇರುತ್ತದೆ. ಅಲ್ಪಸ್ವಲ್ಪವಾಗಿ ಪ್ರಜೆಗಳಲ್ಲಿ ಹೆಚ್ಚುತ್ತಿರುವ ವರಮಾನವೂ ಇಂಥ ದುರ್ವ್ಯಯಗಳ ಪಾಲಾದರೆ, ದೇಶವು ಯಾವ ರೀತಿಯಲ್ಲಿ ತಲೆಯೆತ್ತಬೇಕು? ಪಾಶ್ಚಾತ್ಯ ವಿದ್ಯಾಭ್ಯಾಸಿಗಳಿಂದಲೂ ಈ ದುರ್ವ್ಯಸನದ ವ್ಯಾಪನೆಯುಂಟಾಗುತ್ತಲಿದೆಯೆಂದೂ, ಅವರು ಈ ವಿಷಯದಲ್ಲಿ ಧಾರ್ಮಿಕ ನಿರ್ಬಂಧಗಳನ್ನು ಸಡಿಲ ಮಾಡುತ್ತಿರುವರೆಂದೂ ಸ್ಟೇಟ್ ಸೆಕ್ರೆಟರಿಗಳೇ ಸಾಕ್ಷ್ಯವನ್ನು ಹೇಳಿರುತ್ತಾರೆ. ಬೇಲಿಯೆದ್ದು ಹೊಲವನ್ನು ಮೇಯುವಾಗ ಇನ್ನು ಪೈರಿನ ರಕ್ಷಣೆಯಾಗುವುದು ಹೇಗೆ? ಮದದ್ರವ್ಯದಭಿವೃದ್ಧಿಗೆ ಸ್ಟೇಟ್ ಸೆಕ್ರೆಟರಿಗಳು ಹೇಳಿರುವ ಕಾರಣಗಳಲ್ಲಿ ಮುಖ್ಯವಾದುದೊಂದನ್ನು ಅವರು ಕೂಡ ಹೇಳದೆ ಬಿಟ್ಟಿರುತ್ತಾರೆ. ಅದೇನೆಂದರೆ—ಈ ದುರ್ವ್ಯಸನದ ನಿರೋಧಕ್ಕೆ ಸರ್ಕಾರದವರು ಯಾವ ಏರ್ಪಾಟನ್ನೂ ಮಾಡದೆಯಿರುವುದು. ತಮ್ಮ ತಪ್ಪನ್ನು ತಾವು ತೋರಿಸಿಕೊಳ್ಳುವುದಕ್ಕೆ ಎಂಥವರೂ ತಾವಾಗಿ ಮುಂದೆ ಬರಲಾರರಲ್ಲವೆ? ದೇಶಕ್ಷೇಮವನ್ನು ಕೋರುವುದಕ್ಕೆ ಆಳ್ವ ಪ್ರಭುಗಳೂ ಪ್ರಜಾಪ್ರಮುಖರೆನಿಸಿಕೊಳ್ಳುವ ವಿದ್ಯಾವಂತರುಗಳೂ ಸಹ ಮುಖ್ಯವಾಗಿ ತಾಯ್ತಂದೆಗಳಂತಿರುವರು. ಅವರೀರ್ವರೂ ಒಂದೊಂದು ಕಾರಣದಿಂದ ಈ ದುರ್ವ್ಯಸನದ ಪ್ರಸಾರಕ್ಕೆ ಪ್ರತ್ಯಕ್ಷಾಪ್ರತ್ಯಕ್ಷವಾಗಿ ಸಹಾಯಭೂತರೇ ಆಗಿರುವಾಗ ಇನ್ನು ಇದರ ವರ್ಚಸ್ಸು ತಗ್ಗುವುದು ಹೇಗೆ? ವರ್ಷಕ್ಕೊಂದುಸಲ ಮಾದಕದ್ರವ್ಯ ನಿರೋಧಕ ಸಭೆಯವರು ಅತ್ತ ಕಂಠಶೋಷಣೆಯನ್ನು ಮಾಡಿಕೊಳ್ಳುತ್ತಿರುವರು. ಅವರ ಕೂಗು ಗೌರ್ನಮೆಂಟಿನ ಕಿವಿಗೆ ಬಿದ್ದರೂ ಅವರು ಕೇಳದಂತೆಯೇ ಇರುವರು. ಇತ್ತ ಪುಣೆಯ ಮಧುಪಾನ ನಿಷೇಧಕ ಸಂಘದವರು ಮನಮುಟ್ಟಿ ಸಾಹಸ ಪಡುತ್ತಿರುವರು ಅದಕ್ಕೂ ಅನಂತ ವಿಘ್ನಗಳು ಕಲ್ಪಿಸಲ್ಪಡುತ್ತಿರುವುವು.

ಇಷ್ಟನ್ನೆಲ್ಲಾ ಪರಿಶೀಲಿಸುವಲ್ಲಿ ಮಾದಕದ್ರವ್ಯ ಪ್ರಸಾರಕ್ಕೆ ಈ ದೇಶದಲ್ಲಿ ಅವಕಾಶವು ಹೆಚ್ಚಾಗುತ್ತಲಿದೆಯೆಂದು ಕಾಣುವುದೇ ಹೊರತು ಕಡಿಮೆಯಾಗುವ ಚಿಹ್ನೆಯೇ ಕಾಣುವುದಿಲ್ಲ. ಆದರೂ ಇದು ಉಪೇಕ್ಷಿಸಲ್ಪಡತಕ್ಕ ವಿಷಯವಾಗಿಲ್ಲ. ಈ ದುರ್ವ್ಯಸನವು ತಡೆಯಲ್ಪಡದೆ ಹೋದರೆ ದೇಶವು ಭೀಕರವಾದ ದಾರಿದ್ರ್ಯನರಕದಲ್ಲಿ ಮುಳುಗಿಹೋಗುವುದು. ಅದುಕಾರಣ ದೇಶಾಭಿಮಾನವುಳ್ಳವರುಗಳು ಉದಾಸೀನರಾಗದೆ ತಕ್ಕ ಸಾಹಸವನ್ನು ಮಾಡುತ್ತ ಬರಬೇಕಾಗಿದೆ. ಧರ್ಮೋದ್ಧರಣ ದೀಕ್ಷಿತರಾದ ಮಠಪತಿಗಳು ಈ ವಿಷಯದಲ್ಲಿ ಚಟುವಟಿಕೆಯನ್ನು ತೋರಿಸಿ ಕೆಲಸಮಾಡಿ, ಅಲ್ಲಲ್ಲಿ ಜನರಿಗೆ ಬೋಧಿಸುತ್ತಲೂ, ಮದ್ಯಪಾಯಿಗಳಾಗಿ ಪ್ರಕಟಗೊಂಡ ಉತ್ತಮ ವರ್ಣೀಯರನ್ನು ಶಿಕ್ಷಿಸುತ್ತಲೂ ಬರಬೇಕು. ಪ್ರತಿಯೊಂದು ಸಮಾಜದವರೂ ತಮ್ಮ ತಮ್ಮವರು ಈ ದುರ್ವ್ಯಸನದಲ್ಲಿ ತಗುಲಿಕೊಂಡು ಮಾನಪ್ರಾಣವಿತ್ತಗಳನ್ನು ಹಾಳ್ಮಾಡಿಕೊಳ್ಳದಂತೆ ಅವರನ್ನು ಎಚ್ಚರಿಸುತ್ತಲೂ, ತಕ್ಕ ಕಟ್ಟುಗಳನ್ನು ಮಾಡಿಕೊಳ್ಳುತ್ತಲೂ ಬರಬೇಕು. ಪುಣೆಯಲ್ಲಿ ಸ್ಥಾಪಿಸಿರುವಂತಹ ಮಾದ್ಯಪಾನ ನಿಷೇಧಕ ಸಂಘಗಳನ್ನು ಮುಖಂಡರುಗಳು ಪ್ರತಿ ಮುಖ್ಯ ಪಟ್ಟ ... ಕೊಂಡು, ಇದರ ನಿರೋಧೋಪಾಯಗಳನ್ನು ಕಂಡುಹಿಡಿದು ಸರ್ಕಾರದವರಿಗೆ ಪದೇಪದೇ ಶ್ರುತಪಡಿಸಿ, ಅವರ ಸಹಾಯವನ್ನೂ ಪಡೆದುಕೊಂಡು ಇದನ್ನು ಅಣಗಿಸುವ ಕೆಲಸವನ್ನು ಮಾಡಬೇಕು. ಮುಖ್ಯವಾಗಿ ಪಾಶ್ಚಾತ್ಯ ಮಾದಕದ್ರವ್ಯವ್ಯಾಪಾರಕ್ಕೆ ಲೋಪಬರಗೊಡಿಸುವುದು ಆಂಗ್ಲಪ್ರಭುತ್ವದವರಿಗೆ ಇಷ್ಟವಾಗದೆ ಹೋಗಬಹುದಾದರೂ, ದೇಶೀಯ ಸಂಸ್ಥಾನದ ಪ್ರಭುಗಳಾದರೂ, ತಮ್ಮ ಜನ್ಮದೇಶದ ಅಭಿಮಾನಾತಿಶಯದಿಂದ ಈ ದುರ್ವ್ಯಸನದ ನಿರೋಧಕ್ಕೆ ಸಾಧ್ಯವಾದ ಏರ್ಪಾಡುಗಳನ್ನೆಲ್ಲಾ ಮಾಡಿಕೊಡದಿದ್ದರೆ ದೇಶವು ಎಂದಿಗೂ ಏಳ್ಗೆಗೆ ಬರಲಾರದು. ಈ ಭಾಗದಲ್ಲಿ ಗೌರ್ನಮೆಂಟಿಗೆ ನಷ್ಟವಾದರೂ, ಪ್ರಜೆಗಳು ಪುಷ್ಟರಾಗಲು ಕಾರಣವಾಗುವುದೆಂಬುದನ್ನರಿತು ಅದೇ ತಮ್ಮ ಲಾಭವೆಂಬುದನ್ನು ಮರೆಯದೆ ಈ ವಿಷಯದಲ್ಲಿ ಆಂಗ್ಲಸರ್ಕಾರದವರೂ ತಮ್ಮನ್ನು ಹಿಂಬಾಲಿಸುವಂತೆ ಮಾಡಿಕೊಳ್ಳುವುದು ಅತ್ಯಂತ ಶ್ರೇಯಸ್ಕರವು. ಈಗ ಲೋಕಪ್ರಿಯರಾದ ಬರೋಡಾ ಮಹಾರಾಜರವರೂ, ನಮ್ಮ ಶ್ರೀಮನ್ಮಹಾರಾಜರವರೂ ಸಹ ತಮ್ಮ ತಮ್ಮ ಸಂಸ್ಥಾನಗಳಲ್ಲಿ ಈ ಭಾಗದಲ್ಲಿ ಪ್ರಜೆಗಳಿಗಭಿಮತವಾದ ಒಂದೆರಡು ಏರ್ಪಾಡುಗಳನ್ನು ಮಾಡಿದ್ದಾರೆ. ಹೇಗೆಂದರೆ- ಬರೋಡಾ ಸಂಸ್ಥಾನದಲ್ಲಿ ಎಲ್ಲಾದರೂ ಜನಸಂಖ್ಯೆಯಲ್ಲಿ ೧೦೦ ಕ್ಕೆ ೬೦ ಮಂದಿಗಳು ಒಪ್ಪದೆ ಹೋದರೆ ಅಂಥ ಸ್ಥಲದಲ್ಲಿ ಮದದ್ರವ್ಯವನ್ನು ಮಾರುವ ಅಂಗಡಿಗಳನ್ನಿಡಿಸುವುದಕ್ಕೆ ಅಪ್ಪಣೆ ಕೊಡುವುದಿಲ್ಲವೆಂದು ಏರ್ಪಡಿಸಿದ್ದಾರೆ. ನಮ್ಮ ಮೈಸೂರು ಸರ್ಕಾರದವರು ಜಾತ್ರೆಗಳ ಕಾಲದಲ್ಲಿ ಈ ದುರ್ವ್ಯಸನದ ಹಾವಳಿಯನ್ನು ಸಾಧ್ಯವಾದಮಟ್ಟಿಗೂ ಕಡಿಮೆ ಮಾಡಬೇಕೆಂದು ಪ್ರಯತ್ನಿಸಿದ್ದಾರೆ. ಮದ್ಯದಂಗಡಿಗಳ ಉತ್ಪತ್ತಿಯನ್ನು ಹರಾಜು ಮೂಲಕ ವಿಕ್ರಯಿಸುತ್ತಿದ್ದುದನ್ನು ತಪ್ಪಿಸಿ, ಗುತ್ತಿಗೆಗೆ ಕೊಡುವ ಏರ್ಪಾಟನ್ನು ಪರೀಕ್ಷಾರ್ಥವಾಗಿ ಕೆಲವು ಕಡೆ ಮಾಡಿದ್ದಾರೆ. ಇಷ್ಟೇ ಸಾಲದು. ಮದ್ಯದಂಗಡಿಗಳನ್ನಿಡಿಸಲು ಅಪ್ಪಣೆಕೊಡುವ ಅಧಿಕಾರವು ರೆವಿನ್ಯೂ ಅಧಿಕಾರಿಗಳಿಗಿರುವುದರಿಂದ ಅವರು ಉತ್ಪತ್ತಿಯನ್ನು ಹೆಚ್ಚಿಸಿ ಮೇಲಿನವರ ಮನಸ್ಸಂತೋಷಗೊಳಿಸಬೇಕೆಂದು ಯತ್ನಿಸುವ ಕಾರಣ, ಆ ಅಧಿಕಾರವನ್ನು ರೆವಿನ್ಯೂ ಅಧಿಕಾರಿಗಳಿಂದ ಕೈತಪ್ಪಿಸಬೇಕು. ಮತ್ತೂ ಹೆಚ್ಚು ಜನರು ನಿಷೇಧಿಸುವ ಸ್ಥಲಗಳಲ್ಲಿ ಇದರಂಗಡಿಗಳನ್ನು ಇರಿಸದಂತೆಯೂ ಯಾವುದೊಂದು ಜಾತ್ರೆಗೂ (ಪರಿಶುದ್ಧವಾದ ದೇವತಾಸೇವೆಯ ಸಮಯವಾದುದರಿಂದ) ಮದ್ಯದಂಗಡಿಗಳು ಇರಿಸಲ್ಪಡದಂತೆ ಮಾಡುವುದಕ್ಕೂ ಸರ್ಕಾರದವರು ಪ್ರಯತ್ನಿಸಬೇಕು. ಹೀಗೆ ಸಾಧ್ಯವಾದ ಉಪಾಯಗಳನ್ನೆಲ್ಲಾ ಮಾಡಿ, ಈ ದುರ್ವ್ಯಸನವನ್ನು ಕಡೆದೊಲಗಿಸಿ ದೇಶವನ್ನುದ್ಧರಿಸಿದ ಪುಣ್ಯಕ್ಕೆ ಎಲ್ಲ ಸಂಸ್ಥಾನದ ಪ್ರಭುಗಳೂ ಪ್ರಜೆಗಳೂ ಸಹಭಾಗಿಗಳಾಗುವರೆಂದು ನಂಬುತ್ತೇವೆ.

ಒಳದೇಶದ ವೃತ್ತಾಂತ.

ಬೆಂಗಳೂರು ಪಬ್ಲಿಕ್ ಕಟ್ಟಡದಲ್ಲಿ ವೈದ್ಯುತ ದೀಪಗಳೂ, ಬೀಸಣಿಗೆಗಳೂ ಮಡಗಲ್ಪಡುತ್ತಿವೆ.

ನಂಜನಗೂಡಿನಲ್ಲಿ ಪ್ಲೇಗು ರೋಗವು ಪ್ರಾಪ್ತವಾಗಿ ಆಗಲೇ ಕೆಲ ಮರಣಗಳಾಗಿ ಜನರು ಊರನ್ನು ಬಿಡಯತ್ನಿಸಿರುವರು.

ನಮ್ಮ ಶ್ರೀಮದ್ಯುವರಾಜರು ಜರ್ಮನ್ ದೇಶದಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿರುವ ಭಾರತೀಯರಿಗೆ ೨೫೦ ರೂಪಾಯಿಗಳನ್ನು ಬಹುಮಾನಿಸಿರುವುದಾಗಿ ಆ ದೇಶದ ಪತ್ರಿಕೆಯಿಂದ ಗೊತ್ತಾಗುತ್ತದೆ.

ಬೆಂಗಳೂರಲ್ಲಿ ಮಹಾರಾಜಾ ಬಟ್ಟೆಯ ಕಾರ್ಯಾಲಯದಲ್ಲಿ ಯಂತ್ರದ ಮನೆಗೆ ಕಳೆದ ತಾ॥ ೨೪ ರಲ್ಲಿ ಬೆಂಕಿಯು ಬಿದ್ದಿತು. ಆದರೆ ಕೆಲಸಗಾರರು ಕೂಡಲೆ ಬೆಂಕಿಯನ್ನು ಆರಿಸಿದುದರಿಂದ ನಷ್ಟವೇನೂ ಆಗಲಿಲ್ಲವು.

ಚೀಫ್ ಇಂಜನೀರ್ ಮ॥ ವಿಶ್ವೇಶ್ವರಯ್ಯನವರು ಕಳೆದವಾರ ರಾಜಧಾನಿಗೆ ಬಂದಿದ್ದು ಅರಮನೆಯಲ್ಲೂ ಯುವರಾಜರಿಗಾಗಿ ಸಜ್ಜುಗೊಳಿಸಲ್ಪಡುತ್ತಿರುವ ಅಪ್ಪರ್‌ಕೆಸಿತನ್ನಿ ಬಂಗಲೆಯಲ್ಲೂ ನಡೆಯುತ್ತಿರುವ ಕಾರ್ಯಗಳನ್ನು ಪರಾಮರಿಸಿಕೊಂಡು ಬೆಂಗಳೂರಿಗೆ ದಯಮಾಡಿಸಿದರು.

ಬೆಂಗಳೂರಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ ಶಂಕರಮಠದಲ್ಲಿ ಒಂದು ಸಂಸ್ಕೃತ ಪಾಠಶಾಲೆಯು ಸ್ಥಾಪಿಸಲ್ಪಟ್ಟಿರುತ್ತದೆ. ಇಲ್ಲಿಯ ವಿದ್ಯಾರ್ಥಿಗಳ ವಾಸಕ್ಕಾಗಿ ಒಂದು ನಿಲಯವನ್ನು ಕಟ್ಟಿಸಲು ಫ್ರೆಂಚ್ ರಾಕ್ಸ್ ಸಬ್ ಡಿವಿಜನ್ ಆಫೀಸರಾದ ಮ॥ ಎನ್. ಸುಬ್ಬರಾಯರು ೧೦೦೦ ರೂ. ಗಳನ್ನು ಉಚಿತವಾಗಿ ಕೊಟ್ಟಿರುತ್ತಾರೆ.

ಶ್ರೀಮನ್ಮಹಾರಾಜರವರು ಪರಿವಾರ ಸಮೇತ ಕಳೆದ ತಾ॥ ೩ ರಲ್ಲಿ ಬೊಂಬಾಯಿಯನ್ನು ಬಿಟ್ಟು ಗುಂತಕಲ್ಲುಮಾರ್ಗವಾಗಿ ನೆನ್ನೆಯ ಬೆಳಗ್ಗೆ ಬೆಂಗಳೂರನ್ನು ತಲಪಿದರು. ಮಹಾರಾಣಿಯವರುಗಳು ನೆನ್ನೆಯ ರಾತ್ರಿ ರೈಲು ಬಂಡಿಯಲ್ಲಿ ಹೊರಟು ಈ ಬೆಳಗ್ಗೆ ೬ ಗಂಟೆಗೂ, ಮಹಾರಾಜರವರು ಮೋಟಾರು ಬಂಡಿಯಲ್ಲಿ ಈ ಬೆಳಗ್ಗೆ ೬ ಗಂಟೆಗೆ ಮೈ

೧೧ ಗಂಟೆಗೂ ರಾಜಧಾನಿಯನ್ನು ತಲುಪುವವರಾದರು.

ರಾಜಧಾನಿಯಲ್ಲಿ ಹಗಲೆಲ್ಲಾ ಬಿಸಿಲು ಬಹು ತೀಕ್ಷ್ಣವಾ ರಾತ್ರಿ ಮಾತ್ರ ಚಳಿಯಾಗುತ್ತದೆ. ಸಣ್ಣದ ಕೇರಿ ಚಾಮರಾಜಪೇಟೆಯಲ್ಲಿ ಇಲಿಗಳು ಸಾಯುತ್ತಿರುವೆ ಆಗಲೇ ೪-೬ ಪ್ಲೇಗು ಮರಣಗಳಾದುವು. ಸಿಡುಬಿನ ಉಪದ್ರವವು ಆರಂಭವಾಗಿ ಮಕ್ಕಳಿಗಲ್ಲದೆ ದೊಡ್ಡವರಿಗೂ ಹುಣ್ಣು ಏಳುತ್ತಿರುವುದರಿಂದ ಈ ರೋಗವು ಪ್ರಬಲವಾಗಬಹುದೆಂದು ಜನರು ಭೀತರಾಗಿರುತ್ತಾರೆ. ಇತರ ರೋಗಾದಿಗಳೇನೂ ವಿಶೇಷವಾಗಿಲ್ಲವು. ಆಹಾರ ಪದಾರ್ಥಗಳ ಬೆಲೆಯು ತಕ್ಕಮಟ್ಟಿಗನುಕೂಲವಾಗಿದೆ.

ರಾಜಧಾನಿಗೆ ಬಂದಿದ್ದ ಅನೇಕ ನಾಟಕಗಳನ್ನು ಆಡಿ ಬಹುಮಾನವನ್ನು ಪಡೆದು ಬೆಂಗಳೂರಿಗೆ ಹೋಗಿ ಅಲ್ಲಿ ನಾಟಕಗಳನ್ನಾಡುತ್ತಿರುವ ಸಿರಹಟ್ಟಿ ಲಕ್ಷ್ಮೀಪ್ರಾಸಾದಿಕ ಸಂಗೀತ ನಾಟಕಸಂಘದ ಮ್ಯಾನೇಜರಾದ ಮ|| ಸುಬ್ಬರಾಯರು ಮ್ಯಾಜಿಸ್ಟ್ರೇಟರ ಅಪ್ಪಣೆಯಿಲ್ಲದೆ ಟಾಂಟಾಂ ಹೊಡಿಸಿಕೊಂಡು ಪ್ರಸಿದ್ಧಪತ್ರಿಕೆಯನ್ನು ಬೀದಿಗಳಲ್ಲಿ ಹಂಚಿದರೆಂಬ ಅಪರಾಧದ ಮೇಲೆ ಪೋಲೀಸರಿಂದ ವಿಚಾರಣೆಗೆ ಗುರಿಮಾಡಲ್ಪಟ್ಟಿರುತ್ತಾರೆ. ಈ ವಿವಾದವು ಈ ತಾ|| ಕ್ಕೆ ವಿಚಾರಿಸಲ್ಪಡುವುದು.

ಬೆಂಗಳೂರ ದಂಡಿನಲ್ಲಿ ರಾತ್ರಿವೇಳೆ ದೀಪವಿಲ್ಲದೆ ಬೈಸಿಕಲ್ ಸವಾರಿಯನ್ನು ಮಾಡುವವರು ಅರ್ಧದಂಡವನ್ನು ಕೊಡಬೇಕೆಂದು ಈಚೆಗೆ ಶಾಸನವು ಏರ್ಪಟ್ಟಿದೆ. ಆದರೂ ಕೆಲ ಪುರುಷರೂ ಸ್ತ್ರೀಯರೂ ದೀಪವಿಲ್ಲದೆ ಸವಾರಿ ಮಾಡಿದುದಕ್ಕಾಗಿ ಪೋಲೀಸರಿಂದ ಹಿಡಿಯಲ್ಪಟ್ಟು ಮ್ಯಾಜಿಸ್ಟ್ರೇಟರಲ್ಲಿ ಅರ್ಧ ದಂಡನೆಗೆ ಗುರಿಮಾಡಲ್ಪಟ್ಟರು. ಆ ಅಪರಾಧಿಗಳಲ್ಲಿ ಒಬ್ಬ ಯುವತಿಯ ತಂದೆಯು "ಬೈಸಿಕಲ್ಲಿಗೆ ದೀಪವಿದ್ದುದೆಯಾದರೆ ನನ್ನಮಗಳು ಹೊರಗಡೆ ಸಾವಕಾಶವಾಗಿ ನಿಲ್ಲಲು ಅವಕಾಶವಾಗುತ್ತಾದ ಪ್ರಯುಕ್ತ ಅದಕ್ಕೆ ದೀಪವನ್ನು ಕೊಡಿಸುವುದಿಲ್ಲವು" ಎಂದು ಹೇಳಿದರಂತೆ.

ಶೃಂಗೇರಿಯಲ್ಲಿ ನಾಟುಕೋಟೆಸೆಟ್ಟಿಗಳು ಬಹು ದ್ರವ್ಯವ್ಯಯವನ್ನು ಮಾಡಿ ಹೊಸದಾಗಿ ಕಟ್ಟಿಸುತ್ತಿರುವ ಶೃಂಗೇರಿ ಮಠದ ಒಂದು ಭಾಗವು ಬೆಂಕಿಯಿಂದ ಹೊತ್ತಿಕೊಂಡು ಬಹು ಸುಂದರವಾಗಿ ಚಿತ್ರಕೆಲಸ ಮಾಡಲ್ಪಟ್ಟಿದ್ದ ೧೯ ಕಲ್ಲಿನಕಂಬಗಳೂ ಇತರ ಕಲ್ಲಿನ ಸಾಮಗ್ರಿಗಳೂ ಸಿಡಿದುಹೋದುವು. ಅಷ್ಟರಲ್ಲಿ ಕೆಲಸಗಾರರೂ ಊರಿನವರೂ ಸೇರಿ ನದಿಯಿಂದ ನೀರನ್ನು ತಂದುಹಾಕಿ ಬೆಂಕಿಯನ್ನು ಶಮನಮಾಡಿದರು. ಆದರೂ ೨೦೦೦೦ ರೂ. ವರೆಗೆ ನಷ್ಟವಾಗಿರುವಹಾಗೆ ತೋರುತ್ತದೆ. ಆ ಜ್ವಾಲೆಯು ಶಾರದಾಂಬಾ ಅಮ್ಮನವರ ಗುಡಿಯ ದ್ವಾರದ ಮರದ ಚೌಕಟ್ಟಿಗೂ ಅಮ್ಮನವರ ಮೇಲೆ ಧರಿಸಿದ್ದ ಆಭರಣಗಳಿಗೂ ಕೊಂಚವಾದರೂ ತಗಲದೆ ಇದ್ದುದು ಆಶ್ಚರ್ಯವಾಗಿದೆ.

ಅಮೃತ ಮಹಲ್ ಶಾಖೆಯ ಸೂಪರಿಂಟೆಂಡೆಂಟರಾದ ಮ|| ಎಚ್. ನಂಜುಂಡರಾಜ ಅರಸಿನವರು ತಮ್ಮಣ್ಣಂದಿರಾದ ಗತಿಸಿದ ದರಬಾರುಭಕ್ಷಿ ಮ|| ಎಚ್. ಲಿಂಗರಾಜ ಅರಸಿನವರ ಸ್ಮಾರಕವಾಗಿ ರಾಜಧಾನಿಯ ವೀರಣ್ಣನವರ ಕ್ಯಾಂಪಿನಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸುತ್ತಿರುವರು. ಇದಕ್ಕಾಗಿ ಮ್ಯುನಿಸಿಪಾಲಿಟಿಯವರು ಉಚಿತವಾಗಿ ಸ್ಥಳವನ್ನು ಕೊಟ್ಟು ಅವರ ಔದಾರ್ಯಬುದ್ಧಿಯನ್ನು ಶ್ಲಾಘಿಸಿರುವರು. ಇದೇ ಪ್ರಕಾರ ರಿಜಮೆಂಟ್‌ದಾರ್ ಉದ್ಯೋಗದಿಂದ ನಿವೃತ್ತರಾಗಿರುವ ರಾಜಧಾನಿಯ ಮ|| ಕೃಷ್ಣರಾಯರು ಚಾಮರಾಜ ಮಾರ್ಗದಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಲು ನಿರ್ಧರಿಸಿರುವುದಾಗಿ ಕೇಳುತ್ತೇವೆ. ಈ ಧರ್ಮಕಾರ್ಯಗಳು ಸ್ತುತ್ಯವೂ ಅನುಕರಣೀಯವೂ ಆಗಿವೆ.

ಕಳೆದ ತಾ|| ೨೬ ರಲ್ಲಿ ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ೧೫ ನೇ ವಾರ್ಷಿಕೋತ್ಸವವು ಜರುಗಿತು. ಬೆಳಗ್ಗೆ ಮೆಂಬರುಗಳಿಗೆ ಅಲ್ಪಾಹಾರವೂ, ಮಧ್ಯಾಹ್ನ ಊಟವೂ ಆಟಪಾಟ ವಿನೋದಗಳೂ ನಡೆದುವು. ಅನಂತರ ಸಾಯಂಕಾಲ ಆ ಸಂಘದ ವೈಸ್‌ಪ್ರೆಸಿಡೆಂಟರಾದ ಮ|| ಎಂ. ಕಾಂತರಾಜಅರಸಿನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಸಂಘದ ವರದಿಯು ಓದಲ್ಪಟ್ಟ ಅನಂತರ ಅಧ್ಯಕ್ಷರು ಸಂದರ್ಭೋಚಿತವಾದ ಭಾಷಣವನ್ನು ಮಾಡಿದರು. ತರುವಾಯ ಮುಂದಣ ವರ್ಷಕ್ಕೆ ಮ|| ಕಾಂತರಾಜಅರಸಿನವರು ಪ್ರೆಸಿಡೆಂಟರಾಗಿಯೂ, ಮ|| ಗಳಾದ ರಾ|| ಬ|| ಎ. ನರಸಿಂಹಯ್ಯಂಗಾರರವರು ಮತ್ತೂ ವಿ. ಎನ್. ನರಸಿಂಹಯ್ಯಂಗಾರರು ವೈಸ್ ಪ್ರೆಸಿಡೆಂಟರಾಗಿಯೂ, ಮ|| ಗಳಾದ ಎಂ. ಸಿ. ರಂಗಯ್ಯಂಗಾರರು ಮತ್ತೂ ಡಿ. ವೆಂಕಟರಾಮಯ್ಯನವರು ಸೆಕ್ರೆಟರಿಗಳಾಗಿಯೂ ಆರಿಸಲ್ಪಟ್ಟರು. ಈ ಸಂಘಕ್ಕೆ ಒಂದು ಸ್ವಂತ ಕಟ್ಟಡವನ್ನು ಕಟ್ಟಿಸಲು ೧೦೦೦೦ ರೂ. ಗಳನ್ನು ಮೆಂಬರುಗಳಿಂದ ಸಾಲಾ ತೆಗೆಯಬೇಕೆಂದೂ, ಇದಕ್ಕಾಗಿ ಸರ್ಕಾರದಿಂದ ಉಚಿತವಾಗಿ ಸ್ಥಳವನ್ನು ಕೇಳಬೇಕೆಂದೂ ನಿರ್ಧಾರವಾಯಿತು.

ವರ್ತಮಾನ ಸಂಗ್ರಹ.

ಜರ್ಮನ್ ಚಕ್ರವರ್ತಿಯು ತನ್ನ ರಾಜ್ಯದಲ್ಲಿ ಸರಿಯಾದ ವೈದ್ಯಚಿಕಿತ್ಸೆಯನ್ನು ಹೊಂದಲು ಅಶಕ್ತರಾದ ಬಡಜನರ ಸಹಾಯಾರ್ಥವಾಗಿ ೨೫೦೦೦೦ ರೂಪಾಯಿಗಳನ್ನು ಧರ್ಮಮಾಡಿರುವನು.

ಇಂಗ್ಲೆಂಡಿನ ದೊರೆಗಳು ಕಿರೀಟಧಾರಣಮಹೋತ್ಸವ ಕಾಲದಲ್ಲಿ ಉಪಯೋಗಿಸುವ ರಥವು ನಾಟಿಂಗ್ಹಾಮಿನ ಕಾರ್ಯಾಲಯದಲ್ಲಿ ಬೆಂಕಿಯಿಂದ ಹೊತ್ತಿಕೊಂಡು ಸುಟ್ಟುಹೋಯಿತು. ಈ ರಥವು ನಿರ್ಮಿಸಲ್ಪಟ್ಟು ೨೦೦ ವರ್ಷಗಳಾಗಿದ್ದವು.

ಬರ್ಮಾದಲ್ಲಿ ಬತ್ತವನ್ನು ಬೆಳೆಯುತಕ್ಕ ೧೫ ಮುಖ್ಯ ಡಿಸ್ಟ್ರಿಕ್ಟುಗಳಲ್ಲಿ ಈಗ ೩೮೯೫೫೩ ಎಕರೆ ಪ್ರದೇಶದಲ್ಲಿ ಬೆಳೆಯಿಡಲ್ಪಟ್ಟಿರುತ್ತದೆ. ಕಳೆದವರ್ಷ ಇದಕ್ಕಿಂತ ೧೯೨೩೮ ಎಕರೆ ಬೆಳೆ ಕಡಿಮೆಯಾಗಿದ್ದಿತು. ೫೯೮೦೦೦೦ ಟನ್ ಬತ್ತವು ಹೊರಗೆ ಸಾಗಿಸಲ್ಪಡಲು ಸಿದ್ಧವಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಅಮೇರಿಕಾಕ್ಕೆ ಸೇರಿದ ಚಿಕಾಗೊಪಟ್ಟಣದಲ್ಲಿ ಕಳೆದ ತಾ|| ೧೦ ರಲ್ಲಿ ಒಬ್ಬ ಕಳ್ಳನು ಒಂದು ಮನೆಗೆ ನುಗ್ಗಿ ೩೦೦೦ ರೂಪಾಯಿಗಳನ್ನು ಅಪಹರಿಸಿಕೊಂಡು ಮನೆಯಿಂದ ಹೊರಗೆ ಬರುವಷ್ಟರಲ್ಲಿ ಬೇರೆ ಇನ್ನು ೩ ಜನ ಕಳ್ಳರು ಅವನನ್ನು ಬೆದರಿಸಿ ಅವನು ಅಪಹರಿಸಿದ್ದ ರೂಪಾಯಿಗಳನ್ನು ಕಿತ್ತುಕೊಂಡು ಪಲಾಯನವಾದರು.

ಚೈನಾದಲ್ಲಿ ಈಗ ೨೦೦೦೦೦೦ ಜನ ಹೊಟ್ಟೆಗೆ ಅನ್ನವಿಲ್ಲದಿರುತ್ತಾರೆ. ಸೈನಿಕರು ಇವರಿಗೆ ಆಹಾರವನ್ನು ಒದಗಿಸಿಕೊಡುತ್ತಲಿದ್ದಾರೆ. ಮತ್ತೂ ಜೆ. ಡಿ ರಾಕ್‌ಫೆಲರ್ ಎಂಬ ಶ್ರೀಮಂತರು ಈ ವಿಪನ್ನರ ಸಹಾಯಾರ್ಥವಾಗಿ ಏರ್ಪಟ್ಟಿರುವ ಕ್ಷಾಮನಿವಾರಣೆಯ ಫಂಡಿಗೆ ೧೫೦೦೦ ರೂಪಾಯಿಗಳ ಧರ್ಮವನ್ನು ಮಾಡಿರುತ್ತಾರೆ.

ಬೊಂಬಾಯಿ ಪಟ್ಟಣದಲ್ಲಿ ಈವರ್ಷ ಪ್ಲೇಗು ಉಪದ್ರವವು ಹಿಂದಿನ ೨ ವರ್ಷಗಳಿಗಿಂತಲೂ, ಉಲ್ಬಣವಾಗಿ ಪರಿಣಮಿಸುವ ಸಂಭವವಿರುವುದರಿಂದ ಜನರು ಎಚ್ಚರವಾಗಿದ್ದು ಇನಾಕ್ಯುಲೇಷನ್ ಮಾಡಿಸಿಕೊಳ್ಳತಕ್ಕದೆಂದೂ ಈ ರೋಗವನ್ನು ಅಣಗಿಸುವ ವಿಚಾರದಲ್ಲಿ ಜನರು ಸರ್ಕಾರದವರಿಗೆ ಸಹಾಯಕರಾಗಬೇಕೆಂದೂ ಅಲ್ಲಿಯ ಹೆಲ್ತ್‌ಆಫೀಸರು ತಿಳಿಸಿರುತ್ತಾರೆ.

ದಕ್ಷಿಣ ಹಂಗೇರಿಯಲ್ಲಿ ಪೋಲೀಸರು ಭಿಕ್ಷುಕರ ಗುಂಪೊಂದನ್ನು ಹಿಡಿದು ನೋಡುವಲ್ಲಿ ೨೩ ಮಕ್ಕಳನ್ನು ಕದ್ದುತಂದು ಭಿಕ್ಷೆಯನ್ನು ಮಾಡಿಸುವುದಕ್ಕಾಗಿ ಅವರಲ್ಲಿ ಕೆಲರ ಕಾಲುಗಳನ್ನು ಮುರಿದು ಕುಂಟರನ್ನಾಗಿಯೂ, ಮತ್ತೆ ಕೆಲರನ್ನು ಕುರುಡರನ್ನಾಗಿಯೂ ಹೀಗೆ ಅಂಗವಿಕಲರನ್ನು ಮಾಡಿರುವುದು ಕಂಡುಬಂದಿತು. ಅನಂತರ ಪೋಲೀಸರು ಆ ಭಿಕ್ಷುಕವೃತ್ತಿಯ ಗುಂಪಿನವರನ್ನು ಸೆರೆಹಿಡಿದು ವಿಚಾರಣೆಗೆ ಗುರಿ ಮಾಡಿರುವರು.

ಗಂಗಾನದಿಯ ನೀರನ್ನು ಎಷ್ಟು ದಿನಗಳವರೆಗೆ ಇಟ್ಟಿದ್ದಾಗ್ಯೂ ಕೆಡುವುದಿಲ್ಲವೆಂದು ಭಾರತೀಯರು ನಂಬಿರುವರಷ್ಟೆ. ಸೀಮೆಯಲ್ಲಿ ನೀರಿನ ಪರೀಕ್ಷೆಯ ಡೈರಕ್ಟರಾದ ಡಾಕ್ಟರು ಇದನ್ನು ಪರೀಕ್ಷಿಸುವುದಕ್ಕಾಗಿ ಪ್ರತ್ಯೇಕವಾಗಿ ಶೇಖರಿಸಿದ್ದ ನೀರಿನಲ್ಲಿ ಅರ್ಧಸೇರಿನಷ್ಟನ್ನು ತೆಗೆದು ಅದಕ್ಕೆ ವಿಷಮಶೀತಜ್ವರರೋಗಿಯಿಂದ ಲಕ್ಷಾಂತರ ಹುಳುಗಳನ್ನು ತೆಗೆದು ಬೆರಸಿ ಪಾನಮಾಡಿದಾಗ್ಯೂ ಏನೂ ಅಪಾಯವಾಗದೆ ನೀರು ಕುಡಿಯಲು ಚೆನ್ನಾಗಿತ್ತೆಂದು ಹೇಳುತ್ತಾರೆ.

ಸವಾರ್ಕರನಿಗೆ ಬೊಂಬಾಯಿ ಹೈಕೋರ್ಟಿನವರು ಯಾವಜ್ಜೀವಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದ್ದರು. ಆದರೆ ಅವನು ಫ್ರೆಂಚರದೇಶದಲ್ಲಿ ಹಿಡಿಯಲ್ಪಟ್ಟುದುದರಿಂದ ಫ್ರೆಂಚ್ ಸರ್ಕಾರದನುಮತಿಯಿಲ್ಲದೆ ದಂಡನೆಗೆ ಗುರಿಮಾಡಲ್ಪಡಕೂಡದೆಂಬುದರ ಮೇಲೆ ಹೇಗ್‌ಪಟ್ಟಣದಲ್ಲಿ ಫ್ರೆಂಚ್ ಮತ್ತೂ ಬ್ರಿಟಿಷ್ ಸರ್ಕಾರಗಳ ಪ್ರತಿನಿಧಿಗಳು ಕೂಡಿ ಸವಾರ್ಕರನ ವಿವಾದದ ವಿಚಾರಣೆಯನ್ನು ನಡಿಸಿ ಅವನು ತಪ್ಪಿತಸ್ಥನೆಂದೂ ಈಗ ವಿಧಿಸಲ್ಪಟ್ಟಿರುವ ಶಿಕ್ಷೆಯನ್ನನುಭವಿಸತಕ್ಕದೆಂದೂ ನಿರ್ಧರಿಸಿದರು.

ರಷ್ಯಾದಲ್ಲಿ ಇಬ್ಬರು ಕಳ್ಳರು ತಮ್ಮಿಬ್ಬರಲ್ಲಿ ಕೌಂಟ್ ಟಾಲಸ್ಟಾಯಿಯ ರೂಪನ್ನು ಚೆನ್ನಾಗಿ ಹೋಲುವ ಒಬ್ಬನಿಗೆ ಟಾಲಸ್ಟಾಯಿಯ ವೇಷವನ್ನು ಹಾಕಿ ಕೌಂಟ್‌ಟಾಲಸ್ಟಾಯಿಯೆಂದು ಹೇಳಿಕೊಂಡು ಹಳ್ಳಿಗಳ ಮೇಲೆ ಹೊರಟು ಟಾಲಸ್ಟಾಯಿಯ ಶತ್ರುಗಳು ಮನೆಯನ್ನು ತಮ್ಮನ್ನು ಬಿಡಿಸಿ ಓಡಿಸಿ ಬಿಟ್ಟಿರುತ್ತಾರಾದುದರಿಂದ ದ್ರವ್ಯಸಹಾಯ ಮಾಡಬೇಕೆಂದು ರೈತಜನರಿಗೆ ಸುಳ್ಳು ಹೇಳಿ ಬೇಕಾದಷ್ಟು ಹಣವನ್ನು ಸಂಪಾದಿಸಿ ಕಡೆಗೆ ತಮ್ಮ ಮೋಸ ಕೃತ್ಯವು ಬೈಲಾಗಿ ತಲೆಯನ್ನು ತಪ್ಪಿಸಿಕೊಂಡಿರುತ್ತಾರೆ.

ತಂತಿಗಳ ಸಂಬಂಧವಿಲ್ಲದೆ ಟೆಲಿಫೋನನ್ನು ಏರ್ಪಡಿಸಿರುವ ಶಿಲ್ಪಿಯು ಅದೇ ಸಾಧನದ ಮೂಲಕವಾಗಿಯೇ ರೇಲ್ವೆಯಲ್ಲಿ ಒಂದು ಟ್ರೇನಿನಿಂದ ಮತ್ತೊಂದು ಟ್ರೇನಿಗೆ ಬಂಡಿಯು ನಿಂತಿರುವಾಗಲೇ ಆಗಲಿ ಅತ್ಯಂತ ವೇಗದಿಂದ ಹೋಗುತ್ತಿರುವಾಗಲೇ ಆಗಲಿ ವರ್ತಮಾನವನ್ನು ಕಳುಹಿಸಬಹುದೆಂದು ಗೊತ್ತುಮಾಡಿರುವನು. ಒಂದೇ ಮಾರ್ಗದಲ್ಲಿ ಇದಿರುಬದಿರಿಗೆ ಬಂದ ಬಂಡಿಗಳು ಡಿಕ್ಕಿಹೊಡೆದು ಅಪಾಯವಾಗುತ್ತಿದ್ದುದನ್ನು ಕಂಡು ಈ ಸಾಧನ ದ್ವಾರಾ ಮುಂದಾಗಿ ಸುದ್ದಿಯನ್ನು ತಿಳಿದು ತಪ್ಪಿಸಿಬಿಡಬಹುದೆಂತಲೂ ಆತನು ತಿಳಿಸಿರುತ್ತಾನೆ.

ರಷ್ಯಾದೇಶದ ಯುವರಾಜರಿಗೆ ತನ್ನ ಆಳುಕಾಳುಗಳೆಲ್ಲಾ ತನ್ನನ್ನು ಕಂಡಕೂಡಲೆ ಎದ್ದುನಿಂತು ತನಗೆ ಮರ್ಯಾದಿಸುವುದು ತನಗೆ ದೊಡ್ಡ ಗೌರವವೆಂಬ ಭ್ರಮೆಯು ಬಲವಾಗಿರುವುದು. ಅದಕ್ಕಾಗಿ ಅವರು ನಿಷ್ಕಾರಣವಾಗಿ ಯಾದರೂ ಪದೆಪದೆ ಆ ಕೂಲಿಜನರಿರುವ ಕೋಣೆಗಳಿಗೆ ಹೋಗಿ ಪ್ರತ್ಯುತ್ಥಾನ ಮರ್ಯಾದೆಯನ್ನು ಹೊಂದುತ್ತಿರುವರಂತೆ. ಈ ಸಂಗತಿಯು ತಂದೆಯಾದ ಚಕ್ರವರ್ತಿಯವರಿಗೆ ತಿಳಿಯಬರಲು, ಯಾರೂ ಅಂಥ ಮರ್ಯಾದೆಯನ್ನು ಮಾಡಲವಶ್ಯವಿಲ್ಲವೆಂದು ಅಪ್ಪಣೆ ಮಾಡಿದರು. ಮರುದಿನ ಯುವರಾಜನಿಗೆ ಎಂದಿನಂತೆ ಕೂಲಿಯವರು ಮರ್ಯಾದಿಸದೆ ಹೋಗಲು, ಮನಸ್ಸಿನಲ್ಲಿ ಕೊರಗಿ, ಈ ಹೊತ್ತಿಗೆ ಮಾತ್ರ ಮೊದಲಿನಂತೆ ಮರ್ಯಾದಿಸಿಬಿಡಿ, ಇದನ್ನು ಚಕ್ರವರ್ತಿಯವರಿಗೆ ತಿಳಿಯಗೊಡದಂತೆ ಮಾಡುತ್ತೇನೆ. ಎಂದು ಅವರು ಒಬ್ಬ ಕೂಲಿಯವನನ್ನು ಪ್ರಾರ್ಥಿಸಿಕೊಂಡರಂತೆ.

ಟಾಕೆಯೆಂಬ ವರ್ತಕನು ಚೀನಾದೇಶದಿಂದ ಪರ್ಷಿಯಾಕ್ಕೆ ಹೋಗುತ್ತಾ ಬೊಂಬಾಯಿಗೆ ಭೂಮಾರ್ಗದಿಂದ ಹೋಗಿ ಅಲ್ಲಿಂದ ಹಡಗನ್ನೇರಬೇಕೆಂದು ಯೋಚಿಸಿ, ತುತ್ತುಕುಡಿಯಲ್ಲಿ ಹಡಗಿನಿಂದಿಳಿದನು. ಅವನ ಬಳಿಯಲ್ಲಿದ್ದ ಸಾಮಾನುಗಳನ್ನು ಸುಂಕದಕಟ್ಟೆಯವರು ಪರಿಶೋಧಿಸಲಾಗಿ ೨ ತುಪಾಕಿಗಳು ಇದ್ದುವು. ಅಪ್ಪಣೆ ಚೀಟಿಯಿಲ್ಲದೆ ಅವನ್ನು ಭರತಖಂಡಕ್ಕೆ ತಂದುದಕ್ಕೆ ಪೋಲೀಸರು ತಕ್ಕ ಸಮಾಧಾನವನ್ನು ಕೇಳುವಲ್ಲಿ, ತಾನು ಕಚೇರಿಯಿಂದ ನೇರವಾಗಿ ಸಮುದ್ರ ತೀರಕ್ಕೆ ಬಂದುಬಿಟ್ಟಂತೆಯೂ ತನ್ನ ಅಸಿಸ್ಟೆಂಟು ಮನೆಯಿಂದ ಸಾಮಾನುಗಳನ್ನು ಮೂಟೆಕಟ್ಟಿ ತಂದಿಟ್ಟಿದ್ದಂತೆಯೂ, ಆ ಗಂಟುಗಳನ್ನು ತಾನು ಬಿಚ್ಚಿನೋಡಿರಲಿಲ್ಲವೆಂದೂ ಉತ್ತರಕೊಟ್ಟನು. ಅದನ್ನು ಪೋಲೀಸರು ನಂಬದೆ ದಂಡಾಧಿಕಾರಿಯಿದಿರಿಗೆ ವಿಚಾರಣೆಗೆ ಗುರಿಮಾಡಿದರು. ಅಲ್ಲಿಂದ ಸೆಷನ್ಸಿಗೆ ವಿಚಾರಣೆ ಬದಲಾಯಿತು. ಸಾಕ್ಷ್ಯಗಳು ಚೀನಾದಿಂದ ಬರಬೇಕಾಗಿರುವ ಕಾರಣ ತಿರುನೆಲ್ವೇಲಿ ಸೆಷನ್ಸ್ ಜಡ್ಜರು ಇದರ ವಿಚಾರಣೆಯನ್ನು ಏಪ್ರಿಲ್ ತಿಂಗಳಿಗಿಟ್ಟಿರುವರು.

ಕಳೆದತಿಂಗಳು ತಾ|| ೨೨ ರಲ್ಲಿ ಸೀಮೆಯೊಳಗೆ ಐರಿಷ್ ಪಕ್ಷದ ಜನರು ಮಿ|| ರೆಡ್‌ಮೆಂಡ್‌ರವರ ಅಧ್ಯಕ್ಷತೆಯಿಂದ ಒಂದು ಸಭೆಗೂಡಿದ್ದು, ಈ ಕೆಳಗೆ ಹೇಳುವ ಪ್ರಕಾರ ತಮ್ಮ ಅಭಿಪ್ರಾಯವನ್ನು ಹೊರಗೆಡಹಿದರು—"ಶ್ರೀಮನ್ ಜಾರ್ಜ್ ಚಕ್ರವರ್ತಿಯವರ ಪಟ್ಟಾಭಿಷೇಕ ಮಹೋತ್ಸವವೈಭವದಲ್ಲಿ ನಾವು ಅವರ ಇತರ ಪ್ರಜೆಗಳೊಡನೆ ಕೂಡಿ ಸಮಭಾಗಿಗಳಾಗುವುದಕ್ಕೆ ಇನ್ನೂ ಸಮಯವು ಪ್ರಾಪ್ತವಾಗದೆ ಇರುವುದನ್ನು ಕಂಡು ಅತ್ಯಂತವಾಗಿ ವಿಷಾದಿಸುತ್ತೇವೆ. ನಾವು ಪ್ರಭುಗಳ ಯೋಗಕ್ಷೇಮಾಭಿವೃದ್ಧಿಯನ್ನು ಕುರಿತು ಮನಃಪೂರ್ವಕವಾಗಿ ಪ್ರಾರ್ಥಿಸುತ್ತ ಅವರ ರಾಜ್ಯ ಪರಿಪಾಲನವು ಬಹುಕಾಲ ಮಹಿಮಾತಿಶಯದಿಂದ ಮೆರೆಯುತ್ತಿರಲೆಂದು ಕೋರುತ್ತೇವೆ. ಆದರೆ, ನಮಗೆ ಸ್ವಪ್ರಜಾಪರಿಪಾಲನ ಸ್ವಾತಂತ್ರ್ಯವು ಇನ್ನೂ ಕೊಡಲ್ಪಡದೆ ಯಿರುವುದರಿಂದ ಅಂಥ ಉತ್ಸವ ವೈಭವದಲ್ಲಿ ನಾವೂ ಭಾಗಿಗಳಾಗಿರದೆ ದೂರಸ್ಥರಾಗಿರುವುದಕ್ಕೆ ಬದ್ಧರಾಗಿರುತ್ತೇವೆ. ಐರ್ಲೆಂಡು ದೇಶಕ್ಕೆ ಸ್ವಪ್ರಜಾಪರಿಪಾಲನ ಸ್ವಾತಂತ್ರ್ಯವು ಶೀಘ್ರವಾಗಿಯೇ ದೊರಕೊಳ್ಳುವುದೆಂಬ ನಂಬುಗೆಯಿಂದ ನಿರೀಕ್ಷಿಸುತ್ತೇವೆ.

ದಕ್ಷಿಣ ಆರ್ಕಾಟ್ ಡಿ|| ಪನ್ರುತಿಸಮೀಪದಲ್ಲಿ ಪರಪೇಯಮಾನ್ ಎಂಬ ಗ್ರಾಮದ ಇನಾಂದಾರರಿಗೂ ಮತ್ತೂ ಅಲ್ಲಿಯ ರೈತರಿಗೂ ಕಂದಾಯದ ವಿಚಾರದಲ್ಲಿ ಮನಸ್ತಾಪವುಂಟಾಗಿ ವಾದವನ್ನು ಮಾಡಿದ್ದರು. ಕಡೆಗೆ ಕೋರ್ಟಿಗೆ ಹತ್ತಿ ವಿವಾದವನ್ನು ಮಾಡುತ್ತಿರುವರು. ಈ ಮಧ್ಯೆ ಆ ಹಳ್ಳಿಯ ಇನಾಂದಾರರು ಕಳೆದ ತಾ|| ೨೫ ರಲ್ಲಿ ಒಬ್ಬ ಪೋಲೀಸು ಸಬ್ ಇನ್ಸ್‌ಪೆಕ್ಟರನ್ನೂ ಕೆಲ ಕಾನ್‌ಸ್ಟೆಬಲರುಗಳನ್ನೂ ಸಹಾಯಕ್ಕಾಗಿ ಕೂಡ ಕರೆದುಕೊಂಡು ಕಂದಾಯವನ್ನು ಕೊಡದಿದ್ದ ರೈತರ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು ಹೋದಾಗ, ರೈತರು ರೇಗಿ ಇನಾಂದಾರರ ಮತ್ತೂ ಪೋಲೀಸರ ಮೇಲೆಬಿದ್ದು ಪ್ರಹರಿಸಲುಪಕ್ರಮಿಸಿದಾಗ ಅವರು ಒಂದು ಗುಡಿಸಲಿನಲ್ಲಿ ಸೇರಿಕೊಂಡರು. ರೈತರು ಅಷ್ಟಕ್ಕೆ ಬಿಡದೆ ಕಲ್ಲುಗಳನ್ನೆಸೆದು ಗುಡಿಸಿಲಿಗೆ ಬೆಂಕಿಯನ್ನು ಹೊತ್ತಿಸಿದರು. ಪೋಲೀಸಿನವರೂ ಇನಾಂದಾರರೂ ಪ್ರಾಣವನ್ನುಳಿಸಿಕೊಳ್ಳುವುದು ಬಹು ಕಷ್ಟವಾಗಿ ಒಬ್ಬ ಕಾನ್‌ಸ್ಟೆಬಲನಮೂಲಕ ಪನ್ರುತಿಯಲ್ಲಿದ್ದ ಡಿ|| ಮ್ಯಾಜಿಸ್ಟ್ರೇಟರು ಮತ್ತೂ ಡಿ|| ಸೂಪರಿಂಟೆಂಡೆಂಟರಿಗೆ ವರ್ತಮಾನವನ್ನು ಕೊಟ್ಟರು. ಅವರು ರಿಜರ್ವ್ ಪೋಲೀಸುಬಲದೊಡನೆ ಕೂಡಲೆ ಹಳ್ಳಿಗೆಹೋಗಿ ದಂಗೆಯನ್ನು ಶಮನ ಮಾಡಿ ೧೫ ಜನರನ್ನು ಸೆರೆಯಲ್ಲಿಡಿಸಿದರು.

೧೧ ಗಂಟೆಗೂ ರಾಜಧಾನಿಯನ್ನು ತಲುಪುವವರಾ ರರು.

ರಾಜಧಾನಿಯಲ್ಲಿ ಹಗಲೆಲ್ಲಾ ಬಿಸಿಲು ಬಹು ತೀಕ್ಷ್ಣವಾ ರಾತ್ರಿ ಮಾತ್ರ ಚಳಿಯಾಗುತ್ತದೆ. ಸಣ್ಣದ ಕೇರಿ ತ್ತು ಚಾಮರಾಜಪೇಟೆಯಲ್ಲಿ ಇಲಿಗಳು ಸಾಯುತ್ತಿರು ವೆ ಆಗಲೇ ೪-೬ ಪ್ಲೇಗು ಮರಣಗಳಾದುವು. ಸಿಡು ಪದ್ರವವು ಆರಂಭವಾಗಿ ಮಕ್ಕಳಿಗಲ್ಲದೆ ದೊಡ್ಡವರಿಗೂ ಹುಣ್ಣು ಏಳುತ್ತಿರುವುದರಿಂದ ಈ ರೋಗವು ಪ್ರಬಲ ಗಬಹುದೆಂದು ಜನರು ಭೀತರಾಗಿರುತ್ತಾರೆ. ಇ ರೋಗಾದಿಗಳೇನೂ ವಿಶೇಷವಾಗಿಲ್ಲವು. ಅಹಾರ ಪ ರ್ಥಗಳ ಬೆಲೆಯು ತಕ್ಕಮಟ್ಟಿಗನುಕೂಲವಾಗಿದೆ.

ರಾಜಧಾನಿಗೆ ಬಂದಿದ್ದ ಅನೇಕ ನಾಟಕಗಳನ್ನು ಆ ಬಹುಮಾನವನ್ನು ಪಡೆದು ಬೆಂಗಳೂರಿಗೆ ಹೋಗಿ ಅಲ್ಲಿ ನಾಟಕಗಳನ್ನಾಡುತ್ತಿರುವ ಸಿರಹಟ್ಟಿ ಲಕ್ಷ್ಮೀಪ್ರಾ ದಿಕ ಸಂಗೀತ ನಾಟಕಸಂಘದ ಮ್ಯಾನೇಜರಾದ ಮ|| ಸು ರಾಯರು ಮ್ಯಾಜಿಸ್ಟ್ರೇಟರ ಅಪ್ಪಣೆಯಿಲ್ಲದೆ ಟಾಂಟಾಂ ಡಿಸಿಕೊಂಡು ಪ್ರಸಿದ್ಧಿಪತ್ರಿಕೆಯನ್ನು ಬೀದಿಗಳಲ್ಲಿ ಹಂ ದರೆಂಬ ಅಪರಾಧದ ಮೇಲೆ ಪೋಲೀಸರಿಂದ ವಿಚಾರಣೆ ಗುರಿಮಾಡಲ್ಪಟ್ಟಿರುತ್ತಾರೆ. ಈ ವಿವಾದವು ಈ ತಾ|| ಕ್ಕೆ ವಿಚಾರಿಸಲ್ಪಡುವುದು.

ಬೆಂಗಳೂರ ದಂಡಿನಲ್ಲಿ ರಾತ್ರಿವೇಳೆ ದೀಪವಿಲ್ಲದೆ ಬೈ ಕಲ್ ಸ್ವಾರಿಯನ್ನು ಮಾಡುವವರು ಅರ್ಧದಂಡ ಕೊಡಬೇಕೆಂದು ಈಚೆಗೆ ಶಾಸನವು ಏರ್ಪಟ್ಟಿದೆ. ಆ ರೂ. ಕೆಲ ಪುರುಷರೂ ಸ್ತ್ರೀಯರೂ ದೀಪವಿಲ್ಲದೆ ವಾರಿ ಮಾಡಿದುದಕ್ಕಾಗಿ ಪೋಲೀಸರಿಂದ ಹಿಡಿಯಲ್ಪಟ್ಟು ್ಯಾಜಿಸ್ಟ್ರೇಟರಲ್ಲಿ ಅರ್ಧ ದಂಡನೆಗೆ ಗುರಿಮಾಡಲ್ಪಟ್ಟರು. ಅಪರಾಧಿಗಳಲ್ಲಿ ಒಬ್ಬ ಯುವತಿಯ ತಂದೆಯು "ಬೈಸಿಕ್ಲಿ ದೀಪವಿದ್ದದೆಯಾವತ ನನ್ನ ಮಗಳು ಹೊರಗಡೆ ಸಾ ಶವಾಗಿ ನಿಲ್ಲಲು ಅವಕಾಶವಾಗುತ್ತಾದ ಪ್ರಯುಕ್ತ ಅ ಗೆ ದೀಪವನ್ನು ಕೊಡಿಸುವುದಿಲ್ಲವು" ಎಂದು ಹೇಳಿದರಂತೆ.

ಶೃಂಗೇರಿಯಲ್ಲಿ ನಾಟಕೋಟಿಸೆಟ್ಟಿಗಳು ಬಹು ದ್ರವ್ಯವ್ಯ ವನ್ನು ಮಾಡಿ ಹೊಸದಾಗಿ ಕಟ್ಟಿಸುತ್ತಿರುವ ಶೃಂಗೇರಿ ಠದ ಒಂದು ಭಾಗವು ಬೆಂಕಿಯಿಂದ ಹೊ ತ್ತಿಕೊಂಡು ಬಹು ಸುಂದರವಾಗಿ ಚಿತ್ರಕೆಲಸ ಮಾಡ ಟ್ಟಿದ್ದ ೧೪ ಕಲ್ಲಿನಕಂಬಗಳೂ ಇತರ ಕಲ್ಲಿನ ಸಾಮಗ್ರಿಗಳೂ ಸಿಡಿದುಹೋದುವು. ಅಷ್ಟರಲ್ಲಿ ಕೆಲಸಗಾರರೂ ಊರಿನವರೂ ಸೇರಿ ನದಿಯಿಂದ ನೀರನ್ನು ತಂದುಹಾಕಿ ಬೆಂ ಯನ್ನು ಶಮನಮಾಡಿದರು. ಆದರೂ ೨೦೦೦೦ ರೂ. ವರೆಗೆ ನಷ್ಟವಾಗಿರುವಹಾಗೆ ತೋರುತ್ತದೆ. ಆ ಜ್ವಾಲೆಯು ಶಾರದಾಅಮ್ಮನವರ ಗುಡಿಯ ದ್ವಾರದ ಮರದ ಚೌಕಟ್ಟಿಗೂ ಅಮ್ಮನವರ ಮೇಲೆ ಧರಿಸಿದ್ದ ಆಭರಣಗಳಿಗೂ ಕೊಂಚವಾದರೂ ತಗಲದೆ ಇದ್ದುದು ಆಶ್ಚರ್ಯವಾಗಿದೆ.

ಅಮೃತ ಮಹಲ್ ಶಾಖೆಯ ಸೂಪರಿಂಟೆಂಡೆಂಟರಾದ ಮ|| ಎಚ್. ನಂಜುಂಡರಾಜ ಅರಸಿನವರು ತಮ್ಮಣ್ಣಂದಿರಾದ ಗತಿಸಿದ ದರಬಾರುಭಕ್ಷಿ ಮ|| ಹೆಚ್. ಲಿಂಗರಾಜ ಅರಸಿನವರ ಸ್ಮಾರಕವಾಗಿ ರಾಜಧಾನಿಯ ವೀರಣ್ಣನವರ ಕ್ಯಾಂಪಿನಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಯತ್ನಿಸಿರುವರು. ಇದಕ್ಕಾಗಿ ಮುನ್ಸಿಪಾಲಿಟಿಯವರು ಉಚಿತವಾಗಿ ಸ್ಥಳವನ್ನು ಕೊಟ್ಟು ಅವರ ಔದಾರ್ಯಬುದ್ಧಿಯನ್ನು ಶ್ಲಾಘಿಸಿರುವರು. ಇದೇ ಪ್ರಕಾರ ರಿಜಮಂಟ್‌ದಾರ್ ಉದ್ಯೋಗದಿಂದ ನಿವೃತ್ತರಾಗಿರುವ ರಾಜಧಾನಿಯ ಮ|| ಕೃಷ್ಣರಾಯರು ಚಾಮರಾಜ ಮಾರ್ಗದಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಲು ನಿರ್ಧರಿಸಿರುವುದಾಗಿ ಕೇಳುತ್ತೇವೆ. ಈ ಧರ್ಮಕಾರ್ಯಗಳು ಸ್ತುತ್ಯವೂ ಅನುಕರಣೀಯವೂ ಆಗಿವೆ.

ಕಳೆದ ತಾ|| ೨೬ ರಲ್ಲಿ ರಾಜಧಾನಿಯ ಕಾಸ್ಮಾಪಾಲಿಟನ್ ಕ್ಲಬ್ಬಿನ ೧೫ ನೇ ವಾರ್ಷಿಕೋತ್ಸವವು ಜರುಗಿತು. ಬೆಳಿಗ್ಗೆ ಮೆಂಬರುಗಳಿಗೆ ಅಲ್ಪಾಹಾರವೂ, ಮಧ್ಯಾಹ್ನ ಊಟವೂ ಆಟಪಾಟದ ವಿನೋದಗಳೂ ನಡೆದುವು. ಅನಂತರ ಸಾಯಂಕಾಲ ಆ ಸಂಘದ ವೈಸ್‌ಪ್ರೆಸಿಡೆಂಟರಾದ ಮ|| ಎಂ. ಕಾಂತರಾಜಅರಸಿನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಸಂಘದ ವರದಿಯು ಓದಲ್ಪಟ್ಟ ಅನಂತರ ಅಧ್ಯಕ್ಷರು ಸರಸವಾದ ಭಾಷಣವನ್ನು ಮಾಡಿದರು. ತರುವಾಯ ಮುಂದಣ ವರ್ಷಕ್ಕೆ ಮ|| ಕಾಂತರಾಜಅರಸಿನವರು ಪ್ರೆಸಿಡೆಂಟರಾಗಿಯೂ, ಮ|| ಗಳಾದ ರಾ|| ಬ|| ಎ. ನರಸಿಹ್ಮಯ್ಯಂಗಾರರು ಮತ್ತೂ ವಿ. ಎನ್. ನರಸಿಹ್ಮಯ್ಯಂಗಾರರು ವೈಸ್‌ಪ್ರೆಸಿಡೆಂಟರಾಗಿಯೂ, ಮ|| ಗಳಾದ ಎಂ. ಸಿ. ರಂಗಯ್ಯಂಗಾರರು ಮತ್ತೂ ಡಿ. ವೆಂಕಟರಾಮಯ್ಯನವರು ಸೆಕ್ರೆಟರಿಗಳಾಗಿಯೂ ಆರಿಸಲ್ಪಟ್ಟರು. ಈ ಸಂಘಕ್ಕೆ ಒಂದು ಸ್ವಂತ ಕಟ್ಟಡವನ್ನು ಕಟ್ಟಿಸಲು ೧೦೦೦೦ ರೂ. ಗಳನ್ನು ಮೆಂಬರುಗಳಿಂದ ಚಂದಾ ತೆಗೆಯಬೇಕೆಂದೂ, ಇದಕ್ಕಾಗಿ ಸರ್ಕಾರದಿಂದ ಉಚಿತವಾಗಿ ಸ್ಥಳವನ್ನು ಕೇಳಬೇಕೆಂದೂ ನಿರ್ಧಾರವಾಯಿತು.

ವರ್ತಮಾನ ಸಂಗ್ರಹ.

ಜರ್ಮನ ಚಕ್ರವರ್ತಿಯು ತನ್ನ ರಾಜ್ಯದಲ್ಲಿ ಸರಿಯಾದ ವೈದ್ಯಚಿಕಿತ್ಸೆಯನ್ನು ಹೊಂದಲು ಅಶಕ್ತರಾದ ಬಡಜನರ ಸಹಾಯಾರ್ಥವಾಗಿ ೨೫೦೦೦೦ ರೂಪಾಯಿಗಳನ್ನು ಧರ್ಮಮಾಡಿರುವನು.

ಇಂಗ್ಲಂಡಿನ ದೊರೆಗಳು ಕಿರೀಟಧಾರಣಮಹೋತ್ಸವಕಾಲದಲ್ಲಿ ಉಪಯೋಗಿಸುವ ರಥವು ನಾಟಿಂಗ್ಹಾಮಿನ ಕಾರ್ಯಾಲಯದಲ್ಲಿ ಬೆಂಕಿಯಿಂದ ಹೊತ್ತಿಕೊಂಡು ಸುಟ್ಟುಹೋಯಿತು. ಈ ರಥವು ನಿರ್ಮಿಸಲ್ಪಟ್ಟು ೨೦೦ ವರ್ಷಗಳಾಗಿದ್ದುವು.

ಬರ್ಮಾದಲ್ಲಿ ಬತ್ತವನ್ನು ಬೆಳೆಯುತಕ್ಕ ೧೫ ಮುಖ್ಯ ಡಿಸ್ಟ್ರಿಕ್ಟುಗಳಲ್ಲಿ ಈಗ ೬೪೮೫೮೫೬ ಎಕರೆ ಪ್ರದೇಶದಲ್ಲಿ ಬೆಳೆಯಿಡಲ್ಪಟ್ಟಿರುತ್ತದೆ. ಕಳೆದವರ್ಷ ಇದಕ್ಕಿಂತ ೧೯೨೬೪ ಎಕರೆ ಬೆಳೆ ಕಡಿಮೆಯಾಗಿದ್ದಿತು. ೨೫೮೦೦೦೦ ಟನ್ ಬತ್ತವು ಹೊರಗೆ ಸಾಗಿಸಲ್ಪಡಲು ಸಿದ್ಧವಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಅಮೇರಿಕಾಕ್ಕೆ ಸೇರಿದ ಚಿಕಾಗೊಪಟ್ಟಣದಲ್ಲಿ ಕಳೆದ ತಾ|| ೧೦ ರಲ್ಲಿ ಒಬ್ಬ ಕಳ್ಳನು ಒಂದು ಮನೆಗೆ ನುಗ್ಗಿ ೩೦೦೦ ರೂಪಾಯಿಗಳನ್ನು ಅಪಹರಿಸಿಕೊಂಡು ಮನೆಯಿಂದ ಹೊರಗೆ ಬರುವಷ್ಟರಲ್ಲಿ ಬೇರೆ ಇನ್ನು ೩ ಜನ ಕಳ್ಳರು ಅವನನ್ನು ಬೆದರಿಸಿ ಅವನು ಅಪಹರಿಸಿದ್ದ ರೂಪಾಯಿಗಳನ್ನು ಕಿತ್ತುಕೊಂಡು ಫಲಾಯನವಾದರು.

ಚೈನಾದಲ್ಲಿ ಈಗ ೨೦೦೦೦೦೦ ಜನ ಹೊಟ್ಟೆಗೆ ಅನ್ನವಿಲ್ಲದಿರುತ್ತಾರೆ. ಸೈನಿಕರು ಇವರಿಗೆ ಆಹಾರವನ್ನು ಒದಗಿಸಿಕೊಡುತ್ತಲಿದ್ದಾರೆ. ಮತ್ತೂ ಜೆ. ಡಿ ರಾಕ್‌ಫೆಲರ್ ಎಂಬ ಶ್ರೀಮಂತರು ಈ ವಿಪನ್ನರ ಸಹಾಯಾರ್ಥವಾಗಿ ಏರ್ಪಟ್ಟಿರುವ ಕ್ಷಾಮನಿವಾರಣೆಯ ಫಂಡಿಗೆ ೧೫೦೦೦ ರೂಪಾಯಿಗಳ ಧರ್ಮವನ್ನು ಮಾಡಿರುತ್ತಾರೆ.

ಬೊಂಬಾಯಿ ಪಟ್ಟಣದಲ್ಲಿ ಈವರ್ಷ ಪ್ಲೇಗು ಉಪದ್ರವವು ಹಿಂದಿನ ೨ ವರ್ಷಗಳಿಗಿಂತಲೂ, ಉಲ್ಬಣವಾಗಿ ಪರಿಣಮಿಸುವ ಸಂಭವವಿರುವುದರಿಂದ ಜನರು ಎಚ್ಚರವಾಗಿದ್ದು ಇನಾಕ್ಯುಲೇಷನ್ ಮಾಡಿಸಿಕೊಳ್ಳತಕ್ಕದೆಂದೂ ಈ ರೋಗವನ್ನು ಅಣಗಿಸುವ ವಿಚಾರದಲ್ಲಿ ಜನರು ಸರ್ಕಾರದವರಿಗೆ ಸಹಾಯಕರಾಗಬೇಕೆಂದೂ ಅಲ್ಲಿಯ ಹೆಲ್ತಾಫೀಸರು ತಿಳಿಸಿರುತ್ತಾರೆ.

ದಕ್ಷಿಣ ಹಂಗೇರಿಯಲ್ಲಿ ಪೋಲೀಸರು ಭಿಕ್ಷುಕರ ಗುಂಪೊಂದನ್ನು ಹಿಡಿದು ನೋಡುವಲ್ಲಿ ೨೩ ಮಕ್ಕಳನ್ನು ಕದ್ದುತಂದು ಭಿಕ್ಷೆಯನ್ನು ಮಾಡಿಸುವುದಕ್ಕಾಗಿ ಅವರಲ್ಲಿ ಕೆಲರ ಕಾಲುಗಳನ್ನು ಮುರಿದು ಕುಂಟರನ್ನಾಗಿಯೂ, ಮತ್ತೆ ಕೆಲರನ್ನು ಕುರುಡರನ್ನಾಗಿಯೂ ಹೀಗೆ ಅಂಗವಿಕಲರನ್ನು ಮಾಡಿರುವುದು ಕಂಡುಬಂದಿತು. ಅನಂತರ ಪೋಲೀಸರು ಆ ಭಿಕ್ಷುಕವೃತ್ತಿಯ ಗುಂಪಿನವರನ್ನು ಸೆರೆಹಿಡಿದುವಿಚಾರಣೆಗೆ ಗುರಿ ಮಾಡಿರುವರು.

ಗಂಗಾನದಿಯ ನೀರನ್ನು ಎಷ್ಟು ದಿನಗಳವರೆಗೆ ಇಟ್ಟಿದ್ದಾಗ್ಯೂ ಕೆಡುವುದಿಲ್ಲವೆಂದು ಭಾರತೀಯರು ನಂಬಿರುವರಷ್ಟೆ. ಸೀಮೆಯಲ್ಲಿ ನೀರಿನ ಪರೀಕ್ಷೆಯ ಡೈರಕ್ಟರಾದ ಡಾಕ್ಟರು ಇದನ್ನು ಪರೀಕ್ಷಿಸುವುದಕ್ಕಾಗಿ ಬೇಕಾಗಿ ಶೇಖರಿಸಿದ್ದ ನೀರಿನಲ್ಲಿ ಅರ್ಧಸೇರಿನಷ್ಟನ್ನು ತೆಗೆದು ಅದಕ್ಕೆ ವಿಷಮಶೀತಜ್ವರರೋಗಿಯಿಂದ ಲಕ್ಷಾಂತರ ಹುಳುಗಳನ್ನು ತೆಗೆದು ಬೆರಸಿ ಪಾನಮಾಡಿದಾಗ್ಯೂ ಏನೂ ಅಪಾಯವಾಗದೆ ನೀರು ಕುಡಿಯಲು ಚೆನ್ನಾಗಿತ್ತೆಂದು ಹೇಳುತ್ತಾರೆ.

ಸವಾರ್ಕರನಿಗೆ ಬೊಂಬಾಯಿ ಹೈಕೋರ್ಟಿನವರು ಯಾವಜ್ಜೀವಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದ್ದರು. ಆದರೆ ಅವನು ಫ್ರೆಂಚರದೇಶದಲ್ಲಿ ಹಿಡಿಯಲ್ಪಟ್ಟುದರಿಂದ ಫ್ರೆಂಚ್ ಸರ್ಕಾರದನುಮತಿಯಿಲ್ಲದೆ ದಂಡನೆಗೆ ಗುರಿಮಾಡಲ್ಪಡಕೂಡದೆಂಬುದರ ಮೇಲೆ ಹೇಗ್‌ಪಟ್ಟಣದಲ್ಲಿ ಫ್ರೆಂಚ್ ಮತ್ತೂ ಬ್ರಿಟಿಷ್ ಸರ್ಕಾರಗಳ ಪ್ರತಿನಿಧಿಗಳು ಕೂಡಿ ಸವಾರ್ಕರನ ವಿವಾದದ ವಿಚಾರಣೆಯನ್ನು ನಡಿಸಿ ಅವನು ತಪ್ಪಿತಸ್ಥನೆಂದೂ ಈಗ ವಿಧಿಸಲ್ಪಟ್ಟಿರುವ ಶಿಕ್ಷೆಯನ್ನನುಭವಿಸತಕ್ಕದೆಂದೂ ನಿರ್ಧರಿಸಿದರು.

ರಷ್ಯಾದಲ್ಲಿ ಇಬ್ಬರು ಕಳ್ಳರು ತಮ್ಮಿಬ್ಬರಲ್ಲಿ ಕೌಂಟ್ ಟಾಲಸ್ಟಾಯಿಯ ರೂಪವನ್ನು ಚೆನ್ನಾಗಿ ಹೋಲುವ ಒಬ್ಬನಿಗೆ ಟಾಲಸ್ಟಾಯಿಯ ವೇಷವನ್ನು ಹಾಕಿ ಕೌಂಟ್‌ಟಾಲಸ್ಟಾಯಿಯೆಂದು ಹೇಳಿಕೊಂಡು ಹಳ್ಳಿಗಳ ಮೇಲೆ ಹೊರಟು ಟಾಲಸ್ಟಾಯಿಯ ಶತ್ರುಗಳು ಮನೆಯನ್ನು ತಮ್ಮನ್ನು ಬಿಡಿಸಿ ಓಡಿಸಿ ಬಿಟ್ಟಿರುತ್ತಾರಾದುದರಿಂದ ದ್ರವ್ಯಸಹಾಯ ಮಾಡಬೇಕೆಂದು ರೈತಜನರಿಗೆ ಸುಳ್ಳು ಹೇಳಿ ಬೇಕಾದಷ್ಟು ಹಣವನ್ನು ಸಂಪಾದಿಸಿ ಕಡೆಗೆ ತಮ್ಮ ಮೋಸ ಕೃತ್ಯವು ಬೈಲಾಗಿ ತಲೆಯನ್ನು ತಪ್ಪಿಸಿಕೊಂಡಿರುತ್ತಾರೆ.

ತಂತಿಗಳ ಸಂಬಂಧವಿಲ್ಲದೆ ಟೆಲಿಫೋನನ್ನು ಏರ್ಪಡಿಸಿರುವ ಶಿಲ್ಪಿಯು ಅದೇ ಸಾಧನದ ಮೂಲಕವಾಗಿಯೇ ರೇಲ್ವೆಯಲ್ಲಿ ಒಂದು ಟ್ರೇನಿನಿಂದ ಮತ್ತೊಂದು ಟ್ರೇನಿಗೆ ಬಂಡಿಯು ನಿಂತಿರುವಾಗಲೇ ಆಗಲಿ ಅತ್ಯಂತ ವೇಗದಿಂದ ಹೋಗುತ್ತಿರುವಾಗಲೇ ಆಗಲಿ ವರ್ತಮಾನವನ್ನು ಕಳುಹಿಸಬಹುದೆಂದು ಗೊತ್ತುಮಾಡಿರುವನು. ಒಂದೇ ಮಾರ್ಗದಲ್ಲಿ ಇದಿರುಬದಿರಿಗೆ ಬಂದ ಬಂಡಿಗಳು ಡಿಕ್ಕಿಹೊಡೆದು ಅಪಾಯವಾಗುತ್ತಿದ್ದದನ್ನು ಕಂಡು ಈ ಸಾಧನ ದ್ವಾರಾ ಮುಂದಾಗಿ ಸುದ್ದಿಯನ್ನು ತಿಳಿದು ತಪ್ಪಿಸಿಬಿಡಬಹುದೆಂತಲೂ ಆತನು ತಿಳಿಸಿರುತ್ತಾನೆ.

ರಷ್ಯಾದೇಶದ ಯುವರಾಜರಿಗೆ ತಮ್ಮ ಆಳುಕಾಳುಗಳೆಲ್ಲಾ ತನ್ನನ್ನು ಕಂಡಕೂಡಲೆ ಎದ್ದುನಿಂತು ತನಗೆ ಮರ್ಯಾದಿಸುವುದು ತನಗೆ ದೊಡ್ಡ ಗೌರವವೆಂಬ ಭ್ರಮೆಯು ಬಲವಾಗಿರುವುದು. ಅದಕ್ಕಾಗಿ ಅವರು ನಿಷ್ಕಾರಣವಾಗಿಯಾದರೂ ಪದೆಪದೆ ಆ ಕೂಲಿಜನರಿರುವ ಕೋಣೆಗಳಿಗೆ ಹೋಗಿ ಪ್ರತ್ಯುತ್ಥಾನ ಮರ್ಯಾದೆಯನ್ನು ಹೊಂದುತ್ತಿರುವರಂತೆ. ಈ ಸಂಗತಿಯು ತಂದೆಯಾದ ಚಕ್ರವರ್ತಿಯವರಿಗೆ ತಿಳಿಯಬರಲು, ಯಾರೂ ಅಂಥ ಮರ್ಯಾದೆಯನ್ನು ಮಾಡಲವಶ್ಯವಿಲ್ಲವೆಂದು ಅಪ್ಪಣೆ ಮಾಡಿದರು. ಮರುದಿನ ಯುವರಾಜನಿಗೆ ಎಂದಿನಂತೆ ಕೂಲಿಯವರು ಮರ್ಯಾದಿಸದೆ ಹೋಗಲು, ಮನಸ್ಸಿನಲ್ಲಿ ಕೊರಗಿ, ಈ ಹೊತ್ತಿಗೆ ಮಾತ್ರ ಮೊದಲಿನಂತೆ ಮರ್ಯಾದಿಸಿಬಿಡಿ, ಇದನ್ನು ಚಕ್ರವರ್ತಿಯವರಿಗೆ ತಿಳಿಯಗೊಡದಂತೆ ಮಾಡುತ್ತೇನೆ. ಎಂದು ಅವರು ಒಬ್ಬ ಕೂಲಿಯವನನ್ನು ಪ್ರಾರ್ಥಿಸಿಕೊಂಡರಂತೆ.

ಟಾಕೆಯೆಂಬ ವರ್ತಕನು ಚೀನಾದೇಶದಿಂದ ಪರ್ಷಿಯಾಕ್ಕೆ ಹೋಗುತ್ತಾ ಬೊಂಬಾಯಿಗೆ ಭೂಮಾರ್ಗದಿಂದ ಹೋಗಿ ಅಲ್ಲಿಂದ ಹಡಗನ್ನೇರಬೇಕೆಂದು ಯೋಚಿಸಿ, ತುತ್ತುಕುಡಿಯಲ್ಲಿ ಹಡಗಿನಿಂದಿಳಿದನು. ಅವನ ಬಳಿಯಲ್ಲಿದ್ದ ಸಾಮಾನುಗಳನ್ನು ಸುಂಕದಕಟ್ಟೆಯವರು ಪರಿಶೋಧಿಸಲಾಗಿ ೨ ತುಪಾಕಿಗಳು ಇದ್ದುವು. ಅಪ್ಪಣೆ ಚೀಟಿಯಿಲ್ಲದೆ ಅವನ್ನು ಭರತಖಂಡಕ್ಕೆ ತಂದುದಕ್ಕೆ ಪೋಲೀಸರು ತಕ್ಕ ಸಮಾಧಾನವನ್ನು ಕೇಳುವಲ್ಲಿ, ತಾನು ಕಚೇರಿಯಿಂದ ನೇರವಾಗಿ ಸಮುದ್ರ ತೀರಕ್ಕೆ ಬಂದುಬಿಟ್ಟಂತೆಯೂ ತನ್ನ ಅಸಿಸ್ಟೆಂಟು ಮನೆಯಿಂದ ಸಾಮಾನುಗಳನ್ನು ಮೂಟೆಕಟ್ಟಿ ತಂದಿಟ್ಟಿದ್ದಂತೆಯೂ, ಆ ಗಂಟುಗಳನ್ನು ತಾನು ಬಿಚ್ಚಿ ನೋಡಿರಲಿಲ್ಲವೆಂದೂ ಉತ್ತರಕೊಟ್ಟನು. ಅದನ್ನು ಪೋಲೀಸರು ನಂಬದೆ ದಂಡಾಧಿಕಾರಿಯವರಿಗೆ ವಿಚಾರಣೆಗೆ ಗುರಿಮಾಡಿದರು. ಅಲ್ಲಿಂದ ಸೆಷನ್‌ಕಮಿಟಾಯಿತು. ಸಾಕ್ಷ್ಯಗಳು ಚೀನಾದಿಂದ ಬರಬೇಕಾಗಿರುವ ಕಾರಣ ತಿರುನಲ್ವೇಲಿ ಸೆಷನ್ ಜಡ್ಜರು ಇದರ ವಿಚಾರಣೆಯನ್ನು ಏಪ್ರಿಲ್ ತಿಂಗಳಿಗಿಟ್ಟಿರುವರು.

ಕಳೆದತಿಂಗಳು ತಾ|| ೨೨ ರಲ್ಲಿ ಸೀಮೆಯೊಳಗೆ ಐರಿಷ್ ಪಕ್ಷದ ಜನರು ಮಿ|| ರೆಡ್‌ಮೆಂಡ್‌ರವರ ಅಧ್ಯಕ್ಷತೆಯಿಂದ ಒಂದು ಸಭೆಗೂಡಿದ್ದು, ಈ ಕೆಳಗೆ ಹೇಳುವ ಪ್ರಕಾರ ತಮ್ಮ ಅಭಿಪ್ರಾಯವನ್ನು ಹೊರಗೆಡಹಿದರು—"ಶ್ರೀಪಂಚಮ ಜಾರ್ಜ್ ಚಕ್ರವರ್ತಿಯವರ ಪಟ್ಟಾಭಿಷೇಕ ಮಹೋತ್ಸವವೈಭವದಲ್ಲಿ ನಾವು ಅವರ ಇತರ ಪ್ರಜೆಗಳೊಡನೆ ಕೂಡಿ ಸಮಭಾಗಿಗಳಾಗುವುದಕ್ಕೆ ಇನ್ನೂ ಸಮಯವು ಪ್ರಾಪ್ತವಾಗದೆ ಇರುವುದನ್ನು ಕಂಡು ಅತ್ಯಂತವಾಗಿ ವಿಷಾದಿಸುತ್ತೇವೆ. ನಾವು ಪ್ರಭುಗಳ ಯೋಗಕ್ಷೇಮಾಭಿವೃದ್ಧಿಯನ್ನು ಕುರಿತು ಮನಃಪೂರ್ವಕವಾಗಿ ಪ್ರಾರ್ಥಿಸುತ್ತ ಅವರ ರಾಜ್ಯ ಪರಿಪಾಲನವು ಬಹುಕಾಲ ಮಹಿಮಾತಿಶಯದಿಂದ ಮೆರೆಯುತ್ತಿರಲೆಂದು ಕೋರುತ್ತೇವೆ. ಆದರೆ, ನಮಗೆ ಸ್ವಪ್ರಜಾಪರಿಪಾಲನ ಸ್ವಾತಂತ್ರ್ಯವು ಇನ್ನೂ ಕೊಡಲ್ಪಡದೆಯಿರುವುದರಿಂದ ಅಂಥ ಉತ್ಸವ ವೈಭವದಲ್ಲಿ ನಾವೂ ಭಾಗಿಗಳಾಗಿರದೆ ದೂರಸ್ಥರಾಗಿರುವುದಕ್ಕೆ ಬದ್ಧರಾಗಿರುತ್ತೇವೆ. ಐರ್ಲಂಡು ದೇಶಕ್ಕೆ ಸ್ವಪ್ರಜಾಪರಿಪಾಲನ ಸ್ವಾತಂತ್ರ್ಯವು ಶೀಘ್ರವಾಗಿಯೇ ದೊರಕೊಳ್ಳುವುದೆಂಬ ನಂಬುಗೆಯಿಂದ ನಿರೀಕ್ಷಿಸುತ್ತೇವೆ.

ದಕ್ಷಿಣ ಆರ್ಕಾಟ್ ಡಿ|| ಪನ್ನತಿಸಮಾಲದಲ್ಲಿ ಪರಪೇಯಮಾನ್ ಎಂಬ ಗ್ರಾಮದ ಇನಾಂದಾರರಿಗೂ ಮತ್ತೂ ಅಲ್ಲಿಯ ರೈತರಿಗೂ ಕಂದಾಯದ ವಿಚಾರದಲ್ಲಿ ಮನಸ್ತಾಪವುಂಟಾಗಿ ವಾದವನ್ನು ಮಾಡಿದ್ದರು. ಕಡೆಗೆ ಕೋರ್ಟಿಗೆ ಹತ್ತಿ ವಿವಾದವನ್ನು ಮಾಡುತ್ತಿರುವರು. ಈ ಮಧ್ಯೆ ಆ ಹಳ್ಳಿಯ ಇನಾಂದಾರರು ಕಳೆದ ತಾ|| ೨೫ ರಲ್ಲಿ ಒಬ್ಬ ಪೋಲೀಸು ಸಬ್ ಇನ್ಸ್ಪೆಕ್ಟರನ್ನೂ ಕೆಲ ಕಾನ್‌ಸ್ಟಬಲರುಗನ್ನೂ ಸಹಾಯಕ್ಕಾಗಿ ಕೂಡ ಕರೆದುಕೊಂಡು ಕಂದಾಯವನ್ನು ಕೊಡದಿದ್ದ ರೈತರ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲು ಹೋದಾಗ, ರೈತರು ರೇಗಿ ಇನಾಂದಾರರ ಮತ್ತೂ ಪೋಲೀಸರ ಮೇಲೆಬಿದ್ದು ಪ್ರಹರಿಸಲುಪಕ್ರಮಿಸಿದಾಗ ಅವರು ಒಂದು ಗುಡಿಸಲಿನಲ್ಲಿ ಸೇರಿಕೊಂಡರು. ರೈತರು ಅಷ್ಟಕ್ಕೆ ಬಿಡದೆ ಕಲ್ಲುಗಳನ್ನೆಸೆದು ಗುಡಿಸಿಲಿಗೆ ಬೆಂಕಿಯನ್ನು ಹೊತ್ತಿಸಿದರು. ಪೋಲೀಸಿನವರೂ ಇನಾಂದಾರರೂ ಪ್ರಾಣವನ್ನುಳಿಸಿಕೊಳ್ಳುವುದು ಬಹು ಕಷ್ಟವಾಗಿ ಒಬ್ಬ ಕಾನ್‌ಸ್ಟಬಲನಮೂಲಕ ಪನ್ನತಿಯಲ್ಲಿದ್ದ ಡಿ|| ಮ್ಯಾಜಿಸ್ಟ್ರೇಟರು ಮತ್ತೂ ಡಿ|| ಸೂಪರಿಂಟೆಂಡೆಂಟರಿಗೆ ವರ್ತಮಾನವನ್ನು ಕೊಟ್ಟರು. ಅವರು ರಿಜರ್ವ್ ಪೋಲೀಸುಬಲದೊಡನೆ ಕೂಡಲೆ ಹಳ್ಳಿಗೆಹೋಗಿ ದಂಗೆಯನ್ನು ಶಮನ ಮಾಡಿ ೧೬ ಜನರನ್ನು ಸೆರೆಯಲ್ಲಿಡಿಸಿದರು.

ಲಾಹೋರು ಪ್ರಾಂತದಲ್ಲಿ ಕೆಲ ಜೂಜಾಳಿಗಳು ಗುಂಪುಕೂಡಿ, ತಮ್ಮಲ್ಲಿ ಒಬ್ಬನನ್ನು ದೊಡ್ಡಸೇಟೆಂದು ಪ್ರಸಿದ್ಧಿಗೊಳಿಸಿ, ಅವನ ಕುದುರೆಗಳ ಮೇಲ್ವಿಚಾರಣೆನೋಡಿಕೊಳ್ಳುವುದಕ್ಕೆ ೩೦ ರೂ. ಸಂಬಳದ ಒಬ್ಬ ಮನುಷ್ಯನಾಗಬೇಕೆಂದು ಸುದ್ದಿ ಹುಟ್ಟಿಸಿ, ಅದನ್ನು ನಿಜವೆಂದು ನಂಬಿ ಸಂಬಳಕ್ಕಿರಲು ಬಂದ ಒಬ್ಬ ಮನುಷ್ಯನಿಂದ ೧॥ ಸಾವಿರ ರೂಗಳನ್ನು ಡಿಪಾಜಿಟ್ಟಾಗಿ ತೆಗೆದುಕೊಂಡು ಮೋಸಪಡಿಸಿದರು. ಕಡೆಗೆ ಆತನು ತಮ್ಮೊಡನೆ ಜೂಜಾಡಿ ಅಷ್ಟು ಹಣವನು ಸೋತನೆಂದು ಹೇಳಿದರು. ಮತ್ತೂ ಹಿಗೆಯೆ ತಮ್ಮ ಸೇಟಿನ ಕುದುರೆಗಳಿಗೆ ಹುಲ್ಲಿನ ಕಂಟ್ರಾಕ್ಟರು ಬೇಕೆಂದು ಸುದ್ದಿ ಹುಟ್ಟಿಸಿ, ನರಸಿಂಗ್‌ದಾಸ್ ಎಂಬುವನಿಂದ ೩೦೦ ರೂಗಳನ್ನು ಅಪಹರಿಸಿದರು. ಮತ್ತೂ ತಾವು ಒಂದು ಮಿಲ್ಲನ್ನು ಏರ್ಪಡಿಸಿರುವಂತೆಯೂ, ಅದರಲ್ಲಿ ವಿಪರೀತವಾಗಿ ಲಾಭವು ಬರುತ್ತಿರುವಂತೆಯೂ ನಂಬುಗೆ ಹುಟ್ಟಿಸಿ, ರಾಮಸಿಂಗ್ ಎಂಬ ಒಬ್ಬ ಸ॥ ಅ॥ ಸರ್ಜನನ್ನು ಆ ಮಿಲ್ಲಿನಲ್ಲಿ ಭಾಗಸ್ಥನಾಗಿರುವಂತೆ ಮಾಡಿ, ಅವನ ೧೧೮೦ ರೂ. ಗಳನ್ನು ಅಪಹರಿಸಿದರು. ಕಡೆಗೆ ಆತನೂ ಈ ಹಣವನ್ನು ತಮ್ಮೊಡನೆ ಜೂಜಾಡಿ ಸೋತನೆಂದು ಹೇಳಿದರು. ಹೀಗೆಯೇ ಎಷ್ಟೋ ಮೋಸಗಳನ್ನು ಮಾಡಿದ್ದರು. ಇವರೆಲ್ಲರೂ ಪೋಲೀಸರ ಕೈಗೆ ಸಿಕ್ಕಿ ತರತರದ ಶಿಕ್ಷೆಗೆ ಗುರಿಯಾದರು. ಇನ್ನು ಮೂವರು ಮಾತ್ರ ಸಿಕ್ಕದೆ ತಪ್ಪಿಸಿಕೊಂಡಿರುವರು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು.

ಪ. ಪ್ರ.

ಪತ್ರವ್ಯವಹಾರ.

ಗುಂಡ್ಲುಪೇಟೆ ತಾ॥ ಕೊಡಸೋಗೆ ಗೌರ್ನಮೆಂಟ್ ಕನಡಾ ಸ್ಕೂಲು.

ಈ ಗ್ರಾಮದಲ್ಲಿ ಸ್ಕೂಲು ಸ್ಥಾಪಿಸಲ್ಪಟ್ಟು ೨೫ ವರ್ಷಗಳಾದಾಗ್ಯೂ, ಪ್ರತ್ಯೇಕವಾದ ಕಟ್ಟಡವಿಲ್ಲದೆ ಮಾರಿಚಾವಡಿಯಲ್ಲಿ ನಡೆಸಲ್ಪಡುತ್ತಿದ್ದುದರಿಂದ ವಿದ್ಯಾರ್ಥಿಗಳ ಸಂಖ್ಯೆಯು ೨೫ ಕ್ಕೆ ಹೆಚ್ಚಲು ಅವಕಾಶ ವಿರಲಿಲ್ಲವು. ಆದರೆ ಮ॥ ಬಿ. ಸಿ. ಚಿಕ್ಕಮಲ್ಲಯ್ಯನವರು ೧೯೦೭ ನೇ ಸೆಪ್ಟಂಬರಲ್ಲಿ ಈ ಸ್ಕೂಲಿನ ಮಾಸ್ಟರಾಗಿ ವರ್ಗವಾಗಿ ಬಂದು ಇಲ್ಲಿಯ ಜನರನ್ನು ಪ್ರೋತ್ಸಾಹಿಸಿ, ಹೊಸದಾಗಿ ಒಂದು ಕಟ್ಟಡವನ್ನು ಪಾಠಶಾಲೆಗಾಗಿ ಕಟ್ಟಿಸಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿದರು. ಈಗ ೩೭ ಜನ ವಿದ್ಯಾರ್ಥಿಗಳಿರುತ್ತಾರೆ. ಮತ್ತೂ ನೆರೆ ಗ್ರಾಮದಿಂದ ಇನ್ನೂ ಅನೇಕರು ಬಂದು ಸೇರುವವರಾಗಿರುತ್ತಾರೆ, ಇಂಥ ಅಭಿವೃದ್ಧಿ ಸ್ಥಿತಿಯಲ್ಲಿರುವ ಪಾಠಶಾಲೆಯನ್ನು ಒಬ್ಬ ಉಪಾಧ್ಯಾಯರು ನಿರ್ವಹಿಸುವುದು ಸಾಧ್ಯವಲ್ಲ ವಾದುದರಿಂದ ಸ್ಕೂಲ ಡಿಪ್ಯುಟಿ ಇನ್ಸ್ಪೆಕ್ಟರು ಒಬ್ಬ ಸಹೋಪಾಧ್ಯಾಯರನ್ನು ಕೊಟ್ಟು ಈ ಸ್ಕೂಲನ್ನು ಇನ್ನೂ ಅಭಿವೃದ್ಧಿ ಸ್ಥಿತಿಗೆ ತರುವರೆಂದು ಪ್ರಾರ್ಥಿಸುವ

ಸ್ಥಳನಿವಾಸಿ.

ದಾವಣಗೆರಿಯ ಪ್ರಸಿದ್ಧವಿದ್ವಾನ್ ವೇ॥ ಕೆ. ಯಂ. ದಾನಪ್ಪಶಾಸ್ತ್ರಿಗಳನ್ನು ನಿಜಾಂ ಇಲಾಖಾ ಕೊಪ್ಪಳದ ತಾ॥ ಬಳಗೇರಿಗ್ರಾಮಕ್ಕೆ ಅಲ್ಲಿಯ ನಿವಾಸಿಗಳಾದ ಕೊಟ್ಟೂರು ಜಾಗಟಗೇರಿ ವೀರಾಳಪಟ್ಟದ ಮಠದ ಶ್ರೀ॥ ಬಸವಲಿಂಗಪ್ಪಯ್ಯನವರು ಬರಮಾಡಿಕೊಂಡು ಕಳೆದ ೬॥ ತಿಂಗಳಿಂದಲೂ ಶ್ರೀ ಬಸವೇಶ್ವರ ಪುರಾಣ ಶ್ರವಣವನ್ನು ಈ ಪ್ರಾಂತದ ವೀರಶೈವರಿಗೆ ಮಾಡಿಸಿ ಅವರನ್ನು ಧನ್ಯರನ್ನಾಗಿ ಮಾಡಿದರು. ಈ ಶಾಸ್ತ್ರಿಗಳ ಪಾಂಡಿತ್ಯವನ್ನೂ ವಾಗ್ಧೋರಣೆಯನ್ನೂ ಎಷ್ಟು ಹೇಳಿದರೂ ತೀರದು. ಇವರು ಆಗಾಗ್ಗೆ ಮತಾಚಾರವನ್ನು ಕುರಿತು ಮಾಡಿದ ಉಪನ್ಯಾಸಗಳು ಇಲ್ಲಿಯ ವೀರಶೈವರ ಮನಸ್ಸಿಗೆ ಹತ್ತಿ ಅವರ ಆಚಾರವ್ಯವಹಾರಗಳು ಬಹುವಾಗಿ ಸುಧಾರಿಸಿರುವುವು. ವೀರಾಳಪಟ್ಟದ ಬಸವಲಿಂಗಪ್ಪಯ್ಯನವರು ಒಳ್ಳೇ ಧನಿಕರೂ, ಗುಣಾಢ್ಯರೂ, ದಯಾಳುಗಳೂ, ಆಚಾರಶೀಲರೂ ಆಗಿರುವರು. ಇವರು ಪೌರಾಣಿಕರಾದ ಶಾಸ್ತ್ರಿಗಳನ್ನೂ ಅವರ ಪರಿವಾರದವರನ್ನೂ ತಮ್ಮಲ್ಲೇ ಇಟ್ಟುಕೊಂಡು ಭೋಜನಾದ್ಯುಪಚಾರದಿಂದ ಸತ್ಕರಿಸಿ ನಿತ್ಯದಲ್ಲೂ ಪುರಾಣಶ್ರವಣಕ್ಕೆ ಬಂದಂಥ ಜನರಿಗೆ ಭೋಜನವನ್ನು ಮಾಡಿಸುತ್ತಿದ್ದುದಲ್ಲದೆ ಪುರಾಣಸಮಾಪ್ತಿಯ ದಿನ ದೊಡ್ಡ ಸಮಾರಾಧನೆಯನ್ನು ಮಾಡಿ, ಶಾಸ್ತ್ರಿಗಳಿಗೆ ಯೋಗ್ಯಸಂಭಾವನೆಯನ್ನು ಕೊಟ್ಟು ತೃಪ್ತಿಗೊಳಿಸಿದರು. ಇದೇ ಒಳಗೇರಿಯ ನಿವಾಸಿಗಳಾದ ದೊಡ್ಡಯ್ಯನವರು ಹಿರೇಮಠ, ಫಕೀರಪ್ಪಯ್ಯನವರು, ವೆಂಕಪ್ಪ ದಿನ್ನಾಳ, ಬಸಪ್ಪ ಯರನಾಳ, ಭೀಮಪ್ಪ, ರುದ್ರಯ್ಯ ಮುಂತಾದ ದೊಡ್ಡಮನುಷ್ಯರು ಈ ಪುರಾಣಕಾರ್ಯದಲ್ಲಿ ಮುಂದಾಳುದಳಾಗಿ ನಿಂತು ಸಮಾಪ್ತಿಗೊಳಿಸಿದರು. ನಮ್ಮ ಮತದ ಗೌರವಪ್ರತಿಷ್ಠೆಯನ್ನು ಕಾಪಾಡುತ್ತಿರುವ ಮೈಸೂರು ಸ್ಟಾರ್ ಪತ್ರಿಕೆಗೆ ಈ ದೇಶೀಯರೆಲ್ಲರೂ ಅವಶ್ಯಕವಾಗಿ ದ್ರವ್ಯಸಹಾಯ ಮಾಡಬೇಕೆಂದು ಸಭೆಯಲ್ಲಿ ಬೋಧಿಸಿದರು.

ಪ್ರತ್ಯಕ್ಷದರ್ಶಿ.

ಮೊದಲನೆಯ ಕೌನ್ಸಿಲರ್ ಸಾಹೇಬರವರ ಸಂಚಾರ.

ಮೊದಲನೆಯ ಕೌನ್ಸಿಲರ್ ಸಾಹೇಬರಾದ ಮ॥ ಕೆ. ಪಿ. ಪುಟ್ಟಣ್ಣಸೆಟ್ಟಿಯವರ ಸವಾರಿಯು ಸೊರಬದಿಂದ ಮೋಟಾರ್‌ಕಾರಿನ ಮೇಲೆ ಡೆ॥ ಕ॥ ಸಾಹೇಬರೊಡನೆ ಸಾಯಂಕಾಲ ೫॥ ಗಂಟೆಗೆ ಶಿರಾಳಕೊಪ್ಪಕ್ಕೆ ಬಿಜಯಂಗೈಸಿತು. ಬಂಗಲೆಯ ಮುಂದಿರುವ ಚಪ್ಪರದಲ್ಲಿ ಪುರಪ್ರಮುಖರು ಕಾದಿದ್ದು ನಜರನ್ನು ಅರ್ಪಿಸಿದರು. ಗರ್ಲ್ಸ್ ಸ್ಕೂಲಿನ ಬಾಲಕಿಯರು ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಶ್ರೇಯಃಪ್ರಾರ್ಥನೆಯ ಹಾಡುಗಳನ್ನು ಹಾಡಿದರು. ಆಮೇಲೆ ಇಲ್ಲಿನ ಹುಬ್ಬಳ್ಳಿ ಸಂಸ್ಕೃತ ಪಾಠಶಾಲೆಯಲ್ಲಿ ಸಂಸ್ಕೃತ ಚಂಪೂಕಾವ್ಯಗಳನ್ನೋದಿದ್ದ ಶೀಲವಂತಮಠದ ಶಿವಮೂರ್ತಯ್ಯನವರು ವೇದೋಕ್ತ ಆಶೀರ್ವಾದ ಮಂತ್ರವನ್ನು ಹೇಳಿದಮೇಲೆ ಈ ಆರ್ಯೆಯನ್ನು ಹೇಳಿದರು.

ಆರ್ಯಾ॥ ಕೃಷ್ಣಭೂಪಸಚಿವಂ ಪುಟ್ಟಣಶೆಟ್ಟೀತಿ
ವಿದಿತನುತಿವಿಭವಂ। ಸ್ಮಿತವದನಂ ಶುಭ
ಸದನಂ ಪಾಯಾಚ್ಛ್ರೀಸರ್ವಮಂಗಳಾ
ಜಾನಿಃ॥

ನಂತರ ಪುರಪ್ರಮುಖರು ಗ್ರಾಮದೊಳಕ್ಕೆ ಬಿಜಯಂಗೈಸಬೇಕೆಂದು ವಿಜ್ಞಾಪಿಸಿಕೊಳ್ಳಲು ಅವರ ವಿಜ್ಞಾಪನೆಯನ್ನಂಗೀಕರಿಸಿ ಸ್ವಲ್ಪಹೊತ್ತು ವಿಶ್ರಮಿಸಿಕೊಂಡನಂತರ ಊರಿನೊಳಗೆ ಬಿಜಯಂಗೈಸಿದರು. ಊರಿನ ಮಧ್ಯೆ ಹಾಕಿದ್ದ ಚಪ್ಪರದಲ್ಲಿ ಸ್ವಲ್ಪಹೊತ್ತು ಡೆ॥ ಕಮೀಷನರೇ ಮುಂತಾದ ಅಧಿಕಾರಿಗಳೂ [illegible] ಮಂಡಿಸಿದ್ದು, ನಂತರ ವೀರಶೈವರ ಪ್ರಾರ್ಥನೆಯಮೇರೆ ಅಧಿಕಾರಿಗಳೊಡನೆ ಶ್ರೀ ನಂದೀಶ್ವರ ದೇವಸ್ಥಾನಕ್ಕೆ ದಯಮಾಡಿಸಿದರು. ಅಲ್ಲಿ ಸ್ವಲ್ಪಹೊತ್ತು ಸಂಗೀತವಿದ್ವಾನ್ ಗದ್ದಿಗಯ್ಯನವರಿಂದ ಸಂಗೀತಶ್ರವಣವಾದಮೇಲೆ ಬಂಕಾಪುರದ ಸಂಸ್ಕೃತ ಪಾಠಶಾಲಾಧ್ಯಾಪಕರಾಗಿರುವ ವೇ॥ ಮೂ॥ ಬಿದರೆ ಬಸವಲಿಂಗಶಾಸ್ತ್ರಿಗಳವರು ಶಿರಾಳಕೊಪ್ಪದ ವೀರಶೈವರ ಪರವಾಗಿ ಒಂದು ಭಾಷಣವನ್ನು ಮಾಡಿದರು. ಅದರ ಸಾರಾಂಶವೇನೆಂದರೆ— "ಲೋಕದಲ್ಲಿ ಯಾವ ಕಾರ್ಯವಾಗಬೇಕಾದರೂ ಪ್ರಭುಗಳ ಸಹಾಯವು ಆವಶ್ಯಕವು. ಈ ಕೌನ್ಸಿಲರ್ ಸಾ॥ ರವರು ಸ್ವಮತವನ್ನು ಪರಿಪಾಲನೆ ಮಾಡುವ ಉದ್ದೇಶದಿಂದಲೇ ೩ ನೆಯ ಮಹಾಸಭೆಯ ಅಧ್ಯಕ್ಷರಾಗಿದ್ದರು ಮುಂದಾದರೂ ತಮ್ಮ ರಾಜಕೀಯ ಕಾರ್ಯಗಳಲ್ಲಿ ಇತರ ಮತಸ್ಥರನ್ನು ರಕ್ಷಿಸುವಂತೆಯೇ ವೀರಶೈವರನ್ನೂ ರಕ್ಷಿಸಬೇಕು." ಎಂಬುದು. ಈ ಭಾಷಣವಾದಮೇಲೆ ಮಂಗಳಾರತಿಯು ಸಮರ್ಪಿಸಲ್ಪಟ್ಟಿತು. ನಂತರ ಕೌನ್ಸಿಲರ್ ಸಾ॥ ರವರು ನಿಮ್ಮ ಆದರೋಪಚಾರದಿಂದ ನಾನೂ ಈ ನನ್ನಸ್ನೇಹಿತರೂ ಸಂತೋಷಪಡುತ್ತೇವೆ ಎಂದು ಅಪ್ಪಣೆಕೊಡಿಸಿ ಅಲ್ಲಿಂದ ಬಂಗಲೆಗೆ ದಯಮಾಡಿಸಿ ಅಲ್ಲಿ ಪುರಜನರು ಏರ್ಪಡಿಸಿದ್ದ ಮದ್ದಿನ ತಮಾಷೆಯನ್ನು ಪರಾಮರಿಸಿ ರಾತ್ರಿಯ ಆರೋಗಣೆಗೆ ಬಿಜಯಂಗೈಸಿದರು. ಮಾರನೆಯ ಬೆಳಿಗ್ಗೆ ಶಿರಾಳಕೊಪ್ಪಕ್ಕೆ ಸಮೀಪವಾಗಿ ೧ ಮೈಲಿ ದೂರದಲ್ಲಿದ್ದ ದಕ್ಷಿಣ ಕೇದಾರವೆಂದು ಪ್ರಸಿದ್ಧವಾದ ಬಳಗಾವಿಗೆ ಅಧಿಕಾರಿಗಳೊಡನೆ ಬಿಜಯಂಗೈಸಿದ್ದು ಅಲ್ಲಿನ ಪ್ರಸಿದ್ಧವಾದ ದೇವಸ್ಥಾನಗಳನ್ನು ಪರಾಮರಿಸಿ, ವಾಪಸು ಶಿರಾಳಕೊಪ್ಪಕ್ಕೆ ಬಂದು ಆಸ್ಪತ್ರೆ, ಸ್ಕೂಲು, ಪೋಲೀಸ್ ಸ್ಟೇಷನ್ನುಗಳನ್ನು ಪರಾಮರಿಸಿ, ಪುನಃ ಗ್ರಾಮದಲ್ಲಿ ದಯಮಾಡಿಸಿ, ಹೊಸ ಬಡಾವಣೆ ಮೊದಲಾದ ಭಾಗಗಳನ್ನು ನೋಡಿಕೊಂಡು ಹೊಸದಾಗಿ ಕಟ್ಟಬೇಕಾಗಿದ್ದ ಆಸ್ಪತ್ರೆಗೆ ಯೋಗ್ಯವಾದ ಸ್ಥಳವನ್ನು ಚುನಾಯಿಸಿ ಬಿಡಾರಕ್ಕೆ ತೆರಳಿದರು. ಮಧ್ಯಾಹ್ನ ಸುಮಾರು ೩ ಗಂಟೆಗೆ ಸಾ॥ ರವರ ಸವಾರಿಯು ಮೋಟಾರಿನಮೇಲೆ ಶಿಕಾರಿಪುರಕ್ಕೆ ಸಾಗಿತು.

ಒರ್ವ ವಾರ್ತಾವಿದನು.

ತ್ರಿಷಷ್ಟಿಪುರಾತನ ಮಾಹೇಶ್ವರರ ಪೂಜಾಮಹೋತ್ಸವವು.

ಮೈಸೂರು ಡಿ॥ ನಂಜನಗೂಡು ತಾ॥ ಹುರದಹೋಬಳಿ ಕಣೆನೂರು ಗ್ರಾಮದಲ್ಲಿರುವ ವೀರಶೈವ ಮತಸ್ಥರಾದ ಮ॥ ರಾ॥ ವೀರಪ್ಪನವರು ಹನ್ನೆರಡು ವರ್ಷಗಳಿಂದ ಏಕೋಪವಾಸವ್ರತವಿದ್ದು, ಮೇಲ್ಕಂಡ ಮಾಹೇಶ್ವರರ ಪೂಜಾಮಹೋತ್ಸವವನ್ನು ಕಪಿಲಾ ಮತ್ತು ಭೃಗು ನದಿಗಳು ಸಂಗಮವಾಗತಕ್ಕ ಪುಣ್ಯಕ್ಷೇತ್ರದಲ್ಲಿ ಕಳೆದ ಮಾಘ ತಾ॥ ೮ ರಿಂದ ೧೮ ರವರೆಗೆ ಅತಿ ವಿಜೃಂಭಣೆಯಿಂದ ನಡಿಸಿದರು. ಸ್ಥಳಪರಸ್ಥಳಗಳಲ್ಲಿರುವ ಅನೇಕ ಮಠಪತಿಗಳು ಅಂದರೆ ಷಟ್ಸ್ಥಳದ ಮಾಹೇಶ್ವರರು, ಪಟ್ಟಾಧಿಕಾರಿಗಳು, ಚರಂತರು, ಗುರುಸ್ಥಳದವರು, ಭಕ್ತಮಾಹೇಶ್ವರರು ಮುಂತಾದವರಿಗಲ್ಲಾ ಆಹ್ವಾನಪತ್ರಿಕೆಯನ್ನು ಕೊಟ್ಟು ಅವರುಗಳನ್ನು ಬರಮಾಡಿಕೊಂಡಿದ್ದರು. ಸಾಧಾರಣವಾಗಿ ನಾಲ್ಕೈದು ಸಹಸ್ರ ಜನಕ್ಕೆ ಕೊರತೆಯಿಲ್ಲದೆ ಸೇರಿತ್ತು. ತಾ॥ ೮ ರವರೆಗಿನ ೩ ದಿವಸಗಳಲ್ಲೂ ಮೈಸೂರು ವೇ॥ ರಾ ಶಾಸ್ತ್ರಿಗಳು ಮತ್ತೂ ಮ॥ ರಾ॥ ಚನ್ನಮಲ್ಲಪ್ಪ ವರುಗಳಿಂದ ಶಿವಪುರಾಣವೂ, ಶಿವಾರಾಧನೆಯೂ ಟ್ಟವು. ಗೊತ್ತುಮಾಡಿದ್ದ ವೇಳೆಗೆ (ತಾ॥ ೧೧ ನೇ) ಶು॥ ೧೩ ಶನಿಪ್ರದೋಷಕಾಲದಲ್ಲಿ ನದಿಯಲ್ಲಿ ಸ್ನಾನ ೬೩ ಮಂದಿ ಪುರಾತನರನ್ನು ತಳಿರತೋರಣಗಳಿಂ ತವಾದ ವಿಶಾಲವಾದ ಅತಿಮನೋಹರವಾದ ಕ್ಕೆ ಅತ್ಯಂತ ವೈಭವದಿಂದ ಕರೆದುಕೊಂಡು ಬಂದು ನ ಉಚಿತಾಸನದಲ್ಲಿ ವಿನಿಮಾಡಿಸಿ, ಶಿವಪೂಜಾ ಸಾ ಗಳನ್ನರ್ಪಿಸಿ ಶಿವಪೂಜೆಯನ್ನು ಮಾಡಿಸಲಾಯಿತು. ದೀಕ್ಷಾಸಂಪನ್ನರಾದ ಸತಿಪತಿಗಳೀರ್ವರೂ ಪ್ರತಿಯೊ ಹೇಶ್ವರನನ್ನು ಸಂಕಲ್ಪಪುರಸ್ಸರವಾಗಿಯೂ, ವಾಗಿಯೂ ಷೋಡಶೋಪಚಾರಗಳಿಂದಲೂ ಪೂಜಿ ಯಥಾಶಕ್ತಿ ದಕ್ಷಿಣೆಮುಂತಾದುದರಿಂದ ಸತ್ಕರಿಸಿ, ಆಶೀರ್ವಾದವನ್ನು ಸ್ವೀಕರಿಸಿದರು. ಅಲ್ಲಿಗೆ ಸುಮಾ ಳಗಿನ ಝಾಮವಾಗಿತ್ತು. ಪೂಜಾ ಕಾಲದಲ್ಲಿ ಸೇರಿ ಕ್ತಮಾಹೇಶ್ವರರುಗಳು ಅಲ್ಲಲ್ಲಿ ಶಿವಕೀರ್ತನೆಗಳಿಂದಲ ಸ್ತ್ರಗಳಿಂದಲೂ, ವಿಚಾರತತ್ವಗಳಿಂದಲೂ ಜಾಗರ ವನ್ನು ಮಾಡುತ್ತಿದ್ದರು. ಮಂಟಪದ ಹೊರಭಾಗದಲ್ಲಿ ದ್ಯಗಳು ಮೊಳಗುತ್ತಿದ್ದುವು. ಈ ಕ್ಷೇತ್ರವು ಅರಣ್ಯ ವಾದಾಗ್ಯೂ ಶ್ರೀ ಸಂಗಮೇಶ್ವರ ಸ್ವಾಮಿಯವರ ಕಾಳಿಕ್ಯದ ಸ್ವಾಮಿಯವರ ಗದ್ದಿಗೆಗಳಿಂದಲೂ, ಈ ಕ್ಕಾಗಿ ಕಲ್ಪಿಸಲ್ಪಟ್ಟಿದ್ದ ವಿಶಾಲವಾದ ಮಂಟಪದಿಂದಲೂ, ಪೂಜಾವೈಭವದಿಂದಲೂ ಶೋಭಿಸುತ್ತಾ ಇದ್ದುದನ್ನು ನೋಡಿದರೆ ಎಂಥವನಿಗೂ ಕೈಲಾಸವೋ ಎಂಬಂತೆ ತೋರುತ್ತಿ ತಾ॥ ೧೨ ನೇ ಭಾನುವಾರ ಬೆಳಿಗ್ಗೆ ಅಲಂಕರಿಸಿದ್ದ ಹೊ ಶ್ರೀ ಗುರುಗಳನ್ನು ಜಪಮಾಡಿಸಿ, ಅತಿಭಕ್ತಿಯಿಂದ ಸತ್ಕ ಮಹಾಪಾದಪೂಜೆಯನ್ನು ದಂಪತಿಗಳೀರ್ವರೂ ಮಾಡಿದ ಅನಂತರ ಸೇರಿದ್ದ ಭಕ್ತಮಾಹೇಶ್ವರರಿಗೆ ಭೋಜನ ಮಾ ಪುಷ್ಪ, ಗಂಧ, ತಾಂಬೂಲ, ದಕ್ಷಿಣೆ, ವಸ್ತ್ರ ಮುಂತಾ ಧರ್ಮಗಳನ್ನು ವಿಶೇಷವಾದ ಉದಾರತ್ವದಿಂದ ಮಾಡಿದ ತಾ॥ ೧೩ ನೇ ಸೋಮವಾರ ದಿವಸ ಸಂಖ್ಯಾತೀತವಾದ ತರ ಮತಸ್ಥರಿಗೆಲ್ಲಾ ಭೋಜನ ಮಾಡಿಸಿ, ತಾಂಬೂಲ ನ್ನು ಕೊಟ್ಟು ತೃಪ್ತಿಪಡಿಸಿದರು. ಮತ್ತು ಭಕ್ತಿಪುರ ರವಾಗಿ ಕರಸಿಕೊಂಡಿದ್ದ ಭಕ್ತಮಾಹೇಶ್ವರರನ್ನು ಅದರ ಅವರುಗಳಿಂದ ಆಶೀರ್ವಾದವನ್ನು ಪಡೆದು, ಅವರವ ಸ್ಥಳಗಳಿಗೆ ಬಂಡಿಗಳ ಮೂಲಕ ಪ್ರಯಾಣವನ್ನು ಮಾ ಸಿಕೊಟ್ಟರು. ಮ॥ ರಾ॥ ವೀರಪ್ಪನವರ ಶಾಂತತೆಯ ಉದಾರಬುದ್ಧಿಯೂ ನಡೆನುಡಿಗಳೂ ಅಷ್ಟುಇಷ್ಟೆಂ ವರ್ಣಿಸಲು ಶಕ್ಯವಲ್ಲ. ಈ ಕಾರ್ಯವನ್ನು ನಡಿಸಲು ವರಿಗೆ ಈಶಪ್ರೇರಣೆಯೇ ವಿನಹ ಮತ್ತೇನೇಯಿಲ್ಲ. ಶುಭಕಾರ್ಯವು ಯಾವುದೊಂದು ವಿಘ್ನವೂ ಇಲ್ಲದಂತೆ ನ ದದ್ದಕ್ಕೆ ಆ ದಂಪತಿಗಳೀರ್ವರೂ ಆ ಸಾಕಾರ ಪರಶಿವನ್ನು ಬಾರಂಬಾರಿಗೂ ಸ್ಮರಿಸುತ್ತಾ ಮತ್ತು ಈ ಕಾರ್ಯಕ್ಕೆ ೩ ತಿ ಗಳಲಾಗಾಯಿತು ವಿಶೇಷವಾದ ಮುತವರ್ಜಿಯನ್ನು ವಹಿ ಸಿ, ದೇಹಶ್ರಮಕ್ಕೆ ಗಮನಕೊಡದೆ ನಿಂತು ಸಾಂಗವಾಗಿ ನ ರವೇರಿಸುವುದಕ್ಕೆ ತಕ್ಕ ಅನುಕೂಲಪಡಿಸಿದ ತಮ್ಮ ಅಳಿಯ ದಿರಾದ ಕಪ್ಪಸೋಗೆ ಪ॥ ಮ॥ ರಾ॥ ನಾಗಪ್ಪನವರನ್ನು ಕೊಂಡಾಡುತ್ತ ಸಂತೋಷಸಾಗರದಲ್ಲಿ ಮುಳುಗಿದ್ದರು.

"ಶ್ರೇಯಾಂಸಿ ಬಹು ವಿಘ್ನಾನಿ" ಎಂಬ ನೀತಿವಾಕ್ಯಕ್ಕನುಸಾರವಾಗಿ ಮ॥ ರಾ॥ ವೀರಪ್ಪನವರು ಪ್ರಯತ್ನಿಸಿದ್ದ ಈ ಕಾರ್ಯಕ್ಕೆ ಅನೇಕ ವಿಘ್ನಗಳು ಪ್ರಾಪ್ತವಾಗಿದ್ದಾಗ್ಯೂ ಅವುಗಳನ್ನು ಲೆಕ್ಕಿಸದೆ ಅತ್ಯಂತ ಶ್ರಮವನ್ನು ವಹಿಸಿ ಶ್ರದ್ಧೆಯಿಂದಲೂ, ಅತ್ಯುತ್ಸಾಹದಿಂದಲೂ ಸದ್ಭಕ್ತಿಯಿಂದಲೂ ಈ ಕಾರ್ಯವನ್ನು ವಿತರಣೆಯಿಂದ ಸಾಂಗವಾಗಿ ನೆರವೇರಿಸಲು ಸಹಾಯಕರಾಗಿದ್ದ ಮ॥ ರಾ॥ ಗಳಾದ ದಫೇದಾರ್ ಮಾದಪ್ಪನವರು. ಬಾಗಲ್ ಸುಬ್ಬಣ್ಣನವರು ಕೋಟೆ ನಂಜಪ್ಪನವರು ಹುಜೂರೊಳಿಗದ ವೀರಣ್ಣನವರು ಮೂಡ್ಲಾಪುರದ ಲಿಂಗಣ್ಣನವರು ಆರ್. ಮಾದಪ್ಪನವರು ದರೋಗ ನಂಜಪ್ಪನವರು ಇವರುಗಳೇ ಮೊದಲಾದ ಸದ್ಭಕ್ತರುಗಳಿಗೂ ಮತ್ತೂ ಕಾರ್ಯಕರ್ತರಾದ ಮ॥ ರಾ॥ ವೀರಪ್ಪನವರೇ ಮುಂದಾಗಿ ಅವರ ಬಂಧುವರ್ಗದವರಿಗೂ ಬಸವಾಂಬ ಪ್ರಮಥರು ಆಯುರಾರೋಗ್ಯ ಐಶ್ವರ್ಯವನ್ನು ದಯಪಾಲಿಸಿ ಕಾಪಾಡಲೆಂದು ಪ್ರಾರ್ಥಿಸುತ್ತೇನೆ. ಮೈಸೂರ್ ಡಿ॥ ಮ॥ ಕ ರಾದ ಸರದಾರ್ ಕಾಂತರಾಜೇ ಅರಸನವರು, ಈ ಮಹೋತ್ಸವದ ಕಾರ್ಯಕ್ಕೆ ವಿಘ್ನವೂ ಜನಸ್ತೋಮದಲ್ಲಿ ಗದ್ದಲವೂ ಆಗದಂತೆ ನೋಡಿಕೊಳ್ಳಲು ಪೋಲೀಸ್ ಸಹಾಯವನ್ನು ದಯಪಾಲಿಸಿದ್ದರು. ಇಂಥಾ ಕಾರ್ಯಗಳಿಗೆ ವಿಶೇಷವಾದ ಅಭಿಮಾನವಿಟ್ಟು ಯಾವಾಗಲೂ ಸಹಾಯ ಮಾಡತಕ್ಕವರಿಗೆ ಪರಶಿವನು ನಿರಂತರದಲ್ಲೂ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ

ಚಿತ್ರದುರ್ಗ.

ಮೈಸೂರು ಶ್ರೀ ಮನ್ಮಹಾರಾಜರವರ ೧ ನೇ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಶೆಟ್ಟರವರು ಪ್ರಜೆಗಳ ಸುಖಾಭಿವೃದ್ಧಿಗಳನ್ನು ವಿಚಾರಪೂರ್ವಕ ತಿಳಿದು ವ್ಯವಸ್ಥಿತಿಗೊಳಿಸಲೋಸುಗ ದೇಶಮಧ್ಯದಲ್ಲಿ ಅಲ್ಲಲ್ಲಿಯೇ ವಿಹರಿಸುತ್ತಾ ದಾವಣಗೆರೆಯಿಂದ ಬರುವ ಮಾರ್ಗದಲ್ಲಿರುವ ಮಹಾ॥ ॥ಸಂಸ್ಥಾನದ ಬೃಹನ್ಮಠದವರಿಂದ ತಯಾರಿಸಲ್ಪಟ್ಟ ರಮ್ಯವಾದ ಚಪ್ಪರಕ್ಕೆ ಮೋಟಾರ್ ಗಾಡಿಯಲ್ಲಿ ಫೆಬ್ರವರಿ ಮಾಹೆ ೯ ನೇ ತಾರೀಕು ಗುರುವಾರ ಪ್ರಾತಃಕಾಲದ ೮॥ ಘಂಟೆಗೆ ದಯಮಾಡಿಸೋಣವಾಯಿತು. ಮಹಾ॥ ॥ಸಂಸ್ಥಾನದ ಚರಮೂರ್ತಿಗಳು ಸಮ್ಮುಖದ ಶಾಸ್ತ್ರಿಗಳು ಮುನಸಿಫಿಯವರು ಮುಂತಾದವರು ಆಗಮನವನ್ನು ನಿರೀಕ್ಷಿಸುತಿದ್ದು ಬಂದೊಡನೆಯೇ ಪದ್ಧತಿಪ್ರಕಾರ ಮಂತ್ರಾಕ್ಷತಾ ಪುಷ್ಪಮಾಲಿಕಾದಿಗಳನ್ನು ಈಯಲು ಸ್ವೀಕರಿಸಿ ಮಹಾ॥ ॥ಶ್ರೀಗಳವರ ಸರ್ಕ್ಯೂಟನ ವಿದ್ಯಮಾನಗಳನ್ನೆಲ್ಲಾ ವಿಚಾರಿಸಿ ಶ್ರೀ॥ ॥ಮಠದಲ್ಲಿ ನಿತ್ಯವಾಗಿ ನಡೆಯುವ ಕಾರ್ಯ ವಿಶೇಷವನ್ನೆಲ್ಲಾ ಲಾಲಿಸಿ ಚಿತ್ರದುರ್ಗದಲ್ಲಿ ಇನ್ನು ಎರಡುದಿನ ಮುಕ್ಕಾಂ ಆಗುತ್ತದೆ ಅಷ್ಟರೊಳಗಾಗಿ ಶ್ರೀ॥ ॥ಸ್ವಾಮಿದರ್ಶನಕ್ಕೆ ಬರುವುದಾಗಿ ಸೂಚಿಸಿ ಚಿತ್ರದುರ್ಗಕ್ಕೆ ದಯಮಾಡಿಸಿದರು.

ಫೆಬ್ರವರಿ ಮಾಹೆ ತಾ॥ ೧೦ ರಲ್ಲಿ ಚಿತ್ರದುರ್ಗ ಟವನ್ನಲ್ಲಿ ನೋಡಬೇಕಾದ ಎಲ್ಲಾ ಕಡೆಯಲ್ಲಿಯೂ ಸಂಚರಿಸಿ ಅದೇ ಸಾಯಂಕಾಲ ೬ ಘಂಟೆ ಸಮಯದಲ್ಲಿ ಮಹಾ॥ ॥ಸಂಸ್ಥಾನದ ಅಧಿಕಾರಕ್ಕೊಳಪಟ್ಟ ಗವಿಮಠಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರು ಮೊದಲಾದ ಅಧಿಕಾರಿಗಳ ಸಮೇತವಾಗಿ ಹೋಗಿ ಮಠದಲ್ಲಿ ನಡೆಯುವ ದಾಸೋಹಾದ್ಯನೇಕ ಕೆಲಸಗಳನ್ನು ನಡಿಸಲು ನೂತನವಾಗಿ ಚುನಾಯಿಸಿರುವ ಮಲ್ಲಿಕಾರ್ಜುನ ಮರಿಯವರಿಂದ ಪುಷ್ಪಹಾರಾದಿಗಳಂ ಕೈಕೊಂಡು, ಅರ್ಧ ಘಂಟೆವರೆಗಿದ್ದು ಪ್ಲೀಡರ್ ಮ॥ ಸಿದ್ದನಂಜಪ್ಪನವರಿಂದಲೂ ಮಹಾ॥ ॥ಸಂಸ್ಥಾನಾಶ್ರಿತ ಬಿ. ಯಂ. ರುದ್ರಾರಾಧ್ಯರ ಮೂಲಕ ಅಲ್ಲಿನ ಎಲ್ಲಾ ವಿದ್ಯಮಾನಗಳನ್ನೂ ಲಾಲಿಸಿ ಸಂತೋಷಚಿತ್ತರಾಗಿ ಟ್ರಾವಲರ್ಸ್ ಬಂಗಲೆಗೆ ದಯಮಾಡಿಸಿದರು.

ತಾ॥ ೧೧ ನೇ ಶನಿವಾರ ಸಾಯಂಕಾಲ ೭ ಘಂಟೆಗೆ ಸರಿಯಾಗಿ ಮೋಟಾರ್ ಗಾಡಿಯಲ್ಲಿ ಮಹಾ॥ ॥ಸಂಸ್ಥಾನದ ಬೃಹನ್ಮಠಕ್ಕೆ ವಿಜಯಂಗೈಸಿ ಬಹುನೂತನವಾಗಿಯೂ, ಸುಂದರವಾಗಿಯೂ ಕಟ್ಟಿಸಲ್ಪಟ್ಟಿರುವ ಮಹಾದ್ವಾರವನ್ನೆಲ್ಲಾ ಅವಲೋಕಿಸಿ, ಭೋಜನೋಪಚಾರಂಗಳಿಗೆ ತಯಾರಿಸಲ್ಪಟ್ಟಿದ್ದ ಶ್ರೀ ಗುರುಪಾದಸ್ವಾಮಿಗಳ ಗದ್ದಿಗೆಗೆ ಆಗಮಿಸುವಷ್ಟರಲ್ಲಿಯೇ ಚರಮೂರ್ತಿಗಳು ಶಾಸ್ತ್ರಿಗಳು ಸಾವುಕಾರ್ ಕಾಡಪ್ಪನವರು ಡಿಟ್ಟೋ ಚಿಕ್ಕವೀರಪ್ಪನವರು ಪ್ಲೀಡರ್ ಶಿ. ಸಿದ್ದನಂಜಪ್ಪನವರು ಇನ್ನೂ ಅನೇಕ ಪ್ರಮುಖರು, ತಮ್ಮ ಪೂಜಾದಿಗಳಂ ಪೂರೈಸಿಕೊಂಡು ಕಾದುಕೊಂಡಿರಲು ತಾವೂ ಸ್ನಾನಾನುಷ್ಠಾನಗಳಂ ಮುಗಿಸಿಕೊಂಡು ಪಂಕ್ತಿ ಭೋಜನಂಗೈದು ತರುವಾಯ ಶ್ರೀ॥ ॥ಕರ್ತೃಗಳ ಮೂಲಪೀಠಸಂದರ್ಶನ ಪೂರ್ವಕ ಮಂಗಲ ಮಂತ್ರಪುಷ್ಪಾಂಜಲಿಗಳನ್ನು ಆಗಮಾಡಿಸಿಕೊಂಡು ಹೊಸದಾಗಿ ಕಟ್ಟಿಸಿರುವ ಶ್ರೀ॥ ಜಯದೇವಹಾಲ್ ಶಾರದಾ ಭಂಡಾರ ಮುಂತಾದವುಗಳಂ ಪರಾಮರ್ಶಿಸಿ, ಖಾಸಹಾಲ್‌ಗೆ ದಯಮಾಡಿರಲು ಮಹಾ॥ ॥ಸಂಸ್ಥಾನದ ಚರಮೂರ್ತಿಗಳಾದ ರಾಣೆಬೆನ್ನೂರು ಶ್ರೀ॥ ಶಿವಲಿಂಗದೇಶಿಕೇಂದ್ರರವರು ಮಂಗಲಾಶೀರ್ವಾದವಂ ಮಾಡಲು, ಯಿವರಿಗೋಸ್ಕರ ನಿರ್ಮಿಸಿದ್ದ ಚಿತ್ರವಾದ ಸೋಫಾದಲ್ಲಿ ಕುಳಿತುಕೊಂಡ ತರುವಾಯ ಸದರಿ ಚರಮೂರ್ತಿಗಳು ಮಹಾ॥ ॥ಸಂಸ್ಥಾನದ ಪೂರ್ವೋತ್ತರ ವಿದ್ಯಮಾನಗಳನ್ನೆಲ್ಲಾ ಸಮಯೋಚಿತೋಕ್ತಿಗಳಿಂದ ಸೂಚಿಸಿದರು. ಅನಂತರ ಮಹಾ॥ ॥ಸಂಸ್ಥಾನದ ವೈಯಾಕರಣಿ ದಾವಣಗೆರೆ ಹಿರಿಮಠದ ರುದ್ರಶಾಸ್ತ್ರಿಗಳವರು ತಮ್ಮಿಂದ ರಚಿಸಲ್ಪಟ್ಟ ಅತಿಚಮತ್ಕೃತ ಸಂಸ್ಕೃತವೃತ್ತಗಳನ್ನೂ ಮತ್ತು ಕಂದ ಪದ್ಯಗಳನ್ನೂ ಸುಸ್ವರದೊಡನೆ ಹೇಳಿ ಸವಿಸ್ತಾರವಾಗಿ ಭಾಷಣ ಮಾಡಿ, ಸರ್ವರಿಗೂ ಆನಂದಗೊಳಿಸಿದರು. ನಂತರ ಇಂಗ್ಲೀಷ್ ವಿದ್ಯಾರ್ಥಿಗಳು ಮ॥ ರಾ॥ ಪುಟ್ಟಣ್ಣಶೆಟ್ಟರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿದರು. ತರುವಾಯ ಮಹಾ॥ ॥ಸಂಸ್ಥಾನದ ಚರಮೂರ್ತಿಗಳವರ ಅನುಜ್ಞೆಯಂತೆ ಸಾಹುಕಾರ ಕಾಡಪ್ಪ ಡಿಟೊ ಚಿಕ್ಕವೀರಪ್ಪ ಪ್ಲೀಡರ್ ಶಿ. ಸಿದ್ದನಂಜಪ್ಪ ಪಟೇಲ್ ಶಂಕರಪ್ಪ ಇಟ್ಟಿಗಿ ಮಹಲಿಂಗಪ್ಪ ಡೊಗ್ಗನಾಳು ಪ॥ ಚಂದಪ್ಪ ಇನ್ನು ಮುಂತಾದ ಪ್ರಮುಖ ಸಭಾಸದರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ತರುವಾಯ ಮ॥ ರಾ॥ ಕೌನ್ಸಿಲರ್ ಸಾಹೇಬ ಬಹದ್ದೂರ್ರವರು ಅತ್ಯಾನಂದವನ್ನು ಪ್ರದರ್ಶಿಸಿ ಈ ಎಲ್ಲಾ ವಿಷಯಗಳನ್ನೂ ಮಹಾ॥ ॥ಶ್ರೀಗಳವರ ಸನ್ನಿಧಿಗೆ ವಂದನಾಪೂರ್ವಕವಾಗಿ ಅರಿಕೆ ಮಾಡಬೇಕೆಂದು ಸಂಭಾಷಿಸಲು ಸರ್ವರೂ, ಜಯಘೋಷದೊಡನೆ ಕೈ ಚಪ್ಪಾಳೆಯನ್ನಿಟ್ಟರು. ಸಭೆಯು ಬರಖಾಸ್ತಾಯಿತು.

ಪ್ರತ್ಯಕ್ಷದರ್ಶಿ

ಹೊಸರಿತ್ತಿ.

ಧಾರವಾಡ ಡಿ॥ ಕರ್ಜಗಿ ತಾ॥ ಹೊಸರಿತ್ತಿ ಗ್ರಾಮದಲ್ಲಿ ದರವರ್ಷದಂತೆ ಈ ವರ್ಷವೂ ಶ್ರೀ ಗುದ್ಲಿಸ್ವಾಮಿಗಳವರ ರಥೋತ್ಸವವು ಬಹು ಚೆನ್ನಾಗಿ ನಡೆಯಿತು. ಈ ಜಾತ್ರೆಗೆ ದೂರದೂರ ಪ್ರಾಂತಗಳಿಂದ ೫-೬ ಸಾವಿರಗಳವರೆಗೆ ಜೋರಿಗಳು ವ್ಯಾಪಾರಕ್ಕೋಸುಗವಾಗಿ ಕೂಡಿದ್ದುವು ಹಾಗೂ ಬಹಳ ಜೋರಿಗಳು ಖರ್ಚಾದುವು. ಜನರು ಸುಮಾರು ೩-೮ ಸಾವಿರದವರೆಗೆ ಕೂಡಿದ್ದರು. ಇದಲ್ಲದೆ ಮೆ॥ ಅಸಿಸ್ಟಂಟ ಕಲೆಕ್ಟರ್ ಸಾಹೇಬರವರು ಮ ಇಲ್ಲಿಯ ದನಗಳ ದೆಸೆಯಿಂದ ಔಷಧೋಪಚಾರಕ್ಕೆ ನೇಮಿಸಿದ ರಾ॥ ಪಾಗೇ ಡಾಕ್ಟರರು ಹಾಂಗೂ ಇವರ ಮೇಲಿನವರಿಷ್ಟ ಇನ್ಸ್ಪೆಕ್ಟರ ಮುಂತಾದ ಸರಕಾರ ಮಂಡಳಿಯವರು ಬಂದಿದ್ದರು. ತಾ॥ ೧೩-೧-೧೯೧೧ನೇ ಇಸವಿಯು ಅಂದರೆ ಪೌಷ್ಯ ಶು॥ ೧೪ ಶುಕ್ರವಾರ ಶ್ರೀ ಸ್ವಾಮಿಗಳವರು ಚನ್ನೂರಗ್ರಾಮದಿಂದ ಮಕರತೋರಣಾದಿ ಅನೇಕ ಉತ್ಸವಗಳಿಂದಲೂ ವಾದ್ಯಗಳಿಂದಲೂ ಬಹು ವಿಜೃಂಭಣೆಯಿಂದ ರಾತ್ರಿ ಸುಮಾರು ೧೧ ಗಂಟೆಗೆ ಪುರಪ್ರವೇಶ ಮಾಡಿದರು. ನಂತರ ಪುಷ್ಪರಥೋತ್ಸವವಾಯಿತು. ಮರುದಿವಸ ತಾ॥ ೧೪ ಪುಷ್ಯ ಶು॥ ೧೫ ಶನಿವಾರ ಮಧ್ಯಾಹ್ನಕ್ಕೆ ಮಹಾಗಣಾರಾಧನೆಯೂ ಸಂಜೆಗೆ ಮಹಾರಥೋತ್ಸವವೂ ನಡೆಯಿತು. ಬ॥ ೧ ರವಿವಾರ ಕಡಬಿನ ಕಾಳಗ ಹಗಲು ೩. ಗಂಟೆಗೂ ನಂತರ ಇಲ್ಲಿಯ ಪ್ರಮುಖ ಶ್ರೀಮಂತರುಗಳ ಭಂಡಿಗಳು ಬಂದು ಪ್ರೇಕ್ಷಕರ ಕರ್ಣಾನಂದ ನೇತ್ರಾನಂದ ಮಾಡಿದುವು. ವದ್ಯ ೨ ತಾ॥ ೧೬ ಸೋಮವಾರ ಮುಂಜಾನೆ ಸಂಗೀತಪರೀಕ್ಷೆಯು ನಡೆಯಿತು. ಸುಮಾರು ಮೂವತ್ತು ನಾಲ್ವತ್ತು ಗವಾಯಿ ಜನರು ಕೂಡಿದ್ದರು. ಇವರಿಗೆ ಯೋಗ್ಯ ಇನಾಮು ಕೊಡಲ್ಪಟ್ಟಿತು. ತಾ॥ ೧೭ ಮಂಗಳವಾರ ಕರಡೀಮಜಲು ವಗೈರೆ ತಂತರದ ಉತ್ಸವಗಳೂ, ಮಲ್ಲಕಾಳಗ (ಕುಸ್ತಿ) ಗಳೂ ನಡೆದುವು. ತಾ॥ ೧೮ ಬುಧವಾರ ದನಗಳ ಪ್ರದರ್ಶನವಾಯಿತು. ಸರಕಾರದವರು ಬಹಳ ವೆಚ್ಚದಿಂದ ಮ ಶ್ರಮದಿಂದ ಇಂಥ ಸಂತೆಯನ್ನು ಕೂಡಿಸುತ್ತಾರೆ. ಆದರೆ ಅನಾಯಾಸವಾಗಿ ಇಲ್ಲಿ ಕೂಡಿದ ದನಗಳ ಪ್ರದರ್ಶನವು ವಿಶೇಷವಾಗಿಯೂ, ಪ್ರೇಕ್ಷಣೀಯವಾಗಿಯೂ ಇತ್ತು. ಇದಕ್ಕೆ ಶ್ರೀ ಸ್ವಾಮಿಗಳು ಮ ಪ್ರಮುಖರು ಮುಖ್ಯವಾಗಿ ಒಕ್ಕಲತನದ ವಿಷಯಕ್ಕೆ ವಿಶೇಷ ಪ್ರೋತ್ಸಾಹ ಕೊಡುವವರಾಗಿ ಇರುವುದರಿಂದ ಈ ವರ್ಷ ಉತ್ತಮವಾದ ದನಗಳ ಸಲುವಾಗಿ ೨೦೦ ಇನಾಮುಗಳನ್ನು ಇಟ್ಟಿದ್ದರು. ಈ ಇನಾಮಿನ ಹಣದ ಪೈಕಿ ಸ್ವಾಮಿಗಳು ೫೦ ರೂಪಾಯಿಗಳು, ಶ್ರೀಮಂತ ಬಾಳಪ್ಪ ಸರ್ ದೇಶಾಯಿ ಸಂಸ್ಥಾನ ಹಂದಿಗನೂರ ೧೫ ರೂ., ಶ್ರೀಮಂತ ಅಪ್ಪಾಸಾಹೇಬ ದೇಶಪಾಂಡೆ ಮುಕ್ಕಾಮ ಕುಂದಗೋಳ ೧೦ ರೂ., ರಾ॥ ಪ್ರಬೇಷನರಿ ಇನ್ಸ್ಪೆಕ್ಟರ್ ಸಾಹೇಬರು ೫ ರೂ., ಶಿವಮೂರ್ತಿ ಚನ್ನಯ್ಯನವರು ಹಂದಿಗೋಳ ಮಠ ಹುಬ್ಬಳ್ಳಿ ೫ ರೂ., ಮ॥ ರಾ॥ ಗಳಾಟ ದೊಡ್ಡಬಸಪ್ಪ ಅಣ್ಣಾ ಕಲ್ಕೋಟಿ ಮು॥ ಕೊರಲೂರ ೫ ರೂ., ವಿರೂಪಾಕ್ಷಪ್ಪ ಅಣ್ಣಾ ಕಲ್ಕೋಟಿ ಮು॥ ಕೊರಲೂರ ೫ ರೂ., ವೀರಪ್ಪ ಅಣ್ಣಾ ಮುಂತಾನ ಮು॥ ಮೊಟ್ಲೇರಿ ೫ ರೂ., ಗುರುಶಾಂತಪ್ಪ ಅಣ್ಣಾ ಸಟ್ಟರ ಮು॥ ಹೊಸರಿತ್ತಿ ೫ ರೂ., ಬಾಬಣ್ಣ ಸಾಳೀರ ಮು॥ ಹೊಸರಿತ್ತಿ ೫ ರೂ. ಈಪ್ರಕಾರ ಕೂಡಿದ ಒಟ್ಟು ೧೦೮ ರೂ. ಹಣದಲ್ಲಿ ೧೦-೮-೬-೪ ಈ ಪ್ರಕಾರವಾಗಿ ೨೦ ಇನಾಮುಗಳನ್ನು ಇಟ್ಟಿದ್ದು ಈ ಇನಾಮುಗಳನ್ನು ಮೆ॥ ೨ ನೇ ಅಸಿಸ್ಟಂಟ್ ಕಲೆಕ್ಟರ್ರವರು ತಮ್ಮ ಸಹಸ್ತದಿಂದ ಕೊಟ್ಟು ಜೋರಿಗಳನ್ನು ಸಂರಕ್ಷಿಸುವವರಿಗೆ ಬಹಳ ಪ್ರೋತ್ಸಾಹವನ್ನುಂಟುಮಾಡಿದರು. ಈ ಪ್ರಾಂತಗಳಲ್ಲಿ ಆಗುವ ಜಾತ್ರೆಗಳಲ್ಲಿ ಈ ಪ್ರಕಾರದ ಸುಧಾರಣೆಯು ಇದೇ ಮೊದಲನೇದು ಅನ್ನುವುದಕ್ಕೆ ಅಡ್ಡಿಯಿಲ್ಲ. ಇದೇ ದಿವಸ ಸಂಜೆಯು ೫ ಗಂಟೆಗೆ ಮೆ॥ ಸಾಹೇಬರವರನ್ನು ಶ್ರೀಗಳವರು ತಮ್ಮಲ್ಲಿಗೆ ಕರೆಸಿ ಪಾನಸುಪಾರಿ ಮಾಡಿಸಿದರು. ವದ್ಯ ೫ ತಾ॥ ೧೯ ನೇ ದಿವಸ ಮುಂಜಾನೆ ಶ್ರೀಮದ್ವೀರಶೈವ ಮತೋತ್ತೇಜಕ ಸಭೆಯು ಕೂಡಲ್ಪಟ್ಟಿತ್ತು. ಸದರಿ ದಿವಸ ಮುಂಜಾನೆ ೭॥ ಗಂಟೆಗೆ ಆರಂಭವಾಗುತ್ತಲೇ ಸಭಾಧ್ಯಕ್ಷರಾದ ಶ್ರೀಮಂತ ಮ॥ ರಾ॥ ಮುರಿಗೆಪ್ಪ ಬಸವಂತರಾವ ದೇಶಾಯಿ ಸಂಸ್ಥಾನ ಹಂದಿಗನೂರ ಇವರ ಸ್ವಾರಿಯು ಬಂದಕೂಡಲೇ ಸ್ವಾಗತ ಕಮಿಟಿಯ ಛೇರಮನ್ನರಾದ ವಿರೂಪಾಕ್ಷಪ್ಪ ದೊಡ್ಡಬಸಪ್ಪ ಕಲ್ಕೋಟಿ ಇವರು ಅವರನ್ನು ಎದುಗೊಂಡು ಕರಕೊಂಡು ಬಂದರು. ನಂತರ ಶ್ರೀಗಳವರು ಸಭಾಮಂಟಪಕ್ಕೆ ದಯಮಾಡಿಸಿದಕೂಡಲೆ ಎಲ್ಲಾ ಸಭಿಕಜನರು ಭಕ್ತಿಪೂರ್ವಕವಾಗಿ ಚಪ್ಪಾಳೆ ನಮಸ್ಕಾರಗಳಿಂದ ಸ್ವಾಗತಮಾಡಿದರು. ಆವೇಳೆ ಸ್ವಾಗತ ಕಮಿಟಿಯ ಛೇರಮನ್ನರು ಸಭೆಯ ಉದ್ದೇಶವನ್ನು ಹೇಳಿ ಸರ್ವರ ಆಭಾರ ಮನ್ನಿಸಿದರು. ನಂತರ ಅಧ್ಯಕ್ಷರನ್ನು ನೇಮಿಸಿದಬಳಿಕ ಶ್ರೀಮಂತರವರು ಜನರ ಚಪ್ಪಾಳೆ ಜಯಘೋಷದ ಸಂಭ್ರಮದಲ್ಲಿ ತಮ್ಮ ಅಧ್ಯಕ್ಷಾಸನವನ್ನು ಅಲಂಕರಿಸಿದರು. ಅಧ್ಯಕ್ಷರು ವಿದ್ಯೆಯ ಆವಶ್ಯಕತೆ, ವಿದ್ಯೆಯಿಂದ ಆಗುವ ಲಾಭ, ವಿದ್ಯಾವಿಹೀನತೆಯಿಂದ ಆಗುವ ಹಾನಿ ಇವುಗಳಮೇಲೆ ಬಹು ಗಂಭೀರವಾಗಿ ಭಾಷಣ ಮಾಡಿ ಪ್ರತಿಯೊಬ್ಬರೂ ತಮ್ಮತಮ್ಮ ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕೆ ಪ್ರಯತ್ನವನ್ನು ಮಾಡಲೇಬೇಕೆಂತಲೂ ಬಾಲ್ಯವಿವಾಹವು ಬಹಳ ಸಮಾಜದ ಹಾನಿಯನ್ನುಂಟುಮಾಡುವುದರಿಂದ ಇದನ್ನು ಮಾಡಬಾರದೆಂತಲೂ ಉತ್ತಮವಾಗಿ ಉಪದೇಶಪೂರ್ವಕವಾದ ಭಾಷಣವನ್ನು ೧ ತಾಸಿನವರೆಗೆ ಮಾಡಿದರು. ಬಳಿಕ ತೊರಡೂರ ಸಂಗಯ್ಯಾ ಲಿಂಗಯ್ಯಾ ಕಿತ್ತೂರ ಇವರು ಫಂಡಿನ ಅವಶ್ಯಕತೆಯ ಬಗ್ಗೆ ಚನ್ನಾಗಿ ಮಾತಾಡಿದರು. ಇಲ್ಲಿಯ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳಾದ ಕೊಟ್ರೂರಯ್ಯ ಚನ್ನೂರ ಇವರು ವೈದಿಕ ವಿದ್ಯೆಯ ಅವಶ್ಯಕತೆಯ ಬಗ್ಗೆ ಚನ್ನಾಗಿ ಮಾತಾಡಿದರು. ಕೊರಲೂರ ಚನವೀರಪ್ಪ ಬಳ್ಳಾರಿ ಇವರು ಸ್ತ್ರೀಶಿಕ್ಷಣ ಇದರಮೇಲೆ ಇಂಗ್ಲೀಷಿನಿಂದ ಬಹು ಗಂಭೀರವಾಗಿಯೂ, ವೇ॥ ಇಂದುಧರಶಾಸ್ತ್ರಿ ಕರಡಿ ಮತ್ತೂ ವೇ॥ ಗುದ್ಲಪ್ಪಯ್ಯಶಾಸ್ತ್ರಿ ಚನ್ನೂರ ಇವರು ಧರ್ಮದ ಅವಶ್ಯಕತೆ ಹಾಗೂ ಧರ್ಮದ ತತ್ವ ಈ ಬಗ್ಗೆ ಬಹಳ ಸರಸವಾಗಿ ೨ ತಾಸಿನವರೆಗೆ ಎಲ್ಲಾ ಜನರಿಗೆ ಬಿಂಬಿಸುವಂತೆ ಭಾಷಣ ಮಾಡಿದರು. ನಂತರ ಅಧ್ಯಕ್ಷರ ಆಭಾರಮನ್ನಿಸಿ ಸಭೆಯು ಸುಮಾರು ೧೨ ಗಂಟೆಗೆ ವಿಸರ್ಜಿಸಲ್ಪಟ್ಟಿತು. ಈಪ್ರಕಾರ ಇಲ್ಲಿಯ ಜಾತ್ರೆಯಲ್ಲಿ ೮ ದಿವಸಗಳವರೆಗೆ ಅನೇಕ ತರದ ಉತ್ಸವಗಳು ನಡೆದುವು. ಇದಲ್ಲದೆ ಇಲ್ಲಿ ವ್ಯಾಪಾರವು ಪುಷ್ಕಳವಾಗಿ ವ್ಯಾಪಾರಿಕ ಜನರಿಗೆ ಬಹಳ ಲಾಭವಾಗಿದೆ. ಇದಲ್ಲದೆ ಕುಸ್ತಿಗಳ ದೆಸೆಯಿಂದಲೂ ಅನೇಕ ಇನಾಮುಗಳನ್ನು ಕೊಟ್ಟರು. ಇಂಥ ಜಾತ್ರೆಯಬಗ್ಗೆ ಭಕ್ತಿಪೂರ್ವಕವಾಗಿ ಇಲ್ಲಿಯ ಸರ್ವ ವೀರಶೈವ ಮಂಡಳಿಯವರು ತನುಮನಧನಗಳನ್ನು ಅರ್ಪಿಸಿ ಕಾರ್ಯಮಾಡಿದ್ದಕ್ಕಾಗಿ ಎಲ್ಲರಿಗೂ ಅತ್ಯಾನಂದವಾಗುತ್ತದೆ.

ಒಬ್ಬ ಪ್ರತ್ಯಕ್ಷದರ್ಶಿ.

ಉತ್ತಮ ಗ್ರಂಥಗಳು.

5

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ, ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.— ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ಪಾರ್ಥಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು,
ಹೊಸಮಠ ಮೈಸೂರು.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

9

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣಿಗಳಿಗೆ ಬಿಕರಿ.

ರಾಸ್ಕೋಪಸಿಸ್ಟಂ ಪೇಟಂಟ್ ಲೀವರ್ ಜ್ಯೂವೆಲ್ಡ್ ವಾಚ್

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಅಯಿದು (೫) ವರುಷಗಳು ಗ್ಯಾರೆಂಟು.

ಕ್ರಯ ರೂ. ೨-೮-೦ ವಿ. ಪಿ. ಚಾರ್ಜು ರೂ. ೦-೪-೦.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ ೦-೮-೦ ವಿ. ಪಿ. ಚಾರ್ಜು ೦-೪-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ. ನಂಬರು ೨೦ ಸಿಂಗಣ್ಣಾಚಾರಿಬೀದಿ, ವಾಲಾಟಾಕ್ಸ್ ರೋಡು, ಮದರಾಸು.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

29

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ.

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ.— ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೋಲದಂತೆ ೨೦ ದಿನಗಳವರಿಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಚೆಬ್ಬು, ವ್ರಣ, ಕುಷ್ಠ. ಮಹೋದರ, ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೨ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.— ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೩ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂತಿಮೇಹ, ಮೂತ್ರಕೃಚ್ಛ್ರ ಅಸ್ತಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕುಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ, ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚು ೬ ಆಣೆ.

೯. ಮಹಾಕುಂಡಳ್ಯಾದಿರಸಾಯನ— ಇದರಿಂದ ಕ್ಷಯ ಕಾಶಿ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟ್ಲು ಉರಿ ಸುಸ್ತು ಸಂಕಟ, ವಮನವಿಲ್ಲದೆ ೩-೪ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೫೦ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶ ನೀರು ಎರೆಯುವಾಗ ಜ್ಞಾನ ತಪ್ಪುವುದು, ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಪುರಬತ್ತಿಗಳೂ, ಗುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚನ್ನಬಸಪ್ಪ ಅಂಡ್‌ಸನ್ಸ್,
ಚನ್ನಪಟ್ಟಣ, ಬೆಂಗಳೂರು, ಡಿಸ್ಟ್ರಿಕ್ಟು.

9

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.

ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳ್ತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಮೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

68

ಪದ್ಮರಾಜ ಪುರಾಣಂ.

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಅಣೆ.

ಬಿ. ಮಲ್ಲಾರಾಧ್ಯರು,
ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ **ಬಿ. ಬಸವಾರಾಧ್ಯರು,**
ಡೆಪ್ಯುಟಿ ರಿಜಿಸ್ಟ್ರಾರ್, ಚೀಫ್ ಕೋರ್ಟ್,
ಬೆಂಗಳೂರು

ಉತ್ತಮ ಗ್ರಂಥಗಳು.

109

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ —೦-೧೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ,
ಮೈಸೂರು.

೧೯೧೧ನೇ ಇಸವಿ ಮಾರ್ಚಿ ತಾ॥ ೬ ರಿಂದ ೧೯೧೧ನೇ ಮಾರ್ಚಿ ತಾ॥ ೧೨ ರವರಿಗೆ ಸಲ್ಲುವ ಶಾಲಿವಾಹನ ಶ
೧೮೩೩ ನೇ ಸಾಧಾರಣ ಸಂವತ್ಸರದ ಫಾಲ್ಗುಣ ಶು॥ ಷಷ್ಠಿಯಿಂದ ಫಾಲ್ಗುಣ ಶು॥ ದ್ವಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಾಂಧ ತೇದಿ
6	[1]ಸೋ	ಷ	35-35	ಭ-ಕೃ	2-50	22
7	ಮಂಗ	ಸ	29-46	ರೋಹಿಣಿ	54-38	23
8	ಬುಧ	ಅ	23-50	ಮೃಗಶಿರ	50-22	24
9	ಗುರು	ನ	18-4	ಆರಿದ್ರ	46-40	25
10	[2]ಶುಕ್ರ	ದ	12-32	ಪುನ	42-48	26
11	[3]ಶನಿ	ಏ	7-30	ಪುಷ್ಯಮಿ	40-30	27
12	[4]ಭಾನು	ದ್ವಾ	3-2	ಆಶ್ಲೇಷ	56-42	28

(1) ಸತ್ಯವ್ರತ ತೀರ್ಥಾನಾಂ ಪುಣ್ಯದಿನ. ಮಾರಿ
(೨) ಶ್ರೀ ಭಾಷ್ಯಕಾರತಿರುವಧ್ಯಯನಂ (೩) ಕುಲಶೇ
ರಾಳ್ವಾರ್ ತಿರುನಕ್ಷತ್ರಂ ಸರ್ವತ್ರೈಕಾದಶಿ, (೪) ಶ್ರೀ
ಮರಾಜೇಶ್ವರ ರಥಃ ಚಂದ್ರಪುರದ ಚಂದ್ರಮೌಳೀಶ್ವರರಥ

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಸ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಮಾರ್ಚಿ ತಾರೀಖು ೧೩ ನೇ ಸೋಮವಾರ. [ಸಂಚಿಕೆ ೧೧

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೧-೫-೦
ಕರಸ್ಪಾಂಡೆನ್ಸ್	೦-೩-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

42

ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—

ವೈದ್ಯ. ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಪಂಡಿತ ಎಲ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ

31 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ ೭೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚ ಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೪—೦.

ಅರ್ಶೋರೋಗಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬ ೪—೦—೦. ೧೨ ದಿನಗಳ ಔಷಧ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

30

೧. ಸ್ವರ್ಣಗಂಗಾಧರಮಾತ್ರೆ.— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ.— ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರಿಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಚೆಬ್ಬು, ವ್ರಣ, ಕುಷ್ಠ. ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.— ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತ ನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕಪಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ.— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ.— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಂಶತಿಮೇಹ, ಮೂತ್ರಕೃಚ್ಛ್ರ ಅಸ್ತಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ.— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಪುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚು ೬ ಆಣೆ.

೯. ಮಹಾಕುಂಡಲ್ಯಾದಿರಸಾಯನ.— ಇದರಿಂದ ಕ್ಷಯ ಕಾಶ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟಲ್ಲಿ ಉರಿಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಾಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶ ನೀರು ಎರೆಯುವಾಗ ಜ್ಞಾನ ತಪ್ಪುವುದು, ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳಿಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಷರಬತ್ತುಗಳೂ, ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚನ್ನಬಸಪ್ಪ ಅಂಡ್‌ಸನ್ಸ್,
ಚನ್ನಪಟ್ಟಣ. ಬೆಂಗಳೂರು, ಡಿಸ್ಟ್ರಿಕ್ಟ್

ಜಪಾನ್ ಸಾಮ್ರಾಜ್ಯ.

ಕನ್ನಡದಲ್ಲಿ ಇದುವರೆಗೂ ಇಂತಹ ಪುಸ್ತಕವಿರಲಿಲ್ಲ. ಜಪಾನಿನ ವಿಷಯದಲ್ಲಿ ಎಲ್ಲವನ್ನೂ ವಿಶದವಾಗಿ ತಿಳಿಸುತದೆ. ಆಶ್ಚರ್ಯಕರವಾದ ಸಂಗತಿಗಳು, ಪ್ರತಿಯೊಬ್ಬರೂ ಓದಬೇಕಾದದ್ದು. ಮೇಲಾದಕಾಗದ. ಅಂದವಾದ ಮುದ್ರಣ ಬೆಲೆ ೩ ಆಣೆ. ಕಿಂಡರ್ ಗಾರ್ಡನ್ ಕಥೆಗಳು ಸ್ಕೂಲ್ಮಾಸ್ಟರುಗಳಿಗೆ ಆವಶ್ಯಕವಾದದ್ದು ೧೦ ಆಣೆ. ಉನ್ಮತ್ತ-ಬಂಗಾಳಾದೇಶದ ಸ್ತ್ರೀಯ ಚರಿತ್ರೆ ೨ ಅಣೆ.

ದೊರೆಯುವಸ್ಥಳ—ಜಿ. ಕೃಷ್ಣಶಾಸ್ತ್ರಿ ಅ॥ ಮಾ॥ ನಾರ್ಮಲ್‌ಸ್ಕೂಲ್ ಮೈಸೂರ್. ಮತ್ತು ಜನರಲ್‌ಏಜನ್ಸಿ,
ಮೈಸೂರು.

ಸೌಗಂಧಿಕಾ ಪರಿಣಯ.

(ಕಳೆದವಾರದ ಶೇಷ.)

ಆ ಸಮಯದಲ್ಲಿ ಸೂರ್ಯನು ಸುಗಂಧರಾಜೇಂದ್ರ ಉಗ್ರಬಾಹು ಇವರೀರ್ವರ ಸಮರಸನ್ನಾಹವನ್ನೀಕ್ಷಿಸಬೇಕೆಂಬ ಕುತೂಹಲದಿಂದಲೋ ಯೆಂಬಂತೆ ಅತಿ ಶೀಘ್ರದಿಂದುದಯಗಿರಿಶಿಖರವನ್ನೇರಿ ಬರುತ್ತಿರಲು; ಆ ಸಮಯದೊಳ್ ಗಂಧಮಾದನ ಪರ್ವತದ ಪ್ರಾಂತದಲ್ಲಿರುವ ಸೌಗಂಧಿಕಾ ಸರೋವರದ ಸಮೀಪದಲ್ಲಿ ಇಳಿದಿರ್ದ ಸುಗಂಧರಾಜೇಂದ್ರನು ಪ್ರಾತಃಕಾಲದೊಳೆದ್ದು, ಸಂಧ್ಯಾದಿಸತ್ಕಾರ್ಯಗಳನ್ನೆರವೇರಿಸಿ, ಅಮೃತಸಮಾನವಾದ ದಿವ್ಯಫಲಗಳಂ ಮೆದ್ದು, ಮೊದಲಿನಂತೆ ಸುಮತಿಯೊಡಗೂಡಿ ಯಕ್ಷಾಧಿಪನಾದ ಛಾಯಾಗುಪ್ತನ ಭುಜಪೀಠದಲ್ಲಿ ಕುಳಿತು ತೆರಳುತ, ತೇಜೋಲೋಕದಂತೆ ಅಧಿಕವಾದ ಪ್ರಭೆಯಿಂದ ಅಂತರಿಕ್ಷವಂ ಬೆಳಗುವ ಒಂದು ಮಹಾಪರ್ವತವನ್ನೀಕ್ಷಿಸಿ, ಛಾಯಾಗುಪ್ತನಂ ಕುರಿತು, ಈ ಪರ್ವತವು ಯಾವುದೆಂದು ಕೇಳಲು, ಅವನು ಜೀಯಾ-ರಾಜಕುಲತಿಲಕನೆ! ಸುರಾಸುರ ಮಕುಟಮಣಿ ಪ್ರಭಾಪಟಲದಿಂ ನೀರಾಜಿತವಾದ ಚರಣಾಂಬುಜಗಳಿಂದೊಪ್ಪುವ ಪರಮೇಶ್ವರನಿಗೆ ನಿವಾಸಸದನವಾದ ಕೈಲಾಸಪರ್ವತವಿರುವುದು; ಇದರ ಮೇಲುಭಾಗದೊಳ್ ಅತ್ಯಂತ ಉನ್ನತವಾಗಿ ಮಹಾನೀಲಪರ್ವತದಂತೆ ಕಾಣಿಸುವುದೇ ದಕ್ಷಿಣಾಮೂರ್ತಿಯು ತಪಸ್ಸಂ ಮಾಡುತಿರ್ದ ಪೀಠವಂ ಮಹರ್ಷಿಗಳು ಪೂಜಿಸುವರು, ಎಂದು ಬಿನ್ನವಿಸಲು; ಅದಂ ಕೇಳಿ ಆ ನೃಪಮಂತ್ರಿಗಳೀರ್ವರೂ ಹರಹರ ಮಹಾದೇವನೇ ಎಂದು ನಮಸ್ಕರಿಸಲು; ಮತ್ತೆ ಕೆಲವುದೂರದಮೇಲೆ ರತ್ನಕಲಶ ಸಹಸ್ರಪ್ರಭೆಯಿಂದ ಆಕಾಶವಂ ಭಿತ್ತಿಯಿಲ್ಲದ ಅಪೂರ್ವಚಿತ್ರದಂತೆ ಮಾಡುತಲಿರುವ ಪುರವನ್ನೀಕ್ಷಿಸಿ, ಸುಗಂಧಮಹಾರಾಯನು ಇಲ್ಲಿ ಯಾರಿರುವರೆಂದು ಕೇಳಲಾಗ ಯಕ್ಷನು—ಎಲೈ ರಾಜವಂಶಮುಕ್ತಾಫಲನೆ ಇದು ಕುಬೇರನಿಗೆ ನಿವಾಸಸ್ಥಾನವಾದ ಅಳಕಾಪುರಿಯು; ಇದು ಅನೇಕ ಯೋಜನಾಯತವಾಗಿ, ಸ್ವರ್ಣಗೋಪುರ ಹರ್ಮ್ಯಪ್ರಾಸಾದ ಚಿತ್ರಶಾಲಾಗೃಹಮಾಲೆಗಳಿಂದ ಶೋಭಿಸುವುದು; ಮತ್ತೂ ಈ ಪಟ್ಟಣವು ಪೂರ್ವದಲ್ಲಿ ತ್ವಷ್ಟೃಬ್ರಹ್ಮನಿಂದ ನಿರ್ಮಿತವಾಗಿ, ಯಕ್ಷ ಗಂಧರ್ವ, ಕಿನ್ನರ, ವಿದ್ಯಾಧರಾದಿಗಳಿಗೆ ಆವಾಸಸ್ಥಾನವಾಗಿರುವುದು; ಇಂತಲ್ಲದೆ, ಇದರಲ್ಲಿ ಮೇರುಶಿಖರದಂತೆ ಅತ್ಯುನ್ನತವಾಗಿ, ಅನೇಕ ಸಹಸ್ರ ರತ್ನಕಲಶಧ್ವಜಪತಾಕಾನಿಕರದಿಂ ಅಲಂಕೃತವಾಗಿ ಕಾಣಿಸುವುದೇ ಕುಬೇರನ ಭವನವು, ಅದರ ಸಮೀಪದಲ್ಲಿ ಮರಕತರತ್ನಗಳ ಕಾಂತಿಸಮೂಹದಿಂ ಕೂಡಿರುವುದೇ ನಳಕೂಬರನ ಕುಮಾರನ ಭವನವು, ಪದ್ಮರಾಗನಿರ್ಮಿತವಾಗಿ ಸಂಧ್ಯಾಸಮಯದಂತೆ ಕೆಂಗೊಳಿಸುವುದೇ ದೇವಿಯರ ಅಂತಃಪುರವು, ಅದುಕೋ ನಂದನವನಕ್ಕಿಂತಧಿಕವಾಗಿ ನಿಶಾಸಮಯದಂತತಿನೀಲವಾಗಿ ಕಾಣಿಸುವುದೇ ಕುಬೇರನ ಚೈತ್ರರಥವೆಂಬ ಉದ್ಯಾನವನವು, ಇದುಕೋ ಕವಿಗಳಿಂ ವರ್ಣಿಸಲಶಕ್ಯವಾಗಿ ನಾನಾ ರತ್ನಪ್ರಭೆಯಿಂ ಚಿತ್ರವರ್ಣವಾಗಿ ಕಾಣುವುದೇ ಪುಷ್ಪಕವೆಂಬ ವಿಮಾನವು ಎಂದು ಹೇಳುತ ಮುಂದೆ ತೆರಳುತ್ತಿರಲು; ಆಗ ಸುಗಂಧಮಹಾರಾಯನು ಆ ಅಳಕಾಪುರದ ಹೂಂಗಣ ಉದ್ಯಾನ ವನಗಳನ್ನೀಕ್ಷಿಸುತ, ಅಲ್ಲಲ್ಲಿರುವ ಮಣಿಗ್ರೀವಾದಿಗಳ ವಿಹಾರಸದನಗಳಂ ನಿರೀಕ್ಷಿಸುತ, ಇದೇನೈ ದೃಷ್ಟಿಪಥವಂ ಮೀರಿ, ಪಾರವಿಲ್ಲದ ಆಕಾಶದಂತೆ ಕಾಣಿಸುವುದಾವುದೆನಲು; ಅದಂ ಕೇಳಿ ಯಕ್ಷಾಧಿಪನು— ಅದು ಲಕ್ಷಯೋಜನ ವಿಸ್ತಾರವಾಗಿ ಮಹಾಮೀನನಕ್ರಾದಿಗಳಿಗೆ ಆವಾಸವಾಗಿರುವ ಲವಣಸಮುದ್ರವು, ಅದುಕೋ ಮಹಾಶಬ್ದದಿಂ ಗುಡುಗುತ, ಭೂಮಿಯಲ್ಲಿ ವರ್ಷಿಸಲೋಸುಗ ಸಮುದ್ರದಲ್ಲಿ ಜಲಪಾನವಂಗೆಯ್ಯುತ್ತಿರುವ ಮಹಾಮೇಘಗಳ ತಂಡಗಳು, ಅಗಸ್ತ್ಯಮಹಾಮುನಿಯನ್ನನುಕರಿಸುವಂತೆ ಕಾಣಿಸುವುವು, ಅದುಕೊ ತಿಮಿತಿಮಿಂಗಿಲವೆಂಬ ಮತ್ಸ್ಯಗಳು ಗ್ರಾಸಬುದ್ಧಿಯಿಂದ ಎಳೆತಿಮ್ಮಿಗಳನ್ನುಂಗಲೆಣಿಸಿ, ಪಾತಾಳಕುಹರಗಳಂತೆಸೆವ ತಮ್ಮ ಬಾಯಿಗಳಂ ತೆರೆದು, ಪಕ್ಷಘಾತದಿಂ ಸಮುದ್ರವಂ ಕಲಕುತ, ಅದರ ರಭಸಕ್ಕೆ ಎದ್ದುಬರುವ ತರಂಗಗಳಂ, ಎಳೆತಿಮ್ಮಿಗಳಂ ಮುಳುಗಿಸುತ, ಇದಿರಾಗಿ ಬರುವ ಮಕರಕರ್ಕಟಗಳಂ ಮೆಲ್ಲುತ, ತನ್ನಂ ಗ್ರಹಿಸಲು ಪಾರ್ಶ್ವದಲ್ಲಿ ಬಾಯ್ದೆರೆದು ಬರುವ ಮಹಾಸರ್ಪಗಳಂ ಖಂಡಿಸುತ, ಸಪ್ತತಾಳಪ್ರಮಾಣದಿಂ ಕೂಡಿದ ಕೊಂಬಿನಿಂದೊಪ್ಪುವ ಮದ್ಗುವೆಂಬ ಹೆಣ್ಣು ಕಪ್ಪೆಯೊಡನೆ ಕಲಹವಂ ಮಾಡಿ, ಅದರ ಕೊಂಬಂ ಮುರಿದು, ಆ ಬಳಿಕ ಇದಿರಾಗಿ ಬಂದ ಮಹಾಕೂರ್ಮದೊಡನೆ ಕಲಹವಂ ಮಾಡುತಲಿರುವುದರಿಂ ಆ ರಭಸಕ್ಕೆ ಎದ್ದ ಸಮುದ್ರೋದಕವು ಮೇಘಮಂಡಲವಂ ತುಡುಕುವುದು;

ಸಶೇಷ.

ಸ್ತ್ರೀವಿದ್ಯಾಭ್ಯಾಸ.

(ಹಿಂದಣ ಶೇಷ.)

ಇವೆಲ್ಲವೂ ಹೀಗಿರಲಿ. ಪ್ರಕೃತಕಾಲದಲ್ಲಿ ನಾಗರಿಕತೆಯನ್ನು ಪಡೆದು ಜಗತ್ಪ್ರಸಿದ್ಧವೆನಿಸಿರುವ ಇಂಗ್ಲೆಂಡ್-ಜಪಾನ್-ಜರ್ಮನಿ ಮುಂತಾದ ದೇಶಗಳಲ್ಲಿ ಸ್ತ್ರೀವಿದ್ಯಾಭ್ಯಾಸವು ಅತ್ಯಾವಶ್ಯಕವೆಂದೂ, ಅದರಿಂ ಲೋಕಕ್ಕೆ ಪ್ರಯೋಜನವುಂಟೆಂದೂ ಸಿದ್ಧಾಂತಗೊಳಿಸಲ್ಪಟ್ಟಿದೆ. "ಮಹಾಜನೋಯೇನಗತಸ್ಸಪಂಥಾಃ" ಎಂಬ ನೀತಿವಚನಾನುಸಾರ ಆಯಾ ಕಾಲದ ಪ್ರಸಿದ್ಧ ನಾಗರಿಕದೇಶಗಳ ನಡವಳಿಕೆಗಳನ್ನು ಆಚರಣೆಗೆ ತರುವುದು ನಾಗರಿಕಕ್ಕೆ ಮುಂದೆ ಹಾಯುವ ದೇಶಗಳಿಗೆಲ್ಲ ಯುಕ್ತವಾಗಿರುವುದರಿಂದ, ಈ ಕಾಲಕ್ಕೆ ನಮ್ಮ ದೇಶದಲ್ಲಿ ಅದು ಅಭಿವೃದ್ಧಿಗೆ ಬರಬೇಕಾಗಿದೆ.

ಅಲ್ಲದೆ ಇನ್ನೂ ಒಂದು ವಿಷಯವನ್ನು ದೂರಾಲೋಚನೆಯಿಂದ ಊಹಿಸಬಹುದು. ಪ್ರಪಂಚದಲ್ಲಿರುವ ಮನುಷ್ಯರನ್ನು ಸಾಮಾನ್ಯವಾಗಿ ಎರಡು ಸಮಭಾಗವೆಂದು ಊಹಿಸಿದರೆ, ಒಂದು ಭಾಗವಾದ ಸ್ತ್ರೀಮಂಡಲಿಯೇ ಅಜ್ಞಾನಾಂಧಕೂಪದಲ್ಲಿ ಬಿದ್ದಿರಬೇಕೆಂಬುದು ಸ್ವಭಾವಕ್ಕೂ, ನ್ಯಾಯಕ್ಕೂ ವಿರುದ್ಧವಾಗಿದೆ. ಲೋಕವೆಂಬ ದೇಹಕ್ಕೆ ಪುರುಷನೂ-ಸ್ತ್ರೀಯೂ ಎರಡು ಕಣ್ಣುಗಳೆಂದು ಭಾವಿಸಿದರೆ, ವಿದ್ಯಾಭ್ಯಾಸವಿಲ್ಲದ ಸ್ತ್ರೀಯರಿಂದ ಪ್ರಪಂಚಕ್ಕೆ ಒಂದು ಕಣ್ಣೇ ಇಲ್ಲದಂತಾಗುವುದು. ಒಕ್ಕಣ್ಣಿನ ಪ್ರಪಂಚವು ಕೆಲಸವನ್ನು ನಿರ್ವಹಿಸಿದರೂ ನೋಟಕ್ಕೆ ಅಂದವಿಲ್ಲದೆ ಕುರೂಪಿಯೆಂಬ ಅಪವಾದಕ್ಕೆ ಗುರಿಯಾಗಿ ವ್ಯಥೆಗೊಳ್ಳಬೇಕಾಗುವುದು. ಆದುದರಿಂದ ಸ್ತ್ರೀಪುರುಷರಿಬ್ಬರೂ ವಿದ್ಯಾಜ್ಞಾನಪ್ರಭೆಯಿಂದ ಲೋಕದಲ್ಲಿ ಬೆಳಗಬೇಕಾದುದು ಅಗತ್ಯವಾಗಿದೆ.

ಮತ್ತೊಂದು ವಿಧದಿಂದ ಯೋಚಿಸಿದರೂ ಸ್ತ್ರೀಗೆ ವಿದ್ಯೆಯು ಅತ್ಯಾವಶ್ಯಕವೆಂದು ನಾವು ತಿಳಿಯಬಹುದು. ದೃಢಾಂಗರಾದ ತಾಯಿತಂದೆಗಳಿಂದ ದಾರ್ಢ್ಯದ ಮಕ್ಕಳು ಜನಿಸುವುದು ಸಹಜವಷ್ಟೆ? ಅದರಂತೆಯೇ ಮತಿಪರಿಪಕ್ವಸ್ಥಿತಿಯುಳ್ಳ ಪಿತೃಗಳಿಂದ ಅಂತಹ ಮಕ್ಕಳೇ ಜನಿಸುವುದು ನ್ಯಾಯವಾಗಿದೆ. ಬೀಜದ ಗುಣ ಸಸಿಯಲ್ಲಿ ವ್ಯಕ್ತವಾಗುವುದು ಸ್ವತಸ್ಸಿದ್ಧವು. ವಿವೇಕಹೀನರಾದ ತಾಯಿತಂದೆಗಳಿಂದ ವಿವೇಕದ ಪುತ್ರರನ್ನು ಭಾರತಮಾತೆಯು ಹೇಗೆತಾನೇ ಪಡೆಯುವಳು? ಇವುಗಳನ್ನೆಲ್ಲ ವಿಚಾರ ಮಾಡಿದರೆ, ಸ್ತ್ರೀಶಿಕ್ಷಣವು ಆವಶ್ಯಕವೆಂಬುದನ್ನು ನಾವು ಅಂಗೀಕರಿಸಲೇ ಬೇಕಾಗಿದೆ.

ಹೀಗೆ ಸ್ತ್ರೀಶಿಕ್ಷಣವು ಹಿಂದಣವರ ಒಪ್ಪಿಗೆಯಿಂದಲೂ ಈಗಣವರ ಮೆಚ್ಚುಗೆಯಿಂದಲೂ ಮುಂದಣವರ ಹಚ್ಚುಗೆಯನ್ನು ಬಯಸುವುದೆಂದು ಭಾವಿಸಿ, ಈ ಶಿಕ್ಷಣಕ್ರಮವು ಹೇಗೆ ಇರಬೇಕೆಂಬುದನ್ನು ಸ್ವಲ್ಪ ವಿಚಾರಮಾಡ ಬಿಡುವೆವು.—

ನಮ್ಮ ಸ್ತ್ರೀಯರಿಗೆ ಬೇಕಾದ ಶಿಕ್ಷಣವು ಇಹಕ್ಕೆ ಸೌಲಭ್ಯವನ್ನೂ, ಪಾತಿವ್ರತ್ಯಕ್ಕೆ ರಕ್ಷಣೆಯನ್ನೂ, ಜನ್ಮಕ್ಕೆ ಸಾರ್ಥಕತೆಯನ್ನೂ ತೋರಿಸುವ ಮುಖ್ಯವಾದ ಗುರಿಯಿಂದ ಕೂಡಿರಬೇಕು. ಇದಕ್ಕಾಗಿ ಧರ್ಮಶಿಕ್ಷಣ-ನೀತಿಶಿಕ್ಷಣ-ಸಂಸಾರನಿರ್ವಾಹಶಿಕ್ಷಣ-ವಿಶೇಷಶಿಕ್ಷಣಗಳೆಂದು ನಾಲ್ಕು ಬಗೆಯಾಗಿ ನಾವು ಶಿಕ್ಷಣಭೇದಗಳನ್ನು ಮಾಡಿಕೊಳ್ಳಬಹುದು.

ಧರ್ಮಶಿಕ್ಷಣ:—ನಮ್ಮ ಪ್ರಾಚೀನ ಮಹರ್ಷಿಗಳ ಕಾಲದಿಂದಲೂ ಪ್ರಸಿದ್ಧವಾಗಿ ನಡವಳಿಕೆಗೆ ಬಂದಿರುವ ಶ್ರುತಿಸ್ಮೃತೀತಿಹಾಸಾದಿಗಳೊಳಗಣ ಸದ್ಧರ್ಮಗಳನ್ನು ಸಂಗ್ರಹಿಸಿ ಬೋಧಿಸಬೇಕು. ಧರ್ಮಾಚರಣೆಗೆ ವಿರೋಧವಾಗಿರುವ ಯಾವ ಶಿಕ್ಷಣವನ್ನೂ ನಮ್ಮ ಆರ್ಯಮಹಿಳೆಯರಿಗೆ ಕೊಡಬಾರದು. "ಸ್ವಧರ್ಮೇನಿಧನಂಶ್ರೇಯಃ ಪರಧರ್ಮೋಭಯಾವಹಃ" ಎಂಬ ಭಗವದುಪದೇಶದಂತೆ ಸ್ತ್ರೀಯರು ತಮ್ಮ ಸ್ವಧರ್ಮವನ್ನು ಕಾಪಾಡಿಕೊಂಡು ಪತಿಭಕ್ತಿಯಿಂದ ಪಾಪಕಾರ್ಯದಲ್ಲಿ ಜಿಹಾಸೆಯುಳ್ಳವರಾಗಿಯೂ, ಪುಣ್ಯಕಾರ್ಯದಲ್ಲಿ ಆತುರವುಳ್ಳವರಾಗಿಯೂ ಆಗಿ ಆಸ್ತಿಕಧರ್ಮದ ಮೂಲಕ ಜನ್ಮಸಾರ್ಥಕ್ಯವನ್ನು ಪಡೆಯುವುದಕ್ಕೆ ತಕ್ಕ ಬೋಧನೆಗಳೇ ಇದರಲ್ಲಿ ಸೇರಿಬೇಕು. ಇದಕ್ಕಾಗಿಯೇ ಆರ್ಯಮಹಿಳೆಯರಿಗೆ ಪರಮತೀಯರು ಶಿಕ್ಷಕರಾಗುವುದು ಉಚಿತವೆನಿಸುವುದಿಲ್ಲ; ಪರಮತೀಯ ಸ್ತ್ರೀಯರ ಜತೆಯಲ್ಲಿಯೂ ಅಭ್ಯಾಸವು ಉತ್ತಮವಾಗುವುದಿಲ್ಲ. ಧರ್ಮಭ್ರಷ್ಟತೆಯನ್ನು ಪಡೆದ ವಿದ್ಯಾಭ್ಯಾಸವು ಜನಸಾಮಾನ್ಯಕ್ಕೆ ತೃಪ್ತಿಯಾಗಿರುವುದಿಲ್ಲ. ಎಷ್ಟು ವಿದ್ಯಾಭ್ಯಾಸ ಮಾಡಿದರೂ ತನ್ನ ಪಾತಿವ್ರತ್ಯವನ್ನೂ ಧರ್ಮವನ್ನೂ ಕಾಪಾಡಿಕೊಳ್ಳದ ಸ್ತ್ರೀಯು ಸ್ತ್ರೀಪಿಶಾಚಿಯು.

ನೀತಿಶಿಕ್ಷಣ:—ಇದರಲ್ಲಿ ಹೇಳಬೇಕಾದುದು ಬಹಳದೆ. ಸತ್ಯೋಚ್ಚಾರಣೆ-ಪ್ರಾಮಾಣಿಕಪ್ರವರ್ತನೆ-ಸ್ವ ತ್ಯಾಗ-ಗರ್ವತ್ಯಾಗ-ಆಲಸ್ಯತ್ಯಾಗ-ನಮ್ರತೆ-ಪತಿ ದೈವಭಕ್ತಿ-ಪರಹಿಂಸಾಪರಾಙ್ಮುಖತೆ-ಆತ್ಮಸ್ತುತಿತ್ಯಾ ಮತ್ಸರಾಸೂಯೆಗಳಲ್ಲಿ ಜಿಹಾಸ-ಅತಿಥಿಸತ್ಕಾರಾಶೆ- ದಯೆ-ಸಂಸಾರಪ್ರೀತಿ-ಸ್ವದೇಶಪ್ರೀತಿ-ದಾಕ್ಷಿಣ್ಯ-ಲಜ್ಜಾ ವೇಮೊದಲಾದುವುಗಳಲ್ಲಿ ಸ್ತ್ರೀಯು ಸಂಸ್ಕರಿಸಲ್ಪಡಬೇ ಈ ಶಿಕ್ಷಣಕ್ಕೆ ಸ್ವತಂತ್ರಗ್ರಂಥಗಳೇ ಇರಬೇಕಾದುದಿಲ್ಲ. ಪಂಚದ ಸರ್ವಮತೀಯರ ಗ್ರಂಥಗಳ ಉದಾಹರಣೆಗಳ ಸಂಗ್ರಹಿಸಿ ಬೋಧಿಸಬಹುದು. ಬೇಕಾದಷ್ಟು ಧರ್ಮ ಥಗಳನ್ನು ಅಭ್ಯಾಸಿಸಿದಾಗ್ಯೂ ನೀತಿಯೆಂಬ ಲೌಕಿಕಶಿಕ್ಷ ಅಭ್ಯಾಸವಾದ ಹೊರತು ಅದು ಅಂದವೆನಿಸುವುದಿಲ್ಲ. ಸ್ತ್ರೀಯು ಗೃಹಾಭರಣಪ್ರಾಯಳಾಗಿರುವಳು. ಆದುದರಿಂ ಸ್ತ್ರೀಯೆಂಬ ಸುವರ್ಣಕ್ಕೆ ಧರ್ಮಶಿಕ್ಷಣದಲ್ಲಿ ಪುಟವ ಹೊರತು ಶುದ್ಧವಾಗುವುದಿಲ್ಲ. ಹೀಗೆ ಶುದ್ಧವಾದ ಸ್ವ ರ್ಣದಲ್ಲಿ ನೀತಿಶಿಕ್ಷಣವೆಂಬ ರತ್ನವು ಎಷ್ಟು ಉತ್ತ ವಾಗಿದ್ದರೆ ಅಷ್ಟು ಚೆನ್ನಾಗಿ ಆ ಆಭರಣವು ಶೋಭಿಸುವು

ಇನ್ನು ಮೂರನೆಯ "ಸಂಸಾರನಿರ್ವಾಹಶಿಕ್ಷಣ" ಷಯದಲ್ಲಿ ನಾವು ತಿಳಿಯಬೇಕಾದುದು ಕೆಲವಿವೆ. ಗೃಹ ತ್ಯದ ಆಯವ್ಯಯ ವ್ಯವಹಾರಕ್ಕೆ ತಕ್ಕ ಗಣಿತಾಭ್ಯಾಸ ಸ್ವಾಸ್ಥ್ಯಕ್ಕೂ ಆರೋಗ್ಯಕ್ಕೂ ತಕ್ಕಂತೆ ಆರೋಗ್ಯಶಾಸ್ತ್ರಾಭ್ಯಾಸವೂ, ಪದಾರ್ಥಗಳ ಗುಣಾಗುಣಗಳನ್ನು ತಿಳಿಯ ವಸ್ತುಶಕ್ತಿ ಶಾಸ್ತ್ರಜ್ಞಾನವೂ, "ಹಿಂದಣ ಸ್ತ್ರೀಯರು ಯಾವ ನಡವಳಿಕೆಯಿಂದ ಬಾಳಿದರು ಹೇಗೆ ವರ್ತಿಸಿದರು ಅದರ ಪರಿಣಾಮವೇನಾಗಿದೆ" ಯೆಂಬುದನ್ನು ತಿಳಿಯ ಪ್ರಾಚೀನ ರಮಣಿಯರ ಚರಿತ್ರೆಯ ಪಠನವೂ, ಗೃಹಲಾ ಕ್ಕೆ ಅನುಕೂಲಿಸುವಂತೆ ಹೊಲಿಗೆಯಭ್ಯಾಸವೂ, ರಂಗೋ ಯೇ ಮೊದಲಾದ ಚಿತ್ರಕರ್ಮರಚನೆಗಳೂ, ಉತ್ತಮ ಸಾ ಗಳ-ಮಹನೀಯರ ಕೀರ್ತನೆಯೂ, ದೈವವಿಷಯವಾದ ಗೀತಗಳೂ, ಕಾಲವನ್ನರಿತು ಸರಿಯಾಗಿ ಪಾಕಮಾಡುವ ವಿಧವೂ, ಸಾಮಾನ್ಯ ರೋಗಗಳ ಚಿಕಿತ್ಸಾಕ್ರಮವೂ—ಇ ಮೊದಲಾದ ಸಂಸಾರಕ್ಕೆ ಅನುಕೂಲಿಸುವ ಅನೇಕ ವಿಷಯಗಳನ್ನು ಉತ್ತಮ ಗ್ರಂಥಗಳ ಮೂಲಕ ಸ್ತ್ರೀಯ ಅಭ್ಯಾಸಕ್ಕೆ ತರಬೇಕಾಗಿದೆ.

ಸಶೇ

ಸಮುದ್ರಯಾನ.

ತಮ್ಮ ಫೆಬ್ರುವರಿ ತಾ॥ ೧೩ ನೇ ಪತ್ರದಲ್ಲಿ ಶೃಂಗೇರಿ ಸ್ವಾಮಿಗಳವರಿಂದ ಸಮುದ್ರಯಾನದ ಸಲುವಾಗಿ ನಿಷೇಧಿಸಿ ಆಜ್ಞಾಪತ್ರಿಕೆಯು ಮೈಸೂರ ರಾಜಧಾನಿಯ ತ್ರಿನ ನೇಶ್ವರ ದೇವಾಲಯದಲ್ಲಿ ವೇ॥ ವಿಘ್ನೇಶಶಾಸ್ತ್ರಿಗಳವರಿಂ ಒದಲ್ಪಟ್ಟ ಸಮಾಚಾರವನ್ನು ಓದನೋಡಲಾಗಿ ಶ್ರೀಗಳ ರು-ವೇದಮೂರ್ತಿಗಳು ನಿಜಸ್ಥಿತಿಯ ವಿಪರ್ಯಾಸಮಾ ದ್ದನ್ನು ನೋಡಿ ಮನಸ್ಸಿಗೆ ವಿಷಾದವಾಯ್ತು, ತದ್ವಿಷಯಕ ಲೇಖ ಬರೆಯುವ ಪ್ರಸಂಗ ಬಂದದರಿಂದ ತಮ್ಮ ಘನವಾದ ಪತ್ರದಲ್ಲಿ ಕೆಳಗಿನ ಕಲವು ಪಙ್ಕ್ತಿಗಳಿಗೆ ಸ್ಥಳಕೊಡು ರೆಂದು ನಂಬಿದ್ದೇನೆ.

ಸಮುದ್ರಯಾನವು ವೇದವಿಹಿತವೂ ಮನ್ವಾದಿಸ್ಮೃತ್ಯುಕ್ತವಾದದ್ದೂ ವ್ಯಾಸಮಹರ್ಷಿಗಳಿಂದ ಪ್ರಣೀತವಾದ ಮಹಾಭಾರತಾದಿ ಇತಿಹಾಸಗ್ರಂಥಗಳಲ್ಲಿ ಪ್ರತಿಪಾದಿಸಿರುವದಾ ಯೂ ಇರುವದೆಂದು ನಿರ್ಮಲಾಂತಃಕರಣದಿಂದಲೂ ನಿಷ್ಪಕ್ಷಪಾತದಿಂದಲೂ, ಅವಲೋಕನಮಾಡಿದರೆ ಕೈ ಕನ್ನಡಿಯಂತೆ ಸ್ಪಷ್ಟವಾಗಿ ತೋರುವದೆಂದು ಕಂಡುಬರುತ್ತದೆ.

ಸಮುದ್ರಂಗಚ್ಛ ಸ್ವಾಹಾ ॥ (ಯಜುರ್ವೇದ ಅ. ೬.)
ಅರ್ಥ—"ಸಮುದ್ರಯಾನವನ್ನು ಮಾಡು."

ಮನೋನಿವಿಷ್ಟ ಮನುಸಂಪಶಸ್ವ! ಯತ್ರಭೂಮೇರ್ಜುಷಸ ತತ್ರಗಚ್ಛ ॥ (ಅಥರ್ವವೇದ ಕಾಂಡ ೧೧।೩।೧೩,

ಅರ್ಥ—ಈಶ್ವರಾಜ್ಞೆ ಇರುವುದೇನೆಂದರೆ "ಎಲೈ ರಾಜನೇ ಈ ಪೃಥ್ವಿಯ ಯಾವ ಭಾಗದಲ್ಲಿ ನಿನಗೆ ಹೋ ಬೇಕೆಂದು ಇರುವುದೋ ಆ ಭಾಗದವರೆಗೆ ಹೋಗಿ ಇರು

ತುಗ್ರೋಹ ಭುಜ್ಯುಮಶ್ವಿನೋದಮೇಘೇರಯಿಂ ನ
ಕಶ್ಚಿನ್ಮಮೃವಾಂ ಅವಾಹಾಃ । ತಮೂಹಥುರ್ನೌ
ಭಿರಾತ್ಮನ್ವತೀಭಿರಂತರಿಕ್ಷ ಪ್ರುದ್ಭಿರಪೋದಕಾಭಿಃ ॥
ಋಗ್ವೇದ ಅ॥ ೧।೮।೧ ಮಂ॥ ೩.

ಅರ್ಥ—ಧನ ಮತ್ತು ಇತರ ಭೋಗಗಳನ್ನು ಇಚ್ಛಿಸು ವಂಥ ಬಲವಂತನು ಎಲ್ಲರಿಗೂ ಕುಳಿತುಕೊಳ್ಳುವುದಕ್ಕೆ ಯೋಗ್ಯವಾದಂಥ ನೀರನ್ನು ಬಗೆಯುವಂಥ ಉತ್ತಮ ಹಡಗಿ ದ ಅಥವಾ ವಿಮಾನದಿಂದ ಸಮುದ್ರದಾಟ, ದೇಶಾಂತರ ಹೋಗಿ ಪುರುಷಾರ್ಥ ಸಾಧಿಸಿ ದ್ರವ್ಯಮೊದಲಾದುದ ಸಂಪಾದಿಸಬೇಕು.

ಆನೋ ನಾವಾಮತೀನಾಂಯಾತಂ ಪಾರಾಯ
ಗಂತವೆ ಯುಂಜಾಥಾಮಶ್ವಿನಾರಥಂ॥ (ಋಗ್ವೇದ
ಅ॥ ೧।೩।೫।೭.

ಅರ್ಥ–ಸಮುದ್ರದ ಮೇಲಿಂದ ದಾಟಲಿಕ್ಕೆ ಬುದ್ಧಿವಂತ ಜನರ ಹಡಗದಂತೆ ನಮ್ಮ ಹಡಗವು ಇರಬೇಕು. ಆ ಹಡಗಕ್ಕೆ ವಿದ್ಯುತ್ ಅಗ್ನಿ ಮೊದಲಾದವುಗಳ ಸಂಯೋಗಮಾಡಿ ಪಾರಾಗಿ ಹೋಗಬೇಕು.

ಸಮುದ್ರಯಾನಕುಶಲಾ ದೇಶಕಾಲಾರ್ಥದರ್ಶಿ
ನಃ। ಸ್ಥಾಪಯಂತಿ ತುಯಾಂವೃದ್ಧಿಂ ಸಾತತ್ರಾಧಿಗ
ಮಂಪ್ರತಿ॥ (ಮನುಸ್ಮೃತಿ ಅ॥ ೮. ಶ್ಲೋಕ ೧೫೭.)

ಅರ್ಥ–ದೇಶ ಕಾಲ ಪರಿಸ್ಥಿತಿಬಲ್ಲ ಸಮುದ್ರಯಾನದಲ್ಲಿ ಕುಶಲರಾದವರೇ ಧನದ ವೃದ್ಧಿಮಾಡುತ್ತಾರೆ.

ದೀರ್ಘಾಧ್ವನಿ ಯಥಾದೇಶಂ ಯಥಾಕಾಲಂ ತ
ರೋಭವೇತ್। ನದೀತೀರೇಷು ತದ್ವಿದ್ಯಾತ್ ಸಮುದ್ರೆ
ನಾಸ್ತಿಲಕ್ಷಣಂ॥ (ಮನು ಅ॥ ೮. ಶ್ಲೋಕ ೪೦೬.)

ಅರ್ಥ–ದೂರ ಮಾರ್ಗವಿದ್ದಲ್ಲಿ ದೇಶಕಾಲಾನುಸಾರವಾಗಿ ತೆರಿಗೆಯು (ಹಾಸಲ) ನ್ನು ತೆಗೆದುಕೊಳ್ಳುವರು. ಇದೆಲ್ಲ ನದಿಗಳಲ್ಲಿ ತಿಳಿಯುತಕ್ಕದ್ದು. ಸಮುದ್ರದಲ್ಲಿ ಹಾಸಲಿನ (ಚಾರ್ಜಿನ) ನಿಯಮವು ಇಲ್ಲ. ಯಾಕೆಂದರೆ–ಸಮುದ್ರದಲ್ಲಿ ಹಡಗು ಗಾಳಿಯ ಅಧೀನವಾಗಿರೋಣದರಿಂದ ಅಲ್ಲಿ ಉಚಿತವಾದ ಚಾರ್ಜನ್ನೇ ತೆಗೆದುಕೊಳ್ಳತಕ್ಕದು.

ಗರ್ಭಿಣೀತು ದ್ವಿಮಾಸಾದಸ್ತಥಾ ಪ್ರವ್ರಜಿತೊ
ಮುನಿಃ। ಬ್ರಾಹ್ಮಣಾಲಿಂಗಿನಶ್ಚೈವ ನದಾಪ್ಯಾಸ್ತಾರಿ
ಕಂತರೆ॥ (ಮನು ಅ॥ ೮. ಶ್ಲೋಕ ೪೦೭.)

ಅರ್ಥ–ಗರ್ಭಿಣೀ ಸ್ತ್ರೀ ಸನ್ಯಾಸಿ ವಾನಪ್ರಸ್ಥ ಬ್ರಾಹ್ಮಣ ಲಿಂಗಿಗಳು ನದಿ ಸಮುದ್ರ ದಾಟಿದ ಹಾಸಲನ್ನು ಕೊಡಬಾರದು.

ಆಮ್ಲೇಚ್ಛಾವಧಿಕಾರ್ಸರ್ವಾರ್ಸಭುಂಕ್ತೆ ರಿಪು
ಮರ್ದನಃ। ರತ್ನಾಕರ ಸಮುದ್ರಾಂತಾಶ್ಚಾತುರ್ವರ್ಣ್ಯ
ಜನಾವೃತಾ॥ (ಮಹಾಭಾರತ ಅ॥ ೭.)

ದುಷ್ಯಂತರಾಜನು ಮ್ಲೇಂಛ ದೇಶದ ಪರ್ಯಂತರ ಶತ್ರುಗಳಿಗೆ ಅಪಜಯಮಾಡಿ, ಸಮುದ್ರದ ಕಡೆಯ ಭೂಮಿಯ ಸ್ವಾಮಿತ್ವವನ್ನು ಸಂಪಾದಿಸಿದನು.

ಸತುಮಾಪ ಸಮುದ್ರಾಂತಾಂಪರ್ಯೈತ್ಯವಸುಧಾ
ಮಿಮಾಂ॥ (೧ ಭಾ। ಅಶ್ವ। ಪ। ಅ ೮೧.)

ಅರ್ಥ–ಧರ್ಮರಾಜನು ಅಶ್ವಮೇಧದ ಸಲುವಾಗಿ ಬಿಟ್ಟಂಥ ಕುದುರೆಯು ಸಮಸ್ತ ಭೂಮಿಯನ್ನೂ ತಿರುಗಿ ಸಮುದ್ರವನ್ನು ದಾಟಿಹೋಗಿತ್ತು.

ವಣಿಗ್ಯಥಾಸಮುದ್ರಾದ್ವೈಯಥಾರ್ಥಂ ಲಭತೆಧ
ನಂ॥ (೬। ಭಾ। ಶಾ। ಅ ೬೯೯.)

ವ್ಯಾಪಾರಿ ಜನರು ಸಮುದ್ರವನ್ನು ದಾಟಿಹೋಗಿ ಧನ ಸಂಪಾದನ ಮಾಡುತ್ತಾರೆ. ನದೀ ಸಮುದ್ರ ಮೊದಲಾದುವುಗಳನ್ನು ದಾಟಸುಪಂಥವನು ದಾಟಿಸಿದ ಹಾಸಲನ್ನು ಬ್ರಾಹ್ಮಣಾದಿಗಳಿಂದ ತೆಗದುಕೊಳ್ಳಬಾರದೆಂದು ನಿಷೇಧವನ್ನು ಮಾಡಿರುವುದೇ ನಮಗೆ ಪೂರ್ವದಲ್ಲಿ ಬ್ರಾಹ್ಮಣಾದಿಗಳು ಸಮುದ್ರಯಾನವನ್ನು ಮಾಡುತ್ತಿದ್ದರೆಂದು ಗೊತ್ತಾಗುತ್ತದೆ. ಅದಲ್ಲದೆ ಧರ್ಮರಾಜನ ರಾಜಸೂಯ ಯಜ್ಞಕ್ಕೆ ಪರದೇಶದ ರಾಜರುಗಳು ಸಮುದ್ರಯಾನ ಮಾಡಿ ಬಂದಿದ್ದರೆಂಬುದು ವಿಚಾರಿಮಾಡಿದರೆ ಮಹಾಭಾರತದಿಂದ ತಿಳಿಯಬರುತ್ತದೆ. ಇದೂಅಲ್ಲದೆ ವೇದದಲ್ಲಿ ಸಮುದ್ರಯಾನವು ನಿಷೇಧಿಸಲ್ಪಟ್ಟಿದ್ದರೆ ಪೂರ್ವೋಕ್ತ ನೌಕಾಬಂಧನ ಸಮುದ್ರ ಪ್ರಯಾಣ ವಿಷಯಕ ಮಂತ್ರಗಳು ಎಂದೂ ಇರುತ್ತಿದ್ದಿಲ್ಲ. ಅತಏವ,

ಅಮೂಲಾಶಾಂಕರೀತ್ಯಾಜ್ಯಾನದೋಷೋಸ್ತ್ಯ
ಬ್ಧಿಯಾಯಿನಃ। ದುಷ್ಕರ್ಮಣಿತು ವೃತ್ತಿಃಸ್ಯಾತ್
ಪ್ರಾಯಶ್ಚಿತ್ತೀಯತೆನರಃ॥೧॥

ಶಂಕರಾಚಾರ್ಯರು ಮಾಡಿದ ಸಮುದ್ರಯಾನ ನಿಷೇಧಕ ಆಜ್ಞೆಯು ಸರ್ವಥಾ ತ್ಯಾಜ್ಯವೆಂದು ಹೇಳುವುದೇ ಉಚಿತವು.

ಈಗ ನಮ್ಮ ದೇಶದ ಸುಖಸಂಪತ್ತು ವಿದ್ಯಾಭಿವೃದ್ಧಿಗೋಸ್ಕರ ಪರದೇಶವಾಸಾರ್ಥವಾಗಿ ತೆರಳಬೇಕಾದ ಸಮುದ್ರಯಾನವು ಎಷ್ಟೊಂದು ಪ್ರಯೋಜಕವಾಗಿದೆಯೆಂದು ಹೇಳುವುದು ನನ್ನಿಂದ ಅಸಾಧ್ಯವೇಸರಿ. ಪ್ರಿಯಬಾಂಧವರೇ—ನಮ್ಮ ಪೂರ್ವಜರ ಉದಾತ್ತ ವಿಚಾರಗಳನ್ನೂ ನೋಡದೆ, ಸದ್ಯಸ್ಥಿತಿಯನ್ನೂ ವಿಚಾರಮಾಡದೆ, ಸರ್ವರೀತಿಯಿಂದಲೂ ದುಃಖಕರವಾದ ಧರ್ಮನಿಯಮವನ್ನು ಮಾಡುವುದು ಧರ್ಮಗುರುಗಳೆಂದು ಹೇಳಿಸಿಕೊಳ್ಳುವ ಸನ್ಯಾಸಿಗಳಿಗೆ ಉಚಿತವೆ?

ಹಿಂದಿನ ವರ್ಷದಲ್ಲಿ ಸರ್ ಬಾಲಚಂದ್ರ ಭಾವಟಕರ ಇವರ ತಮ್ಮಂದಿರು ವಿಲಾಯತಿ ಸೀಮೆಗೆ ಬಂದಸಮಯದಲ್ಲಿ ಸಂಕೇಶ್ವರದ ಶಂಕರಾಚಾರ್ಯರು ಪ್ರಾಯಶ್ಚಿತ್ತಮಾಡಿ ತೆಗೆದುಕೊಂಡದ್ದು ಹೋದವರ್ಷದ ಕೇಸರೀ ವರ್ತಮಾನ ಪತ್ರಿಕೆಯಲ್ಲಿ ಪ್ರಸಿದ್ಧಮಾಡಿರುತ್ತದೆ. ಮಹನೀಯರೆ! ಶೃಂಗೇರಿಯವರು ಪ್ರತಿಬಂಧಿಸುವುದು, ಸಂಕೇಶ್ವರದವರು ಆಜ್ಞಾಪಿಸುವುದನ್ನು ನೋಡಿದರೆ ಧರ್ಮಸನ್ಯಾಸಿಗಳಲ್ಲೇ ಏಕಮತ್ಯವಿಲ್ಲದೆ ಮನಸ್ಸಿಗೆ ಬಂದಂತೆ ಮಾಡುವರೇಹೊರತು ಶಾಸ್ತ್ರರೀತಿಯನ್ನು ಅನುಸರಿಸಿಲ್ಲವೆಂಬುವುದು ಸ್ಪಷ್ಟವಾಗುತ್ತದೆ. ಇನ್ನು ಶಂಕರಾಚಾರ್ಯರು ಇದು ಕಲಿಯುಗವು ಈ ಕಲಿಯುಗದಲ್ಲಿ ಸಮುದ್ರಯಾನ ಮಾಡಬಾರದೆಂದು ನಿಷೇಧಮಾಡಿದಪಕ್ಷದಲ್ಲಿ ಕಾಲವು ಬಡವಾಗಿರುವುದರಿಂದ ಪರಾವಲಂಬನೆಯುಳ್ಳದ್ದೇವಿನಾ ಸ್ವಾವಲಂಬನೆಯುಳ್ಳುದಲ್ಲ. ಅಂದಮೇಲೆ ಪ್ರಾಣಿಮಾತ್ರಾವಲಂಬಿಯಾದ ಕಾಲದಲ್ಲಿ ಆಧುನಿಕ ಶಂಕರಾಚಾರ್ಯರು ನಿಷ್ಪಕ್ಷಪಾತದಿಂದ ಶಾಸ್ತ್ರಾವಲೋಕನೆ ಮಾಡಿ ಸತ್ಯಧರ್ಮವನ್ನುಪದೇಶಮಾಡಿದರೆ ಸತ್ಯಯುಗವೇ ಆಗುವುದು. ಆದರೆ ಧರ್ಮಸನ್ಯಾಸಿಗಳೂ ಪಕ್ಷಪಾತದಿಂದ ಅಧರ್ಮವನ್ನುಪದೇಶ ಮಾಡಹತ್ತಿದರೆ ಪಾಪಯುಗ (ಕಲಿಯುಗ) ವೇ ಆಗುವುದಾದುದರಿಂದ ಯಾವು ಧರ್ಮಗುರುಗಳನ್ನೇ ಅವಲಂಬಿಸಿರೋಣದರಿಂದ ಸತ್ಯಧರ್ಮವನ್ನುಪದೇಶಮಾಡಿ ಸತ್ಯಯುಗವನ್ನು ಮಾಡಲಿಕ್ಕೆಬರುವುದಿಲ್ಲವೋ?

ಆದರೆ ಈ ವಿಷಯವಾಗಿ ಇನ್ನೂ ವಿಶೇಷ ಪ್ರತಿಪಾದಿಸದೆ ಶಂಕರಾಚಾರ್ಯರ ಉತ್ತರ ಬಂದನಂತರ ವಿಚಾರಮಾಡಲಾಗುವುದು.

ವಿರೂಪಾಕ್ಷ ವೊಡೆಯರ್, ಬ್ರಹ್ಮಚಾರಿ ವೊಡೆಯರ್.

ಯೂರೋಪಿಯನ್ ಅಧಿಕಾರಿಗಳೂ, ಮತ್ತು ದೇಶೀಯ ದೊಡ್ಡಮನುಷ್ಯರೂ.

ಯೂರೋಪಿಯರ್ನ ಜನರ ನಡವಳಿಕೆಗೂ ಇಂಡಿಯಾ ದೇಶೀಯರ ನಡವಳಿಕೆಗೂ ಅನೇಕ ಭಾಗಗಳಲ್ಲಿ ಬಹು ವ್ಯತ್ಯಾಸವಿರುವುದಷ್ಟೆ. ಇಂಡಿಯಾ ದೇಶದಲ್ಲಿ ಮೇಲ್ಪಟ್ಟ ಅಧಿಕಾರಕ್ಕೆ ನೇಮಿಸಲ್ಪಡುವ ಯೂರೋಪಿಯರ್ನರು ದೇಶೀಯರ ನಡವಳಿಕೆಯನ್ನು ತಿಳಿದುಕೊಂಡು ಅದಕ್ಕನುಸಾರವಾಗಿ ನಡೆದುಕೊಳ್ಳದೆ ಸ್ವೇಚ್ಛೆಯಾಗಿ ವರ್ತಿಸುವುದರಿಂದ ಪರಸ್ಪರ ನಡವಳಿಕೆಯು ಉಭಯತ್ರರಿಗೂ ಸರಿಬೀಳದೆ ದ್ವೇಷ ಅಸೂಯಾದಿಗಳು ಉಂಟಾಗಿ ಈರ್ವರಿಗೂ ಸ್ನೇಹಭಾವವು ಬೆಳೆಯದೆ ಅನೇಕ ಲೋಪಗಳಿಗೆ ಕಾರಣವಾಗಿದೆ. ಯೂರೋಪಿಯರ್ನರು ಅಧಿಕಾರಮದದಿಂದ ದೇಶೀಯರನ್ನು ತುಚ್ಛವಾಗಿ ಎಣಿಸಲು ಅವಕಾಶವಿದೆ. ದೇಶೀಯರು ಕೆಂಪು ಮುಖದವರನ್ನು ನೋಡಿದಕೂಡಲೆ ಅವರ ಚೇಷ್ಟೆಗಳನ್ನು ನೋಡಿ ಜಗುಪ್ಸೆಗೊಂಡು ಹೆದರುತ್ತಾರೆ. ಇದರಿಂದ ಪರಸ್ಪರ ಸಮ್ಮೇಳನವಾಗದೆ ಸಹೃದಯವು ಬೆಳೆಯಲು ಮಾರ್ಗವಿಲ್ಲದ ಹೋಗಿದೆ. ಈ ನ್ಯೂನತೆಯನ್ನು ಹೋಗಲಾಡಿಸಬೇಕೆಂಬ ಅಭಿಪ್ರಾಯದಿಂದ ಮದರಾಸು ಸರ್ಕಾರದವರು ತಮ್ಮ ಯೂರೋಪಿಯರ್ನ ನೌಕರರಿಗೆ ದೇಶೀಯರೊಡನೆ ಮಿಳಿತವಾಗುವಾಗ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಸೂಚಿಸಿ ಒಂದು ಬುದ್ಧಿವಾದ ಪೂರ್ವಕವಾದ ಪತ್ರವನ್ನು ಬರೆದುಕೊಟ್ಟಿದ್ದಾರೆ. ಅದರಲ್ಲಿ ಕೊಟ್ಟಿರುವ ವಿಷಯಗಳು ಸ್ವಾರಸ್ಯಂಗಳಾಗಿರುವುದರಿಂದ ಸಂಕ್ಷೇಪವಾಗಿ ಇಲ್ಲಿ ಬರೆಯುತ್ತೇವೆ:—

೧. ದೇಶೀಯ ರೈತನು ತನ್ನ ಕಷ್ಟಸುಖಗಳನ್ನು ತನ್ನ ಯಜಮಾನನಲ್ಲಿ ಹೇಳಿಕೊಳ್ಳಬೇಕೆಂದು ಪರಿಪೂರ್ಣವಾದ ಕುತೂಹಲವುಳ್ಳವನಾಗಿರುತ್ತಾನೆ. ಆದುದರಿಂದ ಯೂರೋಪಿಯರ್ನ ಅಧಿಕಾರಿಯು ತಾನು ನೌಕರಿಮಾಡುತ್ತಿರುವ ದೇಶದ ಭಾಷೆಯನ್ನು ಮಾತನಾಡುವವಷ್ಟಿಗಾದರೂ ಕಲಿತುಕೊಂಡು ರೈತನೊಡನೆ ಸ್ವತಃ ಸಂಭಾಷಣೆ ಮಾಡುತ್ತ ಅವರ ಅಹವಾಲುಗಳನ್ನು ಕೇಳುತ್ತಿರಬೇಕು. ಭಾಷೆಯನ್ನು ತಿಳಿಯಲಾರದ ದೋಷದಿಂದ ದ್ವಿಭಾಷಿಯಾದ ಮಧ್ಯಸ್ತನನ್ನು ಇಟ್ಟುಕೊಂಡು ರೈತರೊಡನೆ ಸಂಭಾಷಿಸುವುದು ಪರಸ್ಪರ ಸಹೃದಯವನ್ನು ಎಂದಿಗೂ ಉಂಟುಮಾಡಲಾರದು.

೨. ಮುಂಗೋಪವನ್ನು ತೋರಿಸುವುದು ಗೌರವಕ್ಕೆ ಹಾನಿಯನ್ನುಂಟುಮಾಡುವುದು. ದೇಶೀಯರೊಡನೆ ಮಿಳಿತವಾಗುವಾಗ ಕೋಪಮಾಡಿಕೊಳ್ಳದೆ ಇರುವುದನ್ನು ಅಭ್ಯಾಸ ಮಾಡಬೇಕು. ಕೋಪಿಷ್ಠನೆಂದೆನಿಸಿಕೊಂಡವನಲ್ಲಿ ಜನರು ನಂಬಿಕೆಯನ್ನೂ ಗೌರವವನ್ನೂ ಇಡುವುದಿಲ್ಲ.

೩. ದೇಶಭಾಷೆಯಲ್ಲಿ ಮಾತನಾಡುವಾಗ ಕೀಳ್ತರಗತಿಗೆ ಮೇಲ್ಪಟ್ಟವರನ್ನೆಲ್ಲಾ ಬಹುವಚನದಲ್ಲಿ ಮಾತನಾಡಿಸಬೇಕು. ತನ್ನನ್ನು ಕುರಿತು ಹೇಳುವಾಗ “ನಾವು” ಎಂದು ಹೇಳದೆ ‘ನಾನು’ ಎಂದು ಹೇಳುವುದು ಧರ್ಮವು.

೪. ದೇಶೀಯರನ್ನು ಕುರಿತು ಹೇಳುವಾಗ ‘ನೇಟಿವ್’ ಎಂಬ ಮಾತನ್ನು ಉಪಯೋಗಿಸಬಾರದು. ಏಕೆಂದರೆ ದೇಶೀಯರು ತಮಗೆ ಅವಮಾನವಾಯಿತೆಂದು ಭಾವಿಸುತ್ತಾರೆ.

೫. ದೇಶೀಯರಿಗೆ ಎಡಗೈಯಿಂದ ಸಲಾಂ ಮಾಡುವುದನ್ನೂ, ಎಡಗೈಯ್ಯಲ್ಲಿ ಏನಾದರೂ ಪದಾರ್ಥವನ್ನು ಇಸುಕೊಳ್ಳುವುದನ್ನೂ ನಿಲ್ಲಿಸಬೇಕು; ಯಾವಾಗಲೂ ಬಲಗೈಯ್ಯಿಂದ ಸಲಾಂ ಮಾಡಬೇಕು. ಒಂದು ಬೆರಳನ್ನು ಎತ್ತಿ ಸಲಾಂ ಮಾಡುವುದನ್ನು ನಿಲ್ಲಿಸಬೇಕು.

೬. ಉಗುಳುವುದು, ಬಾಯಿಯಲ್ಲಿ ಬೆರಳನ್ನಿಟ್ಟುಕೊಳ್ಳುವುದು, ಪೇನಾ ಅಥವಾ ಸೀಸದಕಡ್ಡಿಯನ್ನು ಬಾಯಿಯಲ್ಲಿ ಕಚ್ಚಿಕೊಂಡು ಅದೇ ಕಡ್ಡಿಯನ್ನು ಒಬ್ಬ ದೇಶಿಯನ ಕೈಗೆ ಕೊಡಲು ಹೋಗುವುದು ದುರಭ್ಯಾಸವೆಂದು ದೇಶೀಯರು ಎಣಿಸುತ್ತಾರಾದುದರಿಂದ ಆ ಅಭ್ಯಾಸವನ್ನು ಬಿಟ್ಟುಬಿಡಬೇಕು.

೭. ಹೊಗೆಸುತ್ತನ್ನು ಬಹಿರಂಗವಾಗಿ ಸೇದುವುದು ಯುಕ್ತವಲ್ಲವೆಂದು ದೇಶೀಯರು ಭಾವಿಸಿರುವುದರಿಂದ ದೇಶೀಯರೊಡನೆ ಸಂಭಾಷಣೆ ಮಾಡುವ ಕಾಲದಲ್ಲಿ ಹೊಗೆಸುತ್ತನ್ನು ಸೇದಬಾರದು.

೮. ದೇಶೀಯರಿಗೆ ಫಲಾಹಾರಗಳನ್ನು ಕೊಡುವುದಕ್ಕೆ ಹೋಗಬಾರದು. ಹಣ್ಣುಗಳನ್ನು ಕೊಡಬಹುದು.

೯. ದೇಶೀಯ ದೊಡ್ಡಮನುಷ್ಯರೊಡನೆ ಸಂಭಾಷಿಸುವಾಗ ಅವರ ಮನೆಯ ಸ್ತ್ರೀಯರ ವಿಚಾರವಾದ ಪ್ರಸ್ತಾಪವನ್ನು ಖಂಡಿತವಾಗಿಯೂ ಮಾಡಬಾರದು. (ಯೂರೋಪಿಯರ್ನರಲ್ಲಿ ಮನೆಸ್ತ್ರೀಯರ ಆರೋಗ್ಯ ಮುಂತಾದುದನ್ನು ಯಜಮಾನನನ್ನು ಕೇಳಿ ತಿಳಿದುಕೊಳ್ಳುವ ಅಭ್ಯಾಸವಿದೆ. ದೇಶೀಯರಲ್ಲಿ ಈ ವಾಡಿಕೆಯು ಇಲ್ಲವಾದುದರಿಂದ ಈ ವಿಧಿಯು ಹೇಳಲ್ಪಟ್ಟಿರುವುದು.)

೧೦. ರೈಲು ಬಂಡಿಗಳಲ್ಲಿ ದೇಶೀಯರು ಪ್ರಯಾಣಮಾಡುತ್ತಿರುವ ಗಾಡಿಯೊಳಕ್ಕೆ ಯೂರೋಪಿಯರ್ನರು ಜಬರದಸ್ತಿಯಿಂದ ನುಗ್ಗಿ ದೇಶೀಯರಿಗೆ ಒಗ್ಗದೆ ಇರುವ ಚುಟ್ಟಾ ಸೇದುವುದು, ಬಟ್ಟೆಬರೆಗಳನ್ನು ತೆಗೆದು ಬಿಸಾಡುವುದು, ಮುಂತಾದ ಒರಟುತನಗಳನ್ನು ತೋರಿಸಬಾರದು. ದೇಶೀಯರು ರುಮಾಲು ತೆಗೆದು ಕೆಳಗಿಟ್ಟರೂ ಅಡಿಕೆ ಎಲೆಯನ್ನು ಅಗಿದರೂ ಯೂರೋಪಿಯರ್ನರು ಅದಕ್ಕೆ ಕೋಪಗೊಳ್ಳಬಾರದು. ತಾವು ಮಾತ್ರ ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಂಡರೆ ದೇಶೀಯರು ಅವರ ಇಷ್ಟದಂತೆ ಏಕೆ ನಡೆದುಕೊಳ್ಳಬಾರದು?

೧೧. ತಮ್ಮನ್ನು ದೇಶೀಯರು ಮನೆಯಲ್ಲಿ ಕಂಡು ಹೋಗುವುದಕ್ಕೆ ಬಂದರೆ ಯೂರೋಪಿಯರ್ನ ಆಫೀಸರುಗಳು ಅವರನ್ನು ಆದರದಿಂದ ಬರಮಾಡಿಕೊಂಡು ಮಾತನಾಡಿ ಕಳುಹಿಸಿಕೊಡಬೇಕು. ಮೊಕ್ತಾ ಮಾತನಾಡಿ ತಮ್ಮ ಅಹವಾಲುಗಳನ್ನು ಹೇಳುವುದಕ್ಕೆ ದೇಶೀಯರು ಮೋಹಿಸುವುದರಿಂದ ಅವರನ್ನು “ಆಫೀಸಿಗೆ ಬಂದು ಮಾತನಾಡು” “ನೀನು ಹೇಳಬೇಕಾದುದನ್ನೆಲ್ಲಾ ಕಾಗದದ ಮುಖಾಂತರ ಬರದುಕೊ” ಎಂದು ಹೇಳಿ ಓಡಿಸಿಬಿಡುವುದು ಮರ್ಯಾದೆಯಲ್ಲ. ಮೊಕ್ತಾ ಮಾತನಾಡಿ ಒಂದುವೇಳೆ ಅವರ ಕೆಲಸವನ್ನು ಮಾಡಿ ಕೊಡದೇ ಇದ್ದರೂ ಅವರು ತಾಳ್ಮೆಯಿಂದ ಸಹಿಸಿಕೊಂಡು ತೃಪ್ತಿಪಟ್ಟುಕೊಂಡು ಹೋಗುವರು. ಮಾತನಾಡದೆ ಹಾಗೇ ಕಳುಹಿಸಿಬಿಟ್ಟರೆ ಬಹಳ ಅವಮಾನವಾದಂತೆ ಭಾವಿಸುವರು.

೧೨. ಸಮಯದೊರಕಿದಾಗಲೆಲ್ಲಾ ರೈತರೊಡನೆ ಮಿಳಿತವಾಗಿ ಅವರ ಸುಖದುಃಖಗಳನ್ನು ವಿಚಾರಿಸಿಕೊಳ್ಳಬೇಕು. ಅವರ ಪರಿಷೆ, ಜಾತ್ರೆ ಮುಂತಾದ ಎಡೆಗಳಿಗೆ ಹೋಗಿ ಅಲ್ಲಿ ನಡೆಯುವುದನ್ನೆಲ್ಲಾ ನೋಡಿಕೊಂಡು ಬಂದರೆ ಅವರಿಗೆ ಎಷ್ಟೋ ಪ್ರೋತ್ಸಾಹವಾಗುವುದಲ್ಲದೆ ಅವರು ಸಂತೋಷಪಡುವರು.

೧೩. ದೇಶೀಯ ದೊಡ್ಡಮನುಷ್ಯನು ಭೇಟಿಗೋಸ್ಕರ ಮನೆಗೆ ಬಂದರೆ ಬಾಗಲಲ್ಲಿರುವ ಜವಾನರು ಮುಂತಾದ ಆಳುಗಳು ಅವರಿಗೆ ಪ್ರವೇಶವನ್ನು ಧಾರಾಳವಾಗಿ ಕೊಡುವಂತೆ ಏರ್ಪಾಡುಮಾಡಬೇಕು. ತನ್ನನ್ನು ನೋಡುವುದಕ್ಕೆ ಯಾರು ಬಂದರೂ ಆ ಸಮಾಚಾರವನ್ನು ಖಂಡಿತವಾಗಿ ತನಗೆ ತಿಳಿಸುವಂತೆ ನೌಕರರಿಗೆ ಆಜ್ಞೆ ಮಾಡಿರಬೇಕು. ಬಂದವರನ್ನು “ನೋಡುವುದಕ್ಕೆ ಆಗುವುದಿಲ್ಲ” ಎಂದು ಹೇಳಿಕಳುಹಿಸುವುದು ಶುದ್ಧ ಅವಮಾನಮಾಡಿದಂತಾಗುವುದು.

೧೪. ದೇಶೀಯರು ಬಂಗಲೆಗೆ ಬಂದರೆ ಆಳುಗಳು ಬಂದು ಅವರಿಗೆ ಕುರ್ಚಿಯನ್ನುಹಾಕಬೇಕಾದುದಿಲ್ಲ. ಕೈಸಾಲೆಯಲ್ಲಿ ಕುರ್ಚಿಗಳನ್ನು ಹಾಕಿಟ್ಟಿದ್ದರೆ ಸಾಕು. ಅವುಗಳಮೇಲೆ ಕುಳಿತುಕೊಳ್ಳಲು ಅರ್ಹರಾದವರೆಲ್ಲಾ ಕುಳಿತುಕೊಳ್ಳುವರು; ಇಲ್ಲವಾದವರು ನಿಂತಿರುವರು.

೧೫. ದೇಶೀಯ ದೊಡ್ಡಮನುಷ್ಯರು ಮರ್ಯಾದಾರ್ಥವಾಗಿ ತಮ್ಮ ಬಂಡಿಗಳನ್ನು ಬಂಗಲೆಯ ಬಾಗಿಲಿನಲ್ಲಿ ಬಿಟ್ಟು ಒಳಗೆ ನಡೆದುಕೊಂಡು ಬರುವರು. ಆದರೆ ತುಂಬಾ ಗೌರವವುಳ್ಳ ದೊಡ್ಡಮನುಷ್ಯರು ತಮ್ಮ ಗಾಡಿಗಳನ್ನು ಬಂಗಲೆಯೊಳಗೆ ಬಿಟ್ಟುಕೊಂಡು ಬರುವಂತೆ ಯೂರೋಪಿಯರ್ನ ಅಧಿಕಾರಿಯು ಹೇಳಬಹುದು. ಭೇಟಿಗೋಸ್ಕರ ಬಂದ ದೊಡ್ಡಮನುಷ್ಯನನ್ನು ಅಧಿಕಾರಿಯು ತನ್ನ ಕುರ್ಚಿಯಿಂದ ಎದ್ದು ಬರಮಾಡಿಕೊಳ್ಳಬೇಕು.

೧೬. ದೇಶೀಯ ದೊಡ್ಡಮನುಷ್ಯನು ಭೇಟಿಗೆ ಬಂದಾಗ ಅಧಿಕಾರಿಯು ಚುಟ್ಟವನ್ನು ಸೇದುತ್ತಿದ್ದರೆ ಅದನ್ನು ತೆಗದಿಡಬೇಕು. ಕಾಫಿಯನ್ನು ಕುಡಿಯುತ್ತಿದ್ದರೆ ಪಾತ್ರೆಗಳನ್ನು ಒಳಗೆ ಕಳುಹಿಸಬೇಕು; ಅಂಗಿಯನ್ನು ತೊಟ್ಟುಕೊಳ್ಳದೆ ಷರ್ಟನಲ್ಲಿದ್ದರೆ ಅಂಗಿಯನ್ನು ತೊಟ್ಟುಕೊಳ್ಳಬೇಕು, ನಾಯಿಗಳನ್ನು ಹೊರಕ್ಕೆ ಕಳುಹಿಸಬೇಕು.

೧೩. ಬೇಟಿಗೆ ಬರುವ ದೊಡ್ಡಮನುಷ್ಯರಿಂದ ಅಧಿಕಾರಿಯ ಜವಾನರು ದುಡ್ಡನ್ನು ಕೇಳುವ ವಾಡಿಕೆಯುಂಟು. ಅವರು ಕೊಡದಿದ್ದರೆ ಮತ್ತೊಂದಾವರ್ತಿ ಬಂದಾಗ ಅವರನ್ನು ಅವಮಾನಪಡಿಸುವರು. ಇದಕ್ಕೆ ಅವಕಾಶವಾಗದಂತೆ ಅಧಿಕಾರಿಯು ನೋಡಿಕೊಳ್ಳಬೇಕು.

೧೪. ದೇಶೀಯರು ಭೇಟಿಗೆ ಬಂದಾಗ ಹಣ್ಣು ಹಂಪಲುಗಳನ್ನು ಒಂದು ತಟ್ಟೆಯಲ್ಲಿರಿಸಿ ತಂದುಕೊಡುವರು. ಅವುಗಳನ್ನು ವಿನಯದಿಂದ ಅಂಗೀಕರಿಸಬೇಕು. ಹಾರವನ್ನು ಹಾಕಿದರೆ ತಲೆಯನ್ನು ಬಾಗಿಸಿ ಹಾಕಿಸಿಕೊಳ್ಳಬೇಕು.

೧೫. ದೇಶೀಯರಿಗೆ ಕಾಗದಗಳನ್ನು ಬರೆಯುವಾಗ ಗೌರವವುಳ್ಳ ಒಕ್ಕಣಿಕೆಗಳನ್ನು ಹಾಕಿ ಬರೆಯಬೇಕು."

ಈಗಿನ ಕಾಲದಲ್ಲಿ ನಮ್ಮ ದೇಶೀಯ ಅಧಿಕಾರಿಗಳೂ ಸಹ ಯೂರೋಪಿಯನ್ನರ ಸ್ವಭಾವವನ್ನೇ ಬಹಳವಾಗಿ ಅನುಕರಿಸಲುಪಕ್ರಮಿಸಿರುತ್ತಾರೆ. ಅಂತಹ ಮಹನೀಯರಿಗೂ ಸಹ ಮೇಲ್ಕಂಡ ಬುದ್ಧಿವಾದವು ಬಹಳವಾಗಿ ಬೇಕಾಗಿರುವುದು. ಯೂರೋಪಿಯನರಂತೆ ನಡೆದುಕೊಳ್ಳುವುದೇ ಮಹಾ ಗೌರವವಾದುದೆಂದು ತಿಳಿದುಕೊಂಡಿರುವ ಅಧಿಕಾರಿಗಳೆಲ್ಲರೂ ಈಗಲಾದರೂ ದೇಶೀಯ ವಾಡಿಕೆಯು ಎಷ್ಟೋ ಶ್ರೇಷ್ಠವಾದುದೆಂದು ತಿಳಿದುಕೊಳ್ಳಲಿ. ಒಂದೂ ಪದ್ಧತಿಯಂತೆ ಯೂರೋಪಿಯನ್ನರು ನಡೆದುಕೊಳ್ಳಬೇಕೆಂದು ಯೂರೋಪಿಯನ್ ಸರ್ಕಾರದವರೇ ಮೇಲ್ಕಂಡಂತೆ ಘಂಟಾಘೋಷವಾಗಿ ಹೇಳುತ್ತಿರುವಲ್ಲಿ ದೇಶೀಯರು ಯೂರೋಪಿಯನ್ನರನ್ನು ಅನುಕರಿಸುವುದಕ್ಕೆ ಹೋಗುವುದು ನಾಚಿಕೆಗೇಡಲ್ಲವೆ? ದೇಶೀಯರೇ! ದೇಶೀಯ ಅಧಿಕಾರಿಗಳೇ! ದೇಶದ ವಾಡಿಕೆಯನ್ನು ಬಿಟ್ಟು ನಗುಪಾಡಿಗೆ ಗುರಿಯಾಗಬೇಡಿರಿ

ಒ. ಪ.

ಪತ್ರಿಕಾಸ್ವವಿಷಯ.

ಚಂದಾ ಹಣವು ಕಾಲಕಾಲಕ್ಕೆ ಸರಿಯಾಗಿ ಬಾರದೆ ಸಾವಿರಾರು ರೂಪಾಯಿಗಳು ಬಾಕಿಯಲ್ಲಿ ನಿಂತು ಪತ್ರಿಕೆಯನ್ನು ನಡೆಸುವುದು ಬಹು ಪ್ರಯಾಸವಾದುದರಿಂದ, ಸ್ಟಾರ್ ಪತ್ರಿಕೆಯು ನಿರಾಯಾಸವಾಗಿ ನಡೆದುಕೊಂಡು ಹೋಗಲು ತಕ್ಕ ಉಪಾಯವನ್ನು ಪತ್ರಿಕಾಭಿಮಾನಿಗಳಾರಾದರೂ ದಯವಿಟ್ಟು ಸೂಚಿಸಿದಲ್ಲಿ ಅವುಗಳಲ್ಲಿ ಯುಕ್ತವಾದುದನ್ನು ಪ್ರಕಟಿಸಿ ಅವುಗಳಂತೆ ಆಚರಿಸಲು ಸಿದ್ಧರಾಗಿರುತ್ತೇವೆಂದು ಈ ಪತ್ರಿಕೆಯ ದ್ವಾರಾ ಪ್ರಕಟಪಡಿಸಿದ್ದುದರಮೇಲೆ ಶ್ರೀಯುತ ಗುಬ್ಬಿ ನೀರಪ್ಪಶಾಸ್ತ್ರಿಗಳು ಸ್ಟಾರ್ ರಿಲೀಫ್ ಫಂಡೊಂದನ್ನು ಏರ್ಪಡಿಸುವುದು ಅವಶ್ಯಕವೆಂದು ಅಭಿಪ್ರಾಯಪಟ್ಟರು. ಇದು ನಮಗೂ ಸಾಧುವಾಗಿ ಕಂಡುಬಂದುದರಮೇಲೆ ಅದನ್ನು ಪ್ರಕಟಿಸಿದೆವು. ಆದರೆ ಈವರೆಗೆ ಅಂಥ ಪ್ರಯತ್ನವಾವುದೂ ನಡೆಯದಿರುವುದು ಶೋಚನೀಯವಾಗಿದೆ. ಶಕ್ತ್ಯನುಸಾರ ಧನಸಹಾಯ ಮಾಡಿ ಪತ್ರಿಕೆಯನ್ನು ನಿರಾಯಾಸವಾಗಿ ನಡೆಸಿಕೊಂಡು ಹೋಗುವಂತೆ ಮಾಡುವ ಉದಾರಬುದ್ಧಿಯುಳ್ಳವರು ದೊರೆಯುವುದು ದುರ್ಲಭವೆಂದು ತೋರಿದುದರಮೇಲೆ ಚಂದಾ ಬಾಕಿಯನ್ನು ಕಳುಹಿಸಿಕೊಡಿರೆಂದು ಬಾಕಿದಾರರನ್ನೂ ಬಹುವಿಧವಾಗಿ ಪ್ರಾರ್ಥಿಸಿ ಪತ್ರಿಕೆಯನ್ನು ವಿ.ಪಿ. ಮೂಲಕ ಕಳುಹಿದುದರಲ್ಲಿ ದೊಡ್ಡದೊಡ್ಡ ವಿದ್ವಾಂಸರೂ, ಅಧಿಕಾರಿಗಳೂ ಆದವರು ಮೊದಲ್ಗೊಂಡು ಅನೇಕರು ಅಂದರೆ ನೂರಲ್ಲಿ ೫೦ ರಮೇಲೆಯೇ ಹಣವನ್ನು ಕೊಡದೆ ವಿ. ಪಿ ಯನ್ನು ಹಿಂತಿರುಗಿಸುತ್ತಿರುವರು. ಬೊಂಬಾಯಾಧಿಪತ್ಯದಲ್ಲಿ ನ್ಯಾಯಾಧೀಶರಾಗಿರುವ ದೊಡ್ಡಮನುಷ್ಯರೊಬ್ಬರು ಎಷ್ಟು ಪ್ರಾರ್ಥನಾ ಕಾಗದಗಳನ್ನು ಬರೆದಾಗ್ಯೂ ೩ ವರ್ಷದ ಚಂದಾ ಬಾಕಿಯನ್ನು ಕಳುಹದೆ ಕಡೆಗೆ ವಿ. ಪಿ. ಯನ್ನು ರೆಫ್ಯೂಸ್ಡ್ ಎಂದು ಮೇಲೆ ಬರೆದು ಹಿಂತಿರುಗಿಸಿರುವರು. ವಿದ್ವಾಂಸರೂ, ಸಮಾಜಸುಧಾರಕರೂ ಎಂದೆನಿಸಿಕೊಳ್ಳತಕ್ಕವರೇ ಹೀಗೆ ನಡೆದಮೇಲೆ ಇನ್ನು ಅವಿದ್ಯಾವಂತರೂ ಸಾಮಾನ್ಯರೂ ಆದ ಜನರ ವಿಚಾರವನ್ನು ಕುರಿತು ಹೇಳತಕ್ಕದೇನಿದೆ! ಇಂಥ ಶೋಚನೀಯಾವಸ್ಥೆಯಿಂದಲೇ ನಮ್ಮ ದೇಶೀಯ ವಾರ್ತಾಪತ್ರಿಕೆಗಳು ಆಂಗ್ಲಪತ್ರಿಕೆಗಳಂತೆ ಚಿರಕಾಲ ಬದುಕದೆ ಮಿಂಚಂತೆ ತೋರಿ ಅಡಗುತ್ತಿರುವುವು.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮಾರ್ಚಿ ತಾ॥ ೧೩ ನೇ ಸೋಮವಾರ.

ಪೌರ್ವಾತ್ಯ ಪಾಶ್ಚಾತ್ಯ ಬಾಂಧವ್ಯ.

ಪೌರ್ವಾತ್ಯರಾದ ಭಾರತೀಯರಿಗೂ ಪಾಶ್ಚಾತ್ಯರಿಗೂ ಬರಬರುತ್ತ ದೇಹಸಂಬಂಧವೂ ವಿಶೇಷವಾಗಿ ನಡೆಯುತ್ತ ಬರುವುದೆಂದು ಕಾಣುತ್ತದೆ. ಇದುವರೆಗೆ ಕೆಲವು ಸಂಸ್ಥಾನಾಧೀಶರೂ ಕೆಲ ಹಿಂದೂ ಮಹಮ್ಮದೀಯರುಸಹ ಪಾಶ್ಚಾತ್ಯದೇಶದ ಅಂಗನೆಯರನ್ನು ವರಿಸಿ, ಮದುವೆ ಮಾಡಿಕೊಂಡಿರುವುದುಂಟು. ಹಿಂದುಗಳು ಪಾಶ್ಚಾತ್ಯರ ದೇಹ ಸಂಬಂಧವನ್ನು ಮಾಡಿದರೆ ಅವರನ್ನು ಒಳಹಾಕಿಕೊಳ್ಳುವುದಕ್ಕೆ ಕ್ರೈಸ್ತಮತವು ಬಾಗಿಲನ್ನು ತೆರೆದಿಟ್ಟಿರುವುದು. ಅದರಂತೆ ಹಿಂದೂಮತದಲ್ಲಿ ಸೌಲಭ್ಯವಿರುವುದಿಲ್ಲ. ಇಂಥ ನಿರ್ಬಂಧವನ್ನು ತಪ್ಪಿಸಿ ಯಾರನ್ನೂ ತನ್ನಲ್ಲಿ ಒಳಗೊಳ್ಳಲು ಸನ್ನದ್ಧವಾಗಿರುವಂತೆ ನಮ್ಮ ದೇಶದೊಳಗೆ ಆರ್ಯಸಮಾಜ ಬ್ರಹ್ಮಸಮಾಜಗಳು ಏರ್ಪಟ್ಟಿರುವುವು. ಮೊನ್ನೆ ತಾನೇ ಇಂಥ ವಿವಾಹ ಸಂಬಂಧವೊಂದು ಕಲಕತ್ತಾ ಪಟ್ಟಣದಲ್ಲಿ ನಡೆದಿರುವುದು. ವರನು ಬೀಹಾರಿನ ಅಸಿಸ್ಟೆಂಟ್ ಕಲೆಕ್ಟರಾದ ಹೆನ್ರಿ ಸಿ. ಮೆಯುಂಟ್ ಐ. ಸಿ, ಎಸ್., ರವರು. ವಧುವಾದರೋ ಕಲಕತ್ತಾದಲ್ಲಿ ಪ್ರಸಿದ್ಧರಾಗಿರುವ ಡಾಕ್ಟರ್ ಪಿ. ಕೆ. ರೇ ರವರ ಮಗಳೂ ಕುಮಾರಿಯಾದ ಶ್ರೀಮತಿ ಲಲಿತಾದೇವಿಯವರು. ಇವರೀರ್ವರಿಗೂ ಬ್ರಹ್ಮಸಮಾಜ ವಿಧ್ಯುಕ್ತ ವಿವಾಹವಾಯಿತು. ವಧುವಿನ ವಯಸ್ಸು ೨೦. ಬಿ. ಎ. ಪರೀಕ್ಷೆಗಾಗಿರುವುದು. ವರನ ವಯಸ್ಸು ೨೩. ವಿವಾಹಕ್ಕೆ ಮುಂಚೆ ವರನು ಬ್ರಹ್ಮಮತ ಸ್ವೀಕಾರವನ್ನು ಮಾಡಿದನು. ಮದುವೆಯ ಸಮಯಕ್ಕೆ ಬರ್ದ್ವಾನಿನ ಮಹಾರಾಜರು, ನ್ಯಾಯಾಧೀಶರುಗಳು, ವಕೀಲರು, ಸುಪ್ರಸಿದ್ಧ ವರ್ತಕರು, ಶ್ರೀಮಂತರು ಮೊದಲಾದ ಅನೇಕ ಮಹಾಜನರು ದಯಮಾಡಿಸಿದ್ದರು. ಬ್ರಹ್ಮಸಮಾಜದ ಮುಖ್ಯಾಚಾರ್ಯರಾಗಿರುವ ಪಂಡಿತ ಶಿವನಾಥಶಾಸ್ತ್ರಿಯವರಿಂದ ವಿವಾಹ ಸಂಸ್ಕಾರವು ನೆರವೇರಿಸಲ್ಪಟ್ಟಿತು. ರಾಯ್ ನರೇಂದ್ರನಾಥಸೇನ್ ಬಹದ್ದೂರ್ ರವರು ಈ ವಿವಾಹ ಸಂಬಂಧವು ಶಾಸ್ತ್ರಸಮ್ಮತವಾದುದೆಂದು ದೃಢಗೊಳಿಸಿದರು. ದಾತೃವಾದ ಡಾಕ್ಟರ್ ರೇಯವರು ಕನ್ಯಾದಾನವನ್ನು ಮಾಡಿದ ಬಳಿಕ ವಧೂವರರಿಂದ ಪಾಣಿಗ್ರಹಣವನ್ನು ಮಾಡಿಸಿದರು. ಆಗ ಅವರು ವಧೂವರರನ್ನು ಕುರಿತು ಹೀಗೆ ಹೇಳಿದರು—ಪ್ರಿಯರಾದ ಹೆನ್ರಿಯೇ ಮತ್ತೂ ಲಲಿತೆಯೆ! ನೀವುಗಳು ಬೇರೆಬೇರೆ ದೇಶಗಳಲ್ಲೂ ಭಿನ್ನಸ್ಥಿತಿಗಳಲ್ಲೂ ಜನಿಸಿದ್ದರೂ ಪರಮಾತ್ಮನು ನಿಮ್ಮನ್ನು ಪವಿತ್ರವಾದ ವಿವಾಹಸಂಬಂಧದಿಂದ ಒಂದಾಗಿ ಮಾಡಿರುವನು. ಈ ದೇಶದಲ್ಲಿಯೂ ಇಂಗ್ಲಂಡಿನಲ್ಲಿಯೂ ಇರುವ ನಿಮ್ಮ ಬಂಧು ಮಿತ್ರಾದಿಗಳಿಗೆ ಈ ಸಂಬಂಧವು ಸಂದೇಹವನ್ನುಂಟುಮಾಡುವುದೆಂದು ನಾವು ತಿಳಿದಿರುತ್ತೇವೆ. ಆದರೂ ಪ್ರೇಮವೆಂಬುವುದು ಸಕಲ ವಿಘ್ನಗಳನ್ನೂ ಕಷ್ಟಗಳನ್ನೂ ಜಯಿಸಬಲ್ಲ ಅಗೋಚರವಾದ ಒಂದು ಮಹಾಶಕ್ತಿಯಾಗಿರುವುದು. ಅದು ತನ್ನ ನಿಯಮಿತೋದ್ದೇಶವನ್ನು ನಿರ್ವಹಿಸಿಕೊಂಡೇ ತೀರುವುದು ("ನಿಯಮಿತೋದ್ದೇಶ" ಎಂಬ ಶಬ್ದವನ್ನು ಬೇಕೆಂದು ಉಪಯೋಗಿಸಿರುತ್ತೇನೆ.) ಏಕೆಂದರೆ—ನಾವು ಎಷ್ಟೆಷ್ಟು ಪ್ರಯತ್ನಗಳನ್ನು ಮಾಡಿದರೂ ಜೀವಿತೋದ್ದೇಶಗಳನ್ನು ಸಂಕಲ್ಪಿಸಿಕೊಳ್ಳುವ ಒಂದು ಮಹಾಮಹಿಮೆಯು ಯಾವಾಗಲೂ ಇದ್ದೇ ಇರುತ್ತಿರುವುದೆಂದು ನಾನು ನಿಶ್ಚಯವಾಗಿ ನಂಬುತ್ತೇನೆ. ಪಾಶ್ಚಾತ್ಯ ಪೌರ್ವಾತ್ಯ ಧರ್ಮಗಳ ಸಮ್ಮೇಳನದಿಂದ ನಿಮ್ಮ ಜೀವಿತವು ಅಭಿಧ್ಯನವಾಗಿ ಕೂಡಿರುತ್ತದೆ. ನೀವು ಸಂತೋಷೈಶ್ವರ್ಯಗಳನ್ನು ಅನುಭವಿಸುವವರಾಗಿರಿಯೆಂದು ನಾನು ಭಗವಂತನನ್ನು ಪ್ರಾರ್ಥಿಸುತ್ತೇನೆ. ಆದರೆ ಸುಖಸಂಪತ್ತುಗಳನ್ನು ಅನುಭವಿಸುವುದಕ್ಕೆ ಮಾತ್ರವೇ ನಾವು ಸೃಷ್ಟಿಸಲ್ಪಟ್ಟಿರುವುದಿಲ್ಲ. ಜೀವಿತವೆಂಬುವುದು ವಿಧಿಬದ್ಧತೆಯಿಂದಲೂ, ಉತ್ತರವಾದಿತ್ವದಿಂದಲೂ, ಕಷ್ಟಗಳಿಂದಲೂ, ದುಃಖಗಳಿಂದಲೂ, ಬಾಧೆಗಳಿಂದಲೂ ಕೂಡಿರುತ್ತದೆ. ಅಂಥ ಸಮಯಗಳಲ್ಲಿ ನೀವು ಒಬ್ಬರ ಪಕ್ಕದಲ್ಲೊಬ್ಬರು ಇರಬೇಕು. ನಿಮ್ಮ ಪರಸ್ಪರ ರಕ್ಷಣಾಭಿವೃದ್ಧಿಗೂ, ಪಾರಂಗತತ್ವಕ್ಕೂ ಈ ವಿವಾಹವು ಭಗವತ್ಸಂಕಲ್ಪಸಿದ್ಧವಾಯಿತೆಂದು ತಿಳಿದುಕೊಳ್ಳಿರಿ. ಒಬ್ಬರನ್ನೊಬ್ಬರು ನೀವು ಪ್ರೀತಿಸುವುದರಿಂದ ನೀವು ನೈತಿಕ ಆಧ್ಯಾತ್ಮಿಕ ಜ್ಞಾನಾಭಿವೃದ್ಧಿಗಳನ್ನು ಮಾಡಿಕೊಳ್ಳುವಿರಿ. ಎಲೈ ಪ್ರಿಯಪುತ್ರಿಯೆ! ನಿನ್ನನ್ನಾಶೀರ್ವದಿಸುವುದಕ್ಕೆ ನನಗೆ ಮಾತುಗಳು ಸಾಲವು. ನಿನ್ನ ತಾಯಿತಂದೆಗಳೂ ಮಿತ್ರರೂ ಸಹ ಅನುಮಾನವುಳ್ಳವರಾಗಿದ್ದರೂ, ಈ ದೇಶದಲ್ಲಿರುವ ನಿನ್ನ ಸಹವಾಸಿಗಳು ವಿರುದ್ಧವಾಗಿ ವಾದಿಸುತ್ತಿದ್ದರೂ, ನನ್ನ ಮಗಳನ್ನು ಮದುವೆಯಾಗುವುದಕ್ಕೆ ನೀನು ಸಾಹಸಪಟ್ಟೆ. ಆಕೆಯಲ್ಲಿ ನಿನಗೆ ಪರಿಪೂರ್ಣವಾದ ಪ್ರೇಮವಿದ್ದುದರಿಂದಲೂ, ನೀನು ಹೊಸದಾಗಿ ಅಂಗೀಕರಿಸಿದ ಮತದಲ್ಲಿ ನಿನಗೆ ವಿಶ್ವಾಸವಿದ್ದುದರಿಂದಲೂ, ನೀನು ಇಂಥ ಸಂಬಂಧವನ್ನು ಮಾಡಿಕೊಂಡೆ. ಇಂಥ ಧೈರ್ಯವೂ, ಸ್ಥೈರ್ಯವೂ ನಿನ್ನ ಭವಿಷ್ಯಜ್ಜೀವಿತದಲ್ಲಿಯೂ ನಿನ್ನ ಮುಖ್ಯಗುಣವಾಗಿರಲಿ. ನೀನು ಗಾರ್ಹಸ್ಥ್ಯನಿರ್ವಾಹವನ್ನು ಮಾಡುವುದಕ್ಕೆ ಆರಂಭಿಸಿದಕೂಡಲೇ ಸ್ವಲ್ಪಮಟ್ಟಿಗೆ ಆಂಗ್ಲಸಂಘದ ಬಹಿಷ್ಕಾರಕ್ಕೆ ಪಾತ್ರರಾಗಬಹುದೆಂಬ ಸಂಶಯವು ತೋರುತ್ತದೆ. ನಿನ್ನನ್ನು ಇಷ್ಟುದೂರಕ್ಕೆ ತಂದು ನಿಲ್ಲಿಸಿದುದು ನಿಶ್ಚಲಧೈರ್ಯವೂ ನಿಶ್ಚಲವಿಶ್ವಾಸವೂ ಆಗಿರುತ್ತವೆ. ಅಂಥ ಬಿಕ್ಕಟ್ಟಿನ ಸಮಯದಲ್ಲೂ ಆ ಸದ್ಗುಣಗಳೇ ನಿಮಗೆ ತಕ್ಕ ಬಲಕಾರಿಗಳಾಗಿರಲಿ. ನನ್ನ ಮಗಳು ನಿನ್ನ ಹೊಸದಾರಿಯಲ್ಲಿ ಪತಿವ್ರತೆಯೂ ಯೋಗ್ಯಳಾದ ಸಹಾಯಿನಿಯೂ ಆಗಿರುವಳೆಂದು ನಾನು ದೃಢವಾಗಿ ನಂಬುತ್ತೇನೆ. ಆಕೆಯ ಪ್ರೇಮವು ನಿನಗೆ ನೂತನ ಬಲವನ್ನುಂಟುಮಾಡಿಕೊಡುವುದು. ಆಕೆಯ ಹಿಂದೆಯೇ ನನ್ನ ಸಹಾನುಭವವೂ ಪ್ರೇಮವೂ ಯಾವಾಗಲೂ ಇರುವುದು. ಈಗ ಈ ವಿವಾಹಮಹೋತ್ಸವಕ್ಕೆ ನಿಮ್ಮನ್ನು ಪ್ರೇರಿಸಿದ ಭಗವಂತನೇ ಮುಂದೆಯೂ ನಿಮ್ಮ ಜೀವಿತಯಾತ್ರದಲ್ಲಿ ಸಹಾಯಕನಾಗುವನೆಂದು ನಂಬುತ್ತೇನೆ." ಹೀಗೆ ಉಪದೇಶಿಸಿ ತರುವಾಯ ಸಭಿಕರೆಲ್ಲರಿಗೂ ಗಂಧ ತಾಂಬೂಲಗಳು ಹಿಂದೂ ಪದ್ಧತಿಯ ಪ್ರಕಾರ ಹಂಚಲ್ಪಟ್ಟುವು. ಅತಿಥಿ ಅಭ್ಯಾಗತರಿಗೂ ಸ್ನೇಹಿತರಿಗೂ ಸಹಭೋಜನವಾಯಿತು.

ನಮ್ಮ ದೇಶದಲ್ಲಿ ಎಲ್ಲ ವಿಧದ ಸುಧಾರಣೆಗಳಲ್ಲೂ ಮುಂದಾಗಿರುವುದು ಬಂಗಾಳಾ ದೇಶವಾಗಿರುತ್ತದೆ. ಆದೇಶೀಯರ ಸಾಮಾಜಿಕ ಸುಧಾರಣೆಗಳಾದರೂ ವಿಪರೀತವಾಗಿ ನಡೆದಿರುತ್ತವೆ. ಸಮುದ್ರಯಾನವು ನಿಷಿದ್ಧವಾದುದೆಂದು ಈಗ ಯಾರಾದರೂ ಅಲ್ಲಿ ಮಾತನಾಡಿದರೆ ಅಂಥವನನ್ನು ಗ್ರಾಮ್ಯನನ್ನಾಗಿ ತಿಳಿದು ಪರಿಹಾಸಮಾಡಿಬಿಡುವ ಸ್ಥಿತಿಯು ಅಲ್ಲಿರುತ್ತದೆ. ಆಹಾರಾದಿ ವಿಷಯಗಳಲ್ಲು ಕೂಡ ಯಾವ ನಿರ್ಬಂಧವೂ ಇಲ್ಲದೆ ಉತ್ತಮ ಸಾಮಾನ್ಯ ವರ್ಣದವರಲ್ಲೆಲ್ಲಾ ನಡೆಯುತ್ತಿವೆ. ಪೂರ್ವಾಚಾರ ಶರಣ್ಯರಾದ ಕೆಲಕೆಲರ ತಕೆಯುಕೂಡ ಇಂಥ ಸಂಸ್ಕರಣ ವಿಷಯಗಳಲ್ಲಿ ಇಲ್ಲದಿರುವಂತೆ ಮಾಡುವುದಕ್ಕೆ ಪರಮಸಾಧಕವಾಗಿರುವುದಕ್ಕಾಗಿಯೇ ಅದೇ ಬಂಗಾಳಾ ದೇಶೀಯರಿಂದಲೇ ಆರ್ಯಸಮಾಜ ಬ್ರಹ್ಮಸಮಾಜಗಳು ಸ್ಥಾಪಿಸಲ್ಪಟ್ಟಿರುವುವು. ಈ ಸಮಾಜಗಳೇರ್ಪಡದಿದ್ದರೆ ಕಾಲದೇಶ ಪ್ರಗತಿಯನ್ನನುಸರಿಸಿ ಪ್ರಸಕ್ತವಿಷಯದಂಥ ವಿವಾಹ ಸಂಬಂಧಗಳು ನೆರವೇರಬೇಕಾಗಿದ್ದರೆ ವಧುವು ವರನ ಮತವನ್ನೇ (ಕ್ರೈಸ್ತ) ಅನುಸರಿಸಬೇಕಾಗುತ್ತಿದ್ದಿತು. ಅದು ತಪ್ಪಿ ಇತರರನ್ನೂ ಹಿಂದೂ ಮತಕ್ಕೆ ಒಳಗುಗೊಳಿಸಿಕೊಳ್ಳಲು ಇವುಗಳಿಂದ ಸಹಾಯವಾಗಿರುವುದು. ಭರತಖಂಡದೊಳಗೆ ಜಾತಿವರ್ಗ ವಿಭಾಗಗಳನ್ನು ತೋರಿಸುವ ಬಹಿಸ್ಸಂಪ್ರದಾಯಗಳಲ್ಲಿ ಸಹಭೋಜನ ಬಾಂಧವ್ಯವೆಂಬಿವುಗಳು ಮುಖ್ಯವಾದುವುಗಳು. ಇವೆರಡೂ ಈಚೀಚೆಗೆ ಶಿಥಿಲವಾಗುತ್ತ ಬರುತ್ತಿವೆ. ಅದು ಉತ್ತರದೇಶದಲ್ಲಿ ಎಷ್ಟುದೂರದವರೆಗೆ ಸಾಗಿಹೋಗಿರುವುದೆಂಬುದನ್ನು ಸೂಚಿಸುವುದಕ್ಕೆ ಮೇಲ್ಕಂಡ ವಿಷಯವು ದೃಷ್ಟಾಂತವಾಗಿದೆ. ಒಂದು ಕಡೆಯಲ್ಲಿ ಕಾಣಿಸಿಕೊಂಡ ರೋಗವಾಗಲಿ ಭೋಗವಾಗಲಿ ಮತ್ತೊಂದು ಕಡೆಯಲ್ಲೂ ಬೇಗನಾಗಲಿ ನಿಧಾನವಾಗಿಯೇ ಆಗಲಿ ವ್ಯಾಪಿಸುವುದರಲ್ಲಿ ಸಂಶಯವಿಲ್ಲ. ಪ್ರಗಮನಶೀಲವಾದ ಲೋಕದ ವ್ಯವಹಾರ ವಿಷಯಗಳನ್ನೆಲ್ಲಾ ನಮ್ಮಲ್ಲಿನ ಧರ್ಮಾಭಿಮಾನಿಗಳೆಲ್ಲರೂ ಗಮನಿಸುತ್ತ ಬಂದರೆ, ಕಾಲೋಚಿತವಾಗಿ ಧರ್ಮರಕ್ಷಣೆಯನ್ನು ಯದೂಕ್ತವಾಗಿ ಮಾಡುತ್ತ ಬರಬೇಕೆಂಬುವುದು ಗೊತ್ತಾಗುವುದು. ಹಾಗೆ ಅವರು ಮಾಡದೆ ಹೋದರೆ, ಅವರ ಮೂರ್ಖತೆಯು ಪ್ರಕಾಶಗೊಳ್ಳುವುದೇ ಹೊರತು ಜಗತ್ತಿನ ಪ್ರಗತಿಪ್ರವಾಹವು ಮಾತ್ರ ಹಿಂದಿರುಗಿ ಮೇಲಕ್ಕೆ ಹರಿಯಲಾರದು.

ಲಂಡನ್ನಿನಲ್ಲಿ ಕಿರೀಟಧಾರಣ ಮಹೋತ್ಸವವು ನಡೆಯುವಾಗ್ಗೆ ಲಾರ್ಡ್ ಕಿಚನರ್ ರವರು ಸೇನಾನಾಯಕರಾಗಿರಲು ನೇಮಿಸಲ್ಪಟ್ಟಿರುತ್ತಾರೆ.

ಕಳ್ಳನು ಆತ್ಮಹತ್ಯೆಯನ್ನು ಮಾಡಿಕೊಂಡುದು.

ಮೇಲುಕೋಟೆಯವನೆಂದು ಹೇಳಿಕೊಂಡು ಕೆಲಕಾಲದಿಂದಲೂ ರಾಜಧಾನಿಯಲ್ಲಿ ವಾಸಮಾಡುತ್ತಿದ್ದ ಒಬ್ಬ ದೇವಾಂಗದವನು ದೊಡ್ಡಗಡಿಯಾರದಬಳಿ ಇರುವ ಪರಸ್ಪರ ಸಹಾಯಕ ಸಂಘದ ಅಂಗಡಿ(ಕೋಆಪರೇಟಿವ್ ಸೊಸೈಟಿ)ಗೆ ಆಗಾಗ್ಗೆ ಬಂದು ನೂಲನ್ನೂ ರೇಷ್ಮೆಯನ್ನೂ ತರಿಸಿಕೊಡಿರೆಂದು ಕೇಳಿ ಹೋಗುತ್ತಿದ್ದು ಕಳೆದ ತಾ॥ ೮ ರಲ್ಲಿ ಎಂದಿನಂತೆ ಬಂದು, ಬೆಲೆಬಾಳುವ ಕಲಾಪತ್ತಿನ ಪಂಚೆ, ರುಮಾಲು ಮೊದಲಾದ ಪದಾರ್ಥಗಳನ್ನಿಟ್ಟಿದ್ದ ಗಾಜಿನ ಬೀರುವಿನ ಮುಂಗಡೆ ಕುಳಿತುಕೊಂಡು ಹತ್ತಿರವಿದ್ದ ಮತ್ತೊಂದು ಮೇಜನ್ನು ಒಂದು ಕೈಯಿಂದ ಬಡಿದು ಶಬ್ದಮಾಡುತ್ತ ಮತ್ತೊಂದು ಕೈಯನ್ನು ತನ್ನ ಬೆನ್ನಿನ ಹಿಂಗಡೆಯಿಂದ ಬೀರುವಿನೊಳಗೆ ಹಾಕಿ ಪಂಚೆಗಳನ್ನೂ ರುಮಾಲುಗಳನ್ನೂ ತೆಗೆ

ಜರ್ಮನಿಯ ಫೋಸ್ಟಾಫೀಸಿನಲ್ಲಿ ಬರೆಯತಕ್ಕವರಿಗೆ ಸೀಸದಕಡ್ಡಿಯು ಮುಗಿದುಹೋಗಿ ಹೊಸದು ಬೇಕಾದಲ್ಲಿ ಅವರು ಅದರ ತುಂಡನ್ನು ಕೊಟ್ಟು ಹೊಸದನ್ನು ಪಡೆಯತಕ್ಕ ಪದ್ಧತಿಯಿದೆ. ಆಪ್ರಕಾರ ಒಬ್ಬನು ಹಳೇ ತುಂಡನ್ನು ಕೊಡದೆ ಹೊಸದನ್ನು ಪಡೆದುಕೊಂಡುದಕ್ಕಾಗಿ ಅವನು ಮತ್ತೊಂದು ಶಾಖೆಗೆ ವರ್ಗಾಯಿಸಲ್ಪಟ್ಟನು ಅವನು ಹೊಸ ಕೆಲಸದಮೇಲೆ ಬಂದೊಡನೆ ನೀನು ತುಂಡು ಪೆನ್ಸಿಲನ್ನು ಹಿಂತಿರುಗಿ ಕೊಡಲು ಅಲಕ್ಷಿಸಿದ್ದೀಯೆ ಎಂದು ಮೇಲಿಂದ ಬರೆದು ಬಂದಿತು. ಆದರೆ ಆ ತುಂಡು ಸೀಸದಕಡ್ಡಿಯು ಮಾಯವಾಗಿದ್ದುದರಮೇಲೆ ಆತನು ಮತ್ತೊಂದು ಹೊಸದನ್ನು ಕೊಂಡು ಅದನ್ನು ಕತ್ತರಿಸಿ ಒಂದು ತುಂಡನ್ನು ಆ ಶಾಖಾ ಸೆಕ್ರಟರಿಗೆ ಕಳುಹಿಸಿಕೊಟ್ಟನಂತೆ. ಇದೊಂದು ವಿಚಿತ್ರವಾದ ಪದ್ಧತಿ.

ವರ್ತಮಾನ ಸಂಗ್ರಹ.

ಜರ್ಮನಿಯ ಯುವರಾಜರು ಕಳೆದ ತಿಂಗಳು ತಾ॥ ೨೪ರಲ್ಲಿ ಬೊಂಬಾಯಿಯಿಂದ ಸ್ವದೇಶಕ್ಕೆ ತೆರಳಿದರು.

ಭರತಖಂಡದಲ್ಲಿ ಉಪ್ಪುಸಾಗುವಳಿಯಾಗುವ ಸ್ಥಲಗಳೊಳಗೆಲ್ಲಾ ಮದ್ರಾಸು ಪಟ್ಟಣವೇ ಮೊದಲನೆಯದು.

ಈಗ ಪ್ರಕಟಗೊಂಡಿರುವ ಪಟ್ಟಿಯ ಪ್ರಕಾರ ಆಂಗ್ಲ ಸಾಮ್ರಾಜ್ಯದ ವಿಸ್ತಾರವು ೧೧೯೯೦೦೦ ಚದರಮೈಲಿಗಳು.

ಬಂಗಾಳಾ ಪ್ರಾಂತದಲ್ಲಿ ಗದ್ದೆಯ ಬೆಳಸು ಚೆನ್ನಾಗಿ ಆಗಿರುವುದರಿಂದ ಅಕ್ಕಿಯ ಬೆಲೆಯು ಇಳಿತರವಾಗುವುದರಲ್ಲಿದೆ.

ಬಳ್ಳಾರಿಯಲ್ಲಿ ಪ್ಲೇಗು ಅತ್ಯಂತ ಉಲ್ಬಣವಾಗಿದೆ. ರೋಗಸೋಂಕಿದವರಲ್ಲಿ ೧೦೦ ಕ್ಕೆ ೯೦ ಕ್ಕಿಂತಲೂ ಹೆಚ್ಚಾಗಿಯೇ ಸಾಯುತ್ತಿದ್ದಾರಂತೆ.

ಹಿಮಾಲಯ ಎಂಬ ಹಡಗಿನಮೇಲೆ ಪೋರ್ಟ್‌ಸೆಯ್ಡಿನಿಂದ ಭರತಖಂಡಕ್ಕೆ ೬೭॥ ಲಕ್ಷರೂಪಾಯಿನ ಚಿನ್ನವು ಸಾಗಿ ಬರುತ್ತಲಿದೆ.

ಸ್ಟೇಟ್ ಸೆಕ್ರಟರಿಯವರಾದ ಲಾರ್ಡ್ ಕ್ರೂರವರು ಅಸ್ವಸ್ಥರಾಗಿರುವುದರಿಂದ ಅವರ ಕೆಲಸವನ್ನು ಲಾರ್ಡ್ ಮಾರ್ಲೆಯವರು ನೋಡುತ್ತಿದ್ದಾರೆ.

ಶ್ರೀ ಚಕ್ರವರ್ತಿದಂಪತಿಗಳು ದಿಲ್ಲಿ ದರ್ಬಾರಿಗೆ ಬರುವಾಗ್ಗೆ ಅವರ ಪರಿವಾರವಾಗಿ ಅನೇಕಮಂದಿ ಉದ್ಯೋಗಸ್ಥರು ಬರುವವರಾಗಿದ್ದಾರೆ.

ಬೊಂಬಾಯಿ ಪ್ರಾಂತದಲ್ಲಿರುವ ಖೋಜಾವೊಬ್ಬನು ಮಹಮ್ಮದೀಯ ವಿದ್ಯಾಪೀಠಸ್ಥಾಪನೆಯ ಫಂಡಿಗೆ ೫೦ ಸಾವಿರ ರೂಪಾಯಿಗಳನ್ನು ದಾನ ಮಾಡಿದನು.

ಈ ತಿಂಗಳು ತಾ॥ ೧ ರಲ್ಲಿ ಕಲಕತ್ತಾ ವಿದ್ಯಾಪೀಠದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ೧೩೪೦ ಮಂದಿ ವಿದ್ಯಾರ್ಥಿಗಳು ಕುಳಿತಿದ್ದರು. ಅವರಲ್ಲಿ ೩೦ ಮಂದಿ ಸ್ತ್ರೀಯರು.

ಕೆಲ್ಲಿಕೋಟೆಯ ಪ್ರಾಂತದಲ್ಲಿ ಒಬ್ಬ ಗ್ರಾಮಮುನ್ಸಿಫನು ವಿಪರೀತವಾಗಿ ಮದ್ಯಪಾನಮಾಡಿ ಒಂದು ಬಹಿರಂಗವಾದ ಸಭೆಗೆ ಬಂದಿದ್ದಾನೆಂಬುದನ್ನು ಕೇಳಿ ಡಿವಿಜನಲ್ ಆಫೀಸರು ಅವನನ್ನು ಕೆಲಸದಿಂದ ತೆಗೆದುಬಿಟ್ಟರು.

ವಾಯುವ್ಯದ ಎಲ್ಲೆಯಲ್ಲಿರುವ ಗುಜರಾನ್ವಾಲಾ, ರಾವಲ್ಪಿಂಡಿ, ಮುಲ್ತಾನ್ ಡೇರಾ ಗಾಜಿಖಾನ್–ಡೇರಾ ಇಸ್ಮಾಯಿಲ್ಖಾನ್ ಮೊದಲಾದ ಪ್ರಾಂತಗಳಲ್ಲಿರುವ ಹಿಂದುಗಳು ಕೂಡ ಮುಸಲ್ಮಾನರಹಾಗೆ ಆಗಾಖಾನ್ ರವರನ್ನು ಗುರುವಿನಂತೆ ಭಾವಿಸಿ ಮರ್ಯಾದಿಸುತ್ತಿರುವರು.

೧೯೦೯ ನೆಯ ವರ್ಷದಲ್ಲಿ ಭರತಖಂಡದಲ್ಲಿ ಎಲ್ಲ ಅಂಚೆಮನೆಗಳಿಂದ ೧೩೬೬೯–೨೬೨–೮ ಕಾಗದಗಳೂ ೧೧೧೧೯–೨–೨೪ ವರ್ತಮಾನ ಪತ್ರಿಕೆಗಳೂ, ಬುಕ್ಕು ಬಾಂಗಿಗಳೂ, ೬೧೪೦೮೧೯ ಪಾರ್ಸಲ್ಲುಗಳೂ ೧೩–೨೮೮೦೯೩ ತಂತೀ ವಾರ್ತೆಗಳೂ ವಿಳಾಸದಾರರಿಗೆ ಸಲ್ಲಿಸಲ್ಪಟ್ಟಿರುವುವು.

ಸೆಂಟ್ ಪೀಟರ್ಸ್ ಬರ್ಗಿನ ಬಳಿಯಲ್ಲಿ ಬಿರುಗಾಳಿಯಿಂದ ಒಂದು ದೊಡ್ಡ ಮಂಜಿನ ಗಡ್ಡೆಯು ಸಮುದ್ರದಲ್ಲಿ ಕೊಚ್ಚಿ ಹೋಯಿತು ಅದರ ಮೇಲೆ ಮನೆ ಕಟ್ಟಿಕೊಂಡು ವಾಸಮಾಡುತ್ತಿದ್ದ ೫೦೦ ಮಂದಿಗಳಲ್ಲಿ ೪೦೦ ಜನರು ಮೃತರಾದರು. ಉಳಿದವರು ೩ ದಿನಗಳ ವರೆಗೂ ಪ್ರಾಣ ಭಯದಿಂದ ಪರದಾಡುತ್ತಿದ್ದು ಕಡೆಗೆ ಸಹಾಯಪೊಂದಗಲು ಬದುಕಿಕೊಂಡರು.

ಈ ವರ್ಷದ ಕಡೆಯಲ್ಲಿ ಕಲ್ಕತ್ತಾದಲ್ಲಿ ಜರುಗುವ ರಾಷ್ಟ್ರೀಯ ಸಾರ್ವಜನಿಕ ಮಹಾಸಭೆಯ ಅಧ್ಯಕ್ಷತೆಯನ್ನು ಸೀಮೆಯಲ್ಲಿರುವ ಕೂಲಿಕಾರರ ಪಕ್ಷದ ಪಾರ್ಲಿಮೆಂಟಿನ ಮೆಂಬರಾದ ರಾಂಸೆಮೆಕ್ಡಾನಲ್ ರವರಿಗೆ ವಹಿಸಿಕೊಡಬೇಕೆಂದು ಯೋಚಿಸಿರುವರು ಆ ಸಭೆಯ ಸತ್ಕಾರಕ ಸಂಘದ ಅಧ್ಯಕ್ಷತೆಯು ಶ್ರೀಯುತ ಭೂಪೇಂದ್ರನಾಥ ಬಾಸುರವರಿಗೆ ಕೊಡಲ್ಪಟ್ಟಿದೆ.

ಗತಿಸಿದ ವಿಕ್ಟೋರಿಯಾ ಚಕ್ರವರ್ತಿನಿಯವರ ಕಾಲದಲ್ಲಿ ವಿವಾಹ ಸಂಬಂಧ ವಿಮೋಚನೆಗಾಗಿ ತರಲ್ಪಡುವ ವ್ಯಾಜ್ಯಗಳಲ್ಲಿ ಕಕ್ಷಿದಾರರಾಗಿದ್ದವರು ಯಾವುದೊಂದು ಅರಸುತನಗಳಿಗೂ ಕರೆಯಲ್ಪಡುತ್ತಿರಲಿಲ್ಲ. ಆದರೆ ಆ ನಿರ್ಬಂಧವು ಒಬ್ಬ ಹೆಂಗುಸಿನ ವಿಷಯದಲ್ಲಿ ಮಾತ್ರ ತಪ್ಪಿಸಲ್ಪಟ್ಟಿದ್ದಿತು. ಈ ಚಕ್ರವರ್ತಿಯವರ ಕಾಲದಲ್ಲಿ ನಾಟಕ ಶಾಲೆಗೆ ಸೇರಿರುವ ಹೆಂಗುಸರು ಸಹ ಕರೆಯಲ್ಪಡುವುದಿಲ್ಲವಂತೆ.

ಕಾಶೀ ಪಟ್ಟಣದಲ್ಲಿ ಆನಿಬೆಸೆಂಟಮ್ಮನವರಿಂದ ಸ್ಥಾಪಿಸಲ್ಪಟ್ಟಿರುವ ಸೆಂಟ್ರಲ್ ಹಿಂದೂ ಕಾಲೇಜಿನಲ್ಲಿ ಈಗ ಆದಾಯಕ್ಕಿಂತಲೂ ವ್ಯಯವು ಅಧಿಕವಾಗುತ್ತಿರುವುದರಿಂದ ವಿದ್ಯಾರ್ಥಿಗಳು ಕೊಡುತ್ತಿರುವ ಮಾಸಿಕ ದಕ್ಷಿಣೆಯನ್ನು ಇನ್ನಷ್ಟು ಹೆಚ್ಚಿಸಿ, ತನ್ಮೂಲಕ ತಿಂಗಳಿಗೆ ೨ ಸಾವಿರ ರೂ.ಗಳ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದು ಅದರ ಕಾರ್ಯನಿರ್ವಾಹಕ ಸಂಘದವರು ನಿರ್ಧರಿಸಿರುವರು.

ನಮ್ಮ ವೈಸ್‌ರಾಯರವರು ವೇಷಾಡಂಬರವೂ, ಪರಿವಾರದ ವಿಜೃಂಭಣೆಯೂ ಇಲ್ಲದೆ ಕಲಕತ್ತಾದಲ್ಲಿರುವ ವಿದ್ಯಾರ್ಥಿಗಳ ಒಂದು ಭೋಜನಾಲಯಕ್ಕೆ ಸಾಮಾನ್ಯ ಮನುಷ್ಯರಂತೆ ಹೋಗಿ, ಅವರ ಊಟಉಪಚಾರದ ವಿದ್ಯಾಭ್ಯಾಸ ವಿಷಯಗಳನ್ನು ವಿಚಾರಮಾಡಿಕೊಂಡು ತೆರಳಿದರು. ಅವರು ಹೋದನಂತರ ಅವರಿಂಥವರೆಂಬುದು ವಿದ್ಯಾರ್ಥಿಗಳಿಗೆ ತಿಳಿದು ಬರಲು, ಅವರು ಸಾಶ್ಚರ್ಯ ಸಂತೋಷಮನಸ್ಕರಾದರು.

ನ್ಯೂಯಾರ್ಕ್ ಪಟ್ಟಣದಲ್ಲಿ ಡೈನಾಮೈಟ್ ಹಾರಿ ಮಹಾಶಬ್ದದಿಂದ ದೊಡ್ಡ ಅಪಾಯವು ಸಂಭವಿಸಿತು. ಆಗ ಒಬ್ಬ ಹೆಂಗುಸು ಬೆಚ್ಚಿ ಬೀಳಲಾಗಿ ಅವಳ ಸ್ಮರಣಶಕ್ತಿಯೇ ತಪ್ಪಿಹೋಯಿತು. ಅಂದಿನಿಂದ ಎಷ್ಟು ಚಿಕಿತ್ಸೆಯನ್ನು ಮಾಡಿದರೂ ಫಲವಾಗಲಿಲ್ಲ. ಕಡೆಗೆ ಯೋಗನಿದ್ರಾವೈದ್ಯ ಪ್ರಯೋಗವನ್ನು ಆಕೆಗೆ ಮಾಡಲು ಆಗ ಜ್ಞಾಪಕಶಕ್ತಿಯು ಆಕೆಗೆ ಬಂದಿತು. ಆ ಕೂಡಲೇ ಅವಳು "ಆ ಭಯಂಕರವಾದ ಶಬ್ದವು ಯಾವದು?" ಎಂದು ಕೇಳಿದಳಂತೆ.

ಲಂಡನ್ ಪಟ್ಟಣದಿಂದ ಪ್ಯಾರಿಸ್ ನಗರಕ್ಕೆ ಆಕಾಶಮಾರ್ಗದಲ್ಲಿ ಹೋದ ಮೆ॥ ವಿಲ್ಲೋಯೆಂಬುವರು ತನಗೆ ಕೊಡಬೇಕಾಗಿರುವ ೬ ಸವರನ್ನುಗಳನ್ನು ಅವರಿಂದ ಬರಮಾಡಿಸಿ ಕೊಡುವುದಕ್ಕಾಗಿ ಅವರಮೇಲೆ ಸಮನ್ ಜಾರಿಮಾಡಿಸಬೇಕೆಂದು ಒಬ್ಬಾನೊಬ್ಬನು ಹೈಗೇಟ್ ದಂಡಾಧಿಕಾರಿಯಲ್ಲಿ ಬಿನ್ನಹವನ್ನು ಮಾಡಿಕೊಳ್ಳಲು, ಅವರು–ವಾಯು ಮಾರ್ಗದ ಮೇಲೆ ತನ್ನ ವಿಚಾರಣಾಧಿಕಾರವು ಇರುವುದಿಲ್ಲವೆಂದು ಉತ್ತರಕೊಟ್ಟರು.

ಗೋಬರ್‌ಡಂಗಾ ಜಮೀನ್‌ದಾರರಾದ ರಾಯಿಜ್ಞಾನದ ಪ್ರಸನ್ನ ಮುಕರ್ಜಿ ಬಹದ್ದೂರ್‌ರವರು ಮೊನ್ನೆತಾನೇ ತಮ್ಮ ಮಗನೊಡನೆಯೂ ಇನ್ನೂ ಕೆಲ ಪರಿವಾರದೊಡನೆಯೂ ಕೂಡಿ ಬೇಟೆಯಾಡುವುದಕ್ಕೆ ಹೋದರು. ಬಾಸಿಯಾ ಗುಡ್ಡಗಾಡಿನಲ್ಲಿ ಅವರೆಲ್ಲರೂ ಬೇಟೆಯಾಡಿ, ೮ ಹುಲಿಗಳನ್ನೂ ಒಂದು ಚಿರತೆಯನ್ನೂ, ಒಂದು ಕಾಡೆಮ್ಮೆ–೩೦–ಜಿಂಕೆ ನೂರಾರು ಸಣ್ಣಮೃಗಗಳನ್ನೂ ಕೊಂದರಂತೆ. ಅವುಗಳಲ್ಲಿ ೪ ಹುಲಿಗಳನ್ನು ಒಂದೇ ಗಂಟೆಯ ಕಾಲದಲ್ಲಿ ಬೇಟೆಯಾಡಿದರು.

ಹಿಂದೂಸ್ತ್ರೀಯರಿಗೆ ಅನೇಕ ನಿರ್ಬಂಧಗಳೇರ್ಪಟ್ಟಿದ್ದಾಗ್ಯೂ, ಅವರಿಗೆ ವಿವಾಹವು ಅವಶ್ಯಕರಣೀಯವಾಗಿದ್ದು, ತತ್ಸಂಬಂಧವಾದ ನಿರ್ಬಂಧಗಳು ತೊಲಗಿಸಲ್ಪಡತಕ್ಕವುಗಳಲ್ಲವೆಂದು ಏರ್ಪಟ್ಟಿದ್ದಾಗ್ಯೂ, ದಕ್ಷಿಣ ಇಂಡಿಯಾದ ಒಂದಾನೊಂದು ಮುಖ್ಯ ಪಟ್ಟಣದ ಒಂದು ಬೀದಿಯ ತುಂಬಾ ತಮ್ಮ ಗಂಡನನ್ನು ಪರಿತ್ಯಜಿಸಿ ಓಡಿಬಂದಿರುವ ಸ್ತ್ರೀಯರು ವಾಸಮಾಡಿಕೊಂಡಿರುವರೆಂದು ತಿಳಿಯಬರುತ್ತದೆಯಾಗಿ, ಮೇಲೆಕಂಡ ನಿರ್ಬಂಧಗಳೊಂದೂ ಇಲ್ಲದಿದ್ದರೆ ಇವರು ಇನ್ನೆಷ್ಟುಮಂದಿ ಸೇರುವರೋ ತಿಳಿಯದು ಎಂದು ಒಬ್ಬ ಲೇಖಕರು ಇಂಡಿಯನ್ ಪೇಟ್ರಿಯಟ್ ಪತ್ರಿಕೆಗೆ ಬರೆದಿರುತ್ತಾರೆ.

ಈ ತಿಂಗಳು ತಾ॥ ೨ ರಲ್ಲಿ ಕಲ್ಕತ್ತಾ ಪಟ್ಟಣದಲ್ಲಿ ಇರಿಗೇಷನ್‌ಶಾಖೆಯ ಉದ್ಯೋಗಿಯಾದ ಮೆ॥ ಕಾಲಿಯೆಂಬ ಆಂಗ್ಲ ಮನುಷ್ಯರು ಕುಳಿತು ಹೋಗುತ್ತಿದ್ದ ಮೋಟಾರು ಬಂಡಿಗೆ ಒಬ್ಬ ಬ್ರಾಹ್ಮಣ ಯುವಕನು ಒಂದು ಸಿಡಿಮದ್ದಿನ ಗುಂಡನ್ನೆಸೆದನು. ದೈವವಶಾತ್ ಅದು ಹಾರಲಿಲ್ಲ. ಹುಡುಗನನ್ನು ಪೊಲೀಸರು ಹಿಡಿದು ವಿಚಾರಮಾಡಲಾಗಿ, ಪೊಲೀಸು ಶಾಖೆಯ ಅಧಿಕಾರಿಗಳು ಆ ಬಂಡಿಯಲ್ಲಿ ಕುಳಿತು ಹೋಗುತ್ತಿರುವರೆಂದು ತಿಳಿದು ತಾನು ಭ್ರಾಂತಿಯಿಂದ ಆ ಬಂಡಿಗೆ ಗುಂಡನ್ನೆಸೆದೆನೆಂದು ಹೇಳಿದನು. ಇನ್ನಾವ ಸಂಗತಿಯನ್ನೂ ಹೇಳಿಲ್ಲ.

ಸಾವರ್ಲ್ಲಕೋಟಫಾರಂ ಮ್ಯಾನೇಜರಾದ ಹಿಂದೂ ಕ್ರೈಸ್ತನು ರುಮಾಲಿಗೆ ಪ್ರತಿಯಾಗಿ ಟೋಪಿಯನ್ನು ಧರಿಸಿಕೊಳ್ಳುತ್ತಿದ್ದದರಿಂದ ಮೇಲ್ಪಟ್ಟ ಯೂರೋಪಿಯನ್ ಆಫೀಸರ ಆಗ್ರಹಕ್ಕೆ ಪಾತ್ರನಾಗಿ ದಂಡಿತನಾಗಿದ್ದನಷ್ಟೆ. ಈಚೆಗೆ ಅವನು ಆ ವಿಷಯವಾಗಿ ಗೌರ್ನಮೆಂಟಿಗೆ ದೂರಿಟ್ಟುಕೊಂಡಿರಲು, ಐರೋಪ್ಯರಂತೆ ಆತನು ಉಡುಪುಗಳನ್ನು ಧರಿಸಿಕೊಳ್ಳುತ್ತಾ ಬಂದುದರಿಂದ ಸಾಲಗಾರನಾಥ ಕಾರಣ ಟೋಪಿಗೆ ಪ್ರತಿಯಾಗಿ ರುಮಾಲನ್ನೇ ಧರಿಸಿಕೊಳ್ಳಬೇಕೆಂದು ಮೇಲ್ಪಟ್ಟ ಆಫೀಸರು ಮಾಡಿದ ಎಚ್ಚರಿಕೆಯು ಸಮಂಜಸವಾಗಿದೆ ಯೆಂದು ಗೌರ್ನಮೆಂಟಿನವರು ಉತ್ತರವನ್ನು ಕೊಟ್ಟಿದ್ದಾರಂತೆ.

ಗೋಲ್ಕೊಂಡದಲ್ಲಿ ಕೆಲವು ಶತಮಾನಗಳ ಹಿಂದೆ ಭಂಗಾರದ ಗಣಿಗಳಿದ್ದುವು. ಅಲ್ಲಿದ್ದ ಎರಡು ಗಣಿಗಳಲ್ಲಿ ಒಂದು ಕರಾವಾನಿನ ಮತ್ತೂ ಕೋಟೆಯ ಮಧ್ಯದಲ್ಲಿ, ಮತ್ತೊಂದು ವಾಯುವ್ಯ ದಿಕ್ಕಿನಲ್ಲಿ ಇದ್ದುವು. ಇವೆರಡೂ ಒಳ್ಳೆಯ ಸರೋವರಗಳಾಗಿ ಪರಿಣಮಿಸಿದ್ದುವು. ಈಚೆಗೆ ಒಬ್ಬ ಕಂಟ್ರಾಕ್ಟದಾರನು ಈ ವಾಯುವ್ಯ ದಿಕ್ಕಿನ ಸರಹದ್ದಿನಲ್ಲಿ ಇಟ್ಟಿಗೆಗಳ ಆವಿಯನ್ನು ಮಾಡಲು ಅಪ್ಪಣೆ ಪಡೆಕೊಂಡು, ಹತ್ತು ಗೂಡುಗಳನ್ನು ಮಾಡಿಸಿ, ಇಟ್ಟಿಗೆಗಳನ್ನು ಸುಡಿಸಿ, ಈಚೆಗೆ ತೆಗೆಯಲು, ಅದರಬಣ್ಣವು ಚಿನ್ನದಂತೆ ಕಂಡಿತು. ಪರೀಕ್ಷೆ ಮಾಡಿಸುವಲ್ಲಿ ಇಟ್ಟಿಗೆಯೊಳಗೆ ಚಿನ್ನವು ಮಿಶ್ರವಾಗಿರುವುದೆಂದು ಗೊತ್ತಾಯಿತು. ಕೂಡಲೇ ಸೆಕ್ರಟರಿಯವರಿಗೆ ಸುದ್ದಿ ಕೊಡಲು, ಅವರು ನೈಜಾಮರಿಗೆ ಅರಿಕೆ ಮಾಡಿದರು. ಈಗ ಆ ಸ್ಥಳದಲ್ಲಿ ಸೈನಿಕರ ಕಾವಲನ್ನಿಟ್ಟಿದ್ದಾರೆ. ಹಾ ೧೦ ಇಟ್ಟಿಗೆ ಗೂಡುಗಳಿಂದಲೂ ಹೊರಟ ಚಿನ್ನವು ೪ ಲ ತೊಲೆಗಳ ತೂಕವಾಗುವುದಂತೆ !

ಮಿಸೌರಿಯೆಂಬ ಸಂಸ್ಥಾನದಲ್ಲಿ ಆಕಾಶಯಾನ ವಿಷಯದಲ್ಲಿ ಒಂದು ವಿಧಿಯು ನೂತನವಾಗಿ ಏರ್ಪಡುವುದರಲ್ಲಿದೆ. ಅದೇನೆಂದರೆ ಆಕಾಶಯಾನದಮೇಲೆ ಮೇಲಕ್ಕೆ ಹೋಗುವವರು ೧೦೦೦ ಅಡಿಯಿಂದ ಮೇಲಕ್ಕೆ ಹೋಗಕೂಡದೆಂತಲೂ ಹಾಗೆ ಏರುವುದಕ್ಕೆ ಮುಂಚೆ ಅಂಥವರು ೨ ಸಾವಿರ ಬಾ ಗಳಿಗೆ ಸ್ವಂತ ಹೊಣೆಯ ಮುಚ್ಚಳಿಕೆಯನ್ನು ಬರೆಕೊಡಬೇಕೆಂತಲೂ ನಿರ್ಬಂಧಪಡಿಸಿರುತ್ತಾರೆ. ಆಕಾಶಯಾ ದಿಂದ ಪ್ರಾಣವನ್ನು ಕಳೆದುಕೊಂಡ ಕೆಲವರ ಮಿತ್ರರು, ಪ್ರಜೆಗಳು ನಿರ್ಲಕ್ಷ್ಯಭಾದದಿಂದ ಆಕಾಶಯಾನದ ಮೂಲಕ ಮಿತಿಮೀರಿ ಸಂಚರಿಸಿ ಪ್ರಾಣವನ್ನು ಕಳೆದುಕೊಳ್ಳದಂತೆ ಮಾಡಬೇಕೆಂದು ಪ್ರಾರ್ಥಿಸಿದ ಪ್ರಕಾರ ಇಂಥ ವಿಧಿಯನ್ನು ಮಾಡಬೇಕಾಯಿತೆಂದು ಅಲ್ಲಿನ ನಿಯಮ ನಿರ್ಮಾಣಸಭೆಯಲ್ಲಿ ಸೂಚಿಸಲ್ಪಟ್ಟಿತು. ಈ ವಿಧಿಯನ್ನು ಉಪೇಕ್ಷಿಸಿ ಸಂಚರಿಸಿದವರು ಆತ್ಮಹತ್ಯಕ್ಕೆ ಪ್ರಯತ್ನಿಸಿದ ಅಪರಾಧಕ್ಕೆ ಗುರಿಯಾಗಿ ೫ ವರ್ಷ ಕಾರಾಗೃಹವಾಸ ಶಿಕ್ಷೆಗೆ ಗುರಿಮಾಡಲ್ಪಡುವರು.

ಸೀಮೆಯಲ್ಲಿ ಸಭಾಸ್ತಾರರನ್ನಾರಿಸುವಾಗ್ಗೆ ಮತಕೊಡುವ ಸ್ವಾತಂತ್ರ್ಯವು ತಮಗೂ ಇರಬೇಕೆಂದು ಆಂಗ್ಲಸ್ತ್ರೀಯರು ವಾದಿಸುತ್ತ, ಅದರ ಸಾಧನೆಗಾಗಿ ನಾನಾಸಾಹಸಗಳನ್ನು ಮಾಡುತ್ತಿರುವರಷ್ಟೆ. ಮೊನ್ನೆತಾನೇ ಅಂಥ ಸಾಹಸಗಾತಿಯರಲ್ಲೊಬ್ಬಾಕೆಯು ಕ್ಯಾಕ್‌ಸ್ಟನ್ನಿನಲ್ಲಿ ಒಂದು ಸಭೆಕೂಡಿದ್ದಾಗ್ಗೆ ಹೀಗೆ ಭಾಷಣಮಾಡಿದಳು—ಜನಪರಿಗಣನೆಯು ನಡೆಯುವಾಗ್ಗೆ ನಾವೆಲ್ಲರೂ (ಸ್ತ್ರೀಯರು) "ಮತವನ್ನು ಕೊಡುವ ಸ್ವಾತಂತ್ರ್ಯಕ್ಕೆ ನಾವು ಯಾವಾಗ ಪಾತ್ರರಲ್ಲವೋ ಆಗ ನಾವು ಮಾನವಕೋಟಿಗೆಸೇರಿದವರೂ ಅಲ್ಲ. ಆ ಕಾರಣದಿಂದ ನಮ್ಮ ಪರಿಗಣನೆಯು ಸರ್ಕಾರದವರಿಗವಶ್ಯಕವೂ ಅಲ್ಲ. ಆದುದರಿಂದ ನಮ್ಮ ವಿಷಯಕವಾದ ವಿವರಣೆಯನ್ನೆಲ್ಲಾ ಹೇಳಿ ಬರೆಯಿಸುವುದಕ್ಕೆ ನಮಗಿಷ್ಟವಿಲ್ಲ" ಎಂದು ಹೇಳಿ, ನಾವೆಲ್ಲರೂ ಪಟ್ಟನ್ನು ಹಿಡಿದು, ಅವರು ಕೇಳುವ ವಿಷಯಗಳನ್ನು ತಿಳುಹದೆ ಯಿರಬೇಕು. ಹಾಗೆ ಮಾಡದೆ ಹೋದರೆ ನಮಗೆ ಬರಬೇಕಾದ ಅಧಿಕಾರವು ದೊರೆಯಲಾರದು" ಎಂಬುದಾಗಿ.

ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ಹದಿಮೂರನೇ ಅಧಿವೇಶನವು.

(ಹೋದಸಂಚಿಕೆಯ ಶೇಷ.)

ಈ ಠರಾವ ಪಾಸಾದಮೇಲೆ ಶ್ರೀಯುತ ತವನಪ್ಪ ಗುಂಡಪ್ಪ ಇಂಗಳೆ (ಸಾಂಗಲಿ) ಇವರು ೧೧ ನೇ ಠರಾವನ್ನು ಈ ಪ್ರಕಾರ ಮುಂದೆ ತಂದರು—"ಖಾನೇಸುಮಾರಿಯ ಸಂಗತಿಗಳು ಚೆನ್ನಾಗಿ ತಿಳಿಯುದ ಮೂಲಕ ತಮ್ಮ ಸಮಾಜದ ಸ್ಥಿತಿಯ ಕಲ್ಪನೆಯು ಆಗುವುದಕ್ಕೆ ಕಠಿನವಾಗುತ್ತದೆ. ಆದುದರಿಂದ ಎಲ್ಲ ಜೈನಬಾಂಧವರು ಖಾನೇಸುಮಾರಿಯ ಕ್ಲಾರ್ಕರಿಗೆ ತಮ್ಮ ಧರ್ಮ, ಜಾತಿ, ಉದ್ಯೋಗ ಮುಂತಾದರ ಸಂಬಂಧಿ ಯೋಗ್ಯಮಾಹಿತಿಯನ್ನು ಹೇಳಬೇಕು."

ಈ ವೇಳೆಗೆ ಕೆಲಸವಾದನಂತರ ಸಾಯಂಕಾಲವಾದುದರಿಂದ ಸಭೆಯ ಕೆಲಸವು ನಿಲ್ಲಿಸಲ್ಪಟ್ಟಿತು. ತದನಂತರ ರಾತ್ರಿ ೮॥ ಗಂಟೆಗೆ ಸಭೆಯು ಕೂಡಿಸಲ್ಪಟ್ಟು ರಾ॥ ದೇಶಥರ ಮತ್ತು ಶ್ರೀಯುತ ಅರ್ಜುನಲಾಲ ಶೇಠಿ (ಜಯಪುರ) ಇವರ ವಿದ್ಯಾಪ್ರಸಾರದ ಬಗ್ಗೆ ಭಾಷಣಗಳಾದುವು. ನಂತರ ರಾ॥ ವಿಶ್ವನಾಥ ದತ್ತಾತ್ರಯ ಕಬಾಡೆ ಎಂಬ ನಿಪ್ಪಾಣಿ ಗ್ರಾಮದ ಓರ್ವ ಬ್ರಾಹ್ಮಣಪಂಡಿತರು ಜೈನಧರ್ಮದ ಮೇಲೆ ಸುರಸವಾದ ಕೀರ್ತನಮಾಡಿದರು. ಇವರು ಬ್ರಾಹ್ಮಣಮತೀಯರಾದರೂ ಜೈನಧರ್ಮವಿಷಯಕ ಕೀರ್ತನವನ್ನು ಪ್ರೇಮಪೂರ್ವಕ ಮಾಡಿದ್ದಕ್ಕಾಗಿ ಅವರ ಅಭಿನಂದನ ಮಾಡುವುದು ಯೋಗ್ಯವದೆ. ಈ ವೇಳೆಗೆ ಕಾರ್ಯಕ್ರಮವಾದನಂತರ ಸಭೆಯ ಎರಡನೇ ದಿವಸದ ಕೆಲಸವು ಮುಗಿಯಿತು.

ಮೂರನೇ ದಿವಸ (ತಾ॥೮–೨–೧೧) ಮುಂಜಾನೆ ಸಬ್ಜೆಕ್ಟ್ ಕಮಿಟಿಯ ಸಭೆಯು ಆದನಂತರ ರಾ॥ ಕೋಪಡೆ (ಜೈನಕೀರ್ತನಕಾರ) ಇವರು "ನೋಟೇಶನ" ಪದ್ಧತಿಯ ಮೇಲೆ ಗಾಯನ ಕಲಿಯುವ "ಜೈನ ಭಜನಾಮೃತ ಪದ್ಯಾವಲಿ" ಎಂಬ ಪುಸ್ತಕವನ್ನು ರಚಿಸಿದ್ದು ಸೊಲ್ಲಾಪುರದ ಗಾನಪ್ರಿಯರಸಿಕರಾದ ಶೇಟ ಪುಲಚಂದ ರಾಮಚಂದ ಗಾಂಧಿಯವರಿಗೆ ಅರ್ಪಿಸುವ ಅಪೂರ್ವ ಸಮಾರಂಭವಾಯಿತು. ಮಧ್ಯಾಹ್ನ ೨ ಗಂಟೆಗೆ ಪುನಃ ಸಭೆಯು ಪ್ರಾರಂಭಿಸಲ್ಪಟ್ಟಿತು. ಸ್ವಾಗತ ಪದ್ಯಗಳನ್ನು ಹಾಡಿದನಂತರ ಅಧ್ಯಕ್ಷರು ಕೆಳಗೆ ಬ ದ ಠರಾವುಗಳನ್ನು ಮುಂದೆ ಇಟ್ಟರು. ಮುಂಬಯಿಯಲ್ಲಿ ಸ್ಥಾಪಿತವಾದ ಶೇಠ ಹಿರಾಚಂದ ಗುಮಾನಜಿ ದಿಗಂಬರ ಜೈನ ಬೋರ್ಡಿಂಗದ ನಿಯಮದ ಪ್ರಕಾರ ಅದರ ಫಂಡಿನೊ ಗಿಂದ ಕೊಲ್ಲಾಪುರ ಮತ್ತು ಹುಬ್ಬಳ್ಳಿ ಬೋರ್ಡಿಂಗದ

ದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ಪುಗಳು ದೊರೆಯಬೇಕು. ಮತ್ತು ಶೆಠ ನಾಥಾರಂಗಜಿ ಬೋರ್ಡಿಂಗ (ಸೊಲ್ಲಾಪುರ)ದ ಫಂಡಿನೊಳಗಿಂದ ಈ ಪ್ರಕಾರ ಸಹಾಯ ದೊರೆಯುತ್ತದೆ. ಈಬಗ್ಗೆ ಈ ಸಭೆಯು ಆ ಬೋರ್ಡಿಂಗದ ಟ್ರಸ್ಟಿಯವರಿಗೆ ಕೃತಜ್ಞ ಅದೆ. (೧೩) ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ಕೆಲಸವು ಈಗಿಗಿಂತಲೂ ವಿಸ್ತೃತಪ್ರಮಾಣದಿಂದ ಮತ್ತು ಜೋರಿನಿಂದ ಸಾಗುವುದಕ್ಕಾಗಿ ಜೈನಜನರ ವಸ್ತಿಯ ಮಾನದಿಂದ ಸಭೆಯು ಕ್ಷೇತ್ರದ ವಿಭಾಗಗಳನ್ನು ಮಾಡಿ ಸ್ಥಾನಿಕ ಕಮಿಟಿಗಳನ್ನು ಸ್ಥಾಪಿಸುವುದು ಅತ್ಯಗತ್ಯವಾಗಿದೆ. ಆದುದರಿಂದ ಕೆಳಗೆ ಕಾಣಿಸಿದ ವಿಭಾಗಗಳನ್ನೂ ಮತ್ತು ಅದಕ್ಕೆ ಓರೋರ್ವ ಸೆಕ್ರೆಟರಿಗಳನ್ನೂ ನಿಯಾಮಕ ಮಾಡಿದೆ. (ಸ್ಥಲಸಂಕೋಚದ ಮೂಲಕ ವಿಭಾಗಗಳ ಹೆಸರು ವಗೈರೆ ಇಲ್ಲಿ ಕೊಟ್ಟಿಲ್ಲ)

ಈ ಠರಾವುಗಳು ಏಕಮತ್ಯದಿಂದ ಪಾಸಾದನಂತರ ೧೪ ನೇ ಠರಾವನ್ನು ರಾ|| ಸಾ|| ಬಾಪು ಅಣ್ಣಾ ಪಾಟೀಲ, ಬಿ. ಎ., ಮಾಮಲೇದಾರ (ಶಿರೋಳಪೇಟಾ) ಇವರು ಸಭೆಯ ಮುಂದೆ ಈ ಮೇರೆಗೆ ಇಟ್ಟರು— "ಜೈನಸಮಾಜದಲ್ಲಿ ಜಾಗ್ರತೆಯು ಆಗಬೇಕಾದರೆ ಹಳ್ಳಿಹಳ್ಳಿಗಳಲ್ಲಿಯು ಕೂಡ ಜೈನಜನರಲ್ಲಿ ಧರ್ಮೋಪದೇಶವಾಗುವುದು ಅವಶ್ಯವದೆ. ಆದುದರಿಂದ ಸಮಾಜದಲ್ಲಿಯು ಮುನಿಜನರು ಮತ್ತು ವಿದ್ವಾಂಜನರು ಪ್ರವಾಸಮಾಡಿ ತಮ್ಮ ಅಜ್ಞಾನಬಾಂಧವರಿಗೆ ಬೋಧಿಸಿ ಅವರನ್ನು ಜ್ಞಾನಿಗಳಾಗಿ ಮಾಡುವುದು ಅಗತ್ಯ ಅದೆ. ಹಾಗೂ ಶಿಕ್ಷಿತರಲ್ಲಿ ಹೆಚ್ಚು ಜಾಗ್ರತೆ ಆಗುವುದಕ್ಕೋಸ್ಕರ ಸಭೆಯು "ಜನವಿಜಯ" ವೆಂಬ ಮರಾಠಿ ಭಾಷೆಯ ಮಾಸಿಕವನ್ನು ಸಾಪ್ತಾಹಿಕ ಮಾಡುವುದು ಶ್ರೇಯಸ್ಕರವದೆ."

ನಂತರ ಪಂಡಿತ ಪಾಸುಗೋಪಾಳ ಶಾಸ್ತ್ರಿ (ಸೊಲ್ಲಾಪುರ) ಇವರು ೧೫ ನೇ ಠರಾವ ಇಟ್ಟಿದ್ದು ಯಾವುದೆಂದರೆ— ಜೈನಸಮಾಜದಲ್ಲಿಯು ಕೆಲವು ಮಠಗಳು ಲುಪ್ತಪ್ರಾಯವಾಗಿದ್ದು, ಕೆಲವು ಅವನತಸ್ಥಿತಿಯಲ್ಲಿ ಇರುತ್ತವೆ. ಆದುದರಿಂದ ಈ ಸ್ಥಿತಿಯು ದೂರ ಆಗುವುದಕ್ಕೋಸ್ಕರ ಮಠಾಧಿಪತಿಗಳು ಮತ್ತು ಜನರು ಮುಂದಿನ ನಿಯಮಗಳನ್ನು ಅಮಲಿನಲ್ಲಿ ತರಬೇಕು. (೧) ಮಠಗಳ ಲೆಖ್ಖವನ್ನು ಪ್ರತಿವರ್ಷ ನಿಯಮದಿಂದ ಪ್ರಸಿದ್ಧಮಾಡಬೇಕು. (೨) ಮಠಾಧಿಪತಿಗಳ ಮುಂದೆ ನಿರ್ಣಯಕ್ಕೆ ಬರುವ ವಾದಗಳ ನಿಕಾಲೆಯನ್ನು ಹ್ಯಾಗೆ ಮಾಡಬೇಕೆಂಬುದರ ಸಲುವಾಗಿ ಕೆಲವು ನಿಯಮಗಳನ್ನು ಪ್ರಸಿದ್ಧಮಾಡಬೇಕು. (೩) ಮಠಗಳ ಉತ್ತರಾಧಿಕಾರಿಯನ್ನು ನಿಯಮಿಸುವುದು. ಸರ್ವಶಿಷ್ಯರ ಸಮ್ಮತಿಯ ಪ್ರಕಾರ ಯೋಗ್ಯ ಮನುಷ್ಯರನ್ನು ಮೊದಲೇ ನಿಯಮಿಸಬೇಕು." ಈ ಠರಾವನ್ನು ಮುಂದೆ ಇಡುವ ಕಾಲಕ್ಕೆ ವೆಳ್ಳಂಡ ಶಾಸ್ತ್ರಿಗಳು ಲಾತೂರದಲ್ಲಿ ಇರುವ ಶೈತವಾಳಮಠವು ಹ್ಯಾಗೆ ನಷ್ಟವನ್ನು ಹೊಂದಿರುತ್ತದೆಯೆಂಬುದನ್ನು ಸುಲಲಿತವಾಗಿ ಹೇಳಿ ಮಠಾಧಿಪತಿಗಳು ತಮ್ಮ ಲೆಕ್ಕಪತ್ರವನ್ನು ಸಕಾಲಕ್ಕೆ ಪ್ರಸಿದ್ಧ ಮಾಡಬೇಕೆಂದು ಹೇಳಿದರು. ಅದಕ್ಕೆ ಕಹಾಪುರದ ರಾ|| ಬಾಬಾಸಾಹೇಬ ಅವಲಕ್ಕಿ ಯವರು ಅನುಮೋದನಕೊಟ್ಟರು.

ತರುವಾಯ ಬೆಳಗಾಂವಿಯ ರಾವ ಸಾ|| ಸಂಗಪ್ಪ ಮಜ್ಜಪ್ಪ ಅಂಗಲೆ (ಲೇಟ್ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್) ಇವರು ೧೬ ನೇ ಠರಾವನ್ನು ಈ ಪ್ರಕಾರ ಇಟ್ಟರು.— "ಜೈನಸಮಾಜದ ಸಾಂಪತ್ತಿಕ ಉನ್ನತಿಯು ಆಗಬೇಕಾದರೆ ಸಮಾಜದಲ್ಲಿ ಉದ್ಯೋಗವೃದ್ಧಿಯು ಮತ್ತು ಕಲಾಕೌಶಲ್ಯದ ಶಿಕ್ಷಣಪ್ರಸಾರವು ಹೆಚ್ಚು ಆಗಲಿಕ್ಕೇಬೇಕು. ಮತ್ತು ಯೊಸಸುಧಾರಣೆಗೆ ಅನುಸರಿಸಿ ವ್ಯವಸಾಯ ವಿಷಯಕ ಶಿಕ್ಷಣವಾದರೂ ದೊರಕಿಸಲಿಕ್ಕೆ ಬೇಕು. ಇವೆಲ್ಲಾ ಸಾಧ್ಯವಾಗಲಿಕ್ಕೆ "ಪರಸ್ಪರ ಸಹಾಯಕಾರಿ ಪೇಡಿ" ಗಳನ್ನು ಸ್ಥಾಪಿಸುವುದು ಅತ್ಯಂತ ಜರೂರವದೆ." ಈ ಠರಾವದವೇಳೆ ರಾ|| ಲಕ್ಷ್ಮಣರಾವ ಕೈಕಿಣಿ (ಪುಣೆ) ಮತ್ತು ರಾ|| ಕೃಷ್ಣಾಜಿ ಕಶಾರಾವ ಹೋರೆ (ಮುಂಬಯಿ ಇಲಾಖೆಯ ಸೆಂಟ್ರಲ್ ವಿಭಾಗದ ಕೋಆಪರೇಟಿವ್ ಕ್ರೆಡಿಟ ಸೊಸೈಟಿಯ ಆಡಿಟರ್) ಇವರ ಸುರಸಭಾಷಣಗಳಾದುವು. ಸಶೇಷ.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸಬೇಕು.
ಪ. ಪ್ರ.

ಪತ್ರವ್ಯವಹಾರ.

ರಬಕವಿ.

ಸಕಲವೀರಶೈವ ಜನಾಂಗಕ್ಕೆ ಜಗದ್ಗುರುಗಳಾದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಚಿನ್ಮೂಲಾದ್ರಿ ಬೃಹನ್ಮಠ ಶೂನ್ಯಸಿಂಹಾಸನಾಧೀಶ ಮಹಾಸ್ವಾಮಿಗಳ ಪಾದಧೂಳಿಯಿಂದ ಕರ್ನಾಟಕದ ನಮ್ಮ ಈ ಭಾಗವು ಎಂಟೊಂಬತ್ತು ತಿಂಗಳಿಂದ ಬಹು ಪವಿತ್ರವಾಯ್ತು. ಇತ್ತಲಾಗಿನ ಅಶೇಷ ವೀರಶೈವ ಸಮಾಜಕ್ಕೆ ಇಹಪರ ವೆರಡರ ಲಾಭಗಳೂ ಶ್ರೀ ಮಹಾಸ್ವಾಮಿಗಳ ಸಾನ್ನಿಧ್ಯದಿಂದ ಪ್ರಾಪ್ತವಾಗಿರುತ್ತವೆ. ಈ ತೆರದ ಯೋಗವು ೫೦ ವರ್ಷಗಳಿಂದೀಚೆಗೆ ಬಂದಿದ್ದಿಲ್ಲವಾದುವರಿಂದ ಶ್ರೀ ಮಜ್ಜಗದ್ಗುರುಗಳ ಸ್ವಾರಿಯು ಇತ್ತಲಾಗಿ ಚಿತ್ತೈಸುವದೆಂದು ತಿಳಿದ ಕಾಲದಿಂದ ನಾವೆಲ್ಲರೂ ಶ್ರೀಗಳ ಆಗಮನವನ್ನು ಬಹು ಶ್ರದ್ಧೆಯಿಂದ ಹಾರೈಸುತಿದ್ದೆವು. ಅದರಂತೆ ಈ ಪರಮಾನಂದಕರಯೋಗವು ನಮಗೆ ಲಭಿಸಿರುವದರಿಂದ ನಮ್ಮ ಆನಂದ ಸಮುದ್ರಕ್ಕೆ ಮರ್ಯಾದೆಯೇ ಇಲ್ಲವಾಗಿದೆ. ಅಸ್ತು.

ಈ ಸಾಧಾರಣನಾಮ ಸಂವತ್ಸರದ ಶ್ರಾವಣಮಾಸದಲ್ಲಿ ತೇರದಾಳ, ಗಬಕವಿ, ಮಹಾಲಿಂಗಪುರಗಳ ಕಡೆಗೆ ದಯಮಾಡಿಸುತ್ತೇವೆಂದು ಶ್ರೀಗಳು ಅಪ್ಪಣೆ ಕೊಡಿಸಿದ್ದುದರಿಂದ ಶ್ರೀಗಳ ಪಾದಪೂಜಾದಿ ಪುಣ್ಯಕರ ಧರ್ಮಕೃತ್ಯಗಳಲ್ಲಿ ಈ ವರ್ಷದ ಶ್ರಾವಣಮಾಸವನ್ನು ಕಳೆದು ಪುನೀತರಾಗುತ್ತೇವೆಂದು ನಲಿದು ಆಯಾಗ್ರಾಮಸ್ಥರಾದ ಭಕ್ತ ಮಾಹೇಶ್ವರರೆಲ್ಲರೂ ಆತುರ ಮನಸ್ಸಿನಿಂದ ಶ್ರೀಗಳ ಆಗಮನ ಕಾಲವನ್ನು ನಿರೀಕ್ಷಿಸುತ್ತಿದ್ದರು. ಆದರೆ ಆ ಕಾಲದಲ್ಲಿ ಬೇರೆ ಕಡೆಯ ವೀರಶೈವಮತಸ್ಥರ ಅತ್ಯಾಗ್ರಹದ ಮೂಲಕವಾಗಿ ಶ್ರೀಮಹಾಸ್ವಾಮಿಗಳ ಶ್ರಾವಣಮಾಸದ ಸಾನ್ನಿಧ್ಯಕ್ಕೆ ನಾವೆಲ್ಲರೂ ಎರವಾಗಬೇಕಾಯ್ತು. ಮುಂದೆ ಶ್ರೀಗಳ ಧರ್ಮಸಂಚಾರವು ಯಥೇಚ್ಛವಾಗಿ ಜರಗುತ್ತ ಜರಗುತ್ತ ಮಾರ್ಗಶೀರ್ಷವದ್ಯ ಪಕ್ಷದಲ್ಲಿ ಶ್ರೀಗಳ ಸ್ವಾರಿಯು ಸಾಂಗಲಿ ಸಂಸ್ಥಾನದ 'ತೇರದಾಳ' ಗ್ರಾಮಕ್ಕೆ ದಯಮಾಡಿಸಲು, ಅಲ್ಲಿ ಅಡ್ಡಪಲ್ಲಕ್ಕಿ ಮೊದಲಾದ ಎಲ್ಲ ಬಿರುದಾವಳಿಗಳಿಂದ ಸಹಿತವಾಗಿ ಶ್ರೀಗಳ ಉತ್ಸವವು ೧೦-೧೨ ದಿವಸಗಳ ವರೆಗೆ ನಡೆಯಿತು. ಈ ಅವಧಿಯಲ್ಲಿ ಅದೇ ಸಂಸ್ಥಾನದ 'ರಬಕವಿ' ಗ್ರಾಮ ಭಕ್ತಮಾಹೇಶ್ವರರು ತೇರದಾಳಕ್ಕೆ ಹೋಗಿ, ತಮ್ಮ ಗ್ರಾಮಕ್ಕೆ ಬರಬೇಕೆಂದು ಶ್ರೀಗಳಿಗೆ ಬಹು ವಿನಯದಿಂದಲೂ ಭಕ್ತಿಯಿಂದಲೂ ಬಿನ್ನವಿಸಿದ ಮೇರೆಗೆ ಶ್ರೀಮನ್ಮಹಾಸ್ವಾಮಿಗಳ ಸ್ವಾರಿಯು ಪುಷ್ಯಮಾಸದ ಶುದ್ಧ ಪಕ್ಷದ ಪಂಚಮಿ ತಿಥಿ ಗುರುವಾರ, ಅಂದರೆ ತಾ|| ೫ ಜಾನೇವಾರಿ ಸನ ೧೯೧೧ ನೇ ಇಸವಿಯ ದಿವಸ, ರಬಕವಿ ಗ್ರಾಮಕ್ಕೆ ದಯಮಾಡಿಸಿದರು. ಆ ದಿವಸದ ಸಮಾರಂಭವನ್ನು ವರ್ಣಿಸಲು ಅಸಾಧ್ಯವೇ ಸರಿ. ಸಕಲಗ್ರಾಮವೂ ತಳಿರ್ದೋರಣ, ರಂಭಾಸ್ತಂಭ, ಧ್ವಜ ಪತಾಕಾವಳಿಯಿಂದ ಅಲಂಕೃತವಾಗಿದ್ದು, ಶ್ರೀಗಳು ಇಳಿಕೊಳ್ಳುವದಕ್ಕಾಗಿ ಸಿದ್ಧಪಡಿಸಿದ ಶ್ರೀ ಶಂಕರಲಿಂಗದೇವಾಲಯವೂ ಭವ್ಯವಾದ ಸಭಾಮಂಟಪವೂ ಶ್ರೀ ಶಂಕರಲಿಂಗ ನೇಟಿವ್‌ಜನರಲ್ ಲೈಬ್ರರಿಯೂ ಚಿತ್ರವಿಚಿತ್ರವಾಗಿ ಶೃಂಗರಿಸಲ್ಪಟ್ಟುದರಿಂದ ಆ ಸ್ಥಾನವು ಮದುವೆಯ ಮಂಗಲಮಂಟಪದಂತೆ ಕಂಗೊಳಿಸುತ್ತಿತ್ತು. ರಬಕವಿಯಲ್ಲಿ ಶ್ರೀಗಳ ಸ್ವಾರಿಯು ಮಾಘವದ್ಯ ೧೩ ರವಿವಾರ ಮುಂಜಾನೆಯವರೆಗೆ ಅಂದರೆ, ಒಂದು ತಿಂಗಳು ೨೩ ದಿವಸಗಳ ವರೆಗೆ ಇದ್ದು, ಆ ಅವಧಿಯಲ್ಲಿ ಭಕ್ತರ ಅಪೇಕ್ಷೆಯಂತೆ ಅಡ್ಡಪಲ್ಲಕ್ಕಿ, ಮೇಣಾಗಳ, ಪಂಚಕಲಶ ಮತ್ತು ಇತರ ಬಿರುದಾವಳಿಗಳ ಸಮೇತವಾಗಿರುವ, ಉತ್ಸವಗಳು ನಿತ್ಯದಲ್ಲಿಯೂ ನಡೆದು, ಪಾದಪೂಜಾದಿ ಧರ್ಮಕೃತ್ಯಗಳಿಂದಲೂ ನಿತ್ಯ ಸಾಯಂಕಾಲದಲ್ಲಿ ಸಭಾಮಂಟಪದಲ್ಲಿ ದರಬಾರು ನೆರೆದು ಶ್ರೀಗಳಿಂದ ಮಾಡಲ್ಪಟ್ಟ ಧರ್ಮಬೋಧಾಮೃತ ಪಾನದಿಂದಲೂ ರಬಕವಿಯೊಳಗಿನ ಸಕಲ ಭಕ್ತಮಾಹೇಶ್ವರರ ಅಂತಃಕರಣಗಳು ಆನಂದ ತುಂದಿಲವಾಗಿದ್ದವು. ನಡುನಡುವೆ ಭಕ್ತಮಂಡಲಿಯೊಳಗಿನ ಕೆಲವರು ಧಾರ್ಮಿಕ ಮತ್ತು ಸಾಮಾಜಿಕ ವಿಷಯವಾಗಿ ಕೆಲವು ಉಪನ್ಯಾಸಗಳನ್ನು ಮಾಡಿದ ಕಾಲದಲ್ಲಿ, ಶ್ರೀಗಳು ಅವರಿಗೆ ಪ್ರೋತ್ಸಾಹವಾಗುವಂತೆ ಸರಿಯಾಗಿ ಚರ್ಚಾಪೂರ್ವಕ ಬುದ್ಧಿವಾದವನ್ನು ಹೇಳುತ್ತಿದ್ದುದರಿಂದ ಶ್ರೋತೃಗಳ ಮನಸ್ಸಿನಲ್ಲಿ ಆಯಾ ವಿಷಯಕ ಜ್ಞಾನವು ಚೆನ್ನಾಗಿ ನೆಲೆಗೊಳ್ಳುತ್ತಿದ್ದಿತು. ಶ್ರೀಮನ್ಮಹಾಸ್ವಾಮಿಗಳು ಸರ್ವೋತ್ಕೃಷ್ಟ ವಾಗ್ಮಿಗಳಿರುವದರಿಂದ ಶ್ರೀಗಳ ಬೋಧಾಮೃತವಾಕ್ಪ್ರವಾಹವು ಗಂಭೀರವಾಗಿಯೂ ಅಸ್ಖಲಿತವಾಗಿಯೂ ನಡೆದು, ಶ್ರೋತೃಗಳ ಮನಸ್ಸುಗಳು ಆಯಾ ವಿಷಯಗಳಲ್ಲಿ ತಲ್ಲೀನವಾಗಿ ಹೋಗುತ್ತಿದ್ದವು. ಆದುದರಿಂದ ಸ್ವಲ್ಪ ಕಡಿಮೆ ಎರಡುತಿಂಗಳುಗಳ ಕಾಲವು ರಬಕವಿಯ ಸಕಲ ವೀರಶೈವ ಜನಾಂಗಕ್ಕೆ ಒಂದೇ ದಿವಸದಂತೆ ಆಗಿ ಹೋಯ್ತು. ಶ್ರೀಮನ್ಮಹಾಸ್ವಾಮಿಗಳ ತ್ರಿಕಾಲ ಲಿಂಗಪೂಜೆಗಳು ನಿತ್ಯದಲ್ಲಿ ನಿಯಮಿತಕಾಲಕ್ಕೆ ಆಗುತ್ತಿದ್ದುದರಿಂದ ಶ್ರೀಗಳ ಪೂಜಾಕಾಲಕ್ಕೆ ಸರಿಯಾಗಿ ಊರೊಳಗಿನ ಜನರು ತಮ್ಮ ಗಡಿಯಾರಗಳ ಕಾಲವನ್ನು ತಿದ್ದಿಕೊಳ್ಳುತ್ತಿದ್ದರು. ಶ್ರೀಗಳು ತಾವು ದಯಮಾಡಿಸಿದ ಗ್ರಾಮಗಳಲ್ಲಿ ದರಬಾರುಗಳನ್ನು ನಿತ್ಯ ನೆರೆಯಿಸಿ, ತಮ್ಮ ಸಂಸ್ಥಾನದಲ್ಲಿ ಆದ ಆದಾಯವ್ಯಯಗಳನ್ನೂ ಸಂಘಟಿಸಿದ ವಿಶೇಷ ಸಂಗತಿಗಳನ್ನೂ ತಪ್ಪದೇ ತಿಳಿಯಿಸುವ ರೀತಿಯು ಅತ್ಯಂತ ಶ್ಲಾಘನೀಯವಾಗಿರುವದಲ್ಲದೆ, ವೀರಶೈವ ಮತವಿಷಯಕ ಜ್ಞಾನವು ವೀರಶೈವ ಜನಾಂಗದಲ್ಲಿ ಹರಡುವ ಸಲುವಾಗಿ ಧರ್ಮಬೋಧನೆಯನ್ನು ಕೂಡ ತಪ್ಪದೇ ಮಾಡುತ್ತಿರುವದರಿಂದ ವೀರಶೈವ ಮತೀಯರಿಗಾಗುವ ಲಾಭವು ಎಲ್ಲಕ್ಕಿಂತಲೂ ಶ್ರೇಷ್ಠತಮವಾದುದೆಂದು ಹೇಳುವ ಕಾರಣವಿಲ್ಲ. ಶ್ರೀಗಳು ತಾವು ಸ್ವೀಕರಿಸಿದ ಆಶ್ರಮಧರ್ಮವನ್ನು ಸಾಂಗವಾಗಿ ನೆರವೇರಿಸುತ್ತಿರುವದರಿಂದ ವೀರಶೈವ ಧರ್ಮವು ಶ್ರೀಗಳ ಜೀವಮಾನಕಾಲದಲ್ಲಿ ಒಳ್ಳೆ ಅಭಿವೃದ್ಧಿಗೆ ಬರಬಹುದೆಂಬ ವಿಷಯದಲ್ಲಿ ಏನೂ ಸಂದೇಹ ತೋರುವದಿಲ್ಲ. ಶ್ರೀಮನ್ಮಹಾಲಿಂಗ ಮಹಾಸ್ವಾಮಿಗಳು ಲಿಂಗೈಕ್ಯರಾದವೇಳೆ ಈ ಶೂನ್ಯಸಿಂಹಾಸನಪೀಠವನ್ನು ಅಲಂಕರಿಸಿದ ಮಹಾಸ್ವಾಮಿಗಳಿಂದ ಸಂಸ್ಥಾನಕಾರ್ಯಗಳು ಸರಿಯಾಗಿ ನಡೆಸುವದೆ ಹೋದುದರಿಂದ ಈಗಣ ಶ್ರೀಮನ್ಮಹಾಸ್ವಾಮಿಗಳಿಗೆ ಕೆಲವು ತೊಂದರೆಗಳು ಉದ್ಭವಿಸಿರುವದರಿಂದ ಅವುಗಳ ಪರಿಹಾರಾರ್ಥವಾಗಿ ಶ್ರೀಗಳಿಗೆ ಹೆಚ್ಚು ಪರಿಶ್ರಮಗಳನ್ನು ಮಾಡಬೇಕಾಗಿರುವುದು. ಈ ತೊಂದರೆಗಳೆಲ್ಲ ನಷ್ಟವಾದ ಮೇಲೆ ಶ್ರೀಗಳಿಂದ ಈಗ ಬೇಕಾಗಿರುವ ಧರ್ಮಸಂಜೀವನ ಕಾರ್ಯಗಳು ಒಳ್ಳೆ ರಭಸದಿಂದ ನಡೆಯುವವೆಂದು ನಾವು ನಂಬುತ್ತೇವೆ. ಅಸ್ತು. ಶ್ರೀಮನ್ಮಹಾಸ್ವಾಮಿಗಳು ಮಾಘ ವದ್ಯ ೧೩ ರವಿವಾರದಿನ ಪ್ರಾತಃಕಾಲದ ಶಿವಪೂಜೆಯನ್ನು ತೀರಿಸಿಕೊಂಡು ಏಳು ಹೊಡೆಯುವ ಕಾಲಕ್ಕೆ ಇಲ್ಲಿಂದ ಹೊರಟು, ಮುಧೋಳ ಸಂಸ್ಥಾನದ ಕೆಳಗಿರುವ "ಮಹಾಲಿಂಗಪುರ" ಗ್ರಾಮಕ್ಕೆ ೯ ಗಂಟೆಗೆ ಮುಟ್ಟುವಂತೆ ಕಾಲಕ್ರಮವನ್ನು ನಿಶ್ಚಯಿಸಿದ್ದರೂ, ರಬಕವಿಯೊಳಗಿನ ಅಶೇಷ ಭಕ್ತಮಾಹೇಶ್ವರರರಿಗೆ ಆಶೀರ್ವಾದಗಳನ್ನು ಕೊಟ್ಟು, ಅವರಿಂದ ಸಾಗಗಳಿಸಿಕೊಳ್ಳಲಿಕ್ಕೆ ೯|| ಗಂಟೆಯು ರಬಕವಿಯಲ್ಲಿಯೇ ಆಯ್ತು. ಒಬ್ಬರನೊಬ್ಬರು ಅಗಲುವ ಕಾಲದಲ್ಲಿ ಶ್ರೀಮನ್ಮಹಾಸ್ವಾಮಿಗಳ ಮತ್ತು ರಬಕವಿಯ ಭಕ್ತಮಾಹೇಶ್ವರರ ಅಂತಃಕರಣಗಳೆಲ್ಲ ಗದ್ಗದಿತವಾಗಿ ಹೋಗಿದ್ದವು. ಹೊರಡುವ ಸಮಯದಲ್ಲಿ ಶ್ರೀಗಳು ಒಳ್ಳೇ ವ್ಯವಸ್ಥೆಯನ್ನಿಟ್ಟ ಸಾಂಗಲೀಸಂಸ್ಥಾನದ ಪೋಲೀಸರಿಗೂ ಇತರ ಸೇವಕ ಜನಕ್ಕೂ ಯೋಗ್ಯವಾದ ಉಡುಗೊರೆಯಿಂದ ಸನ್ಮಾನಿಸಿ ಆಶೀರ್ವದಿಸಿದ ಮೇಲೆ ಶ್ರೀಗಳ ಸ್ವಾರಿಯು ಮಹಾಲಿಂಗಪುರಕ್ಕೆ ಹೊರಟು, ಅಲ್ಲಿಗೆ ಹಗಲು ೧೧ ಗಂಟೆಗೆ ತಲ್ಪಿತು. ಅಲ್ಲಿ ಶ್ರೀಮನ್ಮಹಾಸ್ವಾಮಿಗಳನ್ನು ಸೋತ್ಸವದಿಂದ ಇದಿರ್ಗೊಂಡು ಕರಕೊಂಡು ಹೋಗುವ ಸಲುವಾಗಿ ವೀರಶೈವ ಮಹಾಜನರೂ ಇತರ ಧರ್ಮದ ಅನೇಕರೂ ಕೂಡಿದ್ದುದಲ್ಲದೆ ಮುಧೋಳ ಸಂಸ್ಥಾನದ ರಾಜೇಸಾಹೇಬ ಸರಕಾರದವರಿಂದ ಕಳುಹಿಸಲ್ಪಟ್ಟ ರಾವಸಾಹೇಬ ಪೋಲೀಸ ಇನ್‌ಸ್ಪೆಕ್ಟರರು ತಮ್ಮ ಯೋಗ್ಯವಾದ ಸಿಬ್ಬಂದಿಯೊಡನೆ ಹಾಜರಿದ್ದು, ಎಲ್ಲ ಬಿರುದಾವಳಿಗಳಸಹವಾಗಿ ಶ್ರೀಗಳ ಸ್ವಾರಿಯು, ಕಣ್ಣುನೋವಿನ ದೆಸೆಯಿಂದಲೂ, ಪಲ್ಲಕ್ಕಿಯನ್ನು ಭಕ್ತಾಗ್ರಹದಿಂದ ಇನ್ನೊಂದು ಊರಿಗೆ ಮೊದಲೇ ಕಳುಹಿಸಿದುದರಿಂದಲೂ ಪಂಚಕಲಶೆಯುಕ್ತವಾದ ಮೇಣಾದಲ್ಲಿ ಕುಳಿತು, ಒಳ್ಳೇ ಸಮಾರಂಭಪೂರ್ವಕವಾಗಿ ಮಹಾಲಿಂಗಪುರದೊಳಗೆ ಶ್ರೀ ಮಹಾಲಿಂಗೇಶ್ವರನ ಭವ್ಯವಾದ ಮಠಕ್ಕೆ ೧೨ ಗಂಟೆಗೆ ಹೋಯ್ತು. ಮಹಾಲಿಂಗಪುರ ಗ್ರಾಮವು ಕೂಡ ಭವ್ಯವಾದ ಪ್ರೋಸೀ ಅಗಸೆಗಳಿಂದಲೂ ತಳಿರತೋರಣರಂಭಾ ಸ್ತಂಭ ಧ್ವಜಪತಾಕಾವಳಿಯಿಂದಲೂ ಶೃಂಗರಿಸಲ್ಪಟ್ಟದ್ದು, ಜನ ಸಮ್ಮರ್ದದಿಂದ ತುಂಬಿ ತುಳುಕುತ್ತಿತ್ತು. ಈ ವಿಧವಾಗಿ ಮಹೋತ್ಸವಪೂರ್ವಕವಾಗಿ ಮಹಾಲಿಂಗಪುರದ ಭಕ್ತಮಾಹೇಶ್ವರರು ಒಳ್ಳೇ ವಿಜೃಂಭಣೆಯಿಂದ ತಮ್ಮ ಗ್ರಾಮಕ್ಕೆ ಶ್ರೀಗಳನ್ನು ಬರಮಾಡಿಕೊಂಡು ಧೈರ್ಯದಲ್ಲಿ ಶ್ರೀಗಳ ಸೇವೆಯಲ್ಲಿ ಸನ್ನದ್ಧರಾಗಿರುವರು. ಮಾಘವದ್ಯ ೩೦ ಮಂಗಳವಾರದದಿವಸ ಶ್ರೀ ಚನ್ನಗಿರೀಶ್ವರ ದೇವಾಲಯದಲ್ಲಿ ದೊಡ್ಡ ಸಮಾರಾಧನೆಯನ್ನು ಮಾಡಿಸಿ ಮ|| ರಾ|| ರಾ|| ರಾಯಪ್ಪಾ ಬಾಳಪ್ಪಾ ಅಣ್ಣಾ ಚೆಂಚಲಿ ಎಂಬ ಒಬ್ಬ ಸದ್ಭಕ್ತನು ಶ್ರೀಮನ್ಮಹಾಸ್ವಾಮಿಗಳಿಗೆ ಅಲ್ಲಿಗೆ ದಯಮಾಡಬೇಕೆಂದು ಬಿನ್ನಹಪೂರ್ವಕವಾಗಿ ಆಮಂತ್ರಣವನ್ನು ಕೊಟ್ಟುದರಿಂದ ಆ ದಿವಸ, ಶ್ರೀಮಜ್ಜಗದ್ಗುರು ಮಹಾಸ್ವಾಮಿಗಳ ಸ್ವಾರಿಯು ಅಡ್ಡಪಾಲಕ್ಕಿ ಮತ್ತು ಇತರ ಬಿರುದಾವಳಿಗಳ ಸಹಿತವಾಗಿ ಒಳ್ಳೇ ಸಮಾರಂಭದಿಂದ ಹೊರಟು ಮಹೋತ್ಸವದಿಂದ ಯುಕ್ತವಾಗಿ ಶ್ರೀಮಹಾಲಿಂಗೇಶ್ವರ ಮಠದಿಂದ ಶ್ರೀ ಚನ್ನಗಿರೀಶ್ವರ ದೇವಸ್ಥಾನಕ್ಕೆ ಬಿಜಯಂಗೈದಿತು. ಆ ದಿವಸ ಸದರೀ ರಾಯಪ್ಪನೆಂಬ ಶರಣನು ಶ್ರೀಮನ್ಮಹಾಸ್ವಾಮಿಗಳಿಗೆ ೫೦೦ ರೂಪಾಯಿಗಳ ಕಾಣಿಕೆಯನ್ನು ಅರ್ಪಿಸಿದನೆಂದು ತಿಳಿಯುತ್ತದೆ. ಈ ಶರಣನು ಬಡವನಿದ್ದರೂ ಮನಸ್ಸಿನಿಂದ ಉದಾರನೂ ಧರ್ಮನಿಷ್ಠನೂ ಧರ್ಮಕಾರ್ಯತತ್ಪರನೂ ಇರುವನು. ಅಸ್ತು ಮೇಲೆ ಬರೆದಂತೆ ಅಡ್ಡಪಲ್ಲಕ್ಕಿಯ ಮಹೋತ್ಸವವು ಸಕಲಬಿರುದಾವಳಿ ಸಹವಾಗಿ ಸಾಂಗವಾಗಿ ಜರುಗಿತು. ಇನ್ನೂ ಶ್ರೀಮನ್ಮಹಾಸ್ವಾಮಿಗಳ ವಾಸ್ತವ್ಯವು ಮಹಾಲಿಂಗಪುರದಲ್ಲಿ ಪುಷ್ಕಲದಿವಸಗಳ ವರೆಗೆ ಆಗತಕ್ಕದ್ದಿದ್ದು, ಮುಂದೆ ನಡೆಯುವ ಸಂಗತಿಗಳನ್ನು ತಿಳಿಸುವೆನು.

ತಮ್ಮ ವಿಧೇಯನಾದ

ತಮ್ಮಣ್ಣಪ್ಪ ಸತ್ಯಪ್ಪ ಚಿಕ್ಕೋಡಿ.

ಉತ್ತಮ ಗ್ರಂಥಗಳು.

6

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ, ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.— ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು,
ಹೊಸಮಠ ಮೈಸೂರು.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು. 10

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

ರಾಸ್ಕೋಪಸಿಸ್ಟಂ ಪೇಟಂಟ ಲೀವರ್ ಜ್ಯೂವೆಲ್ಡ್ ವಾಚ್

ROSKOPF
SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಅಯಿದು (೫) ವರುಷಗಳು ಗ್ಯಾರೆಂಟು.

ಕ್ರಯ ರೂ. ೨-೮-೦ ವಿ. ಪಿ. ಚಾರ್ಜು ರೂ. ೦-೪-೦.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ ೦-೮-೦ ವಿ. ಪಿ. ಚಾರ್ಜು ೦-೪-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ. ನಂಬರು ೨೦ ಸಿಂಗಣ್ಣಬೀದಿ, ವಾಲಾಟಾಕ್ಸ್ ರೋಡು, ಮದರಾಸು.

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

13 **ಲೋಕಾಮಯಹಾರ ಕಸ್ತೂರೀ ಮಾತ್ರೆ.**

ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ(ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ,ಅರೋಚಕ ಇನ್ನೂಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನುಸೇವಿಸುತಿರುವವರು ಖಂಡಿತವಾಗಿಯೂ ಪ್ಲೇಗಿನಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೮ ಕುಪ್ಪಿವರೆಗೆ ಪೋಸ್ಟೇಜು ೪ ಆ.

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ:—ಸೀತಾರಾಘವ ವೈದ್ಯಶಾಲಾ,
ಮೈಸೂರು.

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು. 10

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು.

ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಮೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ,
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District

ಪದ್ಮರಾಜ ಪುರಾಣಂ.

69

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಅಣೆ.

ಬಿ. ಮಲ್ಲಾರಾಧ್ಯರು,
ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ ಬಿ. ಬಸವಾರಾಧ್ಯರು,
ಡೆಪ್ಯುಟಿ ರಿಜಿಸ್ಟ್ರಾರ್, ಚೀಫ್ ಕೋರ್ಟ್,
ಬೆಂಗಳೂರು.

ಉತ್ತಮ ಗ್ರಂಥಗಳು.

110

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂಸೇರಿವೆ

ಸೌಂದರ ಪುರಾಣ — ೦.೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ ರಪಂಚೆಪ್ರು ಗಧ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿಃ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ,
ಮೈಸೂರು.

೧೯೧೧ನೇ ಇಸವಿ ಮಾರ್ಚಿ ತಾ॥ ೧೩ ರಿಂದ ೧೯೧೧ ಮಾರ್ಚಿ ತಾ॥ ೧೯ ರವರೆಗೆ ಸಲ್ಲುವ ಶಾಲಿವಾಹನ [illegible] ೧೮೩೩ ನೇ ಸಾಧಾರಣ ಸಂವತ್ಸರದ ಫಾಲ್ಗುಣ [illegible] ದಶಿಯಿಂದ ಫಾಲ್ಗುಣ ಬ॥ ಪಂಚಮಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗ
13	ಸೋ	ಚ	57-53	ಮಖ	87-[illegible]
14	[1]ಮಂಗ	ಪೌ	56-27	ಪುಬ್ಬ	37-[illegible]
15	ಬುಧ	ಪಾ	60-10	ಉತ್ತರ	[illegible]
16	[2]ಗುರು	ಬಿ	1-12	ಹಸ್ತ	[illegible]
17	ಶುಕ್ರ	ತ	0-18	[illegible]	[illegible]
18	[3]ಶನಿ	ಚೌ	4-4	[illegible]	[illegible]
19	ಭಾನು	ಪಂ	8-4[illegible]	[illegible]	[illegible]

(೧) ಹೋಳಿಹಬ್ಬ. ಕಾಮ[illegible] ಥಿ. ನರಸೀಪುರದಲ್ಲಿ ಪ್ರಹ್ಲಾದ[illegible] ರದಲ್ಲಿ ಗುಂಜಾನರಸಿಂಹಸ್ವಾಮಿ [illegible] ಯಸ್ವಾಮಿಗಳ ಪುಣ್ಯದಿನ.

ಮೈಸೂರ್ : ವೈ. ವಿರೂಪಾಕ್ಷ[illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿ[illegible]

REGISTERED NO. M. 194

ಮೈಸೂರ್ ಸ್ಟಾರ್

ಪ್ರ ತಿ ಸೋ ಮ ವಾ ರ ಪ್ರ ಕ ಟ ಸ ಲ್ಪ ಡು ವು ದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನಸ್ತ್ವಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಕೆಯಿಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಮಾರ್ಚಿ ತಾರೀಖು ೨೦ ನೇ ಸೋಮವಾರ. [ಸಂಚಿಕೆ ೧೨

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಜಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಚೆನ್ನು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚ ವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ [illegible] ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

ಗುಣವಾಗದಿದ್ದರೆ ಹಣಪರತ.

ಮ ದ ನೋ ದ್ಭ ವ ಗು ಳ ಗೆ.

[illegible] ಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲ [illegible], ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು [illegible] ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋ [illegible] ಪೋತ್ತೇಜಕ, ಮನೋತ್ಸಾಹಕ ಗರ್ವಿ ಟಾಕಿ) [illegible] ನ ವೇಳೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, [illegible] ದ ಬಾಧೆಗಳು, ಕಟಿಶೂಲೆ, ವಾತರೋ [illegible] ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿ [illegible], ರತಿಸುಖಕ್ಕೆ ಸಂಪೂರ್ಣಶಕ್ತಿ [illegible] ಬಟ್ಟರಿಗೆ ೩೦ ಗುಳಿಗೆಗಳವರೆಗೆ [illegible] ತ್ರ ೨೦ ಗುಳಿಗೆಗಳಿಗೆ ೧ ರೂ. ಒಮ್ಮೆ [illegible] ಕಳುಹಿಸಿದರೆ ೪ ರೂ. ಗಳಿಗೆ ಕೊ [illegible]. ಬೇರೆ ಅನುಪಾನಪತ್ರಿಕೆಯನ್ನು [illegible] ಕಳುಹಿಸುವೆವು. ಅರ್ಧಾಣೆ ಸ್ಟಾಂಪು [illegible] ನಿನ ಕ್ಯಾಟಲಾಗ್ ಪುಕಟ ರವಾ [illegible]

ವಿಳಾಸ—

[illegible] ಎಲ್. ಜೋಶಿ ಮತ್ತು ಕಂಪನಿ,

[illegible] ಬನವಾಸಿ, ಜಿಲ್ಲಾ ಉತ್ತರಕನಡಾ.

ಪಂ ಡಿ ತ ಎ ಶ್. ಗ ರ ಳ ಪು ರಿ ಇ ವ ರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
32 ಮೈ ಸೂ ರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬ ೪—೦—೦. ೧೦ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮— ೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೦—೦.

ದಂತಶುದ್ಧಿ ಚೂರ್ಣ.— ಡಬ್ಬ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

31

೧. ಸ್ವರ್ಣಗಂಗಾಧರಮಾತ್ರೆ.— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ

೨. ಸರ್ವಮೇಹರಾಜಾಂಗ ರಬ್ಬರ್ಎಣ್ಣೆ.— ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರೆಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೆಬ್ಬು, ವ್ರಣ, ಕುಷ್ಟ, ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ.— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂಟಿಮೇಹ, ಮೂತ್ರಕೃಚ್ಛ್ರ ಅಸ್ತಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ—ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚು ೬ ಆಣೆ.

೯. ಮಹಾಕುಂಡಲ್ಯಾದಿರಸಾಯನ— ಇದರಿಂದ ಕ್ಷಯ ಕಾಸ, ಜ್ವರ, ದೀಪನ, ಪಾಂಡುರೋಗ, ಉನ್ಮಾದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾವಲ್ಲಕ.— ಇದರಿಂದ ಗಂಟಲ್ಲು ಉರಿಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೨ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶ ನೀರು ಎರೆಯುವಾಗ ಜ್ಞಾನ ತಪ್ಪುವುದು ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚೇಷ್ಟೆಗಳು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಪುರಬತ್ತುಗಳೂ, ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ—

ಎಂ. ಪಂಡಿತ ಚನ್ನಬಸಪ್ಪ ಅಂಡ್‌ಸನ್ಸ್,

ಚನ್ನಪಟ್ಟಣ, ಬೆಂಗಳೂರು ಡಿಸ್ಟ್ರಿಕ್ಟ್

ಸೌಗಂಧಿಕಾಪರಿಣಯ.

(ಕಳೆದವಾರದ ಶೇಷ.)

ಯುಗ್ಮವು ಸರಸವಾಡುತ ಸಂಚರಿಸುವ ರಭಸಕ್ಕೆ ಸಮುದ್ರವು ಇಬ್ಭಾಗವಾಗಿ ಒಳಗೆ ಕಾಣಿಸುವ ಪರ್ವತಶಿಖರದೊಳ್ ರಾಶಿರಾಶಿಯಾಗಿರುವ ಪದ್ಮರಾಗಮಣಿಗಳು ಬಡಬಾಗ್ನಿಯಂತೆ ಕಂಗೊಳಿಸುವುವೆಂದು ವಿಜ್ಞಾಪಿಸುತ ತೆರಳುತ್ತಿರುವಲ್ಲಿ, ಆ ಲವಣ ಸಮುದ್ರದ ಪಶ್ಚಿಮತೀರವು ಸಮೀಪವಾಗಲು, ಅದನ್ನೋಡಿ, ಅದುಕೋ ತವರುಮನೆಯಿಂದ ಪತಿಗೃಹವನ್ನೈದಲೆಣಿಸಿ, ತಳುವಾಗಿ ಭಯವಿನಯದಿಂ ಬರುತ್ತಿರುವ ಕನ್ನೆಯರಂತೆ, ಮಹಾಪರ್ವತದಿಂದುದ್ಭವಿಸಿ ಭೂಭಾಗವಂ ಭೇದಿಸುತ, ಸಮುದ್ರವು ಸಮೀಪವಾಗಲು ಶಾಂತವಾಗಿ, ಮುಳಲೊಟ್ಟಗಳಿಂ ಕೂಡಿ ಬರುವ ನದಿಗಳು ಸಮುದ್ರದಲ್ಲಿ ಸಂಗಮಂಗೊಂಡು ಅನ್ಯೋನ್ಯವಾಗಿರುವಂತೆ ಕಾಣಿಸುವುವೆಂದು ಪೇಳುತ, ಸಮುದ್ರದ ಪಶ್ಚಿಮತೀರವಂ ಸೇರಿ, ಪ್ಲಕ್ಷದ್ವೀಪದ ಯಶಸ್ವಿಖಂಡವಂ ಹೊಂದಿ, ಮಣಿಕೂಟಪರ್ವತವಂ ಅತಿಕ್ರಮಿಸಿ, ಅರುಣಾನದಿಯಂ ದಾಂಟಿ ತೆರಳುತ, ಇದುಕೊ ಪುಷ್ಪಿಸಿರುವ ಕಕ್ಕೆಮರಗಳಿಂ ನಿಬಿಡವಾದ ವನದಿಂ ಸುತ್ತುವರಿದು, ಉನ್ನತವಾದ ಶಿರೋಭಾಗದೊಳ್ ಅತಿ ನೀಲವಾದ ವನದಿಂ ಕೂಡಿ ಶೋಭಿಸುವ ಪರ್ವತಯುಗ್ಮವು ಭೂದೇವಿಯು ಹರಿದ್ರಾಚೂರ್ಣದಿಂದನುಲಿಪ್ತವಾದ ಚೂಚುಕಗಳಿಂ ಕೂಡಿದ ಸ್ತನಯುಗ್ಮದಂತೆ ಕಂಗೊಳಿಸುವುದು ಎಂದು ಪೇಳುತ, ಸಮುದ್ರಖಂಡವನ್ನೋಡುತ, ವಜ್ರಕೂಟಪರ್ವತವನ್ನತಿಕ್ರಮಿಸಿ ಕ್ಷಮಾಖಂಡವನ್ನೈದಿ, ಧೂಮ್ರವಂತಪರ್ವತಶಿಖರದ ಮೇಲುಭಾಗದಲ್ಲಿ ನಿಂತು, ಮುಂದೆ ಕಾಣುವ ಪಟ್ಟಣವಾವುದೆಂದು ಛಾಯಾಗುಪ್ತನಂ ಕೇಳಲು, ಅವನು ಎಲೈ ಸ್ವಾಮಿಯೆ—ಅದೇಯೇ ಅಪರಿಮಿತ ರತ್ನಕಲಶಪಙ್ಕ್ತಿಯಿಂದಲೂ, ಕನಕರಂಜಿತಗೋಪುರಹರ್ಮ್ಯಗಳಿಂದಲೂ, ಸುವರ್ಣಸ್ತಂಭಗಳಿಂ ಕೂಡಿರುವ ಪ್ರಾಸಾದಪಙ್ಕ್ತಿಯಿಂದಲೂ ಸಮುದ್ರದಂತೆ ನಾನಾರತ್ನಸಾರಭೂತಗಳಾದ ಅಂಗಡಿವೀದಿಗಳಿಂದಲೂ, ಅತ್ಯಂತ ಖಾತವಾದ ಅಗಳಿನಿಂದಲೂ, ಐದುಸುತ್ತಿನ ಕೋಟಕೊತ್ತಲಗಳಿಂದಲೂ, ತೋರಣ ಧ್ವಜಪತಾಕಾನಿಕರದಿಂ ಕೂಡಿರುವ ರಾಕ್ಷಸಭವನಗಳಿಂದಲೂ, ಕುಬೇರಭವನವಂ ಅಪಹಾಸಗೊಳಿಸುವ ರಾಜಭವನಗಳಿಂದಲೂ, ಮತ್ತೂ ಕಲಿಪುರುಷನ ಬಂಧುಗಳಂತೆ ನಿಶಿಭೀಷಣರಾದ ರಾಕ್ಷಸನಿಕರಗಳಿಂ ಅನೇಕ ವಿಧೋದ್ಯಾನಪಙ್ಕ್ತಿಯಿಂ ಸುತ್ತುವರಿದಿರುವ ಶಾಖಾನಗರದಿಂದತಿಭೀಷಣವಾದ ಸಂಯಮಿನೀಪಟ್ಟಣದಂತೆ ತೋರುವ ಈ ವಿಮಲಪುರವು, ಉಗ್ರಬಾಹುವೆಂಬ ರಾಕ್ಷಸಾಧಿಪತಿಗೆ ಆವಾಸಸ್ಥಾನವಾಗಿರುವುದು ಎಂದು ಪೇಳಿ, ಮುಂದೆ ತೆರಳುತ, ಸುಪ್ರಭಾನದೀತೀರದೊಳಿಳಿದು, ಇಲ್ಲಿಗೆ ಆ ವಿಮಲಪುರದ ಶಾಖಾನಗರವು ಒಂದೆ ಯೋಜನದಲ್ಲಿರುವುದರಿಂದ ರಾಕ್ಷಸರ ಸಂಚಾರವು ಇಲ್ಲ ಬಹಳವಾಗಿರುವುದು; ಮತ್ತೂ ಮಹಾಗಜವು ಯಿರುವ ಪುರದ ಹೊರಗಣ ಉದ್ಯಾನವನವು ಇಲ್ಲಿಗೆ ಮೂರುಯೋಜನ ದೂರದಲ್ಲಿರುವುದೆಂದು ನುಡಿದು, ಆ ನದೀತೀರದ ಉದ್ಯಾನವನದಲ್ಲಿ ನೃಪಮಂತ್ರಿಗಳನ್ನಿಳುಹಿಸಿ, ತಳಿರುಗಳಿಂದ ಹಾಸಿಗೆಯಂ ಹಾಕಿ, ಬಳಿಕ ಅಮೃತಸದೃಶವಾದ ಫಲಗಳಂ ತಂದುಕೊಡಲಾಗ ರಾಜಮಂತ್ರಿಗಳೀರ್ವರೂ ಸ್ವಲ್ಪಹೊತ್ತು ವಿಶ್ರಮಿಸಿಕೊಂಡು, ಸಾಯಂಕಾಲವಾಗಲು ಸಂಧ್ಯಾನಿಯಮವನ್ನೆರವೇರಿಸಿ, ಛಾಯಾಗುಪ್ತನು ತಂದಿದ್ದ ಫಲಗಳಂ ಭುಂಜಿಸಿ, ಸುಖನಿದ್ರೆಯಿಂದಾ ರಾತ್ರಿಯಂ ಕಳೆದು, ಅರುಣೋದಯಸಮಯದೊಳ್ ಸುಗಂಧರಾಜೇಂದ್ರನು ಸುಮತಿಯಂ ಕುರಿತು—ಎಲೈ ಮಿತ್ರನೆ, ನಾವು ರಾಕ್ಷಸನ ಪುರದ ಸಮೀಪಕ್ಕೆ ಬಂದಬಳಿಕ ಇನ್ನೇಕೆ ವಿಳಂಬವು? ಧನುಷ್ಟಂಕಾರವಂ ಮಾಡಿ ರಾಕ್ಷಸರಂ ಕೆಣಕಿ, ಮೇಲೆಬಿದ್ದು ಬಂದವರೆಲ್ಲರಂ ಸಂಹರಿಸಿ, ಮಹಾಗಜವಂ ವಶವಂಮಾಡಿಕೊಂಡು ತೆರಳೋಣವೆ? ಮತ್ತೇನಾದರೂ ವಿಮರ್ಶೆಯುಂಟೊ? ಎಂದು ಕೇಳಲು; ಆ ಮಾತಂ ಕೇಳಿ ಸುಮತಿಯು—ಅಯ್ಯಾ ರಾಜಶಿರೋಮಣಿಯೇ, ಕಪಟಶೀಲರಾದ ರಾಕ್ಷಸರ ಕಪಟಮೂಲದಿಂದಲೇ, ಲೋಕಮೆಚ್ಚುವಂತೆ ಅವರನ್ನಿಗ್ರಹಿಸಿ, ಮುಖ್ಯ ಕಾರ್ಯವಾದ ಬಳಿಕ, ಸಂಗಡಲೇ ಮಹಾಗಜವು ಸ್ವಾಧೀನವಾಗುವುದು. ಈಗ ಆಗುವ ಕಾರ್ಯವು ಮತ್ತೆರಡುದಿನದ ಮೇಲೆ ಆದರೆ ಬಾಧಕವೇನು? ಇಷ್ಟರಲ್ಲೇ ಯುದ್ಧಕ್ಕೆ ನಿಮಿತ್ತವುಂಟಾಗುವುದಕ್ಕೆ ಛಾಯಾಗುಪ್ತನಂ ಹಂಸರೂಪವಂ ತಾಳುವಂತೆ ನಿಯಮಿಸಿ, ನಾವೀರ್ವರೂ ಆ ಹಂಸಾರೂಢರಾಗಿ, ಅಲ್ಲಲ್ಲಿ ಸಂಚರಿಸುತಲಿದ್ದರೆ, ರಾಕ್ಷಸಾಧಿಪತಿಯಾದ ಉಗ್ರಬಾಹುವಿಗೆ ತಿಳಿದು ನಮ್ಮನ್ನಾದರೂ ಕರೆಕಳುಹಿಸುವನು, ಇಲ್ಲದಿದ್ದರೆ ನೋಡಲೆಣಿಸಿ ತಾನಾಗಿ ನಮ್ಮ ಬಳಿಗೆ ಬರುವನು, ಇವೆರಡೂ ಘಟಿಸದಿದ್ದರೆ ಆ ಬಳಿಕ ಯಾವನಿಮಿತ್ತದಿಂದಲಾದರೂ, ಯುದ್ಧಯತ್ನವಂ ಮಾಡಿ, ಕಾರ್ಯವಂ ಸಾಧಿಸಬಹುದೆಂದು ವಿಜ್ಞಾಪಿಸಿ, ಛಾಯಾಗುಪ್ತನಂ ಕರೆದು ಎಲೈ ಯಕ್ಷಾಧಿಪನೇ ಮುಂದಣ ಕಾರ್ಯಕ್ಕೋಸುಗ ಹಂಸರೂಪವಂ ತಾಳುವನಾಗೆಂದು ನಿಯಮಿಸಲು, ಆಕ್ಷಣದಲ್ಲಿಯೇ ಛಾಯಾಗುಪ್ತನು ಮಹಾಪ್ರಸಾದವೆಂದು ಬ್ರಹ್ಮಲೋಕದಿಂದಿಳಿದುಬಂದ ಮರಾಳನಂತೆ ದಿವ್ಯಹಂಸರೂಪವಂ ತಾಳಲು, ಆಗ ಸುಗಂಧರಾಜೇಂದ್ರನು ಸ್ನಾನಾಹ್ನಿಕಗಳನ್ನೆರವೇರಿಸಿ, ಸುಮತಿಯೊಡಗೂಡಿ, ಹಂಸರೂಪನಾದ ಛಾಯಾಗುಪ್ತನನ್ನೇರಿ, ಸುಪ್ರಭಾನದಿಯ ಉಭಯತೀರದೊಳ್ ಮನಬಂದಂತೆ, ಸಂಚರಿಸುತ್ತಿರಲಾಗ ಆ ನದಿಯೊಳ್ ಜಲಕ್ರೀಡೆಯನ್ನಾಡುತ್ತಿದ್ದ ರಾಕ್ಷಸರು ಅವರನ್ನೋಡಿ ಆಶ್ಚರ್ಯಪಟ್ಟು, ವೇಗದಿಂ ಪೋಗಿ, ಆಸ್ಥಾನದಲ್ಲಿ ಕುಳಿತಿದ್ದ ಉಗ್ರಬಾಹುವಿಗೆ ಈ ಅರ್ಥವಂ ತಿಳುಹಿಸಲು, ಅದಂ ಕೇಳಿ ರಾಕ್ಷಸಾಧಿಪನು ಅವರ್ಯಾರು? ಅವರಿಳಿಯುವ ಸ್ಥಾನವಂ ತಿಳಿದು, ನಾವು ಬರಹೇಳಿದೆವೆಂದು ಕರೆತರುವರಾಗಿರಿ ಯೆಂದು ಅಧಿಕಾರಿಗಳಿಗೆ ನಿಯಮಿಸಿ, ಅವರು ಮಹಾಪ್ರಸಾದವೆಂದು, ನದೀತೀರದಲ್ಲಿ ಸ್ನಾನಜಪವಂ ಮಾಡುತಲಿರುವ ನೃಪಮಂತ್ರಿಗಳ ಬಳಿಗೆಬಂದು, ಇವರಾರೋ ಮನುಷ್ಯಾಧಿಪರುಗಳೆಂದು ನಿಶ್ಚಯಿಸಿ, ಆ ಕಾರ್ಯನಿಯಮವು ನೆರವೇರಿದ ಬಳಿಕ ಸಮೀಪಕ್ಕೆ ಪೋಗಿ, ಕೈಮುಗಿದು, ಅಯ್ಯಾ ನರಪತಿಗಳೇ! ನೀವು ಯಿಲ್ಲಿಗೆ ಬಂದಿರುವುದಂ ನಮ್ಮ ರಾಕ್ಷಸೇಶ್ವರನು ತಿಳಿದು, ನಿಮ್ಮಂ ನೋಡಲೆಣಿಸಿ, ಕರೆಯಲೋಸುಗ ನಮ್ಮಂ ಕಳುಹಿಸಿರುವನು. ನೀತಿಜ್ಞನಾದ ನಮ್ಮ ಅರಸಿನಬಳಿಗೆ ರಾಕ್ಷಸನೆಂಬ ಶಂಕೆಯಂ ಬಿಟ್ಟು ಬರಬಹುದು, ಮತ್ತೂ ನಮ್ಮ ಅರಸನಂ ಬಹುಮಂದಿ ನರಪತಿಗಳು ಅನುವರ್ತಿಸುತಲಿರುವರು, ಎಂದು ಪೇಳಲು, ಅದಂ ಕೇಳಿ, ಅವರೀರ್ವರೂ ಆ ರಾಕ್ಷಸರಂ ಕುರಿತು ನಿಮ್ಮ ರಾಕ್ಷಸೇಶ್ವರನು ನಮ್ಮನ್ನೋಡಲೆಣಿಸಿದ ಬಳಿಕ, ನಮಗೆ ಸಂತೋಷವಾಯಿತು. ಇದುಕೊ ಬರುವೆವೆಂದು ಪೇಳಿ, ಆಗಲೇ ಹಂಸಾರೂಢರಾಗಿ, ಅಂತರಿಕ್ಷಮಾರ್ಗದಿಂ ಪೋಗುತ, ರಾಕ್ಷಸಾಧಿಪತಿಯ ಸಮ್ಮುಖಕ್ಕೆ ಪೋಗುತ್ತಲಿರುವ, ಸಿಂಹ, ಗಜ, ವರಾಹ, ವಾನರ, ಸರ್ಪ, ಮಾರ್ಜಾಲ, ಹಯ, ಗಾರ್ದಭಗಳಂತೆ ಮುಖವುಳ್ಳ ಪಟುಭಟರಂ, ಶೂಲ, ಕುಂತ, ಮುಸಲ, ತೋಮರ, ಶಕ್ತಿ, ಖಡ್ಗ, ಪರಶು ಮೊದಲಾದ ಆಯುಧಗಳಂ ಪಿಡಿದು ತೆರಳುತ್ತಿರುವ ಪದಾತಿಸಂಘವಂ, ಎರಡು, ಮೂರು, ನಾಲ್ಕು ಮುಖಗಳಿಂದತಿಭೀಷಣರಾಗಿ, ಗಜೋಷ್ಟ್ರ ಗರ್ದಭಾಶ್ವ ವೃಷಭಾರೂಢರಾಗಿ, ವಿವಿಧಾಯುಧಗಳಂ ಝಳಪಿಸುತ ಪೋಗುತಲಿರುವ ಯಾತುಧಾನನಿಕರವಂ ಕೂಡ ನೋಡಿ, ಇವರ ನಿಗ್ರಹವು ದೇವತೆಗಳಿಂದಲೂ, ಆಗಲಾರದೆಂದು ಯೋಚಿಸುತಲಿರುವ ನೃಪತಿಯನ್ನೋಡಿ, ಇಂಗಿತಜ್ಞನಾದ ಸುಮತಿಯು—ಅಯ್ಯಾರಾಜೇಂದ್ರನೇ ಮನದೊಳೇನೊ ಒಂದು ಅರ್ಥವಂ ಊಹಿಸಿಕೊಂಡು ಚಿಂತಿಸುತಿರುವಂತೆ ತೋರುತ್ತಲಿದೆ. ಈ ರಾಕ್ಷಸರು ಮದಾಂಧರು; ಅನಾಚಾರಶೀಲರು, ಸತ್ಯವೆಂಬುವುದು ಎಳ್ಳಷ್ಟೂ ಇಲ್ಲ. ಮತ್ತೂ ಸ್ವಬಲಪರಬಲವಿಚಾರವಿಲ್ಲ. ಜ್ಞಾನಶೂನ್ಯರು; ಧರ್ಮಕಂಟಕರು ಆದುದರಿಂದ ಇವರಿಗೆ ದೈವಸಹಾಯ ನಡೆಯಲಾರದು, ನಿಮಗೆ ದೈವಬಲದಿಂದ ಒದಗಿರುವಸಾಧನಗಳನ್ನೋಡಿದರೆ, ದವಾಗ್ನಿಗೆಸಿಲುಕಿದ ತೃಣರಾಶಿಗಳಂತೆ ಇವರು ನಷ್ಟರಾಗುವರು, ಆದುದರಿಂ ಮನದ ವಿಕಲ್ಪವಂ ಬಿಡುಯೆಂದು ಪೇಳುತ ವಿಮಲಪುರದ ಸಮೀಪವನ್ನೈದಿ, ಪ್ರಾಕಾರಗಳಂ ದಾಂಟಿ, ಕಾಲಮೃತ್ಯುವೇ ರಾಕ್ಷಸರಂ ಕರೆಯಲು ಬಂದಂತೆ ನೃಪಮಂತ್ರಿಗಳೀರ್ವರೂ ಉಗ್ರಬಾಹುವಿನ ಆಸ್ಥಾನದ ಬಳಿಯಲ್ಲಿ ಹಂಸೆಯಿಂದಿಳಿದು, ರಾಕ್ಷಸಾಧಿಪನ ಸಮೀಪಕ್ಕೆ ಪೋಗಲು,

ಸಶೇಷ.

ಸ್ತ್ರೀವಿದ್ಯಾಭ್ಯಾಸ.

(ಹಿಂದಣ ಶೇಷ.)

ಎಲ್ಲ ಸ್ತ್ರೀಯರೂ, ಈ ಮೂರುಬಗೆಯ ಶಿಕ್ಷಣದಲ್ಲಿ ಸಂಸ್ಕೃತರಾದರೆ, ಅಂತಹರು ಉತ್ತಮ ಗೃಹಿಣಿಯರೆನಿಸುವುದರಲ್ಲಿ ಸಂದೇಹವಿರದು. ಆದರೆ ವಿಶೇಷ ಶಿಕ್ಷಣದ ವಿಷಯದಲ್ಲಿ ಎಲ್ಲರೂ ಅಧಿಕಾರಿಗಳಾಗಿದ್ದರೂ, ಅದು ಸಾಧ್ಯವೆನಿಸುವುದಿಲ್ಲ. ವಿಶೇಷ ಶಿಕ್ಷಣಕ್ಕೆ ಪುರುಷರಂತೆಯೇ ಸ್ತ್ರೀಯರೂ ಅರ್ಹರೆನಿಸಬೇಕಾದರೆ, ಸ್ತ್ರೀಗೆ ಪ್ರತಿಬಂಧಕಪರಂಪರೆಗಳಿರಬಾರದು. ಇಂತಹ ಪ್ರತಿಬಂಧಕಗಳಿಲ್ಲದ ಸ್ತ್ರೀಯರು ಎಂದರೆ ಮದುವೆಯನ್ನೇ ಅಪೇಕ್ಷಿಸದೆ ಪರಿವ್ರಾಜಿಕೆಯಾಗಿರುವವರು, ಬಾಲ್ಯದಲ್ಲಿಯೇ ವಿಧವೆಯರಾಗಿ ಪುನರ್ವಿವಾಹಕ್ಕೆ ಇಷ್ಟಪಡದವರು, ಇಲ್ಲವೆ ಮಕ್ಕಳಾಗದ ಬಂಜೆಯರು, ಅಥವಾ ಕೆಲಸಮಾಡಿದರೂ ಕುಂದದಂತಹ ಅತ್ಯಂತ ಬಲಿಷ್ಠೆಯರಾದ ಸ್ತ್ರೀಯರು ಇಂತಹರು ಮಾತ್ರವೇ ವಿಶೇಷಶಿಕ್ಷಣದಿಂದ ಉದ್ಗ್ರಂಥಗಳನ್ನೂ, ಶಾಸ್ತ್ರಾಂತರಗಳನ್ನೂ, ವಿಶೇಷವಾಗಿ ಅಭ್ಯಾಸಮಾಡಿ ಕೀರ್ತಿಯನ್ನು ಸಂಪಾದಿಸಬಹುದಾಗಿದೆ. ವಾದದಲ್ಲಿ ಪುರುಷರನ್ನೂ ಸೋಲಿಸಿದಂತಹ ನಾರೀಮಣಿಗಳೂ ಹಿಂದೆ ಯಿದ್ದರು. ಯುದ್ಧವಿಶಾರದೆಯರಾದ ಸಾಧ್ವಿಗಳೂ ಇದ್ದರು. ಆದುದರಿಂದ ಸ್ತ್ರೀಯರು ಎಲ್ಲ ಕೆಲಸದಲ್ಲಿಯೂ ಮುಂದುವರಿಯಲು ಅಡ್ಡಿಯಿರುವುದಿಲ್ಲ. ಇಂತಹ ವಿಶೇಷ ಶಿಕ್ಷಣದಿಂದ ಸಂಸ್ಕೃತರಾದ ಸ್ತ್ರೀಯರು ಲೋಕೋಪಕಾರದಲ್ಲಿ ವರ್ತಿಸಿ ಆತ್ಮಾವಲಂಬನೆಯಿಂದಲೇ ಸತತಿಯನ್ನು ಸಂಪಾದಿಸಬಹುದಾಗಿದೆ. ವಿಶೇಷಶಿಕ್ಷಣದಿಂದ ಸಂಸ್ಕೃತರಾಗಿ ಸಚ್ಚರಿತೆಯರಾದ ಸ್ತ್ರೀಯರು ಉಪಾಧ್ಯಾಯಿನಿಯರಾಗಿಯೂ, ವೈದ್ಯವಿದ್ಯಾವಿಶಾರದೆಯರಾಗಿಯೂ ಕೈಗೆಲಸಗಳಲ್ಲಿಯೂ ಕೃಷಿಯಲ್ಲಿಯೂ ಪ್ರವರ್ತಿಸಿ, ಆತ್ಮಾವಲಂಬನೆಯನ್ನು ಪಡೆದು ಪರರಿಗೆ ಉಪಕರಿಸಬಹುದು. ಶಾಸ್ತ್ರಶೋಧನೆಗಳ ಮೂಲಕ ಹೊಸ ಸಂಗತಿಗಳನ್ನು ಸುಲಭವಾಗಿ ಲೋಕಕ್ಕೆ ತಿಳಿಸಬಹುದು; ಗ್ರಂಥಗಳನ್ನು ರಚಿಸಬಹುದು. ಅತ್ಯುಚ್ಚ ಶಿಕ್ಷಣದಿಂದ ಯಂತ್ರರಚನೆಗಳಲ್ಲಿಯೂ, ವೈದ್ಯುತ ಮೊದಲಾದುವುಗಳಲ್ಲಿ ನವೀನವಿಷಯಗಳನ್ನು ಕಂಡು ಹಿಡಿಯುವುದರಲ್ಲಿಯೂ, ಮತ ಧರ್ಮ ಮೊದಲಾದುವನ್ನು ಸ್ತ್ರೀಜನರಿಗೆ ಬೋಧಿಸಿ, ಜಗತ್ತನ್ನೆಲ್ಲ ಸನ್ಮಾರ್ಗಕ್ಕೆ ತಿರುಗಿಸುವುದರಲ್ಲಿಯೂ ಸಹಾಯ ಮಾಡಬಹುದಾಗಿದೆ. ಸಚ್ಛಿಕ್ಷಣವು ಪುರುಷನನ್ನಾದರೂ ಸ್ತ್ರೀಯನ್ನಾದರೂ ಉತ್ತಮರನ್ನಾಗಿಯೇ ಮಾಡುವುದು.

ಮುಖ್ಯವಾಗಿ ನಾವು ಸಂಸಾರಿಕ ಸ್ತ್ರೀಯರ ವಿಷಯವಾಗಿ ಹೇಳಬೇಕಾದುದೇನೆಂದರೆ—ಸಂಸಾರವೆಂಬುದು ಒಂದು ರಾಜ್ಯವಾಗಿದೆ. ಇಂತಹ ರಾಜ್ಯದಲ್ಲಿ ಪುರುಷನು ರಾಜನಾಗಿಯೂ, ಪತ್ನಿಯು ಮಂತ್ರಿಯಾಗಿಯೂ ಇರುವಳೆಂದು ಭಾವಿಸಬಹುದು. ರಾಜ್ಯಕ್ಕೆ ಅನೇಕ ಶಾಖೆಗಳಿದ್ದು ಆ ಶಾಖೆಗಳಲ್ಲಿ ಉಪಶಾಖೆಗಳಾಗಿ ಪ್ರತಿಯೊಂದಕ್ಕೂ ಬೇರೆಬೇರೆಯಾದ ವಿಚಾರಕರು ಇದ್ದರೂ, ರಾಜ್ಯದಲ್ಲಿ ಶಾಂತಿಸುಖಗಳು ಸ್ಥಾಯಿಯಾಗಲು ಎಷ್ಟೋ ತತೆಗಳಿರುವುವು. ಸಂಸಾರರಾಜ್ಯದಲ್ಲಿ ಎಲ್ಲಾ ಅಧಿಕಾರವೂ ಪತ್ನಿಯೊಬ್ಬಳ ಮೇಲೆಯೇ ಬಿದ್ದ ಹೊರೆಯಾಗಿದೆ. ಆಕೆಯು ಎಷ್ಟು ಚತುರತೆಯಿಂದಲೂ, ಜಾಗರೂಕತೆಯಿಂದಲೂ ಸಂಸಾರವನ್ನು ನಿರ್ವಹಿಸುವಳೊ, ಅಷ್ಟಷ್ಟು ಸುಖವೃದ್ಧಿಯಾಗಿ ಆ ರಾಜ್ಯವು ದೇವರಾಜ್ಯವೆನಿಸುವುದು. ಸಂಸಾರವೆಂಬ ಬಂಡಿಯನ್ನು ಎಳೆಯಲು ಗಂಡಹೆಂಡಿರಿಬ್ಬರೂ ಸಮನಾಗಿ ಪ್ರಯತ್ನಿಸಬೇಕು. ಇಲ್ಲದಿದ್ದರೆ ಒಂದು ಎತ್ತು ಹಿಂದಕ್ಕೂ ಮತ್ತೊಂದೆತ್ತು ಮುಂದಕ್ಕೂ ಎಳೆದಾಡಲಾರಂಭಿಸಿದರೆ, ಬಂಡಿಯು ಹೇಗೆ ನಡೆಯಲಾರದೋ, ಹಾಗೆಯೇ ಸಂಸಾರವೂ ಸುಖದಿಂದ ಸಾಗುವುದಿಲ್ಲ. ಒಂದು ಭಾರವಾದ ಹೊರೆಯನ್ನು ಒಂದು ಕೈಯಿಂದ ಎತ್ತುವುದಕ್ಕಿಂತಲೂ, ಎರಡು ಕೈಯಿಂದಲೂ ಎತ್ತುವುದು ಎಷ್ಟು ಸುಲಭೋಪಾಯವೆಂಬುದನ್ನು ಯೋಚಿಸಿದರೆ, ದಂಪತಿಗಳು ಪ್ರತಿವಿಷಯದಲ್ಲಿಯೂ ಐಕಮತ್ಯದಿಂದಲೂ, ಪ್ರೀತಿಯಿಂದಲೂ ವರ್ತಿಸಬೇಕಾಗಿದೆ. ಆದುದರಿಂದ ನಮ್ಮ ಭಾರತರಮಣಿಯರು ಉತ್ತಮ ಶಿಕ್ಷಣದಿಂದ ಸಂಸ್ಕೃತರಾಗಿ, ದುಷ್ಕಾರ್ಯಗಳಿಗೂ ಅಪವಾದಕ್ಕೂ ಆಸ್ಪದವನ್ನು ಕೊಡದೆ, ಪತಿಯೇ ದೈವವೆಂದು ತಿಳಿದು, ಅವರ ಛಾಯಾನುವರ್ತಿಗಳಾಗಿ ಸ್ವಧರ್ಮವನ್ನು ರಕ್ಷಿಸಿ ಸಾಧ್ವೀಮಣಿಗಳೆನಿಸಲೆಂದು ನಾವು ಪ್ರಾರ್ಥಿಸುವೆವು.

ಸ್ತ್ರೀಶಿಕ್ಷಣವು ಉತ್ತಮವೆನಿಸಬೇಕಾದರೆ, ಬೋಧಿಸುವ ಗ್ರಂಥಗಳು ಸದ್ಧರ್ಮೋಪದೇಶವನ್ನೇ ಮಾಡತಕ್ಕುವುಗಳಾಗಿರಬೇಕು. ಉತ್ತಮವಾದ ನಡೆನುಡಿಗಳುಳ್ಳ ಸಾಧ್ವೀಮಣಿಗಳೇ ಉಪಾಧ್ಯಾಯಿನಿಯರಾಗಿರಬೇಕು. ಪುರುಷರ ಶಿಕ್ಷೆಯೇ ನಿಲ್ಲಿಸಲ್ಪಡಬೇಕು. ಬಹುಮಾನದ ಆಶೆಗಾಗಲೀ ಲೌಕಿಕಪ್ರತಿಷ್ಠೆಗಾಗಲೀ ವಿದ್ಯಾಭ್ಯಾಸವೆಂದು ತಿಳಿಯುವಂತಿರಬಾರದು. ತಮ್ಮ ಬಾಲಿಕೆಯರು ಸ್ವಧರ್ಮವನ್ನೂ ಸದಾಚಾರವನ್ನೂ ಕಲಿಯಬೇಕೆಂದು ಜನರು [illegible] ದು ಶಾಲೆಗೆ ಕಳುಹಿಸುವಂತಿರಬೇಕು. ನಂಬಿಕೆಯಾದ ಸ್ಥಳ—ನಂಬಿಕೆಯಾದ ಶಿಕ್ಷಣ—ನಂಬಿಕೆಯಾದ ಉಪಾಧ್ಯಾಯಿನಿಯರು—ಇವುಗಳನ್ನೇ ಜನರು ಇದಿರುನೋಡುತ್ತಿರುವರು. ಸರ್ವಮತೀಯರೂ ಆಯಾಮತಧರ್ಮವನ್ನು ತಿಳಿಯುವುದು ಹೆಚ್ಚಲ್ಲ; ಅದನ್ನು ಸದ್ವರ್ತನೆಯಿಂದ ಸಾರ್ಥಕಪಡಿಸಬೇಕಾಗಿದೆ. ಹಾಗೆಯೇ ಸ್ತ್ರೀಯು ವಿದ್ಯಾವತಿಯೆನಿಸುವುದು ಹೆಚ್ಚಲ್ಲ; ತನ್ನ ನಡೆನುಡಿಯಲ್ಲಿ ಪ್ರಾಮಾಣಿಕತೆಯಿಂದ ವರ್ತಿಸಿ ಸಾಧ್ವಿಯಾಗಿರಬೇಕಾಗಿದೆ. ಇಂತಹ ಉತ್ತಮ ಶಿಕ್ಷಣವನ್ನು ನಮ್ಮ ಬಾಲಿಕೆಯರಲ್ಲಿ ಸ್ಥಿರಗೊಳಿಸಬೇಕಾದರೆ, ಜನರು ಸುಮ್ಮನೆ ಕುಳಿತಿದ್ದರೆ ಸಾಧ್ಯವಿಲ್ಲ. [illegible] ತಮ್ಮ ಧರ್ಮಬೋಧನೆಯನ್ನು ತಮ್ಮ ಮಕ್ಕಳಿಗೆ ಹೇಗೆ ಕೊಡಿಸಬಹುದೆಂಬುದನ್ನು ಗೊತ್ತುಮಾಡಿ, ಆ ರೀತಿಯಾಗಿ ಸಣ್ಣಸಣ್ಣ ಪಾಠಶಾಲೆಗಳನ್ನು ಪ್ರತಿಗ್ರಾಮದಲ್ಲಿಯೂ ಮಾಡಿಕೊಂಡು, ತಮ್ಮ ಬಾಲಿಕೆಯರನ್ನು ಉತ್ತಮಗೃಹಿಣಿಯರಾಗುವಂತೆ ತಿದ್ದುವುದು ಶ್ರೇಯಸ್ಕರವಾದುದು. ಎಲ್ಲವೂ ಸರ್ಕಾರದಿಂದಲೇ ನಿರ್ವಹಿಸಲ್ಪಡಲೆಂದು ಸುಮ್ಮನಿದ್ದರೆ, ಸರ್ವಮತವನ್ನೂ ಸಮಭಾವದಿಂದ ನೋಡಬೇಕಾದ ರಾಜ್ಯಭಾರಕ್ರಮವು ಒಂದೇ ಮತಧರ್ಮಬೋಧನೆಯನ್ನು [illegible] ಮ್ಮ ಅವಸರಕ್ಕೆ ತಕ್ಕಂತೆ ಹೇಗೆ ಸಾಧ್ಯಮಾಡಿಕೊಡಲಾಗುವುದು? ಆದುದರಿಂದ ಸ್ತ್ರೀವಿದ್ಯಾಭ್ಯಾಸವು [illegible] ಲ್ಲಿ ಉತ್ತಮವೆನಿಸಬೇಕಾದರೆ, ಆ ಭಾಗವನ್ನು ಜನರೇ [illegible] ಸುವುದು ಮೇಲಾಗಿದೆ.

ಆರ್, ಶ್ರೀನಿವಾಸ[illegible]

ಆಂಧ್ರ ಮಹಿಳಾ ಮಹಾಸಭೆ.

ದೇಶೀಯಾಭಿವೃದ್ಧಿಗೆ ಪುರುಷರಂತೆಯೇ ಸ್ತ್ರೀಯರ ಸುಧಾರಣೆಯೂ ಅವಶ್ಯಕವಾದುದೆಂದು ತಿಳಿಯಲ್ಪಟ್ಟಿರುವುದಷ್ಟೆ. ಅದಕ್ಕನುಗುಣವಾಗಿ ವರ್ಷೆವರ್ಷೆ ರಾಷ್ಟ್ರೀಯಸಾಮಾಜಿಕ ಮಹಾಸಭೆಯ ಜತೆಗೇ ಭಾರತಮಹಿಳಾ ಸಭೆಯನ್ನು ಕೂಡ ನಡೆಯಿರುವ ಪದ್ಧತಿಯು ಕಳೆದ ೪—೫ ವರ್ಷಗಳಿಂದ ನಡೆಯುತ್ತ, ಅದರಲ್ಲಿ ಸ್ತ್ರೀಸುಧಾರಣೆಯ ಉಪಾಯಗಳು ಯೋಚಿಸಲ್ಪಡುತಿವೆ. ಆದರೆ ಅಂಥ ಸಭೆಗಳಿಗೆ ಬೇರೆ ಬೇರೆ ದೇಶಭಾಗಗಳ ನಾರೀಮಣಿಯರೆಲ್ಲ ಸೇರುತ್ತಿರುವುದರಿಂದ ಅಲ್ಲಿನ ಚರ್ಚೆಗಳೆಲ್ಲಾ ಆಂಗ್ಲಭಾಷೆಯಲ್ಲೇ ನಡೆಯುತ್ತಿರುವುವು. ಆ ರಾಜಭಾಷೆಯನ್ನರಿಯದ ನಾರೀಮಣಿಯರಿಗೆ ಅಂಥ ಸಭಾಕಾರ್ಯಗಳಿಂದ ಪ್ರಯೋಜನವಾಗುತ್ತಿಲ್ಲವಾದ ಪ್ರಯುಕ್ತ ಆಂಧ್ರದೇಶದ ನಾರೀಮಣಿಯರೆಲ್ಲರ ಹಿತಾರ್ಥವಾಗಿ ಪ್ರತಿವರ್ಷದಲ್ಲೂ "ಆಂಧ್ರಮಹಿಳಾಸಭಾ" ಯೆಂಬುದೊಂದನ್ನು ಬೇರೆಬೇರೆ ಕಡೆಯಲ್ಲಿ ನಡೆಯಿಸುತ್ತ ಬರಬೇಕೆಂಬ ಪ್ರಯತ್ನವು ಈಗ ನಡೆದಿದೆ. ಪ್ರಥಮ ಸಭೆಯು ಬರುವ ಏಪ್ರಿಲ್ ತಿಂಗಳಲ್ಲಿ ಗೋದಾವರಿ ಜಿಲ್ಲೆಗೆ ಸೇರಿದ ಕೋಕನಾಡದಲ್ಲಿ ಜರುಗುವುದು. ಈ ಸಭೆಗೆ ಆಂಧ್ರದೇಶದಲ್ಲಿರುವ ಚಾತುರ್ವರ್ಣ್ಯಕ್ಕೆ ಸೇರಿದ ಹೆಂಗುಸರೆಲ್ಲರೂ ಬರಬಹುದು. ಎಲ್ಲರ ಸತ್ಕರಣಕ್ಕೂ ಸತ್ಕಾರಕ ಸಂಘದವರು ಏರ್ಪಡಿಸಿರುತ್ತಾರೆ. ಚಂದಾಮೂಲಕ ಧನವನ್ನು ಶೇಖರಿಸಿ, ಸಭಾಕಾರ್ಯವನ್ನು ನೆರವೇರಿಸುವವರಾಗಿದ್ದಾರೆ. ಸ್ತ್ರೀಯರ ವಿದ್ಯಾಭಿವೃದ್ಧಿ—ಸದ್ಧರ್ಮಾಭಿವೃದ್ಧಿಗಳನ್ನು ಮಾಡಬೇಕೆಂಬುದೇ ಈ ಸಭೆಯ ಮುಖ್ಯೋದ್ದೇಶವು. ಸಭೆಯಲ್ಲಿ ಯಾವ ನಾರೀಮಣಿಯಾದರೂ ಉಪನ್ಯಾಸವನ್ನು ಮಾಡಬಹುದು. ಅವರು ಮಾಡುವ ಉಪನ್ಯಾಸವನ್ನು ಮುಂದಾಗಿ ಬರೆದು ಏಪ್ರಿಲ್ ತಾ॥ ೧ ರೊಳಗಾಗಿ ಸಭೆಯ ಕಾರ್ಯದರ್ಶಿನಿಯವರ ಹೆಸರಿಗೆ ಕಳುಹಿಸಬೇಕು. ವಿದ್ಯಾವಿಷಯ—ಸಂಘವಿಷಯ—ಗೃಹಕೃತ್ಯವಿಷಯ—ಎಂಬ ಈ ಮೂರು ವಿಷಯಗಳಲ್ಲಿ ಅಂತರ್ಗತವಾಗುವ ಯಾವವಿಷಯವನ್ನಾದರೂ ಕುರಿತು ಉಪನ್ಯಾಸಮಾಡಬಹುದು. ಶ್ರೀಮತಿ ಪುಲುಗುರ್ತ ಲಕ್ಷ್ಮೀನರಸಮಾಂಬ ಎಂಬುವರು ಇದಕ್ಕೆ ಮುಖ್ಯಪ್ರೋತ್ಸಾಹವನ್ನು ಕೊಟ್ಟು ಕಾರ್ಯದರ್ಶಿನಿಯರಾಗಿ ನಿಂತರುತ್ತಾರೆ. ಆಂಧ್ರದೇಶಾಭಿಮಾನಿಗಳೂ ಸ್ತ್ರೀಸುಧಾರಣಾಭಿಮಾನಿಗಳೂ ಆದ ಮಹನೀಯರೆಲ್ಲರೂ ಈ ಪ್ರಯತ್ನಕ್ಕೆ ಜಯವನ್ನುಕೋರಿ, ಈ ಕಾರ್ಯಕ್ಕೆ ಸ್ವಪರಸಹಾಯಗಳನ್ನು ಮಾಡುವುದು ಅತ್ಯವಶ್ಯಕವಾಗಿರುತ್ತದೆ. ಅನ್ಯರ ಹೇಳಿಕೆಯಿಂದ ಒಂದು ಕೆಲಸವನ್ನು ಮಾಡುವುದಕ್ಕಿಂತಲೂ ತಾವಾಗಿ ಒಂದು ಕೆಲಸವನ್ನು ಮಾಡುವುದರಲ್ಲಿ ಲಾಭವು ಹೆಚ್ಚು. ತಾವಾಗಿ ಪ್ರವರ್ತಿಸುವವರಿಗೂ ಒಂದು ಕಾರ್ಯದಲ್ಲಿನ ಕಷ್ಟಸುಖಗಳೂ ನ್ಯೂನಾತಿರೇಕಗಳೂ ಗೋಚರವಾಗುವುದಲ್ಲ. ಸ್ತ್ರೀಯರಲ್ಲಿ ನಲೋಪಗಳನ್ನು ಪರಿಹರಿಸುವುದಕ್ಕೆ ಪುರುಷರ ಪ್ರಯತ್ನವು ಸಂಪೂರ್ಣ ಫಲಕಾರಿಯಾಗುವುದಿಲ್ಲ. ಮತ್ತೂ ಸ್ತ್ರೀಯರು ಸಹ ನಡುಕಟ್ಟನಿಲ್ಲದಿದ್ದರೆ ಸಮಾಜದ—ಮತ್ತೂ ಗೃಹಕೃತ್ಯದ ಸುಧಾರಣೆಗಳು ಪರಿಪೂರ್ಣವಾಗುವುದಿಲ್ಲ. ದೇಶದ ಅನರ್ಥಕ್ಕೆ ಮೂಲವಾದುವೆಂಬ ಕಾರಣದಿಂದ ಯಾವ ಬಾಲ್ಯವಿವಾಹ ಮೊದಲಾದ ಪದ್ಧತಿಗಳನ್ನು ತಪ್ಪಿಸುವುದಕ್ಕೆ ದೇಶಾಭಿಮಾನಿಗಳಾದ ಪುರುಷರು ಕಳೆದ ಅರ್ಧ ಶತಮಾನದಿಂದಲೂ ಪ್ರಯತ್ನಿಸುತ್ತಿರುವರೋ ಅಂಥ ಕಾರ್ಯಗಳನ್ನು ಮಾಡುವುದಕ್ಕೆ ಸ್ತ್ರೀಯರು ತಾವಾಗಿ ಪ್ರವರ್ತಿಸದರೆ ಅರ್ಧದಶಕದೊಳಗಾಗಿ ಇದು ವರೆಗೂ ಸಾಧ್ಯವಾಗದಿದ್ದಷ್ಟು ಫಲವನ್ನು ಕೂಡ ಸಾಧ್ಯವಾಗಿ ಮಾಡಿಕೊಳ್ಳಬಲ್ಲರು. ಅದು ಕಾರಣ, ಅವರು ತಮ್ಮ ವಿದ್ಯಾ—ಬುದ್ಧಿ ವಿವೇಕ ಮೊದಲಾದುವುಗಳನ್ನು ಬಳಿಯುಸಿಕೊಂಡು, ತಮ್ಮೊಳಕೆ ಕಾಲೋಚಿತವಾದ ಸೌಕರ್ಯ ಸಾಧನಗಳೇನೆಂಬುದನ್ನು ನಿರ್ಧರಿಸಿ, ಆಚರಿಸುತ್ತ ಬಂದರೆ, ಅವರುಗಳಿರುವ ಮನೆಯು ಲಕ್ಷ್ಮೀನಿವಾಸವಾಗಿಯೂ, ಅವರ ದೇಶವು ದೇವಲೋಕಸಮನಾಗಿಯೂ ಪರಿಣಮಿಸುವುದು. ಪ್ರಕೃತದಲ್ಲಿ ನಮ್ಮ ದೇಶದ ಪುರುಷಮಂಡಲಿಯಲ್ಲೇ ಆಂಗ್ಲಭಾಷೆಯನ್ನರಿತವರು ವಿಶೇಷವಾಗಿಲ್ಲದಿರುವಾಗ ಸ್ತ್ರೀಮಂಡಲದಲ್ಲಿ ಆಂಗ್ಲಭಾಷಾಭಿಜ್ಞರು ಅತ್ಯಂತ ವಿರಳವಾಗಿರುವರೆಂಬುದನ್ನು ಹೇಳಬೇಕಾಗಿಲ್ಲ. ದೇಶೀಯ ಭಾಷೆಯನ್ನು ಮಾತ್ರ ತಿಳಿದಿರುವ ನಮ್ಮ ನಾಡಿನ ನಾರೀಮಣಿಯರಲ್ಲಿ ಸ್ವೋದ್ಧಾರ ಪ್ರಯತ್ನ ಜಾಗರೂಕತೆಯುಂಟಾಗುವಂತೆ ಮಾಡಲು ಪ್ರಯತ್ನಿಸಿದವರು ದೇಶೀಯರೆಲ್ಲರ ಕೃತಜ್ಞತೆಗೂ ಪಾತ್ರರಾಗಿರುತ್ತಾರೆ. ಸದ್ಯಕ್ಕೆ ಆಂಧ್ರದೇಶದ ಸ್ತ್ರೀಮಂಡಲದಲ್ಲಿ ಹುಟ್ಟಿರುವ ಈ ಸ್ವೋದ್ಧಾರಕಶ್ರದ್ಧೆಯು ಇತರ ಭಾಗದ ಮಹಿಳಾಮಂಡಲಿಗೆಲ್ಲಾ ಮಾರ್ಗದರ್ಶಕವಾಗುವಂತೆ ಅವರು ಹಿಡಿದಿರುವ ಪ್ರಯತ್ನವು ಜಯಶೀಲವಾಗಲೆಂದು ನಾವು ಕೋರುತ್ತೇವೆ.

ವ್ಯವಸಾಯಕ ವಿಷಯಗಳು.

ಎಳ್ಳಿನ ಪೈರಿನ ದಂಟನ್ನು ಕೊರೆಯತಕ್ಕ ಹುಳುಗಳು.

ಎಳ್ಳಿನ ಪೈರಿನ ದಂಟನ್ನು ಕೊರೆಯತಕ್ಕ ಹಳುಗಳು ಸುಮಾರು ಅರ್ಧ ಅಂಗುಲಕ್ಕಿಂತ ಸ್ವಲ್ಪ ಕಡಿಮೆ ಉದ್ದವಾಗಿರುತ್ತವೆ. ಇವುಗಳು ಸಾಧಾರಣವಾಗಿ ಜುಲೈ ಅಥವ ಆಗಸ್ಟು ತಿಂಗಳಿನಲ್ಲಿ ಅಂದರೆ ಎಳ್ಳು ಪೈರಾಗಿ ಸುಮಾರು ಆರು ವಾರಗಳಾಗಿರುವಾಗ್ಯೆ ಕಾಣಿಸಿಕೊಳ್ಳುತ್ತವೆ. ಹುಳುಗಳು ಅಸಂಖ್ಯಾತವಾಗಿ ಕಾಣಿಸಿಕೊಂಡು ಒಂದು ತಿಂಗಳು ಅಥವಾ ಆರು ವಾರಗಳೊಳಗಾಗಿ ತಮ್ಮ ಕೆಲಸವನ್ನು ಪೂರೈಸಿಬಿಡುತ್ತವೆ. ಹೆಣ್ಣು ಹುಳುವು ಎಲೆಗಳ ಕೆಳಭಾಗದಲ್ಲಿ ದಿಂಡಿಗೆ ಸಮೀಪವಾಗಿ ಒಂದೊಂದು ಎಲೆಗೆ ಒಂದೊಂದು ಮೊಟ್ಟೆಯಂತೆ ಇಡುತ್ತದೆ. ಈ ಮೊಟ್ಟೆಗಳು ಒಡೆದು ಹಳದಿ ಬಣ್ಣದ ಹುಳುಗಳು ಈಚೆಗೆ ಬರುತ್ತವೆ. ಸದರೀ ಹುಳುಗಳು ಅಲ್ಲಿಂದ ತೂತು ಕೊರೆದುಕೊಂಡು ಎಲೆಗಳ ಮಧ್ಯದ ದಿಂಡಿನೊಳಕ್ಕೆ ಪ್ರವೇಶಿಸಿ ಅಲ್ಲಿಂದ ಎಲೆಗಳ ತೊಟ್ಟುಗಳ ಮಾರ್ಗವಾಗಿ ಗಿಡದ ದಂಟಿಗೆ ಪ್ರವೇಶಿಸುತ್ತವೆ. ಎಲೆಗಳಲ್ಲಿ ಇವುಗಳು ಇರುವದನ್ನು ಈ ಕೆಳಗೆ ಹೇಳುವ ಚಿನ್ಹೆಗಳಿಂದ ಗೊತ್ತುಮಾಡಬಹುದು.

(೧) ಎಲೆಗಳು ಸುರುಳಿ ಸುತ್ತಿಕೊಳ್ಳುವದು ಅಥವ ಬಾಡಿಹೋಗಿರುವದು. (೨) ಎಲೆಯ ಮೇಲ್ಭಾಗದಲ್ಲಿ ಮಧ್ಯದಲ್ಲಿರತಕ್ಕ ದಿಂಡಿನ ಸಮೀಪದಲ್ಲಿ ಹಳದಿ ಬಣ್ಣದ ಗೀರು ಕಾಣಿಸುವದು. (೩) ಪೂರ್ತಾ ಎಲೆಯಾಗಲಿ ಅಥವ ಒಂದು ಭಾಗವಾಗಲಿ ಒಣಗಿ ಹೋಗುವದು. (೪) ಕೆಲವು ಸಂಧರ್ಭಗಳಲ್ಲಿ ಎಲೆಯ ಕೆಳಭಾಗದಲ್ಲಿ ಮಧ್ಯದ ದಿಂಡು ಮತ್ತು ಎಲೆಯ ತೊಟ್ಟು ಸಹಾ ಬಹಳ ದಪ್ಪನಾಗುವದು.

ಮೇಲೆ ಹೇಳಿದ ಎರಡನೆ ಚಿನ್ಹೆಯು ಕಾಣಿಸಿಕೊಂಡ ೧೦ ಅಥವ ೧೨ ದಿನಗಳಲ್ಲಿ ಹುಳಗಳೆಲ್ಲವೂ ಪೈರಿನ ದೊಡ್ಡ ದಿಂಡಿನೊಳಕ್ಕೆ ಸೇರಿಕೊಂಡು ಬಿಡುವವು. ನಂತರದಲ್ಲಿ ಅವುಗಳನ್ನು ಹಿಡಿದು ನಾಶಮಾಡುವದು ಅಸಾಧ್ಯ. ದೊಡ್ಡ ದಿಂಡಿನ ಒಳಗೆ ಹುಳುಗಳು ಸೇರಿದೊಡನೆಯೇ ಇವುಗಳು ಪೈರಿನ ತುದಿಯಿಂದ ತಾಯಿ ಬೇರಿನ ಬುಡದ ವರಿವಿಗೂ ಕೊರೆದುಕೊಂಡು ಅಲ್ಲಿ ಮುಂದಿನ ಜುಲೈ ತಿಂಗಳ ವರಿವಿಗೂ ವಾಸಿಸುತ್ತವೆ. ಅವು ಯಾವ ಎಲೆಯಿಂದ ದಿಂಡಿನೊಳಕ್ಕೆ ಪ್ರವೇಶ ಮಾಡಿದವೋ ಆ ಎಲೆಯು ಬಿದ್ದುಹೋದಾಗ ಅವು ದಿಂಡಿನಿಂದ ಮತ್ತೊಂದು ಎಲೆಯ ತೊಟ್ಟಿನ ವರಿವಿಗೂ ಕೊರೆದಬಿಡುವವು. ಹೀಗೆ ಮಾಡುವದು ಉಸುರಾಡುವದಕ್ಕೋಸ್ಕರ ಮೇಲಕ್ಕೆ ಬರುವದಕ್ಕೆಂದು ತೋರುತ್ತದೆ. ಪೂರ್ಣ ಬೆಳವಳಿಕೆಯನ್ನು ಹೊಂದಿರುವಂಥಾ ಹುಳುವು ಒಂದೂವರೆ ಅಂಗುಲ ಉದ್ದವಾಗಿಯೂ ಶರೀರವೆಲ್ಲಾ ಹಳದಿ ಬಣ್ಣದ್ದಾಗಿಯೂ ಎದೆಯು ಬಹಳ ದಪ್ಪನಾದದ್ದಾಗಿಯೂ ಇರುತ್ತದೆ. ಫಸಲು ಕಟಾವಾದ ನಂತರ ಈ ಹುಳುಗಳು ಚೆನ್ನಾಗಿ ಅಗಿದಿರುವಂಥಾ ಸಪ್ಪಿನ ಹಿಂಡಿಯಿಂದ ಬುಡದ ಬಾಯನ್ನು ಮುಚ್ಚಿಬಿಟ್ಟು ಅದರೊಳಗೆ ಸೌಖ್ಯವಾಗಿ ವಾಸಮಾಡಿಕೊಂಡಿರುತ್ತವೆ.

ಈ ಹುಳುಗಳು ಯಾವದಾದರೊಂದು ಎಲೆಯನ್ನು ಮುತ್ತಿದ ತತ್‌ಕ್ಷಣವೇ ಒಳಕ್ಕೆಸೇರಿಕೊಳ್ಳುವುದಕ್ಕೆ ವಿರಾಮ ಕೊಡದೆ ಆ ಎಲೆಯನ್ನು ಕಿತ್ತುಹಾಕಿಬಿಟ್ಟರೆ ಇವುಗಳ ಹಾವಳಿಯನ್ನು ನಿವಾರಣೆ ಮಾಡಿಕೊಳ್ಳಬಹುದೆಂದ ಮೇಲೆಹೇಳಿದ ಸಂಗತಿಗಳಿಂದ ಚೆನ್ನಾಗಿ ಗೊತ್ತಾಗುತ್ತದೆ. ಹುಳುಗಳು ಕಾಣಿಸಿಕೊಂಡ ತರುಣದಲ್ಲಿಯೇ ೧೦ ಅಥವ ೧೨ ದಿನಗಳಿಗೊಂದಾವರ್ತಿ ಈ ರೀತಿ ಮೂರು ಸಾರಿ ಮಾಡುವದರೊಳಗಾಗಿ ಹುಳುಗಳೆಲ್ಲವನ್ನೂ ನಾಶಮಾಡಿ ಬೆಳೆಯನ್ನು ಉಳಿಸಿಕೊಳ್ಳಬಹುದು.

ಈಚೆಗೆ ಹತ್ತಿಯ ಧಾರಣೆಯು ಬರಬರುತ್ತಾ ವಿಶೇಷ ಚಡಾಯಿಸುತ್ತಿರುವದರಿಂದಲೂ ಹತ್ತಿಯ ಫಸಲು ಬಾಕಿ ಫಸಲುಗಳಿಗಿಂತ ವಿಶೇಷ ಆದಾಯಕರವಾಗಿರುವದರಿಂದಲೂ ಬೀರೂರು ಪ್ರಾಂತ್ಯದಲ್ಲಿನ ರೈತರು ಹತ್ತಿಯ ಫಸಲೊಂದನ್ನೇ ವರುಷಂಪ್ರತಿ ವರುಷವೂ ತಮ್ಮ ಜಮೀನುಗಳಲ್ಲಿ ಇಡುತ್ತಾ ಬಂದಿರುತ್ತಾರೆ. ಇದರಿಂದ ಭೂಮಿಯ ಫಲವತ್ತು ಕಮ್ಮಿಬೀಳುತ್ತಿದೆ. ಈ ದುರವಸ್ಥೆಯನ್ನು ತಪ್ಪಿಸಿ ಹತ್ತಿತೋಟಗಳ ಜಮೀನುಗಳನ್ನು ಒಂದೇಸಮವಾಗಿ ಉತ್ಕೃಷ್ಟದಶೆಯಲ್ಲಿಡುವ ಬಗ್ಗೆ, ಹತ್ತಿಗಿಡಗಳ ನಡುವಣ ಭೂಮಿಯಲ್ಲಿ ಹುರುಳಿಯನ್ನು ಬಿತ್ತಿ ಪೈರು ಮಾಡುವ ಏರ್ಪಾಡನ್ನು ಜಾರೀಗೆ ತರುತ್ತಾ ಬಂದದ್ದರಮೇಲೆ ಅದು ಬಹು ಫಲದಾಯಕವಾಗಿ ಕಂಡು ಬಂದಿರುತ್ತೆ. ೧೯೦೯—೧೦ನೇ ಇಸವಿಯಲ್ಲಿ ಹೀಗೆ ಹತ್ತಿ ಮತ್ತು ಹುರುಳಿಗಳೆರಡನ್ನೂ ಫಸಲು ಮಾಡಿದ ಒಂದಾನೊಂದು ತೋಟದಲ್ಲಿ ೩೦೪ ಪೌಂಡು ಹತ್ತಿಯಾಗಿ ಎಕರೆ ಒಂದಕ್ಕೆ ೪೧ ರೂಪಾಯಿನಂತೆ ಉತ್ಪತ್ತಿಯಾದದ್ದು, ಅದೇ ತೋಟದಲ್ಲಿ ಹತ್ತಿಯೊಂದನ್ನೇ ಫಸಲುಮಾಡಿದಾಗ ೨೯೧ ಪೌಂಡು ಮಾತ್ರ ಬೆಳೆಯಾಗಿ ಎಕರೆಯೊಂದಕ್ಕೆ ೩೪ ರೂಪಾಯಿನಂತೆ ಮಾತ್ರ ಗಿಟ್ಟಿತು. ಹತ್ತಿ ಹುರುಳಿಗಳನ್ನು ಜೊತೆಯಾಗಿ ಬೆಳೆದದ್ದರಲ್ಲಿ ಕಂಡುಬಂದ ಮತ್ತೊಂದು ವಿಶೇಷವೇನೆಂದರೆ, ಹುರುಳಿಯನ್ನು ಬಿತ್ತಿದ ಮೇಲೆ ಅದರ ಪೈರೇನೋ ಹುಲುಸಾಗಿಯೇ ಬೆಳೆಯಿತು ಆದರೆ ಕಾಯಿ ತುಂಬಾ ಬಿಡಲಿಲ್ಲ. ಫಸಲು ಕಟಾವು ಮಾಡಿದಮೇಲೆ ರೇಖೆಯಾದ ಹುರುಳಿಯು ಬಿತ್ತಿದ್ದ ಹುರುಳಿಯ ಪ್ರಮಾಣಕ್ಕಿಂತಸ್ವಲ್ಪವೇ ಅಧಿಕವಾಗಿದ್ದಿತು. ಅಂತು ಮೇಲೆ ವಿವರಿಸಿರುವ ಅನುಭವದಿಂದ, ಜಮೀನನ್ನು ಕೀಳುದಶೆಗೆ ತರದೇ ಇರುವದಕ್ಕಾಗಿ ಮುಖ್ಯವಾದ ಬೆಳೆಯನ್ನು ವರುಷವರುಷಕ್ಕೂ ಬದಲಾಯಿಸಲವಶ್ಯಕವಿರುವದಿಲ್ಲವೆಂಬ ಸಂಗತಿಯು ಸ್ಪಷ್ಟವಾಗುತ್ತದೆ,

---

ನೆಲಗಡಲೆ ಕಾಯಿನ ವ್ಯವಸಾಯಗಾರರು ತಿಳಿದುಕೊಳ್ಳಬೇಕಾದ ಕೆಲವು ಅನುಭವಸಿದ್ಧವಾದ ವಿಷಯಗಳು

ನೆಲಗಡಲೆ ಕಾಯನ್ನು ಇತರ ಯಾವದಾದರೊಂದು ಧಾನ್ಯದ ಜತೆಯಲ್ಲಿ ಬೆಳೆಯುವದು ಯಾವಾಗಲೂ ಹೆಚ್ಚು ಲಾಭಕರವಾಗಿರುವದು. ದಕ್ಷಿಣ ಆರ್ಕಾಟು ಡಿಸ್ಟ್ರಿಕ್ಟಿನಲ್ಲಿ ಒಳ್ಳೆ ವ್ಯವಸಾಯಗಾರರು ಮೊದಲು ಕಂಬು ಧಾನ್ಯ ಒಂದನ್ನೇ ಬಿತ್ತುವರು. ಬಿತ್ತಿದ ನಂತರದಲ್ಲಿ ಭೂಮಿಯನ್ನು ಕೈ ಗುದ್ದಲಿಯಿಂದ ಅಗೆದು ಹೆಂಟೆಗಳನ್ನೆಲ್ಲಾ ಪುಡಿಪುಡಿ ಮಾಡುವರು. ಬಿತ್ತನೆಯಾದ ಸುಮಾರು ಒಂದುತಿಂಗಳ ನಂತರದಲ್ಲಿ ಎರಡನೆ ಆವರ್ತಿ ಭೂಮಿಯನ್ನು ಅಗೆದು ನೆಲಗಡಲೆ ಬೀಜವನ್ನು ನೆಟ್ಟು ಮಣ್ಣು ಮುಚ್ಚುತ್ತಾರೆ. ಇದಾದ ಸುಮಾರು ಆರು ವಾರಗಳ ತರುವಾಯ ಕಂಬು ಧಾನ್ಯವನ್ನು ಕಟಾವು ಮಾಡುವರು. ನಂತರ ನೆಲಗಡಲೆ ಕಾಯಿನ ಪೈರು ಒಂದೇ ಉಳಿಯುತ್ತದೆ. ಕಳೆದ ಮೂರು ವರ್ಷಗಳಲ್ಲೂ ಅಜಮಾಯಿಷಿ ಮಾಡಿ ನೋಡಿದ್ದರಲ್ಲಿ ಈ ರೀತಿಯಾಗಿ ನೆಲಗಡಲೆ ಕಾಯನ್ನು ಬೆಳೆಯುವದು ಬಹಳ ಲಾಭಕರವೆಂದು ಕಂಡುಬಂದಿರುತ್ತದೆ. ಒಂದು ಭೂಮಿಯಲ್ಲಿ ಬರೀ ನೆಲಗಡಲೆ ಕಾಯಿನಫಲವನ್ನೂ ಇನ್ನೊಂದು ಭೂಮಿಯಲ್ಲಿ ಮೇಲೆ ಹೇಳಿದ ರೀತಿ ಕಂಬು ಧಾನ್ಯ ನಂತರ ನೆಲಗಡಲೆ ಪೈರನ್ನೂ ಇಟ್ಟು ಎರಡು ಭೂಮಿಗಳಿಗೂ ಎಕರೆಒಂದಕ್ಕೆ ೭ ಗಾಡಿಗಳ ಮೇರೆ ದನವಿನ ಸಗಣಿ, ಬೂದಿ, ಸೊಪ್ಪು ಮೊದಲಾದ ಗೊಬ್ಬರವನ್ನು ಹಾಕಿ ಪರೀಕ್ಷಿಸಿ ನೋಡಿದಲ್ಲಿ ಅವುಗಳಲ್ಲಿ ಈ ಕೆಳಗಿನ ಪಟ್ಟಿಯಲ್ಲಿ ತೋರಿಸಿರುವಂತೆ ಉತ್ಪತ್ತಿಯು ಕಂಡುಬಂದಿರುತ್ತದೆ.

	೧ ನೇ ವರ್ಷ.	೨ ನೇ ವರ್ಷ.	೩ ನೇ ವರ್ಷ.	೩ ವರ್ಷಗಳ ಸರಾಸರಿ.
	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
1. ನೆಲಗಡಲೆಕಾಯಿನ ಪ್ರತ್ಯೇ ಬೆಳೆ	63—11—0	40—12—9	40—15—0	50— 7—7
2. ಕಂಬು	40—12—9	34— 9—6	53—11—0	...
ನಂತರ ನೆಲಗಡಲೆ. ಪ್ರತ್ಯೇ ಬೆಳೆ.	33—10—3	47—11—0	48—10—0	
ಒಟ್ಟು ಉತ್ಪತ್ತಿ...	74— 7—0	82— 4—6	102- 5—3	86— 5—7

ಎರಡು ಬೆಳೆಗಳನ್ನು ಒಟ್ಟಿಗೆ ಬೆಳೆಯುವದರಿಂದ ಎಕರೆಯೊಂದಕ್ಕೆ ೩೬ ರೂಪಾಯಿನಂತೆ ಹೆಚ್ಚು ಆದಾಯವಿ[illegible]ಯೆಂಬುವದು, ಮೇಲಿನ ಪಟ್ಟಿಯಿಂದ ಸ್ಪಷ್ಟವಾಗುತ್ತ[illegible] ಇಷ್ಟುಮಾತ್ರವೇ ಅಲ್ಲದೆ ಪ್ರತಿ ವರ್ಷದಲ್ಲೂ ಭೂಮಿಯ[illegible] ಸಹ ಹೆಚ್ಚು ಅಭಿವೃದ್ಧಿಗೆ ಬರುತ್ತದೆ. ರಾಗಿ ಪೈರನ್ನೂ ಮತ್ತೂ ನೆಲಗಡಲೆ ಪೈರನ್ನೂ ಜತೆಯಲ್ಲಿ ಹಾಕಿ ಪರೀಕ್ಷಿ[illegible] ನೋಡಿದ್ದಲ್ಲಿ ಕಂಬು ಮತ್ತು ನೆಲಗಡಲೆ ಕಾಯನ್ನು ಜತೆಯ[illegible]ಲ್ಲಿ ಹಾಕಿದರೆ ಎಷ್ಟು ಲಾಭಕರವೋ ಅಷ್ಟು ಲಾಭಕರ[illegible]ಗಿ ಕಂಡುಬರಲಿಲ್ಲ; ಆದರೆ ಬರೀ ನೆಲಗಡಲೆ ಪೈರನ್ನು [illegible]ಕುವದಕ್ಕಿಂತ ಹೆಚ್ಚು ಆದಾಯಕರವೇನೋ ಹೌದು.

ಮೇಲ್ಕಂಡ ತಿಳುವಳಿಕೆಯು ಹೊಸದಾಗಿ ನೆಲಗಡ[illegible]ನ್ನು ಬೆಳೆಯತಕ್ಕ ಜನಗಳಿಗೆ ಬಹಳ ಉಪಯೋಗಕರವಾ[illegible]ದೆ. ಮೊದಲನೆ ಆವರ್ತಿ ನೆಲಗಡಲೆ ಕಾಯನ್ನು ಬೆಳೆ[illegible] ತಕ್ಕವರು ಒಂದು ವರ್ಷದ ಉತ್ಪತ್ತಿಯಿಂದ ಬರತಕ್ಕ [illegible]

ಷ್ಯವನ್ನು ನೋಡಿ ಆಸೆಪಟ್ಟು ಮಾರನೆ ವರ್ಷವೂ ನಂತರ ಅದರ ಮಾರನೆ ವರ್ಷವೂ ನೆಲಗಡಲೆಯನ್ನೇ ಹಾಕುತ್ತಾರೆ. ಇದರಿಂದ ಸುಮಾರು ಮೂರುನಾಲ್ಕು ವರ್ಷಗಳ ಕಾಲದಲ್ಲಿ ಉತ್ಪತ್ತಿಯು ಕಡಿಮೆಯಾಗುವದು ಸ್ವಾಭಾವಿಕವಾಗಿದೆ. ಇದು ನೆಲಗಡಲೆ ಕಾಯಿನ ದೋಷವಲ್ಲ ಆದರೆ ದುಡ್ಡಿನ ಮೇಲೆಯೇ ದೃಷ್ಟಿಯಿಟ್ಟು ವರ್ಷಂಪ್ರತಿಯಲ್ಲೂ ಬೆಳೆಗಳನ್ನು ಬದಲಾಯಿಸದೆ, ನೆಲಗಡಲೆ ಕಾಯಿ ಒಂದನ್ನೇ ಬೆಳೆಯುತಕ್ಕ ವ್ಯವಸಾಯಗಾರರ ತಪ್ಪಾಗಿರುತ್ತದೆ. ಅದ್ದರಿಂದ ಒಂದು ವರ್ಷ ನೆಲಗಡಲೆ ಪೈರನ್ನೂ ಮಾರನೆ ವರ್ಷ ಕಂಬು ಅಥವಾ ಇತರ ಕಾಳುಗಳ ಪೈರನ್ನೂ ಇಡುವದು ಪ್ರತಿವರ್ಷವೂ ನೆಲಗಡಲೆ ಪೈರನ್ನು ಇಡುವದಕ್ಕಿಂತಲೂ ಹೆಚ್ಚು ಆದಾಯಕರವೆಂದು ತಿಳಿಯತಕ್ಕದ್ದು.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮಾರ್ಚಿ ತಾ|| ೨೦ ನೇ ಸೋಮವಾರ.

ತೆರಿಗೆಯ ವಿಧಿ.

ಈಸಲದ ವೈಸ್‌ರಾಯರ ನಿಯಮನಿರ್ಮಾಣ ಸಭೆಯಲ್ಲಿ ಹೊಗೆಸೊಪ್ಪು ಸೀಮೆಯೆಣ್ಣೆ ಮೊದಲಾದ ಕೆಲವು ವಸ್ತುಗಳಮೇಲಿನ ತೆರಿಗೆಯ ಸಂಬಂಧವಾದ ಒಂದು ವಿಧಿಯು ವ್ಯವಹಾರಕ್ಕೆ ಬರುವಂತೆ ಮಾಡಲ್ಪಟ್ಟಿತಷ್ಟೆ. ಭರತಖಂಡಕ್ಕೆ ಅನ್ಯದೇಶಗಳಿಂದ ಬರುವ ಹೊಗೆಸೊಪ್ಪು, ಬೆಳ್ಳಿ, ಸೀಮೆಯೆಣ್ಣೆ ಮೊದಲಾದ ಕೆಲವಸ್ತುಗಳ ಮೇಲೆ ಹೊಸಸುಂಕವು ವಿಧಿಸಲ್ಪಟ್ಟದ್ದಿತಷ್ಟೆ. ಹೊಗೆಸೊಪ್ಪಿನ ಮೇಲೆ ವಿಧಿತವಾಗಿದ್ದ ಆ ತೆರಿಗೆಯು ಈಗ ಅರ್ಧಕ್ಕೆ ಇಳಿಸಲ್ಪಟ್ಟಿರುತ್ತದೆ. ಸೀಮೆಯೆಣ್ಣೆಯ ಮೇಲಣ ತೆರಿಗೆಯು ಮಾತ್ರ ಇನ್ನಷ್ಟು ಹೆಚ್ಚಿಸಲ್ಪಟ್ಟಿರುತ್ತದೆ. ಚೀನಾದೇಶೀಯರು ಅಫೀಮನ್ನು ತರಿಸಿಕೊಳ್ಳುವುದನ್ನು ಸುತರಾಂ ನಿಲ್ಲಿಸಿಬಿಟ್ಟಕಾರಣದಿಂದ ಅಫೀಮಿನ ವ್ಯಾಪಾರದಿಂದ ಭರತಖಂಡದ ಸರ್ಕಾರಕ್ಕೆ ಆಗುತ್ತಿದ್ದ ಆದಾಯವು ತಪ್ಪಿಹೋದಕಾರಣ ಆ ನಷ್ಟವನ್ನು ತುಂಬಿಕೊಳ್ಳುವುದಕ್ಕಾಗಿ ಹೊಗೆಸೊಪ್ಪು ಮೊದಲಾದುವುಗಳ ಮೇಲೆ ಸುಂಕವನ್ನು ಹಾಕಬೇಕೆಂದು ಕಳೆದ ವರ್ಷದಲ್ಲಿ ಏರ್ಪಾಟು ಮಾಡಲ್ಪಟ್ಟಿತು. ಹೊಗೆಸೊಪ್ಪು ಭೋಗ್ಯವಸ್ತುವೇ ಹೊರತು ಆಹಾರ್ಯವಸ್ತುವಲ್ಲವಾದಕಾರಣ ಅದರಮೇಲೆ ಎಷ್ಟು ತೆರಿಗೆಯನ್ನು ಬೇಕಾದರೂ ವಿಧಿಸಬಹುದು. ಅದರ ಮೇಲೆ ಹೆಚ್ಚು ತೆರಿಗೆ ಬಿದ್ದು, ತನ್ಮೂಲಕ ಅದರ ಬೆಲೆಯು ಹೆಚ್ಚಿ, ಆ ಕಾರಣದಿಂದಲಾದರೂ ಅದರ ವ್ಯಾಪನೆಯು ಭರತಖಂಡದಲ್ಲಿ ಕಡಿಮೆಯಾಗಲೆಂದು ಈ ದೇಶೀಯರು ಹಾರೈಸುತ್ತಿದ್ದರು. ಸೀಮೆಯೆಣ್ಣೆಯಾದರೋ ಆಗೋಪಾಲಭೂಪಾಲಪರ್ಯಂತವಾಗಿ ಪ್ರತಿಯೊಬ್ಬ ಕುಟುಂಬಿಗೂ ಅವಶ್ಯಕವಾಗಿಬೇಕಾದ ಪದಾರ್ಥವು. ಆದುದರಿಂದ ಇದರಮೇಲೆ ಸುಂಕವು ಹೆಚ್ಚಿಸಲ್ಪಟ್ಟರೆ, ಎಣ್ಣೆಯ ಬೆಲೆಯೂ ಹೆಚ್ಚಿ, ಅದನ್ನುಪಯೋಗಿಸುವ ಬಡಬಗ್ಗರಿಗೆ ಹೊರೆಯು ಹೆಚ್ಚುವದಾದಕಾರಣ, ಅದರ ಮೇಲೆ ಸುಂಕವನ್ನು ಕಡಿಮೆ ಮಾಡಬೇಕೆಂದು ಆ ಕಾಲದಲ್ಲೇ ನಿಯಮನಿರ್ಮಾಣ ಸಭೆಯ ಸಭಾಸ್ಥರಿಂದ ಪ್ರಾರ್ಥಿಸಲ್ಪಟ್ಟಿತು. ಭರತಖಂಡದ ವರ್ತಮಾನಪತ್ರಿಕೆಗಳೆಲ್ಲವೂ ಹಾಗೆಯೇ ಅಭಿಪ್ರಾಯಪಟ್ಟವು. ಈಗಿನ ಪರ್ಯವಸಾನವನ್ನು ನೋಡಿದರೆ ಎಲ್ಲರಿಗೂ ಯವಾಗುವಂತಿರುತ್ತದೆ. ಏಕೆಂದರೆ—ಇದು ಪ್ರಜೆಗ ಭಿಪ್ರಾಯವನ್ನು ತಲೆಕೆಳಗು ಮಾಡಿರುತ್ತದೆ. ಈ ವಿಷ ತೀರ್ಮಾನವು ಮಾಡಲ್ಪಡತಕೂಡದೆಂದೂ, ಈ ವಿಷ ರ್ಣವಾಗಿ ಚರ್ಚೆಯು ನಡೆಯಲು ಅವಕಾಶವ ಯಬೇಕೆಂದೂ ಸಭಿಕರಿಂದ ಪ್ರಾರ್ಥಿಸಲ್ಪಟ್ಟಿದ್ದರೂ ಕೂಡ, ಯಾವುದೊಂದು ಚರ್ಚೆಗೂ ಅವಕಾಶವನ್ನೀಯದೆ, ಈ ವಿಷಯದಲ್ಲಿ ಮಾಡಲ್ಪಟ್ಟ ಆಕ್ಷೇಪಣೆಗೆ ತಕ್ಕ ಸಮಾಧಾನವನ್ನೂ ಕೊಡದೆ, ಅವಸರದಿಂದ ಹೊಗೆಸೊಪ್ಪಿನ ಮೇಲಿನ ಸುಂಕವನ್ನು ತಗ್ಗಿಸುವ ವಿಧಿಯನ್ನು ಏರ್ಪಡಿಸಿ ಬಿಟ್ಟಿರುತ್ತಾರೆ. ಇಂಥ ಏರ್ಪಾಟು ಪ್ರಜಾನಪೇಕ್ಷಿತವಾಗಿದ್ದರೂ, ವಿಧಿಯಾಗಿ ಮಾಡಲ್ಪಡುವುದಕ್ಕೆ ಪ್ರಬಲವಾದ ಕಾರಣವಿಲ್ಲದೆಯಿಲ್ಲ. ಆದರೆ ಅದನ್ನು ಸರ್ಕಾರವು ಹೊರಪಡಿಸಿಲ್ಲ. ಹೊಗೆಸೊಪ್ಪಿನ ಮೇಲೆ ನೂತನವಾಗಿ ಸುಂಕವು ವಿಧಿಸಲ್ಪಟ್ಟ ಕೂಡಲೇ ಇಂಗ್ಲಂಡಿನ ವರ್ತಕರ ಕೋಲಾಹಲವು ವಿಪರೀತವಾಯಿತು. ಆಂಗ್ಲಜನರು ಭರತಖಂಡದಲ್ಲಿ ಕಾಲಿಡುವುದಕ್ಕೆ ಅವರ ವ್ಯಾಪಾರದ ಪುರೋವೃದ್ಧಿಯೇ ಮುಖ್ಯೋದ್ದೇಶವಾಗಿದ್ದುದರಿಂದ ಈಗಲೂ ಅವರು ಆ ಉದ್ದೇಶಕ್ಕೆ ಎಂದಿಗೂ ಭಂಗವನ್ನು ತಂದುಕೊಳ್ಳತಕ್ಕವರಾಗಿಲ್ಲ. ಅದುಕಾರಣವೇ ಪ್ರಕೃತ ಸಂದರ್ಭದಲ್ಲೂ ತಮ್ಮ ವರ್ತಕರ ಮೊರೆಯನ್ನು ಅಲಕ್ಷೀಕರಿಸಲಾರದೆ ಈ ಏರ್ಪಾಟನ್ನು ಮಾಡಲು ಸಾಹಸಗೊಂಡರೆಂದು ಊಹಿಸಬೇಕಾಗುತ್ತದೆ. ಅದುಹೊರತು ಮತ್ತಾವ ಕಾರಣವೂ ಗೋಚರಿಸುವುದಿಲ್ಲ. ಹೊಗೆಸೊಪ್ಪಿನ ಮೇಲೆ ಹೊಸ ಸುಂಕವು ವಿಧಿಸಲ್ಪಟ್ಟದರಿಂದ ಅನ್ಯದೇಶದಿಂದ ಇಲ್ಲಿಗೆ ಆ ಪದಾರ್ಥಗಳನ್ನು ತರಿಸುವುದು ತೀರ ಕಡಿಮೆಯಾಗಿಹೋಯಿತು. ಹೇಗೆಂದರೆ ೧೯೦೯–೧೦ ನೆಯ ವರ್ಷದಲ್ಲಿ ಹೊಗೆಸೊಪ್ಪಿನ ಪದಾರ್ಥಗಳು ಭರತಖಂಡಕ್ಕೆ ೭೩ ಲಕ್ಷ ಮಣದಷ್ಟು ಬಂದಿದ್ದುವು. ೧೯೧೦–೧೧ ರಲ್ಲಿ ಅದು ೧೪ ಲಕ್ಷ ಮಣಕ್ಕೆ ಇಳಿಯಿತು. ಹೀಗೆ ತಮ್ಮ ವರ್ತಕರ ವ್ಯಾಪಾರಕ್ಕೆ ಉಂಟಾಗುವ ಅನುತ್ಸಾಹವನ್ನು ಆಂಗ್ಲ ಸರ್ಕಾರದವರು ಸೈರಿಸಿಕೊಳ್ಳಲಾದೀತೆ? ಲಾರ್ಡ್ ಮಿಂಟೋರವರು ವೈಸ್‌ರಾಯರಾಗಿದ್ದಾಗ ಒಬ್ಬ ಅಮೇರಿಕಾದೇಶಸ್ಥರೊಡನೆ ಮಾತನಾಡುತ್ತಿರುವಲ್ಲಿ, ಅವರು-ಭರತಖಂಡದ ಕೈಗಾರಿಕೆಯು ಮತ್ತೂ ವ್ಯಾಪಾರದಭಿವೃದ್ಧಿಗಾಗಿ ಪಶ್ಚಿಮ ದೇಶಗಳಿಂದ ಅದರಲ್ಲೂ ಮುಖ್ಯವಾಗಿ ಇಂಗ್ಲೇಡಿನಿಂದ ಇಲ್ಲಿಗೆ ಬರುವ ವಸ್ತುಗಳ ಮೇಲೆ ಸುಂಕವನ್ನು ಏತಕ್ಕೆ ವಿಧಿಸಬಾರದು? ಎಂದು ಕೇಳುವಲ್ಲಿ—"ಹಾಗೆ ಮಾಡುವುದಕ್ಕೆ ಆಂಗ್ಲ ವರ್ತಕರು ಒಪ್ಪುವುದಿಲ್ಲ" ವೆಂದು ಲಾರ್ಡ್ ಮಿಂಟೋರವರೇ ಅಪ್ಪಣೆ ಕೊಡಿಸಿದ್ದರು. ಆ ತತ್ವವೇ ಈಗಿನ ಏರ್ಪಾಟಿನಲ್ಲೂ ಪ್ರತಿಫಲಿಸಿರಬೇಕೆಂಬುದರಲ್ಲಿ ಸಂಶಯವೇ ಇಲ್ಲ. ಆಂಗ್ಲಪ್ರಭುಗಳಿಗೆ ಭರತಖಂಡದಮೇಲೆ ಅಭಿಮಾನವಿರುವುದೇನೋ ನಿಜ. ಆದರೇನು? ಸ್ವಕ್ಷೇಮವನ್ನು ಮೊದಲು ನೋಡಿದಮೇಲೆತಾನೇ ಇತರರ ಕ್ಷೇಮಚಿಂತನೆ. ಆ ಕಾರಣದಿಂದಲೇ ಪ್ರಭುವರ್ಗದವರ ಹಿತಕ್ಕಾಗಿ ಭಾರತೀಯರು ಅನಿಷ್ಟಫಲವನ್ನಾದರೂ ಭೋಗಿಸಬೇಕಾಗಿ ಬಂದಿರುತ್ತದೆ. ಆದರೆ ಇನ್ನಾವ ವಿಧವಾಗಿ ಹೆಚ್ಚು ತೆರಿಗೆಯ ಭಾಗವು ಹೊತ್ತರೂ ಭಾರತೀಯರಿಗೆ ವಿಧಿಯಿಲ್ಲದೆ ಹೊರಬಹುದು. ದೇಶಕ್ಷೇಮಕ್ಕೆ ವಿಘಾತಕವಾದ ದುರ್ವ್ಯಸನಗಳ ಪ್ರಸಾರಕ್ಕೆ ಅವಕಾಶವನ್ನು ಹೆಚ್ಚಿಸುವ ಸಂಗತಿಯು ಮಾತ್ರ ಬಹು ಭಾರಗಾಪವಾಗಿರುತ್ತದೆ.

ಭರತಖಂಡದ ಸುದೈವವು ಚೆನ್ನಾಗಿದ್ದರೆ ಸೀಮೆಯೆಣ್ಣೆಯಂಥ ಸರ್ವೋಪಯೋಗ್ಯವಸ್ತುವು ಇಂಗ್ಲಂಡಿನಿಂದಲೇ ಹುಟ್ಟಿ ಇಲ್ಲಿಗೆ ಬರಬಹುದಾಗಿದ್ದಿತು. ಇದರ ದುರ್ದೈವಕ್ಕೆ ಆ ಯೆಣ್ಣೆಯೇ ಅಮೇರಿಕಾ–ರಷ್ಯಾ ಮೊದಲಾದ ಅನ್ಯದೇಶಗಳಿಂದ ಇಲ್ಲಿಗೆ ಬರುತ್ತಿದೆ. ಅದುಕಾರಣ, ಅವುಗಳ ಮೇಲೆ ತೆರಿಗೆಯನ್ನು ಹೆಚ್ಚಿಸುವುದಕ್ಕೆ ಆಂಗ್ಲ ಸರ್ಕಾರದವರೇನೂ ತಾಪತ್ರಯಪಡಬೇಕಾಗಿರುವುದಿಲ್ಲ. ಇಂಗ್ಲಂಡಿನ ಹೊರತು ಅನ್ಯದೇಶಗಳಿಂದ ಭರತಖಂಡಕ್ಕೆ ಬರುವ ಇನ್ನಾವ ವಸ್ತುಗಳ ಮೇಲೆ ಎಷ್ಟು ಸುಂಕವನ್ನೂ ಬೇಕಾದರೂ ಇಂಡ್ಯಾ ಸರ್ಕಾರದವರು ವಿಧಿಸುವುದಕ್ಕೆ ಹಿಂದೆಗೆಯುವಹಾಗಿಲ್ಲ. ಅದು ಎಷ್ಟು ಹೆಚ್ಚಿದರೂ ಬೊಕ್ಕಸವು ವೃದ್ಧಿಗೊಳ್ಳುವುದು. ಅದರಿಂದ ನಷ್ಟಪಡುವವರು ಭಾರತೀಯರೇ ಹೊರತು ಆಂಗ್ಲವರ್ತಕರಲ್ಲ. ಅದುಕಾರಣ ಸೀಮೆಯೆಣ್ಣೆಯ ಮೇಲೆ ಹೆಚ್ಚು ಸುಂಕಬಿದ್ದರೂ ತನ್ಮೂಲಕ ಅದರ ಬೆಲೆಯು ಹೆಚ್ಚಿದರೂ ಭಾರತೀಯರು ಆ ಹೊರೆಯನ್ನು ಹೊತ್ತುಕೊಳ್ಳಬೇಕಾಯಿತು. ಇದೇ ಸೀಮೆಯೆಣ್ಣೆಯು ಇಂಗ್ಲಂಡಿನಿಂದ ಬರುವುದಾಗಿದ್ದರೆ ಅದರ ಮೇಲಿನ ಸುಂಕವು ಎಷ್ಟೋ ಕಡಿಮೆಯಾಗುತ್ತಿದ್ದಿತೆಂಬುದನ್ನು ಹೇಳಬೇಕಾಗಿಲ್ಲ. ಈ ಕಾರಣದಿಂದಲೇ ಆ|| ಗೋಖಲೆಯವರು ನಿಯಮನಿರ್ಮಾಣ ಸಭೆಯಲ್ಲಿ ಈ ಸಂಬಂಧವಾಗಿ ಮಾತನಾಡುವಾಗ್ಗೆ "ಇಂಗ್ಲಂಡು ದೇಶಕ್ಕೆ ನಷ್ಟವುಂಟಾಗುವ ಸಮಯದಲ್ಲಿ ಭರತಖಂಡದ ಹಾನಿವೃದ್ಧಿಗಳು ಗಮನಿಸಲ್ಪಡುವುದೇ ಇಲ್ಲ. ಇಂಥ ಸಂಗತಿಗಳು ಈಗ ಮಾತ್ರವೇ ಅಲ್ಲ; ಎಷ್ಟೋ ಆವೃತ್ತಿ ಹೀಗೆಯೇ ಸಂಭವಿಸಿರುತ್ತವೆ" ಎಂದು ಕೂಡ ಆಡಿದರು. ಅದು ನಿಜವಾದ ಸಂಗತಿಯೇ ಆಗಿರುವುದರಿಂದ ಯಾರೊಬ್ಬರಿಂದಲೂ ಆಕ್ಷೇಪಿಸಲ್ಪಡುವಂತಿರುವುದಿಲ್ಲ. ಲಾರ್ಡ್ ಹಾರ್ಡಿಂಜ್‌ರಂಥ ಉದಾರಮತಿಗಳು ವೈಸ್‌ರಾಯರಾಗಿ ಬಂದಿದ್ದರೂ, ಭರತಖಂಡದ ಹಿತಕ್ಕೆ ವಿಘಾತಕವಾದ ಇಂಥ ವಿಷಯಗಳು ಪ್ರಜೆಗಳ ಇಷ್ಟಕ್ಕೆ ವಿರುದ್ಧವಾಗಿ ವಿಧಿರೂಪಗೊಳ್ಳುತ್ತಿರುವುದನ್ನು ಕಂಡು ನಮ್ಮ ದುರ್ದೈವವನ್ನು ನಾವೇ ನಿಂದಿಸಿಕೊಳ್ಳಬೇಕಾಗಿರುವುದು.

ರಿಜಿಸ್ಟ್ರೇಷ ಶಾಖೆಯ ೧೯೦೯–೧೯೧೦ ರ ವರದಿಯು.

ಈವರದಿಯ ಒಂದುಪ್ರತಿಯು ಈಗತಾನೇ ನಮ್ಮ ಹಸ್ತಗತವಾಗಿದೆ. ಮೆ|| ಎಚ್. ಎಚ್. ಸ್ಪಾರ್ಕ್ಸ್‌ರವರು ಈ ಶಾಖೆಯ ಇನ್ಸ್‌ಪೆಕ್ಟರ್ ಜನರಲ್ಲಾಗಿ ಈ ವರ್ಷವೆಲ್ಲಾ ಇದ್ದರು. ಆದರೆ ಮಧ್ಯೆ ಮಾರ್ಚಿ ತಾ|| ೨೪ ರಿಂದ ಮೆ|| ತಾ|| ೧೦ ರವರೆಗೆ ರಜದಮೇಲೆ ಹೋಗಿದ್ದುದರಿಂದ ಮೆ|| ಎಂ. ನಾರಾಯಣರಾಯರು ಬದಲು ನೋಡುತ್ತಿದ್ದರು. ಸಬ್ ರಿಜಿಸ್ಟ್ರ ಮತ್ತೂ ಡಿಸ್ಟ್ರಿಕ್ಟ್ ರಿಜಿಸ್ಟ್ರ ಆಫೀಸುಗಳ ಅಟೆಂಡರ್ ಮತ್ತೂ ಆಳುಗಳ ಸಂಬಳವು ರೂ. ೬ ರಿಂದ ೮ ಕ್ಕೂ ಮತ್ತೂ ರೂ. ೫ ರಿಂದ ೬ ಕ್ಕೂ ೧೯೦೯ ನೇ ಜುಲೈ ತಾ|| ೧ ರಿಂದ ಹೆಚ್ಚಿಸಲ್ಪಟ್ಟಿತು. ಸ್ವತ್ತುಗಳ ಮೇಲೆ ಪೂರ್ವಾಧಿಗಳೇನಾದರೂ ಇದೆ ಯಿಲ್ಲವೆಂಬುದನ್ನು ರಿಜಿಸ್ಟರ್ ಮಾಡುವವರೇ ಹುಡುಕಿ ಅಬಗೆಗೆ ಸರ್ಟಫಿಕೇಟನ್ನು ಕೊಡುತ್ತಿದ್ದ ಪದ್ಧತಿಯು ತಪ್ಪಿಸಲ್ಪಟ್ಟು ಅಪೇಕ್ಷಿತರು ೧ ರೂ. ಫೀಯನ್ನು ಕೊಟ್ಟು ದಾಖಲೆಗಳನ್ನು ಹುಡುಕಿಕೊಳ್ಳುವಂತೆ ಮಾಡಲ್ಪಟ್ಟಿತು. ಸಂಸ್ಥಾನದಲ್ಲೆಲ್ಲಾ ಒಟ್ಟು ಸ್ಪೆಷಲ್ ಮತ್ತೂ ಎಕ್ಸ್ ಅಫಿಷಿಯೋ ಸಬ್ ರಿಜಿಸ್ಟ್ರ ಆಫೀಸುಗಳು ಹಿಂದಣವರ್ಷದಷ್ಟೆ ಅಂದರೆ ೪೨ ಮತ್ತೂ ೭೬ ಇದ್ದವು. ಈ ವರ್ಷದಲ್ಲಿ ೮೬,೦೫೪ ಪತ್ರಗಳು ರಿಜಿಸ್ಟರು ಮಾಡಲ್ಪಟ್ಟವು. ಇದರ ಹಿಂದಣ ವರ್ಷದಲ್ಲಿ ೮೯೪೬೩ ಪತ್ರಗಳು ಮಾತ್ರ ರಿಜಿಸ್ಟರು ಮಾಡಲ್ಪಟ್ಟಿದ್ದವು. ಅಂದರೆ ೩,೪೦೯ ಪತ್ರಗಳು ಕಡಿಮೆಯಾಗಿದ್ದುವು. ಎಲ್ಲವಿಧವಾದ ಪತ್ರಗಳಲ್ಲೂ ತುಮಕೂರು ಮತ್ತೂ ಹಾಸನ ಡಿ|| ಗಳ ವಿನಾ ಇತರ ಡಿ|| ಗಳಲ್ಲೆಲ್ಲಾ ರಿಜಿಸ್ಟರಾದ ಪತ್ರಗಳ ಸಂಖ್ಯೆಯು ಕಡಿಮೆಯಾಗಿರುವುದು. ಇದಕ್ಕೆ ಇದರ ಹಿಂದಣವರ್ಷ ಪ್ರಾಪ್ತವಾಗಿದ್ದ ಕ್ಷಾಮವು ಕಳೆದೊಡನೆಯೇ ಋತುಮಾನವು ಅನುಕೂಲವಾದುದೂ, ಮೈಸೂರು ಮತ್ತೂ ಬೆಂಗಳೂರು ಡಿ|| ಗಳ ಕೆಲ ತಾ|| ಗಳಲ್ಲಿ ಪ್ಲೇಗು ಮತ್ತೂ ವಾಂತಿಭೇದಿ ರೋಗಗಳು ಪ್ರಾಪ್ತವಾಗಿದ್ದುದೂ, ಮೆ ತಿಂಗಳಲ್ಲಿ ಚಕ್ರವರ್ತಿಯವರ ಮರಣದಿಂದುಂಟಾದ ದುಃಖ ಪ್ರದರ್ಶನಾರ್ಥವಾಗಿಯು, ಮತ್ತೂ ಜೂನ್ ತಿಂಗಳಲ್ಲಿ ಶ್ರೀಮದ್ಯುವರಾಜರ ವಿವಾಹ ಮಹೋತ್ಸವದ ಸಂತೋಷ ಸೂಚಕವಾಗಿಯು ಆಫೀಸುಗಳು ಮುಚ್ಚಲ್ಪಟ್ಟಿದ್ದುದೂ ಕಾರಣವಾಗಿರುತ್ತದೆಂದು ಡಿ|| ರಿಜಿಸ್ಟ್ರಾರುಗಳು ಅಭಿಪ್ರಾಯಪಡುತ್ತಾರೆ. ಒಟ್ಟು ರಿಜಿಸ್ಟರಾದ ೮೬,೦೫೪ ಪತ್ರಗಳಲ್ಲಿ ೮೪೦೯೬ ಸ್ಥಿರಾಸ್ತಿಗಳಿಗೂ, ೧೬೪೬ ಚರಾಸ್ತಿಗಳಿಗೂ, ೫೧೬ ಮರಣ ಶಾಸನಗಳಿಗೂ ೨ ದತ್ತ ಸ್ವೀಕಾರಕ್ಕೂ ಸಂಬಂಧಪಟ್ಟವುಗಳಾಗಿವೆ.

ಈ ವರ್ಷದಲ್ಲಿ ಈ ಶಾಖೆಯಲ್ಲಿ ರೂ. ೧೬೨೬೪೨–೧೬–೧೦ ಉತ್ಪತ್ತಿಯೂ ರೂ. ೮೪೬೪೮–೦–೪ ವ್ಯಯವೂ ಆಗಿರುವುದು. ಇದರ ಹಿಂದಣ ವರ್ಷದಲ್ಲಿ ರೂ. ೧೬೭೦೦೮–೫–೨ ಉತ್ಪತ್ತಿಯೂ ರೂ. ೮೪೬೯೮–೬–೪ ವ್ಯಯವೂ ಆಗಿದ್ದಿತು. ಅಂದರೆ ಈ ವರ್ಷದಲ್ಲಿ ಕಳೆದ ವರ್ಷಕ್ಕಿಂತ ಆದಾಯದಲ್ಲಿ ರೂ. ೯೬೬೫–೬–೪ ಕಡಿಮೆಯೂ, ವ್ಯಯದಲ್ಲಿ ರೂ. ೨೪೯–೯–೦ ಹೆಚ್ಚೂ ಆಗಿರುವುದು. ಎಳಂದೂರು ಸಬ್‌ರಿಜಿಸ್ಟ್ರ ಆಫೀಸಿನಲ್ಲುಳಿದ ರೂ. ೧೬೮೬–೮–೦ ಜಹಗೀರ್ದಾರರಿಗೆ ಸಲ್ಲತಕ್ಕದಾದುದರಿಂದ ಅದು ಹೋಗಲಾಗಿ ಈ ವರ್ಷ ಈ ಶಾಖೆಯಲ್ಲಿ ಒಟ್ಟು ರೂ. ೬೫೯೦೮–೫–೬ ಮಿಕ್ಕಿರುವುದು. ಹಿಂದಣ ವರ್ಷಕ್ಕಿಂತ ಈ ವರ್ಷದಲ್ಲಿ ಪತ್ರಗಳ ಸಂಖ್ಯೆಯು ಕಡಿಮೆಯಾದುದಲ್ಲದೆ ಮೊಬಲಗೂ ರೂ. ೧೮೨೦೬೯೮೭ ರಿಂದ ರೂ. ೧೮೧೬೫೫೫ ಕ್ಕಿಳಿಯಿತು. ಈ ವರ್ಷದಲ್ಲಿ ಕ್ರಯಕ್ಕೆ ಕೊಟ್ಟವನು ತಾನಲ್ಲದಿದ್ದರೂ ತಾನೇ ಎಂದು ಸುಳ್ಳು ಹೇಳಿದ ಅಪರಾಧದಮೇಲೆ ಮೈಸೂರ ಡಿ|| ನಲ್ಲಿ ಎರಡು, ಕೋಲಾರ, ಚಿತ್ರದುರ್ಗ ಮತ್ತೂ ಹಾಸನ ಡಿ|| ಗಳಲ್ಲಿ ಒಂದೊಂದು ಈ ಪ್ರಕಾರ ೫ ವಿವಾದಗಳು ನಡೆಸಲ್ಪಟ್ಟು ೨ ವಿವಾದಗಳಲ್ಲಿ ಅಪರಾಧಿಗಳು ಶಿಕ್ಷೆಗೆ ಗುರಿಮಾಡಲ್ಪಟ್ಟರು. ಮಿಕ್ಕವುಗಳಲ್ಲಿ ಮುಕ್ತರಾದರು. ಈ ಶಾಖೆಯ ಕೆಲಸವು ಬಹು ಸಮರ್ಪಕವಾಗಿ ನಡೆದಿರುವುದಲ್ಲದೆ ಸ್ಪೆಷಲ್ ಸಬ್ ರಿಜಿಸ್ಟ್ರಾರುಗಳು ತಮ್ಮ ಕೆಲಸಗಳನ್ನು ಚೆನ್ನಾಗಿ ಮಾಡಿರುತ್ತಾರೆಂದೂ, ಬೆಂಗಳೂರು, ಮೈಸೂರು ಮತ್ತೂ ಕೋಲಾರ ಡಿ|| ಗಳಲ್ಲಿ ಎಕ್ಸ್ ಅಫಿಷಿಯೋ ಇನ್ಸ್‌ಪೆಕ್ಟರುಗಳು ಸಮರ್ಪಕವಾಗಿ ಕೆಲಸ ಮಾಡಿಲ್ಲವೆಂದೂ, ಕೋಲಾರ ಡಿ|| ನಲ್ಲಿ ಆ ಇನ್ಸ್‌ಪೆಕ್ಟರು ಒಂದಾಫೀಸನ್ನಾದರೂ ಪರೀಕ್ಷಿಸಿಲ್ಲವೆಂದೂ, ಎಕ್ಸ್ ಅಫಿಷಿಯೋ ಸಬ್ ರಿಜಿಸ್ಟ್ರಾರುಗಳು ಸಾಮಾನ್ಯತಃ ಕೆಲಸವನ್ನು ತಿಳಿಯದೆ ಮತ್ತೂ ಶ್ರದ್ಧೆಯನ್ನು ವಹಿಸದೆ ಅನೇಕ ತಪ್ಪುಗಳನ್ನು ಪದೇ ಪದೇ ಮಾಡುತ್ತಾರಾದುದರಿಂದ, ಸಂಸ್ಥಾನದಲ್ಲಿ ಈ ಆಫೀಸುಗಳ ಸಂಖ್ಯೆಯು ಹೆಚ್ಚಾಗಿದ್ದರೂ ಕೆಲಸವು ಬಹುಕಡಿಮೆಯಾಗಿ ನಡೆದಿರುತ್ತದೆ; ಜನಗಳ ಅನುಕೂಲ್ಯಕ್ಕಾಗಿ ರಿಜಿಸ್ಟ್ರೇಷ ಶಾಖೆಯು ಏರ್ಪಟ್ಟಿರುವುದರಿಂದ ಈ ಎ|| ಅ|| ಆಫೀಸುಗಳನ್ನು ಆದಷ್ಟು ಬೇಗನೆ ತಪ್ಪಿಸಿಬಿಡುವುದುತ್ತಮವೆಂದೂ ಇ|| ಜನರಲ್‌ರವರಭಿಪ್ರಾಯ ಪಟ್ಟಿದ್ದುದರಮೇಲೆ, ಸರ್ಕಾರದವರು, ಆಫೀಸುಗಳ ಮೇಲ್ವಿಚಾರಣೆಯ ಕಾರ್ಯವು ಬಹು ಸಾವಕಾಶವಾಗಿ ನಡೆಯಲು ಕಾರಣವನ್ನು ವಿಚಾರಿಸಿ ಇ|| ಜನರಲ್ ರವರು ಪ್ರತ್ಯೇಕವಾಗಿ ವರದಿಯನ್ನು ಮಾಡತಕ್ಕದೆಂದೂ, ಎಕ್ಸ್ ಅಫಿಷಿಯೋ ಆಫೀಸುಗಳನ್ನು ತಪ್ಪಿಸಿ ಸ್ಪೆಷಲ್ ಸಬ್ ರಿ|| ಆಫೀಸನ್ನಾಗಿ ಮಾಡಲು ಸಾಕಾದಷ್ಟು ಕಾರಣವು ತೋರಿಬರುವುದಿಲ್ಲವೆಂದೂ ಅಪ್ಪಣೆಮಾಡಿರುತ್ತಾರೆ.

೧೯೧೧ ನೆಯ ವರ್ಷದ ಜನಪರಿಗಣನೆ.

ಮೊನ್ನೆತಾನೇ ನಡೆದು ಮುಗಿದ ಈ ಜನಪರಿಗಣನೆಯಿಂದ ಇದುವರೆಗೆ ಗೊತ್ತಾಗಿರುವ ಲೆಕ್ಕದಲ್ಲಿ ಮುಖ್ಯವಾದ ಕೆಲವು ವಿವರಣೆಯನ್ನು ಈ ಕೆಳಗೆ ಕೊಟ್ಟಿರುತ್ತೇವೆ.

ಮೈಸೂರು ಸಂಸ್ಥಾನದಲ್ಲಿ ಒಟ್ಟಿಗೆ ಇರುವ ವಾಸದ ಮನೆಗಳ ಸಂಖ್ಯೆ ೧೧೬೬೬೯. ಜನಸಂಖ್ಯೆ ೫೮೦೬೯೬. ಇವರಲ್ಲಿ ಗಂಡುಸರು ೨೯೬೪೬೫; ಹೆಂಗುಸರು ೨೮೬೨೩೧. ಮೈಸೂರು ಪಟ್ಟಣದಲ್ಲಿ ೬೦೦೦೦. ಬೆಂಗಳೂರು ಪಟ್ಟ

ಲ್ಲಿ ೮೩೦೪೩ ; ಹಿಂದಿನ ಸೆನ್‌ಸಸ್ ಕಾಲದಲ್ಲಿದ್ದುದು ೩೩. ಬೆಂಗಳೂರು ದಂಡಿನಲ್ಲಿ ೧೦೦೩೭೪. ಕೊಡಗು ೧೪. ಕಲಕತ್ತಾ ಪಟ್ಟಣದಲ್ಲಿ ೮೯೦೦೦೦; ಹಿಂದಿನ ಸೆನ್ಸಸ್ಸಿಗಿಂತ ೪೫೦೦೦ ಹೆಚ್ಚು. ಡಿಲ್ಲಿಯಲ್ಲಿ ೨೩೨೮೫೯. ತಿರುವಾಂಕೂರು ಸಂಸ್ಥಾನದಲ್ಲಿ ೩೪೩೩೧೭೫೪. ಬರೋಡಾ ಸಂಸ್ಥಾನ ೨೦೩೨೧೭೫೩; ಹಿಂದಿನ ಸೆನ್‌ಸಸ್ಸಿನಲ್ಲಿ ೧೯೫೨೯೫೦. ಮದ್ರಾಸು ಅಧಿಪತ್ಯಕ್ಕೆ ೪೧೩೩೧೬೮೩. ಬೊಂಬಾಯಿ ಪಟ್ಟಣದಲ್ಲಿ ೯೭೨೮೯೨. ಮದ್ರಾಸು ಪಟ್ಟಣ ೫೧೮೩೩೫ ೧೬೫೩೩. ಲಾಹೋರಿನಲ್ಲಿ ೨೨೮೬೨೭. ಹೈದರಾಬಾದ್ ಸಂಸ್ಥಾನದಲ್ಲಿ ೧೩೨೫೦೦೦೦. ಪಂಜಾಬು ಅಧಿಪತ್ಯ ೦೦೦೦೦೦. ಸಂಯುಕ್ತ ಪ್ರಾಂತಗಳು ೧೨೪೫೦೭೦೦. ಪ್ರಾಂತ ೫೮೦೩೧೨೩. ಬರ್ಮಾದಲ್ಲಿ ೧೦೯೦೦೦೧೦. ಸಿಲ್ಲಿ ೧೯೮೪.

ಹಳೆದೇಶದ ವೃತ್ತಾಂತ.

ಮೈಸೂರ ಸಂಸ್ಥಾನದ ಅಧಿಕಾರಿಗಳಲ್ಲಿ ಕೆಲವು ಬದಲಾವಣೆಗಳು ಇಷ್ಟರಲ್ಲೇ ಆಗುವುದೆಂದು ಸುದ್ದಿಯಿದೆ.

ರಾಜಧಾನಿಗೆ ಕೌನ್ಸಿಲರುಗಳಿಬ್ಬರೂ ರೆವಿನ್ಯೂ ಕಮಿಷನರೂ ಸಹ ದಯಮಾಡಿಸಿರುವರು. ಈ ದಿವಸ ಕೌನ್ಸಿಲರ ಸಭೆಯು ಕೂಡುವುದಾಗಿದ್ದಿತು.

ದಿವಾನರು ಕಳೆದ ತಾ॥ ೨ ನೇ ಭಾನುವಾರ ರಾಜಧಾನಿಗೆ ದಯಮಾಡಿಸಿದರು. ಇವರು ಪ್ರಾಯಶಃ ಈ ತಿಂಗಳ ಅಂತ್ಯದವರೆಗೂ ಇಲ್ಲೇ ಇರಬಹುದೆಂದು ತೋರುತ್ತದೆ.

ಬರುವ ಏಪ್ರಿಲ್ ತಿಂಗಳಲ್ಲಿ ನಂಜನಗೂಡಿನಲ್ಲಿ ಆಗುವ ರಥಜಾತ್ರೆಯ ಸಂದರ್ಭವನ್ನನುಸರಿಸಿ ಪದ್ಧತಿಯಂತೆ ಪಶುಪ್ರದರ್ಶನವು ಅದೇ ತಿಂಗಳು ತಾ॥ ೯–೧೦–೧೧ ರಲ್ಲಿ ನಡೆಯುವುದು.

ನಂಜನಗೂಡು ತಾ॥ ಕಳಲೆ ಎಂಬ ಗ್ರಾಮಕ್ಕೆ ಶ್ರೀ ಪರಕಾಲಸ್ವಾಮಿಗಳು ರಾಜ ಮರ್ಯಾದೆಯೊಡನೆ ಕಳೆದ ತಾ॥ ರಲ್ಲಿ ದಯಮಾಡಿಸಿದರು. ಆಗ ಗೌರವಾರ್ಥವಾಗಿ ೨೧ ಕುಶಾಲುತೋಪುಗಳು ಹಾರಿಸಲ್ಪಟ್ಟವು.

ಕಳೆದ ಮಂಗಳವಾರರಾತ್ರಿ ಕಾಮದಹನವು ನಡೆದಿತು. ಹುಣ್ಣಿಮೆಯ ದಿನದಿಂದಲೂ ರಾಜಧಾನಿಯಲ್ಲಿ ಕೆಲ ಹಿಂದುಗಳು ಸುಂದರವಾದ ಹುಡುಗರಿಗೆ ಮನ್ಮಥ ಮತ್ತೂ ರತಿ ವೇಷಗಳನ್ನು ಹಾಕಿ ದಿವ್ಯವಾಗಲಂಕರಿಸಿ ಗಳಿಗಳ ಮೇಲೆ ಕುಳ್ಳಿರಿಸಿ ಕಾಮನಪದಗಳನ್ನು ಹೇಳಿಕೊಂಡು ಅತಿ ವಿಜೃಂಭಣೆಯಿಂದ ಪ್ರತಿರಾತ್ರಿಯಲ್ಲೂ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡುತ್ತಿರುವರು.

ರಾಜಧಾನಿಯಲ್ಲಿ ಸ್ಥಾಪಿತವಾಗಿರುವ ಆರ್ಯಬಾಲಸಮಾಜ ಸಂಬಂಧವಾಗಿ ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿ ಮೆ॥ ಆರ್. ಎಚ್. ಕ್ಯಾಂಬಲ್, ಐ. ಸಿ. ಎಸ್., ರವರು ಈ ತಾ॥ ೨೫ ರ ಸಾಯಂಕಾಲ ೬ ಗಂಟೆಗೆ ಟೌನ್‌ಹಾಲಿನಲ್ಲಿ ಒಂದು ಭಾಷಣವನ್ನು ಮಾಡುತ್ತಾರಾದ್ದರಿಂದ ಪ್ರತಿಯೊಬ್ಬರೂ ದಯವಿಟ್ಟು ದಯಮಾಡಿಸಬೇಕೆಂದು ಸಮಾಜದ ಆನರರಿಸೆಕ್ರೆಟರಿಯವರು ಈ ಪತ್ರಿಕಾಮೂಲಕ ಪ್ರಾರ್ಥಿಸುತ್ತಾರೆ.

ವ್ಯವಹಾರನಿರ್ಣಯ ಮೊದಲಾದ ಗ್ರಂಥಗಳನ್ನು ಬರೆದು ಲಾ ಸಂಬಂಧವಾದ ಮಾಸಪತ್ರಿಕೆಯೊಂದನ್ನು ಪ್ರಕಟಿಸುತ್ತಿದ್ದ ಪ್ರಸಿದ್ಧರಾಗಿದ್ದ ಫಸ್ಟ್‌ಗ್ರೇಡ್ ಪ್ಲೀಡರ್ ಮೆ॥ ಮಲ್ಲಾರಾಧ್ಯರು ಕಳೆದ ೫–೬ ತಿಂಗಳಿಂದಲೂ ಶೀತವಾಯು ಸಂಬಂಧವಾದ ರೋಗದಿಂದ ಗ್ರಸ್ತರಾಗಿದ್ದು ಕಳೆದ ಮಂಗಳವಾರದ ದಿವಸ ಮಂಡ್ಯದ ತಾ॥ ಕೊತ್ತಹತ್ತಿಯಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತ್ಯುಕಾಲದಲ್ಲಿ ಬಹುಶಃ ೪೫ ವರ್ಷಗಳು.

ಶ್ರೀ ಯುವರಾಜರ ವಿವಾಹ ಮಹೋತ್ಸವಕಾಲದಲ್ಲಿ ಉತ್ತರದೇಶದಿಂದ ಬೆಳ್ಳಿ ಭಂಗಾರದ ಮುತ್ತು ಮೊದಲಾದ ಒಡವೆಗಳನ್ನು ಮಾರಾಟಕ್ಕೆ ಎಷ್ಟೋ ಜನ ವರ್ತಕರು ತೆಗೆದುಕೊಂಡು ಬಂದಿದ್ದು ಹಿಂತಿರುಗಿ ಹೋಗುವಾಗ್ಗೆ ಒಬ್ಬ ವರ್ತಕನ ಮುತ್ತುಗಳ ಪೆಟ್ಟಿಗೆಯು ರೈಲು ಬಂಡಿಯಲ್ಲಿ ಗಲಭೆಯಿಂದ ಕಳುವಾಗಿ ಹೋಗಿತ್ತಂತೆ. ಈಗ ರಾಜಧಾನಿಯ ಪೋಲೀಸರು ಮುತ್ತನ್ನು ಮಾರುತ್ತಿದ್ದ ಒಬ್ಬ ಕೋಮಟಿಯನ್ನು ಹಿಡಿದು ಅವನ ಮೂಲಕ ಬೇರೆ ೫–೬ ಜನರನ್ನು ಹಿಡಿದಿರುತ್ತಾರೆ. ಇದರ ಸಂಗತಿಯು ಮುಂದೆ ಗೊತ್ತಾಗಬೇಕು.

ಶ್ರೀಮನ್ಮಹಾರಾಜರವರೂ ರಾಣೀವಾಸದವರೂ ಕಳೆದ ತಾ॥ ೧೭ ನೇ ಶುಕ್ರವಾರದಬೆಳಿಗ್ಗೆ ಶ್ರೀ ಚಾಮುಂಡೇಶ್ವರಿ ಬೆಟ್ಟಕ್ಕೆ ಚಿತ್ತೈಸಿದ್ದು ಕುಲದೇವತೆಯಾದ ಅಮ್ಮನವರ ಅರ್ಚನೆಯನ್ನು ಮಾಡಿಸಿ ಭೋಜನಾದಿಗಳನ್ನು ತೀರಿಸಿಕೊಂಡು ಮಧ್ಯಾಹ್ನ ೧ ಗಂಟೆಗೆ ಹಿಂತಿರುಗಿ ದಯಮಾಡಿಸಿದರು. ಮತ್ತೂ ಶ್ರೀ ನಂಜುಂಡೇಶ್ವರಸ್ವಾಮಿಯ ಸೇವೆಗಾಗಿ ನಂಜನಗೂಡಿಗೆ ಈ ಪ್ರಾತಃಕಾಲ ಮೋಟಾರು ಬಂಡಿಗಳಲ್ಲಿ ದಯಮಾಡಿಸುವರು. ಶ್ರೀ ಯುವರಾಜರೂ ಯುವರಾಣಿಯರೂ ಅಲ್ಲಿಂದಲೇ ಹೆಗ್ಗಡದೇವನಕೋಟೆಗೆ ದಯಮಾಡಿಸುವವರಾಗಿರುವರು.

ಧಾರ್ವಾಡ ಡಿ॥ ಪಶುಪತಿಹಾಳದಲ್ಲಿ ಈ ತಿಂಗಳ ಕಡೆಗೆ ನಡೆಯುವ ಧರ್ಮೋತ್ತೇಜಕ ಸಭೆಯ ಸಂಬಂಧದ ಪ್ರಕಟನವನ್ನು ಬೇರೆ ಕಡೆ ಮುದ್ರಿಸಿದ್ದೇವೆ. ಈ ಸಭೆಯವರು ಸಮಾಜಕ್ಕೆ ಅತ್ಯುಪಯುಕ್ತವಾದ ವಿಷಯಗಳನ್ನು ಮಿತವಾಗಿ ಚರ್ಚೆಗೆ ಇಟ್ಟುಕೊಂಡಿರುವುದು ಶ್ಲಾಘ್ಯವಾಗಿದೆ. ಇಂಥ ವಿಷಯಗಳು ಸರ್ವಸಮರ್ಪಕವಾಗುವಂತೆಯೂ, ಶಾಸ್ತ್ರಾನುಸಾರವಾಗಿಯೂ ನಿರ್ಧಾರಗೊಳ್ಳಬೇಕಾದುದು ಅವಶ್ಯಕ. ಆದರೆ ಸಭಾಕಾಲವು ಕೇವಲ ಸಮೀಪವಾಗಿರುವುದು ಮಾತ್ರ ಕೆಲವು ವಿಷಯಕ್ಕೆ ಅನನುಕೂಲವಾಗಿದೆ. ಆದರೂ ಎಲ್ಲ ಪ್ರಾಂತದ ಅಭಿಮಾನಿಗಳೂ ಸಭೆಗೆ ದಯಮಾಡಿಸಿ, ಸಭಾ ಉದ್ದೇಶವನ್ನು ಸಾರ್ಥಕಗೊಳಿಸುವರೆಂದು ನಂಬುತ್ತೇವೆ.

ಜರ್ಮ ಸಾಮ್ರಾಜ್ಯ.

ಕನ್ನಡದಲ್ಲಿ ಇದುವರೆಗೂ ಇಂತಹ ಪುಸ್ತಕವಿರಲಿಲ್ಲ. ಜಪಾನಿನ ವಿಷಯದಲ್ಲಿ ಎಲ್ಲವನ್ನೂ ವಿಶದವಾಗಿ ತಿಳಿಸುತ್ತದೆ. ಆಶ್ಚರ್ಯಕರವಾದ ಸಂಗತಿಗಳು, ಪ್ರತಿಯೊಬ್ಬರೂ ಓದಬೇಕಾದದ್ದು. ಮೇಲಾದಕಾಗದ. ಅಂದವಾದ ಮುದ್ರಣ ಬೆಲೆ ೬ ಆಣೆ. ಕಿಂಡರ್ ಗಾರ್ಟನ್ ಕಥೆಗಳು ಸ್ಕೂಲ್ಮಾಸ್ಟರುಗಳಿಗೆ ಆವಶ್ಯಕವಾದದ್ದು ೧೦ ಆಣೆ. ಉನ್ಮತ್ತ–ಬಂಗಾಳಾದೇಶದ ಸ್ತ್ರೀಯಚರಿತ್ರೆ ೨॥ ಅಣೆ.

ದೊರೆಯುವಸ್ಥಳ—ಜಿ. ಕೃಷ್ಣಶಾಸ್ತ್ರಿ ಅ॥ ಮೆ॥ ನಾರ್ಮಲ್‌ಸ್ಕೂಲ್ ಮೈಸೂರ್. ಮತ್ತು ಜನರಲ್‌ಏಜನ್ಸಿ,
ಮೈಸೂರು.

ವರ್ತಮಾನ ಸಂಗ್ರಹ.

ಅಲಹಾಬಾದಿನಲ್ಲಿ ನಡೆಯಿಸಿದ ವಸ್ತುಪ್ರದರ್ಶನಗಳ ಸಲುವಾಗಿ ಸಂಯುಕ್ತಪ್ರಾಂತದ ಸರ್ಕಾರಕ್ಕೆ ಒಟ್ಟು ೫ ಲಕ್ಷದಷ್ಟು ನಷ್ಟವಾಯಿತಂತೆ.

ಶ್ರೀಮನ್ ಚಕ್ರವರ್ತಿ ದಂಪತಿಗಳು ತಮ್ಮಲ್ಲಿಗೆ ದಯಮಾಡಿಸಿದಾಗ್ಗೆ ಅವರನ್ನು ಗೌರವಿಸುವ ವೆಚ್ಚಗಳಿಗಾಗಿ ೩೦ ಸಾವಿರ ರೂ. ಗಳನ್ನು ವಿನಿಯೋಗಿಸತಕ್ಕದೆಂದು ಕಲ್ಕತ್ತಾ ಕಾರ್ಪೊರೇಷನ್ನಿನವರು ನಿರ್ಧರಿಸಿದ್ದಾರೆ.

೬ ಲಕ್ಷ ರೂ. ಬೆಲೆಯ ಬೆಳ್ಳಿಯು ಕೊಚ್ಚಿಯಿಂದ ಬೊಂಬಾಯಿಗೆ ಇನ್‌ಷೂರ್ಡ್ ಪಾರ್ಸಲ್ಲಾಗಿ ಕಳುಹಿಸಲ್ಪಟ್ಟದ್ದಿತು. ವಿಳಾಸದಾರನು ಆ ಪಾರ್ಸಲ್ಲನ್ನು ಒಡೆದು ನೋಡುವಾಗ್ಗೆ ಒಳಗೆ ಸೀಸದ ತುಕ್ಕಡಗಳಿದ್ದವು.

ಸಿಡಿಮದ್ದಿನ ಪುಂಡಾಟದಿಂದ ಎಷ್ಟು ನಷ್ಟಕಷ್ಟಗಳು ಸಂಭವಿಸುತ್ತಿರುವುವೆಂಬುದನ್ನು ಹೇಳಬೇಕಾಗಿಲ್ಲ. ೧ ವರ್ಷಕಾಲದಲ್ಲಿ ಇಂಥ ತಪ್ಪಿತಗಳಿಗೆ ಗುರಿಯಾದವರಿಂದ ಅವರ ವಕೀಲರಿಗಾಗಿಯೇ ೩ ಲಕ್ಷ ರೂಪಾಯಿಗಳು ಕೊಡಲ್ಪಟ್ಟವೆಯಂತೆ.

ಧಾರವಾಡದಲ್ಲಿ ಹುಜೂರು ಡಿ॥ ಕಲೆಕ್ಟರಾಗಿದ್ದ ರಾ॥ ಬ॥ ವೀರಸಂಗಪ್ಪ ಮೇಣಸಿನಕಾಯಿಯವರಿಗೆ ಬರುವ ಏಪ್ರಿಲ್ ತಿಂಗಳ ತಾ॥ ೧ ರಿಂದ ಅವರ ಉದ್ಯೋಗದಿಂದ ವಿಶ್ರಾಂತಿಯು ಕೊಡಲ್ಪಡುವುದೆಂದು ಲೋಕಬಂಧು ಪತ್ರಿಕೆಯು ಹೇಳಿರುತ್ತದೆ.

ಮೊನ್ನೆ ಕೂಡಿದ್ದ ವೈಸ್‌ರಾಯರ ನಿಯಮನಿರ್ಮಾಣ ಸಭೆಯಲ್ಲಿ ಆ॥ ಗೋಖಲೆಯವರು ಸೀಮೆಯೆಣ್ಣೆಯ ಮೇಲಿನ ಸುಂಕವನ್ನು ಕಡಿಮೆಮಾಡಬೇಕೆಂಬ ವಿಷಯಕ್ಕೆ ಅನುಕೂಲವಾಗಿಯೂ, ಹೊಗೆಸೊಪ್ಪಿನ ಮೇಲಿನ ಸುಂಕವನ್ನು ತಗ್ಗಿಸಬೇಕೆಂಬುದಕ್ಕೆ ವಿರುದ್ಧವಾಗಿಯೂ ಪ್ರಸಂಗಿಸಿದರು.

ಗತಿಸಿದ ೪ ನೇ ಜಾರ್ಜ್ ಪ್ರಭುಗಳು ಧರಿಸುತ್ತಿದ್ದ ಶ್ರೇಷ್ಠವಾದ ಉಡುಪುಗಳು ಒಬ್ಬ ದೊಡ್ಡಮನುಷ್ಯನಲ್ಲಿದ್ದಿತೆಂದೂ, ಆತನು ನಮ್ಮ ಈಗಿನ ೫ ನೆಯ ಜಾರ್ಜ್‌ಪ್ರಭುಗಳಿಗೆ ಕಾಣಿಕೆಯಾಗಿ ಸಮರ್ಪಿಸಿರುವನೆಂತಲೂ, ಇವರು ತಮ್ಮ ಪಟ್ಟಾಭಿಷೇಕ ಸಮಯದಲ್ಲಿ ಆ ಉಡುಪುಗಳನ್ನೇ ಧರಿಸಿಕೊಳ್ಳತಕ್ಕವರಾಗಿದ್ದಾರೆಂತಲೂ ಪ್ರಕಟವಾಗಿದೆ.

ದಕ್ಷಿಣ ಹಿಂದೂ ಸಮುದ್ರದಲ್ಲಿ ೧೫೦ ಅಡಿಗಳ ಉದ್ದವೂ ೩೩ ಅಡಿಗಳ ಎತ್ತರವೂ ಉಳ್ಳ ಒಂದು ತಿಮಿಂಗಲವು ಕೆಲವು ದಿನಗಳಿಂದ ಕಾಣಿಸಿಕೊಳ್ಳುತ್ತಿದೆಯಂತೆ. ಇದುವರೆಗೆ ಯಾವಾಗಲೋ ಒಂದಾವೃತ್ತಿ ಅಂಥ ದೊಡ್ಡ ತಿಮಿಂಗಲವು ಅಲ್ಲಿ ಕಾಣಿಸಿಕೊಂಡಿದ್ದಿತು. ಇದರ ಕಾಣಿಸುವಿಕೆಯಿಂದ ಏನೋ ಅನಿಷ್ಟವು ಸಂಭವಿಸುವುದೆಂದು ಆ ಪ್ರಾಂತದ ಜನರು ಭಯಪಡುತ್ತಿರುವರು.

ಈಗ ಕಲ್ಕತ್ತಾ ಹೈ ಕೋರ್ಟಿನಲ್ಲಿ ೧೬ ಮಂದಿಗಳು, ಬೊಂಬಾಯಿ ಹೈ ಕೋರ್ಟಿನಲ್ಲಿ ೬ ಮಂದಿಗಳು, ಅಲಹಾಬಾದ್ ಹೈ ಕೋರ್ಟಿನಲ್ಲಿ ೬ ಮಂದಿಗಳು, ಪಂಜಾಬ್ ಛೀಫ್‌ಕೋರ್ಟಿನಲ್ಲಿ ೫ ಮಂದಿಗಳು, ಮದರಾಸ್ ಹೈ ಕೋರ್ಟಿನಲ್ಲಿ ೮ ಮಂದಿ, ಲೋವರ್ ಬರ್ಮ್ಮಾ ಹೈ ಕೋರ್ಟಿನಲ್ಲಿ ೪ ಮಂದಿ ನ್ಯಾಯಾಧೀಶರುಗಳಿದ್ದಾರೆ. ಇಷ್ಟು ಹೆಚ್ಚು ಮಂದಿಗಳಿದ್ದಾಗ್ಯೂ ಕೆಲವು ನ್ಯಾಯಸ್ಥಾನಗಳಲ್ಲಿ ಕೆಲಸಗಳು ಸಾಗದೆ ಎಷ್ಟೋ ಉಳಿಮುಕೊಂಡಿರುವುವೇತಕ್ಕೋ?

ಬರುವ ಕಿರೀಟಧಾರಣ ಮಹೋತ್ಸವಾರ್ಥವಾಗಿ ಕಲ್ಕತ್ತಾದ ಹೈಕೋರ್ಟು ನ್ಯಾಯಾಧಿಪತಿಗಳಿಗೆ ಆಗಲೇ ಆಹ್ವಾನ ಪತ್ರಿಕೆಯು ಕಳುಹಿಸಲ್ಪಟ್ಟಿದೆ. ಅವರುಗಳಲ್ಲಿ ಪ್ರತಿಯೊಬ್ಬರಿಗೂ ದಿಲ್ಲಿಗೆ ಹೋಗಿ ಬರುವುದಕ್ಕೆ ಒಂದೊಂದು ಮೋಟಾರು ಬಂಡಿಗಳು ಕೊಡಲ್ಪಡುವುವು. ವೈಸ್‌ರಾಯಿ ಕೌನ್ಸಿಲಿನ ಅನಾಫೀಷಿಯಲ್ ಸಭಾಸದರಿಗೂ ಆಹ್ವಾನ ಪತ್ರಿಕೆಗಳು ಹೋಗಿರುತ್ತವೆ. ಅವರು ತಮ್ಮ ಜತೆಯಲ್ಲಿ ತಮ್ಮ ಹೆಂಡತಿಯನ್ನಾಗಲೀ ಕುಮಾರಿಯನ್ನಾಗಲೀ ಕರಕೊಂಡು ಹೋಗಬಹುದು.

ಮದ್ರಾಸಿಂದ ೪॥ ಮೈಲಿಯ ದೂರದಲ್ಲಿ ವೇಲೂರಿಗೆ ಹೋಗುವ ಮಾರ್ಗದೊಳಗೆ ವೇತಾಲ್ ಎಂಬ ಒಂದು ಗ್ರಾಮವಿದೆ ಅದಕ್ಕೆ ಬೆಂಕಿಯುಬಿದ್ದು ೨೨ ಮನೆಗಳು ಬೂದಿಯಾದವು. ಸ್ವಲ್ಪ ದಿನಕ್ಕೆ ಮುಂಚೆ ಕೊಯಿಲು ಮಾಡಿದಧಾನ್ಯವೆಲ್ಲಾ ಆ ಮನೆಗಳಲ್ಲಿ ತುಂಬಿದ್ದಿತು. ಬಟ್ಟೆ ಬರೆ ಮನೆ ಧಾನ್ಯ ಮೊದಲಾದುವೆಲ್ಲಾ ನಿಶ್ಶೇಷವಾಗಿ ಭಸ್ಮವಾಯಿತು. ೧೦೦ ಜನರು ಅನ್ನವೂ ನೆಳಲೂ ಇಲ್ಲದೆ ಪರಿತಪಿಸುತ್ತಿರುವರು. ಕೂಲಿ ನಾಲಿ ಮಾಡಿ ಜೀವಿಸುವುದಕ್ಕೆ ಬೇಸಾಯದ ಕಾಲವೂ ಆಗಿಲ್ಲ. ಈ ದೀನ ಜನರ ಸಹಾಯಾರ್ಥವಾಗಿ ಪೆರಂಬೂರಿನಲ್ಲಿರುವ ಮಿಷನ್ ಸಂಘದ ಮೆ॥ ಸದರ್ಲೆಂಡ್‌ರವರು ಚಂದಾ ಕೂಡಿಸುತ್ತಿದ್ದಾರೆ. ಧರ್ಮಾತ್ಮರ ಸಹಾಯವನ್ನು ಅವರು ಕೋರುತ್ತಾರೆ.

ಪ್ಯಾರಿಸ್ ಪಟ್ಟಣದ ಪ್ರಾಂತದಲ್ಲಿ ಒಂದು ಕಳ್ಳರ ಗುಂಪು ಪೋಲೀಸರಿಂದ ಹಿಡಿಯಲ್ಪಟ್ಟಿತು. ಆ ಗುಂಪಿನಲ್ಲಿ ಸೇರಿರುವವರೆಲ್ಲಾ ಹುಡುಗರೇ. ಅವರಲ್ಲಿ ಮುಖ್ಯ ನಾಯಕನಾದವನ ವಯಸ್ಸು ೧೧. ೧೦ ನೆಯ ವಯಸ್ಸಿನಲ್ಲೇ ಇವನಮೇಲೆ ಕಳುವಿನ ಅಪರಾಧಕ್ಕಾಗಿ ಅಭಿಯೋಗವು ಬಂದಿರಲು, ದಂಡಾಧಿಕಾರಿಯು ಅವನ ಅಲ್ಪವಯಸ್ಸನ್ನು ಗಮನಿಸಿ ಕಾರಾಗೃಹಕ್ಕೆ ಕಳುಹದೆ ತಾಯ್ತಂದೆಗಳ ವಶಗೊಳಿಸಿದ್ದರು. ಆದರೂ ಅವನು ಮನೆಯನ್ನು ಬಿಟ್ಟುಹೋಗಿ ಕಳ್ಳರ ಗುಂಪನ್ನು ಸೇರಿಕೊಂಡನು. ಈ ಗುಂಪಿನವರೆಲ್ಲರೂ ಪ್ರತಿದಿನದ ರಾತ್ರಿಯೂ ನಿಲ್ದಾಣದಲ್ಲಿ ಬಿಡುವಾಗಿ ನಿಂತಿರುವ ಬಂಡಿಗಳಲ್ಲಿ ಸೇರಿಕೊಂಡು, ತಾವು ಎಲ್ಲೆಲ್ಲಿ ಏನೇನು ಕೆಲಸಗಳನ್ನು ಮಾಡಬೇಕೆಂಬುದನ್ನು ಆಲೋಚಿಸಿಕೊಂಡು ಅದೇ ರೀತಿಯಾಗಿಯೇ ಮಾಡುತ್ತಿದ್ದರು.

ದಿಲ್ಲಿಯಲ್ಲಿ ನಡೆಯುವ ದರ್ಬಾರಿಗೆ ತಗಲುವ ವೆಚ್ಚದಲ್ಲಿ ಸ್ವಲ್ಪ ಭಾಗವನ್ನು ಇಂಗ್ಲಂಡಿನ ಬೊಕ್ಕಸದಿಂದ ಕೊಡುವರೆ? ಈ ಸಂಬಂಧವಾಗಿ ಭರತಖಂಡದಲ್ಲಿರುವ ಬಡಜನರ ಮೇಲೆ ಮತ್ತಷ್ಟು ಹೆಚ್ಚು ಕಂದಾಯದ ಹೊರೆಯನ್ನು ಹೊರಿಸದಿರುವುದಕ್ಕೆ ಅನುಗುಣವಾದ ಏರ್ಪಾಟು ಮಾಡಲ್ಪಡುವುದೊ? ಎಂಬದಾಗಿ ಪಾರ್ಲಿಮೆಂಟಿನಲ್ಲಿ ರೆವರೆಂಡ್ ಸಿಲ್‌ವಿಸ್ಟರ್ ಹಾರನ್‌ರವರು ಪ್ರಶ್ನೆಮಾಡಲು, ಕಿರೀಟಧಾರಣ ಮಹೋತ್ಸವಕ್ಕಾಗಿಯೆಂದು ನಿರ್ಣಯಿಸಲ್ಪಟ್ಟಿರುವ ದೊಡ್ಡ ಮೊತ್ತದಲ್ಲಿ ಶೇಷವು ಉಳಿಯಬಹುದು. "ಭಾರತೀಯರಮೇಲೆ ಯಾವ ಹೊಸ ತೆರಿಗೆಯ ಭಾರವೂ ಹೊರಿಸಲ್ಪಡುವುದಿಲ್ಲ; ಇಂಗ್ಲಂಡಿನ ಬೊಕ್ಕಸದಿಂದ ಎಷ್ಟುಮಾತ್ರ ಧನಸಹಾಯ ಮಾಡಲ್ಪಡುವುದೊ ಅದನ್ನು ನಿರ್ಣಯಿಸಿ ಹೇಳುವುದಕ್ಕೆ ಈಗ ಅವಕಾಶವಿಲ್ಲವೆಂದು ಉತ್ತರವು ಕೊಡಲ್ಪಟ್ಟಿತು.

ಕಾಶ್ಮೀರ ಸಂಸ್ಥಾನದಲ್ಲಿ ಯಾರೊಬ್ಬರೂ ಆಹಾರಾರ್ಥವಾಗಿ ಗೋವಧೆಯನ್ನು ಮಾಡಬಾರದೆಂದು ಅಲ್ಲಿನ ಮಹಾರಾಜರು ಕಟ್ಟಪ್ಪಣೆಯನ್ನು ಮಾಡಿರುವರು. ಇದರಿಂದ ಅಲ್ಲಿನ ಗೋಮಾಂಸಭಕ್ಷಕರಿಗೆ ಆಗ್ರಹವುಂಟಾಗಿ, ಇದರ ಚರ್ಚೆಯು ಪಾರ್ಲಿಮೆಂಟಿನಲ್ಲಿ ಬರುವಷ್ಟು ಪ್ರಯತ್ನ ಮಾಡಿದರು. ಮಿ॥ ಬರಗಾಯನಿಯವರು ಈ ಸಂಬಂಧದ ಪ್ರಶ್ನೆ ಮಾಡಲಾಗಿ, ಅ॥ ಸೆಕ್ರೆಟರಿ ಮೆ॥ ಮಾಂಟಿಗ್‌ರವರು— ಈ ವಿಷಯವು ಆ ಸಂಸ್ಥಾನದ ಒಳ ಆಡಳಿತಕ್ಕೆ ಸೇರಿದುದಾದಕಾರಣ ಅದರ ವಿಷಯದಲ್ಲಿ ಪ್ರವೇಶಿಸುವುದಕ್ಕೆ ಸರ್ಕಾರದವರಿಗಿಷ್ಟವಿಲ್ಲವಾದುದರಿಂದ ಇದರ ಚರ್ಚೆಯು ನಿಷ್ಪ್ರಯೋಜಕವಾದುದು, ಎಂದು ಉತ್ತರಕೊಟ್ಟರು. ಕಾಶ್ಮೀರದ ಪ್ರಭುಗಳು ಈ ವಿಷಯದಲ್ಲಿ ಹಾಕಿದ ಮೇಲು ಪಂಕ್ತಿಯನ್ನು ಇತರ ಹಿಂದೂ ಸಂಸ್ಥಾನಿಕರೂ ಏಕೆ ಅನುಸರಿಸಬಾರದು? ಗೋರಕ್ಷಣೆ–ಪಶುಪ್ರದರ್ಶನ ಮೊದಲಾದುವುಗಳ ವಿಷಯದಲ್ಲಿ ತಮ್ಮ ಆದರವಿರುವುದೆಂದು ಆಡಂಬರ ತೋರಿಸುವ ಸರ್ಕಾರದವರುಗಳೆಲ್ಲರೂ ಮನಃಪೂರ್ವಕವಾಗಿ ಮಾಡುವ ಗೋವಧೆಯನ್ನು ತಪ್ಪಿಸದೆಯಿರುವುದು ಅನ್ಯಾಯವಲ್ಲವೆ?

ತುರ್ಕಿ ದೇಶದ ಹಿಂದಿನ ಸುಲ್ತಾನರಾಗಿದ್ದ ಅಬ್ದುಲ್ ಹಮೀದ್ ರವರು ಸಿಂಹಾಸನಭ್ರಷ್ಟರಾಗಿ ಸೆರೆಯಾಳಾಗಿ ಇಡಲ್ಪಟ್ಟ ಮೇಲೆ, ಇವರು ತಮ್ಮ ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗುವುದಕ್ಕೆ [illegible] ಪ್ರಯತ್ನ ಪಡುತ್ತಿರುವರು. ಒಂದುಸಲ ಇವರು ತಮ್ಮ ಸೇವಕರಲ್ಲಿ ಒಬ್ಬನನ್ನು ಹೊರಕ್ಕೆ ಕಳುಹಿಸಿದ್ದರು. ಅವರಲ್ಲಿ ಒಬ್ಬನ ಹತ್ತಿರ ಒಂದು ಕಾಗದವಿತ್ತು. ಸುಲ್ತಾನರು ತಪ್ಪಿಸಿಕೊಂಡು ಹೋಗುವ [illegible] ಅದರಲ್ಲಿತ್ತು. [illegible] ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರು. [illegible]

[illegible] ಚಿತ್ರಗಳು [illegible] ೧೨೪೪೪ ರೂ. ಗಳನ್ನು [illegible] ಮತ್ತು ಆ ಸಂಸ್ಥೆಯು [illegible] ಒಂದು [illegible] ಒಂದು [illegible] ಮಾಡಲ್ಪಟ್ಟಿತು. [illegible]

[illegible] ಒಂದು [illegible] ಗೋವರ್ನರ್ [illegible] ತಮ್ಮ [illegible] ಒಂದು [illegible] ಗಳು [illegible] ಒಂದು [illegible] ಗಂಡಸನ್ನು [illegible] ಹೋಗಿ, ಹೊಗೆಬಂಡಿ [illegible] ಒಂದು [illegible] ಹೋಗಿ, ಗಂಡಸನ್ನ [illegible] ಒಂದು [illegible] ಹೋಗಿ, [illegible] ಮಾಡಲಾಯಿತು.

[illegible] “ಕೇಸರಿ” “ಮಿತ್ರ” [illegible] ತಮ್ಮ [illegible] ಗಳನ್ನು [illegible] “ಕೇಸರಿ” [illegible] ಹೆಸರನ್ನು [illegible] ತಮ್ಮ [illegible] ಹೆಸರನ್ನು [illegible] ತಮ್ಮ [illegible] ಗಳನ್ನು [illegible] ಅವರ [illegible] ಮಾಡಿದರು.

ಪತ್ರವ್ಯವಹಾರದ ಅಭಿಪ್ರಾಯಕ್ಕೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸಬೇಕು. ಪ: ಕ:

ಪತ್ರವ್ಯವಹಾರ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ

ಪ್ರವಾಸವೃತ್ತಾಂತ:

ಶ್ರೀ॥ ಸ್ವಾಮಿಗಳವರು ಫೆಬ್ರುವರಿ ತಾ॥ ೨೬ ರಲ್ಲಿ ಸಾಂಗಲಿ ಸಂಸ್ಥಾನದ ತೇರದಾಳ ಪಟ್ಟಣದಿಂದ ಸಕಲ ಪರಿವಾರ ಸಮೇತ ಚಿತ್ತೈಸಿ ಅದೇ ದಿವಸ ಪ್ರಾತಃಕಾಲ ೧೧ ಗಂಟೆಗೆ ಮುಧೋಳ ಸಂಸ್ಥಾನದ ಮಹಾಲಿಂಗಪುರದ ಹೊರಭಾಗಕ್ಕೆ ದಯಮಾಡಿಸಿತು. ಆ ದಿವಸ ಶ್ರೀ॥ [illegible] ಶ್ರೀ॥ ಗಳವರ [illegible] ಶ್ರೀ॥ ಮಹಾಲಿಂಗೇಶ್ವರ ಮಠಕ್ಕೆ ದಯಮಾಡಿಸಿತು. ತಾ॥ ೨೮ ನೇ ಮಂಗಳವಾರ ಮಹಾಲಿಂಗಪುರದಲ್ಲಿರುವ [illegible] ಅಣ್ಣ ಬೆಂಚಿ (ಶರಣಪ್ಪ) ಇವರ ಬಿನ್ನಹವು ಕೈಕೊಂಡ ಪ್ರಕಾರ ಶ್ರೀ॥ ಗಳವರ ಸ್ವಾರಿಯು ಅಡ್ಡಪಾಲಕಿ, ಪಂಚಕಳಶ ಮುಂತಾದ ಎಲ್ಲಾ ಬಿರುದುಗಳೊಡನೆ ಅಂದವಾಗಿ ಅಲಂಕರಿಸಿದ್ದ ಪುರವೀಧಿಗಳಲ್ಲಿ ಉತ್ಸವದಿಂದ ದಯಮಾಡಿಸಿ ಮಹಾಲಿಂಗಪುರದ ಶಿಲ್ಪಿಯಲ್ಲಿರುವ ಗೌಡದವೀರಾಳಿನ ಚನ್ನಿಂಗೇಶ್ವರ ಮಠಕ್ಕೆ ಚಿತ್ತೈಸಿ ಸದರಿ ಶರಣಪ್ಪನ ಬಿನ್ನಹ ಮತ್ತು [illegible] ಕೈಕೊಂಡು ಸಾಯಂಕಾಲಕ್ಕೆ ಪೂರ್ವದಂತಾದ ಮಹಾಲಿಂಗೇಶ್ವರ ಮಠಕ್ಕೆ ಚಿತ್ತೈಸಿತು. ಈ ದಿವಸ ಮುಧೋಳದ ಪ್ರೊಫೆಸರ್ ಇರ್ಸ್ವಸ್ಟರವರು ಹಾಜರಿದ್ದು ಉತ್ಸವಕಾಲದಲ್ಲಿ ಮಾಡಿಸಿದ ಪ್ರೊಫೆಸರ್ ವರ್ಣವು ಬಹಳ ಸಮರ್ಪಕವಾಗಿತ್ತು. ಈ ಶರಣಪ್ಪನವರು ತಮ್ಮ ಯೋಗ್ಯತೆಗೆ ಮೀರಿ ಶ್ರೀಗಳವರಿಗೆ ೫೦೦ ರೂಪಾಯಿಗಳ ಕಾಣಿಕೆಯನ್ನು ಒಪ್ಪಿಸುವದಾಗಿ ಅರಿಕೆಮಾಡಿಕೊಂಡು ೩೦೦ ರೂಪಾಯಿಗಳನ್ನು ನಗದಾಗಿ ಒಪ್ಪಿಸಿದ್ದಲ್ಲದೆ ಒಂದುಕೂರಿಗೆ ಜಮೀನನ್ನು ಶ್ರೀಕರ್ತೃಗಳವರ ಗದ್ದುಗೆಗೆ ದೀಪಾರಾಧನೆ [illegible] ಭಕ್ತಿಪೂರ್ವಕವಾಗಿ ಒಪ್ಪಿಸಿರುತ್ತಾರೆ. ಮಾರ್ಚ್ ತಾ॥ ೩ ನೇ ಮಂಗಳವಾರ ಈ ಸ್ಥಳದ ಸಾಹುಕಾರ ರೇವಪ್ಪ ಚಿನ್ನಬಸಪ್ಪ ಅಣ್ಣ ಇವರ ಪ್ರಾರ್ಥನಾಪ್ರಕಾರ ಇವರ ಗೃಹಕ್ಕೆ ಅಡ್ಡಪಾಲಕಿ ಮುಂತಾದ ಸಮಸ್ತ ಬಿರುದಾವಳಿಗಳೊಡನೆ ಉತ್ಸವದಿಂದ ದಯಮಾಡಿಸಿ ಪಾದಪೂಜೆಯನ್ನು ಕೈಕೊಂಡು ಸಾಯಂಕಾಲಕ್ಕೆ ಪೂರ್ವದಂತಾದ ಶ್ರೀ ಮಹಾಲಿಂಗೇಶ್ವರ ಮಠಕ್ಕೆ ದಯಮಾಡಿಸಿತು. ಶ್ರೀ॥ ಗಳವರ ಸ್ವಾರಿಯು ೧೫ ದಿವಸಗಳವರೆಗೆ ಈ ಪಟ್ಟಣದಲ್ಲಿಯೇ ಇರುವುದಾಗಿ ಕಾಣುತ್ತದೆ.

ಪ್ರತ್ಯಕ್ಷದರ್ಶಿ.

೭ ನೇ ಶ್ರೀವೀರಶೈವ ಧರ್ಮೋತ್ತೇಜಕ ಸಭೆ.

ಈ ಸಭೆಯು ಧಾರವಾಡ ಡಿ॥ ಗುಂದಗೇರಿ ತಾ॥ ಪಶುಪತಿಯಾಳ ಗ್ರಾಮದಲ್ಲಿ ಈ ಮಾರ್ಚ್ ತಾ॥ ೨೬, ೨೭ ಮತ್ತು ೨೮ ರಲ್ಲಿ ಹುಬ್ಬಳ್ಳಿ ಶ್ರೀ ಮೂರುಸಾವಿರ ಮಠಾಧೀಶ ಶ್ರೀ ಗಂಗಾಧರಸ್ವಾಮಿಗಳ ಅಧ್ಯಕ್ಷತೆಯಲ್ಲಿ ಜರಗುವುದು. ಇದರ ಹಿಂದಿನ ದಿವಸ ಅಂದರೆ ತಾ॥ ೨೫ ರಲ್ಲಿ ಈ ಸಭೆಯ ಮಂಗಳಕ್ಕಾಗಿ ವಿಶೇಷ ರುದ್ರಪೂಜೆಯು ನಡೆಯುವುದು. ಶಿವಧರ್ಮಾಭಿವೃದ್ಧಿಯನ್ನು ಮಾತ್ರ ಕೋರುವ ಈ ಸಭೆಯಲ್ಲಿ [illegible] ಸರ್ವರೂ ಗಮನಿಸಬೇಕು.

ನಿರ್ಣಯಿಸಲ್ಪಡತಕ್ಕ ವಿಷಯಗಳು:— ೧. ಸ್ವಗೋತ್ರದಲ್ಲಿ ಶರೀರಸಂಬಂಧ ಮಾಡಬಾರದೆಂಬುವುದಕ್ಕೆ ಪ್ರಮಾಣಗಳು. ಪ್ರಮಾದವಶಾತ್ ಮಾಡಿದರೆ ಉಂಟಾಗತಕ್ಕ ಹಾನಿಗಳು. ೨. [illegible] ಮುಂತಾದ ಪ್ರಬಲಗ್ರಂಥಗಳಲ್ಲಿ ಉಕ್ತವಾಗಿರುವ ನಿತ್ಯನೈಮಿತ್ತಿಕ ಪ್ರಾಯಶ್ಚಿತ್ತಾದಿ ಕರ್ಮಗಳನ್ನು ಸಮಸ್ತರಾಗಿ ಪ್ರತಿಪಾದಿಸುವುದು. ೩. ವೀರಶೈವರಲ್ಲಿ ಜಂಗಮಸೂತಕಗಳು ಇಲ್ಲವೆಂಬ ಉಕ್ತಿಗಳು ಕೆಲ ಗ್ರಂಥಗಳಲ್ಲಿ ಕಾಣಬರುತ್ತವೆ; ಇವುಗಳ ತಾತ್ಪರ್ಯವೇನು? ೪. ಶ್ರೀಪಾದಪೂಜೆಯ ಸಿದ್ಧಾಂತ [illegible]

ಪರೀಕ್ಷಾ ಗ್ರಂಥಗಳು:—[illegible] ನಿರಸನವೆಂಬ ಟೀಕಾಗ್ರಂಥವನ್ನು ಕಂಠಸ್ಥ ಮಾಡಿಸುವುದು. ೨. ಲಿಂಗಧಾರಣ, ದೀಕ್ಷಾವಿಧಿ, ಪಾದೋದಕವಿಧಿ, ಅಂತ್ಯೇಷ್ಟಿವಿಧಿ ಇವುಗಳನ್ನು ಪ್ರಯೋಗಿಸುವುದಕ್ಕೆ ಬರುವಂತೆ ತಿಳಿಸುವುದು. ೩. ಶಿವ[illegible]ಯು.

ಕಾರ್ಯಕ್ರಮಗಳು:—೧. ಉಪನ್ಯಾಸಕರು ಉಪನ್ಯಾಸಕಾಲವನ್ನು ನಿಯಮಿಸಲು ವಿಷಯನಿಯಾಮಕ ಸಭೆಯವರು, ಅಧ್ಯಕ್ಷ ಶ್ರೀ [illegible] ಪಾದಂಗಳವರು ಮತ್ತು ನೂತನ ಧಾರ್ಮಿಕ ವಿಷಯಗಳನ್ನು ಸೂಚಿಸುವ ಮಹಾಶಯರು ಮಾರ್ಚ್ ತಾ॥ ೨೦ ರಲ್ಲಿ ಪಶುಪತಿಯಾಳಕ್ಕೆ ಆಗಮಿಸತಕ್ಕದ್ದು. ೨. ಭಾಷಣ ಮಾಡತಕ್ಕವರು ತಮ್ಮ ಸಂಕ್ಷಿಪ್ತ ಉಪನ್ಯಾಸಗಳನ್ನೂ, ನಿಯಮಿಸುವ ವಿಷಯಗಳನ್ನು ಸೂಚಿಸತಕ್ಕವರು ತಮ್ಮ ಸೂಚನೆಗಳನ್ನೂ ಮಾರ್ಚ್ ತಾ॥ ೨೦ ರೊಳಗೆ ಧಾರವಾಡದಲ್ಲಿಯ ವೀರಶೈವ ಸಂಸ್ಕೃತ ಪಾಠಶಾಲಾಧ್ಯಾಪಕರಾದ ಶಿವಲಿಂಗಶಾಸ್ತ್ರಿಗಳ ಹೆಸರಿಗೆ ಕಳಿಸುವುದು. ೩. ವಿಷಯನಿಯಾಮಕ ಸಭೆಯಲ್ಲಿ ನಿಯಮಿತರಾದವರು ಮಾತ್ರ ಭಾಷಣ ಮಾಡತಕ್ಕದ್ದು. ಉಪನ್ಯಾಸಕಾಲವನ್ನು ಹೆಚ್ಚು ಕಡಿಮೆ ಮಾಡುವುದೂ, ಉಪನ್ಯಾಸಕರನ್ನು ಅವಕಾಶ ಬಂದ ಹೊತ್ತಿಗೆ ಉಪನ್ಯಾಸಕ್ಕೆ ಅವಕಾಶ ಕೊಡುವುದೂ ಅಧ್ಯಕ್ಷರ ಅಧಿಕಾರದಲ್ಲಿರುತ್ತದೆ. ೪. ಪರೀಕ್ಷೆಗಿಟ್ಟ ಗ್ರಂಥಗಳಲ್ಲಿ ಪಾಸಾದವರಿಗೂ, ಭಕ್ತಿಪರವಶ ಕೀರ್ತನಗಳನ್ನು ಮಾಡಿದವರಿಗೂ ಯೋಗ್ಯಸಂಭಾವನೆಯು ಕೊಡಲ್ಪಡುವುದು. ೫. ತಾ॥ ೨೬, ೨೭—೨೮ ಈ ಮೂರು ದಿನಗಳಲ್ಲಿ ಪ್ರಾತಃಕಾಲ ೭ ಗಂಟೆಯಿಂದ ೧೧ ಗಂಟೆಯವರೆಗೆ ಪರೀಕ್ಷೆಯು ನಡೆದು, ಮಧ್ಯಾಹ್ನ ೧೨ ಗಂಟೆಯಿಂದ ಸಭಾಕಾರ್ಯಾರಂಭವಾಗುವುದು. ಅನಂತರ ರಾತ್ರಿ ಶಿವಕೀರ್ತನೆಯಾಗುವುದು. ೬. ಪರೀಕ್ಷೆಯು ಮೌಖಿಕ (ಓರಲ್) ತೆಗೆದುಕೊಳ್ಳಲ್ಪಡುವುದು. ಸಭಾ ಸದರ ನಿಯಮಗಳು:—ಪ್ರತಿಗ್ರಾಮದವರು ತಮ್ಮ [illegible] ಪ್ರತಿನಿಧಿಗಳನ್ನಾರಿಸಿ ಅವರ ಹೆಸರುಗಳನ್ನು ಮಾರ್ಚ್ [illegible] ೨೦ ರೊಳಗಾಗಿ ವ್ಯವಸ್ಥಾಪಕ ಸಂಘದ ಅಧ್ಯಕ್ಷರಿಗೆ ತಿಳಿ[illegible] ಬೇಕು, ಮತ್ತೂ ಜನರು ಸಭೆಗೆ ಬರಲು ಪ್ರೋತ್ಸಾಹಿಸ[illegible]ಕು. ೨. ಸಭಾಪ್ರವೇಶ ಮಾಡುವುದಕ್ಕೆ ೧ ರೂಪಾಯಿ ಫೀ ಕೊಡಬೇಕಾಗುವುದು. ೩. ಸ್ವಾಮಿಗಳವರಿಗೂ, ಶಾಸ್ತ್ರಿಗಳಿಗೂ, ಮಹನೀಯರಿಗೂ, ಅಗ್ರಹಾರಿಗಳಿಗೂ ([illegible]ಗರ್ಣಿ ಕೊಟ್ಟವರು) ಕೀರ್ತನಕಾರರಿಗೂ, ಪರೀಕ್ಷೆಗೆ [illegible]ರತಕ್ಕವರಿಗೂ ಪ್ರವೇಶ ಫೀ ಯಿಲ್ಲವು. ೪. ಸಭೆಗೆ ಬರ[illegible]ಕ್ಕವರು ತಂಬಿಗೆ ಹಾಸಿಗೆ ಮುಂತಾದವುಗಳನ್ನು ಕೊಂಡು [illegible]ತಕ್ಕದ್ದು. ೫. ಸ್ವಾಮಿಗಳಿಗೂ ಅಚಾರಶೀಲರಿಗೂ [illegible]ಗ್ಯಸ್ಥಳ ಗೊತ್ತುಮಾಡಲ್ಪಡುವುದು. ೬. ಸ್ವಯಂಸೇವ[illegible]ರಾಗಲಿಚ್ಛಿಸುವವರು ಮಾರ್ಚ್ ತಾ॥ ೨೦ ರೊಳಗೆ ವ್ಯ[illegible]ಸ್ಥಾಪಕ ಸಂಘಾಧ್ಯಕ್ಷರಿಗೆ ಬರೆಕೊಳ್ಳುವುದು. ೭. ರೈಲು ಮಾರ್ಗವಾಗಿ ಬರತಕ್ಕವರು ಗುಂದಗೇರಿ ಸ್ಟೇಷನ್ನಿನಲ್ಲಿ ಇ[illegible]ಯತಕ್ಕದ್ದು. ಅಲ್ಲಿಂದ ಪಶುಪತಿಯಾಳವು ೩ ಮೈಲಿ ದೂ[illegible]ದಲ್ಲಿದೆ. ಬಂಡಿಯ ವ್ಯವಸ್ಥೆಯು ಇರಲ್ಪಡುವುದು.

ಶಿವಬಸಪ್ಪ ಅಮಾತಭಾಪ, ಬೂದಿಯಾಳ್, ಸ್ವಾಗತಸಂಘಾಧ್ಯಕ್ಷ[illegible]

ಮತ್ತು

ಶಿವಲಿಂಗಶಾಸ್ತ್ರಿ, ಕಾರ್ಯದ[illegible]

ಟಿ. ನರಸೀಪುರದ ತಾ॥ ಮುದುಕನಪುರವೆಂಬ ಗ್ರಾಮದಲ್ಲಿ, ಈ ಸಾಧಾರಣಸಂವತ್ಸರ ಫಾಲ್ಗುಣಮಾಸ ಶುಕ್ಲಪಕ್ಷ ೩ ನೇ ಶುಕ್ರವಾರ (ಅಂದರೆ) ೩-೩-೧೧ ರಲ್ಲಿ ಶಿವದೀಕ್ಷಾ ಮಹೋತ್ಸವವು ನಡೆಯಿತು. ಈ ಮಹೋತ್ಸವಕ್ಕೆ ಮೈಸೂರಿಂದ ಶ್ರೀ ಹೊಸಮಠದ ಚರಮೂರ್ತಿ ಶ್ರೀ [illegible]ಸವಲಿಂಗಸ್ವಾಮಿಗಳವರೂ, ವೇ॥ ಶಾಂತವೀರಶಾಸ್ತ್ರಿಗಳವರೂ, ಇನ್ನೂ ಕೆಲವರೂ ದಯಮಾಡಿಸಿದ್ದರು. [illegible]ದ್ದರಹಳ್ಳಿಯಿಂದ ಶ್ರೀ ಗವಿಮಠದ ಶ್ರೀ ಮಹಾಂತಸ್ವಾಮಿಗಳವರೂ, ಶ್ರೀ॥ ಪಟ್ಟದ ಚನ್ನಬಸವಸ್ವಾಮಿಗಳವರೂ, ರಾ॥ ಶಾಂತಪ್ಪನವರು, ಮಾದಪ್ಪನವರು, ಮಲ್ಲಪ್ಪನವರು ಮೊದಲಾದವರೂ, ಪೊರಿಗಾಲಿ, ತಲಕಾಡು, ಮೊದಲಾದ ಸ್ಥಳಗಳ ಮಠಾಧಿಕಾರಿಗಳೂ, ಇನ್ನೂ ಅನೇಕ ಗ್ರಾಮಗಳಿಂದ ಅನೇಕ ಮಂದಿ ಭಕ್ತಮಾಹೇಶ್ವರರೂ ದಯಮಾಡಿಸಿದ್ದರು. ಮೈಸೂರು ವೇ॥ ಶಾಂತವೀರಶಾಸ್ತ್ರಿಗಳವರು ದೀಕ್ಷಾಸಂಸ್ಕಾರವನ್ನು ಸಾಂಗವಾಗಿ ನೆರವೇರಿಸಿದರು. ಸುಮಾರು ೨ ಸಾವಿರ ಭಕ್ತಮಾಹೇಶ್ವರರಿಗೆ ಸಂತರ್ಪಣೆಯು ಬಹಳ ವಿಜೃಂಭಣೆಯಿಂದ ನಡೆಸಲ್ಪಟ್ಟಿತು.

೪ ನೇ ಶನಿವಾರ ಪ್ರಾತಃಕಾಲ ವಿಚಿತ್ರರಂಗವಲ್ಲೀ ವಿರಾಜಮಾನವೂ, ಕದಳೀ ಸ್ತಂಭಗಳಿಂದಲೂ ಪಲ್ಲವತೋರಣಂಗಳಿಂದಲೂ ಅಲಂಕೃತವೂ, ದರ್ಶನಾರ್ಥವಾಗಿ ಬಂದಿದ್ದ ಅನೇಕಜನ ಸಮಾಕೀರ್ಣವೂ ಆಗಿದ್ದ ಗ್ರಾಮದಲ್ಲಿ ನಾನಾವಿಧ ಮಂಗಳವಾದ್ಯಘೋಷದೊಡನೆ ಪುರಾಣೋತ್ಸವವೂ, ಜಂಗಮ ಮೂರ್ತ್ಯೋತ್ಸವವೂ ಅತಿ ವಿಜೃಂಭಣೆಯಿಂದ ನಡೆಯಿತು. ಹಜ್ಜೆಹಜ್ಜೆಗೆ ಭಕ್ತವೃಂದದಿಂದ ಪಾದಪೂಜೆ ಮಾಡಲ್ಪಡುತ್ತಿತ್ತು. ಭಕ್ತಿಪೂರ್ವಕವಾಗಿ ಜನರು ಫಲಪುಷ್ಪಾದಿಗಳನ್ನು ಸಮರ್ಪಿಸುತ್ತಿದ್ದರು. ಪ್ರಾತಃಕಾಲ ೮ ಗಂಟೆಗೆ ಪ್ರಾರಂಭವಾದ ಉತ್ಸವವು ೧೧ ಗಂಟೆಗೆ ಮುಗಿಯಿತು. ಅನಂತರ ಸಮಾರಾಧನೆಯು ನಡೆಯಿತು.

೬ ನೇ ತಾರೀಖು ಸೋಮವಾರ ಮಧ್ಯಾಹ್ನ ೪ ಗಂಟೆಗೆ ಈ ಗ್ರಾಮದಲ್ಲಿ ಮಾ॥ ರಾ॥ ಸುಬ್ಬಣ್ಣನವರ ಮನೆಯಲ್ಲಿ ಒಂದು ಸಭೆಯು ಸೇರಿತು. ಸ್ಥಳಪರಸ್ಥಳಗಳ ಅನೇಕ ಭಕ್ತಮಾಹೇಶ್ವರರು ನೆರೆದಿದ್ದರು. ಸಭಿಕರ ಅಭಿಪ್ರಾಯಾನುಸಾರವಾಗಿ ಮೈಸೂರು ಹೊಸಮಠದ ಚರಮೂರ್ತಿ ಶ್ರೀ ಬಸವಲಿಂಗಸ್ವಾಮಿಗಳವರು ಸಭಾಧ್ಯಕ್ಷರಾಗಿ ಧರ್ಮಾಚಾರವಿಷಯದಲ್ಲಿ ಭಾಷಣಮಾಡಿದರು. ಅನಂತರ ಮೈಸೂರು ವೇ॥ ಶಾಂತವೀರಶಾಸ್ತ್ರಿಗಳವರು ಐಕಮತ್ಯವಿಷಯದಲ್ಲಿ ಭಾಷಣಮಾಡಿದರು. ಅನಂತರ ಸಭಿಕರ ಅಭಿಪ್ರಾಯಾನುಸಾರವಾಗಿ, “ವೀರಶೈವ ಧರ್ಮಪ್ರವರ್ಧಿನೀ” ಎಂಬ ಹೆಸರಿನಿಂದ ಒಂದು ಸಭೆಯು ಈ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟಿತು. ಅನಂತರ ಸಭಾಧ್ಯಕ್ಷರು ಸಭಿಕರಿಗೆ ಮೈಸೂರ್ ಸ್ಟಾರ್ ಪತ್ರಿಕೆಯಿಂದುಂಟಾಗುವ ಪ್ರಯೋಜನವನ್ನು ಕುರಿತು ಮಾತಾಡಿದರು. ಇದನ್ನೇ ಪುಷ್ಟೀಕರಿಸಿ ವೇ॥ ಶಾಂತವೀರಶಾಸ್ತ್ರಿಗಳು ಮಾತಾಡಿದರು. ಅನಂತರ ಜಯಘೋಷದೊಡನೆ ಸಭೆಯು ಉಪಸಂಹರಿಸಲ್ಪಟ್ಟಿತು.

ಈ ಗ್ರಾಮದ ವೀರಶೈವ ಮಹಾಜನರು ಹಿಗ್ಗಿ ೨ ತಿಂಗಳಿಂದಲೂ ಸಿದ್ಧರಹಳ್ಳಿ ಮಠದ ಪಟ್ಟಾಧಿಕಾರಿ ಶ್ರೀ ಚನ್ನಬಸವಸ್ವಾಮಿಗಳವರಿಂದ ಪುರಾಣಶ್ರವಣ ಮಾಡಿಸುತ್ತಿದ್ದು, ಪುರಾಣವನ್ನುದ್ದೇಶಿಸಿ ಮಹಾಸಮಾರಾಧನೆಯನ್ನು ನಡೆಸುವ ಸಂದರ್ಭದಲ್ಲಿ ಶಿವದೀಕ್ಷಾ ಮಹೋತ್ಸವವನ್ನು ನೆರವೇರಿಸಬೇಕೆಂದು ಅಭಿಪ್ರಾಯಪಟ್ಟವರಾಗಿ ೨೫ ಮಂದಿ ಬಾಲಕರಿಗೆ ದೀಕ್ಷಾಸಂಸ್ಕಾರವನ್ನೂ, ಮಹಾ ಸಮಾರಾಧನೆಯನ್ನೂ ಪುರಾಣೋತ್ಸವವನ್ನೂ ನೆರವೇರಿಸಿದ್ದಲ್ಲದೆ,

ವನಾದ ಒಬ್ಬ ಸ್ವಮತೀಯನಿಗೆ ವಿವಾಹವನ್ನೂ, ದೀಕ್ಷೆಯನ್ನೂ ನೆರವೇರಿಸಿದುದು ಸ್ತುತ್ಯವಾಗಿದೆ.

ಅದರೆ, ಇವರು ಇಷ್ಟುಮಾತ್ರಕ್ಕೇ ತೃಪ್ತರಾಗದೆ, ಈ ಮಹೋತ್ಸವಕ್ಕೆ ದಯಮಾಡಿಸಿದ್ದ ವಿದ್ಯಾವಂತರುಗಳಿಂದ ಉಪದೇಶವನ್ನು ಮಾಡಿಸಿ, ತಮ್ಮಲ್ಲಿರುವ ಕೊರತೆಗಳ ಪರಿಹಾರಕ್ಕೋಸುಗ ತಮ್ಮ ಗ್ರಾಮದಲ್ಲಿ ಮೇಲೆ ತೋರಿಸಿದ ಹೆಸರಿನಿಂದೊಂದು ಸಭೆಯನ್ನು ಏರ್ಪಡಿಸಿಕೊಂಡು ತನ್ಮೂಲಕ ಮತಸುಧಾರಣ ಕಾರ್ಯದಲ್ಲಿ ಪ್ರವರ್ತಿಸಿದ್ದು ಅತ್ಯಂತ ಸ್ತೋತ್ರಾರ್ಹವೂ, ಮುಖ್ಯವೂ ಆದ ಸಂಗತಿಯಾಗಿದೆ. « ಆರಂಭಶೂರಾಃ ಖಲುದಾಕ್ಷಿಣಾತ್ಯಾಃ" ಎಂಬ ಪ್ರಮಾಣಾನುಸಾರವಾಗಿ ನಮ್ಮ ದೇಶದಲ್ಲಿ ಕೆಲವರು ಮೊದಲು ಒಂದು ಕಾರ್ಯವನ್ನು ಆರಂಭಿಸಿ, ಅದನ್ನು ದೀರ್ಘಕಾಲ ನಡೆಸದೆ ಶಾಟಸ್ಥ್ಯವನ್ನವಲಂಬಿಸುವುದುಂಟಷ್ಟೆ? ಹಾಗೆ ಈ ಗ್ರಾಮದ ವೀರಶೈವ ಮಹಾಜನರು ಈಗತಾನೇ ಸ್ಥಾಪಿತವಾಗಿರುವ ಈ ಸಭೆಯನ್ನು ದಿನೇದಿನೇ ವೃದ್ಧಿಸ್ಥಿತಿಗೆ ತಂದು, ಇದರಿಂದ ಮುಂದೆ ಉಂಟಾಗುವ ಮಹತ್ಫಲಗಳನ್ನು ಅನುಭವಿಸಲು ಎಂದಿಗೂ ಉದಾಸೀನರಾಗಲಾರರೆಂದು ನಂಬುತ್ತೇನೆ.

ಈ ಗ್ರಾಮದಲ್ಲಿ ಪ್ರಮುಖರಾಗಿರುವ ಮ॥ ರಾ॥ ಗಳಾದ ಯಜಮಾನ್ ಬಸವಲಿಂಗಪ್ಪನವರು, ಯಜಮಾನ್ ಬೆಣ್ಣೆ ಮಲ್ಲಪ್ಪನವರು, ಡಾ॥ ಮಾ॥ ಮಾದಪ್ಪನವರು, ದೊಡ್ಡಮಲ್ಲಪ್ಪನವರು, ಪಟೇಲ್ ಮರಪ್ಪನವರು, ಬಸವಲಿಂಗದೇವರು, ಶಿವನಪ್ಪನವರು ಮೊದಲಾದವರು ಈ ಸಭೆಯ ವಿಷಯದಲ್ಲಿ ವಿಶೇಷವಾದ ಪ್ರೀತಿಯನ್ನಿಟ್ಟು ಪೋಷಿಸುತ್ತಾ ಬಂದರೆ ಸ್ವಲ್ಪಕಾಲದೊಳಗೆ ಇದರಿಂದಾಗುವ ಪ್ರಯೋಜನಗಳು ತೋರುತ್ತಾ ಬರಲು ಅಭ್ಯಂತರವಿಲ್ಲ. ಈ ಸಭೆಯು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತ ಬಂದರೆ ನೆರೆಗ್ರಾಮಗಳಲ್ಲಿರುವ ನಮ್ಮ ಮತೀಯರೆಲ್ಲರೂ ಈ ಸಭೆಗೆ ಸೇರಿಕೊಳ್ಳಬಹುದು. ಅಥವಾ ಹೀಗೆಯೇ ತಮ್ಮತಮ್ಮ ಗ್ರಾಮಗಳಲ್ಲಿ ಸಂಘಗಳನ್ನು ಏರ್ಪಡಿಸಿಕೊಳ್ಳಲು ಅವಕಾಶವುಂಟಾಗಿ, ಆಗ್ಗೆ ಈ ಮದುಕನ ಪುರಸ್ಥ ವೀರಶೈವಮತೀಯರು ಇತರರಿಗೆ ಮಾರ್ಗದರ್ಶಕರಾಗಿ ಪರಿಣಮಿಸಿ ಕೀರ್ತಿಭಾಜನರಾಗುವರು. ಸದ್ಯಕ್ಕೆ ಈ ಸಭೆಗೆ ವಿದ್ಯಾವಂತರೂ, ದರ್ಮಾಭಿಮಾನಿಗಳೂ ಆಗಿರುವ ಸಿದ್ಧರಹಳ್ಳಿ ಮಠದ ಶ್ರೀ॥ ಚೆನ್ನಬಸವಸ್ವಾಮಿಗಳವರು ಮತ್ತು ಉಪಾಧ್ಯಾಯ ಶಿವನಪ್ಪನವರು ಈ ಈರ್ವರು ಮುಖ್ಯಪಾಲಕರಾಗಿ ನಿಂತಿರುವುದು ಈ ಸಭೆಯ ಏಳಿಗೆಯನ್ನು ಸೂಚಿಸತಕ್ಕದ್ದಾಗಿದೆ.

ಈ ಸಭೆಯು ಸ್ಥಾಪಿತವಾದ ಕೂಡಲೆ ನೆರೆಗ್ರಾಮವಾದ ಹಣಕೊಳದ ಮಠದ ಶ್ರೀ॥ ಪಟ್ಟದಸ್ವಾಮಿಗಳವರು, ಮ॥ ಮಲ್ಲಪ್ಪನವರೂ ಸಹ ಈ ಸಭೆಗೆ ನಾವುಗಳು ಸೇರಿ ಸಭೆಯ ಉದ್ದೇಶವನ್ನು ನೆರವೇರಿಸಲು ಸಹಾಯಕರಾಗುತ್ತೇವೆಂದು ಹೇಳಿದುದು ಅತ್ಯಂತ ಸಂತೋಷಜನಕವಾಗಿದೆ.

ಮುಖ್ಯವಾಗಿ ಈ ಮದುಕನಪುರ ಗ್ರಾಮವಾಸಿಗಳಾದ ವೀರಶೈವಮಹಾಜನರು « ವೀರಶೈವ ಧರ್ಮಪ್ರವರ್ಧಿನೀ" ಎಂಬ ಈ ಸಭೆಯನ್ನು ಸ್ಥಾಪಿಸುವಾಗ್ಗೆ ಹೊಂದಿದ್ದ ಆಸಕ್ತಿ ಯಾವಾಗಲೂ ಕೊರತೆಯನ್ನುಂಟುಮಾಡಿಕೊಳ್ಳದೆ ಎಲ್ಲರೂ ಏಕಮನಸ್ಕರಾಗಿ ಇದರ ಉದ್ದೇಶವನ್ನು ನೆರವೇರಿಸಿ ಇದರಿಂದ ಅನೇಕ ಪ್ರಯೋಜನಗಳನ್ನು ಹೊಂದುವಂತೆ ಜಗದೀಶನು ಯಾವಾಗಲೂ ಪ್ರೇರಿಸುವವನಾಗಲಿ.

ಈ ಗ್ರಾಮದಲ್ಲಿ ನಡೆದ ಶಿವದೀಕ್ಷಾ ಮಹೋತ್ಸವಕಾಲದಲ್ಲಿ ಮದುಕದೊರೆ « ಶ್ರೀ ವೀರಶೈವಮತಸಂವರ್ಧಿನೀ" ಸಭೆ ಆಚಾರ್ಯಸಂಭಾವನೆ ೫ ರೂಪಾಯಿಗಳು ತೆಗೆಯಲ್ಪಟ್ಟಿತು. ಯಂ. ಚೆನ್ನಪ್ಪ.

ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ಹದಿಮೂರನೇ ಅಧಿವೇಶನವು.

(ಹೋದಸಂಚಿಕೆಯ ಶೇಷ.)

ತದನಂತರ ರಾ॥ ಅಣ್ಣಪ್ಪನಾನಾಲಂಗಡೆ (ಶಹಾಪೂರ) ಇವರು ೧೩ ನೇ ತರಾವ ತಂದದ್ದು ಹೇಗೆಂದರೆ:—« ವಿದ್ಯಾರ್ಥಿಗಳಿಗೆ ಧರ್ಮಶಿಕ್ಷಣಕೊಡುವುದು ಸಮಾಜದ ಉನ್ನತಿಗೋಸ್ಕರ ಅತ್ಯಂತ ಜರೂರಾಗಿದೆ. ಆದುದರಿಂದ ಸಭೆಯ ಖರ್ಚಿನಿಂದ ಶಿಕ್ಷಣ ತಕೊಳ್ಳುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಗಳಿಗೆ ಯಾವ ಬಗೆಯ ಶಿಕ್ಷಣ ಕೊಡಬೇಕೆಂಬುದನ್ನು ನಿರ್ಣಯ ಮಾಡುವುದಕ್ಕೆ (೧) ಶೇಠ ಹಿರಾಚಂದ ನೇಮಿಚಂದ, (೨) ಸೇಠ ಹಿರಾಚಂದ ಅಮೀಚಂದ, (೩) ರಾ॥ ರಾ॥ ಲಠ್ಠೆ, (೪) ಶ್ರೀಯುತ ಚೌಗುಲೆ ವಕೀಲ, (೫) ಸೇಠ ರಾವಜಿ ಸಖಾರಾಮ ದೋಶಿ ಮತ್ತು (೬) ಪಂಡಿತ ನಿಟವೆ ಇವರುಗಳುಳ್ಳ ಕಮಿಟಿಯನ್ನು ಈ ಸಭೆಯು ನಿಯಮಿಸುತ್ತದೆ. ಈ ಕಮಿಟಿಯವರು ಉಪಾಧ್ಯಾಯರ ಹುಡುಗರ ಧರ್ಮಶಿಕ್ಷಣಕ್ರಮವನ್ನಾದರೂ ನಿರ್ಣಯಿಸಬೇಕು. ಮತ್ತೂ ಈ ಪ್ರಕಾರ ಶಿಕ್ಷಣ ಕಲಿತು ಯೋಗ್ಯರಾದಂಥ ಉಪಾಧ್ಯಾಯರಿಗೆ (ಪುರೋಹಿತರಿಗೆ) ಸ್ವಾಮಿಗಳು ಮತ್ತು ಸಮಾಜದವರು ಆಶ್ರಯಕೊಡಬೇಕು." ಈ ತರಾವ ಪಾಸಾದ ವೇಳೆ ಶ್ರೀಮಂತ ಅಪ್ಪಾಸಾಹೇಬ ದೇಶಾಯಿ ಹನಗಂಡಿಕರ ಇವರು ೧೮ ನೇ ತರಾವ ತಂದದ್ದು ಏನೆಂದರೆ—« ಸಭೆಯ ಶಿಕ್ಷಣ ಫಂಡಿಗೆ ವಾಗ್ದಾನ ಮಾಡಿದ ಸದ್ಗೃಹಸ್ಥರ ಕಡೆಯಿಂದ ಮತ್ತು ಇತರ ಬಾಂಧವರ ಕಡೆಯಿಂದ ಊರೂರಿಗೆ ಹೋಗಿ ಫಂಡನ್ನು ವಸೂಲು ಮಾಡುವುದಕ್ಕಾಗಿ ಈ ಸಭೆಯು ಸಮಾಜಪುಢಾರಿಗಳಾದ ೯ ಜನರ ಡೆಪ್ಯುಟೇಶನವನ್ನು ನಿಯಾಮಕ ಮಾಡುತ್ತದೆ." ಈ ತರಾವಕ್ಕೆ ರಾ॥ ಬಳವಂತ ರಾಮಬುಗಟಿ ಇಂಗಳಿಕರ ಇವರು ಅನುಮೋದನಕೊಟ್ಟು ಸಭೆಯ ಶಿಕ್ಷಣ ಫಂಡಿಗೆ ಸಹಾಯ ಮಾಡುವುದಕ್ಕಾಗಿ ಸಭಿಕರಿಗೆ ಪ್ರಾರ್ಥನೆ ಮಾಡಿದರು. ಆಗ್ಗೆ ಸುಮಾರು ೨೦೦೦ ರೂ. ಫಂಡು ಕೂಡಿತು. ನಂತರ ಸಾಯಂಕಾಲವಾದಕಾರಣ ಸಭಾಕಾರ್ಯವು ನಿಲ್ಲಿಸಲ್ಪಟ್ಟಿತು. ಇದೇ ದಿವಸ ರಾತ್ರಿ ೯ ಗಂಟೆಗೆ ಜೈನಮಹಿಳಾ ಪರಿಷದವು ಆಯಿತು. ಸ್ತ್ರೀಸಮಾಜವು ಅಂದಾಜು ೧೦೦೦ ಮೇಲೆ ಕೂಡಿತ್ತು. ಪುರುಷರಾದರೂ ಬೇರೆ ಕಡೆಗೆ ಕೂತು ಈ ಸ್ತ್ರೀಸಭೆಯ ಕಾರ್ಯದ ನಿರೀಕ್ಷಣೆಯನ್ನು ಮಾಡುತ್ತಿದ್ದರು. ಈ ಸಭೆಯ ಅಧ್ಯಕ್ಷತೆಯನ್ನು ಸೌ॥ ಪದ್ಮಾವತಿಬಾಯಿ ಶ್ರೀಮಂದಗ ಔರವಾಡೆ (ಸಾಂಗಲಿ) ಇವರಿಗೆ ಕೊಡಲ್ಪಟ್ಟಿತ್ತು. ಸಭೆಯಲ್ಲಿ ಶ್ರೀ॥ ಶ್ರೀಮತಿಬಾಯಿ ಕೋಳೆ, ಶ್ರೀದೇವಿ (ಮೂಡಬಿದರೆ) ಮತ್ತು ಅನ್ನಪೂರ್ಣಾಬಾಯಿ ಆಪಟೆ (ಪುಣೆ) ಮುಂತಾದವರ ಸ್ತ್ರೀಶಿಕ್ಷಣ ಪ್ರಸಾರದ ಬಗ್ಗೆ ಭಾಷಣಗಳಾದುವು. ಶ್ರೀಮತಿ ಆಪಟೆಯವರು ಬಾಲಸಂಗೋಪನದ ವಿಷಯವಾಗಿಯಾದಗೂ ಬಹು ಸರಸವಾದ ಭಾಷಣ ಮಾಡಿದರು. ಸೌ॥ ಜ್ಞಾನಮತಿಬಾಯಿ ಲಠ್ಠೆಯವರು ಸ್ತ್ರೀಶಿಕ್ಷಣಕ್ಕೆ ದ್ರವ್ಯಸಹಾಯ ಮಾಡಬೇಕೆಂದು ಪ್ರಾರ್ಥನೆ ಮಾಡಿದ ವೇಳೆಗೆ ಸ್ತ್ರೀಸಮಾಜದಲ್ಲಿಯೇ ೧೦೦ ರೂಪಾಯಿ ಕೂಡಿದುವು. ಈ ಪ್ರಕಾರ ಸಭೆಯ ೩ ನೇ ದಿವಸದ ಕಾರ್ಯಕ್ರಮವು ತೀರಿತು. ೪ ನೇ ದಿವಸ (ತಾ॥ ೯-೨-೧೧) ಮುಂಜಾನೆ ಸ್ವಲ್ಪ ಹೊತ್ತು ಸಬ್‌ಜಕ್ಟ್ ಕಮಿಟಿಯ ಮೀಟಿಂಗ್ ಆಗಿ ಮಧ್ಯಾಹ್ನ ೩ ಗಂಟೆಗೆ ಸಭಾಕಾರ್ಯಕ್ಕೆ ಪ್ರಾರಂಭವಾಯಿತು. ದಾನವೀರ ಜೈನಕುಲಭೂಷಣ ಸೇಠ ಮಾಣಿಕಚಂದ ಹಿರಾಚಂದ ಜೆ. ಪಿ. (ಮುಂಬಯಿ) ಇವರು ೧೯ ನೇ ತರಾವನ್ನು ಮುಂದೆ ಇಟ್ಟದ್ದು ಯಾವುದೆಂದರೆ—« ವ್ಯಾಪಾರ ಮುಂತಾದುದರಲ್ಲಿ ತೆಗದುಕೊಂಡ ಧರ್ಮಾದಾಯ ದ್ರವ್ಯದ ಯೋಗ್ಯವಿನಿಯೋಗ ಆಗುವುದು ಅತ್ಯಂತ ಅವಶ್ಯವಿದ್ದು, ಹೀಗೆ ಏನಕೆ ಜನರ ಕಡೆಯಿಂದ ಆಗುವುದಿಲ್ಲ. ಇದು ಬಹಳ ಶೋಚನೀಯ ಸಂಗತಿಯೇ ಸರಿ. ಆದುದರಿಂದ ಮುಂದೆ ಕಾಣಿಸಿದ ನಿಯಮಗಳ ಕಡೆಗೆ ಲಕ್ಷ್ಯಕೊಟ್ಟು ಧರ್ಮಾದಾಯ ದ್ರವ್ಯದ ವಿನಿಯೋಗ ಮಾಡಲಿಕ್ಕೆ ಬೇಕು. (೧) ಎಲ್ಲ ಧರ್ಮಾದಾಯ ಸಂಸ್ಥೆಗಳ ಲೆಕ್ಕವನ್ನು ಅವುಗಳ ವ್ಯವಸ್ಥಾಪಕರು ಪ್ರಸಿದ್ಧಮಾಡಬೇಕು. (೨) ವ್ಯಾಪಾರಸ್ಥರು ತಮ್ಮಲ್ಲಿ ಕೂಡಿರುವ ಧರ್ಮಾದಾಯದ ಹಣವನ್ನು ಪಂಚರದೇಖರೇಖೆಯ ಕೆಳಗೆ ಯೋಗ್ಯ ಕಾರ್ಯದಲ್ಲಿ ಖರ್ಚು ಮಾಡಬೇಕು. (೩) ಆದಷ್ಟುಮಟ್ಟಿಗೆ ಈ ಹಣವನ್ನು ಶಿಕ್ಷಣ ಮುಂತಾದ ಅವಶ್ಯಕ ಕಾರ್ಯದಲ್ಲಿಯೇ ಖರ್ಚು ಮಾಡಬೇಕು. ಈ ಬಗ್ಗೆ ನಾಮದಾರ ರಹಿಮತ್ತುಲ್ಲಾರವರು ವರಿಷ್ಠ ಕಾಯದೆ ಕೌನ್ಸಿಲನಲ್ಲಿ ತಂದ ಬಿಲ್ಲು ಈ ಸಭೆಗೆ ಸಮ್ಮತವಿದೆ." ಇದಕ್ಕೆ ರಾ॥ ಗೋಪಾಳ ಕೃಷ್ಣದೇವಧರರವರು ಅನುಮೋದನ ಕೊಟ್ಟರು. ತದನಂತರ ಅಧ್ಯಕ್ಷರು ಈ ಕೆಳಗಿನ ತರಾವುಗಳನ್ನು ಮುಂದೆ ಇಟ್ಟರು.

೨೦. ಕೊಲ್ಲಾಪುರದಲ್ಲಿ ಇರುವ « ಶ್ರಾವಿಕಾಶ್ರಮ" ವೆಂಬ ಜೈನಸ್ತ್ರೀಯರ ಸಂಸ್ಥೆಯು ಸಾಂಗಲಿ ಪಟ್ಟಣದಲ್ಲಿಗೆ ತರಲ್ಪಡಬೇಕು. ಮತ್ತು ಅದರ ವ್ಯವಸ್ಥೆಯನ್ನು ಸಾಂಗಲಿಪಟ್ಟಣದ ಕೆಲ ಸದ್ಗೃಹಸ್ಥರುಳ್ಳ ಕಮಿಟಿಯವರು ನೋಡಬೇಕು. ೨೧ ನೇ ತರಾವು—ಸಭೆಯ ಮುಂದಿನ ವರ್ಷದ ಕಾರ್ಯಕಾರಿಮಂಡಳಿಯ ನೇಮಣೂಕಿಯ ಬಗ್ಗೆ ಇತ್ತು. ಮುಂದಿನ ವರ್ಷದ ಸಭೆಯ ಜನರಲ್ ಸೆಕ್ರೆಟರಿಯ ಕೆಲಸವು ರಾ॥ ಸಾ॥ ಬಾಪು ಅಣ್ಣಾ ಪಾಟೀಲ, ಬಿ. ಎ, ಮಾಮಲೆದಾರ ಪೇಟಾ ಶಿರೋಳ (ಕೊಲ್ಲಾಪುರ) ಇವರಿಗೆ ಕೊಡಲ್ಪಟ್ಟಿತು. ತರುವಾಯ ರಾ॥ ಸಾ॥ ಲಠ್ಠೆಯವರು ಮುಂದಿನ ವರ್ಷದ ಸಭೆಯ ಅಂದಾಜಪತ್ರಕ (ಬಜೆಟ್) ವನ್ನು ಪಾಸಮಾಡುವಬಗ್ಗೆ ೨೨ ನೇ ತರಾವನ್ನು ಮುಂದೆ ಇಟ್ಟರು. ನಂತರ ರಾ॥ ರಾ॥ ಸೇಠ ಜೀವರಾಜವಾಲಚಂದ (ಸೊಲ್ಲಾಪುರ) ಇವರು ೨೩ ನೇ ತರಾವನ್ನು ಇಟ್ಟದ್ದು ಹೇಗೆಂದರೆ—« ಇಂಗ್ಲೀಷ್ ಶಿಕ್ಷಣದ ಕಡೆಗೆ ನಮ್ಮ ಸಮಾಜದ ಲಕ್ಷ್ಯವು ಹತ್ತುತ್ತಲಿದ್ದು, ಅದರ ಪ್ರಸಾರದ ಸಲುವಾಗಿ ಕೊಲ್ಲಾಪುರ, ಸೊಲ್ಲಾಪುರ ಮತ್ತೂ ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿಗೃಹ (ಬೋರ್ಡಿಂಗ್ ಹೌಸ್) ಗಳು ಸ್ಥಾಪಿಸಲ್ಪಟ್ಟಿವೆ. ಇದನ್ನು ನೋಡಿ ಈ ಸಭೆಗೆ ಆನಂದವಾಗುತ್ತದೆ. ಮತ್ತು ಇದೇ ಉದ್ದೇಶದಿಂದ ಶ್ರೀಯುತ ಧರ್ಮರಾವ ಸುಬೇದಾರ (ಶಹಾಪುರ) ಇವರ ೨೦೦೦೧ ರೂಪಾಯಿಯ ದೇಣಗಿಯಿಂದ ಬೆಳಗಾಂವಿಯಲ್ಲಿ ಒಂದು ಬೋರ್ಡಿಂಗ್ ಹೌಸು ಸ್ಥಾಪಿಸಲ್ಪಡುವುದರಲ್ಲಿದೆ. ಇದು ಸಂತೋಷದ ಸಂಗತಿಯೇ ಸರಿ. ಜೈನ ವಿದ್ಯಾರ್ಥಿಗಳಿಗೆ ಸಾಂಪ್ರತಕಾಲದ ಪರಿಸ್ಥಿತಿಯ ಅನುಗುಣವಾಗಿ ಯೋಗ್ಯನಾಗರಿಕರೆನಿಸುವ ಇಂಗ್ಲೀಷ್ ಶಿಕ್ಷಣವು ದೊರೆಯುವ ಬಗ್ಗೆ ಎಲ್ಲರೂ ಪ್ರಯತ್ನಪಡಬೇಕು." ಇದಕ್ಕೆ ಅಥಣಿಯ ಮಾಮಲೇದಾರರಾದ ರಾ॥ ಸಾ॥ ರಣದಿವೆಯವರು ಅನುಮೋದನಕೊಟ್ಟು ಇಂಗ್ಲೀಷ್ ಶಿಕ್ಷಣದ ಮಹತ್ವವನ್ನು ವರ್ಣಿಸಿದರು. ಅನಂತರ ಸಾಂಗಲಿ ಜೈನಸಂಘದವರು ಸಭೆಯ ವ್ಯವಸ್ಥೆಯನ್ನು ಚೆನ್ನಾಗಿ ಇಟ್ಟಬಗ್ಗೆ ಅವರ ಉಪಕಾರವನ್ನು ಸ್ಮರಿಸುವುದನ್ನು ಕುರಿತು ರಾ॥ ಸೇಠ ಮಾಣಿಕಚಂದರವರು ೨೪ ನೇ ತರಾವನ್ನು ಮುಂದೆ ಇಟ್ಟರು. ಇದು ಪಾಸಾದನಂತರ ರಾ॥ ಅಣ್ಣಪ್ಪಾ ನಾನಾಲಂಗಡೆ (ಷಹಾಪುರ) ಇವರು ಮುಂದಿನ ವರ್ಷದ ಸಭೆಯು ಬೆಳಗಾಂವಿಯಲ್ಲಿ ಕೂಡಿಸಬೇಕೆಂಬ ೨೫ ನೇ ತರಾವನ್ನು ಮುಂದೆ ಇಟ್ಟು ಇಲ್ಲರೂ ಬೆಳಗಾಂವಿಯ ಸಭೆಗೆ ಅಗತ್ಯವಾಗಿ ಬರಬೇಕೆಂದು ಆಮಂತ್ರಣ ಕೊಟ್ಟರು. ತದನಂತರ ಅಧ್ಯಕ್ಷರು ಸಭೆಯ ಕೆಲಸವನ್ನು ಚೆನ್ನಾಗಿ ನೆರವೇರಿಸಿದುದಕ್ಕಾಗಿ ಅವರ ಉಪಕಾರವನ್ನು ಸ್ಮರಿಸುವ ಕುರಿತು ಪ್ರೊ॥ ಲಠ್ಠೆಯವರು ೨೬ ನೇ ತರಾವನ್ನು ಮುಂದೆ ಇಟ್ಟರು. ಈ ಪ್ರಕಾರ ಎಲ್ಲ ತರಾವುಗಳೂ ಸರ್ವಾನುಮತದಿಂದ ಪಾಸಾದನಂತರ ಅಧ್ಯಕ್ಷರು ಉಪಸಹಾರಾತ್ಮಕವಾದ ಭಾಷಣ ಮಾಡಿ ಎಲ್ಲರ ಆಭಾರ ಮನ್ನಿಸಿದರು. ಮತ್ತು ಎಲ್ಲರೂ ಏಕೋಕಭಾವದಿಂದ ತಮ್ಮತಮ್ಮ ಉನ್ನತಿಯಬಗ್ಗೆ ಪ್ರಯತ್ನ ಮಾಡಬೇಕೆಂದು ಹೇಳಿದರು. ಬಳಿಕ ಅಧ್ಯಕ್ಷರ ಕೊರಳಲ್ಲಿ ಪೂಮಾಲೆಯನ್ನು ಹಾಕಿ ಅವರನ್ನು ಸನ್ಮಾನಿಸಿದನಂತರ ಸಭೆಯು ಜಯಜಯಕಾರ ಧ್ವನಿಯಲ್ಲಿ ಸುಮಾರು ೫॥ ಗಂಟೆಗೆ ಬರಖಾಸ್ತಾಯಿತು. ನಂತರ ಶ್ರೀಜಿನೇಂದ್ರ ಪಂಚಕಲ್ಯಾಣಪೂಜೆಯ ಸಂಬಂಧವಾದ ರಥೋತ್ಸವದ ಸಮಾರಂಭವು ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಈ ಸಮಾರಂಭದ ಸಲುವಾಗಿ ಮುದ್ದಾಮ ಮುಂಬೈಪಟ್ಟಣದಿಂದ ತರಿಸಲ್ಪಟ್ಟಂಥ ಎರಡು ಕುದುರೆಯ ಅಪೂರ್ವವಾದ ಯಾಂತ್ರಿಕರಥವು ಶೃಂಗರಿಸಲ್ಪಟ್ಟು ಅದರಲ್ಲಿ ಶ್ರೀ ಜಿನೇಂದ್ರರ ಮೂರ್ತಿಯನ್ನು ವಿರಾಜಮಾನಮಾಡಿ ರಥವು ಪಟ್ಟಣದ ಮುಖ್ಯಮುಖ್ಯ ರಾಜಬೀದಿಯಲ್ಲಿ ತಿರುಗಾಡಿಸಲ್ಪಟ್ಟಿತು. ನಂತರ ಈ ಸಮಾರಂಭವು ಮುಗಿಯಿತು. ಈ ಸಮಾರಂಭದ ಕೂಡ ೧೦-೧೫ ಸಾವಿರ ಸ್ತ್ರೀಪುರುಷರು ಏಕಚಿತ್ತದಿಂದ ಬರುತ್ತಿದ್ದರು. ಈ ಸಮಾರಂಭವು ಕಿಟ್ಸನ್ ಲಾಯಿಟಿನ ಬೆಳಕಿನಲ್ಲಿ ಬಹಳ ಪ್ರೇಕ್ಷಣೀಯವಾಗಿ ತೋರಿತು. ಐದನೇ ದಿವಸ (ತಾ॥ ೧೦-೨-೧೧) ಮುಂಜಾನೆ ೯ ಗಂಟೆಗೆ ಕೊಲ್ಲಾಪುರದ ರಾಜಾ ರಾಮಕಾಲೇಜದ ಪ್ರೊಫೇಸರರಾದ ಮಿ॥ ಮಹಾದೇವಗಣೇಶ ಡೊಂಗರೆಯವರ « ಮಾಂಸಾಹಾರ ನಿಷೇಧದಬಗ್ಗೆ ಶಾಸ್ತ್ರೀಯ ದೃಷ್ಟಿಯಿಂದ ವಿಚಾರ" ಈ ವಿಷಯದಮೇಲೆ ಸುರಸವಾದ ವ್ಯಾಖ್ಯಾನವಾಯಿತು. ಅವರು ಪಾಶ್ಚಾತ್ಯ ಪದ್ಧತಿಯಿಂದ ಈ ವಿಷಯದ ಬಗ್ಗೆ ಪ್ರಮಾಣಶೀರ ವಿವೇಚನಮಾಡಿ ಮಾಂಸಾಹಾರವು ಸರ್ವದೃಷ್ಟಿಯಿಂದ ನಿಂದ್ಯವಿದೆ ಎಂದು ಸಿದ್ಧಮಾಡಿದರು. ಈ ಪ್ರಸಂಗದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿದ ಪ್ರಸಿದ್ಧ ನಾಟಕಕಾರರಾದ ರಾ॥ ರಾ॥ ಗೋವಿಂದ ಬಲ್ಲಾಳದೇವಲ (ಸಾಂಗಲಿ) ರವರು ಜೈನಧರ್ಮದ ಅಹಿಂಸತ್ವವನ್ನು ಬಹಳ ಕೊಂಡಾಡಿದರು. ಇದೇ ದಿವಸ ಮಧ್ಯಾಹ್ನ ೧೨ ಗಂಟೆಗೆ ಶ್ರೀ ಜಿನೇಂದ್ರರ ಮಹಾಭಿಷೇಕ ಪೂಜೆಯು ಬಹಳ ಆನಂದದೊಡನೆ ಜರಗಿಸಲ್ಪಟ್ಟಿತು. ನಂತರ ಸಾಯಂಕಾಲ ೮॥ ಗಂಟೆಗೆ ಸಾಂಗಲಿ ಪಟ್ಟಣದಲ್ಲಿ ಸಭಾಕಾರ್ಯಕ್ಕಾಗಿ ಕೂಡಿದ ಜನರಲ್ಲಿ ಪರಸ್ಪರ ಸ್ನೇಹವು ವೃದ್ಧಿಂಗತ ಆಗುವುದಕ್ಕಾಗಿ ಮೆಂಬರ ಜನರು ಸಮ್ಮೇಲನವು (ಗ್ಯಾದರಿ) ಮಾಡಲ್ಪಟ್ಟಿತು. ಇದರಲ್ಲಿ ಅಲ್ಪಫಲಾಹಾರದ ಭೋಜನವು ಮಾಡಲ್ಪಟ್ಟಿತು. ಈ ಸಮ್ಮೇಲನದಲ್ಲಿ ಎಲ್ಲರೂ ಆನಂದದಿಂದ ತಮ್ಮ ಕಾಲವನ್ನು ಕಳೆದರು. ಈಪ್ರಕಾರ ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ಅಧಿವೇಶನವು ಸಾಂಗಲಿ ಪಟ್ಟಣದಲ್ಲಿ ೫-೬ ದಿವಸ ಸಮಾರಂಭದಿಂದ ಜರಗಿದಬಳಿಕ ಎಲ್ಲರೂ ತಮ್ಮತಮ್ಮ ಊರಿಗೆ ತೆರಳಹತ್ತಿದರು.

ತಮ್ಮ ವಿಧೇಯ—ಭರಮಪ್ಪ ಪದ್ಮಪ್ಪ ಪಾಟೀಲ,
ಹೊಸೂರು (ಬೆಳಗಾಂವಿ)

ಊದಬತ್ತಿಗಳು.

1

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦ ; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲ

ಉತ್ತಮ ಗ್ರಂಥಗಳು.

7

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ, ಕೂಡಿಧೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.— ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿಧೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಧೆ.

ಪುರುಷಸೂಕ್ತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿಧೆ.

ಬಸವಲಿಂಗಸ್ವಾಮಿಗಳು,
ಹೊಸಮಠ ಮೈಸೂರು.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು. 11

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

ರಾಸ್ಕೋಪಸಿಸ್ಟಂ ಪೇಟಂಟ ಲೀವರ್ ಜ್ಯೂವೆಲ್ಡ್ ವಾಚ್



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಅಯಿದು (೫) ವರುಷಗಳು ಗ್ಯಾರೆಂಟು.

ಕ್ರಯ ರೂ. ೨-೮-೦ ವಿ. ಪಿ. ಚಾರ್ಜು ರೂ. ೦-೪-೦.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ ೦-೮-೦ ವಿ. ಪಿ. ಚಾರ್ಜು ೦-೪-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ. ನಂಬರು ೨೦ ಸಿಂಗಣ್ಣರ್ಬೀದಿ, ವಾಲಾಟಾಕ್ಸ್ ರೋಡು, ಮದರಾಸು.

ವಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

14 **ಲೋಕಾಮಯಹಾರ ಕಸ್ತೂರೀ ಮಾತ್ರೆ.**



ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳನೋವು, ಮೈ ಕಾಲು ಹೊಡತ(ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ,ಅರೋಚಕ ಇನ್ನೂಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷಯವನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನುಸೇವಿಸುತಿರುವವರು ಖಂಡಿತವಾಗಿಯೂ ಪ್ಲೇಗಿನರೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೯ ಕುಪ್ಪಿವರೆಗೆ ಪೋಸ್ಟೇಜು ೪ ಆ.

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ:—ಸೀತಾರಾಘವ ವೈದ್ಯಶಾಲಾ,
ಮೈಸೂರು.

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು. 11

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.

ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಲುಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳ್ತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ,
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara Distric

70

ಪದ್ಮರಾಜ ಪುರಾಣಂ.

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಆಣೆ.

ಬಿ. ಮಲ್ಲಾರಾಧ್ಯರು,
ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ ಬಿ. ಬಸವಾರಾಧ್ಯರು,
ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್,
ಬೆಂಗಳೂರು.

ಉತ್ತಮ ಗ್ರಂಥಗಳು.

111

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂಸೇರಿವೆ.

ಸೌಂದರ ಪುರಾಣ —೦-೧೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೦ ಆಣೆ. ಪ್ರಾಣಾಯ ನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಕಂಪನಿ,
ಮೈಸೂ

೧೯೧೧ನೇ ಇಸವಿ ಮಾರ್ಚಿ ತಾ॥ ೨೦ ರಿಂದ ೧೯ ಮಾರ್ಚಿ ತಾ॥ ೨೬ ರವರೆಗೆ ಸಲ್ಲುವ ಶಾಲಿವಾಹನ ೧೮೩೨ ನೇ ಸಾಧಾರಣ ಸಂವತ್ಸರದ ಫಾಲ್ಗುಣ ಬ॥ ಯಿಂದ ಫಾಲ್ಗುಣ ಬ॥ ದ್ವಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
20	ಸೋ	ಷ	8-43	ಅ	60-10
21	[1] ಮಂಗ	ಸ	18-58	ಅ	0-42
22	ಬುಧ	ಅ	19-10	ಜ್ಯೇಷ್ಠ	7-29
23	ಗುರು	ನ॰	24-6	ಮೂಲ	14-0
24	ಶುಕ್ರ	ದ	28-24	ಪೂರ್ವಾ	20-26
25	ಶನಿ	ಏ	31-26	ಉತ್ತ	25-14
26	[2] ಭಾನು	ದ್ವಾ	33-49	ಶ್ರವಣ	29-1

(1) ಬೆಟ್ಟದಲ್ಲಿ ಮಹಾಬಲೇಶ್ವರಸ್ವಾಮಿ ರಥ
ಸರ್ವತ್ರೈಕಾದಶಿ ಹಿಮೋಡ್ಗೊಪಾಲಸ್ವಾಮಿ ರಥ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 194

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನೇಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಧೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತ್ರಿಕೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ಕ ೧೯೧೧ ನೇ ಇಸವಿ ಮಾರ್ಚಿ ತಾರೀಖು ೨೭ ನೇ ಸೋಮುವಾರ. [ಸಂಚಿಕೆ ೧೨

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦—೧೦—೦
ಶರವಾದಿಗಜಾಂಕುಶತಾರಾವಳಿ	೦—೮—೦
ಸಟೀಕ ವಿವಾಹವಿಧಿ	೦—೬—೦
ಜಾರುಶೀಲೆ ಚರಿತ್ರೆ	೦—೫—೦
ಕರಸ್ವಾಂತೆನ್ನು	೦—೪—೦
ಸಟೀಕಕರ್ನಾಟಕಶಬ್ದಮಂಜರಿ	೦—೪—೦
ಸಟೀಕಸಂಧೀವ್ರತ	೦—೪—೦
ಮೂಲದೀಕ್ಷಾವಿಧಿ	೦—೨—೦
ವ್ರತಪಂಚಕ	೦—೨—೦
ಸಟೀಕಮಂಜರಿ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಟ್ಟಿ ೧ ಕ್ಕೆ ೨ ಆಣೆ; ಎರಡನೇ ಆವೃತ್ತಿಯಿಂದ ಪಟ್ಟಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗಿ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

44 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಭ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
33 ಮೈಸೂರು.

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕೆ ಬರೆಯಿರಿ.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

32

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ.—ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರಿಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಚಿಬ್ಬು, ವ್ರಣ, ಕುಷ್ಠ, ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂತಿಮೇಹ, ಮೂತ್ರ[illegible] ಅಸ್ತಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ತಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ. ರೂಪಾಯಿ ೩. ಟಪ್ಪಾಲ್ಖರ್ಚು ೬ ೮ ಆಣೆ.

೮. ಮರೀಚಾದಿಲೇಹ್ಯ— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್ಖರ್ಚು ೬ ಆಣೆ.

೯. ಮಹಾಕಂಡಳ್ಯಾದಿರಸಾಯನ— ಇದರಿಂದ ಕ್ಷಯ ಕಾಸ, ಜ್ವರ, ದೀಪನ, ಪಾಂಡುರೋಗ, ಉನ್ಮಾದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟಲ್ಲು ಉರಿ ಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೨ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ— ಮಕ್ಕಳಿಗೆ ಶೀತದಿಂದ ಬಾಯಿಯಲ್ಲಿ ನೀರು ಎಳೆಯುವಾಗ ಜ್ಞಾನ ತಪ್ಪುವುದು, ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚೆನ್ನಿಗಳು ಈ ಮಾತ್ರೆಯನ್ನು ನಾಗದಾಳಿಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಷುರಬತ್ತಿಗಳೂ ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚನ್ನಬಸಪ್ಪ ಅಂಡ್ ಸನ್ಸ್,
ಚನ್ನಪಟ್ಟಣ, ಬೆಂಗಳೂರು ಡಿಸ್ಟ್ರಿಕ್ಟ್.

ಉತ್ತಮ ಗ್ರಂಥಗಳು.

8

ಶಿವಪಂಚಸ್ತವಃ.— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.— ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಕಷಟ್ಪದರೂಪವಾಗಿದೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನ ಜಂಗಮರಿಂದಾದ ಕನ್ನಡಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು,
ಹೊಸಮಠ ಮೈಸೂರು.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು. 12

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. ೨-೮-೦ ಮಾತ್ರ. ರೂ. ೨-೮-೦ ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

ರಾಸ್ಕೋಪ್ ಸಿಸ್ಟಂ ಪೇಟಂಟ್ ಲೀವರ್ ಜ್ಯೂವೆಲ್ಡ್ ವಾಚ್



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. ೨-೮-೦ ರೂ. ೩-೮-೦ ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಅಯಿದು (೫) ವರುಷಗಳು ಗ್ಯಾರೆಂಟಿ.

ಕ್ರಯ ರೂ. ೨-೮-೦ ವಿ. ಪಿ. ಚಾರ್ಜು ರೂ. ೦-೬-೦.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವುದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ ೦-೮-೦ ವಿ. ಪಿ. ಚಾರ್ಜು ೦-೬-೦.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ. ನಂಬರು ೨೦ ಸಿಂಗಣ್ಣನಾಕ ಬೀದಿ, ವಾಲಟಾಕ್ಸ್ ರೋಡು, ಮದರಾಸು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

15 ಲೋಕಾಮಯಹರ ಕಸ್ತೂರೀ ಮಾತ್ರೆ.



ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳ ನೋವು, ಮೈಕೈಕಾಲು ಜಡತ(ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನಗಡು, ನಿಶ್ಶಕ್ತಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಬಾಧೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷವನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನು ಸೇವಿಸುತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೬ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧ರಿಂದ ೧೮ ಕುಪ್ಪಿವರೆಗೆ ಪೋಸ್ಟೇಜು ೬ ಆ.

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ;—ಸೀತಾರಾಘವ ವೈದ್ಯಶಾಲಾ,
ಮೈಸೂರು.

12

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. **ಮಿಂಚಿನ ಉಂಗುರವೂ.**





ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ ಖರ್ಚು ೦-೪-೦. ಒಮ್ಮೇಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೦ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ,
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kunara District.

---

71 ಪದ್ಮರಾಜ ಪುರಾಣಂ.

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಆಣೆ.

ಬಿ. ಮಲ್ಲಾರಾಧ್ಯರು,
ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ ಬಿ. ಬಸವಾರಾಧ್ಯರು,
ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್,
ಬೆಂಗಳೂರು.

ಉತ್ತಮ ಗ್ರಂಥಗಳು.

112

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಸವ ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ —೦-೧೨-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೩ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೩ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿಃ.— ೧೦ ಆಣೆ. ಪ್ರಾಣಾಯಾ
ನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ,
ಮೈಸೂರು.

೧೯೧೧ನೇ ಇಸವಿ ಮಾರ್ಚಿ ತಾ॥ ೨೭ ರಿಂದ ೧೯೧೧ನೆ
ಏಪ್ರೇಲ್ ತಾ॥ ೨ ರವರಿಗೆ ಸಲ್ಲುವ ಶಾಲಿವಾಹನ ಶ
೧೮೩೨ ನೇ ಸಾಧಾರಣ ಸಂವತ್ಸರದ ಫಾಲ್ಗುಣ ಬ॥ ದ್ವಾ
ಶಿಯಿಂದ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ
ತ್ರ ಶು॥ ತದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಾ
27	ಸೋ	ದ್ವಾ	34-52	ಧನಿಷ್ಠ	8 -30	14
28	¹ ಮಂಗ	ತ್ರ	34-20	ಶತಭ	31-35	1
29	ಬುಧ	ಚ	32-40	ಪೂಭಾ	32-38	16
30	² ಗುರು	ಅ	30-2	ಉತ್ತಭಾ	31-48	17
31	³ ಶುಕ್ರ	ಪಾ	26-50	ರೇವತಿ	29-50	1
1	⁴ ಶನಿ	ಬಿ	21-50	ಅಶ್ವಿನಿ	26-58	19
2	⁵ ಭಾನು	ತ	15-56	ಭರಣಿ	23-56	[illegible]

(1) ಪ್ರದೋಷಃ ವ್ಯತ್ಯಯೋಗಃ (2) ಸರ್ವತ್ರ ಮಾವಾಸ್ಯಾ ಪದ್ಮಕಯೋಗಃ (3) ರಕ್ತಾಂ ಚಾಂದ್ರ ವತ್ಸರಾರಂಭಃ, ಆರೋಗ್ಯಪ್ರತಿಪತ್ ರಂಗನಾಥ ತಿ (4) ವೇದವ್ಯಾಸತೀರ್ಥರ ಪುಣ್ಯದಿನ. ರಬ್ಬಿ ಖಾನಿ (5) ದೋಲಾಗೌರೀ ಸೌಭಾಗ್ಯಗೌರೀವ್ರತಂ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ
ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಏಕಸತತ 10 ವರ್ಷಗಳಿಂದ ಬಹುಶ್ರಮಪಟ್ಟು, ಕೇವಲ ವನಸ್ಪತಿಯಿಂದಲೇ ತಯಾರಿಸಿ, ಯಾವ ಋತುಗಳಲ್ಲಿಯೂ ಏನೊಂದು ವ್ಯತ್ಯಾಸವಿಲ್ಲದೆ ಸೇವಿಸಲಿಕ್ಕೆ ಬರುವಂತೆ ತಯಾರಿಸಿದ್ದು.

ಅತ್ಯುತ್ತಮವಾದ ಔಷಧಗಳು.

ಮೊದಲಿನ ಸ್ಥಿತಿ!] [ನಂತರದ ಸ್ಥಿತಿ!!

1 ಪೌಷ್ಟಿಕ ಪಾಕ.

ರಕ್ತಶುದ್ಧಿ ಮತ್ತು ರಕ್ತವೃದ್ಧಿಯ ಮೇಲೆ ಅತಿ ಉತ್ತಮ.

ಸ್ವದೇಶಿ! ಸ್ವದೇಶಿ!!

ಈ ಪಾಕವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗ ಉಳ್ಳವರು, ರಕ್ತವುದ್ರೇಕವಾದವರು, ತೃಷಿಉಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ, ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆಯ ವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩॥; ೮೦ ತೋಲೆಗೆ ರೂ. ೬ ಬೀಳುವದು.

2 ಪ್ರಮೇಹ (ಪರ್ಮಾ) ರೋಗದ ಔಷಧವು.

ಇದರ ಸೇವನೆಯಿಂದ ಮೂತ್ರ ಸ್ಥಾನದಿಂದ ಬಿಳಿದು, ಕೆಂಪು, ಹಳದಿಯಂತೆ ಹೋಗತಕ್ಕ ಕೀವು ೩ ತಾಸಿನಲ್ಲಿ ಗುಣ ತೋರಿಸಿ ೬ ದಿವಸದಲ್ಲಿ ೨೦ ಬಗೆಯ ಮೇಹಜಾಡ್ಯಗಳು ಗುಣವಾಗಿ ಶರೀರಕ್ಕೆ ನಿರೋಗತ್ವ ಉಂಟಾಗುವದು. ಕಿಮ್ಮತು ೬ ದಿವಸದ ಔಷಧಕ್ಕೆ 2—8—0.

3 ಟಾಕಿಯ ಮಲಮು.

ಇದನ್ನು ಟಾಕಿ ಭಗಂದರ ಮುಂತಾದ ಕಠಿಣವಾದ ಹುಣ್ಣುಗಳಿಗೆ 2-3 ಸಾರೆ ಹಚ್ಚುವದರಿಂದ ಗುಣ. ಕಿಮ್ಮತು ಡಬ್ಬಿ 1ಕ್ಕೆ 0-8-0.

4 ಗಜಕರ್ಣದ ಮಲಮು.

ಇದರ ಉಪಯೋಗದಿಂದ ಹಳೆ ಮತ್ತು ಹೊಸತರಕ್ಕೆ ಬಿದ್ದ ಗಜಕರ್ಣವು 2-3 ಸಾರೆ ಹಚ್ಚುವದರೊಳಗೆ ನಾಶವಾಗಿ ಕಲೆಸಹ ಇಲ್ಲದಂತೆ ಆಗುತ್ತದೆ. ಡಬ್ಬಿ 1ಕ್ಕೆ ೬ (ಆರು) ಆಣೆ.

5 ಸುಗಂಧಿ ಹಲ್ಲುಪುಡಿ.

ಇದನ್ನು ಹಲ್ಲುಗಳಿಗೆ ತಿಕ್ಕುವದರಿಂದ ಮುತ್ತಿನಂತೆ ಬೆಳ್ಳಗೆ ಆಗುವವು; ರಕ್ತ, ಕೀವು, ದುರ್ವಾಸನೆ ಮುಂತಾದ ಮುಖರೋಗಗಳು ಹೋಗಲಾಡಿಸುವದು; ವ ನರಗಳಿಗೆ ಬಲವನ್ನುಂಟುಮಾಡುವದು. ಕಿಮ್ಮತು ಡಬ್ಬಿ 1ಕ್ಕೆ ೦-೪-೦; ಬೀಳುವದು.

6 ಜುಲಾಬಿನ ಗುಳಿಗೆ.

ಇದರ ಸೇವನದಿಂದ ಕಫ, ಪಿತ್ಥ, ಮತ್ತು ಹೊಟ್ಟೆಯೊಳಗಿನ ಕಲ್ಮಷ ಮತ್ತು ಮಲವು ಸಾಫ ಆಗುತ್ತದೆ. ೧೫ ಗುಳಿಗೆಗಳ ಕ್ರಯ ೧ ರೂ.

7 ಕಸುವಿನ ಎಣ್ಣೆ.

ಇದನ್ನು ಕಸಬಂದ ಭಾಗಕ್ಕೆ ೨-೩ ಸಾರೆ ಹಚ್ಚುವದರೊಳಗೆ ವಾತರೋಗ, ಕೀಲನೋವು, ನರಗಳ ಹಿಡತ, ಕಟಿಶೂಲ ಮುಂತಾದವುಗಳು ಶೀಘ್ರವಾಗಿ ಗುಣವಾಗುತ್ತವೆ. ಬಾಟ್ಲಿ ೧ಕ್ಕೆ ೧ (ಒಂದು) ರೂ.

8 ಖಜ್ಜಿಯ ಮಲಮು.

ಇದರ ಲೇಪನದಿಂದ ಖಜ್ಜಿಗಳು ಇಸಬುಗಳು, ತುರಿಗಳು, (ಸಣ್ಣ ಬಕ್ಕೆಗಳು) ೨-೩ ಸಾರೆ ಲೇಪಿಸುವದರೊಳಗೆ ಪೂರ್ಣ ಗುಣವಾಗುವವು. ಡಬ್ಬಿ ೧ಕ್ಕೆ ೪ (ನಾಲ್ಕು) ಆಣೆ.

9 ತಲೆನೋವಿಗೆ ಮಲಮು.

ಇದರ ಲೇಪನದಿಂದ ಕಠಿಣ ತಲೆನೋವು, ಅರೆತಲೆನೋವು ಸಹ ೫ ಮಿನಿಟಿನಲ್ಲಿ ಪೂರ್ಣ ಗುಣವಾಗುವದು. ಡಬ್ಬಿ೧ಕ್ಕೆ ೬ (ಆರು) ಆಣೆ.

10 ಸರ್ವ ಜ್ವರದಮೇಲೆ ಗುಳಿಗೆ

ಥಂಡಿಜ್ವರ, ದಾಂಜ್ವರ, ಚಾತುರ್ಥಿಕಜ್ವರ, ಜೋಡುಚಾತುರ್ಥಿಕಜ್ವರ, ಪಿತ್ಥಜ್ವರ ಇವುಗಳ ಸೇವನದಿಂದ ದೂರಾಗಿ ಅಸ್ಥಿಜ್ವರ ಕೂಡಾ ನಿಃಸಂಶಯದಿಂದ ಗುಣವಾಗುತ್ತವೆ. ೨೪ ಗುಳಿಗೆಗಳ ಕ್ರಯ ೧ ರೂ.

11 ತಾಂಬೂಲಕ್ಕೆ ಸುಖಕರ ವಸ್ತು.

ಇದನ್ನು ತಾಂಬೂಲದಸಂಗಡ ಸ್ವಲ್ಪವನ್ನು ಸೇವಿಸುವದರಿಂದ ಸುವಾಸಿಕವಾಗಿ ವಾಯುವಿನಂಥ ಹೊರಡುವ ದುರ್ಗಂಧವಾಸನೆಯು ಹೋಗುವದು. ಕಿಮ್ಮತು ೧ ತಿಂಗಳು ಸಾಕಾಗುವ ಡಬ್ಬಿಗೆ ೮ ಆಣೆ.

12 ಧಾತುಪೌಷ್ಟಿಕ ಲೇಹವು.

ಸ್ವದೇಶಿ! ಸ್ವದೇಶಿ!!

ಒಮ್ಮೆ ಈ ಲೇಹವನ್ನು ಸೇವನೆಮಾಡುವದರಿಂದ ಜನನೇಂದ್ರಿಯದ ಶಿಥಿಲತೆ, ನಪುಂಸಕತ್ವ, ಹಳೆಜ್ವರ, ಅಶಕ್ತತೆ, ಸ್ವಪ್ನಾವಸ್ಥೆ, ಧಾತುಪತನ, ಎದೆನೋವು, ಕಟಿಶೂಲೆ, ವಾತರೋಗ, ರಕ್ತಉದ್ರೇಕ, ಕಫ, ಕೆಮ್ಮು, ದಮ್ಮು, ಮೇಹಸಂಬಂಧಿ ಧಾತು ಹೋಗೋಣ, ಇತ್ಯಾದಿಗಳು ಗುಣವಾಗಿ ಇಂದ್ರಿಯದ ಶಿಥಿಲತೆ, ತೆಳ್ಳಗಾವಿನದ ಧಾತು ನಿರ್ಬಲತೆ, ಸೃಷ್ಟಿ ನಿಯಮದ ವಿರುದ್ಧ ತ್ವರೆಯಿಂದ ಉಂಟಾದ ನಪುಂಸಕತ್ವ, ಇವು ನಾಶವಾಗಿ, ಧಾತುಪೌಷ್ಟಿಕ, ವೀರ್ಯವರ್ಧಕ, ಕಾಮೋತ್ತೇಜಕ, ರಕ್ತಶುದ್ಧಿ ವ ವೃದ್ಧಿ, ದೇಹಕಾಂತಿ, ಗರ್ಮಿ, ಹುಣ್ಣುಗಳು, ತಲೆಶೂಲೆ, ಹೊಟ್ಟೆಶೂಲೆ ಮುಂತಾದವು ಗುಣವಾಗುವವು. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆ ವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ೩—೮—೦, ೮೦ ತೋಲೆಗೆ ೬—೦—೦.

13 ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ, ಇವು ಈ ಗುಳಿಗೆಗಳ ಸೇವನದಿಂದ ದುರಸ್ತಾಗಿ ಧಾತುಪೌಷ್ಟಿಕ, ಕಾಮೋತ್ತೇಜಕ, ವೀರ್ಯಸ್ತಂಭಕ, ಮನೋತ್ಸಾಹಕ, ಗರ್ಮಿ (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದಬಾಧೆಗಳು, ಕಟಿಶೂಲ, ವಾತರೋಗ ಮುಂತಾದವು ಅತಿತ್ವರ್ಯಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೬೦ರ ವರೆಗೆ ಗುಳಿಗೆಗಳು ಬೇಕಾಗುವವು. ಕ್ರಯ ೧೨ ಗುಳಿಗೆಗಳಿಗೆ ೧ ರೂ.

14 ವಸಂತ ಕುಸುಮಾಕರ ತೈಲವು.

ಈ ಸುವಾಸನೆ ಎಣ್ಣೆಯನ್ನು ತಲೆಯ ಕೂದಲುಗಳಿಗೆ ಹಾಕುವದರಿಂದ ಕೂದಲುಗಳಿಂದ ಬಲ ಉಂಟಾಗುವದಲ್ಲದೆ, ಕಪ್ಪಾಗಿಯೂ, ಮೃದುವಾಗಿಯೂ, ಉದ್ದವಾಗಿಯೂ ಬೆಳೆಯುತ್ತವೆ. ಮತ್ತು ಶಿರೋವಾತ, ತಲೆನೋವು, ಕಣ್ಣುರಿ ಇವು ಗುಣವಾಗಿ ಕಣ್ಣಿಗೆ ತಂಪನ್ನುಂಟುಮಾಡಿ ಮಿದುಳಿಗೆ ಬಲವನ್ನುಂಟುಮಾಡುತ್ತದೆ. ಮಾನಸಿಕ ಶ್ರಮಮಾಡುವವರಿಗೆ ಇದು ಅತ್ಯುತ್ತಮವಾಗಿದೆ. ಕಿಮ್ಮತು ಬಾಟ್ಲಿ ೧ಕ್ಕೆ ೧—೦—೦.

15 ಕಾಮಲಿ ರೋಗಕ್ಕೆ ಔಷಧ.

ಈ ಔಷಧ ಸೇವನೆಯಿಂದ ಕಾಮಲಿರೋಗವು ೬ ದಿವಸದಲ್ಲಿ ಗುಣ ಬರುವದು. ಕಿಮ್ಮತು ೧—೮—೦

16 ಬಾಲಾಮೃತವು.

ಇದನ್ನು ಸೇವಿಸುವದರಿಂದ ಶಿಶುಗಳು ಸದೃಢರಾಗಿಯೂ ಅಂಗಕಾಂತಿಯುಳ್ಳವರಾಗಿಯೂ ಆಗುವರು. ಬಾಟ್ಲಿ ೧ಕ್ಕೆ ೧-೦-೦.

17 ಜ್ವರಗಡ್ಡೆಯ ಔಷಧ.

ಪ್ರತಿಒಬ್ಬ ಮನುಷ್ಯನ ಹೊಟ್ಟೆಯ ಎಡಭಾಗಕ್ಕಿರುವ ಜ್ವರಗಡ್ಡೆಯು ಜ್ವರ ಬಂದಾಗ್ಗೆ ನೀರು ವಗೈರೆ ನೀರಿನಂಥಾ ಪದಾರ್ಥ ಸೇವಿಸಿದರೆ ಅದು ದೊಡ್ಡದಾಗಿ ಪಾಚನಶಕ್ತಿಯು ಕಡಿಮೆಯಾಗಿ ನಿತ್ರಾಣನಾಗುವನು. ಇದೇ ಬೆಳದು ಅಡ್ಡಗ್ಯೆ ಅನಿಸಿಕೊಂಡು ಮರಣೋನ್ಮುಖನಾಗುವನು. ಆದ್ದರಿಂದ ಈ ಜ್ವರಗಡ್ಡೆ ಉಂಟಾದ ಕೂಡಲೇ ನಮ್ಮ ಔಷಧವನ್ನು ಸೇವಿಸಿದರೆ ಬೇಗನೇ ಗುಣಹೊಂದುವರು. ೧೫ ದಿವಸದ ಔಷಧಕ್ಕೆ ೩—೮—೦ ಬೀಳುವದು.

18 ಮೂಲವ್ಯಾಧಿಯ ಔಷಧ.

ಇದನ್ನು ಸೇವಿಸಿದರೆ ಕಠಿಣವಾದ ಮೂಲವ್ಯಾಧಿಯಿದ್ದರೂ ನಿಶ್ಶೇಷವಾಗಿ ಗುಣಹೊಂದುವದು. ಕಿಮ್ಮತು ೬ ದಿವಸದ ಔಷಧಕ್ಕೆ ೨-೦-೦.

19 ಮೂಲವ್ಯಾಧಿಯ ಮಲಮು.

ಮೂಲವ್ಯಾಧಿಯಿಂದ ಉಂಟಾದ ಮೊಳೆಗಳಿಗೆ ಹಚ್ಚಿದರೆ ೩ ದಿವಸಗಳಲ್ಲಿ ಮೊಳೆಗಳು ಕರಗಿಹೋಗುವವು. ಡಬ್ಬಿ ೧ಕ್ಕೆ ೦-೧೨-೦.

20 ಇಂದ್ರಿಯ ಸ್ತಂಭನ ಗುಳಿಗೆ.

ಚಿಕ್ಕಂದಿನಲ್ಲಿ ಅತ್ಯಾಚಾರದಿಂದ ಹಸ್ತಘರ್ಷಣೆಯಿಂದ ಇಂದ್ರಿಯವನ್ನು ಸ್ಖಲನಮಾಡಿಸೋದರಿಂದ ಉಂಟಾದ ಕ್ಷೀಣತ್ವವು, ಧಾತು ತೆಳ್ಳಗಾಗಿಯೂ ಕೃಶವಾಗಿಯೂ ರತಿಸುಖಕ್ಕೆ ಅಶಕ್ಯವುಳ್ಳವನಾಗಿಯೂ ಆಗುತ್ತಾನೆ. ಇಂಥವನು ಈ ಗುಳಿಗೆಯನ್ನು ಸೇವಿಸುವದರಿಂದ ಸದೃಢನಾಗಿಯೂ ಸಶಕ್ತನಾಗಿಯೂ ಅಂಗಕಾಂತಿಯುಳ್ಳವನಾಗಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯುಳ್ಳವನಾಗಿಯೂ ಆಗುವನು. ೨೦ ಗುಳಿಗೆಗೆ ೨—೮—೦. ಒಬ್ಬ ಮನುಷ್ಯನಿಗೆ ೬೪ ಗುಳಿಗೆ ಬೇಕಾಗುವವು.

21 ಪಿತ್ಥರೋಗಕ್ಕೆ ಔಷಧ.

ಪಿತ್ಥವಿಕಾರ ಉಂಟಾಯಿತೆಂದರೆ, ತಲೆತಿರುಗುವದು, ಕಣ್ಣುಮುಂದೆ ಕತ್ತಲೆಬರುವದು, ಪಚನಶಕ್ತಿಯಿಲ್ಲದೆ ಇರುವದು, ತಿಂದ ಪದಾರ್ಥಗಳು ರುಚಿಹತ್ತದೆ ಇರುವದು, ಬಾಯಿ ಕಹಿಯಂತೆ ಉಂಟಾಗುವದು. ಇವೆಲ್ಲಾ ಉಂಟಾಗಿ ನಿಸ್ಸಾಮರ್ಥ್ಯನಾಗಿ ಕ್ಷೀಣತೆ ಹೊಂದುವನು. ಇಂಥವನು ಈ ನಮ್ಮ ಪಿತ್ಥದ ಔಷಧ ೨೧ ದಿವಸ ಸೇವಿಸಿದರೆ ಖಾತ್ರಿಯಿಂದ ಗುಣಹೊಂದುವನು. ೨೧ದಿವಸದ ಔಷಧಕ್ಕೆ ೪—೦—೦.

22 ಚಿಕ್ಕಬಾಲಕರ ಕೂರ್ಮವ್ಯಾಧಿಗೆ ಔಷಧ.

ಚಿಕ್ಕಮಕ್ಕಳ ಹೊಟ್ಟೆಯ ಬಲಭಾಗಕ್ಕೆ ಕೂರ್ಮ ಅಥವಾ ನಾಯಿಧಕ್ರಿ ಇದರಂತೆ ಹೊಟ್ಟೆಯೊಳಗಿನ ಕಲ್ಮಷವೆಲ್ಲಾ ಘಟ್ಟಿಯಾಗಿ ಅದು ಕ್ರಿಗೆ ಹತ್ತುತ್ತದೆ. ಈ ರೋಗ ಶುರು ಆಯಿತೆಂದರೆ ಬಾಲಕರ ಮಲಮೂತ್ರ ಹಳದಿಯಂತೆ ಆಗುವದಲ್ಲದೆ, ಶರೀರವೆಲ್ಲಾ ಹಳದಿಯಂತೆ (ಅರಶಿನ) ಆಗುತ್ತದೆ. ಈ ರೋಗದ ನಿವಾರಣೆಗೋಸ್ಕರ ಬಹುಶ್ರಮಪಟ್ಟು ಈ ಔಷಧವನ್ನು ಹುಡುಕಿ ತೆಗದು ಇರುತ್ತೇವೆ. ಇದನ್ನು ಕೂಸುಗಳು ಹುಟ್ಟಿದ ೨ ತಿಂಗಳಿನಿಂದ ಸೇವಿಸಬೇಕು. ಬಾಟ್ಲಿ ೧ಕ್ಕೆ ೨—೮—೦.

ಯಾಲಕ್ಕಿ! ಯಾಲಕ್ಕಿ!! ಯಾಲಕ್ಕಿ!!!

ಶಿರ್ಶಿಯಾಲಕ್ಕಿಯು ಚಂದದಲ್ಲಿಯೂ ಸುವಾಸಿಕದಲ್ಲಿಯೂ ಹೆಸರಾದ್ದರಿಂದ ನಮ್ಮ ಗಿರಾಯಿಕಿಗಳಾದ ಅನೇಕರು ನಮ್ಮ ಕಡಿಗೆ ಯಾಲಕ್ಕಿ ಕಳುಹಿಸಬೇಕೆಂತ ಮಾಗಣಿ ಮಾಡುತ್ತಿರುವದರಿಂದ ಸದರಿ ಜಾಹಿರಾತಿಯನ್ನು ಪ್ರಸಿದ್ಧಪಡಿಸುವದರಲ್ಲಿ ಬಂತು. ಅದರೆ ಸದರಿ ಯಾಲಕ್ಕಿಯನ್ನು ಉತ್ತಮ ತರದ್ದು ನೋಡಿ ಖರೀದಿಮಾಡಿ ರವಾನಾ ಅರ್ಥಾತ್ [illegible] ಮೇಲೆ ರವಾನಿಸುತ್ತೇವೆ. ಅದರಿ ೧ ರಾತ್ತಲಿನಿಂದ ೧೦ ರಾತ್ತಲುಗಳ ವರೆಗೆ ಮಾತ್ರ ವ್ಹೀ. ಪೀ. ರವಾನಿಸುತ್ತೇವೆ. ೧೦ ರಾತ್ತಲಕ್ಕೆ ಹೆಚ್ಚಿಗೆ ಬೇಕಾದವರು ರೇಲ್ವೆಪಾರ್ಸಲಿನಿಂದ ಕಳಿಸಿಕೊಳ್ಳಬೇಕಾಗುತ್ತದೆ. ಆದರೆ ಸದರಿ ಯಾಲಕ್ಕಿಯನ್ನು ರೋಖವುಂಟಾಗಲಿ ಅಥವಾ ವ್ಹೀ. ಪೀ. ಇಂದಾಗಲಿ ರವಾನಿಸಲ್ಪಡುತ್ತದೆ. ಕಿಮ್ಮತು ಬಜಾರ ಭಾವದಂತೆ ಹಾಕಿ ರವಾನಿಸುತ್ತೇವೆ. ಗಿರಾಯಿಕಿಗಳಿಗೆ ಅಲ್ಲಾಸ ಆಗದಂತೆ ಆಗದ ಕಸಲೀಯಿಂದ ಖರೀದಿ ಮಾಡಿ ರವಾನಿಸುತ್ತೇವೆ. ಅವಶ್ಯಕರು ಬರುವ ತರಿಸಿಕೊಳ್ಳಲಿಕ್ಕೆ [illegible]

1 ವಾಚಿನ ಕವರುಗಳು.

ಈ ಕವರುಗಳನ್ನು ವಾಚುಗಳಿಗೆ ಉಪಯೋಗಿಸುವದರಿಂದ ವಾಚುಗಳು ಹಾಳಾಗದೆ ಮಾರಲು ಇದ್ದ ಹೊಸವಾಚುಗಳಂತೇನೇ ಉಳಿಯುತ್ತವೆ. ಕಿಮ್ಮತು ೧ಕ್ಕೆ ೦-೮-೦.

2 ವಾಚಿನ ಸರಪಳಿಗಳು.

ಜರ್ಮನ ಸಿಲ್ವರದಿಂದ ತಯಾರಿಸಿ ಬಹಳ ಸುಂದರವಾಗಿದ್ದದ್ದಕ್ಕೆ ೧ಕ್ಕೆ ೦-೮-೦, ಬಂಗಾರದ ಗಿಲ್ಟ ಮಾಡಿದ್ದಕ್ಕೆ ೧—೮—೦, ಕೊರಳಲ್ಲಿ ಹಾಕುವ ಬೆಳ್ಳಿಯಿಂದ ನಾಜೂಕಾಗಿ ತಯಾರಿಸಿದ್ದಕ್ಕೆ ೩—೦—೦.

3 ಹೋಕಾಯಂತ್ರವು.

ಇದನ್ನು ವಾಚುಗಳ ಸರಪಳಿಗಳ ತುದಿಯಲ್ಲಿ ಹಾಕುವದರಿಂದ ಶೋಭೆಯುಂಟಾಗುವದಲ್ಲದೆ ಪರಸ್ಥಳದಲ್ಲಿ ದಿಕ್ಕು ತಿಳಿಕೊಳ್ಳಲಿಕ್ಕೆ ಬಹಳ ಉಪಯೋಗ ಬೀಳುವದು. ಕ್ರಯ ೧ಕ್ಕೆ ೦—೮—೦ ಟಿ. ಖ. ಬೇರೆ.

4 ಫೌಂಟನ್ನ ಪೆನಗಳು.

ಈ ಪೆನಿನಲ್ಲಿ ಒಮ್ಮೆ ಶಾಯಿ ತುಂಬಿದರೆ ಹತ್ತು ಸಾವಿರ ಶಬ್ದಗಳನ್ನು ಬರೆಯಬಹುದು. ಅದ್ದರಿಂದ ಇಂಥಾ ಪೆನುಗಳನ್ನು ಪ್ರತಿಒಬ್ಬರಲ್ಲಿ ಸಂಗ್ರಹಿಸಿ ಇಡತಕ್ಕದ್ದು. ಸಾಧಾರಣ ಪ್ರತಿಯ ಪೆನ ೧ಕ್ಕೆ ೦—೮—೦. ಅತಿ ಉತ್ತಮ ಪೆನ ೧ಕ್ಕೆ ೩—೦—೦.

5 ಶಾಯಿಪುಡಿ.

ಕಪ್ಪು, ಕೆಂಪು, ಹಸುರು, ಜಾಂಬಳಿ ಈ ಸ್ಥಿತಿ ಯಾವತೇ ರಂಗ [illegible] ಶಾಯಿಪುಡಿಗಳನ್ನು ೦—೧೨—೦ಗೆ [illegible] ೬—೮—೦ [illegible] ಫೌಂಟನ್ನ ಪೆನ ಒಂದನ್ನು ಬಕ್ಷೀಸು ಕೊಡುತ್ತೇವೆ.

6 ಉಂಗುರಗಳು.

ಅಮೇರಿಕನ್ ಗೋಲ್ಡ (ಭಂಗಾರ)ದಿಂದ ತಯಾರಿಸಿದ್ದು ನೋಡಲಿಕ್ಕೆ ಬಹಳೇ ಸುಂದರವಾಗಿದ್ದು ಎಂದೂ ಗಿಲ್ಟ ಹೋಗದೆ ಕೆಡದೆ ಉಳಿಯುತ್ತವೆ. [illegible] ಕಿಮ್ಮತು ೧—೦—೦ [illegible] ೩—೦—೦ ರವಾನಿಸಲಾಗುವದು.

ವಿಶೇಷ ಸೂಚನೆ.—ಮೇಲೆ ಬರೆದ ಔಷಧಗಳಲ್ಲದೆ, ಇನ್ನೂ ಅನೇಕತರದ ರೋಗಗಳ ಬಗ್ಗೆ ಔಷಧಗಳು ತಯಾರಿರುವವು. ರೋಗಿಗಳು ತಮ್ಮ ಪ್ರಕೃತಿಯು ಚೆನ್ನಾಗಿ ತಿಳಿಯುವಂತೆ ಸವಿಸ್ತಾರವಾಗಿ ಏನೊಂದು ಗುಪ್ತರೀತಿಯಿಂದ ಇಡದೆ, ಎಲ್ಲಾ ವಿಷಯವನ್ನು ಸ್ಪಷ್ಟವಾಗಿ ತಿಳಿಸಬೇಕು. ಅಂದರೆ, ಅಂಥವರಿಗೆ ಆ ರೋಗಗಳಿಗೆ ಉತ್ತಮರೀತಿಯಿಂದ ಔಷಧ ತಯಾರಿಸಿ ಕಳುಹಿಸುವೆವು. ಈ ಎಲ್ಲಾ ಔಷಧಗಳ ಕಿಮ್ಮತು ಶಿವಾಯಿ ಟಪ್ಪಾಲು ಖರ್ಚು ಪ್ರತ್ಯೇಕ ಬೀಳುವದು. ಅನುಪಾನಪತ್ರಿಕೆ ಔಷಧದ ಸಂಗಡ ರವಾನಿಸುವೆವು. ಪತ್ರ ಬರಿಯುವವರು ತಮ್ಮ ವಿಳಾಸವನ್ನು ಸ್ಪಷ್ಟ ತಿಳಿಯುವಂತೆ ಪುಟ್ಟ ಅಕ್ಷರಗಳಿಂದ ಹೆಸರು, ತಂದೆ ಹೆಸರು, ಅಡ್ಡ ಹೆಸರು, ಇರುವ ಊರು, ಪೋಸ್ಟ, ತಾಲೂಕು, ಜಿಲ್ಲಾ ಇವುಗಳನ್ನು ಆದಿ ಸ್ಪಷ್ಟ ಬರೆದರೆ, ತಪ್ಪದೆ ಸ್ವಲ್ಪ ಕಾಲದಲ್ಲಿ ಔಷಧಿಗಳು ಮುಟ್ಟುವವು. ವಿಶೇಷ ಮಾಹಿತಿ ಬೇಕಾದರೆ ಡಬ್ಬಲ್ ಕಾರ್ಡ್ ಯಾ ಟಿಕೀಟು ರವಾನಿಸಬೇಕು. ಬರೇ ಪತ್ರಕ್ಕೆ ಉತ್ತರ ದೊರೆಯಲಾರದು. ನಾಟಪೆಡ್ ಪತ್ರ ಸ್ವೀಕರಿಸಲ್ಪಡಲಿಲ್ಲ. ಎಷ್ಟೋ ಜನರು ಪಾರ್ಸೆಲು ವ್ಹಿ.ಪಿ.ಯಿಂದ ತರಿಸಿಕೊಂಡು ಪರತ ಮಾಡುತ್ತಾರೆ. ಅಂಥವರ ಹೆಸರು ಪ್ರಸಿದ್ಧಪಡಿಸುವದರಲ್ಲಿ ಬರುವದು. ಔಷಧಗಳು ಶೀಘ್ರ ಬರುವ ಪತ್ತೆ ಈ ಕೆಳಗೆ ಬರೆದಂತೆ ಬರೆಯಬೇಕು.

Address: **G. L. Joshi & Co.,**
Native Doctor,
POST: BANAVASI, *N. Kanara.*

ವಿಳಾಸ: ಜಿ. ಎಲ್. ಜೋಶಿ ಮತ್ತು ಕಂಪನಿ,
ನೇಟವ್ ವೈದ್ಯ,
ಪೋಸ್ಟ: ಬನವಾಸಿ, ಜಿಲ್ಲಾ: ಉತ್ತರ ಕಾನಡಾ.

G. L. Joshi & Co.

ಜಿ. ಎಲ್. ಜೋಶಿ ಮತ್ತು ಕಂಪನಿ.

ವಾಚುಗಳು ಟಾಯಿಂಪೀಸುಗಳೂ, ಕ್ಲಾಕುಗಳೂ ಮತ್ತು ಅತಿ ಉತ್ತಮ ರೀತಿಯಿಂದ ತಯಾರಿಸಿದ ರಾಮಬಾಣ ಔಷಧಗಳೂ, ಇತರ ಸಾಮಾನುಗಳೂ ಕೂಡಾ

ಸೋಯಿಯಿಂದ ಮಾರಾಟಕ್ಕೆ ದೊರೆಯುವಂತೆ ಸೋಯಿವಾರ ಇಟ್ಟಿರುತ್ತವೆ.



1 ರಾಸ್ಕೋಪ ಸಿಸ್ಟಂ ಲಿವ್ವರ ವಾಚು.

ಈ ವಾಚು ಬಹಳ ಬಂದೋಬಸ್ತ, ಮಜಬೂತ, ಟಿಕಾವು ಸುಂದರ ಇದ್ದು ಬಾಳಿಕೆಯಲ್ಲಿ ಬಹಳೇ ಉತ್ತಮ ಇರುತ್ತದೆ. ಒಮ್ಮೆ ಕೀಲಿಕೊಟ್ಟರೆ 36ತಾಸು ನಡಿಯುವದು. ಇದರಲ್ಲಿ ಫಕ್ತ ಪೇಟಂಟ ಎಂಬುವದು ಮಾತ್ರ ಇರುವದಿಲ್ಲಾ. ಇಷ್ಟೇ ನ್ಯೂನತೆ ಶಿವಾಯ ಬಾಕಿ ಎಲ್ಲಾ ರಾಸ್ಕೋಪ ಪೇಟಂಟ ವಾಚುಗಳಿಗೆ ಸರಿಯಾಗಿರುತ್ತದೆ. ಆದ್ದರಿಂದ ಈ ವಾಚುಗಳ ಖರ್ಚು ಬಹಳ ಜೋರಾಗಿರುತ್ತದೆ. ಈ ಶಿವಾಯ ಈ ವಾಚು ಎಲ್ಲರಿಗೆ ಸೋಯಿಯಾಗಿ ಕಿಮ್ಮತ್ತನ್ನು ಬಹುಕಡಿಮೆ ಅಂದರೆ ಫಕ್ತ 3-8-0 ಇಟ್ಟಿರುತ್ತೇವೆ. ಗ್ಯಾರಂಟಿ ವರ್ಷ ೩.

2 ಬಹದ್ದೂರ ವಾಚು.

ಈ ವಾಚು ನಂಬರ 1ನೇಯಂತೆ ಇದ್ದು ಬಾಳಿಕೆಯಲ್ಲಿ ಅಗದೀ ಬಂದೋಬಸ್ತ ಇರುತ್ತದೆ. ಈ ಶಿವಾಯ 6 ಜುವೆಲ್ಸಗಳಿಂದ ಕೂಡಿರುತ್ತದೆ. ಕಾರಣ ಇಂಥಾ ವಾಚುಗಳನ್ನು ಒಮ್ಮೆ ತಕ್ಕೊಂಡರೆ ೨೦-೨೫ವರ್ಷ ಬೇರೆ ವಾಚನ್ನು ತಕ್ಕೊಳ್ಳುವ ಕಾರಣ ಬೀಳುವದಿಲ್ಲಾ. ಇದರಿಂದಲೇ ಈ ವಾಚಿಗೆ ಅಜ್ಜತಕ್ಕೊಂಡದ್ದು ಮೊಮ್ಮಗ ವಾಪರಿಸಬೇಕೆಂಬ ಹೆಸರು ಬಂದದೆ. ಇದರ ಕಿಮ್ಮತ್ತು 5—8—0. ಗ್ಯಾರಂಟಿ ೫ ವರ್ಷ.





3 ಫ್ಯಾನಸೀ ಡಾಯಲ್ ಲಿವ್ವರ ವಾಚು.

ಈ ವಾಚು ಕೂಡಾ ನಂಬರ 1ನೇಯಂತೆ ಇದ್ದು ಬಾಳಿಕೆಯಲ್ಲಿಯೂ ಕೂಡಾ ಅದರಂತೇನೆ ಇರುತ್ತದೆ. ಈ ಶಿವಾಯ ಸದರಿ ವಾಚಿನ ಡಾಯಲ್ ಅಗದೀ ಸುಂದರ ಇದ್ದು ಚಿತ್ರಗಳಿಂದ ಕೂಡಿ ಮನಸ್ಸಿಗೆ ಆನಂದವನ್ನು ಉಂಟುಮಾಡುತ್ತದೆ. ಈ ಶಿವಾಯ ಇದರ ಕಿಮ್ಮತ್ತನ್ನು ಇಂತಿಷ್ಟೇ ಎಂದು ತಿಳಿಯಲಿಕ್ಕೆ ಆಸ್ಪದವಿಲ್ಲ. ಇದರ ಕಿಮ್ಮತ್ತು ರೂ. 5-0-0. ಗ್ಯಾರಂಟಿ ೫ ವರ್ಷ.

4 ನಂಬರ ೨ನೇ ಫ್ಯಾನಸೀ ಡಾಯಲ್ ಲಿವ್ವರ ವಾಚು.

ಇದು ಕೂಡಾ ನಂಬರ 3ನೇಯಂತೇನೇ ಇದ್ದು 6 ಜುವೆಲ್ಸುಗಳಿಂದ ಕೂಡಿಯದೆ. ಇದರ ಕಿಮ್ಮತ್ತು 6-0-0. ಗ್ಯಾರಂಟಿ ೬ ವರ್ಷ.

5 ಲೇಡಿ ವಾಚಸ್.

ಇದು ಸಿಲೆಂಡರ ಇದ್ದು ಬಹಳ ಸಣ್ಣದು ಇದ್ದು ಮುಂಗೈಯಲ್ಲಿ ಕಟ್ಟಿಕೊಳ್ಳುವಂತೆ ಇರುತ್ತದೆ. ಬೆಳ್ಳಿಯಿಂದ ತಯಾರಿಸಿದ್ದಕ್ಕೆ ಕಿಮ್ಮತ್ತು 7—8—0. ಗ್ಯಾರಂಟಿ ೪ ವರ್ಷ.



6 ರೇಲ್ವೆ ರೆಗ್ಯುಲೇಟರ ವಾಚು.

ಇದು ಲಿವ್ವರ ಇರದೆ ಸಿಲೆಂಡರ ಇರುತ್ತದೆ. ಒಮ್ಮೆ ಕೀಲಿ ಕೊಟ್ಟರೆ 30ತಾಸು ನಡೆಯುವದು. ಇದಾವರೂ ಬಾಳಿಕೆಯಲ್ಲಿ ಬಂದೋಬಸ್ತ ಇದ್ದು ಸುಂದರ ಟಿಕಾವು ಇರುತ್ತದೆ. ಇದರ ಕಿಮ್ಮತ್ತು 4-0-0. ಗ್ಯಾರಂಟಿ ೨ ವರ್ಷ.





7 ಟಾಯಿಂಪೀಸುಗಳು.

ಬರ್ಮಾ ಟ್ಯಾಂಪೀಸ 1-12-0.
B. ಟ್ಯಾಂಪೀಸ 2-12-0.
C. ಅಲಾರಮ್ಮ 2-12-0.
ಇವುಗಳಿಗೆ ಗ್ಯಾರಂಟಿ ೨ವರ್ಷ.

8 ಹಾಫ ಹಂಟಿಂಗ ಲಿವ್ವರ ವಾಚು.

ಇದನ್ನು ಚೊಕ್ಕ ಬೆಳ್ಳಿಯಿಂದ ತಯಾರಿಸಿರುತ್ತದೆ. ಒಮ್ಮೆ ಕೀಲಿ ಕೊಟ್ಟರೆ ೩೬ ತಾಸುವರೆಗೆ ನಡೆಯುವದಲ್ಲದೆ ಇದರ ಮೂಲ ಕಿಮ್ಮತ್ತು ೪೦ ರೂಪಾಯಿ ಇದ್ದು ನಾವು 18 ರೂಪಾಯಿಗೆ ಕೊಡುತ್ತೇವೆ. ಗ್ಯಾರಂಟಿಯು ೧೦ ವರ್ಷದ್ದು.

9 ವಾಂಯ್ಟುಂಗ ಕೀಲೆಸ್ಸ ನಿಕಲ್ ವಾಚು.

ಗ್ಯಾರಂಟಿ] **ಡಬಲ ವ್ಯಾಡಿಂಗ ಕೇಸ** [೧೦ ವರ್ಷ

ನಿಕಲ್ ಲಿವ್ವರ ವಾಚು ಕ್ರಯ ರೂಪಾಯಿ15—0—0.

ಎಂಟು ದಿವಸಕ್ಕೆ ಒಮ್ಮೆ ಕೀಲಿ ಕೊಡುವಂಥಾದ್ದು.



10 ಆಫೀಸ ಕ್ಲಾಕುಗಳು.

ಇದು ಮನೆಯಲ್ಲಿ, ಆಫೀಸಿನಲ್ಲಿ, ಶಾಲೆಯಲ್ಲಿ ಇಡಲಿಕ್ಕೆ ಯೋಗ್ಯವಿರುತ್ತದೆ. ಇದು ತಾಸಿಗೊಮ್ಮೆ ಘಂಟೆ ದೊಡ್ಡ ಶಬ್ದದಿಂದ ಹೊಡೆಯುವದು. ಒಮ್ಮೆ ಕೀಲಿ ಕೊಟ್ಟರೆ ೧೨ ದಿವಸ ನಡೆಯುತ್ತದೆ. ಅಂದರೆ ವಾರಕ್ಕೆ ಒಮ್ಮೆ ಕೀಲಿ ಕೊಡತಕ್ಕದ್ದು. ಇದು ಬಹಳ ಬಂದೋಬಸ್ತ ಇದ್ದು ಅಷ್ಟಶೈಲಾಗಿ ಇರುತ್ತದೆ. ಇದರ ಕಿಮ್ಮತ್ತು 13–8–0. ಗ್ಯಾರಂಟಿ ೫ ವರ್ಷ.

ಇದರಲ್ಲೇ ಅಲಾರಮ್ಮ ಇದ್ದ ಆಫೀಸು ಕ್ಲಾಕಿಗೆ ಕಿಮ್ಮತ್ತು 15-0-0. ಗ್ಯಾರಂಟಿ ೫ ವರ್ಷ.

ಇಂಥಾ ಕ್ಲಾಕನ್ನು ಬೇಡತಕ್ಕವರು ಮುಂಗಡವಾಗಿ 3 ರೂಪಾಯಿ ರವಾನಿಸಿ ಬೇಡತಕ್ಕದ್ದು.



12 ಸಣ್ಣ ಕ್ಲಾಕುಗಳು.

ಈ ಕ್ಲಾಕಿಗೆ ಒಮ್ಮೆ ಕೀಲಿ ಕೊಟ್ಟರೆ 36 ತಾಸು ನಡೆಯುತ್ತದೆ. ತಾಸು, ಅರ್ಧತಾಸು ಹೊಡೆಯುವದಲ್ಲದೆ ಅಲಾರಮ್ಮ ಕೂಡಾ ಇರುತ್ತದೆ. ಕಿಮ್ಮತ್ತು 7–8–0. ಗ್ಯಾರಂಟಿ 3 ವರ್ಷ. ಟ. ಖ. ಬೇರೆ. ನಂಬರ 10ನೇದರಲ್ಲಿ ಬೆಂಡಬಾಜಾಮಾಡುವಂಥಾದ್ದಕ್ಕೆ ಕಿಮ್ಮತ್ತು 7—8—0.



ಅಯ್ಯಾ ದೇಶಬಾಂಧವರೇ! ಈ ಹೊತ್ತಿನ ಸ ರೆಗೆ ಯಾವ ಕಂಪೆನಿಯವರು ಸಹ, ಇಂಥ ವಾಚುಗಳನ್ನು ಅಲ್ಪಕ್ರಯಕ್ಕೆ ಕೊಟ್ಟದ್ದು ಇರುದಿಲ್ಲಾ. ಇವುಗಳು ನಾವು ಪ್ರಥಮತಃ ರೂ. ೩೦ಕ್ಕೆ ಕೊಟ್ಟಿರುತ್ತೇವೆ. ಈಗ ನಾವು ಇದೇ ವಾಚು ೩ ತಿಂಗಳವರೆಗೆ ಫಕ್ತ ರೂ. ೧೮ಕ್ಕೆ ಕೊಡುವೆವು. ಈ ವಾಚಿನ ರಚನೆಯು, ಅ ಉತ್ತಮವಾಗಿಯೂ ಅಂದವಾಗಿಯೂ ಇರುವದಲ್ಲದೆ ಇದರೊಳಗಿನ ಯಂತ್ರಗಳು ಅತಿ ಮಜಬೂತ ಇದ್ದು ಕ್ರಯಕ್ಕೆ ತೆಗೆದುಕೊಂಡಂದಿನಿಂದ ೫೦ ವರ್ಷ ಪರಿಯಂತರ ಬೇರೆ ವಾಚು ತೆಗೆದುಕೊಳ್ಳುವ ಅವಶ್ಯವಿಲ್ಲ. ಒಮ್ಮೆ ಕೀಲಿ ಕೊಟ್ಟರೆ ೧೨ದಿವಸ ವರೆಗೆ ನಡೆಯುತ್ತದೆ. ಇದೇ ವಾಚು ನಮ್ಮ ಬಳಿಯಿಂದ ಕ್ರಯಕ್ಕೆ ಪಡೆದವರು ಬೇರೆಯವರಿಗೆ ೫೦ ರೂಪಾಯಿಗೆ ವಹಿಸಿರುತ್ತಾರೆ.



11 ದೇವಳೀ ಕ್ಲಾಕು.

ಈ ಕ್ಲಾಕು ನೋಡಲಿಕ್ಕೆ ಬಹಳೇ ಸುಂದರ ಇದ್ದು ಬಂದೋಬಸ್ತ ಸಾಮಾನುಗಳಿಂದ ತಯಾರಿಸಿ ಇರುತ್ತದೆ. ಇದಕ್ಕೆ ಒಮ್ಮೆ ಕೀಲಿ ಕೊಟ್ಟರೆ 12 ದಿವಸ ಚನ್ನಾಗಿ ನಡೆಯುವದು. ಅಂದರೆ ವಾರಕ್ಕೆ ಒಮ್ಮೆ ಕೀಲಿ ಕೊಡಬೇಕು. ಇದು ತಾಸಿಗೊಮ್ಮೆ ಘಂಟೆ ಹೊಡಿಯುವಾಗ್ಯೆ ಮಧುರ ಸ್ವರದಂತೆ ಕೇಳಬರುತ್ತದೆ. ಇದರ ಕಿಮ್ಮತ್ತು 15–0–0. ಗ್ಯಾರಂಟಿ ೫ ವರ್ಷ.

ಇದೇ ಕ್ಲಾಕಿನಲ್ಲಿ ಅಲಾರಮ್ಮ ಇದ್ದದಕ್ಕೆ ಕಿಮ್ಮತ್ತು 16–8–0. ಟ. ಖ. ಬೇರೆ.

ಇದನ್ನು ಬೇಡತಕ್ಕವರು ಮುಂಗಡ 3 (ಮೂರು) ರೂಪಾಯಿ ರವಾನಿಸತಕ್ಕದು



13 ಫೋನೋಗ್ರಾಫ

ಈ ಫೋನೋಗ್ರಾಫ ಎಂಬ ಯಂತ್ರವು ಮಾತಾಡಿದಂತೆ ಮಾತಾಡುವದು. ಹಾಡಿದಂತೆ ಹಾಡುವದು. ನಕ್ಕಂತೆ ನಗುವದು. ಇದರ ಕಿಮ್ಮತ್ತು ಫಕ್ತ 12—8—0

ಸೂಚನೆ:— ಮೇಲೆ ಬರೆದ ವಾಚುಗಳು ಒಮ್ಮೆಗೇ 3 ತರಿಸಿಕೊಂಡರೆ, ಟ. ಖರ್ಚು ಮಾಫ. 6 ತ ಸಿಕೊಂಡರೆ 1 ವಾಚು ಬಕ್ಷೀಸು. ಪ್ರತಿವಾಚಿನ ಸಂಗಡ 1ಸ್ಪ್ರಿಂಗ್, 1ಕನ್ನಡಿ, 1ಪೆಟ್ಟಿಗೆ ರವಾನಿಸುವೆವು. ಗಿರಾಯಿಕಿಗಳ ಅಪೇಕ್ಷೆಯಂತೆ ಪ್ರತಿಯೊಂದು ವಾಚಿಗೆ ಕಿಮ್ಮತ್ತು ಕಡಿಮೆ ಮಾಡಿರುತ್ತೇವೆ. ವಾಚುಗಳಿಗೂ ಕ್ಲಾಕುಗಳಿಗೂ ಟಾಯಿಂಪೀಸುಗಳಿಗೂ ವ ಇತರ ಸಾಮಾನುಗಳಿಗೂ ಕಿಮ್ಮತ್ತು ಶಿವಾ ಟಪಾಲ ಖರ್ಚು ಬೇರೆ ಬೀಳುವದು.

ಕಳೆದ ತಾ॥ ೨೭ ರ ಸಾಯಂಕಾಲ ರಾಜಧಾನಿಯ ಮ॥ ರಾ॥ ಬಜ್ಜಣ್ಣನವರು ಕೋಟೆಯಲ್ಲಿ ಅರಮನೆಯ ಇನ್ಛಾರ್ಜಾಫೀಸರನ್ನು ಕಂಡುಬರಲು ೪ ಚಕ್ರದ ಕುದುರೆಯ ಬಂಡಿಯಲ್ಲಿ ಕುಳಿತು ಲ್ಯಾನ್ಸ್‌ಡೌನ್ ಬಜಾರಿನಿದಿರಿಗಿರುವ ಮಾರ್ಗದಲ್ಲಿ ಬರುತ್ತಿರುವಾಗ್ಗೆ ಕುದರೆಯು ಸ್ವೇಚ್ಛೆಯಾಗೋಡಲು, ಬಂಡಿಯನ್ನು ಹೊಡೆಯುತ್ತಿದ್ದ ತುರುಕನು ಬಲವಾಗಿ ಕಡಿವಾಣವನ್ನೆಳೆಯಲು ಅದು ಕಿತ್ತುಹೋಯಿತು. ಮುಂದೆ ಅಪಾಯವಾದೀತೆಂದು ಹೆದರಿ, ಮ॥ ಬಜ್ಜಣ್ಣನವರು ದುಮುಕಿದರು. ತಲೆ ಕಪಾಲ ಮೊದಲಾದ ಸ್ಥಲಗಳಿಗೆ ಬಲವಾದ ಪೆಟ್ಟು ಬಿದ್ದಿತು ಇದನ್ನು ನೋಡಿ ಸಾರಥಿಯು ದುಮಿಕಲು, ಕೈಯಲ್ಲಿದ್ದ ಕಡಿವಾಣದ ಸೆಳೆತದಿಂದ ಕುದುರೆಯೂ ಆ ಕಡೆಗೇ ತಿರುಗಿ, ರಥವು ಮಗುಚಿಕೊಳ್ಳಲು, ಕುದುರೆಯ ಒತ್ತಡದಿಂದಲೂ ಬಂಡಿಯ ನುಲಿತದಲ್ಲಿ ಸಿಕ್ಕಿದುದರಿಂದಲೂ ಆಳು ಅಲ್ಲೇ ಸತ್ತನು. ಮ॥ ಬಜ್ಜಣ್ಣನವರಿಗೆ ಮೂಗುಬಾಯಿಂದ ರಕ್ತವು ಸುರಿಯುತ್ತ ಸ್ಮೃತಿತಪ್ಪಿತು. ಆಕೂಡಲೇ ಜನರಲ್ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಮಾಡಿದಾಗ್ಯೂ ಜ್ಞಾನವು ಬಾರದೆ ಉತ್ಕ್ರಮಣಾವಸ್ಥೆಯಲ್ಲಿರಲು, ಅವರ ಪತ್ನೀ ಪುತ್ರಾದಿಗಳು ರಾತ್ರಿ ೧೧ ಗಂಟೆಗೆ ಮನೆಗೆ ಸಾಗಿಸಿಕೊಂಡುಬಂದ ಕೊಂಚ ಹೊತ್ತಿನಲ್ಲಿ ಪ್ರಾಣವುಹೋಯಿತು. ಸಾವಿರಾರುಜನರು ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬಂದರು. ಮಾರನೆಯ ಬೆಳಿಗ್ಗೆ ೯ ಗಂಟೆಯಲ್ಲಿ ಶವವು ವಿಶೇಷವಾದ ಉತ್ಸವದಿಂದ ರುದ್ರಭೂಮಿಗೆ ಸಾಗಿಸಲ್ಪಟ್ಟು ನಿಕ್ಷೇಪಮಾಡಲ್ಪಟ್ಟಿತು. ಇವರಿಗೆ ೬೦-೭೦ ವರ್ಷ ವಯಸ್ಸಾಗಿತ್ತು, ಮತ್ತೂ ಒಬ್ಬ ಪತ್ನಿಯೂ ೨ ಗಂಡುಮಕ್ಕಳೂ ಇಬ್ಬರು ಹೆಣ್ಣುಮಕ್ಕಳೂ ಮೊಮ್ಮಕ್ಕಳೂ ಇರುವರು. ೬ ಮೈಲಿದೂರದಲ್ಲಿರುವ ಹಳ್ಳಿಗೆ ಹೋಗಿದ್ದ ಗಂಡುಮಕ್ಕಳು ಅಪಾಯಸಂಭವಿಸಿದ ಸಂಗತಿಯನ್ನು ಕೇಳಿ ಆ ಸಾಯಂಕಾಲ ಬಂದರು. ಇವರು ರಾಜಧಾನಿಯ ವರ್ತಕಮಂಡಲಿಯಲ್ಲಿ ಪ್ರಮುಖರಾಗಿಯೂ ಶ್ರೀಮಂತರಾಗಿಯೂ ಇದ್ದುದಲ್ಲದೆ, ೧೫-೧೬ ವರ್ಷಗಳಿಂದ ಅರಮನೆಯ ಮೋತಿಖಾನೆಯ ಕಂಟ್ರಾಕ್ಟನ್ನೂ, ಬೆಂಗಳೂರ [illegible] ರಾ॥ ಬ॥ ಮಾಯಗಂಡದೇವ ಮೊದಲಿಯಾರರ ಪಾಲಿನಲ್ಲಿ ಮೈಸೂರು ಸೀಮೆಯ ಒಟ್ಟು ಸಾರಾಯಿ ಕಂಟ್ರಾಕ್ಟನ್ನೂ, ಸ್ವಂತವಾಗಿ ರಾಜಧಾನಿಯ ಸೇಂದಿ ಕಂಟ್ರಾಕ್ಟನ್ನೂ ಮಾಡಿಕೊಂಡು ಒಳ್ಳೇಪ್ರಸಿದ್ಧರಾಗಿದ್ದರು. ಇವರ ಕೈಕೆಳಗೆ ನೂರಾರುಜನ ಕೆಲಸಮಾಡಿಕೊಂಡು ಜೀವಿಸುತ್ತಿದ್ದರು. ಇವರು ತಮ್ಮ ಪತ್ನಿಪುತ್ರಾದಿಗಳ ಕೂಡ ಅವಸಾನಕಾಲದಲ್ಲಿ ಒಂದು ಮಾತನ್ನೂ ಆಡಲು ದೈವಾಜ್ಞೆಯಿಲ್ಲವಾಯಿತು. ಇವರಿಗೆ ಆಕಸ್ಮಿಕವಾಗಿ ವಿಪತ್ತು ಸಂಭವಿಸಿ ಮರಣವನ್ನು ಹೊಂದುದಕ್ಕಾಗಿ ಅವರ ಕುಟುಂಬದವರೇ ಅಲ್ಲದೆ ಅವರ ಆಶ್ರಿತರೂ ದೊಡ್ಡ ಆಡಳಿತಕ್ಕೆ ಸಂಬಂಧಪಟ್ಟಿದ್ದ ಸಾವಿರಾರು ಜನರೂ ಪರಿತಾಪಪಡುವಂತಾಗಿರುವುದು. ಇವರ ಮರಣದಿಂದ ರಾಜಧಾನಿಯ ವರ್ತಕಮಂಡಲಿಯಲ್ಲಿ ಮುಖ್ಯರಾದವರೊಬ್ಬರು ಮರೆಯಾದಂತಾಯಿತು. ದೈವವಿಲಾಸವು ಅಪ್ರತಿಹತವಾದುದರಿಂದ ಜಗದ್ವ್ಯಾಪಾರದ ಕಡೆಗೆ ಲಕ್ಷ್ಯವಿಟ್ಟು ಇವರ ವಿಯೋಗ ದುಃಖವನ್ನು ಅವರ ಕುಟುಂಬದವರು ಸಹಿಸಿಕೊಳ್ಳುವವರಾಗಲೆಂದು ಕೋರುತ್ತೇವೆ.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೬-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕ್ಕೆ ೧೦ ಅಣೆ; ದಶಾಂಗ ಪೊಟ್ಣ ೧ಕ್ಕೆ ೪ ಅಣೆ; ಧೂಪದ ಗಟ್ಟಿ ೧ಕ್ಕೆ ೨ ಅಣೆ. ಬಾಲಗ್ರಹಧೂಪ ಟಿನ್ ೧ಕ್ಕೆ ೮ ಅಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಜರ್ಮಾನ್ ಸಾಮ್ರಾಜ್ಯ.

ಕನ್ನಡದಲ್ಲಿ ಇದುವರೆಗೂ ಇಂತಹ ಪುಸ್ತಕವಿರಲಿಲ್ಲ. ಜರ್ಮಾನಿನ ವಿಷಯದಲ್ಲಿ ಎಲ್ಲವನ್ನೂ ವಿಶದವಾಗಿ ತಿಳಿಸುತ್ತದೆ. ಆಶ್ಚರ್ಯಕರವಾದ ಸಂಗತಿಗಳು, ಪ್ರತಿಯೊಬ್ಬರೂ ಓದತಕ್ಕದ್ದು. ಮೇಲಾದಕಾಗದ. ಅಂದವಾದ ಮುದ್ರಣ ಬೆಲೆ ೬ ಅಣೆ. ಕಿಂಡರ್ ಗಾರ್ಟನ್ ಕಥೆಗಳು ಸ್ಕೂಲ್ಮಾಸ್ಟರುಗಳಿಗೆ ಅವಶ್ಯಕವಾದದ್ದು ೧೦ ಅಣೆ. ಉನ್ಮತ್ತ-ಬಂಗಾಳದೇಶದ ಸ್ತ್ರೀಯ ಚರಿತ್ರೆ ೨ ಅಣೆ.

ದೊರೆಯುವಸ್ಥಳ—ಜಿ. ಕೃಷ್ಣಶಾಸ್ತ್ರಿ ಅ॥ ಮ॥ ನಾರ್ಮಲ್‌ಸ್ಕೂಲ್ ಮೈಸೂರ್. ಮತ್ತು ಜನರಲ್‌ಏಜನ್ಸಿ
ಮೈಸೂರು

ಒಳದೇಶದ ವೃತ್ತಾಂತ.

ಮೈಸೂರಿಗೆ ಬಂದಿದ್ದ ಚೀಫ್ ಜಡ್ಜರು ಇಲ್ಲಿನ ಸಿವಿಲ್ ಕೋರ್ಟುಗಳ ಇನ್ಸ್ಪೆಕ್ಷನನ್ನು ಮಾಡಿದರು.

ಶ್ರೀಮನ್ ಮಹಾರಾಜರ ಸ್ವಾರಿಯು ಯುಗಾದಿಯ ಹಬ್ಬವಾದ ನಂತರ ಮುಂದಣ ತಾ॥ ೭-೮ ರಲ್ಲಿ ಉದಕಮಂಡಲಕ್ಕೆ ಚಿತ್ತೈಸುವುದಾಗರಿತವು.

ಕೌನ್ಸಿಲರುಗಳಾದ ಮ॥ ಎಚ್. ವಿ. ನಂಜುಂಡಯ್ಯನವರು ತಾ॥ ೨೪ ರಲ್ಲೂ ಮ॥ ಕೆ. ಪಿ. ಪುಟ್ಟಣ್ಣಸೆಟ್ಟರು ತಾ॥ ೨೫ ರಲ್ಲೂ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು.

ಶ್ರೀ ಪರಕಾಲಸ್ವಾಮಿಗಳು ಕಳಲೆ ಪ್ರಾಂತ ಸಂಚಾರ ಹೋಗಿದ್ದು ಕಳೆದ ತಾ॥ ೨೨ ರಲ್ಲಿ ರಾಜಧಾನಿಗೆ ಹಿಂತಿರುಗಿದರು. ಮರ್ಯಾದಾರ್ಥವಾದ ೨೧ ಗುಂಡುಗಳು ಹಾರಿಸಲ್ಪಟ್ಟವು.

ನಮ್ಮ ಸಂಸ್ಥಾನದ ಕಂಟ್ರೋಲರ್‌ರವರು ೧೬೦೦ ರೂ. ಸಂಬಳದ ಮೇಲೆ ಇನ್ನೂ ೩ ವರ್ಷಗಳ ವರೆಗೆ ಇದೇ ಕೆಲಸದಲ್ಲಿರಲು ಇಂಡ್ಯಾ ಗೌರ್ನಮೆಂಟಿನ ಒಪ್ಪಿಗೆಯ ಮೇರೆ ನಿರ್ಣಯವಾಗಿದೆ.

ಬೆಂಗಳೂರು ಚಿಕ್ಕಬಳ್ಳಾಪುರದ ಲೋಹಮಾರ್ಗದ ಕೆಲಸವನ್ನುಪಕ್ರಮಿಸುವುದಕ್ಕೆ ಗೌರ್ನಮೆಂಟಿನವರು ಅಪ್ಪಣೆ ಮಾಡಿದ್ದಾರೆ. ಭಾಗಸ್ಥರುಗಳಿಂದ ಹಣವನ್ನೆತ್ತುವುದಕ್ಕೆ ಸಂಘದವರು ಉಜ್ಜುಗಿಸಿದ್ದಾರೆ.

ಕಳೆದ ತಾ॥ ೨೪ ರಲ್ಲಿ ದಿವಾನರು ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿ ತಾ॥ ೨೫ ರಲ್ಲಿ ತಮ್ಮ ಪಿತೃಗಳ ಶ್ರಾದ್ಧಕರ್ಮವನ್ನು ನೆರವೇರಿಸಿದರು. ತಾ॥ ೧ ರಲ್ಲಿ ಪುನಃ ರಾಜಧಾನಿಗೆ ಬರುವವರಾಗಿರುವರು.

ಮೆಸರ್ಸ್. ಜಿ. ಎಲ್. ಜೋಷಿ ಮತ್ತೂ ಕಂಪೆನಿಯವರ ಗಡಿಯಾರ ಮತ್ತೂ ಔಷಧಸಾಮಗ್ರಿಗಳ ಪ್ರಸಿದ್ಧಪತ್ರಿಕೆಯು ಈ ಸಂಚಿಕೆಯಲ್ಲಿ ಗರ್ಭೀಕರಿಸಲ್ಪಟ್ಟಿದೆ. ವಾಚಕರು ದಯವಿಟ್ಟು ಗಮನಿಸತಕ್ಕದು.

ರಾಜಧಾನಿಯ ಮೃಗಶಾಲೆಯಲ್ಲಿ ಪ್ರತಿ ಬುಧವಾರವೂ ಕರ್ನಾಟಕ ವಾದ್ಯವಾಗುವಂತೆಯೂ, ಯಾರು ಬೇಕಿದ್ದರೂ ಆದಿನ ಉಚಿತವಾಗಿ ಹೋಗಿ ನೋಡಬಹುದೆಂತಲೂ ಶ್ರೀಮನ್ಮಹಾರಾಜರವರು ಅಪ್ಪಣೆ ಮಾಡಿರುವರೆಂದು ಕೇಳುತ್ತೇವೆ.

ಸಂಸ್ಥಾನದ ಮುಖ್ಯಾಧಿಕಾರಿಗಳು ಕಳೆದವಾರ ರಾಜಧಾನಿಯಲ್ಲಿ ಸೇರಿದ್ದು, ಎಲ್ಲ ಶಾಖೆಗಳಲ್ಲೂ ವ್ಯಯವನ್ನು ಕಡಿಮೆ ಮಾಡುವ ವಿಚಾರವನ್ನೂ, ಸಂಸ್ಥಾನದ ಮುಖ್ಯಾಧಿಕಾರಿಗಳ ಕೆಲ ಬದಲಾವಣೆಯ ವಿಷಯವನ್ನೂ ಚರ್ಚಿಸಿದರೆಂದು ಕೇಳುತ್ತೇವೆ.

ಎಕ್ಸೈಸ್ ಕಮೀಷನರ್ ಮ॥ ಸ್ಪಾರ್ಕ್ಸ್‌ರವರು ೬ ತಿಂಗಳ ರಜವನ್ನು ತೆಗೆದುಕೊಳ್ಳುತ್ತಾರೆಂದೂ, ಅವರ ಬದಲು ಈಗ ರಜಾದಮೇಲಿರುವ ಶಷನ್ಸ್ ಜಡ್ಜ್ ಮ॥ ಪರಮಶಿವಯ್ಯನವರು ಆ॥ ಎಕ್ಸೈಜ್ ಕಮಿಷನರಾಗಿ ನೇಮಿಸಲ್ಪಡುತ್ತಾರೆಂದೂ ವರ್ತಮಾನವಿದೆ.

ಇಲ್ಲಿನ ಟವನ್‌ಹಾಲಿನಲ್ಲಿ ಕಳೆದ ಶನಿವಾರದ ದಿನ ಆರ್ಯಬಾಲ ಸಮಾಜದ ಪರವಾಗಿ ಒಂದು ಸಭೆ ಸೇರಿದ್ದು, ವಿದ್ಯಾರ್ಥಿಗಳಿಗೆ ಹಿತಕರವಾದ ಉಪನ್ಯಾಸವು ಮಿ॥ ಆರ್. ಎಚ್. ಕೇಂಬಲ್, ಮ॥ ವಿ. ಎನ್. ನರಸಿಂಹಯ್ಯಂಗಾರ್ ಮ॥ ಎಂ. ವೆಂಕಟಕೃಷ್ಣಯ್ಯ ಇವರುಗಳಿಂದ ಮಾಡಲ್ಪಟ್ಟಿತು.

ಕ್ರಿಕೆಟ್ ಎಂಬ ಚೆಂಡಾಟದಲ್ಲಿ ಒಬ್ಬನು ಬ್ಯಾಟ (ದಾಂಡ)ನ್ನು ಹಿಡಿದುಕೊಂಡು ಮತ್ತೊಬ್ಬನು ಗುರಿಕಟ್ಟಿ ಹಾಕುವ ಚೆಂಡನ್ನು ಹೊಡೆಯುವುದುಂಟಷ್ಟೆ. ಈ ಆಟವನ್ನು ಅಭ್ಯಾಸಮಾಡುವಾಗ್ಗೆ ಚೆಂಡನ್ನು ಗುರಿಯಿಟ್ಟು ಹಾಕುವ ಒಂದು ಯಂತ್ರವನ್ನು ಶ್ರೀಮನ್ಮಹಾರಾಜರವರು ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳಿಗೆ ಬಹುಮಾನಿಸಿರುವುದಾಗರಿಯುತ್ತೇವೆ.

ಶ್ರೀ ರಾಮಕೃಷ್ಣ ಪರಮಹಂಸರವರ ಪತ್ನಿ ಶ್ರೀಮತಿ ಶಾರದಮಣಿ ದೇವಿಯವರು ರಾಮಕೃಷ್ಣಾನಂದ ಮತ್ತೂ ಸದಾನಂದರವರೊಡನೆ ಕಳೆದ ತಾ॥ ೨೪ ರಲ್ಲಿ ಮದ್ರಾಸಿನಿಂದ ಬೆಂಗಳೂರಿಗೆ ಬಂದು ರಾಮಕೃಷ್ಣಾಶ್ರಮದಲ್ಲಿಳಿದುಕೊಂಡಿರುವರು. ಆರ್ಯಸಮಾಜಾಭಿಮಾನಿಗಳು ಅಮ್ಮನವರ ದರ್ಶನಭಾಷಣಗಳನ್ನು ಮಾಡಿಕೊಂಡು ಸಂತುಷ್ಟರಾಗಿ ಬರುತ್ತಿರುವರು.

ಡಿ॥ ಕೆ॥ ಮ॥ ಕಾಂತರಾಜ ಅರಸಿನವರು ತಾ॥ ೨೪ ರಲ್ಲಿ ಗುಂಡ್ಲುಪೇಟೆ ಪ್ರಾಂತ ದಯಮಾಡಿಸಿದರು. ಮತ್ತೂ ಈ ತಾ॥ ೨೮ಕ್ಕೆ ರಾಜಧಾನಿಗೆ ಹಿಂತಿರುಗಿ ತಾ॥ ೧ ರಲ್ಲಿ ಹೆಗ್ಗಡದೇವನಕೋಟೆ ತಾ॥ನಲ್ಲಿ ಹೊಸದಾಗಿ ಕೊಂಡಿರುವ ಜಹಗೀರಿಗೆ ದಯಮಾಡಿಸುವರು. ಶ್ರೀಮನ್ಮಹಾರಾಜರವರು ತಾ॥ ೨ ರಲ್ಲಿ ಅಲ್ಲಿಗೆ ದಯಮಾಡಿಸಿ ಜಹಗೀರಿಯನ್ನು ಪರಾಮರಿಸಿಕೊಂಡು ಬರುವುದಾಗಿ ಕೇಳಿದೆವು.

ಬರುವ ಜೂನ್ ಅಂತ್ಯದಲ್ಲಿ ನಂಜನಗೂಡು ಸಬ್ ಡಿವಿಜನ್ ಅ॥ ಕಮೀಷನರಾದ ಮ॥ ಸುಂದರರಾಜಯ್ಯಂಗಾರರು ಕೆಲಸದಿಂದ ನಿವೃತ್ತಿಗೊಳಿಸಲ್ಪಟ್ಟು, ಅವರಸ್ಥಾನದಲ್ಲಿ ಮೈಸೂರ ಡಿ॥ ಪೋಲೀಸು ಸೂಪರಿಂಟೆಂಟ್ ಮ॥ ರಾಮೋಜಿರಾವ್, ಬಿ. ಎ., ಯವರು ನೇಮಿಸಲ್ಪಡುವುದಾಗಿಯೂ, ಬರುವ ತಿಂಗಳಲ್ಲಿ ರಾಜಧಾನಿಯ ಪೋ॥ ಇನ್ಸ್ಪೆಕ್ಟರ್ ಮ॥ ಮೆಕ್ಕೆಯವರು ಬೆಂಗಳೂರಿಗೂ, ಮ॥ ಒಡಾರ್ಟಿಯವರು ರಾಜಧಾನಿಗೂ ವರ್ಗಾಯಿಸಲ್ಪಡುವುದಾಗಿಯೂ, ಕೇಳುತ್ತೇವೆ.

ಡಿ॥ ಕಮೀಷನರ್ ಮ॥ ರಾ॥ ಎಂ. ಕಾಂತರಾಜಅರಸಿನವರು ಸದ್ಯದಲ್ಲಿ ೧ ತಿಂಗಳು ೧೯ ದಿನಗಳ ಪ್ರಿವಿಲೇಜ್ ರಜವನ್ನು ತೆಗೆದುಕೊಂಡಿರುವುದಾಗಿಯೂ ಇವರ ಬದಲು ಡಿ॥ ಕೆ॥ ಮ॥ ಚಾಂಡಿಯವರು ಬರುವುದಾಗಿಯೂ, ಅವರ ಬದಲು ಮೈಸೂರ ಸೀಮೆಯ ಪರಸ್ಪರಸಹಾಯಕ ಸಂಘಗಳ ರಿಜಿಸ್ಟ್ರಾರಾದ ಮ॥ಎಂ. ಶಾಮರಾವ್, ಎಂ.ಎ. ರವರು ಚಿತ್ರದುರ್ಗ ಡಿ॥ಆಕ್ಟಿಂಗ್ ಡೆಪ್ಯುಟಿ ಕಮೀಷನರಾಗಿ ನೇಮಿಸಲ್ಪಟ್ಟಿರುವುದಾಗಿಯೂ ಕೇಳುತ್ತೇವೆ. ಪೂರ್ಣವಿದ್ಯಾವಂತರೂ ದಯಾಪರರೂ, ಶಾಂತಮೂರ್ತಿಯೂ, ಪ್ರಜಾನುರಾಗಿಗಳೂ ಮತ್ತೂ, ಕಾರ್ಯದಕ್ಷರೂ ಆದ ಮ॥ ಶ್ಯಾಮರಾಯರಿಗೆ ಅವರ ಯೋಗ್ಯತೆಗೆ ತಕ್ಕ ಉದ್ಯೋಗವು ಈಗಳಾದರೂ ದೊರೆದುದಕ್ಕಾಗಿ ಸಂತೋಷಿಸುತ್ತೇವೆ.

ವರ್ತಮಾನ ಸಂಗ್ರಹ.

ಮದರಾಸಿನಲ್ಲಿ ಸರ್ಕಾರದ ಅಪ್ಪಣೆಯಿಲ್ಲದೆ ಸಮುದ್ರ ತೀರದ ಮಳಲನ್ನು ಬಂಡಿಗಳಲ್ಲಿ ತುಂಬಿಕೊಂಡು ಹೋಗುತ್ತಿದ್ದ ಮೂವರಿಗೆ ದಂಡಾಧಿಕಾರಿಯಿಂದ ೧೫-೨- ರೂಪಾಯಿಗಳಂತೆ ಅರ್ಥದಂಡವಾಯಿತು.

ಇನ್ನುಮೇಲೆ ಸಬ್‌ರಿಜಿಸ್ಟ್ರಾರುಗಳು ಕ್ರಿಮಿನಲ್ ಜುಡಿಷಿಯಲ್ ಸಾಮಾನ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವಂತೆ ಮಾಡಬೇಕೆಂದು ಮದರಾಸು ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್‌ರವರು ಮಾಡಿದ ಸೂಚನೆಯನ್ನು ಆ ಗೌರ್ನಮೆಂಟಿನವರು ಒಪ್ಪಿರುತ್ತಾರೆ.

ಶ್ರೀ ರಾಮಕೃಷ್ಣ ಪರಮಹಂಸರವರ ಪತ್ನಿಯವರು ರಾಮಕೃಷ್ಣಾನಂದ ಎಂಬ ಒಬ್ಬ ಶಿಷ್ಯನೊಡನೆ ಮಧುರೆ ಮೊದಲಾದ ಕಡೆಗಳಲ್ಲೆಲ್ಲಾ ಸಂಚರಿಸಿ ಈಗ ರಾಮೇಶ್ವರದ ಕಡೆಗೆ ತೆರಳಿರುವರು. ಅಲ್ಲಿಂದ ಬರುವಾಗ್ಗೆ ಅವರು ಬೆಂಗಳೂರಿಗೂ ಕೂಡ ಬರುವರೆಂದು ಪ್ರಕಟವಾಗಿದೆ.

ಬದೋಡಾ ಮಹಾರಾಜರವರು ಸೀಮೆಯಲ್ಲಿ ಜೂನ್ ತಿಂಗಳಲ್ಲಿ ಜರಗುವ ಜಾರ್ಜ್ ಪ್ರಭುಗಳ ಕಿರೀಟಧಾರಣ ಮಹೋತ್ಸವದಲ್ಲಿ ಭಾಗಿಗಳಾಗಲು ತಾ॥ ೨೪ ರಲ್ಲಿ ಬದೋಡಾದಿಂದ ಬೊಂಬಾಯಿಗೆ ಪ್ರಯಾಣವನ್ನು ಮಾಡಿದರು. ಅಲ್ಲಿಂದ ಕೂಡಲೆ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡುವರು.

ಬೊಂಬಾಯಿಯ ಬಾಯ್ಕುಲಾ ನಿಲ್ದಾಣದಿಂದ ೧೦ ಕುದುರೆಗಳು ಹೈದರಾಬಾದಿಗೆ ಬಂಡಿಯಮೇಲೆ ಕಳುಹಿಸಲ್ಪಟ್ಟವು. ಬಂಡಿಯು ಸಿಯೂರ್ ನಿಲ್ದಾಣಕ್ಕೆ ಬರುವುದರೊಳಗೆ ಕುದುರೆಗಳಿದ್ದ ಬಂಡಿಗಳಿಗೆ ಬೆಂಕಿಯು ತಗಲಿ ೬ ಕುದುರೆಗಳು ಸುಟ್ಟು ಸತ್ತುಹೋಗಿದ್ದವು ಉಳಿದ ೪ ಕ್ಕೆ ಬಲವಾದ ಗಾಯಗಳಾಗಿದ್ದವು.

ಹೈದರಾಬಾದು ನೈಜಾಂರವರು ಮಹಮ್ಮದೀಯರ ಸರ್ವವಿದ್ಯಾನಿಲಯ ಸ್ಥಾಪನಾಕಾರ್ಯದಲ್ಲಿ ಯಾಜಮಾನ್ಯವನ್ನು ವಹಿಸಬೇಕೆಂದು ಅವರನ್ನು ಪ್ರಾರ್ಥಿಸಲು ರಾಂಪುರದ ನವಾಬರು ಹೈದರಾಬಾದಿಗೆ ಇಷ್ಟರಲ್ಲೇ ಹೋಗುವರು. ಈ ನಿಲಯಸ್ಥಾಪನೆಗಾಗಿ ಈವರೆಗೆ ವಾಗ್ದಾನವಾಗಿರುವುದು ೧೯,೫೫,೦೦೦ ರೂ.

ಕಾಚ್ ತಗ್ಗಾಯೆಂಬಲ್ಲಿ ಒಬ್ಬ ಭೂಸ್ವಾಮಿಯ ಮಗಳೊಡನೆ ಮನೆಯಾಳು ಅಕ್ರಮ ಸಾಂಗತ್ಯವನ್ನು ಮಾಡಿಕೊಂಡಿದ್ದುದು ಆ ಭೂಸ್ವಾಮಿಗೆ ತಿಳಿದು ಬರಲು, ಆತನು ಆಳನ್ನು ತುಪಾಕಿಯಿಂದ ಸುಟ್ಟು, ಮಗಳನ್ನು ಕೊಯ್ದು ಸಾಯಿಸಿ, ತಾನು ಪೋಲೀಸರ ಮುಂದೆ ಬಂದು ಮಾಡಿಬಂದ ಕೆಲಸವನ್ನು ತಾನಾಗಿ ಹೇಳಿ ಸೆರೆಯಾಳಾಗಿರುವನು.

ಸೆಂಟ್ ಪೀಟರ್ಸ್‌ಬರ್ಗನಲ್ಲಿ ಪ್ರಜೆಗಳು ಸ್ನಾನಮಾಡುತ್ತಿದ್ದ ಸರೋವರದಲ್ಲಿ ಕಳೆದ ತಿಂಗಳು ತಾ॥ ೧೫ ರಲ್ಲಿ ಒಂದು ಮಹಾಶಬ್ದವಾಯಿತು. ದಿಗಂಬರರಾಗಿ ಸ್ನಾನಮಾಡುತ್ತಿದ್ದ ಸ್ತ್ರೀ ಪುರುಷರುಗಳೆಲ್ಲಾ ಬಹಳ ಭಯಪಟ್ಟು ಹೊರಕ್ಕೆ ಓಡಿಬಂದು ನೋಡುವಲ್ಲಿ ಒಸಾರೆಯಲ್ಲಿ ಒಬ್ಬ ಮನುಷ್ಯನ ಛಿನ್ನಭಿನ್ನವಾದ ದೇಹದ ತುಂಡುಗಳೂ ಹಾರಿದ ಪಿಸ್ತೂಲಿನ ಗುಂಡಿನ ಚೂರುಗಳೂ ಕಂಡುಬಂದವು.

ಮದರಾಸಿನ "ರೈಸಿಂಗ್ ಸ್ಟಾರ್" ಕಂಪೆನಿಯವರು ಮಲಬಾರು ಪ್ರಾಂತದಲ್ಲಿ ಪ್ರದರ್ಶನಮಾಡುತ್ತಿದ್ದ "ದಿಲ್ಲೀಪತನ" ವೆಂಬ ನಾಟಕವು ಆಂಗ್ಲಪ್ರಭುತ್ವದ ಕೀರ್ತಿಗೆ ಭಂಗಕಾರಿಯಾಗಿದೆ ಎಂಬ ಕಾರಣದಿಂದ ಅಲ್ಲಿನ ಜಿಲ್ಲಾ ದಂಡಾಧಿಕಾರಿಯು ಆ ನಾಟಕ ಪ್ರದರ್ಶನವನ್ನು ಮಾಡಕೂಡದೆಂದು ಅಪ್ಪಣೆಮಾಡಿರುವರು. ಇದೇ ನಾಟಕ ಸಂಘದವರು ಇದೇ ಪ್ರಯೋಗವನ್ನು ಮದರಾಸು, ಬಳ್ಳಾರಿ ಮೊದಲಾದ ಸ್ಥಲಗಳಲ್ಲಿ ಎಷ್ಟೋ ಆವರ್ತಿ ನಿರಾತಂಕವಾಗಿ ಪ್ರದರ್ಶನ ಮಾಡಿರುವರಂತೆ.

ಪ್ಯಾರಿಸ್ ಪಟ್ಟಣದಲ್ಲಿ ಇಬ್ಬರು ಮೋಸಗಾರರು ಒಂದು ಅಂಗಡಿಯ ಬಳಿಗೆ ಹೋಗಿ, ಫಲಾಹಾರವನ್ನು ಭಕ್ಷಿಸಿ, ಸೃಷ್ಟನೆಯ ನಾಣ್ಯಗಳನ್ನು ಆತನಿಗೆ ಕೊಟ್ಟು ಸೈಕಲ್ಲಿನ ಮೇಲೆ ಹತ್ತಿ ಹೊರಟುಹೋದರು. ಕೂಡಲೆ ಅಂಗಡಿಯವನು ನಾಣ್ಯವನ್ನು ನೋಡಿ ಸಂಶಯದಿಂದ ಪೋಲೀಸಿಗೆ ತಿಳುಹಿದನು. ಇಬ್ಬರು ಪೋಲೀಸಾಳುಗಳು ಸೈಕಲ್ಲಿನಮೇಲೆ ಹತ್ತಿ ಮೋಸಗಾರನನ್ನು ಬೆನ್ನುಹತ್ತಿ ಹೋಗಲು, ಅವರಲ್ಲೊಬ್ಬನು ಪೋಲೀಸರಮೇಲೆ ತುಪಾಕಿಯನ್ನು ಹಾರಿಸಿ, ಒಬ್ಬನನ್ನು ಕೊಂದು, ಆತ್ಮಹತ್ಯ ಮಾಡಿಕೊಂಡನು. ೨ನೆ ಯವನನ್ನು ಪೋಲೀಸಿನವರು ಹಿಡಿದರು.

ಮೊನ್ನೆತಾನೇ ಒಬ್ಬ ಹೆಂಗುಸು ಹರಿದ್ವಾರದ ಒಂದು ಪ್ರಯಾಣಿಕರ ಹೊಗೆಬಂಡಿಯಲ್ಲಿಬಂದು ಒಂದು ನಿಲ್ದಾಣದಲ್ಲಿಳಿದು, ತನ್ನ ಪೆಟ್ಟಿಗೆಯನ್ನು ಬಂಡಿಯಿಂದ ಕೆಳಕ್ಕೆ ಇಳುಹೆಂದು, ಒಬ್ಬ ಕೂಲಿಯಾಳಿಗೆ ಹೇಳಿ, ಅವನು ಅದನ್ನು ಸಾಗಿಸುತ್ತಿರಲು, ತಾನು ಎತ್ತಲೋ ತಲೆತಪ್ಪಿಸಿಕೊಂಡುಹೋದಳು. (ಬಹುಶಃ ಅದೇ ಬಂಡಿಯಲ್ಲೇ ಮುಂದಕ್ಕೆ ಪ್ರಯಾಣ ಮಾಡಿರಬಹುದು) ಬಳಿಕ ಸ್ಟೇರ್ಷ ಮಾಸ್ಟರು ಸಂಶಯದಿಂದ ಆ ಪೆಟ್ಟಿಗೆಯನ್ನು ತೆರೆಯಿಸಿ ನೋಡುವಲ್ಲಿ ಅದರೊಳಗೆ ತುಕ್ಕಡತುಕ್ಕಡವಾಗಿ ಕತ್ತರಿಸಿದ್ದ ಒಬ್ಬ ಮನುಷ್ಯನ ದೇಹವು ಅಡುಕಲ್ಪಟ್ಟದ್ದುದು ಕಾಣಬಂದಿತು.

ಭರತಖಂಡದಲ್ಲಿ ಕಾಗದವನ್ನು ನಿರ್ಮಾಣ ಮಾಡುವ ಕೈಗಾರಿಕೆಯನ್ನು ಕುರಿತು ಅಲಹಾಬಾದಿನ ಪಯೊನಿಯರ್ ಪತ್ರಿಕೆ ಹೀಗೆ ಹೇಳುತ್ತದೆ—ನಮ್ಮ ಭರತಖಂಡಕ್ಕೆ ೫ ವರ್ಷಗಳ ಕೆಳಗೆ ೧ ವರ್ಷಕಾಲದಲ್ಲಿ ೩೦ ಲಕ್ಷ ರೂಪಾಯಿನ ಕಾಗದವು ಅನ್ಯದೇಶದಿಂದ ಬಂದಿದ್ದಿತು. ಅದರ ಮಾರನೆ ವರ್ಷದಲ್ಲಿ ೮೦ ಲಕ್ಷ ರೂಪಾಯಿನದು ಬಂದಿತು. ಅದರ ಮರು ವರ್ಷದಲ್ಲಿ ೯೨ಲಕ್ಷ ರೂಪಾಯಿನದು. ೧೯೧೦ನೆಯ ವರ್ಷದಲ್ಲಾದರೊ ೧ ಕೋಟಿಯೂ ೧ ಲಕ್ಷ ರೂ. ಬೆಲೆಯ ಕಾಗದವು ಬಂದಿತು. ಭರತಖಂಡದಲ್ಲಿ ಸಕಲ ವಿಧವಾದ ಸ್ವಾಭಾವಿಕ ಸೌಕರ್ಯಗಳು ಇರುತ್ತಿದ್ದರೂ ಕೈಗಾರಿಕೆಗಳು ಕ್ಷೀಣವಾಗಿ ಹೋಗುತ್ತಲಿವೆ.

ಸಿಲೋನಿನಲ್ಲಿ ಒಬ್ಬ ಒಡ್ಡರವನು ತನ್ನಮನೆಯಲ್ಲಿ ಕುಳಿತುಊಟಮಾಡುತ್ತಿದ್ದನು. ಮೇಲಿಂದ ಮಳಲು ಸುರಿಯುತ್ತಿದ್ದಿತು. ಅದಾರು ಹಾಗೆಮಾಡಿದರೆಂದು ಎಲ್ಲೆಲ್ಲಿ ಪರೀಕ್ಷಿಸಿದರೂ ಗೊತ್ತಾಗಲಿಲ್ಲ. ಸ್ವಲ್ಪಹೊತ್ತಿನಮೇಲೆ ಕಬ್ಬಿಣದ ತುಣುಕುಗಳೂ ಕಲ್ಲು ಮಣ್ಣು ಹಂಟೆಗಳೂ ಅವನಮೇಲೇ ಬೀಳಲುಪಕ್ರಮಿಸಿದವು. ಕೂಡಲೇ ಮನೆಯಲ್ಲಿದ್ದನರೆಲ್ಲಾ ದಿಗಿಲುಬಿದ್ದು ಹೊರಕ್ಕೆ ಬಂದುಬಿಟ್ಟರು. ಎಂಥಮಾಂತ್ರಿಕರು ಬಂದರೂ ಈ ವಿಪರೀತಗಳನ್ನು ನಿಲ್ಲಿಸಲಾರದೆ ಹೋದರು. ಅದರ ಕಾರಣವನ್ನುಸಹ ಗೊತ್ತು ಮಾಡಲಾರದೆ ಹೋದರು. ಯಾರು ಮನೆಯೊಳಕ್ಕೆ ನುಗ್ಗಿದರೂ ಮನೆಯಜಮಾನನಿಗಾದ ಮರ್ಯಾದೆಯೇ ಅವರಿಗೂ ಆಗುತ್ತಿದ್ದಿತು. ಕಟ್ಟಕಡೆಗೆ ಮರುದಿನ ಆ ಮನೆಯು ಥಟ್ಟನೆ ಹೊತ್ತಿಕೊಂಡು ಉರಿದುಹೋಯಿತು.

ನ್ಯೂಮಾಲ್ ಡೆನ್ನಿನಲ್ಲಿ ಸ್ಟಿವರ್ಸ್ ಎಂಬ ಸ್ತ್ರೀಯು ತನ್ನ ಮನೆಯಲ್ಲಿ ಸಹೋದರಿಯೊಡನೆ ಮಲಗಿ ನಿದ್ರಿಸುತ್ತಿದ್ದಳು. ಆಲ್ ಫ್ರೆಡ್ ಡೆನ್ನೆಂಟ್ ಎಂಬಕಳ್ಳನು ಆ ಮನೆಗೆ ನುಗ್ಗಿ ತನ್ನ ಒಂದು ಕೈಯನ್ನು ಸಹೋದರಿಯ ಬಾಯಿಮೇಲೆಯಿಟ್ಟು, ಕೂಗಿದರೆ ತುಪಾಕಿಯನ್ನು ಹಾರಿಸಿ ಕೊಲ್ಲುತ್ತೇನೆಂದು ತೋರಿಸಿ ಭಯಪಡಿಸಿ, ಹಿರಿಯಾಕೆಯನ್ನು ಕುರಿತು ತನಗೆ ಹಣವು ಬೇಕಾಗಿದೆ ಕೊಡುಎಂದು ಕೇಳಲು, ಹಣವು ತನ್ನ ತಾಯಿ ಮಲಗಿರುವ ಮನೆಯಲ್ಲಿದೆಯೆಂದು ಆಕೆಯು ಹೇಳಿದಳು. ದೀಪವನ್ನು ಹೊತ್ತಿಸಿಕೊಂಡು ಹೋಗಿ ಹಣವನ್ನು ತೆಗೆದುಕೊಂಡು ಬಾಯೆಂದು ಹೇಳಿ ಕಳ್ಳನು ತುಪಾಕಿಯನ್ನು ಕೈಯಲ್ಲಿ ಹಿಡಿದು ಸಂಗಡಲೇ ಹೋದನು. ಆಕೆಯು ತಾಯಿಮಲಗಿದ್ದ ಕೋಣೆಗೆನುಗ್ಗುವಾಗ ಸನ್ನೆಮಾಡಿ ಕಳ್ಳನನ್ನು ಮೆಟ್ಲಿನಮೇಲೆಯೇ ನಿಲ್ಲಿಸಿದಳು. ಆದರೂ ಕಳ್ಳನು ಅಲ್ಲೇನಿಂತು ತುಪಾಕಿಯನ್ನು ಆಕೆಗೆ ಗುರಿಕಟ್ಟಿ ನೋಡುತ್ತಲೇ ಯಿದ್ದನು. ಸ್ಟಿವರ್ಸಳು ತಾಯಿಯ ಬಳಿಗೆ ಹೋಗಿ ಮನೆಗೆ ಕಳ್ಳನು ನುಗ್ಗಿದ್ದಾನೆಂದು ಪಿಸುಮಾತಿನಲ್ಲಿ ಕಿವಿಯಲ್ಲಿಹೇಳಿ ಹಿಂದಿರುಗಿ ಬರುವುದರೊಳಗಾಗಿ, ಅಸ್ವಸ್ಥನಾಗಿದ್ದ ತಂದೆಯು ಎಚ್ಚತ್ತು, ಸಂದರ್ಭವನ್ನತಿಳಿದುಕೊಂಡು, ಪೋಲೀಸರು ಬಾಜಿಸುವಂತೆ ಸೀಟಿಯನ್ನು ಹೊಡೆದನು. ಆ ಸದ್ದನ್ನುಕೇಳಿ ಕಳ್ಳನು ಭಯಪಟ್ಟು ಕಾಲಿಗೆಬುದ್ಧಿ ಹೇಳಿದನು ಆದರೂ ಪೋಲೀಸರಕೈಗೆ ಸಿಕ್ಕಿಬಿದ್ದನು. ಸ್ಟೀವರ್ಸಿನ ಸಮಯೋಚಿತವಾದ ಬುದ್ಧಿಸಾಹಸಕ್ಕೆ ಎಲ್ಲರೂ, ಮೆಚ್ಚಿಕೊಂಡರು.

ನಮ್ಮ ೫ ನೇಯ ಜಾರ್ಜ್ ಚಕ್ರವರ್ತಿಯವರು ಈ ಕೆಳಗೆ ಹೇಳುವಂತೆ ತಮ್ಮ ನಿತ್ಯಕ್ರಿಯೆಗಳನ್ನು ಇಟ್ಟುಕೊಂಡಿದ್ದಾರೆ. ಅವರು ಬೆಳಗಿನಜಾವಕ್ಕೆ ಎದ್ದು ದೇಹಕ್ರಿಯೆ ಅಲ್ಪಾಹಾರಸ್ವೀಕಾರಗಳನ್ನು ಮಾಡಿಕೊಂಡು, ೮ ಗಂಟೆಗೆ ಸರಿಯಾಗಿ ಕಾಗದಪತ್ರಗಳನ್ನೂ ಪತ್ರವ್ಯವಹಾರಗಳನ್ನೂ ಅವಲೋಕಿಸುವುದಕ್ಕೆ ಉಪಕ್ರಮಿಸಿ, ತಮ್ಮ ಹೆಸರಿಗೆ ಬಂದಿದ್ದ ಕಾಗದಗಳನ್ನೆಲ್ಲಾ ತಾವೇ ಓದುವರು. (ಇವರತಂದೆ ಹೆಸರಿಗೆ ಬರುತ್ತಿದ್ದಷ್ಟುಕಾಗದಗಳು ಇವರ ಹೆಸರಿಗೆ ಬರುವುದಿಲ್ಲ. ಎಡ್ವರ್ಡ್ ಚಕ್ರವರ್ತಿಯವರು ಅವರ ಸಹಾಪಾಟಿಯ ರಾಜರಿಗೂ ರಾಜವರ್ಗದವರಿಗೂ ಪ್ರತಿದಿನವೂ ತಾವೇ ಉತ್ತರ ಪ್ರತ್ಯುತ್ತರಗಳನ್ನು ಬರೆಯುತ್ತಿದ್ದರು.) ೧೦ ಗಂಟೆಯಾದ ಕೂಡಲೇ ಮುಖ್ಯ ಮಂತ್ರಿಯಿಂದಲೂ ಇತರ ಶಾಖಾ ಮುಖ್ಯಾಧಿಕಾರಿಗಳಿಂದಲೂ ಬಂದಿದ್ದ ಕಾಗದಗಳನ್ನೂ ವರದಿಗಳನ್ನೂ ನೋಡುವರು. ೧೧ ಗಂಟೆಯಾದ ಬಳಿಕ ಸರ್ ಫ್ರಾನ್ಸಿಸ್ ನಾಲೀಸ್, ಸರ್ ಆರ್ಥರ್ ಬಿಗ್ಸ್‌ರವರೊಡನೆ ತಮ್ಮಲ್ಲಿಗೆಬಂದಿದ್ದ ವಿವಾದಗಳ ನ್ಯಾಯಪರಿಶೀಲನೆಗಳನ್ನು ಮಾಡುವರು. ಅಲ್ಲಿನ ಕೆಲಸಗಳು ಮುಗಿದನಂತರ ಸಮಯವಿದ್ದರೆ ಮಂತ್ರಿಯವರೊಡನೆ ಮಾತನಾಡತಕ್ಕ ಅವಶ್ಯಕತೆಯಿದ್ದರೆ ಯಾರೂಇಲ್ಲದ ವೇಳೆಯಲ್ಲಿ ಅವರನ್ನು ಬರಮಾಡಿಕೊಳ್ಳುವರು. ಅಪರಾಹ್ಣವಾದವೇಳೆ ತಮ್ಮ ಇಷ್ಟಾನುಸಾರವಾಗಿ ಕಾಲಯಾಪನೆಮಾಡುವರು, ಸಾಯಂಕಾಲವಾದ ಬಳಿಕ ಮತ್ತೆ ರಾಜಕೀಯ ವಿಷಯಗಳ ವಿಚಾರದಲ್ಲಿ ತೊಡಗಿದ್ದು, ರಾತ್ರಿ ಭೋಜನವನ್ನು ತೀರಿಸಿಕೊಂಡು, ೧೧ ಗಂಟೆಗೆ ನಿದ್ರೆಗೆ ತೆರಳುವರು.

ನಮ್ಮ ಚಕ್ರವರ್ತಿಯವರ ಇಬ್ಬರು ಗಂಡುಮಕ್ಕಳು (ಪ್ರಿನ್ಸ್ ಆಫ್ ವೇಲ್ಸ್—ಪ್ರಿನ್ಸ್ ಆಲ್ಬರ್ಟ್) ಡಾರ್ಟ್ಮತ್ತಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವರಷ್ಟೆ. ಅವರುಗಳಿಗೆ ಅಲ್ಲಿ ಸಣ್ಣಸಿಡಿಬು ಎದ್ದಿದ್ದು ಸ್ವಸ್ಥರಾದರು. ಆ ಮಕ್ಕಳನ್ನು ಈಚೆಗೆ ತಾವು ಒಂದುಬಾರಿ ಹೋಗಿ ನೋಡಿಬರುವುದಕ್ಕೆ ಅವರ ತಾಯಿಯಾದ ಮೇರಿ ರಾಣಿಯವರು ಅಪೇಕ್ಷಿಸಲಿಲ್ಲವಂತೆ! ಏಕೆಂದರೆ—ತಾವು ಅಲ್ಲಿಗೆ ಹೋದರೆ ತಮ್ಮ ಉದಾಹರಣೆಯನ್ನು ಹಿಡಿದು, ಅಲ್ಲಿನ ಪಾಠಶಾಲೆಯಲ್ಲಿ ಓದುತ್ತಿರುವವ್ಯಾಧಿಗ್ರಸ್ತರಾದ ಹುಡುಗರ ತಾಯ್ತಂದೆಗಳೆಲ್ಲರೂ, ಮಕ್ಕಳನ್ನು ನೋಡುವುದಕ್ಕಾಗಿ ಅಲ್ಲಿಗೆ ಹೋಗುವುದಕ್ಕುಪಕ್ರಮಿಸುವರು. ಮಕ್ಕಳು ತಾಯಿಗಳ ಮಧ್ಯದಲ್ಲಿರುವ ಪ್ರೇಮಾನುಬಂಧವು ಸರ್ವತ್ರಸಮಾನವಾದುದಾದಕಾರಣ, ಅವರೆಲ್ಲರೂ ಹಾಗೆ ಹೋಗುವುದಕ್ಕೆ ಉಪಕ್ರಮಿಸಿದರೆ ಅದನ್ನು ಆಕ್ಷೇಪಿಸಲಾಗುವುದಿಲ್ಲ. ಎಲ್ಲರೂ ಹಾಗೆ ಹೋಗಬರಲುಪಕ್ರಮಿಸಿದರೆ ಡಾರ್ಟ್ಮತ್ತಿನ ಪಾಠಶಾಲೆಯ ಅಧಿಕಾರಿಗಳಿಗೆ ಹೊರಲಸಾಧ್ಯವಾದ ಭಾರವನ್ನು ಉಂಟುಮಾಡಿದಂತಾಗಿ ದೊಡ್ಡ ಕಷ್ಟವಾಗುವುದು. ಎಂದು ಯೋಚಿಸಿ, ತಮ್ಮ ಮಕ್ಕಳನ್ನು ನೋಡಿಬರುವ ಹಂಬಲನ್ನು ತಾವು ಬಿಟ್ಟುಬಿಟ್ಟರಂತೆ! ಕೋಟ್ಯಂತರ ಪ್ರಜೆಗಳ ಮಾತೆಗೆ ತಕ್ಕ ಘನತರವಾದ ಗುಣವೇ ಆ ನಮ್ಮ ಚಕ್ರವರ್ತಿನಿಯವರಲ್ಲಿ ನೆಲಸಿರುವುದೆಂಬುದಕ್ಕೆ ಇದು ದೊಡ್ಡದೃಷ್ಟಾಂತವಲ್ಲವೆ?

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು. ಪ. ಪ್ರ.

ಪತ್ರವ್ಯವಹಾರ.

ಚಿಕ್ಕಸೂಗೂರು ಎಂಬ ಮಹಾಪುಣ್ಯಸ್ಥಲದಲ್ಲಿ ವೀರಶೈವರು ದಾವಣಗೇರಿಯ ಪ್ರಸಿದ್ಧವಿದ್ವಾನ್ ವೇ॥ ದಾನಪ್ಪಶಾಸ್ತ್ರಿಗಳನ್ನು ಬರಮಾಡಿಕೊಂಡು ಬಸವಪುರಾಣ ಶ್ರವಣವನ್ನು ಮಾಡಿಸುತ್ತಿರುವರು. ಶಾಸ್ತ್ರಿಗಳು ವೀಣಾನಾದದೊಡನೆ ಬಹು ಗಂಭೀರವಾಗಿಯೂ ಆಹ್ಲಾದಕರವಾಗಿಯೂ ಪುರಾಣವನ್ನು ಹೇಳುತ್ತಿರುವರು. ಪ್ರತಿನಿತ್ಯದಲ್ಲೂ ಸಾವಿರಾರು ಗಣಂಗಳಿಗೆ ಸುಖಭೋಜನವಾಗುತ್ತಿರುವುದು. ಆದಕಾರಣ ಆ ಬಾಲವೃದ್ಧರಾದಿಯಾಗಿ ಸರ್ವರೂ ಅಗತ್ಯವಾಗಿ ಬಂದು ಪುರಾಣ ಶ್ರವಣದಿಂದ ಶಿವಕಥಾಮೃತವನ್ನು ಪಾನಮಾಡಿ, ಅಲ್ಲಿಗೆ ಬರತಕ್ಕ ಮಹನೀಯರು ಮಹಾಸ್ವಾಮಿಗಳು ಮತ್ತೂ ಶಿವಶರಣರು ಇವರ ದರ್ಶನ ಸೇವಾದಿಂದ ಧನ್ಯರಾಗಲು ಇದಕ್ಕಿಂತ ಬೇರೆ ಸುಸಮಯ ದೊರೆಯುವದಿಲ್ಲವು. ದೀಕ್ಷೆಯಾಗಬೇಕೆನ್ನುವರು ಸದರಿಸ್ಥಲಾಧಿಕಾರಿಗಳಿಗೆ ಸೂಚಿಸಿದಲ್ಲಿ ಉಚಿತವಾಗಿ ನೆರವೇರಿಸಿ ಕೊಡುವರು. ಪರಂತು ತೊಂದರೆಗಳೇನೂ ಇರಕೂಡದು.

ಪುರಾಣ ಶ್ರವಣಾಭಿಮಾನಿ.

ಕಾಮದಹನದ ಬೂದಿ ಮತ್ತು ಓಕುಳಿಯ ವಿಷಯವಾಗಿ, ಕೆಳಗಿನ ಸಂಗತಿಗಳಿಗೆ ಯಾರಾದರೂ, ತಿಳಿದಂಥಾ ದೊಡ್ಡ ಮನುಷ್ಯರು ಸ್ಟಾರು ಪತ್ರಿಕೆಯಕೂಡ ಉತ್ತರವನ್ನು ದಯಪಾಲಿಸಬೇಕೆಂದು ಪ್ರಾರ್ಥನೆ.

ಯಾವ ದೊಡ್ಡಮನುಷ್ಯನಿಗಾದರೂ ಸರಿಯೆ ಯಾವ ಗ್ರಾಮ ಯಾ ಷಹರುಗಳಲ್ಲಿ ಸಹಾ ಕಾಮನ ಬೂದಿಯನ್ನು ಸಿಕ್ಕಿದಹಾಗೆ ತಲೆಯಮೇಲೆ ಹಾಕಿ ಓಕುಳಿಯನ್ನು ಬಟ್ಟೆ ಬರೆಗೆ ಹಾಕಬಹುದೇ? ಮನೆಯಮುಂದೆ ಇರುವ [illegible]ದೆ ವಗ್ಯೈರೆಯನ್ನು ಸಿಕ್ಕಿದಹಾಗೆ ತೆಗೆದುಕೊಂಡು ಹೋಗಬಹುದೇ? ಕೇಳಿದರೆ ಸಿಕ್ಕಿದಹಾಗೆ ಬಯ್ಯಬಹುದೇ? ಈ ವಿಚಾರದಲ್ಲಿ ಸರಿಯಾದ ಸಾಕ್ಷಿಯೊಡನೆ ಇಂಥಾ ಅವಮಾನ ಹೊಂದಿದ ಮನುಷ್ಯನು ಕೋರ್ಟಿಗೆ ಪಿರ್ಯಾದು ತೆಗೆದುಕೊಂಡು ಹೋದರೆ ಶಿಕ್ಷೆ ಉಂಟೆ ಇಲ್ಲವೇ? ಕಾಮನ ಹಬ್ಬದಲ್ಲಿ ಯಾರು ಯೇನು ಬೇಕಾದರೂ ಮಾಡಿಕೊಳ್ಳಬಹುದೇ? ಎಂಬ ಸಂಗತಿಗಳಿಗೆ ದಯವಿಟ್ಟು ಉತ್ತರ ದಯಪಾಲಿಸಬೇಕೆಂದು ಪ್ರಾರ್ಥನೆ. ಜನಾನುರಾಗಿ.

ಬೆಳಗಾಂ ಖಾನಾಪೂರ.

ಮಹನೀಯರೆ, ಈ ನಮ್ಮ ಭರತಖಂಡದಲ್ಲಿ ಅತಿ ಪ್ರಾಚೀನ ಕಾಲದಿಂದ ನಡೆದು ಬಂದಂಥ ಫಾಲ್ಗುಣ ಮಾಸದ ಉತ್ಸವವು ಯಾವಪ್ರಕಾರದಿಂದ ಜರಗುತ್ತದೆಂಬ ಮಾತನ್ನು ಹೇಳಲವಶ್ಯವಿಲ್ಲ. ಈ ಸಮಾರಂಭವು ಕೆಲವು ಕಡೆಯಲ್ಲಿ ಫಾಲ್ಗುಣ ಶು॥ ೧ ಯಿಂದ ಅಮಾವಾಸ್ಯೆಯವರೆಗೂ, ಕೆಲವು ಕಡೆಯಲ್ಲಿ ಪೌರ್ಣಿಮೆಯಿಂದ ಪಂಚಮಿಯ ವರೆಗೂ ನಡೆಯುವದು. ಈ ಉತ್ಸವವು "ಪೂರ್ವದಲ್ಲಿ ಅಂಡಮಾನದ್ವೀಪದ ನಿವಾಸಿಗಳು ಹಬ್ಬದದಿವಸ ಮೈಗೆ ಕೆಮ್ಮಣ್ಣು ಹಚ್ಚಿಕೊಂಡು ಶೋಕಸ್ವರತೆಗೆದು ಕುಣಿಯುತ್ತಿದ್ದಂತೆ" ಸದ್ಯಕ್ಕೆ ಈ ನಮ್ಮ ಕರ್ನಾಟಕ ದೇಶದಲ್ಲಿ ಶೂದ್ರರು ಸಹಿತವಾಗಿ ಹಬ್ಬದದಿವಸ ಅಥವಾ ಕೆಲವು ದಿವಸ ಮೊದಲೇ ಮನುಷ್ಯನ ಆಕಾರದ ಮೂರ್ತಿಯನ್ನು ಮಾಡಿ ಅದಕ್ಕೆ ಕಾಮನೆಂಬ ಹೆಸರಿಟ್ಟು ಅದರ ಉತ್ಸವದ ದೆಸೆಯಿಂದ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಕಡೆಗೆ ಅದನ್ನು ಪೌರ್ಣಿಮೆಯ ದಿವಸ ಶೂದ್ರರ ಮನೆಯ ಅಗ್ನಿಯಿಂದ ಸುಟ್ಟು, ಅಶ್ರಾವ್ಯ ಬೀಭತ್ಸ ಮಾತುಗಳನ್ನಾಡಿ ಅತಿ ದುಃಖವನ್ನು ತೋರಿಸುವ ಸ್ವರವನ್ನು (ಬಾಯಬಡಿಕೊಂಡು ಶಂಖವಾದ್ಯವನ್ನು) ಮಾಡಿ, ಮೈಮೇಲೆ ಬಣ್ಣವನ್ನೂ ಧೂಳಿಯನ್ನೂ ಹಾಕಿಕೊಂಡು, ಬಡಿದಾಡಿ ಕಳವು ಮುಂತಾದ ದುಷ್ಕೃತ್ಯಗಳನ್ನು ಹೇಳ ಕೂಡದಷ್ಟು ಮಾಡಿ, ಪ್ರತಿವರ್ಷ ಸರಕಾರದ ಅತಿ ಭಯಂಕರಶಿಕ್ಷೆಗೆ ಗುರಿಯಾಗಿ ಯುವರಾಜರ ಅಪ್ರೀತಿಗೃಹಗಳನ್ನೂ ದ್ವೀಪಾಂತರಗಳನ್ನೂ ಸೇರಿ ಸರ್ಕಾರದಿಂದ ಮನ್ನಿಸಲ್ಪಟ್ಟ ಹಣದ ಮುಯ್ಯವನ್ನು ತೀರಿಸಿಕೊಳ್ಳುವದಕ್ಕೋಸ್ಕರ ಸಿರಿವಂತರ ಸೇವಕರಾಗಿ ಜೀವಿಸುವವರ ಉದಾಹರಣೆಗಳೆಷ್ಟೋ ಉಂಟು. ಈ ನಮ್ಮ ಹಿಂದೂ ತಿಂಗಳಿಗೂ ಮುಸಲ್ಮಾನರ ತಿಂಗಳಿಗೂ ಹೆಚ್ಚು ಕಡಿಮೆ ಆಗಿ ಅವರ ಮೊಹರಮ್ಮೂ ಈ ಹೋಳೀ ಹುಣ್ಣಿಮೆಯೂ ಒಂದೇಬಾರಿ ಬರುವದುಂಟು. ಆಗ್ಯೆ ಮುಸಲ್ಮಾನರಿಗೂ ಹಿಂದೂ ಜನರಿಗೂ ಕಡು ಕದನವಾಗಿ ಜೀವಸಹ ಕಳಕೊಳ್ಳುವರು. ಈ ವ್ಯಾಜ್ಯಗಳನ್ನು ತೀರಿಸಲಿಕ್ಕೆ ನ್ಯಾಯಾಧೀಶರು ಸಹ ಬೇಸತ್ತು ಹೋಗಿರುವರು. ಈ ಹಬ್ಬದಬಗ್ಗೆ ಪೂರ್ವಜರು ಮಾಡಿದ—ಶಿದ್ಧಾಂತವನ್ನರಿಯದೆ "ಕಜ್ಜಲೊಳಗಿನ ಉಣ್ಣಿಯು ನೊರೆಹಾಲನ್ನು ಹೀಯಾಳಿಸಿ ರಕ್ತವನ್ನು ಸೇವಿಸುವಂತೆ" ಜನರು ಇದರ ನಿಜ ತತ್ವ ಶೋಧಿಸದೆ ಮನಬಂದಂತೆ ಮಾಡುವರು. ಈ ಹಬ್ಬವು ನಮ್ಮ ವೀರಶೈವರಿಗಂತೂ ತೀರ ವಿರುದ್ಧವಾಗಿರುವದು. ಯಾಕೆಂದರೆ ಲಿಂಗವನ್ನು ಧರಿಸದೆ ಇದ್ದ ಭವಿಗಳ ಸಂಗಡ ಗುದಮುರಿಗೆಯನ್ನು ಹಾಕಿ ಬಾಯಿಗೆ ಬಂದಂತೆ ಕೆಟ್ಟ ಮಾತುಗಳನ್ನಾಡಿ ಮನಬಂದಂತೆ ಮಾಡುವದು ನಮ್ಮ ಧರ್ಮಶಾಸ್ತ್ರಾಧಾರಕ್ಕೂ ಸುಜನತ್ವಕ್ಕೂ ಭಂಗಬರುತ್ತದೆ. ಇದನ್ನು ತಿಳಿದು ಇಲ್ಲಿ ಹೋದವರ್ಷ ಶ್ರೀಯುತ ರುದ್ರಪ್ಪಾ ಸಾಗಪ್ಪಾ ಅಣ್ಣಾ ಹೊಂಡದಕಟ್ಟಿ ಇವರ ಅಧ್ಯಕ್ಷತೆಯ ಕೆಳಗೆ ಒಂದು ಕಮಿಟಿ ನೆರವೇರಿಸಿ ಅದರಿಂದ ಮೇಲೆತೋರಿಸಿದ ದುಷ್ಕೃತ್ಯಗಳನ್ನು ಪ್ರತಿಯೊಬ್ಬ ವೀರಶೈವನೂ ಉಲ್ಲಂಘಿಸಬೇಕೆಂತಲೂ ಅನ್ಯಜಾತಿಯವರು ಮಾಡುವ ಈ ದಾಂದಲೆಯಲ್ಲಿ ಸೇರಬಾರದೆಂತಲೂ ಒಂದುವೇಳೆ ಯಾರಾದರೂ ಈ ಗದ್ದಲದಲ್ಲಿ ಉದ್ಧಟತನದಿಂದ ಸೇರಿದರೆ ಅವರು ನಮ್ಮ ಸಮಾಜಕ್ಕೆ ಅಮಾನ್ಯರೆಂತಲೂ ಈ ಬೀಭತ್ಸ ಉತ್ಸವದದೆಸೆಯಿಂದ ಪ್ರತಿವರ್ಷ ಖರ್ಚು ಮಾಡುತ್ತಿರುವ ಹಣವನ್ನು ಎರಡನೆ ಯಾವದಾದರೂ ಧರ್ಮ ಕೃತ್ಯಕ್ಕೆ ನಿಯೋಗಿಸಬೇಕೆಂತಲೂ ಕಟ್ಟಪ್ಪಣೆಯು ಮಾಡಲ್ಪಟ್ಟಿತು. ಇದೇಪ್ರಕಾರ ಇಲ್ಲಿಯ ವೀರಶೈವ ಬಾಂಧವರು ನಡೆದು ಶಾಂತತೆಯನ್ನುಂಟುಮಾಡಿದರು. ಅದರಂತೆಯೇ ಈ ವರ್ಷವಾದರೂ ಹಬ್ಬವು ನಿರ್ವಿಘ್ನದಿಂದ ಸಾಗಿ ಎಲ್ಲಾ ಬಾಂಧವರಿಗೂ ಸಂತೋಷವನ್ನು ಬೀರಿತು. ಹೀಗೆಯೇ ನಮ್ಮ ಎಲ್ಲಾ ವೀರಶೈವ ಬಂಧುಗಳೂ ನಡೆದರೆ ಎಲ್ಲಾ ಕಡೆಗೂ ಶಾಂತತೆಯುಂಟಾಗಿ ಸಮಾಜಕ್ಕೆ ಸುಖವಾದೀತೆಂದು ನಂಬಿದ್ದೇನೆ.

ಚನ್ನಬಸಪ್ಪಾ ಬಸವಣ್ಣೆಪ್ಪಾ ಜೋಶಿ.

ವ್ಯವಸಾಯುಕೆ ವಿಷಯಗಳು.

ಜರ್ಮ ದೇಶದ ಪ್ರತಿಯೊಬ್ಬ ರೈತನೂ ತನ್ನ ಸ್ವಂತ ಖುಷ್ಕಿ ಜಮೀನಿನ ಒಂದು ಭಾಗದಲ್ಲಿ ಮರಗಳನ್ನ ಬೆಳೆಸುತ್ತಾನೆ. ೧೯೦೫ನೆ ಇಸವಿಯಲ್ಲಿ ಈರೀತಿಯಲ್ಲಿ ಬೆಳೆದ ಮರಗಳಿಂದ ಲಕ್ಷಾಂತರ ರೂಪಾಯಿಗಳು ಉತ್ಪತ್ತಿಯಾದವು.

ಮಂಡ್ಯದ ತಾಲ್ಲೂಕು ಮದ್ದೂರಿನಲ್ಲಿ ಶ್ರೀ ನರಸಿಂಹ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಅಂದರೆ ೧೯೧೧ನೆ ಏಪ್ರಿಲ್ ಮಾಹೆ ೧೯ ಮತ್ತು ೨೦ನೆ ತಾರೀಖುಗಳಲ್ಲಿ ಒಂದು ದನಗಳ ಪ್ರದರ್ಶನವು ನಡೆಯುತ್ತದೆ. ಉತ್ತಮವಾದ ದಾಸುಗಳಿಗೆ ಬಹುಮಾನವು ಕೊಡಲ್ಪಡುವುದು. ಜಾಸ್ತಿ ವಿಷಯಗಳನ್ನು ತಾಲ್ಲೂಕು ಅಮಲ್ದಾರರವರಿಂದ ತಿಳಿಯಬಹುದು.

ನಾಲ್ಕಾರು ಎಕರೆ ಜಮೀನುಗಳು ಕಂದಾಯಕ್ಕೆ ಸಾಕಾಗಬಹುದಾದಷ್ಟು ದ್ರವ್ಯವು ಒಂದು ಹುಣಸೇಮರದ ಉತ್ಪತ್ತಿಯಿಂದ ಬರುವದ್ದರಿಂದ ನಮ್ಮ ಇಂಡಿಯಾದೇಶದಲ್ಲೂ ಮರಗಳನ್ನು ಬೆಳೆಸುವದು ಬಹಳ ಲಾಭಕರವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಮದರಾಸಾಧಿಪತ್ಯದ ಸೇಲಂ ಡಿಸ್ಟ್ರಿಕ್ಟಿನಲ್ಲಿ ಒಂದು ರಸ್ತೆಯಲ್ಲಿ ೧೪ ಮೈಲಿಗಳ ದೂರ ಹುಣಸೆ ಮರಗಳನ್ನ ಸಾಲು ಮರಗಳಾಗಿ ನೆಟ್ಟಿದಾರೆ. ಈ ಮರಗಳ ಉತ್ಪತ್ತಿಯಿಂದ ಬರತಕ್ಕ ವರಮಾನವು ರಸ್ತೆಯ ದುರಸ್ತಿ ಖರ್ಚುಗೆಲ್ಲಾ ಸಾಕಾಗಿ ಇನ್ನೂ ಉಳಿಯುತ್ತದೆ.

ಜರ್ಮ ದೇಶದಲ್ಲಿ ವ್ಯವಸಾಯಕ್ಕೆ ಸಹಾಯಕರವಾದ ದನಕರುಗಳು ಬಹಳ ಕಡಿಮೆ; ಕುರಿ ಮತ್ತು ಮೇಕೆಗಳು ಇಲ್ಲವೇ ಇಲ್ಲ. ಜರ್ಮ ದೇಶದಲೆಲ್ಲಾ ಒಟ್ಟು ಮೂರು ಲಕ್ಷ ದನಕರುಗಳೂ ಮತ್ತು ಕುದುರೆಗಳೂ ಇವೆ. ಮದರಾಸಾಧಿಪತ್ಯದಲ್ಲಾದರೋ ಇಪ್ಪತ್ತು ಲಕ್ಷ ದನಕರುಗಳೂ ಮತ್ತು ಹಲವತ್ತು ಲಕ್ಷ ಕುರಿ ಮತ್ತು ಮೇಕೆಗಳೂ ಇರುವವು. ಇಷ್ಟಾದರೂ ಜರ್ಮನಿನಲ್ಲಿ ಭೂಮಿಯು ಚೆನ್ನಾಗಿ ಫಲವತ್ತಾಗಿ ಮಾಡಲ್ಪಡುವುದು. ಇಂಡಿಯಾ ದೇಶದಲ್ಲಿ ಮಾತ್ರ ಇಲ್ಲ. ಇಂಡಿಯಾದಲ್ಲಿ ಗೊಬ್ಬರವನ್ನು ಭೂಮಿಗೆ ಹಾಕದೆ ಒಲೆಗೆ ಹಾಕಿ ಉರಿಸಿ ವ್ಯರ್ಥವಾಗಿ ಹಾಳುಮಾಡುವುದೇ ಇದಕ್ಕೆ ಕಾರಣ.

ಸನ್ ೧೯೦೮-೦೯, ೧೯೦೯-೧೦, ೧೯೧೦-೧೧ನೆ ಸಾಲುಗಳಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲಿಯೂ, ಮತ್ತು ಒಟ್ಟಾಮೇಲೆ ಇಂಡಿಯಾದೇಶದಲ್ಲಿಯೂ ಹತ್ತಿಯ ಸಾಗುವಳಿಯು ಎಷ್ಟು ವಿಸ್ತಾರವಾಗಿತ್ತೆಂಬ ಸಂಗತಿಯನ್ನೂ ಮತ್ತು ಸದರಿ ಫಸಲಿನ ಉತ್ಪತ್ತಿಯು ಎಷ್ಟಾಗಿತ್ತೆಂಬ ಸಂಗತಿಯನ್ನೂ ಕೆಳಗಿನ ಪಟ್ಟಿಯಿಂದ ಸುಲಭವಾಗಿ ಗೊತ್ತು ಮಾಡಿಕೊಳ್ಳಬಹುದು.

ಇಸವಿ	ಇಂಡಿಯಾ ದೇಶ		ಮೈಸೂರು	
	ಎಕರೆಗಳು	ಮೂಟೆಗಳಲ್ಲಿ ಉತ್ಪತ್ತಿ	ಎಕರೆಗಳು	ಮೂಟೆಗಳಲ್ಲಿ ಉತ್ಪತ್ತಿ
	ಮೂಟೆಯೊಂದಕ್ಕೆ 400 ಪೌಂಡು ತೂಕ			
1910–11	2,12,67,000	46,68,000	1,01,055	10,405
1909–10	2,03,08,000	49,48,000	81,286	6,144
1908–09	1,97,72,000	86,70,000	65,000	3,000

ಕೆಲವು ವರ್ಷಗಳಿಂದೀಚೆಗೆ ದಕ್ಷಿಣ ದೇಶದಲ್ಲಿ ರೆಕ್ಕೆ ಇಲ್ಲದೆ ಇರತಕ್ಕ ಒಂದು ಜಾತಿಯ ಮಿಡಿತೆ ಹುಳುಗಳು ಬಹಳವಾಗಿ ಹೆಚ್ಚಿ ಪೈರುಗಳಿಗೆ ವಿಶೇಷ ನಷ್ಟವನ್ನುಂಟುಮಾಡುತ್ತಿವೆ. ಇವು ಗಾತ್ರದಲ್ಲಿ ಬಹಳ ಸಣ್ಣನಾಗಿರುತ್ತವೆ ಮತ್ತು ಇವುಗಳಿಗೆ ರೆಕ್ಕೆಯೇ ಬರುವುದಿಲ್ಲ. ಇವು ಯಾವಾಗಲೂ ಭೂಮಿಯ ಮೇಲ್ಭಾಗದಲ್ಲಿಯೇ ಇದ್ದುಕೊಂಡು ಗಿಡಗಳ ಮೇಲೆ ಹತ್ತಿ ಎಲೆ, ಹುವ್ವು ಮತ್ತು ಕಾಯಿಗಳನ್ನು ತಿಂದು ಹಾಳುಮಾಡುವವು. ಇವು ಮುಖ್ಯವಾಗಿ ಜೋಳ ಮತ್ತು ಸಜ್ಜೆ ಧಾನ್ಯಗಳ ಪೈರುಗಳನ್ನು ವಿಶೇಷವಾಗಿ ನಾಶಮಾಡುವವು. ಮಿಡತೆಗಳು ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಭೂಮಿಯಲ್ಲಿ ಮೊಟ್ಟೆಗಳನ್ನು ಇಡುವವು. ಸದರಿ ಮೊಟ್ಟೆಗಳು ಮುಂದಿನ ಮಳೆಗಾಲದವರಿವಿಗೂ ಅಲ್ಲೇ ಇದ್ದು ಆಗ್ಯೆ ಒಡೆಯುವವು. ಇವುಗಳು ಮಳೆಗಾಲದಲ್ಲಿ ಬಹಳ ಚಟುವಟಿಕೆಯಾಗಿ ಕೆಲಸಮಾಡುವುದರಿಂದ ಮಳೆಗಾಲದ ಪ್ರಾರಂಭದಲ್ಲಿಯೇ ಪೈರುಗಳು ಬಹಳ ಉದ್ದವಾಗುವದಕ್ಕಿಂತ ಮುಂಚೆಯೇ ಇವುಗಳನ್ನು ನಾಶಮಾಡಬೇಕು. ಆದ್ದರಿಂದ ಪೈರುಗಳು ಚಿಕ್ಕವುಗಳಾಗಿರುವಾಗಲೇ ಬೇಲಗಳನ್ನ ಬೀಸಿ ಇವುಗಳನ್ನು ಹಿಡಿದುಹಾಕಬೇಕು.

ಚೆಂಗಲ್ಪಟ್ಟಿನ ಪರಸ್ಪರ ಸಹಾಯಗಾರರು

ಮದರಾಸು ಸರ್ಕಾರದವರು ಪರಸ್ಪರ ಸಹಾಯ ಸಂಘಗಳನ್ನು ಏರ್ಪಾಡು ಮಾಡಿದಾಗ್ಯೆ ಚೆಂಗಲ್ಪಟ್ ಡಿಸ್ಟ್ರಿಕ್ಟಿನ ರೈತರು ಮುಂದಾಳುಗಳಾಗಿ ನಿಂತು ಸಂಘಗಳನ್ನು ಏರ್ಪಾಡು ಮಾಡಿಕೊಂಡರು. ಈಗ ಏಳು ವರ್ಷಗಳು ಕಳೆದುಹೋದಾಗ್ಯೂ ಅವರುಗಳ ಉತ್ಸಾಹವು ಕಡಿಮೆಯಾಗಿಲ್ಲ. ಈಗ ಅಲ್ಲಿ ಸ್ವಲ್ಪ ಹೆಚ್ಚು ಕಡಿಮೆ ನೂರು ಸಂಘಗಳು ಸ್ಥಾಪಿಸಲ್ಪಟ್ಟಿವೆ. ಇವುಗಳು ಜನಗಳ ಹಿತಕ್ಕಾಗಿ ಮಾಡಿರತಕ್ಕ ಏರ್ಪಾಡುಗಳು ಇತರರೆಲ್ಲರೂ ಅನುಸರಿಸುವುದಕ್ಕೆ ಅರ್ಹವಾಗಿವೆ. ಕಳೆದ ತಿಂಗಳು ೨೧ ಮತ್ತು ೨೨ನೆ ತಾರೀಖುಗಳಲ್ಲಿ ಸಂಘಗಳ ಮೂರನೆ ವಾರ್ಷಿಕೋತ್ಸವವು ಮಧುರಾಂತಕಂ ಎಂಬ ಸ್ಥಳದಲ್ಲಿ ನಡೆದಾಗ್ಯೆ ಡಿಸ್ಟ್ರಿಕ್ಟಿನ ಎಲ್ಲಾ ಕಡೆಯಿಂದಲೂ ಸುಮಾರು ೨೦೦ ಪ್ರತಿನಿಧಿಗಳೂ ಮತ್ತು ಈವಿಷಯದಲ್ಲಿ ಹೆಚ್ಚು ಆಸಕ್ತಿಯುಳ್ಳ ಇನ್ನೂ ಅನೇಕ ಜನಗಳೂ ಸೇರಿದ್ದರೆಂದು ಮದರಾಸ್ ಮೆಯಿಲ್ ಪತ್ರಿಕೆಯಿಂದ ತಿಳಿಯಬರುತ್ತದೆ. ಈ ಪ್ರತಿನಿಧಿಗಳ ಪೈಕಿ ಬಹಳ ಜನ ರೈತರಿದ್ದರು. ಆನರಬಲ್ ಮಿ॥ ಜಸ್ಟಿಸ್ ಸಿ. ಶಂಕರನಾಯರವರು ಅಗ್ರಾಸನವನ್ನು ವಹಿಸಿದ್ದರು. ಸಭೆಯಲ್ಲಿ ನಡೆದ ವಿದ್ಯಮಾನಗಳು ಎಲ್ಲರಿಗೂ ಮಂದಟ್ಟಾಗಬೇಕೆಂಬ ಉದ್ದೇಶದಿಂದ ಸಭೆಯಲ್ಲಿ ಸಮಸ್ತರೂ ತಮಿಳಿನಲ್ಲೇ ಮಾತನಾಡಿದರು. ಸಂಘಗಳಿಗೆ ಸಂಬಂಧಪಡತಕ್ಕ ಕೆಲಸಕಾರ್ಯಗಳಲ್ಲೆಲ್ಲಾ ಪರಸ್ಪರ ಸಹಾಯದಿಂದ ಇರತಕ್ಕ ಪ್ರಯೋಜನವನ್ನು ಈಚೀಚೆಗೆ ಮನಸ್ಸಿಗೆ ತಂದುಕೊಳ್ಳುತ್ತಿರತಕ್ಕ ರೈತರಿಗೆ ಇಂಥಾ ಪರಸ್ಪರ ಸಹಾಯ ಸಂಘಂಗಳಿಂದುಂಟಾಗುವ ಪ್ರಯೋಜನಗಳನ್ನು ಕುರಿತು ಅನೇಕರು ಮಾತನಾಡಿದರು. ಈ ಸಂಘಗಳ ಎಲ್ಲಾ ಮೆಂಬರುಗಳಲ್ಲಿ ಅನ್ಯೋನ್ಯವಾಗಿರುವ (ಒಟ್ಟು) ನಂಬಿಕೆಯೇ ಇವುಗಳಿಗೆ ವ್ಯಾಪಾರದ ಆಸ್ತಿ ಅಥವಾ ಬಂಡವಾಳವಾಗಿರುವದ್ದರಿಂದ, ಸಂಘದ ಪ್ರತಿ ಮೆಂಬರೂ ನೆಮ್ಮದಿವಂತನಾಗಿಯೂ ಮತ್ತು ಶೀಲವಂತನಾಗಿಯೂ ಇರಬೇಕಾದ್ದು ಅವಶ್ಯಕವಾಗಿದೆ. ಆದ್ದರಿಂದ ಯಾರೂ ದುರ್ಮಾರ್ಗಕ್ಕೆ ಹೋಗದಂತೆ ಪ್ರತಿಯೊಬ್ಬನೂ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುವದು ಅವಶ್ಯವಾಗಿ ನಾವುಗಳು ನಿರೀಕ್ಷಿಸದೆ ಇದ್ದ ಪ್ರಯೋಜನಗಳೂ ಕೂಡ ಉಂಟಾಗಿವೆ. ಹ್ಯಾಗಂದರೆ, ಯಾರಾದರೂ ಮದ್ಯಸೇವನೆ ಮಾಡಿದ ಪಕ್ಷದಲ್ಲಿ ಸಂಘದ ಗೌರವಕ್ಕೆ ಕುಂದಕ ಬರಬಹುದಾದಕಾರಣ ಸಂಘದವರು ಒಟ್ಟಾಗಿ ಅವನನ್ನು ಹೊರಗೆ ಹಾಕಿಬಿಡುವರು. ಇದರಿಂದ ಜನಗಳು ಮದ್ಯಸೇವನೆಯನ್ನು ತ್ಯಾಗಮಾಡಿಬಿಡುತ್ತಿರುವರು. ಇದೂ ಅಲ್ಲದೆ ಒಂದು ಸಂಘದ ಕೆಲವು ಮೆಂಬರುಗಳು ಸರ್ಕಾರಿ ಅಧಿಕಾರಿಗಳ ಎದುರಿಗೆ ಸುಳ್ಳುಸಾಕ್ಷಿ ಹೇಳಿದ್ದಕ್ಕಾಗಿ ಇತರ ಮೆಂಬರುಗಳೆಲ್ಲರೂ ಅವರನ್ನು ಹೊರಗೆ ಹಾಕಿದರೆಂಬದಾಗಿಯೂ ತಿಳಿದುಬಂದಿದೆ. ಈ ರೀತಿಯಾಗಿ ಮೆಂಬರುಗಳು ಮನಃಪೂರಕವಾಗಿ ಕೆಲಸಮಾಡುವದು ಸಂಘಗಳು ಇನ್ನು ಮುಂದೆ ತುಂಬಾ ಪ್ರವರ್ಧಮಾನವಾಗುವವೆಂಬುವದನ್ನು ಸೂಚಿಸುತ್ತದೆ.

ಹೀಗೆಯೇ ನಮ್ಮ ಸೀಮೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಸಂಘಗಳೂ ನಡೆದುಕೊಂಡರೆ ದೇಶಕ್ಕೆ ಕ್ಷೇಮವೂ, ಜನಗಳಿಗೆ ಅತ್ಯಧಿಕ ಪ್ರಯೋಜನವೂ ಉಂಟಾಗುವದರಲ್ಲಿ ಯಾವ ಸಂದೇಹವೂ ಇಲ್ಲ.

ತಿರುವಾಂಕೂರು ಸಂಸ್ಥಾನದಲ್ಲಿ ಬಾಳೆ ವ್ಯವಸಾಯ.

ತಿರುವಾಂಕೂರು ಸಂಸ್ಥಾನದ ಮಧ್ಯ ಮತ್ತು ಉತ್ತರ ಭಾಗಗಳಲ್ಲಿ ಮುಂಗಾರು ಮತ್ತು ಹಿಂಗಾರು ಮಳೆಗಳು ಬಹಳ ಚೆನ್ನಾಗಿ ತಪ್ಪದೆ ಬೀಳುವುದರಿಂದ ಈ ಭಾಗಗಳು ಬಾಳೆ ವ್ಯವಸಾಯಕ್ಕೆ ಬಹಳ ಯೋಗ್ಯವಾಗಿವೆ. ಚೆನ್ನಾಗಿ ನೀರು ಸೋರಿಹೋಗಿರತಕ್ಕ ಫಲವತ್ತಾದ ಕೆಂಪುಭೂಮಿಯು ಬಾಳೆಯ ಪೈರಿಗೆ ಉತ್ಕೃಷ್ಟವಾದ ಭೂಮಿಯಾಗಿದೆ. ಆದರೆ ಮಧ್ಯಮವಾದ ಕಪ್ಪು ಭೂಮಿಯಲ್ಲೂ ಸಹಾ ಇದು ಬೆಳೆಯುವುದು. ಗಿಡವನ್ನು ನೆಡುವುದಕ್ಕೆ ಒಂದು ವರ್ಷಕ್ಕೆ ಮುಂಚೆಯೇ ಭೂಮಿಯನ್ನು ಪದೇ ಪದೇ ಉಳುತ್ತಿರಬೇಕು.

ಭೂಮಿಯು ಉಳಲ್ಪಟ್ಟು ಹದವಾಗಿರುವಾಗ್ಯೆ ಮೂರು ಅಡಿ ಆಳವಾದ ಮತ್ತು ಸುತ್ತಲೂ ಮೂರು ಅಡಿ ಗುಂಡಾದ ಗುಣಿಗಳನ್ನು ಎಂಟೆಂಟು ಅಡಿಗಳು ದೂರವಾಗಿ ತೋಡುತ್ತಾರೆ. ಈ ರೀತಿಯಾಗಿ ಎಕರೆ ಒಂದಕ್ಕೆ ಸುಮಾರು ೧೨೦೦ ಗುಣಿಗಳಾಗುವುವು. ಈ ಗುಣಿಗಳಲ್ಲಿ ಒಣಗಿದ ಎಲೆಗಳನ್ನು ಹಾಕಿ ಸುಟ್ಟು ಬೂದಿಯನ್ನು ಗುಣಿಯಲ್ಲಿರುವ ಮಣ್ಣಿನ ಜೊತೆಯಲ್ಲಿ ಚೆನ್ನಾಗಿ ಬೆರಸಿ, ಗುಣಿಯ ಮುಕ್ಕಾಲು ಪಾಲಿನ ವರಿವಿಗೂ ಮುಚ್ಚಿಬಿಡುವರು. ಹೀಗೆ ಮಾಡಿದಲ್ಲಿ ಗಿಡಗಳಿಗೆ ಗೆಜ್ಜಲುಹಿಡಿಯುವದಿಲ್ಲ. ಅನಂತರದಲ್ಲಿ ಗುಣಿಗಳಲ್ಲಿ ಬಾಳೆ ಕಂದುಗಳನ್ನು ನೆಟ್ಟು ಹೊಸದಾದ ಹಸುವಿನ ಗೊಬ್ಬರವನ್ನು ಹಾಕಿ ಅದರಮೇಲೆ ಭೂಮಿಯ ಮಟ್ಟದವರಿವಿಗೂ ತರಗೆಲೆಯನ್ನು ತುಂಬಿ, ಕಂದುಗಳಿಗೆ ಬಿಸಿಲಿನ ತಾಪವು ತಗಲದಂತೆ ಮಾಡುವರು. ಗಿಡಗಳಿಗೆ ನೀರು ಹಾಕುವದಿಲ್ಲ; ಆದರೆ ಆಗಾಗ್ಯೆ ಬೀಳತಕ್ಕ ಮಳೆ ನೀರಿನ ಸಹಾಯದಿಂದ ಗಿಡಗಳು ಬೇರೂರಿದು ಬೆಗರುವವು. ಅವು ಚೆನ್ನಾಗಿ ಬೆಗರುವಾಗ್ಯೆ ಹಸುವಿನ ಸಗಣಿಯ ಮತ್ತು ಸೊಪ್ಪುಗಳ ಗೊಬ್ಬರವನ್ನು ಹಾಕುತ್ತಾರೆ.

ಪೈರುಗಳು ಚೆನ್ನಾಗಿ ಬೆಳೆದ ನಂತರದಲ್ಲಿ, ಭೂಮಿಯನ್ನು ಕ್ರಮವಾಗಿ ಉತ್ತು, ಕಳೇಕಿತ್ತು ಗೊಬ್ಬರವನ್ನು ಹಾಕುತ್ತಿದ್ದರೆ ಸುಮಾರು ಹತ್ತು ಹನ್ನೆರಡು ವರ್ಷಗಳ ಕಾಲ ಬಾಳೆಯು ಫಲ ಬಿಡುತ್ತಿರುವುದು. ವರ್ಷಂಪ್ರತಿಯಲ್ಲಿಯೂ ತಾಯಿ ಕಂದನ್ನು ಕಡಿದುಹಾಕಿ ಸುತ್ತಲೂ ಬೆಳೆಯತಕ್ಕ ಸಣ್ಣ ಸಣ್ಣ ಕಂದುಗಳಿಂದ ಫಲವನ್ನು ತೆಗದುಕೊಳ್ಳುವರು. ಬಾಳೆ ನಾರುಗಳನ್ನು ಸಹಾ ಅಲಕ್ಷ್ಯಮಾಡಿ ಬಿಸಾಡದೆ ವಿಕ್ರಯಿಸಿ ದುಡ್ಡುಮಾಡುತ್ತಾರೆ.

ಬಾಳೆ ಹಣ್ಣಿನ ಸಿಪ್ಪೆಯನ್ನು ತೆಗೆದು ತಿರಳನ್ನು ಬಿಲ್ಲೆ ಬಿಲ್ಲೆಯಾಗಿ ಕತ್ತರಿಸಿ ಬಿಸಲಿನಲ್ಲಿ ಒಣಗಿಸುತ್ತಾರೆ. ಒಣಗಿದ ಬಿಲ್ಲೆಗಳನ್ನು ಕುಟ್ಟಿ ಪುಡಿಮಾಡಿ, ಮಕ್ಕಳಿಗೆ ಆಹಾರವಾಗಿ ಕೊಡುವರು. ಈ ಹಿಟ್ಟು ಬಹಳ ಪುಷ್ಟಿಕರವಾದ ಆಹಾರವಾಗಿದೆ. ದೊಡ್ಡವರು ಈ ಬಿಲ್ಲೆಗಳಿಗೆ ಉಪ್ಪನ್ನು ಬೆರಸಿ ಎಣ್ಣೆ ಅಥವಾ ತುಪ್ಪದಲ್ಲಿ ಹುರಿದು ತಿನ್ನುವರು. ಅಲ್ಲದೆ ಇವುಗಳನ್ನು ಹೊಸಮಡಿಕೆಗಳಲ್ಲಿ ಹಾಕಿ ತಂಪಾದ ಸ್ಥಳಗಳಲ್ಲಿ ಇಟ್ಟಿದ್ದರೆ ಅನೇಕತಿಂಗಳುಕಾಲ ಉಪಯೋಗಿಸಬಹುದು. ಬಡವರು ಹಣ್ಣುಗಳನ್ನು ವಿಶೇಷವಾಗಿ ತಿನ್ನುವರು. ಆದರೆ ಇದು ಸುಲಭವಾಗಿ ಜೀರ್ಣವಾಗುವುದಿಲ್ಲ.

ಎಕರೆಗೆ ವರ್ಷ ಒಂದಕ್ಕೆ ಸರಾಸರಿ ೨೦೦ ರೂಪಾಯಿಗಳ ಉತ್ಪತ್ತಿಯಾಗುತ್ತದೆ. ಆದರೆ ಮೊದಲು ಒಂದೆರಡು ವರ್ಷಗಳ ಕಾಲ ವ್ಯವಸಾಯಗಾರನು ಈ ಕೆಳಗೆ ನಮೂದಿಸಿರುವ ಕೆಲಸಗಳಿಗಾಗಿ ಹೆಚ್ಚು ಲಾಗವದು ಮುಟ್ಟಿಸಬೇಕಾಗಿರುವುದರಿಂದ ಅಷ್ಟು ಆದಾಯವೇನೂ ಬರುವದಿಲ್ಲ.

(೧) ತೋಟದ ಸುತ್ತಲೂ ಬೇಲಿ ಅಥವಾ ಗೋಡೆಗಳನ್ನು ಹಾಕುವುದು.

(೨) ಎಂಟಾವರ್ತಿಗೆ ಕಡಿಮೆ ಇಲ್ಲದಂತೆ ಉಳುವುದು.

(೩) ೧೨೦೦ ಗುಣಿಗಳನ್ನು ತೋಡಿಸುವುದು.

(೪) ಗುಣಿಗಳಲ್ಲಿ ಸುಡುವುದಕ್ಕಾಗಿಯೂ ಮತ್ತು ಕಂದುಗಳನ್ನು ನೆಟ್ಟನಂತರ ಗುಣಿಯನ್ನು ಮುಚ್ಚುವುದಕ್ಕೂ ತರಗನ್ನು ಕೂಡಿಸುವುದು.

(೫) ಹಸುವಿನ ಸಗಣಿ ಮತ್ತು ಸೊಪ್ಪುಗಳಿಗೆ ತಗಲುವ ಖರ್ಚು.

(೬) ಗೊಬ್ಬರವನ್ನು ಹಾಕುವುದಕ್ಕೆ ಮುಟ್ಟತಕ್ಕ ಲಾಗವದು.

(೭) ತೋಟದ ಕಾವಲು.

(೮) ಬೆಳೆಯನ್ನು ಕಟಾವು ಮಾಡುವುದು.

(೯) ಎಲೆಗಳನ್ನು ಕೂಡಿಸುವದು.

(೧೦) ಭೂಮಿಗೆ ಕಂದಾಯ ಮತ್ತು ಬಂಡವಾಳಕ್ಕೆ ಬಡ್ಡಿ.

ಆದರೆ ವ್ಯವಸಾಯಗಾರನು ಸ್ವಲ್ಪವೂ ಖರ್ಚಿಲ್ಲದೆ ಆಗತಕ್ಕ ಗೆಣಸೇ ಮೊದಲಾದವುಗಳನ್ನು ಎರಡನೇ ಪೈರಾಗಿ ಬೆಳೆದು ಲಾಭವನ್ನು ಸಂಪಾದಿಸಬಹುದು. ಕಳೆ ಕೀಳುವುದಕ್ಕೆ ಬಹಳ ಸ್ವಲ್ಪ ಖರ್ಚುಮಾತ್ರ ಆಗುವದು. ಈ ರೀತಿಯಲ್ಲಿ ವ್ಯವಸಾಯ ಮಾಡಿದಲ್ಲಿ ಭೂಮಿಯು ಕ್ಷೀಣಗತಿಗೆ ಬರುವದಿಲ್ಲ. ಇದೂಅಲ್ಲದೆ ಹೊಸದಾಗಿ ಗೊಬ್ಬರವನ್ನು ಹಾಕಿದ ಕೊರಲೆ, ಹುರಳಿ, ಬಟಾಣಿ ಮೊದಲಾದ ದವಸಗಳನ್ನೂ ಸಹ ಬೆಳೆಯಬಹುದು. ಬಾಳೆಯನ್ನ ನೆಡುವುದಕ್ಕೆ ಮುಂಚೆ ಭೂಮಿಯನ್ನು ಅವಶ್ಯವಾಗಿ ಬಂಜರು ಬಿಡಬೇಕು.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮಾರ್ಚಿ ತಾ॥ ೨೭ ನೇ ಸೋಮವಾರ

ಕಾಮನ ಹಬ್ಬ.

ಈಶ್ವರನು ಸಮಾಧಿಯಲ್ಲಿದ್ದಾಗ್ಗೆ ಅವನನ್ನು ಬಹಿರ್ಮುಖಗೊಳಿಸುವುದಕ್ಕಾಗಿ ಮನ್ಮಥನು ತನ್ನ ಪಂಚ ಬಾಣಗಳನ್ನು ಪ್ರಯೋಗಿಸಿ, ಶಿವಕೋಪಕ್ಕೆ ಪಾತ್ರನಾಗಿ, ಫಾಲನೇತ್ರದ ಅಗ್ನಿಜ್ವಾಲೆಯಿಂದ ಧಗಧಗನೆ ಉರಿದುಹೋದನು. ಹಾಗೆ ಕಾಮನು ಉರಿದುಹೋದುದರ ಸ್ಮರಣಾರ್ಥವಾಗಿ ಶಿವನ ಭಕ್ತರು ಲೋಕದಲ್ಲಿ ಫಾಲ್ಗುಣ ಶುದ್ಧ ಪೂರ್ಣಿಮೆಯ ದಿವಸ ಕಾಮದಹನವನ್ನು ಆಚರಿಸುವ ಪದ್ಧತಿಯು ನಡೆದು ಬಂದಿದೆ. ಇದನ್ನಾಚರಿಸುವವರು ೧ ವಾರದಿಂದಲೂ ಕಾಮನನ್ನೂ ಅವನ ಹೆಂಡತಿ ರತಿಯನ್ನೂ ಪ್ರತಿಮೆಗಳಲ್ಲಿ ಆವಾಹಿಸಿಟ್ಟು, ಪ್ರತಿದಿನವೂ ದೀಪೋತ್ಸವ ಗೀತ ನರ್ತನಾದಿ ವೈಭವಗಳನ್ನಾಚರಿಸುತ್ತಿದ್ದು, ಹುಣ್ಣಿಮೆದಿನ ಹಳೆಯ ಕುಕ್ಕೆ ಮೊರ ಮೊದಲಾದ ಸಾಮಾನುಗಳನ್ನೊಟ್ಟಿ, ಮಧ್ಯದಲ್ಲಿ ಕಾಮನ ಚಿತ್ರವನ್ನಿಟ್ಟು ಅಗ್ನಿಪ್ರವೇಶವನ್ನು ಮಾಡಿಸಿ, ದಹಿಸಿಬಿಡುತ್ತಾರೆ. ಹಾಗೆ ದಗ್ಧವಾದ ಕಾಮನ ಬೂದಿಯನ್ನು ಮೈಗೆ ಸೂಡಿಕೊಂಡುದನ್ನು ಸೂಚಿಸುವುದಕ್ಕಾಗಿ ಗುಲಾಲು ಮೊದಲಾದುವುಗಳನ್ನು ಬಳಿದುಕೊಳ್ಳುತ್ತಾರೆ. ಇನ್ನು ಕೆಲವರು ಅನಿರ್ವಾಚ್ಯವಾದ ದುರ್ವಿನೋದಗಳನ್ನೂ ದುರ್ಭಾಷಣಗಳನ್ನೂ ದುಶ್ಶೀಲಗಳನ್ನೂ ಆಚರಿಸುತ್ತಾ ಈ ಹಬ್ಬವನ್ನು ಕಳೆಯುವರು.

ಕಾಮವೆಂಬುವುದು ಮನೋವ್ಯಾಪಾರವು. ಮನಸ್ಸಿನ ದುರ್ವ್ಯಾಪಾರ ಸದ್ವ್ಯಾಪಾರಗಳೆರಡೂ ಆವಿರ್ಭವಿಸುವುವು. ಸದ್ವಿಷಯದಲ್ಲಿ ಹುಟ್ಟಿದ ಮನೋವ್ಯಾಪಾರವು (ಕಾಮವು) ಸತ್ಫಲಪ್ರದವಾದುದರಿಂದ ದುಷ್ಟವಾದುದಲ್ಲ. ದುಷ್ಟವಿಷಯದಲ್ಲಿ ಹುಟ್ಟಿದ ದುರ್ವ್ಯಾಪಾರವು ದುರ್ಗತಿಪ್ರದವಾದುದರಿಂದ ಅದು ದುಷ್ಟವಾದುದು. ಅದುಕಾರಣ ಇಹಲೋಕದಲ್ಲಿ ಮಾನ್ಯರೂ ಪರದಲ್ಲಿ ಸದ್ಗತಿಭಾಜನರೂ ಆಗಬೇಕಾದ ಜನರು ದುಷ್ಕಾಮವನ್ನು ನಿರಾಕರಿಸಿ ಸತ್ಕಾಮವನ್ನು ಪರಿಗ್ರಹಿಸಬೇಕು. ಈಶ್ವರನು ದುಷ್ಟನಾದ ಕಾಮನನ್ನು ದಹಿಸಿಬಿಟ್ಟಬಳಿಕ, ಆತನ ಪತ್ನಿಯ ಪ್ರಾರ್ಥನೆಯ ಪ್ರಕಾರ ಅವನು ಅನಂಗನಾಗಿಯೂ ಮನೋಜನಾಗಿಯೂ ಇರುವಂತೆ ಅನುಗ್ರಹಿಸಿದನು. ಕಾಮನ ಹಬ್ಬವನ್ನು ಆಚರಿಸುವ ಜನರು ಸಹ ಅದನ್ನನುಸರಿಸಿ ಲೋಕಕಂಟಕನಾದ ದುಷ್ಕಾಮವನ್ನು ದಹಿಸಿ, ಸತ್ಕಾಮವನ್ನು ತಮ್ಮ ಮನೋಭೂಮಿಯಲ್ಲಿ ಯಾವಾಗಲೂ ಉದಿಸಿ ಜೀವಿತವಾಗಿರುವಂತೆ ಮಾಡಿಕೊಳ್ಳಬೇಕು. ಆದರೆ ಹೊರಗೆ ಬೀದಿಯಲ್ಲಿ ಸೌದೆ ಬೆರಣಿಗಳನ್ನು ರಾಶಿಹಾಕಿ, ಅದರಲ್ಲಿ ಮನ್ಮಥನನ್ನು ಸುಟ್ಟುಬಿಟ್ಟೆವೆಂಬ ನಾಟಕವನ್ನಭಿನಯಿಸಿ ಅದೇದಿನವೇ ಮನಸ್ಸಿನಲ್ಲಿ ಎಂದಿಗಿಂತಲೂ ಮತ್ತಷ್ಟು ಅತಿಶಯವಾಗಿ ದುಷ್ಕಾಮವು ತಮ್ಮಲ್ಲಿ ವಿಹರಿಸುವುದಕ್ಕೆ ಅವಕಾಶವನ್ನುಂಟುಮಾಡಿದರೆ ಫಲವೇನು? ವಿವೇಕವೆಂಬ ಅಗ್ನಿಯಿಂದ ದುರಿತ ಯೆಂಬ ಕಾಮನನ್ನು ತನ್ನ ಮನೋಗುಣದಲ್ಲಿ ಸುಟ್ಟು, ವಾಸನಾಕ್ಷಯವೆಂಬ ಬೂದಿಯನ್ನು ಬಳಿದುಕೊಂಡು, ಸಂತೋಷಿಸುವುದೀಗ ನಿಜವಾದ ಕಾಮನ ಹಬ್ಬವು. ಹಾಗಲ್ಲದೆ ಮದದ್ರವ್ಯದಂಗಡಿಗಳಿಗೆ ಹೆಚ್ಚು ಸಂಪಾದನೆಯನ್ನು ಮಾಡಿಸಿ ಕೊಟ್ಟು, ವಾರನಾರಿಯರಿಗೂ, ಜಾರಿಣಿಯರಿಗೂ ಸುಗ್ಗಿಯನ್ನುಂಟುಮಾಡಿ ಫಲಸರಕಿನಂಗಡಿಯವರ ಗಲ್ಲಗಳನ್ನು ತುಂಬಿಸಿ ರಂಗುಗಳನ್ನು ಸುರಿದುಕೊಂಡು, ಬೀದಿಗಳಲ್ಲಿ ಬಂಡಪದಗಳನ್ನು ಹಾಡುತ್ತ ಸ್ವಗೌರವದ ದೃಷ್ಟಿಯಿಲ್ಲದೆ ಅಲೆಯುವವರೆಲ್ಲರೂ ಕಾಮನ ದಾಸರುಗಳೇ ಹೊರತು ಕಾಮವಿಜಯಿಗಳಲ್ಲವು. ಜನರಲ್ಲಿ ಸಚ್ಛೀಲ, ಸನ್ನೀತಿಗಳ ಅಭಿವೃದ್ಧಿಯನ್ನುಂಟುಮಾಡುವುದಕ್ಕಾಗಿ ಹುಟ್ಟಿದ ಪುರಾಣದ ಪುಣ್ಯಕಥೆಗಳನ್ನೆಲ್ಲಾ ಜನರು ತಮ್ಮ ದುರ್ನೀತಿಗಳ ಪ್ರೋತ್ಸಾಹಕ್ಕೆ ಸಾಧಕಗಳನ್ನಾಗಿ ಮಾಡಿಕೊಂಡಿರುವುದು ನಿಜವಾಗಿಯೂ ಅನಿಷ್ಟವೂ ವಿಷಾದಕರವೂ ಆಗಿರುವುದು.

ಜನರಲ್ಲಿ ವಿದ್ಯಾ ಬುದ್ಧಿ ನಾಗರಿಕತೆಗಳು ವೃದ್ಧಿಯಾಗುತ್ತಾ ಬಂದಂತೆಲ್ಲಾ ದುಷ್ಟಪದ್ಧತಿಗಳೂ ವಾಡಿಕೆಗಳೂ ಶೋಷಿಸಿಹೋಗುತ್ತ ಬರಬೇಕು. ಈಚೆಗೆ ಬೊಂಬಾಯಿ ಕಲ್ಕತ್ತಾ, ಮದರಾಸು ಮೊದಲಾದ ಪ್ರಾಂತಗಳಲ್ಲಿ ದೇಶಾಭಿಮಾನಿಗಳು ವಿನಾಯಕನ ಹಬ್ಬ ದೀವಳಿಗೆಹಬ್ಬ ಮಹಾನವಮಿ ಮೊದಲಾದ ವಾರ್ಷಿಕ ಉತ್ಸವ ಸಮಯಗಳನ್ನೆಲ್ಲಾ ದೇಶದ ಪುರೋವೃದ್ಧಿಗೆ ಸಾಧಕವಾದ ಒಂದೊಂದು ಕಾರ್ಯವನ್ನಾಚರಿಸುವುದರಲ್ಲಿ ವಿನಿಯೋಗಿಸುವ ವೇಳ್ಪತ್ತೆಯನ್ನು ಹಾಕುತ್ತಲಿದ್ದಾರೆ. ಅದರಂತೆ ಈ ಕಾಮನಹಬ್ಬವನ್ನಾದರೂ ಸದ್ವಿಷಯಕ್ಕೆ ಸಹಾಯಕವಾಗುವಂತೆ ಮಾಡುವುದು ಪರಮಾವಶ್ಯಕವಾಗಿದೆ. ಇಂಥ ಪ್ರಯತ್ನವೊಂದನ್ನು ಬೊಂಬಾಯಿ ಪಟ್ಟಣದಲ್ಲಿ ಮೊನ್ನೆತಾನೇ ಮಾಡಿದರೆಂದು ಕೇಳುವುದಕ್ಕೆ ಸಂತೋಷವಾಗುತ್ತದೆ. ಈ ಹಬ್ಬದಲ್ಲಿ ನಡೆಯುತ್ತಿದ್ದ ಕುಡಿಕತನವನ್ನೂ ದುರಾಚರಣಗಳನ್ನೂ ತಪ್ಪಿಸಿಬಿಡುವುದಕ್ಕೋಸ್ಕರವೇ ಬೊಂಬಾಯಿ ಪಟ್ಟಣದಲ್ಲಿ ಒಂದು ಸಭೆಯು ಕೂಡಿದ್ದಿತು. ಅದಕ್ಕೆ ದೇಶೀಯ ಪ್ರಮುಖರನೇಕರು ಸೇರಿದ್ದರು. ಆಗ ಬರೋಡಾ ಸಂಸ್ಥಾನದ ಕಾಶೀಬಾಯಿ ಯೆಂಬಾಕೆಯು ಮಾಡಿದ ಉಪನ್ಯಾಸದಲ್ಲಿ ಈ ಹಬ್ಬದೊಳಗೆ ಮಾಡಲ್ಪಡುತ್ತಿರುವ ಅನೇಕ ದುಶ್ಶೀಲಗಳು ವಿವರಿಸಲ್ಪಟ್ಟುವಲ್ಲದೆ, ಈ ಹಬ್ಬದ ಕಾಲದಲ್ಲಿ ಮಾನವತಿಯರಾದ ಹೆಂಗುಸರು ಹೊರಕ್ಕೆ ಬರುವುದಕ್ಕೇ ಹಿಂದೆಗೆಯುತ್ತಿರುವರೆಂದೂ, ಕೂಲಿ ನಾಲಿಯನ್ನು ಮಾಡಿಕೊಂಡು ಹೊಟ್ಟೆ ಹೊರೆದುಕೊಳ್ಳುವ ಬಡವರು ಸಹ ಈ ಹಬ್ಬದಲ್ಲಿ ಆಚರಿಸುವ ಚೇಷ್ಟೆಗಳು ಎಷ್ಟೋ ಪರಿತಾಪಕರವಾಗಿರುವುವೆಂದೂ ಸಹ ಹೇಳಲ್ಪಟ್ಟಿತು. ಬಳಿಕ ಈ ಹಬ್ಬದಲ್ಲಿ ನಡೆಯುತ್ತಿರುವ ಇಂಥಾ ದುರ್ವ್ಯಾಪಾರಗಳನ್ನು ನಿಲ್ಲಿಸಿ, ಸದ್ವ್ಯಾಪಾರಗಳು ನಡೆಯುವಂತೆ ಮಾಡುವುದಕ್ಕೆ ಸೌಜನ್ಯಶೀಲರಾದ ಕೇವಲ ಪಾರಮಾರ್ಥಿಕರೂ, ಪ್ರಾಚ್ಯಾಚಾರಪರ ಣರೂ, ಹಿಂದೂಸಂಸ್ಕಾರಧುರೀಣರೂ ಸಹ ಒಂದು ಳವಾಗಿ ಕೆಲ ಕೆಲಸವನ್ನು ಮಾಡಬೇಕೆಂದು ನಿರ್ಧ ದರು. ಇಂಥ ಪ್ರಯತ್ನವನ್ನು ಬಹುಕಾಲ ಅಲಹಾಬಾ ಪಂಜಾಬು ಪ್ರಾಂತಗಳಲ್ಲಿ ಕೆಲವು ಮಹನೀಯರು ಮಾ ಪಕ್ರಮಿಸಿರುವುದನ್ನು ಕೇಳಿ ಈ ಸಭೆಯವರು ಸಂತೋಷಾ ನಂದನಗಳನ್ನು ಪ್ರದರ್ಶನ ಮಾಡಿದರು. ಎಲ್ಲ ಪ್ರಾಂ ಗಳಲ್ಲೂ ಇಂಥ ಪ್ರಯತ್ನಗಳನ್ನು ದೇಶಾಭಿಮಾನಿಗಳು ಆ ರಿಸಬೇಕೆಂದು ನಿರ್ಧಾರಮಾಡಿದರು.

ನಿರ್ಲಜ್ಜೆಯಿಂದ ಪಶುತುಲ್ಯರಾಗಿ ದುರ್ವ್ಯಾಪಾ ನ್ನು ಆಚರಿಸುತ್ತ, ಅಂಥಾ ವಿಷಯಕ್ಕಾಗಿ ಲಕ್ಷಾಂ ರೂಪಾಯಿಗಳನ್ನು ಭಾರತೀಯರು ಈ ಹಬ್ಬದಲ್ಲಿ ಹಾ ಡುತ್ತಿರುವುದನ್ನು ತಪ್ಪಿಸುವುದಕ್ಕೆ ಯಾರು ಎಷ್ಟುಮಟ್ಟಿ ಪ್ರಯತ್ನವನ್ನು ಮಾಡಿದರೂ ಅಷ್ಟೂ ಅದು ಪುಣ್ಯಕಾರ್ಯ ನಿಸಿಕೊಳ್ಳುವುದು.

* * *

೧೯೧೧ನೆಯ ಜನಪರಿಗಣನೆ.

ಮೈಸೂರು ಸಂಸ್ಥಾನದಲ್ಲಿ ನಡೆದ ಜನಪರಿಗಣನೆ ಪ್ರಕಾರ ೮ ಡಿಸ್ಟ್ರಿಕ್ಟುಗಳಲ್ಲೂ ಮುಖ್ಯ ಪಟ್ಟಣಗಳ ಕೂಡ ಬಂದ ಲೆಕ್ಕದ ವಿವರಣೆಯನ್ನು ಮಾತ್ರ ಕಳೆದ ವಾರದ ಸರ್ಕಾರದ ಗೆಜೆಟ್ಟಿನಲ್ಲಿ ಪ್ರಕಟಮಾಡಿರುತ್ತಾ ಅದನ್ನು ಇದರ ಕೆಳಗೆ ನಾವು ಪ್ರಕಟಿಸಿರುತ್ತೇವೆ. ೧೦ ವರ್ಷಗಳ ಹಿಂದೆ ನಡೆದಿದ್ದ ಲೆಕ್ಕಕ್ಕೂ ಈಗಿನ ಲೆಕ್ಕ ತಾಳೆ ನೋಡುವಲ್ಲಿ ಮೈಸೂರು ದೇಶದ ಬಯಲು ಸೀಮೆ ಡಿಸ್ಟ್ರಿಕ್ಟುಗಳಲ್ಲೆಲ್ಲಾ ವಾಸದ ಮನೆಗಳೂ ಜನಸಂಖ್ಯೆ ಅಭಿವೃದ್ಧಿ ಗೊಂಡಿರುವುವೆಂದು ವ್ಯಕ್ತವಾಗುತ್ತದೆ. ಮಲೆ ಸೀಮೆಯ ಡಿಸ್ಟ್ರಿಕ್ಟುಗಳಲ್ಲೆಲ್ಲಾ ಹಾಸನ ಡಿಸ್ಟ್ರಿ ಸ್ಥಿತಿಯು ಸಮರ್ಪಕವಾಗಿದೆ. ಕಡೂರು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ಜನಸಂಖ್ಯೆ ಕಡಿಮೆಯಾಗಿದ್ದಿರುತ್ತದೆ. ಒಟ್ಟಿಗೆ ನೋ ಡುವಲ್ಲಿ ಸಂಸ್ಥಾನದಲ್ಲೆಲ್ಲಾ ೨ಲಕ್ಷ ಪ್ರಜೆಯೂ ಮನೆಗಳ ಸಂಖ್ಯೆಯು ೫೫ಸಾವಿರದಷ್ಟೂ ಹೆಚ್ಚಿದೆಯೆಂದು ಗೊತ್ತಾ ತ್ತದೆ. ಕಳೆದ ೧೦ವರ್ಷಗಳ ಮಧ್ಯೆ ಪ್ರತಿವರ್ಷವೂ ಪ್ಲೇಗಿನ ಹಾವಳಿಯೂ ಮಧ್ಯೆ ಮಧ್ಯೆ ವಾಂತಿಭೇದಿ ಸಿಡುಬಿನ ಉಪ ವವೂ, ಅದರಮಧ್ಯೆ ಭೀಕರವಾದ ಒಂದು ಕ್ಷಾಮವೂ ಪ್ರಾಪ್ತವಾಗಿದ್ದಾಗ್ಯೂ, ಪ್ರಜಾವೃದ್ಧಿಯು ಇಷ್ಟುಮಟ್ಟಿಗೆ ಸಮರ್ಪ ವಾಗಿರುವುದು ಪಾಲ್ಯ ಪಾಲಕರಿಬ್ಬರಿಗೂ ನಿಜವಾಗಿ ಸಂತೋಷಪ್ರದವಾಗಿದೆ. ಮಲೆ ಸೀಮೆಯ ಡಿಸ್ಟ್ರಿಕ್ಟುಗ ನಿಸರ್ಗವಾದ ಸ್ಥಿತಿಯುಮಾತ್ರ ಪರಿತಾಪಕರವಾಗಿರುತ್ತದೆ.

ಮೈಸೂರು ಸಂಸ್ಥಾನದಲ್ಲಿನ ಮನೆಗಳ ಮತ್ತು ಜನರ ಸಂಖ್ಯೆ.

	ವಾಸದ ಮನೆಗಳು.			ಜನಗಳು.		
ಸ್ಥಲ	೧೯೧೧ ರಲ್ಲಿ	೧೯೦೧	ಕಂಡುಬಂದವ್ಯತ್ಯಾಸ	೧೯೧೧	೧೯೦೧	ಕಂಡುಬಂದ ವ್ಯತ್ಯಾ
ಬೆಂಗಳೂರುಪಟ್ಟಣ	೧೯೨೦೮	೧೪೮೧೦	ಹೆಚ್ಚು ೪೩೯೮	೮೮೬೭೦	೬೯೪೪೭	ಹೆಚ್ಚು
ಬೆಂಗಳೂರು ಡಿ॥	೧೫೩೮೧೫	೧೪೩೩೦೯	ಹೆ ೧೦೫೦೬	೭೫೮೨೭೫	೭೨೦೨೧೨	ಹೆ
ಕೋಲಾರ ಚಿ॥ಗಣಿ	೧೧೧೬೨	೮೦೯೮	ಹೆ ೩೦೬೪	೪೮೧೩೪	೩೮೨೦೪	ಹೆ
ಕೋಲಾರ ಡಿ॥	೧೪೪೧೩೧	೧೩೫೦೫೩	ಹೆ ೯೦೭೮	೭೩೦೮೫೮	೬೮೫೩೯೬	ಹೆ
ತುಮಕೂರು ಡಿ॥	೧೪೫೦೨೧	೧೩೬೧೭೨	ಹೆ ೮೮೪೯	೭೩೪೮೬೪	೬೭೦೬೭೭	ಹೆ
ಮೈಸೂರುಪಟ್ಟಣ	೧೪೯೮೫	೧೪೫೪೫	ಹೆ ೪೪೦	೭೧೩೯೯	೬೮೧೧೧	ಹೆ
ಮೈಸೂರು ಡಿ॥	೨೬೬೬೩೨	೨೫೬೬೮೭	ಹೆ ೯೯೪೫	೧೨೭೧೧೨೫	೧೨೨೨೦೬೧	ಹೆ
ಚಿತ್ರದುರ್ಗ ಡಿ॥	೧೦೪೪೬೧	೯೩೮೬೯	ಹೆ ೧೦೫೯೨	೫೬೩೨೦೪	೫೧೧೦೬೨	ಹೆ
ಹಾಸನ ಡಿ॥	೧೧೮೪೭೩	೧೧೫೬೮೨	ಹೆ ೨೭೯೧	೫೭೯೫೫೦	೫೬೮೯೧೯	ಹೆ
ಕಡೂರು ಡಿ॥	೬೯೨೦೦	೭೧೭೫೧	ಕಡಿಮೆ ೨೫೫೧	೩೩೮೦೫೪	೩೫೯೨೩೦	ಕಡಿಮೆ
ಶಿವಮೊಗ್ಗಾ ಡಿ॥	೧೦೨೪೬೯	೧೦೨೨೭೭	ಹೆ ೧೯೨	೫೧೬೧೯೩	೫೩೧೭೩೬	ಕಡಿಮೆ
ರೈಲ್ವೆಗಳಲ್ಲಿ	೧೦೨೧	...	ಹೆ ೧೦೨೧	೫೦೫೨	...	ಹೆ
ಮೈಸೂರುದೇಶದ ಒಟ್ಟು	೧೧೫೦೬೨೮	೧೦೯೨೨೪೮	ಹೆ ೫೮೩೮೦	೫೭೦೬೦೩೩	೫೪೪೯೮೦೦	ಹೆ
ಕಂಟೋನ್ಮೆಂಟಿನಲ್ಲಿ	೧೫೨೫೧	೧೮೪೩೯	ಕಡಿಮೆ ೩೧೮೮	೧೦೦೨೬೩	೮೯೫೯೯	ಹೆ
ಕಂಟೋನ್ಮೆಂಟು ಸೇರಿ ಮೈಸೂರು ದೇಶದ ಒಟ್ಟು	೧೧೬೫೮೭೯	೧೧೧೦೬೮೭	ಹೆ ೫೫೧೯೨	೫೮೦೬೨೯೬	೫೫೩೯೩೯೯	ಹೆ

ಅತ್ತ ಭರತಖಂಡವಾದ್ಯಂತಕ್ಕೂ ಮಾಡಲ್ಪಟ್ಟಿರುವ ಲೆಕ್ಕದಿಂದ ಅಲ್ಲಿನ ಒಟ್ಟು ಜನಸಂಖ್ಯೆಯು ೩೧೫೦೦೧ ಎಂದು ಗೊತ್ತಾಗಿರುವುದು. ಆದರೆ ಕಳೆದ ೧೦ ವರ್ಷದ ಹಿಂದಿನ ಪರಿಗಣನೆಯ ಕಾಲದಲ್ಲಿದ್ದುದಕ್ಕಿಂತ ಈಗ ೧೦೦ ಕ್ಕೆ ೭ ರಂತೆ ಜನಸಂಖ್ಯೆಯು ಹೆಚ್ಚಾಗಿರುವುದು. ಈ ಒಟ್ಟು ಪ್ರಜಾ ಸಂಖ್ಯೆಯಲ್ಲಿ ಬ್ರಿಟಿಷರ ಕೆಗೊಳಪಟ್ಟ ದೇಶಗಳದು ೨೪೪೧೬೭೩೩೧ (ಹಿಂದಣದಕ್ಕಿಂತ ೧೦೦ ರಲ್ಲಿ ೫.೪ ಹೆಚ್ಚು) ದೇಶೀಯ ಸಂ ಗಳದು ೭೦೮೩೩೭೬೮ (ಹಿಂದಣದಕ್ಕಿಂತ ೧೦೦ ರಲ್ಲಿ ೧೨.೯ ಹೆಚ್ಚು) ಈ ಸಲದ ಪರಿಗಣನೆಯಲ್ಲಿ ದೇಶೀ ಸಂಸ್ಥಾನದಲ್ಲಿ ಇಷ್ಟು ಹೆಚ್ಚಿರಲು, ೧೮೯೭ ಮತ್ತೂ ೧೯೦೦ರಲ್ಲಿ ಪ್ರಾಪ್ತವಾಗಿದ್ದ ಕ್ಷಾಮದಿಂದ ಬ್ರಿಟಿಷ್ ರಾಜ್ಯಗ ತ ಅವು ವಿಶೇಷವಾಗಿ ಕಷ್ಟನಷ್ಟಗಳಿಗೆ ಸಿಕ್ಕಿದ್ದಾಗ್ಯೂ ಈಚೆಗೆ ಸುಧಾರಿಸಿಕೊಂಡುದೂ ಮತ್ತೂ ದೇಶೀಯ ಸ್ಥಾನಗಳಲ್ಲಿ ಹೆಚ್ಚು ಪ್ರಜಾವೃದ್ಧಿಗವಕಾಶವಿರುವುದೂ ಕಾರಣವಾಗಿರುತ್ತದೆ. ಬ್ರಿಟಿಷರ ಆಳಿಕೆಗೊಳಪಟ್ಟ ದೇ ಲ್ಲೆಲ್ಲಾ ಮಧ್ಯಪ್ರಾಂತಗಳು ಮತ್ತೂ ಬೀರಾರುಗಳಲ್ಲಿ ೧೦೦ರಲ್ಲಿ ೧೬.೭ ರಂತೆ; ಬರ್ಮಾದಲ್ಲಿ ೧೦೦ ರಲ್ಲಿ ೧೫.೯ ಪೂರ್ವ ಬಂಗಾಳಾ ಮತ್ತೂ ಅಸ್ಸಾಂ ೧೧.೮ ರಂತೆ; ಮದ್ರಾಸಾಧಿಪತ್ಯದಲ್ಲಿ ೮.೩ ರಂತೆ; ಬೊಂಬಾಯಾಧಿಪ ೬ ರಂತೆ ಮತ್ತೂ ಬಂಗಾಳಾಧಿಪತ್ಯದಲ್ಲಿ ೩.೮ ರಂತೆ ಪ್ರಜಾಸಂಖ್ಯೆ ಹೆಚ್ಚಿರುತ್ತದೆ. ಪ್ಲೇಗು ಮತ್ತೂ ಮಲೇ ಉಪದ್ರವಗಳಿಂದ ಪಂಜಾಬಿನಲ್ಲಿ ೧೦೦ ರಲ್ಲಿ ೧.೮ ರಂತೆಯೂ ಸಂಯುಕ್ತ ಪ್ರಾಂತಗಳಲ್ಲಿ ೧೦೦ ರಲ್ಲಿ ೧ ರಂತೆ ಪ್ರಜಾನಾಶವಾಗಿರುತ್ತದೆ.

REGISTERED NO. M. 194

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾಧ್ವಗ್ರ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಕೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪]   ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಏಪ್ರಿಲ್ ತಾರೀಖು ೩ ನೇ ಸೋಮವಾರ.   [ಸಂಚಿಕೆ ೧೪

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೦-೫-೦
ಕೇರಪ್ಪಾಂಚೆನ್ನು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕಸಂಧಿವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೪-೦.
೨ ರಿಂದ ೪ ರವರಿಗೆ ೧-೧೦-೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶ !

೬೬ ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಭಜನಕ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಶೂಲ, ಮಂಡರೋಗ ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕಾರೋಗ್ಯತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗ ಬೇಕಾಗುವುವು. ಕಿಮ್ಮತ್ತು ೨೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—

ವೈದ್ಯ. ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬಸವಾಪಿ, ಜಿಲ್ಲ ಉತ್ತರಕಸವಾ.

ಪಂಡಿತ ಎಸ್. ಗರಳಪುರಿ ಇವ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
34 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೬ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧ. ಸೇರಿನ ಡಬ್ಬಿ ೪-೦-೦. ೧೬ ದಿನಗಳ ಔಷಧ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲಪಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೦-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

33

೧. ಸ್ವರ್ಣಗಂಗಾಧರಮಾತ್ರೆ.— ಇದರ ಸೇವನೆಯಿಂದ ಸ್ತ್ರೀಯರ ಸೂಚೀಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ.—ಈ ಎಣ್ಣೆಯನ್ನು ಬೆಳಿಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರೆಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಚಿಬ್ಬು, ವ್ರಣ, ಕುಷ್ಠ, ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕೆ. ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ.— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ.— ಈ ರಸಾಯನವನ್ನು ೦೮ ದಿನ ಸೇವಿಸುವಲ್ಲಿ ಏಕಾಂತಮೇಹ, ಮೂತ್ರಕೃಚ್ಛ್ರ ಅಸ್ತ್ರಸ್ರಾವ, ಅಸೃಗ್ಧರ, ಪಿತ್ತಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ತಮೂತ್ರ, ಅಸ್ಥಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ತ ಇತ್ಯಾದಿ ರೋಗಗಳು ಸಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ. ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ.—ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚು ೬ ಆಣೆ.

೯. ಮಹಾಕಂಡಳ್ಯಾದಿರಸಾಯನ.— ಇದರಿಂದ ಕ್ಷಯ ಕಾಸ, ಜ್ವರ, ದೀಪನ, ಪಾಂಡುರೋಗ, ಉನ್ಮಾದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ಏಳಂಗಸಾರಾವಲ್ಲಿಕೆ.— ಇದರಿಂದ ಗಂಟಲು ಉರಿಸುಸ್ತು ಸಂಕಟ, ವಮನವಿಲ್ಲದ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಾಳಿವನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ಸ್ವಸ್ಥವಾಗುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶ ಸೇರು ಏರಿಯುವಾಗ ಜ್ಞಾನ ತಪ್ಪುವುದು ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿಹ್ನೆಗಳು ಈ ಮಾತ್ರೆಯನ್ನು ನೆಗಡಾಳಿನೂ ಪುನರಸಿದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಷರಬತ್ತುಗಳೂ ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—

ಎಂ. ಪಂಡಿತ ಚೆನ್ನಬಸಪ್ಪ ಅಂಡಸನ್ಸ್.
ಚೆನ್ನಪಟ್ಟಣ, ಬೆಂಗಳೂರು, ಡಿಸ್ಟ್ರಿಕ್ಟ್.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮಾರ್ಚಿ ತಾ॥ ೨೭ ನೇ ಸೋಮವಾರ

ಕಾಮನ ಹಬ್ಬ.

ಈಶ್ವರನು ಸಮಾಧಿಯಲ್ಲಿದ್ದಾಗ್ಗೆ ಅವನನ್ನು ಬಹಿರ್ಮುಖಗೊಳಿಸುವುದಕ್ಕಾಗಿ ಮನ್ಮಥನು ತನ್ನ ಪಂಚ ಬಾಣಗಳನ್ನು ಪ್ರಯೋಗಿಸಿ, ಶಿವಕೋಪಕ್ಕೆ ಪಾತ್ರನಾಗಿ, ಫಾಲನೇತ್ರದ ಅಗ್ನಿಜ್ವಾಲೆಯಿಂದ ಧಗಧಗನೆ ಉರಿದುಹೋದನು. ಹಾಗೆ ಕಾಮನು ಉರಿದುಹೋದುದರ ಸ್ಮರಣಾರ್ಥವಾಗಿ ಶಿವನ ಭಕ್ತರು ಲೋಕದಲ್ಲಿ ಫಾಲ್ಗುಣ ಶುದ್ಧ ಪೂರ್ಣಿಮೆಯ ದಿವಸ ಕಾಮದಹನವನ್ನು ಆಚರಿಸುವ ಪದ್ಧತಿಯು ನಡೆದು ಬಂದಿದೆ. ಇದನ್ನಾಚರಿಸುವವರು ೧ ವಾರದಿಂದಲೂ ಕಾಮನನ್ನೂ ಅವನ ಹೆಂಡತಿ ರತಿಯನ್ನೂ ಪ್ರತಿಮೆಗಳಲ್ಲಿ ಆವಾಹಿಸಿಟ್ಟು, ಪ್ರತಿದಿನವೂ ದೀಪೋತ್ಸವ ಗೀತ ನರ್ತನಾದಿ ವೈಭವಗಳನ್ನಾಚರಿಸುತ್ತಿದ್ದು, ಹುಣ್ಣಿಮೆದಿನ ಹಳೆಯ ಕುಕ್ಕೆ ಮೊರ ಮೊದಲಾದ ಸಾಮಾನುಗಳನ್ನೊಟ್ಟಿ, ಮಧ್ಯದಲ್ಲಿ ಕಾಮನ ಚಿತ್ರವನ್ನಿಟ್ಟು ಅಗ್ನಿಪ್ರವೇಶವನ್ನು ಮಾಡಿಸಿ, ದಹಿಸಿಬಿಡುತ್ತಾರೆ. ಹಾಗೆ ದಗ್ಧವಾದ ಕಾಮನ ಬೂದಿಯನ್ನು ಮೈಗೆ ಸೂಡಿಕೊಂಡುದನ್ನು ಸೂಚಿಸುವುದಕ್ಕಾಗಿ ಗುಲಾಲು ಮೊದಲಾದುವುಗಳನ್ನು ಬಳಿದುಕೊಳ್ಳುತ್ತಾರೆ. ಇನ್ನು ಕೆಲವರು ಅನಿರ್ವಾಚ್ಯವಾದ ದುರ್ವಿನೋದಗಳನ್ನೂ ದುರ್ಭಾಷಣಗಳನ್ನೂ ದುಶ್ಶೀಲಗಳನ್ನೂ ಆಚರಿಸುತ್ತಾ ಈ ಹಬ್ಬವನ್ನು ಕಳೆಯುವರು.

ಕಾಮವೆಂಬುವುದು ಮನೋವ್ಯಾಪಾರವು. ಮನಸ್ಸಿನ ದುರ್ವ್ಯಾಪಾರ ಸದ್ವ್ಯಾಪಾರಗಳೆರಡೂ ಆವಿರ್ಭವಿಸುವುವು. ಸದ್ವಿಷಯದಲ್ಲಿ ಹುಟ್ಟಿದ ಮನೋವ್ಯಾಪಾರವು (ಕಾಮವು) ಸತ್ಫಲಪ್ರದವಾದುದರಿಂದ ದುಷ್ಟವಾದುದಲ್ಲ. ದುರ್ವಿಷಯದಲ್ಲಿ ಹುಟ್ಟಿದ ದುರ್ವ್ಯಾಪಾರವು ದುರ್ಗತಿಪ್ರದವಾದುದರಿಂದ ಅದು ದುಷ್ಟವಾದುದು. ಅದುಕಾರಣ ಇಹಲೋಕದಲ್ಲಿ ಮಾನ್ಯರೂ ಪರದಲ್ಲಿ ಸದ್ಗತಿಭಾಜನರೂ ಆಗಬೇಕಾದ ಜನರು ದುಷ್ಕಾಮವನ್ನು ನಿರಾಕರಿಸಿ ಸತ್ಕಾಮವನ್ನು ಪರಿಗ್ರಹಿಸಬೇಕು. ಈಶ್ವರನು ದುಷ್ಟನಾದ ಕಾಮನನ್ನು ದಹಿಸಿಬಿಟ್ಟಬಳಿಕ, ಆತನ ಪತ್ನಿಯ ಪ್ರಾರ್ಥನೆಯ ಪ್ರಕಾರ ಅವನು ಅನಂಗನಾಗಿಯೂ ಮನೋಜನಾಗಿಯೂ ಇರುವಂತೆ ಅನುಗ್ರಹಿಸಿದನು. ಕಾಮನ ಹಬ್ಬವನ್ನು ಆಚರಿಸುವ ಜನರು ಸಹ ಅದನ್ನನುಸರಿಸಿ ಲೋಕಕಂಟಕನಾದ ದುಷ್ಕಾಮವನ್ನು ದಹಿಸಿ, ಸತ್ಕಾಮವನ್ನು ತಮ್ಮ ಮನೋಭೂಮಿಯಲ್ಲಿ ಯಾವಾಗಲೂ ಉಳಿಸಿ ಜೀವಿತವಾಗಿರುವಂತೆ ಮಾಡಿಕೊಳ್ಳಬೇಕು. ಆದರೆ ಹೊರಗೆ ಬೀದಿಯಲ್ಲಿ ಸೌದೆ ಬೆರಣಿಗಳನ್ನು ರಾಶಿಹಾಕಿ, ಅದರಲ್ಲಿ ಮನ್ಮಥನನ್ನು ಸುಟ್ಟುಬಿಟ್ಟೆವೆಂಬ ನಾಟಕವನ್ನಭಿನಯಿಸಿ ಅದೇದಿನವೇ ಮನಸ್ಸಿನಲ್ಲಿ ಎಂದಿಗಿಂತಲೂ ಮತ್ತಷ್ಟು ಅತಿಶಯವಾಗಿ ದುಷ್ಕಾಮವು ತಮ್ಮಲ್ಲಿ ವಿಹರಿಸುವುದಕ್ಕೆ ಅವಕಾಶವನ್ನುಂಟುಮಾಡಿದರೆ ಫಲವೇನು? ವಿವೇಕವೆಂಬ ಅಗ್ನಿಯಿಂದ ದುರಿಚ್ಛೆಯೆಂಬ ಕಾಮನನ್ನು ತನ್ನ ಮನೋಗುಣದಲ್ಲಿ ಸುಟ್ಟು, ವಾಸನಾಕ್ಷಯವೆಂಬ ಬೂದಿಯನ್ನು ಬಳಿದುಕೊಂಡು, ಸಂತೋಷಿಸುವುದೀಗ ನಿಜವಾದ ಕಾಮನ ಹಬ್ಬವು. ಹಾಗಲ್ಲದೆ ಮದದ್ರವ್ಯದಂಗಡಿಗಳಿಗೆ ಹೆಚ್ಚು ಸಂಪಾದನೆಯನ್ನು ಮಾಡಿಸಿ ಕೊಟ್ಟು, ವಾರನಾರಿಯರಿಗೂ, ಜಾರಿಣಿಯರಿಗೂ ಸುಗ್ಗಿಯನ್ನುಂಟುಮಾಡಿ ಪಲಸರಕಿನಂಗಡಿಯವರ ಗಲ್ಲಗಳನ್ನು ತುಂಬಿಸಿ ರಂಗುಗಳನ್ನು ಸುರಿದುಕೊಂಡು, ಬೀದಿಗಳಲ್ಲಿ ಬಂಡಪದಗಳನ್ನು ಹಾಡುತ್ತ ಸ್ವಗೌರವದ ದೃಷ್ಟಿಯಿಲ್ಲದೆ ಅಲೆಯುವವರೆಲ್ಲರೂ ಕಾಮನ ದಾಸರುಗಳೇ ಹೊರತು ಕಾಮವಿಜಯಿಗಳಲ್ಲವು. ಜನರಲ್ಲಿ ಸಚ್ಛೀಲ, ಸನ್ನೀತಿಗಳ ಅಭಿವೃದ್ಧಿಯನ್ನುಂಟುಮಾಡುವುದಕ್ಕಾಗಿ ಹುಟ್ಟಿದ ಪುರಾಣದ ಪುಣ್ಯಕಥೆಗಳನ್ನೆಲ್ಲಾ ಜನರು ತಮ್ಮ ದುರ್ನೀತಿಗಳ ಪ್ರೋತ್ಸಾಹಕ್ಕೆ ಸಾಧಕಗಳನ್ನಾಗಿ ಮಾಡಿಕೊಂಡಿರುವುದು ನಿಜವಾಗಿಯೂ ಅನಿಷ್ಟವೂ ವಿಷಾದಕರವೂ ಆಗಿರುವುದು.

ಜನರಲ್ಲಿ ವಿದ್ಯಾ ಬುದ್ಧಿ ನಾಗರಿಕತೆಗಳು ವೃದ್ಧಿಯಾಗುತ್ತಾ ಬಂದಂತೆಲ್ಲಾ ದುಷ್ಟಪದ್ಧತಿಗಳೂ ವಾಡಿಕೆಗಳೂ ಶೋಷಿಸಿಹೋಗುತ್ತ ಬರಬೇಕು. ಈಚೆಗೆ ಬೊಂಬಾಯಿ ಕಲ್ಕತ್ತಾ, ಮದರಾಸು ಮೊದಲಾದ ಪ್ರಾಂತಗಳಲ್ಲಿ ದೇಶಾಭಿಮಾನಿಗಳು ವಿನಾಯಕನ ಹಬ್ಬ ದೀವಳಿಗೆಹಬ್ಬ ಮಹಾನವಮಿ ಮೊದಲಾದ ವಾರ್ಷಿಕ ಉತ್ಸವ ಸಮಯಗಳನ್ನೆಲ್ಲಾ ದೇಶದ ಪುರೋವೃದ್ಧಿಗೆ ಸಾಧಕವಾದ ಒಂದೊಂದು ಕಾರ್ಯವನ್ನಾಚರಿಸುವುದರಲ್ಲಿ ವಿನಿಯೋಗಿಸುವ ಏರ್ಪಟ್ಟಿಯನ್ನು ಹಾಕುತ್ತಿದ್ದಾರೆ. ಅದರಂತೆ ಈ ಕಾಮನಹಬ್ಬವನ್ನಾದರೂ ಸದ್ವಿಷಯಕ್ಕೆ ಸಹಾಯಕವಾಗುವಂತೆ ಮಾಡುವುದು ಪರಮಾವಶ್ಯಕವಾಗಿದೆ. ಇಂಥ ಪ್ರಯತ್ನವೊಂದನ್ನು ಬೊಂಬಾಯಿ ಪಟ್ಟಣದಲ್ಲಿ ಮೊನ್ನೆತಾನೇ ಮಾಡಿದರೆಂದು ಕೇಳಿದುದಕ್ಕೆ ಸಂತೋಷವಾಗುತ್ತದೆ. ಈ ಹಬ್ಬದಲ್ಲಿ ನಡೆಯುತ್ತಿದ್ದ ಕೆಡಿಕತನವನ್ನೂ ದುರಾಚರಣಗಳನ್ನೂ ತಪ್ಪಿಸಿಬಿಡುವುದಕ್ಕೋಸ್ಕರವೇ ಬೊಂಬಾಯಿ ಪಟ್ಟಣದಲ್ಲಿ ಒಂದು ಸಭೆಯು ಕೂಡಿದ್ದಿತು. ಅದಕ್ಕೆ ದೇಶೀಯ ಪ್ರಮುಖರನೇಕರು ಸೇರಿದ್ದರು. ಆಗ ಬರೋಡಾ ಸಂಸ್ಥಾನದ ಕಾಶೀಬಾಯಿ ಯೆಂಬಾಕೆಯು ಮಾಡಿದ ಉಪನ್ಯಾಸದಲ್ಲಿ ಈ ಹಬ್ಬದೊಳಗೆ ಮಾಡಲ್ಪಡುತ್ತಿರುವ ಅನೇಕ ದುಶ್ಶೀಲಗಳು ವಿವರಿಸಲ್ಪಟ್ಟುವಲ್ಲದೆ, ಈ ಹಬ್ಬದ ಕಾಲದಲ್ಲಿ ಮಾನವತಿಯರಾದ ಹೆಂಗುಸರು ಹೊರಕ್ಕೆ ಬರುವುದಕ್ಕೇ ಹಿಂದೆಗೆಯುತ್ತಿರುವರೆಂದೂ, ಕೂಲಿ ನಾಲಿಯನ್ನು ಮಾಡಿಕೊಂಡು ಹೊಟ್ಟೆ ಹೊರೆದುಕೊಳ್ಳುವ ಬಡವರು ಸಹ ಈ ಹಬ್ಬದಲ್ಲಿ ಆಚರಿಸುವ ಚೇಷ್ಟೆಗಳು ಎಷ್ಟೋ ಪರಿತಾಪಕರವಾಗಿರುವುವೆಂದೂ ಸಹ ಹೇಳಲ್ಪಟ್ಟಿತು. ಬಳಿಕ ಈ ಹಬ್ಬದಲ್ಲಿ ನಡೆಯುತ್ತಿರುವ ಇಂಥಾ ದುರ್ವ್ಯಾಪಾರಗಳನ್ನು ನಿಲ್ಲಿಸಿ, ಸದ್ವ್ಯಾಪಾರಗಳು ನಡೆಯುವಂತೆ ಮಾಡುವುದಕ್ಕೆ ಸೌಜನ್ಯಶೀಲರಾದ ಕೇವಲ ಪಾರಮಾರ್ಥಿಕರೂ, ಪ್ರಾಚ್ಯಾಚಾರಪರರಾಯಣರೂ, ಹಿಂದೂಸಂಸ್ಕಾರಧುರೀಣರೂ ಸಹ ಒಂದು ಸಂಘವಾಗಿ ಕೆಲಸವನ್ನು ನಡೆಸಬೇಕೆಂದು ನಿರ್ಧರಿಸಿದರು. ಇಂಥ ಪ್ರಯತ್ನವನ್ನು ಬರೋಡಾ ಅಲಹಾಬಾದು ಪಂಜಾಬು ಪ್ರಾಂತಗಳಲ್ಲಿ ಕೆಲವು ಮಹನೀಯರು ಮಾಡಲುಪಕ್ರಮಿಸಿರುವುದನ್ನು ಕೇಳಿ ಈ ಸಭೆಯವರು ಸಂತೋಷಾಭಿನಂದನಗಳನ್ನು ಪ್ರದರ್ಶನ ಮಾಡಿದರು. ಎಲ್ಲ ಪ್ರದೇಶಗಳಲ್ಲೂ ಇಂಥ ಪ್ರಯತ್ನಗಳನ್ನು ದೇಶಾಭಿಮಾನಿಗಳು ಆಚರಿಸಬೇಕೆಂದು ನಿರ್ಧಾರಮಾಡಿದರು.

ನಿರ್ಲಜ್ಜೆಯಿಂದ ಪಶುತುಲ್ಯರಾಗಿ ದುರ್ವ್ಯಾಪಾರವನ್ನು ಆಚರಿಸುತ್ತ, ಅಂಥಾ ವಿಷಯಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಭಾರತೀಯರು ಈ ಹಬ್ಬದಲ್ಲಿ ಹಾಳಾಡುತ್ತಿರುವುದನ್ನು ತಪ್ಪಿಸುವುದಕ್ಕೆ ಯಾರು ಎಷ್ಟುಮಟ್ಟಿನ ಪ್ರಯತ್ನವನ್ನು ಮಾಡಿದರೂ ಅಷ್ಟೂ ಅದು ಪುಣ್ಯಕಾರ್ಯವೆನಿಸಿಕೊಳ್ಳುವುದು.

೧೯೧೧ನೆಯ ಜನಪರಿಗಣನೆ.

ಮೈಸೂರು ಸಂಸ್ಥಾನದಲ್ಲಿ ನಡೆದ ಜನಪರಿಗಣನೆ ಪ್ರಕಾರ ೮ ಡಿಸ್ಟ್ರಿಕ್ಟುಗಳಲ್ಲೂ ಮುಖ್ಯ ಪಟ್ಟಣಗಳಲ್ಲೂ ಕೂಡ ಬಂದ ಲೆಕ್ಕದ ವಿವರಣೆಯನ್ನು ಮಾತ್ರ ಕಳೆದ ವಾರದ ಸರ್ಕಾರದ ಗೆಜೆಟ್ಟಿನಲ್ಲಿ ಪ್ರಕಟಮಾಡಿರುತ್ತಾರೆ ಅದನ್ನು ಇದರ ಕೆಳಗೆ ನಾವು ಪ್ರಕಟಿಸಿರುತ್ತೇವೆ. ೧೦ ವರ್ಷಗಳ ಹಿಂದೆ ನಡೆದಿದ್ದ ಲೆಕ್ಕಕ್ಕೂ ಈಗಿನ ಲೆಕ್ಕಕ್ಕೂ ತಾಳೆ ನೋಡುವಲ್ಲಿ ಮೈಸೂರು ದೇಶದ ಬಯಲು ಸೀಮೆ ಡಿಸ್ಟ್ರಿಕ್ಟುಗಳಲ್ಲೆಲ್ಲಾ ವಾಸದ ಮನೆಗಳೂ ಜನಸಂಖ್ಯೆಯೂ ಅಭಿವೃದ್ಧಿ ಗೊಂಡಿರುವುವೆಂದು ವ್ಯಕ್ತವಾಗುತ್ತದೆ. ಮಲೆ ಸೀಮೆಯ ಡಿಸ್ಟ್ರಿಕ್ಟುಗಳಲ್ಲೆಲ್ಲಾ ಹಾಸನ ಡಿಸ್ಟ್ರಿಕ್ಟಿನ ಸ್ಥಿತಿಯು ಸಮರ್ಪಕವಾಗಿದೆ. ಕಡೂರು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ಜನಸಂಖ್ಯೆ ಕಡಿಮೆಬಿದ್ದಿರುತ್ತದೆ. ಒಟ್ಟಿಗೆ ನೋಡುವಲ್ಲಿ ಸಂಸ್ಥಾನದಲ್ಲೆಲ್ಲಾ ೨ಲಕ್ಷ ಪ್ರಜೆಯೂ ಮನೆಗಳ ಸಂಖ್ಯೆಯು ೫೮ಸಾವಿರದಷ್ಟೂ ಹೆಚ್ಚಿದೆಯೆಂದು ಗೊತ್ತಾಗುತ್ತದೆ. ಕಳೆದ ೧೦ವರ್ಷಗಳ ಮಧ್ಯೆ ಪ್ರತಿವರ್ಷವೂ ಪ್ಲೇಗಿನ ಹಾವಳಿಯೂ ಮಧ್ಯೆ ಮಧ್ಯೆ ವಾಂತಿಭೇದಿ ಸಿಡುಬಿನ ಉಪದ್ರವವೂ, ಅದರಮಧ್ಯೆ ಭೀಕರವಾದ ಒಂದು ಕ್ಷಾಮವೂ ಪ್ರಾಪ್ತವಾಗಿದ್ದರೂ, ಪ್ರಜಾವೃದ್ಧಿಯು ಇಷ್ಟುಮಟ್ಟಿಗೆ ಸಮರ್ಪಕವಾಗಿರುವುದು ಪಾಲ್ಯ ಪಾಲಕರಿರ್ವರಿಗೂ ನಿಜವಾಗಿ ಸಂತೋಷಪ್ರದವಾಗಿದೆ. ಮಲೆ ಸೀಮೆಯ ಡಿಸ್ಟ್ರಿಕ್ಟುಗಳ ನಿಸರ್ಗವಾದ ಸ್ಥಿತಿಯುಮಾತ್ರ ಪರಿತಾಪಕರವಾಗಿರುತ್ತದೆ.

ಮೈಸೂರು ಸಂಸ್ಥಾನದಲ್ಲಿನ ಮನೆಗಳ ಮತ್ತು ಜನರ ಸಂಖ್ಯೆ.

	ವಾಸದ ಮನೆಗಳು.			ಜನಗಳು.		
ಸ್ಥಲ	೧೯೧೧ ರಲ್ಲಿ	೧೯೦೧	ಕಂಡುಬಂದವ್ಯತ್ಯಾಸ	೧೯೧೧	೧೯೦೧	ಕಂಡುಬಂದ ವ್ಯತ್ಯಾಸ
ಬೆಂಗಳೂರುಪಟ್ಟಣ	೧೯೨೦೮	೧೪೮೧೦	ಹೆಚ್ಚು ೪೩೯೮	೮೮೬೫೧	೬೯೪೪೭	ಹೆಚ್ಚು ೧೯೨೦೪
ಬೆಂಗಳೂರು ಡಿ॥	೧೫೩೮೧೫	೧೪೩೩೦೯	ಹೆ ೧೦೫೦೬	೭೫೮೭೬೫	೬೮೯೫೫೯	ಹೆ ೬೯೨೦೬
ಕೋಲಾರ ಬಿ॥ಗಣಿ	೧೧೧೬೫	೮೦೯೮	ಹೆ ೩೦೬೭	೪೮೧೫೪	೩೮೨೦೪	ಹೆ ೯೯೫೦
ಕೋಲಾರ ಡಿ॥	೧೪೪೧೯೧	೧೩೫೧೫೩	ಹೆ ೯೦೩೮	೭೩೦೮೭೮	೬೮೫೩೯೬	ಹೆ ೪೫೪೮೨
ತುಮಕೂರು ಡಿ॥	೧೪೫೦೨೧	೧೩೬೧೦೨	ಹೆ ೮೮೪೯	೭೩೩೮೬೪	೬೭೦೩೭೭	ಹೆ ೬೪೪೮೩
ಮೈಸೂರುಪಟ್ಟಣ	೧೪೯೮೫	೧೪೫೪೫	ಹೆ ೪೪೦	೭೧೩೦೬	೬೮೧೧೧	ಹೆ ೩೧೯೫
ಮೈಸೂರು ಡಿ॥	೨೬೬೬೩೦	೨೫೬೬೮೨	ಹೆ ೯೯೪೮	೧೨೩೧೧೩೫	೧೨೨೩೬೬೧	ಹೆ ೭೪೭೪
ಚಿತ್ರದುರ್ಗ ಡಿ॥	೧೦೪೪೬೧	೯೩೮೬೯	ಹೆ ೧೦೫೯೨	೫೬೩೩೪೮	೫೧೧೦೬೨	ಹೆ ೫೨೨೮೬
ಹಾಸನ ಡಿ॥	೧೧೮೪೩೩	೧೧೫೬೮೨	ಹೆ ೨೭೫೧	೫೮೭೫೯೦	೫೬೮೯೧೯	ಹೆ ೧೮೬೭೧
ಕಡೂರು ಡಿ॥	೬೯೨೦೦	೭೧೫೫೧	ಕಡಿಮೆ ೨೩೫೧	೩೩೮೫೫೪	೩೬೨೭೫೨	ಕಡಿಮೆ ೨೪೧೯೮
ಶಿವಮೊಗ್ಗಾ ಡಿ॥	೧೦೨೫೪೯	೧೦೨೩೫೭	ಹೆ ೧೯೨	೫೧೬೧೯೫	೫೩೧೭೩೬	ಕಡಿಮೆ ೧೫೫೪೧
ರೇಲ್ವೆಗಳಲ್ಲಿ	೧೦೨೧	...	ಹೆ ೧೦೨೧	೫೦೫೨	...	ಹೆ ೫೦೫೨
ಮೈಸೂರುದೇಶದ						
ಒಟ್ಟು	೧೧೫೦೬೨೮	೧೦೯೨೨೮೫	ಹೆ ೫೮೩೪೩	೫೭೦೫೩೫೯	೫೪೪೯೮೦೦	ಹೆ ೨೫೫೫೫೯
ಕಂಟೋನ್ಮೆಂಟಿನಲ್ಲಿ	೧೫೨೫೧	೧೭೯೨೯	ಕಡಿಮೆ ೨೬೭೮	೧೦೦೮೩೪	೮೯೫೯೯	ಹೆ ೧೧೨೩೫
ಕಂಟೋನ್ಮೆಂಟು ಸೇರಿ ಮೈಸೂರು						
ದೇಶದ ಒಟ್ಟು	೧೧೬೫೮೭೯	೧೧೧೦೨೧೪	ಹೆ ೫೫೬೬೫	೫೮೦೬೧೯೩	೫೫೩೯೩೯೯	ಹೆ ೨೬೬೭೯೪

ಅತ್ತ ಭರತಖಂಡವಾದ್ಯಂತಕ್ಕೂ ಮಾಡಲ್ಪಟ್ಟಿರುವ ಲೆಕ್ಕದಿಂದ ಅಲ್ಲಿನ ಒಟ್ಟು ಜನಸಂಖ್ಯೆಯು ೩೧೫೦೦೧೦೯೯ ಎಂದು ಗೊತ್ತಾಗಿರುವುದು. ಆದರೆ ಕಳೆದ ೧೦ ವರ್ಷದ ಹಿಂದಿನ ಪರಿಗಣನೆಯ ಕಾಲದಲ್ಲಿದ್ದುದಕ್ಕಿಂತಲೂ ಈಗ ೧೦೦ ಕ್ಕೆ ೭ ರಂತೆ ಜನಸಂಖ್ಯೆಯು ಹೆಚ್ಚಾಗಿರುವುದು. ಈ ಒಟ್ಟು ಪ್ರಜಾ ಸಂಖ್ಯೆಯಲ್ಲಿ ಬ್ರಿಟಿಷರ ಆಳಿಕೆಗೊಳಪಟ್ಟ ದೇಶಗಳದು ೨೪೪೨೬೭೫೩೧. (ಹಿಂದಣದಕ್ಕಿಂತ ೧೦೦ ರಲ್ಲಿ ೫. ೪ ಹೆಚ್ಚು) ದೇಶೀಯ ಸಂಸ್ಥಾನಗಳದು ೭೦೭೩೩೫೬೮ (ಹಿಂದಣದಕ್ಕಿಂತ ೧೦೦ ರಲ್ಲಿ ೧೨. ೯ ಹೆಚ್ಚು) ಈ ಸಲದ ಪರಿಗಣನೆಯಲ್ಲಿ ದೇಶೀಯ ಸಂಸ್ಥಾನದಲ್ಲಿ ಇಷ್ಟು ಹೆಚ್ಚಿರಲು, ೧೮೯೭ ಮತ್ತೂ ೧೯೦೦ರಲ್ಲಿ ಪ್ರಾಪ್ತವಾಗಿದ್ದ ಕ್ಷಾಮದಿಂದ ಬ್ರಿಟಿಷ್ ರಾಜ್ಯಗಳಿಗಿಂತ ಅವು ವಿಶೇಷವಾಗಿ ಕಷ್ಟನಷ್ಟಗಳಿಗೆ ಸಿಕ್ಕಿದ್ದಾಗ್ಗೂ ಈಚೆಗೆ ಸುಧಾರಿಸಿಕೊಂಡುದೂ ಮತ್ತೂ ದೇಶೀಯ ಸಂಸ್ಥಾನಗಳಲ್ಲಿ ಹೆಚ್ಚು ಪ್ರಜಾವೃದ್ಧಿಗವಕಾಶವಿರುವುದೂ ಕಾರಣವಾಗಿರುತ್ತದೆ. ಬ್ರಿಟಿಷರ ಆಳಿಕೆಗೊಳಪಟ್ಟ ದೇಶಗಳಲ್ಲೆಲ್ಲಾ ಮಧ್ಯಪ್ರಾಂತಗಳು ಮತ್ತೂ ಬೀರಾರುಗಳಲ್ಲಿ ೧೦೦ರಲ್ಲಿ ೧೭.೭ ರಂತೆ; ಬರ್ಮಾದಲ್ಲಿ ೧೦೦ ರಲ್ಲಿ ೧೫.೪ ರಂತೆ; ಪೂರ್ವ ಬಂಗಾಳಾ ಮತ್ತೂ ಅಸ್ಸಾಂ ೧೧. ೮ ರಂತೆ; ಮದ್ರಾಸಾಧಿಪತ್ಯದಲ್ಲಿ ೮. ೩ ರಂತೆ; ಬೊಂಬಾಯಾಧಿಪತ್ಯದಲ್ಲಿ ೬ ರಂತೆ ಮತ್ತೂ ಬಂಗಾಳಾಧಿಪತ್ಯದಲ್ಲಿ ೩.೮ ರಂತೆ ಪ್ರಜಾಸಂಖ್ಯೆ ಹೆಚ್ಚಿರುತ್ತದೆ. ಪ್ಲೇಗು ಮತ್ತೂ ಮಲೇರಿಯಾ ಉಪದ್ರವಗಳಿಂದ ಪಂಜಾಬಿನಲ್ಲಿ ೧೦೦ ರಲ್ಲಿ ೧. ೮ ರಂತೆಯೂ ಸಂಯುಕ್ತ ಪ್ರಾಂತಗಳಲ್ಲಿ ೧೦೦ ರಲ್ಲಿ ೧ ರಂತೆಯೂ ಪ್ರಜಾನಾಶವಾಗಿರುತ್ತದೆ.

REGISTERED NO. M. 194

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷ್ಯಜ್ಞನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ಗ ೧೯೧೧ ನೇ ಇಸವಿ ಏಪ್ರಿಲ್ ತಾರೀಖು ೩ ನೇಸೋಮವಾರ. [ಸಂಚಿಕೆ ೧೪

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಡೆನ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !
೬೫ ಗುಣವಾಗದಿದ್ದರೆ ಹಣಪರತ.
ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಬಾಹ್ಯ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬೊಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲ, ಮೂತ್ರರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ಆರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳುಹಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರಕನಡಾ.

ಪಂಡಿತ ಎಸ್. ಗರಳಪುರಿ ಇವ.

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
34 ಮೈಸೂರು.

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೨೦-೮೦ ಮಾತ್ರೆಗಳುಳ್ಳ ಸೀಷೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಷೆ ೦—೪—೦., ೨೪ ಮಾತ್ರೆ ಸೀಷೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಷೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಷೆ ೦—೪—೦.

ಅರ್ಶೋರೋಗಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲ ಬಹುಳ ಖಾತರಿಯಾದ ಔಷಧ. ಸೇರಿನ ಡಬ್ಬಿ ೪—೦—೦. ೧೫ ದಿನಗಳ ಔಷಧ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಷೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಷೆ ೦—೪—೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಷೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಯಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕೆ ಬರೆಯಿರಿ.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್
ಇವರ ಅತ್ಯುತ್ತಮ ಸಿದ್ಧೌಷಧಗಳು.
33

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ.—ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೋಲದಂತೆ ೨೦ ದಿನಗಳವರೆಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೊಬ್ಬೆ, ವ್ರಣ, ಕುಷ್ಠ. ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.–ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.– ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕೆ. ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾಮಾಲ್ಯಾದಿರಸಾಯನ— ಈ ರಸಾಯನವನ್ನು ೦೮ ದಿನ ಸೇವಿಸುವಲ್ಲಿ ಪಶಾಂತಮೇಹ, ಮೂತ್ರಕೃಚ್ಛ್ರ ಅಸ್ತಿಸ್ರಾವ, ಅಸೃಗ್ದರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕುಮೂತ್ರ, ಅಸ್ತಿಗತಜ್ವರ ಶಿರೋಭ್ರಮಣ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ. ರೂಪಾಯಿ ೩. ಟಪ್ಪಾಲ್ ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣ ವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್ ಖರ್ಚು ೬ ಆಣೆ.

೯. ಮಹಾಕುಂಡಲ್ಯಾದಿರಸಾಯನ— ಇದರಿಂದ ಕ್ಷಯ ಕಾಶ, ಜ್ವರ, ದೀಪನ, ಪಾಂಡುರೋಗ, ಉನ್ಮಾದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ, ಖ. ೬ ಆ.

೧೦. ಏಳಂಗಸಾರಾಮ್ಲಕ.– ಇದರಿಂದ ಗಂಟಲ್ಲು ಉರಿಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳಿವನಮಾತ್ರೆ.– ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ— ಮಕ್ಕಳಿಗೆ ಸೀತದಿಂದ ಪ್ರಾಯಶ ನೀರು ಎರೆಯುವಾಗ ಜ್ಞಾನ ತಪ್ಪುವುದು ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳಿಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಷರಬತ್ತುಗಳೂ ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ:—
ಎಂ. ಪಂಡಿತ ಚನ್ನಬಸಪ್ಪ ಅಂಡ ಸನ್ಸ್.
ಚನ್ನಪಟ್ಟಣ, ಬೆಂಗಳೂರು, ಡಿಸ್ಟ್ರಿಕ್ಟ್.

ಜರ್ಮನ್ ಸಾಮ್ರಾಜ್ಯ.

4

ಕನ್ನಡದಲ್ಲಿ ಇದುವರೆಗೂ ಇಂತಹ ಪುಸ್ತಕವಿರಲಿಲ್ಲ. ಜರ್ಮನಿನ ವಿಷಯದಲ್ಲಿ ಎಲ್ಲವನ್ನೂ ವಿಶದವಾಗಿ ತಿಳಿಸುತ್ತದೆ. ಆಶ್ಚರ್ಯಕರವಾದ ಸಂಗತಿಗಳು, ಪ್ರತಿಯೊಬ್ಬರೂ ಓದಬೇಕಾದದ್ದು. ಮೇಲಾದಕಾಗದ. ಅಂದವಾದ ಮುದ್ರಣ ಬೆಲೆ ೬ ಆಣೆ. ಕಿಂಡರ್ ಗಾರ್ಟನ್ ಕಥೆಗಳು ಸ್ಕೂಲ್ಮಾಸ್ಟರುಗಳಿಗೆ ಆವಶ್ಯಕವಾದದ್ದು ೧೦ ಆಣೆ. ಉನ್ಮತ್ತ-ಬಂಗಾಳಾದೇಶದ ಸ್ತ್ರೀಯಚರಿತ್ರೆ ೨॥ ಅಣೆ.

ದೊರೆಯುವಸ್ಥಳ—ಜಿ. ಕೃಷ್ಣಶಾಸ್ತ್ರಿ ಅ॥ ಮಾ॥ ನಾರ್ಮಲ್‌ಸ್ಕೂಲ್ ಮೈಸೂರ್. ಮತ್ತು ಜನರಲ್‌ಏಜನ್ಸಿ,

ಮೈಸೂರು.

ಊದಬತ್ತಿಗಳು.

4

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,

ಮೈಸೂರು, ಸುಗಂಧಕಾರಿ.

ಉತ್ತಮ ಗ್ರಂಥಗಳು.

9

ಶಿವಪೂಜಾಸ್ತವಃ— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.— ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು,

ಹೊಸಮಠ ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16 ಲೋಕಾಮಯಹಾರ ಕಸ್ತೂರೀ ಮಾತ್ರೆ.

ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ. ಹೊಟ್ಟೆಶೂಲೆ, ಸಂದುಗಳ ನೋವು, ಮೈ ಕಾಲು ಹೂಡತ(ಭಾರ), ಮೈಸಡಿಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ.

ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಖಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿ ದೋಷಯವನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಪಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ.

ಇದನ್ನುಸೇವಿಸುತಿರುವವರು ಖಂಡಿತವಾಗಿಯೂ ಪ್ಲೇಗಿನರೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.

೨೦ ಮಾತ್ರೆಯುಳ್ಳ ಕುಪ್ಪಿಗೆ ೪ ಆಣೆ, ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು. ೧೧ರಿಂದ ೧೮ ಕುಪ್ಪಿವರೆಗೆ ಪೋಸ್ಟೇಜು ೪ ಆ

ಕಾಗದಗಳನ್ನು ಬರೆಯುವಾಗ್ಗೆ ನಿಮ್ಮ ಅಡ್ರಸ್ಸನ್ನು ದಯವಿಟ್ಟು ವಿಶದವಾಗಿ ಬರೆಯಿರಿ.

ವಿಳಾಸ;—ಸೀತಾರಾಘವ ವೈದ್ಯಶಾಲಾ,

ಮೈಸೂರು.

18

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.



ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರೆಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ,

ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,

Post Bilgi, North Kanara District.

ಪದ್ಮರಾಜ ಪುರಾಣಂ.

72

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨. ಪೋಸ್ಟೇಜು ೪ ಅಣೆ.

ಬಿ. ಮಲ್ಲಾರಾಧ್ಯರು,

ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು.
ಅಥವಾ ಬಿ. ಬಸವಾರಾಧ್ಯರು,

ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್,

ಬೆಂಗಳೂರು.

ಉತ್ತಮ ಗ್ರಂಥಗಳು.

113

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂಸೇರಿವೆ.

ಸೌಂದರ ಪುರಾಣ —೦-೧೨-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಅಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಅಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿಃ.— ೧೨ ಅಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಅಣೆ.

ಶಂಕರಲಿಂಗಕದಂ.— ೧ ಅಣೆ.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕ ಮಂಡಲಿ,

ಮೈಸೂರು.

೧೯೧೧ನೇ ಇಸವಿ ಏಪ್ರಿಲ್ ತಾ॥ ೩ ರಿಂದ ೧೯೧೧ನೇ ಏಪ್ರಿಲ್ ತಾ॥ ೯ ರವರಿಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಚೈತ್ರ ಶು॥ ಚೌತಿಯಿಂದ ಚೈತ್ರ ಶು॥ ದಶಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಾನ ತೇದಿ
3	ಸೋ	ಚೌ	11-2	ಕೃ	19-50	21
4	ಮಂಗ	ಪಂ	4- 0	ಪುನರ್	53-58	22
5	ಬುಧ	ಷ	53-2	ಪುಷ್ಯ	11-30	23
6	¹ಗುರು	ಸ	47-30	ದ್ರಾ	7-32	24
7	²ಶುಕ್ರ	ಅ	42-18	ಪ್ನು	4-2	25
8	ಶನಿ	ನಾ	38-2	ಷ್ಯ	1-4	26
9	³ಭಾನು	ದ	34-40	ಮ	57-20	27

(1) ನಂಜನಗೂಡಿನಲ್ಲಿ ಶ್ರೀಕಂಠಮುಡಿ ಉತ್ಸವಃ (2) ಮೇಲುಕೋಟೆಯಲ್ಲಿ ವೈರಮುಡಿಉತ್ಸವಃ (3)ಸರ್ವೈಕಾದಶಿ, ನಂಜನಗೂಡಿನಲ್ಲಿ ಶ್ರೀಕಂಠೇಶ್ವರಪಂಚರಥ, ಶಿವನಸಮುದ್ರಸೋಮೇಶ್ವರರಥ, ತಿರ್ಮಕೂಡ್ಲು ಅಗಸ್ತ್ಯೇಶ್ವರರಥ.

ಮೈಸೂರ್ ಗೆಜೆಟಿ ಸಂಗ್ರಹ.

ಬಿ ಷೆಡ್ಯೂಲ್ ೫ ನೇ ತ॥ ಅ॥ ಕಮಿಷನರು ಮಿ॥ ಜಿ. ಬಿ. ಹೆಬ್ಬಿಕಾರ್ ಬಿ. ಎ., ಎಲ್‌ಎಲ್. ಬಿ., ಯವರು ೧೯೧೧ನೆ ಡಿಶಂಬರ್ ತಾ॥ ೧ ರಿಂದ ೪ ನೇ ತರಗತಿಗೆ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಡಿಸ್ಟ್ರಿಕ್ಟ್ ಮತ್ತು ಸಷನ್ಸ್ ಜಡ್ಜ್ ಮಿ॥ ಆರ್. ಬಿ. ಪ್ಲಮರ್‌ರವರು ಮಿ॥ ಟಿ. ಪರಮಶಿವಯ್ಯರ್‌ರವರು ರಜದಮೇಲಿರುವವರಿಗೆ ೧ ನೇ ತರಗತಿಯ ಡಿ॥ ಜಡ್ಜರಾಗಿ ಅನಿತ್ಯವಾಗಿ ನೇಮಿಸಲ್ಪಟ್ಟಿತ್ತಾರೆ.

ಚಿತ್ರದುರ್ಗದ ಡಿ॥ ಪೊಲೀಸ್ ಸೂಪರಿಂಟೆಂಡೆಂಟ್ ಮಿ॥ ವೈ. ವಿ. ಕೃಷ್ಣಮೂರ್ತಿ ಬಿ. ಎ., ಯವರು ೧೯೧೦ ನೇ ನವಂಬರು ತಾ॥ ೨ ರಿಂದ ಬಿ ಷೆಡ್ಯೂಲ್ ಅ॥ ಕಮಿಷನರು ೧ ನೇ ತರಗತಿಗೆ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಎ ಷೆಡ್ಯೂಲ್ ೫ ನೇ ತರಗತಿ ಪ್ರಬೇಷನರಿ ಅ॥ ಕಮಿಷನರುಗಳಾದ ಮೆಸರ್ಸ್. ಕೆ. ವಿ. ಅನಂತರಾಮನ್ ಬಿ.ಎ., ಮತ್ತೂ ಎಂ. ವಿ. ರಾಮನಾಥನ್ ಬಿ. ಎ., ಯವರುಗಳು ೧೯೧೦ ನೇ ಡಿಶಂಬರ್ ತಾ॥ ೪ ರಿಂದ ಆ ತರಗತಿಯಲ್ಲಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

೧೯೧೦ ನೇ ಡಿಶಂಬರ್ ತಾ॥ ೧ ರಿಂದ ಸ॥ ಪ್ರೊಟಂ ಸೀನಿಯರ್ ಅ॥ ಕಮಿಷನರ್ ಮಿ॥ ಸಿ. ಎಸ್. ಬಾಲಸುಂದರಮಯ್ಯರ್, ಬಿ. ಎ., ಯವರು ಡೆ॥ ಕಮಿಷನರಾಗಿ ನಿಯಮಿತರಾದ ಮಿ॥ ಕೆ. ಚಾಂಡಿಯವರ ಬದಲು ಸೀನಿಯರ್ ಅ॥ ಕಮಿಷನರಾಗಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ. ಆ॥ ಸೀನಿಯರ್ ಅ॥ಕಮಿಷನರು ಮಿ॥ಬಿ. ರಾಮಸ್ವಾಮಯ್ಯ ಬಿ.ಎ. ಬಿ. ಎಲ್., ರವರು ಮಿ॥ ಎಂ. ಶಾಮರಾವ್ ಎಂ. ಎ., ರವರ ಬದಲು ಸಬ್‌ಪ್ರೊಟಂ ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿಯೂ, ಬಿ. ಷೆಡ್ಯೂಲ್ ೧ ನೇ ತ॥ ಅ॥ ಕಮಿಷನರು ಮಿ॥ ಎಲ್. ಕೃಷ್ಣರಾಯರು ಇತರಕೆಲಸದಮೇಲಿರುವ ಮಿ॥ ಮಿರ್‌ಹಂಜಾಹುಸೇನ್, ಬಿ. ಎ., ಬಿ. ಎಲ್, ರವರ ಬದಲು ಅ॥ ಸೀನಿಯರ್ ಕಮಿಷನರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಎಕ್ಸೈಸ್ ಕಮಿಷನರ್ ಮತ್ತೂ ರೆಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ ಮಿ॥ ಎಚ್. ಎಚ್. ಸ್ಪಾರ್ಕ್ಸ್ ರವರಿಗೆ ೧೯೧೧ ನೇ ಏಪ್ರಿಲ್ ತಾ॥ ೨೦ ರಿಂದ ೬ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ. ಅವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಡೆ॥ ಕಮಿಷನರ್ ಮಿ॥ ಕೆ. ಎಸ್. ದೊರೆಸಾಮಯ್ಯರ್‌ರವರು ಆಕ್ಟಿಂಗ್ ಎಕ್ಸೈಸ್ ಕಮಿಷನರ್ ಮತ್ತೂ ರೆಜಿಸ್ಟ್ರೇಷನ್ ಇ॥ ಜನರಲ್ ಮತ್ತು ಜಾಯಿಂಟ್ ಸ್ಟಾಕ್ ಕಂಪನಿಗಳ ಎ॥ ಅ॥ ರೆಜಿಸ್ಟ್ರಾರ್ ಮತ್ತೂ ಸ್ಟಾಂಪುಗಳ ಕಮಿಷನರು ಆಗಿಯೂ, ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರಾದ ಮಿ॥ ಎಂ. ಶಾಮರಾವ್ ಎಂ. ಎ., ಯವರು ತುಮಕೂರು ಡಿಸ್ಟ್ರಿಕ್ಟ್ ಡೆ॥ ಕಮಿಷನರಾಗಿಯೂ ಡಿ॥ ಮ್ಯಾಜಿಸ್ಟ್ರೇಟರಾಗಿಯೂ, ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ನಾರಾಯಣಯ್ಯಂಗಾರ್ ಬಿ. ಎ., ಬಿ. ಎಲ್., ರವರು ಕೋಆಪರೇಟಿವ್ ಸೊಸೈಟಿಗಳ ರೆಜಿಸ್ಟ್ರಾರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಕನ್ಯಾದಾನವು.

ಈ ವಿಷಯವನ್ನು ಕುರಿತು ತಂಜಾವೂರಿನ ದಿವಾನ್‌ಬಹದ್ದೂರ್ ಆ॥ ಆರ್. ರಘುನಾಥರಾವ್ ರವರು ಹೀಗೆ ಬರೆದಿರುತ್ತಾರೆ—"ಕನ್ಯಾದಾನಕ್ಕೂ ವಿವಾಹಕ್ಕೂ ಸಂಬಂಧವಿಲ್ಲ. ೧೦ ವರ್ಷದ ಹೆಣ್ಣಿಗೆ ಕನ್ಯೆಯೆಂದು ಹೆಸರು. ೧೦ ವರ್ಷ ತುಂಬಿದಮೇಲೆ ೧೧ ನೆಯ ವರ್ಷದಾರಭ್ಯ ಕನ್ಯಾತ್ವವನ್ನು ಕಳೆದುಕೊಳ್ಳುವವರೆಗೂ ಅದು ಕನ್ಯೆಯೆಂತಲೇ ಹೇಳಿಸಿಕೊಳ್ಳುವುದು. ಒಬ್ಬನು ತನ್ನ ಕನ್ಯೆಯನ್ನು ಮತ್ತೊಬ್ಬನಿಗೆ ದಾನಮಾಡಬಹುದು. ಅಂಥ ದಾನವನ್ನು ಪರಿಗ್ರಹಿಸಿದವನು, ದಾನವಾಗಿ ಕೊಡಲ್ಪಟ್ಟ ಕನ್ಯೆಯನ್ನು ತಾನೇ ಮದುವೆಮಾಡಿಕೊಳ್ಳಬಹುದು. ಇಲ್ಲವೆ ಮತ್ತೊಬ್ಬನಿಗೆ ದಾನಮಾಡಿಬಿಡಬಹುದು. ಕನ್ಯಾದಾನಕ್ಕೆ ಪಾತ್ರನಾಗುವವನು ೧೬ ವರ್ಷ ವಯಸ್ಸಿನವನಾಗಿರಬೇಕು. ಆತನು ೨೦ ವರ್ಷ ವಯಸ್ಸಿಗೆ ಮೀರಿದವನಾಗಿರಕೂಡದು. ೧೦ ವರ್ಷಕ್ಕೊಳಪಟ್ಟ ಹೆಣ್ಣು ಕನ್ಯೆಯೆನಿಸಿಕೊಳ್ಳುವುದಿಲ್ಲ. ಆದುದರಿಂದ ಮದುವೆಯ ನಾಲ್ಕನೆಯ ದಿವಸ ಗರ್ಭಾಧಾನವನ್ನು ಹೊಂದುವುದಕ್ಕೆ ಅರ್ಹಳಾದ ಮುಗ್ಧೆಯನ್ನು ಮದುವೆಯಾಗಬೇಕು. ಹಾಗಾದರೆ ಅಂಥ ಕನ್ಯೆಯು ರಜಸ್ವಲೆಯಾಗಿಯೇ ಇರಬೇಕಲ್ಲವೆ? ಇಂಥ ಹೆಣ್ಣುಗಳ ಮದುವೆಯು ಪರಮಸೌಖ್ಯದಾಯಕವೆಂದು ಯಾರು ಹೇಳುವುದಿಲ್ಲ? ಬಾಲಿಕಾವಿವಾಹವನ್ನು ಮಾಡಕೂಡದೆಂದು ತಿಳಿದಿರುವವರೆಲ್ಲರೂ ತಮ್ಮ ಮಕ್ಕಳನ್ನು ಯುಕ್ತ ವಯಸ್ಸು ಬಂದಮೇಲೆ ವಿವಾಹಿತರನ್ನಾಗಿ ಮಾಡುತ್ತಾ ಬಂದರೆ ನಮಗೆ ಶಾಸ್ತ್ರೀಯ ವಿವಾದಗಳೇತಕ್ಕೆ? ವಿಧಿನಿರ್ಮಾಣಗಳೇತಕ್ಕೆ? ಮಠಾಧಿಪತಿಗಳ ಸಮ್ಮತಿಯುತಾನೇ ಏತಕ್ಕೆ? ನಮ್ಮವರು ಹದ್ದುಗಳಂತೆ ಕೂಗಾಟವೇ ಹೆಚ್ಚಾಗುಳ್ಳವರೇ ಹೊರತು ಕಾರ್ಯಭಾಗದಲ್ಲಿ ಮಾತ್ರ ತಮ್ಮ ತ್ರಾಣವನ್ನು ತೋರಿಸುವುದಕ್ಕೆ ಮುಂದಾಗುವವರಲ್ಲವೆಂಬುದನ್ನು ತಿಳುಹುವುದಕ್ಕೆ ವಿಷಾದಿಸುತ್ತೇನೆ."

ನಾಗರಹಾವಿನ ವಿಷಕ್ಕೆ ಮದ್ದು.

ನಾಗರಹಾವಿನ ವಿಷವು ಪ್ರಾಣಾಪಾಯಕರವಾದುದಷ್ಟೆ. ಇದರ ವಿಷದ ನಿರೋಧಕ್ಕೆ ವಿಚಿತ್ರವಾದ ಒಂದು ಚಿಕಿತ್ಸೆಯು ಈಗ ಹೊರಬಿದ್ದಿರುವುದು. ಅದೇನೆಂದರೆ:—"ನಾಗರಹಾವಿನ ಕಂಠದಲ್ಲಿ ವಿಷದ ಕೊಳವೆಯೊಂದಿರುತ್ತದೆ. ಅದರಿಂದ ವಿಷವು ಸ್ರವಿಸುವುದು. ಅದೇ ವಿಷವನ್ನು ತೆಗೆದು ಆ ಹಾವಿನ ದೇಹದ ರಕ್ತಕ್ಕೆ ಸೇರಿಸಿದರೆ ಅದು ಸಾಯುವುದಿಲ್ಲ. ಇದು ನಿಜ. ಕೆಲವು ಹಾವುಗಳಲ್ಲಿ ವಿಷವೇ ಇರುವುದಿಲ್ಲ. ಅಂಥ ವಿಷವಿಲ್ಲದ ಹಾವುಗಳ ಶರೀರಕ್ಕೆ ಈ ವಿಷವನ್ನು ಸೇರಿಸಿದರೆ, ಅವು ಸಾಯುವುವು. ಈ ಹಾವಿನ ವಿಷವನ್ನು ಒಂದು ಕುದುರೆಗೆ ಕೊಟ್ಟು ಕುಡಿಸಿದೆನು. ಆ ಕುದುರೆಯು ಸಾಯಲಿಲ್ಲ. ಮತ್ತೊಂದಾವೃತ್ತಿ ಮೊದಲಿಗಿಂತ ಎರಡರಷ್ಟು ಹೆಚ್ಚಾಗಿ ಕುದುರೆಗೆ ವಿಷವನ್ನು ಕುಡಿಸಿದೆನು. ಆಗಲೂ ಕುದುರೆಯು ಸಾಯಲಿಲ್ಲ. ಮತ್ತೂ ಒಂದು ಬಾರಿ ಕುದುರೆಯ ದೇಹಕ್ಕೆ ಮೊದಲಿಗಿಂತಲೂ ಹೆಚ್ಚಾಗಿ ಆ ವಿಷವನ್ನು ಸೇರಿಸಿದೆನು. ಆದರೂ ಕುದುರೆಯು ಸ್ವಲ್ಪವಾದರೂ ಅಸ್ವಸ್ಥತೆಗೊಳ್ಳದೆ, ಪೂರ್ವದಂತೆಯೇ ಆರೋಗ್ಯದ ರೀತಿಯಲ್ಲಿಯೇ ಇದ್ದಿತು. ಕೆಲವು ಇಲಿಗಳ ಶರೀರಕ್ಕೆ ಆ ಹಾವಿನ ವಿಷವನ್ನು ಸೇರಿಸಿದೆನು. ಕೆಲವು ನಿಮಿಷಗಳೊಳಗಾಗಿ ಅವು ಮರಣಾವಸ್ಥೆಗೆ ಬಂದುವು. ಅಷ್ಟರಲ್ಲಿ ಕುದುರೆಯ ದೇಹದ ರಕ್ತವನ್ನು ಆ ಇಲಿಗಳ ಬಾಯಿಗೆ ಹಾಕಿದೆನು. ಅದನ್ನು ಕುಡಿದ ಕೆಲ ನಿಮಿಷಗಳೊಳಗಾಗಿ ಆ ಇಲಿಗಳು ಸ್ವಸ್ಥವಾಗಿ ಬದುಕಿಕೊಂಡವು. ಆದುದರಿಂದ ಕುದುರೆಯ ರಕ್ತವು ಹಾವಿನ ವಿಷಕ್ಕೆ ವಿರುದ್ಧವಾದ ಗುಣವುಳ್ಳದೆಂದು ಊಹಿಸಿ, ಕೊರ್ಜಿ ಚೀನಾಕ್ಕೂ, ಹಿಂದೂಸ್ಥಾನಕ್ಕೂ ಕುದುರೆಯ ರಕ್ತವನ್ನು ಸೀಸೆಗಳಲ್ಲಿ ತುಂಬಿ ಕೆಡದಂತೆ ಮಾಡಿ ಕಳುಹಿಸಿರುವೆನೆಂಬದಾಗಿ ಈ ಲೇಖನವು ಸರ್. ರೇ. ಲಂಕಾಸ್ಟರ್ ಎಂಬುವರಿಂದ ೧೯೦೯ ನೆಯ ವರ್ಷದಲ್ಲಿ ಬರೆಯಲ್ಪಟ್ಟಿರುವುದೆಂದು ಲಂಡನ್ ಪಟ್ಟಣದಲ್ಲಿರುವ ಆರ್ಚಿಬಲ್ಡ್ ಕಾನ್ಸ್ಟಬಿಲ್ ಅಂಡ್ ಕಂಪೆನಿಯವರು ಪ್ರಕಟಪಡಿಸಿರುವರೆಂಬದಾಗಿ ಫ್ರಂಯಾನ್ ಈಜಿಚೇರ್ ಎಂಬ ಗ್ರಂಥದ ೧೮೧-೧೮೬ ನೆಯ ಪುಟಗಳಲ್ಲಿ ಹೇಳಲ್ಪಟ್ಟಿದೆ.

ಒಬ್ಬ ಮಠಾಧಿಪತಿ ಮಾಡಿದ ಸಾಲವು ಆತನ ಉತ್ತರಾಧಿಕಾರಿಯನ್ನು ಎಷ್ಟರಮಟ್ಟಿಗೆ ಬಾಧ್ಯನನ್ನಾಗಿ ಮಾಡುವುದು?

ಈ ವ್ಯಾಜ್ಯವು ಮದ್ರಾಸು ಹೈ ಕೋರ್ಟಿನಲ್ಲಿ ತೀರ್ಪುಗೊಂಡಿದೆ. ಅಪೀಲ್ ವಾದಿಯು ಧರ್ಮಪುರಂ ಮಠದ ಸದ್ಯದ ಅಧಿಕಾರಿ. ಪ್ರತಿವಾದಿಯು ಆ ಮಠದ ಹಿಂದಿನ ಸ್ವಾಮಿಗಳಿಗೆ ಜವಳಿ ಮೊದಲಾದ ಸಾಮಾನುಗಳನ್ನು ಸಾಲವಾಗಿ ಕೊಟ್ಟಿದ್ದ ವರ್ತಕನು. ಈತನು ತನಗೆ ಹಿಂದಿನ ಸ್ವಾಮಿಗಳಿಂದ ಬರಬೇಕಾಗಿದ್ದ ಹಣಕ್ಕೆ ವ್ಯಾಜ್ಯವನ್ನು ಹಾಕಿ ತನ್ನಪಕ್ಷ ತೀರ್ಪನ್ನು ಪಡೆದುಕೊಂಡನು. ಸಾಲಮಾಡಿದ್ದ ಹಿಂದಿನ ಮಠಾಧಿಪತಿಯು ತನ್ನ ಅಧಿಕಾರವನ್ನು ಈಗಿನ ಅಪೀಲ್‌ವಾದಿಗೆ ವಹಿಸಿದ್ದುದರಿಂದ ಡಿಕ್ರಿದಾರನು ಮಠದ ಸೊತ್ತುಗಳ ಮೇಲೆ ತನ್ನ ಡಿಕ್ರಿಯ ಹಣವನ್ನು ಬಗೆಹರಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದಾಗ ಅಪೀಲ್ ವಾದಿಯು ಆತಂಕಪಡಿಸಿದರು. ಹೈಕೋರ್ಟಿನವರು ಆ ಆತಂಕವನ್ನು ತಿರಸ್ಕರಿಸಿ, ಡಿಕ್ರಿಯಂತೆ ಮಠದ ಸ್ವತ್ತುಗಳಮೇಲೆ ಮುಂದಣ ಕ್ರಮವನ್ನು ಜರುಗಿಸುವುದಕ್ಕೆ ಅಪ್ಪಣೆಯನ್ನಿತ್ತರು. ಆದರೆ, ಇಂಥಾ ವ್ಯಾಜ್ಯಗಳಲ್ಲಿ ಡಿಕ್ರಿಯು ಮೋಸದಿಂದ ಪಡೆಯಲ್ಪಟ್ಟುದೆಂಬ ಕಾರಣವನ್ನನುಸರಿಸಿ, ಡಿಕ್ರಿಯನ್ನು ಪರಿಹಾರಗೊಳಿಸುವುದಕ್ಕೆ ವಾದಿಯು ಹೊಸದಾಗಿ ವ್ಯಾಜ್ಯವನ್ನು ತರಬಹುದೆಂಬದಾಗಿ ಅಪ್ಪಣೆ ಮಾಡಿದರು. ಅದರ ಮೇಲೆ ಪ್ರಸ್ತುತದ ಮಠಾಧಿಕಾರಿಯು ವ್ಯಾಜ್ಯವನ್ನು ತರಲು ಕಾರಣವುಂಟಾಯಿತು. ಮೊದಲ ಕೋರ್ಟಿನವರು ಸಾಲವು ಮಠಕ್ಕಾಗಿ ಮಾಡಲ್ಪಟ್ಟುದಾದುದರಿಂದ ಮೊದಲ ವ್ಯಾಜ್ಯದಲ್ಲಿ ಕೊಡಲ್ಪಟ್ಟ ಡಿಕ್ರಿಗೆ ವಾದಿಯು ಬಾಧ್ಯನಾಗುತ್ತಾನೆಂಬ ಕಾರಣದ ಮೇಲೆ ವಾದಿಯ ವ್ಯಾಜ್ಯವನ್ನು ತಿರಸ್ಕರಿಸಿ, ಪ್ರತಿವಾದಿಯ ಪರವಾಗಿ ತೀರ್ಮಾನವನ್ನಿತ್ತರು. ಇದರಮೇಲೆ ವಾದಿಯು ಹೈಕೋರ್ಟಿನಲ್ಲಿ ಅಪೀಲನ್ನು ಮಾಡಿದರು. ಅಲ್ಲಿ ವ್ಯಾಜ್ಯದ ಜವಾಳವನ್ನು ಕೆಳಗಿನ ನ್ಯಾಯಸ್ಥಾನದವರು ಚೆನ್ನಾಗಿ ಅವಗಾಹನೆಗೆ ತಂದುಕೊಳ್ಳಲಿಲ್ಲವೆಂತಲೂ, ದಕ್ಷಿಣ ಇಂಡಿಯಾದಲ್ಲಿ ಟ್ರಸ್ಟಿಗೆ ಇರಬೇಕಾದ ನಿಯತವಾದ ಅಧಿಕಾರವೇ ಆಗಲೀ, ಗಂಡನ ಸ್ವತ್ತುಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುವ ವಿಧವೆಗೆ ಇರುವಷ್ಟು ಹೆಚ್ಚು ಅಧಿಕಾರವೇ ಆಗಲೀ ಮಠಾಧಿಪತಿಗೆ ಇರುವುದಿಲ್ಲವೆಂತಲೂ, ಆತನು ಕೇವಲ ಒಬ್ಬ ಕಾರ್ಯ ನಿರ್ವಾಹಕನಾಗಿ ತಿಳಿಯಲ್ಪಡುತ್ತಾನೆಂತಲೂ, ಅಂಥಾ ಕಾರ್ಯ ನಿರ್ವಾಹಕನು ತನ್ನ ಅಧಿಕಾರ ನಿರ್ವಾಹಕ್ಕೆ ಅತ್ಯವಶ್ಯಕವಾದ ವೆಚ್ಚಗಳಿಗೆ ತಾತ್ಕಾಲಿಕದ ವರಮಾನವನ್ನು ಉಪಯೋಗಿಸಿಕೊಳ್ಳಬಹುದೆಂತಲೂ, ಮಠಕ್ಕೆ ಸಂಬಂಧಪಟ್ಟ ಸೊತ್ತುಗಳನ್ನು ಅಂಥ ಸಾಲಕ್ಕೆ ಗುರಿಪಡಿಸಬೇಕಾದರೆ, ಮಠಕ್ಕೆ ಇತರ ದ್ರವ್ಯಾನುಕೂಲ್ಯವು ಇರಲಿಲ್ಲವೆಂಬದನ್ನು ನಿರೂಪಿಸಿ ಕೊಡಬೇಕಾಗಿರುವುದೆಂತಲೂ, ಮಠದ ಗುರುಪೂಜಾಮಹೋತ್ಸವದ ವೆಚ್ಚಕ್ಕಾಗಿ ಪ್ರತಿವಾದಿಯಿಂದ ಆ ಜವಳಿ ಮೊದಲಾದ ಪದಾರ್ಥಗಳು ಕೊಡಲ್ಪಟ್ಟಿದ್ದರೂ, ಇನ್ನಾವ ವರಮಾನವೂ ಇಲ್ಲದೆ ಅನಿವಾರ್ಯ ಮೂಲಕವಾಗಿ ಅಂಥ ಸಾಲ ಮಾಡಲ್ಪಟ್ಟಿತೆಂಬುದನ್ನು ಆಧಾರಪೂರ್ವಕವಾಗಿ ನಿರೂಪಿಸಿಕೊಡಬೇಕೆಂತಲೂ, ಹಾಗೆ ಮಾಡಿಕೊಡುವ ಕೆಲಸದ ಭಾರವು ಪ್ರತಿವಾದಿಯ ಮೇಲೆ ಬಿದ್ದಿರುವುದೆಂತಲೂ, ಅದನ್ನು ಪ್ರತಿವಾದಿಯು ನಿರೂಪಿಸಿ ಕೊಟ್ಟಿರುವುದಿಲ್ಲವೆಂತಲೂ, ಇಂಥ ಅಭಿಪ್ರಾಯವನ್ನು ಹಿಡಿದು ಕೆಳಕೋರ್ಟಿನವರು ವ್ಯಾಜ್ಯವನ್ನು ತೀರ್ಮಾನಿಸಿರುವುದಿಲ್ಲವೆಂತಲೂ, ವಾದಿಯಪರವಾಗಿ ವಾದಿಸಲ್ಪಟ್ಟಿತು. ಸಾಲಮಾಡುವುದಕ್ಕೆ ಇದ್ದ ಅವಶ್ಯಕತೆಯನ್ನು ಕುರಿತು ಸ್ವಲ್ಪಮಟ್ಟಿಗೆ ಆಧಾರಗಳು ತೋರಿಸಲ್ಪಟ್ಟಿರುವುದೆಂತಲೂ, ಲೆಕ್ಕಗಳನ್ನು ನ್ಯಾಯಸ್ಥಾನಕ್ಕೆ ತರಬೇಕೆಂದು ವಾದಿಯು ಕೋರಲ್ಪಟ್ಟಿದ್ದರೂ, ಅವರು ಆಪ್ರಕಾರವಾಗಿ ತಂದು ತೋರಿಸಲಿಲ್ಲವೆಂತಲೂ, ಹಿಂದಿನ ಮಠಾಧಿಪತಿಗಳು, ತಮ್ಮ ಅಧಿಕಾರವನ್ನು ಪರಿತ್ಯಜಿಸಿದ ಬಳಿಕ, ಈಗಿನ ಮಠಾಧಿಪತಿಗಳು ಸಾಲಕ್ಕಾಗಿ ಸ್ವಲ್ಪ ಧನವನ್ನು ಸಲ್ಲಿಸಿರುವುದರಿಂದ ಆ ಸಾಲವನ್ನು ತೀರಿಸುವುದಕ್ಕೆ ತಮಗಿರುವ ಬಾಧ್ಯತೆಯನ್ನು ತಾವೇ ಒಪ್ಪಿಕೊಂಡಿರುವರೆಂತಲೂ ಪ್ರತಿವಾದಿಯ ಪಕ್ಷದಿಂದ ವಾದಿಸಲ್ಪಟ್ಟಿತು. ಇದರಮೇಲೆ ಕೋರ್ಟಿನವರು—ಈ ವ್ಯಾಜ್ಯದ ಸಾರಾಂಶವನ್ನು ಕೆಳಕೋರ್ಟಿನವರು ತಿಳಿದುಕೊಂಡಿರಲಿಲ್ಲವೆಂತಲೂ, ಮಠಕ್ಕೆ ಸಾಲವು ಕೊಡಲ್ಪಟ್ಟ ವಿಷಯದಲ್ಲಿ ಅಂಥ ಸಾಲವು ಮಠಕ್ಕೆ ಸಂಬಂಧಿಸಿದ ಯಾವುದೊ ಒಂದು ಕಾರ್ಯಕ್ಕೆ ವಿನಿಯೋಗಪಡಿಸಲ್ಪಟ್ಟಿತೆಂದು ಸಾಲಕೊಟ್ಟವನು ಹೇಳುವುದುಮಾತ್ರವೇ ಸಾಲದಂತಲೂ, ಅಂಥ ಸಾಲವನ್ನು ಕೊಡದೆಹೋಗಿದ್ದರೆ ಮಠದ ಗೌರವಕ್ಕೂ ಗಣ್ಯತೆಗೂ ಭಂಗ ವುಂಟಾಗುವ ಸ್ಥಿತಿಯಲ್ಲಿ ಮಠವು ತಾನು ಸಾಲಕೊಡುವ ಕಾಲದಲ್ಲಿ ಇದ್ದಿತೆಂಬುದನ್ನು ಪ್ರತಿವಾದಿಯು ಆಧಾರಪೂರ್ವಕವಾಗಿ ನಿರೂಪಿಸಿ ಕೊಡಬೇಕಾಗಿದ್ದಿತೆಂತಲೂ, ನ್ಯಾಯಾಧಿಪತಿಗಳು ಅಭಿಪ್ರಾಯಪಟ್ಟು, ಆ ಕಾಲದಲ್ಲಿ ಸಾಲವನ್ನು ಮಾಡಬೇಕಾದುದು ಮಠಕ್ಕೆ ಅತ್ಯವಶ್ಯಕವಾಗಿಯೂ ಅನಿವಾರ್ಯವಾಗಿಯೂ ಏರ್ಪಡುವಷ್ಟರ ಸ್ಥಿತಿಯಲ್ಲಿ ಮಠವು ಇದ್ದಿತೆಂಬುದನ್ನು ವಿಚಾರಿಸಿ ತೀರ್ಮಾನಿಸಬೇಕೆಂದೂ ಕೆಳಕೋರ್ಟಿಗೆ ಹಾಕಿರುವರು.

ವರ್ತಮಾನ ಸಂಗ್ರಹ.

ಬ್ರಿಟಿಷ್ ಕೊಲಂಬಿಯಾ ವ್ಯಾಂಕೂವರಿನಲ್ಲಿ ಪ್ರಕಟಿತವಾಗುವ ಸ್ವದೇಶ ಸೇವಕ ಯೆಂಬ ಪತ್ರಿಕೆಯು ಬ್ರಿಟಿಷ್ ಇಂಡ್ಯಾದೊಳಕ್ಕೆ ತರಿಸಲ್ಪಡಕೂಡದೆಂದು ಅಪ್ಪಣೆಯಾಗಿದೆ.

ಅತ್ಯಂತ ಶ್ರೇಷ್ಠವಾದ ಕುಲೀನನ್ ವಜ್ರವು ಶ್ರೀ ಜಾರ್ಜ್ ಪ್ರಭುಗಳ ಪಟ್ಟಾಭಿಷೇಕ ಮಹೋತ್ಸವ ಸಮಯದಲ್ಲಿ ಧರಿಸಲ್ಪಡುವ ಕಿರೀಟದಲ್ಲಿ ಕೆತ್ತಲ್ಪಡುವುದು. ಅದು ಬಲು ದೊಡ್ಡದಾಗಿರುವುದರಿಂದ ಪೂರ್ಣಾಕೃತಿಯಲ್ಲೇ ಅದನ್ನು ಕಿರೀಟದಲ್ಲಿ ಕೆತ್ತುವುದಕ್ಕೆ ಅನುಕೂಲ್ಯವಿಲ್ಲದುದರಿಂದ, ಅದನ್ನು ಎರಡಾಗಿ ಕತ್ತರಿಸಿ, ಆ ತುಂಡುಗಳಲ್ಲೊಂದು ಕಿರೀಟದ ಮುಂಗಡೆಯ ಮಧ್ಯಭಾಗದಲ್ಲಿ ಸೇರಿಸಲ್ಪಟ್ಟಿರುವುದು.

ರಾಜದ್ರೋಹ ಪ್ರಸರಣವನ್ನು ತಡೆಯುವುದಕ್ಕಾಗಿ ತಾತ್ಕಾಲಿಕವಾಗಿ ಉಪಸಿದ್ಧ ರಾಜದ್ರೋಹ ಸಂಘ ನಿರೋಧಕ ವಿಧಿಯನ್ನು ಶಾಶ್ವತವಾದ ವಿಧಿಯಾಗಿರುವಂತೆ ಮಾಡಬೇಕೆಂಬ ಸಂಗತಿಯು ಕಳೆದ ತಿಂಗಳು ತಾ॥ ೨೦ ರಲ್ಲಿ ವೈಸರಾಯರ ನಿಯಮ ನಿರ್ಮಾಣ ಸಭೆಯಲ್ಲಿ ಪ್ರಸಂಗಿಸಲ್ಪಟ್ಟಿತು. ಅದರಮೇಲೆ ಕೆಲ ಸಭಾಸ್ತಾರರು ಬಲವಾಗಿ ಆಕ್ಷೇಪಿಸಿದರು. ವಾದಾನುವಾದಗಳು ಚೆನ್ನಾಗಿ ಜರುಗಿದುವು. ಕಡೆಗೂ ಅದು ಶಾಶ್ವತ ವಿಧಿಯಾಗಿ ಏರ್ಪಟ್ಟಿತು.

ಷೆಫಿಲ್ಡ್ ಪ್ರಾಂತದಲ್ಲಿ ೬-೫ ವರ್ಷ ವಯಸ್ಸಿನ ೨ ಮಕ್ಕಳುಗಳು ಅವರ ತಾಯ್ತಂದೆಗಳ ಬಳಿಗೆ ಹಡಗಿನಮೇಲೆ ಸಾಮಾನುಗಳನ್ನು ಕಳುಹುವ ರೀತಿಯಲ್ಲಿ ಸಾಗಿಸಲ್ಪಟ್ಟುವು. ಅಂದರೆ ಅವುಗಳ ನಡುವಿನ ಸುತ್ತಲೂ ಚಿಕ್ಕಳದ ಪಟ್ಟಿಯನ್ನು ಕಟ್ಟಿ, ಅದರಮೇಲೆ ತಾಯ್ತಂದೆಗಳ ಹೆಸರು ವಿಳಾಸಗಳನ್ನು ಬರೆದಿದ್ದರು. ದಾರಿಯಲ್ಲಿ ಆ ಮಕ್ಕಳಿಗೆ ಪ್ರಯಾಣಿಕರು ಅನೇಕ ಆಟದ ಸಾಮಾನುಗಳನ್ನು ಕೊಟ್ಟರು. ಕಡೆಗೆ ಆ ಮಕ್ಕಳು ಸುರಕ್ಷಿತವಾಗಿ ತಾಯ್ತಂದೆಗಳ ಬಳಿಯನ್ನು ಸೇರಿದರು.

ಬರುವ ಡಿಶಂಬರ್ ತಾ॥ ೧೨ ರಲ್ಲಿ ದಿಲ್ಲಿಯ ದರ್ಬಾರು ನಡೆಯತಕ್ಕದೆಂದು ಚಕ್ರವರ್ತಿಯವರ ಯಾಗಿದೆ.

ಬೊಂಬಾಯಿಗೆ ಸೇರಿದ ಜಳಗಾಂವದಲ್ಲಿ ಒಂದು ಕಾರ್ಖಾಲಯಕ್ಕೆ ಬೆಂಕಿಬಿದ್ದು ದಗ್ಧವಾಗಿ ೧ ಲಕ್ಷ ರೂ. ನಷ್ಟವಾಯಿತು.

ಅಮೇರಿಕಾದಲ್ಲಿ ಪ್ರಸಿದ್ಧ ಆಕಾಶ ನಾವಿಕನಾದವನೊಬ್ಬನು ಯುದ್ಧನಾವೆಯ ಕೆಲ ಅಧಿಕಾರಿಗಳಿಗೆ ನೀರಿನಮೇಲಿಂದ ನಾವೆಯನ್ನು ಹಾರಿಸಿ ಪುನಹಾ ನೀರಿನಮೇಲಿಳಿಸುವುದನ್ನು ಕಲಿಸುತ್ತೇನೆಂದು ಅಲ್ಲಿಯ ಸರ್ಕಾರಕ್ಕೆ ಸೂಚಿಸಿರುತ್ತಾನೆ.

ಕಳೆದ ತಾ॥ ೨೨ ರಲ್ಲಿ ಕಲ್ಕತ್ತಾದೊಳಗೆ ಗೌರ್ನಮೆಂಟ್ ಹೌಸಿನಲ್ಲಿ ರಾಜಾ ಪ್ರತಾಪಸಿಂಗ್ ಬಹದ್ದೂರ್ ಸಿ. ಐ. ಇ. ಯವರು ಆ॥ ಕೊಲ್ಲಂಗೋಡು ರಾಜರು ಮ॥ ವಿ. ಪಿ. ಮಾಧವರಾಯರು ಸಹ ಶ್ರೀ ವೈಸರಾಯರ ದರ್ಶನವನ್ನು ಹೊಂದಿ ಸ್ವಲ್ಪಹೊತ್ತು ಸಂಭಾಷಿಸಿಕೊಂಡು ಬಂದರು.

ಈ ವಾರದಲ್ಲಿ ನಡೆಯಲಿಕ್ಕಿರುವ ಇಂಗ್ಲೆಂಡು ಮತ್ತು ವೇಲ್ಸಿನ ಜನಗರಿಗಣನೆಯಲ್ಲಿ ಒಟ್ಟು ೩೬೦೭೫೦೦೦ ಜನರಲ್ಲಿ ೧೭೪೪೮೦೦೦ ಗಂಡುಸರೂ, ೧೮೬೨೭೦೦೦ ಹೆಂಗುಸರೂ ಇದ್ದರು. ೧೯೦೧ ರಲ್ಲಿ ಗಂಡುಸರ ಸಂಖ್ಯೆಯು ೧೫೭೨೮೦೦೦ ಕ್ಕೂ ಹೆಂಗುಸರ ಸಂಖ್ಯೆಯು ೧೬೭೯೯೦೦೦ ಕ್ಕೂ ಹೆಚ್ಚಿದ್ದುವು.

ದಿಲ್ಲಿಯಲ್ಲಿ ಪ್ಲೇಗಿನ ಹಾವಳಿಯಿಂದ ಅನೇಕ ಜನರು ಅಂಗಡಿಗಳನ್ನೂ ಮನೆಗಳನ್ನೂ ಮುಚ್ಚಿ ಹೊರಟುಹೋಗಿದ್ದಾರೆ. ಕೆಲವರು ಊರಹೊರಗೆ ಹಳ್ಳಿಗಳಲ್ಲೂ ಉದ್ಯಾನವನಗಳಲ್ಲೂ ವಾಸಮಾಡುತ್ತಿದ್ದಾರೆ. ಈ ಸಲ ರೋಗವು ಮಹಮ್ಮದೀಯರಿಗಿಂತಲೂ ಹಿಂದೂಗಳನ್ನು ವಿಶೇಷವಾಗಿ ಬಾಧಿಸುತ್ತಿದೆ.

ಜರ್ಮನಿಯ ಬರ್ಲಿನ್ ಪಟ್ಟಣದಲ್ಲಿ ೨೦ ವರ್ಷಗಳಿಂದ ಭಿಕ್ಷವನ್ನೆತ್ತಿ ಜೀವಿಸುತ್ತಿದ್ದವನೊಬ್ಬನು ಮೊನ್ನೆತಾನೇ ಹೊಟ್ಟೆಗನ್ನವಿಲ್ಲದೆ ಸತ್ತನು. ಅವನು ತನ್ನ ಹೆಸರಿನಲ್ಲಿ ಬ್ಯಾಂಕಿನೊಳಗೆ ೨೫೩ ಸವರನ್ನುಗಳನ್ನು ಇಟ್ಟಿದ್ದನೆಂದು ಅವನ ಮರಣಾನಂತರ ಹೊರಪಟ್ಟಿತು. ಲೋಭಿಗಳು ಹೀಗೆಯೇ ಪ್ರಾಣವನ್ನಾದರೂ ಬಿಟ್ಟಾರು, ಹಣವನ್ನು ಬಿಡಲಾರರಲ್ಲವೆ?

ಸಿಲೋನಿಗೆ ಸೇರಿದ ಕಲುತಾರಾ ಎಂಬಲ್ಲಿ ಬಾಬು ನಧಿಮಾ ಎಂಬುವನು ಒಬ್ಬನನ್ನು ಕೊಂದು ಮತ್ತೊಬ್ಬನಿಗೆ ಗಾಯಮಾಡಿದ ಅಪರಾಧಕ್ಕಾಗಿ ನ್ಯಾಯಸ್ಥಾನದಲ್ಲಿ ವಿಚಾರಿಸಲ್ಪಡುತ್ತಿರುವಾಗ್ಗೆ “ನನ್ನ ಕಡೆ ಯಾವ ಸಾಕ್ಷಿಯೂ ಇಲ್ಲ, ಆದರೆ ದೇವರಿಗೆ ಬಲಿಯನ್ನು ಕೊಡುವುದಕ್ಕಾಗಿ ನನ್ನ ಇಬ್ಬರು ಮಕ್ಕಳನ್ನು ಕರೆದುಕೊಂಡು ಬನ್ನಿ” ಎಂದು ಹೇಳಿದನಂತೆ.

ಕಳೆದ ಸೋಮವಾರ ಮಿಡ್ನಾಪುರದಲ್ಲಿ ಒಂದು ಸುಂಟರಗಾಳಿ ಎದ್ದು ೧—೨ ಮನೆಗಳ ಮೇಲುಹೊದ್ದಿಕೆಯನ್ನು ಹಾರಿಸಿಬಿಟ್ಟಿತು. ಇದರಿಂದ ಒಬ್ಬನು ಸತ್ತು ಮತ್ತಿಬ್ಬರು ಗಾಯಪಡೆದರು. ಒಂದು ಬಂಡಿಗೆ ಹೂಡಿದ್ದ ೨ ಕುದುರೆಗಳ ಕುತ್ತಿಗೆಗೆ ಕಟ್ಟಿದ್ದ ಚಕ್ಕಳದ ಪಟ್ಟಿಗಳು ಕಿತ್ತುಹೋಗಿ ಓಡಿಹೋದುವು. ಆದರೆ ಬಂಡಿಯುಮಾತ್ರ ಗಾಳಿಯಿಂದ ಮೇಲಕ್ಕೆ ಹಾರಿಸಲ್ಪಟ್ಟು ಕೆಳಗೆ ಬಿದ್ದು ನುಚ್ಚುನೂರಾಯಿತು.

ಹೈದರಾಬಾದಿಗೆ ಸೇರಿದ ಗೋಲಕೊಂಡದಲ್ಲಿ ಇಟ್ಟಿಗೆಯಗೂಡನ್ನು ಸುಡಿಸಲಾಗಿ ಇಟ್ಟಿಗೆಯಲ್ಲಿ ಚಿನ್ನವು ಕಂಡುಬರಲು ಒಂದು ಭಂಗಾರದ ಗಣಿಯೇ ಇರುವುದೆಂದು ಊಹಿಸಲ್ಪಟ್ಟಿದ್ದಿತಷ್ಟೆ. ಈಚೆಗೆ ಪರಿಶೋಧಿಸಲಾಗಿ, ಆ ಹಳೆಯ ಗಣಿಗಳಿಂದ ತೆಗೆಸಿದ ಕಲ್ಲುಮಣ್ಣುಗಳಲ್ಲಿ ಭಂಗಾರವು ಇರಲಿಲ್ಲವೆಂತಲೂ, ಅಭ್ರಕವು ಸ್ವಲ್ಪ ಸೇರಿಕೊಂಡಿದ್ದಿತೆಂತಲೂ, ಅದು ಭಂಗಾರವೆಂಬುದಾಗಿ ಭ್ರಾಂತಿಯುಂಟಾಗಿದ್ದಿತೆಂತಲೂ ವ್ಯಕ್ತವಾಗಿದೆ. ಇದರಿಂದ ಒಂದು ದೊಡ್ಡ ಆಶೆಯು ತೋರಿ ಅಡಗಿದಂತಾಯಿತು.

ಕಳೆದ ಮಾರ್ಚಿ ತಾ॥ ೨೫ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೪೫೨೫೧ ಜನಗೆ ಪ್ಲೇಗು ತಗಲಿ ೩೯೩೮೦ ಜನರು ಸತ್ತರು. ಇದರಲ್ಲಿ ಸಂಯುಕ್ತ ಪ್ರಾಂತಗಳಲ್ಲಿ ೨೦೪೫೪; ಬೊಂಬಾಯಾಧಿಪತ್ಯದಲ್ಲಿ ೧೩೪೯; ಮದ್ರಾಸಾಧಿಪತ್ಯದಲ್ಲಿ ೧೩೯; ಬಂಗಾಳಾದಲ್ಲಿ ೫೩೫೬; ಬರ್ಮಾದಲ್ಲಿ ೧೦೩; ಸಂಯುಕ್ತ ಪ್ರಾಂತಗಳಲ್ಲಿ ೧೨೪೯; ಕೊಡಗಿನಲ್ಲಿ ೧; ಮೈಸೂರ್ ಸಂಸ್ಥಾನದಲ್ಲಿ ೧೧೪; ಹೈದರಾಬಾದು ಸಂಸ್ಥಾನದಲ್ಲಿ ೧೩೨; ಎಲ್ಲಿ ಪ್ರಾಂತಗಳಲ್ಲಿ ೫ ಮತ್ತೂ ಕಾಶೀ ಕ್ಷೇತ್ರದಲ್ಲಿ ೨೩ ಈ ಪ್ರಕಾರ ಮರಣಗಳಾಗಿರುತ್ತವೆ.

ಅಲಹಾಬಾದಿನಲ್ಲಿ ನಡೆದ ಪ್ರದರ್ಶನವನ್ನು ನೋಡುವುದಕ್ಕಾಗಿ ಆಗ್ರಾದಿಂದ ಅಲಹಾಬಾದಿಗೆ ಹೋಗುವುದಕ್ಕೂ, ಅಲ್ಲಿಂದ ಹಿಂತಿರುಗಿ ಆಗ್ರಾಕ್ಕೆ ಬರುವುದಕ್ಕೂ ರೈಲ್ವೆ ಗಾರ್ಡಾದ ವೆಬ್ ಎಂಬುವನಿಗೂ ಆತನ ತಾಯಿಗೂ ಇಬ್ಬರು ಮಕ್ಕಳಿಗೂ ಸಹ ಒಟ್ಟಿಗೆ ೪ ಜನಕ್ಕೆ ಒಂದು ರೈಲ್ವೆ ಪ್ಯಾಸು ಕೊಡಲ್ಪಟಿತು. ಈ ನಾಲ್ವರಿಗೆ ಪ್ರತಿಯಾಗಿ ಅದೇ ಪ್ಯಾಸಿನ ಆಧಾರದಿಂದ ಅದೇರೀತಿ ಪ್ರಯಾಣಮಾಡಿ ರೈಲ್ವೆ ಕಂಪೆನಿಯವರನ್ನು ಮೋಸಮಾಡಿದ ಆಗ್ರಾನಿವಾಸಿಯಾದ ಅಗಸ್ಟಸ್ ಎಲ್ಲಿಸ್ ಎಂಬುವನಿಗೆ ೭೫೦ ರೂ. ಆತನ ಹೆಂಡತಿ ಇಬ್ಬರು ಮಕ್ಕಳಿಗೂ ಸಹ ಸೇರಿ ೧೦೦ ರೂ. ಅರ್ಥ ದಂಡವು ವಿಧಿಸಲ್ಪಟ್ಟಿತು. ಆ ಪ್ಯಾಸನ್ನು ಇವರಿಗೆ ರೈಲ್ವೆ ಗಾರ್ಡ ಕೊಟ್ಟಿದ್ದ ಪಕ್ಷದಲ್ಲಿ ಆತನೂ ಶಿಕ್ಷಾರ್ಹನೇ ಅಲ್ಲವೆ?

ಜಾರ್ಜ್ ಚಕ್ರವರ್ತಿ ದಂಪತಿಗಳು ದಿಲ್ಲಿಯಲ್ಲಿ ನಡೆಯುವ ಕಿರೀಟಧಾರಣ ಮಹೋತ್ಸವಕ್ಕಾಗಿ ೧೯೧೧ ನೇ ಡಿಶಂಬರು ತಾ॥ ೨ ರಲ್ಲಿ ಬೊಂಬಾಯಲ್ಲಿ ಹಡಗನ್ನಿಳಿದು ಅಲ್ಲಿ ೨ ದಿನಗಳಿದ್ದು ತಾ॥ ೪ರ ಸಾಯಂಕಾಲ ದಿಲ್ಲಿ ರೈಲುಬಂಡಿಯನ್ನು ಹತ್ತಿ ದಿಲ್ಲಿಗೆ ಪ್ರಯಾಣಮಾಡುವುದಾಗಿ ಸರ್ಕಾರದಿಂದ ಪ್ರಸಿದ್ಧವಾಗಿರುತ್ತದೆ. ಈಂಗ್ಲೆಂಡಿನ ದೊರೆಗಳು ಸ್ವದೇಶವನ್ನು ಬಿಟ್ಟು ಅನ್ಯದೇಶಕ್ಕೆ ಹೋಗಿರುವಾಗ್ಗೆ ಅವರ ಪತ್ನಿ ರಾಣಿಯವರು ರೀಜಂಟರಾಗಿರುವುದು ಅಲ್ಲಿಯ ನಿಯಮವಾಗಿದೆ. ಆದರೆ ಈವೇಳೆ ರಾಜದಂಪತಿಗಳಿಬ್ಬರೂ ಭರತಖಂಡಕ್ಕೆ ದಯಮಾಡಿಸುತ್ತಾರಾದುದರಿಂದ, ಅವರುಗಳು ಸ್ವದೇಶವನ್ನು ಬಿಟ್ಟು ಮರಳಿ ಸೇರಲು ಹಿಡಿಯುವ ೩ ತಿಂಗಳಕಾಲದವರಿಗೆ ಡ್ಯೂಕ್ ಆಫ್ ಕನಾಟ್ ರವರು ರೀಜಂಟರಾಗಿರುವರು.

ಮೊನ್ನೆತಾನೇ ಒಬ್ಬ ಬಂಗಾಳಿ ಹುಡುಗನು ಬರ್ದ್ವಾನ್ ಪೋಲೀಸು ಡಿ॥ ಸೂಪರಿಂಟೆಂಡೆಂಟರ ಬಳಿಗೆ ಹೋಗಿ, ತನ್ನ ಹೆಸರು ಖಗೇಂದ್ರನಾಥ ಬನರ್ಜಿ ಯೆಂಬದಾಗಿಯೂ, ತಾನು ಕುಲ್ನಾ ನಿವಾಸಿಯೆಂತಲೂ, ಒಂದು ರಹಸ್ಯ ಸಂಘದಲ್ಲಿ ತಾನೊಬ್ಬ ಸಭಾಸ್ತಾರನಾಗಿರುವೆನೆಂದು ಪೋಲೀಸರಿಗೆ ಸಂಶಯ ಬಂದು, ತಾನು ಕಲ್ಕತ್ತಾದಲ್ಲಿರುವಾಗ್ಗೆ ತನ್ನ ಮೇಲೆ ಅವರು ಹೊಂಚುಹಾಕುತಿದ್ದರೆಂತಲೂ, ಅಂಥ ಸಂಶಯಗ್ರಸ್ತನಾಗಿ ಬಾಳುವುದಕ್ಕಿಂತಲೂ ಸಾಯುವುದೇ ಲೇಸೆಂದು ತಾನು ೨ ಆವೃತ್ತಿ ಅಫೀಮನ್ನು ನುಂಗಿದೆನೆಂತಲೂ, ಆದರೂ ಸಾಯಲಿಲ್ಲವಾದಕಾರಣ, ತಾನಾಗಿ ಪೊಲೀಸರ ಅಧೀನಕ್ಕೆ ಹೋಗಿ ಮುಂದೆ ಬರುವ ಕಷ್ಟವನ್ನು ಈಗಲೇ ಹೊಂದುವುದಕ್ಕೆ ಸಿದ್ಧನಾಗಿರುವೆನೆಂತಲೂ ಹೇಳಿದುದರಮೇಲೆ ಸೆರೆಯಲ್ಲಿಡಲ್ಪಟ್ಟಿರುವನು.

ಚಕ್ರವರ್ತಿಯವರು ಭರತಖಂಡಕ್ಕೆ ದಯಮಾಡಿಸಿದಾಗ್ಗೆ ಅವು ಸತ್ಕಾರ ದಿಲ್ಲಿಯ ದರ್ಬಾರು ಮೊದಲಾದವುಗಳಿಗೆ ಮಾಡಲ್ಪಡುವ ವೆಚ್ಚದ ವಿಷಯವನ್ನು ಕುರಿತು ಪಾರ್ಲಿಮೆಂಟಿನಲ್ಲಿ ಮಿ॥ ರಾಂಸೆ ಮೆಕ್ಡಾನಲ್ಡ್ ರವರು ಪ್ರಶ್ನೆಮಾಡಿದ್ದಾಗ್ಗೆ ಇದಕ್ಕಾಗಿ ೧೮೦೦೦೦೦ ರೂ. ವೆಚ್ಚಮಾಡಲ್ಪಡಬೇಕೆಂದು ನಿರ್ಧರವಾಗಿರುವುದೆಂತಲೂ ಅದರಲ್ಲಿ ಎರಡುಭಾಗದಷ್ಟು ತತ್ಸಂಬಂಧವಾದ ಸಿವಿಲ್ ವೆಚ್ಚಗಳಿಗೂ, ೧ ಭಾಗದಷ್ಟು ಸೈನ್ಯಶಾಖೆಯ ವೆಚ್ಚಗಳಿಗೂ ವಿನಿಯೋಗಿಸಲ್ಪಡುವುದೆಂತಲೂ, ಇವೆಲ್ಲವೂ ಇಂಡಿಯಾ ಗೌರ್ನಮೆಂಟಿನ ವೆಚ್ಚಗಳೇ ಎಂತಲೂ, ಪ್ರಾಂತಿಕ ಸರ್ಕಾರದವರು ಗೊತ್ತು ಮಾಡುವ ವೆಚ್ಚಗಳ ವಿವರವು ಇನ್ನೂ ತಿಳಿದುಬಂದಿಲ್ಲವೆಂತಲೂ, ಅವು ಇಂಡಿಯಾಗೌರ್ನಮೆಂಟಿನವರ ಲೆಕ್ಕದಲ್ಲಿ ಸೇರದೆ ಪ್ರತ್ಯೇಕವಾಗಿರುವುದೆಂತಲೂ ಆ॥ ಸೆಕ್ರೆಟರಿಯವರು ಉತ್ತರವಿತ್ತರು.

ಮದರಾಸಿನ ಚೆಂತಾದ್ರಿಪೇಟೆಯಲ್ಲಿ ತಿರುವೆಂಗಡಾಚಾರಿಯೆಂಬ ಅಕ್ಕಿಯ ವ್ಯಾಪಾರಿಯು ಕುಷ್ಠರೋಗಗ್ರಸ್ತನಾಗಿದ್ದರೂ ಅಕ್ಕಿಯ ವ್ಯಾಪಾರವನ್ನು ಮಾಡುತ್ತಿರುವುದು—“ಅಂಟುರೋಗವುಳ್ಳವರು ಆಹಾರದ ಪದಾರ್ಥಗಳನ್ನು ಮಾರಕೂಡದು” ಎಂಬ ಮ್ಯುನಿಸಿಪಲ್ ನಿಬಂಧನೆಗೆ ವಿರುದ್ಧವಾಗಿದ್ದಕಾರಣ, ಅಲ್ಲಿನ ಆರೋಗ್ಯಶಾಖೆಯವರು ಆ ಆಚಾರಿಯಮೇಲೆ ಛಾರ್ಜುಮಾಡಿದರು. ತಾನು ಅಕ್ಕಿಯನ್ನು ಕೈಯಲ್ಲಿ ಮುಟ್ಟಿ ಅಳೆದುಕೊಡುವುದೇಇಲ್ಲವೆಂತಲೂ, ತನ್ನ ಗುಮಾಸ್ತನು ಆ ಕೆಲಸವನ್ನು ಮಾಡಿ ಹಣವನ್ನು ತನಗೆ ಕೊಡುವನೆಂತಲೂ, ದುಡ್ಡನ್ನೆಣಿಸಿಕೊಳ್ಳುವುದರ ಹೊರ್ತು ಅಕ್ಕಿಯ ತಂಟೆಗೆ ತಾನು ಹೋಗುವುದಿಲ್ಲವೆಂತಲೂ ಅಪರಾಧಿಯ ಪಕ್ಷದಲ್ಲಿ ವಾದಿಸಲ್ಪಟ್ಟಿತು. “ಮಾರುವುದು” ಎಂಬ ಪದದ ಅರ್ಥದ ವಿಷಯದಲ್ಲಿ ಎರಡುಪಕ್ಷದವರಿಂದಲೂ ವಾದಾನುವಾದಗಳು ನಡೆದು, ಕಡೆಗೆ ದಂಡಾಧಿಕಾರಿಯಿಂದ ಅಪರಾಧಿಗೆ ೫ ರೂ. ಅರ್ಥ ದಂಡವು ವಿಧಿಸಲ್ಪಟ್ಟಿತು.

ಜಾರ್ಜ್ ಚಕ್ರವರ್ತಿಯವರು ಪತ್ನೀಸಮೇತರಾಗಿ ಮೊನ್ನೆತಾನೇ ಬಾಲ್‌ಮೊರಲ್ ಅರಮನೆಯಲ್ಲಿದ್ದಾಗ್ಗೆ, ಅವರು ಆ ಪ್ರಾಂತದಲ್ಲಿದ್ದ ಪ್ರತಿಯೊಂದು ಮನೆಯವರ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ಅವಲೋಕಿಸಿ, ಅಲ್ಲಿನ ನಿವಾಸಿಗಳಿಗೆ ಯಾವುದಾದರೂ ಕೊರತೆಗಳಿದ್ದರೆ ಅವನ್ನು ವಿಜ್ಞಾಪಿಸಿಕೊಳ್ಳಬಹುದೆಂದು ಅಪ್ಪಣೆಮಾಡಿದುದಲ್ಲದೆ ಬಾಲ್‌ಮೊರಲ್ ಎಸ್ಟೇಟಿನವರ ವಿಜ್ಞಾಪನೆಯನ್ನು ಕೇಳಿ ಅವರನ್ನು ಆದರಿಸಬೇಕೆಂದು ಚಕ್ರವರ್ತಿಯವರು ತಮ್ಮ ಬೊಕ್ಕಸದ ಅಧಿಕಾರಿಗೆ ಅಪ್ಪಣೆಮಾಡಿದರೆಂತಲೂ, ತಾವು ನೋಡಿ ಬಂದ ಸ್ಥಲಗಳಲ್ಲಿರುವ ಗುಡಿಸಲುಗಳನ್ನು ದೊಡ್ಡದನ್ನುಮಾಡಿ, ಅಲ್ಲಲ್ಲಿ ಉಪವನಗಳನ್ನು ನಿರ್ಮಿಸಿ, ಬೇಲಿಗಳನ್ನು ಹಾಕಿಸಿ, ಬಾವಿಗಳನ್ನೂ ಮಾರ್ಗಗಳನ್ನೂ ಏರ್ಪಡಿಸಿ ಕೊಡಬೇಕೆಂತಲೂ ಆಲೋಚಿಸಿರುವರೆಂತಲೂ ತಿಳಿಯಬರುತ್ತದೆ. ಚಕ್ರವರ್ತಿ ದಂಪತಿಗಳಿಗಿರುವ ಈ ವಿಧವಾದ ಸ್ವಪ್ರಜಾಭಿಮಾನವು ಅವರಾಳ್ವಿಕೆಗೊಳಪಟ್ಟವರನ್ನೆಲ್ಲಾ ಸಂತೋಷಗೊಳಿಸುತ್ತಿರುವುದು.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಏಪ್ರಿಲ್ ತಾ॥ ೩ ನೇ ಸೋಮವಾರ.

ಹಿಂದೂಗಳ ಕ್ಷೀಣತೆ.

ನಮ್ಮೀ ಭರತಖಂಡದಲ್ಲಿ ಬರಬರುತ್ತಾ ಹಿಂದೂಜನರು ಕ್ಷೀಣವಾಗುತ್ತ ಬರುತ್ತಿರುವರೆಂಬುದು ಜನಪರಿಗಣನೆಯ ವರದಿಗಳಿಂದ ಗೊತ್ತಾಗುತ್ತದೆ. ಭರತಖಂಡ ನಿವಾಸಿಗಳಲ್ಲಿ ೧೦ ಸಾವಿರಕ್ಕೆ ಹಿಂದೂ—ಮಹಮ್ಮದೀಯ ಕ್ರಿಸ್ತರುಗಳು ಈ ಕೆಳಗೆ ವಿವರಿಸಿರುವ ರೀತಿಯಲ್ಲಿದ್ದರೆಂದು ಗೊತ್ತಾಗುತ್ತದೆ.

ವರ್ಷ	ಹಿಂದೂ	ಮಹಮ್ಮ.	ಕ್ರೈಸ್ತ
೧೮೮೧—	೯೧೪೩	೫೨೦	೨೨೮
೧೮೯೧—	೮೯೮೩	೫೩೦	೨೪೪
೧೯೦೧—	೮೯೧೬	೫೪೨	೨೩೯

ಈ ಮೇಲೆ ಕಂಡ ಲೆಕ್ಕವನ್ನು ನೋಡಿದರೆ ಪ್ರತಿ ಹತ್ತು ವರ್ಷದಲ್ಲೂ ಹಿಂದೂಗಳ ಸಂಖ್ಯೆಯು ಕಡಿಮೆಯಾಗುತ್ತಿರುವುದೂ, ಮಹಮ್ಮದೀಯ ಕ್ರೈಸ್ತರುಗಳ ಸಂಖ್ಯೆ ಹೆಚ್ಚುತ್ತಿರುವುದೂ ಸಹ ಸ್ಪಷ್ಟವಾಗುತ್ತದೆ. ಈಗಿನ ೧೯೧೧ನೆಯ ವರ್ಷದ ಜನಪರಿಗಣನೆಯ ವರದಿಯು ಇನ್ನೂ ಪ್ರಕಟಿತವಾಗಿಲ್ಲದಕಾರಣ ಅದನ್ನೂ ಇದರ ಜತೆಯಲ್ಲಿಟ್ಟು ತಾಳೆ ನೋಡುವುದಕ್ಕೆ ಸದ್ಯಃ ಅವಕಾಶವಿಲ್ಲದಿದ್ದರೂ ಕಳೆದ ೩೦ ವರ್ಷಗಳ ಪ್ರಮಾಣದಂತೆಯೇ ಈಗಲೇ ಆಗಿರಬಹುದೆಂದು ಹೇಳಬೇಕಾಗುತ್ತದೆ. ಹೀಗೆಯೇ ಕೆಲವು ವರ್ಷಗಳು ಸಾಗುತ್ತ ಹೋದರೆ ಭರತಖಂಡದಲ್ಲಿ ಹಿಂದೂಗಳ ಹೆಸರೇ ಇಲ್ಲದಂತೆ ಆಗಿಹೋಗುವುದೋ ಏನೋ! ಎಂದು ಸಂಶಯಪಡಬೇಕಾಗುತ್ತದೆ. ಹಿಂದೂಗಳ ಅವಸ್ಥೆಯು ಹೀಗಾಗುತ್ತಿರುವುದಕ್ಕೆ ಸರ್ವ ದಯಾಮಯನಾದ ಆ ಭಗವಂತನಿಂದ ನಮಗೆ ಸಮಾನವಾಗಿ ಸೃಷ್ಟಿಸಲ್ಪಟ್ಟಿರುವ ಹೀನದಶಾಕ್ರಾಂತರಾಗಿರುವ ಕೀಳುಜಾತಿಯ ಜನರಲ್ಲಿ ನಾವು ತೋರ್ಪಡಿಸುತ್ತಿರುವ ಕ್ರೂರಕೃತ್ಯವೇ ಮುಖ್ಯ ಕಾರಣವೆಂದು ಹೇಳಬೇಕಾಗುತ್ತದೆ. ಕ್ಷಾಮಕಾಲದಲ್ಲಿ ದಿಕ್ಕುಕಾಣದೆ ಕಣ್ಬಾಯಿ ಬಿಡುತ್ತಲಿರುವ ಆ ಬಡಜನಗಳನ್ನು ಇತರ ಮತಸ್ಥರಿಗೆ ಬಲಿಗೊಟ್ಟು ನಾವು ತಟಸ್ಥರಾಗಿರುವುದು ರಾಕ್ಷಸ ಕೃತ್ಯವೇ ಹೊರತು ವಿವೇಕಶಕ್ತಿಯುಳ್ಳ ಮಾನುಷ ಸ್ವಭಾವಕ್ಕೆ ಸಹಜವಾದ ಧರ್ಮವಲ್ಲ. ಪಶು ಪಕ್ಷ್ಯಾದಿಗಳ ವಿಷಯದಲ್ಲಿಯೂ ಕೂಡ ನಾವು ದಯಾನುರಾಗಗಳನ್ನು ತೋರ್ಪಡಿಸುತ್ತೇವೆ. ನಮಗೆ ಸಮಾನವಾದ ಮಾನುಷಕೋಟಿಯ ವಿಷಯದಲ್ಲಿ ಅಷ್ಟುಮಟ್ಟಿನ ದಯೆಯನ್ನಾದರೂ ತೋರಿಸದಿದ್ದರೆ, ನಿಜವಾಗಿಯೂ ಅಂತ್ಯಜರೆಂದು ಇತರರನ್ನು ನಾಮಮಾತ್ರದಲ್ಲಿ ನಿಂದಿಸುವುದಕ್ಕಿಂತಲೂ, ಕೃತ್ಯತಃ ನಾವೇ ಅಪವಿತ್ರರೆನಿಸಿಕೊಳ್ಳುವೆವಲ್ಲವೆ? ಏಕೆಂದರೆ:—ಆ ಅಂತ್ಯಜನೇ ಕ್ರೈಸ್ತ ದೀಕ್ಷೆಯನ್ನು ಪಡೆದು, ಜಾನ್—ಸಾಮ್ಯುಯಲ್ ಮೊದಲಾದ ಹೆಸರುಗಳನ್ನಿಟ್ಟುಕೊಂಡು ಬಂದರೆ ಆಗ ಅವನಿಗೆ ಕರಾಸ್ಪಂದವನ್ನೀಯುವುದಕ್ಕೆ ನಾವು ಲೇಶವೂ ಹಿಂದೆಗೆಯುವುದಿಲ್ಲ

ಭರತಖಂಡದಲ್ಲಿ ಬಹುಶಃ ೫ ಕೋಟಿಯಷ್ಟು ಕೀಳುಜಾತಿಯ ಜನರಿರುವರು. ಅವರು ಇನ್ನೆಷ್ಟು ಕಾಲದವರೆಗೆ ಉತ್ತಮವರ್ಣೀಯರಿಂದ ತೊಂದರೆಗೊಳಗಾಗಿ ಬಾಳುವರು? ಅವರೂ ಇತರರಂತೆ ಈಶ್ವರಸೃಷ್ಟಿಗೆ ಸೇರಿದ ಮಾನವಜಾತಿಯವರೇ ಹೊರತು ಅನ್ಯಥಾ ಮೃಗಜಾತಿಗೆ ಸೇರಿದವರೇನೂಅಲ್ಲ. ನಾವು ಅವರನ್ನು ಎಷ್ಟುಮಟ್ಟಿಗೆ ಪಾತಾಳಕ್ಕೆ ತುಳಿದರೂ ತುಳಿಸಿಕೊಂಡಿರುವ ಕಾಲವು ಕಳೆದುಹೋಯಿತೆಂಬುದನ್ನು ಯಾರೂ ಮರೆಯಕೂಡದು. ಅವರನ್ನು ಯಾರು ಪುರಸ್ಕರಿಸಿ ಆದರಿಸುವರೋ ಅಂಥವರನ್ನೇ ಅವರು ಶರಣುಹೊಗುವರು. ನಾವು ನಮ್ಮ ಅವಿವೇಕದಿಂದ ನಮ್ಮಲ್ಲಿನ ೫ ಕೋಟಿ ಜನರನ್ನು ನಾವಾಗಿ ಕಳೆದುಕೊಳ್ಳುತ್ತಿರುವೆವು. ಗ್ರೇಟ್ ಬ್ರಿಟನ್ನು ಐರ್ಲೆಂಡು ದೇಶದಲ್ಲಿರುವ ಜನಸಂಖ್ಯೆಗಿಂತಲೂ ಈ ಅಂತ್ಯಜಾತಿ ಜನರಸಂಖ್ಯೆಯು ಅಧಿಕವಾಗಿರುವುದು. ಇಷ್ಟೊಂದು ಅಪಾರವಾದ ಜನರನ್ನು ಹಿಂದೂಮತವು ತನ್ನ ಅಜಾಗರೂಕತೆಯಿಂದ ಕಳೆದುಕೊಳ್ಳುವುದೆಂದರೆ ಎಷ್ಟು ಶೋಚನೀಯವು! ಈಗ ನಾವು ಅವರ ವಿಷಯದಲ್ಲಿ ಮಾಡತಕ್ಕದೇನೆಂದು ಕೆಲವರು ಕೇಳಬಹುದು. ಪರಮತ ಬೋಧಕರು ಮಾಡತಕ್ಕ ಕೆಲಸವನ್ನು ಇವರು ನೋಡಬೇಕು. ಅವರು ತಮ್ಮ ಹೆಂಡಿರು ಮಕ್ಕಳನ್ನು ಬಿಟ್ಟು ಆಪ್ತಮಿತ್ರರನ್ನು ತೊರೆದು, ಎಷ್ಟೋಸಾವಿರ ಮೈಲಿಗಳ ದೂರದಲ್ಲಿರುವ ದೇಶಕ್ಕೆ ಬಂದು, ಕಷ್ಟಸುಖಗಳನ್ನು ಪರಿಗಣಿಸದೆ, ಸ್ವಾರ್ಥತ್ಯಾಗಪೂರ್ವಕವಾಗಿ ಸ್ವಮತಾಭಿವೃದ್ಧಿಗೋಸ್ಕರ ಕೆಲಸಮಾಡುತ್ತಿರುವರು. ನೀಚಜಾತಿಯವರೆಂಬುವರ ಬಳಿಗೆ ಅವರುಗಳು ಹೋಗಿ, ಅವರ ಗಾಢಾಲಿಂಗನೆಯನ್ನು ಮಾಡಿ, ಅವರಿಗೆ ಬೇಕಾಗಿದ್ದ ಸಹಾಯವನ್ನು ಕೊಟ್ಟು, ವಿದ್ಯಾದಾನಮಾಡಿ, ಇಷ್ಟೊಂದು ಪರಿಚರ್ಯೆಯಿಂದ ಅವರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳುತ್ತಿರುವರು. ಕ್ರೂರಮೃಗಾದಿಗಳು ಕೂಡ ತಮ್ಮನ್ನು ಆದರಿಸುವವರನ್ನು ಹೊದ್ದಿಕೊಳ್ಳುವಾಗ ಮೃದುಸ್ವಭಾವದ ಮನುಷ್ಯರು ಪರರ ಆದರಣೆಗೆ ವಶವಾಗುವುದೊಂದಾಶ್ಚರ್ಯವೆ?

ನಾವು ಅಷ್ಟು ಕಠಿಣವಾದ ಕೆಲಸವನ್ನೇನೂ ಮಾಡಬೇಕಾಗಿರುವುದಿಲ್ಲ. ನಾವು ಮೂರ್ಖತನದಿಂದ ಅವರ ವಿಷಯದಲ್ಲಿ ತೋರಿಸುತ್ತಿರುವ ತಿರಸ್ಕಾರ ಬುದ್ಧಿಯನ್ನು ತೊಲಗಿಸಿದರೆ ಸಾಕು. ಕೊಳಕರೂ, ಬಡವರೂ, ಅಜ್ಞರೂ, ದುರಾಚಾರಿಗಳೂ ಆಗಿರುವ ಜನರ ಆ ವಿಷಯದಲ್ಲಿ ದಯೆಯನ್ನೂ ಅನುರಾಗವನ್ನೂ, ಪಶ್ಚಾತ್ತಾಪವನ್ನೂ ಹೊಂದಿ, ಸದುಪದೇಶಗಳಿಂದ ಅವರಲ್ಲಿ ವಿದ್ಯೆಯೂ, ಶುಚಿತ್ವವೂ, ಸದಾಚಾರಿತ್ವವೂ ಪ್ರಸಾರಗೊಳ್ಳುವಂತೆ ಮಾಡಬೇಕು. ದೈವಭಕ್ತಿಯೂ ಪಾಪಭೀತಿಯೂ ಅವರಲ್ಲಿ ಬಹುಶಃ ನಿಸರ್ಗವಾಗಿದ್ದೇ ಇರುವುದು. ಇಷ್ಟಾದರೆ ಅವರು ಅನ್ಯಮತದ ಬಲೆಗೆ ಬಿದ್ದುಹೋಗುವ ಸಂಭವವೇ ತಪ್ಪುವುದು, ನಮ್ಮ ಆರ್ಯಮತದ ಅನೇಕ ಶಾಖೆಗಳ ಪೂರ್ವಾಚಾರ್ಯರುಗಳು ಈ ಅಂತ್ಯಜರ ಉದ್ಧಾರಕ್ಕಾಗಿ ಮೇಲೆ ಹೇಳಿದಂತೆ ಉತ್ತಮವಾದ ಪ್ರಯತ್ನಗಳನ್ನು ಮಾಡಿರುವರು. ಸದ್ಭಕ್ತಿ ಸುಜ್ಞಾನ ಸಂಪನ್ನರಾದ ಅಂತ್ಯಜರಲ್ಲಿ ಗುರುಭಾವವನ್ನು ಕೂಡ ಹೊಂದಿದ್ದರು. ಅಂಥ ಮೇಲ್ಪಂಕ್ತಿಯನ್ನು ಅನುಸರಿಸದೆ ಆಧುನಿಕರು ಬಿಡುತ್ತ ಬಂದುದರಿಂದಲೇ ಹಿಂದೂಮತಕ್ಕೆ ಕ್ಷೀಣತೆಯುಂಟಾಗಲು ಅವಕಾಶವಾಯ್ತು. ವಿಚಾರಮಾಡಿದರೆ ಕರ್ಮಚಂಡಾಲರಿಂದಾಗುವಷ್ಟು ಅನರ್ಥವು ನಾಮಚಂಡಾಲರಿಂದಾಗುವುದಿಲ್ಲ. ಪಾಪಭೀತಿ, ಗುರುದೈವ ಭಕ್ತಿ, ದುರಾಚಾರ ದೂರತೆ ಮೊದಲಾದ ಸದ್ಗುಣಗಳಿಗೆಲ್ಲಾ ತಿಲತರ್ಪಣವನ್ನು ಕೊಟ್ಟು, ಮೇಲೆ ಉತ್ತಮರಾಗಿ ಅಭಿನಯಿಸುತ್ತಿರುವ ಚಂಡಾಲರು ಸಮಾಜದ ಮಧ್ಯದಲ್ಲೇ ಇದ್ದುಕೊಂಡು, ತಮ್ಮ ಸಂಸರ್ಗದಿಂದ ಇತರರನ್ನೆಲ್ಲಾ ಕೆಡಿಸುತ್ತಲಿರುವರು. ಇವರಿಂದಾಗುತ್ತಿರುವಷ್ಟು ಕೇಡು ದೂರಸ್ಥರಾಗಿ ಪಾಪಭೀತಿಯುಳ್ಳವರಾಗಿರುವ ನಾಮಚಂಡಾಲರಿಂದ ಎಂದಿಗೂ ಆಗುತ್ತಿರುವುದಿಲ್ಲ. ಆದಕಾರಣ ಮೇಲೆಕಾಣಿಸಿರುವ ಸಂಖ್ಯೆಯ ಆಧಾರದಿಂದ ಹಿಂದೂಗಳ ಕ್ಷೀಣತೆಯನ್ನು ಗಮನಿಸಿ ಈಗಲೇ ಎಚ್ಚತ್ತುಕೊಳ್ಳುವ ಪ್ರಯತ್ನವನ್ನು ಹಿಂದೂಗಳೆನಿಸಿಕೊಂಡಿರುವವರೆಲ್ಲಾ ಮಾಡದೆ ಹೋದರೆ ನೂರಾರು ವರ್ಷಗಳ ಒಳಗೆ ಇನ್ನೆಷ್ಟು ಶೋಚನೀಯವಾದ ಕ್ಷೀಣತೆಯು ಸಂಭವಿಸುವುದೆಂಬುದನ್ನು ಹೇಳಬೇಕಾಗಿಲ್ಲ.

ಸರ್ವಭೂತಗಳಲ್ಲೂ ಸಮಾನಪ್ರೀತಿಯನ್ನು ವಹಿಸಿರಬೇಕೆಂಬುದು ಹಿಂದೂ ಮತದ ಮುಖ್ಯ ತತ್ತ್ವವಾಗಿರುವುದು. ಪ್ರಪಂಚದಲ್ಲಿ ಈಜಿಪ್ಟು—ಪರ್ಷ್ಯ—ಗ್ರೀಸ್—ರೋಮ್ ಮೊದಲಾದ ದೇಶಗಳು ಎಷ್ಟೋ ಉನ್ನತಿಯನ್ನಡರಿದ್ದು ಪುನಃ ಅಧೋಗತಿಯನೈದಿದುವು. ಅವರ ನಾಗರಿಕತೆಯೆಲ್ಲಾ ಅದೃಶ್ಯವಾಯಿತು. ಆದರೂ ನಾವುಗಳು ಅಷ್ಟೊಂದು ಉನ್ನತಿಯನ್ನಾಗಲೀ ಅಷ್ಟೊಂದು ಅವನತಿಯನ್ನಾಗಲೀ ಹೊಂದದೆ ಮಧ್ಯಸ್ಥಿತಿಯಲ್ಲಿ ಉಳಿದುಕೊಂಡೇ ಇರುತ್ತೇವೆ. ಐಹಿಕಸೌಖ್ಯಾನುಭವದಲ್ಲಿ ಅಗ್ರಸ್ಥಾನವನ್ನು ಹೊಂದಿ, ಅಷ್ಟರಿಂದಲೂ ತೃಪ್ತಿಗೊಳ್ಳದಿರುವ ಪಾಶ್ಚಾತ್ಯಪ್ರಪಂಚಕ್ಕೆ ಈಗಲೂ ನಮ್ಮವರು ಜ್ಞಾನಬೋಧೆಯನ್ನು ಮಾಡುತ್ತಿರುವರು. ಇಂಥ ನಾವು ಮಾನವಜಾತಿಗೆ ಅತ್ಯಂತ ದೂರವಾದ ಮೂಢಪಟ್ಟಿನಿಂದ ನಮ್ಮ ಸಹೋದರರಂತಿರುವ ಜನರುಗಳಿಗೆ ಶತ್ರುಗಳಾಗಿ ಪರಿಣಮಿಸಿ, ಹಿಂದೂಮತದ ಕ್ಷೀಣತೆಗೆ ನಾವುಗಳೇ ಕಾರಣಭೂತರಾಗುವುದು ಪರಮಾನ್ಯಾಯವಲ್ಲವೆ? ಮಹಮ್ಮದೀಯರಿಗಿಂತಲೂ ಹಿಂದೂಗಳಲ್ಲಿ ಜನನ ಸಂಖ್ಯೆಯು ಕಡಿಮೆ; ಮರಣಸಂಖ್ಯೆ ಹೆಚ್ಚು. ಇದರಮೇಲೆ ಅನಂತ ಶಾಖೆ—ಪರಸ್ಪರ ದ್ವೇಷ. ಸಾಲದುದಕ್ಕೆ ಬಾಲ್ಯವಿವಾಹ—ಜರತವಿವಾಹದ ಗೊಂದಲ. ಅದರಮೇಲೂ ಬಾಲವಿಧವೆಯರ ನಿಟ್ಟುಸಿರು ಬೇರೆ. ಇವೆಲ್ಲಕ್ಕೂ ಅತಿಶಯವಾಗಿ ಸನ್ಯಾಸಿ ವೇಷದಿಂದ ಅವರ್ಣನೀಯವಾದ ಅನೇಕ ದುಷ್ಕೃತ್ಯಗಳನ್ನಾಚರಿಸುತ್ತ ಸ್ವಕರ್ತವ್ಯವನ್ನು ಮರೆತಿರುವ ರಾವಣಸನ್ಯಾಸಿಗಳಕಾಟ. ಇಂಥ ಈತಿಬಾಧೆಗಳೆಲ್ಲಾ ಹಿಂದೂಮತಕ್ಕೆ ಒಂದಕ್ಕಿಂತ ಒಂದು ಮಿಗಿಲಾಗಿರುವಾಗ, ಪರದೇಶದ ಪರಮತದವರ ಸಂಧಿಯನ್ನು ಕಾದು ಅವರೊಂದುಕಡೆ ಬಲೆಯೊಡ್ಡಿ ಸಿಕ್ಕಿದಷ್ಟನ್ನು ದಕ್ಕಿಸಿಕೊಳ್ಳಲು ಕಾದಿರುವರು. ಹಿಂದೂಮತಕ್ಕೆ ಇಷ್ಟೊಂದು ಕ್ಷೀಣದಶೆಯ ಮಾರ್ಗಗಳಿರುವಾಗ ಅವನ್ನು ನಿವಾರಿಸಲು ಕೈಲಾದ ಪ್ರಯತ್ನವನ್ನು, ಮಾಡದೆ ಸುಮ್ಮನಿರುವುದು ಹಿಂದೂಮತಸ್ಥರೆನಿಸಿಕೊಳ್ಳುವವರಿಗೆ ಶ್ರೇಯಸ್ಕರವೆ? ಇದನ್ನರಿತು ಭಾರತೀಯರೆಲ್ಲರೂ ನಡೆದುಕೊಳ್ಳುವವರಾಗಲೆಂದು ಕೋರುವೆವು,

ಕೈ॥ ರಾ॥ ಬ॥ ತೋಟದಪ್ಪನವರೂ, ವೀರಶೈವರ ಕೃತಜ್ಞತೆಯೂ.

ಮೈಸೂರು ಸೀಮೆಯ ವೀರಶೈವರ ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲ್ಯವು ಇಲ್ಲದಿರುವ ವೇಳೆಯಲ್ಲಿ ಕೈ॥ ಮರಿಮಲ್ಲಪ್ಪನವರು ವೀರಶೈವರ ಬಾಲಕರಿಗೆ ಒಂದು ಸಂಸ್ಕೃತ ಪಾಠಶಾಲೆಯನ್ನೇರ್ಪಡಿಸಿ, ಅನ್ನವಸ್ತ್ರಗಳನ್ನು ಕೊಟ್ಟು ವಿದ್ಯಾಭ್ಯಾಸವನ್ನು ಮಾಡಿಸಬೇಕೆಂದು ಸಂಕಲ್ಪಿಸಿ ತಕ್ಕ ಪ್ರಯತ್ನವನ್ನು ಮಾಡುವಷ್ಟರಲ್ಲಿ, ವೀರಶೈವ ಮಂಡಲಿಯ ದೌರ್ಭಾಗ್ಯದಿಂದ ಅವರಿಗೆ ಅವಸಾನಕಾಲವು ಪ್ರಾಪ್ತವಾಗಲು, ದಿವಾನ್ ರಂಗಾಚಾರ್ಯರವರ ವಶಕ್ಕೆ ಲಕ್ಷ ರೂ. ಗಳ ವರೆಗೂ ಕೊಟ್ಟು, ತಮ್ಮ ಸಂಕಲ್ಪವನ್ನು ನೆರವೇರಿಸಬೇಕೆಂದು ಪ್ರಾರ್ಥಿಸಿಕೊಂಡರು. ಅವರು ಅದರಂತೆ ರಾಜಧಾನಿಯಲ್ಲಿ ಒಂದು ದೊಡ್ಡ ಮನೆಯನ್ನು ಕ್ರಯಕ್ಕೆ ತೆಗೆದು ಅಲ್ಲಿ ವೀರಶೈವರಿಗೆ ಸಂಸ್ಕೃತವನ್ನು ಕೆಲಕಾಲ ಹೇಳಿಸುತ್ತಿದ್ದು, ಅನಂತರ ಬರಿಯ ಸಂಸ್ಕೃತವಿದ್ಯಾಭ್ಯಾಸದಿಂದ ಪ್ರಯೋಜನವಿಲ್ಲವೆಂದು ಅದರ ಜತೆಗೆ ರಾಜವಿದ್ಯೆಯಾದ ಆಂಗ್ಲಭಾಷೆಯನ್ನೂ ಕಲಿಸಬೇಕೆಂದುದ್ದೇಶಿಸಿ ತಕ್ಕೇರ್ಪಾಟನ್ನಿಟ್ಟರು. ಮತ್ತೂ ವೀರಶೈವ ಮತೇತರರೂ ಸ್ಕೂಲ್ ಫೀಯನ್ನು ಕೊಟ್ಟು ಅಲ್ಲಿ ಓದಬಹುದೆಂದು ಮಾಡಿದರು. ಕೆಲ ಕಾಲಾನಂತರ ವೀರಶೈವ ವಿದ್ಯಾರ್ಥಿಗಳಿಗೆ ಅನ್ನವು ಹಾಕಲ್ಪಡುವುದು ತಪ್ಪಿಸಲ್ಪಟ್ಟು ಮಾಶಾಸನವು ಕೊಡಲ್ಪಡಲಾರಂಭವಾಗಿ ಈಗಲೂ ೨—೩ ವಿದ್ಯಾರ್ಥಿಗಳಿಗೆ ಸ್ಕೂಲ್ ಫೀಗಾಗಿ ಸಹಾಯಮಾಡಲ್ಪಡುತ್ತಿದೆ. ಈ ಪಾಠಶಾಲೆಯ ಮೇಲ್ವಿಚಾರಣೆಯು ಒಂದು ಸಂಘಕ್ಕೊಳಪಟ್ಟು ನಡೆದುಕೊಂಡು ಬರುತ್ತಿದೆ. ಇದರಿಂದ ವೀರಶೈವರ ವಿದ್ಯಾಭ್ಯಾಸಕ್ಕೆ ಅಷ್ಟೇನೂ ಸಹಾಯವಾಗದೆ ಬಹು ತೊಂದರೆಯಾಗಿರುವಲ್ಲಿ ನಮ್ಮ ಸೀಮೆಯ ಕೆಲ ವೀರಶೈವ ಮುಂದಾಳುಗಳು ಧಾರವಾಡದಲ್ಲಿ ವೀರಶೈವ ವಿದ್ಯಾಭಿವೃದ್ಧಿ ಫಂಡೊಂದೇರ್ಪಡಿಸಲ್ಪಟ್ಟಿರುವಂತೆ ನಮ್ಮ ಸೀಮೆಯಲ್ಲೂ ಏರ್ಪಡಿಸಬೇಕೆಂದು ಸಂಕಲ್ಪಿಸಿ, ಬೆಂಗಳೂರಲ್ಲಿ ವೀರಶೈವ ಮಹಾಸಭೆಯನ್ನು ನೆರೆಸಿ ಫಂಡನ್ನೇರ್ಪಡಿಸಿದರು. ಆದರೆ ಉದ್ದೇಶದಂತೆ ಸಾಕಷ್ಟು ಹಣವು ಇನ್ನೂ ಕೂಡದೆ ಈವರೆಗೆ ೧೫—೨೦ ಸಾವಿರ ರೂ. ಗಳ ವರೆಗೆ ಮಾತ್ರ ಶೇಖರವಾಗಿ ಅದರ ಬಡ್ಡಿಯಿಂದ ೩—೪ ವಿದ್ಯಾರ್ಥಿಗಳ ಸ್ಕೂಲ್ ಫೀಗಾಗಿ ಸಹಾಯವು ಮಾತ್ರ ಮಾಡಲ್ಪಡುತ್ತಿರುವುದು. ಈಮಧ್ಯೆ ಕೈ॥ ಗುಬ್ಬಿ ತೋಟದಪ್ಪನವರು ತಾವು ಲಕ್ಷಾಂತರ ರೂ. ಗಳನ್ನು ಮುಟ್ಟಿಸಿ ಕಟ್ಟಿಸಿರುವ ಸತ್ರದೊಳಗೆ ವೀರಶೈವ ವಿದ್ಯಾರ್ಥಿಗಳ ವಾಸಕ್ಕಾಗಿ ಬೇರೆ ಕಟ್ಟಡವನ್ನು ಕಟ್ಟಿಸಿ ಅವರ ಅಶನಕ್ಕಾಗಿ ೭೫೦೦೦ ರೂ. ಗಳನ್ನು ಸರ್ಕಾರದ ಬ್ಯಾಂಕಿನಲ್ಲಿಟ್ಟರು. ಮತ್ತೂ ತಮ್ಮ ಅವಸಾನಕಾಲದಲ್ಲಿ ಈ ಫಂಡಿಗೆ ಇನ್ನೂ ೨೫ ಸಾವಿರ ರೂ. ಗಳು ಸೇರತಕ್ಕದೆಂದು ವಿಲ್ಲನ್ನು ಬರೆದಿಟ್ಟರು. ಈ ರೀತಿಯಾಗಿ ಲಕ್ಷಾಂತರ ರೂ. ಗಳನ್ನು ಸ್ವಮತೀಯರ ವಿದ್ಯಾಭಿವೃದ್ಧಿಗಾಗಿ ದಾನಮಾಡಿದ ಪುರುಷರು ನಮ್ಮ ಸೀಮೆಯ ವೀರಶೈವ ಮಂಡಲಿಯಲ್ಲೇ ಯಾರೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಅವರು ಮಾಡಿರುವ ಮಹದುಪಕಾರವನ್ನು ಸ್ವಮತೀಯರು ಎಷ್ಟು ಕೊಂಡಾಡಿದರೂ ತೀರದುದಾಗಿದೆ. ಈ ನವನಾಗರಿಕ ಕಾಲದಲ್ಲಿ ಇತರರಂತೆ ವೀರಶೈವರೂ ವಿದ್ಯಾವಂತರಾಗಿ ಮನುಷ್ಯರೆಂದೆನ್ನಿಸಿಕೊಳ್ಳಲನುಕೂಲಮಾಡಿದ ಆ ಮಹಾ ಧರ್ಮಿಷ್ಠರ ಹೆಸರಿನಿಂದ ಒಂದು ಸ್ಮಾರಕ ಕಾರ್ಯವನ್ನು ಅವರಿರುವಾಗಲೇ ಮಾಡಿದ್ದರೆ ಅತ್ಯಂತ ಪ್ರಶಸ್ತವಾಗುತ್ತಿದ್ದಿತು. ಈಗಲಾದರೂ ಮಾಡಿ ತಮ್ಮ ಕೃತಜ್ಞತೆಯನ್ನು ತೋರ್ಪಡಿಸತಕ್ಕದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿದೆ.

ಕೆಲ ದೊಡ್ಡಮನುಷ್ಯರು ಕೈ॥ ತೋಟದಪ್ಪನವರ ಅರ್ಧಾಕೃತಿಯ ಭಾವವನ್ನು ಅಮೃತಶಿಲೆಯಲ್ಲಿ ಮಾಡಿಸಬೇಕೆಂದು ಯೋಚಿಸಿದ್ದಂತೆ ಕೇಳುತ್ತೇವೆ. ಈ ಕಾರ್ಯಕ್ಕೆ ಹೆಚ್ಚು ದುಡ್ಡಿನ ಸಹಾಯವಾಗಬೇಕಾಗುವುದಲ್ಲದೆ ಇದನ್ನು ಸೀಮೆಯಿಂದಲೇ ಮಾಡಿಸಿ ತರಿಸಬೇಕಾಗಿರುವುದರಿಂದ ಬಹುಕಾಲ ಹಿಡಿಯುವುದು. ಆದುದರಿಂದ ಸುಲಭದಲ್ಲೇ ಶೀಘ್ರವಾಗಿ ಆಗತಕ್ಕ ಕಾರ್ಯವನ್ನು ಮಾಡುವುದುತ್ತಮವು. ಈ ವಿಚಾರದಲ್ಲಿ ನಮಗೆ ಸೂಕ್ತವೆಂದು ತೋರುವ ಒಂದು ಸೂಚನೆಯನ್ನು ಇಲ್ಲಿ ಹೇಳುತ್ತೇವೆ. ಅದು ವೀರಶೈವಬಂಧುಗಳಿಗೆಲ್ಲ ಸಮ್ಮತವಾಗಿ ಕಂಡುಬಂದಲ್ಲಿ ಆ ರೀತಿ ಮಾಡಬಹುದಾಗಿದೆ. ಕೈ॥ ತೋಟದಪ್ಪನವರು ಜೀವಿತರಾಗಿರುವಾಗ್ಗೇ ತಮ್ಮ ಅರ್ಧಾಕೃತಿಯ ಭಾವಚಿತ್ರವನ್ನು ಎಣ್ಣೆಬಣ್ಣದಲ್ಲಿ ಬರೆಸುವಂತೆ ರಾಜಧಾನಿಯ ರವಿ ಫೈನ್ ಆರ್ಟ್ ಏಜಂಟರಾದ ಮೆಸರ್ಸ್ ಲಿಂಗಣ್ಣ ಅಂಡ್‌ಸನ್ಸ್‌ರವರಲ್ಲಿ ಗೊತ್ತುಮಾಡಿದ್ದರು. ಈ ಲಿಂಗಣ್ಣ ಅಂಡ್ ಸನ್ಸ್‌ರವರು ಚಿತ್ರಕಲೆಯಲ್ಲಿ ಬಹು ಪ್ರಸಿದ್ಧರಾದ ಜರ್ಮನಿ ದೇಶದ ಗ್ಯಾರಹಟ್ ಎಂಬುವರಿಂದ ಎಣ್ಣೆ ಬಣ್ಣದಲ್ಲಿ ಬಹು ಶ್ಲಾಘ್ಯವಾಗಿ ಬರೆಸಿರುವರು. ಈ ಪಟವನ್ನು ನೋಡಿದರೆ ತೋಟದಪ್ಪನವರು ಸಜೀವಿಗಳಾಗಿ ಕುಳಿತಿರುವಂತೆ ತೋರುತ್ತದೆಯೇ ವಿನಾ ತಿಲಮಾತ್ರವೂ ವ್ಯತ್ಯಾಸವಿಲ್ಲವು. ವೀರಶೈವರು ಚಂದಾ ಹಣವನ್ನು ಕೂಡಿಸಿ ಈ ಪಟವನ್ನು ಕ್ರಯಕ್ಕೆ ಕೊಂಡು ಸತ್ರದಲ್ಲಿ ಕಟ್ಟದಲ್ಲಿ ಶಾಶ್ವತವಾಗಿರುವುದು. ಈ ಪಟದ ಬೆಲೆಗಾಗಿಯೂ ಅದನ್ನು ಸತ್ರದಲ್ಲಿ ಕಟ್ಟುವಾಗ್ಗೆ ಮಾಡಬೇಕಾದ ಉತ್ಸವಕಾರ್ಯಕ್ಕಾಗಿಯೂ ಒಟ್ಟು ೩೦೦ ರೂ. ಗಳಿಗಿಂತಲೂ ಹೆಚ್ಚಾಗಿ ಬೇಕಾಗುವುದಿಲ್ಲವು. ಅದುಕಾರಣ ನಮ್ಮ ಸೀಮೆಯ ವೀರಶೈವಬಾಂಧವರು ಚೆನ್ನಾಗಿ ಪರ್ಯಾಲೋಚಿಸಿ, ಈ ನಮ್ಮ ಸೂಚನೆಯು ಯುಕ್ತವಾಗಿ ಕಂಡುಬಂದಲ್ಲಿ ಕೂಡಲೇ ಈ ಕಾರ್ಯನಿರ್ವಾಹಕ್ಕೆ ಒಂದು ಸಂಘವನ್ನೇರ್ಪಡಿಸಿ, ಮುಂದಣ ಕಾರ್ಯವನ್ನು ನಡೆಯಿಸಲು ತ್ವರೆಪಡಲೆಂದು ಕೋರುವೆವು.

ಒಳದೇಶದ ವೃತ್ತಾಂತ.

ಮೈಸೂರ ನಿಯಮನಿರ್ಮಾಣ ಸಭೆಯು ಈ ತಾ॥ ೧೨ ಅಥವಾ ೧೩ ರಲ್ಲಿ ಕೂಡುವುದು.

ಶ್ರೀಮದ್ಯುವರಾಜರು ಕಳೆದ ತಾ॥ ೧ ರಲ್ಲಿ ಬೆಂಗಳೂರಿಗೆ ದಯಮಾಡಿಸಿದ್ದು ಈ ದಿವಸ ರಾಜಧಾನಿಗೆ ಹಿಂತಿರುಗಿ ಚಿತ್ತೈಸುವವರಾಗಿರುವರು.

ಶ್ರೀಮನ್ ಮಹಾರಾಜರವರು ಕಳೆದ ತಾ॥ ೧ ರಿಂದ ಜುಜುಟ್ಸು ಎಂಬ ಜಪಾನ್ ದೇಶದ ಅಂಗಸಾಧನೆಯನ್ನು ಅಭ್ಯಾಸಮಾಡಲಾರಂಭಿಸಿರುವರು.

ಬರುವ ಜೂನ್ ತಾ॥ ೮, ೧೦, ೧೩ ರಲ್ಲಿ ರಾಜಧಾನಿಯಲ್ಲಿ ಕುದುರೆಗಳ ಪಂದ್ಯವು ನಡೆಯುವುದು. ಇದಕ್ಕಾಗಿ ೩೦೩೦೦ ರೂ. ಗಳ ಬಹುಮಾನಗಳಿಡಲ್ಪಟ್ಟಿರುವುವು.

ಕಲಕತ್ತಾಕ್ಕೆ ಸಂಚಾರ ಹೊರಟಿದ್ದ ಮ॥ ವಿ. ಪಿ. ಮಾಧವರಾಯರು ವೈಸರಾಯರ ದರ್ಶನ ಸಂಭಾಷಣಗಳನ್ನು ಮಾಡಿಕೊಂಡು ಕಳೆದ ತಾ॥೩೦ರಲ್ಲಿ ಬೆಂಗಳೂರಿಗೆ ಬಂದರು.

ಈ ತಾ॥ ೧೨ ರಲ್ಲಿ ಶ್ರೀಮನ್ ಮಹಾರಾಜರವರು ಮೋಟಾರಿನಲ್ಲಿ ಸೀಗೂರು ಮಾರ್ಗವಾಗಿಯೂ, ರಾಣಿವಾಸದವರು ರೈಲು ಬಂಡಿಯಲ್ಲಿ ಬೆಂಗಳೂರ್ ಮಾರ್ಗವಾಗಿಯೂ ಉದಕಮಂಡಲಕ್ಕೆ ಚಿತ್ತೈಸುವರು.

ಕೋಲಾರದ ಚಿನ್ನದ ಗಣಿಗೆ ತಿರುಚಿದಾಪಲ್ಲಿಯಿಂದ ಒಬ್ಬನು ಬಂದು ಕೂಲಿಯವರನ್ನು ಸಿಲೋನಿಗೆ ಕಳುಹಲು ಪ್ರಯತ್ನಿಸುತ್ತಿದ್ದುದಕ್ಕಾಗಿ ಮ್ಯಾಜಿಸ್ಟ್ರೇಟರು ಅವನಿಗೆ ೬ ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಪೋಲೀಸು ಇ॥ ಜನರಲ್ ಮ॥ ದೇವರಾಜ ಅರಸಿನವರು ಕಳೆದ ಬುಧವಾರ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿದರು. ಇವರು ಪ್ರಾಯಶಃ ಮಹಾರಾಜರ ಸ್ವಾರಿಯು ಉದಕಮಂಡಲಕ್ಕೆ ಚಿತ್ತೈಸುವವರೆಗೂ ಇಲ್ಲೇ ಇರಬಹುದೆಂದು ತೋರುತ್ತದೆ.

ಗತಿಸಿದ ಬಜ್ಜಣ್ಣನವರ ಉತ್ತರಕ್ರಿಯಾದಿಗಳೆಲ್ಲವೂ ಅವರ ಅಂತಸ್ತಿಗೆ ಸರಿಯಾಗಿ ನಡೆಸಲ್ಪಟ್ಟುವು. ಮತ್ತೂ ಇಷ್ಟರಲ್ಲೇ ನಂಜರಾಜಬಹದ್ದೂರ್ ರವರ ಸತ್ರದಲ್ಲಿ ತ್ರಿಮತಸ್ಥ ಬ್ರಾಹ್ಮಣರಿಗೆ ದೊಡ್ಡ ಸಮಾರಾಧನೆಯು ಮಾಡಿಸಲ್ಪಡುವುದು.

ಬರುವ ತಾ॥ ೫ ರಲ್ಲಿ ಶ್ರೀಮನ್ ಮಹಾರಾಜರವರು ಕುಟುಂಬ ಸಮೇತ ಯೆಗ್ಗಡದೇವನಕೋಟೆಗೆ ದಯಮಾಡಿಸಿ ಸರದಾರ್ ಕಾಂತರಾಜೆಅರಸಿನವರು ಮೀರ್ ಬಕ್ಷಿ ಸುಬ್ಬಣ್ಣನವರಿಂದ ಕ್ರಯಕ್ಕೆ ಕೊಂಡಿರುವ ಜಹಗೀರಿಯನ್ನು ಪರಾಮರಿಸಿಕೊಂಡು ತಾ॥ ೬ರಲ್ಲಿ ರಾಜಧಾನಿಗೆ ಹಿಂತಿರುಗುವುದಾಗರಿತೆವು.

ರಜದಮೇಲೆ ಹೋಗುವ ಮ॥ ಕಾಂತರಾಜ ಅರಸಿನವರ ಬದಲು ಮಿ॥ ಚಾಂಡಿಯವರು ಮೈಸೂರು ಡಿ॥ ಡೆ॥ ಕಮಿಷನರವರಾಗಿ ಬರುತ್ತಾರೆಂದು ತಿಳಿಸಿದ್ದೆವಷ್ಟೆ. ಆದರೆ ಮುಜರಾಯಿ ಸೂಪರಿಂಟೆಂಡೆಂಟರಾಗಿರುವ ಮ॥ ಎ. ಸುಬ್ರಹ್ಮಣ್ಯಯ್ಯರವರು ಆಕ್ಟಿಂಗ್ ಡಿ॥ ಕ॥ ರವರಾಗಿ ನೇಮಿಸಲ್ಪಟ್ಟಿರುವರು.

ರಾಜಧಾನಿಯ ಪ್ರಾಣಿಪ್ರದರ್ಶನ ಶಾಲೆಯಲ್ಲಿ ಜನರ ವಿಹಾರಾರ್ಥವಾಗಿ ಪ್ರತಿ ಬುಧವಾರ ಸಾಯಂಕಾಲ ಕರ್ನಾಟಕ ಬ್ಯಾಂಡ್ ವಾದ್ಯವಾಗುವಂತೇರ್ಪಡಿಸಲ್ಪಟ್ಟಿರುತ್ತದೆಯಷ್ಟೆ. ಕಳೆದ ಬುಧವಾರ ಚಿಕ್ಕ ವಯಸ್ಸಿನ ಹುಡುಗರು ಆನೆಯಮೇಲೆ ಕುಳಿತು ಸಲಾಂ ಮಾಡುವುದು ಮೊದಲಾದ ವಿನೋದಗಳು ನಡೆಸಲ್ಪಟ್ಟವು.

ಚೆನ್ನಪಟ್ಟಣದ ಫಲಸರ್ಕಲ್ ಮಳಿಗೆ ಮ॥ಬಸವರಾಜಪ್ಪನವರು ಬರುವ ಸೋಮವಾರದಿಂದ ನಡಿಯುವ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಚೆನ್ನಪಟ್ಟಣಕ್ಕೆ ಬರತಕ್ಕ ವೀರಶೈವ ವಿದ್ಯಾರ್ಥಿಗಳ ಊಟಕ್ಕೂ, ವಾಸಕ್ಕೂ ತಕ್ಕೇರ್ಪಾಟನ್ನು ಉಚಿತವಾಗಿ ಮಾಡಿಸಿರುತ್ತಾರೆಂದು ತಿಳುಹಲು ಸಂತೋಷವಾಗುತ್ತದೆ. ಅಲ್ಲಿಗೆ ಬರತಕ್ಕ ವಿದ್ಯಾರ್ಥಿಗಳು ೨ ದಿವಸ ಮುಂದಾಗಿ ಮ॥ ಬಸವರಾಜಪ್ಪನವರಿಗೆ ಬರೆದು ತಿಳುಹುವುದು.

ರಾಜಧಾನಿಯ ಸ್ಯಾನಿಟರಿ ಇನ್ಸ್ಪೆಕ್ಟರುಗಳಲ್ಲೊಬ್ಬರಾದ ಮ॥ ಅಬ್ದುಲ್‌ಕಾಲಕ್ ರವರು ಚಾಮರಾಜನಗರ ತಾ॥ ಶಿರಸ್ತೆದಾರರಾಗಿ ನೇಮಿಸಲ್ಪಟ್ಟಿರುವರೆಂದು ಕೇಳಿ ಸಂತೋಷಿಸುತ್ತೇವೆ. ಇವರು ಇನ್ನೂ ಚಿಕ್ಕವಯಸ್ಸಿನವರೂ, ಸ್ನೇಹಪರರೂ, ಸುಶೀಲರೂ, ನಿಸ್ಪೃಹರೂ ಆಗಿರುವರು. ಮತ್ತೂ ಮೇಲ್ಪಟ್ಟ ಅಧಿಕಾರಿಗಳ ಮೆಚ್ಚಿಗೆಯನ್ನೂ ಜನಾನುರಾಗವನ್ನೂ ಚೆನ್ನಾಗಿ ಸಂಪಾದಿಸಿದ್ದರು. ವರ್ಧಿಷ್ಣುಗಳಾದಿವರು ತಮ್ಮ ಹೊಸ ಉದ್ಯೋಗದಲ್ಲಿ ಒಳ್ಳೇ ಹೆಸರನ್ನು ಪಡೆದು ಇನ್ನೂ ಅಭಿವೃದ್ಧಿಯನ್ನು ಹೊಂದುವವರಾಗಲೆಂದು ಹಾರೈಸುತ್ತೇವೆ.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದ್ದು. ಪ. ಪ್ರ.

ಪತ್ರವ್ಯವಹಾರ.

ಶಿವಮೊಗ್ಗಾ ಡಿ॥ ಕುಂಶಿ ಸಬ್ ತಾ॥ ನಲ್ಲಿರುವ ಬಡ ಹೋಬಳಿ ಸ್ಕೂಲ್ ಮಾಸ್ಟರುಗಳ ಗೋಳಾಟವನ್ನು ಯಾರು ತಾನೇ ನೋಡಲು ಸಾಧ್ಯ? ಏನಂದರೆ—ಇವರುಗಳ ತಲಬು ಶಿವಮೊಗ್ಗಾ ತಾ॥ ನಲ್ಲಿ ಪ್ರತಿ ಮಾಹೆಯ ಹತ್ತನೆ ತಾರೀಕಿನಲ್ಲಿ ಖರ್ಚು ಬೀಳುತ್ತೆ. ಅಲ್ಲಿಂದ ಡಿಟೋ ಮಾಹೆ ತಾ॥ ೨೪ ರಲ್ಲಿ ಕುಂಶಿ ಸಬ್ ತಾಲ್ಲೂಕಿಗೆ ಬಂದು ನಂತರ ಮುಂದಿನ ಮಾಹೆ ಹತ್ತಕ್ಕೆ ಹೋಬಳಿ ಶೇಕದಾರರಿಗೆ ಪಾವತಿ ಬಗ್ಗೆ ಬರುತ್ತದೆ. ಶೇಕದಾರರುಗಳು ಅದೇಮಾಹೆಯ ೨೪-೩೦ನೆ ತಾರೀಕಿಗೆ ಬಟವಾಡೆ ಮಾಡುತ್ತಾರೆ. ಈ ರೀತಿ ಮಾಡುವದರ ವಿಷಯವಾಗಿ ಡಿಪ್ಯೂಟಿಕಮಿಷನರಲ್ಲಿ ಅರ್ಜಿ ಬರಕೊಂಡರೂ ಕೇಳುವದಕ್ಕೆ ಪುರಸತ್ತು ಇಲ್ಲವಾಗಿ ಕಾಣಿಸುತ್ತೆ, ಆದರೆ ಇನ್ನು ಮುಂದೆ ಇದನ್ನೆಲ್ಲಾ ಹೋಗಲಾಡಿಸಿ ಕ್ರಮವಾಗಿ ರೂಲ್ಸು ಇರುವ ಪ್ರಕಾರ ತಾ॥ ೧೦ ರೊಳಗೆ ಪಾವತಿ ಮಾಡಿ ಬಡ ನೌಕರರ ಕಡೆಗೆ ದೃಷ್ಟಿ ಇಟ್ಟು ಘನಸರ್ಕಾರದವರು ಕಾಪಾಡುವರೆಂಬದಾಗಿ ನಂಬಿರುತ್ತೇನೆ ಮಹಾಸ್ವಾಮಿ.

ಪ್ರಜಾ ಹಿತಚಿಂತಕ.

ಈಮಾಹೆಮಾರ್ಚಿ ತಾ॥ ೪ ನೇ ಶನಿವಾರ ಬೆಂಗಳೂರಿಗೆ ಹೋಗಿದ್ದೆ. ಆದಿವಸರಾತ್ರಿ ೯ ಗಂಟೆಸಮಯದಲ್ಲಿ ಸಾಮಾನುಗಳನ್ನೆಲ್ಲಾ ತೆಗೆದುಕೊಂಡು ಬರುವಾಗ್ಗೆ ಯುಸ್, ಸಾಮ್ಯಾಜಿ ಅಂಡ್ಕೊ ಜನರಲ್ ಮರ್ಚೆಂಟ್ ಮತ್ತು ಕಮಿಷನ್ ಏಜೆಂಟ್ಸ್ ಇವರ ಕಂಪನಿಯಲ್ಲಿ ಒಂದು ಸಣ್ಣ ಕಬ್ ತೆಗೆದುಕೊಳ್ಳುವದಕ್ಕೆ ಹೋಗಿ ಅವರ ಕಂಪನಿಯಲ್ಲಿ ನನ್ನ ಜೊತೆಯಲ್ಲಿದ್ದ ಮನುಷ್ಯನು ೧೮ ರೂಪಾಯಿ ಬಾಳುವ ಸಾಮಾನಿನ ಒಂದು ಬ್ಯಾಕನ್ನು ಅಕಸ್ಮಾತ್ ಮರತುಬಿಟ್ಟು ಹೊಟಲಿಗೆ ಬಂದನಂತರ ಜ್ಞಾಪಕಮಾಡಿ ನಾವು ನಿಂತು ಕೂತ ಸ್ಥಳದಲ್ಲೆಲ್ಲ ಗಾಬರಿಯಿಂದ ಹುಡುಕುವಾಗ್ಗೆ ಮೇಲಿನ ಕಂಪನಿಯವರು ತಾವಾಗಿ ಕರೆದು, ಇದು ಏನಿರಯ್ಯಾ? ಹೀಗೆ ಗಾಬರಿಯಿಂದ ಹುಡುಕುತ್ತೀರೆಂದು ಸಂಗತಿಯನ್ನು ವಿಚಾರಿಸಿ ತಮ್ಮ ವಶದಲ್ಲಿದ್ದ ಬ್ಯಾಕನ್ನು ತಂದುಕೊಟ್ಟುದಕ್ಕಾಗಿ ಕೃತಜ್ಞನಾಗಿರುವೆನು. ಇಂಥ ಸತ್ಯವಂತರು ಪ್ರಬಲಿಸಿ, ಅಲ್ಲಲ್ಲಿ ಇರುವದುಸ್ಸಂಸ್ಕಾರಿಗಳಿಗೆಲ್ಲ ಬೋಧಿಸಿದರೆ ಮತ್ತು ತಮ್ಮ ಪತ್ರಿಕೆಯಲ್ಲಿ ಇಂಥಾ ಸತ್ಯವಾದ ನಡತೆಗಳನ್ನು ಬೋಧಿಸುತ್ತಾಬಂದರೆ ಬಹು ಮಟ್ಟಿಗೆ ಸುಳ್ಳೂ ಕಳ್ಳತನಗಳೂ ಲೋಕದಲ್ಲಿರುವ ದುರ್ನೀತಿಗಳೂ ಅಡಗುವವೆಂದು ವಿಜ್ಞಾಪಿಸುವ ತಮ್ಮ ವಿಧೇಯ.

ಎಸ್. ಎಮ್, ಮಲ್ಲಪ್ಪ, ಚಂದಾದಾರ್.

ಕೊಳ್ಳೆಗಾಲಂ ತಾ॥ಮುಡಿಗುಂಡದಲ್ಲಿ ನಡೆದ ಮುಡುಗುದೊರೆ ಶ್ರೀ ವೀರಶೈವ ಮತಸಂವರ್ಧಿನೀ ಉಪಸಭಾ.

ಮಾರ್ಚಿ ತಾ॥ ೧೮ ರಲ್ಲಿ ಶ್ರೀಮಾನ್ ದೊ. ಗು. ಸಿದ್ದಪ್ಪನವರ ಪ್ರಾರ್ಥನೆ ಮೇರೆಗೆ ಸಭೆಸೇರಿ ನಡೆಸಿದ ವಿಚಾರವು.

(೧) ಸಭಿಕ ಮಹಾಶಯರೇ ನನ್ನ ಪ್ರಾರ್ಥನೆ ಮೇರೆಗೆ ತಾವುಗಳೆಲ್ಲರೂ ದೇಹಶ್ರಮವನ್ನು ವಹಿಸಿ ಸಭೆಯನ್ನಲಂಕರಿಸಿದ್ದಕ್ಕಾಗಿ ನಾನು ಕೃತಜ್ಞತಾಪೂರ್ವಕವಾಗಿ ಅಭಿವಂದಿಸುತ್ತೇನೆ. ಎಂದು ಶ್ರೀಮಾನ್ ದೊ. ಗು. ಸಿದ್ದಪ್ಪನವರ ಭಾಷಣವು ನಡೆದಿತು.

(೨) ಈ ದಿನ ನಡಿಯತಕ್ಕ ಸಭೆಗೆ ಕೊಳ್ಳೇಗಾಲದ ಶ್ರೀಮಾನ್ ಜಿ. ಪಿ. ಸುಬ್ಬಯ್ಯನವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಶ್ರೀಮಾನ್ ದೊ. ಗು ಸಿದ್ದಪ್ಪನವರು ಪ್ರಾರ್ಥಿಸಿದ ಮೇರೆಗೆ ಮಣಿಯಂ ಪುಟ್ಟಪ್ಪನವರು ಮಧುವನಹಳ್ಳಿ ಬಿ. ಮಾದಪ್ಪನವರು ಅನುಮೋದಿಸಲು ಸರ್ವಸಮ್ಮತಿಯಿಂದ ಮಂಜೂರು ಮಾಡಲಾಯಿತು. ಅದರಂತೆಯೇ ಶ್ರೀಮಾನ್ ಜಿ. ಪಿ. ಸುಬಯ್ಯನವರು ಅಗ್ರಾಸನವನ್ನು ವಹಿಸಿದರು.

(೩) ಘನತೆಯನ್ನು ಹೊಂದಿದ ಮೈಸೂರು ಗೌರ್ನಮೆಂಟಿನವರು ನಮ್ಮ ಮುಡುಕುದೊರೆ ವೀರಶೈವ ಮತಸಂವರ್ಧಿನೀ ಸಭಾಧ್ಯಕ್ಷರಾದ ವೇದಮೂರ್ತಿಗಳು ಪಿ. ಆರ್. ಕರಿಬಸವಶಾಸ್ತ್ರಿಗಳು ವೇ. ಎಜ. ಆರ್. ಕರಿಬಸವ ಶಾಸ್ತ್ರಿಗಳ ಮೂಲಕ ವೀರಶೈವ ಮತಲಕ್ಷಣವನ್ನುತಿಳಿದು ಇದರಲ್ಲಿ ಬ್ರಾಹ್ಮಣಾದಿ ಚಾತುರ್ವರ್ಣ್ಯಗಳುಂಟೆಂತಲೂ ಲಿಂಗಧಾರಿ ಅಥವಾ ವೀರಶೈವ ಬ್ರಾಹ್ಮಣ, ಲಿಂಗಧಾರಿ ಅಥವಾ ವೀರಶೈವ ಕ್ಷತ್ರಿಯ ಈ ಮೇರೆಗೆ ಬರಿಸಬಹುದೆಂದು ಆರ್ಡರು ದಯಪಾಲಿಸಿರುವದರಿಂದ ಅದೇಮೇರೆಗೆ ನಮ್ಮ ಇಂಡಿಯಾ ಗೌರ್ನಮೆಂಟ್ ಜನಪರಿಗಣನೆಯ ಲೆಕ್ಕವನ್ನು ಬರಿಯುವ ಎನ್ಯೂಮರೇಟರುಗಳನ್ನೂ, ಸೂಪರ್‌ವೈಜರನ್ನೂ ವೀರಶೈವ ಬ್ರಾಹ್ಮಣ ಎಂದು ಬರೆದುಕೊಳ್ಳುವಂತ ಹೇಳಿದ್ದಕ್ಕೆ ನಕಲು ಪುಸ್ತಕದಲ್ಲಿ ಸರಿಯಾಗಿ ಬರೆದು ಅಚ್ಚು ಕಾಲಮುಗಳಲ್ಲಿ ಅವರ ಇಷ್ಟಬಂದಂತೆ ಅಂದರೆ (ಲಿಂಗಾಯಿತ) ಎಂದು ಬರದಿರುವರೆಂದು ಕೇಳಲು ಶೋಚನೀಯವಾಗಿತ್ತು.

(೪) ಅಷ್ಟರಲ್ಲೇ ನಮ್ಮ ಸಭೆಯ ಮೂಲಕವಾದ ವಿಜ್ಞಾಪನ ಪತ್ರಿಕೆಯನ್ನೂನಮ್ಮ ಅಧ್ಯಕ್ಷರ ಮುಖೇನ ಕಳುಹಿಸಲ್ಪಟ್ಟ ತಂತಿಯನ್ನೂ, ನಮ್ಮ ದಯಾಳುಗಳಾದ ಇಂಡಿಯಾ ಗೌರ್ನಮೆಂಟು ಸೆನ್ಸಸ್ ಸೂಪರಿಂಟೆಂಟರವರು ಪರಾಂಬರಿಸಿ, ಈವಾಗ ಸೆನ್ಸಸ್‌ಕಾಲ ಸಮೀಪಸ್ಥವಾದ್ದರಿಂದ ಎಲ್ಲಾ ಎನ್ಯೂಮರೇಟರುಗಳಿಗೆ ಅರ್ಡರು ಮಾಡಲು ಅನುಕೂಲವಿಲ್ಲವೆಂದು ವಿಷಾದಿಸುತ್ತೇವೆಂತಲೂ, ಆದರೂ ಸೆನ್ಸಸ್ ರಿಪೋರ್ಟಿನಲ್ಲಿ ನಿಮ್ಮ ಇಷ್ಟದಂತೆ ದಾಖಲ್ಮಾಡಿಕೊಳ್ಳುತ್ತೇವೆಂತಲೂ ತಂತೀ ಆರ್ಡರು ದಯಪಾಲಿಸಿರುವದನ್ನು ಆದರಪೂರ್ವಕವಾಗಿ ಸ್ವೀಕರಿಸಿ, ಈ ಮೂಲಕ ವಂದನೆಯನ್ನರ್ಪಿಸುತ್ತೇನೆ. ಎಂಬದಾಗಿ ದೊ. ಗು, ಸಿದ್ದಪ್ಪನವರ ಭಾಷಣಗಳು ನಡದವು.

ಮುಡಿಗುಂಡದ ಸರಾಪು ಮರಿದೇವರ ಮಕ್ಕಳು ಬಾಲಸುಂದರ ದೇವರಿಂದ ಈ ಮುಂದೆಕಂಡ ಆಚರಣೆಗೆ ತರಬೇಕಾದ ಕೆಲವು ವಿಷಯಗಳು ಹೇಳಲ್ಪಟ್ಟವು.

"ಶ್ರೀಮದ್ವೀರಶೈವ ಮತಾಭಿವೃದ್ಧಿ ಸುಕರರಾದ ಸಭಿಕ ಮಹಾಶಯರೇ"—

ಈ ನಮ್ಮ ಮತಬಾಂಧವರು ಅಂತರಂಗದಲ್ಲಿಯೂ, ಆಚಾರದಲ್ಲಿಯೂ, ವೀರಶೈವ ಬ್ರಾಹ್ಮಣ್ಯವನ್ನುವಹಿಸಿದ್ದಾಗ್ಯೂ ಕೆಲವರು ಮಾತ್ರ ವೇಷ ಭಾಷಾದಿಗಳನ್ನು ಸರಿಯಾಗಿ ಉಪಯೋಗಿಸದಿರೋಣದರಿಂದ ಸರ್ವರೂ ಒಂದೇರೀತಿಯಾಗಿ ಆಚಾರ, ವ್ಯವಹಾರ, ವೇಷ ಭಾಷಾದಿಗಳನ್ನು ವ್ಯವಹಾರಕ್ಕೆ ತರುವಂತೆ ಕೆಲವು ವಿಷಯಗಳನ್ನು ನಿರ್ಧರಿಸಿ ಮತಗೌರವವನ್ನುದ್ಧರಿಸಿ ಯಶಸ್ಸನ್ನು ಪಡೆಯಬೇಕೆಂದು ಪ್ರಾರ್ಥಿಸುತ್ತೇನೆಂದು ಭಾಷಣವನ್ನು ಮಾಡಿ ಅಷ್ಟಾವರಣ ವಿಚಾರವಾದ ಒಂದು ಉಪನ್ಯಾಸವನ್ನು ಮಾಡಿದನಂತರ ಅಡಿಯಲ್ಲಿ ಕಂಡ ವಿಷಯಗಳು ಹೇಳಲ್ಪಟ್ಟವು.

(೧) ನಮ್ಮ ವೀರಶೈವ ಮಂಡಲಿಯಲ್ಲಿ ಮತತತ್ವವಿಂಥಾದ್ದೆಂಬ ಅಂತರಂಗವನ್ನೇ ತಿಳಿಯದೆ ಜಾತ್ಯಂಧರಂತಿದ್ದ ನಮಗಳಿಗೆ ಮೈಸೂರು ವೇದಮೂರ್ತಿಗಳು ಪಿ. ಆರ್. ಕರಿಬಸವಶಾಸ್ತ್ರಿಗಳು, ಎಜ. ಆರ್. ಕರಿಬಸವಶಾಸ್ತ್ರಿಗಳು ಸೂರ್ಯಚಂದ್ರರಂತೆ ಮಾರ್ಗದರ್ಶಕರಾಗಿ ಉತ್ತಮಸ್ಥಿತಿಗೆ ತರುವ ಏರ್ಪಾಡು ನಡಿಸಿದ್ದಕ್ಕಾಗಿ ಪ್ರತ್ಯಹವೂ ವಂದನೆಯನ್ನರ್ಪಿಸಲು ಬದ್ಧನಾಗಿರುತ್ತೇನೆ.

(೨) ನಮ್ಮ ಮತಾಭಿವೃದ್ಧಿಗೆ ಮಹಾ ಮಾತೃಸ್ಥಾನವಾದ ಮುಡುಕುದೊರೆ ಶ್ರೀಮದ್ಭ್ರಮರಾಂಬಾ ಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿಯವರ ಸನ್ನಿಧಿಯಲ್ಲಿ ಏರ್ಪಟ್ಟಿರುವ ಶ್ರೀಮದ್ವೀರಶೈವ ಮತಸಂವರ್ಧಿನೀ ಸಭೆಗೆ ಸರ್ವರೂ ಯಥಾಶಕ್ತಿಯಾಗಿ ದ್ರವ್ಯ ಸಹಾಯ ಕೊಡುವದಲ್ಲದೆ ಪ್ರತಿವರ್ಷದಲ್ಲೂ ಪ್ರತಿಯೊಬ್ಬರೂ ಸಭೆಗೆ ತಪ್ಪದೆ ದಯಮಾಡಿಸಿ ಅಲ್ಲಿ ವಿಸ್ತರಿಸುವ ಸಿದ್ಧಾಂತವನ್ನು ಸರ್ವರೂ ಹಿಂಬಾಲಿಸಿ ಆಚರಣೆಗೆ ತರಬೇಕೆಂದು ಪ್ರಾರ್ಥನೆ.

(೩) ಅನೇಕ ದೂರ ದೇಶಗಳಲ್ಲಿ ನಮ್ಮ ಮತಸಂಬಂಧವಾಗಿ ನಡೆಯುವ ಕರಸ್ಪಾಂಡೆನ್ಸುಗಳನ್ನು ನಮ್ಮ ಪರಮಮಿತ್ರನಂತೆ ವಾರಕ್ಕೊಂದಾವರ್ತಿ ನಾವಿದ್ದ ಸ್ಥಳಕ್ಕೇ ಬಂದು ತಿಳುವಳಿಕೆಯನ್ನು ಕೊಟ್ಟು ನಮ್ಮನ್ನು ಕೃತಾರ್ಥರನ್ನಾಗಿ ಮಾಡುತ್ತಿರುವ ಸ್ಟಾರ್ ಪತ್ರಿಕೆಗೆ ದಿನೇ ದಿನೇ ಅಭಿವೃದ್ಧಿಸ್ಥಿತಿಯನ್ನುಂಟುಮಾಡಲೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತೇನಲ್ಲದೆ ಇದಕ್ಕಾಗಿ ಅನೇಕ ಕಷ್ಟ ನಷ್ಟಗಳನ್ನನುಭವಿಸುತ್ತಿರುವ ಮ॥ ವೈ. ವಿರೂಪಾಕ್ಷಯ್ಯನವರನ್ನು ನಮ್ಮ ವೀರಶೈವ ಮಂಡಲಿಯಲ್ಲವೂ ಇಷ್ಟಾನುಸಾರವಾಗಿ ದ್ರವ್ಯ ಸಹಾಯವನ್ನು ಮಾಡಿ ಯಶಸ್ವಿಗಳಾಗಬೇಕೆಂದು ಕೃತಪಡಿಸಿಕೊಳ್ಳುತ್ತೇನೆ.

(೪) ನಮ್ಮ ಶಕ್ತಿ ವಿಶಿಷ್ಟಾದ್ವೈತ ಮತಸಿದ್ಧಾಂತಗಳು ಅನೇಕವಾಗಿ ಸಂಸ್ಕೃತದಲ್ಲಿಯೇ ಇರುವದರಿಂದ ನಮಗೆ ಸಂಸ್ಕೃತಾಭ್ಯಾಸವು ಅತ್ಯಾವಶ್ಯಕವಾಗಿರುತ್ತದೆ. ಆದ್ದರಿಂದ ನಮ್ಮಲ್ಲಿ ಶ್ರೀಮಂತ ಪ್ರಮುಖರಾದ ತಾವುಗಳು ಒಂದೊಂದು ಗ್ರಾಮದಲ್ಲಿ ನಾಲ್ಕಾರು ಜನರವಟ್ಟಿಗಾದರೂ ಸಂಸ್ಕೃತ ವಿದ್ಯಾಭ್ಯಾಸಿಗಳಾಗುವದಕ್ಕೆ ತಕ್ಕ ಸೌಕರ್ಯವನ್ನುಂಟುಮಾಡಿಕೊಟ್ಟು ಮತಪ್ರಕಾಶಕರೆಂಬ ಕೀರ್ತಿಯನ್ನ ಪಡೆಯಬೇಕೆಂದು ವಿನಯಪೂರ್ವಕವಾಗಿ ವಿಜ್ಞಾಪಿಸಿರುತ್ತೇನೆ.

(೫) ನಮ್ಮ ವೀರಶೈವ ಮಂಡಲಿಯು ಸುಮಾರು ೩೪ ಲಕ್ಷ ಜನಗಣನೆಯುಳ್ಳದ್ದೆಂದು ತಿಳಿಯಬರುತ್ತಾದ್ದರಿಂದ ನಮ್ಮ ಪೂರ್ವಸಿದ್ಧಾಂತ ಪ್ರಕಾರ ಇದರಲ್ಲಿ ಬ್ರಾಹ್ಮಣಾದಿ ಚಾತುರ್ವರ್ಣ್ಯವಿರುತ್ತೆಯಾಗಿ ಯಾರೊಬ್ಬ ವೀರಶೈವನು ತಮ್ಮ ಯಾವದೊಂದು ರಿಕಾರ್ಡುಗಳಲ್ಲಿಯೂ ಅವರವರ ವರ್ಣವನ್ನು ವಿವರವಾಗಿ ಅಂದರೆ ವೀರಶೈವ ಬ್ರಾಹ್ಮಣ, ವೀರಶೈವ ಕ್ಷತ್ರಿಯ ಇತ್ಯಾದಿಯಾಗಿ ಬರಸುತ್ತಾಬಂದಲ್ಲಿ ಅನುಕೂಲವಾಗಿರುತ್ತೆಂದು ಅರಿಕೆಮಾಡಿಕೊಳ್ಳುತ್ತೇನೆ.

(೬) ಇಂಥಾ ಸಭೆಯು ನಮ್ಮ ಪ್ರದೇಶದಲ್ಲಿ ಮಾಸಕ್ಕೊಂದಾವರ್ತಿ ನಡೆದು ಸದುಪನ್ಯಾಸಗಳು ನಡಿಸಬೇಕಾದ ಆಚಾರ ವ್ಯವಹಾರಗಳನ್ನು ಬೋಧಿಸುತ್ತಾ ಬಂದಲ್ಲಿ ಮತಸಿದ್ಧಾಂತಪ್ರಕಾರ ಸರ್ವರೂ ಆಚರಣೆಗೆ ತರುವಲ್ಲಿ ಅನುಕೂಲವಾಗಿರುತ್ತೆ. ಅಲ್ಲದೆ ಹೀಗೆ ಏರ್ಪಡಿಸತಕ್ಕ ಸಭೆಗೆ ಒಂದೊಂದುದಿವಸಕ್ಕೆ ಒಬ್ಬೊಬ್ಬ ಪ್ರಮುಖರು ಸತ್ಕಾರವನ್ನು ನಡಿಸುವದು ಅವಶ್ಯಕವೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಈ ವಿಷಯಗಳು ಹೇಳಲ್ಪಟ್ಟ ಮೇಲೆ ಮಧುವನಹಳ್ಳಿ ಬಿ. ಮಾದಪ್ಪನವರು ಮಣೇಗಾರ್ ಸಿದ್ಧಲಿಂಗಪ್ಪನವರು, ತಾಳ್ವಾಡಿ ಮಾದಪ್ಪನವರು ದೊಂಗು ಸಿದ್ದಪ್ಪನವರು ಮಣಿಯಂ ಪುಟ್ಟಪ್ಪನವರು ಸರಾಪು ದೊಡ್ಡಬಸವಲಿಂಗದೇವರು ಇನ್ನೂ ಮುಂತಾದ ಪ್ರಮುಖರು ಇವಾಗ ಹೇಳಿದ ವಿಷಯಗಳೆಲ್ಲವೂ ಅತ್ಯವಶ್ಯವಾಗಿ ನಡಿಸಬೇಕಾದದ್ದೆಂದು ಅನುಮೋದನವನ್ನು ಕರತಾಡನದ ಮೂಲಕ ಸೂಚಿಸಿದರು.

ಸಂಸ್ಕೃತಪಾಠಶಾಲೆಯ ವಿಷಯವಾಗಿ ನಾನು ಯಥಾಶಕ್ತಿಯಾಗಿ ಸಹಾಯಮಾಡುತ್ತೇನೆ ಸರ್ವರೂ ಇದರಂತೆಯೇ ಸಹಾಯವನ್ನು ಮಾಡಿ ವಿದ್ಯಾಭಿವೃದ್ಧಿಯನ್ನುಂಟುಮಾಡಬೇಕೆಂದು ಶ್ರೀಮಾನ್॥ ಸಂ॥ ಶಿವಪ್ಪನವರು ಪ್ರೋತ್ಸಾಹವನ್ನು ಕೊಟ್ಟು ತಮ್ಮ ಉಚಿತೌದಾರ್ಯವನ್ನು ತೋರ್ಪಡಿಸಿದರು. ಮಧುವನಹಳ್ಳಿ ಶ್ರೀಮಾನ್ ಬಿ. ಮಾದಪ್ಪನವರು ಏಕಮತ್ಯವಿಷಯವಾಗಿಯೂ ಶ್ರೀಮಾನ್ ದೊಂಗುಸಿದ್ದಪ್ಪನವರು ಸ್ಟಾರ್ ರಿಲೀಫ್ ಫಂಡಿನ ವಿಷಯವಾಗಿಯೂ ಸಂಭಾಷಣೆಮಾಡಿದರು.

ಈ ದಿವಸ ಮಣೇಗಾರು ಪುಟ್ಟಪ್ಪನವರ ಮನೆಯಲ್ಲಿ ಮುಡಿಗುಂಡ ಕೊಳ್ಳೇಗಾಲ ಮಧುವನಹಳ್ಳಿ ತಲ್ಕಾಡು ಮಳವಳ್ಳಿ ಮುಂತಾದ ಸ್ಥಳಗಳ ಮಹಾಜನಗಳು ಸಭೆಸೇರಿ ಮ॥ ರಾ॥ ಶ್ರೀಮಾನ್ ಜಿ. ಪಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಅಡಿಯಲ್ಲಿ ಕಂಡ ವಿಷಯಗಳ ನಿರ್ಧಾರಮಾಡಿ ಮುಂದಿನ ಮೀಟಿಂಗಿನಲ್ಲಿ ಜಾರಿಗೆ ತರಬೇಕೆಂದು ನಿರ್ಧರಿಸಲ್ಪಟ್ಟಿತು

(೧) ಮಡುಕುದೊರೆ ವೀರಶೈವಮತ ಸಂವರ್ಧಿನೀಸಭೆಗೆ ಪ್ರತಿಯೊಬ್ಬರೂ ದ್ರವ್ಯ ಸಹಾಯವನ್ನು ತಮ್ಮ ಶಕ್ತ್ಯಾನುಸಾರವಾಗಿ ಮಾಡಬೇಕೆಂದು ನಿರ್ಧರಿಸಿತು.

(೨) ಮೈಸೂರು ಸ್ಟಾರ್ ಪತ್ರಿಕಾಕರ್ತರಿಗೆ ಸಹಾಯವಾಗಿ ಸ್ಟಾರ್ ರಿಲೀಫ್ ಫಂಡು ಒಂದನ್ನು ಸ್ಥಾಪಿಸಬೇಕೆಂದು ಮತ್ತೂ ಸ್ಟಾರ್ ಪತ್ರಿಕೆಗಳನ್ನು ಗ್ರಾಮಕ್ಕನಾಲ್ಕೈದಕ್ಕೆ ಕಡಿಮೆಯಿಲ್ಲದಂತೆ ತರಿಸಬೇಕೆಂದು ನಿರ್ಧರಿಸಿತು.

(೩) ಈ ಗ್ರಾಮದಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿ ಉತ್ತರೋತ್ತರ ನಡಿಸಬೇಕೆಂಬುದು.

(೪) ದಸ್ತಾವೇಜು ವಗೈರೆ ಬರಿಸುವದರಲ್ಲಿ ಶಾಸ್ತ್ರೀಯವಾಗಿ ಮತ ಜಾತಿಯನ್ನು ಬರಿಸಬೇಕೆಂಬುದು.

(೫) ತಿಂಗಳಿಗೊಂದಾವರ್ತಿ ಪ್ರತಿತಿಂಗಳ ಶು॥ ೧೩ ರಲ್ಲೂ ಮೀಟಿಂಗು ನಡಿಸಬೇಕೆಂಬುವದು.

(೬) ಮೀಟಿಂಗ್ ಕಾಲಗಳಲ್ಲಿ ಗ್ರಾಮಸ್ಥರು ಪ್ರತಿ ಮೀಟಿಂಗಿಗೂ ಪ್ರತಿಯೊಬ್ಬರಂತೆ ಮೀಟಿಂಗಿಗೆ ಬರತಕ್ಕ ಮಹಾಜನಗಳಿಗೆ ಸತ್ಕಾರವನ್ನು ಮಾಡಬೇಕೆಂಬುವದು.

(೭) ಸಭಾಧ್ಯಕ್ಷರು ಉಪಾಧ್ಯಕ್ಷರು ಮತವಿಷಯವನ್ನು ಸ್ವಾಮತೀಯರಿಗೆ ಬೋಧಿಸುತ್ತಾ ಬರಬೇಕು.

(೮) ನಮ್ಮ ಈ ಮೀಟಿಂಗಿನಲ್ಲಿ ಮತಕ್ಕೆ ಶಾಸ್ತ್ರೀಯವಾಗಿ ಉಂಟಾಗಿರುವ ಗೌರವಾದಿಗಳನ್ನು ಕಾಪಾಡತಕ್ಕ ವಿಷಯಗಳನ್ನು ಸಂಸ್ಕೃತ ವಿದ್ಯಾಭ್ಯಾಸ ಏಕಮತ್ಯ ಮುಂತಾದ ವಿಷಯಗಳಲ್ಲಿ ಪ್ರವರ್ತಿಸಬೇಕೇ ಹೊರ್ತು ಪರದೂಷಣೆ ಪರಮತದೂಷಣೆ ಮುಂತಾದ ಅನ್ಯರಿಗೆ ಹಾನಿಮಾಡತಕ್ಕ ವಿಷಯಗಳಲ್ಲಿ ಪ್ರವರ್ತಿಸಕೂಡದು.

(೯) ಬರುವ ತಿಂಗಳು ಮೀಟಿಂಗು ಮಧುವನಹಳ್ಳಿ ಬಿ. ಮಾದಪ್ಪನವರ ಮನೆಯಲ್ಲಿ ನಡೆಯತಕ್ಕದ್ದು. ಈ ನಿಬಂಧನೆಗಳು ಏರ್ಪಡಿಸಿದನಂತರ ಅಧ್ಯಕ್ಷರು ಶ್ರೀಮಾನ್ ಜಿ. ಪಿ. ಸುಬ್ಬಯ್ಯನವರು ಈ ಕೆಳಗೆ ಕಂಡ ಭಾಷಣವನ್ನು ಮಾಡಿದರು—ಈ ಸಭೆಯನ್ನಲಂಕರಿಸಿರುವ ತಾವುಗಳೆಲ್ಲರೂ ನನಗಿಂತ ವಿದ್ಯಾವಂತರಾಗಿಯೂ, ಹಿರಿಯರುಗಳಾಗಿಯೂ ಇದ್ದಾಗ್ಯೂ ಅಧ್ಯಕ್ಷತೆಯನ್ನು ನನಗೆ ವಹಿಸಿ ಅಪಾರವಾದ ಗೌರವವನ್ನು ಕೊಟ್ಟದ್ದಕ್ಕಾಗಿಯೂ, ಮ॥ ರಾ॥ ಶ್ರೀ॥ ಮಣಿಯಂ ಪುಟ್ಟಪ್ಪನವರು ಈ ಸಭೆಯವರಿಗೆ ಮಾಡಿದ ಸತ್ಕಾರಕ್ಕಾಗಿಯೂ ಈದಿನ ಹೇಳಲ್ಪಟ್ಟ ವಿಷಯಗಳೆಲ್ಲವೂ ಮತಕ್ಕೆ ಗೌರವಕರವಾದದ್ದೆಂದು ನಾನು ಅಭಿಪ್ರಾಯಪಟ್ಟಂತೆಯೇ ಸರ್ವರೂ ಅನುಮೋದಿಸಿ ನಡಿಸುವಂತೆ ಒಪ್ಪಿಕೊಂಡು ಸಂತೋಷಪಟ್ಟದ್ದಕ್ಕಾಗಿಯೂ ಕೃತಜ್ಞತಾಪೂರ್ವಕವಾಗಿ ವಂದಿಸುತ್ತೇನೆ ಎಂದು ಹೇಳಲು, ಸರ್ವರೂ ಜಯಘೋಷವನ್ನು ಮಾಡಿದರು. ಅನಂತರ ಮರ್ಯಾದೆಯೊಡನೆ ಗಂಧಪುಷ್ಪತಾಂಬೂಲಾದಿಗಳು ಹಂಚಲ್ಪಟ್ಟವು.

ಜಿ. ಪಿ. ಸುಬ್ಬಣ್ಣ
ವೀರಶೈವ ಸಭಾಧ್ಯಕ್ಷ
ಮುಡಿಗುಂಡ.

ಮೈಸೂರ್: ವೈ. ವಿರೂಪಾಕ್ಷಯ್ಯ[illegible]ರಿಂದ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಃತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಏಪ್ರಿಲ್ ತಾರೀಖು ೧೦ ನೇ ಸೋಮವಾರ. [ಸಂಚಿಕೆ ೧೪

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಡೆನ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

46 ಗುಣವಾಗದಿದ್ದರೆ ಹಣಪರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ. ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರಕನ್ನಡಾ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
35 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಷೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಷೆ ೦—೪—೦., ೨೪ ಮಾತ್ರೆ ಸೀಷೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲೆಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಷೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೫ ಮಾತ್ರೆ ಸೀಷೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಷೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಷೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಷೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್
ಇವರ ಅತ್ಯುತ್ತಮ ಸಿದ್ಧೌಷಧಗಳು.

34

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂತಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ.—ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರೆಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೊಬ್ಬೆ, ವ್ರಣ, ಕುಷ್ಠ, ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.- ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮೂಕವಾತ, ಅಂಗವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ಕೆ. ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೮ ದಿನ ಸೇವಿಸುವಲ್ಲಿ ವಿಶಂತಿಮೇಹ, ಮೂತ್ರಕೃಚ್ಛ್ರ ಅಸ್ಥಿಸ್ರಾವ, ಅಸೃಗ್ಧರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕುಮೂತ್ರ, ಅಸ್ಥಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ. ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ—ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ವಚ್ಛವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚು ೬ ಆಣೆ.

೯. ಮಹಾಕಲ್ಯಾಣರಸಾಯನ— ಇದರಿಂದ ಕ್ಷಯ ಕಾಸ, ಜ್ವರ, ದೀಪನ, ಪಾಂಡುರೋಗ, ಉನ್ಮಾದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ, ಖ. ೬ ಆ.

೧೦. ವಿಳಂಗಸಾರಾಮ್ಲಕ.- ಇದರಿಂದ ಗಂಟಲ್ಲಿ ಉರಿ ಸುಸ್ತು ಸಂಕಟ, ವಮನವಿಲ್ಲದೆ ೩-೪ ಆವೃತ್ತಿ ಪ್ರವರ್ತಿಯಾಗುತ್ತವೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.- ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ— ಮಕ್ಕಳಿಗೆ ಶೀತದಿಂದ ಪ್ರಾಯಶಃ ನೀರು ಎರೆಯುವಾಗ ಜ್ಞಾನ ತಪ್ಪುವುದು ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯ ಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದಪುರಬತ್ತುಗಳೂ ಗುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ—

ಎಂ. ಪಂಡಿತ ಚನ್ನಬಸಪ್ಪ ಅಂಡ್‌ಸನ್ಸ್.
ಚನ್ನಪಟ್ಟಣ, ಬೆಂಗಳೂರು, ಡಿಸ್ಟ್ರಿಕ್ಟ್.

ಸೌಗಂಧಿಕಾಪರಿಣಯ.

(ಹಿಂದಣವಾರದ ಶೇಷ.)

ಇವರನ್ನೋಡಿದ ಉಗ್ರಬಾಹುವು ಸ್ವಲ್ಪವಾಗಿ ಹೀಲಿಂದೆದ್ದವನಂತೆ ಕುಳಿತು, ಅವರಂ ಉಚಿತಪ್ರಕಾರದಲ್ಲಿ ಕುಳ್ಳಿರಿಸಿ, ಎಲೈ ನೃಪಮಂತ್ರಿಗಳಿರಾ! ಸ್ವಾಗತವೆ? ಎಲ್ಲಿಂದ ಬಂದಿರಿ? ನಿಮ್ಮ ದೇಶವಾವುದು? ನೀವು ಆರಪುತ್ರರೆನಲು, ಅಯ್ಯಾ ರಾಕ್ಷಸೇಶ್ವರನೆ! ಈ ನೃಪೋತ್ತಮರು ಜಂಬೂದ್ವೀಪದ ಭರತಖಂಡವನ್ನಾಳುವ ಸುಚರಿತ್ರ ಮಹಾರಾಯರ ಕುಮಾರರು. ಇವರಂ ಸುಗಂಧಮಹಾರಾಜರೆಂದು ಪೇಳುವರು. ಇವರಿಗೆ ಭೃತ್ಯಭಾವದಲ್ಲಿರುವ ನನ್ನಂ ಸುಮತಿಯೆಂದು ಪೇಳುವರು. ಇವರು ವಿಜಯಯಾತ್ರಾರ್ಥವಾಗಿ ಸೇನೆಯಿಂದೊಡಗೂಡಿ ಮಲತವರಂ ದಂಡಿಸುತ, ಶರಣಾಗತರಂ ಸಲಹುತ, ತುಂಬರಂ ನಿಗ್ರಹಿಸುತ, ಲವಣಸಮುದ್ರದ ಪೂರ್ವತೀರವನ್ನನುಸರಿಸಿ ಬರುತ ಆ ಸಮುದ್ರದ ವಿಸ್ತಾರವಂ ನೋಡಲೆಳಸಿ ಅದನ್ನೋಡುತ, ಈ ಪ್ಲಕ್ಷದ್ವೀಪಕ್ಕೆ ಬಂದು, ಅಲ್ಲಲ್ಲಿ ಕುಲಾಚಲವನಗಳ ರಮಣೀಯತೆಗಳನ್ನೋಡುತ, ಸಮುದ್ರವಂ ಪೊಂದುತಿರುವ ನದೀತೀರದಲ್ಲಿ ಇಳಿದೆವು, ಎನಲು, ಅದಂ ಕೇಳಿ ಉಗ್ರಬಾಹುವು ತನ್ನ ಮನದೊಳ್ ಮನುಷ್ಯರಿಗೆ ಸಮುದ್ರತರಣಶಕ್ತಿಯುಂಟಾದ ಬಳಿಕ ಯಾವುದು ಏನಾಗಬಾರದು! ಕಾಲಗತಿ ಎಂಥಾದ್ದು! ಹರಹರಾ!ಯೆಂದು ವಿಸ್ಮಯಂಬಡುತ, ಮನುಷ್ಯರಿಗೆ ದೇವತಾಯೋಗ್ಯವಾದ ಈ ಹಂಸೆಯು ವಶವಾದ ಬಳಿಕ ದೈವಸಂಕಲ್ಪವೆಂತಿರಬಾರದು? ಎಂದು ವ್ಯಸನಪಡುತ, ಮನುಷ್ಯಮಾತ್ರದವರು ಹೀಗೆ ಬಲಿಷ್ಠರಾಗಿ ಸಮುದ್ರತೀರವಂ ಬಳಸಿ ಬರುತ, ದೇಶಂಗಳಂ ಒತ್ತಿಕೊಳ್ಳುತ್ತಿದ್ದರೆ, ಅದೇ ಜಂಬೂದ್ವೀಪದ ಇಳಾವರ್ತ ಖಂಡದಲ್ಲಿ ವಜ್ರಪುರವನ್ನಾಳುವ ದೇವತೆಗಳ ಸಂಘವೆಂಬ ಮೇಘಮಂಡಲಕ್ಕೆ ಜಂಝಾಮಾರುತನಾದ ನಮ್ಮ ಜಂಝಾಮಾರುತನೆಂಬ ರಾಕ್ಷಸಾಧಿಪತಿಯು ಇಂಥವರನ್ನೋಡಿ ಸಹಿಸಿಕೊಂಡಿರುವನೆಂಬುದು ಆಶ್ಚರ್ಯವು! ಅಲ್ಲದಿದ್ದರೆ ಉಪೇಕ್ಷಾವಂತನಾಗಿರುವನೋ? ಈಗ ಉಂಟಾಗಿರುವ ಸಂಪತ್ತಿನಿಂದಲೇ ಸಂತುಷ್ಟನಾಗಿರುವನೊ? ಮತ್ತೇನಾದರೂ ವಿಶೇಷವಾಗಿ ಯುದ್ಧಸಾಧನವನ್ನಪೇಕ್ಷಿಸುತ ತಪಸ್ಸನ್ನಾಚರಿಸುವುದಕ್ಕೆ ತಪೋವನವಂ ಪೊಂದಿರುವನೊ? ಎಂದು ಪರಿಪರಿ ವಿಕಲ್ಪವಂ ಮಾಡುತ, ಎಲೈ ನೃಪೋತ್ತಮನೆ! ನಮ್ಮ ಪುರದ ಸಮೀಪಕ್ಕೆ ಏನುನಿಮಿತ್ತ ಬಂದವನಾದೆ? ಎಂದು ಕೇಳಲು, ಎಲೈ ರಾಕ್ಷಸರಾಯನೆ! ನೀನು ಪರಾಕ್ರಮಶಾಲಿಯೆಂದು ಕೇಳಿ ನಿನ್ನನ್ನೋಡಬಂದೆವೆಂದು ಸುಗಂಧರಾಜಕುಮಾರನು ಪೇಳಲು, ನನ್ನ ಪರಾಕ್ರಮಪರೀಕ್ಷೆಗೆ ಬಂದವರಾದರೆ ಇವರು ನಮಗೆ ಶತ್ರುಭಾವದಿಂದ ಬಂದಿರಬಹುದೆಂದು ರಾಕ್ಷಸಾಧಿಪತಿಯು ತಿಳಿದವನಾಗಿ, ಎಲೈ ನೃಪೋತ್ತಮನೆ! ನೀನು ನಮ್ಮಂ ಕುರಿತು ಬಂದ ಬಳಿಕ ನಿನ್ನ ರಾಜ್ಯಲಕ್ಷ್ಮಿಯು ನಮ್ಮ ಲಕ್ಷ್ಮಿಯಂ ನೋಡಲೆಳಸಿ ಬಂದಂತಾಯಿತು ಎಂದು ರಾಕ್ಷಸಾಧಿಪತಿಯು ಪೇಳಲು, ಅದಂ ಕೇಳಿ ಸುಗಂಧರಾಯನು ಈ ರಾಕ್ಷಸನು ಹೇಳಿದ ಮಾತಿನಿಂದ ಇಲ್ಲಿ ಬಂದಿರುವ ನಮ್ಮಂ ಕಾವಲುಮಾಡಿಕೊಂಡು ನಮ್ಮ ರಾಜ್ಯವಂ ತನ್ನ ವಶಮಾಡಿಕೊಳ್ಳುವೆನೆಂದು ಹೇಳಿದಂತಾಯಿತೆಂದು ತಿಳಿಯಲು, ಆ ಮಾತಿಗೆ ಸುಮತಿಯು—ಎಲೈ ರಾಕ್ಷಸಾಧಿಪನೆ! ನಮ್ಮ ಲಕ್ಷ್ಮಿಯು ನಿಮ್ಮ ಲಕ್ಷ್ಮಿಯಂ ನೋಡಲೆಳಸಿ ಬಂದುದೇಕೆಂದರೆ— ತನಗೆ ಸವತಿಯಂ ಮಾಡಲೆಳಸಿ ಕನ್ಯಾರ್ಥವಾಗಿ ಬಂದಳೆಂದು ತಿಳಿಯಬೇಕೆನಲು, ಉಗ್ರಬಾಹುವು ಈ ನೃಪಮಂತ್ರಿಯು ಹೇಳಿದ ಮಾತಿನಿಂದ ನಮ್ಮ ರಾಷ್ಟ್ರವಂ ತಮ್ಮ ವಶವಂ ಮಾಡಿಕೊಳ್ಳುವುದಕ್ಕೆ ಬಂದೆವೆಂದು ಹೇಳಿದಂತಾಯಿತೆಂದು ತಿಳಿಯಲು, ಆ ಮಾತಿಗೆ ರಾಕ್ಷಸಮಂತ್ರಿಯಾದ ಶಂಕುಕರ್ಣನು-ಅಯ್ಯಾ ನೃಪೋತ್ತಮನೆ! ಲಕ್ಷ್ಮೀಯರುಗಳು ಒಬ್ಬರಬಳಿಗೊಬ್ಬರು ಹೋಗಿ ಬರುವುದು ಯುಕ್ತವಾದರೂ ನಮ್ಮಲ್ಲಿ ಬಂದ ಲಕ್ಷ್ಮಿಗೆ ನಾವು ಮಾಡುವ ಉಪಚಾರ ಭಕ್ತಿಗಳಿಗೆ ಪರ್ಯವಸಾನವುಂಟಾದ ಬಳಿಕಲ್ಲವೆ ಮರಳಿ ಹೋಗುವುದೆಂಬುದು? ಎಂದು ಪೇಳಲು, ಸುಗಂಧರಾಜನು ಈ ರಾಕ್ಷಸಮಂತ್ರಿಯು ಹೇಳಿದ ಮಾತಿನಿಂದ ನಮ್ಮಂ ಇಲ್ಲಿಂದ ಬಿಟ್ಟುಕಳುಹಿದಾಗಷ್ಟೆ ನಮಗೆ ರಾಜ್ಯದಾಶೆಯು ಎಂದು ಪೇಳಿದಂತಾಯಿತೆಂದು ತಿಳಿಯಲು, ಸುಮತಿಯು—ಎಲೈ ರಾಕ್ಷಸಮಂತ್ರಿಯೆ! ಚಪಲರುಗಳಲ್ಲಿ ಮಾಡಿದ ಉಪಚಾರಭಕ್ತಿಗಳು ಅವರ ಚಾಪಲ್ಯವಂ ಹೋಗಲಾಡಿಸುವುದುಂಟೆ? ಎಂದು ಕೇಳುತ್ತಿರಲು, ರಾಕ್ಷಸಾಧಿಪತಿಯು ಈ ನೃಪಮಂತ್ರಿಯು ಹೇಳಿದ ಮಾತಿನಿಂದ ನೀವು ತಮ್ಮಂ ನಿರ್ಬಂಧವಂ ಪಡಿಸಿದರೆ ನಾವು ನಿಮಗೆ ದಕ್ಕುವರಲ್ಲವೆಂದು ಹೇಳಿದಂತಾಯಿತೆಂದು ತಿಳಿಯಲು, ಶಂಕುಕರ್ಣನು ಎಲೈ ನೃಪಮಂತ್ರಿಯೆ! ಆಶ್ರಯನಿಷ್ಠವಾದ ದೋಷವಂ ಆಶ್ರಿತವಸ್ತುವಿನಲ್ಲಿ ಆರೋಪಣೆಗೈವುದುಂಟೆ? ಎಂದು ಪೇಳಲು, ಸುಮತಿಯು ಎಲೈ ರಾಕ್ಷಸಾಧಿಪತಿಯೆ! ಯುಕ್ತವಂ ಹೇಳಿದವನಾದೆ; ಅಗ್ನಿಯ ಉಷ್ಣವು ಜಲದಲ್ಲಿ ಸಂಬಂಧಿಸಿ ಸ್ವಾಭಾವಿಕವಾದ ಶೈತ್ಯವಂ ಹೋಗಲಾಡಿಸುವಂತೆ ಅರಸಿನ ಗುಣಗಳು ತನ್ನಲ್ಲಿ ಆಶ್ರಯಿಸಿರುವ ಲಕ್ಷ್ಮಿಯು ಸ್ಥೈರ್ಯಗುಣವಂ ವ್ಯಾಪಿಸಿ ಚಾಂಚಲ್ಯವನ್ನುಂಟುಮಾಡುವದು ಎಂದು ಪೇಳಲು, ಶಂಕುಕರ್ಣನು ಈ ನೃಪಮಂತ್ರಿಯು ಹೇಳಿದಮಾತಿನಿಂದ ರಾಕ್ಷಸರು ನ್ಯಾಯತಪ್ಪಿ ನಡೆಯುವರಾದುದರಿಂದ ಇವರಿಗೆ ಐಶ್ವರ್ಯವು ಸ್ಥಿರವಾಗಿರಲರಿಯದೆಂದು ಪೇಳಿದಂತಾಯಿತು ಎಂದು ತಿಳಿದು, ಉಗ್ರಬಾಹುವಂ ನೋಡಿ, ಅಯ್ಯಾ ರಾಕ್ಷಸೇಶ್ವರನೆ! ಈ ನೃಪಮಂತ್ರಿಯು ಪೇಳಿದ ವಾಕ್ಯವು ನಿನ್ನ ಮನಕ್ಕೆ ಬಂದಿರುವುದಷ್ಟೆ? ಎಂದು ನುಡಿದು, ನೃಪನಂ ನೋಡಿ, ಈ ಅರ್ಥವು ಸಾರ್ವತ್ರಿಕವು ಎಂದು ಪೇಳಲು, ಆ ಮಾತಿಗೆ ನೃಪತಿಯು ತನ್ನ ಮನದೊಳ್ ‘ನೀತಿತಪ್ಪಿ ನಡೆಯುವ ಪುರುಷನು ಎಷ್ಟು ಗುಣವಂತನಾದರೂ ಅವರಂ ತ್ಯಜಿಸಿ, ಲಕ್ಷ್ಮಿಯು ಸ್ಥಾನಾಂತರವನ್ನೈದುವುದರಿಂದ ನ್ಯಾಯನೀತಿಯಂ ತಿಳಿದು ನಡೆದುಕೊಳ್ಳುವನಾಗೆಂದು ರಾಕ್ಷಸ ಮಂತ್ರಿಯು ತನ್ನ ಅರಸಿಗೆ ತಿಳುಹಿಸಿ ಯಾರಿಗಾದರೂ ಈ ಅರ್ಥವೇ ಆಗುವುದೆಂದು ನನ್ನನ್ನೋಡಿ ಪೇಳಿದಂತಾಯಿತು’ ಎಂದು ತಿಳಿಯಲು, ಸುಮತಿಯು ಹಾಗೇ ತಮ್ಮ ರಾಯನನ್ನೋಡಿ, ಅದರಿಂದಲೇ ಶ್ರೇಯಸ್ಕಾಮಿಯಾದವರು ವಿಹಿತದಿಂದ ನಡೆದುಕೊಳ್ಳಬೇಕೆಂದು ಪೇಳಲು, ಅದಂ ಕೇಳಿ ಶಂಕುಕರ್ಣ—ಉಗ್ರಬಾಹುಗಳು ತಮ್ಮ ಮನದೊಳ್ ಈ ನೃಪಮಂತ್ರಿಯು ತನ್ನ ರಾಯನಿಗೆ ಹೇಳಿದ ವಾಕ್ಯದಿಂದ ‘ನಾವು ಧರ್ಮಮಾರ್ಗವಂ ಮೀರಿ ನಡೆಯುವರಾದುದರಿಂದ ನಮಗೆ ಶ್ರೇಯೋಲಾಭವುಂಟಾಗಲಾರದೆಂದು ಒಂದು ಅರ್ಥವು, ಲೋಕಾಭಿರಾಮವಾಗಿ ಹೇಳಿದುದು ಒಂದರ್ಥವು” ಎಂದು ತಿಳಿದು, ಬಂದವರೊಡನೆ ವಾಕ್ಕಲಹವೇಕೆ? ಉತ್ತರಪ್ರತ್ಯುತ್ತರಗಳು ಲಲಿತವಾಗಿ ಉಂಟಾದ ಬಳಿಕ ಹೃದಯಕಾಪಟ್ಯವೆಂತಿದ್ದರೂ ಇರಲಿ, ಎಂದು ಆಲೋಚಿಸಿದ ಬಳಿಕ ತಮೋಗುಣಸ್ವಭಾವನಾದ ಉಗ್ರಬಾಹುವು ಈ ಪೂರ್ವೋಕ್ತವಾಕ್ಯವನೆಲ್ಲವಂ ಮರತು, ನೃಪಮಂತ್ರಿಗಳಿಗೆ! ವಾಹನವಾದ ರಾಜಹಂಸೆಯು ನೋಡುತ ಈ ವಾಹನಮೂಲಕದಿಂದ ಈ ಮನುಷ್ಯರಿಗೆ ಬಹು ಸಾಹಸಬುದ್ಧಿಯುಂಟಾಗಿರುವುದು; ಯಾವ ಉಪಾಯದಿಂದಲಾದರೂ ಈ ಹಂಸೆಯಂ ನಾವು ಸ್ವಾಧೀನಮಾಡಿಕೊಂಡರೆ ಪಕ್ಷಹೀನವಾದ ಗೃಧ್ರಗಳಂತೆ ಈ ಸ್ಥಳವಂ ಬಿಟ್ಟು ಚಲಿಸಲಾರದೇ ನಮ್ಮ ವಶವಾಗಿ ಬಿದ್ದಿರುವರು. ವಾಹನವಾದ ಹಂಸೆಯು ನಮಗೆ ಬಹುಕಾರ್ಯಕ್ಕೆ ಸಾಧನವಾಗುವುದು ಎಂದು ನಿಶ್ಚಯಿಸಿ, (ಸಶೇಷ.)

ಗ್ರಂಥವಿಮರ್ಶೆ.

ಕಿಂಡರ್‌ಗಾರ್ಟನ್ ಕಥೆಗಳು.

ಪೂರ್ವದಂತೆ ಮಕ್ಕಳಿಗೆ ಬರೇ ಬಾಯಿಪಾಠಗಳನ್ನು ಮಾಡಿಸದೆ, ಇತ್ತೀಚೆಗೆ ಪಾಶ್ಚಾತ್ಯಬಾಲಶಾಲಾಕ್ರಮವನ್ನನುಸರಿಸಿ, ಸ್ವಾಭಾವಿಕವಾದ ಸಸ್ಯಾದಿಗಳ ಮತ್ತೂ ಪಕ್ಷ್ಯಾದಿ ಪ್ರಾಣಿಗಳ ಸಂಬಂಧವಾದ ಪಾಠಗಳನ್ನು ಹೇಳಿಕೊಡುವಾಗ್ಗೆ [illegible] ನಿರ್ಮಾಣ, ಉಪಯೋಗ ಮೊದಲಾದ ವಿಷಯ[illegible] ಬಾಲಕರ ಮನಸ್ಸಿಗೆ ಥಟ್ಟನೆ ಹಿಡಿಯುವಂತೆ ಕಿಂಡರ್‌ಗಾರ್ಟನ್ ಎಂಬ ಪದ್ಧತಿಯನ್ನನುಸರಿಸಿ, ಹೇಳಿಕೊಡುವ ಪದ್ಧತಿಯು ವಿಶೇಷವಾಗಾಚರಣೆಗೆ ತರಲ್ಪಟ್ಟಿದೆ. ಈ ಕ್ರಮವನ್ನನುಸರಿಸಿ ಬೋಧಿಸತಕ್ಕ ಉಪಾಧ್ಯಾಯರುಗಳುಪಯೋಗಾರ್ಥವಾಗಿ ರಾಜಧಾನಿಯ ಸರ್ಕಾರಿ ನಾರ್ಮಲ್ ಸ್ಕೂಲಿನ ಸಹೋಪಾಧ್ಯಾಯರಾದ ಮ|| ಜಿ. ಕೃಷ್ಣಶಾಸ್ತ್ರಿಗಳು ಶ್ರಮವನ್ನು ವಹಿಸಿ ಕಿಂಡರ್‌ಗಾರ್ಟನ್ ಕಥೆಗಳನ್ನು ಸಾಮಾನ್ಯರೂಢಿಯಲ್ಲಿರುವ ಶಬ್ದಗಳ ಪ್ರಯೋಗದಿಂದ ಬಹು ಲಲಿತವಾಗಿಯೂ ಸರಸವಾಗಿಯೂ ಬರೆದಿರುತ್ತಾರೆ. ಇದನ್ನು ಕ್ರೌನ್ ಅಷ್ಟಪತ್ರದಾಕೃತಿಯಲ್ಲಿ ಸ್ವಚ್ಛವಾದ ಕಾಗದದಮೇಲೆ ಸುಂದರವಾದ ಅಕ್ಷರಗಳಿಂದ ಅಂದವಾಗಿ ಮುದ್ರಣಮಾಡಿಸಿರುತ್ತಾರೆ. ಈ ಗ್ರಂಥರಚನಾಶೈಲಿಯನ್ನು ತೋರಿಸುವ ಬಗೆಗೆ ಒಂದು ಕಥೆಯನ್ನು ಈ ಕೆಳಗೆ ಕೊಟ್ಟಿರುತ್ತೇವೆ. ವಿದ್ಯಾರ್ಥಿಗಳೂ, ಬೋಧಕರೂ ಇದರ ಪ್ರಯೋಜನವನ್ನು ತಿಳಿದು ಗ್ರಂಥಕರ್ತರಿಗೆ ತಕ್ಕ ಪ್ರೋತ್ಸಾಹವನ್ನು ಕೊಡುವವರಾಗಲೆಂದಿಚ್ಛೈಸುವೆವು. ಇದರ ಬೆಲೆ ೧೦ ಆಣೆ ಮಾತ್ರ.

ಗುಬ್ಬಚ್ಚಿ.

ಇವುಗಳಲ್ಲಿ ಎರಡು ಬಗೆಗಳುಂಟು. ೧ ನೇದು ಕಾಡುಗುಬ್ಬಚ್ಚಿ. ೨ ನೇದು ಊರು ಗುಬ್ಬಚ್ಚಿ. ಕೆಲವು ಮರಗಳ ಮೇಲೂ, ಮತ್ತೆ ಕೆಲವು ಮನೆಗಳಲ್ಲೂ ವಾಸಮಾಡುವುವು. ಒಣಹುಲ್ಲು, ಹತ್ತಿ, ಬಟ್ಟೆಚಿಂದಿ, ಕೂದಲು ಇಂತಹವುಗಳನ್ನು ತಂದು ಗೋಡೆ ಬಿರುಕು, ಸೂರುಕಟ್ಟು, ಮಾಳಿಗೆ ಮರದ ಪೊಟ್ಟರೆ ಇಂತಹ ಕಡೆಗಳಲ್ಲಿ ಗೂಡುಕಟ್ಟುವುವು. (ಇದನ್ನು ತೋರಿಸುವುದು.) ಒಂದುಸಲಕ್ಕೆ ಐದಾರು ಮೊಟ್ಟೆಗಳನ್ನಿಡುವುವು. ಅವು ಬಿಳಿಛಾಯೆಯಾಗಿ ಕೆಂದು ಬಣ್ಣದ ಚುಕ್ಕೆಗಳನ್ನುಂಟಾಗಿರುವುವು. ಇನ್ನು ಕೆಲವುಗಳ ಹಸರುಛಾಯೆಯಾಗಿ ಕೆಂದು ಬಣ್ಣದ ಚುಕ್ಕೆಗಳನುಂಟಾಗಿರುವುವು. ಸಣ್ಣಹುಳು, ಹಣ್ಣು, ಕಾಳು ಇಂತಹುವನ್ನು ತಿನ್ನುವುವು. (ಗುಂಪುಗುಂಪಾಗಿ ಹೋಗಿ ಹೊಲಗಳಲ್ಲೂ ಮನೆಗಳಲ್ಲೂ ಕಾಳು ಮೇದು ಹಾವಳಿ ಮಾಡುವುದನ್ನು ತೋರಿಸುವುದು) ಇವು ಮನುಷ್ಯರಿಗೆ ಹಿತೋಪಕಾರವುಳ್ಳವು.

ಗುಬ್ಬಚ್ಚಿ ಮತ್ತು ಗಾಣಿಗ.

ಮೈಸೂರಿನಂತಹ ಒಂದು ಪಟ್ಟಣ. ಅಲ್ಲಿ ಜಗ್ಗೋಲಾಲನೆಂಬ ಒಬ್ಬ ಹುಡುಗನಿದ್ದನು. ಅವನು ಸ್ವಲ್ಪ ಪೋಲಿಪೋಲಿಯಾಗಿಯೇ ಇದ್ದನು. ಅವನು ಒಂದು ನಾಯನ್ನು ಸಾಕಿದ್ದನು. ಅವನ ಪೋಲಿತನದಿಂದ ಅದಕ್ಕೆ ಸರಿಯಾದ ಪೋಷಣೆಯೇ ಇರಲಿಲ್ಲ. ಒಂದೊಂದು ದಿನ ಉಪವಾಸವೇ ಇರಬೇಕಾಗಿತ್ತು. ಯಾಕೆಂದರೆ— ಅದಕ್ಕೆ ತಿಂಡಿ ಹಾಕುವುದನ್ನೇ ಮರೆತುಬಿಡುತ್ತಿದ್ದನು. ಜ್ಞಾಪಕಬಂದಾಗ ಮಾತ್ರ ಐದಾರುದಿವಗಳಿಗಾಗುವಷ್ಟು ತಿಂಡಿಯನ್ನು ತಂದು ಅದರ ಮುಂದೆ ಹಾಕಿ “ತಿನ್ನು, ತಿನ್ನು” ಎನ್ನುತ್ತಿದ್ದನು. ಅದು ತನಗೆ ಬೇಕಾದಷ್ಟು ತಿನ್ನುತ್ತಿತ್ತು. ಅಂತು ಅದಕ್ಕೆ ತಿಂಡಿ ಸಿಕ್ಕಿದ ದಿನ ಸಿಕ್ಕಿತು, ಇಲ್ಲದ ದಿನ ಇಲ್ಲ. ಹೀಗೆಯೇ ಇತ್ತು. ಒಂದು ದಿನ ಹೀಗೆಯೇ ತಿಂಡಿಯಿಲ್ಲದೆ ಅದಕ್ಕೆ ಹಸಿವಿನಿಂದ ಬಹಳ ಬಳಲಿಕೆಯಾಗಿತ್ತು. ಆದ್ದರಿಂದ ಅದು ಜೋಲು ಮುಖ ಹಾಕಿಕೊಂಡು ಬೀದಿಬೀದಿಗಳಲ್ಲೂ ಅಲೆಯುತ್ತಿತ್ತು. ಆಗ ಒಂದು ಗುಬ್ಬಚ್ಚಿಯು ಅದನ್ನು ಕಂಡು—“ಏನು ನಾಯಿಕರೆ, ಇದೇಕೆ ಬಹಳ ಸಪ್ಪಗಿದ್ದೀರಿ?” ಎಂದಿತು. ನಾಯಿ— “ತಂಗಿ, ನನ್ನ ಕಷ್ಟವನ್ನು ಏನೆಂದು ಹೇಳಲಿ? ನಿನ್ನೆಯಿಂದ ಹೊಟ್ಟೆಗೆ ಏನೂ ಇಲ್ಲ. ಪ್ರಾಣ ಹೋಗುತಿದೆ. ನಮ್ಮ ಯಜಮಾನನು ಎಲ್ಲಿಹೋದನೋ ಗೊತ್ತೇ ಇಲ್ಲ. ಏನುಮಾಡಲಿ?” ಎಂದು ಗೋಳಾಡಿತು. ಆಗ ಗುಬ್ಬಚ್ಚಿ— “ಅಣ್ಣಯ್ಯ, ನೀನೇನೂ ಯೋಚನೆ ಮಾಡಬೇಡ, ನನ್ನ ಸಂಗಡ ಬಾ. ನೀನು ತಿಂದು ದಣಿಯುವಷ್ಟು ಊಟಮಾಡಿಸುತ್ತೇನೆ.” ಎಂದು ಅದನ್ನೂ ಸಂಗಡ ಕರೆದುಕೊಂಡು ಕಟುಕರ ಬೀದಿಗೆ ಹೋಯ್ತು. ಅಲ್ಲಿ ಹಾರಿಹೋಗಿ ಯಾರೂ ಕಾಣದಂತೆ ಒಂದು ದೊಡ್ಡ ಮಾಂಸದ ಚೂರನ್ನು ಕೆಳಕ್ಕೆ ಉರುಳಿಸಿತು. ನಾಯಿಯು ತತ್‌ಕ್ಷಣವೇ ಅದನ್ನು ಎತ್ತಿಕೊಂಡು ಹೋಗಿ ತಿಂದುಬಿಟ್ಟಿತು. ಗುಬ್ಬಚ್ಚಿ— “ಏನಯ್ಯಾ, ಊಟವಾಯ್ತೆ?” ಎಂದು ಕೇಳಿತು. ಅದಕ್ಕೆ ನಾಯಿ— “ಏನೋ ನಿನ್ನ ದಯದಿಂದ ಸದ್ಯಕ್ಕೆ ಅರಹೊಟ್ಟೆ ಊಟವಾದರೂ ಆಯ್ತಮ್ಮ. ಗುಬ್ಬಚ್ಚಿ— “ಅರಹೊಟ್ಟೆ ಊಟವೇತಕ್ಕೆ ಆಗಬೇಕು? ಬೇಕಾದಷ್ಟೂ ಊಟಮಾಡುವೆಯಂತೆ, ಬಾ.” ಎಂದು ಪುನಃ ಕರೆದುಕೊಂಡು ಹೋಗಿ ಇನ್ನೊಂದಂಗಡಿಯಲ್ಲಿ ದೊಡ್ಡದಾದ ಎರಡುಮೂರು ಮಾಂಸದ ಚೂರುಗಳನ್ನು ಕೆಳಕ್ಕೆ ಉರುಳಿಸಿತು, ನಾಯಿ ಅದನ್ನು ಸಂತೋಷದಿಂದ ತಿಂದು ಹೊಟ್ಟೆ ತುಂಬಿಸಿಕೊಂಡಿತು. ಬಳಿಕ ಅದಕ್ಕೆ ನಿದ್ದೆ ಬಂತು. ಅದು ಎಲ್ಲಿ ಮಲಗಬೇಕು? ಗೊತ್ತಿಲ್ಲವೆ? ಪೋಲೀ ನಾಯಿಗಳಿಗೆ ಬೀದಿಯೇ ಮಲಗುವ ಮನೆ ಆದ್ದರಿಂದ ರಸ್ತೆಯಲ್ಲಿ ಮಲಗಿಕೊಂಡು ನಿದ್ದೆಮಾಡಿತು. ಆ ರಸ್ತೆಯಲ್ಲಿ ಒಬ್ಬ ಗಾಣಿಗನು ಎಣ್ಣೆ ತುಂಬಿದ ಶೀಷೆಗಳನ್ನು ಭರ್ತಿಮಾಡಿಕೊಂಡು ಒಂದು ಒಂಟೆತ್ತಿನ ಗಾಡಿಯನ್ನು ಹೊಡೆದುಕೊಂಡು ಬರುತಿದ್ದನು. ಆಗ ತನ್ನ ಸ್ನೇಹಿತನಿಗೆ ಕಾವಲಾಗಿ ಮರದಮೇಲೆ ಕೂತಿದ್ದ ಆ ಗುಬ್ಬಚ್ಚಿಯು ಗಾಣಿಗನನ್ನು ಕುರಿತು— “ಅಯ್ಯಾ ಶೆಟ್ಟಿ, ದಾರಿಯಲ್ಲಿ ನಮ್ಮ ಸ್ನೇಹಿತನಾದ ನಾಯಿನಾಯಕನು ಮಲಗಿದಾನೆ. ಆದ್ದರಿಂದ ಓರೆಯಾಗಿ ಬಂಡಿ ಹೊಡೆದುಕೊಂಡುಹೋಗು. ಇಲ್ಲದಿದ್ದರೆ ನಾನು ಸುಮ್ಮನೆ ಬಿಡುವುದಿಲ್ಲ.” ಎಂದಿತು, ಆದರೆ ಅವನು ಈ ಮಾತನ್ನು ಮನಸ್ಸಿಗೆ ತಂದುಕೊಳ್ಳದೆ— “ಛೆ, ಹೋಗು. ಬಡಹಕ್ಕಿ, ನಿನ್ನಿಂದ ನನಗೇನಾದೀತು? ಎಂದು ತಾತ್ಸಾರಮಾಡಿ ಗಾಡಿಯನ್ನು ಹೊಡದೇ ಬಿಟ್ಟನು. ಚಕ್ರವು ನಾಯಿ ಬಾಲದ ಮೇಲೆ ಹರಿದುಹೋಯ್ತು. ಅದಕ್ಕೆ ಬಹು ನೋವಾಗಿ— ‘ಕೊಯ್, ಕೊಯ್, ಕೊಯ್’ ಎಂದು ಕೂಗಿಕೊಳ್ಳುತ ಹುಚ್ಚುಹಿಡಿದಂತೆ ಗೋಳಾಡುತ್ತಿತ್ತು. ಆಗ ಗುಬ್ಬಚ್ಚಿಗೆ ಬಹು ಕೋಪಬಂದು ತನ್ನ ಬಳಗವನ್ನೆಲ್ಲಾ ಕರೆದುಕೊಂಡು ಹೋಗಿ, ಗಾಣಿಗನ ಎಣ್ಣೆ ಶೀಷೆಗಳ ಬಿರಡೆಗಳನ್ನೆಲ್ಲಾ ಕಿತ್ತು ಹಾಕಿತು. ಮುಂದುಗಡೆ ಕೂತಿದ್ದ ಅವನಿಗೆ ಇದು ಗೊತ್ತೇ ಇರಲಿಲ್ಲ. ಆದ್ದರಿಂದ ಎಣ್ಣೆಯೆಲ್ಲಾ ಸುರಿದುಹೋಯ್ತು. ಬಳಿಕ ಅವನು ಹಿಂತಿರುಗಿ ನೋಡಿದನು. ಎಣ್ಣೆಯೆಲ್ಲಾ ಸುರಿದುಹೋಗಿತ್ತು. ಗುಬ್ಬಚ್ಚಿಗಳು ಶೀಷೆಗಳ ಬಳಿಯಿದ್ದವು. ಗುಬ್ಬಚ್ಚಿ— “ಎಲೋ ಗಾಣಿಗ, ಇನ್ನೂ ಎಲ್ಲಿ ಕೆಟ್ಟೆ? ಆಗಲಿ, ಇನ್ನೂ ತೋರಿಸುತ್ತೇನೆ.” ಎಂದಿತು. ಗಾಣಿಗನು ಆ ಶೀಷೆಗಳನ್ನು ಸರಿಮಾಡುವುದಕ್ಕೆ ಹೋಗಿ ಹಾಗೆಯೇ ಗುಬ್ಬಚ್ಚಿಗಳನ್ನು ಹೊಡೆಯುವುದಕ್ಕೆ ಕೈಯೆತ್ತಿದನು. ಗುಬ್ಬಚ್ಚಿಗಳೆಲ್ಲಾ ಹಾರಿಹೋದವು. ಈ ಗುಬ್ಬಚ್ಚಿ ಮಾತ್ರ ಮುಂದುಗಡೆ ಗಾಡಿಯ ಎತ್ತಿನ ಕಣ್ಣನ್ನು ಕುಟುಕುವುದಕ್ಕೆ ಹೋಯ್ತು. ಆ ಬಡಎತ್ತು ಗಾಬರಿಯಿಂದ ನೆಗೆದಾಡಿತು. ಈ ಗಲಭೆಯಲ್ಲಿ ಶೀಷೆಗಳೆಲ್ಲಾ ನೆಲಕ್ಕೆ ಬಿದ್ದು ಚೂರುಚೂರಾಗಿ ಒಡೆದುಹೋದವು. ಪುನಃ ಗಾಣಿಗನು— “ಅಯ್ಯೋ ಕೆಟ್ಟೆನಲ್ಲಾ, ಎಣ್ಣೆಯೂ ಹೋಯ್ತು. ಶೀಷೆಗಳೂ ಹೋದುವು.” ಎಂದು ಗೋಳಾಡಿದನು. ಗುಬ್ಬಚ್ಚಿ— “ಎಲೋ ಮೂರ್ಖ ಇನ್ನೂ ಎಲ್ಲಿ ಕೆಟ್ಟೆ? ಆಗಲಿ ನೋಡುವೆಯಂತೆ.” ಎಂದು ಅಷ್ಟಕ್ಕೇ ಬಿಡದೆ ಜತೆಯ ಹಕ್ಕಿಗಳನ್ನೆಲ್ಲಾ ಗುಂಪು ಸೇರಿಸಿಕೊಂಡು, ಹಿಂದೆಯೇ ಹೊರಟು ಅವನ ಮನೆಗೆ ಸೇರಿದವು

ಅಂಗಳದಲ್ಲಿ ಒಣಗಹಾಕಿದ್ದ ಬತ್ತದಲ್ಲಿ ಸುಮಾರು ಅರ್ಧವನ್ನೆಲ್ಲಾ ಮೇದುಬಿಟ್ಟವು. ಗಾಣಿಗನು ಮನೆಗೆ ಹೋಗಿ ಈ ಸಂಗತಿಯನ್ನೆಲ್ಲಾ ಹೆಂಡತಿಗೆ ಹೇಳಿದನು. ಅವಳು ಬಂದು ಅಂಗಳದಲ್ಲಿ ನೋಡುವಾಗ್ಗೆ ಅರ್ಧ ಬತ್ತವೆಲ್ಲಾ ಮುಗಿದುಹೋಗಿತ್ತು. ಅದೂ ಆ ಗುಬ್ಬಚ್ಚಿಗಳ ಕೆಲಸವೇ ಸರಿಯೆಂದು ಗೊತ್ತುಮಾಡಿಕೊಂಡಳು. ಆಗ ಕೈ ಮುಗಿದುಕೊಂಡು “ಓ ಗುಬ್ಬಚ್ಚಿಗಳಿರಾ, ನೀವು ಇಷ್ಟು ಗಟ್ಟಿಗರೆಂದು ನನ್ನ ಗಂಡನಿಗೆ ತಿಳಿದಿರಲಿಲ್ಲ. ಅಲ್ಲದೆ ಆತನು ಮಾಡಿದ್ದೂ ತಪ್ಪು. ನಾವು ಬಡವರು. ಈದಿನ ನಮ್ಮ ಎಣ್ಣೆಯೂ ಶೀಷೆಗಳೂ ಬತ್ತವೂ ಹೋಗಿ ನಮಗೆ ಎಲ್ಲಾ ನಷ್ಟವೇ ಆಗಿದೆ. ಕ್ಷಮಿಸಿ, ಮುಂದೆಯಾದರೂ ನಮ್ಮ ಗೋಜಿಗೆ ಬರಬೇಡಿರಿ.” ಎಂದು ಬೇಡಿಕೊಂಡಳು. ಅವು ಸುಮ್ಮನೆ ಹೊರಟುಹೋದುವು.

ವಿಚಾರಚಂದ್ರನ ಸಾಹಸಿಕೆ.

ಪ್ರಸಿದ್ಧ ಆಂಗ್ಲಭಾಷಾಗ್ರಂಥ ರಚಯಿತೃಗಳಲ್ಲೊಬ್ಬನಾದ ಎ. ಕೊರ್ನಡಾಯಿಲ್ ಎಂಬ ಪಂಡಿತನು ಲೋಕದಲ್ಲಿ ಎಂಥ ಅಸಾಧ್ಯವಾದ ವಿಷಯಗಳನ್ನೂ ನಿಶ್ಚಯಿಸುವುದು ಮನುಷ್ಯಸಾಧ್ಯವೆಂಬ ಬಗೆಗೆ ಅಡ್ವೆಂಚರ್ಸ್ ಆಫ್ ಷರಲಾಕ್‌ಹೋಮ್ಸ್ ಎಂಬ ಕಥೆಯನ್ನು ತನ್ನ ಕಲ್ಪನಾಶಕ್ತಿಯಿಂದ ಬಹು ಚಮತ್ಕಾರವಾಗಿ ಬರೆದಿರುವುದನ್ನು ಕನ್ನಡಿಗರ ತಿಳಿವಿಕೆಗಾಗಿ ಮ|| ರಾ|| ಕ್ಲೋಸ್‌ಪೇಟೆಯ ಆರ್. ಶ್ರೀನಿವಾಸರಾಯರು ಮತ್ತೂ ಹನುಮರ್ಗವರೂ ವಿಚಾರಚಂದ್ರನ ಸಾಹಸಕಾರ್ಯಗಳು ಎಂದು ಬಿಡುಗನ್ನಡದಲ್ಲಿ ಬರೆದು ಕ್ರೌನ್ ಅಷ್ಟಪತ್ರದಾಕೃತಿಯಲ್ಲಿ ಅಂದವಾಗಿ ಮುದ್ರಣಮಾಡಿಸಿರುತ್ತಾರೆ. ಈ ಸ್ಟಾರು ಪತ್ರಿಕೆಯಲ್ಲಿ ಆಗಾಗ್ಗೆ ಉತ್ಕೃಷ್ಟವಾದ ಲೇಖನಗಳನ್ನು ಬರೆದು ವಾಚಕರ ಮನಸ್ಸನ್ನಾನಂದಗೊಳಿಸುತ್ತಿರುವ ಮ|| ಆರ್. ಶ್ರೀನಿವಾಸರಾಯರ ಲೇಖನಶೈಲಿಯನ್ನು ಅನೇಕರು ಬಲ್ಲರಾದುದರಿಂದ ನಾವು ಇಲ್ಲಿ ಗ್ರಂಥಪ್ರಶಂಸೆಯನ್ನು ವಿಶೇಷವಾಗಿ ಮಾಡಬೇಕಾದುದಿಲ್ಲವು. ಇದರ ಬೆಲೆ ೨|| ಆಣೆ.

ವ್ಯವಸಾಯಕ ವಿಷಯಗಳು.

ಇಂಡಿಯಾ ದೇಶದಲ್ಲಿ ಸೀಮೆ ಬಟಾಣಿಯ ವ್ಯವಸಾಯ.

ಸೀಮೆ ಬಟಾಣಿಯನ್ನು ಯಾವಾಗಲೂ ಮಳೆಗಾಲದಲ್ಲಿ ಬೆಳೆಯಬೇಕು. ಜೂನ್ ಅಥವಾ ಜೂಲೈ ತಿಂಗಳಲ್ಲಿ ಬಿತ್ತನೆ ಮಾಡಿದರೆ ಅಕ್ಟೋಬರ್ ಅಥವಾ ನವಂಬರ್ ತಿಂಗಳಿಗೆ ಬೆಳೆಯು ಕೈಯಿಗೆ ಬರುತ್ತದೆ.

ಸುಮಾರಾಗಿ ಫಲವತ್ತಾಗಿರುವ ಜಿಗಟುಮಣ್ಣಿನ ಜಮೀನುಗಳಲ್ಲಿ ಇದನ್ನು ಬೆಳೆಯಬೇಕು. ಮಳೆಯು ಸುಮಾರಾಗಿ ಆದರೆ ಸಾಕಾಗಿರುತ್ತೆ. ಬಿತ್ತನೆಗೆ ಮುಂಚೆ ಜಮೀನನ್ನು ಚೆನ್ನಾಗಿ ಉತ್ತು ಕಲ್ಲುಗಳನ್ನೆಲ್ಲಾ ಆದುಹಾಕಬೇಕು. ಬಿತ್ತನೆಯ ಕಾಲದಲ್ಲಿ ಭೂಮಿಯಲ್ಲಿ ಸಾಕಾದಷ್ಟು ತೇವವಿರಬೇಕು. ಬೀಜವನ್ನು ೨ ರಿಂದ ೫ ಅಂಗುಲಗಳ ದೂರವಾಗಿ ಸಾಲಾಗಿ ನೆಟ್ಟು, ಒಂದು ಮರದ ತುಂಡಿನಿಂದ ಭೂಮಿಯನ್ನು ಮಟ್ಟಸಮಾಡಬೇಕು. ಬೀಜಗಳ ಮೇಲೆ ಎರಡು ಅಂಗುಲಕ್ಕಿಂತಲೂ ಹೆಚ್ಚಾಗಿ ಮಣ್ಣು ಮುಚ್ಚಕೂಡದು. ಎಕರೆಗೆ ಸುಮಾರು ೧೫ ಅಥವಾ ೨೦ ಪೌಂಡು ಬೀಜಗಳು ಸಾಕಾಗುವುವು. ಸೊಸಿಗಳು ಒಂದಕ್ಕಿಂತಲೂ ಹೆಚ್ಚಾಗಿದ್ದ ಪಕ್ಷದಲ್ಲಿ ಅವುಗಳನ್ನು ಕಿತ್ತು ಒಂದೊಂದು ಸಸಿಯನ್ನು ೯ ಅಂಗುಲ ದೂರವಾಗಿ ನೆಡಬೇಕು. ಗಿಡಗಳು ಬಹಳ ಸೊಂಪಾಗಿ ಬೆಳೆದು ವಿಸ್ತಾರವಾಗಿ ಹರಡಿಕೊಂಡು ಭೂಮಿಯನ್ನೆಲ್ಲಾ ಮುಚ್ಚಿಬಿಡುವುವು.

ಬಿತ್ತನೆಯಾದಮೇಲೆ ಜಮೀನಿನಲ್ಲಿರತಕ್ಕ ಕಸವನ್ನೆಲ್ಲ ತೆಗೆದು ಪದೇಪದೆ ಸಣ್ಣ ಕೈ ಗುದ್ದಲಿಯಿಂದ ಅಗೆದು ಮಣ್ಣನ್ನು ಪುಡಿಪುಡಿ ಮಾಡುತ್ತಿರಬೇಕು. ಅಲ್ಲದೆ ಅವಶ್ಯಬಿದ್ದಾಗಲೆಲ್ಲಾ ಕಳೆಯನ್ನು ಸಹಾ ಕಿತ್ತುಹಾಕಬೇಕು. ಗಿಡದ ಎಲೆಗಳೆಲ್ಲಾ ಉದುರಿಹೋದನಂತರ ಪೈರನ್ನು ಕಟಾವುಮಾಡತಕ್ಕದ್ದು.

ಫಸಲು ಚೆನ್ನಾಗಿ ಆದ ವರ್ಷದಲ್ಲಿ ಎಕರೆಗೆ ೨೦ ರಿಂದ ೩೦ ಮಣಗಳ ವರಿವಿಗೂ ದವಸವಾಗುವುದು. ಇದರ ಕಡ್ಡಿಯನ್ನು ದನಕರುಗಳು ವಿಶೇಷವಾಗಿ ತಿನ್ನುವುವು.

ಹೊಸ ಕ್ರಿಮಿನಾಶಕ ಚೂರ್ಣ.

ಇಂಡಿಯಾದೇಶದಲ್ಲಿ ಹುಳುಗಳನ್ನು ನಾಶಮಾಡುವುದಕ್ಕೋಸ್ಕರವಾಗಿ, ವ್ಯವಸಾಯವೇ ಮುಖ್ಯ ಕಸಬಾಗಿರತಕ್ಕ ಇತರ ದೇಶಗಳಲ್ಲಿ ಉಪಯೋಗಿಸುವಂತೆ ಚೂರ್ಣಗಳನ್ನು ಉಪಯೋಗಿಸುತ್ತಿರಲಿಲ್ಲ. ಆದರೆ ಕೆಲವು ವರ್ಷಗಳಿಂದೀಚೆಗೆ ಹೆಚ್ಚು ಬೆಲೆ ಬಾಳತಕ್ಕ ಹಣ್ಣು, ತರಕಾರಿ ಮೊದಲಾದುವುಗಳನ್ನು ಬೆಳೆಯತಕ್ಕವರೆಲ್ಲರೂ ಇಂಥಾ ಚೂರ್ಣಗಳನ್ನು ವಿಶೇಷವಾಗಿ ಉಪಯೋಗಿಸುತ್ತಾ ಬಂದಿರುವರು. ಮುಖ್ಯವಾಗಿ ಶೋಧನಾಲಯಗಳಲ್ಲಿ ಇವುಗಳನ್ನು ಅವಶ್ಯಕವಾಗಿ ಉಪಯೋಗಿಸಲೇ ಬೇಕು. ಇಂಥಾ ಚೂರ್ಣಗಳಲ್ಲಿ ಸೀಸಪಾಷಾಣ ಎಂಬುವುದು ವಿಶೇಷವಾಗಿ ಉಪಯೋಗಿಸಲ್ಪಡುತ್ತಿದೆ. ಆದರೆ ರೈತರುಗಳನೇಕರು ಈ ಪಾಷಾಣವನ್ನು ತಮ್ಮ ಹೊಲಗಳಲ್ಲಿ ಉಪಯೋಗಿಸಲು ಬಹಳ ಹಿಂಜರಿಯುತ್ತಿದ್ದಾರೆ. ಈ ದೇಶದಲ್ಲಿ ಹೊಲಗಳಿಗೆ ಬೇಲಿ ಹಾಕದೆ ಇರುವುದರಿಂದಲೂ ಮತ್ತು ಪೋಲೀ ದನಗಳು ಯಥೇಚ್ಛವಾಗಿವಾಗಿರುವುದರಿಂದಲೂ ದನಗಳು ಹೊಲಗಳಿಗೆ ನುಗ್ಗಿ ಪೈರನ್ನು ತಿನ್ನುವಾಗ್ಗೆ ಈ ಪಾಷಾಣವನ್ನು ತಿಂದು ಸಾಯಬಹುದೆಂಬುವುದೇ ಇದಕ್ಕೆ ಕಾರಣವಾಗಿರುತ್ತದೆ. ಇದೂ ಅಲ್ಲದೆ ಈ ಪಾಷಾಣವು ಹೊಲಗಳಲ್ಲಿ ಇಟ್ಟಿರುವ ಕಾಲದಲ್ಲಿ ಇಲ್ಲಿನ ಬಿಸಲಿನ ವೇಗದಿಂದ ಕೊಳೆತು, ಪೈರಿಗೆ ವೈರಿಗಳಾಗಿರುವ ಹುಳುಗಳನ್ನು ನಾಶಮಾಡುವುದಕ್ಕೆ ಬದಲಾಗಿ ಗಿಡಗಳನ್ನೇ ನಾಶಮಾಡಿ ಬಿಡುವುದು.

ಮೇಲ್ಕಂಡ ನ್ಯೂನತೆಗಳೊಂದೂ ಇಲ್ಲದೆ ಮಳೇ ನೀರಿಗೆ ಕರಗಿ ಕೊಚ್ಚಿ ಹೋಗದೆ ಮತ್ತು ಅಗ್ಗವಾಗಿರತಕ್ಕ ಮತ್ತು ಎಲೆಗಳ ಮೇಲಿರುವಾಗ್ಗೆ ಕೊಳೆತು ಗಿಡಗಳನ್ನು ನಾಶಮಾಡದೆ ಇರತಕ್ಕ ಒಂದು ಕ್ರಿಮಿನಾಶಕ ಚೂರ್ಣವನ್ನು ಕಂಡುಹಿಡಿಯಬೇಕೆಂಬ ಉದ್ದೇಶದಿಂದ ಅಜಮಾಯಿಷಿ ಮಾಡಿ ನೋಡಿದ್ದರಲ್ಲಿ ಲೆಡ್ ಕ್ರೊಮೇಟ್ ಎಂಬ ಚೂರ್ಣವು ಬಹಳ ಉತ್ತಮವಾದುದೆಂದು ಕಂಡುಬಂದಿರುತ್ತದೆ. ಈ ಚೂರ್ಣವನ್ನು ಸುಲಭವಾಗಿ ನೀರಿನಲ್ಲಿ ಕಲಸಬಹುದು. ಇದು ಹಳದೀ ಬಣ್ಣದ್ದಾಗಿರುವುದರಿಂದ ಎಲೆಗಳ ಮೇಲೆ ಎರಚಿದಲ್ಲಿ ಪ್ರತಿ ಎಲೆಗೂ ಚೆನ್ನಾಗಿ ಬಿದ್ದಿದೆಯೇ ಇಲ್ಲವೇ ಎಂಬುವುದು ಸುಲಭವಾಗಿಗೊತ್ತಾಗುವುದು; ಇದು ಎಲೆಗಳ ಮೇಲಿರುವಾಗ್ಗೆ ಕೊಳೆಯುವುದಿಲ್ಲ; ಮಳೆ ಬಿದ್ದಲ್ಲಿ ಕೊಚ್ಚಿಹೋಗುವುದಿಲ್ಲ ಮತ್ತು ಇದರಲ್ಲಿ ಪಾಷಾಣವಿಲ್ಲ. ಹೋದವರುಷ ಈ ಚೂರ್ಣವನ್ನು ಪ್ಯೂಸಾದಲ್ಲಿ ಅನೇಕ ತರಹ ಪೈರುಗಳಿಗೆ ಪ್ರಯೋಗಮಾಡಿ ನೋಡಿದ್ದರಲ್ಲಿ ಪೈರುಗಳಿಗೆ ಯಾವಕೇಡೂ ಸಂಭವಿಸಲಿಲ್ಲವೆಂದು ತಿಳಿಯಬರುತ್ತದೆ. ಕಂಬಳಿ ಹುಳುಗಳು ಮುತ್ತಿಕೊಂಡಿರತಕ್ಕ ಪೈರುಗಳಿಗೆ ಇದನ್ನು ಎರಚಿದರೆ ಹುಳುಗಳೆಲ್ಲವೂ ನಿರ್ಮೂಲವಾಗಿಬಿಡುವುವು. ಇಂಥಾ ಪಾಷಾಣರಹಿತವಾದ ಚೂರ್ಣವು, ಕಂಡುಹಿಡಿಯಲ್ಪಟ್ಟಿರುವುದರಿಂದ ಹೆಚ್ಚು ಬೆಲೆಯಾಗತಕ್ಕ ಬೆಳೆಗಳನ್ನು ಬೆಳೆಯುವರೆಲ್ಲರೂ ಇದನ್ನು ಧಾರಾಳವಾಗಿ ಉಪಯೋಗಿಸಿ, ತಮ್ಮ ಪೈರುಗಳು ಹುಳುಗಳಿಂದ ಸ್ವಲ್ಪವೂ ನಷ್ಟವಾಗದಂತೆ ಮಾಡಿಕೊಳ್ಳಬಹುದು. ಸದ್ಯದಲ್ಲಿ ಕ್ರಿಮಿನಾಶಕವಾದ ಚೂರ್ಣಗಳನ್ನೂ ಮತ್ತು ಅವುಗಳನ್ನು ಉಪಯೋಗಿಸುವುದಕ್ಕೆ ಸಹಕಾರಿಗಳಾದ ಯಂತ್ರಗಳ ಹೆಸರುಗಳನ್ನೂ ಜನಗಳಿಗೆಲ್ಲಾ ಪ್ರಚುರಪಡಿಸಿ ಇವುಗಳನ್ನು ವಿಕ್ರಯಿಸತಕ್ಕ ಕಂಪೆನಿಗಳ್ಯಾವುವೂ ಇಲ್ಲದ ಕಾರಣ, ಪ್ಯೂಸಾದಲ್ಲಿರತಕ್ಕ ವ್ಯವಸಾಯಪರಿಶೋಧನಾಲಯದವರೇ ಇದಕ್ಕೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿರುತ್ತಾರೆ. ಹೆಚ್ಚು ವಿಷಯಗಳನ್ನು ತಿಳಿಯಬೇಕಾದವರು ಅವರಿಗೆ ಬರೆದು ತಿಳಿದುಕೊಳ್ಳಬಹುದು.

ಮೈಸೂರ್ ಗೆಜೆಟಿ ಸಂಗ್ರಹ.

ಮೈಸೂರ್ ಚೇಫ್‌ಕೋರ್ಟ್ ಚೇಫ್ ಜಡ್ಜ ಮೆ|| ಸ್ಟಾನ್ಲೆ ಇಜ್‌ಮೆ ಸಿ. ಎಸ್. ಐ, ಬಾರ್-ಅಟ್-ಲಾ, ಯವರಿಗೆ ೧೯೧೧ ರಲ್ಲಿ ಬೇಸಿಗೆಯ ರಜವನ್ನನುಸರಿಸಿ ಪೂರ್ಣಸಂಬಳದಮೇಲೆ ೨ ತಿಂಗಳು ಮತ್ತೂ ೧ ದಿವಸದ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುತ್ತದೆ.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾದ ಅಸಿಸ್ಟೆಂಟ್ ಸರ್ಜನ್ ಮೆ|| ಸಿ. ಎ. ನಂಜಪ್ಪನವರಿಗೆ ೧೯೧೧ ನೇ ಏಪ್ರಿಲ್ ತಾ|| ೧೦ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೧ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅವರು ಬರುವವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪೋಸ್ಟ್ ಗ್ರಾಜ್ಯುಯೆಟ್ ಕೋರ್ಸಿನಲ್ಲಿರುವ ಅ|| ಸರ್ಜನ್ ಮೆ|| ಟಿ. ಎ. ಕುಪ್ಪುಸ್ವಾಮಿ ಮೊದಲಿಯಾರರು ಆಕ್ಟಿಂಗ್ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿ ನೇಮಿಸಲ್ಪಟ್ಟಿರುತ್ತಾರೆ.

ಶಿವಮೊಗ್ಗೆಯ ಸಿವಿಲ್ ಆಸ್ಪತ್ರೆಯಲ್ಲಿ ಕೆಲಸಮಾಡುವ ಅ|| ಸರ್ಜನ್ ಮೆ|| ಎಸ್. ಕೆ. ಹನುಮಂತರಾಯರಿಗೆ ೧೯೧೧ ನೇ ಏಪ್ರಿಲ್ ತಾ|| ೪ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೧ ತಿಂಗಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಕೋಲಾರದ ಗೋಲ್ಡ್‌ಫೀಲ್ಡ್ಸಿನಲ್ಲಿ ಇನಾಕ್ಯುಲೇಷನ್ ಕೆಲಸದ ಮೇಲಿರುವ ಸ|| ಅ|| ಸರ್ಜನ್ ಮೆ|| ಟಿ. ಬಾಲಕೃಷ್ಣ ಮೊದಲಿಯಾರರು ಶಿವಮೊಗ್ಗೆಯ ಸಿವಿಲ್ ಆಸ್ಪತ್ರೆಯಲ್ಲಿ ಕೆಲಸಮಾಡತಕ್ಕದ್ದು.

ಮೈಸೂರ ಡಿ|| ಡೆಪ್ಯುಟಿ ಕಮೀಷನರ್ ಮೆ|| ಎಂ. ಕಾಂತರಾಜ ಅರಸ್, ಬಿ. ಎ., ಯವರಿಗೆ ೧೯೧೧ ನೇ ಏಪ್ರಿಲ್ ತಾ|| ೫ ರಿಂದ ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖಿನಿಂದ ೧ ತಿಂಗಳು ಮತ್ತೂ ೯ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಮುಜರಾಯಿ ಸೂಪರಿಂಟೆಂಡೆಂಟ್ ಮೆ|| ಎ. ಸುಬ್ರಹ್ಮಣ್ಯಯ್ಯರ್ ಬಿ. ಎ., ಯವರು ಮೈಸೂರ ಡಿ|| ಆಕ್ಟಿಂಗ್ ಡೆ|| ಕ|| ರವರಾಗಿಯೂ ಡಿ|| ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಚಾಮರಾಜನಗರ ತಾ|| ಅಮಲ್ದಾರ್ ಮೆ|| ಜಿ. ನಾರಾಯಣರಾವ್ ಬಿ. ಎ., ಬಿ. ಎಲ್., ರವರಿಗೆ ೧೯೧೧ ನೇ ಏಪ್ರಿಲ್ ತಾ|| ೧ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೨ ತಿಂಗಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟಿರುವುದರಿಂದ. ನಂಜನಗೂಡು ಪೋಲೀಸ್ ಇನ್ಸ್‌ಪೆಕ್ಟರು ಮೆ|| ಸಿ. ರಾಮಚಂದ್ರರಾವ್ ಬಿ. ಎ., ಬಿ. ಎಲ್., ರವರು ಚಾಮರಾಜನಗರ ತಾ|| ಆಕ್ಟಿಂಗ್ ಅಮಲ್ದಾರ್ ಮತ್ತೂ ೩ ನೇ ತ|| ಮ್ಯಾಜಿಸ್ಟ್ರೇಟರಾಗಿ ಮೆ|| ನಾರಾಯಣರಾಯರು ಬರುವವರೆಗೆ ಅಥವಾ ಬೇರೆ ಅಪ್ಪಣೆಯಾಗುವವರೆಗೆ ಇರತಕ್ಕದ್ದು

ತುಮಕೂರು ತಾ|| ಅಮಲ್ದಾರ್ ಮೆ|| ಜಿ. ಬಾಲ್‌ರವರಿಗೆ ಅವರುಪಯೋಗಿಸಿಕೊಳ್ಳುವ ತಾ|| ನಿಂದ ೨ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಜ|| ಮತ್ತೂ ರೆ|| ಸೆಕ್ರೆಟರಿಯಟ್ಟಿನ ಅ|| ಸೂಪರಿಂಟೆಂಡೆಂಟರಾದ ಮೆ|| ಎನ್. ಮೂರ್ತಿರಾವ್ ಬಿ. ಎ., ಯವರು ಆ|| ಅಮಲ್ದಾರರಾಗಿಯೂ ೩ ನೇ ತ|| ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಕೋಲಾರದ ಡಿ|| ಟ್ರಜರಿ ಛಾರ್ಜಿನಲ್ಲಿರುವ ಅ|| ಕಮಿಷನರ್ ಮೆ|| ಎ. ವೇದಾಂತದೇಶಿಗಂ ಅಯ್ಯಂಗಾರ್‌ರವರಿಗೆ ೧೯೧೧ ನೇ ಏಪ್ರಿಲ್ ತಾ|| ೫ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೬ ವಾರಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಅವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಕೋಲಾರದ ಡಿ||ಗೆ ಸೇರಿದ ಪ್ರಬೇಷನರಿ ಅ|| ಕಮಿಷನರ್ ಮೆ|| ಬಿ. ಟಿ. ಕೇಶವಯ್ಯಂಗಾರ್ ಬಿ. ಎ., ಯವರು ಡಿ|| ಟ್ರಜರಿ ಛಾರ್ಜಿನಲ್ಲಿರತಕ್ಕದ್ದು.

ಹೊಸದುರ್ಗದ ತಾ|| ಅಮಲ್ದಾರ್ ಮೆ|| ಜಿ. ನಾರಾಯಣರಾಯರಿಗೆ ಕೊಟ್ಟಿದ್ದ ೬ ವಾರಗಳ ಪ್ರಿವಿಲೇಜ್‌ರಜವು ಇನ್ನೂ ಒಂದು ತಿಂಗಳಿಗೆ ಹೆಚ್ಚಿಸಲ್ಪಟ್ಟಿರುವುದರಿಂದ ತಾ|| ಛಾರ್ಜಿನಲ್ಲಿದ್ದ ಶಿರಸ್ತೇದಾರ್ ಎಂ. ರಾಘವೇಂದ್ರರಾಯರು ಆ|| ಅಮಲ್ದಾರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮಾಲೂರು ತಾ|| ಅಮಲ್ದಾರ್ ಮೆ|| ಸಿ. ಗೋಪಾಲಾಚಾರ್ ಬಿ. ಎ., ಯವರಿಗೆ ಅವರುಪಯೋಗಿಸಿಕೊಳ್ಳುವ ತಾ|| ನಿಂದ ೨ ತಿಂಗಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟಿರುತ್ತದೆ.

ಚೇಫ್ ಜಡ್ಜ ಮೆ|| ಇಜ್‌ಮೆಯವರು ರಜದಮೇಲಿರುವ ವರೆಗೆ ಮೆ|| ಜಸ್ಟಿಸ್ ಪಿ. ಎಸ್. ಕೃಷ್ಣರಾವ್ ರಾವ್ ಬಹದ್ದೂರ್ ಬಿ. ಎ., ಬಿ. ಎಲ್., ರವರು ಅಫಿಷಿಯೇಟಿಂಗ್ ಚೇಫ್ ಜಡ್ಜರಾಗಿಯೂ, ರಜದಮೇಲಿರುವ ಡಿ|| ಜಡ್ಜ ಮೆ|| ಟಿ. ಪರಮಶಿವಯ್ಯರ್ ಬಿ. ಎ., ಯವರು ಉದ್ಯೋಗದಮೇಲೆ ಬಂದು ಚೇಫ್‌ಕೋರ್ಟಿನ ಆಫಿಷಿಯೇಟಿಂಗ್ ಜಡ್ಜರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಬೆಂಗಳೂರಲ್ಲಿ ಇನಾಕ್ಯುಲೇಷನ್ ಉದ್ಯೋಗದ ಮೇಲಿದ್ದ ಸ|| ಅ|| ಸರ್ಜನ್ ಮೆ|| ಸಿ. ಕುಪ್ಪುಸ್ವಾಮಿ ಪಿಳ್ಳೆಯವರು ಮೈಸೂರು ಜನರಲ್ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ರೆವಿನ್ಯೂ ಸರ್ವೆ ಅ|| ಸೂಪರಿಂಟೆಂಡೆಂಟ್ ಮೆ|| ಕೆ. ಜಿ. ಶಾಮಣ್ಣ ಬಿ. ಎ., ಯವರು ೧೯೧೦ ನೇ ಸೆಪ್ಟಂಬರ್ ತಾ|| ೨೦ ರಿಂದ ಬಿ|| ಷೆಡ್ಯೂಲು ೪ ನೇ ತ|| ಯಿಂದ ೩ ನೇ ತ|| ಗೆ ಅಭಿವೃದ್ಧಿಗೊಳಿಸಲ್ಪಟ್ಟತ್ತಾರೆ.

ಶಿವಮೊಗ್ಗ ಡಿ|| ಪೋಲೀಸು ಸೂಪರಿಂಟೆಂಡೆಂಟ್ ಮೆ|| ಬಿ. ರಾಮಸ್ವಾಮಯ್ಯ ಬಿ. ಎ., ಯವರು ೧೯೧೦ ನೇ ಜುಲೈ ತಾ|| ೧ ರಿಂದ ಬಿ ಷೆಡ್ಯೂಲ್ ೪ ನೇ ತ|| ಯಿಂದ ೩ ನೆ ತ||ಗೆ ಹೆಚ್ಚಿಸಲ್ಪಟ್ಟಿರುತ್ತಾರೆ.

ಮೈಸೂರ ಡಿ|| ಮೆಡಿಕಲ್ ಆಫೀಸರ್ ಮೆ|| ಇ. ಎಸ್. ಕೃಷ್ಣಸ್ವಾಮಿ ಅಯ್ಯರವರು ತಮ್ಮ ಕೆಲಸದೊಡನೆ ಡಿ|| ಸ್ಯಾನಿಟರಿ ಆಫೀಸರ ಉದ್ಯೋಗವನ್ನು ಮೆ|| ಕೃಷ್ಣರಾಯರು ಅಮೃತಸರದಿಂದ ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ನೋಡತಕ್ಕದ್ದು.

ಶೃಂಗೇರಿಯ ಜಹಗೀರಿಗೆ ಕಳುಹಲ್ಪಟ್ಟಿದ್ದ ಅಮಲ್ದಾರ್ ಮೆ|| ಬಿ. ಸಿ. ಕೃಷ್ಣಶಾಸ್ತ್ರಿ ಬಿ. ಎ., ಯವರು ಪುನಃ ಸರ್ಕಾರಿಯ ಕೆಲಸದ ಮೇಲೆ ಬರಮಾಡಲ್ಪಟ್ಟು ೧೯೧೧ ನೇ ಏಪ್ರಿಲ್ ತಾ|| ೮ ರಿಂದ ಉದ್ಯೋಗದಿಂದ ನಿವೃತ್ತಿಯಾಗಲಪ್ಪಣೆಮಾಡಲ್ಪಟ್ಟಿರುವ ಮೆ|| ಬಿ. ಎಸ್. ವೆಂಕಟೇಶಯ್ಯನವರ ಬದಲು ಕೋಲಾರ ತಾ|| ಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

೧ ನೇ ಕೌನ್ಸಿಲರ ಪರ್ಸನಲ್ ಅಸಿಸ್ಟೆಂಟರಾದ ಮೆ|| ಎಚ್. ಪಿ. ಗಂಗಾಧರಪ್ಪ ಬಿ. ಎ., ಯವರು ಕುಣಿಗಲ್ ತಾ|| ಅಮಲ್ದಾರರಾಗಿಯೂ, ೩ ನೇ ತ|| ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಅಮಲ್ದಾರ್ ಮೆ|| ಬಿ. ಕೇಸರ್‌ಸಿಂಗ್‌ರವರು, ಮೆ|| ಗೋಪಾಲಾಚಾರ್ಯರು ರಜದಮೇಲೆ ಇರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಕುಣಿಗಲ್ ತಾ|| ನಿಂದ ಮಾಲೂರಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಏಪ್ರಿಲ್ ತಾ॥ ೧೦ ನೇ ಸೋಮವಾರ

ಪ್ರಾಥವಿದ್ಯೆಯನ್ನು ಬಲಾತ್ಕಾರದಿಂದ ಮಾಡಿಸುವುದು.

ನಮ್ಮ ಭರತಖಂಡದಲ್ಲಿ ವಿದ್ಯಾಪ್ರಸಾರವು ಬಹಳವಾಗಿ ಕಡಿಮೆಯಾಗಿರುವುದೆಂಬ ಸಂಗತಿಯು ಎಲ್ಲರಿಗೂ ಗೊತ್ತು. ವಿದ್ಯಾಪ್ರಸಾರಕ್ಕೆ ಬಲವಾದ ಸಾಹಸವನ್ನು ಮಾಡಿದಲ್ಲದೆ ಆ ಲೋಪವು ಪರಿಹಾರಗೊಳ್ಳದು. ಪ್ರತಿಯೊಬ್ಬ ಹುಡುಗರನ್ನೂ ಓದುಬರಹ ಬರುವವಷ್ಟಾದರೂ ಮಾಡಿಸಿದರೆ, ಪ್ರಾಥವಿದ್ಯಾಭ್ಯಾಸವನ್ನು ಮಾಡಿಕೊಳ್ಳುವುದು ಅವರವರ ಅನುಕೂಲ್ಯ-ಇಷ್ಟ ಮೊದಲಾದುವುಗಳ ಅಧೀನವಾಗಿರುವುದು. ಅದುಕಾರಣ ಅಜ್ಞಭೂಯಿಷ್ಠವಾದ ಈ ದೇಶದಲ್ಲಿ ಸರ್ಕಾರದವರೇ ನಿರ್ಬಂಧಪೂರ್ವಕವಾಗಿ ಬಾಲವಿದ್ಯಾಭ್ಯಾಸವನ್ನು ಮಾಡಿಸಿದಲ್ಲದೆ ಉದ್ದೇಶಸಾಧನವಾಗುವುದಿಲ್ಲವೆಂಬುದು ಅನೇಕರ ಅಭಿಪ್ರಾಯವಾಗಿರುತ್ತದೆ. ಅದರಂತೆಯೇ ವೈಸ್ರಾಯರ ನಿಯಮನಿರ್ಮಾಣಸಭೆಯ ಸಭಾಸ್ತರರಾದ ಮ॥ ಗೋಖಲೆಯವರು ಅತ್ಯಂತ ಸಾಹಸಪಟ್ಟು ದೂರಾಲೋಚನೆಯಿಂದ ಬರೆದ ತತ್ಸಂಬಂಧವಾದ ವಿಧಿಯೊಂದನ್ನು ಸಭೆಯ ಮುಂದಿಟ್ಟು, ಅದನ್ನು ವ್ಯವಹಾರಕ್ಕೆ ತರಬೇಕೆಂದು ಪ್ರಾರ್ಥಿಸಿಕೊಂಡಿರುವರು. ಅದರ ವಿವರವನ್ನು ಇದರ ಕೆಳಗೆ ಮುದ್ರಿಸಿರುತ್ತೇವೆ.

ಇಂಥ ವಿಧಿಯೊಂದು ಅನುಷ್ಠಾನಕ್ಕೆ ಬರುವಂತಾದರೆ ದೇಶಕ್ಕೆ ಅತ್ಯಂತ ಕ್ಷೇಮವಾಗುವುದು. ಆದರೆ ನಿರ್ಬಂಧದಿಂದ ವಿದ್ಯಾಭ್ಯಾಸಮಾಡಿಸಬೇಕಾದರೆ ಈಗಿಗಿಂತಲೂ ಒಂದಕ್ಕೆ ನಾಲ್ಕಾಗಿ ಪಾಠಶಾಲೆಗಳ ಸಂಖ್ಯೆಯು ಗ್ರಾಮಾಂತರಗಳಲ್ಲೆಲ್ಲಾ ಹೆಚ್ಚಬೇಕಾಗುವುದು. ಹಾಗೆ ಹೆಚ್ಚಿದರೆ ಹತ್ತಾರುಕೋಟಿ ರೂ. ಗಳನ್ನು ಆ ಶಾಖೆಗಾಗಿಯೇ ಹೆಚ್ಚಾಗಿ ವೆಚ್ಚ ಮಾಡಬೇಕಾಗುವುದು. ಅದನ್ನು ಒದಗಿಸಿಕೊಡುವುದು ಸರ್ಕಾರದವರಿಗೆ ತುಂಬಾ ಶ್ರಮವಾದೀತು. ಆ ಕಾರಣವನ್ನು ಹೇಳಿ ಈ ವಿಧಿಯು ಅನುಷ್ಠಾನಕ್ಕೆ ತಡೆಮಾಡಲ್ಪಡದೆ ಇರುವಂತಾಗಲೆಂಬುದಕ್ಕಾಗಿಯೇ ಆ॥ ಗೋಖಲೆಯವರು ಪ್ರಜೆಗಳಿಂದ ಈ ವಿದ್ಯಾವ್ಯಾಪ್ತಿಗೋಸ್ಕರಲೇ ಪ್ರತ್ಯೇಕವಾದ ಕಂದಾಯವನ್ನು ಬೇಕಿದ್ದರೂ ವಿಧಿಸಬಹುದೆಂದು ಈ ವಿಧಿಯಲ್ಲಿ ಕಾಣಿಸಿರುವರಲ್ಲದೆ ಮತ್ತೂ ತಿಂಗಳಿಗೆ ೧೦ ರೂ. ಗೆ ಕಡಿಮೆಯಾದ ವರಮಾನವುಳ್ಳವರ ಮಕ್ಕಳಿಗೆ ಉಚಿತವಾಗಿಯೇ ವಿದ್ಯಾಭ್ಯಾಸಮಾಡಿಸುವುದಕ್ಕೂ ಅವಕಾಶವನ್ನು ಕಲ್ಪಿಸಿರುವರು. ಈ ಕಾರಣದಿಂದ ಉಪಪನ್ನರಾದವರೆಲ್ಲರೂ ದೇಶಕ್ಕೆ ಅತ್ಯಂತ ಹಿತಕಾರಿಯಾದ ವಿದ್ಯಾಪ್ರಸಾರಕ್ಕಾಗಿ ಈಗ ಅವರು ಕೊಡುತ್ತಿರುವ ಭೂ ಗಂದಾಯ ಮೊದಲಾದುವುಗಳ ಜತೆಗೆ ರೂಪಾಯಿಗೆ ೧-೨ ಆಣೆಯಂತೆ ಹೆಚ್ಚಾಗಿ ಕೊಡುವುದಕ್ಕಾದರೂ ಗೊಣಗುಟ್ಟದೆ ಸಿದ್ಧರಾದರೆ ಉದ್ದೇಶ ಸಾಧನವಾಗುವುದು.

ವಿದ್ಯಾಶಾಖೆಯವರ ಅನುಮತಿಯನ್ನೈದಿದ ಶಾಲೆಗಳಿಗೆ ಪ್ರತಿಯೊಬ್ಬ ಬಾಲ ಬಾಲಕಿಯರನ್ನೂ ಕಳುಹಿಸಬೇಕೆಂದು ಈ ವಿಧಿಯಲ್ಲಿ ಕಾಣಿಸಲ್ಪಟ್ಟಿದ್ದರೂ, ಅದರಿಂದ ನಿರ್ಬಂಧವಾಗಬಾರದೆಂದು, ಸ್ವತಂತ್ರಶಾಲೆಗಳಲ್ಲಿ ಓದಿಸಿದರೂ ಆಗಬಹುದೆಂಬ ಅಂಶವನ್ನು ಆ ನಿಯಮ ವಿಧಿಯಲ್ಲಿ ವ್ಯಕ್ತಪಡಿಸಿರುವುದು ಚೆನ್ನಾಗಿದೆ. ಮತ್ತೂ ಅಪರಿಹಾರ್ಯವಾದ ತೊಂದರೆಗಳಿದ್ದರೂ ಶಾಲೆಗೆ ಮಕ್ಕಳನ್ನು ಕಳುಹದಿರಬಹುದಾದುದಕ್ಕೆ ಅವಕಾಶ ಕೊಡಲ್ಪಟ್ಟಿದೆ. ನಿಷ್ಕಾರಣವಾಗಿಯೂ, ಔದಾಸೀನ್ಯದಿಂದಲೂ ವರ್ಷಮ್ಮುಗಳಾದ ಮಕ್ಕಳುಗಳಿಗೆ ವಿದ್ಯಾಭ್ಯಾಸ ಮಾಡಿಸದೆ ಮೂಢರನ್ನಾಗಿ ಮಾಡಿಟ್ಟುಕೊಳ್ಳತಕ್ಕವರಿಗೆ ಭೀತಿಪ್ರದವಾಗುವಂತೆ ಶಿಕ್ಷೆಯು ಸಾಧಾರಣವಾಗಿ ಕಲ್ಪಿಸಲ್ಪಟ್ಟಿದೆ. ಸರ್ಕಾರಕ್ಕೂ, ಪ್ರಜೆಗಳಿಗೂ ಉಭಯತ್ರ ಅನುಕೂಲವಾಗಿರುವ ಈ ವಿಧಿಯು ಅನತಿಕಾಲದೊಳಗಾಗಿ ನಿಯಮ ನಿರ್ಮಾಣ ಸಭೆಯ ಅನುಮೋದನವನ್ನು ಪಡೆದು ವ್ಯವಹಾರಕ್ಕೆ ಬರುವಂತಾಗಲೆಂದೂ, ೧-೨ ಕಡೆ ಮೊದಲು ಇದನ್ನು ವ್ಯವಹಾರಕ್ಕೆ ತರಿಸಿ ಪರೀಕ್ಷಿಸಿ, ಫಲಿತಾಂಶವನ್ನು ಗೌರ್ನ್ಮೆಂಟಿನವರು ತಿಳಿದುಕೊಂಡು ದಿನಕ್ರಮೇಣ ಸರ್ವತ್ರ ಅನುಷ್ಠಾನಕ್ಕೆ ಬರುವಂತೆ ಮಾಡುವರೆಂದೂ ನಿರೀಕ್ಷಿಸುತ್ತೇವೆ.

ಬಾಲವಿದ್ಯಾಭ್ಯಾಸವನ್ನು ಕುರಿತ ವಿಧಿ.

ಕಳೆದ ಮಾರ್ಚಿ ತಾ॥ ೧೬ ರಲ್ಲಿ ಕೂಡಿದ್ದ ವೈಸ್ರಾಯರ ನಿಯಮನಿರ್ಮಾಣ ಸಭೆಯಲ್ಲಿ ಆ॥ ಗೋಖಲೆಯವರು ಇದಕ್ಕೆ ಸಂಬಂಧಪಟ್ಟ ವಿಧಿಯೊಂದನ್ನು ಏರ್ಪಡಿಸಬೇಕೆಂದು ಸಭಿಕರನ್ನು ಪ್ರಾರ್ಥಿಸಿ, ಅದರ ಸ್ವರೂಪನಿರೂಪಣವನ್ನು ಈ ಕೆಳಗೆ ಕಂಡ ರೀತಿಯಲ್ಲಿ ಮಾಡಿರುವರು :—

(೧) ಈ ವಿಧಿಗೆ ಆರಂಭ ವಿದ್ಯಾಭ್ಯಾಸವಿಧಿಯೆಂದು ಹೆಸರು. (೨) ಇದು ಬ್ರಿಟಿಷ್ ಇಂಡ್ಯಾದಲ್ಲೆಲ್ಲಾ ವ್ಯಾಪಿಸಿರತಕ್ಕದು. ಆದರೂ ಆಯಾ ದೇಶಗಳಲ್ಲಿ ೩ ನೆಯ ಸೆಕ್ಷನ್ ಪ್ರಕಾರ ಇಂತಿಂಥ ಸ್ಥಲಗಳಲ್ಲಿ ಈ ವಿಧಿಯು ವ್ಯವಹಾರಕ್ಕೆ ಬರತಕ್ಕದೆಂದು ಪ್ರಕಟಿಸಲ್ಪಡುವ ಸ್ಥಲಗಳಲ್ಲಿ ಮಾತ್ರವೇ ವ್ಯವಹಾರಕ್ಕೆ ಬರತಕ್ಕದು. ವಿವರಣೆ–ಪೇರೆಂಟ್ ಎಂಬ ಪದಕ್ಕೆ ಮಕ್ಕಳ ರಕ್ಷಕರೆಂದರ್ಥ. ಲೋಕಲ್ ಬೋರ್ಡ್ ಎಂದರೆ ಜಿಲ್ಲಾಬೋರ್ಡು–ಮ್ಯುನಸಿಪಾಲಿಟಿಗಳನ್ನು ಹೊಂದಿರುವ ಪ್ರಾಂತಿಕ ಆಧಿಪತ್ಯ. ಸರ್ಕಾರದವರಿಂದ ನಿಯಮಿಸಲ್ಪಟ್ಟಿರುವ ವಿದ್ಯಾಶಾಖಾಧಿಕಾರಿಗಳಿಂದ ಏರ್ಪಡಿಸಲ್ಪಟ್ಟಿರುವ ವಿದ್ಯೆಗೆ "ಪಬ್ಲಿಕ್ ಇನ್ಸ್ಟ್ರಕ್ಷನ್" ಎಂದು ಹೆಸರು. ವಿದ್ಯಾಶಾಖಾಧಿಕಾರಿಗಳಿಂದ ಅಂಗೀಕರಿಸಲ್ಪಟ್ಟಿರುವ ಪಾಠಶಾಲೆಗಳಿಗೆ "ರೆಕಗ್ನೈಸ್ಡ್ ಸ್ಕೂಲ್" ಎಂದು ಹೆಸರು. ಓದುವುದು ಬರೆಯುವುದು, ಗಣಿತ, ಪ್ರಾರಂಭವಿದ್ಯಾಶಾಲೆಗಳಿಗಾಗಿ ಪಬ್ಲಿಕ್ ಇನ್ಸ್ಟ್ರಕ್ಷನ್ನರವರಿಂದ ನಿರ್ಣಯಿಸಲ್ಪಡುವ ಇತರ ವಿಷಯಗಳು ಇವೇ ಮೊದಲಾದುವು ಪ್ರಾರಂಭವಿದ್ಯೆಯೆನಿಸಿಕೊಳ್ಳುವುವು. ಜಿಲ್ಲಾ ಸಭೆಗೂ, ಜಿಲ್ಲಾ ಲೋಕಲ್ ಬೋರ್ಡಿಗೂ ಡಿಸ್ಟ್ರಿಕ್ಟ್ ಬೋರ್ಡ್ ಎಂದು ಹೆಸರು. ಗ್ರಾಮಾಧಿಕಾರಿ ಹೊರತು ಉಳಿದ ಮ್ಯಾಜಿಸ್ಟ್ರೇಟರೆಲ್ಲರೂ ಮ್ಯಾಜಿಸ್ಟ್ರೇಟರೆನ್ನಲ್ಪಡುವರು. (೩) ಗೌರ್ನರ್ ಜನರಲ್‌ರವರ ಪ್ರಕಟನೆಯಿಂದ ಪ್ರದೇಶ ಗೌರ್ನಮೆಂಟಿನವರ ಅಪ್ಪಣೆಯನ್ನು ಪಡೆದು, ಜಿಲ್ಲಾಬೋರ್ಡು ಇಲ್ಲವೆ ಮ್ಯುನಸಿಪಾಲಿಟಿಯವರು ಪ್ರಕಟಿಸುವ ಸ್ಥಲಗಳಲ್ಲಿ ಈ ವಿಧಿಯು ವ್ಯವಹಾರದಲ್ಲಿರತಕ್ಕದು. (೪) ಹೀಗೆ ಪ್ರಕಟಿಸಲ್ಪಡುವ ಸ್ಥಲಗಳಲ್ಲಿ ವಾಸಮಾಡುವ ಮಕ್ಕಳ ರಕ್ಷಣಕರ್ತರು ೬ ವರ್ಷಕ್ಕೆ ಮೇಲ್ಪಟ್ಟು ೧೦ ವರ್ಷದೊಳಗೆ ವಯಸ್ಸಿರುವ ತಮ್ಮ ಪ್ರತಿಯೊಂದು ಮಕ್ಕಳನ್ನೂ ರೆಕಗ್ನೈಜ್ ಪಾಠಶಾಲೆಗೆ ಕಳುಹಿಕೊಡಬೇಕು. (೫) ಪೋಷಕರು ತಮ್ಮ ವಶದಲ್ಲಿರುವ ಮಕ್ಕಳನ್ನು ಪಾಠಶಾಲೆಗೆ ಕಳುಹಿಸದೆ ಇರುವುದಕ್ಕೆ ಈ ಕೆಳಗೆ ವಿವರಿಸುವುವುಗಳು ಕಾರಣವಾಗಿರಬೇಕು.-(ಎ) ಮಕ್ಕಳಿರುವ ಗ್ರಾಮದಲ್ಲಾಗಲೀ, ಅದಕ್ಕೆ ಒಂದು ಮೈಲಿ ದೂರದಲ್ಲಾಗಲೀ ರೆಕಗ್ನೈಜ್ಡ್ ಪಾಠಶಾಲೆಯು ಇಲ್ಲದೆ ಹೋಗಿರಬೇಕು. ಮತವಿಷಯಕ ಬಾಧೆಯು ಅಡಚಣೆಯಾಗಿರಬೇಕು. (ಬಿ) ಬಾಲಕನಿಗೆ ರೋಗಸಂಭವಿಸಿದಾಗಲೀ, ಗೃಹಕೃತ್ಯವನ್ನು ನೋಡಿಕೊಳ್ಳುವುದಕ್ಕೆ ಬೇರೆ ಯಾರೂ ದಿಕ್ಕಿಲ್ಲದೆಯಾಗಲೀ, ಪೈರಿನ ಕಾಲದಲ್ಲಿ ಬಾಲಕರು ಕೆಲಸಮಾಡುವ ಸಮಯವು ಸಂಭವಿಸಿಯಾಗಲೀ, ಇದೇ ತೆರದ ಇತರ ಅನಿವಾರ್ಯಗಳಾಗಲೀ ಸಂಭವಿಸಿರಬೇಕು. (ಸಿ) ತೃಪ್ತಿಕರವಾಗಿ ಬಾಲಕನು ಇತರವಿಧವಾದ ವಿದ್ಯೆಯನ್ನಭ್ಯಾಸಮಾಡುತ್ತಿರಬೇಕು. ಆಗ ರಕ್ಷಕನು ದಂಡಕ್ಕೆ ಪಾತ್ರನಾಗುವುದಿಲ್ಲ. ಇವು ಹೊರತು ಉಳಿದ ಕಾರಣಗಳು ಸಲ್ಲುವುದಿಲ್ಲ. (೬) ಈ ವಿಧಿಯ ಪ್ರಕಾರ ಪಾಠಶಾಲೆಗೆ ಹೋಗತಕ್ಕ ವಯಸ್ಸಿನಲ್ಲಿರುವ ಬಾಲಕರನ್ನು ಸಂಬಳಕ್ಕೆ ಸೇರಿಸಕೂಡದು. (೭) ಪಬ್ಲಿಕ್ ಇನ್ಸ್ಟ್ರಕ್ಷನ್ ಶಾಖೆಯವರು ಸಮ್ಮತಿಸುವ ಪ್ರಕಾರ ಮ್ಯುನಸಿಪಾಲಿಟಿಯವರಾಗಲೀ, ಜಿಲ್ಲಾ ಬೋರ್ಡಿನವರಾಗಲೀ ಪಾಠಶಾಲೆಗೆ ತಕ್ಕಷ್ಟು ಕಟ್ಟಡಗಳನ್ನು ಏರ್ಪಡಿಸಮಾಡಿಕೊಡಬೇಕು. (೮) ಬಾಲಕರ ಪ್ರಾರಂಭವಿದ್ಯಾಭ್ಯಾಸಕ್ಕಾಗಿ ಮ್ಯುನಸಿಪಾಲಿಟಿಯವರಾಗಲೀ, ಲೋಕಲ್ ಬೋರ್ಡಿನವರಾಗಲೀ ಪ್ರಾಂತಿಕ ಗೌರ್ನರ ಅಪ್ಪಣೆಯನ್ನು ಪಡೆದು ವಿದ್ಯಾಭ್ಯಾಸದ ತೆರಿಗೆಯನ್ನು ಪ್ರಜೆಗಳಮೇಲೆ ವಿಧಿಸಬಹುದು. (೯) ಬಾಲಕರ ಸಂರಕ್ಷಕನ ತಿಂಗಳ ವರಮಾನವು ೧೦ ರೂ ಗೆ ಒಳಗಾಗಿದ್ದರೆ ಬಾಲಕನಿಗೆ ಶಾಲೆಯ ಫೀಯನ್ನು ಕೊಡಬೇಕಾದುದಿಲ್ಲ. ಈ ವಿಧಿಯ ನಾಲ್ಕನೆಯ ಸೆಕ್ಷನ್ ಪ್ರಕಾರ ಶಾಲೆಗೆ ಹೋಗಬಲ್ಲ ಹುಡುಗನಿಗೆ ಫೀಯನ್ನು ಕೊಡುವ ವಿಷಯದಲ್ಲಿ ಸಂರಕ್ಷಕನು ಬಡವನಾಗಿದ್ದರೆ, ಮ್ಯುನಸಿಪಾಲಿಟಿಯವರಾಗಲೀ, ಬೋರ್ಡಿನವರಾಗಲೀ ಫೀಯನ್ನು ಮನ್ನಿಸಿಬಿಡಬಹುದು. (೧೦) ಬಾಲಕರು ಪಾಠಶಾಲೆಗೆ ಕ್ರಮವಾಗಿ ಕಳುಹಿಸಲ್ಪಡುತ್ತಿರುವರೆ? ಇಲ್ಲವೆ? ಎಂಬ ವಿಚಾರಣೆಯನ್ನು ಮಾಡುವುದಕ್ಕಾಗಿ ಸ್ಕೂಲ್ ಅಟೆಂಡೆನ್ಸ್ ಕಮಿಟಿಯವರನ್ನು ಮ್ಯುನಸಿಪಾಲಿಟಿಯವರಾಗಲೀ ಜಿಲ್ಲಾ ಬೋರ್ಡಿನವರಾಗಲೀ ನಿಯಮಿಸಿಕೊಳ್ಳಬಹುದು. ಈ ಕಮಿಟಿಯವರು ಹುಡುಗರು ಶಾಲೆಗೆ ಕ್ರಮವಾಗಿ ಕಳುಹಿಸಲ್ಪಡುತ್ತಿರುವರೆ? ಇಲ್ಲವೆ? ಎಂಬುದನ್ನು ವಿಚಾರಮಾಡಿಕೊಳ್ಳುತ್ತಿರಬೇಕು. (೧೧) ಸರಿಯಾದ ಕಾರಣಗಳಿಲ್ಲದೆ ಬಾಲಕರನ್ನು ಪಾಠಶಾಲೆಗೆ ಕಳುಹಿಸುತ್ತ ಇಲ್ಲವೆಂದು ಕಮಿಟಿಯವರಿಗೆ ತಿಳಿದುಬಂದರೆ, ಅಂಥ ರಕ್ಷಕರಿಗೆ ಮುಂದಾಗಿ ಎಚ್ಚರಿಸಿ, ಅನಂತರ ಅವರನ್ನು ದಂಡಾಧಿಕಾರಿಯದುರಿಗೆ ಕಮಿಟಿಯವರು ವಿಚಾರಣೆಗೆ ಗುರಿಪಡಿಸಬಹುದು. (೧೨) ಅದರ ಮೇಲೆ ದಂಡಾಧಿಕಾರಿಯು ಇಂಥ ದಿವಸ ಹುಡುಗನನ್ನು ಪಾಠಶಾಲೆಗೆ ಕರತಂದಿರಬೇಕು ಎಂದು ಅಪ್ಪಣೆ ಮಾಡಬಹುದು. ಅದರಮೇಲೂ ರಕ್ಷಕನು ನಿಷ್ಕಾರಣವಾಗಿ ನಿರಾಕರಿಸಿಬಿಟ್ಟರೆ, ಕಮಿಟಿಯವರು ಸಂರಕ್ಷಕನನ್ನು ಪ್ರಾಸಿಕ್ಯೂಟ್ ಮಾಡಬಹುದು. (೧೩) ಸಂರಕ್ಷಕನಿಗೆ ಮೊದಲಾವೃತ್ತಿ ಮ್ಯಾಜಿಸ್ಟ್ರೇಟರು ೨ ರೂ. ಅರ್ಥದಂಡವನ್ನು ವಿಧಿಸಬಹುದು. ದ್ವಿಯಾವೃತ್ತಿ ಅಥವಾ ಅನೇಕಾವೃತ್ತಿ ಆಜ್ಞೋಲ್ಲಂಘನೆಯನ್ನು ಮಾಡಿದರೆ ೧೦ ರೂ. ವರೆಗೆ ದಂಡವನ್ನು ವಿಧಿಸಬಹುದು. (೧೪) ಈ ವಿಧಿಯ ೬ನೇ ಸೆಕ್ಷನ್‌ಪ್ರಕಾರ ನಡೆದುಕೊಳ್ಳಲು ತಪ್ಪಿಹೋಗಿ ಯಾರು ಬಾಲಕರನ್ನು ಸಂಬಳಕ್ಕೆ ಇರಿಸಿಕೊಳ್ಳುವರೋ ಅಂಥವರನ್ನು ಕಮಿಟಿಯವರು ಪ್ರಾಸಿಕ್ಯೂಟ್ ಮಾಡಬಹುದು. ೧ ಮೈಲಿಯೊಳಗೆ ಪಾಠಶಾಲೆಯಿಲ್ಲದೆಹೋದರೂ, ಶಾಲೆಗೆ ಹೋಗುವುದಕ್ಕೆ ಕೆಲಸವು ಪ್ರತಿಬಂಧಕವಾಗಿ ಏರ್ಪಡದೆ ಇದ್ದರೂ, ಇತರ ಯಾವವಿಧವಾಗಿಯಾದರೂ ಬಾಲಕರ ವಿದ್ಯಾಭ್ಯಾಸಕ್ಕೆ ಭಂಗವಿಲ್ಲದೆಯಿದ್ದರೆ ಬಾಲಕರನ್ನು ಕೆಲಸಕ್ಕೆ ಸೇರಿಸಿಕೊಳ್ಳಬಹುದು. ಈ ಕಾರಣಗಳ ಹೊರತು ಇತರ ಕಾರಣಗಳಮೇಲೆ ಬಾಲಕರನ್ನು ಕೆಲಸಕ್ಕೆ ಸೇರಿಸಿಕೊಂಡರೆ, ಹಾಗೆ ಸೇರಿಸಿಕೊಂಡವರಿಗೆ ೨೦ ರೂ. ದಂಡವನ್ನು ವಿಧಿಸಬಹುದು. (೧೫) ಏಜಂಟರು ಕೂಡ ಯಜಮಾನರಂತೆಯೇ ದಂಡನೆಗೆ ಪಾತ್ರರಾಗತಕ್ಕವರು. (೧೬) ಲೋಕಲ್ ಗೌರ್ನಮೆಂಟಿನವರು ಅವಶ್ಯಕತೆಯಿದ್ದರೆ ಇಂಥ ಜನವರ್ಗದವರ ಮೇಲೆ ಈ ವಿಧಿಯನ್ನು ವ್ಯವಹಾರಕ್ಕೆ ತರಕೂಡದು ಎಂಬುದಾಗಿ ಹೇಳಿ ಆ ವರ್ಗದವರನ್ನು ಈ ವಿಧಿಯ ನಿರ್ಬಂಧದಿಂದ ತಪ್ಪಿಸಿಬಿಡಬಹುದು. (೧೭) ಗೌರ್ನರ್ ಜನರಲ್‌ರವರ ಆಜ್ಞೆಗೆ ಅಧೀನರಾಗಿ ಲೋಕಲ್ ಗೌರ್ನಮೆಂಟಿನವರು ಮೇಲೆಹೇಳಿದ ವಿಧಿಗಳನ್ನು ಸೆಕ್ಷನ್ ೩ ರ ಪ್ರಕಾರ ಈ ವಿಧಿಯ ವ್ಯಾಪನೆಯನ್ನು ಕುರಿತು ಗೆಜೆಟ್ಟಿನಲ್ಲಿ ಪ್ರಕಟಿಸಿರುವ ಸ್ಥಲಗಳಲ್ಲಿ ಬಾಲಿಕೆಯರ ವಿಷಯದಲ್ಲೂ ಈ ವಿಧಿಯನ್ನು ವ್ಯವಹರಿಸುವಂತೆ ಮಾಡಬಹುದು. (೧೮) ಗೌರ್ನರ್ ಜನರಲ್‌ರವರು ಈ ವಿಧಿಯನ್ನು ಅನುಷ್ಠಾನಕ್ಕೆ ತರಿಸಲು ತಕ್ಕ ವಿಧಿಯನ್ನೇರ್ಪಡಿಸಬಹುದು. ಆ ವಿಧಿಗಳು ಈ ವಿಧಿಯ ಅಭಿಪ್ರಾಯಕ್ಕೆ ಭಂಗವನ್ನು ತರತಕ್ಕವಾಗಿರಕೂಡದು. ಶಾಲೆಗೆ ಬರಲು ತಕ್ಕವರಾಗಿರುವ ಬಾಲಕರ ಅಥವಾ ಬಾಲಿಕೆಯರ ಸಂಖ್ಯೆ ಇಷ್ಟೆಂದು ಗೊತ್ತುಮಾಡಿಕೊಳ್ಳಬಹುದು. ವೆಚ್ಚದ ವಿಷಯದಲ್ಲಿ ಮ್ಯುನಸಿಪಾಲಿಟಿಯವರಿಗಾಗಲೀ, ಜಿಲ್ಲಾಬೋರ್ಡಿನವರಿಗಾಗಲೀ ಇಂಥ ರೀತಿಯಿಂದ ಹಣವನ್ನು ಜತೆಗೊಳಿಸಿ ಕೊಡಬೇಕೆಂದು ಅಪ್ಪಣೆಮಾಡಬಹುದು. (೧೯) ಮ್ಯುನಸಿಪಾಲಿಟಿಯವರು ಅಥವಾ ಜಿಲ್ಲಾಬೋರ್ಡಿನವರು ಗೌರ್ನಮೆಂಟಿನವರ ಅಪ್ಪಣೆಯನ್ನು ಹೊಂದಿ, ಕಮಿಟಿಯನ್ನೇರ್ಪಡಿಸುವುದೇ ಮೊದಲಾದ ವಿಷಯಗಳಲ್ಲಿ ತಕ್ಕ ವಿಧಿಯನ್ನೇರ್ಪಡಿಸಿಕೊಳ್ಳಬಹುದು

ಮೈಸೂರು ಸರ್ಕಾರದ ವ್ಯಯದಲ್ಲಿ ಕಡಿಮೆಮಾಡತಕ್ಕ ವಿಚಾರದಲ್ಲಿ ದಿವಾನರೂ, ಕೌನ್ಸಿಲರುಗಳೂ, ಕಂಟ್ರೋಲರೂ ರೆ॥ ಕಮಿಷನರೂ ರಾಜಧಾನಿಯಲ್ಲಿ ಸಭೆಸೇರಿದ್ದು ಒಂದು ರಿಟ್ರಂಚ್‌ಮೆಂಟ್ ಕಮಿಟಿಯನ್ನು ಸ್ಥಾಪಿಸಿದರೆಂದು ಹಿಂದೆ ತಿಳಿಸಿದ್ದೆವಷ್ಟೆ. ಮ॥ ಎ. ರಂಗಸ್ವಾಮಯ್ಯಂಗಾರರು ರೆವಿನ್ಯೂ ಕಮಿಷನರುದ್ಯೋಗದಿಂದ ಬರುವ ಜೂನ್ ತಿಂಗಳ ಕಡೆಯಲ್ಲಿ ನಿವೃತ್ತರಾಗುವುದರಿಂದ ಈ ಅಧಿಕಾರಸ್ಥಾನವನ್ನು ತಪ್ಪಿಸಿಬಿಡಬೇಕೆಂಬ ಈ ರಿಟ್ರಂಚ್‌ಮೆಂಟ್ ಕಮಿಟಿಯವರಭಿಪ್ರಾಯವನ್ನು ಸರ್ಕಾರದವರು ಅನುಮೋದಿಸಿರುವುದಾಗಿ ಕೇಳುತ್ತೇವೆ. ಇದರಿಂದ ವರ್ಷ ೧ ಕ್ಕೆ ೩೦,೦೦೦ ರೂ. ಗಳುಳಿಯುವುವೆಂದು ಈ ಕಮಿಟಿಯವರು ಹೇಳುತ್ತಾರೆ. ರೆ॥ ಕಮಿಷನರ ಸ್ಥಾನವನ್ನು ತಪ್ಪಿಸುವುದರಿಂದ ಅವರಿಗೆ ವರ್ಷ ೧ ಕ್ಕೆ ಸಲ್ಲುತ್ತಿದ್ದ ಪ್ರಾಯಶಃ ೨೦,೩೦೦ ರೂ. ಗಳೇನೋ ಉಳಿಯುವುವು. ಆದರೆ ಇನ್ನುಳಿದ ೧೯ ಚಿಲ್ಲರೆ ಸಾವಿರ ರೂ. ಗಳ ವೆಚ್ಚ ಕ್ಕೆ ಕಾರಣರಾದ ಇತರ ಕೆಲಸಗಾರರು ಅನ್ಯಥಾ ಉದ್ಯೋ ಗದ ಮೇಲೆ ನಿಯೋಜಿಸಲ್ಪಡಬೇಕಾಗಿರುವುದರಿಂದ ಅದು ಹ ಗೆ ೮೦,೧೦೦ ರೂ. ಗಳುಳಿಯುವುದೋ ಗೊತ್ತಿಲ್ಲ. ಹಿಂದೆ ಏರ್ಪಾಟಾಗಿದ್ದ ರಿಟ್ರಂಚ್‌ಮೆಂಟ್ ಕಮಿಟಿಯವರು ವೆಚ್ಚ ನ್ನು ಕಡಿಮೆಮಾಡಲು ಹೊರಟು, ಜುಡಿಷಿಯಲ್ ಶಾಖೆಯ ಅಲ್ಪ ಸಂಬಳದ ೩೦-೪೦ ಬಡ ಕೆಲಸಗಾರರನ್ನು ತೆಗೆದು ಟ್ಟರು. ಇದರಿಂದ ಸರ್ಕಾರದ ಉದ್ದೇಶವು ಎಷ್ಟ ಮಟ್ಟಿಗೆ ಸಫಲವಾಗಿರುವುದು? ಒಂದೊಂದು ಶಾಖೆಯ ಹೆಚ್ಚು ಸಂಬಳವನ್ನು ಪಡೆಯುವ ಅಧಿಕಾರಿಗಳ ಸಂಖ್ಯೆಯ ಅಧಿಕವಾಗಿ ಇರುತ್ತದೆ. ಅವರಲ್ಲಿ ವೃದ್ಧರಾದವರನ್ನು ನಿ ತ್ತಿಗೊಳಿಸಿ, ಯುವಕರಾಗಿಯೂ, ಸಮರ್ಥರಾಗಿಯೂ ರುವವರಿಗೆ ೨-೩ ಬಾಬುಗಳನ್ನು ವಹಿಸಿ, ಇನ್ನು ಮುಂದೆ ತಿವರ್ಷದಲ್ಲೂ ಹೊಸಹೊಸದಾಗಿ ಅವರ ಸಂಖ್ಯೆಯನ್ನು ಚ್ಚಿಸದೆ ಹೋದಲ್ಲಿ ಸಂಸ್ಥಾನದ ಒಟ್ಟು ವ್ಯಯದಲ್ಲಿ ಎಷ್ಟೊ ಕಡಿಮೆಯಾಗುವುದಲ್ಲದೆ ಕೆಲಸವಿಲ್ಲದೆ ತೂಗಡಿಸುತ್ತಿರುವವ ಗೆ ಸಾಕಷ್ಟು ಉದ್ಯೋಗವು ದೊರೆತು, ಚಟುವಟಿಕೆಯಿಂದ ಲಸಗಳನ್ನು ಮಾಡುವಂತಾಗುವುದು. ಮತ್ತೂ ತಮ್ಮ ಪುರೋ ವೃದ್ಧಿಗವಕಾಶವಿರುವುದೆಂದು ಅವರು ಉತ್ಸಾಹಭರಿತರಾ [illegible] ಸಂಬಳದ ೧೦೦-೨೦೦ ಜನರು ೫೦೦-೧೦೦೦ರ ಸಂಬಳದ ಒಬ್ಬೊಬ್ಬರಿಗೆ ಸರಿಹೋಗುವುದಿಲ್ಲವಾದುದರಿ ಸಾವಿರಾರು ಬಡಗೆಲಸಗಾರರನ್ನು ತೆಗೆದು ಅವರ ಜೀವನ ತೊಂದರೆಯಾಗಿಸುವುದಕ್ಕಿಂತ ಮಿತಿಮೀರಿರುವವರಲ್ಲಿ ೪- ಮಂದಿ ಹೆಚ್ಚು ಸಂಬಳದವರನ್ನು ಕಡಿಮೆಮಾಡುವುದರಿ ಸಾಸಿರಾರು ರೂ. ಗಳುಳಿಯುವುದರಲ್ಲಿ ಸಂದೇಹವಿಲ್ಲವಾ ದುಕಾರಣ ಈ ರಿಟ್ರಂಚ್‌ಮೆಂಟ್ ಕಮಿಟಿಯವರು ಬಹ ಲೋಚನೆಯಿಂದ ಅವಾವ ಶಾಖೆಯಲ್ಲಿ ಎಷ್ಟೆಷ್ಟು

ಹೆಚ್ಚು ಸಂಬಳದ ಉದ್ಯೋಗಗಳು ಮಿತಿಮೀರಿವೆಯೋ ಅವನ್ನು ಕಂಡುಹಿಡಿದು ಕಡಿಮೆಮಾಡುವಂತೆ ಸೂಚಿಸಿದಲ್ಲಿ ಬಡಪಾಯಿಗಳ ಜೀವನಕ್ಕೆ ತೊಂದರೆಯಿಲ್ಲದಂತಾಗುವುದಲ್ಲದೆ ಸರಕಾರದ ಸದುದ್ದೇಶವೂ ಸಾರ್ಥಕವಾಗುವುದು.

ಅದ್ಭುತಭವಿಷ್ಯತ್ಸಾಧನಗಳು.

ಪ್ರಪಂಚದಲ್ಲಿ ಅತ್ಯದ್ಭುತವಾದ ಗ್ರಾಮೋಫೋನ್ ಮೊದಲಾದ ಯಂತ್ರಸಾಧನಗಳನ್ನು ನಿರ್ಮಿಸಿ, ಅಭಿನವ ವಿಶ್ವಾಮಿತ್ರನಂತೆ ಜಗದ್ವಿಖ್ಯಾತರಾಗಿರುವ ಮಿ॥ ಥಾಮಸ್ ಎ. ಎಡಿಸನ್‌ರವರು ಜಗತ್ತಿನಲ್ಲಿ ಮುಂದೆಮುಂದೆ ಮಾನುಷ ಬುದ್ಧಿಶಕ್ತಿಯಿಂದ ಕಲ್ಪಿತವಾಗುವ ರಚನಾ ಚಾತುರ್ಯವನ್ನು ಕುರಿತು ಹೀಗೆ ಭವಿಷ್ಯತ್ತನ್ನು ಹೇಳಿರುತ್ತಾರೆ. ಏನೆಂದರೆ– ಇನ್ನುಮೇಲೆ ಬಟ್ಟೆ, ಗುಂಡಿ, ದಾರ, ಕಾಗದ ರಟ್ಟು ಮೊದಲಾದುವುಗಳನ್ನು ಒಂದು ಯಂತ್ರದ ಬಾಯಿಯ ಮುಂದುಗಡೆಯಲ್ಲಿಟ್ಟರೆ, ಕತ್ತರಿಸಿ ಹೊಲಿದು, ಸಿದ್ಧವಾದ ಉಡುಪುಗಳು ಯಂತ್ರದ ಮತ್ತೊಂದು ಕಡೆಯಿಂದ ಹೊರಕ್ಕೆ ಬಂದುಬಿಡುವುವೆಂತಲೂ, ಮರಕ್ಕೆ ಪ್ರತಿಯಾಗಿ ಉಕ್ಕಿನ ಸಾಮಾನುಗಳೇ ಕಲ್ಪಿಸಲ್ಪಡುವುವೆಂತಲೂ, ಇವು ಮರದ ಸಾಮಾನುಗಳಿಗಿಂತಲೂ ದೃಢವಾಗಿಯೂ ಅಗ್ಗವಾಗಿಯೂ ಇರುವುವೆಂತಲೂ, ಮರದ ಸಾಮಾನು ಯಾವ ರಂಗಿನಲ್ಲಿರುವುದೋ ಆ ರಂಗಿನಲ್ಲೇ ಈ ಲೋಹದ ಸಾಮಾನುಗಳೂ ಇರುವುವೆಂತಲೂ, ಪುಸ್ತಕಗಳ ಕಾಗದಕ್ಕೆ ಪ್ರತಿಯಾಗಿ "ನಿಕಲ್" ಎಂಬ ಲೋಹವು ಉಪಯೋಗಿಸಲ್ಪಡುವುದೆಂತಲೂ, ಈ ಲೋಹದ ಪತ್ರಗಳು ಅಗ್ಗವಾಗಿಯೂ ಗಟ್ಟಿಯಾಗಿಯೂ ಮಗುಚುವುದಕ್ಕೆ ಅನುಕೂಲಿಸುವ ಹಾಳೆಗಳಾಗಿಯೂ ಮಾಡಲ್ಪಡುವುವೆಂತಲೂ, ೨ ಅಂಗುಲ ದಪ್ಪವಾದ ನಿಕಲಿನ ಪುಸ್ತಕದಲ್ಲಿ ೪೦ ಸಾವಿರ ಪುಟಗಳಿರಬಹುದೆಂತಲೂ ಇಷ್ಟು ದೊಡ್ಡ ಪುಸ್ತಕವು ೧ ಪೌನಿನ ಭಾರಮಾತ್ರವಾಗಿರುವುದೆಂತಲೂ, ಈಗ ಇರುವ ವ್ಯವಸಾಯಸಾಧನೆಗಳಿಗೆ ಪ್ರತಿಯಾಗಿ ವಿದ್ಯುಚ್ಛಕ್ತಿಯಿಂದ ನಡೆಯಿಸಲ್ಪಡುವ ದೊಡ್ಡದೊಡ್ಡ ಯಂತ್ರಗಳು ಉಪಯೋಗಿಸಲ್ಪಡುವುವೆಂತಲೂ, ಆಗ ಬೇಸಾಯಗಾರರು ಭೂಸಾರಲಕ್ಷಣವನ್ನೂ ವೃಕ್ಷಶಾಸ್ತ್ರವನ್ನೂ ತಿಳಿದುಕೊಂಡವರಾಗಿರುವರೆಂತಲೂ, ಒಂದು ಕಡೆಯಲ್ಲಿ ಕುಳಿತು ಒಂದು ಸಣ್ಣ ತಿರುಪನ್ನು ತಿರುವಿದ ಕೂಡಲೇ ಬೇಸಾಯದ ಕೆಲಸವೆಲ್ಲವೂ ಜರುಗುವುದೆಂತಲೂ, ಸ್ವಲ್ಪಕಾಲದಮೇಲೆ ಭಂಗಾರವು ಕೂಡ ಕಲ್ಪಿತವಾಗುವುದೆಂತಲೂ ಆ ಭಂಗಾರಕ್ಕೆ ಈಗಿನಷ್ಟು ಬೆಲೆಯಿಲ್ಲದೆ ಹೋಗುವುದೆಂತಲೂ ಹೇಳಿರುತ್ತಾರೆ.

LECTURE.

DR. M. C. NANJUNDA RAO B. A., M. B. C. M. of Madras will deliver a lecture on the *Present Theosophic Controversy* in the Town Hall Mysore, on the evening of Wednesday the 12th Inst. The public are cordially invited to attened the lecture.

K. CHENDRASEKARIYA,
Advocate.

ಒಳದೇಶದ ವೃತ್ತಾಂತ.

ಚೆನ್ನರಾಯಪಟ್ಟಣ ಮತ್ತೂ ಅರಸೀಕೆರೆ ಮಾರ್ಗಗಳು ಕೂಡುವ ಸ್ಥಳದಲ್ಲಿ ಕಾರಿಯಸುಂಕವನ್ನು ಬರುವ ಜುಲೈ ತಾ॥ ೧ ರಿಂದ ತೆಗೆದುಕೊಳ್ಳಲು ಸರ್ಕಾರದ ಅಪ್ಪಣೆಯಾಗಿರುತ್ತದೆ.

ದಿವಾನರು ಶ್ರೀಮನ್ಮಹಾರಾಜರ ದರ್ಶನಕ್ಕಾಗಿ ಕಳೆದ ತಾ॥ ೮ ರ ಮೇಲು ಬಂಡಿಯಲ್ಲಿ ರಾಜಧಾನಿಗೆ ದಯಮಾಡಿಸಿದರು. ಮತ್ತು ತಾ॥ ೧೨ ಅಥವಾ ೧೩ ರಲ್ಲಿ ಮರಳಿ ಬೆಂಗಳೂರಿಗೆ ಹಿಂತಿರುಗಿ ಹೊರಡಬಹುದಾಗಿ ತೋರುತ್ತದೆ.

ಡೆಪ್ಯುಟಿ ಕಮಿಷನರುಗಳಾದ ಮ॥ ರಾ॥ ಬಿ. ಜಿ. ಕುಮಾರಸ್ವಾಮಿ ನಾಯಕರು ಬೆಂಗಳೂರಿಂದ ಹಾಸನಕ್ಕೂ, ಶ್ರೀಕಂಠೇಶ್ವರಯ್ಯರ್ ರವರು ಕೋಲಾರದಿಂದ ಬೆಂಗಳೂರಿಗೂ, ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು ಕಡೂರಿಂದ ಕೋಲಾರಕ್ಕೂ ವರ್ಗವಾಗುವ ಸಂಭವವಿದೆಯೆಂದು ಡೆ. ಕ್ರೊ. ತಿಳಿಸುತ್ತದೆ.

ಮದ್ರಾಸಿನಲ್ಲಿ ಪ್ರಸಿದ್ಧ ವೈದ್ಯರಾದ ಡಾ॥ ಎಂ. ಸಿ. ನಂಜುಂಡರಾಯರು ದಿವ್ಯಜ್ಞಾನ ಸಭಾ ವಿಚಾರದಲ್ಲಿ ಪ್ರಕೃತ ಇರತಕ್ಕ ವಿವಾದಾಂಶವನ್ನು ಕುರಿತು ಬರುವ ತಾ॥ ೧೨ನೇ ಬುಧವಾರ ಸಾಯಂಕಾಲ ರಾಜಧಾನಿಯ ಟವುನ್‌ಹಾಲಿನಲ್ಲಿ ಉಪನ್ಯಾಸವನ್ನು ಮಾಡುವವರಾದುದರಿಂದ ಎಲ್ಲರೂ ದಯಮಾಡಿಸಬೇಕಾಗಿ ಪ್ರಾರ್ಥನೆ.

ಕಾನಕಾನಹಳ್ಳಿ ತಾ॥ ಹಾರೋಹಳ್ಳಿಯ ನಾಟಕ ಸಂಘದ ಮ್ಯಾನೇಜರ್ ನರಸಿಂಹಯ್ಯನವರು ತಮ್ಮ ಸಂಘದಲ್ಲಿದ್ದ ಕೃಷ್ಣಪ್ಪ ನೆಂಬ ಬ್ರಾಹ್ಮಣ ಯುವಕನು ಕಳೆದ ತಾ॥ ೨೦ ರಿಂದ ತಪ್ಪಿಸಿಕೊಂಡು ಹೋಗಿರುತ್ತಾನೆ. ಮತ್ತೂ ಅನೇಕ ಬೆಲೆಬಾಳುವ ಉಡುಪುಗಳು ಮಾಯವಾಗಿವೆ ಎಂದು ಬೆಂಗಳೂರು ಯಲಹಂಕ ಪೋಲಿಸು ಠಾಣಕ್ಕೆ ವರ್ದಿಯನ್ನು ಕೊಟ್ಟಿರುತ್ತಾರೆ.

ಮ॥ ರಾ॥ ಗಳಾದ ರೆವಿನ್ಯೂ ಕಮಿಷನರು ರಾ॥ ಬ॥ ಎ. ರಂಗಸ್ವಾಮಯ್ಯಂಗಾರರರು, ರೆವಿನ್ಯೂ ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟ್ ಕೆ. ರಾಮಸ್ವಾಮಯ್ಯಂಗಾರರು, ಸೈನ್ಯಶಾಖೆಯ ಅಸಿಸ್ಟೆಂಟ್ ಸೆಕ್ರೆಟರಿ ಮ॥ ಎಚ್. ಡಾರ್ ರವರು ಮತ್ತೂ ಅ॥ ಕಮಿಷನರ್ ಟಿ. ಕೆ. ಸುಂದರರಾಜಯ್ಯಂಗಾರರು ಬರುವ ಜುಲೈ ತಾ॥ ೧ ರಾರಭ್ಯ ಉದ್ಯೋಗದಿಂದ ನಿವೃತ್ತಿಯಾಗಲು ಸರ್ಕಾರದ ಅಪ್ಪಣೆಯಾಗಿರುತ್ತದೆ. ಇನ್ನೂ ಕೆಲ ಅಧಿಕಾರಿಗಳು ನಿವೃತ್ತಿಯಾಗುವ ವಿಚಾರವು ಇಷ್ಟರಲ್ಲೇ ಹೊರಬೀಳಬಹುದು.

ಈ ತಾ॥ ೧೨ ನೇ ಬುಧವಾರ ಬೆಳಗ್ಗೆ ೩ ಘಂಟೆಯೊಳಗೆ ಶ್ರೀಮನ್ ಮಹಾರಾಜ ಸಹೋದರರು ಸೆಕ್ರೆಟರಿಯವರೊಡನೆ ಮೋಟಾರು ಬಂಡಿಯಲ್ಲಿ ಉದಕಮಂಡಲಕ್ಕೆ ದಯಮಾಡಿಸುವರು. ಮತ್ತೂ ಮಹಾಮಾತೃಶ್ರೀಯವರೂ, ಮಹಾರಾಣಿಯವರೂ ೯ ಗಂಟೆಗೆ ಹೆಚ್ಚುಗಟ್ಟಲೆಯ ರೈಲುಬಂಡಿಯಲ್ಲಿ ಪ್ರಯಾಣಮಾಡಿ ಬೆಂಗಳೂರನ್ನು ಸಾಯಂಕಾಲ ೪॥ ಘಂಟೆಗೆ ಸೇರಿ ಅಲ್ಲಿಂದ ರಾತ್ರಿ ೭॥ ಘಂಟೆಗೆ ದಂಡಿನಲ್ಲಿ ಮದ್ರಾಸು ಬಂಡಿಯನ್ನು ಹತ್ತಿ ಈರೋಡು ಮಾರ್ಗವಾಗಿ ಮಾರನೆಯ ಬೆಳಗ್ಗೆ ಉದಕಮಂಡಲವನ್ನು ತಲುಪುವರು.

ಕಳೆದ ತಾ॥ ೬ ರಲ್ಲಿ ರಾಜಧಾನಿಯ ಹೆಲ್ತಾಫೀಸು ಹೆ॥ ಕ್ಲಾರ್ಕ್ ಮ॥ ಎ. ಬಸಪ್ಪನವರು ಚಾಮರಾಜನಗರದ ತಾ॥ ಶಿರಸ್ತೇದಾರರಾಗಿ ವರ್ಗವಾಗಿ ಹೋದ ಮ॥ ಅಬ್ದುಲ್ ಕಾಲಕ್‌ರವರನ್ನು ತಮ್ಮ ಗೃಹಕ್ಕೆ ಬರಮಾಡಿಕೊಂಡು ಗ್ರಾಮಫೋನ್ ಹಾಡುಗಾರಿಕೆಯಿಂದಲೂ, ಅಲ್ಪಹಾರದಿಂದಲೂ, ಗಂಧ ಪುಷ್ಪ ತಾಂಬೂಲಗಳಿಂದಲೂ ಸತ್ಕರಿಸಿ ಅವರ ಪುರೋವೃದ್ಧಿಯನ್ನು ಕೋರಿ ತಮ್ಮ ವಿಶ್ವಾಸವನ್ನು ಪ್ರದರ್ಶಿಸಿದರು. ಈ ಸಮಾರಂಭಕ್ಕೆ ಹೆಲ್ತಾಫೀಸಿನ ಕೆಲಸಗಾರರೆಲ್ಲರೂ ಬಂದಿದ್ದು ಮ॥ ಕಾಲಕ್ ರವರಮೇಲೆ ತಮಗಿದ್ದ ವಿಶ್ವಾಸವನ್ನು ಪ್ರದರ್ಶಿಸಿದರು.

ಕಳೆದ ಶುಕ್ರವಾರ ಮೇಲುಕೋಟೆಯಲ್ಲಿ ಶ್ರೀ ವರದರಾಜಸ್ವಾಮಿಯವರ ರಥೋತ್ಸವವು ಅತಿ ವೈಭವದಿಂದ ನಡೆಯಿತು. ಸಾವಿರಾರು ಭಕ್ತರು ಎಲ್ಲ ಕಡೆಯಿಂದಲೂ ಬಂದು ತುಂಬಿದ್ದರು. ಇದರಿಂದ ೧-೨ ದಿನಗಳು ರೈಲುಬಂಡಿಗಳಲ್ಲಿ ಸ್ಥಳಸಂಕೋಚದಿಂದ ಜನರು ಕುರಿ ಹಿಂಡಿನಂತೆ ತುಂಬಲ್ಪಡುತ್ತಿದ್ದರು. ನೆನ್ನೆಯದಿನ ನಂಜನಗೂಡಿನಲ್ಲಿ ಶ್ರೀ ನಂಜುಂಡೇಶ್ವರಸ್ವಾಮಿಯ ಪಂಚ ರಥಗಳು ಅತಿ ವಿಜೃಂಭಣೆಯಿಂದ ಹರಿದುವು. ಇದಕ್ಕಾಗಿ ಶನಿವಾರ ಮತ್ತೂ ಭಾನುವಾರ ಬೆಳಗ್ಗೆ ನಿತ್ಯಗಟ್ಟಲೆಯ ರೈಲು ಬಂಡಿಗಳಲ್ಲಿ ಸ್ಥಳ ಸಾಲದಿದ್ದುದರಿಂದ, ಹೆಚ್ಚುಗಟ್ಟಲೆಯ ಬಂಡಿಗಳು ಬಿಡಲ್ಪಟ್ಟುವು. ಶ್ರೀಮನ್ಮಹಾರಾಜರ ಮತ್ತೂ ರಾಣಿವಾಸದವರ ಸ್ವಾರಿಯೂ ಮೋಟಾರು ಬಂಡಿಯಲ್ಲಿ ಚಿತ್ತೈಸಿ ರಥೋತ್ಸವವನ್ನು ಪರಾಂಬರಿಸಿಕೊಂಡು ಸಾಯಂಕಾಲ ದಯಮಾಡಿಸಿತು.

ರಾಜಧಾನಿಯಲ್ಲಿರುವ ಉಪ್ಪಿನಕೇರಿಮಠದಲ್ಲಿ ಕಳೆದ ಸೋಮವಾರ–ಶುಕ್ರವಾರ, ರಾತ್ರಿಗಳಲ್ಲಿ ಗಿರಿಜಾಕಲ್ಯಾಣ ಶಬರಶಂಕರವಿಲಾಸ ಕಥಾ ಕಾಲಕ್ಷೇಪವು ವೇ॥ ಶಿವಕಥಾ ಶಿವಯ್ಯಶಾಸ್ತ್ರಿಗಳವರಿಂದ ಪ್ರೌಢವಾಗಿಯೂ, ನವರಸಯುಕ್ತವಾಗಿಯೂ ಮಾಡಲ್ಪಟ್ಟಿತು. ಶ್ರೋತೃಜನವೃಂದವು ವಿಶೇಷವಾಗಿ ಬೀದಿಯ ತುಂಬಾ ಸೇರುತ್ತ, ಕಥೆಯನ್ನು ಮಾಡುವುದರಲ್ಲಿ ಪ್ರಸಂಗೌಚಿತ್ಯ–ವಾಕ್ಸ್ಫುರಿ–ವಿಸ್ತಾರವಾದ ಕಂಠಧ್ವನಿ–ಶ್ರುತಿತಾಳ ಗಾನ ವಿದ್ಯೆ ಮೊದಲಾದುವುಗಳ ಸಂಬಂಧವಾಗಿ ಶಾಸ್ತ್ರಿಗಳಿಗಿರುವ ಅಸಾಧಾರಣವಾದ ಕೌಶಲ್ಯವನ್ನು ಕುರಿತು ಸಂತೋಷ ಪ್ರದರ್ಶನವನ್ನು ಮಾಡುತ್ತಿದ್ದರು. ಶುಕ್ರವಾರದ ದಿವಸ ಮಠದಲ್ಲಿ ಒಂದು ಗಣಾರಾಧನೆಯೂ ಸಹ ವಿತರಣೆಯಿಂದ ನಡೆಸಲ್ಪಟ್ಟಿತು. ಯಜಮಾನ್ ಕಟೇ ಅಂಗಡಿ ಸಿದ್ದಣ್ಣನವರು, ಶೆಟ್ಟರು ತಮ್ಮಣ್ಣನವರು ಈ ಪ್ರಮುಖರ ಪ್ರೋತ್ಸಾಹದಿಂದ ಅವರ ಕುಲಬಾಂಧವರೆಲ್ಲರೂ ಸೇರಿ ಈ ಕಾರ್ಯವನ್ನು ಶ್ಲಾಘನೀಯವಾಗಿ ನಡೆಸಿದರೆಂದು ಕೇಳಿ ಸಂತೋಷಿಸುತ್ತೇವೆ.

ಪ್ರಪಂಚವನ್ನೆಲ್ಲಾ ಬೈಸಿಕಲ್ ಬಂಡಿಯಮೇಲೆ ಸ್ವಾರಿಮಾಡಿಕೊಂಡು ಸುತ್ತಿಬರಲು ಹೊರಟಿರುವ ಸರ್ವಿಯಾ ದೇಶದ ಕೌಂಟ್‌ಮಿಲೋರಾಡ್ ರೇಚಿವಿಚ್ ಎಂಬ ೨೧ ವರ್ಷ ವಯಸ್ಸಿನ ವಿದ್ಯಾರ್ಥಿಯು ಕಳೆದ ತಾ॥ ೪ ರಲ್ಲಿ ಬೆಂಗಳೂರಿಗೆ ಬಂದು ಅಲ್ಲಿಂದ ಶ್ರೀಮನ್ಮಹಾರಾಜರ ದರ್ಶನವನ್ನು ತೆಗೆದುಕೊಳ್ಳುವುದಕ್ಕಾಗಿ ತಾ॥ ೫ ರಲ್ಲಿ ರಾಜಧಾನಿಗೆ ಬಂದಿದ್ದನು. ಈತನು ಬೈಸಿಕಲ್ಲು ಸ್ವಾರಿಯಿಂದ ಪ್ರಪಂಚವನ್ನೆಲ್ಲಾ ಸುತ್ತಿ ಚಿತ್ರಸಹಿತವಾದ ಅಂಚೆಯ ಕಾರ್ಡುಗಳನ್ನು ಮಾರಿ ಅದರುತ್ಪತ್ತಿಯಿಂದ ತನ್ನ ಜೀವನವನ್ನು ಮಾಡಿಕೊಂಡು ಬಂದಲ್ಲಿ [illegible] ರೂ. ಗಳ ಬಹುಮಾನವು ಕೊಡಲ್ಪಡುವುದೆಂದು ಗೊತ್ತಾಗಿರುವುದು. ಈ ಯುವಕನು ಈ ಪಂದ್ಯಕ್ಕೊಪ್ಪಿ ೧೯೧೦ ನೇ ಮಾರ್ಚಿ ತಾ॥ ೧೨ ರಲ್ಲಿ ಬೆಲಗ್ರೇಡನ್ನು ಬಿಟ್ಟು ಇಟಲಿ, ಫ್ರಾನ್ಸ್, ಇಂಗ್ಲೆಂಡ್, ಜರ್ಮ, ಚೈನ, ರಷ್ಯಾ, ಬರ್ಮಾ ಮೊದಲಾದ ಸ್ಥಳಗಳಲ್ಲಿ ಸಂಚಾರಮಾಡಿಕೊಂಡು ಭರತಖಂಡಕ್ಕೆ ಬಂದಿರುತ್ತಾನೆ. ಪಾಶ್ಚಾತ್ಯರ ಧೈರ್ಯ ಸಾಹಸಾದಿಗಳನ್ನೆಷ್ಟು ಹೊಗಳಿದರೂ ತೀರದು.

ವರ್ತಮಾನ ಸಂಗ್ರಹ.

ಕಾಶೀಪಟ್ಟಣದಲ್ಲಿ ಪ್ಲೇಗು ರೋಗವು ತುಂಬಾ ವ್ಯಾಪಿಸಿಕೊಂಡಿದೆ.

ಈ ತಿಂಗಳು ತಾ॥ ೪ ರಲ್ಲಿ ಶ್ರೀ ಕಾಶೀ ಮಹಾರಾಜರು ಸಿಂಹಾಸನಾರೋಹಣವನ್ನು ಮಾಡಿದರು.

ಕಳೆದ ವರ್ಷ ಭರತಖಂಡದಿಂದ ಸಂಯುಕ್ತ ರಾಜ್ಯಗಳಿಗೆ ೮೯೫೦೦೦ ಟನ್ ಗೋಧುಮೆಯು ಸಾಗಿಹೋಯಿತು.

೩ ವರ್ಷದಿಂದ ಆ ಪ್ರಾಂತಗಳಲ್ಲಿ ಕಾಣಿಸಿಕೊಳ್ಳದಿದ್ದ ಪ್ಲೇಗು ರೋಗವು ಈ ಸಲ ಪುನೆ ಪಟ್ಟಣದಲ್ಲಿ ಕಾಣಿಸಿಕೊಂಡಿದೆ.

ತಿರುನಲ್ವೇಲಿಯ ಸಬ್ ಜಡ್ಜರು ಮನೆಯಲ್ಲಿ ಬೆಳಗಿನ ೯ ಘಂಟೆಯ ಹೊತ್ತಿನಲ್ಲಿ ಜಡ್ಜ್‌ಮೆಂಟನ್ನು ಬರೆಯುತ್ತಾ ಕುಳಿತಿರುವಾಗಲೇ ಅಕಸ್ಮಾತ್ ದೈವಾಧೀನರಾದರು

ಅಸ್ಸಾಂ ಪ್ರಾಂತಕ್ಕೆ ಸೇರಿದ ಗೋಲ್ಪರಾ ಜಿಲ್ಲೆಯಲ್ಲಿ ಬಿರುಗಾಳಿ ಮಳೆಗಳ ಹಾವಳಿಯಿಂದ ಅಭಯಪುರಿ ಎಂಬ ಗ್ರಾಮವೇ ಹಾಳಾಗಿದೆ. ತಂತಿಯ ಕಂಬಗಳೆಲ್ಲಾ ಉರುಳಿ ಬಿದ್ದಿವೆ.

ಭರತಖಂಡಕ್ಕೆ ದಯಮಾಡಿಸುವಾಗ್ಗೆ ತಮ್ಮ ಈಜಿಪ್ಟಿನಲ್ಲಿ ಇಳಿದಿದ್ದು ದಯಮಾಡಿಸಬೇಕೆಂದು ಅಲ್ಲಿನ ಕೆಡೀವ್ (ಪ್ರಭುವು) ಚಕ್ರವರ್ತಿ ದಂಪತಿಗಳಿಗೆ ಆಹ್ವಾನ ಪತ್ರಿಕೆಯನ್ನು ಬರೆದುಕೊಂಡಿದ್ದಾರೆ.

ಬ್ರಿಕ್ವೆಟ್ ಎಂಬ ಆಕಾಶ ನಾವಿಕನು ೧೧ ಜನರನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ೨ ಮೈಲಿ ದೂರ ಪ್ರಯಾಣ ಮಾಡಿ ಬಂದನು. ಈವರೆಗೆ ಮತ್ತಾರೂ ಇಷ್ಟೊಂದು ಜನರನ್ನು ಕರೆದುಕೊಂಡು ಹೋಗಿರಲಿಲ್ಲ.

ಲಂಡನ್ನಿನ "ಡೇಲಿ ಮೇಲ್" ಎಂಬ ಪತ್ರಿಕಾ ಸಂಪಾದಕರು ಜುಲೈ ತಾ॥ ೨೨ ರಿಂದ ಆಗಸ್ಟ್ ತಾ॥ ೫ ರೊಳಗೆ ೧೦೦೦ ಮೈಲಿ ಪ್ರಯಾಣವನ್ನು ಆಕಾಶವಿಮಾನದಲ್ಲಿ ಕುಳಿತು ಸಂಚರಿಸಿಕೊಂಡು ಬಂದವರಿಗೆ ೧೫೦೦೦೦ ರೂ. ಗಳನ್ನು ಬಹುಮಾನಿಸುತ್ತೇವೆಂದು ಪ್ರಸಿದ್ಧಿಪಡಿಸಿರುತ್ತಾರೆ. ಈಗ್ಗೆ ಕೊಂಚಕಾಲದ ಹಿಂದೆ ಇದೇ ಪತ್ರಿಕೆಯವರು ೨೦೦ ಮೈಲಿ ಪ್ರಯಾಣಮಾಡಿ ಬಂದವರಿಗೆ ೧೫೦೦೦೦ ರೂಪಾಯಿಗಳನ್ನು ಬಹುಮಾನಿಸಿದ್ದರು.

ಕಳೆದ ತಾ॥ ೫ ರಲ್ಲಿ ಈಸ್ಟ್ ಇಂಡಿಯಾ ರೈಲು ಮಾರ್ಗದಲ್ಲಿ ಒಂದು ಸೇತುವೆ ಹತ್ತಿರ ಯಾರೋ ತುಂಟರು ಕಂಬಿಯನ್ನು ಕಿತ್ತುಹಾಕಿದ್ದುದರಿಂದ ಬಂಡಿಯು ಬಿದ್ದುಹೋಗಿ ಪ್ರಯಾಣಿಕರಲ್ಲಿ ಒಬ್ಬ ಹಿಂದೂ ಸ್ತ್ರೀಯು ಸತ್ತಳು. ಮತ್ತೂ ೩ ಜನ ಐರೋಪ್ಯರೂ ಒಬ್ಬ ಹಿಂದೂ ಸ್ತ್ರೀಯೂ ಘೋರಾ ಗಾಯವಡೆದರು. ಅಲ್ಲದೆ ಮೂವರು ಐರೋಪ್ಯರೂ ೨೦ ಭಾರತೀಯರೂ ಕೊಂಚ ಪೆಟ್ಟನ್ನು ತಿಂದರು. ಬೇರೊಂದು ಬಂಡಿಯು ಬಂದು ಪ್ರಯಾಣಿಕರನ್ನೊಯ್ದಿತು.

ಕಲ್ಕತ್ತಾದಲ್ಲಿ ತಟಿಗಂಜಿಗೆ ಸೇರಿದ ಮೌಲ್ವಿನಾತ್ ಬೀದಿಯಲ್ಲಿರುವ ಒಂದು ಉದ್ಯಾನವನದೊಳಗೆ ಆನಂದರಾಯ್ ಎಂಬ ಬಂಗಾಳಿಯ ಮನೆಗೆ ಪೋಲೀಸು ಡೆ॥ ಕಮಿಷನರು ಮೊದಲಾದವರು ಮುತ್ತಿಗೆಯನ್ನು ಹಾಕಿ ಒಳಗೆ ನುಗ್ಗಿ ಶೋಧಿಸುವಲ್ಲಿ ಛಾಯಾಗ್ರಾಹಿ ಯಂತ್ರ (ಫೋಟೋಗ್ರಾಫ್) ಸಹಾಯದಿಂದ ಸರ್ಕಾರಿಯ ೧೦೦೦ ರೂ. ಗಳ ನೋಟನ್ನು ಮಾಡುವ ಯಂತ್ರಗಳೂ ಅನೇಕ ಸಾವಿರ ರೂ. ಗಳ ನೋಟುಗಳೂ ದೊರೆದುವು. ನೋಟುಗಳು ಸರಿಯಾದ ಸರ್ಕಾರಿಯ ನೋಟುಗಳಿಗೆ ಕೊಂಚವೂ ವ್ಯತ್ಯಾಸವಿಲ್ಲದಂತೆ ಬಹು ಚಮತ್ಕಾರದಿಂದ ಮಾಡಲ್ಪಟ್ಟಿರುವುವು. ಆದರೆ ಇವು ವಿಶೇಷವಾಗಿ ಉಪಯೋಗಕ್ಕೆ ಬಂದಂತಿಲ್ಲವು. ಈ ಮನೆಯು ಅರಮನೆಯೋಪಾದಿಯಲ್ಲಿದ್ದು ಒಳಗೆ ಅನೇಕ ಕೊಠಡಿಗಳಿರುವುವು. ಇಲ್ಲಿ ವಾಸವಾಗಿದ್ದ ಆನಂದರಾಯನೂ ಮತ್ತೂ ಅವನಬಂಧು ಒಬ್ಬನೂ ಸೆರೆ ಹಿಡಿಯಲ್ಪಟ್ಟಿರುವರು.

ಸಂಗೀತ ವಿದ್ವಾಂಸರಾದ ಇನಾಯತ್‌ಖಾನರವರು ಮೊನ್ನೆತಾನೇ ಕೊಲಂಬಿಯಾ ವಿದ್ಯಾಪೀಠದ ಉಪಾಧ್ಯಾಯ ಪ್ರೌಢವಿದ್ಯಾಲಯದಲ್ಲಿ ಹಿಂದು ಗಾನವಿದ್ಯೆಯನ್ನು ಕುರಿತು ಒಂದು ಉಪನ್ಯಾಸವನ್ನು ಮಾಡಿದರು.

ಬರುವ ಜೂನ್ ತಿಂಗಳಲ್ಲಿ ಇಂಗ್ಲೆಂಡಿನಲ್ಲಿ ಕಿರೀಟಧಾರಣ ಮಹೋತ್ಸವವು ನಡೆಯುವ ಸಂದರ್ಭದಲ್ಲಿ ಚಕ್ರವರ್ತಿ ದಂಪತಿಗಳು ಲಂಡನ್ ಪಟ್ಟಣದ ಬೀದಿಗಳಲ್ಲಿ ಉತ್ಸವಗೊಳ್ಳುವುದೇ ಬಹುಶಃ ೩೦ ಮೈಲಿಗಳ ದೂರವಾಗುವುದಂತೆ.

ದಿಲ್ಲಿಯಲ್ಲಿ ಪ್ಲೇಗು ರೋಗವು ವಿಪರೀತವಾಗಿ ವ್ಯಾಪಿಸಿರುವುದರಿಂದ ಜನರು ಮನೆ ಮಠಗಳನ್ನು ಬಿಟ್ಟು ತೋಟ ಹೊಲಗಳಲ್ಲಿ ವಾಸಮಾಡುತ್ತಲಿದ್ದಾರೆ. ಪ್ಲೇಗಿನ ನಿವಾರಣೆಗಾಗಿ ಸರ್ಕಾರದವರು ಅತ್ಯಂತ ಸಾಹಸಮಾಡುತ್ತಲಿದ್ದಾರೆ.

ಮೊನ್ನೆತಾನೇ ಇಂಗ್ಲಂಡಿನಲ್ಲಿ ೩೪ಲಕ್ಷ ರೂ. ಗಳಿಗೆ ದಿವಾಳಿಯಾದ ಚರ್ಮದ ವ್ಯಾಪಾರಿಗಳು ಬ್ರೌನ್ ಬ್ರದರ್ಸ್ ಎಂಬ ಇಬ್ಬರು ಸಹೋದರರು ಬುಚ್ ಬ್ರದರ್ಸ್ ಕಂಪೆನಿಯವರನ್ನು ೨೫೩೦ ಪೌನಿಗೆ ಮೋಸಗೊಳಿಸಿದುದಕ್ಕಾಗಿ ಸೆರೆಹಿಡಿಯಲ್ಪಟ್ಟಿರುತ್ತಾರೆ.

ಮದರಾಸು ಒಬ್ಬಿಬ್ಬರು ವರ್ತಕರು ದಿವಾಳಿಯಾದರು. ಇದರಿಂದ ವ್ಯಾಪಾರಿಗಳಿಗೆ ಸಾಲಾ ಕೊಡುತ್ತಿದ್ದ ಗುಜರಾತಿ ಸಾಹುಕಾರರೆಲ್ಲಾ ದಿಗಲುಬಿದ್ದು ವರ್ತಕರ ಮನೆಬಾಗಿಲಿಗೆ ಸುತ್ತುತ್ತ ತಾವು ಕೊಟ್ಟಿರುವ ಹಣವನ್ನೆಲ್ಲಾ ಎತ್ತಿಕೊಳ್ಳುವುದಕ್ಕೆ ನಿರ್ಬಂಧಪಡಿಸುತ್ತಿರುವರು.

ಬೊಂಬಾಯಿಯಿಂದ ದಿಲ್ಲಿಗೆ ನೇರವಾಗಿ ಹಾಕಲ್ಪಡುತಿದ್ದ ಲೋಹ ಮಾರ್ಗದಲ್ಲಿ ಕಳೆದ ಏಪ್ರೀಲ್ ತಾ॥ ೧ ರಿಂದ ಬಂಡಿಗಳ ಸಂಚಾರವು ಆರಂಭಿಸಲ್ಪಟ್ಟಿತು. ಈ ಮಾರ್ಗವು ಗುಜರಾತ್, ಬರೋಡಾ ಸಂಸ್ಥಾನ, ಮಧ್ಯ ಇಂಡಿಯಾ ರಾಜಪುತಾನದಮೇಲೆ ಹಾದು ಹೋಗುವುದು.

ದಕ್ಷಿಣ ಕನರಾ ಜಿಲ್ಲೆಗೆ ಸೇರಿದ ಉಪ್ಪಿನಂಗಡಿ ಪ್ರಾಂತದಲ್ಲಿ ಹುಲಿಗಳ ಹಾವಳಿಯಿಂದ ಅನೇಕ ಪಶುಗಳು ಕೊಲ್ಲಲ್ಪಡುತ್ತಿದ್ದುದರಿಂದ ಆ ದುಷ್ಟಮೃಗಗಳನ್ನು ಕೊಲ್ಲುವ ಕೆಲಸಕ್ಕಾಗಿ ೩ ತಿಂಗಳವರೆಗೆ ಉದಕಮಂಡಲದ ಒಬ್ಬ ಐರೋಪ್ಯರು ಗೌರ್ನಮೆಂಟಿನಿಂದ ನಿಯಮಿಸಲ್ಪಟ್ಟಿದಾರೆ.

ಕೊಯಮತ್ತೂರಿನಲ್ಲಿ ರಸೂಲ್‌ಖಾನ್ ಎಂಬುವನು ತನ್ನ ಸಿಗರೇಟುಗಳಿಗೆ ಮತ್ತೊಂದು ಕಂಪೆನಿಯ ವ್ಯಾಪಾರದ ಗುರುತನ್ನು ಹಾಕಿ ಮಾರಾಟಮಾಡಿದ ತಪ್ಪಿತದಿಂದ ದಂಡಾಧಿಕಾರಿಯು ಆತನಿಗೆ ೨೦೦ ಅರ್ಥ ದಂಡ ತಪ್ಪಿದರೆ ೨ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ದಿಲ್ಲಿ ದರ್ಬಾರಿನಲ್ಲಿ ಚಕ್ರವರ್ತಿಯವರ ಬಿಡಾರದಬಳಿ ಇಳಿದುಕೊಳ್ಳುವುದಕ್ಕೆ ಹಲವುಮಂದಿ ಪಾರ್ಲಿಮೆಂಟ್ ಸಭಾಸದರು ಮೊದಲಾದವರು ಬಿನ್ನವತ್ತಳೆಯನ್ನು ಹಾಕಿಕೊಂಡಿರುವರಂತೆ. ಆದರೆ ಇಷ್ಟರೊಳಗೇ ಸ್ವಲ್ಪ ಹೆಚ್ಚು ಕಡಿಮೆ ಬಿಡಾರಗಳಿಗೆಲ್ಲಾ ಜನರು ಭರ್ತಿಯಾಗಿ ಏರ್ಪಟ್ಟಿರುವರು.

೧೩ ವರ್ಷಕ್ಕೊಳಪಟ್ಟ ಕನ್ಯೆಗೆ ೨೪ ವರ್ಷದೊಳಗಿನ ಪುರುಷನಿಂದ ಹುಟ್ಟಿದ ಮಗುವು ಧೀರ್ಘಕಾಲ ಬದುಕುವುದಿಲ್ಲವೆಂದೂ ಒಂದುವೇಳೆ ಬದುಕಿದರೂ ಬಹು ಹೀನವಾಗಿರುವುದೆಂದೂ ಸುಶ್ರುತ ಎಂಬ ಗ್ರಂಥದಲ್ಲಿ ಧನ್ವಂತರಿಯು ಹೇಳಿರುವನು ಎಂಬದಾಗಿ ಅಮೇರಿಕಾ ದೇಶದ ಆರೋಲೈವಾಲಸ್ ಎಂಬಾಕೆಯು ಹೇಳುವಳು.

ಬಲು ದೊಡ್ಡ 'ತಲೆಯುಳ್ಳವನಾಗಿದ್ದ ಜೋರ್ಜ್‌ರೀಸ್ ಎಂಬ ರೈತನೊಬ್ಬನು ತನ್ನ ತಲೆಯನ್ನು ರೋಗಲಕ್ಷಣ ಬೋಧಕ ಪಾಠಶಾಲೆಯವರಿಗೆ ೩೦ ಪೌನುಗಳಿಗೆ ಮಾರಿಬಿಟ್ಟಿದ್ದನು. ಆತನು ಸತ್ತಕೂಡಲೆ ಆ ಪಾಠಶಾಲೆಯವರು ಅವನ ತಲೆಯನ್ನು ಕೊಯ್ದು ತೆಗೆದುಕೊಂಡುಹೋದ ಬಳಿಕ ಮುಂಡವನ್ನು ಭೂಸ್ಥಾಪನೆ ಮಾಡಿದರು.

ನ್ಯೂಯಾರ್ಕ್ ಪ್ರಾಂತದಲ್ಲಿ ಕ್ಯಾಪಿಟಲ್ ಎಂಬ ದೊಡ್ಡ ಮಂದಿರಕ್ಕೆ ಬೆಂಕಿ ಬಿದ್ದು ೧೧ ಲಕ್ಷ ಡಾಲರ್ ಬೆಲೆಯ ಪುಸ್ತಕ ಭಂಡಾರವು ಸುಟ್ಟು ಬೂದಿಯಾಯಿತು. ಈ ಮಂದಿರವು ೩೪೨ ಅಡಿಯ ಎತ್ತರವೂ ೨೭೪ ಅಡಿಗಳ ಉದ್ದವೂ ೩೦೨ ಅಡಿಗಳ ಅಗಲವೂ ಉಳ್ಳದಾಗಿದ್ದಿತು. ಈಭವನವು ೧ ಕೋಟಿಯ ೫೦ ಲಕ್ಷ ಡಾಲರ್‌ಗಳ ಬೆಲೆಬಾಳುವುದಾಗಿದ್ದಿತು. ಒಟ್ಟಿಗೆ ಅರ್ಧಕೋಟಿ ಡಾಲರ್‌ಗಳ ನಷ್ಟವು ಈ ಅಗ್ನಿಯಾಪತ್ತಿನಿಂದ ಸಂಭವಿಸಿತು.

ಮದರಾಸಿನ ಒಂದು ಮನೆಯೊಳಗೆ ಕೆಲವರು ಜೂಜಾಡುತ್ತಿರುವರೆಂಬ ಸುದ್ದಿಯು ಪೋಲೀಸರಿಗೆ ತಿಳಿದುಬರಲು, ಅವರು ಹೋಗಿ ಶೋಧನೆಮಾಡುವಲ್ಲಿ ಇಸ್ಪೀಟುಗಳು, ಹಣ, ಚಿನ್ನದುಂಗುರ, ವಜ್ರ ಮೊದಲಾದ ಪದಾರ್ಥಗಳ ಸಮೇತ ಕೆಲವರು ಸಿಕ್ಕಿದರು. ದಂಡಾಧಿಕಾರಿ ಯಿದಿರಿಗೆ ಅವರನ್ನೆಲ್ಲಾ ವಿಚಾರಣೆಗೆ ಗುರಿಮಾಡಿಸಲು, ಜೂಜಾಡಲು ಮನೆಯನ್ನು ಕೊಟ್ಟವನಿಗೆ ೨೦೮ ರೂ. ಅರ್ಥದಂಡ ತಪ್ಪಿದರೆ ೩ ವಾರಗಳ ಕಾರಾಗೃಹವಾಸ ಶಿಕ್ಷೆಯೂ, ಉಳಿದವರಿಗೆಲ್ಲಾ ಅರ್ಥದಂಡವೂ ವಿಧಿಸಲ್ಪಟ್ಟಿತು.

ಚಕ್ರವರ್ತಿ ದಂಪತಿಗಳು ಬರುವ ನವೆಂಬರ್ ತಿಂಗಳ ೩ ನೆಯ ವಾರದಲ್ಲಿ ಸೀಮೆಯಿಂದ ಹೊರಟು, ಬೊಂಬಾಯಿಯಲ್ಲಿ ಹಡಗನ್ನಿಳಿದು, ಅಲ್ಲಿಂದ ದಿಲ್ಲಿಗೆ ಹೊರಟು, ಅಲ್ಲಿ ೧೦-೧೨ ದಿನಗಳಿದ್ದು ಬಳಿಕ ನೇಪಾಳ ದೇಶಕ್ಕೆ ಹೋಗಿ, ಅಲ್ಲಿ ಹುಲಿಯ ಬೇಟೆಯಾಡುತ್ತ ೧೦ ದಿನಗಳಿದ್ದು, ಆ ಮೇಲೆ ಕಲ್ಕತ್ತಾಕ್ಕೆ ಹೋಗಿ, ಅಲ್ಲಿ ೩-೪ ದಿವಗಳಿದ್ದು, ಕಲ್ಕತ್ತಾದಿಂದ ಸ್ವದೇಶಕ್ಕೆ ತೆರಳುವಾಗ ಬಹುಶಃ ಮದ್ರಾಸಿನಲ್ಲೂ ೧ ದಿನದಮಟ್ಟಿಗೆ ನಿಂತು ಸತ್ಕಾರಗೊಂಡು ದಯಮಾಡಿಸುವರೆಂದು ಟೈಮ್ಸ್ ಪತ್ರಿಕೆಯು ಹೇಳಿರುತ್ತದೆ.

ತಮ್ಮ ಜಿಲ್ಲೆಗಳಲ್ಲಿ ಜರುಗಿಸಲ್ಪಡುವ ಜನೋಪಯೋಗಕರವಾದ ಕಾರ್ಯಗಳಿಗೆ ತಮಗೆ ಯುಕ್ತವೆಂದು ತೋರಿದರೆ, ದ್ರವ್ಯರೂಪವಾಗಿ ಸಹಾಯಮಾಡುವ ಅಧಿಕಾರವನ್ನು ಮದರಾಸು ಗೌರ್ನಮೆಂಟಿನವರು ಜಿಲ್ಲಾ ಕಲೆಕ್ಟರುಗಳಿಗೆ ಕೊಟ್ಟಿರುವರು. ಬಾವಿತೋಡಿಸುವುದು ಮೊದಲಾದ ಜನೋಪಯೋಗಿ ಕಾರ್ಯಗಳಿಗೆ ಗ್ರಾಂಟು ೧ಕ್ಕೆ ೨೫೦ ರೂ. ಗೆ ಹೆಚ್ಚಿಲ್ಲದಂತೆ ಅಪ್ಪಣೆಮಾಡಬಹುದೆಂತಲೂ ಯಾವುದೊಂದು ಜಿಲ್ಲೆಗೂ ವರ್ಷ ೧ ಕ್ಕೆ ಇಂಥಾ ವೆಚ್ಚವು ೧ ಸಾವಿರ ರೂ. ಗಿಂತ ಹೆಚ್ಚಾಗಕೂಡದೆಂದೂ ತಿಳಿಯಪಡಿಸಿದ್ದಾರೆ.

ರಷ್ಯಾಕ್ಕೆ ಸೇರಿದ ಪೋಲಾಂಡ್ ಪ್ರಾಂತದ ಒಂದೂರಿನಲ್ಲಿ ಒಂದು ಮದುವೆಯು ಜರುಗುವುದಕ್ಕೆ ಎಲ್ಲಾ ಏರ್ಪಾಡುಗಳೂ ನಡೆದಿದ್ದುವು. ಮದುವೆಯ ದಿವಸ ಮದುವಣಿಗನು ಕುದುರೆಯ ಸ್ವಾರಿಗಾಗಿ ಹೋದವನು ಮುಹೂರ್ತವು ಸಮೀಪಿಸಿದರೂ ಹಿಂತಿರುಗಿ ಬರಲಿಲ್ಲ. ಮದುವಣಗಿತ್ತಿಯು ಚಿಂತಾಕ್ರಾಂತಳಾಗಿ, ತನ್ನ ತಂದೆಯಸಂಗಡ ಮದುವಣಿಗನು ಹೋದ ದಾರಿಯಲ್ಲೇ ಹುಡುಕಿಕೊಂಡು ಹೋದಳು. ಸ್ವಲ್ಪ ದೂರದಲ್ಲಿ ಆ ವರನು ಸತ್ತು ಬಿದ್ದುದು ಗೋಚರಿಸಿತು. ತನ್ನ ಆಶಾಭಂಗವಾದುದಕ್ಕಾಗಿ ಮದುವಣಗಿತ್ತಿಯು ಎದೆಯಾರಿ ಸ್ಮೃತಿತಪ್ಪಿ ಅಲ್ಲೇ ಬಿದ್ದುಕೊಂಡಳು.

ಶ್ರೀರಾಮಪುರದಲ್ಲಿ ೫ ಮಂದಿ ಬಂಗಾಳಿ ಹುಡುಗರು ತಾವು ಪತ್ತೇದಾರಿ ಪೋಲೀಸುಗಳೆಂದು ಹೇಳಿಕೊಂಡು, ಕೊಕೇನ್ ಎಂಬ ಮಾದಕದ್ರವ್ಯವು ಇರುವುದೆಂಬ ಸಂಶಯದಮೇಲೆ ಶೋಧಿಸುವುದಕ್ಕಾಗಿ ತಮಗೆ ಅಪ್ಪಣೆಯಾಗಿರುವದೆಂದು ಯಾವುದೋ ಒಂದು ಕಾಗದವನ್ನು ತೋರಿಸಿ, ಬೂಬೂಜರ್ಜ ಎಂಬುವನ ಮನೆಯನ್ನು ಪರಿಶೋಧಿಸಿ, ಅಲ್ಲಿ ದೊರೆತ ಸ್ವಲ್ಪ ಕೊಕೇನನ್ನು ಸಂಗ್ರಹಿಸಿಕೊಂಡು, ಅಷ್ಟಕ್ಕೇ ತೃಪ್ತಿಗೊಳದೆ ಯಜಮಾನನಿಂದ ಸ್ವಲ್ಪ ಹಣವನ್ನು ಅಪಹರಿಸಿಕೊಂಡು ಹೋದರು. ಕಡೆಗೆ ಪೋಲೀಸರ ಕೈಗೆ ಸಿಕ್ಕಿಬಿದ್ದರು. ಅವರಲ್ಲಿ ಯಾವನ ವಶದಲ್ಲಿ ಕೊಕೇನ್ ದೊರೆಯಿತೋ ಅವನಿಗೆ ೧ ತಿಂಗಳ ಕಾರಾಗೃಹ ಶಿಕ್ಷೆಯಾಯಿತು. ಉಳಿದ ನಾಲ್ವರು ಜೋಣಿಯಮೇಲೆ ಬಿಡಿಸಲ್ಪಟ್ಟಿದ್ದಾರೆ.

ಕಾಷ್‌ಕಂಡ್ ಎಂಬ ಊರಿನಲ್ಲಿ ವಾಸಮಾಡುತ್ತಿದ್ದ ಸುಮಾರು ೧೫೦ ಜನಗಳುಳ್ಳ ಒಂದು ಕೂಟವು ಮದಿವೆಗಾಗಿ ಒಂದು ಹಳ್ಳಿಗೆ ಹೋಗಿದ್ದು ತಮ್ಮ ಊರಿನ ಸಮೀಪಕ್ಕೆ ಬರುವಷ್ಟರಲ್ಲಿ ಗಾಡಿಗಳನ್ನೆಳೆಯುತ್ತಿದ್ದ ಕುದುರೆಗಳು ಇದ್ದಕ್ಕಿದ್ದಹಾಗೆಯೇ ಬೆದರಿ ನಿಂತುವು. ಅಷ್ಟರಲ್ಲಿ ಕಾಡಿನಲ್ಲಿದ್ದ ತೋಳಗಳ ದೊಡ್ಡ ಗುಂಪೊಂದು ಕಾಣಿಸಿತು. ಆ ಜನಗಳೆಲ್ಲರೂ ಗಾಬರಿಪಟ್ಟು ಸ್ತಬ್ಧರಾಗಿರುವಷ್ಟರೊಳಗಾಗಿಯೇ ಆ ತೋಳಗಳು ಬಂದು ಈ ಗುಂಪನ್ನು ಸುತ್ತಲೂ ಮುತ್ತಿಕೊಂಡುವು. ಅವುಗಳನ್ನ ಚದರಿಸುವುದಕ್ಕಾಗಿ ಅಲ್ಲಿದ್ದ ಜನರೆಲ್ಲರೂ ಎಷ್ಟು ಪ್ರಯತ್ನಮಾಡಿದರೂ ವಿಫಲವಾಗಿ ಸುಮಾರು ೧೧೦ ಜನಗಳವರೆಗೆ ಆ ತೋಳಗಳ ಬಾಯಿಗೆ ತುತ್ತಾದರೆಂದು ತಿಳಿಯಬಂದಿದೆ.

ಮೆ॥ ಬರ್ನ್‌ಹಾಮ್ ಎಂಬುವರು ಒಂದು ಹೊಸ ಯಂತ್ರವನ್ನು ಕಂಡುಹಿಡಿದಿರುವರು. ಇದರಿಂದ ವಿಶೇಷವಾಗಿ ಕಲ್ಲುಗಳುಳ್ಳ ಜಮೀನಿನಲ್ಲಿ ಬಹು ಸುಲಭವಾಗಿ ಕಲ್ಲುಗಳನ್ನೆಲ್ಲಾ ತೆಗೆದುಹಾಕಬಹುದು. ಇದನ್ನು ವ್ಯವಸಾಯದ ಇಲಾಖೆಯ ಅಧಿಕಾರಿಗಳು ಬಂದು ಪರೀಕ್ಷಿಸಿ ನೋಡಿದಾಗ, ಆ ಯಂತ್ರವು ಒಂದು ಘಂಟೆಯ ಕಾಲದಲ್ಲಿ ಒಂದು ಎಕರೆ ಜಮೀನಿನ ಮೇಲಿದ್ದ ಕಲ್ಲುಗಳನ್ನೆಲ್ಲಾ ಜಮೀನಿನ ಅಂಚಿನಲ್ಲಿ ರಾಶಿಹಾಕಿ ಶುದ್ಧವಾಗಿ ಮಾಡಿತಂತೆ. ಆದರೆ ಇಷ್ಟು ಕೆಲಸಮಾಡುವಷ್ಟರಲ್ಲಿ ಆ ಯಂತ್ರವು ಸ್ವಲ್ಪ ಶಿಥಿಲವಾಯಿತು. ಮತ್ತು ಈ ಯಂತ್ರವನ್ನು ಎಳೆಯುವುದಕ್ಕಾಗಿ ಐದಾರು ಕುದುರೆಗಳನ್ನು ಕಟ್ಟಬೇಕಾಗುವುದು. ಈ ಭಾಗದಲ್ಲಿ ಇದಕ್ಕೆ ಹೆಚ್ಚು ವೆಚ್ಚವು ತಗುಲುವುದಾದರೂ ವಿಶೇಷ ಕಲ್ಲುಗಳುಳ್ಳ ಜಮೀನುಗಳಲ್ಲಿ ಅನೇಕ ದಿವಸಗಳವರೆಗೆ ಆಳುಗಳನ್ನಿಟ್ಟು ಕೆಲಸಮಾಡಿಸುವುದಕ್ಕೆ ತಗಲುವ ವೆಚ್ಚಕ್ಕಿಂತಲೂ ಇದರ ವೆಚ್ಚವು ಕಡಿಮೆಯಾಗುವುದಾಗಿ ತಿಳಿಯಬಂದಿದೆ. ಈ ವಿಧವಾದ ಯಂತ್ರಗಳಿಗೆ ಹಬೆಯನ್ನುಪಯೋಗಿಸಿ ಕೆಲಸಮಾಡಿಸುವುದು ಬಹಳ ಮೇಲಾದ ಉಪಾಯವೆಂದು ಅಭಿಪ್ರಾಯಪಟ್ಟಿರುವರು.

ಇಂಗ್ಲಂಡಿನಲ್ಲಿ ಜೂನ್ ತಾ॥ ೧೯ ರಾರಭ್ಯ ಜುಲೈ ತಾ॥ ೧೮ ವರೆಗೆ ಜರುಗುವ ಕಿರೀಟಧಾರಣ ಮಹೋತ್ಸವಕ್ಕಾಗಿ ಅಲ್ಲಿಗೆ ವಿದೇಶಗಳಿಂದ ಬರುವ ಅತಿಥಿಶ್ರೇಷ್ಠರುಗಳನು ಬೀಳ್ಕೊಡುವ ಸಂದರ್ಭದಲ್ಲಿ ರಾಜದಂಪತಿಗಳು ಬಕಿಂಗ್ ಹ್ಯಾಮ್ ಅರಮನೆಯಲ್ಲಿ ಉಪವನೋತ್ಸವವನ್ನು ಜರುಗಿಸುವರು. ಆ ಸಾಯಂಕಾಲ ರಾಜದಂಪತಿಗಳು ಅತಿಥಿಗಳ ಸಮೇತ ನಾಟಕಾವಲೋಕವನ್ನು ಮಾಡುವರು. ಆ ರಾತ್ರಿ ಡೆರ್ಬಿ ಪ್ರಭು ದಂಪತಿಗಳು ರಾಜದಂಪತಿಗಳಿಗೆ ಔತಣವನ್ನು ಮಾಡಿಸಿ ವಿನೋದೋತ್ಸವಗಳನ್ನು ಜರುಗಿಸುವರು. ತಾ॥ ೨ ರಲ್ಲಿ ಹೊರಗಿನ ದೇಶಗಳ ರಾಜಕುಮಾರರು ಮೊದಲಾದವರು ತಮ್ಮ ತಮ್ಮ ದೇಶಗಳಿಗೆ ತೆರಳುವರು. ಆ ಸಾಯಂಕಾಲ ಜಾರ್ಜ್ ಪ್ರಭುಗಳು ರಾಯಲ್ ಅಗ್ರಿಕಲ್ಚರಲ್ ಪ್ರದರ್ಶನೋತ್ಸವವನ್ನು ಅವಲೋಕಿಸಿ, ಲಂಡನ್ನಿಗೆ ತೆರಳುವರು. ತಾ॥ ೨೯ ರಲ್ಲಿ ಅಲ್ಲಿನ ಪುರಾಧಿಕಾರಿಯ ಔತಣವನ್ನು ಸ್ವೀಕರಿಸುವರು. ಆದಿನ ಪಟ್ಟಣದ ನಾಲ್ಕು ಬೀದಿಗಳಲ್ಲೂ ಉತ್ಸವಗೊಳ್ಳುವರು. ತಾ॥ ೩೦ ರಲ್ಲಿ ಮುಖ್ಯ ಮಂತ್ರಿಗಳಾದ ಮೆ॥ ಆಸ್ಕ್ವಿತ್ ರವರ ಔತಣವನ್ನು ಪರಿಗ್ರಹಿಸುವರು. ಜುಲೈ ತಾ॥ ೧ ರಲ್ಲಿ ವಿಂಡ್ಸರಿಗೆ ಪ್ರಯಾಣ ಮಾಡುವರು.

ಪೆರು ದೇಶದಿಂದ ಬಂದ ವಿಶೇಷ ವೃತ್ತಾಂತಗಳಲ್ಲಿ ಲೋಕವಿಚಿತ್ರವಾದ ಒಂದು ವಿಷಯವು ಕಾಣಿಸಲ್ಪಟ್ಟಿದೆ. ಕ್ಷಾಮನಿವಾರಣೆಗಾಗಿ ಮಳೆ ಗಿಡಗಳೆಂಬ ಒಂದು ಜಾತಿಯ ವೃಕ್ಷಗಳು ಇಲ್ಲಿ ಬೆಳೆಸಲ್ಪಡುವುವಂತೆ. "ಛೇಂಬರ್ಸ್ ಜನರಲ್" ಎಂಬ ಪತ್ರಿಕೆಯಲ್ಲಿ ಅದರ ವಿವರವು ಕಾಣಿಸಲ್ಪಟ್ಟಿರುವುದು. ಈ ಗಿಡಗಳು ಗುಂಪು ಗುಂಪಾಗಿ ಬೆಳೆದು, ವಿಶೇಷವಾಗಿ ದೊಡ್ಡೆಲೆಗಳನ್ನು ಹೊಂದಿರುವುವಂತೆ. ಇವು ಮಳೆಗಾಲದಲ್ಲಿಯೂ, ಹಿಮಗಾಲದಲ್ಲಿಯೂ, ಮೇಲೆ ಬೀಳತಕ್ಕ ಜಲಾಂಶವನ್ನೆಲ್ಲಾ ಹೀರಿಕೊಂಡು, ಅದನ್ನು ಘನೀಭೂತವಾಗಿಮಾಡಿ ತಮ್ಮಲ್ಲಿಟ್ಟುಕೊಂಡಿದ್ದು, ಬೇರೊಂದು ಕಾಲದಲ್ಲಿ ಆ ನೀರನ್ನೆಲ್ಲಾ ಮಳೆಯಹಾಗೆ ವಿಪರೀತವಾಗಿ ಉಗುಳುತ್ತಿರುವುವಂತೆ. ಬೇಸಿಗೆ ಕಾಲದಲ್ಲಿ ಉಷ್ಣವು ಹೆಚ್ಚಾಗಿ ನದಿಗಳೆಲ್ಲವೂ ಒಣಗುವ ಸ್ಥಿತಿಯಲ್ಲಿದ್ದಾಗ, ಈ ಮರಗಳ ಎಲೆಗಳಿಂದಲೂ, ದಿಂಡಿನಿಂದಲೂ ನೀರು ಜಿನಗುತ್ತಾ ಸುತ್ತಲೂ ಇರುವ ಭೂಮಿಗೆಲ್ಲಾ ಹರಿದು, ಮಣ್ಣಿನಲ್ಲಿ ತೇವವು ಆರದಂತೆ ಮಾಡುವುದಲ್ಲದೆ, ಈ ನೀರನ್ನು ಕಟ್ಟೆಗಳಲ್ಲಿ ಸಂಗ್ರಹಿಸಿಟ್ಟು ವ್ಯವಸಾಯಕ್ಕೂ ಉಪಯೋಗಿಸುವರಂತೆ. ಈ ಜಾತಿಯ ಒಂದೊಂದು ಮರವು ದಿನ ೧ಕ್ಕೆ ೯ ಗ್ಯಾಲನ್‌ಗಳ ನೀರನ್ನು ಬಿಡುತ್ತಿವೆಯಂತೆ.

ಗಿನೀ ದೇಶದ ಹುಲ್ಲಿನ ವ್ಯವಸಾಯ.

ಇಂಡಿಯಾದೇಶದಲ್ಲಿ ವ್ಯವಸಾಯವೇ ಮುಖ್ಯ ಜೀವನೋಪಾಯವಾಗಿದೆ. ಇಂಥಾ ವ್ಯವಸಾಯಕ್ಕೆ ದನಕರುಗಳಿಂದ ಆಗತಕ್ಕ ಸಹಾಯವು ಮತ್ತ್ಯಾವದರಿಂದಲೂ ಆಗುವುದಿಲ್ಲ. ಆದರೆ ಈಚೆಗೆ ದನಕರುಗಳು ಸುಲಭ ಖರೀದಿಗೆ ಸಿಕ್ಕುವದೇ ಅಪರೂಪವಾಗುತ್ತಾ ಬಂತು. ಒಂದು ಜೊತೆ ಉಳತಕ್ಕ ಯತ್ತುಗಳು ೧೫೦ ರೂಪಾಯಿಗಳಿಗೆ ಕಡಿಮೆಯಾಗಿ ಸಿಕ್ಕುವುದಿಲ್ಲ. ಕ್ಷಾಮಗಳಿಂದ ಮತ್ತು ರೋಗಗಳಿಂದ ದನಕರುಗಳು ಸತ್ತಿರುವುದರಿಂದಲೂ, ವ್ಯವಸಾಯವು ಜಾಸ್ತಿಯಾಗುತ್ತಿರುವುದರಿಂದಲೂ, ಹುಲ್ಲುಗಾವಲುಗಳು ವ್ಯವಸಾಯಕ್ಕಾಗಿ ಉಪಯೋಗಿಸಲ್ಪಡುತ್ತಿರುವುದರಿಂದಲೂ, ಮತ್ತು ಹುಲ್ಲುಗಾವಲಿರತಕ್ಕವರು ಒಂದೊಂದು ದನವನ್ನು ಮೇಯಿಸುವದಕ್ಕೆ ಹೆಚ್ಚು ದುಡ್ಡನ್ನು ವಸೂಲು ಮಾಡುವದರಿಂದಲೂ, ಈ ರೀತಿ ದನಕರುಗಳ ಬೆಲೆಯು ಹೆಚ್ಚುತ್ತಿದೆ ಯೆಂದು ಹೇಳಬಹುದು.

ವ್ಯವಸಾಯವೇ ಜೀವಾಧಾರವಾಗಿರತಕ್ಕ ಮತ್ತು ಪದೇ ಪದೇ ಸಕಾಲದಲ್ಲಿ ಮಳೆಯಾಗದೇ ಇರುವ ದೇಶದಲ್ಲಿ ಪ್ರತಿ ಗ್ರಾಮದಲ್ಲೂ ದನಕರುಗಳ ಮೇವಿಗಾಗಿ ತಕ್ಕಷ್ಟು ಯೋಗ್ಯವಾದ ಹುಲ್ಲುಗಾವಲುಗಳನ್ನು ಇಟ್ಟಿರತಕ್ಕದ್ದು ಸರ್ಕಾರದವರ ಮತ್ತು ರೈತರುಗಳ ಕರ್ತವ್ಯವಾಗಿದೆ. ಆದರೆ ಇದುವರಿವಿಗೆ ಈ ರೀತಿಯಲ್ಲಿ ಜಾರಿಯಲ್ಲಿ ಬಂದಿಲ್ಲ. ಜಪಾನಿನಲ್ಲಿ ಒಂದೆರಡುಎಕರೆ ಜಮೀನು ಹಿಡುವಳಿದಾರನೂ ಸಹಾ ತನ್ನ ಜಮೀನಿನ ಸ್ವಲ್ಪ ಭಾಗದಲ್ಲಿ ಸೌದೆಗಾಗಿ ಮರಗಳನ್ನು ಹಾಕಿ, ಇನ್ನು ಸ್ವಲ್ಪ ಭಾಗದಲ್ಲಿ ತೋಟ ಮೊದಲಾದವುಗಳನ್ನು ಮಾಡಿಕೊಂಡಿರುತ್ತಾನೆ. ಆದರೆ ಇಂಡಿಯಾ ದೇಶದ ರೈತರು ಹುಲ್ಲುಗಾವಲಿಗೂ, ಸೌದೆಗೂ, ಗೊಬ್ಬರಕ್ಕೂ ಯಾವ ಅನುಕೂಲಗಳನ್ನೂ ಮಾಡಿಕೊಳ್ಳುವುದಿಲ್ಲ.

ಹೈದರಾಬಾದ್ ಸಂಸ್ಥಾನದ ವಾರಂಗಲ್ ಡಿಸ್ಟ್ರಿಕ್ಟಿನಲ್ಲಿ ೨೦ ವರ್ಷಗಳ ಹಿಂದೆ ಒಂದು ಗಾಡಿ ಹುಲ್ಲಿಗೆ ೧-೮-೦ ಖರೀದಿ ಯಾಗುತ್ತಿದ್ದದ್ದು ಈಗ ಎಂಟು ರೂಪಾಯಿ ಆಗಿದೆ. ಇವುಗಳನ್ನೆಲ್ಲಾ ವಿಚಾರಮಾಡಿ ನೋಡಿದಲ್ಲಿ ಇನ್ನು ಮುಂದೆ ದನಗಳನ್ನು ಸಾಕಬೇಕಾದರೆ ಅಗ್ಗವಾದ ಮೇವುಗಳನ್ನು ಬೆಳೆಸಿ ಉಪಯೋಗಕ್ಕೆ ತರುವುದು ಅವಶ್ಯಕವಾಗಿರುತ್ತದೆ.

ಈ ಉದ್ದೇಶದಿಂದ ಇಂಡಿಯಾ ದೇಶದಲ್ಲಿ ಅನೇಕ ತರಹ ಮೇವುಗಳನ್ನು ಬೆಳಸಿ ನೋಡಿದ್ದರಲ್ಲಿ ಗಿನಿ ದೇಶದ ಹುಲ್ಲನ್ನು ಬಹಳ ಸುಲಭವಾಗಿ ಬೆಳಸಬಹುದೆಂದು ಗೊತ್ತಾಗಿದೆ.

ಈ ಹುಲ್ಲನ್ನು ನೆಡುವುದಕ್ಕೆ ಮುಂಚೆ ಜಮೀನನ್ನು ಸಾಧಾರಣವಾಗಿ ಉತ್ತು ನೀರು ಹಾಯಿಸುವುದಕ್ಕೆ ಪಾತಿಗಳನ್ನು ಮಾಡಿ ಪಾತಿಗಳಲ್ಲಿ ಇತ್ತವನ್ನು ೧॥ ಅಡಿ ದೂರವಾಗಿ ನೆಡಬೇಕು. ಅನಂತರದಲ್ಲಿ ನಾಲ್ಕು ದಿನಗಳಿಗೊಂದಾವರ್ತಿ ನೀರು ಹಾಯಿಸಿ, ಅವಶ್ಯಕಬಿದ್ದಾಗಲೆಲ್ಲಾ ಗೊಬ್ಬರವನ್ನು ಹಾಕಬೇಕು. ಗಿಡಗಳು ಸುಮಾರಾಗಿ ಬೇರುಬಿಟ್ಟ ನಂತರದಲ್ಲಿ ಹೆಚ್ಚಾಗಿ ನೀರನ್ನು ಹಾಯಿಸಬೇಕಾಗಿಲ್ಲ. ಆದರೆ ಎಂಥಾ ಅನಾವೃಷ್ಟಿ ಬಂದಾಗ್ಯೂ ಈ ಗಿಡಗಳು ಒಣಗಿಹೋಗುವುದಿಲ್ಲ. ಆದರೆ ನೀರು ಹಾಯಿಸುತ್ತಿದ್ದರೆ ಒಂದು ವರ್ಷಕ್ಕೆ ಆರೇಳಾವರ್ತಿ ಬೆಳೆಯನ್ನು ತೆಗೆಯಬಹುದು. ಈ ಹುಲ್ಲು ಎಲ್ಲಾ ದನಕರುಗಳಿಗೂ ಒಳ್ಳೇ ಮೇವಾಗಿದೆ. ಮೊದಲುಮೊದಲು ಇದು ಜೀರ್ಣವಾಗುವುದಿಲ್ಲವೆಂದು ತೋರಿದರೂ ಕ್ರಮೇಣ ಸರಿಹೋಗುವುದು. ಎಕರೆ ಒಂದಕ್ಕೆ, ಪ್ರತಿ ವರ್ಷವೂ ೯೩೦೦ ಮಣಗಳಂತೆ ೩೦ ವರ್ಷಗಳ ಕಾಲ ಬೆಳೆಯಾಗುವುದು. ಮತ್ತು ಮತ್ತ್ಯಾವ ಮೇವೂ ಇಷ್ಟು ಸುಲಭ ಖರ್ಚಿಗೆ ಇಷ್ಟು ಲಾಭಕರವಾಗಿ ಆಗಲಾರದೆಂದು ನಾವು ಧಾರಾಳವಾಗಿ ಹೇಳಬಹುದು.

ಅಲ್ಲದೆ ಗಿನಿ ಹುಲ್ಲು ಬಹಳ ರುಚಿಯಾಗಿಯೂ ಮತ್ತು ಆರೋಗ್ಯಕರವಾಗಿಯೂ ಇರುತ್ತದೆ. ಇದನ್ನು ತಿನ್ನತಕ್ಕ ಕರೆಯುವ ಹಸುಗಳಿಗೂ ಮತ್ತು ಕೆಲಸಮಾಡತಕ್ಕ ಯತ್ತುಗಳಿಗೂ ಹಿಂಡಿಯನ್ನು ಹಾಕಬೇಕಾದ್ದಿಲ್ಲ. ದೊಡ್ಡ ರೋಗವೇ ಮೊದಲಾದ ಉಪದ್ರವಗಳು ಈ ಹುಲ್ಲನ್ನು ತಿನ್ನತಕ್ಕ ದನ ಕರುಗಳಿಗೆ ಬರುವದು ಬಹಳ ಅಪರೂಪ. ಇದನ್ನು ನೋಡಿದರೆ, ಗಿನೀ ಹುಲ್ಲು ಉಷ್ಣದೇಶವಾದ ನಮ್ಮ ಇಂಡಿಯಾದೇಶಕ್ಕೆ ಬಹಳ ಪ್ರಯೋಜನಕರವಾದ ಮತ್ತು ಉತ್ಕೃಷ್ಟವಾದ ಮೇವೆಂದು ತಿಳಿಯಬರುತ್ತದೆ.

ದರ್ಖ ಹೈದರಾಬಾದಿನಲ್ಲಿರತಕ್ಕ ಮ॥ ಡಿ. ಯಲ್. ನಾರಾಯಣರಾಯರೆಂಬುವರು ಈ ಹುಲ್ಲನ್ನು ತಮ್ಮ ಜಮೀನಿನಲ್ಲಿ ಬೆಳೆದು ತಮ್ಮ ಅನುಭವಗಳನ್ನು ಜನಗಳ ತಿಳುವಳಿಕೆ ಬಗ್ಗೆ ಸಂಕ್ಷೇಪವಾಗಿ ವಿವರಿಸಿದಾರೆ. ಅವು ಯಾವವಂದರೆ:—

೧. ೬೦ ದಿನಗಳಲ್ಲಿ ಎಕರೆ ಒಂದಕ್ಕೆ ೧೩೦೦ ಮಣಗಳು ಉತ್ಪತ್ತಿಯಾಗುವುದರಿಂದ ಈ ಹುಲ್ಲು ಬಹಳ ಜಾಗ್ರತೆಯಾಗಿ ಬೆಳೆಯಾಗುತ್ತದೆ.

೨. ಇದು ಬಹಳ ರುಚಿಯಾದ ಮತ್ತು ಎಲ್ಲಾ ಜಾತಿಯ ದನಕರುಗಳಿಗೂ ತಕ್ಕಂಥಾ ಮೇವಾಗಿದೆ.

೩. ಇದು ಒಂದಾವರ್ತಿ ಬೀಜ ಬಿತ್ತಿದಲ್ಲಿ ಅನೇಕ ವರ್ಷಗಳ ಕಾಲ ಅಂದರೆ ಕೊನೇಪಕ್ಷ ೩೦ ವರ್ಷಗಳು ಫಸಲನ್ನು ಕೊಡುತ್ತಿರುತ್ತದೆ.

೪. ಇದನ್ನು ಹೆಚ್ಚು ಖರ್ಚಿಲ್ಲದೆ ಬೆಳೆಯಬಹುದು. ನಾಟಿ ಹಾಕತಕ್ಕ ಪೈರಿಗೆ ಹೆಚ್ಚು ಖರ್ಚು ತಗಲುವುದಿಲ್ಲ. ಕಳೆ ಕೀಳಬೇಕಾದ ಅವಶ್ಯಕವಿಲ್ಲ,

೫. ಎಂಟು ಎಕರೆ ಜಮೀನಿನಲ್ಲಿ ಜೋಳದ ಕಡ್ಡಿಯನ್ನು ಬೆಳೆಯುವುದಕ್ಕೆ ತಗಲಬಹುದಾದ ಲಾಗವಡಿನಲ್ಲಿ ಅರ್ಧವನ್ನು ಖರ್ಚುಮಾಡಿ ಒಂದು ಎಕರೆ ಜಮೀನಿನಲ್ಲಿ ಗಿನಿ ಹುಲ್ಲನ್ನು ವ್ಯವಸಾಯಮಾಡಿದಲ್ಲಿ ಗಿನಿಹುಲ್ಲಿನ ಉತ್ಪತ್ತಿಯೇ ಜಾಸ್ತಿಯಾಗುವುದು. ಮತ್ತು ಎಂಥಾ ಅನಾವೃಷ್ಟಿಯ ಕಾಲದಲ್ಲೂ ಇದು ಒಣಗಿಹೋಗದೆ ಬೆಳೆಯುವುದರಿಂದ ಕ್ಷಾಮಗಾಲದಲ್ಲಿ ಬಹಳಉಪಯೋಗವಾದ ಮೇವಾಗಿದೆ.

೬. ಮಸಾಲೆ ಸೊಪ್ಪೇ ಮೊದಲಾದ ಮೇವುಗಳಿಗೆ ತಗಲತಕ್ಕ ರೋಗಗಳು ಇದಕ್ಕೆ ತಗಲುವುದಿಲ್ಲ.

೭. ಮಾರಾಟಕ್ಕೆ ಹುಲ್ಲು ಬೆಳೆಯುವವರು ಇದನ್ನು ಬೆಳೆಯುವುದು ಬಹಳ ಲಾಭಕರವಾಗಿರುತ್ತದೆ. ಮೇಲೆ ಹೇಳಿದಂತೆ ವರ್ಷಕ್ಕೆ ಎಕರೆ ೧ ಕ್ಕೆ ೯೩೦೦ ಮಣಗಳು ಹಸರು ಹುಲ್ಲಾಗುತ್ತದೆ. ಇದನ್ನು ರೂಪಾಯಿಗೆ ೧೧॥ ಮಣಗಳ ಮೇರೆ ಮಾರಿದರೆ ೮೦೦ ರೂ. ಸಿಕ್ಕುವುದು. ನಾಲಾ ನೀರಿನ ಆಸರೆ ಇರತಕ್ಕ ಸ್ಥಳಗಳಲ್ಲಿ ಈ ಹುಲ್ಲನ್ನು ಬೆಳೆಯುವುದು ಬಹಳ ಸುಲಭ. ಗೊಬ್ಬರಕ್ಕೆ ಮಾತ್ರ ಸ್ವಲ್ಪ ಲಾಗವಡು ತಗಲುವುದು. ಬಚ್ಚಲುಗೊಬ್ಬರ, ಕುರಿಯಗೊಬ್ಬರ ಮೂಳೆಪುಡಿ ಮೊದಲಾದುವುಗಳನ್ನು ಬಹಳವಾಗಿ ಹಾಕಬೇಕು. ಇವುಗಳು ಸಿಕ್ಕದಿದ್ದ ಪಕ್ಷದಲ್ಲಿ ಕೊಳತಿರತಕ್ಕ ತಿಪ್ಪೆಯ ಕಸ ಮತ್ತು ದನವಿನ ಗೊಬ್ಬರವನ್ನೂ ಹಾಕಬಹುದು ಪೂರಾ ಫಸಲನ್ನು ತೆಗೆಯುವುದಕ್ಕೆ ಎಕರೆಗೆ ೧೦೦ ರೂಪಾಯಿಗಿಂತ ಹೆಚ್ಚು ಖರ್ಚಾಗುವುದಿಲ್ಲ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹಸುರು ಹುಲ್ಲು ಬಹಳವಾಗಿ ಮಾರಾಟವಾಗುವುದರಿಂದ ಇಂಥಾ ಪಟ್ಟಣಗಳ ಸಮೀಪದಲ್ಲಿರತಕ್ಕ ಜಮೀನುಗಳಲ್ಲಿ ಗಿನಿ ಹುಲ್ಲನ್ನು ಬೆಳೆಯುವುದು ಬಹಳ ಲಾಭಕರವಾಗಿದೆ. ಗ್ರಾಮಾಂತರಗಳಲ್ಲಿ ಪ್ರತಿ ರೈತನೂ ೨೪ ರಾಸುಗಳಿಗೆ ಸಾಕಾಗುವಷ್ಟು ಹುಲ್ಲನ್ನು ಒಂದು ಎಕರೆ ಜಮೀನಿನಲ್ಲಿ ಬೆಳೆಯಬಹುದು. ಹಾಲುಮಾರುವವರಿಗೆ ೧೦ ಕರೆಯುವ ಹಸುಗಳಿಗೆ ಒಂದು ಎಕರೆ ಜಮೀನಿನಲ್ಲಿ ಬೆಳೆಯುವಷ್ಟು ಹುಲ್ಲು ಬೇಕಾಗುವುದು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದ್ದು. ಪ. ಪ್ರ.

ಪತ್ರವ್ಯವಹಾರ.

ಬುಕ್ಕಾಂಬುಧಿ.

ಈ ಗ್ರಾಮದ ವೀರಶೈವರಲ್ಲಿ ಪ್ರಮುಖರಾಗಿದ್ದ ಹಣ್ಣೆ ರುದ್ರಪ್ಪನವರು ಕಳೆದ ಫೆಬ್ರವರಿ ತಾ॥ ೨೩ ರಲ್ಲಿ ಶಿವಾಧೀನರಾದರು. ಇವರಿಗೆ ಅವಸಾನ ಕಾಲದಲ್ಲಿ ೬೦ ವರ್ಷಗಳಾಗಿದ್ದುವು. ಇವರು ತಮ್ಮ ಗ್ರಾಮದ ಸಮೀಪದಲ್ಲಿ ಒಂದು ಶಿವಾಲಯವನ್ನು ಬಹು ದ್ರವ್ಯ ವ್ಯಯಮಾಡಿ ಕಟ್ಟಿಸಿರುವರು. ಮತ್ತೂ ಒಳ್ಳೇ ಧನಾಢ್ಯರಾಗಿದ್ದು ಅನೇಕರಿಗೆ ಅನ್ನದಾನಮಾಡಿ ಪರೋಪಕಾರ ಬುದ್ಧಿಯುಳ್ಳವರಾಗಿದ್ದರು. ಇವರಿಗೆ ೧೮ ವರ್ಷ ವಯಸ್ಸಿನ ಒಬ್ಬ ಮಗನು ಇದ್ದಾನೆ. ಈತನಿಗೆ ತಂದೆಯಂತೆ ಧರ್ಮಬುದ್ಧಿಯನ್ನೂ ದೀರ್ಘಾಯುಷ್ಯವನ್ನೂ ಕೊಡಲೆಂದು ಪರಶಿವನನ್ನು ಬೇಡುತ್ತೇನೆ.

ಹಿತಚಿಂತಕ.

ವೀರಶೈವಮಹನೀಯರುಗಳಿರಾ !

ಈಗ್ಯೆ ಸುಮಾರು ೧ ವರುಷದಲ್ಲಿ ಯಡತೊರೆ ತಾ॥ ಕಸಬಾ ಯಡತೊರೆಯಲ್ಲಿರುವ ಶ್ರೀಕಂಠಶೆಟ್ಟರಮಗಳ ಲಗ್ನದಲ್ಲಿ ಬೆಟ್ಟದಪುರದಮಠದ ಶ್ರೀ॥ ಶ್ರೀ॥ ಚಿಕ್ಕವೀರದೇಶಿಕೇಂದ್ರಸ್ವಾಮಿಗಳವರ ಅಧ್ಯಕ್ಷತೆಯಿಂದ ಸಭೆಸೇರಿ ವೀರಶೈವ ಧರ್ಮಫಂಡಿಗೆ ಲಿಖಿತಮೂಲಕ ವಾಗ್ದಾನಮಾಡಿದಂತೆ ಇದುವರಿಗೆ ಮೊಬಲಗು ಒಟ್ಟುಗೂಡಿಸಲು ಆ ಆ ಸ್ಥಳದಲ್ಲಿ ಅಂದರೆ– ಯಡತೊರೆ, ಚವುಕಹಳ್ಳಿ, ರಾಮಂಬೂರು, ಬೆಟ್ಟದಪುರ, ಬಸವಾಪಟ್ಟಣ ಕೊತ್ತುವಳ್ಳಿ ಈ ಸ್ಥಳಗಳಲ್ಲಿ ಗೊತ್ತು ಮಾಡಿರುವವರ ವಶಕ್ಕೆ ಮೊಬಲಗು ಪಾವತಿ ಮಾಡಿ ದಾಖಲೆಯಿಟ್ಟುಕೊಂಡು ಶ್ರೀ॥ ಶ್ರೀ॥ ಸ್ವಾಮಿಯವರಿಗೆ ಅರಿಕೆಮಾಡಬೇಕೆಂದು ಗೊತ್ತುಮಾಡಲ್ಪಟ್ಟಿತ್ತಷ್ಟೆ. ಆ ಪ್ರಕಾರ ಈವರಿಗೆ ಮೊಬಲಗನ್ನುಕೂಡಿಸುವ ಪ್ರಯತ್ನ ನಡಿಸಲ್ಪಟ್ಟಹಾಗೆ ಕಂಡುಬರಲಿಲ್ಲವಾಗಿ, ಜಾಗ್ರತೆಯಾಗಿ ಮೊಬಲಗನ್ನು ಸದರಿಯವರವಶಕ್ಕೆ ಪಾವತಿಮಾಡಬೇಕಾಗಿ ಪ್ರಾರ್ಥನೆ. ಅನಂತರ ರಾಮಂದೂರು, ಯಡತೊರೆ, ಚವುಕಹಳ್ಳಿ. ಈ ಸ್ಥಳಗಳಲ್ಲಿ ನಡಿಯುವ ಲಗ್ನಗಳಲ್ಲಿ ಸಭೆಸೇರಿ ಮುಂದಿನ ಕಾರ್ಯಕ್ರಮವನ್ನು ವೀರಶೈವ ಮಹಾಜನಂಗಳು ಗೊತ್ತು ಮಾಡಬೇಕಾಗಿದೆ. ಮುಖ್ಯವಾಗಿ ಇವಾಗ ಹೇಳುವದೇನೆಂದರೆ, ಧರ್ಮಕ್ಕೋಸ್ಕರ ವಾಗ್ದಾನಮಾಡಿರುವವರು ಮೊಬಲಗನ್ನು ಕೊಟ್ಟು ನಿಂತವರಿಂದ ಮೊಬಗಲು ವಸೂಲ್ ಮಾಡುವುದಕ್ಕೆ ತಕ್ಕ ಪ್ರಯತ್ನ ಮಾಡಬೇಕಾಗಿ ಈ ಕೆಳಗೆ ರುಜುಮಾಡಿರುವವರ ವಿನಂತಿಗಳಿರುತ್ತವೆ.

ಹಾ॥ ಮಲ್ಲಶೆಟ್ಟಿ ಬಸವಾಪಟ್ಟಣ, ಕಪನಸೆಟ್ಟಿ ಚವುಕಹಳ್ಳಿ, ನಂದಿ ಬಸೆಟ್ಟಿ ಬೆಟ್ಟದಪುರ, ತಟ್ಟವಾಳ್ ದೊಡ್ಡ ಬಸೆಟ್ಟಿ, ರಾ॥ ಬ॥ ಚಿಕ್ಕಬಸೆಟ್ಟಿ.

ಹೋದ ಸಂಚಿಕೆಯಲ್ಲಿ "ಸ್ಟಾರ್" ಪತ್ರದ ಚಂದಾದಾರರ ವಿಷಯವಾಗಿ ಪತ್ರಿಕಾಕರ್ತರು ದೂರಿಕೊಂಡ ಲೇಖನವನ್ನು ನೋಡಿ ಇಲ್ಲಿ ನಮ್ಮ ಮಂಡಳಿಗೂ ನಮಗೂ ಆದ ಪಶ್ಚಾತ್ತಾಪವನ್ನು ಬರೆಯಲಸದಳವಾಗಿದೆ. ಪತ್ರದ ಚಂದಾಹಣವನ್ನು ಉಳಿಸಿಕೊಂಡು ಋಣಧಾರಿಗಳಾಗಿ ಇರುವರಾದರೆ, ಪತ್ರ ಜೀವಿಸುವ ಪರಿ ಹ್ಯಾಗೆ ? ವರ್ತಮಾನಪತ್ರವನ್ನು ಓದತಕ್ಕ ಮಹನೀಯರು ಸುಜ್ಞಾನಿಗಳಿರುವರಲ್ಲದೆ ಅಜ್ಞಾನಿಗಳು ಇರುವುದು ಅತಿ ವಿರಳವಾಗಿದೆ. ಆದರೆ ಇಂಥಾ ಸುಜ್ಞಾನಿಗಳು ಈಪರಿಯಾಗಿ ಮಾಡಿದರೆ ಹೇಳುವದೇನು ! ಇದು ಬೇರೆ ಇರಲಿ, ಸ್ಟಾರ್ ಪತ್ರದ ಚಂದಾದಾರರಲ್ಲಿ ವೀರಶೈವರು ಹೆಚ್ಚಾಗಿರಬಹುದೆಂದು ನನಗೆ ತೋರುವುದು. ಅಂದಬಳಿಕ ನಮ್ಮ ಮತದಲ್ಲಿ ಈ ಒಂದ ಪತ್ರವಲ್ಲದೆ ಮತ್ತೊಂದು ಕಂಡುಬರುವುದಿಲ್ಲ. ಇಂಥ ಪ್ರಿಯ ಪತ್ರವನ್ನು ನಮ್ಮ ಸರ್ವ ವೀರಶೈವರೂ ಸಂರಕ್ಷಿಸಿ ಅದರ ಆನಂದ ಬೋಧೆಯನ್ನು ಭೋಗಿಸಲಾರದೆ, ಹೋಗುವುದು ಲಾಂಛನಾಸ್ಪದವು. ತಮಗೆ ಪತ್ರವು ಬೇಡವಾಗಿದ್ದರೆ ಮುಂಚಿತವಾಗಿ ತಿಳಿಸುವುದಕ್ಕೆ ಸವಡು ಆಗುವುದಿಲ್ಲವೇ ? ಬಾಕಿಯನ್ನುಳಿಸಿಕೊಂಡವರು ಮತ್ತೊಮ್ಮೆ ವಿಜ್ಞಾಪನೆಗೆ ಅವಕಾಶವನ್ನು ಕೊಡದೆ ತಿಂಗಳವೊಳಗಾಗಿ ಹಣವನ್ನು ಮುಟ್ಟಿಸಿ ರುಣಮುಕ್ತರಾಗಿ ತಮ್ಮ ಮತಪ್ರಿಯ ಪತ್ರವನ್ನು ಸಂರಕ್ಷಿಸಬೇಕಾಗಿ ಸರ್ವರಿಗೂ ಕರಗಳಂ ಜೋಡಿಸಿ ವಿನಂತಿಯನ್ನು ಮಾಡಿ ಈ ಲೇಖನವನ್ನು ಮುಗಿಸುವುದಕ್ಕೆ ಅಪ್ಪಣೆಯನ್ನು ಬೇಡುತ್ತೇನೆ.

ಪತ್ರದ ಹಿತಚಿಂತಕ ಕೊಲ್ಲಾಪುರ.

ಬಿಸಗರಹಳ್ಳಿ.

ಮಂಡ್ಯದ ತಾಲ್ಲೋಕು ಕೊಪ್ಪದ ಹೋಬಳಿ ಬಿಸಗರಹಳ್ಳಿ ಗ್ರಾಮದ ಗುರುಬಸಪ್ಪನ ಬಸವಣ್ಣನವರ ಮನೆಲಗ್ನಕ್ಕೆ ಬಂದಿದ್ದ ವೀರಶೈವರು ಸನ್ ೧೯೧೧ ನೇ ಮಾರ್ಚಿ ತಾ॥ ೨೮ರಲ್ಲಿ ಸಭೆ ಸೇರಿ ಮಾಡಿದ ನಿರ್ಧಾರವು.

ಈ ಬಿಸಗರಹಳ್ಳಿ ಗ್ರಾಮದಲ್ಲಿ ಮತವಿಷಯಕವಾಗಿ ಹಿಂದೆ ತೆಗೆದಿದ್ದ ನಲವತ್ತೈದು ರೂಪಾಯಿಗಳು ಇದೇ ಊರು ಶಂಗಪ್ಪನವರ ಮಗ ಮರಿಬಸಪ್ಪನವರಲ್ಲಿರುತ್ತೆ. ಇದೇ ಊರು ಮಗಣ್ಣನವರ ಮನೆಲಗ್ನದಲ್ಲಿ ಪಂಚಾಚಾರ್ಯರ ಸಂಭಾವನೆಯಾಗಿ ತೆಗೆದಿದ್ದ ಹನ್ನೆರಡು ರೂಪಾಯಿಗಳು ಕಾಡಬಸಪ್ಪನವರ ಕಾಳಶೆಟ್ಟಪ್ಪನವರಲ್ಲಿರುತ್ತೆ. ಗುರುಬಸಪ್ಪನವರಮಗ ಬಸವಣ್ಣನವರ ಮನೆಲಗ್ನದಲ್ಲಿ ಆಚಾರ್ಯ ಸಂಭಾವನೆಯಾಗಿ ತೆಗೆದಿದ್ದ ೧೨ ರೂಪಾಯಿಗಳು ಸೆಟ್ಟರ ಲಿಂಗಪ್ಪನವರಲ್ಲಿರುತ್ತದೆ. ಜುಮ್ಲಾ ೬೯ ರೂ. ಗಳನ್ನು ಈ ತಾರೀಖುಲಾಗಾಯಿತು ೧ ತಿಂಗಳು ವಾಯಿದೆವೊಳಗಾಗಿ ಮೇಲ್ಕಂಡ ರೂಪಾಯಿಗಳ ಪೈಕಿ ೪೦ ರೂಪಾಯಿಗಳನ್ನು ಮುಡುಕುತೊರೆ ಶ್ರೀ ವೀರಶೈವಮತಸಂವರ್ಧಿನೀ ಸಭಾ ಕೋಶಾಧ್ಯಕ್ಷರವಶಕ್ಕೂ ೨೯ ರೂಪಾಯಿಗಳನ್ನು ಬೆಂಗಳೂರು ವೀರಶೈವ ವಿದ್ಯಾವರ್ಧಕ ಫಂಡಿನ ಸೆಕ್ರೆಟರಿಯವರಿಗೂ ರವಾನಿಸುವಂತೆ ನಿರ್ಧಾರವಾಯಿತು.

ಈ ಗ್ರಾಮದಲ್ಲಿ ನಮ್ಮ ಮತಸಮಾಜದಲ್ಲಿ ಈ ಲಾಗಾಯಿತು ಚಿರಕಾಲದವರೆಗೂ ನಡೆಯುವ ಲಗ್ನಗಳಲ್ಲಿ ಗ್ರಾಮಸ್ಥರಿಗೆ ಸಂತರ್ಪಣೆನಡಿಸುವ ಮೂರು ಊಟಗಳ ಪೈಕಿ ಒಂದು ಊಟವನ್ನು ತಪ್ಪಿಸಿ ಆದರ ಬಾಬತು ವೆಚ್ಚದಲ್ಲಿ ೧೨ ರೂಪಾಯಿಗಳನ್ನೂ ಆಚಾರ್ಯಸಂಭಾವನೆಯಾಗಿ ತೆಗದು ಅರ್ಧ ಭಾಗವಾದ ೬ ರೂಪಾಯಿಗಳನ್ನು ಶ್ರೀ ವೀರಶೈವ ಸಂವರ್ಧಿನೀಸಭಾಕ್ಕೂ ಇನ್ನು ೬ ರೂಪಾಯಿಗಳನ್ನು ಬೆಂಗಳೂರು ವೀರಶೈವವಿದ್ಯಾವರ್ಧಕ ಫಂಡಿಗೂ ರವಾನಿಸುವಂತೆ ನಿಷ್ಕರ್ಷೆಮಾಡಲ್ಪಟ್ಟಿತು.

ಬಿದರುಕೋಟೆ ಮಠದ ಚನ್ನವೀರಾರಾಧ್ಯ.

ಕಾಮನಹಬ್ಬ.

ತಮ್ಮ ೨೩-೩-೧೯೧೧ ನೇ ತಾರೀಖಿನ ಪೇಪರಿನಲ್ಲಿ "ಜನಾನುರಾಗಿ" ಎಂಬುವರು ಕಾಮನಉತ್ಸವ ನಡೆಸತಕ್ಕವರು ನೀಚ ಕೃತ್ಯಗಳನ್ನು ಮಾಡಿದರೆ ಅವು ಕ್ರಿಮಿನಲ್ ತಪ್ಪಿತವಾಗುತ್ತವೆಯೋ ಹೇಗೆ? ಎಂತಕೇಳಿದ್ದಾರೆ– ಈ ವಿಷಯಗಳಿಗೆ ಉತ್ತರವನ್ನು ಈ ಕೆಳಗೆ ಬರೆಯುತ್ತೇನೆ. ದಯವಿಟ್ಟು ತಮ್ಮ ಪೇಪರಿನಲ್ಲಿ ಪಬ್ಲಿಷ್‌ಮಾಡಿ.

ಮೇಲಿನವಿಷಯಗಳಿಗೆ ಜಬಾಬು.

(೧) ನೇ ಪ್ರಶ್ನೆಗುತ್ತರ:—ಲೋಕವನ್ನೇ ಕೆಡಿಸುತ್ತಿರತಕ್ಕ ಇಂಥಾ ದುಶ್ಚೇಷ್ಟೆಗಳಲ್ಲೇ ನಮ್ಮವರು ನಿರತರಾಗಿರುವದ್ದರಿಂದ ಅದು ದೇಶಾಭಿವೃದ್ಧಿಗೂ ದೇಶದಲ್ಲಿ ಪರಸ್ಪರ ಮೈತ್ರೀಭಾವಹುಟ್ಟಲಿಕ್ಕೂ ಅಭ್ಯಂತರ ಪಡಿಸುತ್ತಾ ಇದೆ. ಇಷ್ಟವಿಲ್ಲದವರಮೇಲೆ ಬೂದಿಚೆಲ್ಲಿ ಓಕಳಿಹಾಕತಕ್ಕದ್ದು ಕ್ರಿಮಿನಲ್ ತಪ್ಪಿತವಾಗುತ್ತೆ.

(೨) ನೇದಕ್ಕೆ ಉತ್ತರ:—ಮಾಲೀಕನ ಅನುಮತಿಯಿಲ್ಲದೆ ಸೌದೆ ತೆಗೆದುಕೊಂಡುಹೋದರೆ ಆಕೃತ್ಯವುಕಳವು ತಪ್ಪಿತವಾಗುತ್ತೆ.

(೩) ನೇದಕ್ಕೆ ಉತ್ತರ:—ಆತ್ಮಹತ್ಯಪ್ರಯತ್ನ ಅವರ ನಡವಳಿಕೆಯಿಂದ ಪಬ್ಲಿಕ್ ಯಾ ಸಂಸಾರಿಗಳಮಾನ ಸ್ವತ್ತು ದೇಹ ಇವುಗಳಿಗೆ ಭಾಧಕವಾಗತಕ್ಕದ್ದು ಇವುಗಳಿಗೆ ಅವಕಾಶಕೊಡದೆ ಆ ಉತ್ಸವನಡೆಸತಕ್ಕವರು ಇತರಯಾವ ಕೆಲಸಗಳನ್ನಾದರೂ ಮಾಡಿಕೊಳ್ಳಬಹುದು. ಮುಖ್ಯವಾಗಿ ಹೇಳುವುದೇನಂದರೆ–ಈ ಹೇಯವಾದ ನಡವಳಿಕೆಯ ಗುಣ ಅವಗುಣ ಇವುಗಳಿಗೆ ಆ ಉತ್ಸವನಡೆಸತಕ್ಕವರು ಮಾತ್ರ ಭಾಗಿಗಳಾಗಿರಬೇಕು. ಹಾಗಲ್ಲದೆ ಅವರ ದುಶ್ಚೇಷ್ಟೆಯಿಂದ ಪಬ್ಲೀಕಿಗೆ ತೊಂದರೆಆಗತಕ್ಕದ್ದಾಗಿದ್ದರೆ ಯಾ ಆದರೆ ಆಗ್ಯೆ ಈ ನಡವಳಿಕೆ ಕ್ರಿಮಿನಲ್ ತಪ್ಪಿತವಾಗುತ್ತೆ.

(೪) ನೇದಕ್ಕೆ ಜಬಾಬು:—ಫಿರ್ಯಾದಿಗೆ ಉಂಟಾಗತಕ್ಕ ಅವಮಾನ ಇತ್ಯಾದಿ ಇವುಗಳನ್ನ ನಿಂದಿಸಲ್ಪಡುವವನು ಮನಃಪೂರ್ವಕವಾಗಿ ನಡಿಸಿದ್ದರೆ ಕೋರ್ಟಿನವರು ಇದನ್ನು ಕ್ರಿಮಿನಲ್ ತಪ್ಪಿತವಾಗಿ ವಿಚಾರಣೆ ನಡಿಸೇನಡಿಸುತ್ತಾರೆ.

A Retired Officer.

ಭಕ್ತಿವಿಶೇಷ.

ಅಯ್ಯಾ ಪತ್ರಕರ್ತರೆ, ತಮ್ಮ ಲೋಕಮಾನ್ಯವಾದ ಪತ್ರಿಕೆಯಲ್ಲಿ ಕೊಂಚ ಸ್ಥಳವನ್ನಿಯ್ಯುವಿರೆಂದು ನಂಬಿರುತ್ತೇನೆ. ಕಳೆದ ಕಾರ್ತಿಕ ಶು॥ ೨ ಸೌಮ್ಯವಾಸರ ಮೊದಲ್ಗೊಂಡು ಶ್ರೀ ಬಸವೇಶ್ವರ ಪುರಾಣವನ್ನು ಚಿತ್ರದುರ್ಗ ಡಿ॥ ಜಗಲೂರು ತಾ॥ ಜಮಾಪುರದ ಪಾಟೀಲ್ ಮಹಾದೇವಪ್ಪನವರು ತಮ್ಮ ಗೃಹದಲ್ಲಿ ಬಹು ವಿಜೃಂಭಣೆಯಿಂದಲೂ ಭಕ್ತಿಪೂರ್ವಕವಾಗಿಯೂ ನಡೆಯಿಸಿದರೆಂದು ಹೇಳಲಿಕ್ಕೆ ಬಹಳ ಆನಂದವಾಗುತ್ತದೆ. ಪುರಾಣ ಪ್ರಾರಂಭದಿವಸದಲ್ಲಿ ಸದರಿ ಮಹಾದೇವಪ್ಪನವರು ತಮ್ಮ ಗೃಹವನ್ನು ತಳಿರು ತೋರಣಾದಿಗಳಿಂದಲಂಕರಿಸಿ ಒಳಭಾಗದಲ್ಲಿ ಪುರಾಣಶ್ರವಣ

ಮಂಟಪವನ್ನು ಮನೋಹರವಾಗಿ ರಚಿಯಿಸಿದ್ದರು. ಪ್ರಾರಂಭದಿವಸದಲ್ಲಿಯೇ ಅನೇಕ ಭಕ್ತಮಾಹೇಶ್ವರರ ಸಂದಣಿಯು ನೆರೆದಿದ್ದಿತು. ಪುರಾಣಪಠಣವು ಆಗ್ರಾಮದ ಶಾನುಭೋಗರು ಮ|| ರಾ|| ಕೃಷ್ಣಪ್ಪನವರಿಂದ ಸುಶ್ರಾವ್ಯವಾಗಿ ಮಾಡಲ್ಪಡುತ್ತಿತ್ತು. ಅದರ ವ್ಯಾಖ್ಯಾನವು ವೇ|| ಬೆಂಗಳೂರು ವೆಂಕಟಪತಯ್ಯ ಶಾಸ್ತ್ರಿಯವರಿಂದ ಸಪ್ರಮಾಣವಾಗಿಯೂ ಶ್ರೋತೃಜನರ ಕರ್ಣಾನಂದಕರವಾಗಿಯೂ ಮಾಡಲ್ಪಡುತ್ತಿದ್ದಿತು. ಹೀಗೆ ನಿತ್ಯಗಟ್ಲೆ ನೂರಾರು ಜನರುಗಳಿಗೆ ಭೋಜನಾದಿ ಸತ್ಕಾರಗಳು ಮಹಾದೇವಪ್ಪನವರಿಂದ ನಡೆಯಲ್ಪಡುತ್ತಿತ್ತು. ಪ್ರಾರಂಭಕಾಲ ಮೊದಲ್ಗೊಂಡು ಅಖೈರುಕಾಲವಾದ ಇದೇ ಸಂವತ್ಸರದ ಮಾರ್ಗಶಿರ ಬ|| ೧೬ ವರಿಗೆ ಅವಿಚ್ಛಿನ್ನವಾಗಿಯೂ ಭಕ್ತಿಪೂರ್ವಕವಾಗಿಯೂ ತನುಮನಧನಗಳನ್ನು ವೆಚ್ಚಮಾಡಿದ ಮಹಾದೇವಪ್ಪನವರು ಪುಣ್ಯಕೀರ್ತಿಗಳಿಗೆ ಭಾಜನರಾದರೆಂದು ಹೇಳುವದಕ್ಕೆ ಯಾವಸಂದೇಹವೂ ಇಲ್ಲಾ. ಮಹಾದೇವಪ್ಪನವರು ಉದಾರಮನಸ್ಸಿನಿಂದ ಮಾಡುವ ಸತ್ಕಾರ್ಯಗಳಿಗೆ ಸ್ಥಳ ಪರಸ್ಥಳಗಳಿಂದ ಅನೇಕ ವೀರಶೈವ ಭಕ್ತಮಾಹೇಶ್ವರರೂ ಇತರರೂ ಸಹ ನಿತ್ಯದಲ್ಲಿಯೂ ಬಂದು ಸಭೆಯು ಕಿಕ್ಕಿರಿಯುವಂತೆ ನೆರೆಯುತ್ತಿದ್ದರು. ಪುರಾಣಿಕರಾದ ಶ್ಯಾ|| ಕೃಷ್ಣಪ್ಪನವರ ಗಾನಮಾಧುರ್ಯದಿಂದಲೂ ವೇ|| ಶಾಸ್ತ್ರಿಯವರ ವಾಗ್ಝರಿಯಿಂದಲೂ, ಶ್ರೋತೃಗಳು ಚಿತ್ರಬೊಂಬೆಗಳಹಾಗೆ ತಲ್ಲೀನರಾಗಿರುತ್ತಿದ್ದರು. ಮತ್ತು ಶ್ರೀ ಬಸವೇಶ್ವರಪುರಾಣವು ಇದುವರೆಗೆ ಎಲ್ಲಿಯೂ ಬ್ರಾಹ್ಮಣರಿಂದ ಹೇಳಿಸಲ್ಪಡದೆ ಇರುವದರಿಂದಲೂ ಈಗ ಮೇಲ್ಕಂಡ ಶ್ಯಾ|| ರವರು ಶಾಸ್ತ್ರಿಯವರು ಸಹ ನಿರ್ಮಾತ್ಸರ್ಯಭಾವದಿಂದ ಈ ಪುರಾಣವನ್ನು ಸಾಂಗವಾಗಿ ನೆರವೇರಿಸುವದು ತುಂಬಾ ಆಶ್ಚರ್ಯಕರವಾದ್ದರಿಂದ ಅನೇಕರು ಬರುವದಕ್ಕೆ ಕಾರಣವಾಗಿತ್ತು. ಈ ಮಹಾಕಾರ್ಯದಲ್ಲಿ ಮುಂದಾಳುಗಳಾಗಿದ್ದ ಆ ಗ್ರಾಮನಿವಾಸಿಗಳೂ ಮುಖಂಡರುಮಾಡಿದ ಸಾಹಸವೂ, ವಿತರಣೆಯೂ, ಸ್ತೋತ್ರಾರ್ಹವಾಗಿತ್ತು. ಪುರಾಣದ ಅಖೈರುದಿವಸದಲ್ಲಿ ದೋಣಿಹಳ್ಳಿಮಠದ ವೇ|| ತಿಪ್ಪೆಸ್ವಾಮಿಯವರು ಮೊದಲಾದ ಮಠಸ್ಥರೂ ಅನೇಕಮಂದಿ ಶ್ರೋತೃಜನಮಂಡಳಿಯೂ ನೆರದಿದ್ದಿತು. ಪುರಾಣದ ಅಖೈರು ಮಹಾಗಣಾರಾಧನೆಯೂ ಮತ್ತು ಭೂರಿದಕ್ಷಿಣೆಯೂ, ಅನೇಕದಾನಧರ್ಮಾದಿಗಳೂ ಮಹಾದೇವಪ್ಪನವರಿಂದ ಮಾಡಲ್ಪಟ್ಟ ನಂತರ ಶ್ರೀ ಬಸವೇಶ್ವರ ಪುರಾಣದ ಮೆರವಣಿಗೆಯುತ್ಸವವು ನಂದೀಧ್ವಜವಾದ್ಯ ವೈಭವದಿಂದ ನಡೆಯಿಸಲ್ಪಟ್ಟು ಮಹಾದೇವಪ್ಪನವರಿಗೆ ಆಯುರಾರೋಗ್ಯವನ್ನೂ ಧನಕನಕಾದಿಸಂಪತ್ಸಮೃದ್ಧಿಯನ್ನೂ ಪುತ್ರಮಿತ್ರಕಳತ್ರಾದಿಸಂತೋಷವನ್ನೂ ಶ್ರೀ ಬಸವೇಶ್ವರನು ಉಂಟುಮಾಡಲೆಂಬ ಜಯಘೋಷದಿಂದ ಸರ್ವರೂ ಹರಸಿ ತಮ್ಮತಮ್ಮ ಸ್ಥಾನಂಗಳಿಗೆ ಬಿಜಯಂಗೈದರು.

ಪ್ರತ್ಯಕ್ಷದರ್ಶಿ ಚಂದಾದಾರ್.

ಊದಬತ್ತಿಗಳು.

5

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,

ಮೈಸೂರು, ಸುಗಂಧಕಾರಿ.

ಉತ್ತಮ ಗ್ರಂಥಗಳು.

10

ಶಿವಪೂಜಾಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿಥೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿಥೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಥೆ.

ಪುರುಷಸೂಕ್ತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿಥೆ.

ಬಸವಲಿಂಗಸ್ವಾಮಿಗಳು,

ಹೊಸಮಠ ಮೈಸೂರು.

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

1

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೊಂಕಿಗೆ ಗುರಿಯಾಗುವದಿಲ್ಲ. ಬಲ್ಲೀಶಕ್ತಿವರ್ಧಕವಾಗಿದೆ— ೨೫೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.— ಪಿತ್ತವನ್ನೂ, ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.— ಉಜ್ಜುತ್ತಾ ಬಂದರೆ ಪೊಸಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರು, ಹಲ್ಲುಗಳ ಬಾಳೆ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು— ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ— ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಷ್ಟೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ಸೀತಾರಾಘವ

ವೈದ್ಯಶಾಲಾ, ಮೈಸೂರು.

73

ಪದ್ಮರಾಜ ಪುರಾಣಂ.

ಇದು ಕೆರೆಯ ಪದ್ಮಣಾರ್ಯರೆಂಬ ಮಹಾತ್ಮ ಪುಣ್ಯಚರಿತ್ರೆಯು. ಮತ್ತೂ ಇದರಲ್ಲಿ ಶಿವಾದ್ವೈತಸಾಕಾರಸಿದ್ಧಾಂತವು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ.

ಕ್ರಯ ರೂ. ೨ ಪೋಸ್ಟೇಜು ೪ ಆಣೆ.

ಬಿ. ಮಲ್ಲಾರಾಧ್ಯರು,

ಗರ್ಲ್ಸ್ ಸ್ಕೂಲ್ ಗಲ್ಲಿ, ಹಳೇ ಅಗ್ರಹಾರ, ಮೈಸೂರು

ಅಥವಾ ಬಿ. ಬಸವಾರಾಧ್ಯರು,

ಡೆಪ್ಯುಟಿ ರಿಜಿಸ್ಟ್ರಾರ್, ಛೀಫ್ ಕೋರ್ಟ್,

ಬೆಂಗಳೂರು.

ಉತ್ತಮ ಗ್ರಂಥಗಳು.

114

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೩-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ — ೦-೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಕಾಶಕ ಮಂಡಳಿ,

ಮೈಸೂರು.

ಜರ್ಮನ್ ಸಾಮ್ರಾಜ್ಯ.

5

ಕನ್ನಡದಲ್ಲಿ ಇದುವರೆಗೂ ಇಂತಹ ಪುಸ್ತಕವಿರಲಿಲ್ಲ ಜಪಾನಿನ ವಿಷಯದಲ್ಲಿ ಎಲ್ಲವನ್ನೂ ವಿಶದವಾಗಿ ತಿಳಿಸುತ್ತದೆ. ಆಶ್ಚರ್ಯಕರವಾದ ಸಂಗತಿಗಳು, ಪ್ರತಿಯೊಬ್ಬರೂ ಓದಬೇಕಾದದ್ದು. ಮೇಲಾದಕಾಗದ. ಅಂದವಾದ ಮುದ್ರಣ ಬೆಲೆ ೬ ಆಣೆ. ಕಿಂಡರ್ ಗಾರ್ಡನ್ ಕಥೆಗಳು ಸ್ಕೂಲ್ಮಾಸ್ಟರುಗಳಿಗೆ ಅವಶ್ಯಕವಾದದ್ದು ೧೦ ಆಣೆ. ಉನ್ಮತ್ತೆ— ಬಂಗಾಳಾದೇಶದ ಸ್ತ್ರೀಯಚರಿತ್ರೆ ೨|| ಅಣೆ.

ದೊರೆಯುವಸ್ಥಳ— ಜಿ. ಕೃಷ್ಣಶಾಸ್ತ್ರಿ ಬಿ|| ಎ|| ನಾರ್ಮಲ್‌ಸ್ಕೂಲ್ ಮೈಸೂರ್. ಮತ್ತು ಜನರಲ್‌ಏಜನ್ಸಿ,

ಮೈಸೂರು.

೧೯೧೧ನೇ ಇಸವಿ ಏಪ್ರಿಲ್ ತಾ|| ೧೦ ರಿಂದ ೧೯೧೧ನೇ ಏಪ್ರಿಲ್ ತಾ|| ೧೬ ರವರಿಗೆ ಸಲ್ಲುವ ಶಾಲಿವಾಹನ ಶಕ ೧೮೩೩ನೇ ವಿರೋಧಿಕೃತು ಸಂವತ್ಸರದ ಚೈತ್ರ ಶು|| ದ್ವಾದಶಿಯಿಂದ ಚೈತ್ರ ಬ|| ತದಿಗೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಾಸತೇದಿ
10	¹ಸೋ	ದ್ವಾ	31-45	ಹು	56-25	28
11	²ಮಂಗ	ತ್ರ	30-30	ಉತ್ತ	57-17	29
12	³ಬುಧ	ಚ	30-31	ಹಸ್ತ	60-0	30
13	⁴ಗುರು	ಪೌ	31-47	ಹಸ್ತ	0-10	1
14	ಶುಕ್ರ	ಪಾ	34-21	ಚಿತ್ತ	3-37	2
15	ಶನಿ	ಬಿ	38-0	ಸ್ವಾ	8-14	3
16	ಭಾನು	ತ	42-33	ವಿ	13-48	4

(1) ಮೇಲುಕೋಟೆಯಲ್ಲಿ ಚೆಲುವರಾಯಸ್ವಾಮಿ ರಥ. (2) ಅನಂಗತ್ರಯೋದಶಿ ಪ್ರದೋಷ. (3) ಚೆಲುವರಾಯಜಯಂತಿ ಶ್ರೀರಂಗದಲ್ಲಿ ತೋರಥ. (4) ಚಿತ್ರಾಪೂರ್ಣಿಮಾ ಭೌಚ್ಚ ಮನು. ಚಿತ್ರವಿಷುಪುಣ್ಯಕಾಲ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೇಯಾತ್ ।

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।

ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತೀಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ಕ ೧೯೧೧ ನೇ ಇಸವಿ ಮೇ ತಾರೀಖು ೧ ನೇ ಸೋಮವಾರ. [ಸಂಖ್ಯೆ ೧೮

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

4

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೊಂಕಿಗೆ ಗುರಿಯಾಗುವದಿಲ್ಲ. ಬಲ್ಲೀಶಕ್ತಿವರ್ಧಕವಾಗಿದೆ— ೨೫೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.— ಪಿತ್ತವನ್ನೂ, ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.— ಉಜ್ಜುತ್ತಾ ಬಂದರೆ ಪೊಸಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರು, ಹಲ್ಲುಗಳ ಬಾಳೆ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು— ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ— ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಷ್ಟೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:— ಶ್ರೀ ಸೀತಾರಾಘವ

ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ವಾಂಡೆನ್ಸ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ

38 ಮೈಸೂರು.

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೬೦-೮೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚ ಕರ್ಪೂರದಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೦-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟಪುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೩-೦.

೨ ರಿಂದ ೪ ರವರಿಗೆ ೦-೧೦-೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೦-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧|| ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿಸಿಕೊಳ್ಳಬಹುದು. ಅಗ್ಗಿ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದುಗಣವಾಗಿ ದರವು ಬೀಳುವುದು.

ಧ್ಯವೇಶಿ ! (ಸತ್ಯಮೇವಜಯತೆ) ಸ್ವದೇಶಿ !

49

ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲಕೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—

ವೈದ್ಯ. ಜಿ. ಎಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡಾ.

ಸೌಗಂಧಿಕಾಪರಿಣಯ

(ಹಿಂದಣವಾರದ ಶೇಷ.)

ಅವರು ಮೊದಲಿನಂತೆ ಹಂಸಾರೂಢರಾಗಿ ನದೀತೀರವಂ ಕುರಿತು ತೆರಳಿದ ಬಳಿಕ ಉಗ್ರಬಾಹುವು ಸಿಂಹಾಸ್ಯನೆಂಬ ಮಂತ್ರಿಯನ್ನೇಕಾಂತದಲ್ಲಿ ಕರೆದು, ಎಲೈ ಮಂತ್ರಿಯೆ ! ರಾಜಪುತ್ರನಿಗೂ, ನಮಗೂ ಉಂಟಾದ ಸಂವಾದವಂ ತಿಳಿದಿರುವೆಯಷ್ಟೆ. ಇದರಲ್ಲಿ ನಿನಗೆ ತೋರಿದ ಅರ್ಥವಂ ಪೇಳುವನಾಗೆನಲು, ಅವನು- ಅಯ್ಯಾ ರಾಕ್ಷಸರಾಯನೆ! ಆ ನೃಪತಿಯು ನಿನ್ನಲ್ಲಿರುವ ಮಹಾಗಜದಲ್ಲಿ ದೃಷ್ಟಿಯನ್ನಿಟ್ಟು, ತನ್ನ ಹಂಸೆಯಂ ಕೊಡುವೆನೆಂದು ಸಮ್ಮತನಾಗಿ ಹೋಗಿರುವನು. ಮಹಾಗಜಮೂಲದಿಂದ ನಿನಗೆ ಸಕಲ ಸಂಪತ್ತುಗಳೂ ಉಂಟಾಗಿರುವುದರಿಂದ ಅದಂ ಕೊಡುವಲ್ಲಿ ನಿನ್ನ ರಾಜ್ಯಲಕ್ಷ್ಮಿಯು ಅದರಲ್ಲೇ ಕುಳಿತು ತೆರಳುವಳು. ಆದುದರಿಂದ ಗಜವಂ ಅನ್ಯರಿಗೆ ಕೊಡಕೂಡದು. ಹಂಸೆಯಾದರೋ ಅಂತರಿಕ್ಷ ಗಮನಕ್ಕೆ ಮಾತ್ರ ಉಪಯೋಗವಾಗಿರುವುದು. ಆದುದರಿಂ ಅವರಂ ಮೋಸಗೊಳಿಸಲೆಣಿಸಿ ಬಯಸಿದುದಂ ಕೊಡುವೆವೆಂದು ಪೇಳಿ, ಹಂಸೆಯಂ ಮೊದಲು ಸ್ವಾಧೀನವಂ ಮಾಡಿಕೊಂಡು ಕಾಲಹರಣಮಾಡುತ್ತಿದ್ದರೆ, ಅವರಿಗೆ ಇಚ್ಛಾನುಸಾರ ಗಮನತಪ್ಪಿದ ಬಳಿಕ ಮನುಷ್ಯಮಾತ್ರರಾದ ಅವರಿಂದ ಆಗತಕ್ಕುದೇನೆಂದು ಪೇಳಲದಂ ಕೇಳಿ ಉಗ್ರಬಾಹುವು ದೈವಬಲ ತಪ್ಪಿದುದರಿಂದ ಆ ದುರ್ಮಂತ್ರಿಯ ಮಾತಿನ ವಿಶ್ವಾಸವಂ ಮಾಡಿ- ಕಾರ್ಯಾಂತರನೊಳಿರುತ್ತಿರಲು, ಆ ನೃಪಮಂತ್ರಿಗಳೀರ್ವರೂ ಸಾಯಂಕಾಲದ ಸಮಯದಲ್ಲಿ ಮೊದಲಿನಂತೆ ಹಂಸಾರೂಢರಾಗಿ ಉಗ್ರಬಾಹುವಿನ ಆಸ್ಥಾನದ ಬಳಿಗೆ ಬಂದು ಇಳಿದು ಅವನ ಸಮೀಪದಲ್ಲಿ ಉಚಿತದಿಂ ಕುಳಿತಿರಲವನು- ಎಲೈ ನೃಪತಿಯೆ! ನಿಮ್ಮ ಹಂಸೆಗಿಂತ ಶತಗುಣಾಧಿಕವಾದ ಮಹಾ ಗಜವಂ ಕೊಡುವೆವು. ಹಂಸೆಯಂ ಕೊಡುವರಾಗಿ. ಅದರ ಸ್ವಭಾವವೆಂತಿರುವುದು ? ಪೇಳಬಹುದೆಂದು ನುಡಿಯಲಾ ಮಾತಿಗೆ ಸುಮತಿಯು- ಅಯ್ಯಾ ರಾಕ್ಷಸಾಧಿಪತಿಯೆ ! ಈ ಹಂಸೆ ಇರುವ ಪ್ರದೇಶದಲ್ಲಿ ಹಿಂಸಾದಿಗಳೂ, ಅಸತ್ಯವೂ ನಡೆಯಕೂಡದು. ನೀನು ನಿಯತನಾಗಿರುವನಾದರೂ, ನಿನ್ನ ಸ್ವಜನರ ಮನೋಗತವೆಂತಿರುವುದೊ ? ಈ ಹಂಸೆಗೆ ಜುಗುಪ್ಸೆ ತೋರಿದ ಬಳಿಕ ನಿಮ್ಮಂ ಮೀರಿ, ನಮ್ಮಂ ಉಪೇಕ್ಷಿಸಿ, ತನಗೆ ಜನ್ಮಸ್ಥಾನವಾದ ಮಾನಸ ಸರೋವರವನ್ನೈದುವುದು. ಹಾಗಾದರೆ, ನಿಮ್ಮ ಮನೋರಥವು ವ್ಯರ್ಥವಾಗುವುದು ಎಂದು ಪೇಳಲಾ, ಉಗ್ರಬಾಹುವು- ಎಲೈ ನೃಪಮಂತ್ರಿಯೆ ! ನೀನು ಹೇಳಿದ ಮರ್ಯಾದೆಯಿಂದ ನಡೆದುಕೊಳ್ಳುವೆವು. ನಾವಾಗಿ ಅಪೇಕ್ಷಿಸಿ ತೆಗೆದುಕೊಂಡ ವಸ್ತುವಿನಲ್ಲಿ ಉಪೇಕ್ಷೆಯಂ ಮಾಡುವುದಕ್ಕೆ ನಾವು ಮರುಳುಗಳೆ? ಎನಲು, ಆಗ ಸುಮತಿಯು ಹಾಗಾದರೆ ಹಂಸೆಯು ನಿಮ್ಮ ವಶವಾದುದು ನೋಡಿಕೊಳ್ಳುವರಾಗಿ, ನಾವು ಏರುವುದಕ್ಕೆ ಅನುರೂಪವಾದ ಗಜವಂ ತೋರಿಸಿರೆನಲು, ಆ ಮಾತಿಗೆ ಉಗ್ರಬಾಹುವು ಅದು ನಾಳೆ ಆಗುವುದು. ಪ್ರಕೃತದಲ್ಲಿ ಕುಳಿತು ಸಂಚರಿಸುವುದಕ್ಕೆ ರಥವು ಸಿದ್ಧವಾಗಿರುವುದು. ಇದರಿಂ ಸಂಚರಿಸುವರಾಗಿಯೆಂದು ಪೇಳಿ ಮನೋಹರವಾದ ರಥವಂ ತರಿಸಿ ನಿಲ್ಲಿಸಿ, ಹಂಸೆಯಂ ಕೈಯಿಂದ ಸವರುತ, ವಿಸ್ತಾರವಾದ ಸುವರ್ಣಪಂಜರದಲ್ಲಿ ಕೂಡಿ, ಮೃದುವಾದ ಮೃಣಾಳಶಕಲಗಳಂ, ಕಮಲಕೇಸರಗಳಂ ಕೂಗ ಕೊಡುತ, ರಾಜಮಂತ್ರಿಗಳಂ ಕುರಿತು ಹೋಗಿಬನ್ನಿರೆಂದು ಪೇಳಲವರು ರಥವನ್ನೇರಿ ನದೀತೀರವಂ ಕುರಿತು ತೆರಳಿದರು, ಇತ್ತಲಾ ಶಂಕುಕರ್ಣನು ಇದೆಲ್ಲವಂ ತಿಳಿದು ಉಗ್ರಬಾಹುವಂ ಕುರಿತು, ಅಯ್ಯಾ ಅರಸೆ ! ಇಷ್ಟು ದಿವಸ ಪರ್ಯಂತವೂ ರಾಜಕಾರ್ಯದಲ್ಲಿ ನನ್ನೊಡನೆ ಮಂತ್ರಾಲೋಚನೆಯಂ ಮಾಡುತ ಬಹು ಯಶೋವಂತನಾಗಿರುವನಾದೆ. ಈಗ ಅನ್ಯರ ಆಲೋಚನೆಯು ನಿನ್ನ ಮನಕ್ಕೆ ಬಂದಬಳಿಕ ನಿನ್ನ ಯೋಗಕ್ಷೇಮವೇನಿದ್ದರೂ ಅವರನ್ನೇ ಹೊಂದಿತು. ನಾನು ಇಲ್ಲಿದ್ದು ಫಲವೇನು? ವಿದೇಶಗತನಾಗುವೆನು. ಆದರೂ ಬಹುಕಾಲ ನಿನ್ನಲ್ಲಿದ್ದುದರಿಂದ ಈಗಲೂ ನಿನ್ನ ಕ್ಷೇಮವನ್ನೇ ಬಯಸಿ ಪೇಳ್ವರಿದು ಖಂಡಿತವಾಗಿ ಪೇಳುವೆನು. ಆ ಹಂಸೆಯಂ ಎಂದಿನಂತೆ ಅವರ ವಶವಂ ಮಾಡಿ, ಸಮ್ಮಾನದಿಂ ಕಳುಹಿಸಿಕೊಡುವವನಾಗು. ಇಲ್ಲದಿರೆ ಅವರಂ ಕರೆಕಳುಹಿ ಆನೆಯಮೇಲೆ ಆನೆಯಂಬಿಟ್ಟು ಕೊಟ್ಟು ಕಳುಹು. ಈ ಎರಡರ್ಥವನ್ನತಿಕ್ರಮಿಸಿ ನಡೆದರೆ, ರಾಕ್ಷಸರಿಗೆ ಕ್ಷೇಮವುಂಟಾಗಲಾರದು; ಇದು ನಿಶ್ಚಯವು. ಇದರಮೇಲೆ ಅದೃಷ್ಟವಿದ್ದಂತಾಗುವುದೆಂದು ಬಿನ್ನವಿಸಿ, ಉಗ್ರಬಾಹುವು ಎಷ್ಟು ಒಡಂಬಡಿಸಿದರೂ ಸಮ್ಮತನಾಗದೆ ಪತ್ನೀಪುತ್ರಸಮೇತನಾಗಿ ಪಾತಾಳಲೋಕವಂ ಕುರಿತು ತೆರಳಿದನು. ಇತ್ತಲಾ ನದೀತೀರದಲ್ಲಿಳಿದಿರುವ ರಾಯನು ಮತ್ತೆ ಮೂರುನಾಲ್ಕು ದಿನದವೇಳೆ ಛಾಯಾಗುಪ್ತನನ್ನೆನೆಯಲು, ಆ ಹಂಸರೂಪವಂ ತಾಳಿ ರಾಕ್ಷಸನ ಬಳಿಯೊಳ್ ಪಂಜರದಲ್ಲಿದ್ದ ಛಾಯಾಗುಪ್ತನು ರಾತ್ರಿಯೊಳ್ ಸೂಕ್ಷ್ಮರೂಪದಿಂ ಪಂಜರದ ರಂಧ್ರದಿಂ ಹೊರಟು ನೃಪತಿಯಿದ್ದೆಡೆಗೆ ಬಂದು, ಹಂಸರೂಪವಂ ಬಿಟ್ಟು ಕಾಣಿಸಿಕೊಂಡು, ಅಭಿನಂದಿಸಿ ನಿಂದಿರಲು, ಸುಗಂಧರಾಜನು-ಎಲೈ ಯಕ್ಷಾಧಿಪತಿಯೆ ! ಅದೃಶ್ಯನಾಗಿ ನಾವು ಕುಳಿತುಕೊಳ್ಳುವ ರಥವಂ ರಕ್ಷಿಸುತಲಿರುವವನಾಗೆಂದು ಪೇಳಿ, ಸುಖನಿದ್ರೆಯಂಗೈದು, ಅರುಣೋದಯದೊಳೆದ್ದು ನದಿಯೊಳ್ ಸ್ನಾನಾಹ್ನಿಕಗಳನ್ನೆರವೇರಿಸಿ, ಅಸ್ತ್ರಮಂತ್ರಗಳನ್ನ್ಯಾಸಪೂರ್ವಕವಾಗಿ ಜಪಿಸಿ, ರಥದ ಬಳಿಯಲ್ಲಿ ಸನ್ನಿಹಿತರಾಗಿರಬೇಕೆಂದು ಪ್ರಾರ್ಥಿಸಿ, ಸುಮತಿಯೊಡನೆ ರಥಾರೂಢನಾಗಲು, ಅತ್ತಲಾ ಉಗ್ರಬಾಹುವಿನ ಆಸ್ಥಾನದೊಳ್ ಪಂಜರದಲ್ಲಿದ್ದ ಹಂಸೆಯಂ ಕಾಣದೆ ಗ್ರಾಸಾರ್ಥವಾಗಿ ಕೊಟ್ಟ ತಾವರೇ ದಂಟುಗಳು ಮಾತ್ರ ಉಳಿದಿರುವುದನ್ನೋಡಿ, ಪಂಜರರಕ್ಷಕರು ಉಗ್ರಬಾಹುವಿಗೆ ವಿಜ್ಞಾಪಿಸಲು, ಅವನು ರಭಸದಿಂದೆದ್ದು ಬಂದು ನೋಡಿ, ಹಾ ! ಮೋಸವಾಯಿತು; ಏನೋ ಅಚಾತುರ್ಯ ನಡೆದಿರುವುದರಿಂದ ಹಂಸೆಯು ಅದೃಶ್ಯವಾಯಿತು. ಶಂಕುಕರ್ಣನ ವಾಕ್ಯದಲ್ಲಿ ಉಪೇಕ್ಷೆಯಂ ಮಾಡಿದ್ದಕ್ಕೆ ಏನು ಅನಿಷ್ಟ ಸಂಭವಿಸುವುದೊ ? ಗಜವಂ ಕೊಡಬೇಕೆಂದು ಕೇಳಿದರೆ, ಅವರಿಗೆ ಏನು ಪ್ರತ್ಯುತ್ತರವಂ ಕೊಡಲಿ ? ಎಂದು ಚಿಂತಿಸುತ, ಭಟರನ್ನೋಡಿ, ಹಂಸೆಯೆಲ್ಲಿಹೋಗಿರುವುದು ? ಹುಡುಕಿ ತರುವರಾಗಿರಿಯೆಂದು ನಿಯಮಿಸಿ, ಯಾವುದೂ ಮನಕ್ಕೆ ಬಾರದೆ, ವ್ಯಸನಪಡುತ, ಆ ಸ್ಥಾನದಲ್ಲಿ ಕುಳಿತಿರ್ದ ಸಮಯದೊಳ್ ನೃಪಮಂತ್ರಿಗಳು ರಥಾರೂಢರಾಗಿ ಬಂದು ಆಸ್ಥಾನದ ಬಳಿಯಲ್ಲಿಳಿದು ರಾಜಸಭೆಗೆ ಪೋಗಿ, ಉಚಿತದಿಂ ಕುಳಿತು, ಬಳಿಕ ಸುಮತಿಯು ಉಗ್ರಬಾಹುವಂ ನೋಡಿ- ಅಯ್ಯಾ ರಾಕ್ಷಸಾಧಿಪತಿಯೆ ! ನಾವು ಈ ಪುರದ ರಮಣೀಯತೆಯಂ ನೋಡಲೆಣಿಸಿ ಬಂದು ಎಂಟು ದಿವಸವಾಯಿತು. ಲವಣಸಮುದ್ರದ ಪೂರ್ವತೀರದಲ್ಲಿಳಿದಿರುವ ನಮ್ಮ ಸೇನೆಗಳು ನಾವು ಪೇಳಿಬಂದಂತೆ ಹೋಗದೆ ವಿಳಂಬವಂ ಮಾಡಿದುದರಿಂದ ಎಷ್ಟು ವ್ಯಸನಪಡುವುದೊ ! ನಮ್ಮ ರಾಜೇಂದ್ರನಿಗೆ ಸೇನೆಯಂನೋಡಲೆಣಿಸಿ ಮನತವಕವಿಡುತಲಿದೆ. ನೀವು ಆಡಿದ ರೀತಿಗೆ ಮದಗಜವಂ ಕೊಡಿಸಿದರೆ ಜಾಗ್ರತೆಯಿಂದ ತೆರಳುವೆವು ಎಂದು ಪೇಳಲು, ಅದಂ ಕೇಳಿ ಉಗ್ರಬಾಹುವು ಅಯ್ಯಾ ನೃಪಮಂತ್ರಿಯೆ ! ನೀವು ಕೊಟ್ಟಿದ್ದ ಹಂಸೆಯು ನೆನ್ನೆ ರಾತ್ರಿವೇಳೆಯಲ್ಲಿ ಅದೃಶ್ಯವಾಗಿ ಹೋಯಿತು. ಅದರ ಚಿಂತೆಯಲ್ಲೇ ಇರುವೆನೆಂದು ಪೇಳಲು, ಸುಮತಿಯು, ಇದೇನಾಶ್ಚರ್ಯವು ! ಹಂಸೆಯಂ ಯಾರು ಕೆಣಕಿದರೋ ? ಅಥವಾ ಅಶುಚಿಸಂಬಂಧವುಂಟಾಯಿತೊ ? ನಿನ್ನ ವಶವಾದ ಬಳಿಕ ಅದರ ಯೋಗಕ್ಷೇಮವು ನಿನಗೇ ತಿಳಿಯಬೇಕು. ನಿಮ್ಮಂ ಮೀರಿ ಎಲ್ಲಿಗೆ ಹೋಗುವುದು ? ಅದಂ ನಿನ್ನ ವಶವಂ ಮಾಡಿದಾಗಲೇ ಅದರ ಚಿಂತೆಯಂ ಬಿಟ್ಟೆವು.

(ಸಶೇಷ.)

ತುಲಾಭಾರ.

ಈ ವರ್ಷ ಡಿಸೆಂಬರ್ ತಿಂಗಳಲ್ಲಿ ಇಂಡಿಯಾ ಚಕ್ರವರ್ತಿ ಮತ್ತು ಚಕ್ರವರ್ತಿನಿಯವರಾದ ಶ್ರೀ ಜಾರ್ಜ್ ಪ್ರಭುಗಳೂ ಮತ್ತು ಶ್ರೀ ಮೇರಿ ರಾಣಿಯವರೂ ಸಹಾ ಇಂಡಿಯಾ ದೇಶಕ್ಕೆ ತಾವಾಗಿ ಬಂದು ಇಂದ್ರಪ್ರಸ್ತಪುರದಲ್ಲಿ (ಡೆಹಲಿ ಪಟ್ಟಣದಲ್ಲಿ) ಪಟ್ಟಾಭಿಷಿಕ್ತರಾಗುತ್ತಾರಷ್ಟೆ. ಈ ಶುಭ ಸಮಯದಲ್ಲಿ ಅವರೀರ್ವರೂ ಭಂಗಾರದಲ್ಲಿ ತೂಗಿಸಿಕೊಂಡು ಆ ಸುವರ್ಣವನ್ನು ದಾನಧರ್ಮ ಪರೋಪಕಾರಗಳಲ್ಲಿ ವಿನಿಯೋಗಿಸುವುದು ಉಚಿತವೆಂದು ಈ ದೇಶದಲ್ಲಿ ಅನೇಕ ಪ್ರಮುಖರು ಅಭಿಪ್ರಾಯಪಟ್ಟಿರುತ್ತಾರೆ. ಈ ಪದ್ಧತಿಯು ಇಂಡಿಯಾ ದೇಶದಲ್ಲಿ ನೂತನವಾದುದಲ್ಲವೆಂತಲೂ, ಪುರಾತನ ಕಾಲದಲ್ಲಿ ಬಹುಮಂದಿ ಚಕ್ರವರ್ತಿಗಳು ಈ ಪ್ರಕಾರ ತುಲಾ ದಾನವನ್ನು ನೆರವೇರಿಸಿರುವರೆಂತಲೂ, ಹಿಂದೂ ಪೂರ್ವಚರಿತ್ರೆಗಳಿಂದ ತಿಳಿಯಬರುತ್ತದೆ. ಇದನ್ನೆಲ್ಲಾ ವಿಮರ್ಶಿಸಿ ಮದರಾಸಿನ ಮೆ॥ ಸಿ. ಹಯವದನರಾಯರು “ ಮದರಾಸ್ ಮೇಲ್ ” ಎಂಬ ಇಂಗ್ಲೀಷ್ ಪತ್ರಿಕೆಯಲ್ಲಿ ಬಹಳ ಸ್ವಾರಸ್ಯವುಳ್ಳ ಒಂದು ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ಕಂಡುಬರುವ ಮುಖ್ಯ ಅಂಶಗಳನ್ನು ನಮ್ಮ ವಾಚಕರ ತಿಳುವಳಿಕೆಗೋಸ್ಕರ ನಾವು ಇಲ್ಲಿ ಪ್ರಕಟಿಸಿರುತ್ತೇವೆ.

ಭಂಗಾರದಲ್ಲಿ ತೂಕ ಮಾಡಿಕೊಳ್ಳುವುದು ಹಿಂದೂಗಳಿಗೆ ನೂತನಪದ್ಧತಿಯಾಗಿಲ್ಲವು. ದಾನಗಳನ್ನು ಕುರಿತು ಬರೆಯಲ್ಪಟ್ಟಿರುವ ಹಿಂದೂ ಗ್ರಂಥಗಳಲ್ಲಿ ಈ ತುಲಾ ದಾನದ ವಿವರವು ವರ್ಣಿತವಾಗಿರುವುದು. ರಾಜನು ಮಾಡಬೇಕಾದ ಹದಿನಾರು ಬಗೆಯ ದಾನಗಳಲ್ಲಿ ಇದು ಒಂದಾಗಿರುವುದೆಂದು ಆ ಪುಸ್ತಕಗಳಲ್ಲಿ ಹೇಳಲ್ಪಟ್ಟಿದೆ. ತುಲಾಭಾರ, ತುಲಾಪುರುಷ ಮತ್ತು ತುಲಾದಾನ ಎಂಬ ಮಾತುಗಳಿಂದ ಅದು ಕರೆಯಿಸಿಕೊಳ್ಳಲ್ಪಟ್ಟಿರುವುದು. ಘಟ್ಟಿ ಭಂಗಾರವನ್ನೇ ಇಟ್ಟು ತೂಗುತ್ತಿದ್ದರು. ಆದರೆ ಭಂಗಾರದ ನಾಣ್ಯಗಳನ್ನೂ ಮತ್ತು ಕೆಲವುವೇಳೆ ಮುತ್ತುಗಳನ್ನೂ ಇಟ್ಟು ತೂಗುತ್ತಿದ್ದರೆಂದು ಕಂಡುಬರುತ್ತದೆ. ತೂಗಿಕೊಳ್ಳುವುದು ತುಲಾಭಾರ; ತೂಗಿಕೊಂಡವನು ತುಲಾಪುರುಷ; ತೂಗಿದುದನ್ನು ದಾನ ಮಾಡುವುದು ತುಲಾದಾನ ಎಂದೆನಿಸಿಕೊಂಡಿರುವುದು. ಪೂರ್ವದಲ್ಲಿ ಈ ಕರ್ಮವನ್ನು ರಾಜರೇ ನೆರವೇರಿಸುತ್ತಿದ್ದರೆಂದು ಕಾಣುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಅವರ ಪತ್ನಿಯರೂ ಸಹ ತೂಗಿಸಿಕೊಳ್ಳುತಿದ್ದರು. ಕಿರೀಟಧಾರಣೆಯ ಕಾಲದಲ್ಲಿಯೇ ಈ ಉತ್ಸವವು ನೆರವೇರಿಸಲ್ಪಡುತ್ತಿದ್ದಿತೆಂದು ತೋರುತ್ತದೆ. ಆದರೆ ರಾಜನು ದಂಡಯಾತ್ರೆಯನ್ನು ಮಾಡಿ ಶತ್ರುಗಳನ್ನು ಸೋಲಿಸಿ ದಿಗ್ವಿಜಯವನ್ನು ಪಡೆದುಬಂದಾಗಲೂ ಈ ಶಾಸ್ತ್ರವನ್ನು ನೆರವೇರಿಸಿ ತಾನು ನೂತನವಾಗಿ ಗೆದ್ದ ರಾಜ್ಯಕ್ಕೆ ಒಡೆಯನಾದುದನ್ನು ಪ್ರಕಟಪಡಿಸಿಕೊಳ್ಳುತ್ತಿದ್ದನು. ಒಂದೊಂದುವೇಳೆ ರಾಜನಾದವನು ಯಾವುದಾದರೂ ಒಂದು ಪ್ರಸಿದ್ಧ ಪುಣ್ಯ ಸ್ಥಳಕ್ಕೆ ಯಾತ್ರೆ ಹೋಗಿ ಬಂದಾಗಲೂ ಈ ಕರ್ಮವನ್ನು ನೆರವೇರಿಸುತ್ತಿದ್ದನೆಂದು ತಿಳಿಯುವುದು.

ತುಲಾಭಾರ ಕ್ರಮವು.

ಈ ಕರ್ಮವು ಒಂದು ದಿವ್ಯವಾಗಿ ಅಲಂಕರಿಸಲ್ಪಟ್ಟ ಪ್ರತ್ಯೇಕವಾದ ಮಂಟಪದಲ್ಲಿ ನೆರವೇರಿಸಲ್ಪಡುತ್ತಿದ್ದಿತು. ಈ ಮಂಟಪದ ಮಧ್ಯದಲ್ಲಿ ಒಂದು ಭಾರಿ ತಕ್ಕಡಿಯು ಅಲಂಕರಿಸಲ್ಪಟ್ಟು ಇರಿಸಲ್ಪಡುತ್ತಿದ್ದಿತು. ರಾಜನಾದವನು ತಕ್ಕಡಿಯ ಒಂದು ಪ್ರದೇಶದಲ್ಲಿ ಕುಳಿತುಕೊಳ್ಳಲು ಅದರ ಮತ್ತೊಂದೆಡೆಯಲ್ಲಿ ಸಮತೂಕವಾಗುವವರಿವಿಗೂ ಭಂಗಾರವು, ಅಥವಾ ಭಂಗಾರದ ನಾಣ್ಯಗಳು, ಅಥವಾ ಮುತ್ತುಗಳು ಇರಿಸಲ್ಪಡುತ್ತಿದ್ದುವು. ರಾಜನು ಈ ಪ್ರಕಾರ ತೂಗಿಕೊಂಡ ನಂತರ ಗೋದಾನ, ಭೂದಾನ, ಭೂರಿದಾನ ಮುಂತಾದ ಇನ್ನೂ ವಿಶೇಷವಾದ ದಾನಗಳನ್ನು ಮಾಡಬಹುದಾಗಿದ್ದಿತು. ಈ ಪ್ರಕಾರ ತೂಗಲ್ಪಟ್ಟ ಭಂಗಾರ, ನಾಣ್ಯ, ಆಭರಣ ಮುಂತಾದುದು ವಿದ್ವಾಂಸರಾದ ಬ್ರಾಹ್ಮಣರಿಗೆ ದಾನವಾಗಿ ಕೊಡಲ್ಪಡುತ್ತಿದ್ದಿತು. ಮತ್ತು ದೇವಸ್ಥಾನಗಳನ್ನು ಕಟ್ಟಿಸುವುದಕ್ಕೂ, ಅವುಗಳ ತಸ್ತೀಕುಗಳನ್ನು ಏರ್ಪಡಿಸುವುದಕ್ಕೂ ಸದರಿ ಭಂಗಾರವು ವಿನಿಯೋಗಿಸಲ್ಪಡುತ್ತಿದ್ದಿತೆಂಬುದಕ್ಕೆ ಶಾಸನಗಳ ಆಧಾರವಿರುವುದು. ಕೆಲವು ಸಂದರ್ಭಗಳಲ್ಲಿ ಯೋಗಿಗಳನ್ನು ಸಂರಕ್ಷಿಸುವುದಕ್ಕೂ ಮತ್ತು ಬಡಬಗ್ಗರ ಸಹಾಯಾರ್ಥವಾಗಿ ಧರ್ಮಶಾಲೆಗಳನ್ನು ಏರ್ಪಡಿಸುವುದಕ್ಕೂ ಆ ಭಂಗಾರವು ಉಪಯೋಗಿಸಲ್ಪಡುತ್ತಿದ್ದಿತು.

ಚೋಳರಾಜರು.

ತುಲಾಭಾರ ಕರ್ಮವನ್ನು ಮುಂದೆ ಹೇಳುವ ಚೋಳದೇಶದ ರಾಜರು ನೆರವೇರಿಸಿದಂತೆ ಶಾಸನಗಳಿಂದ ತಿಳಿದುಬಂದಿದೆ. ಕ್ರಿಸ್ತಶಕ ೯೦೦ನೆಯ ಇಸ್ವಿಯಲ್ಲಿ ವೀರ ನಾರಾಯಣನೆಂದು ಹೆಸರ್ಗೊಂಡ ೧ನೆ ಪರಂತಪನೆಂಬ ಚೋಳರಾಜನು ತುಲಾಭಾರ ಕರ್ಮವನ್ನು ನೆರವೇರಿಸಿದನು. ಈತನು ಅನೇಕ ಪುಣ್ಯಕೆಲಸಗಳನ್ನೂ ಮತ್ತು ದಾನಗಳನ್ನೂ ಮಾಡಿರುವುದಾಗಿ ಖ್ಯಾತಿಗೊಂಡಿರುವನು. ರಾಷ್ಟ್ರಕೂಟ ದೊರೆಯಾದ ಮೂರನೆ ಇಂದ್ರನೆಂಬ ರಾಜನು ಕ್ರಿ. ಶ. ೯೧೫ನೆಯ ಇಸ್ವಿಯಲ್ಲಿ ದಕ್ಷಿಣ ಮಹಾರಾಷ್ಟ್ರ ದೇಶದಲ್ಲಿ ಕೃಷ್ಣಾ ಮತ್ತು ಪಂಚಾಗ್ನಿ ನದಿಗಳು ಸಂಗಮವಾಗುವ ಸ್ಥಳದಲ್ಲಿರುವ ಕುರುಂದವಾಡದಲ್ಲಿ ತುಲಾಭಾರವನ್ನು ನೆರವೇರಿಸಿ, ಹಿಂದಿನ ರಾಜರುಗಳು ಸರ್ಕಾರಕ್ಕೆ ಸೇರಿಸಿಕೊಂಡಿದ್ದ ೮೦೦ ಗ್ರಾಮಗಳನ್ನು ಬಿಟ್ಟುಕೊಟ್ಟಿರುವುದಾಗಿಯೂ, ೨೦॥ ಲಕ್ಷ ವರಹಗಳನ್ನು ದಾನಮಾಡಿರುವುದಾಗಿಯೂ ಪ್ರಕಟಿಸಿದನು. ಅದೇ ವಂಶದ ನಾಲ್ಕನೇ ಗೋವಿಂದನೆಂಬ ರಾಜನು ಕ್ರಿ. ಶ. ೯೩೩ ರಲ್ಲಿ ತುಲಾಪುರುಷನಾಗಿ ಬ್ರಾಹ್ಮಣರಿಗೆ ೬೦೦ ಗ್ರಾಮಗಳನ್ನೂ, ಮೂರು ಲಕ್ಷ ಸುವರ್ಣಗಳನ್ನೂ ಕೊಟ್ಟಿರುವುದಾಗಿಯೂ, ದೇವಸ್ಥಾನಗಳ ತಸ್ತೀಕುಗಳಿಗೋಸ್ಕರ ೮೦೦ ಗ್ರಾಮಗಳನ್ನೂ, ೪ ಲಕ್ಷ ಸುವರ್ಣಗಳನ್ನೂ ದಾನಮಾಡಿರುವುದಾಗಿಯೂ ಪ್ರಕಟಪಡಿಸಿದನು. ಹತ್ತನೆಯ ಶತಮಾನದಲ್ಲಿ ತಂಜಾವೂರಿನಲ್ಲಿ ಆಳುತ್ತಿದ್ದ ರಾಜ ಚೋಳನು ತುಲಾ ದಾನವನ್ನು ನೆರವೇರಿಸಿದನು. ತಂಜಾವೂರು ಡಿಸ್ಟ್ರಿಕ್ಟಿಗೆ ಸೇರಿದ ತಿರುವಿಸಲೂರಿನಲ್ಲಿರುವ ಶೈವ ದೇವಸ್ಥಾನದಲ್ಲಿರುವ ಒಂದು ಶಾಸನದಲ್ಲಿ ಈತನು ಮಾಡಿದ ಈ ದಾನದ ವಿವರವು ಬರೆಯಲ್ಪಟ್ಟಿದೆ. ಈ ಶಾಸನವು ಕ್ರಿ. ಶ. ೧೦೧೩ ರಲ್ಲು ಬರೆಯಲ್ಪಟ್ಟುದೆಂದು ತಿಳಿದುಬಂದಿದೆ.

ಈಚಿನ ರಾಜರು.

ಸರ್ ೧೧೯೪ ರಲ್ಲಿ ಕನೌಜಿನ ಜಯಚಂದ್ರನೆಂಬುವನು ಕಾಶೀ ಪಟ್ಟಣದಲ್ಲಿ ಗಂಗಾನದಿಯಲ್ಲಿ ಸ್ನಾನಮಾಡಿ ಶಿವನ ಎದುರಿಗೆ ತುಲಾಭಾರವನ್ನು ಮಾಡಿಕೊಂಡನು. ಮೈಸೂರು ಸಂಸ್ಥಾನದಲ್ಲಿರುವ ಹಳೇಬೀಡಿನಲ್ಲಿ ಆಳುತ್ತಿದ್ದ ಪ್ರಸಿದ್ಧ ಹೊಯಿಸಲ ರಾಜನಾದ ವಿಷ್ಣುವರ್ಧನನು ಸರ್ ೧೧೩೩ ರಲ್ಲಿ ತುಲಾಭಾರವನ್ನು ನೆರವೇರಿಸಿದನು. ಇದೇ ವಂಶೀಯನಾದ ಸೋಮೇಶ್ವರನು ಸರ್ ೧೨೪೫ ರಲ್ಲಿ ಶ್ರೀರಂಗದಲ್ಲಿ ಕಿರೀಟಧಾರಣೆಯನ್ನು ಮಾಡಿ ತುಲಾಭಾರವನ್ನು ನೆರವೇರಿಸಿದನು. ಈತನು ಪಾಂಡ್ಯರನ್ನೂ, ಯಾದವರನ್ನೂ ಗೆದ್ದು ತದ್ದಿಗ್ವಿಜಯವನ್ನು ಸೂಚಿಸುವುದಕ್ಕೋಸ್ಕರ ಈ ಕರ್ಮವನ್ನು ನೆರವೇರಿಸಿದನು. ಇದೇ ಸೋಮೇಶ್ವರನನ್ನು ಹತಮಾಡಿದ ಮಧುರೆಯ ಸುಂದರ ಪಾಂಡ್ಯನೆಂಬ ರಾಜನು ತುಲಾಭಾರ ಕರ್ಮವನ್ನು ಪದೇ ಪದೇ ಮಾಡುತ್ತಿದನೆಂತಲೂ ಮತ್ತು ಈಪ್ರಕಾರ ತೂಗಿಸಿಕೊಂಡ ಭಂಗಾರದಿಂದ ಶ್ರೀರಂಗದಲ್ಲಿ ದೇವರಿಗೆ ಭಂಗಾರದ ದೇವಸ್ಥಾನವನ್ನು ಕಟ್ಟಿಸಿದ್ದನೆಂತಲೂ ಶಾಸನದಿಂದ ತಿಳಿಯಬರುತ್ತದೆ. ವಿಜಯನಗರ ಸಂಸ್ಥಾನದ ರಾಜರಾದ ಎರಡನೆಯ ಹರಿಹರನೂ ಮತ್ತು ಆತನ ಕುಮಾರನಾದ ವಿರುಪಣ್ಣ ಒಡೆಯರೂ ಸಹ ಶ್ರೀರಂಗದ ದೇವಸ್ಥಾನದಲ್ಲಿ ಈ ಕರ್ಮವನ್ನು ನೆರವೇರಿಸಿದಂತೆ ಕೋಯಿಲ್ ಎಂಬ ಗ್ರಂಥದಿಂದ ಕಂಡುಬರುತ್ತದೆ. ಇದೇ ವಿಜಯನಗರ ಸಂಸ್ಥಾನದ ರಾಜರಲ್ಲಿ ಅತ್ಯಂತ ಪ್ರಖ್ಯಾತಿಗೊಂಡ ಕ್ರಿಷ್ಣರಾಯನು ಸರ್ ೧೫೧೩ ನೆಯ ಇಸ್ವಿಯಲ್ಲಿ ಕೃಷ್ಣಾ ಡಿ॥ ಅಮರಾವತಿಯಲ್ಲಿರುವ ಅಮರೇಶ್ವರ ದೇವಾಲಯದಲ್ಲಿ ತುಲಾಭಾರವನ್ನು ನೆರವೇರಿಸಿದನು; ಮತ್ತು ಈತನ ಸಹೋದರನಾದ ಅಚ್ಯುತನು ಕಂಚಿಯಲ್ಲಿನ ವರದರಾಜಸ್ವಾಮಿಯ ದೇವಸ್ಥಾನಕ್ಕೆ ಯಾತ್ರೆ ಹೋಗಿ ಅವರ ಜ್ಞಾಪಕಾರ್ಥವಾಗಿ ಮುತ್ತುಗಳಲ್ಲಿ ತೂಗಿಸಿಕೊಂಡು ಅದನ್ನೂ, ಸಾವಿರ ಹಸುಗಳನ್ನೂ, ಗ್ರಾಮಗಳನ್ನೂ ಮತ್ತು ಆಭರಣಗಳನ್ನೂ ದೇವರಿಗೆ ಸಮರ್ಪಿಸಿದನು.

ಶಿವಾಜಿ.

ಈಚೆಗೆ ಮಹಾರಾಷ್ಟ್ರ ಚಕ್ರಾಧಿಪತ್ಯವನ್ನು ಸ್ಥಾಪಿಸಿದ ಶಿವಾಜಿಯು ವಿಶೇಷ ಭೂಭಾಗವನ್ನು ಗೆದ್ದು, ಶ್ರೀರಾಜ ಛತ್ರಪತಿ ಎಂಬ ಬಿರುದನ್ನು ಪಡೆದು, ಅದನ್ನು ಧರಿಸುವ ಸಮಯದಲ್ಲಿ ತುಲಾಭಾರವನ್ನು ಮಾಡಿಕೊಂಡನು. ಆತನು ಮಹಾರಾಜ ಎಂಬ ಬಿರುದನ್ನು ಸರ್ ೧೬೭೪ ರಲ್ಲಿ ವಹಿಸಿಕೊಂಡನು. ತುಲಾಭಾರವನ್ನು ಮಾತ್ರ ೧೬೭೪ ರಲ್ಲಿ ನೆರವೇರಿಸಿದನು. ತಾನು ಮಾಡಿದ ಪಾಪಗಳನ್ನು ಕಳೆದುಕೊಳ್ಳುವುದಕ್ಕೂ ಮತ್ತು ತನ್ನ ಸಾಮ್ರಾಜ್ಯಾಧಿಪತ್ಯವನ್ನು ಪ್ರಕಟಪಡಿಸುವುದಕ್ಕೂ ಆತನು ಈಪ್ರಕಾರ ಮಾಡಿದನೆಂದು ತಿಳಿಯಬರುತ್ತದೆ. ಆತನು ೧೬ ಸಾವಿರ ವರಹಗಳನ್ನು ತೂಗಿದನೆಂತಲೂ ಇದು ೧೬೦ ಪೌಂಡುಗಳಿಗೆ ಸರಿಸಮಾನವಾದ ತೂಕವೆಂತಲೂ, ಫ್ರಯರ್ ಎಂಬ ಚರಿತ್ರಾಕಾರನು ಬರೆದಿರುತ್ತಾನೆ.

ತಿರುವಾಂಕೂರು ರಾಜರು.

ತಿರುವಾಂಕೂರು ರಾಜರು ತುಲಾಭಾರವನ್ನು ಮಾಡಿರುವರು. ಮತ್ತು ಕೇರಳ ದೇಶವನ್ನು ಉದ್ಧಾರಮಾಡಿದ ಪರಶುರಾಮನು ಈ ಕರ್ಮವನ್ನು ನೆರವೇರಿಸಿದನೆಂದು ತಿಳಿದುಬಂದಿದೆ. ತಿರುವಾಂಕೂರಿನ ಪುರಾತನ ರಾಜರಲ್ಲಿ ಪ್ರಸಿದ್ಧನಾದ ಕುಲಶೇಖರ ಪೆರುಮಾಳ್ ಎಂಬಾತನು ಈ ಕರ್ಮವನ್ನು ನೆರವೇರಿಸಿದನು. ಸರ್ ೧೮೫೦ ನೆಯ ಇಸ್ವಿಯಲ್ಲಿ ಮಹಾರಾಜ ಮಾರ್ತಾಂಡವರ್ಮನೂ ಮತ್ತು ಸರ್ ೧೮೯೦ ನೆಯ ಇಸ್ವಿಯಲ್ಲಿ ಈಗಿರುವ ಮಹಾರಾಜರೂ ಸಹ ತುಲಾಭಾರ ಕರ್ಮವನ್ನು ಮಾಡಿದರು.

ನಮ್ಮ ಶ್ರೀಮಾನ್ ಜಾರ್ಜ್ ಚಕ್ರವರ್ತಿಯವರೂ ಸಹ ನಮ್ಮ ಭಾರತವರ್ಷದ ಪ್ರಖ್ಯಾತರಾದ ಪ್ರಾಚೀನ ರಾಜರುಗಳ ಉದಾಹರಣೆಯನ್ನನುಸರಿಸಿ ತುಲಾಭಾರ ಕರ್ಮವನ್ನು ನೆರವೇರಿಸಿ ತೂಗಿದ ಆ ಭಂಗಾರವನ್ನು ದಾನ ಧರ್ಮ ಪರೋಪಕಾರಗಳಲ್ಲಿ ವಿನಿಯೋಗಿಸುವುದಾದರೆ, ಅವರು ಹಾಗೆ ನೆರವೇರಿಸುವ ಕರ್ತವ್ಯವು ಹಿಂದೂಗಳಿಗೆ ಪ್ರಿಯವಾಗಿರುವ ಪುರಾತನ ಆಚಾರ ವ್ಯವಹಾರವನ್ನು ರೂಢಿಗೆ ತಂದು ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆದುಕೊಳ್ಳುವುದರಲ್ಲಿ ಸಂದೇಹವಿರುವುದಿಲ್ಲ.

ಜಿ. ಪ.

ಗಾನವಿದ್ಯೆ.

ಗಾನವೆಂದರೆ ಹಾಡುವುದು. ಇದಕ್ಕೆ ಸಂಗೀತವೆಂತಲೂ ಹೆಸರು. ಋಗ್ವೇದ ಮೊದಲಾದ ನಾಲ್ಕು ವೇದಗಳು ವ್ಯಾಕರಣ ಮೊದಲಾದ ಆರು ಶಾಸ್ತ್ರಗಳು, ಮೀಮಾಂಸ ನ್ಯಾಯ ಪುರಾಣ ಧರ್ಮಶಸ್ತ್ರ ಇವೇ ಚತುರ್ದಶವಿದ್ಯೆಗಳು. ಇವುಗಳಿಗೆ ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ದಂಡನೀತಿ ಈ ನಾಲ್ಕುಸೇರಿದರೆ ಅಷ್ಟಾದಶವಿದ್ಯೆಗಳಾಗುವುವೆಂದು ಭಾರತೀಯ ವಿದ್ವಾಂಸರು ನಿರ್ಧರಿಸಿರುವರು. ಇವುಗಳೊಳಗೆ ಚತುರ್ದಶವಿದ್ಯೆಗಳೇ ವೈದಿಕಗಳೆನಿಸುವವು; ಆಯುರ್ವೇದಾದಿಗಳೇ ಲೌಕಿಕವಿದ್ಯೆಗಳಾಗಿರುವುವು. ಸಕಲವಿದ್ಯೆಗಳೂ ಶಬ್ದರೂಪದಿಂದ ತೋರುತ್ತವೆ. ಶಬ್ದವಲ್ಲಿ ವರ್ಣಾತ್ಮಕವೆಂದೂ, ಧ್ವನ್ಯಾತ್ಮಕವೆಂದೂ ಎರಡು ವಿಧವುಂಟು. ಧ್ವನ್ಯಾತ್ಮಕಶಬ್ದವು ಅಚೇತನಗಳಲ್ಲಿಯೂ, ಪಶ್ವಾದಿಗಳಲ್ಲಿಯೂ ಇರುವುದು. ವರ್ಣಾತ್ಮಕಶಬ್ದವು ಮನುಷ್ಯರಲ್ಲಿ ಮಾತ್ರ ತೋರುವುದು. ಧ್ವನ್ಯಾತ್ಮಕ, ವರ್ಣಾತ್ಮಕ ಶಬ್ದಗಳೆರಡೂ ಮನುಷ್ಯರಲ್ಲಿ ಹುಟ್ಟುವುವು. ವರ್ಣಾತ್ಮಕಶಬ್ದದಿಂದ ಬಾಹ್ಯಾಭ್ಯಂತರಗಳಾದ ಸಕಲಾರ್ಥಗಳನ್ನೂ ಮತ್ತೊಬ್ಬರಿಗೆ ಪ್ರಕಾಶಪಡಿಸಬಹುದು. ಧ್ವನ್ಯಾತ್ಮಕಶಬ್ದದಿಂದ ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ಸಕಲವಿದ್ಯೆಗಳೂ ವರ್ಣಾತ್ಮಕವಾಗಿರುವುವು. ಆದರೆ ಗಾಂಧರ್ವವೇದವಿಷಯವು ಮಾತ್ರ ಧ್ವನ್ಯಾತ್ಮಕವಾದುದು. ಭಾಷೆಯೆಂಬುವುದು ವರ್ಣಾತ್ಮಕವಾದುದರಿಂದ ಭಾಷೆಯ ಕೌಶಲ್ಯವನ್ನು ಬೋಧಿಸುವ ವಿದ್ಯೆಯೇ ಸಾಹಿತ್ಯವೆನಿಸುವುದು. ಕಾವ್ಯ, ಚಂಪೂ, ನಾಟಕಾಲಂಕಾರ ಛಂದೋವ್ಯಾಕರಣ, ನ್ಯಾಯಾದಿಗ್ರಂಥಗಳ ಅಭ್ಯಾಸದಿಂದುಂಟಾದ ಜ್ಞಾನವೇ ಸಾಹಿತ್ಯವಿದ್ಯೆ. ಸರಿಗಮಾದಿ ಸಪ್ತಸ್ವರಗಳಿಂದ ಹುಟ್ಟುವ ರಾಗ, ತಾಳಾದಿ ಜ್ಞಾನವೇ ಸಂಗೀತವಿದ್ಯೆ. ಧ್ವನಿಯೇ ಪರಿಮಾಣವಿಶೇಷದಿಂದ ಷಡ್ಜ, ಮುಂತಾದ ನಾಮಧೇಯವಂ ಪಡೆಯುವುದು. ಸಾಹಿತ್ಯಜ್ಞಾನವನ್ನು ಸಂಪಾದಿಸಿರುವವರು ಲಕ್ಷಕ್ಕೊಬ್ಬರಿರಬಹುದು. ಸಾಹಿತ್ಯದಲ್ಲಿ ಪಂಡಿತರಾದವರಲ್ಲಿ ಒಬ್ಬರಿಗೊಬ್ಬರು ತಮ್ಮ ತಮ್ಮ ಯೋಗ್ಯತೆಯನ್ನು ತಿಳಿದುಕೊಂಡು ಸಂತೋಷಪಡಬೇಕಲ್ಲದೆ, ಇತರರ್ಯಾರೂ ಸಾಹಿತ್ಯಕ್ಕೆ ಕಿವಿಗೊಡುವುದಿಲ್ಲ; ಕಿವಿಗೊಟ್ಟರೂ ತಿಳಿಯುವುದಿಲ್ಲ. ಸಂಗೀತವಾದರೋ ಪಶುಸರ್ಪಮೃಗಾದಿಗಳಿಗೂ ಸಂತೋಷಜನಕವಾಗಿರುವುದು. ಈ ಅರ್ಥದಲ್ಲಿ ಒಬ್ಬ ಕವಿಯು— “ ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣಿಃ। ಸಾಹಿತ್ಯರಸಮಾಧುರ್ಯಂ ಶಂಕರೋವೇತ್ತಿ ವಾ ನವಾ ” ಎಂದು ಹೇಳಿದ್ದಾನೆ. ಹೀಗಿರುವಲ್ಲಿ ಸಂಗೀತದ ಸ್ವಾರಸ್ಯವನ್ನು ತಿಳಿದು ಆನಂದಪಡದವನನ್ನು ಪಶುಮೃಗಾದಿಗಳಿಗಿಂತಲೂ ಮೂಢನೆಂದು ಹೇಳುವುದರಲ್ಲಿ ಏನೂ ಸಂಶಯವಿಲ್ಲ. ಸಂಗೀತವು ಸಕಲ ಚಿಂತೆಗಳನ್ನೂ, ದುಃಖಗಳನ್ನೂ ಮರೆಸಿ, ಆತ್ಮನಿಗೆ ಆಹ್ಲಾದವನ್ನುಂಟುಮಾಡುವ ಸ್ವಭಾವವುಳ್ಳುದಾಗಿರುವುದು. ಆದರೆ ಚಿತ್ರಕ್ಕೆ ಗೋಡೆಯು ಹೇಗೋ ಹಾಗೆ ಸಂಗೀತಕ್ಕೆ ಒಳ್ಳೇ ಮಧುರ ಕಂಠವು ಮುಖ್ಯಾಧಾರವಾಗಿರುವುದು. ಮಧುರಕಂಠವೆಂದರೆ ಇಂಪಾದ ಶಾರೀರವು. ಶಾರೀರಸಂಪತ್ತಿಲ್ಲದವರು ಕ್ರಮವನ್ನು ಹಿಡಿದು ಗಾನಮಾಡಿದಾಗ್ಯೂ ಕೇಳಿದವರಿಗೆ ಹಿತವುಂಟಾಗುವುದಿಲ್ಲ. ಶಾರೀರಸಂಪತ್ತಿದ್ದಾಗ್ಯೂ ಕ್ರಮತಪ್ಪಿ ಹಾಡಿದರೆ ಅಸಹ್ಯತೆಯುಂಟಾಗುವುದು. ಶಾರೀರಸಂಪತ್ತುಳ್ಳವರು ಕ್ರಮವಿಡಿದು ಹಾಡಿದರೆ ಕೇಳಿದವರಿಗೆ ಆನಂದಕಾರವಶ್ಯವುಂಟಾಗುವುದಲ್ಲದೆ, ರೋಗಾದ್ಯುಪದ್ರವಗಳೂ ಶಾಂತವಾಗಿ ದೈವಾನುಗ್ರಹವೂ ಲಭಿಸುವುದು. ದೇವತೆಗಳೊಳಗೆ ನಾರದ, ಕಂಬಲ, ಅಶ್ವತ್ಥ ಮುಂತಾದವರು ಗಾನವಿದ್ಯಾ ವಿಶಾರದರೆಂದೂ, ಶಿವ, ವಿಷ್ಣು ಮುಂತಾದವರು ಗಾನವಿನೋದಿಗಳೆಂದೂ ಪ್ರಸಿದ್ಧಿ. “ ಸದ್ಯಸ್ಸುಖಂತು ಸಂಗೀತಂ ” ಎಂಬಂತೆ ಸಂಗೀತಶ್ರವಣದಿಂದ ಸಕಲರಿಗೂ ಕರ್ಣಾನಂದ ಹೃದಯಾನಂದಗಳುಂಟಾಗುವುದು ಪ್ರತ್ಯಕ್ಷಸಿದ್ಧವಾಗಿರುವಲ್ಲಿ, ಆ ವಿಷಯವಾಗಿ ಪ್ರೋತ್ಸಾಹವನ್ನುಂಟುಮಾಡಬೇಕೆಂದು ಹೇಳುವುದರಿಂದೇನು ಫಲವು? ಆಹಾ! ಸ್ವಹಿತ ಪರಹಿತ ಸಂಪಾದಕವಾದ ಸಂಗೀತವನ್ನು ದ್ವೇಷಿಸುವವರನ್ನೂ, ಕೇಳಿ ಸುಖಾನುಭವವಂ ಮಾಡದವನನ್ನೂ ಮನುಷ್ಯನೆಂದು ಹೇಳುವುದಕಾದೀತೆ? ಆದುದರಿಂದ ನಮ್ಮ ಭಾರತೀಯರಲ್ಲಿ ಪೂರ್ವಕಾಲದಾರಭ್ಯ ಸಂಪ್ರದಾಯವಿಡಿದು ಬಂದ ಸಂಗೀತ ವಿದ್ಯೆಯನ್ನು ನಮ್ಮ ದೇಶದ ಯೋಗ್ಯರಾದ ಸ್ತ್ರೀಪುರುಷರು ಚೆನ್ನಾಗಿ ಅಭ್ಯಾಸಿಸಿ ಅಭಿವೃದ್ಧಿಯಲ್ಲಿ ತಂದರೆ ದೇಶಕ್ಕೆ ಬಹಳ ಮಟ್ಟಿಗೆ ಉಪಕಾರವಂ ಮಾಡಿದಂತಾಗುವುದು.

ಗಾನವಿದ್ಯಾಭಿಮಾನಿ.

ಒಬ್ಬ ಬ್ರಾಹ್ಮಣವಿಧವೆಯಾಸ್ತಿಯು.

ಮದ್ರಾಸಿನಲ್ಲಿ ಒಬ್ಬ ಬ್ರಾಹ್ಮಣವಿಧವೆಯು ಗಂಡನಮನೆಯನ್ನು ಬಿಟ್ಟು ಹೊರಗೆ ಬಂದು ತನ್ನ ಅಜ್ಜಿಯ ಅಂದರೆ ತಾಯಿಯ ತಾಯಿಯ ಕೂಡ ವಾಸಮಾಡಿಕೊಂಡಿದ್ದು ವ್ಯಭಿಚಾರವೃತ್ತಿಯಿಂದ ೨೦೦೦ ರೂ. ಗಳ ಆಸ್ತಿಯನ್ನು ಸಂಪಾದಿಸಿಟ್ಟು ಸತ್ತುಹೋದಳು. ಅನಂತರ ಈ ಆಸ್ತಿಯ ಹಕ್ಕಿನ ವಿಚಾರದಲ್ಲಿ ವಿಧವೆಯ ಗಂಡನ ಮತ್ತೊಬ್ಬ ಹೆಂಡತಿಯ ಮಗಳಿಗು ಮತ್ತೂ ಈ ವಿಧವೆಯ ಅಜ್ಜಿಗೂ ವಿವಾದವು ಹುಟ್ಟಿ ಉಭಯರೂ ಕೋರ್ಟಿಗೆ ಹತ್ತಿದರು. ಅಲ್ಲಿ ಜಡ್ಜಿ ಮೆ॥ ವಾಲಿಸ್‌ರವರು ವಿಧವೆಯು ತನ್ನ ಗಂಡನ ಮನೆಯನ್ನು ಬಿಟ್ಟು ಬಂದು ವ್ಯಭಿಚಾರಿಣಿಯಾಗಿದ್ದುದರಿಂದ ತನ್ನ ಗಂಡನ ಬಾಂಧವ್ಯವನ್ನು ಕಳೆದುಕೊಂಡಳು. ಅದುಕಾರಣ ಅವಳ ಗಂಡನ ವಾರಸುದಾರರು ಯಾರಿಗೂ ಅವಳ ಆಸ್ತಿಯಮೇಲೆ ಹಕ್ಕಿರುವುದಿಲ್ಲವು. ಮತ್ತೂ ಹಿಂದೂ ಲಾ ಪ್ರಕಾರ ಆ ವಿಧವೆಯ ಅಜ್ಜಿಯು ಹಕ್ಕುದಾರಳಾದುದರಿಂದ ಅವಳಿಗೆ ವಿಧವೆಯ ಆಸ್ತಿಯು ಸೇರತಕ್ಕದೆಂದು ತೀರ್ಮಾನಿಸಿದರು.

ಮೇವಿನ ಜತೆಯಲ್ಲಿ ಉಪ್ಪನ್ನು ಬೆರಿಸುವ ಪ್ರಯೋಜನ.

ದನಗಳು ಒಂದನ್ನೊಂದಾಗಲಿ ಅಥವಾ ಕರುಗಳನ್ನಾಗಲಿ ನೆಕ್ಕುತ್ತಿರುವುದನ್ನು ನಾವುಗಳು ಸಾಧಾರಣವಾಗಿ ನೋಡಿರುತ್ತೇವೆ. ಅಲ್ಲದೆ ಕೆಲವು ದನಗಳು ಗಂಜಲವನ್ನು ಕುಡಿಯುವುದೂ ಸಹ ಉಂಟು. ಈ ದೃಷ್ಟಾಂತರಗಳಿಂದ ದನಗಳಿಗೆ ಉಪ್ಪುಬೇಕೆಂದು ಹೇಳಬಹುದು. ಅನೇಕರು ದನಗಳ ಮೇವಿನ ಜತೆಯಲ್ಲಿ ಉಪ್ಪನ್ನು ಬೆರಿಸಿಡುವುದು ಬಹಳ ವಾಡಿಕೆಯಾಗಿದೆ. ಮೇವಿನ ಜತೆಯಲ್ಲಿ ಉಪ್ಪನ್ನು ಬೆರಸಿಟ್ಟಲ್ಲಿ ಮೇವು ರುಚಿಯಾಗಿರುವುದರಿಂದ ಮೇವನ್ನು ದನಗಳು ಪೋಲುಮಾಡದೆ ಪೂರ್ತಿಯಾಗಿ ತಿಂದು ಬಿಡುವುವು. ಉಪ್ಪು ದನಗಳ ರಕ್ತವನ್ನು ಶುದ್ಧಿಮಾಡುತ್ತದೆ; ಕಾಲಕಾಲಕ್ಕೆ ಜಲಮಲವಿಸರ್ಜನೆಯನ್ನು ಮಾಡಿಸುತ್ತದೆ. ಮತ್ತೂ ದನಗಳಿಗೆ ವಿಶೇಷವಾಗಿ ರೋಗವು ತಗಲದಂತೆ ಮಾಡುತ್ತದೆ. ಕರೆಯುವ ಹಸುಗಳಿಗೆ ಮೇವಿನ ಜತೆಯಲ್ಲಿ ಉಪ್ಪನ್ನು ಬೆರಿಸಿ ತಿನ್ನಿಸಿದರೆ ಹಾಲು ಹೆಚ್ಚುವುದು ಮತ್ತು ಹೊಟ್ಟೆಯಲ್ಲಿರತಕ್ಕ ಕ್ರಿಮಿಗಳೆಲ್ಲವೂ ನಾಶವಾಗುವವು. ಇದೂ ಅಲ್ಲದೆ ಗೊಡ್ಡುದನಗಳಿಗೆ ಹಸೀಹುಲ್ಲನ್ನೂ ಮತ್ತು ಉಪ್ಪು ಮಿಶ್ರವಾದ ಮೇವನ್ನೂ ತಿನ್ನಿಸಿದ್ದರಿಂದ ಅವು ತೆನೆಯಾಗಿ ಕರು ಹಾಕಿರುತ್ತವೆಯೆಂದು ತಿಳಿದುಬಂದಿದೆ. ಕುರಿಗಳಿಗೆ ಮೇವಿನೊಡನೆ ಉಪ್ಪನ್ನು ತಿನ್ನಿಸಿದರೆ ರೋಗವು ತಗಲುವದು ಕಡಿಮೆ. ಸಾಧಾರಣವಾಗಿ ದನಗಳಿಗೆ ಪ್ರತಿದಿನವೂ ೧ ತೊಲ ಮೊದಲುಗೊಂಡು ೨ ತೊಲಗಳವರಿಗೂ ಉಪ್ಪನ್ನು ತಿನ್ನಿಸಬಹುದು.

ಮೈಸೂರ್ ಗೆಜೆಟ್ ಸಂಗ್ರಹ.

ರೆ॥ ಕಮಿಷನರ್ ರಾವ್ ಬಹದ್ದೂರ್ ರಾಜಕಾರ್ಯಪ್ರವೀಣ ಮೆ॥ ಎ. ರಂಗಸ್ವಾಮಿಯ್ಯಂಗಾರ್, ಬಿ.ಎ.,ಬಿ.ಎಲ್. ರವರಿಗೆ ೧೯೧೧ ನೇ ಏಪ್ರಿಲ್ ತಾ॥ ೨೭ ರಿಂದ ೧೫ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಕ್ಲೋಸ್‌ಪೇಟೆ ಸಬ್ ಡಿವಿಜನ್ ಛಾರ್ಜಿನಲ್ಲಿರುವ ಅ॥ ಕಮಿಷನರ್ ಮೆ॥ ಸಿ. ಎಸ್. ಕುಪ್ಪಸ್ವಾಮಿ ಅಯ್ಯಂಗಾರ್ಯರಿಗೆ ಅವರುಪಯೋಗಿಸಿಕೊಳ್ಳುವಂದಿನಿಂದ ೨॥ ತಿಂಗಳ ಪ್ರಿವಿಲೇಜ್‌ರಜವು ಕೊಡಲ್ಪಟ್ಟಿರುವುದರಿಂದ, ಇವರು ಬರುವವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ಚೀಫ್‌ಕೋರ್ಟು ಡಿ॥ ರೆಜಿಸ್ಟ್ರರರಾದ ಮೆ॥ ಬಿ. ಬಸವಾರಾಧ್ಯ, ಬಿ.ಎ., ಬಿ.ಎಲ್., ರವರು ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ಮತ್ತು ೧ ನೇ ತ॥ ಮ್ಯಾಜಿಸ್ಟ್ರೇಟರಾಗಿ ಕ್ಲೋಸ್‌ಪೇಟೆ ಸಬ್ ಡಿವಿಜನ್ನಿನಲ್ಲಿರಲು ನೇಮಿಸಲ್ಪಟ್ಟಿರುತ್ತಾರೆ.

ದೊಡ್ಡಬಳ್ಳಾಪುರ ಸಬ್‌ಡಿವಿಜನ್ ಛಾರ್ಜಿನಲ್ಲಿರುವ ಸೀನಿಯರ್ ಅ॥ ಕಮಿಷನರ್ ಮೆ॥ ಜಿ. ಆರ್ವಮುದಂ ಅಯ್ಯಂಗಾರ್, ಬಿ. ಎ., ಬಿ. ಎಲ್., ರವರಿಗೆ ೧೯೧೧ ನೇ ಏಪ್ರಿಲ್ ತಾ॥ ೨೭ ರಿಂದ ೧೫ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಇವರು ಬರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಬೆಂಗಳೂರು ಸಬ್ ಡಿವಿಜನ್ ಛಾರ್ಜಿನಲ್ಲಿರುವ ಅ॥ ಕಮಿಷನರ್ ಮೆ॥ ಬಿ. ವೆಂಕೋಬರಾವ್, ಬಿ. ಎ., ಯವರು ತಮ್ಮ ಕೆಲಸದೊಡನೆ ದೊಡ್ಡಬಳ್ಳಾಪುರ ಸಬ್‌ಡಿವಿಜನ್ ಛಾರ್ಜಿನಲ್ಲಿರತಕ್ಕದ್ದು.

ಸೆನಸಸ್ ಸೂಪರಿಂಟೆಂಡೆಂಟರಿಗೆ ಅಸಿಸ್ಟೆಂಟರಾದ ಮೆ॥ ಎ. ಮೃತ್ಯುಂಜಯ ಅಯ್ಯರ್, ಬಿ. ಎ., ಯವರಿಗೆ ಕೊಟ್ಟಿದ್ದ ರಜವು ೧೯೧೧ ನೇ ಮೇ ತಾ॥ ೨೦ ರವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ. ಅದುವರೆಗೆ ಈಗಿರತಕ್ಕ ಏರ್ಪಾಟೇ ನಡೆಯತಕ್ಕದು.

ಜಗಳೂರು ತಾ॥ ಅಮಲ್ದಾರ್ ಮೆ॥ ಇ.ಸಿ. ಸದಾಶಿವಂ ಪಿಳ್ಳೆಯವರಿಗೆ ಕೊಟ್ಟಿರುವ ೨೫ ದಿನಗಳ ಪ್ರಿವಿಲೇಜ್ ರಜಾಕಾಲದಲ್ಲಿ ಅವರಿಗೆ ಬದಲು ಕೆಲಸನೋಡಲು ನೇಮಿಸಲ್ಪಟ್ಟಿರುವ ಜಗಳೂರು ತಾ॥ ಶಿರಸ್ತೇದಾರ್ ಟಿ. ನರಸಿಂಗರಾಯರು ಆ ತಾ॥ ನ ಆಕ್ಟಿಂಗ್ ಅಮಲ್ದಾರರಾಗಿಯೂ, ೩ ನೇ ತ॥ ಮಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಮೆ॥ ಪಿ. ಪಲ್ಪ, ಎಲ್. ಎಂ. ಎಸ್. ಡಿ. ಪಿ. ಎಚ್. ರವರು ಹೆಲ್ತಾಫೀಸರಾಗಿ ನೇಮಿಸಲ್ಪಟ್ಟು ಡಿಸ್ಟ್ರಿಕ್ಟ್ ಸ್ಯಾನಿಟರಿ ಆಫೀಸರಾಗಿ ಶಿವಮೊಗ್ಗಾ ಡಿ॥ ಗೆ ಕಳುಹಲ್ಪಟ್ಟಿರುತ್ತಾರೆ.

ಬೆಂಗಳೂರು ಅಡಿಷನಲ್ ಮುನಸೀಫ್ ಮೆ॥ ಸತ್ಯಾಜಿರಾವ್, ಬಿ. ಎ., ಬಿ. ಎಲ್., ರವರು ಸಿವಿಲ್‌ಕೋರ್ಟುಗಳ ರಜಾಕಾಲದಲ್ಲಿ ಬಿ. ಷಡ್ಯೂಲ್ ೩ ನೇ ತ॥ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾಗಿ ನೇಮಿಸಲ್ಪಟ್ಟು ೧ ನೇ ತ॥ ಮ್ಯಾಜಿಸ್ಟ್ರೇಟರ ಅಧಿಕಾರದೊಡನೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರಾಗಿ ಮಾಡಲ್ಪಟ್ಟಿರುತ್ತಾರೆ.

ಮೈಸೂರು ಜನರಲ್ ಆಸ್ಪತ್ರೆಯಲ್ಲಿ ಕೆಲಸಮಾಡುವ ಸಬ್ ಅಸಿಸ್ಟೆಂಟ್ ಸರ್ಜನ್ ಮೆ॥ ಸಿ. ಕುಪ್ಪಸ್ವಾಮಿ ಪಿಳ್ಳೆಯವರು ಅ॥ ಸರ್ಜನ್ ಮೆ॥ ಕೆ. ಹನುಮಂತರಾಯರು ರಜಾದಮೇಲಿರುವವರೆಗೆ ಅಥವಾ ಇನ್ನೊಂದಪ್ಪಣೆಯಾಗುವವರೆಗೆ ಶಿವಮೊಗ್ಗಾ ಸಿವಿಲ್ ಆಸ್ಪತ್ರೆಯಲ್ಲಿ ಕೆಲಸಮಾಡಿಕೊಂಡಿರತಕ್ಕದ್ದು.

ಅಫಿಷಿಯೇಟಿಂಗ್ ಡೆ॥ ಕಮಿಷನರ್ ಮೆ॥ ಎಂ. ಶ್ಯಾಮರಾಯರು ೧೯೧೧ ನೇ ಏಪ್ರಿಲ್ ತಾ॥ ೨೩ ರ ಪೂರ್ವಾಹ್ನದಲ್ಲಿ ತುಮಕೂರ ಡಿಸ್ಟ್ರಿಕ್ಟ್ ಮತ್ತೂ ಟ್ರಜರಿ ಛಾರ್ಜನ್ನು

ಶ॥ ಮ॥ ಕೆ. ಎಸ್. ದೊರಸ್ವಾಮಿ ಅಯ್ಯರಿಂದ ಸ್ವೀಕರಿಸಿದರು.

ಗುಬ್ಬಿ ಸಬ್ ಡಿವಿಜನ್ ಛಾರ್ಜಿನಲ್ಲಿರುವ ಅ॥ ಕಮಿಷನರ್ ಮ॥ ಎನ್. ಮಾಧವರಾವ್, ಬಿ. ಎ., ಬಿ. ಎಲ್., ರವರಿಗೆ ೧೧೦ ನೇ ಸೆಕ್ಷನ್ನನುಸರಿಸಿ, ಒಳ್ಳೇ ನಡತೆಗಾಗಿ ಹೊಣೆಯನ್ನು ತೆಗೆದುಕೊಳ್ಳುವ ಅಧಿಕಾರವು ಕೊಡಲ್ಪಟ್ಟಿರುತ್ತದೆ.

ಕ್ಲೋಸ್‌ಪೇಟೆ ಸಬ್ ತಾ॥ ಆಕ್ಟಿಂಗ್ ಡಿ॥ ಅಮಲ್ದಾರ್ ಮ॥ ಎ. ಶಾಮರಾವ್, ಬಿ. ಎ., ಯವರಿಗೆ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ನನುಸರಿಸಿ ಅಪರಾಧಗಳನ್ನು ವಿಚಾರಿಸುವ ಅಧಿಕಾರವು ಕೊಡಲ್ಪಟ್ಟಿರುತ್ತದೆ.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮೇ ತಾ॥ ೧ ನೇ ಸೋಮವಾರ.

ಮೈಸೂರ ಪ್ರಜಾಪ್ರತಿನಿಧಿ ಸಭೆಯು.

ಈ ಸಭೆಯು ೨೫ನೇ ವರ್ಷದ ಕೂಟವು ಕಳೆದ ೧೯೧೦ ನೇ ಅಕ್ಟೋಬರ್ ತಾ॥ ೧೫ ರಾರಭ್ಯ ರಾಜಧಾನಿಯ ಪಬ್ಲಿಕ್ ಆಫೀಸಿನ ಸಭಾಂಗಣದಲ್ಲಿ ಸೇರಿದ್ದುದರ ನಡವಳಿಕೆಯು (ಪ್ರೊಸೀಡಿಂಗ್ಸ್) ಈಗತಾನೇ ಪ್ರಕಟವಾಗಿ ಅದರ ಪ್ರತಿಯೊಂದು ನಮ್ಮ ಹಸ್ತಗತವಾಗಿರುತ್ತದೆ. ಸಭೆಯು ನಡೆದು ಇಲ್ಲಿಗೆ ೬ ತಿಂಗಳಾಯಿತು. ಈ ನಡವಳಿಕೆಯನ್ನು ಪ್ರಕಟಿಸಲು ಇಷ್ಟು ಸಾವಕಾಶವಾಗಲು ಕಾರಣವೇನೋ ಗೊತ್ತಾಗಲಿಲ್ಲವು. ಪ್ರಾಯಶಃ ಸಂಸ್ಥಾನದ ಎಲ್ಲ ಶಾಖೆಯ ವರದಿಗಳೂ ಹೀಗೆಯೇ ಸಾವಕಾಶವಾಗಿ ಪ್ರಕಟಿಸಲ್ಪಡುವುದನ್ನೋಡಿದರೆ, ಇದು ಬಹುಕಾಲದಿಂದನುಸರಿಸಿಬಂದ ಪದ್ಧತಿಯಾಗಿರಬಹುದೆಂದು ತೋರುತ್ತದೆ. ಪ್ರತಿಯೊಂದು ಕಾರ್ಯವನ್ನೂ ಸಕಾಲದಲ್ಲಿ ನೆರವೇರಿಸಬೇಕೆಂಬ ಸಂಕಲ್ಪವುಳ್ಳವರೆಂದು ಹೆಸರುಗೊಂಡಿರುವ ಮ॥ ಆನಂದರಾಯರು ತಮ್ಮ ದಿವಾನಗಿರಿಯಲ್ಲಾದರೂ ವಿಶಿಷ್ಟ ಶಾಖಾಧಿಕಾರಿಗಳು ತಂತಮ್ಮ ಶಾಖೆಯ ವರದಿಗಳನ್ನು ಸಕಾಲದಲ್ಲಿ ಪ್ರಕಟಿಸುವಂತೆ ಕಟ್ಟಪ್ಪಣೆಯನ್ನು ಮಾಡಿ ಈ ಗುಂಟಾಗಿರುವ ಅಲಸತೆಯನ್ನು ಹೋಗಲಾಡಿಸುವರೆಂದು ನಿರೀಕ್ಷಿಸುತ್ತೇವೆ. ಈ ಪ್ರೊಸೀಡಿಂಗ್ಸ್ನ ದಿವಾನರು ಸಭಾರಂಭದಲ್ಲಿ ಮಾಡಿದ ಸಂಸ್ಥಾನದಾಡಳಿತವಿಷಯಕವಾದ ಭಾಷಣವನ್ನೂ, ಪ್ರತಿನಿಧಿಗಳು ಮಾಡಿದ ಅರಿಕೆಗಳನ್ನೂ, ಸರ್ಕಾರದವರು ಕೊಟ್ಟ ಉತ್ತರಗಳನ್ನೂ ಮತ್ತೂ ಕೆಲ ಪ್ರತಿನಿಧಿಗಳೊಪ್ಪಿಸಿದ ೬ ಜ್ಞಾಪನಪತ್ರಿಕೆಗಳನ್ನೂ ಒಳಗೊಂಡಿರುತ್ತದೆ. ಸಭೆಯು ನಡೆಯುವಾಗಲೇ ಇವುಗಳೆಲ್ಲವನ್ನೂ ಸಂಕ್ಷೇಪವಾಗಿ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆಯಾದರೂ, ಅನೇಕ ವಿಷಯಗಳು ಗಮನಿಸಲ್ಪಡತಕ್ಕವುಗಳಾದುದರಿಂದ ಮುಖ್ಯವಾದುವುಗಳನ್ನು ನಮ್ಮ ವಾಚಕರ ತಿಳಿವಳಿಕೆಗಾಗಿ ಇಲ್ಲಿ ಕೊಟ್ಟಿರುತ್ತೇವೆ.

ಒಂದಾವೃತ್ತಿ ಆರಿಸಲ್ಪಟ್ಟ ಪ್ರತಿನಿಧಿಗಳು ೩ ವರ್ಷಕಾಲದವರೆಗೆ ಮೆಂಬರುಗಳಾಗಿರತಕ್ಕದೆಂದು ೧೯೦೯ ರಲ್ಲಿ ಮಾಡಿದ ಪದ್ಧತಿಯನ್ನನುಸರಿಸಿ ಇದರ ಹಿಂದಣವರ್ಷದಲ್ಲಿ ಆರಿಸಲ್ಪಟ್ಟಿದ್ದ ಪ್ರತಿನಿಧಿಗಳು ಈ ವರ್ಷದಲ್ಲೂ ಮೆಂಬರಾಗಿದ್ದರು. ಈ ಒಟ್ಟು ೨೬೦ ಪ್ರತಿನಿಧಿಗಳಲ್ಲಿ ೬೮ ತಾಲ್ಲೋಕುಗಳಿಂದ (ಸಬ್‌ತಾಲ್ಲೋಕುಗಳು ಸೇರಿ) ೨೦೧, ೫೦೦೦ ಮತ್ತು ಅದಕ್ಕೆ ಮೇಲ್ಪಟ್ಟ ಪ್ರಜಾಸಂಖ್ಯೆಯುಳ್ಳ ೨೬ ಮ್ಯುನಿಸಿಪಾಲಿಟಿಗಳಿಂದ ೪೨, ೮ ಲೋಕಲ್ ಬೋರ್ಡುಗಳಿಂದ ೧೬, ಮತ್ತೂ ೧೧ ಅಸೋಸಿಯೇಷನ್ನುಗಳಿಂದ ೧೧ ಈ ಪ್ರಕಾರ ಆರಿಸಲ್ಪಟ್ಟಿದ್ದರು. ಇವರಲ್ಲಿ ಯೂರೋಪ್ಯರು ೮, ಮಹಮ್ಮದೀಯರು ೧೭ ಮತ್ತೂ ಹಿಂದೂಗಳು ೨೩೫ ಇದ್ದರು. ಅಲ್ಲದೆ ೨೬೦ ರಲ್ಲಿ ವರ್ತಕರು ೩೫, ಸಾಹುಕಾರರು ಅಥವಾ ಬ್ಯಾಂಕಿಟ್ಟಿರುವವರು ೧೦, ಗ್ರಾಮಾಧಿಕಾರಿಗಳಾದ ಪಟೇಲರು ಶಾನುಭೋಗರು ೩೧, ಭೂಮಿಯುಳ್ಳವರು ೧೧೬, ಲಾಯರುಗಳು ೩೫, ಉಪಾಧ್ಯಾಯರುಗಳು ೨ ಮತ್ತೂ ಇತರ ಕಸಬಿನವರು ೧೫ ಈ ಪ್ರಕಾರ ಪ್ರಾಯಶಃ ಎಲ್ಲಾ ವೃತ್ತಿಯ ಜನರೂ ಮೆಂಬರಾಗಿದ್ದರು. ಸಭಾಂಗಣದಲ್ಲಿ ೨೪೧ ಸ್ಥಾನಗಳು ಸಿದ್ಧಪಡಿಸಲ್ಪಟ್ಟಿದ್ದುವು. ಆದರೆ ಕೆಲರು ಸತ್ತುಹೋದುದರಿಂದ ಮತ್ತೆ ಕೆಲರು ಮೆಂಬರುಗಳಾಗಿರಲು ಅನರ್ಹರೆಂದು ಮಾಡಲ್ಪಟ್ಟುದರಿಂದ ೯ ಸ್ಥಾನಗಳು ಬಿಡುವಾದುವು. ಅಲ್ಲದೆ ಒಬ್ಬ ಮೆಂಬರೇ ೩ ಕಡೆಗೆ ಪ್ರತಿನಿಧಿಗಳಾಗಾರಿಸಲ್ಪಟ್ಟಿದ್ದರು. ಈ ಕಾರಣದಿಂದ ಒಟ್ಟು ೨೬೦ ಮೆಂಬರುಗಳು ಬರುವುದಾಗಿ ಗೊತ್ತಾಗಿದ್ದಿತು.

ಚಿತ್ರಕಲ್‌ದುರ್ಗ ಡಿಸ್ಟ್ರಿಕ್ಟಿನ ಕೆಲ ಮುಖ್ಯಪಟ್ಟಣಗಳಲ್ಲಿ ಪ್ಲೇಗ್ ರೋಗವು ಪ್ರಾಪ್ತವಾಗಿದ್ದುದರಿಂದ, ಆ ಡಿಸ್ಟ್ರಿಕ್ಟಿನಲ್ಲಿ ಆರಿಸಲ್ಪಟ್ಟಿದ್ದ ಒಟ್ಟು ೨೬ ಮೆಂಬರುಗಳಲ್ಲಿ ೧೩ ಮೆಂಬರುಗಳು ಬರಲಿಲ್ಲವು. ಇದರಂತೆಯೇ ಶಿವಮೊಗ್ಗಾ ಡಿ॥ನಲ್ಲಿ ೩೩ ಮೆಂಬರುಗಳಲ್ಲಿ ೯ ಮೆಂಬರು ಬರದೆ ನಿಂತುಬಿಟ್ಟರು. ಈ ಕಾರಣಗಳಿಂದ ಬಾರದೆ ನಿಂತವರು ಹೋಗುತ ಒಟ್ಟು ೨೧೧ ಜನ ಮೆಂಬರುಗಳು ಸಭೆಗೆ ಬಂದಿದ್ದರು ಸಭಾಕಾರ್ಯವು ಅಕ್ಟೋಬರ್ ತಾ॥ ೨೩ ನೇ ಭಾನುವಾರದ ದಿವಸ ಮುಗಿದಿತು. ಆ ದಿವಸ ಸಭೆಯಲ್ಲಿ ೮೬ ಜನ ಮೆಂಬರುಗಳು ಮಾತ್ರ ಇದ್ದರು. ಸಭಾರಂಭದ ದಿವಸ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹಲ್‌ತಾಲೆ, ಸಿ.ಎಸ್.ಐ., ಸಿ.ಐ.ಇ., ಯವರು ಮತ್ತೂ ಇತರ ಯೂರೋಪ್ಯಾತಿಥಿಗಳು ಬಂದಿದ್ದರಲ್ಲದೆ, ಸಂಸ್ಥಾನದ ಕೌನ್ಸಿಲರುಗಳೂ, ಎಲ್ಲ ಶಾಖಾಧಿಕಾರಿಗಳೂ, ಮುಖ್ಯಾಧಿಕಾರಿಗಳೂ ಬಂದಿದ್ದರು. ದಿವಾನರು ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲಿ ಓದಿದಮೇಲೆ ಅಂಡರ್ ಸೆಕ್ರೆಟರಿ ಮ॥ ಬಿ. ರಾಮಸ್ವಾಮಯ್ಯನವರು ಅದನ್ನು ಕನ್ನಡದಲ್ಲೋದಿದರು. ಅನಂತರ ಚೆನ್ನದಗಣಿ ಮೆ॥ ರಿಚರ್ಡ್ಸ್‌ನರವರು, ದೇವನಹಳ್ಳಿ ತಾಲ್ಲೋಕಿನ ಮ॥ ಡಿ. ಎಸ್. ಹನುಮಂತರಾಯರು, ಬೆಂಗಳೂರ ಮಹಮ್ಮದೀಯರ ಸಂಘದ ಮೌ॥ ಮಹಮ್ಮದ್ ಅಬ್ಬಾಸ್‌ಖಾನರವರು, ಚಿತ್ರದುರ್ಗದ ಡಿ॥ನ ಮ॥ ಅಡವಿಗುಪ್ಪನವರು, ಮೇಲುಕೋಟೆಯ ಸದಾನಂದವರ್ಧನಿ ಸಭೆಯ ಪಂಡಿತ ಶ್ರೀನಿವಾಸ ರಾಘವಾಚಾರ್ಯರು. ಮತ್ತೂ ಯಡತೊರೆ ತಾ॥ನ ಮ॥ ಎ. ರಾಮಣ್ಣನವರು ವಿಜ್ಞಾಪನಪತ್ರಿಕೆಗಳನ್ನೋದಿ ಒಪ್ಪಿಸಿದ ಮೇಲೆ ದಿವಾನರು ತಕ್ಕುತ್ತರವನ್ನು ದಯಪಾಲಿಸಿದರು. ಪ್ರತಿನಿಧಿಗಳು ಅರಿಕೆಮಾಡಿಕೊಂಡ ವಿಷಯಗಳು ಅಕ್ಟೋಬರ್ ತಾ॥ ೧೬ರಿಂದ ೩ ದಿನಗಳವರೆಗೆ ಚರ್ಚಿಸಲ್ಪಟ್ಟವು. ಸಭಾಕಾರ್ಯವು ಮುಗಿದಮೇಲೆ ಮೌ॥ ಮಹಮ್ಮದ್ ಅಬ್ಬಾಸ್‌ಖಾನ್ ಮುಂತಾದ ಮೆಂಬರುಗಳು ಎದ್ದುನಿಂತು ದಿವಾನರು ಬಹು ಶಾಂತಚಿತ್ತದಿಂದ ತಮ್ಮ ಅರಿಕೆಯನ್ನು ಲಾಲಿಸಿದುದಕ್ಕಾಗಿ ಅವರನ್ನು ವಂದಿಸಿದುದಲ್ಲದೆ ತಮ್ಮ ರಾಜಭಕ್ತಿ, ವಿಶ್ವಾಸಗಳನ್ನು ಶ್ರೀಮನ್ಮಹಾರಾಜರವರಲ್ಲಿ ಬಿನ್ನೈಸಬೇಕೆಂದು ಪ್ರಾರ್ಥಿಸಿದರು. ದಿವಾನರು ಪ್ರತಿಯಾಗಿ ಮೆಂಬರುಗಳನ್ನು ವಂದಿಸಿ ಅವರ ವಿಜ್ಞಾಪನೆಯನ್ನು ಶ್ರೀಮನ್ಮಹಾರಾಜರವರಲ್ಲಿ ತಿಳಿಸುತ್ತೇವೆಂದು ಅಪ್ಪಣೆಕೊಡಿಸಿದರು.

ಒಟ್ಟು ೨೬೦ ಜನ ಪ್ರತಿನಿಧಿಗಳಲ್ಲಿ ೩೧ ಜನ ಗ್ರಾಮಾಧಿಕಾರಿಗಳು ಅಂದರೆ ಶಾನುಭೋಗ ಪಟೇಲರುಗಳಿರುತ್ತಾರೆ. ಇವರು ಸರ್ಕಾರದ ಉದ್ಯೋಗಸ್ಥರಾದುದರಿಂದ ಮತ್ತೂ ಯಾವಾಗಲೂ ಮೇಲ್ಪಟ್ಟಧಿಕಾರಿಗಳ ಸಮೀಪವರ್ತಿಗಳಾಗಿದ್ದು ಅವರ ಅನುಗ್ರಹವನ್ನು ನಿರೀಕ್ಷಿಸುತ್ತಿರುವುದರಿಂದ ಲಾಯರುಗಳು, ಜಮೀನ್ದಾರರು, ವರ್ತಕರು ಮೊದಲಾದ ಸ್ವತಂತ್ರ ಜನರಂತೆ ಪ್ರಜೆಗಳಿಗನುಕೂಲವಾದ ವಿಷಯಗಳನ್ನು ಒತ್ತಿ ಹೇಳುವಷ್ಟು ಧೈರ್ಯವು ಇವರಿಗಿಲ್ಲವು. ಅದುಕಾರಣ ಇಂಥ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಪ್ರಜಾ ಸಾಮಾನ್ಯಕ್ಕೆ ಅಷ್ಟು ಪ್ರಯೋಜನವಾಗಲಾರದು. ಈಗ ನಾವು ತಿಳಿದಿರುವುದರಲ್ಲಿ ಮೈಸೂರ ಮ॥ ಎಂ. ವೆಂಕಟಕೃಷ್ಣಯ್ಯನವರು, ಮ॥ ಅಣ್ಣಯ್ಯ ಪಂಡಿತರು, ಮ॥ ರಂಗಯ್ಯಂಗಾರ್ಯರು, ಮ॥ ಎ ರಾಮಣ್ಣನವರು ಶಿವಮೊಗ್ಗೆಯ ಮ॥ ಬಾಲಕೃಷ್ಣರಾಯರು, ಮ॥ ಶಂಕರನಾರಣಪ್ಪನವರು ಮತ್ತೆ ಕೆಲರು ಯೋಗ್ಯವೂ, ಉಪಯುಕ್ತವೂ ಆದ ವಿಷಯಗಳನ್ನು ಕುರಿತು ಯುಕ್ತಿಯುಕ್ತವಾಗಿಯೂ, ನ್ಯಾಯಬದ್ಧವಾಗಿಯೂ, ಧೈರ್ಯದಿಂದ ಚರ್ಚಿಸಿ ಸರಕಾರದವರನ್ನೊಡಂಬಡಿಸುವರು. ಇಂಥವರನ್ನು ಹೆಚ್ಚಾಗಿ ಆರಿಸುವುದನ್ನು ಬಿಟ್ಟು ದಾಕ್ಷಿಣ್ಯಕ್ಕೊಳಗಾಗಿ ಅರ್ಹತೆಯಿಲ್ಲದವರನ್ನು ಆರಿಸುವುದರಿಂದ, ಅವರು ಸಭೆಯ ಸಂಖ್ಯಾಪೂರ್ತಿಗೆ ಮಾತ್ರವಿದ್ದು, ಸವಿಯೂಟವನ್ನು ಮಾಡಿ, ಅರಮನೆಯ ದರ್ಬಾರಿನಲ್ಲಾಗುವ ವಿನೋದಗಳನ್ನೋಡಿ ತಮ್ಮ ಕಣ್ಣಿನ ಹಬ್ಬವನ್ನು ತೀರಿಸಿಕೊಂಡು ಹೋಗುವರೇ ಹೊರತು ತಮ್ಮನ್ನಾರಿಸಿದವರ ನಿರೀಕ್ಷೆಯನ್ನು ಸಾಫಲ್ಯಗೊಳಿಸತಕ್ಕವರಲ್ಲ. ಅದುಕಾರಣ ಪ್ರಜೆಗಳು ಪ್ರತಿನಿಧಿಗಳನ್ನು ಆರಿಸುವಾಗ್ಗೆ ಚ್ಚರವಾಗಿದ್ದು ಮೇಲೆಹೇಳಿದ ದೊಡ್ಡಮನುಷ್ಯರಂಥ ಸಮರ್ಥರನ್ನು ಆರಿಸುವುದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಲು ಮರೆಯಬಾರದೆಂದು ನಾವು ಒತ್ತಿ ಹೇಳುತ್ತೇವೆ. ಮತ್ತೂ ಸರ್ಕಾರದವರು ಈ ಪ್ರತಿನಿಧಿಗಳ ಅರಿಕೆಗಳಿಗುತ್ತರವನ್ನು ಕೊಡುವಾಗ್ಗೆ ಪ್ರಾಯಶಃ "ಆಲೋಚಿಸುತ್ತೇವೆ,ಗುರುತ್ತುಮಾಡಿಕೊಂಡಿದ್ದೇವೆ." ಎಂದು ಹೇಳುವುದೇ ಹೆಚ್ಚು. ಇದರಿಂದ ಅರಿಕೆಮಾಡಿಕೊಳ್ಳತಕ್ಕ ಪ್ರತಿನಿಧಿಗಳು ನಿರುತ್ಸಾಹಿಗಳಾಗುತ್ತಾರಾದ ಪ್ರಯುಕ್ತ, ಉತ್ತರವನ್ನು ಕೊಡಲು ಅರ್ಹವಲ್ಲದ ವಿಷಯಗಳನ್ನು ಚರ್ಚೆಗೇ ತಾರದಂತೆಯೂ, ಅರ್ಹವಾದುವುಗಳಿಗೆ ತಕ್ಕುತ್ತರವನ್ನು ಕೊಡಲಿ ದಯಪಾಲಿಸುವಂತೆಯೂ ಮಾಡುವುದು ಯುಕ್ತವಾಗಿರುತ್ತದೆ. ಅಲ್ಲದೆ ಒಬ್ಬ ಪ್ರತಿನಿಧಿಯು ಒಂದು ವಿಷಯವನ್ನರಿಕೆಮಾಡಿದರೆ, ಸರ್ಕಾರದವರು ಉತ್ತರವನ್ನು ಕೊಡುವುದಕ್ಕೆ ಮೊದಲೇ ಮತ್ತೊಬ್ಬ ಪ್ರತಿನಿಧಿಯು ಎದ್ದು ಅದಕ್ಕೆ ವಿರುದ್ಧವಾಗಿ ಹೇಳುವುದು, ಅಥವಾ "ಅವರಿಗೆ ಹೇಳುವುದಕ್ಕೆ ಬರುವುದಿಲ್ಲ; ಅವರಭಿಪ್ರಾಯವನ್ನು ನಾನು ಹೇಳುತ್ತೇನೆ." ಎಂದು ಅಡ್ಡಲಾಗಿ ಬಂದು ಆ ಪ್ರತಿನಿಧಿಯ ಮನಸ್ಸಿಗಸಮಾಧಾನವನ್ನುಂಟುಮಾಡುವುದನ್ನು ಸರ್ಕಾರದವರು ತಪ್ಪಿಸಬೇಕೆಂದು ಸೂಚಿಸುವೆವು.

ಕಿರೀಟಧಾರಣಮಹೋತ್ಸವದ ವೆಚ್ಚವು.

ಬರುವ ಜೂನ್ ತಿಂಗಳಲ್ಲಿ ಲಂಡನ್ ಪಟ್ಟಣದಲ್ಲಿ ನಡೆಯಲಿಕ್ಕಿರುವ ಕಿರೀಟಧಾರಣಮಹೋತ್ಸವಕ್ಕೆ ಇಷ್ಟೇ ಹಣವು ವೆಚ್ಚವಾಗುತ್ತದೆಂದು ಈಗಲೇ ಹೇಳುವುದಕ್ಕಾಗದಿದ್ದರೂ ಹಿಂದೆ ವಿಕ್ಟೋರಿಯಾಮಹಾರಾಣಿಯವರ ಮತ್ತೂ ಎಡ್ವರ್ಡ್ ಪ್ರಭುಗಳ ಕಿರೀಟಧಾರಣಮಹೋತ್ಸವಗಳಲ್ಲಾದ ವೆಚ್ಚದನುಭವದಿಂದ ೩೦೦೦೦೦೦ ರೂ. ಗಳಿಗೆ ಕಡಿಮೆಯಿಲ್ಲದಂತಾಗುವುದೆಂದು ಹೇಳಬಹುದು. ಆದರೆ ಜಾರ್ಜ್ ದೊರೆಗಳ ಮತ್ತೂ ಮೇರಿ ರಾಣಿಯವರ ಕಿರೀಟಧಾರಣ ಮಹೋತ್ಸವವು ಅತಿ ವಿಜೃಂಭಣೆಯಿಂದ ಮಾಡಲ್ಪಡಬೇಕೆಂದು ನಿರ್ಧರಿಸಲ್ಪಟ್ಟಿರುವುದರಿಂದ, ಪ್ರಾಯಶಃ ಹಿಂದಾದುದಕ್ಕಿಂತ ಹೆಚ್ಚು ವೆಚ್ಚವಾಗುವುದರಲ್ಲಿ ಸಂದೇಹವಿಲ್ಲವು. ವಿಕ್ಟೋರಿಯಾ ಮಹಾರಾಣಿಯವರ ಕಿರೀಟಧಾರಣ ಮಹೋತ್ಸವಕ್ಕಾಗಿ ೩,೦೦೦,೦೦೦ ರೂ. ಗಳನ್ನು ವೆಚ್ಚಮಾಡತಕ್ಕದೆಂದು ಪಾರ್ಲಿಮೆಂಟಿನವರು ಗೊತ್ತುಮಾಡಿದ್ದರು. ಇದರಲ್ಲಿ ಹೆಚ್ಚು ಹಣವು ವೆಸ್ಟ್ ಮಿನಿಸ್ಟರ್ ಆಬೆ ಯೆಂಬ ರಾಜಭವನವನ್ನು ಮಕಮಲ್ಲು ಮತ್ತೂ ಜರತಾರಿ ಬಟ್ಟೆಗಳಿಂದ ಅಲಂಕರಿಸಲು ವೆಚ್ಚವಾದುದಲ್ಲದೆ ಕೆಲಸಗಾರರ ಸಂಬಳಕ್ಕಾಗಿ ೨೧೦೩೦ ಚಿಲ್ಲರೆ ರೂ. ಗಳೂ, ರಥಗಳಿಗಾಗಿ ೧೫೩೦೦೦ ರೂ. ಗಳೂ, ಉಡುಪುಗಳಿಗಾಗಿ ೮೬೪೫ ಚಿಲ್ಲರೆ ರೂ. ಗಳೂ, ಬೆಳ್ಳಿ ಭಂಗಾರದ ಪದಕ, (ಮೆಡಲ್ಲು)ಗಳಿಗಾಗಿ ೩೫೦೦೦ ರೂ. ಗಳೂ, ಆಬೆ ಭವನದ ಅಲಂಕಾರಕ್ಕೆ ಬೇಕಾದ ಮರದ ಸಾಮಗ್ರಿಗಳಿಗಾಗಿ ೮೫೩೯೫ ರೂ. ಗಳೂ ವೆಚ್ಚವಾದುವು. ೪ ನೇ ವಿಲಿಯಂ ರವರ ಕಿರೀಟಧಾರಣ ಕಾಲದಲ್ಲಿ ೬೮೩೪೮೫ ರೂ. ಗಳು ಮಾತ್ರ ವ್ಯಯವಾಗಿದ್ದಿತು. ಇದರಲ್ಲಿ ೧೪೦೦೦೦ ರೂ. ಗಳು ರಾಜಭವನದ ಶೃಂಗಾರಕ್ಕೆ ಹಿಡಿಯಿತು. ನಾಟಕಗಳಿಗಾಗಿ ೮೫೫೧೦ ಚಿಲ್ಲರೆ ರೂ. ಗಳೂ, ರಾಜರುತ್ಸವ ಹೊರಟಾಗ ಮಾರ್ಗದಲ್ಲಿ ಜನರಿಗೆ ಕೊಟ್ಟ ದಾನಗಳಿಗಾಗಿ ೬೪೯೦ ಚಿಲ್ಲರೆ ರೂ. ಗಳೂ ವ್ಯಯವಾದುವು. ಆದರೆ ೪ ನೇ ಜಾರ್ಜ್ ರವರ ಕಿರೀಟಧಾರಣ ಮಹೋತ್ಸವಕ್ಕೆ ಮಾತ್ರ ೬೮೩೪೮೫ ಚಿಲ್ಲರೆ ರೂ. ಗಳು ವೆಚ್ಚವಾಯಿತು. ಈ ಕಾಲದಲ್ಲಿ ವೆಸ್ಟ್ ಮಿನಿಸ್ಟರ್ ಮತ್ತೂ ಆಬೆ ಭವನಗಳನ್ನು ಅಲಂಕರಿಸುವುದಕ್ಕೆ ೧೪೦೦೦೦ ರೂ. ಗಳು ಮುಟ್ಟಿತು. ಮಹೋತ್ಸವಕ್ಕಾಗಿ ಲಂಡನ್ನಿಗೆ ಬಂದಿದ್ದ ಪರದೇಶದ ರಾಜರುಗಳ ಪ್ರತಿನಿಧಿಗಳಿಗೆ ಕೊಡಲು ನಶ್ಯದ ಡಬ್ಬಿ ಮೊದಲಾದ ಪದಾರ್ಥಗಳನ್ನು ನವರತ್ನದಿಂದ ಪರತಲು ೧೨೩೯೦ ರೂ. ಗಳು ವ್ಯಯವಾಯಿತು. ಈ ಮಹೋತ್ಸವದ ವಿವರಣೆಯನ್ನು ಬರೆಯಲುದ್ಯುಕ್ತನಾಗಿದ್ದವನಿಗೆ ೪೫೦೦೦ ರೂ. ಗಳು ಕೊಡಲ್ಪಟ್ಟಿತು. ಈ ಮಹೋತ್ಸವಕ್ಕಾಗಿ ಹಣವು ನೀರಿನಂತೆ ವೆಚ್ಚಮಾಡಲ್ಪಟ್ಟಿತು. ಆದರೆ ೧೯೦೨ ರಲ್ಲಿ ನಡೆದ ೭ ನೇ ಎಡ್ವರ್ಡ್ ಪ್ರಭುಗಳ ಕಿರೀಟಧಾರಣ ಮಹೋತ್ಸವವು ವಿಕ್ಟೋರಿಯಾ ಮಹಾರಾಣಿಯವರ ಮಹೋತ್ಸವಕ್ಕಿಂತತಿಶಯವಾಗಿ ನಡೆದಿದ್ದಾಗ್ಯೂ ವೆಚ್ಚವು ಮಾತ್ರ ಅದಕ್ಕಿಂತಲೂ ಕಡಿಮೆಯಾಗಿದ್ದಿತು. ಈಗ ಜಾರ್ಜ್ ಪ್ರಭುಗಳ ಕಿರೀಟಧಾರಣ ಮಹೋತ್ಸವವು ೧೯೦೨ ರಲ್ಲಿ ಆದ ಮಹೋತ್ಸವಕ್ಕಿಂತಲೂ ಅತಿಶಯವಾಗಿ ನಡೆಯಬೇಕೆಂದು ಸಂಕಲ್ಪಿಸಲ್ಪಟ್ಟಿರುವುದರಿಂದ ವೆಚ್ಚವು ಹೆಚ್ಚಾಗಿಯೇ ಆಗಬಹುದೆಂದು ತೋರುತ್ತದೆ.

ಡೆಪ್ಯುಟಿ ಸ್ಯಾನಿಟರಿ ಕಮಿಷನರು.

ನಮ್ಮ ಸಂಸ್ಥಾನದಲ್ಲಿ ಬಹುಕಾಲದಿಂದಲೂ ಸೀನಿಯರ್ ಸರ್ಜನರೇ ಸ್ಯಾನಿಟರಿ ಕಮಿಷನರಾಗಿರುತ್ತಿದ್ದರು. ಆದರೆ ಈಚೆಗೆ ಆರೋಗ್ಯಾಭಿವೃದ್ಧಿಯ ಕಾರ್ಯವು ಹೆಚ್ಚಾದುದರಿಂದ ಪ್ರಾಯಶಃ ಎರಡುಕೆಲಸಗಳನ್ನೂ ಒಬ್ಬರೇ ನೋಡಿಕೊಳ್ಳಲಾಗುವುದಿಲ್ಲವೆಂಬುದರಮೇಲೆ ಡೆ॥ ಸ್ಯಾನಿಟರಿ ಕಮಿಷನರ ಸ್ಥಾನವೊಂದು ಹೊಸದಾಗಿ ಕಲ್ಪಿಸಲ್ಪಟ್ಟು ಅದಕ್ಕೆ ಡಾ॥ ಪಾಲ್ಪು ಯವರು ನೇಮಿಸಲ್ಪಟ್ಟರು. ಅವರು ಈ ಉದ್ಯೋಗವನ್ನು ನೆನ್ನೆಯವರಿಗೂ ನೋಡುತಿದ್ದರು. ಆದರೆ ಈಗ ಅವರು ಪುನಃ ಹೆಲ್ತಾಫೀಸರರಾಗಿ ನೇಮಿಸಲ್ಪಟ್ಟು ಶಿವಮೊಗ್ಗ ಡಿ॥ ಸ್ಯಾನಿಟರಿ ಆಫೀಸರಾಗಿ ವರ್ಗಾಯಿಸಲ್ಪಟ್ಟಿರುವರೆಂದು ಕಳೆದ ವಾರದ ಗೆಜೆಟ್ಟಿನಲ್ಲಿ ಪ್ರಕಟವಾಗಿರುವುದನ್ನೋಡಿದರೆ ಡೆ॥ ಸ್ಯಾನಿಟರಿ ಕಮಿಷನರ ಸ್ಥಾನವನ್ನೇ ತಪ್ಪಿಸಿಬಿಟ್ಟಂತೆ ತೋರುತ್ತದೆ. ಹೀಗೆ ಡಾ॥ ಪಲ್ಪುಯವರು ದೊಡ್ಡದ್ಯೋಗದಲ್ಲಿದ್ದು ಮರಳಿ ಕಡಿಮೆಯುದ್ಯೋಗಕ್ಕೆ ತರಲ್ಪಟ್ಟಿರುವುದನ್ನೋಡಿದರೆ, ಪ್ರಾಯಶಃ ಅವರಿಗೂ ಡಾ॥ ಶ್ರೀನಿವಾಸರಾಯರಿಗೂ ಹುಟ್ಟಿದ್ದ ವಿವಾದದ ಫಲಿತಾಂಶವಿರಬಹುದೆಂದು ತೋರುತ್ತದೆ. ಅಲ್ಲದೆ ಈಚೀಚೆಗೆ ಅನೇಕ ವಿಷಯಗಳಲ್ಲಿ ಇವರಭಿಪ್ರಾಯಕ್ಕೆ ಸ್ಯಾನಿಟರಿ ಕಮಿಷನರ ಅಭಿಪ್ರಾಯವು ಭಿನ್ನವಾಗುತ್ತ ಬಂದುದೂ ತಕ್ಕಮಟ್ಟಿಗೆ ಸಹಾಯಕವಾಗಿರಬಹುದು.

ಒಳದೇಶದ ವೃತ್ತಾಂತ.

ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಎಕ್ಸೈಸ್ ಟ್ರೇನಿಂಗ್ ಸ್ಕೂಲನ್ನು ೧೯೧೧ ನೇ ಅಗಸ್ಟಿನಿಂದ ಒಂದು ವರ್ಷವರೆಗೆ ನಡೆಸತಕ್ಕದ್ದೆಂದು ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ.

ಚಿಕ್ಕಬಳ್ಳಾಪುರದಲ್ಲಿ ಪ್ಲೇಗು ರೋಗವು ಸಂಪೂರ್ಣವಾಗಿ ನಿಂತಿರುವುದರಿಂದ ಊರ ಹೊರಗೆ ಗುಡಸಲಿನಲ್ಲಿ ವಾಸಮಾಡುತ್ತಿರುವ ಜನರು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿ ಬರುವ ಪ್ರಯತ್ನದಲ್ಲಿದ್ದಾರೆ.

ಕಳೆದ ಗುರುವಾರ ರಾಜಧಾನಿಯಲ್ಲಿ ಕೊಂಚ ಮಳೆಯಾಯಿತು. ಇದರಿಂದ ದಗೆಯು ಇನ್ನೂ ಹೆಚ್ಚಿತೇ ವಿನಾ ಕಡಿಮೆಯಾಗಲಿಲ್ಲವು. ನಂಜನಗೂಡು, ಹೊನ್ನಾಳಿ ಮೊದಲಾದ ಕಡೆ ಬಹುದೊಡ್ಡ ಮಳೆಯಾಯಿತೆಂದು ಕೇಳುತ್ತೇವೆ

ಕಳೆದ ತಾ॥ ೨೫ರಲ್ಲಿ ಬೆಂಗಳೂರ ಮಾರ್ಕೆಟ್ ಬೀದಿಯಲ್ಲಿ ಈಗತಾನೆ ಜನಿಸಿದ ಒಂದು ಹೆಣ್ಣು ಮಗುವು ಜೀವಸಹಿತವಾಗಿಯೇ ಕಸ-ಗೊಬ್ಬರವನ್ನು ಹಾಕುವ ತೊಟ್ಟಿಯಲ್ಲಿ ಬಿಸಾಕಲ್ಪಟ್ಟಿತ್ತು. ಪೋಲೀಸರು ಈ ಮಗುವನ್ನು ಆಸ್ಪತ್ರೆಯ ರಕ್ಷಣೆಯಲ್ಲಿಟ್ಟು ಮಗುವನ್ನು ಹೀಗೆ ಬಿಸಾಡಿದ್ದ ನೀಚರನ್ನು ಕಂಡುಹಿಡಿಯುತ್ತಿದ್ದಾರೆ.

ಹೊನ್ನಾಳಿ ಸಬ್ ತಾ॥ ನ್ಯಾಮತಿಯಲ್ಲಿ ೮ ವರ್ಷ ವಯಸ್ಸಿನೊಳಗಿನ ಹುಡುಗಿಗೆ ಮದುವೆಯನ್ನು ಮಾಡಿದ ಅಪರಾಧಕ್ಕಾಗಿ ಆ ಹುಡುಗಿಯ ತಂದೆಗೂ ಮತ್ತೂ ಮಾವನಿಗೂ ಮೈಸೂರು ಡಿ॥ ಮ್ಯಾಜಿಸ್ಟ್ರೇಟರು ೬೦ ರೂ. ಗಳ ದಂಡವನ್ನು, ಇದನ್ನು ಕೊಡಲು ತಪ್ಪಿದರೆ ೧ ತಿಂಗಳ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ತುಮಕೂರು ಡಿ॥ ಮೆಡಿಕಲ್ ಆಫೀಸರಾದ ಮ॥ ಟಿ. ಎಸ್. ನಂಜಪ್ಪನವರು ಈ ತಾ॥ ೧ ರಿಂದ ೧ ತಿಂಗಳ ಪ್ರಿವಿಲೇಜ್ ರಜವನ್ನು ಪಡೆದುಕೊಂಡಿರುವುದರಿಂದ ಅವರ ಬದಲು ರಾಜಧಾನಿಯ ಜನರಲ್ ಆಸ್ಪತ್ರೆಯ ರೆಸಿಡೆಂಟ್ ಸರ್ಜನರಾದ ಮ॥ ರಾಜಾ ರಾಮರಾಯರು ಆಕ್ಟಿಂಗ್ ಡಿ॥ ಮೆಡಿಕಲ್ ಆಫೀಸರಾಗಿ ನೇಮಿಸಲ್ಪಟ್ಟಿರುತ್ತಾರೆ,

ತುಮಕೂರಿನಲ್ಲಿ ಕಳೆದ ೧ ತಿಂಗಳಿಂದಲೂ ಪ್ಲೇಗುಮರಣಗಳಿಲ್ಲದೆ ಸಂಪೂರ್ಣವಾಗಿ ನಿಂತುಹೋಗಿರುವುದರಿಂದ, ಜನರೆಲ್ಲರೂ ಊರಿಗೆ ಬಂದು ಸೇರುತ್ತಿರುವರು. ಪಾಠಶಾಲೆಗಳು ಪ್ಲೇಗಿಗಾಗಿ ಮುಚ್ಚಲ್ಪಟ್ಟಿದ್ದರಿಂದ ಬೇಸಿಗೆ ರಜಾಕ್ಕಾಗಿ ಮುಚ್ಚಲ್ಪಡದೆ ನಡಿಸಲ್ಪಡಬೇಕೆಂದು ವಿದ್ಯಾಶಾಖೆಯವರ ಅಪ್ಪಣೆಯಾಗಿರುತ್ತದೆ. ಮ॥ ಎಂ. ಶಾಮರಾಯರು ಕಳೆದ ತಾ ೧೭ ರಲ್ಲಿ ಡಿ॥ ಕಮಿಷನರ ಅಧಿಕಾರವನ್ನು ಮ॥ ಕೆ. ದೊರೆಸ್ವಾಮಯ್ಯರಿಂದ ವಹಿಸಿಕೊಂಡರು. ಮ॥ ದೊರೆಸ್ವಾಮಯ್ಯರು ಡಿ॥ ಕಮಿಷನರ ಅಧಿಕಾರವನ್ನು ಮ॥ ಶಾಮರಾಯರಿಗೆ ವಹಿಸಿಕೊಡುವುದಕ್ಕೆ ಮೊದಲು ತಾವು ಹಿಂದೆ ಅರ್ಧದಂಡವನ್ನು ವಿಧಿಸಿದ್ದವರಿಗೆಲ್ಲ ದಂಡದ್ರವ್ಯವನ್ನು ಹಿಂತಿರುಗಿ ಕೊಡಿಸಿದರೆಂದೂ ಕೆಲಕಾಲದವರೆಗೆ ಕೆಲಸಕ್ಕೆ ಬರದಂತೆ ಆಜ್ಞೆಮಾಡಿದ್ದವರನ್ನು ಮರಳಿ ಕೆಲಸಕ್ಕೆ ಬರಮಾಡಿದರೆಂದೂ ಕೇಳುತ್ತೇವೆ,

ಕಳೆದ ತಾ॥ ೨೦ ರ ರಾತ್ರಿ ಬೆಂಗಳೂರ ದೊಡ್ಡಣ್ಣನ ಸ್ಕೂಲ್ ಕಟ್ಟಡದಲ್ಲಿ ಸಿರಿಪಟ್ಟಣ ನಾಟಕಸಂಘದವರು ಭೋಜಪ್ರಬಂಧವನ್ನು ಆಡುತ್ತಿರುವಾಗ್ಗೆ ೨ ನೇ ಅಂಕದ ಕಡೆಯಲ್ಲಿ ಕಾಳಿಯು ಪ್ರಸನ್ನಳಾಗುವ ಸಂದರ್ಭದಲ್ಲಿ ಅಂಕದ ಪರದೆಯ ಹಿಂದೆ ಕಟ್ಟಿದ್ದ ವಾಷಿಂಗ್‌ಟನ್ ದೀಪವು ತೂತಾಗಿದ್ದುದರಿಂದ ಎಣ್ಣೆಯು ಸೋರಿ ಹೊತ್ತಿಕೊಂಡು ಜ್ವಾಲೆಯು ಹತ್ತಿರದ ಪರದೆಗೆ ತಗಲಿ ಮುಂದೆ ವ್ಯಾಪಿಸುವಷ್ಟರಲ್ಲಿ ರಂಗಸ್ಥಳದಲ್ಲಿದ್ದ ಸಂಘದವರೂ ಇತರರೂ ಕೂಡಲೆ ನೀರನ್ನು ಸುರಿದು ಬೆಂಕಿಯನ್ನು ಆರಿಸಿಬಿಟ್ಟರು. ಮಂದಿರದಲ್ಲಿ ನೆರೆದಿದ್ದ ಪ್ರೇಕ್ಷಕರು ಪೂನಾದ ಸಮೀಪದಲ್ಲಿರುವ ಸೊಲಂಬ್ರಿಯಂಬಲ್ಲಾದ ಅಗ್ನಿಯ ಅನಾಹುತದಂತೆ ಇಲ್ಲಿ ಆಗುವುದೋ ಎಂದು ಬಹು ಭಯಗ್ರಸ್ತರಾಗಿದ್ದರು. ಆದರೆ ದೈವಾನುಗ್ರಹದಿಂದ ಅಷ್ಟು ಅಪಾಯಕ್ಕವಕಾಶವಿಲ್ಲದಂತೆ ಸಂಘದವರು ಸಕಾಲದಲ್ಲಿ ಧೈರ್ಯದಿಂದ ನೀರನ್ನು ಸುರಿದುದು ಸಂತೋಷವೇ ಸರಿ.

ಮೂಡಗೆರೆ ತಾಲ್ಲೋಕು ಒಬ್ಬ ಮುತ್ಸದ್ದಿ ಕೆ. ರಾಮಸ್ವಾಮಯ್ಯನು ಕಂಟ್ರಾಕ್ಟರುಗಳಿಗೆ ಕೊಡತಕ್ಕ ರಸೀತಿಗಳಲ್ಲಿ ಹೆಚ್ಚು ಮೊಬಲಗನ್ನು ಬರೆದು ಖಜಾನೆಗೆ ಕಡಿಮೆ ಮೊಬಲಗನ್ನು ಕಟ್ಟುತ್ತ ೨೦೦ ರೂ. ಗಳ ವರೆಗೆ ದುರುಪಯೋಗಪಡಿಸಿಕೊಂಡಿದ್ದನು. ಇವನ ಮೇಲ್ಪಟ್ಟ ಅಧಿಕಾರಿಗಳಿಗೆ ಅನುಮಾನ ಹುಟ್ಟಿ ಅವನನ್ನು ಬೇರೆ ಕೆಲಸಕ್ಕೆ ನೇಮಿಸಿ ಒಬ್ಬ ಮುತ್ಸದ್ದಿಯ ಕೆಲಸಕ್ಕೆ ಮತ್ತೊಬ್ಬನನ್ನು ಹಾಕಿದರು. ಈ ಹೊಸ ಮುತ್ಸದ್ದಿಯು ಹಿಂದಿನವನು ಮೋಸಮಾಡಿ ಹಣವನ್ನಪಹರಿಸಿದ್ದ ಸಂದರ್ಭಗಳನ್ನೆಲ್ಲ ಹೊರಗೆಡಹಲು ಕೆ. ರಾಮಸ್ವಾಮಯ್ಯನು ಇದರಿಂದ ತನಗಪಾಯ ಸಂಭವಿಸುತ್ತದೆಂದು ಭಯಪಟ್ಟು ಕಳೆದ ಯುಗಾದಿ ಹಬ್ಬದ ದಿವಸ ನೀರಿನೊಳಗೆ ಮುಳುಗಿ ಆತ್ಮಹತ್ಯೆಯನ್ನು ಮಾಡಿಕೊಂಡನು. ಇದೇರೀತಿ ಗುಬ್ಬಿ ತಾ॥ ನಲ್ಲಿ ಒಬ್ಬ ಶಾನುಭೋಗನು ಸರ್ಕಾರಿಯ ಹಣವನ್ನು ತಿಂದಿದ್ದು ಕಂಟ್ರೋಲ ಆಫೀಸ್ ಅದಿಟರೊಬ್ಬರು ಬಂದು ಲೆಕ್ಕವನ್ನು ಪರೀಕ್ಷಿಸುತ್ತಿರುವಾಗ್ಗೆ ತನ್ನ ಮೋಸಕೃತ್ಯವು ಹೊರಬೀಳುತ್ತದೆಂದು ಭಯಪಟ್ಟು ಕಳೆದ ತಾ॥ ೧೯ ರಲ್ಲಿ ಬಾವಿಯೊಳಗೆ ಬಿದ್ದು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದನು.

ಪರಸ್ಪರ ಸಹಾಯಕ ಸಂಘಗಳ ಆಕ್ಟಿಂಗ್ ರೆಜಿಸ್ಟ್ರಾರಾಗಿ ನೇಮಿಸಲ್ಪಟ್ಟಿರುವ ಅ॥ ಕಮಿಷನರ್ ಮ॥ ಎಂ. ಎ. ನಾರಾಯಣಯ್ಯಂಗಾರರು ದಾವಣಗೆರೆ ಸಬ್‌ಡಿವಿಜನ್ ಛಾರ್ಜನ್ನು ಕೊಟ್ಟು ಬರುವಾಗ್ಗೆ ದಾವಣಗೆರೆಯ ನಿವಾಸಿಗಳು ಮ॥ ನಾರಣಯ್ಯಂಗಾರರನ್ನು ಅಲ್ಲಿಯ ಟವರ್ ಹಾಲಿಗೆ ತಾ॥ ೨೫ ರ ಸಾಯಂಕಾಲ ಬರಮಾಡಿಕೊಂಡು ಅನೇಕ ವಿನೋದೋತ್ಸವಗಳಿಂದ ತೃಪ್ತಿಪಡಿಸಿ ತಮಗಿದ್ದ ವಿಶ್ವಾಸವನ್ನು ವ್ಯಕ್ತಪಡಿಸಿದರು. ಮತ್ತೂ ಡಿ॥ ಬೋರ್ಡು ಮೆಂಬರು ಮ॥ ಸುಬ್ಬರಾಯರು ಬ್ರಾಹ್ಮಣರ ಪರವಾಗಿಯೂ, ಮ॥ ಗುರುಶಾಂತಪ್ಪನವರು ವೀರಶೈವರಪರವಾಗಿಯೂ, ಬಾಜಿಯವರು ಮಹಮ್ಮದಿಯರ ಪರವಾಗಿಯೂ ಅತಿಥಿಗಳ ಗುಣಕಥನಗಳನ್ನು ಮಾಡಿ ದಾವಣಗೆರೆಗೆ ಅವರು ಮಾಡಿದ ಅನಂತುಪಕಾರಗಳನ್ನು ಸ್ಮರಣೆಗೆ ತಂದರು. ಅನಂತರ ಮ॥ ಅಯ್ಯಂಗಾರ್ಯರು ಉಚಿತವಾದ ಉತ್ತರಗಳನ್ನು ಕೊಟ್ಟು ತಮಗಿಷ್ಟೊಂದು ಮರ್ಯಾದೆಯನ್ನು ಮಾಡಿದುದಕ್ಕಾಗಿ ದಾವಣಗೆರೆಯ ನಿವಾಸಿಗಳನ್ನು ವಂದಿಸಿದರು.

ವರ್ತಮಾನಸಂಗ್ರಹ.

ಪಶ್ಚಿಮದೇಶ ಸಂಚಾರಕ್ಕೊರಟಿರುವ ಭೂಪಾಲಿನ ಬೇಗಂರವರು ಈಗ ಪ್ಯಾರಿಸ್ ಪಟ್ಟಣದಲ್ಲಿರುವರು. ಮತ್ತೂ ಅಲ್ಲಿಂದ ಕಿರೀಟಧಾರಣಮಹೋತ್ಸವ ಸಮಯಕ್ಕೆ ಲಂಡನ್ ಪಟ್ಟಣಕ್ಕೆ ಬರುವವರಾಗಿರುವರು.

ದಿಲ್ಲಿಯಪಟ್ಟಣದ ಒಂದು ಬೀದಿಯಲ್ಲಿ ಅಗ್ನಿಪ್ರವೇಶವಾಗಿ ಕೆಲ ಅಂಗಡಿಗಳೂ, ಒಂದು ಬರ್ಸಿನ ಕಾರ್ಯಾಲಯವೂ, ಒಂದು ಕಂಪೆನಿಯವರ ಕಟ್ಟಡವೂ ಸುಟ್ಟುಹೋದುವು. ಇದರಿಂದ ೨ ಲಕ್ಷ ರೂ. ವರೆಗೆ ನಷ್ಟವಾಗಿರಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಬೊಂಬಾಯಿಯ ಹೈಕೋರ್ಟು ಜಡ್ಜಿಗಳಾದ ಚಂದಾವರ್ಕರವರು ನಾಸಿಕದ ಕಲೆಕ್ಟರಾಗಿದ್ದ ಜಾಕ್‌ಸನ್‌ರವರ ಕೊಲೆಯ ವಿವಾದವನ್ನು ವಿಚಾರಿಸುತ್ತಿರುವಾಗ್ಗೆ ನರಸಿಂಹಭಟ್ಟ ಎಂಬ ಬ್ರಾಹ್ಮಣನು ಚಂದಾವರ್ಕರರಿಗೆ ಭಯೋತ್ಪಾದವನ್ನುಂಟುಮಾಡಿ ಕಾಗದಗಳನ್ನು ಬರೆದಿದ್ದನೆಂಬ ಅಪರಾಧದಮೇಲೆ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು, ತಾನು ಕಾಗದಗಳನ್ನು ಬರೆದಿದ್ದುಂಟೆಂದು ಒಪ್ಪಿಕೊಂಡದ್ದರಮೇಲೆ ೨ ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟನು,

ಕಳೆದ ತಾ॥ ೨೬ ರಲ್ಲಿ ಬೊಬ್ಬಲಿಯಲ್ಲಿ ಆಕಸ್ಮಿಕವಾಗಿ ಅಗ್ನಿಯು ಪ್ರವೇಶವಾಗಿ ಅನೇಕ ಬೀದಿಗಳಿಗೆ ವ್ಯಾಪಿಸಿ, ಪ್ರಾಯಶಃ ೩೦೦ ಮನೆಗಳ ಮೇಲೆಯೇ ಸುಟ್ಟು ಭಸ್ಮವಾದುವು. ಇದರಿಂದ ೧೦ ಜನರು ಆ ಕೂಡಲೇ ಸತ್ತರು. ಮತ್ತೆ ೩ ಜನರು ಮರಣಾವಸ್ಥೆಯಲ್ಲಿರುವರು. ಇವರಲದೆ ಅನೇಕ ದನಕರುಗಳು ಸತ್ತುಹೋದವಂತೆ. ಅಲ್ಲಿಯ ಮಹಾರಾಜರು ಮನೆಯನ್ನು ಕಳೆದುಕೊಂಡು ವಿಪನ್ನರಾದ ಜನರ ವಿಚಾರದಲ್ಲಿ ಕನಿಕರಪಟ್ಟು ಆ ರಾತ್ರಿ ಅವರೆಲ್ಲರಿಗೂ ಅನ್ನವನ್ನು ಹಾಕಿಸಿದರು. ಮತ್ತೂ ಮಾರಣೆಯ ಬೆಳಿಗ್ಗೆ ಬಂಡಿಗಳಲ್ಲಿ ಆಹಾರಪದಾರ್ಥಗಳನ್ನು ತುಂಬಿಸಿ ಬೀದಿಗಳ ಮೇಲೆ ಕಳಿಸಿಕೊಟ್ಟರು.

ಬಾರಿಸಾಲಿಗೆ ಸೇರಿದ ಲಕ್ಷ್ಮಣಕಟ್ಟೆಯೆಂಬ ಗ್ರಾಮದಲ್ಲಿ ಪುಣ್ಯವಂತನಾದ ರಾಧಾಚರಣಭೂಪ ಎಂಬುವನ ಮನೆಗೆ ಕಳೆದ ತಾ॥ ೨೦ ರ ರಾತ್ರಿ ೩೦-೪೦ ಜನ ಕಳ್ಳರು ಮುಖಕ್ಕೆ ಕಪ್ಪನ್ನು ಬಳಿದುಕೊಂಡು, ಕೈಗಳಲ್ಲಿ ದೀಪಗಳನ್ನೂ ಕತ್ತಿಗಳನ್ನೂ, ತುಪಾಕಿಗಳನ್ನೂ ಹಿಡಿದುಕೊಂಡು ನುಗ್ಗಿ ಮನೆಯೊಳಗೆ ಮಲಗಿದ್ದವರನ್ನೆಲ್ಲ ಎಬ್ಬಿಸಿ ಅವರ ಕೈಕಾಲುಗಳನ್ನು ಹಗ್ಗದಿಂದ ಬಿಗಿದು ಕಟ್ಟಿ, ಕಬ್ಬಿಣದ ಪೆಟ್ಟಿಗೆಯ ಬೀಗದ ಕೈಗಳನ್ನು ಕಿತ್ತುಕೊಂಡು ಬಾಗಿಲನ್ನು ತೆಗೆದು ಸಾವಿರಾರು ರೂಪಾಯಿಬಾಳುವ ಆಭರಣಗಳನ್ನೂ, ನಗದು ಹಣವನ್ನೂ ಎತ್ತಿಕೊಂಡು ಫಲಾಯನವಾದರು. ಪೋಲೀಸರು ಕಳ್ಳರನ್ನು ಹಿಡಿಯಲು ವಿಶ್ವಪ್ರಯತ್ನವನ್ನು ನಡೆಸಿರುವರು.

ಕಲಕತ್ತಾದಲ್ಲಿ ಬರ್ರಾಬಜಾರಿನ ಪೋಲೀಸಿನವರು ಒಂದು ಜತೆ ಭಂಗಾರದ ಬಳೆಯನ್ನು ದಾರಿಯಲ್ಲಿ ಹೋಗುತ್ತಿದ್ದ ಒಬ್ಬನ ಗಂಟಿನಿಂದ ಅಪಹರಿಸಿದ್ದವನನ್ನು ಹಿಡಿದು ಠಾಣಕ್ಕೆ ಕರೆದುಕೊಂಡು ಬಂದು ಬಳೆಯನ್ನು ಕಳೆದುಕೊಂಡವನನ್ನು ವಿಚಾರಿಸುವಲ್ಲಿ ಅವನು–'ನಾನು ಈ ಬಳೆಗಳನ್ನು ರಂಗೂನಿನಲ್ಲಿ ೩೦ ರೂ. ಗಳ ಕ್ರಯಕ್ಕೆ ತೆಗೆದುಕೊಂಡು ಈ ಬೆಳಿಗ್ಗೆ ರಂಗೂನಿನಿಂದ ಇಲ್ಲಿಗೆಬಂದಿಳಿದು ಮಾರ್ಗದಲ್ಲಿ ಬರುತ್ತಿರುವಾಗ್ಗೆ ಈ ಕಳ್ಳನು ನನ್ನ ಹೆಗಲಿನಮೇಲೆ ಹಾಕಿಕೊಂಡಿದ್ದ ಗಂಟಿನಲ್ಲಿ ಕಟ್ಟಿದ್ದ ಬಳೆಗಳನ್ನು ಅಪಹರಿಸಿಕೊಂಡು ಓಡಿಹೋಗುತ್ತಿದ್ದನು. ನಾನು ಅದನ್ನು ಕಂಡು ಕೂಗಿಕೊಳ್ಳಲು ಪೋಲೀಸು ಇನ್ಸ್ಪೆಕ್ಟರು ಅವನ ಹಿಂದೆಯೇ ಓಡಿಹೋಗಿ ಹಿಡಿದುತಂದರು' ಎಂದು ಹೇಳಿದನು. ಆ ಕಳ್ಳನು 'ತಾನು ಕದ್ದುದುಂಟು. ಆದರೆ ಈ ಬಳೆಗಳು ಗಿಲೀಟಿನವೇ ಹೊರತು ಭಂಗಾರದವಲ್ಲ. ಇವನು ವರ್ತಕರಿಗೆ ಮೋಸಪಡಿಸಲು ತೆಗೆದುಕೊಂಡು ಹೋಗುತ್ತಿದ್ದನು,' ಎಂದು ಹೇಳಿದುದರ ಮೇಲೆ ಪೋಲೀಸಿನವರು ಹಿತ್ತಾಳೆಯ ಬಳೆಗಳಿಗೆ ಭಂಗಾರದ ಗಿಲೀಟು ಮಾಡಲ್ಪಟ್ಟಿರುವುದೆಂದು ನಿರ್ಧರಿಸಿ ಅವನನ್ನೂ ಸೆರೆಯಲ್ಲಿಟ್ಟಿರುವರು.

ಕಳೆದ ತಾ॥ ೨೦ ರ ರಾತ್ರಿ ಒಬ್ಬ ಯೂರೋಪ್ಯ ಸ್ತ್ರೀಯು ಡಾರ್ಜಿಲಿಂಗಿನಿಂದ ಹೊರಟು ಮೇಲು ಬಂಡಿಯ ೨ನೇ ತರಗತಿಯಲ್ಲಿ ಪ್ರಯಾಣ ಮಾಡುತ್ತಿರುವಾಗ್ಗೆ ಸಿಲಿಗೂರಿ ಮತ್ತು ಶಾಂತಹರ ಸ್ಟೇಷನ್ನುಗಳ ಮಧ್ಯೆ ನಿದ್ದೆಯಿಂದೆಚ್ಚೆತ್ತು ನೋಡುವಲ್ಲಿ ಒಬ್ಬ ಕೀಳು ಜಾತಿಯವನು ತಾನು ಮಲಗಿದ್ದ ಬಂಡಿಯೊಳಕ್ಕೆ ಹೇಗೊ ಪ್ರವೇಶಿಸಿ ಮೊಳಕಾಲೂರಿಕೊಂಡು ಆಭರಣದ ಪೆಟ್ಟಿಗೆಯ ಬಾಗಿಲನ್ನು ತೆರೆಯುತ್ತಿದ್ದುದನ್ನು ಕಂಡು ಬಹು ಧೈರ್ಯ ಸಾಹಸದಿಂದ ಆ ಕಳ್ಳನನ್ನು ಹಿಡಿದು ಜೋರಾಡುತ್ತಿರುವಷ್ಟರಲ್ಲಿ, ಅವನು ಆಭರಣದ ಪೆಟ್ಟಿಗೆಯನ್ನು ತೆಗೆದು ಕಿಟಕಿಯಿಂದ ಹೊರಗಡೆ ಬಿಸಾಡಿ, ಬಹು ಸಾಹಸಪಟ್ಟು ಆಕೆಯ ಕೈಯಿಂದ ಬಿಡಿಸಿಕೊಂಡು ಕಿಟಕಿಯಿಂದ ನುಗ್ಗಿ ಹೊರಗೆ ದುಮುಕಿ ಕತ್ತಲೆಯಲ್ಲಿ ಮಾಯವಾದನು. ಬಂಡಿಯು ಶಾಂತಹರ ಸ್ಟೇಷನ್ನಿಗೆ ಬಂದು ಸೇರಲು ರಾತ್ರಿ ೨ ಗಂಟೆಯಾಗಿದ್ದಿತು. ಆಗ ಆ ಯೂರೋಪ್ಯಳು ನಡೆದ ವೃತ್ತಾಂತಗಳನ್ನೆಲ್ಲ ಅಧಿಕಾರಿಗಳಿಗೆ ತಿಳುಹಲು ಅವರು ಸರ್ಕಾರಿಯ ರೈಲ್ವೆ ಪೋಲೀಸಿನವರಿಗೆ ಅನುಮಾನಗ್ರಸ್ತರಾದಂಥವರನ್ನು ಹಿಡಿಯುವಹಾಗೆ ತಂತಿಯನ್ನು ಕೊಟ್ಟರು. ದಮುಕದಿಯ ಸ್ಟೇಷನ್ನಿನಲ್ಲಿ ಪೋಲೀಸಿನವರು ಆ ಯೂರೋಪ್ಯಳ ವಾಜ್ಮೂಲವನ್ನು ತೆಗೆದುಕೊಂಡು ಕಳ್ಳನನ್ನು ಹಿಡಿಯ ಯತ್ನಿಸಿರುವರು.

ಕಳೆದ ತಾ॥ ೨೨ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೩೯,೩೪೧ ಪ್ಲೇಗು ಮರಣಗಳಾದುವು. ಇವುಗಳಲ್ಲಿ ಬೊಂಬಾಯಾಧಿಪತ್ಯದಲ್ಲಿ ೧೫೧೩; ಮದ್ರಾಸಾಧಿಪತ್ಯದಲ್ಲಿ ೩೩; ಬಂಗಾಳದಲ್ಲಿ ೩೨೦೫; ಸಂಯುಕ್ತ ಪ್ರಾಂತಗಳಲ್ಲಿ ೧೯೧೧೮; ಪಂಜಾಬಿನಲ್ಲಿ ೧೪೯೯೧; ಬರ್ಮಾದಲ್ಲಿ ೯೯; ಮಧ್ಯಪ್ರಾಂತಗಳಲ್ಲಿ ೨೪೮; ಮೈಸೂರ ಸಂಸ್ಥಾನದಲ್ಲಿ ೭೦; ಹೈದರಾಬಾದು ಸೀಮೆಯಲ್ಲಿ ೬೩; ಮಧ್ಯಹಿಂದೂಸ್ಥಾನದಲ್ಲಿ ೩೩೬; ಎಲ್ಲೆಯ ಪ್ರಾಂತಗಳಲ್ಲಿ ೨೮; ಮತ್ತೂ ಕಾಶ್ಮೀರದಲ್ಲಿ ೧೦೧ ಈ ಪ್ರಕಾರ ಮರಣವಾಗಿರುತ್ತವೆ. ಬೊಂಬಾಯಿ ಪಟ್ಟಣದಲ್ಲಿ ೪೬ ಜನರಿಗೆ ರೋಗವು ತಗಲಿ ೩೦ ಜನರು ಸತ್ತರು. ಹಿಂದಣ ವಾರದಲ್ಲಿ ೩೩೭ ಮರಣವಾಗಿದ್ದಿತು. ಆದರೆ ಒಟ್ಟು ಬೊಂಬಾಯಾಧಿಪತ್ಯದಲ್ಲಿ ೧೯೯೭ ಜನರಿಗೆ ತಗಲಿ ೧೫೧೩ ಜನರು ಸತ್ತರು. ಈ ವರ್ಷ ಇಲ್ಲಿ ರೋಗವಿಳಿಯುವ ಚಿಹ್ನೆಯು ಕಾಣು ಬರಲಿಲ್ಲ. ಮತ್ತೂ ಹಿಂದೂಗಳಲ್ಲಿ ಬಹು ಕೀಳುಜಾತಿಯವರು ವಿಶೇಷವಾಗಿ ತುತ್ತಾಗುತ್ತಿರುವರು. ದಿಲ್ಲಿ ಪಟ್ಟಣದಲ್ಲಿ ಆಚೆ ವಾರದಲ್ಲಿ ೪೧ ಜನರಿಗೆ ತಗಲಿ ೪೧ ಜನರೂ ಸತ್ತರು. ಮತ್ತು ಡಿಸ್ಟ್ರಿಕ್ಟಿನಲ್ಲಿ ೯೩೦ ಜನರಿಗೆ ತಗಲಿ ೯೩೦ ಮರಣಗಳಾಗಿರುವುವು. ಏಪ್ರಿಲ್ ತಿಂಗಳ ಮೊದಲಿನ ವಾರದಲ್ಲಿ ದಿಲ್ಲಿ ಪಟ್ಟಣದಲ್ಲಿ ೫೦ ಜನರು ರೋಗಗ್ರಸ್ತರಾಗಿ ೫೦ ಜನರೂ ಸತ್ತರು. ಅದರ ಮುಂದಿನ ವಾರದಲ್ಲಿ ೩೦ ಜನರಿಗೆ ತಗಲಿ ೩೫ ಜನರು ಸತ್ತರು. ಮತ್ತು ೩ನೇ ವಾರದಲ್ಲಿ ೮೦ ಜನರಿಗೆ ತಗಲಿ ೮೦ ಜನರೂ ಸತ್ತುಹೋದರು. ಹೀಗೆ ದಿಲ್ಲಿಯ ಪಟ್ಟಣದಲ್ಲಿ ಪ್ಲೇಗುರೋಗವು ಉಲ್ಬಣವಾಗಿರುವುದನ್ನೋಡಿ ಬರುವ ಡಿಸೆಂಬರ್ ತಿಂಗಳಲ್ಲಿ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವವು ನಡೆಯುವುದೊ ಇಲ್ಲವೊ ಎಂಬ ಸಂಶಯವು ಹುಟ್ಟಿರುವುದು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು.

ಪ. ಪ್ರ.

ಪತ್ರವ್ಯವಹಾರ.

ಬೆಂಗಳೂರಲ್ಲಿರುವ ಅಡ್ವೋಕೇಟ್ ಮ॥ ಎಚ್. ಕೆ. ವೀರಬಸವಯ್ಯ, ಬಿ. ಎ, ಬಿ. ಎಲ್., ರವರ ತಮ್ಮ ಮ॥ ಮಲ್ಲಪ್ಪನವರ ಪತ್ನಿಯು ಈಗ್ಗೆ ೪-೫ ತಿಂಗಳಿಂದಲೂ ಕ್ಷಯರೋಗಪೀಡಿತರಾಗಿದ್ದು ಸಕಲವಿಧವಾದ ಔಷಧೋಪಚಾರವನ್ನು ಮಾಡಿಸಿದಾಗ್ಯೂ ಗುಣವನ್ನು ಹೊಂದದೆ ಇದೇ ಏಪ್ರಿಲ್ ತಾ॥ ೧೧ ರಲ್ಲಿ ಶಿವಾಧೀನರಾದರೆಂದು ತಿಳುಹಲು ತುಂಬಾ ವಿಷಾದವಾಗುತ್ತದೆ. ಈಕೆಯು ಇನ್ನೂ ಬಹು ಚಿಕ್ಕವಯಸ್ಸಿನವರಾಗಿದ್ದಾಗ್ಯೂ ಒಳ್ಳೇ ಗುಣಾಢ್ಯರಾಗಿದ್ದು ಎಲ್ಲರ ಹೊಗಳಿಕೆಗೆ ಪಾತ್ರರಾಗಿದ್ದರು. ಮ॥ ಮಲ್ಲಪ್ಪನವರಿಗೆ ಇಷ್ಟು ಚಿಕ್ಕವಯಸ್ಸಿನಲ್ಲಿ ಪತ್ನೀವಿಯೋಗ ದುಃಖವು ಪ್ರಾಪ್ತವಾದುದಕ್ಕಾಗಿ ಅವರ ಮಿತ್ರಮಂಡಲಿಯೆಲ್ಲವು ವಿಶೇಷವಾಗಿ ಚಿಂತಿಸುತ್ತದೆ.

ಓರ್ವ ಮಿತ್ರ.

ಹೈದರಾಬಾದು ಇಲಾಖಾ ಕೃಷ್ಣಾ ಜಿಲ್ಲೆಗೆ ಸೇರಿದ ಚಿಕ್ಕಸೂಗೂರು ಮಹಾ[illegible] ಮಠಾಧ್ಯಕ್ಷರಾದ ಶ್ರೀಮತ್ಸಿದ್ಧಲಿಂಗ ಮಹಾಸ್ವಾಮಿಯವರ ಸನ್ನಿಧಿಯಲ್ಲಿ [illegible]

ರಾ|| ಮಾ|| ಕೆ. ಎಸ್. ದೊರೆಸಾಮಯ್ಯನವರಿಂದ ಸ್ವೀಕರಿಸಿದರು.

ಗುಬ್ಬಿ ಸಬ್ ಡಿವಿಜನ್ ಛಾರ್ಜನಲ್ಲಿರುವ ಅ|| ಕಮಿಷನರ್ ಮಾ|| ಎಸ್. ಮಾಧವರಾವ್, ಬಿ. ಎ., ಬಿ. ಎಲ್., ರವರಿಗೆ ೧೧೦ ನೇ ಸೆಕ್ಷನ್ನನುಸರಿಸಿ, ಒಳ್ಳೇ ನಡತೆಗಾಗಿ ಜಾಮೀನೆಯನ್ನು ತೆಗೆದುಕೊಳ್ಳುವ ಅಧಿಕಾರವು ಕೊಡಲ್ಪಟ್ಟಿರುತ್ತದೆ.

ಕ್ಲೋಸ್‌ಪೇಟೆ ಸಬ್ ತಾ|| ಆಕ್ಟಿಂಗ್ ಡಿ|| ಅಮಲ್ದಾರ್ ಮಾ|| ಎ. ಶಾಮರಾವ್, ಬಿ. ಎ., ಯವರಿಗೆ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ನನುಸರಿಸಿ ಅಪರಾಧಗಳನ್ನು ವಿಚಾರಿಸುವ ಅಧಿಕಾರವು ಕೊಡಲ್ಪಟ್ಟಿರುತ್ತದೆ.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮೇ ತಾ|| ೧ ನೇ ಸೋಮವಾರ.

ಮೈಸೂರ ಪ್ರಜಾಪ್ರತಿನಿಧಿ ಸಭೆಯು.

ಈ ಸಭೆಯು ೨೯ನೇ ವರ್ಷದ ಕೂಟವು ಕಳೆದ ೧೯೧೦ ನೇ ಅಕ್ಟೋಬರ್ ತಾ|| ೧೯ ರಾರಭ್ಯ ರಾಜಧಾನಿಯ ಪಬ್ಲಿಕ್ ಆಫೀಸಿನ ಸಭಾಂಗಣದಲ್ಲಿ ಸೇರಿದ್ದುದರ ನಡವಳಿಕೆಯು (ಪ್ರೊಸೀಡಿಂಗ್ಸ್) ಈಗತಾನೇ ಪ್ರಕಟವಾಗಿ ಅದರ ಪ್ರತಿಯೊಂದು ನಮ್ಮ ಹಸ್ತಗತವಾಗಿರುತ್ತದೆ. ಸಭೆಯು ನಡೆದು ಇಲ್ಲಿಗೆ ೬ ತಿಂಗಳಾಯಿತು. ಈ ನಡವಳಿಕೆಯನ್ನು ಪ್ರಕಟಿಸಲು ಇಷ್ಟು ಸಾವಕಾಶವಾಗಲು ಕಾರಣವೇನೋ ಗೊತ್ತಾಗಲಿಲ್ಲವು. ಪ್ರಾಯಶಃ ಸಂಸ್ಥಾನದ ಎಲ್ಲ ಶಾಖೆಯ ವರದಿಗಳೂ ಹೀಗೆಯೇ ಸಾವಕಾಶವಾಗಿ ಪ್ರಕಟಿಸಲ್ಪಡುವುದನ್ನೋಡಿದರೆ, ಇದು ಬಹುಕಾಲದಿಂದನುಸರಿಸಿಬಂದ ಪದ್ಧತಿಯಾಗಿರಬಹುದೆಂದು ತೋರುತ್ತದೆ. ಪ್ರತಿಯೊಂದು ಕಾರ್ಯವನ್ನೂ ಸಕಾಲದಲ್ಲಿ ನೆರವೇರಿಸಬೇಕೆಂಬ ಸಂಕಲ್ಪವುಳ್ಳವರೆಂದು ಹೆಸರುಗೊಂಡಿರುವ ಮಾ|| ಆನಂದರಾಯರು ತಮ್ಮ ದಿವಾನಗಿರಿಯಲ್ಲಾದರೂ ವಿಶಿಷ್ಟ ಶಾಖಾಧಿಕಾರಿಗಳು ತಂತಮ್ಮ ಶಾಖೆಯ ವರದಿಗಳನ್ನು ಸಕಾಲದಲ್ಲಿ ಪ್ರಕಟಿಸುವಂತೆ ಕಟ್ಟಪ್ಪಣೆಯನ್ನು ಮಾಡಿ ಈ ಗುಂಟಾಗಿರುವ ಅಲಸತೆಯನ್ನು ಹೋಗಲಾಡಿಸುವರೆಂದು ನಿರೀಕ್ಷಿಸುತ್ತೇವೆ. ಈ ಪ್ರೊಸೀಡಿಂಗ್ಸು ದಿವಾನರು ಸಭಾರಂಭದಲ್ಲಿ ಮಾಡಿದ ಸಂಸ್ಥಾನದಾಡಳಿತವಿಷಯಕವಾದ ಭಾಷಣವನ್ನೂ, ಪ್ರತಿನಿಧಿಗಳು ಮಾಡಿದ ಅರಿಕೆಗಳನ್ನೂ, ಸರ್ಕಾರದವರು ಕೊಟ್ಟ ಉತ್ತರಗಳನ್ನೂ ಮತ್ತೂ ಕೆಲ ಪ್ರತಿನಿಧಿಗಳೊಪ್ಪಿಸಿದ ವಿಜ್ಞಾಪನಪತ್ರಿಕೆಗಳನ್ನೂ ಒಳಗೊಂಡಿರುತ್ತದೆ. ಸಭೆಯು ನಡೆಯುವಾಗಲೇ ಇವುಗಳೆಲ್ಲವನ್ನೂ ಸಂಕ್ಷೇಪವಾಗಿ ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆಯಾದರೂ, ಅನೇಕ ವಿಷಯಗಳು ಗಮನಿಸಲ್ಪಡತಕ್ಕವುಗಳಾದುದರಿಂದ ಮುಖ್ಯವಾದುವುಗಳನ್ನು ನಮ್ಮ ವಾಚಕರ ತಿಳಿವಳಿಕೆಗಾಗಿ ಇಲ್ಲಿ ಕೊಟ್ಟಿರುತ್ತೇವೆ.

ಒಂದಾವೃತ್ತಿ ಆರಿಸಲ್ಪಟ್ಟ ಪ್ರತಿನಿಧಿಗಳು ೩ ವರ್ಷ ಕಾಲದವರೆಗೆ ಮೆಂಬರುಗಳಾಗಿರತಕ್ಕುದೆಂದು ೧೯೦೭ ರಲ್ಲಿ ಮಾಡಿದ ಪದ್ಧತಿಯನ್ನನುಸರಿಸಿ ಇದರ ಹಿಂದಣವರ್ಷದಲ್ಲಿ ಆರಿಸಲ್ಪಟ್ಟಿದ್ದ ಪ್ರತಿನಿಧಿಗಳು ಈ ವರ್ಷದಲ್ಲೂ ಮೆಂಬರಾಗಿದ್ದರು. ಈ ಒಟ್ಟು ೨೭೦ ಪ್ರತಿನಿಧಿಗಳಲ್ಲಿ ೬೮ ತಾಲ್ಲೋಕುಗಳಿಂದ (ಸಬ್‌ತಾಲ್ಲೋಕುಗಳು ಸೇರಿ) ೨೧೧, ೫೦೦೦ ಮತ್ತು ಅದಕ್ಕೆ ಮೇಲ್ಪಟ್ಟ ಪ್ರಜಾಸಂಖ್ಯೆಯುಳ್ಳ ೨೭ ಮ್ಯುನಿಸಿಪಾಲಿಟಿಗಳಿಂದ ೩೬, ೮ ಲೋಕಲ್ ಬೋರ್ಡುಗಳಿಂದ ೧೬, ಮತ್ತೂ ೧೧ ಅಸೋಸಿಯೇಷನ್ನುಗಳಿಂದ ೧೧ ಈ ಪ್ರಕಾರ ಆರಿಸಲ್ಪಟ್ಟಿದ್ದರು. ಇವರಲ್ಲಿ ಯುರೋಪ್ಯರು ೪, ಮಹಮ್ಮದೀಯರು ೧೭ ಮತ್ತೂ ಹಿಂದೂಗಳು ೨೪೯ ಇದ್ದರು. ಅಲ್ಲದೆ ೨೭೦ ರಲ್ಲಿ ವರ್ತಕರು ೩೫, ಸಾಹುಕಾರರು ಅಥವಾ ಬ್ಯಾಂಕಿಟ್ಟಿರುವವರು ೧೦, ಗ್ರಾಮಾಧಿಕಾರಿಗಳಾದ ಪಟೇಲರು ಶಾನುಭೋಗರು ೩೧, ಭೂಮಿಯುಳ್ಳವರು ೧೧೭, ಲಾಯರುಗಳು ೨೫, ಉಪಾಧ್ಯಾಯರುಗಳು ೭ ಮತ್ತೂ ಇತರ ಕಸಬಿನವರು ೧೫ ಈ ಪ್ರಕಾರ ಪ್ರಾಯಶಃ ಎಲ್ಲ ವೃತ್ತಿಯ ಜನರೂ ಮೆಂಬರಾಗಿದ್ದರು. ಸಭಾಂಗಣದಲ್ಲಿ ೨೮೧ ಸ್ಥಾನಗಳು ಸಿದ್ಧಪಡಿಸಲ್ಪಟ್ಟಿದ್ದುವು. ಆದರೆ ಕೆಲರು ಸತ್ತುಹೋದುದರಿಂದ ಮತ್ತೆ ಕೆಲರು ಮೆಂಬರುಗಳಾಗಿರಲು ಅನರ್ಹರೆಂದು ಮಾಡಲ್ಪಟ್ಟುದರಿಂದ ೯ ಸ್ಥಾನಗಳು ಬಿದ್ದುವು. ಅಲ್ಲದೆ ಒಬ್ಬ ಮೆಂಬರೇ ೩ ಕಡೆಗೆ ಪ್ರತಿನಿಧಿಗಳಾಗಾರಿಸಲ್ಪಟ್ಟಿದ್ದರು. ಈ ಕಾರಣದಿಂದ ಒಟ್ಟು ೨೭೦ ಮೆಂಬರುಗಳು ಬರುವುದಾಗಿ ಗೊತ್ತಾಗಿದ್ದಿತು.

ಚಿತ್ರಕಲ್‌ದುರ್ಗ ಡಿಸ್ಟ್ರಿಕ್ಟಿನ ಕೆಲ ಮುಖ್ಯಪಟ್ಟಣಗಳಲ್ಲಿ ಪ್ಲೇಗ್ ರೋಗವು ಪ್ರಾಪ್ತವಾಗಿದ್ದುದರಿಂದ, ಆ ಡಿಸ್ಟ್ರಿಕ್ಟಿನಲ್ಲಿ ಆರಿಸಲ್ಪಟ್ಟಿದ್ದ ಒಟ್ಟು ೨೬ ಮೆಂಬರುಗಳಲ್ಲಿ ೧೩ ಮೆಂಬರುಗಳು ಬರಲಿಲ್ಲವು. ಇದರಂತೆಯೇ ಶಿವಮೊಗ್ಗಾ ಡಿ|| ನಲ್ಲಿ ೨೩ ಮೆಂಬರುಗಳಲ್ಲಿ ೧೯ ಮೆಂಬರು ಬರದೆ ನಿಂತುಬಿಟ್ಟರು. ಈ ಕಾರಣಗಳಿಂದ ಬಾರದೆ ನಿಂತವರು ಹೋಗುತ ಒಟ್ಟು ೨೧೧ ಜನ ಮೆಂಬರುಗಳು ಸಭೆಗೆ ಬಂದಿದ್ದರು. ಸಭಾಕಾರ್ಯವು ಅಕ್ಟೋಬರ್ ತಾ|| ೨೩ ನೇ ಭಾನುವಾರದ ದಿವಸ ಮುಗಿದಿತು. ಆ ದಿವಸ ಸಭೆಯಲ್ಲಿ ೮೩ ಜನ ಮೆಂಬರುಗಳು ಮಾತ್ರ ಇದ್ದರು. ಸಭಾರಂಭದ ದಿವಸ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹ್ಯೂಡಾಲೆ, ಸಿ.ಎಸ್.ಐ., ಸಿ.ಐ.ಇ., ಯವರು ಮತ್ತೂ ಇತರ ಯುರೋಪ್ಯಾತಿಥಿಗಳು ಬಂದಿದ್ದರಲ್ಲದೆ, ಸಂಸ್ಥಾನದ ಕೌನ್ಸಿಲರುಗಳೂ, ಎಲ್ಲ ಶಾಖಾಧಿಕಾರಿಗಳೂ, ಮುಖ್ಯಾಧಿಕಾರಿಗಳೂ ಬಂದಿದ್ದರು. ದಿವಾನರು ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲಿ ಓದಿದಮೇಲೆ ಅಂಡರ್ ಸೆಕ್ರೆಟರಿ ಮಾ|| ಬಿ. ರಾಮಸ್ವಾಮಯ್ಯನವರು ಅದನ್ನು ಕನ್ನಡದಲ್ಲೋದಿದರು. ಅನಂತರ ಚಿನ್ನದಗಣಿ ಮಿ|| ರಿಚರ್ಡ್‌ಸನ್‌ರವರು, ದೇವನಹಳ್ಳಿ ತಾಲ್ಲೋಕಿನ ಮಾ|| ಡಿ. ಎಸ್. ಹನುಮಂತರಾಯರು, ಬೆಂಗಳೂರ ಮಹಮ್ಮದೀಯರ ಸಂಘದ ಮೌ|| ಮಹಮ್ಮದ್ ಅಬ್ಬಾಸ್‌ಖಾನರವರು, ಚಿತ್ರದುರ್ಗದ ಡಿ|| ನ ಮಾ|| ಅಡವಿಗುಪ್ಪನವರು, ಮೇಲುಕೋಟೆಯ ಸದಾನಂದವರ್ಧಿನಿ ಸಭೆಯ ಪಂಡಿತ ಶ್ರೀನಿವಾಸ ರಾಘವಾಚಾರ್ಯರು. ಮತ್ತೂ ಯಡತೊರೆ ತಾ||ನ ಮಾ|| ಎ. ರಾಮಣ್ಣನವರು ವಿಜ್ಞಾಪನಪತ್ರಿಕೆಗಳನ್ನೋದಿ ಒಪ್ಪಿಸಿದ ಮೇಲೆ ದಿವಾನರು ತಕ್ಕ ಉತ್ತರವನ್ನು ದಯಪಾಲಿಸಿದರು. ಪ್ರತಿನಿಧಿಗಳು ಅರಿಕೆಮಾಡಿಕೊಂಡ ವಿಷಯಗಳು ಅಕ್ಟೋಬರ್ ತಾ|| ೧೭ರಿಂದ ೭ ದಿನಗಳವರೆಗೆ ಚರ್ಚಿಸಲ್ಪಟ್ಟುವು. ಸಭಾಕಾರ್ಯವು ಮುಗಿದಮೇಲೆ ಮೌಲವಿ ಮಹಮ್ಮದ್ ಅಬ್ಬಾಸ್‌ಖಾನ್ ಮುಂತಾದ ಮೆಂಬರುಗಳು ಎದ್ದುನಿಂತು ದಿವಾನರು ಬಹುಶಾಂತಚಿತ್ತದಿಂದ ತಮ್ಮ ಅರಿಕೆಯನ್ನು ಲಾಲಿಸಿದುದಕ್ಕಾಗಿ ಅವರನ್ನು ವಂದಿಸಿದುದಲ್ಲದೆ ತಮ್ಮ ರಾಜಭಕ್ತಿ, ವಿಶ್ವಾಸಗಳನ್ನು ಶ್ರೀಮನ್ಮಹಾರಾಜರವರಲ್ಲಿ ಬಿನ್ನೈಸಬೇಕೆಂದು ಪ್ರಾರ್ಥಿಸಿದರು. ದಿವಾನರು ಪ್ರತಿಯಾಗಿ ಮೆಂಬರುಗಳನ್ನು ವಂದಿಸಿ ಅವರ ವಿಜ್ಞಾಪನೆಯನ್ನು ಶ್ರೀಮನ್ಮಹಾರಾಜರವರಲ್ಲಿ ತಿಳಿಸುತ್ತೇನೆಂದು ಅಪ್ಪಣೆ ಕೊಡಿಸಿದರು.

ಒಟ್ಟು ೨೭೦ ಜನ ಪ್ರತಿನಿಧಿಗಳಲ್ಲಿ ೩೧ ಜನ ಗ್ರಾಮಾಧಿಕಾರಿಗಳು ಅಂದರೆ ಶಾನುಭೋಗ ಪಟೇಲರುಗಳಿರುತ್ತಾರೆ. ಇವರು ಸರ್ಕಾರದ ಉದ್ಯೋಗಸ್ಥರಾದುದರಿಂದ ಮತ್ತೂ ಯಾವಾಗಲೂ ಮೇಲ್ಪಟ್ಟಧಿಕಾರಿಗಳ ಸಮೀಪವರ್ತಿಗಳಾಗಿದ್ದು ಅವರ ಅನುಗ್ರಹವನ್ನು ನಿರೀಕ್ಷಿಸುತ್ತಿರುವುದರಿಂದ ಲಾಯರುಗಳು, ಜಮೀನ್ದಾರರು, ವರ್ತಕರು ಮೊದಲಾದ ಸ್ವತಂತ್ರ ಜನರಂತೆ ಪ್ರಜೆಗಳಿಗನುಕೂಲವಾದ ವಿಷಯಗಳನ್ನು ಒತ್ತಿ ಹೇಳುವಷ್ಟು ಧೈರ್ಯವು ಇವರಿಗಿಲ್ಲವು. ಅದುಕಾರಣ ಇಂಥ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಪ್ರಜಾಸಾಮಾನ್ಯಕ್ಕೆ ಅಷ್ಟು ಪ್ರಯೋಜನವಾಗಲಾರದು. ಈಗ ನಾವು ತಿಳಿದಿರುವುದರಲ್ಲಿ ಮೈಸೂರ ಮಾ|| ಎ. ವೆಂಕಟಕೃಷ್ಣಯ್ಯನವರು, ಮಾ|| ಅಣ್ಣಯ್ಯಾ ಪಂಡಿತರು, ಮಾ|| ರಂಗಯ್ಯಂಗಾರ್ಯರು, ಮಾ|| ಎ ರಾಮಣ್ಣನವರು ಶಿವಮೊಗ್ಗೆಯ ಮಾ|| ಬಾಲಕೃಷ್ಣರಾಯರು, ಮಾ|| ಶಂಕರನಾರಣಪ್ಪನವರು ಮತ್ತೆ ಕೆಲರು ಯೋಗ್ಯವೂ, ಉಪಯುಕ್ತವೂ ಆದ ವಿಷಯಗಳನ್ನು ಕುರಿತು ಯುಕ್ತಿಯುಕ್ತವಾಗಿಯೂ, ನ್ಯಾಯಬದ್ಧವಾಗಿಯೂ, ಧೈರ್ಯದಿಂದ ಚರ್ಚಿಸಿ ಸರಕಾರದವರನ್ನೊಡಂಬಡಿಸುವರು. ಇಂಥವರನ್ನು ಹೆಚ್ಚಾಗಿ ಆರಿಸುವುದನ್ನು ಬಿಟ್ಟು ದಾಕ್ಷಿಣ್ಯಕ್ಕೊಳಗಾಗಿ ಅರ್ಹತೆಯಿಲ್ಲದವರನ್ನು ಆರಿಸುವುದರಿಂದ, ಅವರು ಸಭೆಯ ಸಂಖ್ಯಾಪೂರ್ತಿಗೆ ಮಾತ್ರವಿದ್ದು, ಸವಿಯೂಟವನ್ನು ಮಾಡಿ, ಅರಮನೆಯ ದರ್ಬಾರಿನಲ್ಲಾಗುವ ವಿನೋದಗಳನ್ನೋಡಿ ತಮ್ಮ ಕಣ್ಣಿನ ಹಬ್ಬವನ್ನು ತೀರಿಸಿಕೊಂಡು ಹೋಗುವರೇ ಹೊರತು ತಮ್ಮನ್ನಾರಿಸಿದವರ ನಿರೀಕ್ಷೆಯನ್ನು ಸಾಫಲ್ಯಗೊಳಿಸತಕ್ಕವರಲ್ಲ. ಅದುಕಾರಣ ಪ್ರಜೆಗಳು ಪ್ರತಿನಿಧಿಗಳನ್ನು ಆರಿಸುವಾಗ್ಗೆಚ್ಚರವಾಗಿದ್ದು ಮೇಲೆಹೇಳಿದ ದೊಡ್ಡಮನುಷ್ಯರಂಥ ಸಮರ್ಥರನ್ನು ಆರಿಸುವುದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಲು ಮರೆಯಬಾರದೆಂದು ನಾವು ಒತ್ತಿ ಹೇಳುತ್ತೇವೆ. ಮತ್ತೂ ಸರ್ಕಾರದವರು ಈ ಪ್ರತಿನಿಧಿಗಳ ಅರಿಕೆಗಳಿಗುತ್ತರವನ್ನು ಕೊಡುವಾಗ್ಗೆ ಪ್ರಾಯಶಃ "ಆಲೋಚಿಸುತ್ತೇವೆ, ಗುರುತ್ತುಮಾಡಿಕೊಂಡಿದ್ದೇವೆ." ಎಂದು ಹೇಳುವುದೇ ಹೆಚ್ಚು. ಇದರಿಂದ ಅರಿಕೆಮಾಡಿಕೊಳ್ಳತಕ್ಕ ಪ್ರತಿನಿಧಿಗಳು ನಿರುತ್ಸಾಹಿಗಳಾಗುತ್ತಾರಾದಪ್ರಯುಕ್ತ, ಉತ್ತರವನ್ನು ಕೊಡಲು ಅರ್ಹವಲ್ಲದ ವಿಷಯಗಳನ್ನು ಚರ್ಚೆಗೇ ತಾರದಂತೆಯೂ, ಅರ್ಹವಾದುವುಗಳಿಗೆ ತಕ್ಕುತ್ತರವನ್ನು ಕೊಡಲೆ ದಯಪಾಲಿಸುವಂತೆಯೂ ಮಾಡುವುದು ಯುಕ್ತವಾಗಿರುತ್ತದೆ. ಅಲ್ಲದೆ ಒಬ್ಬ ಪ್ರತಿನಿಧಿಯು ಒಂದು ವಿಷಯವನ್ನರಿಕೆಮಾಡಿದರೆ, ಸರ್ಕಾರದವರು ಉತ್ತರವನ್ನು ಕೊಡುವುದಕ್ಕೆ ಮೊದಲೇ ಮತ್ತೊಬ್ಬ ಪ್ರತಿನಿಧಿಯು ಎದ್ದು ಅದಕ್ಕೆ ವಿರುದ್ಧವಾಗಿ ಹೇಳುವುದು, ಅಥವಾ "ಅವರಿಗೆ ಹೇಳುವುದಕ್ಕೆ ಬರುವುದಿಲ್ಲ; ಅವರಭಿಪ್ರಾಯವನ್ನು ನಾನು ಹೇಳುತ್ತೇನೆ." ಎಂದು ಅಡ್ಡಲಾಗಿ ಬಂದು ಆ ಪ್ರತಿನಿಧಿಯ ಮನಸ್ಸಿಗಸಮಾಧಾನವನ್ನುಂಟುಮಾಡುವುದನ್ನು ಸರ್ಕಾರದವರು ತಪ್ಪಿಸಬೇಕೆಂದು ಸೂಚಿಸುತೇವೆ.

ಕಿರೀಟಧಾರಣಮಹೋತ್ಸವದ ವೆಚ್ಚವು.

ಬರುವ ಜೂನ್ ತಿಂಗಳಲ್ಲಿ ಲಂಡನ್ ಪಟ್ಟಣದಲ್ಲಿ ನಡೆಯಲಿಕ್ಕಿರುವ ಕಿರೀಟಧಾರಣಮಹೋತ್ಸವಕ್ಕೆ ಇಷ್ಟೇ ಹಣವು ವೆಚ್ಚವಾಗುತ್ತದೆಂದು ಈಗಲೇ ಹೇಳುವುದಕ್ಕಾಗದಿದ್ದರೂ ಹಿಂದೆ ವಿಕ್ಟೋರಿಯಾಮಹಾರಾಣಿಯವರ ಮತ್ತೂ ಎಡ್ವರ್ಡ್ ಪ್ರಭುಗಳ ಕಿರೀಟಧಾರಣಮಹೋತ್ಸವಗಳಲ್ಲಾದ ವೆಚ್ಚದನುಭವದಿಂದ ೩೦೦೦೦೦೦ ರೂ. ಗಳಿಗೆ ಕಡಿಮೆಯಿಲ್ಲದಂತಾಗುವುದೆಂದು ಹೇಳಬಹುದು. ಆದರೆ ಜಾರ್ಜ್ ದೊರೆಗಳ ಮತ್ತೂ ಮೇರಿ ರಾಣಿಯವರ ಕಿರೀಟಧಾರಣಮಹೋತ್ಸವವು ಅತಿ ವಿಜೃಂಭಣೆಯಿಂದ ಮಾಡಲ್ಪಡಬೇಕೆಂದು ನಿರ್ಧರಿಸಲ್ಪಟ್ಟಿರುವುದರಿಂದ, ಪ್ರಾಯಶಃ ಹಿಂದಾದುದಕ್ಕಿಂತ ಹೆಚ್ಚು ವೆಚ್ಚವಾಗುವುದರಲ್ಲಿ ಸಂದೇಹವಿಲ್ಲವು. ವಿಕ್ಟೋರಿಯಾ ಮಹಾರಾಣಿಯವರ ಕಿರೀಟಧಾರಣ ಮಹೋತ್ಸವಕ್ಕಾಗಿ ೩,೦೦೦,೦೦೦ ರೂ. ಗಳನ್ನು ವೆಚ್ಚಮಾಡತಕ್ಕದೆಂದು ಪಾರ್ಲಿಮೆಂಟಿನವರು ಗೊತ್ತುಮಾಡಿದ್ದರು. ಇದರಲ್ಲಿ ಹೆಚ್ಚು ಹಣವು ವೆಸ್ಟ್ ಮಿನಿಸ್ಟರ್ ಅಬೆ ಯೆಂಬ ರಾಜಭವನವನ್ನು ಮಕಮಲ್ಲು ಮತ್ತೂ ಜರತಾರಿ ಬಟ್ಟೆಗಳಿಂದ ಅಲಂಕರಿಸಲು ವೆಚ್ಚವಾದುದಲ್ಲದೆ ಕೆಲಸಗಾರರ ಸಂಬಳಕ್ಕಾಗಿ ೨೧೦೩೬೦ ಚಿಲ್ಲರೆ ರೂ. ಗಳೂ, ರಥಗಳಿಗಾಗಿ ೧೪೩೦೦೦ ರೂ. ಗಳೂ, ಉಡುಪುಗಳಿಗಾಗಿ ೬೬೪೮೫ ಚಿಲ್ಲರೆ ರೂ. ಗಳೂ, ಬೆಳ್ಳಿ ಭಂಗಾರದ ಪದಕ, (ಮೆಡಲ್ಲು)ಗಳಿಗಾಗಿ ೩೫೦೦೦ ರೂ. ಗಳೂ, ಆ ಭವನದ ಅಲಂಕಾರಕ್ಕೆ ಬೇಕಾದ ಮರದ ಸಾಮಗ್ರಿಗಳಿಗಾಗಿ ೬೫೪೯೫ ರೂ. ಗಳೂ ವೆಚ್ಚವಾದುವು. ೪ ನೇ ವಿಲಿಯಂ ರವರ ಕಿರೀಟಧಾರಣ ಕಾಲದಲ್ಲಿ ೬೪೨೩೫೮೫ ರೂ. ಗಳು ಮಾತ್ರ ವ್ಯಯವಾಗಿದ್ದಿತು. ಇದರಲ್ಲಿ ೧೮೦೦೦೦ ರೂ. ಗಳು ರಾಜಭವನದ ಶೃಂಗಾರಕ್ಕೆ ಹಿಡಿಯಿತು. ನಾಟಕಗಳಿಗಾಗಿ ೬೫೫೦ ಚಿಲ್ಲರೆ ರೂ. ಗಳೂ, ರಾಜರುತ್ಸವ ಹೊರಟಾಗ ಮಾರ್ಗದಲ್ಲಿ ಜನರಿಗೆ ಕೊಟ್ಟ ದಾನಗಳಿಗಾಗಿ ೬೪೮೯೦ ಚಿಲ್ಲರೆ ರೂ. ಗಳೂ ವ್ಯಯವಾದುವು. ಆದರೆ ೪ ನೇ ಜಾರ್ಜ್ ರವರ ಕಿರೀಟಧಾರಣ ಮಹೋತ್ಸವಕ್ಕೆ ಮಾತ್ರ ೬೪೨೩೫೮೫ ಚಿಲ್ಲರೆ ರೂ. ಗಳು ವೆಚ್ಚವಾಯಿತು. ಈ ಕಾಲದಲ್ಲಿ ವೆಸ್ಟ್ ಮಿನಿಸ್ಟರ್ ಮತ್ತೂ ಅಬೆ ಭವನಗಳನ್ನು ಅಲಂಕರಿಸುವುದಕ್ಕೆ ೧೮೦೦೦೦ ರೂ. ಗಳು ಮುಟ್ಟಿತು. ಮಹೋತ್ಸವಕ್ಕಾಗಿ ಲಂಡನ್ನಿಗೆ ಬಂದಿದ್ದ ಪರದೇಶದ ರಾಜರುಗಳ ಪ್ರತಿನಿಧಿಗಳಿಗೆ ಕೊಡಲು ನಶ್ಯದ ಡಬ್ಬಿ ಮೊದಲಾದ ಪದಾರ್ಥಗಳನ್ನು ನವರತ್ನದಿಂದ ಮಾಡಲು ೧೨೩೯೦ ರೂ. ಗಳು ವ್ಯಯವಾಯಿತು. ಈ ಮಹೋತ್ಸವದ ವಿವರಣೆಯನ್ನು ಬರೆಯಲುದ್ಯುಕ್ತನಾಗಿದ್ದವನಿಗೆ ೬೫೦೦೦ ರೂ. ಗಳು ಕೊಡಲ್ಪಟ್ಟಿತು. ಈ ಮಹೋತ್ಸವಕ್ಕಾಗಿ ಹಣವು ನೀರಿನಂತೆ ವೆಚ್ಚಮಾಡಲ್ಪಟ್ಟಿತು. ಆದರೆ ೧೯೦೨ ರಲ್ಲಿ ನಡೆದ ೭ ನೇ ಎಡ್ವರ್ಡ್ ಪ್ರಭುಗಳ ಕಿರೀಟಧಾರಣ ಮಹೋತ್ಸವವು ವಿಕ್ಟೋರಿಯಾ ಮಹಾರಾಣಿಯವರ ಮಹೋತ್ಸವಕ್ಕಿಂತತಿಶಯವಾಗಿ ನಡೆದಿದ್ದಾಗ್ಯೂ ವೆಚ್ಚವು ಮಾತ್ರ ಅದಕ್ಕಿಂತಲೂ ಕಡಿಮೆಯಾಗಿದ್ದಿತು. ಈಗ ಜಾರ್ಜ್ ಪ್ರಭುಗಳ ಕಿರೀಟಧಾರಣ ಮಹೋತ್ಸವವು ೧೯೦೨ ರಲ್ಲಿ ಆದ ಮಹೋತ್ಸವಕ್ಕಿಂತಲೂ ಅತಿಶಯವಾಗಿ ನಡೆಯಬೇಕೆಂದು ಸಂಕಲ್ಪಿಸಲ್ಪಟ್ಟಿರುವುದರಿಂದ ವೆಚ್ಚವು ಹೆಚ್ಚಾಗಿಯೇ ಆಗಬಹುದೆಂದು ತೋರುತ್ತದೆ.

ಡೆಪ್ಯುಟಿ ಸ್ಯಾನಿಟರಿ ಕಮಿಷನರು.

ನಮ್ಮ ಸಂಸ್ಥಾನದಲ್ಲಿ ಬಹುಕಾಲದಿಂದಲೂ ಸೀನಿಯರ್ ಸರ್ಜನರೇ ಸ್ಯಾನಿಟರಿ ಕಮಿಷನರಾಗಿರುತ್ತಿದ್ದರು. ಆದರೆ ಈಚೆಗೆ ಆರೋಗ್ಯಾಭಿವೃದ್ಧಿಯ ಕಾರ್ಯವು ಹೆಚ್ಚಾದುದರಿಂದ ಪ್ರಾಯಶಃ ಎರಡುಕೆಲಸಗಳನ್ನೂ ಒಬ್ಬರೇ ನೋಡಿಕೊಳ್ಳಲಾಗುವುದಿಲ್ಲವೆಂಬುದರಮೇಲೆ ಡೆ|| ಸ್ಯಾನಿಟರಿ ಕಮಿಷನರ ಸ್ಥಾನವೊಂದು ಹೊಸದಾಗಿ ಕಲ್ಪಿಸಲ್ಪಟ್ಟು ಅದಕ್ಕೆ ಡಾ|| ಪಾಲ್ಪು ಯವರು ನೇಮಿಸಲ್ಪಟ್ಟರು. ಅವರು ಈ ಉದ್ಯೋಗವನ್ನು ನೆನ್ನೆಯವರೆಗೂ ನೋಡುತಿದ್ದರು. ಆದರೆ ಈಗ ಅವರು ಪುನಃ ಹೆಲ್ತಾಫೀಸರಾಗಿ ನೇಮಿಸಲ್ಪಟ್ಟು ಶಿವಮೊಗ್ಗ ಡಿ|| ಸ್ಯಾನಿಟರಿ ಆಫೀಸರಾಗಿ ವರ್ಗಾಯಿಸಲ್ಪಟ್ಟಿರುವರೆಂದು ಕಳೆದ ವಾರದ ಗೆಜೆಟ್ಟಿನಲ್ಲಿ ಪ್ರಕಟವಾಗಿರುವುದನ್ನೋಡಿದರೆ ಡೆ|| ಸ್ಯಾನಿಟರಿ ಕಮಿಷನರ ಸ್ಥಾನವನ್ನೇ ತಪ್ಪಿಸಿಬಿಟ್ಟಂತೆ ತೋರುತ್ತದೆ. ಹೀಗೆ ಡಾ|| ಪಲ್ಪುಯವರು ದೊಡ್ಡದೊಂದುದ್ಯೋಗದಲ್ಲಿದ್ದು ಮರಳಿ ಕಡಿಮೆಯುದ್ಯೋಗಕ್ಕೆ ತರಲ್ಪಟ್ಟಿರುವುದನ್ನೋಡಿದರೆ, ಪ್ರಾಯಶಃ ಅವರಿಗೂ ಡಾ|| ಶ್ರೀನಿವಾಸರಾಯರಿಗೂ ಹುಟ್ಟಿದ್ದ ವಿಷಾದದ ಫಲಿತಾಂಶವಿರಬಹುದೆಂದು ತೋರುತ್ತದೆ. ಅಲ್ಲದೆ ಈಚೀಚೆಗೆ ಅನೇಕ ವಿಷಯಗಳಲ್ಲಿ ಇವರಭಿಪ್ರಾಯಕ್ಕೆ ಸ್ಯಾನಿಟರಿ ಕಮಿಷನರ ಅಭಿಪ್ರಾಯವು ಭಿನ್ನವಾಗುತ್ತ ಬಂದುದೂ ತಕ್ಕಮಟ್ಟಿಗೆ ಸಹಾಯಕವಾಗಿರಬಹುದು.

ಒಳದೇಶದ ವೃತ್ತಾಂತ.

ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಎಕ್ಸೈಸ್ ಟ್ರೇನಿಂಗ್ ಸ್ಕೂಲನ್ನು ೧೯೧೧ ನೇ ಆಗಸ್ಟಿನಿಂದ ಒಂದು ವರ್ಷ ವರೆಗೆ ನಡೆಸತಕ್ಕದ್ದೆಂದು ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ.

ಚಿಕ್ಕಬಳ್ಳಾಪುರದಲ್ಲಿ ಪ್ಲೇಗು ರೋಗವು ಸಂಪೂರ್ಣವಾಗಿ ನಿಂತಿರುವುದರಿಂದ ಊರ ಹೊರಗೆ ಗುಡಿಸಲಿನಲ್ಲಿ ವಾಸಮಾಡುತ್ತಿರುವ ಜನರು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿ ಬರುವ ಪ್ರಯತ್ನದಲ್ಲಿದ್ದಾರೆ.

ಕಳೆದ ಗುರುವಾರ ರಾಜಧಾನಿಯಲ್ಲಿ ಕೊಂಚ ಮಳೆಯಾಯಿತು. ಇದರಿಂದ ದಗೆಯು ಇನ್ನೂ ಹೆಚ್ಚಿತೇವಿನಾ ಕಡಿಮೆಯಾಗಲಿಲ್ಲವು. ನಂಜನಗೂಡು, ಹಿರೋತೆ ಮೊದಲಾದ ಕಡೆ ಬಹುದೊಡ್ಡ ಮಳೆಯಾಯಿತೆಂದು ಕೇಳುತ್ತೇವೆ.

ಕಳೆದ ತಾ|| ೨೫ರಲ್ಲಿ ಬೆಂಗಳೂರ ಮಾರ್ಕೆಟ್ ಬೀದಿಯಲ್ಲಿ ಆಗತಾನೆ ಜನಿಸಿದ ಒಂದು ಹೆಣ್ಣು ಮಗುವು ಜೀವಸಹಿತವಾಗಿಯು ಕಸ–ಗೊಬ್ಬರವನ್ನು ಹಾಕುವ ತೊಟ್ಟಿಯಲ್ಲಿ ಬಿಸಾಡಲ್ಪಟ್ಟಿತ್ತು. ಪೋಲೀಸರು ಈ ಮಗುವನ್ನು ಆಸ್ಪತ್ರೆಯ ಪೋಷಣೆಯಲ್ಲಿಟ್ಟು ಮಗುವನ್ನು ಹೀಗೆ ಬಿಸಾಡಿದ್ದ ನೀಚರನ್ನು ಕಂಡುಹಿಡಿಯುತ್ತಿದ್ದಾರೆ.

ಹಿರೋತೆ ಸಬ್ ತಾ|| ನ್ಯಾಮನಹಳ್ಳಿಯಲ್ಲಿ ೮ ವರ್ಷ ವಯಸ್ಸಿನೊಳಗಿನ ಹುಡುಗಿಗೆ ಮದುವೆಯನ್ನು ಮಾಡಿದ ಅಪರಾಧಕ್ಕಾಗಿ ಆ ಹುಡುಗಿಯ ತಂದೆಗೂ ಮತ್ತೂ ಮಾವನಿಗೂ ಮೈಸೂರು ಡಿ|| ಮ್ಯಾಜಿಸ್ಟ್ರೇಟರು ೩೦ ರೂ. ಗಳ ದಂಡವನ್ನು, ಇದನ್ನು ಕೊಡಲು ತಪ್ಪಿದರೆ ೧ ತಿಂಗಳ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ತುಮಕೂರು ಡಿ|| ಮೆಡಿಕಲ್ ಆಫೀಸರಾದ ಮಾ|| ಟಿ. ಸಿ. ನಂಜಪ್ಪನವರು ಈ ತಾ|| ೧ ರಿಂದ ೧ ತಿಂಗಳ ಪ್ರಿವಿಲೇಜ್ ರಜವನ್ನು ಪಡೆದುಕೊಂಡಿರುವುದರಿಂದ ಅವರ ಬದಲು ರಾಜಧಾನಿಯ ಜನರಲ್ ಆಸ್ಪತ್ರೆಯ ರೆಸಿಡೆಂಟ್ ಸರ್ಜನರಾದ ಮಾ|| ರಾಜಾ ರಾಮರಾಯರು ಆಕ್ಟಿಂಗ್ ಡಿ|| ಮೆಡಿಕಲ್ ಆಫೀಸರಾಗಿ ನೇಮಿಸಲ್ಪಟ್ಟಿರುತ್ತಾರೆ,

ತುಮಕೂರಿನಲ್ಲಿ ಕಳೆದ ೧ ತಿಂಗಳಿಂದಲೂ ಪ್ಲೇಗುಮರಣಗಳಿಲ್ಲದೆ ಸಂಪೂರ್ಣವಾಗಿ ನಿಂತುಹೋಗಿರುವುದರಿಂದ, ಜನರೆಲ್ಲರೂ ಊರಿಗೆ ಬಂದು ಸೇರುತ್ತಿರುವರು. ಪಾಠಶಾಲೆಗಳು ಪ್ಲೇಗಿಗಾಗಿ ಮುಚ್ಚಲ್ಪಟ್ಟಿದ್ದರಿಂದ ಬೇಸಿಗೆ ರಜಾಕ್ಕಾಗಿ ಮುಚ್ಚಲ್ಪಡದೆ ನಡಿಸಲ್ಪಡಬೇಕೆಂದು ವಿದ್ಯಾಶಾಖೆಯವರ ಅಣತಿಯಾಗಿರುತ್ತದೆ. ಮಾ|| ಎಂ. ಶಾಮರಾಯರು ಕಳೆದ ತಾ|| ೧೭ ರಲ್ಲಿ ಡಿ|| ಕಮಿಷನರ ಅಧಿಕಾರವನ್ನು ಮಾ|| ಕೆ. ದೊರೆಸಾಮಯ್ಯರಿಂದ ವಹಿಸಿಕೊಂಡರು. ಮಾ|| ದೊರೆಸಾಮಯ್ಯರು ಡಿ|| ಕಮಿಷನರ ಅಧಿಕಾರವನ್ನು ಮಾ|| ಶಾಮರಾಯರಿಗೆ ವಹಿಸಿಕೊಡುವುದಕ್ಕೆ ಮೊದಲು ತಾವು ಹಿಂದೆ ಅರ್ಥದಂಡವನ್ನು ವಿಧಿಸಿದ್ದವರಿಗೆಲ್ಲ ದಂಡದ್ರವ್ಯವನ್ನು ಹಿಂತಿರುಗಿ ಕೊಡಿಸಿದರೆಂದೂ ಕೆಲಕಾಲದವರೆಗೆ ಕೆಲಸಕ್ಕೆ ಬರದಂತೆ ಆಜ್ಞೆ ಮಾಡಿದ್ದವರನ್ನು ಮರಳಿ ಕೆಲಸಕ್ಕೆ ಬರಮಾಡಿದರೆಂದೂ ಕೇಳುತ್ತೇವೆ,

ಕಳೆದ ತಾ|| ೨೩ ರ ರಾತ್ರಿ ಬೆಂಗಳೂರ ದೊಡ್ಡಣ್ಣನವರ ಹಾಲ್ ಕಟ್ಟಡದಲ್ಲಿ ಸಿರಿಹಟ್ಟಿಯ ನಾಟಕಸಂಘದವರು ಭೋಜಪ್ರಬಂಧವನ್ನು ಆಡುತ್ತಿರುವಾಗ್ಗೆ ೩ ನೇ ಅಂಕದ ಕಡೆಯಲ್ಲಿ ಕಾಳಿಯು ಪ್ರಸನ್ನಳಾಗುವ ಸಂದರ್ಭದಲ್ಲಿ ರಂಗದ ಪರದೆಯ ಹಿಂದೆ ಕಟ್ಟಿದ್ದ ವಾಷಿಂಗ್‌ಟನ್ ದೀಪವು ತೂತಾಗಿದ್ದುದರಿಂದ ಎಣ್ಣೆಯು ಸೋರಿ ಹೊತ್ತಿಕೊಂಡು ಜ್ವಾಲೆಯು ಹತ್ತಿರದ ಪರದೆಗೆ ತಗಲಿ ಮುಂದೆ ವ್ಯಾಪಿಸುವಷ್ಟರಲ್ಲಿ ರಂಗಸ್ಥಳದಲ್ಲಿದ್ದ ಸಂಘದವರೂ ಇತರರೂ ಕೂಡಲೆ ನೀರನ್ನು ಸುರಿದು ಬೆಂಕಿಯನ್ನು ಆರಿಸಿಬಿಟ್ಟರು. ಮಂದಿರದಲ್ಲಿ ನೆರೆದಿದ್ದ ಪ್ರೇಕ್ಷಕರು ಪೂನಾದ ಸಮೀಪದಲ್ಲಿರುವ ಸಾಲಂಬ್ರಿಯಂಬಲ್ಲಾದ ಅಗ್ನಿಯ ಅನಾಹುತದಂತೆ ಇಲ್ಲಿ ಆಗುವುದೋ ಎಂದು ಬಹು ಭಯಗ್ರಸ್ತರಾಗಿದ್ದರು. ಆದರೆ ದೈವಾನುಗ್ರಹದಿಂದ ಅಷ್ಟು ಅಪಾಯಕ್ಕವಕಾಶವಿಲ್ಲದಂತೆ ಸಂಘದವರು ಸಕಾಲದಲ್ಲಿ ಧೈರ್ಯದಿಂದ ನೀರನ್ನು ಸುರಿದುದು ಸಂತೋಷವೇ ಸರಿ.

ಮೂಡಗೆರೆ ತಾಲ್ಲೋಕು ಒಟ್ಟು ಮುತ್ಸದ್ದಿ ಕೆ. ರಾಮಸ್ವಾಮಯ್ಯನು ಕಂಟ್ರಾಕ್ಟರುಗಳಿಗೆ ಕೊಡತಕ್ಕ ರಸೀತಿಗಳಲ್ಲಿ ಹೆಚ್ಚು ಮೊಬಲಗನ್ನು ಬರೆದು ಖಜಾನೆಗೆ ಕಡಿಮೆ ಮೊಬಲಗನ್ನು ಕಟ್ಟುತ್ತ ೭೦೦ ರೂ. ಗಳ ವರೆಗೆ ದುರುಪಯೋಗಪಡಿಸಿಕೊಂಡಿದ್ದನು. ಇವನ ಮೇಲ್ಪಟ್ಟ ಅಧಿಕಾರಿಗಳಿಗೆ ಅನುಮಾನ ಹುಟ್ಟಿ ಅವನನ್ನು ಬೇರೆ ಕೆಲಸಕ್ಕೆ ನೇಮಿಸಿ ಒಟ್ಟು ಮುತ್ಸದ್ದಿಯ ಕೆಲಸಕ್ಕೆ ಮತ್ತೊಬ್ಬನನ್ನು ಹಾಕಿದರು. ಈ ಹೊಸ ಮುತ್ಸದ್ದಿಯು ಹಿಂದಿನವನು ಮೋಸಮಾಡಿ ಹಣವನ್ನು ಅಪಹರಿಸಿದ್ದ ಸಂದರ್ಭಗಳನ್ನೆಲ್ಲ ಹೊರಗೆಡಹಲು ಕೆ. ರಾಮಸ್ವಾಮಯ್ಯನು ಇದರಿಂದ ತನಗಪಾಯ ಸಂಭವಿಸುತ್ತದೆಂದು ಭಯಪಟ್ಟು ಕಳೆದ ಯುಗಾದಿ ಹಬ್ಬದ ದಿವಸ ನೀರಿನೊಳಗೆ ಮುಳುಗಿ ಆತ್ಮಹತ್ಯೆಯನ್ನು ಮಾಡಿಕೊಂಡನು. ಇದೇರೀತಿ ಗುಬ್ಬಿ ತಾ|| ನಲ್ಲಿ ಒಬ್ಬ ಶಾನುಭೋಗನು ಸರ್ಕಾರಿಯ ಹಣವನ್ನು ತಿಂದಿದ್ದು ಕಂಟ್ರೋಲ್ ಆಫೀಸ್ ಅಧಿಕಾರಿಗಳು ಬಂದು ಲೆಖ್ಖವನ್ನು ಪರೀಕ್ಷಿಸುತ್ತಿರುವಾಗ್ಗೆ ತನ್ನ ಮೋಸಕೃತ್ಯವು ಹೊರಬೀಳುತ್ತದೆಂದು ಭಯಪಟ್ಟು ಕಳೆದ ತಾ|| ೧೯ ರಲ್ಲಿ ಬಾವಿಯೊಳಗೆ ಬಿದ್ದು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದನು.

ಪರಸ್ಪರ ಸಹಾಯಕ ಸಂಘಗಳ ಆಕ್ಟಿಂಗ್ ರೆಜಿಸ್ಟ್ರಾರಾಗಿ ನೇಮಿಸಲ್ಪಟ್ಟಿರುವ ಅ|| ಕಮಿಷನರ್ ಮಾ|| ಎಂ. ಎ. ನಾರಯಣಯ್ಯಂಗಾರರು ದಾವಣಗೆರೆ ಸಬ್‌ಡಿವಿಜನ್ ಛಾರ್ಜನ್ನು ಕೊಟ್ಟು ಬರುವಾಗ್ಗೆ ದಾವಣಗೆರೆಯ ನಿವಾಸಿಗಳು ಮಾ|| ನಾರಣಯ್ಯಂಗಾರರನ್ನು ಅಲ್ಲಿಯ ಟವನ್‌ಹಾಲಿಗೆ ತಾ|| ೨೫ ರ ಸಾಯಂಕಾಲ ಬರಮಾಡಿಕೊಂಡು ಅನೇಕ ವಿನೋದೋತ್ಸವಗಳಿಂದ ತೃಪ್ತಿಪಡಿಸಿ ತಮಗಿದ್ದ ವಿಶ್ವಾಸವನ್ನು ವ್ಯಕ್ತಪಡಿಸಿದರು. ಮತ್ತೂ ಡಿ|| ಬೋರ್ಡು ಮೆಂಬರು ಮಾ|| ಸುಬ್ಬರಾಯರು ಬ್ರಾಹ್ಮಣರ ಪರವಾಗಿಯೂ, ಮಾ|| ಗುರುಶಾಂತಪ್ಪನವರು ವೀರಶೈವರಪರವಾಗಿಯೂ, ಬಾಜಿಯವರು ಮಹಮ್ಮದಿಯರ ಪರವಾಗಿಯೂ ಅತಿಥಿಗಳ ಗುಣಕಥನಗಳನ್ನು ಮಾಡಿ ದಾವಣಗೆರೆಗೆ ಅವರು ಮಾಡಿದ ಅನಂತುಪಕಾರಗಳನ್ನು ಸ್ಮರಣೆಗೆ ತಂದರು. ಅನಂತರ ಮಾ|| ಅಯ್ಯಂಗಾರ್ಯರು ಉಚಿತವಾದ ಉತ್ತರಗಳನ್ನು ಕೊಟ್ಟು ತಮಗಿಷ್ಟೊಂದು ಮರ್ಯಾದೆಯನ್ನು ಮಾಡಿದುದಕ್ಕಾಗಿ ದಾವಣಗೆರೆಯ ನಿವಾಸಿಗಳನ್ನು ವಂದಿಸಿದರು.

ವರ್ತಮಾನಸಂಗ್ರಹ.

ಪಶ್ಚಿಮದೇಶ ಸಂಚಾರಕ್ಕೊರಟಿರುವ ಭೂಪಾಲಿನ ಬೇಗಂರವರು ಈಗ ಪ್ಯಾರಿಸ್ ಪಟ್ಟಣದಲ್ಲಿರುವರು. ಮತ್ತೂ ಅಲ್ಲಿಂದ ಕಿರೀಟಧಾರಣಮಹೋತ್ಸವ ಸಮಯಕ್ಕೆ ಲಂಡನ್ ಪಟ್ಟಣಕ್ಕೆ ಬರುವವರಾಗಿರುವರು.

ದಿಲ್ಲಿಯಪಟ್ಟಣದ ಒಂದು ಬೀದಿಯಲ್ಲಿ ಅಗ್ನಿಪ್ರವೇಶವಾಗಿ ಕೆಲ ಅಂಗಡಿಗಳೂ, ಒಂದು ಬರ್ಸಿನ ಕಾರ್ಯಾಲಯವೂ, ಒಂದು ಕಂಪೆನಿಯವರ ಕಟ್ಟಡವೂ ಸುಟ್ಟುಹೋದುವು. ಇದರಿಂದ ೨ ಲಕ್ಷ ರೂ. ವರೆಗೆ ನಷ್ಟವಾಗಿರಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಬೊಂಬಾಯಿಯ ಹೈಕೋರ್ಟು ಜಡ್ಜಿಗಳಾದ ಚಂದಾವರ್ಕರವರು ನಾಶಿಕದ ಕಲೆಕ್ಟರಾಗಿದ್ದ ಜಾಕ್‌ಸನರವರ ಕೊಲೆಯ ವಿವಾದವನ್ನು ವಿಚಾರಿಸುತ್ತಿರುವಾಗ್ಗೆ ನರಸಿಕ್ಕಭಟ್ಟ ಎಂಬ ಬ್ರಾಹ್ಮಣನು ಚಂದಾವರ್ಕರರಿಗೆ ಭಯೋತ್ಪಾದವನ್ನುಂಟುಮಾಡಿ ಕಾಗದಗಳನ್ನು ಬರೆದಿದ್ದನೆಂಬ ಅಪರಾಧದಮೇಲೆ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು, ತಾನು ಕಾಗದಗಳನ್ನು ಬರೆದಿದ್ದುಂಟೆಂದು ಒಪ್ಪಿಕೊಂಡದ್ದರಮೇಲೆ ೭ ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟನು,

ಕಳೆದ ತಾ|| ೨೬ ರಲ್ಲಿ ಬೊಬ್ಬಲಿಯಲ್ಲಿ ಆಕಸ್ಮಿಕವಾಗಿ ಅಗ್ನಿಯು ಪ್ರವೇಶವಾಗಿ ಅನೇಕ ಬೀದಿಗಳಿಗೆ ವ್ಯಾಪಿಸಿ, ಪ್ರಾಯಶಃ ೩೦೦ ಮನೆಗಳ ಮೇಲೆಯೇ ಸುಟ್ಟು ಭಸ್ಮವಾದುವು. ಇದರಿಂದ ೧೦ ಜನರು ಆ ಕೂಡಲೇ ಸತ್ತರು. ಮತ್ತೆ ೩ ಜನರು ಮರಣಾವಸ್ಥೆಯಲ್ಲಿರುವರು. ಇವರಲದೆ ಅನೇಕ ದನಕರುಗಳು ಸತ್ತುಹೋದವಂತೆ. ಅಲ್ಲಿಯ ಮಹಾರಾಜರು ಮನೆಯನ್ನು ಕಳೆದುಕೊಂಡು ವಿಪನ್ನರಾದ ಜನರ ವಿಚಾರದಲ್ಲಿ ಕನಿಕರಪಟ್ಟು ಆ ರಾತ್ರಿ ಅವರೆಲ್ಲರಿಗೂ ಅನ್ನವನ್ನು ಹಾಕಿಸಿದರು. ಮತ್ತೂ ಮಾರಣೆಯ ಬೆಳಿಗ್ಗೆ ಬಂಡಿಗಳಲ್ಲಿ ಆಹಾರಪದಾರ್ಥಗಳನ್ನು ತುಂಬಿಸಿ ಬೀದಿಗಳ ಮೇಲೆ ಕಳಿಸಿಕೊಟ್ಟರು.

ಬಾರಿಸಾಲಿಗೆ ಸೇರಿದ ಲಕ್ಷ್ಮಣಕಟ್ಟಿಯೆಂಬ ಗ್ರಾಮದಲ್ಲಿ ಪುಣ್ಯವಂತನಾದ ರಾಧಾಚರಣಭೂಪ ಎಂಬುವನ ಮನೆಗೆ ಕಳೆದ ತಾ|| ೨೨ ರ ರಾತ್ರಿ ೩೦-೪೦ ಜನ ಕಳ್ಳರು ಮುಖಕ್ಕೆ ಕಪ್ಪನ್ನು ಬಳಿದುಕೊಂಡು, ಕೈಗಳಲ್ಲಿ ದೀಪಗಳನ್ನೂ ಕತ್ತಿಗಳನ್ನೂ, ತುಪಾಕಿಗಳನ್ನೂ ಹಿಡಿದುಕೊಂಡು ನುಗ್ಗಿ ಮನೆಯೊಳಗೆ ಮಲಗಿದ್ದರನ್ನೆಲ್ಲ ಎಬ್ಬಿಸಿ ಅವರ ಕೈಕಾಲುಗಳನ್ನು ಹಗ್ಗದಿಂದ ಬಿಗಿದು ಕಟ್ಟಿ ಕಬ್ಬಿಣದ ಪೆಟ್ಟಿಗೆಯ ಬೀಗದ ಕೈಗಳನ್ನು ಕಿತ್ತುಕೊಂಡು ಬಾಗಿಲನ್ನು ತೆಗೆದು ಸಾವಿರಾರು ರೂಪಾಯಿಬಾಳುವ ಆಭರಣಗಳನ್ನೂ, ನಗದು ಹಣವನ್ನೂ ಎತ್ತಿಕೊಂಡು ಪಲಾಯನವಾದರು. ಪೊಲೀಸರು ಕಳ್ಳರನ್ನು ಹಿಡಿಯಲು ವಿಶ್ವಪ್ರಯತ್ನವನ್ನು ನಡೆಸಿರುವರು.

ಕಲಕತ್ತಾದಲ್ಲಿ ಬರ್‌ಬಜಾರಿನ ಪೊಲೀಸಿನವರು ಒಂದು ಜತೆ ಭಂಗಾರದ ಬಳೆಯನ್ನು ದಾರಿಯಲ್ಲಿ ಹೋಗುತ್ತಿದ್ದ ಒಬ್ಬನ ಗಂಟಿನಿಂದ ಅಪಹರಿಸಿದ್ದವನನ್ನು ಹಿಡಿದು ಠಾಣಕ್ಕೆ ಕರೆದುಕೊಂಡು ಬಂದು ಬಳೆಯನ್ನು ಕಳೆದುಕೊಂಡವನನ್ನು ವಿಚಾರಿಸುವಲ್ಲಿ ಅವನು–"ನಾನು ಈ ಬಳೆಗಳನ್ನು ರಂಗೂನಿನಲ್ಲಿ ೩೦ ರೂ. ಗಳ ಕ್ರಯಕ್ಕೆ ತೆಗೆದುಕೊಂಡು ಈ ಬೆಳಿಗ್ಗೆ ರಂಗೂನಿನಿಂದ ಇಲ್ಲಿಗೆಬಂದಿಳಿದು ಮಾರ್ಗದಲ್ಲಿ ಬರುತ್ತಿರುವಾಗ್ಗೆ ಈ ಕಳ್ಳನು ನನ್ನ ಹೆಗಲಿನಮೇಲೆ ಹಾಕಿಕೊಂಡಿದ್ದ ಗಂಟಿನಲ್ಲಿ ಕಟ್ಟಿದ್ದ ಬಳೆಗಳನ್ನು ಅಪಹರಿಸಿಕೊಂಡು ಓಡಿಹೋಗುತ್ತಿದ್ದನು. ನಾನು ಅದನ್ನು ಕಂಡು ಕೂಗಿಕೊಳ್ಳಲು ಪೊಲೀಸು ಇನ್ಸ್‌ಪೆಕ್ಟರು ಅವನ ಹಿಂದೆಯೇ ಓಡಿಹೋಗಿ ಹಿಡಿದುತಂದರು" ಎಂದು ಹೇಳಿದನು. ಆ ಕಳ್ಳನು "ತಾನು ಕದ್ದುದುಂಟು. ಆದರೆ ಈ ಬಳೆಗಳು ಗಿಲೀಟಿನವೇ ಹೊರತು ಭಂಗಾರದವಲ್ಲ. ಇದನು ವರ್ತಕರಿಗೆ ತೋರಿಸಲು ತೆಗೆದುಕೊಂಡು ಹೋಗುತ್ತಿದ್ದನು" ಎಂದು ಹೇಳಿದುದರ ಮೇಲೆ ಪೊಲೀಸಿನವರು ಹಿತ್ತಾಳೆಯ ಬಳೆಗಳಿಗೆ ಭಂಗಾರದ ಗಿಲೀಟು ಮಾಡಲ್ಪಟ್ಟಿರುವುದೆಂದು ನಿರ್ಧರಿಸಿ ಅವನನ್ನೂ ಸೆರೆಯಲ್ಲಿಟ್ಟಿರುವರು.

ಕಳೆದ ತಾ|| ೨೩ ರ ರಾತ್ರಿ ಒಬ್ಬ ಯುರೋಪ್ಯ ಸ್ತ್ರೀಯು ಡಾರ್ಜಿಲಿಂಗಿನಿಂದ ಹೊರಟು ಮೇಲು ಬಂಡಿಯ ೭ನೇ ತರಗತಿಯಲ್ಲಿ ಪ್ರಯಾಣ ಮಾಡುತ್ತಿರುವಾಗ್ಗೆ ಸಿಲಿಗೂರಿ ಮತ್ತು ಕಾಂತಹರ ಸ್ಟೇಷನ್ನುಗಳ ಮಧ್ಯೆ ನಿದ್ದೆಯಿಂದೆಚ್ಚೆತ್ತು ನೋಡುವಲ್ಲಿ ಒಬ್ಬ ಕೀಳು ಜಾತಿಯವನು ತಾನು ಮಲಗಿದ್ದ ಬಂಡಿಯೊಳಕ್ಕೆ ಹೇಗೊ ಪ್ರವೇಶಿಸಿ ಮೊಳಕಾಲೂರಿಕೊಂಡು ಆಭರಣದ ಪೆಟ್ಟಿಗೆಯ ಬಾಗಿಲನ್ನು ತೆರೆಯುತ್ತಿದ್ದುದನ್ನು ಕಂಡು ಬಹು ಧೈರ್ಯ ಸಾಹಸದಿಂದ ಆ ಕಳ್ಳನನ್ನು ಹಿಡಿದು ಹೋರಾಡುತ್ತಿರುವಷ್ಟರಲ್ಲಿ, ಅವನು ಆಭರಣದ ಪೆಟ್ಟಿಗೆಯನ್ನು ತೆಗೆದು ಕಿಟಕಿಯಿಂದ ಹೊರಗಡೆ ಬಿಸಾಡಿ, ಬಹು ಸಾಹಸಪಟ್ಟು ಆಕೆಯ ಕೈಯಿಂದ ಬಿಡಿಸಿಕೊಂಡು ಕಿಟಕಿಯಿಂದ ನುಗ್ಗಿ ಹೊರಗೆ ದುಮುಕಿ ಕತ್ತಲೆಯಲ್ಲಿ ಮಾಯವಾದನು. ಬಂಡಿಯು ಕಾಂತಹರ ಸ್ಟೇಷನ್ನಿಗೆ ಬಂದು ಸೇರಲು ರಾತ್ರಿ ೨ ಗಂಟೆಯಾಗಿದ್ದಿತು. ಆಗ ಆ ಯುರೋಪ್ಯಳು ನಡೆದ ವೃತ್ತಾಂತಗಳನ್ನೆಲ್ಲ ಅಧಿಕಾರಿಗಳಿಗೆ ತಿಳುಹಲು ಅವರು ಸರ್ಕಾರಿಯ ರೈಲ್ವೆ ಪೊಲೀಸಿನವರಿಗೆ ಅನುಮಾನಗ್ರಸ್ತರಾದಂಥವರನ್ನು ಹಿಡಿಯುವಹಾಗೆ ತಂತಿಯನ್ನು ಕೊಟ್ಟರು. ದಮುಕೆಡಿಯ ಸ್ಟೇಷನ್ನಿನಲ್ಲಿ ಪೊಲೀಸಿನವರು ಆ ಯುರೋಪ್ಯಳ ವಾಜ್ಯಮಾಲವನ್ನು ತೆಗೆದುಕೊಂಡು ಕಳ್ಳನನ್ನು ಹಿಡಿಯ ಯತ್ನಿಸಿರುವರು.

ಕಳೆದ ತಾ|| ೨೨ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೩೯೨೭೧ ಪ್ಲೇಗು ಮರಣಗಳಾದುವು. ಇವುಗಳಲ್ಲಿ ಬೊಂಬಾಯಾಧಿಪತ್ಯದಲ್ಲಿ ೧೫೧೩; ಮದ್ರಾಸಾಧಿಪತ್ಯದಲ್ಲಿ ೩೩; ಬಂಗಾಳದಲ್ಲಿ ೩೦೫೪; ಸಂಯುಕ್ತ ಪ್ರಾಂತಗಳಲ್ಲಿ ೧೯೧೧೮; ಪಂಜಾಬಿನಲ್ಲಿ ೧೪೩೯೧; ಬರ್ಮಾದಲ್ಲಿ ೯೯; ಮಧ್ಯಪ್ರಾಂತಗಳಲ್ಲಿ ೭೩೮; ಮೈಸೂರ ಸಂಸ್ಥಾನದಲ್ಲಿ ೩೭; ಹೈದರಾಬಾದು ಸೀಮೆಯಲ್ಲಿ ೬೩; ಮಧ್ಯ ಹಿಂದೂಸ್ಥಾನದಲ್ಲಿ ೩೨೬; ಎಲ್ಲೆಯ ಪ್ರಾಂತಗಳಲ್ಲಿ ೭೪; ಮತ್ತೂ ಕಾಶ್ಮೀರದಲ್ಲಿ ೧೦೧ ಈ ಪ್ರಕಾರ ಮರಣವಾಗಿರುತ್ತವೆ. ಬೊಂಬಾಯಿ ಪಟ್ಟಣದಲ್ಲಿ ೪೬ ಜನರಿಗೆ ರೋಗವು ತಗಲಿ ೩೦ ಜನರು ಸತ್ತರು. ಹಿಂದಣ ವಾರದಲ್ಲಿ ೩೩೦ ಮರಣವಾಗಿದ್ದಿತು. ಆದರೆ ಒಟ್ಟು ಬೊಂಬಾಯಾಧಿಪತ್ಯದಲ್ಲಿ ೧೯೯೭ ಜನರಿಗೆ ತಗಲಿ ೧೫೧೩ ಜನರು ಸತ್ತರು. ಈ ವರ್ಷ ಇಲ್ಲಿ ರೋಗವಿಳಿಯುವ ಚಿನ್ಹೆಯು ಕಾಣು ಬರಲಿಲ್ಲ. ಮತ್ತೂ ಹಿಂದೂಗಳಲ್ಲಿ ಬಹು ಕೀಳುಜಾತಿಯವರು ವಿಶೇಷವಾಗಿ ತುತ್ತಾಗುತ್ತಿರುವರು. ದಿಲ್ಲಿ ಪಟ್ಟಣದಲ್ಲಿ ಆಚೆ ವಾರದಲ್ಲಿ ೪೧ ಜನರಿಗೆ ತಗಲಿ ೪೧ ಜನರೂ ಸತ್ತರು. ಮತ್ತು ಡಿಸ್ಟ್ರಿಕ್ಟಿನಲ್ಲಿ ೯೩೦ ಜನರಿಗೆ ತಗಲಿ ೯೩೦ ಮರಣಗಳಾಗಿರುವುವು. ಏಪ್ರಿಲ್ ತಿಂಗಳ ಮೊದಲಿನ ವಾರದಲ್ಲಿ ದಿಲ್ಲಿ ಪಟ್ಟಣದಲ್ಲಿ ೫೦ ಜನರು ರೋಗಗ್ರಸ್ತರಾಗಿ ೫೦ ಜನರೂ ಸತ್ತರು. ಅದರ ಮುಂದಿನ ವಾರದಲ್ಲಿ ೩೦ ಜನರಿಗೆ ತಗಲಿ ೬೫ ಜನರು ಸತ್ತರು. ಮತ್ತು ೩ನೇ ವಾರದಲ್ಲಿ ೮೦ ಜನರಿಗೆ ತಗಲಿ ೮೦ ಜನರೂ ಸತ್ತುಹೋದರು. ಹೀಗೆ ದಿಲ್ಲಿಯ ಪಟ್ಟಣದಲ್ಲಿ ಪ್ಲೇಗುರೋಗವು ಉಲ್ಬಣವಾಗಿರುವುದನ್ನೋಡಿ ಬರುವ ಡಿಶಂಬರ್ ತಿಂಗಳಲ್ಲಿ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವವು ನಡೆಯುವುದೊ ಇಲ್ಲವೊ ಎಂಬ ಸಂಶಯವುಹುಟ್ಟಿರುವುದು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು. ಪ. ಪ್ರ.

ಪತ್ರವ್ಯವಹಾರ.

ಬೆಂಗಳೂರಲ್ಲಿರುವ ಅಡ್ವೋಕೇಟ್ ಮಾ|| ಎಚ್. ಕೆ. ವೀರಬಸವಯ್ಯ, ಬಿ. ಎ, ಬಿ. ಎಲ್., ರವರ ತಮ್ಮ ಮಾ|| ಮಲ್ಲಪ್ಪನವರ ಪತ್ನಿಯು ಈಗ್ಗೆ ೪-೫ ತಿಂಗಳಿಂದಲೂ ಕ್ಷಯರೋಗಪೀಡಿತರಾಗಿದ್ದು ಸಕಲವಿಧವಾದ ಔಷಧೋಪಚಾರವನ್ನು ಮಾಡಿಸಿದಾಗ್ಯೂ ಗುಣವನ್ನು ಹೊಂದದೆ ಇದೇ ಏಪ್ರಿಲ್ ತಾ|| ೧೧ ರಲ್ಲಿ ಶಿವಾಧೀನರಾದರೆಂದು ತಿಳುಹಲು ತುಂಬಾ ವಿಷಾದವಾಗುತ್ತದೆ. ಈಕೆಯು ಇನ್ನೂ ಬಹು ಚಿಕ್ಕ ವಯಸ್ಸಿನವರಾಗಿದ್ದಾಗ್ಯೂ ಒಳ್ಳೇ ಗುಣಾಢ್ಯರಾಗಿದ್ದು ಎಲ್ಲರ ಹೊಗಳಿಕೆಗೆ ಪಾತ್ರರಾಗಿದ್ದರು. ಮಾ|| ಮಲ್ಲಪ್ಪನವರಿಗೆ ಇಷ್ಟು ಚಿಕ್ಕವಯಸ್ಸಿನಲ್ಲಿ ಪತ್ನೀವಿಯೋಗ ದುಃಖವು ಪ್ರಾಪ್ತವಾದುದಕ್ಕಾಗಿ ಅವರ ಮಿತ್ರಮಂಡಳಿಯಲ್ಲವು ವಿಶೇಷವಾಗಿ ಚಿಂತಿಸುತ್ತದೆ.

ಓರ್ವ ಮಿತ್ರ

ಹೈದರಾಬಾದು [illegible] ಕೃಷ್ಣಾ [illegible] ಚಿಕ್ಕಸೂಗೂರು [illegible]

ಮೊಘ ಶು॥ ೫ ಆರಭ್ಯ ನಿತ್ಯದಲ್ಲೂ ಜಂಗಮ ದಾಸೋಹದೊಡನೆ ಶ್ರೀ ಬಸವ ಮಹಾಪುರಾಣವು ಪ್ರಾರಂಭಿಸಲ್ಪಟ್ಟು ದಾವಣಗೆರೆ ವೇ॥ ವಿದ್ವಾನ್ ಕೆ. ಎಂ. ದಾನಪ್ಪಶಾಸ್ತ್ರಿಗಳಿಂದ ವೀಣಾ ವಾದನದೊಡನೆ ಪ್ರೇಕ್ಷಕರಿಗೆ ಅತಿ ಶ್ರಾವ್ಯವಪ್ಪಂತೆ ಬೋಧಿಸಲ್ಪಡುತ್ತ ಈವರೆಗೂ ಶಿವಾನುಗ್ರಹದಿಂದ ನಡೆಯುತ್ತ ಬಂದಿದೆ. ಈ ಮಹಾಪುರಾಣದ ಸಮಾಪ್ತಿ ಮಂಗಲವು ಇದೇ ವೈಶಾಖ ಬ॥ ೧ ಭಾನುವಾರ ನಡೆಯುವಂತೆ ನಿಶ್ಚಯಿಸಲ್ಪಟ್ಟಿರುವುದರಿಂದ ವೀರಶೈವ ಭಕ್ತರು ಕಳತ್ರ ಪುತ್ರ ಮಿತ್ರರೊಡನೆಯೂ ಮಾಹೇಶ್ವರರು ಶಿಷ್ಯವರ್ಗದೊಡನೆಯೂ ಬಂದೆರಡುದಿವಸ ಮುಂಚಿತವಾಗಿ ದಯಮಾಡಿಸಿ ಪುರಾಣಶ್ರವಣ ಗಣಸೇವಾದಿಗಳಿಂದ ಧನ್ಯರಾಗಬೇಕಾಗಿ ಇಚ್ಛೈಸುವ

ನನ್ನಯ್ಯಪ್ಪ, ಸಮಸ್ತಕಾರ್ಯ ನಿರ್ವಾಹಕ.

ಸೂಚನೆ—ಮಹಾಗಣಾರಾಧನೆಯ ದಿನವೇ ಗಣಂಗಳಿಗೆ ದಕ್ಷಿಣೆಯು ಕೊಡಲ್ಪಡುವುದು.

ದಾವಣಗೆರೆ ತಾಲ್ಲೂಕು ಅಣಜಿ.

ನಮ್ಮ ತಾ॥ ನಲ್ಲಿ ಈಗ ೩ ವರ್ಷಗಳಿಂದ ಪೋಲೀಸ್ ಇನಿಸ್ಪೆಕ್ಟರಾಗಿದ್ದ ಮಿ॥ ಬಸವಂತ ಕಾಳೋಜಿರಾಯರಿಗೆ ಜಗಲೂರು ತಾಲ್ಲೂಕಿಗೆ ವರ್ಗವಾಗಿ ಅಲ್ಲಿ ಹೋಗುವಲುದ್ದಿಶ್ಯ ಬಂದು ತಾ॥ ೨೦ ರಲ್ಲಿ ನಮ್ಮ ಗ್ರಾಮ ಪೋಲೀಸ್ ಸ್ಟೇಷನ್ನಲ್ಲಿ ಇಳಿದರು. ಪುರಪ್ರಮುಖರೆಲ್ಲ ಇವರಂ ಸತ್ಕರಿಸುವದು ಯುಕ್ತವೆಂದಾಲೋಚಿಸಿ ಮಧ್ಯಾಹ್ನ ೪ ಗಂಟೆಗೆ ಪ್ರೈಮರಿ ಸ್ಕೂಲ್ ಕಟ್ಟಡದಲ್ಲಿ ಸರ್ವರುಸೇರಿ ಮಾ॥ರಾ॥ಗಳಾದ ಪೋಲೀಸ್ ದಫೇದಾರ್ ಅಬ್ದುಲ್ ವಹಬ್ ಜನಾಬರವರು ಪಟೇಲ್ ಜಡಿಯಪ್ಪನವರು ಚಿನ್ನಾಳು ಶಿರಸ್ತೆ ಶಾನುಭೋಗ ಹನುಮಂತರಾಯರು ಮಂಬರಹಳ್ಳಿ ಶಿವಲಿಂಗಪ್ಪನವರು, ಇನ್ಸ್ಪೆಕ್ಟರವರನ್ನು ಇದಿರ್ಗೊಂಡು ಸ್ಕೂಲ್ ಕಟ್ಟಡದಲ್ಲಿ ಕರತಂದು ಮಡಗೆ ರಾ॥ ಮ್ಯಾಳೇದ ಗುರುಶಾಂತಪ್ಪನವರಿಂದಲೂ ಬಿ॥ಭರಮಪ್ಪನಿಂದಲೂ ಸಂಗೀತ ಹಾಡಿಸಿ ನಂತರ ಮ॥ ರಾ॥ ಶಾನುಭೋಗ ಎ. ಪಿ. ಸಿದ್ಧಲಿಂಗಪ್ಪನವರು ಎದ್ದುನಿಂತು ಮಿ॥ ರಾಯರ ಚರಿತ್ರೆಯನ್ನು ಸಭಿಕರೆಲ್ಲರಿಗೂ ಮನನವಾಗುವಂತೆ ತಿಳಿಸಿ ಗುಣಕಥನಮಾಡಿ ಪ್ರಮುಖರ ಪರವಾಗಿ ಪುಷ್ಪಹಾರವನ್ನು ಹಾಕಿದರು. ಮಿ॥ ರಾಯರವರು ಕಾಲೋಚಿತವಾದ ಉತ್ತರವನ್ನಿತ್ತ ಮಡನೆ ಸರ್ವರಿಗೂ ಗಂಧ ತಾಂಬೂಲಾದಿಗಳು ಹಂಚಲ್ಪಟ್ಟಿತು. ಮಿ॥ ಬಸವಂತ ಕಾಳೋಜಿರಾಯರವರು ಆ ರಾತ್ರಿಯೆ ಜಗಲೂರಿಗೆ ಪ್ರಯಾಣಮಾಡಿದರು. ಇವರು ರಾಜಕಾರ್ಯಧುರಂಧರರಾಗಿಯೂ ಚೋರರನ್ನು ಪತ್ತೆಮಾಡುವಲ್ಲಿ ಗಟ್ಟಿಗರಾಗಿ "ಮೈಸೂರ್ ಹುಲಿ" ಎಂಬ ಬಿರದನ್ನು ಹೊಂದಲು ಅರ್ಹರಾಗಿ ಪ್ರಸಿದ್ಧಿಹೊಂದಿರುವರು, ಇಂಥವರನ್ನು ಇಷ್ಟುಬೇಗನೆ ವರ್ಗಾಯಿಸಿದ್ದು ನಮ್ಮ ತಾಲ್ಲೂಕಿನ ಪ್ರಜೆಗಳ ದುರ್ದೈವವೆಂದು ಭಾವಿಸಬೇಕಾಗಿದೆ.

ಪ್ರತ್ಯಕ್ಷದರ್ಶಿ,

ಶ್ರೀಮನ್ನಿರಂಜನ ನಿರಾಭಾರ ದೇಶಿಕೋತ್ತಮರಾದ ಅಥಣಿ ಗಚ್ಚಿನಮಠದ ಮುರುಘ[illegible] ಶಿವಯೋಗಿಗಳ ವಿಷಯವಾಗಿ ದಾವಣಗೆರೆ [illegible] ಪಂಡಿತ ಚಂದ್ರಶೇಖರ ಶಾಸ್ತ್ರಿಗಳು ರಚಿಸಿದ ಸ್ತವನಾಷ್ಟಕವಿದು.

॥ ಶ್ಲೋಕ ॥

ಶ್ರೀಯೋಗೀಸುಕೃತಂ ಪ್ರಿಯೋಮುಕಲಯನ್ನ ಕೃತ್ರಿಮ ತದ್ದುಷ್ಕೃತಂ । ಕೈವಲ್ಯಂಪರಮಂಪ್ರಯಾತಿನಿಯತಂ ನಿರ್ಲ್ಲೇಪತಶ್ಶಾಶ್ವತಂ ॥ ಇತ್ಯುಕ್ತಿಂಪರಿಭಾವಯನ್ನಹಮಿಹಸ್ವಾತ್ಮಪ್ರದೇಪಾಪ್ರಿಯಃ । ಸತ್ಯಾತ್ಮನ್ ಶಿವಯೋಗಿವರ್ಯಮುರುಘಸ್ವಾಮಿನ್ ಭವಾನ್ಪಾತುಮಾಂ ॥ ೧ ॥

ಧ್ಯಾಯಚ್ಛ್ರೀಶಿವಏಕಏವಶಿವಕೃತ್ಸರ್ವಂತದನ್ಯತ್ತ್ಯಜೇತ್ । ಇತ್ಯೇತಾಂ ಶ್ರುತಿಮುಖ್ಯಪೇಷ್ಯ ಕೃತವಾನ್ ತಿದ್ವಿವಾಂಸ್ತ್ವಂ ರಸೇವತೇ ॥ ಅಜ್ಞಾನಂ ಶಿವತತ್ವಪರಂ ಬತಶಿವಧ್ಯಾನಪ್ರದಾನಾದಿಮಂ । ಸತ್ಯಾತ್ಮನ್ ಶಿವಯೋಗಿವರ್ಯಮುರುಘಸ್ವಾಮಿನ್ ಭವಾನ್ಪಾತುಮಾಂ ॥ ೨ ॥

ಪುಣ್ಯಂ ಶ್ರೀಶಿವಯೋಗಿವಂದನಕೃತೋಗಣ್ಯಂ ಜರೀಜೃಂಭತೇ । ಬಾಹಾನ್ಯೈರ್ನ ಬಹೂನಿಸಂತಿಬಿಲುತನ್ನಿಂದಾಕೃತಸ್ತತ್ಕ್ಷಣಂ ॥ ಭಿಕ್ಷಾಮಾತ್ರಮನಂತಯಜ್ಞಫಲದಂ ತತ್ರೈತಿಮತ್ವಾಶ್ರಯೇ । ಸತ್ಯಾತ್ಮನ್ ಶಿವಯೋಗಿವರ್ಯಮುರುಘಸ್ವಾಮಿನ್ ಭವಾನ್ಪಾತುಮಾಂ ॥ ೩ ॥

ಅಜ್ಞಾನಾತಿಶಯಾಧಿಕಾಂಧತಮಸಾತ್ಯಂತಂ ಪ್ರಮಾಂ ಸಂಗುರಃ । ಸುಜ್ಞಾನಾಂಜನಸಾಧನೇನ ಕುರುತೇ ಸದ್ದೃಷ್ಟಿಶೀಲಂ ಸತ್ವರಂ ॥ ಇತ್ಯಾರ್ಯೋಕ್ತಿಮನುಸ್ಮರನ್ ತವಪದಾಂಭೋಜಂ ಶರಣ್ಯಂ ಶ್ರಯೇ । ಸತ್ಯಾತ್ಮನ್ ಶಿವಯೋಗಿವರ್ಯಮುರುಘಸ್ವಾಮಿನ್ ಭವಾನ್ಪಾತುಮಾಂ ॥ ೪ ॥

ಯೋಗೀಯತ್ರಪದಂ ಕರೋತಿವಿಮಲಂ ತತ್ ಕ್ಷೇತ್ರಮೇವಾಖಿಲಂ । ತಸ್ಮೈವಾನಘತೀರ್ಥಜಾಲಮಮರಾಸ್ತತ್ರೈವ ಸಂತಿಪ್ರಿಯಾಃ ॥ ಸರ್ವಂ ಪುಣ್ಯಮಗಣ್ಯಮಿತ್ಯನುದಿನಂ ತ್ವತ್ಪಾದಪದ್ಮಂ ಭಜೇ । ಸತ್ಯಾತ್ಮನ್ ಶಿವಯೋಗಿವರ್ಯಮುರುಘಸ್ವಾಮಿನ್ ಭವಾನ್ಪಾತುಮಾಂ ॥ ೫ ॥

ಮೃತ್ಪಾಷಾಣಮಯಾನ್ ಸುರಾನ್ ಜಲಮಯಾನ್ ತೀರ್ಥಾನಿ ತೀರ್ಥಾನ್ಯಹೋ । ಸೇವಾಸನ್ತಿ ಜನಾಃ ಪ್ರವಕ್ತೃ ಬಹುನಾ ಕಾಲೇನ ಯೋಗೀಶ್ವರಾಃ । ಸದ್ಯೋದರ್ಶನಮಾತ್ರತಃ ಖಲುಪುನನ್ತ್ಯಾಲೋಕ್ಯ ಮುಕ್ತಿಂ ತ್ವತಃ । ಸತ್ಯಾತ್ಮನ್ ಶಿವಯೋಗಿವರ್ಯಮುರುಘಸ್ವಾಮಿನ್ ಭವಾನ್ಪಾತುಮಾಂ ॥ ೬ ॥

ಯೋಗೀಬ್ರಹ್ಮ ನಹುತಾಶನಾತ್ಪ್ರದಹತಿ ದ್ರಾಗಗ್ನಿತತ್ತ್ವಾರವನ್ನಿಕ್ಷೈಷಂ ಸಕಲಂ ಚ ಕರ್ಮನಿಚಯಂ ತಸ್ಮಾತ್ಸದಾನಂದದ ॥ ನಾಸ್ತ್ಯೇವತ್ವಯಿ ಪಾಪಪುಣ್ಯನಿಕೃತೇರ್ಲ್ಲೇಶೋಪ್ಯತೋಭಾವಯೇ । ಸತ್ಯಾತ್ಮನ್ ಶಿವಯೋಗಿವರ್ಯಮುರುಘಸ್ವಾಮಿನ್ ಭವಾನ್ಪಾತುಮಾಂ ॥ ೭ ॥

ಅವ್ಯಾರಾಧಿತಮಪಿ ಮೇ ಗುರುಜನೋ ಸ್ವಾತ್ಮೈವನತತ್ಪ್ರಾಂತಪ್ರೋ । ಅವ್ಯಾಪಾಯ್ಯಮಿದಂ ಚ ಜನ್ಮಸಫಲಂ ಶಾಸ್ತ್ರಂ ಮಯಾಸಾಧಿತಂ ॥ ಭಾಗ್ಯಂ ತತ್ವಕಿಕಲ್ಯಷಪ್ರಶಮನಾತ್ತ್ವತ್ಪಾದಸಂದರ್ಶನಾತ್ । ಸತ್ಯಾತ್ಮನ್ ಶಿವಯೋಗಿವರ್ಯಮುರುಘಸ್ವಾಮಿನ್ ಭವಾನ್ಪಾತುಮಾಂ ॥ ೮ ॥

ಆರ್ಯಾ॥ ಪೃಥಿವೀಸ್ತುತಿ ತಾ ಕಿಣಿ ಸತ್ಕಥನೀಯತಪಃ ಕಥಾವಿತತೇಃ । ಮುರುಘಶಿವಯೋಗಿ ನೋಷ್ಟಕಮಬದ್ಧಂ ಚಂದ್ರಶೇಖರ ಬುಧೇನ ॥ ೯ ॥

ಅವಿಚಾರ ಧರ್ಮ.

ಮಹನೀಯರೇ:—ನಮ್ಮ ಭರತಖಂಡದಲ್ಲಿ ಅನೇಕ ಧರ್ಮಸಂಗಡಗಳಾಗಿ ಆಯಾಯ ಧರ್ಮ ಸಂಗಡದವರು ತಮ್ಮ ತಮ್ಮ ಧರ್ಮ ಪದ್ಧತಿಯಂತೆ ಧರ್ಮಕೃತಿಗಳನ್ನು ಮಾಡುತ್ತಿರುವರಷ್ಟೆ. ಮತ್ತವರಲ್ಲಿ ಕೆಲ ಪೂರ್ವಜರ ಚರಿತ್ರಸ್ಮರಣಾರ್ಥವಾಗಿ ಹಬ್ಬಗಳೆಂದು ಮಾಡುತ್ತಿದ್ದು ಈ ಪೌರಾಣಿಕ ಪದ್ಧತಿಯು ಎಲ್ಲಾಕಡೆ ವಿಶೇಷ ಪ್ರಚಾರದಲ್ಲಿ ಬಂದದ್ದು ಎಷ್ಟೊಂದು ದೇಶದ ನಿಜಧರ್ಮವನ್ನು ನಷ್ಟಮಾಡಿರುವುದೆಂದು ಎಷ್ಟು ಹೇಳಿದರೂ ಸಾಲದಂತಿದೆ. ಆದರೆ ಅದರ ಪೈಕಿ ಒಂದಾದ ಹೋಳಿ ಹುಣಿವೆಯು ಮತ್ತು ಅದರಲ್ಲಿ ಮಾಡುವ ಕೃತಿಯು ವಿಚಾರಮಾಡಿ ನೋಡಿದರೆ ನಿಜವಾದ ಧರ್ಮ ಲೋಪವು ಸಹಜಲಕ್ಷಣದಲ್ಲಿ ಬರುವಂತಿದೆ.

ಈ ಹೋಳಿ ಹುಣಿವೆಯಲ್ಲಿ ಮಾಡುವ ಹೋಳಿಕೋತ್ಸವ ವಿಷಯವಾಗಿ "ನಿರ್ಣಯಸಿಂಧು" "ಧರ್ಮ ಸಿಂಧು" ಇತ್ಯಾದ್ಯನೇಕ ಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವದು. ಪೂರ್ವದಲ್ಲಿ ರಘುರಾಜನು ರಾಜ್ಯವಾಳುತ್ತಿರುವಾಗ ಅವನ ರಾಜ್ಯದಲ್ಲಿ ದೊಡ್ಡವರಿಗೆ ಸೌಖ್ಯವಾಗಿದ್ದು ಬಾಲರಿಗೆಮಾತ್ರ ಬಹು ಬಾಧೆಯುಂಟಾಗಿದ್ದುದರಿಂದ ಆ ಬಾಧೆಯನ್ನು ನಿವಾರಣಮಾಡಿಸಬೇಕೆಂದಿಚ್ಛೆಯಿಂದ ಕೆಲವು ಜನರು ರಘುರಾಜನಲ್ಲಿಗೆ ಬಂದು ಬಾಧಾಪರಿಹಾರವನ್ನು ಬೇಡಿಕೊಳ್ಳಲಾಗ ರಘುರಾಜನು ವಿಚಾರಿಸಲು, ಢುಂಢಾಯೆಂಬ ರಾಕ್ಷಸಿಯು ಬಾಧೆಯನ್ನುಂಟುಮಾಡುವಳೆಂದು ತಿಳಿದುಬಂದದ್ದರಿಂದ ಆಕೆಯ ಕೂಡ ಯುದ್ಧಮಾಡ ತೊಡಗಲು ರಘುರಾಜನಿಗೆ ಆಕೆಯು ಸಾಧ್ಯವಾಗದೆ ಯುದ್ಧದಿಂದ ಹಿಂತಿರುಗಿ ಅರಮನೆಗೆಬಂದು ಗುರುಗಳಾದ ವಸಿಷ್ಠರನ್ನು ಕರೆಸಿ ಉಪಾಯವನ್ನು ಕೇಳಲಾವಸಿಷ್ಠರು, ಈ ರಾಕ್ಷಸಿಯು ತಪಶ್ಚರ್ಯದಿಂದ ಈಶ್ವರನನ್ನೊಲಿಸಿ ಆತನಿಂ, ಮನುಷ್ಯ ಪಶು ಪಕ್ಷ್ಯಾದಿಗಳಿಂದ ತನಗೆ ಮೃತ್ಯುವಾಗಬಾರದೆಂದು ವರವನ್ನು ಪಡೆದಿರುವಳು. ಆದ್ದರಿಂದ ಎಲೈ ರಘುರಾಜನೆ ಆಕೆಯ ಮರಣವು ಅಸಾಧ್ಯವಾಗಿರುವುದೆಂದು ಹೇಳಲು, ಆಗ ರಘುರಾಜನು ವಿಶೇಷ ಚಿಂತೆಯಿಂದ ಪುನಃ ಗುರುಗಳನ್ನು ಈಕೆಯ ಸಂಹಾರಕ್ಕುಪಾಯ ವೇನೆಂದು ಕೇಳಲು, ವಸಿಷ್ಠರು ಆಲೋಚಿಸಿ ಬಾಲರಿಂ ಕಳವಿನಿಂ ಕುಳ್ಳು ಕಟ್ಟಿಗೆ ಮೊದಲಾದ ಪದಾರ್ಥಗಳನ್ನು ತರಿಸಿ ಒಟ್ಟಿಸಿ ಚಂಡಾಲರ ಮನೆಯಿಂದ ಬೆಂಕಿಯಂ ತರಿಸಿ ಹಚ್ಚಿಸಿ ಅದರಲ್ಲಿ ಈಕೆಯನ್ನು ಹಾಕಿದರೆ ಸಾಯುತ್ತಾಳೆಂದು ಹೇಳಲು, ಅದೇಪ್ರಕಾರ ರಘುರಾಜನು ಮಾಡಿಸಲು ಸತ್ತುಹೋದ್ದರಿಂದ ಈಕೆಯು ಪುನಃ ಬಾಲಬಾಧಾ ಮಾಡಬಾರದೆಂಬದಾಗಿ ಪ್ರತಿವರ್ಷ ಈ ಕೃತ್ಯವಂ ಮಾಡಬೇಕೆಂದು ಭವಿಷ್ಯತ್ಪುರಾಣದಲ್ಲಿ ಬರೆದಿರುವದು. ಅದೂಅಲ್ಲದೆ ಈ ದಿವಸ ಮಾಡುವ ಕೃತಿಯು ಧರ್ಮಸಿಂಧು ಗ್ರಂಥದಲ್ಲಿ

ಶ್ಲೋ॥ ಗೀತಾವಾದ್ಯೈಃ ಸ್ತಥಾನೃತ್ಯೈ ರಾತ್ರಿಃ ಸಾನೀಯತೇ ಜನೈಃ । ತಮಗ್ನಿಂತ್ರಿಃ ಪರಿಕ್ರಮ್ಯಶಬ್ದೈರ್ಲಿಂಗಭಗಾಂಕಿತೈಃ । ತೇನ ಶಬ್ದೇನ ಸಾ ಪಾಪಾ ರಾಕ್ಷಸೀತೃಪ್ತಿಮಾಪ್ನುಯಾತ್ । ತಮಗ್ನಿಂತ್ರಿಃ ಪರಿಕ್ರಮ್ಯಗಾಯಂತುಚ ಹಸಂತು ಚ । ಜಲ್ಪಂತುಸ್ವೇಚ್ಛಯಾ ಲೋಕಾನಿಶ್ಶಂಕಾಯಸ್ಯ ಯನ್ಮತಂ ॥

ಹೋಳಿಕಾದಿವಸ ಆ ರಾಕ್ಷಸಿಯನ್ನು ಸುಡ್ವ ಅಗ್ನಿಯನ್ನು ಮೂರುಸಾರಿ ಪ್ರದಕ್ಷಿಣೆಮಾಡಿ ನೃತ್ಯ ಗಾಯನವಾದ್ಯಗಳಿಂದಲೂ ಮನಸ್ಸಿಗೆ ಬಂದ ದುಷ್ಟ ಹಾಸ್ಯೋಕ್ತಿಗಳಿಂದಲೂ, ಸ್ವೇಚ್ಛಾಲಾಪಗಳಿಂದಲೂ ಭಯರಹಿತರಾಗಿ ಶಿಶ್ನಯೋನಿ ವಿಶಿಷ್ಟ ಶಬ್ದಗಳುಳ್ಳ ಬೈಗುಳಿಂದ ಆ ರಾತ್ರಿಕಾಲ ಕಳಿಯಲು ಆ ದುಷ್ಟಳಾದ ರಾಕ್ಷಸಿಯು ತೃಪ್ತಿಯನ್ನು ಹೊಂದುವಳು. ಇದು ಅಲ್ಲದೆ, ಧರ್ಮಸಿಂಧುಕಾರನು—

ಶ್ಲೋ॥ ಏವಂ ರಾತ್ರೌ ಹೋಲಿಕೋತ್ಸವಂ ಕೃತ್ವಾ ಪ್ರಾತಃಪ್ರತಿಪದಿಯಃ । ಶ್ವಪಚಂ ಸ್ಪೃಷ್ಟ್ವಾ ದೃಷ್ಟ್ವಾ ಸ್ನಾನಂ ಕುರ್ಯಾತ್ ನತಸ್ಯ ದುಷ್ಕೃತಿಃ ಕಿಂಚಿತ್ ॥

ಈ ರೀತಿ ರಾತ್ರಿಯಲ್ಲಿ ಮೇಲೆ ಹೇಳಿದ ಕೃತಿಯನ್ನು ಮಾಡಿದ ಮನುಷ್ಯನು ಪ್ರತಿಪದ್ ಪ್ರಾತಃಕಾಲದಲ್ಲಿ ಚಂಡಾಲನನ್ನು ನೋಡಿ ಸ್ನಾನಮಾಡಲು ಅವನಿಗೆ ಸ್ವಲ್ಪಾದರೂ ಪಾಪವು ತಗಲುವುದಿಲ್ಲೆಂದು ಸ್ವಕಪೋಲ ಕಲ್ಪನೆಯ ವಾಕ್ಯವನ್ನು ಬರದಿರುವನು. ಅಯ್ಯಾ ಧರ್ಮ ಬಾಂಧವರೆ! ಯಾವ ಧರ್ಮವಾದರೂ ಇಂಥಾ ಕೃತಿಯನ್ನು ಬೋಧಿಸುವುದೇ? ಯಾವ ಮೂಢ ಮನುಷ್ಯನಾದರೂ ಈ ಕೃತಿಯನ್ನು ಒಪ್ಪುವನೇ? ಅಯ್ಯೋ ಪರಮ ಪೂಜ್ಯರಾದ ಮಾತಾ ಸಹೋದರಿ ಪರಸ್ತ್ರೀಯರ ಸಮ್ಮುಖದಲ್ಲಿ ದುಷ್ಟಶಬ್ದೋಚ್ಚಾರಕ್ಕೆ ಯಾವ ಧರ್ಮವಾದರೂ ಆಸ್ಪದ ಕೊಟ್ಟೀತೇ? ಒಂದು ಸಲ ತನ್ನ ಮನಸ್ಸಿನಿಂದ ವಿಚಾರಮಾಡಿ ನೋಡಿದರೆ ಮನಸ್ಸಾದರೂ ಒಪ್ಪೀತೆ?

ಅಯ್ಯಾ ವೇದ ಮನ್ವಾದಿ ಪರಾಶರಾಂತ ಸ್ಮೃತಿಗಳಲ್ಲಿ ಮನುಷ್ಯನು ಎಂದೂ ದುಷ್ಟಶಬ್ದವನ್ನುಚ್ಚರಿಸದೆ ಅಡಿಗಡಿಗೆ ಧರ್ಮವನ್ನು ಪಾಲಿಸುತ್ತಾ ಮುಖ ಮೇಲಕ್ಕೆ ಮಾಡಿ ನಡೆಯುವುದೇ ಅಧರ್ಮವು; ಮುಖ ತಗ್ಗಿಸಿ ನಡೆಯುವುದೇ ಧರ್ಮವು. ಎಂದು ಪ್ರತಿಪಾದಿಸುವ ಧರ್ಮವೆತ್ತ, ಈ ದುಷ್ಟ ಧರ್ಮವನ್ನು ಪ್ರತಿಪಾದಿಸುವ ಗ್ರಂಥಗಳೆತ್ತ. ಆದರೆ ಆರ್ಯರ ಈ ಒಂದು ಶ್ಲೋಕದಿಂದಲೇ ಎಷ್ಟೊಂದು ಸೂಕ್ಷ್ಮ ಧರ್ಮಗಳನ್ನು ಅವರು ಬೋಧಿಸಿರುವರೆಂಬುದು ಸ್ಪಷ್ಟವಾಗುತ್ತದೆ.

ಶ್ಲೋ॥ ಮಾತೃವತ್ಪರದಾರಾಂಶ್ಚ ಪರದ್ರವ್ಯಾಣಿಲೋಷ್ಟವತ್ । ಆತ್ಮವತ್ಸರ್ವಭೂತಾನಿ ಯಃಪಶ್ಯತಿಸಪಶ್ಯತಿ ॥

ಮಹನೀಯರೇ, ತನ್ನಂತೆಯೇ ಎರಡನೇ ಪ್ರಾಣಿಗಳನ್ನು ಕಾಣಬೇಕೆಂಬೀ ಮಹರ್ಷಿಗಳ ಧರ್ಮ ಶಾಸ್ತ್ರಕ್ಕೆ ವಿರುದ್ಧವಾದ ಈ ಅಧರ್ಮವನ್ನು ಬೋಧಿಸುವ ಧರ್ಮ ಗ್ರಂಥಗಳಿಗೆ "ಧರ್ಮ ಸಿಂಧು" ವೆನ್ನಬೇಕೋ ಅಥವಾ (ಪಾಪ) ಸಿಂಧುವೆನ್ನಬೇಕೋ "ನಿರ್ಣಯ ಸಿಂಧು" ವೆನ್ನಬೇಕೊ ನರಕ ಸಿಂಧುವೆನ್ನಬೇಕೋ? ಎಂಬುವದನ್ನು ವಾಚಕರೆ ಊಹಿಸಬಹುದು. ಇಂಥ ದುಷ್ಟ ಧರ್ಮಗ್ರಂಥಗಳು ಜಗತ್ತಿನಲ್ಲಿ ಪ್ರಬಲವಾಗಿ ವ್ಯಾಪಿಸಿ ಪೂರ್ವಜರ ನಿಜವಾದ ಧರ್ಮವನ್ನಡಗಿಸಿ ಜನರಂ ದುಷ್ಟಮಾರ್ಗಕ್ಕೆ ಪ್ರವರ್ತಿಸಲುದ್ಯುಕ್ತವಾಗಿರುವುವು. ಇದೂಅಲ್ಲದೆ ಎರಡನೇ ರೂಪದಿಂದ ಕೆಲವು ಗ್ರಂಥಗಳಲ್ಲಿ "ಕಾಮ" ಅವನ ಹೆಂಡತಿಯಾದ "ರತಿ" ಯನ್ನು ಮಾಡಿ ಈ ದಿವಸ ಸುಡಬೇಕೆಂದು ಹೇಳಲ್ಪಟ್ಟಿದೆ ಯೆಂದು ತಿಳಿದು ಕೆಲ ಜನರು ಅದರಂತೆಯೇ ಆಚರಿಸುತ್ತಿರುವರು.

ಈ ರೀತಿ ಯಾವ ಆರ್ಯರ ಗ್ರಂಥಗಳಲ್ಲಿಯೂ ಬರದಿಲ್ಲವೆಂಬುವುದು ನಿಜವಾದರೂ ಒಂದುವೇಳೆ ಯಾವದಾದರೊಂದು ಗ್ರಂಥದಲ್ಲಿ ಬರದಿವೆ ಅಂತ ಹೇಳದಾಗ್ಯೂ ಬಾಹ್ಯದಲ್ಲಿ ಒಂದು ಗೊಂಬೆಯನ್ನು ಮಾಡಿ ಸುಡುವುದು ಕಾಮನ ಸುಟ್ಟಂತಲ್ಲ. ಹಾಗೂ ಆರ್ಯರ ಸಮ್ಮತವಾದ ಧರ್ಮದಲ್ಲಿ ಪ್ರಥಮೋಕಃ ಕಾಮ ಅಂದರೆನು? ಇದರ ವಿಚಾರ ಮಾಡುವ—ಕಾಮಂ=ಇಚ್ಛಾ, ಆಶಾಅಂತ ಅರ್ಥವಾಗುತ್ತವೆ. ಇನ್ನು ಅವನ ಹೆಂಡತಿಯಾದ ರತಿ=ಪ್ರೀತಿ ಮೊದಲಾದ ಅರ್ಥಗಳಾಗುತ್ತವೆ. ಯಾವುದೋ ಒಂದು ವಸ್ತುವಿನಲ್ಲಿ ಪ್ರೀತಿ ಉತ್ಪನ್ನವಾದರೆ ಇಚ್ಛೆಯೇ ಪ್ರಥಮಕಾರಣವಾಗಿರುವುದು. ಆಶಾ (ಇಚ್ಛೆ) ಇಲ್ಲದವಿನಹಾ ಎಂದೂ ಪ್ರೀತಿಯು ಉತ್ಪನ್ನವಾಗಲಾರದು. ಅಂದಮೇಲೆ ಅವೆರಡಕ್ಕೆ ಪರಸ್ಪರ ಅಭೇದ ಸಂಬಂಧಾನ್ವಯ ಅರ್ಥಾತ್ ಪತಿ ಪತ್ನೀ ಭಾವರೂಪ ಉಂಟೆಂದು ಸಿದ್ಧವಾಗುತ್ತದೆ. ಮನುಷ್ಯನು ದುರ್ಲಭವಾದ ಪರಮಾರ್ಥವನ್ನು ಹೊಂದಬೇಕಾದರೆ ಭವಸಾಗರವನ್ನು ದಾಟಲಿಕ್ಕೆ ಬೇಕು. ಯದ್ಯಪಿ ಸಂಸಾರವು ದುಃಖಕರವಾದಾಗ್ಯೂ ಪ್ರೀತಿಕರವೆಂದು ಭಾವಿಸುವ ಆಶಾಪಾಶವನ್ನು ಸುಡಲಿಕ್ಕೆ ಬೇಕಾಗುವುದು. "ಕಾರಣಾಭಾವಾತ್ ಕಾರ್ಯಾಭಾವಃ" ಎಂಬೀ ವೈಶೇಷಿಕ ದರ್ಶನ ಸೂತ್ರದಂತೆ ಕಾರಣರೂಪವಾದ ದುರಾಶೆಯನ್ನೇ ಸುಟ್ಟಮೇಲೆ ಕಾಮರೂಪವಾದೀ ಪ್ರೀತಿ (ರತಿ) ಯನ್ನು ಸುಡಬೇಕೆಂಬುವ ಭಾಗವೇ ಉಳಿಯಲಿಲ್ಲ. ಅಂದಮೇಲೆ ಜನನ ಮರಣರೂಪ ದುಃಖವನ್ನು ಕೊಡುತ್ತಿದ್ದ ಮನಸ್ಸನ್ನು ವ್ಯಾಪಿಸಿರುವ ಆಶೆಯನ್ನು ಸುಡುವುದೇ ನಿಜವಾದ ಕಾಮದಹನಧರ್ಮವೆಂಬುವುದು ಸ್ಪಷ್ಟವಾಗುತ್ತದೆ. ಹಾಗೂ ಪತಂಜಲಿ ಋಷಿಗಳ ಯೋಗಸೂತ್ರವೂಕೂಡ ಈ ವಿಷಯವನ್ನು ಪುಷ್ಟೀಕರಿಸುತ್ತಿರುವುದು. "ಅಭ್ಯಾಸ ವೈರಾಗ್ಯಾಭ್ಯಾಂ ತನ್ನಿರೋಧಃ" ಮನುಷ್ಯನು ಮುಕ್ತನಾಗಬೇಕಾದರೆ ಮನೋನಿಗ್ರಹಾದಿ ಯೋಗಾಂತ ಕಾರಣಗಳಿರುವುವು. ಅದರಲ್ಲಿ ಪ್ರಥಮವಾದ ಮನೋನಿಗ್ರಹಕ್ಕೆ ಅಭ್ಯಾಸ ವೈರಾಗ್ಯ (ಆಶಾಛೇದನ) ಗಳೇ ಕಾರಣಗಳಾಗಿರುವುವು. ಇದೆಲ್ಲಾ ವಿಚಾರಮಾಡಿದರೆ ಆಶಾ ಛೇದನವೇ ಕಾಮ ದಹನವೆಂದು ಸ್ಪಷ್ಟವಾಗುತ್ತದೆ.

ಈಗ ಮಾಡುವ ಈ ದುಷ್ಟ ವ್ಯವಹಾರದಿಂದ ಕೂಡಿದ ಹೋಳಿಕೋತ್ಸವವು ಅನಾರ್ಯರಿಂದ ನಿರ್ಮಿತವಾದ ಅಧರ್ಮವೆಂದು ತಿಳಿದು ಸರ್ವ ಪ್ರಾಜ್ಞರೂ ನಿಜಧರ್ಮ ಶೋಧನೆಗುದ್ಯುಕ್ತರಾದಾರೆಂದು ನಂಬುವೆನು.

ಸುಜ್ಞರೇ! ಈ ಧರ್ಮಸಿಂಧುಕಾರನು ತನ್ನ ಗ್ರಂಥಾಂತದಲ್ಲಿ ಈ ಕೆಳಗಿನ ಶ್ಲೋಕಗಳನ್ನು ಬರೆದಿರುವನು.

ಶ್ಲೋ॥ ವಿಮಾಮಾಂಸಾ ಧರ್ಮಶಾಸ್ತ್ರಜ್ಞಾಃ ಸುಧಿಯೋಽಪಿ ಸಕಲಸಾಬುಧಾಃ । ಸ್ವತಃ ಕಾರ್ಯಃ ಪ್ರಾಜ್ಞಾ ಬಂಧೈಸ್ತ್ವರ್ಥಂ ನಾಯಮುದ್ಯಮಃ ॥ ಯೆ ಪುನರ್ಮಂದಮತಯೋಽ ಲಸಾ ಅಜ್ಞಾಶ್ಚನಿರ್ಣಯಾ । ಧರ್ಮೋಪೇದಿತುಮಿಚ್ಛಂತಿ ರಚಿತಸ್ತದಪೇಕ್ಷಯಾ ॥ ಇತ್ಯಾದಿ.

ಈ ಧರ್ಮಸಿಂಧುವೆಂಬುವ ಗ್ರಂಥವನ್ನು ನಾನು ವಿದ್ವಾಂಸರಸಲುವಾಗಿ ಬರೆಯಬೇ ಮೂಢರಾದ ಅವಿವೇಕಿಗಳಿಗೋಸ್ಕರ ಬರದಿರುವೆನೆಂದು ಸ್ಪಷ್ಟವಾಗಿ ಹೇಳುತ್ತಿರುವನು. ಹೀಗಿರುವುದನ್ನು ನೋಡಿಯೂ ಪ್ರಾಜ್ಞರುಕೂಡ ಇದನ್ನು ಅನುಸರಿಸುತ್ತಾರೆಂದಮೇಲೆ ಅವರು ಪ್ರಾಜ್ಞರೋ, ಅಧರ್ಮಿಗಳೋ, ಅವಿವೇಕಿಗಳೋ ಎಂಬುವುದನ್ನು ಮನುಷ್ಯನು ತನಗೆತಾನೇ ವಿಚಾರಮಾಡಬಹುದು.

ಇನ್ನುಮೇಲಾದರೂ ನಮ್ಮ ದೇಶಬಾಂಧವರು ಇಂಥಾ ದುಷ್ಟ ಗ್ರಂಥಗಳಿಗೆ ವಿಶ್ವಾಸಕೊಡದೆ ನಿಜಧರ್ಮಶೋಧನೆ ತತ್ಪರರಾದಾರೆಂದು ಪುನಃ ಕೋರುವೆನು.

ವಿರೂಪಾಕ್ಷ ಪಡಿಸುರ್ ಬ್ರಹ್ಮಚಾರಿ.

ಸುಲಭಕ್ರಯ! ಖಾತರಿಮಾಡಿ !! ಬಿಡಬೇಡಿರಿ!!!

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ। ೧ಕ್ಕೆ	೬	ಕಸ್ತೂರಿ ಬಿಲ್ಲೆ ತೊ। ೧ಕ್ಕೆ	೨
೨ ಅಂಬರ್‌ಬತ್ತಿ ಸೇ। ೧ಕ್ಕೆ	೪	ಜವಾಜಿ ಬಿಲ್ಲೆ ತೊ। ೧ಕ್ಕೆ	೧
ಕಸ್ತೂರಿ ಬತ್ತಿ ಸೇ। ೧ಕ್ಕೆ	೨॥	ಅರಗಜ। ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೇ। ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ। ೧ಕ್ಕೆ	।
ಗುಲಾಬ್ ಬತ್ತಿ ಸೇ। ೧ಕ್ಕೆ	॥	ಸುರಂಗಿ ಸೆಂಟ್ ಸಿ। ೧ಕ್ಕೆ	೧
ನಕ್ಷತ್ರಕಾಂತಿಬ। ಸೇ। ೧ಕ್ಕೆ	೧	ಸ್ವದೇಶಿ ಫೆ ಪೌ। ಡ। ೧ಕ್ಕೆ	।

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಉದಬತ್ತಿಗಳೂ, ತಲೆಗೆಹಚ್ಚುವ ಯೆಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರಕುತ್ತೆ ಕ್ಯಾಟ್ಲಾಗ್ ಅಪೇಕ್ಷಿತರು ಕೆಳ್ಗಿನವಿಳಾಸಕ್ಕೆ ಬರೆಯಿರಿ

ಎಂ. ಆರ್. ಸುಬ್ಬಾಜೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಪ್ರಯೋಗಿಸಿ ಕ್ಲಪ್ತ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೬-೦ರೂ. ಆಗುತ್ತದೆ. ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರೂ. ಕೊಡಬೇಕಾಗುತ್ತೆ. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೆ ೦-೮-೦ ಆಣೆ ಯಂತೆ ಕಳುಹಬೇಕು. ಕ್ಲಪ್ತ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅದನ್ನೇ [illegible] ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದಲ್ಲಿ ೧-೦-೦ ರೂ. ಅನ್ನು ಹೆಚ್ಚಾಗಿ ಕೊಡಬೇಕು. ಹೆಚ್ಚು ವಿವರಗಳನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
[illegible] ಮೈಸೂರು.

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

೩

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು. ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರೆಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚೆಂಟ
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District·

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

37

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ— ಈ ಎಣ್ಣೆಯನ್ನು ಬೆಳಿಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರಿಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೆಬ್ಬು, ವ್ರಣ, ಕುಷ್ಠ, ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕೆ. ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫ ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೦ ದಿನ ಸೇವಿಸುವುದರಿಂದ ವಿಕಂಪಿತೋಷ್ಣ, ಮೂತ್ರಕೃಚ್ಛ್ರ, ಅಸ್ಥಿಸ್ರಾವ, ಅಸೃಗ್ದರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕುಮೂತ್ರ, ಅಸ್ಥಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ. ರೂಪಾಯಿ ೩. ಟಪ್ಪಾಲ್ ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಪುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್ ಖರ್ಚು ೬ ಆಣೆ.

೯. ಮಹಾಕುಂಡಲ್ಯಾದಿರಸಾಯನ— ಇದರಿಂದ ಕ್ಷಯ ಕಾಸ, ಜ್ವರ, ಡಿಸ್ಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟಲ್ಲು ಉರಿ ಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೫೦ ಮಾತ್ರೆಗೆ ರೂ. ೧ ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ— ಮಕ್ಕಳಿಗೆ ಸೀತದಿಂದ ಪ್ರಾಯಳ ನೀರು ಎಳೆಯುವಾಗ ಜ್ಞಾನ ತಪ್ಪುವುದು ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳಿತ್ತು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದ ಉದಬತ್ತಿಗಳೂ ಘಂಟಿಗೆಗಳೂ ದೊರೆಯುತ್ತವೆ. ನಮ್ಮ ವಿಳಾಸ—

ಎಂ. ಡಾಕ್ಟರ ಚೆನ್ನಬಸವಪ್ಪ ಅಂಡ್ ಸನ್ಸ್.
[illegible]

ಮಾಘ ಶು॥ ೫ ಆರಭ್ಯ ನಿತ್ಯದಲ್ಲೂ ಜಂಗಮ ದಾಸೋಹದೊಡನೆ ಶ್ರೀ ಬಸವ ಮಹಾಪುರಾಣವು ಪ್ರಾರಂಭಿಸಲ್ಪಟ್ಟು ದಾವಣಗೆರೆ ವೇ॥ ವಿದ್ವಾನ್ ಕೆ. ಎಂ. ದಾನಪ್ಪಶಾಸ್ತ್ರಿಗಳಿಂದ ವೀಣಾ ವಾದನದೊಡನೆ ಪ್ರೇಕ್ಷಕರಿಗೆ ಅತಿ ಶ್ರಾವ್ಯವಪ್ಪಂತೆ ಬೋಧಿಸಲ್ಪಡುತ್ತ ಈವರೆಗೂ ಶಿವಾನುಗ್ರಹದಿಂದ ನಡೆಯುತ್ತ ಬಂದಿದೆ. ಈ ಮಹಾಪುರಾಣದ ಸಮಾಪ್ತಿ ಮಂಗಲವು ಇದೇ ವೈಶಾಖ ಬ॥ ೧ ಭಾನುವಾರ ನಡೆಯುವಂತೆ ನಿಶ್ಚಯಿಸಲ್ಪಟ್ಟಿರುವುದರಿಂದ ವೀರಶೈವ ಭಕ್ತರು ಕಳತ್ರ ಪುತ್ರ ಮಿತ್ರರೊಡನೆಯೂ ಮಾಹೇಶ್ವರರು ಶಿಷ್ಯವರ್ಗದೊಡನೆಯೂ ಒಂದೆರಡುದಿವಸ ಮುಂಚಿತವಾಗಿ ದಯಮಾಡಿಸಿ ಪುರಾಣಶ್ರವಣ ಗಣಸೇವಾದಿಗಳಿಂದ ಧನ್ಯರಾಗಬೇಕಾಗಿ ಇಚ್ಛಿಸುವ

ನನ್ನಯ್ಯಪ್ಪ, ಸಮಸ್ತಕಾರ್ಯ ನಿರ್ವಾಹಕ.

ಸೂಚನೆ—ಮಹಾಗಣಾರಾಧನೆಯು ವಿರಕ್ತ ಗಣಂಗಳಿಗೆ ದಕ್ಷಿಣೆಯು ಕೊಡಲ್ಪಡುವುದು.

ದಾವಣಗೆರೆ ತಾಲ್ಲೂಕು ಅಣಜಿ.

ನಮ್ಮ ತಾ॥ ನಲ್ಲಿ ಈಗ ೩ ವರ್ಷಗಳಿಂದ ಪೋಲಿಸ್ ಇನ್‌ಸ್ಪೆಕ್ಟರಾಗಿದ್ದ ಮೆ॥ ಬಸವಂತ ಕಾಳೋಜಿರಾಯರಿಗೆ ಜಗಲೂರು ತಾಲ್ಲೂಕಿಗೆ ವರ್ಗವಾಗಿ ಅಲ್ಲಿ ಹೋಗುವಲುದ್ದಿಶ್ಯ ಬಂದು ತಾ॥ ೨೦ ರಲ್ಲು ನಮ್ಮ ಗ್ರಾಮ ಪೋಲೀಸ್ ಸ್ಟೇಷನ್ನಲ್ಲಿ ಇಳಿದರು. ಪುರಪ್ರಮುಖರೆಲ್ಲ ಇವರಂ ಸತ್ಕರಿಸುವದು ಯುಕ್ತವೆಂದಾಲೋಚಿಸಿ ಮಧ್ಯಾಹ್ನ ೪ ಗಂಟೆಗೆ ಪೂರ್ವದ ಸ್ಕೂಲ್ ಕಟ್ಟಡದಲ್ಲಿ ಸನ್ಮಾನ್ಯರೆನಿಸಿದ ಮಾ॥ರಾ॥ಗಳಾದ ಪೋಲೀಸ್ ದಫೇದಾರ್ ಅಬ್ದುಲ್ ವಹಬ್ ಜಿನೋದಿಯವರು ಪಟೇಲ್ ಜಡಿಯಪ್ಪನವರು ಹೆಬ್ಬಾಳು ಶೀರ್ಷ ಶಾನುಭೋಗ ಹನುಮಂತರಾಯರು ಮರುಬಸಪ್ಪ ಶಿವಲಿಂಗಪ್ಪನವರು, ಇನ್‌ಸ್ಪೆಕ್ಟರವರನ್ನು ಇದಿರ್ಗೊಂಡು ಸ್ಕೂಲ್ ಕಟ್ಟಡದಲ್ಲಿ ಕರತಂದು ಒಡನೆ ರಾ॥ ಹ್ಯಾಳೇದ ಗುರುಶಾಂತಪ್ಪನವರಿಂದಲೂ ಬಿ॥ ಭರಮಪ್ಪನಿಂದಲೂ ಸಂಗೀತ ಹಾಡಿಸಿ ನಂತರ ಮೆ॥ ರಾ॥ ಶಾನುಭೋಗ ಎ. ಪಿ. ಸಿದ್ಧಲಿಂಗಪ್ಪನವರು ಎದ್ದು ನಿಂತು ಮೆ॥ ರಾಯರ ಚರಿತ್ರೆಯನ್ನು ಸಭಿಕರೆಲ್ಲರಿಗೂ ಮನನವಾಗುವಂತೆ ತಿಳಿಸಿ ಗುಣಕಥನಮಾಡಿ ಪ್ರಮುಖರ ಪರವಾಗಿ ಪುಷ್ಪಹಾರವನ್ನು ಹಾಕಿದರು. ಮೆ॥ ರಾಯರವರು ಕಾಲೋಚಿತವಾದ ಉತ್ತರವನ್ನಿತ್ತ ಒಡನೆ ಸರ್ವರಿಗೂ ಗಂಧ ತಾಂಬೂಲಾದಿಗಳು ಹಂಚಲ್ಪಟ್ಟಿತು. ಮೆ॥ ಬಸವಂತ ಕಾಳೋಜಿರಾಯರವರು ಆ ರಾತ್ರಿಯೆ ಜಗಲೂರಿಗೆ ಪ್ರಯಾಣಮಾಡಿದರು. ಇವರು ರಾಜಕಾರ್ಯಧುರಂಧರರಾಗಿಯೂ ಚೋರರನ್ನು ಪತ್ತೆಮಾಡುವಲ್ಲಿ ಗಟ್ಟಿಗರಾಗಿ "ಮೈಸೂರ್ ಹುಲಿ" ಎಂಬ ಬಿರುದನ್ನು ಹೊಂದಲು ಅರ್ಹರಾಗಿ ಪ್ರಸಿದ್ಧಿಹೊಂದಿರುವರು, ಇಂಥವರನ್ನು ಇಷ್ಟುಬೇಗನೆ ವರ್ಗಾಯಿಸಿದ್ದು ನಮ್ಮ ತಾಲ್ಲೂಕಿನ ಪ್ರಜೆಗಳ ದುರ್ದೈವವೆಂದು ಭಾವಿಸಬೇಕಾಗಿದೆ.

ಪ್ರತ್ಯಕ್ಷದರ್ಶಿ,

ಶ್ರೀಮನ್ನಿರಂಜನ ನಿರಾಭಾರ ಮೇಶಿಕೋತ್ತಮರಾದ ಅಥಣಿ ಗಚ್ಚಿನಮಠದ ಮುರುಘ[illegible] ಶಿವಯೋಗಿಗಳ ವಿಷಯವಾಗಿ ದಾವಣಗೆರೆ [illegible]ದ ಪಂಡಿತ ಚಂದ್ರಶೇಖರ ಶಾಸ್ತ್ರಿಗಳು ರಚಿಸಿದ ಸ್ತವನಾಷ್ಟಕವಿದು.

॥ ಶ್ಲೋಕ ॥

ಶ್ರೀಯೋಗೀಸುಕೃತಂ ಪ್ರಿಯೇಮುಕಲಯನ್ನಸ್ತತ್ರತದ್ದುಷ್ಕೃತಂ । ಕೈವಲ್ಯಂಪರಮಂಪ್ರಯಾತಿನಿಯತಂ ನಿಕ್ಷೇಪತಃಶಾಶ್ವತಂ ॥ ಇತ್ಯುಕ್ತಿಂಪರಿಭಾವಯನ್ನಹಮಿಹತ್ವತ್ಪಾದಸೇವಾಪ್ರಿಯಃ । ಸತ್ಯಾತ್ಮನ್‌ಶಿವಯೋಗಿವರ್ಯಮುರುಘಸ್ವಾಮಿನ್ಭವಾನ್ಪಾತುಮಾಂ ॥ ೧ ॥

ಧ್ಯೇಯಃಶ್ರೀಶಿವಏಕಏವಶಿವಕೃತ್ಸರ್ವಂತದನ್ಯತ್ತ್ಯಜೇ । ದಿಕ್ಷ್ವೇತಾಂಶ್ರುತಿಮಪ್ಯಪೇಕ್ಷ್ಯ ಕೇಮತಿರ್ದೈವಾಂತರಂಸೇವತೆ ॥ ಅಜ್ಞಾನಂಕಿಮತಃಪರಂಬತಶಿವಧ್ಯಾನಪ್ರದಾನಾದಿಮಂ । ಸತ್ಯಾತ್ಮನ್ ಶಿವಯೋಗಿವರ್ಯಮುರುಘಸ್ವಾಮಿನ್ಭವಾನ್ಪಾತುಮಾಂ ॥ ೨ ॥

ಪುಣ್ಯಂಶ್ರೀಶಿವಯೋಗಿವಂದನಕೃತೋಗಣ್ಯಂಜರೀಜೃಂಭತೆ । ಪಾಪಾನ್ಯೇವಬಹೂನಿಸಂತಿಬಲುತನ್ನಿಂದಾಕೃತಸ್ತತ್ಕ್ಷಣಂ ॥ ಭಿಕ್ಷಾಮಾತ್ರಮನಂತಯಜ್ಞಫಲದಂತತ್ರೇತಿಮತ್ವಾಶ್ರಯೇ । ಸತ್ಯಾತ್ಮನ್‌ಶಿವಯೋಗಿವರ್ಯಮುರುಘಸ್ವಾಮಿನ್ಭವಾನ್ಪಾತುಮಾಂ ॥ ೩ ॥

ಅಜ್ಞಾನಾತಿಶಯಾಧಿಕಾಂಧತಮಸಾತ್ಯಂಧಂಪುಮಾಂಸಂಗುರಃ । ಸುಜ್ಞಾನಾಂಜನಸಾಧನೇನಕುರುತೇ ಸದ್ಯಸ್ಸ್ವಲೋಕಂಸತ್ವರಂ ॥ ಇತ್ಯಾರ್ಯೋಕ್ತಿಮನುಸ್ಮರನ್ತವಪದಾಬ್ಜೋಪಕಂಠಂ ರಣ್ಯಂಶ್ರಯೇ । ಸತ್ಯಾತ್ಮನ್‌ಶಿವಯೋಗಿವರ್ಯಮುರುಘಸ್ವಾಮಿನ್ಭವಾನ್ಪಾತುಮಾಂ ॥ ೪ ॥

ಯೋಗೀಯತ್ರವದಂಕರೋತಿವಿಮಲಂತತ್‌ಕ್ಷೇತ್ರಮೇವಾಖಿಲಂ । ತತ್ರೈವಾಸಸ್ಯತೀರ್ಥಜಾಲಮಮರಾಸ್ತತ್ರೈವ ಸಂತಿಪ್ರಿಯಾಃ ॥ ಸರ್ವಂಪುಣ್ಯಮಗಣ್ಯಮಿತ್ಯನುದಿನಂತ್ವತ್ಪಾದಪದ್ಮಂಭಜೆ । ಸತ್ಯಾತ್ಮನ್‌ಶಿವಯೋಗಿವರ್ಯಮುರುಘಸ್ವಾಮಿನ್ಭವಾನ್ಪಾತುಮಾಂ ॥ ೫ ॥

ಮೃತ್ಪಾಷಾಣಮಯಾಸುಸ್ವರಾಜಲಮಯಾನ್ಯೇತಾನಿತೀರ್ಥಾನ್ಯಹೋ । ಸೇವಾಸನ್ತಿಜನಾನ್ಪವಿತ್ರಯಬಹುನಾಕಾಲೇನಯೋಗೀಶ್ವರಾಃ ॥ ಸದ್ಯೋದರ್ಶನಮಾತ್ರತಃ ಖಲುಪುನನ್ತ್ಯೇಕೋಪ್ಯಮುಕ್ತಿಂತ್ವತಃ । ಸತ್ಯಾತ್ಮನ್‌ಶಿವಯೋಗಿವರ್ಯಮುರುಘಸ್ವಾಮಿನ್ಭವಾನ್ಪಾತುಮಾಂ ॥ ೬ ॥

ಯೋಗೀಜ್ಞಾನಹುತಾಶನಾತ್ಪ್ರದಹತಿಪ್ರಾಗಗ್ನಿತತ್ಪೂರವನ್ನಿಶ್ಶೇಷಂಸಕಲಂಚಕರ್ಮನಿಚಯಂ ತಸ್ಮಾತ್ಸದಾನಂದದಃ ॥ ನಾಸ್ತ್ಯೇವತ್ವಯಿಪಾಪಪುಣ್ಯವಿಕೃತಿರ್ಲೇಶೋಪ್ಯತೋಭಾವಯೇ । ಸತ್ಯಾತ್ಮನ್‌ಶಿವಯೋಗಿವರ್ಯಮುರುಘಸ್ವಾಮಿನ್ಭವಾನ್ಪಾತುಮಾಂ ॥ ೭ ॥

ಅಜ್ಞಾರಾಧಿತಪವನಮಿಗುರುಜನೋಪ್ಯಸ್ತ್ಯೈವತದ್ಪಂತಪ್ರೊ । ಅಜ್ಞಾನೋಘಮಿದಂಜನನ್ನ ಫಲಂಶಾಸ್ತ್ರಂಮಯಾಸಾಧಿತಂ ॥ ಭಾಗ್ಯಂತತ್ಕಲಿಕಲ್ಮಷಪ್ರಶಮನಾತ್ತ್ವತ್ಪಾದಸಂದರ್ಶನಾತ್ । ಸತ್ಯಾತ್ಮನ್‌ಶಿವಯೋಗಿವರ್ಯಮುರುಘಸ್ವಾಮಿನ್ಭವಾನ್ಪಾತುಮಾಂ ॥ ೮ ॥

ಆರ್ಯಾ॥ ಪೃಥಿವೀಪ್ರಥಿತಾಥಣಿಸತ್ಕಥನೀಯತಪಃ ಕಥಾವಿತತೇಃ । ಮುರುಘಶಿವಯೋಗಿನೋಷ್ಟಕಮಾಬದ್ಧಂ ಚಂದ್ರಶೇಖರ ಬುಧೇನ ॥ ೯ ॥

ಅವಿಚಾರಧರ್ಮ.

ಮಹನೀಯರೇ:—ನಮ್ಮ ಭರತಖಂಡದಲ್ಲಿ ಅನೇಕ ಧರ್ಮ ಪಂಗಡಗಳಿರುವವು. ಆಯಾಯ ಧರ್ಮ ಪಂಗಡದವರು ತಮ್ಮ ತಮ್ಮ ಧರ್ಮ ಪದ್ಧತಿಯಂತೆ ಧರ್ಮಕೃತಿಗಳನ್ನು ಮಾಡುತ್ತಿರುವರಷ್ಟೆ. ಮತ್ತವರಲ್ಲಿ ಕೆಲ ಪೂರ್ವಜರ ಚರಿತ್ರಸ್ಮರಣಾರ್ಥವಾಗಿ ಹಬ್ಬಗಳೆಂದು ಮಾಡಹತ್ತಿದ್ದು ಈ ಪಾರಂಪರಿಕ ಪದ್ಧತಿಯು ಎಲ್ಲಾಕಡೆ ವಿಶೇಷ ಪ್ರಚಾರದಲ್ಲಿ ಬಂದದ್ದು ಎಷ್ಟೋಂದು ದೇಶದ ನಿಜಧರ್ಮವನ್ನು ನಷ್ಟಮಾಡಿರುವುದೆಂದು ಎಷ್ಟು ಹೇಳಿದರೂ ಸಾಲದಂತಿದೆ. ಆದರೆ ಅದರ ಪೈಕಿ ಒಂದಾದ ಹೋಳಿ ಹುಣಿವೆಯು ಮತ್ತು ಅದರಲ್ಲಿ ಮಾಡುವ ಕೃತಿಯು ವಿಚಾರಮಾಡಿ ನೋಡಿದರೆ ನಿಜವಾದ ಧರ್ಮ ಲೋಪವು ಸಹಜಲಕ್ಷಣದಲ್ಲಿ ಬರುವಂತಿದೆ.

ಈ ಹೋಳಿ ಹುಣಿವೆಯಲ್ಲಿ ಮಾಡುವ ಹೋಳಿಕೋತ್ಸವ ವಿಷಯವಾಗಿ "ನಿರ್ಣಯಸಿಂಧು" "ಧರ್ಮ ಸಿಂಧು" ಇತ್ಯಾದ್ಯನೇಕ ಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವದು. ಪೂರ್ವದಲ್ಲಿ ರಘುರಾಜನು ರಾಜ್ಯವಾಳುತ್ತಿರುವಾಗ ಅವನ ರಾಜ್ಯದಲ್ಲಿ ದೊಡ್ಡವರಿಗೆ ಸೌಖ್ಯವಾಗಿದ್ದು ಬಾಲರಿಗೆಮಾತ್ರ ಬಹು ಬಾಧೆಯುಂಟಾಗಿದ್ದುದರಿಂದ ಆ ಬಾಧೆಯನ್ನು ನಿವಾರಣಮಾಡಿಸಬೇಕೆಂಬಿಚ್ಛೆಯಿಂದ ಕೆಲವು ಜನರು ರಘುರಾಜನಲ್ಲಿಗೆ ಬಂದು ಬಾಧಾಪರಿಹಾರವನ್ನು ಬೇಡಿಕೊಳ್ಳಲಾಗ ರಘುರಾಜನು ವಿಚಾರಿಸಲು, ಢುಂಢಾಯೆಂಬ ರಾಕ್ಷಸಿಯು ಬಾಧೆಯನ್ನುಂಟುಮಾಡುವಳೆಂದು ತಿಳಿದುಬಂದದ್ದರಿಂದ ಆಕೆಯ ಕೂಡ ಯುದ್ಧಮಾಡತೊಡಗಲು ರಘುರಾಜನಿಗೆ ಆಕೆಯು ಸಾಧ್ಯವಾಗದೆ ಯುದ್ಧದರಿಂದ ಹಿಂತಿರುಗಿ ಅರಮನೆಗೆಬಂದು ಗುರುಗಳಾದ ವಸಿಷ್ಠರನ್ನು ಕರೆಸಿ ಉಪಾಯವನ್ನು ಕೇಳಲಾವಸಿಷ್ಠರು, ಈ ರಾಕ್ಷಸಿಯು ತಪಶ್ಚರ್ಯದಿಂದ ಈಶ್ವರನನ್ನೊಲಿಸಿ ಆತನಿಂ, ಮನುಷ್ಯ ಪಶು ಪಕ್ಷ್ಯಾದಿಗಳಿಂದ ತನಗೆ ಮೃತ್ಯುವಾಗಬಾರದೆಂದು ವರವನ್ನು ಪಡೆದಿರುವಳು. ಆದ್ದರಿಂದ ಎಲೈ ರಘು ರಾಜನೆ ಆಕೆಯ ಮರಣವು ಅಸಾಧ್ಯವಾಗಿರುವುದೆಂದು ಹೇಳಲು, ಆಗ ರಘುರಾಜನು ವಿಶೇಷ ಚಿಂತೆಯಿಂದ ಪುನಃ ಗುರುಗಳನ್ನು ಈಕೆಯ ಸಂಹಾರಕ್ಕುಪಾಯ ಮೇನೆಂದು ಕೇಳಲು, ವಸಿಷ್ಠರು ಆಲೋಚಿಸಿ ಬಾಲರಿಂ ಕಳವಿನಿಂ ಕುಳ್ಳು ಕಟ್ಟಿಗೆ ಮೊದಲಾದ ಪದಾರ್ಥಗಳನ್ನು ತರಿಸಿ ಒಟ್ಟಿಸಿ ಚಂಡಾಲರ ಮನೆಯಿಂದ ಬೆಂಕಿಯಂ ತರಿಸಿ ಹಚ್ಚಿಸಿ ಅದರಲ್ಲಿ ಈಕೆಯನ್ನು ಹಾಕಿದರೆ ಸಾಯುತ್ತಾಳೆಂದು ಹೇಳಲು, ಅದೇಪ್ರಕಾರ ರಘುರಾಜನು ಮಾಡಿಸಲು ಸತ್ತುಹೋದ್ದರಿಂದ ಈಕೆಯು ಪುನಃ ಬಾಲಬಾಧಾ ಮಾಡಬಾರದೆಂಬದಾಗಿ ಪ್ರತಿವರ್ಷ ಈ ಕೃತ್ಯವಂ ಮಾಡಬೇಕೆಂದು ಭವಿಷ್ಯತ್ಪುರಾಣದಲ್ಲಿ ಬರೆದಿರುವುದು. ಅದೂಅಲ್ಲದೆ ಈ ದಿವಸ ಮಾಡುವ ಕೃತಿಯು ಧರ್ಮಸಿಂಧು ಗ್ರಂಥದಲ್ಲಿ

ಶ್ಲೋ॥ ಗೀತಾವಾದ್ಯೈಸ್ತಥಾನೃತ್ಯೈ ರಾತ್ರಿಃ ಸಾನೀ
ಯತೇ ಜನೈಃ । ತಮಗ್ನಿಂತ್ರಿಃ ಪರಿಕ್ರಮ್ಯಶ
ಬ್ದೈರ್ಲಿಂಗಭಗಾಂಕಿತೈಃ । ತೇನ ಶಬ್ದೇನ ಸಾ
ಪಾಪಾ ರಾಕ್ಷಸೀತೃಪ್ತಿಮಾಪ್ನುಯಾತ್ । ತಮ
ಗ್ನಿಂತ್ರಿಃ ಪರಿಕ್ರಮ್ಯಗಾಯಂತುಚ ಹಸಂತು
ಚ । ಜಲ್ಪಂತುಸ್ವೇಚ್ಛಯಾ ಲೋಕಾನಿಶ್ಯಂಕಾ
ಯಸ್ಯ ಯನ್ಮತಂ ॥

ಹೋಳಿಕಾದಿವಸ ಆ ರಾಕ್ಷಸಿಯನ್ನು ಸುಟ್ಟ ಅಗ್ನಿಯನ್ನ ಮೂರುಸಾರಿ ಪ್ರದಕ್ಷಿಣೆಮಾಡಿ ನೃತ್ಯ ಗಾಯನವಾದ್ಯಗಳಿಂದಲೂ ಮನಸ್ಸಿಗೆ ಬಂದ ದುಷ್ಟ ಹಾಸ್ಯೋಕ್ತಿಗಳಿಂದಲೂ, ಸ್ವೇಚ್ಛಾಲಾಪಗಳಿಂದಲೂ ಭಯರಹಿತರಾಗಿ ಶಿಶ್ನಯೋನಿ ವಿಶಿಷ್ಟ ಶಬ್ದಗಳುಳ್ಳ ಬೈಗುಳಿಂದ ಆ ರಾತ್ರಿಕಾಲ ಕಳೆಯಲು ಆ ದುಷ್ಟಳಾದ ರಾಕ್ಷಸಿಯು ತೃಪ್ತಿಯನ್ನು ಹೊಂದುವಳು. ಇದು ಅಲ್ಲದೆ, ಧರ್ಮಸಿಂದುಕಾರನು—

ಶ್ಲೋ॥ ಏವಂ ರಾತ್ರೌ ಹೋಲಿಕೋತ್ಸವಂ ಕೃತ್ವಾ
ಪ್ರಾತಃಪ್ರತಿಪದಿಯಃ । ಶ್ವಪಾಕಸ್ವಪಚಂ ದೃ
ಷ್ಟ್ವಾಸ್ನಾನಂ ಕುರ್ಯಾತ್ ನತಸ್ಯ ದುಷ್ಕೃ
ತಿಃ ಕಿಂಚಿತ್ ॥

ಈ ರೀತಿ ರಾತ್ರಿಯಲ್ಲಿ ಮೇಲೆ ಹೇಳಿದ ಕೃತಿಯನ್ನು ಮಾಡಿದ ಮನುಷ್ಯನು ಪ್ರತಿಪದ್ ಪ್ರಾತಃಕಾಲದಲ್ಲಿ ಚಂಡಾಲನನ್ನು ನೋಡಿ ಸ್ನಾನಮಾಡಲು ಅವನಿಗೆ ಸ್ವಲ್ಪಾದರೂ ಪಾಪವು ತಗಲುವುದಿಲ್ಲೆಂದು ಸ್ವಕಪೋಲ ಕಲ್ಪನೆಯ ವಾಕ್ಯವನ್ನು ಬರದಿರುವನು. ಅಯ್ಯಾ ಧರ್ಮ ಬಾಂಧವರೆ! ಯಾವ ಧರ್ಮವಾದರೂ ಇಂಥಾ ಕೃತಿಯನ್ನು ಬೋಧಿಸುವುದೇ? ಯಾವ ಮೂಢ ಮನುಷ್ಯನಾದರೂ ಈ ಕೃತಿಯನ್ನು ಒಪ್ಪುವನೇ? ಅಯ್ಯೋ ಪರಮ ಪೂಜ್ಯರಾದ ಮಾತಾ ಸಹೋದರಿ ಪರಸ್ತ್ರೀಯರ ಸಮ್ಮುಖದಲ್ಲಿ ದುಷ್ಟಶಬ್ದೋಚ್ಚಾರಕ್ಕೆ ಯಾವ ಧರ್ಮವಾದರೂ ಆಸ್ಪದ ಕೊಟ್ಟೀತೇ? ಒಂದುವೇಳೆ ತನ್ನ ಮನಸ್ಸಿನಿಂದ ವಿಚಾರಮಾಡಿ ನೋಡಿದರೆ ಮನಸ್ಸಾದರೂ ಒಡಂಬಟ್ಟೀತೆ?

ಅಯ್ಯಾ ವೇದ ಮನ್ವಾದಿ ಪರಾಶರಾಂತ ಸ್ಮೃತಿಗಳಲ್ಲಿ ಮನುಷ್ಯನು ಎಂದೂ ದುಷ್ಟಶಬ್ದವನ್ನುಚ್ಚರಿಸದೆ ಅಡಿಗಡಿಗೆ ಧರ್ಮವನ್ನು ಪಾಲಿಸುತ್ತಾ ಮುಖ ಮೇಲಕ್ಕೆ ಮಾಡಿ ನಡೆಯುವುದೇ ಅಧರ್ಮವು; ಮುಖ ತಗ್ಗಿಸಿ ನಡೆಯುವುದೇ ಧರ್ಮವು. ಎಂದು ಪ್ರತಿಪಾದಿಸುವ ಧರ್ಮವೆತ್ತ, ಈ ದುಷ್ಟ ಧರ್ಮವನ್ನು ಪ್ರತಿಪಾದಿಸುವ ಗ್ರಂಥಗಳೆತ್ತ. ಆದರೆ ಆರ್ಯರ ಈ ಒಂದು ಶ್ಲೋಕದಿಂದಲೇ ಎಷ್ಟೋಂದು ಸುಕ್ಷ್ಮ ಧರ್ಮಗಳನ್ನು ಅವರು ಬೋಧಿಸಿರುವರೆಂಬುದು ಸ್ಪಷ್ಟವಾಗುತ್ತದೆ.

ಶ್ಲೋ॥ ಮಾತೃವತ್ಪರದಾರಾಂಶ್ಚ ಪರದ್ರವ್ಯಾಣಿಲೋಷ್ಟವತ್।
ಆತ್ಮವತ್ಸರ್ವಭೂತಾನಿ ಯಃಪಶ್ಯತಿಸಪಶ್ಯತಿ ॥

ಮಹನೀಯರೇ, ತನ್ನಂತೆಯೇ ಎರಡನೇ ಪ್ರಾಣಿಗಳನ್ನು ಕಾಣಬೇಕೆಂಬೀ ಮಹರ್ಷಿಗಳ ಧರ್ಮ ಶಾಸ್ತ್ರಕ್ಕೆ ವಿರುದ್ಧವಾದ ಈ ಅಧರ್ಮವನ್ನು ಬೋಧಿಸುವ ಧರ್ಮ ಗ್ರಂಥಗಳಿಗೆ "ಧರ್ಮ ಸಿಂಧು" ವೆನ್ನಬೇಕೋ ಅಥವಾ (ಪಾಪ) ಸಿಂಧುವೆನ್ನಬೇಕೋ "ನಿರ್ಣಯ ಸಿಂಧು" ವೆನ್ನಬೇಕೊ ನರಕ ಸಿಂಧುವೆನ್ನಬೇಕೋ? ಎಂಬುವದನ್ನು ವಾಚಕರೆ ಊಹಿಸಬಹುದು. ಇಂಥ ದುಷ್ಟ ಧರ್ಮಗ್ರಂಥಗಳು ಜಗತ್ತಿನಲ್ಲಿ ಪ್ರಬಲವಾಗಿ ವ್ಯಾಪಿಸಿ ಪೂರ್ವಜರ ನಿಜವಾದ ಧರ್ಮವನ್ನಡಗಿಸಿ ಜನರಂ ದುಷ್ಟಮಾರ್ಗಕ್ಕೆ ಪ್ರವರ್ತಿಸಲುದ್ಯುಕ್ತವಾಗಿರುವುವು. ಇದೂಅಲ್ಲದೆ ಎರಡನೇ ರೂಪದಿಂದ ಕೆಲವು ಗ್ರಂಥಗಳಲ್ಲಿ "ಕಾಮ" ಅವನ ಹೆಂಡತಿಯಾದ "ರತಿ" ಯನ್ನು ಮಾಡಿ ಈ ದಿವಸ ಸುಡಬೇಕೆಂದು ಹೇಳಲ್ಪಟ್ಟಿದೆ ಯೆಂದು ತಿಳಿದು ಕೆಲ ಜನರು ಅದರಂತೆಯೇ ಆಚರಿಸುತ್ತಿರುವರು.

ಈ ರೀತಿ ಯಾವ ಆರ್ಯರ ಗ್ರಂಥಗಳಲ್ಲಿಯೂ ಬರದಿಲ್ಲವೆಂಬುವುದು ನಿಜವಾದರೂ ಒಂದುವೇಳೆ ಯಾವದಾದರೊಂದು ಗ್ರಂಥದಲ್ಲಿ ಬರದಿದೆ ಅಂತ ಹೇಳಿದಾಗ್ಯೂ ಬಾಹ್ಯದಲ್ಲಿ ಒಂದು ಗೊಂಬೆಯನ್ನು ಮಾಡಿ ಸುಡುವುದು ಕಾಮನ ಸುಟ್ಟಂತಲ್ಲ. ಹಾಗೂ ಆರ್ಯರ ಸಮ್ಮತವಾದ ಧರ್ಮದಲ್ಲಿ ಪ್ರಥಮೋಕ್ತಕಾಮ ಅಂದರೇನು? ಇದರ ವಿಚಾರ ಮಾಡುವ— ಕಾಮಂ=ಇಚ್ಛಾ, ಆಶಾ ಅಂತ ಅರ್ಥವಾಗುತ್ತವೆ. ಇನ್ನು ಅವನ ಹೆಂಡತಿಯಾದ ರತಿ=ಪ್ರೀತಿ ಮೊದಲಾದ ಅರ್ಥಗಳಾಗುತ್ತವೆ. ಯಾವುದೋ ಒಂದು ವಸ್ತುವಿನಲ್ಲಿ ಪ್ರೀತಿ ಉತ್ಪನ್ನವಾದರೆ ಇಚ್ಛೆಯೇ ಪ್ರಥಮಕಾರಣವಾಗಿರುವುದು. ಆಶಾ (ಇಚ್ಛೆ) ಇಲ್ಲದವಿನಹಾ ಎಂದೂ ಪ್ರೀತಿಯು ಉತ್ಪನ್ನವಾಗಲಾರದು. ಅಂದಮೇಲೆ ಅವೆರಡಕ್ಕೆ ಪರಸ್ಪರ ಅಭೇದ ಸಂಬಂಧಾನ್ವಯ ಅರ್ಥಾತ್ ಪತಿ ಪತ್ನೀ ಭಾವರೂಪ ಉಂಟೆಂದು ಸಿದ್ಧವಾಗುತ್ತದೆ. ಮನುಷ್ಯನು ದುರ್ಲಭವಾದ ಪರಮಾರ್ಥವನ್ನು ಹೊಂದಬೇಕಾದರೆ ಭವಸಾಗರವನ್ನು ದಾಟಲಿಕ್ಕೆ ಬೇಕು. ಯದ್ಯಪಿ ಸಂಸಾರವು ದುಃಖಕರವಾದಾಗ್ಯೂ ಪ್ರೀತಿಕರವೆಂದು ಭಾವಿಸುವ ಆಶಾಪಾಶವನ್ನು ಸುಡಲಿಕ್ಕೆ ಬೇಕಾಗುವುದು. "ಕಾರಣಾಭಾವಾತ್ ಕಾರ್ಯಾಭಾವಃ" ಎಂಬೀ ವೈಶೇಷಿಕ ದರ್ಶನ ಸೂತ್ರದಂತೆ ಕಾರಣರೂಪವಾದ ದುರಾಶೆಯನ್ನೇ ಸುಟ್ಟಮೇಲೆ ಕಾಮರೂಪವಾದ ಪ್ರೀತಿ (ರತಿ) ಯನ್ನು ಸುಡಬೇಕೆಂಬುವ ಭಾಗವೇ ಉಳಿಯಲಿಲ್ಲ. ಅಂದಮೇಲೆ ಜನನ ಮರಣರೂಪ ದುಃಖವನ್ನು ಕೊಡುತ್ತಿದ್ದ ಮನಸ್ಸನ್ನು ವ್ಯಾಪಿಸಿರುವ ಆಶೆಯನ್ನು ಸುಡುವುದೇ ನಿಜವಾದ ಕಾಮದಹನಧರ್ಮವೆಂಬುವುದು ಸ್ಪಷ್ಟವಾಗುತ್ತದೆ. ಹಾಗೂ ಪತಂಜಲಿ ಋಷಿಗಳ ಯೋಗಸೂತ್ರದಲ್ಲಿಕೂಡ ಈ ವಿಷಯವನ್ನು ಪುಷ್ಟೀಕರಿಸುತ್ತಿರುವುದು. "ಅಭ್ಯಾಸ ವೈರಾಗ್ಯಾಭ್ಯಾಂ ತನ್ನಿರೋಧಃ" ಮನುಷ್ಯನು ಮುಕ್ತನಾಗಬೇಕಾದರೆ ಮನೋನಿಗ್ರಹಾದಿ ಯೋಗಾಂತ ಕಾರಣಗಳಿರುವುವು. ಅದರಲ್ಲಿ ಪ್ರಥಮವಾದ ಮನೋನಿಗ್ರಹಕ್ಕೆ ಅಭ್ಯಾಸ ವೈರಾಗ್ಯ (ಅಕಾಥೇದನ) ಗಳೇ ಕಾರಣಗಳಾಗಿರುವುವು. ಇದೆಲ್ಲಾ ವಿಚಾರಮಾಡಿದರೆ ಆಶಾ ಛೇದನವೇ ಕಾಮ ದಹನವೆಂದು ಸ್ಪಷ್ಟವಾಗುತ್ತದೆ.

ಈಗ ಮಾಡುವ ಈ ದುಷ್ಟ ವ್ಯವಹಾರದಿಂದ ಕೂಡಿದ ಹೋಲಿಕೋತ್ಸವವು ಅನಾರ್ಯರಿಂದ ನಿರ್ಮಿತವಾದ ಅಧರ್ಮವೆಂದು ತಿಳಿದು ಸರ್ವ ಪ್ರಾಜ್ಞರೂ ನಿಜಧರ್ಮ ಶೋಧನೆಗುದ್ಯುಕ್ತರಾದಾರೆಂದು ನಂಬುವೆನು.

ಸುಜ್ಞರೇ! ಈ ಧರ್ಮಸಿಂಧುಕಾರನು ತನ್ನ ಗ್ರಂಥಾಂತರದಲ್ಲಿ ಈ ಕೆಳಗಿನ ಶ್ಲೋಕಗಳನ್ನು ಬರೆದಿರುವನು.

ಶ್ಲೋ॥ ವಿಶಾಮಾಂಶಾ ಧರ್ಮಶಾಸ್ತ್ರಜ್ಞಾಃ ಸುಧಿ
ಯೋಽತ್ರಕೇಲಸಾಬುಧಾಃ॥ ಕೃತಶಾಸ್ತ್ರೇಃ ಪ್ರಾ
ಜ್ಞಬಂಧೈಸ್ತದರ್ಥಂ ನಾಯಮುದ್ಯಮಃ ॥ ಯೆ
ಪುನರ್ಮಂದಮತಯೋಽತ್ರ ಲಸಾಅಜ್ಞಾಶ್ಚನಿ
ರ್ಣಯಂ । ಧರ್ಮೋಪೇಧಿತುಮಿಚ್ಛಂತಿ ರಚಿತ
ಸ್ತದಪೇಕ್ಷಯಾ ॥ ಇತ್ಯಾದಿ.

ಈ ಧರ್ಮಸಿಂಧುವೆಂಬುವ ಗ್ರಂಥವನ್ನು ನಾನು ವಿದ್ವಾಂಸರಸಲುವಾಗಿ ಬರೆಯದೇ ಮೂಢರಾದ ಅವಿವೇಕಿಗಳಿಗೋಸ್ಕರ ಬರದಿರುವೆನೆಂದು ಸ್ಪಷ್ಟವಾಗಿ ಹೇಳುತ್ತಿರುವನು. ಹೀಗಿರುವುದನ್ನು ನೋಡಿಯೂ ಪ್ರಾಜ್ಞರುಕೂಡ ಇದನ್ನು ಅನುಸರಿಸುತ್ತಾರಂದಮೇಲೆ ಅವರು ಪ್ರಾಜ್ಞರೋ, ಅಧರ್ಮಿಗಳೋ, ಅವಿವೇಕಿಗಳೋ ಎಂಬುವುದನ್ನು ಮನುಷ್ಯನು ತನಗೆತಾನೇ ವಿಚಾರಮಾಡಬಹುದು.

ಇನ್ನುಮೇಲಾದರೂ ನಮ್ಮ ದೇಶಬಾಂಧವರು ಇಂಥಾ ದುಷ್ಟ ಗ್ರಂಥಗಳಿಗೆ ವಿಶ್ವಾಸಕೊಡದೆ ನಿಜಧರ್ಮಶೋಧನೆ ತತ್ಪರರಾದಾರೆಂದು ಪುನಃ ಕೋರುವೆನು.

ವಿರೂಪಾಕ್ಷ ವಡಿಸುರ್ ಬ್ರಹ್ಮಚಾರಿ.

ಸುಲಭಕ್ರಯ! ಖಾತರಿಮಾಡಿ !! ಬಿಡಬೇಡಿರಿ!!!

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ॥ ೧ಕ್ಕೆ	೩	ಕಸ್ತೂರಿ ಬಿಲ್ಲೆ ತೊ॥ ೧ಕ್ಕೆ	೨
೨ ಅಂಬರ್‌ಬತ್ತಿ ಸೇ॥ ೧ಕ್ಕೆ	೪	ಜವಾಜಿ ಬಿಲ್ಲೆ ತೊ॥ ೧ಕ್ಕೆ	೧
ಕಸ್ತೂರಿ ಬತ್ತಿ ಸೇ॥ ೧ಕ್ಕೆ	೨॥	ಅರಗಜ ೧ ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೇ॥ ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ॥ ೧ಕ್ಕೆ	।
ಗುಲಾಬ್ ಬತ್ತಿ ಸೇ॥ ೧ಕ್ಕೆ	॥	ಸುರಂಗಿ ಸೆಂಟ್ ಸಿ॥ ೧ಕ್ಕೆ	೧
ನಕ್ಷತ್ರಕಾಂತಿಬ॥ ಸೇ॥ ೧ಕ್ಕೆ	೧	ಸ್ವದೇಶಿ ಫೇ ಪೌ ಡ॥ ೧ಕ್ಕೆ	।

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಉದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರಕುತ್ತೆ ಕ್ಯಾಟ್ಲಾಗ್ ಅಪೇಕ್ಷಿತರು ಕೆಳಗಿನವಿಳಾಸಕ್ಕೆ ಬರೆಯಿರಿ

ಎಂ. ಆರ್. ಸುಬ್ಬಾಚೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೮-೦ರೂ. ಆಗುತ್ತದೆ. ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರೂ. ಕೊಡಬೇಕಾಗುತ್ತೆ. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೭-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ೧೦೦ ಕ್ಕೂ ೦-೮-೦ ಅಣೆ ಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅದನ್ನೇ ಮತ್ತೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದಲ್ಲಿ ೧-೦-೦ ರೂ. ಅನ್ನು ಹೆಚ್ಚಾಗಿ ಕೊಡಬೇಕು. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
[illegible]

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು. ೩

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು. ಮಿಂಚಿನ ಉಂಗುರವು.




ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಷ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರೆಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ್
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

37

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ— ಈ ಎಣ್ಣೆಯನ್ನು ಬೆಳಿಗ್ಗೆ ಮತ್ತೂ ಸಾಕಾಂಯಲ ೧ ತೋಲದಂತೆ ೨೦ ದಿನಗಳವರೆಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಚಿಬ್ಬು, ವ್ರಣ, ಕುಷ್ಠ, ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಅಣೆ.

೩. ಬಾಲಸಂಜೀವಿನೀಮಾತ್ರೆ—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಅಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಅಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೦ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕೆ. ೮ ರೂ. ಟ. ಖ. ೮ ಅಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಅಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನ [illegible] ಅಸ್ತಿಸ್ರಾವ, ಅಸೃಗ್ದರ, ಪಿತ್ಥಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ತಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ. ರೂಪಾಯಿ ೩. ಟಪ್ಪಾಲ್ ಖರ್ಚು ೬ ಆ ಅಣೆ.

೮. ಮರೀಚಾದಿಲೇಹ್ಯ— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್ ಖರ್ಚು ೬ ಅಣೆ.

೯. ಮಹಾಕಂಡಳ್ಯಾದಿರಸಾಯನ— ಇದರಿಂದ ಕ್ಷಯ ಕಾಸ, ಜ್ವರ, ಶ್ವಾಸ, ಪಾಂಡುರೋಗ, ಉನ್ಮಾದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟಲು ಉರಿ ಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಅಣೆ.

೧೧. ಯಳೆವಿನಮಾತ್ರೆ— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೫೦ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ— ಮಕ್ಕಳಿಗೆ ಸೀತದಿಂದ ಪ್ರಾಯಶಃ ಸೀರು ಎಳೆಯುವಾಗ ಜ್ಞಾನ ತಪ್ಪುವುದು ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳಿಗೆ ಈ ಮಾತ್ರೆಯನ್ನು ನಾಗದಾಳಿಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದ ಔಷಧಗಳೂ [illegible] ದೊರೆಯುತ್ತವೆ. ವಿಳಾಸ—

[illegible] ಚೆನ್ನಬಸವಪ್ಪ [illegible]
[illegible]

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೋಪ್‌ಸಿಸ್ಟಂ ಪೇಟಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. [illegible]-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜವೆಲ್ಡ್‌ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಪೋಲೋ ಸಿಲ್ವರ್ ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಉಚ್ಚಿಗೆ ಬಹುಮಾನವಾಗಿ ಕಳುಹಿಸುವೆವು. ಟಪಾಲ್ ಛಾರ್ಜು ಇನಾಮು.

ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಂಡರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

ಉತ್ತಮ ಗ್ರಂಥಗಳು.

12

ಶಿವ[illegible]:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ [illegible] ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

[illegible]ಸೂತ್ರಂ.—ಬೆಲೆ ವಿ.ಪಿ. ಯಿಂದ ೪ [illegible] ಪಂಗಸುಪರವಾದ ಕನ್ನಡಟೀಕಾ ಸಮೇತವಾಗಿದೆ.

[illegible] ಸ್ವಾಮಿಗಳವ್ರು [illegible]

ಜರ್ಮಾ ಸಾಮ್ರಾಜ್ಯ.

7

ಕನ್ನಡದಲ್ಲಿ ಇದುವರೆಗೂ ಇಂತಹ ಪುಸ್ತಕವಿರಲಿಲ್ಲ. ಜರ್ಮನಿನ ವಿಷಯದಲ್ಲಿ ಎಲ್ಲವನ್ನೂ ವಿಶದವಾಗಿ ತಿಳಿಸುತ್ತದೆ. ಆಶ್ಚರ್ಯಕರವಾದ ಸಂಗತಿಗಳು, ಪ್ರತಿಯೊಬ್ಬರೂ ಓದಬೇಕಾದದ್ದು. ಮೇಲಾದಕಾಗದ. ಅಂದವಾದ ಮುದ್ರಣ ಬೆಲೆ ೬ ಆಣೆ. ಕಿಂಡರ್ ಗಾರ್ಡನ್ ಕಥೆಗಳು ಸ್ಕೂಲ್ಮಾಸ್ಟರುಗಳಿಗೆ ಆವಶ್ಯಕವಾದದ್ದು ೧೦ ಆಣೆ. ಉನ್ಮತ್ತಿ—ಬಂಗಾಳಾದೇಶದ ಸ್ತ್ರೀಯಚರಿತ್ರೆ ೨॥ ಆಣೆ.

ದೊರೆಯುವಸ್ಥಳ—ಜಿ. ಕೃಷ್ಣಶಾಸ್ತ್ರಿ, ಆ॥ ಸೆ॥ ನಾರ್ಮಲ್‌ಸ್ಕೂಲ್ ಮೈಸೂರ್. ಮತ್ತು ಜನರಲ್‌ಏಜನ್ಸಿ
ಮೈಸೂರು.

ಉತ್ತಮ ಗ್ರಂಥಗಳು.

117

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೨-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦.— ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ —೦.೧-೨-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೦ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ,
ಮೈಸೂರು.

ಊದಬತ್ತಿಗಳು.

8

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೦-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಜಲ್ಲಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೦ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

೧೯೧೧ನೇ ಇಸವಿ ಮೇ ತಾ॥ ೧ ರಿಂದ ೧೯೧೧ನೇ ಮೇ ತಾ॥ ೭ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ನೇ ವಿರೋಧಿಕೃತು ಸಂವತ್ಸರದ ವೈಶಾಖ ಶು॥ ತದಿಗೆಯಿಂದ ವೈಶಾಖ ಬ॥ ನವಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
1	ಸೋ	ತ	37-34	ರೋ	36-13	19
2	ಮಂಗ	ಚೌ	31-39	ಮೃ	32-0	20
3	[1]ಬುಧ	ಪಂ	25-19	ದ್ರಾ	27-55	21
4	ಗುರು	ಷ	19-44	ಪುನ	24-17	22
5	[2]ಶುಕ್ರ	ಸ	14-54	ಪುಷ್ಯ	21-8	23
6	ಶನಿ	ಅ	10-13	ಶ್ಲೇ	18-45	24
7	ಭಾನು	ನ	6-52	ಮ	17-14	25

(1) ಸಾಲಿಗ್ರಾಮದಲ್ಲಿ ನರಸಿಂಹಸ್ವಾಮಿರಥ, ಶ್ರೀರಂಗದಲ್ಲಿ ಕೋದಂಡತಿರುನಾಳ್ ಉತ್ಸವಾರಂಭ. (2) ಶ್ರೀರಂಗನಾಥಸ್ವಾಮಿ[illegible]ಂತಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 134

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶ್ವರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನಸ್ವಹೃತ್ತಮೋಹರಾಜಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪರಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಮೇ ತಾರೀಖು ೮ ನೇ ಸೋಮವಾರ. [ಸಂಚಿಕೆ ೧೯

ಭಾಷ್ಯದ ವೆಂಕಟಾಚಲ ಪಂಡಿತರಸಿದ್ಧೌಷಧಗಳು.

5

ಲೋಕೋಪಕಾರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಕಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪ್ರೊಸಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೆಂಪು, ಹಲ್ಲುಗಳ ಪಾಚಿ, ಇಗುರೊಡೆದು ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುವ್ವೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಕೊಗಳಿಕೆಯುಳ್ಳ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಸ್ತಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೪. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ [illegible] ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡ[illegible]ಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-[illegible]-೦.
೨ ರಿಂದ ೪ ರವರೆಗೆ [illegible]-೦.
[illegible] ಪ್ರತಿನಾಲ್ಕುಪತ್ರಿಕೆಗೂ [illegible] ಯಂತೆ.

ಪ್ರಕಟನೆಯ ದರ.

ಕಾಲಾ ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೨ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ರ [illegible] ಕೊಡಬೇಕು. [illegible]

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

50 ಗುಣವಾಗದಿದ್ದರೆ ಹಣಪರತ.

ಮದನೋದ್ಭವ ಗು[illegible].

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿ[illegible]ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ (ಗರ್ಭ ಟಾನಿಕ್) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬೊಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವವು. ಇಪ್ಪತ್ತು ೨೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ. ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳುಹಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ [illegible] ಕಳುಹುವೆವು.

ವಿಳಾಸ—
ವೈದ್ಯ. ಜಿ. ಎಸ್. ಜೋಶಿ ಮತ್ತು [illegible]
[illegible] ಬಿಜಾಪುರ, [illegible]

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ಪಾಂಡೆನ್ಸ್	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ

39 ಮೈಸೂರು.

ಗೋರೋಚನ ಮಾತ್ರೆ— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೬೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೩-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರದಮಾತ್ರೆ— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ— ಮೋಹಜಾಡ್ಯಗಳಲ್ಲಿ ಬಹುಳ ಖ್ಯಾತಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೩-೦.

ಮಲಶೋಧನ ವಟಿಕ[illegible] ಮಾತ್ರೆ ಮಲಗುವಾಗ [illegible] ಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ— [illegible] ಸಕಲಕ್ಕೂ. ೩೦೦ ಮಾತ್ರೆ ಸೀಸೆ ೦-೩-೦.

ಕುರುಚು ಸಂಜೀವಿನಿ— ೩೨ ಮಾತ್ರೆ ಸೀಸೆ [illegible].

ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-[illegible].

ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ— ೫೦ ಮಾತ್ರೆ ಸೀಸೆ [illegible].

ದಂತಶುದ್ಧಿ ಚೂರ್ಣ— ಡಬ್ಬಿ ೧ ಕ್ಕೆ ೦-[illegible].

ನಮ್ಮಲ್ಲಿ [illegible] ಔಷಧಿಗಳೇ ಅಲ್ಲದೆ ಎಲ್ಲಾ [illegible] ಇಂಗ್ಲೀಷು ಔಷಧಿಗಳು [illegible]

ಸೌಗಂಧಿಕಾಪರಿಣಯ

(ಕಳೆದವಾರದಶೇಷ.)

ನಾವು ನಮ್ಮ ಸೇನೆಗೆ ತೆರಳುವುದಕ್ಕೆ ಉಪಯುಕ್ತವಾದ ಗಜವಂ ತಂದು ಕೊಡುವಂತೆ ನಿನ್ನ ಭಟರಿಗೆ ಅಜ್ಞಾಪಿಸೆಂದು ಹೇಳಲಾಮಾತಿಗೆ ಉಗ್ರಬಾಹುವು ಪ್ರತ್ಯುತ್ತರವಂ ಕೊಡದೆ ಸುಮ್ಮನೆ ಯಿರಲು, ಸುಗಂಧರಾಜೇಂದ್ರನು—ಎಲೈ ರಾಕ್ಷಸಾಧಿಪತಿಯೆ! ನಮ್ಮ ಮಂತ್ರಿಯು ಹೇಳಿದ ಮಾತಿಗೆ ಉತ್ತರವಂ ಕೊಡದೆ ನಮಗೆ ಅದಿರ್ದರ್ಥವನ್ನ ನಡಿಸದೆ ಸುಮ್ಮನೆ ಯಿರುವ ಪರಿಯೇನು? ಉದಾಸೀನತ್ವವೋ, ಅಲ್ಲದೆ ಅಪಲಾಪ ಬುದ್ಧಿಯೋ? ಎಂದು ಕೇಳುತ್ತಿರುವಾಗ ಉಗ್ರಬಾಹುವು—ತಾಳ್ಳೆ ನೃಪತಿಯೆ! ಎರಡುಮೂರು ದಿವಸದಲ್ಲಿ ಹೇಳುವೆವು ಎಂದು ಹೇಳಲಾಗ, ಸುಮತಿಯು—ಎಲೈ ರಾಕ್ಷಸೇಶ್ವರನೆ! ನಮಗೆ ಪ್ರಯಾಣ ತ್ವರ್ಯವಾದ್ದರಿಂದ ಬದಲುತ್ತರವಂ ಹೇಳದೆ ಗಜವಂ ತಂದು ನಿಲ್ಲಿಸುವಂತೆ ಭಟರಿಗೆ ನೇಮಿಸುವವನಾಗು ಎನಲಾಮಾತಿಗೆ, ಉಗ್ರಬಾಹುವಿನ ಪುತ್ರನಾದ ಬಭ್ರುವೆಂಬ ರಾಕ್ಷಸನು ಎದ್ದು ಎಲೈ ನೃಪಮಂತ್ರಿಯೆ! ರಾಕ್ಷಸಕುಲ ಚಕ್ರವರ್ತಿಗಳಾದ ಪ್ರಭುಗಳಂ ಮನುಷ್ಯರಂ ಕಂಡಂತೆ ಹಲವುಪರಿ ಮಾತನಾಡುವೆ? ರಾಜಸಭೆಯಲ್ಲದೆ ಮತ್ತೊಂದೆಡೆಯಲ್ಲಾದರೆ, ನಿನ್ನ ನಾಲಿಗೆಯಂ ಕೊಯಿಸಿ ಕಳುಹಿಸಿರುವೆನೆಂದು ಹೇಳಲು, ಸುಮತಿಯು—ಎಲೈ ರಾಕ್ಷಸ ಪುತ್ರನೆ! ನೀನು ಹೇಳಿದ ಮಾತು ಸಾಗದಿದ್ದರೂ ಮನಬಂದಂತೆ ಹರಟದರೆ, ನಿನ್ನ ಶಿರವು ಉಳಿಯಲಾರದೆಂದು ನುಡಿದು, ಎಲೈ ಉಗ್ರಬಾಹುವೆ! ಗಜವಂ ತಂದುಕೊಟ್ಟಲ್ಲದೆ ಇಲ್ಲಿಂದ ಏಳುವುದಕ್ಕೆ ನಮ್ಮ ರಾಯನ ಅಪ್ಪಣೆ ಯಿಲ್ಲವೆಂದು ಹೇಳಲು, ಆ ಮಾತಿಗೆ ಉಗ್ರಬಾಹುವು ಕೋಪಗೊಂಡು, ಕಣ್ಣುಗಳಂ ಕೆಂಪುಮಾಡಿಕೊಂಡು ಮೀಸೆಯಂ ಘರ್ರನೆ ತಿರುಗಿಸುತ, ಸೌಮ್ಯರೂಪವಂ ಮರೆಮಾಡಿ, ತನ್ನ ಸಹಜರೂಪವಂ ತಾಳಿ, ತುಟಿಯಂ ನಾಲಿಗೆಯಿಂ ಸವರುತಿರಲು, ಅವನನ್ನೋಡಿ ಬಭ್ರುವೆಂಬ ಕುಮಾರನು, ಎಲೈ ಮನುಷ್ಯ ಮಂತ್ರಿಯೆ! ಸ್ವಬಲ ಪರಬಲವನ್ನರಿಯದೆ ಸೊಕ್ಕಿದ ಶ್ವಾಪದಂತೆ ಬೊಗಳುವೆ. ನಿನ್ನಂ ಶಕಲವಂಗೈದು ಭಕ್ಷಿಸುವೆನೆಂದು ಖಡ್ಗವಂ ಪಿಡಿದು ಝಳಪಿಸುತಲಿರಲದಂ ಕಂಡು, ನೃಪತಿಯು ಈ ಕುಮಾರನಂ ಸಂಹರಿಸಿ ರಾಕ್ಷಸಾಧಿಪತಿಗೆ ಕೋಪ ವುಂಟಾಗುವಂತೆ ಮಾಡದಿದ್ದರೆ, ಗಜವಂ ಕೊಟ್ಟು ಸಂಧಿಗಾದರೂ ಪ್ರಾರ್ಥಿಸಿ ಬರುವನು. ಅದಕ್ಕೆ ನಾವು ಒಡಂಬಡಬೇಕಾಗುತ್ತದೆ. ಅದರಿಂ, ರಾಕ್ಷಸರೆಲ್ಲರೂ ಹತರಾಗದೆ ಎಂದಿನಂತೆ ಧರ್ಮವು ಉತ್ಪನ್ನವಾಗುವುದು. ಆದುದರಿಂದ ಈಗಲೇ ಈ ಹುಡುಗನಂ ಸಂಹರಿಸಬೇಕೆಂದು ನಿಶ್ಚೈಸಿ, ಕೋಪದಿಂ ಕೋಶದಿಂದ ಕತ್ತಿಯಂ ಕಿತ್ತು, ಎಲೈ ರಾಕ್ಷಸಕುಮಾರನೆ! ನಮ್ಮಿರ್ವರಂ ಭಕ್ಷಿಸುವಪರಿ ಎಂತೆಂದು ಪ್ರಹರಿಸಿದಮಾತ್ರದಿಂದಲವನು ಎರಡುತುಂಡಾಗಿ ಸಭೆಯ ಹವಳದ ಸ್ತಂಭವೂಕೂಡ ತುಂಡುತುಂಡಾಗಲು, ಅದನ್ನೋಡಿ ಸುಮತಿಯು, ತನ್ನ ಕೈ ಖಡ್ಗದಿಂದ ರಾಕ್ಷಸಾಧಿಪತಿಯು ಆಯುಧವಂ ಪಿಡಿದಿರುವ ರಾಕ್ಷಸರ ಬಾಹುವಂ ಕತ್ತರಿಸಿ ಒಬ್ಬರಿಗೂ ತಿಳಿಯದಂತೆ ಅತಿ ಜಾಗ್ರತೆಯಿಂದ ಅವರ ಬಳಿಯಲ್ಲಿದ್ದ ಪೀಟವಂ ತೆಗೆದು ತಮ್ಮ ರಾಯನ ಕೈಯಲ್ಲಿ ಕೊಟ್ಟು ಬಿದ್ದಿದ್ದ ಬಭ್ರುಕುಮಾರನ ಪೀಟವಂ ತಾನು ತೆಗೆದುಕೊಳ್ಳಲು, ಬಳಿಕ ನೃಪಮಂತ್ರಿಗಳೀರ್ವರೂ ಸುತ್ತಮುತ್ತಲಿರುವ ರಾಕ್ಷಸರಂ ಖಡ್ಗದಿಂ ಪ್ರಹರಿಸುತ್ತಿರಲು, ಅದಂ ಕಂಡು ಉಗ್ರಬಾಹುವು ಖಡ್ಗವಂ ತೆಗೆದುಕೊಂಡು ರಭಸದಿಂ ಬರುತ್ತಿರಲು, ಆಗ ರಾಜ ಸಭೆಯಲ್ಲಿದ್ದ ಶೂರರಾದ ರಾಕ್ಷಸಭಟರು ನೃಪಮಂತ್ರಿಗಳಂ ಸುತ್ತಿಕೊಂಡು ಮೇಲೆ ಬಿದ್ದು ಆಯುಧಗಳಂ ಪ್ರಹರಿಸುತ್ತಿರಲು, ಆ ನೃಪ ಮಂತ್ರಿಗಳು ಅವರ ಆಯುಧಗಳಂ ಪೇಟ್ಯಗಳಂ ತಡೆಯುತ ಒಂದೊಂದು ಪೆಟ್ಟಿಗೆ ಇಬ್ಬರುಮೂವರು ರಾಕ್ಷಸರಶಿರಗಳನ್ನಿಳುಹುತ, ಹಾರಿ ಕುಪ್ಪಳಿಸುತ, ನಿಂತಲ್ಲಿ ನಿಲ್ಲದೆ ಕುಲಾಲಚಕ್ರದಂತೆ ತಿರುಗುತ್ತಲಿರುವುದರಿಂ ಆ ಸಭೆಯಲ್ಲಿ ಎಲ್ಲಿ ನೋಡಿದರೂ ನೃಪಮಂತ್ರಿಗಳ ಮಯವಾಗಿರುವಂತೆ ಕಾಣಿಸುತ್ತಿರಲಾಗ, ರಾಕ್ಷಸ ಭಟರುಗಳು ಅತಿ ಕುಪಿತರಾಗಿ ತಮ್ಮಗಳಮೇಲೆ ಭಲ್ಯ, ಪರಶು, ಶೂಲ, ಕುಂತ, ತೋಮರ, ಗಧೆಗಳಂ ಎಸೆಯುತ ಮೇಲೆ ಕವಿದುಬರುವುದಂ ಕಂಡು, ಶುಷ್ಕಪರ್ಣರಾಶಿಯಲ್ಲಿ ಪ್ರವೇಶಿಸಿದ ಸುಂಟರಗಾಳಿಯಂತೆ ರಾಕ್ಷಸ ಸಂಘದೊಳ್ಪೊಕ್ಕು ಶಿರಗಳನ್ನೀಡಾಡುತ, ಪೇಟಗಳಿಂದವರ ಪ್ರಹಾರಗಳಂ ತಡೆಯುತ, ಖಡ್ಗಗಳಂ ಅತಿ ವೇಗದಿಂ ಪ್ರಯೋಗಿಸಿ, ರಾಕ್ಷಸರ ಶರೀರಂಗಳಂ ಛಿನ್ನಾಭಿನ್ನವಾಗಿ ಛೇದಿಸುತ್ತಿರಲು, ಆ ಖಡ್ಗಪ್ರಭೆಯಿಂದ ಕೆಲವು ಕಾಲ ಕೋಟಿ ಮಿಂಚುಗಳು ಏಕವಾಗಿ ಉದಯಿಸಿದಂತೆ, ಸಭೆಯೆಲ್ಲವೂ ಪ್ರಕಾಶಿಸುತ್ತಿರಲು, ಮತ್ತೆ ಕೆಲವು ಹೊತ್ತಿನ ಮೇಲೆ ಮುತ್ತುಗದ ಹುವ್ವಿನ ಮೊತ್ತಗಳಂತೆ ರಾಕ್ಷಸರ ಅವಯವಗಳಿಂದುದುರುತಲಿರುವ ಮಾಂಸಖಂಡಗಳಂ ಹರಹಿ ರೌದ್ರವಾಗಿ ಕಾಣಿಸುತ, ಮರಳಿ ನೋಡಿದರೆ ಶತಸಹಸ್ರ ಬಂಡೆಗಳಿಂತೆಳಚುವ ಓಕಳಿಯ ವರ್ಷಗಳಿಂತಲೋ ಎಂಬಂತೆ ರಕ್ತಧಾರೆಗಳಿಂದ ಸಂಧ್ಯಾಸಮಯದಂತೆ ಕಾಣಿಸುತ್ತಿರುವ ಆ ಸಭೆಗೆ ಜಾರಿ ನೆಗೆಯುತ, ಹಲ್ಲು ಮಸೆದು ಸಿಂಹನಾದವಂ ಮಾಡುತ, ರಾಕ್ಷಸ ಸಂಘವು ಬಂದುದಲ್ಲದೆ ಮರಳಿ ಹಿಂದಕ್ಕೆ ಹೋಗುವುದೆಂಬುದಿಲ್ಲದೆ ನಷ್ಟವಾಗುತ್ತಿರಲು, ಮತ್ತು ಆ ಸಭೆಯು ಸ್ತಂಭವಂ ಛೇದಿಸಿ ಘುಡಿಘುಡಿಸುತ ರಾಕ್ಷಸರ ತಂಡಗಳಂ ಸಂಹರಿಸುವ ನರಸಿಂಹಮೂರ್ತಿಯುಗ್ಮದಿಂದುಗ್ರವಾದ ಹಿರಣ್ಯಕಶಿಪುವಿನ ಅಪೂರ್ವ ಸಭೆಯಂತೆ ತೋರುತ್ತಿರಲು, ಮತ್ತು ಇವರೀರ್ವರೂ ಕುಳಿತು ಬಂದ ರಥವಂ ಹಿಂತಿರುಗಿ ತೆಗೆದುಕೊಂಡು ಹೋಗುವುದಕ್ಕೆ ರಾಕ್ಷಸರು ಯತ್ನವಂ ಮಾಡಿ ದಾವಾಗ್ನಿಜ್ವಾಲೆಗೆ ಯೆರಗಿದ ಪತಂಗಗಳಂತೆ, ರಥವಂ ರಕ್ಷಿಸುವ ಅಸ್ತ್ರಜ್ವಾಲಾಕದಂಬದಿಂ ಸುಡುತ ಶರೀರಗಳು ಸೀದುಹೋಗುತ, ರಥದ ಸಮೀಪವಂ ಸೇರಲಾರದೆ ಪಲಾಯನಂ ಗೈಯುತ್ತಿರಲು, ಮತ್ತೆ ಕೆಲಂಬರು ಅದೃಶ್ಯರಾಗಿ ಛಾಯಾಗುಪ್ತನು ಪ್ರಹರಿಸುವ ರಭಸದಿಂ ಯದವೆಡೆಗು ರಕ್ತವಂ ಕಾರುತ ಮೂರ್ಛಿತರಾಗಿ ಬಿದ್ದು ಹೊರಳಾಡುತ್ತಿರಲು, ಆಗ ಆ ಪುರವೆಲ್ಲವೂ ಛಾಬರಿಯಾಗಿ ಗುರುಗುಟ್ಟಿ ಗುಂಪುಗೂಡುತ ಹಾಗೆ ಬೆದರಿ ಓಡುತ ಮೂಲಾನುಮೂಲವಂ ಅರಿಯದೆ ಮನಬಂದಂತೆ ಮಾತನಾಡುತ್ತಿರುವ ರಾಕ್ಷಸರ ತಂಡಗಳಂ, ಆಭರಣಗಳಂ ಮರೆಮಾಡಿ ಬೆಬ್ಬಾಳೆಗಳಂ ಹುಯ್ಯುತ ಬಾಲಕರುಗಳಂ ಬೀದಿಗೆ ಬಿಡದೆ ಬಾಗಿಲುಗಳಂ ಬಂಧಿಸುತ, ಓಡಾಡುತ್ತಿರುವ ಸ್ತ್ರೀರುಗಳಂ, ಅವರುಗಳಂ ಸಂತೈಸುತ್ತಿರುವ ವೀರ ಭಟರುಗಳಂ ಕಂಡು ವ್ಯಾಕುಲವಾಗುತ್ತಿರಲು, ಅದನ್ನೋಡಿ ಉಗ್ರಬಾಹುವು ಕೆಲವುಕಾಲ ರಾಜಮಂತ್ರಿಗಳೊಡನೆ ಖಡ್ಗಯುದ್ಧವಂಮಾಡಿ, ಬಳಿಕ ಖಡ್ಗಯುದ್ಧದಿಂದಿವರೀರ್ವರೂ ಸಾಧ್ಯರಾಗರೆಂದು ಭಲ್ಯವಂ ಪಿಡಿದು ಮೇಲ್ವರಿದು ಬರುತ್ತಿರಲದಂ ಕಂಡು ನೃಪತಿಯು ಹಾರಿ ಖಡ್ಗದಿಂದವನ ಭಲ್ಯವಂ ಇಕ್ಕಡಿಯಾಗಿ ಖಂಡಿಸಿ ತ್ವರಿತದಿಂ ಸುಮತಿಯೊಡಗೂಡಿ ರಥವನ್ನೇರಲಾಗ, ಸುಮತಿಯು ಸಾರಥಿಯಂತೆ ಮುಂದೆ ಕುಳಿತು ತುರಗಗಳಂ ಬೈದಡವುತ್ತಿರಲಾಗ, ಸುಗಂಧರಾಜೇಂದ್ರನು ರಾಕ್ಷಸರ ರಕ್ತಗಳಂ ನೆನದಿರುವ ವಸ್ತ್ರವಂ ಬದಲುಮಾಡಿ, ದಿವ್ಯ ಕವಚವಂ ತೊಟ್ಟು, ಛಾಯಾಗುಪ್ತನ ವಶದಲ್ಲಿದ್ದ ಧನುವಂ, ಬತ್ತಳಿಕೆಗಳಂ ಕೂಡ ತೆಗೆದುಕೊಂಡು, ಧನುಸ್ಸಿಗೆ ಹೆದೆಯಂ ಕಟ್ಟಿ ಜ್ಯಾಘಾತವಂ ಮಾಡುತ್ತಿರಲಾಗ ಅದರಿಂದುಂಟಾದ ಟೇಂಕಾರಧ್ವನಿಯು ದಿಕ್ತಟಗಳಂ ವ್ಯಾಪಿಸುತ, ರಾಕ್ಷಸರ ಹೃದಯಗಳಂ ತಲ್ಲಣಗೊಳಿಸುತ, ಭೂಭಾಗವಂ ಗಡಗಡನೆ ನಡಗಿಸುತ್ತಿರಲು, ಆ ಮಹಾ ಧ್ವನಿಗೆ ಬೆದರಿದ ತುರಗಗಳು ಕಡಿವಾಣಗಳಂ ಹರಿದುಕೊಂಡು ಮೇಲೆ ಕುಳಿತಿರುವ ರಾವುತರಂ ಕೆಡಹಿ ಕಾಲುಗಳಂ ತುಳಿಯುತ ದಿಕ್ಕುದಿಕ್ಕುಗಳಿಗೆ ಓಡಾಡುತ್ತಿರಲು, ಸಶೇಷ.

ವ್ಯವಸಾಯಕ ವಿಷಯಗಳು.

ಸುಟ್ಟ ಸುಣ್ಣಕಲ್ಲಿಗೆ ನೀರು ಹಾಕಿ ಅರಳಿಸದೆ ಚೆನ್ನಾಗಿ ಕುಟ್ಟಿ ಪುಡಿಮಾಡಿ, ಎಕರೆಗೆ ೧೮ ಮಣ ಪುಡಿಯಂತೆ ಸಾಯಂಕಾಲದಲ್ಲಿ ರಾಗಿಯನ್ನು ಬಿತ್ತುವಂತೆ ಎರಚಿ, ಮರುದಿನ ಬೆಳಗ್ಗೆ ಜಮೀನನ್ನು ಚೆನ್ನಾಗಿ ಉತ್ತರೆ, ಕಂಬಳಿ ಹುಳಗಳೆಲ್ಲವೂ ನಾಶವಾಗುವುವು. ಸುಣ್ಣದ ಪುಡಿಯಿಂದ ಭೂಮಿಯು ಅರಳಿ ಒಳ್ಳೇ ಫಲಸಾದ ಬೆಳೆಯಾಗುವುದೇಹೊರ್ತು ಜಮೀನಿಗಾಗಲಿ ಅಥವಾ ಪೈರಿಗಾಗಲಿ ಯಾವ ವಿಧವಾದ ಕೇಡೂ ಸಂಭವಿಸುವುದಿಲ್ಲ.

ಕಬ್ಬನ್ನು ಬೆಳೆಯಲು ಬಹಳ ಖರ್ಚು ತಗಲುವುದು. ಇದು ಸಸ್ಯಾಹಾರವನ್ನು ವಿಶೇಷವಾಗಿ ಸೇವಿಸುವುದರಿಂದ ಗೊಬ್ಬರವನ್ನು ಹಿಡಿತವಿಲ್ಲದೆ ಧಾರಾಳವಾಗಿ ಹಾಕಬೇಕಾಗುವುದು. ಕಬ್ಬನ್ನು ಬೆಳೆಯುವವರಲ್ಲಿ ಬಹಳ ಅನುಭವದಾರರಾದ ರೈತರು ಗೊಬ್ಬರಕ್ಕಾಗಿ ಹರಳಿನ ಮತ್ತು ನೆಲಗಡಲೆಯ ಕಾಯಿನ ಹಿಂಡಿಯನ್ನು ಕೊಂಡುಕೊಳ್ಳಲು ಎಕರೆಗೆ ೫೦ ರೂ. ಮೊದಲ್ಗೊಂಡು ೭೦ ರೂ. ಗಳ ವರಿವಿಗೂ ಖರ್ಚು ಮಾಡುವರು. ಕಬ್ಬಿನ ಬೆಳೆಗೆ ಬಹಳ ಎಚ್ಚರಿಕೆಯಿಂದ ನೀರನ್ನು ಹಾಯಿಸಿ ನೀರೆಲ್ಲವೂ ಬಸಿದು ಹೋಗುವಂತೆ ಮಾಡುವುದು ಅತ್ಯವಶ್ಯಕ. ಅನೇಕ ರೈತರುಗಳು ನೀರು ಹಾಯಿಸುವ ವಿಷಯದಲ್ಲಿ ತಕ್ಕಷ್ಟು ಜಾಗರೂಕರಾಗಿರುವುದಿಲ್ಲವಾದ ಕಾರಣ, ಅವರ ಜಮೀನಿನಲ್ಲಿರತಕ್ಕ ಪೈರೆಲ್ಲವೂ ಹಳದಿಯಾಗಿ ರೋಗ ತಗಲಿದಂತೆ ಕಾಣುವುವು. ಸಾಮಾನ್ಯವಾಗಿ ಇಂಥಾ ಜಮೀನುಗಳಿಗೆ ಮನಸ್ವೀ ನೀರನ್ನು ಹಾಯಿಸಿ ಅದು ಬಸಿದುಹೋಗಲು ತಕ್ಕ ಏರ್ಪಾಡುಗಳನ್ನು ಮಾಡದೇ ಇರುವದು ಎಲ್ಲರಿಗೂ ಗೊತ್ತಾಗುತ್ತದೆ. ಹೀಗೆ ಜಬ್ಬಾಗಿ ನೀರು ಹಾಯಿಸಿದಲ್ಲಿ ಕಬ್ಬಿನ ಬೇರೆಲ್ಲವೂ ಭೂಮಿಯ ಮೇಲ್ಭಾಗಕ್ಕೆ ಬರುವುದರಿಂದ ಪೈರಿಗೆ ಆಹಾರವು ಕಡಿಮೆಯಾಗುವುದು. ಅಲ್ಲದೆ ಮಿತವಾಗಿ ನೀರನ್ನು ಹಾಯಿಸಿದರೆ, ಬೇರು ಭೂಮಿಗೆ ಆಳವಾಗಿ ಇಳಿದು, ಬೇಕಾದಷ್ಟು ಸಸ್ಯಾಹಾರವನ್ನು ಸೇವಿಸಿ ಪೈರು ಬಹಳ ಜೋರುವಾಗಿ ಬೆಳೆಯುವುದು. ಮುಖ್ಯವಾಗಿ ಕಬ್ಬಿನ ಫಸಲಿನಲ್ಲಿ ಹೆಚ್ಚು ಅದಾಯ ಬರಬೇಕಾದರೆ, ಪೈರಿಗೆ ಧಾರಾಳವಾಗಿ ಗೊಬ್ಬರವನ್ನು ಹಾಕಿ, ನೀರು ಬಸಿದುಹೋಗಲು ತಕ್ಕ ಏರ್ಪಾಡುಗಳನ್ನು ಮಾಡಿ, ಮಿತವಾಗಿ ನೀರು ಹಾಯಿಸುವುದು ಅವಶ್ಯಕ.

ಇಪ್ಪೆ ಹುವ್ವಿನ ಪ್ರಯೋಜನಗಳು

ಇಪ್ಪೆ ಹುವ್ವುಗಳಿಂದ ಮೂರುವಿಧವಾದ ಪ್ರಯೋಜನಗಳಿವೆ. ಅವು ಯಾವುವೆಂದರೆ:—

೧. ಈ ಹುವ್ವುಗಳಿಂದ ಸಕ್ಕರೆಯನ್ನು ತಯಾರುಮಾಡಬಹುದು. "ಅಲೆಯಿಲ್ಲದ ಊರಿಗೆ ಹಿಪ್ಪೇಹುವ್ವೇ ಸಕ್ಕರೆ" ಎಂಬ ಗಾದೆಯು ಬಹಳ ವಾಡಿಕೆಯಲ್ಲಿದೆ. ಅಂದರೆ ಹಿಪ್ಪೇಹುವ್ವಿನಿಂದ ಸಕ್ಕರೆಯನ್ನು ತಯಾರುಮಾಡಬಹುದೆಂಬವುದೇ ಇದಕ್ಕೆ ಅರ್ಥವೆಂದು ಹೇಳಬಹುದು. ಈ ಹುವ್ವುಗಳನ್ನು ಕೂಡಿಸಿ ಅವುಗಳ ರಸವನ್ನು ಚೆನ್ನಾಗಿ ಕಾಯಿಸಿದರೆ ಸಕ್ಕರೆ ಆಗುವುದು. ಈ ಸಕ್ಕರೆಯನ್ನು ಶುದ್ಧಿಮಾಡಿ ಬಿಳೀ ಸಕ್ಕರೆಯನ್ನೂ ಮತ್ತು ಕಲ್ಲುಸಕ್ಕರೆಯನ್ನೂ ತಯಾರುಮಾಡಬಹುದು. ಇಂಥಾ ಕಲ್ಲುಸಕ್ಕರೆಯನ್ನು ಔಷಧಿಗಳಿಗೆ ಬಹಳವಾಗಿ ಉಪಯೋಗಿಸುವರು. ಚೀನಾ ದೇಶದ ಕಲ್ಲುಸಕ್ಕರೆಗೆ ಈ ಸಕ್ಕರೆಯು ಸಮಾನವಾದದ್ದೆಂದು ಅನೇಕರು ಹೇಳುವರು.

೨. ಈ ಹುವ್ವಿನಿಂದ ಒಂದು ವಿಧವಾದ ಸಾರಾಯನ್ನು ತಯಾರು ಮಾಡಬಹುದು. ಈ ಸಾರಾಯಿ ಯೂರೋಪ್ ಮೊದಲಾದ ಅನ್ಯದೇಶಗಳಿಂದ ಈ ದೇಶಕ್ಕೆ ರಫ್ತಾಗತಕ್ಕ ಸಾರಾಯಿಗಳಿಗೆ ಸಮನಾದದ್ದೆಂತಲೂ, ಹಿಂದೆ ಒಂದಾನೊಂದು ಕಾಲದಲ್ಲಿ ಸರ್ಕಾರದವರೇ ಹಿಪ್ಪೇಹುವ್ವಿನಿಂದ ಸಾರಾಯನ್ನು ತಯಾರು ಮಾಡುತಿದ್ದರೆಂಬದಾಗಿಯೂ, ಮದದ್ರಾವಕಗಳನ್ನು ಸೇವನೆ ಮಾಡತಕ್ಕವರೆಲ್ಲರೂ ಈ ಸಾರಾಯನ್ನು ಬಹಳ ಅಕ್ಕರೆಯಿಂದ ಸೇವನೆ ಮಾಡುವರೆಂಬದಾಗಿಯೂ ತಿಳಿದು ಬರುತ್ತದೆ.

೩. ಹಿಪ್ಪೆ ಹುವ್ವಿನಲ್ಲಿ ಜಿಡ್ಡಿರುವುದರಿಂದ ಅವುಗಳ ಜೊತೆಯಲ್ಲಿ ಕೆಲವು ಪದಾರ್ಥಗಳನ್ನು ಬೆರಸಿದರೆ ಕೊಂಬರೀ ಯಣ್ಣೆಗೆ ಸಮಾನವಾದ ಯಣ್ಣೆಯಾಗುವುದೆಂದೂ, ಈ ಯಣ್ಣೆಯನ್ನು ದೀಪಗಳಿಗೂ, ತಿಂಡಿಯ ಸಾಮಾನುಗಳನ್ನು ಹುರಿಯುವುದಕ್ಕೂ ಉಪಯೋಗಿಸಬಹುದೆಂತಲೂ ಹೇಳುವರು. ಈ ವಿಷಯವನ್ನು ಪರೀಕ್ಷಿಸಿ ನಿರ್ಧರಿಸಬೇಕಾಗಿದೆ. ಇದಕ್ಕೆ ಹೆಚ್ಚು ಖರ್ಚು ತಗಲಲಾರದು. ಹೀಗೆ ಹಿಪ್ಪೆ ಹುವ್ವಿನಿಂದ ಸಕ್ಕರೆ, ಸಾರಾಯಿ ಮತ್ತು ಯಣ್ಣೆಯನ್ನು ತಯಾರುಮಾಡತಕ್ಕ ಕೆಲಸ ಬಡಬಗ್ಗರಿಗೆಲ್ಲಾ ಸುಲಭ ಜೀವನೋಪಾಯವಾಗುವುದರಲ್ಲಿ ಸಂಶಯವಿಲ್ಲ.

ಕಡ್ಡಿ ಕತ್ತರಿಸುವ ಯಂತ್ರಗಳು.

ಜೋಳ ಮತ್ತು ಮೆಕ್ಕೆ ಜೋಳಗಳನ್ನು ಯಥೇಚ್ಛವಾಗಿ ಬೆಳೆಯತಕ್ಕ ಸ್ಥಳಗಳಲ್ಲೆಲ್ಲಾ ಇವುಗಳ ಕಡ್ಡಿಯನ್ನೇ ದನಗಳಿಗೆ ವಿಶೇಷವಾಗಿ ಮೇವಾಗಿ ಉಪಯೋಗಿಸುವುದು ವಾಡಿಕೆಯಾಗಿದೆ. ಅನೇಕ ಸ್ಥಳಗಳಲ್ಲಿ ಇವುಗಳ ಕಡ್ಡಿಯನ್ನು ಕತ್ತರಿಸದೆ ದನಗಳಿಗೆ ಹಾಕುವರು. ಹೀಗೆ ಮಾಡಿದಲ್ಲಿ ದನಗಳು ಕಡ್ಡಿಯ ತುದಿಯನ್ನೂ ಮತ್ತು ಗರಿಗಳನ್ನೂ ತಿಂದು ಗರಿಯಿಲ್ಲದ ಕಡ್ಡಿಯನ್ನು ಹಾಗೆಯೇ ಬಿಟ್ಟುಬಿಡುವುವು. ಇನ್ನೂ ಕೆಲವು ಪ್ರದೇಶಗಳಲ್ಲಿ ಕಡ್ಡಿಯ ಕಂತೆಯನ್ನು ಮೂರು ತುಂಡುಗಳಾಗಿ ಕತ್ತರಿಸಿ ಪ್ರತಿತುಕ್ಕಡವನ್ನೂ ಬೇರೆಬೇರೆಯಾಗಿ ಹಾಕುವರು. ಹೀಗೆ ಮಾಡಿದಾಗ್ಯೂ ದನಗಳು ಕಡ್ಡಿಯ ಗಟ್ಟಿಯಾದ ಮಧ್ಯಭಾಗವನ್ನೂ ಮತ್ತು ಬುಡವನ್ನೂ ತಿನ್ನದೆ ಸಂಪೂರ್ಣವಾಗಿ ಬಿಟ್ಟುಬಿಡುವುವು. ಆದ್ದರಿಂದ ಕಡ್ಡಿ ಕತ್ತರಿಸತಕ್ಕ ಯಂತ್ರಗಳಿಂದ ಕಡ್ಡಿಗಳನ್ನು ತುಂಡುತುಂಡುಗಳಾಗಿ ಕತ್ತರಿಸಿ ಉಪಯೋಗಿಸಿದಲ್ಲಿ ಮೇಲ್ಕಂಡ ರೀತಿಯಲ್ಲಿ ಮೇವು ಅನ್ಯಾಯವಾಗಿ ವ್ಯರ್ಥವಾಗಲಾರದು. ಸ್ವಲ್ಪವೂ ಶ್ರಮವಿಲ್ಲದೆ ಕಡ್ಡಿಯನ್ನೆಲ್ಲಾ ಸಣ್ಣ ಸಣ್ಣ ತುಂಡುಗಳಾಗಿ ಕತ್ತರಿಸುವುದು ಬಹಳ ಸುಲಭ. ದನಗಳೂ ಸಹ ಹೀಗೆ ಕತ್ತರಿಸಿದ ಕಡ್ಡಿಗಳನ್ನು ಬಹಳ ಹರ್ಷದಿಂದ ತಿನ್ನುವವು.

ಇದುವರಿವಿಗೆ ಪರೀಕ್ಷಿಸಿ ನೋಡಿದ್ದರಲ್ಲಿ ಜೋಳದ ಕಡ್ಡಿಯನ್ನು ಕತ್ತರಿಸದೆ ಉಪಯೋಗಿಸಿದಲ್ಲಿ ಸುಮಾರು ಅರ್ಧದಷ್ಟು ನಷ್ಟವಾಗುವುದೆಂದು ಗೊತ್ತಾಗಿದೆ. ಕೈಕೊಡಲಿಯಿಂದ ಕತ್ತರಿಸಿದ ಸುಮಾರು ಮೂರನೆ ಒಂದುಭಾಗವು ನಷ್ಟವಾಗುವುದು. ಅಲ್ಲದೆ ಕಡ್ಡಿ ಕತ್ತರಿಸುವ ಯಂತ್ರದಿಂದ ಕಡ್ಡಿಯನ್ನು ಕತ್ತರಿಸಿ ಉಪಯೋಗಿಸಿದರೆ ಸುಮಾರು ಎಂಟರಲ್ಲಿ ಒಂದುಭಾಗ ಮಾತ್ರ ನಷ್ಟವಾಗುವುದು; ಅಂದರೆ ಕೈಕೊಡಲಿಯಿಂದ ಕಡ್ಡಿಯನ್ನು ಕತ್ತರಿಸಿದಲ್ಲಿ ನಷ್ಟವಾಗಬಹುದಾದ್ದರ ಅರ್ಧ ಭಾಗವನ್ನು ಯಂತ್ರಗಳನ್ನು ಉಪಯೋಗಿಸಿದಲ್ಲಿ ಉಳಿಸಿಕೊಳ್ಳಬಹುದು ಎಂದು ಗೊತ್ತಾಗುತ್ತದೆ.

ಈಚೆಗೆ ಬೊಂಬಾಯಿ ಅಧಿಪತ್ಯದಲ್ಲಿ ಸರ್ಕಾರಿ ಫಾರಂ ನವರೂ, ಬುದ್ಧಿವಂತರಾದ ಕೆಲವು ರೈತರೂ ಮತ್ತು ಕೆಲವು

ಭಾರೀ ಐಶ್ವರ್ಯವಂತರಾದ ಜಮೀನುದಾರರೂ ಇಂಥ ಕಡ್ಡಿ ಕತ್ತರಿಸತಕ್ಕ ಯಂತ್ರಗಳನ್ನು ಉಪಯೋಗಿಸುತ್ತಿದಾರೆ. ನಾಲ್ಕು ದನಗಳನ್ನು ಸಾಕುವವನು ಕಡ್ಡಿಯನ್ನು ಕತ್ತರಿಸದೆ ಉಪಯೋಗಿಸುವುದಕ್ಕೆ ಬದಲಾಗಿ ಯಂತ್ರದಿಂದ ಕತ್ತರಿಸಿ ಉಪಯೋಗಿಸಿದರೆ, ಒಂದು ತಿಂಗಳಲ್ಲಿ ಯಂತ್ರಕ್ಕೆ ಆಗಬಹುದಾದಷ್ಟು ಹಣವನ್ನು ಉಳಿಸಬಹುದು. ಅಲ್ಲದೆ ದನಗಳು ಆರೋಗ್ಯವಾಗಿರುವವು.

ಇಂಡಿಯಾ ದೇಶದಲ್ಲೇ ತಯಾರಾದ ಯಂತ್ರಗಳು ಒಂದೊಂದಕ್ಕೆ ಹತ್ತು ರೂಪಾಯಿನಂತೆ ಬೆಳಗಾಂ ನಲ್ಲಿರುವ ಕಿರ್ಲೋಸ್ಕರ್ ಬ್ರದರ್ಸ್ ರವರಲ್ಲಿ ಸಿಕ್ಕುವುವು.

ಅಬೋರೆಂಬ ಕಾಡುಜನರ ಹಾವಳಿ.

ಹಿಮಾಲಯ ಪರ್ವತದ ಪ್ರಾಂತಗಳಲ್ಲಿ ಟಿಬೆಟ್ಟಿನ ಎಲ್ಲೆಕಟ್ಟುಗಳಿಗೆ ಸಮೀಪವಾಗಿರುವ ದೊಡ್ಡ ದೊಡ್ಡ ಕಾಡುಗಳಲ್ಲಿ ಅಬೋರರೆಂಬ ಕೆಲವು ಜಾತಿಯ ಕಾಡುಜನರು ವಾಸಿಸುತ್ತಿರುವರು. ಈ ಕಾಡುಗಳಿಗೆ ಆಗಾಗ ಬೇಟೆಯಾಡುವುದಕ್ಕಾಗಿಯೂ, ಸಂಚಾರಕ್ಕಾಗಿಯೂ ಅದರ ಸುತ್ತಲಿರುವ ದೇಶಗಳಿಂದ ಜನರು ಹೋಗಿಬರುವುದುಂಟು. ಈಗೆ ಕೆಲವು ದಿನಗಳ ಕೆಳಗೆ ಮಿ॥ ವಿಲಿಯಂಸನ್ ಎಂಬ ಆಂಗ್ಲೇಯ ಮಹನೀಯನೊಬ್ಬನು ಕಾರಣಾಂತರದಿಂದ ಕೆಲವು ಪರಿವಾರಗಳೊಡನೆ ಆ ಕಾಡಿಗೆ ಹೋಗಿರಲು, ಅಲ್ಲಿದ್ದ ಕಾಡುಜನರು ಆತನಲ್ಲಿ ಬಹಳ ಪ್ರೀತಿ ವಿಶ್ವಾಸಗಳನ್ನು ತೋರಿಸುವವರ ಹಾಗೆ ನಟಿಸಿ, ತಮ್ಮ ಯಜಮಾನನ ಮೂಲಕವಾಗಿ ಆತನಿಗೆ ಅತಿಥಿಸತ್ಕಾರಗಳನ್ನು ನಡೆಸುವಂತೆ ಮೃದುವಾಕ್ಯಗಳಿಂದ ಆತನನ್ನು ಮರಳುಮಾಡಿ, ನಡುಕಾಡಿಗೆ ಕರೆದುಕೊಂಡು ಹೋಗಿ ಕೊಂದುದಲ್ಲದೆ, ಆತನ ಪರಿವಾರಗಳಲ್ಲಿಯೂ ಒಬ್ಬೊಬ್ಬರನ್ನಾಗಿ ಹೀಗೆಯೇ ಆಸೆ ತೋರಿಸಿ ಕರೆದುಕೊಂಡು ಹೋಗಿ ಕೊಲ್ಲುವುದಕ್ಕೆ ಉಪಕ್ರಮಿಸಿದರು. ಕೊನೆಕೊನೆಗೆ ಅಲ್ಲಿ ಉಳಿದಿದ್ದ ಕೆಲವರಿಗೆ ಈ ಮರ್ಮವು ತಿಳಿದು ಅವರು ಆ ಸ್ಥಳವನ್ನು ಬಿಟ್ಟು ತಲೆತಪ್ಪಿಸಿಕೊಂಡು ಓಡುವುದಕ್ಕೆ ಉಪಕ್ರಮಿಸಿದರು. ಆ ಕಾಡು ಜನರೂಕೂಡ ಇವರನ್ನು ಬೆನ್ನಟ್ಟಿ ಬರಲು, ಇವರು ಪ್ರಾಣಭಯದಿಂದ ಸಿಕ್ಕಿದಕಡೆಗೆ ಓಡುತ್ತ, ಬಹು ದೂರದವರೆಗೆ ಹೋದಮೇಲೆ, ಕೆಲವು ವರ್ತಕರಿಗೆ ಆಶ್ರಯವಾದ ಘಾಸಿ ಘಾಟ್ ಎಂಬ ಸ್ಥಳಕ್ಕೆ ಬಂದು ಸೇರಿ, ಆ ಅತ್ಯಾಹಿತ ವಿವರಗಳೆಲ್ಲವನ್ನೂ ಅಲ್ಲಿದ್ದ ವರ್ತಕರಿಗೆ ತಿಳಿಸಿದರು. ಅದರಮೇಲೆ ಈ ವಿಚಾರಗಳೆಲ್ಲವೂ ಅಧಿಕಾರಿಗಳಿಗೆ ಮುಟ್ಟಿ ಆ ಕೊಲೆಗಾರರನ್ನು ನಿಗ್ರಹಿಸುವುದಕ್ಕಾಗಿ ಸರಕಾರದವರು ಕೆಲವು ಸೈನ್ಯಗಳನ್ನು ಕಳುಹಿಸುವವರಾಗಿದಾರೆ. ಆ ಕಾಡುಗಳಲ್ಲಿ ಈಗ ಬಹಳವಾಗಿ ಮಳೆ ಸುರಿಯುತ್ತಿರುವುದರಿಂದ, ಈ ಕಾಲವು ಅಲ್ಲಿಗೆ ಸೈನಿಕರ ಪ್ರಯಾಣಕ್ಕೆ ಅನುಕೂಲವಿಲ್ಲವೆಂಬುದರಮೇಲೆ ಈ ಮಳೆಗಾಲವು ಪೂರೈಸುವವರೆಗೂ ಆ ಘಾಸೀಘಾಟಿನಲ್ಲಿಯೇ ಸೈನ್ಯಗಳನ್ನಿರಿಸಿದ್ದು ಆಮೇಲೆ ಕಳುಹಿಸುವುದಾಗಿ ತೀರ್ಮಾನಿಸಿರುವರೆಂದು ಕೇಳುತ್ತೇವೆ.

ಈ ಕಾಡುಜನರ ವಿಚಿತ್ರವಾದ ಪದ್ಧತಿ.

ಇವರು ಪಿಶಾಚಿಗಳನ್ನು ಪೂಜಿಸುವರು. ಪ್ರಪಂಚದ ಒಂದೊಂದು ವ್ಯಾಪಾರವನ್ನೂ ಇಲಾಖೆಗಳಾಗಿ ವಿಂಗಡಿಸಿಕೊಂಡು ಒಂದೊಂದು ಭಾಗಕ್ಕೆ ಒಂದೊಂದು ಭೂತವು ಅಧಿದೇವತೆಯಾಗಿ ನಡೆಸುತ್ತಿರುವುದೆಂದು ಇವರ ನಂಬಿಕೆ. ಇವರಲ್ಲಿ ಯಾರಿಗಾದರೂ ಒಂದು ವ್ಯಾಧಿಯು ಬಂದಲ್ಲಿ ಅದಕ್ಕೆ ಚಿಕಿತ್ಸೆಮಾಡುವ ರೀತಿಯೇ ಅವರಿಗೆ ತಿಳಿಯದು. ಆಯಾ ರೋಗಗಳಿಗೆ ಅಧಿದೇವತೆಯಾಗಿ ಒಂದೊಂದು ಪಿಶಾಚಿ ಇರುವುದೆಂದು ನಂಬಿ, ರೋಗ ಬಂದೊಡನೇ ಆ ಪಿಶಾಚಕ್ಕೆ ಬಲಿ ಕೊಡುವುದಕ್ಕೆ ಉಪಕ್ರಮಿಸುವರಂತೆ. ಮೃಗಾದಿಗಳನ್ನು ಬಲಿಕೊಟ್ಟಮೇಲೆ ಆ ಮಾಂಸವನ್ನು ಮುಂದೆ ಬಾಳಿ ಬದುಕತಕ್ಕ ಸಣ್ಣ ವಯಸ್ಸಿನವರು ತಿನ್ನಕೂಡದೆಂದು ಕೇವಲ ವಾರ್ಧಕ್ಯದೆಶೆಯಲ್ಲಿರುವವರಿಗೆ ಮಾತ್ರ ಅದನ್ನು ಕೊಡುವರಂತೆ. ಇವರು ವಾಸಮಾಡುವ ಪ್ರಾಂತದ ಸಮೀಪದಲ್ಲಿ ರಿಗಾಂ ಎಂಬ ಒಂದು ಬೆಟ್ಟವಿರುವುದು. ಸಮಸ್ತ ಪಿಶಾಚಿಗಳು ಅಲ್ಲಿ ವಾಸಮಾಡುತ್ತಿರುವುವೆಂದೂ, ಆ ಬೆಟ್ಟವನ್ನು ಕಾಲಿಂದ ಮೆಟ್ಟಿ ಮೇಲೇರಿದವರು ಪುನಃ ಬದುಕಿ ಬರಲಾರರೆಂದೂ ಒಂದು ದೊಡ್ಡ ನಂಬಿಕೆ ಯಿಟ್ಟಿರುವರಾದುದರಿಂದ, ಆ ಬೆಟ್ಟಕ್ಕೆ ಯಾರೂ ಹೋಗದೆ ಅದನ್ನೇ ದೇವರಂತೆ ಪೂಜಿಸುತ್ತಿರುವರಂತೆ.

ಪೀ. ಕೇ.

ಪ್ಲೇಗು ನಿವಾರಣೋಪಾಯವು.

ಪ್ಲೇಗು ರೋಗದ ಸೋಂಕು ಇಲಿಯಿಂದ ಮನುಷ್ಯನಿಗೆ ಚಿಗಟದ ಮೂಲಕ ತಗಲುತ್ತದೆಂದು ವೈದ್ಯರು ಹೇಳುವರಷ್ಟೆ. ಹೀಗೆ ಸೋಂಕನ್ನು ಹರಡುವ ಚಿಗಟಗಳನ್ನು ಬಿಸಿಲಿನಲ್ಲಿ ಕೊಲ್ಲುವ ವಿಧಾನವನ್ನು ಕುರಿತು ಕ್ಯಾಪ್ಟನ್ ಜೆ. ಕನ್ನಿಂಘ್ಯಾಂ, ಎಂ. ಬಿ., ಐ. ಎಂ. ಎಸ್., ರವರು ಬರೆದಿರುವ ಪತ್ರಿಕೆಯನ್ನು ಇಂಡ್ಯಾ ಸರ್ಕಾರದವರು ಸಮಸ್ತಜನರ ತಿಳಿವಳಿಗಾಗಿ ಪ್ರಕಟಿಸಿರುತ್ತಾರೆ. ಅದರಲ್ಲಿ ಮುಖ್ಯವಾಗಿ ಹೇಳಲ್ಪಟ್ಟಿರುವುದೇನೆಂದರೆ:—ಪ್ಲೇಗುರೋಗವು ಇಲಿಯಿಂದ ಮನುಷ್ಯನಿಗೆ ಚಿಗಟದ ಮೂಲಕ ಬರುತ್ತದೆಂಬುದೂ, ಜನರು ಪ್ಲೇಗು ತಗಲಿದ ಸ್ಥಳದಿಂದ ಪ್ಲೇಗಿಲ್ಲ ಸ್ಥಳಕ್ಕೆ ಹೋಗುವಾಗ್ಗೆ ಸೋಂಕು ತಗಲಿದ ಚಿಗಟಗಳುಅವರ ಬಟ್ಟೆ, ಗಂಟು ಮೊದಲಾದ ವಸ್ತುಗಳ ಮೂಲಕ ಬರುತ್ತವೆಂತು ಪ್ರಸಿದ್ಧವಾಗಿರುವುದಷ್ಟೆ. ಪ್ರಯಾಣಿಕರು ಇಳಿದ ಸ್ಥಳದಲ್ಲಿ ತಮ್ಮ ಬಟ್ಟೆ, ಗಂಟು, ಹಾಸಿಗೆ ಮೊದಲಾದುವುಗಳನ್ನು ಬಿಚ್ಚುತಲೆ ಅವುಗಳಲ್ಲಿ ಸೇರಿದ ಚಿಗಟಗಳು ಹಾರಿಹೋಗಿ ಆ ಸ್ಥಳದ ಇಲಿಗಳ ಮೈಮೇಲೆ ಸೇರಿಕೊಂಡು ವಾಸಮಾಡುವುವು. ಈ ಚಿಗಟಗಳು ಇಲಿಗಳ ಮೈ ರಕ್ತವನ್ನು ಪಾನಮಾಡುವಾಗ್ಗೆ ಅವು (ಚಿಗಟ) ಗಳಲ್ಲಿ ಸೇರಿಕೊಂಡಿರುವ ಪ್ಲೇಗು ಕ್ರಿಮಿಗಳು ಇಲಿಗಳ ರಕ್ತದಲ್ಲಿ ಪ್ರವೇಶಿಸುವುವು. ಇದರಿಂದ ಇಲಿಗಳು ಪ್ಲೇಗು ರೋಗಪೀಡಿತವಾಗಿ ಸಾಯುವುವು. ಈ ಪ್ಲೇಗುತಗಲಿ ಸತ್ತ ಇಲಿಗಳ ಮೂಲಕ ಮನುಷ್ಯರಿಗೆ ರೋಗವು ಬಂದು ಅವರು ಸಾಯುವರು. ಈರೀತಿಯಾಗಿ ರೋಗವು ಗ್ರಾಮದಿಂದ ಗ್ರಾಮಕ್ಕೆ ವ್ಯಾಪಿಸುತ್ತದೆಯಾದುದರಿಂದ, ಹೊಸದಾಗಿ ಒಂದು ಸ್ಥಳಕ್ಕೆ ಬರುವ ಜನರ ಬಟ್ಟೆ, ಹಾಸಿಗೆ ಮೊದಲಾದ ಪದಾರ್ಥಗಳನ್ನು ಒಂದೆರಡು ಗಂಟೆಯ ಕಾಲದವರೆಗೆ ಬಿಸಿಲಿನಲ್ಲಿ ಹಾಕುವುದರಿಂದ ಅವುಗಳಲ್ಲಿ ಸೇರಿಕೊಂಡಿರುವ ಪ್ಲೇಗು ಕ್ರಿಮಿಗಳು ನಾಶವಾಗುವುವೆಂದು ಬೊಂಬಾಯಿಯ ಪರೇಲಿನಲ್ಲಿರುವ ರಸಾಯನ ಶಾಸ್ತ್ರಶೋಧನಾಲಯದಲ್ಲಿ ಪರೀಕ್ಷಿಸಲ್ಪಟ್ಟಿರುವುದು. ಈ ವಿಧಾನದಲ್ಲಿ ಮುಖ್ಯವಾಗಿ ಮಾಡಬೇಕಾಗಿರುವುದೇನೆಂದರೆ—ಹುಲ್ಲು ಸತ್ತೆಗಳೇನೂ ಇಲ್ಲದೆ ಒಂದೇ ಮಟ್ಟಸವಾಗಿರುವ ಮಳಲು ಭೂಮಿಯ ಮೇಲೆ ಬಟ್ಟೆ ಹಾಸಿಗೆ ಮೊದಲಾದುವುಗಳನ್ನು ಬಿಚ್ಚಿ ಒಂದರ ಪಕ್ಕದಲ್ಲೊಂದನ್ನು ಹರಡಬೇಕು. ಹೀಗೆ ಮಾಡಿದ ಸ್ವಲ್ಪ ಹೊತ್ತಿನಲ್ಲಿ ಚಿಗಟಗಳೆಲ್ಲವೂ ಸತ್ತುಹೋಗುವುವು. ಬಟ್ಟೆಯನ್ನು ಹರಡುವುದಕ್ಕೆ ಮೊದಲು ನೆಲವು ಸಮನಾಗಿರಬೇಕಲ್ಲದೆ ಮಳಲು ಬಿಸಿಲಿನಲ್ಲಿ ಚೆನ್ನಾಗಿ ಕಾದಿರಬೇಕು. ಮಳಲು ಕಾದಿರುವುದನ್ನು ತಿಳಿಯಲು ಒಂದು ಉಷ್ಣಮಾಪಕಯಂತ್ರ (ಥರ್ಮಾಮಿಟರು) ಅವಶ್ಯಕವಾಗಿರುವುದು. ಈ ಯಂತ್ರವು ಮೇಲೆಹೇಳಿದ ರಸಾಯನಶಾಸ್ತ್ರಶೋಧನಾಲಯದಲ್ಲಿ ೨ ಆಣೆ ಬೆಲೆಗೆ ದೊರಕುವುದು. ಈ ಕೆಳಗೆ ಹೇಳಿರುವ ನಿಬಂಧನೆಗಳನ್ನನುಸರಿಸಿ ನಡೆದಲ್ಲಿ, ಬಟ್ಟೆ, ಹಾಸಿಗೆ ಮೊದಲಾದುವುಗಳಲ್ಲಿ ಸೇರಿಕೊಂಡಿರುವ ಚಿಗಟಗಳೆಲ್ಲವೂ ಖಂಡಿತವಾಗಿ ನಾಶವಾಗುವುವು.

೧. ನಯವಾಗಿಯೂ, ಮಟ್ಟಸವಾಗಿಯೂ, ಬಿರುಕಿಲ್ಲದೆಯೂ ಇರುವ ಮತ್ತು ಸಮೀಪದಲ್ಲಿ ಮರಗಳೂ, ಮನೆಗಳೂ ಇಲ್ಲದೆ ಬಿಸಿಲು ದಿನವೆಲ್ಲಾ ಚೆನ್ನಾಗಿ ಕಾಯುವ ಸ್ಥಳವು ಆರಿಸಲ್ಪಡಬೇಕು.

೨. ಭೂಮಿಯು ಹುಲ್ಲು ಅಥವಾ ಕಲ್ಲುಗಳಿಲ್ಲದೆ ಸಮವಾಗಿರಬೇಕು.

೩. ಮಳಲು ಭೂಮಿಯಲ್ಲದಿದ್ದರೆ ೨ ಅಂಗುಲ ಮಂದಕ್ಕೆ ಮಳಲು ಹಾಕಲ್ಪಟ್ಟು ಮೇಲ್ಭಾಗದಲ್ಲಿ ನಯವಾಗಿ ಹರಡಲ್ಪಡಬೇಕು.

೪. ಬಟ್ಟೆಗಳನ್ನು ಹಾಕುವುದಕ್ಕೆ ಮೊದಲು ಮಳಲು ಚೆನ್ನಾಗಿ ಸುಡುವಂತೆ ಕಾದಿರಬೇಕು. ಅದುಕಾರಣ ಬೆಳಗ್ಗೆ ೧೦ ಘಂಟೆಯವರೆಗೆ ನಿರೀಕ್ಷಿಸಿಕೊಂಡಿದ್ದು ಆಮೇಲೆ ಬಟ್ಟೆಗಳನ್ನು ಹರಡುವುದುತ್ತಮವು.

೫. ಮಧ್ಯಾಹ್ನ ೪ ಘಂಟೆಯಮೇಲೆ ಮಳಲು ತಣ್ಣಗಾಗುತ್ತಾದುದರಿಂದ, ಆಗ ಯಾವ ಬಟ್ಟೆಯನ್ನೂ ಬಿಸಲಿಗೆ ಹಾಕಬಾರದು.

೬. ಮಳಲಿನಮೇಲೆ ಬಟ್ಟೆಗಳು ಒಂದರಮೇಲೊಂದು ಬೀಳದಂತೆ ಸಮನಾಗಿ ಹರಡಬೇಕು.

೭. ಬಟ್ಟೆಗಳು ೧ ಗಂಟೆಯವರೆಗೆ ಬಿಸಲಿನಲ್ಲಿ ಕಾಯಲು ಬಿಡಲ್ಪಟ್ಟಿರಬೇಕು.

೮. ಮಂದವಾದ ಕೋಟು, ಹಾಸಿಗೆ ಮೊದಲಾದ ಪದಾರ್ಥಗಳು ಮಾತ್ರ ಎರಡುಕಡೆಯೂ ಚೆನ್ನಾಗಿ ಕಾಯುವಂತೆ ಒಂದೆರಡಾವೃತ್ತಿ ತಿರುವಿಹಾಕಬೇಕು.

೯. ಈ ಮಳಲು ಭೂಮಿಯ ಅಂಚಿನಿಂದ ೩ ಅಡಿ ಅಂತರ ಬಿಟ್ಟು ಬಟ್ಟೆಗಳನ್ನು ಹರಡುವುದು. ಇಲ್ಲದಿದ್ದರೆ ಚಿಗಟಗಳು ಬಿಸಿಲಿನ ಕಾವಿಗೆ ಸಿಕ್ಕದಂತೆ ತಪ್ಪಿಸಿಕೊಂಡು ಹೋಗಿ ಗ್ರಾಮಕ್ಕೆ ಸೋಂಕನ್ನು ಹರಡುವುವು.

೧೦. ಮಳಲು ಭೂಮಿಯ ಮೇಲೆ ಬಟ್ಟೆಗಳನ್ನು ಹಾಕುವುದಕ್ಕೆಮೊದಲೇ ಆ ನೆಲವು ದನಕರುಗಳು ಮೊದಲಾದ ಪ್ರಾಣಿಗಳ ತಿರುಗಾಟದಿಂದ ಹೆಜ್ಜೆಯ ಗುರುತುಗಳೇನೂ ಇಲ್ಲದೆ ಒಂದೇಸಮನಾಗಿರುವುದನ್ನು ನೋಡಿಕೊಳ್ಳಬೇಕಾದುದು ಅತ್ಯವಶ್ಯಕವು.

ಮೈಸೂರ ನಿಯಮ ನಿರ್ಮಾಣ ಸಭೆಯು.

ಬೆಂಗಳೂರ ಕಬ್ಬನ್ ಉದ್ಯಾನ ವನದಲ್ಲಿರುವ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಕಳೆದ ತಾ॥ ೨೩ ನೇ ಗುರುವಾರ ಮಧ್ಯಾಹ್ನದಲ್ಲಿ ನಿಯಮ ನಿರ್ಮಾಣ ಸಭೆಯು ದಿವಾನರು ಮ॥ ಟಿ. ಅನಂದರಾಯರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಸಭಾಸ್ತರರುಗಳಾದ ೧ನೇ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಶೆಟ್ಟರು, ೨ ನೇ ಕೌನ್ಸಿಲರ್ ಮ॥ ಎಚ್. ನಂಜುಂಡಯ್ಯನವರು, ಪೊಲೀಸ್ ಇ॥ ಜನರಲ್ ಮ॥ ದೇವರಾಜಅರಸಿನವರು, ಮ॥ ಸಯ್ಯದ್ ಅಮಿರ್ ಹಸನ್ರವರು, ಮ॥ ಗಳಾದ ಎಂ. ಸಿ. ರಂಗಯ್ಯಂಗಾರ್ಯರು, ಡಿ. ವೆಂಕಟರಾಮಯ್ಯನವರು, ಎಲ್. ನಾರಾಯಣ ರಾಯರು, ಸಿ. ಶ್ರೀನಿವಾಸಯ್ಯಂಗಾರ್ಯರು, ಎ. ರಾಮಣ್ಣನವರು ಮತ್ತು ಎಂ. ನಾರಾಯಣ ರಾಯರು ಸಭೆಗೆ ದಯಮಾಡಿಸಿದ್ದರು. ಆದಿವಸದ ಕಾರ್ಯಾರಂಭಕ್ಕೆ ಪೂರ್ವ ಈ ಸಭಾ ಸೆಕ್ರೆಟರಿಗಳಾದ ಮ॥ ಎಚ್. ಹಿರಿಯಣ್ಣಯ್ಯನವರು, ೧೯೧೦ನೇ ಡಿಸೆಂಬರ್ ತಾ॥೧ ಮತ್ತು ೨ ರಲ್ಲಿ ಮತ್ತು ೧೯೧೧ ನೇ ಜನವರಿ ತಾ॥ ೪ ರಲ್ಲಿ ಪ್ರಕಟವಾದ ಮೈಸೂರ ಕಾರಾಗೃಹ (ಬಂದೀಖಾನೆ) ಗಳ ಬಿಲ್ಲನ್ನೂ, ವಿಷಸಂಬಂಧವಾದ ಬಿಲ್ಲನ್ನೂ, ಕೆರೆ ಪಂಚಾಯತ ಬಿಲ್ಲನ್ನೂ ಸಂಸ್ಥಾನದಲ್ಲಿ ಅನುಷ್ಠಾನಕ್ಕೆ ತರಲು ಶ್ರೀಮನ್ಮಹಾರಾಜರವರು ಸಮ್ಮತಿಸಿರುತ್ತಾರೆಂದು ತಿಳುಹಿದರು. ಅನಂತರ ಈ ಕೆಳಗಿನ ವಿಷಯಗಳು ಚರ್ಚಿಸಲ್ಪಟ್ಟವು:—

ಮೈಸೂರ ಗ್ರಾಮಕೋರ್ಟುಗಳ ಬಿಲ್ಲು.

ಪೂರ್ವದಲ್ಲಿ ಗ್ರಾಮಸ್ಥರು ತಮ್ಮಲ್ಲಿ ಹುಟ್ಟುವ ವಿವಾದಗಳನ್ನು ಗ್ರಾಮಕೋರ್ಟಿನಲ್ಲಿ ಪಂಚಾಯತರ ಮೂಲಕ ಇತ್ಯರ್ಥ ಮಾಡಿಕೊಳ್ಳುತ್ತಿದ್ದರು. ಇದರಿಂದ ಅವರಿಗೆ ಹಣವು ವಿಶೇಷವಾಗಿ ವ್ಯಯವಾಗುತ್ತಿರಲಿಲ್ಲವಲ್ಲದೆ ದೇಹಶ್ರಮವೂ ಕಡಿಮೆಯಾಗಿದ್ದಿತು. ಆದರೆ ಈಚೆಗೆ ಈ ಪದ್ಧತಿಯು ತಪ್ಪಿಹೋಗಿರುವುದು. ಈ ಗ್ರಾಮಕೋರ್ಟುಗಳು ಮದ್ರಾಸಾಧಿಪತ್ಯದಲ್ಲಿ ಅನುಷ್ಠಾನದಲ್ಲಿದ್ದು ೨೦ ರೂಪಾಯಿಗಳೊಳಗಿರುವ ವಿವಾದಗಳು ೫೦೦೦ ದ ಮೇಲೆಯೇ ಇತ್ಯರ್ಥಮಾಡಲ್ಪಟ್ಟಿರುವುವು. ಅದುಕಾರಣ ಈ ಗ್ರಾಮ ಕೋರ್ಟುಗಳನ್ನು ನಮ್ಮ ಸಂಸ್ಥಾನದಲ್ಲಿ ಪುನಃ ಸ್ಥಾಪಿಸುವುದರಿಂದ ಗ್ರಾಮಸ್ಥರಿಗೆ ದುಡ್ಡಿನ ನಷ್ಟವೂ, ದೇಹಶ್ರಮವೂ ಬಹುಮಟ್ಟಿಗೆ ಕಡಿಮೆಯಾಗಿ ನೆಮ್ಮದಿಯಾಗುವುದಲ್ಲದೆ ಸರ್ಕಾರಕ್ಕೂ ವೆಚ್ಚವು ಕಡಿಮೆಯಾಗುವುದು. ಅದುಕಾರಣ ಈ ಬಿಲ್ಲಿನ ಸಾಧಕ ಬಾಧಕಗಳನ್ನು ಈ ಸಭೆಯಲ್ಲಿ ಚರ್ಚೆಗೆ ತರಬೇಕೆಂದು ಸೂಚಿಸಿದರು. ಮ॥ ರಾಮಣ್ಣನವರು ಮೊದಲಾದ ಸಭಾಸ್ತರರ ಅನುಮೋದನದಿಂದ ಈ ಬಿಲ್ಲು ಚರ್ಚೆಗೆ ತರಲ್ಪಡತಕ್ಕದೆಂದು ನಿರ್ಧಾರವಾಯಿತು.

ಸ್ಮಾಲ್ಕಾಜ್ ಕೋರ್ಟುಗಳ ಬಿಲ್ಲು.

ಕ್ರಿಮಿನಲ್ ವಿವಾದಗಳ ಇತ್ಯರ್ಥದಲ್ಲಿ ಅಸೆಸರುಗಳ ಅಭಿಪ್ರಾಯವು ತೆಗೆದುಕೊಳ್ಳಲ್ಪಡುವಂತೆ ಸಿವಿಲ್ ವಿವಾದಗಳ ಇತ್ಯರ್ಥದಲ್ಲೂ ಅಸೆಸರುಗಳಭಿಪ್ರಾಯವು ತೆಗೆದುಕೊಳ್ಳಲ್ಪಡುವಂತೆ ಸ್ಮಾಲ್ಕಾಜ್ ಕೋರ್ಟುಗಳ ಬಿಲ್ಲಿನಲ್ಲಿ ತಿದ್ದುಪಾಟಾಗಬೇಕೆಂದು ೨ ನೇ ಕೌನ್ಸಿಲರು ಸೂಚಿಸಿದುದರಮೇಲೆ, ಮ॥ ಡಿ. ವೆಂಕಟರಾಮಯ್ಯನವರು ಮತ್ತು ಮ॥ ಎ. ರಾಮಣ್ಣನವರು ಈ ಏರ್ಪಾಟಿನಿಂದ ಕಕ್ಷಿಗಾರರಿಗೆ ಬಹು ಅನುಕೂಲವಾಗಿರುವುದರಿಂದ ಇದನ್ನು ಅನುಷ್ಠಾನಕ್ಕೆ ತರುವಲ್ಲಿ ಯಾರೂ ಆಕ್ಷೇಪಿಸುವುದಿಲ್ಲವೆಂದು ತಿಳಿಸಿದರು. ಅನಂತರ ಸರ್ವರ ಸಮ್ಮತಿಯಿಂದ ತಿದ್ದುಪಾಟಾಗತಕ್ಕದೆಂದು ನಿರ್ಧರಿಸಲ್ಪಟ್ಟಿತು.

ಅಪ್ರಾಪ್ತವಯಸ್ಕರು ಧೂಮಪಾನ ಮಾಡುವುದು.

ಈ ಧೂಮಪಾನ ನಿರೋಧಕ ವಿಧಿಯು ಸಭೆಯಲ್ಲೋದಲ್ಪಟ್ಟು, ಅರ್ಥದಂಡ ಮೊದಲಾದ ಶಿಕ್ಷೆಯ ವಿಚಾರವನ್ನು ಕುರಿತು ಆಲೋಚಿಸತಕ್ಕ ಬಗೆಗೆ ಮ॥ ಗಳಾದ ಎಚ್. ವಿ. ನಂಜುಂಡಯ್ಯನವರು, ಮ॥ ಸಯ್ಯದ್ ಅಮಿರ್ ಹಸನ್ರವರು, ರಂಗಯ್ಯಂಗಾರ್ಯರು, ಡಿ. ದೇವರಾಜ ಅರಸಿನವರು ಮತ್ತೂ ಶ್ರೀನಿವಾಸಯ್ಯಂಗಾರ್ಯರು ಇವರುಗಳಿಂದ ಕೂಡಿದ ಒಂದು ಸಭೆಯು ಗೊತ್ತುಮಾಡಲ್ಪಟ್ಟಿತು.

ಎವಿಡೆನ್ಸ್ ಆಕ್ಟು.

ಕೋರ್ಟುಗಳಿಗೆ ದಾಖಲೆಗಾಗಿ ಅರಮನೆಯ ಶಾಖೆಗೆ ಸಂಬಂಧಿಸಿದ ಕಾಗದ ಪತ್ರಗಳನ್ನೂ, ಪುಸ್ತಕಗಳನ್ನೂ ಒಪ್ಪಿಸುವಾಗ್ಗೆ ಅರಮನೆಯ ಶಾಖೆಯವರಿಗೂ, ಕಕ್ಷಿಗಾರರಿಗೂ ವೃಥಾ ತೊಂದರೆಯಾಗದಂತೆ ಎವಿಡೆನ್ಸ್ ಆಕ್ಟಿನಲ್ಲಿ ಬದಲಾಯಿಸಬೇಕೆಂದು ೨ ನೇ ಕೌನ್ಸಿಲರು ಸೂಚಿಸಿದುದನ್ನು ಸರ್ವರೂ ಸಮ್ಮತಿಸಿದರು.

ಪದಾರ್ಥಗಳಿಗೆ ಸುಂಕವನ್ನು ಕೊಡದೆ ಒಯ್ಯುವುದು.

ಸುಂಕವನ್ನು ಕೊಡಬೇಕಾದ ಪದಾರ್ಥಗಳಿಗೆ ಸುಂಕವನ್ನು ಸಲ್ಲಿಸದೆ ಕದ್ದೊಯ್ಯುವವರ ವಿಚಾರದಲ್ಲಿ ಕಠಿಣವಾದ ಕೆಲ ನಿಬಂಧನೆಗಳನ್ನು ಮ್ಯುನಿಸಿಪಲ್ ರೆಗ್ಯುಲೇಷನ್ನಿಗೆ ಸೇರಿಸಲು ಸೆಲೆಕ್ಟ್ ಕಮಿಟಿಯವರು ಮಾಡಿರುವ ವರದಿಯನ್ನು ೧ ನೇ ಕೌನ್ಸಿಲರೋದಿದರು. ಬಿಲ್ಲನ್ನು ಅನುಷ್ಠಾನಕ್ಕೆ ತರಬೇಕಾದವಶ್ಯಕತೆಯಿಲ್ಲವೆಂದು ಮ॥ ರಾಮಣ್ಣನವರು ವಿಷಾದದಿಂದ ತಿಳುಹಲು ೧ ನೇ ಕೌನ್ಸಿಲರು ಇದರಿಂದ ನ್ಯಾಯಪೂರ್ವಕವಲ್ಲದೆ ನಡಿಯತಕ್ಕ ಬರಿಗೆ ಭಯವಿಲ್ಲ ಮತ್ತೂ ಮ್ಯುನಿಸಿಪಾಲಿಟಿಯವರು ಸುಂಕವನ್ನೇ ತಪ್ಪಿಸಿ ಅನ್ಯೋ

ದುತ್ಪನ್ನವಾಗುವ ೮೦೦೦೧ ರೂ. ಗಳನ್ನು ಬಿಟ್ಟುಕೊಡುವುದು ಅಸಂಭವವು ಎಂದು ಸಮಾಧಾನವನ್ನು ಹೇಳಿದುದರ ಮೇಲೆ ಈ ಬಿಲ್ಲು ಮುಂದಣ ಸಭೆಯಲ್ಲಿ ಚರ್ಚಿಸಲ್ಪಡತಕ್ಕದೆಂದು ನಿರ್ಧರಿಸಲ್ಪಟ್ಟಿತು.

ಜಟಕಾ ಬಂಡಿಗಳು.

ಈ ಬಂಡಿಗಳ ವಿಷಯಕವಾದ ಬಿಲ್ಲಿನಮೇಲೆ ಸೆಲೆಕ್ಟ ಕಮಿಟಿಯವರು ಮಾಡಿರುವ ವರದಿಯು ೧ ನೇ ಕೌನ್ಸಿಲರಿಂದೋದಲ್ಪಟ್ಟು ಅನುಷ್ಠಾನಕ್ಕೆ ತರಲ್ಪಡತಕ್ಕದೆಂದು ನಿರ್ಧಾರವಾಯಿತು.

ಗ್ರಾಮದಾರೋಗ್ಯ.

ಗ್ರಾಮದಾರೋಗ್ಯದ ಬಿಲ್ಲಿನ ವಿಚಾರವಾಗಿ ಸೆಲೆಕ್ಟ ಕಮಿಟಿಯವರು ಮಾಡಿರುವ ವರದಿಯನ್ನು ೧ ನೇ ಕೌನ್ಸಿಲರೋದಿ, ಈ ಬಿಲ್ಲನ್ನು ಆಚರಣೆಗೆ ತರತಕ್ಕದು ಅತ್ಯವಶ್ಯಕವೆಂದು ಹೇಳಿದರು. ಅದರಮೇಲೆ ಮ॥ ಡಿ. ವೆಂಕಟರಾಮಯ್ಯನವರು ಈ ಬಿಲ್ಲಿನಿಂದ ಗ್ರಾಮಸ್ತರಿಗೆ ಬಹು ತೊಂದರೆಯುಂಟಾಗುತ್ತಾದಪ್ರಯುಕ್ತ ಅದನ್ನು ಅನುಷ್ಠಾನಕ್ಕೆ ತಾರದೆ ಅನಾರೋಗ್ಯವಾದ ಗ್ರಾಮಗಳನ್ನೇ ತೆಗೆದುಬಿಡುವುದುತ್ತಮವೆಂದು ಹೇಳಿದರು. ಅದಕ್ಕೆ ೧ ನೇ ಕೌನ್ಸಿಲರು ಗ್ರಾಮಸ್ತರಿಗೆ ತೊಂದರೆಯುಂಟಾಗದಂತೆ ವಿಧಿಯು ಮಾಡಲ್ಪಡುವುದು, ಆದರೆ ಮ॥ ಡಿ. ವೆಂಕಟರಾಮಯ್ಯನವರು ಹೇಳುವಂತೆ ಗ್ರಾಮವನ್ನೇ ತೆಗೆದುಬಿಡುವುದು ಅಸಂಭವವು ಎಂದು ಸಮಾಧಾನವನ್ನು ಹೇಳಿದ ಮೇಲೆ ಈ ಬಿಲ್ಲು ಮತ್ತೊಂದು ಸಭೆಯಲ್ಲಿ ಚರ್ಚಿಸಿ ಅನುಷ್ಠಾನಕ್ಕೆ ತರಲ್ಪಡತಕ್ಕದೆಂದು ನಿರ್ಧಾರವಾಯಿತು. ಅನಂತರ ಸಭೆಯು ಉಪಸಂಹರಿಸಲ್ಪಟ್ಟಿತು.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮೇ ತಾ॥ ೮ ನೇ ಸೋಮವಾರ.

ಅಭೂತಪೂರ್ವವಾದ ಕಿರೀಟಧಾರಣಮಹೋತ್ಸವವು.

ಭರತಖಂಡದ ರಾಜ್ಯಾಡಳಿತವು ಮೊಗಲ್ ಚಕ್ರವರ್ತಿಗಳ ತರುವಾಯ ಬ್ರಿಟಿಷರ ವಶವಾಗಿ ಈಸ್ಟ್ ಇಂಡ್ಯಾ ಕಂಪೆನಿಯವರ ಮೂಲಕ ನಡೆಸಲ್ಪಡುತ್ತಿದ್ದು ದೊಡ್ಡ ದಂಗೆಯಾದಮೇಲೆ, ಗತಿಸಿದ ವಿಕ್ಟೋರಿಯಾ ಮಹಾರಾಣಿಯವರಿಗೊಪ್ಪಿಸಲ್ಪಟ್ಟು, ಅವರು ಇಲ್ಲಿಯ ಚಕ್ರವರ್ತಿನಿಯಾಗಿ ಮಾಡಲ್ಪಟ್ಟರು. ಈ ವಿಕ್ಟೋರಿಯಾ ಮಹಾರಾಣಿಯವರಾಗಲಿ, ಅವರತರುವಾಯ ಚಕ್ರವರ್ತಿಗಳಾಗಿದ್ದ ಅವರ ಪುತ್ರರಾದ ಎಡ್ವರ್ಡ್ ಪ್ರಭುಗಳಾಗಲಿ ಭರತಖಂಡಕ್ಕೆ ಪ್ರತ್ಯಕ್ಷವಾಗಿ ದಯಮಾಡಿಸಿ ಕಿರೀಟಧಾರಣ ಮಹೋತ್ಸವವನ್ನು ನೆರವೇರಿಸಿರಲಿಲ್ಲ. ಆದರೆ ಈಗ ನಮ್ಮ ಚಕ್ರವರ್ತಿಗಳಾದ ಜಾರ್ಜ್ ಪ್ರಭುಗಳು ಚಕ್ರವರ್ತಿನಿಯವರಾದ ಮೇರಿ ರಾಣಿಯವರೊಡನೆ ಬರುವ ಡಿಶಂಬರ್ ತಿಂಗಳಲ್ಲಿ ಭರತಖಂಡಕ್ಕೆ ದಯಮಾಡಿಸಿ, ದಿಲ್ಲಿಯಲ್ಲಿ ಕಿರೀಟಧಾರಣಮಹೋತ್ಸವವನ್ನು ಪ್ರತ್ಯಕ್ಷವಾಗಿ ನಡಿಸಲು ನಿಶ್ಚಯಿಸಿರುವುದು ಭಾರತೀಯರ ಭಾಗ್ಯವಿಶೇಷವೇ ಸರಿ. ಇಂಥ ಅಭೂತಪೂರ್ವವಾದ ಮಹೋತ್ಸವವು ಅದ್ವಿತೀಯವಾಗಿ ನೆರವೇರಿಸಲ್ಪಡಲು ಬೇಕಾದ ಸನ್ನಾಹಗಳು ನಡೆಯುತ್ತಿವೆ. ಚಕ್ರವರ್ತಿಗಳ ಜನ್ಮೋತ್ಸವ, ಪಟ್ಟಾಭಿಷೇಕ ಮೊದಲಾದ ವಿಶೇಷಕಾಲದಲ್ಲಿ ಏನಾದರೊಂದು ಸ್ಮಾರಕಕಾರ್ಯವು ಮಾಡಲ್ಪಡುವುದು ವಾಡಿಕೆಯಾಗಿರುತ್ತದಷ್ಟೆ. ಈಗ ನಡೆಯುವ ಅಭೂತಪೂರ್ವವಾದ ಕಿರೀಟಧಾರಣ ಮಹೋತ್ಸವದ ಜ್ಞಾಪಕಾರ್ಥವಾಗಿ ಭರತಖಂಡಕ್ಕೆ ಒಂದು ಒಳ್ಳೇ ಉಪಕೃತಿಯನ್ನು ಅಂದರೆ ರಾಜಶಾಸನದಲ್ಲಿ ಏನಾದರೊಂದು ಸುಧಾರಣೆಯನ್ನು ಮಾಡಬೇಕೆಂದು ಲಂಡನ್ನಿನ ಟೈಂಸ್ ಪತ್ರಿಕಾಕರ್ತರೂ, ಭಾರತರಾಜರುಗಳಿಗೆ ಪೂರ್ವದಿಂದಲೂ ನಡೆದುಬಂದಿರುವ ತುಲಾಭಾರಕರ್ಮವನ್ನು ಚಕ್ರವರ್ತಿ ದಂಪತಿಗಳು ನಡೆಸಿ ಭಂಗಾರವನ್ನು ದಾನಮಾಡುವುದು ಯುಕ್ತವೆಂದು ಮತ್ತೆ ಕೆಲರೂ, ಭಾರತೀಯರಿಗೆ ದೇವತಾಸ್ವರೂಪವಾದ ಗೋವುಗಳನ್ನ ವಧಿಸುವುದನ್ನು ಚಕ್ರವರ್ತಿದಂಪತಿಗಳು ಭರತಖಂಡದಲ್ಲಿರುವವರೆಗೂ ಯಾರೂ ಮಾಡದಂತೆ ನಿಲ್ಲಿಸಿ, ಅವರು ಭರತಖಂಡವನ್ನು ಬಿಟ್ಟು ದಯಮಾಡಿಸಿದಮೇಲೆ ಅಕ್ಬರ್ ಚಕ್ರವರ್ತಿಯ ಕಾಲಗಳಲ್ಲಿ ಆಚರಣೆಯಲ್ಲಿದ್ದ ಗೋವಧೆಯವಿಷಯಕವಾದ ವಿಧಿಯನ್ನು ಅನುಷ್ಠಾನಕ್ಕೆ ತರುವುದು ಅತ್ಯುತ್ತಮವಾದ ಸ್ಮಾರಕಕಾರ್ಯವೆಂದು ಲಂಡನ್ನಿನ ರಿವ್ಯೂ ಆಫ್ ರಿವ್ಯೂಸ್ ಎಂಬ ಮಾಸಿಕ ಪುಸ್ತಕದ ಸಂಪಾದಕರಾದ ಮಿ॥ ಸ್ಟೆಡ್‌ರವರೂ ಅಭಿಪ್ರಾಯಪಟ್ಟಿರುತ್ತಾರೆ. ಈ ಸೂಚನೆಗಳಲ್ಲಿ ಮೊದಲನೆಯದಾದ ರಾಜಶಾಸನಸುಧಾರಣೆಯು ಈಗಲ್ಲದಿದ್ದರೆ ಮುಂದಾದರೂ ಕಾಲಾನುಗುಣ್ಯವಾಗಿ ಮಾಡಲ್ಪಡತಕ್ಕದಾದುದರಿಂದ ಈ ಸಂದರ್ಭದಲ್ಲಿ ಅಷ್ಟು ಪ್ರಯೋಜನಕಾರಿಯಾದುದಲ್ಲವು; ಎರಡನೆಯದಾದ ತುಲಾಭಾರವು ಭಾರತಚಕ್ರವರ್ತಿಗಳಿಗೆ ಸಂಪ್ರದಾಯವಾಗಿ ನಡೆದು ಬಂದುದಾದರೂ, ತುಲನೆ ಮಾಡಲ್ಪಟ್ಟ ಭಂಗಾರದ ವಿನಿಯೋಗದಿಂದ ಕೊಂಚ ಜನರಿಗೆ ಮಾತ್ರ ತಾತ್ಕಾಲಿಕ ತೃಪ್ತಿಯುಂಟಾಗುವುದರಿಂದ, ಭಾರತೀಯರೆಲ್ಲರಿಗೂ ಸಂತೋಷಕರವಾದುದಲ್ಲವು. ಆದರೆ ಮೂರನೆಯದಾದ ಗೋವಧೆಯ ನಿರೋಧವು ಮಾತ್ರ ಪ್ರತಿಯೊಬ್ಬ ಭಾರತೀಯನಿಗೂ ಅತ್ಯಂತ ಪ್ರಿಯಕರವಾಗಿರುವುದು. ಏಕೆಂದರೆ— ಈ ಗೋವು ಕಸಕಡ್ಡಿಯನ್ನು ತಿಂದುಕೊಂಡು ಭಾರತೀಯರ ಅಹಾರಕ್ಕವಶ್ಯಕವಾದ ಹಾಲು, ಮೊಸರು, ಬೆಣ್ಣೆಗಳನ್ನೊದಗಿಸಿಕೊಟ್ಟು ಪ್ರಾಣಾಧಾರವಾಗಿರುವುದರಿಂದ ಭಾರತೀಯರೆಲ್ಲರೂ ಈ ಗೋಮಾತೆಯನ್ನು ದೇವತಾಸ್ವರೂಪವೆಂದು ಭಾವಿಸಿಕೊಂಡಿರುವರು. ಮತ್ತೂ ವ್ಯವಸಾಯವೇ ಮುಖ್ಯ ಕಸುಬನ್ನಾಗುಳ್ಳ ಈ ಭರತಖಂಡದ ವ್ಯವಸಾಯವು ಈ ಪಶುಜಾತಿಯಿಂದಲೇ ನಡೆಯಬೇಕಾಗಿರುವುದು. ಪರದೇಶೀಯರು ಗೋವಿನ ಹಾಲು ತುಪ್ಪಗಳಿಗೆಪ್ರತಿಯಾಗಿ ಇತರಪದಾರ್ಥಗಳನ್ನೂ, ವ್ಯವಸಾಯಕ್ಕೆ ಬೇಕಾದ ದನಗಳಿಗೆ ಬದಲಾಗಿ ಕತ್ತೆ, ಕುದುರೆ, ಯಂತ್ರ ಮೊದಲಾದುವುಗಳನ್ನೂ ಕಲ್ಪಿಸಿಕೊಂಡಿರುವುದರಿಂದ ಅವರಿಗೆ ಈ ಗೋವುಗಳ ವಧೆಯಿಂದಾಗತಕ್ಕ ನಷ್ಟವು ತಿಳಿಯದು. ಇಂಥದುರಲ್ಲಿ ಅವರು ಭಾರತೀಯರಿಗೆ ದೇವತಾ ಸ್ವರೂಪವೂ, ಪ್ರಾಣಾಧಾರವೂ ಆದ ಗೋವುಗಳ ವಧೆಯನ್ನು ಖಂಡಿಸುವರೆಂದು ಹೇಗೆತಾನೇ ನಿರೀಕ್ಷಿಸುವುದು? ಅದುಕಾರಣ ಈ ಗೋವಧಾನಿರೋಧದ ವಿಷಯದಲ್ಲಿ ಗೋರಕ್ಷಣಾಭಿಮಾನಿಗಳಲ್ಲದವರ ಅಭಿಪ್ರಾಯವನ್ನು ನಿರೀಕ್ಷಿಸದೆ, ಈ ಅಭೂತಪೂರ್ವವಾದ ಕಿರೀಟಧಾರಣ ಮಹೋತ್ಸವದ ಜ್ಞಾಪಕಾರ್ಥವಾಗಿ ನಮ್ಮ ಸಾರ್ವಭೌಮರು ಗೋವಧೆಯು ಕಡಿಮೆಯಾಗುವಂತೆ ಮಾಡಿದುದೇಯಾದರೆ, ಗೋವಧೆಯ ದೋಷದಿಂದ ಈ ದೇಶಕ್ಕೆ ಆಗಾಗ್ಗೆ ಪ್ರಾಪ್ತವಾಗುತ್ತಿರುವ ಕ್ಷಾಮಡಾಮರ ಪ್ಲೇಗೋಪದ್ರವಗಳು ಶಾಂತವಾಗಿ, ಭಾರತೀಯರೆಲ್ಲರಿಗೂ ಸುಖಸಂಪತ್ತುವುಂಟಾಗುವುದು. ಅದುಕಾರಣ ಈ ಮಹೋತ್ಸವದ ಜ್ಞಾಪಕಾರ್ಥವಾಗಿ ಭಾರತೀಯರಿಗೆ ಉಪಕಾರವೇನಾದರೂ ಮಾಡಲ್ಪಡುವ ಸಂದರ್ಭದಲ್ಲಿ ಸರ್ವಜನಾದರಣೀಯವಾದ ಈ ಗೋವಧೆಯ ನಿರೋಧವನ್ನು ಮಾಡಿ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆಯುವವರಾಗಲೆಂದು ಇಚ್ಛಿಸುತ್ತೇವೆ.

ಅಲಿಗರಿನಲ್ಲಿ ಮಹಮ್ಮದೀಯರ ಸರ್ವಕಲಾಶಾಲೆ (ಯೂನಿವರ್ಸಿಟಿ) ಯನ್ನು ಸ್ಥಾಪಿಸಲು ಚಂದಾಹಣವನ್ನು ಕೂಡಿಸುವುದಕ್ಕಾಗೇರ್ಪಟ್ಟಿರುವ ಕಮಿಟಿಯ ಜಾಯಿಂಟ್ ಸೆಕ್ರೆಟರಿ ಮಿ॥ ಷೌಕತ್ ಅಲಿ, ಬಿ ಎ, ಯವರು, ಮೈಸೂರಿನ ಸೆಂಟ್ರಲ್ ಮಹಮ್ಮಡನ್ ಅಸೋಸಿಯೇಷನ್ನಿನ ಪ್ರೆಸಿಡೆಂಟರಾದ ನವಾಬ್ ಗುಲಾಂ ಅಹಮ್ಮದ್ ಸಾಹೆಬ್ ಕಲಮಿಯವರು, ಮದ್ರಾಸಿನ ಹೈಕೋರ್ಟ್ ವಕೀಲ್ ಮಿ॥ ಎ. ಹಾಮಿದ್‌ಹಸನ್, ಬಿ. ಎ., ಎಲ್ ಎಲ್. ಬಿ., ಯವರು ಮುಂತಾದ ಕೆಲರು ಕಳೆದ ತಾ॥ ೩ ರ ಬೆಳಿಗ್ಗೆ ರಾಜಧಾನಿಗೆ ಬಂದರು. ಪೊಲೀಸು ಸೂಪರಿಂಟೆಂಡೆಂಟ್ ಉದ್ಯೋಗದಿಂದ ನಿವೃತ್ತರಾಗಿರುವ ಮಿ॥ ಮಹಮ್ಮದ್ ಜಾಫರ್ ಸಾಹೇಬರು, ಅಮಲ್ದಾರ್ ಮಿ॥ ಮಹಮ್ಮದ್ ಷೀರ್ ಬಿ ಎ, ಯವರು ಮೊದಲಾದ ಮಹಮ್ಮದೀಯ ದೊಡ್ಡ ಮನುಷ್ಯರು ರೈಲ್ವೇ ಸ್ಟೇಷನ್ನಿನಲ್ಲಿ ಇದಿರ್ಗೊಂಡು ಮರ್‍ಯಾದಿಸಿದರು. ಮಿ॥ ಷೌಕತ್ ಅಲಿ ಮೊದಲಾದ ದೊಡ್ಡಮನುಷ್ಯರು ಕಳೆದ ತಾ॥ ೩ ರ ಸಾಯಂಕಾಲ ರಾಜಧಾನಿಯ ಟರ್ಪ ಹಾಲಿನಲ್ಲಿ ಮಹಮ್ಮದೀಯರ ಸಭೆಯೊಂದನ್ನು ಸೇರಿಸಿ, ಸರ್ವಕಲಾಶಾಲೆಯನ್ನು ಸ್ಥಾಪಿಸಬೇಕಾದ ಅವಶ್ಯಕತೆಯನ್ನು ಕುರಿತು ಪ್ರತಿಯೊಬ್ಬನ ಮನಸ್ಸಿಗೂ ಹಿಡಿಯುವಂತೆ ಭಾಷಣಮಾಡಿ, ಮಹಮ್ಮದೀಯ ಮತಾಭಿಮಾನಿಗಳೆಲ್ಲರೂ ಶಕ್ತ್ಯನುಸಾರ ದ್ರವ್ಯಸಹಾಯಮಾಡಬೇಕೆಂದು ಪ್ರಾರ್ಥಿಸಿದರು. ಅನಂತರ ಇಲ್ಲಿಯ ಸರ್ಕಾರಿಯಧಿಕಾರಿಗಳು ಪ್ರತಿಯೊಬ್ಬರೂ ಒಂದೊಂದು ತಿಂಗಳ ಸಂಬಳವನ್ನು ಕೊಡುತ್ತೇವೆಂದೂ, ಉಳಿದ ವರ್ತಕರು ಮೊದಲಾದವರು ೫೦೦, ೩೦೦, ೧೦೦ ಹೀಗೆಕೊಡುತ್ತೇವೆಂದೂ ವಾಗ್ದಾನಮಾಡಿದರು. ಒಂಟೆತ್ತಿನ ಬಂಡಿಯನ್ನು ಹೊಡೆಯುವ ಮಹಮ್ಮದೀಯನೊಬ್ಬನು ರೂ. ೧-೨-೦ ಯನ್ನು ಆ ಕೂಡಲೆ ಒಪ್ಪಿಸಲು, ಸೆಕ್ರೆಟರಿಯವರು ಅದನ್ನು ಅತ್ಯಾದರದಿಂದ ಸ್ವೀಕರಿಸಿ ಈ ೧ ರೂ. ೨ ಆಣೆಯು ೧ ಲಕ್ಷ ರೂ. ಗಿಂತಲೂ ಅಧಿಕವಾದುದೆಂದು ಸಭಿಕರಿಗೆ ತಿಳುಹಲು, ಮತ್ತೊಬ್ಬ ಮಹಮ್ಮದೀಯನು ಎದ್ದು ೧ ರೂ. ೨ ಆಣೆಗೆ ೧೫ ರೂ. ಕೊಟ್ಟು ಕೊಂಡುಕೊಳ್ಳುತ್ತೇನೆಂದು ಹೇಳಿದನು. ಅದನ್ನು ಕೇಳಿ ಕೋಲಾರದ ಗಣಿಗಳ ಕೆಂಟ್ರಾಕ್ಟರೊಬ್ಬರು ಅದಕ್ಕೆ ೩೦ ರೂ. ಗಳನ್ನು ಕೊಟ್ಟು ಕೊಳ್ಳುತ್ತೇನೆಂದು ಹೇಳಿ ಆ ೧ ರೂ. ೨ ಆಣೆಯ ಜತೆಗೆ ೩೧ ರೂ. ಗಳನ್ನು ಕೊಟ್ಟರು. ಸೆಕ್ರೆಟರಿಯವರು ಆ ಬಡವನು ಕೊಟ್ಟ ೧ ರೂ. ೨ ಆಣೆಯು ೧ ಲಕ್ಷ ರೂ. ಗಿಂತಲೂ ಅಧಿಕವಾದುದೆಂದು ಹೇಳಿ ಅದಕ್ಕೆ ಗೌರವವನ್ನುಕೊಟ್ಟುದೇ ಹೀಗೆ ಒಬ್ಬರಿಗೊಬ್ಬರಲ್ಲಿ ಸ್ಪರ್ಧೆಯು ಹುಟ್ಟಲು ಕಾರಣವಾಯಿತು.

ಒಳದೇಶದವೃತ್ತಾಂತ.

ಕಳೆದ ಸೋಮವಾರ ರಾತ್ರಿ ದಿವಾನರು ಪರಿವಾರ ಸಹಿತ ಉದಕಮಂಡಲಕ್ಕೆ ದಯಮಾಡಿಸಿದರು.

ಬೌರಿಂಗಪೇಟೆಯಿಂದ ಕೋಲಾರಕ್ಕೆ ರೈಲು ಮಾರ್ಗವನ್ನು ಹಾಕಲು ಪ್ಲಾನು ಬರೆಯಲ್ಪಟ್ಟು ಸಿದ್ಧವಾಗಿರುತ್ತದೆ. ಈ ಲೋಹಮಾರ್ಗವು ಈಗಿರುವ ಬಂಡಿಯ ಮಾರ್ಗದ ಪಕ್ಕದಲ್ಲೇ ಬರುವಂತಿದೆ.

ಕಳೆದ ಮಂಗಳವಾರ ಬೆಂಗಳೂರ ಜುಮ್ಮಾಮಸೀದಿ ಬೀದಿಯಲ್ಲಿ ಮ್ಯುನಿಸಿಪಲ್ ಕಮಿಷನರು ಮ॥ ದೊಪ್ಪಣ್ಣನವರ ಬಸಪ್ಪನವರು ೨೦೦೦ ಜನರ ಮೇಲ್ಪಟ್ಟು ಬಡಬಗ್ಗರಿಗೆ ಅನ್ನವನ್ನು ಹಾಕಿಸಿದರು.

ರೆವಿನ್ಯೂ ಕಮಿಷನರು ಮ॥ ಎಂ. ರಂಗಸ್ವಾಮಯ್ಯಂಗಾರ್ಯರು ೧೫ ದಿನಗಳ ರಜವನ್ನು ಪಡೆದುಕೊಂಡಿರುವುದರಿಂದ, ಅವರು ಬರುವವರೆಗೆ ಪೊ॥ ಇ॥ ಜನರಲ್ ಮ॥ ದೇವರಾಜ ಅರಸಿನವರು ತಮ್ಮ ಕೆಲಸದೊಡನೆ ರೆ॥ ಕಮಿಷನರ ಕೆಲಸವನ್ನು ನೋಡಿಕೊಳ್ಳುವಂತೆ ಅಪ್ಪಣೆಯಾಗಿರುತ್ತದೆ.

ಶ್ರೀಮನ್ ಮಹಾರಾಜರವರು ಕಳೆದ ಸೋಮವಾರ ಉದಕಮಂಡಲದಿಂದ ರಾಜಧಾನಿಗೆ ದಯಮಾಡಿಸಿದ್ದು ಮಾತೃಶ್ರೀಯವರಾದ ವಾಣಿವಿಲಾಸ ಸನ್ನಿಧಿಯವರ ಮಾತೃಶ್ರೀಯವರ ದೇಹಸ್ಥಿತಿಯು ಉತ್ತಮವಾಗಿರುವುದನ್ನು ಪರಾಮರಿಸಿಕೊಂಡು ತಮ್ಮ ಮಾತೃಶ್ರೀಯವರೊಡನೆ ಕಳೆದ ಬುಧವಾರ ಉದಕಮಂಡಲಕ್ಕೆ ಮರಳಿ ಮೋಟಾರಿನಲ್ಲಿ ದಯಮಾಡಿಸಿದರು.

ಹಾಸನದ ಡಿ॥ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರಾದ ಮ॥ ಕೆ. ಎನ್. ವೀರಭದ್ರಯ್ಯನವರು, ಮನೆಯ ಬಾಗಿಲನ್ನು ಭದ್ರಪಡಿಸಿಕೊಂಡು ಸಂಸಾರ ಸಮೇತ ಬೆಂಗಳೂರಿಗೆ ಬಂದಿದ್ದಾಗ್ಗೆ ಕಳ್ಳರು ಅವರ ಮನೆಯ ಬೀಗವನ್ನೊಡೆದು ಒಳಗೆ ನುಗ್ಗಿ ೩೦೦ ರೂ. ಬೆಲೆ ಬಾಳುವ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು.

ಚಿಕ್ಕಮಗಳೂರಲ್ಲಿ ಶ್ರೀಮದ್ಯುವರಾಜರ ವಿವಾಹಮಹೋತ್ಸವದ ಜ್ಞಾಪಕಾರ್ಥವಾಗಿ ಯುವರಾಜರ ಹೆಸರಿನ ಮೇಲೆ ಕಟ್ಟಲ್ಪಡಬೇಕೆಂದಿರುವ ಟರ್ಪ ಹಾಲಿಗೆ ಶಂಕುಸ್ಥಾಪನೆಯನ್ನು ಶ್ರೀಮದ್ಯುವರಾಜರ ಜನ್ಮದಿನವಾದ ಈ ತಿಂಗಳ ತಾ॥ ೨೮ ರಲ್ಲಿ ಮಾಡಲು ಶ್ರೀಮನ್ಮಹಾರಾಜರವರಪ್ಪಣೆಯು ಕೇಳಲ್ಪಟ್ಟಿರುತ್ತದೆ. ಈ ಕಟ್ಟಡಕ್ಕಾಗಿ ಬೀರೂರಿನ ಪತ್ರಿ ಮ॥ ವೀರಪ್ಪನವರು ೪೦೦೦ ರೂ. ಗಳನ್ನು ಕೊಡಲು ವಾಗ್ದಾನ ಮಾಡಿರುವುದಾಗಿ ಕೇಳುತ್ತೇವೆ

ಪುಂಗನೂರು ರಾಜರಾದ ಬಸವರಾಯಲು ಯಶೋವಂತ ಬಹದ್ದೂರ್‌ರವರು ಪತ್ನಿಪುತ್ರಾದಿಗಳೊಡನೆ ಕಳೆದ ತಾ॥ ೩ನೇ ಭಾನುವಾರ ಮೇಲುಬಂಡಿಯಲ್ಲಿ ರಾಜಧಾನಿಗೆ ದಯಮಾಡಿಸಿ ಗತಿಸಿದ ಶೇಷಾದ್ರಿ ಅಯ್ಯರ ಬಂಗಲೆಯಲ್ಲಿ ಶ್ರೀಮನ್ಮಹಾರಾಜರ ಅತಿಥಿಗಳಾಗಿರುವರು. ರಾಜಧಾನಿಯಲ್ಲಿ ಅರಮನೆ ಮೊದಲಾದ ಪ್ರೇಕ್ಷಣೀಯವಾದ ಸ್ಥಳಗಳನ್ನೂ, ನಂಜನಗೂಡು, ಶ್ರೀರಂಗಪಟ್ಟಣವನ್ನೂ ನೋಡಿಕೊಂಡು ಇಷ್ಟರಲ್ಲೇ ಹಿಂತಿರುಗಿ ದಯಮಾಡಿರುವವರಾಗಿರುವರು.

ಸಿದ್ಧಘಟ್ಟದಲ್ಲಿ ಕಳೆದ ತಾ॥ ೨೦ ರಲ್ಲಿ ೬೫ ವರ್ಷ ವಯಸ್ಸಿನ ಒಬ್ಬ ಅಕ್ಕಸಾಲೆಯು ಸತ್ತುಹೋದನು. ಇವನ ಮರಣದ ವಿಚಾರದಲ್ಲಿ ಅನುಮಾನ ಹುಟ್ಟಿದುದರಮೇಲೆ ಅಮಲ್ದಾರರೂ, ಡಾಕ್ಟರೂ ಮರಣವಾದ ಸ್ಥಳಕ್ಕೆ ಹೋಗಿ ವಿಚಾರಿಸುವಲ್ಲಿ ಅವನು ಇಟ್ಟುಕೊಂಡಿದ್ದವಳಮೇಲೆ ಅನುಮಾನವು ಕಂಡುಬಂದುದರಿಂದ ಅವಳ ಮನೆಯನ್ನು ಶೋಧಿಸುವಲ್ಲಿ ೧೦೦೦ ರೂ. ಬೆಲೆಯವರಿಗಿನ ಆಭರಣವು ಸಿಕ್ಕಿದುವು. ಪೋಲೀಸರು ಈ ಕೃತ್ಯವನ್ನಡಿಸಿದವರನ್ನು ಹಿಡಿಯ ಯತ್ನಿಸಿದಾರೆ.

ಬೆಂಗಳೂರಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಶಂಕರಮಠದಲ್ಲಿ ಸ್ಥಾಪಿತವಾಗಿರುವ ಸಂಸ್ಕೃತ ವಿದ್ಯಾಪೀಠದ ಆರಂಭೋತ್ಸವವು ಶೃಂಗೇರಿಮಠದ ವೇ॥ ಕೃಷ್ಣಶಾಸ್ತ್ರಿಗಳಿಂದ ಕಳೆದ ತಾ॥ ೩ ರಲ್ಲಿ ವಿಧ್ಯುಕ್ತವಾಗಿ ನಡಿಸಲ್ಪಟ್ಟಿತು. ಆ ಕಾಲದಲ್ಲಿ ಸರ್ ಪಿ. ಎನ್. ಕೃಷ್ಣಮೂರ್ತಿಯವರು, ಮ॥ ವಿ. ಪಿ. ಮಾಧವರಾಯರು, ಮ॥ ದೇಶಮುಖ ಶ್ಯಾಮರಾಯರು, ಆರ್ಕಾಟ್ ಶ್ರೀನಿವಾಸಾಚಾರ್ಯರು, ಮ॥ ಪಿ ಎನ್. ಪೂರ್ಣಯ್ಯನವರು, ಮ॥ ಎಂ. ನಾರಾಯಣರಾಯರು ಮೊದಲಾದ ದೊಡ್ಡಮನುಷ್ಯರು ದಯಮಾಡಿಸಿದ್ದರು.

ತರೀಕೆರೆ ತಾ॥ ಸಾಂತವೇರಿಯ ಪೋಲೀಸು ದಫೇದಾರ್ ಚಲುವಯ್ಯನು, ಕಡೂರ್ ತಾ॥ ಸಕ್ರೆಪಟ್ಟಣದವರಿಬ್ಬರು ಮತ್ತು ದೋರನಾಳದವನೊಬ್ಬನು ಅಂತು ನಾಲ್ಕು ಜನರು ಕೆಲಕಾಲದಿಂದ ಮಾಯವಾಗಿ ಎಷ್ಟು ತಡಕಿದರೂ ಅವರ ವಿಚಾರವೇ ಗೊತ್ತಾಗಿಲ್ಲವು. ಆದರೆ ಮಿ॥ ಟೇಟರವರ ತೋಟದೊಳಗಿರುವ ಕೆರೆಯಲ್ಲಿ ಒಂದು ತಲೆಯ ಬುರುಡೆಯೂ, ಕಾಲಿನ ಒಂದು ಭಾಗವೂ ಸಿಕ್ಕಿರುವುವು. ಇದರಿಂದ ಆ ದಫೇದಾರನು ಕೊಲ್ಲಲ್ಪಟ್ಟು ಅವನಶವವು ಆ ಕೆರೆಯೊಳಗೆ ಬಿಸಾಡಲ್ಪಟ್ಟಿರಬಹುದೆಂದೂ, ಈ ಕೃತ್ಯವು ಒಬ್ಬ ಲಂಬಾಣಿ ಗುಂಪಿನಿಂದ ನಡೆದಿರಬಹುದೆಂದೂ ಊಹಿಸಲ್ಪಟ್ಟಿರುತ್ತದೆ.

ಕಳೆದ ತಾ॥ ೨ ರಲ್ಲಿ ಬೆಂಗಳೂರ ಜನೋಪಕಾರಿ ದೊಡ್ಡಣ್ಣನವರ ಪಾಠಶಾಲಾ ಕಟ್ಟಡದಲ್ಲಿ ಗುಂಟೂರಿನ ಡಿಸ್ಟ್ರಿಕ್ಟ ಮುನಸೀಫರಾದ ಮ॥ ಜೆ. ಎಂ ನಲ್ಲಸ್ವಾಮಿಪಿಳ್ಳೆಯವರು ಶೈವ ಸಿದ್ಧಾಂತದಮೇಲೆ ಅಂಗ್ಲೇಯ ಭಾಷೆಯಲ್ಲಿ ಒಂದು ಪ್ರೌಢವಾದ ಭಾಷಣವನ್ನು ಮಾಡಿದರು. ಹಿಂದಣ ದಿವಾನರಾದ ಮ॥ ರಾ॥ ವಿ. ಪಿ ಮಾಧವರಾಯರು ಅಗ್ರಾಸನವನ್ನು ವಹಿಸಿದ್ದು ಉಪನ್ಯಾಸಕರು ತಮಿಳು ಭಾಷೆಯಲ್ಲಿರುವ ಶೈವಸಿದ್ಧಾಂತಗ್ರಂಥಗಳನ್ನು ಚನ್ನಾಗಿ ಪರಿಶೀಲನೆಮಾಡಿ ಅವುಗಳನ್ನು ಪ್ರಸಾರಕ್ಕೆ ತರಲು ಬಹು ಶ್ರಮಪಡುತ್ತಿರುವರೆಂದು ಮೊದಲಾಗಿ ಕಾಲೋಚಿತವಾದ ಭಾಷಣವನ್ನು ಮಾಡಿದರು.

ಮೈಸೂರ ಮಹಾರಾಜ ಕಾಲೇಜಿನ ಪಂಡಿತರುಗಳೊಬ್ಬರಾದ ಮ॥ ಎನ್. ಎಸ್, ಸುಬ್ಬರಾವ್, ಬಿ ಎ. ಯವರಿಗೆ, ಬೆಂಗಳೂರ ಡಿ॥ ಸ್ಕೂಲುಗಳ ಡಿಪ್ಯುಟಿ ಇನ್ಸ್‌ಪೆಕ್ಟರಾದ ಮ॥ ಬಿ. ದಾಸಪ್ಪ, ಬಿ. ಎ., ಯವರು ತಮ್ಮ ಮಗಳನ್ನು ಕೊಟ್ಟು ವಿವಾಹಮಾಡಲು ನಿಶ್ಚಯಿಸಿರುವುದಾಗಿಯೂ, ಮ॥ ಸುಬ್ಬರಾಯರು [illegible] ಬೇರೆ[illegible]ರಾದುದರಿಂದ ಅವರ ಬಾಂಧವ್ಯವನ್ನು [illegible] ಕೆಲ ಕ ಮಂತಿಗಳು ವಿರೋಧಿಸುತ್ತಿರುವುದಾಗಿಯೂ ಕೇಳುತ್ತೇವೆ. ಮ॥ ದಾಸಪ್ಪನವರು ಧೃಢಮನಸ್ಕರಾದುದರಿಂದ ನೀಚಜನರ ದುರ್ಬೋಧನೆಗೆ ಕಿವಿಗೊಡದೆ ತಮ್ಮ ಸಂಕಲ್ಪವನ್ನು ನೆರವೇರಿಸಿ ನಿಜವಾದ ಸಮಾಜಸುಧಾರಕರೆಂದು ಹೆಸರ್ಗೊಂಡು ಬೂಟಾಟಿಕೆಯ ಸುಧಾರಕರಿಗೆ ಮಾರ್ಗದರ್ಶಕರಾಗಲೆಂದು ಅಪೇಕ್ಷಿಸುತ್ತೇವೆ.

ರೇವಾಮಹಾರಾಜರಿಂದ ಕಳುಹಲ್ಪಟ್ಟಿದ್ದ ಮ॥ ಶ್ರೀನಿವಾಸಾಚಾರ್ಯರು ಕಳೆದ ಮಂಗಳವಾರ ಅರಮನೆಯಲ್ಲಿ ಶ್ರೀಮನ್ ಮಹಾರಾಜರ ದರ್ಶನವನ್ನು ತೆಗೆದುಕೊಂಡು ಪ್ರಯಾಗದಲ್ಲಿ ಕೂಡುವ ಭರತಖಂಡದ ಮಹಾಸಭೆಗೆ [illegible] ಮತ ಸಿದ್ಧಾಂತವನ್ನು ಬಲ್ಲ ಕೆಲ ಪಂಡಿತರುಗಳನ್ನು ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಶ್ರೀಮನ್ಮಹಾರಾಜರವರು ಅವರನ್ನು [illegible] ಮನ್ನಿಸಿ, ಅರಮನೆಯ ವಿದ್ವಾಂಸರಾದ ಮ॥ [illegible] ಚಾರ್ಯರೂ, ಪಾಠಶಾಲೆಯ ಮ॥ [illegible], ಹೋಗುವಂತೆ ಅಪ್ಪಣೆಮಾಡಿದರು. [illegible] ಮ॥ ಪುತ್ತೂರು ರಾಘವಾಚಾರ್ಯರೂ, ಮ॥ [illegible] ನರಸಿಂಹಾಚಾರ್ಯರೂ ಹೋಗಲು ಗೊತ್ತಾಗಿರುವುದು. ಇವರುಗಳಲ್ಲದೆ ಮ॥ ಎ. ಗೋವಿಂದಾಚಾರ್ಯರು ಮುಂತಾದವರು ಜೊತೆಗೆ ಹೊರಡುವವರಾಗಿರುವರು.

೧ ನೇ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಶೆಟ್ಟರ ಪರ್ಸನಲ್ ಅಸಿಸ್ಟೆಂಟರಾಗಿದ್ದ ಮ॥ ಎಚ್. ಪಿ ಗಂಗಾಧರಪ್ಪ ಬಿ. ಎ., ಯವರು ಕುಣಿಗಲ್ ತಾ॥ ಅಮಲ್ದಾರರಾಗಿ ನೇಮಿಸಲ್ಪಟ್ಟಿರುವುದರಿಂದ ಮ॥ ರಾ॥ ಎ. ಸಂಗಪ್ಪ, ಬಿ. ಎ. ಬಿ. ಎಲ್, ರವರು ಪರ್ಸನಲ್ ಅಸಿಸ್ಟೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆ. ಇವರು ಮ॥ ಸೆಟ್ಟರ ಎರಡನೇ ಅಳಿಯಂದಿರು, ಮತ್ತೂ ಪಾಲಾಜಿಯಲ್ಲಿ ಒಳ್ಳೇ ಪ್ರಸಿದ್ಧಿಯ ಕುಟುಂಬಕ್ಕೆ ಸೇರಿದವರು. ಇವರ ಹಿರಿಯರು ಪಾಲಾಜಿಯಿಂದ ಮದ್ರಾಸಿಗೆ ಬಂದು ದೊಡ್ಡವ್ಯಾಪಾರವನ್ನು ಮಾಡಿಕೊಂಡಿದ್ದರು. ಮತ್ತೂ ಇವರೂ ಬೆಂಗಳೂರಿಗೆ ಬರುವುದಕ್ಕೆ ಮೊದಲು ಮದ್ರಾಸಿನಲ್ಲಿ ಹೈಕೋರ್ಟ್ ವಕೀಲರಾಗಿದ್ದರು. ಮ॥ ಸಂಗಪ್ಪನವರು ಬಹು ಸರಸಿಗಳು, ಸ್ನೇಹಪರರು ಮತ್ತೂ ನಿಗರ್ವಶಿಖಾಮಣಿಗಳು. ಇವರಿಗೆ ಇನ್ನೂ ಉನ್ನತಪದವಿಯು ಜಾಗ್ರತೆಯಾಗಿ ದೊರೆಯಲೆಂದು ಹಾರೈಸುವೆವು.

ಚಿಕ್ಕ ಬಳ್ಳಾಪುರದಲ್ಲಿ ಪ್ಲೇಗು ನಿಂತುಹೋಗಿದ್ದುದರಿಂದ ಗುಡಸಲಿನಲ್ಲಿ ವಾಸಮಾಡುವ ಜನರು ಮನೆಗಳಿಗೆ ಹಿಂತಿರುಗುವಷ್ಟರಲ್ಲಿ ಪ್ಲೇಗು ಪುನಃ ಆರಂಭವಾಗಿ ೪-೫ ಜನರು ಏಕಕಾಲದಲ್ಲಿ ಸತ್ತುಹೋಗಲು ಜನರು ಊರಿಗೆ ಬರುವ ಯೋಚನೆಯನ್ನು ಬಿಟ್ಟು ಮಳೆಗಾಲವಾದುದರಿಂದ ತಮ್ಮ ಗುಡಸಲುಗಳನ್ನೇ ಭದ್ರಪಡಿಸಿಕೊಳ್ಳಯತ್ನಿಸಿದರು. ಈ ಊರ ಮುನಸೀಫ್‌ಕೋರ್ಟಿನ ಹಿಂಭಾಗದಲ್ಲಿದ್ದ ಒಂದು ಗುಡಿಸಲಿಗೆ ಕಳೆದ ತಾ॥ ೨೯ರಲ್ಲಿ ಬೆಂಕಿಯು ಬಿದ್ದು ಹೊತ್ತಿಕೊಂಡಿತು. ಆ ಗುಡಿಸಲಿನೊಳಗೆ ಗಂಡಹೆಂಡತಿ ಮತ್ತು ಇಬ್ಬರು ಮಕ್ಕಳಿದ್ದರು. ಗುಡಸಲಿನ ಮೇಲು ಹೊದ್ದಿಕೆಯಲ್ಲವೂ ಹೊತ್ತಿಕೊಂಡುರಿಯುವಾಗ ಗಂಡಹೆಂಡರು ತಮ್ಮ ಗುಡಸಲಿಗೆ ಬೆಂಕಿ ಬಿದ್ದಿರುವುದೆಂದು ತಿಳಿದು ದಿಗಿಲು ಬಿದ್ದು ಹೊರಕ್ಕೋಡಿಬಂದು ಕೊಂಚ ಹೊತ್ತಿನಮೇಲೆ ಒಳಗೆ ಮಲಗಿದ್ದ ತಮ್ಮಿಬ್ಬರು ಮಕ್ಕಳನ್ನು ಸ್ಮರಿಸಿಕೊಂಡು ವಿಶೇಷವಾಗಿ ವ್ಯಸನಪಡುತ್ತ ಮಕ್ಕಳನ್ನು ಬದುಕಿಸಿಕೊಡಲು ಪೋಲೀಸರನ್ನು ಪ್ರಾರ್ಥಿಸಿಕೊಂಡರು. ಆಗ ಪೋಲೀಸರಲ್ಲೊಬ್ಬರು ತಮ್ಮ ಪ್ರಾಣದಮೇಲಿನ ಆಸೆಯನ್ನು ಬಿಟ್ಟು ಉರಿಯೊಳಗೆ ನುಗ್ಗಿ ಆ ಎರಡು ಮಕ್ಕಳನ್ನೂ, ಹಣವನ್ನಿಟ್ಟಿದ್ದ ಒಂದು ಪೆಟ್ಟಿಗೆಯನ್ನೂ ತಂದು ಕೊಡಲು ಆ ತಂದೆ ತಾಯಿಗಳು ತಮ್ಮ ಮಕ್ಕಳ ಪ್ರಾಣವನ್ನುಳಿಸಿದುದಕ್ಕಾಗಿ ಆ ಪೋಲೀಸರನ್ನು ಕೊಂಡಾಡಿದರು.

ವರ್ತಮಾನಸಂಗ್ರಹ.

ಮೆಸಿಡೋನಿಯಾ ಎಂಬ ಹಡಗಿನಲ್ಲಿ ೧೫,೦೦,೦೦೦ ರೂ. ಬೆಲೆಯ ಭಂಗಾರವು ಭರತಖಂಡಕ್ಕೆ ಕಳುಹಲ್ಪಟ್ಟಿರುವುದು.

ಮಹಮ್ಮದೀಯರಲ್ಲಿ ಪ್ರಸಿದ್ಧರಾದ ಡಾಕ್ಟರ್ ಸೈಯದ್ ಅಲಿಬಿಲಿಗ್ರಾಮಿಯವರು ಶ್ವಾಸಬಂಧನದಿಂದ ಮೃತರಾದರೆಂದು ತಂತಿಯ ವಾರ್ತೆಯು ಬಂದಿದೆ.

ಕಳೆದ ಏಪ್ರಿಲ್ ತಾ॥ ೨೯ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೩೩೬೪೪ ಜನರಿಗೆ ಪ್ಲೇಗು ತಗಲಿ ೩೨೦೬೩ ಜನರು ಸತ್ತರು. ಇದರಲ್ಲಿ ಪಂಜಾಬಿನಲ್ಲ ೧೩,೪೮೧ ಮರಣವಾಗಿರುವುದು.

ಲಂಡನಿನಲ್ಲಿ ಕುದುರೆಯ ಬಂಡಿಗಳು ಈಗ ಬಹು ಕಡಿಮೆಯಾಗಿರುವುವು. ಮತ್ತೂ ಇನ್ನು ೩ ವರ್ಷ ಕಾಲದಲ್ಲಿ ಒಂದೂ ಇಲ್ಲದಂತಾಗಿ ಬರೇ ಮೋಟಾರು ಬಂಡಿಗಳ ಮಯವಾಗುವುವೆಂದು ನಿರೀಕ್ಷಿಸಲ್ಪಟ್ಟಿದೆ.

ಡಾಕ್ಟರ್ ಗಿಲ್ಬರ್ಟ್ ರವರು ಚೇಳಿನಂತೆ ಬಾಲದಲ್ಲಿ ವಿಷವನ್ನುಳ್ಳ ಒಂದು ಹಾವನ್ನೂ, ಕಲಕತ್ತಾದ ಮತ್ತೊಬ್ಬನು ಬಾಯಿಂದ ಕಡಿಯತಕ್ಕ ಚೇಳನ್ನೂ ಕಂಡು ಹಿಡಿದಿರುವರಂತೆ. ಸೃಷ್ಟಿಯ ವೈಚಿತ್ರವನ್ನು ಎಷ್ಟೆಂದು ಹೇಳೋಣ!

ದಿಲ್ಲಿಯಲ್ಲಿ ಯುನಾನಿ ಆಸ್ಪತ್ರೆಯನ್ನು ಸ್ಥಾಪಿಸುವ ಪ್ರಯತ್ನವು ನಡೆಯುತ್ತಿದೆ. ಇದಕ್ಕಾಗಿ ರಾಂಪುರದ ನವಾಬರು ೫೦೦೦೦ ರೂ. ಗಳನ್ನೂ, ಭೂಪಾಲಿನ ಬೇಗಂರವರು ೩೦೦೦೦ರೂ.ಗಳನ್ನೂ ಕೊಡಲು ವಾಗ್ದಾನಮಾಡಿರುತ್ತಾರೆ.

ಕಳೆದ ತಾ॥ ೪ ರಲ್ಲಿ ಕಲಕತ್ತಾದಲ್ಲಿ ಟಿಕಾರಿ ಮಹಾರಾಜ ದಂಪತಿಗಳು ೩ ಜನ ಐರೋಪ್ಯಸ್ತ್ರೀಯರೊಡನೆ ಮೋಟಾರು ಬಂಡಿಯಲ್ಲಿ ಕುಳಿತು ಹೋಗುತ್ತಿರುವಾಗ್ಗೆ ವೆಲ್ಲಿಂಗ್ಟನ್ ಚೌಕದಲ್ಲಿ ನೀರಿನ ಶಾಖೆಯವರು ೨೦ ಅಡಿ ಆಳದವರೆಗೆ ತೋಡಿದ್ದ ಹಳ್ಳಕ್ಕೆ ಮೋಟಾರು ಬಂಡಿಯು ಮಗುಚಿಕೊಂಡು ಒಳಗೆ ಕುಳಿತಿದ್ದವರೆಲ್ಲರೂ ಹಳ್ಳದೊಳಗೆ ಬಿದ್ದು ಕೂಗಿಕೊಂಡರು. ಜನರು ಅದನ್ನು ಕೇಳಿ ಕೂಡಲೆ ಬಂದು ಅವರೆಲ್ಲರನ್ನೂ ಮೇಲಕ್ಕೆತ್ತಿದರು. ಮಹಾರಾಜರಿಗೂ ಐರೋಪ್ಯಸ್ತ್ರೀಯರಿಗೂ, ಬಂಡಿಯನ್ನು ನಡೆಸುವವನಿಗೂ ಭೂರಾಪೆಟ್ಟುಬಿದ್ದಿರುತ್ತದೆ.

ಅಮೃತಸರ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ಉದ್ಯೋಗದ ಮೇಲಿರುವ ಅಸಿಸ್ಟೆಂಟ್ ಸರ್ಜನ್ ಮ॥ ಭಗವಾನ್‌ದಾಸ್‌ರವರು ಕೆವನೂಕಿ ಎಂಬ ಗ್ರಾಮದಲ್ಲಿ ಜನರು ತಾವಾಗಿ ಕಳೆದ ೩ ವರ್ಷಗಳಿಂದಲೂ ತಪ್ಪದೆ ಇನಾಕ್ಯುಲೇಷನನ್ನು ಮಾಡಿಸಿಕೊಳ್ಳುತ ಬಂದಿರುವುದರಿಂದ ಆ ಗ್ರಾಮಕ್ಕೆಮಾತ್ರ ಪ್ಲೇಗು ರೋಗವು ತಗಲದೆ ನೆರೆ ಗ್ರಾಮಗಳೆಲ್ಲವೂ ರೋಗಪೀಡಿತವಾಗಿರುತ್ತವೆ. ಮತ್ತು ಕಳೆದ ೧೦ ವರ್ಷಗಳಲ್ಲಿ ಈ ಗ್ರಾಮದ ಪ್ರಜಾಸಂಖ್ಯೆಯು ೧೦೦ ರಲ್ಲಿ ೨೩ ರಂತೆ ಹೆಚ್ಚಿ ಇತರ ಗ್ರಾಮಗಳಲ್ಲಿ ಬಹು ಕಡಿಮೆಯಾಗಿರುತ್ತದೆ. ಎಂದು ತಿಳಿಸಿರುತ್ತಾರೆ.

ತುರ್ಕಿಯಲ್ಲಿ ಚಿಕ್ಕವಯಸ್ಸಿನ ಡಾಕ್ಟರುಗಳು ವಿದ್ಯಾಪ್ರಶಸ್ತಿಯನ್ನು ಪಡೆಯುವಾಗ “ ಏಕಕಾಲದಲ್ಲಿ ಒಬ್ಬ ಐಶ್ವರ್ಯವಂತನಾದ ರೋಗಿಯು ಮತ್ತೊಬ್ಬ ಬಡವನಾದ ರೋಗಿಯು ನನ್ನ ಸಹಾಯವನ್ನಪೇಕ್ಷಿಸಿದಲ್ಲಿ ನಾನು ಐಶ್ವರ್ಯವಂತನಿಂದ ಕೊಡಲ್ಪಡುವ ಹೆಚ್ಚು ಹಣವನ್ನು ಲಕ್ಷಿಸದೆ ಬಡರೋಗಿಯತೆಗೆ ಹೋಗಿ ಅವನ ರೋಗವನ್ನು ಗುಣಪಡಿಸಲು ಸಾಹಸಪಡುವೆನು. ಮತ್ತೂ ಸಾಂಕ್ರಾಮಿಕ ಅಥವಾ ಇತರ ರೋಗಗಳಿಗೆ ಚಿಕಿತ್ಸೆಯನ್ನು ಮಾಡಲು ಹಗಲು ರಾತ್ರಿ ಎನ್ನದೆ ಎಲ್ಲಾ ಕಾಲದಲ್ಲಿಯೂ ಹೋಗಲು ನಾನೆಂದಿಗೂ ತಿರಸ್ಕರಿಸುವುದಿಲ್ಲ ” ಎಂದು ಪ್ರಮಾಣವನ್ನು ಮಾಡುವರು.

ಕಲಕತ್ತಾದ ಒಬ್ಬ ಹೈಕೋರ್ಟ್ ವಕೀಲನ ಮಾವನು ತನ್ನ ಮಗಳನ್ನು ಗಂಡನಾದ ವಕೀಲನು ಹಿಂಸಿಸುತ್ತಾನೆಂದು ಆಲಿಪುರದ ಡಿಪ್ಯುಟಿಮ್ಯಾಜಿಸ್ಟ್ರೇಟರಲ್ಲಿ ಅರ್ಜಿಯನ್ನು ಕೊಟ್ಟಿರುವುದರಮೇಲೆ ಹೆಂಡತಿಯಕೂಡ ಅವಿಶ್ವಾಸದಿಂದಿರುವ ಬಗೆಗೆ ಹೊಣೆಯನ್ನು ತೆಗೆದುಕೊಳ್ಳದಿರಲು ಕಾರಣವೇನಾದರು ಇದ್ದರೆ ತೋರಿಸಬೇಕೆಂದು ಡಿ॥ ಮ್ಯಾಜಿಸ್ಟ್ರೇಟರು ಆ ವಕೀಲನನ್ನು ಕೇಳಿರುತ್ತಾರೆ. ಈ ವಿಧವಾದ ವಿವಾದವು ಹುಟ್ಟಿರುವುದು ಇದೇ ಮೊದಲು. ಊರಿನವರ ವಿವಾದಗಳನ್ನೆಲ್ಲ ಹಿಡಿದು ತೊಡೆಬಾಡುವ ನ್ಯಾಯಮೂರ್ತಿಗಳೇ ಹೀಗೆ ನ್ಯಾಯಮಾರ್ಗವನ್ನು ಬಿಟ್ಟು ನಡಿಯುವುದಾದರೆ ಇನ್ನು ನ್ಯಾಯವನ್ನರಿಯದವರ ಪಾಡನ್ನು ಹೇಳುತಕ್ಕದೇನಿದೆ !

ಕಲ್ಕತ್ತಾದ ೪ ನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಕಳೆದ ಗುರುವಾರ ದುರ್ಮಾರ್ಗದಿಂದ ಬಟ್ಟೆಗಳನ್ನು ತೆಗೆದುಕೊಂಡಿದ್ದ ಷೇರ್‌ಕನ್ನು ಮತ್ತೂ ಗೋವಿಂದವಿಶ್ವಾಸ ಇವರಿಬ್ಬರ ವಿಚಾರಣೆಯನ್ನು ಮಾಡಿ ಒಂದುವರ್ಷ ಕಠಿಣ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದೆಯೆಂದು ಹೇಳಿದಕೂಡಲೇ ಷೇರ್‌ಕನ್ನು ಎಂಬುವನು— “ ನೀವು ನನಗೆ ಅನ್ಯಾಯಮಾಡಿದುದರಿಂದ ನಿಮಗೆ ಇದೇ ಫಲವು ” ಎಂದು ಹೇಳಿ ತನ್ನ ಕೋಟಿನೊಳಗೆ ಬಚ್ಚಿಟ್ಟಿದ್ದ ಜೋಡನ್ನು ತೆಗೆದು ಜಡ್ಜಿಯವರ ಮೇಲೆ ಎಸೆದನು. ಪೋಲೀಸರು ಅವನನ್ನು ಆ ಕೂಡಲೆ ಹಿಡಿದು ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಿ ೧೮ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಬೆಳಗಾವಿಯ ಡಿವಿಜನಲ್ ಫಾರೆಸ್ಟ್ ಅಫೀಸರಾದ ಬಟರ್‌ವರ್ತ್ ರವರು ಬೇಟೆಗಾಗಿ ಸಿರಿಸಿಯ ಕಾಡಿಗೆ ಹೋಗಿದ್ದು ಅಲ್ಲಿ ಒಂದು ದೊಡ್ಡ ಮರದಮೇಲೆ ಕುಳಿತುಕೊಂಡು ಹುಲಿಯ ಆಗಮನದ ನಿರೀಕ್ಷಣೆಯಲ್ಲೇ ಇದ್ದು ಅದು ಬಂದೊಡನೆಯೇ ಗುರಿಕಟ್ಟಿ ಗುಂಡನ್ನು ಹೊಡೆದರು. ಆ ಹುಲಿಯು ಗುಂಡೇಟನ್ನು ತಿಂದಕ್ಷಣದಲ್ಲಿಯೇ ಮರದಮೇಲಕ್ಕೆ ಹಾರಿ ಅವರನ್ನು ಕೆಳಗೆ ಕೆಡಹಿ ತಾನೂ ಕೆಳಗೆ ಬಿದ್ದು ಅವರಮೇಲೆ ಆಗತುಕೊಂಡಿತು. ಬಟರ್‌ವರ್ತ್‌ರವರು ಅದರಕೂಡ ಬಹಳ ಹೊತ್ತು ಹೋರಾಡಿ ಕಡೆಗೆ ಅದನ್ನು ಕೊಂದುಬಿಟ್ಟರು. ಆದರೆ ಈ ಹೋರಾಟದಲ್ಲಿ ಬಟರ್‌ವರ್ತರವರ ಮೈಯಲ್ಲ ವಿಶೇಷವಾಗಿ ಗಾಯವಾಗಿದ್ದುದರಿಂದ ಅವರು ಆಸ್ಪತ್ರೆಗೊಯ್ಯಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಲಿರುವರು.

ಚಕ್ರವರ್ತಿ ದಂಪತಿಗಳು ದಿಲ್ಲಿಯಲ್ಲಿ ಕಿರೀಟಧಾರಣ ಮಹೋತ್ಸವವನ್ನು ತೀರಿಸಿಕೊಂಡು ಕಲಕತ್ತಾಕ್ಕೆ ದಯಮಾಡಿಸಿದ ವೇಳೆಯಲ್ಲಿ ಅದ್ವಿತೀಯವಾದ ಉತ್ಸವಗಳನ್ನು ನಡಿಸಲು ತಕ್ಕ ಏರ್ಪಾಟುಗಳು ಆಲೋಚಿಸಲ್ಪಡುತ್ತಿವೆ. ಈ ಸಂದರ್ಭದಲ್ಲಿ ಅಲ್ಲಿಯ ಸಂಗೀತಸಮಾಜದವರು ೪ ಲಕ್ಷ ರೂಪಾಯಿಗಳನ್ನು ವ್ಯಯಮಾಡಿ ಬಡವರಿಗೆ ಅನ್ನವನ್ನು ಹಾಕಿಸಲು ಮತ್ತೂ ತಮ್ಮ ವೆಚ್ಚದಿಂದಲೇ ಚಕ್ರವರ್ತಿ ದಂಪತಿಗಳಿಂದ ತುಲಾಭಾರ ಕರ್ಮವನ್ನು ಮಾಡಿಸಲು ಪ್ರಯತ್ನಿಸಿರುವರು. ಇದಕ್ಕಾಗಿ ೩ ಮಣ ಭಂಗಾರವು ಬೇಕಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ. ತುಲನವಾದಮೇಲೆ ಭಂಗಾರದ ಬಹುಭಾಗವು ಪ್ರಜೋಪಯುಕ್ತವಾದ ಕಾರ್ಯಕ್ಕೆ ವಿನಿಯೋಗಿಸಲ್ಪಟ್ಟು ಉಳಿದುದು ಬಡವರಿಗೆ ಹಂಚಲ್ಪಡುವುದಾಗಿ ಯೋಚಿಸಲ್ಪಟ್ಟಿರುವುದು

ಕಲ್ಕತ್ತಾದಲ್ಲಿ ಒಬ್ಬ ೨೦ ವರುಷಗಳ ವಯಸ್ಸಿನ ಯುವತಿಯು ತನ್ನ ೩೦ ವರ್ಷ ವಯಸ್ಸಿನ ಗಂಡನು ಅಸ್ವಸ್ಥನಾಗಿ ಎಷ್ಟು ಚಿಕಿತ್ಸೆಯನ್ನು ಮಾಡಿಸಿದಾಗ್ಯೂ ಗುಣವನ್ನು ಹೊಂದದೆ ಉತ್ಕ್ರಮಣಾವಸ್ಥೆಯಲ್ಲಿದ್ದುದನ್ನು ತಿಳಿದು, ಗಂಗಾತೀರ್ಥವನ್ನು ತೆಗೆದುಕೊಂಡು ಬಂದು ಬಾಯಲ್ಲಿ ಹಾಕಿ ಬಹುವಾಗಿ ರೋದಿಸಿದನಂತರ, ಒಂದು ಕೊಠಡಿಯೊಳಗೆ ಹೋಗಿ ಆಭರಣಗಳನ್ನೆಲ್ಲ ಧರಿಸಿಕೊಂಡು ಒಳ್ಳೇ ವಸ್ತ್ರಗಳನ್ನುಟ್ಟು, ಅರಶಿನ ಕುಂಕುಮ ಗಂಧಪುಷ್ಪ ಮೊದಲಾದವುಗಳಿಂದ ಅಲಂಕೃತಳಾಗಿ ಕೊಠಡಿಯ ಬಾಗಿಲನ್ನು ಭದ್ರವಾಗಿ ಮುಚ್ಚಿ ತಾನುಟ್ಟಿದ್ದ ಬಟ್ಟೆಗೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿಯಿಂದ ಹೊತ್ತಿಸಿಕೊಂಡು ಪತಿಧ್ಯಾನಾಪರಾಯಣಳಾಗಿದ್ದಳು. ಈ ಸಂದರ್ಭವನ್ನು ನೆರೆಯವರು ತಿಳಿದು ಬಂದು ಬಾಗಿಲನ್ನೊಡೆದು ಒಳಗೆ ನುಗ್ಗಿ ಬೆಂಕಿಯನಾಹುತದಿಂದ ಆಕೆಯನ್ನು ತಪ್ಪಿಸಲು ಎಷ್ಟು ಪ್ರಯತ್ನಪಟ್ಟಾಗ್ಯೂ ಆಕೆಯು ಅವಕಾಶವನ್ನು ಕೊಡದೆ ಪಂಚತ್ವವನ್ನೈದಿದಳು. ಈ ವಿಷಯವನ್ನು ಪಟ್ಟಣದ ನಾರೀಮಣಿಯರು ತಿಳಿದು ಬಂದು ಆಕೆಯ ಪತಿಭಕ್ತಿ ಮನಸ್ಥೈರ್ಯ ಮೊದಲಾದ ಸದ್ಗುಣಗಳನ್ನು ಕೊಂಡಾಡಿ ಆಕೆಯ ಎಲುಬುಗಳನ್ನು ತಮ್ಮ ಮನೆಯಲ್ಲಿಟ್ಟು ಪೂಜೆಮಾಡುವುದಕ್ಕಾಗಿ ತೆಗೆದುಕೊಂಡು ಹೋದರಂತೆ.

ಮದರಾಸಿನ ಅಗಸರ ಪೇಟೆಯಲ್ಲಿ ಒಬ್ಬ ಪೋಲೀಸ್ ಕಾನಿಸ್ಟೇಬಲು ರಾಜಮಾರ್ಗದಲ್ಲಿ ಜಲಬಾಧೆಯನ್ನು ಮಾಡಿದರೆಂದು ಇಬ್ಬರು ಮನುಷ್ಯರನ್ನು ಹಿಡಿದು ಪ್ರತಿಯೊಬ್ಬನೂ ೨ ಆಣೆಯನ್ನು ತನಗೆ ಕೊಟ್ಟಲ್ಲಿ ಬಿಟ್ಟುಬಿಡುತ್ತೇನೆ ಇಲ್ಲದಿದ್ದರೆ ಪೋಲೀಸು ಠಾಣಕ್ಕೆ ಕರೆದುಕೊಂಡು ಹೋಗುತ್ತೇನೆಂದು ಹೆದರಿಸುತ್ತ, ಅವರು ಹಣವನ್ನು ಕೊಡುತ್ತೇವೆಂದು ಹೇಳಿದಾಗ್ಯೂ ಅವರನ್ನು ಬಿಡದೆ ಹೋಗಲು, ಆ ಇಬ್ಬರಲ್ಲೊಬ್ಬನು ಆ ಕಾನಿಸ್ಟೇಬಲನ್ನು ತನ್ನ ಮನೆಗೆ ಕರೆದುಕೊಂಡುಹೋಗಿ ಅವನಕೈಲಿ ೨ ಆಣೆಯನ್ನಿಟ್ಟು ಕಳುಹಿದನು. ಮತ್ತೊಬ್ಬನು ಈ ಕಾನಿಸ್ಟಬಲಿಗೆ ಹೇಗಾದರೂ ಮೋಸಮಾಡಬೇಕೆಂದು ಯೋಚಿಸಿ ಸಮೀಪದಲ್ಲಿದ್ದ ಒಂದು ತೋಪಿಗೆ ಕರೆದುಕೊಂಡು ಹೋಗಿ ಅಲ್ಲಿ ಯಾವುದೊ ಒಂದು ವಿವಾದವನ್ನು ವಿಚಾರಿಸುತ್ತಿದ್ದ ಪೋಲೀಸು ಡಿ॥ ಕಮಿಷನರ ಬಳಿಗೆ ಈ ಕಾನಿಸ್ಟಬಲು ಕಾಣದಂತೆ ಹೋಗಿ ನಡೆದ ಸಂಗತಿಯನ್ನೆಲ್ಲ ಅವರಿಗೆ ರಹಸ್ಯವಾಗಿ ತಿಳಿಸಿದನು. ಡಿ॥ ಕಮಿಷನರು ತಮ್ಮ ಜೇಬಿನಿಂದ ೮ ಕಾಲಾಣೆಗಳನ್ನು ತೆಗೆದು ಅವುಗಳಮೇಲೆ ಏನೋ ಒಂದು ಗುರ್ತನ್ನು ಮಾಡಿ ಅವನ ಕೈಲಿ ಕೊಟ್ಟು ಅವನ್ನು ಕಾನಿಸ್ಟಬಲಿಗೆ ಕೊಟ್ಟುಬಿಡೆಂದು ಹೇಳಿ ಕಳುಹಿದರು. ಅವನು [illegible]

ದುತ್ಪನ್ನವಾಗುವ ೮೦೦೦೧ ರೂ. ಗಳನ್ನು ಬಿಟ್ಟುಕೊಡುವುದು ಅಸಂಭವವು ಎಂದು ಸಮಾಧಾನವನ್ನು ಹೇಳಿದುದರ ಮೇಲೆ ಈ ಬಿಲ್ಲು ಮುಂದಣ ಸಭೆಯಲ್ಲಿ ಚರ್ಚಿಸಲ್ಪಡತಕ್ಕದೆಂದು ನಿರ್ಧರಿಸಲ್ಪಟ್ಟಿತು.

ಜಟಕಾ ಬಂಡಿಗಳು.

ಈ ಬಂಡಿಗಳ ವಿಷಯಕವಾದ ಬಿಲ್ಲಿನಮೇಲೆ ಸೆಲೆಕ್ಟ್ ಕಮಿಟಿಯವರು ಮಾಡಿರುವ ವರದಿಯು ೧ ನೇ ಕೌನ್ಸಿಲರಿಂದೋದಲ್ಪಟ್ಟು ಅನುಷ್ಠಾನಕ್ಕೆ ತರಲ್ಪಡತಕ್ಕದೆಂದು ನಿರ್ಧಾರವಾಯಿತು.

ಗ್ರಾಮದಾರೋಗ್ಯ.

ಗ್ರಾಮದಾರೋಗ್ಯದ ಬಿಲ್ಲಿನ ವಿಚಾರವಾಗಿ ಸೆಲೆಕ್ಟ್ ಕಮಿಟಿಯವರು ಮಾಡಿರುವ ವರದಿಯನ್ನು ೧ ನೇ ಕೌನ್ಸಿಲರೋದಿ, ಈ ಬಿಲ್ಲನ್ನು ಆಚರಣೆಗೆ ತರತಕ್ಕದು ಅತ್ಯವಶ್ಯಕವೆಂದು ಹೇಳಿದರು. ಅದರಮೇಲೆ ಮ॥ ಡಿ. ವೆಂಕಟರಾಮಯ್ಯನವರು ಈ ಬಿಲ್ಲಿನಿಂದ ಗ್ರಾಮಸ್ಥರಿಗೆ ಬಹು ತೊಂದರೆಯುಂಟಾಗುತ್ತಾದಪ್ರಯುಕ್ತ ಅದನ್ನು ಅನುಷ್ಠಾನಕ್ಕೆ ತಾರದೆ ಅನಾರೋಗ್ಯವಾದ ಗ್ರಾಮಗಳನ್ನೇ ತೆಗೆದುಬಿಡುವುದುತ್ತಮವೆಂದು ಹೇಳಿದರು. ಅದಕ್ಕೆ ೧ ನೇ ಕೌನ್ಸಿಲರು ಗ್ರಾಮಸ್ಥರಿಗೆ ತೊಂದರೆಯುಂಟಾಗದಂತೆ ವಿಧಿಯು ಮಾಡಲ್ಪಡುವುದು, ಆದರೆ ಮ॥ ಡಿ. ವೆಂಕಟರಾಮಯ್ಯನವರು ಹೇಳುವಂತೆ ಗ್ರಾಮವನ್ನೇ ತೆಗೆದುಬಿಡುವುದು ಅಸಂಭವವು ಎಂದು ಸಮಾಧಾನವನ್ನು ಹೇಳಿದ ಮೇಲೆ ಈ ಬಿಲ್ಲು ಮತ್ತೊಂದು ಸಭೆಯಲ್ಲಿ ಚರ್ಚಿಸಿ ಅನುಷ್ಠಾನಕ್ಕೆ ತರಲ್ಪಡತಕ್ಕದೆಂದು ನಿರ್ಧಾರವಾಯಿತು. ಅನಂತರ ಸಭೆಯು ಉಪಸಂಹರಿಸಲ್ಪಟ್ಟಿತು.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮೇ ತಾ॥ ೮ ನೇ ಸೋಮವಾರ.

ಅಭೂತಪೂರ್ವವಾದ ಕಿರೀಟಧಾರಣಮಹೋತ್ಸವವು.

ಭರತಖಂಡದ ರಾಜ್ಯಾಡಳಿತವು ಮೊಗಲ್ ಚಕ್ರವರ್ತಿಗಳ ತರುವಾಯ ಬ್ರಿಟಿಷರ ವಶವಾಗಿ ಈಸ್ಟ್ ಇಂಡ್ಯಾ ಕಂಪೆನಿಯವರ ಮೂಲಕ ನಡೆಸಲ್ಪಡುತ್ತಿದ್ದು ದೊಡ್ಡ ದಂಗೆಯಾದಮೇಲೆ, ಗತಿಸಿದ ವಿಕ್ಟೋರಿಯಾ ಮಹಾರಾಣಿಯವರಿಗೊಪ್ಪಿಸಲ್ಪಟ್ಟು, ಅವರು ಇಲ್ಲಿಯ ಚಕ್ರವರ್ತಿನಿಯಾಗಿ ಮಾಡಲ್ಪಟ್ಟರು. ಈ ವಿಕ್ಟೋರಿಯಾ ಮಹಾರಾಣಿಯವರಾಗಲಿ, ಅವರತರುವಾಯ ಚಕ್ರವರ್ತಿಗಳಾಗಿದ್ದ ಅವರ ಪುತ್ರರಾದ ಎಡ್ವರ್ಡ್ ಪ್ರಭುಗಳಾಗಲಿ ಭರತಖಂಡಕ್ಕೆ ಪ್ರತ್ಯಕ್ಷವಾಗಿ ದಯಮಾಡಿಸಿ ಕಿರೀಟಧಾರಣ ಮಹೋತ್ಸವವನ್ನು ನೆರವೇರಿಸಿರಲಿಲ್ಲ. ಆದರೆ ಈಗ ನಮ್ಮ ಚಕ್ರವರ್ತಿಗಳಾದ ಜಾರ್ಜ್ ಪ್ರಭುಗಳು ಚಕ್ರವರ್ತಿನಿಯವರಾದ ಮೇರಿ ರಾಣಿಯವರೊಡನೆ ಬರುವ ಡಿಶೆಂಬರ್ ತಿಂಗಳಲ್ಲಿ ಭರತಖಂಡಕ್ಕೆ ದಯಮಾಡಿಸಿ, ಡಿಲ್ಲಿಯಲ್ಲಿ ಕಿರೀಟಧಾರಣಮಹೋತ್ಸವವನ್ನು ಪ್ರತ್ಯಕ್ಷವಾಗಿ ನಡಿಸಲು ನಿಶ್ಚಯಿಸಿರುವುದು ಭಾರತೀಯರ ಭಾಗ್ಯವಿಶೇಷವೇ ಸರಿ. ಇಂಥ ಅಭೂತಪೂರ್ವವಾದ ಮಹೋತ್ಸವವು ಅದ್ವಿತೀಯವಾಗಿ ನೆರವೇರಿಸಲ್ಪಡಲು ಬೇಕಾದ ಸನ್ನಾಹಗಳು ನಡೆಯುತ್ತಿವೆ. ಚಕ್ರವರ್ತಿಗಳ ಜನ್ಮೋತ್ಸವ, ಪಟ್ಟಾಭಿಷೇಕಮೊದಲಾದ ವಿಶೇಷಕಾಲದಲ್ಲಿ ಏನಾದರೊಂದು ಸ್ಮಾರಕಕಾರ್ಯವು ಮಾಡಲ್ಪಡುವುದು ವಾಡಿಕೆಯಾಗಿರುತ್ತದಷ್ಟೆ. ಈಗ ನಡೆಯುವ ಅಭೂತಪೂರ್ವವಾದ ಕಿರೀಟಧಾರಣ ಮಹೋತ್ಸವದ ಜ್ಞಾಪಕಾರ್ಥವಾಗಿ ಭರತಖಂಡಕ್ಕೆ ಒಂದು ಒಳ್ಳೇ ಉಪಕೃತಿಯನ್ನು ಅಂದರೆ ರಾಜಶಾಸನದಲ್ಲಿ ಏನಾದರೊಂದು ಸುಧಾರಣೆಯನ್ನು ಮಾಡಬೇಕೆಂದು ಲಂಡನ್ನಿನ ಟೈಂಸ್ ಪತ್ರಿಕಾಕರ್ತರೂ, ಭಾರತರಾಜರುಗಳಿಗೆ ಪೂರ್ವದಿಂದಲೂ ನಡೆದುಬಂದಿರುವ ತುಲಾಭಾರಕರ್ಮವನ್ನು ಚಕ್ರವರ್ತಿ ದಂಪತಿಗಳು ನಡೆಸಿ ಭಂಗಾರವನ್ನು ದಾನಮಾಡುವುದು ಯುಕ್ತವೆಂದು ಮತ್ತೆ ಕೆಲರೂ, ಭಾರತೀಯರಿಗೆ ದೇವತಾಸ್ವರೂಪವಾದ ಗೋವುಗಳನ್ನ ವಧಿಸುವುದನ್ನು ಚಕ್ರವರ್ತಿದಂಪತಿಗಳು ಭರತಖಂಡದಲ್ಲಿರುವವರೆಗೂ ಯಾರೂ ಮಾಡದಂತೆ ನಿಲ್ಲಿಸಿ, ಅವರು ಭರತಖಂಡವನ್ನು ಬಿಟ್ಟು ದಯಮಾಡಿಸಿದಮೇಲೆ ಅಕ್ಬರ್ ಚಕ್ರವರ್ತಿಯ ಕಾಲದಲ್ಲಿ ಆಚರಣೆಯಲ್ಲಿದ್ದ ಗೋವಧೆಯವಿಷಯಕವಾದ ನಿಧಿಯನ್ನು ಅನುಷ್ಠಾನಕ್ಕೆ ತರುವುದು ಅತ್ಯುತ್ತಮವಾದ ಸ್ಮಾರಕಕಾರ್ಯವೆಂದು ಲಂಡನ್ನಿನ ರಿವ್ಯೂ ಆಫ್ ರಿವ್ಯೂಸ್ ಎಂಬ ಮಾಸಿಕ ಪುಸ್ತಕದ ಸಂಪಾದಕರಾದ ಮಿ॥ ಸ್ಟೆಡ್‌ರವರೂ ಅಭಿಪ್ರಾಯಪಟ್ಟಿರುತ್ತಾರೆ. ಈ ಸೂಚನೆಗಳಲ್ಲಿ ಮೊದಲನೆಯದಾದ ರಾಜಶಾಸನಸುಧಾರಣೆಯು ಈಗಲ್ಲದಿದ್ದರೆ ಮುಂದಾದರೂ ಕಾಲಾನುಗುಣ್ಯವಾಗಿ ಮಾಡಲ್ಪಡತಕ್ಕದಾದುದರಿಂದ ಈ ಸಂದರ್ಭದಲ್ಲಿ ಅಷ್ಟು ಪ್ರಯೋಜನಕಾರಿಯಾದುದಲ್ಲವು; ಎರಡನೆಯದಾದ ತುಲಾಭಾರವು ಭಾರತಚಕ್ರವರ್ತಿಗಳಿಗೆ ಸಂಪ್ರದಾಯವಾಗಿ ನಡೆದು ಬಂದುದಾದರೂ, ತುಲನೆ ಮಾಡಲ್ಪಟ್ಟ ಭಂಗಾರದ ವಿನಿಯೋಗದಿಂದ ಕೊಂಚ ಜನರಿಗೆ ಮಾತ್ರ ತಾತ್ಕಾಲಿಕ ತೃಪ್ತಿಯುಂಟಾಗುವುದರಿಂದ, ಭಾರತೀಯರೆಲ್ಲರಿಗೂ ಸಂತೋಷಕರವಾದುದಲ್ಲವು. ಆದರೆ ಮೂರನೆಯದಾದ ಗೋವಧೆಯ ನಿರೋಧವು ಮಾತ್ರ ಪ್ರತಿಯೊಬ್ಬ ಭಾರತೀಯನಿಗೂ ಅತ್ಯಂತ ಪ್ರಿಯಕರವಾಗಿರುವುದು. ಏಕೆಂದರೆ— ಈ ಗೋವು ಕಸಕಡ್ಡಿಯನ್ನು ತಿಂದುಕೊಂಡು ಭಾರತೀಯರ ಆಹಾರಕ್ಕವಶ್ಯಕವಾದ ಹಾಲು, ಮೊಸರು, ಬೆಣ್ಣೆಗಳನ್ನೊದಗಿಸಿಕೊಟ್ಟು ಪ್ರಾಣಾಧಾರವಾಗಿರುವುದರಿಂದ ಭಾರತೀಯರೆಲ್ಲರೂ ಈ ಗೋಮಾತೆಯನ್ನು ದೇವತಾಸ್ವರೂಪವೆಂದು ಭಾವಿಸಿಕೊಂಡಿರುವರು. ಮತ್ತೂ ವ್ಯವಸಾಯವೇ ಮುಖ್ಯ ಕಸುಬನ್ನಾಗುಳ್ಳ ಈ ಭರತಖಂಡದ ವ್ಯವಸಾಯವು ಈ ಪಶುಜಾತಿಯಿಂದಲೇ ನಡೆಯಬೇಕಾಗಿರುವುದು. ಪರದೇಶೀಯರು ಗೋವಿನ ಹಾಲು ತುಪ್ಪಗಳಿಗೆಪ್ರತಿಯಾಗಿ ಇತರಪದಾರ್ಥಗಳನ್ನೂ, ವ್ಯವಸಾಯಕ್ಕೆ ಬೇಕಾದ ದನಗಳಿಗೆ ಬದಲಾಗಿ ಕತ್ತೆ, ಕುದುರೆ, ಯಂತ್ರ ಮೊದಲಾದುವುಗಳನ್ನೂ ಕಲ್ಪಿಸಿಕೊಂಡಿರುವುದರಿಂದ ಅವರಿಗೆ ಈ ಗೋವುಗಳ ವಧೆಯಿಂದಾಗತಕ್ಕ ನಷ್ಟವು ತಿಳಿಯದು. ಇಂಥದುರಲ್ಲಿ ಅವರು ಭಾರತೀಯರಿಗೆ ದೇವತಾಸ್ವರೂಪವೂ, ಪ್ರಾಣಾಧಾರವೂ ಆದ ಗೋವುಗಳ ವಧೆಯನ್ನು ಖಂಡಿಸುವರೆಂದು ಹೇಗೆತಾನೇ ನಿರೀಕ್ಷಿಸುವುದು? ಅದುಕಾರಣ ಈ ಗೋವಧಾನಿರೋಧದ ವಿಷಯದಲ್ಲಿ ಗೋರಕ್ಷಣಾಭಿಮಾನಿಗಳಲ್ಲದವರ ಅಭಿಪ್ರಾಯವನ್ನು ನಿರೀಕ್ಷಿಸದೆ, ಈ ಅಭೂತಪೂರ್ವವಾದ ಕಿರೀಟಧಾರಣ ಮಹೋತ್ಸವದ ಜ್ಞಾಪಕಾರ್ಥವಾಗಿ ನಮ್ಮ ಸಾರ್ವಭೌಮರು ಗೋವಧೆಯು ಕಡಿಮೆಯಾಗುವಂತೆ ಮಾಡಿದುದೇಯಾದರೆ, ಗೋವಧೆಯ ದೋಷದಿಂದ ಈ ದೇಶಕ್ಕೆ ಆಗಾಗ್ಗೆ ಪ್ರಾಪ್ತವಾಗುತ್ತಿರುವ ಕ್ಷಾಮಡಾಮರ ಕ್ಷುದ್ರೋಪದ್ರವಗಳು ಶಾಂತವಾಗಿ, ಭಾರತೀಯರೆಲ್ಲರಿಗೂ ಸುಖಸಂಪತ್ತುಂಟಾಗುವುದು. ಅದುಕಾರಣ ಈ ಮಹೋತ್ಸವದ ಜ್ಞಾಪಕಾರ್ಥವಾಗಿ ಭಾರತೀಯರಿಗೆ ಉಪಕಾರವೇನಾದರೂ ಮಾಡಲ್ಪಡುವ ಸಂದರ್ಭದಲ್ಲಿ ಸರ್ವಜನಾದರಣೀಯವಾದ ಈ ಗೋವಧೆಯ ನಿರೋಧವನ್ನು ಮಾಡಿ ಆಚಂದ್ರಾರ್ಕವಾದ ಕೀರ್ತಿಯನ್ನು ಪಡೆಯುವವರಾಗಲೆಂದು ಇಚ್ಛೈಸುತ್ತೇವೆ.

ಆಲಿಗರಿನಲ್ಲಿ ಮಹಮ್ಮದೀಯರ ಸರ್ವಕಲಾಶಾಲೆ (ಯೂನಿವರ್ಸಿಟಿ) ಯನ್ನು ಸ್ಥಾಪಿಸಲು ಚಂದಾಹಣವನ್ನು ಕೂಡಿಸುವುದಕ್ಕಾಗೇರ್ಪಟ್ಟಿರುವ ಕಮಿಟಿಯ ಜಾಯಿಂಟ್ ಸೆಕ್ರೆಟರಿ ಮಿ॥ ಷೌಕತ್ ಅಲಿ, ಬಿ ಎ, ಯವರು, ಮೈಸೂರಿನ ಸೆಂಟ್ರಲ್ ಮಹಮ್ಮಡನ್ ಅಸೋಸಿಯೇಷನ್ನಿನ ಪ್ರೆಸಿಡೆಂಟರಾದ ನವಾಬ್ ಗುಲಾಂ ಅಹಮ್ಮದ್ ಸಾಹೇಬ್ ಕಲಮಿಯವರು, ಮದ್ರಾಸಿನ ಹೈಕೋರ್ಟ್ ವಕೀಲ್ ಮಿ॥ ಎ. ಹಾಮಿದ್‌ಹಸೇನ್, ಬಿ. ಎ., ಎಲ್ ಎಲ್. ಬಿ., ಯವರು ಮತ್ತೆ ಕೆಲರು ಕಳೆದ ತಾ॥ ೩ ರ ಬೆಳಗ್ಗೆ ರಾಜಧಾನಿಗೆ ಬಂದರು. ಪೊಲೀಸು ಸೂಪರಿಂಟೆಂಡೆಂಟ್ ಉದ್ಯೋಗದಿಂದ ನಿವೃತ್ತರಾಗಿರುವ ಮಿ॥ ಮಹಮ್ಮದ್ ಜಾಫರ್ ಸಾಹೇಬರು, ಅಮಲ್ದಾರ್ ಮಿ॥ ಮಹಮ್ಮದ್ ಷೇರ್ ಬಿ ಎ, ಯವರು ಮೊದಲಾದ ಮಹಮ್ಮದೀಯ ದೊಡ್ಡ ಮನುಷ್ಯರು ರೈಲ್ವೆ ಸ್ಟೇಷನ್ನಿನಲ್ಲಿ ಇದಿರ್ಗೊಂಡು ಮರ್ಯಾದಿಸಿದರು. ಮಿ॥ ಷೌಕತ್ ಅಲಿ ಮೊದಲಾದ ದೊಡ್ಡಮನುಷ್ಯರು ಕಳೆದ ತಾ॥ ೩ ರ ಸಾಯಂಕಾಲ ರಾಜಧಾನಿಯ ಟವರ್ ಹಾಲಿನಲ್ಲಿ ಮಹಮ್ಮದೀಯರ ಸಭೆಯೊಂದನ್ನು ಸೇರಿಸಿ, ಸರ್ವಕಲಾಶಾಲೆಯನ್ನು ಸ್ಥಾಪಿಸಬೇಕಾದ ಅವಶ್ಯಕತೆಯನ್ನು ಕುರಿತು ಪ್ರತಿಯೊಬ್ಬನ ಮನಸ್ಸಿಗೂ ಹಿಡಿಯುವಂತೆ ಭಾಷಣಮಾಡಿ, ಮಹಮ್ಮದೀಯ ಮತಾಭಿಮಾನಿಗಳೆಲ್ಲರೂ ಶಕ್ತ್ಯನುಸಾರ ದ್ರವ್ಯಸಹಾಯಮಾಡಬೇಕೆಂದು ಪ್ರಾರ್ಥಿಸಿದರು. ಅನಂತರ ಇಲ್ಲಿಯ ಸರ್ಕಾರಿಯಧಿಕಾರಿಗಳು ಪ್ರತಿಯೊಬ್ಬರೂ ಒಂದೊಂದು ತಿಂಗಳ ಸಂಬಳವನ್ನು ಕೊಡುತ್ತೇವೆಂದೂ, ಉಳಿದ ವರ್ತಕರು ಮೊದಲಾದವರು ೫೦೦, ೩೦೦, ೧೦೦ ಹೀಗೆಕೊಡುತ್ತೇವೆಂದೂ ವಾಗ್ದಾನಮಾಡಿದರು. ಒಂಟೆತ್ತಿನ ಬಂಡಿಯನ್ನು ಹೊಡೆಯುವ ಮಹಮ್ಮದೀಯನೊಬ್ಬನು ರೂ. ೧-೨-೦ ಯನ್ನು ಆ ಕೂಡಲೆ ಒಪ್ಪಿಸಲು, ಸೆಕ್ರೆಟರಿಯವರು ಅದನ್ನು ಅತ್ಯಾದರದಿಂದ ಸ್ವೀಕರಿಸಿ ಈ ೧ ರೂ. ೨ ಆಣೆಯು ೧ ಲಕ್ಷ ರೂ. ಗಿಂತಲೂ ಅಧಿಕವಾದುದೆಂದು ಸಭಿಕರಿಗೆ ತಿಳುಹಲು, ಮತ್ತೊಬ್ಬ ಮಹಮ್ಮದೀಯನು ಎದ್ದು ೧ ರೂ. ೨ ಆಣೆಗೆ ೧೪ ರೂ. ಕೊಟ್ಟು ಕೊಂಡುಕೊಳ್ಳುತ್ತೇನೆಂದು ಹೇಳಿದನು. ಅದನ್ನು ಕೇಳಿ ಕೋಲಾರದ ಗಣಿಗಳ ಕಂಟ್ರಾಕ್ಟರೊಬ್ಬರು ಅದಕ್ಕೆ ೩೦ ರೂ. ಗಳನ್ನು ಕೊಟ್ಟು ಕೊಳ್ಳುತ್ತೇನೆಂದು ಹೇಳಿ ಆ ೧ ರೂ. ೨ ಆಣೆಯ ಜತೆಗೆ ೩೧ ರೂ. ಗಳನ್ನು ಕೊಟ್ಟರು. ಸೆಕ್ರೆಟರಿಯವರು ಆ ಬಡವನು ಕೊಟ್ಟ ೧ ರೂ. ೨ ಆಣೆಯು ೧ ಲಕ್ಷ ರೂ. ಗಿಂತಲೂ ಅಧಿಕವಾದುದೆಂದು ಹೇಳಿ ಅದಕ್ಕೆ ಗೌರವವನ್ನುಕೊಟ್ಟುದೇ ಹೀಗೆ ಒಬ್ಬರಿಗೊಬ್ಬರಲ್ಲಿ ಸ್ಪರ್ಧೆಯು ಹುಟ್ಟಲು ಕಾರಣವಾಯಿತು.

ಒಳದೇಶದವೃತ್ತಾಂತ.

ಕಳೆದ ಸೋಮವಾರ ರಾತ್ರಿ ದಿವಾನರು ಪರಿವಾರ ಸಮೇತ ಉದಕಮಂಡಲಕ್ಕೆ ದಯಮಾಡಿಸಿದರು.

ಬೌರಿಂಗಪೇಟೆಯಿಂದ ಕೋಲಾರಕ್ಕೆ ರೈಲು ಮಾರ್ಗವನ್ನು ಹಾಕಲು ಪ್ಲಾನು ಬರೆಯಲ್ಪಟ್ಟು ಸಿದ್ಧವಾಗಿರುತ್ತದೆ. ಈ ಲೋಹಮಾರ್ಗವು ಈಗಿರುವ ಬಂಡಿಯ ಮಾರ್ಗದ ಪಕ್ಕದಲ್ಲೇ ಬರುವಂತಿದೆ.

ಕಳೆದ ಮಂಗಳವಾರ ಬೆಂಗಳೂರ ಜುಮ್ಮಾಮಸೀದಿ ಬೀದಿಯಲ್ಲಿ ಮ್ಯುನಿಸಿಪಲ್ ಕಮಿಷನರು ಮ॥ ಬೊಪ್ಪಣ್ಣನವರ ಬಸಪ್ಪನವರು ೨೦೦೦ ಜನರ ಮೇಲ್ಪಟ್ಟು ಬಡಬಗ್ಗರಿಗೆ ಅನ್ನವನ್ನು ಹಾಕಿಸಿದರು.

ರೆವಿನ್ಯೂ ಕಮಿಷನರು ಮ॥ ಎಂ. ರಂಗಸ್ವಾಮಯ್ಯಂಗಾರ್ಯರು ೧೪ ದಿನಗಳ ರಜವನ್ನು ಪಡೆದುಕೊಂಡಿರುವುದರಿಂದ, ಅವರು ಬರುವವರೆಗೆ ಫೊ॥ ಇ॥ ಜನರಲ್ ಮ॥ ದೇವರಾಜ ಅರಸಿನವರು ತಮ್ಮ ಕೆಲಸದೊಡನೆ ರೆ॥ ಕಮಿಷನರ ಕೆಲಸವನ್ನು ನೋಡಿಕೊಳ್ಳುವಂತೆ ಅಪ್ಪಣೆಯಾಗಿರುತ್ತದೆ.

ಶ್ರೀಸರ್ವ ಮಹಾರಾಜರವರು ಕಳೆದ ಸೋಮವಾರ ಉದಕಮಂಡಲದಿಂದ ರಾಜಧಾನಿಗೆ ದಯಮಾಡಿಸಿದ್ದು ಮಾತೃಶ್ರೀಯವರಾದ ವಾಣಿವಿಲಾಸ ಸನ್ನಿಧಿಯವರ ಮಾತೃಶ್ರೀಯವರ ದೇಹಸ್ಥಿತಿಯು ಉತ್ತಮವಾಗಿರುವುದನ್ನು ಪರಾಮರಿಸಿಕೊಂಡು ತಮ್ಮ ಮಾತೃಶ್ರೀಯವರೊಡನೆ ಕಳೆದ ಬುಧವಾರ ಉದಕಮಂಡಲಕ್ಕೆಮರಳಿ ಮೋಟಾರಿನಲ್ಲಿ ದಯಮಾಡಿಸಿದರು.

ಹಾಸನದ ಡಿ॥ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರಾದ ಮ॥ ಕೆ. ಎನ್. ವೀರಭದ್ರಯ್ಯನವರು, ಮನೆಯ ಬಾಗಿಲನ್ನು ಭದ್ರಪಡಿಸಿಕೊಂಡು ಸಂಸಾರ ಸಮೇತ ಬೆಂಗಳೂರಿಗೆ ಬಂದಿದ್ದಾಗ್ಗೆ ಕಳ್ಳರು ಅವರ ಮನೆಯ ಬೀಗವನ್ನೊಡೆದು ಒಳಗೆ ನುಗ್ಗಿ ೩೦೦ ರೂ. ಬೆಲೆ ಬಾಳುವ ನಗನಾಣ್ಯಗಳನ್ನು ಅಪಹರಿಸಿಕೊಂಡು ಹೋದರು.

ಚಿಕ್ಕಮಗಳೂರಲ್ಲಿ ಶ್ರೀಮದ್ಯುವರಾಜರ ವಿವಾಹಮಹೋತ್ಸವದ ಜ್ಞಾಪಕಾರ್ಥವಾಗಿ ಯುವರಾಜರ ಹೆಸರಿನ ಮೇಲೆ ಕಟ್ಟಲ್ಪಡಬೇಕೆಂಬ ಟವರ್ ಹಾಲಿಗೆ ಶಂಕುಸ್ಥಾಪನೆಯನ್ನು ಶ್ರೀಮದ್ಯುವರಾಜರ ಜನ್ಮದಿವಸವಾದ ಈ ತಿಂಗಳ ತಾ॥ ೨೮ ರಲ್ಲಿ ಮಾಡಲು ಶ್ರೀಮನ್ಮಹಾರಾಜರವರಪ್ಪಣೆಯು ಕೇಳಲ್ಪಟ್ಟಿರುತ್ತದೆ. ಈ ಕಟ್ಟಡಕ್ಕಾಗಿ ಬೀರೂರಿನ ಪತ್ರಿ ಮ॥ ವೀರಪ್ಪನವರು ೪೦೦೦ ರೂ. ಗಳನ್ನು ಕೊಡಲು ವಾಗ್ದಾನ ಮಾಡಿರುವುದಾಗಿ ಕೇಳುತ್ತೇವೆ.

ಪುಂಗನೂರು ರಾಜರಾದ ಬಸವರಾಜಲು ಯಶೋವಂತ ಬಹದ್ದೂರ್‌ರವರು ಪತ್ನಿಪುತ್ರಾದಿಗಳೊಡನೆ ಕಳೆದ ತಾ॥ ೩ನೇ ಭಾನುವಾರ ಮೇಲುಬಂಡಿಯಲ್ಲಿ ರಾಜಧಾನಿಗೆ ದಯಮಾಡಿಸಿ ಗತಿಸಿದ ಶೇಷಾದ್ರಿ ಅಯ್ಯರ ಬಂಗಲೆಯಲ್ಲಿ ಶ್ರೀಮನ್ಮಹಾರಾಜರ ಅತಿಥಿಗಳಾಗಿರುವರು. ರಾಜಧಾನಿಯಲ್ಲಿ ಅರಮನೆ ಮೊದಲಾದ ಪ್ರೇಕ್ಷಣೀಯವಾದ ಸ್ಥಳಗಳನ್ನೂ ನಂಜನಗೂಡು, ಶ್ರೀರಂಗಪಟ್ಟಣವನ್ನೂ ನೋಡಿಕೊಂಡು ಇಷ್ಟರಲ್ಲೇ ಹಿಂತಿರುಗಿ ದಯಮಾಡಿಸುವವರಾಗಿರುವರು.

ಸಿದ್ಲಘಟ್ಟದಲ್ಲಿ ಕಳೆದ ತಾ॥ ೨೨ ರಲ್ಲಿ ೧೪ ವರ್ಷ ವಯಸ್ಸಿನ ಒಬ್ಬ ಅಕ್ಕಸಾಲೆಯು ಸತ್ತುಹೋದನು. ಇವನ ಮರಣದ ವಿಚಾರದಲ್ಲಿ ಅನುಮಾನ ಹುಟ್ಟಿದುದರಮೇಲೆ ಅಮಲ್ದಾರರೂ, ಡಾಕ್ಟರೂ ಮರಣವಾದ ಸ್ಥಳಕ್ಕೆ ಹೋಗಿ ವಿಚಾರಿಸುವಲ್ಲಿ ಅವನು ಇಟ್ಟುಕೊಂಡಿದ್ದವಳಮೇಲೆ ಅನುಮಾನವು ಕಂಡುಬಂದುದರಿಂದ ಅವಳ ಮನೆಯನ್ನು ಶೋಧಿಸುವಲ್ಲಿ ೧೦೦೦ ರೂ. ಬೆಲೆಯವರೆಗಿನ ಆಭರಣವು ಸಿಕ್ಕಿದುವು. ಪೊಲೀಸರು ಈ ಕೃತ್ಯವನ್ನಡಿಸಿದವರನ್ನು ಹಿಡಿಯ ಯತ್ನಿಸಿದಾರೆ.

ಬೆಂಗಳೂರಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಶಂಕರಮಠದಲ್ಲಿ ಸ್ಥಾಪಿತವಾಗಿರುವ ಸಂಸ್ಕೃತ ವಿದ್ಯಾಪೀಠದ ಆರಂಭೋತ್ಸವವು ಶೃಂಗೇರಿಮಠದ ವೇ॥ ಕೃಷ್ಣಶಾಸ್ತ್ರಿಗಳಿಂದ ಕಳೆದ ತಾ॥ ೩ ರಲ್ಲಿ ವಿಧ್ಯುಕ್ತವಾಗಿ ನಡಿಸಲ್ಪಟ್ಟಿತು. ಆ ಕಾಲದಲ್ಲಿ ಸರ್ ಪಿ. ಎನ್. ಕೃಷ್ಣಮೂರ್ತಿಯವರು, ಮ॥ ವಿ. ಪಿ. ಮಾಧವರಾಯರು, ಮ॥ ದೇಶಮುಖಿ ಶ್ಯಾಮರಾಯರು, ಆಕಾರ್ಟ್ ಶ್ರೀನಿವಾಸಾಚಾರ್ಯರು, ಮ॥ ಪಿ ಎನ್. ಪೂರ್ಣಯ್ಯನವರು, ಮ॥ ಎಂ. ನಾರಾಯಣರಾಯರು ಮೊದಲಾದ ದೊಡ್ಡಮನುಷ್ಯರು ದಯಮಾಡಿಸಿದ್ದರು.

ತರೀಕೆರೆ ತಾ॥ ಸಂತವೇರಿಯ ಪೊಲೀಸು ದಫೇದಾರ್ ಚಲುವಯ್ಯನು, ಕಡೂರ್ ತಾ॥ ಸಖ್ರೆಪಟ್ಟಣದವರಿಬ್ಬರು ಮತ್ತು ದೋರನಾಳದವನೊಬ್ಬನು ಅಂತು ನಾಲ್ಕು ಜನರು ಕೆಲಕಾಲದಿಂದ ಮಾಯವಾಗಿ ಎಷ್ಟು ತಡಕಿದರೂ ಅವರ ವಿಚಾರವೇ ಗೊತ್ತಾಗಿಲ್ಲವು. ಆದರೆ ಮಿ॥ ಡೇರವರ ತೋಟದೊಳಗಿರುವ ಕೆರೆಯಲ್ಲಿ ಒಂದು ತಲೆಯ ಬುರುಡೆಯೂ, ಕಾಲಿನ ಒಂದು ಭಾಗವೂ ಸಿಕ್ಕಿರುವುವು. ಇದರಿಂದ ಆ ದಫೇದಾರನು ಕೊಲ್ಲಲ್ಪಟ್ಟು ಅವನಶವವು ಆ ಕೆರೆಯೊಳಗೆ ದೂಡಲ್ಪಟ್ಟಿರಬಹುದೆಂದೂ, ಈ ಕೃತ್ಯವು ಒಬ್ಬ ಲಂಬಾಣಿ ಹೆಂಗುಸಿನಿಂದ ನಡೆದಿರಬಹುದೆಂದೂ ಊಹಿಸಲ್ಪಟ್ಟಿರುತ್ತದೆ.

ಕಳೆದ ತಾ॥ ೨ ರಲ್ಲಿ ಬೆಂಗಳೂರ ಜನೋಪಕಾರಿ ದೊಡ್ಡಣ್ಣನವರ ಪಾಠಶಾಲಾ ಕಟ್ಟಡದಲ್ಲಿ ಗುಂತೂರಿನ ಡಿಸ್ಟ್ರಿಕ್ಟ್ ಮುನಸೀಫರಾದ ಮ॥ ಜೆ. ಎಂ ನಲ್ಲಸ್ವಾಮಿಪಿಳ್ಳೆಯವರು ಶೈವ ಸಿದ್ಧಾಂತದಮೇಲೆ ಆಂಗ್ಲೇಯ ಭಾಷೆಯಲ್ಲಿ ಒಂದು ಪ್ರೌಢವಾದ ಭಾಷಣವನ್ನು ಮಾಡಿದರು. ಹಿಂದಣ ದಿವಾನರಾದ ಮ॥ ರಾ॥ ವಿ. ಪಿ ಮಾಧವರಾಯರು ಅಗ್ರಾಸನವನ್ನು ವಹಿಸಿದ್ದು ಉಪನ್ಯಾಸಕರು ತಮಿಳು ಭಾಷೆಯಲ್ಲಿರುವ ಶೈವಸಿದ್ಧಾಂತಗ್ರಂಥಗಳನ್ನು ಚನ್ನಾಗಿ ಪರಿಶೀಲನೆಮಾಡಿ ಅವುಗಳನ್ನು ಪ್ರಸಾರಕ್ಕೆ ತರಲು ಬಹು ಶ್ರಮಪಡುತ್ತಿರುವರೆಂದು ಮೊದಲಾಗಿ ಕಾಲೋಚಿತವಾದ ಭಾಷಣವನ್ನು ಮಾಡಿದರು.

ಮೈಸೂರ ಮಹಾರಾಜಾ ಕಾಲೇಜಿನ ಪಂಡಿತರುಗಳಲ್ಲೊಬ್ಬರಾದ ಮ॥ ಎನ್. ಎಲ್. ಸುಬ್ಬರಾವ್, ಬಿ ಎ. ಯವರಿಗೆ, ಬೆಂಗಳೂರ ಡಿ॥ ಸ್ಕೂಲುಗಳ ಡಿಪ್ಯುಟಿ ಇನ್ಸ್‌ಪೆಕ್ಟರಾದ ಮ॥ ಬಿ. ದಾಸಪ್ಪ, ಬಿ. ಎ., ಯವರು ತಮ್ಮ ಮಗಳನ್ನು ಕೊಟ್ಟು ವಿವಾಹ [illegible] ಗಿಯೂ, ಮ॥ ಸುಬ್ಬ [illegible] ರಾದುದರಿಂದ ಅವರ ಬಾಂಧವ್ಯವನ್ನು [illegible] ಕೆಲ ಕೆ ಮತಿಗಳು [illegible] ತ್ತೇವೆ. ಮ॥ ದಾಸಪ್ಪನವರು [illegible] ದುದರಿಂದ ನೀಚಜನರ ದುರ್ಬೋಧನೆಗೆ ಕಿವಿಗೊಡದೆ ತಮ್ಮ ಸಂಕಲ್ಪವನ್ನು ನೆರವೇರಿಸಿ ನಿಜವಾದ ಸಮಾಜಸುಧಾರಕರೆಂದು ಹೆಸರ್ಗೊಂಡು ಬೂಟಾಟಿಕೆಯ ಸುಧಾರಕರಿಗೆ ಮಾರ್ಗದರ್ಶಕರಾಗಲೆಂದು ಅಪೇಕ್ಷಿಸುತ್ತೇವೆ.

ರೇವಾಮಹಾರಾಜರಿಂದ ಕಳುಹಲ್ಪಟ್ಟಿದ್ದ ಮ॥ ಶ್ರೀನಿವಾಸಾಚಾರ್ಯರು ಕಳೆದ ಮಂಗಳವಾರ ಅರಮನೆಯಲ್ಲಿ ಶ್ರೀಸರ್ವ ಮಹಾರಾಜರ ದರ್ಶನವನ್ನು ತೆಗೆದುಕೊಂಡು ಪ್ರಯಾಗದಲ್ಲಿ ಕೂಡುವ ಭರತಖಂಡದ [illegible] ಮತ ಸಿದ್ಧಾಂತವನ್ನು ಬಲ್ಲ ಕೆಲ ಪಂಡಿತರುಗಳನ್ನು ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರು. ಶ್ರೀಮನ್ಮಹಾರಾಜರವರು ಅವರನ್ನು [illegible], ಅರಮನೆಯ ವಿದ್ವಾಂಸರಾದ [illegible] ರ್ಯರೂ, ಪಾಠಶಾಲೆಯ ಮ॥ [illegible], ಹೋಗುವಂತೆ ಅಪ್ಪಣೆಮಾಡಿದರು. [illegible] ಮ॥ ಪುತ್ತೂರು ರಾಘವಾಚಾರ್ಯರೂ, ಮ॥ [illegible] ಹಾಚಾರ್ಯರೂ ಹೋಗಲು ಗೊತ್ತಾಗಿದ್ದರು. ಇವರುಗಳಲ್ಲದೆ ಮ॥ ಎ. ಗೋವಿಂದಾಚಾರ್ಯರು [illegible] ಹೊರಡುವವರಾಗಿರುವರು.

೧ ನೇ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಶೆಟ್ಟರ ಪರ್ಸನಲ್ ಅಸಿಸ್ಟೆಂಟರಾಗಿದ್ದ ಮ॥ ಎಚ್. ಪಿ ಗಂಗಾಧರಪ್ಪ ಬಿ. ಎ., ಯವರು ಕುಣಿಗಲ್ ತಾ॥ ಅಮಲ್ದಾರರಾಗಿ ನೇಮಿಸಲ್ಪಟ್ಟಿರುವುದರಿಂದ ಮ॥ ರಾ॥ ಎ. ಸಂಗಪ್ಪ, ಬಿ. ಎ. ಬಿ. ಎಲ್, ರವರು ಪರ್ಸನಲ್ ಅಸಿಸ್ಟೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆ. ಇವರು ಮ॥ ಸೆಟ್ಟರ ಎರಡನೇ ಅಳಿಯಂದಿರು, ಮತ್ತೂ ಪಾಲಾಜಿಯಲ್ಲಿ ಒಳ್ಳೇ ಪ್ರಸಿದ್ಧಿಯ ಕುಟುಂಬಕ್ಕೆ ಸೇರಿದವರು. ಇವರ ಹಿರಿಯರು ಪಾಲಾಜಿಯಿಂದ ಮದ್ರಾಸಿಗೆ ಬಂದು ದೊಡ್ಡವ್ಯಾಪಾರವನ್ನು ಮಾಡಿಕೊಂಡಿದ್ದರು. ಮತ್ತೂ ಇವರೂ ಬೆಂಗಳೂರಿಗೆ ಬರುವುದಕ್ಕೆ ಮೊದಲು ಮದ್ರಾಸಿನಲ್ಲಿ ಹೈಕೋರ್ಟು ವಕೀಲರಾಗಿದ್ದರು. ಮ॥ ಸಂಗಪ್ಪನವರು ಬಹು ಸರಸಿಗಳು, ಸ್ನೇಹಪರರು ಮತ್ತೂ ನಿಗರ್ವಶಿಖಾಮಣಿಗಳು. ಇವರಿಗೆ ಇನ್ನೂ ಉನ್ನತಪದವಿಯು ಜಾಗ್ರತೆಯಾಗಿ ದೊರೆಯಲೆಂದು ಹಾರೈಸುವೆವು.

ಚಿಕ್ಕ ಬಳ್ಳಾಪುರದಲ್ಲಿ ಪ್ಲೇಗು ನಿಂತುಹೋಗಿದ್ದುದರಿಂದ ಗುಡಸಲಿನಲ್ಲಿ ವಾಸಮಾಡುವ ಜನರು ಮನೆಗಳಿಗೆ ಹಿಂತಿರುಗುವಷ್ಟರಲ್ಲಿ ಪ್ಲೇಗು ಪುನಃ ಆರಂಭವಾಗಿ ೪-೩ ಜನರು ಏಕಕಾಲದಲ್ಲಿ ಸತ್ತುಹೋಗಲು ಜನರು ಊರಿಗೆ ಬರುವ ಯೋಚನೆಯನ್ನು ಬಿಟ್ಟು ಮಳೆಗಾಲವಾದುದರಿಂದ ತಮ್ಮ ಗುಡಸಲುಗಳನ್ನೇ ಭದ್ರಪಡಿಸಿಕೊಳ್ಳುತ್ತಿದ್ದರು. ಈ ಊರ ಮುನಸೀಫ್‌ಕೋರ್ಟಿನ ಹಿಂಭಾಗದಲ್ಲಿದ್ದ ಒಂದು ಗುಡಸಲಿಗೆ ಕಳೆದ ತಾ॥ ೨೮ರಲ್ಲಿ ಬೆಂಕಿಯು ಬಿದ್ದು ಹೊತ್ತಿಕೊಂಡಿತು. ಆ ಗುಡಿಸಲಿನೊಳಗೆ ಗಂಡಹೆಂಡತಿ ಮತ್ತು ಇಬ್ಬರು ಮಕ್ಕಳಿದ್ದರು. ಗುಡಸಲಿನ ಮೇಲು ಹೊದ್ದಿಕೆಯಲ್ಲವೂ ಹೊತ್ತಿಕೊಂಡುರಿಯುವಾಗ ಗಂಡಹೆಂಡರು ತಮ್ಮ ಗುಡಸಲಿಗೆ ಬೆಂಕಿ ಬಿದ್ದಿರುವುದೆಂದು ತಿಳಿದು ಬಿಗಿಲು ಬಿದ್ದು ಹೊರಕ್ಕೋಡಿಬಂದು ಕೊಂಚ ಹೊತ್ತಿನಮೇಲೆ ಒಳಗೆ ಮಲಗಿದ್ದ ತಮ್ಮಿಬ್ಬರು ಮಕ್ಕಳನ್ನು ಸ್ಮರಿಸಿಕೊಂಡು ವಿಶೇಷವಾಗಿ ವ್ಯಸನಪಡುತ್ತ ಮಕ್ಕಳನ್ನು ಬದುಕಿಸಿಕೊಡಲು ಪೊಲೀಸರನ್ನು ಪ್ರಾರ್ಥಿಸಿಕೊಂಡರು. ಆಗ ಪೊಲೀಸರಲ್ಲೊಬ್ಬರು ತಮ್ಮ ಪ್ರಾಣದಮೇಲಿನ ಆಸೆಯನ್ನು ಬಿಟ್ಟು ಉರಿಯೊಳಗೆ ನುಗ್ಗಿ ಆ ಎರಡು ಮಕ್ಕಳನ್ನೂ, ಹಣವನ್ನಿಟ್ಟಿದ್ದ ಒಂದು ಪೆಟ್ಟಿಗೆಯನ್ನೂ ತಂದು ಕೊಡಲು ಆ ತಂದೆ ತಾಯಿಗಳು ತಮ್ಮ ಮಕ್ಕಳ ಪ್ರಾಣವನ್ನುಳಿಸಿದುದಕ್ಕಾಗಿ ಆ ಪೊಲೀಸರನ್ನು ಕೊಂಡಾಡಿದರು.

ವರ್ತಮಾನಸಂಗ್ರಹ.

ಮೆಸಿಡೋನಿಯಾ ಎಂಬ ಹಡಗಿನಲ್ಲಿ ೧೪,೦೦,೦೦೦ ರೂ. ಬೆಲೆಯ ಭಂಗಾರವು ಭರತಖಂಡಕ್ಕೆ ಕಳುಹಲ್ಪಟ್ಟಿರುವುದು.

ಮಹಮ್ಮದೀಯರಲ್ಲಿ ಪ್ರಸಿದ್ಧರಾದ ಡಾಕ್ಟರ್ ಸೈಯದ್ ಅಲಿಬಿಲಿಗ್ರಾಮಿಯವರು ಶ್ವಾಸಬಂಧನದಿಂದ ಮೃತರಾದರೆಂದು ತಂತಿಯ ವಾರ್ತೆಯು ಬಂದಿದೆ.

ಕಳೆದ ಏಪ್ರಿಲ್ ತಾ॥ ೨೯ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೩೩೬೪ ಜನರಿಗೆ ಪ್ಲೇಗು ತಗಲಿ ೩೨೬೩ ಜನರು ಸತ್ತರು. ಇದರಲ್ಲಿ ಪಂಜಾಬಿನಲ್ಲ ೧೨೮೧ ಮರಣವಾಗಿರುವುದು.

ಲಂಡನಿನಲ್ಲಿ ಕುದುರೆಯ ಬಂಡಿಗಳು ಈಗ ಬಹು ಕಡಿಮೆಯಾಗಿರುವುವು. ಮತ್ತೂ ಇನ್ನು ೩ ವರ್ಷ ಕಾಲದಲ್ಲಿ ಒಂದೂ ಇಲ್ಲದಂತಾಗಿ ಬರೇ ಮೋಟಾರು ಬಂಡಿಗಳ ಮಯವಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಡಾಕ್ಟರ್ ಗಿಲ್ಬರ್ಟ್ ರವರು ಹೇಳಿದಂತೆ ಬಾಲನಲ್ಲಿ ವಿಷವನ್ನುಳ್ಳ ಒಂದು ಹಾವನ್ನೂ, ಕಲಕತ್ತಾದ ಮತ್ತೊಬ್ಬನು ಬಾಯಿಂದ ಕಡಿಯತಕ್ಕ ಚೇಳನ್ನೂ ಕಂಡು ಹಿಡಿದಿರುವರಂತೆ. ಸೃಷ್ಟಿಯ ವೈಚಿತ್ರವನ್ನು ಎಷ್ಟೆಂದು ಹೇಳೋಣ!

ಡಿಲ್ಲಿಯಲ್ಲಿ ಯುನಾನಿ ಆಸ್ಪತ್ರೆಯನ್ನು ಸ್ಥಾಪಿಸುವ ಪ್ರಯತ್ನವು ನಡೆಯುತ್ತಿದೆ. ಇದಕ್ಕಾಗಿ ರಾಂಪುರದ ನವಾಬರು ೫೦೦೦೦ ರೂ. ಗಳನ್ನೂ, ಭೂಪಾಲಿನ ಬೇಗಂರವರು ೨೦೦೦೦ರೂ.ಗಳನ್ನೂ ಕೊಡಲು ವಾಗ್ದಾನಮಾಡಿರುತ್ತಾರೆ.

ಕಳೆದ ತಾ॥ ೪ ರಲ್ಲಿ ಕಲಕತ್ತಾದಲ್ಲಿ ಟಿಕಾರಿ ಮಹಾರಾಜ ದಂಪತಿಗಳು ೩ ಜನ ಯುರೋಪ್ಯಸ್ತ್ರೀಯರೊಡನೆ ಮೋಟಾರು ಬಂಡಿಯಲ್ಲಿ ಕುಳಿತು ಹೋಗುತ್ತಿರುವಾಗ್ಗೆ ವೆಲ್ಲಿಂಗ್ಟನ್ ಚೌಕದಲ್ಲಿ ನೀರಿನ ಶಾಖೆಯವರು ೭೦ ಅಡಿ ಆಳದವರೆಗೆ ತೋಡಿದ್ದ ಹಳ್ಳಕ್ಕೆ ಮೋಟಾರು ಬಂಡಿಯು ಮಗುಚಿಕೊಂಡು ಒಳಗೆ ಕುಳಿತಿದ್ದವರೆಲ್ಲರೂ ಹಳ್ಳದೊಳಗೆ ಬಿದ್ದುಕೊಂಡರು. ಜನರು ಅದನ್ನು ಕೇಳಿ ಕೂಡಲೆ ಬಂದು ಅವರೆಲ್ಲರನ್ನೂ ಮೇಲಕ್ಕೆತ್ತಿದರು. ಮಹಾರಾಜರಿಗೂ ಯುರೋಪ್ಯಸ್ತ್ರೀಯರಿಗೂ, ಬಂಡಿಯನ್ನು ನಡೆಸುವವನಿಗೂ ಪೂರಾಪೆಟ್ಟುಬಿದ್ದಿರುತ್ತದೆ.

ಅಮೃತಸರದ ಡಿಸ್ಟ್ರಿಕ್ಟಿನಲ್ಲಿ ಪ್ಲೇಗು ಉದ್ಯೋಗದ ಮೇಲಿರುವ ಅಸಿಸ್ಟೆಂಟ್ ಸರ್ಜನ್ ಮ॥ ಭಗವಾನ್‌ದಾಸ್‌ರವರು ಕೆನನೂಕಿ ಎಂಬ ಗ್ರಾಮದಲ್ಲಿ ಜನರು ತಾವಾಗಿ ಕಳೆದ ೩ ವರ್ಷಗಳಿಂದಲೂ ತಪ್ಪದೆ ಇನಾಕ್ಯುಲೇಷನನ್ನು ಮಾಡಿಸಿಕೊಳ್ಳುತ ಬಂದಿರುವುದರಿಂದ ಆ ಗ್ರಾಮಕ್ಕೆಮಾತ್ರ ಪ್ಲೇಗು ರೋಗವು ತಗಲದೆ ನೆರೆ ಗ್ರಾಮಗಳೆಲ್ಲವೂ ರೋಗಪೀಡಿತವಾಗಿರುತ್ತವೆ. ಮತ್ತು ಕಳೆದ ೧೦ ವರ್ಷಗಳಲ್ಲಿ ಈ ಗ್ರಾಮದ ಪ್ರಜಾಸಂಖ್ಯೆಯು ೧೦೦ ರಲ್ಲಿ ೨೩ ರಂತೆ ಹೆಚ್ಚಿ ಇತರ ಗ್ರಾಮಗಳಲ್ಲಿ ಬಹು ಕಡಿಮೆಯಾಗಿರುತ್ತದೆ. ಎಂದು ತಿಳಿಸಿರುತ್ತಾರೆ.

ತುರ್ಕಿಯಲ್ಲಿ ಚಿಕ್ಕವಯಸ್ಸಿನ ಡಾಕ್ಟರುಗಳು ವಿದ್ಯಾಪ್ರಶಸ್ತಿಯನ್ನು ಪಡೆಯುವಾಗ “ ಏಕಕಾಲದಲ್ಲಿ ಒಬ್ಬ ಐಶ್ವರ್ಯವಂತನಾದ ರೋಗಿಯು ಮತ್ತೊಬ್ಬ ಬಡವನಾದ ರೋಗಿಯು ನನ್ನ ಸಹಾಯವನ್ನಪೇಕ್ಷಿಸಿದಲ್ಲಿ ನಾನು ಐಶ್ವರ್ಯವಂತನಿಂದ ಕೊಡಲ್ಪಡುವ ಹೆಚ್ಚು ಹಣವನ್ನು ಲಕ್ಷಿಸದೆ ಬಡರೋಗಿಯತೆಗೆ ಹೋಗಿ ಅವನ ರೋಗವನ್ನು ಗುಣಪಡಿಸಲು ಸಾಹಸಪಡುವೆನು. ಮತ್ತೂ ಸಾಂಕ್ರಾಮಿಕ ಅಥವಾ ಇತರ ರೋಗಗಳಿಗೆ ಚಿಕಿತ್ಸೆಯನ್ನು ಮಾಡಲು ಹಗಲು ರಾತ್ರಿ ಎನ್ನದೆ ಎಲ್ಲಾ ಕಾಲದಲ್ಲಿಯೂ ಹೋಗಲು ನಾನೆಂದಿಗೂ ತಿರಸ್ಕರಿಸುವುದಿಲ್ಲ ” ಎಂದು ಪ್ರಮಾಣವನ್ನು ಮಾಡುವರು.

ಕಲಕತ್ತಾದ ಒಬ್ಬ ಹೈಕೋರ್ಟು ವಕೀಲನ ಮಾವನು ತನ್ನ ಮಗಳನ್ನು ಗಂಡನಾದ ವಕೀಲನು ಹಿಂಸಿಸುತ್ತಾನೆಂದು ಆಲಿಪುರದ ಡಿಪ್ಯುಟಿಮ್ಯಾಜಿಸ್ಟ್ರೇಟರಲ್ಲಿ ಅರ್ಜಿಯನ್ನು ಕೊಟ್ಟಿರುವುದರಮೇಲೆ ಹೆಂಡತಿಯಕೂಡ ಅವಿಶ್ವಾಸದಿಂದಿರುವ ಬಗೆಗೆ ಜಾಮೀನನ್ನು ತೆಗೆದುಕೊಳ್ಳದಿರಲು ಕಾರಣವೇನಾದರೂ ಇದ್ದರೆ ತೋರಿಸಬೇಕೆಂದು ಡಿ॥ ಮ್ಯಾಜಿಸ್ಟ್ರೇಟರು ಆ ವಕೀಲನನ್ನು ಕೇಳಿರುತ್ತಾರೆ. ಈ ವಿಧವಾದ ವಿವಾದವು ಹುಟ್ಟಿರುವುದು ಇದೇ ಮೊದಲು. ಊರಿನವರ ವಿವಾದಗಳನ್ನೆಲ್ಲ ಹಿಡಿದು ಹೊಡೆಬಾಡುವ ನ್ಯಾಯಮೂರ್ತಿಗಳೇ ಹೀಗೆ ನ್ಯಾಯಮಾರ್ಗವನ್ನು ಬಿಟ್ಟು ನಡಿಯುವುದಾದರೆ ಇನ್ನು ನ್ಯಾಯವನ್ನರಿಯದವರ ಪಾಡನ್ನು ಹೇಳುತಕ್ಕದೇನಿದೆ !

ಕಲ್ಕತ್ತಾದ ೮ ನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಕಳೆದ ಗುರುವಾರ ದುರ್ಮಾರ್ಗದಿಂದ ಬಟ್ಟೆಗಳನ್ನು ತೆಗೆದುಕೊಂಡಿದ್ದ ಷೇರ್‌ಖನ್ನು ಮತ್ತೂ ಗೋವಿಂದವಿಶ್ವಾಸ ಇವರಿಬ್ಬರ ವಿಚಾರಣೆಯನ್ನು ಮಾಡಿ ಒಂದುವರ್ಷ ಕಠಿಣ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದೆಯೆಂದು ಹೇಳಿದಕೂಡಲೇ ಷೇರ್‌ಖನ್ನು ಎಂಬುವನು “ ನೀವು ನನಗೆ ಅನ್ಯಾಯಮಾಡಿದುದರಿಂದ ನಿಮಗೆ ಇದೇ ಫಲವು ” ಎಂದು ಹೇಳಿ ತನ್ನ ಕೋಟಿನೊಳಗೆ ಬಚ್ಚಿಟ್ಟಿದ್ದ ಜೋಡನ್ನು ತೆಗೆದು ಜಡ್ಜಿಯವರ ಮೇಲೆ ಎಸೆದನು. ಪೊಲೀಸರು ಅವನನ್ನು ಆ ಕೂಡಲೆ ಹಿಡಿದು ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಿ ೧೮ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ಬೆಳಗಾವಿಯ ಡಿವಿಜನಲ್ ಫಾರೆಸ್ಟ್ ಆಫೀಸರಾದ ಬಟರ್‌ವರ್ತ್ ರವರು ಬೇಟೆಗಾಗಿ ಸಿರಿಸಿಯ ಕಾಡಿಗೆ ಹೋಗಿದ್ದು ಅಲ್ಲಿ ಒಂದು ದೊಡ್ಡ ಮರದಮೇಲೆ ಕುಳಿತುಕೊಂಡು ಹುಲಿಯ ಆಗಮನದ ನಿರೀಕ್ಷಣೆಯಲ್ಲೇ ಇದ್ದು ಅದು ಬಂದೊಡನೆಯೇ ಗುರಿಕಟ್ಟಿ ಗುಂಡನ್ನು ಹೊಡೆದರು. ಆ ಹುಲಿಯು ಗುಂಡೇಟನ್ನು ತಿಂದಕ್ಷಣದಲ್ಲಿಯೇ ಮರದಮೇಲಕ್ಕೆ ಹಾರಿ ಅವರನ್ನು ಕೆಳಗೆ ಕೆಡಹಿ ತಾನೂ ಕೆಳಗೆ ಬಿದ್ದು ಅವರಮೇಲೆ ಅಗತುಕೊಂಡಿತು. ಬಟರ್‌ವರ್ತ್‌ರವರು ಅದರಕೂಡ ಬಹಳ ಹೊತ್ತು ಹೋರಾಡಿ ಕಡೆಗೆ ಅದನ್ನು ಕೊಂದುಬಿಟ್ಟರು. ಆದರೆ ಈ ಹೋರಾಟದಲ್ಲಿ ಬಟರ್‌ವರ್ತರವರ ಮೈಯಲ್ಲ ವಿಶೇಷವಾಗಿ ಗಾಯವಾಗಿದ್ದುದರಿಂದ ಅವರು ಆಸ್ಪತ್ರೆಗೊಯ್ಯಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಲಿರುವರು.

ಚಕ್ರವರ್ತಿ ದಂಪತಿಗಳು ಡಿಲ್ಲಿಯಲ್ಲಿ ಕಿರೀಟಧಾರಣ ಮಹೋತ್ಸವವನ್ನು ತೀರಿಸಿಕೊಂಡು ಕಲಕತ್ತಾಕ್ಕೆ ದಯಮಾಡಿಸಿದ ವೇಳೆಯಲ್ಲಿ ಅದ್ವಿತೀಯವಾದ ಉತ್ಸವಗಳನ್ನು ನಡಿಸಲು ತಕ್ಕ ಏರ್ಪಾಟುಗಳು ಆಲೋಚಿಸಲ್ಪಡುತ್ತಿವೆ. ಈ ಸಂದರ್ಭದಲ್ಲಿ ಅಲ್ಲಿಯ ಸಂಗೀತಸಮಾಜದವರು ೪ ಲಕ್ಷ ರೂಪಾಯಿಗಳನ್ನು ವ್ಯಯಮಾಡಿ ಬಡವರಿಗೆ ಅನ್ನವನ್ನು ಹಾಕಿಸಲು ಮತ್ತೂ ತಮ್ಮ ವೆಚ್ಚದಿಂದಲೇ ಚಕ್ರವರ್ತಿ ದಂಪತಿಗಳಿಂದ ತುಲಾಭಾರ ಕರ್ಮವನ್ನು ಮಾಡಿಸಲು ಪ್ರಯತ್ನಿಸಿರುವರು. ಇದಕ್ಕಾಗಿ ೩ ಮಣ ಭಂಗಾರವು ಬೇಕಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ. ತುಲನೆಯಾದಮೇಲೆ ಭಂಗಾರದ ಬಹುಭಾಗವು ಪ್ರಜೋಪಯುಕ್ತವಾದ ಕಾರ್ಯಕ್ಕೆ ವಿನಿಯೋಗಿಸಲ್ಪಟ್ಟು ಉಳಿದುದು ಬಡವರಿಗೆ ಹಂಚಲ್ಪಡುವುದಾಗಿ ಯೋಚಿಸಲ್ಪಟ್ಟಿರುವುದು

ಕಲ್ಕತ್ತಾದಲ್ಲಿ ಒಬ್ಬ ೨೦ ವರುಷಗಳ ವಯಸ್ಸಿನ ಯುವತಿಯು ತನ್ನ ೩೦ ವರ್ಷ ವಯಸ್ಸಿನ ಗಂಡನು ಅಸ್ವಸ್ಥನಾಗಿ ಎಷ್ಟು ಚಿಕಿತ್ಸೆಯನ್ನು ಮಾಡಿಸಿದಾಗ್ಯೂ ಗುಣವನ್ನು ಹೊಂದದೆ ಉತ್ಕ್ರಮಣಾವಸ್ಥೆಯಲ್ಲಿದ್ದುದನ್ನು ತಿಳಿದು, ಗಂಗಾತೀರ್ಥವನ್ನು ತೆಗೆದುಕೊಂಡು ಬಂದು ಬಾಯಲ್ಲಿ ಹಾಕಿ ಬಹುವಾಗಿ ರೋಧಿಸಿದನಂತರ, ಒಂದು ಕೊಠಡಿಯೊಳಗೆ ಹೋಗಿ ಆಭರಣಗಳನ್ನೆಲ್ಲ ಧರಿಸಿಕೊಂಡು ಒಳ್ಳೇ ವಸ್ತ್ರಗಳನ್ನುಟ್ಟು, ಅರಶಿನ ಕುಂಕುಮ ಗಂಧಪುಷ್ಪ ಮೊದಲಾದವುಗಳಿಂದ ಅಲಂಕೃತಳಾಗಿ ಕೊಠಡಿಯ ಬಾಗಿಲನ್ನು ಭದ್ರವಾಗಿ ಮುಚ್ಚಿ ತಾನುಟ್ಟಿದ್ದ ಬಟ್ಟೆಗೆ ಸೀಮೆಯಎಣ್ಣೆಯನ್ನು ಸುರಿದು ಬೆಂಕಿಯಿಂದ ಹೊತ್ತಿಸಿಕೊಂಡು ಪತಿಧ್ಯಾನಾಪರಾಯಣಳಾಗಿದ್ದಳು. ಈ ಸಂದರ್ಭವನ್ನು ನೆರೆಯವರು ತಿಳಿದು ಬಂದು ಬಾಗಿಲನ್ನೊಡೆದು ಒಳಗೆ ನುಗ್ಗಿ ಬೆಂಕಿಯನಾಹುತದಿಂದ ಆಕೆಯನ್ನು ತಪ್ಪಿಸಲು ಎಷ್ಟು ಪ್ರಯತ್ನಪಟ್ಟಾಗ್ಯೂ ಆಕೆಯು ಅವಕಾಶವನ್ನು ಕೊಡದೆ ಪಂಚತ್ವವನ್ನೈದಿದಳು. ಈ ವಿಷಯವನ್ನು ಪಟ್ಟಣದ ನಾರೀಮಣಿಯರು ತಿಳಿದು ಬಂದು ಆಕೆಯ ಪತಿಭಕ್ತಿ ಮನಸ್ಥೈರ್ಯ ಮೊದಲಾದ ಸದ್ಗುಣಗಳನ್ನು ಕೊಂಡಾಡಿ ಆಕೆಯ ಎಲಬುಗಳನ್ನು ತಮ್ಮ ಮನೆಯಲ್ಲಿಟ್ಟು ಪೂಜೆಮಾಡುವುದಕ್ಕಾಗಿ ತೆಗೆದುಕೊಂಡು ಹೋದರಂತೆ.

ಮದರಾಸಿನ ಅಗಸರ ಪೇಟೆಯಲ್ಲಿ ಒಬ್ಬ ಪೋಲೀಸು ಕಾನೆಸ್ಟೇಬಲು ರಾಜಮಾರ್ಗದಲ್ಲಿ ಜಲಬಾಧೆಯನ್ನು ಮಾಡಿದರೆಂದು ಇಬ್ಬರು ಮನುಷ್ಯರನ್ನು ಹಿಡಿದು ಪ್ರತಿಯೊಬ್ಬನೂ ೨ ಆಣೆಯನ್ನು ತನಗೆ ಕೊಟ್ಟಲ್ಲಿ ಬಿಟ್ಟುಬಿಡುತ್ತೇನೆ ಇಲ್ಲದಿದ್ದರೆ ಪೋಲೀಸು ಠಾಣಕ್ಕೆ ಕರೆದುಕೊಂಡು ಹೋಗುತ್ತೇನೆಂದು ಹೆದರಿಸುತ್ತ, ಅವರು ಜುಲ್ಮಾನೆಯನ್ನು ಕೊಡುತ್ತೇವೆಂದು ಹೇಳಿದಾಗ್ಯೂ ಅವರನ್ನು ಬಿಡದೆ ಹೋಗಲು ಆ ಇಬ್ಬರಲ್ಲೊಬ್ಬನು ಆ ಕಾನೆಸ್ಟೇಬಲನ್ನು ತನ್ನ ಮನೆಗೆ ಕರೆದುಕೊಂಡುಹೋಗಿ ಅವನಕೈಲಿ ೨ ಆಣೆಯನ್ನಿಟ್ಟು ಕಳುಹಿದನು. ಮತ್ತೊಬ್ಬನು ಈ ಕಾನೆಸ್ಟಬಲಿಗೆ ಹೇಗಾದರೂ ಮೋಸಮಾಡಬೇಕೆಂದು ಯೋಚಿಸಿ ಸಮೀಪದಲ್ಲಿದ್ದ ಒಂದು ತೋಪಿಗೆ ಕರೆದುಕೊಂಡು ಹೋಗಿ ಅಲ್ಲಿ ಯಾವುದೊ ಒಂದು ವಿವಾದವನ್ನು ವಿಚಾರಿಸುತ್ತಿದ್ದ ಪೋಲೀಸು ಡೆ॥ ಕಮಿಷನರ ಬಳಿಗೆ ಈ ಕಾನೆಸ್ಟಬಲು ಕಾಣದಂತೆ ಹೋಗಿ ನಡೆದ ಸಂಗತಿಯನ್ನೆಲ್ಲ ಅವರಿಗೆ ರಹಸ್ಯವಾಗಿ ತಿಳಿಸಿದನು. ಡೆ॥ ಕಮಿಷನರು ತಮ್ಮ ಜೇಬಿನಿಂದ ೮ ಕಾಲಾಣೆಗಳನ್ನು ತೆಗೆದು ಅವುಗಳಮೇಲೆ ಏನೋ ಒಂದು ಗುರ್ತನ್ನು ಮಾಡಿ ಅವನ ಕೈಲಿ ಕೊಟ್ಟು ಅವನ್ನು ಕಾನೆಸ್ಟಬಲಿಗೆ ಕೊಟ್ಟುಬಿಡೆಂದು ಹೇಳಿ ಕಳುಹಿದರು. ಅವನು [illegible]

೮ ಕಾಲಾಳುಗಳನ್ನು ತಂದು ಕಾನ್ಸ್ಟೆಬಲರಿಗೆ ಕೊಟ್ಟು ಸೆರೆಯಿಂದ ಬಿಡಿಸಿಕೊಂಡು ಹೋದನು. ಮರಿಯಲ್ಲಿ ನಿಂತು ಈ ಸಂದರ್ಭವನ್ನೆಲ್ಲ ನೋಡುತ್ತಿದ್ದ ಡಿ॥ ಕಮಿಷನರರು ಕೂಡಲೆ ಬಂದು ಆ ಕಾನಸ್ಟಬಲನ್ನು ಹಿಡಿದು ವಿಚಾರಿಸುತ್ತಿರುವರು. ಇಂಥ ಸಂದರ್ಭಗಳು ನಿತ್ಯದಲ್ಲೂ ಎಷ್ಟೋ ನಡಿಯುತ್ತವೆ. ಆದರೆ ಹೀಗೆ ಮೇಲ್ಪಟ್ಟಧಿಕಾರಿಗಳ ಗಮನಕ್ಕೆ ಬಂದು ತಕ್ಕ ಶಿಕ್ಷೆಯು ವಿಧಿಸಲ್ಪಡುವುದು ಮಾತ್ರ ಬಹು ಅಪೂರ್ವವು.

ಕಾಂಗ್ರಾದಲ್ಲಿ ಭೂಕಂಪದಿಂದ ನಷ್ಟವಾದ ಒಂದು ಕುಟುಂಬದಲ್ಲಿ ೮ ವರ್ಷದ ಒಂದು ಹೆಣ್ಣು ಮಗುವು ಮಾತ್ರ ಉಳಿದುಕೊಂಡಿತ್ತು. ಮತ್ತೂ ಈ ಅಪತ್ತು ಸಂಭವಿಸಿದ ಕಾಲದಲ್ಲಿ ಆ ಹುಡುಗಿಯ ತಂದೆಯು ಪರದೇಶಕ್ಕೆ ಹೋಗಿದ್ದನು. ಈ ಕುಟುಂಬದ ನೆರೆಮನೆಯ ಬ್ರಾಹ್ಮಣನೊಬ್ಬನು ಆ ದಿಕ್ಕಿಲ್ಲದ ಹೆಣ್ಣು ಮಗುವನ್ನು ತನ್ನವಶಕ್ಕೆ ತೆಗದುಕೊಂಡು, ಪರದೇಶಕ್ಕೆ ಹೋಗಿದ್ದ ಆ ಹುಡುಗಿಯ ತಂದೆಗೆ ಅವನ ಹೆಂಡತಿ ಮಕ್ಕಳೆಲ್ಲರೂ ಭೂಕಂಪದಲ್ಲಿ ಸತ್ತುಹೋದರೆಂದು ಬರೆದು ಆ ಹುಡುಗಿಯನ್ನು ಮತ್ತೊಂದು ಗ್ರಾಮಕ್ಕೆ ಕರೆದುಕೊಂಡು ಹೋಗಿ ಒಬ್ಬರ ಮನೆಯಲ್ಲಿಟ್ಟು ವಿಶೇಷ ದ್ರವ್ಯ ವ್ಯಯಮಾಡಿ ಲಗ್ನಮಾಡಿ ಕೊಡುತ್ತೇನೆಂದು ಆ ಮನೆಯವನಿಗೆ ಆಶೆಯನ್ನು ಹುಟ್ಟಿಸಿ ಅವರ ಪೋಷಣೆಯಲ್ಲಿ ಬಿಟ್ಟಿದ್ದನು. ಸ್ವಲ್ಪ ಕಾಲಾನಂತರ ಪರದೇಶಕ್ಕೆ ಹೋಗಿದ್ದ ಆ ಹುಡುಗಿಯ ತಂದೆಯು ಕಾಂಗ್ರಾಕ್ಕೆ ಹಿಂತಿರುಗಿ ಬಂದನು. ಆಗ ಆ ನೆರೆಯ ಬ್ರಾಹ್ಮಣನು ಆ ಹುಡುಗಿಯ ತಂದೆಗೆ ಇನ್ನೊಂದು ಲಗ್ನವನ್ನು ಮಾಡಿಕೊಂಡು ಸಂಸಾರಿಯಾಗಿರೆಂದು ಬಲವಂತಮಾಡಿ ಅವನನ್ನೊಡಂಬಡಿಸಿ ತಾನು ಬೇರೆಯೂರಿನಲ್ಲಿರಿಸಿದ್ದ ಅವನ ಮಗಳನ್ನು ಕರೆದುಕೊಂಡು ಬಂದು ಅವನಿಗೆ (ತಂದೆಗೆ) ಲಗ್ನಮಾಡಿಸಿಬಿಟ್ಟನು. ಅವನು ತನ್ನ ಹೆಂಡತಿಯನ್ನು ಕರೆದುಕೊಂಡು ಬಂದು ತನ್ನ ಸ್ವಂತ ಮನೆಯಲ್ಲಿರುವಾಗ್ಗೆ ಈ ಬ್ರಾಹ್ಮಣನು ಮಾಡಿದ ಮೋಸ ಕೃತ್ಯವು ಗೊತ್ತಾಗಿ ಪೋಲೀಸರಿಗೆ ತಿಳುಹಿದನು. ಪೋಲೀಸರು ಆ ಬ್ರಾಹ್ಮಣನನ್ನೂ ಅವನ ಸಹಾಯಕನಾದ ಮತ್ತೊಬ್ಬನನ್ನೂ ಹಿಡಿದು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಿರುವಲ್ಲಿ ಆ ನೀಚಬ್ರಾಹ್ಮಣನಿಗೆ ಯಾವಜ್ಜೀವ ದ್ವೀಪಾಂತರ ಶಿಕ್ಷೆಯೂ, ಅವನ ಸಹಕಾರಿಗೆ ಕಾರಾಗೃಹವಾಸಶಿಕ್ಷೆಯೂ ವಿಧಿಸಲ್ಪಟ್ಟಿತು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು. ಪ. ಪ್ರ.

ಪತ್ರವ್ಯವಹಾರ.

ಮಹಾಲಿಂಗಪುರ.

ಶ್ರೀಮನ್ಮಹಾನಿರಂಜನ ಜಗದ್ಗುರು ಮುರಘರಾಜೇಂದ್ರ ಚಿನ್ಮೂಲಾದ್ರಿ ಬೃಹನ್ಮಠ ಸಂಸ್ಥಾನ ಚಿತ್ರದುರ್ಗ ಮಹಾಸ್ವಾಮಿಗಳ ಸವಾರಿಯು ಮಹಾಲಿಂಗಪುರಕ್ಕೆ ಶಕೆ ೧೮೩೨ ಮಾಘ ವದ್ಯ ೧೪ ಮಹಾಶಿವರಾತ್ರಿಯ ದಿವಸ ಬಿಜಯಂಗೈದ ವರ್ತಮಾನವು ತಮ್ಮ ಪತ್ರದಲ್ಲಿ ಪ್ರಸಿದ್ಧವಾಗಿರುವುದಷ್ಟೆ. ಈ ಮಹಾಲಿಂಗಪುರಗ್ರಾಮವು ಶ್ರೀಮನ್ಮಹಾಲಿಂಗೇಶ್ವರ ಯತಿಪುಂಗರವರ ದೇವಸ್ಥಾನದಿಂದ ದೊಡ್ಡ ಪುಣ್ಯಕ್ಷೇತ್ರವಾಗಿರುವುದರಿಂದ, ಇಲ್ಲಿ ವೀರಶೈವ ಮತಸ್ಥರೇ ವಿಶೇಷವಾಗಿ ವಾಸಮಾಡುತ್ತಿರುವರು. ಸುಮಾರು ೮೫ ವರ್ಷಗಳ ಹಿಂದೆ ಶ್ರೀಮನ್ಮಹಾಸ್ವಾಮಿಗಳ ಆಗಮನವು ಈ ಪ್ರಾಂತದಲ್ಲಿ ಆಗಿರುವುದರಿಂದ, ಇಲ್ಲಿಯ ಮಾ॥ ರಾ॥ ಬಸವಲಿಂಗಪ್ಪ ಅಣ್ಣ ಘಟನಟ್ಟಿ, ಬಸವಪ್ಪ ಅಣ್ಣ ಕೌರಿ, ಕಾದಬಪ್ಪ ಅಣ್ಣ ಅಷ್ಟಗಿ ಮತ್ತು ಚನ್ನಬಸವಪ್ಪ ಅಣ್ಣ ಕುಳೊಳ್ಳಿ ಮುಂತಾದ ಪ್ರಮುಖ ಜನರು ತಮ್ಮ ಗ್ರಾಮಕ್ಕೆ ಮಹಾಸ್ವಾಮಿಗಳ ಸವಾರಿಯು ಬಿಜಯಂಗೈಯ್ಯಬೇಕೆಂದು ಅತ್ಯಂತ ವಿನಯಪೂರ್ವಕವಾಗಿ ಶ್ರೀಗಳಿಗೆ ಪ್ರಾರ್ಥಿಸಿದ ಮೇರೆಗೆ ಮಹಾಸ್ವಾಮಿಗಳ ಸವೈಭವಾಗಮನವು ಇಲ್ಲಿ ಆದಂದಿನಿಂದ ಭಕ್ತರ ತರತಮ ಪ್ರಾರ್ಥನೆಗಳಿಗೆ ಸರಿಯಾಗಿ ಪ್ರತಿನಿತ್ಯವು ಸಕಲ ಬಿರುದಾವಳಿಗಳ ಸಮೇತವಾಗಿ ಅಡ್ಡಪಲ್ಲಕ್ಕಿ ಮತ್ತು ಮೇಣಾಗಳಲ್ಲಿ ಶ್ರೀಗಳ ಮಹೋತ್ಸವಗಳು ಎಡಬಿಡದೆ ಒಳ್ಳೇ ವಿಜೃಂಭಣೆಯಿಂದ ಸುಮಾರು ಎರಡು ತಿಂಗಳುಗಳವರೆಗೆ ನಡೆದು, ಭಕ್ತಮಂಡಲಿಯು ಭಕ್ತಿಪುರಸ್ಸರ ಸೇವೆಯಿಂದ ಶ್ರೀಗಳು ಅತ್ಯಂತ ಸಂತುಷ್ಟರಾಗಿ, ಎಲ್ಲರಿಗೂ ಸಪ್ರೇಮಾಶೀರ್ವಾದಗಳನ್ನು ಕೊಟ್ಟು, ಶಕೆ ೧೮೩೩ ಚೈತ್ರ ಬ॥ ೧೦ ಸೋಮವಾರ ಉಷಃ ಕಾಲದಲ್ಲಿ ಸುಮುಹೂರ್ತದಿಂದ ಇಲ್ಲಿಂದ ಗೋಕಾಕ ತಾಲೋಕಿನ ಮೆಸಗುಪ್ಪಿ ಗ್ರಾಮಕ್ಕೆ ಶ್ರೀಮನ್ಮಹಾಸ್ವಾಮಿಗಳು ತೆರಳಿದರು. ಈ ಎರಡು ತಿಂಗಳ ಅವಧಿಯಲ್ಲಿ ಗ್ರಾಮದಲ್ಲಿ ನಿತ್ಯ ಅನ್ನ ಸಂತರ್ಪಣೆಗಳೂ, ಶ್ರೀಗಳ ಪಾದಪೂಜೆಗಳೂ ಮತ್ತು ಸಕಲ ಬಿರುದಾವಳಿಗಳ ಸಮೇತ ಅಡ್ಡಪಲ್ಲಕ್ಕಿ ಮತ್ತು ಮೇಣಾಗಳಲ್ಲಿ ಶ್ರೀಗಳ ಒಳ್ಳೇ ವೈಭವದ ಮೆರವಣಿಗೆಗಳೂ ಒಂದೇಸಮನೆ ನಡೆದುದರಿಂದ ಸುತ್ತಮುತ್ತಲಿನ ವೀರಶೈವ ಮತ್ತು ಇತರ ಅನೇಕ ಧರ್ಮದ ಗೃಹಸ್ಥ ಮಂಡಲಿಯಿಂದಲೂ ವೀರಶೈವ ವೈದಿಕ ಗಣಂಗಳಿಂದಲೂ ಈ ಗ್ರಾಮವು ಕಿಷ್ಕಿಂಧವಾಗಿತ್ತು. ಶ್ರೀ ಮಹಾಲಿಂಗೇಶ್ವರ ಮಠದಲ್ಲಿ ನಿತ್ಯ ಪುರಾಣ ಕಥನವಾಗುತಿದ್ದು, ಪುರಾಣವು ಮುಗಿದಮೇಲೆ ನಿತ್ಯದಲ್ಲಿ ಭಕ್ತ ಮಂಡಳಿಗೆ ಮತಬೋಧೆಯು ಶ್ರೀಗಳಿಂದ ಮಾಡಲ್ಪಡುತಿದ್ದುದರಿಂದ ಭಕ್ತರಲ್ಲಿ ಧರ್ಮಜ್ಞಾನಪ್ರಸಾರವಾಗಲಿಕ್ಕೆ ಬಹಳ ಅನುಕೂಲವಾಯಿತು. ಈ ಪ್ರಕಾರವಾಗಿ ಅಪೂರ್ವರೀತಿಯಿಂದ ಸಾಗಿದ ದಿನಚರ್ಯೆಯ ಮೂಲಕವಾಗಿ ಭಕ್ತಮಂಡಲಿಗೆ ಈ ಎರಡು ತಿಂಗಳ ಅವಧಿಯು ಒಂದು ದಿವಸದಂತೆ ಆಯಿಯಿತು. ಶ್ರೀಗಳ ಸಾತ್ವಿಕಸ್ವಭಾವವೂ, ಗಂಭೀರ ಮೂರ್ತಿಯೂ, ಕಳಕಳಿಯಿಂದ ಹೇಳಿದ ಧರ್ಮೋಪದೇಶವೂ, ಅಮೋಘವಕ್ತೃತ್ವವೂ, ಭಕ್ತರ ಅಂತಃಕರಣಗಳಲ್ಲಿ ದೃಢಮೂಲವಾಗಿರುವವು. ಇಂತಹ ಶ್ರೀಮನ್ಮಹಾಸ್ವಾಮಿಗಳ ಆಯುರಾರೋಗ್ಯಗಳು ವೃದ್ಧಿಯಾಗಿ ತನ್ಮೂಲಕ ವೀರಶೈವ ಧರ್ಮವೃದ್ಧಿಯಾಗಲೆಂದು ನಾವೆಲ್ಲರೂ ಹಾರೈಸುತ್ತಿರುವೆವು. ಶ್ರೀಗಳ ಸವಾರಿಯು ಮಸಗುಪ್ಪಿಯಿಂದ ಅರಭಾವಿ ಮಹಾಮಠಕ್ಕೆ ದಯಮಾಡಿಸಿ, ಅಲ್ಲಿ ಮುಂದಿನ ಪ್ರವಾಸಕ್ರಮವನ್ನು ಗೊತ್ತುಮಾಡಬಹುದೆಂದು ತೋರುತ್ತದೆ. ಮಹಾಲಿಂಗಪುರದಲ್ಲಿ ಶ್ರೀಗಳ ಪಾದ ಸನ್ನಿಧಾನಕ್ಕೆ ಭಕ್ತಮಂಡಳಿಯಿಂದ ಅರ್ಪಿಸಲ್ಪಟ್ಟ ಕಾಣಿಕೆಯ ಹಣವು ಬಹು ತೃಪ್ತಿಕರವಾಗಿತ್ತೆಂದು ತಿಳಿಯುತ್ತದೆ. ಈ ಸಂದರ್ಭದಲ್ಲಿ ಅಡ್ಡಪಲ್ಲಕ್ಕಿ ಮುಂತಾದ ಮಹೋತ್ಸವಗಳ ಕಾಲಕ್ಕೆ ಶ್ರೀಮಂತ ರಾಜ ಸಾಹೇಬ, ಸರಕಾರ ಸಂಸ್ಥಾನ ಮುಧೋಳ ಇವರು ಅತ್ಯುತ್ತಮ ವ್ಯವಸ್ಥೆಯನ್ನಿಟ್ಟಬಗ್ಗೆ, ಮುಧೋಳ ಸರಕಾರದವರ ಉಪಕಾರಗಳನ್ನು ಎಷ್ಟು ಎಣಿಸಿದರೂ ಕಡಿಮೆಯೇ ಸರಿ.

ಇನ್ನೊಂದು ಆನಂದದ ಸಂಗತಿ ಏನಂದರೆ:—ತಮ್ಮ ಸ್ವಂತ ವೆಚ್ಚದಿಂದ ಇಂಗ್ಲಂಡಿಗೆ ಹೋಗಿ, ಅಲ್ಲಿ ಬ್ಯಾರಿಸ್ಟರ ಪರೀಕ್ಷೆಯಲ್ಲಿಯೂ ಬಹು ಘನವಂತಿಕೆಯ ಆಕ್ಸ್‌ಫರ್ಡ ಯೂನಿವರ್ಸಿಟಿಯ ಬಿ. ಎ. ಪರೀಕ್ಷೆಯಲ್ಲಿಯೂ ತೇರ್ಗಡೆಯನ್ನು ಹೊಂದಿ, ಮತ್ತು ಇಂದಿನವರೆಗೆ ಭರತಖಂಡದಲ್ಲಿ ಯಾರೂ ಸಂಪಾದಿಸದೇ ಇದ್ದ ಲಂಡನ್ನಿನ ಒಂದಾನೊಂದು ಘನವಾದ ಡಿಬೇಟಿಂಗ್ ಕ್ಲಬ್ಬಿನ ಪ್ರಸಿಡೆಂಟ ಪದವಿಯನ್ನು ತಮ್ಮ ಪ್ರಯತ್ನದಿಂದ ಪಡೆದು, ಶುಚಿರ್ಭೂತ ದೇಹದಿಂದಲೂ, ಮನಸ್ಸಿನಿಂದಲೂ, ಆಚರಣೆಯಿಂದಲೂ ಈ ದೇಶಕ್ಕೆ ಮರಳಿ ಬಂದು, ಮೇಲ್ಕಂಡ ಶ್ರೀಮನ್ಮಹಾ ನಿರಂಜನ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿ, ಸಂಸ್ಥಾನ ಚಿತ್ರದುರ್ಗದವರಿಂದ ಅಥಣಿಯಲ್ಲಿ ವಿಧಾನಪೂರ್ವಕವಾಗಿ ಪ್ರಾಯಶ್ಚಿತ್ತವನ್ನು ಹೊಂದಿ, ಮತೀತರಾಗಿ ಧರ್ಮದ ಸಕಲ ವ್ಯವಹಾರಗಳಿಗೂ ಅರ್ಹರಾಗಿ ಮುಂಬಯಿ ಹೈ ಕೋರ್ಟಿನಲ್ಲಿ ಬ್ಯಾರಿಸ್ಟರೀ ಕೆಲಸವನ್ನು ನಡೆಯಿಸುವ ಮಾ॥ ರಾ॥ ಶ್ರೀ॥ ಬೆಂಗಳೂರಿನ ಗದಿ ರುದ್ರಪ್ಪನವರು ಹೈಕೋರ್ಟಿನ ಸೂಟಿಯಲ್ಲಿ ಸ್ವಗ್ರಾಮಕ್ಕೆ ಹೋಗುವ ಪೂರ್ವದಲ್ಲಿ ಅವರಲ್ಲಿ ಸಹಜವಾಗಿರುವ ಭಕ್ತಿಭಾವದಿಂದ, ಶ್ರೀಮನ್ಮಹಾಸ್ವಾಮಿಗಳ ಸವಾರಿಯು ಮಹಾಲಿಂಗಪುರದಲ್ಲಿರುವರೆಂದು ತಿಳಿದು, ಶ್ರೀಗಳ ದರ್ಶನಾಪೇಕ್ಷೆಯಿಂದ ಮಹಾಲಿಂಗಪುರಕ್ಕೆ ದಯಮಾಡಿಸುವರೆಂಬ ವಾರ್ತೆಯು ಹುಟ್ಟಿತು. ಕೂಡಲೇ ಆ ಮಹಾಶಯರನ್ನು ಕೂಡಚಿ ಸ್ಟೇಶನ್ನಿನಿಂದ ಸನ್ಮಾನದಿಂದ ರಬಕವಿ ಗ್ರಾಮಸ್ಥರು ಕರೆತಂದು, ದೊಡ್ಡ ಸಭೆಯನ್ನು ಕೂಡಿಸಿ ಬಹುಮಾನವನ್ನಿತ್ತರು. ಇದರಂತೆ ಬನಹಟ್ಟಿಯಲ್ಲಿಯೂ, ಮಹಾಲಿಂಗಪುರದಲ್ಲೂ ಸದರಿ ಬ್ಯಾರಿಸ್ಟರವರನ್ನು ಸನ್ಮಾನಪೂರ್ವಕ ಎದುರ್ಗೊಂಡು ಕರಕೊಂಡುಬಂದು ಸಭೆಗಳನ್ನು ನಡೆಸಿ ಮನ್ನಿಸಿದರು. ಆ ಮೂರು ಗ್ರಾಮಗಳಲ್ಲಿ ಸಹಪಂಕ್ತಿ ಭೋಜನ ಸಮಾರಂಭಗಳೂ ನಡೆದವು. ಆ ಎಲ್ಲ ಪ್ರಸಂಗಗಳಲ್ಲಿ ಬ್ಯಾರಿಸ್ಟರವರು ವೀರಶೈವ ಜನಾಂಗದ ಏಳಿಗೆಗಾಗಿ ಮನಃಪೂರ್ವಕ ಪ್ರಯತ್ನಿಸುವೆನೆಂದು ಉದ್ಘೋಷಿಸಿದರು. ಅವರ ಸೌಶೀಲ್ಯವನ್ನೂ ಸಮಂಜಸತೆಯನ್ನೂ ನೋಡಿ ಸಕಲರಿಗೂ ಆಹ್ಲಾದಕರವಾಯಿತು. ಈ ಪ್ರಕಾರ ಜನರಿಂದ ಮನ್ನಣೆಯನ್ನು ಹೊಂದಿ ಶ್ರೀ ಜಗದ್ಗುರು ಮಹಾಸ್ವಾಮಿಗಳ ದರ್ಶನವನ್ನು ತೆಗೆದುಕೊಂಡು ಸನ್ನಿಧಾನದಿಂದ ಆಶೀರ್ವಾದವನ್ನು ಪಡೆದುಕೊಂಡು ಬ್ಯಾರಿಸ್ಟರವರು ಮರಳಿ ಕೂಡಚಿ ಸ್ಟೇಷನ್ನಿಗೆ ಹೋಗುವಷ್ಟರಲ್ಲಿ, ಇವರ ಆಗಮನವನ್ನು ನಿರೀಕ್ಷಿಸುತ್ತಿದ್ದ ರಾವಬಹದ್ದೂರ್ ರುದ್ರಗೌಡ ಅರಟಾಳ, ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ್ ಸಾಹೇಬರವರು ಸ್ಟೇಷನ್ನಿನಿಂದ ಇವರನ್ನು ತಮ್ಮ ಕ್ಯಾಂಪಿಗೆ ಕರೆದುಕೊಂಡು ಹೋಗಿ ಸಹಪಂಕ್ತಿಭೋಜನ ಸುಖಸಲ್ಲಾಪಗಳಿಂದ ಸಂತೋಷಪಡಿಸಿದರು. ಮುಂದೆ ಇದೇ ವೈಶಾಖದಲ್ಲಿ ಬೆಂಗಳೂರಲ್ಲಿ ಬ್ಯಾರಿಸ್ಟರ್ ಸಾಹೇಬರ ಲಗ್ನ ಸಮಾರಂಭವಿರುವುದರಿಂದ ಅತ್ತಕಡೆಗೆ ಅವರು ಹೋಗುವವರಾದರು. ಈ ನಮ್ಮ ಉತ್ತರ ಕರ್ನಾಟಕ ಪ್ರಾಂತದ ಜನರು ಶ್ರೀ ಜಗದ್ಗುರು ಮಹಾಸ್ವಾಮಿಗಳ ಅಪ್ಪಣೆಯಮೇರೆಗೆ ಬ್ಯಾರಿಸ್ಟರ್ ರುದ್ರಪ್ಪನವರೊಂದಿಗೆ ಅನ್ನಪಾನಾದಿ ಸಕಲ ಧಾರ್ಮಿಕ ವ್ಯವಹಾರಗಳನ್ನೂ ನಿರಾತಂಕವಾಗಿ ಮಾಡಿ ಸಮುದ್ರಯಾನಕ್ಕೆ ಇರುವ ತೊಂದರೆಯನ್ನು ತೆಗೆದುಹಾಕಿದಬಗ್ಗೆ ನಾನು ಬಹು ಆನಂದವನ್ನು ತಾಳಿ ಈ ಲೇಖನವನ್ನು ಬರೆದಿದ್ದೇನೆ.

ಪ್ರೇಷಕ.

ವೀರಮಾಹೇಶ್ವರ ಪ್ರಶಂಸಾ.

ಸ್ಕಾಂದ ಪುರಾಣದ ಉತ್ತರ ಭಾಗದಲ್ಲಿ ಹೇಳಲ್ಪಟ್ಟಿರುವ ವೀರಮಾಹೇಶ್ವರರ ಧರ್ಮಾಚರಣ, ಲಿಂಗಾಂಗ ಸಾಮರಸ್ಯ ರೂಪವಾದ ಸಿದ್ಧಾಂತ ಮೊದಲಾದ ವಿಷಯಗಳು ತಾತ್ಪರ್ಯದೊಡನೆ ಮೈಸೂರು ಸ್ಟಾರ್ ಪತ್ರಿಕೆಯ ೧೯೦೯ ನೇ ಜನ್ ತಾ॥ ೨೦ ರ ಸಂಚಿಕೆಯಿಂದಲೂ ಪ್ರತಿವಾರದಲ್ಲೂ ಬರೆಯಲ್ಪಡುತ್ತಿದ್ದು ಈಚೆಗೆ ಕೆಲ ಅನಿವಾರ್ಯ ಬೆಸೆಯಿಂದ ನಿಲ್ಲಿಸಲ್ಪಟ್ಟಿದ್ದವು. ಈ ವಿಷಯಗಳನ್ನು ಸಮಸ್ತರೂ ತಿಳಿಯತಕ್ಕದಾವಶ್ಯಕವಾದುದರಿಂದ, ಪ್ರಮಾದವಶಾತ್ ಬಿಟ್ಟುಹೋಗಿದ್ದ ೮೫ ನೆಯ ಅಧ್ಯಾಯವು ಮೊದಲು ಬರೆಯಲ್ಪಟ್ಟು ಅನಂತರ ಹಿಂದೆ ನಿಂತುಹೋಗಿದ್ದುದರ ಮುಂದೆ ಸಾಗಿಸಲ್ಪಡುವುದು.

ಋಷಯಃ॥ ಭವತಾ ಕಥಿತಾ ವೃತ್ತಿರ್ವೀರ ಮಾಹೇಶ್ವರೋಚಿತಾ । ಅಸ್ಮಾಕಂ ಸಾಂಪ್ರತಂ ವಿದ್ವನ್ ವದ ಷಟ್ಸ್ಥಲನಿರ್ಣಯಂ ॥೧॥ ಸೂತಃ॥ ವಕ್ಷ್ಯೇ ಭಾರ್ಗವತಾಂಶ್ರೇಷ್ಠಾಃ ಷಟ್ಸ್ಥಲಾನಿ ಸಮಾಸತಃ । ಯಾನಿ ಕ್ರಿದರಾಯಾಹ ಶ್ರೀಕಂಠಃ ಪಾರ್ವತೀಪತಿಃ ॥೨॥ ಪುರಾ ಕೈಲಾಸಶಿಖರೇ ನಾನಾರತ್ನವಿಭೂಷಿತೇ । ಸಮಾಸೀನಂ ಮಹಾದೇವಂ ಪಾರ್ವತ್ಯಾ ಸಹಿತಂ ಶಿವಂ । ಗಂಗಾಧರಂ ವಿರೂಪಾಕ್ಷಂ ಶ್ರೀಕಂಠಮಮಿತೌಜಸಂ ॥ ಪಪ್ರಚ್ಛ ಪ್ರಣತೋ ಭೂತ್ವಾ ಸ್ಕಂದಃ ಷಟ್ಸ್ಥಲನಿರ್ಣಯಂ ॥೪॥ ಸ್ಕಂದಃ॥ ದೇವದೇವ ಮಹಾದೇವ ವದ ಷಟ್ಸ್ಥಲನಿರ್ಣಯಂ । ಕೃಪಯಾ ತವ ದೇವೇಶ ಭವಾಮಿ ಭಜಕೋತ್ತಮಃ ॥೫॥ ಶ್ರೀ ಶಂಕರ ಉವಾಚ ॥ ವಕ್ಷ್ಯಾಮಿ ಸಂಗ್ರಹೇಣಾಹಂ ಶೃಣು ಷಟ್ಸ್ಥಲನಿರ್ಣಯಂ । ಸಾರಂ ಸಮಸ್ತ ಶಾಸ್ತ್ರಾಣಾಂ ರಹಸ್ಯಂ ಚ ಷಡಾನನ ॥೬॥ ಸರ್ವೇಷಾಂ ಸ್ಥಾನಭೂತತ್ವಾಲ್ಲಯಭೂತತ್ವತಸ್ತದಾ । ತತ್ವಾನಾಂ ಮಹದಾದೀನಾಂ ಸ್ಥಲಮಿತ್ಯಭಿಧೀಯತೇ ॥೭॥ ಸ್ಥೀಯತೇ ಲೀಯತೇ ಯಸ್ಮಿನ್ ಮುಕ್ತಿಸ್ಸಂಸಾರಪದ್ಧತಿಃ । ತದೇವಸ್ಥಲಮಿತ್ಯುಕ್ತಂ ಸ್ಥಲತತ್ವವಿಶಾರದೈಃ ॥೮॥ ಸ್ಥಾನೇ ಸರ್ವಾಶ್ರಯೇ ನಂತೇ ಸಚ್ಚಿದಾನಂದರೂಪಿಣಿ । ಯಸ್ಮಿನ್ ಬ್ರಹ್ಮಣಿ ಲೀಯೇತ ಪ್ರಪಂಚಸ್ತತ್ಸ್ಥಲಂ ಸ್ಮೃತಂ ॥೯॥ ತದ್ಬ್ರಹ್ಮಸ್ಥಲಶಬ್ದೇನ ಸ್ವಶಕ್ತ್ಯಾ ಷಡ್ವಿಧಂ ಭವೇತ್ । ಮೋಕ್ಷಮಾರ್ಗೈಕಸೋಪಾನಂ ವೀರಮಾಹೇಶ್ವರಾದೃತಂ ॥೧೦॥ ತಸ್ಯ ನಾಮಾನಿ ವಕ್ಷ್ಯಾಮಿ ಸ್ವರೂಪಂ ಚ ಸಮಾಸತಃ । ಯದಾಜ್ಞಾನೇನ ನರೋ ಮುಕ್ತಿಮನಾಯಾಸೇನ ಗಚ್ಛತಿ ॥೧೧॥ ಭಕ್ತೋ ಮಾಹೇಶ್ವರಶ್ಚೈವ ಪ್ರಸಾದೀ ಪ್ರಾಣಲಿಂಗಿಕಃ । ಶರಣಶ್ಚೈವ ಲಿಂಗೈಕ್ಯಃ ಷಟ್ಸ್ಥಲಂಚ ಮಮಪ್ರಿಯಂ ॥೧೨॥ ಸದಾಚಾರೇ ಶಿವೇ ಭಕ್ತಿರ್ಲಿಂಗೇ ಜಂಗಮ ಏಕಧೀಃ । ಲಾಂಛನೇ ಶರಣೇ ಭಕ್ತಿಸ್ತದ್ಭಕ್ತಸ್ಥಲಮುತ್ತಮಂ ॥೧೩॥ ಪರಸ್ತ್ರಿಯಂ ಪರಾರ್ಥಂ ವರ್ಜಿತೋ ಭಾವಶುದ್ಧಿಮಾನ್ । ಲಿಂಗನಿಷ್ಠಾನಿಯುಕ್ತಾತ್ಮಾ ಮಾಹೇಶ್ವರ ಮಹಾಸ್ಥಲಂ ॥೧೪॥ ಲಿಂಗಾರ್ಪಿತ ಪದಾರ್ಥಸ್ಯ ಭೋಕ್ತಾ ಲಿಂಗೇ ಸಮಾಹಿತಃ । ಅನರ್ಪಿತ ವಿವರ್ಜೀ ಚ ಪ್ರಸಾದಿಸ್ಥಲಧೀರ್ಮತಃ ॥೧೫॥ ವಾಯೌ ಪ್ರಾಣಗುಣೇ ಲಿಂಗಂ ಲಿಂಗೇ ಪ್ರಾಣಸ್ಸಮಾಹಿತಃ । ಸುಖದುಃಖೋ ಭಯಂ ನಾಸ್ತಿ ಪ್ರಾಣಲಿಂಗಿಸ್ಥಲಂ ಭವೇತ್ ॥೧೬॥

ಋಷಿಗಳು ಸೂತಪೌರಾಣಿಕನನ್ನು ಕುರಿತು— ಅಯ್ಯಾ! ನೀನು ವೀರಮಾಹೇಶ್ವರರಿಗೆ ಯೋಗ್ಯವಾದ ವೃತ್ತಿಯನ್ನು ನಮಗೆ ಹೇಳಿದೆಯಷ್ಟೆ. ಇನ್ನು ಷಟ್ಸ್ಥಲಸಿದ್ಧಾಂತವನ್ನು ಹೇಳು ಎಂದು ಪ್ರಶ್ನೆಮಾಡಲಾಗಿ ಸೂತಪೌರಾಣಿಕನು ಹೇಳುತ್ತಾನೆ— ಎಲೈ ಭಾಗ್ಯಶಾಲಿಗಳೊಳಗೆ ಶ್ರೇಷ್ಠರಾದ ಮುನಿಗಳಿರಾ! ಷಟ್ಸ್ಥಲಗಳನ್ನು ಸಂಕ್ಷೇಪವಾಗಿ ಹೇಳುತ್ತೇನೆ. ಈ ಷಟ್ಸ್ಥಲಗಳನ್ನೇ ಪೂರ್ವದಲ್ಲಿ ಪರಶಿವನು ಕುಮಾರಸ್ವಾಮಿಗೆ ನಿರೂಪಿಸಿದನು. ಅದೆಂತೆಂದೊಡೆ—

ಪೂರ್ವದಲ್ಲಿ ಅನೇಕವಿಧ ರತ್ನಗಳಿಂದ ಅಲಂಕರಿಸಲ್ಪಟ್ಟ ಕೈಲಾಸಪರ್ವತದಲ್ಲಿ ನೆಲೆಗೊಂಡಿರುವಂಥ ಗಂಗಾಧರನಾಗಿಯೂ, ತ್ರಿನೇತ್ರನಾಗಿಯೂ, ನೀಲಕಂಠನಾಗಿಯೂ, ಅಪರಿಮಿತ ತೇಜೋನಿಧಿಯಾಗಿಯೂ, ಪಾರ್ವತೀಸಮೇತನಾಗಿಯೂ, ದೇವತಾಸಾರ್ವಭೌಮನಾಗಿಯೂ ಇರುವ ಪರಶಿವನನ್ನು ಷಣ್ಮುಖನು ನಮಸ್ಕರಿಸಿ— ಎಲೈ ಸ್ವಾಮಿ! ನೀನು ಕರುಣದಿಂದ ನನಗೆ ಷಟ್ಸ್ಥಲಸಿದ್ಧಾಂತವನ್ನು ತಿಳಿಸು. ನಾನು ನಿನ್ನ ಸೇವಕನಾಗಿದ್ದೇನೆ ಎಂದು ಪ್ರಶ್ನೆಮಾಡಲಾಗಿ, ಪರಶಿವನು— ಅಯ್ಯಾ ಷಣ್ಮುಖನೆ! ಸಕಲ ಶಾಸ್ತ್ರಗಳ ಸಾರವಾಗಿಯೂ, ಗೋಪ್ಯವಾಗಿಯೂ ಇರುವ ಷಟ್ಸ್ಥಲಸಿದ್ಧಾಂತವನ್ನು ನಾನು ಸಂಕ್ಷೇಪದಿಂದ ಹೇಳುತ್ತೇನೆ. ಕೇಳು— ಮಹತ್ತತ್ವ ಮೊದಲಾದ ಸಕಲ ತತ್ವಗಳಿಗೆ ಆಧಾರವಾಗಿರುವುದರಿಂದಲೂ, ಮತ್ತು ಲಯಸ್ಥಾನವಾಗಿರುವುದರಿಂದಲೂ ಆ ಶಿವತತ್ವವೇ ಸ್ಥಲವೆಂದು ಹೇಳಲ್ಪಡುತ್ತದೆ. ಮತ್ತು ಯಾವ ಪರವಸ್ತುವಿನಲ್ಲಿ ಮುಕ್ತಿಯು ನೆಲೆಸಿರುತ್ತದೋ ಜನನಮರಣಪ್ರವಾಹರೂಪವಾದ ಸಂಸಾರವು ಲಯಿಸುತ್ತಿರುವುದೋ ಅದನ್ನು ಸ್ಥಲತತ್ವದಲ್ಲಿ ಪಂಡಿತರಾದವರು ಸ್ಥಲವೆಂದು ಹೇಳುತ್ತಾರೆ. ಚರಾಚರಾತ್ಮಕವಾದ ಪ್ರಪಂಚದ ಸಕಲ ತತ್ವಗಳಿಗೆ ಆಧಾರವಾಗಿಯೂ, ಕೊನೆಯಿಲ್ಲದವಾಗಿಯೂ, ಸಚ್ಚಿಜ್ಞಾನಾನಂದರೂಪವಾಗಿಯೂ ಇರುವ ಯಾವ ಬ್ರಹ್ಮದಲ್ಲಿ ಲಯಿಸುವುದೋ ಅದೇ ಸ್ಥಲವೆಂದು ಹೇಳಲ್ಪಟ್ಟಿತು. ಸ್ಥಲವೆಂಬ ಪರ್ಯಾಯನಾಮವುಳ್ಳದಾದ ಆ ಬ್ರಹ್ಮವು ತನ್ನ ಶಕ್ತಿಯಿಂದ ಆರುವಿಧವಾಯಿತು. ಆ ಷಟ್ಸ್ಥಲಬ್ರಹ್ಮವೇ ಮುಕ್ತಿಮಾರ್ಗಕ್ಕೆ ಸೋಪಾನವಾಗಿಯೂ ವೀರಮಾಹೇಶ್ವರರಿಂದ ಅಂಗೀಕರಿಸಲ್ಪಟ್ಟುದಾಗಿಯೂ ಇರುವುದು. ಇದನ್ನು ತಿಳಿದವನು ಆಯಾಸವಿಲ್ಲದೆ ಮೋಕ್ಷವನ್ನು ಪಡೆಯುವನು. ಅವುಗಳ ಹೆಸರುಗಳನ್ನೂ, ಸ್ವರೂಪವನ್ನೂ ಸಂಕ್ಷೇಪವಾಗಿ ನಿನಗೆ ಹೇಳುವೆನು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇವೇ ನನಗೆ ಪ್ರಿಯವಾದ ಷಟ್ಸ್ಥಲವು. ಒಳ್ಳೆಯ ನಡೆಯುಳ್ಳವನಾಗಿ, ಶಿವನಲ್ಲಿಯೂ ಭಕ್ತಿ; ಶಿವಲಿಂಗದಲ್ಲಿ ಮತ್ತು ಶಿವಸ್ವರೂಪನಾದ ಜಂಗಮನಲ್ಲಿ ಒಂದೇವಿಧ ಭಾವನೆ; ಭಸ್ಮ-ರುದ್ರಾಕ್ಷ ಮೊದಲಾದ ಶೈವ ಚಿಹ್ನೆಗಳಲ್ಲಿ ಭಕ್ತಿ— ಇವೇ ಉತ್ತಮವಾದ ಭಕ್ತಸ್ಥಲವು. ಪರಸ್ತ್ರೀಯನ್ನೂ, ಪರದ್ರವ್ಯವನ್ನೂ ಅಪೇಕ್ಷಿಸದೆ, ಮನಶ್ಶುದ್ಧಿಯುಳ್ಳವನಾಗಿ, ಲಿಂಗನಿಷ್ಠೆಯಿಂದ ಕೂಡಿರುವುದೇ ಮಾಹೇಶ್ವರ ಸ್ಥಲವು. ಇಷ್ಟಲಿಂಗಕ್ಕೆ ಸಮರ್ಪಿಸಿದ ಪದಾರ್ಥವನ್ನು ಸೇವಿಸುತ್ತಾ ಲಿಂಗದಲ್ಲಿ ಸಾವಧಾನತೆಯುಳ್ಳವನಾಗಿ, ಲಿಂಗಕ್ಕೆ ಸಮರ್ಪಿಸಲ್ಪಡದ ವಸ್ತುಗಳನ್ನು ಬಿಟ್ಟಿರುವುದೇ ಮಾಹೇಶ್ವರ ಸ್ಥಲವು. ಪ್ರಾಣದಲ್ಲಿ ಲಿಂಗವನ್ನೂ, ಲಿಂಗದಲ್ಲಿ ಪ್ರಾಣವನ್ನೂ ಇಟ್ಟು, ಅನುಕೂಲವಿಷಯಪ್ರಾಪ್ತಿಯಲ್ಲಿ ಸಂತೋಷವನ್ನೂ, ಪ್ರತಿಕೂಲವಿಷಯಪ್ರಾಪ್ತಿಯಲ್ಲಿ ಖೇದವನ್ನೂ ಬಿಟ್ಟಿರುವುದೇ ಪ್ರಾಣಲಿಂಗಿಸ್ಥಲವು. (ಸಶೇಷ.)

ಸುಲಭಕ್ರಯ! ಖಾತರಿಜಮಾಲ್ !! ಬಿಡಬೇಡಿರಿ!!!

2 ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನಪಡೆದ ಊದುಬತ್ತಿಗಳು.

ನಂ.		ರೂ.		ರೂ.
೧	ಅಂಬರ್‌ಬತ್ತಿ ಸೇ| ೧ಕ್ಕೆ	೬	ಕಸ್ತೂರಿ ಬಿಲ್ಲೆ ತೊ| ೧ಕ್ಕೆ	೨
೨	ಅಂಬರ್‌ಬತ್ತಿ ಸೇ| ೧ಕ್ಕೆ	೪	ಜವಾಜಿ ಬಿಲ್ಲೆ ತೊ| ೧ಕ್ಕೆ	।
	ಕಸ್ತೂರಿ ಬತ್ತಿ ಸೇ| ೧ಕ್ಕೆ	೨॥	ಅರಗಜ। ತೊ ಡಬ್ಬಿ ೧ಕ್ಕೆ	೧
	ಪುನಗಿನ ಬತ್ತಿ ಸೇ| ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ| ೧ಕ್ಕೆ	।
	ಗುಲಾಬ್ ಬತ್ತಿ ಸೇ| ೧ಕ್ಕೆ	॥	ಸುಗಂಧಿ ಸೆಂಟ್ ಸಿ| ೧ಕ್ಕೆ	೧
	ನಕ್ಷತ್ರಕಾಂತಿಬ| ಸೇ| ೧ಕ್ಕೆ	೧	ಸ್ವದೇಶಿ ಘೆ ಬಾ| ದ| ೧ಕ್ಕೆ	।
	ಕಾಶ್ಮೀರ್‌ಕೇಸ್ರಿ ತೊ| ೧ಕ್ಕೆ	೧	ಪಚ್ಚಕರ್ಪೂರ ತೊ| ೧ಕ್ಕೆ	।॥

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದುಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರಕುತ್ತೆ. ಕ್ಯಾಟ್ಲಾಗ್ ಅಪೇಕ್ಷಿತರು ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ. ಆರ್. ಸುಬ್ಬಾಚೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ, ಮೈಸೂರು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ರೂ. ಆಗುತ್ತದೆ. ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರೂ. ಕೊಡಬೇಕಾಗುತ್ತೆ. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ೧೦೦ ಕ್ಕೂ ೦-೮-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದಲ್ಲಿ ೧-೦-೦ ರೂ. ಅನ್ನು ಹೆಚ್ಚಾಗಿ ಕೊಡಬೇಕು. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್‌ಪ್ರೆಸ್, ಮೈಸೂರ್.

4 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು

ಮೈ ಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.



ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಆರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯುವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಪ್ರಬಲಹಣ್ಣಾಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚ
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್
ಇವರ ಅತ್ಯುತ್ತಮ ಸಿದ್ಧೌಷಧಗಳು.

38

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂಜಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೩೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ.

೨. ಸರ್ವಮೇಹರಾಜಾಂಗ ರಬ್ಬರ್‌ಎಣ್ಣೆ— ಈ ಎಣ್ಣೆಯನ್ನು ಬೆಳಿಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರೆಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೆಬ್ಬು, ವ್ರಣ, ಕುಷ್ಠ, ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೫ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕೆ. ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ— ಈ ರಸಾಯನವನ್ನು ೪೦ ದಿನ ಸೇವಿಸುವಲ್ಲಿ ಶಿರಶ್ಶೂಲೆ, ಮೂತ್ರಕೃಚ್ಛ್ರ, ಅಸ್ತಿಸ್ರಾವ, ಅಸೃಗ್ದರ, ಪಿತ್ತಭ್ರಮೆ, ಸಹುಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ತ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚು ೬ ಆಣೆ.

೯. ಮಹಾಕಂದಳ್ಯಾದಿರಸಾಯನ— ಇದರಿಂದ ಕ್ಷಯ ಕಾಸ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟಲು ಉರಿ ಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳೆವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸೆಂದುಹರಮಾತ್ರೆ— ಮಕ್ಕಳಿಗೆ ಶೀತದಿಂದ ಬಾಯಿಯಲ್ಲಿ ನೀರು ಎಳೆಯುವಾಗ ಜ್ಞಾನ ತಪ್ಪುವುದು ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿಹ್ನೆಗಳು ಈ ಮಾತ್ರೆಯನ್ನು ನಾಗದಾಳೆಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯ ಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದ [illegible] [illegible] ದೊರೆಯುತ್ತವೆ. ನಮ್ಮ ವಿಳಾಸ—

ಎಂ. ಪಂಡಿತ ಚೆನ್ನಬಸಪ್ಪ ಅಂಡ್ ಸನ್ಸ್,
ಚನ್ನಪಟ್ಣ, ಬೆಂಗಳೂರು ಡಿಸ್ಟ್ರಿಕ್ಟ್.

2 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ ನೇದು ರೂ. 3-8-0 ಮಾತ್ರ!! ೩ ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪ್ ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡು ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.

ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಪ್ಪೋರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

14 ಉತ್ತಮ ಗ್ರಂಥಗಳು.

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರ ವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.—ಬೆಲೆ ವಿ.ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿದೆ.

ಚನ್ನಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಜಪಾನ್ ಸಾಮ್ರಾಜ್ಯಂ.

೧ ಕನ್ನಡದಲ್ಲಿ ಇದುವರೆಗೂ ಇಂತಹ ಪುಸ್ತಕವಿರಲಿಲ್ಲ ಜಪಾನಿನ ವಿಷಯದಲ್ಲಿ ಎಲ್ಲವನ್ನೂ ವಿಶದವಾಗಿ ತಿಳಿಸುತ್ತದೆ. ಆಶ್ಚರ್ಯಕರವಾದ ಸಂಗತಿಗಳು, ಪ್ರತಿಯೊಬ್ಬರೂ ಓದಬೇಕಾದದ್ದು. ಮೇಲಾದಕಾಗದ. ಅಂದವಾದ ಮುದ್ರಣ ಬೆಲೆ ೩ ಆಣೆ. ಕಿಂಡರ್ ಗಾರ್ಟನ್ ಕಥೆಗಳು ಸ್ಕೂಲ್ ಮಾಸ್ತರುಗಳಿಗೆ ಅವಶ್ಯಕವಾದದ್ದು ೧೦ ಆಣೆ. ಉನ್ನತಸ್ತ್ರೀ-ಬಂಗಾಳಾದೇಶದ ಸ್ತ್ರೀಯಚರಿತ್ರೆ ೨॥ ಆಣೆ.

ದೊರೆಯುವಸ್ಥಳ—ಜಿ. ಕೃಷ್ಣಶಾಸ್ತ್ರಿ ಬಿ ಎ ಮೇನ್ ನಾರ್ಮಲ್‌ಸ್ಕೂಲ್ ಮೈಸೂರ್. ಮತ್ತು ಜನರಲ್‌ಏಜನ್ಸಿ ಮೈಸೂರು.

ಉತ್ತಮ ಗ್ರಂಥಗಳು.

118

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦.— ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ —೦-೧೨-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ವಪ್ರಕಾಶಿಕಾ.— ೩ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೩ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೦ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ,
ಮೈಸೂರು.

ಊದಬತ್ತಿಗಳು.

9

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೦ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

೧೯೧೧ನೇ ಇಸವಿ ಮೇ ತಾ॥ ೮ ರಿಂದ ೧೯೧೧ನೇ ಮೇ ತಾ॥ ೧೪ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ವೈಶಾಖ ಶು॥ ದಶಮಿಯಿಂದ ವೈಶಾಖ ಬ॥ ಪಾಡ್ಯದವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
8	ಸೋ	ದ	4-14	ಹು	16-45	26
9	[1] ಮಂಗ	ಏ	2-53	ಉತ್ತರೆ	17-25	27
10	[2] ಬುಧ	ದ್ವಾ	2-47	ಹಸ್ತ	19-28	28
11	[3] ಗುರು	ತ್ರ	3-58	ಚಿತ್ತ	22-38	29
12	ಶುಕ್ರ	ಚ	6-21	ಸ್ವಾ	26-54	30
13	[4] ಶನಿ	ಪೌ	9-56	ವಿಶಾ	31-59	31
14	ಭಾನು	ಪಾ	14-19	ನೂ	38-28	1

(1)ಮಾಗಡಿರಂಗನಾಥಸ್ವಾಮಿರಥ (2) ಮಳೂರು ಅಪ್ರಮೇಯಸ್ವಾಮಿರಥ (3) ತೊಂಡನೂರು ನಾರಾಯಣಸ್ವಾಮಿರಥ ಬಿಳಿಗಿರಿರಂಗಸ್ವಾಮಿರಥ (4) ಚಿತ್ರಾಪೂರ್ಣಿಮಾ.

ಮೈಸೂರ್: ಮ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನೈರ್ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಕೆಯಿಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೪] ಮೈಸೂರ್ ಸ್ಟಾರ್ ಸೆ ೧೯೧೧ ನೇ ಇಸವಿ ಮೇ ತಾರೀಖು ೧೫ ನೇ ಸೋಮವಾರ. [ಸಂಚಿಕೆ ೨೦

ಮಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

6

ಲೋಕಾಮಯಾಪಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲಿ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟಕೂಡಲೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರುಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಷ್ಣತ್ವ ಬಂದರೆ ಒಸಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರೆ, ಹಲ್ಲುಗಳ ಪಾಚಿ, ಇಗುರೂರಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲಿ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಿಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗಿಕ್ಷಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಏರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೪—೦.

೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗಿ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸುಲಭಕ್ರಯ! ಹಾತರಿಮಾಲ್ !! ಬಿಡಬೇಡಿರಿ!!!

3

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ॥ ೧ಕ್ಕೆ	೩	ಕಸ್ತೂರಿ ಬಿಲ್ಲೆ ತೊ॥ ೧ಕ್ಕೆ	೨
೨ ಅಂಬರ್‌ಬತ್ತಿ ಸೇ॥ ೧ಕ್ಕೆ	೪	ಜವಾಜಿ ಬಿಲ್ಲೆ ತೊ॥ ೧ಕ್ಕೆ	೧
ಕಸ್ತೂರಿ ಬತ್ತಿ ಸೇ॥ ೧ಕ್ಕೆ	೨॥	ಅರಗಜ।ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೇ॥ ೧ಕ್ಕೆ	೧	ಕಸ್ತೂರಿ ಮಾತ್ರೆ ಸೀ ೧ಕ್ಕೆ	।
ಗುಲಾಬ್ ಬತ್ತಿ ಸೇ॥ ೧ಕ್ಕೆ	॥	ಸುರಂಗಿ ಸೆಂಟ್ ಸೀ ೧ಕ್ಕೆ	೧
ನಕ್ಷತ್ರಕಾಂತಿಬ॥ ಸೇ॥ ೧ಕ್ಕೆ	೧	ಸ್ವದೇಶಿ ಫೆ ಬಾ॥ ಡ॥ ೧ಕ್ಕೆ	।
ಕಾಶ್ಮೀರ್‌ಕೇಸ್ರು ತೊ॥ ೧ಕ್ಕೆ	೧	ಪಚ್ಚಕರ್ಪೂರ ತೊ॥ ೧ಕ್ಕೆ	।।।

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರಕುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂ ದೊರೆಯದು.

ಎ. ಆರ್. ಸುಬ್ಬಾಶೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

ಇಲ್ಲಿನೋಡಿ ವಿಶೇಷಸೂಚನೆಗಳು!

ಕಾಶೀವಿಶ್ವೇಶ್ವರಪ್ರಸನ್ನ.

KASHI VISHWESHWAR S.N.U. & CO BENARES CITY.

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಉಡುವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಅನೇಕತರದ ಅತ್ತರುಗಳು, ಇನ್ನೂ ಅನೇಕತರದ ಪಟಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ, ೧ ಕ್ಯಾಟಲಾಗ್ ೧ ಕಾಶೀಪಟ. ೪ ಸೀನರಿಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರಸ್‌ಕಾರ್ಡು, ಇವುಗಳನ್ನು ಇನಾಮಾಗಿ ತಾವು ಬರದು ತಿಳಿಸುವ ವಿಳಾಸಕ್ಕೆ ಕಳಿಹಿಸಲಾಗುತ್ತ. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—

ಯಸ್. ಉಡುಪಿನಾರಾಯಣಾಚಾರ್ಯ ಅಂಡ್‌ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayanacharya & Co.
Benares City.

2 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ ! ! ಬಿಡಬೇಡಿರಿ ! ! !

ಪ್ರತಿ ವಾಚಿಗೆ ೫ ವರುಷಗಳು ಗ್ಯಾರುಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಫುಸಿಸ್ಟಂ ಪೇಟಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೊಟರ್ರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.



ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಫು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಸ್ಸೋರಿಾ ಸಿಲ್ವರು ಗಡಿಯಾರದ ಸರಪಣಿ,

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಛಾರ್ಜು ರೂ. 0-4-0.

ಬಹುಮಾನ ! ಬಹುಮಾನ ! ! ಬಹುಮಾನ ! ! !

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣನ್ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

14

ಉತ್ತಮ ಗ್ರಂಥಗಳು.

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿದಿಂದಲೂ ಕೂಡಿಧೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ.ಯಿಂದ ೮ ಅಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರ ವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕ ಷಟ್ಪದಿರೂಪವಾಗಿಧೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಅಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಧೆ.

ಪುರುಷಸೂಕ್ತಂ.—ಬೆಲೆ ವಿ.ಪಿ. ಯಿಂದ ೪ ಅಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿಧೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಜಪಾನ್ ಸಾಮ್ರಾಜ್ಯಂ.

9

ಕನ್ನಡದಲ್ಲಿ ಇದುವರೆಗೂ ಇಂತಹ ಪುಸ್ತಕವಿರಲಿಲ್ಲ ಜಪಾನಿನ ವಿಷಯದಲ್ಲಿ ಎಲ್ಲವನ್ನೂ ವಿಶದವಾಗಿ ತಿಳಿಸುತ್ತದೆ. ಆಶ್ಚರ್ಯಕರವಾದ ಸಂಗತಿಗಳು, ಪ್ರತಿಯೊಬ್ಬರೂ ಓದಬೇಕಾದದ್ದು. ಮೇಲಾದಕಾಗದ. ಅಂದವಾದ ಮುದ್ರಣ ಬೆಲೆ ೬ ಅಣೆ. ಕಿಂದರ್ ಗಾರ್ಟೆನ್ ಕಥೆಗಳು ಸ್ಕೂಲ್ಮಾಸ್ತರುಗಳಿಗೆ ಆವಶ್ಯಕವಾದದ್ದು ೧೦ ಅಣೆ. ಉನ್ನತಿ—ಬಂಗಾಳಾದೇಶದ ಸ್ತ್ರೀಯಚರಿತ್ರೆ ೨॥ ಅಣೆ.

ದೊರೆಯುವಸ್ಥಳ—ಜಿ. ಕೃಷ್ಣಶಾಸ್ತ್ರಿ ೨॥ ನಂ॥ ನಾರ್ಮಲ್‌ಸ್ಕೂಲ್ ಮೈಸೂರ್. ಮತ್ತು ಜನರಲ್ಏಜನ್ಸಿ ಮೈಸೂರು.

ಉತ್ತಮ ಗ್ರಂಥಗಳು.

118

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦.— ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂಸೇರಿವೆ.

ಸೌಂದರ ಪುರಾಣ —೦-೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಅಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಅಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಅಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಅಣೆ.
ಶಂಕರಲಿಂಗಕದಂ.— ೧ ಅಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ,
ಮೈಸೂರು.

ಊದಬತ್ತಿಗಳು.

9

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಅಣೆ; ದಶಾಂಗ ಪೊಟ್ಣ ೧ ಕ್ಕೆ ೪ ಅಣೆ; ಧೂಪದ ಗಟ್ಟಿ ೧ ಕ್ಕೆ ೨ ಅಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಅಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

೧೯೧೧ನೇ ಇಸವಿ ಮೇ॥ ತಾ॥ ೮ ರಿಂದ ೧೯೧೧ನೇ ಮೇ॥ ತಾ॥ ೧೪ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ವೈಶಾಖ ಶು॥ ದಶಮಿಯಿಂದ ವೈಶಾಖ ಬ॥ ಪಾಡ್ಯದವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
8	ಸೋ	ದ	4-14	ಹು	16-45	26
9	[1]ಮಂಗ	ಏ	2-53	ಉತ್ತ	17-25	27
10	[2]ಬುಧ	ದ್ವಾ	2-47	ಹಸ್ತ	19-28	28
11	[3]ಗುರು	ತ್ರ	3-58	ಚಿತ್ತ	22-38	29
12	ಶುಕ್ರ	ಚ	6-21	ಸ್ವಾ	26-54	30
13	[4]ಶನಿ	ಪಾ	9-56	ವಿಶಾ	31-53	31
14	ಭಾನು	ಪೌ	14-19	ನೂ	33-28	1

(1)ಮೂಗದಿರಂಗನಾಥಸ್ವಾಮಿರಥ (2) ಮುಳೂರು ಅಪ್ರಮೇಯಸ್ವಾಮಿರಥ (3) ತೊಂಡನೂರು ನಾರಾಯಣಸ್ವಾಮಿರಥ ಬಿಳಗಿರಿರಂಗಸ್ವಾಮಿರಥ (4) ಚಿತ್ರಾ ಪೂರ್ಣಿಮಾ.

ಮೈಸೂರ್ : ಮ॥ ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರಿಂಟಿಂಗ್ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 134

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷ್ಯಜ್ಞನೈಹೃತ್ತಮೋಹರಾಜೀಯಾತ್ ॥
ಶ್ರೀಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಪತ್ತಿಕೇಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಮೇ ತಾರೀಖು ೧೫ ನೇ ಸೋಮವಾರ. [ಸಂಚಿಕೆ ೨೦

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

6

ಲೋಕಾಮೃತಸಪರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲಿ ಸಂದುಗಳ ನೋವು ಮೈ ಕಾಲು ಜಡತೆ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ರಕ್ತಮೂಲ, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಜಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ಬಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿರು ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳಪು, ಜ್ವರ, ನಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಅಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಅಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಟ್ಟಸ, ಸ್ತ್ರೈಭಾಗ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೩-೦.

೩. ದೃಢದಂತ ಚೂರ್ಣ.—ಉಷ್ಣಶಕ್ತಿ ಬಂದರೆ ಪೊಸತುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕರು, ಹಲ್ಲುಗಳ ಪಾಚಿ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಅಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸಬೇಡಿ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಿಲ್ಲ. ತರಿಸಿ ನೋಡಿ, ಅನುಭಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಕ್ತಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೦. ೮. ಏರಡರಿಂದ ಟಪಾಲ್ ಖರ್ಚು ೫ ಅಣೆ ಮಾತ್ರ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಅಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಅಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸುಲಭಕ್ರಯ! ಖಾತರಿಮಾಲ್ !! ಬಿಡಬೇಡಿರಿ!!!

3

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನುಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ॥ ೧ಕ್ಕೆ	೬	ಕಸ್ತೂರಿ ಬಿಲ್ಲೆ ತೊ॥ ೧ಕ್ಕೆ	೨
೨ ಅಂಬರ್‌ಬತ್ತಿ ಸೇ॥ ೧ಕ್ಕೆ	೪	ಜವಾಜಿ ಬಿಲ್ಲೆ ತೊ॥ ೧ಕ್ಕೆ	೧
ಕಸ್ತೂರಿ ಬತ್ತಿ ಸೇ॥ ೧ಕ್ಕೆ	೨॥	ಅರಗಜ। ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ. ಸೇ॥ ೧ಕ್ಕೆ	೧	ಕಸ್ತೂರಿ ಮಾತ್ರೆ ಸೀ॥ ೧ಕ್ಕೆ	।
ಗುಲಾಬ್ ಬತ್ತಿ ಸೇ॥ ೧ಕ್ಕೆ	॥	ಸುರಂಗಿ ಸೆಂಟ್ ಸೀ॥ ೧ಕ್ಕೆ	೧
ನಕ್ಷತ್ರಕಾಂತಿಬ॥ ಸೇ॥ ೧ಕ್ಕೆ	೧	ಸ್ವದೇಶಿ ಫೆ॥ ಪಾ॥ ಡ॥ ೧ಕ್ಕೆ	।
ಕಾಶ್ಮೀರ್‌ಕೇಸ್ರಿ ತೊ॥ ೧ಕ್ಕೆ	೧	ಪಚ್ಚಕರ್ಪೂರ ತೊ॥ ೧ ಕ್ಕೆ	॥।

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರಕುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂದೊರೆಯದು.

ಎ. ಆರ್. ಸುಬ್ಬಾಶೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

ಇಲ್ಲಿನೋಡಿ ವಿಶೇಷಸೂಚನೆಗಳು !

ಕಾಶೀವಿಶ್ವೇಶ್ವರಪ್ರಸನ್ನ.



KASHI VISHWESHWAR S.N.U. & CO BENARES CITY.

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಧರಿಸುವಮಡಿ ಯಾವದು? ಕಾಶಿಪಟ್ಟೆ ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ ? ಅದಕ್ಕೆ ಸಂದೇಹವೇನು !

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಅನೇಕತರದ ಅತ್ತರುಗಳು, ಇನ್ನೂ ಅನೇಕತರದ ಪಠಗಳು, ಮತ್ತೆ ಬನಾರಸ್‌ನಲ್ಲಿ ಎಲ್ಲರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟಲಾಗ್ ೧ ಕಾಶೀಪಟ. ೪ ಸಾದಾಕಾರ್ಡು, ೨ ಕಾಶೀವಿಶ್ವೇಶ್ವರಪಠ ೨ ನಮ್ಮ ಕಂಪೆನಿ ಅಡ್ರೆಸ್‌ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಸುವ ವಿಳಾಸಕ್ಕೆ ಕಳಿಹಿಸಲಾಗುತ್ತಿತು. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—

ಯಸ್. ಉಡಪ್ಪಿನಾರಾಯಣಾಚಾರ್ಯ ಅಂಡ್‌ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayanacharya & Co.
Benares City.

ಸೌಗಂಧಿಕಾಪರಿಣಯ

—:o:—

(ಕಳೆದವಾರದಶೇಷ.)

ಮುಷ್ಟಾನೆಗಳು ಸರಪಣಿಗಳಂ ಹರಿದುಕೊಂಡು, ಮಾವುತರಂ ಕೆಳವಿ ಸೊಂಡಲಿಂ ಸೀಳುತ, ಎದುರಾಗಿ ಬರುವ ಭಟರಂ ಕೊಂಬುಗಳಿಂ ತಿವಿದು ಕಾಲುಗಳಿಂ ಹೊಸಕುತ, ಓಡಿ ಹೋಗಿ ಬಾಲಕರಂ ಬಾಧಿಸುತ ಆ ಪುರವಂ ವ್ಯಾಕುಲಪಡಿಸುತ್ತಿರಲಾಗ, ಉಗ್ರಬಾಹುವು ರಥವನ್ನೇರಿ ಭೇದಿಸಲಶಕ್ಯವಾದ ಕವಚವಂ ಧರಿಸಿ ಘರ್ಜಿಸುವ ಮೇಘದಂತೆ ಧನುವಂ ಸಜ್ಜುಗೊಳಿಸುತ, ಯುದ್ಧೋದ್ಧತರಾದ ಪಟುಭಟರಿಂ ಕೂಡಿಬರುವವಂ ಕಂಡು, ಸುಗಂಧರಾಜೇಂದ್ರನು-ಸಾರಥಿಯಾಗಿರುವಂತೆ ಛಾಯಾಗುಪ್ತನಿಗೆ ನಿಯಮಿಸಿ ಹಿಂಭಾಗದೊಳ್ ಕುಳಿತು ಚಕ್ರವಂ ರಕ್ಷಿಸುತ ಯುದ್ಧವಂ ಮಾಡುವಂತೆ ಸುಮತಿಗಾಜ್ಞಾಪಿಸಿ, ತಾನು ರಥದೊಳ್ ಕುಳಿತು ಜ್ಯಾನಾದವಂ ಮಾಡುತ್ತಿರಲದನ್ನೋಡಿ, ರಾಕ್ಷಸಭಟರು ನಾಲ್ಕು ಕಡೆಯಲ್ಲೂ ಮೇಘಗಳು ಉದಕಧಾರೆಗಳಂ ವರ್ಷಿಸುವಂತೆ ಬಾಣಂಗಳಂ ವರ್ಷಿಸುತ ಬರುತ್ತಿರಲಾಗ, ನೃಪತಿ ಸುಮತಿಗಳೀರ್ವರ ಚಾಪಗಳಿಂ ಹೊರಡುವ ಬಾಣಪರಂಪರೆಗಳಿಂದ ರಾಕ್ಷಸರ ಬಾಣಂಗಳು ತುಂಡುತುಂಡಾಗಿ ಬೀಳುತ್ತಿರಲು, ಭುಜಂಗಳು ಕತ್ತರಿಸಿ ಭೂಮಿಯೊಳ್ ಬೀಳಲು, ಹೃದಯಂಗಳು ಪಂದರಿಗಳಂತೆ ಛಿದ್ರಗಳಾಗಲು, ಇದೆಲ್ಲವನ್ನೋಡಿ ಅತ್ಯಂತ ಕುಪಿತನಾದ ಉಗ್ರಬಾಹುವು ನಿಜಧನುವಂ ಟಂಕಾರಗೊಳಿಸುತ, ಅಪರಿಮಿತ ಬಾಣಂಗಳಂ ಹೂಡಿ ಸುಗಂಧರಾಜೇಂದ್ರನಮೇಲೆ ಪ್ರಯೋಗಿಸುತ್ತಿರಲು, ಅವನ ಬೆಂಬಿಡಿದು ಬರುವ ಶೂರರಾದ ರಾಕ್ಷಸ ರಥಿಕರು ದರ್ಪದಿಂ ಭಲ್ಲೆಗಳಂ ಬೀಸುತ, ದೀರ್ಘಂಗಳಾದ ಗದೆಗಳಂ ಪ್ರಯೋಗಿಸುತ, ತೀಕ್ಷ್ಣಂಗಳಾದ ಶೂಲಗಳನ್ನೆಸೆಯುತ, ಎತೆಯುತೆಗೆ ಬಾಣಂಗಳಂ ಬೀರುತ ಬೊಬ್ಬಿರಿದು ಕೂಗುತ್ತಿರಲು, ಆಗ ರಾಜ ಮಂತ್ರಿಗಳೀರ್ವರೂ ಆ ರಾಕ್ಷಸರು ಬೀರುವ ಆಯುಧಂಗಳನೆಲ್ಲವಂ ಅತ್ಯಂತ ತೀಕ್ಷ್ಣಂಗಳಾದ ತಮ್ಮ ಬಾಣಂಗಳಿಂ ತುಂಡುತುಂಡಾಗಿ ಕತ್ತರಿಸುತ, ಮತ್ತು ಒಬ್ಬೊಬ್ಬ ರಥಿಕನಮೇಲೆ ನೂರು ನೂರು ಬಾಣಂಗಳಂ ಪ್ರಯೋಗಿಸುತ್ತಿರಲಾ ಬಾಣಂಗಳು ರಾಕ್ಷಸರು ಪ್ರಯೋಗಿಸಿದ ಬಾಣಂಗಳಂ ಭೇದಿಸುತ, ಹುತ್ತವಂ ಹೋಗುವ ಮಹೋರಗಗಳಂತೆ ಶತ್ರುಗಳ ಹೃದಯಗಳಂ ಭೇದಿಸಿಕೊಂಡು ಭೂಮಿಯಂ ಪೊಗುತಿರಲು, ಆ ರಾಕ್ಷಸರು ಈ ರಾಜಮಂತ್ರಿಗಳು ಮನುಷ್ಯಮಾತ್ರದವರಲ್ಲ; ರಾಕ್ಷಸರನ್ನಿಷ್ಟಗೊಳಿಸಲೆಣಿಸಿ ಕಾಲಮೃತ್ಯುವೇ ಈ ರೂಪದಿಂ ಬಂದಿರುವುದೆಂದು ಸಂಘಸಂಘವಾಗಿ ಹೊಗಳಿಕೊಳ್ಳುತ, ಮರಳಿ ರೋಷ ಹೆಚ್ಚಿ ಬರುವುದನ್ನೋಡಿ ಛಾಯಾಗುಪ್ತನು ರಥಾಶ್ವವಂ ಚಬುಕುಮಾಡಿ ಮಂಡಲಾಕಾರವಾಗಿ ತಿರುಗಿಸುತ ನಿಂತಲ್ಲಿ ನಿಲ್ಲದೆ ಕುಲಾಲಚಕ್ರದಂತೆ ರಾಕ್ಷಸರಿಗೆ ಭ್ರಮೆಯನ್ನುಂಟುಮಾಡುತ್ತಿರಲಾಗ, ರಾಕ್ಷಸಸಂಘವು ಕಲಕಿ ನೃಪಮಂತ್ರಿಗಳ ಬಾಣಗಳಿಂದ ಘಾಯವಡದು ರಕ್ತಮಸೆಗಿ ಪುಷ್ಪಿಸಿದ ಮುತ್ತುಗದ ಮರಗಳಂತೆ ತೋರುತ ಮರಳಿ ಮರಳಿ ನೃಪಮಂತ್ರಿಗಳಮೇಲೆ ಕವಿಯುತ್ತಿರಲಾಗ ಸುಮತಿಯು ರೋಷಾವಿಷ್ಟನಾಗಿ ತನಗೆ ಉಪದಿಷ್ಟಮಾಡಿದ ಮಹಾಸ್ತ್ರಮಂತ್ರದಿಂ ಬಾಣವನ್ನಭಿಮಂತ್ರಿಸಿ ಹೆದೆಯಲ್ಲಿ ಹೂಡಿ ರಾಕ್ಷಸರ ಸಂಘದ ಮೇಲೆ ಪ್ರಯೋಗಿಸಲು, ಆ ಮಹಾಸ್ತ್ರವು ಖಾಂಡವವನವಂ ದಹಿಸುವ ಅಗ್ನಿಯಂತೆ ಪ್ರಜ್ವಲಿಸುತ ಚಾಪದಿಂ ಹೊರಡುತ್ತಿರಲದರಿಂ ಉದ್ಭವಿಸಿದ ಬಾಣಪರಂಪರೆಗಳಿಂ ಸಾಲುಸಾಲಾಗಿ ಹೊರಡುವ ಭಲ್ಲೆಗಳಿಂ, ಗುಂಪುಗುಂಪಾಗಿ ನಡೆವ ತೋಮರಗಳಿಂ, ಒಟ್ಟಾಗಿ ಬೀಳುತ್ತಿರುವ ಗದೆಗಳಿಂ, ಪಜ್ತಿಯಾಗಿ ನಡೆಯುವ ಚಕ್ರಗಳಿಂ ರಾಕ್ಷಸರ ಶರೀರಗಳು ಛಿನ್ನಾಭಿನ್ನವಾಗುತ, ರಥಸಾರಥಿಗಳ ಶಿರಗಳು ಸಡಲಿ ಉದರುತ, ತುರಗಜಗಳು ತುತ್ತುಮೂರಾಗುತ, ಧ್ವಜಪತಾಕೆಗಳು ಧ್ವಂಸಮಾಡುತ, ರಥಚಕ್ರಗಳು ಪುಡಿಪುಡಿಯಾಗುತ, ಅಚ್ಚುಗಳು ಮುರಿದು ನುಚ್ಚುನುಚ್ಚಾಗುತ, ಆ ಭೂಮಿಯಲ್ಲವೂ ತುಂಬುತ ಚಿತ್ರವರ್ಣಮಾಗುತ್ತಿರಲು, ಆ ಉಗ್ರಬಾಹುವು ಅತಿ ತ್ವರೆಯಿಂ ಬಂದು ಮಹಾಗದೆಯಂ ಬೀಸುತ ನಿಲ್ಲು ನಿಲ್ಲೆಂದು ಗರ್ಜಿಸಿ ಸಿಂಹನಾದವಂ ಮಾಡುತ್ತಿರಲದನ್ನೋಡಿ ನೃಪತಿಯು ಒಂದು ಮಹಾ ಶಕ್ತಿಯಂ ಪ್ರಯೋಗಿಸಿ ಆಗದೆಯಂ ಇಕ್ಕಡಿಯಾಗಿ ಖಂಡಿಸಿ ಅವನಂ ಕುರಿತು-ಎಲೈ ರಾಕ್ಷಸಾಧಿಪನೇ! ನಿನ್ನ ಗರ್ವವು ಇನ್ನೂ ಶಮನವಾಗದು, ಯಾವ ಆಯುಧವಿದ್ದರೂ ಪ್ರಯೋಗಿಸುವನಾಗೆಂದು ನುಡಿಯಲದಂ ಕೇಳಿ ಅತ್ಯುಗ್ರನಾದ ಉಗ್ರಬಾಹುವು-ಎಲೈ ಮನುಷ್ಯಕೀಟವೆ! ಇರಕಟವಾದ ಈ ಪುರವಂ ಬಿಟ್ಟು ಪ್ರಾಕಾರದ ಹೊರಗೆ ವಿಸ್ತಾರವಾದ ರಣಭೂಮಿಯಲ್ಲಿ ನಿಲ್ಲುವನಾಗು. ನಡೆ ನಡೆ, ನಿನ್ನಾಡಂಬರವನ್ನಡಗಿಸುವೆನೆಂದು ಹೇಳಲು; ಆಗ ಸುಗಂಧಮಹಾರಾಜೇಂದ್ರನು-ಎಲೈ ರಾಕ್ಷಸ ಕೀಟಕ! ಶೂರರಾದವರು ಎಲ್ಲಿ ನಿಂತರಲ್ಲಿಯೇ ರಣಭೂಮಿಯಾಗುವುದು, ಮತ್ತು ಪ್ರಾಕಾರವೆಲ್ಲಿಹುದು ನೋಡೆಂದು ನುಡಿದು, ಅಮೋಘವಾದ ಬಾಣವಂ ತೆಗದು ವಜ್ರಾಸ್ತ್ರಮಂತ್ರದಿಂದ ಅಭಿಮಂತ್ರಿಸಿ ಆ ಪುರದ ಪ್ರಾಕಾರಗಳಮೇಲೆ ಪ್ರಯೋಗಿಸಲು, ಆಗ ಆ ಬಾಣದಿಂ, ಕೋಟಿ ಸಿಡಿಲುಗಳು ಏಕಕಾಲದಲ್ಲಿ ಹೊರಟು ಸ್ಫೋಟಿಸಿದಮಾತ್ರದಿಂದಲೇ ಗಿರಿ ಶಿಖರಗಳು ಉರುಳುವಂತೆ ಏದು ಸುತ್ತಿನ ಪ್ರಾಕಾರಗಳು ಪತದು ಉರುಳಿ ಬೀಳುತ, ಅಗಳುಗಳು ಮುಚ್ಚಿಹೋಗುತ ನೆಲಸಮವಾಗುತ್ತಿರಲು, ಅದನ್ನೋಡಿ ರಾಕ್ಷಸರು, ಇದೇನೋ ಮಹಾಪ್ರಳಯಕಾಲವದಗಿತೆಂದು ಬಹು ಭೀತರಾಗಿ ಎಲ್ಲವಂ ಬಿಟ್ಟು ನಮಗೆ ಸಂರಕ್ಷಕರ್ಯಾರೆಂದು ಹಾಹಾಕಾರಪಡುತ ದಿಕ್ಕುದಿಕ್ಕುಗಳಿಗೆ ಪಲಾಯನವಂಗೈಯುತ್ತಿರಲು, ಆಗ ಆ ಪುರದ ಮಹಾಪ್ರಾಕಾರವು ನಷ್ಟವಾದುದನ್ನೋಡಿ ಉಗ್ರಬಾಹುವು ಮಹಾ ಗಜವಂ ತಂದು ನಿಲ್ಲಿಸುವಂತೆ ನಿಯಮಿಸಿ ದೂತರಂ ಕಳುಹಿಸಲಾಗ, ಸುಗಂಧರಾಜನು ಮಹಾಗಜವಂ ಘಾಸಿಗೊಳಿಸಬಾರದೆಂದರಿತು, ಮಹಾಶರವಂ ಪ್ರಯೋಗಿಸಿ ರಾಕ್ಷಸಾಧಿಪತಿಯಾದ ಉಗ್ರಬಾಹುವಿನ ಸಾರಥಿಯಂ ಛೇದಿಸಲಾಗ, ಉಗ್ರಬಾಹುವು ಅತ್ಯುಗ್ರನಾಗಿ, ನೃಪತಿಗೆ ಸಾರಥಿಯಾಗಿ ಕುಳಿತಿರ್ದ ಛಾಯಾಗುಪ್ತನಮೇಲೆ ಕೆಲವು ಬಾಣಗಳಂ ಪ್ರಯೋಗಿಸಿ ಅವನಂ ಅಲ್ಲಿ ಕುಳ್ಳಿರಲಾರನಂತೆ ಮಾಡಿ, ಮತ್ತೈದು ಬಾಣಗಳಿಂದ ನೃಪನ ರಥಾಶ್ವಗಳಂ ಪ್ರಹರಿಸಲಾ ಬಾಣಪ್ರಹಾರವಂ ಸಹಿಸಲಾರದೆ ಆ ರಥಾಶ್ವಗಳು ದಿಕ್ಕುಕಾಣದೆ ಉಗ್ರಬಾಹುವಿನ ರಥವಂ ಬಳಸಿ ಬರುತ್ತಿರಲದಂ ನೋಡಿ ಅತಿ ಕುಪಿತನಾದ ನರಪತಿಯು, ಮಯೂರಪಿಂಛದಿಂ ಚಿತ್ರಮಾಗಿ ಮಹೋರಗದಂತಿರ್ದ ಬಾಣದಿಂದುಗ್ರಬಾಹುವಿನ ಧನುವಂ ಛೇದಿಸಲು, ಆಗ ಕ್ರುದ್ಧನಾದ ಉಗ್ರಬಾಹುವು ತನಗೆ ವಿದ್ಯಾಗುರುವಾದ ಶಾಷ್ಕಲಕ ಋಷಿಯಿಂ ಲಬ್ಧಮಾದ, ನಿತ್ಯದಲ್ಲಿಯೂ ಪೂಜಿತಮಾದ, ಘಂಟಾಶತದಿಂದಲಂಕೃತಮಾದ ಮಹೋರಗದಂತೆ ಅತ್ಯುಗ್ರಮಾದ ಒಂದು ಶೂಲಾಯುಧವಂ ಪಿಡಿದು ಕೂಗುತಲಿರುವುದನ್ನೋಡಿ, ನೃಪತಿಯು ಈ ಶತ್ರುವಿಗೆ ಇದು ಪ್ರಬಲಸಾಧನವೆಂದು ತಿಳಿದು, ಅಶನಿಯೆಂಬ ಅಸ್ತ್ರವಂ ಆಕರ್ಣಾಂತವಾಗಿ ಸೆಳೆದು ಶತ್ರುವಿನ ಶೂಲದಮೇಲೆ ಪ್ರಯೋಗಿಸಲಾ ರಾಕ್ಷಸನ ಹಸ್ತದಿಂ ದಾವಾಗ್ನಿಯಂತೆ ಪ್ರಜ್ವಲಿಸುತ ಬರುವ ಮಹಾಶೂಲವು ನೃಪತಿಯು ಅಶನಿಯೆಂಬ ಅಸ್ತ್ರವಂ ಅಶನವಂ ಮಾಡಿಕೊಂಡು ನೃಪನಮೇಲೆ ಬರುವುದನ್ನೋಡಿ, ಸುಮತಿಯು ಸ್ತಂಭನಾಸ್ತ್ರದಿಂದ ಶೂಲವಂ ಕವಿದು ನಿಲ್ಲಿಸಿರಲಾಗ ನೃಪತಿಯು ಕಾಲಚಕ್ರವೆಂಬ ಮಹಾಸ್ತ್ರವಂ ಪ್ರಯೋಗಿಸಿ ಶತ್ರುವಿನ ಶೂಲವಂ ಇಬ್ಭಾಗವಾಗಿ ಛೇದಿಸಿ ಮತ್ತೊಂದು ಬಾಣವಂ ಪ್ರಯೋಗಿಸಲುದ್ಯುಕ್ತನಾಗಲು,

ಸಶೇಷ.

ಅಡಿಕೆಯ ಕೊಳೇರೋಗ.

ವ್ಯವಸಾಯಶಾಖಾಧಿಪತಿಗಳಾದ ಡಾಕ್ಟರ್ ಲೇಸ್ಲೀಸಿ ಕೋಲ್ಮನ್‌ರವರು ಈ ರೋಗನಿವಾರಣಾರ್ಥವಾಗಿ ತಾವು ಮಾಡಿರುವ ಚಿಕಿತ್ಸೆಯನ್ನು ಕುರಿತು ಪ್ರಸಿದ್ಧಪಡಿಸಿರುವುದರ ಮುಖ್ಯಾಂಶವೇನಂದರೆ:—

ಅಡಿಕೆಯ ಕೊಳೇರೋಗಕ್ಕೆ ಚಿಕಿತ್ಸೆಮಾಡುವ ವಿಷಯದಲ್ಲಿ ೧೯೧೧ ನೇ ಇಸವಿಯಲ್ಲಿ ಮಾಡಬೇಕಾದ ಏರ್ಪಾಡುಗಳು ನಡೆಯುತ್ತಿರುವುವು. ಹಿಂದಿನ ಸಾಲಿನಲ್ಲಿ ಅಂದರೆ ೧೯೧೦ ನೇ ಇಸವಿಯಲ್ಲಿ ೪೬ ಅಡಿಕೆ ತೋಟಗಳಲ್ಲಿ ಚಿಕಿತ್ಸಾಕ್ರಮವು ನಡೆಸಿದೆವು. ಆ ತೋಟಗಳಲ್ಲಿ ಕೊಳೇರೊಗವು ಕಾಣಿಸಿಕೊಂಡಾಗ ದ್ರಾವಕವನ್ನು ಹಾಕಿದ ಮರಗಳಲ್ಲಿಯೂ, ಅವುಗಳ ಆಜೂಬಾಜಿನಲ್ಲೇ ಅಷ್ಟೇ ವಿಸ್ತೀರ್ಣ ಪ್ರದೇಶದಲ್ಲಿ ಕೊಟ್ಟೆ ಕಟ್ಟಿದ್ದ ಮರಗಳಲ್ಲಿಯೂ ಫಸಲು ಎಷ್ಟರಮಟ್ಟಿಗೆ ಉಳಿಯಿತೆಂಬುವುದನ್ನು ಗೊತ್ತುಮಾಡಿರುತ್ತೇವೆ. ಹೀಗೆ ಗೊತ್ತುಮಾಡಿದ ೪೬ ತೋಟಗಳಲ್ಲಿನ ಲೆಕ್ಕವನ್ನು ನೋಡುವಲ್ಲಿ ಎರಡು ತೋಟಗಳು ವಿನಾಯಿಸಿ ಬಾಕಿ ತೋಟಗಳಲ್ಲೆಲ್ಲಾ ಕೊಟ್ಟೆ ಕಟ್ಟಿದ್ದಕ್ಕಿಂತಲೂ ದ್ರಾವಕವನ್ನು ಹಾಕಿದ್ದರಿಂದ ಹೆಚ್ಚು ಉಪಯೋಗವಾಯಿತೆಂದು ಗೊತ್ತಾಯಿತು.

ಚಿಕಿತ್ಸೆಮಾಡಿದ ೪೬ ತೋಟಗಳಪೈಕಿ ೭ ತೋಟಗಳಲ್ಲಿ ಮಾತ್ರ ಒಂದುಸಲ ದ್ರಾವಕವನ್ನು ಹಾಕಿದ್ದ ಮರಗಳಿಗೆ ಎರಡನೇಸಲ ದ್ರಾವಕವನ್ನು ಹಾಕಿದೆವು. ಆಕ್ಟೋಬರು ತಿಂಗಳ ವರಿವಿಗೂ ಮಳೆಯು ಬೀಳುತ್ತಲೇ ಇದ್ದುದರಿಂದ ದ್ರಾವಕವನ್ನು ಎರಡನೇಸಲ ಹಾಕಬೇಕಾಯಿತು. ಆಗಸ್ಟು ತಿಂಗಳ ಆಖೈರಿನಲ್ಲಿ ಕೆಲವು ತೋಟಗಳಲ್ಲೂ, ಸೆಪ್ಟಂಬರು ತಿಂಗಳಿನ ಪ್ರಾರಂಭದಲ್ಲಿ ಮಿಕ್ಕ ತೋಟದಲ್ಲೂ ಎರಡನೇಸಲ ದ್ರಾವಕವನ್ನು ಹಾಕಿದೆವು. ಹೀಗೆ ಮಾಡಿದಕೂಡಲೇ ರೋಗವು ಹಬ್ಬುವುದೇ ನಿಂತುಹೋಯಿತು. ಬಹಳ ದೀರ್ಘವಾದ ಮಳೆಗಾಲದಲ್ಲಿ ಮಳೆಯು ಹೆಚ್ಚಾಗಿ ಬೀಳುತ್ತಿರುವ ಪ್ರದೇಶಗಳಲ್ಲಿಮಾತ್ರ ದ್ರಾವಕವನ್ನು ಎರಡನೇಸಲ ಹಾಕಬೇಕಾದ ಪ್ರಮೇಯವಿರಬಹುದು. ಆ ಭಾಗಗಳಲ್ಲಿ ಮಾತ್ರ ಸಕಾಲದಲ್ಲಿ ದ್ರಾವಕವನ್ನು ಹಾಕಿದ್ದೇ ಆದರೆ ಉಳಿದುಕೊಳ್ಳುವ ಫಸಲಿನ ಬೆಲೆಯು ದ್ರಾವಕವನ್ನು ಹಾಕುವುದಕ್ಕೆ ತಗಲುವ ಲಾಗೋಡಿಗಿಂತ ಎಷ್ಟೋ ಹೆಚ್ಚಾಗುವುದು.

ದ್ರಾವಕವನ್ನು ಹಾಕುವುದಕ್ಕೆ ತಗಲುವ ಖರ್ಚನ್ನು ಕಂಡುಹಿಡಿಯುವುದಕ್ಕಾಗಿ ಚಿಕಿತ್ಸೆ ಮಾಡಿದ ಪ್ರತಿಯೊಂದು ತೋಟಗಳಲ್ಲಿ ಖರ್ಚಾದ ಸಾಮಾನಿನ ಲೆಕ್ಕವನ್ನೂ ಚಿಕಿತ್ಸೆ ಮಾಡಿದ ಮರಗಳ ಸಂಖ್ಯೆಯನ್ನೂ ಕರಾರುವಾಕಾಗಿ ಲೆಕ್ಕವಿಟ್ಟುಕೊಂಡು ೪೦೦ ಮರಗಳಿಗೆ ಚಿಕಿತ್ಸೆ ಮಾಡಬೇಕಾದರೆ ತಗಲುವ ಖರ್ಚನ್ನು ಗೊತ್ತುಮಾಡಿರುತ್ತೆ. ದ್ರಾವಕವನ್ನು ಚಿಮುಕಿಸಿದ ಎಲ್ಲಾ ತೋಟಗಳಲ್ಲೂ ಒಂದೇ ರೀತಿಯಾದ ಖರ್ಚು ತಗಲಿಲ್ಲ. ಗೊಂಚಲುಗಳು ಜಾಸ್ತಿಯಾಗಿಯೂ ದಪ್ಪವಾಗಿಯೂ ಇದ್ದ ತೋಟಗಳಲ್ಲಿ ದ್ರಾವಕವನ್ನು ಹಾಕುವುದಕ್ಕೆ ಹೆಚ್ಚು ಲಾಗೋಡು ತಗಲಿರುತ್ತೆ. ಇದೂಅಲ್ಲದೆ ಕೆಲವು ತೋಟಗಳಲ್ಲಿ ದ್ರಾವಕವನ್ನು ಮಿತಿಮೀರಿ ಹಾಳುಮಾಡಿರುತ್ತಾರೆ.

೫ ತೋಟಗಳ ಮಾಲೀಕರುಮಾತ್ರ ಮರ ಹತ್ತುವವರ ಕೂಲಿ ಮುಂತಾದ್ದನ್ನೆಲ್ಲಾ ಸೇರಿಸಿಕೊಂಡು ದ್ರಾವಕವನ್ನು ಹಾಕುವುದಕ್ಕೆ ತಗಲುವ ಒಟ್ಟು ಖರ್ಚಿನ ಲೆಕ್ಕವನ್ನು ಕೊಟ್ಟಿರುತ್ತಾರೆ ಹೀಗೆ ತಗಲುವ ಒಟ್ಟು ಖರ್ಚು ೫ ರೂ. ೧೦ ಆಣೆಯಿಂದ ೫ ರೂ. ೩ ಆಣೆಯವರಿವಿಗೂ ತಗಲಿರುವಂತೆ ಕಾಣುತ್ತೆ. ಆದರೆ ೫ ತೋಟಗಳಲ್ಲಿ ಮಾತ್ರವೇ ೪೦೦ ಮರಗಳಿಗೆ ದ್ರಾವಕವನ್ನು ಹಾಕುವುದಕ್ಕೆ ೮ ರೂ. ಗಿಂತ ಹೆಚ್ಚು ಖರ್ಚು ತಗಲಿರುತ್ತೆ. ೪೦೦ ಮರಗಳಿಗೆ ಕೊಟ್ಟೆಯನ್ನು ಕಟ್ಟುವ ಕೂಲಿಯೇ ೮ ರೂಪಾಯಿಗಳಿಗಿಂತ ಕಮ್ಮಿಯಾಗುವುದೇ ಇಲ್ಲಾ. ಕೊಟ್ಟೆಯ ಖರೀದಿಯನ್ನು ಸೇರಿಸಿದರೆ ಕೊಟ್ಟೆ ಕಟ್ಟುವುದಕ್ಕೆ ಬೇಕಾಗುವ ಲಾಗೋಡು ಇನ್ನೂ ಜಾಸ್ತಿಯೇ ಆಗುವುದು.

೧೯೧೧ ನೇ ಇಸವಿಯಲ್ಲಿ ಕೊಳೇರೋಗಕ್ಕೆ ಚಿಕಿತ್ಸೆ ಮಾಡಬೇಕೆಂದು ಇದುವರಿವಿಗೆ ೧೦೦ ಕ್ಕಿಂತ ಹೆಚ್ಚಾದ ಅರ್ಜಿಗಳು ತೋಟಗಳ ಮಾಲೀಕರಿಂದ ಬಂದಿರುತ್ತವೆ. ಇನ್ನೂ ಅನೇಕ ಅರ್ಜಿಗಳು ಕ್ಷಿಪ್ರದಲ್ಲಿಯೇ ಬರುವಂತೆ ತೋರುತ್ತೆ. ದ್ರಾವಕವನ್ನು ಹಾಕಿಸಿನೋಡುವ ಕುತೂಹಲವುಳ್ಳವರೆಲ್ಲಾ ಜಾಗ್ರತೆಯಾಗಿಯೇ ಅರ್ಜಿಗಳನ್ನು ಬರೆದುಕೊಳ್ಳಬೇಕು. ದ್ರಾವಕವನ್ನು ಹಾಕಿಸುವುದಕ್ಕೆ ಬೇಕಾದ ಜನರೂ, ಹಾಕುವ ಸಾಧನಗಳೂ ಮಿತವಾಗಿರುವುದರಿಂದ ಕೊನೆಕೊನೆಗೆ ಬಂದ ಅರ್ಜಿಗಳನ್ನು ಹಿಡಿಯಲು ಆಗದೇಹೋಗಬಹುದು. ಮೇ ತಿಂಗಳು ೧೫ ನೇ ತಾರೀಖಿನ ವರಿವಿಗೂ ಅರ್ಜಿಗಳನ್ನೆಲ್ಲಾ ನನ್ನ ಹೆಸರಿಗೇನೇ ಬೆಂಗಳೂರಿಗೆ ಕಳುಹಿಸಬಹುದು. ನಂತರ ಬರೆಯುವ ಅರ್ಜಿಗಳನ್ನೆಲ್ಲಾ ಸಾಗರ ಮತ್ತು ನಗರ ತಾಲ್ಲೂಕಿನವರು ತಾಳಗುಪ್ಪೆಯಲ್ಲಿರುವ ಅಸಿಸ್ಟೆಂಟ್ ಮೈಕಾಲಜಿಸ್ಟರಾದ ಮಿಸ್ಟರ್ ಎಂ. ಕೆ. ವೆಂಕಟರಾಯರವರಿಗೂ ತೀರ್ಥಹಳ್ಳಿ ಮತ್ತು ಕೊಪ್ಪ ತಾಲ್ಲೂಕಿನವರು ತೀರ್ಥಹಳ್ಳಿಯಲ್ಲಿರುವ ಫೀಲ್ಡ್‌ಮ್ಯಾನ್ ಸ್ಟೀವನ್ ಅನ್ಸರ್‌ರವರಿಗೂ ಕಳುಹಿಸಬೇಕು. ಮೇಲ್ಕಂಡವರಿಗೆ ಯಾವಾಗಲಾದರೂ ಅರ್ಜಿಗಳನ್ನು ರೂಬರೂಬು ತೆಗದುಕೊಂಡು ಹೋಗಿ ಕೊಡಬಹುದು.

ಕೊಳೇರೋಗದ ಚಿಕಿತ್ಸೆಯ ದ್ರಾವಕಕ್ಕೆ ೫ ಪೌಂಡು ಮೈಲುತುತ್ತವನ್ನೂ ೫ ಪೌಂಡು ಸುಣ್ಣವನ್ನೂ ೧೦೦ ಸೇರು ನೀರಿನಲ್ಲಿ ಬೆರಸಬೇಕು. ಮೈಲ್‌ತುತ್ತವನ್ನು ಮರದ ಬಾನೆಯಲ್ಲಾಗಲಿ ಗಡಿಗೆಯಲ್ಲಾಗಲಿ ೪೮ ಸೇರು ನೀರಿನಲ್ಲಿ ಹಾಕಿ ಕರಗಿಸಬೇಕು. ಕಬ್ಬಿಣದ ಪಾತ್ರೆಯಲ್ಲಿ ಮಾತ್ರ ಹಾಕಕೂಡದು. ಮೈಲ್‌ತುತ್ತವನ್ನು ನುಣ್ಣಗೆ ಪುಡಿ ಮಾಡಿ ಒರಟು ಬಟ್ಟೆಯಿಂದಮಾಡಿದ ಒಂದು ಚೀಲದಲ್ಲಿ ತುಂಬಿ ಆ ಚೀಲವನ್ನು ೪೮ ಸೇರು ನೀರಿನಲ್ಲಿ ಮೈಲ್‌ತುತ್ತವೆಲಾ ಕರಗಿಹೋಗುವವರಿವಿಗೂ ಹಾಕಿರಬೇಕು. ಸುಣ್ಣವನ್ನು ಇನ್ನೊಂದು ಬಾನೆಯಲ್ಲಾಗಲಿ ಮಡಿಕೆಯಲ್ಲಾಗಲಿ ಪಾತ್ರೆಯಲ್ಲಾಗಲಿ ಹಾಕಿ ಚೆನ್ನಾಗಿ ಬೆಂದು ಪುಡಿಯಾಗುವವರಿವಿಗೂ ನೀರನ್ನು ಚಿಮುಕಿಸುತ್ತಾ ಇದ್ದು ನಂತರ ಮಿಕ್ಕ ೪೮ ಸೇರು ನೀರನ್ನೆಲ್ಲಾ ಸುರಿದು ಚನ್ನಾಗಿ ಕದಡಬೇಕು. ಇವೆರಡನ್ನೂ ಸಮಪಾಲಾಗಿ ತೆಗದುಕೊಂಡು ಬೇರೊಂದು ಬಾನೆಯಲ್ಲಿ ಹಾಕಿ ಬೆರಸಿ ಚನ್ನಾಗಿ ಕದಡಬೇಕು. ಅಥವಾ ಸುಣ್ಣದ ನೀರನ್ನು ಮೈಲುತುತ್ತದ ದ್ರಾವಕದೊಡನೆ ಸೇರಿಸಬೇಕು. ಹೀಗೆ ಬೆರಸಿಮಾಡಿದ ದ್ರಾವಕವು ಮೇಘವರ್ಣಉಳ್ಳದ್ದಾಗಿರಬೇಕಲ್ಲದೆ ಸ್ವಲ್ಪವೂ ಹಸಿರಾಗಿರಬಾರದು. ಈ ದ್ರಾವಕದಲ್ಲಿ ಕತ್ತಿಯನ್ನು ಅದ್ದಿದರೆ ಆ ಕತ್ತಿಯಮೇಲೆ ತಾಂಬ್ರವು ಅಂಟಿಕೊಂಡು ಕತ್ತಿಯು ಬಣ್ಣಗೆಡಬಾರದು. ಇದಾದಮೇಲೆ ೨ ಪೌಂಡು ರಾಳವನ್ನೂ ೧ ಪೌಂಡು ಸೋಡಾ ಉಪ್ಪನ್ನೂ ೨ ಸೇರು ನೀರಿನಲ್ಲಿ ಹಾಕಿ ಚನ್ನಾಗಿ ಒಂದು ಗಂಟೆಯ ಹೊತ್ತು ಬೆಂಕಿಯಮೇಲೆ ಮರಳಿಸಿ ಬಂಕೆಯನ್ನು ಮಾಡಿ ನಂತರ ಮಾಡಿಟ್ಟುಕೊಂಡಿರುವ ದ್ರಾವಕಕ್ಕೆ ಹಾಕಿ ಬೆರಸಿದರೆ ದ್ರಾವಕವು ಉಪಯೋಗಕ್ಕೆ ಸಿದ್ಧವಾಗುವದು. ಪೌಂಡು ಮತ್ತು ಗ್ಯಾಲನ್ ಇವುಗಳ ಅಳತೆಯು ತಿಳಿಯದೆ ಇದ್ದವರು ಒಂದು ಪೌಂಡಿಗೆ ೪೦ ತೊಲೆ ತೂಕವೆಂದೂ, ಒಂದು ಗ್ಯಾಲನ್ನಿಗೆ ೪ ಅಳತೇ ಸೇರೆಂತಲೂ ತಿಳಿದುಕೊಳ್ಳಬಹುದು.

ಅದ್ದರಿಂದ ಚಿಕಿತ್ಸಾ ದ್ರಾವಕವನ್ನು ಹೀಗೆ ಮಾಡಬೇಕು:—

೧. ೫ ಪೌಂಡು ಮೈಲ್‌ತುತ್ತವನ್ನು ೨೫ ಗ್ಯಾಲನ್ ನೀರಿನಲ್ಲಿ ಕರಗಿಸಬೇಕು.

೨. ೫ ಪೌಂಡು ಸುಣ್ಣವನ್ನು ೨೫ ಗ್ಯಾಲನ್ನು ನೀರಿನಲ್ಲಿ ಸುಟ್ಟು ಕದಡಬೇಕು.

೩. ೨ ಪೌಂಡು ರಾಳವನ್ನೂ ೧ ಪೌಂಡು ಸೋಡಾವನ್ನೂ ೧ ಗ್ಯಾಲನ್ ನೀರಿನಲ್ಲಿ ಹಾಕಿ ಚನ್ನಾಗಿ ಒಂದು ಗಂಟೆಯಕಾಲ ಮರಳಿಸಬೇಕು. ನಂತರ ೨ ನೇ ದ್ರಾವಕವನ್ನು ೧ ನೇ ದ್ರಾವಕಕ್ಕೆ ಹಾಕಿ ಚನ್ನಾಗಿ ಬೆರಸಿ ಆ ಮೇಲೆ ೩ ನೇ ದ್ರಾವಕವನ್ನು ಹಾಕಿ ಬೆರಸಬೇಕು.

ದ್ರಾವಕವನ್ನು ಒಂದು ಗ್ಯಾಲನ್ನಿಂದ ಹಿಡಿದು ಎಷ್ಟು ಬೇಕಾದರೂ ಮಾಡಿಕೊಳ್ಳಬಹುದು. ಆದರೆ ಪದಾರ್ಥಗಳ ವಿಷಯದಲ್ಲಿ ಮಾತ್ರ ಮೇಲೆ ಹೇಳಿರುವ ಪ್ರಮಾಣವನ್ನು ಅನುಸರಿಸಬೇಕು. ಕೆಲಸಕಾಲದಲ್ಲಿ ಒಂದು ದಿನದ ಕೆಲಸಕ್ಕೆ ಬೇಕಾಗುವಷ್ಟು ದ್ರಾವಕವನ್ನೇ ಮಾಡಿಕೊಂಡು ಪ್ರತಿದಿನವೂ ಹೊಸದಾಗಿಯೇ ದ್ರಾವಕವನ್ನು ಮಾಡಿಕೊಂಡು ಉಪಯೋಗಿಸಬೇಕು. ದೊಡ್ಡ ದೊಡ್ಡ ಮಡಿಕೆಗಳಾಗಲೀ ಮರದ ಬಾನೆಗಳಾಗಲೀ ದೊರೆಯದ ಪಕ್ಷಕ್ಕೆ ಚಿಕ್ಕ ಚಿಕ್ಕ ಮಡಿಕೆಗಳಲ್ಲಿ ಅವು ಹಿಡಿಯುವಷ್ಟು ದ್ರಾವಕವನ್ನೇ ಮಾಡಿಕೊಳ್ಳಬೇಕು.

ಅಲಕಪುರಿ ಧಾರ್ಮಿಕ ವಾಚಕಶಾಲೆ.

೧-೫-೧೯೧೧ ನೇ ಸೋಮವಾರ ರಾತ್ರಿ ಈ ಹಲಕೂರು ಗ್ರಾಮದಲ್ಲಿ ಕಾರ್ಯದರ್ಶಿಗಳಾದ ಮ॥ ರಾ॥ ಶಾ॥ ವೆಂಕಟರಮಣಯ್ಯನವರಿಂದ ಸ್ಥಾಪಿಸಲ್ಪಟ್ಟಿರುವ "ಅಲಕಪುರೀ ಧಾರ್ಮಿಕ ವಾಚಕಶಾಲೆ" ಎಂಬ ವಾಚನಮಂದಿರದಲ್ಲಿ ಶ್ರೀ ರಾಮದೇವರ ಅರ್ಚನೋತ್ಸವವು ನಡೆಯಿತು. ಈ ಗ್ರಾಮದ ಮತ್ತು ಸಮೀಪಗ್ರಾಮಗಳ ಅನೇಕ ಮಂದಿ ನೆರದಿದ್ದರು. ಈ ಉತ್ಸವಕಾಲದಲ್ಲಿ ಕಾರ್ಯದರ್ಶಿಗಳಿಂದ ಹೇಳಲ್ಪಟ್ಟ ಉಪನ್ಯಾಸವು ಇದರಲ್ಲಿ ಗರ್ಭೀಕರಿಸಲ್ಪಟ್ಟಿರುವುದು. ಒಗ್ಗಟ್ಟಿನ ವಿಷಯವಾಗಿ ಸದರಿಯವರು ಹೇಳಿದ ಉಪನ್ಯಾಸವು ತಮ್ಮಿಂದ ಅನುಮೋದಿಸಲ್ಪಟ್ಟಲ್ಲಿ ಅದು ಪ್ರಕಟಿಸಲ್ಪಡಲಿ! ಇಂತಹ "ವಾಚನಾಲಯಗಳೂ" ಇಂತಹ "ಭಜನೆಯ ಕೂಟಗಳೂ" ಮತಪಕ್ಷರಾತವಿಲ್ಲದೆ, ಕೇವಲ ದುರ್ಜನರೂ ಸನ್ಮಾರ್ಗದಲ್ಲಿ ಪ್ರವರ್ತಿಸಿ, ಒಗ್ಗಟ್ಟಿನಿಂದುಂಟಾಗುವ ಸತ್ಫಲವನ್ನು ಅನುಭವಿಸುವುದಕ್ಕೆ ಸಹಕಾರಿಗಳಾಗಿರುತ್ತವೆಂಬುದಕ್ಕೆ ಅರ ಆಕ್ಷೇಪಣೆಯೂ ಇರಲಾರದೆಂದು ನಾನು ದೃಢವಾಗಿ ನಂಬಿರುವೆನು.

ಪ್ರತ್ಯಕ್ಷದರ್ಶಿ.

ಕಾರ್ಯದರ್ಶಿಗಳ ಉಪನ್ಯಾಸ.

ನಮ್ಮ ಪ್ರಿಯಮಿತ್ರರೆ! ಈಗ ನಿಮಗೂ, ನಿಮ್ಮೊಡನಿರುವ ನನಗೂ ಎಷ್ಟೋ ಆನಂದವುಂಟಾಗಿರುವುದಷ್ಟೆ. ಏತರಿಂದ? ಈಗ ನೀವು ನಿಮ್ಮ ಹೊಲಗಳ ಬಳಿಯಲ್ಲಿ ನಿಮ್ಮ ಆಸ್ತಿಯಾದ ಬೆಳೆಯನ್ನೂ ನೋಡುತ್ತಾ ಅಥವಾ ಅದರ ಸಂರಕ್ಷಣೆಗಾಗಿ ಅಲ್ಲಿ ಇದ್ದು ನಿದ್ದೆಹೋಗುತ್ತಾ ಕುಳಿತಿದ್ದರೆ ಇಂತಹ ಆನಂದ ವುಂಟಾಗುತ್ತಿದ್ದಿತೆ? ಅವುದಾದರೊಂದು ಕಾರ್ಯಕ್ಕಾಗಿ ಹೊರಟು ದಾರಿಗರಾಗುತ್ತಿದ್ದರೆ ಇಷ್ಟು ಆನಂದ ಉಂಟಾಗುತ್ತಿದ್ದಿತೆ? ಇನ್ನಾವವಿಧವಾದ ನಿಮಗೆ ಅತ್ಯಾದಾಯವೆಂದು ತೋರುವ ಕಾರ್ಯತತ್ಪರರಾಗಿದ್ದರೆ ಇಷ್ಟು ಹರ್ಷವುಂಟಾಗುತ್ತಿದ್ದಿತೆ? ನಿಮ್ಮ ಸತಿ ಸುತರೊಡನೆ ಸಂತೋಷದಿಂದಿರುವಾಗ ಈ ಬಗೆಯ ಉತ್ಸಾಹವೂ, ಆನಂದವೂ ನಿಮಗಾಗುತ್ತಿದ್ದುವೆ? ಹಾಗಾದರೆ ಈಗ ಎಂತಹ ಸಂತೋಷದಲ್ಲಿರುವೆವು? ಎಂದು ನೀವು ಕೇಳುವಿರೇನು? ಅದನ್ನು ವಿವರಿಸಬೇಕೆಂಬುದೇ ಈಗಿನ ನನ್ನ ಉದ್ದಿಶ್ಯ.

ಪ್ರಪಂಚದಲ್ಲಿ ಪ್ರತಿಯೊಂದುಪ್ರಾಣಿಯೂ ಆನಂದಪಡಬೇಕೆಂದೇ ಅಪೇಕ್ಷಿಸುವುದು. ಅದಕ್ಕಾಗಿಯೇ ಪ್ರಯತ್ನಿಸಿ ಅವುದಾದರೊಂದು ಕಾರ್ಯವನ್ನು ಮಾಡುತ್ತಿರುವುದು. ಹೀಗೆ ಕಾರ್ಯಗಳನ್ನಾಚರಿಸುವುದರಲ್ಲಿ ಒಂದೊಂದು ಪ್ರಾಣಿಯ ಆಕಾರವೂ, ಗುಣವೂ, ಪರಿಪೂರ್ಣವೂ ಹೇಗೆ ವ್ಯತ್ಯಾಸಗಳುಳ್ಳವುಗಳಾಗಿರುವುವೋ ಹಾಗೆ ಅಭಿಪ್ರಾಯಗಳು ಬೇರೆ ಬೇರೆ ವಿಧಗಳಾಗಿರುವುವು. ಅಸಂಖ್ಯಾತ ಸ್ಥಾವರ ಜಂಗಮ ಪ್ರಾಣಿ ಸಮೂಹ ನಿಬಿಡವಾದ ಈ ಪ್ರಪಂಚದಲ್ಲಿ ಪ್ರತಿಯೊಂದೂ ಬೇರೆಬೇರೆ ತೆರನಾಗಿರುವಂತೆ, ನಿರ್ಮಿಸಿರುವ ಮತ್ತು ನಿರ್ಮಿಸುತ್ತಿರುವ ಲೋಕೇಶನ ಮಹಿಮೆಯನ್ನು ಎಷ್ಟು ವರ್ಣಿಸಿದರೂ ಸಾಲದುದಾಗಿದೆ. ಅದಂತಿರಲಿ!

ಪ್ರತಿಯೊಂದು ಪ್ರಾಣಿಯ ಅಭಿಪ್ರಾಯಗಳೂ ಭಿನ್ನ ಭಿನ್ನಗಳಾಗಿರುವುದರಿಂದಲೇ ಒಂದರ ಕೃತ್ಯವು ಮತ್ತೊಂದಕ್ಕೆ ಸರಿಬೀಳುವುದಿಲ್ಲವು. ಅದರ ವಿಚಾರದಲ್ಲಿ ಕುಳಿತರೆ ಪ್ರಾಣಿಯು ಜನಿಸಿದುದೇ ನಿರರ್ಥಕವೆನ್ನಬೇಕು. ಅದುದರಿಂದ ಪ್ರಾಣಿಗಳನ್ನು ತರಗತಿಗಳನ್ನಾಗಿ ವಿಂಗಡಿಸಿಕೊಂಡಕ್ಕೆ, ಪ್ರಕೃತ ಮನುಷ್ಯಪ್ರಾಣಿಯ ಸ್ಥಿತಿಯು ಇತರ ಪ್ರಾಣಿಗಳಿಗಿಂತಲೂ ಅಧಿಕವೆನ್ನಬೇಕಾಗಿದೆ. ಏಕೆಂದರೆ—ಅವ್ಯಾಜ ದಯಾಕರನಾದ ಜಗತ್ಕರ್ತನು ಎಲ್ಲಾ ಪ್ರಾಣಿಗಳಿಗಿಂತಲೂ ಅತ್ಯಧಿಕವಾಗಿ ಜ್ಞಾನವೆಂಬ ವಸ್ತುವನ್ನು ಮನುಷ್ಯಪ್ರಾಣಿಗೆ ಕೊಟ್ಟಿರುವನು. ಅದರಿಂದಲೇ ಎಲ್ಲಾ ಪ್ರಾಣಿಗಳಿಗಿಂತಲೂ ಮನುಷ್ಯ ಪ್ರಾಣಿಯು ಶ್ರೇಷ್ಠವೆಂದು ಹೇಳುತ್ತಾರೆ. ಈ ಮನುಷ್ಯರಲ್ಲಿಯೂ ಜ್ಞಾನವು ಹೆಚ್ಚಾಗಿ ಅರಿಗೆ ಇರುವುದೋ ಅವರು ಮತ್ತೂ ಶ್ರೇಷ್ಠರು.

ಹೀಗೆ ಅನೇಕ ವ್ಯತ್ಯಾಸಗಳುಂಟಾಗಿರುವುದರಿಂದಲೇ ಪ್ರಪಂಚದಲ್ಲಿ ಒಬ್ಬರ ಅಭಿಪ್ರಾಯವು ಮತ್ತೊಬ್ಬರಿಗೆ ಸರಿಬೀಳುವುದಿಲ್ಲವು. ಒಬ್ಬರು ಮಾಡಿದ ಕೆಲಸವನ್ನು ಮತ್ತೊಬ್ಬರು ಒಪ್ಪುವುದಿಲ್ಲವು. ಎಂತಹ ಉತ್ತಮತರದ ಕೆಲಸವೇ ಆದರೂ ಎಲ್ಲರೂ ಏಕಮನದಿಂದ ಅನುಮೋದಿಸದಿರುವುದು ಪ್ರಪಂಚದ ಲಕ್ಷಣ! ಆದರೆ ಹೆಚ್ಚಿಗೆ ಜನರ ಸಮ್ಮತಿಯು ಆವ ಕಾರ್ಯಕ್ಕೆ ಇರುವುದೋ ಅದೇ ಉತ್ತಮಕಾರ್ಯವೆಂದು ಆರ್ಯರು ಅಪ್ಪಣೆಕೊಡಿಸಿರುವರು. ಎಂದರೆ ಹತ್ತು ಜನರಲ್ಲಿ ಆರುಜನರೊಪ್ಪಿ ನಾಲ್ಕರೊಪ್ಪದಿದ್ದರೂ ಅದು ಉತ್ತಮಕಾರ್ಯವೇಸರಿ! ನಾಲ್ಕರೊಪ್ಪಿ ಆರುಮಂದಿ ಯೊಪ್ಪದಿದ್ದರೆ ಅದು ದುರ್ಜನೀಯವಾದ ಕೆಲಸವಾಗಿರುವುದು ಆದುದರಿಂದಲೇ ಕಾರ್ಯಕ್ಕೆ ಆರಂಭಿಸುವಾಗಲೇ ಅದರ ಗುಣಾವಗುಣಗಳನ್ನು ಪರ್ಯಾಲೋಚಿಸಿ ಆರಂಭಿಸಬೇಕು. ತಾನು ಮಾಡಿದ ಕೆಲಸಕ್ಕೆ ತನ್ನಷ್ಟಕ್ಕೆ ತಾನೇ ಸಂತೋಷಿಸುವುದು ಹೇಗೆ? ತನ್ನ ಕೃತ್ಯವನ್ನು ನೋಡಿದವರಲ್ಲಿ ಅನೇಕರು ಸಂತೋಷಿಸಿದರೆ ಅದೇ ಆ ಕಾರ್ಯಕರ್ತನಿಗೆ ಸಂತೋಷವಲ್ಲವೆ? ಅಂತಹ ಆನಂದಕರವಾದ ಕೆಲಸವು ಈಗ ನನ್ನ ಮಿತ್ರರಾದ ತಮ್ಮೆಲ್ಲರಿಂದಲೂ ಆಚರಿಸಲ್ಪಟ್ಟಿರುವುದು. ಇದಕ್ಕಾಗಿ ತಮ್ಮೆಲ್ಲರಿಗೂ ನಾನೂ ನನ್ನೊಡನಾಡಿಗಳೂ ಕೃತಜ್ಞರಾಗಿರುವೆವು,

ಅಂತಹ ಅತ್ಯುತ್ತಮವಾದ ಕೆಲಸವನ್ನು ನಾವೇನು ಮಾಡಿದೆವು? ಎಂದು ನೀವು ಪ್ರಶ್ನೆಮಾಡಬಹುದು! ಅದಕ್ಕೆ ಉತ್ತರವಾಗಿ "ತಾವೆಲ್ಲರೂ ವಿಶ್ವಾಸವಿಟ್ಟು ಒಗ್ಗಟ್ಟಾಗಿ ಒಂದುಕಡೆ ಸೇರಿ ತಾವೂ ತಮ್ಮೊಡನಿರುವ ನಾವೂ ಆನಂದಪಡುವಂತೆ ಮಾಡಿರುವುದೇ" ತಾವು ಆಚರಿಸಿದ ಉತ್ತಮವಾದ ಕಾರ್ಯವೆಂದು ಉತ್ಸಾಹದಿಂದ ಹೇಳುತ್ತೇನೆ. ಏಕೆಂದರೆ—ಒಬ್ಬನು ಪ್ರಯತ್ನಿಸಿದ ಕಾರ್ಯಕ್ಕೆ ಅನೇಕರು ನೆರವಾಗಬೇಕಾದರೆ, ಅವನಿಗೆ ಪೂರ್ವಾರ್ಜಿತ ಪುಣ್ಯಫಲವಿರಬೇಕು. ಅಂತಹ ಕಾರ್ಯವು ಲೋಕೋಪಕಾರಿಯೂ, ಬಹುಜನಾನುಮೋದನಾರ್ಹವೂ ಆಗಿರುವುದಾದರೆ ಪ್ರಯತ್ನಿಸಿದವನಿಗೂ, ಅವನ ಸಹಾನುಭೂತಿಗಳಿಗೂ ಉಂಟಾಗುವ ಉತ್ಸಾಹಕ್ಕೂ, ಆನಂದಕ್ಕೂ ಮೇರೆಯುಂಟೆ? ಇಂತಹ ಅಮೂಲ್ಯವಾದ ಆನಂದವು ಈ ತಮ್ಮಗಳಿಗುಂಟಾಗುವುದಲ್ಲವೆ? ಏತರಿಂದುಂಟಾಯಿತು? ನಿಮ್ಮ ನಮ್ಮ ಒಗಟ್ಟಿನಿಂದುಂಟಾಯಿತೆಂದು ನೀವು ಸುಲಭವಾಗಿ ಹೇಳುವುದಕ್ಕೆ ಉದ್ಯುಕ್ತರಾಗುವಿರಿ. ಎಂತಹ ಅಲ್ಪಕಾರ್ಯವಾದರೂ ಒಬ್ಬನಿಂದ ಪೂರ್ಣವಾಗಲಾರದು ಎನ್ನುವಾಗ, ಬಹುಜನಸಮ್ಮತವಾಗಿರಬೇಕಾದರೆ ಇಂತಹ ಕಾರ್ಯಗಳು ತಮ್ಮಂತಹ ಸನ್ಮಿತ್ರರ ಸಹಾಯವಿಲ್ಲದಿದ್ದರೆ ಸಂಪೂರ್ಣ ಫಲದಾಯಕವಾಗುವುವೇನು? ಒಬ್ಬರಿಗೊಬ್ಬರು ನೆರವಾದರೆ ಎಂತಹ ದುರ್ಘಟವಾದ ಕಾರ್ಯವನ್ನಾದರೂ ಸಾಧಿಸಬಹುದು. ಸಣ್ಣ ಸಣ್ಣ ದಾರದೆಳೆಗಳನ್ನು ಸೇರಿಸಿ ಹೊಸೆದ ಒಂದು ಹಗ್ಗದಿಂದ ದೊಡ್ಡ ಆನೆಯನ್ನಾದರೂ ಬಿಗಿದು ಕಟ್ಟಬಹುದು.

ಇಂತಹ ಸ್ತುತ್ಯವಾದ "ಒಗಟ್ಟು" ಉಂಟಾಗುವುದಕೆ "ಭಜನೆಯ ಕೂಟಗಳೂ, ವಾಚಕಮಂದಿರಗಳೂ" ಬಹಳ ಸಾಹಕಾರಿಗಳಾಗಿರುವುವು. ಇಂತಹ ಸ್ಥಳಗಳಲ್ಲಿ ಆಗಾಗ್ಗೆ ಅನೇಕ ತೆರನಾದ ಜನಗಳು ಸೇರುವುದರಿಂದ ಇತರರ ಅಭಿಪ್ರಾಯಗಳನ್ನೂ, ನಡವಳಿಗಳನ್ನೂ ನಾವು ತಿಳಿದುಕೊಂಡು ಅವುಗಳಲ್ಲಿ ಉತ್ತಮವಾದವುಗಳನ್ನಾರಿಸಿ ಅವರಂತೆ ಅನುಸರಿಸುವುದಕ್ಕೆ ಅನುಕೂಲವಾಗಿರುತ್ತದೆ. ಇಂತಹ ಕಾರ್ಯಗಳು ಒಬ್ಬನ ಪ್ರಯತ್ನದಿಂದ ಆಗಲಾರದೆಂತ ಪದೇ ಪದೇ ತಮಗೆ ಜ್ಞಾಪಿಸುತ್ತಲೇ ಇರುವೆನಷ್ಟೆ. ಇಂತಹ ಕಾರ್ಯಗಳಿಗೆ ತಾವೆಲ್ಲರೂ ಮನಃಪೂರ್ವಕವಾಗಿ ಸಾರ್ವಕಾಲದಲ್ಲಿಯೂ ಸಹಾಯಕರಾಗಿರುತ್ತಿರುವಿರೆಂದು ನಂಬಿದ್ದೇನೆ.

« ಉತ್ಸಾಹಂ ಸಾಹಸಂ ಧೈರ್ಯಂ ಬುದ್ಧಿಶ್ಶಕ್ತಿಃ ಪರಾಕ್ರಮಃ । ಷಡೇತೇಯತ್ರತಿಷ್ಠಂತಿ ತತ್ರದೇವೋಪಿತಿಷ್ಠತಿ ॥ ಎಂದರೆ- ಉತ್ಸಾಹವು, ಸಾಹಸವು, ಧೈರ್ಯವು, ಬುದ್ಧಿ, ಶಕ್ತಿ, ಪರಾಕ್ರಮ ಈ ಆರು ಗುಣಗಳೂ ಎಲ್ಲಿರುವುವೋ ಅಲ್ಲಿ ದೇವರು ಇರುತ್ತಾನೆ ಎಂಬುದಾಗಿ ನೀತಿವಚನವಿರುವುದು. ಈ ಆರುಗುಣಗಳೂ ಒಂದರಹಿಂದೆ ಮತ್ತೊಂದು ಉಂಟಾಗುವುದು ಹೇಗೋ ಹಾಗೆ ಒಂದಿಲ್ಲದಿದ್ದರೆ ಮತ್ತೊಂದಿರಲಾರದು. ಇವೆಲ್ಲಕ್ಕೂ ಉತ್ಸಾಹವೇ ಮೊದಲಲ್ಲವೆ? ಆ ಉತ್ಸಾಹವು ತಮ್ಮಗಳಿಂದ ಉಂಟಾಗಿರುವ ಕಾರಣ ತಮ್ಮಗಳಿಗೆ ನಾನು ಕೃತಜ್ಞನಾಗಿರುವೆನು.

ಮಿತ್ರರೆ! ಇಂತಹ ಐಕಮತ್ಯವು (ಒಗ್ಗಟ್ಟು) ಸಾರ್ವಕಾಲಿಕವಾಗಿ ನಮ್ಮಗಳಲ್ಲಿ ನೆಲಸಿರುವಂತೆ ಮಾಡಲಿ ಎಂದು ಸರ್ವಾಂತರ್ಯಾಮಿಯಾದ ಭಗವಂತನನ್ನು ಸದಾ ಸಂಪ್ರಾರ್ಥಿಸುತ್ತಿರುವೆನು. ಆದರೆ ಇದಕ್ಕೋಸ್ಕರ ಕೆಲವು ನಿಯಮಗಳನ್ನು ನಾವೆಲ್ಲರೂ ಆವಾಗಲೂ ಅನುಸರಿಸರಿಸುತ್ತಿರಬೇಕಾಗಿದೆ. ಅದು ಎಲ್ಲರ ಹೃದಯದಲ್ಲಿ ನಿರಂತರದಲ್ಲಿಯೂ ಇರಬೇಕಾದುದಾಗಿರುವುದು.

೧. ಒಬ್ಬರು ತೊಡಗಿದ ಕಾರ್ಯಕ್ಕೆ ಇತರರು ಅನುಮೋದಿಸುವುದು. ಆದರೆ ಅದರ ಗುಣಾವಗುಣಗಳನ್ನು

[೬ ನೇಯ ಪೇಜನ್ನು ನೋಡಿರಿ.]

ಭರತಖಂಡದಲ್ಲಿ ನಡೆಯುವ ಕಿರೀಟಧಾರಣ ಮಹೋತ್ಸವವು.

ಡಿಲ್ಲಿಯಲ್ಲಿ ನಡೆಯುವ ದರ್ಬಾರಿನ ಕಾಲದಲ್ಲಿ ಐರೋಪ್ಯಸ್ತ್ರೀಯರು ಬೆಳಗಿನ ಉಡುಗನ್ನು ಧರಿಸಬೇಕೆಂದು ವಿಧಾಯಕವಾಗಿದೆ. ಮತ್ತೂ ಕಲಕತ್ತಾಕ್ಕೆ ಚಕ್ರವರ್ತಿ ದಂಪತಿಗಳು ದಯಮಾಡಿಸಿದ ವೇಳೆಯಲ್ಲಿ ಜರಗುವ ದರ್ಬಾರಿನಲ್ಲಿ ಸ್ತ್ರೀಯರು ಉದ್ದವಾದ ಗೌನುಗಳನ್ನುಮಾತ್ರ ಧರಿಸಬೇಕಲ್ಲದೆ ತುಸಟ ಮೊದಲಾದುದನ್ನುಪಯೋಗಿಸಕೂಡದು. ಡಿಲ್ಲಿಯ ದರ್ಬಾರಿನಲ್ಲಿ ಚಕ್ರವರ್ತಿಗಳು ಯಾವವಿಧವಾದ ಉಡುಗೊರೆಯನ್ನೂ ಸ್ವೀಕರಿಸುವುದಿಲ್ಲ. ಆದರೆ ಮುಖ್ಯರಾದ ಪ್ರಜಾಪ್ರತಿನಿಧಿಗಳು ತಮ್ಮ ಸ್ಥಳೀಯ ಸರ್ಕಾರದವರಿಂದ ಅಪ್ಪಣೆಯನ್ನು ಮುಂದಾಗಿ ಪಡೆದುಕೊಂಡೊಪ್ಪಿಸುವ ವಿಜ್ಞಾಪನಪತ್ರಿಕೆಗಳನ್ನು ಮಾತ್ರ ಸ್ವೀಕರಿಸುವರು. ಈ ವಿಜ್ಞಾಪನಪತ್ರಿಕೆಗಳಲ್ಲಿ ಅಭಿನಂದನ ಮತ್ತೂ ವಂದನಾಪೂರ್ವಕವಾದ ವಾಕ್ಯಗಳುಮಾತ್ರ ಇರಬೇಕಲ್ಲದೆ, ರಾಜಕೀಯ ವಿಚಾರಗಳೂ, ಪ್ರಾರ್ಥನೆಗಳೂ ಇದ್ದಲ್ಲಿ ಸ್ವೀಕರಿಸಲ್ಪಡುವುದಿಲ್ಲವು.

ಕಲಕತ್ತಾದಲ್ಲಿ ನಡೆಯುವ ಉತ್ಸವವು.

ಚಕ್ರವರ್ತಿ ದಂಪತಿಗಳು ಕಲ್ಕತ್ತಾಕ್ಕೆ ದಯಮಾಡಿದ ವೇಳೆಯಲ್ಲಿ ಅವರನ್ನು ಸತ್ಕರಿಸಲು ಏರ್ಪಟ್ಟಿರುವ ಸಂಘದವರು ಮಾಡಬೇಕೆಂದಿರುವ ಚಕ್ರವರ್ತಿ ದಂಪತಿಗಳ ಉತ್ಸವವು ೪ ಭಾಗವಾಗಿ ವಿಂಗಡಿಸಲ್ಪಟ್ಟಿರುವುದು. ಒಂದನೆಯದರಲ್ಲಿ- ರಾಮಾಯಣದಲ್ಲಿ ವರ್ಣಿತವಾಗಿರುವ ಶ್ರೀರಾಮಚಂದ್ರನು ವನವಾಸಾನಂತರ ಸರ್ವಾಲಂಕಾರ ಭೂಷಿತನಾಗಿ ದಿವ್ಯವಾದ ತೇಜಿಗಳನ್ನೂಡಿದ ಮಹಾರಥದಲ್ಲಿ ಕುಳಿತು ಚತುರಂಗಸೇನೆಯಿಂದಲೂ, ಪುರಜನರಿಂದಲೂ, ರಾಕ್ಷಸಪಡೆಯಿಂದಲೂ, ಕಪಿಗಳ ಗುಂಪಿನಿಂದಲೂ ಕೂಡಿದವನಾಗಿ ರಾಜಧಾನಿಯಾದ ಅಯೋಧ್ಯಾ ಪಟ್ಟಣವನ್ನು ಪ್ರವೇಶಿಸುವ ಭಾಗವೂ, ಎರಡನೆಯದರಲ್ಲಿ- ಅರ್ಜುನನು ಶ್ರೀಕೃಷ್ಣನ ಸಾರಥಿತ್ವದಿಂದ ದಿವ್ಯ ರಥಾರೋಹಣಮಾಡಿ ಸಕಲ ಸೇನಾ ಸಮೇತನಾಗಿ ಯುದ್ಧಮಾಡಲು ಕುರುಕ್ಷೇತ್ರಕ್ಕೆ ತೆರಳುವ ಭಾಗವೂ ಪ್ರತ್ಯಕ್ಷವಾಗಿ ಪ್ರದರ್ಶಿಸಲ್ಪಡುವುವು. ಈ ಉತ್ಸವಗಳಲ್ಲಿ ಆ ಕಾಲದ ಉಡುಪುಗಳನ್ನೂ, ಆಯುಧಗಳನ್ನೂ ಧರಿಸಿದ ಜನರೇ ಭಾಗಿಗಳಾಗುವರು. ಮೂರನೆಯದರಲ್ಲಿ—ಅವರಂಗ್‌ಜೇಬ್ ಚಕ್ರವರ್ತಿಯು ಸಕಲ ಸೇನಾಸಮೇತನಾಗಿಯೂ, ಬಿರುದುಗಳಿಂದಲೂ ಕಾಶ್ಮೀರವನ್ನು ಪ್ರವೇಶಿಸುವ ವೈಭವವು ಪ್ರದರ್ಶಿಸಲ್ಪಡುವುದು. ಇದರಿಂದ ಆ ಕಾಲದಲ್ಲಿ ಮೊಗಲರ ದವಲತ್ತು ಎಷ್ಟು ಉನ್ನತಿಯಲ್ಲಿದ್ದಿತೆಂಬುದು ವ್ಯಕ್ತವಾಗುತ್ತದೆ. ಈ ಪುರಾಣೋಕ್ತವಾದ ಕಥಾಭಾಗಗಳನ್ನು ವಾಸ್ತವ್ಯವಾಗಿ ಮಾಡಿ ತೋರಿಸಲು ತಕ್ಕಾಯುಧಗಳೂ, ಉಡುಪುಗಳೂ, ಗಜಾಶ್ವಪದಾತಿ ಮೊದಲಾದ ಸೇನೆಗಳೂ ಅತ್ಯವಶ್ಯಕವಾಗಿರುವುದರಿಂದ ಅವುಗಳನ್ನು ಜಯಪುರದ ಮಹಾರಾಜರು, ರಾಂಪುರದ ನವಾಬರು, ಮುರುಷದಾಬಾದಿನ ನವಾಬರು ಮೊದಲಾದವರುಗಳಿಂದ ಎರವಾಗಿ ತೆಗದುಕೊಳ್ಳಬೇಕೆಂದು ನಿರ್ಧರಿಸಲ್ಪಟ್ಟಿರುತ್ತದೆ. ನಾಲ್ಕನೆಯದರಲ್ಲಿ- ಭರತಖಂಡದ ಎಲ್ಲ ಜನಾಂಗದವರಲ್ಲೂ ಕೆಲ ಜನರು ಬರಮಾಡಲ್ಪಟ್ಟು ಪ್ರದರ್ಶಿಸಲ್ಪಡುವರು. ಇದರಿಂದ ಪಾಶ್ಚಾತ್ಯರು ಸ್ವಲ್ಪವಧಿಯಲ್ಲಿ ಭರತಖಂಡದ ನಾನಾ ಜನಾಂಗದವರನ್ನೋಡಿ ತಿಳಿಯಲವಕಾಶವಾಗಿರುವುದು. ಇದಕ್ಕಾಗಿ ಮಧ್ಯಪ್ರಾಂತಗಳಿಂದ ಗಾಂಡ್ ಜನರು, ನೀಲ್ಗಿರಿಯಿಂದ ತೋಡ ಜನರು, ವಾಯುವ್ಯ ಮೂಲೆಯ ಪ್ರಾಂತಗಳಿಂದ ಅಫ್ರಿದಿ ಜನರು, ಪರ್ಷ್ಯನರು, ಅರಬ್ಬಿಯವರು, ಮಹಾರಾಷ್ಟ್ರದವರು, ಪೋರ್ಚುಗೀಸರು ಮೊದಲಾದ ನೂರಾರುಜಾತಿಯ ಜನರೆಲ್ಲ ಬರಮಾಡಲ್ಪಡುವರು. ಭರತಖಂಡದ ಸೇನಾಧಿಪತಿಗಳು ಈ ಉತ್ಸವಗಳಿಗೆ ಬೇಕಾದ ಸಹಾಯವನ್ನು ಮಾಡುವುದಾಗೊಪ್ಪಿಕೊಂಡಿರುವರು. ಹಿಂದೂ ಪುರಾಣೋಕ್ತವಾದ ಕಥಾಭಾಗಗಳನ್ನು ಈ ಉತ್ಸವದಲ್ಲಿ ಪ್ರದರ್ಶಿಸುವುದರಿಂದ ಭಾರತೀಯರು ಪವಿತ್ರವೆಂದು ಭಾವಿಸಿರುವುದನ್ನು ಅಣಕಿಸಿದಂತಾಗುತ್ತಾದುದರಿಂದ ಈ ಭಾಗಗಳನ್ನು ಬಿಟ್ಟುಬಿಡುವುದುತ್ತಮವೆಂದು ಕೆಲ ಹಿಂದೂ ವೃತ್ತಪತ್ರಿಕೆಗಳು ಸೂಚಿಸಿರುತ್ತವೆ.

ದರ್ಬಾರು ಕಾಲದಲ್ಲಿ ಅಧಿಕಾರಿಗಳಿಗೂ, ಸೈನಿಕರಿಗೂ, ಅತಿಥಿಗಳಿಗೂ ಹಾಲು ಮತ್ತು ಬೆಣ್ಣೆಯನ್ನೊದಗಿಸಲು ಸೋನೆಯವರ ಮೇಲ್ವಿಚಾರಣೆಯಲ್ಲಿ ಒಂದು ಕರೆಯುವ ಹಟ್ಟಿಯು ಏರ್ಪಡಿಸಲ್ಪಡುವುದು. ಇಲ್ಲಿ ಒಳ್ಳೇ ಹಸುಗಳು ಇಡಲ್ಪಟ್ಟು ಬೆಣ್ಣೆಯು ಪೌನಿಗೆ ೧। ರೂಪಾಯಿನಂತೆಯೂ ಹಾಲು ಸೇರು ೧ಕ್ಕೆ ೪ ಆಣೆಯಂತೆಯೂ ಎಲ್ಲ ಸರ್ಕಾರಿಯ ಬಿಡಾರಗಳಿಗೊದಗಿಸಲ್ಪಡುವುವು. ಈ ಸ್ಥಳಗಳಿಗೆ ಇತರರ್‍ಯಾರೂ ಹಾಲು ಮತ್ತು ಬೆಣ್ಣೆಯನ್ನು ತಂದು ಮಾರಗೊಡಲ್ಪಡುವುದಿಲ್ಲವು. ಮತ್ತೂ ದರ್ಬಾರು ಕಾಲದಲ್ಲಿ ಜನರು ವಿಶೇಷವಾಗಿ ಸಂಚರಿಸುವ ಆಲಿಪುರ ಮಾರ್ಗವನ್ನು ೪೦ ಅಡಿ ವಿಶಾಲಮಾಡಿ ಸರಿಪಡಿಸಲು ೩೧,೦೦೦ ರೂ. ಅಪ್ಪಣೆಯಾಗಿರುವುದು. ಈ ಮಾರ್ಗದ ಉಭಯ ಪಾರ್ಶ್ವದಲ್ಲೂ ಜನರಿಗಾಗಿ ೧೦ ಅಡಿ ಕಾಲುದಾರಿಯು ಮಾಡಲ್ಪಡುವುದು.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮೇ ತಾ॥ ೧೫ನೇ ಸೋಮವಾರ.

ಮೈಸೂರು ಸಂಸ್ಥಾನದ ಮದದ್ರವ್ಯಾಬ್ಕಾರಿಯ ೧೯೦೯-೧೦ ರ ವರದಿಯು.

ಈ ವರ್ಷದಲ್ಲಿ ದೇಶೀಯ ಸಾರಾಯಿನಂಗಡಿಗಳು ೭೪೯ ರಿಂದ ೭೨೮ ಕ್ಕೂ, ಪರದೇಶದ ಮದ್ಯದಂಗಡಿಗಳು ೬೩ ರಿಂದ ೬೪ ಕ್ಕೂ, ಹೆಂಡದಂಗಡಿಗಳು ೩,೪೬೨ ರಿಂದ ೩,೩೪೪ ಕ್ಕೂ, ಅಕ್ಕಿಭೋಜದ ಮದ್ಯದಂಗಡಿಗಳು ೮೩ ರಿಂದ ೮೩ ಕ್ಕೂ, ಗಾಂಜಾದಂಗಡಿಗಳು ೬೫೭ ರಿಂದ ೬೩೩ ಕ್ಕೂ, ಅಫೀಮಿನಂಗಡಿಗಳು ೧೧೩ ರಿಂದ ೧೧೦ ಕ್ಕೂ ಇಳಿಸಲ್ಪಟ್ಟವು. ಮತ್ತೂ ಸಾರಾಯಿನ ಮಾದಕಶಕ್ತಿಯು ಕಡಿಮೆಮಾಡಲ್ಪಟ್ಟು ಅದರಮೇಲಿನ ಸುಂಕವು ರೂ. ೪-೧೪-೦ ರಿಂದ ರೂ. ೬-೪-೮ ಕ್ಕೆ ಹೆಚ್ಚಿಸಲ್ಪಟ್ಟಿತು. ಹೀಗೆ ಸರ್ಕಾರದವರು ವರ್ಷೇವರ್ಷೇ ಮದ್ಯದ ಅಂಗಡಿಗಳ ಸಂಖ್ಯೆಯನ್ನು ಕಡಿಮೆಮಾಡುತ್ತ ಅದರಮೇಲಿನ ಬೆಲೆಯನ್ನು ಹೆಚ್ಚಿಸುತಬಂದಲ್ಲಿ ಬಡಬಗ್ಗರು ಸುಲಭವಾಗಿ ಕೊಂಡುಕೊಳ್ಳಲವಕಾಶವಿಲ್ಲದಂತಾಗಿ, ಅದರ ಪ್ರಸಾರವು ಕಡಿಮೆಯಾಗುವುದಲ್ಲದೆ ಈಗ ಹೊಟ್ಟೆಯನ್ನಾದರೂ ಕಟ್ಟಿ ಮದ್ಯಸೇವನೆಗಾಗಿ ಸಂಪಾದಿಸಿದುದನ್ನೆಲ್ಲ ಹಾಳುಮಾಡಿ ದುರ್ವ್ಯಸನಕ್ಕೆ ಪಾತ್ರರಾಗುತ್ತಿರುವ ಸಾವಿರಾರು ಬಡಜನರು ಬದುಕಿಕೊಳ್ಳುವರು. ಇದರಿಂದ ಸರ್ಕಾರಕ್ಕೆ ಆದಾಯವೇನೋ ಕಡಿಮೆಯಾದಾಗ್ಯೂ ಒಳ್ಳೇ ಕೀರ್ತಿ ಬರುವುದು. ಹೀಗೆ ಕಡಿಮೆಮಾಡಿದುದರಿಂದ ಹಿಂದೆ ಪ್ರತಿವರ್ಷದಲ್ಲೂ ಹೆಚ್ಚುತ್ತಿದ್ದ ಆದಾಯವು ಈ ವರ್ಷದಲ್ಲಿ ೮೮,೫೭,೭೫೩ ರೂಪಾಯಿಗಳಿಗಿಳಿದಿತು. ಇದರ ಹಿಂದಿನ ವರ್ಷದಲ್ಲಿ ೮೯,೫೭,೪೯೯ ರೂ. ಆಗಿದ್ದಿತು.

ಕಳೆದವರ್ಷ ೮೦,೯೮೩ ಗ್ಯಾಲನ್ನು ಸಾರಾಯಿ ಖರ್ಚಾಗಿದ್ದುದು ಈ ವರ್ಷ ೩೭,೩೩೯ ಗ್ಯಾಲನ್ನುಮಾತ್ರ ಖರ್ಚಾಗಿರುವುದು. ಹೀಗೆ ೨೦೦೦೦ ಗ್ಯಾಲನ್ನಿನಷ್ಟು ಕಡಿಮೆಯಾಗಲು ನಾನಾಕಾರಣಗಳು ಹೇಳಲ್ಪಟ್ಟಾಗ್ಯೂ ಕೋಲಾರದ ಚಿನ್ನದಗಣಿಗಳಲ್ಲಿ ಮರಹಮತ್ ಶಾಖೆಯವರು ನಡಿಸುತ್ತಿದ್ದ ಕಾರ್ಯಗಳನ್ನು ನಿಲ್ಲಿಸಿದುದು ಮತ್ತೂ ಹುಣಸೂರಿನಲ್ಲಿದ್ದ ಹೇಸರಗತ್ತೆ ಬಂಡಿಗಳನ್ನು ಅವಕ್ಕೆ ಸಂಬಂಧಪಟ್ಟ ಜನಗನ್ನೂ ತೆಗೆದುಬಿಟ್ಟುದೂ ಮುಖ್ಯ ಕಾರಣವೆಂದು ಸರ್ಕಾರದವರು ಅಭಿಪ್ರಾಯಪಟ್ಟಿರುತ್ತಾರೆ. ಮತ್ತೂ ಬೆಂಗಳೂರಲ್ಲೇ ಇಳಿಸಲ್ಪಡುವ ಸಾರಾಯಿನ ಪ್ರಾಬಲ್ಯವು ಹೆಚ್ಚುತ್ತಿರುವುದರಿಂದ, ಪರದೇಶದ ಮದ್ಯಗ ವ್ಯಾಪನೆಯು ಬಹು ಕಡಿಮೆಯಾಗುತ್ತಿದೆಯೆಂದು ತಿಳಿಸಿರುತ್ತಾರೆ. ಹಿಂದಣ ವರ್ಷದಲ್ಲಿ ೮೩,೮೦೪೩ ಮರಗಳಿಂದ ಹೆಂಡವಿಳಿಸಲ್ಪಟ್ಟಿದ್ದುದು ಈ ವರ್ಷ ೮೭,೯೪೩೩ ಮರಗಳಿಂದ ಮಾತ್ರ ಇಳಿಸಲ್ಪಟ್ಟಿರುವುದಾದರೂ, ಈ ಹೆಂಡದಂಗಡಿಗಳ ಮಾರಾಟದಿಂದ ಕಳೆದ ವರ್ಷಕ್ಕಿಂತ ರೂ. ೩,೧೯೯-೧೩-೮ ಹೆಚ್ಚಾಗಿ ಉತ್ಪತ್ತಿಯಾಗಿರುವುದು. ಇದಕ್ಕೆ ಹೆಂಡದ ಅಂಗಡಿಗಳನ್ನು ೨ ಅಥವಾ ೩ ವರ್ಷಗಳವಧಿಯಿಂದ ಖರೀದಿಗೆ ಕೊಟ್ಟುದೇ ಕಾರಣವೆಂದು ಎಕ್ಸೈಸ್ ಕಮಿಷನರು ತಿಳಿಸಿರುವರು. ಈ ಹೆಂಡದ ಬೆಲೆಯು ಸಾರಾಯಿ ಮೊದಲಾದ ಮದದ್ರಾವಕಗಳ ಬೆಲೆಗಿಂತ ಕಡಿಮೆಯಾದುದರಿಂದ, ಇದರ ಪಾನವನ್ನು ಮಾಡತಕ್ಕವರ ಸಂಖ್ಯೆಯೇ ಹೆಚ್ಚಾಗಿರುವುದು. ಅವರೆಲ್ಲರೂ ಪ್ರಾಯಶಃ ರಿಕ್ತರಾಗಿರುವುದರಿಂದ ಸಾರಾಯಿನ ಸುಂಕವನ್ನು ಹೆಚ್ಚಿಸಿರುವಂತೆ ಈ ಹೆಂಡದಂಗಡಿಗಳ ಮಾರಾಟದ ಬೆಲೆಯನ್ನೂ ಈಗಿರುವುದಕ್ಕಿಂತಲೂ ಹೆಚ್ಚಿಸಿದಲ್ಲಿ ಅಷ್ಟುದುಡ್ಡನ್ನು ಕೊಟ್ಟು ಕುಡಿಯಲು ಅವರಿಗೆ ಶಕ್ತಿಸಾಲದೆ ಅದರ ಪ್ರಸಾರವು ಕಡಿಮೆಯಾಗುವುದು.

ಈ ಶಾಖೆಯಲ್ಲಿ ಈ ವರ್ಷ ಮಾಡಲ್ಪಟ್ಟ ಕೆಲ ಬದಲಾವಣೆಗಳಲ್ಲಿ, ಜಾತ್ರೆಕಾಲದಲ್ಲಿ ಜನ ಸೇರತಕ್ಕ ಸ್ಥಳದ ಸುತ್ತಲೂ ೧ ಮೈಲಿಯ ವಿಸ್ತೀರ್ಣದೊಳಗೆ ಮದ್ಯದಂಗಡಿಗಳಿಡಲ್ಪಡಕೂಡದೆಂದು ಮಾಡಿರುವ ನಿರ್ಬಂಧವು ಬಹು ಮುಖ್ಯವಾದುದು. ಯಾಕೆಂದರೆ ಜಾತ್ರೆಯಸ್ಥಲವು ಪವಿತ್ರವಾದುದು. ಇಲ್ಲಿಗೆ ಬರತಕ್ಕ ಭಕ್ತಾದಿಗಳು ತಮ್ಮ ದುಷ್ಟಪದ್ಧತಿಗಳನ್ನು ಬಿಟ್ಟು ನಿರ್ಮಲಚಿತ್ತದಿಂದ ದೇವರ ಸೇವೆಯನ್ನು ಮಾಡಿ ಪುಣ್ಯವನ್ನು ಸಂಪಾದಿಸಿಕೊಳ್ಳತಕ್ಕದಾಗಿದೆ. ಇಂಥ ಸ್ಥಳದಲ್ಲಿ ಮದ್ಯದ ಅಂಗಡಿಗಳಿದ್ದರೆ, ಮದ್ಯಪಾನಾಪೇಕ್ಷಿಗಳಾದ ಜನರ ದೃಷ್ಟಿಯು ಅತ್ತಕಡೆಬಿದ್ದು ಅವರ ಮನಸ್ಸು ಎಷ್ಟು ದೈವಭಕ್ತಿಯಿಂದ ಕೂಡಿದ್ದಾದರೂ ದುಷ್ಪಾನದಕಡೆಗೆಳೆಯುವುದು. ಅದುಕಾರಣ ಇಂಥ ಪವಿತ್ರವಾದ ಸ್ಥಳದಲ್ಲಿ ಮದ್ಯದಂಗಡಿಗಳನ್ನು ಇಡಗೊಡದಂತೆ ಮಾಡಬೇಕೆಂದು ಕೆಲರು ಸರ್ಕಾರದವರನ್ನು ಬಹುವಿಧವಾಗಿ ಪ್ರಾರ್ಥಿಸಿಕೊಂಡಿದ್ದುದರಮೇಲೆ, ಸರ್ಕಾರದವರು ಸದ್ಯದಲ್ಲಿ ಜಾತ್ರೆಯಾಗತಕ್ಕ ಸ್ಥಳದ ಸುತ್ತಲೂ ೧ ಮೈಲಿಯ ಹೊರಗೆ ಈ ಅಂಗಡಿಗಳನ್ನಿಡುವಂತೆ ಅಪ್ಪಣೆಮಾಡಿರುವುದನ್ನೋಡಿದರೆ, ಇವರಿಂದಾಗತಕ್ಕನರ್ಥವು ಅವರ ಮನಸ್ಸಿಗೆ ಬಂದಿರುವುದಲ್ಲದೆ ಕ್ರಮೇಣ ಜಾತ್ರೆಯ ಸ್ಥಲದ ೧ ಮೈಲಿಯ ಹೊರಗೂ ಇಡದಂತೆ ಮಾಡುವರೆಂದು ತೋರುತ್ತದೆ. ನಮ್ಮ ದಯಾಳು ಸರ್ಕಾರದವರು ಈ ಮದದ್ರವ್ಯ ಪ್ರಸಾರದಿಂದ ತಮ್ಮ ಬಡ ಪ್ರಜೆಗಳಲ್ಲಾಗತಕ್ಕ ಅನರ್ಥವನ್ನು ತಮ್ಮ ಗಮನಕ್ಕೆ ತಂದುಕೊಂಡು ಆದಾಯದಮೇಲೆ ದೃಷ್ಟಿಯನ್ನಿಡದೆ ಕಳೆದ ವರ್ಷದಿಂದಲೂ ಮದದ್ರವ್ಯದಂಗಡಿಗಳ ಸಂಖ್ಯೆಯನ್ನು ಕಡಿಮೆಮಾಡಿ ಅವುಗಳ ಬೆಲೆಯನ್ನು ಹೆಚ್ಚಿಸುತಬಂದಿರುವುದು ಈ ದೇಶೀಯರ ಭಾಗ್ಯೋದಯವೆಂತಲೇ ಹೇಳಬೇಕಾಗಿದೆ. ಈ ರೀತಿಯಾಗಿ ಸರ್ಕಾರದವರು ಬರತಕ್ಕಾದಾಯವನ್ನು ಕಡಿಮೆಮಾಡಿಕೊಂಡು ಮದದ್ರವ್ಯ ಸೇವನೆಯ ದುರ್ವ್ಯಸನದಿಂದ ಪ್ರಜೆಗಳನ್ನುದ್ಧರಿಸಬೇಕೆಂದು ಪ್ರಯತ್ನಿಸಿರುವಾಗ್ಗೆ, ಈ ದುರಭ್ಯಾಸದಿಂದ ಅರ್ಥಹಾನಿ, ಮಾನಹಾನಿ ಮತ್ತು ಪ್ರಾಣಹಾನಿಯನ್ನು ಹೊಂದುತ್ತಿರುವವರು ಈ ನೀಚಪದಾರ್ಥಗಳ ಸೇವನೆಯನ್ನು ಬಿಟ್ಟು ಸನ್ಮಾರ್ಗಿಗಳಾಗಲು ಪ್ರಯತ್ನಿಸದಿದ್ದರೆ ತಮ್ಮ ಕಾಲಿನಮೇಲೆ ತಾವೇ ಕಲ್ಲನ್ನು ಹಾಕಿಕೊಂಡು ಹಾಳಾಗುವವರಲ್ಲದೆ ತಮ್ಮನ್ನು ನಂಬಿದವರನ್ನೂ ಹಾಳುಮಾಡುವವರೆನ್ನುವುದರಲ್ಲಿ ಸಂದೇಹವಿಲ್ಲವು.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಪಂಚಕಲಶಯುಕ್ತವಾದ ಅಡ್ಡಪಾಲಕಿಯುತ್ಸವವು ವ್ಯಾಘ್ರಚರ್ಮಗಳು ಸಮೇತವಾದ ನಂದಿಧ್ವಜ, ಮಕರತೋರಣ, ಹಗಲುದೀವಟಿಗೆ ಶ್ವೇತಛತ್ರ ಮೋರ್ಛಾಲು ಮೊದಲಾದ ಸಮಸ್ತ ಬಿರುದುಗಳೊಡನೆ ಕಳೆದ ತಾ॥ ೧೨ ನೇ ಶುಕ್ರವಾರ ದಿವಸ ಕೊಲ್ಲಾಪುರದಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿತು.

ಒಳದೇಶದವೃತ್ತಾಂತ.

ಶ್ರೀಮನ್ಮಹಾರಾಜರು ಉದಕಮಂಡಲದಿಂದ ನೆನ್ನೆಯ ಸಾಯಂಕಾಲ ರಾಜಧಾನಿಗೆ ದಯಮಾಡಿಸಿದರು.

ರಾಜಧಾನಿಯಲ್ಲಿ ಪ್ರತಿಪಕ್ಷದಲ್ಲೂ ಹೊರಡುವ 'ಸಾಧ್ವಿ' ಎಂಬ ಆಂಗ್ಲೋ ಕನ್ನಡಪತ್ರಿಕೆಯು ಇತಃಪರ ಪ್ರತಿನಿತ್ಯದಲ್ಲೂ ಹೊರಡಿಸಲ್ಪಡಲು ಸರ್ಕಾರದಪ್ಪಣೆಯು ದೊರೆತಿರುವುದಾಗರಿತೆವು.

ಬೆಂಗಳೂರ ಶಂಕರಮಠದಲ್ಲಿ ಸ್ಥಾಪಿತವಾಗಿರುವ ವಿದ್ಯಾಪೀಠದಲ್ಲಿ ಪಾಠಪ್ರವಚನವು ಕಳೆದವಾರ ಆರಂಭಿಸಲ್ಪಟ್ಟಿತಷ್ಟೆ. ಈಗ ಅಲ್ಲಿ ೮ ವಿದ್ಯಾರ್ಥಿಗಳು ವೇದಾಂತವನ್ನೂ ಮೂವರು ಪೂರ್ವಮೀಮಾಂಸವನ್ನೂ ವ್ಯಾಸಂಗಮಾಡುತ್ತಿರುವರು.

ಮೈಸೂರ ಮರಿಮಲ್ಲಪ್ಪನವರ ಸ್ಕೂಲು ಫಂಡಿನ ಟ್ರಸ್ಟಿಗಳಲ್ಲೊಬ್ಬರಾಗಿದ್ದ ಮ॥ ಎಂ. ಮಲ್ಲಾರಾಧ್ಯರು ಗತಿಸಿದುದರಿಂದ, ಅವರಿಗೆ ಬದಲು ಮ॥ ಪಿ. ಮಹಾದೇವಯ್ಯ ಬಿ. ಎ., ಬಿ. ಎಲ್., ರವರು ಒಬ್ಬ ಟ್ರಸ್ಟಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

ಕಳೆದ ತಾ॥ ೧೨ ರಲ್ಲಿ ರಾಜಧಾನಿಯ ಕೊತ್ವಾಲ ರಾಮಣ್ಣನ ಬೀದಿಯಲ್ಲಿ ಯಾರೋ ಅಗತಾನೇ ಜನಿಸಿದ್ದ ಮಗುವನ್ನು ಒಂದು ಗಡಿಗೆಯಲ್ಲಿ ಹಾಕಿ ಅದನ್ನು ಬೀದಿಯಲ್ಲಿರಿಸಿದ್ದರು. ಪೋಲೀಸರು ಆ ಮಗುವಿನ ತಾಯಿಯನ್ನು ಗೊತ್ತುಮಾಡಯತ್ನಿಸಿದ್ದಾರೆ.

ಅಲಿಘರದಲ್ಲಿ ಸ್ಥಾಪಿಸಲ್ಪಡುವ ಮಹಮ್ಮದೀಯರ ಸರ್ವಕಲಾಶಾಲೆಯ ಫಂಡಿಗೆ ರಾಜಧಾನಿಯ ಮಹಮ್ಮದೀಯರಿಂದ ಈವರೆಗೆ ರೂ. ೪೫೮-೧೦-೦ ಚಂದಾಹಣವು ಕೊಡಿಸಲ್ಪಟ್ಟಿರುತ್ತದೆ. ಮತ್ತೂ ಪ್ರತಿ ಮಹಮ್ಮದೀಯರ ಮನೆಗೂ ಚಂದಾಹಣವು ಎತ್ತಲ್ಪಡುವ ಪ್ರಯತ್ನವು ನಡೆದಿರುತ್ತದೆ.

ಮ॥ ಅಂಬಲೆ ಅಣ್ಣಯ್ಯ ಪಂಡಿತರ ಅಳಿಯಂದರು ಮತ್ತೂ ಮಹಾರಾಜಾ ಕಾಲೇಜಿನ ಉಪಾಧ್ಯಾಯರು ಆದ ಮ॥ ವೆಂಗಟೇಶಯ್ಯ, ಬಿ. ಎ., ಯವರ ಮಕ್ಕಳು ಸೀಮೆಗೆ ಹೋಗಿ ಬಂದಿರುವುದರಿಂದ ಪ್ರಾಯಶ್ಚಿತ್ತಕರ್ಮವನ್ನು ಮಾಡಿಸಿಕೊಂಡು ಬರಲು ರಾಮೇಶ್ವರಕ್ಕೆ ಹೋಗಿರುವುದಾಗಿ ಕೇಳುತ್ತೇವೆ.

ರಾಜಧಾನಿಯ ಮರಿಮಲ್ಲಪ್ಪನವರ ಹೈಸ್ಕೂಲಿನಲ್ಲಿ ಒಟ್ಟು ೯೦೦ ವಿದ್ಯಾರ್ಥಿಗಳೋದುತ್ತಿದ್ದಾರೆ. ಇಷ್ಟೊಂದು ವಿದ್ಯಾರ್ಥಿಗಳಿಗೆ ಸ್ಥಳ ಸಂಕೋಚವಾಗಿರುವುದರಿಂದ, ದಕ್ಷಿಣದಿಕ್ಕಿಗಿರುವ ಮಹಡಿಯನ್ನು ಇನ್ನೂ ಎತ್ತರಿಸಿ ಅದರ ಎರಡು ಪಕ್ಕದಲ್ಲೂ ಮಹಡಿಯನ್ನು ಕಟ್ಟಲು ಯೋಚಿಸಲ್ಪಟ್ಟಿರುವುದಾಗಿ ಕೇಳುತ್ತೇವೆ.

ಹುಜೂರು ಸೆಕ್ರೆಟರಿಯವರಾದ ಮ॥ ಪಿ. ರಾಘವೇಂದ್ರರಾಯರ ಮನೆಯಲ್ಲಿ ದೇವರ ಪೂಜೆಯನ್ನು ಮಾಡಿಕೊಂಡಿದ್ದ ವಾಸುದೇವಾಚಾರಿ ಎಂಬ ವಿದ್ಯಾರ್ಥಿಯು ರಾಯರ ಹೆಂಡತಿಯವರು ಮರೆತು ಮಂಚದಮೇಲಿಟ್ಟಿದ್ದ ಭಂಗಾರದ ಸಣ್ಣ ಗಡಿಯಾರವನ್ನು ಅಪಹರಿಸಿದ್ದುದಕ್ಕಾಗಿ ಸಿಟಿ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಯನ್ನು ಹೊಂದುತ್ತಿರುವನು.

ಶಿವಮೊಗ್ಗೆಯ ಡಿಸ್ಟ್ರಿಕ್ಟ್ ಫಾರೆಸ್ಟಾಫೀಸರ್ ಮ॥ ಮು ಸಾಹೇಬ್ ಎಂ. ಜಿ. ರಾಮರಾವ್, ಬಿ. ಎ., ಯವರು ತಮ್ಮ ಜೇಷ್ಠಪುತ್ರರಾದ ಸುಂದರರಾಯರಿಗೆ ಶಿವಮೊಗ್ಗೆಯ ಅ॥ ಕಮಿಷನರ್ ಬಾದಾಮಿ ಭೀಮರಾಯರ ಪುತ್ರಿ ಸೌ॥ ಶಾರದಾಬಾಯಿಯನ್ನು ತಂದು ಈ ತಾ॥ ಹದಿನೆಂಟರಲ್ಲಿ ಶಿವಮೊಗ್ಗೆಯಲ್ಲಿ ವಿವಾಹಮಹೋತ್ಸವವನ್ನು ಬೆಳೆಸುವರು.

ಕಳೆದ ಶುಕ್ರವಾರ ಸಾಯಂಕಾಲ ರಾಜಧಾನಿಯಲ್ಲಿ ೧ ಗಂಟೆಯ ವರೆಗೆ ಒಳ್ಳೇ ಮಳೆಯು ಸುರಿದಿತು. ಇದರಿಂದ ದಗೆಯು ಕೊಂಚಮಟ್ಟಿಗೆ ಕಡಿಮೆಯಾಗಿದೆ. ಮೋಡವು ಆಗಾಗ್ಗೆ ಕಟ್ಟುತಲೇ ಇದೆ. ರೋಗಾದ್ಯುಪದ್ರವಗಳೇನೂ ಇಲ್ಲ. ಈ ಸಂವತ್ಸರ ಮಾವಿನ ಫಲವು ಬಹು ಕಡಿಮೆಯಾಗಿರುವುದರಿಂದ ಸಾಮಾನ್ಯವಾದ ಹಣ್ಣಿನ ಬೆಲೆಯು ಸಹ ಪ್ರಿಯವಾಗಿದೆ.

ಸರ್ಕಾರಿಯಾಡಳಿತದ ವೆಚ್ಚವನ್ನು ಕಡಿಮೆಮಾಡಲು ಏರ್ಪಟ್ಟಿರುವ ಕಮಿಟಿಯವರು ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟರಿಯಟ್ಟಿನಲ್ಲಿ ಕೆಲ ಸೂಪರಿಂಟೆಂಡೆಂಟರುಗಳ ಮತ್ತೂ ಕ್ಲಾರ್ಕುಗಳ ಸ್ಥಾನಗಳನ್ನು ತೆಗೆಯಲು ನಿಶ್ಚಯಿಸಿರುತ್ತಾರೆ. ಅರಮನೆಯ ವೆಚ್ಚದಲ್ಲಿ ೮ ಲಕ್ಷ ರೂ. ಹೆಚ್ಚಾದುದರಿಂದ ಇತರ ಶಾಖೆಗಳಲ್ಲಿ ೮ ಲಕ್ಷ ರೂ. ಕಡಿಮೆಮಾಡಬೇಕಾಗಿರುತ್ತದಂತೆ.

ರೆ॥ ಕಮಿಷನರು ಮ॥ ಎ. ರಂಗಸ್ವಾಮಯ್ಯಂಗಾರರು ೧೪ ದಿನಗಳ ರಜವನ್ನು ಪಡೆದುಕೊಂಡು ತಮ್ಮ ಅಳಿಯಂದಿರಾದ ಅ॥ ಕಮಿಷನರ್ ಮ॥ ಆರ್ಮುದಂ ಅಯ್ಯಂಗಾರರ ಕೂಡ ಶ್ರೀರಂಗಕ್ಕೆ ಹೋಗಿದ್ದು, ತಮ್ಮ ಮೊಮ್ಮಗನ ಮತ್ತೂ ದೌಹಿತ್ರನ ಉಪನಯನಗಳನ್ನೂ, ಮತ್ತೊಬ್ಬ ದೌಹಿತ್ರನ ವಿವಾಹವನ್ನೂ ನೆರವೇರಿಸಿಕೊಂಡು ತಾ॥ ೧೦ ರಲ್ಲಿ ಬೆಂಗಳೂರಿಗೆ ಬಂದರು.

ನಮ್ಮ ಸಂಸ್ಥಾನದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರಾದ ಮ॥ ಗಿಬ್ಸ್‌ರವರು ಬರುವ ಜುಲೈ ತಾ॥ ೧ ರಿಂದ ಕೆಲಸದಿಂದ ನಿವೃತ್ತರಾಗುವ ಪ್ರಯುಕ್ತ ಅವರ ಬದಲು ನ್ಯೂಯಾರ್ಕಿನ ಜನರಲ್ ಎಲೆಕ್ಟ್ರಿಕ್ ಕಂಪೆನಿಯ ಇಂಜನಿಯರುಗಳಲೊಬ್ಬರಾಗಿದ್ದ ಮ॥ ಎಚ್. ಪಿ. ಫ್ಯಾನ್ಸ್‌ಕೆಂರವರು ಮೈಸೂರ ಸರ್ಕಾರದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರಾಗಿ ನೇಮಿಸಲ್ಪಟ್ಟಿರುವರು. ಇವರು ಜುಲೈ ತಿಂಗಳಲ್ಲಿ ಇಲ್ಲಿಗೆ ಬರುವರು.

ಕಾನಕಾನಹಳ್ಳಿ ತಾ॥ ನಾಗರಸನ ಕೋಟೆಯಲ್ಲಿ ನಂಜುಂಡಯ್ಯನೆಂಬ ಬ್ರಾಹ್ಮಣನು ತನ್ನ ೪ ವರ್ಷದ ಮಗಳನ್ನು ೧೩ ವರ್ಷದ ಹುಡುಗನಿಗೂ, ಇದೇ ತಾ॥ ಉಲ್ಲೂರು ಶ್ರೀಕಂಠಯ್ಯನು ತನ್ನ ತಂಗಿಯ ೭ ವರ್ಷದ ಮಗಳನ್ನು ೧೩ ವರ್ಷದ ಹುಡುಗನಿಗೂ ಕೊಟ್ಟು ಏಕಕಾಲದಲ್ಲಿ ವಿವಾಹಮಾಡಿದುದಕ್ಕಾಗಿ ನಂಜುಂಡಯ್ಯನನ್ನು, ಶ್ರೀಕಂಠಯ್ಯನನ್ನು ಮತ್ತೂ ಈ ಲಗ್ನಗಳನ್ನು ಮಾಡಿಸಿದ ಪುರೋಹಿತರುಗಳನ್ನು ಹಿಡಿದು ವಿಚಾರಣೆಗೆ ಗುರಿಮಾಡಲು ಸರ್ಕಾರದಪ್ಪಣೆಯಾಗಿರುತ್ತದೆ.

ಸರ್ಕಾರಿಯುದ್ಯೋಗಸ್ತರು ದೀರ್ಘಕಾಲ ರಜವನ್ನು ತೆಗೆದುಕೊಂಡು ವಕೀಲಿತನವನ್ನಡಿಸುವುದು, ಪಾಠಶಾಲೆಗಳಲ್ಲುಪಾಧ್ಯಾಯರಾಗಿರುವುದು, ವ್ಯಾಪಾರ ಮಾಡುವುದು ಮೊದಲಾದುವನ್ನು ನಡಿಸಕೂಡದು, ಮತ್ತೂ ಈಗ ರಜವನ್ನು ಪಡೆದುಕೊಂಡು ಮೇಲೆಹೇಳಿದ ಕೆಲಸವನ್ನು ಮಾಡುತ್ತಿರುವಂಥವರು ಕೂಡಲೆ ಸರ್ಕಾರಿಯುದ್ಯೋಗದಮೇಲೆ ಬರುವಂತೆ ಮಾಡಲ್ಪಡತಕ್ಕದ್ದು, ಹಾಗೆ ಬಾರದಿದ್ದಲ್ಲಿ ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಡತಕ್ಕದು ಎಂದು ಸರ್ಕಾರದಪ್ಪಣೆಯಾಗಿರುವುದು.

ಕಾನಕಾನಹಳ್ಳಿ ತಾಲ್ಲೋಕಿನಲ್ಲಿ ಕಾವೇರಿ ಮತ್ತೂ ಅರ್ಕಾವತಿ ನದಿಗಳು ಸಂಗಮವಾಗುವ ಸ್ಥಳದಲ್ಲಿ ನದಿಯ ವೈಶಾಲ್ಯವು ಒಂದು ಮೇಕೆಯು ದಾಟುವಷ್ಟಿರುವುದರಿಂದ ಅದಕ್ಕೆ "ಮೇಕೆಯ ದಾಟು" ಎಂದು ಹೆಸರು ಬಂದಿರುತ್ತದೆ. ಈ ಸ್ಥಳದಲ್ಲಿ ಕೆಲ ದಿನಗಳ ಕೆಳಗೆ ಒಂದು ಜಾತಿಯ ವಿಷಸರ್ಪವು ಒಂದು ದೊಡ್ಡ ಗಂಡು ಸಾರಂಗವನ್ನು ತನ್ನ ಬಾಲದಿಂದ ಸುತ್ತಿಕೊಂಡಿರಲು, ಆ ಸಾರಂಗವು ಬಿಡಿಸಿಕೊಳ್ಳಲು ಪ್ರಯತ್ನಪಟ್ಟು ಸಾಧ್ಯವಾಗದೆ ಅರಚಿಕೊಳ್ಳುತ್ತಿದ್ದುದನ್ನು ಹಳ್ಳಿಯವರು ಕೇಳಿ ಬಂದು ಅವರಲ್ಲೊಬ್ಬನು ಸರ್ಪಕ್ಕೆ ಗುಂಡನ್ನು ಗುರಿಯಿಟ್ಟು ಹೊಡೆಯಲು ಅದು ಸಾರಂಗಕ್ಕೂ ತಗಲಿ ಎರಡುಪ್ರಾಣಿಗಳೂ ಸತ್ತುಹೋದುವು.

ಕಳೆದ ತಾ॥ ೧೩ ರ ರಾತ್ರಿ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಂಘದವರು ಪರ್ವಹಾಲಿನಲ್ಲಿ ರತ್ನಾವಳಿ ಎಂಬ ನಾಟಕವನ್ನಭಿನಯಿಸಿದರು. ಕೌಶಾಂಬೀ ದೊರೆಯಾದ ಉದಯರಾಜನ ಪಾತ್ರವನ್ನು ವಹಿಸಿದ್ದ ಮ॥ ಶಾಮಣ್ಣನವರಿಗೆ ಅದು ಚನ್ನಾಗೊಪ್ಪುತಿದ್ದಿತು. ಮತ್ತೂ ರತ್ನಾವಳಿಯ ಪಾತ್ರವನ್ನು ವಹಿಸಿದ್ದಾತನ ರೂಪು ಲಾವಣ್ಯವು ಉತ್ತಮ ಸ್ತ್ರೀಪಾತ್ರಕ್ಕೆ ತಕ್ಕದಾಗಿದ್ದುದಾದರೂ ಹಾಡುಗಾರಿಕೆಯಲ್ಲಿ ಮಾತ್ರ ಇನ್ನೂ ಅಭ್ಯಾಸವಾಗಬೇಕು. ಹಿಂದೆ ನಾವು ಸೂಚಿಸಿದ್ದಂತೆ ನಮ್ಮ ದೇಶದ ಉಡುಪನ್ನು ಧರಿಸಲುಪಕ್ರಮಿಸಿರುವುದು ಎಲ್ಲರಿಗೂ ಸಂತೋಷಕರವಾಗಿದೆ. ಈ ನಾಟಕವನ್ನೋಡಲು ಪುಂಗನೂರು ರಾಜರು ಪತ್ನಿಪುತ್ರಾದಿಗಳೊಡನೆ ದಯಮಾಡಿಸಿದ್ದರು. ನಾಟಕ ಸಂಘದ ಮ್ಯಾನೇಜರು ರಾಜರಿಗೂ ಅವರಕಡೆಯವರಿಗೂ ಪುಷ್ಪಹಾರಗಳನ್ನು ಹಾಕಿ ಮರ್ಯಾದಿಸಿದರು.

ಕಳೆದ ತಾ॥ ೧೨ ನೇ ಶುಕ್ರವಾರ ಸಾಯಂಕಾಲ ರಾಜಧಾನಿಯ ವೀರಶೈವರು ಶ್ರೀಯುತ ಪುಂಗನೂರ ರಾಜರನ್ನು ರಥ್ವಾಶಾಲೆಗೆ ಬರಮಾಡಿಕೊಂಡು ಶ್ರೀಮನ್ಮಹಾರಾಜರವರ ನಾಟಕಸಂಘದ ಮ॥ ರಾಚಪ್ಪನವರ ಹಾಡುಗಾರಿಕೆ ಮೊದಲಾದ ವಿನೋದೋತ್ಸವದಿಂದಲೂ, ಅಲ್ಪಾಹಾರದಿಂದಲೂ ಸತ್ಕರಿಸಿ ಅವರ ಗುಣಕಥನ ರೂಪವಾದ ಭಾಷಣಗಳು ಮಾಡಲ್ಪಟ್ಟು ಕೆಲ ಪದ್ಯಗಳು ಹೇಳಲ್ಪಟ್ಟುವು. ಅನಂತರ ರಾಜರು ರಾಜಧಾನಿಯ ವೀರಶೈವ ಮಂಡಲಿಯವರು ಮಾಡಿದ ಸತ್ಕಾರದಿಂದ ತಮಗುಂಟಾದ ಸಂತೋಷವನ್ನು ಪ್ರದರ್ಶಿಸಿದುದಲ್ಲದೆ, ತಮ್ಮ ವಂದನೆಯನ್ನು ತಿಳುಹಿದರು. ಈ ರಾಜರು ತಮ್ಮ ಪರಿವಾರದೊಡನೆ ಇಷ್ಟರಲ್ಲೇ ಹಿಂತಿರುಗಿ ಪ್ರಯಾಣಮಾಡುವವರಾಗಿರುವರು.

ನಮ್ಮ ಸಂಸ್ಥಾನದ ಇಂಪೀರಿಯಲ್ ಸೇನೆಯಲ್ಲಿರುವ ಮ॥ ಎಂ. ಪಿ. ಕೃಷ್ಣ ಅರಸಿನವರು ಬರುವ ಜೂನ್ ತಿಂಗಳಲ್ಲಿ ಲಂಡನ್ನಿನಲ್ಲಿ ಜರಗುವ ಕಿರೀಟಧಾರಣ ಮಹೋತ್ಸವಕ್ಕಾಗಿ ಭರತಖಂಡದಿಂದ ಹೋಗುವ ಸೇನೆಯಕೂಡ ಸೇರಿ ಹೋಗಲು ಕಳೆದ ಗುರುವಾರ ಬೊಂಬಾಯಿಗೆ ಪ್ರಯಾಣ ಮಾಡಿದರು. ಇವರು ನಮ್ಮ ಸಂಸ್ಥಾನದ ಸೇನೆಯ ಪ್ರತಿನಿಧಿಗಳಾಗಿ ಹೋಗುವುದರಿಂದ, ಇವರಿಗೆ ೨೦೦ ರೂ. ವರೆಗೆ ವೆಚ್ಚಮಾಡಿ ಹೊಸ ಉಡುಪು ಮಾಡಿಸಿಕೊಡಲ್ಪಟ್ಟಿರುವುದು. ಭರತಖಂಡದಿಂದ ಒಟ್ಟು ೮೦೦ ಸೈನಿಕರು ಸೀಮೆಗೆ ಹೊರಡುವರು. ಇವರಲ್ಲಿ ಹೈದರಾಬಾದಿನಿಂದೊಬ್ಬರು, ಮತ್ತೂ ನಮ್ಮ ಮೈಸೂರಿನಿಂದೊಬ್ಬರು ಸೇರಿರುವರು. ಇವರೆಲ್ಲರೂ ಬರುವ ಶುಕ್ರವಾರ ಬೊಂಬಾಯಿನಿಂದ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡುವರು.

ಕಳೆದ ತಾ॥ ೧೨ ರಲ್ಲಿ ೨೦ ವರ್ಷ ವಯಸ್ಸಿನ ಒಬ್ಬ ಹೆಂಗುಸು ಗಂಡುಸರ ಉಡುಪನ್ನು ಧರಿಸಿಕೊಂಡು ಬೆಂಗಳೂರ ಕೆಂಗೇರಿ ಪೋಲೀಸು ಠಾಣದ ಬಳಿ ಹೋಗುತ್ತಿರುವಾಗ್ಗೆ ಪೋಲೀಸರು ವೇಷಧಾರಿಯನ್ನು ಹಿಡಿದು ವಿಚಾರಿಸುವಲ್ಲಿ ತಾನು ಮೈಸೂರ ಸಮೀಪದಲ್ಲಿರುವ ಚಟ್ನಹಳ್ಳಿಯ ವಾಸಸ್ಥಳಾದ ಮರಾಟಿ ಜಾತಿಯವಳೆಂದೂ, ತನ್ನ ಹೆಸರು ಸಿದ್ಧಿಯೆಂದೂ, ಬೆಂಗಳೂರಲ್ಲಿ ಪೋಲೀಸು ಕಾನಸ್ಟೇಬಲಾಗಿರುವ ಅನಂತರಾವ್ ಎಂಬುವನು ತನ್ನ ಅಣ್ಣನೆಂದೂ ಮತ್ತೂ ತಾನು ಗಂಡುಸಿನ ವೇಷದಿಂದ ಬೆಂಗಳೂರಿಗೆ ಬರುವಂತೆ ತನ್ನ ಅಣ್ಣನು ಹೇಳಿದ್ದನೆಂದೂ ಹೇಳಿದಳು. ಪೋಲೀಸರು ಅವಳ ಅಣ್ಣನನ್ನು ಹುಡುಕುತ್ತಿದ್ದಾರೆ. ಒಬ್ಬ ಯುವತಿಯು ಗಂಡುಸಿನ ವೇಷವನ್ನು ಧರಿಸಬೇಕಾಗಿದ್ದಲ್ಲಿ ಏನೋ ಒಂದು ಸಾಂಕೇತಿಕವಾದ ಕಾರಣವಿರಬೇಕು!

ಕಳೆದವಾರ ರಾಜಧಾನಿಯ ಮಂಡಿಮೊಹಲ್ಲಾದಲ್ಲಿ ಒಬ್ಬ ಮಹಮ್ಮದೀಯ ಹುಡುಗನು ಗ್ಯಾಸ್‌ಸ್ಟೌ ಎಂಬ ಸೀಮೆಯೆಣ್ಣೆಯು ಗ್ಯಾಸಾಗುರಿಯುವ ಅಗ್ಗಿಷ್ಟಿಕೆಯಲ್ಲಿ ಏನೋ ಪದಾರ್ಥವನ್ನು ಬೇಯಿಸುತ್ತಿರುವಾಗ್ಗೆ ಎಣ್ಣೆತುಂಬಿದ್ದ ಹಿತ್ತಾಳೆಯ ಪಾತ್ರೆಯು ಅತಿಯಾಗಿ ಕಾದು ಗ್ಯಾಸು ಹೊತ್ತಿಕೊಂಡು ಒಡೆದುಹೋಗಿ ಆ ಹುಡುಗನ ಮುಖ ಎದೆ ಮೈಮೇಲೆ ಕಾದೆಣ್ಣೆಯು ಹಾರಿ ಪೂರಾ ಅಪಾಯವಾಯಿತು. ಈ ಹುಡುಗನ ಸಮೀಪದಲ್ಲಿದ್ದ ಅವನ ಅಕ್ಕ ಮತ್ತೂ ಆಕೆಯ ಗಂಡ ಇವರಿಬ್ಬರ ಮುಂಗೈಗಳಮೇಲೂ ಎಣ್ಣೆಯು ಹಾರಿದ್ದು ಸುಟ್ಟುಹೋಗಿರುವುದು. ಈ ಮೂವರು ಕೂಡಲೆ ಆಸ್ಪತ್ರೆಗೊಯ್ಯಲ್ಪಟ್ಟು ಚಿಕಿತ್ಸೆಮಾಡುವಲ್ಲಿ ಆ ಹುಡುಗನು ೧-೨ ದಿವಸವಿದ್ದು ಗುಣವನ್ನು ಹೊಂದದೆ ಸತ್ತುಹೋದನು ಮತ್ತೂ ಆ ಗಂಡಹೆಂಡರಿಬ್ಬರೂ ಗುಣವನ್ನು ಹೊಂದುವದರಲ್ಲಿದ್ದಾರೆ.

ಮೈಸೂರ್ ಗೆಜೆಟಿ ಸಂಗ್ರಹ.

ಚಿತ್ರದುರ್ಗದ ಡಿ॥ ಪೋಲೀಸು ಸೂಪರಿಂಟೆಂಡೆಂಟರಾದ ಮ॥ ವೈ. ವಿ. ಕೃಷ್ಣಮೂರ್ತಿ, ಬಿ. ಎ., ಯವರಿಗೆ ಅವರು ಉಪಯೋಗಿಸಿಕೊಳ್ಳುವಾರಭ್ಯ ೨॥ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವುದರಿಂದ ಅವರು ಬರುವವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ಚಿತ್ರದುರ್ಗ ಡಾ॥ ಅಮಲ್ದಾರ್ ಮ॥ ಎಂ. ಎಸ್. ರಾಮಚಂದ್ರರಾವ್, ಬಿ. ಎ., ಬಿ. ಎಲ್., ರವರು ಬಿ. ಪುಡ್ಡಿಗ್ಗಲ್ ೪ ನೇ ತಾ॥ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾಗಿ ನೇಮಿಸಲ್ಪಟ್ಟು ಚಿತ್ರದುರ್ಗ ಡಿ॥ ಪೋಲೀಸ್ ಸೂಪರಿಂಟೆಂಡೆಂಟರ ಉದ್ಯೋಗಕ್ಕೆ ನಿಯೋಗಿಸಲ್ಪಟ್ಟಿರುತ್ತಾರೆ.

ಮೈಸೂರ ಡಿ॥ ಟ್ರಜರಿ ಛಾರ್ಜಿನಲ್ಲಿರುವ ಪ್ರೊಬೇಷನರಿ ಅ॥ ಕಮಿಷನರ್ ಮ॥ ಎಸ್. ವೆಂಕಟರಂಗಂ, ಬಿ. ಎ., ಬಿ. ಎಲ್., ರವರು ೨ ನೇ ತಾ॥ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಫಾರೆಸ್ಟಾಫೀಸರುಗಳಾದ ಡಿ॥ ಕನ್ಸರ್ವೇಟರ್ ಮ॥ ಎಂ. ಜಿ. ರಾಮರಾವ್ ಬಿ. ಎ., ಯವರು ೧ ನೇ ತಾ॥ ಇಂದ ೨ ನೆ ತಾ॥ ಗೂ, ೧ ನೇ ತಾ॥ ಅ॥ ಕನ್ಸರ್ವೇಟರ್ ಮ॥ ವೈ. ಸೀತಾರಾಮಯ್ಯನವರು ೨ ನೇ ತಾ॥ ಡಿ॥ ಕನ್ಸರ್ವೇಟರರಾಗಿಯೂ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಹಾಸನ ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರ್ ಮ॥ ವಿ. ಅಪ್ಪಾಸ್ವಾಮಿಅಯ್ಯರ್, ಬಿ. ಎ., ಬಿ. ಸಿ. ಇ., ಯವರಿಗೆ ೧೯೧೧ ನೇ ಮೇ॥ ತಾ॥ ೮ ರಿಂದ ೧೪ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ವರ್ತಮಾನಸಂಗ್ರಹ.

ಬರ್ಮಾ ಸೀಮೆಯೆಣ್ಣೆಯ ಕಂಪೆನಿಯವರಿಗೆ ಕಳೆದವರ್ಷ ೧೩೨೪೦೦೦೦ ರೂ. ಗಳ ಆದಾಯವು ಬಂದಿರುತ್ತದೆ ಈ ಕಂಪೆನಿಯ ಮೂಲಧನವು ರೂ. ೪,೬೪,೦೦,೦೦೦.

ಬರುವ ಜೂನ್ ತಾ॥ ೨೨ ರಲ್ಲಿ ಸೀಮೆಯಲ್ಲಿ ಜಾರ್ಜ್ ಪ್ರಭು ದಂಪತಿಗಳ ಕಿರೀಟಧಾರಣ ಮಹೋತ್ಸವವು ನಡಿಯುವುದರಿಂದ ಅದರ ಸಂತೋಷಸೂಚಕವಾಗಿ ಭರತಖಂಡದಲ್ಲಿ ಎಲ್ಲ ಆಫೀಸುಗಳಿಗೂ, ಪಾಠಶಾಲೆಗಳಿಗೂ ರಜವನ್ನು ಕೊಡಬೇಕೆಂದು ನಿರ್ಧರವಾಗಿರುವುದು.

ಸಿಂದ್‌ನಲ್ಲಿ ಬಹುದಿವಸಗಳಿಂದ ವೈದ್ಯವನ್ನು ಮಾಡಿಕೊಂಡು ಒಳ್ಳೇ ಪ್ರಸಿದ್ಧಿಯನ್ನು ಹೊಂದಿದ್ದ ಡಾಕ್ಟರ್ ಬರ್ಬ್ರೂಕ್ಸ್ ರವರು ಈಚೆಗೆ ಅಲ್ಲಿ ಪ್ಲೇಗುರೋಗವು ಪ್ರಾರಬ್ಧವಾದಾರಭ್ಯ ಪ್ಲೇಗು ರೋಗಿಗಳಿಗೆ ಚಿಕಿತ್ಸೆಯನ್ನು ಮಾಡುತ್ತಿದ್ದು ಕಳೆದ ತಾ॥ ೯ರಲ್ಲಿ ಪ್ಲೇಗುರೋಗ ತಗಲಿ ಸತ್ತುಹೋದರು.

ಭೂಪಾಲಿನ ಬೇಗಂರವರು ಲಂಡನ್‌ಪಟ್ಟಣವನ್ನು ತಲುಪಿದರು. ಅಲೆಕ್ಸಾಂಡ್ರಾ ರಾಣಿಯವರು ಇವರನ್ನೂ, ಇವರ ಮಗನನ್ನೂ ಬರಮಾಡಿಕೊಂಡು ಸತ್ಕರಿಸಿದರು. ಅಲ್ಲಿನ ವೃತ್ತಪತ್ರಿಕೆಗಳು ಈ ಬೇಗಂರವರ ಪ್ರಶಂಸೆಯನ್ನು ಮಾಡುವಾಗ್ಗೆ "ಈಕೆಯು ಸ್ತ್ರೀಜಾತಿಗೆ ಆಭರಣಪ್ರಾಯಳಾಗಿರುವಳು" ಎಂದು ಹೇಳಿರುತ್ತವೆ.

ಬೆಂಕಿಪುರದ ಕಾಮನಾರಾಯಣ ಮಸಿಲದರ ಎಂಬುವರ ಹೆಂಡತಿಯು ಈಚೆಗಾದ ದಿನಜಾಪೂರಿನ ರೈಲ್ವೆಯ ಅನಾಹುತದಿಂದ ತನ್ನ ಮಗಳು ಸತ್ತುಹೋಗಿ ತನಗೂ ಅಪಾಯ ಸಂಭವಿಸಿದುದಕ್ಕಾಗಿ ೩೦,೦೦೦ ರೂ. ಗಳ ಪರಿಹಾರವು ಬರಬೇಕೆಂದು ಈಸ್ಟ್ ಇಂಡ್ಯಾ ರೈಲ್ವೆಯಕಂಪೆನಿಗೆ ನೋಟೀಸನ್ನು ಕೊಡಿಸಿರುತ್ತಾಳೆ.

ಜಪಾನಿಗೆ ಸೇರಿದ ಯಮಗಾತಯೆಂಬೂರಿಗೆ ಅಗ್ನಿಪ್ರವೇಶವಾಗಿ ಬ್ಯಾಂಕುಗಳು, ಪಾಠಶಾಲೆಗಳು ಮತ್ತು ಕಚೇರಿಯ ಕಟ್ಟಡಗಳು ಸೇರಿ ೧೦೦೦ ಮನೆಗಳು ಸುಟ್ಟು ಭಸ್ಮವಾದುವು. ಅಲ್ಲದೆ ಮ್ಯಾಂಚೂರಿಯಾದಲ್ಲಿ ಮರದ ಮನೆಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿ ಸುಟ್ಟುಹೋಗಿ ಅನೇಕ ಪದಾರ್ಥಗಳು ನಷ್ಟವಾದುವಲ್ಲದೆ ಅನೇಕ ಜನರು ಸತ್ತರು.

ಮೈಮರ್ನಸಿಂಗ್ ಡಿಸ್ಟ್ರಿಕ್ಟಿಗೆ ಸೇರಿದ ತಂಗಾಯಿಲ್ ಎಂಬಲ್ಲಿ ಕಳೆದ ಸೋಮವಾರ ಪ್ರಚಂಡಮಾರುತವೆದ್ದು ಸಾವಿರಾರು ಮರಗಳು ಬುಡಮೇಲಾಗಿ ಬಿದ್ದುವು. ಮತ್ತೂ ಅನೇಕ ಮನೆಗಳು ಹಾಳಾದುವು. ಪಾಠಶಾಲೆಯ ಕಟ್ಟಡವೂ, ಅಂಚೆಯ ಮನೆಯೂ ನೆಲಸಮನಾದುವು. ಇದರಿಂದ ನಷ್ಟವು ಬಹುವಾಗಿದ್ದಾಗ್ಯೂ ಪ್ರಾಣಾಪಾಯವೇನೂ ಆಗಲಿಲ್ಲವು. ನಿಂತಿದ್ದ ಬೆಳೆಯು ಮಾತ್ರ ವಿಶೇಷವಾಗಿ ಹಾಳಾಯಿತು.

ಬವೇರಿಯಾದಲ್ಲಿ ಒಬ್ಬ ಶ್ರೀಮಂತನು ತನ್ನ ಆಸ್ತಿಯ ಬೆಲೆಯು ೧೫,೧೯,೧೦೦ ರೂ. ಯಿಂದ ೩೦,೦೦,೦೦೦ ರೂ. ಒಳಗೆಂದು ಕಳೆದ ೨೦ ವರ್ಷಗಳಿಂದಲೂ ಬರೆಸುತ್ತ ಬಂದಿದ್ದನು. ಈಗ ಅವನು ಸತ್ತುಹೋಗಲು ಅಲ್ಲಿಯ ಮ್ಯುನಿಸಿಪಾಲಿಟಿಯವರು ಅವನಾಸ್ತಿಯು ೩,೦೯,೧೯,೦೦೦ ರೂ. ಬೆಲೆಬಾಳತಕ್ಕದೆಂದು ಗೊತ್ತುಮಾಡಿ ೬೪,೦೯,೧೦೦ ರೂ. ವರೆಗೆ ಆದಾಯದ ತೆರಿಗೆ ಬಾಕಿಯನ್ನು ಕೊಡಬೇಕೆಂದು ಅವನ ಉತ್ತರಾಧಿಕಾರಿಗಳನ್ನು ಹಿಂಸಿಸುತ್ತಿರುವರು.

ಕಲಕತ್ತಾದಲ್ಲಿ ಒಬ್ಬ ಯೂರೋಪಿಯನ್ನು ತನ್ನ ಹೆಂಡತಿಯೊಡನೆ ಕಲಹಮಾಡಿಕೊಂಡು ಕಳೆದ ೨ ವರ್ಷಗಳಿಂದಲೂ ಬೇರೆ ವಾಸಮಾಡುತ್ತಿದ್ದವನು ಕಳೆದ ತಾ॥ ೬ ರಲ್ಲಿ ತನ್ನ ಹೆಂಡತಿಯು ವಾಸಮಾಡಿಕೊಂಡಿದ್ದ ಮನೆಗೆ ಹೋಗಿ ಅವಳನ್ನು ಕೊಂಚ ಹಣವನ್ನು ಸಾಲವಾಗಿ ಕೊಡೆಂದು ಕೇಳಿ ಅವಳು ಕೊಡದೆಹೋಗಲು ತುಪಾಕಿಯಿಂದ ಅವಳನ್ನು ಎರಡಾವೃತ್ತಿ ಹೊಡೆದು ಕಡೆಯಲ್ಲಿ ತಾನೇ ಹೊಡದುಕೊಂಡು ಸತ್ತನು. ಹೆಂಡತಿಯ ಸ್ಥಿತಿಯು ಅಷ್ಟೇನೂ ಅಪಾಯಕರವಾಗಿಲ್ಲವು.

ಅಫ್‌ಗಾನಿಸ್ಥಾನದ ಅಮೀರರನ್ನು ಕೊಲ್ಲಬೇಕೆಂದು ಪ್ರಯತ್ನಿಸಿದ್ದ ಡಾಕ್ಟರ್ ಅಬ್ದುಲ್‌ಗನಿ ಮೊದಲಾದವರು ಕಾರಾಗೃಹ ಶಿಕ್ಷೆಯನ್ನನುಭವಿಸುತ್ತಿರುವರಷ್ಟೆ. ಈಗ ಈ ಬಂದಿಗಳಲ್ಲೊಬ್ಬನ ಹೇಳಿಕೆಯಮೇಲೆ ಪೋಲೀಸಿನವರು ಕಾಬೂಲಿನಲ್ಲಿ ಹೆಲ್ತಾಫೀಸರಾಗಿರುವ ಅಮೀರುದ್ದೀನ್ ಪೇಷಾವಾರಿಯ ಮನೆಯನ್ನು ಶೋಧಿಸಿ ಅಲ್ಲಿದ್ದ ಕಾಗದಪತ್ರಗಳನ್ನು ತಮ್ಮ ಸ್ವಾಧೀನಮಾಡಿಕೊಂಡು ಹೆಲ್ತಾಫೀಸರನ್ನು ಸೆರೆಯಲ್ಲಿಟ್ಟಿರುವರು. ಅಮೀರರು ಜಲಾಲಾಬಾದಿನಿಂದ ಹಿಂತಿರುಗಿದಮೇಲೆ ಇವನ ವಿಚಾರಣೆಯು ನಡಿಯಬಹುದು.

ರಂಗೂನಿನಲ್ಲಿ ಸಿಕ್ಕರಜಾತಿಯ ಪೋಲೀಸಿನವನೊಬ್ಬನು ಹಡಗಿನಿಂದ ಕೆಲ ಕೋವಿಮೊಟ್ಟೆಗಳನ್ನು ಕದ್ದು ತಂದಿದ್ದುದಕ್ಕಾಗಿ ವಿಚಾರಣೆಯಿಂದ ಪೋಲೀಸು ಠಾಣದ ಸೆರೆಯಲ್ಲಿಡಲ್ಪಡುವಾಗ್ಗೆ ಒಂದು ದೊಣ್ಣೆಯನ್ನು ಕಿತ್ತುಕೊಂಡು ಡೆಪ್ಯುಟಿ ಇನ್ಸ್‌ಪೆಕ್ಟರಿಗೆ ಸ್ಮೃತಿಯುತಪ್ಪುವಂತೆ ಹೊಡೆದು, ಇನ್ಸ್‌ಪೆಕ್ಟರಿಗೂ ಹೊಡೆಯುವಷ್ಟರಲ್ಲಿ ಆತನು ತಪ್ಪಿಸಿಕೊಂಡು ಹೋದನು, ಮತ್ತೂ ತನನ್ನನ್ನು ಹಿಡಿಯಲು ಬಂದ ಮತ್ತಿಬ್ಬರಿಗೆ ಪೂರಾ ಏಟನ್ನು ಹಾಕಿದನು. ಅಷ್ಟರಲ್ಲಿ ಇತರರು ಬಂದು ಅವನನ್ನು ಹಿಡಿದುಕೊಳ್ಳುವ ಪ್ರಯತ್ನದಲ್ಲಿ ಅವನು ಸುಸ್ತಾಗಿ ಒಂದು ಬಚ್ಚಲಲ್ಲಿ ಬಿದ್ದುಹೋಗಿ ಪೋಲೀಸರ ವಶವಾದನು.

ಚೈನಾಕ್ಕೆ ಸೇರಿದ ಹಾಂಗ್‌ಕೌ ಎಂಬಲ್ಲಿ ಅಕ್ಕಿಯನ್ನು ಮಾರುವವರು ಅದರ ಬೆಲೆಯನ್ನು ಕಡಿಮೆಮಾಡುವುದಿಲ್ಲವೆಂದು ಮುಷ್ಕರ ಹಿಡಿದುದರಮೇಲೆ, ಬಡಜನರು ಆ ವರ್ತಕರ ೨೦ ಅಂಗಡಿಗಳನ್ನೂ, ಕೆಲ ಮನೆಗಳನ್ನೂ ನಾಶಪಡಿಸಿದರು ಅದರಮೇಲೆ ಪೋಲೀಸರು ಈ ದಂಗೆಕೋರರಲ್ಲಿ ಕೆಲವರನ್ನು ಹಿಡಿದು ಸೆರೆಯಲ್ಲಿಟ್ಟರು. ದಂಗೆಕೋರರು ಸೆರೆಯಲ್ಲಿದ್ದವರನ್ನು ಬಿಡಿಸಿಕೊಳ್ಳಲು ಎಷ್ಟು ಪ್ರಯತ್ನಿಸಿದಾಗ್ಯೂ, ಪೋಲೀಸರು ಬಿಡದೆಹೋದುದರಿಂದ ಪೋಲೀಸು ಠಾಣಗಳನ್ನೂ, ಕಚೇರಿಯನ್ನೂ, ನ್ಯಾಯಸ್ಥಾನಗಳನ್ನೂ ಹಾಳುಮಾಡಿ ಅನೇಕ ಪೋಲೀಸರಿಗೆ ಗಾಯವನ್ನುಂಟುಮಾಡಿದರು. ಅನಂತರ ಸೇನೆಯು ಬಂದು ದಂಗೆಯನ್ನು ಅಡಗಿಸಿತು.

ಕೆಲದಿನಗಳ ಕೆಳಗೆ ಹಜಾರಿಬಾಗ್ ಡಿ॥ ನಲ್ಲಿ ಜಯರಾಂ ಎಂಬುವನೂ, ಇವನ ಹೆಂಡತಿ ವಾಲ್ಕಿ ಎಂಬುವಳೂ ಗೋವರ್ಧನನೆಂಬುವನು, ಇವನ ಹೆಂಡತಿ, ಮಗಳು ಮತ್ತೂ ಪರಿಚಾರಕನಾದ ವೃದ್ಧ ಬ್ರಾಹ್ಮಣ ಈ ನಾಲ್ಕು ಜನರಿಗೆ ವಿಷಮಿಶ್ರವಾದ ಮಿಠಾಯಿಯನ್ನು ಕೊಟ್ಟು ತಿನ್ನಿಸಿದರು. ಅವರೆಲ್ಲರೂ ಅದನ್ನು ತಿಂದ ಕೂಡಲೆ ಮೂರ್ಛಿತರಾಗಲು ಅವರ ಕುತ್ತಿಗೆಗಳನ್ನು ಕುಯಿದು ಅವರಲ್ಲಿದ್ದ ನಗದುಹಣ ಬಟ್ಟೆ ಮತ್ತೂ ಆಭರಣಗಳನ್ನು ಅಪಹರಿಸಿಕೊಂಡು ಅದೇ ರಾತ್ರಿ ಊರಿಗೆ ಬಂದು ಅಲ್ಲಿ ಬೆಲೆಯ ಆಭರಣಗಳನ್ನು ಮಾರಿ ಅನಂತರ ತಮ್ಮ ಸ್ವಗ್ರಾಮಕ್ಕೆ ಬಂದು ಸೇರಿಕೊಂಡರು. ಪೋಲೀಸರು ಈ ಸಮಾಚಾರವನ್ನು ತಿಳಿದು ಆ ನರರಾಕ್ಷಸ ದಂಪತಿಗಳನ್ನು ಹಿಡಿದು ಸೆಷನ್ಸ್ ವಿಚಾರಣೆಗೆ ಗುರಿಮಾಡಿರುವರು.

ಜರ್ಮನಿಯಲ್ಲಿ ಒಬ್ಬ ಸೈನಿಕನು ಆತ್ಮಹತ್ಯವನ್ನು ಮಾಡಿಕೊಳ್ಳಯತ್ನಿಸಿದ್ದುದಕ್ಕಾಗಿ, ಸೈನಿಕರಿಗಾಗೇರ್ಪಟ್ಟಿರುವ ಕೋರ್ಟಿನವರು ಅವನನ್ನು ಉದ್ಯೋಗದಿಂದ ನಿವೃತ್ತಿಗೊಳಿಸಿ, ಅವನಿಗೆ ಪಿಂಚನ್ನೂ, ಉಡುಪೂ ದೊರಕದಂತೆ ಶಿಕ್ಷೆಯನ್ನು ವಿಧಿಸಿದ್ದರು. ಈ ವಿಚಾರವನ್ನು ಚಕ್ರವರ್ತಿಯವರು ತಿಳಿದು, "ಸೇನೆಯಲ್ಲಿದ್ದು ನಂಬುಗೆಯಿಂದ ಕೆಲಸಮಾಡುತ್ತೇನೆಂದು ಅವನು ಮಾಡಿದ್ದ ಪ್ರಮಾಣಕ್ಕೂ, ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಪ್ರಯತ್ನಕ್ಕೂ ಏನೊಂದು ಸಂಬಂಧವಿಲ್ಲವು. ಇಂಥ ಘಾತುಕ ಕಾರ್ಯವನ್ನು ಮಾಡಯತ್ನಿಸಿದ ಅಪರಾಧಕ್ಕಾಗಿ ಅವನು ದೇವರಿಗೂ, ತನ್ನ ಮನಸ್ಸಾಕ್ಷಿಗೂ ಉತ್ತರವನ್ನು ಹೇಳಬೇಕಾಗಿದೆಯೇ ಹೊರತು ಮತ್ತಾರಿಗೂ ಹೇಳಬೇಕಾದುದಿಲ್ಲವೆಂಬಭಿಪ್ರಾಯದಿಂದ ಸೇನೆಯ ಕೋರ್ಟಿನವರ ತೀರ್ಮಾನವನ್ನು ತಳ್ಳಿಬಿಟ್ಟರು.

ಕಳೆದ ತಾ॥ ೭ ರಲ್ಲಿ ರಂಗೂನಿನಲ್ಲಿ ಒಬ್ಬ ಮಾವುತನು ತನ್ನ ಆನೆಯ ಮೈಯನ್ನು ತೊಳೆದು, ಜೊಂಡನ್ನು ತಿನ್ನಿಸಲು ಅದನ್ನು ತನ್ನ ಹಿಂದೆ ಬಿಟ್ಟುಕೊಂಡು ಹೋಗುತ್ತಿರುವಾಗ ಒಂದು ಹುಲಿಯು ಅಕಸ್ಮಾತ್ತಾಗಿ ಬಂದು ಅವನಮೇಲೆ ಹಾರಿ ಅವನ ಶರೀರವನ್ನು ಬಗೆಯಲಾರಂಭಿಸಿತು. ಅಷ್ಟರಲ್ಲಿ ಆ ಮಾವುತನು ತನ್ನ ಕೈಲಿದ್ದ ದೊಣ್ಣೆಯಿಂದ ಆ ಹುಲಿಯ ತಲೆಯಮೇಲೆ ಒಂದೇಟನ್ನು ಹಾಕಿ ಗಟ್ಟಿಯಾಗಿ ಕೂಗಿಕೊಂಡನು. ಆನೆಯು ಈ ಕೂಗನ್ನು ಕೇಳಿ ಆ ಹುಲಿಯಮೇಲೆ ತತ್ಕ್ಷಣವೇ ನುಗ್ಗಿ ತನ್ನ ಮುಂಗಾಲಿನಿಂದ ಅದನ್ನು ಒದ್ದುಬಿಟ್ಟಿತು. ಆ ಹುಲಿಯು ಆನೆಯ ಒದೆಯೇಟನ್ನು ತಡೆಯಲಾರದೆ ಕೊಂಚದೂರ ಉರುಳಿಕೊಂಡು ಹೋಗಿ ರಕ್ತವನ್ನು ಕಾರುತ ಹಾಗೆಯೇ [illegible]. ಮಾವುತನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿದ್ದಾನೆ.

[೩ ನೆಯ ಪೇಜಿನಿಂದ ಮುಂದೆಸಾಗಿದುದು.]

ತಮಗೆ ತಿಳಿದಷ್ಟು ಮಟ್ಟಿಗೆ ವಿಮರ್ಶಿಸಿ ಸೂಚಿಸಿ ಉತ್ತಮವಾದ ಮಾರ್ಗವನ್ನೇ ಅನುಸರಿಸಬೇಕು!

೨. ಒಬ್ಬರನ್ನೊಬ್ಬರು ತಿರಸ್ಕರಿಸುವುದು, ದ್ವೇಷಿಸುವುದು, ಮತದ್ವೇಷ ಇವುಗಳನ್ನು ತ್ಯಜಿಸಬೇಕು.

೩. ತಾನೇ ದೊಡ್ಡವನೆಂದು ಗರ್ವಿಸದಿರುವುದು. ಆದರೆ ಅವ ವಿಷಯದಲ್ಲಾಗಲೀ ಆರಾರು ಅವಾವ ಕೆಲಸವನ್ನು ಮಾಡಬೇಕೋ ಅವರವರು ಅದನ್ನು ವಿಚಾರದಂತೆ ಮಾಡಬೇಕೆಂಬುದನ್ನು ಜ್ಞಾಪಕದಲ್ಲಿರಿಸಿರಬೇಕು.

೪. "ಆತ್ಮವತ್ಸರ್ವಭೂತಾನಿ" ಎಂದರೆ ತನ್ನಂತೆ ಸರ್ವಪ್ರಾಣಿಗಳೂ ಕಷ್ಟಸುಖಗಳನ್ನು ಹೊಂದುವುವಲ್ಲವೆ? ಎಂಬುದನ್ನು ಮರೆಯಬಾರದು.

೫. ದೀನರನ್ನು ಕರುಣೆಯಿಂದ ನೋಡುವುದು.

೬. "ದಾನಂ ದಾಕ್ಷಿಣ್ಯಮೂಲಂ" ಎಂಬ ನೀತಿಯಿದೆ. ದಾಕ್ಷಿಣ್ಯವೇ ಒಗ್ಗಟ್ಟಿಗೆ ತವರೂರು. ಲೋಭದಿಂದ ಆಶೆಯೂ, ಆಶೆಯಿಂದ ಅನ್ಯಾಯಾಚರಣೆಯೂ, ಅನ್ಯಾಯಾಚರಣೆಯಿಂದ ಪಾಪವೂ, ಪಾಪದಿಂದ ಕಷ್ಟವೂ ಉಂಟಾಗುವುದು. ಆದುದರಿಂದ ಲೋಭವನ್ನು ಸಾಧ್ಯವಾದಷ್ಟು ದೂರಮಾಡಿರಬೇಕು.

ಮಿತ್ರರೆ! "ಲೋಕೇಸ್ಪೃಷ್ಟಿತಿಸದ್ವ್ಯತಾರ್ಥಾಂ ಶರೀರೆ ಕುಶಲಂತವ॥ ಕುತಃಕುಶಲಮಸ್ಮಾಕ ಮಾಯುರ್ಯಾತಿ ದಿನೇದಿನೇ" ಎಂದರೆ-ಒಬ್ಬರು ಮತ್ತೊಬ್ಬರನ್ನು ಕುರಿತು ಅಯ್ಯಾ! ನೀವು ಕ್ಷೇಮವೇ? ಎಂದು ಪ್ರಶ್ನೆಮಾಡುವರು. ದಿನೇದಿನೇ ಆಯುಸ್ಸು ಕಡಿಮೆಯಾಗುತ್ತಿರುವಾಗ ನಮಗೆ ಕ್ಷೇಮವೆಲ್ಲಿಯದು? ಪೃಚ್ಛಕರಿಗೆ ಏನು ಉತ್ತರವನ್ನು ಹೇಳಬೇಕು? ಅನಿತ್ಯಾನಿ ಶರೀರಾಣಿ ವಿಭವೋನೈವಶಾಶ್ವತಃ। ನಿತ್ಯಂಸನ್ನಿಹಿತೋ ಮೃತ್ಯುಃ ಕರ್ತವ್ಯೋಧರ್ಮಸಂಗ್ರಹಃ" ಎಂದರೆ ಶರೀರವು ಶಾಶ್ವತವಲ್ಲ; ವೈಭವವು ಕ್ಷಣಿಕವಾದುದು; ವಿನಾಶಕಾಲವು ಆವಾಗಲೂ ಸಮೀಪಿಸುತ್ತಲೇ ಇರುವುದು; ಆದುದರಿಂದ ಧರ್ಮವನ್ನು ಆರ್ಜಿಸಬೇಕಾದುದು ಅಸ್ಮದಾದಿಗಳ ಕರ್ತವ್ಯವಲ್ಲವೆ? ಆದುದರಿಂದ "ಆತ್ಮಾತ್ವಂಕ್ಷಿತಿಜಾಮತಿಃ ಪರಿಜನಾಃಪ್ರಾಣಾಃಶರೀರಂಗೃಹಂ। ಪೂಜಾತೇವಿಷಯೋಪಭೋಗರಚನಾ ನಿದ್ರಾಸಮಾಧಿಸ್ಥಿತಿಃ॥ ಸಂಚಾರಃಪದಯೋಃಪ್ರದಕ್ಷಿಣವಿಧಿಃ ಸ್ತೋತ್ರಾಣಿಸರ್ವಾಗಿರಃ। ಯದ್ಯತ್ಕರ್ಮಕರೋಮಿತತ್ತದಖಿಲಂ ರಾಮಾಸ್ತುತೇಪೂಜನಂ॥" ಎಂಬ ಭಾವದಿಂದ ಸದಾ ಸನ್ಮಾರ್ಗಗಾಮಿಗಳಾಗಿರುವಿರಾದರೆ ನಿಮ್ಮ ಮತ್ತು ನಿಮ್ಮ ಸಂಗಡಿಗರ ಜನ್ಮವು ಸಾರ್ಥಕವೆನಿಸುವುದು.

ಶ್ರಾ॥ ವೆಂಕಟರಮಣಯ್ಯ ಕಾರ್ಯದರ್ಶಿ,
ಅಲಕಪುರೀ ಧಾರ್ಮಿಕವಾಚಕಶಾಲಾ, ಹಲಕೂರು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು. ಪ. ಪ್ರ.

ಪತ್ರವ್ಯವಹಾರ.

ಶ್ರೀ ರಾಮನವಮಿ.

ರಾಜಧಾನಿಯ ಶ್ರೀರಾಮಪೇಟೆಯಲ್ಲಿರುವ ಬ್ರಾಹ್ಮಣರು ಕಳೆದ ೨೦-೨೫ ವರ್ಷಗಳಿಂದಲೂ ಶ್ರೀರಾಮಾಭ್ಯುದಯ ಸಭೆಯನ್ನು ನಲ್ಲಪ್ಪನ ತಾಣದಬಳಿ ಸ್ಥಾಪಿಸಿಕೊಂಡು ಪ್ರತಿವರ್ಷದ ಶ್ರೀರಾಮನವಮಿಯ ಕಾಲದಲ್ಲಿ ರಾಮಭಜನೆ, ಹರಿಕಥೆ, ಸಂಗೀತ ಮೊದಲಾದ ಸತ್ಕಾಲಕ್ಷೇಪವನ್ನು ಮಾಡಿ ರಾಮ ಪಟ್ಟಾಭಿಷೇಕಾನಂತರ ಸಾವಿರಾರು ಜನರಿಗೆ ಸಮಾರಾಧನೆಯನ್ನು ಮಾಡಿಸುತ್ತ ಬಂದಿರುವರು. ಈ ವರ್ಷವೂ ಯಥಾಪ್ರಕಾರ ಶ್ರೀರಾಮನವಮಿಯಲ್ಲಿ ಭಜನೆ, ಸಂಗೀತ, ಹರಿಕಥೆ ಮೊದಲಾದ ಸತ್ಕಾಲಕ್ಷೇಪವನ್ನು ಮಾಡಿ ರಾಮ ಪಟ್ಟಾಭಿಷೇಕವನ್ನು ಅತಿ ವಿಜೃಂಭಣೆಯಿಂದ ನಡಿಸಿ ತಾ॥ ೭ರಲ್ಲಿ ನಂಜರಾಜಬಹದ್ದೂರರವರ ಸತ್ರದಲ್ಲಿ ಪ್ರಾಯಶಃ ೨೦೦೦ ಜನರಿಗೆ ಸಂತರ್ಪಣೆಯನ್ನು ಮಾಡಿಸಿದರು. ಅಲ್ಲದೆ ಈ ಸಭೆಗೆ ಸಂಬಂಧಪಟ್ಟವರಲ್ಲಿ ಉಲಚಕೆಂಬಿ ಎಂಬ ಒಂದು ಪ್ರಭೇದದವರು ಮಾತ್ರ ಪೃಥಕ್ಕಾಗಿ ಸಂತರ್ಪಣೆಯನ್ನು ಮಾಡಿಕೊಂಡುದು ವಿಷಾದಕರವೇಸರಿ. ಯಾಕೆಂದರೆ:- ದೇವತಾಭಜನೆಯಲ್ಲಿ ಎಲ್ಲ ಜನರೂ ಭಿನ್ನಭಾವವನ್ನೆಣಿಸದೆ ಏಕೀಭವಿಸಿರತಕ್ಕದು ಅವಶ್ಯಕವು. ಮತ್ತು ಇಂಥಾ ದೊಡ್ಡಕಾರ್ಯಗಳು ಬಹು ಜನರಿಂದಲ್ಲದೆ ಒಬ್ಬಿಬ್ಬರಿಂದ ಪೂರೈಸಲ್ಪಡತಕ್ಕದಲ್ಲವು. ರಾಮಭಕ್ತ.

ಶಂಕರಜಯಂತೀ ಮಹೋತ್ಸವವು.

ರಾಜಧಾನಿಯಲ್ಲಿರುವ ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲಾ ಸ್ಮಾರ್ತಮತಸ್ಥ ವಿದ್ಯಾರ್ಥಿಗಳು ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರವರ ಜನ್ಮದಿನೋತ್ಸವವನ್ನು ರಾಜಧಾನಿಯಲ್ಲಿ ಉತ್ತರಾದೀಮಠದ ಮಗ್ಗುಲಿನಲ್ಲಿರುವ ಈಗಿನ ಶೃಂಗಗಿರಿ ಜಗದ್ಗುರು ಶ್ರೀ ಸಚ್ಚಿದಾನಂದ ನೃಸಿಂಹ ಭಾರತೀಸ್ವಾಮಿಗಳ ಜನ್ಮಗೃಹದಲ್ಲಿ ನೆರವೇರಿಸಿದರು. ಈ ಉತ್ಸವಕ್ಕಾಗಿ ಆ ಮಂದಿರವು ವಿಶೇಷವಾಗಲಂಕರಿಸಲ್ಪಟ್ಟಿತ್ತು. ಪಾಠಶಾಲೆಯ ಪಂಡಿತರುಗಳು, ವಿದ್ಯಾರ್ಥಿಗಳು ಮತ್ತು ಸ್ಥಳೀಯರಾದ ವೈದಿಕ ಲೌಕಿಕ ಮಹಾಜನರೂ ಸಕಾಲಕ್ಕೆ ಸಭೆಯನ್ನಲಂಕರಿಸಿದ್ದರು. ವಿದ್ಯಾರ್ಥಿಗಳ ಪ್ರಾರ್ಥನೆಯೊಡನೆ ತರ್ಕವೇದಾಂತ ವಿದ್ವಾಂಸರಾದ ಬ್ರಹ್ಮಶ್ರೀ ವಿಭಾಗಂ ಶ್ರೀಕಂಠ ಶಾಸ್ತ್ರಿಗಳು ಆಚಾರ್ಯರ ಅವತಾರ ಮತನಿರ್ಮಾಣಿತ್ಯಾದಿ ವಿಷಯಗಳನ್ನು ಕುರಿತು ಸುಮಾರು ೧ ಘಂಟೆಕಾಲ ಉಪನ್ಯಾಸ ಮಾಡಿದರು. ಅನಂತರ ಸಂಗೀತ ವಿದ್ವಾನ್ ವೀಣೆ ಸುಬ್ರಹ್ಮಣ್ಯ ಅಯ್ಯರವರು ವೀಣೆಯನ್ನು ನುಡಿಸಿ ಸಭಿಕರ ಮನಸ್ಸಿಗೆ ಆನಂದವನ್ನುಂಟುಮಾಡಿದರು. ರಾಜಾಸ್ಥಾನೋಪಾಧ್ಯಾಯರಾದ ಕೋಸಲೆ ಅಯ್ಯಶಾಸ್ತ್ರಿಗಳು, ಸಂಸ್ಕೃತ ಪಾಠಶಾಲಾ ಸಾಹಿತ್ಯೋಪಾಧ್ಯಾಯರಾದ ಬಾ. ರಾಮಶಾಸ್ತ್ರಿಗಳು ರಚಿಸಿದ್ದ ಭಗವತ್ಪಾದಾಚಾರ್ಯಪ್ರಶಂಸಾಪರವಾದ ಶ್ಲೋಕಗಳು ಓದಲ್ಪಟ್ಟವು. ಬಳಿಕ ವಿದ್ಯಾರ್ಥಿಗಳ ಪ್ರತಿನಿಧಿಯೊಬ್ಬರು ಎದ್ದು ಈ ಉತ್ಸವದ ನಿಮಿತ್ತವನ್ನು ಕುರಿತು ಭಕ್ತಿಯಿಂದ ಕೂಡಿದ ಒಂದು ಭಾಷಣವನ್ನು ಮಾಡಿದುದಲ್ಲದೆ ಈ ಉತ್ಸವಕ್ಕೆ ದಯವಿಟ್ಟು ದಯಮಾಡಿದ ಸಭಿಕರಿಗೂ, ಸಂಗೀತ ವಿದ್ವಾಂಸರಿಗೂ, ಉಪನ್ಯಾಸಕರಿಗೂ ದಯವಿಟ್ಟು ಕವಿತೆಯನ್ನು ಮಾಡಿ ಕಳುಹಿಸಿಕೊಟ್ಟ ವಿದ್ವಾಂಸರಿಗೂ, ಅವುಗಳನ್ನು ಮುಫತ್ತಾಗಿ ಮುದ್ರಿಸಿದ ಮುದ್ರಾಶಾಲಾಧಿಕಾರಿಗಳಿಗೂ ವಂದನೆಗಳನ್ನು ಸಮರ್ಪಿಸಿದರು. ಅನಂತರ ವೇದತ್ರಯಗಳಲ್ಲಿಯೂ ಸ್ವಸ್ತಿವಾಚನವಾಗುತ್ತಿರುವಲ್ಲಿ, ಶಿಷ್ಯಚತುಷ್ಟಯಾವೃತರಾದ ಆಚಾರ್ಯರ ಚಿತ್ರಪಟಕ್ಕೆ ಮಂಗಳಾರತಿಯೂ, ಮಹಾರಾಜರ ಶ್ರೇಯಃಪ್ರಾರ್ಥನೆಯೂ ಮಾಡಲ್ಪಟ್ಟಿತು. ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ಹಣ್ಣು ಸಕ್ಕರೆಯು ಹಂಚಲ್ಪಟ್ಟು ಸಭೆಯು ಉಪಸಂಹರಿಸಲ್ಪಟ್ಟಿತು. ಈ ವಿದ್ಯಾರ್ಥಿಗಳು ಮುಂದೆಯೂ ಇಂಥಾ ಸತ್ಕಾರ್ಯಾಸಕ್ತರಾಗಿ ಆಸ್ತಿಕತೆಯನ್ನು ಬಿಡದೆ ವೈದಿಕ ಧರ್ಮಗಳನ್ನು ಕಾಪಾಡಿಕೊಂಡು ಬರಲೆಂದು ಹಾರೈಸುತ್ತೇನೆ. ವೈದಿಕ ಹಿತೈಷಿ.

ವಿರೋಧಿಕೃತು ಸಂವತ್ಸರದ ಚೈತ್ರ ಬಹುಳ ಪಾಡ್ಯಮಿ ದಿವಸ ಶ್ರವಣಬೆಳ್ಗೊಳದ ಭಂಡಾರಬಸದಿಯಲ್ಲಿ ಕರ್ನಾಟಕದಿಗಂಬರ ಹಿತೈಷಿಣೀ ಪ್ರಾಂತಿಕ ಸಭೆಯು ದೇವಮಾನ್ಯದೇವ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯಸ್ವಾಮಿಗಳವರ ಅಧ್ಯಕ್ಷತೆಯಿಂದ ನಡೆಸಲ್ಪಟ್ಟಿತು. ಅಧ್ಯಕ್ಷಮಹಾಸ್ವಾಮಿಗಳಿಂದ ೧ ಗಂಟೆಪರ್ಯಂತರ ಬಹುಸ್ವಾರಸ್ಯವಾದ ಉಪನ್ಯಾಸವು ಮಾಡಲ್ಪಟ್ಟಿತು. ಅನಂತರ ಜೈನಬೋರ್ಡಿಂಗ್ ಮ್ಯಾನೇಜರ್. ಜಿ. ಸಿ. ಪದ್ಮರಾಜಯ್ಯನವರು ಶ್ರೀ ಅಧ್ಯಕ್ಷರ ಜೀವನ ಚರಿತ್ರವನ್ನು ೧ ಗಂಟೆಹೊತ್ತು ಬಹು ಸ್ವಾರಸ್ಯವಾಗಿ ಹೇಳಿದರು. ಈ ವಿಚಾರವು ಅಲ್ಲಿ ನೆರೆದಿದ್ದ ಸಭಿಕರಮನಸ್ಸಿಗೆ ಬಹು ಆನಂದವನ್ನುಂಟುಮಾಡಿತು. ಅಲ್ಲಿ ಈ ಸಭೆಯ ಸೆಕ್ರೆಟರಿಗಳಾದ ಮ॥ ರಾ॥ ಗೌ. ಕೆ. ಪದ್ಮರಾಜಯ್ಯನವರು ಅಧ್ಯಕ್ಷರನ್ನು ಪ್ರಾರ್ಥಿಸಿದ್ದೇನಂದರೆ—ಹೋದವರ್ಷ ಕ್ಷೇತ್ರದಲ್ಲಿ ನಡೆದ ಮಹಾಸಭೆಯ ಕಾಲದಲ್ಲಿ ಇಲ್ಲಿ ಒಂದು ಬೋರ್ಡಿಂಗ್ ಹೌಸ್ ಅವಶ್ಯಕವಾಗಿ ಸ್ಥಾಪಿಸಲ್ಪಡಬೇಕೆಂಬುದಾಗಿ ಮೈಸೂರ್ ಮೋತಿಖಾನೆ ಸಾಹುಕಾರ್ ವರ್ಧಮಾನಯ್ಯನವರು ತಿಳಿಸಿದ್ದರಮೇಲೆ ಸಾಧಾರಣಸಂವತ್ಸರದ ಚೈತ್ರ ಶುದ್ಧ ಪಂಚಮಿಯಲ್ಲಿ ಬೋರ್ಡಿಂಗು ಸ್ಥಾಪಿಸಲ್ಪಟ್ಟಿತು ಆದರೆ ಆ ಲಾಗಾಯಿತು ಬೋರ್ಡಿಂಗ್ ಹೌಸನ್ನು ಯಾರೂ ಕಟ್ಟಿಸಲಿಲ್ಲವಾಗಿ, ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿರುವಪ್ರಯುಕ್ತ. ಮತ್ತೊಂದು ಸತ್ರವನ್ನು ಹೊಸದಾಗಿ ಕಟ್ಟಿಸಲು ಶೇಖರಿಸಿರುವ ಈ ಸ್ಥಳದಲ್ಲಿ ಶ್ರೀ ಸ್ವಾಮಿಯವರ ಹೆಸರಿನಿಂದ ಒಂದು ಬೋರ್ಡಿಂಗ್ ಹೌಸನ್ನೇರ್ಪಡಿಸಿಕೊಡಬೇಕೆಂಬುದಾಗಿ ಸೂಚಿಸಿದ್ದನ್ನು ಮೈಸೂರಿನಿಂದ ದಯಮಾಡಿಸಿದ್ದ ಮೋತಿಖಾನೆ ಸಾಹುಕಾರ್ ಮ॥ ರಾ॥ ವರ್ಧಮಾನಯ್ಯನವರು ಪುಷ್ಟೀಕರಿಸಿದ್ದರ ಮೇಲೆ ಶ್ರೀ ಚಾರುಕೀರ್ತಿಪಂಡಿತಾಚಾರ್ಯ ವರ್ಯಸ್ವಾಮಿಯವರು ತಮ್ಮ ಅಮೋಘವಾದ ಕೃಪೆಯಿಂದ ಒಪ್ಪಿದ ಮಹನಿಯೆ ಅಲ್ಲಿನೆರೆದಿದ್ದ ಸಭಿಕರೆಲ್ಲರೂ ಆನಂದದಿಂದ ಜಯಘೋಷವನ್ನು ಮಾಡಿದರು. ಅಷ್ಟರಲ್ಲಿ ಸಾಯಂಕಾಲವಾದ್ದರಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ತಾ॥ ೩೦-೪-೧೯೧೧ ರಲ್ಲಿ ಶ್ರವಣಬೆಳ್ಗೊಳದ ವಾಣೀವಿಲಾಸಪಾಠಶಾಲೆಯಲ್ಲಿ ದೇ॥ ಶ್ರೀ ನೇಮಿಸಾಗರಸ್ವಾಮಿಯವರು ದಯಮಾಡಿಸಿ ಅಲ್ಲಿ ಇಲ್ಲಿಗೆ ದಯಮಾಡಿಸಿದ್ದ ಮೈಸೂರ್ ಅಡ್ವೋಕೇಟ್ ಮ॥ ರಾ॥ ಕೃಷ್ಣರಾಯರನ್ನೂ ಮ॥ ರಾ॥ ನಂಜಪ್ಪನವರನ್ನೂ ಬರಮಾಡಿಕೊಂಡು ಕೃಷ್ಣರಾಯರ ಅಧ್ಯಕ್ಷತೆಯಿಂದ ಸಭೆಯನ್ನು ಸೇರಿಸಿದ್ದರು. ಅಲ್ಲಿ ಶ್ರೀ ದೇ॥ ನೇಮಿಸಾಗರಸ್ವಾಮಿಗಳವರು ೨ ಗಂಟೆಹೊತ್ತು ಆತ್ಮವಿಚಾರವಾಗಿ ಉಪನ್ಯಾಸವನ್ನು ಬಹು ಸ್ವಾರಸ್ಯದಿಂದ ಮಾಡಿದರು. ಅನಂತರ ಅಡ್ವೋಕೇಟ್ ಕೃಷ್ಣರಾಯರು ಆ ವಿಚಾರವನ್ನು ಸಭಿಕರ ಮನಸ್ಸಿಗೊಪ್ಪುವಂತೆ ಬಹು ಚಮತ್ಕಾರವಾಗಿ ತಿಳಿಸಿದರು. ನಂತರ ಪಾ॥ ಅಧ್ಯಕ್ಷರಾದ ವೇದಮೂರ್ತಿ ಪಂಡಿತ್ ದೋರ್ಬ ಜಿನದಾಸಶಾಸ್ತ್ರಿಗಳವರು ಈ ವಿಚಾರವನ್ನ ಅಲ್ಲಿ ನೆ ಮಹಾಜನಂಗಳ ಮನಸ್ಸಿಗೆ ಬಹು ತೃಪ್ತಿಯಾಗುವಂತೆ ಶಿದ್ದರಮೇಲೆ ಸಭೆಯು ಮುಕ್ತಾಯ ಮಾಡಲ್ಪಟ್ಟಿತು.

ವೀರಮಾಹೇಶ್ವರ ಪ್ರಶಂಸಾ.

(ಹಿಂದಣವಾರದ ಶೇಷ.)

ಪತಿರ್ಲಿಂಗಂ ಸತೀಚಾಹಂ ಹೃದಿಯುಕ್ತಸ್ಸ್ವಯಂಪ್ರಭುಃ॥ ಪ್ರಾಪಂಚಿಕ ಸುಖಂನಾಸ್ತಿ ಶರಣಸ್ಥಲಮುತ್ತಮಂ ॥೧೭॥ ಷಡೂರ್ಮಿಯುಕ್ತ ಸತ್ತ್ವಾಭವಾನಾಸ್ತಿ ಚಾಷ್ಟವಿಧಾರ್ಚನಂ। ನಿರ್ಭಾವೋ ನಿಜಲಿಂಗೈಕ್ಯಶ್ಶಿವಕರ್ಪೂರ ಯೋಗವತ್ ॥೧೮॥ ಪೂರ್ವಪೂರ್ವಂಸಾಧನಂಸ್ಯಾತ್ಸಾಧ್ಯಂಸ್ಯಾದುತ್ತರೋತ್ತರಂ। ಉತ್ತರೋತ್ತರ ವೈಶಿಷ್ಟ್ಯಮೇಕೈಷಾಂಪರಿಕೀರ್ತಿತಂ ॥೧೯॥ ಅಭ್ಯಸ್ತಂ ಪೂರ್ವಪೂರ್ವಂ ಸ್ಯಾದುತ್ತರೋತ್ತರ ಮಾಶ್ರಯೇತ್। ಆಶ್ರಿತ್ಯಚೋತ್ತರಂ ಮರ್ತ್ಯಸ್ವಯಂಪೂರ್ವಂ ಪರಿತ್ಯಜೇತ್ ॥೨೦॥ ಏತಾನ್ಯಭ್ಯಸತಃಪುಂಸೋ ಮುಕ್ತಿಃಪಾಣಿತಲೇಸ್ಥಿತಾ। ನತಸ್ಯ ದುರ್ಲಭಂಕಿಂಚಿತ್ತ್ರಿಷುಲೋಕೇಷುವಿದ್ಯತೇ ॥೨೧॥ ಷಟ್ಸ್ಥಲಾಭ್ಯಾಸ ಯೋಗೇನ ಮುಕ್ತಿಸ್ಸಾಯುಜ್ಯಲಕ್ಷಣಾ। ಪ್ರಾಪ್ಯತೇ ಶಿವಭಕ್ತೈಶ್ಚ ನಾನ್ಯೈಃ ಕರ್ಮರತೈರ್ಜನೈಃ ॥೨೨॥ ವೃ॥ ಅತಸ್ಸದಾಚಾರರತಸ್ಸಮಾಧಿಮಗ್ನಃ ಶಿವಸ್ಯ ಲಿಂಗಾರ್ಚನ ತತ್ಪರೋಜನಃ। ಶಿವಸ್ವರೂಪಂ ಪರಮಾರ್ಥ ಮಾದರಾತ್ಸದಾಭ್ಯಸೇತ್ಷಟ್ಸ್ಥಲಮೇಕಭಾವತಃ ॥೨೩॥ ಯೇಷಟ್ಸ್ಥಲೇಷು ವಿಚರಂತಿ ಹಿತೇಮಹಾಂತೋ ಮಂದ್ಯಾಸ್ತ ಏವವಿಜಿತೇಂದ್ರಿಯಶತ್ರುವರ್ಗೆ। ಸಂಸಾರಸ್ವರಾಡಪಿಚ ಯತ್ರತೃಣಾಯತೇ ತದ್ಭವಂ ಪದಂಜಗತಿ ತೇಸಮವಾಪ್ನುವಂತಿ ॥೨೪॥ ಏವಂಷಟ್ಸ್ಥಲನಿರ್ಣಯಂ ಶಿವಪದಪ್ರಾಪ್ತ್ಯೈಕಹೇತುಂ ಸದಾಯುಸ್ಸೇವೇತಕರಾಬ್ಜಹಿತನಿಹಿತಶ್ರೀಕಂಠ ಲಿಂಗಾರ್ಚಕಃ। ಸಜ್ಞಾನೀ ಸಪುರಾತನಸ್ಸಚ ಮಹಾಮಾಹೇಶ್ವರೋತ್ತಮೋ ಮರ್ತ್ಯಸ್ತೇನ ಜಗತ್ತ್ರಯೇಪಿ ಸದೃಶೋವಿದ್ಯೋ ತದೇವೋಪಿವಾ ॥೨೫॥

ಲಿಂಗವೇ ಪತಿಯು, ತಾನೇ ಸತಿಯು, ನನ್ನ ಹೃದಯದಲ್ಲಿ ಶಿವನು ತಾನೇ ನೆಲೆಗೊಂಡಿದ್ದಾನೆಂದು ತಿಳಿದು ಸ್ರಕ್ಚಂದನವನಿತಾದಿಲೌಕಿಕಸುಖವನ್ನು ತ್ಯಜಿಸಿರುವುದೇ ಶರಣಸ್ಥಲವು. ಕ್ಷುತ್ತು, ತೃಷ್ಣೆ, ಶೋಕ, ಮೋಹ, ಜರೆ, ಮರಣ ಎಂಬ ಷಡೂರ್ಮಿಗಳೂ, ಅಸ್ತಿ, ಜಾಯತೆ, ವರ್ಧತೆ, ಪರಿಣಮತೆ, ಅಪಕ್ಷೀಯತೆ, ನಶ್ಯತಿ ಎಂಬ ಷಡ್ಭಾವವಿಕಾರಗಳೂ ತೊಲಗಿ, ಜಲ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ ಎಂಬ ಅಂತರಂಗ ಬಹಿರಂಗ ಪೂಜೆಗಳಡಗಿ, ಕರ್ಪೂರವು ಉರಿಯಲ್ಲಿ ಬೆರೆದಂತೆ ಮಹಾಲಿಂಗದಲ್ಲಿ ಬೆರೆಸಿಗುವುದೇ ಐಕ್ಯಸ್ಥಲವು. ಈ ಸ್ಥಳಗಳೊಳಗೆ, ಮೊದಲನೆ ಮೊದಲನೆಯದು ಸಾಧನವಾಗಿಯೂ, ಮುಂದಣ ಮುಂದಣದು ಸಾಧ್ಯವಾಗಿಯೂ ಇರುವುದರಿಂದ, ಒಂದಕ್ಕಿಂತ ಒಂದು ಶ್ರೇಷ್ಠವೆನಿಸಿಕೊಳ್ಳುವುದು. ಮೊದಲನೆಯದು ಅಭ್ಯಾಸದಿಂದ ಅಳವಟ್ಟಮೇಲೆ ಮುಂದಣದನ್ನು ಹಿಡಿಯಬೇಕು. ಮುಂದಣದನ್ನು ಆಶ್ರೈಸಿದಮೇಲೆ ಹಿಂದಣದ ಅಭ್ಯಾಸವನ್ನು ಬಿಡಬೇಕು. ಹೀಗೆ ಈ ಷಟ್ಸ್ಥಲಗಳನ್ನು ಅಭ್ಯಾಸಮಾಡಿದ ಪುರುಷನಿಗೆ ಮೋಕ್ಷವು ಕೈಯಲ್ಲೇ ಇರುವುದು. ಅವನಿಗೆ ಮೂರುಲೋಕದಲ್ಲಿಯೂ ದುರ್ಲಭವಾದದ್ದಿಲ್ಲ. ಷಟ್ಸ್ಥಲಾಭ್ಯಾಸವೆಂಬ ಯೋಗದಿಂದ ಶಿವಭಕ್ತರಿಗೆ ಸಾಯುಜ್ಯರೂಪವಾದ ಮುಕ್ತಿಯು ದೊರೆಯುವುದೇ ಹೊರತು ಕರ್ಮಯೋಗದಲ್ಲಿ ಆಸಕ್ತರಾದವರಿಗೆ ದೊರೆಯುವುದಿಲ್ಲ. ಆದುದರಿಂದ ಸದಾಚಾರಪರಾಯಣರಾಗಿಯೂ, ಚಿತ್ತೈಕಾಗ್ರತೆಯುಳ್ಳವರಾಗಿಯೂ, ಶಿವಲಿಂಗಾರ್ಚನದಲ್ಲಿ ಆಸಕ್ತರಾಗಿಯೂ ಇರುವವರು ಶಿವಸ್ವರೂಪವಾಗಿಯೂ, ಸಾರವಾದುದಾಗಿಯೂ ಇರುವ ಷಟ್ಸ್ಥಲವನ್ನು ಏಕಮನಸ್ಸಿನಿಂದ ಯಾವಾಗಲೂ ಅಭ್ಯಾಸಮಾಡಬೇಕು. ಯಾರು ಷಟ್ಸ್ಥಲಗಳಲ್ಲಿ ವಿಹರಿಸುತ್ತಾರೋ ಅವರೇ ದೊಡ್ಡವರು, ಅವರೇ ಪೂಜ್ಯರು, ಅವರೇ ಜಿತೇಂದ್ರಿಯರು ಮತ್ತು ಷಡ್ವರ್ಗವನ್ನು ಗೆದ್ದವರು. ಅಂಥವರಿಗೆ ಭೂಮಿಯಲ್ಲಿ ಚಕ್ರವರ್ತಿಯೂ, ಸ್ವರ್ಗದಲ್ಲಿ ಇಂದ್ರನೂ ತೃಣಪ್ರಾಯವಾಗಿ ತೋರುವ ಶಿವತ್ವದ ರೂಪವಾದ ಸಾಯುಜ್ಯವು ಲಭಿಸುವುದು. ಈ ಪ್ರಕಾರವಾಗಿ ಶಿವಸಾಯುಜ್ಯಕ್ಕೆ ಮುಖ್ಯ ಕಾರಣವಾದ ಷಟ್ಸ್ಥಲಸಿದ್ಧಾಂತವನ್ನು ಹಸ್ತಪೀಠದಲ್ಲಿ ಶಿವಲಿಂಗವನ್ನಿಟ್ಟು ಪೂಜಿಸುವ ಯಾವ ವೀರಶೈವನು ಯಾವಾಗಲೂ ಅಭ್ಯಾಸ ಮಾಡುತ್ತಾನೋ ಅವನೇ ಜ್ಞಾನಿಯು, ಅವನೇ ಹಳಬನು, ಅವನೇ ಮಾಹೇಶ್ವರರಲ್ಲಿ ಶ್ರೇಷ್ಠನು. ಅವನಿಗೆ ಸಮಾನನಾದ ದೇವನು ಮೂರು ಲೋಕಗಳಲ್ಲಿ ಇದ್ದಾನೆಯೋ?

(ಶೇಷ.)

ಊದಬತ್ತಿಗಳು.

10

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಜಲ್ಲಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೩-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ಪಾಂಡೆನ್ಸ್	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
40 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಷೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಷೆ ೦-೪-೦., ೨೪ ಮಾತ್ರೆ ಸೀಷೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಷೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೯ ಮಾತ್ರೆ ಸೀಷೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ ೨೪ ಮಾತ್ರೆ ಸೀಷೆ ೦-೩-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಷೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಷೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಷೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತು ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

---

5 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ



ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ, ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚ
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

39

೧. ಸ್ವರ್ಣಗಂಗಾಧರಮಾತ್ರೆ.— ಇದರ ಸೇವನೆಯಿಂದ ಸ್ತ್ರೀಯರ ಸೂಚಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ.— ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರಿಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೆಬ್ಬು, ವ್ರಣ, ಕುಷ್ಠ, ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂತವಾತ ಮುಂತಾದ ೮೦ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ.— ಇದು ಎಲ್ಲ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ.— ಈ ರಸಾಯನವನ್ನು ೪೦ ದಿನ ಸೇವಿಸುವುದರಿಂದ ಶಿರಶೂಲೆ, ಮೂತ್ರಕೃಚ್ಛ್ರ, ಅಸ್ಥಿಸ್ರಾವ, ಅಸೃಗ್ದರ, ಪಿತ್ತಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕಮೂತ್ರ, ಅಸ್ಥಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ತ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತವೆ. ಇದರ ಕ್ರಯ ಸೇರು ೧ ಕ್ಕೆ ರೂಪಾಯಿ ೩. ಟಪ್ಪಾಲ್ ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ.— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್ ಖರ್ಚು ೬ ಆಣೆ.

೯. ಮಹಾಕುಂಡಲ್ಯಾದಿರಸಾಯನ.— ಇದರಿಂದ ಕ್ಷಯ ಕಾಸ, ಜ್ವರ, ಶ್ವಾಸ, ಪಾಂಡುರೋಗ, ಉನ್ಮಾದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟ್ಲು ಉರಿಸುತ್ತ ಸಂಕಟ, ವಮನವಿಲ್ಲದೆ ೩-೪ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶಃ ನೀರು ಎಳೆಯುವಾಗ ಜ್ಞಾನ ತಪ್ಪುವುದು ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳಿಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ವಿಶೇಷಯುಕ್ತವಾದ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದ ಊದಬತ್ತಿಗಳೂ ಗುಳಿಗೆಗಳೂ ದೊರೆಯುತ್ತವೆ. ನಮ್ಮ ವಿಳಾಸ—

ಎಂ. ಚೆನ್ನಬಸಪ್ಪ ಅಂಡ್ ಸನ್ಸ್.
ಚಿಕ್ಕಪೇಟೆ, ಬೆಂಗಳೂರು ಸಿಟಿ.

3

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೋಪ್‌ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರೆಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕೆಡ್ಡಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 2-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.



ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇದು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲ. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 3-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಪ್ಕೋಲಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

15

ಉತ್ತಮ ಗ್ರಂಥಗಳು.

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೮-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.—ಬೆಲೆ ವಿ.ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವೇಶ್ವರ ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಉಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೮-೦ರೂ. ಆಗುತ್ತದೆ. ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರೂ. ಕೊಡಬೇಕಾಗುತ್ತೆ. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ೧೦೦ಕ್ಕೂ ೦-೪-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನು ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದಲ್ಲಿ ೧-೦-೦ ರೂ. ಅನ್ನು ಹೆಚ್ಚಾಗಿ ಕೊಡಬೇಕು. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್ ಪ್ರೆಸ್, ಮೈಸೂರ್.

ಉತ್ತಮ ಗ್ರಂಥಗಳು.

118

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೮-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೪-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦.— ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರ ಚರಿತ್ರೆ. ಮತವಿಷಯವೂ ಪುರಾತನರ ಕಥೆಗಳೂ ಸೇರಿವೆ.

ಸೌಂದರಪುರಾಣ — ೧-೧೨-೦. ಲಲಿತವಾದ ಕವಿತೆ. ಸೌಂದರನಂಬಿಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೩ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೩ ಆಣೆ. ಬಾಲ್ಯಗಿರಿಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ [illegible]ವಿಧಿ.— ೧೨ ಆಣೆ. ಪ್ರಾಣಾಯಾಮ ನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕಂದಂ.— ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ,
ಮೈಸೂರು.

೧೯೧೧ನೇ ಇಸವಿ ಮೇ ತಾ॥ ೧೫ ರಿಂದ ೧೯೧೧ನೇ ಮೇ ತಾ॥ ೨೧ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ವೈಶಾಖ ಬ॥ ಬಿದಿಗೆಯಿಂದ ವೈಶಾಖ ಬ॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೈಶಾಖ ತೇದಿ
15	ಸೋ	ಬಿ	19-19	ಜ್ಯೆ	14-95	26
16	ಮಂಗ	ತ	24-25	ಮೂ	51-38	27
17 (1)	ಬುಧ	ಚೌ	30-22	ಪೂಷಾ	57-32	28
18	ಗುರು	ಪಂ	33-37	ಉ॥ಷಾ	60-0	29
19	ಶುಕ್ರ	ಷ	36-53	ಉ॥ಷಾ	2-53	30
20	ಶನಿ	ಸ	38-58	ಶ್ರ	7-14	31
21	ಭಾನು	ಅ	40-53	ಧ	10-14	1

(1) ಕಂಚಿ ವರದರಾಜಸ್ವಾಮಿ ರಥ॥ ಮಾರಹಳ್ಳಿ ನರಸಿಂಹಸ್ವಾಮಿ ರಥ॥

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED 24

ಮೈಸೂರ್ ✱ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಕ್ಷಕೃತಾವತಾರಾ ಪಶ್ಯಜ್ಜನೈಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತಿ ಶ್ರೀಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೮ | ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಮೇ ತಾರೀಖು ೨೨ ನೇ ಸೋಮವಾರ. [ಸಂಚಿಕೆ ೨೧

ಹಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

7

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೊಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವಾಯು, ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೮-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪೋರಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರೆ, ಹಲ್ಲುಗಳ ಜಾಳೆ, ಇಸುಗೂಡಿ ಹೊಲ್ಲುರಿಯುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವದು ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ಕ್ಕೆ ೬ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ೧ಕ್ಕೆ ರೂ. ೧ ಗಿಷ್ಟಿ ಮೊದಲಾದವಕ್ಕೆ ಸವರುವ ಡಬ್ಬಿ ೧ಕ್ಕೆ ಆ. ೪. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕು ಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ಕ್ಕೆ ೨ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ ಬಿಲ್ಲ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಹಾಕಲ್ಪಡುವುದು.

ಸುಲಭಕ್ರಯ! ಖಾತರಿವಾಲ್ !! ಬಿಡಬೇಡಿರಿ!!!

4

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನುಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ॥ ೧ಕ್ಕೆ	೬	ಕಸ್ತೂರಿ ಬಿಲ್ಲೆ ತೊ॥ ೧ಕ್ಕೆ	೨
೨ ಅಂಬರ್‌ಬತ್ತಿ ಸೇ॥ ೧ಕ್ಕೆ	೪	ಜವಾಜಿ ಬಿಲ್ಲೆ ತೊ॥ ೧ಕ್ಕೆ	೧
ಕಸ್ತೂರಿ ಬತ್ತಿ ಸೇ॥ ೧ಕ್ಕೆ	೨॥	ಅರಗಜ ೩ ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೇ॥ ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ ೧ಕ್ಕೆ	।
ಗುಲಾಬ್ ಬತ್ತಿ ಸೇ॥ ೧ಕ್ಕೆ	॥	ಸುರಂಗಿ ಸೆಂಟ್ ಸಿ ೧ಕ್ಕೆ	೧
ನಕ್ಷತ್ರಕಾಂತಿಬ॥ ಸೇ॥ ೧ಕ್ಕೆ	೧	ಸ್ವದೇಶಿ ಘೀ ಪೌ॥ ಡ॥ ೧ಕ್ಕೆ	।
ಕಾಶ್ಮೀರ್‌ಕೇಸ್ರಿ ತೊ॥ ೧ಕ್ಕೆ	೧	ಪಚ್ಚಕರ್ಪೂರ ತೊ॥ ೧ಕ್ಕೆ	।॥

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದುಬತ್ತಿಗಳೂ, ತಲೆಗೆಹಚ್ಚುವ ಹೆಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರಕುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂ ದೊರೆಯದು.

ಎ. ಆರ್. ಸುಬ್ಬಾಚಿಟ್ಟಪ್ಪ.
ಕೃಷ್ಣರಾಜಮೊಹಲ್ಲಾ ಮೈಸೂರು.

ಇಲ್ಲಿನೋಡಿ ವಿಶೇಷಸೂಚನೆಗಳು!

2

ಕಾಶೀವಿಶ್ವೇಶ್ವರಪ್ರಸನ್ನ.

RASM VISHWESHWAR
S.N.U. & Co
BENARES CITY

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಉಡುವ ಮಡಿ ಯಾವದು? ಕಾಶಿಪಟ್ಟೆ ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ಸೈನ್‌ಅಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!! ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೆಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಅನೇಕತರದ ಅತ್ತರುಗಳು, ಇನ್ನೂ ಅನೇಕತರದ ಪಟಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟಲಾಗ್ ೧ ಕಾಶೀಪಟ. ೪ ಸಾದಾಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರೆಸ್‌ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಸಿರುವ ವಿಳಾಸಕ್ಕೆ ಕಳಿಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—
ಯಸ್. ಉಡುಪಿನಾರಾಯಣಾಚಾರ್ಯ ಅಂಡ್‌ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayenacharya & Co.
Benares City.

3

ಅಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೋಪ್‌ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ROSKOPF
SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕೆಟ್ಟಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

MOTORREGULATOR
LEVER
SWISS MADE

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು [illegible] ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 3-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಪ್ರೋಲಿದಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಸಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

15

ಉತ್ತಮ ಗ್ರಂಥಗಳು.

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೮-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೀರಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.—ಬೆಲೆ ವಿ.ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವೇಶ್ವರ ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಸ್ವಲ್ಪ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೮-೦ರೂ. ಆಗುತ್ತದೆ. ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರೂ. ಕೊಡಬೇಕಾಗುತ್ತೆ. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ೧೦೦ ಕ್ಕೂ ೦-೪-೦ ಆಣೆ ಯಂತೆ ಕಳುಹಬೇಕು. ಸ್ವಲ್ಪಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನು ಪಾರ್ಸಲ್ಲಿನವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದಲ್ಲಿ ೧-೨-೦ ರೂ. ಅನ್ನು ಹೆಚ್ಚಾಗಿ ಕೊಡಬೇಕು. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್ ಪ್ರೆಸ್, ಮೈಸೂರ್.

ಉತ್ತಮ ಗ್ರಂಥಗಳು.

118

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೮-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೦-೪-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೨-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦.— ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ — ೦-೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೩ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೩ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸರೋಜ ದೀಕ್ಷಾವಿಧಿ.— ೧೦ ಆಣೆ. ಪ್ರಾಣಾಯಾಮ ನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ,
ಮೈಸೂರು.

೧೯೧೧ನೇ ಇಸವಿ ಮೇ ತಾ|| ೧೫ರಿಂದ ೧೯೧೧ನೇ ಮೇ ತಾ|| ೨೧ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ವೈಶಾಖ ಬ|| ಬಿದಿಗೆಯಿಂದ ವೈಶಾಖ ಬ|| ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಡಿ
15	ಸೋ	ಬಿ	19-19	ಜ್ಯೇ	44-95	26
16	ಮಂಗ	ತ	24-25	ಮೂ	51-38	27
17	¹ ಬುಧ	ಚ	30-22	ಪೂಷಾ	57-32	28
18	ಗುರು	ಪಂ	33-37	ಉ|ಷಾ	60 0	29
19	ಶುಕ್ರ	ಷ	36-53	ಉ|ಷಾ	2-53	30
20	ಶನಿ	ಸ	38-58	ಶ್ರ	7-14	31
21	ಭಾನು	ಅ	40-53	ಧ	10-14	1

(1) ಕಂಚಿ ವರದರಾಜಸ್ವಾಮಿ ರಥ. ಮಾರಹಳ್ಳಿ ನರಸಿಂಹಸ್ವಾಮಿ ರಥ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

---

24 REGISTERED

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಿಷ್ಟನ್ನಿಹೃತ್ತಮೋಹರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತಿಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೮] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಮೇ ತಾರೀಖು ೨೨ ನೇ ಸೋಮವಾರ. [ಸಂಚಿಕೆ ೨೧

ಕಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

7

ಲೋಕಾಮಯಾಪಹ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲಿ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

೨. ಛಾವನಾ ಜೀರಕ ರಸಾಯನ.—ಪಿತ್ತವನ್ನೂ, ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರುಗಲು, ಬಾಯಿ ನೀರು, ಎದೆ ಉರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೮-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪೋರಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರು, ಹಲ್ಲುಗಳ ಪಾಚಿ, ಇಸುಗೂಡಿ ಜೊಲ್ಲು ಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ತಕ್ಕ ಜುಮ್ಮೆನ್ನುವದು ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೩ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ೧ ಕ್ಕೆ ರೂ. ೧ ಗಿಷ್ಟಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೦. ೪. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಂಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಂಕ್ತಿ ೧ ಕ್ಕೆ ೧|| ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗಿ ಅನುಕೂಲವಾಗಿ [illegible] ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸುಲಭಕ್ರಯ! ಖಾತರಿಮಾಲ್ !! ಬಿಡಬೇಡಿರಿ!!!

4

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ|| ೧ಕ್ಕೆ	೩	ಕಸ್ತೂರಿ ಬಿಲ್ಲೆ ತೊ|| ೧ಕ್ಕೆ	೨
೨ ಅಂಬರ್‌ಬತ್ತಿ ಸೇ|| ೧ಕ್ಕೆ	೪	ಜವಾಜಿ ಬಿಲ್ಲೆ ತೊ|| ೧ಕ್ಕೆ	೧
ಕಸ್ತೂರಿ ಬತ್ತಿ ಸೇ|| ೧ಕ್ಕೆ	೨||	ಅರಗಜ	ತೊ ಡಬ್ಬಿ ೧ಕ್ಕೆ		
ಪುನಗಿನ ಬತ್ತಿ ಸೇ|| ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ ೧ಕ್ಕೆ		
ಗುಲಾಬ್ ಬತ್ತಿ ಸೇ|| ೧ಕ್ಕೆ	||	ಸುರಂಗಿ ಸೆಂಟ್ ಸಿ ೧ಕ್ಕೆ	೧
ನಕ್ಷತ್ರಕಾಂತಿಬ|| ಸೇ|| ೧ಕ್ಕೆ	೧	ಸ್ವದೇಶಿ ಪೌ ಡ|| ೧ಕ್ಕೆ		
ಕಾಶ್ಮೀರ್‌ಕೇಸ್ರಿ ತೊ|| ೧ಕ್ಕೆ	೧	ಪಚ್ಚಕರ್ಪೂರ ತೊ|| ೧ಕ್ಕೆ	|||

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮೀಷನ್ ದೊರೆಯುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂ ದೊರೆಯಲಾರವು.

ಪಿ. ಆರ್. ಸುಬ್ಬಾಚಿಟ್ಟಪ್ಪ,
ಕೃಷ್ಣರಾಜಮೊಹಲ್ಲಾ, ಮೈಸೂರು.

ಇಲ್ಲಿನೋಡಿ ವಿಶೇಷ ಸೂಚನೆಗಳು!

2

ಕಾಶೀವಿಶ್ವೇಶ್ವರಪ್ರಸನ್ನ.

RASM VISHWESHWAR S.N.U. & CO BENARES CITY

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಉಡುವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್ ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!! ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಅನೇಕತರದ ಅತ್ತರುಗಳು, ಇನ್ನೂ ಅನೇಕತರದ ಪಟಗಳು, ಮತ್ತೈ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಖತ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟ್ಲಾಗ್ ೧ ಕಾಶೀಪಟ. ೪ ಸಾದಾ ಕಾರ್ಡ್, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರೆಸ್ ಕಾರ್ಡ್, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಸಿರುವ ವಿಳಾಸಕ್ಕೆ ಕಳಿಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—

ಯಸ್. ಉಡುಪಿನಾರಾಯಣಾಚಾರ್ಯ ಅಂಡ್ ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayanacharya & Co.
Benares City.

ಸೌಗಂಧಿಕಾಪರಿಣಯ

(ಕಳೆದವಾರದಶೇಷ.)

ಉಗ್ರಬಾಹುವು ತನ್ನ ಕೊಲವು ನಷ್ಟವಾದುದನ್ನೀಕ್ಷಿಸಿ ಖಿನ್ನನಾಗಿ, ಮಾಯಾವಿದ್ಯದಿಂ ನೃಪಮಂತ್ರಿಗಳಂ ಸಂಹರಿಸಲೆಳಸಿ, ಅದೃಶ್ಯನಾಗಿ ವ್ಯಾಘ್ರ, ಸಿಂಹ, ವರಾಹ, ಶರಭ, ಭೇರುಂಡ, ಸರ್ಪರೂಪಗಳಂ ತೋರಿಸುತ ನೃಪತಿಯ ರಥದಮೇಲೆ ಕವಿದು ಬರುವದನ್ನೀಕ್ಷಿಸಿ ಸುಮತಿಯು ಆ ರಾಕ್ಷಸನ ಮಾಯಾರೂಪಗಳಿಗೆ ಪ್ರತಿಕ್ರಿಯೆಗಳನ್ನಾಚರಿಸುತ್ತಿರಲಾಗ ಉಗ್ರಬಾಹುವು ತನ್ನ ಯತ್ನಸಾಗದೇ ಇರುವದಂ ತಿಳಿದು ನೃಪತಿಯಮೇಲೆ ವೃಕ್ಷಗಳಂ ಕಿತ್ತು ಹಾಕಿಯುತ ಶಿಲಾವರ್ಷಗಳಂ ವರ್ಷಿಸುತ, ಕ್ಷಣಮಾತ್ರ ಕಾಣಿಸಿಕೊಂಡು, ಹಾಗೆ ಅದೃಶ್ಯನಾಗುತಲಿರುವ ರಾಕ್ಷಸನಮೇಲೆ ಕೋಪ ಉಂಟಾಗಿ ನೃಪತಿಯು, ಈ ದುರಾತ್ಮನೊಡನೆ ಎಷ್ಟೊತ್ತು ಹೋರ್ಯಾಡುವದೆಂದು ಜಲವಂ ಸ್ಪರ್ಶಿಸಿ ಶುಚಿರ್ಭೂತನಾಗಿ, ಜಗದೀಶ್ವರಿಯನ್ನೆನದು ಅವರ ಪ್ರಸಾದದಿಂ ಲಬ್ಧವಾದ ಮಹಾಸ್ತ್ರವಂ ಸ್ಮರಿಸಿ, ಅಮೋಘವಾದ ಒಂದು ಮಹಾಶರವಂ ತೆಗೆದು ಧನುಸ್ಸಿನೋಳ್ ಹೂಡಿ ಶತ್ರುಗಳಾದ ರಾಕ್ಷಸರಂ ಸಂಹರಿಸಬೇಕೆಂದು ಪ್ರಾರ್ಥಿಸಿ, ಬಿಡಲಾಮಹಾಸ್ತ್ರವು ತ್ರಿಪುರಾಂತಕರ ಫಾಲಲೋಚನಾಗ್ನಿಯಂತೆ, ಮಹಾಜ್ವಾಲಾಮಾಲಾಯುಕ್ತವಾಗಿ, ಕೋಟಿಸಿಡಿಲುಗಳೆರಗಿದಂತೆ ಧ್ವನಿಗೈಯುತ ಹೊರಡಲದರ ರಭಸದಿಂ, ಕುಲಾಚಲಸಮೇತವಾದ ಭೂಭಾಗವೆಲ್ಲವೂ ಕಂಪಿಸುತ, ಸಮುದ್ರಗಳುಲ್ಲೋಲಕಲ್ಲೋಲವಾಗುತ, ತಾರಾಚಕ್ರಗಳು ಮೇರೆವಿಾರಿ ತಿರುಗುತ ಪ್ರಾಣಿಸಂಘಗಳುರಳಿ ನೆಲವಂ ಕಚ್ಚುತ, ನದೀತಟಾಕಜಲಗಳೆಲ್ಲವೂ ಶೋಷಿಸುತ್ತಿರುವದನ್ನೀಕ್ಷಿಸಿ, ಅಂತರಿಕ್ಷಗತರಾದ ಸಿದ್ಧವಿದ್ಯಾಧರರು ಇದೇನೆಂದು ವಿಸ್ಮಯಪಡುತ್ತಿರಲಾಗ ಮಹಾಸ್ತ್ರವು ಸೋಂಕಿದಮಾತ್ರದಿಂ ರಾಕ್ಷಸಾಧಿಪತಿಯಾದ ಉಗ್ರಬಾಹು ದಗ್ಧನಾಗಿ ರಾಕ್ಷಸಸಂಘಸಮೇತವಾದ ಆ ಪುರವೂ ಕೂಡ ಉರಿದು ಉಡುಗಿಪೋಗಲು ಅದನ್ನೀಕ್ಷಿಸಿ ಸುಗಂಧರಾಯನು ಇನ್ನು ವಿಳಂಬವಂ ಮಾಡಿದರೆ ಈ ಮಹಾಸ್ತ್ರವು ಪಾತಾಳಲೋಕವಂ ದಹಿಸುವದೆಂದು ತಿಳಿದು ತ್ವರಿತದಿಂದದಂ ಉಪಸಂಹಾರಮಾಡಿ ಈಗಿನ ಭೂಭಾರವು ನಿವೃತ್ತವಾಯಿತೆಂದರಿತು ಭಸ್ಮಭೂತವಾದ ಆ ಪುರವನೋಡುತ, ಸುಮತಿ ಛಾಯಾಗುಪ್ತರಿಂದೊಡಗೂಡಿ ಮೊದಲಿನಂತೆ ಸುಪ್ರಭಾನದೀತೀರವಂಸೇರಿ, ಕವಚವಂ ಸಡಲಿಸಿ, ಆ ಸುಪ್ರಭಾನದೀ ಜಲದಲ್ಲಿ ಸ್ನಾನವಂಮಾಡಿ ಬಳಿಕ ವಿಶ್ರಮಿಸಿಕೊಳ್ಳುತ ಛಾಯಾಗುಪ್ತನಂ ಕರೆದು ಎಲೈ ಯಕ್ಷಾಧಿಪತಿಯೇ ಮಹಾಗಜದ ಯೋಗಕ್ಷೇಮವು ಎಂತಿರುವುದು? ಮತ್ತೂ ಈ ಪುರದಲ್ಲಿ ಏನುಳಿದಿರುವದು? ಅದನ್ನೆಲ್ಲವಂ ತಿಳಿದುಬಂದು ಪೇಳುವವನಾಗೆನಲಾ ಯಕ್ಷನು ಮಹಾಪ್ರಸಾದವೆಂದು ಅಲ್ಲಿಂದ ತೆರಳಿ, ಅಸ್ತ್ರಜ್ವಾಲೆಯಿಂದ ಪುರದಸುತ್ತಲೂ ಇರುವ ಉದ್ಯಾನವನಗಳು ಕೆಲವೆಡೆಯೋಳ್ ಭಸ್ಮವಾಗಿ, ಕೆಲವೆಡೆಯೋಳ್ ಇದ್ದಲಾಗಿ, ಕೆಲವೆಡೆಯೋಳ್ ಎಲೆಗಳೆಲ್ಲ ಕಂದಿಹೋಗಿ ವೃಕ್ಷಮಾತ್ರ ಉಳಿದರುವದಂ ಮತ್ತಮಲ್ಲಲ್ಲಿ ನಾನಾ ವಿಕಾರರಾದ ರಾಕ್ಷಸರು ಉರುಳಿಬಿದ್ದಿರುವದಂ ಕೂಡಾ ನೋಡುತ, ಹೆಣ್ಣಾನೆ ಹಿಂಡುಗಳು ಮಹಾಸ್ತ್ರಶಬ್ದದಿಂ ಗತಪ್ರಾಣಗಳಾಗಿ ಬಿದ್ದಿರುವದನ್ನೀಕ್ಷಿಸಿ ಮಹಾಗಜದ ಯೋಗಕ್ಷೇಮವೆಂತಿರುವದೋ ಎಂದು ಚಿಂತಿಸುತ ಮುಂದೆ ತೆರಳಿ ಇಕ್ಷುವನಕ್ಕೆಪೋಗಿ, ಅಲ್ಲಿ ಏಕಾಕಿಯಾಗಿ ವ್ಯಸನಪಡುತ, ಕರಿಣಿಗಳ ವಿಯೋಗದಿಂ ಕಂಬನಿದುಂಬುತ, ತನಿಗೆ ಬಾಲಕರ್ಯಾರೆಂದು ನಾಲ್ಕು ದಿಕ್ಕುಗಳನ್ನೀಕ್ಷಿಸುತ, ಗ್ರಾಸದಲ್ಲಿ ಉಪೇಕ್ಷೆಯಂ ಮಾಡುತಲಿರುವ ಮಹಾ ಗಜವನ್ನೀಕ್ಷಿಸಿ ದೈವಯೋಗದಿಂ ಜೀವಿಸಿಕೊಂಡಿರುವದೆಂದು ತಿಳಿದು ಅಚ್ಚರಿಪಡುತ, ಅಲ್ಲಿಂದ ಹೊರಟು ವಿಮಲಪುರಿಯನ್ನೈದಿ, ಆಸ್ಥಾನ, ಅರಮನೆ ಮುಂತಾದ್ದೆಲ್ಲವೂ ಭಸ್ಮವಾಗಿರುವದನ್ನೀಕ್ಷಿಸುತ ಕೋಶಗೃಹದಬಳಿಗೆ ಬಂದು ಅಸ್ತ್ರಘಾತದಿಂ ಬಿದ್ದಿರುವ ಕೋಶಗೃಹವನ್ನೀಕ್ಷಿಸಿ, ಇಲ್ಲಿ ವಿಶೇಷವೇನಿರುವದೆಂದು ಕಾಲಿನಿಂ ಕೆದಕಿ ಅಲ್ಲಿಸಿಕ್ಕಿದ ರತ್ನಗಳಂ ತೆಗೆದುಕೊಂಡು ರಾಯನಿದ್ದೆಡೆಗೆ ಬಂದು ಕೈಮುಗಿದು, ಎಲೈ ರಾಜಶಿರೋಮಣಿಯೇ! ಮಹಾಗಜವು ಕ್ಷೇಮದಿಂದಿರುವದು. ರಾಕ್ಷಸನ ಕೋಶಗೃಹವು ಉರುಳಿಬಿದ್ದುದರಿಂದ ಅಸ್ತ್ರಜ್ವಾಲೆಗೆ ತಗಲದೆ ಈ ರತ್ನಗಳು ಉಳಿದಿದ್ದವೆಂದು ರಾಯನ ಮುಂದಿರಿಸಲದನ್ನೀಕ್ಷಿಸಿ ರಾಯನು, ಈ ರತ್ನಗಳು ಅಮೂಲ್ಯವಾದುದರಿಂದ ದೇವತಾರ್ಹಂಗಳು ಎಂದು ಭಾವಿಸಿ ನಿನ್ನ ವಶದಲ್ಲಿರಲೆಂದು ಆ ರತ್ನಗಳಂ ಆ ಯಕ್ಷಾಧೀಶನ ಕೈಯಲ್ಲಿ ಕೊಟ್ಟು, ಆ ಮಾರನೆದಿವ ಉಗ್ರಬಾಹುವು ನಷ್ಟನಾದುದಂ ತಿಳಿದು ಅಲ್ಲಲ್ಲಿ ಪುರವಂ ರಚಿಸಿಕೊಂಡು ವಾಸಗೊಂಡಿದ್ದ ರಕ್ಕಸರೆಲ್ಲರೂ ಪಾತಾಳವಂ ಕುರಿತು ಪಲಾಯನಂಗೈಯಲಾದ್ವೀಪವೆಲ್ಲವು ಆತಂಕರಹಿತವಾಗಿ, ಪ್ರಜೆಗಳೆಲ್ಲರೂ ಸಂತೋಷಪಡುತ್ತಿರಲು, ಇದೆಲ್ಲವಂ ತಿಳಿದ ಅಲ್ಲಿಯ ಪೂರ್ವೀಕರಾದ ಅರಸುಗಳು ಈ ರಾಯನಂ ಅವತಾರಪುರುಷನೆಂದರಿತು, ತಮ್ಮಲ್ಲಿರುವ ವಸ್ತುಗಳಂ ತೆಗೆದುಕೊಂಡು ಬಂದು ರಾಯನಂಕಂಡು ಅಭಿವಂದಿಸಿ, ಕೈಕಾಣಿಕೆಗಳಂ ಒಪ್ಪಿಸಿ, ತಮ್ಮ ವೃತ್ತಾಂತವೆಲ್ಲವಂ ಹೇಳಿಕೊಳ್ಳುತ್ತಿರಲವರಂ ರಾಯನು ಸಮ್ಮಾನದಿಂಕಂಡು ಅವರಂ ಕುರಿತು ಮೊದಲಿನಂತೆ ನಿಮ್ಮ ನಿಮ್ಮ ರಾಜ್ಯಗಳನ್ನಾಳುತ, ನಾವು ಹೇಳಕಳುಹಿದಾಗ ನಿಮ್ಮ ಬಳಿಯಲ್ಲಿರುವ ವಿಶೇಷವಸ್ತುಗಳಂ ಕಳುಹುವರಾಗಿ ಎಂದು ನಿಯಮಿಸಲರಸುಗಳೆಲ್ಲರೂ ಅತಿಸಂಭ್ರಮದಿಂ ರಾಯನಂ ಬಿಟ್ಟು ಪೋಗಲಾರದೆ ಆ ನದೀತೀರದಲ್ಲಿಯೇ ಇರಲು, ಆ ಮಾರನೇದಿನ ಸುಗಂಧರಾಯನು ಸುಮತಿಛಾಯಾಗುಪ್ತರೊಡಗೂಡಿ ಗಜವಿದ್ದೆಡೆಗೆ ಬಂದು, ಸುಮತಿಯನ್ನೀಕ್ಷಿಸಿ ಈ ಗಜವು ವಶವಾಗುವದಕ್ಕೆ ಉಪಾಯವೇನೆಂದು ಪೇಳಲು ಸುಮತಿಯು ತನ್ನ ಮನದೊಳ್ ಪೂರ್ವದಲ್ಲಿ ಉಗ್ರಬಾಹುವು ತನ್ನ ರಾಕ್ಷಸರೂಪವಂ ಮರೆಮಾಡಿ ಸೌಮ್ಯರೂಪವಂ ಧರಿಸಿದ್ದರಿಂ ಈ ಗಜವು ಅವನಿಗೆ ಸ್ವಾಧೀನವಾಗಿರಬಹುದು. ಆ ಸೌಮ್ಯರೂಪದಿಂದಲೇ ನಮ್ಮೊಡನೆ ಸಭೆಯಲ್ಲಿ ಸಂವಾದವಂ ಮಾಡುತ್ತಿದ್ದರು. ಆಗ ಅವರ ರೂಪವೂ, ನಮ್ಮರಾಯರರೂಪವೂ ಬಿಂಬ ಪ್ರತಿಬಿಂಬಗಳಂತೆ ಏಕರೂಪವಾಗಿ ಇದ್ದುದಾದ್ದರಿಂ ಈ ರಾಯರು ಗಜದ ಪುರೋಭಾಗದಲ್ಲಿ ನಿಂತರೆ ಗಜವು, ತಾನೇ ಸ್ವಾಧೀನವಾಗುವದೆಂದು ಆಲೋಚಿಸಿ, ರಾಯರಂ ಕುರಿತು ಎಲೈ ರಾಯನೇ! ನಿನ್ನ ಗುಣಕ್ಕೆ ಯಾವದುತಾನೇ ಸ್ವಾಧೀನವಾಗಲಾಗದು? ನೀನು ಈ ಐರಾವತದ ಪುರೋಭಾಗದಲ್ಲಿ ಹೋಗಿ ನಿಂತರೆ, ನಾಥರಿಲ್ಲದೆ ಕರಿಣೀ ನಿಕರಗಳ ವಿಯೋಗದಿಂ ಕ್ಲೇಶಪಡುತಲಿರುವ ಈ ಗಜವು ಸ್ವಾಧೀನವಾಗುವದೆಂದು ಬಿನ್ನವಿಸಲು, ಅದಂ ಕೇಳಿ ರಾಯನು ಗಜದಮುಂದುಗಡೆ ಹೋಗ್ನಿಲ್ಲಲು, ಅವನನ್ನೀಕ್ಷಿಸಿ ಆ ಮಹಾಗಜವು, ಮೊದಲಿನಂತೆ ತನ್ನ ಒಡೆಯನು ಬಂದನೆಂದು ತಿಳಿದು ಸೊಂಡಿಲಂ ಸಿರದೊಳಿಟ್ಟು ಅಭಿವಂದಿಸಿ ಕಂಬನಿದುಂಬಲು, ಆಗ ಸುಮತಿಯು ಮಹಾಗಜವಂ ಪ್ರಸಾದಗೊಳಿಸುವ ಇರಾವತೀಸೂಕ್ತವಂ ಪಠಿಸಿ ಮೈದಡವುತ್ತಿರಲು, ಅದಕ್ಕೆ ಪ್ರಸನ್ನವಾಗಿ ಆ ಮಹಾಗಜವು ಸೊಂಡಿಲಿನ ಕೊನೆಯಿಂದ ಸುಮತಿಯಂ ತಡವುತ ಬಾರೆಂದು ಕರೆದರೆ ಸಂಗಡಪೋಗುತ, ಗ್ರಾಸವಂಕೊಟ್ಟರೆ ಗ್ರಹಿಸುತ, ಇಚ್ಛಾನುಸಾರವಾಗಿ ನಡೆಯುತಲಿರುವದಂ ಕಂಡು, ವಶವಾಯಿತೆಂದರಿತು ರಾಜಮಂತ್ರಿಗಳೀರ್ವರೂ ಪ್ರದಕ್ಷಿಣವಾಗಿ ಬರುತ್ತಿರಲು,

(ಸಶೇಷ.)

ಗ್ರಂಥವಿಮರ್ಶೆ.

ಉನ್ಮತ್ತೆ.

ಬಂಗಾಳಾದಲ್ಲಿ ಪ್ರಸಿದ್ಧ ವಿದ್ವಾಂಸರಾದ ಮೆ॥ ಮನ್ಮಥನಾಥದತ್ತ, ಎಂ. ಎ., ಯವರು "ವೀರರಮಣಿಯರು" ಎಂಬ ಹೆಸರಿನಿಂದ ಆಂಗ್ಲಭಾಷೆಯಲ್ಲಿ ರಚಿಸಿರುವ ಬಹು ಸ್ವಾರಸ್ಯವಾದ ಕಥೆಗಳಲ್ಲೊಂದಾದ ಈ ಉನ್ಮತ್ತೆಯ ಕಥೆಯನ್ನು ರಾಜಧಾನಿಯ ನಾರ್ಮಲ್ ಸ್ಕೂಲಿನ ಸಹಾಯೋಪಾಧ್ಯಾಯರಾದ ಮ॥ ಜಿ. ಕೃಷ್ಣಶಾಸ್ತ್ರಿಯವರು ಕನ್ನಡಭಾಷೆಯಲ್ಲಿ ರಚಿಸಿರುವರು. ಈ ಚಿಕ್ಕಪುಸ್ತಕವು ಕ್ರೌನ್ ಅಷ್ಟಪತ್ರಾಕೃತಿಯಲ್ಲಿ ಸ್ವಚ್ಛವಾದ ಕಾಗದದ ಮೇಲೆ ಬಹು ಸುಂದರವಾಗಿ ಕ್ರೌನ್ ಪ್ರೆಸ್ಸಿನವರಿಂದ ಮುದ್ರಿಸಲ್ಪಟ್ಟಿರುವುದು. ಈ ಗ್ರಂಥರಚನೆಯ ಶೈಲಿಯನ್ನು ಮತ್ತೂ ಕಥಾ ಸ್ವಾರಸ್ಯವನ್ನು ತಿಳಿಯುವ ಬಗೆಗೆ ಒಂದು ಭಾಗವನ್ನು ಈ ಕೆಳಗೆ ಉದ್ಧರಿಸಿದ್ದೇವೆ.—

ಉನ್ಮತ್ತೆ.

ಉನ್ಮತ್ತೆಯು ಮೊದಲಿನಿಂದಲೂ ಉನ್ಮತ್ತಳಾಗಿರಲಿಲ್ಲ; ಅಂದರೆ ಹುಟ್ಟು ಹುಚ್ಚಿಯಾಗಿರಲಿಲ್ಲ. ನವಯೌವನದ ವಸಂತಕಾಲದಲ್ಲಿ ಈಕೆಗೆ ಈ ಅವಸ್ಥೆಯು ಪ್ರಾಪ್ತವಾಯಿತು. ಮನುಷ್ಯಮಾತ್ರಕ್ಕೂ ಅವರವರ ಪೂರ್ವಕರ್ಮಾನುಸಾರವಾಗಿ ತಮ್ಮತಮ್ಮ ಜೀವಿತಕಾಲದಲ್ಲಿ ನಾನಾ ಅವಸ್ಥೆಗಳು ಬಂದು ಒದಗುವುವು. ಅಂತಹ ಭಿನ್ನಭಿನ್ನಾವಸ್ಥೆಗಳಿಗೆ ಪ್ರಾಚೀನಕರ್ಮಗಳೇ ಕಾರಣವೆಂದು ಹೇಳುವುದು ನಮ್ಮ ಹಿಂದೂ ತತ್ವಜ್ಞಾನಿಗಳ ಮತ. ಅದರೂ ಪ್ರಪಂಚದ ನಡೆವಳಿಕೆಯಲ್ಲಿ ಪ್ರತಿಯೊಂದು ವಿಷಯಕ್ಕೂ ಏನಾದರೊಂದು ಹೊರಗಿನ ಕಾರಣವೂ ತೋರುವುದು ಸಹಜವಾಗಿದೆ.

ಹಾಗಾದರೆ ಪ್ರಕೃತದಲ್ಲಿ ನಮ್ಮ ಉನ್ಮತ್ತೆಗೆ ಏತಕ್ಕೆ ಹುಚ್ಚು ಹಿಡಿಯಿತೆಂಬುದನ್ನು ವಿಚಾರಮಾಡೋಣ. ಇದಕ್ಕೆ ಮೊದಲು ಆಕೆಯ ಜನ್ಮಭೂಮಿಯಾದ ಬಂಗಾಳದೇಶದ ಆಗಿನ ಕಾಲಸ್ಥಿತಿಯನ್ನು ಸ್ವಲ್ಪ ತಿಳಿಯಬೇಕಾಗಿರುವುದು. ಆ ಕಾಲವು ನಮ್ಮ ಭಾರತವಂಶೋದ್ಧಾರಕರಾದ ನಳ ಹರಿಶ್ಚಂದ್ರಾದಿಗಳಂತಹವರ ಸತ್ಯಕಾಲವಂತು ಅಲ್ಲವೇ ಅಲ್ಲ. ಈಗಿನಂತೆ ಇಂಗ್ಲೀಷರ ರಾಮರಾಜ್ಯದ ಕಾಲವೂ ಅಲ್ಲ. ಅಥವಾ ಮಹಮ್ಮದೀಯರಲ್ಲಿ ಮೇಲೆನಿಸಿಕೊಂಡಿದ್ದ ಅಕ್ಬರನಂತಹ ಸತ್ಪುರುಷನ ಕಾಲವೂ ಅಲ್ಲ. ಅದು ನವಾಬ ಸಿರಾಜುದ್ದೌಲನ ಕಾಲ. ಆಗ ನವಾಬನು ಇಪ್ಪತ್ತು ವರ್ಷದ ಚಿಕ್ಕವಯಸ್ಸಿನವನು. ಬಾಲ್ಯದಿಂದ ಅತ್ಯಂತ ಭೋಗದಲ್ಲಿ ಸ್ವೇಚ್ಛೆಯಾಗಿ ಬೆಳೆದವನು. ಇವನ ತಾತನಾದ ಅಲಿವರ್ದೀಖಾನನು ವಿಶೇಷವಾಗಿ ಲಾಲಿಸಿ ಇವನ ಏಳಿಗೆಗೆ ಕಲ್ಲುಹಾಕಿದ್ದನು. ಅಲ್ಲದೆ ಸಿರಾಜನು ತನ್ನ ರಾಜಧಾನಿಯಾದ ಮುರ್ಷಿದಾಬಾದಿನಲ್ಲಿ ಸತ್ಪುರುಷರ ಸಂಗಡ ಸಂಭಾಷಣೆಗೆ ಕೂಡ ಅಯೋಗ್ಯರೆನಿಸಿಕೊಂಡಿದ್ದ ನೀಚರಜತೆಗೆಬೇರೆ ಸೇರಿ ಕೆಟ್ಟುಹೋಗಿದ್ದನು. ಇವನೂ ಮತ್ತು ಇವನ ಸಂಗಾತಿಗಳೂ ಹಲವುಬಗೆಯಾದ ದುಷ್ಕೃತ್ಯಗಳನ್ನು ಮಾಡತೊಡಗಿದರು. ಅನೇಕರ ದಾಂಪತ್ಯವನ್ನು ಅಗಲಿಸಿ ಸಂಸಾರಗಳನ್ನು ಧ್ವಂಸಮಾಡಿದರು. ಅನೇಕ ಕುಲರಮಣಿಯರನ್ನು ಹಾರಿಸಿಕೊಂಡು ಹೋಗಿ ಅವರ ಪತಿಗಳಿಗೂ, ತಾಯ್ತಂದೆಗಳಿಗೂ, ಅಣ್ಣತಮ್ಮಂದಿರಿಗೂ ಅಪಾರವಾದ ಅಪಮಾನವನ್ನೂ, ದುಃಖವನ್ನೂ ಉಂಟುಮಾಡಿ ಅವರನ್ನು ವಿಷಪಾನಕ್ಕೆ ಗುರಿಮಾಡಿದರು. ಎಷ್ಟು ಹೇಳಿದರೇನು! ಈ ವ್ಯಭಿಚಾರಿಯಾದ ಮಹಾಪಾಪಿಯು ಆಳಿದ್ದೆಲ್ಲ ಮೂರುಮುಕ್ಕಾಲು ವರುಷವೇ ಆದರೂ ಆ ಕಾಲವು ಸ್ತ್ರೀಜಾತಿಯ ಮರ್ಯಾದೆಗೆ ಕಂಟಕಪ್ರಾಯವಾಗಿದ್ದಿತು. ಇವನು ಕಡೆಗೆ ಅತ್ಯಂತ ಶೂರರಾದ ತನ್ನ ಸರದಾರರ ಮನೆಯವರನ್ನು ಕೂಡ ಬಿಡುತ್ತಿರಲಿಲ್ಲ. ಅವರ ಪುತ್ರಿಯರು ಅಥವಾ ಸಹೋದರಿಯರು ಸುಂದರಿಯರಾಗಿದ್ದರೆ ಅವರನ್ನು ತಂದು ತನಗೆ ಒಪ್ಪಿಸಲೇಬೇಕೆಂದು ಬಲಾತ್ಕರಿಸುತ್ತಿದ್ದನು. ಹಾಗೆ ಮಾಡಲು ಸಾಧ್ಯವಿಲ್ಲದ ಕಡೆ ದುರುಳರಾದ ಮೋಸಗಾರರ ಮೂಲಕ ದುರಾಲೋಚನೆಗಳನ್ನುಂಟುಮಾಡಿ, ಏನೂ ತಿಳಿಯದ ಮೃದುಹೃದಯೆಯರಾದ ಮಹಿಳೆಯರನ್ನು ಮರುಳುಮಾಡಿಸಿಯಾದರೂ ಅವರನ್ನು ಸತ್ಕುಲಕಳಂಕಿನಿಯರನ್ನಾಗಿ ಮಾಡುತ್ತಿದ್ದನು.

ಆಗ ಮುರ್ಷಿದಾಬಾದಿನ ಜಗತ್ಸೇಟರೆಂಬ ಮನೆತನದವರು ಬಹಳ ಧನಿಕರಾಗಿ ಇಂಡಿಯಾದಲ್ಲೆಲ್ಲಾ ಕುಬೇರರೆನಿಸಿಕೊಂಡಿದ್ದರು. ಎಲ್ಲೆಲ್ಲಿಯೂ ಅವರ ಬ್ಯಾಂಕುಗಳು ಹರಡಿದ್ದವು. ಅಷ್ಟೇಕೆ? ಈ ನಮ್ಮ ಭಾರತಭೂಮಿಯಲ್ಲಿ ಜಗತ್ಸೇಟರ ಒಂದು ಸಣ್ಣ ಬ್ಯಾಂಕಾಗಲಿ ಅವರ ಏಜಂಟರಾಗಲಿ ಇಲ್ಲದ ಗ್ರಾಮವೇ ಇರಲಿಲ್ಲವೆನ್ನಬಹುದು. ಪರಾಕ್ರಮಶಾಲಿಗಳಾದ ಎಷ್ಟೋ ಪಾಳೇಗಾರರು ಮತ್ತು ರಾಜರು ಕೂಡ ಅವರಿಗೆ ಸಾಲಗಾರರಾಗಿದ್ದರು. ಅಖಂಡಮಂಡಲಾಧಿಪತಿಯಾದ ಡೆಲ್ಲಿಯ ಚಕ್ರವರ್ತಿಯು ಕೂಡ ಅನೇಕವೇಳೆ ಆ ಜಗತ್ಸೇಟರ ಮನೆಯ ಬಾಗಿಲಿಗೆ ಬಂದು ಸಾಲವನ್ನು ತೆಗೆದುಕೊಂಡು ಹೋಗಬೇಕಾಗಿದ್ದಿತು. ಮರಾಟಿಯವರು ಬಂಗಾಳಕ್ಕೆ ಬಂದು ಲೂಟಿಮಾಡಿದಾಗ ಉಂಟಾದ ಕೋಟ್ಯಂತರ ದ್ರವ್ಯನಷ್ಟವೂ ಆ ಜಗತ್ಸೇಟುಗಳಿಗೆ ತೃಣಗಣಾಯಮಾನವವಾಗಿತ್ತು. ಹೀಗಿರುವಲ್ಲ ಈ ಸೇಟುಗಳು ಇಂಡಿಯಾದಲ್ಲಿ ಎಷ್ಟು ಕೋಟ್ಯಧೀಶ್ವರರಾಗಿ ಎಷ್ಟು ಮರ್ಯಾದೆಯುಳ್ಳವರಾಗಿ ಇದ್ದರೋ ನೀವೇ ಊಹಿಸಿನೋಡಿ!

ಸಿರಾಜನು ಸಿಂಹಾಸನವನ್ನು ಏರಿದಾಗ ಮಹತಾಬಚಂದನೆಂಬಾತನು ಜಗತ್ಸೇಟರುಗಳಿಗೆಲ್ಲ ಯಜಮಾನನಾಗಿದ್ದನು. ಆತನಿಗೆ ಅತ್ಯಂತ ಸುಂದರಿಯಾದ ಅಸಾಮಾನ್ಯೆಯೆಂಬ ಒಬ್ಬ ಮಗಳಿದ್ದಳು. ಪ್ರಾಯಶಃ ಆ ಮೂರ್ಷಿದಾಬಾದಿನಲ್ಲಿಲ್ಲ ಮಹತಾಬಚಂದನ ಕುಮಾರಿಯಂತಹ ರೂಪವತಿಯರು ಯಾರೂ ಇರಲಿಲ್ಲವೆನ್ನಬಹುದು. ನೀಚನಾದ ಸಿರಾಜನು ಅಸಾಮಾನ್ಯೆಯ ಅನ್ಯಾದೃಶವಾದ ಲಾವಣ್ಯಾತಿಶಯವನ್ನು ಕೇಳಿ, ದೀಪವನ್ನು ಮೋಹಿಸಿದ ಪತಂಗದಂತೆ ಜಗನ್ಮೋಹಿನಿಯಾದ ಈ ತರುಣೀಮಣಿಯನ್ನು ಬಯಸಿ ಮೋಹಪಿಶಾಚಗ್ರಸ್ತನಾದನು. ಆದರೆ ಆಕೆಯೇನು ಸಾಮಾನ್ಯಳೆ? ಹಿಂದೂಸ್ಥಾನದಲ್ಲೆಲ್ಲ ಲಕ್ಷ್ಮೀಪುತ್ರರೆಂದು ಜಗತ್ಪ್ರಸಿದ್ಧರಾದ ಜಗತ್ಸೇಟರಿಗೆ ಅಧೀಶ್ವರನೂ ಮಹಾ ಗೌರವಶಾಲಿಯೂ ಆದ ಆ ಮಹತಾಬಚಂದನ ಮುದ್ದುಮಗಳಾದ ಅಸಾಮಾನ್ಯೆಯೆಂಬ ಕುಲವಧುವಲ್ಲವೆ? ಹೀಗಿರುವಲ್ಲಿ ಈಕೆಯನ್ನು ತನ್ನ ವಶಪಡಿಸೆಂದು ಹೇಳುವುದಕ್ಕೆ ಕೂಡ ಆ ಹೇಡಿದುರುಳನಾದ ನವಾಬನಿಗೆ ಧೈರ್ಯವುಂಟೆ? ಆದರೂ ಮನುಷ್ಯನ ಮನೋವ್ಯಾಪಾರವು ನಿಸ್ಸೀಮವಾದುದು.

ಒಂದು ದಿನ ರಾತ್ರಿ ನವಾಬನು ಸ್ತ್ರೀವೇಷಧಾರಿಯಾಗಿ ಇಂದ್ರಭವನದಂತಿದ್ದ ಆ ಜಗತ್ಸೇಟಿನ ಅರಮನೆಗೆ ಪ್ರವೇಶಿಸಿದನು. ಹಾಗೆ ಹೊಕ್ಕು ಯಾವ ತಡೆಯೂ ಇಲ್ಲದೆ ಆ ಲೋಕೈಕ ಸುಂದರಿಯಾದ ಅಸಾಮಾನ್ಯೆಯಿದ್ದ ಸ್ಥಳದವರೆಗೂ ಹೋದನು. ಆ ಲಾವಣ್ಯವತಿಯನ್ನು ಕಂಡು ಮೆಚ್ಚಿ ಆನಂದಪಡುವಷ್ಟು ಮಾತ್ರ ಲಭಿಸಿದರೂ ಸಾಕೆಂದು ಅವನಿಗೆ ಉದ್ದೇಶವಿದ್ದಿತು. ಆದರೆ ಆ ಸೌಂದರ್ಯವು ಅಸಾಧಾರಣವಾದುದು. ಕೆಂದಾವರೆಯಂತೆ ಪ್ರಸನ್ನವಾದ ಗುಂಡುಮುಖ. ವೈಯಾರವಾದ ನೋಟವುಳ್ಳ ವಿಶಾಲನೇತ್ರ. ಮಲ್ಲಿಗೆಯ ಮೊಗ್ಗನ್ನು ಮೀರಿಸುವ ದಂತಕಾಂತಿ. ಕಂಬುದಂತಿರುವ ಕೊರಳು. ಬಳ್ಳಿಗಳಂತಿರುವ ತೋಳುಗಳು. ಸುವರ್ಣಾಭೆಯುಳ್ಳ ಸುಕುಮಾರಶರೀರ. ಉಂ! ಎಷ್ಟುಹೇಳಿದರೆ ತಾನೇ ಏನು? ನಾವು ಯಾವುದನ್ನು ಅತ್ಯುತ್ತಮವಾದ ಸೌಂದರ್ಯವೆಂದು ಕರೆಯುವೆವೋ ಅದೆಲ್ಲ ಆಕೆಯಲ್ಲಿ ಸಹಜವಾಗಿದ್ದಿತು. ಇಷ್ಟಕ್ಕೆಮೇಲೂ ಲೋಕಾನಂದಕ್ಕೆ ಪುಷ್ಟಿಯಾದ ನವಯೌವನ. ಇಂತಹ ಸ್ವಭಾವಸುಂದರಿಗೆ ಆಭರಣಗಳೇ ಅನಾವಶ್ಯಕ. ಆದರೂ ಲೋಕಾಚಾರಕ್ಕೆಂದೋ ಅಥವಾ ಸೌಮಂಗಲ್ಯದ ಮಂಗಳಕ್ಕಾಗಿಯೋ ಅಮೂಲ್ಯವಾದ ಕೆಲವು ರತ್ನಾಭರಣಗಳುಮಾತ್ರ ಆಕೆಯ ಮಂಗಳಾಂಗಗಳಲ್ಲಿ ಮೆರೆಯುತ್ತಿದ್ದವು. ಅದರಲ್ಲೂ ಕೆಂಪಿನ ಬೆಂಡೋಲೆ, ನಕ್ಷತ್ರವನ್ನಣಕಿಸುವ ವಜ್ರದ ಮೂಗುಬಟ್ಟು, ತುರುಬಿನಲ್ಲಿ ತಿರುಗಿಸಿಕೊಂಡಿದ್ದ ವೈಡೂರ್ಯದ ಜಡೆಹೂ, ಇವೆಲ್ಲ ಆ ರಾತ್ರಿ ದೇದೀಪ್ಯಮಾನಗಳಾದ ದೀಪರಾಜಿಗಳ ತೇಜೋರಾಶಿಯಲ್ಲಿ ಮೆಲ್ಮೆಯಿಂದ ಥಳಥಳಿಸುತ್ತಿದ್ದವು. ಆಕೆಯ ಅಂಗಭಂಗಿಯಿಂದ ಅಕಸ್ಮಾತ್ತಾಗಿ ಕಲಾಪತ್ತಿನ ಪೀತಾಂಬರದ ಸೆರಗನ್ನು ಸರಿಮಾಡಿಕೊಳ್ಳುವುದಕ್ಕೆ ಯತ್ನಿಸಿದಾಗೆಲ್ಲ ಕೈಬಳೆಗಳ ಘುಲ್‌ಘುಲ್‌ಧ್ವನಿಯೂ, ಥಟ್ಟನೆ ಸ್ಫುರಿಸುವ ರತ್ನಪ್ರಭೆಯೂ ಆ ವ್ಯಕ್ತಿಯನ್ನು ನೋಡಬಂದ ಎಂತಹ ಮನುಷ್ಯಮಾತ್ರದವನಿಗೂ ನೇತ್ರಶ್ರೋತ್ರಹೃದಯಾನಂದಕರವಾಗಿರುತ್ತಿದ್ದವು. ಸಿರಾಜನಾದರೊ ತಾನು ಹುಟ್ಟಿದಂದಿನಿಂದಲೂ ಅಂತಹ ಸುಂದರೀಮಣಿಯನ್ನು ಎಂದೂ ಎಲ್ಲಿಯೂ ನೋಡಿರಲಿಲ್ಲ. ಯಾವಾಗ ಆ ರತ್ನದ ಬೊಂಬೆಯ ಅವರ್ಣನೀಯವಾದ ರೂಪಾತಿಶಯವನ್ನು ರೆಪ್ಪೆಬಡಿಯದೆ ನೋಡುತ ನಿಂತನೋ ಆಗ ತನ್ನನ್ನೇ ತಾನು ಮರೆತುಬಿಟ್ಟನು. ತಾನು ಬಂದಿರುವ ಸ್ಥಳವು ಎಂತಹ ಗಂಡಾಂತರವುಳ್ಳದ್ದು ಎಂಬುದನ್ನೂ ತಿಳಿಯದೆ ತನ್ನ ನೀಚವೃತ್ತಿಗೆ ತಕ್ಕ ಚಾಪಲ್ಯಕ್ಕೆ ಒಳಪಟ್ಟು ಆ ಪತಿವ್ರತಾಶಿರೋಮಣಿಯ ಕಡೆಗೆ ತನ್ನ ಪಾಪಹಸ್ತವನ್ನು ಚಾಚಿದನು! ಅಹಾ! ಆ ಕುಲಪಾಲಿಕೆಯಾದ ಬಾಲಕಿಯು ಗಾಬರಿಗೊಂಡಳು. ಕಿಟ್ಟನೆ ಕಿರಿಚಿಕೊಂಡಳು. ಕಡೆಗೆ ಮೈಮೇಲೆ ಜ್ಞಾನಕೂಡ ಇಲ್ಲದೆ ತನ್ನ ಪ್ರಾಣಕಾಂತನಾದ ಇಂದುಸುಂದರನಿದ್ದ ಸ್ಥಳಕ್ಕೆ ಓಡಿಹೋಗಿ ನಡೆದ ಸಂಗತಿಯನ್ನೆಲ್ಲ ಏದುತ್ತ ಹೇಳಿದಳು. ಈ ಭಯಂಕರವಾದ ದುರ್ವಾರ್ತೆಯನ್ನು ಕೇಳಿದ ಕೂಡಲೆ ವೀರನಾದ ಆ ಪತಿಯು ಕೋಪೋದ್ರಿಕ್ತನಾಗಿ ಕಣ್ಣುಗಳಲ್ಲಿ ಕೆಂಡವನ್ನು ಸುರಿಸುತ್ತ ಓಡಿಬಂದು ಆ ಹೆಂಗುಸಿನವೇಷದ ಹೇಡಿನವಾಬನನ್ನು ಬೆನ್ನಟ್ಟಿಕೊಂಡುಹೋಗಿ ಕಡೆಗೆ ಹಿಡಿದೇಬಿಟ್ಟನು. ಆಗಲೂ ಆ ಖೂಳನು ಮನೆಯಿಂದ ಹೊರಗೆ ತಪ್ಪಿಸಿಕೊಂಡುಹೋಗಲು ಯತ್ನಿಸಿದನು. ಆದರೆ ಬಂಗಾಳ ಬಿಹಾರ ಒರಿಸ್ಸಾದೇಶಗಳ ಸಿಂಹಾಸನಾಧಿಪತಿಯಾದ ಒಬ್ಬ ಪ್ರಭುವಿಗೆ ಯಾವಶಿಕ್ಷೆಯು ಆಗಬಾರದೊ, ಭಾರತಮಹಿಳಾಪಾತಿವ್ರತ್ಯವು ಯಾವುದನ್ನು ಇನ್ನೂ ಸಾಲದೆಂದು ಅತೃಪ್ತಿಪಡುವುದೋ ಅಂತಹುದೊಂದು ಹೀನಾಯವಾದ ಶಿಕ್ಷೆಯನ್ನು ಸಿರಾಜನು ಅನುಭವಿಸಬೇಕಾಯಿತು. ಅಂದರೆ ಬಹಳದಿನಗಳಿಂದ ಅಸಾಮಾನ್ಯೆಯ ಪ್ರಾಣಕಾಂತನ ಸುಂದರಪಾದಾರವಿಂದಗಳನ್ನು ಸೇವಿಸಿಸೇವಿಸಿ ದಣಿದಿದ್ದ ಪಾದರಕ್ಷೆಗಳು ಈಗ ನವಾಬ ಸಿರಾಜನಿಗೆ ಪದೇಪದೇ ಶಿರೋಭೂಷಣಗಳಾಗುತ ಬಂದವು. ಬಳಿಕ ಆ ಬೋಳಪಿಶಾಚವನ್ನು ದಿಗಂಬರನನ್ನಾಗಿಮಾಡಿ, ಮೇಲೆಕೆಂಡಭೂಷಣಗಳಿಂದ ಅಲಂಕರಿಸಿ ಮನೆಯಿಂದ ಹೊರಗೆ ತಳ್ಳಿದರು.

ಬೋಧನ ಕ್ರಮ.

ಈ ಚಿಕ್ಕ ಪುಸ್ತಕವು ಮೇಲ್ಕಂಡ ಮ॥ ಜಿ. ಕೃಷ್ಣಶಾಸ್ತ್ರಿಗಳಿಂದ ರಚಿಸಲ್ಪಟ್ಟಿದೆ. ಇದರಲ್ಲಿ ಉಪಾಧ್ಯಾಯರುಗಳು ಅಗತ್ಯವಾಗಿ ತಿಳಿದಿರಬೇಕಾದ ಪಾಠಶಾಲೆಗಳ ಕೆಲಸ ಮತ್ತು ಬೋಧನಕ್ರಮ ಇವುಗಳು ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ. ಇದು ಕ್ರೌನ್ ಪ್ರೆಸ್ಸಿನಲ್ಲಿ ಬಿಳೀ ಕಾಗದದ ಮೇಲೆ ಸುಂದರವಾದಕ್ಷರಗಳಿಂದ ಕ್ರೌನ್ ಅಷ್ಟಪತ್ರಾಕೃತಿಯಲ್ಲಿ ಅಂದವಾಗಿ ಮುದ್ರಿಸಲ್ಪಟ್ಟಿರುತ್ತದೆ. ಈ ಪುಸ್ತಕಗಳೆರಡೂ ಮೈಸೂರ ಜನರಲ್ ಏಜನ್ಸಿಯಲ್ಲಿ ಬೆಲೆಗೆ ದೊರೆಯುವುವು.

ಒಬ್ಬ ಪರಮಲೋಭಿಯ ವಿಚಿತ್ರ ವರ್ತನವು.

ಪಾವು ಎಂಬ ಸ್ಥಳದಲ್ಲಿ ಆಂಗ್ಲಂಡ್ ಎಂಬ ಪರಮ ಲೋಭಿಯೊಬ್ಬನಿದ್ದನು. ಅವನು ಕಾಸಿಗೆಕಾಸು ಗಂಟುಹಾಕಿ ಅನ್ನಬಟ್ಟೆಗಳಿಗೂ ಕಾರ್ಪಣ್ಯಪಡುತ್ತ ಹಣವನ್ನು ಸೇರಿಸುವುದರಲ್ಲಿಯೇ ದೃಷ್ಟಿಯಿಟ್ಟದ್ದಲ್ಲದೆ, ಆ ಹಣವನ್ನೇ ಹೆಂಡತಿ ಮಕ್ಕಳಿಗೂಕೂಡ ಕೊಡುವುದಕ್ಕೆ ಇಷ್ಟಪಡದೆ ಗುಟ್ಟಾಗಿ ಬಚ್ಚಿಡುತ್ತಿದ್ದನು. ಅವನ ಜೀವಮಾನವೆಲ್ಲವೂ ತಾನು ಸತ್ತಾಗ ಆ ಆಸ್ತಿಯು ತನ್ನೊಡನೆ ಬರುವುದಿಲ್ಲವೆಂಬ ಚಿಂತೆಯೊಂದರಲ್ಲಿಯೇ ಅಡಗಿತ್ತು. ಅವನು ತನ್ನಲ್ಲಿಟ್ಟುಕೊಂಡಿದ್ದ ಹಣವನ್ನು ತನ್ನ ಹೆಂಡತಿ ಮಕ್ಕಳಿಗಾದರೂ ತೋರಿಸುತ್ತಿರಲಿಲ್ಲ. ತಾನು ಸತ್ತಮೇಲೆ ಕೂಡ ಆ ಹಣವನ್ನು ತನ್ನೊಡನೆ ಬರಮಾಡಿಕೊಳ್ಳುವುದಕ್ಕೆ ಉಪಾಯವೇನೆಂದು ಯೋಚಿಸುತ್ತಾ ಕೊನೆಗೆ ತನ್ನಲ್ಲಿದ್ದ ಹಣವನ್ನೆಲ್ಲಾ ನೋಟುಗಳನ್ನಾಗಿಯೂ, ಪತ್ರಗಳನ್ನಾಗಿಯೂ ಬದಲಾಯಿಸಿ, ಅವೆಲ್ಲವನ್ನೂ ಸುರಳಿಸುತ್ತಿ ಒಂದು ಬಿದಿರು ಕೋಲಿನಲ್ಲಿ ತುರುಕಿಟ್ಟು ಆ ಕೋಲನ್ನೇ ತನ್ನ ಊರುಗೋಲಾಗಿ ಉಪಯೋಗಿಸಿಕೊಂಡು ಅದನ್ನು ಯಾವಾಗಲೂ ಕೈಬಿಡದೆ ಹಿಡಿದುಕೊಂಡು ತಿರುಗುತ್ತಿದ್ದನು. ಕೊನೆಗೆ ಅವನ ಆಯುಃಪ್ರಮಾಣವು ತೀರಿ ಅವನು ಉತ್ಕ್ರಮಣಾವಸ್ಥೆಯಲ್ಲಿದ್ದಾಗ ಹೆಂಡತಿಯು ನಿನಗೇನು ಬೇಕೆಂದು ಕೇಳಲು, ತನಗೆ ಬೇರೊಂದೂ ಅವಶ್ಯವಿಲ್ಲ; ಬಹುಕಾಲದಿಂದ ಎಡಬಿಡದೆ ನಾನು ಹಿಡಿದಿದ್ದ ಈ ಊರುಗೋಲನ್ನ ಮಾತ್ರ ನನ್ನೊಡನೆಯೇ ಸೇರಿಸಿ ಸಮಾಧಿಯಲ್ಲಿ ಹೂಳಬೇಕೆಂದು ಕೇಳಿಕೊಂಡನು. ಆ ಊರುಗೋಲಿನ ಮರ್ಮವು ಅದುವರೆಗೆ ಯಾರಿಗೂ ತಿಳಿಯದಿದ್ದುದರಿಂದ ಹಾಗೆಯೇ ಅದನ್ನು ಅವನೊಡನೆ ಹೂಳಿಟ್ಟರು. ಆ ಮೇಲೆ ಹೆಂಡತಿಯು ಮನೆಗೆ ಬಂದು ಮನೆಯನ್ನೆಲ್ಲಾ ಹುಡುಕಿದಾಗ ಆತನು ಯಾವುದೋ ಒಂದು ಕಡೆಯಲ್ಲಿ ಹೂಳಿಟ್ಟಿದ್ದ ೧೯೫೦ ರೂ ಗಳು ಮಾತ್ರ ಸಿಕ್ಕಿತು. ತನ್ನ ಗಂಡನು ಸಂಪಾದಿಸಿಟ್ಟಿದ್ದ ಆಸ್ತಿಯು ಇಷ್ಟೇಎಂದು ಅವಳು ತಿಳಿದು ಅಷ್ಟರಲ್ಲಿಯೇ ತೃಪ್ತಳಾಗಿದ್ದಳು. ಎರಡು ಮೂರು ದಿವಸಗಳಮೇಲೆ ಅಲ್ಲಿದ್ದ ಬ್ಯಾಂಕಿನ ಗುಮಾಸ್ತನೊಬ್ಬನು ಆ ಬ್ಯಾಂಕಿನಿಂದ ಆ ಲೋಭಿಗೆ ಸೇರಬೇಕಾದ ಕೆಲವು ಹಣವನ್ನು ತಂದು, ಈ ಹೆಂಡತಿಯನ್ನು ಕುರಿತು ನಿನ್ನ ಗಂಡನಿಗೆ ಬ್ಯಾಂಕಿನಿಂದ ಸಲ್ಲಬೇಕಾದ ಈ ಹಣವನ್ನು ತೆಗೆದುಕೊಂಡು ಪತ್ರವನ್ನು ಹಿಂತಿರುಗಿ ಕೊಡೆಂದು ಕೇಳಿದನು. ಮನೆಯಲ್ಲೆಲ್ಲಾ ಹುಡುಕಿದರೂ ಆಕೆಗೆ ಪತ್ರವೊಂದು ಸಿಕ್ಕದಿರಲು, ಕೊನೆಗೆ ಆ ಊರುಗೋಲಿನಲ್ಲಿ ಸಂದೇಹವುಂಟಾಗಿ ಅಲ್ಲಿನ ಮೇಜಿಸ್ಟ್ರೇಟರ ಸಂಗಡ ಹೋಗಿ ಸಮಾಧಿಯನ್ನು ಶೋಧಿಸಿ ಆ ಊರುಗೋಲನ್ನು ತೆಗೆದು ನೋಡಿದಾಗ ಅದರಲ್ಲಿ ಈ ಪತ್ರವೇ ಅಲ್ಲದೆ ಇನ್ನೂ ಅನೇಕ ಪತ್ರಗಳೂ ನೋಟುಗಳೂ ಇದ್ದುವಂತೆ. ಲೋಕದಲ್ಲಿ ಇನ್ನೂ ಎಂಥೆಂಥಾ ಲೋಭಿಗಳಿರುವರೋ ತಿಳಿಯದು!

ದೇವರಿಗೆ ಕೈಬೆರಳನ್ನು ಒಪ್ಪಿಸುವುದು.

ಕೋಲಾರದ ಸಮೀಪದಲ್ಲಿರುವ ಶೀತಗುಡ್ಡದ ಮೇಲಿರುವ ಕಾಲಭೈರವ ದೇವರಿಗೆ ಅದರ ಭಕ್ತರಾದ ಮೊರಸುಒಕ್ಕಲಿಗರು, ರಡ್ಡಿಗರು ಮೊದಲಾದವರು ಈಗ್ಗೆ ೩೦ ವರ್ಷಗಳ ಹಿಂದೆ ಕೈಬೆರಳನ್ನು ಒಪ್ಪಿಸುತಿದ್ದುದು ಲಿಪ್ಯನ್ವೇಷಣ ಶಾಖೆಯವರ ಶೋಧನಕಾಲದಲ್ಲಿ ದೊರೆತ ಆ ದೇವಸ್ಥಾನದ ಶಾಸನಗಳಿಂದ ವ್ಯಕ್ತವಾಗುತ್ತದೆ. ಅದು ಹೇಗೆಂದರೆ:—

ಶೀತಗುಡ್ಡದ ದಕ್ಷಿಣಕ್ಕೆ ಒಂದು ದೊಡ್ಡ ಗುಡ್ಡವಿದೆ. ಇದಕ್ಕೆ ಭಸ್ಮಾಸುರ ಬೆಟ್ಟವೆಂದು ಹೆಸರು. ಈ ಬೆಟ್ಟದ ಮೇಲೆ ಭಸ್ಮಾಸುರನೆಂಬ ರಾಕ್ಷಸನು ಸುಟ್ಟು ಭಸ್ಮಮಾಡಲ್ಪಟ್ಟನೆಂಬುವಾಗಿ ಸ್ಥಳ ಪುರಾಣವಿದೆ. ಈ ಬೆಟ್ಟದಮೇಲೆ ಭಸ್ಮಾಸುರನು ಸುಟ್ಟುಹೋದ ಬೂದಿಯು ಇರುವುದಾಗಿ ಜನರು ಹೇಳಿಕೊಳ್ಳುತ್ತಾರೆ. ಮತ್ತು ಎಂತಹ ಬಿರುಸಾದ ಮಳೆಯು ಬಂದರೂ ಈ ಬೆಟ್ಟದ ಮೇಲ್ಗಡೆಯ ನೀರು ಆ ಬೆಟ್ಟದೊಳಗೇ ಹೀರಿಕೊಳ್ಳಲ್ಪಡುತ್ತದೆಯೇ ಹೊರ್ತು ಕೆಳಭಾಗಕ್ಕೆ ಇಳಿದು ಹರಿದುಹೋಗುವುದಿಲ್ಲವಂತೆ. ಭಸ್ಮಾಸುರನು ತಾನು ಯಾರ ತಲೆಯಮೇಲೆ ಕೈಯ್ಯನ್ನಿಟ್ಟರೂ ಅವರು ಸುಟ್ಟು ಭಸ್ಮವಾಗಿಹೋಗುವಂತೆ ಶಿವನಿಂದ ವರವನ್ನು ಪಡೆದಿದ್ದನು. ಈ ವರವನ್ನು ಶಿವನಮೇಲೆಯೇ ಪ್ರಯೋಗಿಸಬೇಕೆಂದು ಭಸ್ಮಾಸುರನು ಇಷ್ಟಪಟ್ಟು ಶಿವನನ್ನು ಅಟ್ಟಿಕೊಂಡು ಹೋದನು. ಶಿವನು ಇವನಿಂದ ತಪ್ಪಿಸಿಕೊಳ್ಳಲೋಸುಗ ಅಲೆದು ಕಡೆಗೆ ಶೀತಿ ಗ್ರಾಮದಬಳಿ ಇರುವ ಗೌತಮರ ಆಶ್ರಮಕ್ಕೆ ಬಂದು ಗೌತಮರ ಮಾತಿನಪ್ರಕಾರ ಶೀತಗುಡ್ಡದ ಮೇಲಿರುವ ಈಗ ಗರ್ಭಗೃಹವೆಂದು ಕರೆಯಲ್ಪಡುವ ಗುಹೆಯಲ್ಲಿ ಅವಿತುಕೊಂಡನು. ಶಿವನನ್ನು ಕಾಣದೆಹೋದ ಭಸ್ಮಾಸುರನು ಸಮೀಪದಲ್ಲಿ ಹೊಲವನ್ನು ಉಳುತ್ತಿದ್ದ ಒಬ್ಬ ರೈತನನ್ನು ಕುರಿತು "ಈ ಕಡೆ ಒಬ್ಬ ಮನುಷ್ಯನು ಓಡಿಹೋದುದನ್ನು ನೋಡಿದೆಯಾ" ಎಂದು ಕೇಳಿದನು. ಅದಕ್ಕೆ ಆ ರೈತನು ತನ್ನ ಮುಂಬೆರಳನ್ನು ಆ ಗುಡ್ಡದಕಡೆಗೆ ತೋರಿಸಿದನು. ಆ ಕ್ಷಣವೇ ವಿಷ್ಣುವು ದಿವ್ಯಾಂಗಸುಂದರಿಯಾದ ಮೋಹಿನಿಯ ರೂಪವನ್ನು ಧರಿಸಿ, ಭಸ್ಮಾಸುರನ ಪ್ರಾಣಹರಣವನ್ನು ಮಾಡಿಬಿಟ್ಟನು. ಈ ವಿವರವೆಲ್ಲವೂ ಪುರಾಣದಲ್ಲಿ ಹೇಳಲ್ಪಟ್ಟಿದೆ. ಅನಂತರ ವಿಷ್ಣುವು ತಾನು ಭಸ್ಮಾಸುರನನ್ನು ಕೊಂದ ವಿವರವನ್ನು ಶಿವನಿಗೆ ಹೇಳಲು, ಶಿವನು—"ನೀನು ಯಾವ ರೂಪವನ್ನು ಧರಿಸಿ ಭಸ್ಮಾಸುರನನ್ನು ಕೊಂದೆಯೋ ಆ ಮೋಹಿನಿಯ ರೂಪವನ್ನು ಪುನಃ ಧರಿಸು" ಎಂದು ವಿಷ್ಣುವಿಗೆ ಹೇಳಿದನು. ವಿಷ್ಣುವು ಅದೇಪ್ರಕಾರ ಮೋಹಿನಿಯ ರೂಪವನ್ನು ಧರಿಸಲು ಶಿವನು ಮೋಹಿನಿಯ ಸೌಂದರ್ಯವನ್ನು ನೋಡಿ ಮೋಹಪರವಶನಾಗಿ ಮೋಹಿನಿಯನ್ನು ಆಲಿಂಗನೆಮಾಡಿಕೊಂಡನು. ಆ ಸಂಪರ್ಕದಿಂದ ಕಾಲಭೈರವನು ಉತ್ಪನ್ನನಾದನು. ಕಾಲಭೈರವನು "ನಾನು ಏನುಮಾಡಬೇಕೆಂದು" ಶಿವನನ್ನು ಪ್ರಶ್ನೆಮಾಡಲು, ಶಿವನು—"ನೀನು ಈ ಗುಡ್ಡದಲ್ಲಿ ವಾಸವಾಗಿರು ಮತ್ತು ನಾನು ಅವಿತುಕೊಂಡ ಸ್ಥಳವನ್ನು ಕೈಬೆರಳಿಂದ ತೋರಿಸಿ ನನ್ನ ಗುಟ್ಟನ್ನು ಹೊರಪಡಿಸಿದ ಆ ರೈತನಿಂದಲೂ ಮತ್ತು ಅವನ ಪಂಗಡದವರಿಂದಲೂ ತಪ್ಪುಮಾಡಿದ ಆ ಮುಂಬೆರಳಿನ ಒಂದು ತುಂಡನ್ನು ಕತ್ತರಿಸಿ ಅದನ್ನು ಆಹುತಿಯಾಗಿ ತೆಗೆದುಕೋ" ಎಂದು ಆಜ್ಞೆಮಾಡಿದನು. ಈ ಆಚರಣೆಯು ಕೆಲವುಕಾಲದವರಿವಿಗೂ ನಡೆದುಕೊಂಡುಬಂದಿತು. ಆದರೆ ಗಂಡುಸರ ಮುಂಬೆರಳನ್ನು ಕತ್ತರಿಸಿ ಹಾಕುವುದರಿಂದ ವ್ಯವಸಾಯ ಕೆಲಸಕ್ಕೆ ತುಂಬಾ ತೊಂದರೆ ಉಂಟಾಗುತ್ತದೆಂದು ಕಂಡುಬಂದುದರಿಂದ ಹೆಂಗುಸರ ಎರಡು ಬೆರಳುಗಳನ್ನು ಅಂದರೆ ಕಿರುಬೆರಳನ್ನು ಮತ್ತು ಚಿಕ್ಕ ಬೆರಳುಗಳನ್ನು ದೇವರಿಗೆ ಸಮರ್ಪಿಸುವಂತೆ ಒಪ್ಪಂಗಮಾಡಿಕೊಳ್ಳಲ್ಪಟ್ಟಿತು. ಈ ವಾಡಿಕೆಯು ಸಹಾ ಸುಮಾರು ಮುವತ್ತು ವರ್ಷಗಳ ಹಿಂದಿನವರಿವಿಗೂ ಆಚರಣೆಯಲ್ಲಿದ್ದಿತು. ಆಗ ಸರ್ಕಾರದವರು ಅದನ್ನು ತಪ್ಪಿಸಿಬಿಟ್ಟರು. ಈ ಬೆರಳನ್ನು ಕತ್ತರಿಸುವ ಕೆಲಸಕ್ಕಾಗಿ ದೇವಸ್ಥಾನದಲ್ಲಿ ಕೆಲ ಜನರು ನೇಮಕವಾಗಿದ್ದರು. ಬೆರಳನ್ನು ಒಪ್ಪಿಸತಕ್ಕ ಭಕ್ತಾದಿಗಳು ಹಣವನ್ನು ಮತ್ತು ಅಕ್ಕಿಯನ್ನು ಆ ಜನರಿಗೆ ಅರ್ಪಿಸುತ್ತಿದ್ದರು. ಇದನ್ನು ಈ ಪ್ರಕಾರವಾಗಿಯೇ ಹಂಚಬೇಕೆಂಬುದಾಗಿ ಒಂದು ಶಾಸನದಲ್ಲಿ ಬರೆಯಲ್ಪಟ್ಟಿರುವುದು. ಈ ಶಾಸನವು ೧೬ನೆಯ ಶತಮಾನದಲ್ಲಿ ಅಂದರೆ ೩೦೦ ವರ್ಷಗಳ ಹಿಂದೆ ಬರೆಯಲ್ಪಟ್ಟುದಾಗಿರುವುದು. ಬೆರಳುಕೊಡುವ ಪದ್ಧತಿಯನ್ನು ತಪ್ಪಿಸಕೂಡದೆಂದು ಆ ವಾಡಿಕೆಯನ್ನಿಟ್ಟುಕೊಂಡಿರುವ ಪ್ರಜೆಗಳು ಬಹಳ ಪ್ರಯತ್ನಪಟ್ಟರು. ಆದರೆ ಅವರ ಸಾಹಸಗಳು ಫಲಪ್ರದವಾಗಲಿಲ್ಲ. ಪ್ರಕೃತದಲ್ಲಿ ಕತ್ತರಿಸಲ್ಪಡಬೇಕಾದ ಬೆರಳುಗಳಿಗೆ ದೇವಸ್ಥಾನದಲ್ಲಿ ಹೂವನ್ನು ಸುತ್ತುವರು ಮತ್ತು ಮನೆಗೆ ಬರುವಾಗ ಅದನ್ನು ಬಿಚ್ಚಿಹಾಕುವರು. ಬೆರಳುಕೊಡುವ ಪದ್ಧತಿಯು ಈ ಶೀತಗುಡ್ಡವಮೇಲೆಯೇ ಹೊರ್ತು ಇಂಡ್ಯಾದೇಶದ ಮತ್ತಾವ ಪ್ರದೇಶದಲ್ಲಿಯೂ ಆಚರಣೆಯಲ್ಲಿಲ್ಲವೆಂದು ತಿಳಿದುಬಂದಿದೆ.

ಮೈಸೂರ್ ಗೆಜೆಟ್ ಸಂಗ್ರಹ.

ಚಿತ್ರದುರ್ಗದ ಡಿ॥ ಟ್ರಜರಿ ಛಾರ್ಜಿನಲ್ಲಿರುವ ಅ॥ ಕಮಿಷನರ್ ಮೆ॥ ಆರ್. ನಾರಾಸ್ವಾಮಿರಾವ್, ಬಿ. ಎ, ಯವರಿಗೆ ೧೯೧೧ ನೇ ಮೇ ತಾರೀಖು ೧೯ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೧೪ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ, ಅವರು ಬರುವವರೆಗೆ ಅಥವಾ ಬೇರೊಂದಪ್ಪಣೆಯಾಗುವವರೆಗೆ ಚಿತ್ರದುರ್ಗ ಡಿ॥ ನಲ್ಲಿ ಪ್ರಬೇಷನರಿ ಅ॥ ಕಮಿಷನರರಾದ ಮೆ॥ ಟಿ. ಜಿ. ರಾಮಯ್ಯರ್, ಬಿ. ಎ, ಯವರು ಡಿ॥ ಟ್ರಜರಿ ಛಾರ್ಜಿನಲ್ಲಿರತಕ್ಕದ್ದು.

ಶಿವಮೊಗ್ಗ ಡಿ॥ ನ ಅಸಿಸ್ಟೆಂಟ್ ಫಾರೆಸ್ಟ್ ಕನ್ಸರ್ವೇಟರ್ ಮೆ॥ ಬಿ. ರಾಜಾರಾಯರಿಗೆ ೧೯೧೧ ನೇ ಮೇ ತಾ॥ ೧೪ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಾರಭ್ಯ ೧೪ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುತ್ತದೆ.

ರಾಜಕಾರ್ಯಪ್ರವೀಣ ಮೆ॥ ಎ. ರಂಗಸ್ವಾಮಿ ಅಯ್ಯಂಗಾರ್, ಬಿ. ಎ., ಬಿ. ಎಲ್., ರಾವ್‌ಬಹದ್ದೂರ್ ರವರು ೧೯೧೧ ನೇ ಮೇ ತಾ॥ ೧೧ ರ ಅಪರಾಹ್ಣದಲ್ಲಿ ರೆವಿನ್ಯೂ ಕಮಿಷನರ ಛಾರ್ಜನ್ನು ವಹಿಸಿಕೊಂಡರು.

ಅ॥ ಸರ್ಜನ್ ಮೆ॥ ಪಿ. ಮುತ್ತುಸ್ವಾಮಿರಾವ್ ರವರು ೧೯೧೧ ನೇ ಮಾರ್ಚಿ ತಾ॥ ೩೦ ರಾರಭ್ಯ ೩ ನೇ ತ॥ ಇಂದ ೨ ನೇ ತ॥ ಗೆ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಸ॥ ಅ॥ ಸರ್ಜನ್ ಮೆ॥ ಸಿ. ಕುಪ್ಪುಸಾಮಿಪಿಳ್ಳೆಯವರು ೧೯೧೧ ನೇ ಮಾರ್ಚಿ ತಾ॥ ೯ ರಾರಭ್ಯ ೨ ನೇ ತ॥ ಇಂದ ೧ ನೇ ತ॥ ಗೆ ಹೆಚ್ಚಿಸಲ್ಪಟ್ಟಿರುತ್ತಾರೆ.

ಕಡೂರು ಡಿ॥ ಅಕ್ಟಿಂಗ್ ಡಿ॥ ಸಿರಸ್ತೇದಾರ್ ಟಿ. ಗೋಪಾಲಕೃಷ್ಣಯ್ಯಂಗಾರರು ಮೆ॥ ಎಸ್. ರೂಬಿರವರು ಬೇರೆ ಉದ್ಯೋಗದ ಮೇಲಿರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಮೂಡಗೆರೆ ತಾ॥ ಅಕ್ಟಿಂಗ್ ಅಮಲ್ದಾರರಾಗಿಯೂ, ೩ನೇ ತ॥ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಮೆ॥ ಎ. ಸುಬ್ರಹ್ಮಣ್ಯ ಅಯ್ಯರ್‌ರವರು ಬೇರೆ ಕೆಲಸದ ಮೇಲಿರುವವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಮೈಸೂರ ಗೌರ್ನಮೆಂಟಿಗೆ ಅಂಡರ್ ಸೆಕ್ರೆಟರಿಯಾದ ಮೆ॥ ಬಿ. ರಾಮಸ್ವಾಮಯ್ಯ, ಬಿ. ಎ., ಬಿ. ಎಲ್., ರವರು ತಮ್ಮ ಕೆಲಸದೊಡನೆ ಮುಜರಾಯಿ ಸೂಪರಿಂಟೆಂಡೆಂಟರ ಕೆಲಸಗಳನ್ನೋಡಿಕೊಳ್ಳತಕ್ಕದ್ದಲ್ಲದೆ ಎಕ್ಸ್ ಅಫಿಷಿಯೋ ಅಂಡರ್ ಸೆಕ್ರೆಟರಿಯಾಗಿರತಕ್ಕದ್ದು.

ಕಾವೇರಿ ರಿಜರ್ವಾಯರ್ ಡಿವಿಜನ್ನಿಗೆ ಸೇರಿದ ಅ॥ ಇಂಜನಿಯರ್ ಮೆ॥ ಎಂ. ಎ. ಅನಂತಾಳ್ವಾರ್, ಬಿ. ಎ., ಬಿ.ಸಿ.ಇ., ಯವರಿಗೆ ೧೯೧೧ ನೇ ಮೇ ತಾ॥ ೧೩ ರಿಂದ ಅಥವಾ ಅವರುಪಯೋಗಿಸಿಕೊಳ್ಳುವ ತಾ॥ ನಿಂದ ೧೪ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುತ್ತದೆ.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮೇ ತಾ|| ೨೨ನೇ ಸೋಮವಾರ

ಭರತಖಂಡದಲ್ಲಿ ಪೋಲೀಸರ ಹಿಂಸೆಯು.

ಈ ವಿಚಾರದಲ್ಲಿ ಮಿ|| ಫ್ರೆಡರಿಕ್ ಮೆಕಾರ್ನೆಸ್ ರವರಿಗೂ ಇಂಗ್ಲೆಂಡಿನ ಮಂತ್ರಿಗಳಾದ ಮಿ|| ಅಸ್ಕ್ವಿತ್ ರವರಿಗೂ ನಡೆದಿರುವ ಪತ್ರವ್ಯವಹಾರದ ಮುಖ್ಯಾಭಿಪ್ರಾಯವೇನೆಂದರೆ:— ಇತ್ತೀಚೆಗೆ ಭರತಖಂಡದ ಬೇರೆ ಬೇರೆ ಭಾಗಗಳಲ್ಲಿ ಪೋಲೀಸರ ಕ್ರೂರ ಹಿಂಸೆಯಿಂದ ೫ ಜನರಿಗೆ ಕಡಿಮೆಯಿಲ್ಲದೆ ಸತ್ತಿರುವ ಅಂಶವು ನಿಜವೆಂದು ಕೆಲ ದಿವಸಗಳ ಕೆಳಗೆ ಪಾರ್ಲಿಮೆಂಟು ಸಭೆಯಲ್ಲಿ ಅಧಿಕಾರಿಗಳೇ ಒಪ್ಪಿಕೊಂಡಿರುತ್ತಾರೆ. ಕೆಲ ಸಂದರ್ಭಗಳಲ್ಲಿ ಪೋಲೀಸರು ತಮ್ಮ ಸೆರೆಯಲ್ಲಿರುವವರನ್ನು ಹಿಂಸೆ ಮಾಡಿದುದಕ್ಕಾಗಿ ದಂಡಿಸಲ್ಪಟ್ಟಿರುತ್ತಾರೆಯೆ ಹೊರತು, ತಮ್ಮ ಹಿಂಸೆಯಿಂದ ಅವರಿಗೆ ಮರಣವುಂಟಾದುದಕ್ಕಾಗಿ ಶಿಕ್ಷಿಸಲ್ಪಟ್ಟಿರುವುದಿಲ್ಲವು. ಮ್ಯಾಜಿಸ್ಟ್ರೇಟರು ತಮ್ಮಲ್ಲಿಗೆ ವಿಚಾರಣೆಗಾಗಿ ಪೋಲೀಸರು ಕರೆದುಕೊಂಡು ಬರತಕ್ಕ ಅಪರಾಧಿಗಳನ್ನು ಪೋಲೀಸರು ಹಿಂಸಿಸಿವಾರೆಯೆಂಬುದನ್ನು ಪರೀಕ್ಷಿಸಲು ಅಧಿಕಾರವು ಕೊಡಲ್ಪಟ್ಟಿರುತ್ತಾರೆಂದು ಲಾರ್ಡ್ ಮಾರ್ಲೆಯವರು ಲಾರ್ಡ್ಸ್ ಸಭೆಯಲ್ಲಿ ಹೇಳಿರುವುದರಿಂದ, ಭರತಖಂಡದಲ್ಲಿ ಪೋಲೀಸರ ಹಿಂಸೆಯುಂಟೆಂದು ನಿರ್ಧರವಾಗುತ್ತದೆ. "ಪೋಲೀಸರು ತಮ್ಮ ಸೆರೆಯಲ್ಲಿರುವವರು ಅಪರಾಧಕೃತ್ಯವನ್ನು ನಡಿಸಿದುದುಂಟೆಂದು ಒಪ್ಪಿಕೊಳ್ಳುವಂತೆ ಮಾಡುವುದಕ್ಕಾಗಿ ಅವರಿಗೆ ಅತಿ ಕ್ರೂರ ಹಿಂಸೆಯನ್ನು ಮಾಡುವುದು ಸರ್ವಸಾಮಾನ್ಯವಾಗಿರುವುದಲ್ಲದೆ, ತಾವು ಸೆರೆಯಲ್ಲಿಟ್ಟಿರುವವರಿಗೆ ಶಿಕ್ಷೆಯನ್ನು ಮಾಡಿಸಿದುದೆಯಾದರೆ, ಅದಕ್ಕಾಗಿ ತಾವು ಕೊಡುವ ಹಿಂಸೆಯನ್ನು ಅಧಿಕಾರಿಗಳು ತಮ್ಮ ಗಮನಕ್ಕೆ ತಂದುಕೊಳ್ಳುವುದಿಲ್ಲವೆಂದು ಸಂಪೂರ್ಣವಾಗಿ ನಂಬಿಕೊಂಡಿರುತ್ತಾರೆ. ಈ ನಂಬುಗೆಯನ್ನು ಹೋಗಲಾಡಿಸತಕ್ಕದು ಅತ್ಯವಶ್ಯಕವು" ಎಂದು ೧೯೦೮ ರಲ್ಲಿ ಏರ್ಪಾಟಾಗಿದ್ದ ಪೋಲೀಸು ಕಮಿಷನ್ನಿನವರು ಅಭಿಪ್ರಾಯಪಟ್ಟಿರುತ್ತಾರೆ. ಆ ಲಾಗಾಯಿತು ವಿಧಿಯು ಸರಿಪಡಿಸಲ್ಪಡದೆ ಇರುವುದಲ್ಲದೆ, ಪೋಲೀಸರು ತಮ್ಮ ಬಂಧನದಲ್ಲಿರುವವರನ್ನು ಹಿಂಸಿಸುವುದಕ್ಕಾಗಿ ಕೋರ್ಟಿನವರಿಂದ ವಾಗ್ದಂಡನೆ ಮಾಡಲ್ಪಟ್ಟಾಗ್ಯೂ ಪ್ರಶಸ್ತಿಯನ್ನು ಮಾತ್ರ ಪಡೆಯುತ್ತಿರುವರು. ಅಪರಾಧಕೃತ್ಯವನ್ನು ನಡಿಸಿದುದುಂಟೆಂದು ಪೋಲೀಸರ ಮುಂದೆ ಹೇಳಿಸುವುದು ನ್ಯಾಯವಿರುದ್ಧವಾದಾಗ್ಯೂ, ಅಪರಾಧವನ್ನು ನಡಿಸಿದ್ದುಂಟೆಂದು ಮ್ಯಾಜಿಸ್ಟ್ರೇಟರ ಮುಂದೆ ತಾವಾಗಿ ಹೇಳುವಂತೆ ಮಾಡುವವರಾದ ಪೋಲೀಸರ ವಶಕ್ಕೆ ಅಪರಾಧಿಗಳನ್ನು ಯಾವಾಗಲೂ ಬಿಟ್ಟುಕೊಡುವುದರಿಂದ, ಪೋಲೀಸರು ಹೀಗೆ ಕ್ರೂರ ಹಿಂಸೆಯನ್ನು ಮಾಡಲು ಅವಕಾಶವಿರುತ್ತದೆ. ಯಾರ ಸೆರೆಯಿಂದ ಹೊರಗೆ ಬಂದು ಮರಳಿ ಸೆರೆಯೊಳಗಿರಬೇಕಾಗುತ್ತದೊ ಅಂಥ ಪೋಲೀಸರ ಕ್ರೂರಹಿಂಸೆಯಿಂದಲೇ ಹೀಗೆ ಒಪ್ಪಿಕೊಳ್ಳತಕ್ಕದಾಗಿದೆ. ಪೋಲೀಸರು ಹೀಗೆ ಹಿಂಸೆಯನ್ನು ಮಾಡಲವಕಾಶವಿಲ್ಲದಂತೆ, ವಿಚಾರಣೆಯ ಕಾಲದಲ್ಲಿ ವಿನಹಾ ಇತರ ಕಾಲದಲ್ಲಿ ಒಪ್ಪಿಕೊಂಡುದನ್ನು ಒಂದು ಆಧಾರವಾಗಿಟ್ಟುಕೊಳ್ಳದಂತೆ, ಮತ್ತೂ ಹಿಂಸೆ ಮಾಡಿರುವುದು ಕೋರ್ಟಿನವರ ತಿಳಿವಳಿಕೆಗೆ ಬಂದಲ್ಲಿ ಪೋಲೀಸರಿಗೆ ತಕ್ಕ ನ್ಯಾಯಸ್ಥಾನದಲ್ಲಿ ಬಹಿರಂಗವಾಗಿ ಶಿಕ್ಷೆಯಾಗುವಂತೆ ವಿಧಿಯು ತಿದ್ದಲ್ಪಡಬೇಕೆಂದು ನಾನು ಒತ್ತಿ ಹೇಳುತ್ತೇನೆ. ಈ ಕಾರ್ಯವನ್ನು ಮಾಡಿದಹೊರತು, ಕ್ರೂರಹಿಂಸೆಯನ್ನು ನಿಲ್ಲಿಸಲು ಸರ್ಕಾರದವರಿಗೆ ಕುತೂಹಲವಿರುವುದೆಂದು ಹೇಗೆತಾನೆ ಹೇಳುವುದಕ್ಕಾದೀತು? ಈ ವಿಷಯವಾಗಿ ಇಂಡಿಯಾದ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕ್ರೂಯವರಕೂಡ ನಾನು ಪ್ರಸ್ತಾಪಿಸಿದಾಗ್ಗೆ, ಅವರೂ ತಮ್ಮನುತಾಪವನ್ನು ತೋರಿಸಿದರು." ಎಂದು ಮೆಕಾರ್ನೆಸ್ ರವರು ಪತ್ರವನ್ನು ಬರೆದಿರಲು, ಮಂತ್ರಿಗಳು ನೀವು ಬರೆದಿರುವ ವಿಚಾರದಲ್ಲಿ ತಕ್ಕ ಪರಿಹಾರವನ್ನು ಇಂಡ್ಯಾ ಸರ್ಕಾರದವರು ಕೆಲ ಕಾಲದಿಂದಲೂ ಯೋಚಿಸುತ್ತಿರುವರೆಂದು ನೀವು ನಂಬತಕ್ಕದು. ಎಂದುತ್ತರವನ್ನು ಕೊಟ್ಟಿರುತ್ತಾರೆ.

ಮಿ|| ಮೆಕಾರ್ನೆಸ್‌ರವರು ಹೇಳುವ ಪ್ರಕಾರ ಪೋಲೀಸರು ತಮ್ಮ ಬಂಧನದಲ್ಲಿರುವವರು ಕಳುವು, ಕೊಲೆ ಮೊದಲಾದ ಕೃತ್ಯಗಳನ್ನು ನಡಿಸಿದುದುಂಟೆಂದು ಒಪ್ಪಿಕೊಳ್ಳುವಹಾಗೆ ಮಾಡಲು ಅವರಿಗೆ ಹಿಂಸೆ ಕೊಡುವುದು ಸಾಮಾನ್ಯವಾಗಿರುತ್ತದೆ. ಮತ್ತೂ ಹೀಗೆ ಹಿಂಸಿಸುವಾಗ್ಗೆ ಪೋಲೀಸರ ಅಜಾಗರೂಕತೆಯಿಂದಲೂ, ನಿರ್ದಯೆಯಿಂದಲೂ ಕೆಲವೇಳೆ ಮರಣವಾಗುವುದುಂಟು. ಅಲ್ಲದೆ ಕೆಲ ಸಂದರ್ಭದಲ್ಲಿ ಬಂಧನದಲ್ಲಿರುವವರು ಎಷ್ಟು ಕ್ರೂರ ಹಿಂಸೆಯನ್ನು ಕೊಟ್ಟಾಗ್ಯೂ ಕೃತ್ಯವನ್ನು ನಡಿಸಿದ್ದುಂಟೆಂದೊಪ್ಪಿಕೊಳ್ಳದೆ ತಾವೇ ಆತ್ಮಹತ್ಯೆಯನ್ನು ಮಾಡಿಕೊಳ್ಳುವುದೂ ಉಂಟು. ಹೀಗೆ ಪೋಲೀಸರು ತಮ್ಮ ಬಂಧನದಲ್ಲಿರುವವರಿಗೆ ಹಿಂಸೆಯನ್ನು ಕೊಡದಂತೆಯೂ ಒಂದುವೇಳೆ ಹಿಂಸೆಕೊಟ್ಟಿರುವುದು ನಿದರ್ಶನಕ್ಕೆ ಬಂದಲ್ಲಿ ಅವರಿಗೆ ತಕ್ಕ ನ್ಯಾಯಸ್ಥಾನದಲ್ಲಿ ಬಹಿರಂಗವಾಗಿ ಶಿಕ್ಷೆಯಾಗುವಂತೆಯೂ ಕಠಿಣವಾದ ವಿಧಿಯು ಕೂಡಲೆ ಕಲ್ಪಿಸಲ್ಪಡುವುದು ಅತ್ಯವಶ್ಯಕವೆಂದು ಮಿ|| ಮೆಕಾರ್ನೆಸ್ ರವರು ಸೂಚಿಸಿರುತ್ತಾರೆ. ಅನನುಭವಿಗಳೂ, ಪುಕ್ಕಲರೂ ಆದವರು ಮಾತ್ರ ಕಳ್ಳತನವನ್ನು ಮಾಡಿ ಪೋಲೀಸರ ವಶವಾದಕೂಡಲೆ ಹೆದರಿ ಕೃತ್ಯವನ್ನು ನಡೆಸಿದುದುಂಟೆಂದು ಹಿಂಸೆಯೇನೂ ಇಲ್ಲದೆ ತಾವಾಗೊಪ್ಪಿಕೊಳ್ಳುವರಲ್ಲದೆ, ಮ್ಯಾಜಿಸ್ಟ್ರೇಟರಮುಂದೆಯೂ ಒಪ್ಪಿಕೊಳ್ಳುವರು. ಆದರೆ ಬಾಲ್ಯದಿಂದಲೂ ಎಷ್ಟು ಕ್ರೂರ ಹಿಂಸೆಯನ್ನು ಕೊಟ್ಟಾಗ್ಯೂ ಇಲ್ಲವೆನ್ನುವುದನ್ನು ಅಭ್ಯಾಸಮಾಡಿರುವ ಕಳ್ಳರು ಮೊದಲಾದವರು ತಮ್ಮನ್ನು ಪೋಲೀಸರು ಎಷ್ಟು ಕ್ರೂರವಾಗಿ ಹಿಂಸಿಸಿದರೂ ಕೃತ್ಯವನ್ನು ನಡೆಸಿದೆವೆಂದು ಎಂದಿಗೂ ಒಪ್ಪಿಕೊಳ್ಳುವುದಿಲ್ಲ; ಒಂದುವೇಳೆ ಪೋಲೀಸರಲ್ಲಿ ಒಪ್ಪಿಕೊಂಡಾಗ್ಯೂ ಮ್ಯಾಜಿಸ್ಟ್ರೇಟರ ವಿಚಾರಣೆಯಲ್ಲಿ ಮಾತ್ರ ಕೃತ್ಯವನ್ನು ನಡೆಸಲಿಲ್ಲವೆಂದು ಧಾರಾಳವಾಗಿ ಹೇಳುವರು. ಹೀಗೆ ಇಷ್ಟು ಕ್ರೂರ ಹಿಂಸೆಯನ್ನು ಪೋಲೀಸರು ಕೊಟ್ಟಾಗ್ಯೂ ಇಲ್ಲವೆಂದು ಸಾಧಿಸಿ ದೋಷಮುಕ್ತರಾಗುತ್ತಿರುವಾಗ್ಗೆ, ಇನ್ನು ಪೋಲೀಸರ ಹಿಂಸೆಯಿಲ್ಲದೇನೇ ತಾವಾಗಿ ಮ್ಯಾಜಿಸ್ಟ್ರೇಟರಮುಂದೆ ಒಪ್ಪಿಕೊಳ್ಳುವರೆನ್ನುವುದು ಅಸಂಭವವು. ಮತ್ತೂ ಹಾಗೆ ಧಾರಾಳವಾಗೊಪ್ಪಿಕೊಳ್ಳುವವರು ಅಂಥ ಕೃತ್ಯವನ್ನು ಎಂದಿಗೂ ಮಾಡುವುದಿಲ್ಲವು. ಈ ಹಿಂಸೆಯು ತಪ್ಪುವುದರಿಂದ ಜನರು ನಿರ್ಭಯವಾಗಿ ಕಳ್ಳತನ ಮೊದಲಾದ ದುಷ್ಕೃತ್ಯಗಳನ್ನು ವಿಶೇಷವಾಗಿ ಮಾಡಲು ಕಾರಣವಾಗುವುದಾದಪ್ರಯುಕ್ತ ಅದನ್ನು ತಪ್ಪಿಸದೆ, ಪೋಲೀಸರು ಅಪರಾಧಿಗಳನ್ನು ಸೆರೆಯಲ್ಲಿಟ್ಟು ಕೃತ್ಯವನ್ನು ನಡಿಸಿದುದುಂಟೆಂದು ಅವರೊಪ್ಪಿಕೊಳ್ಳುವಂತೆ ಮಾಡುವ ಪ್ರಯತ್ನದಲ್ಲಿ ಪ್ರಾಣಹಾನಿಯೇನಾದರೂ ಆದರೆ ಅದಕ್ಕೆ ಸಂಬಂಧಪಟ್ಟ ಪೋಲೀಸಿನವರು ದಂಡನೆಗೆ ಗುರಿಮಾಡಲ್ಪಡುವರೆಂಬ ಬಗೆಗೆ ಒಂದು ಕಠಿಣತರವಾದ ವಿಧಿಯನ್ನು ಮಾಡುವುದು ಅತ್ಯವಶ್ಯಕವೆಂದು ನಮಗೆ ತೋರುತ್ತದೆ.

ಮೈಸೂರ ಟೈಂಸ್ ಪತ್ರಿಕೆಯು.

ಈ ಪತ್ರಿಕೆಯು ಕಳೆದ ೨ ವರ್ಷಗಳಿಂದಲೂ ಆಂಗ್ಲ ಭಾಷೆಯಲ್ಲಿ ವಾರಕ್ಕೆರಡಾವೃತ್ತಿ ಅಂದರೆ ಪ್ರತಿ ಬುಧವಾರ ಮತ್ತೂ ಶನಿವಾರಗಳಲ್ಲಿ ಬೆಂಗಳೂರಲ್ಲಿ ಪ್ರಕಟಿಸಲ್ಪಡುತ್ತಿರುವುದು. ನಮ್ಮ ಮೈಸೂರ ಸಂಸ್ಥಾನದಲ್ಲಿ ಪ್ರಕಟವಾಗುವ ವೃತ್ತಪತ್ರಿಕೆಗಳ ಸ್ವಾತಂತ್ರ್ಯವನ್ನು ಕಡಿಮೆಮಾಡುವುದಕ್ಕಾಗಿ ಈಗ್ಗೆ ೩ ವರ್ಷಗಳ ಹಿಂದೆ ಒಂದು ಕಠಿಣವಾದ ವಿಧಿಯು ಮಾಡಲ್ಪಟ್ಟು ಅನುಷ್ಠಾನಕ್ಕೆ ತರಲ್ಪಟ್ಟಿತಷ್ಟೆ. ಆ ತರುಣದಲ್ಲಿ ಆಂಗ್ಲಪತ್ರಿಕೆಗಳೆರಡೂ, ಕನ್ನಡಪತ್ರಿಕೆಗಳಲ್ಲಿ ಕೆಲವೂ ನಿಲ್ಲಿಸಲ್ಪಡಲು; 'ಮೈಸೂರ್ ಮೇಲ್' ಎಂಬ ಹೆಸರಿನಿಂದ ಒಂದು [illegible] ದೈನಿಕಪತ್ರಿಕೆಯು ಪ್ರತಿನಿತ್ಯದಲ್ಲೂ ಹೊರಡಲು [illegible] ಸ್ವಲ್ಪಕಾಲ ನಡೆದು, ಚಂದಾದಾರರ ಪ್ರೋತ್ಸಾಹವಿಲ್ಲದೆಯೋ ಅಥವಾ ಮತ್ತಾವಕಾರಣದಿಂದಲೋ ಅದೃಶ್ಯವಾಯಿತು. ಆವೇಳೆ ಈ ಟೈಂಸ್ ಪತ್ರಿಕೆಯು ಬೆಂಗಳೂರ ಪ್ರಸಿದ್ಧ ಅಡ್ವೋಕೇಟರುಗಳಲ್ಲೊಬ್ಬರಿಂದಾರಂಭಿಸಲ್ಪಟ್ಟು ನಡೆದುಕೊಂಡು ಬರುತ್ತಿರುವುದು. ಆದರೆ ಈಗ ಈ ಪತ್ರಿಕಾ ಸಂಪಾದಕರು— "ಚಂದಾದಾರರ ಪ್ರೋತ್ಸಾಹವಿಲ್ಲದುದರಿಂದ ಪತ್ರಿಕಾಪ್ರಕಟನವನ್ನೇ ನಿಲ್ಲಿಸಬೇಕೆಂದಿದ್ದೆವು. ಆದರೆ ಕೆಲವರ ಅಪೇಕ್ಷೆಯಂತೆ ಸದ್ಯದಲ್ಲಿ ವಾರಪತ್ರಿಕೆಯನ್ನಾಗಿ ಮಾಡಲು ನಿರ್ಧರಿಸಿರುತ್ತೇವೆಯಾದುದರಿಂದ ಇತಃಪರ ಪ್ರತಿಶನಿವಾರದಲ್ಲೂ ಪ್ರಕಟವಾಗುವುದು." ಎಂದು ಕಳೆದ ತಾ|| ೧೩ರ ಸಂಚಿಕೆಯಲ್ಲಿ ಬರೆದಿರುತ್ತಾರೆ.

ಜನರ ಪಕ್ಷವನ್ನು ಹಿಡಿದು ಸರ್ಕಾರದ ಉದ್ಯೋಗಸ್ಥರ ಅತ್ಯಾಚಾರಗಳನ್ನು ಖಂಡಿಸಿ, ಪ್ರಜೆಗಳಿಗಿರತಕ್ಕ ಕುಂದುಕೊರತೆಗಳನ್ನು ಸರ್ಕಾರದವರಲ್ಲಿ ಬಿನ್ನೈಸಿ, ಮತ್ತೂ ಸರ್ಕಾರದವರ ಸದುದ್ದೇಶವನ್ನು ಪ್ರಜೆಗಳ ತಿಳಿವಳಿಕೆಗೆ ತರುತ್ತ ಬಹು ಉಪಯುಕ್ತವಾಗಿದ್ದ 'ಮೈಸೂರ್ ಸ್ಟ್ಯಾಂಡರ್ಡ್' ಮತ್ತೂ 'ಮೈಸೂರ್ ಹೆರಾಲ್ಡ್' ಪತ್ರಿಕೆಗಳು, ಪ್ರೆಸ್ ಆಕ್ಟು ಅನುಷ್ಠಾನಕ್ಕೆ ತರಲ್ಪಟ್ಟು ಪತ್ರಿಕೆಗಳಿಗಿದ್ದ ಸ್ವಾತಂತ್ರ್ಯವು ಕಡಿಮೆಮಾಡಲ್ಪಟ್ಟುದರಿಂದ ವಿಶ್ರಾಂತಿಯನ್ನು ಹೊಂದಿದುವು. ಅವುಗಳ ತರುವಾಯ ಆಂಗ್ಲ ಭಾಷೆಯಲ್ಲಿ ಹೊರಡತಕ್ಕ ದೇಶೀಯ ಪತ್ರಿಕೆಗಳ್ಯಾವೂ ಇಲ್ಲದೆ ಜನರಿಗೆ ಬಹು ತೊಂದರೆಯಾಗಿರುವಷ್ಟರಲ್ಲಿ 'ಮೈಸೂರ್ ಮೇಲ್' ಎಂಬ ದೈನಿಕ ಪತ್ರಿಕೆಯು ಕೆಲಕಾಲ ಹೊರಟು ನಾಶವಾಯಿತು. ಅನಂತರ ಈ 'ಟೈಂಸ್' ಪತ್ರಿಕೆಯು ವಾರಕ್ಕೆರಡಾವೃತ್ತಿಯಂತೆ ಹೊರಡಲಾರಂಭಿಸಲ್ಪಟ್ಟು, ಈವರೆಗೆ ನಡೆದುಕೊಂಡು ಬಂದಿತು. ಆದರೆ ಇದು ಚಂದಾದಾರರ ಪ್ರೋತ್ಸಾಹವಿಲ್ಲದೆ ಈಗ ವಾರಪತ್ರಿಕೆಯಾಗಿ ಮಾರ್ಪಡಬೇಕಾದ ಶೋಚನೀಯಾವಸ್ಥೆಗೆ ಬಂದುದು ಮಾದರಿಸಂಸ್ಥಾನವೆಂದೂ, ನಾಗರೀಕದೇಶವೆಂದೂ ಹೆಸರ್ಗೊಂಡಿರುವ ಈ ಮೈಸೂರು ಸಂಸ್ಥಾನದಲ್ಲಿ ಸ್ವದೇಶದ ಪತ್ರಿಕೆಗೆ ಆಶ್ರಯವು ದೊರಕುವುದಿಲ್ಲವೆಂಬ ಅಪವಾದಕ್ಕಾಸ್ಪದವಾಯಿತು. ಈಗ ಪ್ರಸಾರದಲ್ಲಿರುವ ಮಿಷನರಿಗಳಿಂದ ನಡೆಸಲ್ಪಡುವ ಪತ್ರಿಕೆಗಳ ವಿನಹಾ ಇತರ ಎಲ್ಲ ಕನ್ನಡ ಪತ್ರಿಕೆಗಳ ಸ್ಥಿತಿಯೂ ಇದೇ ತೆರನಾಗಿದೆ. ನಮ್ಮ ದೇಶೀಯರಲ್ಲಿ ವೃತ್ತಪತ್ರಿಕೆಗಳನ್ನೋದಿ ತಿಳಿದುಕೊಳ್ಳುವಷ್ಟು ವಿದ್ಯಾವಂತರು ಇಲ್ಲದೇ ಇಲ್ಲ. ಆದರೆ ಸ್ವೇಚ್ಛೆಯಿಂದಲೋ ಅನ್ಯರ ಪ್ರೇರಣೆಯಿಂದಲೋ ಒಂದಾವೃತ್ತಿ ಪತ್ರಿಕೆಗಳನ್ನು ತರಿಸಿಕೊಳ್ಳಲಾರಂಭಿಸಿ, ಚಂದಾವಧಿಯು ಪೂರೈಸಿದ ಮೇಲೂ ಬರುವ ಪತ್ರಿಕೆಗಳನ್ನು ಸ್ವೀಕರಿಸುತ್ತಿದ್ದು ಚಂದಾಬಾಕಿಗೆ ಕಾಗದಗಳನ್ನೆಷ್ಟು ಬರೆದಾಗ್ಯೂ ಹಣವನ್ನು ಕಳುಹದೆಯೂ, ಉತ್ತರವನ್ನು ಸಹ ಕೊಡದೆಯೂ ಮೌನವಾಗಿದ್ದು ಬಾಕಿ ಹಣಕ್ಕಾಗಿ ಪತ್ರಿಕೆಯು ವಿ. ಪಿ. ಮೂಲಕ ಕಳುಹಲ್ಪಟ್ಟಲ್ಲಿ ಅದನ್ನು ತಿರಸ್ಕರಿಸಿಬಿಟ್ಟು ಪತ್ರಿಕಾ ಸಂಪಾದಕರಿಗೆ ನಾಮವನ್ನು ಹಚ್ಚುವರು. ಇಂಥ ದೇಶಾಭಿಮಾನಿಗಳು ೧೦೦ ರಲ್ಲಿ ೭೦-೮೦ ರ ಮೇಲೇ ದೊರೆಯುವರು. ನಮ್ಮ ದೇಶದ ಪತ್ರಿಕೆಗಳ ಸ್ಥಿತಿಯು ಹೀಗಿರುವಾಗ್ಗೆ ಟೈಂಸ್ ಪತ್ರಿಕಾಕರ್ತರು ವಾರಕ್ಕೆರಡಾವೃತ್ತಿ ಹೊರಡಿಸುವುದನ್ನು ತಪ್ಪಿಸಿ ಒಂದಾವೃತ್ತಿ ಹೊರಡಿಸಯತ್ನಿಸಿರುವುದೇನೂ ಆಶ್ಚರ್ಯವಲ್ಲವು. ಮತ್ತೂ ಈ ಪತ್ರಿಕೆಗಳ ಹೀನಸ್ಥಿತಿಗೆ ಚಂದಾದಾರರೇ ಕಾರಣರಲ್ಲದೆ ಅವುಗಳ ಸಂಪಾದಕರೆಂದಿಗೂ ಕಾರಣಭೂತರಲ್ಲವು. ಮುಖ್ಯವಾಗಿ ನಮ್ಮ ಮೈಸೂರ ಸೀಮೆಯಲ್ಲಿ ವಾಗಾಡಂಬರವೇ ಹೆಚ್ಚಲ್ಲದೆ ಕಾರ್ಯದಕ್ಷತೆಯು ಕಡಿಮೆ. ಇದು ಸುಧಾರಿಸಬೇಕಾದರೆ, ಪ್ರತಿಯೊಬ್ಬರೂ ವಿದ್ಯಾವಂತರಾಗಿ ತಮ್ಮ ದೇಶೋನ್ನತಿಗೆ ಕಾರಣವಾವುದೆಂಬುದನ್ನು ತಿಳಿಯುವಷ್ಟು ಶಕ್ತರಾಗಬೇಕು.

ಮೈಸೂರು ಸೀಮೆಯ ಸೆಂಟ್ರಲ್‌ನಾಜರುದ್ಯೋಗವು ತಪ್ಪಿಸಲ್ಪಟ್ಟುದು.

ಸೆಂಟ್ರಲ್ ನಾಜರುದ್ಯೋಗಸ್ಥಾನವು ೧೯೦೫ ರಲ್ಲಿ ಕಲ್ಪಿಸಲ್ಪಟ್ಟಿತು. ಇದರಿಂದ ಎಲ್ಲ ಕೋರ್ಟುಗಳ ಸಾಕ್ಷಿ ಭತ್ಯ ಮೊದಲಾದುದು ಸೆಂಟ್ರಲ್ ನಾಜರಿಂದ ವಿನಿಯೋಗಿಸಲ್ಪಡಬೇಕಾಗಿದ್ದಿತೇವಿನಹಾ ಇದರ ವಿಚಾರದಲ್ಲಿ ಮುನ್ಸೀಫರುಗಳಿಗಧಿಕಾರವಿರಲಿಲ್ಲವು. ಈ ಕ್ರಮವು ಸರಿಯಾಗಿ ನಡಿಯದೆ ಕಕ್ಷಿಗಾರರಿಗೆ ಬಹುತೊಂದರೆಯಾಗಿದ್ದುದರಮೇಲೆ, ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ಮೆಂಬರುಗಳು ಈ ಸೆಂಟ್ರಲ್ ನಾಜರ್ ಸ್ಥಾನವನ್ನು ತಪ್ಪಿಸಬೇಕೆಂದು ಪ್ರಾರ್ಥಿಸಿಕೊಳ್ಳಲು, ಬೆಂಗಳೂರು ಮೈಸೂರು ಮತ್ತೂ ಶಿವಮೊಗ್ಗೆಯಲ್ಲಿ ಭತ್ಯದ ವಿನಿಯೋಗಕ್ಕೆ ಸಂಬಂಧಪಟ್ಟ ಸರ್ವಜವಾನರು ಮತ್ತೂ ಅಮೀನರುಗಳು ಮುನ್ಸೀಫರುಗಳ ಅಧಿಕಾರಕ್ಕೊಳಪಡಿಸಲ್ಪಡುವರೆಂದು ದಿವಾನರು ಅಪ್ಪಣೆ ಕೊಡಿಸಿದ್ದರು. ಈಗ ಅದೇ ಪ್ರಕಾರ ೧೯೧೧ ನೇ ಜುಲೈ ತಾ|| ೧ ರಿಂದ ಪ್ರತಿಯೊಂದು ಮುನಸೀಫ್ ಕೋರ್ಟಿಗೂ ಒಬ್ಬೊಬ್ಬ ನಾಜರು ಪ್ರತ್ಯೇಕವಾಗಿದ್ದು ಆಯಾ ಕೋರ್ಟಿನ ಮುನಸೀಫರ ಅಧಿಕಾರಕ್ಕೊಳಪಟ್ಟಿರತಕ್ಕದು ಎಂದು ಸರ್ಕಾರದವರು ಅಪ್ಪಣೆ ಮಾಡಿ ನಾಜರುಗಳ ಮತ್ತೂ ಅವರ ಕೈಕೆಳಗಣ ಕೆಲಸಗಾರರ ತರಗತಿಯನ್ನೂ, ಸಂಬಳವನ್ನೂ ಈ ಪ್ರಕಾರವಾಗಿ ಗೊತ್ತುಮಾಡಿರುವರು:— ನಾಜರುಗಳಲ್ಲಿ ೨ ತರಗತಿಗಳಿರಬೇಕು. ಇವರಲ್ಲಿ ೧ ನೇ ತರಗತಿಯವರಿಗೆ ತಿಂಗಳೊಂದಕ್ಕೆ ೨೫ ರೂ. ಸಂಬಳದಿಂದ ವರ್ಷವೊಂದಕ್ಕೆ ೧ ರೂ. ಪ್ರಕಾರ ೩೦ ರೂ. ವರೆಗೂ, ೨ನೇ ತಾ|| ಯವರಿಗೆ ೨೦ ರೂ. ಯಿಂದ ವರ್ಷ ೧ಕ್ಕೆ ೧ ರೂ. ಪ್ರಕಾರ ೨೫ ರೂ. ವರೆಗೂ ಹೆಚ್ಚಿಸಲ್ಪಡತಕ್ಕದು. ಅಮೀನರುಗಳಲ್ಲಿ ೧ನೇ ತಾ|| ಯವರಿಗೆ ೧೬ ರೂ. ಮತ್ತೂ ೨ ನೇ ತಾ|| ಯವರಿಗೆ ೧೪ ರೂ. ಆಳುಗಳಲ್ಲಿ ೧ ನೇ ತಾ|| ಯವರಿಗೆ ೮ ರೂ. ಮತ್ತು ೨ನೇ ತಾ|| ಯವರಿಗೆ ೭ ರೂ., ಈ ಪ್ರಕಾರ ಸಂಬಳವು ಪ್ರತಿತಿಂಗಳಲ್ಲೂ ಸಲ್ಲತಕ್ಕದು. ಪ್ರತಿಯೊಬ್ಬ ಪ್ರೋಸೆಸ್ ನಾಜರು ೨೫೦ ರೂ. ಗಳನ್ನು ಅಥವಾ ಅದಕ್ಕಿಂತ ಹೆಚ್ಚಾದ ಮೊಬಲಗನ್ನು ಹೊಣೆಯಾಗಿ ಕೊಡತಕ್ಕದು. ಇದೇ ಪ್ರಕಾರ ೧ ನೇ ತಾ|| ಅಮೀನನು ೧೨೦ ರೂ. ೨ ನೇ ತಾ| ಅಮೀನನು ೧೦೦ ರೂ. ಮತ್ತೂ ೧ ನೇ ತಾ| ಆಳು ೭೫ ರೂ., ೨ ನೇ ತಾ|| ಆಳು ೫೦ ರೂ ಗಳನ್ನು ಹೊಣೆಯಾಗಿ ಕಟ್ಟಬೇಕು. ಒಬ್ಬ ಪ್ರತಿವಾದಿ ಅಥವಾ ಸಾಕ್ಷಿಗೆ ಸಮನ್ನು ಕೊಡಲು ೮ ಆಣೆಯನ್ನು ತೆಗೆದುಕೊಳ್ಳತಕ್ಕದು. ಒಂದೇಗ್ರಾಮ ಅಥವಾ ಪಟ್ಟಣದಲ್ಲಿ ಒಬ್ಬನಿಗಿಂತ ಹೆಚ್ಚಾಗಿ ಪ್ರತಿವಾದಿಗಳೂ, ಸಾಕ್ಷಿಗಳೂ ಇದ್ದು ಅವರಿಗೆ ಸಮನ್ನು ಕೊಡಬೇಕಾಗಿದ್ದಲ್ಲಿ ಪ್ರತಿಯೊಬ್ಬನಿಗೂ ೪ ಆಣೆಯಂತೆ ತೆಗೆದುಕೊಳ್ಳಲ್ಪಡತಕ್ಕದು. ವಾರಂಟಿನಿಂದ ಹಿಡಿಯಲು ೧ ರೂ. ಹರಾಜನ್ನು ಪ್ರಸಿದ್ಧಪಡಿಸಲು ೮ ಆಣೆ. ಚರಸ್ಥಿರಾಸ್ತಿಯನ್ನು ಜಪ್ತಿಮಾಡಲು ೧ ರೂ., ೫೦ ರೂ. ಗೆ ಮೇಲ್ಪಟ್ಟ ಸ್ಥಿರಾಸ್ತಿಯನ್ನು ಹರಾಜುಮಾಡಿಸಲು ೧ ರೂ., ೫೦ ರೂ. ಒಳಗಿದ್ದರೆ ೮ ಆಣೆ, ಚರಾಸ್ತಿಯನ್ನು ಹರಾಜು ಮಾಡಿಸಲು ೮ ಆಣೆ ಈ ಪ್ರಕಾರ ಫೀಯನ್ನು ತೆಗೆದುಕೊಳ್ಳಬೇಕೆಂದು ವಿಧಾಯಕವಾಗಿರುತ್ತದೆ.

ಒಳದೇಶದವೃತ್ತಾಂತ.

ತುಮಕೂರು ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿದ್ದು ಸ್ಥಳಸಂಕೋಚವಾಗಿರುವುದರಿಂದ, ಸ್ಕೂಲಿನ ಕಟ್ಟಡವನ್ನು ೨೧೦೦೦ ರೂ. ವ್ಯಯದಿಂದ ಅಭಿವೃದ್ಧಿಗೊಳಿಸಲು ಸರ್ಕಾರದಪ್ಪಣೆಯಾಗಿರುತ್ತದೆ.

ಪ್ರತಿವರ್ಷದಲ್ಲೂ ರಾಜಧಾನಿಯಲ್ಲಿ ನಡೆಯುವ ವಸ್ತುಪ್ರದರ್ಶನವು ಬರುವ ಸೆಪ್ಟಂಬರ್ ತಾ| ೨೫ ರಲ್ಲಾರಂಭವಾಗಿ ಅಕ್ಟೋಬರ್ ತಾ|| ೧೫ ರ ವರೆಗೆ ನಡೆಯುವುದು. ಪ್ರದರ್ಶನಕ್ಕೆ ಕಳುಹಲ್ಪಡುವ ಪದಾರ್ಥಗಳು ಸೆಪ್ಟಂಬರ್ ತಾ|| ೧೦ ರ ವರೆಗೆ ಸ್ವೀಕರಿಸಲ್ಪಡುವುವು.

ಕೋಲಾರದ ಡಿ|| ನಲ್ಲಿ ಒಂದು ಗ್ರಾಮದ ಪಟೇಲನೂ ಮತ್ತು ಒಬ್ಬ ಪೋಲೀಸಿನವನೂ ಹುಣಸೆ ಫಸಲನ್ನು ಕದ್ದಿರುವರೆಂದು ಕೆಲ ಗ್ರಾಮಸ್ಥರಮೇಲೆ ಅಪರಾಧವನ್ನು ಹೊರಿಸಿ, ಅದರ ಬೆಲೆಯನ್ನು ತಮಗೆ ಕೊಡದಿದ್ದರೆ ಶಿಕ್ಷೆಗೆ ಗುರಿಮಾಡುತ್ತೇವೆಂದು ಬೆದರಿಸಲು, ಆ ಹಳ್ಳಿಯ ಜನರು ಹೆದರಿ ಪೋಲೀಸಿನವನಿಗೆ ೨೪ ರೂ. ಗಳನ್ನು ಕೊಟ್ಟುಬಿಟ್ಟರು. ಈಗ ಇದರ ವಿಚಾರಣೆಯು ನಡಿಯುತ್ತಿದೆ.

ರಾಜಧಾನಿಯಲ್ಲಿ ಕೆಲವುದಿವಸಗಳಿಂದಲೂ ಪ್ರತಿರಾತ್ರಿ ಮಳೆಯು ತಪ್ಪದೆ ೧-೨ ಗಂಟೆಯವರೆಗೆ ಚೆನ್ನಾಗಿ ಹುಯ್ಯುತಲಿದೆ. ಇದರಿಂದ ದಗೆಯು ಸ್ವಲ್ಪ ಕಡಿಮೆಯಾಗಿದೆ. ಮತ್ತೂ ದೊಡ್ಡಕೆರೆಗೂ ಕಾರಂಜೀಕೆರೆಗೂ, ಕುಂಟೆಗಳಿಗೂ ಕೊಂಚಕೊಂಚವಾಗಿ ನೀರು ಬರುತ್ತಿದೆ. ಕಳೆದ ಚೈತ್ರಬಹುಳದಿಂದಲೂ ವಿವಾಹ ಮಹೋತ್ಸವಗಳು ನಡೆಯುತ್ತಿದ್ದು ಕಳೆದ ಶುಕ್ರವಾರದದಿವಸ ನೂರಾರು ಲಗ್ನಗಳು ನಡೆದುವು. ಇದರಿಂದ ರಾಜಧಾನಿಯ ಯಾವ ಭಾಗದಲ್ಲಿ ನೋಡಿದರೂ ಚಪ್ಪರಗಳೂ, ಉತ್ಸವಗಳೂ ಕಾಣುವುವಲ್ಲದೆ ವಾದ್ಯಘೋಷವು ಕಿವಿಯನ್ನು ಕಿವುಡುಮಾಡುತ್ತಿರುವುದು.

ಮಿ|| ಜಾರ್ಜ ಬೋರ್‌ರವರು ಒದೆದು ಕ್ರೂರವಾಗಿ ಹೊಡೆದರೆಂದು ಅವರ ಸೇವಾವೃತ್ತಿಯಲ್ಲಿದ್ದ ಹುಡುಗನು ಅವರಮೇಲೆ ಬೆಂಗಳೂರ ದಂಡಿನ ಡಿ|| ಮ್ಯಾಜಿಸ್ಟ್ರೇಟರಲ್ಲಿ ವಿವಾದವನ್ನುಹೂಡಿದ್ದನು. ಮ್ಯಾಜಿಸ್ಟ್ರೇಟರ ವಿಚಾರಣೆಯಲ್ಲಿ ಅಪರಾಧಿಯು— ಹುಡುಗನು ಅಮರ್ಯಾದೆಯಿಂದ ನಡೆದುಕೊಂಡುದರಿಂದ ಅವನ ತಲೆಯಮೇಲೆ ಒಂದೆರಡು ಏಟುಗಳನ್ನು ಹಾಕಿದುದುಂಟೆಂದು ಒಪ್ಪಿಕೊಳ್ಳಲು, ಮ್ಯಾಜಿಸ್ಟ್ರೇಟರು ಆ ಹುಡುಗನು ಹೇಳುವುದು ಅತಿಶಯೋಕ್ತಿಯೆಂದು ಗ್ರಹಿಸಿ ಮಿ|| ಬೋರ್‌ರವರಿಗೆ ೪ ಆಣೆಯ ದಂಡವನ್ನು ವಿಧಿಸಿದುದಲ್ಲದೆ ಅವನ ವೆಚ್ಚಕ್ಕಾಗಿ ೧೨ ಆಣೆಯನ್ನು ಕೊಡಬೇಕೆಂದು ತೀರ್ಮಾನಿಸಿದರು. ಈ ಸಂದರ್ಭದಲ್ಲಿ ನ್ಯಾಯವು ಬಡವರಿಗೂ, ಬಲ್ಲಿದರಿಗೂ ತಾರತಮ್ಯವಿಲ್ಲದೆ ಒಂದೇಸಮನಾಗಿ ವಿಮರ್ಶಿಸಲ್ಪಟ್ಟಿರುವುದು.

ಮೈಸೂರು ಸೀಮೆಯ ಸೀನಿಯರ್ ಸರ್ಜನ್ನರು ಮತ್ತು ಸ್ಯಾನಿಟರಿ ಕಮಿಷನರು ಆಗಿದ್ದ ಕರ್ನಲ್ ಜೆ. ಸ್ಮೈತ್, ಎಂ. ಡಿ., ಐ. ಎಂ. ಎಸ್., ರವರು ಸಿಕಿಂದ್ರಾಬಾದಿನಲ್ಲಿ ಸೇನೆಯ ಚೀಫ್ ಮೆಡಿಕಲ್ ಆಫೀಸರಾಗಿ ನೇಮಿಸಲ್ಪಟ್ಟಿರುವುದರಿಂದ ಕಳೆದ ಸೋಮವಾರ ಬೆಂಗಳೂರ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೈಸೂರ ಸೀಮೆಯ ವೈದ್ಯ(ಡಾಕ್ಟ)ರುಗಳ ಸಂಘದವರು ಕ|| ಸ್ಮೈತ್ ರವರಿಗೆ ಅಲ್ಪಾಹಾರವನ್ನು ಮಾಡಿಸಿ ಒಂದು ವಿಜ್ಞಾಪನಾಪತ್ರಿಕೆಯನ್ನೊಪ್ಪಿಸಿದರು. ಈ ಪತ್ರಿಕೆಯಲ್ಲಿ ಇವರ ಗುಣ ಕಥನವು ಮಾಡಲ್ಪಟ್ಟಿತ್ತು. ಈ ಕ|| ಸ್ಮೈತ್‌ರವರು ಪ್ರತ್ಯುತ್ತರವನ್ನು ಕೊಡುವಾಗ್ಗೆ ಈ ಸಂಸ್ಥಾನದಲ್ಲಿ ತಮ್ಮ ಉದ್ಯೋಗದವಧಿಯಲ್ಲಿ ಮಾಡಿದ ಕಾರ್ಯಗಳನ್ನೆಲ್ಲಾ ಸಂಕ್ಷೇಪವಾಗಿ ತಿಳಿಸಿದರು. ಇವರು ಭರತಖಂಡಕ್ಕೆ ೧೮೮೧ ರಲ್ಲಿ ಮೊದಲು ಬಂದು ಮದರಾಸು ಮೊದಲಾದ ಕಡೆ ಕೆಲಸಮಾಡಿ ೧೮೯೨ ನೇ ಏಪ್ರಿಲ್ ತಾ|| ೬ ರಲ್ಲಿ ನಮ್ಮ ಸೀಮೆಗೆ ದರ್ಬಾರು ಸರ್ಜನ್ನರಾಗಿ ಬಂದು ಎರಡು ವರ್ಷಗಳ ತರುವಾಯ ಡಾ|| ಮೆಗ್ಗಾರವರ ಬದಲು ಸೀನಿಯರ್ ಸರ್ಜನ್, ಸ್ಯಾನಿಟರಿ ಕಮಿಷನರು ಮತ್ತು ಕಾರಾಗೃಹಗಳ ಇನ್ಸ್‌ಪೆಕ್ಟರ್ ಜನರಲ್‌ರವರಾಗಿ ನೇಮಿಸಲ್ಪಟ್ಟು ಈವರೆಗೂ ಇದ್ದರು. ಇವರಿಗೆ ಒಟ್ಟು ಸಂಬಳವು ೨೫೦೦ ರೂ. ಗಳ ವರೆಗೆ ಸಲ್ಲುತ್ತಿದ್ದಿತು. ಇವರ ಕಾಲದಲ್ಲಿ ವೈದ್ಯ ಮತ್ತು ಆರೋಗ್ಯ ಶಾಖೆಗಳು ಬಹುಮಟ್ಟಿಗೆ ಸುಧಾರಿಸಲ್ಪಟ್ಟುವು. ಇವರು ಶಸ್ತ್ರವೈದ್ಯದಲ್ಲಿ ಬಹುನಿಪುಣರು. ಈಗ ಬೆಂಗಳೂರ ದಂಡಿನಲ್ಲಿ ರೆಸಿಡೆನ್ಸಿ ಸರ್ಜನರಾಗಿರುವ ಕ್ಯಾಪ್ಟನ್ ಸ್ಟ್ಯಾಂಡೇಜ್‌ರವರು ಸೀನಿಯರ್ ಸರ್ಜನ್ನರಾಗಿ ನೇಮಿಸಲ್ಪಡುವುದಾಗಿ ವರ್ತಮಾನವಿದೆ.

ಚೆನ್ನಪಟ್ಟದ ವಾಸಸ್ಥನಾದ ಮಕದುಮ್ ಸಾಬಿಯು ಮತ್ತೂ ಈತನ ಆಪ್ತಸ್ನೇಹಿತನಾದ ಬುರ್ರಾನಸಾಬಿಯು ಕೆಲ ತಿಂಗಳ ಕೆಳಗೆ ಒಬ್ಬ ಮಹಮ್ಮದೀಯ ಹುಡುಗಿಯನ್ನೆತ್ತಿಕೊಂಡು ಹೋಗಿದ್ದ ಅಪರಾಧಕ್ಕಾಗಿ ೬ ತಿಂಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನನುಭವಿಸಿ ಈಗ ಕೆಲ ದಿನಗಳ ಕೆಳಗೆ ಬಿಡುಗಡೆಯನ್ನು ಹೊಂದಿ ಬಂದಿದ್ದರು. ಇವರಲ್ಲಿ ಬುರ್ರಾನ ಸಾಬಿಯು ತಾನೆತ್ತಿಕೊಂಡು ಹೋಗಿದ್ದ ಹುಡುಗಿಯ ಬಂಧುಜನರಕೂಡ ವಿಶ್ವಾಸವನ್ನು ಬಳಸಿ ಅಳಿಯ ಅಕ್ಕನನ್ನು ವಿವಾಹಮಾಡಿಕೊಳ್ಳಲು ಪ್ರಯತ್ನಪಟ್ಟಿರುವ ವಿಷಯವನ್ನು ಅವನ ಜತೆಗಾರನಾದ ಮಕದುಮ್‌ಸಾಬಿಯು ತಿಳಿದು "ನಮ್ಮನ್ನು ಕಾರಾಗೃಹವಾಸ ಶಿಕ್ಷೆಗೆ ಗುರಿಮಾಡಿದ ಜನರಲ್ಲಿ ಸ್ನೇಹವನ್ನು ಬಳಸಿ ಅವರ ಹೆಣ್ಣನ್ನು ಲಗ್ನಮಾಡಿಕೊಳ್ಳುವುದು ಸರಿಯಲ್ಲವಾದುದರಿಂದ ಖಂಡಿತವಾಗಿ ಮಾಡಿಕೊಳ್ಳಕೂಡದು" ಎಂದು ಬಹುವಿಧವಾಗಿ ಹೇಳಿದಾಗ್ಯೂ ಬುರ್ರಾನಸಾಬಿಯು ಕೇಳದೆ ಆ ಹುಡುಗಿಯನ್ನು ವಿವಾಹಮಾಡಿಕೊಂಡನು. ಲಗ್ನವಾದ ೨ದಿನಗಳಮೇಲೆ ಈ ಬುರ್ರಾನಸಾಬಿಯೂ ಮಕದುಮ್‌ಸಾಬಿಯೂ ಚನ್ನಪಟ್ಟದ ಪೇಟೆಯ ಚೌಕದಲ್ಲಿ ಸಂಧಿಸಿ ಇದೇ ಲಗ್ನದ ವಿಚಾರವಾಗಿ ಉಭಯರಿಗೂ ಮಾತುಗಳು ನಡೆದು ಕಡೆಗೆ ಹೊಡೆದಾಟಕ್ಕಾರಂಭವಾಗಿ ಮಕದುಮ್ ಸಾಬಿಯು ಒಂದು ಚಾಕುವಿನಿಂದ ಬುರ್ರಾನಸಾಬಿ ಎದೆಯನ್ನು ತಿವಿದನು. ಈ ಪೆಟ್ಟಿನಿಂದ ಬುರ್ರಾನಸಾಬಿಯು ಕೊಂಚಹೊತ್ತಿನಲ್ಲಿ ಪ್ರಾಣವನ್ನು ಬಿಟ್ಟನು. ಈ ಉಭಯರ ಕಲಹವನ್ನೋಡುತ್ತಿದ್ದವರಲ್ಲೊಬ್ಬರಾದರೂ ಬಂದು ಬಿಡಿಸಿಕೊಳ್ಳಯತ್ನಿಸಲಿಲ್ಲ, ಮತ್ತೂ ಅಂಗಡಿಯಲ್ಲಿದ್ದವರೂ ಮುಂದೆ ಸಾಕ್ಷಿಯನ್ನು ಹೇಳಬೇಕಾದೀತೆಂಬ ಯೋಚನೆಯಿಂದ ಅಂಗಡಿಗಳನ್ನು ಮುಚ್ಚಿಕೊಂಡು ಮಾಯವಾದರಂತೆ. ಈ ಮಕದುಮ್ ಸಾಬಿಯು ಬುರ್ರಾನಸಾಬಿಯನ್ನು ಕೊಂದಮೇಲೆ ತನ್ನ ಮನೆಗೆ ನುಗ್ಗಿ ತನ್ನ ಹೆಂಡತಿಯನ್ನು ಕೊಲ್ಲಯತ್ನಿಸುವಷ್ಟರಲ್ಲಿ ಅವನ ಬಂಧುಗಳು ಅವಳನ್ನು ಒಂದು ಕೊಠಡಿಯಲ್ಲಿ ಕೂಡಿ ಬಾಗಿಲಿಗೆ ಬೀಗವನ್ನು ಹಾಕಿ ಭದ್ರಪಡಿಸಿದ್ದರು. ಅಷ್ಟರಲ್ಲಿ ಪೋಲೀಸರು ಬಂದು ಆ ಕೊಲೆಪಾತಕಿಯನ್ನು ಹಿಡಿದು ಸೆರೆಯಲ್ಲಿಟ್ಟು ವಿಚಾರಣೆಗೆ ಗುರಿಮಾಡಿರುವರು.

ವರ್ತಮಾನಸಂಗ್ರಹ.

ಕಲಿಭೀಮನೆಂದು ಹೆಸರ್ವಡೆದ ರಾಮಮೂರ್ತಿಯವರು ತಮ್ಮ ಅದ್ಭುತ ಅಂಗಸಾಧನೆಗಳನ್ನು ಪಾಶ್ಚಾತ್ಯ ದೇಶಗಳಲ್ಲಿ ಪ್ರದರ್ಶಿಸಲು ಸೀಮೆಗೆ ಪ್ರಯಾಣಮಾಡಿದರು.

ಮ್ಯಾಂಚೂರಿಯಾಕ್ಕೆ ಸೇರಿದ ಕಿರಿನ್ ಎಂಬಲ್ಲಿ ಈಚೆಗಾದ ಅಗ್ನಿಯ ಅನಾಹುತದಿಂದ ೨,೫೦,೦೦,೦೦೦ ರೂ. ಬೆಲೆಬಾಳುವ ಕಟ್ಟಡಗಳು ನಾಶವಾದುವಲ್ಲದೆ ೬೦೦ ಅಂಗಡಿಗಳೂ, ೫೦ ಬ್ಯಾಂಕುಗಳೂ ಹಾಳಾದುವು. ಇದರಿಂದ ೬೦,೦೦೦ ಜನರಿಗೆ ನೆರಳಿಲ್ಲದಂತಾಗಿರುವುದಲ್ಲದೆ ಒಟ್ಟು ೬,೦೦,೦೦,೦೦೦ ರೂ. ನಷ್ಟವಾಗಿರುತ್ತದೆ.

ಕಲಕತ್ತಾಕ್ಕೆ ಪ್ರತಿವರ್ಷದಲ್ಲೂ ೨,೩೦,೦೦೦ ಮಣ ತುಪ್ಪವು ಹೊರಗಡೆಯಿಂದ ತರಿಸಲ್ಪಡುವುದು. ಅಲ್ಲಿಯ ಮ್ಯುನಿಸಿಪಾಲಿಟಿಯವರು ಕೆಲ ದಿನಗಳ ಕೆಳಗೆ ೩೦೦ ವಿಧದ ತುಪ್ಪವನ್ನು ಪರೀಕ್ಷಿಸಿದುದರಲ್ಲಿ, ೧೩೫ ಬಗೆಯ ತುಪ್ಪವುಮಾತ್ರ ಬೆರಿಕೆಯಿಲ್ಲದೆ ಶುದ್ಧವಾಗಿರುವುದಾಗಿಯೂ, ಉಳಿದುವೆಲ್ಲವೂ ಎಣ್ಣೆ ಮತ್ತು ಕೊಬ್ಬು ಮಿಶ್ರವಾಗಿರುವುದಾಗಿಯೂ ಕಂಡುಬಂದಿದೆ.

ನರ್ಸಾಪುರದ ಮಿಷನ ಪಾಠಶಾಲೆಯಲ್ಲಿ ಓದುತ್ತಿದ್ದ ೧೫ ವರ್ಷದ ಒಬ್ಬ ಹಿಂದೂ ಹುಡುಗನನ್ನು ಕ್ರಿಸ್ತಮತಕ್ಕೆ ಸೇರಿಸಿಕೊಳ್ಳಲು ಪಾದ್ರಿಗಳು ಕಳೆದ ತಾ| ೨೯ ರ ರಾತ್ರಿ ತಮ್ಮ ಬಂಗಲೆಗೆ ಕರೆದುಕೊಂಡುಹೋಗಿಟ್ಟುಕೊಂಡಿದ್ದರು. ಮಾರನೆಯ ಬೆಳಗ್ಗೆ ಈ ಸುದ್ದಿಯು ಆ ಹುಡುಗನ ತಂದೆತಾಯಿಗಳಿಗೆ ತಿಳಿದು ಅವರು ಪಾದ್ರಿಗಳ ಬಂಗಲೆಗೆ ಬಂದು ಅವರಕೂಡ ಬಹಳ ಕಲಹವನ್ನು ಮಾಡಿದರು. ಆದರೆ ಅವರ ವ್ಯವಸಾನವುಮಾತ್ರ ಇನ್ನೂ ಗೊತ್ತಾಗಲಿಲ್ಲವು.

ಜಾರ್ಜ್ ಚಕ್ರವರ್ತಿ ದಂಪತಿಗಳು ಕಲ್ಕತ್ತಾಕ್ಕೆ ದಯಮಾಡಿಸಿದ ವೇಳೆಯಲ್ಲಿ ನಡಿಸಲ್ಪಡಲಿಕ್ಕಿರುವ ವಿನೋದೋತ್ಸವಗಳಲ್ಲಿ ರಾಮಾರ್ಜುನರು ಸಕಲ ಸೇನಾಸಮೇತರಾಗಿ ವಿಜೃಂಭಣೆಯಿಂದ ರಾಜಧಾನಿಗಳನ್ನು ಪ್ರವೇಶಮಾಡಿದ ಭಾಗಗಳನ್ನು ಪ್ರದರ್ಶಿಸುವುದರಿಂದ ಅವರನ್ನು ದೇವತಾಸ್ವರೂಪವೆಂದು ಭಾವಿಸುವ ಹಿಂದೂಗಳ ಮನಸ್ಸಿಗೆ ಖೇದವಾಗುತ್ತದೆಂಬುದರಮೇಲೆ ಅವುಗಳನ್ನು ಬಿಟ್ಟುಬಿಡಬೇಕೆಂದು ಸತ್ಕಾರಕಸಂಘದವರು ನಿರ್ಧರಿಸಿರುವರು.

ಕಳೆದವಾರ ಕರಾಚಿಯಲ್ಲಿ ಡಾ|| ಜಾರ್ಜ ಬ್ರೂಕ್ಸ್‌ರವರು ಪ್ಲೇಗುರೋಗ ಪೀಡಿತರಾಗಿ ಸತ್ತರೆಂದು ತಿಳುಪಿದ್ದೆವಷ್ಟೆ. ಅವರ ಉತ್ತರಕ್ರಿಯಾದಿಗಳಿಗಾಗಿ ಸಮಾಧಿಯಬಳಿಗೆ ಹೋಗಿದ್ದ ಅವರ ಹೆಂಡತಿಯವರೂ ೨ ದಿನಗಳವರೆಗೆ ಸ್ವಸ್ಥವಾಗಿದ್ದು ಮೂರನೇದಿವಸ ಪ್ಲೇಗುರೋಗಪೀಡಿತರಾಗಿ ಸತ್ತುಹೋದರೆಂದು ತಿಳುಹಲು ವಿಷಾದವಾಗುತ್ತದೆ.

ನರಸಾಪುರದಲ್ಲಿ ಒಬ್ಬ ಹಿಂದೂ ಸನ್ಯಾಸಿಗೆ ಒಬ್ಬ ಮಹಮ್ಮದೀಯನೂ ಅವನ ೧೫ ವರ್ಷ ವಯಸ್ಸಿನ ಮಗನೂ ಶಿಷ್ಯರಾಗಿದ್ದರು. ಆ ಮಹಮ್ಮದೀಯನೂ ಸನ್ಯಾಸಿಯೂ ಗೃಹವನ್ನು ಸಂಪಾದಿಸುವುದಕ್ಕಾಗಿ ತನ್ನ ಮಗನನ್ನು ಅವನ ಸಮ್ಮತಿಯಿಂದಲೇ ಒಳ್ಳೇ ಮಧ್ಯಾಹ್ನದಲ್ಲಿ ಕೊಂದು ತನ್ನ ಮನೆಯ ಹೊರಗಡೆ ಬಿಸಾಡಿದ್ದನು. ಪೋಲೀಸರು ಅವನನ್ನೂ ಅವನ ಗುರುವಾದ ಸನ್ಯಾಸಿಯನ್ನೂ ಹಿಡಿದು ಸೆರೆಯಲ್ಲಿಟ್ಟಿರುವರು.

ಕಳೆದ ತಾ|| ೧೫ ರಲ್ಲಿ ಕಲಕತ್ತಾದ ಧರ್ಮತಲಾ ಬೀದಿಯಲ್ಲಿ ಒಬ್ಬ ಯುರೋಪ್ಯನು ಬೈಸಿಕಲ್ಲಿನಮೇಲೆ ಸ್ವಾರಿ ಮಾಡಿ ಮಾಡಿಕೊಂಡು ಹೋಗುತ್ತಿರುವಾಗ್ಗೆ ಕೆಲ ಬಂಗಾಳಿಯ ಹುಡುಗರು ಅಡ್ಡಕಟ್ಟೆ ನಿಂತುಕೊಂಡು ಗಂಟೆಯನ್ನು ಎಷ್ಟು ಬಡಿದಾಗ್ಯೂ ದಾರಿಯನ್ನು ಬಿಡದೆಹೋದುದರಿಂದ ಬಂಡಿಯಿಂದ ಕೆಳಗಿಳಿದುಬಿಟ್ಟನು. ಅನಂತರ ಹುಡುಗನಿಗೂ ಅವನಿಗೂ ವಾಗ್ವಾದ ನಡೆದು ಕಡೆಗೆ ಮುಷ್ಟಾಮುಷ್ಟಿಗೆ ಪ್ರಾರಂಭವಾಗಿ ಆ ಯುರೋಪ್ಯನಿಗೆ ತುಂಬಾ ಪೆಟ್ಟು ಬಿದ್ದು ಒಂದು ತೋಳು ಮುರಿದುಹೋದುದಲ್ಲದೆ ಒಬ್ಬ ಹುಡುಗನೆಸೆದ ಗಾಜಿನಚೂರು ಅವನ ಮುಖಕ್ಕೆ ತಗಲಿ ಅಪಾಯವನ್ನುಂಟುಮಾಡಿತು.

ಜೂನ್ ತಿಂಗಳಲ್ಲಿ ಲಂಡನ್ ಪಟ್ಟಣದಲ್ಲಿ ಜರಗುವ ಕಿರೀಟಧಾರಣಮಹೋತ್ಸವಕ್ಕೆ ಗ್ವಾಲಿಯರ್, ಬಿಕನೀರ್ ಮತ್ತೂ ಪಾಟಿಯಾಲಾ ಸಂಸ್ಥಾನಗಳ ಮಹಾರಾಜರುಗಳು ಮತ್ತೆ ಕೆಲರು ಹೊರಡುವರು. ಅಲ್ಲಿ ಅವರು ಧರಿಸುವುದಕ್ಕಾಗಿ ಅಮೋಘವಾದ ರತ್ನಾಭರಣಗಳು ಮುಂದಾಗಿ ಹಡಗಿನ ದ್ವಾರ ಲಂಡನ್ನಿಗೆ ಕಳುಹಲ್ಪಡುತ್ತಿರುವುವು. ಪಾಟಿಯಾಲ ಸಂಸ್ಥಾನವೊಂದರಿಂದಲೇ ಕಳೆದವಾರ ೫೦ ಲಕ್ಷ ರೂ. ಗಳ ಬೆಲೆಯ ಆಭರಣಗಳು ಬೊಂಬಾಯಿಯಿಂದ ಕಳುಹಲ್ಪಟ್ಟುವು. ಹಾಗಾದರೆ ಎಲ್ಲ ಮಹಾರಾಜರುಗಳು ಧರಿಸಲು ತೆಗೆದುಕೊಂಡು ಹೋಗುವ ಆಭರಣಗಳ ಬೆಲೆಯು ಕೋಟ್ಯಂತರ ರೂ. ಗಳಾಗಬಹುದಲ್ಲವೆ!

ಕಳೆದ ತಾ|| ೧೩ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೨೧೦೮೯ ಪ್ಲೇಗು ಮರಣಗಳಾಗಿವೆ. ಇದರಲ್ಲಿ ಬೊಂಬಾಯಾಧಿಪತ್ಯದಲ್ಲಿ ೧೦೫೪; ಮದ್ರಾಸಾಧಿಪತ್ಯದಲ್ಲಿ ೨೬; ಬಂಗಾಳದಲ್ಲಿ ೮೬೮; ಸಂಯುಕ್ತ ಪ್ರಾಂತಗಳಲ್ಲಿ ೭೮೩೩; ಪಂಜಾಬಿನಲ್ಲಿ ೧೧೮೮೬; ಬರ್ಮಾದಲ್ಲಿ ೮೯; ಮಧ್ಯಪ್ರಾಂತಗಳಲ್ಲಿ ೨೩; ಮೈಸೂರ ಸಂಸ್ಥಾನದಲ್ಲಿ ೫೬; ಹೈದರಾಬಾದು ಸೀಮೆಯಲ್ಲಿ ೫; ರಾಜಪುಟಾನದಲ್ಲಿ ೩೦೩; ವಾಯವ್ಯಮೂಲೆಯ ಎಲ್ಲೆ ಪ್ರಾಂತದಲ್ಲಿ ೨೩; ಕಾಶ್ಮೀರದಲ್ಲಿ ೯೩; ಈ ಪ್ರಕಾರವಾಗಿ ಮರಣವಾಗಿರುತ್ತದೆ. ಇದೇ ಕಾಲದಲ್ಲಿ ದಿಲ್ಲಿಯ ಡಿಸ್ಟ್ರಿಕ್ಟಿನಲ್ಲಿ ೩೮೯ ಜನರಿಗೆ ರೋಗತಗಲಿ ೩೩೫ ಜನರು ಸತ್ತರು. ಮತ್ತೂ ದಿಲ್ಲಿ ಪಟ್ಟಣದಲ್ಲಿ ೧೧ ಜನರಿಗೆ ತಗಲಿ ೧೦ ಜನರು ಸತ್ತರು.

ಅಂಕೋಲವೆಂಬ ಸ್ಥಳದಲ್ಲಿ ಈಗ ಇಪ್ಪತ್ತೆರಡು ವರುಷಗಳ ಕೆಳಗೆ ಒಬ್ಬ ಮನುಷ್ಯನನ್ನು ಒಂದು ನಾಯಿಯು ಕಚ್ಚಿತು. ಕಚ್ಚಿದೊಡನೆಯೇ ಆತನು ಇದಕ್ಕಾಗಿ ಏರ್ಪಟ್ಟಿದ್ದ ಆಸ್ಪತ್ರೆಗೆ ಹೋಗಿ ಕೆಲವು ದಿವಸಗಳವರೆಗೆ ಚಿಕಿತ್ಸೆ ಹೊಂದಿ ಸಂಪೂರ್ಣವಾಗಿ ಗುಣಹೊಂದಿ ಹಿಂತಿರುಗಿ ಬಂದುಬಿಟ್ಟನು. ಆ ಮನುಷ್ಯನಿಗೆ ಈಗ ಹತ್ತು ದಿವಸಗಳ ಕೆಳಗೆ ವಿಷವು ಇದ್ದಕಿದ್ದ ಹಾಗೆ ವ್ಯಾಪಿಸಿ, ಹುಚ್ಚು ಹಿಡಿದು ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದನು. ಯಾವ ಚಿಕಿತ್ಸೆಯೂ ಪ್ರಯೋಜನಕಾರಿಯಾಗದೆ ಆ ವ್ಯಾಧಿಯು ಕಂಡ ಮೂರು ದಿವಸಗಳೊಳಗಾಗಿಯೇ ಸತ್ತುಹೋದನು. ಕಳೆದ ಇಪ್ಪತ್ತೆರಡು ವರ್ಷಗಳಿಂದಲೂ ಯಾವ ಅಸ್ವಸ್ಥತೆಯೂ ಇಲ್ಲದೆ ಈಗ ಆಕಸ್ಮಿಕವಾಗಿ ವಿಷವೇರಿ ಸಾಯಬೇಕಾದರೆ ಹುಚ್ಚುನಾಯಿಗಳ ವಿಷವು ಅತಿ ಕ್ರೂರವಾದುದೆಂದು ತೋರುತ್ತದೆ.

ಕಲಕತ್ತಾದಲ್ಲಿ ಕಳೆದ ಬಕ್ರೀದು ಹಬ್ಬದಲ್ಲಿ ಹಿಂದೂ ಮಹಮ್ಮದೀಯರಿಗೆ ಕಲಹವು ನಡೆದ ಸಂದರ್ಭದಲ್ಲಿ ಪನ್ನಾಲಾಲ್ ಎಂಬ ಒಬ್ಬ ದೊಡ್ಡ ಮಾರ್ವಾಡಿ ಶ್ರೀಮಂತನ ಮನೆಗೆ ನುಗ್ಗಿ ಸುಲಿಗೆಯನ್ನು ಮಾಡಿದ್ದ ಇಬ್ಬರು ಆಫಘಾನಿಸ್ಥಾನದವರು ಮತ್ತು ೧೮ ಮಹಮ್ಮದೀಯರು ಸೆಷನ್ಸು ವಿಚಾರಣೆಗೆ ಗುರಿಯಾಗಿದ್ದರು. ಇವರಲ್ಲಿ ಬಂಡಿಯನ್ನು ಹೊಡೆಯುವವನೊಬ್ಬನವಿನಹ ಉಳಿದವರೆಲ್ಲರೂ ತಪ್ಪಿತಸ್ಥರೆಂದು ಜೂರಿಗಳು ತಮ್ಮ ಅಭಿಪ್ರಾಯವನ್ನು ಹೇಳಿದುದರಮೇಲೆ ನ್ಯಾಯಾಧೀಶರು ಆ ಬಂಡಿಯವನನ್ನು ದೋಷಮುಕ್ತನನ್ನಾಗಿ ಮಾಡಿ ಉಳಿದವರಲ್ಲಿ ೪ ಜನರಿಗೆ ೭ ವರ್ಷ, ೩ ಜನರಿಗೆ ೬ ವರ್ಷ, ಇಬ್ಬರಿಗೆ ೫ ವರ್ಷ, ಒಬ್ಬನಿಗೆ ೪ ವರ್ಷ ಮತ್ತು ಇಬ್ಬರಿಗೆ ೩ ವರ್ಷ ಈ ಪ್ರಕಾರ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು. ಹೀಗೆ ಶಿಕ್ಷೆಗೆ ಗುರಿಯಾದವರಲ್ಲೊಬ್ಬನು ಆ ಸ್ಥಳದಲ್ಲೇ ತನ್ನ ಕೊರಳಿಗೆ ಬಟ್ಟೆಯನ್ನು ಸುತ್ತಿಕೊಂಡು ಆತ್ಮಹತ್ಯವನ್ನು ಮಾಡಿಕೊಳ್ಳುವಷ್ಟರಲ್ಲಿ ಪೋಲೀಸರು ಅವನನ್ನು ಹಿಡಿದುಕೊಂಡರು.

ಸಂಯುಕ್ತಪ್ರಾಂತಗಳಲ್ಲಿ ಬರಬಾಂಕಿ ಎಂಬ ಡಿಸ್ಟ್ರಿಕ್ಟಿಗೆ ಸೇರಿದ ರಿಸೌಲಿ ಎಂಬೂರಿನಿಂದ ಕರಾಚಿಯಲ್ಲಿರುವ ಫಕೀರ್ ಮಹಮ್ಮದ್ ಕಂಪೆನಿಯವರ ವಿಳಾಸಕ್ಕೆ ಒಂದು ಮರದ ಪೆಟ್ಟಿಗೆಯು ಭಾಂಗಿಮಾಡಿ ಕಳುಹಲ್ಪಟ್ಟಿತ್ತು. ಇದು ಯಾರಿಂದಲೂ ಅಪೇಕ್ಷಿಸಲ್ಪಡದೆ ಕಳೆದ ಮಾರ್ಚಿ ತಾ| ೨೯ ರ ವರೆಗೆ ರೈಲ್ವೆಯ ಸ್ಟೇಷನ್ನಿನಲ್ಲೇ ದಿಕ್ಕಿಲ್ಲದೆ ಬಿದ್ದಿದ್ದುದರಮೇಲೆ, ರೈಲ್ವೆಯಧಿಕಾರಿಗಳು ಅದನ್ನು ಕಳುಹಿಸಿದ್ದ ಹುಸೇನ್ ಎಂಬ ಹೆಸರಿನವನನ್ನು ಕಂಡುಹಿಡಿಯಲು ಪ್ರಯತ್ನಿಸಿ ಅವನು ಗೊತ್ತಾಗದಿರಲು ಆ ಪೆಟ್ಟಿಗೆಯನ್ನೊಡೆದು ಅದರೊಳಗಿರುವ ಪದಾರ್ಥವನ್ನು ಹರಾಜುಮಾಡಿಬಿಡುವಂತೆ ಅಪ್ಪಣೆಮಾಡಿದರು. ಅದೇಪ್ರಕಾರ ಪೆಟ್ಟಿಗೆಯೊಡೆಯಲ್ಪಟ್ಟು ಒಳಗೆ ನೋಡುವಲ್ಲಿ, ಒಬ್ಬ ತರುಣ ಸ್ತ್ರೀಯಳ ಶವವಿದ್ದುದು ಕಂಡುಬಂದಿತು. ಕರಾಚಿಯ ಸಿವಿಲ್ ಸರ್ಜನರು ಶವವನ್ನು ಎಷ್ಟು ಪರೀಕ್ಷಿಸಿದಾಗ್ಯೂ ಮರಣದ ಕಾರಣವು ಗೊತ್ತಾಗಲಿಲ್ಲವು. ಪೋಲೀಸರು ಈ ವಿಚಾರವನ್ನು ಕಂಡುಹಿಡಿಯಯತ್ನಿಸಿದ್ದಾರೆ.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದ್ದು. ಪ. ಪ್ರ.

ಪತ್ರವ್ಯವಹಾರ.

ಶ್ರೀ ಶಿವಸೇವೆ.

ಬೇಲೂರು ತಾ|| ಅರೇಹಳ್ಳಿ ಹೋಬಳಿ ಕೋಗೋಡು ಗ್ರಾಮದ ಶ್ರೀ ಮಲ್ಲಿಕಾರ್ಜುನಸ್ವಾಮಿ ರಥವು ಶಿಥಿಲವಾಗಿ ಹೋಗಿದ್ದುದನ್ನು ಬೆಳ್ಳಾವಾರದ ಪಟೇಲ್ ಕಾಫೀಪ್ಲಾಂಟರ್ ಪುಟ್ಟಸ್ವಾಗೌಡರು ಸುಮಾರು ೧೦೦೦ ರೂ. ಗಳ ವರೆಗೆ ಖರ್ಚುಮಾಡಿ ಹೊಸದಾಗಿ ತಯಾರ್ಮಾಡಿಸಿ ಆ ಸಂಬಂಧವಾದ ಉತ್ಸವವು ಈ ವಿರೋಧಿಕೃತು ಸಂ|| ಚೈತ್ರ ಶು|| ೯ ಶುಕ್ರವಾರ ಶ್ರೀಸ್ವಾಮಿಗೆ ಕಂಕಣಬಂಧ, ಪುಣ್ಯಾಹ, ನಾಂದಿ ಶು|| ೧೦ ಶನಿವಾರ ನವಗ್ರಹಪೂಜೆ, ಹವನಹೋಮ, ರುದ್ರಾಭಿಷೇಕ, ಸಹಸ್ರನಾಮಪೂಜೆ ಮಧ್ಯಾಹ್ನಾತ್ಪರ ನಂದಿವಾಹನೋತ್ಸವ, ಶು|| ೧೧ ಭಾನುವಾರ ಗಿರಿಜಾಕಲ್ಯಾಣ ರಥಾರೋಹಣವು, ಈ ಮೂರು ದಿವಸವೂ ಗಣಪರ್ವವು ಸಾಂಗವಾಗಿ ನೆರವೇರಿದವು. ಶ್ರೀ ಪುಷ್ಪಗಿರಿ ಮಲ್ಲಾಪುರದ ಮಠದ ಪಟ್ಟಾಧ್ಯಕ್ಷ ಶ್ರೀ ಶಾಂತಮಲ್ಲಿಕಾರ್ಜುನ ಮಹಾಸ್ವಾಮಿಯವರ ಅಪ್ಪಣೆಪ್ರಕಾರ ಸಿದ್ಧರಹಳ್ಳಿ ಮಾಸ್ಟರ್ ಕೊಂಡಜ್ಜಿ ಚನ್ನಬಸವಯ್ಯನವರು ಮುಂತಾದ ವೈದಿಕರು ಈ ಕಾರ್ಯಗಳನ್ನೆಲ್ಲ ವಿಧ್ಯುಕ್ತವಾಗಿ ಸಮಾಪ್ತಿಗೊಳಿಸಿದರು. ಸದರಿ ಕೋಗೋಡು ಗ್ರಾಮದ ಭಕ್ತರುಗಳು ಸಹಾಯವಾಗಿ ನಿಂತು ಈ ಕಾರ್ಯ ಪೂರ್ಣಗೊಳಿಸಿದ್ದರಿಂದ ಮೆ|| ಗೌಡರ ಸಂತೋಷಕ್ಕೆ ಪಾರವೇಯಿಲ್ಲ. ಸಾವಿರಾರು ಜನರವರೆಗೆ ಪರುಸೆ ಕೂಡಿತ್ತು. ಬಡಬಗ್ಗರಿಗೆ ವಿವಾಹ ಮುಂತಾದ್ದಕ್ಕೆ ಸಹಾಯ ಮಾಡುವುದು, ಗುರುದೇವತಾ ಕಾರ್ಯಗಳನ್ನು ಮುತುವರ್ಜಿಯಾಗಿ ನಡೆಸುವುದು ಮುಂತಾದ ಪುಣ್ಯಕಾರ್ಯಗಳಲ್ಲಿ ನಿರತರಾಗಿರುವುದು ಇವರ ಯಶಸ್ಸಿಗೆ ತಕ್ಕದ್ದಾಗಿರುತ್ತೆ. ಜಗದೀಶನು ಈ ಸತ್ಪುರುಷರಿಗೆ ಆಯುರಾರೋಗ್ಯ ಸೌಭಾಗ್ಯಗಳನ್ನು ಕೊಡುವುದಲ್ಲದೆ ಇವರ ಹೆಸರು ಶಾಶ್ವತವಾಗುವಂತೆ ಈ ಪ್ರಾಂತದಲ್ಲಿ ವೀರಶೈವ ಬಾಲಕರ ವಿದ್ಯಾಭಿವೃದ್ಧಿಗೆ ಪ್ರಯತ್ನಪಡುವಂತೆ ಶ್ರೀ ಮಲ್ಲಿಕಾರ್ಜುನಸ್ವಾಮಿಯು ಅನುಗ್ರಹಿಸಲಿ.

ಓರ್ವ ಚಂದಾದಾರ್.

ಸಂತೆಬಸ್ತೂರು.

ಈ ಊರಿನಲ್ಲಿ ಪ್ರಸಿದ್ಧ ವರ್ತಕರಾಗಿದ್ದ ಎರಡುಕೆರೆ ಅಜಾತಮಠದ ಮರುಳ ಕರಿಸಿದ್ದಯ್ಯನವರು ಕಳೆದ ಏಪ್ರಿಲ್ ತಾ|| ೧೦ ರಲ್ಲಿ ಶಿವಸಾಯುಜ್ಯವನ್ನು ಹೊಂದಿದರು. ಈ ವಾರ್ತೆಯನ್ನು ಕೇಳಿ ಆ ಊರಿನವರೆಲ್ಲರಿಗೂ ಅಪಾರ ದುಃಖವುಂಟಾದುದಲ್ಲದೆ, ನೆರೆಯ ಗ್ರಾಮಗಳಿಂದ ಸಾವಿರಾರು ಜನ ಬಂದು ಸೇರಿದ್ದರು. ಆ ದಿವಸ ಶವಸಂಸ್ಕಾರವು ವಿಧ್ಯುಕ್ತವಾಗಿ ಮಾಡಲ್ಪಟ್ಟು ಪೂರೈಸುವುದರೊಳಗೆ ಸಾಯಂಕಾಲವಾಯಿತು. ಇವರು ಒಳ್ಳೇ ಕುಶಲರು, ವಾಗ್ಮಿಗಳು, ಉಪಕಾರಿಗಳು ಮತ್ತು ದಯಾಳುಗಳು. ಮೊದಲು ಹರಸೂರು ಮಠದ ಅಡಿವಯ್ಯನವರ ಕೂಡ ೧೦ ವರ್ಷಕಾಲ ಪಾಲಿಗೆ ವ್ಯಾಪಾರವನ್ನು ಮಾಡುತಿದ್ದು ಅನಂತರ ತಾವೇ ಸ್ವಂತವಾಗಿ ವ್ಯಾಪಾರವನ್ನು ಮಾಡತೊಡಗಿ ಬೇಕಾದಷ್ಟು ದ್ರವ್ಯವನ್ನು ಸಂಪಾದಿಸಿದರು. ಇವರು ಎಲ್ಲ ವ್ಯಾಪಾರಗಾರರಂತೆ ಹಳೇ ಪದ್ಧತಿಯನ್ನನುಸರಿಸಿ ವ್ಯಾಪಾರವನ್ನು ಮಾಡದೆ ಈಗಿನ ಕಾಲಕ್ಕೆ ತಕ್ಕಂತೆ ವಿಶೇಷ ಸುಧಾರಣೆಯನ್ನು ಮಾಡಿದ್ದರು. ಕಳೆದ ವರ್ಷ ತಮ್ಮ ಸಹೋದರರ ಲಗ್ನವನ್ನು ಮಾಡಿದಾಗ್ಗೆ ೧೬ ವಟುಗಳಿಗೆ ದೀಕ್ಷೆಯನ್ನು ಧರ್ಮಾರ್ಥವಾಗಿ ಮಾಡಿಸಿದರು. ಮತ್ತು ಬೆಂಗಳೂರು-ಚಿಕ್ಕಬಳ್ಳಾಪುರದ ಲೈಟ್ ರೈಲ್ವೆಕಂಪೆನಿಗೆ ೧೦೦೦ ರೂ. ಗಳ ಷೇರನ್ನು ಹಾಕಿರುವರು. ಚನ್ನಗಿರಿ ತಾ|| ಅಮಲ್ದಾರರಾದ ಮ|| ನರಸಿಂಹಶಾಸ್ತ್ರಿಗಳು ಈ ಕರಿಸಿದ್ದಯ್ಯನವರ ಔದಾರ್ಯ ಮತ್ತೂ ವ್ಯಾಪಾರದಲ್ಲಿ ಪರಗಿದ್ದ ಕೌಶಲ್ಯಗಳನ್ನು ತಿಳಿದು ಸಂತೋಷಪಟ್ಟು ಅವರಿಂದ ೩೦೦೦ ರೂ. ಗಳ ಷೇರನ್ನು ಹಾಕಿಸಿ ಒಂದು ಪರಸ್ಪರ ಸಹಾಯಕ ಸಂಘವನ್ನೇರ್ಪಡಿಸಿ, ಅದಕ್ಕವರನ್ನು ಪ್ರಸಿಡೆಂಟರನ್ನಾಗಿ ಮಾಡಬೇಕೆಂದೆಣಿಸಿ ಕರಿಸಿದ್ದಯ್ಯನವರನ್ನೊಡಂಬಡಿಸಿದ್ದರು. ಮತ್ತು ಅವರು ಶಿವಾಧೀನವಾದ ದಿವಸವೇ ಅವರು ಆ ಪರಸ್ಪರ ಸಹಾಯಕ ಸಂಘಕ್ಕೆ ಪ್ರಸಿಡೆಂಟರಾಗಿರತಕ್ಕದ್ದೆಂದು ಸರ್ಕಾರದಿಂದ ಅಪರಂಗರಿಗಪ್ಪಣೆ ಬಂದಿತ್ತು. ಅವರುಮಾತ್ರ ಬದುಕಿದ್ದು ಪ್ರಸಿಡೆಂಟರಾಗಿದ್ದಲ್ಲಿ ಸಂಘವನ್ನು ಬಹು ಉನ್ನತಸ್ಥಿತಿಗೆ ತರುತ್ತಿದ್ದರೆನ್ನುವುದರಲ್ಲಿ ಸಂದೇಹವಿಲ್ಲವು. ಇಂಥ ಉದಾರಿಗಳೂ ವ್ಯಾಪಾರದಲ್ಲಿ ನಿಪುಣರೂ ಆದವರನ್ನು ಇಷ್ಟು ಬೇಗನೆ ಕಳೆದುಕೊಂಡುದು ಈ ಪ್ರಾಂತದ ಜನರ ದುರ್ದೈವವೆಂದು ಭಾವಿಸಬೇಕಾಗಿದೆ. ಇವರಿಗೆ ಮರಣಕಾಲದಲ್ಲಿ ೪೦ ವರ್ಷ ವಯಸ್ಸು ಮಾತ್ರವಾಗಿತ್ತು.

ಓರ್ವ ಸ್ನೇಹಿತ.

ತಿಪಟೂರು.

ಈ ಗ್ರಾಮದಲ್ಲಿ ಸುತರಾಂ ಮಳೆಯಿಲ್ಲದೆ ಜನರೆಲ್ಲರೂ ಹಾಹಾಕಾರಪಡುತ್ತಿದ್ದರು. ದೇವರದಯದಿಂದ ತಕ್ಕಮಟ್ಟಿಗೆ ಒಂದುಹದ ಮಳೆಬಂತು. ಆದರೂ ಕೆರೆಗೆ ಮಾತ್ರ ನೀರು ಬರಲೇಇಲ್ಲ. ಈ ಕೆರೆಯು ಬಹಳ ಚಿಕ್ಕದಾಗಿದ್ದರೂ ಯಾವಪ್ರಾಂತದಿಂದಲೂ ನೀರು ಬರುವುದಕ್ಕೆ ಅವಕಾಶವಿಲ್ಲದೆ ತುಂಬುವುದೇಇಲ್ಲ. ಅಪರೂಪವಾಗಿ ಈ ಕೆರೆಯು ಭರ್ತಿಯಾಗಿ ಇಲ್ಲಿನವರಿಗೆ ಸಂತೋಷವನ್ನುಂಟುಮಾಡುತ್ತದೆ. ಯಾವಾಗಲೂ ಈ ಗ್ರಾಮದಲ್ಲಿ ನೀರಿನ ಕ್ಷಾಮವಿರುವುದರಿಂದ ಸರ್ಕಾರದವರು ಅತಿಶೀಘ್ರವಾಗಿ ತಮ್ಮ ಗಮನವನ್ನು ಇತ್ತಕಡೆಗೆ ತಿರುಗಿಸಿ ಕ್ಷೇಮವನ್ನುಂಟುಮಾಡಿ ಕಾಪಾಡುವರೆಂದು ನಂಬಿರುತ್ತೇವೆ.

ಇದೇ ಗ್ರಾಮದ ವೀರಶೈವರಲ್ಲೊಬ್ಬರಾದ ಮ|| ರಾ|| ಉಂಡೇಕಾರ್ ಪುಟ್ಟಸಿದ್ದಪ್ಪನವರು ತಮ್ಮ ಪುತ್ರಿಯನ್ನು ಮೈಸೂರು ಅರಮನೆ ಮೊಹತ್ತೇಸರರಾದ ಮ|| ರಾ|| ಬಸಲಿಂಗಪ್ಪನವರ ಸೋದರಳಿಯಂದಿರಾದ ಮ|| ರಾ|| ಚಿಕ್ಕಮಲ್ಲಪ್ಪನವರಿಗೆ ಕೊಟ್ಟು ಕನ್ಯಾದಾನಪುರಸ್ಸರವಾಗಿ ಲಗ್ನವನ್ನು ಇದೇ ವೈಶಾಖ ಶುದ್ಧ ೯ ಯ ದಿವಸ ತಮ್ಮ ಗ್ರಾಮವಾದ ಅರಳಗುಪ್ಪೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿಸಿದರು. ಈ ಮಹೋತ್ಸವದಲ್ಲಿ ಮೊಹತ್ತೇಸರರಾದ ಮ|| ರಾ|| ಬಸವಲಿಂಗಪ್ಪನವರೂ, ಚಿಂತಾಮಣಿ ಅಮಲ್ದಾರರಾದ ಮ|| ಬಿ. ಲಿಂಗಪ್ಪನವರೂ, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರವರಾದ ಮ|| ಬಿ. ನಂಜಪ್ಪನವರೂ, ಇವರ ಸಹೋದರರೂ ಮತ್ತೂ ಚಿಕ್ಕಮಗಳೂರು ಡಿ|| ಆಫೀಸ್ ಹೆಡ್ ಅಕೌಂಟೆಂಟರಾದ ಮ|| ಬಿ. ಶಂಕರಪ್ಪನವರೂ, ಬೆಂಗಳೂರು ಓವರ್ಸಿಯರ್ ಮ|| ಮಲ್ಲಪ್ಪನವರೂ ಇನ್ನೂ ಇತರ ಇವರ ಬಂಧುಗಳೆಲ್ಲರೂ ಭಾಗಿಗಳಾಗಿದ್ದರು. ಅಲ್ಲದೆ ಈ ಗ್ರಾಮದ ಮೇ|| ಗು|| ಕೊಟ್ಟೂರಪ್ಪನವರೇ ಆದಿಯಾಗಿ ಸಕಲ ದೊಡ್ಡಮನುಷ್ಯರೂ ಈ ಮಹೋತ್ಸವದಲ್ಲಿ ಭಾಗಿಗಳಾಗಿದ್ದರು. ಮ|| ಗು|| ಕೊಟ್ಟೂರಪ್ಪನವರು ಮೇಲ್ಕಂಡ ಸಂದಣಿಯಲ್ಲಿ ದೆರತು ಮರ್ಯಾದೆಗಳೆಲ್ಲವೂ ಸಾಂಗವಾಗಿ ನಡೆಯುವಂತೆ ತಕ್ಕೇರ್ಪಾಟನ್ನೇರ್ಪಡಿಸಿದ್ದುದು ಸ್ತೋತ್ರಾರ್ಹವಾದುದೇ ಸರಿ. ಅಲ್ಲಿನ ಮೇಲ್ವಿಚಾರಣೆಗಳೆಲ್ಲವೂ ಅರಳಗುಪ್ಪೆ ಮಠದ ಮ|| ತೋಟಪ್ಪನವರು ಮತ್ತೂ ತಿಪಟೂರು ಮ|| ಹುಚ್ಚಣ್ಣಯ್ಯನವರ ರುದ್ರಪ್ಪನವರಿಂದ ಬಹಳ ವಿತರಣೆಯಾಗಿ ನಡೆಸಲ್ಪಟ್ಟವು. ಅಲ್ಲಿಗೆ ಅತಿಥಿಗಳಾಗಿ ಬಂದಿದ್ದ ಸಕಲ ಮಾಹೇಶ್ವರರಿಗೂ ಯಥಾಶಕ್ತಿ ದಕ್ಷಿಣೆಯು ಲಗ್ನಕರ್ತರಿಂದ ಸಮರ್ಪಿಸಲ್ಪಟ್ಟಿತು. ಈ ಮಹೋತ್ಸವದ ಸಭಾಮಂಟಪದಲ್ಲಿ ತಿಪಟೂರು ಸ್ಕೂಲ್ಮಾಸ್ಟರ್ ಮ|| ಜಿ. ತಮ್ಮಯ್ಯನವರು, ಪ್ರತಿಯೊಬ್ಬ ವೀರಶೈವರೂ ಅವರವರ ಮನೆಯ ಲಗ್ನಕಾಲಗಳಲ್ಲಿ ಬೆಂಗಳೂರು ವಿದ್ಯಾಭಿವೃದ್ಧಿಯ ಫಂಡಿಗೆ ಶಕ್ತ್ಯನುಸಾರ ಧನಸಹಾಯ ಮಾಡಬೇಕಾದುದು ಅತ್ಯವಶ್ಯಕವೆಂಬ ವಿಷಯವಾಗಿಯು ಮತ್ತು ವಿದ್ಯಾ ವಿಷಯವಾಗಿಯು, ಬಹಳ ಸರಸವಾದ ಮತ್ತು ಗಂಭೀರವಾದ ವಾಕ್ಸರಣಿಯಿಂದ ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಸರ್ವರೂ ಇದನ್ನು ಲಾಲಿಸಿ, ಬಹಳ ಸಂತೋಷಭರಿತರಾದರು. ಕೂಡಲೆ ಲಗ್ನಕರ್ತರಾದ ಮ|| ಉ. ಪುಟ್ಟಸಿದ್ದಪ್ಪನವರು ಬೆಂಗಳೂರು ವಿದ್ಯಾಭಿವೃದ್ಧಿಯ ಫಂಡಿಗೆ ೧೦ ರೂ. ಗಳನ್ನೂ, ಓವರ್ಸಿಯರ್ ಮ|| ಮಲ್ಲಪ್ಪನವರು ೫ ರೂ. ಗಳನ್ನೂ ಕಾಣಿಕೆಯಾಗಿ ಬಹಳ ಉದಾರವಾಗಿ ತಿ|| ಮ|| ಗು|| ಕೊಟ್ಟೂರಪ್ಪನವರ ಹಸ್ತಕ್ಕೆ ಅರ್ಪಿಸಿದರು. ಅನಂತರ ಗಂಧಪುಷ್ಪತಾಂಬೂಲ ಮೊದಲಾದುವುಗಳಿಂದ ಸಭಾಸದರು ಮರ್ಯಾದಿಸಲ್ಪಟ್ಟು ಸಭೆಯು ಭರಕಾಸ್ತಾಯಿತು. ಮೇಲ್ಕಂಡ ೧೫ ರೂ. ಗಳು ಕೂಡಲೆ ಮ|| ಗು|| ಕೊಟ್ಟೂರಪ್ಪನವರಿಂದ ಸದರಿ ಫಂಡಿನ ಸೆಕ್ರೆಟರಿಯವರಲ್ಲಿಗೆ ರವಾನಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ವೀರಮಾಹೇಶ್ವರ ಪ್ರಶಂಸಾ.

(ಕಳೆದವಾರದಶೇಷ.)

ಅತಸ್ಸಮಸ್ತಂಪರಿವರ್ಜಯಿತ್ವಾ ಸುಖಾಭಿಲಾಷೀ ಪರಿಪೂರ್ಣಚೇತಾಃ | ಸ್ಥಲೋಕ್ತಸಮ್ಯಕ್ ಚಿತಚಿತ್ತವೃತ್ತಿಂ ನಿರೀಕ್ಷ್ಯತದ್ವಾವವಿಚಾರವಾರ್ನ್ಸ್ಯಾತ್ ||೬|| ಏತದಷ್ಯಪರೀಪ್ರಾಹು ಷಟ್ಸ್ಥಲಜ್ಞಾನವಿತ್ತಮಾಃ|| ಭಕ್ತ್ಯಾದಿಜ್ಞಾನಪರ್ಯಂತಂ ಸಾಧ್ಯಸಾಧನಭಾವತಃ ||೭|| ಭಕ್ತಿಃ ಕರ್ಮಕ್ಷಯೋ ಬುದ್ಧಿರ್ವಿಚಾರೋದರ್ಪಸಂಕ್ಷಯಃ | ಸಮ್ಯಜ್ಞಾನಮಿತಿಪ್ರಾಜ್ಞೈಃ ಸ್ಥಲಷಟ್ಕಮುದಾಹೃತಂ ||೮|| ಕ್ರಿಯಯೊತ್ತಮಯಾಭಕ್ತಿಃ ಪ್ರಾಪ್ಯತೇಶಿವಚಿಂತಕೈಃ | ಭಕ್ತ್ಯಾ ಕರ್ಮಕ್ಷಯಸ್ತಸ್ಮಾದಮಳಾಧಿಷಣಾಭವೇತ್ ||೯|| ಧಿಯಾವಸ್ತುವಿಚಾರಸ್ಸ್ಯಾದ್ವಿಚಾರಾದ್ದರ್ಪಸಂಕ್ಷಯಃ | ತಸ್ಮಾದ್ಜ್ಞಾನಂತತೋಮೋಕ್ಷೋ ನಮೋಕ್ಷಾದ್ವಿದ್ಯತೇಪರಂ ||೧೦|| ಯಸ್ಮೈವಂಕ್ರಮವಿಜ್ಞಾನಂ ದೇಶಿಕಸ್ಯಪ್ರಸಾದತಃ | ಜನ್ಮಾಂತರಕೃತಾತ್ಪುಣ್ಯಾ ಜ್ಜಾಯತೇ ಸ್ಸ ಶಿವಾತ್ಮಕಃ ||೧೧|| ಸಮ್ಯಜ್ಞಾನಸ್ಯಮೂಲಂಹಿ ಭಕ್ತಿರನ್ಯಭಿಚಾರಿಣೀ | ಸಚ್ಚಿದಾನಂದಸಂಪೂರ್ಣೇ ಶಿವಲಿಂಗಸ್ವರೂಪಿಣಿ ||೧೨|| ಶಿವಸ್ಯಭಕ್ತಿರ್ಮೂಲಂಹಿ ವೀರಮಾಹೇಶ್ವರೈರ್ಜನೈಃ | ಸಂಗಮಸ್ಸರ್ವದಾಪುಂಸಾಂ ಸತುಲೋಕೇಷುದುರ್ಲಭಃ ||೧೩|| ಪೂರಾಕೃತಮಹಾಪುಣ್ಯ ಪರಿಪಾಕವಶೇನಚ | ವೀರಮಾಹೇಶ್ವರೈಸ್ಸಂಗ ಸ್ಸುಲಭಃಕಸ್ಯಚಿದ್ಭವೇತ್ ||೧೪|| ನರೋಮಾಹೇಶ್ವರೈಸ್ಸಂಗ ಪರೋಭವತಿಯದ್ದಿನೇ | ತದ್ದಿನೇನೈವನೋಮಾಸೈಃ ಪ್ರಾಪ್ನೋತಿಶಿವವೇದನಂ ||೧೫|| ವೃಯೋಹಸ್ತಪೀಠೇನಿಜಲಿಂಗಮಿಷ್ಟಂ ವಿನ್ಯಸ್ಯತಲ್ಲೀನಮನಃಪ್ರಚಾರಃ | ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ ಸಂಪೂಜಯತ್ಯಂಗಸವೀರಶೈವಃ ||೧೬|| ಗುರುಪ್ರಸಾದಾಧಿಗತೇಷ್ಟಲಿಂಗಂ ಸಂಪೂಜಯಂತಂ ಸ್ವಕರಾಬ್ಜಪೀಠೇ | ಷಡಾಸ್ಯಭಕ್ತ್ಯಾವಿವಿಧೋಪಚಾರೈರ್ನರಸ್ತಮಾಲೋಕ್ಯವಿಮುಕ್ತಿಮೇತಿ ||೧೭|| ನವೀರಮಾಹೇಶ್ವರಸೇವಯಾವಿ ನಾಶಿವಸ್ಯಭಕ್ತಿರ್ಮನುಜೈರ್ನಲಭ್ಯತೇ | ವಿನಾಸ್ತಿಭಕ್ತ್ಯಾಶಿವವೇದನಂನಹಿ ಪ್ರಧಾನಮೇತಚ್ಚಿವಭಕ್ತಪೂಜನಂ ||೧೮|| ಭವಾರ್ಣವಂತರ್ತುಮಿಹೇಚ್ಛತಾಂನೃಣಾಮುಪಾಯ ಏಕಸ್ಸುಲಭಸ್ಸುಖಪ್ರದಃ | ಸವೀರಮಾಹೇಶ್ವರಸಂಗಮಾದೃತೇ ಜಗತ್ರಯೇನಾಸ್ತಿವಿಚಾರಿತೇಸತಿ ||೧೯||

ಆದುದರಿಂದ ಸುಖವನ್ನು ಅಪೇಕ್ಷಿಸುವವನು ಸಮಸ್ತವನ್ನೂ ತ್ಯಜಿಸಿ, ಪೂರ್ಣ ಮನಸ್ಸಿನಿಂದ ಷಟ್ಸ್ಥಲಗಳಲ್ಲಿ ಹೇಳಲ್ಪಟ್ಟ ವ್ಯಾಪಾರಗಳಲ್ಲಿಡಲ್ಪಟ್ಟ ಚಿತ್ತವೃತ್ತಿಯುಳ್ಳವನಾಗಿ ಅವುಗಳ ಸ್ವರೂಪವನ್ನು ವಿಚಾರಮಾಡುವವನಾಗಬೇಕು. ಷಟ್ಸ್ಥಲಜ್ಞಾನಕೋವಿದರಾದ ಕೆಲವರು ಭಕ್ತಿ ಮೊದಲ್ಗೊಂಡು ಜ್ಞಾನಪರ್ಯಂತವಾಗಿ ಸಾಧ್ಯಸಾಧನಭಾವದಿಂದ ಷಟ್ಸ್ಥಲವೆಂದು ಹೇಳುತ್ತಾರೆ. ಹೇಗೆಂದೊಡೆ:— ಭಕ್ತಿ, ಕರ್ಮಕ್ಷಯ, ಬುದ್ಧಿ, ವಿಚಾರ, ದರ್ಪಕ್ಷಯ, ಸಮ್ಯಜ್ಞಾನವೆಂಬಿವೇ ಷಟ್ಸ್ಥಲಗಳೆಂದು ಪ್ರಾಜ್ಞರಿಂದ ಉದಾಹರಿಸಲ್ಪಟ್ಟಿತು. "ಅನೇಕಜನ್ಮಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ || ನಪಾಣಾಂಕ್ಷೀಣಪಾಪಾನಾಂ ಶಿವೇಭಕ್ತಿಃಪ್ರಜಾಯತೆ" ಎಂಬಾಗಮವಚನಾನುಸಾರವಾಗಿ ಶಿವಚಿಂತಕರಿಗೆ ಸತ್ಕರ್ಮಾನುಷ್ಠಾನದಿಂದ ಶಿವಭಕ್ತಿಯು ದೊರೆಯುವುದು. ಶಿವಭಕ್ತಿಯಿಂದ ಪುಣ್ಯಪಾಪರೂಪವಾದ ಕರ್ಮಗಳು ನಾಶವನ್ನೈದುವುವು. ಕರ್ಮಕ್ಷಯದಿಂದ ನಿರ್ಮಲಬುದ್ಧಿಯುಂಟಾಗುವುದು. ನಿರ್ಮಲ ಬುದ್ಧಿಯಿಂದ ನಿತ್ಯಾನಿತ್ಯವಸ್ತು ವಿಚಾರವು ತಲೆದೋರುವುದು. ವಿಚಾರದಿಂದ ಅಹಂಕಾರವು ಕೆಡುವುದು. ಅಹಂಕಾರನಾಶದಿಂದ ಶಿವಜ್ಞಾನವು ಲಭಿಸುವುದು. ಶಿವಜ್ಞಾನದಿಂದ ಮೋಕ್ಷವು ಸಿದ್ಧಿಸುವುದು. ಮೋಕ್ಷಕ್ಕಿಂತ ಶ್ರೇಷ್ಠವಾದುದೇನೂ ಇಲ್ಲ. ಈ ರೀತಿಯಾದ ತಿಳುವಳಿಕೆಯು ಯಾವನಿಗೆ ಪೂರ್ವಜನ್ಮದಲ್ಲಿ ಮಾಡಲ್ಪಟ್ಟ ಸುಕೃತವಿಶೇಷದಿಂದ ಸಂಭವಿಸುವುದೋ ಅವನೇ ಸದಾಶಿವನೆನಿಸುವನು. ಸತ್ಯಜ್ಞಾನಸುಖಾತ್ಮಕನಾಗಿಯೂ, ಪರಿಪೂರ್ಣನಾಗಿಯೂ, ಲಿಂಗರೂಪಿಯಾಗಿಯೂ ಇರುವ ಶಿವನ ವಿಷಯದಲ್ಲಿ ಮಾತ್ರ ನೆಲೆಗೊಂಡ ಭಕ್ತಿಯೇ ಶಿವಜ್ಞಾನಕ್ಕೆ ಕಾರಣವು ಭಕ್ತಿಮೂಲಕವಾದ ಶಿವೈಕ್ಯವು ಯಾವಾಗಲೂ ವೀರಮಾಹೇಶ್ವರರಿಗೆ ದೊರೆಯುವುದು. ಅದು ಲೋಕದಲ್ಲಿ ಇತರರಿಗೆ ದುರ್ಲಭವು. ಯಾವನೋ ಒಬ್ಬನಿಗೆ ಪೂರ್ವಜನ್ಮದಲ್ಲಿ ಮಾಡಿದ ಪುಣ್ಯದ ಪರಿಣಾಮಬಲದಿಂದ ವೀರಮಾಹೇಶ್ವರರ ಸಂಗವುಂಟಾಗುವುದು. ಮನುಷ್ಯನು ಯಾವ ದಿನದಲ್ಲಿ ಆಸಕ್ತಿಯಿಂದ ಮಾಹೇಶ್ವರರೊಡನೆ ಸ್ನೇಹವುಳ್ಳವನಾಗುವನೋ ಆ ದಿನವೇ ಅವನಿಗೆ ಶಿವಜ್ಞಾನವು ಲಭಿಸುವುದು ತಿಂಗಳುಗಳ ನಿರೀಕ್ಷೆ ಬೇಕಾಗಿಲ್ಲ. ಯಾವನು ತನ್ನ ಕರಪೀಠದಲ್ಲಿ ಗುರುಮುಖದಿಂದ ದೀಕ್ಷಾಸಂಸ್ಕಾರಪೂರ್ವಕವಾಗಿ ಬಂದ ಇಷ್ಟಲಿಂಗವನ್ನು ಇಟ್ಟು ಅದರಲ್ಲಿಯೇ ಅಡಗಿದ ಮನೋವ್ಯಾಪಾರಗಳುಳ್ಳವನಾಗಿ ಸ್ವರ್ಗಾದಿ ಸಾಧನವಾದ ಯಜ್ಞಾದಿಕಾಮ್ಯಕರ್ಮ ಸಂಧ್ಯಾವಂದನ ಮುಂತಾದ ನಿತ್ಯಕರ್ಮ, ದರ್ಶಪೂರ್ಣಮಾಸಾದಿ ನೈಮಿತ್ತಿಕಕರ್ಮ ಮುಂತಾದ ಬಾಹ್ಯಕರ್ಮಗಳಲ್ಲಿ ಅಪೇಕ್ಷೆಯಿಲ್ಲದವನಾಗಿ ತ್ರಿಕಾಲದಲ್ಲಿಯೂ ಪೂಜಿಸುತ್ತಾನೋ ಅವನೇ ವೀರಶೈವನೆನಿಸುವನು. ಎಲೈ ಷಣ್ಮುಖನೆ! ಗುರುವಿನ ಅನುಗ್ರಹದಿಂದ ಪಡೆಯಲ್ಪಟ್ಟ ಇಷ್ಟಲಿಂಗವನ್ನು ಹಸ್ತಪೀಠದಲ್ಲಿಟ್ಟುಕೊಂಡು, ಷೋಡಶೋಪಚಾರಗಳಿಂದ ಪೂಜಿಸುವಾತನನ್ನು ಯಾವನು ಭಕ್ತಿಯಿಂದ ನೋಡುತ್ತಾನೋ ಅವನು ಮುಕ್ತಿಯನ್ನೈದುವನು. ಮನುಷ್ಯನಿಗೆ ವೀರಮಾಹೇಶ್ವರರ ಸೇವೆಯನ್ನು ಬಿಟ್ಟರೆ, ಬೇರೆ ಯಾವುದರಿಂದಲೂ ಶಿವಭಕ್ತಿಯುಂಟಾಗುವುದಿಲ್ಲ. ಶಿವಭಕ್ತಿಯಿಲ್ಲದಿದ್ದರೆ ಶಿವಜ್ಞಾನವುಂಟಾಗುವುದಿಲ್ಲ. ಆದುದರಿಂದ ವೀರಮಾಹೇಶ್ವರ ಪೂಜನವು ಮುಖ್ಯವಾದುದು. ವಿಚಾರಮಾಡಿದಲ್ಲಿ ಸಂಸಾರವೆಂಬ ಸಮುದ್ರವನ್ನು ದಾಟಬೇಕೆಂಬ ಅಪೇಕ್ಷೆಯುಳ್ಳ ಮನುಷ್ಯರಿಗೆ ವೀರಮಾಹೇಶ್ವರರ ಸಂಗವನ್ನು ಬಿಟ್ಟರೆ ಮುಖ್ಯವಾಗಿಯೂ, ಸುಲಭವಾಗಿಯೂ ಸಂತೋಷಜನಕವಾಗಿಯೂ ಇರುವ ಬೇರೆ ಉಪಾಯವು ತ್ರಿಭುವನದಲ್ಲಿಯೂ ಇಲ್ಲ.

ಶೇಷ

ಊದಬತ್ತಿಗಳು.

11

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦ ೪-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೬ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೩-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ಥಾಂತೆಸ್ನು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಪಂಡಿತ ಎಲ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
41 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಷೆ ೧ ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಷೆ ೦—೪—೦., ೨೪ ಮಾತ್ರೆ ಸೀಷೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಷೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭವೇಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೮ ಮಾತ್ರೆ ಸೀಷೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦—೩—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಷೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦ ಮಾತ್ರೆ ಸೀಷೆ ೦—೪—೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಷೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦—೧೦—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೨—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು [illegible]

6 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.





ರಕ್ತ ಕೆಟ್ಟದ್ದರಿಂದಲುಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವ, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಷ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧—೨—೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳ್ತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಪೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ್
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ನೇಟಿವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್ ಇವರ ಅತ್ಯುತ್ತಮ ಸಿದ್ಧೌಷಧಗಳು.

40

೧. ಸ್ವರ್ಣಗಂಗಾಧರಮಾತ್ರೆ.— ಇದರ ಸೇವನೆಯಿಂದ ಸ್ತ್ರೀಯರ ಸೂತಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ೧೦ ರೂ. ಟ. ಖ. ೬ ಆ

ಸರ್ವಮೇಹರಾಜಾಂಗ ರಬ್ಬರ್ ಎಣ್ಣೆ.— ಈ ಎಣ್ಣೆಯನ್ನು ಬೆಳಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರೆಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಬೊಬ್ಬೆ, ವ್ರಣ, ಕುಷ್ಠ, ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೨. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೩ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ.— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಖಚಿತ ಖಾತರಿಯಿಂತ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲಪುಷ್ಟಿಯನ್ನುಂಟುಮಾಡುತ್ತದೆ. ೭೫ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫ ಟಪ್ಪಾಲ್ ಖರ್ಚು ೬ ಆಣೆ.

೭. ಮಹಾಪ್ರಾಜ್ಞಾಧಿರಸಾಯನ.— ಈ ರಸಾಯನವು [illegible] ಅಸ್ಥಿಸ್ರಾವ, ಅಸೃಗ್ದರ, ಪಿತ್ತಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ತಮೂತ್ರ, ಅಸ್ಥಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ ರೂಪಾಯಿ ೩. ಟಪ್ಪಾಲ್ ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ.— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಫುಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್ ಖರ್ಚು ೬ ಆಣೆ.

೯. ಮಹಾಕುಂಡಲಿಕ್ಯಾದಿರಸಾಯನ.— ಇದರಿಂದ ಕ್ಷಯ ಕಾಸ, ಜ್ವರ, ದೀಪನ, ಪಾಂಡುರೋಗ, ಉನ್ಮಾದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತವೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ. ಖ. ೬ ಆ.

೧೦. ನಿಶಂಗಸಾರಾಮ್ಲಿಕೆ.— ಇದರಿಂದ ಗಂಟಲ್ಲಿ ಉರಿ ಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೫೦ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಬಾಯಿಂದ ನೀರು ಎಳೆಯುವಾಗ ಜ್ಞಾನ ತಪ್ಪುವುದು ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಜಿನ್ನಿಗಳಿಗೆ ಈ ಮಾತ್ರೆಯನ್ನು ನಾಗದಾಳಿಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦. ಮಾತ್ರೆಗಳ ಸೀಸೆ ೧ ಕ್ಕೆ ೧| ರೂ. ಟ. ಖ. ಬೇರೆ.

ಔಷಧಿಯುಕೊಡ ಅನುಪಾನಪತ್ರಿಕೆಯು [illegible] ಇವಲ್ಲದೆ ಇನ್ನೂ ಅನೇಕವಿಧವಾದ [illegible] ಕಾಟಿಗೆಗಳೂ ದೊರೆಯುತ್ತವೆ. [illegible]

ಎಂ. [illegible]

4

ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ ನೇದು ರೂ. 3-8-0 ಮಾತ್ರ!! ೩ ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೋಫಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 3-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಪ್ಪೋಲೋ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡರ್ಜ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡರ್ಜ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

16

ಉತ್ತಮ ಗ್ರಂಥಗಳು.

ಶಿವಪಂಚಸ್ತವ:– ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತವೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.–ಬೆಲೆ ವಿ. ಪಿ.ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣಷಟ್ಸ್ಥಲ, ಪಂಚಾಚಾರ [illegible] ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಪಟ್ಟದಿರೂಪವಾಗಿದೆ.

[illegible]ವಿ.– ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು [illegible]ದೆ.

[illegible]–ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಹಿತವಾಗಿದೆ.

[illegible]ಸ್ವಾಮಿಗಳವರು, [illegible] ಮೈಸೂರು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಸಪಬ್ರಟೇಶ್ವರ ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲಪ್ತ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೮-೦ರೂ. ಆಗುತ್ತದೆ. ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರೂ. ಕೊಡಬೇಕಾಗುತ್ತೆ. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ೧೦೦ ಕ್ಕೂ ೦-೭-೦ ಆಣೆ ಯಂತೆ ಕಳುಹಬೇಕು. ಕ್ಲಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದಲ್ಲಿ ೧-೦-೦ ರೂ. ಅನ್ನು ಹೆಚ್ಚಾಗಿ ಕೊಡಬೇಕು. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್ ಪ್ರೆಸ್, ಮೈಸೂರ್.

ಉತ್ತಮ ಗ್ರಂಥಗಳು.

119

ಬಸವರಾಜವಿಜಯಂ.– ಬೆಲೆ ವಿ. ಪಿ. ಯಿಂದ ೧-೮-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.– ೧-೭-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.– ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.– (೧ನೆಯಪ್ರಕರಣ) ೧-೩-೦.– ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿಬ್ಬರ ಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ – ೦-೧೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.– ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.– ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.– ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.– (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.– ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ,
ಮೈಸೂರು.

೧೯೧೧ನೇ ಇಸವಿ ಮೇ ತಾ॥ ೨೨ ರಿಂದ ೧೯೧೧ನೇ ಮೇ ತಾ॥ ೨೮ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ವೈಶಾಖ ಬ॥ ನವಮಿಯಿಂದ ವೈಶಾಖ ಬ॥ ಅಮಾವಾಸ್ಯೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೇಷು ತೇದಿ
22	ಸೋ	ನಾ	39-16	ಶ್ರ	12-4	2
23	ಮಂಗ	ದ	37-28	ಪೂಭಾ	12-38	3
24[1]	ಬುಧ	ಏ	34-31	ಉಭಾ	12-6	4
25	ಗುರು	ದ್ವಾ	30-36	ರೆ	10-29	5
26	ಶುಕ್ರ	ತ್ರ	25-3	ಶ್ವಿ	8-0	6
27[2]	ಶನಿ	ಚ	20-28	ಭ	4-47	7
28	ಭಾನು	ಅ	14-42	ಕೃ	1-33	8

(1) ಸರ್ವತ್ರೈಕಾದಶಿ. (2) ಸರ್ವತ್ರ ಅಮಾವಾಸ್ಯೆ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 131

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತೀಯಂ ಸದಾಪುರೀಗೆ ಗೌರೀಶಾನುಕಂಪೋಜ್ಜ್ವಲಂ ॥

ಸಂಪುಟ ೨೪] ಮೈಸೂರ ಸ್ಟಾರ ಸೆ ೧೯೧೧ ನೇ ಇಸವಿ ಮೇ ತಾರೀಖು ೨೯ ನೇ ಸೋಮವಾರ. [ಸಂಚಿಕೆ ೨೨

ಹಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

8

ಲೋಕಾಮಯಾಪಹ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಜೋಡತ (ಭಾರ), ಮೈಸಡಿಲಿಕೆ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, [illegible] ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೭ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರಗನ್ನೆಲ್ಲಾ ಗುಣಪಡಿಸುತ್ತವೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೬-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪೊಸಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರತ, ಹಲ್ಲುಗಳ ಬಾಳೆ, ಇಸುಗೂಡಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿನ ವಿಷದವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಜೊಗಳೆಯಲ್ಲಿ ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಸ್ತಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೦. ೭. ವರದರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು

3

ಇಲ್ಲನೋಡಿ ವಿಶೇಷಸೂಚನಗಳು!

ಕಾಶೀವಿಶ್ವೇಶ್ವರಪ್ರಸನ್ನ.



ಅಗ್ಗವಾದಮಾಲುಗಳು– ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಪುಟವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟಿ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್ ಅಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!! ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ವುತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪಠಗಳು, ಜೈಪುರ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ವುತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ. ೧ ಕ್ಯಾಟಲಾಗ್ ೧ ಕಾಶೀಪಟಿ. ೪ ಸಾದಾಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರೆಸ್‌ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯುವ ವಿಳಾಸಕ್ಕೆ ಕಳುಹಿಸಲಾಗುತ್ತೆ. ವಿಳಾಸವನ್ನು ಚೆನ್ನಾಗಿ ಬರಿಯಬೇಕೆಂದ್ರೆ ಆ ಪತ್ರಕ್ಕೆ ನಿಗಾ ಕೊಡಲಾಗುವು.

ನಮ್ಮ ವಿಳಾಸ:—

ಯಸ್. ಉಡುಪಿನಾರಾಯಣಾಚಾರ್ಯ ಅಂಡ್ ಕೋ [illegible]

S. Udipi [illegible]

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೮-೦.

೨ ರಿಂದ ೪ ರವರೆಗೆ ೧-೧೦-೦.

ದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಹೆಚ್ಚು.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ [illegible] ಮಾಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ [illegible] ದರ ಹೆಚ್ಚುವುದು.

ಸುಲಭಕ್ರಯ! ಖಾತರಿಮಾಲ್ !! ಬಿಡಬೇಡಿರಿ!!!

5

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೆ॥ ೧ಕ್ಕೆ	೬	ಕಸ್ತೂರಿ ಬಿಲ್ಲೆ ತೊ॥ ೧ಕ್ಕೆ	೨
೨ ಅಂಬರ್‌ಬತ್ತಿ ಸೆ॥ ೧ಕ್ಕೆ	೪	ಜವಾಜಿ ಬಿಲ್ಲೆ ತೊ॥ ೧ಕ್ಕೆ	೧
ಕಸ್ತೂರಿ ಬತ್ತಿ ಸೆ॥ ೧ಕ್ಕೆ	೨।	ಅರಗಜ । ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೆ॥ ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ ೧ಕ್ಕೆ	।
ಗುಲಾಬ್ ಬತ್ತಿ ಸೆ॥ ೧ಕ್ಕೆ	॥	ಸುರಂಗಿ ಸೆಂಟ್ ಸಿ ೧ಕ್ಕೆ	೧
ನಕ್ಷತ್ರಕಾಂತಿಬ॥ ಸೆ॥ ೧ಕ್ಕೆ	೧	ಸ್ವದೇಶಿ ಘ॥ ಪಾ॥ ಡ॥ ೧ಕ್ಕೆ	।
ಕಾಶ್ಮೀರ್ ಕೇಸರಿ ತೊ॥ ೧ಕ್ಕೆ	೧	ಪಚ್ಚಕರ್ಪೂರ ತೊ॥ ೧ ಕ್ಕೆ	॥।

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮೀಷನ್ ಕೊಡಲಾಗುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲಿಯೂ ದೊರೆಯಲಾರದು.

ಎ. ಆರ್. ಸುಬ್ಬಾಚೆಟ್ಟಪ್ಪ.

ಕೃಷ್ಣರಾಜಮೊಹಲ್ಲಾ, ಮೈಸೂರು.

ಸೌಗಂಧಿಕಾಪರಿಣಯ

—:o:—

(ಕಳೆದವಾರದಶೇಷ.)

ಅವರನ್ನೀಕ್ಷಿ ಆ ಮಹಾಗಜವು, ಇವರು ಆರೋಹಣವಂಗೈಯುವದಕ್ಕೆ ಅಪೇಕ್ಷಿಸುವರೆಂದು ತಿಳಿದು ಮೆಲ್ಲನೆ ಕುಳಿತುಕೊಳ್ಳುತ್ತಿರಲದಂ ಕಂಡು, ಸುಪ್ರೀತನಾದ ಸುಗಂಧರಾಜನು ಸುಮತಿಯು ಹಸ್ತಲಾಘವದಿಂದತಿವಿಸ್ತಾರವಾದ, ಕುಳಿತುಕೊಳ್ಳುವದಕ್ಕೆ ಸುಖಕರವಾದ ಆ ಮಹಾಗಜದ ಸ್ಕಂದಪೀಠದಲ್ಲಿ ಕುಳ್ಳಿರಲಾಗ ಸುಮತಿಯು ಮುಂಭಾಗದಲ್ಲಿ ಕುಳ್ಳಿರಲು, ಬಳಿಕ ಆ ರಾಜಮಂತ್ರಿಗಳೀರ್ವರೂ ಆ ವನವಂ ಬಳಸಿಬಂದು ಗಜದಿಂದಿಳಿದು, ಛಾಯಾಗುಪ್ತನು ಪದಗಿಸಿಕೊಡುವ ಗ್ರಾಸವಂ ಆ ಮಹಾಗಜವು ಸ್ವೀಕರಿಸುತಲಿರುವದನ್ನೀಕ್ಷಿ ಸಂತೋಷಪಡುತ, ಒಂದೆರಡುದಿವಸ ಇದೇರೀತಿಯಲ್ಲಿ ಗಜಾರೂಢರಾಗಿ ನದೀತೀರದಲ್ಲಿ ಸಂಚರಿಸುತ್ತಿರಲು, ಅವರನ್ನೀಕ್ಷಿ ಅಲ್ಲಿರುವ ಅರಸುಗಳು ಈ ಮಹಾಗಜದ ನಿಮಿತ್ತವಾಗಿಯೇ ಈ ರಾಯನು ಇಲ್ಲಿದ್ದ ರಾಕ್ಷಸರನೆಲ್ಲರಂ ಸಂಹರಿಸಿರಬೇಕು. ಇದು ದೇವತಾಗಜವಾದ್ದರಿಂದಲೇ ಪರ್ಯವಸಾನದಲ್ಲಿ ಈ ದ್ವೀಪಕ್ಕೆ ಕ್ಷೇಮವನ್ನುಂಟುಮಾಡಿತೆಂದು ತಿಳಿದು ರಾಯನಂ ಸ್ತುತಿಸುತ್ತಿರಲು, ಆಗ ರಾಯನು ಅರಸುಗಳಂ ಕುರಿತು ಅಯ್ಯಾ ಅರಸುಗಳಿರಾ! ಧರ್ಮದಿಂ ಪ್ರಜಾಪಾಲನವಂ ಮಾಡುವವರಾಗಿ ಎಂದುಪೇಳೆ, ಆ ಪಂಥಾಧಿಪತಿಯಾದ ಸುದ್ಯುಮ್ನನೆಂಬ ಅರಸನ್ನೀಕ್ಷಿ ಎಲೈ ಅರಸೇ? ನಮ್ಮಿಂದ ಈ ಪುರವು ಶೂನ್ಯವಾಯಿತೆಂಬ ಲೋಕಾಪವಾದ ಉಂಟಾಗದಂತೆ ಮರಳಿ ಇಲ್ಲಿಪುರವಂ ರಚಿಸಿಕೊಂಡು ಸುಖದಿಂದಿರುವನಾಗೆಂದು ನಿಯಮಿಸಿ, ನಾವು ಜಂಬೂದ್ವೀಪವಂ ಕುರಿತು ತೆರಳುವೆವು. ನಿಮಗೆಲ್ಲರಿಗೂ ಕ್ಷೇಮವಿರಬೇಕೆಂದು ಪೇಳಲು, ಆಗ ಆ ಅರಸುಗಳು ಸುಗಂಧರಾಜನಂ ಸ್ತುತಿಗೈವ ಕೋಲಾಹಲಶಬ್ದದಿಂದಾಪ್ರದೇಶವೆಲ್ಲವು ಮುಖರಿತವಾಗುತ್ತಿರಲು, ಬಳಿಕ ರಾಯನು ಆ ಅರಸುಗಳಂ ಕಳುಹಿಸಿ ನದಿಯಂದಾಟಿ ಮುಂದೆ ತೆರಳುತ ಯದುಗೊಂಡುಬರುವ ಅರಸುಗಳ ತಂಡಗಳನ್ನೀಕ್ಷಿ ಸಮ್ಮಾನಗೊಳಿಸುತ ರಮಣೀಯಂಗಳಾದ ಉದ್ಯಾನಂಗಳಲ್ಲಿಯೂ, ಪುರಂಗಳಲ್ಲಿಯೂ ಇಳಿದು ವಿಶ್ರಮಿಸಿಕೊಂಡು, ಅಲ್ಲಿಯರಾಯರುಗಳು ಮಾಡುವ ಉಪಚಾರಗಳಂ ಸ್ವೀಕರಿಸುತ, ಮುಂದೆತೆರಳಿ ಲವಣಸಮುದ್ರದ ತೀರವಂಪೊಂದಿ, ಆ ಮರುದಿವಸ ಪ್ರಾತಃಕಾಲದಲ್ಲಿ ಪದ್ಮಕಯೋಗವೆಂದರಿತು ಆ ಸಮುದ್ರದಲ್ಲಿ ಸ್ನಾನಾದಿಗಳನ್ನೆರವೇರಿಸಿ ಗಜವಂ ಪೂಜಿಸಿ ಪ್ರದಕ್ಷಿಣನಂ ಮಾಡಿ ಆರೋಹಣಂಗೈಯಲ್ಕಲು, ಆಗ ಮಹಾಗಜವು [illegible] ವಾಗಿ, ಭೂಮಿಯಲ್ಲಿನಡೆಯುವಂತೆ ಸಮುದ್ರದ ಜಲವು ಸೋಂಕದಂತೆ ಅಂತರಿಕ್ಷದಲ್ಲಿಯೇ ತೆರಳುತ್ತಿರಲಾಗ ಛಾಯಾಗುಪ್ತನು ಅತಿ ಜಾಗರೂಕನಾಗಿ ಮುಂಭಾಗದಲ್ಲಿ ನಡೆಯುತ್ತಿರಲು, ಸುಗಂಧರಾಜನು ಆ ಮದಗಜದ ಗಮನವನ್ನೀಕ್ಷಿ ಸಂತೋಷಪಡುತ ಸುಮತಿಯನ್ನೀಕ್ಷಿ ಎಲೈ ಮಂತ್ರಿಯೇ? ಇದೇನಚ್ಚರಿಯು. ಈ ಮದಗಜವು ಭೂಮಿಯಲ್ಲಿನಡೆಯುವಂತೆ ನಿರವಲಂಬನವಾದ ಅಂತರಿಕ್ಷದಲ್ಲಿಯೂ ನಡೆಯುತಲಿಧೆ. ಇದಂ ಕೂಡ ಛಾಯಾಗುಪ್ತನ ಅಣೆವಂಮಾಡಿ ಸಮುದ್ರವಂ ದಾಟಬೇಕೆಂದು ನಿಶ್ಚೈಸಿದ್ದ ನಮ್ಮ ಸಂಕಲ್ಪವನ್ನೂ ವಿಚಾರಿ ಸ್ವತಂತ್ರವಾಗಿ ನಮ್ಮನ್ನು ವಹಿಸಿಕೊಂಡು ಛಾಯಾಗುಪ್ತನ ಕೂಡ ಆಯಾಸಪಡಿಸದಂತೆ ನಡೆಯುವದರಿಂದ ಇದು ಭೂಮಿಯಗಜವಲ್ಲ. ನಮ್ಮ ಸುಕೃತವೇ ಈ ರೂಪದಿಂ ಬಂದಿರುವದೆಂದು ತೋರುತಲಿಧೆ. ಎಂದು ಗಜದ ಗುಣಶ್ಲಾಘನವಂ ಮಾಡುತ ಬರುತ್ತಿರಲು, ಆಗಜವು ಸಾಧಾರಣ ಹಳ್ಳವಂ ದಾಟುವಂತೆ ಅತಿವೇಗದಿಂ ಸಮುದ್ರವಂ ದಾಟಿ ಆಯಾಸವಿಲ್ಲದೆ ಛಾಯಾಗುಪ್ತನ ಬೆಂಬಿಡಿದು ತೆರಳುತ ಅಳಕಾಪುರಿಯನ್ನತಿಕ್ರಮಿಸಿ, ಕುಬೇರನ ಸೌಗಂಧಿಕಾ ಸರೋವರತೀರದಲ್ಲಿಳಿಯಲಾಗ ನೃಪಮಂತ್ರಿಗಳೀರ್ವರೂ ಗಜದಿಂದಿಳಿದು ಛಾಯಾಗುಪ್ತನಂ ಕುರಿತು ಗಜರಾಜನನ್ನುಪಚರಿಸುವವನಾಗೆಂದು ನಿಯಮಿಸಿ, ಅಲ್ಲಿಯ ಪುಷ್ಪವಾಟಿಗಳನ್ನೀಕ್ಷುತ, ಸೌಗಂಧಿಕಾ ಸರೋವರದಲ್ಲಿ ಸಾಯಂಸಂಧ್ಯೆಯನ್ನೆರವೇರಿಸಿ, ಶ್ರಮಹರವಾಗಿ ಮಧುರವಾದ ದಿವ್ಯಫಲಗಳನ್ನಾಸ್ವಾದಿಸಿ ಛಾಯಾಗುಪ್ತನು ತಂದು ಒದಗಿಸಿದ ಕದಳೀವೃಕ್ಷ ಇಕ್ಷುಕಾಂಡ ಪಲ್ಲಕೀಪಲ್ಲವಗಳಂ ಮೆಲ್ಲುತ ವಿಶ್ರಮಿಸಿಕೊಳ್ಳುತ್ತಿರುವ ಗಜವನ್ನೀಕ್ಷುತ್ತಿರಲನ್ನಕೋಳ್ ನಿಶಾಂಧಕಾರವುಂಟಾಗಿ ಆಕಾಶದಲ್ಲಿ ನಕ್ಷತ್ರಗಳು ತಳಿಯುತ್ತಿರಲು, ಆಗ ಸುಮತಿಯು ಛಾಯಾಗುಪ್ತನಂ ಕರೆದು ಅಂಧಕಾರವನ್ನಡಗಿಸುವ ಜ್ಯೋತಿರ್ಲತೆಇದ್ದರೆ ತರುವನಾಗೆಂದು ಪೇಳಲವನು ಅಂಧಕಾರನಿವಾರಣಕ್ಕೆ ಸಾಧನವಿರುವಲ್ಲಿ ಬೇರೆ ಪ್ರಯತ್ನವ್ಯಾತಕ್ಕೆಂದು ಉಗ್ರಬಾಹುವಿನ ಭಂಡಾರದಿಂ ತಂದ ರತ್ನಗಳಂ ರಾಯನ ಮುಂದೆ ರಾಶಿಗೊಳಿಸಲು, ಅವುಗಳ ಪ್ರಭೆಯು ದೀಪಿಕಾ ಸಮೂಹದಂತೆ ತೋರುತ್ತ, ಅಲ್ಲಿಯ ಅಂಧಕಾರವನ್ನೆಲ್ಲವಂ [illegible] ಮಾಡುತ್ತಿರಲು, ಮತ್ತೂ ಆ ಪ್ರಭೆಯಿಂದಲೇ ಆ ಸರೋವರದೊಳಿಲ್ಲ ಕುಳಿತಂಗಳಾದ ಕಮಲಂಗಳೆಲ್ಲವು ವಿಕಸಿತಂಗಳಾಗಿ, ವಿರಲೆಂಬ ಭ್ರಾಂತಿಯಿಂದ ಚಕ್ರವಾಕಮಿಥುನಂಗಳು ವಿಯೋಗದುಃಖವಂ ಬಿಟ್ಟು ಸಂತೋಷವಂಬಟ್ಟು ಸುಖದಿಂದಿರಲು, ಪಕ್ಷಿಗಳ ಗುಂಪುಗಳು ಗೂಡುಗಳಿಂದ ಹೊರಡುವದಕ್ಕೆ ಕಲಕಲವಂ ಮಾಡುತ್ತಿರಲು, ಇದೆಲ್ಲವನ್ನೀಕ್ಷಿ ಸುಗಂಧರಾಯನು ಈ ರತ್ನಗಳು ದೇವತಾಯೋಗ್ಯವೇ ಹೊರತು ಮನುಷ್ಯಯೋಗ್ಯಂಗಳಲ್ಲವೆಂದು ತಿಳಿಯುತ ತಳಿಗುಗಳ ಹಾಸಿಗೆಯಲ್ಲಿ ಸುಖದಿಂದಿರಲು, ಬಳಿಕ ಆ ಉದ್ಯಾನರಕ್ಷಕರಾದ ಯಕ್ಷರು ಇದೆಲ್ಲವನ್ನೀಕ್ಷಿ ತ್ವರೆಯಿಂಪೋಗಿ, ತಮಗೆ ಪತಿಯನಾದ ಕುಬೇರನಂ ಕಂಡು ಕೈಮುಗಿದು, ಯಾರೋ ನೃಪಮಂತ್ರಿಗಳೀರ್ವರು ಗಜಾರೂಢರಾಗಿ ಅಂತರಿಕ್ಷಮಾರ್ಗದಿಂ ಬಂದು ಸೌಗಂಧಿಕಾ ಸರೋವರದ ತೀರದೊಳಿಳಿದಿರುವರಂ ಅವರುಗಳ ಸಮೀಪದೊಳ್ ರಾಶಿಗೊಳಿಸಿರುವ ರತ್ನಗಳಕಾಂತಿಯಿಂದ ವನವೆಲ್ಲವೂ ಬೆಳಗುತ್ತಿರುವದ ಕೂಡಾ ವಿಜ್ಞಾಪಿಸಲು, ಆ ಕಾಲದೊಳ್ ರಾಕ್ಷಸಸಂಘ ಸಮೇತನಾದ ಉಗ್ರಬಾಹುವೆಂಬ ರಾಕ್ಷಸನು ನೃಪನಂ ಕೆಣಕಿ ಭಸ್ಮವಾಗಿ, ಅವನಬಳಿಯಲ್ಲಿದ್ದ ಗಜವು ಆ ಧೊರೆಯ ಸ್ವಾಧೀನವಾಯಿತೆಂದು ಬೆಳೆದ ಕಿನ್ನರವಾಕ್ಯವಂ ಕೇಳಿ ಏನುವಿಶೇಷವಿರುವದು ಇದಂ ತಿಳಿಯಬೇಕೆಂದು ನಿಶ್ಚಯಿಸಿರುವ ಕುಬೇರನು ಮುನಿವೇಷವಂ ಧರಿಸಿ, ಮಣಿಗ್ರೀವನಂ ಶಿಷ್ಯನಂ ಮಾಡಿಕೊಂಡು, ಸ್ನಾನಾರ್ಥವಾಗಿ ಸೌಗಂಧಿಕಾ ಸರೋವರಕ್ಕೆ ಬರುವವನಂತೆ ಬರುತ್ತಿರಲನ್ನಕೋಳ್ ಸೂರ್ಯೋದಯವಾಗಲು, ಆಗ ನೃಪಮಂತ್ರಿಗಳು ಆ ಸರೋವರದಲ್ಲಿ ಸ್ನಾನವಂಮಾಡಿ ಕುಳಿತಿರುವದಂ ಕಂಡು ಅವರ ವಶದಲ್ಲಿರುವ ಗಜವನ್ನೀಕ್ಷಿ ಕುಬೇರನು ಇದು ಇಂದ್ರನಾಸ್ಥಾನದಲ್ಲಿದ್ದ ಪ್ರಾಚೀನವಾದ ಐರಾವತವು. ಏನು ಕಾರಣ ಇವರಿಗೆ ಸ್ವಾಧೀನವಾಗಿರುವದೋ? ಎಂದು ತಿಳಿಯುತ, ರಾಯನಂ ದೂರದಿಂ ದೃಷ್ಟಿಸಿನೋಡಿ, ಇದೇನು ವಿಚಿತ್ರವು? ಇಲ್ಲಿಗೆ ದೇವೇಂದ್ರನು ಬಂದಿರುವನು. ಮಹರ್ಷಿಯ ಶಾಪದಿಂ ಸ್ವರ್ಗವು ರಾಕ್ಷಸರವಶವಾಗಿ, ಶಚೀಸಮೇತನಾದ ದೇವೇಂದ್ರನು ಭೂಲೋಕದಲ್ಲಿ ಪುಟ್ಟಿರುವನು. ಶಚೀದೇವಿಯು ಎಲ್ಲಿರುವಳೋ, ಮತ್ತೂ ಆತನ ಮಸ್ತಗರು ಎಲ್ಲೆಲ್ಲಿರುವರೋ? ಎಂದಾಲೋಚಿಸುತ, ಈತನು ಇಂದ್ರನಾದುದರಿಂದಲೇ, ಪರಿವಾರಸಮೇತನಾದ ಮಹಾರಾಕ್ಷಸನಂ ಸಂಹರಿಸಿ ಈ ಮಹಾಗಜವಂ ಸಾಧಿಸಿಕೊಂಡುಬಂದಿರುವನು. ಮತ್ತು ಭೂಸ್ಪರ್ಶದೋಷದಿಂದ ತನ್ನಸ್ವಭಾವವಂ, ಗಜದ ಸ್ವಭಾವವಂ ಕೂಡ ತಿಳಿದಿರುವನೋ ಇಲ್ಲವೋ ಎಂದು ಮನದಲ್ಲಿ ವಿಕಲ್ಪವಂ ಮಾಡುತ ಸಮೀಪಕ್ಕೆ ಬಂದು ಜಯಶೀಲನಾಗೆಂದು ಹರಸಲು, ಸುಗಂಧರಾಜೇಂದ್ರನು ಯಾರೋ ಋಷಿಗಳು ದರ್ಶನವಂ ಕೊಡಲೋಸುಗ ಬಂದಿರುವರೆಂದು ತಿಳಿದು ಅಭಿವಂದಿಸಿ, ಉಚಿತಾಸನದಲ್ಲಿ ಕುಳ್ಳಿರಿಸಿ, ಅರ್ಘ್ಯಪಾದ್ಯಗಳಿಂದುಪಚರಿಸಿ ನಾನು ಧನ್ಯನಾದೆನು.

(ಸಶೇಷ.)

ವ್ಯವಸಾಯಕವಿಷಯಗಳು.

ಮದ್ರಾಸಾದಿಪತ್ಯದಲ್ಲಿ ಭತ್ತದ ವ್ಯವಸಾಯ.

ಭತ್ತದ ಸಾಗುವಳಿಯಲ್ಲಿ ಹೆಚ್ಚು ಆಸಕ್ತಿಯುಳ್ಳ ಜನರೆಲ್ಲರೂ ಕಳೆದ ೫-೬ ವರುಷಗಳಿಂದ ಪರೀಕ್ಷಿಸಿ ನೋಡಿದ್ದರಲ್ಲಿ, ಒಟ್ಲು ಹೊಯ್ದು ಪೈರುಗಳನ್ನು ಒಂದೊಂದಾಗಿ ನಾಟಿ ಹಾಕಿದರೆ, ಬಿತ್ತನೆಯ ಬೀಜವನ್ನು ತಕ್ಕಮಟ್ಟಿಗೆ ಉಳಿಸಿಕೊಳ್ಳುವದಲ್ಲದೆ ಬೆಳೆಯಲ್ಲಿಯೂ ಹೆಚ್ಚು ಉತ್ಪತ್ತಿಯನ್ನು ಹೊಂದಬಹುದೆಂದು ತಿಳಿದುಬಂದಿದೆ. ಮೊದಲು ಒಂದೆರಡು ವರ್ಷಗಳು ಪರೀಕ್ಷಾರ್ಥವಾಗಿ ಸಣ್ಣ ಸಣ್ಣ ತಾಕುಗಳಲ್ಲಿ ಒಂದೊಂದೇ ಸೊಸಿಯನ್ನು ನಾಟಿಹಾಕಿದ ರೈತರೆಲ್ಲರೂ ಕ್ರಮೇಣ ಜಮೀನುಗಳಲ್ಲೆಲ್ಲಾ ಇದೇಕ್ರಮವನ್ನೇ ಅನುಸರಿಸಬೇಕೆಂದು ಪ್ರಯತ್ನಪಡುತ್ತಿದ್ದಾರೆ. ಇಂಥಾ ವ್ಯವಸಾಯಗಾರರನ್ನು ವಿಚಾರಿಸಲಾಗಿ, ಒಂದೊಂದೇ ಸೊಸಿಯನ್ನು ನಾಟಿಹಾಕುವದಕ್ಕೆ ಈಗ ರೂಢಿಯಲ್ಲಿರುವಂತೆ ನಾಲ್ಕಾರು ಸೊಸಿಗಳನ್ನು ನಾಟಿಹಾಕುವದಕ್ಕಿಂತಲೂ ಹೆಚ್ಚು ಖರ್ಚು ತಗಲುವದಿಲ್ಲವೆಂದು ಹೇಳುತ್ತಾರೆ. ಆದರೆ ಈ ವಿಷಯದಲ್ಲಿ ಅನುಭವಸ್ಥರಲ್ಲದೆ ಕೆಲವು ಜನರು ಹೀಗೆ ಒಂದೊಂದೇ ಸೊಸಿಯನ್ನು ನಾಟಿಹಾಕಬೇಕಾದರೆ ಜಮೀನಿಗೂ ಮತ್ತು ಒಟ್ಲು ಹುಯ್ಯುವಕ್ಕೆ ಪ್ರದೇಶಕ್ಕೂ ಹೇರಳವಾಗಿ ಗೊಬ್ಬರವನ್ನು ಹಾಕಿ ಹೆಚ್ಚು ಮುತವರ್ಜಿಯಿಂದ ನೋಡಿಕೊಳ್ಳಬೇಕಾಗುವದೆಂಬದಾಗಿಯೂ ಮತ್ತು ಹೆಚ್ಚು ಕೆಲಸ ಮಾಡಬೇಕಾಗುವದೆಂಬದಾಗಿಯೂ ಮನಸ್ಸಿಗೆ ಹೇಳುತ್ತಾರೆ.

ಕಳೆದ ವರ್ಷ ಮದರಾಸು ಕುಂಭಕೋಣ ತಾಲ್ಲೂಕಿನಲ್ಲಿ ಮಿ॥ ಟಿ. ಎಸ್. ನಾರಾಯಣಸ್ವಾಮಿ ಅಯ್ಯರವರು ಈರೀತಿಯಾಗಿ ಮೂರುಮೂರು ಅಡಿಗಳ ದೂರವಾಗಿ ಒಂದೊಂದೆ ಸೊಸಿಯನ್ನು ನಾಟಿಹಾಕಿ ಪ್ರತಿ ಸೊಸಿಗೂ ಬೇರೆ ಬೇರೆಯಾಗಿ ಗೊಬ್ಬರವನ್ನುಹಾಕಿ ವ್ಯವಸಾಯವಮಾಡಿ ನೋಡಿದ್ದರಲ್ಲಿ, ಈಗ ರೂಢಿಯಲ್ಲಿರುವ ಪದ್ಧತಿಗನುಸಾರವಾಗಿ ವ್ಯವಸಾಯ ಮಾಡಿದರೆ ಉತ್ಪನ್ನವಾಗುವದಕ್ಕಿಂತಲೂ ಹೆಚ್ಚು ಉತ್ಪತ್ತಿಯಾಯಿತೆಂದು ತಿಳಿಯಬರುತ್ತದೆ.

ಈ ಹೊಸಕ್ರಮಕ್ಕನುಸಾರವಾಗಿ ವ್ಯವಸಾಯ ಮಾಡಿ ಪರೀಕ್ಷಿಸಬೇಕೆಂದು ಇವರು ಅಭಿಪ್ರಾಯ ಪಡುವ ಹೊತ್ತಿಗೆ ಕಾಲವು ಮೀರಿಹೋಗುತ್ತಾದ್ದರಿಂದ, ಇದಕ್ಕೋಸ್ಕರವಾಗಿ ಬೇರೆ ನಾಟಿ ಪೈರುಗಳನ್ನು ಬೆಳಸಲು ಸಾಧ್ಯವಾಗಲಿಲ್ಲ. ಮತ್ತು ಜಮೀನಿಗೂ ಹೆಚ್ಚು ವ್ಯವಸಾಯವೇನೂ ಮಾಡಲಿಲ್ಲ. ನಾಟಿಗೆ ಮುಂಚೆ ಜಮೀನನ್ನು ಮೂರಾವರ್ತಿ ಉತ್ತು ಮಮಟಿಯಿಂದ ಚೆನ್ನಾಗಿ ಅಗತೆಮಾಡಿಸಿದರು. ಪೆರುಂಸಂಬಾ ಎಂಬ ಭತ್ತವನ್ನು ಒಟ್ಲುಹುಯ್ದು ನಲವತ್ತು ದಿನಗಳಾದ ಮೇಲೆ ದಪ್ಪ ಕಾವುಗಳುಳ್ಳ ಸೊಸಿಗಳನ್ನು ಆರಿಸಿ, ಪೈರುಗಳ ಎರಡು ಕತೆಗಳಲ್ಲೂ ಸುಮಾರು ೨ | ಅಡಿ ಜಾಗವನ್ನು ಬಿಟ್ಟು ಡಿಸೆಂಬರು ಪ್ರಾರಂಭದಲ್ಲಿ ನಾಟಿಹಾಕಿದರು. ನಾಟಿಗೆ ಮುಂಚೆ ಪ್ರತಿಗುಳಿಗೂ ಒಂದು ಹಿಡಿ ದನದ ಗೊಬ್ಬರವನ್ನು ಮತ್ತು ಒಂದುಹಿಡಿ ಮರಳನ್ನೂ ಬೆರಸಿ ಹಾಕಿದರು. ಕಳೆ ಕೀಳುವಾಗ್ಗೆ ಪೈರುಗಳ ಸುತ್ತಲೂ ಚೆನ್ನಾಗಿ ಅಗತೆಮಾಡಿದರು. ನಂತರದಲ್ಲಿ ಎಕರೆಗೆ ೧ ಖಂಡಿಗ ನೆಲಗಡಲೆಕಾಯಿನ ಹಿಂಡಿಯನ್ನು ೫ ಗಾಡಿ ಬೂದಿಯಜತೆಯಲ್ಲಿ ಬೆರಸಿ ಪ್ರತಿ ಪೈರಿಗೂ ಸಮನಾಗಿ ಸುತ್ತಲೂ ಕಯ್ಯಿಂದ ಅಗೆದು ಗೊಬ್ಬರವಾಗಿ ಹಾಕಿದರು. ಇದೇರೀತಿ ೨೦ ದಿನಗಳ ನಂತರ ಪುನಃ ಮಾಡಿದರು. ಕಟಾವು ಕಾಲದವರಿವಿಗೂ ಜಮೀನಿನಲ್ಲಿ ೧ ಅಂಗುಲ ಪ್ರಮಾಣ ನೀರುನಿಂತಿತ್ತು. ಪ್ರತಿ ಸೊಸಿಯಲ್ಲಿಯೂ ೬೦ ರಿಂದ ೧೦೦ ರವರಿವಿಗೂ ಕವಲು ಒಡದಿತ್ತು. ಗೊಬ್ಬರಕ್ಕೂ ಮತ್ತು ಕೂಲಿಗೂ ಒಟ್ಟು ಎಕರೆಗೆ ರೂ. ೨೮-೦-೦ ಖರ್ಚಾಯಿತು. ಎಕರೆಗೆ ಸುಮಾರು ೨೩ ಪಲ್ಲ ಭತ್ತವೂ ೯೦ ಹೊರೆ ಹುಲ್ಲೂ ಉತ್ಪತ್ತಿಯಾಯಿತು.

ಈ ವರ್ಷವೂ ಸಹಾ ಮಿ॥ ಟಿ. ಎಸ್. ನಾರಾಯಣಸ್ವಾಮಿ ಅಯ್ಯರವರು ಸುಮಾರು ೩ | ಎಕರೆ ವಿಸ್ತೀರ್ಣದಲ್ಲಿ ಪೆರುಂಸಂಬಾ ಎಂಬ ಭತ್ತವನ್ನೂ ಮತ್ತು ೧ ಎಕರೆಯಲ್ಲಿ ಬಂಕುಎಂಬ ಭತ್ತವನ್ನೂ ನಾಟಿಹಾಕಿಸಿದ್ದಾರೆ. ಇವುಗಳಲ್ಲಿ ಪೆರುಂಭತ್ತವನ್ನು ೧ ಗುಂಟೆ ಪ್ರದೇಶದಲ್ಲಿ ೩ ಸೇರಿನಂತೆ ಜುಲೈತಿಂಗಳು ಮಧ್ಯ ಭಾಗದಲ್ಲಿ ಒಟ್ಲುಹೊಯ್ದು ಸೆಪ್ಟಂಬರ್ ತಿಂಗಳು ಪ್ರಾರಂಭದಲ್ಲಿ ನಾಟಿಹಾಕಿದರು. ಕಳೆದ ವರ್ಷದಂತೆಯೇ ಈ ಸಲವೂ ಸಾಲುಗಳ ಮಧ್ಯೆ ೨ | ಅಡಿದೂರವೂ ಮತ್ತು ಪೈರುಗಳ ಮಧ್ಯೆ ೧ ಅಡಿದೂರವೂ ಬಿಟ್ಟಿತ್ತು. ಒಂದುವರೇಸೇರು ಬೀಜದಿಂದ ಆದ ಪೈರು ೨-೨ | ಎಕರೆ ಜಮೀನಿನ ನಾಟಿಗೆ ಸಾಕಾಯಿತು. ನಾಟಿಯಾದ ಒಂದು ತಿಂಗಳಲ್ಲೇ ಒಂದೊಂದು ಸೊಸಿಯಲ್ಲಿ ೩೦-೩೫ ಕವಲುಗಳು ಒಡೆದ್ದವು. ಈ ವರುಷ ಈ ರೀತಿ ಸಕಾಲದಲ್ಲಿ ವ್ಯವಸಾಯವು ಆರಂಭವಾದದ್ದರಿಂದ ಕಳೆದವರ್ಷದ ಎರಡರಷ್ಟು ಉತ್ಪತ್ತಿಯಾಗಬಹುದೆಂದು ಜನವರಿ ತಿಂಗಳಲ್ಲಿ ಅಂದಾಜುಮಾಡಿದರು.

ಶುಂಠಿ

ಉಷ್ಣದೇಶಗಳಲ್ಲಿ ಶುಂಠಿಯು ಬಹಳವಾಗಿ ಬೆಳೆಯುತ್ತದೆ. ಶುಂಠಿಯು ಕೊನೆಯಲ್ಲಿ ಯಣ್ಣೆಯಿರುತ್ತದೆ. ಇ ಆದಾ ಭೂಗುಣಕ್ಕನುಸಾರವಾಗಿ ಹೆಚ್ಚಾಗಿಯೂ ಮತ್ತು ಕಡಿಮೆಯಾಗಿಯೂ ಇರುವದು. ಇದನ್ನು ಬೆಳಸಲು ಸು ರಾಗಿ ಉತ್ಕೃಷ್ಟವಾದ ಜಮೀನೇ ಆಗಬೇಕು. ಜಮೀನು ತುಳಾಗಿಯೇ ಆಗಲಿ, ಜೌಗುಪ್ರದೇಶವಾಗಿಯೇ ಆಗಲಿ ಕೂಡದು, ಮರಳು ಮತ್ತು ಸುಣ್ಣದ ಕಲ್ಲುಗಳುಳ್ಳ ಜಿಗ ಭೂಮಿಯು ಈ ವ್ಯವಸಾಯಕ್ಕೆ ಸಪೂರ್ಣತ್ಕೃಷ್ಟವಾದದ್ದು. ಬಿತ್ತನೆಗೆ ಕೊನೆಗಳನ್ನೇ ಉಪಯೋಗಿಸಬೇಕು. ಹೀಗೆ ನೆ ವದಕ್ಕೆ ಉಪಯೋಗಿಸತಕ್ಕ ಶುಂಠಿಯನ್ನು ತೇವವಿಲ್ಲದ ದಲ್ಲಿ ಇಟ್ಟಿದ್ದು ಅವುಗಳನ್ನು ಪ್ರತಿಚೂರಿಗೂ ಒಂದೊ ಕಣ್ಣುಗಳಿರುವಂತೆ ಒಂದೂವರೆ ಅಂಗುಲದಿಂದ ಎರಡುಅಂ ಲಗಳು ಉದ್ದವಾದ ಚೂರುಗಳಾಗಿ ಕತ್ತರಿಸಿ ನೆಡಬೇ ಜಮೀನನ್ನು ಆಲೂಗೆಡ್ಡೆ ವ್ಯವಸಾಯಕ್ಕೆ ಯಾವರೀತಿ ಮಾಡುತ್ತದೆಯೋ ಅದೇರೀತಿಯಲ್ಲಿ ಹದಮಾಡಬೇಕು. ಒ ಅಡಿ ಗಾತ್ರವಾಗಿ ಬದುಗಳನ್ನು ಕಟ್ಟಿ ೨ | ಅಡಿ ಅಗಲ ನೇಗಿಲು ಸಾಲುಗಳನ್ನು ಹೊಡೆದು ಬದುಗಳಮೇಲೆ ಅಂಗುಲ ಮೊದಲ್ಗೊಂಡು ೧೧ll ಅಂಗುಲಗಳ ದೂರವಾಗಿ ೩-೪ ಅಂಗುಲ ಆಳವಾದ ಗುಣಿಗಳನ್ನು ಡಿ ಶುಂಠಿಗೆಡ್ಡೆಯ ಚೂರುಗಳನ್ನಿಟ್ಟು ಇವುಗಳು ಕೊ ಹೋಗದಂತೆ ಮೇಲೆ ಚೆನ್ನಾಗಿ ಮುಚ್ಚಬೇಕು. ಇದಗ ಣಗುವದಕ್ಕೆ ಪ್ರಾರಂಭವಾದ ಕೂಡಲೆ ಅಂದರೆ ಸು ೯ ತಿಂಗಳಮೇಲೆ ಫಸಲನ್ನು ಕೀಬೆ ಮಾಡುವದಕ್ಕೆ ಸ ಗಿರುತ್ತದೆ. ಆಗ್ಗೆ ಗೆಡ್ಡೆಗಳನ್ನು ಅಗಿದುಕೊಳ್ಳಬೇಕು. ವಾಯ ಗೆಡ್ಡೆಗಳನ್ನೆಲ್ಲಾ ನೀರಿನಲ್ಲಿ ಚೆನ್ನಾಗಿ ತೊಳೆ ರುಗಳೆಲ್ಲವನ್ನೂ ಕತ್ತರಿಸಬೇಕು. ಈ ತೊಳೆದ ಕೊನೆ ಒಣಶುಂಠಿಯನ್ನು, ಮತ್ತು ಮೊರಬ್ಬಾ ಪನ್ನೂ ಮಾ ಕೆ. ಒಣಶುಂಠಿಯಲ್ಲಿ ಸಿಪ್ಪೆ ಸುಲಿದ ಅಥವಾ ಬಿಳಿ ಶುಂ ಬದಾಗಿಯೂ ಮತ್ತುಸಿಪ್ಪೆ ಸುಲಿಯದ ಅಥವಾ

ಎಂಬದಾಗಿಯೂ, ಎರಡು ತರಹ ಉಂಟು. ಗೆಡ್ಡೆಗಳನ್ನು ನಿರ್ಮಲವಾದ ನೀರಿನಲ್ಲಿ ತೊಳೆದೊಡನೆಯೇ ಒಣಗಿಸಿದರೆ ಕರೀ ಶುಂಠಿಯಾಗುವದು. ಬಿಳೀಶುಂಠಿಯನ್ನು ತಯಾರು ಮಾಡಬೇಕಾದರೆ ಸಿಪ್ಪೆಯನ್ನು ಸಾಧ್ಯವಾದಷ್ಟು ತೆಳುವಾಗಿ ತೆಗೆದುಹಾಕಬೇಕು. ಹಾಗಿಲ್ಲವಿದ್ದರೆ ಸಿಪ್ಪೆಯ ಕೆಳಭಾಗದಲ್ಲಿರುವ ಶುಂಠಿಯ ಸುಗಂಧ ಪದಾರ್ಥಗಳೆಲ್ಲವೂ ವ್ಯರ್ಥವಾಗಿಹೋಗುವವು. ಸಿಪ್ಪೆಯನ್ನು ಸುಲಿದ ತಕ್ಷಣವೇ ಗೆಡ್ಡೆಗಳನ್ನು ನಿರ್ಮಲವಾದ ನೀರಿನಲ್ಲಿ ಹಾಕಿ ಒಂದು ರಾತ್ರಿಯ ಕಾಲ ಅದರಲ್ಲೇ ಬಿಟ್ಟಿದ್ದು ಮಾರನೆ ದಿನಕ್ಕೆ ಅವುಗಳನ್ನು ನೀರಿನಿಂದ ಹೊರಕ್ಕೆ ತೆಗೆದು ಒಣಗಿಸಬೇಕು. ಶುಂಠಿಯು ಹೆಚ್ಚು ಬಿಳುಪಾಗಿದ್ದಷ್ಟೂ ಜನರು ಅದನ್ನು ಹೆಚ್ಚಾಗಿ ಮೋಹಿಸುವರು. ಹೆಚ್ಚು ಬಿಳುಪು ಬಣ್ಣ ಬರಲೆಂದು ಕ್ಲೋರೈಡ್ ಆಫ್ ಲೈಮ್ ಮತ್ತು ಪ್ಲಾಸ್ಟರ್ ಆಫ್ ಪ್ಯಾರಿಸ್ ಇವೇ ಮೊದಲಾದ ಪದಾರ್ಥಗಳೊಡನೆ ಶುಂಠಿಗೆಡ್ಡೆಯನ್ನು ಬೆರಸಿಡುತ್ತಾರೆ. ಆದರೆ ಹೀಗೆ ಮಾಡುವದು ಶುದ್ಧ ತಪ್ಪು.

ಮೊರಬ್ಬಾವನ್ನು ಮಾಡಬೇಕಾದರೆ ಗೆಡ್ಡೆಗಳನ್ನು ಚನ್ನಾಗಿತೊಳೆದು ನೀರಿನಲ್ಲಿ ಹಾಕಿ ಕುದಿಸಿ, ಸಿಪ್ಪೆಯನ್ನುಸುಲಿದು ಮಣ್ಣಿನ ಪಾತ್ರೆಯಲ್ಲಿ ಹಾಕಿ ತಕ್ಷಣವೇ ಕುದಿಯುತ್ತಿರುವ ಸಕ್ಕರೆಪಾಕವನ್ನು ಅವುಗಳಮೇಲೆ ಸುರಿಯಬೇಕು. ಇಪ್ಪತ್ತನಾಲ್ಕು ಘಂಟೆಗಳ ತರುವಾಯ ಈ ಪಾಕವನ್ನು ಬಸಿದು, ಪುನಃ ಪಾಕವನ್ನು ಕಾಯಿಸಿ ಗೆಡ್ಡೆಗಳಿರುವ ಪಾತ್ರೆಗೆ ಸುರಿಯಬೇಕು. ಅನಂತರ ಎರಡು ದಿನಗಳಾದ ಮೇಲೆ ಹೀಗೆಯೇ ಮಾಡಬೇಕು. ತರುವಾಯ ಶುಂಠಿಯನ್ನು ಪಾಕದಿಂದ ಹೊರಕ್ಕೆ ತೆಗದು ಒಣಗಿಸಿ ಇಟ್ಟುಕೊಳ್ಳಬಹುದು. ಇಲ್ಲದಿದ್ದರೆ ಪಾಕದ ಜೊತೆಯಲ್ಲಿಯೇ ಹೂಜೆಗಳಲ್ಲಿ ಹಾಕಿಡಬಹುದು.

ಎಕರೆಗೆ ೪೮ರಿಂದ ೩೦ ಮಣಗಳವರಿವಿಗೂ ಉತ್ಪತ್ತಿಯಾಗುವದು. ಎಕರೆಗೆ ೯೦ಮಣಗಳು ಉತ್ಪತ್ತಿಯಾಗಿರುವದೂ ಉಂಟು. ಆದರೆ ಇದು ಬಹಳ ಅಪರೂಪ. ಶುಂಠಿಯು ಹೆಚ್ಚು ಬೆಲೆ ಬಾಳುವದರಿಂದ ಇದನ್ನು ಬೆಳೆದು ಹೆಚ್ಚು ಲಾಭವನ್ನು ಸಂಪಾದಿಸಬಹುದು. ಆದರೆ ಇದರ ವ್ಯವಸಾಯಕ್ಕೆ ಬಹಳ ಕಷ್ಟಪಡಬೇಕಾಗಿರುವದರಿಂದ ವಿಸ್ತಾರವಾದ ಜಮೀನುಗಳಲ್ಲಿ ಇದನ್ನು ವ್ಯವಸಾಯ ಮಾಡುವದಕ್ಕೆ ಆಗಲಾರದು. ಅಲ್ಲದೆ ಶುಂಠಿಯು ಗಿಡವು ಭೂಸಾರವನ್ನು ಜಾಗ್ರತೆಯಾಗಿ ಹೀರಿಬಿಡುತ್ತಾದ್ದರಿಂದ, ಒಂದೇ ಜಮೀನಿನಲ್ಲಿ ಪದೇಪದೇ ಶುಂಠಿಯ ವ್ಯವಸಾಯವನ್ನು ಮಾಡಬೇಕಾದರೆ ಗೊಬ್ಬರವನ್ನು ಯಥೇಚ್ಛವಾಗಿ ಹಾಕಬೇಕಾಗುವದು.

ಲಂಡನ್ ಪಟ್ಟಣದಲ್ಲಿ ಸುಮಾರು ೫ ಮಣ ಚೆನ್ನಾಗಿಬಣಗಿದ ಶುಂಠಿಗೆ ೧೫ ರಿಂದ ೨೩ ರೂಪಾಯಿನವರಿವಿಗೂ ಬೆಲೆಯಾಗುವದು.

ಸರ್ಕಾರಿಯಪ್ಪಣೆ.

ಮೈಸೂರು ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸುವ ವಿಚಾರದಲ್ಲಿ ಈ ದೇಶೀಯರಾದ ವಿದ್ಯಾವಂತರು, ಪ್ರಮುಖ ಬೇಸಾಯಗಾರರು, ವರ್ತಕರು ಮೊದಲಾದವರು ಸರ್ಕಾರಿಯಧಿಕಾರಿಗಳ ಕೂಡ ಕಲತು ಆಲೋಚಿಸುವಂತೆ ಮಾಡಬೇಕೆಂಬುದು ಕೆಲಕಾಲದಿಂದ ಶ್ರೀಮನ್ಮಹಾರಾಜರವರ ಪರ್ಯಾಲೋಚನೆಯಲ್ಲಿದ್ದಿತು.

೨. ಪ್ರಜಾಪ್ರತಿನಿಧಿಸಭೆಯು ಈ ಭಾಗದಲ್ಲಿ ಸ್ವಲ್ಪಮಟ್ಟಿಗೆ ಪ್ರವರ್ತಿಸಿದ್ದಾಗ್ಯೂ ಅದು ಬಹುಜನರ ಕೂಟವಾಗಿಯೂ, ವರ್ಷಕ್ಕೊಂದಾವೃತ್ತಿ ಸೇರತಕ್ಕದಾಗಿಯೂ ಇರುವುದರಿಂದ ಹೆಚ್ಚು ಪ್ರಯೋಜನಕಾರಿಯಾಗಿರುವುದಿಲ್ಲ. ಈಗ ಪರ್ಯಾಲೋಚನೆಯಲ್ಲಿರುವ ಪ್ರಜೋಪಯೋಗವಾದಂಥ ಅನೇಕ ವಿಷಯಗಳನ್ನು ಅರ್ಹರಾದ ಸಭಾಸ್ತರರು ಸರ್ವದಾ ತಮ್ಮ ಗಮನಕ್ಕೆ ತಂದುಕೊಂಡು ಚರ್ಚಿಸಿ ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳುಹತಕ್ಕದಾಗಿದೆ. ಜನರು ತಮ್ಮ ಬುದ್ಧಿ, ಶಕ್ತಿ, ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುವಂತೆ ಉತ್ತೇಜನ ಕೊಡುವುದಕ್ಕಾಗಿಯೂ, ಸರ್ಕಾರದವರು ಸಹಾಯಮಾಡಬಹುದಾದ ಸಂದರ್ಭದಲ್ಲಿ, ಸಾಧ್ಯವಾದುಪಾಯಗಳನ್ನು ಅನುಷ್ಠಾನಕ್ಕೆ ತರುವಂತೆ ಸೂಚಿಸುವುದಕ್ಕಾಗಿಯೂ ಆಗಾಗ್ಗೆ ಸಭೆ ಸೇರಿ ಆಲೋಚಿಸುವುದವಶ್ಯಕವೆಂದು ಶ್ರೀಮನ್ಮಹಾರಾಜರವರ ಅಭಿಪ್ರಾಯವಾಗಿರುವುದು.

೩. ಪ್ರತಿವರ್ಷದ ಜೂನ್‌ತಿಂಗಳಲ್ಲಿ ರಾಜಧಾನಿಯಲ್ಲಿ ನಡಿಯುವ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವಕ್ಕಾಗಿ ಎಲ್ಲ ಶಾಖಾಧಿಕಾರಿಗಳೂ, ಡಿಸ್ಟ್ರಿಕ್ಟ್ ಕಮಿಷನರುಗಳೂ ಸೇರುತ್ತಾರಾದುದರಿಂದ ಆ ಸಮಯದಲ್ಲಿ ಸಂಸ್ಥಾನದ ಸಂಪದಭಿವೃದ್ಧಿಗೆ ಕಾರಣವಾದ ವಿಷಯಗಳನ್ನು ಚರ್ಚಿಸುವುದಕ್ಕಾಗಿ ಒಂದು ವಾರ್ಷಿಕ ಸಭೆಯು (ಕಾನ್ಫರೆನ್ಸು) ನ್ನು ಕೂಡಿಸುವುದು ಸೂಕ್ತವಾಗಿ ತೋರುತ್ತದೆ. ಈ ಸಭೆಯವರು ತಾವು ಕೈಗೊಳ್ಳುವ ವಿಷಯಗಳನ್ನೆಲ್ಲಾ ಅವು ಕಾರ್ಯಾಂಶಕ್ಕೆ ಪಕ್ವವಾಗುವವರೆಗೂ ಚೆನ್ನಾಗಿ ಚರ್ಚಿಸಿ ನಿರ್ಧರಿಸತಕ್ಕದು ಅವರ ಕರ್ತವ್ಯವಾಗಿದೆ. ಪ್ರಜೆಗಳು ತಾವೇ ನೆರವೇರಿಸತಕ್ಕ ವಿಷಯಗಳನೇಕವಾಗಿವೆ ಅಥವಾ ಅಂಥ ವಿಷಯಗಳಲ್ಲಿ ಅವರ ಸಹಾಯವು ಅವಶ್ಯಕವಾಗಿರುತ್ತದೆ. ಈ ಸಭಾಕಾರ್ಯಗಳು ಪ್ರಜಾಪ್ರತಿನಿಧಿ ಸಭೆಯ ಕಾರ್ಯಗಳಿಗಿಂದಿಗೂ ಅಡ್ಡಿಯಾಗುವುದಿಲ್ಲವು. ಪ್ರಜಾಪ್ರತಿನಿಧಿ ಸಭೆಯವರಭಿಪ್ರಾಯದಂತೆ ನಿಯಮನಿರ್ಮಾಣ ಸಭಾಸ್ತರರಾಗಿ ನೇಮಿಸಲ್ಪಟ್ಟಿರುವ ಇಬ್ಬರು ಈ ಸಭೆಯ ಮೆಂಬರುಗಳಾಗಿರತಕ್ಕದು.

೪. ಈ ಕೆಳಗೆ ಹೇಳುವ ಅಧಿಕಾರಿಗಳೂ, ದೊಡ್ಡಮನುಷ್ಯರುಗಳೂ ಈ ಸಭೆಯ ಮೆಂಬರುಗಳಾಗಿ ನೇಮಿಸಲ್ಪಟ್ಟಿರುತ್ತಾರೆ:—

ಪ್ರೆಸಿಡೆಂಟರು—ಮೈಸೂರು ಸಂಸ್ಥಾನದ ದಿವಾನರು. ವೈಸ್‌ಪ್ರೆಸಿಡೆಂಟರುಗಳು—ಕೌನ್ಸಿಲ್ ಮೆಂಬರುಗಳು. ಮೆಂಬರುಗಳು—(೧) ಶಾಖಾಧಿಕಾರಿಗಳಲ್ಲಿ ಸರ್ಕಾರದಿಂದ ಆರಿಸಲ್ಪಟ್ಟವರು. (೨) ನಿಯಮನಿರ್ಮಾಣ ಸಭೆಯ ಮೆಂಬರುಗಳು. (೩) ಸರ್ಕಾರಿಯುದ್ಯೋಗದಿಂದ ನಿವೃತ್ತರಾದವರಲ್ಲಿ ಸರ್ಕಾರದಿಂದ ಆರಿಸಲ್ಪಟ್ಟವರು. (೪) ಡೆಪ್ಯುಟಿ ಕಮಿಷನರುಗಳು. (೫) ೧ ನೇ ಪ್ಯಾರಾದಲ್ಲಿ ಹೇಳಲ್ಪಟ್ಟಿರುವ ಪ್ರಮುಖ ದೊಡ್ಡಮನುಷ್ಯರಲ್ಲಿ ೬ ಕ್ಕೆ ಕಡಿಮೆಯಿಲ್ಲದೆ ೮ ಕ್ಕೆ ಜಾಸ್ತಿಯಿಲ್ಲದಂತೆ ಸರ್ಕಾರದಿಂದಾರಿಸಲ್ಪಟ್ಟವರು. (೧), (೩) ಮತ್ತೂ (೫) ರಲ್ಲಿ ಹೇಳಲ್ಪಟ್ಟ ಮೆಂಬರುಗಳು ಸರ್ಕಾರದಿಂದ ಆರಿಸಲ್ಪಟ್ಟ ಅವರ ಹೆಸರುಗಳು ಸರ್ಕಾರಿಯ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡುವುವು. ಹೀಗೆ ನೇಮಿಸಲ್ಪಟ್ಟವರು ನೇಮಿತವಾದ ತಾರೀಖಿನಿಂದ ೩ ವರ್ಷಗಳ ಕಾಲದವರೆಗೆ ಈ ಸಭೆಯ ಮೆಂಬರುಗಳಾಗಿರತಕ್ಕದು. ಮತ್ತೂ ಆ ಅವಧಿಯು ಪೂರೈಸಿದಮೇಲೆ ಅವಶ್ಯಕವಿದ್ದಲ್ಲಿ ಅವರೇ ಪುನಃ ನೇಮಿಸಲ್ಪಡಬಹುದು. ನಿಯಮನಿರ್ಮಾಣ ಸಭೆಯ ಮೆಂಬರುಗಳು ತಾವು ನಿಯಮನಿರ್ಮಾಣಸಭೆಯಲ್ಲಿರುವವರೆಗೂ ಈ ಸಭೆಯಲ್ಲಿ ಮೆಂಬರುಗಳಾಗಿರತಕ್ಕದು.

೫. ಈ ಸಭೆಯು ಸಾಮಾನ್ಯವಾಗಿ ಪ್ರತಿವರ್ಷದ ಜೂನ್ ತಿಂಗಳಲ್ಲಿ ನಡಿಯತಕ್ಕದು, ಆದರೆ ಅಂಥ ಅವಶ್ಯಕವಾದ ವಿಷಯಗಳೇನಾದರೂ ಆಲೋಚಿಸಲ್ಪಡಬೇಕಾಗಿದ್ದಲ್ಲಿ ಶ್ರೀಮನ್ಮಹಾರಾಜರವರ ವಿಶೇಷ ಅಪ್ಪಣೆಯಿಂದ ಮತ್ತಾವಕಾಲದಲ್ಲಾದರೂ ನಡಿಯಬಹುದು. ಸಭೆಯು ಸೇರತಕ್ಕ ಕಾಲವು ಮತ್ತೂ ಸ್ಥಳವು ಮೆಂಬರುಗಳ ತಿಳಿವಿಕೆಗಾಗಿ ಮುಂಚಿತವಾಗಿಯೇ ಪ್ರಕಟಿಸಲ್ಪಡುವುವು.

೬. ಈ ಸಭೆಯವರು ಆಲೋಚಿಸತಕ್ಕ ವಿಷಯಗಳ ಪಟ್ಟಿಯು ಈ ಕೆಳಗೆ ಕೊಡಲ್ಪಟ್ಟಿರುತ್ತದೆ. ಈ ಸಭೆಯವರು ಈ ವಿಷಯಗಳಲ್ಲದೆ ತಮಗವಶ್ಯಕವಾಗಿ ತೋರುವ ಮತ್ತಾವುದನ್ನಾದರೂ ಆಗಾಗ್ಗೆ ಪಟ್ಟಿಗೆ ಸೇರಿಸಬಹುದು. ಶ್ರೀಮನ್ಮಹಾರಾಜರವರಿಗಿರತಕ್ಕ ವಿಶೇಷಾಧಿಕಾರ, ರಾಜಶಾಸನ, ಈ ಸಂಸ್ಥಾನಕ್ಕೂ ಇಂಡ್ಯಾ ಸರ್ಕಾರಕ್ಕೂ ಇರತಕ್ಕ ಸಂಬಂಧ ಅಥವಾ ಸಾರ್ವಭೌಮ ಸರ್ಕಾರದ ನೀತಿ ಈ ೪ ಭಾಗಗಳನ್ನು ಕುರಿತು ಯಾವ ವಿಷಯವನ್ನೂ ಈ ಸಭೆಯವರು ಚರ್ಚಿಸತಕ್ಕದಲ್ಲವು.

೭. ಈ ಸಭೆಯ ಮೆಂಬರುಗಳಾದ ಡೆ॥ ಕಮಿಷನರುಗಳು ಚರ್ಚಿಸಲ್ಪಡತಕ್ಕ ವಿಷಯಗಳನ್ನು ಕುರಿತು ತಂತಮ್ಮ ಡಿ॥ ಗಳಲ್ಲಿ ಪ್ರಮುಖರಾದ ಜನರ ಕೂಡ ಆಲೋಚಿಸಿಕೊಂಡು ಸಭೆಗೆ ಬಂದು ಆ ಪ್ರಮುಖಜನರ ಅಭಿಪ್ರಾಯಗಳನ್ನು ತಮ್ಮಭಿಪ್ರಾಯಗಳ ಕೂಡ ತಿಳುಹತಕ್ಕದು.

೮. ಪ್ರಕೃತದಲ್ಲಿ ಈ ಸಭೆಯ ನಡವಳಿಕೆಯು ಬಹಿರಂಗಪಡಿಸಲ್ಪಡದೆ ರಹಸ್ಯವಾಗಿಡಲ್ಪಡುವುದು. ಈ ಸಭೆಯ ಮೆಂಬರುಗಳಲ್ಲಿ ೩ ನೆಯ ೨ ಭಾಗದವರು ಸಮ್ಮತಿಸುವಂಥ ವಿಷಯಗಳು ಮಾತ್ರ ಸರ್ಕಾರದವರ ಆಲೋಚನೆಯ ಬಗೆಗೆ ಕಳುಹಲ್ಪಡತಕ್ಕದು. ಅದರಮೇಲೆ ಸರ್ಕಾರದವರು ತಮಗೆ ಸೂಕ್ತತೋರಿದಂತೆ ಕಾರ್ಯಭಾಗವನ್ನು ನಡಿಸುವರು.

೯. ಈ ಸಭೆಯವರು ತಮ್ಮ ಪರ್ಯಾಲೋಚನೆಗೂ, ಚರ್ಚೆಗೂ ಉಪಯುಕ್ತವಾದ ವಿಷಯಗಳನ್ನು ಪಟ್ಟಿಯಿಂದಾರಿಸಿಕೊಳ್ಳತಕ್ಕದು. ಮತ್ತೂ ತಮ್ಮ ಕಾರ್ಯವನ್ನು ಮುಂದಣ ವರ್ಷದಲ್ಲಿ ನಡಿಸಲು ಸಂಘಗಳನ್ನೇರ್ಪಡಿಸಿ ಅವುಗಳಿಗೆ ಸರ್ಕಾರಿಯುದ್ಯೋಗಿಕ ಮತ್ತೂ ಅನುದ್ಯೋಗಿಕ ದೊಡ್ಡಮನುಷ್ಯರುಗಳನ್ನು ಮೆಂಬರುಗಳನ್ನಾಗಿ ನೇಮಿಸಿಕೊಳ್ಳುವುದು. ಅಲ್ಲದೆ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ಡೆ॥ ಕಮಿಷನರ ಮೇಲ್ವಿಚಾರಣೆಯಲ್ಲಿ ಒಂದೊಂದು ಉಪಸಂಘವನ್ನೇರ್ಪಡಿಸಿ ಅದಕ್ಕೆ ಸರ್ಕಾರಿಯಧಿಕಾರಿಗಳು, ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ಮತ್ತೂ ಅನುದ್ಯೋಗಿಕ ದೊಡ್ಡಮನುಷ್ಯರು ಇವರುಗಳನ್ನು ಮೆಂಬರುಗಳನ್ನಾಗಿ ಸೇರಿಸಿಕೊಳ್ಳಬಹುದು. ಈ ಉಪಸಂಘದವರು ಮುಖ್ಯ ಸಂಘದವರ ಮಾರ್ಗವಿಡಿದು ಡಿಸ್ಟ್ರಿಕ್ಟುಗಳಲ್ಲಿ ಕಾರ್ಯಾಭಿವೃದ್ಧಿಗೊಳಿಸತಕ್ಕದು.

೧೦. ಪ್ರಕೃತದಲ್ಲಿ ಸರ್ಕಾರಿಯಧಿಕಾರಿಯೊಬ್ಬರು ಈ ಸಭೆಯ ಸೆಕ್ರೆಟರಿಯಾಗಿ ನೇಮಿಸಲ್ಪಡುವರು. ಮತ್ತೂ ಇವರೇ ಸಭೆಯವರಿಂದೇರ್ಪಡಿಸಲ್ಪಟ್ಟ ಪ್ರತಿಯೊಂದು ಸಂಘಕ್ಕೂ ಸೆಕ್ರೆಟರಿಯಾಗಿರುವರು. ಇವರ ಕೂಡ ಅನುದ್ಯೋಗಿಕ ಮೆಂಬರುಗಳಿಂದಾರಿಸಲ್ಪಟ್ಟ ಮೆಂಬರೊಬ್ಬರು ಜತೆ ಸೆಕ್ರೆಟರಿಯಾಗಿರಬಹುದು.

೧೧. ಸಂಘಗಳೂ, ಉಪಸಂಘಗಳೂ ತಿಂಗಳಿಗೊಂದಾವೇಳೆ ಅಥವಾ ಅವಶ್ಯಕವಿದ್ದಲ್ಲಿ ಹೆಚ್ಚುವೇಳೆ ಸಭೆ ಸೇರತಕ್ಕದು. ಈ ಸಂಘದವರು ಆಲೋಚಿಸತಕ್ಕ ವಿಷಯಗಳಲ್ಲಿ ಸಂಸ್ಥಾನಾಭಿವೃದ್ಧಿಗೆ ಸಾಧಕವಾದುವುಗಳು ಮೊದಲ ಸಂಗ್ರಹಿಸಲ್ಪಡಬೇಕು. ಅನಂತರ ಆ ವಿಷಯದ ವಿದಮಾನದಸ್ಥಿತಿಗೂ, ಮೈಸೂರು ಸಂಸ್ಥಾನದ ಹೊರಗಣ ದೇಶದ ವಿದ್ಯಮಾನದ ಸ್ಥಿತಿಗೂ ತಾಳೆ ನೋಡಬೇಕು. ಈ ಸಂಘದವರು ತಾವು ಚರ್ಚಿಸಿದ ವಿಷಯಗಳನ್ನೆಲ್ಲ ಜನರೂ ಮತ್ತೂ ವಾರ್ತಾಪತ್ರಿಕೆಗಳು ತಿಳಿದು ಚರ್ಚಿಸಿ ತಮ್ಮಭಿಪ್ರಾಯವನ್ನು ಹೊರಗೆಡಹಲು ಅವಕಾಶವಾಗುವಂತೆ ಮುದ್ರಿಸಿ ಪ್ರಚುರಪಡಿಸುವುದು. ಈ ಮುದ್ರಣದ ವೆಚ್ಚವನ್ನು ಸರ್ಕಾರದವರು ವಹಿಸಿಕೊಳ್ಳುವರು. ಈ ಸಂಘದವರು ಮೈಸೂರು ದೇಶದೊಳಗೂ ಹೊರಗೂ ಇರತಕ್ಕ ಅನುಭವಸ್ಥರ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳಬಹುದು. ಪ್ರತಿಯೊಂದು ಭಾಗದಿಂದಲೂ ಉಪಯುಕ್ತವಾದ ವಿಷಯವನ್ನು ಸಂಗ್ರಹಿಸಿ ಸರ್ಕಾರದವರ ಮತ್ತೂ ಪ್ರಜೆಗಳ ತಿಳಿವಿಕೆಗೆ ತರತಕ್ಕದು ಈ ಸಂಘದವರ ಕರ್ತವ್ಯವಾಗಿರುತ್ತದೆ. ಸಾಮಾನ್ಯವಾಗಿ ಈ ಸಂಘದವರು ತಮ್ಮಭಿಪ್ರಾಯಗಳನ್ನು ಕಾನ್ಫರೆನ್ಸಿನವರು ಮುಂದಣ ಸಭೆ ಸೇರುವುದರೊಳಗೆ ಅವರ ಕೈಸೇರುವಂತೆ ಪ್ರತಿ ವರ್ಷದ ಮಾರ್ಚಿ ತಿಂಗಳೊಳಗಾಗಿ ಕಳುಹಿಸಿಕೊಡತಕ್ಕದು.

೧೨. ಕಾನ್ಫರೆನ್ಸಿನ (ಸಭೆಯ) ಮೊದಲನೇ ಕೂಟವು ೧೯೧೧ ನೇ ಜೂನ್ ತಾ॥ ೮ ನೇ ಗುರುವಾರ ಪ್ರಾರಂಭವಾಗಿ ಮುಂದೆ ೨ ದಿನಗಳಲ್ಲಿ ನಡೆಯುವುದು. ಕಾನ್ಫರೆನ್ಸಿನವರು ಮೊದಲನೆಯ ವರ್ಷ ೩ ಸಂಘಗಳನ್ನೇರ್ಪಡಿಸಿ ಗೊತ್ತುಮಾಡಲ್ಪಟ್ಟ ವಿಷಯಗಳನ್ನು ಅವುಗಳಿಗೆ ಹಂಚಾಕುವುದಾಗಿ ಸೂಚಿಸಲ್ಪಟ್ಟಿದೆ. ಕಾನ್ಫರೆನ್ಸಿನವರು ಮೇಲೆ ಹೇಳಲ್ಪಟ್ಟಿರುವ ವಿಧಿಗಳಲ್ಲಿ ಈ ಸಭಾಕಾರ್ಯವು ಸರಾಗವಾಗಿ ನಡೆದು ಅದರುಪಯೋಗವು ಅಭಿವೃದ್ಧಿಯಾಗಲು ಏನಾದರೂ ವ್ಯತ್ಯಾಸವಾಗಬೇಕಾಗಿದ್ದಲ್ಲಿ ಮತ್ತೂ ಹೊಸದಾಗಿ ಸೇರಿಸಬೇಕಾಗಿದ್ದಲ್ಲಿ ಅವುಗಳನ್ನು ಸೂಚಿಸತಕ್ಕದು.

ಚರ್ಚಿಸಲ್ಪಡತಕ್ಕ ವಿಷಯಗಳು.

ವಿದ್ಯಾಭ್ಯಾಸ—(೧) ಹಿಂದುಳಿದ ಜನರಲ್ಲಿ ವಿದ್ಯಾಪ್ರಸಾರಣೆಯು. (೨) ಪ್ರಾಥಮಿಕ ಮತ್ತೂ ಕೈಗಾರಿಕೆಯ ವಿದ್ಯಾಭಿವೃದ್ಧಿಯು. (೩) ಗೊತ್ತಾದ ಭಾಗದಲ್ಲಿ ವಿದ್ಯೆಯನ್ನು ಬಲವಂತದಿಂದ ಕಲಿಸುವ ಪ್ರಯತ್ನದ ಸಾಧ್ಯತೆ. (೪) ವಿದ್ಯಾಭಿವೃದ್ಧಿಯ ಕಾರ್ಯಕ್ಕಾಗಿ ಸ್ವತಂತ್ರ ಜನರ ಸಹಾಯವನ್ನೂ ಸ್ವತಂತ್ರ ಧನರಾಶಿಯನ್ನೂ ಸಂಪಾದಿಸುವುದು. (೫) ಈ ದೇಶದಲ್ಲಿ ಒಂದು ಸರ್ವಕಲಾಶಾಲೆಯನ್ನು ಸ್ಥಾಪಿಸುವುದು.

ಬೇಸಾಯ—(೧) ವ್ಯವಸಾಯಮಾಡುವುದರಲ್ಲೂ ಫಲಪುಷ್ಪಾದಿಗಳನ್ನು ಬೆಳೆಸುವುದರಲ್ಲೂ ಸರ್ಕಾರಿಯ ಅನೇಕ ಶಾಖಾಧಿಕಾರಿಗಳ ಸಹ ಪ್ರವೃತ್ತಿ. (೨) ಮೈಸೂರ ದೇಶದ ರೈತನು ಎಷ್ಟರಮಟ್ಟಿಗೆ ಸಾಲಗಾರನಾಗಿರುವನು? ಮತ್ತೂ ಅವನ ಸಾಮಾನ್ಯ ಮನವಾರ್ತೆಯ ಸ್ಥಿತಿಯು ಹೇಗಿರುವುದು? (೩) ಹತ್ತಿಯ ಮತ್ತೂ ಹಿಪ್ಪಲಿನೇರಳೆಯ ವ್ಯವಸಾಯಕ್ಕೆ ಪ್ರೋತ್ಸಾಹ ಕೊಡುವುದು. (೪) ಕಬ್ಬಿನ ಬೇಸಾಯವನ್ನಭಿವೃದ್ಧಿಗೊಳಿಸುವುದು. (೫) ಸಂಸ್ಥಾನದ ಬೇರೆಬೇರೆ ಭಾಗಗಳಲ್ಲಿ ಮೂಲಧನವನ್ನು, ಕೂಲಿಯವರನ್ನು, ಗೊಬ್ಬರವನ್ನು ಮೇವನ್ನು ಮತ್ತೂ ಕಟ್ಟಿಗೆಯನ್ನೊದಗಿಸಿಕೊಡುವುದು ಮತ್ತೂ ಅವುಗಳನ್ನಭಿವೃದ್ಧಿಗೊಳಿಸುವುದರುಪಾಯ.

ಕೈಗಾರಿಕೆ—(೧) ಸಂಸ್ಥಾನದಲ್ಲಿ ನಡಿಯುವ ಕೈಗಾರಿಕೆಗಳು ಮತ್ತೂ ಅವುಗಳನ್ನನುಸರಿಸಿರುವ ಜನರ ಸ್ಥಿತಿಯು. (೨) ಕಸಬುಗಳಲ್ಲಿ ಯಾವುವನ್ನು ಉತ್ತಮ ಪಡಿಸಿ, ಅಪಾಯಕರವಾದುವುಗಳನ್ನು ಹೊಸದಾಗಿ ರೂಢಿಸಬಹುದು (೩) ಪರಸ್ಪರ ಸಹಾಯಕ ಸಂಘಗಳನ್ನು ಬೆಳೆಸುವುದು. (೪) ಕಬ್ಬಿನ ಮತ್ತೂ ಉಕ್ಕುಗಳನ್ನು ತಯಾರಿಸುವುದು. (೫) ನೂಲಿನ, ಲೋಹದ ಮತ್ತೂ ಹಳ್ಳಿಗಾಡಿನ ಕಸಬುಗಳನ್ನು ಹೆಚ್ಚಿಸುವುದು. (೬) ವಿದ್ಯುಚ್ಛಕ್ತಿಯ ಸಹಾಯದಿಂದ ಸುಲಭವಾಗಿ ದೊಡ್ಡ ಮತ್ತೂ ಸಣ್ಣ ಕೈಗಾರಿಕೆಗಳನ್ನಭಿವೃದ್ಧಿಗೊಳಿಸುವುದು.

ಸಾಮಾನ್ಯವಿಷಯಗಳು—(೧) ಉಪಯುಕ್ತವಾದ ವಿಷಯಗಳಿಗಾಗಿ ವೆಚ್ಚಮಾಡಲು ತಕ್ಕ ರಾಜಾದಾಯವನ್ನು ಹೆಚ್ಚಿಸುವ ಉಪಾಯವನ್ನು ಹೊಸದಾಗಿ ಕಂಡುಹಿಡಿಯುವುದು. (೨) ಸಂಸ್ಥಾನದಲ್ಲಿ ಕೊಡುವ ರಜಾ ದಿವಸಗಳನ್ನು ಕಡಿಮೆಮಾಡುವುದು ಮತ್ತೂ ಹಬ್ಬ ಮತ್ತು ಜಾತ್ರೆಗಳ ಕಾಲದಲ್ಲಿ ಕೈಗಾರಿಕೆಯ ವಸ್ತುಗಳ ಪ್ರದರ್ಶನವನ್ನಡಿಸುವುದು. (೩) ನೀರಾವರಿ ಕೆರೆ ಮತ್ತೂ ನಾಲೆಗಳನ್ನು ಪ್ರಜೆಗಳೇ ಕಾಪಾಡಿಕೊಳ್ಳುವುದು. (೪) ಗ್ರಾಮ ಮತ್ತು ಪಟ್ಟಣಗಳ ಆರೋಗ್ಯ ಕುಡಿಯುವ ನೀರು ಮತ್ತು ಬಚ್ಚಲನೀರು ಹೋಗುವುದು. (೫) ಮ್ಯುನಿಸಿಪಲ್ ಮತ್ತೂ ಡಿ॥ ಬೋರ್ಡುಗಳ ರಚನೆಯು ಮತ್ತೂ ಕಾರ್ಯಗಳ ಕ್ರಮವು. (೬) ದೇಸಿಗೆಯ ಕಾಲದಲ್ಲಿ ಪ್ರಜೆಗಳೆಲ್ಲರೂ ಹೋಗಿ ವಾಸವಾಗಿದ್ದು ಬರಲು ಅನುಕೂಲಿಸುವಂತೆ ಬೆಟ್ಟ ಪ್ರದೇಶವನ್ನು [illegible] ಗೊತ್ತು ಮಾಡಿ ಅವನ್ನು ಒಳ್ಳೇ ಸ್ಥಿತಿಯಲ್ಲಿಟ್ಟುಕೊಳ್ಳುವುದು.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಮೇ ತಾ|| ೨೯ನೇ ಸೋಮವಾರ.

ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡು.

ಈ ಫಂಡಿನ ಕಾರ್ಯನಿರ್ವಾಹಕ್ಕಾಗಿ ಏರ್ಪಟ್ಟಿರುವ ಸಂಘದವರು ಕಳೆದ ತಾ|| ೧೬ ರಲ್ಲಿ ಬೆಂಗಳೂರಲ್ಲಿ ಸಭೆ ಸೇರಿದ್ದು ನಡಿಸಿದ ನಡವಳಿಕೆಯಲ್ಲವೂ ಏಪ್ರಿಲ್ ತಾ|| ೨೮ ರ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟವಾಗಿರುವುದು. ಏಪ್ರಿಲ್ ತಾ|| ೧೬ ರ ವರೆಗೆ ಈ ಫಂಡಿನಲ್ಲಿ ಒಟ್ಟು ರೂ. ೧೭,೪೯೯–೮–೩ ಇರುವುದಾಗಿ ಸಂಘದ ಸೆಕ್ರೆಟರಿಯವರ ೧೯೧೦ ನೇ ವರ್ಷದ ವರದಿಯಿಂದ ಗೊತ್ತಾಗುತ್ತದೆ. ಈ ಒಟ್ಟು ಹಣದಲ್ಲಿ ೫,೦೦೦ ರೂ. ಗಳು ಸಂಘಾಧ್ಯಕ್ಷರಾದ ಮ|| ಕೆ. ಪಿ. ಪುಟ್ಟಣ್ಣಸೆಟ್ಟರು ತಮ್ಮ ವಾಗ್ದಾನದಂತೆ ಕೊಟ್ಟ ಚಂದಾಹಣವಾಗಿರುತ್ತದೆ. ಮತ್ತು ವೀರಶೈವರು ತಮ್ಮ ಗೃಹದಲ್ಲಿ ನಡೆದ ವಿವಾಹ ಮೊದಲಾದ ಶುಭಕಾರ್ಯಗಳಲ್ಲಿ ಸಂತೋಷದಿಂದ ವಿದ್ಯಾಭಿವೃದ್ಧಿ ಫಂಡಿಗಾಗೆಂದು ಕಾಣಿಕೆಯನ್ನು ತೆಗೆದು ಕಳುಹಿಸಿ ಕೊಟ್ಟದ್ದು ಪ್ರಾಯಶಃ ೨೦೦೦ ರೂ. ವರೆಗಿರಬಹುದು. ಇವು ಹೋಗುತ ಇನ್ನುಳಿಯುವ ೧೦,೦೦೦ ಚಿಲ್ಲರೆ ರೂ. ಗಳು ವಾಗ್ದಾನಮಾಡಿರುವವರಲ್ಲಿ ಕೆಲವರಿಂದ ಬಂದಿರತಕ್ಕದೆಂದು ವ್ಯಕ್ತವಾಗುತ್ತದೆ. ೧೯೦೪ ರಲ್ಲಿ ಬೆಂಗಳೂರಲ್ಲಿ ಎರಡನೇ ವೀರಶೈವ ಮಹಾಸಭೆಯು ನೆರೆದಿದ್ದಾಗ್ಗೆ ಈ ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡು ಸ್ಥಾಪಿಸಲ್ಪಟ್ಟು ಆ ಸಭಾಕಾಲದಲ್ಲೇ ೩೦–೪೦ ಸಾವಿರ ರೂ. ಗಳ ವರೆಗೆ ಚಂದಾಹಣವು ವಾಗ್ದಾನಮಾಡಲ್ಪಟ್ಟಿದ್ದಿತು. ಹೀಗೆ ಫಂಡು ಸ್ಥಾಪಿತವಾಗಿ ೬ ವರ್ಷಗಳಾದಾಗ್ಯೂ ವಾಗ್ದಾನವಾಗಿರುವ ಹಣದಲ್ಲಿ ಅರ್ಧಮಟ್ಟಿಗೂ ಶೇಖರವಾಗದಿರುವುದು ಸಖೇದಾಶ್ಚರ್ಯವಾಗಿರುತ್ತದೆ. ಇದಕ್ಕೆ ಕಾರ್ಯನಿರ್ವಾಹಕ ಸಂಘದವರ ಕರ್ತವ್ಯಶೂನ್ಯತೆಯೇ ಕಾರಣವೆನ್ನೋಣವೆಂದರೆ, ಅವರು ಹಣವನ್ನೆತ್ತಲು ಹೊರಗೆ ಸಂಚಾರ ಹೊರಡುವುದೊಂದರ ವಿನಹಾ ವಾಗ್ದಾನಮಾಡಿರುವವರೆಲ್ಲರಿಗೂ ಪದೇಪದೆ ಕಾಗದಗಳನ್ನು ಬರೆಯುವುದು ಮೊದಲಾದ ತಮಗೆ ಸಾಧ್ಯವಿರುವ ಕಾರ್ಯಗಳನ್ನೆಲ್ಲ ಬಹು ಶ್ರದ್ಧೆಯಿಂದ ಮಾಡಿರುವರೆಂಬುದನ್ನು ನಾವು ಚೆನ್ನಾಗಿ ತಿಳಿದಿರುವೆವು. ಮೊದಲು ಈ ಸಂಘದ ಸೆಕ್ರೆಟರಿಯಾಗಿದ್ದವರು ಮತ್ತೊಬ್ಬ ಮೆಂಬರು ಸಹ ಚಂದಾ ಹಣವನ್ನೆತ್ತಲು ದೇಶಸಂಚಾರ ಹೊರಡಬೇಕೆಂದು ಸಿದ್ಧರಾಗಿರುವಷ್ಟರಲ್ಲಿ ಸರ್ಕಾರಿಯುದ್ಯೋಗದಲ್ಲಿರುವವರು ಜನರಿಂದ ಚಂದಾಹಣವನ್ನೆತ್ತುವ ಕಾರ್ಯದಲ್ಲಿ ಪ್ರವೇಶಿಸಕೂಡದೆಂದು ಸರ್ಕಾರದವರು ನಿರ್ಬಂಧವನ್ನು ಹಡಿಸಿದುದರ ಮೇಲೆ, ಅವರು ಸರ್ಕಾರಿಯುದ್ಯೋಗಸ್ಥರಾದುದರಿಂದ ಸಂಚಾರ ಹೊರಡುವ ಪ್ರಯತ್ನವನ್ನು ಬಿಡಬೇಕಾಯಿತು. ಸರ್ಕಾರಿಯುದ್ಯೋಗಸ್ಥರಲ್ಲದ ಮೆಂಬರುಗಳು ಹಣವನ್ನೆತ್ತಲು ಸಂಚಾರಹೊರಡಬಹುದಾಗಿದ್ದಿತು. ಆದರೆ ಅವರುಗಳೆಲ್ಲಾರೂ ಈವರೆಗೆ ಪ್ರಯತ್ನಿಸಿದಂತೆ ತೋರಲಿಲ್ಲವು. ಪ್ರತಿಯೊಂದು ಜಾತಿಯವರ ನೈತಿಕ, ಧಾರ್ಮಿಕ, ಔದ್ಯೋಗಿಕ ಮೊದಲಾದ ಸುಧಾರಣೆಗೆ ಆಯಾ ಜಾತಿಯವರಿಂದ ಕೂಡಿದ ಮಹಾ ಸಭೆಗಳು ಮುಖ್ಯ ಸಾಧನಗಳೆಂಬುದನ್ನು ಈ ಮೈಸೂರ ದೇಶೀಯರು ಅರಿಯದಿದ್ದ ವೇಳೆಯಲ್ಲಿ ಇಲ್ಲಿಯ ವೀರಶೈವರು ತಮ್ಮ ಔತ್ತರೇಯ ವೀರಶೈವ ಬಂಧುಗಳ ಮೇಲ್ಪಂಕ್ತಿಯನ್ನನುಸರಿಸಿ ಬೆಂಗಳೂರಲ್ಲಿ ತಮ್ಮದೊಂದು ಮಹಾಸಭೆಯನ್ನು ನೆರಿಸಿ ಇತರರಿಗೆ ಮಾರ್ಗದರ್ಶಕರಾದರು. ಇವರನ್ನೋಡಿ ಒಕ್ಕಲಿಗರು, ವೈಶ್ಯರು, ಮರಾಟಿಯವರು ದೇವಾಂಗದವರು ಮೊದಲಾದವರು ಮಹಾ ಸಭೆಗಳನ್ನುಮಾಡಿ ತಂತಮ್ಮ ಜನರ ವಿದ್ಯೆ ನಾಗರೀಕಾದಿಗಳ ಅಭಿವೃದ್ಧಿಗೆ ಸಾಧಕವಾದ ಕಾರ್ಯಗಳನ್ನು ಮಾಡತೊಡಗಿರುವರು. ಇವರಲ್ಲಿ ಒಕ್ಕಲಿಗರುಮಾತ್ರ ಈವರೆಗೆ ೨–೩ ಮಹಾ ಸಭೆಗಳನ್ನು ನಡಿಸಿ ತಮ್ಮ ಜನರುಪಯೋಗಕ್ಕಾಗಿ ಒಂದು ಪತ್ರಿಕೆಯನ್ನು ಸ್ವಂತವಾಗಿ ಹೊರಡಿಸುತ್ತಿರುವರಲ್ಲದೆ ವಿದ್ಯಾರ್ಥಿಗಳ ನಿಲಯವೊಂದನ್ನು ಕಟ್ಟಿಸಯತ್ನಿಸಿರುವರು. ಹೀಗೆ ವೀರಶೈವರು ಕೂಡಿಸಿದ ಮಹಾಸಭೆಯನ್ನೋಡಿಕೊಂಡು ಇತ್ತೀಚೆಗೆ ಬೇರೆಬೇರೆಸಭೆಗಳನ್ನು ಮಾಡಿಕೊಂಡಿರುವಂಥವರೆಲ್ಲರೂ ಎಷ್ಟೋ ಉಪಯುಕ್ತ ಕಾರ್ಯಗಳನ್ನು ಮಾಡಿಕೊಳ್ಳುತ್ತಿರುವಾಗ್ಗೆ, ವೀರಶೈವರು ಮಾತ್ರ ಹಿಡಿದ ಕಾರ್ಯವನ್ನು ಸಾಂಗಗೊಳಿಸದೆ ಅಲಸರಾಗಿರುವುದು ಲಜ್ಜಾಸ್ಪದವಾಗಿದೆ. ಈ ಜನರಲ್ಲಿ ಐಶ್ವರ್ಯವಂತರೇನೂ ಕಡಿಮೆಯಾಗಿಲ್ಲವು. ಅವರು ಮನಸ್ಸು ಮಾಡಿದಲ್ಲಿ ಒಬ್ಬೊಬ್ಬರೇ ೩೦–೪೦ ಸಾವಿರ ರೂ. ಗಳನ್ನು ಕೊಡಬಲ್ಲರು. ಆದರೆ ಅವರಲ್ಲಿ ಅಂಥ ಉದಾರ ಬುದ್ಧಿಯು ಮಾತ್ರ ಹುಟ್ಟುವುದು ಕಷ್ಟವಾಗಿದೆ. ಶ್ರೀ|| ರಾ|| ಬ|| ಗುಬ್ಬಿ ತೋಟದಪ್ಪನವರು ಅಂಥ ಉದಾರ ಬುದ್ಧಿಯಿಂದ ಅಭೂತಪೂರ್ವವಾದ ಧರ್ಮಕಾರ್ಯವನ್ನು ಮಾಡಿ ನಮ್ಮ ಮಹಾಪ್ರಭುಗಳಿಂದಲೂ, ಸಾರ್ವಭೌಮರಿಂದಲೂ ಪ್ರಶಸ್ತಿಗಳನ್ನು ಸಂಪಾದಿಸಿಕೊಂಡು ಕೀರ್ತಿಶೇಷರಾಗಿರುವರು. ಇವರಿಗಿಂತಲೂ ಅಧಿಕವಾಗಿ ಶ್ರೀಮಂತರಾಗಿರುವ ಬೀರೂರಿನ ಮ|| ಪತ್ರಿ ವೀರಪ್ಪನವರು ವೀರಶೈವರ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಅತ್ಯವಶ್ಯಕವಾಗಿರುವ ಸಂಸ್ಕೃತ ಕಾಲೇಜನ್ನು ಕಟ್ಟಿಸಿಕೊಡುತ್ತೇವೆಂದು ವಾಗ್ದಾನಮಾಡಿರುತ್ತಾರೆ. ಈ ಶ್ರೀಮಂತರು ತಮ್ಮ ವಾಗ್ದಾನವನ್ನು ಆದಷ್ಟು ತ್ವರೆಯಿಂದ ನೆರವೇರಿಸುವವರಾಗಲೆಂದಿಚ್ಛಿಸುವೆವು.

ಫಂಡಿಗೆ ಸರಿಯಾಗಿ ಹಣವು ಶೇಖರವಾಗದೆ ಇರುವುದರಿಂದ ಕಾರ್ಯನಿರ್ವಾಹಕ ಸಂಘದವರು, ಯಾರಾದರು ಮತಾಭಿಮಾನಿಗಳು ದೇಶಸಂಚಾರ ಹೊರಟು ಹಣವನ್ನೆತ್ತುವುದಾದರೆ, ಅಂಥವರಿಗೆ ಸಂಬಳವನ್ನು ಕೊಡುತ್ತೇವೆಂದು ಗೊತ್ತುಮಾಡಿರುವರು. ಸಮಾಜಕ್ಕುಪಯುಕ್ತವಾದ ಕಾರ್ಯಗಳಿಗೆ ಸ್ವಹಸ್ತ ಪರಹಸ್ತದಿಂದ ಸಹಾಯಮಾಡಿಸುವುದು ಮತಾಭಿಮಾನಿಗಳಿಗೆ ಭೂಷಣವಾದುದರಿಂದ, ಸದ್ಯದಲ್ಲಿ ಒಬ್ಬರಿಬ್ಬರಾದರೂ ಕಾರ್ಯನಿರ್ವಾಹಕ ಸಂಘದವರಿಷ್ಟದಂತೆ ದೇಶಸಂಚಾರ ಹೊರಟು ವಾಗ್ದಾನಮಾಡಿರುವವರಿಂದ ಹಣವನ್ನೆತ್ತಿ ಫಂಡಿನುದ್ದೇಶವು ಸಾರ್ಥಕವಾಗುವಂತೆ ಮಾಡುವರೆಂದು ನಿರೀಕ್ಷಿಸುತ್ತೇವೆ. ಸ್ವಮತೀಯರ ವಿದ್ಯಾಭಿವೃದ್ಧಿ ಕಾರ್ಯವನ್ನು ಸಿಂಹಾಸನಾಧೀಶ್ವರರೂ, ಮಠಾಧಿಪತಿಗಳೂ ಮಾಡಬೇಕಾಗಿರುವುದು. ಅಂಥವರಲ್ಲಿ ಶಿಷ್ಯರೇ ಕೈಗೊಂಡಿರುವ ಈ ಕಾರ್ಯಕ್ಕೆ ಅವರುಗಳು ಸ್ವಹಸ್ತಪರಹಸ್ತದಿಂದ ದ್ರವ್ಯಸಹಾಯಮಾಡದಿರುವುದು ಅವರ ಪದವಿಗೆ ಭೂಷಣವಲ್ಲವಾದುದರಿಂದ, ಇನ್ನಾದರೂ ಸಿಂಹಾಸನಾಧೀಶ್ವರರೂ ಪ್ರಮುಖರಾದ ಮಠಪತಿಗಳೂ ಆಲಸ್ಯಮಾಡದೆ ತಂತಮ್ಮ ಶಿಷ್ಯವರ್ಗಕ್ಕೆ ಸೇರಿದವರು ಫಂಡಿಗೆ ಚಂದಾಹಣವನ್ನೂ, ವಿವಾಹಮೊದಲಾದ ಶುಭಕಾರ್ಯಗಳಲ್ಲಿ ಕಾಣಿಕೆಯನ್ನೂ ಕೊಡುವಂತೆ ಪ್ರತಿಯೊಂದು ಸ್ಥಳದ ಮಠಮಹಂತರಿಗೂ ಪ್ರಮುಖರಿಗೂ ನಿರೂಪಗಳ ಮೂಲಕ ಅಪ್ಪಣೆ ಕೊಡಿಸಬೇಕಾಗಿ ಸೂಚಿಸುತ್ತೇವೆ. ಈ ಫಂಡು ಆರಂಭವಾದಂದಿನಿಂದ ವೀರಶೈವರು ತಂತಮ್ಮ ಗೃಹದಲ್ಲಾಗುವ ಶುಭಶೋಭನಕಾರ್ಯಗಳಲ್ಲಿ ತಮ್ಮ ಶಕ್ತ್ಯನುಸಾರ ಕಾಣಿಕೆಯನ್ನು ಅಪ್ರಾರ್ಥಿತರಾಗಿ ತೆಗೆದು ಸೆಕ್ರೆಟರಿಯವರಲ್ಲಿಗೆ ಕಳುಹುತ್ತ ಬಂದಿರುವರು. ಆದರೆ ಕೆಲ ಸ್ಥಳಗಳಲ್ಲಿ ಕೆಲ ಪುಣ್ಯಾತ್ಮರು ಫಂಡಿಗೆ ಕಳುಹಿಸಿಕೊಡುತ್ತೇವೆಂದು ಹೇಳಿ ಕಾಣಿಕೆಯ ಹಣವನ್ನು ತೆಗೆದಿಟ್ಟುಕೊಂಡು ಈವರೆಗೂ ಫಂಡಿಗೆ ಕಳಿಸಿಕೊಡಲಿಲ್ಲವೆಂದು ಕೇಳಿ ವಿಷಾದಿಸುತ್ತೇವೆ. ಈ ಮಹನೀಯರು ಇನ್ನು ಮುಂದೆ ಹಾಗೆ ಮಾಡದೆ ಈವರೆಗೆ ತಮ್ಮಲ್ಲಿ ನಿಂತಿರುವ ಹಣವನ್ನು ಸೆಕ್ರೆಟರಿಯವರಲ್ಲಿಗೆ ಕಳುಹಿಸಿಕೊಡುವುದಲ್ಲದೆ ಇತಃಪರ ಬರತಕ್ಕ ಹಣವನ್ನು ತಮ್ಮಲ್ಲಿಟ್ಟುಕೊಳ್ಳದೆ ಆ ಕೂಡಲೆ ಮನಿಯಾರ್ಡರು ಮಾಡುವರೆಂದು ನಿರೀಕ್ಷಿಸುತ್ತೇವೆ. ಮ|| ಬಿ. ಬಸವಾರಾಧ್ಯರು ಫಂಡಿನ ಸೆಕ್ರೆಟರಿಯುದ್ಯೋಗದಿಂದ ನಿವೃತ್ತರಾಗಿರುವಪ್ರಯುಕ್ತ ಈಗ ಸೆಕ್ರೆಟರಿಯಾಗಿರುವ ಮ|| ಜಿ. ಶಾಂತವೀರಪ್ಪ ಬಿ. ಎ., ಯವರ ಹೆಸರಿಗೆ ಹಣವನ್ನು ಕಳುಹಿಸಿಕೊಡತಕ್ಕದು.

ಮೈಸೂರದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸುವ ಉಪಾಯವು.

ವಿದ್ಯಾಭ್ಯಾಸ, ಬೇಸಾಯ, ಕೈಗಾರಿಕೆ ಮೊದಲಾದ ಭಾಗಗಳಲ್ಲಿ ಮೈಸೂರ ಸಂಸ್ಥಾನದ ಸಂಪತ್ತು ಅಭಿವೃದ್ಧಿಯಾಗುವ ಮಾರ್ಗವನ್ನು ಕಂಡುಹಿಡಿಯುವುದಕ್ಕಾಗಿ ಸರ್ಕಾರಿಯಧಿಕಾರಿಗಳ ಕೂಡ ದೇಶಾಭಿಮಾನಿಗಳಾದ ವಿದ್ವಾಂಸರು ವರ್ತಕರು, ಬೇಸಾಯಗಾರರು, ಬ್ಯಾಂಕಿಟ್ಟಿರುವವರು ಮೊದಲಾದವರು ಕಲತು ಪ್ರತಿವರ್ಷದ ಜೂನ್ ತಿಂಗಳಲ್ಲಿ ರಾಜಧಾನಿಯಲ್ಲಿ ನಡಿಯುವ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ ಕಾಲದಲ್ಲಿ ಒಂದು ಕಾನ್ಫರೆನ್ಸನ್ನು ಮಾಡುವಂತೆ ಶ್ರೀ ಮನ್ಮಹಾರಾಜರವರು ಅಪ್ಪಣೆಮಾಡಿರುತ್ತಾರೆ. ಈ ಸಂಬಂಧವಾದ ಸರ್ಕಾರಿಯಪ್ಪಣೆಯು ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವುದು. ನಮ್ಮ ಪ್ರಭುಗಳು ತಮ್ಮ ಪ್ರಜೆಗಳು ಎಲ್ಲ ಭಾಗದಲ್ಲೂ ಅಭಿವೃದ್ಧಿಯನ್ನು ಹೊಂದಬೇಕೆಂದು ಸಾರ್ವದಾ ಚಿಂತಿಸುತ್ತಿರುವರೆಂಬುದಕ್ಕೆ ಈಗಪ್ಪಣೆಮಾಡಿರುವ ಭಾಗವೇ ನಿದರ್ಶನವಾಗಿರುತ್ತದೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಹೆಚ್ಚಾಗಿರುವುದರಿಂದಲೂ, ಅದು ವರ್ಷಕ್ಕೊಂದುಸಲ ಸೇರುವುದರಿಂದಲೂ ಅದರಿಂದ ಸಂಪತ್ತಿನಭಿವೃದ್ಧಿಗೆ ಕಾರಣವಾದ ವಿಷಯಗಳನ್ನು ಚರ್ಚಿಸಿ ಗೊತ್ತುಮಾಡುವುದಕ್ಕವಕಾಶವಿಲ್ಲದಿರುವ ಪ್ರಯುಕ್ತ ಪ್ರಕೃತ ಕಾನ್ಫರೆನ್ಸನ್ನು ಏರ್ಪಡಿಸಬೇಕಾಗಿ ಬಂದಿತೆಂದು ಸರ್ಕಾರಿಯಪ್ಪಣೆಯಲ್ಲಿ ತಿಳುಹಲ್ಪಟ್ಟಿದೆ. ಇದರಿಂದ ಕಾಲಕ್ರಮೇಣ ಪ್ರಜಾಪ್ರತಿನಿಧಿ ಸಭೆಯು ಪ್ರಾಬಲ್ಯವು ಕಡಿಮೆಯಾಗಿ ಈ ಕಾನ್ಫರೆನ್ಸಿನ ಪ್ರಾಶಸ್ತ್ಯವು ಹೆಚ್ಚಬಹುದೆಂದು ತೋರುತ್ತದೆ. ಈ ಸಂಸ್ಥಾನದ ಎಲ್ಲ ಡಿಸ್ಟ್ರಿಕ್ಟುಗಳಿಂದಲೂ, ತಾಲ್ಲೋಕುಗಳಿಂದಲೂ ಪ್ರಾಯಶಃ ಎಲ್ಲ ಜಾತಿಯವರಲ್ಲೂ ಪ್ರತಿನಿಧಿಗಳಾಗಿ ಜನರಿಂದಲೇ ಆರಿಸಲ್ಪಟ್ಟವರನ್ನು ಮೆಂಬರುಗಳನ್ನಾಗುಳ್ಳ ಪ್ರಜಾಪ್ರತಿನಿಧಿ ಸಭೆಯೋ ಸರಕಾರದವರಭಿಪ್ರಾಯದಲ್ಲಿ ಅಷ್ಟೊಂದು ಪ್ರಯೋಜನಕಾರಿಯಲ್ಲವೆಂದು ತೋರಿರುವಾಗ್ಗೆ ಇನ್ನು ಮುಕ್ಕಾಲುಪಾಲು ಸರಕಾರಿಯಧಿಕಾರಿಗಳಿಂದಲೂ, ಕಾಲುಪಾಲು ಸರಕಾರದವರಿಂದಲೇ ಆರಿಸಲ್ಪಟ್ಟ ಸ್ವತಂತ್ರ ಜನರಿಂದಲೂ ಕೂಡಿರುವ ಈ ಕಾನ್ಫರೆನ್ಸು ಎಷ್ಟರಮಟ್ಟಿಗೆ ಪ್ರಯೋಜನಕರವಾಗಿರುವುದೆಂದು ಕೆಲರು ಸಂಶಯಪಡುತ್ತಾರೆ. ಈ ಕಾನ್ಫರೆನ್ಸಿನ ಮೊದಲನೆಯ ಕೂಟವು ಬರುವ ಜೂನ್ ತಾ|| ೮ ರಲ್ಲಿ ರಾಜಧಾನಿಯಲ್ಲಿ ಕೂಡುವುದಾಗಿ ಗೊತ್ತಾಗಿರುವುದಲ್ಲದೆ, ಅದರ ನಡವಳಿಕೆಯು ಬಹಿರಂಗಪಡಿಸಲ್ಪಡುವುದಿಲ್ಲವಾಗಿ ಹೇಳಲ್ಪಟ್ಟಿದೆ. ಪ್ರಾಯಶಃ ಈ ಕಾನ್ಫರೆನ್ಸಿನ ಉದ್ದೇಶವು ಎಷ್ಟರಮಟ್ಟಿಗೆ ನೆರವೇರುವುದೆಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಈ ರೀತಿ ರಹಸ್ಯದಲ್ಲಿ ನಡಿಸಲ್ಪಡಬಹುದೆಂದೂಹಿಸುತ್ತೇವೆ. ಈ ಕಾನ್ಫರೆನ್ಸಿನ ಪ್ರಯೋಜನಾಪ್ರಯೋಜನವು ಹೇಗೆಯೋ ಆಗುತ್ತದೆಂದು ಸದ್ಯದಲ್ಲಿ ಹೇಳುವುದು ಕಷ್ಟವಾಗಗುತ್ತದೆ.

ಈಕಾನ್ಫರೆನ್ಸಿನ ಮೆಂಬರುಗಳಾಗಿ ನೇಮಿಸಲ್ಪಟ್ಟಿರುವವರ ಹೆಸರುಗಳು ಕಳೆದ ತಾ|| ೨೩ ರ ಗೆಜೆಟ್ಟಿನ ವಿಶೇಷಪತ್ರಿಕೆಯಲ್ಲಿ ಪ್ರಕಟವಾಗಿರುತ್ತವೆ. ಇವುಗಳಲ್ಲಿ ದಿವಾನರು, ಕೌನ್ಸಿಲರುಗಳು, ಶಾಖಾಧಿಕಾರಿಗಳು, ನಿಯಮನಿರ್ಮಾಣ ಸಭೆಯ ಮೆಂಬರುಗಳು ಮತ್ತೂ ಡಿ|| ಕಮಿಷನರುಗಳು ಇವರುಗಳ ಹೆಸರುಗಳು ಎಲ್ಲರಿಗೂ ಗೊತ್ತಿರುವುದರಿಂದ ಅವನ್ನು ಬಿಟ್ಟು ಉಳಿದವರ ಹೆಸರುಗಳನ್ನು ಇಲ್ಲಿ ಕೊಟ್ಟಿರುತ್ತೇವೆ.

ಸರ್ಕಾರಿಯುದ್ಯೋಗದಿಂದ ನಿವೃತ್ತರಾದವರು:— (೧) ಹಿಂದೆ ದಿವಾನರಾಗಿದ್ದ ಮ|| ವಿ. ಪಿ. ಮಾಧವರಾವ್, ಬಿ. ಎ., ಸಿ. ಐ. ಇ., ಯವರು, (೨) ಕಂಟ್ರೋಲರುದ್ಯೋಗದಿಂದ ನಿವೃತ್ತರಾಗಿರುವ ಮ|| ಇ. ಆರ್. ಸುಬ್ಬರಾಯ ಅಯ್ಯರ್, ಬಿ. ಎ., ಯವರು, (೩) ಅ|| ಕಮಿಷನರುದ್ಯೋಗದಿಂದ ನಿವೃತ್ತರಾಗಿರುವ ಮ|| ಬಾದಾಮಿ ಕೃಷ್ಣರಾಯರು.

ಅನುದ್ಯೋಗಿಕ ದೊಡ್ಡ ಮನುಷ್ಯರುಗಳು:— (೧) ಗುಬ್ಬಿಯ ದಸರಾ ಪ್ರಜಾಪ್ರತಿನಿಧಿಸಭೆಯ ಮೆಂಬರು ಮ|| ಹುಚ್ಚವೀರಗೌಡರು, (೨) ಶ್ರೀರಂಗಪಟ್ಟಣದ ದಸರಾ ಪ್ರಜಾಪ್ರತಿನಿಧಿಸಭೆಯ ಮೆಂಬರು ಮ|| ಬಿ. ನರಸಿಂಗರಾಯರು, (೩) ಕಡೂರ ಪ್ರ|| ಸಭೆಯಮೆಂಬರು ಮ|| ಎಸ್. ಪರ್ವತಪ್ಪನವರು, (೪) ಸಾಗರದ ಡಿಟೋ ಮೆಂಬರಾದ ಮ|| ರಟ್ಟಿಹಳ್ಳಿ ಪುಟ್ಟಪ್ಪನವರು, (೫) ಶಿವಮೊಗ್ಗೆಯ ಡಿಟೋ ಮೆಂಬರಾದ ಮ|| ಎಸ್. ಆರ್. ಬಾಲಕೃಷ್ಣರಾವ್, ಬಿ. ಎ., ಬಿ. ಎಲ್., ರವರು, (೬) ದಾವಣಗೆರೆಯ ಡಿಟೋ ಮೆಂಬರಾದ ಮ|| ಚೆನ್ನಗಿರಿ ಸೋಮಣ್ಣನವರು, (೭) ಮಾಗಡಿ ಕಾರ್ಣಿಕ ಕೃಷ್ಣಮೂರ್ತಿರಾಯರು, (೮) ಮ|| ಉರಗಳ್ಳಿ ಜೋಡಿದಾರ್ ಕೃಷ್ಣಯ್ಯಂಗಾರರು, (೯) ಬೆಂಗಳೂರ ಮಹಾರಾಜಾ ಮಿಲ್ಲಿನ ಮ|| ಎಸ್. ಸಿರೂರ್‌ರವರು.

ತಾತ್ಕಾಲಿಕ ಸೆಕ್ರೆಟರಿಯವರು:— ರೆವಿನ್ಯೂ ಆಫೀಸಿಗೆ ಸೇರಿದ ಅ|| ಕಮಿಷನರ್ ಮ|| ಕೆ. ಸುಬ್ಬರಾವ್, ಬಿ. ಎ., ಯವರು.

ಒಳದೇಶವೃತ್ತಾಂತ.

ಬೇಸಿಗೆಯ ರಜಕ್ಕಾಗಿ ಮುಚ್ಚಲ್ಪಟ್ಟಿದ್ದ ಸಿವಿಲ್ ಕೋರ್ಟುಗಳೆಲ್ಲವೂ ಈ ದಿವಸದಿಂದ ತೆರೆಯಲ್ಪಟ್ಟಿರುವುವು.

ಶ್ರೀಮದ್ಯುವರಾಜರು ಕಳೆದ ತಾ|| ೨೩ ರಲ್ಲಿ ಕುಣಿಗಲ್ಲಿಗೆ ದಯಮಾಡಿಸಿದ್ದು ತಾ|| ೨೬ ರಲ್ಲಿ ಹಿಂತಿರುಗಿ ರಾಜಧಾನಿಗೆ ಚಿತ್ತೈಸಿದರು.

ಕಳೆದ ತಾ|| ೧೩ ರಲ್ಲಿ ಗಂಜಾಮಿನಲ್ಲಿ ೧೪ ವರ್ಷಗಳ ವಯಸ್ಸಿನ ಹುಡುಗಿಯೊಬ್ಬಳು ಮನೆಯಲ್ಲಿ ಕೆಲಸಮಾಡುತ್ತಿರುವಾಗ್ಗೆ ಸಿಡಿಲುಬಡಿದು ಸತ್ತುಹೋದಳು. ಮತ್ತು ನೆರೆಯ ಮನೆಯವರಲ್ಲಿ ಇಬ್ಬರು ಮೂವರಿಗೆ ಸಿಡಿಲಿನ ಜ್ವಾಲೆಯ ಶಾಖವು ತಗಲಿ ಕೊಂಚ ಬಾಧೆಯುಂಟಾಗಿದ್ದಿತು.

ಸರ್ಕಾರಿಯಧಿಕಾರಿಗಳು ವ್ಯಾಪಾರ ಮೊದಲಾದ ಕಸಬನ್ನು ಮಾಡಕೂಡದೆಂದು, ಹಣವನ್ನಾಗಲೀ ಬಟ್ಟೆಬರೆಯನ್ನಾಗಲೀ ಬಹುಮಾನವಾಗಿ ಸ್ವೀಕರಿಸಕೂಡದೆಂದು, ಮತ್ತು ಇತರರ ಜತೆಯಲ್ಲಿ ಭಾವಚಿತ್ರವನ್ನು ತೆಗಿಸಕೂಡದೆಂದು ಸರ್ಕಾರದವರು ಒಂದು ವಿಧಿಯನ್ನು ಮಾಡಿ ಎಲ್ಲ ಶಾಖೆಗಳ ಮುಖ್ಯಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುವುದಾಗಿ ಕೇಳುತ್ತೇವೆ.

ಮಹಾಮಾತೃಶ್ರೀಯವರೂ ಮಹಾರಾಣಿಯವರೂ ಮುಂದಣ ತಿಂಗಳ ತಾ|| ೧ ರಲ್ಲಿ ಉದಕಮಂಡಲದಿಂದ ಹೆಚ್ಚುಗಟ್ಟಲೆಯ ರೈಲುಬಂಡಿಯಲ್ಲಿ ಹೊರಟು ತಾ|| ೨ ರ ಬೆಳಿಗ್ಗೆ ಬೆಂಗಳೂರನ್ನು ತಲಪುವರು. ಮತ್ತೂ ಅದೇದಿವಸ ರಾತ್ರಿ ೯|| ಗಂಟೆಗೆ ಬೆಂಗಳೂರಿಂದ ಹೆಚ್ಚುಗಟ್ಟಲೆಯ ರೈಲುಬಂಡಿಯಲ್ಲಿ ಪ್ರಯಾಣಮಾಡಿ ತಾ|| ೩ ರ ಬೆಳಿಗ್ಗೆ ರಾಜಧಾನಿಯನ್ನು ಸೇರುವರು. ಶ್ರೀಮನ್ಮಹಾರಾಜರು ತಾ|| ೩ ರಲ್ಲಿ ಉದಕಮಂಡಲವನ್ನು ಬಿಟ್ಟು ಮೋಟಾರುಬಂಡಿಯಲ್ಲಿ ಪ್ರಯಾಣಮಾಡಿ ಅದೇದಿವಸ ರಾಜಧಾನಿಯನ್ನು ತಲುಪುವದಾಗಿರುವು.

ಬೆಂಗಳೂರ ದರ್ಜಿಪೇಟೆಯ ವಾಸಸ್ಥಳಾದ ಲಕ್ಷ್ಮೀಬಾಯಿ ಯೆಂಬುವಳು ಮತ್ತೂ ಗುಡಿಯಮ್ಮನಪೇಟೆಯ ದಾಸ ನೆಂಬ ಹುಡುಗನೂ ಸಹ ಕಳೆದ ಗುರುವಾರ ರಾತ್ರಿ ಗು ಯಮ್ಮನಪೇಟೆಯಲ್ಲಿ ಬರುತ್ತಿರುವಾಗ್ಗೆ ವಿದ್ಯುಲ್ಲತೆಯ ತಂ ಗಳಿಗೆ ಸಿಕ್ಕಿಕೊಂಡು ನೇತಾಡುತ್ತಿದ್ದ ದಾರವು ಅವರಿಬ್ಬರಿ ತಗಲಿ ವಿದ್ಯುಲ್ಲತೆಯ ವೇಗವು ಅವರ ಶರೀರದಲ್ಲಿ ಪ್ರವೇ ಲು ಅವರು ಗಟ್ಟಿಯಾಗಿ ಕೂಗಿಕೊಂಡು ಸೊಕ್ಕಿ ಬಿದ್ದ . ವೈದ್ಯುತಶಾಖೆಯ ಲೈನ್ ಇನ್ಸ್‌ಪೆಕ್ಟರು ಕೂಡಲೇ ಬಂ ಅವರ ಮೈಗೆ ತಗಲಿಕೊಂಡಿದ್ದ ದಾರವನ್ನು ತಂತಿಯಿಂದ ಸಿ ಅವರನ್ನು ಕೂಡಲೆ ಚಿಕಿತ್ಸೆಗಾಗಿ ವಿಕ್ಟೋರಿಯಾ ಆ ತ್ರೆಗೆ ಕಳುಹಿದರು.

ಮನಾ ಸಿನಲ್ಲಿ ೧೯೦ ನೇ ದೇವರಾಜವೀಧಿಯಲ್ಲಿರುವ ಮೆಸರ್ಸ್. ಪಿ ನಂಬೆರುಮಾಳ್ಳುಚೆಟ್ಟಿ ಮತ್ತೂ ಕಂಪೆನಿಯವರು ರಾಜಾ ರವಿವರ್ಮನ ಚಿತ್ರಶಾಲೆಯಲ್ಲಿ ಮುದ್ರಿಸಿ ಪ್ರಕಟಿಸಿರುವ ಸರಸ್ವತಿಯ ಮತ್ತೂ ಲಕ್ಷ್ಮಿಯ ಪಟದ ಪ್ರತಿಯೊಂದನ್ನು ರಾಜಧಾನಿಯ ಮೆಸರ್ಸ್ ಎಚ್. ಜಿ. ಲಿಂಗಪ್ಪ ಮತ್ತೂ ಕಂಪೆನಿಯವರ ಮೂಲಕ ವಿಶ್ವಾಸಪೂರ್ವಕವಾಗಿ ಸ್ವೀಕರಿಸಿರುವೆವು. ಈ ಪಟಗಳೆರಡೂ ೧೪×೨೦ ಅಂಗುಲಗಳಾಕೃತಿಯುಳ್ಳ ಬೇರೆ ಬೇರೆ ಮುದ್ರಣಮಾಡಲ್ಪಟ್ಟಿರುವುವು ಈ ಚಿತ್ರಗಳ ಮುಖಭಾವವು ನಮ್ಮ ದಕ್ಷಿಣದೇಶ ಸ್ತ್ರೀಯರ ಮುಖಭಾವದಂತಿರುವುದು. ಮತ್ತೂ ಉಡಿಗೆ ತೊಡಿಗೆಗಳೂ ಈ ದೇಶದವುಗಳಂತೆಯೇ ಇರುವುವು. ಈ ಪ ಗಳು ಪ್ರಸಿದ್ಧ ರವಿವರ್ಮರ ಚಿತ್ರಶಾಲೆಯಲ್ಲಿ ಮುದ್ರಿತವಾಗಿರುವುದರಿಂದ ಅವುಗಳ ಬಣ್ಣ ಅಂದ ಮೊದಲಾದ ವಿ ಯಗಳನ್ನು ಇಲ್ಲಿ ಹೇಳಬೇಕಾದುದಿಲ್ಲವು. ಇವುಗಳ ಬೆಲೆ ಪ್ರತಿ ೧ ಕ್ಕೆ ೧ ರೂಪಾಯಿ.

ಸರ್ಕಾರಿಯ ಲೈಫ್ ಇನ್ಶೂರೇನ್ಸ್ ಬ್ಯಾಂಕಿಗೆ ಹಣವನ್ನು ಹಾಕತಕ್ಕ ಸರ್ಕಾರಿಯುದ್ಯೋಗಸ್ಥರು ಅಪೇಕ್ಷಿಸುವಂತೆ ಅವರ ಹೆಸರಿಗೆ ಆ ಶೇಖರವಾದ ಹಣವನ್ನು ಇಟ್ಟವರ ಮರಣಾನಂತರ ಅಥವ ಕ್ಲುಪ್ತ ಕಾಲಾನಂತರ ಕೊಡುವಂತೆ ಈ ಗೆ ಮಾಡಲ್ಪಟ್ಟಿರುವುದಷ್ಟೆ. ಹೀಗೆ ಹಣವನ್ನಿಟ್ಟಿರುವವ ಮೊದಲೇ ಹಣವನ್ನು ಪಡೆಯಲು ಗೊತ್ತುಮಾಡಲ್ಪಟ್ಟಿರುವವರು ಸತ್ತುಹೋದಲ್ಲಿ ಅವರ ಉತ್ತರಾಧಿಕಾರಿಗಳಿಗೆ ಹಣವು ಸಲ್ಲುವುದಿಲ್ಲವು. ಮತ್ತೂ ಹಣವನ್ನು ಪಡೆಯಲು ಗೊತ್ತುಮಾಡಲ್ಪಟ್ಟಿರುವವರು ಒಬ್ಬರಿಗಿಂತ ಹೆಚ್ಚಾಗಿದ್ದಲ್ಲಿ ಹಣವನ್ನಿಟ್ಟಿರುವವನ ಮರಣಾನಂತರ ಅವರೆಲ್ಲರಿಗೂ ಅಥವಾ ಅವರ ಉತ್ತರಾಧಿಕಾರಿಗಳೆಲ್ಲರಿಗೂ ಒಟ್ಟಿಗೆ ಕೊಡಲ್ಪಡುವುದು. ಹಣವನ್ನಿಟ್ಟಿರುವವನು ಮೊದಲೊಬ್ಬನಿಗೆ ಹಣವು ಸಲ್ಲಬೇಕೆಂದು ಗೊತ್ತುಮಾಡಿದ್ದು ಅನಂತರ ಅವನನ್ನು ಬಿಟ್ಟು ಮತ್ತಾರಿಗಾದರೂ ಸಲ್ಲುವಂತೆ ಬದಲಾಯಿಸಬಹುದು. ಎಂದು ವಿಧಿಯಲ್ಲಿ ತಿದ್ದುಪಡಿ ಮಾಡಲ್ಪಟ್ಟಿದೆ.

ಲೆ|| ಕರ್ನಲ್ ಸ್ಮಿತ್‌ರವರು ಸೀನಿಯರ್ ಸರ್ಜನ್ನುದ್ಯೋಗವನ್ನು ಬಿಟ್ಟು ಸಿಕಿಂದರಾಬಾದಿನಲ್ಲಿ ಪ್ರಿನ್ಸಿಪಲ್ ಮೆಡಿಕಲ್ ಆಫೀಸರುದ್ಯೋಗವನ್ನು ವಹಿಸಲು ಕಳೆದ ತಾ|| ೦ ರಲ್ಲಿ ಸಿಕಿಂದರಾಬಾದಿಗೆ ಪ್ರಯಾಣಮಾಡಿದರು. ಇವರ ನದಲ್ಲಿ ಡಾಕ್ಟರ್ ಅಚ್ಯುತರಾಯರು ಅಫಿಷಿಯೇಟಿಂಗ್ ಸೀನಿಯರ್ ಸರ್ಜನ್ ಮತ್ತೂ ಸ್ಯಾನಿಟರಿ ಕಮಿಷನರಾಗಿ ನೇಮಿಸಲ್ಪಟ್ಟಿರುತ್ತಾರೆ. ಆದರೆ ಇವರು ರಜದಮೇಲಿರುವುದರಿಂದ ಇವರು ಬರುವವರೆಗೆ ವಿಕ್ಟೋರಿಯಾ ಆಸ್ಪತ್ರೆಯ ಡಾ|| ಅಮ್ಮರ್ಗಂ ಮೊದಲಿಯಾರರು ಕೆಲಸ ನೋಡುವಂತೆ ಅಪ್ಪಣೆಯಾಗಿರುತ್ತದೆ. ಈ ಸ್ಥಾನಕ್ಕೆ ಹೊರಗಿನವರನ್ನು ತರುವುದಕ್ಕಿಂತ ಅನೇಕವೇಳೆ ಸೀನಿಯರ್ ಸರ್ಜನರುದ್ಯೋಗವನ್ನು ಬದಲುನೋಡುತ್ತಿದ್ದು ಬಲ್ಲೇ ಸಮರ್ಥರೆಂದು ಹೆಸರ್ಪಡೆದಿರುವ ಲೋಕಪ್ರಿಯರಾದ ಡಾ|| ಅಚ್ಯುತರಾಯರನ್ನೇ ಸ್ಥಿರವಾಗಿ ನೇಮಿಸಿದಲ್ಲಿ ಈ ದೇಶೀಯರೆಲ್ಲರಿಗೂ ಪರಮಸಂತೋಷವಾಗುವುದು. ಬಹುಕಾಲದಿಂದಲೂ ಐರೋಪ್ಯರೇ ವಹಿಸಿಕೊಂಡಿದ್ದ ಚೀಫ್ ಇಂಜನಿಯರುದ್ಯೋಗವನ್ನು ನಮ್ಮ ಪ್ರಭುಗಳು ಈವೇಳೆ ಸ್ವದೇಶದವರಿಗೆ ಕೊಟ್ಟಿರುವುದನ್ನೋಡಿದರೆ, ಈ ಸೀನಿಯರ್ ಸರ್ಜನರುದ್ಯೋಗಕ್ಕೆ ಹೊರಗಿನವರನ್ನಪೇಕ್ಷಿಸದೆ ಈಗ ಅನಿತ್ಯವಾಗಿ ನೋಡುತ್ತಿರುವ ರಾಯರನ್ನೇ ಸ್ಥಿರಗೊಳಿಸಬಹುದೆಂದು ತೋರುತ್ತದೆ.

ವರ್ತಮಾನ ಸಂಗ್ರಹ.

ಯುದ್ಧದ ಹಡಗುಗಳಲ್ಲುಪಯೋಗಿಸುವ ಹಗ್ಗಗಳ ಬೆಲೆಯು ೪೫,೦೦೦ ರೂ. ಆಗುವುದಂತೆ.

ಅಮೇರಿಕಾದೇಶದ ಸಂಯುಕ್ತ ಸಂಸ್ಥಾನದಲ್ಲಿ ಒಬ್ಬ ಕೋಟ್ಯಧೀಶ್ವರನು ಪೋಲೀಸು ಉದ್ಯೋಗದಲ್ಲಿರುವನು.

ಕರಾಚಿಯ ಸಿಟಿ ಮ್ಯಾಜಿಸ್ಟ್ರೇಟರಾದ ಮಿ|| ಇ. ಸ್ಯಾಂಡ್ಸ್ ರವರು ಪ್ಲೇಗು ರೋಗಗ್ರಸ್ತರಾಗಿ ತಾ|| ೨೩ ರಲ್ಲಿ ಸತ್ತುಹೋದರು.

ಇಂಗ್ಲೆಂಡಿನ ಶ್ರೀಮಂತರಲ್ಲೊಬ್ಬನಾದ ಲಾರ್ಡ್ ಹವರ್ಡ್ ದಿವಾಲ್ಡ್ ಎಂಬಾತನಿಗೆ ವರ್ಷವೊಂದಕ್ಕೆ ೩,೪೫೦೦೦೦ ರೂ. ಗಳ ಆದಾಯವಿರುವುದು.

ಜರ್ಮನಿ ರಾಜ್ಯಕ್ಕೆ ಸೇರಿದ ಪ್ರಷ್ಯನಿಯಲ್ಲಿ ಪಾಠಶಾಲೆಗಳಲ್ಲೋದುವ ವಿದ್ಯಾರ್ಥಿಗಳಿಗೆ ಚದುರಂಗದಾಟವು ಹೇಳಿಕೊಡಲ್ಪಡುವುದು.

ಪ್ರಪಂಚದ ಎಲ್ಲ ರಾಜರುಗಳು ಕಾಗದಪತ್ರಗಳ ಮೇಲೆ ರುಜುವನ್ನು ಮಾಡುವಾಗ್ಗೆ ತಮ್ಮ ಹೆಸರನ್ನು ಬರೆಯುವುದು ಪದ್ಧತಿಯಷ್ಟೆ. ಆದರೆ ಸ್ಪೇನ್‌ದೇಶದ ರಾಜನು ಮಾತ್ರ "ನಾನು ದೊರೆ" ಎಂದು ರುಜು ಮಾಡುತ್ತಾನೆ.

ಕೊಚ್ಚಿ ಸಂಸ್ಥಾನದ ರಾಜರು ತಮ್ಮ ದಿವಾನರಾದ ಮಿ|| ಎಂ. ಆರ್. ಬಾನರ್ಜಿ, ಎಂ. ಎ., ಐ. ಸಿ. ಎಸ್., ರವರನ್ನು ತಮ್ಮ ಪ್ರತಿನಿಧಿಗಳನ್ನಾಗಿ ಸೀಮೆಯಲ್ಲಿ ನಡೆಯುವ ಕಿರೀಟಧಾರಣ ಮಹೋತ್ಸವಕ್ಕೆ ಕಳುಹಲು ನಿರ್ಧರಿಸಿರುವರು.

ಈಚೆಗಾದ ಜನಪರಿಗಣಿತಿಯಲ್ಲಿ ಇಂಗ್ಲೆಂಡು ಮತ್ತೂ ವೇಲ್ಸಿನ ಜನಸಂಖ್ಯೆಯು ೩,೬೦,೭೫,೨೬೯ ಎಂದು ಗೊತ್ತಾಗಿರುವುದು. ೧೯೦೧ ರಲ್ಲಿ ೩,೨೫,೨೭,೮೪೩ ಜನಸಂಖ್ಯೆಯಿದ್ದಿತು. ಲಂಡನ್‌ಪಟ್ಟಣ ಒಂದರಲ್ಲೇ ೭೨,೫೨,೯೬೩ ಜನರಿರುವುದಾಗಿ ಗೊತ್ತಾಗಿರುವುದು.

ಇಂಗ್ಲೆಂಡಿಗೆ ಸೇರಿದ ಒಂದು ಹಳ್ಳಿಯಲ್ಲಿ ಹಿಂದೆ ಒಂದು ಬಾತು ೧೪ ಅಂಗುಲ ಸುತ್ತಳತೆಯೂ, ೨೮ ರೂ. ಗಳ ತೂಕವೂ ಇದ್ದ ಒಂದು ಮೊಟ್ಟೆಯನ್ನಿಟ್ಟಿದ್ದಿತು. ಈಗ ಮತ್ತೊಂದು ಬಾತು ೧೬|| ಅಂಗುಲ ಸುತ್ತಳತೆಯೂ ೩೩ ರೂ. ತೂಕವೂ ಉಳ್ಳ ಒಂದು ಮೊಟ್ಟೆಯನ್ನಿಟ್ಟಿರುವುದು.

ಮುಂದಣ ತಿಂಗಳಲ್ಲಿ ಲಂಡನ್ ಪಟ್ಟಣದಲ್ಲಿ ಜರಗುವ ಜಾರ್ಜ್‌ಪ್ರಭು ದಂಪತಿಗಳ ಕಿರೀಟಧಾರಣ ಮಹೋತ್ಸವಕ್ಕೆ ಅಮೇರಿಕಾದೇಶಕ್ಕೆ ಸೇರಿದ ಸಂಯುಕ್ತ ಸಂಸ್ಥಾನದಿಂದ ಜಾನ್ ಹೇಸ್‌ಹ್ಯಾಮಂಡ್ ರವರು ಪ್ರತಿನಿಧಿಯಾಗಿ ಬರುವರು. ಇವರು ಹಿಂದೆ ಆ ದೇಶದ ರೈಲ್ವೆ ಕಂಪೆನಿಯ ಇಂಜನೀಯರಾಗಿದ್ದಾಗ್ಗೆ ವರ್ಷವೊಂದಕ್ಕೆ ೧೫,೦೦,೦೦೦ ರೂ. ಸಂಬಳವು ದೊರೆಯುತ್ತಿದ್ದಿತಂತೆ. ಇಷ್ಟು ಭಾರಿ ಸಂಬಳವು ಪ್ರಪಂಚದಲ್ಲಿ ಮತ್ತಾರಿಗೂ ಸಲ್ಲುತ್ತಿಲ್ಲವು.

ಕಲ್ಕತ್ತೆಯಲ್ಲಿ ಒಬ್ಬ ಮಾರ್ವಾಡಿ ಶ್ರೀಮಂತನ ಮನೆಯಲ್ಲಿ ೧೫,೦೦೦ ರೂ. ಬೆಲೆ ಬಾಳುವ ಆಭರಣಗಳನ್ನು ಅವನ ಪುರೋಹಿತನು ಮತ್ತೂ ಸೇವಕನು ಇಬ್ಬರೂ ಸೇರಿ ಅಪಹರಿಸಿದ್ದರು. ಆ ಶ್ರೀಮಂತನು ತನ್ನ ಮನೆಯಲ್ಲಿ ಅವರಿಬ್ಬರೂ ಚಿಕ್ಕವಯಸ್ಸಿನಿಂದಲೂ ಇದ್ದುದರಿಂದ ಅವರನ್ನು ವಿಚಾರಣೆಗೆ ಗುರಿಮಾಡಲೊಪ್ಪಲಿಲ್ಲವು. ಆದರೆ ಇತರ ಮಾರ್ವಾಡಿಗಳ ಹೇಳಿಕೆಯಮೇರೆ ಪೋಲೀಸಿನವರು ಅವರಿಬ್ಬರನ್ನೂ ಹಿಡಿದು ವಿಚಾರಿಸುವಲ್ಲಿ ಪುರೋಹಿತನು ಕೃತ್ಯವನ್ನು ನಡಿಸಿದುದುಂಟೆಂದೊಪ್ಪಿಕೊಂಡು ಆಭರಣಗಳನ್ನು ಕೊಟ್ಟುಬಿಟ್ಟನು.

ಕಳೆದ ಏಪ್ರಿಲ್ ತಾ|| ೧೮ ರಲ್ಲಿ ಬಾಬ್ನಾ ಡಿ|| ಷಹಜಾಪುರದ ಡೆಪ್ಯುಟಿ ಮ್ಯಾಜಿಸ್ಟ್ರೇಟರು ದೊಂಬಿಯನ್ನು ನಡಿಸಿದ ಅಪರಾಧಕ್ಕೆ ಗುರಿಮಾಡಲ್ಪಟ್ಟಿದ್ದ ೮ ಜನ ಮಹಮ್ಮದೀಯರ ವಿಚಾರಣೆಯನ್ನು ಮಾಡುತ್ತಿರುವಾಗ್ಗೆ ಅಪರಾಧಿಗಳ ಪಕ್ಷದ ವಕೀಲನನ್ನು ತಮ್ಮ ಸಮೀಪಕ್ಕೆ ಬರಮಾಡಿಕೊಂಡು ಅವನ ಕಿವಿಯನ್ನು ಅವನ ಕೈಯಿಂದಲೇ ಏಳಾವೃತ್ತಿ ಹಿಡಿದೆಳೆಸಿ ಅನಂತರ ಹೊರಗೆ ಕಳುಹಿಸಿಬಿಟ್ಟರು. ಈ ವಿಚಾರವು ಹೈಕೋರ್ಟಿನವರ ಗಮನಕ್ಕೆ ಬಂದು ಅವರು ಆ ಮ್ಯಾಜಿಸ್ಟ್ರೇಟರ ವಿಚಿತ್ರ ನಡತೆಗಾಗಿ ವಾಗ್ದಂಡನೆಯನ್ನು ಮಾಡಿರುವರು.

ಲಕ್ನೋ ಡಿಸ್ಟ್ರಿಕ್ಟಿಗೆ ಸೇರಿದ ಕಕೋರಿ ಎಂಬ ಗ್ರಾಮದ ಲುಕಾಯಿ ಎಂಬುವನು ಒಂದು ಕೈಯಲ್ಲಿ ಒಬ್ಬ ಹೆಂಗುಸಿನ ಶಿರಸ್ಸನ್ನೂ ಮತ್ತೊಂದುಕೈಯಲ್ಲಿ ಚಾಕುವನ್ನೂ ಹಿಡಿದುಕೊಂಡು ಬೀದಿಯಲ್ಲಿ ಓಡಿಹೋಗುತ್ತಿರುವಾಗ್ಗೆ ಪೋಲೀಸರು ಅವನನ್ನು ಹಿಡಿದು ಡಿ|| ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಿದರು. ಅವನು ವಿಚಾರಣೆಯಲ್ಲಿ ಆ ಶಿರವು ತನ್ನ ಹೆಂಡತಿಯದೆಂದೂ, ಅವಳು ಮನೆಯ ಕೆಲಸವನ್ನು ಸರಿಯಾಗಿ ಮಾಡದೆ ಆ ದಿವಸ ಅಡಿಗೆಯನ್ನು ಕೆಡಿಸಿಬಿಟ್ಟದ್ದರಿಂದ ಕುಪಿತನಾಗಿ ಅವಳ ಕತ್ತನ್ನು ಕತ್ತರಿಸಿ ಡಿ|| ಕಮಿಷನರ ಮುಂದೆ ಹೇಳಲು ಓಡಿಹೋಗುತ್ತಿದ್ದೆನೆಂದೂ ಹೇಳಿದನು.

ಕಳೆದ ತಾ|| ೨೦ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲಿ ಒಟ್ಟು ೭೧೯೦ ಪ್ಲೇಗ್ ಮರಣಗಳಾದುವು. ಇದರಲ್ಲಿ ಬೊಂಬಾಯಾಧಿಪತ್ಯದಲ್ಲಿ ೩೩೧; ಮದ್ರಾಸಾಧಿಪತ್ಯದಲ್ಲಿ ೨೮; ಬಂಗಾಳದಲ್ಲಿ ೫೧೪; ಸಂಯುಕ್ತ ಪ್ರಾಂತಗಳಲ್ಲಿ ೫೦೭೩; ಪಂಜಾಬಿನಲ್ಲಿ ೧೬೪೯; ಬರ್ಮಾದಲ್ಲಿ ೧೩೩; ಮಧ್ಯಪ್ರಾಂತಗಳಲ್ಲಿ ೨೦; ಮೈಸೂರು ಸಂಸ್ಥಾನದಲ್ಲಿ ೮೦; ಹೈದರಾಬಾದು ಸಂಸ್ಥಾನದಲ್ಲಿ ೧; ಮಧ್ಯ ಹಿಂದೂಸ್ಥಾನದಲ್ಲಿ ೩೩; ರಾಜಪುಟಾನದಲ್ಲಿ ೮೩೩; ದಿಲ್ಲಿ ಪ್ರಾಂತಗಳಲ್ಲಿ ೧೩ ಮತ್ತೂ ಕಾಶ್ಮೀರದಲ್ಲಿ ೧೪ ಈ ಪ್ರಕಾರವಾಗಿ ಮರಣಗಳಾಗಿರುತ್ತವೆ. ದಿಲ್ಲಿಯ ಪಟ್ಟಣದಲ್ಲಿ ೩ ಜನರಿಗೆ ರೋಗತಗಲಿ ೩ ಮರಣಗಳಾದುವು. ಮತ್ತೂ ದಿಲ್ಲಿಯ ಡಿ|| ನಲ್ಲಿ ೨೮ ಜನರಿಗೆ ತಗಲಿ ೨೩ ಜನರು ಸತ್ತರು.

ಕುಲ್ನಾ ಡಿ|| ಗೆ ಸೇರಿದ ನಲಿಯಾರ್ಕೆರ ಎಂಬಲ್ಲಿ ನಾಮಶೂದ್ರರಿಗೂ, ಮಹಮ್ಮದೀಯರಿಗೂ ನಡೆದಿದ್ದ ಕಲಹದ ವಿಚಾರದಲ್ಲಿ ನಾಮಶೂದ್ರರು ದೋಷಯುಕ್ತರಾಗಲು ಮಹಮ್ಮದೀಯರು ಮತ್ತಷ್ಟು ರೇಗಿ ನೆರೆಗ್ರಾಮಗಳಿಂದ ಮಹಮ್ಮದೀಯರನ್ನು ಬರಮಾಡಿಕೊಂಡು ಒಟ್ಟು ೧೦೦೦ ಜನರವರೆಗೆ ಸೇರಿ ದೊಣ್ಣೆ, ಪಿಸ್ತೋಲು, ಕತ್ತಿ ಮೊದಲಾದ ಆಯುಧಗಳನ್ನು ಹಿಡಿದುಕೊಂಡು ನಾಮಶೂದ್ರರ ಗ್ರಾಮಗಳ ಮೇಲೆ ನುಗ್ಗಿ ಕಲಹಕ್ಕಾರಂಭಿಸಿದರು. ಆದರೆ ಆ ನಾಮಶೂದ್ರರು ಕಲಹಕ್ಕೆ ಸನ್ನದ್ಧರಾಗಿರಲಿಲ್ಲವಾಗಿ ಬಹಳ ಪೆಟ್ಟನ್ನು ತಿಂದರು. ಮಹಮ್ಮದೀಯರು ನಾಮಶೂದ್ರರನ್ನು ವಿಪರೀತವಾಗಿ ಹಿಂಸಿಸಿ ಅವರ ಮನೆಗಳಿಗೆ ನುಗ್ಗಿ ಪದಾರ್ಥಗಳನ್ನು ಸೂರೆಮಾಡಿಕೊಂಡು ಹೋದರು.

ಕಳೆದ ತಾ|| ೨೮ ರ ರಾತ್ರಿ ಬೆಳಗಾವಿಗೂ ಮಿರಜಿಗೂ ಮಧ್ಯೆ ಸೇಡ್‌ಬಾಳದಲ್ಲಿ ದೊಡ್ಡ ಬಿರುಗಾಳಿಯಿಂದ ಕೂಡಿದ ಮಳೆಯು ಬಂದು ರೈಲ್ವೆಯ ಸ್ಟೇಷನ್ನಿನಲ್ಲಿ ಆಗತಾನೆ ಇತರ ಬಂಡಿಗಳಿಂದ ಬೇರ್ಪಡಿಸಲ್ಪಟ್ಟು ಕಂಬಿಗಳಮೇಲೆ ನಿಲ್ಲಿಸಲ್ಪಟ್ಟಿದ್ದ ೮ ವಾಗನ್ನುಗಳನ್ನು ಬಹುದೂರ ಹೊಡೆದುಕೊಂಡುಹೋಗಿ ಬಿಟ್ಟಿದ್ದಿತು. ಆದರೆ ಈ ಸಂದರ್ಭವು ಆ ಸ್ಟೇಷನ್ನಿನ ಕೆಲಸಗಾರರಿಗೆ ತಿಳಿದಿರಲಿಲ್ಲವು. ಕೊಂಚಹೊತ್ತಿನಲ್ಲಿ ಪೂನಾಕ್ಕೆ ಅದೇ ಮಾರ್ಗವಾಗಿ ಹೋಗುವ ಮೇಲು ಬಂಡಿಯು ಬಂದು ಸ್ಟೇಷನ್ನಿನ ಆಚೆ ೮ ಮೈಲಿ ದೂರದಲ್ಲಿ ಕಂಬಿಗಳ ಮೇಲೆ ನಿಂತಿದ್ದ ಆ ವ್ಯಾಗನ್ನುಗಳಿಗೆ ತಾಕಿಬಿಡಿತು. ಇದರಿಂದ ೨ ವ್ಯಾಗನ್ನುಗಳು ಕಂಬಿಯನ್ನು ಬಿಟ್ಟು ಕೆಳಗಿಳಿದುವು ಮತ್ತೂ ಆ ಇಂಜನ್ನಿನ ಮುಂಗಡೆ ಕೊಂಚ ಜಖಮವಾಯಿತು. ಆದರೆ ಪ್ರಯಾಣಿಕರಿಗೇನೂ ಅಪಾಯವಾಗಲಿಲ್ಲವು.

೧೯೦೬ರಲ್ಲಿ ಬುದ್ಧಿಭ್ರಾಂತನಾದ ಒಬ್ಬ ಪಠಾಣನು ಪಿಸ್ತೂಲನ್ನೂ ಚಾಕುವನ್ನೂ ಹಿಡಿದುಕೊಂಡು ಆಗಿನ ಡಿ|| ಪೊಲಿಟಿಕಲ್ ಆಫೀಸರಾದ ಮಿ|| ಎಚ್. ಎ. ಕ್ಯಾಸರ್ಲರವರ ಮೇಲೆ ಬಿದ್ದು ಕೊಲ್ಲಯತ್ನಿಸುವಷ್ಟರಲ್ಲಿ ಪಂಜಾಬಿನ ಎಕ್ಸ್‌ಟ್ರಾ ಅ|| ಕಮಿಷನರ್ ಖಾನ್‌ಮಹಮದ್ ಜಾಫರ್‌ಖಾನರವರು ಆ ಪಠಾಣನನ್ನು ತಮ್ಮಎರಡು ಕೈಗಳಿಂದಲೂ ಬಾಚಿ ಭದ್ರವಾಗಿ ತಬ್ಬಿಕೊಂಡರು. ಮತ್ತು ಇಬ್ಬರೂ ಹೋರಾಡಿ ಕೆಳಗೆ ಬಿದ್ದರು. ಅಷ್ಟರಲ್ಲಿ ಬೇರೆಯೊಬ್ಬನು ಬಂದು ಆ ಹುಚ್ಚನ ಕೈಯಿಂದ ಆಯುಧವನ್ನು ಕಿತ್ತುಕೊಳ್ಳದಿದ್ದಲ್ಲಿ ಆ ಹುಚ್ಚನು ಖಾನ್‌ಮಹಮದ್ ರವರನ್ನು ಚಾಕುವಿನಿಂದ ತಿವಿದು ಕೊಂದುಬಿಡುತ್ತಿದ್ದನು. ಹೀಗೆ ಖಾನರವರು ತಮ್ಮ ಪ್ರಾಣಾಪಾಯದ ಮೇಲೆ ದೃಷ್ಟಿಯಿಡದೆ ಮಿ|| ಕ್ಯಾಸರ್ಲರವರ ಪ್ರಾಣವನ್ನೂ ಮತ್ತಿಬ್ಬರ ಪ್ರಾಣವನ್ನೂ ಉಳಿಸಿದ ಸಾಹಸ ಕಾರ್ಯವು ಗೌರ್ನರ್‌ಜನರಲ್‌ರವರ ಗಮನಕ್ಕೆ ಈಗತಾನೆ ಬಂದು ಪ್ರಶಸ್ತಿಯನ್ನು ದಯಪಾಲಿಸಿರುವರು.

ತಿರುವಾಂಕೂರ್ ಸಂಸ್ಥಾನಕ್ಕೆ ಸೇರಿದ ಭೂತಪಾಂಡಿ ಎಂಬಲ್ಲಿ ೪ ತಿಂಗಳೊಳಗೆ ಒಂದು ರಥೋತ್ಸವವು ನಡೆದಿತ್ತು. ಆಗ್ಗೆ ತಾಲ್ಲೋಕು ತಾಸಿಲಾದಾರರ ಪಕ್ಷವೊಂದು ಮತ್ತೂ ಅದರ ಇದಿರುಪಕ್ಷವೊಂದೂ ಹೀಗೆ ಎರಡು ಪಕ್ಷಗಳಿದ್ದುವು. ಇವುಗಳಲ್ಲಿ ತಾಸಿಲ್ದಾರರ ಇದಿರ ಪಕ್ಷದವರು ರಥೋತ್ಸವವು ನಡಿಯಕೂಡದೆಂದೂ ಒಂದುವೇಳೆ ನಡೆದಲ್ಲಿ ಅನಾಹುತವಾಗುತ್ತದೆಂದೂ ಭಯಪಡಿಸುತ್ತಿದ್ದರು. ಇದರಮೇಲೆ ಪೋಲೀಸು ಇನ್ಸ್‌ಪೆಕ್ಟರು ಐರೋಪ್ಯನಾದುದರಿಂದ ರಥೋತ್ಸವ ಕಾಲದಲ್ಲಿ ಬರಬಹುದೆ ಎಂದು ತಾಸಿಲ್ದಾರರನ್ನು ಕೇಳಿ ಪರಸ್ಪರ ಚರ್ಚೆಯು ನಡೆಯುತ್ತಿರುವಷ್ಟರಲ್ಲಿ ಇನ್ಸ್‌ಪೆಕ್ಟರು ರಥೋತ್ಸವದ ಸಮಯದಲ್ಲಿ ಬಂದುಬಿಟ್ಟಿದ್ದರು. ಇದರಿಂದ ದೇವರಿಗೆ ಅಪರಿಶುದ್ಧತೆಯಾಯಿತೆಂದೂ ಮತ್ತೂ ಪರಿಶುದ್ಧಿಗಾಗಿ ಇನ್ಸ್‌ಪೆಕ್ಟರು ೫೦೪ ರೂ. ಗಳನ್ನು ಕೊಡಬೇಕೆಂದೂ ತಾಸಿಲ್ದಾರನು ಮೇಲ್ಪಟ್ಟಧಿಕಾರಿಗಳಿಗೆ ಬರೆದು ಕೇಳಿದ್ದನು. ಅದರಮೇಲೆ ಡಿವಿಜನ್ ಮ್ಯಾಜಿಸ್ಟ್ರೇಟರು ವಿಚಾರಣೆ ನಡಿಸಿ ಇನ್ಸ್‌ಪೆಕ್ಟರು ಪರಿಶುದ್ಧಿಗಾಗಿ ಏನನ್ನೂ ಕೊಡಕೂಡದೆಂದು ತೀರ್ಮಾನಿಸಿ ಸರ್ಕಾರಕ್ಕೆ ನಡೆದ ವಿದ್ಯಮಾನವನ್ನು ಬರೆದು ತಿಳಿಸಿದರು. ಸರ್ಕಾರದವರು ತಾಸಿಲ್ದಾರನ ಕೃತ್ಯವೆಲ್ಲವೂ ಅಸೂಯೆಯಿಂದ ಮಾಡಿದುದಾಗಿದೆ ಯಾದುದರಿಂದ ದೇವರ ಪರಿಶುದ್ಧಿಗಾಗಿ ೫೦೦ ರೂ. ಗಳನ್ನು ಆತನೇ ಕೊಡಬೇಕೆಂದೂ ಪೋ|| ಇನ್ಸ್‌ಪೆಕ್ಟರು ಆತುರಪಟ್ಟುದು ತಪ್ಪೆಂದೂ ಅಪ್ಪಣೆ ಮಾಡಿರುತ್ತಾರೆ.

ಪತ್ರವ್ಯವಹಾರ.

ಜಗದ್ಗುರುಗಳ ದೇಶಸಂಚಾರ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ಸವಾರಿಯು ದೇಶಸಂಚಾರಾರ್ಥವಾಗಿ ದಯಮಾಡಿಸಿ ಅಲ್ಲಲ್ಲಿ ಪ್ರಸಿದ್ಧ ಸ್ಥಳಗಳಲ್ಲಿ ದಿಗ್ವಿಜಯಮಾಡಿ ನಿಪ್ಪಾಣಿಯಿಂದ ಶ್ರೀ ಸಿದ್ಧಗಿರಿ ಸಂಸ್ಥಾನದ ಮಾರ್ಗವಿಡಿದು ಈ ತಿಂಗಳು ೧೧ನೇ ತಾರೀಖಿಗೆ ಕೊಲ್ಹಾಪುರಕ್ಕೆ ದಯಮಾಡಿಸಿ ಶ್ರೀಮಂತ ಕುರ್ಲೆ ಶಿಂತ್ರಿ ಮಲ್ಲಪ್ಪ ಅಣ್ಣಾ ಇವರ ಭವ್ಯಭವನದಲ್ಲಿ ನಿವೇಶಮಾಡಿತು. ಅಲ್ಲಿಂದ ೧೭ನೇ ತಾ|| ಪ್ರಾತಃಕಾಲ ೬ ಗಂಟೆಗೆ ಸವಾರಿಯು ಅತ್ತಾಲೋಕಿ, ಪಂಚಕಳಸ, ಹಗಲುದೀವಟಿಗೆ, ಬ್ಯಾಂಡು

ಡೋಲುಕಟ್ಟಿದ ನಂದೀಧ್ವಜ, ಮೊಹರ್ಬಾಲು ಮೊದಲಾದ ಸಕಲ ಬಿರುದುಗಳಿಂದಲೂ ಶ್ರೀಮನ್ಮಹಾರಾಜ ಶಾಹು ಛತ್ರಪತಿ ಸರ್ಕಾರದಿಂದ ಶ್ರೀಗಳವರ ಗೌರವವಿಶೇಷಕ್ಕಾಗಿ ಕಳುಹಿಸಲ್ಪಟ್ಟಿದ್ದ ಆನೆಗಳು, ಕುದುರೆಗಳು, ಕುದುರೆಮೇಳಣ ಬ್ಯಾಂಡ್‌ವಾದ್ಯ ಮೊದಲಾದ ಮರ್ಯಾದೆಗಳಿಂದಲೂ, ಸಿಟಿ ಫೌಜ್‌ದಾರರಿಂದ ಕಳುಹಿಸಲ್ಪಟ್ಟ ಕಾನಸ್ಟೆಬಲುಗಳಿಂದಲೂ ಮುಂದೆ ನಡೆಯುತ್ತಿದ್ದ ವೇದಘೋಷ ಪರಾಕುಗಳಿಂದಲೂ, ಅನೇಕವಿಧ ವಾದ್ಯತೂರ್ಯಧ್ವನಿಗಳಿಂದಲೂ, ಅಥಣಿ, ಮಹಲಿಂಗಪುರ, ಮಿರ್ಜ್, ಸಾಂಗ್ಲಿ, ರಬಕವಿ, ಬನಹಟ್ಟಿ, ಗೋಕಾಕ್, ನಿಪ್ಪಾಣಿ, ಗಡಹಿಂಗ್ಲೇಜ್, ಸಂಕೇಶ್ವರ, ಬಾಗೇವಾಡಿ, ಎಕ್ಸಂಬಿ, ದಾವಣಗೆರೆ, ಬ್ಯಾಡ್ಗಿ, ಆಲೂರು, ಬೆಳಗಾಂ, ಚಿಕ್ಕೋಡಿ, ಹುಬ್ಬಳ್ಳಿ ಮೊದಲಾದ ಪ್ರಸಿದ್ಧ ಸ್ಥಳಗಳಿಂದ ಉತ್ಸವ ದರ್ಶನಕ್ಕೋಸ್ಕರ ಬಂದು ನೆರವಿದ್ದ ಮಹಾಜನಗಳ ಸಂದಣಿಯಿಂದಲೂ, ವೀಧಿಯ ಉಭಯಪಾರ್ಶ್ವಗಳಲ್ಲೂ ಕಿಕ್ಕಿರಿದು ನಿಂತು ನಿರೀಕ್ಷಿಸುವ ನಗರವಾಸಿಗಳಿಂದಲೂ ಸಾಂದ್ರವಾದ ಪರಮೋತ್ಸವವು ಬಹು ವಿಜೃಂಭಣೆಯಿಂದ ಹೊರಟು ಸರಕಾರಿ ರಿಸಾಲ್ ಮಾರ್ಗದಿಂದ ಆಲ್ಬರ್ಟ್ ಎಡ್ವರ್ಡ್ ಆಸ್ಪಿಟಲ್ ಮತ್ತು ಟವರ್‌ಹಾಲ್ ಇವುಗಳ ಮುಖ್ಯ ರಾಜಮಾರ್ಗವನ್ನು ಹಿಡಿದು ಭೆಂಡಿಮಾರ್ಕೆಟ್ ಮುಂದೆ ನಡೆದು ಗೋಡಂಬೀ ಮಸೀದಿಹತ್ತಿರ ಹಾದು ಶ್ರೀ ಅಹಲ್ಯಾಬಾಯಿ ದವಾಖಾನೆಮುಂದೆ ಗುಜರಿ ರಾಜಮಾರ್ಗದಿಂದ ನಾಗಪೂರ್ ಕರವೀರ ಕಾಂತಾಚಾರ್ಯಪಂಡಿತ ಇವರ ಮಂದಿರದ ಮಾರ್ಗವಾಗಿ ರಂಕಾಳವೇಸಿ ರಸ್ತೆ ಹಿಡಿದು ಮಹಾರಾಜ ಸರಕಾರದ ಮೀರಾಬಾಗ್ ಬಂಗಲೆಗೆ ೧೧ ಗಂಟೆಗೆ ಬಿಜಮಾಡಿಸಿತು. ಈ ಜಗದ್ಗುರು ಮಹಾಸ್ವಾಮಿಗಳ ಮಹೋತ್ಸವ ಸಮಾರಂಭವು ಈ ರಾಜಧಾನಿಯ ಅನೇಕ ಸಮಾಜದವರ ಸಹಾನುಭೂತಿಯಿಂದ ನಡಿಯಿತು. ಮಧ್ಯೆ ರಾಜಮಾರ್ಗದಲ್ಲಿ ಎರಡುಸಾರಿ, ಮತ್ತು ಮೀರಾಬಾಗ್ ಮುಂದೆ ಎರಡುಸಾರಿ ಶ್ರೀ ಜಗದ್ಗುರುಗಳವರ ಉತ್ಸವ ಸಮಾರಂಭದ ಭಾವಚಿತ್ರಗಳು ತೆಗೆಯಲ್ಪಟ್ಟವು. ಅನಂತರ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ನಿವೇಶದಲ್ಲಿ ರಚಿಸಿದ್ದ ಸಿಂಹಪೀಠದಲ್ಲಿ ಮಂಡಿಸಿ ನೆರದ ಸಭೆಯು ಸಂತೋಷಪಡುವಂತೆ ಹಿಂದೂಸ್ತಾನಿ ಭಾಷೆಯಿಂದ ಬ್ರಿಟಿಷ್ ಸರಕಾರದಲ್ಲಿರುವ ಸಮದೃಷ್ಟಿ, ನಿಷ್ಪಕ್ಷಪಾತ ಮೊದಲಾದ ಸದ್ಗುಣಗಳು ಕರವೀರಮಹಾರಾಜರಲ್ಲಿಯೂ ನೆಲಗೊಂಡಿರುವವೆಂಬುದು ಮೊದಲಾದ ವಿಷಯವನ್ನು ಅಪ್ಪಣೆಕೊಡಿಸಿದರು. ಅನಂತರ ದಾವಣಗೆರೆ ಟಿ. ಎಂ. ಪಂಡಿತ ಚಂದ್ರಶೇಖರ ಶಾಸ್ತ್ರಿಗಳು ಶ್ರೀ ಗಳ ಅನೇಕ ದೇಶಸಂಚಾರ ದಿಗ್ವಿಜಯ, ಇಲ್ಲಿಯ ವೀರಶೈವ ಪ್ರಮುಖರಾದ ರಾವ್‌ಸಾಹೇಬ್ ಚೌಗುಲೆ ಮುನ್ಸೀಫರವರು, ರಾ॥ ಶೆಟ್ಟಿ ಮಾಸ್ತರ್, ರಾ॥ ಬೂತಾಳೇ ವಕೀಲ್, ರಾ॥ ಗವಾಯಿ ಅಪ್ಪಯ್ಯ ಮುಂತಾದವರು ನಡೆಸಿದ ಸಮಾರಂಭ ಸಾಹಸ ಇವುಗಳನ್ನುದ್ದೇಶಿಸಿ ಬಹಳ ಸರಸವಾಗಿ ಭಾಷಣಮಾಡಿದರು. ಬಳಿಕ ಮಿರ್ಜಿ ಮಠದ ಸಣ್ಣ ತಮ್ಮಪ್ಪ ಶಾಸ್ತ್ರಿಗಳು ಶ್ರೀಗಳವರ ಭಾಷಣಾಭಿಪ್ರಾಯವನ್ನು ಮರಾಠಿಯಿಂದ ಸರ್ವರಿಗೂ ತಿಳಿಯುಂತೆ ಭಾಷಣಮಾಡಿದರು. ಅನಂತರ ಸಭೆ ಬರಖಾಸ್ತಾಯಿತು. ೧೨ನೇ ತಾ॥ ಪ್ರಾತಃಕಾಲಕ್ಕೆ ವೈದ್ಯಪಂಚಾನನ ಕೆ. ವ್ಹಿ. ಎಲಗಡಕರ ಇವರು ಮಹಾರಾಷ್ಟ್ರಭಾಷೆಯಿಂದ ಉತ್ಸವ ಸಮಾರಂಭವರ್ಣನೆಯೆಂಬ ಕವಿತ್ವವನ್ನು ಮಾಡಿ ತಂದೊಪ್ಪಿಸಲು, ಅವರಿಗೆ ಶ್ರೀಗಳ ಸನ್ನಿಧಿಯಿಂದ ಸಂಭಾವನೆಯು ದೊರಕಿತು. ೧೩ ನೇ ತಾ॥ ನಲ್ಲಿ ವೈಯ್ಯಾಕರಣ ಪಂಡಿತ ಬಾಳಾಶಾಸ್ತ್ರಿ ಹುಪರಿಕರ ಇವರು ದರ್ಶನಕ್ಕೆ ಬಂದು ಸಂಸ್ಥಾನವೈಯ್ಯಾಕರಣ ಗುರುಮೂರ್ತಿ ಶಾಸ್ತ್ರಿಗಳೊಡನೆ ಕೆಲವು ಶಾಸ್ತ್ರಾರ್ಥವನ್ನು ಮಾಡಿದರು. ೧೪ನೇ ತಾ॥ ಮಧ್ಯಾಹ್ನ ೧ ಗಂಟೆಗೆ ಶ್ರೀಮನ್ಮಹಾರಾಜರವರ ದರ್ಶನಕ್ಕೋಸ್ಕರ ದಾವಣಗೆರೆ ಟಿ. ಎಂ. ಪಂಡಿತ ಚಂದ್ರಶೇಖರ ಶಾಸ್ತ್ರಿಗಳು, ಮಿರ್ಜಿಮಠದ ಸಣ್ಣ ತಮ್ಮಪ್ಪ ಶಾಸ್ತ್ರಿಗಳು, ಶ್ರೀಮಂತ ಮಲ್ಲಪ್ಪ ಅಣ್ಣ ಕರ್ಲಿ ಇವರು, ರಾ॥ ಬಸಲಿಂಗಪ್ಪ ಅಣ್ಣ ಘಟ್ಟಟ್ಟಿ ಮಹಲಿಂಗಪುರ ಇವರು, ರಾ॥ ಶಿವಪ್ಪಣ್ಣ ಮಹಜನ ಅಥಣಿ, ರಾ॥ ಬಸವಪ್ರಭಪ್ಪ ಬಾಗೇವಾಡಿ, ರಾವ್‌ಸಾಹೆಬ್ ಚೌಗುಲೆ ಮುನ್ಸೀಫ್‌ರವರು, ರಾ॥ ವೀರಬಸವಶೆಟ್ಟಿ, ಆಕ್ಟಿಂಗ್ ಸಂಸ್ಕೃತ ಪ್ರೊಫೆಸರ್ ರಾಜಾರಾಮಕಾಲೇಜ್ ಇವರೆಲ್ಲಾ ರಾಜಾಸ್ಥಾನಕ್ಕೆ ಹೋದನಂತರ ಮೊದಲು ಪಂಡಿತ ಚಂದ್ರಶೇಖರ ಶಾಸ್ತ್ರಿಗಳು ತಾವು ಮಹಾರಾಜರ ವಿಷಯವಾಗಿ ರಚಿಸಿದ್ದ ಸಂಸ್ಕೃತ ಶ್ಲೋಕಗಳನ್ನು ಹೇಳಿ ಮಂಗಳಾಶೀರ್ವಾದವನ್ನು ಮಾಡಿದನಂತರ, ಮಿರ್ಜಿಮಠದ ಸಣ್ಣ ತಮ್ಮಪ್ಪ ಶಾಸ್ತ್ರಿಗಳು ಶ್ರೀಗಳ ನಿಜಗೌರವವನ್ನು ಸರಿಯಾಗಿ ಕಾಪಾಡಿ ಅಶೇಷ ವೀರಶೈವರಿಗುಂಟುಮಾಡಿದ ಆನಂದಾತಿಶಯಕ್ಕಾಗಿ ಆಭಾರ ಮನ್ನಿಸಿದರು. ಬಳಿಕ ಶ್ರೀಮನ್ಮಹಾರಾಜರು ಶ್ರೀಗಳ ಸಮಾಗಮದಿಂದ ತಮಗುಂಟಾದ ಅತ್ಯಾನಂದವನ್ನು ಬಹುವಿಧವಾಗಿ ಪ್ರದರ್ಶಿಸಿದರು. ೧೫ನೇ ತಾರೀಖಿನಲ್ಲಿ ಶ್ರೀಗಳವರ ಸ್ವಾರಿಯು ಶ್ರೀಮಹಾರಾಜರವರ ಕರಂಬ ತಲಾಕಳ್ಳಿ ದಯಮಾಡಿಸಿ ಅಲ್ಲಿಯ ವಿಶೇಷವನ್ನು ಪರಾಮರ್ಶಿಸಿದರು. ೧೬ನೇ ತಾರೀಖಿನಲ್ಲಿ ಶ್ರೀಮಂತ ಹಿರಾಜರಾವ್ ಫುರ್ಫ್ ಬಾಪುಸಾಹೇಬ್ ವಜಾರತ್, ಪಿ॥ ಆಲ್‌ಸಂಸ್ಥಾನ ಕಾಗಲ್ ಇವರ ಕೋರಿಕೆಮೇರೆಗೆ ಶ್ರೀಶಾಹು ಸ್ಪಿನ್ನಿಂಗ್ ಮತ್ತು ವೀವ್ಹಿಂಗ್ ಮಿಲ್ಲಿಗೆ ದಯಮಾಡಿಸಿದ್ದರು. ಮಧ್ಯಾಹ್ನದವೇಳೆ ಶ್ರೀಗಳ ಸಂದರ್ಶನಕ್ಕೆ ಮರಾಟಿ, ಸಾರಸ್ವತ, ಪ್ರಭು, ಮುಸಲ್‌ಮಾನ್ ಮುಂತಾದ ಸಮಾಜಗಳ ಸೂಪರಿಂಟೆಂಡೆಂಟ್ ಮಿ॥ ಹೋಲ್ಕರ್ ಪ್ರೊಫೇಸರ್ ಡೋಂಗ್ರೆ ಮುಂತಾದವರು ತಮ್ಮ ವಿದ್ಯಾರ್ಥಿಗಳೊಡನೆ ಬಂದಿದ್ದರು. ೧೭ನೇ ತಾ॥ ನಲ್ಲಿ ನಾಮದೇವ, ಜೈನ ಸಮಾಜದ ಮುಖ್ಯರು ವಿದ್ಯಾರ್ಥಿಗಳೊಡನೆ ಬಂದಿದ್ದರು. ಅವರ ವಿದ್ಯಾಸಂಸ್ಥೆಗಳ ಕ್ರಮವನ್ನು ಶ್ರೀಗಳವರು ವಿಚಾರಿಸಿ ವಿದ್ಯಾರ್ಥಿಗಳಿಗೆ ಬ್ರಹ್ಮಚರ್ಯಪಾಲನ, ವಿದ್ಯಾಭ್ಯಾಸಲಕ್ಷಣ ಮೊದಲಾದವುಗಳನ್ನುಪದೇಶಿಸಿ, ಶ್ರೀಗಳು ವಿದ್ಯಾಭಿವೃದ್ಧಿಯ ಉತ್ತೇಜನಕ್ಕೋಸ್ಕರ ಪ್ರತಿಯೊಂದು ಬೋರ್ಡಿಂಗ್ ಸಂಸ್ಥೆಗಳಿಗೆ ಒಂದೊಂದುನೂರು ರೂಪಾಯಿಗಳನ್ನು ಆಶೀರ್ವಾದರೂಪವಾಗಿ ದಯಪಾಲಿಸಿದರು. ಈ ಮಾಹೆ ೧೮ನೇ ತಾ॥ ಸಾಯಂಕಾಲ ೫ ಘಂಟೆಗೆ ಶ್ರೀಮನ್ಮಹಾರಾಜರವರು ಶ್ರೀಗಳವರ ಸಂದರ್ಶನಕ್ಕೆ ದಿವಾನರವರು ಪ್ರೊಫೇಸರ್ ಡೋಂಗ್ರೆ ಮುಂತಾದವರೊಡನೆ ರಾಜಮರ್ಯಾದಾಪುರಸ್ಸರವಾಗಿ ವೀರಶೈವ ಬೋರ್ಡಿಂಗಿಗೆ ಆಗಮಿಸಿ ವಂದನಾದಿಗಳನ್ನು ಸಮರ್ಪಿಸಿದನಂತರ ಶ್ರೀಗಳವರು ಮಹಾರಾಜರವರಿಗೆ ಫಲಮಂತ್ರಾಕ್ಷತೆಗಳನ್ನು ವೇದಘೋಷಕರ ಮಂತ್ರೋಚ್ಚಾರಪೂರ್ವಕವಾಗಿ ಸಮರ್ಪಿಸಿ ಆಶೀರ್ವಾದವನ್ನು ಮಾಡಿದರು. ಬಳಿಕ ದಾವಣಗೆರೆ ಪಂಡಿತ ಟಿ. ಎಂ. ಚಂದ್ರಶೇಖರ ಶಾಸ್ತ್ರಿಗಳು ಮಹಾರಾಜರವರಲ್ಲಿ ನೆಲೆಗೊಂಡಿರುವ ಶೌರ್ಯ, ಧೈರ್ಯ, ಗಾಂಭೀರ್ಯ, ಕೀರ್ತಿ, ಮೊದಲಾದ ಸ್ವೀಯಗುಣಗಳನ್ನು ಕುರಿತು ರಚಿಸಿದ್ದ ಸಂಸ್ಕೃತ ಶ್ಲೋಕಗಳನ್ನು ಹೇಳಿ ಸಂತೋಷಪಡಿಸಿದನಂತರ ಉಭಯ ಕುಶಲಪ್ರಶ್ನೆಗಳು ನಡೆದವು. ಮಹಾರಾಜರವರು ಶ್ರೀಗಳವರಿಗೆ ತಮ್ಮ ಮಠಗಳು ಯಾವಯಾವ ಸ್ಥಳಗಳಲ್ಲಿರುವವೆಂದು ಕೇಳಿ, ಇಲ್ಲಿಯೂ ತಮ್ಮದೊಂದು ಮಠವನ್ನು ಸ್ಥಾಪಿಸಬೇಕೆಂತಲೂ, ಅದಕ್ಕೆ ತಾವು ಉದಾರಾಶ್ರಯವನ್ನು ಕೊಡುವೆವೆಂತಲೂ ವಾಗ್ದಾನ ಮಾಡಿದರು. ೨೦ನೇ ತಾ॥ ನಲ್ಲಿ ಹುಜೂರು ಅಪ್ಪಣೆಮೇರೆಗೆ ಅರಮನೆಯಿಂದ ೪೦೦ ಜನಗಳಿಗೆ ಪಂಚಪಕ್ವಾನ್ನ ಭೋಜನಕ್ಕೆ ಸರಿಯಾದ ಪಕ್ವಾಲವಾಜಮೆಯು ಕಳುಹಲ್ಪಟ್ಟಿತ್ತು. ಶ್ರೀಮನ್ಮಹಾರಾಜರವರ ಅಭಿಪ್ರಾಯದಂತೆ ಈ ಕರವೀರ ಕ್ಷೇತ್ರದಲ್ಲಿ (ಕೊಲ್ಹಾಪುರದಲ್ಲಿ) ಮಠವನ್ನು ಸ್ಥಾಪಿಸಲು ಸ್ಥಳನಿರ್ದೇಶದ ಕಾರ್ಯವು ಆಗಲೇ ಆರಂಭಿಸಲ್ಪಟ್ಟು ಈ ಮಠದ ಶಂಕುಸ್ಥಾಪನಾಕಾರ್ಯವು ಶ್ರೀಮನ್ಮಹಾರಾಜ ಶಾಹು ಛತ್ರಪತಿ ಭೂಪಾಲರವರಿಂದಲೇ ನಡೆಸಲ್ಪಡತಕ್ಕದೆಂದು ಆಲೋಚನೆಯು ನಡಿದಿರುತ್ತೆ. ಈ ಮಹಾಸಮಾರಂಭವು ಭಕ್ತಪ್ರಮುಖರುಗಳೆಲ್ಲರಿಗೂ ಅವಕಾಶವಿದ್ದಲ್ಲಿ ತಿಳಿಸಲ್ಪಡುತ್ತೆ.

ಪ್ರತ್ಯಕ್ಷದರ್ಶಿ.

ವೀರಮಾಹೇಶ್ವರ ಪ್ರಶಂಸಾ.

(ಕಳೆದವಾರದಶೇಷ.)

ಮಾಹೇಶ್ವರಸ್ಯ ಹೃದಯಾಂಬುಜಕರ್ಣಿಕಾಯಾಮಧ್ಯೆ ವಸಾಮಿಗಿರಿರಾಜಸುತಾಸಹಾಯಃ । ತಂಪೂಜಯೇದ್ಯ ಇಹಮಾಂ ಮನುಜೋರ್ಚಯೇದ್ಯಸ್ತಸ್ಯೈದದಾಮಿಶಿವಮಾಹಮವಾಂಛಿತಾರ್ಥಂ ॥ ೪೦ ॥ ಯಾಪೂಜಾಮಮಭಕ್ತಸ್ಯ ಕೃತಾಯೇನಸದಾತನ । ಸಾಮಮೈವಕೃತಾಪೂಜಾ ತೇನನಾಸ್ತ್ಯತ್ರಸಂಶಯಃ ॥ ೪೧ ॥ ಮಲ್ಲಿಂಗಂಮಸ್ತಕಾದ್ಯಂಗೇ ಧೃತ್ವಾಶಕ್ರಪುರೋಗಮಾಃ । ದೇವಾಮಮಾಂತಿಂಗಮಧ್ಯೆಸಂಪೂಜ್ಯಸ್ವಂ ಸ್ವಂಪದಂಯಯುಃ ॥ ೪೨ ॥ ಉರಸ್ಥಲೇಹರಿರ್ಲಿಂಗಂ ಧೃತ್ವಾಚಕ್ರಪುರೋಗಮಾಃ । ಲಿಂಗಸ್ಥಂ ಮಾಂಸಮಾರಾಧ್ಯಸ್ವಂ ಸ್ವಂಪದಮವಾಪಿರೇ ॥ ೪೩ ॥ ಲಕ್ಷ್ಮೀಸರಸ್ವತೀಮುಖ್ಯಾದೇವ್ಯೋ ಮಲ್ಲಿಂಗಮಾದರಾತ್ । ಧೃತ್ವಾನಿಜಾಂಗೇ ತಲ್ಲೀನಭಾವಾಜಗ್ಮುಃಪರಂಸುಖಂ ॥ ೪೪ ॥ ಕೇಚಿನ್ಮಹಾಂತೋ ಹೃದಿಭಾವಲಿಂಗಂ ಸಂಪೂಜ್ಯಸಚ್ಚಿತ್ಸುಖರೂಪಮೀಶಂ । ಮುಕ್ತಿಂಪ್ರಯಾತಾಃ ಪರಮಾತ್ಮಲೀನಮನಃ ಪ್ರಚಾರಾಃ ಪರಿಪೂರ್ಣಭಾವಾಃ ॥ ೪೫ ॥ ಪ್ರಾಣಾಖ್ಯಯಂ ಲಿಂಗಮನನ್ಯಭಾವಾಸ್ಸಂಪೂಜಯಿತ್ವಾ ಗುಹನಾಭಿಕಂಠೇ । ಕೇಚಿನ್ಮುನೀಂಪ್ರಾಃಪದಮವ್ಯಯಂ ತಚ್ಛಿವಂಪ್ರಯಾತಾದೃಢಭಕ್ತಿಯುಕ್ತಾಃ ॥ ೪೬ ॥ ಅನ್ಯೇಸದಾಯೋಗಪರಾಹೃದಬ್ಜ ಜ್ವಲಂತಮಂಗುಷ್ಠಮಿತಂಪುರಾಣಂ । ಲಿಂಗಸ್ವರೂಪಂ ಶಿವಮಪ್ರಮೇಯಂ ಸಂಭಾವ್ಯತಸ್ಮಿಂಲಯಮಾಪುರಾರ್ಯಾಃ ॥ ೪೭ ॥ ಭ್ರೂಘ್ರಾಣಮಧ್ಯೇಪ್ಯವಿಮುಕ್ತದೇಶೇ ವಿಶ್ವೇಶ್ವರಾಖ್ಯಂ ಪರಮಾತ್ಮಲಿಂಗಂ । ಧ್ಯಾನಾಮೃತಾಸಕ್ತಧಿಯೋ ಮಹಾಂತೋಧ್ಯಾತ್ವಾಪರಾಮುಕ್ತಿಮವಾಪುರನ್ಯೇ ॥ ೪೮ ॥ ಯೇಬ್ರಹ್ಮರಂಧ್ರಸ್ಥ ಸಹಸ್ರಪತ್ರಮಧ್ಯೇಸ್ಫುರಂತಂ ರವಿಕೋಟಿಭಾಸಂ । ಮಾಮೇಕಭಾವೇನ ವಿಭಾವಯಂತಿತೇ ಮತ್ಪ್ರಿಯಾನಿತ್ಯವಿಮುಕ್ತಿಭಾಜಃ ॥ ೪೯ ॥ ಯೇಮತ್ಪೃಥಕ್ತ್ವೇನಸಮರ್ಚಯಂತೇಮಾಮದ್ವಯಂತೇ ಪೃಥಗೇವಮತ್ತಃ । ತೇನೋಪಮೇಯಾ ಭವಪಾಶಬದ್ಧಾ ಸ್ಸಂಸಾರರಥೀರ್ಘಾಧ್ವನಿನ್ಯೆಗಮಾಸ್ತೆ ॥ ೫೦ ॥

ಅಯ್ಯಾ ಷಣ್ಮುಖನೇ! ನಾನು ಮಾಹೇಶ್ವರನ ಹೃತ್ಕಮಲಕರ್ಣಿಕಾಮಧ್ಯದಲ್ಲಿ ಪಾರ್ವತೀಸಮೇತನಾಗಿ ವಾಸಿಸುತ್ತೇನೆ. ಯಾವ ಮನುಷ್ಯನು ಆ ವೀರಮಾಹೇಶ್ವರನನ್ನು ಪೂಜಿಸಿ ನನ್ನನ್ನು ಪೂಜಿಸುವನೋ ಅವನಿಗೆ ಸಕಲೇಷ್ಟಾರ್ಥಗಳನ್ನೂ ಕೊಡುತ್ತೇನೆ. ನನ್ನ ಭಕ್ತನಿಗೆ ಮಾಡಿದ ಪೂಜೆಯೇ ನನ್ನ ಪೂಜೆ; ಈ ವಿಷಯದಲ್ಲಿ ಯಾವಸಂಶಯವೂ ಇಲ್ಲ. ಇಂದ್ರ ಮೊದಲಾದ ದೇವತೆಗಳು ಶಿವಲಿಂಗವನ್ನು ಸಿರಸ್ಸು ಮುಂತಾದಸ್ಥಲಗಳಲ್ಲಿ ಧರಿಸಿಕೊಂಡು, ಲಿಂಗಮಧ್ಯದಲ್ಲಿರುವ ನನ್ನನ್ನು ಪೂಜಿಸಿ ತಂತಮ್ಮ ಅಧಿಕಾರವನ್ನು ಪಡೆದರು. ನಾರಾಯಣನು ಎದೆಯಮೇಲೆ ಶಿವಲಿಂಗವನ್ನು ಧರಿಸಿ ತನ್ನಧಿಕಾರಪದವಿಯನ್ನು ಹೊಂದಿದನು. ಲಕ್ಷ್ಮಿ, ಸರಸ್ವತಿ, ಮುಂತಾದ ದೇವಸ್ತ್ರೀಯರು ತಮ್ಮದೇಹದಲ್ಲಿ ಶಿವಲಿಂಗವನ್ನು ಪ್ರೀತಿಯಿಂದ ಧರಿಸಿದರಾಗಿ,ಅದರಲ್ಲಿಯೇ ಮನಸ್ಸನ್ನು ಲಯಿಸಿ ಪರಮಾನಂದವನ್ನು ಪಡೆದಿದ್ದಾರೆ. ಕೆಲವರು ಮಹಾತ್ಮರು ಹೃದಯದಲ್ಲಿ ಸಚ್ಚಿದಾನಂದರೂಪವಾದ ಭಾವಲಿಂಗವನ್ನು ಪೂಜಿಸುತ್ತಾ ಪರಮಾತ್ಮನಲ್ಲಿ ಅಡಗಿದ ಮನೋವ್ಯಾಪಾರವುಳ್ಳವರೂ, ಪರಿಪೂರ್ಣಭಾವವುಳ್ಳವರೂ ಆಗಿ ಮೋಕ್ಷವನ್ನು ಪಡೆದರು. ಕೆಲವರು ಮುನಿಶ್ರೇಷ್ಠರು ಭಕ್ತಿಯುಕ್ತರಾಗಿ ಹೊಕ್ಕಳು ಕೊರಳುಗಳ ನಡುವೆ ಅಂದರೆ ಹೃದಯಸ್ಥಾನದಲ್ಲಿ ಪ್ರಾಣಲಿಂಗವನ್ನು ಅಭೇದಭಾವನೆಯಿಂದ ಪೂಜಿಸಿ ನಿತ್ಯವಾದ ಶಿವಪದವನ್ನು ಪಡೆದರು. ಯೋಗನಿಷ್ಠರಾದ ಬೇರೆಕೆಲವರು ಆರ್ಯರು ಹೃದಯಕಮಲದಲ್ಲಿ ಪ್ರಕಾಶಿಸುತ್ತಿರುವವನಾಗಿಯೂ, ಅಂಗುಷ್ಠಪರಿಮಾಣನಾಗಿಯೂ, ನಿತ್ಯನಾಗಿಯೂ, ಅಳತೆಮೀರಿದವನಾಗಿಯೂ, ಲಿಂಗಸ್ವರೂಪನಾಗಿಯೂ ಇರುವ ಶಿವನನ್ನು ಧ್ಯಾನಿಸಿ, ಅಲ್ಲಿಯೇ ಲಯವನ್ನು ಹೊಂದಿದರು. ಇನ್ನುಕೆಲವರು ಮಹನೀಯರು ಧ್ಯಾನವೆಂಬ ಅಮೃತದಲ್ಲಿ ಆಸಕ್ತರಾಗಿ, ಹುಬ್ಬು ಮೂಗುಗಳ ನಡುವೆ ಅವಿಮುಕ್ತವೆಂಬ ಸ್ಥಲದಲ್ಲಿ ವಿಶ್ವೇಶ್ವರನೆಂಬ ಹೆಸರುಳ್ಳ ಶಿವಲಿಂಗವನ್ನು ಧ್ಯಾನಿಸಿ ಶ್ರೇಷ್ಠವಾದ ಮೋಕ್ಷವನ್ನು ಪಡೆದರು. ಯಾರು ಬ್ರಹ್ಮರಂಧ್ರವೆಂಬ ಶಿರಸ್ಥಾನದಲ್ಲಿರುವ ಸಹಸ್ರದಳ ಕಮಲದ ನಡುವೆ ಕೋಟಿ ಸೂರ್ಯರಂತೆ ಹೊಳೆಯುತ್ತಿರುವ ನನ್ನನ್ನು ನಿಶ್ಚಲಚಿತ್ತದಿಂದ ಒಂದಾಗಿ ಧ್ಯಾನಿಸುತ್ತಾರೋ ಅವರು ನನ್ನ ಪ್ರೀತಿಗೆ ಪಾತ್ರರಾಗಿ ನಿತ್ಯಮುಕ್ತಿಯನ್ನು ಪಡೆಯುವರು. ಯಾರು ಅದ್ವಿತೀಯನಾದ ನನ್ನನ್ನು ಬೇರೆಯೆಂಬ ಭಾವನೆಯಿಂದ ಪೂಜಿಸುತ್ತಾರೋ ಅವರು ನನಗಿಂತಲೂ ಬೇರೆ ನನ್ನವರಲ್ಲ; ಸಂಸಾರವೆಂಬ ಹಗ್ಗದಿಂದ ಕಟ್ಟಲ್ಪಟ್ಟವರಾಗಿ ಪ್ರಪಂಚವೆಂಬ ದಾರಿಯಲ್ಲಿ ದುಃಖರೂಪವಾದ ವಾಣಿಜ್ಯವ್ಯಾಪಾರವಂ ನಡಸುವವರಾಗಿದ್ದಾರೆ.

---

೭೦ ಕಥೆಗಳು. ಸಚಿತ್ರ. ೫೧೦ ಪುಟಗಳು.

ಶುಕಸಪ್ತತಿ ಕಥೆಗಳು.

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವದು. (೩) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದ್ದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತ ವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಮುಂತಾದ ಸುಗಂಧದ್ರವ್ಯಗಳು; ಪ್ಲೇಗು, ಕಾಲರಾ ಮುಂತಾದ ಜಾಡ್ಯವ್ಯಾಧಿಗಳಿಗೆ ಮುಖ್ಯ ಔಷಧಗಳು; ಭಾವನಚಿತ್ರಮುದ್ರಾಪಟಗಳು; ಮೊದಲಾದ ಸಾಮಾನುಗಳು ನಮ್ಮಲ್ಲಿ ದೊರೆಯುತ್ತವೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಊದಬತ್ತಿಗಳು.

12

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೬-೦-೦ ೫-೦-೦; ೩-೦-೦; ೨-೮-೦; ೧-೪-೦ ; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಚೂರ್ಣ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಸಟೀಕ ವಿವಾಹವಿಧಿ	೦-೬-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಡೆನ್ಸ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಮೂಲದೀಕ್ಷಾವಿಧಿ	೦-೨-೦
ವ್ರತಪಂಚಕ	೦-೩-೦
ವಿವೇಕಮಂಜರಿ	೦-೨-೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಪಂಡಿತ ಎಲ್. ಗರಳಪುರಿ ಇವ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
42 ಮೈಸೂರು.

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೯ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೩-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೩-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೩-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ— ೫೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವವು. ಅಸಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

7 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು
ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.

ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದಲುಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿವಿದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೬-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಬಿಟ್ಟಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚ್
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ನೇಟೀವ್ ಡಾಕ್ಟರ್ ಚೆನ್ನಬಸವಪ್ಪ ಅಂಡ್ ಸನ್ಸ್
ಇವರ ಅತ್ಯುತ್ತಮ ಸಿದ್ಧೌಷಧಗಳು.

41

೧. ಸ್ವರ್ಣಗಂಗಾಧರಮಾತ್ರೆ— ಇದರ ಸೇವನೆಯಿಂದ ಸ್ತ್ರೀಯರ ಸೂತಿಕಾವಾಯು ಮೇಹವಾತ ಕ್ಷಯ ಮುಂತಾದ ಪ್ರಬಲ ರೋಗಗಳು ಪರಿಹಾರವಾಗಿ ಆಹಾರ ನಿದ್ರಾಕ್ರಮವು ಸರಿಹೋಗಿ ರಕ್ತಪುಷ್ಟಿಯಿಂದ ಬಲವು ಬರುವುದು. ಕ್ರಯ ೨೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೦ ರೂ. ಟ. ಖ. ೬ ಆ

ಸರ್ವಮೋಹರಾಜಾಂಗ ರಬ್ಬರ್ ಎಣ್ಣೆ.— ಈ ಎಣ್ಣೆಯನ್ನು ಬೆಳಿಗ್ಗೆ ಮತ್ತೂ ಸಾಯಂಕಾಲ ೧ ತೊಲದಂತೆ ೨೦ ದಿನಗಳವರೆಗೆ ಸೇವಿಸಿದಲ್ಲಿ ಸಕಲ ಮೇಹಸಂಬಂಧವಾದ ಉಷ್ಣರೋಗಗಳೂ, ಚಿಬ್ಬು, ವ್ರಣ, ಕುಷ್ಠ, ಮಹೋದರ ಉಬ್ಬಸ, ಕೈ ಕಾಲು ಹಿಡಿದುಕೊಳ್ಳುವುದು ಮೊದಲಾದ ಮೇಹಸಂಬಂಧರೋಗಗಳು ನಿವಾರಣೆಯಾಗಿ ಒಳ್ಳೇ ಬಲ ಬರುವುದು. ಇದಕ್ಕೆ ಗ್ಯಾರಂಟಿ ಕೊಡುತ್ತೇವೆ. ಕ್ರಯ ೧೦ ಔನ್ಸ್ ಸೀಸೆ ೧ ಕ್ಕೆ ೩ ರೂ. ಟ. ಖ. ೬ ಆಣೆ.

೩. ಬಾಲಸಂಜೀವಿನೀಮಾತ್ರೆ.—ಇದು ಎಳೆಮಕ್ಕಳ ಜ್ವರಕ್ಕೂ, ಕೆಮ್ಮಿಗೂ, ಸೀತಕ್ಕೂ ಅತ್ಯಂತನಂಬುಗೆಯಾದ ಔಷಧವು. ಕ್ರಯ ೫೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧ ರೂ. ಟ. ಖ. ೬ ಆಣೆ.

೪. ಮೇಹಕುಲಾಂತಕತೈಲ.— ಈ ತೈಲವು ಅನೇಕ ವಿಧವಾದ ಉಷ್ಣವಾಯುವನ್ನು ಹೋಗಲಾಡಿಸಿ ದೇಹಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುತ್ತದೆ. ಕ್ರಯ ೨೪ ಔನ್ಸ್ ಸೀಸೆ ೧ ಕ್ಕೆ ೫ ರೂ. ಟ. ಖ. ೮ ಆಣೆ.

೫. ನಾರಾಯಣತೈಲ.— ಈ ತೈಲದಿಂದ ಪಾರ್ಶ್ವವಾಯು, ಲಕ್ವಾ, ಮುಸ್ಕವಾತ, ಅಂಡವಾತ ಮುಂತಾದ ೮೪ ವಿಧ ವಾಯುಗಳು ಖಂಡಿತವಾಗಿ ಗುಣವಾಗುತ್ತವೆ. ಇದಕ್ಕೆ ಗ್ಯಾರಂಟಿಕೊಡುತ್ತೇವೆ. ಕ್ರಯ ೨೪ ಔನ್ಸ್ ಸೀಸೆ ೧ ಕೆ. ೮ ರೂ. ಟ. ಖ. ೮ ಆಣೆ.

೬. ಮೇಹರಾಮಬಾಣ ಮಾತ್ರೆ— ಇದು ೨೪ ಬಗೆಯ ಮೇಹ ಸಂಬಂಧವಾದ ರೋಗಗಳನ್ನು ಬಹುಳ ಖಾತರಿಯಿಂದ ಗುಣ ಮಾಡಿ ರಕ್ತಪುಷ್ಟಿಯನ್ನು ಕೊಟ್ಟು ಬಲವನ್ನುಂಟುಮಾಡುತ್ತದೆ. ೨೪ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ರೂಪಾಯಿ ೫. ಟಪ್ಪಾಲ್ ಖರ್ಚು ೬ ಆಣೆ.

೭. ಮಹಾದ್ರಾಕ್ಷಾದಿರಸಾಯನ.— ಈ ರಸಾಯನವನ್ನು ೪೦ ದಿನ ಸೇವಿಸುವದರಿಂದ ಛಳಿಂತಿ ಮೇಹ, ಮೂತ್ರ ಕಟ್ಟು ಅಸ್ತಿಸ್ರಾವ, ಅಸೃಗ್ದರ, ಪಿತ್ತಭ್ರಮೆ, ಸಹಿಸಲಾರದ ಬಾಯಾರಿಕೆ, ರಕ್ತಮೂತ್ರ, ಸಿಕ್ಕಮೂತ್ರ, ಅಸ್ತಿಗತಜ್ವರ ಶಿರೋಭ್ರಮಣೆ, ಯೋನಿರೋಗ, ರಕ್ತಪಿತ್ಥ ಇತ್ಯಾದಿ ರೋಗಗಳು ನಿರ್ಮೂಲವಾಗಿ ವೀರ್ಯವೃದ್ಧಿಯಿಂದ ಒಳ್ಳೇ ಬಲವೂ ತೇಜಸ್ಸೂ ಉಂಟಾಗುತ್ತದೆ. ಇದರ ಕ್ರಯ ಸೇರು ೧ ಕ್ಕೆ. ರೂಪಾಯಿ ೩. ಟಪ್ಪಾಲ್‌ಖರ್ಚು ೬ ಆ ಆಣೆ.

೮. ಮರೀಚಾದಿಲೇಹ್ಯ.— ಈ ಲೇಹ್ಯಸೇವನೆಯಿಂದ ಹೊಟ್ಟೆ ಉಬ್ಬರವೂ, ಅಜೀರ್ಣವಾಯುವೂ ಪರಿಹಾರವಾಗಿ ಅಗ್ನಿಸ್ಪಟವಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨ ಟಪ್ಪಾಲ್‌ಖರ್ಚು ೬ ಆಣೆ.

೯. ಮಹಾಕುಂಡಳ್ಯಾದಿರಸಾಯನ.— ಇದರಿಂದ ಕ್ಷಯ ಕಾಸಿ, ಜ್ವರ, ದೀಪನ, ಪಾಂಡುರೋಗ, ಉನ್ಮದ, ಗ್ರಹಣಿ ಅರೋಚಕ ಅನೇಕ ವಿಧವಾದ ಕೆಮ್ಮು ಮೊದಲಾದ ರೋಗಗಳು ಪರಿಹರವಾಗಿ ಬಲವೂ, ಕಾಂತಿಯೂ ಉಂಟಾಗುತ್ತದೆ. ಕ್ರಯ ಸೇರು ೧ ಕ್ಕೆ ರೂಪಾಯಿ ೨. ಟ, ಖ. ೬ ಆ.

೧೦. ವಿಳಂಗಸಾರಾಮ್ಲಕ.— ಇದರಿಂದ ಗಂಟ್ಲು ಉರಿಸುಸ್ತು ಸಂಕಟ, ವಮನವಿಲ್ಲದೆ ೪-೫ ಆವೃತ್ತಿ ಪ್ರವರ್ತಿಯಾಗುತ್ತದೆ. ಕ್ರಯ ಡಬ್ಬಿ ೧ ಕ್ಕೆ ಟ. ಖ. ಸೇರಿ ೮ ಆಣೆ.

೧೧. ಯಳವಿನಮಾತ್ರೆ.— ಈ ಮಾತ್ರೆಯನ್ನು ಮಗುವಿಗೆ ಎದೆ ಹಾಲಿನಿಂದ ತೇದುಹಾಕುವುದರಿಂದ ತಾಯಿಯ ದುರಾಹಾರ ದೋಷದಿಂದುಂಟಾಗುವ ಕೆಮ್ಮು, ಗಂಟಲಲ್ಲಿ ಶ್ಲೇಷ್ಮ ಕಟ್ಟಿ ತೊಂದರೆಪಡುವುದು ಖಂಡಿತ ನಿಲ್ಲುತ್ತದೆ. ಕ್ರಯ ೧೫ ಮಾತ್ರೆಗೆ ರೂ. ೧. ಟ. ಖ. ಬೇರೆ.

೧೨. ಮಕ್ಕಳ ಸಂದುಹರಮಾತ್ರೆ.— ಮಕ್ಕಳಿಗೆ ಸೀತದಿಂದ ಪ್ರಾಯಶಃ ನೀರು ಎರೆಯುವಾಗ ಜ್ಞಾನ ತಪ್ಪುವುದು ಕೈಕಾಲುಗಳು ಸೆಳೆಯುವುದು ಮೊದಲಾದ ಪ್ರಾಣಾಪಾಯಕರವಾದ ಚಿನ್ಹೆಗಳು ಈ ಮಾತ್ರೆಯನ್ನು ನಾಗದಾಳಿಸೊಪ್ಪಿನರಸದಲ್ಲಿ ತೇದುಕೊಡುವುದರಿಂದ ಖಂಡಿತ ಗುಣವಾಗುತ್ತದೆ. ಕ್ರಯ ೨೦ ಮಾತ್ರೆಗಳ ಸೀಸೆ ೧ ಕ್ಕೆ ೧। ರೂ. ಟ. ಖ. ಬೇರೆ.

ಔಷಧಿಯ ಕೂಡ ಅನುಪಾನಪತ್ರಿಕೆಯು ಕಳುಹಲ್ಪಡುವುದು. ಇವಲ್ಲದೆ ಇನ್ನೂ ಅನೇಕವಿಧವಾದ ಊದಬತ್ತಿಗಳೂ ಘುಟಿಕೆಗಳೂ ದೊರೆಯುತ್ತವೆ. ನಮ್ಮ ವಿಳಾಸ—

ಎಂ. ಪಂಡಿತ ಚನ್ನಬಸಪ್ಪ ಅಂಡ್‌ಸನ್ಸ್,
ಚನ್ನಪಟ್ಟಣ, ಬೆಂಗಳೂರು, ಡಿಸ್ಟ್ರಿಕ್ಟ್.

5 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. **2-8-0** ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪಸಿಸ್ಟಂ ಪೇಟೆಂಟ್ ಲೀವರ್ ಜನರಲ್ಸ್ ವಾಚ್



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರೆಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂಥಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಪರಿಸ ಗ್ಲಾಸು ತೋರಿಸುವ ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವದನ್ನು ನೋಡಿ ಮೋಸಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. **2-8-0** ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜನರಲ್ಸ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಪರಿಸ ಗ್ಲಾಸು ತೋರಿಸುವ ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟದ್ದು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇದು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 3-0-0 ವಿ. ಪಿ. ಪಿ ಛಾರ್ಜು ರೂ. 0-6-0.

ಅಮ್ಮೋನಿಯಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಛಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಭಾಗ್ಯ ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯಿಯನ್ನು) ಮಣಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟ್ಯಾಕ್ಸ್ ರೋಡು ಮದರಾಸು.

ಉತ್ತಮ ಗ್ರಂಥಗಳು.

17

ಶಿವತತ್ವರತ್ನ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ.ಯಿಂದ ೮ ಆಣೆ. ಇದರಲ್ಲಿ ಅಷ್ಟಾವರಣಪಂಚಿಕೆ, ಪಂಚಾಚಾರ ವಿಚಾರ ಧರ್ಮಾಚಾರವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.—ಬೆಲೆ ವಿ.ಪಿ. ಯಿಂದ ೪ ಆಣೆ. ನಿರಂಜನ ಜಂಗಮಪರವಾದ ಕನ್ನಡಟೀಕಾ ಸಹಿತವಾಗಿದೆ.

ಬಸವಲಿಂಗಸ್ವಾಮಿಗಳವರು, ತೋಂಟದ ಮಠ ಮೈಸೂರು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ನಟೇಶ್ವರ ಉಮಾಮಹೇಶ್ವರ, ಗಜಲಕ್ಷ್ಮಿ, ಶಿವ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾ ಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಪ್ರಯೋಗಿಸಿ ಕ್ಲಪ್ತ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ರೂ. ಆಗುತ್ತದೆ. ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರೂ. ಕೊಡಬೇಕಾಗುತ್ತೆ. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚು ಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ೧೦೦ ಕ್ಕೂ ೦-೭-೦ ಆಣೆ ಯಂತೆ ಕಳುಹಬೇಕು. ಕ್ಲಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದಲ್ಲಿ ೧-೦-೦ ರೂ. ಅನ್ನು ಹೆಚ್ಚಾಗಿ ಕೊಡಬೇಕು. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್ ಪ್ರೆಸ್, ಮೈಸೂರ್.

ಉತ್ತಮ ಗ್ರಂಥಗಳು.

120

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೭-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರ ಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ — ೦-೧೨-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರ[illegible] ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೦ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕರಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ,
ಮೈಸೂರು

೧೯೧೧ನೇ ಇಸವಿ ಮೇ ತಾ|| ೨೯ ರಿಂದ ೧೯೧೧ನೇ ಜೂನ್ ತಾ|| ೪ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಜ್ಯೇಷ್ಠ ಶು|| ಪಾಡ್ಯಮಿಯಿಂದ ಜ್ಯೇಷ್ಠ ಶು|| ಅಷ್ಟಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
29	ಸೋ	ಪಾ	8-30	ಮೃ	52-54	9
30	ಮಂಗ	ಬಿ	2-51	ಉಪರಿ	53-48	10
31	ಬುಧ	ಚೌ	45-6	ಪುನ	44-7	11
1	ಗುರು	ಪಂ	40-37	ಪುಷ್ಯ	41-30	12
2	ಶುಕ್ರ	ಷ	37-1	ಶ್ಲೇ	38-52	13
3	ಶನಿ	ಸ	34-26	ಮ	37-9	14
4	ಭಾನು	ಅ	33-0	ಪು	36-26	15

(1) ಶ್ರೀರಂಗದಲ್ಲಿ ವಸಂತೋತ್ಸವಾರಂಭ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್.

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮುಖಿಗತರಾಜಮಂಡಲಹಿತೈಷಾ ಘನಪಕ್ಷಕೃತಾವತಾರಾ ಪಕ್ಷ್ಯಜ್ಞಸ್ವಹೃತ್ತಮೋಹರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಪ್ಸಿತದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಜೂನ್ ತಾರೀಖು ೫ ನೇ ಸೋಮವಾರ. [ಸಂಚಿಕೆ ೨೩.

ಶಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

9

ಲೋಕಾಮಯಾಪಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೊಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೩ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರುಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಬ್ಬುತ್ತಾ ಬಂದರೆ ಪೊಸಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರೆ, ಹಲ್ಲುಗಳ ಪಾಚಿ, ಇಗುರೂಡಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಳ್ಳಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಿಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೭. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೪-೦.
೨ ರಿಂದ ೪ ರವರೆಗೆ ೧-೧೦-೦.

ಇದರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧ಆಣೆ. ಕಾಲುಕಾಲಮ್ಮಿಗಿಂತಲೂ ಜಾಸ್ತಿಯಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ಪ್ರತ್ಯೇಕವಾಗಿ ದರವು ಹೇಳಲ್ಪಡುವದು.

ಸುಲಭಕ್ರಯ! ಖಾತರಿಮಾಲ್!! ಬಿಡಬೇಡಿರಿ!!!

6

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ|| ೧ ಕ್ಕೆ	೩	ಕಸ್ತೂರಿ ಬಿಲ್ಲೆ ತೊ|| ೧ ಕ್ಕೆ	೨
೨ ಅಂಬರ್‌ಬತ್ತಿ ಸೇ|| ೧ ಕ್ಕೆ	೪	ಜವಾದಿ ಬಿಲ್ಲೆ ತೊ|| ೧ ಕ್ಕೆ	೧
ಕಸ್ತೂರಿ ಬತ್ತಿ ಸೇ|| ೧ ಕ್ಕೆ	೨||	ಅರಗಜ	ತೊ|| ಡಬ್ಬಿ ೧ ಕ್ಕೆ		
ಪುನಗಿನ ಬತ್ತಿ ಸೇ|| ೧ ಕ್ಕೆ	೧	ಕಸ್ತೂರಿ ಮಾತ್ರೆ ಸಿ|| ೧ ಕ್ಕೆ		
ಗುಲಾಬ್ ಬತ್ತಿ ಸೇ|| ೧ ಕ್ಕೆ	||	ಸುರಂಗಿ ಸೆಂಟ್ ಸಿ|| ೧ ಕ್ಕೆ	೧
ನಕ್ಷತ್ರಕಾಂತಿಬತ್ತಿ ಸೇ|| ೧ ಕ್ಕೆ	೧	ಸ್ವದೇಶೀ ಘೀ ಪೌ|| ಡ|| ೧ ಕ್ಕೆ		
ಕಾಶ್ಮೀರ್ ಕೇಸ್ರಿ ತೊ|| ೧ ಕ್ಕೆ	೧	ಪಚ್ಚಕರ್ಪೂರ ತೊ|| ೧ ಕ್ಕೆ	|||

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರಕುತ್ತೆ. ಇಷ್ಟು ಸುಲಭಕ್ರಯದಲ್ಲಿ ಇನ್ನೆಲ್ಲೂ ದೊರೆಯದು.

ಎಂ. ಆರ್. [illegible] ಚೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

ಇಲ್ಲಿನೋಡಿ ವಿಶೇಷಸೂಚನಗಳು!

4 ಕಾಶೀವಿಶ್ವೇಶ್ವರಪ್ರಸನ್ನ.



KASHI VISHWESHWAR S.N.U. & Co BENARES CITY

ಅಗ್ಗವಾದಮಾಲುಗಳು— ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಉಡುವಮಡಿ ಯಾವದು? ಕಾಶಿಪಟ್ಟೆ ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ಸೈನ್ ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!! ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪದಗಳು, ಮತ್ತೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟ್ಲಾಗ್ ೧ ಕಾಶೀಪಟ ೮ ಸಾದಾ ಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರೆಸ್ ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರೆದು ತಿಳಿಯುವ ವಿಳಾಸಕ್ಕೆ ಕಳಿಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ಉತ್ತರ ಕೊಡಲಾರೆವು.

ನಮ್ಮ ವಿಳಾಸ:—
ಯಸ್. ಉಡುಪಿನಾರಾಯಣಾಚಾರ್ಯ ಅಂಡ್ ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayanacharya & Co.
Benares City.

ಸೌಗಂಧಿಕಾಪರಿಣಯ

:0:

(ಕಳೆದವಾರದ ಶೇಷ.)

ತಾವು ಬಂದಪ್ರಯೋಜನವೇನೆಂದು ಕೇಳಲು, ಕುಬೇರನು ಅಯ್ಯಾ ನೃಪೋತ್ತಮನೇ! ಈ ದೇವತಾಭೂಮಿಗೆ ಮನುಷ್ಯರು ಯಾರೂಬರುವದಿಲ್ಲ. ಅದ್ದರಿಂ ನೀನು ಯಾರಪುತ್ರನು ಯೇತಿನಿಮಿತ್ತದಿಂ ಬಂದವನಾದೆ? ಎಂದು ಕೇಳಲಾಮಾತಿಗೆ ಸುಮತಿಯು ರಾಯನ ವೃತ್ತಾಂತವೆಲ್ಲವಂಪೇಳಿ, ಗಜಬಂದನಿಮಿತ್ತವಂ ಅದರಿಂದಾಗುವ ಮನೋರಥವಂ ಕೂಡ ತಿಳುಹಿಸಲು, ಇದೆಲ್ಲವಂ ಕೇಳಿದ ಋಷಿವೇಷದ ಕುಬೇರನು ಕಳಿಂಗರಾಜಪುತ್ರಿಯೇ ಶಚೀದೇವಿಯಾಗಿರಬಹುದು. ಈ ಗಜದ ಪಣನಿಮಿತ್ತವಾಗಿ ಶಚೀದೇವೇಂದ್ರರಿಗೆ ಸಂಬಂಧವುಂಟಾಗಿ ಧರ್ಮಕಂಟಕರಾದ ರಾಕ್ಷಸರು ನಷ್ಟರಾಗಿ ದೇವಕಾರ್ಯನೇರವೇರುವದಕ್ಕೋಸುಗ ಈಶ್ವರನು ಸಂಕಲ್ಪಿಸಿರುವನು. ಅದ್ದರಿಂ ಮಹರ್ಷಿಕಾಶ್ಯಪು ಲೋಕಾನುಗ್ರಹಾರ್ಥವಾಗಿ ಅದುವಲ್ಲದೇ ಇಂದ್ರನಂ ಭಂಗಪಡಿಸುವದಕ್ಕೆ ಉಂಟಾಯಿತೆಂದು ಹೇಳಕೊಡದೆಂದರಿತು ರಾಯನಂ ಮನುಷ್ಯಯೋಗ್ಯವಾದ ಸ್ತುತಿಗಳಿಂ ಸ್ತುತಿಸುತ, ಅಯ್ಯಾ ರಾಯನೆ! ಸ್ನಾನಾರ್ಥವಾಗಿ ನಾವು ಇಲ್ಲಿಗೆ ಬರುವದುಂಟು; ನಮ್ಮ ವಾಸಗೃಹವು ಸಮೀಪದಲ್ಲಿಯೇ ಇರುವದು. ಮರ್ಯಾದಾಪಾಲಕನಾದ ನಿನ್ನನ್ನೀಡಿ ಬ್ರಾಹ್ಮಣ್ಯದಯೋಗಕ್ಷೇಮಕ್ಕೆ ನೀನು ಬಾಧ್ಯನೆಂದರಿತು, ನಿನ್ನೊಡನೆ ಸಲ್ಲಾಪವಂಮಾಡಿ ಸಂತುಷ್ಟರಾದೆವೆಂದು ಹೇಳುತ್ತಿರುವ ಋಷಿಶ್ರೇಷ್ಠನ ರೀತಿಯನ್ನೀಡಿ, ಅಯ್ಯಾ ಮಹಾನುಭಾವನೇ! ನಿಮ್ಮನ್ನು ಪಚರಿಸುವದಕ್ಕೆ ನಾನು ಮಾರ್ಗಸ್ಥನಾಗಿ ಬಂದಿರುವೆನು. ನನಗೆ ದರ್ಶನವಂ ಪಾಲಿಸಿದ ಬ್ರಾಹ್ಮಣರು ರಿಕ್ತಹಸ್ತದಿಂ ಹಿಂತಿರಗಲಿಲ್ಲ. ಅದ್ದರಿಂ ಈಗ ನನ್ನ ಬಳಿಯಲ್ಲಿರುವ ದಿವ್ಯರತ್ನಶಕಲಗಳಂ ಒಪ್ಪಿಸಿಕೊಂಡು ನಾನು ಮಾಡುವ ನಮಸ್ಕಾರಂಗಳಂ ಸುಪ್ರೀತನಾಗಿ ತೆರಳಬಹುದೆಂದುಪೇಳಿ, ಸುಮತಿಯಂ ಕರದು ನಮ್ಮಲ್ಲಿರುವ ಮಣಿಗಳಂ ಇವರಿಗೆ ಸಮರ್ಪಿಸುವವನಾಗೆನಲಾಗ ಸುಮತಿಯು ಉಗ್ರಾಣದವಿರ ಭಂಡಾರದ ರತ್ನಗಳಂ ತಂದು ಋಷಿಯಮುಂದೆ ರಾಶಿಗೂಳಿಸಲು, ಅದನ್ನೀಡಿ ಸಂತುಷ್ಟನಾದ ಋಷಿಯು ರಾಯನಂ ಕುರಿತು ಸತ್ಸಂತಾನವಂತನಾಗೆಂದು ಆಶೀರ್ವಾದವಂ ಮಾಡಿ ಮಣಿಗಣವಂ ಮಣಿಗ್ರೀವನಕೈಯಲ್ಲಿ ಕೊಟ್ಟು, ಅದರಲ್ಲಿ ಮೂರುಮಣಿಗಳಂ ಹೊರಲಾರನೆಂದು ಬಿಸುಟು, ಅಯ್ಯಾ ದಾನಶೂರನಾದ ರಾಯನೆ! ಜಯಶೀಲನಾಗೆಂದು ಮತ್ತೆ ಹರಸಿ ಅಂತರ್ಧಾನನಾಗಲು, ಅದನ್ನೀಡಿ ಸುಮತಿಯು ಅಯ್ಯಾ ನೃಪೋತ್ತಮನೆ! ಇದೇನು ವಿಶೇಷವು ಅರುವರು? ಬ್ರಾಹ್ಮಣರು ಬಿಟ್ಟುಹೋಗಿರುವ ಮಣಿಗಳು ನಮಗೆ ಯೋಗ್ಯವಾಗದೇ ಎನಲು, ರಾಯನು ಯೋಗ್ಯವಾದ್ದರಿಂದಲೇ ಇವು ಬ್ಯಾಡವೆಂದು ಉಪೇಕ್ಷಿಸಿದವರಂತೆ ಬಿಟ್ಟು ಪೋದರು ಎನಲು ಅದಂ ಕೇಳಿ ಸುಮತಿಯು, ಅದೇನು ರಹಸ್ಯವಿರುವದು ಪೇಳೆನಲು, ಆ ಮಾತಿಗೆ ಸುಗಂಧರಾಯನು ಆ ಋಷಿಗಳು ರೆಪ್ಪೆಹಾಕದೆ ಕುಳಿತಿರ್ದುದೇ ಅದರ ರಹಸ್ಯವೆನಲಾಗ ಸುಮತಿಯು, ಅಯ್ಯಾ ರಾಯನೆ! ಅವರು ಯಾವ ದೇವತೆಗಳು ಎನಲಾಗ ರಾಯನು, ಈ ಪ್ರದೇಶವನ್ನಾರು ಆಳುವರೋ? ಅವರೇ ಬಂದಿದ್ದರೆಂದು ಪೇಳಲಂ ಕೇಳಿ ಸುಮತಿಯು, ರತ್ನನಿಮಿತ್ತವಾಗಿ ಕುಬೇರನು ಬಂದು ರಾಯನ ವಿತರಣೆಯಂ ಪರೀಕ್ಷಿಸಿ ಹೋದನು, ಇದು ಏನು ನಿಮಿತ್ತವೋ? ಎಂದು ಮನದೊಳ್ನೆನದು ಆ ಮೂರು ರತ್ನಗಳಂ ಛಾಯಾಗುಪ್ತನ ವಶವಂಮಾಡಿ ಅರಸಂ ಕುರಿತು ಇಲ್ಲಿರುವ ದೇವತಾಯೋಗ್ಯಂಗಳಾದ ಫಲಪುಷ್ಪಂಗಳಂ ತರುವವನಾಗೆಂದು ಆಜ್ಞಾಪಿಸಲವನು ತಂದು ಒಪ್ಪಿಸಿದ ಫಲಗಳನ್ನಾಸ್ವಾದಿಸಿ, ಬಳಿಕ ರಾಜಮಂತ್ರಿಗಳೀರ್ವರೂ ಗಜಾರೋಹಣವಂ ಮಾಡಿ ಗಜವಂ ಪ್ರೇರಿಸಲಾಗ ಮಹಾಗಜವು ಛಾಯಾಗುಪ್ತನ ಬೆಂಬಿಡಿದು ಅಂತರಿಕ್ಷದೊಳ್ ಪೋಗುತ್ತಿರಲಾಗ ಛಾಯಾಗುಪ್ತನು ರಾಯನಂ ಕುರಿತು, ಅಯ್ಯಾ ರಾಜಶ್ರೇಷ್ಠನೆ! ಇದುಕೋ ಕೈಲಾಸಪರ್ವತಕ್ಕೆ ಸಮಾನವಾಗಿ ಕಾಣಿಸುವದೇ ಕಿಂಪುರುಷವರ್ಷದ ಹೇಮಕೂಟಪರ್ವತವು. ಇದೇ ಚಿತ್ರರಥನೆಂಬ ಗಂಧರ್ವರಾಜನಿಗೆ ಅನುಚರರಾದ ಗಂಧರ್ವರಪುರವು. ಇದಕ್ಕೆ ದಕ್ಷಿಣದೇಶದಲ್ಲಿ ಮನುಷ್ಯಗಂಧರ್ವರಿರುವರು. ಎಂದು ಪೇಳುತ ಮುಂದೆತೆರಳಿ, ಅದುಕೋ ಮಹರ್ಷಿಸಿದ್ಧ ದೇವತೆಗಳಿಗೆ ನಿವಾಸಸ್ಥಾನವಾದ ಹಿಮಾಚಲವು, ಇದೇಗಂಗೋತ್ಪತ್ತಿಗೆ ಮೂಲವಾದ ಬಿಂದು ಸರೋವರವು. ಮತ್ತೂ ಮಣಿಮಯಗಳಾದ ಶಿಖರಗಳಿಂ ಶೋಭಿಸುವದೇ ಉಮಾದೇವಿಯುಕೆಯನಗೃಹವು. ಇದೇ ವ್ಯಾಸವಸಿಷ್ಠಾದಿಯಷಿಗಳ ಆಶ್ರಮವು. ಎಂದು ಪೇಳುತ ಮುಂದೆತೆರಳಿ, ಇದೇ ಭರತಖಂಡವು. ಇದಕ್ಕೆ ಮರೆಯಾದಪರ್ವತವೇ ಹಿಮಾಚಲವು. ಅಲ್ಲಿಂದ ಪಶ್ಚಿಮಕ್ಕೆ ಮ್ಲೇಂಛಹೂಣಾದಿಗಳ ದೇಶಗಳು. ಅದು ಶೋಕಶಕ್ತಿಮಂತವೆಂಬ ಕುಲಾಚಲವು, ಅದೇ ಆರ್ಯಾವರ್ತವು. ಇದುಕೋ ಗಂಗಾನದಿಯು. ಇದೇ ಯಮುನಾನದೀಸಂಗನಮವಾದ ಪ್ರಯಾಗಕ್ಷೇತ್ರವು. ಇದಕ್ಕೆ ಪಶ್ಚಿಮದಲ್ಲಿ ಕಾಣುವದೇ ವಿಂಧ್ಯಪರ್ವತವು. ಇಲ್ಲಿಂದಮುಂದೆ ದಕ್ಷಿಣಕ್ಕೆ ದಂಡಕಾರಣ್ಯವು ಎಂದು ತೋರಿಸಲದನ್ನೀಡುತ ಸುಗಂಧರಾಯನನ್ನು, ಗೋದಾವರಿನದೀಮಾರ್ಗಗೊಂಡುಬರುತ, ಕಳಿಂಗದೇಶಾಭಿಮುಖವಾಗಿ ಹೊರಟು ಮಣಿಖಚಿತ ಕನಕ ಕಲಶಧ್ವಜತೋರಣಾದಿಗಳಿಂದ ಅಲಂಕೃತವಾದ ವಿಜಯನಗರದ ಸಮೀಪಕ್ಕೆಬಂದು, ಆ ಮಹಾಗಜವಂ ಭೂಮಿಗೆ ಇಳುಹಿಸಿ ಬರುತ್ತಿರಲಾಮಹಾಗಜದ ಗಂಡಸ್ಥಲದಿಂ ಜಾರಿಪೇಳುತ್ತಿರುವ ಮದೋದಕಧಾರಾಪರಿಮಳವು ವಿಜಯನಗರವೆಂಬ ಪುರವಂ ವ್ಯಾಪಿಸಲದರಿಂ ವಿಷ್ಯಲಂಗಳಾದ ಸಕಲರಾಜರ ಸೇನಾಗಜಂಗಳು ಮದಹೆಚ್ಚಿ ಸರಪಣಿಗಳಂ ಪದರಿ ಕಿತ್ತುಕೊಂಡು ಮಾವುತರಿಗೆ ದಕ್ಕದೆ ಹುಚ್ಚು ಹಿಡಿದಂತೆ ದಿಕ್ಕುದಿಕ್ಕುಗಳಿಗೆ ಓಡುತ್ತಿರಲು ಮತ್ತು ಛಾಯಾಗುಪ್ತನ ಬಳಿಯಲ್ಲಿರುವ ದೇವಯೋಗ್ಯಂಗಳಾದ ಪುಷ್ಪಗಳಪರಿಮಳವು ಆ ಪುರವಂ ವ್ಯಾಪಿಸಿ, ಪೌರಜನಂಗಳಿಗೆ ವಿಸ್ಮಯವನ್ನುಂಟುಮಾಡುತ, ಮತ್ತೊಂದು ಪರಿಮಳದ್ರವ್ಯಗಳಲ್ಲಿ ಗಂಧವೇ ಇಲ್ಲದಂತೆಮಾಡುತ, ಆ ಘ್ರಾಣಿಸುವವರಿಗೆ ಶಿರೋವೇದನೆಯನ್ನುಂಟುಮಾಡುತ, ಉಪವನಪುಷ್ಪಂಗಳಲ್ಲಿ ಮಧುಪಾನವಂಗೈಯುತಲಿರುವ ಮಧುಕರನಿಕರಂಗಳನ್ನಾಕರ್ಷಿಸುತಲಿರುವ ಸಮಯದೊಳ್ ಮಹಾಗಜದ ಕೊರಳೊಳಳವಡಿಸಿರುವ ಮಣಿಘಂಟಾನಿನಾದವು ಆ ಪುರವೆಲ್ಲವಂ ತುಂಬುತ್ತಿರಲದಂ ಕೇಳಿ ಕಳಿಂಗರಾಜನ ಅಂತಃಪುರದ ಸ್ತ್ರೀಯರುಗಳು ಮಹಾಘಂಟಾನಿನಾದವು ಎಲ್ಲಿಯದೆಂದು ಆಶ್ಚರ್ಯಪಡುತ, ಉನ್ನತಂಗಳಾದ ಪ್ರಾಸಾದಶಿಖರಂಗಳನ್ನೇರಿ ನೋಡುತ್ತಿರಲು, ಆಗ ನಡದು ಬರುವ ಕೈಲಾಸಪರ್ವತವೂ! ಎಂಬಂತೆ ಅಮೃತಲಾಭಾರ್ಥವಾಗಿ ದೇವಾಸುರರಿಂ ಮಥಿಸಲ್ಪಟ್ಟ ಕ್ಷೀರಸಾಗರದ ವಿಮಲತರವಾದ ಫೇನಸಮುದಾಯವೋ ಎಂಬಂತೆ, ಪುಂಜೀಭೂತವಾದ ಚಂದ್ರಿಕಾನಿಕರಗಳೋ ಎಂಬಂತಿರುವ ಚತುರ್ದಂತಂಗಳಿಂ, ಅತ್ಯಂತಶುಭ್ರವಾದ ಅಮೃತದದಿಂದೀರವಂಡಲಗಳೋ ಎಂಬಂತಿರುವ ಕುಂಭಸ್ಥಳಗಳಿಂದಲೂ ಕೂಡಿ ವಿರಾಜಿಸುತ, ಮತ್ತು ಶರೀರದಿಂ ಕೂಡಿ ನಡದುಬರುವ ಕ್ಷೀರಪಾರಾಶಿಯು ಯಶೋರಾಶಿಯೋ ಎಂಬಂತೆ ಹೊಳೆಯುತ್ತಿರುವ ಮಹಾಗಜವಂ ಕಂಡು ರಾಜಶಿರೋಮಣಿಯಾದ ಸುಗಂಧರಾಜನು ಯಾವದೇಶವನ್ನೋ ಜೈಸಿ ಅಲ್ಲಿಯ ಅರಸುಗಳ ಮಹಿಳೆಗ್ನನ್ನೇ ಗಜರೂಪವಂ ಮಾಡಿ ತಂದಿರಬೇಕೆಂದು ನಿಶ್ಚಯಿಸುತ್ತಿರಲಾಗ ರಾಜಮಂಡಲವೆಲ್ಲವೂ ಇದಿರ್ಗೊಂಡು ಪೋಗಿ ನಿಲಲಾಗಿ ನಿಂತು ಕರಗಳಂ ಮುಗಿಯುತ ಸ್ತುತಿಸುತ್ತಿರಲವರಂ ರಾಯನು ಕುಶಲವಂ ಕೇಳುತ ಬಿಡಾರದ ಬಳಿಗೆಬಂದು, ಸುಮತಿಯೊಡನೆ ಗಜದಿಂದಿಳಿದು, ಪ್ರದಕ್ಷಿಣವಾಗಿ ಬಿಡಾರವಂ ಪೊಂದುತ್ತಿರಲಾಗ, ಆ ಗಜದೇಹದ ಕಾಂತಿಯಿಂದ ಬಿಡಾರಕ್ಕೆ ಪರಿವೇಷವುಂಟಾದಂತೆ ಆ ಪ್ರದೇಶವಂ ವ್ಯಾಪಿಸಿ, ಮತ್ತು ಗಂಗಾತರಂಗಗಳಂ ವ್ಯಾಪ್ತಮಾದ ಶ್ವೇತದ್ವೀಪವದಂತೆ ಮಾಡುತ್ತಿರಲು,

(ಸಶೇಷ.)

ಪಾರ್ಲಿಮೆಂಟಿನಲ್ಲಿ ಭರತಖಂಡದವಿಚಾರವಾಗಿ ನಡೆದ ಪ್ರಶ್ನೋತ್ತರಗಳು.

ಮಿಸ್ಟರ್ ಗಾಡ್ ರವರಪ್ರಶ್ನೆ— ಮದ್ರಾಸಿನಲ್ಲಿ ಸಿಡುಬು ರೋಗದಿಂದ [illegible] ಜನವರಿಯಲ್ಲಿ ೮೦, ಫೆಬ್ರವರಿಯಲ್ಲಿ ೩೩, ಮತ್ತೂ ಮಾರ್ಚಿಯಲ್ಲಿ ೪೭ ಈ ಪ್ರಕಾರ ಮರಣಗಳಾಗಿ [illegible] ೩೩೦ ರಂತೆ ಸತ್ತಿರುವುದುಂಟೆ? ಮದ್ರಾಸುಪಟ್ಟಣದಲ್ಲಿ ಕೆಲವರ್ಷಗಳಿಂದಲೂ ಸರ್ಕಾರದ ಲೆಕ್ಕದಲ್ಲಿ ಬರೆಯುವುದಕ್ಕಿಂತಲೂ ೩ ರಷ್ಟು ಹೆಚ್ಚಾಗಿ ಜನರು ಪ್ರತಿವರ್ಷದಲ್ಲೂ ಸಿಡುಬನ್ನು ಹಾಕಿಸಿಕೊಳ್ಳುವುದು ನಿಮಗೆ ಗೊತ್ತಿರುವುದೆ ಮತ್ತೂ ಈ ರೋಗವನ್ನು ನಿಲ್ಲಿಸಲು ಸಿಡುಬು ಹಾಕುವುದರ ವಿನಹಾ ಮತ್ತಾವ ಕಾರ್ಯಗಳನ್ನು ಕೈಕೊಂಡಿರುವರೆಂಬುದನ್ನು ಅಲ್ಲಿಯಧಿಕಾರಿಗಳನ್ನು ಕೇಳಿ ತಿಳಿದುಕೊಳ್ಳುವಿರಾ.

ಅಂಡರ್ ಸೆಕ್ರೆಟರಿ ಮಾಂಟಗೇಯುವರುತ್ತರ—ಮದ್ರಾಸುಪಟ್ಟಣವು ಸಿಡುಬುರೋಗದಿಂದ ಪೀಡಿತವಾಗಿದೆಯೆಂದು ತಿಳಿಸಹಲು ಸ್ಟೇಟ್ ಸೆಕ್ರೆಟರಿಯವರು ವಿಷಾದಪಡುತ್ತಾರೆ. ಮ್ಯುನಿಸಿಪಾಲಿಟಿಯವರು ಪ್ರತ್ಯೇಕವಾದ (ಐಸೊಲೇಷನ್) ಆಸ್ಪತ್ರೆಗಳನ್ನು ಕಟ್ಟಿಸಿರುವರಲ್ಲದೆ, ರೋಗವನ್ನು ಬಹಿರಂಗಪಡಿಸಿ ಶುಚೀಕರ್ಣವನ್ನು ಮಾಡಲು ಹೆಲ್ತ್ ಆಫೀಸರ ನಿಬಾರಣೆಯಲ್ಲಿ ಪ್ರತ್ಯೇಕವಾದ ಜನರನ್ನು ನೇಮಿಸಿರುತ್ತಾರೆ. ಮದ್ರಾಸಿನಲ್ಲಿ ಸಿಡುಬಿನ ಲೆಕ್ಕವನ್ನಿಟ್ಟಿರುವ ಕ್ರಮದಿಂದ ಲಂಡನ್ ಪಟ್ಟಣದಲ್ಲಾಗುವ ಸಂಖ್ಯೆಗೆ ಹೋಲಿಸಿ ಹೇಳಲಾಗುವುದಿಲ್ಲ. ಲಂಡನ್ ಪಟ್ಟಣದಲ್ಲಿ ಒಂದುಸಲ ಸಿಡುಬನ್ನು ಹಾಕಿದ್ದವರಿಗೆ ಪುನಃ ಹಾಕಿದುದು ಲೆಕ್ಕಕ್ಕೆ ಸೇರುವುದಿಲ್ಲ.

ಭರತಖಂಡದ ಪೋಲೀಸರ ದುರ್ನಡತೆ.

ಒಗ್ರಾಡಿಯವರಪ್ರಶ್ನೆ—ಬಂಗಾಳಾ ಪೋಲೀಸ್ ಇನ್ಸ್ಪೆಕ್ಟರ್ ಜನರಲ್‌ರವರ ವರದಿಯಲ್ಲಿ ತಿಳುಹಲ್ಪಟ್ಟಿರುವ ೧೯೦೯ ರಲ್ಲಿ ಪೂರ್ನಿಯಾದ ಪೋಲೀಸರು ಮಾಡಿದ ಹಿಂಸೆಯ ವಿಚಾರವನ್ನು ಇಂಡ್ಯಾ ಸರ್ಕಾರದವರು ತಿಳಿಸಿರುವರೋ? ಹಾಗಿದ್ದಪಕ್ಷದಲ್ಲಿ ಒಬ್ಬ ಮನುಷ್ಯನು ಪೋಲೀಸರ ಹಿಂಸೆಯಿಂದ ಸತ್ತುಹೋದುದರ ವಿಚಾರಣೆಯ ಫಲಿತಾಂಶವೇನು, ಅವರು ಯಾವ ಹಿಂಸೆಯನ್ನು ಕೊಟ್ಟರೆಂಬುದು ವಿಚಾರಣೆಯಲ್ಲಿ ಗೊತ್ತಾಯಿತು; ಅದಕ್ಕೆ ಸೇರಿದ್ದ ಪೋಲೀಸರಮೇಲೆ ಯಾವ ಅಪರಾಧವು ಹೊರಿಸಲ್ಪಟ್ಟು ಎಂಥ ಶಿಕ್ಷೆಯು ವಿಧಿಸಲ್ಪಟ್ಟಿತು.

ಅಂಡರ್ ಸೆಕ್ರೆಟರಿಯವರುತ್ತರ—ಕೃತ್ಯವನ್ನು ಮಾಡಿದುದುಂಟೆಂದು ಹೇಳಿಸುವುದಕ್ಕಾಗಿ ಒಬ್ಬ ಮನುಷ್ಯನನ್ನು ಅನ್ಯಾಯವಾಗಿ ಸೆರೆಯಲ್ಲಿಟ್ಟು, ಅವನಿಗೆ ಕ್ರೂರವಾದ ಹಿಂಸೆಯನ್ನು ಕೊಟ್ಟ ಅಪರಾಧಕ್ಕೆ ಇಬ್ಬರು ಸಬ್ ಇನ್ಸ್ಪೆಕ್ಟರು ಗುರಿಮಾಡಲ್ಪಟ್ಟಿದ್ದು ವಿಚಾರಣೆಯಲ್ಲಿ ಕೃತ್ಯವು ಮಾಡಲ್ಪಟ್ಟದು ಸುಳ್ಳೆಂದು ನಿರ್ಧರವಾಗಿ ಅವರು ದೋಷಮುಕ್ತರಾದರು. ಒಬ್ಬ ಸಬ್ ಇನ್ಸ್ಪೆಕ್ಟರು ಮತ್ತೆ ಇಬ್ಬರು ಕಾನೆಸ್ಟಬಲುಗಳು ಸತ್ತುಹೋದ ಮನುಷ್ಯನ ತೋಳುಗಳನ್ನು ಅಜಾಗರೂಕತೆಯಿಂದ ಕಟ್ಟಿದ್ದು ಅವನು ಸಾಯಲವಕಾಶವನ್ನು ಕೊಟ್ಟುದಕ್ಕಾಗಿಯೂ, ಅಪರಾಧಿಗಳನ್ನು ಹೆಡ್‌ಕ್ವಾರ್ಟರಿಗೆ ಕರೆದುಕೊಂಡು ಬರಲು ಸಾವಕಾಶ ಮಾಡಿದುದಕ್ಕಾಗಿಯೂ ಪೋಲೀಸ್ ಶಾಖೆಯವರಿಂದ ಸಿಕ್ಷಿಸಲ್ಪಟ್ಟರು. ಸೆಕ್ರೆಟರಿಯವರು ಮುಂದಣ ವಿದ್ಯಮಾನವನ್ನು ಇಂಡ್ಯಾ ಸರ್ಕಾರದವರಿಂದ ನಿರೀಕ್ಷಿಸುತ್ತಿದಾರೆ. ಬಂದೊಡನೆ ತಿಳುಹುವರು.

ಪ್ಲೇಗು ಮರಣ.

ಮೆಂಬರು—ಸಂಯುಕ್ತಪ್ರಾಂತಗಳಲ್ಲಿ ೧೯೦೩ ನೇ ಇಸವಿಯಾರಭ್ಯ ಈವರೆಗೆಷ್ಟು ಪ್ಲೇಗು ಮರಣಗಳಾಗಿವೆ; ಪ್ರತಿಯೊಂದು ವೇಳೆಯಲ್ಲೂ ಪ್ರಜಾಸಂಖ್ಯೆಯಲ್ಲಿ ಎಷ್ಟರಂತೆ ಮರಣವಾಗಿದೆ; ಪ್ರತಿವರ್ಷದಲ್ಲೂ ಎಷ್ಟು ಜನರು ಇನಾಕ್ಯುಲೇಷನ್ ಮಾಡಿಸಿಕೊಂಡಿದಾರೆ; ಮತ್ತೂ ಈ ರೋಗನಿವಾರಣಾರ್ಥವಾಗಿ ವರ್ಷಕ್ಕೆಷ್ಟು ಹಣ ವ್ಯಯವಾಗಿರುತ್ತದೆ.

ಅಂಡರ್ ಸೆಕ್ರೆಟರಿ—

ವರ್ಷ	ಪ್ಲೇಗು ಮರಣ	ಜನಸಂಖ್ಯಾನುಸಾರದರ	ಇನಾಕ್ಯುಲೇಷನ್ ಮಾಡಿಸಿಕೊಂಡವರು	ವೆಚ್ಚವಾಗಿರುವುದು ರೂ.
1903	84499	·177	964	196755
1904	179082	·375	3258	79245
1905	383802	·805	6411	116805
1906	69660	·146	1846	78675
1907	328862	·690	34169	337995
1908	22878	·048	133666	482445
1909	38394	·080	97899	123240
1910	158057	·335	71033	105000

ಈ ವೆಚ್ಚವು ಟಬ್ಬು ಆದಾಯದಲ್ಲಿ ಮಾಡಿದುವಾಗಿದೆಯೇ ಹೊರತು ಮ್ಯುನಿಸಿಪಲ್ ಮತ್ತೂ ಲೋಕಲ್ ಫಂಡುಗಳಿಂದ ಮಾಡಲ್ಪಟ್ಟಿಲ್ಲವು.

ಅಫೀಮಿನ ವ್ಯಾಪಾರ.

ಮೆಂಬರು—ಈ ಅಫೀಮಿನ ವ್ಯಾಪಾರ ವಿಚಾರವಾಗಿ ಭರತಖಂಡಕ್ಕೂ, ಚೈನಾರಾಜ್ಯಕ್ಕೂ ಹೊಸದಾಗಿ ನಡಿದಿರುವ ಒಡಂಬಡಿಕೆಯ ಫಲಿತಾಂಶವೇನು; ಈ ಹೊಸ ಒಡಂಬಡಿಕೆಯಿಂದ ಚೈನಾ ರಾಜ್ಯದಲ್ಲಿ ಈಗ ಅಫೀಮನ್ನು ಅಲ್ಪಸ್ವಲ್ಪ ಬೆಳೆಯುವುದೂ ನಿಂತುಹೋದಕೂಡಲೇ ಭರತಖಂಡದಿಂದ ಬರುವ ಅಫೀಮನ್ನು ಬಿಟ್ಟುಬಿಡಲು ಅವಕಾಶವಿರುತ್ತದೆಯೇ; ಮತ್ತೂ ಈಗ ಹಾಂಕಾಂಗು ಮೊದಲಾದ ರೇವುಗಳಲ್ಲೆಷ್ಟು ಅಫೀಮಿದೆ.

ಮೆಂಬರು—ಹೊಸ ಒಡಂಬಡಿಕೆಯು ಈಗತಾನೆ ಆಗಿದೆ. ಹಾಂಕಾಂಗ್ ಮೊದಲಾದ ರೇವು ಪಟ್ಟಣಗಳಲ್ಲಿ ೨೧೦೦೦ ಪೆಟ್ಟಿ ಅಫೀಮಿದೆ. ೧೯೧೨ ರಲ್ಲಿ ಭರತಖಂಡದಿಂದ ಚೈನಾಕ್ಕೆ ೧೯೫೦೦ ಪೆಟ್ಟಿ ಅಫೀಮು ತರಸಲ್ಪಡಬಹುದು.

ಮೆಂಬರು—ಭರತಖಂಡಕ್ಕೆ ಇದರಿಂದ ಆದ ನಷ್ಟಕ್ಕೆ ಯಾವ ಪರಿಹಾರವು ಕಲ್ಪಿಸಲ್ಪಟ್ಟಿದೆ. ಮತ್ತೊಬ್ಬ ಮೆಂಬರು—ಚೈನಾದಲ್ಲಿ ಅಫೀಮಿನ ಬೆಳೆಯು ಕಡಿಮೆಯಾದುದರಿಂದ ಭರತಖಂಡಕ್ಕೆ ೯-೧೦ ವರ್ಷದಲ್ಲಿ ಉತ್ಪನ್ನವಾಗುವುದಾಗಿ ನಿರೀಕ್ಷಿಸಲ್ಪಟ್ಟಿದ್ದ ಆದಾಯವು ಆಗಲೇ ಬಂದಿರುವುದಿಲ್ಲವೆ. ಮಗದೊಬ್ಬ ಮೆಂಬರು—ಈಗಿನ ಒಡಂಬಡಿಕೆಯಿಂದ ಭಾರತೀಯರಮೇಲೆ ಹೊರಿಸಬೇಕೆಂದಿರುವ ಹೆಚ್ಚು ಹೊರೆಗೆ ಬ್ರಿಟಿಷ್ ಖಜಾನೆಯಿಂದೇನಾದರೂ ತೆರಬೇಕಾಗಿರುತ್ತದೆಯೋ.

ಅಂ॥ ಸೆಕ್ರೆಟರಿಯವರು— ಭರತಖಂಡದಿಂದ ಚೈನಾಕ್ಕೆ ಕಳುಹಲ್ಪಡುವ ಅಫೀಮಿನಿಂದುತ್ಪನ್ನವಾಗುವ ೪೦೦೦೦೦೦ ರೂಪಾಯಿಗಳು ಹೆಚ್ಚಾಗಿ ಇನ್ನು ೭ ವರ್ಷಗಳಲ್ಲಿ ಸಂಪೂರ್ಣವಾಗಿ ಕಾಣದೆಹೋಗುವುದು. ಚೈನಾದವರು ಹೊಸ ಒಡಂಬಡಿಕೆಯವೇರಿಗೆ ಯಾವರೀತಿ ನಡೆಯುತ್ತಾರೆಂಬುದನ್ನು ತಿಳಿದಹೊರ್ತು ಖಜಾನೆಯಿಂದ ತೆರಬೇಕಾಗುವ ವಿಷಯವನ್ನಾಲೋಚಿಸಲು ಸಾಧ್ಯವಲ್ಲವು. ಮತ್ತೂ ತೆರಿಗೆಯನ್ನು ತೆರತಕ್ಕ ಬ್ರಿಟಿಷ್ ದೇಶದವರೇ ಈ ರೀತಿ ಸೂಚಿಸುವುದನ್ನೀಡಿದರೆ ಆಶ್ಚರ್ಯವಾಗಿರುತ್ತದೆ.

ಮೆಂಬರು—ಅತ್ಯಂತ ಮುಖ್ಯವಾದ ಈ ಚೈನಾ ಅಫೀಮಿನ ಒಡಂಬಡಿಕೆಯು ಹೌಸ್ ಆಫ್ ಪಾರ್ಲಿಮೆಂಟಿನವರ ತಿಳಿವಿಕೆಗೆ ಬಾರದೆ ಮಾಡಲ್ಪಟ್ಟಿತು. ಮತ್ತೂ ಅವರ ಗಮನಕ್ಕೆ ಬಂದುದು ಇದೇ ಮೊದಲು

ಅಂ॥ ಸೆಕ್ರೆಟರಿಯವರು—ಈ ಒಡಂಬಡಿಕೆಯ ವಿಧಾನವು ನಿಮಗೆ ಚನ್ನಾಗಿ ತಿಳಿದೇ ಇದೆ. ಹಾಗೆ ನಿಮಗೆ ಇದರ ವಿಚಾರದಲ್ಲೇನಾದರೂ ಆಕ್ಷೇಪಿಸತಕ್ಕದ್ದಿದ್ದರೆ, ಅಂಥ ಆಕ್ಷೇಪಗಳನ್ನು ಫಾರೆಯಿನ್ ಸೆಕ್ರೆಟರಿಯವರಿಗೆ ತಿಳುಹಬಹುದು.

ಮೆಂಬರು —ಈ ಒಡಂಬಡಿಕೆಯಿಂದ ಭರತಖಂಡಕ್ಕೆ ಬರತಕ್ಕುತ್ಪತ್ತಿಯಲ್ಲಿ ೫॥ ಕೋಟಿ ರೂಪಾಯಿಗಳು ನಷ್ಟವಾಗಿ ಪಷ್ಯಾರ್ದುತ್ಪತ್ತಿಯು ಹೆಚ್ಚಾಗುವುದು ನಿಶ್ಚಯವೆ.

ಅಂ॥ ಸೆಕ್ರೆಟರಿಯವರು—ಭರತಖಂಡದ ಸರ್ಕಾರದವರು ಚೈನಾಕ್ಕೆ ಅಫೀಮನ್ನು ವಿಕ್ರಯಿಸಕೂಡದೆಂದು ನಿರ್ಧರಿಸಿರುತ್ತಾರೆ. ಭಾರತ ದೇಶನಿಯಗಾರನೂ, ವರ್ತಕನೂ ಈ ಯೋಗ್ಯವಾದ ವ್ಯವಹಾರ ಚಾತುರ್ಯದಿಂದ ತಾವು ಹೆಚ್ಚು ಹೊರೆಯನ್ನು ಹೊರತಕ್ಕ ಭಾಗದಲ್ಲಿ ತಮ್ಮ ಅಸಮಾಧಾನವನ್ನು ತೋರಿಸಿರುವ ವಿಚಾರದಲ್ಲಿ ನನಗಿನ್ನೂ ಯಾವ ಸಮಾಚಾರವೂ ಬಂದಿರುವುದಿಲ್ಲ.

ಮೆಂಬರು—ಈ ವ್ಯವಹಾರದಿಂದ ಭರತಖಂಡಕ್ಕೆಷ್ಟು ಆದಾಯವು ಕಡಿಮೆಯಾಗಿ ಪಷ್ಯಾರ್ಕೆ ಹೆಚ್ಚುವುದು?

ಅಂ॥ ಸೆಕ್ರೆಟರಿ—ಭರತಖಂಡದಿಂದ ಚೈನಾಕ್ಕೆ ಹೋಗುವ ಅಫೀಮಿನ ವಿನಹಾ ಮತ್ತಾವ ಕಡೆಯಿಂದಲೂ ತರಿಸಲ್ಪಡದಂತೆ ತಕ್ಕ ಏರ್ಪಾಟು ಮುಂಜಾಗರೂಕತೆಯಿಂದ ಮಾಡಲ್ಪಟ್ಟಿರುವುದೆಂಬುದು ಒಡಂಬಡಿಕೆಯು ಪ್ರಕಟವಾಗಿ ನಿಮ್ಮ ಹಸ್ತಗತವಾದಮೇಲೆ ನಿಮಗೇ ಗೊತ್ತಾಗುವುದು.

ಗ್ರಾಮಮುನ್ಸೀಫ್.

ನಮ್ಮ ಗೌರ್ನಮೆಂಟಿನವರು ಈ ಮೈಸೂರು ದೇಶದಲ್ಲಿಯೂ ಗ್ರಾಮ ಮುನ್ಸೀಫ್ ಏರ್ಪಾಡನ್ನು ಮಾಡಲಿಕ್ಕೆತ್ನಿಸುತ್ತಿದಾರೆ. ಈ ಉದ್ದೇಶ್ಯವೇನೊ ಉತ್ತಮವಾದುದಾಗ್ಯೂ ಇದನ್ನು ನಡವಳಿಕೆಯಲ್ಲಿ ತರತಕ್ಕ ಅಧಿಕಾರಿಗಳು ನಿಸ್ಪೃಹರಾಗಿಯೂ, ಜಾತಿಭೇದವನ್ನೆಣಿಸದೆ ಸತ್ಯವಾಗಿ ಕೆಲಸಮಾಡತಕ್ಕವರಾಗಿಯೂ ಇರಬೇಕು. ಹಾಗಲ್ಲದಿದ್ದಲ್ಲಿ ಗೌರ್ನಮೆಂಟಿನವರ ಸದುದ್ದೇಶವು ನೆರವೇರುವುದು ಕಷ್ಟವೆಂಬುದಕ್ಕೆ ಅನೇಕ ನಿದರ್ಶನಗಳಿವೆ. ಆ ವಿಷಯ ಹಾಗಿರಲಿ. ಈ ಗ್ರಾಮ ಮುನಸೀಫ್ ಕೆಲಸವನ್ನು ತನಗೆ ಕೊಡಿಸಬೇಕೆಂತ ಬ್ರಿಟಿಷ್ ರಾಜ್ಯದಲ್ಲಿ ಗಗನಂ ಸೂರ್ಯಪ್ರಕಾಶರಾವ್ ಬರಕೊಂಡಿರತಕ್ಕ ಅಪ್ಲಿಕೇಷನ್ನು ಬೊಂಬೈನಲ್ಲಿ ಪ್ರಕಟವಾಗುವ ಆಂಧ್ರಪತ್ರಿಕೆಯ ತಾ॥ ೮-೫-೧೯೧೧ ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಇದನ್ನು ನಮ್ಮ ದೇಶದವರ ತಿಳಿವಿಕೆಗಾಗಿ ಕನ್ನಡದಲ್ಲಿ ಪರಿವರ್ತಿಸಿ ಈ ಕೆಳಗೆ ಬರೆದಿರುತ್ತೇನೆ:—

ಮ॥ ರಾ॥ ವಂಗರೋಲ್ ಡಿವಿಜನ್ ಕಲೆಕ್ಟರ್ ಸಾಹೇಬರವರ ಜನಾಬಿಗೆ—

ಬಾಪಟ್ಲ ತಾಲ್ಲೂಕು ಗಗನಂಪಲ್ಲಿ ಗ್ರಾಮದ ವಾಸಸ್ಥ ಗಗನಂ ಸೂರ್ಯನಾರಾಯಣನ ಅರ್ಜಿ.

ಘನತೆಯುಳ್ಳ ಪ್ರಭುವೇ!—

ನಮ್ಮ ಗ್ರಾಮದ ಮುನ್ಸೀಫ್ ಕೆಲಸ ಖಾಲಿ ಇರುತ್ತೆ. ಅದನ್ನು ನನಗೆ ಕೊಡಿಸಬೇಕೆಂತ ಪ್ರಾರ್ಥಿಸುತ್ತೇನೆ.

ಹೆಸರು— ಮೇಲೆ ಹೇಳಿರತಕ್ಕದ್ದೇನೆ.
ಜಾತಿ— ಆರವೇಲ್‌ನಿಯೋಗಿ ಬ್ರಾಹ್ಮಣ.
ವಯಸ್ಸು— ೩೩ ವರುಷ.
ಕಸಬು— ಸದ್ಯದಲ್ಲಿ ನಿರುದ್ಯೋಗಿಯಾಗಿದ್ದೇನೆ.
ಯೋಗ್ಯತೆ— ಬೇಕಾದಷ್ಟು ಯೋಗ್ಯತೆ ಯಿದೆ. ಅದರ ವಿವರಣೆ ಈ ಕೆಳಗೆ ಕೊಟ್ಟಿರುತ್ತೇನೆ.—

ಚಿಕ್ಕ ವಯಸ್ಸಿನಲ್ಲಿ ನನ್ನನ್ನು ಸಹಪಾಠಿಗಳು ಸ್ಕೂಲಿಗೆ ಕರೆಯಲು ಬಂದರೆ, ಅವರ ಮೇಲಿದಿದ್ದು ಅವರನ್ನು ಕಚ್ಚುತಿದ್ದೆ. ಸ್ಕೂಲ್ ಮಾಸ್ಟರು ಬೆತ್ತವನ್ನು ಹಿಡಿದುಕೊಂಡು ಬಂದರೆ, ಅವರ ಕೈಗೆ ಸಿಕ್ಕದೆ ಮಡಿಯಲ್ಲಿರುತ್ತಿದ್ದ ನಮ್ಮ ಅಜ್ಜಿಯನ್ನು ತಬ್ಬಿ ಹಿಡಕೊಳ್ಳುತಿದ್ದೆ. ಆ ಮುದುಕಿ ಸತ್ತನಂತರ ಪಾಪಿಷ್ಠನಾದ ಸ್ಕೂಲ್ ಮಾಸ್ಟರಿನ ನಿರ್ಬಂಧದಲ್ಲಿ ಸಿಕ್ಕಿ ೭ ವರುಷಕ್ಕೆ ಪ್ರೈಮರಿ ಪರೀಕ್ಷೆ ಪ್ಯಾಸ್‌ಮಾಡಿದೆ. ಈಗ ೭ ವರುಷದಿಂದಲೂ ಕರಣಂ ಗ್ರಾಮ ಮುನ್ಸೀಫ್ ಈ ಪರೀಕ್ಷೆಗಳಿಗೆ ದರಖಾಸ್ತು ಮಾಡುತ್ತಲೇ ಇದ್ದೇನೆ. ಇನ್ನೂ ಅದರಲ್ಲಿ ತೇರ್ಗಡೆಯಾಗಲಿಲ್ಲ. ನಮ್ಮ ಗ್ರಾಮದ ವಾಸಸ್ಥರಲ್ಲಿ ನನಗೆ ಇರುವಷ್ಟು ಕೆಲಸ ಮತ್ಯಾರಿಗೂ ಇಲ್ಲ. ಯಾತಕ್ಕೆಂದರೆ (೧) ಸ್ವಲ್ಪ ಕಾರಣ ಸಿಕ್ಕಿದರೆ ಗ್ರಾಮ ಮುನ್ಸೀಫನಮೇಲೆ ಅರ್ಜಿ ಬರೆಸುತ್ತಿರುತ್ತೇನೆ. (೨) ತನಗೆ ಬೇಕಾದಷ್ಟು ಚಟ್ನಾ, ಹೊಗೆಸೊಪ್ಪು ಇವುಗಳನ್ನು ಕೊಡದೇಯಿದ್ದರೆ ಆ ಅಂಗಡಿಯ ವೈಶ್ಯನಿಗೆ ೫೦೦ ಕಂಟ್ಯಾಕ್ಸ್ ಹಾಕಬೇಕೆಂತ ಆಕಾಶದ ರಾಮಣ್ಣನ ಹೆಸರಿನಿಂದ ಅರ್ಜಿ ಬರೆಸುತ್ತಿರುತ್ತೇನೆ. (೩) ಜುಲುಂ, ತಿರಸ್ಕಾರ ಇಂಥಾ ವ್ಯಾಜ್ಯಗಳನ್ನು ಕಟ್ಟಿಕೊಂಡು ಯಾವಾಗಲೂ ಕೋರ್ಟಿಗೂ ಊರಿಗೂ ಸುತ್ತುತ್ತಿರುವೆನು. (೪) ಹತ್ತು ರೂಪಾಯಿನ ದಾವಾ ಆದರೂ ಗ್ರಾಮ ಮುನ್ಸೀಫರಲ್ಲಿ ದಾಖಲಾಗದಂತೆ ಮಾಡಿ ಅದನ್ನು ಜಿಲ್ಲಾ ಮುನ್ಸೀಫ್‌ಕೋರ್ಟಿನಲ್ಲಿ ದಾಖಲೆ ಮಾಡಿಸಿ ಕಕ್ಷಿಗಾರರಿಗೆ ನೂರಾರು ರೂಪಾಯಿ ಖರ್ಚಾಗುವಂತೆ ಮಾಡುತ್ತಾ ಇದ್ದೇನೆ. (೫) ಉಪಾಯವಾಗಿ ಪ್ರತಿವಾದಿಕಡೆಗೂ ಸೇರಿ ಅವನಿಂದಲೂ ಹಣ ಸೆಳೆಯುತ್ತೇನೆ. (೬) ಈ ಮಧ್ಯೆ ನಮ್ಮ ಸಬ್‌ಮೇಜಿಸ್ಟ್ರೇಟರಾಗಿ ಬಂದ ಸುಬ್ಬರಾಯರಂತಲು ಅಧಿಕಾರವಿದ್ದರೆ ಅವರಿಗೆ ಸಲ್ಲತಕ್ಕ ಮುತುವು (ಪಗಾರೆ) ಹರಿಕೆಗಳು ತಪ್ಪದೆ ಪಾವತಿ ಮಾಡಿಸುತ್ತೇನೆ. (೭) ಸರ್ಕಾರಿ ಉದ್ಯೋಗಸ್ಥರು ನಮ್ಮ ಗ್ರಾಮಕ್ಕೆ ಬಂದರೆ ಅವರಿಗೆ ಬೇಕಾದ ಸಪ್ಲೈ ಮಾಡಿ ಅವರ ದಯೆಗೆ ಪಾತ್ರನಾಗುತ್ತೇನೆ. (೮) ದೊಡ್ಡ ದೊರೆಗಳಿಗೆ, ಇಂಜನೀರುಗಳಿಗೆ, ಕಲೆಕ್ಟರಿಗೆ ಬೆಂಗಳೂರಿಂದ ಮಾವಿನ ಹಣ್ಣು, ದ್ರಾಕ್ಷಿ ಹಣ್ಣು, ಅಂಜೂರದಹಣ್ಣು, ಮದ್ರಾಸಿನಿಂದ ಹ್ಯಾರಿಸನ್ ಕಂಪೆನಿಯ ಶ್ರೇಷ್ಠವಾದ ರೊಟ್ಟಿಗಳು, ಬಿಸ್ಕತ್ತುಗಳು ನಿಜಾಂ ಪಟ್ಟಣದಿಂದ ಉಪ್ಪು ಹಚ್ಚಿದ ಮೀನು ಇವುಗಳನ್ನು ತರಿಸಿ ಅವುಗಳ ಜತೆಗೆ ನಮ್ಮ ಮನೆಯಿಂದ ಭಕ್ಷ್ಯಗಳನ್ನು ಮಾಡಿಸಿ ಇವುಗಳನ್ನೂ ಎಳೆನೀರು, ಉಪ್ಪಿನಕಾಯಿಗಳನ್ನು ಸಹಾ ಕಳುಹಿಸುತ್ತೇನೆ. (೯) ನಮ್ಮ ಗ್ರಾಮದಲ್ಲಿ ನನ್ನನ್ನು ಯಾರುನೋಡಿದರೂ ಬಗ್ಗಿ ವಂದನೆಗಳನ್ನು ಮಾಡುತ್ತಾ ಚಂಡಪ್ರಚಂಡನೆಂಬ ಬಿರುದನ್ನು ನನಗೆ ಕೊಟ್ಟಿರುತ್ತಾರೆ. ಗ್ರಾಮಸ್ಥರಿಗೆಲ್ಲಾ ನನ್ನಲ್ಲಿ ವಿಶ್ವಾಸವಿದೆ. ಆದ್ದರಿಂದ ನಾನು ಮೇಲೆ ಕೇಳಿಕೊಂಡಿರತಕ್ಕ ಗ್ರಾಮ ಮುನ್ಸೀಫ್ ಕೆಲಸವನ್ನು ಸಂಬಳವಿಲ್ಲದೇನೇ ನನಗೆ ಕೊಡಿಸಿಕೊಡಬೇಕು. ಅದರಿಂದ ಗೌರ್ನಮೆಂಟಿಗೂ ಫಾಯಿದೆಯಾಗುತ್ತೆ. ಗ್ರಾಮದಿಂದ ನಾನು ಜೀವನ ಮಾಡಿಕೊಳ್ಳುತ್ತೇನೆ. ನನ್ನ ಯೋಗ್ಯತೆ ವಿಷಯದಲ್ಲಿ ನಾನೇ ಆತ್ಮಸ್ತುತಿ ಮಾಡಿಕೊಳ್ಳತಕ್ಕುದು ಸರಿಯಲ್ಲ. ಗೌರ್ನಮೆಂಟಿನವರೇ ನಮ್ಮ ಗ್ರಾಮದಲ್ಲಿ ವಿಚಾರಿಸಿಕೊಳ್ಳಬಹುದು. ಈ ಉಪಕಾರಕ್ಕಾಗಿ ತಮ್ಮ ತಾಯಿಹೊಟ್ಟೆಯು ತಣ್ಣಗಿರಬೇಕೆಂತ ತ್ರಿಕಾಲದಲ್ಲೂ ಸಂಧ್ಯಾವಂದನೆಯ ಜತೆಗೆ ದೇವರನ್ನು ಪ್ರಾರ್ಥಿಸುತ್ತೇನೆ.

ಇದು ಹಾಸ್ಯಲಹರಿ ಎಂಬ ಹೆಡ್ಡಿಂಗಿನಲ್ಲಿ ಪಬ್ಲಿಷ್ ಆಗಿರುವುದರಿಂದ ಇದರ ನಿಜತ್ವ ಹ್ಯಾಗಾದರೂ ಇರಲಿ. ಇಂಥಾ ಅಪ್ಲಿಕೇಷನ್ನು ಬರೆಯತಕ್ಕವರು ನಮ್ಮಲ್ಲಿ ಅನೇಕಜನಗಳಿರಬಹುದಾದುದರಿಂದ ಈ ವಿಷಯದಲ್ಲಿ ಪ್ರಜೆಗಳೂ, ಗೌರ್ನಮೆಂಟಿನವರೂ ಗಮನಕೊಡಬೇಕೆಂದು ಇದನ್ನು ಬರದಿದ್ದೇನೆ.

A Retired Officer.

ನೋಟನ್ನು ಒಂದಕ್ಕೆರಡರಷ್ಟು ಮಾಡುವುದು.

ಕಳೆದ ಮಾರ್ಚಿ ತಿಂಗಳಾದಿಭಾಗದಲ್ಲಿ ಬೊಂಬಾಯಿನಲ್ಲಿ ರಾಧಾಕೃಷ್ಣ ಶೀತಲಪ್ರಸಾದ ನೆಂಬುವನೊಬ್ಬನು ಆಭರಣಗಳ ವರ್ತಕನಾದ ದಾನಚಂದ್ ರತ್ನಚಂದ್ ಎಂಬುವನ ಅಂಗಡಿಗೆ ಹೋಗಿ ನಮ್ಮ ಮನೆಯಲ್ಲಿ ೩-೪ ಸಾವಿರ ರೂಪಾಯಿ ಬೆಲೆಯ ಬೆಳ್ಳಿ ಭಂಗಾರದ ಆಭರಣಗಳು ವಿಕ್ರಯಿಸಲ್ಪಡತಕ್ಕವಿವೆ; ನೀವು ಹಣವನ್ನು ತೆಗದುಕೊಂಡು ನನ್ನ ಕೂಡ ಬಂದು ಬೆಲೆ ನಿಷ್ಕರ್ಷಿಸಿಕೊಂಡು ಕೊಳ್ಳಬಹುದೆಂದು ಹೇಳಲು, ಆ ವರ್ತಕನು ಹಣವನ್ನು ತೆಗೆದುಕೊಂಡು ತನ್ನ ಪಾಲ್ದಾರನ ಸಮೇತ ಹೊರಟನು. ರಾಧಾಕೃಷ್ಣನು ಅವನನ್ನು ಒಂದು ಮನೆಯ ೨ ನೇ ಅಂತಸ್ತಿನ ಮೇಲೆ ಕರೆದುಕೊಂಡು ಹೋದನು. ಅಲ್ಲಿ ಪಂಡಿತ ವಿಷ್ಣುಪ್ರಸಾದ ಬಿಂದು ಪ್ರಸಾದನೆಂಬುವನು ಅಗ್ನಿ ಕುಂಡದ ಮುಂಗಡೆ ಕುಳಿತುಕೊಂಡು ದೇವತೆಗಳನ್ನು ಸ್ವಾಧೀನ ಪಡಿಸಿಕೊಂಡು ಯಕ್ಷಿಣಿಯನ್ನು ಮಾಡುವುದಕ್ಕಾಗಿ ಮಂತ್ರೋಚ್ಚಾರಣೆಯನ್ನು ಮಾಡುತ್ತಿರುವುದನ್ನೂ, ಒಂದು ಕೊಠಡಿಯಲ್ಲಿ ಶಂಕರನ ವಿಗ್ರಹವನ್ನಿರಿಸಿ ಪೂಜಿಸಿರುವುದನ್ನೂ ನೋಡಿದರು. ಇವರುಗಳನ್ನು ಕರೆದುಕೊಂಡು ಬಂದ ರಾಧಾಕೃಷ್ಣನು ಆ ವರ್ತಕರಿಬ್ಬರನ್ನೂ ಕುರಿತು ಈ ಪಂಡಿತನು ಮಹಾ ಮಂತ್ರವಾದಿಯು; ೧೦೦೦ ರೂ. ನ ನೋಟನ್ನು ಒಂದು ಕ್ಷಣದಲ್ಲಿ ೨೦೦೦ ರೂ. ನೋಟನ್ನಾಗಿ ಮಾಡುವ ಅದ್ಭುತ ಶಕ್ತಿಯು ಇವನಿಗಿರುವುದು. ಎಂದು ಮೊದಲಾಗಿ ಅವರ ಮನಸ್ಸು ಕರಗುವಂತೆ ಹೇಳಿ ಅವರು ಆಭರಣಗಳನ್ನು ಕೊಂಡುಕೊಳ್ಳಲು ತಂದಿದ್ದ ೧೦೦೦ ರೂ. ನ ೪ ನೋಟುಗಳನ್ನು ಆ ಪಂಡಿತನ ವಶಕ್ಕೆ ಕೊಡಿಸಿದನು. ಆ ಪಂಡಿತನು ಒಂದು ಬಿಳಿ ಕಾಗದದಲ್ಲಿ ಆ ನೋಟುಗಳನ್ನಿಟ್ಟು ಸುರುಳಿಸುತ್ತಿ ಬೆಂಕಿಯ ಜ್ವಾಲೆಯಮೇಲೆ ಹಿಡಿದುಕೊಂಡು ಏನೋ ಮಂತ್ರಗಳನ್ನು ಹೇಳುತ ಸ್ವಲ್ಪಕಾಲ ಕೈಯಾಡಿಸುತ್ತಿದ್ದು ತತ್ಕ್ಷಣದಲ್ಲಿ ಆ ಸುರುಳಿಗೆ ಜ್ವಾಲೆಯು ತಗಲಿ ಸುಟ್ಟುಹೋಗಿ ಭಸ್ಮವಾಯಿತೆಂದು ಹೇಳಿದುದಲ್ಲದೆ, ನೀವು ಶಬ್ದಮಾಡದೆ ಮನೆಗೆ ಹೋಗಿ ಈ ವಿಷಯವನ್ನು ಯಾರಿಗೂ ಹೇಳದೆ ಮೌನವಾಗಿರದಿದ್ದರೆ ನೋಟುಗಳನ್ನಿಟ್ಟಿದ್ದ ಕಾಗದದ ಸುರುಳಿಯು ಸುಟ್ಟು ಭಸ್ಮವಾದಂತೆ ನಿಮ್ಮಿಬ್ಬರನ್ನೂ ನನ್ನ ಮಂತ್ರಶಕ್ತಿಯಿಂದ ಸುಟ್ಟು ಭಸ್ಮಮಾಡಿಬಿಡುವೆನೆಂದು ಚೆನ್ನಾಗಿ ಭಯವನ್ನು ಹುಟ್ಟಿಸಿ ಕಳುಹಿಬಿಟ್ಟನು. ಆ ವರ್ತಕರಿಬ್ಬರೂ ಆ ಮೋಸಗಾರನಾದ ಮಾಂತ್ರಿಕನು ಏನು ಕೇಡನ್ನು ಮಾಡುತ್ತಾನೊ ಎಂದು ಹೆದರಿ ನಡೆದ ವಿಷಯವನ್ನು ಪೋಲೀಸರಿಗೆ ಸಹ ತಿಳುಹಿಸದೆ ಸುಮ್ಮನಿದ್ದರು. ಆದರೆ ಈ ವಿಷಯವು ಪೋಲೀಸರಿಗೆ ಹೇಗೋ ತಿಳಿದು ಆ ಮೋಸಗಾರರಾದ ರಾಧಾಕೃಷ್ಣ ಶೀತಳಪ್ರಸಾದನನ್ನೂ ಪಂಡಿತ ಪ್ರಸಾದನನ್ನೂ ಹಿಡಿದು ವಿಚಾರಣೆಗೆ ಗುರಿಮಾಡಿರುವರು.

ಪ್ರಸಿದ್ಧಪತ್ರಿಕೆ.

ರಾ॥ ಬ॥ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ೨೦ ಜನ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಡಾಗಿದೆ. ವಿದ್ಯಾರ್ಥಿಗಳು ಮೈಸೂರು ದೇಶೀಯರಾಗಿಯೂ, ವೀರಶೈವರಾಗಿಯೂ, ಇಂಗ್ಲೀಷ್ ಲೋವರ್‌ಸೆಕೆಂಡರಿಗೆ ಕಡಮೆಯಿಲ್ಲದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಪ್ರೌಢ ವಿದ್ಯಾಭ್ಯಾಸ ಮಾಡಲು ಚೈತನ್ಯ ವಿಲ್ಲದವರಿಗೆಮಾತ್ರ ಅವಕಾಶ ದೊರೆಯುವುದು. ಚೈತನ್ಯವಿಲ್ಲವೆಂಬುವುದಕ್ಕೆ ನಿದರ್ಶನಾರ್ಥವಾಗಿ ಸ್ಥಳೀಯ ಪ್ರಮುಖ ವೀರಶೈವರಿಂದಲಾಗಲಿ ಅಥವ ತಾವು ಓದಿದ ಸ್ಕೂಲು ಯಾ ಕಾಲೇಜು ಮುಖ್ಯೋಪಾಧ್ಯಾಯರಿಂದಲಾಗಲಿ ಸರ್ಟಿಫಿಕೇಟನ್ನು ತರಬೇಕು. ಇಷ್ಟೆಯುಳ್ಳವರು ಜೂನ್ ತಿಂಗಳು ೧೫ ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಹಾಕತಕ್ಕದ್ದು.

ಎಚ್. ಕೆ. ವೀರಬಸವಯ್ಯ, ಬಿ. ಎ., ಬಿ. ಎಲ್.,
ಆನರರಿ ಸೆಕ್ರೆಟರಿ
ತೋಟದಪ್ಪನವರ ಧರ್ಮಸತ್ರ ಬೆಂಗಳೂರು

ಮೈಸೂರ್ ಗೆಜೆಟ್ ಸಂಗ್ರಹ.

ಚಿತ್ರಕಲ್‌ದುರ್ಗ ಡಿ॥ ಸ್ಕೂಲುಗಳ ಡೆ॥ ಇನ್ಸ್ಪೆಕ್ಟರ್ ಮೆ॥ ಎಂ. ಕೆ. ತಿರುಮಲಾಚಾರ್ ರವರಿಗೆ ಕೊಟ್ಟಿದ್ದ ೧೫ ದಿವಸಗಳ ಪ್ರಿವಿಲೇಜ್ ರಜವು ಇನ್ನೂ ೨೦ ದಿನಗಳಿಗೆ ಹೆಚ್ಚಿಸಲ್ಪಟ್ಟಿದೆಯಾದುದರಿಂದ ಇದೇ ಡಿ॥ ಅ॥ ಡೆ॥ ಇನ್ಸ್ಪೆಕ್ಟರ್ ಮೆ॥ ಕೆ. ನಾರಾಯಣರಾಯರು ಡಿ॥ ಇನ್ಸ್ಪೆಕ್ಟರಾಫೀಸ್ ಛಾರ್ಜಿನಲ್ಲಿರತಕ್ಕದು.

ಮೆ॥ ಕೆ. ಆರ್. ಕೃಷ್ಣಸ್ವಾಮಿ ಅಯ್ಯಂಗಾರ್ ಎಂ. ಬಿ. ಸಿ. ಎಚ್. ಬಿ. ಅಂಡ್ ಡಿ. ಪಿ. ಎಚ್., ರವರು ೨ ವರ್ಷಕಾಲ ಪ್ರುಬೇಷನ್‌ಮೇಲೆ ೨ ನೇ ತ॥ ಅಸಿಸ್ಟೆಂಟ್ ಸರ್ಜನನಾಗಿ ನೇಮಿಸಲ್ಪಟ್ಟು ಸರ್ಕಾರಿಯ ಕೆಮಿಕಲ್ ಎಕ್ಸಾಮಿನರ್ ಮತ್ತೂ ಬ್ಯಾಕ್ಟಿಯಾರಿಯೋಲಾಜಿಸ್ಟರವರ ಅಸಿಸ್ಟೆಂಟರಾಗಿರತಕ್ಕದು.

ಮೆ॥ ಜಿ. ಎಚ್. ಕರ್ವೆ, ಎಂ. ಬಿ. ಡಿ. ಪಿ. ಎಚ್., ರವರು ೨ ವರ್ಷಕಾಲ ಪ್ರುಬೇಷನ್‌ಮೇಲೆ ೨ ನೇ ತ॥ ಅ॥ ಸರ್ಜನರಾಗಿ ನೇಮಿಸಲ್ಪಟ್ಟು ಮೈಸೂರ ಜನರಲ್ ಆಸ್ಪತ್ರೆಯಲ್ಲಿ ಕೆಲಸಮಾಡಲಪ್ಪಣೆಮಾಡಲ್ಪಟ್ಟಿರುತ್ತಾರೆ.

ಈಗ ದಾವಣಗೆರೆಯ ಆಕ್ಟಿಂಗ್ ಅಮಲ್ದಾರರಾಗಿರುವ, ಚಿತ್ರದುರ್ಗದ ಅ॥ ಡಿ॥ ಶಿರಸ್ತೆದಾರ್ ಮೆ॥ ಕೆ. ವಿ. ವೇದಾಂತಅಯ್ಯಂಗಾರ್, ಬಿ. ಎ., ಯವರು ದಾವಣಗೆರೆಯಲ್ಲಿ ಬಿಡುಗಡೆಯಾದ ಮೇಲೆ ಮೆ॥ ಎಂ. ಎಸ್. ರಾಮಚಂದ್ರರಾವ್, ಬಿ. ಎ., ಬಿ. ಎಲ್ ರವರು ಬೇರೆ ಉದ್ಯೋಗದ ಮೇಲಿರುವವರೆಗೆ ಚಳ್ಳಕೆರೆ ತಾ॥ ಆಕ್ಟಿಂಗ್ ಅಮಲ್ದಾರರಾಗಿಯೂ, ೨ ನೇ ತ॥ ಮ್ಯಾಜಿಸ್ಟ್ರೇಟರಾಗಿಯೂ ಇರತಕ್ಕದು.

ಲೆ॥ ಕರ್ನಲ್ ಜಿ. ಸ್ಮೈತ್, ಎಂ. ಡಿ, ಐ. ಎಂ. ಎಸ್., ರವರಿಂದ ಮೆ॥ ಟಿ. ವಿ. ಅಮರ್ಗಂ ಮೊದಲಿಯಾರರು ಸೀನಿಯರ್ ಸರ್ಜನ್, ಸ್ಯಾನಿಟರಿಕಮಿಷನರ್ ಮತ್ತೂ ಕಾರಾಗೃಹಗಳ ಇ॥ ಜನರಲ್ ಉದ್ಯೋಗಗಳ ಅಧಿಕಾರವನ್ನು ೧೯೧೧ ನೇ ಮೆ ತಾ॥ ೨೦ ರ ಮಧ್ಯಾಹ್ನದಲ್ಲಿ ವಹಿಸಿಕೊಂಡರು.

ಮೆ॥ ವೈ. ಕೆ. ರಾಮಚಂದ್ರರಾವ್, ಬಿ. ಎ., ಎಲ್. ಸಿ. ಇ., ಯವರು ಮರಾಮತ್ ಶಾಖೆಯಲ್ಲಿ ೧ ವರ್ಷದವರೆಗೆ ಅನಿತ್ಯವಾಗಿ ೨ ನೇ ತ॥ ಸಬ್ ಅ॥ ಇಂಜನೀರಾಗಿ ನೇಮಿಸಲ್ಪಟ್ಟಿರುತ್ತಾರೆ.

ಈಗ ಸೀಮೆಯಲ್ಲಿ ವ್ಯಾಸಂಗಮಾಡುತ್ತಿರುವ ಸಬ್ ಅ॥ ಇಂಜನೀರ್ ಮೆ॥ ಎಸ್. ವೆಂಕಟಸುಬ್ಬಶೆಟ್ಟಿ, ಬಿ. ಎ., ಯವರಿಗೆ ೧೯೧೧ ನೇ ಏಪ್ರಿಲ್ ತಾ॥ ೯ ರಿಂದ ಒಂದು ವರ್ಷದ ವರೆಗೆ ಸಂಬಳವಿಲ್ಲದೆ ವಿಶೇಷರಜವು ಕೊಡಲ್ಪಟ್ಟಿದೆ.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಜೂನ್ ತಾ॥ ೫ ನೇ ಸೋಮವಾರ.

ಬರೋಡಾ ಸಂಸ್ಥಾನವು.

ಈ ಸಂಸ್ಥಾನವನ್ನಾಳತಕ್ಕ ಗಾಯಕವಾಡ ಮಹಾರಾಜರವರು ತಮ್ಮ ಪ್ರಜೆಗಳ ಸುಖಸಂಪತ್ತೇ ತಮ್ಮ ಸ್ವಸುಖಸಂಪತ್ತೆಂಬುದನ್ನು ಮೂಲ ಮಂತ್ರವನ್ನಾಗಿಟ್ಟುಕೊಂಡು, ಬಡ ಪ್ರಜೆಗಳು ಹೊಟ್ಟೆಯನ್ನು ಕಟ್ಟಿ ಗಳಿಸಿದ ದುಡ್ಡಿನಿಂದ ಸ್ವೇಚ್ಛಾವಿಹಾರಿಗಳಾಗಿರದೆ, ಪರದೇಶಗಳಲ್ಲಿ ಸಂಚರಿಸಿ ಅಲ್ಲಿಯ ಜನರ ಸುಖಸಂಪತ್ತಿಗೆ ಕಾರಣವಾದ ವಿಷಯಗಳನ್ನೋದಿ ತಿಳಿದುಕೊಂಡು ಬಂದು, ತಮ್ಮ ರಾಜ್ಯದಲ್ಲಿ ವಿದ್ಯೆ ಬೇಸಾಯ, ಕೈಗಾರಿಕೆ ಮೊದಲಾದ ವಿಷಯಗಳನ್ನು ಎಷ್ಟು ಅಭಿವೃದ್ಧಿಗೆ ತಂದಿರುವರೆಂಬುದೂ, ಸಮಾಜದಲ್ಲಿ ಎಂಥ ಸುಧಾರಣೆಯನ್ನು ಮಾಡಿರುವರೆಂಬುದೂ ಮುಂದೆ ಹೇಳುವ ಸಂಗತಿಯಿಂದ ವ್ಯಕ್ತವಾಗುತ್ತವೆ. ೧೯೦೯-೧೦ ರಲ್ಲಿ ಈ ಸಂಸ್ಥಾನದಲ್ಲಿ ಲೋಹಮಾರ್ಗವು ೭೦೦ ಮೈಲಿಯವರೆಗೆ ಹಬ್ಬಿಸಲ್ಪಡಬೇಕೆಂದು ನಿರ್ಧರವಾಗಿ ಅಗಲೇ ಕಾರ್ಯಾರಂಭವಾಗಿರುವುದು. ಅಪ್ರಾಪ್ತವಯಸ್ಕ ಬಂದಿಗಳಿಗೆ ವಿದ್ಯಾಬುದ್ಧಿಯನ್ನೂ, ಕಸಬನ್ನೂ ಕಲಿಸುವ ಪದ್ಧತಿಯು ಬಹು ಪ್ರಯೋಜನಕಾರಿಯಾಗಿ ಪರಿಣಮಿಸಿರುವುದು. ಮತ್ತೂ ಪರೀಕ್ಷಾರ್ಥವಾದ ಹೊಲಗಳಲ್ಲಿ ಕೆಲಸ ಮಾಡಲು ಹಚ್ಚಲ್ಪಟ್ಟಂಥ ಬಂದಿಗಳು ಈಗ ಸ್ವತಂತ್ರ ಜನರಾಗಿರುವರಲ್ಲದೆ, ಅದು ಅವರಿಗೆ ಬಹು ಆರೋಗ್ಯಕರವಾಗಿರುವುದು. ೭೦ ತಾಲ್ಲೂಕುಗಳಲ್ಲಿ ಸಮಾಧಾನವನ್ನು ಮಾಡತಕ್ಕ ಕೋರ್ಟುಗಳು ಸ್ಥಾಪಿಸಲ್ಪಟ್ಟು ೨ನೇ ೩ ಭಾಗದ ವಿವಾದಗಳೆಲ್ಲ ಇವುಗಳ ಮೂಲಕ ಇತ್ಯರ್ಥವಾಗಿ ಈರ್ಷ್ಯಾಸೂಯೆಯಿಂದ ಪಕ್ಷಗಳೇರ್ಪಡುವುದು ಬಹುಮಟ್ಟಿಗೆ ಕಡಿಮೆಯಾಗಿದೆ. ಪ್ರತಿಯೊಂದು ಮುನಿಸಿಪಾಲಿಟಿಯೂ ಸರ್ಕಾರದವಲಂಬನೆಯಿಲ್ಲದೆ ತನ್ನ ಖರ್ಚಿಗೆ ತಕ್ಕಷ್ಟು ಉತ್ಪತ್ತಿಯನ್ನು ತಾನೇ ಮಾಡಿಕೊಳ್ಳುವಂತೆ ಮಾಡಲ್ಪಟ್ಟಿದೆ. ಮತ್ತೂ ತೆರಿಗೆಯನ್ನು ಸ್ವತಃ ವಿಧಿಸುವ ಅಧಿಕಾರವು ಕೊಡಲ್ಪಟ್ಟು ತನ್ನ ಸ್ವಾತಂತ್ರ್ಯವೂ, ಉತ್ತರವಾದಿತ್ವವೂ ಎಷ್ಟರಮಟ್ಟಿಗಿರುವುದೆಂಬುದು ತಿಳುಹಲ್ಪಟ್ಟಿದೆ. ಈ ಸಂಸ್ಥಾನದ ಪ್ರಾಯಶಃ ಎಲ್ಲ ಗ್ರಾಮಗಳಲ್ಲಿಯೂ ಪಂಚಾಯಿತಿಗಳೇರ್ಪಟ್ಟಿರುತ್ತವೆ. ಇವುಗಳಿಗೆ ಜನರು ತಮ್ಮಲ್ಲಿ ವಿವೇಕಿಗಳಾದವರನ್ನು ಮೆಂಬರುಗಳನ್ನಾಗಿ ಆರಿಸಿಕೊಂಡಿರುತ್ತಾರೆ. ಈ ಗ್ರಾಮ ಪಂಚಾಯಿತರಿಗೆ ಗ್ರಾಮದ ಆರೋಗ್ಯವನ್ನೂ, ಬೆಳಕನ್ನೂ, ಮಾರ್ಗಗಳನ್ನೂ, ಕೆರೆಗಳನ್ನೂ, ಬಾವಿಗಳನ್ನೂ ಚನ್ನಾಗಿಟ್ಟುಕೊಳ್ಳುವ, ನೀರು, ಕೂಲ ಮತ್ತೂ ಭೂಮಿ ಈ ಸಂಬಂಧವಾದ ೫೦ ರೂಪಾಯಿನೊಳಗಿರುವ ವಿವಾದಗಳನ್ನು ಇತ್ಯರ್ಥಮಾಡುವ, ಮತ್ತೂ ಹೊಡೆಯುವುದ, ಹಿಂಸಿಸುವುದು, ಬಾಂದಲೆಮಾಡುವುದು, ದನುವನ್ನುಂಟುಮಾಡುವುದು ಮೊದಲಾದ ಅಪರಾಧಕೃತ್ಯಗಳನ್ನು ವಿಚಾರಿಸಿ ಅವರಿಗೆ ಶಿಕ್ಷೆಯನ್ನು ವಿಧಿಸುವ ಅಧಿಕಾರಗಳು ಕೊಡಲ್ಪಟ್ಟಿವೆ. ಇಷ್ಟಲ್ಲದೆ ವಿಶಿಷ್ಟ ಗ್ರಾಮ ಪಂಚಾಯಿತಿಗಳು ಬೇರೆ ಸ್ಥಾಪಿಸಲ್ಪಟ್ಟಿವೆ. ಇವುಗಳಿಗೆ ತಮ್ಮ ಗ್ರಾಮಕ್ಕುಪಯುಕ್ತವಾದ ಕೆಲಸಗಳನ್ನು ಮಾಡಲು ತೆರಿಗೆಯನ್ನು ಹಾಕುವಧಿಕಾರವಿರುತ್ತದೆ. ಇಂಗ್ಲೀಷು ಮಾದರಿಯ ಕಬ್ಬಿಣದ ನೇಗಲುಗಳೂ, ನೀರಿನ ಯಂತ್ರಗಳೂ, ಕಬ್ಬಿನ ಆಲೆಯ ಯಂತ್ರಗಳೂ ಮುಖ್ಯರಾದ ರೈತರಿಗೆ ಪರೀಕ್ಷಾರ್ಥವಾಗಿ ದುಡ್ಡಿಲ್ಲದೆ ಕೊಡಲ್ಪಟ್ಟಿವೆ. ಅನೇಕ ಸ್ಥಳಗಳಲ್ಲಿ ಬೇಸಾಯಗಾರರ ಸಂಘಗಳು ಸ್ಥಾಪಿತವಾಗಿವೆ. ದೊಡ್ಡ ಪಟ್ಟಣಗಳಲ್ಲೆಲ್ಲ ಮಾದರಿಯ ಹೊಲಗಳು ಮಾಡಲ್ಪಟ್ಟು ಅಲ್ಲಿ ರೈತರ ಮಕ್ಕಳು ಕೆಲಸವನ್ನು ಕಲಿಯುತ್ತಿದ್ದಾರೆ. ಸಕ್ಕರೆ, ಚಾಕಲಿಟ್, ರಸಾಯನ ಮೊದಲಾದ ಕಾರ್ಖಾನೆಗಳು ಸಮರ್ಪಕವಾಗಿ ನಡೆಯುತ್ತಿವೆ. ಗಾಜಿನ ಕಾರ್ಖಾನೆಯೊಂದು ಹೊಸದಾಗಿ ಸ್ಥಾಪಿತವಾಗಿದೆ. ಬಲವಂತದಿಂದ ಬಾಲ್ಯವಿದ್ಯಾಭ್ಯಾಸವನ್ನು ಮಾಡಿಸುವುದೂ, ಮಧ್ಯಮ ಮತ್ತೂ ಪ್ರೌಢವಿದ್ಯಾಭ್ಯಾಸವೂ ಬಹು ತೃಪ್ತಿಕರವಾಗಿ ನಡೆಯುತ್ತಿವೆ. ವಿವಾಹವಾಗತಕ್ಕ ಹೆಣ್ಣುಮಕ್ಕಳ ವಯಸ್ಸು ೧೦ ವರ್ಷಕ್ಕೆ ಕಡಿಮೆ ಇರಕೂಡದೆಂದಿದ್ದುದನ್ನು ತಪ್ಪಿಸಿ ೧೧ ವರ್ಷಕ್ಕೆ ಕಡಿಮೆಯಿರಕೂಡದೆಂದು ತಿದ್ದುಪಾಟು ಮಾಡಲ್ಪಟ್ಟಿದೆ. ಮತ್ತೂ ಬಾಲಕ ಬಾಲಿಕೆಯರು ೪ ನೆಯ ತರಗತಿಯವರೆಗೆ ವಿದ್ಯಾಭ್ಯಾಸಂಗ ಮಾಡಿಯೇ ತೀರಬೇಕೆಂಬ ನಿರ್ಬಂಧವಿದೆ. ಇದಕ್ಕಾಗಿ ಹೆಚ್ಚಿಸಬೇಕಾಗಿರುವ ಉಪಾಧ್ಯಾಯರುಗಳ ವೇತನಕ್ಕಾಗಿ ೪೦೦೦೦ ರೂಪಾಯಿಗಳು ಹೆಚ್ಚಾಗಿ ಕೊಡಲ್ಪಟ್ಟಿರುತ್ತವೆ. ಮಕ್ಕಳು ಒಂದೇಸಮನಾಗಿ ೧೦ ದಿವಸ ಪಾಠಶಾಲೆಗೆ ಬಾರದಿದ್ದಲ್ಲಿ ಅವರ ತಂದೆ ತಾಯಿಗಳು ಅಥವಾ ಪೋಷಕರು ಅರ್ಥದಂಡವನ್ನು ವಿಧಿಸಲ್ಪಡುವರು. ಈಗ ಆ ಅವಧಿಯು ೬ ದಿನಗಳಿಗಿಳಿಸಲ್ಪಟ್ಟಿದೆ. ಲೋಕಲ್ ಬೋರ್ಡಿನವರು ಅನೇಕಗ್ರಾಮಗಳಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಲು ದುಡ್ಡಿನ ಚೈತನ್ಯವಿಲ್ಲದೆಹೋದುದರಿಂದ, ಅವುಗಳ ಸ್ಥಾಪನೆಗಾಗಿ ಸರ್ಕಾರದವರು ವರ್ಷ ೧ ಕ್ಕೆ ೩೩,೦೩೩ ರೂ.ಗಳನ್ನು ಕೊಡಲುಪ್ಪಣೆಮಾಡಿರುತ್ತಾರೆ. ಗಾತ ಮತ್ತೂ ಕೌಶಲ ವಿದ್ಯೆಗಳನ್ನು ಕಲಿಸುವ ಕಲಾಭವನವೂ, ಕೆಲಸಗಾರರಿಗಾಗೇರ್ಪಟ್ಟಿರುವ ರಾತ್ರಿಯ ಪಾಠಶಾಲೆಗಳೂ, ಅಮರೇಲಿಯಲ್ಲಿರುವ ಕೈಗಾರಿಕೆಯ ಪಾಠಶಾಲೆಯೂ ಸಮರ್ಪಕವಾಗಿ ನಡೆಯುತ್ತಿವೆ. ಕೈಗಾರಿಕೆಯ ಪಾಠಶಾಲೆಗಳನ್ನು ಇನ್ನೂ ವಿಶೇಷವಾಗಿ ಸ್ಥಾಪಿಸಬೇಕೆಂಬುದು ಮಹಾರಾಜರವರ ತಾತ್ಪರ್ಯವಾಗಿದೆ. ಶ್ರೀಮನ್ಮಹಾರಾಜರವರು ಪುಸ್ತಕ ಭಂಡಾರಗಳನ್ನು ಸ್ಥಾಪಿಸುವುದು ಬಹು ಉಪಯುಕ್ತವಾದುದೆಂದರಿತು, ಅವುಗಳ ಪೋಷಣೆಗಾಗಿ ೩೦,೦೦೦ ರೂ. ಗಳನ್ನು ಕೊಡಲು ವಾಗ್ದಾನ ಮಾಡಿರುತ್ತಾರೆ. ಈಗ ೭೩೦ ಪುಸ್ತಕ ಭಂಡಾರಗಳು ದ್ರವ್ಯಸಹಾಯವನ್ನು ಹೊಂದುತ್ತಿವೆ.

ಗಾಯಕವಾಡ ಮಹಾರಾಜರು ತಮ್ಮ ದೇಶೋನ್ನತಿಗೆ ಮುಖ್ಯಸಾಧನಗಳಾದ ಬೇಸಾಯ, ಕೈಗಾರಿಕೆ ವ್ಯಾಪಾರ ಮೊದಲಾದವುಗಳಲ್ಲಿ ಕಾಲಾನುಗುಣ್ಯವಾಗಿ ಸುಧಾರಣೆಯನ್ನು ಮಾಡಬೇಕೆಂಬ ದೃಢಸಂಕಲ್ಪದಿಂದ ನಾನಾ ಹೊಲಗಳನ್ನೂ, ಕೈಗಾರಿಕೆಯ ಪಾಠಶಾಲೆಗಳನ್ನೂ, ಕಾರ್ಖಾನೆಗಳನ್ನೂ ಸ್ಥಾಪಿಸಿರುವರು. ಮತ್ತೂ ರೈತರು, ವರ್ತಕರು ಮೊದಲಾದವರು ಬೇಕಾದ ವಿಷಯಗಳಲ್ಲಿ ವೈದುಷ್ಯವನ್ನು ಸಂಪಾದಿಸಲು ತಕ್ಕಮಟ್ಟಿಗಾದರೂ ವಿದ್ಯಾವಂತರಾದ ಹೊರತು ಸಾಧ್ಯವಲ್ಲವೆಂಬುದರ ಮೇಲೆ, ತಮ್ಮ ಸಂಸ್ಥಾನದಲ್ಲಿ ಪ್ರತಿಯೊಬ್ಬ ತಂದೆತಾಯಿಯೂ ತಮ್ಮ ಮಕ್ಕಳಿಗೆ ೪ ನೇ ತರಗತಿಯವರೆಗಾದರೂ ವಿದ್ಯೆಯನ್ನು ಕಲಿಸಲು ತಪ್ಪಿದಲ್ಲಿ ಅರ್ಥದಂಡಕ್ಕೆ ಗುರಿಮಾಡಲ್ಪಡುವರೆಂದು ಒಂದು ನಿರ್ಬಂಧವನ್ನು ಕಲ್ಪಿಸಿರುವರು. ಮತ್ತೂ ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಪ್ರತಿವರ್ಷದಲ್ಲೂ ವ್ಯಯಮಾಡುತ್ತಿರುವರು. ತಮ್ಮ ಪ್ರಜೆಗಳಲ್ಲಿ ಯಾರಾದರೂ ಕಾರ್ಖಾನೆಗಳನ್ನು ಸ್ಥಾಪಿಸಬಯಸಿದರೆ, ಅವರಿಗೆ ತಮ್ಮ ಸರ್ಕಾರದಿಂದ ದ್ರವ್ಯ ಮೊದಲಾದ ಸಹಾಯವನ್ನು ಮಾಡಿಸಿಕೊಡುವರು. ಮುಖ್ಯವಾಗಿ ಅವರಿಗೆ ತಮ್ಮ ಪ್ರಜೆಗಳು ಸರ್ವವಿಧದಲ್ಲೂ ಅಭಿವೃದ್ಧಿಯನ್ನು ಹೊಂದಿ, ತಮ್ಮ ಸಂಸ್ಥಾನವು ಇತರದೇಶೀಯ ಸಂಸ್ಥಾನಗಳಿಗೆ ಮಾರ್ಗದರ್ಶಕವಾಗಿರುವಂತೆ ಮಾಡಬೇಕೆಂಬ ಚಿಂತೆಯು ವಿಶೇಷವಾಗಿರುವುದು ಮೇಲ್ಕಂಡ ಅವರ ಕಾರ್ಯಕ್ರಮಗಳಿಂದ ಸ್ಪಷ್ಟವಾಗುತ್ತದೆ. ಸ್ವಕ್ಷೇಮಕ್ಕಿಂತಲೂ ಪ್ರಜಾಕ್ಷೇಮವೇ ಮುಖ್ಯವಾದುದೆಂದು ತ್ರಿಕರಣಶುದ್ಧಿಯಾಗಿ ತಿಳಿದು ಆಚರಿಸುತ್ತಿರುವ ಶ್ರೀಮನ್ ಗಾಯಕವಾಡ ಮಹಾರಾಜರನ್ನು ತಮ್ಮ ಪ್ರಭುಗಳನ್ನಾಗಿ ಪಡೆದ ಆ ಬರೋಡಾ ಸಂಸ್ಥಾನದ ಪ್ರಜೆಗಳ ಭಾಗ್ಯೋದಯಕ್ಕೆ ಎಣೆಯಿಲ್ಲ. ಬರೋಡಾ ಮಹಾರಾಜರಿಗಿಂತಲೂ ಮಿಗಿಲಾದ ಪ್ರಜಾಭಿಮಾನವುಳ್ಳ ನಮ್ಮ ಮೈಸೂರ ಶ್ರೀಮನ್ ಮಹಾರಾಜರವರು ಬರೋಡಾ ಸಂಸ್ಥಾನದಲ್ಲಿ ಮಾಡಲ್ಪಟ್ಟಿರುವ ಪ್ರಯೋಜನಯುಕ್ತವಾದ ಕಾರ್ಯಕ್ರಮಗಳನ್ನು ತಿಳಿದುಬರಲು ತಮ್ಮ ಅಧಿಕಾರಿಗಳಲ್ಲಿ ಸಮರ್ಥರಾದ ಒಬ್ಬಿಬ್ಬರನ್ನು ಅಲ್ಲಿಗೆ ಕಳುಹಿಸಿಕೊಟ್ಟರೆ ಬಹು ಪ್ರಯೋಜನವಾಗುವುದೆಂದು ನಮಗೆ ತೋರುತ್ತದೆ.

ಒಳದೇಶದ ವೃತ್ತಾಂತ.

ಕಳೆದ ತಾ॥ ೧ ರಲ್ಲಿ ದಿವಾನರು ಉದಕಮಂಡಲದಿಂದ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು. ಇವರು ಪ್ರಾಯಶಃ ಈ ದಿವಸ ರಾಜಧಾನಿಗೆ ಬರುವರು.

ಸರದಾರ್ ಎಂ. ಕಾಂತರಾಜ ಅರಸಿನವರು ಮೈಸೂರ ಡಿ॥ ಡೆಪ್ಯುಟಿ ಕಮಿಷನರ ಉದ್ಯೋಗವನ್ನು ಮ॥ ಸುಬ್ರಹ್ಮಣ್ಯ ಅಯ್ಯರ್‌ರವರಿಂದ ಈ ದಿವಸ ಸ್ವೀಕರಿಸಿಕೊಳ್ಳುವವರಾಗಿರುವರೆಂದು ಕೇಳುತ್ತೇವೆ.

ಶ್ರೀಮತ್ಕೃಷ್ಣರಾಜ ಮಹಾರಾಣಿಯವರುಗಳ ಸವಾರಿಯು ಕಳೆದ ತಾ॥ ೧ ರ ಮಧ್ಯಾಹ್ನ ೪ ಘಂಟೆಗೆ ರಾಜಧಾನಿಗೆ ಚಿತ್ತೈಸಿತು. ಮರ್ಯಾದಾರ್ಥವಾದ ಗುಂಡುಗಳು ಹಾರಿಸಲ್ಪಟ್ಟುವು.

ರೆವಿನ್ಯೂ ಕಮಿಷನರು ಕಳೆದ ತಾ॥ ೨ ರಲ್ಲಿ ರಾಜಧಾನಿಗೆ ಬಂದು ತಾ॥ ೪ ರಲ್ಲಿ ನಂಜನಗೂಡಿಗೆ ದಯಮಾಡಿಸಿದರು. ಮತ್ತೂ ವರ್ಧಂತ್ಯುತ್ಸವಕ್ಕಾಗಿ ಈಹೊತ್ತು ಅಥವಾ ನಾಳೆ ದಿವಸ ರಾಜಧಾನಿಗೆ ಹಿಂತಿರುಗಿ ಬರುವರು.

ಬೆಂಗಳೂರ ಕೆಂಪಾಂಬುಧಿಯ ಕೆರೆಯಲ್ಲಿ ಕಳೆದ ತಾ॥ ೨೯ ರಲ್ಲಿ ೧೬ ವರ್ಷ ವಯಸ್ಸಿನ ಸುಂದರ ಮೊದಲಿ ಎಂಬುವನು ಮತ್ತೆ ಮೂವರು ಹುಡುಗರ ಕೂಡ ಈಜುತ್ತಿರುವಾಗ್ಗೆ ನೀರಿನೊಳಗೆ ಮುಳುಗಿ ಸತ್ತುಹೋದನು.

ಚೀಫ್ ಇಂಜನೀರ ಅಸಿಸ್ಟೆಂಟರಾದ ಮ॥ ಎಂ. ಸಿ. ಸಿಂಗಾರವೇಲು ಮೊದಲಿಯಾರರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟಿದಾರೆ. ಇವರು ಕಳೆದ ೩೪ ವರ್ಷಗಳಿಂದಲೂ ಈ ಮರಮಹತ್ ಶಾಖೆಯಲ್ಲಿ ಕೆಲಸವನ್ನು ಮಾಡಿರುತ್ತಾರೆ.

ಕಳೆದ ತಾ॥ ೨ ನೇ ಶುಕ್ರವಾರ ಶ್ರೀಮದಿಂಡಿಯಾ ಚಕ್ರವರ್ತಿಯವರ ಜನ್ಮದಿನವಾದುದರಿಂದ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳಿಗೂ, ಪಾಠಶಾಲೆಗಳಿಗೂ ರಜವು ಕೊಡಲ್ಪಟ್ಟಿತ್ತು. ಮತ್ತೂ ರಾಜಧಾನಿಯಲ್ಲಿ ೩೧ ಗುಂಡುಗಳು ಹಾರಿಸಲ್ಪಟ್ಟುವು.

ಕಾನಕಾನಹಳ್ಳಿ ತಾ॥ ನಾಗರಸನಕೋಟೆಯಲ್ಲಿ ಕಾನುಭೋಗ ಸುಬ್ರಾಯರು ಮತ್ತೆ ಇಬ್ಬರು ೭ ವರ್ಷ ವಯಸ್ಸಿನೊಳಗಿರುವ ಇಬ್ಬರು ಹೆಣ್ಣುಮಕ್ಕಳಿಗೆ ಕೆಲ ದಿವಸಗಳ ಕೆಳಗೆ ವಿವಾಹವನ್ನು ಮಾಡಿದ ಅಪರಾಧಕ್ಕಾಗಿ ಇಬ್ಬರಿಗೆ ೫೫-೫೫ ರೂ., ಮತ್ತೊಬ್ಬನಿಗೆ ೧೦ ರೂ. ಈಪ್ರಕಾರ ಅರ್ಥದಂಡವು ಬೆಂಗಳೂರ ಡಿ॥ ಮ್ಯಾಜಿಸ್ಟ್ರೇಟರಿಂದ ವಿಧಿಸಲ್ಪಟ್ಟಿತು.

ಈ ತಾ॥ ೭ ರಲ್ಲಿ ನಡೆಯುವ ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವಕ್ಕಾಗಿ ರಾಜಧಾನಿಗೆ ಬರತಕ್ಕ ಭರತಖಂಡದ ಅತಿಥಿಗಳನ್ನು ಸತ್ಕರಿಸಲು ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟರಿಯಟ್ಟಿನ ರೆಜಿಸ್ಟ್ರಾರಾದ ಮ॥ ಬಿ. ನಾರಾಯಣಸ್ವಾಮಯ್ಯಂಗಾರ್, ಬಿ. ಎ., ಬಿ. ಎಲ್., ರವರು ನೇಮಿಸಲ್ಪಟ್ಟಿರುತ್ತಾರೆ. ಅತಿಥಿಗಳಾಗಿ ಬರತಕ್ಕ ದೊಡ್ಡಮನುಷ್ಯರು ಬಿಡಾರ ಮೊದಲಾದ ವಿಚಾರದಲ್ಲಿ ಅವರಿಗೆ ಬರೆದು ತಿಳಿದುಕೊಳ್ಳಬಹುದು.

ಬೆಂಗಳೂರಲ್ಲಿ ಮೊದಲಿದ್ದು ಈಚೆಗೆ ತೆಗೆದುಹಾಕಲ್ಪಟ್ಟಿರುವ ಡಿಸ್ಟ್ರಿಕ್ಟ್ ಮತ್ತೂ ಸೆಷನ್ಸ್ ಕೋರ್ಟು ಪುನಃ ಸ್ಥಾಪಿಸಲ್ಪಡಲು ಸರ್ಕಾರದಪ್ಪಣೆಯಾಗಿರುವುದಾಗಿ ಕೇಳುತ್ತೇವೆ. ಈಗ ರಜದಮೇಲಿರುವ ಮ॥ ಇಜ್‌ಮೆ ಯವರು ಮರಳಿ ಕೆಲಸಕ್ಕೆ ಬಂದಮೇಲೆ ೩ನೆಯ ಜಡ್ಜರಾಗಿ ಬದಲು ನೋಡುತ್ತಿರುವ ಮತ್ತು ಶಿವಮೊಗ್ಗೆಗೆ ವರ್ಗಾಯಿಸಲ್ಪಟ್ಟಿರುವ ಮ॥ ಪರಮಶಿವಯ್ಯನವರು ಬೆಂಗಳೂರ ಕೋರ್ಟಿಗೆ ವರ್ಗಾಯಿಸಲ್ಪಡಬಹುದೆಂದು ತೋರುತ್ತದೆ.

ಶ್ರವಣಬೆಳಗೊಳದ ಐಶ್ವರ್ಯವಂತಳಾದ ಸಾವಿತ್ರಮ್ಮನೆಂಬ ವಿಧವೆಯು ತನ್ನ ಹೆಸರಿನಲ್ಲಿರುವ ೩೨,೦೦೦ ರೂ. ಗಳ ಮೈಸೂರ ಸರ್ಕಾರಿಯ ಪತ್ರವು ತನ್ನಿಂದ ತನ್ನ ದತ್ತುಮಗನಾದ ಧರಣಯ್ಯನ ಹೆಸರಿಗೆ ವರ್ಗಾಯಿಸಲ್ಪಟ್ಟಿರುವಂತೆ ಫೋರ್ಜರಿ ಮಾಡಲ್ಪಟ್ಟಿರುತ್ತದೆಯಾದುದರಿಂದ, ಆ ಪತ್ರದ ಮೊಬಲಗನ್ನು ಧರಣಯ್ಯನಿಗೆ ಕೊಡಕೊಡದೆಂದು ಕಂಟ್ರೋಲರಿಗೆ ಬರೆದಿದ್ದುದರ ಮೇಲೆ ಆ ಪತ್ರವು ಧರಣಯ್ಯನ ಹೆಸರಿಗೆ ಬರೆದಿರುವುದರ ನಿಜಾಂಶವನ್ನು ತಿಳಿಯುವ ಬಗೆಗೆ ಹಾಸನದ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಯು ನಡೆಯುತ್ತಿರುವುದು. ಈವರೆಗೆ ಧರಣಯ್ಯನ ಕಡೆ ಎರಡು ಸಾಕ್ಷಿಗಳ ವಿಚಾರಣೆಯಾಗಿ ಬರುವ ಜುಲೈ ತಾ॥ ೧೪ ರಲ್ಲಿ ಮುಂದಣವಿಚಾರಣೆಗಿಡಲ್ಪಟ್ಟಿರುವುದು. ಈ ವಿವಾದದ ಫಲಿತಾಂಶದ ವಿಚಾರವಾಗಿ ಜೈನಜನರಲ್ಲಿ ವಿಶೇಷ ಕುತೂಹಲವುಂಟಾಗಿರುತ್ತದೆ.

ರಾಜಧಾನಿಯಲ್ಲಿ ಕಳೆದವಾರ ಪ್ರತಿದಿನಸಾಯಂಕಾಲ ಮಳೆಯಾಗುತ್ತಿದ್ದಿತು. ಆದರೆ ಕಳೆದ ಸೋಮವಾರ ಸಾಯಂಕಾಲ ೧॥ ಅಂಗುಲ ಮಳೆಯಾಗಿ ನೀರು ಬಚ್ಚಲುಗಳಲ್ಲಿ ತುಂಬಿ ಮೇಲುಕ್ಕಿ ಮಾರ್ಗಗಳಲ್ಲಿ ಕಣಕಾಲುದ್ದ ಹರಿಯುತ್ತಿದ್ದಿತು. ಶ್ರೀರಾಮಪೇಟೆಯಲ್ಲಿರುವ ದೊಡ್ಡ ಬಚ್ಚಲಿನಲ್ಲಿ ನೀರು ತುಂಬಿ ಕಾಲುವೆಯಂತೆ ಹರಿಯುತ್ತಿರುವಾಗ್ಗೆ ಅಂಗಡಿಯಲ್ಲಿ ಏನನ್ನೋ ಕೊಂಡುಕೊಳ್ಳಲು ಹೋಗಿದ್ದ ೧೧ ವರ್ಷದ ಒಬ್ಬ ಕುಂಬಾರ ಹುಡುಗನು ಅಂಗಡಿಯಿಂದಿಳಿದು ಬರುವಾಗ್ಗೆ ಕಾಲುಜಾರಿ ಬಚ್ಚಲ ನೀರಿಗೆ ಬಿದ್ದು ಕೊಚ್ಚಿಕೊಂಡು ಹೋದನು. ಅವನನ್ನು ಹಿಡಿದುಕೊಳ್ಳ ಯತ್ನಿಸಿದವನು ನೀರಿನ ಸೆಳೆತಕ್ಕೆ ಭಯಪಟ್ಟು ಹುಡುಗನನ್ನು ಬಿಟ್ಟುಬಿಟ್ಟು ಮೇಲಕ್ಕೆ ಬಂದುಬಿಟ್ಟನು. ಆ ಹುಡುಗನ ಶವವು ಆ ಬಚ್ಚಲಿನಲ್ಲೇ ಕೊಚ್ಚಿಹೋಗಿ ಅದು ದೊಡ್ಡಕೆರೆಯೊಳಗೆ ಸಂಗಮವಾಗುವ ಸ್ಥಳದಲ್ಲಿ ಬಿದ್ದಿದ್ದುದು ಮಾರನೆಯ ಬೆಳಿಗ್ಗೆ ತಡಕುವಾಗ್ಗೆ ದೊರಕಿತು. ಮುನಿಸಿಪಾಲಿಟಿಯವರು ಜನಸಂದಣಿಯಿರುವ ಸ್ಥಳದಲ್ಲಿ ಅಷ್ಟು ದೊಡ್ಡ ಬಚ್ಚಲಿನ ಮೇಲ್ಭಾಗವನ್ನು ಮುಚ್ಚದೆ ಹಾಗೆಯೇ ಬಿಟ್ಟಿರುವುದರಿಂದ ಇಂಥ ಅನರ್ಥಕ್ಕೆ ಕಾರಣವಾಗಿರುವುದು.

ವರ್ತಮಾನ ಸಂಗ್ರಹ.

ಒಬ್ಬ ಮನುಷ್ಯನ ಬೆರಳುಗಳ ಉಗುರುಗಳು ಜಾಗ್ರತೆ ಬೆಳೆದಲ್ಲಿ ಅದು ಆ ಮನುಷ್ಯನು ಒಳ್ಳೇ ಆರೋಗ್ಯಸ್ಥಿತಿಯಲ್ಲಿರುವನೆಂಬುದಕ್ಕೆ ಚಿಹ್ನೆಯಾಗಿದೆಯಂತೆ.

ಫ್ರಾನ್ಸ್ ದೇಶದ ಒಂದು ಹಳ್ಳಿಯಲ್ಲಿ ಕೆಲ ದಿನಗಳ ಕೆಳಗೆ ಒಬ್ಬ ಬಡ ಮುದುಕಿಯು ಸತ್ತುಹೋದಳು. ಅವಳ ಹಾಸಿಗೆಯನ್ನು ಶೋಧಿಸುವಲ್ಲಿ ೨೫೧೦೦ ರೂ. ಗಳು ದೊರಕಿದವಂತೆ.

ವಿಲಾಯಿತಿಯಲ್ಲಿ ೨೧ ವರ್ಷ ವಯಸ್ಸಿನೊಬ್ಬ ತರುಣನು ೭ ಅಡಿ ಮತ್ತು ೭॥ ಅಂಗುಲ ಎತ್ತರವಿರುವವನು. ಇವನಷ್ಟು ಎತ್ತರವಾದ ಮನುಷ್ಯನು ವಿಲಾಯಿತಿಯಲ್ಲಿ ಬೇರೊಬ್ಬನಿಲ್ಲವು.

ಬ್ರಿಟಿಷ್ ಚಕ್ರಾಧಿಪತ್ಯದಲ್ಲಿರುವ ಮೇರಿ ಎಂಬ ಹೆಸರಿನ ಸ್ತ್ರೀಯರು ಕಿರೀಟಧಾರಣ ಮಹೋತ್ಸವಕಾಲದಲ್ಲಿ ಮೇರಿ ಚಕ್ರವರ್ತಿನಿಯವರಿಗೆ ಬಹುಮಾನವನ್ನು ಕೊಡಲು ೧೨೫೫೦೦ ರೂ. ಗಳ ಚಂದಾ ಕೂಡಿಸಿರುವರು.

ಈಚೆಗೆ ಇಂಗ್ಲೆಂಡಿನಲ್ಲೂ, ಅಮೇರಿಕಾದಲ್ಲೂ ಹೆಂಗುಸರು ಚುಟ್ಟವನ್ನು ಸೇದುವುದು ವಿಪರೀತವಾಗಿರುವುದು. ಹೋದವರ್ಷ ಇಂಗ್ಲೆಂಡಿನ ಒಂದು ಕಂಪೆನಿಯವರು ಹೆಂಗುಸರಿಗಾಗಿ ೫೦,೫೦,೦೦,೦೦೦ ಚುಟ್ಟಾಗಳನ್ನು ಮಾಡಿಸಿ ಮಾರಿದರು.

ಸೆಂಟ್ರಲ್ ಅಮೇರಿಕಾಕ್ಕೆ ಸೇರಿದ ನಿಕರಾಗ್ವಾ ಎಂಬಲ್ಲಿ ಜನರು ದಂಗೆಯೆದ್ದು ಲಾಲೀಯೋನ್‌ಕೋಟೆಗೆ ಮುತ್ತಿಗೆಯನ್ನು ಹಾಕಿ ಅರಮನೆಯನ್ನು ಮತ್ತೆ ಕೆಲಕಟ್ಟಡಗಳನ್ನು ಹಾಳುಮಾಡಿದರು. ಈ ಕಲಹದಲ್ಲಿ ಈವರೆಗೆ ೧೫೦ ಜನರು ಮಡಿದಿರುವರು.

ಲಂಡನ್ನಿನಲ್ಲಿ ನಡೆಯುವ ಕಿರೀಟಧಾರಣಮಹೋತ್ಸವ ಸಮಯದಲ್ಲಿ ಕ್ರಿಸ್ಟಲ್ ಅರಮನೆಯಲ್ಲಿ ಭರತಖಂಡದ ವಿಷಯವನ್ನು ಕುರಿತು ಆಗಾಖಾನ್ ರವರು ಮಹಮ್ಮದೀಯರ ಪರವಾಗಿಯೂ, ಗುಪ್ತರವರು ಹಿಂದೂಗಳಪರವಾಗಿಯೂ, ಆಂಡ್ರು ಫ್ರೇಜರ್‌ರವರು ಇಂಗ್ಲೀಷರ ಪರವಾಗಿಯೂ ಭಾಷಣಗಳನ್ನು ಮಾಡುವರು.

ಆಸ್ಟ್ರೇಲಿಯಾ ದೇಶದಲ್ಲಿ ಅನಾಥರಾದ ಮಕ್ಕಳು ಸಂಸಾರಿಗಳ ಪೋಷಣೆಗೊಳಪಡಿಸಲ್ಪಡುವುದರಿಂದ ಈ ದೇಶದಲ್ಲಿರುವಂತೆ ಅನಾಥಾಲಯಗಳು ಅಲ್ಲಿಲ್ಲವು. ಸಂಸಾರಿಗಳು ಅನಾಥರನ್ನು ೧೪ ವರ್ಷಕಾಲ ಇಟ್ಟುಕೊಂಡು ಪೋಷಿಸಬೇಕಾಗಿರುವುದು. ಇದಕ್ಕಾಗಿ ಅವರಿಗೆ ಸರ್ಕಾರದವರು ಏನಾದರೂ ದ್ರವ್ಯ ಸಹಾಯವನ್ನು ಮಾಡುವರು.

ಸ್ಪೇನ್ ರಾಜ್ಯದ ದೊರೆಗಳು ಬೇಸಾಯಸಂಬಂಧಕವಾದ ಮಹಾಸಭೆಯು ಮುಕ್ತಾಯದ ದಿವಸ ಬೇಸಾಯವನ್ನು ಕುರಿತು ಒಂದು ಘನವಾದುಪನ್ಯಾಸವನ್ನು ಮಾಡಿ ಜನರ ಬಾಳ್ವಿಕೆಗೆ ಬೇಸಾಯವೇ ಮೂಲಾಧಾರವೆಂದು ಹೇಳಿದುದಲ್ಲದೆ ತಮ್ಮ ರಾಜ್ಯದ ಬೇಸಾಯಾಭಿವೃದ್ಧಿಗಾಗಿ ಪ್ರಯತ್ನಪಡಲು ತಮಗೆ ಕುತೂಹಲ ವಿರುವುದೆಂದು ತಿಳುಹಿದರು.

ಒಂದು ದೇಶದಿಂದ ಸಮಾಚಾರವನ್ನು ಕಳುಹುವುದಕ್ಕಾಗಿ ಭೂಮಿಯಮೇಲೂ, ನೀರಿನಮೇಲೂ ತಂತಿಗಳು ಹಾಕಲ್ಪಟ್ಟಿರುವವಷ್ಟೆ. ಸಮಾಚಾರವು ಭೂಮಿಯಮೇಲೆ ಹಾಕಿರುವ ತಂತಿಗಳ ಮೂಲಕ ೧ ನಿಮಿಷದಲ್ಲಿ ೧೬,೦೦೦ ಮೈಲಿಗಳ ದೂರಹೋಗುವುದು. ಆದರೆ ನೀರಿನಮೇಲಿರುವ ತಂತಿಗಳ ಮೂಲಕ ೧ ನಿಮಿಷದಲ್ಲಿ ೯೦೦೦ ಮೈಲಿಗಳುಮಾತ್ರ ಹೋಗುವುದು.

ಕಳೆದ ತಾ॥ ೨೩ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೧೯೬೩ ಜನರಿಗೆ ಪ್ಲೇಗು ರೋಗವು ತಗಲಿ ೧೯೧೩ ಜನರು ಸತ್ತರು ಇದರಲ್ಲಿ—ಬೊಂಬಾಯಾಧಿಪತ್ಯದಲ್ಲಿ ೬೦೧; ಬಂಗಾಳದಲ್ಲಿ ೭೪೯; ಸಂಯುಕ್ತ ಪ್ರಾಂತಗಳಲ್ಲಿ ೭೫೦; ಪಂಜಾಬಿನಲ್ಲಿ ೩೬೯೭; ಬರ್ಮಾದಲ್ಲಿ ೧೬೧ ಮತ್ತು ಮದ್ರಾಸಾಧಿಪತ್ಯದಲ್ಲಿ ೧೩ ಈ ಪ್ರಕಾರವಾಗಿ ಮರಣವಾಗಿರುತ್ತದೆ.

ಜಾರ್ಜ್ ದಂಪತಿಗಳು ಕಳೆದ ತಾ॥ ೯ರಲ್ಲಿ ಭೋಪಾಲಿನ ಬೇಗಂರವರನ್ನು ಅವರ ಕಿರಿ ಮಗನ ಸಮೇತ ಬಕಿಂಗ್ಹಾಂ ಅರಮನೆಗೆ ಬರಮಾಡಿಕೊಂಡು ಅವರಕೂಡ ಕೊಂಚಕಾಲ ವಿನೋದದಿಂದ ಪ್ರಸ್ತಾಪಮಾಡಿ ಕಳುಹಿಸಿಕೊಟ್ಟರು. ಮತ್ತೂ ತಾ॥ ೧೦ ರಲ್ಲಿ ಇಂದೂರಿನ ಮಹಾರಾಜ ದಂಪತಿಗಳನ್ನು ಬರಮಾಡಿಕೊಂಡು ಸಂಭಾಷಣೆಯನ್ನು ಮಾಡಿ ಕಳುಹಿಸಿಕೊಟ್ಟರು.

ಐರೋಪ್ಯ ದೇಶದಲ್ಲಿ ಪ್ರಸಿದ್ಧ ಕವಿಗಳಲ್ಲೊಬ್ಬನಾದ ರಾಬರ್ಟ್ ಬರ್ನ್ಸ್ ಎಂಬಾತನು ತಾನು ಮಾಡಿದ್ದ ಕವಿತ್ವಗಳನ್ನೆಲ್ಲ ೧೭೮೬ ರಲ್ಲಿ ಪುಸ್ತಕರೂಪವಾಗಿ ಮುದ್ರಿಸಿ ಪುಸ್ತಕ ೧ ಕ್ಕೆ ೭। ರೂ. ನಂತೆ ಮಾರುವಲ್ಲಿ ೩೦೦ ರೂ ಮಾತ್ರ ಆದಾಯ ಬಂದಿದ್ದಿತು. ಅದೇ ಪುಸ್ತಕ ಒಂದು ಈಚೆಗೆ ಅಮೇರಿಕಾದಲ್ಲಿ ಹರಾಜುಹಾಕಲ್ಪಟ್ಟಾಗ್ಗೆ ೧೫೭೦೦, ರೂಪಾಯಿಗೆ ವಿಕ್ರಯಿಸಲ್ಪಟ್ಟಿತಂತೆ.

ಅಲಿಘರದಲ್ಲಿ ಸ್ಥಾಪಿಸಲ್ಪಡಬೇಕೆಂದಿರುವ ಮಹಮ್ಮದೀಯರ ಸರ್ವಕಲಾಶಾಲೆಯನ್ನು ಭರತಖಂಡದಲ್ಲಿರುವ ಸರ್ಕಾರಿಯ ೪ ಸರ್ವಕಲಾಶಾಲೆಗಳಂತೆ ಪರಿಗಣಿಸಬೇಕೆಂದು ಇಂಡ್ಯಾ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರುವಲ್ಲಿ, ೨೫ ಲಕ್ಷ ರೂ. ಗಳನ್ನು ಇದರ ಸ್ಥಾಪನೆಗಾಗಿ ಬ್ಯಾಂಕಿನಲ್ಲಿಟ್ಟಲ್ಲಿ ಅರೀತಿ ಪರಿಗಣಿಸುವುದಾಗುತ್ತೆಂದು ಸರ್ಕಾರದವರಪ್ಪಣೆಯನ್ನು ಮಾಡಿರುತ್ತಾರೆ.

ಲಂಡನ್ನಿನಲ್ಲಿ ನಡೆಯುವ ಕಿರೀಟಧಾರಣ ಮಹೋತ್ಸವಕ್ಕೆ ಭರತಖಂಡದಿಂದ ಹೋಗಿರುವ ರಾಜರುಗಳು ಅಲ್ಲಿ ತಾವು ಉಪಯೋಗಿಸುವುದಕ್ಕಾಗಿ ಅಮೋಘವಾದ ಆಭರಣಗಳನ್ನು ಕೂಡ ತೆಗೆದುಕೊಂಡು ಹೋದಲ್ಲಿ ಕಳುವಾಗುತ್ತದೆಂಬ ಭಯದಿಂದ ಭೀಮಾಮಾಡಿ ತರಿಸಿಕೊಂಡರು. ಇವುಗಳಲ್ಲಿ ಕೆಲ ಆಭರಣಗಳು ೧೫೩೫೦೦೦ ರೂ. ಗೂ, ಮತ್ತೆ ಬೇರೆಯವು ೩೦೧೦೦೦ ರೂ. ಯಿಂದ ೮೫೦೦೦೦೦ ರೂ. ವರೆಗೂ ಭೀಮೆ ಮಾಡಲ್ಪಟ್ಟಿದ್ದುವು.

ಇಂಗ್ಲೆಂಡಿನಲ್ಲಿರುವ ಒಂದು ಬೀಸಣಿಗೆಯ ಕಾರ್ಖಾನೆಯವರು ಈ ತಿಂಗಳಲ್ಲಿ ಲಂಡನ್ ಪಟ್ಟಣದಲ್ಲಿ ನಡೆಯುವ ಕಿರೀಟಧಾರಣ ಮಹೋತ್ಸವ ಕಾಲದಲ್ಲಿ ಚಕ್ರವರ್ತಿನಿಯವರಿಗೆ ಬಹುಮಾನವಾಗೊಪ್ಪಿಸಲು ಅಮೋಘವಾದ ಬೀಸಣಿಗೆಯೊಂದನ್ನು ಮಾಡುತ್ತಿರುವರು. ಇಂಗ್ಲೆಂಡಿನ ರಾಣಿಯರುಗಳಿಗೆ ವಿಧವಿಧವಾದ ಬೀಸಣಿಗೆಗಳನ್ನಿಟ್ಟುಕೊಳ್ಳುವ ಅಭಿರುಚಿಯು ವಿಶೇಷವಾಗಿರುವುದು ಹಿಂದೆ ಎಲಿಜಬತ್ ರಾಣಿಯವರಲ್ಲಿ ಬಹುಬೆಲೆ ಬಾಳುವ ೭೩ ಬೀಸಣಿಗೆಗಳಿದ್ದುವು.

ಯೂರೋಪ್ ಖಂಡಕ್ಕೆ ಸೇರಿದ ನಾರ್ವೆ ದೇಶದಲ್ಲಿ ಜನರು ಒಂದು ದಿವಸದಲ್ಲಿ ಎರಡುಮೇಳೆಗಿಂತಲೂ ಹೆಚ್ಚಾಗಿ ಮದ್ಯಪಾನ ಮಾಡಕೂಡದೆಂದೂ, ಇದಕ್ಕಾಗಿ ಒಬ್ಬನು ದಿನ ೧ ಕ್ಕೆ ೩ ಆಣೆಗಿಂತಲೂ, ಅಧಿಕವಾಗಿ ವ್ಯಯ ಮಾಡಕೂಡದೆಂದೂ ಶಾಸನವಿರುವುದಂತೆ. ಇದು ಶ್ಲಾಘ್ಯವಾದುದು. ಇಂಥ ನಿರ್ಬಂಧವು ಭರತಖಂಡದಲ್ಲಿ ಕುಡಿಕತನವು ಹೆಚ್ಚಾಗಿದ್ದು ಜನರು ನಾಶವಾಗುತ್ತಿರುವ ಸ್ಥಲಗಳಲ್ಲಿ ಮಾಡಿದುದೇಯಾದರೆ ಮಹೋಪಕಾರವಾಗಿ ಸಾವಿರಾರು ಕುಟುಂಬಗಳು ಉದ್ಧಾರವಾಗುತ್ತವೆ.

ಭರಮೋಸದ ಪೋಲೀಸ್ ಸಬ್ ಇನ್ಸ್‌ಪೆಕ್ಟರು ಮತ್ತಿಬ್ಬರು ಕಾನಿಸ್ಟೆಬಲುಗಳು ಕಳುವನ್ನು ಮಾಡಿದ್ದವನೊಬ್ಬನನ್ನು ಹಿಡಿದು ಸೆರೆಯಲ್ಲಿಟ್ಟು ಅವನು ಕೃತ್ಯವನ್ನು ಮಾಡಿರುದುಂಟೆಂದು ಅವನೊಪ್ಪಿಕೊಳ್ಳುವಂತೆ ಮಾಡುವ ಪ್ರಯತ್ನದಲ್ಲಿ ಕ್ರೂರಹಿಂಸೆಯನ್ನು ಕೊಟ್ಟುದರಿಂದ ಅಪರಾಧಿಯು ಸತ್ತುಹೋಗಲು, ಸೆಷನ್ಸ್ ಜಡ್ಜರು ಸಬ್ ಇನ್ಸ್‌ಪೆಕ್ಟರಿಗೆ ೫ ವರ್ಷ ಮತ್ತು ಇಬ್ಬರು ಕಾನಿಸ್ಟೆಬಲುಗಳಿಗೆ ೩ ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದ್ದರು. ಇದರ ಮೇಲೆ ಹೈಕೋರ್ಟಿನಲ್ಲಿ ಅಪೀಲಾಗಿದ್ದು ಅಲ್ಲೂ ಕೆಳಕೋರ್ಟಿನ ತೀರ್ಮಾನವೇ ಸ್ಥಿರಗೊಳಿಸಲ್ಪಟ್ಟಿತು.

ಯೂರೋಪಿಗೆ ಸೇರಿದ ತುರ್ಕಿ ರಾಜ್ಯದಲ್ಲಿ ಸೆಟ್‌ಸೋಫಿಯ ಎಂಬ ಪಟ್ಟಣದಲ್ಲಿ ಒಂದು ಮಸೀತಿ ಯಿರುತ್ತದೆ. ಇದರ ದ್ವಾರದ ಬಳಿಗೆ ಬರುತ್ತಲೆ ಬಹು ಸುವಾಸನೆಯು ಬರುವುದು. ಇದಕ್ಕೆ ಕಾರಣವೇನಂದರೆ:—ಈಗ್ಗೆ ೧೦೦೦ ವರುಷದ ಕೆಳಗೆ ಈ ಮಸೀತಿಯು ಕಟ್ಟಲ್ಪಡುವಾಗ್ಗೆ ಗೋಡೆಗಳಿಗುಪಯೋಗಿಸಲ್ಪಟ್ಟಿರುವ ಇಟ್ಟಿಗೆಗಳ ಕೂಡ ಕಸ್ತೂರಿಯು ಮಿಶ್ರಮಾಡಲ್ಪಟ್ಟಿದ್ದಿತಂತೆ. ಒಂದು ಸಾವಿರ ವರುಷವಾದರೂ ವಾಸನೆಯು ಹೋಗದಿರಬೇಕಾದರೆ ಎಂಥ ಉತ್ಕೃಷ್ಟವಾದ ಕಸ್ತೂರಿ ಯುಪಯೋಗಿಸಲ್ಪಟ್ಟಿರಬೇಕು ಮತ್ತೂ ಇದಕ್ಕಾಗಿ ಎಷ್ಟು ಹಣ ವ್ಯಯವಾಗಿರಬೇಕು! ಕಟ್ಟಡಗಳಿಗೂ ಸುವಾಸನೆಯನ್ನು ಕಟ್ಟಬೇಕಾಗಿದ್ದಲ್ಲಿ ಈ ಮಹಮ್ಮದೀಯರಿಗೆ ವಾಸನಾಭಿರುಚಿಯು ಇನ್ನೆಷ್ಟಿರಬಹುದು!

ಡಚ್ ದೇಶದಲ್ಲಿ ಆಕಾಶ ವಿಮಾನವನ್ನು ನಡೆಸುವುದರಲ್ಲಿ ಪ್ರಸಿದ್ಧನಾದ ವ್ಯಾಂಡಿಬಾರ್ಗ್ ಎಂಬಾತನು ಹಾಂಕಾಂಗಿನಲ್ಲಿ ಆಕಾಶ ವಿಮಾನವನ್ನು ನಡಿಸಿ ತೋರಿಸಿ ಕ್ಯಾಂಟನ್ನಿನಲ್ಲಿ ಪ್ರದರ್ಶಿಸುವುದಕ್ಕಾಗಿ ಅಲ್ಲಿಗೆ ಹೋಗಲು ಅಲ್ಲಿನ ಚೈನಾ ಜನರು ಆಕಾಶ ವಿಮಾನದಲ್ಲಿ ಕುಳಿತು ಸಂಚರಿಸುವುದನ್ನೋದಿ ಆ ನಾವಿಕನನ್ನು "ದೆವ್ವ" ಎಂದು ಕರೆದು ಅವನು ಚೈನಾ ರಾಜ್ಯವನ್ನು ಕೂಡಲೆ ಬಿಟ್ಟು ಹೋಗದಿದ್ದರೆ ಕೊಂದುಬಿಡುತ್ತೇವೆಂದು ಹೆದರಿಸಲು, ಆ ನಾವಿಕನು ಆ ಸಾಯಂಕಾಲವೇ ತನ್ನ ವಿಮಾನವನ್ನು ಗಂಟುಕಟ್ಟಿದನು. ಆದರೆ ಅದನ್ನು ಹೊರತಕ್ಕವರ್ಯಾರೂ ಸಿಕ್ಕದೆಹೋಗಲು ಜನರು ಅದನ್ನು ಮುರಿದುದಲ್ಲದೆ ಬೆಂಕಿಯನ್ನು ಹೊತ್ತಿಸಿಬಿಟ್ಟರು. ಆಗ ನಾವಿಕನು ಅಲ್ಲಿ ಒಂದು ನಿಮಿಷವೂ ನಿಲ್ಲದೆ ಪ್ಯಾರಿಸ್ ಪಟ್ಟಣಕ್ಕೋಡಿ ಬಂದುಬಿಟ್ಟನು.

ಇಂಗ್ಲೆಂಡಿನಲ್ಲಿ ಬಿಸಿಲಿನ ತಾಪವು ಸಹಿಸಲಶಕ್ಯವಾಗಿದ್ದು ಈಗ ವಿಪರೀತ ಮಳೆಯು ಸುರಿಯಲಾರಂಭವಾಗಿದೆ. ಲಂಡನ್ನಿನಲ್ಲಿ ಮಳೆಯು ವಿಶೇಷವಾಗಿ ಸುರಿಯುತ್ತಿರುವುದರಿಂದ ನೀರು ಬೀದಿಗಳಲ್ಲಿ ಪ್ರವಾಹದಂತೆ ಹರಿಯುತ್ತಿದೆ. ಎಪ್ಸಂ ಎಂಬಲ್ಲಿ ನಡೆಯುವ ಕುದುರೆಯ ಪಂದ್ಯವನ್ನೋಡಲು ಹಿಂದೆ ಯಾವಾಗಲೂ ಸೇರದಿದ್ದಷ್ಟು ಜನರು ಕೂಡಿದ್ದರು. ಅವರಲ್ಲಿ ೩ ಜನರು ಸಿಡಿಲು ಬಡಿದು ಸತ್ತರು ಮತ್ತೂ ಅನೇಕ ದನಕರುಗಳೂ ಕುದುರೆಗಳೂ ಹತವಾದುವು. ಕಳೆದ ತಾ॥ ೩೧ ರಲ್ಲಿ ೧॥ ಗಂಟೆಯಲ್ಲಿ ೪ ಅಂಗುಲ ಮಳೆಯು ಬಂದಿತು ಮತ್ತೂ ಬಹುದಿನದಿಂದಲೂ ಕಾಣದಿದ್ದಂಥ ಸಿಡಿಲು ಬಡಿದು ೨ ಜನರು ಸತ್ತರು. ಇವರಲ್ಲೊಬ್ಬ ಪೋಲೀಸಿನವನಿದ್ದನು. ಇವಲ್ಲದೆ ಅನೇಕದೊಡ್ಡ ಕಟ್ಟಡಗಳಿಗೂ, ೭ ದೇವಾಲಯಗಳಿಗೂ ಒಂದು ಕಾರಾಗೃಹಕ್ಕೂ ಸಿಡಿಲು ಬಡಿದು ಅವೆಲ್ಲವೂ ಹಾಳಾಗಿರುವುವು.

ಮರಾಕೊ ರಾಜ್ಯವು ಆಫ್ರಿಕಾ ಖಂಡದ ಉತ್ತರ ದಿಕ್ಕಿನಲ್ಲಿರುತ್ತದೆ. ಇದನ್ನಾಳುವ ಸುಲ್ತಾನನು ದುಷ್ಟ ಮಂತ್ರಿಗಳ ಕೈವಶವಾಗಿ ರಾಜ್ಯಭಾರವನ್ನು ಸಮರ್ಥತೆಯಿಂದ ನಿರ್ವಹಿಸಲಶಕ್ತನಾದುದರಿಂದ, ಅಧಿಕಾರಿಗಳುಪಟಳವು ಪ್ರಜೆಗಳಿಗೆ ಹೆಚ್ಚಾಗಿದೆ. ಪ್ರಜೆಗಳು ಇದನ್ನು ಸಹಿಸಲಾರದೆ ಆಗಾಗ್ಗೆ ದಂಗೆಯೇಳುತ್ತಿರುವರು. ಈಗ ರಾಜಧಾನಿಯಾದ ಫೆಜ್ ಪಟ್ಟಣಕ್ಕೆ ದಂಗೆಕೋರರು ಮುತ್ತಿಗೆ ಹಾಕಿರುವರು. ಫ್ರೆಂಚರಿಗೆ ಈ ರಾಜ್ಯದಲ್ಲಿ ಕೆಲ ಸ್ಥಲವು ಸೇರಿರುವುದರಿಂದ ಈ ದಂಗೆಕೋರರ ಸೆರೆಯಲ್ಲಿ ಸಿಕ್ಕಿರುವ ಐರೋಪ್ಯ ಪ್ರಜೆಗಳನ್ನು ಬಿಡಿಸಲೂ, ಸುಲ್ತಾನನಿಗೆ ಸಹಾಯ ಮಾಡಲೂ ತಮ್ಮ ಕಡೆಯ ಸೇನೆಯನ್ನು ಕಳುಹಿಸಿರುವರು. ದಂಗೆಕೋರರು ಫೆಜ್ಜಿಗೆ ಸಮೀಪದಲ್ಲಿರುವ ಬಹು ಫಲವತ್ತಾದ ಲಿಮ್ಯಾ ಡಿಸ್ಟ್ರಿಕ್ಟ ಸ್ಥಳಕ್ಕೆ ಬೆಂಕಿಯನ್ನು ಹೊತ್ತಿಸಿ ನಾಶಮಾಡಿದರು. ಮತ್ತೂ ೮೧ ಜನ ಹೆಂಗುಸರನ್ನೂ ಮಕ್ಕಳನ್ನೂ ಬಹಿರಂಗವಾಗಿ ವಿಕ್ರಯಿಸಿಬಿಟ್ಟರು. ಬ್ರಿಟಿಷರ ಪೋಷಣೆಯೊಳಗಿದ್ದ ಮೂರ್ ಜನರು ಬಹುವಾಗಿ ತೊಂದರೆಯನ್ನು ಪಟ್ಟರು. ಸುಲ್ತಾನನು ಜನರಲ್ ಮೊಯಿನರ್ ರವರು ಬಂದಮೇಲೆ ಧೈರ್ಯದಿಂದ ಕಂಟಕಪ್ರಾಯನಾದ ವಜೀರನನ್ನು ಅಧಿಕಾರದಿಂದ ತೆಗೆದುಬಿಟ್ಟನು. ಅಲ್ಲಿಯ ಸ್ಥಿತಿಯು ಇನ್ನೂ ತಾಮಸಕ್ಕೆ ಬಂದಿಲ್ಲ.

ಫ್ರೆಂಚರಿಗೆ ಸೇರಿದ ಚಂದ್ರನಾಗೂರಿನಲ್ಲಿರುವ ಕಾರಾಗೃಹದಲ್ಲಿ ಬಂಗಾಳದೇಶದ ೨೫ ಜನರೂ, ಮದ್ರಾಸಿನವರು ೭೪ ಜನರೂ ಬಂದಿಗಳಾಗಿರುವರು. ಮತ್ತೂ ಇವರಮೇಲೆ ೫ ಜನ ಕಾವಲಗಾರರಿರುವರು. ಈಗ್ಗೆ ಕೆಲ ದಿನಗಳ ಹಿಂದೆ ಮದ್ರಾಸಿನ ಬಂದಿಯೊಬ್ಬನು ಕಾರಾಗೃಹದ ಹೊರಭಾಗದಲ್ಲಿ ಹೂಗಿಡಗಳಿಗೆ ನೀರನ್ನೆರೆಯುತ್ತಿದ್ದವನು ನದಿಯಿಂದ ಸ್ನಾನಮಾಡಿಕೊಂಡು ಆಮಾರ್ಗವಾಗಿ ಬರುತ್ತಿದ್ದ ಒಬ್ಬ ಕುಲೀನ ಸ್ತ್ರೀಯಮೇಲೆ ಬಿದ್ದು ಅತ್ಯಾಚಾರವನ್ನೆಸಗ ಯತ್ನಿಸಿದ ಸಂಗತಿಯನ್ನು ಮರೆಯಲ್ಲಿದ್ದ ಕಾವಲುಗಾರನು ತಿಳಿದು ಬಂದು ಅವನನ್ನು ಹಿಡಿದು ಅಧಿಕಾರಿಗಳಿಂದ ಶಿಕ್ಷೆಯನ್ನು ಮಾಡಿಸಿದನು. ಇದು ಮದ್ರಾಸಿನ ಬಂದಿಗಳ ಮನಸ್ಸಿಗೆ ಬೇಸರವನ್ನುಂಟುಮಾಡಿದ್ದಿತು. ಕಳೆದ ತಾ॥ ೭೪ ರ ಸಾಯಂಕಾಲ ಕಾವಲುಗಾರರು ಅವರನ್ನು ಕಿರುಮನೆಗಳಲ್ಲಿ ಕೂಡಹಾಕುತ್ತಿರುವಾಗ್ಗೆ, ಆ ಬಂದಿಗಳು ಒಳಗೆಹೋಗಲು ತಂಟೆಯನ್ನು ಮಾಡಿ ಕಾವಲುಗಾರರ ಮೇಲೆಬಿದ್ದು ಅವರವಶದಲ್ಲಿದ್ದ ಸನೀನುಗಳನ್ನು ಕಿತ್ತುಕೊಂಡು ಕಾವಲುಗಾರರಲ್ಲೊಬ್ಬನನ್ನು ಸನೀನಿಂದ ತಿವಿದು ಕೊಂದು ಮುಖ್ಯ ಕಾವಲುಗಾರನನ್ನು ಹಿಡಿದುಕೊಂಡು ಅವನಲ್ಲಿದ್ದ ಕತ್ತಿಯನ್ನೂ ಬೀಗದ ಕೈಗಳ ಗೊಂಚಲನ್ನೂ ಕಿತ್ತುಕೊಳ್ಳಲು ಪ್ರಯತ್ನಿಸುತ್ತಿರುವಾಗ್ಗೆ ಅವನು ಕೂಗಿಕೊಂಡನು. ಬೇರೆಕಡೆ ಊಟಮಾಡುತ್ತಿದ್ದ ಬಂಗಾಳಿಯ ಬಂದಿಗಳೂ ಅಲ್ಲಿಯ ಕೆಲಸಗಾರರೂ ಓಡಿಬಂದು ಅವನನ್ನು ಬಿಡಿಸಿಕೊಂಡು ಕಾವಲುಗಾರನೂ, ಅಧಿಕಾರಿಗಳೂ ಆಯುಧಗಳನ್ನು ತೆಗೆದುಕೊಂಡು ಬರುವವರೆಗೂ ಆ ದಂಗೆಕೋರರಾದ ಬಂದಿಗಳನ್ನು ಭದ್ರವಾಗಿ ಹಿಡಿದುಕೊಂಡಿದ್ದರು. ಆಗ ಕಾರಾಗೃಹದ ಗಾರ್ಡರು ಆ ದಂಗೆಕೋರರನ್ನು ಕುರಿತು ನೀವು ಮುಂದಕ್ಕೆ ಕಾಲನ್ನಿಡದೆ ಈಗ ಶರಣಾಗತರಾಗದಿದ್ದಲ್ಲಿ ನಿಮ್ಮೆಲ್ಲರನ್ನೂ ಗುಂಡಿನಿಂದ ಹೊಡೆದು ಸುಡಿಸಿಬಿಡುತ್ತೇನೆಂದು ಹೇಳಲು ಆ ಬಂದಿಗಳು ಮತ್ತಿಷ್ಟು ರೇಗಿ ಗಾರ್ಡರನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದರು. ಆಗ ಗಾರ್ಡರು ಅವರಗುಂಪಿಗೆ ಗುಂಡನ್ನು ಹೊಡೆದು ಒಬ್ಬನನ್ನು ಕೊಂದು ತನ್ನ ತಲೆಯನ್ನು ತಪ್ಪಿಸಿಕೊಂಡನು. ಅಷ್ಟರಲ್ಲಿ ಸೇನೆಯ ಪೋಲೀಸರು ಈ ವರ್ತಮಾನವನ್ನು ತಿಳಿದು ಆ ಕೂಡಲೇ ಬಂದು ದಂಗೆಕೋರರಮೇಲೆ ತುಪಾಕಿಗಳನ್ನು ಹಾರಿಸಿದರು. ಇದರಿಂದ ಅವರಲ್ಲೊಬ್ಬನಿಗೆ ಪ್ರಾಣ ಪೆಟ್ಟುಬಿದ್ದಿತು, ಮತ್ತೆ ೧೦ ಜನರಿಗೆ ಕೊಂಚಗಾಯವಾಯಿತು. ಅಷ್ಟರಲ್ಲಿ ದಂಗೆಕೋರರು ಹೆದರಿ ಆಯುಧಗಳನ್ನು ಬಿಸಾಡಿ ಶರಣಾಗತರಾದರು. ಬಂಗಾಳಿಯ ಬಂದಿಗಳು ಆ ಕಾಲದಲ್ಲಿ ಧೈರ್ಯದಿಂದ ಸಹಾಯಮಾಡಿದುದಕ್ಕಾಗಿ ಫ್ರೆಂಚ್ ಅಧಿಕಾರಿಗಳು ಅವರ ಕಾರಾಗೃಹವಾಸದವಧಿಯನ್ನು ಕಡಿಮೆಮಾಡುವ ತಾತ್ಪರ್ಯದಲ್ಲಿರುವರು. ದಂಗೆಕೋರರ ವಿಚಾರಣೆಯು ನಡೆಯುತ್ತಿದೆ.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ಗಮನಿಸತಕ್ಕದು.

ಪ. ಪ್ರ.

ಪತ್ರವ್ಯವಹಾರ.

ಬಾಗಲಕೋಟೆಯ ಹವಾಮಾನ ಚನ್ನಾಗಿದ್ದು ರೋಗಾದಿಗಳೇನು ಇಲ್ಲಾ. ಇಲ್ಲಿಗೆ ಕನ್ನಡದಲ್ಲಿ ಅತ್ಯಂತ ಪ್ರಸಿದ್ಧವಾದ ಕೊಣ್ಣೂರಕರ ಸ್ತ್ರೀಮಿಶ್ರಿತಸಂಗೀತ ನಾಟಕಮಂಡಳಿಯು ಬಂದಿರುತ್ತದೆ. ತಾ॥ ೭-೫-೧೯೧೧ನೇ ದಿವಸ ಶ್ರೀ ಬಸವೇಶ್ವರ ನಾಟಕವನ್ನು ಬಹು ಸರಸವಾಗಿ ಶಾಸ್ತ್ರೋಕ್ತರೀತ್ಯಾ ತೋರಿಸಿದ್ದಲ್ಲದೆ, ವೀರಶೈವರಿಗೂ ಇತರ ಎಲ್ಲಾ ಮತಸ್ಥರಿಗೂ ಸದ್ಬೋಧರೂಪವಾದ ಈ ಬಸವೇಶ್ವರ ನಾಟಕವನ್ನು ನೋಡಿದ ಸ್ವಮತ ಪರಮತದ ಜನರೆಲ್ಲಾ ಪುನಹಪುನಃ ಈನಾಟಕವನ್ನೇ ಆಡಬೇಕೆಂದು ಸೂಚಿಸುವುದನ್ನು ನೋಡಿ ಅತ್ಯಾನಂದವಾಗುತ್ತದೆ. ಈ ನಾಟಕ ನೋಡಲಿಕ್ಕೆ ಬಂದ ಸರಕಾರಿ ಅಮಲದಾರರು, ಬ್ರಾಹ್ಮಣರು, ಇತರ ಸಭ್ಯಗೃಹಸ್ಥರು ವಗೈರೆ ಯಾವತ್ತು ಜನರ ಮನಸ್ಸನ್ನಾಕರ್ಷಣ ಮಾಡುವಂಥಾದ್ದಾಗಿತ್ತು. ಕೆಲವು ಬ್ರಾಹ್ಮಣರು ವೀರಶೈವ ಮತದ ದ್ವೇಷಬುದ್ಧಿಯಿಂದ ಮಿ॥ ಕೆಲೆ

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಜೂನ್ ತಾ॥ ೫ ನೇ ಸೋಮವಾರ.

ಬರೋಡಾ ಸಂಸ್ಥಾನವು.

ಈ ಸಂಸ್ಥಾನವನ್ನಾಳತಕ್ಕ ಗಾಯಿಕವಾಡ ಮಹಾರಾಜರವರು ತಮ್ಮ ಪ್ರಜೆಗಳ ಸುಖಸಂಪತ್ತೇ ತಮ್ಮ ಸ್ವಸುಖಸಂಪತ್ತೆಂಬುದನ್ನು ಮೂಲ ಮಂತ್ರವನ್ನಾಗಿಟ್ಟುಕೊಂಡು, ಬಡ ಪ್ರಜೆಗಳು ಹೊಟ್ಟೆಯನ್ನು ಕಟ್ಟಿ ಗಳಿಸಿದ ದುಡ್ಡಿನಿಂದ ಸ್ವೇಚ್ಛಾವಿಹಾರಿಗಳಾಗಿರದೆ, ಪರದೇಶಗಳಲ್ಲಿ ಸಂಚರಿಸಿ ಅಲ್ಲಿಯ ಜನರ ಸುಖಸಂಪತ್ತಿಗೆ ಕಾರಣವಾದ ವಿಷಯಗಳನ್ನೋದಿ ತಿಳಿದುಕೊಂಡು ಬಂದು, ತಮ್ಮ ರಾಜ್ಯದಲ್ಲಿ ವಿದ್ಯೆ ಬೇಸಾಯ, ಕೈಗಾರಿಕೆ ಮೊದಲಾದ ವಿಷಯಗಳನ್ನು ಎಷ್ಟು ಅಭಿವೃದ್ಧಿಗೆ ತಂದಿರುವರೆಂಬುದೂ, ಸಮಾಜದಲ್ಲಿ ಎಂಥ ಸುಧಾರಣೆಯನ್ನು ಮಾಡಿರುವರೆಂಬುದೂ ಮುಂದೆ ಹೇಳುವ ಸಂಗತಿಯಿಂದ ವ್ಯಕ್ತವಾಗುತ್ತವೆ. ೧೯೦೯-೧೦ ರಲ್ಲಿ ಈ ಸಂಸ್ಥಾನದಲ್ಲಿ ಲೋಹಮಾರ್ಗವು ೬೦೦ ಮೈಲಿಯವರೆಗೆ ಹೆಚ್ಚಿಸಲ್ಪಡಬೇಕೆಂದು ನಿರ್ಧರವಾಗಿ ಅಗಲೇ ಕಾರ್ಯಾರಂಭವಾಗಿರುವುದು. ಅಪ್ರಾಪ್ತವಯಸ್ಕ ಬಂದಿಗಳಿಗೆ ವಿದ್ಯಾಬುದ್ಧಿಯನ್ನೂ, ಕಸಬನ್ನೂ ಕಲಿಸುವ ಪದ್ಧತಿಯು ಬಹು ಪ್ರಯೋಜನಕಾರಿಯಾಗಿ ಪರಿಣಮಿಸಿರುವುದು. ಮತ್ತೂ ಪರೀಕ್ಷಾರ್ಥವಾದ ಹೊಲಗಳಲ್ಲಿ ಕೆಲಸ ಮಾಡಲು ಹಚ್ಚಲ್ಪಟ್ಟಂಥ ಬಂದಿಗಳು ಈಗ ಸ್ವತಂತ್ರ ಜನರಾಗಿರುವರಲ್ಲದೆ, ಅದು ಅವರಿಗೆ ಬಹು ಆರೋಗ್ಯಕರವಾಗಿರುವುದು. ೬ ತಾಲ್ಲೂಕುಗಳಲ್ಲಿ ಸಮಾಧಾನವನ್ನು ಮಾಡತಕ್ಕ ಕೋರ್ಟುಗಳು ಸ್ಥಾಪಿಸಲ್ಪಟ್ಟು ೩ನೇ ೨ ಭಾಗದ ವಿವಾದಗಳೆಲ್ಲ ಇವುಗಳ ಮೂಲಕ ಇತ್ಯರ್ಥವಾಗಿ ಈರ್ಷಾಸೂಯೆಯಿಂದ ಪಕ್ಷಗಳೇರ್ಪಡುವುದು ಬಹುಮಟ್ಟಿಗೆ ಕಡಿಮೆಯಾಗಿದೆ. ಪ್ರತಿಯೊಂದು ಮುನಿಸಿಪಾಲಿಟಿಯೂ ಸರ್ಕಾರದವಲಂಬನೆಯಿಲ್ಲದೆ ತನ್ನ ಖರ್ಚಿಗೆ ತಕ್ಕಷ್ಟು ಉತ್ಪತ್ತಿಯನ್ನು ತಾನೇ ಮಾಡಿಕೊಳ್ಳುವಂತೆ ಮಾಡಲ್ಪಟ್ಟಿದೆ. ಮತ್ತೂ ತೆರಿಗೆಯನ್ನು ಸ್ವತಃ ವಿಧಿಸುವ ಅಧಿಕಾರವು ಕೊಡಲ್ಪಟ್ಟು ತನ್ನ ಸ್ವಾತಂತ್ರ್ಯವೂ, ಉತ್ತರವಾದಿತ್ವವೂ ಎಷ್ಟರಮಟ್ಟಿಗಿರುವುದೆಂಬುದು ತಿಳುಹಲ್ಪಟ್ಟಿದೆ. ಈ ಸಂಸ್ಥಾನದ ಪ್ರಾಯಶಃ ಎಲ್ಲ ಗ್ರಾಮಗಳಲ್ಲಿಯೂ ಪಂಚಾಯಿತಿಗಳೇರ್ಪಟ್ಟಿರುತ್ತವೆ. ಇವುಗಳಿಗೆ ಜನರು ತಮ್ಮಲ್ಲಿ ವಿವೇಕಿಗಳಾದವರನ್ನು ಮೆಂಬರುಗಳನ್ನಾಗಿರಿಸಿಕೊಂಡಿರುತ್ತಾರೆ. ಈ ಗ್ರಾಮ ಪಂಚಾಯಿತರಿಗೆ ಗ್ರಾಮದ ಆರೋಗ್ಯವನ್ನೂ, ಬೆಳಕನ್ನೂ, ಮಾರ್ಗಗಳನ್ನೂ, ಕೆರೆಗಳನ್ನೂ, ಬಾವಿಗಳನ್ನೂ ಚೆನ್ನಾಗಿಟ್ಟುಕೊಳ್ಳುವ, ಮನೆ, ಹೊಲ ಮತ್ತೂ ಋಣ ಈ ಸಂಬಂಧವಾದ ೨೫ ರೂಪಾಯಿನೊಳಗಿರುವ ವಿವಾದಗಳನ್ನು ಇತ್ಯರ್ಥಮಾಡುವ, ಮತ್ತೂ ಹೊಡೆಯುವುದು, ಹಿಂಸಿಸುವುದು, ಘಾಂದಲೆಮಾಡುವುದು, ಭಯವನ್ನುಂಟುಮಾಡುವುದು ಮೊದಲಾದ ಅಪರಾಧಕೃತ್ಯಗಳನ್ನು ವಿಚಾರಿಸಿ ಅವರಿಗೆ ಶಿಕ್ಷೆಯನ್ನು ವಿಧಿಸುವ ಅಧಿಕಾರಗಳು ಕೊಡಲ್ಪಟ್ಟಿವೆ. ಇವಲ್ಲದೆ ವಿಶಿಷ್ಟ ಗ್ರಾಮ ಪಂಚಾಯಿತಿಗಳು ಬೇರೆ ಸ್ಥಾಪಿಸಲ್ಪಟ್ಟಿವೆ. ಇವುಗಳಿಗೆ ತಮ್ಮ ಗ್ರಾಮಕ್ಕುಪಯುಕ್ತವಾದ ಕೆಲಸಗಳನ್ನು ಮಾಡಲು ತೆರಿಗೆಯನ್ನು ಹಾಕುವಧಿಕಾರವಿರುತ್ತದೆ. ಇಂಗ್ಲೀಷು ನಮೂನೆ ಮಾದರಿಯ ಕಬ್ಬಿಣದ ನೇಗಲುಗಳೂ, ನೀರಿನ ಯಂತ್ರಗಳೂ, ಕಬ್ಬಿನ ಆಲೆಯ ಯಂತ್ರಗಳೂ ಮುಖ್ಯರಾದ ರೈತರಿಗೆ ಪರೀಕ್ಷಾರ್ಥವಾಗಿ ದುಡ್ಡಿಲ್ಲದೆ ಕೊಡಲ್ಪಟ್ಟಿವೆ. ಅನೇಕ ಸ್ಥಳಗಳಲ್ಲಿ ಬೇಸಾಯಗಾರರ ಸಂಘಗಳು ಸ್ಥಾಪಿತವಾಗಿವೆ. ದೊಡ್ಡ ಪಟ್ಟಣಗಳಲ್ಲೆಲ್ಲ ಮಾದರಿಯ ಹೊಲಗಳು ಮಾಡಲ್ಪಟ್ಟು ಅಲ್ಲಿ ರೈತರ ಮಕ್ಕಳು ಕೆಲಸವನ್ನು ಕಲಿಯುತ್ತಿದ್ದಾರೆ. ಸಕ್ಕರೆ, ಚಾಕಲೆಟ್, ರಸಾಯನ ಮೊದಲಾದ ಕಾರ್ಯಾಲಯಗಳು ಸಮರ್ಪಕವಾಗಿ ನಡೆಯುತ್ತಿವೆ. ಗಾಜಿನ ಕಾರ್ಯಾಲಯವೊಂದು ಹೊಸದಾಗಿ ಸ್ಥಾಪಿತವಾಗಿದೆ. ಬಲವಂತದಿಂದ ಬಾಲ್ಯ ವಿದ್ಯಾಭ್ಯಾಸವನ್ನು ಮಾಡಿಸುವುದೂ, ಮಧ್ಯಮ ಮತ್ತೂ ಪ್ರೌಢವಿದ್ಯಾಭ್ಯಾಸವೂ ಬಹು ತೃಪ್ತಿಕರವಾಗಿ ನಡೆಯುತ್ತಿವೆ. ವಿವಾಹವಾಗತಕ್ಕ ಹೆಣ್ಣುಮಕ್ಕಳ ವಯಸ್ಸು ೧೦ ವರ್ಷಕ್ಕೆ ಕಡಿಮೆ ಇರಕೂಡದೆಂದಿದ್ದುದನ್ನು ತಪ್ಪಿಸಿ ೧೧ ವರ್ಷಕ್ಕೆ ಕಡಿಮೆಯಿರಕೂಡದೆಂದು ತಿದ್ದುಪಾಟು ಮಾಡಲ್ಪಟ್ಟಿದೆ. ಮತ್ತೂ ಬಾಲಕ ಬಾಲಿಕೆಯರು ೪ನೆಯ ತರಗತಿಯವರೆಗೆ ವಿದ್ಯಾಭ್ಯಾಸಂಗ ಮಾಡಿಯೇ ತೀರಬೇಕೆಂಬ ನಿರ್ಬಂಧವಿದೆ. ಇದಕ್ಕಾಗಿ ಹೆಚ್ಚಿಸಬೇಕಾಗಿರುವ ಉಪಾಧ್ಯಾಯರುಗಳ ವೇತನಕ್ಕಾಗಿ ೪೦೦೦೦ ರೂಪಾಯಿಗಳು ಹೆಚ್ಚಾಗಿ ಕೊಡಲ್ಪಟ್ಟಿರುತ್ತವೆ. ಮಕ್ಕಳು ಒಂದೇಸಮನಾಗಿ ೧೦ ದಿವಸ ಪಾಠಶಾಲೆಗೆ ಬಾರದಿದ್ದಲ್ಲಿ ಅವರ ತಂದೆ ತಾಯಿಗಳು ಅಥವಾ ಪೋಷಕರು ಅರ್ಥದಂಡವನ್ನು ವಿಧಿಸಲ್ಪಡುವರು. ಈಗ ಆ ಅವಧಿಯು ೬ ದಿನಗಳಿಗಿಳಿಸಲ್ಪಟ್ಟಿದೆ. ಲೋಕಲ್ ಬೋರ್ಡಿನವರು ಅನೇಕಗ್ರಾಮಗಳಲ್ಲಿ ಪಾಠಶಾಲೆಗಳನ್ನು ಸ್ಥಾಪಿಸಲು ದುಡ್ಡಿನ ಚೈತನ್ಯವಿಲ್ಲದೆಹೋದುದರಿಂದ, ಅವುಗಳ ಸ್ಥಾಪನೆಗಾಗಿ ಸರ್ಕಾರದವರು ವರ್ಷ ೧ ಕ್ಕೆ ೩೩,೦೩೩ ರೂ.ಗಳನ್ನು ಕೊಡಲಪ್ಪಣೆಮಾಡಿರುತ್ತಾರೆ. ಗಾನ ಮತ್ತೂ ಕುಶಲ ವಿದ್ಯೆಗಳನ್ನು ಕಲಿಸುವ ಕಲಾಭವನವೂ, ಕೆಲಸಗಾರರಿಗಾಗೇರ್ಪಟ್ಟಿರುವ ರಾತ್ರಿಯ ಪಾಠಶಾಲೆಗಳೂ, ಅಮರೇಲಿಯಲ್ಲಿರುವ ಕೈಗಾರಿಕೆಯ ಪಾಠಶಾಲೆಯೂ ಸಮರ್ಪಕವಾಗಿ ನಡೆಯುತ್ತಿವೆ. ಕೈಗಾರಿಕೆಯ ಪಾಠಶಾಲೆಗಳನ್ನು ಇನ್ನೂ ವಿಶೇಷವಾಗಿ ಸ್ಥಾಪಿಸಬೇಕೆಂಬುದು ಮಹಾರಾಜರವರ ತಾತ್ಪರ್ಯವಾಗಿದೆ. ಶ್ರೀಮನ್ಮಹಾರಾಜರವರು ಪುಸ್ತಕ ಭಂಡಾರಗಳನ್ನು ಸ್ಥಾಪಿಸುವುದು ಬಹು ಉಪಯುಕ್ತವಾದುದೆಂದರಿತು, ಅವುಗಳ ಪೋಷಣೆಗಾಗಿ ೩೦,೦೦೦ ರೂ. ಗಳನ್ನು ಕೊಡಲು ವಾಗ್ದಾನ ಮಾಡಿರುತ್ತಾರೆ. ಈಗ ೨೩೩ ಪುಸ್ತಕ ಭಂಡಾರಗಳು ದ್ರವ್ಯಸಹಾಯವನ್ನು ಹೊಂದುತ್ತಿವೆ.

ಗಾಯಿಕವಾಡ ಮಹಾರಾಜರು ತಮ್ಮ ದೇಶೋನ್ನತಿಗೆ ಮುಖ್ಯಾಧಾರಗಳಾದ ಬೇಸಾಯ, ಕೈಗಾರಿಕೆ ವ್ಯಾಪಾರ ಮೊದಲಾದವುಗಳಲ್ಲಿ ಕಾಲಾನುಗುಣ್ಯವಾಗಿ ಸುಧಾರಣೆಯನ್ನು ಮಾಡಬೇಕೆಂಬ ದೃಢಸಂಕಲ್ಪದಿಂದ ಮಾದರಿ ಹೊಲಗಳನ್ನೂ, ಕೈಗಾರಿಕೆಯ ಪಾಠಶಾಲೆಗಳನ್ನೂ, ಕಾರ್ಯಾಲಯಗಳನ್ನೂ ಸ್ಥಾಪಿಸಿರುವರು. ಮತ್ತೂ ರೈತರು, ವರ್ತಕರು ಮೊದಲಾದವರು ಮೇಲ್ಕಂಡ ವಿಷಯಗಳಲ್ಲಿ ನೈಪುಣ್ಯವನ್ನು ಸಂಪಾದಿಸಲು ತಕ್ಕಮಟ್ಟಿಗಾದರೂ ವಿದ್ಯಾವಂತರಾದ ಹೊರತು ಸಾಧ್ಯವಿಲ್ಲವೆಂಬುದರಿಂದಲೇ, ತಮ್ಮ ಸಂಸ್ಥಾನದಲ್ಲಿ ಪ್ರತಿಯೊಬ್ಬ ತಂದೆತಾಯಿಯೂ ತಮ್ಮ ಮಕ್ಕಳಿಗೆ ೪ ನೇ ತರಗತಿಯವರೆಗಾದರೂ ವಿದ್ಯೆಯನ್ನು ಕಲಿಸಲು ತಪ್ಪಿದಲ್ಲಿ ಅರ್ಥದಂಡಕ್ಕೆ ಗುರಿಮಾಡಲ್ಪಡುವರೆಂದು ಒಂದು ನಿರ್ಬಂಧವನ್ನು ಕಲ್ಪಿಸಿರುವರು. ಮತ್ತೂ ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಪ್ರತಿವರ್ಷದಲ್ಲೂ ವ್ಯಯಮಾಡುತ್ತಿರುವರು. ತಮ್ಮ ಪ್ರಜೆಗಳಲ್ಲಿ ಯಾರಾದರೂ ಕಾರ್ಯಾಲಯಗಳನ್ನು ಸ್ಥಾಪಿಸುತ್ತೇವೆಂದರೆ, ಅವರಿಗೆ ತಮ್ಮ ಸರ್ಕಾರದಿಂದ ದ್ರವ್ಯವೊದಲಾದ ಸಹಾಯವನ್ನು ಮಾಡಿಸಿಕೊಡುವರು. ಮುಖ್ಯವಾಗಿ ಅವರಿಗೆ ತಮ್ಮ ಪ್ರಜೆಗಳು ಸರ್ವವಿಧದಲ್ಲೂ ಅಭಿವೃದ್ಧಿಯನ್ನು ಹೊಂದಿ, ತಮ್ಮ ಸಂಸ್ಥಾನವು ಇತರ ದೇಶೀಯ ಸಂಸ್ಥಾನಗಳಿಗೆ ಮಾರ್ಗದರ್ಶಕವಾಗಿರುವಂತೆ ಮಾಡಬೇಕೆಂಬ ಚಿಂತೆಯು ವಿಶೇಷವಾಗಿರುವುದು ಮೇಲ್ಕಂಡ ಅವರ ಕಾರ್ಯಕ್ರಮಗಳಿಂದ ಸ್ಪಷ್ಟವಾಗುತ್ತದೆ. ಸ್ವಕ್ಷೇಮಕ್ಕಿಂತಲೂ ಪ್ರಜಾಕ್ಷೇಮವೇ ಮುಖ್ಯವಾದುದೆಂದು ತ್ರಿಕರಣಶುದ್ಧಿಯಾಗಿ ತಿಳಿದು ಆಚರಿಸುತ್ತಿರುವ ಶ್ರೀಮನ್ ಗಾಯಿಕವಾಡ ಮಹಾರಾಜರನ್ನು ತಮ್ಮ ಪ್ರಭುಗಳನ್ನಾಗಿ ಪಡೆದ ಬರೋಡಾ ಸಂಸ್ಥಾನದ ಪ್ರಜೆಗಳ ಭಾಗ್ಯೋದಯಕ್ಕೆ ಪಾರವಿಲ್ಲ. ಬರೋಡಾ ಮಹಾರಾಜರಿಗಿಂತಲೂ ಮಿಗಿಲಾದ ಪ್ರಜಾಭಿಮಾನವುಳ್ಳ ನಮ್ಮ ಮೈಸೂರ ಶ್ರೀಮನ್ಮಹಾರಾಜರವರು ಬರೋಡಾ ಸಂಸ್ಥಾನದಲ್ಲಿ ಮಾಡಲ್ಪಟ್ಟಿರುವ ಪ್ರಯೋಜನಯುಕ್ತವಾದ ಕಾರ್ಯಕ್ರಮಗಳನ್ನು ತಿಳಿದುಬರಲು ತಮ್ಮ ಅಧಿಕಾರಿಗಳಲ್ಲಿ ಸಮರ್ಥರಾದ ಒಬ್ಬಿಬ್ಬರನ್ನು ಅಲ್ಲಿಗೆ ಕಳುಹಿಸಿಕೊಟ್ಟಲ್ಲಿ ಬಹು ಪ್ರಯೋಜನವಾಗುವುದೆಂದು ನಮಗೆ ತೋರುತ್ತದೆ.

ಒಳದೇಶವೃತ್ತಾಂತ.

ಕಳೆದ ತಾ॥ ೧ ರಲ್ಲಿ ದಿವಾನರು ಉದಕಮಂಡಲದಿಂದ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು. ಇವರು ಪ್ರಾಯಶಃ ಈ ದಿವಸ ರಾಜಧಾನಿಗೆ ಬರುವರು.

ಸರದಾರ್ ಎಂ. ಕಾಂತರಾಜ ಅರಸಿನವರು ಮೈಸೂರ ಡಿ॥ ಡೆಪ್ಯುಟಿ ಕಮಿಷನರ ಉದ್ಯೋಗವನ್ನು ಮ॥ ಸುಬ್ರಹ್ಮಣ್ಯಯ್ಯರ್‌ರವರಿಂದ ಈ ದಿವಸ ಸ್ವೀಕರಿಸಿಕೊಳ್ಳುವವರಾಗಿರುವರೆಂದು ಕೇಳುತ್ತೇವೆ.

ಶ್ರೀಮನ್ಯುವರಾಜ ಮಹಾರಾಣಿಯವರುಗಳ ಸವಾರಿಯು ಕಳೆದ ತಾ॥ ೧ ರ ಮಧ್ಯಾಹ್ನ ೪ ಘಂಟೆಗೆ ರಾಜಧಾನಿಗೆ ಚಿತ್ತೈಸಿತು. ಮರ್ಯಾದಾರ್ಥವಾದ ಗುಂಡುಗಳು ಹಾರಿಸಲ್ಪಟ್ಟುವು.

ರೆವಿನ್ಯೂ ಕಮಿಷನರು ಕಳೆದ ತಾ॥ ೨ ರಲ್ಲಿ ರಾಜಧಾನಿಗೆ ಬಂದು ತಾ॥ ೪ ರಲ್ಲಿ ನಂಜನಗೂಡಿಗೆ ದಯಮಾಡಿಸಿದರು. ಮತ್ತೂ ವರ್ಧಂತ್ಯುತ್ಸವಕ್ಕಾಗಿ ಈಹೊತ್ತು ಅಥವಾ ನಾಳೆ ದಿವಸ ರಾಜಧಾನಿಗೆ ಹಿಂತಿರುಗಿ ಬರುವರು.

ಬೆಂಗಳೂರ ಕೆಂಪಾಂಬುಧಿಯ ಕೆರೆಯಲ್ಲಿ ಕಳೆದ ತಾ॥ ೨೯ರಲ್ಲಿ ೧೬ ವರ್ಷ ವಯಸ್ಸಿನ ಸುಂದರ ಮೊದಲಿ ಎಂಬುವನು ಮತ್ತೆ ಮೂವರು ಹುಡುಗರಕೂಡ ಈಜುತ್ತಿರುವಾಗ್ಗೆ ನೀರಿನೊಳಗೆ ಮುಳುಗಿ ಸತ್ತುಹೋದನು.

ಚೀಫ್ ಇಂಜನೀರ ಅಸಿಸ್ಟೆಂಟರಾದ ಮ॥ ಎಂ. ಸಿ. ಸಿಂಗಾರವೇಲು ಮೊದಲಿಯಾರರು ಉದ್ಯೋಗದಿಂದ ನಿವೃತ್ತಿಗೊಳಿಸಲ್ಪಟ್ಟಿದ್ದಾರೆ. ಇವರು ಕಳೆದ ೩೪ ವರ್ಷಗಳಿಂದಲೂ ಈ ಮರಮಹತ್ ಶಾಖೆಯಲ್ಲಿ ಕೆಲಸವನ್ನು ಮಾಡಿರುತ್ತಾರೆ.

ಕಳೆದ ತಾ॥ ೨ ನೇ ಶುಕ್ರವಾರ ಶ್ರೀಮದಿಂದಿಯಾ ಚಕ್ರವರ್ತಿಯವರ ಜನ್ಮದಿನವಾದುದರಿಂದ ಸಂಸ್ಥಾನದ ಎಲ್ಲ ಕೋರ್ಟು ಕಚೇರಿಗಳಿಗೂ, ಪಾಠಶಾಲೆಗಳಿಗೂ ರಜವು ಕೊಡಲ್ಪಟ್ಟಿತ್ತು. ಮತ್ತೂ ರಾಜಧಾನಿಯಲ್ಲಿ ೩೧ ಗುಂಡುಗಳು ಹಾರಿಸಲ್ಪಟ್ಟುವು.

ಕಾನಕಾನಹಳ್ಳಿ ತಾ॥ ನಾಗರಸನಕೋಟೆಯಲ್ಲಿ ಶಾನುಭೋಗ ಸುಬ್ಬಾಯರು ಮತ್ತೆ ಇಬ್ಬರು ೮ ವರ್ಷ ವಯಸ್ಸಿನೊಳಗಿರುವ ಇಬ್ಬರು ಹೆಣ್ಣುಮಕ್ಕಳಿಗೆ ಕೆಲ ದಿವಸಗಳ ಕೆಳಗೆ ವಿವಾಹವನ್ನು ಮಾಡಿದ ಅಪರಾಧಕ್ಕಾಗಿ ಇಬ್ಬರಿಗೆ ೧೫-೧೫ ರೂ., ಮತ್ತೊಬ್ಬನಿಗೆ ೧೦ರೂ. ಈಪ್ರಕಾರ ಅರ್ಥದಂಡವು ಬೆಂಗಳೂರ ಡಿ॥ಮ್ಯಾಜಿಸ್ಟ್ರೇಟರಿಂದ ವಿಧಿಸಲ್ಪಟ್ಟಿತು.

ಈ ತಾ॥ ೭ ರಲ್ಲಿ ನಡೆಯುವ ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವಕ್ಕಾಗಿ ರಾಜಧಾನಿಗೆ ಬರತಕ್ಕ ಭರತಖಂಡದ ಅತಿಥಿಗಳನ್ನು ಸತ್ಕರಿಸಲು ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟರಿಯಟ್ಟಿನ ರೆಜಿಸ್ಟ್ರಾರಾದ ಮ॥ ಬಿ. ನಾರಾಯಣಸ್ವಾಮಯ್ಯಂಗಾರ್, ಬಿ. ಎ., ಬಿ. ಎಲ್., ರವರು ನೇಮಿಸಲ್ಪಟ್ಟಿರುತ್ತಾರೆ. ಅತಿಥಿಗಳಾಗಿ ಬರತಕ್ಕ ದೊಡ್ಡಮನುಷ್ಯರು ಬಿಡಾರ ಮೊದಲಾದ ವಿಚಾರದಲ್ಲಿ ಅವರಿಗೆ ಬರೆದು ತಿಳಿಸಿಕೊಳ್ಳಬಹುದು.

ಬೆಂಗಳೂರಲ್ಲಿ ಮೊದಲಿದ್ದು ಈಚೆಗೆ ತೆಗೆದುಹಾಕಲ್ಪಟ್ಟಿರುವ ಡಿಸ್ಟ್ರಿಕ್ಟ ಮತ್ತೂ ಸೆಷನ್ಸ ಕೋರ್ಟು ಪುನಃ ಸ್ಥಾಪಿಸಲ್ಪಡಲು ಸರ್ಕಾರದಪ್ಪಣೆಯಾಗಿರುವುದಾಗಿ ಕೇಳುತ್ತೇವೆ. ಈಗ ರಜದಮೇಲಿರುವ ಮ॥ ಇಜ್‌ಮ ಯವರು ಮರಳಿ ಕೆಲಸಕ್ಕೆ ಬಂದಮೇಲೆ ೩ ನೆಯ ಜಡ್ಜರಾಗಿ ಬದಲು ನೋಡುತ್ತಿರುವ ಮತ್ತೂ ಶಿವಮೊಗ್ಗೆಗೆ ವರ್ಗಾಯಿಸಲ್ಪಟ್ಟಿರುವ ಮ॥ ಪರಮಶಿವಯ್ಯನವರು ಬೆಂಗಳೂರ ಕೋರ್ಟಿಗೆ ವರ್ಗಾಯಿಸಲ್ಪಡಬಹುದೆಂದು ತೋರುತ್ತದೆ.

ಶ್ರವಣಬೆಳಗೊಳದ ಐಶ್ವರ್ಯವಂತಳಾದ ಸಾವಿತ್ರಮ್ಮನೆಂಬ ವಿಧವೆಯು ತನ್ನ ಹೆಸರಿನಲ್ಲಿರುವ ೩೨,೦೦೦ ರೂ. ಗಳ ಮೈಸೂರ ಸರ್ಕಾರಿಯ ಪತ್ರವು ತನ್ನಿಂದ ತನ್ನ ದತ್ತುಮಗನಾದ ಧರಣಯ್ಯನ ಹೆಸರಿಗೆ ವರ್ಗಾಯಿಸಲ್ಪಟ್ಟಿರುವಂತೆ ಫೋರ್ಜರಿ ಮಾಡಲ್ಪಟ್ಟಿರುತ್ತದೆಯಾದುದರಿಂದ, ಆ ಪತ್ರದ ಮೊಬಲಗನ್ನು ಧರಣಯ್ಯನಿಗೆ ಕೊಡಕೂಡದೆಂದು ಕಂಟ್ರೋಲರಿಗೆ ಬರೆದಿದ್ದುದರ ಮೇಲೆ ಆ ಪತ್ರವು ಧರಣಯ್ಯನ ಹೆಸರಿಗೆ ಬರೆದಿರುವುದರ ನಿಜಾಂಶವನ್ನು ತಿಳಿಯುವ ಬಗೆಗೆ ಹಾಸನದ ಅಸಿಸ್ಟೆಂಟ್ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಯು ನಡೆಯುತ್ತಿರುವುದು. ಈವರೆಗೆ ಧರಣಯ್ಯನ ಕಡೆ ಎರಡು ಸಾಕ್ಷಿಗಳ ವಿಚಾರಣೆಯಾಗಿ ಬರುವ ಜುಲೈ ತಾ॥ ೧೪ ರಲ್ಲಿ ಮುಂದಣವಿಚಾರಣೆಗಿಡಲ್ಪಟ್ಟಿರುವುದು. ಈ ವಿವಾದದ ಫಲಿತಾಂಶದ ವಿಚಾರವಾಗಿ ಜೈನಜನರಲ್ಲಿ ವಿಶೇಷ ಕುತೂಹಲವುಂಟಾಗಿರುತ್ತದೆ.

ರಾಜಧಾನಿಯಲ್ಲಿ ಕಳೆದವಾರ ಪ್ರತಿದಿನಸಾಯಂಕಾಲ ಮಳೆಯಾಗುತ್ತಿದ್ದಿತು. ಆದರೆ ಕಳೆದ ಸೋಮವಾರ ಸಾಯಂಕಾಲ ೧॥ ಅಂಗುಲ ಮಳೆಯಾಗಿ ನೀರು ಬಚ್ಚಲುಗಳಲ್ಲಿ ತುಂಬಿ ಮೇಲುಕ್ಕಿ ಮಾರ್ಗಗಳಲ್ಲಿ ಕಣಕಾಲುದ್ದ ಹರಿಯುತ್ತಿದ್ದಿತು. ಶ್ರೀರಾಮಪೇಟೆಯಲ್ಲಿರುವ ದೊಡ್ಡ ಬಚ್ಚಲಿನಲ್ಲಿ ನೀರು ತುಂಬಿ ಕಾಲುವೆಯಂತೆ ಹರಿಯುತ್ತಿರುವಾಗ್ಗೆ ಅಂಗಡಿಯಲ್ಲಿ ಏನನ್ನೋ ಕೊಂಡುಕೊಳ್ಳಲು ಹೋಗಿದ್ದ ೧೧ ವರ್ಷದ ಒಬ್ಬ ಕುಂಬಾರ ಹುಡುಗನು ಅಂಗಡಿಯಿಂದಿಳಿದು ಬರುವಾಗ್ಗೆ ಕಾಲುಜಾರಿ ಬಚ್ಚಲ ನೀರಿಗೆ ಬಿದ್ದು ಕೊಚ್ಚಿಕೊಂಡು ಹೋದನು. ಅವನನ್ನು ಹಿಡಿದುಕೊಳ್ಳ ಯತ್ನಿಸಿದವನು ನೀರಿನ ಸೆಳೆತಕ್ಕೆ ಭಯಪಟ್ಟು ಹುಡುಗನನ್ನು ಬಿಟ್ಟುಬಿಟ್ಟು ಮೇಲಕ್ಕೆ ಬಂದುಬಿಟ್ಟನು. ಆ ಹುಡುಗನ ಶವವು ಆ ಬಚ್ಚಲಿನಲ್ಲೇ ಕೊಚ್ಚಿಹೋಗಿ ಅದು ದೊಡ್ಡಕೆರೆಯೊಳಗೆ ಸಂಗಮವಾಗುವ ಸ್ಥಳದಲ್ಲಿ ಬಿದ್ದಿದ್ದುದು ಮಾರನೆಯ ಬೆಳಗ್ಗೆ ತಡಕುವಾಗ್ಗೆ ದೊರಕಿತು. ಮುನಿಸಿಪಾಲಿಟಿಯವರು ಜನಸಂದಣಿಯಿರುವ ಸ್ಥಳದಲ್ಲಿ ಅಷ್ಟು ದೊಡ್ಡ ಬಚ್ಚಲಿನ ಮೇಲ್ಭಾಗವನ್ನು ಮುಚ್ಚಿಸದೆ ಹಾಗೆಯೇ ಬಿಟ್ಟಿರುವುದರಿಂದ ಇಂಥ ಅನರ್ಥಕ್ಕೆ ಕಾರಣವಾಗಿರುವುದು.

ವರ್ತಮಾನ ಸಂಗ್ರಹ.

ಒಬ್ಬ ಮನುಷ್ಯನ ಬೆರಳುಗಳ ಉಗುರುಗಳು ಜಾಗ್ರತೆ ಬೆಳೆದಲ್ಲಿ ಅದು ಆ ಮನುಷ್ಯನು ಒಳ್ಳೇ ಆರೋಗ್ಯಸ್ಥಿತಿಯಲ್ಲಿರುವನೆಂಬುದಕ್ಕೆ ಚಿನ್ಹೆಯಾಗಿದೆಯಂತೆ.

ಫ್ರಾನ್ಸು ದೇಶದ ಒಂದು ಹಳ್ಳಿಯಲ್ಲಿ ಕೆಲ ದಿನಗಳ ಕೆಳಗೆ ಒಬ್ಬ ಬಡ ಮುದುಕಿಯು ಸತ್ತುಹೋದಳು. ಅವಳ ಹಾಸಿಗೆಯನ್ನು ಶೋಧಿಸುವಲ್ಲಿ ೬೫೦೦೦ ರೂ. ಗಳು ದೊರಕಿದವಂತೆ.

ವಿಲಾಯಿತಿಯಲ್ಲಿ ೨೧ ವರ್ಷ ವಯಸ್ಸಿನೊಬ್ಬ ತರುಣನು ೭ ಅಡಿ ಮತ್ತು ೬॥ ಅಂಗುಲ ಎತ್ತರವಿರುವನು. ಇವನಷ್ಟು ಎತ್ತರವಾದ ಮನುಷ್ಯನು ವಿಲಾಯಿತಿಯಲ್ಲಿ ಬೇರೊಬ್ಬನಿಲ್ಲವು.

ಬ್ರಿಟಿಷ್ ಚಕ್ರಾಧಿಪತ್ಯದಲ್ಲಿರುವ ಮೇರಿ ಎಂಬ ಹೆಸರಿನ ಸ್ತ್ರೀಯರು ಕಿರೀಟಧಾರಣ ಮಹೋತ್ಸವಕಾಲದಲ್ಲಿ ಮೇರಿ ಚಕ್ರವರ್ತಿನಿಯವರಿಗೆ ಬಹುಮಾನವನ್ನು ಕೊಡಲು ೧೩೪೪೦೦ ರೂ. ಗಳ ಚಂದಾ ಕೂಡಿಸಿರುವರು.

ಈಚೆಗೆ ಇಂಗ್ಲೆಂಡಿನಲ್ಲೂ, ಅಮೇರಿಕಾದಲ್ಲೂ ಹೆಂಗಸರು ಚುಟ್ಟವನ್ನು ಸೇದುವುದು ವಿಪರೀತವಾಗಿರುವುದು. ಹೋದವರ್ಷ ಇಂಗ್ಲೆಂಡಿನ ಒಂದು ಕಂಪೆನಿಯವರು ಹೆಂಗಸರಿಗಾಗಿ ೫೦,೦೦೦,೦೦೦ ಚುಟ್ಟಾಗಳನ್ನು ಮಾಡಿಸಿ ಮಾರಿದರು.

ಸೆಂಟ್ರಲ್ ಅಮೇರಿಕಾಕ್ಕೆ ಸೇರಿದ ನಿಕರಾಗ್ವಾ ಎಂಬಲ್ಲಿ ಜನರು ದಂಗೆಯೆದ್ದು ಲಾಲೋಮಕೋಟೆಗೆ ಮುತ್ತಿಗೆಯನ್ನು ಹಾಕಿ ಅರಮನೆಯನ್ನು ಮತ್ತೆ ಕೆಲಕಟ್ಟಡಗಳನ್ನು ಹಾಳುಮಾಡಿದರು. ಈ ಕಲಹದಲ್ಲಿ ಈವರೆಗೆ ೧೫೦ ಜನರು ಮಡಿದಿರುವರು.

ಲಂಡನ್ನಿನಲ್ಲಿ ನಡೆಯುವ ಕಿರೀಟಧಾರಣಮಹೋತ್ಸವ ಸಮಯದಲ್ಲಿ ಕ್ರಿಸ್ಟಲ್ ಅರಮನೆಯಲ್ಲಿ ಭರತಖಂಡದ ವಿಷಯವನ್ನು ಕುರಿತು ಆಗಾಖಾನ್ ರವರು ಮಹಮ್ಮದೀಯರ ಪರವಾಗಿಯೂ, ಗುಪ್ತರವರು ಹಿಂದೂಗಳಪರವಾಗಿಯೂ, ಆಂಡ್ರ್ಯು ಫ್ರೇಜರ್‌ರವರು ಇಂಗ್ಲೀಷರ ಪರವಾಗಿಯೂ ಭಾಷಣಗಳನ್ನು ಮಾಡುವರು.

ಆಸ್ಟ್ರೇಲಿಯಾ ದೇಶದಲ್ಲಿ ಅನಾಥರಾದ ಮಕ್ಕಳು ಸಂಸಾರಿಗಳ ಪೋಷಣೆಗೊಳಪಡಿಸಲ್ಪಡುವುದರಿಂದ ಈ ದೇಶದಲ್ಲಿರುವಂತೆ ಅನಾಥಾಲಯಗಳು ಅಲ್ಲಿಲ್ಲವು. ಸಂಸಾರಿಗಳು ಅನಾಥರನ್ನು ೧೪ ವರ್ಷಕಾಲ ಇಟ್ಟುಕೊಂಡು ಪೋಷಿಸಬೇಕಾಗಿರುವುದು. ಇದಕ್ಕಾಗಿ ಅವರಿಗೆ ಸರ್ಕಾರದವರು ಏನಾದರೂ ದ್ರವ್ಯಸಹಾಯವನ್ನು ಮಾಡುವರು.

ಸ್ಪೇನ್ ರಾಜ್ಯದ ದೊರೆಗಳು ಬೇಸಾಯನಿಮಿತ್ತಕವಾದ ಮಹಾಸಭೆಯು ಮುಕ್ತಾಯದ ದಿವಸ ಬೇಸಾಯವನ್ನು ಕುರಿತು ಒಂದು ಘನವಾದುಪನ್ಯಾಸವನ್ನು ಮಾಡಿ ಜನರ ಬಾಳ್ವಿಕೆಗೆ ಬೇಸಾಯವೇ ಮೂಲಾಧಾರವೆಂದು ಹೇಳಿದುದಲ್ಲದೆ ತಮ್ಮ ರಾಜ್ಯದ ಬೇಸಾಯಾಭಿವೃದ್ಧಿಗಾಗಿ ಪಾಟುಪಡಲು ತಮಗೆ ಕುತೂಹಲ ವಿರುವುದೆಂದು ತಿಳುಹಿದರು.

ಒಂದು ದೇಶದಿಂದ ಸಮಾಚಾರವನ್ನು ಕಳುಹುವುದಕ್ಕಾಗಿ ಭೂಮಿಯಮೇಲೂ, ನೀರಿನಮೇಲೂ ತಂತಿಗಳು ಹಾಕಲ್ಪಟ್ಟಿರುವವಷ್ಟೆ. ಸಮಾಚಾರವು ಭೂಮಿಯಮೇಲೆ ಹಾಕಿರುವ ತಂತಿಗಳ ಮೂಲಕ ೧ ನಿಮಿಷದಲ್ಲಿ ೧೫,೦೦೦ ಮೈಲಿಗಳ ದೂರಹೋಗುವುದು. ಆದರೆ ನೀರಿನಮೇಲಿರುವ ತಂತಿಗಳ ಮೂಲಕ ೧ ನಿಮಿಷದಲ್ಲಿ ೯೦೦೦ ಮೈಲಿಗಳುಮಾತ್ರ ಹೋಗುವುದು.

ಕಳೆದ ತಾ॥ ೨೭ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೧೯೩೩ ಜನರಿಗೆ ಪ್ಲೇಗು ರೋಗವು ತಗಲಿ ೧೧೯೩ ಜನರು ಸತ್ತರು. ಇದರಲ್ಲಿ—ಬೊಂಬಾಯಾಧಿಪತ್ಯದಲ್ಲಿ ೩೦೧; ಬಂಗಾಳಾದಲ್ಲಿ ೨೯೯; ಸಂಯುಕ್ತ ಪ್ರಾಂತಗಳಲ್ಲಿ ೨೫೦; ಪಂಜಾಬಿನಲ್ಲಿ ೩೯೭; ಬರ್ಮಾದಲ್ಲಿ ೧೩೧ ಮತ್ತು ಮದ್ರಾಸಾಧಿಪತ್ಯದಲ್ಲಿ ೧೩ ಈ ಪ್ರಕಾರವಾಗಿ ಮರಣವಾಗಿರುತ್ತದೆ.

ಜಾರ್ಜ್ ದಂಪತಿಗಳು ಕಳೆದ ತಾ॥ ೯ರಲ್ಲಿ ಭೂಪಾಲಿನ ಬೇಗಂರವರನ್ನು ಅವರ ಕಿರೀ ಮಗನ ಸಮೇತ ಬಕಿಂಗ್ಹ್ಯಾಂ ಅರಮನೆಗೆ ಬರಮಾಡಿಕೊಂಡು ಅವರಕೂಡ ಕೊಂಚಕಾಲ ವಿನೋದದಿಂದ ಪ್ರಸ್ತಾಪಮಾಡಿ ಕಳುಹಿಸಿಕೊಟ್ಟರು. ಮತ್ತೂ ತಾ॥ ೧೦ ರಲ್ಲಿ ಇಂದೂರಿನ ಮಹಾರಾಜ ದಂಪತಿಗಳನ್ನು ಬರಮಾಡಿಕೊಂಡು ಸಂಭಾಷಣೆಯನ್ನು ಮಾಡಿ ಕಳುಹಿಸಿಕೊಟ್ಟರು.

ಐರೋಪ್ಯ ದೇಶದಲ್ಲಿ ಪ್ರಸಿದ್ಧ ಕವಿಗಳಲ್ಲೊಬ್ಬನಾದ ರಾಬರ್ಟ್ ಬರ್ನ್ಸ್ ಎಂಬಾತನು ತಾನು ಮಾಡಿದ್ದ ಕವಿತ್ವಗಳನ್ನೆಲ್ಲ ೧೭೮೬ ರಲ್ಲಿ ಪುಸ್ತಕರೂಪವಾಗಿ ಮುದ್ರಿಸಿ ಪುಸ್ತಕ ೧ ಕ್ಕೆ ೨। ರೂ. ನಂತೆ ಮಾರುವಲ್ಲಿ ೩೦೦ ರೂ ಮಾತ್ರ ಆದಾಯ ಬಂದಿದ್ದಿತು. ಅದೇ ಪುಸ್ತಕ ಒಂದು ಈಚೆಗೆ ಅಮೇರಿಕಾದಲ್ಲಿ ಹರಾಜಾಕಲ್ಪಟ್ಟಾಗ್ಗೆ ೧೩೫೦೦, ರೂಪಾಯಿಗೆ ವಿಕ್ರಯಿಸಲ್ಪಟ್ಟಿತಂತೆ.

ಅಲಿಘರದಲ್ಲಿ ಸ್ಥಾಪಿಸಲ್ಪಡಬೇಕೆಂದಿರುವ ಮಹಮ್ಮದೀಯರ ಸರ್ವಕಲಾಶಾಲೆಯನ್ನು ಭರತಖಂಡದಲ್ಲಿರುವ ಸರ್ಕಾರಿಯ ೪ ಸರ್ವಕಲಾಶಾಲೆಗಳಂತೆ ಪರಿಗಣಿಸಬೇಕೆಂದು ಇಂಡ್ಯಾ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿರುವಲ್ಲಿ, ೨೫ ಲಕ್ಷ ರೂ. ಗಳನ್ನು ಇದರ ಸ್ಥಾಪನೆಗಾಗಿ ಬ್ಯಾಂಕಿನಲ್ಲಿಟ್ಟಲ್ಲಿ ಅರೀತಿ ಪರಿಗಣಿಸುವುದಾಗುತ್ತೆಂದು ಸರ್ಕಾರದವರಪ್ಪಣೆಯನ್ನು ಮಾಡಿರುತ್ತಾರೆ.

ಲಂಡನ್ನಿನಲ್ಲಿ ನಡೆಯುವ ಕಿರೀಟಧಾರಣ ಮಹೋತ್ಸವಕ್ಕೆ ಭರತಖಂಡದಿಂದ ಹೋಗಿರುವ ರಾಜರುಗಳು ಅಲ್ಲಿ ತಾವು ಉಪಯೋಗಿಸುವುದಕ್ಕಾಗಿ ಅಮೋಘವಾದ ಆಭರಣಗಳನ್ನು ಕೂಡ ತೆಗೆದುಕೊಂಡು ಹೋದಲ್ಲಿ ಕಳುವಾಗುತ್ತದೆಂಬ ಭಯದಿಂದ ಭೀಮಾಮಾಡಿ ತರಿಸಿಕೊಂಡರು. ಇವುಗಳಲ್ಲಿ ಕೆಲ ಆಭರಣಗಳು ೧೫೩೫೦೦೦ ರೂ. ಗೂ, ಮತ್ತೆ ಬೇರೆಯವು ೩೦೧೦೦೦೦ ರೂ. ಯಿಂದ ೪೫೦೦೦೦೦ ರೂ. ವರೆಗೂ ಭೀಮೆ ಮಾಡಲ್ಪಟ್ಟಿದ್ದುವು.

ಇಂಗ್ಲೆಂಡಿನಲ್ಲಿರುವ ಒಂದು ಬೀಸಣಿಗೆಯ ಕಾರ್ಯಾಲಯದವರು ಈ ತಿಂಗಳಲ್ಲಿ ಲಂಡನ್ ಪಟ್ಟಣದಲ್ಲಿ ನಡೆಯುವ ಕಿರೀಟಧಾರಣ ಮಹೋತ್ಸವ ಕಾಲದಲ್ಲಿ ಚಕ್ರವರ್ತಿನಿಯವರಿಗೆ ಬಹುಮಾನವಾಗೊಪ್ಪಿಸಲು ಅಮೋಘವಾದ ಬೀಸಣಿಗೆಯೊಂದನ್ನು ಮಾಡುತ್ತಿರುವರು. ಇಂಗ್ಲೆಂಡಿನ ರಾಣಿಯರುಗಳಿಗೆ ವಿಧವಿಧವಾದ ಬೀಸಣಿಗೆಗಳನ್ನಿಟ್ಟುಕೊಳ್ಳುವ ಅಭಿರುಚಿಯು ವಿಶೇಷವಾಗಿರುವುದು. ಹಿಂದೆ ಎಲಿಜಬತ್ ರಾಣಿಯವರಲ್ಲಿ ಬಹುಬೆಲೆ ಬಾಳುವ ೨೩ ಬೀಸಣಿಗೆಗಳಿದ್ದುವು.

ಯೂರೋಪ್ ಖಂಡಕ್ಕೆ ಸೇರಿದ ನಾರ್ವೆ ದೇಶದಲ್ಲಿ ಜನರು ಒಂದು ದಿವಸದಲ್ಲಿ ಎರಡುವೇಳೆಗಿಂತಲೂ ಹೆಚ್ಚಾಗಿ ಮದ್ಯಪಾನ ಮಾಡಕೂಡದೆಂದೂ, ಇದಕ್ಕಾಗಿ ಒಬ್ಬನು ದಿನ ೧ ಕ್ಕೆ ೬ ಆಣೆಗಿಂತಲೂ, ಅಧಿಕವಾಗಿ ವ್ಯಯ ಮಾಡಕೂಡದೆಂದೂ ಶಾಸನವಿರುವುದಂತೆ. ಇದು ಶ್ಲಾಘ್ಯವಾದುದು. ಇಂಥ ನಿರ್ಬಂಧವನ್ನು ಭರತಖಂಡದಲ್ಲಿ ಕುಡಿಕತನವು ಹೆಚ್ಚಾಗಿದ್ದು ಜನರು ನಾಶವಾಗುತ್ತಿರುವ ಸ್ಥಲಗಳಲ್ಲಿ ಮಾಡಿದ್ದುದೇಯಾದರೆ ಮಹೋಪಕಾರವಾಗಿ ಸಾವಿರಾರು ಕುಟುಂಬಗಳು ಉದ್ಧಾರವಾಗುತ್ತವೆ.

ಭರತಖಂಡದ ಪೋಲೀಸ್ ಸಬ್ ಇನ್‌ಸ್ಪೆಕ್ಟರು ಮತ್ತಿಬ್ಬರು ಕಾನೆಸ್ಟಬಲುಗಳು ಕಳುವನ್ನು ಮಾಡಿದ್ದವನೊಬ್ಬನನ್ನು ಹಿಡಿದು ಸೆರೆಯಲ್ಲಿಟ್ಟು ಅವನು ಕೃತ್ಯವನ್ನು ಮಾಡಿದುದುಂಟೆಂದು ಅವನೊಪ್ಪಿಕೊಳ್ಳುವಂತೆ ಮಾಡುವ ಪ್ರಯತ್ನದಲ್ಲಿ ಕ್ರೂರಹಿಂಸೆಯನ್ನು ಕೊಟ್ಟುದರಿಂದ ಅಪರಾಧಿಯು ಸತ್ತುಹೋಗಲು, ಸೆಷನ್ಸು ಜಡ್ಜರು ಸಬ್ ಇನ್‌ಸ್ಪೆಕ್ಟರಿಗೆ ೫ ವರ್ಷ ಮತ್ತು ಇಬ್ಬರು ಕಾನೆಸ್ಟಬಲುಗಳಿಗೆ ೩ ವರ್ಷ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದ್ದರು. ಇದರ ಮೇಲೆ ಹೈಕೋರ್ಟಿನಲ್ಲಪೀಲಾಗಿದ್ದು ಅಲ್ಲೂ ಕೆಳಕೋರ್ಟಿನ ತೀರ್ಮಾನವೇ ಸ್ಥಿರಗೊಳಿಸಲ್ಪಟ್ಟಿತು.

ಯೂರೋಪಿಗೆ ಸೇರಿದ ತುರ್ಕಿ ರಾಜ್ಯದಲ್ಲಿ ಸೆಟ್‌ಸೋಫಿಯ ಎಂಬ ಪಟ್ಟಣದಲ್ಲಿ ಒಂದು ಮಸೀದಿ ಯಿರುತ್ತದೆ. ಇದರ ದ್ವಾರದ ಬಳಿಗೆ ಬರುತ್ತಲೆ ಬಹು ಸುವಾಸನೆಯು ಬರುವುದು. ಇದಕ್ಕೆ ಕಾರಣವೇನಂದರೆ:—ಈಗ್ಗೆ ೧೦೦೦ ವರುಷದ ಕೆಳಗೆ ಈ ಮಸೀದಿಯು ಕಟ್ಟಲ್ಪಡುವಾಗ್ಗೆ ಗೋಡೆಗಳಿಗುಪಯೋಗಿಸಲ್ಪಟ್ಟಿರುವ ಇಟ್ಟಿಗೆಗಳಕೂಡ ಕಸ್ತೂರಿಯು ಮಿಶ್ರಮಾಡಲ್ಪಟ್ಟಿದ್ದಿತಂತೆ. ಒಂದು ಸಾವಿರ ವರುಷವಾದರೂ ವಾಸನೆಯು ಹೋಗದಿರಬೇಕಾದರೆ ಎಂಥ ಉತ್ಕೃಷ್ಟವಾದ ಕಸ್ತೂರಿ ಯುಪಯೋಗಿಸಲ್ಪಟ್ಟಿರಬೇಕು ಮತ್ತೂ ಇದಕ್ಕಾಗಿ ಎಷ್ಟು ಹಣ ವ್ಯಯವಾಗಿರಬೇಕು! ಕಟ್ಟಡಗಳಿಗೂ ಸುವಾಸನೆಯನ್ನು ಕಟ್ಟಬೇಕಾಗಿದ್ದಲ್ಲಿ ಈ ಮಹಮ್ಮದೀಯರಿಗೆ ವಾಸನಾಭಿರುಚಿಯು ಇನ್ನೆಷ್ಟಿರಬಹುದು!

ಡಚ್ ದೇಶದಲ್ಲಿ ಆಕಾಶ ವಿಮಾನವನ್ನು ನಡೆಸುವುದರಲ್ಲಿ ಪ್ರಸಿದ್ಧನಾದ ವ್ಯಾಂಡಿಬಾರ್ಗ ಎಂಬಾತನು ಹಾಂಕಾಂಗಿನಲ್ಲಿ ಆಕಾಶ ವಿಮಾನವನ್ನು ನಡೆಸಿ ತೋರಿಸಿ ಕ್ಯಾಂಟನ್ನಿನಲ್ಲಿ ಪ್ರದರ್ಶಿಸುವುದಕ್ಕಾಗಿ ಅಲ್ಲಿಗೆ ಹೋಗಲು ಅಲ್ಲಿನ ಚೈನಾ ಜನರು ಆಕಾಶ ವಿಮಾನದಲ್ಲಿ ಕುಳಿತು ಸಂಚರಿಸುವುದನ್ನೋಡಿ ಆ ನಾವಿಕನನ್ನು "ಬಿಳಿದೆವ್ವ" ಎಂದು ಕರೆದು ಅವನು ಚೈನಾ ರಾಜ್ಯವನ್ನು ಕೂಡಲೆ ಬಿಟ್ಟು ಹೋಗದಿದ್ದರೆ ಕೊಂದುಬಿಡುತ್ತೇವೆಂದು ಹೆದರಿಸಲು, ಆ ನಾವಿಕನು ಆ ಸಾಯಂಕಾಲವೇ ತನ್ನ ವಿಮಾನವನ್ನು ಗಂಟುಕಟ್ಟಿದನು. ಆದರೆ ಅದನ್ನು ಹೊರತಕ್ಕವರ್ಯಾರೂ ಸಿಕ್ಕದೆಹೋಗಲು ಜನರು ಅದನ್ನು ಮುರಿದುದಲ್ಲದೆ ಬೆಂಕಿಯನ್ನು ಹೊತ್ತಿಸಿಬಿಟ್ಟರು. ಆಗ ನಾವಿಕನು ಅಲ್ಲಿ ಒಂದು ನಿಮಿಷವೂ ನಿಲ್ಲದೆ ಪ್ಯಾರಿಸ್ ಪಟ್ಟಣಕ್ಕೋಡಿ ಬಂದುಬಿಟ್ಟನು.

ಇಂಗ್ಲೆಂಡಿನಲ್ಲಿ ಬಿಸಿಲಿನ ತಾಪವು ಸಹಿಸಲಶಕ್ಯವಾಗಿದ್ದು ಈಗ ವಿಪರೀತ ಮಳೆಯು ಸುರಿಯಲಾರಂಭವಾಗಿದೆ. ಲಂಡನ್ನಿನಲ್ಲಿ ಮಳೆಯು ವಿಶೇಷವಾಗಿ ಸುರಿಯುತ್ತಿರುವುದರಿಂದ ನೀರು ಬೀದಿಗಳಲ್ಲಿ ಪ್ರವಾಹದಂತೆ ಹರಿಯುತ್ತಿದೆ. ಎಪ್ಸಂ ಎಂಬಲ್ಲಿ ನಡೆಯುವ ಕುದುರೆಯ ಪಂದ್ಯವನ್ನೋಡಲು ಹಿಂದೆ ಯಾವಾಗಲೂ ಸೇರದಿದ್ದಷ್ಟು ಜನರು ಕೂಡಿದ್ದರು. ಅವರಲ್ಲಿ ೬ ಜನರು ಸಿಡಿಲು ಬಡಿದು ಸತ್ತರು ಮತ್ತೂ ಅನೇಕ ದನಕರುಗಳೂ ಕುದುರೆಗಳೂ ಹತವಾದುವು. ಕಳೆದ ತಾ॥ ೩೧ ರಲ್ಲಿ ೧॥ ಗಂಟೆಯಲ್ಲಿ ೪ ಅಂಗುಲ ಮಳೆಯು ಬಂದಿತು ಮತ್ತೂ ಬಹುದಿನದಿಂದಲೂ ಕಾಣದಿದ್ದಂಥ ಸಿಡಿಲು ಬಡಿದು ೩ ಜನರು ಸತ್ತರು. ಇವರಲ್ಲೊಬ್ಬ ಪೋಲೀಸಿನವನಿದ್ದನು. ಇವಲ್ಲದೆ ಅನೇಕದೊಡ್ಡ ಕಟ್ಟಡಗಳಿಗೂ, ೨ ದೇವಾಲಯಗಳಿಗೂ ಒಂದು ಕಾರಾಗೃಹಕ್ಕೂ ಸಿಡಿಲು ಬಡಿದು ಅವೆಲ್ಲವೂ ಹಾಳಾಗಿರುವುವು.

ಮರಾಕೊ ರಾಜ್ಯವು ಆಫ್ರಿಕಾ ಖಂಡದ ಉತ್ತರ ದಿಕ್ಕಿನಲ್ಲಿರುತ್ತದೆ. ಇದನ್ನಾಳುವ ಸುಲ್ತಾನನು ದುಷ್ಟ ಮಂತ್ರಿಗಳ ಕೈವಶವಾಗಿ ರಾಜ್ಯಭಾರವನ್ನು ಸಮರ್ಥತೆಯಿಂದ ನಿರ್ವಹಿಸಲಶಕ್ತನಾದುದರಿಂದ, ಅಧಿಕಾರಿಗಳುಪಟಳವು ಪ್ರಜೆಗಳಿಗೆ ಹೆಚ್ಚಾಗಿದೆ. ಪ್ರಜೆಗಳು ಇದನ್ನು ಸಹಿಸಲಾರದೆ ಆಗಾಗ್ಗೆ ದಂಗೆಯೇಳುತ್ತಿರುವರು. ಈಗ ರಾಜಧಾನಿಯಾದ ಫೆಜ್ಜ ಪಟ್ಟಣಕ್ಕೆ ದಂಗೆಕೋರರು ಮುತ್ತಿಗೆ ಹಾಕಿರುವರು. ಫ್ರೆಂಚರಿಗೆ ಆ ರಾಜ್ಯದಲ್ಲಿ ಕೆಲ ಸ್ಥಳವು ಸೇರಿರುವುದರಿಂದ ಆ ದಂಗೆಕೋರರ ಸೆರೆಯಲ್ಲಿ ಸಿಕ್ಕಿರುವ ಐರೋಪ್ಯ ಪ್ರಜೆಗಳನ್ನು ಬಿಡಿಸಲೂ, ಸುಲ್ತಾನನಿಗೆ ಸಹಾಯ ಮಾಡಲೂ ತಮ್ಮ ಕಡೆಯ ಸೇನೆಯನ್ನು ಕಳುಹಿಸಿರುವರು. ದಂಗೆಕೋರರು ಫೆಜ್ಜಿಗೆ ಸಮೀಪದಲ್ಲಿರುವ ಬಹು ಫಲವತ್ತಾದ ಲಿಮ್ಯಾ ಡಿಸ್ಟ್ರಿಕ್ಟ ಸ್ಥಳಕ್ಕೆ ಬೆಂಕಿಯನ್ನು ಹೊತ್ತಿಸಿ ನಾಶಮಾಡಿದರು. ಮತ್ತೂ ೮೧ ಜನ ಹೆಂಗುಸರನ್ನೂ ಮಕ್ಕಳನ್ನೂ ಬಹಿರಂಗವಾಗಿ ವಿಕ್ರಯಿಸಿಬಿಟ್ಟರು. ಬ್ರಿಟಿಷರ ಪೋಷಣೆಯೊಳಗಿದ್ದ ಮೂರ್‌ಜನರು ಬಹುವಾಗಿ ತೊಂದರೆಯನ್ನು ಪಟ್ಟರು. ಸುಲ್ತಾನನು ಜನರಲ್ ಮೊಯಿನರ್ ರವರು ಬಂದಮೇಲೆ ಧೈರ್ಯದಿಂದ ಕಂಟಕಪ್ರಾಯನಾದ ವಜೀರನನ್ನು ಅಧಿಕಾರದಿಂದ ತೆಗೆದುಬಿಟ್ಟನು. ಅಲ್ಲಿಯ ಸ್ಥಿತಿಯು ಇನ್ನೂ ತಾಮಸಕ್ಕೆ ಬಂದಿಲ್ಲ.

ಫ್ರೆಂಚರಿಗೆ ಸೇರಿದ ಚಂದ್ರನಾಗೂರಿನಲ್ಲಿರುವ ಕಾರಾಗೃಹದಲ್ಲಿ ಬಂಗಾಳಾದೇಶದ ೨೫ ಜನರೂ, ಮದ್ರಾಸಿನವರು ೨೪ ಜನರೂ ಬಂದಿಗಳಾಗಿರುವರು. ಮತ್ತೂ ಇವರಮೇಲೆ ೫ ಜನ ಕಾವಲಗಾರರಿರುವರು. ಈಗ್ಗೆ ಕೆಲ ದಿನಗಳ ಹಿಂದೆ ಮದ್ರಾಸಿನ ಬಂದಿಯೊಬ್ಬನು ಕಾರಾಗೃಹದ ಹೊರಭಾಗದಲ್ಲಿ ಹೂಗಿಡಗಳಿಗೆ ನೀರನ್ನೆರೆಯುತ್ತಿದ್ದವನು ನದಿಯಿಂದ ಸ್ನಾನಮಾಡಿಕೊಂಡು ಆಮಾರ್ಗವಾಗಿ ಬರುತ್ತಿದ್ದ ಒಬ್ಬ ಕುಲೀನ ಸ್ತ್ರೀಯಮೇಲೆ ಬಿದ್ದು ಅತ್ಯಾಚಾರವನ್ನಡಿಸ ಯತ್ನಿಸಿದ ಸಂಗತಿಯನ್ನು ಮರೆಯಲ್ಲಿದ್ದ ಕಾವಲುಗಾರನು ತಿಳಿದು ಬಂದು ಅವನನ್ನು ಹಿಡಿದು ಅಧಿಕಾರಿಗಳಿಂದ ಶಿಕ್ಷೆಯನ್ನು ಮಾಡಿಸಿದನು. ಇದು ಮದ್ರಾಸಿನ ಬಂದಿಗಳ ಮನಸ್ಸಿಗೆ ಬೇಸರವನ್ನುಂಟುಮಾಡಿದ್ದಿತು. ಕಳೆದ ತಾ॥ ೨೮ ರ ಸಾಯಂಕಾಲ ಕಾವಲುಗಾರರು ಅವರನ್ನು ಕಿರುಮನೆಗಳಲ್ಲಿ ಕೂಡ ಯತ್ನಿಸಿದಾಗ್ಗೆ, ಆ ಬಂದಿಗಳು ಓಡಿಹೋಗಲು ತಂಟೆಯನ್ನು ಮಾಡಿ ಕಾವಲುಗಾರರ ಮೇಲೆಬಿದ್ದು ಅವರವಶದಲ್ಲಿದ್ದ ಸನೀನುಗಳನ್ನು ಕಿತ್ತುಕೊಂಡು ಕಾವಲುಗಾರರಲ್ಲೊಬ್ಬನನ್ನು ಸನೀನಿಂದ ತಿವಿದು ಕೆಡವಿ ಮುಖ್ಯ ಕಾವಲುಗಾರನನ್ನು ಹಿಡಿದುಕೊಂಡು ಅವನಲ್ಲಿದ್ದ ಕತ್ತಿಯನ್ನೂ ಬೀಗದ ಕೈಗಳ ಗೊಂಚಲನ್ನೂ ಕಿತ್ತುಕೊಳ್ಳಲು ಪ್ರಯತ್ನಿಸುತ್ತಿರುವಾಗ್ಗೆ ಅವನು ಕೂಗಿಕೊಂಡನು. ಬೇರೆಕಡೆ ಊಟಮಾಡುತ್ತಿದ್ದ ಬಂಗಾಳಿಯ ಬಂದಿಗಳೂ ಅಲ್ಲಿಯ ಕೆಲಸಗಾರರೂ ಓಡಿಬಂದು ಅವನನ್ನು ಬಿಡಿಸಿಕೊಂಡು ಕಾವಲುಗಾರರೂ, ಅಧಿಕಾರಿಗಳೂ ಆಯುಧಗಳನ್ನು ತೆಗೆದುಕೊಂಡು ಬರುವವರೆಗೂ ಆ ದಂಗೆಕೋರರಾದ ಬಂದಿಗಳನ್ನು ಭದ್ರವಾಗಿ ಹಿಡಿದುಕೊಂಡಿದ್ದರು. ಆಗ ಕಾರಾಗೃಹದ ಗವರ್ನರು ಆ ದಂಗೆಕೋರರನ್ನು ಕುರಿತು ನೀವು ಮುಂದಕ್ಕೆ ಕಾಲನ್ನಿಡದೆ ಈಗ ಶರಣಾಗತರಾಗದಿದ್ದಲ್ಲಿ ನಿಮ್ಮೆಲ್ಲರನ್ನೂ ಗುಂಡಿನಿಂದ ಹೊಡೆದು ಸುಡಿಸಿಬಿಡುತ್ತೇನೆಂದು ಹೇಳಲು ಆ ಬಂದಿಗಳು ಮತ್ತಿಷ್ಟು ರೇಗಿ ಗವರ್ನರನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದರು. ಆಗ ಗವರ್ನರು ಅವರಗುಂಪಿಗೆ ಗುಂಡನ್ನು ಹೊಡೆದು ಒಬ್ಬನನ್ನು ಕೊಂದು ತನ್ನ ತಲೆಯನ್ನು ತಪ್ಪಿಸಿಕೊಂಡರು. ಅಷ್ಟರಲ್ಲಿ ಸೇನೆಯ ಪೋಲೀಸರು ಈ ವರ್ತಮಾನವನ್ನು ತಿಳಿದು ಆ ಕೂಡಲೇ ಬಂದು ದಂಗೆಕೋರರಮೇಲೆ ತುಪಾಕಿಗಳನ್ನು ಹಾರಿಸಿದರು. ಇದರಿಂದ ಅವರಲ್ಲೊಬ್ಬನಿಗೆ ಪ್ರಾಣ ಪೆಟ್ಟುಬಿದ್ದಿತು, ಮತ್ತೆ ೧೦ ಜನರಿಗೆ ಕೊಂಚಗಾಯವಾಯಿತು. ಅಷ್ಟರಲ್ಲಿ ದಂಗೆಕೋರರು ಬೆದರಿ ಆಯುಧಗಳನ್ನು ಬಿಸಾಡಿ ಶರಣಾಗತರಾದರು. ಬಂಗಾಳಿಯ ಬಂದಿಗಳು ಆ ಕಾಲದಲ್ಲಿ ಧೈರ್ಯದಿಂದ ಸಹಾಯಮಾಡಿದುದಕ್ಕಾಗಿ ಫ್ರೆಂಚ್ ಅಧಿಕಾರಿಗಳು ಅವರ ಕಾರಾಗೃಹವಾಸದವಧಿಯನ್ನು ಕಡಿಮೆಮಾಡುವ ತಾತ್ಪರ್ಯದಲ್ಲಿರುವರು. ದಂಗೆಕೋರರ ವಿಚಾರಣೆಯು ನಡೆಯುತ್ತಿದೆ.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ಗಮನಿಸತಕ್ಕದ್ದು. ಪ. ಪ್ರ.

ಪತ್ರವ್ಯವಹಾರ.

ಬಾಗಲಕೋಟೆಯ ಹವಾಮಾನ ಚನ್ನಾಗಿದ್ದು ರೋಗಾದಿಗಳೇನು ಇಲ್ಲಾ. ಇಲ್ಲಿಗೆ ಕನ್ನಡದಲ್ಲಿ ಅತ್ಯಂತ ಪ್ರಸಿದ್ಧವಾದ ಕೊಣ್ಣೂರಕರ ಸ್ತ್ರೀಮಿಶ್ರಿತಸಂಗೀತ ನಾಟಕಮಂಡಳಿಯು ಬಂದಿರುತ್ತದೆ. ತಾ॥ ೨೨-೫-೧೯೧೧ನೇ ದಿವಸ ಶ್ರೀ ಬಸವೇಶ್ವರ ನಾಟಕವನ್ನು ಬಹು ಸರಸವಾಗಿ ಶಾಸ್ತ್ರೋಕ್ತರೀತ್ಯಾ ತೋರಿಸಿದ್ದಲ್ಲದೆ, ವೀರಶೈವರಿಗೂ ಇತರ ಎಲ್ಲಾ ಮತಸ್ಥರಿಗೂ ಸದ್ಬೋಧರೂಪವಾದ ಈ ಬಸವೇಶ್ವರ ನಾಟಕವನ್ನು ನೋಡಿದ ಸ್ವಮತ ಪರಮತದ ಜನರೆಲ್ಲಾ ಪುನಹಪುನಃ ಈನಾಟಕವನ್ನೇ ಆಡಬೇಕೆಂದು ಸೂಚಿಸುವುದನ್ನು ನೋಡಿ ಅತ್ಯಾನಂದವಾಗುತ್ತದೆ. ಈ ನಾಟಕ ನೋಡಲಿಕ್ಕೆ ಬಂದ ಸರಕಾರಿ ಅಮಲದಾರರು,ಬ್ರಾಹ್ಮಣರು, ಇತರ ಸಭ್ಯಗೃಹಸ್ಥರು ವಗೈರೆ ಯಾವತ್ತೂ ಜನರ ಮನಸ್ಸನ್ನಾಕರ್ಷಣ ಮಾಡುವಂಥಾದ್ದಾಗಿತ್ತು. ಕೆಲವು ಬ್ರಾಹ್ಮಣರು - ವೀರಶೈವ ಮತದ ದ್ವೇಷಬುದ್ಧಿಯುಳ್ಳ ಜನ ಕೆಲ

ಕ್ಟರ್ ಬಾ|| ಬಾ|| ರವರ ಕಡಿಗೆ ಈ ನಾಟಕವನ್ನು ಬಂದಿದಿಸಬೇಕೆಂದು ತಾರುಮಾಡಿದ್ದು ದ್ವೇಷಕ್ಕೆ ಕಾರಣವೇ ಹೊ[illegible] ಅವರಿಗೆ ಈ ನಾಟಕದಿಂದ ಅವಮಾನವೇನೂ ಯಿಲ್ಲ. ಪ್ರತ್ಯಕ್ಷ ನೋಡಿದ ಕೆಲವು ವಕೀಲರು ಇದರಲ್ಲೇನು ದೋಷಾರೋಪಣೆ ಯಿಲ್ಲೆಂದು ಪದೇಪದೇ ಹೇಳುತ್ತಾರೆ. ಹೀಗಿದ್ದು ಪ್ರತ್ಯಕ್ಷ ನೋಡದೆ ಇಲ್ಲದ್ದೊಂದು ವಿಕಲ್ಪ ಮನಸ್ಸಿಗೆ ತಂದು ಸಮಾಜದವರಿಗೂ ಸರಕಾರದವರಿಗೂ ತ್ರಾಸ ಕೊಡುವುದು ದೇಶಬಾಂಧವರಿಗೆ ಸರಿಯಾದ್ದಲ್ಲ. ಕನ್ನಡದಲ್ಲಿ ಇಂಥ ಅತ್ಯುತ್ತಮ ನಾಟಕ ಮಾಡಿದವರಲ್ಲಿ ಇವರೇ ಮೊದಲನೇಯವರೆನ್ನಲಿಕ್ಕೆ ಏನೂ ಸಂದೇಹವಿಲ್ಲ. ಈ ಬಸವೇಶ್ವರ ನಾಟಕ ಸೋಮವಾರ ಗುರುವಾರ ಆಗುತ್ತದೆ. ಆ ದಿವಸ ಥೇಟರಿನಲ್ಲಿ ಜಾಗಾ ಸಹಿತ ಅಡಚಣೆಯಾಗುತ್ತದೆ. ಜನರು ವಿಶೇಷ ಕೊಡುತ್ತಾರೆ.

ಪ್ರೇಕ್ಷಕ.

ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಲಗ್ನಕಾಲದಲ್ಲಿ ಕಾಣಿಕೆಯನ್ನು ಕೊಟ್ಟಿರುವವರ ಹೆಸರು:—

ತಿಪ್ಟೂರಿನ ಮ|| ಹುಂಡೆಕಾರ್ ಸಿದ್ದಪ್ಪನವರಿಂದ ಅವರ ಮಗಳಲಗ್ನದಲ್ಲಿ ...	೧೫-೦-೦
ತಿಪ್ಟೂರಿನ ಮ|| ಬೈಲಪ್ಪನವರಿಂದ ಅವರ ಮಗಳ ಲಗ್ನದಲ್ಲಿ ...	೨-೦-೦
ತಿಪ್ಟೂರಿನ ಮ|| ಗಂಡಿಗೆ ಸುಬ್ಬಣ್ಣನವರಿಂ ಅವರ ಮಗಳ ಲಗ್ನದಲ್ಲಿ ...	೨-೦-೦
ಈಚನೂರು ಮ|| ಗುರುಸಿದ್ದಯ್ಯನವರಿಂದ ಅವರ ಮಗಳ ಲಗ್ನದಲ್ಲಿ ಮ|| ಜಿ. ವಿ. ವೀರಸೆಟ್ಟರ ಮೂಲಕ ...	೧೦-೦-೦
ಒಟ್ಟು ...	೨೯-೦-೦

ಜಿ. ಶಾಂತವೀರಪ್ಪ,
ಸೆಕ್ರೆಟರಿ.

ಶಿವಯೋಗಮಂದಿರ.

ಅಗಡಿಯೊಳಗಿರುವ ಕೊಟ್ರಪ್ಪಾ ಗಾಣಿಗೇರ ಈತನು ತಮ್ಮಂದಿರ ಲಗ್ನಮಾಡಿದ್ದಕ್ಕಾಗಿ ಕಾಣಿಕೆ ರೂ.	೨-೦-೦
ಮಹಾದೇವಪ್ಪಾ ಲಾಟಿ ಸ್ವಂತಮಾಡಿಕೊಂಡದ್ದಕ್ಕಾಗಿ ಕಾಣಿಕೆ	೧-೦-೦
ಶಿದ್ದಪ್ಪಾ ಬಸೆಗಣ್ಣಿ ಇವರು ತಮ್ಮ ತಮ್ಮನ ಲಗ್ನಮಾಡಿದ್ದಕ್ಕಾಗಿ ಕಾಣಿಕೆ	೧-೦-೦
ಮಹಾದೇವಪ್ಪಾ ಗಾಣಿಗೇರ ವೀರಾಪುರ ಇವರು ತಮ್ಮ ಪುತ್ರಿಯ ಲಗ್ನಮಾಡಿದ್ದಕ್ಕಾಗಿ	೦-೮-೦
ಶಿದ್ದಪ್ಪಾ ಗಾಣಿಗೇರ ವೀರಾಪುರ ಇವರು ತಮ್ಮ ಪುತ್ರಿಯ ಲಗ್ನಮಾಡಿದ್ದಕ್ಕಾಗಿ	೦-೮-೦
ರೂ.	೫-೦-೦

ಈ ಪ್ರಕಾರ ಅಯ್ದು ರೂಪಾಯಿಗಳನ್ನು ಶಿವಯೋಗಮಂದಿರಕ್ಕೆ ಕಾಣಿಕೆಯಾಗಿ ಸ್ವಸಂತೋಷದಿಂದ ಕಳಿಸಿದ್ದಾರೆ. ಇಷ್ಟೇಅಲ್ಲ, ಇವರು ಪೂರ್ವದವರು ವೀರಶೈವರಲ್ಲದವರ ಕಡೆಯಿಂದ ಲಗ್ನಮಾಡಿಸುವದನ್ನು ಉಪದೇಶದಿಂದ ತ್ಯಜಿಸಿ ನಮ್ಮ ವೀರಶೈವ ಪದ್ಧತಿಯಂತೆ ದುಂದುವೆಚ್ಚವಿಲ್ಲದೆ ಗಣಾರಾಧನೆ ಮುಂತಾದಕೆಲಸಗಳನ್ನು ಸಾಂಗವಾಗಿಸಾಗಿಸಿ, ಯೋಗ್ಯರೀತಿಯಿಂದ ಕಾರ್ಯಗಳನ್ನು ಜರಗಿಸಿದರು.

ವರ್ಗಣಿದಾರ.

ಕೊಳ್ಳೇಗಾಲ ತಾ|| ಮಧುವನಹಳ್ಳಿಯಲ್ಲಿ ವೀರಶೈವ ಮಹಾಜನರು ಸಭೆಸೇರಿ ನಡಸಿದ ವಿಚಾರವು.

೧೯೧೧ ನೇ ಮೇತಿಂಗಳು ತಾ|| ೫ ರಲ್ಲಿ ಯಜಮಾನರು ಮಲ್ಲಪ್ಪನವರ ಮನೆಯಲ್ಲಿ ಮುಡಿಗುಂಡ ಮಾಂಬಳ್ಳಿ ಕೊಳ್ಳೇಗಾಲ ಸಿದ್ಧರಹಳ್ಳಿ ಇನ್ನೂಮುಂತಾದ ಅನೇಕ ಮಹಾಜನರು ಸಭೆಯನ್ನಲಂಕರಿಸಿದ್ದರು. ಮುಡಿಗುಂಡದಲ್ಲಿ ನಡದ ಸಭೆಯಲ್ಲಿ ನಿರ್ಧರಿಸಿದ್ದವೇಳರಿಗೆ ಮೀಟಿಂಗು ನಡಿಸಲು ಕೆಲವು ಅನಿವಾರ್ಯಗಳ ನಿಮಿತ್ತವಾಗಿ ತಾಮಸವಾಯಿತು. ಅದರೂ ಈದಿವಸಸೇರಿದ ಸಭೆಗೆ ಮ|| ಮಾಂಬಳ್ಳಿ ಚಿಕ್ಕಣ್ಣದೇವರು ಅಧ್ಯಕ್ಷರಾಗಬೇಕೆಂದು ಮಧುವನಹಳ್ಳಿ ಬಿ. ಮಾದಪ್ಪನವರು ಪ್ರಾರ್ಥಿಸಿದ ಮೇಲರಿಗೆ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಅದೇವೇಳರಿಗೆ ಶ್ರೀಮಾನ್ ಚಿಕ್ಕಣ್ಣದೇವರು ಅಗ್ರಾಸನವನ್ನು ವಹಿಸಿದ್ದರು. ಮುಡಿಗುಂಡದ ಎಸ್. ಎಮ್., ಬಾಲಸುಂದರದೇವರು ಯಥನಾಗ್ರಹಿಗ್ರಂಥದಲ್ಲಿ ಕೇಳಿರುವ ವೀರಶೈವಮತಸಂಬಂಧವಾದ ಪ್ರಶ್ನೆಗಳಿಗೆ ಮೆ|| ಪಿ. ಆರ್, ಕರಿಬಸವಶಾಸ್ತ್ರಿಗಳು ಬರೆದಿರುವ ಉತ್ತರಗಳನ್ನು ಸರ್ವರಿಗೂ ತಿಳಿಯುವಂತೆ ವಿಶದವಾಗಿ ಮುಮು[illegible] ಸಭಾಚರಿತ್ರೆಯಿಂದ ಓದಿ ಹೇಳಿದರು. ಮಧುವನಹಳ್ಳಿ ಬಿ. ಮಾದಪ್ಪನವರು ಇದನ್ನು ಪುಷ್ಟೀಕರಿಸಿ ಹೇ[illegible] ಮೆ|| ಮದ್ರಾಸು ರಾಮನಾಥಶಾಸ್ತ್ರಿಗಳು ಎಂಬವರು ಅಂಗ್ಲಭಾಷೆಯಲ್ಲಿ ಬರೆದಿರುವ ವೀರಶೈವಮತಲಕ್ಷಣವನ್ನೋದಿ ಕನ್ನಡದಲ್ಲಿ ತರ್ಜುಮಾ ಮಾಡಿಹೇಳಲು ಸರ್ವರು ಕರತಾಡನ ಮೂಲಕ ಸಂತೋಷವನ್ನು ಸೂಚಿಸಿದರು. ಮುಡಿಗುಂಡದಲ್ಲಿ ನಡದ ಮೀಟಿಂಗಿನಲ್ಲಿ ನಿರ್ಧರವಾಗಿದ್ದಂತೆ ಈ ಕೆಳಗೆಕಂಡಂತೆ ಆಚರಣೆಯಲ್ಲಿ ತರಲ್ಪಟ್ಟಿದೆ.

(೧) ಮುಡುಕುದೊರೆ ಸಭೆಗೆ ಇವಾಗ ಸಹಾಯಮಾಡತಕ್ಕವರಲ್ಲದೆ ಮಿಕ್ಕಾದವರು, ಯಥಾಶಕ್ತಿಯಾಗಿ ಸಹಾಯ ಮಾಡಬೇಕು. (೨) ಸ್ಟಾರ್ ಪತ್ರಿಕೆಯನ್ನು ತರಿಸುತ್ತಾ ಇಧೆ. ಇದರ ರಿಲೀಫ್‌ಫಂಡಿನ ವಿಷಯ ಈ ದಿನ ಅರ್ಧವಟ್ಟಿಗೆ ಚರ್ಚಿತವಾಗಿರೋಣದರಿಂದ ಮುಂದಿನ ತಿಂಗಳು ಮೀಟಿಂಗಿನಲ್ಲಿ ನಿಷ್ಕರ್ಷೆ ಮಾಡಬೇಕು. (೩) ಮುಡಿಗುಂಡದಲ್ಲಿ ಸಂಸ್ಕೃತ ಪಾಠಶಾಲೆಯನ್ನೇರ್ಪಡಿಸಿ, ಅದಕ್ಕಾಗುವ ಸಹಾಯವನ್ನು ಅಲ್ಲಿನ ಮಹಾಜನರೇ ನಡೆಸಬೇಕು. (೪) ದಸ್ತಾವೇಜು ವಗೈರೆಗಳಲ್ಲಿ ಶಾಸ್ತ್ರೀಯವಾಗಿ ಮತಜಾತಿಗಳನ್ನು ಬರೆಸುತ್ತಾ ಇದೆ. (೫) ತಿಂಗಳಿಗೊಂದಾವೃತ್ತಿ ಮೀಟಿಂಗು ನಡೆಸುತ್ತಾಯಿದೆ. (೬) ಪ್ರತಿಮೀಟಿಂಗುಗೂ ಪ್ರತಿಯೊಬ್ಬರಂತೆ ಸತ್ಕಾರ ನಡೆಸುತ್ತಾರೆ. (೭) ಸಭಾಧ್ಯಕ್ಷರು ಮತವಿಷಯವನ್ನು ಸ್ವಮತೀಯರಿಗೆ ಬೋಧಿಸುತ್ತಾರೆ. (೮) ಮುಂದಣ ಮೀಟಿಂಗು ಕೊಳ್ಳೇಗಾಲದ ಶ್ರೀಮಾನ್ ಜೀ. ಪಿ. ಸುಬ್ಬಣ್ಣನವರ ಮನೆಯಲ್ಲಿ ಸೇರತಕ್ಕದ್ದು.

ಈ ದಿವಸ ಮತಸಂಬಂಧವಾಗಿ ಉಪನ್ಯಾಸ ಮಾಡಲ್ಪಟ್ಟ ವಿಷಯಗಳೂ ನಿರ್ಧರಿಸಲ್ಪಟ್ಟ ವಿಷಯಗಳೂ ಮತಕ್ಕೆ ಬಹಳ ಗೌರವಕರವಾದವುಗಳೆಂದು ಶ್ರೀಮಾನ್ ಜಿ. ಪಿ. ಮಲ್ಲಣ್ಣನವರೂ, ಸಂ|| ಶಿವಪ್ಪನವರೂ, ದೊ. ಗು. ಶಿದ್ದಪ್ಪನವರೂ, ಶೆಟ್ಟಪ್ಪನವರೂ, ಗುರುಕಾರ್ ಮಲ್ಲೇದೇವರೂ, ಶಿದ್ಧರಹಳ್ಳಿ ಶಿವಪ್ಪನವರೂ ಇನ್ನೂ ಮುಂತಾದ ಪ್ರಮುಖರು ಸಂತೋಷಸೂಚಕವಾದ ಭಾಷಣಮಾಡಿದ ನಂತರ ಮರ್ಯಾದೆಯೊಡನೆ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಸಭಾ ಭರಕಾಸ್ತಾಯಿತು.

ಬಿ. ಮಾದಪ್ಪ,
ಸಭಾ ಸೆಕ್ರೆಟರಿ ಮಧುವನಹಳ್ಳಿ.

ಬ್ಯಾರಿಸ್ಟರ್ ರುದ್ರಪ್ಪನವರ ವಿವಾಹ ಸಮಾರಂಭವು.

ಈ ಬೆಂಗಳೂರು ಪಟ್ಟಣದಲ್ಲಿ ಮ|| ರಾ|| ಗರಡಿ ರುದ್ರಪ್ಪನವರು, ಬಿ. ಎ, (ಆಕ್ಸಫರ್ಡ್) ಬ್ಯಾರಿಸ್ಟರ್ ಅಟ್‌ಲಾ ಇವರ ಲಗ್ನ ಮಹೋತ್ಸವವು ತಾ|| ೩೧ ನೇ ಮೇ ೧೯೧೧ ಬುಧವಾರ ಶುಭಮುಹೂರ್ತದಲ್ಲಿ ಒಳ್ಳೇ ವಿಜೃಂಭಣೆಯಿಂದ ಜರಗಿತು. ವಧುವು ಇಲ್ಲಿಯ ನಿವಾಸಿಗಳಾದ ಮ|| ರಾ|| ಯಜಮಾನ ಲಿಂಗಣ್ಣ ಸೆಟ್ಟರ ಮಗಳಾದ ಸೌ|| ವಜ್ರಚೂತಾಮುಡಿಕೆ ಹೊನ್ನಮ್ಮನವರು. ಈ ಲಗ್ನವು ಗುಬ್ಬಿಯ ನಿವಾಸಿಗಳಾದ ಶಿವಮೂರ್ತಿ ಕಪ್ಪಣ್ಣ ಶಾಸ್ತ್ರಿಗಳೂ, ಸಿದ್ಧಲಿಂಗಶಾಸ್ತ್ರಿಗಳೂ ಇವರ ಪೌರೋಹಿತ್ಯದಿಂದ ವಿಧ್ಯುಕ್ತವಾಗಿ ನಡಿಸಲ್ಪಟ್ಟಿತು. ಈ ಲಗ್ನ ಸಮಾರಂಭಕ್ಕೆ ಶ್ರೀಮನ್ನಿಸಾರಾಜ ನಿರಂಜನ ಮುರುಘರಾಜೇಂದ್ರ ಜಗದ್ಗುರು ಬೃಹನ್ಮಠ, ಚಿನ್ಮೂಲಾದ್ರಿ ಚಿತ್ರದುರ್ಗ ಮಹಾಸಂಸ್ಥಾನದ ವಂತಿಗೆಯಿಂದ ದಾವಣಗೇರಿಯ ಸಂಸ್ಕೃತ ಪಾಠಶಾಲಾಧ್ಯಾಪಕರಾದ ಶಿವಮೂರ್ತಿ ರಾ|| ಗುರುಮೂರ್ತಿ ಶಾಸ್ತ್ರಿಗಳೂ, ದಾವಣಗೇರಿಯ ತಿರುಕಪ್ಪನವರ ಮಠದ ಶ್ರೀ ಷಡಕ್ಷರಪ್ಪನವರೂ, ಮುಂಬಯಿಯಿಂದ ಮ|| ರಾ|| ಸಾಬೋಜೀ ಗಂಗಾಧರಪ್ಪನವರೂ, ಸಾಂಗಲೀ ಸಂಸ್ಥಾನದಪೈಕಿ ರಬಕವಿಯಿಂದ ಶ್ರೀ|| ಬಾಗೋಜಿ ಮುರಗಯ್ಯನವರೂ, ಜಮಖಂಡಿ ಸಂಸ್ಥಾನದಪೈಕಿ ಬನಹಟ್ಟಿಯಿಂದ ಮ|| ಚಿಕ್ಕೋಡಿ ತಮ್ಮಣ್ಣನವರೂ, ಇದರಂತೆ ಗುಬ್ಬಿಯಿಂದ ಮ|| ರಾ|| ಶಿವರಾತ್ರಪ್ಪನವರೂ, ಮತ್ತು ರಾಣಿಬನ್ನೂರು, ತಿಪಟೂರು, ಪಿರಿಯಾಪಟ್ಟಣ, ಮೈಸೂರು ಮತ್ತು ಮದ್ರಾಸು ಮುಂತಾದ ಸ್ಥಲಗಳಿಂದ ಅನೇಕ ಸಭ್ಯಗೃಹಸ್ಥರೂ ಒಳ್ಳೇ ಪ್ರೀತಿಪುರಸ್ಸರವಾಗಿ ಬಂದು ಲಗ್ನಕಾರ್ಯವನ್ನು ಯಥಾಸಾಂಗವಾಗಿ ನೆರವೇರಿಸಿಕೊಟ್ಟದ್ದಲ್ಲದೆ, ನಿತ್ಯ ೪೦೦-೫೦೦ ಜನರ ಗಣಾರಾಧನೆಯು ತೃಪ್ತಿಕರವಾಗಿ ಸಾಗುತ್ತಿರುವುದು. ಮ|| ರಾ|| ಬ್ಯಾರಿಸ್ಟರ್ ರುದ್ರಪ್ಪನವರು ಸೀಮೆಗೆ ಹೋಗಿ ಬಂದವರಾದುದರಿಂದ ಈ ಕಾರ್ಯಕ್ಕೆ ಬಹುಮಹತ್ತ್ವವು ಬಂದಿತ್ತು. ನಮ್ಮ ವೀರಶೈವ ಜನಾಂಗದವರು ಈ ಕಾರ್ಯದಲ್ಲಿ ಒಳ್ಳೇ ಅಭಿಮಾನದಿಂದಲೂ, ಪ್ರೇಮದಿಂದಲೂ ಮಿಳಿತರಾಗಿ ಸಪಜ್ತಿ ಭೋಜನಾದಿಗಳಿಂದ ಮ|| ರಾ|| ಬ್ಯಾ|| ರುದ್ರಪ್ಪನವರನ್ನು ಸಂತೋಷಗೊಳಿಸಿದರು. ಆ ಲಗ್ನಕಾರ್ಯದ ದಿವಸ ಈ ಸಂಸ್ಥಾನದ ಮಾಜಿ ದಿವಾನರಾದ ನಾಮದಾರ ವಿ.ಪಿ. ಮಾಧವರಾವ್, ಸಿ. ಐ. ಇ. ಯವರೂ, ೧ನೇ ಕೌನ್ಸಿಲರಾದ ನಾಮದಾರ ಕೆ. ಪಿ. ಪುಟ್ಟಣ್ಣ ಸೆಟ್ಟರವರೂ, ೨ ನೇ ಕೌನ್ಸಿಲರಾದ ನಾಮದಾರ್ ಎಚ್. ವಿ. ನಂಜುಂಡಯ್ಯ, ಎಮ್. ಎ., ಎಮ್. ಎಲ್., ರವರೂ, ರಿಟೈರ್ಡ್ ಕೌನ್ಸಿಲರಾದ ನಾಮದಾರ್ ಶ್ರೀನಿವಾಸಯ್ಯಂಗಾರರವರೂ, ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯರಾದ ಮ|| ರಾ|| ಬಾಲಸುಂದರಂ ಅಯ್ಯರ್ ರವರೂ, ಅಸಿಸ್ಟೆಂಟ್ ಸೆಕ್ರೆಟರಿಯವರಾಗಿದ್ದ ಮ|| ರಾ|| ಎಚ್. ರಾಮಯ್ಯನವರೂ, ಚೀಫ್ ಕೆಮಿಕಲ್ ಎಗ್ಸಾಮಿನರಾದ ಡಾ|| ಶ್ರೀನಿವಾಸರಾಯರವರೂ, ಬೆಂಗಳೂರು ಸಬ್ ಜಡ್ಜರಾದ ಮ|| ರಾ|| ಬ್ಯಾರಿಸ್ಟರ್ ನಾಗಪ್ಪನವರೂ, ಮಾಜಿ ಡಿಸ್ಟ್ರಿಕ್ಟ್ ಜಡ್ಜರಾದ ಮ|| ರಾ|| ರಾಮಸ್ವಾಮಯ್ಯರ್ ರವರೂ, ಅಸಿಸ್ಟೆಂಟ್ ಕಮಿಷನರರವರಾದ ಮ|| ರಾ|| ಬಸವಾರಾಧ್ಯರವರೂ ಇವರೇ ಮುಂತಾದ ಅನೇಕ ಗೌರ್ನಮೆಂಟ್ ಅಧಿಕಾರಿಗಳು ದಯಮಾಡಿಸಿ ಈ ಪ್ರೌಢಲಗ್ನದಿಂದ ತಮಗುಂಟಾದ ಸಂತೋಷವನ್ನು ವ್ಯಕ್ತಮಾಡಿ ಸರ್ವರನ್ನೂ ಆನಂದಗೊಳಿಸಿದರು. ಇದಲ್ಲದೆ ಈ ಲಗ್ನಮಹೋತ್ಸವಕ್ಕೆ ಕಾರ್ಯಬಾಹುಲ್ಯದಿಂದ ಬರಲು ಅನುಕೂಲಿಸದೇಯಿದ್ದುದರಿಂದ ಶ್ರೀ|| ನಾಮದಾರ್ ಲಖಮಗೌಡ, ಬಸವಪ್ರಭು ಸರದೇಸಾಯಿ, ವಂಟಮುರಿಯವರೂ, ಡೆಪ್ಯುಟಿ ಕಲೆಕ್ಟರರಾದ ರಾವಬಹದ್ದೂರ್ ಅರಟಾಳ ರುದ್ರಗೌಡ ಸಾಹೇಬರೂ ಮತ್ತು ಸೋಲಾಪುರ ಮುಂತಾದ ಪಟ್ಟಣಗಳ ಮಹಾಶಯರೂ ತಂತಿಮೂಲಕವಾಗಿ ತಮ್ಮ ಅಭಿನಂದನವನ್ನು ವ್ಯಕ್ತಪಡಿಸಿದರು. ಈ ಪ್ರಕಾರವಾಗಿ ಈ ಲಗ್ನ ಸಮಾರಂಭವು ಚೆನ್ನಾಗಿ ನಡೆದುದನ್ನು ಪ್ರತ್ಯಕ್ಷತಃ ನಾನು ಕಂಡು ಇದನ್ನು ತಮಗೆ ತಿಳುಹಿಸಿರುವೆನು. ಲೋಭವಿರಲಿ.

ಒಬ್ಬ ಪ್ರೇಕ್ಷಕ.

ಶ್ರೀಮದ್ವೀರಶೈವ ಮಹಾಸಭೆಯ ನಿರ್ಣಯಪ್ರಕಾರ ಈ ದಿವಸ ಹಂದಿಗನೂರ ಗ್ರಾಮದಲ್ಲಿ ಮಹಾಸಭೆಯ ಸ್ಟಾಂಡಿಂಗ್ ಕಮಿಟಿಯ ಚೇರಮನ್ನರಾದ ರವ್‌ಸಾಹಿಬ್ ಶಾಂತವೀರಪ್ಪಣ್ಣಾ ಮೆಣಸಿಕಾಯಿ ಇವರ ಅಧ್ಯಕ್ಷತೆಯ ಕೆಳಗೆ ಜಾಹೀರ್‌ಸಭೆಗೂಡಿ ಸ್ಥಾಪಿತವಾದ ಧಾರ್ವಾಡ ಜಿಲ್ಲಾಪೈಕಿ ಹಾವೇರಿ ತಾಲ್ಲೂಕು ಕಮಿಟಿ ವಿಷಯವಾಗಿ ಸರ್ವಾನುಮತದಿಂದ ಠರಾಯಿಸಲ್ಪಟ್ಟ ವಿಷಯಗಳು ಕೆಳಗೆ ಬರೆದಪ್ರಕಾರ:—

೧. ಕರ್ಜಗಿ ತಾಲ್ಲೂಕಿನ ಪರವಾಗಿ ಹಾವೇರಿ ಗ್ರಾಮದಲ್ಲಿ ಒಂದು ತಾಲ್ಲೂಕು ಕಮಿಟಿಯು ಸ್ಥಾಪಿಸಲ್ಪಡತಕ್ಕದ್ದು.

೨. ತಾ|| ಕಮಿಟಿಯಲ್ಲಿ ಕೆಳಗೆ ಬರೆದ ಸಭ್ಯಗೃಹಸ್ಥರು ಮೆಂಬರಾಗಿ ಇರತಕ್ಕದ್ದು.

ದೇವಿಹೊಸೂರ: ೧ ದೇವಿಹೊಸೂರ, ೨ ದೇವಗೇರಿ ಎಲ್ಲಾಪುರ-ವಿ|| ಚನ್ನಬಸಪ್ಪಾ ನಂಜಪ್ಪಾ ಕುರಬಗೊಂಡ. ದೇವಿಹೊಸೂರ. ೩ ದೇವಗೇರಿ-ವಿ|| ಲಿಂಗನಗೌಡ್ರು ಹರ್ತಿ ಸಾ|| ಸದರಿ. ೪ ಸೋಮಾಪುರ-ವಿ|| ಬಸಪ್ಪಾ ಕಬ್ಬೂರ ಸಾ|| ಸದರಿ. ೫ ಚಿಂಚಿಹಳ್ಳಿ ವಿ|| ಬಸಲಿಂಗಪ್ಪಾ ಹೋಳಿಕಟ್ಟಿ ಸಾ|| ದೇವಗೇರಿ ೬ ವೆಂಕಟಾಪುರ- ದೊಡ್ಡಮಲ್ಲಪ್ಪಾ ಹೋಳಿಕಟ್ಟಿ ಸಾ|| ಸದರಿ. ೭ ಸಂಗೂರು ೮ ಗವರಾಪುರ, ೯ ಹೊಸಳ್ಳಿ ಮಾ|| ಆಡೂರ, ೧೦ ಆಲದಕಟ್ಟಿ, ೧೧ ವಿಜಾಪುರಿಲಕ್ಮಾಪುರ, ೧೨ ದಿತಗೂರ, ೧೩ ಬಿದರಗಟ್ಟಿ, ೧೪ ತಿಮ್ಮಾಪುರ ಮಾ|| ಆಡೂರ, ೧೫ ನುಚ್ಚಳ್ಳಿ, ೧೬ ನಾಗನೂರ, ೧೭ ಶಂಕ್ರಿಪುರ, ೧೮ ಮಲ್ಲೂರು- ವಿ|| ಮಲ್ಲನಗೌಡಾ ಪಾಟೀಲ ಸಾಕೀನ ಸದರಿ.

(೨) ಕರ್ಜಗಿ: ೧ ಕರ್ಜಗಿ, ೨ ಕೋಳೂರ- ವಿ|| ಚನ್ನಬಸಪ್ಪ ಗುರುಶಿದ್ದಪ್ಪ ಶಿರೂರ ಸಾಕೀನ ಕರ್ಜಗಿ. ೩ ಗಣಜೂರ, ೪ ಬಸವನಕಟ್ಟಿ, ೫ ಮಾಜಾಪುರ-ವಿ|| ಶಿದ್ರಾಮಯ್ಯಾ ಚನ್ನಬಸವಯ್ಯಾ ಕುಲಕರ್ಣಿ ಸಾಕೀನ ಸದರಿ. ೬ ಹಳೇರಿತ್ತಿ, ೭ ರಾಮಾಪುರ, ೮ ಅಗಸನಮಟ್ಟಿ, ೯ ಯಲಗಚ್ಚ, ೧೦ ಚಿಕ್ಕಮುಗದೂರ, ೧೧ ಹಿರೇಮುಗದೂರ-ವಿ|| ವೀರಪ್ಪಾ ಅಯ್ಯಪ್ಪಾ ಸಜ್ಜನರ.

(೩) ಹಾವೇರಿ: ೧ ಹಾವೇರಿ- ವಿ|| ಮದಿವಾಳೆಪ್ಪಾ ಹತ್ತಿ ಸಾ|| ಹಾವೇರಿ. ೨ ಲಕ್ಮಾಪುರ, ೩ ಯತ್ತಿನಹಳ್ಳಿ- ವಿ|| ಸಿದ್ದಪ್ಪಾ ಆನೂರಶೆಟ್ರು ಸಾ|| ಹಾವೇರಿ. ೪ ತೋಟದ ಎಲ್ಲಾಪುರ- ವಿ|| ಮಡಿವಾಳಪ್ಪಾ ವೀರಪ್ಪಾ ಮಾಸೂರ ಸಾ|| ಹಾವೇರಿ. ಜಂಗಮನಕೋಟ, ದೇವಗೇರಿ ಎಲ್ಲಾಪುರ- ವಿ|| ಸಂಗನಬಸಪ್ಪಾ ಚನ್ನಬಸಪ್ಪಾ ಪುಮರಿ ಸಾ|| ಹಾವೇರಿ. ೭ ನೆಲೋಗಲ್ಲ-ವಿ|| ಚನ್ನಪ್ಪಾ ಹಿಂಚಿಗೇರಿ ಸಾ|| ಹಾವೇರಿ. ೮ ಕೆರಕಾಪುರ, ೯ ಹೊಂಬರಡಿ, ೧೦ ಬುಜರೂವ ಕೋಡಿಹಳ್ಳಿ-ವಿ|| ರಾಚಪ್ಪಾ ನೆಲಿವಿಗಿ ಸಾ|| ಹಾವೇರಿ.

(೪) ಕಾಟೇನಹಳ್ಳಿ: ೧ ಕಾಟೇನಹಳ್ಳಿ, ೨ ಅರಬಗೊಂಡ, ೩ ಪರಾಪುರ- ವಿ|| ಮುರಿಗೆಪ್ಪಾ ಕಲ್ಯಾಣಪ್ಪಾ ನೆಲ್ವಿಗಿ ಸಾ|| ಕಾಟೇನಹಳ್ಳಿ. ೪ ಸುರನಹಳ್ಳಿ, ೫ ಕಳ್ಳಿಹಾಳ, ೬ ತರೇದಹಳ್ಳಿ ಮ|| ಕಾಗಿನೆಲ್ಲಿ, ೭ ಖುರ್ದ ಕೋಡಿಹಳ್ಳಿ- ವಿ|| ಮಹಾಲಿಂಗಪ್ಪಾ ಬಸಪ್ಪಾ ನೆಲ್ವಿಗಿ ಸಾ|| ಕಾಟೇನಹಳ್ಳಿ.

(೫) ಹನಮನಹಳ್ಳಿ: ೧ ಹನಮನಹಳ್ಳಿ, ೨ ಕಡಮನಹಳ್ಳಿ- ವಿ|| ಹೊಳಿಯಪ್ಪಾ ಬಸೆಟ್ಟೆಪ್ಪಾ ಗೋವಿ ಸಾ|| ಹನಮನಹಳ್ಳಿ. ೩ ಗಂಜೀನಹಳ್ಳಿ, ೪ ಕಂಗೊಂಡ- ವಿ|| ತಿಪ್ಪಣ್ಣಾ ಮಲ್ಲಿಕಾರ್ಜುನಪ್ಪಾ ಕೊಳ್ಳಿ ಸಾ|| ಸದರಿ. ೫ ಕಲ್ಲೇದೇವರು, ೬ ಕನವಳ್ಳಿ, ೭ ಛಿರಡಿ- ವಿ|| ಪ್ಯಾಟಪ್ಪಾ ಹೊನ್ನಪ್ಪಾ ಹೊನ್ನಪ್ಪನವರ ಸಾ|| ಕಲ್ಲೇದೇವರು. ೮ ಕೊರಗೊಂಡ, ೯ ಬುಡಗಟ್ಟಿ, ೧೦ ತಿಮ್ಮನಹಳ್ಳಿ, ೧೧ [illegible]- ವಿ|| ಚನವೀರಯ್ಯಾ ಹುಲಿಕಾಜ ಸಾ|| ಕಂಗೊಂಡ.

(೬) ಹಂದಿಗನೂರ:— ೧ ಹಂದಿಗನೂರ, ೨ ಹೊಸರಿತ್ತಿ- ಸರದಾರ ಶ್ರೀಮಂತ ಬುಳ್ಳಪ್ಪಾ ಬಸವಂತರಾವ ದೇಸಾಯಿ ಹಂದಿಗನೂರ. ೩ ಚನ್ನೂರು, ೪ ಕೊರಡೂರು, ೫ ಕಿತ್ತೂರು- ವಿ|| ವಿರೂಪಾಕ್ಷಪ್ಪಾ ಸಣ್ಣಬಸಪ್ಪಾ ಕಲಕೋಟಿ ಸಾ|| ಸದರಿ. ೬ ಅಕ್ಕೂರು, ೭ ಮಲ್ಲೂರು- ವಿ|| ಗುರುಶಾಂತಪ್ಪಾ ಶೆಟ್ಟರ ಸಾ|| ಹೊಸರಿತ್ತಿ. ೮ ಕೆಸರಳ್ಳಿ, ೯ ಬಮ್ಮನಗಟ್ಟಿ, ೧೦ ಮೇಲಮರಿ, ೧೧ ಶಿರಮಾಪುರ, ೧೨ ಚಿಕ್ಕನೇಳಿಹಳ್ಳಿ, ೧೩ ಹಿರೇಮಳ್ಳಿಹಳ್ಳಿ, ೧೪ ಮರಡೂರು, ೧೫ ಇಜ್ಜಂಗಿ- ವಿ|| ಮಲ್ಲಪ್ಪಾ ಮೇಲಮರಿ ಸಾ|| ಮೇಲಮರಿ

(೭) ನೆಗಳೂರು: ೧ ನೆಗಳೂರು, ೨ ಕೋಡಬಾಳ- ವಿ|| ಫಕೀರಗೌಡಾ ನುಕಳ ಪಾಟಿಲ ಸಾ|| ನೆಗಳೂರು. ೩ ಮರೋಳ-ಅತಿವಪ್ಪಾಗೌಡಾ ಪೋಲೀಸ್ ಪಾಟೀಲ ಸಾ|| ಸದರಿ ೪ ಹಾಲಗಿ-ವಿ|| ಚನ್ನಪ್ಪಾ ಉಪ್ಪಿನ ಸಾ|| ಬೆಳವಿಗಿ. ೫ ನೀರಲಗಿ ಮ. ಗುತ್ತಲ, ೬ ಗುಡ್ಡದಲಕೊಪ್ಪ-ವಿ|| ಮಲ್ಲನಗೌಡಾ ಕರೇಗೌಡರ ಸಾ|| ಸದರಿ. ೭ ಗುರಲಗೊಂದಿ, ೮ ಮೇವುಂಡಿ-ವಿ|| ಫಕೀರಗೌಡಾ ಈಶ್ವರಗೌಡಾ ಪಾಟೀಲ ಸಾ|| ನೀರಲಗಿ ಮ|| ಗುತ್ತಲ. ೯ ಬೆಳವಿಗಿ, ೧೦ ಕೆರಿಕೊಪ್ಪ- ವಿ|| ಅತಿವಪ್ಪಾ ಅಂಗಡಿ ನೆಗಳೂರ.

(೮) ಹಾವನೂರು: ೧ ಹಾವನೂರು, ೨ ಹಾವಂಶಿ- ವಿ|| ಪಕ್ಕೀರಯ್ಯನವರ ಕರಸ್ಥಳದ ಸಾ|| ಹಾವನೂರು ೩. ಕಾಕೋಲ- ವಿ|| ಗದಿಗೆಯ್ಯನವರು ಕರಸ್ಥಲದ ಸಾ|| ಸದರಿ, ೪ ಹರಳಳ್ಳಿ, ೫ ನರಶಿಪುರ- ಹೊನ್ನಪ್ಪಾ ಗೌಡಾ ಪಾಟೀಲ. ೬ ಕಂಚರಗಟ್ಟಿ- ವಿ|| ಪರಪ್ಪಾ ಚಿಕ್ಕಿ ಸಾ|| ಗುತ್ತಲ ೭ ಹುರಳಿಹಾಳ ಮ. ಜಾವನೂರು- ವಿ|| ಸಂಗಪ್ಪಾ ಬೆಳವಿಗಿ ಸಾ|| ಗುತ್ತಲ. ೮ ಗುತ್ತಲ, ೯ ತಿಮ್ಮಾಪೂರ-ವಿ|| ಚನ್ನಬಸಯ್ಯನವರು ಸ್ವಾಮಿ ಮಠದ ಸಾ|| ಗುತ್ತಲ.

[ಸಶೇಷ]

“ಅಗತ್ಯ ವಿಚಾರ.”

ಬೆಲೆ ೪|| ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ “ಅಗತ್ಯವಿಚಾರ” ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೨ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೬೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡಿಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತೆ !—ವೀರಭದ್ರಪ್ಪಾ ಆರುಬೆರಳಿನ,
ಪೋಸ್ಟ್-ಬಾಗೇವಾಡಿ. ಡಿ|| ಬೆಳಗಾಂವ

೩೦ ಕಥೆಗಳು. ಸಚಿತ್ರ. ೩೧೨ ಪುಟಗಳು.

ಶುಕಸಪ್ತತಿ ಕಥೆಗಳು.

2

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕೀಕ ವ್ಯವಹಾರ ಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವದು. (೩) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದ್ದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತ ವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦. ಅಂಚೆ ಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಮುಂತಾದ ಸುಗಂಧದ್ರವ್ಯಗಳು; ಪ್ಲೇಗು, ಕಾಲರಾ ಮುಂತಾದ ಜಾಡ್ಯವ್ಯಾಧಿಗಳಿಗೆ ಮುಖ್ಯ ಔಷಧಗಳು; ಭಾವನಕ್ಷೆ ಚಿತ್ರಮುದ್ರಪಟಗಳು; ಮೊದಲಾದ ಸಾಮಾನುಗಳು ನಮ್ಮಲ್ಲಿ ದೊರೆಯುತ್ತವೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ:—ವಿಜಯಸೇನಾ ಕಂಪನಿ,
ಬೆಂಗಳೂರು ಸಿಟಿ.

8 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.



ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರಿತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ವೀಷದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಷ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವಕರ, ಮರ್ಚ
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಊದಬತ್ತಿಗಳು.

13

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಡೆನ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹತ್ತಿರ ಮೈಸೂರು.

43

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ತಿಂದ್ದರೆ, ಅಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಷೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಷೆ ೦-೪-೦., ೨೪ ಮಾತ್ರೆ ಸೀಷೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಷೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಷೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಷೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಷೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಷೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತು ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. [illegible]

ಕ್ಟರ್ ಚಾ|| ಬಾ|| ರವರ ಕಡಿಗೆ ಈ ನಾಟಕವನ್ನು ಬಂದಿದಿಲಬೇಕೆಂದು ತಾರುಮಾಡಿದ್ದು ದ್ವೇಷಕ್ಕೆ ಕಾರಣವೇ ಹೊರತು ಅವರಿಗೆ ಈ ನಾಟಕದಿಂದ ಅವಮಾನವೇನೂ ಯಿಲ್ಲ. ಪ್ರತ್ಯಕ್ಷ ನೋಡಿದ ಕೆಲವು ವಕೀಲರು ಇದರಲ್ಲೇನು ದೋಷಾರೋಪಣೆ ಯಿಲ್ಲೆಂದು ಪದೇಪದೇ ಹೇಳುತ್ತಾರೆ. ಹೀಗಿದ್ದು ಪ್ರತ್ಯಕ್ಷ ನೋಡದೆ ಇಲ್ಲದ್ದೊಂದು ವಿಕಲ್ಪ ಮನಸ್ಸಿಗೆ ತಂದು ಸಮಾಜದವರಿಗೂ ಸರಕಾರದವರಿಗೂ ತ್ರಾಸ ಕೊಡುವುದು ದೇಶಬಾಂಧವರಿಗೆ ಸರಿಯಾದ್ದಲ್ಲ. ಕನ್ನಡದಲ್ಲಿ ಇಂಥ ಅತ್ಯುತ್ತಮ ನಾಟಕ ಮಾಡಿದವರಲ್ಲಿ ಇವರೇ ಮೊದಲನೇಯವರೆನ್ನಲಿಕ್ಕೆ ಏನೂ ಸಂದೇಹವಿಲ್ಲ ಈ ಬಸವೇಶ್ವರ ನಾಟಕ ಸೋಮವಾರ ಗುರುವಾರ ಆಗುತ್ತದೆ. ಆ ದಿವಸ ಥೇಟರಿನಲ್ಲಿ ಜಾಗಾಸಹಿತ ಅಡಚಣಿಯಾಗುತ್ತದೆ. ಜನರು ವಿಶೇಷ ಕೂಡುತ್ತಾರೆ.

ಪ್ರೇಕ್ಷಕ.

ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ಲಗ್ನಕಾಲದಲ್ಲಿ ಕಾಣಿಕೆಯನ್ನು ಕೊಟ್ಟಿರುವವರ ಹೆಸರು:—

ತಿಪ್ಟೂರಿನ ಮ|| ಹುಂಡೇಕಾರ್ ಸಿದ್ದಪ್ಪನವರಿಂದ ಅವರ ಮಗಳಲಗ್ನದಲ್ಲಿ ...	೧೫-೦-೦
ತಿಪ್ಟೂರಿನ ಮ|| ಬೈಲಪ್ಪನವರಿಂದ ಅವರ ಮಗಳ ಲಗ್ನದಲ್ಲಿ ...	೨-೦-೦
ತಿಪ್ಟೂರಿನ ಮ|| ಗಂಡಿಗೆ ಸುಬ್ಬಣ್ಣನವರಿಂ ಅವರ ಮಗಳ ಲಗ್ನದಲ್ಲಿ ...	೨-೦-೦
ಈಚನೂರು ಮ|| ಗುರುಸಿದ್ದಯ್ಯನವರಿಂದ ಅವರ ಮಗಳ ಲಗ್ನದಲ್ಲಿ ಮ|| ಜಿ. ವಿ. ವೀರಸೆಟ್ಟರ ಮೂಲಕ ...	೧೦-೦-೦
ಒಟ್ಟು ...	೨೯-೦-೦

ಜಿ. ಶಾಂತವೀರಪ್ಪ,
ಸೆಕ್ರೇಟರಿ.

ಶಿವಯೋಗಮಂದಿರ.

ಅಗಡಿಯೊಳಗಿರುವ ಕೊಟ್ರಪ್ಪಾ ಗಾಣಿಗೇರ ಈತನು ತಮ್ಮಂದಿರ ಲಗ್ನಮಾಡಿದ್ದಕ್ಕಾಗಿ ಕಾಣಿಕೆ ರೂ.	೨-೦-೦
ಮಹಾದೇವಪ್ಪಾ ಲಾಟಿ ಸ್ವಂತಮಾಡಿಕೊಂಡದ್ದಕ್ಕಾಗಿ ಕಾಣಿಕೆ	೧-೦-೦
ಸಿದ್ದಪ್ಪಾ ಬಸೆಗಣ್ಣಿ ಇವರು ತಮ್ಮ ತಮ್ಮನ ಲಗ್ನಮಾಡಿದ್ದಕ್ಕಾಗಿ ಕಾಣಿಕೆ	೧-೦-೦
ಮಹಾದೇವಪ್ಪಾ ಗಾಣಿಗೇರ ವೀರಾಪುರ ಇವರು ತಮ್ಮ ಪುತ್ರಿಯ ಲಗ್ನಮಾಡಿದ್ದಕ್ಕಾಗಿ	೦-೮-೦
ಸಿದ್ದಪ್ಪಾ ಗಾಣಿಗೇರ ವೀರಾಪುರ ಇವರು ತಮ್ಮ ಪುತ್ರಿಯ ಲಗ್ನಮಾಡಿದ್ದಕ್ಕಾಗಿ	೦-೮-೦
ರೂ.	೫-೦-೦

ಈ ಪ್ರಕಾರ ಅಯ್ದು ರೂಪಾಯಿಗಳನ್ನು ಶಿವಯೋಗಮಂದಿರಕ್ಕೆ ಕಾಣಿಕೆಯಾಗಿ ಸ್ವಸಂತೋಷದಿಂದ ಕಳಿಸಿದ್ದಾರೆ. ಇಷ್ಟೇಅಲ್ಲ, ಇವರು ಪೂರ್ವದವರು ವೀರಶೈವರಲ್ಲದವರ ಕಡೆಯಿಂದ ಲಗ್ನಮಾಡಿಸುವದನ್ನು ಉಪದೇಶದಿಂದ ತ್ಯಜಿಸಿ ನಮ್ಮ ವೀರಶೈವ ಪದ್ಧತಿಯಂತೆ ದುಂದುವೆಚ್ಚವಿಲ್ಲದೆ ಗಣಸಮಾರಾಧನೆ ಮುಂತಾದಕೆಲಸಗಳನ್ನು ಸಾಂಗವಾಗಿಸಾಗಿಸಿ, ಯೋಗ್ಯರೀತಿಯಿಂದ ಕಾರ್ಯಗಳನ್ನು ಜರಗಿಸಿದರು.

ವರ್ಗಣಿದಾರ.

ಕೊಳ್ಳೇಗಾಲ ತಾ|| ಮಧುವನಹಳ್ಳಿಯಲ್ಲಿ ವೀರಶೈವ ಮಹಾಜನರು ಸಭೆಸೇರಿ ನಡಸಿದ ವಿಚಾರವು.

೧೯೧೧ ನೇ ಮೇತಿಂಗಳು ತಾ|| ೫ ರಲ್ಲಿ ಯಜಮಾನರು ಮಲ್ಲಪ್ಪನವರ ಮನೆಯಲ್ಲಿ ಮುಡಿಗುಂಡ ಮಾಂಬಳ್ಳಿ ಕೊಳ್ಳೇಗಾಲ ಸಿದ್ಧರಹಳ್ಳಿ ಇನ್ನೂಮುಂತಾದ ಅನೇಕ ಮಹಾಜನರು ಸಭೆಯನ್ನಲಂಕರಿಸಿದ್ದರು. ಮುಡಿಗುಂಡದಲ್ಲಿ ನಡದ ಸಭೆಯಲ್ಲಿ ನಿರ್ಧರಿಸಿದ್ದವೇಳೆಗೆ ಮೀಟಿಂಗು ನಡಿಸಲು ಕೆಲವು ಅನಿವಾರ್ಯಗಳ ನಿಮಿತ್ತವಾಗಿ ತಾಮಸವಾಯಿತು. ಆದರೂ ಈದಿನನಡೆದ ಸಭೆಗೆ ಮ|| ಮಾಂಬಳ್ಳಿ ಚಿಕ್ಕಣ್ಣದೇವರು ಅಧ್ಯಕ್ಷರಾಗಬೇಕೆಂದು ಮಧುವನಹಳ್ಳಿ ಬಿ. ಮಾದಪ್ಪನವರು ಪ್ರಾರ್ಥಿಸಿದ ವೇಳೆಗೆ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಅದೇವೇಳೆಗೆ ಶ್ರೀಮಾನ್ ಚಿಕ್ಕಣ್ಣದೇವರು ಅಗ್ರಾಸನವನ್ನು ವಹಿಸಿದ್ದರು. ಮುಡಿಗುಂಡದ ಎಸ್. ಎಮ್., ಬಾಲಸುಂದರದೇವರು ಯಥನಾಗ್ರಸಿಗ್ರಂಥದಲ್ಲಿ ಕೇಳಿರುವ ವೀರಶೈವಮತಸಂಬಂಧವಾದ ಪ್ರಶ್ನೆಗಳಿಗೆ ಬಿ|| ಪಿ. ಆರ್, ಕರಿಬಸವಶಾಸ್ತ್ರಿಗಳು ಬರೆದಿರುವ ಉತ್ತರಗಳನ್ನು ಸರ್ವರಿಗೂ ತಿಳಿಯುವಂತೆ ವಿಶದವಾಗಿ ಮುಡುಕುಡದೊರೆ ಸಭಾಚರಿತ್ರೆಯಿಂದ ಓದಿ ಹೇಳಿದರು. ಮಧುವನಹಳ್ಳಿ ಬಿ. ಮಾದಪ್ಪನವರು ಇದನ್ನು ಪುಷ್ಟೀಕರಿಸಿ ಹೇಳಿದ್ದಲ್ಲದೆ ಮ|| ಮದ್ರಾಸು ರಾಜನಾಥಶಾಸ್ತ್ರಿಗಳು ಎಂಬವರು ಆಂಗ್ಲಭಾಷೆಯಲ್ಲಿ ಬರೆದಿರುವ ವೀರಶೈವಮತಲಕ್ಷಣವನ್ನೋದಿ ಕನ್ನಡದಲ್ಲಿ ತರ್ಜುಮಾ ಮಾಡಿಹೇಳಲು ಸರ್ವರು ಕರತಾಡನ ಮೂಲಕ ಸಂತೋಷವನ್ನು ಸೂಚಿಸಿದರು. ಮುಡಿಗುಂಡದಲ್ಲಿ ನಡದ ಮೀಟಿಂಗಿನಲ್ಲಿ ನಿರ್ಧರವಾಗಿದ್ದಂತೆ ಈ ಕೆಳಗೆಕಂಡಂತೆ ಆಚರಣೆಯಲ್ಲಿ ತರಲ್ಪಟ್ಟಿದೆ.

(೧) ಮುಡುಕುಡದೊರೆ ಸಭೆಗೆ ಇವಾಗ ಸಹಾಯಮಾಡತಕ್ಕವರಲ್ಲದೆ ಮಿಕ್ಕಾದವರು, ಯಥಾಶಕ್ತಿಯಾಗಿ ಸಹಾಯ ಮಾಡಬೇಕು. (೨) ಸ್ಟಾರ್ ಪತ್ರಿಕೆಯನ್ನು ತರಿಸುತ್ತಾ ಇಧೆ. ಇದರ ರಿಲೀಫ್‌ಫಂಡಿನ ವಿಷಯ ಈ ದಿನ ಅರ್ಧಮಟ್ಟಿಗೆ ಚರ್ಚಿತವಾಗಿರೋಣದರಿಂದ ಮುಂದಿನ ತಿಂಗಳು ಮೀಟಿಂಗಿನಲ್ಲಿ ನಿಷ್ಕರ್ಷೆ ಮಾಡಬೇಕು. (೩) ಮುಡಿಗುಂಡದಲ್ಲಿ ಸಂಸ್ಕೃತ ಪಾಠಶಾಲೆಯನ್ನೇರ್ಪಡಿಸಿ, ಅದಕ್ಕಾಗುವ ಸಹಾಯವನ್ನು ಅಲ್ಲಿನ ಮಹಾಜನರೇ ನಡಿಸಬೇಕು. (೪) ದಸ್ತಾವೇಜು ವಗ್ಯೆರೆಗಳಲ್ಲಿ ಶಾಸ್ತ್ರೀಯವಾಗಿ ಮತಜಾತಿಗಳನ್ನು ಬರೆಸುತ್ತಾ ಇವೆ. (೫) ತಿಂಗಳಿಗೊಂದಾವೃತ್ತಿ ಮೀಟಿಂಗು ನಡೆಸುತ್ತಾಯಿದೆ. (೬) ಪ್ರತಿಮೀಟಿಂಗುಗೂ ಪ್ರತಿಯೊಬ್ಬರಂತೆ ಸತ್ಕಾರ ನಡೆಸುತ್ತಾರೆ. (೭) ಸಭಾಧ್ಯಕ್ಷರು ಮತವಿಷಯವನ್ನು ಸ್ವಮತೀಯರಿಗೆ ಬೋಧಿಸುತ್ತಾರೆ. (೮) ಮುಂದಣ ಮೀಟಿಂಗು ಕೊಳ್ಳೇಗಾಲದ ಶ್ರೀಮಾನ್ ಜಿ. ಪಿ. ಸುಬ್ಬಣ್ಣನವರ ಮನೆಯಲ್ಲಿ ಸೇರತಕ್ಕದ್ದು.

ಈ ದಿವಸ ಮತಸಂಬಂಧವಾಗಿ ಉಪನ್ಯಾಸ ಮಾಡಲ್ಪಟ್ಟ ವಿಷಯಗಳೂ ನಿರ್ಧರಿಸಲ್ಪಟ್ಟ ವಿಷಯಗಳೂ ಮತಕ್ಕೆ ಬಹಳ ಗೌರವಕರವಾದವುಗಳೆಂದು ಶ್ರೀಮಾನ್ ಜಿ. ಪಿ. ಮಲ್ಲಣ್ಣನವರೂ, ಸಂ|| ಶಿವಪ್ಪನವರೂ, ದೊ. ಗು. ಶಿದ್ದಪ್ಪನವರೂ, ಶೆಟ್ಟಪ್ಪನವರೂ, ಗುರುಕಾರ್ ಮಲ್ಲೇದೇವರೂ, ಶಿದ್ಧರಹಳ್ಳಿ ಶಿವಪ್ಪನವರೂ ಇನ್ನೂ ಮುಂತಾದ ಪ್ರಮುಖರು ಸಂತೋಷಸೂಚಕವಾದ ಭಾಷಣಮಾಡಿದ ನಂತರ ಮರ್‍ಯಾದೆಯೊಡನೆ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟು ಸಭಾ ಭರಕಾಸ್ತಾಯಿತು.

ಬಿ. ಮಾದಪ್ಪ,
ಸಭಾ ಸೆಕ್ರೆಟರಿ ಮಧುವನಹಳ್ಳಿ.

ಬ್ಯಾರಿಸ್ಟರ್ ರುದ್ರಪ್ಪನವರ ವಿವಾಹ ಸಮಾರಂಭವು.

ಈ ಬೆಂಗಳೂರು ಪಟ್ಟಣದಲ್ಲಿ ಮ|| ರಾ|| ಗರಡಿ ರುದ್ರಪ್ಪನವರು, ಬಿ. ಎ, (ಆಕ್ಸಫರ್ಡ) ಬ್ಯಾರಿಸ್ಟರ್ ಅಟ್‌ಲಾ ಇವರ ಲಗ್ನ ಮಹೋತ್ಸವವು ತಾ|| ೩೧ ನೇ ಮೇ ೧೯೧೧ ಬುಧವಾರ ಶುಭಮುಹೂರ್ತದಲ್ಲಿ ಒಳ್ಳೇ ವಿಜೃಂಭಣೆಯಿಂದ ಜರಗಿತು. ವಧುವು ಇಲ್ಲಿಯ ನಿವಾಸಿಗಳಾದ ಮ|| ರಾ|| ಯಜಮಾನ ಲಿಂಗಣ್ಣ ಸೆಟ್ಟರ ಮಗಳಾದ ಸೌ|| ವಜ್ರಚೂಡಾಮುಡಿತೆ ಪೊನ್ನಮ್ಮನವರು. ಈ ಲಗ್ನವು ಗುಬ್ಬಿಯ ನಿವಾಸಿಗಳಾದ ಶಿವಮೂರ್ತಿ ಕಪ್ಪಣ್ಣ ಶಾಸ್ತ್ರಿಗಳೂ, ಸಿದ್ಧಲಿಂಗಶಾಸ್ತ್ರಿಗಳೂ ಇವರ ಪೌರೋಹಿತ್ಯದಿಂದ ವಿಧ್ಯುಕ್ತವಾಗಿ ನಡಿಸಲ್ಪಟ್ಟಿತು. ಈ ಲಗ್ನ ಸಮಾರಂಭಕ್ಕೆ ಶ್ರೀಮನ್ಮಹಾರಾಜ ನಿರಂಜನ ಮುರುಘರಾಜೇಂದ್ರ ಜಗದ್ಗುರು ಬೃಹನ್ಮಠ, ಚಿನ್ಮೂಲಾದ್ರಿ ಚಿತ್ರದುರ್ಗ ಮಹಾಸಂಸ್ಥಾನದ ಪಂಕ್ತಿಗೆಯಿಂದ ದಾವಣಗೇರಿಯ ಸಂಸ್ಕೃತ ಪಾಠಶಾಲಾಧ್ಯಾಪಕರಾದ ಶಿವಮೂರ್ತಿ ರಾ|| ಗುರುಮೂರ್ತಿ ಶಾಸ್ತ್ರಿಗಳೂ, ದಾವಣಗೇರಿಯ ತಿರುಕಪ್ಪನವರ ಮಠದ ಶ್ರೀ ಷಡಕ್ಷರಪ್ಪನವರೂ, ಮುಂಬಯಿಂದ ಮ|| ರಾ|| ಸಾಬೋಜೀ ಗಂಗಾಧರಪ್ಪನವರೂ, ಸಾಂಗಲೀ ಸಂಸ್ಥಾನದಪೈಕಿ ರಬಕವಿಯಿಂದ ಶ್ರೀ|| ಬಾಗೋಜಿ ಮುರಗಯ್ಯನವರೂ, ಜಮಖಂಡಿ ಸಂಸ್ಥಾನದಪೈಕಿ ಬನಹಟ್ಟಿಯಿಂದ ಮ|| ಚಿಕ್ಕೋಡಿ ತಮ್ಮಣ್ಣನವರೂ, ಇದರಂತೆ ಗುಬ್ಬಿಯಿಂದ ಮ|| ರಾ|| ಶಿವರಾತ್ರಪ್ಪನವರೂ, ಮತ್ತು ರಾಣಿಬನ್ನೂರು, ತಿಪಟೂರು, ಪಿರಿಯಾಪಟ್ಟಣ, ಮೈಸೂರು ಮತ್ತು ಮದ್ರಾಸು ಮುಂತಾದ ಸ್ಥಲಗಳಿಂದ ಅನೇಕ ಸಭ್ಯಗೃಹಸ್ಥರೂ ಒಳ್ಳೇ ಪ್ರೀತಿಪುರಸ್ಸರವಾಗಿ ಬಂದು ಲಗ್ನಕಾರ್ಯವನ್ನು ಯಥಾಸಾಂಗವಾಗಿ ನೆರವೇರಿಸಿಕೊಟ್ಟದ್ದಲ್ಲದೆ, ನಿತ್ಯ ೪೦೦-೫೦೦ ಜನರ ಗಣಾರಾಧನೆಯು ತೃಪ್ತಿಕರವಾಗಿ ಸಾಗುತ್ತಿರುವುದು. ಮ|| ರಾ|| ಬ್ಯಾರಿಸ್ಟರ್ ರುದ್ರಪ್ಪನವರು ಸೀಮೆಗೆ ಹೋಗಿ ಬಂದವರಾದುದರಿಂದ ಈ ಕಾರ್ಯಕ್ಕೆ ಬಹುಮಹತ್ತ್ವವು ಬಂದಿತ್ತು. ನಮ್ಮ ವೀರಶೈವ ಜನಾಂಗದವರು ಈ ಕಾರ್ಯದಲ್ಲಿ ಒಳ್ಳೇ ಅಭಿಮಾನದಿಂದಲೂ, ಪ್ರೇಮದಿಂದಲೂ ಮಿಳಿತರಾಗಿ ಸಪಙ್ಕ್ತಿ ಭೋಜನಾದಿಗಳಿಂದ ಮ|| ರಾ|| ಬ್ಯಾ|| ರುದ್ರಪ್ಪನವರನ್ನು ಸಂತೋಷಗೊಳಿಸಿದರು. ಆ ಲಗ್ನಕಾರ್ಯದ ದಿವಸ ಈ ಸಂಸ್ಥಾನದ ಮಾಜಿ ದಿವಾನರಾದ ನಾಮದಾರ ವಿ.ಪಿ. ಮಾಧವರಾವ್, ಸಿ. ಐ. ಇ. ಯವರೂ, ೧ನೇ ಕೌನ್ಸಿಲರಾದ ನಾಮದಾರ ಕೆ. ಪಿ. ಪುಟ್ಟಣ್ಣಸೆಟ್ಟರವರೂ, ೨ ನೇ ಕೌನ್ಸಿಲರಾದ ನಾಮದಾರ್ ಎಚ್. ವಿ. ನಂಜುಂಡಯ್ಯಾ ಎಮ್. ಎ., ಎಮ್. ಎಲ್., ರವರೂ, ರಿಟೈರ್ಡ್ ಕೌನ್ಸಿಲರಾದ ನಾಮದಾರ್ ಶ್ರೀನಿವಾಸಯ್ಯಂಗಾರರವರೂ, ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯರಾದ ಮ|| ರಾ|| ಬಾಲಸುಂದರಂ ಅಯ್ಯರ್ ರವರೂ, ಅಸಿಸ್ಟೆಂಟ್ ಸೆಕ್ರೆಟರಿಯವರಾಗಿದ್ದ ಮ|| ರಾ|| ಎಚ್. ರಾಮಯ್ಯನವರೂ, ಚೀಫ್ ಕೆಮಿಕಲ್ ಎಗ್ಸಾಮಿನರರಾದ ಡಾ|| ಶ್ರೀನಿವಾಸರಾಯರವರೂ, ಬೆಂಗಳೂರು ಸಬ್ ಜಡ್ಜರಾದ ಮ|| ರಾ|| ಬ್ಯಾರಿಸ್ಟರ್ ನಾಗಪ್ಪನವರೂ, ಮಾಜಿ ಡಿಸ್ಟ್ರಿಕ್ಟ್ ಜಡ್ಜರಾದ ಮ|| ರಾ|| ರಾಮಸ್ವಾಮಯ್ಯರ್ ರವರೂ, ಅಸಿಸ್ಟೆಂಟ್ ಕಮಿಷನರರವರಾದ ಮ|| ರಾ|| ಬಸವಾರಾಧ್ಯರವರೂ ಇವರೇ ಮುಂತಾದ ಅನೇಕ ಗೌರ್ನಮೆಂಟ್ ಅಧಿಕಾರಿಗಳು ದಯಮಾಡಿಸಿ ಈ ಪ್ರೌಢಲಗ್ನದಿಂದ ತಮಗುಂಟಾದ ಸಂತೋಷವನ್ನು ವ್ಯಕ್ತಮಾಡಿ ಸರ್ವರನ್ನೂ ಆನಂದಗೊಳಿಸಿದರು. ಇದಲ್ಲದೆ ಈ ಲಗ್ನಮಹೋತ್ಸವಕ್ಕೆ ಕಾರ್ಯಬಾಹುಲ್ಯದಿಂದ ಬರಲು ಅನುಕೂಲಿಸದೇಯಿದ್ದುದರಿಂದ ಶ್ರೀ|| ನಾಮದಾರ್ ಲಖಮಗೌಡ, ಬಸವಪ್ರಭು ಸರದೇಸಾಯಿ, ವಂಟಮುರಿಯವರೂ, ಡೆಪ್ಯುಟಿ ಕಲೆಕ್ಟರರಾದ ರಾವಬಹದ್ದೂರ್ ಅರಟಾಳ ರುದ್ರಗೌಡ ಸಾಹೇಬರೂ ಮತ್ತು ಸೋಲಾಪುರ ಮುಂತಾದ ಪಟ್ಟಣಗಳ ಮಹಾಶಯರೂ ತಂತಿಮೂಲಕವಾಗಿ ತಮ್ಮ ಅಭಿನಂದನವನ್ನು ವ್ಯಕ್ತಪಡಿಸಿದರು. ಈ ಪ್ರಕಾರವಾಗಿ ಈ ಲಗ್ನ ಸಮಾರಂಭವು ಚೆನ್ನಾಗಿ ನಡೆದುದನ್ನು ಪ್ರತ್ಯಕ್ಷತಃ ನಾನು ಕಂಡು ಇದನ್ನು ತಮಗೆ ತಿಳುಹಿಸಿರುವೆನು. ಲೋಭವಿರಲಿ.

ಒಬ್ಬ ಪ್ರೇಕ್ಷಕ.

ಶ್ರೀಮದ್ವೀರಶೈವ ಮಹಾಸಭೆಯ ನಿರ್ಣಯಪ್ರಕಾರ ಈ ದಿವಸ ಹಂದಿಗನೂರ ಗ್ರಾಮದಲ್ಲಿ ಮಹಾಸಭೆಯ ಸ್ಟಾಂಡಿಂಗ್ ಕಮಿಟಿಯ ಚೇರಮನ್ನರಾದ ರವ್‌ಸಾಹಿಬ್ ಶಾಂತವೀರಪ್ಪಣ್ಣಾ ಮೆಣಸಿಕಾಯಿ ಇವರ ಅಧ್ಯಕ್ಷತೆಯ ಕೆಳಗೆ ಜಾಹೀರ್‌ಸಭೆಗೂಡಿ ಸ್ಥಾಪಿತವಾದ ಧಾರವಾಡ ಜಿಲ್ಲಾಪೈಕಿ ಹಾವೇರಿ ತಾಲ್ಲೂಕು ಕಮಿಟಿ ವಿಷಯವಾಗಿ ಸರ್ವಾನುಮತದಿಂದ ಠರಾಯಿಸಲ್ಪಟ್ಟ ವಿಷಯಗಳು ಕೆಳಗೆ ಬರೆದಪ್ರಕಾರ:—

೧. ಕರ್ಜಗಿ ತಾಲ್ಲೂಕಿನ ಪರವಾಗಿ ಹಾವೇರಿ ಗ್ರಾಮದಲ್ಲಿ ಒಂದು ತಾಲ್ಲೂಕು ಕಮಿಟಿಯು ಸ್ಥಾಪಿಸಲ್ಪಡತಕ್ಕದ್ದು.

೨. ತಾ|| ಕಮಿಟಿಯಲ್ಲಿ ಕೆಳಗೆ ಬರೆದ ಸಭ್ಯಗೃಹಸ್ಥರು ಮೆಂಬರರಾಗಿ ಇರತಕ್ಕದ್ದು.

ದೇವಿಹೊಸೂರ: ೧ ದೇವಿಹೊಸೂರ, ೨ ದೇವಗೇರಿ ಎಲ್ಲಾಪುರ-ವಿ|| ಚನ್ನಬಸಪ್ಪಾ ನಂಜಪ್ಪಾ ಕುರಬಗೊಂಡ. ದೇವಿಹೊಸೂರ. ೩ ದೇವಗೇರಿ-ವಿ|| ಲಿಂಗನಗೌಡ್ರು ಹರ್ತಿ ಸಾ|| ಸದರಿ. ೪ ಸೋಮಾಪುರ-ವಿ|| ಬಸಪ್ಪಾ ಕಬ್ಬೂರ ಸಾ|| ಸದರಿ. ೫ ಬೆಂಚಿಹಳ್ಳಿ ವಿ|| ಬಸಲಿಂಗಪ್ಪಾ ಹೋಳಿಕಟ್ಟಿ ಸಾ|| ದೇವಗೇರಿ ೬ ವೆಂಕಟಾಪುರ- ದೊಡ್ಡಮಲ್ಲಪ್ಪಾ ಹೋಳಿಕಟ್ಟಿ ಸಾ|| ಸದರಿ. ೭ ಸಂಗೂರು ೮ ಗವರಾಪುರ, ೯ ಹೊಸಳ್ಳಿ ಮಾ|| ಆತೂರ, ೧೦ ಆಲದಕಟ್ಟಿ, ೧೧ ವಿಜಾರಿಲಕ್ಮಾಪುರ, ೧೨ ದಿಡಗೂರ, ೧೩ ಬಿಡರಗಟ್ಟಿ, ೧೪ ತಿಮ್ಮಾಪುರ ಮ|| ಆಡೂರ, ೧೫ ನುಚ್ಚಳ್ಳಿ, ೧೬ ನಾಗನೂರ, ೧೭ ಕಂಕ್ರಿಪುರ, ೧೮ ಮಲ್ಲೂರು- ವಿ|| ಮಲ್ಲನಗೌಡಾ ಪಾಟೀಲ ಸಾಕೀನ ಸದರಿ.

(೨) ಕರ್ಜಗಿ: ೧ ಕರ್ಜಗಿ, ೨ ಕೋಳೂರ- ವಿ|| ಚನ್ನಬಸಪ್ಪಾ ಗುರುಶಿದ್ದಪ್ಪಾ ಶಿರೂರ ಸಾಕೀನ ಕರ್ಜಗಿ. ೩ ಗಣಜೂರ, ೪ ಬಸವನಕಟ್ಟಿ, ೫ ಮಾಜಾಪುರ-ವಿ|| ಶಿದ್ರಾಮಯ್ಯಾ ಚನ್ನಬಸವಯ್ಯಾ ಕುಲಕರ್ಣಿ ಸಾಕೀನ ಸದರಿ. ೬ ಹಳೇರಿತ್ತಿ, ೭ ರಾಮಾಪುರ, ೮ ಅಗಸನಮಟ್ಟಿ, ೯ ಯಲಗಚ್ಚ, ೧೦ ಚಿಕ್ಕಮುಗದೂರ, ೧೧ ಹಿರೇಮುಗದೂರ-ವಿ|| ವೀರಪ್ಪಾ ಅಯ್ಯಪ್ಪಾ ಸಜ್ಜನರ.

(೩) ಹಾವೇರಿ: ೧ ಹಾವೇರಿ- ವಿ|| ಮಡಿವಾಳೆಪ್ಪಾ ಹತ್ತಿ ಸಾ|| ಹಾವೇರಿ. ೨ ಲಕ್ಮಾಪುರ, ೩ ಯತ್ತಿನಹಳ್ಳಿ- ವಿ|| ಸಿದ್ದಪ್ಪಾ ಅನೂರಶೆಟ್ರ ಸಾ|| ಹಾವೇರಿ. ೪ ತೋಟದ ಎಲ್ಲಾಪುರ- ವಿ|| ಮಡಿವಾಳಪ್ಪಾ ವೀರಪ್ಪಾ ಮಾಸೂರ ಸಾ|| ಹಾವೇರಿ. ಜಂಗಮನಕೋಟ, ದೇವಗೇರಿ ಎಲ್ಲಾಪುರ- ವಿ|| ಸಂಗನಬಸಪ್ಪಾ ಚನ್ನಬಸಪ್ಪಾ ಪುಮರಿ ಸಾ|| ಹಾವೇರಿ. ೭ ನೆಲೋಗಲ್ಲ-ವಿ|| ಚನ್ನಪ್ಪಾ ಹಿಂಚಿಗೇರಿ ಸಾ|| ಹಾವೇರಿ. ೮ ಕರಕಾಪುರ, ೯ ಹೊಂಬರಡಿ, ೧೦ ಬುಜರೂವ ಕೋಡಿಹಳ್ಳಿ- ವಿ|| ರಾಚಪ್ಪಾ ನೆಲಿವಿಗಿ ಸಾ|| ಹಾವೇರಿ.

(೪) ಕಾಟೇನಹಳ್ಳಿ: ೧ ಕಾಟೇನಹಳ್ಳಿ, ೨ ಅರಳಗೊಂಡ, ೩ ಪರಾಪುರ- ವಿ|| ಮುರಿಗೆಪ್ಪಾ ಕಲ್ಯಾಣಪ್ಪಾ ನೆಲ್ವಿಗಿ ಸಾ|| ಕಾಟೇನಹಳ್ಳಿ. ೪ ಸುರನಹಳ್ಳಿ, ೫ ಕಳ್ಳಿಹಾಳ, ೬ ತರೇದಹಳ್ಳಿ ಮ|| ಕಾಗಿನೆಲ್ಲಿ, ೭ ಖುರ್ದ ಕೋಡಿಹಳ್ಳಿ- ವಿ|| ಮಹಾಲಿಂಗಪ್ಪಾ ಬಸಪ್ಪಾ ನೆಲ್ವಿಗಿ ಸಾ|| ಕಾಟೇನಹಳ್ಳಿ.

(೫) ಹನಮನಹಳ್ಳಿ: ೧ ಹನಮನಹಳ್ಳಿ, ೨ ಕಡಮನಹಳ್ಳಿ- ವಿ|| ಹೊಳಿಯಪ್ಪಾ ಬಸೆಟ್ಟೆಪ್ಪಾ ಗೋವಿ ಸಾ|| ಹನಮನಹಳ್ಳಿ. ೩ ಗಂಡೀನಹಳ್ಳಿ, ೪ ಕಂಗೊಂಡ- ವಿ|| ತಿಪ್ಪಣ್ಣಾ ಮಲ್ಲಿಕಾರ್ಜುನಪ್ಪಾ ಕೊಳ್ಳಿ ಸಾ|| ಸದರಿ. ೫ ಕಲ್ಲೇದೇವರು, ೬ ಕನವಳ್ಳಿ, ೭ ಕರಡಿ- ವಿ|| ಪ್ಯಾಟೆಪ್ಪಾ ಹೊನ್ನಪ್ಪಾ ಹೊನ್ನಪ್ಪನವರ ಸಾ|| ಕಲ್ಲೇದೇವರು. ೮ ಕೊರಗೂರ, ೯ ಬುಡಗಟ್ಟ, ೧೦ ತಿಮ್ಮನಹಳ್ಳಿ, ೧೧ ಸೋಮನಹಳ್ಳಿ- ವಿ|| ಬಸವೀರಯ್ಯಾ [illegible] ಸಾ|| ಕಂಗೊಂಡ.

(೬) ಹಂದಿಗನೂರ:- ೧ ಹಂದಿಗನೂರ, ೨ ಹೊಸರಿತ್ತಿ- ಸರದಾರ ಶ್ರೀಮಂತ ಬುಳ್ಳಪ್ಪಾ ಬಸವಂತರಾವ ದೇಸಾಯಿ ಹಂದಿಗನೂರ. ೩ ಚನ್ನೂರು, ೪ ಕೂರಗೂರು, ೫ ಕಿತ್ತೂರು- ವಿ|| ವಿರೂಪಾಕ್ಷಪ್ಪಾ ಸಣ್ಣಬಸಪ್ಪಾ ಕಲಕೋಟಿ ಸಾ|| ಸದರಿ. ೬ ಅಕ್ಕೂರು, ೭ ಮಲ್ಲೂರು- ವಿ|| ಗುರುಶಾಂತಪ್ಪಾ ಶೆಟ್ಟರ ಸಾ|| ಹೊಸರಿತ್ತಿ. ೮ ಕೆಸರಳ್ಳಿ, ೯ ಬಮ್ಮನಗಟ್ಟಿ, ೧೦ ಮೇಲಮರಿ, ೧೧ ಶಿರಮಾಪುರ, ೧೨ ಚಿಕ್ಕನೇಳಿಹಳ್ಳಿ, ೧೩ ಹಿರೇಮಳ್ಳಹಳ್ಳಿ, ೧೪ ಮರಡೂರು, ೧೫ ಇಜ್ಜಂಗಿ- ವಿ|| ಮಲ್ಲಪ್ಪಾ ಮೇಲಮರಿ ಸಾ|| ಮೇಲಮರಿ

(೭) ನೆಗಳೂರು: ೧ ನೆಗಳೂರು, ೨ ಕೋಡಬಾಳ- ವಿ|| ಫಕೀರಗೌಡಾ ನುಚಳಿ ಪಾಟೀಲ ಸಾ|| ನೆಗಳೂರು ೩ ಮರೋಳ-ಅತಿವೆಪ್ಪಾಗೌಡಾ ಪೊಲೀಸ್ ಪಾಟೀಲ ಸಾ|| ಸದರಿ ೪ ಹಾಲಿಗಿ-ವಿ|| ಚನ್ನಪ್ಪಾ ಉಪ್ಪಿನ ಸಾ|| ಬೆಳವಿಗಿ. ೫ ನೀರಲಗಿ ಮ. ಗುತ್ತಲ, ೬ ಗುಡನಲಕೊಪ್ಪ-ವಿ|| ಮಲ್ಲನಗೌಡಾ ಕರೇಗೌಡರ ಸಾ|| ಸದರಿ. ೭ ಗುರಲಗೊಂದಿ, ೮ ಮೇವುಂಡಿ-ವಿ|| ಫಕೀರಗೌಡಾ ಈಶ್ವರಗೌಡಾ ಪಾಟೀಲ ಸಾ|| ನೀರಲಗಿ ಮ|| ಗುತ್ತಲ. ೯ ಬೆಳವಿಗಿ, ೧೦ ಕೆರಿಕೊಪ್ಪ- ವಿ|| ಅತಿವೆಪ್ಪಾ ಅಂಗಡಿ ನೆಗಳೂರ.

(೮) ಹಾವನೂರು: ೧ ಹಾವನೂರು, ೨ ಹಾವಂಶಿ- ವಿ|| ಪಕ್ಕೀರಯ್ಯನವರ ಕರಸ್ಥಳದ ಸಾ|| ಹಾವನೂರು ೩ ಶಾಕಾರ- ವಿ|| ಗದಿಗೆಯ್ಯನವರು ಕರಸ್ಥಲದ ಸಾ|| ಸದರಿ, ೪ ಹರಳಳ್ಳಿ, ೫ ನರಶಿಪುರ- ಹೊನ್ನಪ್ಪಾ ಗೌಡಾ ಪಾಟೀಲ. ೬ ಕಂಚರಗಟ್ಟಿ- ವಿ|| ಪರಗೆಪ್ಪಾ ಚಿಕ್ಕಿ ಸಾ|| ಗುತ್ತಲ ೭ ಹುರಳಿಹಾಳ ಮ. ಜಾವನೂರು- ವಿ|| ಸಂಗಪ್ಪಾ ಬೆಳವಿಗಿ ಸಾ|| ಗುತ್ತಲ. ೮ ಗುತ್ತಲ, ೯ ತಿಮ್ಮಾಪೂರ-ವಿ|| ಚನ್ನಬಸಯ್ಯನವರು ಸ್ವಾಮಿ ಮಠದ ಸಾ|| ಗುತ್ತಲ.

[ಸಶೇಷ]

“ ಅಗತ್ಯ ವಿಚಾರ ”

ಬೆಲೆ ೪|| ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿವಿಚಾರಿಸತಕ್ಕದ್ದಾಗಿರುವದರಿಂದಲೇ “ಅಗತ್ಯವಿಚಾರ” ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೨ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ:—ವೀರಭದ್ರಪ್ಪ ಆರುಬೆರಳಿನ,
ಪೋಸ್ಟ್-ಬಾಗೇವಾಡಿ. ಡಿ|| ಬೆಳಗಾಂವ

---

೭೦ ಕಥೆಗಳು. ಸಚಿತ್ರ. ೬೧೨ ಪುಟಗಳು.

ಶುಕಸಪ್ತತಿ ಕಥೆಗಳು.

2

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕೀಕ ವ್ಯವಹಾರ ಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವದು. (೩) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದ್ದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತ ವಾಗಿರುವದು. (೬) ಚಿತ್ರಕಲಾಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿಧೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಕೂಲವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವವನ್ನು ತೋರಿಸುವ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦. ಅಂಚೆ ಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಮುಂತಾದ ಸುಗಂಧದ್ರವ್ಯಗಳು; ಪ್ಲೇಗು, ಕಾಲರಾ ಮುಂತಾದ ಜಾಡ್ಯ ವ್ಯಾಧಿಗಳಿಗೆ ಮುಖ್ಯ ಔಷಧಗಳು; ಭಾವನಕ್ಷೆ ಚಿತ್ರಮುದ್ರಿಕೆಗಳು; ಮೊದಲಾದ ಸಾಮಾನುಗಳು ನಮ್ಮಲ್ಲಿ ದೊರೆಯುತ್ತವೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ.—ವಿಜಯಕೇಸರಿ ಕಂಪೆನಿ,
ಬೆಂಗಳೂರು ಸಿಟಿ.

8

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು.

ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಪ್ರಕರ, ಮರ್ಚ
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಊದಬತ್ತಿಗಳು.

13

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ವಾಂಡೆನ್ನು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ
ಮೈಸೂರು.

48

ಗೋರೋಚನ ಮಾತ್ರೆ— ೧-೨ ಮಾತ್ರೆಗಳನ್ನು ಕೊಟ್ಟರೆ, ಅಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೬-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭಪೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ	೨-೦-೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ	೧-೦-೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ	೦-೮-೦.
ಅಜೀರ್ಣಹರಮಾತ್ರೆ.— ೫೦ ಮಾತ್ರೆ ಸೀಸೆ	೦-೧೨-೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ	೦-೨-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಗಳು ಸುಲಭಕ್ರಯಕ್ಕೆ ದೊರಕುವುವು. [illegible] ಕೊಡಬೇಕು. [illegible]

6 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬರೆರಿ.

1. ರಾಸ್ಕೋಪಸಿಸ್ಟಂ ಪೇಟಂಟ್ ಲೀವರ್ ಜೂವೆಲ್ಡ್ ವಾಚ್.

ROSKOPF
SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 2-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

MOTORREGULATOR
LEVER
SWISS MADE

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 3-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಪ್ಕೋಲಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡರ್ಜ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡರ್ಜ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ ನಟೇಶ್ವರ ಉಮಾಮಹೇಶ್ವರ, ಗಜಲಕ್ಷ್ಮಿ, ಕೃಷ್ಣ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನುಪಯೋಗಿಸಿ ಕ್ಲ್ಪಪ್ತ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೮-೦ರೂ. ಆಗುತ್ತದೆ. ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರೂ. ಕೊಡಬೇಕಾಗುತ್ತೆ. ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ೧೦೦ ಕ್ಕೂ ೦-೮-೦ ಆಣೆ ಯಂತೆ ಕಳುಹಬೇಕು. ಕ್ಲೃಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದಲ್ಲಿ ೧-೦-೦ ರೂ. ಅನ್ನು ಹೆಚ್ಚಾಗಿ ಕೊಡಬೇಕು. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್ ಪ್ರೆಸ್, ಮೈಸೂರ್.

ಉತ್ತಮ ಗ್ರಂಥಗಳು.

121

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೮-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ, ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು.

೧೯೧೧ನೇ ಇಸವಿ ಜೂನ್ ತಾ॥ ೫ ರಿಂದ ೧೯೧೧ ನೇ ಜೂನ್ ತಾ॥ ೧೧ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೪ ನೇ ವಿರೋಧಿಕೃತು ಸಂವತ್ಸರದ ಜ್ಯೇಷ್ಠ ಶು॥ ನವಮಿಯಿಂದ ಜ್ಯೇಷ್ಠ ಶು॥ಪೌರ್ಣಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ತೇದಿ
5	ಸೋ	ನ	33-0	ಉತ್ತ	36-48	23
6	ಮಂಗ	ದ	32-48	ಹಸ್ತ	38-27	24
7	[1]ಬುಧ	ಏ	33-48	ಚಿತ್ತ	41-17	25
8	ಗುರು	ದ್ವಾ	36-8	ಸ್ವಾ	45-26	26
9	ಶುಕ್ರ	ತ್ರ	39-36	ವಿಶಾ	50-8	27
10	ಶನಿ	ಚ	43-48	ನೂ	56-34	28
11	[2]ಭಾನು	ಪೌ	48-52	ಜ್ಯೇ	60-0	29

(1) ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವ.
(2) ಭೂಮಿಪೂರ್ಣಿಮಾ, ಸಾವಿತ್ರಿ ಪೂಜಾ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಉತ್ತಮ ಗ್ರಂಥಗಳು.

18

ಶಿವಪಂಚಸ್ತವ.— ಬೆಲೆ ವಿ. ಪಿ. ಯಿಂದ ೧-೮-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಷಡ್ವರ್ಗಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ಪಾರ್ಥಿಕಪತ್ರಿಕಾರೂಪವಾಗಿದೆ.

ವೇದಸಂಜೀವಿನಿ.—ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಶಿವರಹಸ್ಯೋತ್ತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮವಿರಚಿತವಾದ ಕನ್ನಡಟೀಕಾಸಮೇತವಾಗಿದೆ.

ಪ್ರಸಾದಲಿಂಗಸ್ವಾಮಿಗಳು, ಹೊಸಮಠ ಮೈಸೂರು.

REGISTERED NO M. 136

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷ್ಯಜ್ಞಸ್ತೋಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೮] ಮೈಸೂರ್ ಸ್ಟಾರ್ ೧೯೧೧ ನೇ ಇಸವಿ ಜೂನ್ ತಾರೀಖು ೧೨ ನೇ ಸೋಮವಾರ. [ಸಂಚಿಕೆ

ಶಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

10

೧. ಲೋಕಾಮೃತಸಾರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ

ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ, ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೩-೦.

೩. ದೃಢದಂತ ಚೂರ್ಣ.—ಉಷ್ಣತ್ವಾ ಬಂದರೆ ಪ್ರೊಸತುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರು, ಹಲ್ಲುಗಳ ಪಾಶೆ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಿಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಸ್ತಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರೆಗೆ ೧-೧೦-೦.

ಇದರಂತೆ ಮುಂಬರುವ ಪ್ರತಿನಾಲ್ಕು ಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ ಕಂಟ್ರಾಕ್ಟ್ ಕೊಡಲ್ಪಡುವುದು. ಪ್ರಕಟನೆಯ ಪ್ರಕಟಿಸಬೇಕಾದರೆ ಮುಂಗಡವಾಗಿ ಹಣ ಕಳುಹಬೇಕು.

ಸುಲಭಕ್ರಯ! ಬಾತರಿಮಾಲ್ !! ಬಿಡಬೇಡಿರಿ!!!

7

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ ೧ಕ್ಕೆ	೩	ಕಸ್ತೂರಿ ಬಿಲ್ಲೆ ತೊ। ೧ಕ್ಕೆ	೨
೨ ಅಂಬರ್‌ಬತ್ತಿ ಸೇ ೧ಕ್ಕೆ	೪	ಜವಾಜಿ ಬಿಲ್ಲೆ ತೊ। ೧ಕ್ಕೆ	೧
ಕಸ್ತೂರಿ ಬತ್ತಿ ಸೇ ೧ಕ್ಕೆ	೨॥	ಅರಗಜ। ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೇ ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ ೧ಕ್ಕೆ	।
ಗುಲಾಬ್ ಬತ್ತಿ ಸೇ ೧ಕ್ಕೆ	॥	ಸುರಂಗಿ ಸೆಂಟ್ ಸಿ ೧ಕ್ಕೆ	೧
ನಕ್ಷತ್ರಕಾಂತಿಬ। ಸೇ ೧ಕ್ಕೆ	೧	ಸ್ವದೇಶಿ ಘಿ ಪೌ॥ ಡ। ೧ಕ್ಕೆ	।
ಕಾಶ್ಮೀರ್‌ಕೇಸರಿ ತೊ। ೧ಕ್ಕೆ	೧	ಪಚ್ಚಕರ್ಪೂರ ತೊ। ೧ಕ್ಕೆ	।॥

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ಕೊಡಲಾಗುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂ ದೊರೆಯದು.

ಎ. ಆರ್. ಸುಬ್ಬಾಚೆಟ್ಟರ್,
ಕೃಷ್ಣರಾಜಮೊಹಲ್ಲಾ ಮೈಸೂರು.

ಇಲ್ಲನೋಡಿ ವಿಶೇಷಸೂಚನೆಗಳು!

5

ಕಾಶೀವಿಶ್ವೇಶ್ವರಪ್ರಸನ್ನ.

KASHI VISHWESHWAR S.N.U. & Co BENARES CITY

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಉಡುವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಿಹೊಂದಿರುವ ಮಡಿಯಾವದು? ಕಾಶೀಪಟ್ಟಿ.

ಮತ್ತು ಜರೀಕೆಲಸಗಳಲ್ಲಿಯೂ ಸೈನ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!! ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೆಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪದಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟ್ಲಾಗ್ ೧ ಕಾಶೀಪಟ. ೪ ಸಾದಾ ಕಾರ್ಡ್, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರೆಸ್‌ಕಾರ್ಡ್, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯಿಸುವ ವಿಳಾಸಕ್ಕೆ ಕಳಿಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—

ಎಸ್. ಉಡಪಿನಾರಾಯಣಾಚಾರ್ಯ ಅಂಡ್ ಕೋ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayanacharya & Co.
Benares City.

6 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೪ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪ್‌ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ವಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 2-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೋಟರ್‌ರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.



ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ವಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 3-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಪ್ನೋರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-3-0 (ಮೂರಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

---

18 **ಉತ್ತಮ ಗ್ರಂಥಗಳು.**

ಶಿವಸಾಂಖ್ಯಸ್ಮೃತಿ.— ಬೆಲೆ ವಿ. ಪಿ. ಯಿಂದ ೧-೮-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.—ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಲಿಂಗಮಹರವಾದ ಕನ್ನಡಟೀಕಾಸಮೇತವಾಗಿದೆ.

ಪ್ರಕಾಶಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ ನಟೇಶ್ವರ ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನುಪಯೋಗಿಸಿ ಕ್ಲಪ್ತ ಕಾಲದಲ್ಲಿ ಬಹುಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೮-೦ರೂ. ಆಗುತ್ತದೆ. ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರೂ. ಕೊಡಬೇಕಾಗುತ್ತೆ. ಸಾದಾ ಕಪ್ಪು ಕಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ೧೦೦ ಕ್ಕೂ ೦-೮-೦ ಆಣೆ ಯಂತೆ ಕಳುಹಬೇಕು. ಕ್ಲಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದಲ್ಲಿ ೧-೦-೦ ರೂ. ಅನ್ನು ಹೆಚ್ಚಾಗಿ ಕೊಡಬೇಕು. ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್ ಪ್ರೆಸ್, ಮೈಸೂರ್.

ಉತ್ತಮ ಗ್ರಂಥಗಳು.

121

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೮-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವ ಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೪-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ, ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೦ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ, ಮೈಸೂರು.

೧೯೧೧ನೇ ಇಸವಿ ಜೂನ್ ತಾ॥ ೫ ರಿಂದ ೧೯೧೧ ನೇ ಜೂನ್ ತಾ॥ ೧೧ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಜ್ಯೇಷ್ಠ ಶು॥ ನವಮಿಯಿಂದ ಜ್ಯೇಷ್ಠ ಶು॥ ಪೌರ್ಣಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಡಿಗ್ರಿ
5	ಸೋ	ನ	33-0	ಉತ್ತ	36-48	23
6	ಮಂಗ	ದ	32-48	ಹಸ್ತ	38-27	24
7	¹ಬುಧ	ಏ	33-48	ಚಿತ್ತ	41-17	25
8	ಗುರು	ದ್ವಾ	36-8	ಸ್ವಾ	45-26	26
9	ಶುಕ್ರ	ತ್ರ	39-36	ವಿಶಾ	50-8	27
10	ಶನಿ	ಚ	43-48	ಅನೂ	56-34	28
11	²ಭಾನು	ಪೌ	48-52	ಜ್ಯೇ	60-0	29

(1) ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವ.
(3) ಭೂಮಿಪೂರ್ಣಿಮಾ, ಸಾವಿತ್ರಿ ಪೂಜಾ.

ಮೈಸೂರ್ : ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 184

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಞಸ್ಸ್ವಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಜೂನ್ ತಾರೀಖು ೧೨ ನೇ ಸೋಮವಾರ. [ಸಂಚಿಕೆ

ಶಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

10

ಲೋಕಾಮಯಾಪಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಪಾಕೆಯೊಳು ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತವೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪ್ರೊಸರುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರು, ಹಲ್ಲುಗಳ ಪಾಚಿ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಸ್ತಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ವಿರಡರಿಂದ ಟಪಾಲ್ ಖರ್ಚು ೪ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರಿಗೆ ೧-೧೦-೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ [illegible] ಕೊಡಲ್ಪಡುವುದು. ಬಾಷಾಂತರಿಸಿ ಪ್ರಕಟಿಸಬೇಕಾದರೆ ಪ್ರತ್ಯೇಕವಾಗಿ ದರವು ಬೀಳುವುದು.

ಸುಲಭಕ್ರಯ! ಖಾತರಿಮಾಲ್ !! ಬಿಡಬೇಡಿರಿ!!!

7

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ ೧ಕ್ಕೆ	೬	ಕಸ್ತೂರಿ ಬಿಲ್ಲೆ ತೊ। ೧ಕ್ಕೆ	೨
೨ ಅಂಬರ್‌ಬತ್ತಿ ಸೇ ೧ಕ್ಕೆ	೪	ಜವಾಜಿ ಬಿಲ್ಲೆ ತೊ। ೧ಕ್ಕೆ	೧
ಕಸ್ತೂರಿ ಬತ್ತಿ ಸೇ ೧ಕ್ಕೆ	೨॥	ಅರಗಜ। ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೇ ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ ೧ಕ್ಕೆ	।
ಗುಲಾಬ್ ಬತ್ತಿ ಸೇ ೧ಕ್ಕೆ	॥	ಸುರಂಗಿ ಸೆಂಟ್ ಸಿ ೧ಕ್ಕೆ	೧
ನಕ್ಷತ್ರಕಾಂತಿಬ। ಸೇ ೧ಕ್ಕೆ	೧	ಸ್ವದೇಶಿ ಫೇ ಪೌ। ಡ। ೧ಕ್ಕೆ	।
ಕಾಶ್ಮೀರ್‌ಕೇಸ್ರಿ ತೊ। ೧ಕ್ಕೆ	೧	ಪಚ್ಚಕರ್ಪೂರ ತೊ। ೧ ಕ್ಕೆ	॥।

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರಕುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂ ದೊರೆಯದು.

ಎಂ. ಆರ್. ಸುಬ್ಬಾಚೆಟ್ಟಪ್ಪ.
ಕೃಷ್ಣರಾಜಮೊಹಲ್ಲಾ ಮೈಸೂರು.

ಇಲ್ಲನೋಡಿ ವಿಶೇಷಸೂಚನೆಗಳು !

5 ಕಾಶೀವಿಶ್ವೇಶ್ವರಪ್ರಸನ್ನ.

KASHI VISHWESHWAR S.N.U. & Co
BENARES CITY

ಅಗ್ಗವಾದಮಾಲುಗಳ ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಪೂಜಾವಸನ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಿಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು !

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!! ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಪಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪದಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟ್ಲಾಗ್ ೧ ಕಾಶೀಪಠ. ೪ ಸಾದಾ ಕಾರ್ಡು, ೨ ಕಾಶೀವಿಶ್ವೇಶ್ವರಪಠ ೨ ನಮ್ಮ ಕಂಪೆನಿ ಅಡ್ರಸ್‌ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯಿಸುವ ವಿಳಾಸಕ್ಕೆ ಕಳಿಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರಿಯಬೇಕಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—

ಯಸ್. ಉಡುಪಿನಾರಾಯಣಾಚಾರ್ಯ ಅಂಡ್‌ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayanacharya & Co.
Benares City.

ಸೌಗಂಧಿಕಾಪರಿಣಯು

:o:

(ಕಳೆದವಾರದ ಶೇಷ.)

ಅದಂ ನೋಡಿದ ಪುರಜನರು ಪರಮಸಂತೋಷಭರಿತರಾಗಿ ರಾಯನಂ ಸ್ತುತಿಸುತ್ತಿರಲು, ಆಗ ಸುಗಂಧರಾಜನು ಕಳಿಂಗರಾಜಾಂತಃಪುರಕ್ಕೆ ಹೇಳಿಕಳುಹಿಸಿ ಚಿತ್ರಲೇಖೆಯಂ ಕರತರಿಸಲವಳು ಬಂದು ರಾಯಂಗಭಿವಂದಿಸಿ, ನಮ್ಮ ದೇವಿಯು ತಮ್ಮಕಾದ ಪಂಕೇರುಹಂಗಳಿಗೆ ಶಿರವಂಬಾಗಿರುವೆನೆಂದು ವಿಜ್ಞಾಪಿಸುವಂತೆ ನಿಯಮಿಸಿರುವಳೆಂದು ಬಿನ್ನವಿಸಲು, ಅದಂ ಕೇಳಿ ಅವಳಂ ಸಂಮಾನದಿಂ ಕಂಡು, ಅವಳಂ ಕುರಿತು—ಎಲೈ ಸಖಿರನ್ನಳೇ! ನಿಮ್ಮ ದೇವಿಯು ಕ್ಷೇಮದಿಂದಿರುವಳೇ? ಅವಳು ಅಪೇಕ್ಷಿಸಿದಂತೆ ಮಹಾಗಜವು ಬಂದಿರುವದು. ಇದು ದೇವತಾಯೋಗ್ಯವಾದುದರಿಂದ ಗೌರಿದೇವಿಯೇ ಈ ವಸ್ತುವಿನಲ್ಲಿ ಸನ್ನಿಹಿತಳಾಗಿರುವಳು. ಅದರಿಂದಿದು ಪೂಜಾಯೋಗ್ಯವು. ಈ ಅರ್ಥವಂ ನಿಮ್ಮ ದೇವಿಗೆ ತಿಳುಹಿಸುವಳಾಗು, ಮತ್ತೂ ನಾವು ಪರಮಪ್ರೇಮದಿಂದಾಲಿಂಗಿಸಿ ಕುಶಲವಂ ಕೇಳಿದೆವೆಂದು ತಿಳುಹಿಸುವಳಾಗು. ರಾಜಶಿರೋಮಣಿಯಾದ, ಮತ್ತೂ ಸಸ್ತ್ರೀಜನಸಮೇತನಾಗಿರುವ ನಿಮ್ಮ ರಾಯಂಗೆ ನಾನು ಅಭಿವಂದಿಸಿದೆನೆಂದು ಬಿನ್ನೈಸುವವಳಾಗು. ಇದುಕೋ ಸೌಗಂಧಿಕಾ ಸರೋವರದ ಸೌಗಂಧಿಕಾ ಕುಸುಮಂಗಳು. ಇವು ಸಾಧಾರಣ ಜನಂಗಳಿಗೆ ದುರ್ಲಭಂಗಳು, ಮತ್ತೂ ಎಂದಿಗೂ ಕಂದದೆ ಮಹಾಪರಿಮಳಭರಿತಂಗಳಾಗಿ ಮುಡಿದವರ್ಗೆ ಹರ್ಷಕರಂಗಳಾಗಿರುವುವು. ಈ ಕುಸುಮಂಗಳಂ ನಾನೇ ಮುಡಿಸಿದೆನೆಂದು ಪೇಳಿ ಸರಸಮಾದ ಮುಡಿಗೆ ಮುಡಿಸುವವಳಾಗು. ಇದಂ ದೇವಿಯು ಮುಡಿದುದರಿಂದಲೇ ಸೌಗಂಧಿಕವೆಂಬ ಈ ಪುಷ್ಪನಾಮವು ಸಫಲವಾಗುವದು, ಮತ್ತೂ ಅಮೋಘಂಗಳಾದ ಈ ಫಲಂಗಳಂ ನಾನು ಪ್ರೇಮದಿಂ ಕಳುಹಿಸಿದೆನೆಂದು ನಿಮ್ಮವಡತಿಗೆ ಒಪ್ಪಿಸುವವಳಾಗು, ಮತ್ತೂ ನಿನ್ನ ಬೆಂಬಿಡಿದು ಈ ಮಹಾಗಜವು ಬರುವದು ನೋಡಿ ಇದಂ ಪೂಜಿಸಲಿ ಎಂದುಪೇಳಿ, ಸಖಿಯಾದ ಚಿತ್ರಲೇಖೆಗೆ ಉಚಿತಮಾಗಿ ಅಮೂಲ್ಯಂಗಳಾದ ವಸ್ತ್ರಾಭೂಷಣಾದಿಗಳಂ ಕೊಡಿಸಿ, ಪ್ರೇಮದಿಂ ಗಲ್ಲವಂ ನೇವರಿಸಿ, ಎಲೈ ಸಖಿಶಿರೋಮಣಿಯಾದ ಚಿತ್ರಲೇಖೆಯೆ! ನೀನು ತೆರಳಬಾರೆಂದು ಕಳುಹಿರಲು, ಆಗ ಚಿತ್ರಲೇಖೆಯು ಮಹಾಪ್ರಸಾದವೆಂದು ರಾಜೇಂದ್ರನಿಗೆ ನಮಸ್ಕರಿಸಿ, ರಾಯನು ಕೊಟ್ಟ ವಸ್ತ್ರಾಭೂಷಣಾದಿ ಸಮಸ್ತವಸ್ತುಗಳಂ ತೆಗೆದುಕೊಂಡು ಅಂದಳದಲ್ಲಿ ಕುಳಿತು, ವೇಗದಿಂ ದೇವಿಯ ಸಮೀಪವಂ ಕುರಿತು ತೆರಳಲು, ಬಳಿಕ ರಾಯನು ಆ ಗಜಕ್ಕೆ ಯೋಗ್ಯವಾದ ಮಾವುತನನ್ನಿಯಮಿಸಿ, ಆ ಗಜವಂ ಶೃಂಗರಿಸಿ, ಯೋಗ್ಯವಾದ ಅ[illegible]ಗಳಂ ಕರಿಸಿ, ಅವರಂ ಕುರಿತು ನೀವು ಈ ಮದಗಜವ[illegible]ಳಿಂಗಪತಿಯಾದ ವಿಜಯವರ್ಮರಾಯನ ಆಸ್ಥಾನದಬಳಿಯಲ್ಲಿ ನಿಲ್ಲಿಸಿ, ದೇವಿಯು ಮಾಡುವ ಗಜಪೂಜೆಗೆ ನಾವು ಇದಂ ಕಳುಹಿಸಿದೆವೆಂದು ಪೇಳಿ ಬಳಿಕ ಅಪ್ಪಣೆಯಂ ಗೊಂಡು ಬರುವರೆಂದು ಆಜ್ಞಾಪಿಸಲು, ಆಗ ಆ ಮಹಾಗಜದ ಉಭಯಪಾರ್ಶ್ವದಲ್ಲಿಯೂ ರಾಯನ ಚತುರಂಗಬಲವು ಸಾಲ್ವರಿದು ನಡೆಯುತ್ತಿರಲು, ರತ್ನದ ಕಾಲುಕಡಗಗಳಿಂದಲೂ, ನವರತ್ನಗಳಿಂದ ರಚಿಸಿದ ಮೇಲುಹೊದ್ದಿಕೆಯಿಂದಲೂ, ನಕ್ಷತ್ರಪಙ್ಕ್ತಿಗಳಂತೆ ಒಪ್ಪುವ ಮುಕ್ತಾಮಯ ತಾರಕಾಭರಣಗಳಿಂದಲೂ, ಉಭಯಪಾರ್ಶ್ವಂಗಳಲ್ಲಿಯೂ ಸೂರ್ಯಚಂದ್ರರಂತೆ ಕಂಗೊಳಿಸುವ ಮಹಾಘಂಟೆಗಳಿಂದಲೂ, ಯತೆಗಿತೆಗೆ ಅಲಂಕರಿಸಿದ ಕಿರುಘಂಟೆಗಳಸರಂಗಳಿಂದಲೂ, ವಜ್ರದ ಬಾವುಲಿಗಳಿಂದಲೂ, ರತ್ನದ ಮುಖಪಟ್ಟಿಗಳಿಂದಲೂ, ಪದ್ಮರಾಗದಿಂ ರಚಿಸಿದ ದಂತಕಟ್ಟುಗಳಿಂದಲೂ, ಮುಕ್ತಾಮಯವಾದ ಚಂದ್ರಸೂರ್ಯಾಭರಣಂಗಳಿಂದಲೂ ಅಲಂಕೃತವಾಗಿ, ರತ್ನಸಾನುಗಳಿಂ ರಂಜಿಸುವ ಮಹಾಮೇರುಪರ್ವತದಂತೆ ಗಾಂಭೀರ್ಯದಿಂ ಆ ಗಜಾಧಿಪತಿಯು ಮೆಲ್ಲಮೆಲ್ಲನೆ ತೆರಳುತ್ತಿರಲು, ಆನಕಭೇರಿ ನಿಸ್ಸಾಳಕಾಹಳಾದಿ ವಾದ್ಯಂಗಳು ಭೋರೆಂದು ಮೊರೆಯುತ್ತಿರಲು, ಬಂದಿಮಾಗಧರು ಹಸ್ತಗಳನ್ನೆತ್ತಿ ಬಗೆಬಗೆಯಾಗಿ ಹೊಗಳುತ್ತಿರಲು, ಚಾಮರ ಶ್ವೇತಚ್ಛತ್ರ ಮೊದಲಾದ ರಾಜಬಿರುದುಗಳಂ ಪಿಡಿದವರು ಮುಂದೆ ಸಾಲುಸಾಲಾಗಿ ನಡೆಯುತ್ತಿರಲು, ನೂತನವಾಗಿ ಕ್ಷೀರಸಾಗರದಿಂದುದ್ಭವಿಸಿ, ದೇವಸೇನಾಪರಿವೃತವಾಗಿ ಬರುವ ಇಂದ್ರನ ಐರಾವತದ ಪ್ರತಿಬಿಂಬವೋ! ಎಂದು ಪೌರಜನರೆಲ್ಲರೂ ಸಂಭ್ರಮಿಸಿ ನೋಡುತ್ತಿರಲು, ಆ ಮಹಾಗಜವಂ ನೋಡುವ ಕುತೂಹಲದಿಂ ಪುರಸ್ತ್ರೀಯರೆಲ್ಲರು ಪ್ರಾಸಾದಗಳನ್ನೇರಿ ವಿವಿಧಸಲ್ಲಾಪಗಳನ್ನಾಡುತ ವಿಸ್ಮಿತರಾಗಿರಲು, ರಾಯನಿಂದಾಜ್ಞಪ್ತರಾದ ಅಧಿಕಾರಿಗಳು ಆ ಮಹಾಗಜವಂ ಸಂತೈಸುತ ಕರದುಕೊಂಡುಹೋಗಿ ಕಳಿಂಗರಾಯನ ಆಸ್ಥಾನದ ಬಳಿಯಲ್ಲಿ ನಿಲ್ಲಿಸಿ ಆ ರಾಯನಂ ಕಂಡು ಕೈಮುಗಿದು ಸುಗಂಧರಾಜೇಂದ್ರನು ಪೇಳಿದ ವಾಕ್ಯವಂ ವಿಜ್ಞಾಪಿಸಲು, ಅದಂ ಕೇಳಿ ವಿಜಯವರ್ಮರಾಯನು ಸಂತೋಷಭರಿತನಾಗಿ ಆ ಅಧಿಕಾರಿಗಳಂ ಉಚಿತವಸ್ತ್ರಾಭರಣಗಳಿಂದುಪಚರಿಸಿ, ಬಳಿಕ ಗಜಾಧಿಪತಿಯ ರೀತಿಯನ್ನೋಡಿ ಅದರ ನೆಲೆಯ ಹೀಗೆಂದು ನಿಶ್ಚೈಸುವದಕ್ಕೆ ಅಶಕ್ಯವಾದುದರಿಂದ ಆಶ್ಚರ್ಯಸಂತೋಷಗಳಿಂ ಯುಕ್ತನಾಗಿ ಸಮೀಪದಲ್ಲಿರುವ ಅಂತಃಪುರದ ಕಂಚುಕಿಯನ್ನೋಡಿ, ಅಂತಃಪುರದರಾಣಿಯರು ಗಜರಾಜನಂ ಪೂಜಿಸಲಿ ಎಂದು ಹೇಳಿಕಳುಹಿಸಲು, ಆಮಾತಂ ಕೇಳಿ ಅಲ್ಲಿದ್ದ ಜನರೆಲ್ಲರು ಮೆಲ್ಲಮೆಲ್ಲನೆ ಹೊರಡುತ್ತಿರಲು, ಅಷ್ಟರಲ್ಲಿಯೇ ಚಿತ್ರಲೇಖೆಯು ಪುಷ್ಪಫಲಂಗಳಂ ತಂದು ಸೌಗಂಧಿಕಾದೇವಿಗೆ ತಲ್ಪಿಸಿ ಸುಗಂಧರಾಜನು ಪೇಳಿದ ಮಾತುಗಳಂ ಪೇಳಿ ಮಹಾಗಜವು ಆಸ್ಥಾನದಬಳಿಯಲ್ಲಿ ಬಂದಿರುವದೆಂದು ಪೇಳಲು, ಅದಂ ಕೇಳಿ ಸೌಗಂಧಿಕಾದೇವಿಯು ದೇವತಾಯೋಗ್ಯಂಗಳಾದ ಆ ಫಲಪುಷ್ಪಂಗಳನ್ನೋಡಿ ದೇಪ್ರೋತ್ತಮನೆ ಪತಿಯಾಗಿಬಂದನೆಂದು ತಿಳಿದು ದೇವತಾಪೂಜಾಕಾಲದಲ್ಲಿ ನಿತ್ಯವೊಳ್ ತಂದು ಒಪ್ಪಿಸಿರಿ; ಸುವರ್ಣಂಗಳಾದ ಕುಸುಮಂಗಳಂ ಮುಡಿವೆವು ಎಂದು ಸಖೀಜನರಿಗೆ ನಿಯಮಿಸುತ್ತಿರಲು, ಆಗ ಕಂಚುಕಿಯು ಬಂದು ತನ್ನ ರಾಯನು ಪೇಳಿದ ಅರ್ಥವಂ ರಾಣಿಯರಿಗೆ ತಿಳುಹಿಸಲು, ಆಗ ಎಲ್ಲರೂ ಸಂಭ್ರಮದಿಂದ ಅಲಂಕೃತರಾಗಿ ಬಂದು ಗಜರಾಜನಂ ಸುತ್ತುವರಿದು ನಿಂತು ಅದರ ಸೌಂದರ್ಯಲೊಬಗುಗಳನ್ನೋಡುತ ವಿಸ್ಮಿತರಾಗಲು, ಸೌಗಂಧಿಕಾದೇವಿಯು ಆ ಮಹಾಗಜವನ್ನೋಡಿ ವಿಸ್ಮಯಪಡುತ ಈ ಗಜದ ಸೌಂದರ್ಯರೀತಿಗಳು ಮಹಾಕವಿಗಳಿಂದಲು ಕೂಡ ಬಣ್ಣಿಸಲಶಕ್ಯಂಗಳು, ಉಳಿದವರ ವಾಙ್ಮಗಳಿಗೆ ಶಕ್ಯವೆಂತಹುದು! ಎಂದು ತಿಳಿದು ಆ ಗಜರಾಜನಿಗೆ ಷೋಡಶೋಪಚಾರಪೂಜೆಯಂ ಮಾಡಿ ನೀರಾಜನವಂಗೈದು, ಮೂರುಬಾರಿ ಪ್ರದಕ್ಷಿಣೆಯಂ ಮಾಡಿ ನಮಸ್ಕರಿಸಿ, ನಿತ್ಯದಲ್ಲಿಯೂ ಈ ನಮ್ಮ ಪುರೋಹಿತರು ಪೂಜಿಸುತ್ತಿರಲಿ ಎಂದು ನಿಯಮಿಸಿ ಎಂದಿನಂತೆ ಅಂತಃಪುರವಂ ಪೈದಲು, ಎಲ್ಲರೂ ಗಜವಂ ಪ್ರದಕ್ಷಿಣೆಯಂ ಮಾಡಿ ನಮಸ್ಕರಿಸಿ ಸ್ವಸ್ಥಾನವಂ ಪೈದಿದರೆಂಬಲ್ಲಿಗೆ ॥ ಗದ್ಯ ॥ ಕೆಂಡಲಿಶಯಖಂಡಪರಶುಪುಂಡರೀಕಭವಾಖಂಡಲಪ್ರಮುಖನಿಖಿಲಸುರವರಪರಿಭವಪರಿಣತ ಪ್ರಚಂಡಬಲ ಚಂಡಮುಂಡಖಂಡನನಿಪುಣಕೋದಂಡಕಾಂಡಮಂಡಲಾಗ್ರಧರಭುಜಾದಂಡಪರಿಮಂಡಿತಚಾಮುಂಡಿಕಾಕಟಾಕ್ಷವೀಕ್ಷಣಪ್ರವರ್ಧಮಾನಭೂಮಂಡಲಾಧಿಪತ್ಯ ಸತ್ಯಪ್ರತಾಪ ಸಕಲಭಾಷಾಸಾಮ್ರಾಜ್ಯಸರ್ವಂಕಷಚತುರ್ವಿಧ ಸರಸಕವಿತಾನಿಸ್ಸಹಾಯ ನಿರ್ಮಾಣಧೌರೇಯಘಟಿಕಾಶತಗ್ರಂಥದಿನದಿನಪ್ರಬಂಧನಿಬಂಧನ ಧುರಂಧರತ್ರಿಭುವನಪವಿತ್ರಾ ತ್ರೇಯಸಗೋತ್ರಾಶ್ವಲಾಯನಸೂತ್ರಸುಚರಿತ್ರ ಚಾಮರಾಜಮಹಾರಾಜಪುತ್ರನರಪತಿಬಿರುದಮಹೀಶೂರಪುರವರಾಧೀಶ ಶ್ರೀ ಕೃಷ್ಣರಾಜಒಡೆಯರವರಿಂದ ರಸಿಕಜನಾನಂದಕರಮಾಗಿ ವಿರಚಿತಮಾದ ಸೌಗಂಧಿಕಾಪರಿಣಯವೆಂಬ ಈ ನವೀನಕೃತಿಯೊಳ್ ಸುಗಂಧರಾಜೇಂದ್ರನು ಗಜಪಣವಂ ಸಾಧಿಸಿದನೆಂಬ ಹದಿನೈದನೇ ಆಶ್ವಾಸ ನಿರೂಪಣಕ್ಕೆ ಮಂಗಳಮಹಾ. (ಸಶೇಷ.)

ವಿದ್ಯಾಭ್ಯಾಸ.

ತಿಳಿವಳಿಕೆಯನ್ನುಂಟುಮಾಡುವುದು ಯಾವುದೋ ಅದು ವಿದ್ಯೆಯೆನ್ನಲ್ಪಡುವುದು. ವಿದ್ಯೆಯೆಂಬುದು ಜ್ಞಾನಫಲವನ್ನು ಪಡೆಯುವುದಕ್ಕೆ ವ್ಯವಸಾಯರೂಪವಾಗಿರುವುದು. ಭೂಮಿಗೆ ಪೈರನ್ನು ಬೆಳಸುವುದೇ ಲಕ್ಷಣವಾಗಿದ್ದರೂ, ತಕ್ಕ ವ್ಯವಸಾಯವಿಲ್ಲದಿದ್ದರೆ ಬಿತ್ತಿದ ಬೀಜವು ವೃದ್ಧಿಹೊಂದದೆ ಹೇಗೆ ನಷ್ಟವಾಗುವುದೋ ಅದರಂತೆ ದೈವಸೃಷ್ಟಿಯಲ್ಲಿ ಮನುಷ್ಯನಿಗೆ ಜ್ಞಾನೇಂದ್ರಿಯ ಶಕ್ತಿಯು ದಯಪಾಲಿಸಲ್ಪಟ್ಟಿದ್ದರೂ ಅದಕ್ಕೆ ತಕ್ಕ ವ್ಯವಸಾಯವಿಲ್ಲದಿದ್ದರೆ, ಆ ಇಂದ್ರಿಯದ ಸಾರ್ಥಕ್ಯವು ಆಗುವುದಿಲ್ಲ. ಆ ಜ್ಞಾನಫಲದ ಉತ್ಪತ್ತಿಗೆ ವಿದ್ಯೆಯೇ ವ್ಯವಸಾಯವಾಗಿರುವುದು. ವಿದ್ಯೆಯಿಲ್ಲದ ಮನುಷ್ಯನಿಗೆ ಸದಸದ್ವಿಚಾರವಿಲ್ಲ; ವಿಚಾರಹೀನನಿಗೆ ಜ್ಞಾನವಿಲ್ಲ; ಅಜ್ಞಾನಿಗೆ ಸನ್ಮಾರ್ಗಪ್ರವರ್ತನೆಯಿಲ್ಲ; ದುರ್ಮಾರ್ಗಪ್ರವರ್ತಕನು ಪುಣ್ಯಪುರುಷನಲ್ಲ; ಪಾಪಿಷ್ಠನಿಗೆ ಸುಖವಿಲ್ಲ; ಅದುಕಾರಣ ಸಕಲವಿಧ ಸುಖಕ್ಕೂ ವಿದ್ಯೆಯೇ ಮೂಲಕಾರಣವಾಗಿರುವುದು. ಓದುವುದು, ಬರೆಯುವುದು ಮಾತ್ರವೇ ವಿದ್ಯೆಯಲ್ಲ. ಸದಸದ್ವಿಚಾರವರ್ತನೆಯುಳ್ಳದ್ದೇ ವಿದ್ಯೆಯೆಂದು ಹೇಳಲ್ಪಡುವುದು.

ಮನುಷ್ಯನು ಸಾಧ್ಯವಾದ ಮಟ್ಟಿಗೆ ಕೇಡುಗಳನ್ನು ತಪ್ಪಿಸಿಕೊಂಡು ಸುಖವಾಗಿರಬೇಕಾದರೆ, ಸನ್ಮಾರ್ಗಪ್ರವರ್ತನೆಯುಳ್ಳರಬೇಕು. ಅದರೆ ಇದಕ್ಕಿಂತ ಮೊದಲು ಸನ್ಮಾರ್ಗವಾವುದು? ದುರ್ಮಾರ್ಗವಾವುದು? ಎಂಬುದನ್ನು ತಾನು ತಿಳಿದುಕೊಳ್ಳಬೇಕು. ಹೀಗೆ ತಿಳಿವಳಿಕೆಯನ್ನುಂಟುಮಾಡುವುದಕ್ಕಾಗಿಯೇ ಪ್ರಾಚೀನರಾದ ಲೋಕಹಿತೈಷಿಗಳು ಎಷ್ಟೋ ಉತ್ತಮಗ್ರಂಥಗಳನ್ನು ರಚಿಸಿರುವರು. ಅವುಗಳನ್ನು ಓದಿ ತಿಳಿದುಕೊಳ್ಳಬೇಕಾದರೆ ತಾನು ವಿದ್ಯಾವಂತನಾಗಬೇಕು. ಅದುಕಾರಣವೇ ಪೂರ್ವದ ವಿದ್ವಾಂಸರು "ವಿದ್ಯಾವಿಹೀನಃ ಪಶುಃ" ಯೆಂದು ಹೇಳಿರುವರು. ಪಂಚವಿಂಶತಿ ತತ್ವಗಳು ಮನುಷ್ಯನಲ್ಲಿ ಪರಿಪೂರ್ಣವಾಗಿರುವುದರಿಂತ ಸಕಲೇಂದ್ರಿಯ ವ್ಯಾಪಾರಗಳೂ ಅಲ್ಲಿ ನಡೆಯುತ್ತಿರುವುವು. ಪಶುವಿನಲ್ಲಿ ಮಾತ್ರ ಹೀಗಿಲ್ಲ. ಆಕಾಶತತ್ವಸಂಬಂಧವಾದ ಜ್ಞಾನೇಂದ್ರಿಯವೇ ಅಲ್ಲಿ ಲುಪ್ತವಾಗಿರುವುದು. ಅದುಕಾರಣವೇ ಪಶುಗಳಿಗಿಂತಲೂ ಮಾನವಜನ್ಮವು ಅಧಿಕವಾಗಿರುವುದು.

ವಿದ್ಯಾವಂತನು ಜ್ಞಾನವೆಂಬ ಕಣ್ಣನ್ನು ಪಡೆದಿರುವುದರಿಂದ ಅವನು ಉತ್ತಮಮಾರ್ಗದಲ್ಲಿ ನಡೆದು ಸುಖಪಡುವನು. ವಿದ್ಯಾವಿಹೀನನು ಕುರುಡನಂತೆ ದುರ್ಮಾರ್ಗದಲ್ಲಿ ನಡೆದು, ಹಳ್ಳಕೊಳ್ಳದಲ್ಲಿ ಬಿದ್ದು ಕಷ್ಟದಲ್ಲಿ ನರಳುವನು. ಐಶ್ವರ್ಯವಂತರು, ರಾಜರು ಸಹ ವಿದ್ಯಾವಂತನ ಬುದ್ಧಿಶಕ್ತಿಗೆ ಅಡಿಯಾಳಾಗಿರಬೇಕಾಗುವುದು. ವಿದ್ಯೆಗಿರತಕ್ಕ ಗೌರವವು ಅಸಾಧಾರಣವಾದದು. ಲೌಕಿಕಗಳಾದ ಸಕಲ ಸಂಪತ್ತುಗಳೂ ಇಹಲೋಕದ ಸುಖಕ್ಕೆ ಮಾತ್ರವೇ ಸಾಧಕಗಳಾಗುವವು. ವಿದ್ಯಾಸಂಪತ್ತಾದರೋ ಇಹಪರವೆರಡರ ಸುಖವನ್ನೂ ಸಂಪಾದಿಸಿಕೊಡುವುದು. ವಿದ್ಯೆಯಿಲ್ಲದ ಐಶ್ವರ್ಯವು ಎಂದಿಗೂ ಪ್ರಶ್ವಾಸಿಸತಕ್ಕದಲ್ಲ. ಐಶ್ವರ್ಯವಂತನು ತನ್ನ ಧನವನ್ನು ಇತರರಿಗೆ ಕೊಡುತ್ತಾ ಬಂದರೆ, ಅವನಲ್ಲಿ ಅದು ಕಡಿಮೆಯಾಗುತ್ತಾ ಬರುವುದು. ಇದಕ್ಕಾಗಿಯೇ ಧನಿಕರು ಕೊಟ್ಟರೆ ಹೋಗುವುದೆಂದು ಲೋಭಿಗಳಾಗುವರು. ಮತ್ತು ಈ ಧನಕ್ಕೆ ಕಳ್ಳಕಾಕರರ ಭಯವೂ ಉಂಟು. ವಿದ್ಯಾಧನವಾದರೊ ಹಾಗಲ್ಲ. ಇತರರಿಗೆ ಎಷ್ಟು ದಾನ ಮಾಡಲ್ಪಡುತ್ತಿದ್ದರೂ ತಾನುಬೇರೆ ಕಡಿಮೆಯಾಗುವುದಿಲ್ಲ; ಮತ್ತಷ್ಟು ವೃದ್ಧಿಯನ್ನೇ ಹೊಂದುತ್ತಿರುವುದು. ಇದರಿಂದ ಯಾವ ಭೀತಿಯೂ ಯಿಲ್ಲ. ಆರ್ಜಿಸಿದವನನ್ನು ಯಾವಾಗಲೂ ಅನುಸರಿಸಿಯೇ ಇರುವುದು. ಶ್ರೀಮಂತರನ್ನೂ, ಪ್ರಭುಗಳನ್ನೂ ಆಯಾ ನಾಡಿನವರೇ ಪುರಸ್ಕರಿಸುವರು. ವಿದ್ಯಾವಂತರನ್ನಾದರೊ ಜಗತ್ತೆಲ್ಲಾ ಪುರಸ್ಕರಿಸುವುದು.

ವಿದ್ಯೆಯೆಂಬುದು ಜಗತ್ತಿನಲ್ಲಿರದಿದ್ದರೆ, ನಾಗರೀಕತೆಯು ಅಭಿವೃದ್ಧಿ ಹೊಂದುತ್ತಲೇ ಯಿರಲಿಲ್ಲ. ಜಗತ್ತಿನ ಪೂರ್ವಸ್ಥಿತಿಯನ್ನೂ, ಈಗಿನ ಸ್ಥಿತಿಯನ್ನೂ ಸರಿಹೋಲಿಸಿ ನೋಡಿಕೊಳ್ಳುವ ಸಾಧನಸಂಪತ್ತಿಯು ಯಾರಿಗೂ ಉಂಟಾಗುತ್ತಿರಲಿಲ್ಲ. ಜಗಜ್ಜನದ ಸಮೀಚೀನತೆಗೆ ವಿದ್ಯೆಯೇ ಮುಖ್ಯಕಾರಣವು. ವಿದ್ಯಾವಂತನಿಂದ ಜಗತ್ತಿನಲ್ಲಿ ಉಂಟಾಗುತ್ತಿರುವಷ್ಟು ಮಹೋಪಕಾರವು ಇನ್ನಾರಿಂದಲೂ ಆಗುವುದಿಲ್ಲವೆಂಬುದು ನಿರ್ವಿವಾದದ ಮಾತಾಗಿದೆ. ಯಾವ ಕೆಲಸವನ್ನು ಹೇಗೆ ಮಾಡಿ ಸಾಧಿಸಬೇಕೋ ಅದನ್ನು ವಿದ್ಯಾವಂತನು ತಿಳಿದ ಮಟ್ಟಿಗೆ ವಿದ್ಯಾವಿಹೀನನೆಂದಿಗೂ ತಿಳಿಯನು. ಈಗ್ಗೆ ಅನೇಕ ವರ್ಷಗಳಹಿಂದೆ ಪ್ರಪಂಚದಲ್ಲಿನ ಬಹುಭಾಗದ ಜನರು ಮೂಢರಾಗಿದ್ದರು. ಆಗ–ಗ್ರೀಕರು, ರೋಮಾಯರು ಕೇವಲ ವಿದ್ಯಾಕುಶಲರಾಗಿದ್ದುದರಿಂದ, ಬಹುದೇಶಗಳು ಅವರಿಗೆ ಅಧೀನವಾಗಿ ಜಗತ್ತಿನಲ್ಲಿ ನಾಗರೀಕತೆಯು ಹರಡುವುದಕ್ಕೆ ಕಾರಣವಾಯಿತು. ಪ್ರಕೃತದಲ್ಲಿ ಪಾಶ್ಚಾತ್ಯರು ಸರ್ವವಿದ್ಯಾಕುಶಲರಾಗಿರುವುದರಿಂದ, ಬಹುವಿಷಯದಲ್ಲಿ ಅವರನ್ನು ಮೀರಿಸುವುದು ಇತರರಿಗೆ ಅಸಾಧ್ಯವಾಗಿರುವುದು ಇವರಲ್ಲಿ ಅಸಾಧಾರಣವಾದ ವಿದ್ಯಾಶಕ್ತಿಯಿರುವುದರಿಂದ ಅಭೂತಪೂರ್ವವಾದ ಲೋಹ ಯಂತ್ರಾದಿಗಳನ್ನು ಅಸಂಖ್ಯಾತವಾಗಿ ನಿರ್ಮಿಸಿ ಪ್ರಪಂಚಕ್ಕೆಲ್ಲಾ ಸೌಖ್ಯವನ್ನುಂಟುಮಾಡಿ, ತಾವೂ ಸುಖಪಟ್ಟು ನಿರಾತಂಕವಾಗಿ ರಾಜ್ಯವನ್ನಾಳುತ್ತಿರುವರು. ಆದ್ದರಿಂದ ಸಕಲ ಸುಖಕ್ಕೂ, ಗೌರವಕ್ಕೂ ಮುಖ್ಯಾಧಾರಭೂತವಾದ ವಿದ್ಯೆಯನ್ನು ಆರ್ಜಿಸುವುದಕ್ಕೆ ಸರ್ವರೂ ಬಾಲಾರಭ್ಯ ಪ್ರಯತ್ನಪಡಬೇಕೆಂದು ಕೋರುವ.

ವಿದ್ಯಾಭಿಲಾಷಿ.

ವ್ಯವಸಾಯಕ ವಿಷಯಗಳು.

ಕಲ್ಲುಸಕ್ಕರೆಯನ್ನು ತಯಾರ್ಮಾಡತಕ್ಕ ಕ್ರಮ

ಪ್ರಾಯಕವಾಗಿ ನಮ್ಮ ದೇಶಕ್ಕೆ ಇತರ ದೇಶಗಳಿಂದ ಕಲ್ಲುಸಕ್ಕರೆಯನ್ನು ತರಿಸುತ್ತಿದ್ದಾರೆ. ಅದರೆ ಸಿಂಧು ದೇಶದಲ್ಲಿ ಅಲ್ಲಿಗೆ ಬೇಕಾಗುವಷ್ಟು ಕಲ್ಲುಸಕ್ಕರೆಯು ಅಲ್ಲೇ ತಯಾರುಮಾಡಲ್ಪಡುವುದು. ಇದನ್ನು ನೋಡಿದರೆ ಸಕ್ಕರೆಯು ಸಿಕ್ಕತಕ್ಕ ಎಲ್ಲಾ ದೇಶಗಳಲ್ಲೂ ಕಲ್ಲುಸಕ್ಕರೆಯನ್ನು ತಯಾರುಮಾಡುವದು ಸುಲಭಸಾಧ್ಯವೆಂದು ಗೊತ್ತಾಗುತ್ತದೆ.

ಒಂದು ದೊಡ್ಡ ಕಬ್ಬಿಣದ ಕೊಪ್ಪರಿಗೆ ಅಥವಾ ಕಡಾಯಿಯಲ್ಲಿ ಸುಮಾರು ೩೩ ಸೇರು ಸಕ್ಕರೆಯನ್ನು ೧೩ ಸೇರು ನೀರಿನಲ್ಲಿ ಹಾಕಿ ಚೆನ್ನಾಗಿ ಕಾಯಿಸಬೇಕು. ಸಕ್ಕರೆಯು ಕರಗಲು ಆರಂಭವಾದೊಡನೆಯೇ ಅದರಲ್ಲಿ ತೇಲಾಡುವ ಕಸ ಕಡ್ಡಿ ಮೊದಲಾದ ಕಶ್ಮಲಗಳನ್ನೆಲ್ಲಾ ತೆಗೆದುಹಾಕಬೇಕು. ಪಾಕವು ಕುದಿಬರುವುದಕ್ಕೆ ಸ್ವಲ್ಪ ಮುಂಚೆ ಪಾಕದ ಜೊತೆಗೆ ಸುಮಾರು ಮೂರುಪಾವು ಹಾಲು ಹಾಕಿದರೆ ಸಕ್ಕರೆಯಲ್ಲಿರುವ ಕಶ್ಮಲಗಳೆಲ್ಲವೂ ಮೇಲಕ್ಕೆ ತೇಲಿಬರುವುವು. ಅವುಗಳನ್ನು ಸ್ವಲ್ಪವೂ ಬಿಡದಂತೆ ತೆಗೆದುಹಾಕಬೇಕು. ಆನಂತರದಲ್ಲಿ ಉರಿಯನ್ನು ಹೆಚ್ಚಾಗಿ ಹಾಕಿ ಪಾಕವನ್ನು, ಅದು [illegible] ಗಟ್ಟಿಯಾಗಬೇಕಾದರೆ [illegible] ಬರುವರೆಗೂ ಆ ಹದಕ್ಕೆ ಇಳಿಸಿಕೊಳ್ಳಬೇಕು. ಪಾಕವನ್ನು ತಯಾರು ಮಾಡುವುದಕ್ಕೆ ಮೊದಲೇ ಇದನ್ನು ಹುಯ್ಯುವುದಕ್ಕೆ ಮಣ್ಣಿನ ಗಡಿಗೆಗಳನ್ನು ಸಿದ್ಧಪಡಿಸಿಕೊಂಡಿರಬೇಕು. ಇಂಥಾ ಗಡಿಗೆಗಳನ್ನು ಮೂರು ದಿನಗಳಕಾಲ ನೀರಿನಲ್ಲಿ ಮುಳುಗಿಸಿದ್ದು ಆಮೇಲೆ ಅವುಗಳನ್ನು ಸಾಲಾಗಿ ಇಟ್ಟು ಉದ್ದುದ್ದವಾದ ಬಿದರು ಹಚ್ಚಿಗಳನ್ನು ಇವುಗಳ ಬಾಯಿನಮೇನೆ ಅಡ್ಡಡ್ಡಲಾಗಿಡತಕ್ಕದ್ದು. ದಾರದ ತುಂಡುಗಳ ಮಧ್ಯಭಾಗವನ್ನು ಮಡಿಕೆಗಳ ಕೆಳಭಾಗಕ್ಕೆ ಸರಿಯಿಂದ ಅಂಟಿಸಿ ಅವುಗಳ ತುದಿಯನ್ನು ಬಾಯಿನಮೇಲಿರುವ ಹಚ್ಚಿಗಳಿಗೆ ಕಟ್ಟಬೇಕು. ಇದಾದಮೇಲೆ ಹದವಾಗಿ ಕಾಯಿಸಿದ ಪಾಕವನ್ನು ಗಡಿಗೆಗಳಿಗೆ ಸುರಿಯತಕ್ಕದ್ದು. ಪಾಕವು ಗಡಿಗೆಗಳಲ್ಲೇ ಇದ್ದರೆ ಸುಮಾರು ೬–೭ ದಿನಗಳ ಹೊತ್ತಿಗೆ ಗಟ್ಟಿಯಾಗುವುದು. ಅನಂತರದಲ್ಲಿ ಗಡಿಗೆಗಳನ್ನು ಸ್ವಲ್ಪಕಾಲ ಬಿಸಲಿನಲ್ಲಿಡುವುದು. ಪಾಕವು ಹೀಗೆ ಪೂರ್ತಿಯಾಗಿ ಗಟ್ಟಿಯಾದಮೇಲೆ ಗಡಿಗೆಗಳನ್ನು ಒಡೆದುಹಾಕಿದರೆ ಕಲ್ಲುಸಕ್ಕರೆಯು ಸಿಕ್ಕುವುದು.

ಬಾಳೇಗಿಡದ ವ್ಯವಸಾಯ.

ಇದು ಬಹಳ ಪ್ರಯೋಜನಕರವಾದದ್ದು. ಅದರೆ ಈ ವ್ಯವಸಾಯವು ತುಂಬಾ ಉಪೇಕ್ಷಿಸಲ್ಪಟ್ಟಿರುವದು. ಬಾಳೇ ವ್ಯವಸಾಯ ಮಾಡತಕ್ಕವರು ಪ್ರಾಯಕವಾಗಿ ದರಿದ್ರರು ವಿದ್ಯಾವಂತರಲ್ಲ, ಶಾಸ್ತ್ರಮರ್ಯಾದೆಗಳನ್ನು ತಿಳಿದವರಲ್ಲ. ಇವರಿಗೆ ಉತ್ಸಾಹವೂ, ಬಂಡವಾಳವೂ ಎರಡೂ ವಿಶೇಷವಾಗಿರುವದಿಲ್ಲ. ೩೦೦ ಗಿಡಗಳನ್ನು ಸರಿಯಾಗಿ ಬೆಳೆಯುವಂತೆ ಮಾಡಿದರೆ ಅದರಿಂದ ಒಂದು ಕುಟುಂಬವು ಸುಖವಾಗಿ ಜೀವಿಸಬಹುದು. ಬಾಳೇ ಸಾಗುವಳಿಯು ಇಂಡಿಯಾದೇಶದಲ್ಲಿ ಉಕ್ರಮವಾಗಿ ಆಫ್ಘಾನಿಸ್ಥಾನ್, ಪರ್ಷಿಯಾ, ಟಿಬೆಟ್, ಬರ್ಮ, ಮಲಯ ದ್ವೀಪಗಳು, ಸುಮಾತ್ರ, ಜಾವ ಈ ದೇಶಗಳಲ್ಲಿಯೂ ಹರಡಿಕೊಂಡಿತು. ಈ ದೇಶೀಯರೆಲ್ಲರೂ ಬಾಳೆಯ ಪೈರನ್ನು ಚೆನ್ನಾಗಿ ಬಳೆದು ತುಂಬಾ ಧನಿಕರಾಗಿದ್ದಾರೆ. ಇದನ್ನು ಬಳೆಯುವ ಕ್ರಮವೇನೆಂದರೆ:— ಕಂದುಗಳನ್ನು ಹಾಕುವಾಗ್ಗೆ ಒಂದುವರೆಮೊಳ ಆಳವಿರುವಂತೆ ಗುಂಡಿಯನ್ನು ತೋಡಬೇಕು. ಒಂದು ಗುಂಡಿಗೂ ಮತ್ತೊಂದು ಗುಂಡಿಗೂ ೭ ಮೊಳ ವಿಸ್ತೀರ್ಣವಿರಬೇಕು. ಗಿಡವು ಬಳೆದಕೂಡಲೆ ಎಲೆಗಳನ್ನು ಕತ್ತರಿಸಕೂಡದು. ಅನೇಕರು ಒಂದು ಮೊಳ ಆಳವಿರತಕ್ಕ ಗುಂಡಿಯನ್ನು ತೋಡುವರು. ಇದು ಸಾಲದು. ೧೬೦೦ ಚದರ ಗಜಗಳಲ್ಲಿ ೧೦೦ ಗಿಡಗಳನ್ನು ಹಾಕುವರು. ೧॥ ಮೊಳ ಆಳವಿಲ್ಲದೇ ಇದ್ದರೆ ಆಗಕ್ಕೆ ಬೇರುಬಿಡುವದಕ್ಕೆ ಅವಕಾಶವಾಗುವದಿಲ್ಲ; ಗಿಡ ಬಿದ್ದುಹೋಗುವದೂ ಉಂಟು. ಒಂದು ಗಿಡಕ್ಕೂ ಮತ್ತೊಂದು ಗಿಡಕ್ಕೂ ಅಂತರವು ೭ ಮೊಳಕ್ಕಿಂತ ಕಡಮೆಯಾಗಿದ್ದರೆ ಗಿಡಗಳು ಚೆನ್ನಾಗಿ ಬಳೆಯುವದಿಲ್ಲ. ಬಾಳೇತೋಟವನ್ನು ಮರಳು ಜೌಗು ಭೂಮಿಯಲ್ಲಿ ಮಾಡಬೇಕು. ಕೆಸರೇ ಇದಕ್ಕೆ ಗೊಬ್ಬರವಾಗಿ ಪರಿಣಮಿಸುವದು. ಬಾಳೆಯತೋಟವನ್ನು ಉತ್ತು ಕೆಸರನ್ನು ಕಾಡುಮಣ್ಣಿನ ಜೊತೆಗೆ ಮಿಶ್ರಮಾಡಬಹುದು. ವೈಶಾಖ ಅಥವ ಜ್ಯೇಷ್ಠಮಾಸದಲ್ಲ ಒಂದು ಮಳೆಯಾದ ತರುವಾಯ ಕಂದನ್ನು ಹಾಕುವರು. ಕಂದನ್ನು ತೆಗೆದ ೨ ದಿವಸದಮೇಲೆ ಹುಟ್ಟಿಹಾಕಬೇಕು. ಪ್ರಾಯಕವಾಗಿ ಗೊಬ್ಬರಕ್ಕೆ ಬದಲಾಗಿ ಕೆಸರನ್ನು ಹಾಕುವರು. ಕೆಲವು ಸ್ಥಳಗಳಲ್ಲಿ ಹಿಂಡಿಯನ್ನು ಹಾಕುವದೂ ಉಂಟು. ವರುಷಕ್ಕೆ ಎರಡಾವರ್ತಿ ಭೂಮಿಯನ್ನು ಉಳಬೇಕು. ಜುಲೈ ತಿಂಗಳಲ್ಲಿ ಕಳೆ ಕೀಳಬೇಕು. ಆ ಕಾಲದಲ್ಲಿ ಕೆಸಗು ಗೊಬ್ಬರವನ್ನು ಹಾಕುವದೂ ಉಂಟು. ಅಕ್ಟೋಬರ್ ತಿಂಗಳಲ್ಲಿ ಮಣ್ಣನ್ನು ತಿರಿವಿಹಾಕಬೇಕು. ದನದ ಗೊಬ್ಬರವನ್ನು ಹಾಕಬಾರದು. ಹಾಗೆ ಹಾಕಿದರೆ ಒಂದುವಿಧವಾದ ಹುಳುವು ಬಿದ್ದು ಗಿಡಗಳನ್ನು ಕೆಡಿಸುವದು. ದನಗಳು ಎಲೆಗಳನ್ನು ತಿನ್ನದಂತೆ ಮಾಡಬೇಕು. ಸರಿಯಾದ ಫಲವಾಗಬೇಕಾದರೆ ಎಲೆಯನ್ನು ಕತ್ತರಿಸಲೇಕೂಡದು. ಕಳೆಯನ್ನು ಕೀಳದೆ ಇದ್ದರೆ ಫಲವು ಚೆನ್ನಾಗಿ ಆಗುವದಿಲ್ಲ. ಬಾಳೆಯಹಣ್ಣು ಬಹಳ ಪುಷ್ಟಿಕರವಾದ ಆಹಾರ. ಕಾಯಿಂದಲೂ ಹಣ್ಣಿನಿಂದಲೂ ಅನೇಕ ತಿಂಡಿಗಳನ್ನು ಮಾಡುವರು. ಇದರ ನಾರಿನಲ್ಲಿ ಬಟ್ಟೆಗಳನ್ನು ಮಾಡುವರು. ಇದರ ತೊಗಟನ್ನು ಸುಟ್ಟು ಬೂದಿಯನ್ನು ಮಾಡಿದರೆ ಆ ಬೂದಿಯಲ್ಲಿ ಬಟ್ಟೆಗಳನ್ನು ತೊಳೆಯುವದಕ್ಕೆ ಸಾಧಕವಾದ ಒಂದು ಬಗೆ ಉಪ್ಪು ಸಿಕ್ಕುವದು. ಅದರ ದಿಂಡು ಹಣ್ಣಿನಂತೆಯೇ ಭೋಜನಕ್ಕೆ ಉಪಯೋಗಿಸಲ್ಪಡುವದು. ಅದರ ಪಟ್ಟೆಗಳನ್ನು ಕತ್ತರಿಸಿ ದನಗಳಿಗೆ ಆಹಾರಕ್ಕಾಗಿ ಹಾಕುವರು. ಕಂದುಗಳಿಂದ ಬಳೆ ಪೈರುಗಳನ್ನು ಮಾಡಬಹುದು. ೫೦೦ ಬೀಜಗಳನ್ನು ವ್ಯವಸಾಯಮಾಡುವವರಿಂದ ತಿಂಗಳಿಗೆ [illegible] ರೂ. ಉತ್ಪತ್ತಿಯಾಗುವದು. ವ್ಯವಸಾಯ ಮಾಡುವದರಲ್ಲಿ ಸ್ವಲ್ಪ ಹೆಚ್ಚು [illegible] ಮಾಡಿ, ಬೆಳೆ [illegible] ಮಾಡಿದರೆ ಇನ್ನೂ ಹೆಚ್ಚಾಗಿ ಲಾಭಬರುವದು. ಜೀವನದಲ್ಲೆಲ್ಲಾ ಕೃಷಿಯು ಅತ್ಯಂತ ಸ್ವತಂತ್ರವಾದ ಜೀವನವೆಂದು ಇದಕ್ಕೋಸ್ಕರವೇ ಜನಗಳು ಹೇಳುವರು.

ಕೆ. ಕೆ.

ಹಿಂದೂಗಳ ದುರಾಚಾರ.

[ಸೀನ್ I.]

ರಂಗಾಚಾರ್ಯರೂ ರಾಮರಾಯನೂ ಇನ್ನೂ ಕೆಲವರು ಸಂಕಟಪುರದಲ್ಲಿರುವ ಜರಾರಾಯನ ಮನೆಯ ಪಡಸಾಲೆಯಲ್ಲಿ ತಾಂಬೂಲವನ್ನು ಸವಿಯುತ್ತಿರುವರು.

ರಂಗಾಚಾರ್ಯ—ಜರಾರಾಯರೆ! ತಾವು ವಯಸ್ಸಿನಲ್ಲಿ ನನಗಿಂತಲೂ ಎಷ್ಟೋ ಚಿಕ್ಕವರು. ದೇವರು ಚಿಕ್ಕನೋಟದಿಂದ ನೋಡಿದನಾದುದರಿಂದಲೇ ಇಂತಹ ವಿಪತ್ತುಗಳು ಒಂದಾದಮೇಲೊಂದು ಬಂದೊದಗಿದವು. ದೈವಯತ್ನಕ್ಕೆ ಮೀರುವರಾರು? ಮನುಷ್ಯನ ಆಯುಃಪ್ರಮಾಣವು ನೂರು ವರುಷಗಳಲ್ಲವೆ? ಅದರಲ್ಲಿ ಅರ್ಧವೂ ತಮಗಾಗಿರುವಂತೆ ಕಾಣಬರುವುದಿಲ್ಲವು. ತಾವು ಇಷ್ಟು ನಿರುತ್ಸಾಹದಿಂದ ಇರುವುದು ಸರಿಯಾಗಿ ತೋರುವುದಿಲ್ಲವು. ಮತ್ತೆ ವಿವಾಹ ಪ್ರಯತ್ನ ಮಾಡಬೇಕೆಂಬುದೇ ನನ್ನ ಕೋರಿಕೆ.

ಜರಾರಾಯ—(ಬಹು ನಮ್ರತೆಯಿಂದ) ಆಚಾರ್ಯರೆ! ಇದೇನಾಶ್ಚರ್ಯ, ನನ್ನ ಆಲೋಚನೆಗೆ ಈಗತಾನೆ ಈ ಸಂಗತಿ ಬಂದಿತು. ಅಷ್ಟರಲ್ಲೇ ತಾವೂ ಪ್ರಸ್ತಾಪಿಸಿದಿರಿ. ಕಲ್ಯಾಣಕಾಲವು ಬೆಗರಿತೋ? ಅದು ಕೂಡಿದರೆ ಆವುದೂ ಅಡ್ಡಿಮಾಡಲಾರದು. ನಾನು ದೊಡ್ಡವನೆಂದು ಹೆಣ್ಣು ಕೊಡುವುದಿಲ್ಲವೆಂಬುವಾಗಿ ಕೋಪಿಸುವರೋ?

ರಂಗಾಚಾರ್ಯ—ಸ್ವಾಮಿ! ನಿಮ್ಮ ಮಾತಿಗೆ ಅಡ್ಡಬರುತ್ತೇನೆ. ಆದರೆ ತಮಗೆಷ್ಟು ವರುಷಗಳು?

ಜರಾರಾಯ—ಎಷ್ಟು, ಅಕ್ಷಯಸಂವತ್ಸರದ ಕ್ಷಾಮದಲ್ಲಿ ನಾನು ಹತ್ತುಹದಿನೈದು ವರ್ಷಗಳವನು. ಆಗ ಹಣಕ್ಕೆ ಒಂದು ಸೇರಕ್ಕಿಯನ್ನು ಮಾರುತ್ತಿದ್ದರು. ಆಗ ನನಗಿಂತಲೂ ಎಷ್ಟೋ ದೊಡ್ಡವರಾಗಿದ್ದವರು ಇನ್ನೂ ಬದುಕಿದ್ದಾರೆ. ನೋಡಿರಿ! ನಮ್ಮ ತಾಯಿ ಇನ್ನೂ ಎಷ್ಟು ದೃಢಗಾತ್ರರಾಗಿರುವರು. ಆಗಲಿ ತಾಳಿರಿ. ಆಕೆಯನ್ನು ಒಂದುಮಾತ ಕೇಳುತ್ತೇನೆ—ಅಮ್ಮ! ಅಮ್ಮ! (ಎಂದು ಕೂಗಿದನು ತಾಯಾದ ಮಂಗಮ್ಮನು ಬಂದು)

ಮಂಗಮ್ಮ—ಏನುಮಗು?

ಜರಾ—ಅಕ್ಷಯ ಸಂವತ್ಸರದ ಬರದಲ್ಲಿ ನಾನು ಹೇಗಿದ್ದೆ?

ಮಂಗಮ್ಮ—ಅಯ್ಯೋ! ಆಗ ನೀನು ಹೇಗಿದ್ದೆ! ಚೆಂಡು ಆಡುತ್ತಿದ್ದೆ. ಅದುವರೆಗೆ ಪಾಠಶಾಲೆಗೇ ಹೋಗುತ್ತಿರಲಿಲ್ಲ.

ಜರಾ—ಆ! ಹು! ಅದೇ ನನಗೆ ಜ್ಞಾಪಕ. ಇದುವರೆಗೆ ನನಗೆ ಅರವತ್ತು ವರ್ಷಗಳಾಗಿರಬಹುದು. ಇನೂ ನಲವತ್ತು ವರುಷಗಳು ತಲೆಯಮೇಲೆ ಕಲ್ಲುಬಿದ್ದರೂ ನಾನು ಸಾಯುವುದಿಲ್ಲ.

ರಾಮಾಚಾರ್ಯ—ಆದರೆ ಮೊನ್ನೆಯ ಕಟ್ಟಾಡಯ್ಯನವರನ್ನು ನೋಡಿರಿ. ಅವರ ತಲೆ ಮೈ ಎಲ್ಲಾ ನರೆತಿದೆ. ಬಾಯಲ್ಲಿ ಒಂದು ಹಲ್ಲೂ ಇಲ್ಲ. ಗಂಟಲಿನಲ್ಲಿ ಸ್ವರವೇ ಚೆನ್ನಾಗಿ ಹೊರಡದು. ಅಂತಹವರಿಗು ಕೂಡಾ ಮದುವೆಯಾಯಿತು. ನಿಮಗೆ ಮದುವೆಯಾಗುವುದಕ್ಕೆ ಸಂದೇಹವೇನು? ದೃತಕಾಯರು, ವಿದ್ಯಾವಂತರು, ಧನಸಂಪನ್ನರು. ಇನ್ನೂ ನಿಮ್ಮ ತಲೆಗೂದಲೇ ಚೆನ್ನಾಗಿ ನರೆತಿಲ್ಲವು. ಹಲ್ಲುಗಳು ಒಂದೆರಡಾದರೂ ಇವೆ. ಈಗಲೇನು, ಸಣ್ಣಹುಡುಗರಿಗೇ ಹಲ್ಲುಗಳುದುರಿಹೋಗುತ್ತವೆ. ಅದು ಹಾಗಿರಲಿ. ಮನೆಯಲ್ಲಿ ಪಾಪ! ನಿಮ್ಮ ತಾಯಿ ಅತಿ ವೃದ್ಧಳು, ಕಣ್ಣು ಕಾಣಿಸುವುದಿಲ್ಲ, ಕೈಯಲ್ಲಿ ತ್ರಾಣವಿಲ್ಲ. ಆಕೆಗೆ ಒಬ್ಬರು ಸೇವೆಗೆ ಇರಬೇಕು. ನಿಮ್ಮ ಮೊದಲಿನ ಹೆಂಡತಿಯ ಮಗಳೊಬ್ಬಳಿದ್ದಾಳೆ. ಅಳಿಗೆ ಸದಾ ರೋಗ. ಎರಡನೆಯ ಹೆಂಡತಿ ಮಕ್ಕಳಿಬ್ಬರಲ್ಲಿ ಒಬ್ಬನು ಗಂಡುಸು. ಅತನು ಹೊರಗಿನ ಕೆಲಸ ಕಾರ್ಯಗಳನ್ನು ಬಿಟ್ಟು ಮನೆಗೆಲಸವನ್ನು ನೋಡುವುದಕ್ಕಾಗುವುದಿಲ್ಲ. ಅತನ ತಂಗಿ ಇನ್ನೂ ಹುಡುಗಿ, ಆಕೆಯು ತನ್ನ ಎರಡು ಮಕ್ಕಳನ್ನೂ ಕಟ್ಟಿಕೊಂಡು ಹೇಗೆ ಕೆಲಸಗಳನ್ನು ಮಾಡಿಯಾಳು? ಅದರ ಮೇಲೆ ಆಕೆಯ ಗಂಡನು ಹೋಗಿ ಇನ್ನೂ ಒಂದು ವರುಷವಾಗಿಲ್ಲ. ಇನ್ನು ನಿಮ್ಮ ಸಹಾಯವಿನ್ನೆಷ್ಟರವು ಟ್ಟಿಗೆ? ಸಂಪಾದನೆಗಾಗಿ ಹೊರಗೆ ಎಷ್ಟೋ ಶ್ರಮಪಟ್ಟು ಮನೆಗೆ ಬಂದರೆ ಅದರಸುವರಿಲ್ಲದಿದ್ದರೆ ಅವನ ಬಾಳಿನ್ನೇಕೆ? ಏನೋ ಒಂದುವೇಳೆ ಕಾಲುನೊಂದರೂ, ಕೈನೊಂದರೂ, ಮೈನೊಂದರೂ, ಅವುದಾದರು ರೋಗಬಂದರೂ ಹೆಂಡತಿಗೆ ಸಮನಾಗಿ ಹಿತದಿಂದ ನೋಡುವರಾರಿರುವರಲೆ?

[ಸಶೇಷ.]

ದಿಲ್ಲಿಯ ದರ್ಬಾರು.

ಜಾರ್ಜ್ ಚಕ್ರವರ್ತಿ ದಂಪತಿಗಳು ದಿಲ್ಲಿಯಲ್ಲಿ ನಡೆಯುವ ಪಟ್ಟಾಭಿಷೇಕದ ಮಹೋತ್ಸವಕ್ಕಾಗಿ ಹಿಂದೂಸ್ತಾನಕ್ಕೆ [illegible]

ಬಂಧುಗಳು ೫೨ ಜನರೊಡನೆ ಬರುವುದಾಗಿ ಗೊತ್ತಾಗಿರುವುದು. ಡೆರ್ಬಿಷೈರ್ ಡ್ಯೂಕ್‌ರವರ ಮತ್ತೂ ಲಾರ್ಡ್ ಅಂಫಿಲ್ ರವರ ಪತ್ನೀರುಗಳೂ ಪ್ರಭುಗಳ ಪರಿವಾರದಲ್ಲಿ ಸೇರಿರುವರು. ಮೈಸೂರಾಯರ ಅತಿಥಿಗಳಾಗಿ ಕೆಲರು ಸೀಮೆಯಿಂದ ಬರುವವರಾಗಿರುವರು. ಪಾರ್ಲಿಮೆಂಟು ಮೆಂಬರುಗಳಲ್ಲಿ ದರ್ಬಾರಿಗೆ ಅತಿಥಿಗಳಾಗಿ ಬರತಕ್ಕವರು ನವೆಂಬರ್ ತಾ॥ ೭ ರಲ್ಲಿ ಲಂಡನ್ ಪಟ್ಟಣವನ್ನು ಬಿಟ್ಟು ಓರಿಯಂಟಲ್ ಅಫರ್ ಎಂಬ ಹಡಗಿನಲ್ಲಿ ಪ್ರಯಾಣ ಮಾಡಿ ಡಿಸೆಂಬರ್ ತಾ॥ ೮ ರಲ್ಲಿ ಕಲಕತ್ತೆಯನ್ನು ತಲುಪುವರು. ಅಲ್ಲಿಂದ ಮೆಂಬರುಗಳು ದಿಲ್ಲಿಗೆ ರೈಲಿನಲ್ಲಿ ಪ್ರಯಾಣಮಾಡಿ ಬಂದು ಅಲ್ಲಿ ಉತ್ಸವವನ್ನು ತೀರಿಸಿಕೊಂಡು ಮರಳಿ ಕಲಕತ್ತಾಕ್ಕೆ ಹಿಂತಿರುಗಿ ಅದುವರೆಗೆ ತಮಗಾಗಿ ಅಲ್ಲೇ ನಿರೀಕ್ಷಿಸಿಕೊಂಡಿರುವ ಹಡಗನ್ನು ಹತ್ತಿ ರಂಗೂನು, ಮದ್ರಾಸು ಮತ್ತೂ ಸಿಲೋನು ಇವುಗಳನ್ನು ನೋಡಿಕೊಂಡು ೧೯೧೨ ನೇ ಜನವರಿ ತಾ॥ ೬ ರಲ್ಲಿ ಬೊಂಬಾಯನ್ನು ತಲಪುವರು. ಅತಿಥಿಗಳಾಗಲ್ಲದೆ ಸ್ವತಂತ್ರವಾಗಿ ಬರತಕ್ಕ ಪಾರ್ಲಿಮೆಂಟ್ ಮೆಂಬರುಗಳು ಸೆಪ್ಟಂಬರ್ ತಿಂಗಳ ಮಧ್ಯಭಾಗದಲ್ಲಿ ದನ್ನಾಟರ್ ಕ್ಯಾಸಲ್ ಎಂಬ ಹಡಗಿನಲ್ಲಿ ಪ್ರಯಾಣಮಾಡಿ ಕೊಲಂಬೋ ಮತ್ತೂ ಸ್ಟ್ರೇಟ್ ಸೆಟ್ಲಮೆಂಟು ಮಾರ್ಗವಾಗಿ ಜಪಾನಿಗೆ ಬರುವರು. ಅಲ್ಲಿಂದ ಭರತಖಂಡಕ್ಕೆ ಹೊರಟು ದರ್ಬಾರನ್ನೋಡಲಪೇಕ್ಷಿಸುವವರು ಕಲಕತ್ತಾದಲ್ಲಿಳಿದು ದಿಲ್ಲಿಗೆ ಹೋಗಿ ಅನಂತರ ಬೊಂಬಾಯಿಗೆ ಬಂದು ಡಿಸೆಂಬರ್ ತಾ॥ ೨೭ ರಲ್ಲಿ ತಾವು ಬಂದ ಹಡಗಿನಲ್ಲೇ ಕುಳಿತು ಸೀಮೆಗೆ ಹಿಂತಿರುಗುವರು.

ಭರತಖಂಡಕ್ಕೆ ಪ್ರಯಾಣವನ್ನು ಮಾಡಲು ಸನ್ನಾಹವನ್ನು ಮಾಡುತ್ತಿರುವ ಪಾರ್ಲಿಮೆಂಟ್ ಕಮಿಟಿಯವರು ತಮ್ಮಕೂಡ ಬರಲಿಚ್ಛಿಸುವಂಥವರಿಗೆ ಸ್ಥಳಾನುಕೂಲವನ್ನು ಮಾಡಿಕೊಡುವಿರಾ? ಎಂದು ಇಂಡ್ಯಾ ಸರ್ಕಾರದವರನ್ನು ಕೇಳಿರುವಲ್ಲಿ, ಪ್ರಭುಗಳ ಬಿಡಾರದಬಳಿ ೪೦ ಜನರಿಗೆ ಸ್ಥಳವಸತಿಯು ಮಾಡಿ ಕೊಡಲ್ಪಡುವುದು. ಇದಕ್ಕಿನ್ನ ಹೆಚ್ಚಾಗಿ ಬರುವವರು ಇತರ ಅತಿಥಿಗಳ ಬಿಡಾರದಲ್ಲಿ ನಿಲ್ಲಬೇಕಾಗುವುದು. ಇವರು ಪ್ರತಿಯೊಬ್ಬರೂ ೩೦೦೦ ರೂಪಾಯಿಗಳನ್ನು ಕೊಟ್ಟಲ್ಲಿ ತಿರುಗಾಡಲು ರಥಗಳ ವಿನಹಾ ಇತರ ಊಳಿಗ ಸ್ಥಳ ಮೊದಲಾದ ಅನುಕೂಲ್ಯಗಳೆಲ್ಲವೂ ಕಮಿಟಿಯವರಿಂದ ಮಾಡಲ್ಪಡುವುವು. ಸರ್ಕಾರಿಯ ಡೇರಾಗಳೂ, ಮನುಷ್ಯರೂ ದೊರೆಯದಿರುವುದರಿಂದ ಹೊಸವುಗಳನ್ನು ಕೊಂಡು ಬೇರೆ ಮನುಷ್ಯರನ್ನು ನೇಮಿಸಬೇಕಾಗಿರುವಪ್ರಯುಕ್ತ ಇಷ್ಟು ಹೆಚ್ಚು ಛಾರ್ಜನ್ನು ಮಾಡಬೇಕಾಗಿರುವುದು. ಎಂದು ಆ ಮೆಂಬರುಗಳಿಗೆ ಉತ್ತರವು ಕೊಡಲ್ಪಟ್ಟಿರುವುದು.

ಬೊಂಬಾಯಿಗೆ ಪ್ರಭು ದಂಪತಿಗಳು ಬಂದಾಗ್ಗೆ ಪುರಾಲಂಕಾರವನ್ನೂ, ದೀಪೋತ್ಸವಗಳನ್ನೂ ಮಾಡಲು ಒಂದು ಕಾರ್ಯನಿರ್ವಾಹಕ ಸಂಘವೇರ್ಪಟ್ಟಿರುವುದು. ಈ ಉತ್ಸವಸಮಯದಲ್ಲಿ ವಿವಿಧವಾದ ವಿನೋದೋತ್ಸವಗಳನ್ನಡೆಸಲೇರ್ಪಾಡಾಗಿದೆ. ಕಲಕತ್ತಾಕ್ಕೆ ದಯಮಾಡಿಸಿದ ವೇಳೆಯಲ್ಲಿ ನಡಿಸಬೇಕೆಂದಿರುವ ವಿನೋದೋತ್ಸವಗಳಲ್ಲಿ ರಾಮಾಯಣ ಮಹಾಭಾರತ ಸಂಬಂಧವಾದ ಭಾಗಗಳನ್ನು ಪ್ರದರ್ಶಿಸುವುವನ್ನು ಬಿಟ್ಟು (೧) ಅಕ್ಬರ್ ಚಕ್ರವರ್ತಿಯ ಕಾಲದಲ್ಲಾರಂಭಿಸಲ್ಪಟ್ಟು ಈಗಲೂ ಮುರುಷಿದಾಬಾದಿನ ನವಾಬರಿಂದಾಚರಿಸಲ್ಪಡುತ್ತಿರುವ ಮಹಮ್ಮದೀಯರ ಹೊಸ ವರ್ಷಾರಂಭದ ದಿವಸ ಕುದುರೆಗಳನ್ನೂ, ಆನೆಗಳನ್ನೂ ಅಮೋಘವಾದ ವಸ್ತ್ರಾಭರಣಗಳಿಂದಲಂಕರಿಸಿ ಚಕ್ರವರ್ತಿಯವರನ್ನು ಇದಿರ್ಗೊಳ್ಳಲು ಅರಮನೆಯಿಂದ ಹೊರಡುವ ವಿಧಾನವೂ. (೨) ಹಿಂದೂ ರಾಜರುಗಳು ವಿಜಯದಶಮಿ ದಿವಸ ಸರ್ವಾಭರಣ ಭೂಷಿತರಾಗಿ ದಿವ್ಯಾಲಂಕೃತವಾದ ಆನೆಯಮೇಲಿನ ಅಂಬಾರಿಯಲ್ಲಿ ಕುಳಿತು ಸಕಲ ಬಿರುದಾವಳಿಗಳಿಂದಲೂ, ಚತುರಂಗ ಸೇನಾಬಲದಿಂದಲೂ, ಸಂಸ್ಥಾನದ ಅಧಿಕಾರಿಗಳಿಂದಲೂ ಪರಿವೃತರಾಗಿ ಬನ್ನಿಯ ಮರವನ್ನು ಕಡಿಯಲು ಹೋಗುವ ವಿಧಾನವೂ, (೩) ಡಕ್ಕಾದಲ್ಲಿ ಕೃಷ್ಣನ ಜನ್ಮಾಷ್ಟಮಿ ದಿವಸ ಬೆಳ್ಳಿ ಅಥವಾ ಬಂಗಾರದಿಂದ ಮಾಡಿದ ಸಿಂಹಾಸನವನ್ನುಪಯೋಗಿಸುವ ಕ್ರಮವೂ, (೪) ಒರಿಸಾದ ಜನರು ತಮ್ಮ ಕತ್ತಿಕೊಡ ಕಾದಾಡುವ ವಿಚಿತ್ರ ವಿಧಾನವೂ ಪ್ರದರ್ಶಿಸಲ್ಪಡುವುದಾಗಿ ಗೊತ್ತಾಗಿರುವುದು. ದಿಲ್ಲಿಯ ಪಟ್ಟಣದಲ್ಲಿ ಜನರಿಗೆ ಈ ಮಹೋತ್ಸವಕಾಲದಲ್ಲಿ ನಿತ್ಯದಲ್ಲೂ ೧೬ ಗಂಟೆಯ ಕಾಲದಲ್ಲಿ ೧೨,೫೦,೦೦೦ ಗ್ಯಾಲನ್ನು ಕುಡಿಯುವ ನೀರನ್ನೊದಗಿಸಬೇಕೆಂದು ಮೊದಲು ಗೊತ್ತಾಗಿದ್ದು ಈಗ ಜನರು ವಿಶೇಷವಾಗಿ ಸೇರುವುದರಿಂತ ನಿತ್ಯದಲ್ಲೂ ೫೦ ಲಕ್ಷ ಗ್ಯಾಲನ್ನು ನೀರೊದಗಿಸಲ್ಪಡಲು ಅಲ್ಲಿಯ ಮ್ಯುನಿಸಿಪಾಲಿಟಿಯವರು ವ್ಯಯಮಾಡಲು ಗೊತ್ತಾಗಿರುವ ೩ ಲಕ್ಷ ರೂಪಾಯಿಗಳಲ್ಲದೆ ಇನ್ನೂ ೯೦,೦೦೦ ರೂ. ಗಳನ್ನು ಕೊಡಲು ಸರ್ಕಾರದಪ್ಪಣೆಯಾಗಿದೆ. ಉತ್ಸವ [illegible] ತಕ್ಕ ರಾಜಮಾರ್ಗಗಳಲ್ಲಿ ಧೂಳಿ ಏಳದಂತೆ ಸೀಮೆಎಣ್ಣೆಯನ್ನು ನೆಲದಮೇಲೆ ಚೆಲ್ಲಬೇಕೆಂದು ನಿರ್ಧಾರವಾಗಿರುತ್ತದೆ.

ಮೈಸೂರ್ ಸ್ಟಾರ್.

೧೯೧೧ನೇ ಇಸವಿ ಜೂನ್ ತಾ॥ ೧೨ನೇ ಸೋಮವಾರ.

ಮೈಸೂರು ಸಂಸ್ಥಾನದ ಸಂಪತ್ತನ್ನಭಿವೃದ್ಧಿಗೊಳಿಸುವ ಆಲೋಚನಾ ಸಭೆಯು.

(ಎಕನಾಮಿಕ್ ಕಾನ್ಫರೆನ್ಸು.)

ಈ ಸಭೆಯು ಮೊದಲು ಗೊತ್ತಾಗಿದ್ದಂತೆ ಕಳೆದ ತಾ॥ ೮ ರಲ್ಲಿ ಸೇರಲು ಕೆಲವನಿವಾರ್ಯದಿಂದ ಸಾಧ್ಯವಾಗಲಿಲ್ಲವಾಗಿ ಕಳೆದ ತಾ॥ ೧೦ ರ ಮಧ್ಯಾಹ್ನ ೧೨॥ ಗಂಟೆಯಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸಿನ ಸಭಾಂಗಣದಲ್ಲಿ ಶ್ರೀಮನ್ಮಹಾರಾಜರವರಿಂದ ಆರಂಭಿಸಲ್ಪಟ್ಟಿತು. ಯುವರಾಜರೂ, ಬ್ರಿಟಿಷ್ ರೆಸಿಡೆಂಟರು, ಪ್ರೈವೆಟ್ ಸೆಕ್ರೆಟರಿ ಮ॥ ಕ್ಯಾಂಬಲ್‌ರವರು, ಮತ್ತು ಹುಜೂರ್ ಸೆಕ್ರೆಟರಿ ಮ॥ ರಾಘವೇಂದ್ರರಾಯರು ದಯಮಾಡಿಸಿದ್ದರು. ಮ॥ ವಿ. ಪಿ. ಮಾಧವರಾಯರು ಮತ್ತೂ ಮ॥ ಸಿರೂರು ಇವರುಗಳ ವಿನಹಾ ಉಳಿದ ಮೆಂಬರುಗಳೆಲ್ಲರೂ ಬಂದಿದ್ದರು. ಒಕ್ಕಲಿಗರ ಸಂಘದ ಮ॥ ಎಚ್. ಕೆ. ರಾಮಯ್ಯನವರು ಮತ್ತೆ ಕೆಲರು ಬರಮಾಡಲ್ಪಟ್ಟಿದ್ದರು. ವೃತ್ತಪತ್ರಿಕಾ ಪ್ರತಿನಿಧಿಗಳು ಮಹಾರಾಜರವರ ಮತ್ತೂ ದಿವಾನರ ಭಾಷಣಗಳಾಗುವವರೆಗಿದ್ದು ಅನಂತರ ಹೊರಟು ಹೋದರು. ಮತ್ತೂ ಕಟ್ಟಡದ ಹೊರಭಾಗದಲ್ಲಿ ರಿಜರ್ವ್ ಪೋಲೀಸರ ಕಾವಲಿಡಲ್ಪಟ್ಟಿದ್ದಿತು. ಶ್ರೀಮನ್ಮಹಾರಾಜರವರು ಈ ಸಭೆಯನ್ನು ಸ್ಥಾಪಿಸಬೇಕಾದವಶ್ಯಕತೆ ಮತ್ತೂ ಅದರ ಪ್ರಯೋಜನವನ್ನು ಕುರಿತು ೨೦ ನಿಮಿಷಗಳವರೆಗೆ ಒಂದು ರಸವತ್ತಾದ ಭಾಷಣವನ್ನು ಮಾಡಿ ಅರಮನೆಗೆ ದಯಮಾಡಿಸಿದ ಮೇಲೆ, ಸಭಾಧ್ಯಕ್ಷರಾದ ದಿವಾನರು ತಮ್ಮ ಭಾಷಣವನ್ನೋದಿ ಹೇಳಿದರು. ಕೊಂಚಕಾಲ ವಿರಾಮದಿಂದ ಸಭಿಕರಿಗೆ ಅಲ್ಪಾಹಾರವು ನಡೆದು ಅನಂತರ ಮ॥ ಗಳಾದ ಕೆ. ಪಿ. ಪುಟ್ಟಣ್ಣಸೆಟ್ಟರು, ಎ. ರಂಗಸ್ವಾಮಯ್ಯಂಗಾರರು, ಎಂ. ಎ. ನಾರಾಯಣಯ್ಯಂಗಾರರು, ಡಿ. ವೆಂಕಟರಾಮಯ್ಯನವರು, ಎಸ್. ಆರ್. ಬಾಲಕೃಷ್ಣರಾಯರು ಮತ್ತೂ ಎ. ರಾಮಣ್ಣನವರು ವ್ಯವಸಾಯ, ಕೈಗಾರಿಕೆ, ಬ್ಯಾಂಕು ಮೊದಲಾದ ವಿಷಯಗಳಮೇಲೆ ಸಂಕ್ಷೇಪವಾಗಿ ಭಾಷಣಗಳನ್ನು ಮಾಡಿದರು. ಅಲ್ಲಿಗೆ ೭ ಗಂಟೆಯಾಗಲು ಸಭೆಯು ವಿಸರ್ಜಿಸಲ್ಪಟ್ಟಿತು. ಮುಂದಣಕಾರ್ಯವನ್ನಾಲೋಚಿಸುವುದಕ್ಕಾಗಿ ಈ ದಿವಸ ಸಭೆಗೂಡುವುದು. ಮೇಲ್ಕಂಡ ಎರಡು ಭಾಷಣಗಳನ್ನು ಸಂಪೂರ್ಣವಾಗಿಲ್ಲಿ ಕೊಡಲು ಸ್ಥಳವಿಲ್ಲದುದರಿಂದ, ಶ್ರೀಮನ್ಮಹಾರಾಜರವರ ಭಾಷಣದ ಮುಖ್ಯಾಂಶವನ್ನು ಮಾತ್ರ ಈಗ ಕೊಟ್ಟಿರುತ್ತೇವೆ:—

“ಯೂರೋಪು ಖಂಡದಲ್ಲಿ ಬಹು ಅಭಿವೃದ್ಧಿಯನ್ನು ಹೊಂದಿರುವ ರಾಜ್ಯಗಳಲ್ಲಿ ಒಬ್ಬ ಮನುಷ್ಯನು ಸಾಮಾನ್ಯವಾಗಿ ವರ್ಷವೊಂದಕ್ಕೆ ೪೦೦ ರೂ.ಗಳಿಗೆ ಕಡಿಮೆಯಿಲ್ಲದೆಯೂ, ಇಂಗ್ಲೆಂಡಿನಲ್ಲಿ ಮಾತ್ರ ೩೦೦ ರೂ.ಯಿಂದ ೭೦೦ ರೂ.ನ ವರೆಗೂ ಸಂಪಾದಿಸುವನು. ಆದರೆ ನಮ್ಮ ಭರತಖಂಡದಲ್ಲಿ ಒಬ್ಬನು ೩೦ ರೂ. ಗಿಂತ ಹೆಚ್ಚಾಗಿ ಸಂಪಾದಿಸಲಾರನು. ಓದಲೂ, ಬರೆಯಲೂ ಬಲ್ಲವರು ಅಮೇರಿಕಾದ ಸಂಯುಕ್ತ ಸಂಸ್ಥಾನದ ಮತ್ತೂ ಜರ್ಮನಿಯ ಒಟ್ಟು ಜನಸಂಖ್ಯೆಯಲ್ಲಿ ೧೦೦ಕ್ಕೆ ೯೦ ರಂತೆಯೂ, ಜಪಾನಿನಲ್ಲಿ ೧೦೦ ಕ್ಕೆ ೮೦ ಕ್ಕಿಂತಲೂ ಹೆಚ್ಚಾಗಿಯೂ ಇರುವರು. ಆದರೆ ನಮ್ಮ ಮೈಸೂರು ಸೀಮೆಯಲ್ಲಾದರೋ ಅಂಥವರು ಒಟ್ಟು ಜನಸಂಖ್ಯೆಯಲ್ಲಿ ೧೦೦ಕ್ಕೆ ೫ ರಂತೆ ಮಾತ್ರ ಸಿಕ್ಕುವರು. ಬ್ರಿಟಿಷ್ ದೇಶದಲ್ಲಿ ಪ್ರತಿಯೊಂದು ಸಾವಿರ ಜನರಲ್ಲಿ ೩೦ ಮರಣವಾಗುವಂತೆ ನಮ್ಮ ಸೀಮೆಯಲ್ಲೂ ಆಗುವುದು. ಆದರೆ ಇಂಗ್ಲೆಂಡು ಮತ್ತೂ ಜರ್ಮನಿಯಲ್ಲಿ ಸಾವಿರ ಜನರಲ್ಲಿ ೧೫ ರಿಂದ ೧೮ ಕ್ಕೆ ಮೀರಿ ಮರಣವಾಗುವುದಿಲ್ಲವು. ಮೇಲೆಹೇಳಿದ ೩ ಮುಖ್ಯ ವಿಷಯಗಳನ್ನು ಹೋಲಿಸಿ ನೋಡುವುದರಿಂದ, ನಮ್ಮ ದೇಶದಲ್ಲಿ ದಾರಿದ್ರ್ಯವೂ, ಅವಿವೇಕವೂ, ಕಡಿಮೆ ಜೀವತ್ವವೂ ಎಷ್ಟರಮಟ್ಟಿಗೆ ನೆಲಸಿರುವುದೆಂಬುದೂ, ತನ್ಮೂಲಕ ನಮ್ಮ ಜನರ ಸಂಪಾದನೆಯಶಕ್ತಿಯು ಕಡಿಮೆಯಾಗಿರುವುದೂ ಸ್ಪಷ್ಟವಾಗುತ್ತವೆ. ಸಂಪಾದನೆಯಲ್ಲಿ ಬಹು ಅಭಿವೃದ್ಧರಾಗಿರುವ ಜನರ ಮಾರ್ಗವನ್ನನುಸರಿಸಿ ನಾವು ಹೋಗುವುದೇ ಮೇಲೆ ಹೇಳಿದ ಕೊರತೆಗಳ ನಿವಾರಣೋಪಾಯವಾಗಿರುತ್ತದೆ. ಯಾವ ದೇಶದಲ್ಲಿ ನಿಷ್ಪ್ರಯೋಜಕರು ಅಥವಾ ನಿರುದ್ಯೋಗಿಗಳು ಕಡಿಮೆಯಾಗಿರುವರೋ, ಆ ದೇಶವು ಬಹು ಅಭಿವೃದ್ಧಿಯಾದುದೆಂದು ಯೂರೋಪಿನಲ್ಲಿ ಭಾವಿಸಲ್ಪಟ್ಟಿರುತ್ತದೆ. ನಮ್ಮ ದೇಶದಲ್ಲಿ ಬುದ್ಧಿವಂತರಾದ ಕೆಲಸಗಾರರ ಸಂಖ್ಯೆಯೂ ಅವರ ಕಸಬೂ ಹೆಚ್ಚಬೇಕಾಗಿದೆ. ಮತ್ತೂ ನಮ್ಮ ದೇಶದಲ್ಲಿ ಮುಖ್ಯ ಕಸಬಾದ ಬೇಸಾಯವು ಶಾಸ್ತ್ರರೀತ್ಯಾ ಮಾಡಲ್ಪಡುವಂತಾಗಬೇಕು. ರೈತನು ತಾನು ಬೆಳೆದ ಪದಾರ್ಥಗಳಿಗೆ ನ್ಯಾಯ ಬೆಲೆಯಾಗುವುದೆಂಬುದನ್ನು ಕಂಡು ಹಿಡಿಯುವುದನ್ನು [illegible] ಮತ್ತೂ ವ್ಯವಸಾಯ, ಕೈಗಾರಿಕೆ ಇವುಗಳ ಸಂಬಂಧವಾದ ವ್ಯಾಪಾರದಲ್ಲಿ ಸಾಮಾನ್ಯ ಲೆಖ್ಖಾಚಾರವನ್ನು ಮಾಡುವುದನ್ನು ಅವರಿಗೆ ಕಲಿಸಿಕೊಡಬೇಕು. ಐಶ್ವರ್ಯಾಭಿವೃದ್ಧಿಗೆ ಮುಖ್ಯಸಾಧನವಾದುದಕ್ಕೆ ಮೊದಲು ಉತ್ತೇಜನವನ್ನು ಕೊಡತಕ್ಕದಾಗಿದೆ. ಮರ, ಕಬ್ಬಿಣ, ಮಣ್ಣು, ಚರ್ಮ, ಬಟ್ಟೆ ಈ ಪದಾರ್ಥಗಳನ್ನು ಮಾಡುವುದನ್ನು ಬುದ್ಧಿವಂತರಾದ ಜನರಿಗೆ ಕಲಿಸಿ, ನಮಗೆ ನಿತ್ಯದಲ್ಲೂ ಬೇಕಾಗುವ ಪದಾರ್ಥಗಳನ್ನು ಅವರಿಂದಲೇ ಮಾಡಿಸಿಕೊಳ್ಳಲು ಪ್ರಯತ್ನಿಸಬೇಕು. ನಮ್ಮ ಸಂಪತ್ತಿನಭಿವೃದ್ಧಿಗಿರುವ ಬಾಧೆಗಳಿಗೆಲ್ಲಾ ವಿದ್ಯೆಯು ರಾಜವೈದ್ಯವಾಗಿದೆ. ನಮ್ಮ ಸರ್ಕಾರದವರು ಪ್ರಜೆಗಳಿಗೆ ವಿದ್ಯೆಯನ್ನು ಕಲಿಸಿ ಬುದ್ಧಿವಂತರನ್ನಾಗಿ ಮಾಡಲು ಈಚೆಗೆ ಬಹು ಹಣವನ್ನು ವ್ಯಯಮಾಡಿರುವರು. ವಿದ್ಯೆಯ ಅವಶ್ಯಕತೆಯು ನಮ್ಮ ಗಮನದಲ್ಲಿ ವಿಶೇಷವಾಗಿರುವುದರಿಂದಲೇ, ನೀವು ಪರ್ಯಾಲೋಚಿಸಲಿಕ್ಕಿರುವ ವಿಷಯಗಳಲ್ಲಿ ಅದನ್ನು ಮೊದಲು ಕೊಟ್ಟಿರುವುದು. ನಮ್ಮ ದೇಶೀಯರು ವಿದ್ಯಾವಂತರಾಗಿಯೂ, ಕಸಬುದಾರರಾಗಿಯೂ ಆದಲ್ಲಿ ದೇಶದ ಸಂಪತ್ತೂ ಅಭಿವೃದ್ಧಿಯಾಗುವುದಲ್ಲದೆ ಜನರ ಮರಣಸಂಖ್ಯೆಯೂ ಕಡಿಮೆಯಾಗುವುದು. ದಾರಿದ್ರ್ಯ, ಅವಿವೇಕ, ಅನಾರೋಗ್ಯ ಮತ್ತೂ ಅಕಾಲಮರಣ ಇವುಗಳು ಪ್ರತಿಯೊಂದು ದೇಶದಲ್ಲೂ ಎಲ್ಲಕಾಲದಲ್ಲೂ ತಕ್ಕಮಟ್ಟಿಗಿರುವುದಾದರೂ, ಇವನ್ನು ಕಡಿಮೆಮಾಡತಕ್ಕ ಉದ್ದೇಶವು ನಮಗಿರಬೇಕು. ಮಾರ್ಗಾಭಿವೃದ್ಧಿಯಾದಂತೆಲ್ಲ ದೂರವೆಂಬ ಶಬ್ದವೇ ಇಲ್ಲದಂತಾಗಿ ವ್ಯವಸಾಯ ಮತ್ತೂ ಕೈಗಾರಿಕೆಯ ಪದಾರ್ಥಗಳಲ್ಲಿ ಸ್ಪರ್ಧೆಯು ಹೆಚ್ಚುತ್ತಿರುವುದು. ಜಾಣರಾಗಿಯೂ, ಬಲಾಢ್ಯರಾಗಿಯೂ ಇರುವವರ ಕೂಡ ನಾವು ನಮ್ಮ ಪುರಾತನವಾದ ಮುಟ್ಟುಗಳಿಂದ ಹಳೇ ಮಾದರಿಯ ಪದಾರ್ಥಗಳನ್ನು ಮಾಡಿ ಹೋರಾಡಲಾಗುವುದಿಲ್ಲ. ಹಾಗೆ ನಾವು ಅಭಿವೃದ್ಧಿಯನ್ನು ಹೊಂದಬೇಕಾದಲ್ಲಿ ನಮ್ಮ ಹಳೇ ಪದ್ಧತಿಗಳನ್ನು ಬಿಟ್ಟು ಈಗಿನ ಕಾಲದ ಮುಟ್ಟುಗಳಿಂದ ಹೊಸರೀತಿಯ ಪದಾರ್ಥಗಳನ್ನು ಮಾಡಯತ್ನಿಸಬೇಕು. ಈಗ ನಿಮ್ಮ ಪರ್ಯಾಲೋಚನೆಗಾಗಿಟ್ಟಿರುವ ವಿಷಯಗಳೆಲ್ಲವೂ ಸಾಧ್ಯವಾಗಲು ಕೆಲಕಾಲವಾಗಬೇಕಾಗಿರುವುದು. ಆದರೆ ಅವುಗಳಲ್ಲಿ ಕೆಲವನ್ನು ಮಾತ್ರ ಒಳ್ಳೇ ಅನುಭವಸ್ಥರ ಅಭಿಪ್ರಾಯವನ್ನು ತೆಗೆದುಕೊಂಡು ವಿಚಾರಮಾಡಿದುದೇಯಾದರೆ, ಅವನ್ನು ಅನುಷ್ಠಾನಕ್ಕೆ ತರುವುದು ಸಾಧ್ಯವು. ಈ ಸಂಸ್ಥಾನಾಭಿವೃದ್ಧಿಗೆ ಬಾಧಕವಾಗಿರುವ ಸ್ಥಿತಿಗತಿಗೂ, ಅಭಿವೃದ್ಧಿಯಲ್ಲಿರುವ ದೇಶಗಳಲ್ಲಿಯ ಸ್ಥಿತಿಗತಿಗೂ ಹೋಲಿಸಿ ಅವುಗಳ ವ್ಯತ್ಯಾಸವನ್ನು ಕಂಡುಹಿಡಿದು ಇಲ್ಲಿಯ ಜನರ ತಿಳಿವಿಕೆಗೆ ತರಬೇಕಾಗಿರುವುದು. ಈ ರೀತಿಯಾಗಿ ಜನರು ಆಲೋಚಿಸಿ ಕೆಲಸಮಾಡುವುದಾದರೆ, ಅವರಲ್ಲಿ ಕೆಲರು ಮುಖಂಡರು ಮತ್ತೂ ಪ್ರವೀಣರು ಆಗುವರು. ಯಾವುದಾದರೊಂದು ವಿಚಾರದಲ್ಲಿ ಸುಧಾರಣೆಯಾಗಬೇಕಾದುದವಶ್ಯಕವೆಂದು ಮುಖಂಡರಿಗೆ ತೋರಿದಲ್ಲಿ, ಅವರು ಆ ವಿಷಯದಲ್ಲಿ ಪ್ರಯತ್ನಿಸುವಂತೆ ಇತರರನ್ನು ಪ್ರೋತ್ಸಾಹಿಸುವರು. ಮತ್ತೂ ಸರ್ಕಾರದ ಸಹಾಯವು ಅವಶ್ಯಕವಾಗಿದ್ದಲ್ಲಿ ಅಪೇಕ್ಷಿಸುವರು. ಈಗ ಪರ್ಯಾಲೋಚಿಸಲ್ಪಡಲಿಕ್ಕಿರುವ ವಿಷಯಗಳು ಹೆಚ್ಚಾಗಿರುವುದರಿಂದ, ಅವನ್ನು ಸರ್ಕಾರಿಯುದ್ಯೋಗಸ್ಥರು ಮಾತ್ರ ಚರ್ಚಿಸಲು ಸಾಧ್ಯವಲ್ಲವು. ಮತ್ತೂ ಸ್ವತಂತ್ರಜನರು ಅಧಿಕಾರಿಗಳ ಸಹಾಯವಿಲ್ಲದೇನೆ ನಿರ್ವಹಿಸಲು ಅವರಿಗಷ್ಟು ಅನುಭವವಿಲ್ಲವು. ಅದುಕಾರಣ ಉಭಯರೂ ಸೇರಿ ವಿಷಯಗಳನ್ನು ಚರ್ಚೆಸತಕ್ಕದಾಗಿದೆ. ಈ ಸಭೆಯ ಕಾರ್ಯಕ್ರಮದಿಂದ ಪ್ರಜಾಪ್ರತಿನಿಧಿಸಭೆಯಕಾರ್ಯಕ್ರಮಕ್ಕೆ ಯಾವುದೊಂದು ಕುಂದಕವೂ ಇಲ್ಲವು. ಮತ್ತೂ ಪ್ರ॥ ಸಭೆಯ ಪುರೋವೃದ್ಧಿಯನ್ನು ನಾವೂ, ನಮ್ಮ ಸರ್ಕಾರದವರೂ ಯಾವತ್ತೂ ಕೋರತಕ್ಕವರಾಗಿರುವೆವು. ಈ ಸಭೆಯಲ್ಲಿ ಸರ್ಕಾರಿಯುದ್ಯೋಗಸ್ಥರೂ ಇತರರೂ ಕೆಲವು ವಿಷಯಗಳನ್ನು ಚರ್ಚಿಸಿ ಗೊತ್ತುಮಾಡಿದ ಕಾರ್ಯಗಳನ್ನು ಕಮಿಟಿಯವರೂ, ಸಬ್ ಕಮಿಟಿಯವರೂ ಕೈಗೊಂಡು ಮುಖ್ಯವಾದ ವಿಷಯಗಳನ್ನು ಪ್ರಸಿದ್ಧಪತ್ರಿಕೆಗಳ ದ್ವಾರಾ ಆಗಾಗ್ಗೆ ಪ್ರಕಟಿಸುತ್ತ ಬರಬೇಕು. ಈಗ ಚರ್ಚಿಸಬೇಕಾಗಿರುವ ವಿಷಯಗಳನ್ನು ಕುರಿತು ನಿಮ್ಮ ಸ್ವಂತಅಭಿಪ್ರಾಯವನ್ನು ತಿಳುಹಲು ನಿಮಗೆ ಸಾಕಷ್ಟು ವ್ಯವಧಾನವಿಲ್ಲವು, ಆದಾಗ್ಯೂ ನೀವುಗಳು ಕಮಿಟಿಗಳನ್ನು ಮತ್ತೂ ಸಬ್‌ಕಮಿಟಿಗಳನ್ನೇರ್ಪಡಿಸಿ ಈ ವರ್ಷದಲ್ಲಿ ಮಾಡಬೇಕಾದ ಕಾರ್ಯಗಳನ್ನು ಗೊತ್ತುಮಾಡುವಿರೆಂದು ನಾವು ನಂಬುತ್ತೇವೆ. ರಾಜಕೀಯ ಸಂಬಂಧವಾದ ವಿಚಾರವನ್ನು ಚರ್ಚಿಸುವುದರಿಂದ, ಇತರಕಡೆ ಬಹು ಅನರ್ಥವಾಗಿರುವ ಪ್ರಯುಕ್ತ ಅದು ಈ ಸಭೆಯ ಆಲೋಚನೆಯಿಂದ ದೂರೀಕರಿಸಲ್ಪಟ್ಟಿದೆ. ಶ್ರದ್ಧೆಯಿಂದ ಕೆಲಸಮಾಡತಕ್ಕವರು ನಮಗೆ ಬೇಕಾಗಿರುತ್ತಾರೆ. ಈ ವಿಷಯದಲ್ಲಿ ಸಹಾಯಮಾಡಬಿಚ್ಛಿಸುವವರೆಲ್ಲರನ್ನೂ ಅರಿಸಿ ತೆಗೆದುಕೊಳ್ಳಬೇಕೆಂಬುದು ನಮ್ಮ ಅಭಿಮತವು. ಕಾರ್ಯಮಾಡತಕ್ಕ ಶಕ್ತಿಯುಳ್ಳವರು ಕೊಂಚ ವ್ಯವಧಾನವನ್ನು ಮಾಡಿಕೊಂಡು ಈ ಕಾರ್ಯದಲ್ಲಿ ಸಹಾಯಮಾಡಬಹುದು. ವಿಶೇಷಾದಿಗಳಾದವರು ಉಪಾಯಗಳನ್ನು ತೋರಿಸಿಕೊಡಬಹುದು. ಮತ್ತೂ [illegible] ಈ ಕಾರ್ಯಸಾಧನೆಗಾಗಿ ದ್ರವ್ಯಸಹಾಯ ಮಾಡಬಹುದು. ಈಗ ಉದ್ದೇಶಿಸಿರುವ ಕಾರ್ಯದಲ್ಲಿ ಶ್ರದ್ಧೆಯಿಂದ ಕೆಲಸಮಾಡತಕ್ಕವರು ಮೆಂಬರುಗಳಾಗಬೇಕಲ್ಲದೆ, ಬರೀ ಭೂಷಣಪ್ರಾಯರಾದವರು ಬೇಕಾಗಿಲ್ಲವು. ನೀವುಗಳೆಲ್ಲರೂ ಬಿಡದೆ ಶ್ರದ್ಧೆಯಿಂದ ಕೆಲಸಮಾಡಿದುದೇಯಾದರೆ, ದೇಶಾಭ್ಯುದಯಕ್ಕೆ ಸಾಧಕವಾದ ಕಾರ್ಯಗಳನ್ನು ಸಾಧಿಸಬಲ್ಲಿರೆಂದು ನಂಬುತ್ತೇವೆ. ನಮ್ಮ ಸಂಸ್ಥಾನದ ಪ್ರಜೆಗಳಲ್ಲಿ ಪ್ರತಿಯೊಬ್ಬರೂ ಜಾಣರು ಮತ್ತೂ ಸಮರ್ಥರು ಆಗಿ ತಮ್ಮ ಮಕ್ಕಳಿಗೂ, ಮಕ್ಕಳಮಕ್ಕಳಿಗೂ ಯಾವುದಾದರೂ ಚಮತ್ಕಾರವಾದ ಕಸಬನ್ನು ಕಲಿಸುವವರಾಗಲೆಂದು ನಿಮ್ಮಗಳಿಗೂ, ನಿಮ್ಮಗಳಮೂಲಕ ಅವರಿಗೂ ಹೇಳುತ್ತೇವೆ. ಜಯವನ್ನು ಪಡೆಯಲು ಸರಾಗವಾದ ಮಾರ್ಗವಿಲ್ಲವು. ಸರ್ಕಾರಿಯುದ್ಯೋಗಸ್ಥರಾಗಿರಲಿ, ಉದ್ಯೋಗಸ್ಥರಲ್ಲದಿರಲಿ ನಮ್ಮ ದೇಶದ ಪ್ರತಿಯೊಬ್ಬರೂ ಈ ಸಭೆಯುದ್ದೇಶವನ್ನೆರವೇರಿಸಲು ಶ್ರದ್ಧೆಯಿಂದ ಕೆಲಸಮಾಡಬೇಕೆಂದು ನಾವು ಕೋರುವುದು ನಿರರ್ಥಕವಾಗುವುದಿಲ್ಲವೆಂದು ನೆನಸುತ್ತೇವೆ.”

ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುವುದೆಲ್ಲವೂ ಅನುಭವಸಿದ್ಧವು ಮತ್ತೂ ಅತ್ಯಂತ ಪ್ರಯೋಜನಕರವು ಆಗಿರುವುದರಿಂದ, ಅದರಂತೆ ಪ್ರಜೆಗಳು ಶ್ರದ್ಧೆಯಿಂದಾಚರಿಸಿದುದೇಯಾದರೆ, ತಾವೂ ತಮ್ಮ ದೇಶವೂ ಅಭಿವೃದ್ಧಿಯನ್ನು ಹೊಂದುವುದರಲ್ಲಿ ಯಾವ ಸಂದೇಹವೂ ಇಲ್ಲವು. ಈ ಸಭೆಯ ಸ್ಥಾಪನೆಯಿಂದ ಕಳೆದ ೩೦ ವರ್ಷಗಳಿಂದಲೂ ಇರುವ ಪ್ರಜಾಪ್ರತಿನಿಧಿ ಸಭೆಯ ಪ್ರಾಶಸ್ತ್ಯಕ್ಕೆ ಯಾವ ಕುಂದಕವೂ ಇಲ್ಲವೆಂದು ಮತ್ತೂ ಪ್ರಜಾಪ್ರತಿನಿಧಿ ಸಭೆಯ ಅಭಿವೃದ್ಧಿಯನ್ನು ತಾವೂ ತಮ್ಮ ಸರ್ಕಾರದವರೂ ಯಾವಾಗಲೂ ಬಯಸುತ್ತಿರುವೆವೆಂದು ಮಹಾರಾಜರವರು ಸ್ಪಷ್ಟವಾಗ ಪ್ಪಣೆಯನ್ನು ಕೊಡಿಸಿರುತ್ತಾರೆ. ತಮ್ಮ ಪ್ರಜಾಭಿವೃದ್ಧಿಗೆ ಸಾಧಕವಾದುಪಾಯಗಳನ್ನು ಸದಾ ಚಿಂತಿಸುತ್ತಿರುವ ನಮ್ಮ ಮಹಾಪ್ರಭುಗಳುದ್ದಿಷ್ಟ ಕಾರ್ಯವು ಸಫಲವಾಗಿ ಅವರಿಗೆ ಆಚಂದ್ರಾರ್ಕವಾದ ಕೀರ್ತಿಯೂ, ಅವರ ಪ್ರಜೆಗಳಿಗೆ ಸಂಪತ್ತೂ ಲಭ್ಯವಾಗುವಂತೆ ಆಶೀರ್ವದಿಸಲೆಂದು ನಾವು ಆ ಪರಮೇಶ್ವರನನ್ನು ಅನನ್ಯಭಾವದಿಂದ ಪ್ರಾರ್ಥಿಸುತ್ತೇವೆ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು.

ನಮ್ಮ ಪ್ರಭುಗಳಾದ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ., ರವರಿಗೆ ಕಳೆದ ಜ್ಯೇಷ್ಠ ಶು॥ ೧೧ ಗೆ ಸರಿಯಾದ ಜೂನ್ ತಾ॥ ೭ ಕ್ಕೆ ೨೭ ನೇ ವರ್ಷ ವಯಸ್ಸು ತುಂಬಿದುದರಿಂದ ಆ ದಿವಸ ಬೆಳಿಗ್ಗೆ ಪದ್ಧತಿಯ ಪ್ರಕಾರ ಅಂಬಾವಿಳಾಸದಲ್ಲಿ ದರ್ಬಾರು ನಡೆದಿತು. ದಿವಾನರು, ಅಳಿಯಂದಿರುಗಳು, ಕೌನ್ಸಿಲರುಗಳು ಅರಸುಮಕ್ಕಳು, ಶಾಖಾಧಿಕಾರಿಗಳು, ವರ್ತಕರು ಮೊದಲಾದವರು ಸಭೆಯಲ್ಲಿ ನೆರದಿದ್ದರು. ಸಾಯಂಕಾಲ ೫॥ ಗಂಟೆಯಲ್ಲಿ ಶ್ರೀಮನ್ಮಹಾರಾಜರವರೂ, ಶ್ರೀಮದ್ಯುವರಾಜರೂ ಸರ್ವಾಭರಣಭೂಷಿತರಾಗಿ ದಿವ್ಯವಾದ ಕುದುರೆಗಳ ಮೇಲೆ ಕುಳಿತು ಸಕಲ ಬಿರುದಾವಳಿಗಳಿಂದಲೂ, ಸೇನೆಯಿಂದಲೂ, ಅಧಿಕಾರಿಗಳಿಂದಲೂ ಪರಿವೃತರಾಗಿ ಅರಮನೆಯಿಂದ ಉತ್ಸವ ಹೊರಟು ದೊಡ್ಡ ಬಂಗಲೆಗೆ ಚಿತ್ತೈಸಿ ಅಲ್ಲಿ ಸೇನೆಯವರ ಅಂಗಸಾಧನವನ್ನು ಪರಾಮರಿಸಿಕೊಂಡು ರಾತ್ರಿ ೯॥ ಗಂಟೆ ಸಮಯದಲ್ಲಿ ಅರಮನೆಗೆ ಹಿಂತಿರುಗಿ ದಯಮಾಡಿಸಿದರು. ಆ ದಿವಸ ಸೋನೆಯಾಡುತ್ತಿದ್ದುದರಿಂದ ಉತ್ಸವವೈಭವಕ್ಕೆ ಕೊಂಚ ಅಡಚಣೆಯಾಗಿದ್ದಿತು. ಈ ಉತ್ಸವಕ್ಕಾಗಿ ಬಂದಿರುವ ರೆಸಿಡೆಂಟರು ಮೊದಲಾದ ಐರೋಪ್ಯಾತಿಥಿಗಳಿಗೆ ಮಾರನೆಯ ದಿನ ಔತಣವು ನಡೆದಿತು. ಮತ್ತೂ ದಿವಾನರು ಹಿಂದೂ ಅತಿಥಿಗಳಿಗೆ ತಮ್ಮ ಗೃಹದಲ್ಲಿ ಔತಣವನ್ನೂ, ಸಂಗೀತ ಶ್ರವಣವನ್ನೂ ಮಾಡಿಸಿದರು. ತಾ॥ ೮ ರಿಂದ ಕುದುರೆಯ ಮತ್ತೂ ಪೋಲೋವಿನ ಪಂದ್ಯಗಳು ಆಗುತ್ತಿವೆ. ಇದಕ್ಕಾಗಿ ಬಹುಜನ ಐರೋಪ್ಯರೂ, ಪಾರ್ಸಿಗಳೂ, ಮಹಮ್ಮದೀಯರೂ ಬಂದಿರುವರು. ಈ ವಿನೋದಗಳೆಲ್ಲವೂ ತಾ॥ ೧೩ ರಲ್ಲಿ ಮುಗಿಯುವುದರಿಂದ ಐರೋಪ್ಯಾತಿಥಿಗಳೆಲ್ಲರೂ ತಾ॥ ೧೫ ರಲ್ಲಿ ಹಿಂತಿರುಗುವರು. ಸರ್ಕಾರಿಯಧಿಕಾರಿಗಳೂ ಇತರ ಅತಿಥಿಗಳೂ ನಾಳೆನಾಡಿದ್ದರಲ್ಲಿ ಹಿಂತಿರುಗುವವರಾಗಿರುವರು.

Office of Senior Surgeon,
Mysore Govt.
Dated, Bangalore, 10 June 1911.

1. Applications from candidates (Male and Female) for qualifying as Hospital Assistants in the Royapuram Medical School, Madras, will be received by the undersigned, till 22nd June 1911, the latest.

2. Applicants must be Matriculates and should state their age and nationality and if they know Canarese, also send along with their applications, copies of testimonials and a certificate from any graduate in Medicine as to physical fitness and age.

3. Selected candidates will have to execute covenants on a five rupee Mysore Government stamp paper to serve the State for 7 (seven) years, after qualifying as Hospital Assistants.

4. A scholarship of Rs 9/— per mensem for the first year and Rs 10/— for the succeeding three years will be given with supply of books, school fees, etc.

S. V. RAMASWAMY IYENGAR, M. C., M. D.
Personal Assistant,
For Offg., Senior Surgeon, Mysore Govt.

ಒಳದೇಶದವೃತ್ತಾಂತ.

ಚಿಂತಾಮಣಿ ತಾ॥ ಪೋಲೀಸು ಇನ್ಸ್‌ಪೆಕ್ಟರು ಮ॥ ಮರಿಯಪ್ಪನವರು ಕೃತ್ರಿಮ ನಾಣ್ಯಗಳನ್ನು ಮಾಡುವವರನ್ನು ಅಚ್ಚುಸಮೇತ ಹಿಡಿದಿರುವುದಾಗಿ ಕೇಳುತ್ತೇವೆ.

ಶ್ರೀಮನ್ಮಹಾರಾಜರ ವರ್ಧಂತಿಯ ದಿವಸ ಸೀನಿಯರ್‌ಸರ್ಜನ್ ಡಾ॥ ಅಚ್ಯುತರಾಯರು ಅನ್ನಶಾಂತಿ ಸಂಘದಾಲಯದಲ್ಲಿ ೧೦೦ ಜನ ಎಲ್ಲ ಜಾತಿಯ ಬಡವರಿಗೆ ಅನ್ನವನ್ನು ಹಾಕಿಸಿದರು.

ಮೈಸೂರ ಮಹಾರಾಜಾ ಕಾಲೇಜಿನ ರೈಟರಾದ ಮ॥ ಕೃಷ್ಣರಾಯರ ಕುಮಾರ್ತಿಯು ಕಳೆದ ವರ್ಷದ ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ಮೊದಲನೆಯವರಾಗಿ ತೇರ್ಗಡೆಯನ್ನು ಹೊಂದಿರುವುದು ಸ್ತುತ್ಯವಾದುದೇಸರಿ.

ರಾಜಧಾನಿಯ ಅಡ್ವೋಕೇಟರಾದ ಮತ್ತೂ ಲೆ॥ ಕೌನ್ಸಿಲ್ ಮೆಂಬರಾದ ಮ॥ ಎಂ. ಸಿ. ರಂಗಯ್ಯಂಗಾರರ ಕುಮಾರರಾದ ಮ॥ ನರಸಿಂಹಯ್ಯಂಗಾರರು ಈಗ ೨ ವರ್ಷಗಳ ಕೆಳಗೆ ಬ್ಯಾರಿಸ್ಟರ್ ಪರೀಕ್ಷೆಯನ್ನು ಕೊಟ್ಟುಬರಲು ಸೀಮೆಗೆ ಹೋಗಿದ್ದರಷ್ಟೆ. ಇವರು ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾದುದರಿಂದ ಸೀಮೆಯನ್ನು ಬಿಟ್ಟು ಈ ತಾ॥ ೧೬ ನೇ ಶುಕ್ರವಾರ ಬೊಂಬಾಯನ್ನು ತಲುಪುವರು.

ರಾಜಧಾನಿಯಲ್ಲಿ ಕಳೆದವಾರವೆಲ್ಲ ಮಳೆಯು ಹಗಲೂ ರಾತ್ರಿ ಎಡೆಬಿಡದೆ ಮಲೆನಾಡಿನಂತೆ ಸುರಿಯುತ್ತಿದ್ದು ಈ ದಿವಸ ಕೊಂಚ ವಿರಾಮವನ್ನು ಕೊಟ್ಟಂತಿದೆ. ಇದರಿಂದ ಕೆಲಸಗಾರರಿಗೂ, ವರ್ತಕರಿಗೂ ಹೊರಗೆ ಹೋಗಲವಕಾಶವಿಲ್ಲದೆ ಬಹು ತೊಂದರೆಯೂ, ಜಿಗುಪ್ಸೆಯೂ ಆಗಿದ್ದಿತು. ಮಂದಿ ಮೊಹಲ್ಲಾದಲ್ಲಿ ಈಗ್ಗೆ ೧-೨ ವಾರಗಳಿಂದಲೂ ೧-೨ ಪ್ಲೇಗುಮರಣವಾಗುತ್ತಿರುವುದು. ಈ ಮಳೆಯಾಧಿಕ್ಯದಿಂದೆಲ್ಲಿ ಹೆಚ್ಚುವುದೋ ಎಂದು ಜನರು ಭೀತರಾಗಿರುತ್ತಾರೆ.

ರಾಜಧಾನಿಯಿಂದ ಕಳೆದವರ್ಷ ಇಂಟರ್‌ಮೀಡಿಯಟ್ (ಎಫ್. ಎ., ಗೆ ಸಮಾನವಾದ) ಪರೀಕ್ಷೆಗೆ ಹೋಗಿದ್ದ ಒಟ್ಟು ೪೯ ವಿದ್ಯಾರ್ಥಿಗಳಲ್ಲಿ ಮಹಾರಾಜಾಕಾಲೇಜಿನ ೧೯ ವಿದ್ಯಾರ್ಥಿಗಳೂ, ಮಹಾರಾಣೀಕಾಲೇಜಿನ ಒಬ್ಬ ವಿದ್ಯಾರ್ಥಿನಿಯೂ ತೇರ್ಗಡೆಯನ್ನು ಹೊಂದಿರುವರು. ಈ ವಿದ್ಯಾರ್ಥಿನಿಯ ಹೆಸರು ನಾಗಮ್ಮ. ಈಕೆಯು ೨ ವರ್ಷಗಳ ಕೆಳಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ್ದಳು. ಮತ್ತೂ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಮಹಾರಾಜಾಕಾಲೇಜಿನಿಂದ ಹೋಗಿದ್ದ ೭೭ ಜನರಲ್ಲಿ ೨೯, ಮರಿಮಲ್ಲಪ್ಪನವರ ಸ್ಕೂಲಿನಿಂದ ಹೋಗಿದ್ದ ೭೯ ರಲ್ಲಿ ೧೧, ಮಿಷನ್ ಸ್ಕೂಲಿನಿಂದ ಹೋಗಿದ್ದ ೨೨ ಜನರಲ್ಲಿ ೧೧ ಮತ್ತೂ ಇತರಕಡೆಯಿಂದ ಬಂದಿದ್ದವರಲ್ಲಿ ೬ ಈ ಪ್ರಕಾರ ಒಟ್ಟು ೧೭೭ ವಿದ್ಯಾರ್ಥಿಗಳಲ್ಲಿ ೫೮ ಜನರು ತೇರ್ಗಡೆಯನ್ನು ಹೊಂದಿರುತ್ತಾರೆ.

ತರೀಕೆರೆಯಲ್ಲಿ ದೇವಾಂಗದವರು ಕಳೆದ ಮೆ॥ ತಾ॥ ೨೯, ೩೦ ಮತ್ತೂ ೩೧ ರಲ್ಲಿ ಹೊಳಲ್ಕೆರೆಯ ಮ॥ ವರಲಕೆ ದೇವರಪುರದ ರಂಗಣ್ಣನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ತಮ್ಮ ಜನರ ಪುರೋವೃದ್ಧಿಯ ವಿಷಯವನ್ನು ಕುರಿತು ಚರ್ಚಿಸಿ ತಮ್ಮ ಮಕ್ಕಳಿಗೆ ಸಂಸ್ಕೃತ ವಿದ್ಯೆಯನ್ನು ಕಲಿಸಬೇಕೆಂತಲೂ, ತಮ್ಮ ಹೆಣ್ಣು ಮಕ್ಕಳಿಗೆ ೧೦ ವರ್ಷ ವಯಸ್ಸಿನೊಳಗೆ ವಿವಾಹವನ್ನು ಮಾಡಬೇಕೆಂತಲೂ ಮುಂದಣ ಸಭೆಯು ಅರಸೀಕೆರೆ ತಾ॥ ಬಾಣಾವಾರದಲ್ಲಿ ಕೂಡತಕ್ಕದೆಂತಲೂ ಕೆಲ ನಿರ್ಧಾರಗಳನ್ನು ಮಾಡಿಕೊಂಡರು. ಬಾಲ್ಯ ವಯಸ್ಸಿನಲ್ಲೇ ವಿವಾಹವನ್ನು ಮಾಡಬೇಕೆಂಬ ನಿರ್ಬಂಧವನ್ನು [illegible] ಇಟ್ಟುಕೊಂಡಿರುವವರು ಸಹ ಈಗ ಹೆಣ್ಣುಮಕ್ಕಳಿಗೆ ಪ್ರಾಪ್ತ ವಯಸ್ಸಾಗುವವರೆಗೂ ವಿವಾಹವನ್ನು ಮಾಡದಿರಬೇಕೆಂದು ಪ್ರಯತ್ನಿಸುತ್ತಿರುವಾಗ್ಯ ಅಂಥ ನಿರ್ಬಂಧಕ್ಕೊಳಗಾಗದ ಈ ಜನರು ಮೇಲ್ಕಂಡರೀತಿ ನಿರ್ಧಾರವನ್ನು ಮಾಡಿಕೊಂಡಿರುವುದು ಸಹೇದಾಶ್ಚರ್ಯವಾಗಿದೆ.

ರಾಜಧಾನಿಯಲ್ಲಿ ಜಯಲಕ್ಷ್ಮಿವಿಲಾಸ ಬ್ರಾಹ್ಮಿಕಾಶ್ರಮದ ಸಮೀಪದಲ್ಲಿರುವ ನಾರ್ಮಲ್‌ಸ್ಕೂಲಿನ ಮಾದರಿ ಹೊಲದ (ಫಾರಮ್ಮಿನ) ಲ್ಲಿದ್ದ ಒಂದುಜತೆ ಒಳ್ಳೇ ಎತ್ತುಗಳನ್ನು ಕಳೆದ ತಾ॥ ೯ ರ ರಾತ್ರಿ ಯಾರೋ ಕದ್ದು ತೆಗೆದುಕೊಂಡುಬಂದು ಕುಕ್ಕರಹಳ್ಳಿ ಕೆರೆಯ ಕೋಡಿಯ ಹತ್ತಿರವಿರುವ ಸೇತುವೆ ಕೆಳಗೆ ಅವನ್ನು ಕೊಂದು ಚರ್ಮವನ್ನು ಸುಲಿದುಕೊಂಡು ಮೂಳೆಯನ್ನು ಬಿಟ್ಟು ಹೋಗಿದ್ದರಂತೆ. ಪರಮ ಪಾತಕಿಗಳು ದನಗಳ ಚರ್ಮದಾಸೆಯಿಂದ ದನಗಳು ಮೇಯುತ್ತಿರುವ ಸ್ಥಳದಲ್ಲಿ ಹುಲ್ಲಿಗೆ ಒಂದುವಿಧವಾದ ದ್ರಾವಕವನ್ನು ಸವರುತ್ತಾರೆಂದೂ ಅಂಥ ಹುಲ್ಲನ್ನು ಮೇದ ದನಗಳು ಸತ್ತುಹೋಗುತ್ತವೆಂದೂ ಅನೇಕರು ಹೇಳುತ್ತಿರುವರು. ಈ ರಾಜಧಾನಿಯಲ್ಲಿ ಇಂಥ ನೀಚಕೃತ್ಯವು ಈಚೀಚೆಗೆ ವಿಶೇಷವಾಗಿ ನಡಿಯುತ್ತಿರುವುದು. ಇದಕ್ಕೆ ಪೋಲೀಸಿನವರು ಗಮನಕೊಟ್ಟು ಈ ಪರಮ ನೀಚರನ್ನು ಹಿಡಿದು ಶಿಕ್ಷೆಗೆ ಗುರಿಮಾಡದಿದ್ದಲ್ಲಿ, ರಾಜಧಾನಿಯ ದನಗಳು ಬಾಳುವುದು ಬಹು ಕಷ್ಟವಾಗುವುದು.

ರಾಜಧಾನಿಯ ಶ್ರೀಮಂತ ಮೋತಿಖಾನೆ ವರ್ಧಮಾನಯ್ಯನವರು ಕಳೆದ ತಾ॥ ೯ ರಲ್ಲಿ ತಮ್ಮ ಸಹೋದರಿಯ ವಿವಾಹಮಹೋತ್ಸವವನ್ನು ಮಾಡಿದರು. ಈ ಲಗ್ನಕ್ಕೆ ದಿವಾನರು, ಕೌನ್ಸಿಲರುಗಳು, ಇತರ ಅಧಿಕಾರಿಗಳು, ಲಾಯರುಗಳು, ವರ್ತಕರು ಮೊದಲಾದ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು. ಮ॥ ವರ್ಧಮಾನಯ್ಯನವರು ವೇಶ್ಯೆಯರನರ್ತನ ಮದ್ದು ಮೊದಲಾದ ಡಾಂಭಿಕಗಳೇನೂ ಇಲ್ಲದೆ ಉದಾರವಾದ ದಕ್ಷಿಣೆ ತಾಂಬೂಲಾದಿಗಳಿಂದಲೂ ಮೃಷ್ಟಾನ್ನ ಭೋಜನದಿಂದಲೂ ಅತಿಥಿಗಳನ್ನು ತೃಪ್ತಿಗೊಳಿಸಿ ಬಹು ವಿಚಕ್ಷಣೆಯಿಂದ ಲಗ್ನವನ್ನು ನೆರವೇರಿಸಿದರು. ಸೂಳೆಯರ ನರ್ತನಕ್ಕೂ ಮದ್ದು ಮೊದಲಾದ ಹೊರಗಣ ಡಾಂಭಿಕಗಳಿಗೂ ಸಾವಿರಾರು ರೂಪಾಯಿಗಳನ್ನು ವ್ಯಯಮಾಡುವುದು ಅವರಿಗೆ ದೊಡ್ಡದಾಗಿರಲಿಲ್ಲವಾದಾಗ್ಯೂ, ಅಂಥ ನಿಷ್ಪ್ರಯೋಜಕವಾದ ವಿಷಯಗಳಿಗೆ ಅವಕಾಶವನ್ನು ಕೊಡದೆ ಬಹು ಸುಧಾರಿಸಿದ ರೀತಿಯಲ್ಲಿ ವಿವಾಹಮಹೋತ್ಸವವನ್ನು ನೆರವೇರಿಸಿ ಇಂಥ ಶುಭಕಾರ್ಯಗಳಲ್ಲಿ ವೃಥಾ ದುಂದುವೆಚ್ಚವನ್ನು ಮಾಡತಕ್ಕವರಿಗೆಲ್ಲ ಮೇಲುಪಜ್ಞೆಯನ್ನು ಹಾಕಿಕೊಟ್ಟದು ಅವರ ವಿದ್ಯಾಸಂಪನ್ನತೆಗೆ ಭೂಷಣವಾದುದು.

ವರ್ತಮಾನ ಸಂಗ್ರಹ.

ಮೆಕ್ಸಿಕೊಪಟ್ಟಣದಲ್ಲಿ ಭೂಕಂಪನವಾಗಿ ಸೈನಿಕರವಾಸದ ಮನೆಗಳುರುಳಿ ೬೦ ಸೈನಿಕರು ಕಟ್ಟಡಗಳಕೆಳಗೆ ಸಿಕ್ಕಿ ಹೂತುಹೋದರು.

ಕಳೆದ ಮೆ ತಿಂಗಳಲ್ಲಿ ಬ್ರಿಟಿಷ್ ರಾಜ್ಯಕ್ಕೆ ಹೊರಗಿನಿಂದ ಬಂದ ಪದಾರ್ಥಗಳ ಬೆಲೆಯಲ್ಲಿ ೧,೯೬,೯೮,೯೩೫ ಗೂ. ಕಡಿಮೆಯೂ, ಅಲ್ಲಿಂದ ಹೊರಕ್ಕೆ ಸಾಗಿಸಲ್ಪಟ್ಟ ಪದಾರ್ಥಗಳ ಬೆಲೆಯಲ್ಲಿ ೩,೧೧,೧೭,೬೫೫ ರೂ. ಹೆಚ್ಚೂ ಬಂದಿರುತ್ತದೆ.

ಕಳೆದ ಬುಧವಾರ ಮಾಂಟಗುಮರಿ ಮತ್ತೂ ಪಿಷಾವರುಗಳ ಔಷ್ಣ್ಯವು ೧೧೯ ಡಿಗ್ರಿಯೂ, ಜಕೋಬಾಬಾದಿನಲ್ಲಿ ೧೨೭ ಡಿಗ್ರಿಯೂ ಇದ್ದಿತೆಂದೂ ಇಷ್ಟು ಅಧಿಕ ಉಷ್ಣವು ಕಳೆದ ೩೫ ವರ್ಷಗಳಿಂದಲೂ ಇರಲಿಲ್ಲವೆಂದೂ, ಲಾಹೂರಿನಲ್ಲಿ ೧೧೭ ಡಿಗ್ರಿಯ ಔಷ್ಣವಿದ್ದಿತೆಂದೂ ಉಷ್ಣಮಾಪಕಯಂತ್ರದಿಂದ ಗೊತ್ತಾಗಿರುತ್ತದೆ.

ಕಲಕತ್ತಾದಲ್ಲಿ ೫ ಜನ ದೊಡ್ಡ ಸಕ್ಕರೆಯ ವ್ಯಾಪಾರಿಗಳು ಕಳೆದ ಜನ್ನಿನಿಂದ ಡಿಸೆಂಬರ್ ವರೆಗೆ ೧೧,೦೦,೦೦೦ ಮೂಟೆ ಸಕ್ಕರೆಯನ್ನು ಮಾರಿದರು. ಆದರೆ ಈಗ ಕಲಕತ್ತೆಯ ವರ್ತಕರಲ್ಲಿ ೨,೫೧,೦೦೦ ಸಕ್ಕರೆ ಮೂಟೆಗಳು ಮಾರದೆ ನಿಂತಿರುತ್ತವೆ. ಮತ್ತೂ ಜಾವಾದಿಂದ ೩,೦೦,೦೦೦ ಸಕ್ಕರೆ ಮೂಟೆಗಳು ಹಡಗಿನಲ್ಲಿ ಬರುತ್ತಿವೆ. ಇದರಿಂದ ಈಗ ಸಕ್ಕರೆಯ ಬೆಲೆಯು ಇಳಿದಿದೆ.

ಕಳೆದ ತಾ॥ ೩ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೧೯೩೧ ಜನರಿಗೆ ಪ್ಲೇಗು ತಗಲಿ ೯೩೦೨ ಜನರು ಸತ್ತರು. ಇದರಲ್ಲಿ ಬೊಂಬಾಯಾಧಿಪತ್ಯದಲ್ಲಿ ೩೯; ಮದ್ರಾಸಾಧಿಪತ್ಯದಲ್ಲಿ ೧೨; ಬಂಗಾಳದಲ್ಲಿ ೧೧೯; ಸಂಯುಕ್ತ ಪ್ರಾಂತಗಳಲ್ಲಿ ೧೨೨೯; ಪಂಜಾಬಿನಲ್ಲಿ ೬೨೦; ಬರ್ಮಾದಲ್ಲಿ ೧೧೯ ಮತ್ತೂ ರಾಜಪುಟಾನದಲ್ಲಿ ೧೧೭. ಈ ಪ್ರಕಾರವಾಗಾಗಿರುತ್ತದೆ.

ಪಾಟಿಯಾಲಾ ಮಹಾರಾಜರವರ ಯಜಮಾನ್ಯದಿಂದ ಸೀಮೆಗೆ ಭರತಖಂಡದಿಂದ ಹೋಗಿರುವ ಕ್ರಿಕೆಟ್ ಚೆಂಡಿನಾಟದವರು ಈ ಜೂನ್ ತಾ॥ ೮ ರಲ್ಲಿ ಲಂಡನ್ನಿನಲ್ಲಿ ಇಂಗ್ಲೀಷರ ಕೂಡನೆ ಆಡಿದರು. ಇವರಲ್ಲಿ ಮಿಸ್ತ್ರಿ ಎಂಬುವರು ೮೦ ನಿಮಿಷಗಳಲ್ಲಿ ೭೮ ಓಟಗಳನ್ನು ಮಾಡಿರುವರು. ಇಂಗ್ಲೀಷರ ಕಡೆ ನಾಲ್ಕು ಜನರೇ ೨೩೬ ಓಟಗಳನ್ನು ಮಾಡಿರುವರು. ಇವರ ಫಲಿತಾಂಶವಿನ್ನೂ ಗೊತ್ತಾಗಿಲ್ಲವು.

ತಾ॥ ೨೨ ರಲ್ಲಿ ಲಂಡನ್ನಿನಲ್ಲಿ ಕಿರೀಟಧಾರಣ ಮಹೋತ್ಸವವು ನಡೆಯುವುದರಿಂದ ಆ ದಿವಸ ಭರತಖಂಡದ ಎಲ್ಲ ಕೋರ್ಟು ಕಚೇರಿಗಳಿಗೂ, ಪಾಠಶಾಲೆಗಳಿಗೂ ಅಂಚೆ ಮತ್ತೂ ತಂತಿಯಾಫೀಸುಗಳಿಗೂ ರಜವು ಕೊಡಲ್ಪಟ್ಟಿರುವುದು. ಗೌರ್ನರ್ ಜನರಲ್ ರವರು, ಗೌರ್ನರುಗಳೂ ತಂತಮ್ಮ ಸ್ಥಳದ ದೇವಾಲಯಗಳಲ್ಲಿ ಮುಖ್ಯವಾದ ಅಧಿಕಾರಿಗಳ ಮತ್ತೂ ಇತರ ದೊಡ್ಡಮನುಷ್ಯರಕೂಡ ಸೇರಿ ದೇವರಪ್ರಾರ್ಥನೆಯನ್ನು ಮಾಡುವರು.

ಜಾರ್ಜ್ ಪ್ರಭುಗಳು ಈ ತಾ॥ ೨೨ ರಲ್ಲಿ ಧರಿಸಲಿಕ್ಕಿರುವ ಕಿರೀಟಕ್ಕೆ ೨೧೯ ವಜ್ರಗಳು, ೨೯೭ ಮುತ್ತುಗಳು, ೨ ಪಚ್ಚೆಗಳು, ೫೩ ಕೆಮಲಗಳು, ೫೨ ಕೆಂಪುಗಳುಪಯೋಗಿಸಲ್ಪಟ್ಟಿವೆ. ಇವುಗಳಲ್ಲಿ ಭರತಖಂಡದಿಂದ ತೆಗೆದುಕೊಂಡು ಹೋಗಿರುವ ಕೊಹಿನೂರು ವಜ್ರವೂ, ಈಚೆಗೆ ಆಫ್ರಿಕಾದೇಶದಲ್ಲಿ ದೊರೆತ ಕಲ್ಲಿನ್ ಅನ್ ವಜ್ರವೂ ಮುಖ್ಯವಾದವುಗಳಾಗಿವೆ. ಈ ಕಲ್ಲಿನ್ ಅನ್ ವಜ್ರವು ೫೦ ರೂಪಾಯಿತೂಕವಿದೆ. ಮತ್ತೂ ಇದು ೨ ಭಾಗಗಳಾಗಿ ಕತ್ತರಿಸಲ್ಪಟ್ಟಿದೆ.

ಹೌರಾ ಡಿ॥ ಗೆ ಸೇರಿದ ಖಾಷ್‌ವಾರ್ ಗ್ರಾಮದಲ್ಲಿ ಒಬ್ಬ ಮಹಮ್ಮದೀಯನ ಮನೆಗೆ ೧೨ ಜನ ಕಳ್ಳರು ಆಯುಧಪಾಣಿಗಳಾಗಿ ಕಳೆದ ಮಂಗಳವಾರ ರಾತ್ರಿ ನುಗ್ಗಿದರು. ಇವರನ್ನು ಕಂಡು ನಾಯಿಯು ಬೊಗಳಲು, ಮನೆಯ ಯಜಮಾನನೆದ್ದು ತಲವಾಗಿಲಿಗೆ ಬಂದು ಕಳ್ಳರನ್ನು ನೋಡಿ ಗಟ್ಟಿಯಾಗಿ ಕೂಗಿಕೊಂಡನು. ಈ ಕೂಗನ್ನು ಕೇಳಿ ನೆರೆಹೊರೆಯವರೆಲ್ಲರೂ ಬರಲು ಕಳ್ಳರು ಕಾಲಿಗೆ ಬುದ್ಧಿಯನ್ನು ಹೇಳಿದರು. ಆದರೆ ಗ್ರಾಮಸ್ಥರು ಅವರ ಬೆನ್ನಹತ್ತಿ ಹೋಗಿ ಅವರಕೂಡ ಕಾದಾಡಿದರು. ಈ ಕದನದಲ್ಲಿ ಕಳ್ಳರು ಪೆಟ್ಟನ್ನು ತಿಂದು ಆಯುಧಗಳನ್ನು ಬಿಟ್ಟೋಡಿದರು.

ಬಿಕನೀರ್ ಸಂಸ್ಥಾನದ ಮಹಾರಾಜರು ಲಂಡನ್ ಪಟ್ಟಣವನ್ನು ತಲುಪಿದರು. ಇವರನ್ನು ಮಾಂಚೆಸ್ಟರ್ ಡ್ಯೂಕ್ ಮೊದಲಾದವರು ಸ್ಟೇಷನ್ನಿನಲ್ಲಿದುರ್ಗೊಂಡು ಮರ್ಯಾದಿಸಿದರು. ಗ್ವಾಲಿಯರ್ ಸಂಸ್ಥಾನದ ಮಹಾರಾಜ ಸಿಂಧ್ಯಾರವರು ಲಂಡನ್ ನಗರವನ್ನು ಸೇರಿದರು. ಜಪಾನ್ ಪ್ರತಿನಿಧಿಗಳಾದ ಅಡ್ಮಿರಲ್ ಟೋಗೋ ಮತ್ತೂ ಜನರಲ್ ನೋಗಿಯವರು ಲಂಡನ್ನಿಗೆ ಪ್ರಯಾಣ ಮಾಡಿರುತ್ತಾರೆ. ಕಿರೀಟಧಾರಣ ಮಹೋತ್ಸವಕ್ಕಾಗಿ ಪ್ರತಿನಿತ್ಯದಲ್ಲೂ ೭ ಲಕ್ಷ ಜನರು ಲಂಡನ್ನಿಗೆ ಬರುತ್ತಿದಾರೆ. ಇಷ್ಟೊಂದು ಜನರು ಹಿಂದೆ ಯಾವ ಸಂದರ್ಭದಲ್ಲೂ ಸೇರಿರಲಿಲ್ಲವು. ಅಲ್ಲಿಯ ಅಂಗಡಿಯವರಿಗೆ ವಿಶೇಷ ವ್ಯಾಪಾರವಾಗುತ್ತಿದೆ.

ತಿಬೆಟ್ಟಿನ ಪ್ರಕೃತ ಸ್ಥಿತಿಯನ್ನು ಕುರಿತು ದಲಾಯಲಾಮನು ಬರೆಯುವುದೇನಂದರೆ:— ಈ ದೇಶವನ್ನು ಚೀನೆಯರು ಆಕ್ರಮಿಸಿಕೊಂಡು ಇಲ್ಲಿ ದೊಡ್ಡ ಸೇನೆಯನ್ನಿರಿಸಿರುವರು. ನಮ್ಮ ಜನರಿಗಂತೂ ಹಿಂಸೆಯು ಬಹುವಾಗಿದೆ. ಚೈನಾದ ರಾಯಭಾರಿಯು ಬಹು ಬಲಿಷ್ಠನು ಮತ್ತೂ ನಮ್ಮ ಜನರನ್ನು ಬಹು ಕ್ರೂರವಾಗಿ ಕಾಣುತ್ತಿದಾನೆ. ನಮ್ಮ ಮಂತ್ರಿಗಳೇನಾದರೂ ಮೈಲುವು ಗಾಗಲಿ ಅಥವಾ ಪೆಕಿಂಗಿನಲ್ಲಿರುವ ಚೈನಾದ ಫಾರಿನ್ ಆಫೀಸಿಗಾಗಲಿ ನಮ್ಮ ಜನರಿಗಿರುವ ತೊಂದರೆಯನ್ನು ತಪ್ಪಿಸಿಕೊಡಲು ತಂತಿಯನ್ನು ಕೊಟ್ಟಲ್ಲಿ ಉತ್ತರವೇ ದೊರೆಯುವುದಿಲ್ಲವು. ಇದರಿಂದ ದಲಾಯಿಲಾಮನ ಮನೋಗತವು ಗೊತ್ತಾಗದಿದ್ದಾಗ್ಗ್ಯೂ ಚೀನೆಯರು ಮಾತ್ರ ತಿಬೆಟ್ಟಿನಲ್ಲಿ ತಮಗೆ ಮೊದಲಿದ್ದ ಅಧಿಕಾರವನ್ನು ಸಂಪಾದಿಸಿಕೊಳ್ಳುವ ಯತ್ನದಲ್ಲಿದ್ದಾರೆಂದು ಗೊತ್ತಾಗುತ್ತದೆ.

ಕಳೆದ ಸೋಮವಾರ ರಂಗೂನಿನಲ್ಲಿ ಆಗತಾನೆ ರೈಲಿನಿಂದ ತರಲ್ಪಟ್ಟ ಕೆಲ ಎಮ್ಮೆಗಳಲ್ಲಿ ಒಂದು ರೇಗಿ ಬೀದಿಯಲ್ಲಿ ಮನಸ್ಸಿಗೆ ಓಡುತ ಒಬ್ಬ ಚೈನಾದೇಶಸ್ಥನಮೇಲೆ ನುಗ್ಗಿ ಅವನ ಎಡತೋಳನ್ನು ತನ್ನ ಕೊಂಬಿನಿಂದ ತಿವಿದು ಪೂರಾ ಪೆಟ್ಟನ್ನುಂಟುಮಾಡಿ, ಅಲ್ಲಿಂದ ಒಂದು ಮಗುವನ್ನೆತ್ತಿಕೊಂಡಿದ್ದ ಒಬ್ಬ ಬೀದಿಯನ್ನು ಗುಡಿಸುವವನ ಮೇಲೆನುಗ್ಗಿ ಅವನನ್ನು ಕೆಡವಿಬಿಟ್ಟು ಅವನಿಗೆ ಪ್ರಾಣಾಪಾಯವನ್ನುಂಟುಮಾಡಿ, ಅಲ್ಲಿಂದ ಒಬ್ಬ ಚಿಕ್ಕ ಹುಡುಗನನ್ನು ಕೆಡವಿ ಒಬ್ಬ ಸಿಪಾಯಿನಮೇಲೆಬಿದ್ದು ಅವನ ಒಂದು ತೋಳನ್ನು ಮುರಿದುಬಿಟ್ಟಿತು. ಮತ್ತೂ ಗೌರ್ನಮೆಂಟು ಹಾಸ್ಪಿಟಲಿಗೆ ಮತ್ತೊಬ್ಬ ಸಿಪಾಯಿನ ಮೇಲೆನುಗ್ಗಿ ಆತನನ್ನು ತಿವಿದು ತುಂಬಾ ಅಪಾಯವನ್ನುಂಟುಮಾಡಿತು. ಅಷ್ಟರಲ್ಲಿ ಗುಂಡನ್ನು ಹೊಡೆದು ಅದನ್ನು ಕೊಂದುಬಿಟ್ಟರು. ಆ ಸಿಪಾಯಿಯೂ, ಗುಡಿಸುವವನೂ ಪ್ರಾಣಾಪಾಯ ಸ್ಥಿತಿಯಲ್ಲಿರುವರು.

ಪತ್ರವ್ಯವಹಾರ.

ಕೋಲಾರದ ತಾ॥ ನಾಗಲಾಪುರ ಮಠದ ಪಟ್ಟಾಧ್ಯಕ್ಷರಾದ ಶ್ರೀ ಗುರುಲಿಂಗರಾಜ ಸ್ವಾಮಿಯವರು ಕಳೆದ ಮೆ ತಾ॥ ೧೮ ನೇ ಗುರುವಾರ ಮಿಥುನಲಗ್ನದಲ್ಲಿ ೨೦೦ ಪಟುಗಳಿಗೆ ಶಿವದೀಕ್ಷೆಯನ್ನೂ, ಮಾರನೆಯ ದಿನ ಬೆಳಿಗ್ಗೆ ೫-೬ ಸಾವಿರ ಭಕ್ತ ಮಾಹೇಶ್ವರರಿಗೆ ಮಹಾ ಗಣಾರಾಧನೆಯನ್ನೂ ಅತಿವಿಜೃಂಭಣೆಯಿಂದಲೂ, ವಿಚಕ್ಷಣೆಯಿಂದಲೂ ನಡಿಸಿದರು.

ಈ ಮಹೋತ್ಸವಕ್ಕೆ ಹುಣಸಮಾರನಹಳ್ಳಿಯ ಸಂಸ್ಥಾನಿಕರು ಮೊದಲಾದವರೂ, ಕೋಲಾರಪೇಟೆಯ ಶೆಟ್ಟರು, ಯಜಮಾನರು ಮೊದಲಾದವರು ದಯಮಾಡಿಸಿದ್ದರು. ಈ ಮಹೋತ್ಸವವು ೨-೩ ದಿನಗಳವರೆಗೆ ಜಾತ್ರೆಯಂತೆ ನಡೆದು ತೆಂಗಿನಕಾಯಿ ೧ ಕ್ಕೆ ೨ ಆಣೆಯಂತೆಯೂ, ಬಾಳೆಹಣ್ಣು ಡುಬ್ಬಿಗೆ ೧ ರಂತೆಯೂ ಮಾರಲ್ಪಟ್ಟವು. ಪ್ರತ್ಯಕ್ಷದರ್ಶಿ.

ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡು.

ಮೆ॥ ರಾ॥ ಗಳಾದ

ಆನೆಕಲ್ ಚಿಕ್ಕರುದ್ರಪ್ಪನವರ ಮಗಳ ಲಗ್ನದಲ್ಲಿ	೧೦—೦—೦
ಬೆಂಗಳೂರು ಗರಡಿಮನೆ ಶಿದ್ದೀಗಪ್ಪನವರ ತಮ್ಮಂದಿರು ರುದ್ರಪ್ಪ ಬಾರ್ ಎಟ್‌ಲಾ ರವರ ಲಗ್ನದಲ್ಲಿ ...	೧೦—೦—೦
ಕ್ಯಾಮಗೊಂಡ್ಲು ಮರಿಚೆನ್ನಶೆಟ್ಟರ ಮಕ್ಕಳು ಪುಟ್ಟಗಂಗಯ್ಯನವರ ಲಗ್ನದಲ್ಲಿ	೩—೧—೦
ಕೆಂದೂರು ಚನ್ನಬಸಣ್ಣನವರ ಮಗ ಗುಬ್ಬಣ್ಣನವರ ಲಗ್ನದಲ್ಲಿ ...	೩—೦—೦
ಬ್ಯಾಸೆಗೆರಹಳ್ಳಿ ರಾಮಣ್ಣನವರಿಂದ...	೬—೦—೦
ಮೊಗಲಿ ತಮ್ಮಣ್ಣಗೌಡರ ಲಗ್ನದಲ್ಲಿ	೮—೦—೦
ಬಾಶ್ಯು ರಸ್ತೆಮನೆ ಮಲ್ಲೀಗೌಡರ ಮಗಳ ಲಗ್ನದಲ್ಲಿ	೫—೦—೦
ಬಾಶ್ಯು ಕೆಳಗಳ ತೋಟ್ಟಿ ನಂಜೇಗೌಡರ ಲಗ್ನದಲ್ಲಿ	೪—೦—೦
ಕೆ. ಸಿದ್ಧರಾಮಪ್ಪನವರಿಂದ ಅವರ ನೂತನ ಗೃಹಪ್ರವೇಶಮಾಡಿದುದಕ್ಕಾಗಿ...	೨—೦—೦
	೫೨—೧—೦
ಹಿಂದೆ ಬಂದುದು ...	೨೯—೦—೦
ಒಟ್ಟು ...	೮೧—೧—೦

ಜಿ. ಶಾಂತವೀರಪ್ಪ,
ಸೆಕ್ರಿಟರಿ.

ಕಳೆದ ಮೆ ತಾ॥ ೩೧ರಲ್ಲಿ ಬೆಂಗಳೂರಲ್ಲಿ ನಡೆದ ಮೆ॥ರಾ॥ ಜಿ. ರುದ್ರಪ್ಪ ಬಿ. ಎ., (ಆಕ್ಸ್‌ಫರ್ಡ್) ಬ್ಯಾರಿಸ್ಟರ್ ಅಟ್‌ಲಾ ಯವರ ವಿವಾಹಮಹೋತ್ಸವದ ವಿವರಣೆಯನ್ನು ಒಬ್ಬ ಪ್ರತ್ಯಕ್ಷದರ್ಶಿಯು ಕಳೆದ ವಾರದ "ಸ್ಟಾರ್" ಪತ್ರಿಕೆಯಲ್ಲಿ ಬರೆದಿರುವರಷ್ಟೆ. ಈ ಲಗ್ನಕ್ಕೆ ಬೆಂಗಳೂರ ಶೆಟ್ಟಿ ಯಜಮಾನರು ಮುಂತಾದ ವರ್ತಕರು ಬಂದಿದ್ದರಲ್ಲದೆ, ತಾ॥ ೨ ರಲ್ಲಿ ಸಂಸ್ಥಾನದ ದಿವಾನರಾದ ಮ॥ ಟಿ. ಆನಂದರಾಯರು ದಯಮಾಡಿಸಿದ್ದರು. ಮೊದಲನೆಯ ದಿವಸ ಮುಹೂರ್ತವಾದನಂತರ ಸಭಿಕರಿಗೆ ತಾಂಬೂಲ ವಿನಿಯೋಗವಾಗುವುದಕ್ಕೆ ಮೊದಲು ಮ॥ ರಾ॥ ಗರಡಿ ಸಿದ್ಧವೀರಪ್ಪನವರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ೧೦ ರೂ. ಕಾಣಿಕೆಯನ್ನು ತೆಗೆದು ಅಧ್ಯಕ್ಷರಿಗೆ ಒಪ್ಪಿಸಿದರು. ಈ ದೊಡ್ಡ ಮನುಷ್ಯರು ಮಹಾಸಭೆಯ ತೀರ್ಮಾನವನ್ನು ಗೌರವಿಸಿದುದು ತುಂಬಾ ಶ್ಲಾಘನೀಯವಾದುದಾಗಿದೆ. ಇವರ ಮೇಲ್ಪಂಕ್ತಿಯನ್ನು ಇತರ ವೀರಶೈವ ದೊಡ್ಡಮನುಷ್ಯರು ಅನುಸರಿಸಿದರೆ ವೀರಶೈವ ವಿದ್ಯಾಭಿವೃದ್ಧಿ ಫಂಡಿನ ಸಂಘದವರು ಕೈಗೊಂಡಿರುವ ಕಾರ್ಯವು ಶೀಘ್ರವಾಗಿ ಸಫಲವಾಗುವುದರಲ್ಲಿ ಸಂದೇಹವಿಲ್ಲ. ನಮ್ಮ ಮತದ ಶ್ರೀಮಂತರು ಲಗ್ನಗಳಲ್ಲಿ ಮೇಳ್ಯಾಂಗನೆಯರಿಗೂ, ಮದ್ದು ಮೊದಲಾದ ವಿನೋದಕ್ಕೂ ಸಾವಿರಾರು ರೂಪಾಯಿಗಳನ್ನು ವ್ಯರ್ಥವಾಗಿ ವೆಚ್ಚಮಾಡುತ್ತಿರುವಲ್ಲಿ ವಿದ್ಯಾ ಪ್ರೋತ್ಸಾಹಕ್ಕಾಗಿ ೧೦-೧೫ ರೂಪಾಯಿಗಳನ್ನು ಕೊಡಲು ಹಿಂದುಮುಂದು ನೋಡಿದರೆ ಈ ೨೦ ನೆಯ ಶತಮಾನದಲ್ಲಿ ಜಾಣರ ನಗೆಗೀಡಾಗುವುದಿಲ್ಲವೆ? ಬೆಂಗಳೂರು ಪಟ್ಟಣದ ದೇಶದ ಶೆಟ್ಟಿ ಯಜಮಾನರು ಮನಸ್ಕರಿಸಿದು ದೇಹಾದರೆ ಇದೊಂದು ಪಟ್ಟಣದಲ್ಲೇ ಲಗ್ನಕಾಲದಲ್ಲಿ ಫಂಡಿಗೆ ನೂರಾರು ರೂಪಾಯಿಗಳು ಶೇಖರವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಬೆಂಗಳೂರಿನಂತಹ ನಗರದಲ್ಲಿ ವಾಸವಾಗಿದ್ದರೂ ಇಲ್ಲಿನ ವೀರಶೈವರಿಗೆ ವಿದ್ಯಾಭಿಮಾನ ಉಂಟಾಗದಿರುವುದು ಆಶ್ಚರ್ಯವಾಗಿದೆ. ಎಲ್ಲಾ ವಿಧವಾದ ದಾನಗಳಿಗಿಂತಲೂ ವಿದ್ಯಾದಾನವೇ ಉತ್ಕೃಷ್ಟವಾದುದೆಂದೂ, ಲಗ್ನ ಮೊದಲಾದ ಶುಭ ಕಾರ್ಯಗಳಲ್ಲಿ ವಿದ್ಯಾಭಿವೃದ್ಧಿ ಫಂಡಿಗೆ ಸಹಾಯಮಾಡತಕ್ಕದು ಮುಖ್ಯ ಕರ್ತವ್ಯವೆಂದೂ ಶ್ರೀಯುತ ಕೆ. ಪಿ. ಪುಟ್ಟಣ್ಣಶೆಟ್ಟರು ಭಾವಿಸದಿದ್ದರೆ ತಮ್ಮ ಮನೆಯ ಲಗ್ನಗಳಲ್ಲಿ ಮೇಲ್ಕಂಡ ಫಂಡಿಗೆ ಉದಾರವಾಗಿ ಸಹಾಯಮಾಡುತ್ತಿದ್ದರೆ? ಎಂಬುದನ್ನು ಬೆಂಗಳೂರಿನ ವೀರಶೈವ ಶ್ರೀಮಂತರು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ಇನ್ನಾದರೂ ಮಹಾಸಭೆಯ ತೀರ್ಮಾನವನ್ನು ಗೌರವಿಸುವಂತೆ ಬೆಂಗಳೂರಿನ ದೇಶದ ಶೆಟ್ಟಿಯಜಮಾನರಿಗೂ ಮತ್ತು ಶ್ರೀಮಂತರಿಗೂ ಈಶ್ವರಪ್ರೇರಣೆಯಾಗಲೆಂದು ಪ್ರಾರ್ಥನೆ.

ಓರ್ವ ವಿದ್ಯಾಭಿಮಾನಿ.

ಹಾವೇರಿ ತಾಲ್ಲೂಕು ಕಮಿಟಿ.

(ಕಳೆದವಾರದ ಶೇಷ.)

೩. ಈ ತಾಲ್ಲೂಕು ಕಮಿಟಿಗೆ ಕೆಳಗೆ ಬರೆದ ಸದ್ಗೃಹಸ್ಥರನ್ನ ವ್ಯವಸ್ಥಾಪಕ ಕಮಿಟಿ ಮೆಂಬರರನ್ನಾಗಿ ನೇಮಿಸಿದೆ.

(೧) ಸರದಾರ ಬುಳ್ಳಪ್ಪಾ ಬಸವಂತರಾವ್ ದೇಸಾಯಿ ಸಾಕೀನ ಹುಂಬಿಗನೂರು. (೨) ಚನ್ನಬಸಪ್ಪಾ ಸಂಟಿಪ್ಪಾ ಕೊರಬಗೊಂಡ ಸಾ॥ ದೇವಿಹೊಸೂರ. (೩) ಗದಿಗೆಯ್ಯನವರು ಕೆರಸ್ಥಳದ ಸಾ॥ ಹಾವನೂರು. (೪) ಹೊಳೆಯಪ್ಪಾ ಗೋವಿ ಸಾ॥ ಹನುಮನಹಳ್ಳಿ. (೫) ತಿಪ್ಪಣ್ಣಾ ಕೋಳಿನ ಸಾ॥ ಹನುಮಗಹಳ್ಳಿ. (೬) ಮುರಿಗಪ್ಪಾ ಕಲ್ಯಾಣಪ್ಪಾ ನೆಗ್ಗಿ ಸಾ॥ ಕಾಟೇನಹಳ್ಳಿ. (೭) ವಿರೂಪಾಕ್ಷಪ್ಪಾ ಸಣ್ಣಬಸವಪ್ಪಾ ಸಾ॥ ಕಲಕೋಟಿ. (೮) ಚನ್ನಬಸಪ್ಪಾ ಶಿರೂರ ಸಾ॥ ಕರ್ಜಗಿ. (೯) ಸಿದ್ದಪ್ಪಾ ಅನೂರ ಶೆಟ್ಟಿ ಸಾ॥ ಹಾವೇರಿ (೧೦) ಮಡಿವಾಳಪ್ಪಾ ಹತ್ತಿ ಸಾ॥ ಹಾವೇರಿ. (೧೧) ಮಡಿವಾಳಪ್ಪಾ ಮಾಸೂರ ಸಾ॥ ಹಾವೇರಿ.

ಈ ವ್ಯವಸ್ಥಾಪಕ ಕಮಿಟಿಗೆ ಸರದಾರ ಶ್ರೀಮಂತ ಬುಳ್ಳಪ್ಪಾ ದೇಸಾಯರು ಚೇರಮನ್ನರಾಗಿ ಇರತಕ್ಕದ್ದು. ಅಂಕಲಾವಿ ಚನ್ನಬಸಪ್ಪಾ ಶೆಟ್ಟಿ ಇವರು ಸೂಚಿಸಿದ್ದಕ್ಕೆ ಮಿ॥ ವಿರೂಪಾಕ್ಷಪ್ಪಾ ಕಲಕೋಟಿ ಇವರು ಅನುಮೋದ ಕೊಟ್ಟರು. ಸರ್ವಾನುಮತದಿಂದ ಪಾಸುಮಾಡಲ್ಪಟ್ಟಿತು.

ಸದರಿ ಕಮಿಟಿಗೆ ಮಿ॥ ಸಿದ್ದಪ್ಪಾ ಅನೂರ ಮ॥ ಮಡಿವಾಳಪ್ಪಾ ಹತ್ತಿ ಇವರು ಸೆಕ್ರೆಟರಿಗಳಾಗಿ ಇರಬೇಕೆಂದು ಮಿ॥ ಗದಿಗೆಯ್ಯನವರು ಸೂಚನಾಕೊಟ್ಟಿದ್ದಕ್ಕೆ ಚನ್ನಬಸಪ್ಪಾ ಶಿರೂರ ಇವರು ಅನುಮೋದನಕೊಟ್ಟು ಸರ್ವಾನುಮತದಿಂದ ಪಾಸುಮಾಡಲ್ಪಟ್ಟಿತು. ಮತ್ತು ಸದರಿ ಕಮಿಟಿಗೆ ಮಿ॥ ಚನ್ನಬಸಪ್ಪಾ ಸಂಪಪ್ಪಾ ಶೆಟ್ಟಿ ಇವರು ಟ್ರೇಝರರಾಗಿರತಕ್ಕದ್ದು ಅಂತಾ ಮಿ॥ ಮಡಿವಾಳಪ್ಪಾ ಮಾಸೂರ ಇವರು ಸೂಚನಮಾಡಿದ್ದಕ್ಕೆ ಮಿ॥ ಚನ್ನಬಸಪ್ಪಾ ಶಿರೂರ ಇವರು ಅನುಮೋದನಕೊಟ್ಟರು. ಸರ್ವಾನುಮತದಿಂದ ಪಾಸುಮಾಡಲ್ಪಟ್ಟಿತು.

೫. ತಾಲ್ಲೂಕು ಕಮಿಟಿಯ ಕೆಲಸ ನಡೆಸುವ ಆಫೀಸು ಹಾವೇರಿಯಲ್ಲಿ ಇರತಕ್ಕದ್ದೆಂದು ಮಿ॥ ಫಕೀರಯ್ಯನವರು ಕೆರಸ್ಥಳದ ಇವರು ಸೂಚನಾ ಮಾಡಿದ್ದಕ್ಕೆ ಮಿ॥ ಸಿದ್ಧರಾಮಯ್ಯನವರು ಕರ್ಜಗಿ ಇವರು ಅನುಮೋದನ ಕೊಟ್ಟಿದ್ದಕ್ಕೆ ಸರ್ವಾನುಮತ ಪಾಸುಮಾಡಲ್ಪಟ್ಟಿತು.

೬. ವ್ಯವಸ್ಥಾಪಕ ಕಮಿಟಿ ಮೆಂಬರರು ಕೆಳಗೆ ಬರೆದ ಸ್ಥಳಗಳಲ್ಲಿ ಟಿಕ್ಕಿ ಕಮಿಟಿಗಳನ್ನು ಸ್ಥಾಪಿಸಿ ಅವುಗಳ ಸುತ್ತುಮುತ್ತಿನ ಗ್ರಾಮಗಳಲ್ಲಿ ತಾ॥ ಕಮಿಟಿ ಮೆಂಬರರ ಸಹಾಯದಿಂದ ಸಮಾಜ ಸುಧಾರಣೆ ಕಾರ್ಯಗಳಿಗಾಗಿ ಎತ್ನಿಸತಕ್ಕದ್ದು. ಅವು ಯಾವವೆಂದರೆ ಕೆಳಗೆ ಬರೆದ ಪ್ರಕಾರ:—

೧ ದೇವಿಹೊಸೂರು, ೨ ಕರ್ಜಗಿ, ೩ ಹಾವೇರಿ, ೪ ಕಾಟೇನಹಳ್ಳಿ, ೫ ಹನುಮನಹಳ್ಳಿ, ೬ ಹುಂದಿಗನೂರು, ೭ ನೆಗಳೂರು, ೮ ಹಾವನೂರು ಈ ಪ್ರಕಾರ ನೇಮಿಸಿದ್ದು.

೭. ತಾಲ್ಲೂಕು ಕಮಿಟಿ ಮೆಂಬರರನ್ನು ಹೆಚ್ಚು ಕಡಿಮೆ ಮಾಡಲಿಕ್ಕೂ, ಟಿಕ್ಕಾ ಕಮಿಟಿ ಸ್ಥಳಗಳನ್ನು ಬದಲು ಮಾಡಲಿಕ್ಕೂ ವ್ಯವಸ್ಥಾಪಕ ಕಮಿಟಿಯವರಿಗೆ ಅಧಿಕಾರವಿರುತ್ತದೆ.

೮. ವೀರಶೈವ ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯು ಧಾರವಾಡದಲ್ಲಿ ಯಿದ್ದು ಸದ್ಯಕ್ಕೆ ನಮ್ಮ ಜಿಲ್ಲಾದಲ್ಲಿ ಜಿಲ್ಲಾ ಕಮಿಟಿ ಇಲ್ಲದಮೂಲಕ ಮಹಾಸಭೆಯ ಠರಾವುಗಳು ವ ಅಪ್ಪಣೆಗಳು ಸದರಿ ಸ್ಟ್ಯಾಂಡಿಂಗ್ ಕಮಿಟಿಯ ಚೇರಮನ್ನರ ಮುಖಾಂತರ ಈ ಕಮಿಟಿಯ ಚೇರಮನ್ನರ ಕಡೆ ಬರುವವು. ಅವುಗಳನ್ನು ಅವರು ಈ ತಾಲ್ಲೂಕಿನ ಟಿಕ್ಕಾ ಕಮಿಟಿಗಳ ಮುಖಾಂತರವಾಗಿ ಪ್ರತಿಯೊಂದು ಹಳ್ಳಿಯಲ್ಲೂ ಅಮಲಿನಲ್ಲಿ ತರಲಿಕ್ಕೆ ಯತ್ನಿಸತಕ್ಕದ್ದು. ತಾ॥ ಕಮಿಟಿ ಮೆಂಬರರು ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯ ನೇಮಕ್ಕೆ ಒಳಗಾಗಿ ಕೆಲಸ ಮಾಡತಕ್ಕದ್ದು.

೯. ತಾಲ್ಲೂಕು ಕಮಿಟಿಯವರು ವಿದ್ಯಾ, ಧರ್ಮ, ಪಕ್ಕಲುತನ, ಕೈಗಾರಿಕೆ ಮುಂತಾದ ಸಮಾಜ ಸುಧಾರಣೆ ಮಾಡಲಿಕ್ಕೆ ಯತ್ನ ಮಾಡತಕ್ಕದ್ದು.

೧೦. ಎಲ್ಲಾ ಕಡೆಯಲ್ಲೂ ಪ್ರಾಚೀನಕಾಲದಲ್ಲಿ ಇದ್ದಂತೆ ಪಂಚಾಯತ ಪದ್ಧತಿಯನ್ನು ಸ್ಥಾಪಿಸಬೇಕು. ಅಂದರೆ ನಮ್ಮಲ್ಲಿಯ ಧಾರ್ಮಿಕ ವ್ಯವಹಾರಿಕಗಳು ಕೋರ್ಟುಗಳಿಗೆ ಹೋಗದೆ ಪಂಚರಿಂದಲೇ ತೀರಿಸಿಕೊಳ್ಳಲಿಕ್ಕೆ ಅನುಕೂಲವಾಗುವುದು.

೧೧. ವಿದ್ಯಾಪ್ರಸಾರದ ವಿಷಯವಾಗಿ ತಾಲ್ಲೂಕು ಕಮಿಟಿ ಮೆಂಬರರು ಅದಷ್ಟು ಎತ್ನಿಸತಕ್ಕದ್ದು.

೧೨. ಲಗ್ನ ಪುರಾಣ ಮುಂತಾದ ಕಾರ್ಯಗಳಲ್ಲಿ ಮತ್ತು ಜಂಗಮರಿಗೆ ಕೈಚೇರಿಗೆ ದಕ್ಷಿಣೆ ಕಾಣಿಕೆಯನ್ನು ಮರಿಯದೆ ತೆಗೆಯತಕ್ಕದ್ದು. ಈ ಹಣ ತಾ॥ ಕಮಿಟಿ ಚೇರಮನ್ನರ ಕಡೆ ಕಳುಹಿಸಿ ಪಾವತಿ ಪಡೆಯತಕ್ಕದ್ದು.

೧೩. ತಾ॥ ಕಮಿಟಿ ಫಂಡಿನ ಹಣವನ್ನು ಚೇರಮನ್ನರು ಟ್ರೇಝರರ ಕಡೆಗೆ ಕಳಿಸಿ ಪಾವತಿ ತೆಗೆದುಕೊಳ್ಳತಕ್ಕದ್ದು. ಸದರಿ ಲೆಕ್ಕವನ್ನು ಮಹಾಸಭೆಯ ಸ್ಟ್ಯಾಂಡಿಂಗ್ ಕಮಿಟಿಯ ಚೇರಮನ್ನರ ಕಡೆ ದರಸಾಲ ಆಖೇರಕ್ಕೆ ಕಳಿಸತಕ್ಕದ್ದು.

೧೪. ತಾ॥ ಕಮಿಟಿ ಹಣವು (೧೦೦) ರೂ. ಗಳಿಗಿಂತಾ ಹೆಚ್ಚಾದಮೇಲೆ ಬಡ್ಡಿಗೆ ಹಚ್ಚಿ ಬೆಳೆಸುವ ಮುಂತಾದ ವಿಚಾರವನ್ನು ಮ್ಯಾನೇಜಿಂಗ್ ಕಮಿಟಿಯವರು ವಿಚಾರಮಾಡತಕ್ಕದ್ದು.

೧೫. ಕಮಿಟಿಗಳ ಕೆಲಸ ನಡಿಸಲಿಕ್ಕೆ ಜನರಲ್ ಕಮಿಟಿ ಮೆಂಬರು ಒಂದಕ್ಕಿಂತ ಕಡಿಮೆಯಿಲ್ಲದಷ್ಟು ಮತ್ತು ಮ್ಯಾನೇಜಿಂಗ್ ಕಮಿಟಿಗೆ ಅರ್ಧಕ್ಕಿಂತಲೂ ಕಡಿಮೆಯಿಲ್ಲದಷ್ಟು ಮೆಂಬರರು ಕೂಡಿದಲ್ಲಿ ಕೋರಮ ಆಯಿತೆಂದು ತಿಳಿಯತಕ್ಕದ್ದು. ಅಂತಾ ಸರ್ವಾನುಮತದಿಂದ ಪಾಸುಮಾಡಲಾಯಿತು. ನೇಮಿಸಿದ ತಾರೀಖಿಗೆ ಕಮಿಟಿ ಕೋರಮ ಆಗದೆ ಮುಂದಿನ ತಾರೀಖಿಗೆ ನೇಮಿಸಿ ಆ ತಾರೀಖಿಗೆ ಇದ್ದಷ್ಟು ಮೆಂಬರರಮೇಲೆ ಕೆಲಸ ನಡಿಸತಕ್ಕದ್ದು. ಮೇಲಿನ ನೇಮಗಳನ್ನು ಹೆಚ್ಚುಕಮ್ಮಿ ಮಾಡುವುದಾದರೆ ಸ್ಟ್ಯಾಂಡಿಂಗ್ ಕಮಿಟಿ ಚೇರಮನ್ನರ ಪರವಾನಿಗಿ ಪಡಕೊಂಡು ಜನರಲ್ ಕಮಿಟಿಯವರು ಮಾಡಲಿಕ್ಕೆ ಅಧಿಕಾರವಿದೆ.

ಈ ಪ್ರಕಾರ ಕಮಿಟಿಯಲ್ಲಿ ವಿಷಯಗಳು ಜರಗಿ ಕಮಿಟಿಯು ವಿಸರ್ಜನವಾಯಿತು.

22-5-11 B. B. Anur,
Secretary.

ನೋಟೀಸು.

ಜಾತಕ ಸುಧಾಸಾರ ಮಂಜರಿ.

ಅಯ್ಯಾ ಲೋಕಬಾಂಧವರೆ! ವಿನಯಪೂರ್ವಕವಾಗಿ ಶೃತಪಡಿಸುವದೇನಂದರೆ—ಈ ನಮ್ಮ ಭರತಖಂಡದಲ್ಲಿ ಅನೇಕಪಂಡಿತರು ಜ್ಯೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಒಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ಯಾರೂ ರಚಿಸಲಿಲ್ಲ. ಆದಪ್ರಯುಕ್ತ ನಾನು ಅನೇಕ ಪುರಾತನ ಪರಾಶರ ಗ್ರಂಥಗಳನ್ನು ಪರಿಶೋಧನಮಾಡಿ ಅಲ್ಪವಿದ್ವದವರಿಗೂ ಕೂಡ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡಟೀಕಾ ತಾತ್ಪರ್ಯದೊಂದಿಗೆ ರಚಿಸಿ ಇರುತ್ತೇನೆ ಸದ್ರಿ ಗ್ರಂಥದಲ್ಲಿ ಇರುವ ವಿಷಯವೇನಂದರೆ—ಯುಗಭೇದಜನ್ಮಲಗ್ನವಿಚಾರ, ಮಾನಪ್ರಮಾಣವಿಚಾರ, ಸಂದೇಹಲಗ್ನನಿವೃತ್ತಿವಿಚಾರ, ನಕ್ಷತ್ರಗಣನವಿಚಾರ, ಗ್ರಹೋಚ್ಚನೀಚವಿಷಯ, ರಾಜಲಕ್ಷಣಯೋಗ, ಭೋಗಿಯೋಗ, ಕೀರ್ತಿಯೋಗ, ಮರಣಾಂತ್ಯಸೌಖ್ಯಯೋಗ ರತ್ನಲಾಭಯೋಗ ಸುವರ್ಣಪಾತ್ರಭೋಜನಯೋಗ ಕುಬೇರಯೋಗ ತ್ರಿಲಕ್ಷಾಂತರಕೋಟ್ಯಧೀಶ್ವರಯೋಗ ಋಣಯೋಗ ಭಿಕ್ಷಾನ್ನಭಕ್ಷಣಯೋಗ ಲೋಭಿಯೋಗ ಅಂಧಕಯೋಗ ಮೂಕಯೋಗ ಗಣಿತಶಾಸ್ತ್ರಯೋಗ ತರ್ಕಶಾಸ್ತ್ರಯೋಗ ವ್ಯಾಕರಣಶಾಸ್ತ್ರಯೋಗ ಷಟ್‌ಶಾಸ್ತ್ರಯೋಗ ವೇದಶಾಸ್ತ್ರಯೋಗ ಭ್ರಾತೃವೃದ್ಧಿಯೋಗ ಭ್ರಾತೃಜಾರಯೋಗ ಬಾರಜಾತಕಯೋಗ ಕ್ಷೇತ್ರಲಾಭಯೋಗ ಕೃಷಿಲಾಭಯೋಗ ರಾಜಯೋಗ ಪುತ್ರವೃದ್ಧಿಯೋಗ ಏಕಪುತ್ರಯೋಗದ್ವಾದಶಪುತ್ರಯೋಗ ಪುತ್ರಹೀನಯೋಗ ಶತೃಯೋಗ ಶತ್ರುಹೀನಯೋಗ ಏಕಕಳತ್ರಯೋಗ ಕಳತ್ರಜಾರಯೋಗ ದ್ವಿಕಳತ್ರಯೋಗ ತ್ರಿಕಳತ್ರಯೋಗ ಸಪ್ತಕಳತ್ರಯೋಗ ದ್ವಾದಶದಾರಯೋಗ ಶತಕಳತ್ರಯೋಗ ದ್ವಿಶತಕಳತ್ರಯೋಗ ದೀರ್ಘಾಯುರ್ಯೋಗ ಮಧ್ಯಮಾಯುರ್ಯೋಗ ಅಲ್ಪಾಯುರ್ಯೋಗ ಮೃತ್ಯುಯೋಗ ಧನಪ್ರಯಯೋಗ ತನುಭಾವ ವಿಚಾರ ಧನಭಾವವಿಚಾರ ತೃತೀಯಭಾವ ವಿಚಾರ ಚತುರ್ಥಭಾವವಿಚಾರ ಪಂಚಮಭಾವವಿಚಾರ ಷಷ್ಠಮಭಾವ ವಿಚಾರ ಸಪ್ತಮಭಾವ ವಿಚಾರ ಅಷ್ಟಮಭಾವ ವಿಚಾರ ನವಮಭಾವ ವಿಚಾರ ದಶಮಭಾವವಿಚಾರ ಏಕಾದಶಭಾವ ವಿಚಾರ ದ್ವಾದಶಭಾವ ವಿಚಾರ, ಮೇಷಾದಿಯಾಗಿ ಮೀನದವರಿಗೂ ೧೨ ಲಗ್ನಗಳ ಫಲವನ್ನು ಇದಲ್ಲದೆ ಇನ್ನೂ ಅನೇಕ ವಿಷಯಗಳನ್ನು ಈ ನೋಟೀಸಿನಲ್ಲಿ ಬರೆದು ತೋರಿಸಲು ಸಾಧ್ಯವಲ್ಲವೆಂದು ಸದರಿ ಗ್ರಂಥದಲ್ಲಿ ಇರುವ ವಿಷಯವನ್ನು ಸ್ವಲ್ಪಮಟ್ಟಿಗೆ ಸೂಚಿಸಿರುತ್ತೇನೆ.

ಜಾತಕಸುಧಾಸಾರಮಂಜರಿ ಗ್ರಂಥ ೧ ಕ್ಕೆ ೦-೧೪-೦.

ನವಗ್ರಹಗಳ ದಂಡಕವು ವಿಸ್ತಾರವಾಗಿ ತಯಾರಾಗಿರುತ್ತದೆ. ಕ್ರಯ ೧ಕ್ಕೆ ೦-೨-೦.

ಅಥವಾ ಎರಡಾಣೆ ಸ್ಟಾಂಪುಗಳನ್ನು ಕಳುಹಿದಬಳಿಗೆ ಕಳುಹಿಸುತ್ತೇವೆ.

ನಮ್ಮ ವಿಳಾಸ:—
ಬಳ್ಳಾರಿ ಗಣೇಶನಗುಡಿ ಬೀದಿ ಕೊಟ್ಟೂರು ಸ್ವಾಮಿಗಳ ಮಠದ ಸಿದ್ಧಾಂತಿ ಮಲ್ಲಿಕಾರ್ಜುನ ಶಾಸ್ತ್ರಿಗಳು,
ಬಳ್ಳಾರಿ.

"ಅಗಸ್ತ್ಯ ವಿಚಾರ."

2

ಬೆಲೆ ೧೪ ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗತ್ಯವಿಚಾರ"ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೨ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ:—ವೀರಭದ್ರಪ್ಪಾ ಆಂಟಿರಳಿನ,
ಪೋಸ್ಟ್-ಬಾಗೇವಾಡಿ. ಡಿ॥ ಬೆಳಗಾಂವ.

---

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿಕಥೆಗಳು.

3

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವದು. (೩) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದ್ದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತ ವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦. ಅಂಚೆ ಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಮುಂತಾದ ಸುಗಂಧದ್ರವ್ಯಗಳು; ಪ್ಲೇಗು, ಕಾಲರಾ ಮುಂತಾದ ಜಾಡ್ಯವ್ಯಾಧಿಗಳಿಗೆ ಮುಖ್ಯ ಔಷಧಗಳು; ಭಾವನಕ್ಷೆ ಚಿತ್ರಮುದ್ರಾಪಟಗಳು; ಮೊದಲಾದ ಸಾಮಾನುಗಳು ನಮ್ಮಲ್ಲಿ ದೊರೆಯುತ್ತವೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಪ್ರಸಿದ್ಧಪತ್ರಿಕೆ.

ರಾ॥ ಬ॥ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ೨೦ ಜನ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಡಾಗಿದೆ. ವಿದ್ಯಾರ್ಥಿಗಳು ಮೈಸೂರು ದೇಶೀಯರಾಗಿಯೂ, ವೀರಶೈವರಾಗಿಯೂ, ಇಂಗ್ಲೀಷ್ ಲೋವರ್‌ಸೆಕೆಂಡರಿಗೆ ಕಡಮೆಯಿಲ್ಲದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಪ್ರೌಢ ವಿದ್ಯಾಭ್ಯಾಸ ಮಾಡಲು ಚೈತನ್ಯವಿಲ್ಲದವರಿಗೆಮಾತ್ರ ಅವಕಾಶ ದೊರೆಯುವುದು. ಚೈತನ್ಯವಿಲ್ಲವೆಂಬುವುದಕ್ಕೆ ನಿದರ್ಶನಾರ್ಥವಾಗಿ ಸ್ಥಳೀಯ ಪ್ರಮುಖ ವೀರಶೈವರಿಂದಲಾಗಲಿ ಅಥವ ತಾವು ಓದಿದ ಸ್ಕೂಲು ಯಾ ಕಾಲೇಜು ಮುಖ್ಯೋಪಾಧ್ಯಾಯರಿಂದಲಾಗಲಿ ಸರ್ಟಿಫಿಕೇಟನ್ನು ತರಬೇಕು. ಇಚ್ಛೆಯುಳ್ಳವರು ಜೂನ್ ತಿಂಗಳು ೧೫ ರೊಳಗಾಗಿ ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನ್ ಹಾಕತಕ್ಕದ್ದು.

ಎಸ್. ಕೆ. ವೀರಬಸವಯ್ಯ ಬಿ. ಎ., ಬಿ. ಎಲ್.,
ಆನರರಿ ಸೆಕ್ರಿಟರಿ
ತೋಟದಪ್ಪನವರ ಧರ್ಮಸತ್ರ ಬೆಂಗಳೂರು.

---

9 **ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.**

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.



ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ, ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಊದಬತ್ತಿಗಳು.

14

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಡಬ್ಬಿ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಥಾಂಶನ್ನು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹತ್ತಿರ
44 ಮೈಸೂರು.

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೬—೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೪—೦., ೨೪ ಮಾತ್ರೆ ಸೀಸೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

7 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪಸಿಸ್ಟಂ ಪೇಟೆಂಟ್ ಲೀವರ್ 'ಜೂವೆಲ್ಡ್' ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ತೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರವವುಗಳನ್ನು ರೂ. 2-8-0 ರೂ. 2-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಷ್ಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ತೋಮು ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 3-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಲ್ಬೋನೀರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

19

ಉತ್ತಮ ಗ್ರಂಥಗಳು.

ಶಿವಪೂಜಾಸ್ತವ:- ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.-ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.-ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.-ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸ ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚ ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀ ಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹುಳ ಸುಲಭವಾದ ಭಾಜ ನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ರೂ. ಆಗುತ್ತದೆ. ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರೂ ಕೊಡಬೇಕಾಗುತ್ತೆ. ಸಾದಾ ಕಪ್ಪು ಶಾಯಿಯಲ್ಲಿ ನೂ ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತ ಪ್ರತಿ೧೦೦ ಕ್ಕೂ ೦-೮-೦ ಆಣೆ ಯಂತೆ ಕಳುಹಬೇಕು. ಕ್ಲು ಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆ ಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೆ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅ ನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮಾಡಬೇಕಾದಲ್ಲಿ ೧-೦-೦ ರೂ. ಅನ್ನು ಹೆಚ್ಚಾಗಿ ಕೊಡಬೇಕು ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್ ಪ್ರೆಸ್, ಮೈಸೂರು

ಉತ್ತಮ ಗ್ರಂಥಗಳು.

122

ಬಸವರಾಜವಿಜಯಂ.- ಬೆಲೆ ವಿ. ಪಿ. ಯಿಂದ ೧-೪- ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸ ಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂ ವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.- ೧-೮-೦. ಇದು ವಚ ರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.- ೧-೩-೦. ಸವ್ಯಾಖ್ಯಾ ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩- ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿ

ಸೌಂದರ ಪುರಾಣ ೧-೩-೦. ಲಲಿತವಾದ ಕವಿ ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳು ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.- ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.- ೬ ಆಣೆ. ಪಾಲ್ಕುರಿಕೆಸೋಮ ರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯ ಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿಃ.- ೨ ಆಣೆ. ಪ್ರಾಣಾಯಾಮ ನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.- (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.- ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು

೧೯೧೧ನೇ ಇಸವಿ ಜೂನ್ ತಾ॥ ೧೨ ರಿಂದ ೧೯೧೧ನೇ ಜೂ ತಾ॥ ೧೮ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ಸ ವಿರೋಧಿಕೃತು ಸಂವತ್ಸರದ ಜ್ಯೇಷ್ಠ ಬ॥ ಪಾಡ್ಯಮಿಯಿಂ ಜ್ಯೇಷ್ಠ ಬ॥ಷಷ್ಠಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವ್ಯ-ಮಿ ತೇದಿ
12	ಸೋ	ಪಾ	45-4	ಜ್ಯೆ	3-23	30
13	ಮಂಗ	ಬಿ	59-6	ಮೂ	9-56	31
14	ಬುಧ	ತ	60-0	ಪೂಷಾ	16-8	32
15	ಗುರು	ತ	2-56	ಉಷಾ	21-39	1
16	[1]ಶುಕ್ರ	ಚ	6-6	ಶ್ರ	26-7	2
17	ಶನಿ	ಪಂ	8-11	ಧ	29-16	3
18	ಭಾನು	ಷ	8-56	ಶ	31-43	4

(1) ಶ್ರೀಕೃಷ್ಣ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ರುನಕ್ಷತ್ರಂ.

ಮೈಸೂರ್: ಮೈ. ವಿರೂಪಾಕ್ಷಯ್ಯನವರಿಂದ ಸ್ಟಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED

ಮೈಸೂರ್ ✻ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ೧೯೧೧ ನೇ ಇಸವಿ ಜೂನ್ ತಾರೀಖು ೧೨ ನೇ ಸೋಮವಾರ. [ಸಂಚಿಕೆ ೨೩

ವೈದ್ಯ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

11

ಲೋಕಾಮಯಾಂಕುಶ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೆಟ್ಟಿತಿ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇವನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೨೦ ಕುಪ್ಪಿವರೆಗೆ ಪೋಸ್ಟೇಜು ೬ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಶ್ವಾಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೩-೦

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪೊಸಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕರು, ಹಲ್ಲುಗಳ ಬಾಸೆ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯು. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ತ್ತೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರಿಗೆ ೧-೧೦-೦.
ರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃ ಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗಿ ಅನುಕೂಲವಾಗಿ [illegible]

ಸುಲಭಕ್ರಯ! ಖಾತರಿಮಾಲ್!! ಬಿಡಬೇಡಿರಿ!!!

8

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ ೧ಕ್ಕೆ	೩	ಕಸ್ತೂರಿ ಬಿಲ್ಲೆ ತೊ। ೧ಕ್ಕೆ	೨
೨ ಅಂಬರ್‌ಬತ್ತಿ ಸೇ ೧ಕ್ಕೆ	೪	ಜವಾಜಿ ಬಿಲ್ಲೆ ತೊ। ೧ಕ್ಕೆ	೧
ಕಸ್ತೂರಿ ಬತ್ತಿ ಸೇ ೧ಕ್ಕೆ	೨॥	ಅರಗಜ । ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೇ ೧ಕ್ಕೆ	೧	ಕಸ್ತೂರಿ ಮಾತ್ರೆ ಸೇ ೧ಕ್ಕೆ	।
ಗುಲಾಬ್ ಬತ್ತಿ ಸೇ ೧ಕ್ಕೆ	॥	ಸುರಂಗಿ ಸೆಂಟ್ ಸೇ ೧ಕ್ಕೆ	೧
ನಕ್ಷತ್ರಕಾಂತಿಬ! ಸೇ ೧ಕ್ಕೆ	೧	ಸ್ವದೇಶಿ ಘ ಪೌ॥ ಡ॥ ೧ಕ್ಕೆ	।
ಕಾಶ್ಮೀರ್ ಕೇಸ್ರಿ ತೊ। ೧ಕ್ಕೆ	೧	ಪಚ್ಚಕರ್ಪೂರ ತೊ। ೧ ಕ್ಕೆ	।॥

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ಕೊಡಲಾಗುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂ ದೊರೆಯದು.

ಎಂ. ಆರ್. ಸುಬ್ಬಾಚಿಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

ಇಲ್ಲಿನೋಡಿ ವಿಶೇಷಸೂಚನೆಗಳು!

6 ಕಾಶೀವಿಶ್ವೇಶ್ವರಪ್ರಸನ್ನ.



ಅಗ್ಗವಾದಮಾಲುಗಳು. ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಪೂಜಿಸುವ ಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಿ ಹೊಂದಿರುವ ಮಡಿಯಾವದು? ಕಾಶೀಪಟ್ಟಿ.

ಮತ್ತು ಜರೀಕೆಲಸಗಳಲ್ಲಿಯೂ ಸೈನ್ ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಸರಕುಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟ್ಲಾಗ್ ೧ ಕಾಶೀಪಠ, ೪ ಸಾದಾ ಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪಿನಿ ಅಡ್ರಸ್‌ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಸುವ ವಿಳಾಸಕ್ಕೆ ಕಳಿಹಿಸಲಾಗುತ್ತೆ. ವಿಳಾಸವನ್ನು ಚೆನ್ನಾಗಿ ಬರಿಯಬೇಕಾದ್ದಲ್ಲದೆ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—
ಯಸ್. ಉಡುಪಿನಾರಾಯಣಾಚಾರ್ಯ ಅಂಡ್‌ಕೋ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.
S. Udipi Narayanacharya & Co.
Benares City.

7 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪ ಸಿಸ್ಟಂ ಪೇಟೆಂಟ್ ಲೀವರ 'ಜೂವೆಲ್ಡ್' ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ದೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 2-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೇರೆಗ್ಯುಲೇಟರ್ ಲೀವರ್ ಜೂವೆಲ್ಡು ವಾಚ್.



ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ದೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 3-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಲ್ಬೋರ್ಟ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟ್ಯಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣನ್ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

19 ಉತ್ತಮ ಗ್ರಂಥಗಳು.

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳು ಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.—ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಲಗ್ನಪತ್ರಿಕೆಗಳ ಮುದ್ರಣ ಕ್ರಮವು.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸ ನಟೇಶ್ವರ ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚ ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀ ಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದವುಗಳನ್ನು ಯೋಗಿಸಿ ಕ್ಲ್ಪಪ್ತ ಕಾಲದಲ್ಲಿ ಬಹುಳ ಸುಲಭವಾದ ಭಾ ನಿಂದ ಲಗ್ನಪತ್ರಿಕೆಗಳನ್ನು ಮಾಡಿಸಿಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳ ಮುದ್ರಿಸಲು ೨-೮-೦ರೂ. ಆಗುತ್ತದೆ. ೧೦೦ಕ್ಕಿಂತ ಹೆ ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿ ನೂರಕ್ಕೂ ೧ರ ಕೊಡಬೇಕಾಗುತ್ತೆ. ಸಾದಾ ಕಪ್ಪು ಶಾಯಿಯಲ್ಲಿ ನೂ ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತ ಪ್ರತಿ೧೦೦ ಕ್ಕೂ ೦-೮-೦ ಆಣೆ ಯಂತೆ ಕಳುಹಬೇಕು. ಕ್ಲ ಪ್ತ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬ ಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದನಂತರ ಅ ನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚು ಮ ಡಬೇಕಾದಲ್ಲಿ ೧-೦-೦ ರೂ. ಅನ್ನು ಹೆಚ್ಚಾಗಿ ಕೊಡಬೇಕ ಹೆಚ್ಚು ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್ ಪ್ರೆಸ್, ಮೈಸೂರ

ಉತ್ತಮ ಗ್ರಂಥಗಳು.

122

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪- ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸ ಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂ ವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚ ರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾ ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩- ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿ

ಸೌಂದರ ಪುರಾಣ ೧-೩-೦. ಲಲಿತವಾದ ಕವಿ ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳು ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೩ ಆಣೆ. ತಾತ್ಪರ್ಯಸಮೇತವ ಗಿದೆ. ಸಿದ್ಧಾಂತಾನುಸಾರವಾಗಿ ೩೩ ತತ್ತ್ವಗಳ ವಿಭಜ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೩ ಆಣೆ. ಪಾಲ್ಕುರಿಕೆಸೋಮ ರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯ ಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿಃ.— ೧೦ ಆಣೆ. ಪ್ರಾಣಾಯಾಮ ನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರ

೧೯೧೧ನೇ ಇಸವಿ ಜೂನ್ ತಾ॥ ೧೨ ರಿಂದ ೧೯೧೧ನೇ ಜೂ ತಾ॥ ೧೮ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ಸ ವಿರೋಧಿಕೃತು ಸಂವತ್ಸರದ ಜ್ಯೇಷ್ಠ ಬ॥ ಪಾಡ್ಯಮಿಯಿಂ ಜ್ಯೇಷ್ಠ ಬ॥ಷಷ್ಠಿವರಿಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವ್ಯ-ಮಿ ತೇದಿ
12	ಸೋ	ಪಾ	45-4	ಜ್ಯೆ	3-23	30
13	ಮಂಗ	ಬಿ	59-6	ಮೂ	9-56	31
14	ಬುಧ	ತ	60-0	ಪೂಷಾ	16-8	32
15	ಗುರು	ತ	2-56	ಉ॥ಷಾ	21-39	1
16	¹ಶುಕ್ರ	ಚ	6-6	ಶ್ರ	26-7	2
17	ಶನಿ	ಪಂ	8-11	ಧ	29-16	3
18	ಭಾನು	ಷ	8-56	ಶ	31-43	4

(1) ಶ್ರೀಕೃಷ್ಣ ಬ್ರಹ್ಮತಂತ್ರ ಪರಕಾಲಸ್ವಾಮಿಗಳ ರುನಕ್ಷತ್ರಂ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜ್ಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳಿಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ ಸ್ಟಾರ್ ಸರ್ ೧೯೧೧ ನೇ ಇಸವಿ ಜೂನ್ ತಾರೀಖು ೧೨ ನೇ ಸೋಮವಾರ. [ಸಂಚಿಕೆ ೨೪

ಬಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

11

ಲೋಕಾಮೃಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೆಲ್ಸಟ್ಟಿಕೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇವನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕಪ್ಪಿಗೆ ೪ ಆಣೆ; ೫ ಕಪ್ಪಿಗೆ ೧ ಕಪ್ಪಿ ಹೆಚ್ಚು, ೧ ರಿಂದ ೨೦ ಕಪ್ಪಿವರೆಗೆ ಪೋಸ್ಟೇಜು ೬ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಷ್ಣತ್ವಾತ್ತು ಬಂದರೆ ಪೂಸಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೆಂಪು, ಹಲ್ಲುಗಳ ಪಾಶೆ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೩ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯು. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕಪ್ಪಿ ೧ ಕ್ಕೆ ರೂ. ೧ ಇತ್ತೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೦. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.

೨ ರಿಂದ ೪ ರವರಿಗೆ ೧-೧೦-೦.

ವರಂತೆ ಮುಂದೆಪ್ರತಿನಾಲ್ಕು ಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಂಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಂಕ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ [illegible] ಭಾಷಾಂತರಿಸಿ ಪ್ರಕಟಿಸಲಾಗುವ [illegible]

ಸುಲಭಕ್ರಯ! ಬಾತರಿಮಾಲ್ !! ಬಿಡಬೇಡಿರಿ!!!

8

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ॥ ೧ಕ್ಕೆ	೩	ಕಸ್ತೂರಿ ಬಿಲ್ಲೆ ತೊ॥ ೧ಕ್ಕೆ	೨
೨ ಅಂಬರ್‌ಬತ್ತಿ ಸೇ॥ ೧ಕ್ಕೆ	೪	ಜವಾಜಿ ಬಿಲ್ಲೆ ತೊ॥ ೧ಕ್ಕೆ	೧
ಕಸ್ತೂರಿ ಬತ್ತಿ ಸೇ॥ ೧ಕ್ಕೆ	೨॥	ಅರಗಜ। ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೇ॥ ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ ೧ಕ್ಕೆ	।
ಗುಲಾಬ್ ಬತ್ತಿ ಸೇ॥ ೧ಕ್ಕೆ	॥	ಸುರಂಗಿ ಸೆಂಟ್ ಸಿ ೧ಕ್ಕೆ	೧
ನಕ್ಷತ್ರಕಾಂತಿಬ॥ ಸೇ॥ ೧ಕ್ಕೆ	೧	ಸ್ವದೇಶಿ ಘೀ ಪಾ॥ ಡ॥ ೧ಕ್ಕೆ	।
ಕಾಶ್ಮೀರ್‌ಕೇಸ್ರಿ ತೊ॥ ೧ಕ್ಕೆ	೧	ಪಚ್ಚಕರ್ಪೂರ ತೊ॥ ೧ಕ್ಕೆ	।॥

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗಿಡುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮೀಷನ್ ಕೊಡಲಾಗುವುದು. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂ ದೊರೆಯದು.

ಎಂ. ಆರ್. ಸುಬ್ಬಾಚೆಟ್ಟರು.

ಕೃಷ್ಣರಾಜಬೊಲೆವಾರ್ಡು ಮೈಸೂರು.

ಇಲ್ಲನೋಡಿ ವಿಶೇಷಸೂಚನೆಗಳು!

6

ಕಾಶೀವಿಶ್ವೇಶ್ವರಪ್ರಸನ್ನ.



ಅಗ್ಗವಾದಮಾಲುಗಳು. ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಉಡುವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖಿ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯನ್ನು ಇನ್ನೂ ಅನೇಕತರದ ಪಟಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟ್ಯಾಂಪು ಕಳಿಹಿಸಿದಲ್ಲಿ, ೧ ಕ್ಯಾಟ್ಲಾಗ್ ೧ ಕಾಶೀಪಟ. ೪ ಸಾದಾ ಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರಸ್‌ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರೆದು ತಿಳಿಯಿರುವ ವಿಳಾಸಕ್ಕೆ ಕಳಿಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರಿಯಬೇಕಾಗಿಲ್ಲ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—
ಯಸ್. ಉಡುಪಿನಾರಾಯಣಾಚಾರ್ಯ ಅಂಡ್‌ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayanacharya & Co.
Benares City.

ಸೌಗಂಧಿಕಾಪರಿಣಯ

:o:

(ಕಳೆದವಾರದ ಶೇಷ.)

ಹದಿನಾರನೇ ಅಶ್ವಾಸ ಪ್ರಾರಂಭ.

ಶ್ರೀಚಾಮುಂಡಿಕಾಂಬಾಯೈನಮಃ ಪೂರ್ವದೊಳ್ ದೂರ್ವಾಸನೆಂಬ ಮಹಾಮುನೀಶ್ವರನ ಶಾಪದ್ದೆಸೆಯಿಂದ ಮಹೇಂದ್ರನು ಭೂಲೋಕದೊಳ್ ಅವತರಿಸುವದಕ್ಕೆ ಉದ್ಯೋಗಿಸಲು, ಅವನ ಆರೋಹಣಕ್ಕೆ ಯೋಗ್ಯವಾದ, ಕ್ಷೀರಸಮುದ್ರದೊಳ್ ಲಕ್ಷ್ಮೀಚಂದ್ರಸಹೋದರನಾಗಿ ಉದ್ಭವಿಸಿದ ಉಚ್ಚೈಶ್ರವಸ್ಸೆಂಬ ಅಶ್ವರತ್ನವು ತನ್ನ ಒಡೆಯನಾದ ಪುರಂದರನಿಗೆ ಮಹರ್ಷಿಯ ಶಾಪದ್ದೆಸೆಯಿಂದ ಭೂಲೋಕದೊಳ್ ಜನಿಸುವದಂ ತಿಳಿದು, ತಾನು ಒಡೆಯನಿಲ್ಲದೆ ಅತಿದುಃಖದಿಂದ ಪತಿಯಿಲ್ಲದ ಸತಿಯಂತೆ, ಸೂರ್ಯನಿಲ್ಲದಕಿರಣದಂತೆ ಚಂದ್ರನಿಲ್ಲದಕಾಂತಿಯಂತೆ, ಒಡೆಯನಿಲ್ಲದ ರಾಜ್ಯದಂತೆ ಮನದೊಳ್ಕೊರಗುತ ಕಂಬನಿಯಂ ತುಪಿ ಹಂಬಲಿಸುತ, ನನಗೆ ಅಧಿಕತಿಯಾದ ಮಹೇಂದ್ರನಿಲ್ಲದ ಬಳಿಕ ಅತನ ಆರೋಹಣಕ್ಕೆ ಯೋಗ್ಯವಾದ ನಾನು ಈ ದುಷ್ಟರಾಕ್ಷಸರ ವಶವಾಗಿ ಅವರಿಂತಹಿಸುವ ಮಹಾಕಷ್ಟವಂ ನಾನೆಂತು ಸಹಿಸುವೆನು? ಮಾನವಂತರಿಗೆ ಅವಮಾನ ಬರುವಲ್ಲಿ ಸ್ಥಾನವಂ ಬಿಟ್ಟು ಪಲಾಯನವಂ ಮಾಡಿ ದೇಶಾಂತರದೊಳ್ ಕಾಲವಂ ಕಳೆಯುತ್ತಿರುವುದು ಉತ್ತಮೋತ್ತಮವೆಂದು ಊಹಿಸಿ, "ಭೂಲೋಕದೊಳ್ ಜಂಬೂದ್ವೀಪದಲ್ಲಿ ಜಾಬಾಲಿಯೆಂಬ ಋಷಿಯ ಆಶ್ರಮವು ಇರುತ್ತಿಹುದು. ಅಲ್ಲಿ ರಾಕ್ಷಸರ ಉಪದ್ರವಗಳು, ಮಾನೋಭಾಯಗಳು ಕೂಡ ನಡೆಯಲಾರವು. ಅದುದರಿಂದ ಆ ಪುಣ್ಯಾಶ್ರಮವಂ ಸೇರಿ ಕೆಲವು ಕಾಲವಲ್ಲಿದ್ದು, ನನ್ನ ಒಡೆಯನಾದ ಪುರಂದರನು ಪೂರ್ವದಂತೆ ಆಧಿಪತ್ಯವಂ ತಾಳಿದಬಳಿಕ ಆತನ ಪಾದಸೇವೆಗೆ ಯೋಗ್ಯವಾಗಿ ಮೆರೆಯುವಾ" ಎಂದು ನಿಶ್ಚೈಸಿ, ಅಮರಾವತಿಯಿಂ ವೇಗದಿಂ ತೆರಳಿ ಬರುವಾಗ ಚಲಿಸುವ ನವರತ್ನದ ಕಲ್ಕಿಯಿಂ ತೊಡಗೊಡಿದ, ಸುಮ್ಮಾನಗರಿಯಿಂ ಕಟ್ಟಿರುವ ವಜ್ರದ ಹಣೆಚಂದ್ರಬೊಟ್ಟಿನಿಂ, ಧಗಧಗಿಸಿ ಮೆರೆವ ಪದ್ಮರಾಗದ ಮೊಕವಾಡದಿಂ, ಬಳ್ಳಿ ಮಿಂಚುಗಳಿಗೆ ಮಿಂಚಾಗಿರುವ ಕೆಂಡಣದ ಕಡಿವಾಣದಿಂ, ಕದಲುವ ಕುರುಚು ಕಿವಿಗಳ ಪಾರ್ಶ್ವದೊಳ್ ನಲಿವ ಸಣ್ಣ ಕರ್ಣಚಾಮರಗಳಿಂ, ಹಣೆಯೊಳ್ ಮಣಿಗಳಿಂ ಧರಿಸಿದ ಶೇಷನ ಮರಿಗಳಂತೆ ಜೊಸದಿರುವ ಮಣಿಯ ಕೊಪ್ಪುಗಳಿಂದೊಪ್ಪುವ ಜತೆಗಳೊಡನೆ ವಿರಾಜಿಸುವ ನಿರಾಜಿಯ ಕಸೆಗಳಿಂ, ಕುಲಿಕ್ಯಾಡುವ ಮುತ್ತಿನ ಸರಗಳಿಂ ತೊಡಗೊಡಿ ನಾನಾವಿಧ ರತ್ನಗಳಿಂ ವಿಜಾತೀಯವಾಗಿ ಕೆತ್ತಿರುವ ಪದಕದ ಸಾಲುಗಳಿಂ, ಬಾಲಸೂರ್ಯಮಂಡಲದಂತೆ ಕೆವ ಹಲ್ಲಣದ ಅಂಚಿನೊಳ್ ಸುತ್ತುವರಿದು ಬಿಟ್ಟಿರುವ ಮುತ್ತಿನ ಬಲೆಗಳಿಂ, ಇದರ ನಾಲ್ಕು ಕಡೆಯೊಳ್ ತೂಗಾಡುವ ಚಮರೀ ಮೃಗದ ಝಲ್ಲಿಗಳಿಂ, ಮುಂಭಾಗದೊಳ್ ಮುತ್ತಿನ ಸರಗಳಂ ಚೌಕಳಿಯಾಗಿ ಪೆಣೆದು ಕಟ್ಟಿರುವ ದಟ್ಟಿಯಿಂ, ಬಿಳಿಯ ನವಿಲಿನ ಪಿಂಛದಂತೆ ನಲಿದಾಡುವ ಪುಚ್ಛವಂ ಹಲ್ಲಣವಂ ಕೂಡ ಅನುಸರಿಸಿ ಬಿಗಿದು ಕಟ್ಟಿರುವ ಕಮಲದ ಮೊಗ್ಗುಗಳ ತಂಡದಂತೆ ಸಾಲ್ಗೊರಿಸಿರುವ ನವರತ್ನದ ಗುಬ್ಬಿಗಳಿಂ ಒಪ್ಪಿದ ಪಟ್ಟಿಗಳಿಂ, ಕರ್ಣದಿಂದ ಪಾದಪರ್ಯಂತವಾಗಿ ಬಿಟ್ಟಿರುವ ಬಿಡಿಮಣಿಗಳಿಂ ಪೋಣಿಸಿದ ಬಿರುದುಕುಚ್ಚುಗಳಿಂ, ಕಲಕಲಧ್ವನಿಯಂ ಮಾಡುವ ಕನಕ ಗಗ್ಗರೆಗಳಿಂ ಮುಂಭಾಗದ ಪಾದಗಳೊಳ್ ಧರಿಸಿದ ಪಚ್ಚೆಯ ಪಾದಪೆಂಡ್ಯಗಳಿಂ, ಪದ್ಮರಾಗವಂ ಕೆಡದು ಮಾಡಿದ ಪಾಕಶಾಸನನ ಪಾದಪದ್ಮಗಳಂ ಇರಿಸುವುದಕ್ಕೆ ಯೋಗ್ಯವಾದ ಪವಾಡಗಳಿಂ ಒಪ್ಪಿ, ಮತ್ತೂ ವಾಯುವೇಗ ಮನೋವೇಗಂಗಳೆಂಬ ಪಕ್ಷಗಳಂ ತಾಳಿ ಅತಿ ಶುಭ್ರವಾದ, ಸರ್ವಲಕ್ಷಣ ಯುಕ್ತವಾದ, ಒಟ್ಟುಗೂಡಿದ ಬೆಳದಿಂಗಳಂದಿರುವ, ಸತ್ಯಲೋಕದಿಂ ಇಳಿದು ಬಂದಿರುವ ರಾಜಹಂಸದಂತೆಸೆವ, ಗಾಳಿಯಿಂ ಭೋರಳಿ ವೇಗದಿಂ ಜಗುಳಿ ಬೀಳುವ ದೇವಗಂಗೆಯ ತರಂಗದಂತೆ ವಿರಾಜಿಸುವ ಆ ಸುರ ತುರಂಗವು ಗಗನದಿಂ ಬರುತ ದಿಕ್ಕುವಿದಿಕ್ಕುಗಳಂ ತನ್ನ ಕಾಂತಿಯಿಂ ಬೆಳಗಿಸುತ ಭೂಲೋಕವನ್ನೆಯ್ದಿ ಜಾಬಾಲಿ ಆಶ್ರಮದ ಸಮೀಪದೊಳಿರುವ ನೀಪವನದೊಳಿಳಿದು, ಹ್ರಸ್ವಭಾವವಂ ತಾಳಿ, ಭೂಲೋಕದ ಅಶ್ವಗಳೊಳ್ ತಾನೊಂದು ಉತ್ತಮಾಶ್ವದಂತೆ ರೂಪುಗೊಂಡು ಅಲ್ಲಲ್ಲಿರುವ ಎಳೆಗರಿಗಳಂ ಮೆಲ್ಲಮೆಲ್ಲನೆ ಮೇಯುತ್ತ, ದಿಕ್ಕುದಿಕ್ಕುಗಳನ್ನೀಕ್ಷಿಸುತ, ಉತ್ಸಾಹದಿಂ ಹೇಷಾರವಂ ಗೆಯ್ಯುತ್ತ, ಅಮರಾವತಿಯ ಅವಸ್ಥೆಯೇನಾಯಿತೋ ಎಂದು ನೋಡುವಂತೆ ಆಕಾಶವಂ ನೋಡುತ, ಮಂಡಲಾಕಾರವಾಗಿ ಸವ್ಯಾಪಸವ್ಯವಾಗಿ ತಿರುಗುತ, ನದಿಗಳಂ ಹಾರುತ್ತ, ಬಯಲುಭೂಮಿಯೊಳ್ ಗಾಳಿಯಂತೆ ಧಾಳಿಯಂ ಗೈಯುತ್ತ, ಸ್ವೇಚ್ಛೆಯಿಂ ವಿಹರಿಸುತ್ತಿರಲು, ಜಾಬಾಲಿಯೆಂಬ ಋಷಿಯು ನಿಜಾಶ್ರಮ ಸಮೀಪದೊಳ್ ಉತ್ತಮೋತ್ತಮವಾದ ಆ ಅಶ್ವವು ಬಂದು ನಿಂದಿರಲದಂ ಕಂಡು, ಇದು ಉಚ್ಚೈಶ್ರವಸ್ಸೆಂದರಿತು ಇದರಿಂದ ಮುಂದೆ ನದಿಯುವ ಕಾರ್ಯವಿಶೇಷಗಳಂ ಅದರ [illegible] ತಿಳಿದು ಋಷಿಯು ಆ ಅಶ್ವಕ್ಕೆ ರಾಕ್ಷಸರ ಬಾಧೆ ತಗಲದಂತೆ ಅದರ ಸಂರಕ್ಷಣೆಯಲ್ಲಿ ಪೂರ್ಣ ದೃಷ್ಟಿಯನ್ನಿಟ್ಟು ಅದರಿಸುತ್ತಿರಲು, ಇತ್ತಲಾ ಕಳಿಂಗದೇಶದೊಳ್ ಸುಗಂಧರಾಜೇಂದ್ರನು ಸೌಗಂಧಿಕಾ ದೇವಿಗೆ ಗಜಗೌರಿ ನೋಂಪಿಗೋಸುಗ ಚತುರ್ದಂತಗಳುಳ್ಳ ಶುಭ್ರವಾದ ದಿವ್ಯ ಗಜವಂ ತಂದು ಎರಡನೇ ಪಣವಂ ಗೆದ್ದು, ಮಾರನೆಯ ದಿನ ಸೂರ್ಯೋದಯವಾಗುತ್ತಲೇ ತನಗೆ ಬಿಡಾರವಾದ ಗೃಹದೊಳ್ ಮಣಿಮಂಚದಿಂದೆದ್ದು, ಶುಭವಸ್ತುಗಳನ್ನೀಡಿ, ಬಳಿಕ ಮಜ್ಜನಗೃಹವಂ ಪೊಕ್ಕು, ಪನ್ನೀರುಗಳಿಂದ ಮಜ್ಜನವಂ ಮಾಡಿ, ಪೀತಾಂಬರವನ್ನುಟ್ಟು, ನಿತ್ಯಕರ್ಮವಂ ಮಾಡಿ ಷಡ್ರಸೋಪೇತವಾದ ಅನ್ನವಂ ಭುಂಜಿಸಿ ಕರ್ಪೂರ ವೀಳೆಯವಂ ಮೆಲ್ಲುತ, ಅಲಂಕರಿಸಿದ ರಥದೊಳ್ಕುಳಿತು, ತನ್ನ ಬಿಡಾರದಿಂ ಪೊರಮಟ್ಟು ಕಳಿಂಗರಾಯನ ಮಂದಿರಕ್ಕೆ ಬರುತ್ತಿರಲಾ ಕಾಲದೊಳ್, ಕಳಿಂಗಪತಿಯಾದ ವಿಜಯವರ್ಮರಾಯನು ಸುಗಂಧರಾಜೇಂದ್ರನಂ ಇದಿರ್ಗೊಂಡು ಬಂದು, ಸಭಾಮಂಟಪಕ್ಕೆ ತಂದು, ಸಿಂಹಾಸನದೊಳ್ ಕುಳ್ಳಿರಿಸಲಾಗ ಸುಗಂಧರಾಜನು ಮಿತ್ರನಾದ ಸುಮತಿಯ ಮೊಗವಂ ನೋಡಲು ಸುಮತಿಯು ಕಳಿಂಗರಾಯನಂ ಕುರಿತು— ಎಲೈ ಭೂಪತಿಯೆ! ನಿಮ್ಮ ಪುತ್ರಿಯಾದ ಸೌಗಂಧಿಕಾದೇವಿಯು ಪೇಳಿದ ನಾಲ್ಕುದಂತಗಳುಳ್ಳ ಸರ್ವ ಲಕ್ಷಣಗಳಿಂದೊಪ್ಪುವ ಆನೆಯಂ ನಮ್ಮ ಸುಗಂಧಮಹಾರಾಜನು ತಂದಿತ್ತು ಪಣವಂ ಗೆದ್ದನು. ಇನ್ನೇನು ಪಣವು ಬೇಕೆಂದು ಸೌಗಂಧಿಕಾ ದೇವಿಯ ಚಿತ್ತದೊಳಿರುವುದೋ ಅದಂ ತಿಳಿದು ಪೇಳಬೇಕೆನಲು, ಅದಂ ಕೇಳಿ ಕಳಿಂಗರಾಯನು— ಎಲೈ ಸುಮತಿಯೆ! ಮಹಾತ್ಮನಾದ ಈ ಚಕ್ರಾಧೀಶ್ವರನಿಗೆ ಯಾವಕಾರ್ಯವು ಅಸಾಧ್ಯವಾಗಿರುವುದು? ಇನ್ನೇನು ಕಾರ್ಯವನ್ನಾದರೂ ಲೀಲಾಮಾತ್ರದಿಂದಲೇ ನೆರವೇರಿಸುವನು; ಇದರೊಳ್ ಸಂದೇಹವಿಲ್ಲ; ನನ್ನ ಪುತ್ರಿಯ ಪುಣ್ಯಕ್ಕೆ ಎಣೆವುಂಟೆ? ಎಂದು ನುಡಿದು ಬಳಿಕ ಅಂತಃಪುರದ ಬಾಗಿಲೊಳ್ ಕಾದಿರುವ ಕಂಚುಕಗಳಂ ಕರೆದು, ಎಲೈ ಕಂಚುಕಿಗಳಿರಾ! ದೀರ್ಘ ಸುಮಂಗಲಿಯಾದ ನಮ್ಮ ಸೌಗಂಧಿಕಾ ದೇವಿಯಂ ಈ ಆಸ್ಥಾನದ ಸಭಾಮಂಟಪಕ್ಕೆ ಕರೆತರುವುದೆಂದು ಅಪ್ಪಣೆಯಂ ಕೊಡಲು,

(ಸಶೇಷ.)

ಹಿಂದೂಗಳ ದುರಾಚಾರ.

(ಕಳೆದವಾರದ ಶೇಷ.)

ಜರಾರಾಯ—ಆಚಾರ್ಯರೆ! ನೀವೆಂದುದೆಲ್ಲವೂ ನಿಜವೆ. ಅರಿದ್ದರೂ ತಿನ್ನತಕ್ಕವರೇ ಹೊರತು ನನ್ನನ್ನು ಪ್ರೀತಿಯಿಂದ ನೋಡುವವರಿಲ್ಲ. ಮೂರು ತಿಂಗಳು ಮುಗಿಯುವುದರೊಳಗಾಗಿ ಪ್ರಯತ್ನ ಮಾಡಬೇಕೆಂದಿರುವೆನು. ಮೊನ್ನೆ ಸೆನ್ಸೆಸ್ಸು ಲೆಖ್ಖದಲ್ಲಿ ನನ್ನನ್ನು "ಅಪತ್ನೀಕ" ಎಂದು ಬರೆದುಕೊಂಡು ಹೋದಂದಿನಿಂದಲೂ, ನನ್ನ ದುಃಖಕ್ಕೆ ಕೊನೆಯೇ ಇಲ್ಲದಂತಾಗಿದೆ. ಎಷ್ಟು ದುಡ್ಡು ವೆಚ್ಚವಾದರೂ ಸರಿಯೆ ಈ ಸೆನ್ಸೆಸ್ಸು ಮುಗಿಯುವುದರೊಳಗಾಗಿ (ಎಂದರೆ ೧೯೧೧ನೆ ಮಾರ್ಚಿ ತಾ॥ ೧೦ ರ ಒಳಗಾಗಿ) ಈ ಮಾತು ಇಲ್ಲದಂತೆ ಮಾಡಿಕೊಳ್ಳಬೇಕೆಂಬ ಇಷ್ಟವಿದೆ. ತಾವು ದಯೆಯಿಟ್ಟು ಎಲ್ಲಿಯಾದರೂ ವಿಚಾರಿಸಿರಿ. ನಿಮಗೆ ಬಹುವಾಗಿ ಪಾರಿತೋಷಕವನ್ನು ಕೊಡುತ್ತೇನೆ, ಅಥವಾ ನೀವು ಮತ್ತೆ ವಿವಾಹ ಮಾಡಿಕೊಳ್ಳಬೇಕೆಂದಿರುವಿರಷ್ಟೆ. ಆ ವೆಚ್ಚದಲ್ಲಿ ಅರ್ಧವನ್ನು ನಾನು ನಿಮಗೆ ಕೊಡುತ್ತೇನೆ.

ರಾಮಾಚಾರ್ರು—ಹೆಣ್ಣಿಗೇನುಸ್ವಾಮಿ! ಈಗ ಒಂದಲ್ಲದಿಲ್ಲದ್ದರೆ ಹತ್ತು ಬೇಕಾದರೂ ಸಿಕ್ಕುವುವು. ಹದಿನಾಲ್ಕು ಹದಿನೈದು ವರ್ಷಗಳವು ಸಿಕ್ಕುತ್ತವೆ; ಎಂದರೆ ಅವರೆಲ್ಲರೂ ಬಿ. ಎ., ಬಿ. ಎಲ್., ಪರೀಕ್ಷೆಗಳನ್ನು ಕೊಟ್ಟವರನ್ನೇ ಹುಡುಕುತ್ತಿರುವರು. ಅದು ಹಾಗಿರಲಿ, ಬೇಕಾದಷ್ಟು ಹೆಣ್ಣುಗಳು ಸಿಕ್ಕುವುವು. ಮೊನ್ನೆ ಒಬ್ಬ ಆಚಾರ್ಯರು ವರಾನ್ವೇಷಣಕ್ಕಾಗಿ ಬಂದು ಇನ್ನೂ ಇಲ್ಲಿಯೇ ಇದ್ದಾರೆ.

ಜರಾ—(ಆತುರದಿಂದ) ಅವರಾರು? ಅವರೆಲ್ಲಿದ್ದಾರೆ? ಹುಡುಗಿಗೆ ಎಷ್ಟು ವರುಷಗಳು? ಕಪ್ಪಗಿದೆಯೊ ಬೆಳ್ಳಗಿದೆಯೊ? ದೊಡ್ಡ ಹೆಣ್ಣೋ?

ರಾಮಾ—(ಮನಸ್ಸಿನಲ್ಲಿ) ಅಯ್ಯೋ ಮುದುಕ! ನಿನಗೆಷ್ಟು ಆಸೆ? ಪಂಚಾಪತಿರಾಯ ಎಂಬ ಜನ ರಂಡೆಯರು ನನಗೆ ಕೆಲಸವನ್ನು ಕೊಟ್ಟರು. ನಾನು ಒಬ್ಬಳಿಗಾದರೂ ಕೆಲಸವನ್ನು ಕೊಡದಿರಲಾರೆನು. ಎಂದು ಹೇಳಿದಂತೆ ಮಾಡುತ್ತಾನೆ. ಹು ಆಗಲಿ, ದೈವ ಯತ್ನಕ್ಕೆ ಮೀರುವವರಾರು. (ಪ್ರಕಾಶಂ) ಬಳ್ಳಾರಿ ಧೋಂಡೋ ರಾಯಾಚಾರ್ಯರಂತೆ. ಆ ಹೆಣ್ಣಿಗೆ ಹತ್ತು ವರುಷಗಳಂತೆ. ಚಿಕ್ಕಂದಿನಲ್ಲಿ ಸೀಮೆಯಣ್ಣೆಯ ಅನಾಹುತದಲ್ಲಿ ಸಿಕ್ಕಿ ಮೈ ಸ್ವಲ್ಪ ಸುಟ್ಟಿದೆ. ಹೋದವರುಷ ಸಿಡುಬಿದ್ದು ಮುಖದಮೇಲೆ ಅಲ್ಪ ಸ್ವಲ್ಪ ಕಲೆಗಳಿವೆ. ಒಂದು ಕಣ್ಣು, ಕೈ ಕಾಲುಗಳು ಎಲ್ಲಾ ಚನ್ನಾಗಿವೆ. ಕ್ಯಾಮಲರ್ವ, ತಲೆಗೂದಲು ಇನ್ನೂ ಹುಟ್ಟುತ್ತಿದೆ; ಇನ್ನು ಸ್ವಲ್ಪ ದಿನಗಳಲ್ಲಿ ದೊಡ್ಡದಾಗುತ್ತದೆ. ಹೆಣ್ಣು ಪ್ರಾಯಕ್ಕೆ ಬಂದರೆ ಅವ ಕೊರತೆಯೂ [illegible]. ಅವನೂ ಒಪ್ಪಲಾರನು. ಇವಾಗಲೆ ಎಲ್ಲಾ ವಿಷಯವೂ ಅನುಕೂಲಿಸುತ್ತಿದೆ. ನಿನ್ನೆಯದಿನವೇ ನಕ್ಷತ್ರಾನುಕೂಲವನ್ನೂ ನೋಡಿದೆನು. ಅದು ಬಹು ಪ್ರಶಸ್ತವಾಗಿ ಬರುತ್ತದೆ.

ಜರಾ—ಎಲ್ಲವೂ ಸರಿಯೆ. ನನಗೊಂದು ಸಂದೇಹವಾಗಿದೆ. ಒಂದು ಕಣ್ಣು ಚನ್ನಾಗಿದೆಯೆಂದು ಹೇಳಿದಿರಿ. ಇನ್ನೊಂದುಕಣ್ಣು?

ರಾಮಾ—ಹ್ನು ಹ್ನು ಪಾಪ! ಹೋದವರುಷ ಸಿಡುಬು ಎದ್ದಿತ್ತೆಂದು ಹೇಳಿದೆನಷ್ಟೆ. ಆಗ ಒಂದು ಕಣ್ಣಿನಲ್ಲಿ ಸ್ವಲ್ಪ ಹೂ ಹೊರಟಿದೆ, ಅದೇನು, ಅದನ್ನು ಅರುತಾನೆ ಪರೀಕ್ಷಿಸುವರು? ಮಾನವದೇಹ.

ಜರಾ—(ಮನಸ್ಸಿನಲ್ಲಿ) ಎಲ್ಲವೂ ಚನ್ನಾಗಿದ್ದರೆ ನನ್ನಂತಹವನಿಗೆ ಅರುಕೊಡುವರು? ಎಂದುಕೊಂಡು (ಪ್ರಕಾಶಂ) ನೀವು ಒಪ್ಪಿದರೆ ನನಗೂ ಸಮ್ಮತವೇ. ಒಂದು ಅಳುವಾದ ಮೇಲೆ ಮತ್ತೊಂದು ಅಳುವ ದಿನವೇ ಹೊರತು ಸಂತಸಿರುವ ದಿನವಿಲ್ಲವಷ್ಟೆ? ನನಗೆ ದಿನಗಳು ಕಳೆಯುತ್ತವೆ, ಹುಡುಗಿಗೆ ದಿನಗಳೇರುತ್ತಿವೆ. ಈ ಕಾಲದಲ್ಲಿ ಒಳ್ಳೆಯ ಸುಂದರಿಯನ್ನು ಮಾಡಿಕೊಂಡರೆ, ಅವರನ್ನು ರಾತ್ರಿ ಹಗಲೂ ಕಾಯುವವರಾರು? ನಮ್ಮ ರಂಗಣ್ಣನನ್ನು ನೋಡಿರಿ ಅವುದೋ ಒಂದು ರೀತಿ ವಿವಾಹವಾಯಿತೆಂದರೆ ಸಾಕು.

ರಾಮಾ—ಹುಡುಗಿಗೆ ನಗನಾಣ್ಯಗಳೂ ವಸ್ತ್ರಗಳೂ ಎಷ್ಟರಮಟ್ಟಿಗೆ ಕೊಡುತ್ತೀರಿ?

ಜರಾ—ಸ್ವಾಮಿ! ನಮ್ಮ ಸ್ಥಿತಿ ಗತಿಗಳು ತಮಗೆ ಎಲ್ಲವೂ ಗೊತ್ತಿರುವುದಷ್ಟೆ? ನಾಲ್ಕುಪಾವು ಭಂಗಾರ ಹತ್ತುಪಾವು ಬೆಳ್ಳಿ ಒಂದುನೂರು ರೂಪಾಯಿನ ವಸ್ತ್ರಗಳು ಇಷ್ಟನ್ನು ಕೊಡುತ್ತೇನೆ.

ರಾಮಾ—ಅವರಿಗೆ ಎಂಟುಸೇರು ಭಂಗಾರ ಬೇಕಂತೆ.

ಜರಾ—ಸ್ವಾಮಿ! ಅಷ್ಟೆಲ್ಲಿಂದ ತರಲಿ? ಇನ್ನೊಂದು ಕೆಲಸವನ್ನು ಮಾಡಿ. ಐನೂರು ರೂಪಾಯಿಗಳನ್ನೂ ಒಂದು ಸೇರು ಭಂಗಾರವನ್ನೂ ಕೊಡುತ್ತೇನೆ.

ರಾಮಾ—ಹಾಗಾದರೆ ಆಗಬಹುದು. ನಾಳೆಯದಿನ ಅವರಲ್ಲಿ ಪ್ರಸ್ತಾಪಮಾಡಿ ತಮ್ಮಲ್ಲಿ ಅರಿಕೆಮಾಡುತ್ತೇನೆ.

ಜರಾ—"ಶುಭಸ್ಯ ಶೀಘ್ರಂ" ಎಂಬಂತೆ ಬೇಗನೆ ಆಗಲಿ; ಈ ದಿನವೇ ಪ್ರಯತ್ನಮಾಡಿರಿ.

ರಾಮಾ—ಅಪ್ಪಣೆಯಂತಾಗಲಿ ಊಟದ ಆಯಾಸವಷ್ಟೆ, ಸ್ವಲ್ಪ ಮಲಗಿ ಹೊರಳಾಡಿ ಬಳಿಕ ಹೊರಡುತ್ತೇನೆ. (ಎಂದು ಹೊರಟನು)

[ಸೀನ್ II]

ಜರಾರಾಯ—ಅಮ್ಮ ಇನ್ನೂ ಆಗಲಿಲ್ಲವೆ?

ಮಂಗಮ್ಮ—ಇದರಮನೆ ಹಾಳಾಗ, ದೊಡ್ಡ ಅಡುಗೆಮನೆಯಲ್ಲಿ ಮಾಡಿದರೆ ಹೊತ್ತಾಗುವುದೆಂದು ಸಣ್ಣ ಮನೆಯಲ್ಲಿ ಅಡುಗೆ ಮಾಡಿದರೂ ಬೇಗ ಆಗದು. ಇದು ನಾಶವಾಗ. ಮಾಸಿಕಗಳು ಒಂದಾದಮೇಲೊಂದು ಸಿದ್ಧವಾಗುವುವು. ಪ್ರತಿಯೊಂದು ಹಬ್ಬಕ್ಕೂ ಒಂದೊಂದು ಒನೆಗೂಡಿ [illegible]ಧಿಸುತ್ತಿರುವುವು. ಸತ್ತವರಿಗೆ ಮಾಸಿಕವಲ್ಲವು; ನನ್ನದಾಗಿದೆ.

ಜರಾ—ನೀನು ಬೇಯಿಸಲಾರದೆ ಸಾಯುತ್ತಿದ್ದರೆ ನಾನು ಮಾಸಿಕಗಳಿಗೆ ತಂದುಹಾಕಲಾರದೆ ಮಾಡಲಾರದೆ ಸಾಯುತ್ತಿದೇನೆ. ಇದಕ್ಕೇ ಗೋಳಾಡುವವಳು ಇನ್ನು ಮದುವೆಯ ಕೆಲಸಗಳನ್ನೇನುತಾನೆ ಮಾಡೀಯೆ? ಅದು ಹತ್ತಿರವಾಗುತ್ತಿದೆ.

ಮಂಗಮ್ಮ—ಅದೇನು, ಅದೇನು? ದೊಡ್ಡ ಅಪ್ಪಯ್ಯಗೋ?

ಜರಾ—ಅಲ್ಲ, ಅಲ್ಲ! ಮತ್ತೇ ನನಗೇ.

ಮಂಗಮ್ಮ—ಕೊಡುತ್ತೇನೆಂದಿರುವವರು ಅರು? ಎಷ್ಟು ವರುಷದ ಹುಡುಗಿ?

ಜರಾ—ರಾಮಾಚಾರ್ಯರು ಹೇಳಿರುವುದನ್ನೆಲ್ಲಾ ಹೇಳಿದನು.

ಮಂಗಮ್ಮ—ಹುಡುಗಿ ಹೇಗಿದ್ದರೇನು, ಪ್ರಾಯ ಬಂದರೆ ಅವರೇ ಚನ್ನಾಗಿರುವರು. ಸೊಗಸನ್ನೇನು ಕಟ್ಟಿಕೊಂಡು ಹೋಗುತ್ತಾರೋ?

ಜರಾ—ಅಷ್ಟೇ, (ಎಂದು ಹೊರಟು ಹೋಗುವನು) ಪಾಠಶಾಲೆಯಿಂದ ಮಾಧುರ್ಯನೆಂಬ ಮಗನು ಬರುವನು.

ಮಾಧುರ್ಯ—ಅಮ್ಮ ಏನು ಮಾಡುತ್ತಿರುವೆ? ನಾನು ಬೇಗ ಹೊರಡಬೇಕು ಅನ್ನವನ್ನಿಡು. ತಮ್ಮನಿನ್ನೂ ಬಾ[illegible]ಲ್ಲವೇನು?

ಮಂಗಮ್ಮ—ಹುಗು, ಊಟಮಾಡು ಎಲೆಯಲ್ಲಿ ಅನ್ನವನ್ನಿಟ್ಟಿರುವೆನು. (ಊಟ ಮಾಡುತ್ತಿರುವಾಗ ಮಂಗಮ್ಮನು ಜರಾರಾಯನ ವಾರ್ತೆಯನ್ನು ಹೇಳುವಳು.

ಮಾಧುರ್ಯ—ಅಮ್ಮ! ಅಪ್ಪನವರಿಗೆ ಎಂಥಹ ಹುಚ್ಚು? ಇದುವರೆಗೆ ಎಪ್ಪತ್ತು ವರ್ಷಗಳಾಗಿವೆ; ಐದುವರ್ಷದಿಂದ [illegible] ಗಟ್ಟಿ ಪದಾರ್ಥವನ್ನು ಅಗಿಯುವುದಕ್ಕೆ ಕೂಡಾ ಹಲ್ಲಿಲ್ಲವು. ಇನ್ನೂ ಅತನಿಗೆ ಮದುವೆಯ ಆಸೆಯೆ? [illegible] ವಿನ ಕೊರಳನ್ನು ಕೊಯ್ಯುವುದಕ್ಕೆ [illegible] ವಿದೆ. ದುಡ್ಡಿಗಾಸೆಬಿದ್ದು ದುರ್ಮಾರ್ಗರಾದ [illegible] ಗಳು ಹೆಣ್ಣು ಕೊಡುವುದಕ್ಕೆ ಒಪ್ಪಿದರೂ [illegible]

ನಾವು ಸಮ್ಮತಿಸುವುದು ತರವೇ? ವಯಸ್ಸಾದಮೇಲೆ ಮದುವೆಯಾಗುವುದು ಅನೇಕ ರೀತಿಗಳಲ್ಲಿ ಕೆಟ್ಟದೆಂದು ನೀತಿಜ್ಞರು ಬಾರಿಬಾರಿಗೂ ಹೇಳುವುದನ್ನು ಕೇಳುತ್ತಿದ್ದರೂ ಇಂತಹ ಅಕೃತ್ಯಗಳನ್ನು ಮಾಡಬಹುದೇ?

ಮಂಗಮ್ಮ—ಗುಡ್ಡ ಬಂದು ತಾಯಿಯನ್ನು ಏಳಿಸಿದ ರೀತಿಯಾಗಿ ನಮ್ಮೆದುರಿಗೆ ಹುಟ್ಟಿ ನಮಗೆ ನೀತಿಗಳನ್ನು ಹೇಳಿಕೊಡುತ್ತಿರುವೆಯಾ? ಬೋಡಿ! ಇಂಗ್ಲೀಷು ಎರಡಕ್ಷರ ಕಲಿತಮಾತ್ರಕ್ಕೆ ನೀನೇನು ಮಹಾ ಪಂಡಿತನಾದೆಯಾ? ಸುಮ್ಮನಿರು.

(ಸಶೇಷ.)

ಕಾ॥ ವೆಂಕಟರಮಣಯ್ಯ, ಅಲಕೂರು.

ಕೊರಟಗೆರೆ.

ಕಳೆದ ನೇ ತಿಂಗಳು ೨೫ ರಲ್ಲಿ ಕೊರಟಗೆರೆ ಎ. ವಿ. ಸ್ಕೂಲ್ ಹಾಲಿನಲ್ಲಿ "ಯಂಪೈರ್‌ಡೆ" ಎಂಬ ಮಹೋತ್ಸವವನ್ನು ಜರುಗಿಸಲು ಅನೇಕ ಮಹನೀಯರು ನೆರದಿದ್ದರು. ಮತ್ತು ದಯಾರ್ದ್ರಹೃದಯರಾದ ಕೊ-ಆಪರೇಟಿವ್ ಸೊಸೈಟಿ ರಿಜಿಸ್ಟ್ರಾರ್‌ಯವರಾದ ಮ॥ ಎಂ. ಎ. ನಾರಾಯಣಯ್ಯಂಗಾರ್ಯರವರು ಸಕಾಲಕ್ಕೆ ದಯಮಾಡಿಸಿ ವಾರ್ಷಿಕ ಬಹುಮಾನಗಳನ್ನು ಕೊಡುವುದಕ್ಕೆ ಒಪ್ಪಿ ಅಗ್ರಾಸನವನ್ನು ವಹಿಸಿದ್ದರು. ಆ ಕಾಲದಲ್ಲಿ ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ಹೆಚ್. ಶ್ರೀನಿವಾಸಾಚಾರ್ಯರು ಸ್ಕೂಲಿನ ವಾರ್ಷಿಕ ರಿಪೋರ್ಟನ್ನು ಸಾಂಗೋಪಾಂಗವಾಗಿ ಓದಿದರು. ಆರೀತಿ ಓದಿದ ರಿಪೋರ್ಟು ಅತ್ಯಂತ ದೀರ್ಘವಾಗಿತ್ತು. ಆದರೆ ಸಕಲಜನ ಮನೋರಂಜಕವಾಗಿರಲಿಲ್ಲವೆಂದು ವಿಶೇಷಣ ಕೊಡಬೇಕಾದ್ದಿಲ್ಲವು. ಹಾಗೆ ಲಂಬಿಸಿ ಬರೆದ ರಿಪೋರ್ಟಿನ ಸಾರಾಂಶವೇನಂದರೆ:—ಸ್ಕೂಲಿನಲ್ಲಿ ಸ್ಪಷ್ಟವಾಗಿ ಉಚ್ಚರಿಸತಕ್ಕ ಮತ್ತು ವಿದ್ಯೆಗೆ ಆತುರರಾಗಿರುವ ಬ್ರಾಹ್ಮಣರ ಸಂಖ್ಯೆಯು ಪಾಠಶಾಲೆಯಲ್ಲಿ ಕಡಮೆಯಾಗಿರುವುದರಿಂದ ನಾವು ವಿಷಾದಿಸುತ್ತೇವೆಂತ ಸೂಚಿಸಿದರು. ಬ್ರಾಹ್ಮಣ ಹುಡುಗರ ಸಂಖ್ಯೆಯು ಕಡಿಮೆಯಾದ ಮಾತ್ರಕ್ಕೆ ಇಷ್ಟು ಅಸ್ಯಹನೆಯನ್ನು ತೋರಿಸಿದ್ದು ನೋಡಿದರೆ, ಸರ್ವರಿಗೂ ವಿಷಾದವನ್ನುಂಟುಮಾಡುತ್ತಿದೆ. ಜಾತಿ ಮಾತ್ಸರ್ಯಗಳನ್ನು ಬಲಪಡಿಸಲೋಸುಗವೂ, ಇವರ ಸ್ವಂತ ಅಭಿಪ್ರಾಯವನ್ನು ನೆರವೇರಿಸಲೋಸುಗವೂ ಸರ್ಕಾರದವರು ಪಾಠಶಾಲೆಗಳನ್ನು ಏರ್ಪಡಿಸಲಿಲ್ಲ. ಜಾತಿಭೇದಗಳನ್ನಳಿದು ಸರ್ವರನ್ನೂ ಒಟ್ಟುಗೂಡಿಸಿ ಪ್ರೀತಿವಾತ್ಸಲ್ಯಾದಿಗಳೆಂಬ ಬಳ್ಳಿಯಿಂದ ಬಿಗಿದು ಕಟ್ಟಬೇಕೆನ್ನುವುದೇ ಘನವಾದ ಸರ್ಕಾರದವರ ಸದುದ್ದೇಶವು. ಸರ್ಕಾರದವರ ಸದುದ್ದೇಶವನ್ನು ತಿಳಿದಿದ್ದೂ ಹೆಡ್ಮಾಸ್ಟರವರು ಈ ಪ್ರಕಾರ ಅಪ್ಪಣೆ ಕೊಡಿಸಿದುದಕ್ಕಾಗಿ ವ್ಯಸನಪಡಬೇಕಾಗಿದೆ. ಇದನ್ನೆಲ್ಲಾ ಗ್ರಹಿಸುತ್ತಲಿದ್ದ ಅಗ್ರಾಸನಾಧಿಪತಿಗಳಾದ ಮಹಾರಾಜಶ್ರೀ ಎಂ. ಎ., ನಾರಣಯ್ಯಂಗಾರ್ಯರವರು ಹೆಡ್ಮಾಸ್ಟರ ಅಭಿಪ್ರಾಯವನ್ನು ಖಂಡಿಸಿ ಈ ಕೆಳಗೆ ಕಂಡಂತೆ ಅಪ್ಪಣೆ ಕೊಡಿಸಿದರು.—

ಬ್ರಾಹ್ಮಣ ಹುಡುಗರು ಕಡಿಮೆಯಾದುದರಿಂದ ವ್ಯಸನಪಡಕೆಲಸವಿಲ್ಲ. ಇರುವ ಹುಡುಗರಿಗೆ ಶ್ರದ್ಧೆಯಿಂದ ಓದುಬರಹಗಳನ್ನು ಕಲಿಸಿ ಅವರನ್ನು ತೇರ್ಗಡೆಯನ್ನು ಹೊಂದಿಸಬೇಕಲ್ಲದೆ, ಅಸ್ಯೆರಣೆ ಎಂಬ ಬೀಜವನ್ನು ಬಿತ್ತುವುದರಲ್ಲಿ ಪ್ರಯೋಜನವಿಲ್ಲವೆಂದೂ ಮುಂತಾಗಿ ಬುದ್ಧಿವಾದಗಳನ್ನು ಹೇಳಿದರು. ಸಭೆಯೇನೊ ಅಂದಿಗೆ ಮುಕ್ತಾಯವಾಯಿತು. ಸಭೆಯಲ್ಲಿ ನಡೆದ ಚರ್ಚಿತವಾದ ಸಂಗತಿಮಾತ್ರ ನೆರದಿದ್ದ ಮಹನೀಯರೆಲ್ಲರ ಮನಸ್ಸಿನಲ್ಲಿಯೂ ಕೇವಲ ಕಳವಳವನ್ನುಂಟುಮಾಡಿತಲ್ಲದೆ ಅನೇಕಕಾಲ ನೆನಪಿನಲ್ಲಿಡುವಂತೆ ಮಾಡಿತು.

ಸರ್ಕಾರದವರ ಮಹೋದ್ದೇಶವನ್ನು ಕೈಕನ್ನಡಿಯಾಗಿಟ್ಟುಕೊಂಡು ತಮ್ಮ ತಮ್ಮ ಅಲ್ಪಜ್ಞತ್ವದಿಂದ ಸಂಜನಿತವಾದ ಮತವೈಷಮ್ಯಗಳಮೂಲಕ ಅದನ್ನು ಕಲುಷಿತವಂ ಮಾಡದೆ ಸರ್ವತ್ರ ಸಮದರ್ಶನವೆಂಬ ಶ್ರೇಷ್ಠವಾದ ಗೀತೆಯ ವಾಕ್ಯವನ್ನು ಪರಿಶುದ್ಧತ್ವದಿಂದ ಪರಿಪಾಲಿಸುವ ಮಹನೀಯರೇ ವಿದ್ಯಾಬೋಧನೆಗೆ ಅರ್ಹರೆಂಬ ವಿಚಾರವು ಸರ್ವರ ಅವಗಾಹನೆಗೆ ತರಬೇಕೆಂಬದಾಗಿಯೂ, ತನ್ಮೂಲಕ ವಿದ್ಯಾಶಾಲೆಯಲ್ಲಿ ಪ್ರಸ್ತುತದುದ್ದೇಶ್ಯವು ನಿರ್ಮೂಲವಾಗಲೆಂಬದಾಗಿಯೂ ಈ ಸಂಗತಿಯನ್ನು ತಮ್ಮ ಘನವಾದ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂಬದಾಗಿಯೂ ಕೋರಿಕೆ.

ಚಂದಾದಾರ್.

ಶ್ರೀಮನ್ಮಹಾರಾಜರವರ ವರ್ಧಂತಿಯುತ್ಸವದ ನಿಮಿತ್ತ ದೊಡ್ಡಬಳ್ಳಾಪುರದಲ್ಲಿ ನಡೆದ ವಿನೋದಗಳು.

ನಮ್ಮ ಶ್ರೀಮನ್ಮಹಾರಾಜರವರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ., ರವರ ೨೭ ನೇಯ ವರ್ಷ ವರ್ಧಂತಿಯು ಈ ತಿಂಗಳ ೭ ನೇಯ ತಾ॥ ಬುಧವಾರದ ದಿನ ದೊಡ್ಡಬಳ್ಳಾಪುರದಲ್ಲಿ ವಿಶೇಷ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಇದಕ್ಕಾಗಿ ಒಂದೆರಡು ವಾರಗಳ ಹಿಂದೆಯೇ ಅಮಲ್ದಾರ್ ಮ॥ ಎ. ಕೃಷ್ಣೇಅರಸನವರ ಅಧ್ಯಕ್ಷತೆಯಲ್ಲಿ ಊರಿನ ಪ್ರಮುಖರ ಒಂದು ಕಮಿಟಿಯು ಏರ್ಪಟ್ಟು, ಉತ್ಸವಾದಿಗಳ ವಿವರವೆಲ್ಲವೂ ಪೂರ್ವಭಾವಿಯಾಗಿಯೇ ನಿರ್ಧರಿಸಲ್ಪಟ್ಟಿದ್ದುವು. ಕಮಿಟಿಯವರು ಊರಿನಲ್ಲಿಯ ಸರ್ಕಾರಿ ಮತ್ತೂ ಸಾಹುಕಾರಿ ದೊಡ್ಡಮನುಷ್ಯರುಗಳೆಲ್ಲರಿಗೂ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿರಲಾಗಿ ಅದರ ಊರಿನ ಪ್ರಮುಖರೆಲ್ಲರೂ ಕ್ಲಿಪ್ತಕಾಲಕ್ಕೆ ಸರಿಯಾಗಿ ದಯಮಾಡಿಸಿದ್ದರು. ಗೌರ್ನ್ಮೆಂಟ್ ಎ. ವಿ. ಸ್ಕೂಲಿನ ಆಟದ ಮೈದಾನದಮಧ್ಯೆ ಮಕರತೋರಣಗಳಿಂದಲೂ, ಕದಳೀ ಸ್ತಂಭಾದಿಗಳಿಂದಲೂ ಅಲಂಕೃತವಾದ ಒಂದು ಚಪ್ಪರವು ಹಾಕಲ್ಪಟ್ಟಿತ್ತು. ಇದರ ಉಭಯಪಾರ್ಶ್ವಗಳಲ್ಲಿಯೂ ವಿದ್ಯಾರ್ಥಿಗಳೂ, ವಿದ್ಯಾರ್ಥಿನಿಯರೂ, ಸರ್ಕಾರಿ ಉದ್ಯೋಗಸ್ಥರುಗಳೂ, ಇತರ ದೊಡ್ಡಮನುಷ್ಯರುಗಳೂ ಕುಳಿತುಕೊಳ್ಳುವುದಕ್ಕೆ ಬೆಂಚು ಕುರ್ಚಿಗಳು ಹಾಕಲ್ಪಟ್ಟಿದ್ದುವು. ಅಲ್ಲದೆ ಸುತ್ತಲೂ ಧ್ವಜಪತಾಕೆಗಳೂ, ತಳಿರತೋರಣಗಳೂ ರಮ್ಯವಾಗಿ ಕಟ್ಟಲ್ಪಟ್ಟಿದ್ದುವು.

ಪ್ರಾತಃಕಾಲ ಶ್ರೀ ವೆಂಕಟರಮಣಸ್ವಾಮಿಯ ದೇವಸ್ಥಾನದಲ್ಲಿ ಪೂಜಾದಿಗಳನ್ನು ಶ್ರೇಯಃ ಪ್ರಾರ್ಥನೆಗಳನ್ನೂ ನೆರವೇರಿಸಿದ ತರುವಾಯ ರಾಜಾರವಿವರ್ಮರವರಿಂದ ತಯಾರಿಸಲ್ಪಟ್ಟ ಶ್ರೀಮನ್ಮಹಾರಾಜರವರ ಮತ್ತೂ ಶ್ರೀಮನ್ಮಹಾರಾಣಿಯವರ ವಿವಾಹಕಾಲದ ಭಾವಚಿತ್ರವನ್ನು ಪುಷ್ಪಹಾರಾದಿಗಳಿಂದಲಂಕರಿಸಿ, ಪಲ್ಲಕ್ಕಿಯಲ್ಲಿಟ್ಟು ಊರಿನಲ್ಲೆಲ್ಲಾ ಮೆರವಣಿಗೆಮಾಡಿಕೊಂಡು ಎ. ವಿ. ಸ್ಕೂಲಿನ ಆಟದ ಮೈದಾನದಲ್ಲಿ ಏರ್ಪಡಿಸಲ್ಪಟ್ಟಿದ್ದ ಚಪ್ಪರದಲ್ಲಿನ ಉನ್ನತಾಸನದ ಮೇಲೆ ಇರಿಸಲಾಯಿತು. ಅನಂತರ ಹತ್ತು ಗಂಟೆಯವರಿವಿಗೂ ಹುಡುಗರ ಆಟಪಾಟಗಳು ಕೆಲವುಮಟ್ಟಿಗೆ ನಡೆದುವು. ಅನಂತರ ಊರಿನಲ್ಲಿನ ಪ್ರತಿಯೊಂದು ಪಾಠಶಾಲೆಯಲ್ಲಿಯೂ ಬಾಲಕ ಬಾಲಿಕೆಯರುಗಳೆಲ್ಲರಿಗೂ ಲಾಡು, ಮಾವಿನಹಣ್ಣುಗಳು ಹಂಚಲ್ಪಟ್ಟುವು.

ಮಧ್ಯಾಹ್ನಾನಂತರ ೨ ಗಂಟೆಯ ಸಮಯಕ್ಕೆ ಸರಿಯಾಗಿ ಆಟದ ಮೈದಾನದಲ್ಲಿ ಪುನಃ ಸಭೆಯು ಸೇರಿತು. ಆಟಪಾಟಗಳಪೈಕಿ ಪ್ರಾತಃಕಾಲ ಪೂರೈಸದೆ ಉಳಿದಿದ್ದುವುಗಳೆಲ್ಲವೂ ಮಧ್ಯಾಹ್ನ ಪೂರೈಸಲ್ಪಟ್ಟುವು. ಈಪೈಕಿ ಬೆಂಚುಗಳ ಕೆಳಗೂ, ಪೀಪಾಯಿಗಳ ಮಧ್ಯೆಯೂ ಹಾದು ಓಡುವುದು, ಗೋಣಿಯಚೀಲದಲ್ಲಿ ನಿಂತು ಕುಪ್ಪಳಿಸುವುದು, ಕಣ್ಣುಕಟ್ಟಿಕೊಂಡು ನೀರುತುಂಬಿದ ಮಡಕೆಯನ್ನು ಹೊತ್ತುಕೊಂಡು ಓಡುವುದು, ಕತ್ತೆಯಮೇಲೆ ಸವಾರಿಮಾಡುವುದು, ಸ್ಕೂಲು ಉಪಾಧ್ಯಾಯರುಗಳೂ ರೆವಿನ್ಯೂಇಲಾಖೆಯ ನೌಕರರೂ ಸೇರಿ ಹಗ್ಗ ಎಳೆಯುವುದು, ಗರಡಿಗೆಸೇರಿದ ಹುಡುಗರ ಅಂಗಸಾಧನೆ ಇವುಗಳು ನೋಟಕರ ಕಣ್ಮನಗಳನ್ನು ಸೆಳೆಯುವಂತೆ ರಮ್ಯವಾಗಿದ್ದುವು. ಮೋಡವಾಗಿದ್ದು ಸ್ವಲ್ಪ ಮಳೆಯು ಬಿದ್ದಪ್ರಯುಕ್ತ ಆಟಪಾಟಗಳು ಸಾಂಗವಾಗಿ ನಡೆಯುವುದಕ್ಕೂ, ಪ್ರೇಕ್ಷಕರು ನಿರಾಯಾಸವಾಗಿ ವಿನೋದಗಳಲ್ಲಿ ಭಾಗಿಗಳಾಗುವುದಕ್ಕೂ ತುಂಬ ಅನುಕೂಲವಾಗಿತ್ತು. ಪ್ರೇಕ್ಷಕರ ಸಂಖ್ಯೆಯು ಒಂದು ಸಾವಿರಕ್ಕೆ ಮೇಲ್ಪಟ್ಟು ಇತ್ತು. ಇವರುಗಳೆಲ್ಲರೂ ಪ್ರಜೆಗಳ ಪ್ರೀತಿಗೌರವಗಳಿಗೆ ಭಾಜನರಾದ ಶ್ರೀಮನ್ಮಹಾರಾಜರವರ ವರ್ಧಂತಿಯ ಪ್ರಯುಕ್ತವಾದ ಉತ್ಸವಗಳಲ್ಲಿ ವಿಶೇಷ ರಾಜಭಕ್ತಿಯೊಡನೆ ಭಾಗಿಗಳಾಗಿದ್ದರು.

ಆಟಗಳೆಲ್ಲವೂ ಸಾಯಂಕಾಲ ೫ ಗಂಟೆಗೆ ಪೂರೈಸಿದುವು. ಅನಂತರ ಕಮಿಟಿಯ ಅಧ್ಯಕ್ಷರಾದ ಅಮಲ್ದಾರ್ ಮ॥ ಎ. ಕೃಷ್ಣೇಅರಸರವರು ಆಟಗಳಲ್ಲಿ ಗೆದ್ದವರಿಗೆ ಮೇಣದ ಬತ್ತಿಯ ದೀಪಸ್ತಂಭ, ಕನ್ನಡಿ ಟವಲು ಗುಂಡಿ ಬನೀನಾ ಮಸಿಯುದವತಿ ಬೆತ್ತ ಈ ಮುಂತಾದ ಉಪಯುಕ್ತಪದಾರ್ಥಗಳನ್ನು ಬಹುಮಾನವಾಗಿ ಹಂಚಿ ವಿದ್ಯಾರ್ಥಿಗಳಿಗೆ ಬುದ್ಧಿವಾದ ರೂಪಕವಾದ ಕೆಲವುಮಾತುಗಳನ್ನು ಅಪ್ಪಣೆ ಕೊಡಿಸಿದ ತರುವಾಯ, ಬೆಂಗಳೂರಲ್ಲಿ ಜವಳಿ ವ್ಯಾಪಾರಿಗಳಾಗಿಯೂ, ಮ್ಯುನಿಸಿಪಲ್ ಕೌನ್ಸಿಲರ್ ಮತ್ತೂ ಆನರರಿ ಬೆಂಚ್ ಮೇಜಿಸ್ಟ್ರೇಟ್‌ರಾಗಿಯೂ, ಇದ್ದುಕೊಂಡು ದೇವಾಂಗದವರಲ್ಲಿ ಅಗ್ರಗಣ್ಯರೆನಿಸಿಕೊಂಡಿರುವ ಮ॥ ರಾ॥ ಡಿ. ಅದೆಪ್ಪನವರು ಕಮಿಟಿಯವರ ಕೋರಿಕೆಯಂತೆ ಬೆಂಗಳೂರಿಂದ ದಯಮಾಡಿಸಿದುದುಮಾತ್ರವೇ ಅಲ್ಲದೆ ದೊಡ್ಡಬಳ್ಳಾಪುರದ ಎ. ವಿ. ಸ್ಕೂಲ್ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸುಮಾರು ೫೦ ರೂ. ಗಳ ಬೆಲೆ ಬಾಳುವ "ಪ್ಯಾರಲೆಲ್ ಬಾರ್ಸ್ ಎಂಬ" ಅಂಗಸಾಧನೆಯ ಸಾಮಾನನ್ನು ಬಹುಮಾನವಾಗಿ ದಯಪಾಲಿಸಿದ ಸಂಗತಿಯನ್ನು ಸಭೆಯಲ್ಲಿ ತಿಳಿಸಲಾಗಿ ಸರ್ವರೂ ಸಂತೋಷದೊಡನೆ ಕರತಾಳನವಂ ಮಾಡಿದರು. ಅನಂತರ ಇಂಗ್ಲೀಷ್ ಮಾಸ್ಟರ್ ಮ॥ ಎಂ. ಆರ್. ಸುಬ್ಬರಾಯರವರು, ಮ॥ ರಾ॥ ಡಿ. ಅದೆಪ್ಪನವರು ವಿಶ್ವಾಸಪೂರ್ವಕವಾಗಿ ಬಹುಮಾನವನ್ನು ದಯಪಾಲಿಸಿದುದಕ್ಕಾಗಿ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಪರವಾಗಿ ಅವರಿಗೆ ವಂದನೆಗಳನ್ನು ಅರ್ಪಿಸಿದುದಲ್ಲದೆ ಈ ದೊಡ್ಡಮನುಷ್ಯರು ಈ ಸ್ಕೂಲಿನ ವಿಷಯದಲ್ಲಿ [illegible] ವೆಂತಲೂ, ಈ ಊರು ಲೋವರ್ ಸೆಕೆಂಡರಿ ಪರೀಕ್ಷಾ ಸೆಂಟರ್ ಆಗುವುದಕ್ಕಿಂತ ಮುಂಚೆ ಇಲ್ಲಿನ ವಿದ್ಯಾರ್ಥಿಗಳು ಸದರಿ ಪರೀಕ್ಷೆಗಾಗಿ ಬೆಂಗಳೂರಿಗೆ ಹೋಗಬೇಕಾಗಿದ್ದಾಗ ಅವರುಗಳ ಊಟ ಉಪಚಾರಾದಿಗಳಿಗೆಲ್ಲ ತಮ್ಮ ಸ್ವಂತ ಖರ್ಚಿನಿಂದ ಇವರು ತೃಪ್ತಿಕರವಾದ ಏರ್ಪಾಡು ಮಾಡಿಕೊಡುತ್ತಾ ಇದ್ದರೆಂತಲೂ ಸಭಿಕರಿಗೆ ತಿಳಿಯಪಡಿಸಿದರು.

ಸಾಯಂಕಾಲ ೭ ಗಂಟೆಗೆ ಶ್ರೀಮನ್ಮಹಾರಾಜರವರ ಮತ್ತು ಶ್ರೀಮನ್ಮಹಾರಾಣಿಯವರ ವಿವಾಹಕಾಲದ ಭಾವಚಿತ್ರವನ್ನು ಆಟದ ಮೈದಾನದಿಂದ ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆ ಮಾಡಿಕೊಂಡು ಎ. ವಿ. ಸ್ಕೂಲ್ ಕಟ್ಟಡದಲ್ಲಿ ಇರಿಸಿದುದಾಯಿತು. ಈ ಕಟ್ಟಡವು ತಳಿರ ತೋರಣಗಳಿಂದಲಂಕೃತವಾಗಿದ್ದುದಲ್ಲದೆ ಹೊರಭಾಗದಲ್ಲಿ ವಿಧವಿಧವಾದ ಬಣ್ಣದ ದೀಪಗಳು ರಮ್ಯವಾಗಿರುವಂತೆ ಗೋಡೆಗೆ ತಗಲಹಾಕಲ್ಪಟ್ಟಿದ್ದುವು. ಅಲ್ಲಿ ಸುಮಾರು ಒಂದೆರಡು ಗಂಟೆಗಳಕಾಲ ಮ॥ ರಾ॥ ಚನ್ನಾಚಾರ್ಯರ ಸಂಗೀತವು ಸಭಿಕರಿಗೆ ಕರ್ಣಾನಂದವನ್ನುಂಟುಮಾಡುತ್ತಿತ್ತು.

ಸಂಗೀತವು ಪೂರೈಸಿದ ನಂತರ ಸಭಾಧ್ಯಕ್ಷರಾದ ಅಮಲ್ದಾರ್ ಮ॥ ಎ. ಕೃಷ್ಣೇಅರಸಿನವರು ನಮ್ಮ ಶ್ರೀಮನ್ಮಹಾರಾಜರವರ ಗುಣಕಥನವಂ ಮಾಡಿ ಅವರು ತಮ್ಮ ಪ್ರಜೆಗಳ ಪರಿಪಾಲನೆಯಲ್ಲಿ ತೋರಿಸುತ್ತಿರುವ ಶಕ್ತಿ ಸಾಮರ್ಥ್ಯಗಳನ್ನು ವಿವರಿಸಿ ಹೇಳಿದುದಲ್ಲದೆ ಸಂಸ್ಥಾನದ ಇತರ ಪ್ರಜೆಗಳಂತೆ ಈ ಊರಿನ ನಿವಾಸಿಗಳೂ ಸಹ ರಾಜಭಕ್ತಿಯನ್ನು ಪ್ರದರ್ಶಿಸಿದುದನ್ನು ಶ್ಲಾಘಿಸಿ, ಮುಂದೆಯೂ ಇದೇ ರೀತಿ ಪ್ರದರ್ಶಿಸುತ್ತಾ ಬರಬೇಕೆಂದು ಅಪ್ಪಣೆ ಕೊಡಿಸಿದರು. ಅನಂತರ ಪ್ಲೀಡರ್ ಮ॥ ಗೋಪಾಲರಾಯರು ಸಭಾಧ್ಯಕ್ಷರನ್ನೂ, ಊರಿನ ಮಹಾಜನಗಳನ್ನೂ ಈದಿನದ ಉತ್ಸವಗಳು ಸಾಂಗವಾಗಿ ನೆರವೇರಲು ಮುತುವರ್ಜಿ ವಹಿಸಿ ಶ್ರಮಿಸಿದ ದೊಡ್ಡಮನುಷ್ಯರುಗಳನ್ನೂ ವಂದಿಸಿದರು. ಅನಂತರ ಇಂಗ್ಲೀಷ್ ಮಾಸ್ಟರ್ ಮ॥ ಎಂ. ಆರ್. ಸುಬ್ಬರಾಯರವರು ಈ ದಿನದ ಉತ್ಸವಗಳು ವಿಜೃಂಭಣೆಯಿಂದ ನಡೆಯುವುದಕ್ಕೆ ಉದಾರವಾಗಿ ದ್ರವ್ಯಸಹಾಯ ಮಾಡಿದ ಊರಿನ ಪ್ರಮುಖರು ಮಾತ್ರವೇ ಅಲ್ಲದೆ ದೊಡ್ಡ ವಂಶಕ್ಕೆ ಸೇರಿ ೧೦-೧೨ ವರುಷಗಳಕಾಲ ರಾಜಧಾನಿಯಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಪದವಿಯಲ್ಲಿದ್ದು ದೃಢಕಾಯರಾಗಿಯೂ, ವ್ಯಾಯಾಮದಲ್ಲಿ ಆಸಕ್ತಿಯುಳ್ಳವರಾಗಿಯೂ ಇರುವ ಮಿ॥ ಸಿರಾಜುದ್ದೀನ್ ಮಹಮ್ಮದ್ ರವರೂ ಸಹ ಕಾರಣರಾಗಿರುವರೆಂದು ಮುಂತಾಗಿ ಬಹಳ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅನಂತರ ಸಂಸ್ಕೃತ ಪಂಡಿತರು ಶ್ರೀಮನ್ಮಹಾರಾಜರವರ, ಯುವರಾಜರವರ ಮತ್ತು ರಾಜವರ್ಗದವರ ಶ್ರೇಯಃಪ್ರಾರ್ಥನೆಯನ್ನು ಸೂಚಿಸುವ ಶ್ಲೋಕಗಳನ್ನು ಹೇಳಿದರು. ಆಮೇಲೆ ಬೇರೆ ಬೇರೆ ಪಾಠಶಾಲೆಗಳ ವಿದ್ಯಾರ್ಥಿಗಳು ಕನ್ನಡ, ಸಂಸ್ಕೃತ ಇಂದುಸ್ತಾನಿ ಭಾಷೆಗಳಲ್ಲಿ ಶ್ರೇಯಃ ಪ್ರಾರ್ಥನೆಯ ಹಾಡುಗಳನ್ನು ಹಾಡಿದರು. ಸಭಿಕರಿಗೆ ಗಂಧಪುಷ್ಪ ತಾಂಬೂಲಗಳೂ, ಅಲ್ಪಾಹಾರವೂ ವಿನಿಯೋಗಿಸಲ್ಪಟ್ಟ ನಂತರ ಸಭೆಯು ಮುಕ್ತಾಯವಾಯಿತು.

D. C. S.

2

Office of Senior Surgeon,
Mysore Govt.

Dated, Bangalore, 10 June 1911.

1. Applications from candidates (Male and Female) for qualifying as Hospital Assistants in the Royapuram Medical School, Madras, will be received by the undersigned, till 22nd June 1911, the latest.

2. Applicants must be Matriculates and should state their age and nationality and if they know Canarese, also send along with their applications, copies of testimonials and a certificate from any graduate in Medicine as to physical fitness and age.

3. Selected candidates will have to execute covenants on a five rupee Mysore Government stamp paper to serve the State for 7 (seven) years, after qualifying as Hospital Assistants.

4. A scholarship of Rs 9/— per mensem for the first year and Rs 10/— for the succeeding three years will be given with supply of books, school fees, etc.

S. V. Ramaswamy Iyengar, L. C. M. B.
Personal Assistant,
For Offg. Senior Surgeon, Mysore Govt.

ಮೈಸೂರ್ ಸ್ಟಾರ್.

೧೯೧೧ನೇ ಇಸವಿ ಜೂನ್ ತಾ|| ೧೯ ನೇ ಸೋಮವಾರ.

ಮೈಸೂರು ಸಂಸ್ಥಾನದ ಸಂಪತ್ತನ್ನಭಿವೃದ್ಧಿಗೊಳಿಸುವ ಆಲೋಚನಾ ಸಭೆಯು.

(ಏಕನಾಮಿಕ್ ಕಾನ್ಫರೆನ್ಸ್.)

ಈ ಸಭೆಯನ್ನು ಪ್ರಾರಂಭಮಾಡಿದ ಕಾಲದಲ್ಲಿ ಶ್ರೀಮನ್ಮಹಾರಾಜರವರು ಮಾಡಿದ ಭಾಷಣದ ಮುಖ್ಯ ಸಾರಾಂಶವನ್ನು ಹಿಂದಣವಾರದಲ್ಲಿ ಪ್ರಕಟಿಸಿರುವೆವು. ಇದನ್ನು ಓದಿದರೆ ನಮ್ಮ ಮಹಾರಾಜರವರ ಅಸಾಧಾರಣವಾದ ವಾಚಾಲತೆಯೂ, ಶ್ಲಾಘನೀಯವಾದ ಪ್ರಜಾನುರಾಗವೂ, ಅಪ್ರತಿಮವಾದ ಬುದ್ಧಿಚಾತುರ್ಯವೂ ಪ್ರತಿವಾಕ್ಯದಲ್ಲಿಯೂ ಸ್ಪಷ್ಟವಾಗಿ ಪ್ರಕಟಗೊಳ್ಳುತ್ತಿರುವುವು. ಇಂತಹ ರಾಜನೀತಿವಿಶಾರದರಾದ ಪ್ರಭುಗಳು ನಮ್ಮ ದೇಶೀಯರ ಸುಖಸಂಪತ್ತುಗಳನ್ನು ಅಭಿವೃದ್ಧಿಗೊಳಿಸಲು ಬದ್ಧಕಂಕಣರಾಗಿ ತಮ್ಮ ಕಾಲವನ್ನೂ, ತಮ್ಮ ಬುದ್ಧಿಶಕ್ತಿಯನ್ನೂ, ತಮ್ಮ ಸರ್ವಸ್ವವನ್ನೂ ಕೊಡುತ್ತಿರುವುದು ನಮ್ಮಗಳ ಪುಣ್ಯೋದಯವೇ ಸರಿ. ಆದರೆ ಸದುದ್ದೇಶಕ್ಕೂ, ಸತ್ಫಲಪ್ರಾಪ್ತಿಗೂ ಅಂತರವು ಬಹಳವಾಗಿರುವುದು. ಉದ್ದೇಶಿಸಿದ ಕೆಲಸವು ನೆರವೇರಬೇಕಾದರೆ, ತಕ್ಕ ಸಲಕರಣಗಳು ಬೇಕು; ಅದಕ್ಕೆ ಸೇರಿದ ಜನರಲ್ಲಿ ಏಕವಾಕ್ಯತೆಯೂ, ಏಕಾಭಿಪ್ರಾಯವೂ ನೆಲಸಿರಬೇಕು; ಸ್ವಾರ್ಥತೆಯು ಬಹಳಮಟ್ಟಿಗೆ ಕಡಿಮೆಯಾಗಿರಬೇಕು; ಮಾರ್ಗವು ಸರಿಯಾದುದಾಗಿರಬೇಕು. ಇಷ್ಟೆಲ್ಲಾ ಇದ್ದರಲ್ಲದೆ ನಮ್ಮ ಮಹಾರಾಜರವರು ಕೈಗೊಂಡಿರುವ ಈ ಮಹಾಕಾರ್ಯವು ಫಲಪ್ರದವಾಗಿ ಪರಿಣಮಿಸುವುದು; ಮತ್ತೂ ನಮ್ಮಗಳ ದೌರ್ಭಾಗ್ಯವು ನಿರ್ಮೂಲವಾಗುವುದು. ಈ ನಮ್ಮ ಭರತಖಂಡದ ಪುರೋಭಿವೃದ್ಧಿಯನ್ನು ಬಯಸುವ ಅನೇಕಮಂದಿ ಮಹನೀಯರೂ, ದೇಶಹಿತೈಷಿಗಳೂ ನಮ್ಮಲ್ಲಿರುವ ನ್ಯೂನಾತಿರಿಕ್ತ ದೋಷಗಳನ್ನೂ, ತನ್ನಿವಾರಣೆಗೆ ಸಾಧಕಗಳಾದ ಏರ್ಪಾಡುಗಳನ್ನೂ ಕುರಿತು ಪುಸ್ತಕಗಳಲ್ಲಿಯೂ, ಉಪನ್ಯಾಸಗಳಲ್ಲಿಯೂ, ಪತ್ರಿಕಾದ್ವಾರವಾಗಿಯೂ ಎಷ್ಟೋ ಆವೃತ್ತಿ ಹೇಳಿರುವರು. ಮತ್ತೂ ಈಗಲೂ ಹೇಳುತ್ತಿರುವರು. ಆದಾಗ್ಯೂ ನಮ್ಮ ದೇಶಸ್ಥಿತಿಯು ಮಾತ್ರ ಬದಲಾಯಿಸದೆ ಏಕರೀತಿಯಾಗಿರುವುದು. ಇದು ಏತಕ್ಕೆಂದರೆ— ಇಂತಹ ಕಾರ್ಯಗಳು ನಡೆಯಬೇಕಾದರೆ ಸರ್ಕಾರದವರೂ, ವಿದ್ಯಾವಂತರೂ, ಪ್ರಜೆಗಳೂ ಏಕೀಭವಿಸಿ ಹೊಂದಿಕೆಯಿಂದ ಕೆಲಸಗಳನ್ನು ಜರುಗಿಸಬೇಕು. ಇವರಲ್ಲಿ ಇಂತಹ ಹೊಂದಿಕೆಯು ನೆಲಸಿರಬೇಕಾದರೆ, ಸರಕಾರದ ದೊಡ್ಡ ಉದ್ಯೋಗಗಳಲ್ಲಿರುವ ಅಧಿಕಾರಿಗಳು ಸ್ವಾರ್ಥತೆಯನ್ನು ತ್ಯಜಿಸಿ, ಪ್ರಜಾಹಿತಕ್ಕಾಗಿ ಶ್ರಮಪಡುತ್ತಾ ಜನರ ನಂಬುಗೆಗೆ ಪಾತ್ರರಾಗಬೇಕು; ಮಹಾರಾಜರು ನಂಬುಗೆಯಿಂದ ತಮಗೆ ಕೊಟ್ಟಿರುವ ಅಧಿಕಾರದಿಂದ ತಮ್ಮ ದೊಡ್ಡಸ್ತಿಕೆಯನ್ನು ಸ್ಥಾಪಿಸಿಕೊಳ್ಳುವುದಕ್ಕೆ ಬದಲಾಗಿ ಅದನ್ನು ಸದ್ವಿನಿಯೋಗ ಪಡಿಸಿ ಪ್ರಜೆಗಳ ಪ್ರೀತಿಗೂ, ಗೌರವಕ್ಕೂ ಪಾತ್ರರಾಗಿ ರಾಜರು ತಮ್ಮಲ್ಲಿಟ್ಟ ನಂಬುಗೆಗೆ ದ್ರೋಹವನ್ನು ತಾರದೆ ಇರಬೇಕು. ವಿದ್ಯಾವಂತರಾದವರು ತಮ್ಮ ಬುದ್ಧಿಶಕ್ತಿಯನ್ನೆಲ್ಲ ವೆಚ್ಚಮಾಡಿ ಜನರಿಗೆ ಇಂತಹ ಕೆಲಸಗಳಿಂದಾಗುವ ಪ್ರಯೋಜನವನ್ನು ತಿಳಿಯಪಡಿಸಿ ಅವರು ಇದರಲ್ಲಿ ಸೇರಿ ಕೆಲಸಮಾಡಲು ಪ್ರೋತ್ಸಾಹಿಸಬೇಕು. ಇದಕ್ಕೆಲ್ಲ ವಿದ್ಯಾಭಿವೃದ್ಧಿಯು (ಅಂದರೆ ಸ್ತ್ರೀಪುರುಷರುಭಯತ್ರರ ವಿದ್ಯಾಭಿವೃದ್ಧಿಯು) ಬಹಳ ಸಹಕಾರಿಯು. ಇಲ್ಲಿ ವಿದ್ಯೆಯೆಂದರೆ ಪರೀಕ್ಷೆಗಳಲ್ಲಿ ತೇರ್ಗಡೆಹೊಂದುವುದೆಂದಾಗಲೀ, ಭಾಷಾಜ್ಞಾನವೆಂದಾಗಲೀ ತಿಳಿಯಬಾರದು. ಯಾವ ವಿದ್ಯೆಯು ಮನುಷ್ಯನಿಗೆ ಸನ್ಮಾರ್ಗಪ್ರವರ್ತನೆಯನ್ನು ಕೊಡಲಾರದೋ, ಯಾವ ವಿದ್ಯೆಯು ಮನುಷ್ಯನಿಗೆ ತನ್ನ ಕರ್ತವ್ಯವನ್ನೂ, ಧರ್ಮವನ್ನೂ ತಿಳಿಯಪಡಿಸಿ ಅವನು ತನ್ನ ಜನ್ಮ ಸಾರ್ಥಕಮಾಡಿಕೊಳ್ಳಲು ಸಹಕಾರಿಯಾಗದಿಲ್ಲವೋ ಅದು ವಿದ್ಯೆಯೇ ಅಲ್ಲ. ವಿದ್ಯೆಯು ತಿಳುವಳಿಕೆಯನ್ನು ಹೆಚ್ಚಿಸಬೇಕು. ಹೀಗೆ ಹೆಚ್ಚಿದ ತಿಳುವಳಿಕೆಯು ನಡವಳಿಕೆಯಲ್ಲಿ ಪ್ರತಿಬಿಂಬಿಸುತ್ತಿರಬೇಕು. ಇಂತಹ ವಿದ್ಯಾಭಿವೃದ್ಧಿಯಿಂದಲೇ ರಾಜ್ಯವು ಸಂಪತ್ಸಮೃದ್ಧಿಯಾಗುವುದು. ಇದೇ ಅರ್ಥವನ್ನೇ ನಮ್ಮ ಮಹಾರಾಜರವರು ತಮ್ಮ ಭಾಷಣದಲ್ಲಿ ಹೇಳಿರುವರೆಂದು ನಾವು ತಿಳಿಯುತ್ತೇವೆ. ಆದರೆ ರಾಜ್ಯವು ಉತ್ತಮಸ್ಥಿತಿಗೆ ಬರಬೇಕಾದರೆ, ಪ್ರಜೆಗಳೆಲ್ಲರೂ ವಿದ್ಯಾವಂತರಾಗಬೇಕೋ? ಅದಕ್ಕೆ ಮುಂಚೆ ಯಾವ ಕೆಲಸಗಳನ್ನೂ ಮಾಡಲಾಗುವುದಿಲ್ಲವೋ? ಎಂದರೆ ಅದು ಅವಶ್ಯಕವಲ್ಲ. ಎಲ್ಲರೂ ವೈದ್ಯಶಾಸ್ತ್ರವನ್ನು ಓದಿದರೇನೇ ರಾಜ್ಯದಲ್ಲಿ ರೋಗಗಳು ನಿರ್ಮೂಲವಾಗುವುವು ಎಂದು ಹೇಳಬಹುದೋ? ಎಂದಿಗೂ ಇಲ್ಲ! ವೈದ್ಯರು ಏತಕ್ಕೆ ಪಥ್ಯವನ್ನು ಹೇಳುತ್ತಾರೆ ಎಂದು ರೋಗಿಗೆ ತಿಳಿಯದಿದ್ದರೂ ಅವರು ತನಗೆ ಹಿತಕ್ಕಾಗಿ ಹೇಳುವರೆಂಬ ನಂಬುಗೆಯು ಅವನಿಗೆ ಇರುವುದರಿಂದ ಅತ್ಯಂತ ಕಹಿಯಾದ ಔಷಧವನ್ನು ಸೇವಿಸುತ್ತಾನೆ; ಕಠಿಣವಾದ ಪಥ್ಯವನ್ನೂ ಕೈಕೊಳ್ಳುತ್ತಾನೆ. ಇದರಂತೆಯೇ ಸರಕಾರದವರೂ, ನಮ್ಮ ಹಿತಚಿಂತಕರೂ ಜನರ ನಂಬುಗೆಯನ್ನು ಸಂಪಾದಿಸಿಕೊಂಡರೆ, ಕೆಲಸಕಾರ್ಯಗಳು ಸುಲಲಿತವಾಗಾಗುವುವು. ಜನರಿಗೆ ಅನುಕೂಲಗಳು ಹೆಚ್ಚಿದಹಾಗೆಲ್ಲಾ ವಿದ್ಯೆಯು ಅಭಿವೃದ್ಧಿಯಾಗುವುದು. ಆದರೆ ವಿದ್ಯಾಭಿವೃದ್ಧಿಯು ಸರಿಯಾದಮಾರ್ಗದಲ್ಲಿ ಆಗುತ್ತಲಿದೆಯೋ ಎಂಬುದನ್ನು ಮಾತ್ರ ನಮ್ಮ ಮಹಾರಾಜರೂ, ಸರಕಾರದ ಅಧಿಕಾರಿಗಳೂ ನೋಡಿಕೊಳ್ಳುತ್ತಿರಬೇಕು.

ಘನತೆಯನ್ನು ಪಡೆದಿರುವ ಯಾವದೇಶದ ಚರಿತ್ರೆಯನ್ನೋದಿದರೂ ಅಲ್ಲಿನ ಪ್ರಜೆಗಳೆಲ್ಲರೂ ದೊಡ್ಡವರಾಗಿದ್ದರೆಂದು ತಿಳಿಯಬರುವುದಿಲ್ಲ. ಸಾಮಾನ್ಯಜನರು ಯಾವಾಗಲೂ ಬಹಳಮಂದಿ ಇದ್ದೇ ಇರುವರು. ದೇಶದ ಉಚ್ಛ್ರಾಯಸ್ಥಿತಿಯೂ, ಹೀನಸ್ಥಿತಿಯೂ ಅಲ್ಲಿನ ಮುಖ್ಯಸ್ಥರ ಮತ್ತೂ ರಾಜಕಾರ್ಯನಿರ್ವಾಹಕರ ಗುಣದೋಷಗಳಿಂದ ಬಹಳಮಟ್ಟಿಗೆ ನಿಷ್ಕರ್ಷೆಯಾಗುವುವು. ಆದುದರಿಂದ ಈ ದೇಶದ ಸಂಪತ್ತನ್ನಭಿವೃದ್ಧಿಗೊಳಿಸುವ ಆಲೋಚನಾ ಸಭೆಗೆ ಸೇರಿರುವ ದೇಶಹಿತೈಷಿಗಳಾದ ಸಭಿಕರು, ಈಗ ನಮ್ಮ ಮಹಾರಾಜರವರು ನಮಗೆ ಒದಗಿಸಿಕೊಟ್ಟಿರುವ ಸುಸಮಯವನ್ನು ಸಾರ್ಥಕಗೊಳಿಸುವ ಭಾರವನ್ನು ವಹಿಸಿರುವರು; ಸತ್ಸಂಕಲ್ಪದಿಂದ ಅವರು ಕಾರ್ಯಗಳನ್ನು ಮಾಡುತ್ತಿರುವಾಗ ದೋಷಗಳು ಕಂಡುಬಂದರೆ ಅವನ್ನು ತಿದ್ದಿಕೊಳ್ಳಬಹುದು. ಮಹಾರಾಜರು ಮಾಡಿರುವ ಸದುದ್ದೇಶವು ನೆರವೇರಬೇಕೆಂಬ ಒಂದು ಗುರಿಯನ್ನು ಸರ್ವದಾ ಅವರು ಮರೆಯದಿದ್ದರೆ ಸಾಕು.

ಈಗ ನಮ್ಮ ಮಹಾಪ್ರಭುಗಳವರು ಪ್ರಜಾಹಿತಚಿಂತನೆಯೆಂಬ ಉದಾರಭಾವದಿಂದ ಈ ಸಭೆಯಲ್ಲಿ ನಾಟಿರುವ ಬೀಜವು ಮೈಸೂರು ಸರ್ಕಾರದ ಪ್ರೋತ್ಸಾಹವೆಂಬ ರಸಸೇಚನೆಯಿಂದ ಅಂಕುರಿಸಿ ಸಬ್ ಕಮಿಟಿಗಳೆಂಬ ಶಾಖೆಗಳನ್ನು ದೇಶದಲ್ಲಿ ಹರಡಿ ಕೃಷಿವ್ಯಾಪಾರಾದಿ ಸಂಪತ್ಪ್ರದಗಳಾದ ಕೆಲಸಗಳಿಗೆ ಅಪೂರ್ವ ಫಲವನ್ನು ಕೊಡುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಇಷ್ಟಕ್ಕೆ ಪ್ರಜೆಗಳ ಅನುಮತಿ, ಆದರಣೆ ಮತ್ತೂ ಸಹಾಯಗಳೆಂಬ ಸೂರ್ಯಕಿರಣಗಳ ಪ್ರಸಾದವು ಅತ್ಯವಶ್ಯಕವಾಗಿ ಬೇಕಾಗಿದೆ. ಆದುದರಿಂದ ಈ ದೇಶೀಯರೆಲ್ಲರೂ ತಮ್ಮ ಶಕ್ತ್ಯನುಸಾರ ಸಮಯವರಿತು ಸಹಾಯಮಾಡುವರಲ್ಲದೆ ಇತರರಿಗೂ ಈ ಕೆಲಸದಲ್ಲಿ ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

ಗೋರಕ್ಷಣೆಯುಪಾಯ.

ಭರತಖಂಡದಲ್ಲಿ ಭೂಮಿಯನ್ನುಳಲು, ಕಪಿಲೆ ಹೊಡೆಯಲು, ಭಾರವನ್ನು ಹೊರಲು ಮೊದಲಾದ ಕಾರ್ಯಗಳಿಗೆ ಎತ್ತುಗಳೂ ಕೋಣಗಳೂ ವಿಶೇಷವಾಗುಪಯೋಗಿಸಲ್ಪಡುವುದರಿಂದ ಅವುಗಳ ಬೆಲೆಯು ಹೆಚ್ಚಾಗಿರುತ್ತದೆ. ಅದು ಕಾರಣ ಅವುಗಳನ್ನು ಬಹಳ ಸುಲಭ ಬೆಲೆಗೆ ದೊರೆಯುವ ಆಕಳುಗಳೂ, ಎಮ್ಮೆಗಳೂ ಬ್ರಿಟಿಷ್ ಸೈನಿಕರ ಮತ್ತೂ ಇತರ ಮಾಂಸಹಾರಿಗಳುಪಯೋಗಾರ್ಥವಾಗಿ ಪ್ರತಿನಿತ್ಯದಲ್ಲೂ ಸಾವಿರಾರುಗಟ್ಟಲೆ ವಧಿಸಲ್ಪಡುತ್ತಿವೆ. ಇದರಿಂದ ವ್ಯವಸಾಯವೇ ಮೊದಲಾದ ಕಾರ್ಯಗಳಲ್ಲಿ ಬಹು ಉಪಯುಕ್ತವಾಗಿರುವ ಎತ್ತುಗಳ ಮತ್ತೂ ಕೋಣಗಳ ಅಭಿವೃದ್ಧಿಗವಕಾಶವಿಲ್ಲದೆ ಭಾರತೀಯರಿಗೆ ಮುಖ್ಯ ಜೀವನವಾಗಿರುವ ಬೇಸಾಯಕ್ಕೆ ಮುಂದೆ ಬಹು ತೊಂದರೆಯಾಗುವುದು. ಅದು ಕಾರಣ ಬ್ರಿಟಿಷ್ ಸೈನಿಕರು ಆಸ್ಟ್ರೇಲಿಯಾ ದೇಶದಿಂದ ಉಪ್ಪುಹಾಕಿ ತಗಡಿನ ಪೆಟ್ಟಿಗೆಯಲ್ಲಿಟ್ಟು ಕಳುಹಲ್ಪಡುವ ಮಾಂಸವನ್ನುಪಯೋಗಿಸಬೇಕಲ್ಲದೆ ಮಾಂಸಭಕ್ಷಣೆಗಾಗಿ ಗೋವುಗಳನ್ನು ಕೊಲ್ಲಕೂಡದೆಂದು ಒಂದು ಶಾಸನವನ್ನು ಮಾಡಿದಲ್ಲಿ ಇತರ ಮಾಂಸಹಾರಿಗಳೂ ಪರದೇಶದಿಂದ ಬರುವ ಮಾಂಸವನ್ನುಪಯೋಗಿಸುವಂತಾಗುವುದು. ಎಂದು ಮೊದಲಾದ ಕಾರಣಗಳನ್ನು ಸೂಚಿಸಿ ಒಂದು ವಿಜ್ಞಾಪನ ಪತ್ರಿಕೆಯನ್ನು ಬರೆದು ಅದಕ್ಕೆ ೫೦ ಕೋಟಿ ಹಸ್ತಾಕ್ಷರ (ರುಜು) ಗಳನ್ನು ಹಾಕಿಸಿ ೧೦-೨೦ ಜನ ಪ್ರತಿನಿಧಿಗಳೊಡನೆ ಅಕ್ಟೋಬರು ತಿಂಗಳಲ್ಲಿ ಸೀಮೆಗೆ ಹೋಗಿ ಚಕ್ರವರ್ತಿಯವರಿಗೊಪ್ಪಿಸಿ ಬರಲು ನಿಶ್ಚಯಿಸಿ ಬೇಕಾದ ಸನ್ನಾಹಗಳನ್ನು ಮಾಡುತ್ತಿರುವುದಾಗಿಯೂ, ಇಂಡಿಯನ್ ಪೆನಿನ್ಸುಲರ್ ಸ್ಟೀಂ ಕಂಪೆನಿಯವರು ದುಡ್ಡಿಲ್ಲದೆ ಈ ಪ್ರತಿನಿಧಿಗಳನ್ನು ಸೀಮೆಗೆ ಕರೆದುಕೊಂಡು ಹೋಗಿ ಹಿಂತಿರುಗಿ ಕರೆತಂದು ಬಿಡಲೊಪ್ಪಿಕೊಂಡಿರುವುದಾಗಿಯೂ ಜಬ್ಬಲಪುರದ ಒಬ್ಬ ಹಿಂದೂ ದೊಡ್ಡಮನುಷ್ಯರು "ಮದ್ರಾಸು ಮೇಲ್" ಪತ್ರಿಕೆಗೆ ಬರೆದಿರುತ್ತಾರೆ. ಈ ಪ್ರಯತ್ನವೇನೋ ಅತ್ಯಂತ ಶ್ಲಾಘ್ಯವೂ, ಅವಶ್ಯಕವೂ ಆದುದು. ಆದರೆ ಗೋಮಾಂಸಭಕ್ಷಣಾಭಿರುಚಿಯುಳ್ಳ ಜನರು ಗೋವಧೆಯ ನಿರೋಧಕ್ಕೆ ಅವಕಾಶವನ್ನು ಕೊಡುವರೆನ್ನುವುದು ಮಾತ್ರ ಅಸಂಭವವಾಗಿ ತೋರುವುದು. ಇದರಮೇಲೆ ಈ ದೇಶೀಯರ ಪುಣ್ಯಪ್ರಭಾವವೆಂತಿರುವುದೋ?

ದಿಲ್ಲಿಯ ಕಿರೀಟಧಾರಣ ಮಹೋತ್ಸವ ಕಾಲದಲ್ಲಿ ಮದ್ರಾಸಾಧಿಪತ್ಯದವರು ಒಂದು ವಿಜ್ಞಾಪನ ಪತ್ರಿಕೆಯನ್ನೊಪ್ಪಿಸುವ ವಿಚಾರವಾಗಿ ಕಳೆದ ತಾ|| ೯ ರಲ್ಲಿ ಮದ್ರಾಸ್ ಗವರ್ನರ ಬ್ಯಾಂಕ್ವೆಟಿಂಗ್ ಹಾಲಿನಲ್ಲಿ ಸೇರಿದ್ದ ಸಭೆಯಲ್ಲಿ ಸರ್ ಎಸ್. ಸುಬ್ರಹ್ಮಣ್ಯಯ್ಯರ್ ರವರು ಕೆಲ ಸೂಚನೆಗಳನ್ನು ಕೊಟ್ಟಿದ್ದುದಲ್ಲದೆ, ಭರತಖಂಡ, ಸಿಲೋನ್ ಮತ್ತು ಬರ್ಮಾ ಈ ದೇಶಗಳ ಬೇರೆ ಬೇರೆ ಭಾಗಗಳಲ್ಲಿ ದೊರೆಯುತಕ್ಕಂಥ ನವರತ್ನಗಳಿಂದ ಒಂದು ಅಮೋಘವಾದ ಆಭರಣವನ್ನು ಸ್ವದೇಶೀಯರಿಂದಲೇ ಮಾಡಿಸಿ ಅಧೀನ ಸಂಸ್ಥಾನಾಧೀಶ್ವರರಲ್ಲಿ ಮೊದಲನೆಯವರಾದ ಮತ್ತೂ ಹಿಂದೂ ಮಹಮ್ಮದೀಯ ಪ್ರಜೆಗಳನ್ನು ಸಮದೃಷ್ಟಿಯಿಂದಲೂ, ಪ್ರೀತಿಯಿಂದಲೂ ಧರ್ಮದಿಂದಲೂ ಕಾಪಾಡುತ್ತಿರುವ ಹೈದರಾಬಾದು ಸಂಸ್ಥಾನದ ನೈಜಾಮರವರ ಮೂಲಕ ಚಕ್ರವರ್ತಿಗಳಿಗೆ ಭಾರತ ಪ್ರಜೆಗಳೆಲ್ಲರ ಕಾಣಿಕೆಯನ್ನಾಗೊಪ್ಪಿಸಿ ಈ ಆಭರಣವನ್ನು ಚಕ್ರವರ್ತಿಗಳು ಕಿರೀಟವನ್ನು ಧರಿಸುವಾಗಲೆಲ್ಲ ಧರಿಸುವಂತೆ ಪ್ರಾರ್ಥಿಸಬೇಕೆಂದೂ, ಕಿರೀಟಧಾರಣ ಮಹೋತ್ಸವವನ್ನು ಭರತಖಂಡದಲ್ಲಿ ಪ್ರತ್ಯಕ್ಷವಾಗಿ ನೆರವೇರಿಸಿ ತನ್ಮೂಲಕ ಪಾಲಕ ಪಾಲ್ಯರಿಗಿರುವ ಪರಸ್ಪರ ಸಂಬಂಧಾನುರಾಗವನ್ನು ವೃದ್ಧಿಗೊಳಿಸಲು ದಯಗೈದಿರುವ ಚಕ್ರವರ್ತಿಯವರಿಗೆ ಬೇಕಾದಷ್ಟು ಪೆಟ್ಟಿಗೆಗಳನ್ನೊಪ್ಪಿಸಿ ಅವುಗಳು ಕಡೆಗೆ ಒಂದು ಪ್ರದರ್ಶನಶಾಲೆಯ ಮೂಲೆಯಪಾಲಾಗುವಂತೆ ಮಾಡುವುದಕ್ಕಿಂತ, ಈ ಆಭರಣವನ್ನೊಪ್ಪಿಸುವುದರಿಂದ ಪ್ರಜೆಗಳಾದ ನಮಗೆ ಪ್ರಭುಗಳಲ್ಲಿರತಕ್ಕ ವಿಶ್ವಾಸವನ್ನು ಚೆನ್ನಾಗಿ ಪ್ರದರ್ಶಿಸುವುದೆಂದು "ಮದ್ರಾಸು ಮೇಲ್" ಪತ್ರಿಕೆಯಲ್ಲಿ ಸೂಚಿಸಿರುವರು. ಸರ್ ಸುಬ್ರಹ್ಮಣ್ಯಯ್ಯರ್ ರವರು ಕೊಟ್ಟಿರುವ ಈ ಸೂಚನೆಯಂತೆ ಒಂದು ಅಮೋಘವಾದಾಭರಣವನ್ನೊಪ್ಪಿಸುವುದರಿಂದ ಅದು ಚಿರಸ್ಮರಣೀಯವಾಗಿರುವುದೆನ್ನುವುದರಲ್ಲಿ ಸಂದೇಹವಿಲ್ಲವು. ಆದರೆ ಕಾಲೋಚಿತವಾದ ವಿಜ್ಞಾಪನ ಪತ್ರಿಕೆಗಳವಿನಹಾ ಮತ್ತಾವುದೂ ಸ್ವೀಕರಿಸಲ್ಪಡುವುದಿಲ್ಲವೆಂದೂ ಮತ್ತೂ ಅದಕ್ಕಾಗಿ ವೆಚ್ಚಮಾಡಲ್ಪಡುವ ದ್ರವ್ಯವು ಯಾವುದಾದರೂ ಧರ್ಮಕಾರ್ಯಗಳಿಗುಪಯೋಗಿಸತಕ್ಕದೆಂದೂ ಚಕ್ರವರ್ತಿಗಳೇ ಅಪ್ಪಣೆಯನ್ನು ಕೊಡಿಸಿರುವುದರಿಂದ, ಸರ್ ಸುಬ್ರಹ್ಮಣ್ಯಯ್ಯರ ಸೂಚನೆಯನ್ನು ಅನುಷ್ಠಾನಕ್ಕೆ ತರಲವಕಾಶವಿಲ್ಲವು.

ಒಳದೇಶದವೃತ್ತಾಂತ.

ಬೆಂಗಳೂರ ಕೊರಚರ ಪಾಳ್ಯದಲ್ಲಿದ್ದ ಮುತ್ತಮ್ಮ ಎಂಬ ವೃದ್ಧಳು ಕಳೆದ ಗುರುವಾರ ಸತ್ತುಹೋದಳು. ಇವಳಿಗೆ ೧೧೦ ವರ್ಷ ವಯಸ್ಸಾಗಿದ್ದಿತೆಂದು ಜನರುಹೇಳುತ್ತಾರೆ.

ಮೈಸೂರ ರೆಸಿಡೆಂಟರು ದಿಲ್ಲಿಯ ದರ್ಬಾರಿಗೆ ಹೋದಾಗ್ಗೆ ಅಲ್ಲಿರಿಯಲು ಬಿಡಾರವನ್ನೇರ್ಪಡಿಸುವುದಕ್ಕಾಗಿ ಕೊಡಗಿನ ಸಬ್ ಇಂಜನೀರು ಮ|| ಕೆ. ಎಸ್. ಮುತ್ತಣ್ಣನವರು ದಿಲ್ಲಿಗೆ ಹೋಗಲು ನೇಮಿಸಲ್ಪಟ್ಟಿದ್ದಾರೆ.

ಕಳೆದ ತಾ|| ೧೮ ರಲ್ಲಿ ಪೋಲೋ ಪಂದ್ಯವೆಲ್ಲವೂ ಮುಗಿದು ಡೆಕ್ಕನ್ ಹಾರ್ಸ್ ಪಕ್ಷದವರಿಗೆ ಬೆಳ್ಳಿಯ ಬಟ್ಟಲಿನ ಬಹುಮಾನವು ದೊರಕಿತು. ಕಳೆದ ತಾ|| ೧೨ ರಲ್ಲಿ ಹುಜಾರ್ಸ್ ಪಕ್ಷದವರು ಡೆಕ್ಕನ್ ಪಕ್ಷದವರೊಡನೆ ಪೋಲೋ ಚೆಂಡಾಟವನ್ನಾಡುವಾಗ್ಗೆ ಕ್ಯಾಪ್ಟನ್ ಮೌಬರ್ನ್ ಎಂಬುವರು ಕುದುರೆಯಮೇಲಿಂದ ಬಿದ್ದುಬಿಟ್ಟರು. ಇದರಿಂದ ಅವರಿಗೆ ೧-೨ ಹಲ್ಲುಗಳು ಮುರಿದುಹೋದುವೆಂದು ಕೇಳುತ್ತೇವೆ.

ಕಳೆದ ತಾ|| ೧೨ ರಲ್ಲಿ ಮೈಸೂರಿನಿಂದ ಬೆಂಗಳೂರಿಗೆ ಹೊರಟ ಮೇಲು ಬಂಡಿಯ ಇಂಜನ್ನಿಗೆ ಕೆಂಗೇರಿ ಮತ್ತೂ ಬಿಡದಿ ಮಧ್ಯೆ ಒಂದು ಎಮ್ಮೆ ಸಿಕ್ಕಿ ಚಕ್ರವು ಹರಿದು ಸತ್ತುಹೋಯಿತು, ಮತ್ತೂ ಇಂಜನ್ನು ಕಂಬಿಯಿಂದ ಕೆಳಗಿಳಿಯಿತು. ಆದರೆ ದೈವಾನುಗ್ರಹದಿಂದ ಯಾವುದೊಂದಪಾಯವೂ ಆಗಲಿಲ್ಲವು. ಈ ಕಾರಣದಿಂದ ಬಂಡಿಯು ಬೆಂಗಳೂರನ್ನು ತಲುಪಲು ೧ ಗಂಟೆ ನಿಧಾನವಾಯಿತು.

ಬೆಂಗಳೂರ ಪೇಟೆಯಲ್ಲಿರುವ ಕರೀಂ ಮಹಮ್ಮದ್ ಸೇಟ್ ಎಂಬುವರು ಈಗ್ಗೆ ಸ್ವಲ್ಪ ಕಾಲದ ಹಿಂದೆ ಮೈಸೂರಿನಲ್ಲಿ ೪ ಮುತ್ತುಗಳನ್ನು ಹಾಕಿದ್ದ ಒಂದು ನತ್ತನ್ನು [illegible] ರೂ. ಗಳಿಗೆ ಕ್ರಯಕ್ಕೆ ಕೊಂಡಿದ್ದು ಅದನ್ನು ಬೊಂಬಾಯಿನಲ್ಲಿರುವ ಒಬ್ಬ ಸೇಟರಿಗೆ ಇನ್ಶೂರ್ಡ್ ಬಾಂಗಿಯ ದ್ವಾರ ಕಳುಹಿಸಿಕೊಟ್ಟದ್ದೆಂದೂ, ಆ ಬಾಂಗಿಯನ್ನು ಬೊಂಬಾಯಿನಲ್ಲಿ ಒಡೆದು ನೋಡುವಲ್ಲಿ ಒಳಗೇನೂ ಇರಲಿಲ್ಲವು ಮತ್ತೂ ಬಾಂಗಿಯ ಮೊಹರು ಭದ್ರವಾಗಿತ್ತೆಂದು ತಂತಿ ಬಂದಿರುತ್ತದೆಂದೂ ಪೋಲೀಸಿಗೆ ತಿಳಿಸಿರುತ್ತಾರೆ.

ರಾಜಧಾನಿಯಲ್ಲಿ ಕಳೆದವಾರದಿಂದ ಮಳೆಯು ಗಟ್ಟಿಯಾಗಿ ಬರುವುದು ನಿಂತುಹೋಗಿ ಯಾವಾಗಲೂ ಮೋಡವು ಕವಿತುಕೊಂಡು ಸೋನೆಯಾಡುತ್ತಿದೆ ಮತ್ತೂ ಗಾಳಿಯು ವಿಪರೀತವಾಗಿ ಬೀಸುತ್ತಿದೆ. ಇದರಿಂದ ವಾಯುಗುಣವು ಕೆಟ್ಟು ಶೀತಜ್ವರಾದಿ ರೋಗಗಳಿಗೆ ಕಾರಣವಾಗಿದೆ. ಮಂಡಿ ಮತ್ತೂ ಲಷ್ಕರ್ ಮೊಹಲ್ಲಾ ಗಳಲ್ಲಿ ಈವರೆಗೆ [illegible] ರ ಮೇಲೆಯೇ ಪ್ಲೇಗುಮರಣಗಳಾಗಿವೆ. ಇಲ್ಲಿಯ ಕಾಲಸ್ಥಿತಿಯನ್ನು ನೋಡಿದರೆ, ಈ ಬಾರಿ ಪ್ಲೇಗ್ ರೋಗವು ಹೆಚ್ಚಾಗುವಂತೆ ತೋರುತ್ತದೆ. [illegible]

[illegible] ಪೂರ್ಣವಾಗಿ ಬರುತ್ತಿರುವುದು. [illegible] ವಿಶೇಷವಾಗಿ [illegible]

ರಾಜಧಾನಿಯ ಸಂತೇಪೇಟೆಯಲ್ಲಿರುವ ಮ|| ರಾ|| ನೀಲಗಿರಿ ದೊಡ್ಡ ಕೃಷ್ಣ ರವರ ಅಳಿಯಂದಿರಾದ ಮ|| ಗಂಜಾಂ ತಿಮ್ಮಯ್ಯನವರು ಕಳೆದ ಸೋಮವಾರ [illegible] ಜನ ಅವಧೂತರ ಸಂಗಡ ತಮ್ಮ ಮನೆಯಲ್ಲಿ ಮೃಷ್ಟಾನ್ನ ಭೋಜನ ಮಾಡಿ ಸಂತೋಷದಿಂದ ಕಾಲಕ್ಷೇಪವನ್ನು ಮಾಡಿಕೊಂಡಿದ್ದು ಸಾಯಂಕಾಲ ಅಕಸ್ಮಾತ್ತಾಗಿ [illegible] ವೇಳೆ ವಾಂತಿಯನ್ನು ಮಾಡಿ ಹಾಗೆಯೇ ಮೂರ್ಛಿತರಾದರು. ಅಷ್ಟರಲ್ಲಿ ಅವರ ಬಾವಮೈದುನರಾದ ಮ|| ಮೊಗಣ್ಣನವರು ಡಾಕ್ಟರುಗಳನ್ನು ಕರೆಸಿ ಪರೀಕ್ಷಿಸುವಲ್ಲಿ ಪ್ರಾಣವು ಹೋಗಿರುವುದೆಂದು ಗೊತ್ತಾಗಲು, ಆ ರಾತ್ರಿಯೇ ಬಹು ವಿಜೃಂಭಣೆಯಿಂದ ಶವವನ್ನು ರುದ್ರಭೂಮಿಗೆ ತೆಗೆದುಕೊಂಡುಹೋಗಿ ಸಂಸ್ಕಾರವನ್ನು ಮಾಡಿಸಿದರು. ತಿಮ್ಮಯ್ಯನವರಿಗೆ [illegible] ವರ್ಷ ವಯಸ್ಸು ಮಾತ್ರವಾಗಿದ್ದಿತು.

ಕೆಲದಿನಗಳ ಕೆಳಗೆ ಬೆಂಗಳೂರ ದೊಡ್ಡಪೇಟೆಯಲ್ಲಿ ಆಭರಣಗಳನ್ನು ಮಾರುವ ಸುಬ್ಬರಾಯ ಸೆಟ್ಟರ ಅಂಗಡಿಗೆ ಒಬ್ಬ ಮುದುಕನು ಮತ್ತೊಬ್ಬನು ಹೋಗಿ ೧೦೦ ರೂ. ಬೆಲೆಯಲ್ಲಿ ಬಂಗಾರದ ಅಡ್ಡಿಗೆಯು ಕ್ರಯಕ್ಕೆ ಬೇಕಾಗಿರುತ್ತೆಂದು ಕೇಳಿ ಅದನ್ನು ತೆಗೆದುಕೊಂಡು ಮನೆಯ ಹೆಂಗುಸರಿಗೆ ತೋರಿಸಿ ಬರುತ್ತೇನೆ, ಅಲ್ಲಿಯವರೆಗೆ ಈ ಮುದುಕನೂ ೧೦೦ ರೂ. ಇಟ್ಟಿರುವ ಈ ಬಟ್ಟೆಯ ಗಂಟೂ ನಿಮ್ಮಂಗಡಿಯಲ್ಲೇ ಇರಲಿ; ಜೋಪಾನವಾಗಿ ನೋಡಿಕೊಳ್ಳಿರಿ ಎಂದು ಹೇಳಿ ಹೊರಟುಹೋದವನು ಪುನಃ ಬಾರದೆ ಹೋದುದರಮೇಲೆ ಆ ಸೆಟ್ಟರಿಗೆ ಅನುಮಾನಹುಟ್ಟಿ ಆ ಗಂಟನ್ನು ಬಿಚ್ಚಿ ನೋಡುವಲ್ಲಿ ಒಳಗೆ ಕಲ್ಲುಗಳಿದ್ದುದು ಕಂಡುಬರಲು, ಆ ಮುದುಕನನ್ನು ಆ ಕಲ್ಲಿನ ಗಂಟುಸಮೇತ ಪೋಲೀಸರ ವಶಮಾಡಿದರು. ಪೋಲೀಸರು ಆಭರಣವನ್ನಪಹರಿಸಿಕೊಂಡು ಹೋದ ಕಳ್ಳನನ್ನು ಹುಡುಕುತ್ತಿದ್ದಾರೆ.

ರಾಜಧಾನಿಯಲ್ಲಿರುವ ಮಹಾರಾಜರ ಸಂಸ್ಕೃತ ಕಾಲೇಜಿನಲ್ಲಿ ಧರ್ಮಶಾಸ್ತ್ರ ಪಾಠವನ್ನು ಹೇಳುತ್ತಿದ್ದ ವಿಭಾಗಂ ಶ್ರೀಕಂಠ ಶಾಸ್ತ್ರಿಗಳೂ, ಅಲಹಾಬಾದಿನಲ್ಲಿ ಜರಗಿದ ವೈಷ್ಣವ ಮಹಾಸಭೆಗೆ ಶ್ರೀ ಪರಕಾಲ ಮಠದ ಪ್ರತಿನಿಧಿಗಳಾಗಿ ಹೋಗಿದ್ದು ಒಂದು ವಾರದ ಕೆಳಗೆ ಅಸ್ವಸ್ಥರಾಗಿ ಹಿಂತಿರುಗಿ ಬಂದಿದ್ದ ಪುತ್ತೂರು ಶ್ರೀನಿವಾಸಾಚಾರ್ಯರೂ ಕಳೆದ ತಾ|| [illegible] ರಲ್ಲಿ ಪರಲೋಕಯಾತ್ರೆಯನ್ನು ಮಾಡಿದರು. ಮರಣಕಾಲದಲ್ಲಿ ಮೊದಲನೆಯವರಿಗೆ [illegible] ವರ್ಷಗಳ ಮತ್ತೂ ಎರಡನೆಯವರಿಗೆ [illegible] ವರ್ಷಗಳ ವಯಸ್ಸಾಗಿದ್ದಿತು. ಶ್ರೀಕಂಠ ಶಾಸ್ತ್ರಿಗಳು ಬಹು ಉತ್ಸುಕತೆಯಿಂದಲೂ ಸಾಮರ್ಥ್ಯದಿಂದಲೂ ಪಾಠವನ್ನು ಹೇಳುತಿದ್ದುದರಿಂದ ವಿದ್ಯಾರ್ಥಿಗಳಿಗೆ ಅವರ ಮರಣದಿಂದ ವಿಶೇಷ ಸಂಕಟವನ್ನುಂಟುಮಾಡಿರುತ್ತದೆ. ಮತ್ತೂ ದುಃಖಪ್ರದರ್ಶನಾರ್ಥವಾಗಿ ತಾ|| [illegible] ರಲ್ಲಿ ಪಾಠಶಾಲೆಯು ಮುಚ್ಚಲ್ಪಟ್ಟಿದ್ದಿತು.

"ವರ್ತಮಾನ ಸಂಗ್ರಹ."

ಜರ್ಮನ್ ಚಕ್ರವರ್ತಿಯು ಪ್ರತಿನಿತ್ಯದಲ್ಲೂ [illegible] ಪದ್ಯಗಳಿಗೆ ಕಡಿಮೆಯಿಲ್ಲದಂತೆ ಕವಿತೆಯನ್ನು ಮಾಡುವವನು.

ಪಾಶ್ಚಾತ್ಯರಾಜರುಗಳಲ್ಲೆಲ್ಲ ಸ್ವೀಡ ದೇಶದ ದೊರೆಯು ಚಿತ್ರಪಟವನ್ನು ಬರೆಯುವುದರಲ್ಲಿ ಬಹುನಿಪುಣನಾಗಿರುವನು.

ಪರ್ಷಿಯಾ ದೇಶದ ದೊರೆಯಾದ ಷಾನ ಹತ್ತಿರ [illegible] ರೂ.ಗಳ ಬೆಲೆಬಾಳುವ ಆಭರಣಗಳಿರುತ್ತವೆ.

ಮೆಕ್ಸಿಕೊದಲ್ಲಾದ ಭೂಕಂಪನದಿಂದ [illegible] ಜನರು ಸತ್ತರಲ್ಲದೆ ಕೋಟ್ಯಂತರ ರೂ. ಗಳ ನಷ್ಟವಾಯಿತು.

ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಚಂಡಮಾರುತವೂ, ಮಳೆಯೂ ಬಂದು ಸಿಡಿಲು ಬಡಿದು [illegible] ಜನರವರೆಗೆ ಹತರಾದರು. ಮತ್ತೂ ಬಹುಪದಾರ್ಥಗಳು ನಷ್ಟವಾದುವು.

ಇಟಲಿ ದೇಶದಲ್ಲಿರುವ ರೋಮನ್ ಕೆಥೋಲಿಕ್ ಗುರುವಿ (ಪೋಪ)ನ ಹೆಸರಿಗೆ ನಿತ್ಯದಲ್ಲೂ ಸರಾಸರಿ [illegible] ಸಾವಿರದಿಂದ [illegible] ಸಾವಿರದ ವರೆಗೆ ಕಾಗದಗಳು ಬರುವುವಂತೆ.

ಜರ್ಮನಿಯಲ್ಲಿ ಒಬ್ಬ ಆಕಾಶ ನಾವಿಕನು ಮತ್ತೊಬ್ಬನನ್ನು ನಾವೆಯಲ್ಲಿ ಕೂರಿಸಿಕೊಂಡು [illegible] ಅಡಿ ಎತ್ತರಕ್ಕೆ ಹೋಗಿರುವಾಗ್ಗೆ ನಾವೆಯು ತಲೆಕೆಳಗಾಗಿ ಬಿದ್ದು ಇಬ್ಬರೂ ಹತರಾದರು.

ಜಪಾನಿನಲ್ಲಿ ಗಂಡುಸರು [illegible] ಮತ್ತೂ ಹೆಂಗುಸರು [illegible] ಸೇರಿ ಒಟ್ಟು ಪ್ರಜಾಸಂಖ್ಯೆಯು [illegible] ಎಂದು ಗೊತ್ತಾಗಿರುವುದು. ೧೦ ವರ್ಷಗಳ ಹಿಂದೆ [illegible] ಜನರಿದ್ದರು.

ಜರ್ಮನಿಯ ಚಕ್ರವರ್ತಿಯವರ ಬಳಿ [illegible] ಬಂದಿರುತ್ತವೆ. ಇವುಗಳಲ್ಲದೆ [illegible] ಇವುಗಳನ್ನು ನಡೆಸಲು [illegible] ಜನರಿರುವರು.

ಗ್ರೇಟ್ ಬ್ರಿಟನ್ನಿಗೆ ಸೇರಿದ [illegible] ಯನ್ನು ಸೇರಿಸಿದ್ದು ಈಗ [illegible] ಜನಸಂಖ್ಯೆಯನ್ನು ಹೊಂದಿ ಲಂಡನ್ ನಗರಕ್ಕೆ ಎರಡನೆಯದಾಗಿದೆ.

ಆಸ್ಟ್ರೇಲಿಯಾಕ್ಕೆ ಸೇರಿದ ಟ್ರಾನ್ಸ್ ಎಂಬಲ್ಲಿ ಪ್ರಚಂಡಮಾರುತವೆದ್ದು ಸಮುದ್ರದಲ್ಲಿ ಅಲೆಗಳು [illegible] ಅಡಿ ಎತ್ತರದವರೆಗೆ ಬಂದು ದಡದಲ್ಲಿದ್ದ ಅನೇಕ ಹಡಗುಗಳೂ, ಜನರೂ ನಾಶವಾದರು. ಈ ವರೆಗೆ [illegible] ಶವಗಳು ಸಿಕ್ಕಿವೆ.

ಮೇರಿ ರಾಣಿಯವರ ಹತ್ತಿರವಿರುವ ಆಭರಣಗಳಲ್ಲಿ ಒಂದು ಮುತ್ತಿನಹಾರವು [illegible] ರೂ. ಬೆಲೆ ಬಾಳುವುದು. ಇದು ಇಂಗ್ಲೆಂಡಿನ ಸ್ತ್ರೀಯರು ಚಂದಾಹಣವನ್ನೆತ್ತಿ ರಾಣಿಯವರ ವಿವಾಹಕಾಲದಲ್ಲಿ ಬಹುಮಾನಿಸಲ್ಪಟ್ಟದಾಗಿದೆ.

ಚಕ್ರವರ್ತಿ ದಂಪತಿಗಳು ಭರತಖಂಡಕ್ಕೆ ಪ್ರಯಾಣಮಾಡಿ ಬರುವ ಮೆಡಿನಾ ಎಂಬ ಹಡಗು ಪರೀಕ್ಷಿಸಿ ನೋಡಲ್ಪಟ್ಟಿತು. ಇದರ ಅಲಂಕಾರವೆಲ್ಲವೂ ಮುಗಿದಮೇಲೆ ಅಧಿಕಾರಿಗಳು ಅಗಸ್ಟಿನಲ್ಲಿ ಕುಳಿತು ಪ್ರಯಾಣಮಾಡಿ ನೋಡುವವರಾಗಿರುವರು.

ಬೊಂಬಾಯಿನಲ್ಲಿ ಹಾಲಕೆನೆ ಮಾರುವವನೊಬ್ಬನು ಮತ್ತು ಹಳೆ ಪಾತ್ರೆ ಮಾರುವ ಮಾರ್ವಾಡಿಯೊಬ್ಬನು ಕಡಿಮೆ ತೂಕದ ಬಟ್ಟುಗಳನ್ನಿಟ್ಟುಕೊಂಡಿದ್ದುದಕ್ಕಾಗಿ ಪೋಲೀಸರು ಅವರಿಬ್ಬರನ್ನೂ ಹಿಡಿದು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಿ ಮೊದಲನೆಯವನಿಗೆ [illegible] ರೂ. ಎರಡನೆಯವನಿಗೆ [illegible] ರೂ. ದಂಡವನ್ನು ಹಾಕಿಸಿದರು.

ಆಸ್ಯಾ ಮತ್ತು ಯೂರೋಪ್ ಖಂಡಗಳಲ್ಲಿಯ ಕೆಲದೇಶಗಳಲ್ಲಿ ಮಗುವು ಜನನವಾದಕೂಡಲೆ ಉಪ್ಪಿನ ನೀರು ತೆಗೆದು ಅದರ ಮೈಗೆಲ್ಲಾ ಸವರಲ್ಪಟ್ಟು [illegible] ಗಂಟೆಯ ಕಾಲವಾದ ನಂತರ ಬಿಸಿನೀರಿಂದ ತೊಳೆಯಲ್ಪಡುವುದು ಈಗಲೂ ಆಚರಣೆಯಲ್ಲಿರುವುದು. ಇದರಿಂದ ಮಕ್ಕಳು ಅರೋಗದೃಢಕಾಯರಾಗಿರುವರೆಂದು ಅಲ್ಲಿಯ ಜನರು ಭಾವಿಸಿರುವರು.

ಬಾಕರ್ ಗಂಜ್ ಡಿ|| ಗೆ ಸೇರಿದ ನಾಜಿರಪೂರದ ಪೋಲೀಸು ಠಾಣದ ಸಬ್ ಇನ್ಸ್ಪೆಕ್ಟರು [illegible]ಯನ್ನು ಮಾಡಿದ್ದ ಒಬ್ಬ ಮಹಮ್ಮದೀಯನ ಮನೆಯನ್ನು ಶೋಧಿಸುವಾಗ್ಗೆ ಕಬ್ಬಿಣದ ಪೆಟ್ಟಿಗೆಯಿಂದ [illegible] ರೂ. ಗಳನ್ನು ಅಪಹರಿಸಿದನೆಂಬ ಅಪರಾಧಕ್ಕೆ ಗುರಿಮಾಡಲ್ಪಟ್ಟಿದ್ದು ಮ್ಯಾಜಿಸ್ಟ್ರೇಟರ ವಿಚಾರಣೆಯಲ್ಲಿ ಸರಿಯಾದ ನಿದರ್ಶನವು ಬರಲಿಲ್ಲವೆಂದು ಬಿಡಲ್ಪಟ್ಟನು.

ಹಿಂದೆ ನಡೆದ ದಿಲ್ಲಿಯ ದರ್ಬಾರಿನಲ್ಲಿ ಲಾರ್ಡ್ ಕರ್ಜನ್ ರವರು ಆನೆಯ ಮೇಲಿನ ಅಂಬಾರಿಯಲ್ಲಿ ಕುಳಿತು ಬಹು ಅಟ್ಟಹಾಸದಿಂದ ಉತ್ಸವವನ್ನು ಮಾಡಿಸಿಕೊಂಡರಷ್ಟೆ. ಈ ಡಿಸೆಂಬರಿನಲ್ಲಿ ಚಕ್ರವರ್ತಿ ದಂಪತಿಗಳು ಸಾಕ್ಷಾತ್ತಾಗಿ ಬಂದು ದರ್ಬಾರನ್ನು ನಡಿಸುವುದಾದರೂ ಆನೆಯಮೇಲಿನಂಬಾರಿಯ ಉತ್ಸವವು ಮಾತ್ರ ನಡಿಯುವುದಿಲ್ಲವೆಂದು ನಿರ್ಧರವಾಗಿರುವುದು.

ಕಳೆದ ತಾ|| [illegible]ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು [illegible] ಜನರಿಗೆ ಪ್ಲೇಗು ರೋಗವು ತಗಲಿ [illegible] ಜನರು ಸತ್ತರು. ಇದರಲ್ಲಿ ಬೊಂಬಾಯಿಯಾಧಿಪತ್ಯದಲ್ಲಿ [illegible]; ಮದ್ರಾಸಾಧಿಪತ್ಯದಲ್ಲಿ [illegible]; ಬಂಗಾಳದಲ್ಲಿ [illegible]; ಸಂಯುಕ್ತ ಪ್ರಾಂತದಲ್ಲಿ [illegible]; ಪಂಜಾಬಿನಲ್ಲಿ [illegible] ಮತ್ತೂ ಬರ್ಮಾದಲ್ಲಿ [illegible] ಈ ಪ್ರಕಾರ ಮರಣವಾಗಿರುತ್ತದೆ.

ಕಲಕತ್ತಾದಲ್ಲಿ ಕೆಲಕಾಲ ಅಲೆಕ್ಸಾಂಡ್ರಾ ಜೂಟಿನ ಕಾರ್ಯಾಲಯದ ಮ್ಯಾನೇಜಿಂಗ್ ಏಜಂಟಾಗಿದ್ದು ಈಚೆಗೆ ಸ್ವತಂತ್ರ ವ್ಯಾಪಾರಿಯಾಗಿದ್ದ ಜಾರ್ಜ್ ಸರ್ಕಿಸ್ ಎಂಬಾತನಿಗೆ [illegible] ರೂ. ಗಳ ಸಾಲವೂ [illegible] ರೂ. ನ ಆಸ್ತಿಯೂ ಇರುವುದು. ಇದರಲ್ಲಿ ಕಾಶ್ಮೀರ ದರ್ಬಾರಿನವರಿಗೆ [illegible] ಲಕ್ಷ ಮತ್ತೂ ಬಂಗಾಳಬ್ಯಾಂಕಿಗೆ [illegible] ಲಕ್ಷ ರೂ. ಬರಬೇಕಾಗಿರುವುದು.

ಭರತಖಂಡದಲ್ಲಿ ಪ್ರಾಯಶಃ ಎಲ್ಲಜಾತಿಯ ಜನರೂ ತಂತಮ್ಮ ಹೆಣ್ಣುಮಕ್ಕಳಿಗೆ ಶೀಘ್ರವಾಗಿ ವಿವಾಹವನ್ನು ಮಾಡಲು ಆಸಕ್ತರಾಗಿರುವರು ಮತ್ತೂ ಹಾಗೆ ಮಾಡದಿದ್ದರೆ ಅದು ಆಕ್ಷೇಪಕರವಾಗೆಣಿಸಲ್ಪಟ್ಟಿರುವುದು. ಆದರೆ ಸೆರ್ವಿಯಾ ದೇಶದಲ್ಲಿ ಮಾತ್ರ ಗಂಡುಮಕ್ಕಳಿಗೆ [illegible] ವರ್ಷ ವಯಸ್ಸಿನೊಳಗೆ ಮದುವೆಯನ್ನು ಮಾಡದಿದ್ದರೆ ಇತರರು ತಂದೆತಾಯಿಗಳನ್ನು ಹಿಯ್ಯಾಳಿಸುವರು.

ನಾಶಿಕದಲ್ಲಿ ನಡೆದ ಜಾಕ್ಸನರವರ ಕೊಲೆಯ ಮತ್ತೂ ಸಂಚಿನ ವಿವಾದಗಳಲ್ಲಿ ಶಿಕ್ಷೆಯನ್ನು ವಿಧಿಸಲ್ಪಟ್ಟಿರುವ ಕೃಷ್ಣಾಜಿ ಗೋಪಾಲ ಕರ್ವೆ, ವಿನಾಯಕ ದಾಮೋದರ ಸವಾರ್ಕರ್, ಕೃಷ್ಣಾಜಿ ಗೋಪಾಲ ಖಾರೆ ಮತ್ತೂ ವಿಷ್ಣು ಮಹಾದೇವ ಭಟ್ಟ ಇವರುಗಳು ಪಡೆದುಕೊಂಡಿರುವ ಬಿ. ಎ. ಪ್ರಶಸ್ತಿಯನ್ನು ಬೊಂಬಾಯಿನ ಸರ್ವಕಲಾಶಾಲೆಯವರು ಹಿಂತಿರುಗ ತೆಗೆದುಕೊಳ್ಳಲು ಆಲೋಚನೆಯಲ್ಲಿರುವರು.

ಬ್ರಿಟಿಷ್ ರಾಜ್ಯದಿಂದ ಭಾರತಪ್ರಜೆಗಳಿಗಾಗುತ್ತಿರುವ ಉಪಕಾರ ಸ್ಮರಣಾರ್ಥವಾಗಿ ಚಕ್ರವರ್ತಿ ದಂಪತಿಗಳು ಭರತಖಂಡಕ್ಕೆ [illegible] ಬೇಕೆಂದೂ, ಈ ಕಾರ್ಯಕ್ಕಾಗಿ ಚಂದಾ ಹಣವನ್ನು ಕೂಡಿಸಬೇಕೆಂದೂ ಕಾಳಿಘಟ್ಟದ ವೈದಿಕರುಗಳೆಲ್ಲರೂ ಒಂದು ಸಭೆ ಸೇರಿದ್ದು ನಿರ್ಧರಿಸಿದರು.

ಪ್ರಪಂಚದಲ್ಲೆಲ್ಲ ಉತ್ಪನ್ನವಾಗುವ ಕಾಫಿ ಬೀಜದಲ್ಲಿ ಮುಕ್ಕಾಲು ಭಾಗವು ಬ್ರೆಜಿಲ್ ದೇಶವೊಂದರಲ್ಲಿ ಬೆಳೆಯಲ್ಪಡುವುದು. ಆ ದೇಶದಲ್ಲಿ ಈಗ [illegible] ಕಾಫಿ ಗಿಡಗಳಿವೆ. ಅಲ್ಲಿ ಈ ವ್ಯವಸಾಯವಾರಂಭವಾಗಿ ಇಲ್ಲಿಗೆ ಪ್ರಾಯಶಃ [illegible] ವರ್ಷಗಳಾಗಿರಬಹುದು. ಈಗ್ಗೆ [illegible] ವರ್ಷಗಳ ಕೆಳಗೆ ಇಂಗ್ಲೆಂಡೊಂದಕ್ಕೆ [illegible] ಚೀಲಗಳಷ್ಟು ಬೀಜವು ಸಾಗಿಸಲ್ಪಡುತಿದ್ದುದು ಈಗ [illegible] ಚೀಲಗಳಿಗೆ ಕಡಿಮೆಯಿಲ್ಲದೆ ಸಾಗಿಸಲ್ಪಡುವುವು.

ಅಕಾಯಿ ಕೆ. ಕುಮಾರರಾಯ್ ಎಂಬುವನು "ತಾನು ಬಾರಿಸಾಲದ ಮುನಸೀಫ್ ಕೋರ್ಟಿನಲ್ಲಿ ನಡಿಯುತ್ತಿರುವ ಒಂದು ವಿವಾದದಲ್ಲಿ ಸಾಕ್ಷಿಯಾಗಿದ್ದು ಕೋರ್ಟಿಗೆ ಹಾಜರಿಲ್ಲವಾಗಿ ಮುನಸೀಫನು ತನ್ನ ಅಂಗಡಿಗೆ ಕೋರ್ಟಿನ ಆಳುಗಳನ್ನು ಕಳುಹಿಸಿ ತನ್ನನ್ನು ಬಲವಂತದಿಂದ ಕರೆತರಿಸಿ ಕೋರ್ಟಿನಾಜ್ಞೆಯನ್ನು ತಿರಸ್ಕರಿಸಿದ ಅಪರಾಧಕ್ಕೆ ಗುರಿಮಾಡಿದರು." ಎಂದು ಮ್ಯಾಜಿಸ್ಟ್ರೇಟರಲ್ಲಿ ಆ ಮುನಸೀಫನ ಮೇಲೂ ಆಳುಗಳ ಮೇಲೂ ವಿವಾದವನ್ನು ಹೂಡಿದ್ದಾನೆ. ಇದರ ವಿಚಾರಣೆಯು ನಡೆಯುತ್ತಿದೆ.

ಅಮೇರಿಕಾ ದೇಶದ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಒಂದು ಡಿಸ್ಟ್ರಿಕ್ಟಿನಲ್ಲಿ ಆರೋಗ್ಯಾಧಿಕಾರಿಯು— "ಪ್ರತಿಯೊಬ್ಬ ಗಂಡುಸೂ, ಹೆಂಗುಸೂ ವಾರಕ್ಕೊಂದಾವೃತ್ತಿಯಾದರೂ ತಪ್ಪದೆ ಸ್ನಾನವನ್ನು ಮಾಡಬೇಕು. ಹಾಗೆ ಮಾಡದಿದ್ದಲ್ಲಿ ಶಿಕ್ಷೆಗೆ ಗುರಿಯಾಗುವರು" ಎಂದು ಪ್ರಸಿದ್ಧಿ ಪಡಿಸಿರುತ್ತಾರೆ. ನಮ್ಮ ಮಹರ್ಷಿಗಳು ಈ ಸ್ನಾನದ ಅವಶ್ಯಕತೆಯನ್ನು ತಿಳಿದೇ ಪ್ರತಿಯೊಬ್ಬ ಮನುಷ್ಯನೂ ನಿತ್ಯದಲ್ಲೂ ಸ್ನಾನಮಾಡಿ ಮಡಿಬಟ್ಟೆಯನ್ನುಟ್ಟು ದೇವರಾರಾಧನೆಯನ್ನೂ, ಊಟವನ್ನೂ ಮಾಡಬೇಕೆಂಬ ವಿಧಿಯನ್ನು ಮಾಡಿರುವರು.

[illegible]ರಲ್ಲಿ ಫ್ರಾನ್ಸಿನಲ್ಲಿ [illegible] ಜನನವೂ [illegible] ಮರಣವೂ ಆಗಿರುತ್ತದೆ. ಆದರೆ ಇದರ ಹಿಂದಣ ವರ್ಷದಲ್ಲಿ [illegible] ಜನನವೂ, [illegible] ಮರಣವೂ ಆಗಿದ್ದಿತು. ಹೀಗೆ [illegible] ಮರಣ ಸಂಖ್ಯೆಯು ಕಡಿಮೆಯಾಗಲು ಕಳೆದವರ್ಷ [illegible] ರಿಂದ [illegible] ರ ವರೆಗೆ ಜನನ ಸಂಖ್ಯೆಯು ಹೆಚ್ಚಿದುದು ಕಾರಣವಾಗಿದೆ. [illegible] ರಿಂದ [illegible] ರ ವರೆಗೆ ಫ್ರಾನ್ಸಿನಲ್ಲಿ [illegible], ಇಟಲಿಯಲ್ಲಿ [illegible], ಆಸ್ಟ್ರೇಲಿಯಾದಲ್ಲಿ [illegible], ಇಂಗ್ಲೆಂಡಿನಲ್ಲಿ [illegible], ಜರ್ಮನಿಯಲ್ಲಿ [illegible] ಮತ್ತೂ ನೆದರ್ಲ್ಯಾಂಡುಗಳಲ್ಲಿ [illegible] ಈ ಪ್ರಕಾರ ಮರಣಕ್ಕಿಂತ ಜನನವು ಹೆಚ್ಚಿರುತ್ತದೆ.

ಗತಿಸಿದ ಎಡ್ವರ್ಡ್ ದೊರೆಗಳ ಕಿರೀಟಧಾರಣಾ ಮಹೋತ್ಸವವು [illegible] ರಲ್ಲಿ ಲಂಡನ್ ನಗರದಲ್ಲಿ ನಡೆದಾಗ್ಗೆ ವೆಸ್ಟ್ ಮಿನಿಸ್ಟರ್ ಅರಮನೆಯಲ್ಲಿಟ್ಟಿದ್ದ ಸಿಂಹಾಸನವನ್ನು [illegible] ದಿನಗಳಲ್ಲಿ [illegible] ಜನರು ಬಂದು ನೋಡಿಕೊಂಡು ಹೋದರು. ಈಗಲೂ ಈ ತಾ|| [illegible] ರಲ್ಲಿ ಜಾರ್ಜ್ ದೊರೆಗಳ ಕಿರೀಟಧಾರಣವು ಆದಮೇಲೆ ಸಿಂಹಾಸನವನ್ನೋಡಲು [illegible] ದಿವಸಗಳ ವರೆಗೆ ಜನರು ಬಿಡಲ್ಪಡುವರು. ಇದನ್ನೋಡಲು ಪ್ರತಿಯೊಬ್ಬರೂ ಮೊದಲನೆಯ ದಿವಸ [illegible] ರೂ., ಎರಡನೆಯ ದಿವಸ [illegible] ಅನಂತರ [illegible] ದಿನಗಳ ವರೆಗೆ ದಿನ [illegible]ಕ್ಕೆ [illegible] ಆ., ಕಡೆಯಲ್ಲಿ [illegible] ಆ., ಈ ಪ್ರಕಾರ ದುಡ್ಡನ್ನು ಕೊಡಬೇಕಾಗಿರುವುದು. ಇದರಿಂದುತ್ಪನ್ನವಾದ ಹಣವು ಧರ್ಮಕಾರ್ಯಕ್ಕೆ ವಿನಿಯೋಗಿಸಲ್ಪಡುವುದು.

ಕಾಶಿ ಪಟ್ಟಣದಲ್ಲಿ ಒಂದು ಸ್ವತಂತ್ರ ಸರ್ವಕಲಾಶಾಲೆಯನ್ನು ಸ್ಥಾಪಿಸುವ ವಿಚಾರದಲ್ಲಿ ಅನಿಬೆಸೆಂಟಮ್ಮನವರಿಗೂ ಪಂಡಿತ ಮದನಮೋಹನ ಮಾಳವಿಯರವರಿಗೂ ಭಿನ್ನಾಭಿಪ್ರಾಯವಿದ್ದಿತು ಈಗ ಈ ವಿಚಾರದಲ್ಲಿ ಅಮ್ಮನವರ ಅಭಿಪ್ರಾಯವು ಭಿನ್ನವಾಗಿರುವುದೇನೆಂದರೆ:— ಮಹಮ್ಮದೀಯರು ತಮ್ಮದೊಂದು ಸರ್ವಕಲಾಶಾಲೆಯನ್ನು ಸ್ಥಾಪಿಸುವ ಪ್ರಯತ್ನದಿಂದ ಹಿಂದೂ ಸರ್ವಕಲಾಶಾಲೆಯನ್ನು ಸ್ಥಾಪಿಸುವ ವಿಚಾರದಲ್ಲಿ ನಾನು ಯೋಚಿಸಿದ್ದ ಕಾರ್ಯಕ್ರಮವನ್ನು ಬದಲಾಯಿಸಬೇಕಾಗಿದೆ. ಆ|| ಪಂಡಿತ ಮದನಮೋಹನ ಮಾಳವಿಯವರು ಬಹಳ ಸಮರ್ಥರು ಮತ್ತೂ ತಮ್ಮ ದೇಶದ ಹಿತಾರ್ಥಕ್ಕಾಗಿ ತಮ್ಮ ವಕೀಲ ಉದ್ಯೋಗವನ್ನು ಸಹಾ ಬಿಟ್ಟು ನಷ್ಟಕಷ್ಟಗಳಿಗೆ ಗುರಿಯಾಗಿರುತ್ತಾರೆ. ಇಂಥ ಸಮರ್ಥರು ಸರ್ವಕಲಾಶಾಲೆಯನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಮುಂದಾಳುಗಳಾಗಲು ಎಲ್ಲ ಭಾಗದಲ್ಲೂ ತಕ್ಕವರಾದುದರಿಂದ, ನಾನು ನನ್ನ ಅಭಿಪ್ರಾಯವನ್ನು ಬದಲಾಯಿಸಿ ಅವರ ಕೂಡೆ ಸೇರಿ ಪ್ರಯತ್ನಪಡಲು ನಿರ್ಧರಿಸಿರುತ್ತೇನೆ. ಅದುಕಾರಣ ಈ ಕಾಲಾ ಸ್ಥಾಪನೆಗಾಗಿ ಚಕ್ರವರ್ತಿಯವರಿಗೆ [illegible] ವಿಜ್ಞಾಪನಪತ್ರಿಕೆಗಳನ್ನು [illegible] ಪ್ರಯತ್ನವನ್ನು ಬಿಟ್ಟು ಮಹಮ್ಮದೀಯರಿಂದೊಂದು ಮತ್ತೂ ಹಿಂದೂಗಳಿಂದೊಂದು ಈ ಪ್ರಕಾರ ಎರಡನ್ನು ಮಾತ್ರ ಕೊಡತಕ್ಕದ್ದಾಗಿದೆ.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ಗಮನಿಸತಕ್ಕದು. ಪ. ಪ್ರ.

ಪತ್ರವ್ಯವಹಾರ.

ಎಂಪೈರ್‌ಡೇ ಮಹೋತ್ಸವವು.

ಗತ ಮೇ ತಾ॥ ೨೪ ರಲ್ಲು ಈ ಸಂತೆ ಬೆನ್ನೂರು ಬಾಯ್ಸ್ ಸ್ಕೂಲ್ ಭವನವು ತಳಿತೋರಣ ತೋರಣಗಳಿಂದಲಂಕರಿಸಲ್ಪಟ್ಟು ಉಪಾಧ್ಯಾಯರುಗಳಿಂದಲೂ, ವಿದ್ಯಾರ್ಥಿಗಳಿಂದಲೂ, ಸ್ಕೂಲ್ ಮೆಂಬರ್ ಮತ್ತು ಯೂನಿಯನ್ ಸಭಿಕರಿಂದಲೂ, ಇತರ ಜನಸಂಘದಿಂದಲೂ ಕಿಕ್ಕಿರಿದು ಕಣ್ಣಿಗೆ ಹಬ್ಬಗಳವಾಗಿ ಕಳೆಯುತ್ತಿತ್ತು.

ಆಗ ಮುಖ್ಯೋಪಾಧ್ಯಾಯರವರಾದ ಮ॥ ಬಿ. ವೆಂಕಟರಾಯರು ಎದ್ದುನಿಂತು ಸಭೆಯ ಉದ್ದೇಶವನ್ನು ತಿಳಿಸಿದರಲ್ಲದೆ ಚೇರ್‌ಮನ್ ಸ್ಥಾನವನ್ನು ಮ॥ ಲಾಲಬರ್ನ ಸಾಹೇಬರವರು ವಹಿಸಬೇಕಾಗಿ ಕೋರಿದ್ದರಿಂದ ಸಾಹೇಬರವರು ಸರ್ವಾನುಮತಿಯಿಂದಂಗೀಕರಿಸಿದರು.

ಅನಂತರ ಈ ಮೊದಲೇ ಏರ್ಪಾಟು ಮಾಡಿದ್ದಂತೆ ಹೆಡ್ಮ್ಯಾಸ್ಟರವರ ಸೂಚನೆಯಂತೆ ಪ್ರಕಾರ ಅಸಿಸ್ಟೆಂಟ್ ಮ್ಯಾಸ್ಟರ್ ಎಂ. ಶಿವಲಿಂಗಯ್ಯನವರು ಮತ್ತು ಅ॥ ಮ್ಯಾಸ್ಟರ್ ಎನ್. ನರಸಿಂಗರಾಯರು ಘನವನ್ನು ಹೊಂದಿದ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರವರ ರಾಜ್ಯಭಾರ ಕ್ರಮಾದಿಗಳನ್ನು ಯುಕ್ತ್ಯಾನುಸಾರ ವಿಶದಗೊಳಿಸಿದರು. ತದ್ವಿಷಯವನ್ನು ಕುರಿತು ಮ॥ ಹೆಡ್ಮ್ಯಾಸ್ಟರ್ ಬಿ. ವೆಂಕಟರಾಯರು ತಾತ್ಕಾಲಿಕ ರಾಜ್ಯಭಾರಕ್ರಮವನ್ನೂ ಪುರಾತನ ರಾಜ್ಯಭಾರಕ್ರಮವನ್ನೂ ಹೋಲಿಸಿ, ಆಂಗ್ಲೇಯ ರಾಜ್ಯಭಾರದಾಳಿತದಿಂದ ಕಡುಬಡವನಿಗೂ ಕೂಡ ದೊರೆತಿರುವ ಸ್ವಾತಂತ್ರ್ಯಾದಿ ಪ್ರಜಾ ಸೌಕರ್ಯಾದಿಗಳನ್ನು ಕುರಿತು ಮುಕ್ತಾಲುಗೆಂಟಿಯ ಪರಿಯಂತರ ಮೃದುಮಧುರ ಪದಪುಂಜ ರಂಜನೆಮಾಗಿ ಸರ್ವರ ಹೃತ್ಕರ್ಣಾನಂದವಾಗುವಂತೆ ಗಂಭೀರದಿಂದ ವಿವರಗೊಳಿಸಿ, ಚಿಕ್ಕ ಬಾಲಕರಿಂದ ಕಿವಿಗಿಂಪಾಗುವಂತಹ ಸ್ವರಯುಕ್ತವಾಗಿ ಶ್ರೀಮನ್ ಚಕ್ರವರ್ತಿ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಕೀರ್ತನೆಗಳನ್ನು ಪಾಡಿಸಿದ ನಂತರದಲ್ಲಿ ಶ್ರೀಮನ್ಮಹಾರಾಜ ಚಕ್ರವರ್ತಿಗಳವರ ಶ್ರೇಯಃ ಪ್ರಾರ್ಥನೆಯನ್ನು ಕೋರಿ ಶ್ರೀ ಭಗವಂತನಂ ವಂದಿಸಿದರಲ್ಲದೆ ಮ॥ ಚೇರ್‌ಮನರವರ ಹಸ್ತದಿಂದ ಓಡುವುದು, ಹಾರುವುದು, ಕಣ್ಣುಕಟ್ಟಿಕೊಂಡೋಡುವುದು. ಮೊದಲಾದ ಆಟಗಳಲ್ಲಿ ಜಯಪ್ರದವನ್ನು ಹೊಂದಿದ (ಮುಂದಾದ) ಬಾಲಕನಿಸರಕ್ಕೆ ಯೋಗ್ಯತಾನುಸಾರವಾಗಿ ಬಹುಮಾನವನ್ನು ([illegible]ವನ್ನು) ಕೊಡಿಸಿದರು. ಚೇರ್‌ಮನರವರು [illegible] ಹೆಡ್ಮ್ಯಾಸ್ಟರವರು ಈ ಸ್ಕೂಲಿಗೆ ಪ್ರವೇಶಮಾಡಿದಾರಭ್ಯ ಸಹಾಯೋಪಾಧ್ಯಾಯರಲ್ಲಿಯೂ, ಬಾಲಕರಲ್ಲಿಯೂ, ಪುರನಿವಾಸಿಗಳಲ್ಲಿಯೂ ಇಟ್ಟಿರುವ ಅಕೃತ್ರಿಮವಾದ ಪ್ರೇಮಾತಿಶಯವು ಕೊಂಡಾಡಲ್ಪಡತಕ್ಕದಾಗಿದೆ. ಎಂದು ಮೊದಲಾಗಿ ಸಮಯೋಚಿತ ವಾಕ್ಯಗಳನಾಡಿದರು. ತದನಂತರ ಬಾಲಕರೆಲ್ಲರೂ ಶರ್ಕರ ಚೂತಫಲಾದಿಗಳಿಂದಲೂ ಸಭಾಸದರೇ ಮೊದಲಾದ ನೋಟಕ ಮಹಾಶಯರುಗಳು ತಾಂಬೂಲಶರ್ಕರ ಮತ್ತು ಚೂತಫಲಾದಿಗಳಿಂದಲೂ ಮಹದಾನಂದಭರಿತರಾಗಿ ತಮ್ಮ ತಮ್ಮ ಗೃಹಾಭಿಮುಖರಾದರು. ಜಯಜಯರವದೊಡನೆ ಅಂದಿನ ಸಭೆಯು ಪರಿಸಮಾಪ್ತಿ ಮಾಡಲ್ಪಟ್ಟಿತು.

ಪ್ರೇಕ್ಷಕ.

ಮಳಲ ಮಠದ ಪಟ್ಟಾಭಿಷೇಕ ಮಹೋತ್ಸವವು.

ತೀರ್ಥಹಳ್ಳಿ ತಾ॥ ಅಗ್ರಹಾರದ ಹೋ॥ ಮಳಲಿ ಮಠದ ಶ್ರೀ ಪಟ್ಟದ ಸ್ವಾಮಿಗಳು ಈಗ್ಗೆ ೪ ವರ್ಷಗಳಕೆಳಗೆ ಶಿವೈಕ್ಯರಾದರು. ಆಗಲಿಂದಲೂ ಈ ಮಠಕ್ಕೆ ಶಿಷ್ಯರಾಗಿಯೂ ಅಭಿಮಾನಶಾಲಿಗಳಾಗಿಯೂ ಇರುವ ಮ॥ ರಾ॥ ಕ್ಯಾರಂದೂರು ಐಯ್ಯಪ್ಪಗೌಡರು, ಹೊಲ್ಲದ ಹಾಲಪ್ಪಗೌಡರು ಇವರ ಮೈಪಟ್ಟಿನಿಂದಲೂ, ಮ॥ ರಾ॥ ಭಾಂಡ್ಯದ ಶಿವಪ್ಪಗೌಡರ ಮೇಲ್ವಿಚಾರಣೆಯಿಂದಲೂ ಈ ಮಠದ ಆಡಳಿತವು ನಡೆಸಲ್ಪಟ್ಟು, ಈ ಮಠಕ್ಕೆ ಯೋಗ್ಯರಾಗಿಯೂ, ವಿದ್ಯಾವಂತರಾಗಿಯೂ ಇರತಕ್ಕವರನ್ನು ಅಧಿಕಾರಿಗಳನ್ನಾಗಿ ನೇಮಿಸಿ ಕೊಡಬೇಕೆಂದು ಶ್ರೀ ರಂಭಾಪುರಿ ವೀರಸಿಂಹಾಸನ ಜಗದ್ಗುರು ಮಹಾಸ್ವಾಮಿಗಳವರಿಗೆ ಈಪ್ರಾಂತದ ಪ್ರಮುಖರು ಬಿನ್ನೈಸಿಕೊಂಡಿದ್ದರವೇಳೆ, ಶ್ರೀ ಮಹಾಸ್ವಾಮಿಗಳವರು ಬೀರೂರು ಸಂಸ್ಕೃತಪಾಠಶಾಲೆಯಲ್ಲಿ ಈಗ ೫-೬ ವರುಷಗಳಿಂದ ಶಾಸ್ತ್ರಾಭ್ಯಾಸ ಮಾಡಿ ಸರಿಯಾದ ಯೋಗ್ಯತೆಯನ್ನು ಪಡೆದಿರುವ ತರೀಕೆರೆ ತಾ॥ ಚಿಕ್ಕಾತೂರು ಮಠದ ಬಸವರಾಜ ಶಾಸ್ತ್ರಿಯವರನ್ನು ಅರಿಸಿ, ಇದೇ ವಿರೋಧಿಕೃನ್ನಾಮ ಸಂವತ್ಸರದ ವೈಶಾಖ ಶುದ್ಧ ೩ ರಲ್ಲಿ ಮಳಲಿ ಮಠಕ್ಕೆ ಸಮಸ್ತ ಪರಿವಾರದೊಡನೆ ಪ್ರತ್ಯಕ್ಷವಾಗಿ ದಯಮಾಡಿಸಿ, ವೈಶಾಖ ಶು॥ ೫ನೆ ಸೋಮವಾರ ೨೨ ಮಿಥುನ ಲಗ್ನದಲ್ಲಿ ಶಿವಲಂಚಿಪುಷ್ಪ ಕಲಶಸ್ಥಾಪನಾಪೂರ್ವಕವಾಗಿ ವೇದೋಕ್ತ ಪಟ್ಟಾಭಿಷೇಕ ಕರ್ಮವನ್ನು ಮಾಡಿಸಿ, ನಾಗಾರ್ಜುನಸ್ವಾಮಿಗಳೆಂಬಭಿಧಾನವನ್ನು ಕಲ್ಪಿಸಿ ಮಠದ ಪ್ರಾಚೀನಪದ್ಧತಿಪ್ರಕಾರ ಮುದ್ರಾಮೊಹರನ್ನು ವಹಿಸಿಕೊಟ್ಟು ಅಧಿಕಾರ ಹೊಂದಿದವರಿಗೆ ಆಚಾರಬೋಧ ಪತ್ರಿಕೆ ನಡವಳಿಕೆಗಳನ್ನು ಸವಿಸ್ತರವಾಗಿ ಸಭಾಸದರೆಲ್ಲರಿಗೂ ತಿಳುವಳಿಕೆ ಬರುವಂತೆ ಘೋಷಿಸಿ ಅವರಿಂದ ಶಿಷ್ಯರಾದ ೩ ವಟುಗಳಿಗೆ ಶಿವದೀಕ್ಷಾ ಸಂಸ್ಕಾರವನ್ನು ಮಾಡಿಸಿದರು. ಅನಂತರ ನಮಗಾಗಿ ರಾತ್ರಿ ಸಮಾರಂಭ ಕಾರ್ಯವು ವಿಚಾರಪೂರ್ವಕ ಸ್ವತಂತ್ರದಾದರಿಂದ ನಡೆಯಲ್ಪಟ್ಟಿತು. ಸಾಯಂಕಾಲ ಪಟ್ಟಗಜಾರೋಹಣ ಮಹೋತ್ಸವವು ಕೇವಲ ವೈಭವದಿಂದ ನಡೆದು ನೆರೆದ ಶಿಷ್ಯಜನರಿಗೆ ಶ್ರೀಸನ್ನಿಧಿ ಸಮ್ಮುಖದಿಂದ ಆ ದಿವಸ ಪಟ್ಟಾಭಿಷಿಕ್ತರಾದ ಮಳಲಿ ಮಠದ ಶ್ರೀಗಳು ಬಹುಮಂಗಳವಾದ ವಾಣಿಯಿಂದ ತಮಗೆ ವಿದ್ಯಾಭ್ಯಾಸಕ್ಕೆ ಸಹಾಯಮಾಡಿದ ಬೀರೂರು ಮ॥ ಪತ್ರೆ ಚಿ॥ ವೀರಪ್ಪಯ್ಯನವರೇ ಮೊದಲಾದ ಬೀರೂರು ಮಹಾಜನಗಳು ಮತ್ತು ಮ॥ ಯಡೇಹಳ್ಳಿ ಶಾಂತಪ್ಪ ಶೆಟ್ಟರು ಇವರುಗಳ ಉಪಕಾರವನ್ನು ಸ್ಮರಿಸಿ ವಿದ್ಯಾಪ್ರೋತ್ಸಾಹ ವಿಷಯಗಳುಂಟಾಗುವ ಪ್ರಯೋಜನವನ್ನು ವಿದ್ಯಾಭ್ಯಾಸ ಮಾಡುವುದಕ್ಕೆ ತಕ್ಕ ಭೋಜನ ವಸ್ತ್ರಾದಿಗಳನ್ನು ಅನುಕೂಲಪಡಿಸಿದ ಬೀರೂರು ಮ॥ ದೊಡ್ಡಮನೆ ಮಲ್ಲಣ್ಣನವರ ಉಪಕಾರಸ್ಮರಣೆಯನ್ನು ಮಾಡಿ ಇನ್ನು ೨ ವರುಷಕಾಲ ವಿದ್ಯಾಭ್ಯಾಸಕ್ಕೆ ಅವಕಾಶ ಕೊಡಬೇಕಾಗಿ ವಿಜ್ಞಾಪಿಸಿ ಸೂಚಿಸಿದ್ದಕ್ಕೆ ಅವರು ಅನುಮೋದಿಸಿದರು. ಅನಂತರ ಬೆಂಗಳೂರು ವಿದ್ಯಾವರ್ಧಕ ಫಂಡಿಗೋಸ್ಕರ ಯುಕ್ತೋಚಿತ ಸಹಾಯವನ್ನು ಮಾಡಬೇಕೆಂಬದಾಗಿ ದೊಡ್ಡಗುಣಿ ಮಠದ ಶ್ರೀಗಳು ಸೂಚಿಸಿದ್ದಕ್ಕೆ ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಸಮಸ್ತ ಭಕ್ತರುಗಳಿಗೂ ಪ್ರೋತ್ಸಾಹವಾಗುವಂತೆ ಅಪ್ಪಣೆ ಮಾಡಿದ ಪ್ರಕಾರ ಫಂಡಿಗೆ ೫೦ ರೂ. ಗಳನ್ನು ಕಳುಹಿಸಿಕೊಡುತ್ತೇವೆಂತ ವಾಗ್ದಾನ ಮಾಡಿದರು. ಈ ಪ್ರದೇಶದಲ್ಲಿ ಕನ್ಯಾಶುಲ್ಕವನ್ನು ಪರಿಗ್ರಹಿಸತಕ್ಕ ಪದ್ಧತಿಯನ್ನು ಸನ್ನಿಧಾನಕ್ಕೆ ಕೆಲವರು ಸೂಚಿಸಿದ್ದರವೇಳೆ ಮಹಾಸ್ವಾಮಿಗಳವರು ಪೂರ್ವೋಕ್ತ ಸರ್ಕ್ಯುಲರ್ ಪ್ರಕಾರ ನಡೆಯಲು ಒಪ್ಪಿಗೆ ಮುಚ್ಚಳಿಕೆ ಮೂಲಕ ಬಂದೋಬಸ್ತು ಮಾಡಲ್ಪಟ್ಟಿತು. ಇನ್ನು ಮುಂದೆ ಇಂಥಾ ಕಾರ್ಯವು ನಡೆಸಲು ಈ ನಿರ್ಬಂಧ ಪದ್ಧತಿಯಿಂದ ಭೀತರಾಗಿ ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ವೇ॥ ಸಮ್ಮುಖದಲ್ಲಿದ್ದ ಸಿದ್ಧಲಿಂಗ ಶಾಸ್ತ್ರಿಗಳು ಮೇಲಿನ ಎಲ್ಲಾ ವಿಷಯಗಳಿಗೂ ಸಪ್ರಮಾಣವಾದ ಗ್ರಂಥೋಕ್ತಿಗಳನ್ನು ಪ್ರಕಾಶಪಡಿಸಿ ಜನಗಳ ಹೃದಯದಲ್ಲಿ ಪ್ರತಿಬಿಂಬಿಸುವಂತೆ ಯುಕ್ತಾಯುಕ್ತವಾಗಿ ಉಪನ್ಯಾಸ ಮಾಡಿದರು. ಕೇಳಿದವರು ತಮ್ಮ ಮಹದಾನಂದವನ್ನು ೩ ಸಾರಿ ಕರತಾಡನ ಮೂಲಕ ವ್ಯಕ್ತಗೊಳಿಸಿದರು. ಸಭಾಸದರಿಗೆ ದಕ್ಷಿಣೆ ತಾಂಬೂಲ ಗಂಧ ಪುಷ್ಪಮಾಲಾ ಇವುಗಳಿಂದ ಜನಗಳನ್ನು ಸನ್ಮಾನಿಸಿದರು. ಮರುದಿವಸ ಮಠದ ಮುಂದಿನ ಆಡಳಿತದ ಆಲೋಚನಾ ಜರಗಿ ಪಂಚರನ್ನು ನಿಯಾಮಿಸಿದ್ದಾಯಿತು. ಆದರೆ ಏಕಸಮ ೩-೪ ದಿವಸ ನೆರೆದ ಮಹಾಜನಗಳ ಆಥಿತ್ಯವನ್ನು ದೇಹಶ್ರಮದ ಕಡೆಗೆ ಲಕ್ಷ್ಯಕೊಡದೆ ಮ॥ ರಾ॥ ಗಳಾದ ಅಯ್ಯಪ್ಪ ಗೌಡರು, ಹಾಲಪ್ಪಗೌಡರು, ಶಿವಪ್ಪಗೌಡರು, ಕಟ್ಟೆ ಅಡವಪ್ಪಶೆಟ್ಟರು ಸಹ ಆಸುಪಾಸು ಗ್ರಾಮಗಳ ಜನಸಹಾಯದೊಡನೆ ಕಾರ್ಯವನ್ನು ಅತ್ಯಂತ ಸ್ತುತ್ಯವಾಗಿ ಸಮಾಪ್ತಿಗೊಳಿಸಿದ್ದಕ್ಕಾಗಿ ಸಮಸ್ತರೂ ಸಂತೋಷಪ್ರದರ್ಶನಮನಸ್ಕರಾಗಿ ಶ್ರೀಗಳ ಮಹಾಸನ್ನಿಧಿ ಫಲಾಶೀರ್ವಾದವಂ ಪಡೆದು ತಮ್ಮ ಗ್ರಾಮಗಳಿಗೆ ತೆರಳಿದರು. ಈ ಮಹೋತ್ಸವಕ್ಕೋಸ್ಕರ ೩-೪ ಸಾವಿರ ಜನರು ಸೇರಿ ನಡೆದ ವೈಭವವನ್ನು ಆ ಪ್ರಾಂತದ ಜನರು ಸ್ತುತಿಸಿದರು.

ಓರ್ವ ಪ್ರತ್ಯಕ್ಷದರ್ಶಿ.

ಕೊಲ್ಲಾಪುರದಲ್ಲಿ ಕಟ್ಟಲ್ಪಡುವ ಚಿತ್ರದುರ್ಗದ ಶ್ರೀಮನ್ ನಿರಂಜನ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಮಠದ ಶಂಕುಸ್ಥಾಪನ ಸಮಾರಂಭವು.

ಕೊಲ್ಲಾಪುರದ ಶ್ರೀಮನ್ಮಹಾರಾಜಾ ಶಾಹು ಛತ್ರಪತಿ ಮಹಾರಾಜಾ ಸಾಹೇಬ ಬಹದ್ದೂರವರು ತಮ್ಮ ರಾಜಧಾನಿಯಲ್ಲಿ ಶ್ರೀ ಜಗದ್ಗುರು ಮಹಾ ಸ್ವಾಮಿಗಳವರ ಮಠವು ಇರಬೇಕೆಂದೂ ಅದಕ್ಕೆ ತಾವು ಉದಾರಾಶ್ರಯ ಕೊಡುವುದಾಗಿಯೂ ಶ್ರೀಗಳವರಲ್ಲಿ ಭಕ್ತಿಪೂರ್ವಕವಾಗಿ ಅರಿಕೆ ಮಾಡಿಕೊಂಡವೇಳೆಗೆ ಶ್ರೀ ಜಗದ್ಗುರುಗಳವರು ಶ್ರೀಮನ್ಮಹಾರಾಜರನ್ನು ಕುರಿತು, ನಿಮ್ಮ ಅಪೇಕ್ಷೆಯಂತೆ ಮಠವನ್ನು ಕಟ್ಟಿಸಲು ಯಾವ ಅಡ್ಡಿಯೂ ಇರುವುದಿಲ್ಲವೆಂದು ಅಪ್ಪಣೆ ಕೊಡಿಸಿದ ವೇಳೆ, ಶಾಹುನಗರಿ ಮತ್ತೂ ಕೊಲ್ಲಾಪುರ ಈ ಮಧ್ಯದಲ್ಲಿ ರೇಲ್ವೆ ಸ್ಟೇಷನ್ನಿಗೆ ಹೋಗುವ ರಾಜಮಾರ್ಗದ ಪಕ್ಕದಲ್ಲಿ ಅತಿ ಉತ್ತಮವಾಗಿಯೂ, ವಿಶಾಲವಾಗಿಯೂ ಬಹು ವಿಟಳವಾಗಿಯೂ ಇರುವ ನಾಲ್ಕು ಎಕರೆ ಭೂಮಿಯು ಶ್ರೀಮನ್ಮಹಾರಾಜರವರಿಂದ ದಾನವಾಗಿ ಶ್ರೀ ಜಗದ್ಗುರುಗಳವರಾದ ಮುರುಘರಾಜೇಂದ್ರ ಮಹಾಸ್ವಾಮಿಗಳವರಿಗೆ ಕೊಡಲ್ಪಟ್ಟಿತು.

ಇದೇ ತಿಂಗಳ ೧ ನೇ ತಾ॥ ನಲ್ಲಿ ಈ ಮಠದ ಶಂಕುಸ್ಥಾಪನದ ಸಮಾರಂಭವು ನಡಿಸಲು ಶ್ರೀಮನ್ಮಹಾರಾಜರವರನ್ನು ಕೇಳಿಕೊಂಡುದಕ್ಕೆ ಈ ಶಂಕುಸ್ಥಾಪನೆಯು ತಮ್ಮ ಜ್ಯೇಷ್ಠ ಪುತ್ರರಾದ ಶ್ರೀಮನ್ ಯುವರಾಜ ರಾಜಾರಾಮಮಹಾರಾಜರವರಿಂದ ನಡಿಸಲು ಅಪ್ಪಣೆಯನ್ನು ಕೊಟ್ಟರು. ಅದೇ ಪ್ರಕಾರ ಯುವರಾಜರವರು ತಮ್ಮ ರಾಜಬಿರುದಾವಳಿಗಳ ಸಮೇತವಾಗಿ ಸದರಿ ಸ್ಥಳಕ್ಕೆ ದಯಮಾಡಿಸಲು ಕೊಲ್ಲಾಪೂರ ಸಂಸ್ಥಾನದ ದಿವಾನಸಾಹೇಬರು ಮೊದಲಾದ ಸ್ಟೇಟ ಅಧಿಕಾರಿಗಳೂ, ಪಟ್ಟಣದ ದೊಡ್ಡದೊಡ್ಡ ವರ್ತಕರೂ, ಜೈನಸಮಾಜದ ಪ್ರಮುಖರೂ ವಿಶೇಷವಾದ ಜನಸಂದಣಿಯೂ ಸೇರಿತು ಅಷ್ಟರಲ್ಲಿಯೇ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಯವರ ಸ್ವಾರಿಯು ಸಕಲ ಅಜಬಾಬ ಸಮೇತವಾಗಿ ಅಲ್ಲಿಗೆ ದಯಮಾಡಿಸಿದಕೂಡಲೇ ನೆರೆದಿದ್ದ ಎಲ್ಲ ಜನಗಳು ಭಕ್ತಿಯಿಂದ ಕರತಾಡನವನ್ನು ಮಾಡಿ ಶ್ರೀಗಳವರಿಗೆ ವಂದಿಸಿದರು. ಈ ಸಮಾರಂಭವು ನೋಡುವವರಿಗೆ ಬಹು ಆನಂದಕರವಾಗಿತ್ತು. ಈ ಸ್ಥಳದಲ್ಲಿ ಸ್ಟೇಟ್ ಅಧಿಕಾರಿಗಳಿಗೋಸ್ಕರವಾಗಿ ದೊಡ್ಡದಾದ ತಂಬು(ಡೇರಾ)ಹೊಡಿಯಲ್ಪಟ್ಟಿತ್ತು.

ಅನಂತರ ಶ್ರೀಮನ್ ಯುವರಾಜರವರು ಶ್ರೀಗಳವರಿಗೆ ವಂದನೆಯನ್ನು ಮಾಡಿ ಶಂಕುಸ್ಥಾಪನೆಯನ್ನು ಮಾಡಿದರು. ಇದು ನೋಡುವವರಿಗಂತೂ ಬಹು ಸಂತೋಷವನ್ನುಂಟುಮಾಡಿದ್ದಿತು. ಈ ಕೊಲ್ಲಾಪೂರ ಪಟ್ಟಣವು ಮಹಾರಾಷ್ಟ್ರದೇಶದ ಸ್ಥಾಪನಾಕರ್ತರಾದ ಶಿವಾಜಿ ಮಹಾರಾಜರವರ ಮುಖ್ಯಪೀಠವಾಗಿರುತ್ತದೆ. ಇಲ್ಲಿನ ಶ್ರೀಮನ್ಮಹಾರಾಜರವರು ನೈಜಾಮ, ಮೈಸೂರ, ಬದೋಡಾ (ಗಾಯಕವಾಡ)ಮಹಾರಾಜರವರಂತೆಯೇ ತಮ್ಮ ಸಂಸ್ಥಾನದಲ್ಲಿ ಎಲ್ಲ ಇಲಾಖೆಗಳನ್ನಿಟ್ಟುಕೊಂಡು ಸತ್ಯದಿಂದಲೂ, ನಿಷ್ಪಕ್ಷಪಾತದಿಂದಲೂ ಪ್ರಜಾಪರಿಪಾಲನೆಯನ್ನು ಮಾಡಿ ಸಾರ್ವಭೌಮ ಸರಕಾರದ ಆಂಗ್ಲಪ್ರಭುಗಳಲ್ಲಿ ವಿಶೇಷ ಗೌರವಶಾಲಿಗಳಾಗಿದ್ದಾರೆ. ಈ ಮಹಾರಾಜರವರಿಗೆ ನೈಜಾಮ. ಮೈಸೂರ ಗಾಯಕವಾಡ, ಬದೋಡಾ ಮಹಾರಾಜರವರಂತೆಯೇ ಬ್ರಿಟಿಷ ರಾಜ್ಯದಲ್ಲಿ ದಯಮಾಡಿಸಿದಕಾಲದಲ್ಲೆಲ್ಲ ಇವರ ಗೌರವಾರ್ಥವಾಗಿ ಇಪ್ಪತ್ತೊಂದು ತೋಪುಗಳು ಉಡಾಯಿಸಲ್ಪಡುತ್ತವೆ. ಈ ಕೊಲ್ಲಾಪುರ ಪಟ್ಟಣವು ಬೆಂಗಳೂರ ಪಟ್ಟಣದಷ್ಟು ದೊಡ್ಡದಾಗಿರುತ್ತದೆ. ಈ ಊರಿನಲ್ಲಿ ಪ್ರಜೆಗಳ ಹಿತಕ್ಕಾಗಿ ಮಹಾರಾಜರವರು ನೀರಿನ ಅನುಕೂಲ್ಯಗಳನ್ನು ವಿಶೇಷವಾಗಿ ಮಾಡಿ ಕೊಟ್ಟಿದ್ದಾರೆ. ಮತ್ತೂ ಇವರ ರಾಜ್ಯದಲ್ಲಿ ವ್ಯಾಪಾರ, ಕೈಗಾರಿಕೆ, ವ್ಯವಸಾಯ ವಿಷಯವಾಗಿ ಅನೇಕವಾದ ಸೌಲಭ್ಯಗಳನ್ನು ಮಾಡಿದ್ದಾರೆ. ಈ ಕೊಲ್ಲಾಪೂರದಲ್ಲಿ ಶ್ರೀಮನ್ಮಹಾರಾಜಾ ಶಾಹು ಛತ್ರಪತಿ ಬಹದ್ದೂರರವರ ಹೆಸರಿನ "ಸ್ಪಿನ್ನಿಂಗ ಅಂಡ್ ವೀವ್ಹಿಂಗ" ಮಿಲ್ಲು ಸ್ಥಾಪಿತವಾಗಿರುತ್ತದೆ. ಅದಕ್ಕೆ ಬೇಕಾದಷ್ಟು ಅನುಕೂಲಗಳನ್ನು ಅದರ ಅಭಿವೃದ್ಧಿಯನ್ನು ಕುರಿತು ಮಾಡಿಕೊಟ್ಟಿದ್ದಾರೆ. ಈ ಮಹಾರಾಜರವರು ತಮ್ಮ ರಾಜ್ಯದಲ್ಲಿ ಮೊಹರಚಾಲ ಎಂಬುದನ್ನು ಮಹತ್ವವಾದ ಬಿರದೆಂದು ಗಣಿಸಿರುತ್ತಾರೆ. ಈ ಬಿರುದನ್ನು ತಮ್ಮ ಸ್ವಂತ ಉಪಯೋಗಕ್ಕಾಗಿಯೇ ಇಟ್ಟುಕೊಂಡಿದ್ದಾರೆ. ಈ ಬಿರುದನ್ನು ತಮ್ಮ ಕೋರ್ಟುಗಳ ಮೊಹರಗಳಲ್ಲಿ ಕೆತ್ತಿಸಿರುತ್ತಾರೆ. ಈ ರಾಜಬಿರುದನ್ನು ಅಡ್ಡಪಾಲಕಿ, ವ್ಯಾಸನತೋಳು, ಹಗಲದೀವಟಿಗೆ ಮತ್ತೈರೆ ಸಹಾ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರು ಈ ರಾಜ್ಯದಲ್ಲಿಯು ಸಹ ಉಪಯೋಗಿಸಲು ಮಹಾರಾಜರು ಹುಕುಂ ದಯಪಾಲಿಸಿದ್ದಾರೆ.

ಶಂಕರಾಚಾರ್ಯ ಆದಿಪೀಠವೆಂದು ಪ್ರಸಿದ್ಧಿಗೊಂಡಿರುವ ಸ್ಮಾರ್ತ ಬ್ರಾಹ್ಮಣರಿಗೆಲ್ಲಾ ಜಗದ್ಗುರುಗಳೆನಿಸಿಕೊಂಡು ಈ ದೇಶದಲ್ಲಿ ಸ್ಥಾಪಿತವಾಗಿರುವ ಶಂಕರಭಾರತಸ್ವಾಮಿಗಳ ಮಠಕ್ಕೂ ಇವರ ರಾಜ್ಯದಲ್ಲಿ ೩೦-೪೦ ಸಾವಿರ ರೂಪಾಯಿ ದರವರ್ಷ ಉತ್ಪನ್ನಬರುವ ಜಹಗೀರನ್ನೂ ಮತ್ತೂ ಪ್ರಸಿದ್ಧವಾದ ಮಹಾಲಕ್ಷ್ಮೀ ದೇವಾಲಯಕ್ಕೂ, ಇನ್ನೂ ಬೇರೆ ದೇವಾಲಯಗಳಿಗೂ ಮತ್ತೂ ಮಠಗಳಿಗೂ ಮೇಲ್ಕಂಡ ಮಠಕ್ಕೆ ತಕ್ಕನಾದ ಜಹಗೀರುಗಳನ್ನೂ ಕೊಟ್ಟಿರುವದಲ್ಲದೆ ತಮ್ಮ ರಾಜ್ಯದಲ್ಲಿ ಎಲ್ಲಾ ಪ್ರಜೆಗಳನ್ನು ನಿಷ್ಪಕ್ಷಪಾತದಿಂದಲೂ, ಪ್ರೀತಿಯಿಂದಲೂ ಕಾಪಾಡುತ್ತಾರೆ.

(ಶೇಷ.)

---

೩೦ ಕಥೆಗಳು. ಸಚಿತ್ರ. ೫೧೦ ಪುಟಗಳು.

ಶುಕಸಪ್ತತಿ ಕಥೆಗಳು.

4

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಶ್ಶಕ್ತಿ ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ಲಕ್ಷ್ಯಗಳನ್ನು ತೋರಿಸುವದು. (೩) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದ್ದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತ ವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦. ಅಂಚೆ ಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಮುಂತಾದ ಸುಗಂಧದ್ರವ್ಯಗಳು; ಪ್ಲೇಗು, ಕಾಲರಾ ಮುಂತಾದ ಜಾಡ್ಯವ್ಯಾಧಿಗಳಿಗೆ ಮುಖ್ಯ ಔಷಧಗಳು; ಭಾವನಕ್ಷೆ ಚಿತ್ರಪಟಗಳು; ಮೊದಲಾದ ಸಾಮಾನುಗಳು ನಮ್ಮಲ್ಲಿ ದೊರೆಯುತ್ತವೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ನೋಟೀಸು.

ಜಾತಕ ಸುಧಾಸಾರ ಮಂಜರಿ.

2

ಅಯ್ಯಾ ಲೋಕಬಾಂಧವರೆ! ವಿನಯಪೂರ್ವಕವಾಗಿ ಶ್ರುತಪಡಿಸುವದೇನಂದರೆ— ಈ ನಮ್ಮ ಭರತಖಂಡದಲ್ಲಿ ಅನೇಕಪಂಡಿತರು ಜ್ಯೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಒಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ಯಾರೂ ರಚಿಸಲಿಲ್ಲ. ಅದಪ್ರಯುಕ್ತ ನಾನು ಅನೇಕ ಪುರಾತನ ಪರಾಶರ ಗ್ರಂಥಗಳನ್ನು ಪರಿಶೋಧನಮಾಡಿ ಅಲ್ಪವಿದ್ಯದವರಿಗೂ ಕೂಡ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡಟೀಕಾ ತಾತ್ಪರ್ಯದೊಂದಿಗೆ ರಚಿಸಿ ಇರುತ್ತೇನೆ ಸದ್ರಿ ಗ್ರಂಥದಲ್ಲಿ ಇರುವ ವಿಷಯವೇನಂದರೆ—ಯುಗಭೇದಜನ್ಮಲಗ್ನವಿಚಾರ, ಮಾನಪ್ರಮಾಣವಿಚಾರ, ಸಂದೇಹಲಗ್ನನಿವೃತ್ತಿವಿಚಾರ, ನಕ್ಷತ್ರಗಣನವಿಚಾರ, ಗ್ರಹೋಚ್ಚನೀಚವಿಷಯ, ರಾಜಲಕ್ಷಣಯೋಗ, ಭೋಗಯೋಗ, ಕೀರ್ತಿಯೋಗ, ಮರಣಾಂತ್ಯಸೌಖ್ಯಯೋಗ ರತ್ನಲಾಭಯೋಗ ಸುವರ್ಣಪಾತ್ರಭೋಜನಯೋಗ ಕುಬೇರಯೋಗ ತ್ರಿಲಕ್ಷಾಂತರಕೋಟ್ಯಧೀಶ್ವರಯೋಗ ರುಣಯೋಗ ಭಿಕ್ಷಾನ್ನಭಕ್ಷಣಯೋಗ ಲೋಭಿಯೋಗ ಅಂಧಕಯೋಗ ಮೂಕಯೋಗ ಗಣಿತಶಾಸ್ತ್ರಯೋಗ ತರ್ಕಶಾಸ್ತ್ರಯೋಗ ವ್ಯಾಕರಣಶಾಸ್ತ್ರಯೋಗ ಷಟ್‌ಶಾಸ್ತ್ರಯೋಗ ವೇದಶಾಸ್ತ್ರಯೋಗ ಭ್ರಾತೃವೃದ್ಧಿಯೋಗ ಭ್ರಾತೃಜಾರಯೋಗ ಪಾರಜಾತಕಯೋಗ ಕ್ಷೇತ್ರಲಾಭಯೋಗ ಕೃಷಿಲಾಭಯೋಗ ರಾಜಯೋಗ ಪುತ್ರವೃದ್ಧಿಯೋಗ ಏಕಪುತ್ರಯೋಗದ್ವಾದಶಪುತ್ರಯೋಗ ಪುತ್ರಹೀನಯೋಗ ಶತೃಯೋಗ ಶತೃಹೀನಯೋಗ ಏಕಕಳತ್ರಯೋಗ ಕಳತ್ರಜಾರಯೋಗ ದ್ವಿಕಳತ್ರಯೋಗ ತ್ರಿಕಳತ್ರಯೋಗ ಸಪ್ತಕಳತ್ರಯೋಗ ದ್ವಾದಶದಾರಯೋಗ ಶತಕಳತ್ರಯೋಗ ದ್ವಿಶತಕಳತ್ರಯೋಗ ಪೂರ್ಣಾಯುರ್ಯೋಗ ಮಧ್ಯಮಾಯುರ್ಯೋಗ ಅಲ್ಪಾಯುರ್ಯೋಗ ಮೃತ್ಯುಯೋಗ ಧನವ್ಯಯಯೋಗ ತನುಭಾವ ವಿಚಾರ ಧನಭಾವವಿಚಾರ ತೃತೀಯಭಾವ ವಿಚಾರ ಚತುರ್ಥಭಾವವಿಚಾರ ಪಂಚಮಭಾವವಿಚಾರ ಷಷ್ಠಮಭಾವ ವಿಚಾರ ಸಪ್ತಮಭಾವ ವಿಚಾರ ಅಷ್ಟಮಭಾವ ವಿಚಾರ ನವಮಭಾವ ವಿಚಾರ ದಶಮಭಾವವಿಚಾರ ಏಕಾದಶಭಾವ ವಿಚಾರ ದ್ವಾದಶಭಾವ ವಿಚಾರ, ಮೇಷಾದಿಯಾಗಿ ಮೀನದವರಿಗೂ ೧೨ ಲಗ್ನಗಳ ಫಲವನ್ನು ಇದಲ್ಲದೆ ಇನ್ನೂ ಅನೇಕ ವಿಷಯಗಳನ್ನು ಈ ನೋಟೀಸಿನಲ್ಲಿ ಬರೆದು ತೋರಿಸಲು ಸಾಧ್ಯವಲ್ಲವೆಂದು ಸದರಿ ಗ್ರಂಥದಲ್ಲಿ ಇರುವ ವಿಷಯವನ್ನು ಸ್ವಲ್ಪಮಟ್ಟಿಗೆ ಸೂಚಿಸಿರುತ್ತೇನೆ.

ಜಾತಕಸುಧಾಸಾರಮಂಜರಿ ಗ್ರಂಥ ೧ ಕ್ಕೆ ೦-೧೪-೦.

ಜನನಗ್ರಹಗಳ ದಂಡಕವು ವಿಸ್ತಾರವಾಗಿ ತಯಾರಾಗಿರುತ್ತದೆ. ಕ್ರಯ ೧ಕ್ಕೆ ೦-೨-೦.

ಅಥವಾ ಎರಡಾಣೆ ಸ್ಟ್ಯಾಂಪುಗಳನ್ನು ಕಳುಹಿದವರಿಗೆ ಕಳುಹಿಸುತ್ತೇವೆ.

ನಮ್ಮ ವಿಳಾಸ:—
ಬಳ್ಳಾರಿ ಗಣೇಶನಗುಡಿ ಬೀದಿ ಬೊಮ್ಮನ್ನರು ಸ್ವಾಮಿಗಳ
ಮಠದ ಸಿದ್ಧಾಂತಿ ಮಲ್ಲಿಕಾರ್ಜುನ ಶಾಸ್ತ್ರಿಗಳು,
ಬಳ್ಳಾರಿ.

---

10 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತುವ್ವ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು.



ಮಿಂಚಿನ ಉಂಗುರವು.



ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೩-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೦ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚ್
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಊದಬತ್ತಿಗಳು.

15

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೬-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೦ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ವಾಂಕೆನ್ನ	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಪಂಡಿತ ಎಲ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
ಮೈಸೂರು.

45

ಗೋರೋಚನ ಮಾತ್ರೆ— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಷೆ ೧ ಕ್ಕೆ ಕ್ರಯ ೦-೩-೦.

ಜ್ವರಹರಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೦ ಮಾತ್ರೆ ಸೀಷೆ ೦—೪—೦., ೨೪ ಮಾತ್ರೆ ಸೀಷೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಷೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೦ ಮಾತ್ರೆ ಸೀಷೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೦ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦—೩—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಷೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಷೆ ೦—೪—೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಷೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೨—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸ[illegible] ದೊರಕುವುವು. [illegible] [illegible] ಬರೆದರೆ [illegible] ಕಳುಹಿಸುವೆವು.

8 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೪ ವರುಷಗಳು ಗ್ಯಾರಂಟ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪುಸಿಸ್ಟಂ ಪೇಟಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೋಟರ್‌ರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.

ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಡದು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ [illegible]. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ನೋರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೩೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

20

ಉತ್ತಮ ಗ್ರಂಥಗಳು.

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.—ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಹಿತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

“ಅಗಸ್ತ್ಯ ಚಾರ.”

3

ಬೆಲೆ ೬॥ ಆಣೆ. ವಿ. ಪಿ. ಯಿಂದ ೭ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗಸ್ತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ “ಅಗಸ್ತ್ಯವಿಚಾರ” ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಫಿಕೇಟ್‌ಗಳು ಇದುವರೆಗೆ ೩೦ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ:—ವೀರಭದ್ರಪ್ಪ ಆರುಬೆರಳಿನ,
ಪೋಸ್ಟ್-ಬಾಗೇವಾಡಿ, ಡಿ॥ ಬೆಳಗಾಂವ.

ಉತ್ತಮ ಗ್ರಂಥಗಳು.

123

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೭-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರ ಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೦ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕಂದಂ.— ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ, ಮೈಸೂರು.

೧೯೧೧ನೇ ಇಸವಿ ಜೂನ್ ತಾ॥ ೧೯ ರಿಂದ ೧೯೧೧ನೇ ಜೂನ್ ತಾ॥ ೨೫ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಜ್ಯೇಷ್ಠ ಬ॥ ಸಪ್ತಮಿಯಿಂದ ಜ್ಯೇಷ್ಠ ಬ॥ ಚತುರ್ದಶಿವರಿಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ತೇದಿ
19	ಸೋ	ಸ	8-31	ಪೂಭಾ	82-33	5
20	ಮಂಗ	ಅ	6-46	ಉಭಾ	82-16	6
21	ಬುಧ	ನ	3-56	ರೆ	30-50	7
22	ಗುರು	ದ	0-7ಉ	ಶ್ವ	55-45	8
23	ಶುಕ್ರ	ದ್ವಾ	0-20	ಭ	25-23	9
24	ಶನಿ	ತ್ರ	44-24	ಕೃ	21-42	10
25	ಭಾನು	ಚ	38-12	ರೋ	17-41	4

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ✷ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹೀಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಕ್ಷಕೃತಾವತಾರಾ ಪಶ್ಯೈಷ್ಣಸೆ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ॥
ಹಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪ್ರೊರೆಗೆ ಗೌರೀಕಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸೆ ೧೯೧೧ ನೇ ಇಸವಿ ಜೂನ್ ತಾರೀಖು ೧೯ ನೇ ಸೋಮವಾರ. [ಸಂಚಿಕೆ ೨೫

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.
೧ ಪ್ರತಿಗೆ ೧ ವರ್ಷಕ್ಕೆ ೦-೬-೦.
೨ ರಿಂದ ೪ ರವರಿಗೆ ೧-೧೦-೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸುಲಭಕ್ರಯ! ಖಾತರಿನಾಚ್ಛೆ !! ಬಿಡಬೇಡಿರಿ!!!

9

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನುಪಡೆದ ಊದಬತ್ತಿಗಳು.

ನಂ.	ರೂ.		ರೂ.
ಅಂಬರ್‌ಬತ್ತಿ ಸೆ ೧ಕ್ಕೆ	೬	ಕಸ್ತೂರಿ ಬಿಲ್ಲೆ ತೊ ೧ಕ್ಕೆ	೨
ಅಂಬರ್‌ಬತ್ತಿ ಸೆ ೧ಕ್ಕೆ	೪	ಜವಾಜಿ ಬಿಲ್ಲೆ ತೊ ೧ಕ್ಕೆ	೧
ಕಸ್ತೂರಿ ಬತ್ತಿ ಸೆ ೧ಕ್ಕೆ	೨॥	ಅರಗಜ ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೆ ೧ಕ್ಕೆ	೧	ಕಸ್ತೂರಿ ಮಾತ್ರೆ ಸೆ ೧ಕ್ಕೆ	।
ಗುಲಾಬ್ ಬತ್ತಿ ಸೆ ೧ಕ್ಕೆ	॥	ಸುರಂಗಿ ಸೆಂಟ್ ಸೆ ೧ಕ್ಕೆ	೧
ನಕ್ಷತ್ರಕಾಂತಿಬ ಸೆ ೧ಕ್ಕೆ	೧	ಸ್ವದೇಶಿ ಘೀ ಪೌ॥ ಡ ೧ಕ್ಕೆ	।
ಕಾಶ್ಮೀರ್‌ಕೇಸ್ರಿ ತೊ ೧ಕ್ಕೆ	೧	ಪಚ್ಚಕರ್ಪೂರ ತೊ ೧ ಕ್ಕೆ	।॥

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮೀಷನ್ ದೊರಕುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂದೊರೆಯದು.

ಎ. ಆರ್. ಸುಬ್ಬಾಚೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

---

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

5

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮಾತಪಿತೃ ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವದು. (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವು ಸಂಗ್ರಹವಾಗಿ ಉಕ್ತವು. (೫) ಮೃದುಮಧುರ ವಾಕ್ಯರಚನೆಯಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕ [illegible] ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಕೂಲವಾಗಿ ಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೭-೦. ಅಂಚೆ ಕಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಮುಂತಾದ ಸುಗಂಧದ್ರವ್ಯಗಳು; ಪ್ಲೇಗು, ಕಾಲರಾ ಮುಂತಾದ ಜಾಡ್ಯವ್ಯಾಧಿಗಳಿಗೆ ಮುಖ್ಯ ಔಷಧಗಳು; ಭಾವನಕ್ಷೆ ಚಿತ್ರಮುದ್ರಾವಳಿಗಳು; ಮೊದಲಾದ ಸಾಮಾನುಗಳು ನಮ್ಮಲ್ಲಿ ದೊರೆಯುತ್ತವೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಪಂಡಿತ ಎಲ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
46 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತವೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೮-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೦ ಮಾತ್ರೆ ಸೀಸೆ ೦-೩-೦, ೨೪ ಮಾತ್ರೆ ಸೀಸೆ ೦-೭-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಸಿಕೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೩೦ ಸಲಕ್ಕೆ ಆಗುವ ಔಷಧ ಡಬ್ಬಿ ೦-೮-೦. ತೊಲೆ ೧ ಕ್ಕೆ ೧-೭-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭಪಿಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೦ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೭-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೦ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೭-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-೦
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೭-೦.
ಅಜೀರ್ಣದಮಾತ್ರೆ.— ೪೦ ಮಾತ್ರೆ ಸೀಸೆ ೦-೧೦-೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತು ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು [illegible] ಕೊಡಬೇಕು. ಇಷ್ಟವಿದ್ದವರು [illegible] ಬರೆಯಿರಿ.

ಇಲ್ಲಿನೋಡಿ ವಿಶೇಷಸೂಚನೆಗಳು !

7 ಕಾಶೀವಿಶ್ವೇಶ್ವರಪ್ರಸನ್ನ.



KASHI VISHWESHWAR   S.N.U. & CO BENARES CITY

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಪುಡುವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೆಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖಿ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪಠಗಳು, ಮತ್ತೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳುಹಿಸಿದಲ್ಲಿ, ೧ ಕ್ಯಾಟ್ಲಾಗ್ ೪ ಸಾದಾಕಾರ್ಡ್, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅತ್ತರ್‌ಕಾರ್ಡ್, ಇವುಗಳನ್ನೂ ಇನಾಮಾಗಿ ತಾವು ಬರೆದು ತಿಳಿಯಬೇಕಾದ ವಿಳಾಸಕ್ಕೆ ಕಳುಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—
ಯಸ್. ಉಡುಪನಾರಾಯಣಾಚಾರ್ಯ ಅಂಡ್‌ಕೋ.
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.
S. Udipi Narayanacharya & Co.
Benares City.

ಸೌಗಂಧಿಕಾಪರಿಣಯ

(ಕಳೆದವಾರದ ಶೇಷ.)

ಅಗ ಆ ಕಂಚುಕಿಗಳು ಮಹಾಪ್ರಸಾದವೆಂದು ವೇಗದಿಂ ತೆರಳಿ ಕಳಿಂಗರಾಯನು ಅಪ್ಪಣೆಯಂ ಕೊಟ್ಟ ವೃತ್ತಾಂತವಂ ಅವನ ಮಗಳಾದ ಸೌಗಂಧಿಕಾದೇವಿಗೆ ಬಿನ್ನವಿಸಲಾಕ್ಷಣವೆ ಸೌಗಂಧಿಕಾದೇವಿಯು ತನ್ನ ಪ್ರೇಮಸಖಿಯಾದ ಚಿತ್ರಲೇಖೆಯ ಹಸ್ತವಂಪಿಡಿದು ಮತ್ತೂ ಅನೇಕ ಸ್ತ್ರೀಯರುಗಳೊಡನೆ ಸಭಾಮಂಟಪದ ಉತ್ತರಭಾಗದೊಳ್ ಕಟ್ಟಿರುವ ಕಾಂಡಪಟದ ಮರೆಯೊಳ್ ಬಂದು ರತ್ನಪೀಠದಲ್ಲಿ ಕುಳಿತು ಆನೆಯಂ ತಂದ ಸುಗಂಧರಾಜನ ಪರಾಕ್ರಮವಂ ನೆನನೆನದು, ಈ ಮನೋಹರಾಂಗನ ರೂಪರೇಖೆಯಂ ತೆರೆಯ ಗವಾಕ್ಷದೊಳ್ ಅಡಿಗಡಿಗೆ ನೋಡುತ, ಆನಂದಭರಿತಳಾಗಿ, ತನ್ನ ಸಖಿಯಂ ಕುರಿತು, ಎಲೈ ಚಿತ್ರಲೇಖೆಯೆ! ಮಹಾರಾಜನಾದ ತ್ರಿಖಂಡವಲ್ಲಭನಾದ ಸುಗಂಧರಾಜೇಂದ್ರನಿಗೆ ನಾನು ಅಭಿವಂದಿಸಿದೆನೆಂದು ವಿಜ್ಞಾಪನೆಯಂ ಮಾಡಿ, ನನ್ನ ಪ್ರತಿಜ್ಞಾಪೂರ್ತಿಯಂ ಮಾಡುವುದಕ್ಕೆ ನೀನೇ ಸಮರ್ಥನಲ್ಲದೆ ಈ ಧರಣಿಯೊಳ್ ಅಸಾರನಾದ ಮತ್ತೊಬ್ಬ ರಾಜನಿಂ ಸಾಧ್ಯವಲ್ಲ, ಆದ್ದರಿಂ ನನ್ನಲ್ಲಿ ದಯವಿಟ್ಟು ಆನೆಯಂ ತಂದಿತ್ತಂತೆ ನಾನು ಮಾಡು ಜಯಲಕ್ಷ್ಮೀವ್ರತಕ್ಕೋಸುಗ ಲೋಕಾತಿಶಾಯಿಯಾಗಿ, ಅತಿ ಶುಭ್ರವಾಗಿ, ಸರ್ವಲಕ್ಷಣಯುಕ್ತವಾಗಿ, ವರ್ಣಾಂತರದ ಕೂದಲು ಒಂದಾದರೂ ಇಲ್ಲದೆ, ವಾಯುವೇಗ ಮನೋವೇಗ ಯುಕ್ತವಾದ ರೆಕ್ಕೆಗಳಿಂದೊಡಗೂಡಿ, ಮತ್ತೂ ರಾವುತನಮನವೇ ಕಡಿವಾಣವಾಗಿ ಉಳ್ಳ ಒಂದು ಅಶ್ವವಂ ನಾನು ಅಪೇಕ್ಷಿಸಿ ಇರುವೆನು, ಈ ಪ್ರತಿಜ್ಞಾಪೂರ್ತಿಯು ಕೂಡಾ ನಿನ್ನಿಂದಲೇ ನೆರವೇರಬೇಕೆಂದು ಬಿನ್ನವಿಸಬೇಕೆಂದು ಆ ಸ್ಥಾನದಲ್ಲಿ ವಿತಜನದೊಡನೆ ಸಿಂಹಾಸನದಲ್ಲಿ ಕುಳಿತಿರ್ದ ಸುಗಂಧರಾಜೇಂದ್ರನಂ ಕೇಳುವಂತೆ ಚಿತ್ರಲೇಖೆಯೊಡನೆ ಪೇಳಲಾಚಿತ್ರಲೇಖೆಯು, ತೆರೆಯ ಮುಂದುಗಡೆಯೊಳ್ ಬಂದು ನಿಂತು ಸುಗಂಧರಾಜೇಂದ್ರನಿಗೆ ಪ್ರಣಾಮವಂ ಮಾಡಿ, ರಾಜಪುತ್ರಿಯಾದ ಸೌಗಂಧಿಕಾದೇವಿಯು ಅಪ್ಪಣೆಯಂ ಕೊಟ್ಟ ಪರಿಯಂ ಬಿನ್ನವಿಸಲಾಗ, ಸುಗಂಧಮಹಾರಾಜೇಂದ್ರನು ಆಮಾತಂ ಪ್ರೇಮದಿಂ ಲಾಲಿಸಿ, ದೇವಿಯ ಪ್ರಾಣಸಖಿಯಾದ ಚಿತ್ರಲೇಖೆಯಂ ಕುರಿತು, ಎಲೈ ಸಖೀಶಿರೋಮಣಿಯೆ! ನೀನು ಪೇಳಿದ, ಶುಭ್ರವರ್ಣವಾದ ಸರ್ವಲಕ್ಷಣಯುಕ್ತವಾದ ಈ ಅಶ್ವವಂ ತರುವನೇನಚ್ಚರಿಯು, ಈ ಪ್ರತಿಜ್ಞಾಪೂರ್ತಿಯಂ ನಾನು ಕ್ಷಣಮಾತ್ರದಿಂ ನೆರವೇರಿಸುವೆನೆಂದು ಅಪ್ಪಣೆಯನ್ನಿತ್ತು, ಕಳಿಂಗರಾಜನು ಭಕ್ತಿಯಿಂ ಒಪ್ಪಿಸಿದ ಉಡುಗೆರೆಗಳಂ ಸುತ್ತವಿಳ್ಯವಂ ಕೂಡಾ ಕೈಕೊಂಡು, ಆ ಸ್ಥಾನದಿಂದೆದ್ದು ತನ್ನ ಪರಿವಾರದೊಡಗೂಡಿ ಬಿಡಾರಗವನ್ನೈದಿ, ಸ್ವಲ್ಪ ವಿಶ್ರಮಿಸಿಕೊಂಡು ಬಳಿಕ ಪ್ರಿಯಮಿತ್ರನಾದ ಸುಮತಿಯಂ, ಮುಖ್ಯ ಸೇನಾಧಿಪತಿಯಾದ ವೀರಸೇನನಂ, ಗುರುವಾದ ವಿದ್ಯಾಸಾಗರನಂ ಕೂಡ ಕರೆಯಿಸಿ, ಇವರೊಡಗೂಡಿ ಮಂತ್ರಾಲೋಚನೆಗೆ ಯೋಗ್ಯವಾದ ರಹಸ್ಯಸ್ಥಲವನ್ನೈದಿ ಅವರೊಡನೆ ಯಥೋಚಿತವಾಗಿ ಕುಳಿತು, ಸೌಗಂಧಿಕಾದೇವಿಯು ಪ್ರತಿಜ್ಞೆಯಂ ಮಾಡಿದ ಅರ್ಥವಂ ಪೇಳಲು, ಅದಂ ಕೇಳಿ ವಿದ್ಯಾಸಾಗರನು ಎಲೈ ಮಹಾರಾಜ ವಂಶಾಂಬುಧಿರಾಕಾಶಶಾಂಕನೆ! ಕೇಳು, ಭೂಲೋಕದೊಳ್ ಕೆಲವು ದೇಶಂಗಳೊಳ್ ಅಶ್ವಂಗಳು ಪುಟ್ಟುವುವು. ಅದರಲ್ಲಿ ಅರಬ್ಬಿದೇಶದಲ್ಲಿ ಪುಟ್ಟಿದ ಅಶ್ವಂಗಳು ಅತಿ ಪ್ರಸಿದ್ಧಂಗಳಾಗಿರುವುವು. ಅದರ ಲಕ್ಷಣವಂ, ಮತ್ತೂ ನಾನಾ ದೇಶಂಗಳೊಳಿರುವ ಅಶ್ವಂಲಕ್ಷಣಂಗಳಂ, ಉತ್ತಮಾದಮಂಗಳಾದ ಸುಳಿಗಳ ವಿವರವಂ, ಜಾತಿಗಳಂ, ಗತಿವಿಶೇಷಂಗಳಂ ಕೂಡ ಪೇಳುವೆನು; ಅದಂ ಲಾಲಿಸಿ ಸಾವಧಾನಚಿತ್ತನಾಗಿರೆಂದು ಪೇಳಿ, ಅಶ್ವಶಾಸ್ತ್ರವಂ ವಿವರಿಸಲುದ್ಯೋಗಿಸಿ, ಎಲೈ ಸ್ವಾಮಿಯಾದ ಸುಗಂಧರಾಜೇಂದ್ರನೆ! ಪೂರ್ವದೊಳ್ ಅಮೃತದಿಂದಲೂ, ಬಾಷ್ಪೋದಕದಿಂದಲೂ, ಅಗ್ನಿಯಿಂದಲೂ, ದೇವತೆಗಳಿಂದಲೂ, ಅಂಡದಿಂದಲೂ, ಗರ್ಭದಿಂದಲೂ, ಸಾಮವೇದದಿಂದಲೂ ಅಶ್ವಗಳ ಉತ್ಪತ್ತಿಯು ಏಳುಪ್ರಕಾರವಾಗಿ ಪೇಳಲ್ಪಡುವುದು. ಅದೆಂತೆನೆ— ಪೂರ್ವದಲ್ಲಿ ಕ್ಷೀರಸಮುದ್ರದ ದೆಸೆಯಿಂದ ಉಚ್ಚೈಶ್ರವಸ್ಸೆಂಬ ಹೆಸರುಳ್ಳ ಅಶ್ವವು ಪುಟ್ಟಿತು. ಮತ್ತೂ ಬ್ರಹ್ಮದೇವನ ಮುಖದಿಂದಲೂ, ಅಗ್ನಿಯ ನಾಲಿಗೆಯಿಂದಲೂ ಇವರುಗಳ ಹಸ್ತಗಳಲ್ಲಿ ಬಾಷ್ಪೋದಕಗಳು ಸ್ರವಿಸಿದುವು. ಆ ಬಾಷ್ಪೋದಕಂಗಳಲ್ಲಿ ಮೂರು ಅಶ್ವಗಳು ಆವಿರ್ಭವಿಸಿದುವು. ಯುಗಪ್ರಾರಂಭದಲ್ಲಿ ಈ ಮೂರು ಅಶ್ವಗಳೇ ಬಾಷ್ಪೋದಕಂಗಳಿಂದ ಪುಟ್ಟಿದುವು. ಮತ್ತೂ ಪೂರ್ವದಲ್ಲಿ ಪದ್ಮೋತ್ಪನ್ನನಾದ ಬ್ರಹ್ಮನಿಂದ ಹೋಮಮಾಡಲ್ಪಡುವ ಅಗ್ನಿಯ ದೆಸೆಯಿಂದ ಒಂದು ಅಶ್ವವು ಆವಿರ್ಭವಿಸಿತು. ಈ ಅಶ್ವವೊಂದೇ ಅಗ್ನಿಜನ್ಯವಾದುದು. ಇದಲ್ಲದೆ ಪೂರ್ವದೊಳ್ ಇಂದ್ರಾದಿ ದಿಕ್ಪತಿಗಳ್ ನವಪ್ರಜೇಶರಂತೆ ಸೃಷ್ಟಿವ್ಯಾಪಾರದೊಳ್ ಪ್ರವರ್ತಿಸಿದರು. ಆ ಕಾಲದೊಳ್ ಅಷ್ಟದಿಕ್ಪತಿಗಳಿಂದ ಎಂಟು ದಿಕ್ಕುಗಳಲ್ಲಿಯೂ ಎಂಟು ಅಶ್ವಗಳು ಪುಟ್ಟಿದುವು. ಇವೇ ದೇವತೆಗಳಿಂದುಂಟಾದ ಅಶ್ವೋತ್ಪತ್ತಿ ಕ್ರಮವೆಂದು ಪೇಳಲ್ಪಡುವುದು. ಮತ್ತೂ ಪೂರ್ವದೊಳ್ ಅಶ್ವಿನಾಮಕಳಾದೇವಸ್ತ್ರೀಯೂ ಬ್ರಹ್ಮದೇವನೂ ಕೂಡ ಲಕ್ಷ್ಮೀದೇವಿಯುತಪ್ರೇಮನದ ಸಮಾಪದೊಳ್ ಪರಸ್ಪರ ಶಾಪಂಗಳಿಂದ ಆ ಅಶ್ವಿನಾಮಕಳು ಮೊಸಳೆಯ ರೂಪವಂ ತಾಳಿದಳು. ಬ್ರಹ್ಮದೇವನು ಭಾತರೂಪವಂ ತಾಳಿದನು. ಈ ರೀತಿಯಿಂದ ಇವರೀರ್ವರು ಪರಸ್ಪರ ಶಾಪಯುಕ್ತರಾಗಲು, ಅವರಿಂದ ಅಂಡಗಳು ಜನಿಸಿದುವು. ಅದೇ ಅಂಡಜನ್ಯವಾದ ಅಶ್ವಸೃಷ್ಟಿಯು. ಮತ್ತೂ ಸ್ತ್ರೀಪುರುಷಾಶ್ವಸಂಬಂಧದಿಂದುಂಟಾದ ಅಶ್ವಸೃಷ್ಟಿಯು ಗರ್ಭಸಂಭವವೆಂದು ಪೇಳಲ್ಪಡುವುವು. ಇಂತಲ್ಲದೆ ಬ್ರಹ್ಮದೇವನು ಸೃಷ್ಟಿಕಾಲದೊಳ್ ಸಾಮವೇದದಿಂದ ಅಶ್ವಗಳಂ ಸೃಜಿಸಿದನು. ಈ ರೀತಿಯಿಂದ ಅಶ್ವಗಳ ಉತ್ಪತ್ತಿಯು ಏಳುಪ್ರಕಾರವಾಗಿರುವುದೆಂದು ಋಷಿಗಳು ಪೇಳುವರು. ಪೂರ್ವದಲ್ಲಿ ಬ್ರಹ್ಮದೇವನ ಬೆವರಿನಿಂದ ಯುಕ್ತವಾದ ಭಸ್ಮದಿಂ ಗರ್ದಭಗಳು ಪುಟ್ಟಿದವೆಂದು ಪೂರ್ವಿಕರಾದ ವಿದ್ವಾಂಸರು ಪೇಳುವರು. ಆ ಗರ್ದಭಗಳಿಂದ ಅಶ್ವಯೋನಿಗಳಲ್ಲಿ ಜನಿಸಿದ ಜಾತಿವಿಶೇಷಂಗಳು ಅಶ್ವತರಂಗಳೆನಿಸುವುವು. ಆ ಅಶ್ವತರಗಳಿಂದ ಹೆಣ್ಣು ಕುದುರೆಗಳಲ್ಲಿ ಹುಟ್ಟಿದ್ದು ಗೌರೀಖರವೆಂದು ಪೇಳಲ್ಪಡುವುದು. ಆ ಗೌರೀಖರದಿಂದ ಹೆಣ್ಣು ಕುದುರೆಗಳಲ್ಲಿ ಪುಟ್ಟಿದ್ದು ಮುಕುಬವೆನಿಸುವುದು. ಆ ಮುಕುಬವೆಂಬ ಗರ್ದಭದಿಂದ ಹುಟ್ಟಿದ್ದು ಕಿಂಪುರುಷವೆನಿಸುವುದು. ಆ ಕಿಂಪುರುಷದಿಂ ಹೆಣ್ಣು ಕುದುರೆಗಳಲ್ಲಿ ಜನಿಸಿದ್ದು ಪುಂಖರವೆಂದು ತಿಳಿಯುವುದು. ಪೂರ್ವದಲ್ಲಿ ಅಶ್ವಗಳು ಪಕ್ಷಗಳಿಂ ಕೂಡಿ ಆಕಾಶದೊಳ್ ಸಂಚರಿಸುತ್ತಿರಲು, ಅವುಗಳನ್ನೋಡಿ ಇಂದ್ರನು ಶಾಲಿಹೋತ್ರನೆಂಬ ಋಷಿಯಂ ಕುರಿತು, ಎಲೈ ಋಷಿಯೆ! ಈ ಕುದುರೆಗಳು ನಿನ್ನ ಸ್ವಾಧೀನದಲ್ಲಿದ್ದು, ವಾಹನತ್ವವಂ ಪಡೆಯುವಂತೆ ಇವುಗಳ ರೆಕ್ಕೆಗಳಂ ಛೇದಿಸುವನಾಗೆನಲು, ಆಗ ಋಷಿಯು ಐಷೀಕಾಸ್ತ್ರದಿಂದ ಆ ಕುದುರೆಗಳ ಪಕ್ಷಗಳಂ ಇಂದ್ರನ ಪ್ರೀತಿಗೋಸ್ಕರ ಛೇದಿಸಲು, ಆ ಕುದುರೆಗಳಿಂದ ಪ್ರಾರ್ಥಿಸಲ್ಪಟ್ಟವನಾದ ಶಾಲಿಹೋತ್ರ ಋಷಿಯು ನಿಮ್ಮ ಪಕ್ಷವೇಗಕ್ಕೆ ಸಮಾನವಾದ ವೇಗವು ಪಾದಗಳಿಗೆ ಉಂಟಾಗಲೀ ಎಂದು ಆ ಕುದುರೆಗಳಿಗೆ ವರವನ್ನಿತ್ತು, ಎಲೈ ಅಶ್ವಗಳಿರಾ! ನೀವು ಇಂದ್ರಾದಿದೇವತೆಗಳಿಗೂ, ಭೂಪತಿಗಳಿಗೂ ಕೂಡ ಪೂಜ್ಯಂಗಳಾಗಿ ವಾಹನತ್ವವಂ ಪಡೆಯುವರಾಗಿ ಎಂದು ಪೇಳಿ, ಮತ್ತೂ ಯಾವದೊರೆಯು ಅನ್ನಪಾನಾದಿಗಳಿಂದ ನಿತ್ಯದಲ್ಲಿಯೂ ನಿಮಗೆ ಪುಷ್ಟಿಯನ್ನುಂಟುಮಾಡುವನೋ ಆ ರಾಜನು ಸರ್ವದೇಶಂಗಳಲ್ಲಿಯೂ ವಿಜಯವಂ ಪಡೆಯುವನೆಂದು ಪೇಳಲು, ಆ ಅಶ್ವಗಳು ಭೂಲೋಕಕ್ಕೆ ಬಂದು ಭೂಪಾಲಕರಿಗೆ ವಾಹನತ್ವವನ್ನೈದಿ ತಮ್ಮಂ ಸಂರಕ್ಷಿಸುವ ಭೂಪಾಲಕರಿಗೆ ಉಪಕಾರಗಳಂ ಮಾಡುತ, ಧರ್ಮಾರ್ಥಕಾಮಂಗಳೆಂಬ ಪುರುಷಾರ್ಥಂಗಳಂ ಸಾಧಿಸುವುವು. (ಸಶೇಷ.)

ಮೈಸೂರು ಸಂಸ್ಥಾನದಲ್ಲಿ ಆಯಾ ವಿದ್ಯಾಭ್ಯಾಸದ ಸ್ಥಿತಿ.

ದೇಶಾಭ್ಯುದಯಕ್ಕೆ ಕೈಗಾರಿಕೆಯು ಅತ್ಯಂತಾವಶ್ಯಕವಾದುದು. ಕೈಗಾರಿಕೆಯಲ್ಲಿ ಸುಪ್ರಸಿದ್ಧರಾದವರು ತಮ್ಮ ಬುದ್ಧಿ ಕುಶಲತೆಯನ್ನು ಇನ್ನೂ ಮುಂದೆ ಓಡಿಸುತ್ತಲೇ ಇರುವರು. ಹೊಸ ಹೊಸ ಯಂತ್ರಗಳನ್ನು ಕಂಡು ಹಿಡಿಯುತ್ತಲೇ ಇರುವರು. ಹೊಸ ನಮೂನೆಯ ಪದಾರ್ಥಗಳನ್ನು ಹೊರಗೆ ತರುತ್ತಲೇ ಇರುವರು. ಅವರ ಖ್ಯಾತಿಯು ಪ್ರಪಂಚದಲ್ಲಿ ಪೂರ್ಣಿಮಾ ಚಂದ್ರನಂತೆ ಪ್ರಕಾಶಿಸುತ್ತಿದೆ ಎಂಬುದರಲ್ಲಿ ಸಂದೇಹವೇನು? ಅವರ ವಿಜಯ ಪತಾಕೆಯು ಬಲವಾಗಿ ಬೇರೂರುವುದರಲ್ಲಿ ಸಂದೇಹವೇನು? ಸಾವಿರಾರು ವರುಷಗಳಿಗೆ ಮುಂಚೆ ಈ ಭಾರತವರ್ಷದಲ್ಲಿದ್ದ ನಮ್ಮ ಆರ್ಯರು ಚಿತ್ರ ಕೆಲಸದಲ್ಲಿಯೂ, ಶಿಲ್ಪಿ ಕೆಲಸದಲ್ಲಿಯೂ ಅದ್ವಿತೀಯರಾಗಿದ್ದರೆಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಆದರದು ಅನೇಕ ಮುಸಲ್ಮಾನೇತರ ರಾಜರುಗಳಿಂದ ನಾಶವಾಗಿಹೋಯಿತು. ಈಚೆಗೆ ಭರತಖಂಡದಲ್ಲಿ ದೇಶಾಭ್ಯುದಯಕ್ಕೆ ಬೇಕಾದ ಕೈಗಾರಿಕೆಯೂ, ವ್ಯಾಪಾರವೂ ಹೆಚ್ಚುತ್ತಲಿದೆಯೆಂದು ಹೇಳಬಹುದು. ಭರತಖಂಡದ ಇತರ ಭಾಗಗಳಲ್ಲಿ ಕೈಗಾರಿಕೆಯೂ, ವ್ಯಾಪಾರವೂ, ವ್ಯವಸಾಯವೂ ಎಷ್ಟರಮಟ್ಟಿಗೆ ಅಭಿವೃದ್ಧಿಗೆ ಬಂದಿದೆ ಎಂಬುದನ್ನು ತಿಳಿಸಲು ನಾವು ಬರೆಯಬೇಕೆಂದಿರುವ ಲೇಖನಗಳಿಂದ ವಾಚಕರಿಗೆ ವ್ಯಕ್ತವಾಗದಿರಲಾರದು. ಇತರ ಸಂಸ್ಥಾನಗಳು ಅಭಿವೃದ್ಧಿಗೆ ಬಂದಿರುವಷ್ಟು ಮೈಸೂರು ಸಂಸ್ಥಾನವು ಬಂದಿಲ್ಲವೆಂದು ಹೇಳಬಹುದು. ಮೈಸೂರು ಸಂಸ್ಥಾನದಲ್ಲೆಲ್ಲಾ ೧೯೦೩ ನೇ ವರ್ಷದ ಅಂತ್ಯದಲ್ಲಿ ಆಯಾ ವಿದ್ಯಾಭ್ಯಾಸದಿಂದಲೂ, ಕೈಗಾರಿಕೆ ವಿದ್ಯಾಭ್ಯಾಸದಿಂದಲೂ ಕೂಡಿದ ಪಾಠಶಾಲೆಗಳು ೧೯ ಇದ್ದವೆಂದು ತಿಳಿಯಬಂದಿದೆ. ಈ ಪಾಠಶಾಲೆಗಳಲ್ಲೆಲ್ಲಾ ೯೦೦ ವಿದ್ಯಾರ್ಥಿಗಳಿದ್ದರೆಂತಲೂ ಅವರಲ್ಲಿ ೧೦೦ ಜನ ವಿದ್ಯಾರ್ಥಿನಿಯರೂ ೮೦೦ ಜನ ವಿದ್ಯಾರ್ಥಿಗಳೂ ಇದ್ದರೆಂತಲೂ ತಿಳಿಯಬಂದಿದೆ. ಒಂದು ಇಂಜನೀಯರ ಪಾಠಶಾಲೆಯೂ, ಒಂದು ವ್ಯವಸಾಯವನ್ನು ಬೋಧಿಸುವ ಪಾಠಶಾಲೆಯೂ, ಕೆಲವು ವ್ಯಾಪಾರಸಂಬಂಧವಾದ ವಿದ್ಯೆಯನ್ನು ಬೋಧಿಸುವ ಪಾಠಶಾಲೆಗಳೂ, ಒಂದು ಕ್ರ ರುಡರ ಮೊಳಕೆ ಪಾಠಶಾಲೆಯೂ ಇರುವುದಾಗಿ ತಿಳಿ ಬಂದಿದೆ. ಈ ಪಾಠಶಾಲೆಗಳಲ್ಲಿ ನಡೆಯುವ ವಿದ್ಯಾಭ್ಯಾಸವು ಬರೋಡ ಮೊದಲಾದ ಪ್ರದೇಶಗಳಲ್ಲಿ ಕೊಡುವಷ್ಟು ಉಚ್ಚ ವಿದ್ಯಾಭ್ಯಾಸವಲ್ಲದಿದ್ದರೂ, ಮುಂದೆ ಉನ್ನತಿಗೆ ಬರತಕ್ಕದಕ್ಕೆ ಸಹಾಯವಾಗಿರುವುದು. ಇಲ್ಲಿ ಉಚ್ಚ ವಿದ್ಯಾಭ್ಯಾಸವು ನಡೆಯದಿದ್ದರೂ ಸರ್ಕಾರದವರು ವಿದ್ಯಾರ್ಥಿ ವೇತನವನ್ನು ಕೊಟ್ಟು ಪರದೇಶಗಳಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸುವರು. ಮೈಸೂರು ಮಾದರಿಯ ಸಂಸ್ಥಾನವೆನಿಸಿದ್ದರೂ ಈ ವಿಷಯದಲ್ಲಿ ಅದು ಇನ್ನೂ ಬಹಳ ಅಭಿವೃದ್ಧಿಗೆ ಬರಬೇಕಾಗಿದೆ.

ಕೈಗಾರಿಕೆ ಪಾಠಶಾಲೆಗಳು.

ಮೈಸೂರು ಸಂಸ್ಥಾನದಲ್ಲಿರುವ ಕೈಗಾರಿಕೆ ಪಾಠಶಾಲೆಗಳಲ್ಲೆಲ್ಲಾ ರಾಜಧಾನಿಯಲ್ಲಿರುವುದೇ ದೊಡ್ಡದೆಂದು ಹೇಳಬಹುದು. ಮೈಸೂರಿನಲ್ಲಿರುವ ಪಾಠಶಾಲೆಯಲ್ಲಿ ೬೮ ವಿದ್ಯಾರ್ಥಿಗಳಿದ್ದರು. ಅವರಲ್ಲಿ ೪೫ ವಿದ್ಯಾರ್ಥಿಗಳು ಚಿತ್ರಗಾರರ ಅಥವಾ ಮರಗೆಲಸದವರ ಮಕ್ಕಳಾಗಿದ್ದರು. ಈ ಪಾಠಶಾಲೆಯಲ್ಲಿ ಮರಗೆಲಸ, ಮಣ್ಣುಗೆಲಸ (ಕುಂಬಾರರ ಕೆಲಸ) ಬೆತ್ತದ ಕೆಲಸ, ಯಂತ್ರೋಪಕರಣಗಳ ಕೆಲಸ, ಚಿತ್ರ ಕೆಲಸಗಳನ್ನು ಕಲಿಸುವ ತರಗತಿಗಳಿವೆ. ಇತರ ಭಾಗಗಳಲ್ಲಿರುವ ಪಾಠಶಾಲೆಗಳಲ್ಲಿ ದೇಶಾನುಗುಣವಾದ ಕೈಗಾರಿಕೆ ಕುಶಲವಿದ್ಯೆಗಳನ್ನು ಹೇಳಿಕೊಡುವರು. ಚನ್ನಪಟ್ಟಣದಲ್ಲಿ ಒಂದು ಪಾಠಶಾಲೆ ಇರುವುದು. ಈ ಪಾಠಶಾಲೆಯಲ್ಲಿ ತಂತಿ ಮಾಡುವ ಕೆಲಸವೂ, ಬಣ್ಣದ ಸಾಮಾನುಗಳನ್ನು ಮಾಡುವ ಕೆಲಸವೂ ಕುಶಲ ಕೆಲಸಗಳಲ್ಲಿ ಬುದ್ಧಿವಂತರಾಗಿರುವವರಿಂದ ಕಲಿಸಲ್ಪಡುವುದು. ಇಲ್ಲಿ ತಯಾರಾಗುವ ತಂತಿಯೂ, ಬಣ್ಣದ ಸಾಮಾನೂ ಪ್ರಖ್ಯಾತಗೊಂಡಿರುವುವು. ಈ ಪಾಠಶಾಲೆಯಲ್ಲಿ ವಿದ್ಯೆಯನ್ನು ಕಲಿತವರನೇಕರು ಸ್ವಂತ ಬಂಡವಾಳವನ್ನು ಹಾಕಿಕೊಂಡು ಕಾರ್ಯಾಲಯಗಳನ್ನು ಸ್ಥಾಪಿಸಿ ಕಾರ್ಯ ನಿರ್ವಾಹಮಾಡಿಕೊಂಡು ಹೋಗುತ್ತಿರುವರು.

ವೇಲ್ಕೋಟೆಯಲ್ಲಿ ಒಂದು ಪಾಠಶಾಲೆ ಇರುವುದು. ಈ ಪಾಠಶಾಲೆಯಲ್ಲಿಯೂ ಮರಗೆಲಸ, ಚಿತ್ರಕೆಲಸ, ನೇಯಿಗೆಯ ಕೆಲಸ, ಬಣ್ಣ ಕೊಡುವ ಕೆಲಸ, ಛಾಪಾಖಾನೆ (ಪ್ರಿಂಟಿಂಗ್) ಕೆಲಸ, ಪುಸ್ತಕಗಳನ್ನು ಬೈಂಡು ಮಾಡುವ ಕೆಲಸ, ಹಲಗೆಯ ಕೆಲಸ, ಶಿಲ್ಪಿಗಳ ಕೆಲಸವೇ ಮೊದಲಾದ ಕೆಲಸಗಳನ್ನು ಕಲಿಸುವರು. ಈ ಪಾಠಶಾಲೆಯಲ್ಲಿ ನೇಯ್ಗೆಯ ಕೆಲಸವನ್ನು ಬಹಳ ಚೆನ್ನಾಗಿ ಹೇಳಿಕೊಡುವರೆಂದು ಕೇಳುತ್ತೇವೆ. ಇದರಂತೆಯೇ ೧೯೦೭ ರಲ್ಲಿ ಮುಸಲ್ಮಾನರು ಬೆಂಗಳೂರಿನಲ್ಲಿ ಸ್ಥಾಪಿಸಿರುವ “ಮಹಮ್ಮದೀಯರ ಕಲಾಶಾಲೆ”ಯಲ್ಲಿಯೂ ಮರಗೆಲಸ, ಚಿತ್ರ ಕೊರೆಯುವ ಕೆಲಸ, ದಂತದಿಂದ ಸಾಮಾನುಗಳನ್ನು ಮಾಡುವುದು ಮೊದಲಾದ ಕೆಲಸಗಳನ್ನು ಹೇಳಿಕೊಡುವರು. ಮಹಮ್ಮದೀಯರು ತಮ್ಮ ಬಾಲಕರನ್ನು ಈರೀತಿ ಅಭಿವೃದ್ಧಿಗೆ ತರುವುದು ಸ್ತೋತ್ರಾರ್ಹವಾದುದೇಸರಿ. ಇದರಂತೆಯೇ ತುಮಕೂರಿನಲ್ಲಿ ವೆಸ್ಲಿಯನ್ ಮಿಷನ್ನಿನವರಿಂದ ಸ್ಥಾಪಿಸಲ್ಪಟ್ಟು ಸರ್ಕಾರದವರ ಪ್ರೋತ್ಸಾಹದಿಂದ ನಡೆಯುತ್ತಲಿರುವ ಪಾಠಶಾಲೆಯಲ್ಲಿಯೂ ಮರಗೆಲಸ, ಜೀನಗಾರಕೆಲಸ, ಚಿತ್ರ ಕೊರೆಯುವ ಕೆಲಸ, ಹಗ್ಗ ಹೊಸೆಯುವ ಕೆಲಸ, ಚಿತ್ರಕೆಲಸ, ಬೆತ್ತದ ಕೆಲಸವೇ ಮೊದಲಾದವನ್ನು ಹೇಳಿಕೊಡುವರು. ಈ ಪಾಠಶಾಲೆಯ ಹತ್ತಿರವಿರುವ ಕೆಲವು ಗ್ರಾಮಗಳಲ್ಲಿ ಇದರ ಶಾಖೆಗಳು ಸ್ಥಾಪಿಸಲ್ಪಟ್ಟಿವೆ. ಉಳಿದ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸದ ಸಂಗಡ ಮರಗೆಲಸವೇ ಮೊದಲಾದುವನ್ನು ಹೇಳಿಕೊಡುವರು. ಮೇಲ್ಕಂಡ ಎಲ್ಲಾ ಪಾಠಶಾಲೆಗಳಲ್ಲೂ ಇಂಗ್ಲೀಷು ಅಂಕಗಣಿತ, ರೇಖಾಗಣಿತಗಳೊಡನೆ ಕೈಗಾರಿಕೆ ಕುಶಲವಿದ್ಯೆಗಳನ್ನು ಹೇಳಿಕೊಡುವರು. ಯಾವ ಕೈಗಾರಿಕೆ ಪಾಠಶಾಲೆಯಲ್ಲಿಯೂ ಫೀ ಕೊಡಬೇಕಾಗಿಲ್ಲ.

ನಾವು ಮುಖ್ಯವಾಗಿ ಹೇಳಬೇಕಾದ ಮತ್ತೊಂದು ವಿಷಯವೇನಂದರೆ:—ಸರ್ಕಾರದ ಪಾಠಶಾಲೆಗಳಿಗಿಂತಲೂ ಪ್ರಜೆಗಳ ಪ್ರೋತ್ಸಾಹದಿಂದ ಪ್ರಾರಂಭವಾಗಿರುವ ಪಾಠಶಾಲೆಗಳೇ ಅಭಿವೃದ್ಧಿಯಲ್ಲಿವೆ. ಕೋಲಾರದ [illegible] ನಲ್ಲಿರುವ ನಿವಾಸಪುರದಲ್ಲಿ ಒಂದು ಆಂಗ್ಲೋ ವರ್ನ್ಯಾಕ್ಯುಲರ್ ಪಾಠಶಾಲೆಯ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಬಂದರಲ್ಲೇ ಪಾರಂತರಾದರೆ ಸಾಲದೆಂಬ ಅಂಶವನ್ನು ತಿಳಿದು, ಜನರ ಪ್ರೋತ್ಸಾಹದಿಂದ ೧೯೦೫ ರಲ್ಲಿ ಅಲ್ಲಿಯೇ ಒಂದು ಕಲಾಶಾಲೆಯನ್ನು ಸ್ಥಾಪಿಸಿದರು. ಈ ಕಲಾಶಾಲೆಯು ಮಧ್ಯಾಹ್ನ ೨ ರಿ ೫ ರ ವರೆಗೆ ಇರುವುದು. ಈ ಶಾಲೆಯಲ್ಲಿ ಚಾಪೆಗಳ ಹೆಣೆವುದು ಮತ್ತು ಮರಗೆಲಸಗಳನ್ನು ಹೇಳಿಕೊಡುತ್ತಾರೆ. ಈ ಪಾಠಶಾಲೆಯವರು ಫೀ (ರುಸುಂ) ತೆಗೆದುಕೊಳ್ಳುವುದಿಲ್ಲ. ಈ ಪಾಠಶಾಲೆಗೆ ಇದರಲ್ಲಿ ತಯಾರಾದ ಪದಾರ್ಥಗಳೇ ಬಂಡವಾಳವಾಗಿದ್ದಿತು. ಕೈಗಾರಿಕೆಯು ಹೆಚ್ಚು [illegible] ಕವು ಅಭಿವೃದ್ಧಿಸ್ಥಿತಿಗೆ ಬರುತ್ತಲಿದೆಯೆಂದು ಹೇಳಬಹುದು. ನಮ್ಮ ಪಾಠಶಾಲೆಗಳಲ್ಲಿ, ಪಾಠಶಾಲೆ ಸಂಬಂಧಿಗಳಲ್ಲಿ [illegible]

ಗಳಾಗಿರುವರ್ಯಾರಾದರೂ ಇದ್ದರೆ ಅಂತಹವರು ಯಾವುದಾದರೊಂದು ಕೈಗಾರಿಕೆ ಪಾಠಶಾಲೆಗೆ ಸೇರಿಕೊಂಡು ಜೀವನೋಪಾಯವನ್ನು ಕಲ್ಪಿಸಿಕೊಳ್ಳಬಹುದು.

(ಸಶೇಷ.)

ದೇಶ ಭಾಷೆಗೆ ಬೇಕಾಗಿರುವ ಪ್ರೋತ್ಸಾಹ.

ನಿಮ್ಮ ಜನೋಪಕಾರಿಯಾದ ಪತ್ರಿಕಾದ್ವಾರ ನನ್ನ ಕೆಲವು ಅಭಿಪ್ರಾಯಗಳನ್ನು ಪ್ರಕಟಗೊಳಿಸಬೇಕೆಂದು ಉದ್ಯುಕ್ತನಾಗಿ ಇದನ್ನು ಬರೆದು ಕಳುಹಿಸಿರುವೆನು. ಇದರಲ್ಲಿ ನಾನು ವಿಜ್ಞಾಪಿಸಿಕೊಂಡಿರುವಂತೆ ದೇಶಬಂಧುಗಳಾದ ವಿದ್ಯಾವಂತರೂ ಸರಕಾರದವರೂ ಕನ್ನಡ ಭಾಷೆಗೆ ಪ್ರೋತ್ಸಾಹವನ್ನು ಕೊಟ್ಟರೇ ಅದರೆ ಈ ದೇಶದ ವ್ಯವಸಾಯ ಮತ್ತು ಕೈ ಗಾರಿಕೆಗಳು ಬಹಳಮಟ್ಟಿಗೆ ಉತ್ತೇಜನ ಹೊಂದಿ ರಾಷ್ಟ್ರದ ಸಂಪತ್ತು ಅಭಿವೃದ್ಧಿಗೊಳ್ಳುವುದರಲ್ಲಿ ಸಂದೇಹವಿಲ್ಲವೆಂದು ನನಗೆ ತೋರುತ್ತದೆ. ಮುಂದಕ್ಕೆ ಈ ವಿಚಾರದಲ್ಲಿ ಭಗವಂತನು ಅವರಿಗೆ ಪ್ರೇರಿಸಿದಂತಾಗಲಿ, ಈಗ್ಗೆ ತಾವು ನಾನು ಹೇಳಬೇಕೆಂದಿರುವ ಅಂಶಗಳಿಗೆ ತಮ್ಮ ಪತ್ರಿಕೆಯಲ್ಲಿ ಸ್ಥಳ ಕೊಡುವಿರೆಂದು ಪ್ರಾರ್ಥಿಸುತ್ತೇನೆ.

ಈಗ ಲಕ್ಷ್ಮಿಗೆ ಆವಾಸಸ್ಥಾನಗಳೆಂದು ಪ್ರಖ್ಯಾತಗೊಂಡಿರುವ ದೇಶಗಳಲ್ಲಿ ಐಶ್ವರ್ಯಕ್ಕೆ ಕಾರಣಭೂತಗಳಾದುವು ಯಾವುವೆಂದು ವಿಮರ್ಶಿಸಿ ನೋಡುವಲ್ಲಿ ಮೊದಲನೆಯದು ಶಾಸ್ತ್ರಾಭ್ಯಾಸವೆಂತಲೂ, ಎರಡನೆಯದು ಶಾಸ್ತ್ರೋತ್ಕೃಷ್ಟವಾದ ಯಂತ್ರಾದಿ ಉಪಕರಣಗಳನ್ನು ಉಪಯೋಗಿಸಿಕೊಳ್ಳಲು ಬೇಕಾದಷ್ಟು ತಿಳುವಳಿಕೆಯನ್ನು ಹೆಚ್ಚಿಸುವಂತಹ ಸಾಮಾನ್ಯ ವಿದ್ಯಾಪ್ರಸರಣವೆಂತಲೂ ಹೇಳಬಹುದಾಗಿದೆ. ಸಮಷ್ಟಿಯಲ್ಲಿ ಜ್ಞಾನಾಭಿವೃದ್ಧಿಯನ್ನು ಮಾಡುವಂತಹ ವಿದ್ಯಾಪ್ರಾಚುರ್ಯವು ನಮ್ಮ ದೇಶದಲ್ಲಿರುವ ದಾರಿದ್ರ್ಯಾದಿ ಸಮಸ್ತ ದುಃಖಗಳಿಗೂ, ಎಲ್ಲಾ ನ್ಯೂನತೆಗಳಿಗೂ ಸಂಜೀವನವೆಂದು ಅನೇಕಾನೇಕ ಮಂದಿ ಹಿಂದೂ ದೇಶಾಭಿಮಾನಿಗಳು ಹೇಳಿರುವರು. ಇದೇ ಅಂಶವನ್ನೇ ನಮ್ಮ ಶ್ರೀಮನ್ಮಹಾರಾಜರವರು ಸಹ ಮೊನ್ನೆ ನಡೆದ “ಎಕಾನೊಮಿಕ್ ಕಾನ್ಫರೆನ್ಸ್” ನಲ್ಲಿ ಅಪ್ಪಣೆ ಕೊಡಿಸಿದರು.

ಅದುದರಿಂದ ಸಮಸ್ತಕ್ಕೂ ರಾಜವೈದ್ಯವಾದ ಈ ವಿದ್ಯಾಭಿವೃದ್ಧಿಯನ್ನು ಹೇಗೆ ಮಾಡಬೇಕೆಂಬುದನ್ನು ತಿಳಿದುಕೊಂಡರೆ ನಮ್ಮ ದೇಶವು ಉತ್ತಮಸ್ಥಿತಿಗೆ ಬರುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಈ ವಿಷಯದಲ್ಲಿ ನನ್ನ ಅಭಿಪ್ರಾಯವೇನಂದರೆ:—ವಿದ್ಯಾಭಿವೃದ್ಧಿಯು ದೇಶಭಾಷಾ ಮೂಲಕವಾಗಿ ನಡೆಯಬೇಕೆಂಬುದೇ, ಮೈಸೂರು ಸರಕಾರದವರು ಸಹಾ ಇದನ್ನು ತಿಳಿದು ಕಡೇಪಕ್ಷ ಕನ್ನಡದಲ್ಲಿ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಾದರೂ ತೇರ್ಗಡೆಯಾಗದಿದ್ದರೆ ಸರಕಾರದಲ್ಲಿ ಉದ್ಯೋಗಗಳು ದೊರೆಯಲಾರವೆಂದು ಹೇಳಿಯೇ ಇರುವುದಲ್ಲದೆ, ಈಚೆಗೆ ಇಂಗ್ಲೀಷು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕೆಂದಿರುವವರು ಅಗತ್ಯವಾಗಿ ಕನ್ನಡ ಭಾಷೆಯನ್ನು ಓದಿಯೇ ತೀರಬೇಕೆಂದು ವಿಧಾಯಕಮಾಡಿದ್ದಾರಲ್ಲಾ, ಇನ್ನು ನಿಮ್ಮ ಆಕ್ಷೇಪಣೆ ಏನೆಂದು ಕೆಲವರು ಕೇಳಬಹುದು. ನಿಜ, ಇದನ್ನೆಲ್ಲಾ ನಾವು ಬಲ್ಲೆವು. ಇವೆಲ್ಲಾ ಮಾಡಬೇಕಾದವುಗಳೇಸರಿ. ಆದರೆ ಇಷ್ಟು ಮಾಡಿಬಿಟ್ಟರೆ ಸಾಲದೆಂಬುದೇ ನಮ್ಮ ಆಕ್ಷೇಪಣೆ. ಕನ್ನಡ ಭಾಷೆಯಲ್ಲಿ ಅತ್ಯಂತ ಸುಲಭವಾದ ಶೈಲಿಯುಳ್ಳ ಪಾಶ್ಚಿಮಾತ್ಯರ ಶಾಸ್ತ್ರಗ್ರಂಥಗಳನ್ನು ಹೊರಡಿಸಲು ಏರ್ಪಾಡು ಮಾಡಬೇಕು, ಬರೆಯುವವರಿಗೆ ತಕ್ಕ ಪ್ರೋತ್ಸಾಹವನ್ನು ಕೊಡಬೇಕು. ನಮ್ಮ ದೇಶವು ಅತ್ಯಂತ ಬಡಸ್ಥಿತಿಯಲ್ಲಿರುವುದನ್ನು ನೆನಪಿನಲ್ಲಿಟ್ಟುಕೊಂಡು ಪುಸ್ತಕಗಳಿಗೆ ಬಹಳ ಸುಲಭ ಖರೀದಿಯನ್ನು ಹಾಕಬೇಕು ಮತ್ತು ಸಣ್ಣ ಸಣ್ಣ ಪುಸ್ತಕಗಳನ್ನು ಉಚಿತವಾಗಿಯೇ ಕೊಡಬೇಕು. ಇಷ್ಟೇ ಅಲ್ಲದೆ ಶಾಸ್ತ್ರ ಪ್ರಥಮಾಭ್ಯಾಸಕ್ಕೆ ಬೇಕಾದ ವಿಷಯಗಳನ್ನೂ ಅದರ ಅಭ್ಯಾಸದಿಂದಾಗುವ ಪ್ರಯೋಜನಾಂಶಗಳನ್ನೂ ಕುರಿತು ಆಗಾಗ್ಗೆ ಉಪನ್ಯಾಸಾದಿಗಳಿಂದ ಜನರಿಗೆ ಬೋಧಿಸಬೇಕು. ಹೀಗೆ ಮಾಡುವುದರಿಂದ ಜನರಿಗೆ ಆಯಾ ಶಾಸ್ತ್ರದ ಪುಸ್ತಕಗಳನ್ನು ಓದಬೇಕೆಂಬ ಅಭಿಲಾಷೆಯು ಹುಟ್ಟುವುದು. ಇದನ್ನು ಬಿಟ್ಟು ಕೇವಲ ಕಾದಂಬರೀ ಗ್ರಂಥಗಳನ್ನೂ, ಅಲಂಕಾರ ಗ್ರಂಥಗಳನ್ನೂ, ಎಷ್ಟು ಮಂದಿ ಓದಿದರೆ, ಎಷ್ಟು ಚೆನ್ನಾಗಿ ಓದಿದರೆತಾನೇ ದೇಶದಲ್ಲಿ ವ್ಯವಸಾಯ, ಕೈಗಾರಿಕೆಗಳು ಅಭಿವೃದ್ಧಿಗೊಂಡಾವೆ? ಎಂದಿಗೂ ಸಾಧ್ಯವಿಲ್ಲ. ಅನ್ಯ ಭಾಷೆಯಲ್ಲಿರುವ ವಿಷಯಗಳನ್ನು ತಿಳಿಸಬೇಕಾದರೆ ನಾವು ಹೇಳಿದ ಮಾರ್ಗವೇ ಸರಿಯಾದುದೆನ್ನುವುದಕ್ಕೆ ಕ್ರೈಸ್ತ ಪಾದರಿಗಳು ನಿದರ್ಶನಭೂತರಾಗಿರುವರು. ಅವರು ತಮ್ಮ ಮತಗ್ರಂಥಗಳಲ್ಲಿ ಮುಖ್ಯವಾದುವುಗಳನ್ನು ಮೊದಲು ಭಾಷಾಂತರ ಮಾಡುತ್ತಾರೆ. ಆಯಾ ವಿಷಯಗಳನ್ನು ಕುರಿತು ಕನ್ನಡದಲ್ಲಿ ಉಪನ್ಯಾಸಗಳನ್ನು ಮಾಡುತ್ತಾರೆ. ಅವರು ಪುಸ್ತಕಗಳಿಗೆ ಖರೀದಿಯನ್ನು ಅತ್ಯಂತ ಸುಲಭವಾಗಿಯೇ ಹಾಕುತ್ತಾರೆಂದು ನಾವು ಹೇಳಬೇಕಾಗಿಯೇ ಇಲ್ಲ. [illegible] ಸಿಕ್ಕಿದಾಗ [illegible] ಮೂಲಕವಾಗಿಯೂ ಬೋಧಿಸುತ್ತಾರೆ. ಇವರು ವಿಶ್ವಾಸದಿಂದ ಕೇಳುತ್ತಾರೋ ಇಲ್ಲವೋ ಎಂದು ಸಂಶಯಪಡದೆ ಕೇಳಿದವರು ಕೇಳಲಿ ನಮ್ಮ ಕೆಲಸವನ್ನು ಕೈಲಾದಷ್ಟುಮಟ್ಟಿಗೆ ಚೆನ್ನಾಗಿ ಮಾಡೋಣ, ಎಂದು ಕಷ್ಟಪಡುತ್ತಾರೆ. ಇವರ ಫಲವೇನಂದರೆ:—ಓದು ಬರಹ ಬಲ್ಲ ಆಬಾಲವೃದ್ಧರಿಗೂ ಸಹ ಕ್ರೈಸ್ತಮತ ಬೋಧನೆಗಳು ಬಹಳಮಟ್ಟಿಗೆ ತಿಳಿದಿವೆ. ಓದುಬರಹ ಬಾರದವರಿಗೂ ಸಹ ಅಲ್ಪ ಸ್ವಲ್ಪವಾಗಿ ತಿಳಿದಿದೆ. ಮತಜ್ಞಾನವನ್ನು ಹೆಚ್ಚಿಸಲು ಅವರು ಮಾಡುತ್ತಿರುವ ಸಾಹಸಗಳನ್ನೆಲ್ಲಾ ಈಗ ನಾವು ಶಾಸ್ತ್ರಜ್ಞಾನಾಭಿವೃದ್ಧಿಗಾಗಿ ಮಾಡಬೇಕಾಗಿದೆ.

ವ್ಯವಸಾಯವು ನಮ್ಮ ದೇಶದ ಐಶ್ವರ್ಯಕ್ಕೆ ಆಧಾರಭೂತವಾದುದು. ನಮ್ಮ ರೈತರಾದರೋ ವ್ಯವಸಾಯದಲ್ಲಿ ಪೂರ್ವಪದ್ಧತಿಗಳನ್ನೇ ಅನುಸರಿಸುತ್ತಾ ಬಂದಿರುವುದರಿಂದ ಬೆಳಸಿನ ಬಾಹುಳ್ಯವನ್ನೂ ಉತ್ಕೃಷ್ಟತೆಯನ್ನೂ ವೃದ್ಧಿಗೊಳಿಸಲಾರದೆ ತಾವು ಬಡವರಾಗಿರುವರಲ್ಲದೆ ದೇಶವನ್ನು ಸಹ ಬಡಸ್ಥಿತಿಗೆ ತಂದಿರುವರು. ಈ ವಿಷಯದಲ್ಲಿ ಅವರಿಗೆ ತಿಳುವಳಿಕೆಯನ್ನು ಹೆಚ್ಚಿಸುವುದು ವಿದ್ಯಾವಂತರ ಮತ್ತೂ ಸರಕಾರದವರ ಪ್ರಥಮಕರ್ತವ್ಯವಾಗಿರುತ್ತದೆ. ಇದೇ ಅಲ್ಲದೆ ಒಂದು ವಿಷಯವನ್ನು ಸುಮ್ಮನೆ ಬಾಯಲ್ಲಿ ಹೇಳುವುದಕ್ಕಿಂತಲೂ ಅದನ್ನು ಕೈಯಲ್ಲಿ ಮಾಡಿ ತೋರಿಸುವುದರಿಂದ ಹೆಚ್ಚು ಪ್ರಯೋಜನವುಂಟು. ಇದರಂತೆಯೇ ಅಮೇರಿಕಾ ಸಂಯುಕ್ತಸಂಸ್ಥಾನಗಳಲ್ಲಿ ಸರಕಾರದವರು ಕೃಷಿಶಾಸ್ತ್ರ ವಿದ್ಯಾನಿಲಯಗಳನ್ನು ಅಲ್ಲಲ್ಲಿ ಸ್ಥಾಪಿಸಿರುವರಲ್ಲದೆ ದೇಶದಲ್ಲಿ ನಡೆಯುತ್ತಿರುವ ವ್ಯವಸಾಯಾದಿ ಕಾರ್ಯಗಳನ್ನು ಮೇಲ್ವಿಚಾರಣೆ ನೋಡಿಕೊಳ್ಳುವುದಕ್ಕೂ, ಅಗತ್ಯಬಿದ್ದಾಗ ಹೊಸಹೊಸ ಮಾರ್ಗಗಳನ್ನು ಮಾದರಿಗಾಗಿ ತೋರಿಸಿಕೊಡುವುದಕ್ಕೂ ಬೇರೊಂದು ಡಿಪಾರ್ಟುಮೆಂಟನ್ನು ಏರ್ಪಡಿಸಿರುವರು. ಅಧಿಕಾರಿಗಳು ದೇಶದ ಬೇರೆಬೇರೆ ಭಾಗಗಳಲ್ಲಿನ ಭೂಗುಣ ಹವಾ ಮೊದಲಾದ ವಿಷಯಗಳನ್ನು ಪರೀಕ್ಷಿಸಿ ರೈತರಿಗೆ ಪತ್ರಿಕಾದ್ವಾರಾ ತಿಳಿಯಪಡಿಸುತ್ತಾ ರೈತರು ತಮ್ಮ ಸಲಹೆಗಳನ್ನು ತೆಗೆದುಕೊಳ್ಳದೆ ಹಿಂದೆಗೆಯುತ್ತಿದ್ದರೆ ತಾವೇ ಮಾದರಿಗಾಗಿ ಸ್ವಲ್ಪ ಭಾಗವನ್ನು ಹೊಸ ವಿಧಾನದಲ್ಲಿ ಉತ್ತು, ಬೀಜವನ್ನು ಬಿತ್ತಿ, ವಿಶೇಷವಾಗಿ ಬೆಳಸನ್ನು ಹೆಚ್ಚಿಸಿ, ರೈತರಿಗೆ ಫಸಲು ಹೊಸ ವಿಧಾನದಿಂದಾಗುವ ಪ್ರಯೋಜನಾಂಶವನ್ನು ನಿದರ್ಶನ ಮಾಡಿಕೊಡುತ್ತಾರೆ. ಈ ರೀತಿಯಲ್ಲಿ ನಮ್ಮ ದೇಶದಲ್ಲಿ ಏತಕ್ಕೆ ಏರ್ಪಾಡುಗಳನ್ನು ಮಾಡಬಾರದು? ಅಥವಾ ಒಂದುವೇಳೆ ಮಾಡಿದರೆ ಎಲ್ಲೋ ಒಂದು ಮೂಲೆಯಲ್ಲಿ ಸ್ವಲ್ಪ ಮಾಡಿದ್ದರಿಂದ ಫಲವೇನಾಗುವುದು? ಆದುದರಿಂದ ಈ ದೇಶದಲ್ಲಿಯೂ ಇಂತಹ ಒಂದು ಡಿಪಾರ್ಟುಮೆಂಟನ್ನು ಸ್ಥಾಪಿಸಿ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಹೊಸವಿಧಾನದಿಂದ ವ್ಯವಸಾಯಾದಿ ಕಾರ್ಯಗಳನ್ನು ಮಾಡಿಸಿ, ಅದರ ವಿಚಾರವಾಗಿ ರೈತರಿಗೆ ಅನುಕೂಲವಾಗಿರುವಂತೆ ಕನ್ನಡಭಾಷೆಯಲ್ಲಿ ಪುಸ್ತಕಗಳನ್ನು ಪ್ರಕಟಗೊಳಿಸಿದರೆ ದೇಶಕ್ಕೆ ಕ್ಷೇಮವುಂಟಾಗುವುದು. ಆದರೆ ಇಷ್ಟನ್ನೆಲ್ಲಾ ಈಗಲೇ ಮಾಡಲು ಸಾಧ್ಯವಲ್ಲವಿದ್ದರೆ ಪ್ರಾರಂಭದಲ್ಲಿ ರೈತರೇ ಒಬ್ಬೊಬ್ಬರು ಇಂತಹ ಕಾರ್ಯಗಳನ್ನು ಮಾಡಲು ಪ್ರೋತ್ಸಾಹಕೊಟ್ಟು, ಅವರಿಗೆ ಇದರಿಂದ ನಷ್ಟವಾಗುವ ಸಂದರ್ಭದಲ್ಲಿ ಸರಕಾರದವರು ತಾವು ಸಹಾಯಮಾಡುವುದಾಗಿ ಭರವಸೆಕೊಟ್ಟರೆ ಎಷ್ಟೋ ಪ್ರಯೋಜನವಾದೀತು. ಎಲ್ಲಕ್ಕೂ ಮೂಲಾಧಾರವಾಗಿರುವ ಶಾಸ್ತ್ರಜ್ಞಾನವನ್ನು ಈ ದೇಶಭಾಷಾಮೂಲಕವಾಗಿ ಹೆಚ್ಚಿಸಲು ಶೀಘ್ರದಲ್ಲೇ ಏರ್ಪಾಟನ್ನು ಮಾಡಿಯಾರೆಂದು ನಂಬಿ ಪ್ರಾರ್ಥಿಸುತ್ತೇನೆ.

M. S.

[ಜರ್ಮಾನದೇಶದಲ್ಲಿ ಮುಖ್ಯವಾದ ಶಾಸ್ತ್ರಗ್ರಂಥಗಳನ್ನೆಲ್ಲಾ ದೇಶಭಾಷೆಯಲ್ಲಿಯೇ ಅವರು ಪ್ರಕಟಿಸಿರುವರೆಂದು ಗೊತ್ತಾಗಿದೆ.— ಪ. ಪ್ರ.]

ಕಿರೀಟಧಾರಣಮಹೋತ್ಸವವು.

ಕಳೆದ ೨೨ ನೇ ತಾರೀಖು ಗುರುವಾರದ ದಿವಸ ಲಂಡನ್ ಪಟ್ಟಣದಲ್ಲಿ ನಮ್ಮ ಐದನೇ ಜಾರ್ಜ್ ಪ್ರಭುಗಳವರಿಗೂ ಮತ್ತೂ ಅವರ ಪತ್ನಿಯರಾದ ಮೇರಿ ಮಹಾರಾಜ್ಞಿಯವರಿಗೂ ಅತಿ ವಿಜೃಂಭಣೆಯಿಂದ ಕಿರೀಟಧಾರಣ ಮಹೋತ್ಸವವು ನಡೆಯಿತು, ಲಂಡನ್ ಪಟ್ಟಣದ ಕೆಲವು ರಾಜಮಾರ್ಗಗಳಲ್ಲಿ ಜನಸಂಚಾರಕ್ಕೆ ಅವಕಾಶವಿಲ್ಲದಷ್ಟು ಜನರ ಗುಂಪು ನೆರೆದಿದ್ದಿತು. ಸಾಧಾರಣ ಜನರಿಗೆ ಈ ಉತ್ಸವವು ನೇತ್ರಾನಂದಕರವಾದ ಒಂದು ಮೆರವಣಿಗೆಯಂತೆ ಪರಿಣಮಿಸಿದರೂ ಜಾರ್ಜ್ ಪ್ರಭುಗಳಿಗೆ ಅವರ ಆಳಿಕೆಯಲ್ಲಿ ಇದೊಂದು ಬಹಳ ಜವಾಬ್ದಾರಿ ಕೆಲಸವಾಗಿರುವುದು. ಏತಕ್ಕೆಂದರೆ ಈ ಮಹೋತ್ಸವಕಾಲದಲ್ಲಿ ಅವರು ದೇಶದಲ್ಲಿ [illegible] ಬಂತ ಧರ್ಮಶಾಸ್ತ್ರ ಮತ್ತೂ ಆಚಾರಗಳಿಗೆ ವಿರೋಧವಾಗಿ ನಡೆಯದೆ ತಮ್ಮ ರಾಜ್ಯವನ್ನು ಸತ್ಯದಿಂದಲೂ, ಧರ್ಮದಿಂದಲೂ, ದಯೆಯಿಂದಲೂ ಪರಿಪಾಲಿಸುವುದಾಗಿ ಪ್ರಮಾಣ ಮಾಡುವರು. ಈ ಉತ್ಸವವು ಮಧ್ಯಾಹ್ನ ೧೧ ಗಂಟೆಗೆ ಪ್ರಾರಂಭವಾಗುವುದಾಗಿ ಗೊತ್ತಾಗಿದ್ದಿತು. ವೆಸ್ಟ್‌ಮಿನಿಸ್ಟರ್ ಅಬೆ ಎಂಬ ರಾಜದೇವಾಲಯದಲ್ಲಿ ಇದು ಜರುಗಿದನಂತರ ಚಕ್ರವರ್ತಿಯವರೂ ಅವರ ಪತ್ನಿಯರೂ ರಾಜಾಂಗಕ್ಕೆ ಸೇರಿದವರಿಂದಲೂ, ದೊಡ್ಡದೊಡ್ಡ ಹುದ್ದೇದಾರರುಗಳಿಂದಲೂ ಕೂಡಿದವರಾಗಿ ಮುಖ್ಯವಾದ ರಾಜಮಾರ್ಗಗಳಲ್ಲಿ ಮೆರವಣಿಗೆ ಹೊರಟು ನೋಡಲು ಸೇರಿದ್ದ ಅಪರಿಮಿತ ಜನಸಮುದಾಯಕ್ಕೆ ತೃಪ್ತಿಯನ್ನುಂಟುಮಾಡುವ ಉದ್ದೇಶದಿಂದ ಬಹಳ ನಿಧಾನವಾಗಿ ಹೋಗುತ್ತಾ ಸಾಯಂಕಾಲ ಸುಮಾರು ೪ ಗಂಟೆಯ ಹೊತ್ತಿಗೆ ಬಕಿಂಗ್ಹಾಮ್ ಅರಮನೆಗೆ ತಲಪುವುದಾಗಿ ಗೊತ್ತಾಗಿದ್ದಿತು. ಮುಖ್ಯವಾಗಿ ದೇವಾಲಯದಲ್ಲಿ ನಡೆಯಬೇಕಾಗಿದ್ದ ಕೆಲಸಕಾರ್ಯಗಳೆಲ್ಲವೂ ಹಿಂದಣ ಎಡ್ವರ್ಡ್ ರವರಿಗೆ ಕಿರೀಟಧಾರಣ ಮಹೋತ್ಸವ ಕಾಲದಲ್ಲಿ ನಡೆದಂತೆಯೇ ಈಗಲೂ ನಡೆಯಬೇಕೆಂದು ಗೊತ್ತಾಗಿದ್ದಿತು. ಈ ಸಾಮ್ರಾಜ್ಯಾಧಿಪತ್ಯಕ್ಕೆಲ್ಲ ಪ್ರತಿನಿಧಿಗಳಾದ ವೈದಿಕಮಂಡಲಿಯವರು ದೇವಸ್ಥಾನದ ಬಾಗಿಲಲ್ಲಿ ರಾಜರನ್ನೂ ರಾಣಿಯವರನ್ನೂ ಇದಿರ್ಗೊಂಡು ಒಳಕ್ಕೆ ಕರೆದುಕೊಂಡು ಹೋಗಿ ದೇವರಿಗೆ ಸ್ತೋತ್ರವನ್ನು ಅರ್ಪಿಸಿದನಂತರ ರಾಜರನ್ನು ಬಲಿಪೀಠದ ದಕ್ಷಿಣಪಾರ್ಶ್ವದಲ್ಲಿ ಬಿಜಮಾಡಿಸಿದರು. ನಂತರ ವೈದಿಕಮಂಡಲಿಗೆಲ್ಲಾ ಅಧ್ಯಕ್ಷರಾದ ಕ್ಯಾಂಟರಿಬರಿ ಆರ್ಚಿಬಿಷಪ್‌ರವರೂ ಇನ್ನೂ ಹಲವು ಮುಖ್ಯಸ್ಥರೂ ಏಕವಾಕ್ಯತೆಯಿಂದ “ಈ ಐದನೇ ಜಾರ್ಜರವರೇ ನಮ್ಮ ರಾಜರು; ಇವರಿಗೆ ನೀವು ವಂದನೆಯನ್ನು ಸಮರ್ಪಿಸಿರಿ.” ಎಂದು ಉದ್ಘೋಷಿಸಿದರು. ಅದಕ್ಕೆ ನೆರೆದಿದ್ದವರೆಲ್ಲರೂ ಒಪ್ಪಿ ನಾಲಕ್ಕು ಕಡೆಗಳಿಂದಲೂ— ನಿಸ್ಸಂದೇಹವಾಗಿಯೂ ಈ ರಾಷ್ಟ್ರಕ್ಕೆ ಇವರೇ ರಾಜರು, ದೇವರು ಈ ರಾಜರನ್ನು ಪೊರೆಯಲಿ, ಎಂದು ಗಟ್ಟಿಯಾಗಿ ಕೂಗಿ ಹೇಳಿದರು. ಅನಂತರ ಕ್ರಿಸ್ತಮತಾನುಸಾರವಾಗಿ ಒಂದು ದೇವತಾರಾಧನೆಯು ಜರುಗಿತು. ಇದೆಲ್ಲ ನಡೆಯುವವರೆಗೂ ಜಾರ್ಜ್ ಪ್ರಭುಗಳು ರಕ್ತವರ್ಣದ ಒಂದು ಮಕಮಲ್ಲು ಟೋಪಿಯನ್ನು ಮಾತ್ರ ಧರಿಸಿಕೊಂಡಿದ್ದರು. ಇಷ್ಟು ಹೊತ್ತಿಗೆ ಕಿರೀಟಧಾರಣ ಮಹೋತ್ಸವಕ್ಕೆ ಎಲ್ಲವೂ ಸಿದ್ಧವಾಗಿದ್ದಿತು. ಆಗ ಪ್ರಭುಗಳು ಟೋಪಿಯನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು ಬಲಿಪೀಠದ ಸಮೀಪಕ್ಕೆ ಬಿಜಮಾಡಿಸಿದರು. ಆಗ ಆರ್ಚಿಬಿಷಪ್‌ಗಳವರು ಚಕ್ರವರ್ತಿಯವರಿಗೆ ಅಭಿಷೇಕವನ್ನು ಮಾಡಿ— “ಸರ್ವಶಕ್ತನಾದ ಸ್ವಾಮಿಯು ನಿಮ್ಮ ಶಿರಸ್ಸಿನಮೇಲೂ ಹೃದಯದಮೇಲೂ ಪವಿತ್ರಾತ್ಮನ ಆಶೀರ್ವಚನವನ್ನು ವರ್ಷಿಸಲಿ. ನೀವು ಕೈಗೊಂಡ ಕಾರ್ಯಗಳು ಊರ್ಜಿತಗೊಳ್ಳಲಿ. ಆ ಭಗವಂತನ ಅನುಗ್ರಹದಿಂದ ನಿಮ್ಮ ಆಳಿಕೆಗೆ ಒಳಪಟ್ಟಿರುವ ಜನರ ಸುಖಸಂಪತ್ತುಗಳು ಹೆಚ್ಚಿ, ಅವರಲ್ಲಿ ಶಾಂತಿಯು ನೆಲಸಿ, ಅವರು ಭಗವದ್ಭಕ್ತಿಯುತರಾಗಲಿ. ಚಿರಕಾಲ ನೀವು ಈ ಭೂಲೋಕದ ರಾಜ್ಯವನ್ನು ದೈವಭಕ್ತಿಯಿಂದಲೂ, ಧರ್ಮದಿಂದಲೂ ವಿವೇಕದಿಂದಲೂ ಪರಿಪಾಲಿಸಿ ಶಾಶ್ವತರಾಜ್ಯಪದವಿಗೆ ಭಾಗಿಗಳಾಗಿರಿ.”—ಎಂದು ಆಶೀರ್ವಾದರೂಪವಾದ ಸ್ತೋತ್ರಮಾಡಿದರು. ಇದಾದಮೇಲೆ ಮತರಕ್ಷಣೆ, ಗ್ರೇಟ್‌ಬ್ರಿಟನ್ ಮತ್ತೂ ಐರ್ಲೆಂಡ್ ದೇಶಗಳ ರಾಜ್ಯಾಧಿಪತ್ಯ, ಇಂಡಿಯಾ ಸಾಮ್ರಾಜ್ಯಪದವಿಗಳೆಂಬ ಮೂರು ಅಧಿಕಾರಗಳಿಗೂ, ಚಿನ್ಹಾರೂಪವಾದ ಬೇರೆ ಪೋಷಾಕನ್ನು ಪ್ರಭುಗಳು ಧರಿಸಿದರು. ಆಗ ರಾಜಾಂಗಗಳಾದ ಕತ್ತಿ, ದಂಡ ಮೊದಲಾದುವುಗಳನ್ನು ಅವರಿಗೆ ಒಪ್ಪಿಸಿದರು. ಇಷ್ಟೆಲ್ಲಾ ಆದಮೇಲೆ ಚಕ್ರವರ್ತಿಗಳಿಗೆ ಕಿರೀಟಧಾರಣೋತ್ಸವವು ನಡೆಯಿತು. ಚಕ್ರವರ್ತಿಯವರು ಸಿಂಹಾಸನದ ಮೇಲೆ ಕುಳಿತುಕೊಂಡರು. ಕೂಡಲೇ ಆ ಸಭೆಯಲ್ಲಿ ನೆರೆದಿದ್ದ ಮಹಾಮಹಿಮರೆಲ್ಲರೂ ತಮ್ಮತಮ್ಮ ಕಿರೀಟಗಳನ್ನು ಧರಿಸಿದರು. ಹೊರಗಡೆ ತಂಡೋಪತಂಡಗಳಾಗಿ ಎಳ್ಳಷ್ಟಾದರೂ ಸ್ಥಳವಿಡದೆ ಸಾಂದ್ರವಾಗಿ ನೆರೆದು ಆತುರದಿಂದಲೂ ಉತ್ಸಾಹದಿಂದಲೂ ನಿರೀಕ್ಷಿಸಿಕೊಂಡಿರುವ ಜನಕೋಟಿಗೆ ಈ ಶುಭಕಾರ್ಯವು ಸಾಂಗವಾಗಿ ನೆರವೇರಿತೆಂದು ಸೂಚಿಸುವುದಕ್ಕಾಗಿ ಮಂಗಳವಾದ್ಯಗಳು ಧ್ವನಿಮಾಡಲ್ಪಟ್ಟುವು. ಈ ಶುಭವೃತ್ತಾಂತವನ್ನು ಫಿರಂಗಿಗಳ ಶಬ್ದವು ಮತ್ತಷ್ಟುದೂರ ಹರಡಿತು. ರಾಜ್ಯದ ಎಲ್ಲಾ ಕಡೆಗಳಲ್ಲೂ ಜನರು ತಮ್ಮ ಆನಂದಾತಿಶಯವನ್ನು ತೋರ್ಪಡಿಸಿಕೊಳ್ಳಲು ಬೇರೊಂದುಪಾಯವನ್ನರಿಯದೆ ತಾವೂ ಸಹ ಫಿರಂಗಿಗಳನ್ನು ಹಾರಿಸಿದರು. ಆ ಲಂಡನ್ ಪಟ್ಟಣವೆಲ್ಲವೂ ಶಬ್ದಮಯವಾಯಿತು. ಅನಂತರ ಎಲ್ಲರೂ ದೇಶಾಚಾರವನ್ನನುಸರಿಸಿ, ಚಕ್ರವರ್ತಿಯವರಿಗೆ ಜುಹಾರಿಮಾಡಿದರು.

ಹೀಗೆ ಜಾರ್ಜರವರಿಗೆ ಕಿರೀಟಧಾರಣೆಯು ಆದಮೇಲೆ ಅವರ ಪತ್ನಿಯರಾದ ಮೇರಿ ಮಹಾರಾಜ್ಞಿಯವರಿಗೆ ಆರ್ಚಿಬಿಷಪ್ ರವರು ರತ್ನಖಚಿತವಾದ ಸ್ವರ್ಣಮಯವಾದ ಮತ್ತೊಂದು ಕಿರೀಟವನ್ನು ಒಪ್ಪಿಸಿ ಆಶೀರ್ವದಿಸಿದರು. ಮಹಾರಾಜ್ಞಿಯವರು [illegible] ಕಿರೀಟವನ್ನು ಧರಿಸಿ ಬೇರೆ ಪೋಷಾಕನ್ನು ಧರಿಸಿ [illegible] ಭೂಷಿತೆಯರಾಗಿ ರಾಜರ ಸಮೀಪಕ್ಕೆ [illegible] ಅವರ ಪಕ್ಕದಲ್ಲಿ [illegible]

ಮಹಾಶೀಲವನ್ನಲಂಕರಿಸಿದರು. ಅನಂತರ ದಂಪತಿಗಳು ಸಹಿತ ಸರ್ವರೂ ದೇವತಾರಾಧನೆಯನ್ನು ಮಾಡಿದರು.

ಈ ರೀತಿಯಲ್ಲಿ ಈ ಶುಭಕಾರ್ಯವು ಪರಿಸಮಾಪ್ತವಾದುದನ್ನು ಕೇಳಿ ನಾವೆಲ್ಲರೂ ಬಹಳ ಸಂತೋಷಪಡುತ್ತೇವೆ. ಅಲ್ಲಿನ ಅತಿಶಯವನ್ನೂ, ಅಟ್ಟಹಾಸವನ್ನೂ ಮಾತುಗಳಿಂದ ವಿವರಿಸಲು ಅಸದಳವಾಗಿರುವುದು. ಭಗವಂತನು ಈ ದಂಪತಿಗಳಿಗೆ ಆಯುರಾರೋಗ್ಯ ಐಶ್ವರ್ಯಾದಿಗಳನ್ನಿತ್ತು ಚೆನ್ನಾಗಿ ಸಲಹಲಿ ಎಂದು ನಾವೆಲ್ಲರೂ ಸರ್ವದಾ ಆತನನ್ನು ಪ್ರಾರ್ಥಿಸುತ್ತೇವೆ.

ಮೈಸೂರ್ ಸ್ಟಾರ್.

೧೯೧೧ನೇ ಇಸವಿ ಜೂನ್ ತಾ॥ ೨೬ ನೇ ಸೋಮವಾರ

ಮಠಾಧಿಪತಿಗಳೂ ಮತ್ತು ದೇಶಾಭಿವೃದ್ಧಿಯೂ.

ಹಿಂದೂ ಮತಕ್ಕೂ ಇತರ ಮತಗಳಿಗೂ ಒಂದು ಮುಖ್ಯವಾದ ವ್ಯತ್ಯಾಸವು ಕಂಡುಬರುವುದು. ಅದೇನೆಂದರೆ:- ಹಿಂದೂಮತ ರೀತ್ಯಾ ಮನುಷ್ಯನು ಮಾಡುತ್ತಿರುವ ಸಮಸ್ತ ಕರ್ಮಗಳೂ ಅಂದರೆ ಊಟಮಾಡುವುದು ಮೊದಲಾಗಿ ಸಮಸ್ತ ಕರ್ಮಗಳೂ ಶಾಸ್ತ್ರರೀತ್ಯಾ ಅನುಸರಿಸಲ್ಪಡಬೇಕು. ಜ್ಞಾನಾರ್ಜನ ವಿಧಾನದಲ್ಲಿಯೂ ಮತ್ತು ಮನುಷ್ಯನು ಯಾವ ದೇವರಲ್ಲಿ ಭಕ್ತಿಯನ್ನಿಡಬೇಕೆಂಬ ವಿಚಾರದಲ್ಲಿಯೂ ಅವನಿಗೆ ಸಂಪೂರ್ಣ ಸ್ವಾತಂತ್ರ್ಯವಿದ್ದರೂ ಕರ್ಮಾಚರಣೆಯಲ್ಲಿ ಮಾತ್ರ ಕೇವಲ ಶಾಸ್ತ್ರಬದ್ಧನಾಗಿರುವನು. ಪೂರ್ವಕಾಲದಲ್ಲಿ ಶಾಸ್ತ್ರಕಾರರಾದರೋ ಕೇವಲ ಜ್ಞಾನಿಗಳೇ ಆಗಿದ್ದರು ಮತ್ತು ಸೂಕ್ಷ್ಮ ಪ್ರಪಂಚಗಳ ಸ್ಥಿತಿಗಳನ್ನು ತಾವೇ ಸ್ವತಃ ತಿಳಿದವರಾಗಿಯೊ ಇಲ್ಲದಿದ್ದರೆ ತಿಳಿದ ಮಹಾತ್ಮರಿಂದ ಉಪದೇಶಿಸಲ್ಪಟ್ಟವರಾಗಿಯೊ ಇದ್ದರು. ಅವರು ಆಯಾ ಕಾಲದೇಶ ಧರ್ಮಗಳನ್ನನುಸರಿಸಿ ಮನುಷ್ಯನ ಶ್ರೇಯೋಭಿವೃದ್ಧಿಗೆ ಬೇಕಾದ ಸಾಧನಗಳನ್ನು ವಿಧಾಯಕ ಮಾಡಿದರು. ಈಚೆಗೆ ಅಂಧಪರಂಪರೆಯು ಬಂದು ಜನರು ಏತಕ್ಕಾಗಿ ಹೀಗೆ ಶಾಸ್ತ್ರ ಹೇಳಿದೆ ಎಂಬುದನ್ನು ಮರೆತು ಆ ಶಾಸ್ತ್ರಗಳಿಗೆ ತಮಗೆ ತೋರಿದ ರೀತಿಯಲ್ಲಿ ವೃತ್ತಿಯನ್ನು ಕಲ್ಪಿಸಿದ್ದರಿಂದ ಅನೇಕ ಉಪಶಾಸ್ತ್ರಗಳು ಹುಟ್ಟಿದುವು. ಅನುಭವವಿಲ್ಲದವರು ಹೆಚ್ಚುತ್ತಾ ಹೆಚ್ಚುತ್ತಾ ಶಾಸ್ತ್ರವು ಜ್ಞಾನಸಾಧನೆಗೂ, ಮನುಷ್ಯನ ಶ್ರೇಯೋಭಿವೃದ್ಧಿಗೂ ಸಾಧಕವಾಗುವುದಕ್ಕೆ ಬದಲಾಗಿ ಬಾಧಕವಾಗಿಯೂ, ಬಂಧನವಾಗಿಯೂ ಪರಿಣಮಿಸಿತು. ಪಾಶ್ಚಿಮಾತ್ಯರೇ ಮೊದಲಾದವರ ಮತವು ಕರ್ಮಾಚರಣೆಯಲ್ಲಿ ಮನುಷ್ಯನಿಗೆ ಬಹಳಮಟ್ಟಿಗೆ ಸ್ವಾತಂತ್ರ್ಯವನ್ನು ಕೊಟ್ಟು ನಂಬಿಕೆ ಮೊದಲಾದ ಮನೋವೃತ್ತಿಗಳಿಗೆ ಬಂಧವನ್ನು ಹೇಳುವುದು. ಈ ವಿಚಾರದಲ್ಲಿ ಯಾವುದು ಉತ್ತಮವಾದುದೆಂದು ಹೇಳುವುದು ಪ್ರಕೃತ ವಿಷಯವಲ್ಲ. ಇದರಿಂದ ನಮ್ಮ ದೇಶಕ್ಕಾಗಿರುವ ಸಾಧಕ ಬಾಧಕಗಳನ್ನು ಯೋಚಿಸಿ ನೋಡೋಣ.

ಈ ದೇಶದಲ್ಲಿ ಮತವಿಚಾರದಲ್ಲಿ ಮೇಲ್ವಿಚಾರಣೆಯನ್ನು ಮಾಡುವುದಕ್ಕಾಗಿ ಮಠಗಳು ಏರ್ಪಟ್ಟವು. ಇಲ್ಲಿನ ಅಧಿಪತಿಗಳಾದ ಸ್ವಾಮಿಗಳು ತಮ್ಮ ಶಿಷ್ಯವರ್ಗಕ್ಕೆ ಜ್ಞಾನೋಪದೇಶವನ್ನು ಮಾಡುತ್ತಲೂ ಆಯಾ ಪಂಗಡದವರಿಗೆ ತಮ್ಮ ತಮ್ಮ ಧರ್ಮಗಳನ್ನು ಬೋಧಿಸಿ, ಸ್ವಧರ್ಮ ನಿರತರಾದವರಿಗೆ ರಕ್ಷಣೆಯನ್ನೂ, ಧರ್ಮಭ್ರಷ್ಟರಿಗೆ ಪ್ರಾಯಶ್ಚಿತ್ತ ರೂಪವಾದ ಶಿಕ್ಷೆಯನ್ನೂ ಕೊಡುತ್ತಾ "ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ" ಎಂಬ ಭಗವದುದ್ದೇಶವನ್ನು ನೆರವೇರಿಸಲು ಬಂದ ಆ ಭಗವದಂಶ ಸಂಭೂತರೋ ಎಂಬಂತೆ ಸ್ವಾರ್ಥತ್ಯಾಗಮಾಡಿ ಲೋಕಾನುಗ್ರಹಾರ್ಥವಾಗಿಯೇ ಪ್ರತಿ ಕ್ಷಣದಲ್ಲಿಯೂ ಶ್ರಮಪಡುತ್ತಾ ಇಹದಲ್ಲಿ ಯಶಸ್ಸನ್ನೂ, ಜನಾನುರಾಗವನ್ನೂ ಪರದಲ್ಲಿ ಭಗವಂತನ ಅನುಗ್ರಹವನ್ನೂ ಪಡೆಯಲು ಸಾಹಸಪಡುವುದು ನ್ಯಾಯವಾಗಿಯೂ, ಧರ್ಮವಾಗಿಯೂ ಇರುವುದು. ಆದರೆ ಈಚೆಗೆ ಮಠಾಧಿಪತ್ಯಕ್ಕೆ ಬರುವ ಸ್ವಾಮಿಗಳಲ್ಲಿ ಅನೇಕರು ಶಾಸ್ತ್ರಾಭ್ಯಾಸದಲ್ಲಿ ಅಂದರೆ ಯಾವ ಯಾವ ಗ್ರಂಥದಲ್ಲಿ ಏನು ಏನು ಹೇಳಿದೆ ಎಂದು ಕಂಠಪಾಠ ಮಾಡುವುದರಲ್ಲಿ ನಿಸ್ಸೀಮರಾಗಿದ್ದರೂ ಲೋಕಾನುಭವ ಸಾಲದವರಾಗಿಯೂ ಪ್ರಕೃತ ಕಾಲದೇಶ ಸ್ಥಿತಿಗಳನ್ನರಿಯದವರಾಗಿಯೂ ಇರುವುದರಿಂದ ನಮ್ಮ ದೇಶಾಭ್ಯುದಯಕ್ಕೆ ಬಹಳ ವಿಘ್ನವನ್ನಾಚರಿಸುತ್ತಿರುವರು. ಇವರಿಗಿರುವ ಅಧಿಕಾರವು ಸರಕಾರದವರಿಗೂ ಇಲ್ಲ. ಏತಕೆಂದರೆ ಸರಕಾರದವರು ಮನುಷ್ಯನ ಕೆಲವು ವಿಧವಾದ ಕರ್ಮಾಚರಣೆಯನ್ನು ಮಾತ್ರ ನಿರೋಧಿಸಬಹುದು; ಈ ಸ್ವಾಮಿಗಳಾದರೋ ತಮ್ಮ ಶಿಷ್ಯವರ್ಗದ ಸಮಸ್ತ ಕರ್ಮಗಳನ್ನೂ ನಿರೋಧಿಸಬಹುದು. ಆದರೆ ವ್ಯತ್ಯಾಸವೇನೆಂದರೆ–ಸ್ವಾಮಿಗಳ ಅಧಿಕಾರವು ಶಿಷ್ಯಾನುಮತಿಯಿಂದ ನಿಂತಿದೆ. ಸರಕಾರದ ಅಧಿಕಾರವು ಸೇನಾಬಲಜನಿತವಾಗಿ ಅಷ್ಟೇ. (ಪ್ರಜಾಪ್ರಭುತ್ವವುಳ್ಳ ರಾಜ್ಯಗಳಲ್ಲಿ ಅಧಿಕಾರವು ಪ್ರಜಾನುಮತಿಯಿಂದ ನಿಂತಿದೆ ಎಂದು ಹೇಳುತ್ತಾರೆ.) ಇಂತಹ ಅಪರಿಮಿತಾಧಿಕಾರವನ್ನು ಸ್ವಾಮಿಗಳು ತಮ್ಮ ಶಿಷ್ಯವರ್ಗದ ಕ್ಷೇಮಕ್ಕಾಗಿಯೂ, ದೇಶ ಹಿತಕ್ಕಾಗಿಯೂ ವಿನಿಯೋಗಿಸದಿದ್ದರೆ ಶಿಷ್ಯರೂ, ದೇಶವೂ ಕ್ಷೀಣಗತಿಗೆ ಬಂದು, ತಾವೂ ಸಹಾ ಕ್ಷೀಣದೆಸೆಗೆ ಗುರಿಯಾಗುವರು. ಆಗಲೂ ಅವರು ಎಚ್ಚರಗೊಳ್ಳದಿದ್ದರೆ ಶಿಷ್ಯರು ಇವರ ನಿಷ್ಪ್ರಯೋಜನಾಸ್ಥಿತಿಯನ್ನು ಕಂಡು ಪಶ್ಚಾತ್ತಾಪಪಟ್ಟು ಬೇರೇ ಏರ್ಪಾಡು ಮಾಡಿಕೊಳ್ಳುವರು. ಈ ಮಾತಿಗೆ ಸಂದೇಹವಿಲ್ಲ. ಹೀಗೆ ಶಿಷ್ಯಾನುರಾಗವು ತಪ್ಪಿದರೆ ಸ್ವಾಮಿಗಳಿಗೆ ಅಧಿಕಾರವೇ ಇಲ್ಲದಂತಾಗುವುದು. ಈ ರೀತಿಯಲ್ಲಿ ನಮ್ಮ ಸ್ವಾಮಿಗಳೂ, ನಮ್ಮ ಮಠ, ನಮ್ಮ ಮತ ಇವೆಲ್ಲ ಹಾಳಾದಿತಲ್ಲಾ ಎಂಬ ಸ್ವಮತಾಭಿಮಾನಪ್ರೇರಿತ ಶಂಕಾತುರರಾಗಿ ಈ ವಿಷಯವನ್ನು ಇಲ್ಲಿ ಬರೆದಿರುವೆವು. ನಮಗೆ ಯಾವ ಸ್ವಾಮಿಗಳಮೇಲೂ ದ್ವೇಷಾಸೂಯೆಗಳಿಲ್ಲ. ಈಗ ನಾವು ಹೇಳಿದ ಅಂಶಗಳು ನಿಜವೇ, ಅಲ್ಲವೇ ಎಂಬುದನ್ನು ಕುರಿತು ಆಲೋಚಿಸೋಣ.

ಈಗ ನಮ್ಮ ದೇಶೀಯರು ಇಂಗ್ಲೆಂಡು ಮೊದಲಾದ ಪಾಶ್ಚಾತ್ಯದೇಶಗಳಿಗೆ ಹೋಗಿ ವಿದ್ಯಾಭ್ಯಾಸಂಗಮಾಡಿ ಸಂಪತ್ಪ್ರದಗಳಾದ ಕುಶಲವಿದ್ಯೆಗಳನ್ನು ಈ ದೇಶದಲ್ಲಿ ಅಭಿವೃದ್ಧಿಸ್ಥಿತಿಗೆ ತರುವುದು ಅತ್ಯಂತಾವಶ್ಯಕವೆಂದು ಲೋಕವ್ಯವಹಾರವನ್ನರಿತ ವಿದ್ವಾಂಸರೆಲ್ಲರೂ ತಿಳಿದಿರುತ್ತಾರೆ. ಆದರೆ ಇವರಲ್ಲಿ ಅನೇಕರು ಪೂರ್ವಾಚಾರಗಳನ್ನು ಬಿಡಲು ಮನಸ್ಸಿಲ್ಲದೆ ನಮ್ಮ ಶಾಸ್ತ್ರದಲ್ಲಿ ಏನು ಹೇಳಿದೆ ಎಂದು ಶಾಸ್ತ್ರಗಳನ್ನು ಪರಿಶೋಧಿಸಿದ್ದಾರೆ. ಕೆಲವರು ಇದು ಶಾಸ್ತ್ರವಿರುದ್ಧವಲ್ಲವೆಂತಲೂ, ಮತ್ತೆ ಕೆಲವರು ಇದು ಉಭಯಪಕ್ಷವಾಗಿದೆಯೆಂತಲೂ ಹೇಳಿರುವರು. ಹೀಗಿರುವುದರಿಂದ ಆಯಾ ಪಂಗಡದವರು ತಮ್ಮತಮ್ಮ ಸ್ವಾಮಿಗಳನ್ನು ಕುರಿತು– ಮಹಾಸ್ವಾಮಿಯವರೆ! ನಮ್ಮ ದೇಶದ ಬಡಸ್ಥಿತಿಯು ಬಹಳ ಶೋಚನೀಯವಾಗಿದೆ. ನಾವು ಪಾಶ್ಚಾತ್ಯದೇಶಗಳಿಗೆ ಹೋಗಿಬರಲು ತಾವು ಅಪ್ಪಣೆಯನ್ನು ಕೊಡಿ. ನಾವು ಐಶ್ವರ್ಯವಂತರಾಗಿ ನಿಮ್ಮ ಧರ್ಮಕಾರ್ಯಗಳನ್ನೂ ವೃದ್ಧಿಗೊಳಿಸುತ್ತೇವೆ. ಶಾಸ್ತ್ರದಲ್ಲಿ ಸಂದಿಗ್ಧವಾಗಿದೆ. ತಮ್ಮ ಮುಖದಿಂದ ಬಂದರೆ ನಮಗೆ ಸಾಕು– ಎಂದು ಕೇಳಿಕೊಂಡಿದ್ದಾರೆ. ಆದರೆ ಪ್ರತಿಸಾರಿಯೂ "ಕೂಡದು" ಎಂದು ಧಿಕ್ಕರಿಸುವರೇ ಹೊರತು ಇವರು ಇದನ್ನು ಇಷ್ಟಾಗಿ ಏತಕ್ಕೆ ಕೇಳುತ್ತಾರೆಂದು ಪರ್ಯಾಲೋಚಿಸಿರುವಂತೆಯೂ ಕಾಣುವುದಿಲ್ಲ. ಹಾಗೆ ಆಲೋಚಿಸಿ ಅದು ತಪ್ಪೆಂದು ಅವರಿಗೆ ಕಂಡುಬಂದರೆ, ಅದು ಹೇಗೆ ತಪ್ಪೆಂಬುದನ್ನು ಅವರು ಸಕಾರಣವಾಗಿ ಅಲ್ಪಬುದ್ಧಿಗಳಾದ ನಮಗೆ ತಿಳಿಯಪಡಿಸಿದರೆ, ಪುನಃ ಆ ಪ್ರಸ್ತಾಪವನ್ನೇ ಎತ್ತುವುದಿಲ್ಲ. ಬಹುಶಃ ಅವರು ಹೀಗೆ ಯೋಚಿಸಬಹುದು: ಆ ದೇಶಗಳಿಗೆ ಹೋಗಿಬಂದರೆ ಕರ್ಮಭ್ರಷ್ಟರಾಗುತ್ತಾರೆ; ಮದ್ಯಮಾಂಸಾದಿಗಳನ್ನು ಸೇವಿಸುತ್ತಾರೆ; ಸಂಪರ್ಕದೋಷವು ಬರುತ್ತದೆ ಎಂದು ಭಾವಿಸಬಹುದು. ಆದರೆ ಹೀಗೆಲ್ಲಾ ಆಗಬೇಕಾದ ಅವಶ್ಯಕವೇನೂ ಇಲ್ಲ. ದೇಶಾಂತರಗಳಿಗೆ ಹೋಗಬೇಕೆಂದಿರುವವರು ಈ ರೀತಿಯಲ್ಲಿರಬೇಕೆಂದು ಸ್ವಾಮಿಗಳು ವಿಧಾಯಕ ಮಾಡಿದರೆ ವಿದ್ಯಾರ್ಥಿಗಳು ಅದರಂತೆಯೇ ನಡೆಕೊಳ್ಳುವರು. ಅವರು ಹಾಗೆ ನಡೆದುಕೊಳ್ಳುವರೋ ಇಲ್ಲವೋ ಎಂಬ ಸಂಶಯವಿದ್ದರೆ ಅದಕ್ಕಾಗಿ ತಕ್ಕ ಏರ್ಪಾಟನ್ನು ಮಾಡಬಹುದು.

ಈ ಮಾರ್ಗಗಳನ್ನೆಲ್ಲಾ ಬಿಟ್ಟು ದೇಶಾಂತರಗಳಿಗೆ ಹೋಗಿ ಬಂದವರು ತಮ್ಮನ್ನೆಲ್ಲಿ ತಿರಸ್ಕರಿಸುವರೋ, ಹಾಗೆ ಎಲ್ಲರೂ ತಿರಸ್ಕರಿಸಿದರೆ ನಮ್ಮ ಅಧಿಕಾರಕ್ಕೆಲ್ಲಿ ಕುಂದು ಬರುವುದೋ ಎಂಬ ಶಂಕೆಯಿಂದಲೋ ಮತ್ಯಾವ ಕಾರಣದಿಂದಲೋ ಈ ಪ್ರಶ್ನೆಗೆ ಸದುತ್ತರವನ್ನು ಕೊಡದೆ ಕಾಲಹರಣ ಮಾಡುತ್ತಿರುವರು. ಇದೂ ಹಾಗಿರಲಿ, ಹಾಗೆ ದೇಶಾಂತರಕ್ಕೆ ಹೋಗಿ ಬರುವವರನ್ನು ವ್ಯವಹಾರದಲ್ಲಿ ಸೇರಿಸಿಕೊಳ್ಳುವುದಿಲ್ಲವೆಂದು ಭಾವಿಸೋಣ. ಈಗ ಇರುವ ಸ್ಥಿತಿಯು ಎಲ್ಲಾ ವಿಷಯದಲ್ಲೂ ಸಮರ್ಪಕವಾಗಿಯೂ, ನಿರ್ದುಷ್ಟವಾಗಿಯೂ ಇದೆಯೋ ಎಂದರೆ ಅದು ಮೊದಲೇ ಇಲ್ಲ. ಮದ್ಯಮಾಂಸಾದಿಗಳನ್ನು ಸ್ವೀಕರಿಸುವವರು ಅನೇಕರು ಇದ್ದೇ ಇರುವರು. ಮಠದ ಕೆಲವು ಅಧಿಕಾರಿಗಳು ಇದನ್ನು ತಿಳಿದಿದ್ದರೂ ತಿಳಿಯದವರಂತೆ ಅವರಲ್ಲಿ ವಿಶ್ವಾಸಕ್ಕೆ ಪಾತ್ರರಾಗಬೇಕೆಂಬ ಉದ್ದೇಶದಿಂದ ತಪ್ಪನ್ನೆಲ್ಲಾ ಗಣಿಸದಿರುವರು. ಮತ್ತು ಕೆಲವು ವೇಳೆಗಳಲ್ಲಿ ಸರಕಾರಿ ಕೋರ್ಟು ಮೊದಲಾದ ಸ್ಥಳಗಳಲ್ಲಿ ರುಜುವಾತಾದ ವಿಷಯಗಳನ್ನು ಸಹ ಉದಾಸೀನಭಾವದಿಂದ ಕಂಡಿರುವರು. ಇದನ್ನೆಲ್ಲಾ ಹೀಗೆ ಬಿಟ್ಟಿರುವುದು ಅವರ ಅಭಿಪ್ರಾಯದಂತೆ ಶಿಷ್ಯವರ್ಗಕ್ಕೆ ಅಹಿತಕಾರಿಯಲ್ಲವೆ? ಇವೆಲ್ಲಾ ಎಂದಿಗೂ ದುಷ್ಕೃತ್ಯಗಳೇ, ಅದೂ ಹಾಗಿರಲಿ. ಸರಕಾರಕ್ಕೆ ವಿರೋಧವಾಗಿ ತಪ್ಪುಗಳನ್ನು ಮಾಡಿದ ಕಾರಾಗೃಹವಾಸಿಗಳಿಗೆ ಪ್ರಾಯಶ್ಚಿತ್ತಾದಿಗಳನ್ನು ಮಾಡಿ ಪುನಃ ವ್ಯವಹಾರದಲ್ಲಿ ಸೇರಿಸಿಕೊಳ್ಳುತ್ತಾರಲ್ಲಾ, ಅದಕ್ಕಿಂತಲೂ ಇದು ನೀಚವಾದುದೆ? ದೇಶ ಹಿತಕ್ಕಾಗಿ ಸ್ವಜನವನ್ನೂ, ಸ್ವರಾಷ್ಟ್ರವನ್ನೂ ಬಿಟ್ಟು ಪರದೇಶದಲ್ಲಿ ಕಷ್ಟಪಟ್ಟು ವಿದ್ಯಾಭ್ಯಾಸಂಗಮಾಡಿಕೊಂಡು ಬಂದರೆ, ಅದು ದೈವದೃಷ್ಟಿಯಲ್ಲಿಯೂ, ಮನುಷ್ಯದೃಷ್ಟಿಯಲ್ಲಿಯೂ ಹೇಯವಾದ ನೀಚವಾದ ಅಪರಾಧವನ್ನು ಮಾಡಿ ಕಾರಾಗೃಹವಾಸಕ್ಕೆ ಬೀಳುವುದಕ್ಕಿಂತಲೂ ನೀಚವಾಗಿದೆಯಲ್ಲಾ! ಕಾಲ ವೈಪರೀತ್ಯವನ್ನು ಏನೆಂದು ಹೇಳೋಣ? ಧರ್ಮವೇ ಅಧರ್ಮವಾಯಿತಲ್ಲಾ!

ಹೀಗಿರುವುದರಿಂದ ನಮ್ಮ ದೇಶಹಿತವನ್ನು ಮುಖ್ಯಗುರಿಯಾಗುಳ್ಳ ನಮ್ಮ ದೇಶಭಾಂಧವರೆಲ್ಲರೂ ಒಟ್ಟುಗೆಸೇರಿ ಮಠಾಧಿಪತಿಗಳಿಗೆ ಈಗಿನ ಸ್ಥಿತಿಗತಿಗಳನ್ನು ವಿಜ್ಞಾಪಿಸಿ ಈ ವಿಷಯದಲ್ಲೂ ಮತ್ತೂ ಇತರ ವಿಷಯಗಳಲ್ಲೂ ದೇಶಹಿತಕರವಾದ ಏರ್ಪಾಡುಗಳನ್ನೂ, ಮಾಡಿಸಿದರೆ ನಮ್ಮ ಮಠಗಳು ಉಳಿಯುತ್ತವೆ, ನಮ್ಮ ಸ್ವಾಮಿಗಳೂ ಪ್ರಖ್ಯಾತರಾಗುತ್ತಾರೆ. ಇಲ್ಲವಾದರೆ ಕಾಲಚಕ್ರವೇನೋ ನಿಲ್ಲುವುದಿಲ್ಲ, ಬೇಕಾದ ಬದಲಾವಣೆಗಳು ಆಗೇ ಆಗುವುವು. ಈಗಿನ ಸಮಯವನ್ನು ವಿನಿಯೋಗಿಸಿಕೊಳ್ಳದವರು ಹಿಂದೆ ಬೀಳುವರು.

ಘೋರವಾದ ಕೊಲೆಪಾತಕವು.

ಕಳೆದ ೧೭ ನೇ ತಾ॥ ಶನಿವಾರದ ದಿವಸ ಮದ್ರಾಸು ಆಧಿಪತ್ಯಕ್ಕೆ ಸೇರಿದ ತಿನ್ನವೆಲ್ಲಿ ಡಿ॥ ಕಲೆಕ್ಟರೂ ಮತ್ತು ಡಿ॥ ಮ್ಯಾಜಿಸ್ಟ್ರೇಟರೂ ಆಗಿದ್ದ ಮಿ॥ ರಾಬರ್ಟ್ ವಿಲಿಯಂ ದಿಯಸ್ ಕೋರ್ಟ್ ಆಷೆಯವರನ್ನು ಮನಿಯಾಚಿ ರೈಲ್ವೆ ಸ್ಟೇಷನ್ನಲ್ಲಿ ಯಾವನೋ ಒಬ್ಬ ದುರಾತ್ಮನಾದ ಸುಮಾರು ೨೫ ವರುಷ ವಯಸ್ಸಿನ ಒಬ್ಬ ಸ್ಮಾರ್ತ ಬ್ರಾಹ್ಮಣನು ಪಿಸ್ತೂಲಿನಿಂದ ಹೊಡೆದು ಕೊಂದನು. ಮಿ॥ ಆಷೆಯವರು ಪತ್ನಿಸಮೇತ ಕೊಡೆಕನಾಲಿಗೆ ಹೋಗುತ್ತಿದ್ದರು. ಇವರು ಫಸ್ಟ್‌ಕ್ಲಾಸು ಗಾಡಿಯಲ್ಲಿ ಕುಳಿತಿದ್ದರು. ಆಗ ಒಳ್ಳೇ ಉಡುಪನ್ನು ಧರಿಸಿಕೊಂಡಿದ್ದ ಒಬ್ಬ ಹಿಂದುವು ಗಾಡಿಯ ಕಿಟಕಿಯ ಹತ್ತಿರಕ್ಕೆ ಬಂದು ತನ್ನ ಕೈಯಲ್ಲಿದ್ದ ಪಿಸ್ತೂಲಿನಿಂದ ಎದೆಗೆ ಗುರಿಯಿಟ್ಟು ಹೊಡೆದನು. ಆ ಪೆಟ್ಟನ್ನು ತಪ್ಪಿಸಿಕೊಳ್ಳಲು ಮಿ॥ ಆಷೆಯವರು ಥಟ್ಟನೆದ್ದು ತನ್ನ ಟೋಪಿಯನ್ನು ಅಡ್ಡಲಾಗಿ ಹಿಡಿದರು. ಆದರೂ ಬಲಗಡೆ ಎದೆಗೆ ಏಟು ಬಿದ್ದಿತು. ಅಷ್ಟರಲ್ಲೇ ಸಮೀಪದಲ್ಲಿದ್ದ ಒಬ್ಬ ಜವಾನನು ಆ ಘಾತುಕನ ಕೈಯನ್ನು ಹಿಡಿದುಕೊಂಡನು. ಆಗ ಆ ಪಾಪಿಯು ತನ್ನ ಕೈ ಪಿಸ್ತೂಲನ್ನು ಆ ಜವಾನನ ಕಡೆಗೆ ತಿರುಗಿಸಿ ತನ್ನನ್ನು ಬಿಡದಿದ್ದರೆ ಹೊಡೆಯುವುದಾಗಿ ಹೆದರಿಸಿದನು. ಅಷ್ಟಕ್ಕೆ ಹೆದರಿ ಜವಾನನು ಕೈ ಬಿಟ್ಟನು. ಕೊಲೆಪಾತಕನು ಕೂಡಲೆ ಓಡಿಹೋಗಿ ರೈಲ್ವೆ ಕಕ್ಕಸ್ಸಿನಲ್ಲಿ ಅವಿತುಕೊಂಡನು. ಪೋಲೀಸಿನವರು ಜಮಾಯಿಸಿಕೊಂಡು ಒಳಗೆ ನುಗ್ಗಿ ನೋಡುವಲ್ಲಿ ಅವನ ಶವವು ಸಿಕ್ಕಿತು. ಡಾಕ್ಟರು ಅಜಮಾಯಿಷಿ ಮಾಡುವಲ್ಲಿ ಅವನು ಬಾಯಿಗೆ ಗುಂಡು ಹೊಡೆದುಕೊಂಡು ಸತ್ತನೆಂದು ಗೊತ್ತಾಯಿತು. ಆ ದಿವಸ ಗಾಳಿಯು ವಿಶೇಷವಾಗಿದ್ದುದರಿಂದ ಹೊರಗಿನವರಿಗೆ ಗುಂಡಿನ ಶಬ್ದವು ಕೇಳಿಸಲಿಲ್ಲ. ಅವನ ಜೇಬಿನಲ್ಲಿ ಒಂದು ಎರಡನೇ ಕ್ಲಾಸು ರೈಲ್ವೆ ಟಿಕೀಟು ಮತ್ತು ಒಂದು ಕಾಗದವು ಸಿಕ್ಕಿದವು. ಅವನು ಇಂತವನೆಂದು ಪತ್ತೆ ಮಾಡುವ ಉದ್ದೇಶದಿಂದ ಆ ಶವವನ್ನು ದಹನಮಾಡದೆ ಆ ದಿನ ಮಧ್ಯಾಹ್ನ ಮತ್ತು ಮಾರನೇದಿವಸ ಮಧ್ಯಾಹ್ನದ ವರೆಗೂ ಆಸ್ಪತ್ರೆಯಲ್ಲಿಟ್ಟಿದ್ದರು. ಯಾರೂ ಅವನನ್ನು ಗುರ್ತಿಸಲಾರದೇ ಹೋದರು.

ಅತ್ತ ಗಾಯಪಟ್ಟ ಮಿ॥ ಆಷೆಯವರನ್ನು ಚಿಕಿತ್ಸೆಗಾಗಿ ರೈಲಿನಲ್ಲಿ ತಿನ್ನವೆಲ್ಲಿಗೆ ಕರೆದುಕೊಂಡು ಹೋಗುತ್ತಿರುವಾಗ್ಗೆ ದಾರಿಯಲ್ಲೇ ಅವರು ಮೃತಪಟ್ಟರು. ಮಾರನೆಯ ದಿನ ಅವರಿಗೆ ಉತ್ತರಕ್ರಿಯಾದಿಗಳು ತಕ್ಕ ಮರ್ಯಾದೆಯೊಡನೆ ನಡೆಸಲ್ಪಟ್ಟುವು. ಇವರ ಪತ್ನಿಯವರೂ ಮತ್ತು ನಾಲಕ್ಕು ಮಂದಿ ಮಕ್ಕಳೂ, ಕೆಲವು ದಿನಗಳ ಹಿಂದೆ ಇಂಗ್ಲಾಂಡಿನಿಂದ ಬಂದಿದ್ದರು. ಮಿ॥ ಆಷೆಯವರು ಬಹಳ ನೀತಿವಂತರು ಮತ್ತೂ ಒಳ್ಳೇ ಕಾರ್ಯನಿರ್ವಾಹಕರು. ಇವರು ಕೆಲಸಮಾಡಿದ ಸ್ಥಳಗಳಲ್ಲೆಲ್ಲಾ ಪ್ರಜಾನುರಾಗಕ್ಕೆ ಪಾತ್ರರಾಗಿದ್ದರು. ಇಂತಹ ಸತ್ಪುರುಷರಿಗೆ ಅಕಾಲದ ದುರ್ಮರಣವು ಪ್ರಾಪ್ತವಾದುದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ. ತಿನ್ನವೆಲ್ಲಿಯ ಪ್ರಜೆಗಳೆಲ್ಲರೂ ಸೇರಿ ಅವರ ಕುಟುಂಬಕ್ಕೆ ಪ್ರಾಪ್ತವಾದ ಘೋರದುಃಖವನ್ನು ಕುರಿತು ತಮ್ಮೆಲ್ಲರಿಗೂ ಉಂಟಾದ ವಿಷಾದವನ್ನು ಸೂಚಿಸಿ ಮಿಸೆಸ್. ಆಷೆಯವರಿಗೆ ಪತ್ರಗಳನ್ನು ಕಳುಹಿಸಿದರು. ಮಿಸೆಸ್. ಆಷೆಯವರಿಗೆ ಅಕಸ್ಮಾತ್ತಾಗಿ ಪ್ರಾಪ್ತವಾದ ಈ ದುಸ್ಸಹವಾದ ಶೋಕವನ್ನು ಶಮನಮಾಡುವುದಕ್ಕಾಗಿ ಮದ್ರಾಸು ಗೌರ್ನರು ವೈಸ್ರಾಯರವರು ಮುಂತಾಗಿ ಅನೇಕಮಂದಿ ತಂತಿಗಳನ್ನು ಕೊಟ್ಟರು. ದಕ್ಷಿಣ ಇಂಡಿಯಾದೇಶೀಯರು ರಾಜಭೀತರೂ ಮತ್ತು ಪಾಪಭೀತರೂ ಎಂದು ಬಂದಿದ್ದ ಬಿರುದಿಗೆ ಇದೊಂದು ಕುಂದು ಉಂಟಾದುದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ.

ಈಚೆಗೆ ಪೋಲೀಸಿನವರ ತರದೂದಿನಿಂದ ಪತ್ತೆಯಾಗಿರುವ ವಿಷಯಗಳಾವವೆಂದರೆ:—ಆ ಕೊಲೆಗಾರನ ಸಂಗಡ ಸುಮಾರು ೨೫ ವರ್ಷದ ಒಬ್ಬ ಬ್ರಾಹ್ಮಣ ಯುವಕನಿದ್ದನೆಂತಲೂ, ಅವನು ಒಂದು ಮಳೆಯಾಳಿ ಮುಂಡನ್ನು ಸುತ್ತಿಕೊಂಡು ಮೇಲೆ ಒಂದು ಕಲಾಪತ್ತು ವಲ್ಲಿಯನ್ನು ಹೊದೆದುಕೊಂಡಿದ್ದನೆಂತಲೂ, ಖೂನಿಯಾದಮೇಲೆ ಗಲಾಟೆಯಲ್ಲಿ ಎಲ್ಲಿಯೋ ತಪ್ಪಿಸಿಕೊಂಡು ಹೊರಟು ಹೋದನೆಂತಲೂ ತಿಳಿದುಬಂದಿದೆ. ಸರಕಾರದವರು ಇವನನ್ನು ಹಿಡಿದುಕೊಟ್ಟವರಿಗೆ ೧೦೦೦ ರೂಪಾಯಿ ಬಹುಮಾನವನ್ನು ಕೊಡುವುದಾಗಿ ಪ್ರಸಿದ್ಧಪಡಿಸಿರುತ್ತಾರೆ. ಕೊಲೆಗಾರನು ತಿರುವಾಂಕೂರು ಸಂಸ್ಥಾನಕ್ಕೆ ಸೇರಿದ ಶೆಂಕೋಟೆಯಲ್ಲಿದ್ದ ರಘುಪತಿ ಐಯ್ಯರ್ ಎಂಬಾತನ ಮಗನೆಂತಲೂ, ಅವನ ಹೆಸರು ಆರ್. ವಾಂಚಿ ಐಯ್ಯರ್ ಎಂತಲೂ, ಅವನಿಗೆ ತಿರುವಾಂಕೂರು ಫಾರೆಸ್ಟು ಇಲಾಖೆಯಲ್ಲಿ ಒಂದು ಸಣ್ಣ ನೌಕರಿ ಇದ್ದುದಾಗಿಯೂ, ಅವನಿಗೆ ಅಲ್ಲಿ ಆ ಕೆಲಸದಿಂದ ದೂರೀಕರಿಸಿದ್ದರೆಂತಲೂ ತಿಳಿದು ಬಂದಿದೆ. ಪೋಲೀಸು ಚಹರೆಪಟ್ಟಿಗೆ ಅನುಸಾರವಾಗಿರುವ ಒಬ್ಬ ಮುತ್ತುಸಾಮಿಯೆಂಬ ಬ್ರಾಹ್ಮಣ ಯುವಕನನ್ನು ಕೊಲೆಗಾರನ ಸ್ನೇಹಿತನಾಗಿರಬಹುದೆಂದು ಹಿಡಿದಿರುತ್ತಾರೆ. ಪೋಲೀಸು ಶೋಧನೆಯಲ್ಲಿ ಸಿಕ್ಕಿದ ಕಾಗದಪತ್ರಗಳ ಆಧಾರದ ಮೇಲೆ ಅಲಿಪೆಯಲ್ಲಿದ್ದ ಹರಿಹರ ಐಯರ್ ಮತ್ತು ಹರಿಹರಶಾಸ್ತ್ರಿ ಎಂಬ ಇಬ್ಬರು ಭಾರೀ ಜವಳೀವ್ಯಾಪಾರಿಗಳನ್ನು ಹಿಡಿದು ಅವರ ಅಂಗಡಿ ಮನೆಗಳನ್ನು ಶೋಧನೆಮಾಡುವಲ್ಲಿ ತಪ್ಪನ್ನು ರುಜುವಾತು ಮಾಡುವ ಅನೇಕ ಕಾಗದಪತ್ರಗಳು ಸಿಕ್ಕಿವೆ. ಇವರನ್ನು ಇನ್ನೂ ವಿಚಾರಣೆಮಾಡಬೇಕೆಂದು ಪೋಲೀಸಿನವರು ಮ್ಯಾಜಿಸ್ಟ್ರೇಟರವರಿಂದ ಅಪ್ಪಣೆಯನ್ನು ಪಡೆದು ಆ ಇಬ್ಬರನ್ನೂ ಕೈದಿನಲ್ಲಿಟ್ಟಿರುತ್ತಾರೆ. ಇನ್ನೂ ಮಧುರೆಯಲ್ಲಿ ಒಬ್ಬನನ್ನೂ ತುತುಕುಡಿಯಲ್ಲಿ ಒಬ್ಬನನ್ನೂ ಪೋಲೀಸಿನವರು ಹಿಡಿದಿರುವರು. ಇವರ ಬಳಿಯಲಲ್ಲಾ ತಪ್ಪನ್ನು ಆಪಾದನೆಮಾಡುವಂತಹ ಕಾಗದಪತ್ರಗಳು ಸಿಕ್ಕಿರುವುವು.

ಇದನ್ನೆಲ್ಲಾ ನೋಡಿದರೆ ಕೊಲೆಗಾರನು ತನಗಿದ್ದ ಹೊಟ್ಟೆಕಿಚ್ಚನ್ನು ತೀರಿಸಿಕೊಳ್ಳುವುದಕ್ಕಾಗಿ ಈ ಕೃತ್ಯವನ್ನು ಮಾಡಲಿಲ್ಲವೆಂತಲೂ ಅನೇಕರು ಇದಕ್ಕೆ ಸಹಾಯಕರಾಗಿ ಮೊದಲಿನಿಂದ ಸಮಯನಿರೀಕ್ಷಿಸಿಕೊಂಡಿದ್ದು ಈ ಕೃತ್ಯವನ್ನು ಜರುಗಿಸಿರಬೇಕೆಂತಲೂ ಕಾಣುತ್ತದೆ. ಇದು ಮುಂದೆ ಹೇಗೆ ಪರಿಣಮಿಸುವುದೊ ನೋಡತಕ್ಕದಾಗಿದೆ.

---

3 Office of Senior Surgeon,
Mysore Govt.
Dated, Bangalore, 10 June 1911.

1. Applications from candidates (Male and Female) for qualifying as Hospital Assistants in the Royapuram Medical School, Madras, will be received by the undersigned, till 22nd June 1911, the latest.

2. Applicants must be Matriculates and should state their age and nationality and if they know Canarese, also send along with their applications, copies of testimonials and a certificate from any graduate in Medicine as to physical fitness and age.

3. Selected candidates will have to execute covenants on a five rupee Mysore Government stamp paper to serve the State for 7 (seven) years, after qualifying as Hospital Assistants.

4. A scholarship of Rs 9/— per mensem for the first year and Rs 10/— for the succeeding three years will be given with supply of books, school fees, etc.

S. V. RAMASWAMY IYENGAR, M. C., M. D.
Personal Assistant,
For Offg., Senior Surgeon, Mysore Govt.

ಒಳದೇಶದವೃತ್ತಾಂತ.

ನಮ್ಮ ದಿವಾನರವರು ೨೬ ನೇ ತಾ॥ ಸೋಮವಾರದ ದಿವಸ ಬೆಂಗಳೂರಿಗೆ ವಾಪಸುಹೋಗುವುದಾಗಿ ಕೇಳುತ್ತೇವೆ.

ಕಳೆದ ಶನಿವಾರ ಮಧ್ಯಾಹ್ನ ಡಾ॥ ಪಿ. ಎಸ್. ಅಚ್ಯುತರಾಯರು ಸೀನಿಯರ್ ಸರ್ಜನ್ ಕೆಲಸದ ಛಾರ್ಜನ್ನು ವಹಿಸಿದರು.

ಈ ದೇಶದಲ್ಲಿ ರೆವಿನ್ಯೂ ಕಮಿಷನರ್ ಎಂಬ ಒಬ್ಬ ಹೊಸ ಅಧಿಕಾರಿಯು ಇರಬೇಕಾದುದು ಅವಶ್ಯಕವೇ ಎಂಬ ವಿಷಯವು ಇನ್ನೂ ಚರ್ಚೆಯಲ್ಲಿದೆ.

ಮೊನ್ನೆ ೨೨ ನೇ ತಾ॥ ಗುರುವಾರದ ದಿವಸ ಚಕ್ರವರ್ತಿಯವರ ಕಿರೀಟಧಾರಣ ಮಹೋತ್ಸವಕ್ಕಾಗಿ ಎಲ್ಲಾ ಆಫೀಸುಗಳೂ, ಸ್ಕೂಲುಗಳೂ ಮುಚ್ಚಲ್ಪಟ್ಟಿದ್ದುವು.

ಮೊನ್ನೆ ೨೩ ನೇ ತಾ॥ ದಿನ ಬೆಂಗಳೂರಿಗೆ ಸೇರಿದ ಅಲಸೂರುಪೇಟೆ ಪೋಲೋ ಆಟದ ಮೈದಾನದಲ್ಲಿ ಆ ಆಟವು ನಡೆಯುತ್ತಿದ್ದಾಗ ಜಮಾದಾರ್ ನೂರ್‌ಖಾನರವರು ಅಕಸ್ಮಾತ್ತಾಗಿ ಕುದುರೆಯಿಂದ ಬಿದ್ದು ಪ್ರಾಣಬಿಟ್ಟರೆಂದು ತಿಳಿಸಲು ವಿಷಾದಿಸುತ್ತೇವೆ.

ಬೌರಿಂಗ್‌ಪೇಟೆ ತಾ॥ ಶಿರಸ್ತೆ ಕೆಲಸದಲ್ಲಿದ್ದ ಮಿ॥ ಕೆ. ಕನ್ನೈಯ್ಯಶಾಸ್ತ್ರಿಗಳನ್ನು ಶ್ರೀ ಶೃಂಗಗಿರಿ ಜಹಗೀರಿಯಲ್ಲಿ ಮೂರು ವರುಷಗಳಕಾಲ ಡೆಪ್ಯುಟಿ ಅಮಲ್ದಾರರಾಗಿಯೂ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ ಇರಬೇಕೆಂದು ನೇಮಕಮಾಡಿರುತ್ತಾರೆ.

ಮಿ॥ ಎಸ್. ನಾರಾಯಣರಾಯರ ಸ್ಥಳಕ್ಕೆ ಬದಲಾಗಿ ಮಿ॥ ಸಿ. ಎಸ್. ದೊರಸಾಮಯ್ಯಂಗಾರ್ ಬಿ. ಎ., ಬಿ. ಎಲ್, ರವರನ್ನು ಬೆಂಗಳೂರಿನಲ್ಲಿ ಗೌರ್ನಮೆಂಟ್ ಅಡ್ವೋಕೇಟರನ್ನಾಗಿ ನೇಮಿಸಿರುತ್ತಾರೆ. ಇವರು ಮೂರು ವರುಷಕಾಲ ಈ ಕೆಲಸವನ್ನು ನೋಡತಕ್ಕದು.

ರಾಜಧಾನಿಯಲ್ಲಿ ಕಳೆದವಾರ ಮಳೆ ಮೋಡಗಳು ವಿಶೇಷವಾಗಿರಲಿಲ್ಲ. ಸೂರ್ಯರಶ್ಮಿಯು ಚೆನ್ನಾಗಿ ಬೀಳುತ್ತಿದ್ದಿತು. ಆದರೂ ಅಲ್ಲಲ್ಲಿ ಒಂದೆರಡು ಪ್ಲೇಗು ಖಾಯಿಲೆಗಳು ಪ್ರಾರಂಭವಾಗಿರುವುದೆಂದು ಕೇಳಿ, ಅದು ಎಲ್ಲಿ ಹರಡಿಕೊಳ್ಳುವುದೋ ಎಂದು ಜನರು ದಿಗಿಲುಗೊಂಡಿರುವರು.

ಕಾರ್ಕಾರ್ ಹಳ್ಳಿ ತಾಲ್ಲೋಕಿಗೆ ಸೇರಿದ ನಾಗರಸನಕೋಟೆಯಲ್ಲಿ ಒಂದು ಬಾಲ್ಯವಿವಾಹವು ಜರುಗಿತು. ಇದನ್ನು ಸರಕಾರದವರು ತನಿಖೆಮಾಡಿ ಶೇಷಮ್ಮನೆಂಬ ೬ ವರ್ಷದ ಕನ್ಯೆಯ ತಂದೆ ನಂಜುಂಡಯ್ಯನಿಗೂ, ವರನತಂದೆ ಸೂರ್ಯನಾರಾಯಣಪ್ಪನಿಗೂ, ಪುರೋಹಿತ ಮಾಡಿಸಿದ ಸುಬ್ರಾಯಪ್ಪನಿಗೂ ಅರ್ಥದಂಡವನ್ನು ವಿಧಿಸಿದರು.

ಈಗ ಎರಡುವರುಷಗಳ ಹಿಂದೆ ರಾಜಧಾನಿಗೆ ಬಂದು ಭಗವದ್ಗೀತಾ ಉಪನಿಷತ್ತು ಮೊದಲಾದ ವಿಷಯವನ್ನು ಕುರಿತು ಉಪನ್ಯಾಸ ಮಾಡಿ ಹೋಗಿದ್ದ ಬ್ರಹ್ಮಜ್ಞಾನಸಮಾಜಕ್ಕೆ ಸೇರಿದ ಮಿ॥ ಎಫ್. ಟಿ. ಬ್ರೂಕ್ಸ್ ರವರು ಈಗ ಬೆಂಗಳೂರಿನಲ್ಲಿ ಉಪನ್ಯಾಸಗಳನ್ನು ಮಾಡಲುಪಕ್ರಮಿಸಿದ್ದಾರೆ. ಮೊನ್ನೆ ಶುಕ್ರವಾರ ಶನಿವಾರಗಳಲ್ಲಿ ಉಪನ್ಯಾಸಗಳು ನಡೆದುವು.

ಮೊನ್ನೆ ಗುರುವಾರದ ದಿವಸ ಸಾಯಂಕಾಲ ಶ್ರೀಮನ್ ಮಹಾರಾಜರವರು ಮೋಟಾರ್ ಗಾಡಿಯಲ್ಲಿ ನಂಜನಗೂಡಿಗೆ ದಯಮಾಡಿ ಅಲ್ಲಿ ಗುಂಡ್ಲು ಮತ್ತೂ ಕಪನಿ ಹೊಳೆಗಳ ವಿಶೇಷ ಪ್ರವಾಹವನ್ನು ಪರಾಮರಿಸಿ, ಗುಂಡ್ಲಿನ ಸಮೀಪದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದ ಕುರುಬರೇ ಮೊದಲಾದವರಿಗೆ ಊರಿನೊಳಕ್ಕೆ ಹೋಗಬೇಕೆಂದು ಅಪ್ಪಣೆ ಕೊಡಿಸಿದರೆಂದೂ ಮತ್ತೂ ಅದೇ ಸಾಯಂಕಾಲ ರಾಜಧಾನಿಗೆ ವಾಪಸು ದಯಮಾಡಿದರೆಂದೂ ಕೇಳುತ್ತೇವೆ.

ರಾಜಧಾನಿಗೆ ಒಬ್ಬ ರಷ್ಯಾದ ಜಟ್ಟಿಯು ಬಂದಿರುವನು. ಆತನನ್ನು ರಷ್ಯಾದೇಶದ ಸ್ಯಾಂಡೊ (ಅಥವಾ ಕಲಿಯುಗದ ಭೀಮ) ಎಂದು ಕರೆಯುತ್ತಾರೆ. ಈತನ ಕಾಯಶಕ್ತಿಯು ಅತ್ಯದ್ಭುತವಾದುದು. ದಪ್ಪನಾದ ಕಬ್ಬಿಣದ ಕಂಬಿಯನ್ನು ಸುರುಳಿ ಸುತ್ತಿ ಎಸೆಯುವನು. ಟಗ್ ಆಫ್ ವಾರ್ ಎಂಬುವದರಲ್ಲಿ ಹತ್ತುಮಂದಿ ಬಲಿಷ್ಠರನ್ನು ಸುಲಭವಾಗಿ ಎಳೆದುಬಿಡುವನು. ಈತನು ನಾಳೆ ಶನಿವಾರದ ದಿವಸ ಟೌನ್‌ಹಾಲಿನಲ್ಲಿ ತನ್ನ ಶಕ್ತಿ ಸಾಹಸಗಳನ್ನು ಪ್ರದರ್ಶಿಸುವನೆಂದು ಕೇಳುತ್ತೇವೆ.

ಮೈಸೂರು ಇಂಡಸ್ಟ್ರಿಯಲ್ ಸ್ಕೂಲಿಗೆ ಸೇರಿದ ಮಣ್ಣಿನ ಕೆಲಸದ ಡಿಪಾರ್ಟ್‌ಮೆಂಟನ್ನು ಪ್ರತ್ಯೇಕಿಸಿ ನಾಳೆ ಜುಲೈ ಮೊದಲನೇ ತಾ॥ ನಿಂದ ಎರಡುವರುಷಗಳವರಿವಿಗೂ ಬೇರೆ ಡಿಪಾರ್ಟ್‌ಮೆಂಟನ್ನಾಗಿ ಮಾಡಿ ಅದರಮೇಲಿನ ವಿಚಾರಣೆಯನ್ನು ಮುಖ್ಯವಾಗಿ ಇಂಜನೀರ್ ಸ್ಕೂಲ್ ಸೂಪರಿಂಟೆಂಡೆಂಟರವರಿಗೆ ವಹಿಸಬೇಕೆಂದು ಮೈಸೂರು ಸರ್ಕಾರದವರು ತಿಳಿಸಿರುತ್ತಾರೆ. ಸ್ಕೂಲ್ ಕಮಿಟಿಯವರೂ ಇನ್ಸ್‌ಪೆಕ್ಟರವರೂ ಆಗಾಗ್ಗೆ ತನಿಖೆಮಾಡುತ್ತಿರುವರು. ಇದಕ್ಕಾಗಿ ಸರಕಾರದವರು ೧೧,೦೦೦ ರೂ. ಗಳನ್ನು ಕೊಟ್ಟಿರುತ್ತಾರೆ. ಇದರಲ್ಲಿ ೩,೦೦೦ ರೂ. ಗಳಿಗೆ ಕಮಿಟಿಯವರು ಒಂದು ಯಂತ್ರವನ್ನು ತರಿಸಿಕೊಳ್ಳುವರು. ಉಳಿದ ರೂ. ಗಳನ್ನು ಮೂಲಧನವನ್ನಾಗಿಟ್ಟುಕೊಂಡು ಕೆಲಸಮಾಡಲುಪಕ್ರಮಿಸುವರು.

ಮೈಸೂರ್ ಗೆಜೆಟಿ ಸಂಗ್ರಹ.

ಚಿತ್ರದುರ್ಗದ ಡಿ॥ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರಾದ ಮಿ॥ ಎಂ. ಕೆ. ತಿರುಮಲಾಚಾರ್ಯರಿಗೆ ಕೊಟ್ಟಿದ್ದ ೩೦ ದಿನಗಳ ಪ್ರಿವಿಲೇಜ್ ರಜಾಪೈಕಿ ಅವರು ೨೭ ದಿನಗಳ ರಜವನ್ನು ಮಾತ್ರ ಉಪಯೋಗಿಸಿಕೊಂಡಿರುವುದರಿಂದ ಉಳಿದ ಮೂರು ದಿನಗಳ ರಜವನ್ನು ಮಾತ್ರ ರದ್ದುಮಾಡಿದೆ.

ಚಾಮರಾಜನಗರದ ತಾ॥ ಅಮಲ್ದಾರರಾದ ಮಿ॥ ಜಿ. ನಾರಾಯಣರಾವ್ ಬಿ. ಎ., ಬಿ. ಎಲ್., ರವರಿಗೆ ಕೊಟ್ಟಿದ್ದ ಎರಡು ತಿಂಗಳ ಪ್ರಿವಿಲೇಜ್ ರಜವನ್ನು ಅನುಸರಿಸಿ ಇನ್ನೂ ಮುಂದಕ್ಕೆ ೭ ದಿನಗಳು ಹೆಚ್ಚಿಸಲ್ಪಟ್ಟಿದೆ.

ಮೈಸೂರು ಗೌರ್ನಮೆಂಟ್ ಕಂಟ್ರೋಲರಾಫೀಸಿಗೆ ಸೇರಿದ ೪ ನೇ ತರಗತಿ ಅ॥ ಕ॥ ಮಿ॥ ಎಸ್. ಶಾಮಣ್ಣನವರಿಗೆ ೧೯೧೧ನೇ ಜೂನ್ ತಾ॥ ೧ ರಿಂದ ಅಥವಾ ಅವರುಪಯೋಗಿಸಿಕೊಳ್ಳುವ ದಿನದಿಂದ ೧೮ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಗುಬ್ಬಿ ಸಬ್ ಡಿವಿಜನ್ ಅ॥ ಕ॥ ಮಿ॥ ಎಮ್. ಮಾಧವರಾವ್ ಬಿ. ಎ., ಬಿ. ಎಲ್., ರವರಿಗೆ ಜುಲೈ ತಾ॥ ೧೦ ರ ಲಾಗಾಯಿತು ಹತ್ತು ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ. ಆ ಕಾಲದಲ್ಲಿ ತುಮಕೂರು ಡಿ॥ ಡೆಪ್ಯುಟಿ ಕಮಿಷನರವರು ತಮ್ಮ ಕೆಲಸದೊಂದಿಗೆ ಈ ಸಬ್ ಡಿವಿಜನ್ ಛಾರ್ಜಿನಲ್ಲಿರತಕ್ಕದು.

ಅಮಲ್ದಾರ್ ಮಿ॥ ಕೆ. ನಾರಾಯಣಯ್ಯರು ಚಿಕ್ಕಬಳ್ಳಾಪುರ ತಾ॥ ನಿಂದ ಕೊಪ್ಪಕ್ಕೂ, ಅಮಲ್ದಾರ್ ಮಿ॥ ಮಹಮ್ಮದ್ ಸಯ್ಯದ್ ಷರೀಫ್‌ರವರು ಕೊಪ್ಪದಿಂದ ಚಿಕ್ಕಬಳ್ಳಾಪುರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಮಿ॥ ಕೆ. ನಾರಣಯ್ಯಂಗಾರ್ ಬಿ. ಎ, ಎ. ಸಿ. ಇ., ರವರನ್ನು ಒಂದು ವರ್ಷಕಾಲ ಹಂಗಾಮಿಯಾಗಿ ಪಬ್ಲಿಕ್ ವರ್ಕ್ ಎಸ್ಟಾಬ್ಲಿಷ್ಮೆಂಟಿನಲ್ಲಿ ೨ ನೆ ತರಗತಿ ಸ॥ ಅ॥ ಇಂಜನಿಯರಾಗಿ ನೇಮಿಸಿರುತ್ತಾರೆ.

ವರ್ತಮಾನ ಸಂಗ್ರಹ.

ಮದ್ರಾಸಿನ ನ್ಯಾಷನಲ್ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿರುವ ಪಿಳ್ಳೆ ಎಂಬ ಯುವಕನನ್ನು ಮಿ॥ ಆಷೆಯವರ ಖೂನೀ ಮೊಕದ್ದಮೆಗೆ ಸೇರಿದವನೆಂದು ಪೋಲೀಸಿನವರು ಹಿಡಿದಿರುತ್ತಾರೆಂದು ಈಚೆಗೆ ತಿಳಿದು ಬಂದಿದೆ.

ಅಲೆಗ್ಸಾಂಡ್ರಾ ಮಹಾರಾಣಿಯವರು ಗತಿಸಿದ ಏಳನೆಯ ಎಡ್ವರ್ಡ್ ಸಾರ್ವಭೌಮರ ಚರಿತ್ರೆಯನ್ನು ಬರೆಯುತ್ತಿದ್ದಾರೆ. ಇದನ್ನು ಸುಮಾರು ಆಗಸ್ಟ್ ತಿಂಗಳೊಳಗೆ ಪೂರೈಸಿ ಅಚ್ಚು ಹಾಕಿಸುವರೆಂದು ಕೇಳುತ್ತೇವೆ. ಮೊದಲನೆಯ ಭಾಗದಲ್ಲಿ ಕೆಲವು ಪ್ರತಿಗಳನ್ನು ಮಾತ್ರ ಹಾಕಿಸಿ ರಾಜಮಂಡಲಿಗೆ ಸೇರಿದವರಿಗೆ ಹಂಚಿಕೊಡುವರು. ಅನಂತರ ಜನರಿಗೆಲ್ಲಾ ಉಪಯುಕ್ತವಾಗುವಂತಹ ಬೇರೊಂದು ಭಾಷೆಯು ಆಗಬಹುದು.

ಮೊನ್ನೆಯ ೧೯ನೇ ತಾರೀಖಿನ ದಿವಸ ಮೈಮನ್‌ಸಿಂಗ್‌ನಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ರಾಜಕುಮಾರರಾಯ್‌ರವರೂ ಮತ್ತೂ ಕೋರ್ಟು ಸಬ್ ಇನ್ಸ್‌ಪೆಕ್ಟರ್ ಸುರೇಶಬಾಬುರವರೂ ರಾತ್ರಿ ಗಸ್ತುಹೋಗಿರುವಾಗ್ಗೆ ಯಾರೋ ಮೂರುಮಂದಿ ಘಾತುಕರು ಮೇಲೆಬಿದ್ದು ರಾಜಕುಮಾರ ರಾಯರವರನ್ನು ಗುಂಡಿನಿಂದ ಹೊಡೆದು ಕೊಂದು, ಜನರು ಸೇರುವುದರೊಳಗಾಗಿ ಪರಾರಿಯಾದರು. ಇನ್ನೂ ಆಸಾಮಿಗಳು ಪತ್ತೆಯಾಗಲಿಲ್ಲ.

ಭರತಖಂಡದಲ್ಲಿ ಪ್ಲೇಗ್ ಮರಣಗಳ ಸಂಖ್ಯೆಯು ಕ್ರಮೇಣ ಕಡಿಮೆಯಾಗುತ್ತಲಿದೆ. ೧೭ ನೇ ತಾರೀಖಿಗೆ ಪೂರೈಸಿದ ವಾರದಲ್ಲಿ ಒಟ್ಟು ೩,೩೬೦ ಜನರಿಗೆ ತಗಲಿ ಅವರಲ್ಲಿ ೨,೭೯೪ ಮಂದಿ ಸತ್ತರು. ಡಿಲ್ಲಿ ಡಿ॥ ನಲ್ಲಿ ೯ ಜನರಿಗೆ ತಗಲಿ ೯ ಜನರು ಸತ್ತರು. ಬೊಂಬಾಯಿಯಲ್ಲಿ ೭೮೯ ಮಂದಿಯೂ, ಮದ್ರಾಸಿನಲ್ಲಿ ೩೯ ಮಂದಿಯೂ, ಬಂಗಾಳದಲ್ಲಿ ೪೪ ಮಂದಿಯೂ, ಸಂಯುಕ್ತ ಪ್ರಾಂತ್ಯದಲ್ಲಿ ೧೯ ಮಂದಿಯೂ, ಪಂಜಾಬಿನಲ್ಲಿ ೭೬೭ ಮಂದಿಯೂ, ಬರ್ಮಾದಲ್ಲಿ ೧೦೯ ಮಂದಿಯೂ, ಈ ಕಾಯಿಲೆಯಿಂದ ಸತ್ತರೆಂದು ತಿಳಿದು ಬಂದಿದೆ.

ಡಾಕ್ಟರ್ ಜಲ್ಲರವರು ಭೂಮಂಡಲದಲ್ಲಿ ಸುಮಾರು ೧,೫೦೦,೦೦೦,೦೦೦ ಜನಸಂಖ್ಯೆ ಇರಬಹುದೆಂದು ಅಂದಾಜು ಹೇಳಿರುತ್ತಾರೆ. ಇವರಲ್ಲಿ ೪೩೪,೯೪೦,೦೦೦ ಮಂದಿ ಕ್ರೈಸ್ತರೆಂತಲೂ; ೧೭೫,೨೯೦,೦೦೦ ಮಂದಿ ಮಹಮ್ಮದೀಯರೆಂತಲೂ; ೧೧,೮೩೦,೦೦೦ ಮಂದಿ ಯೆಹೂದ್ಯರೆಂತಲೂ; ಆಸ್ಯಖಂಡದಲ್ಲಿ ಕನ್‌ಪ್ಯೂಷಿಯಸ್ ಅಂದರೆ ಚೀನರ ಮತಸ್ಥರು ೩೦೦,೦೦೦,೦೦೦ ಮಂದಿ ಎಂತಲೂ; ಹಿಂದೂಗಳು ೨೧೦,೦೦೦,೦೦೦ ಮಂದಿ ಎಂತಲೂ; ಬೌದ್ಧರು ೧೨೧,೦೦೦,೦೦೦ ಮಂದಿ ಎಂತಲೂ ಹೇಳಿರುವರು. ಇದರಲ್ಲಿ ಅವರು ತೋರಿಸಿರುವ ಒಂದು ವಿಶೇಷಾಂಶವೇನೆಂದರೆ:—ಕೋಟ್ಯಾಂತರ ಮಂದಿ ಹಿಂದೂಗಳಪೈಕಿ ಮೂರುಮಂದಿಗೆ ಮಾತ್ರ ಬಾರೊನೆಟ್ ಎಂಬ ಪದವಿಯು ಬಂದಿರುವುದು. ಮತ್ತು ಇಬ್ಬರು ಪಾರ್ಸಿಯವರು ಮಾತ್ರ ಇಂಗ್ಲೆಂಡು ಪ್ರಜಾಪ್ರತಿನಿಧಿ ಸಭೆಗೆ ಸೇರಿದ್ದರು ಎಂಬುದೇ.

ಅಳವಾಗಿ ಉಳುವುದು.

ವ್ಯವಸಾಯದಲ್ಲಿ ಏಳಿಗೆಯಾಗಬೇಕೆಂಬ ರೈತರು ಮೂರು ಮುಖ್ಯ ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. (೧) ಅಳವಾಗಿ ಉಳುವುದು; (೨) ಸಂಪೂರ್ಣವಾಗಿ ಉಳುವುದು; (೩) ಮತ್ತು ಉಳುವುದರಲ್ಲಿ ತಡಮಾಡದೆ ಇರುವುದು.

ಇವನ್ನೆಲ್ಲಾ ತೃಪ್ತಿಕರವಾಗಿ ನೆರವೇರಿಸಬೇಕಾದರೆ ಜನವು ವಿಶೇಷವಾಗಿ ಖರ್ಚಾಗುವುದು. ಆದರೆ ಅದಕ್ಕೆ ತಕ್ಕ ಪ್ರತಿಫಲವು [illegible]

ದಿಲ್ಲ; ಎರಡನೆಯ ವರ್ಷವೂ ಕಾಣುವುದಿಲ್ಲ. ಭೂಮಿಯು ಗುಣವು ತೋರ್ಪಡಲು ಕಾಲವಿಳಂಬವಾಗುವುದು.

ಆಳವಾಗಿ ಉಳುವುದಕ್ಕೆ ಗ್ರಾಮಾಂತರಗಳಲ್ಲಿ ಈಗ ರೂಢಿಯಲ್ಲಿರುವ ನಾಡು ನೇಗಿಲುಗಳಿಗಿಂತಲೂ ಉತ್ತಮ ತರಹೆಯ ನೇಗಿಲುಗಳು ಬೇಕು. ನಾಡು ನೇಗಿಲುಗಳು ಕ್ರಯದಲ್ಲಿ ಸುಲಭವಾಗಿದ್ದಾಗ್ಯೂ ಅವುಗಳಿಂದ ಆಗುವ ಉಳಿಮೆಯು ಅಷ್ಟೇನೂ ಫಲದಾಯಕವಾದುದಲ್ಲ. ನೂತನ ತರಹೆಯ ನೇಗಿಲು ಮೊಟ್ಟಮೊದಲು ಬೆಲೆಯುಳ್ಳದಾದರೂ ಅದರಿಂದ ನೆರವೇರಲ್ಪಡುವ ಆಳವಾದ ಉಳಿಮೆಯು ಬೆಳೆಯಿಂದ ಅಂತ್ಯದಲ್ಲಿ ಬಹಳ ಲಾಭಕರವಾಗಿ ಕಂಡುಬರುವುದು. ಆದುದರಿಂದ ಅದಕ್ಕೆ ಮೊದಲು ಹಾಕುವ ದುಡ್ಡು ಕಡೆಯಲ್ಲಿ ಬಹಳ ಸುಲಭವಾಗಿಯೇ ಪರಿಣಮಿಸುವುದು. ಯಾವ ನೇಗಿಲನ್ನು ತೆಗೆದುಕೊಂಡರೂ ಅದು ಎತ್ತುಗಳಿಗೆ ಶ್ರಮವಿಲ್ಲದೆ ಉಳುವವನು ವಿಶೇಷಬಲವನ್ನು ವ್ಯಯಮಾಡುವ ಅವಶ್ಯಕತೆಯೂ ಇಲ್ಲದೆ, ಸುಲಭವಾಗಿ ಭೂಮಿಯನ್ನು ಉಳತಕ್ಕದಾಗಿರಬೇಕು. ಮತ್ತು ಆಳವಾಗಿಯೂ ಉಳಬೇಕು. ನಮ್ಮ ರೈತರು ಒಂದೆರಡು ಜತೆ ಎತ್ತುಗಳನ್ನು ಮಾತ್ರ ಇಟ್ಟುಕೊಂಡಿರುವರು; ಇವುಗಳ ಕೈಲಿ ಕಬ್ಬಿಣದಿಂದ ತಯಾರ್ಮಾಡಿದ ಭಾರವಾದ ಇಂಗ್ಲೀಷ್ ನೇಗಿಲುಗಳನ್ನು ಎಳೆಯಲು ಆಗುವುದಿಲ್ಲ. ಮತ್ತು ಭೂಮಿಯು ಗಡಸಾಗಿದ್ದರೆ ತೊಂದರೆಯು ಮತ್ತಷ್ಟು ಹೆಚ್ಚುವುದು. ಇದನ್ನೆಲ್ಲಾ ಪರೀಕ್ಷಿಸಿ ನೋಡಿ ಕೋಲಾರದಲ್ಲಿ ಕಸುಬಿನ ಪಾಠಶಾಲೆಯನ್ನು ಇಟ್ಟು ನಡೆಸುತ್ತಿರುವ ರೆವರೆಂಡ್ ಮೆ|| ಹಾಲಿಸ್ಟರ್ ಸಾಹೇಬರು ಈ ದೇಶದ ಅವಶ್ಯಕತೆಗಳಿಗೆ ಅನುಕೂಲಿಸುವ ಹಾಗೆ ನೇಗಿಲುಗಳನ್ನು ತಯಾರ್ಮಾಡಿ ಮಾರುತ್ತಿರುವರು. ಇವುಗಳ ಕ್ರಯವೂ ಅಷ್ಟೇನೂ ದುಬಾರಿಯಲ್ಲ. ಆದುದರಿಂದ ನಮ್ಮ ರೈತರು ಅಂತಹ ನೇಗಿಲುಗಳನ್ನು ಕೊಂಡು ಕೊಂಡು ಉಪಯೋಗಿಸುವುದು ಸೂಕ್ತವಾಗಿದೆ ನಾಡು ನೇಗಿಲಿನಿಂದ ಉಳುವುದಕ್ಕೆ ೮-೧೦ ದಿನಗಳು ಹಿಡಿಯುವುದು; ಇಂತಹ ಒಳ್ಳೆಯ ನೇಗಿಲಿನಿಂದ ಉತ್ತರೆ ೪ ದಿನಗಳಲ್ಲಿ ಇನ್ನೂ ಹೆಚ್ಚು ಉಳಿಮೆಯು ನೆರವೇರುವುದು.

ಒಳ್ಳೆಯ ನೇಗಿಲಿನಿಂದ ಉಳುವುದು ವ್ಯವಸಾಯಕ್ರಮದಲ್ಲಿ ಮೊದಲನೆಯ ಕೆಲಸವಾಗಿದೆ. ಸಂಪೂರ್ಣವಾಗಿ ಉಳುವುದು ಎರಡನೆಯ ಕೆಲಸ. ಉಳುವುದರಲ್ಲಿ ಅರ್ಧಾಂತಕ ಮಾಡುವುದರಿಂದ ಬಹಳ ಲುಕ್ಸಾನಿಗೆ ಕಾರಣವಾಗುವುದು. ರೈತನು ತನ್ನ ಹೊಲವನ್ನು ಸಂಪೂರ್ಣವಾಗಿ ಉತ್ತು ಹದಮಾಡಿ ಮಳೆ ಬೀಳುವುದಕ್ಕೋಸ್ಕರ ಅಣಿಮಾಡಿಟ್ಟಿದ್ದರೆ ಆ ಹೊಲದಮೇಲೆ ಬೀಳುವ ಪ್ರತಿ ಮಳೆಯೂ ಆ ರೈತನಿಗೆ ಹಣವನ್ನು ಸಂಪಾದಿಸಿಕೊಡುವುದು. ಮಳೆ ಬೀಳುವ ಸಮಯಕ್ಕೆ ಹೊಲವನ್ನು ಚನ್ನಾಗಿ ಉತ್ತು ಸಿದ್ಧವಾಗಿಟ್ಟಿದ್ದರೆ ಮಳೆ ಬಿದ್ದಾಗ ನೀರೆಲ್ಲವೂ ಭೂಮಿಯೊಳಗೆ ಹಿಂಗಿ ಭೂಮಿಯಲ್ಲಿ ತಂಪು ನಿಲಿಸುವುದು. ಹೊಲವನ್ನು ಅರ್ಧಾಂತಕವಾಗಿ ಉತ್ತು ಇಟ್ಟಿದ್ದರೆ ತಂಪು ನಿಲ್ಲುವುದಕ್ಕೆ ಅಷ್ಟು ಆಸ್ಪದವಿರುವುದಿಲ್ಲ. ಮೇಲೆ ಬಿದ್ದ ನೀರು ಹಾಗೆಯೇ ಹರಿದು ಹೋಗುವುದಕ್ಕೆ ಕಾರಣವಾಗುವುದು. ಮಳೆಯ ನೀರೆಲ್ಲವೂ ಭೂಮಿಯಲ್ಲಿಯೇ ಉಳಿದಿರುವಂತೆ ಹೊಲವನ್ನು ಚನ್ನಾಗಿ ಉಳುಮೆಮಾಡಿ ಇಟ್ಟಿದ್ದರೆ ಬೆಳೆಯನ್ನು ಸುಲಭವಾಗಿಯೂ, ಹುಲುಸಾಗಿಯೂ ಮತ್ತು ಪದೇಪದೆಯೂ ಬೆಳೆಯುವುದಕ್ಕೆ ಅವಕಾಶವಾಗುವುದು. ಕೆರೆಯ ತೂಬನ್ನು ಮುಚ್ಚದೆ ತೆರೆದುಬಿಟ್ಟಿದ್ದರೆ ನೀರೆಲ್ಲಾ ಹಾಳಾಗಿಹೋಯಿತೆಂದು ರೈತರು ಗೋಳಾಡುತ್ತಾರೆ. ಆದರೆ ತಮ್ಮ ಭೂಮಿಯನ್ನು ಸರಿಯಾಗಿ ಉಳದೆ ಇರೋಣದರ ದೆಸೆಯಿಂದ ಅದರ ಮೇಲ್ಗಡೆ ಬಿದ್ದ ನೀರೆಲ್ಲವೂ ಆ ಭೂಮಿಯಲ್ಲಿಯೇ ತಂಗದೆ ವ್ಯರ್ಥವಾಗಿ ಹರಿದುಹೋಗುವುದನ್ನು ನೋಡಿ ವ್ಯಸನಪಡುವುದಿಲ್ಲವಲ್ಲಾ! ಭೂಮಿಯು ಫಲವತ್ತಾಗುವುದಕ್ಕೆ ಹೆಚ್ಚಾಗಿ ಮಳೆಯು ಬೀಳಬೇಕಾದುದು ಅವಶ್ಯಕವಿಲ್ಲ. ಬಿದ್ದ ಮಳೆಯನೀರು ಎಷ್ಟುಮಟ್ಟಿಗೆ ಆ ಜಮೀನಿನಲ್ಲಿ ಹಿಂಗಿಕೊಳ್ಳುವುದೋ ಅದರಿಂದಲೇ ಆ ಭೂಮಿಯು ಫಲವತ್ತಾದುದು ಅಥವಾ ಅಲ್ಲವೆಂಬುವ ಅಂಶವು ನಿರ್ಣಯಿಸಲ್ಪಡತಕ್ಕದಾಗಿರುವುದು. ಆದಕಾರಣ ಎಷ್ಟು ಮಳೆಯು ಬಿದ್ದರೂ ಸರಿಯೆ, ಆ ಮಳೆಯ ನೀರೆಲ್ಲವೂ ಭೂಮಿಯಲ್ಲಿಯೇ ತಂಗುವಂತೆ ಆ ಭೂಮಿಯನ್ನು ನೂತನ ತರಹೆಯ ನೇಗಿಲಿನಿಂದ ಆಳವಾಗಿಯೂ, ಸಂಪೂರ್ಣವಾಗಿಯೂ ಉಳುಮೆ ಮಾಡಬೇಕೆಂಬುದನ್ನು ರೈತನು ಯಾವಾಗಲೂ ನೆನಪಿನಲ್ಲಿಟ್ಟಿರಬೇಕು.

ಪ್ರತಿಯೊಬ್ಬ ರೈತನೂ ತನ್ನ ಜಮೀನನ್ನು ೧೦ ರಿಂದ ೧೨ ಅಂಗುಲಗಳ ವರಿಗೂ ಉಳುಮೆ ಮಾಡಬೇಕು. ಕೆಳತೆರೆಯ ಮಣ್ಣನ್ನು ಮೇಲಕ್ಕೆ ತರುವಂತೆ ಮಾಡಬಾರದು. ಕೆಳಮಣ್ಣು ಕೆಳಗೇ ಇರಬೇಕು. ಮೇಲಿನ ಮಣ್ಣು ಮೇಲ್ಗಡೆಯೇ ಇರಲಿ. ಇದಕ್ಕೋಸ್ಕರ ಮೇಲ್ಮಣ್ಣನ್ನು ಸೀಳುವ ನೇಗಲನ್ನೂ ಜತೆಯಾಗಿ ಉಪಯೋಗಿಸುತ್ತಾ ಬರಬೇಕು. ಹೀಗೆ ಮಾಡಿದರೆ ಕೆಳಮಣ್ಣು ಸೀಳಲ್ಪಟ್ಟಕೂಡಲೇ ಮೇಲ್ಮಣ್ಣು ಅದರಮೇಲೆ ಬಿದ್ದು ಅದನ್ನು ಅಸ್ಥಳದಲ್ಲಿಯೇ ಇರಿಸಿ ಮುಚ್ಚಿ ಬಿಡುವುದು. ಇದರಿಂದ ಮಳೆಯ ನೀರು ಜಾಗ್ರತೆಯಾಗಿ ಕೆಳಮಣ್ಣಿನ ಪ್ರದೇಶಕ್ಕೆ ಇಳಿದುಹೋಗಲು ಬಹಳ ಅನುಕೂಲವಾಗುವುದು.

ಸಂಪೂರ್ಣವಾಗಿ ಉಳುವುದು ಅಂದರೆ ಆಳವಾಗಿ ಉಳುವುದು ಒಂದೇ ಅಲ್ಲ. ಉಳುವುದರಿಂದ ಹಿಂಟಿಯಾಗಿ ಎದ್ದ ಮಣ್ಣನ್ನು ಪುಡಿ ಪುಡಿಯಾಗಿ ಮಾಡುವುದೂ ಸಹ ಅದಕ್ಕೆ ಅಂಗವಾಗಿಟ್ಟುಕೊಳ್ಳಬೇಕು. ಹಿಂಟಿ ಮಣ್ಣನ್ನು ಪುಡಿಮಾಡುವುದಕ್ಕೆ ನೇಗಿಲು ಅಷ್ಟು ಪ್ರಯೋಜನಕಾರಿಯಲ್ಲವು. ಇದಕ್ಕೆ ಕುಂಟಿಯು ಬಹಳ ಪ್ರಯೋಜನಕಾರಿಯು. ಮಣ್ಣನ್ನು ಪುಡಿಮಾಡುವುದು ನಿಷ್ಪ್ರಯೋಜನವಾದ ಕೆಲಸವೆಂದು ಅನೇಕ ರೈತರು ತಿಳಿದುಕೊಂಡಿಧಾರೆ. ಮತ್ತು ಕೆಣಸ್ತರೂ ಸಹ ಈ ಕೆಲಸವನ್ನು ಮಾಡಿಸುವುದಕ್ಕೆ ಹಿಂತೆಗೆಯುತ್ತಾರೆ. ಇದಕ್ಕೋಸ್ಕರ ರೈತರು ವೆಚ್ಚಮಾಡುವ ಹಣಕ್ಕೆ ಚಕ್ರಬಡ್ಡಿಯ ಪ್ರಕಾರ ಹಣವು ಉತ್ಪತ್ತಿಯಾಗುವುದೆಂಬ ಅಂಶವು ಅವರಿಗೆ ತಿಳಿಯದೆ ಇರುವುದು ಶೋಚನೀಯವಾಗಿದೆ. ೧೬ ರೂಪಾಯಿಗೆ ಒಂದು ಕುಂಟಿಯು ಬರುತ್ತದೆ. ಇದನ್ನು ಸರಿಯಾಗಿ ಉಪಯೋಗಿಸಿದರೆ ಮಣ್ಣನ್ನು ಪುಡಿ ಮಾಡುವುದರಲ್ಲಿಯೂ ಮತ್ತು ಕಳೆಯನ್ನು ಕಿತ್ತುಹಾಕುವುದರಲ್ಲಿಯೂ ವರ್ಷಕ್ಕೆ ೪ ರಿಂದ ೧೦ ರೂ. ಗಳು ಮಿಗುತ್ತದೆ. ಮಣ್ಣನ್ನು ಪುಡಿಮಾಡುವುದು ಬಹಳ ಅವಶ್ಯಕವಾದುದು. ಏಕೆಂದರೆ ಭೂಮಿಯಲ್ಲಿ ತನುವು ನಿಲ್ಲುವುದಕ್ಕೆ ಅದು ಬಹಳವಾಗಿ ಸಹಾಯಮಾಡುತ್ತದೆ. ಮತ್ತು ಪೈರುಗಳ ಬೇರುಗಳು ಚನ್ನಾಗಿ ಊರಿ ಪುಷ್ಟಿಕರವಾಗಿ ಬೆಳೆದು ಸಸಿಗಳಿಗೆ ಸಾರವನ್ನು ಕೊಡುವುದಕ್ಕೆ ಬಹಳ ಅನುಕೂಲವಾಗುತ್ತದೆ. ಈ ಪ್ರಕಾರವಾಗಿ ಭೂಮಿಯನ್ನು ಉಳುಮೆಮಾಡಿ ಅದರಿಂದ ಉಂಟಾಗುವ ಪ್ರಯೋಜನಗಳನ್ನು ಪ್ರದರ್ಶಿಸುವುದು ಬುದ್ಧಿವಂತರೂ, ವಿದ್ಯಾವಂತರೂ ಮತ್ತು ಉತಪತ್ತಿಯುಳ್ಳವರೂ ಆದ ಜಮೀನುದಾರರುಗಳ ಕರ್ತವ್ಯವಾಗಿರುವುದು. ಮೊದಲು ಮಾಡುವ ಪ್ರಯತ್ನಗಳು ಪ್ರೋತ್ಸಾಹಕರವಾಗಿ ಕಾಣದೆ ಇರಬಹುದು. ಆದರೆ ಪದೇ ಪದೇ ಪ್ರಯತ್ನಗಳನ್ನು ಮಾಡುತ್ತಾ ಬಂದರೆ ಪ್ರಯೋಜನವು ಕಂಡುಬರುವುದರಲ್ಲಿ ಸಂಶಯವಿಲ್ಲ. ಒಂದು ಸಾವಿರ ಅಥವಾ ಐದು ಸಾವಿರ ಜನರಿಗೆ ಸುಖ ಭೋಜನವನ್ನು ಮಾಡಿಸುವುದು ಪುಣ್ಯ ಕೆಲಸವೇ ಸರಿ. ಆದರೆ ನಮ್ಮ ನೆರೆಹೊರೆಯವರ ಹೊಲಗಳು ಹೆಚ್ಚು ಫಲವತ್ತಾದುವುಗಳನ್ನಾಗಿ ಮಾಡಿಕೊಳ್ಳುವ ಬಗೆಯನ್ನು ಅವರಿಗೆ ತೋರಿಸಿಕೊಟ್ಟು ಅವರಿಗೆ ಪ್ರಯೋಜನವನ್ನುಂಟುಮಾಡುವ ಕೆಲಸವನ್ನು ಕೈಗೊಳ್ಳುವುದು ಇನ್ನೂ ಅತಿಶಯವಾದ ಪುಣ್ಯ ಕೆಲಸವಾಗಿರುವುದು.

ರೆ. ಗೆ.

ಪತ್ರವ್ಯವಹಾರ.

ಕೊಲ್ಲಾಪುರದಲ್ಲಿ ಕಟ್ಟಲ್ಪಡುವ ಚಿತ್ರದುರ್ಗದ ಶ್ರೀಮನ್ನಿರಂಜನ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಮಠದ ಶಂಕುಸ್ಥಾಪನ ಸಮಾರಂಭವು.

(ಕಳೆದವಾರದ ಶೇಷ.)

ವಿದ್ಯೆಯಿಂದ ಹಿಂದುಳಿದಿರುವ ಜನಾಂಗದವರು ಮುಂದಕ್ಕೆ ಬರಲೆಂದು ಉದ್ದೇಶಪಟ್ಟು ವೀರಶೈವ ಮತ್ತು ಜೈನರು, ಮಹಾರಾಷ್ಟ್ರರು, ಮಹಮದೀಯರು ಇವರಿಗೆಲ್ಲಾ ಪ್ರತ್ಯೇಕವಾಗಿ ಬೋರ್ಡಿಂಗುಗಳನ್ನು ಸ್ಥಾಪಿಸಿರುವುದಲ್ಲದೆ ಅವುಗಳ ಅಭಿವೃದ್ಧಿಗೋಸ್ಕರ ಉದಾರಾಶ್ರಯವನ್ನು ಕೊಟ್ಟಿದ್ದಾರೆ. ಮತ್ತು ತಮ್ಮ ಇಂಗ್ಲೀಷು ಕಾಲೇಜಿನಲ್ಲಿ ಇವರಿಗೆ ಬೇಕಾದ ಸೌಲಭ್ಯಗಳನ್ನು ಉಂಟುಮಾಡಿಕೊಟ್ಟಿದಾರೆ

ಮೇಲ್ಕಂಡ ಶಂಕುಸ್ಥಾಪನೆಯ ಸಮಾರಂಭವು ಪೂರೈಸಿದೊಡನೆ ಯಾವತ್ತೂ ಜನಗಳು ಶ್ರೀ ಜಗದ್ಗುರು ಸ್ವಾಮಿಗಳವರಿಗೆ ವಂದಿಸಿ, ಸರಕಾರಿ ಅಧಿಕಾರಿಗಳೂ, ಶ್ರೀಮನ್ ಯುವರಾಜರೂ, ಶ್ರೀಮನ್ ದಿವಾನಸಾಹೇಬರೂ ಮೊದಲಾದವರು ತಾಂಬೂಲ ಪುಷ್ಪಹಾರಾದಿಗಳನ್ನು ಸ್ವೀಕರಿಸಿ ತಮ್ಮ ತಮ್ಮ ಸ್ಥಳಂಗಳಿಗೆ ತೆರಳಿದರು.

ಬೆಳಗಾಂವಿ ಜಿಲ್ಲಾ ಚಿಕ್ಕೋಡಿ ತಾ|| ಪೈಕಿ ಕೆರ್ಲಿ ಶ್ರೀಮಂತರಾಗಿಯೂ ಈ ಡಿಸ್ಟ್ರಿಕ್ಟಿನಲ್ಲಿ ಸಾವಕಾರರಲ್ಲಿ ೧ ನೇಯವರಾಗಿಯೂ ಇರುವ ಮಲ್ಲಪ್ಪಾ ಅಣ್ಣಾ ಶಿಂತ್ರೆ ಇವರು ಶ್ರೀಗಳವರ ಸಂದರ್ಶನಕ್ಕೆ ಪಾತ್ರರಾಗಿ ತಮ್ಮ ಸ್ವಗ್ರಾಮದ ಕೆರ್ಲಿಗೆ ದಯಮಾಡಿಸಿ ತಮ್ಮಿಂದ ಮಾಡಲ್ಪಡುವ ಸೇವೆ ಸತ್ಕಾರ ಪಾದಪೂಜೆಯನ್ನು ಕೈಗೊಂಡು ತಮ್ಮನ್ನು ಧನ್ಯರನ್ನಾಗಿ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡ ಮೇರೆಗೆ ಸದರಿ ಸಾಹುಕಾರರ ಬಿನ್ನಪವನ್ನು ಕೈಕೊಂಡು ಇದೇ ತಿಂಗಳ ೮ ನೇ ತಾರೀಖಿನಲ್ಲಿ ಕೊಲ್ಲಾಪುರವನ್ನು ಬಿಟ್ಟು ಕಾಗಲ್ ರಾಜಧಾನಿ ಮಾರ್ಗವಾಗಿ ಶ್ರೀಗಳವರ ಸವಾರಿಯು ಹೊರಡಲು, ಶ್ರೀಮನ್ ಯುವರಾಜರವರು ಅಶ್ವಾರೂಢರಾಗಿ (೫೦) ಜನ ಕುದುರೆ ಸವಾರರ ಸಹಿತ ನಾಲ್ಕು ಮೈಲಿಗಳವರೆಗೆ ದಯಮಾಡಿಸಲು, ಶ್ರೀಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಪ್ರಸ್ಥಾನವನ್ನು ನಿಲ್ಲಿಸಿ, ಯುವರಾಜರನ್ನು ಬಹು ವಿಶ್ವಾಸದಿಂದ ಮುಂದಕ್ಕೆ ಕರೆದು ಬಹು ಮೃದುವಾದ ಮಾತಿನಿಂದ ಅಪ್ಪಣೆ ಕೊಡಿಸಿದ್ದೇನಂದರೆ:—“ತಾವು ಬಹುದೂರ ದಯಮಾಡಿಸಿದಿರಿ; ರಾಜಧಾನಿಗೆ ಹಿಂದಕ್ಕೆ ತೆರಳಿರಿ ಎಂದು ಆಶೀರ್ವಾದವನ್ನು ಮಾಡಿದುದಲ್ಲದೆ, ಶ್ರೀಮನ್ ಯುವರಾಜರೇ! ಘನತೆಯನ್ನು ಹೊಂದಿದ ನಿಮ್ಮ ತಂದೆ ಶಾಹು ಛತ್ರಪತಿ ಮಹಾರಾಜರವರೂ ನೀವೂ ಸಹ ನಿಷ್ಪಕ್ಷಪಾತದಿಂದ ರಾಜ್ಯಪರಿಪಾಲನೆಯನ್ನು ಮಾಡುವುದರಿಂದಲೂ ಎಲ್ಲ ಪ್ರಜೆಗಳನ್ನೂ ಸಮದೃಷ್ಟಿಯಿಂದ ಕಾಣುವುದರಿಂದಲೂ ನಿಮ್ಮ ಆಳುವಿಕೆಯು ಚಿರಕಾಲವಿರಲೆಂದೂ ನಿಮ್ಮನ್ನು ಆಂಗ್ಲೇಯ ಸಾರ್ವಭೌಮ ಸರಕಾರದವರು ಸದಾ ಗೌರವದಿಂದ ಕಾಪಾಡಲೆಂದೂ ನಿಮಗೂ ಮತ್ತು ನಿಮ್ಮ ರಾಜವಂಶದವರೆಲ್ಲರಿಗೂ ಶ್ರೀ ಜಗದೀಶನು ಆಯುರಾರೋಗ್ಯ ಭಾಗ್ಯಸಂಪತ್ತುಗಳನ್ನು ಇದಕ್ಕೂ ಉನ್ನತವಾಗಿ ಕೊಟ್ಟು ಕಾಪಾಡಲಿ.” ಎಂದು ಆಶೀರ್ವಾದವನ್ನು ಮಾಡಿದನಂತರ ಶ್ರೀ ಜಗದ್ಗುರುಗಳವರ ಸ್ವಾರಿಯು ಮ್ಯಾನಾದಲ್ಲಿ ಮುಹೂರ್ತಮಾಡಿ ಕಾಗಲ್ ಪಟ್ಟಣದ ಮಾರ್ಗವಾಗಿ ಕೆರ್ಲಿ ಗ್ರಾಮವನ್ನು ಕುರಿತು ಮುಂದಕ್ಕೆ ಸಾಗಿದರು. ಆವೇಳೆ ಯುವರಾಜರವರು ತಮ್ಮ ಪರಿವಾರ ಸಮೇತವಾಗಿ ರಾಜಧಾನಿಗೆ ಹಿಂದಕ್ಕೆ ತೆರಳಿದರು.

ಶ್ರೀ ಜಗದ್ಗುರುಗಳವರ ಸ್ವಾರಿಯು ಈ ದಿವಸ ಕೆರ್ಲಿ ಗ್ರಾಮಕ್ಕೆ ದಯಮಾಡಿಸಿ ಅಶ್ವಪಾಲಕಿ, ಪಂಚಕಲಶ, ಮೊಹರಚಾಲ, ಮಕರತೋರಣ, ಮೊದಲಾದ ರಾಜ್ಯಬಿರುದಾವಳಿಗಳಿಂದ ಉತ್ಸವದೊಡನೆ ಮೆ|| ಶ್ರೀಮಂತರಾದ ಶಿಂತ್ರೆ ಮಲ್ಲಪ್ಪಣ್ಣನವರ ಸ್ವಂತ ಗೃಹಕ್ಕೆ ದಯಮಾಡಿಸಿತು. ನಿತ್ಯದಲ್ಲಿಯೂ ೩-೪ ಸಹಸ್ರ ಜನಗಳಿಗೆ ೩-೪ ದಿನಗಳವರಿಗೂ ಪಕ್ವಾನ್ನ ಭೋಜನದಿಂದ ಗಣಾರಾಧನೆಯನ್ನು ಮಾಡಿಸಿ ಮೆ|| ಮಲ್ಲಪ್ಪಣ್ಣನವರು ತಮ್ಮ ಸ್ವಂತ ಖರ್ಚಿನಿಂದ ಎಲ್ಲರನ್ನೂ ತೃಪ್ತಿಪಡಿಸಿದರು. ಇಲ್ಲಿಗೆ ನಿಡಸೋಸಿ, ಅಥಣಿ, ಬೆಳೂರ ಈ ಮಠಗಳ ಶ್ರೀಗಳವರು ತಮ್ಮ ತಮ್ಮ ಪರಿವಾರಗಳ ಸಮೇತ ಇನ್ನೂ ಮುಂತಾದ ಮಹಾಜನಗಳು ದಯಮಾಡಿಸಿದ್ದರು. ಇದನ್ನು ನೋಡುವುದಕ್ಕೆ ಸಾಕ್ಷಾತ್ ಭೂಕೈಲಾಸವೇ ಎಂದು ತೋರುತಿತ್ತು. ಎಲ್ಲಾ ಮಠಗಳವರಿಗೂ ಅವರವರ ಪರಿವಾರದವರಿಗೂ ಸಹಾ ಸವರಿ ಮೆ|| ಮಲ್ಲಪ್ಪಣ್ಣನವರು ಉಡುಗೆರೆಗಳನ್ನು ಕೊಟ್ಟರು. ಕೊಲ್ಲಾಪುರದಲ್ಲಿ ಈಗ ಕಟ್ಟಲ್ಪಡುವ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಮಠದಲ್ಲಿ ತಮ್ಮ ಅಣ್ಣಂದಿರಾದ ಕೈಲಾಸವಾಸಿ ಅಪ್ಪಯ್ಯಪ್ಪನವರ ಸ್ಮರಣಾರ್ಥವಾಗಿ ಒಂದು ಭವ್ಯವಾದ ಸಭಾ ಮಂದಿರವನ್ನು ಕಟ್ಟಿಸಲು ಬೇಕಾಗುವ ಮೊಬಲಗನ್ನು ಒಪ್ಪಿಸಲು ಭಕ್ತಿಪೂರ್ವಕವಾಗಿ ಶ್ರೀ ಜಗದ್ಗುರುಗಳವರಿಗೆ ಮೆ|| ಮಲ್ಲಪ್ಪಣ್ಣನವರು ಸಾಷ್ಟಾಂಗ ಹಾಕಿರುತ್ತಾರೆ. ಇವರು ಭಕ್ತಿವಂತರಾಗಿಯೂ, ನಮ್ಮ ವೀರಶೈವ ಜನಾಂಗದವರಲ್ಲಿ ಒಂದನೇ ಸಾಹುಕಾರರಾಗಿಯೂ, ಉದಾರ ಗುಣವುಳ್ಳವರಾಗಿಯೂ, ನಿಸರ್ಗ ಶಿರೋಮಣಿಗಳಾಗಿಯೂ ಇದಾರೆ.

ಓರ್ವ ಪ್ರತ್ಯಕ್ಷದರ್ಶಿ.

---

೨೦೦ ರೂಪಾಯಿಗಳ ಬಹುಮಾನವು.

ಕೈ. ವಾ. ಚನಬಸಪ್ಪಾ ಧಾರವಾಡ ಡಿ|| ಎ|| ಇನ್ಸ್ಪೆಕ್ಟರ್ ಇವರ ಬಗ್ಗೆ ಮಾಹಿತಿಯನ್ನು ಕಳಿಸಿಕೊಟ್ಟವರಿಗೆ ೨೦೦ ರೂ. ಗಳಲ್ಲಿ ಬಹುಮಾನಗಳು ವಿಜಾಪುರ ಜಿಲ್ಲಾ ಸಭೆಯಿಂದ ಹಂಚಲ್ಪಡುವವೆಂದು ೧೯೧೧ ನೆಯ ಜನವರಿ ತಿಂಗಳಿನಲ್ಲಿ ಒಂದು ಪ್ರಕಟನ ಪತ್ರಿಕೆಯು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದು ತಮ್ಮ ವಾಚಕರ ನೆನಪಿನಲ್ಲಿರಬಹುದು. ಆ ಮೇರೆಗೆ ಕೆಲ ಮಹನೀಯರು ತಮಗೆ ಗೊತ್ತಿದ್ದ ಅನೇಕ ಸಂಗತಿಗಳನ್ನು ಬರೆದು ನಮ್ಮ ಕಡೆಗೆ ಈಗ ಕಳುಹಿಸಿರುವರು. ಆದರೂ ಇನ್ನೂ ಕೈಲಾಸವಾಸಿಗಳ ಬಗ್ಗೆ ಹೆಚ್ಚಿಗೆ ಮಾಹಿತಿಯನ್ನು ಸಂಗ್ರಹಿಸುವುದು ಅತ್ಯವಶ್ಯವದೆ. ಅದರಿಂದ ಅವರ ಗುಣಗಳು, ಅಭಿಪ್ರಾಯಗಳು, ಅಭ್ಯಾಸ, ವಿದ್ವತ್ತೆ ಮೊದಲಾದವುಗಳನ್ನು ನಿರ್ದೇಶಿಸತಕ್ಕ ಸಂಗತಿಗಳು ಯಾರಿಗಾದರೂ ಗೊತ್ತಿದ್ದಲ್ಲಿ ಅವುಗಳನ್ನು ಅವರು ನಮಗೆ ಬರೆದು ತಿಳುಹಿಸತಕ್ಕದ್ದು. ಇವೆಲ್ಲ ಸಂಗತಿಗಳು ಅವರ ಜತೆಗಾರರು, ಮಿತ್ರರು, ಅವರಿಂದ ಉಪಕಾರಹೊಂದಿದವರು ಇವರೇ ಮೊದಲಾದವರಿಗೆ ತಿಳಿಯುವ ಸಂಭವವು ಹೆಚ್ಚಿಗುಂಟು. ಅವರು ಅವುಗಳನ್ನೆಲ್ಲ ನಮಗೆ ಬರೆದು ತಿಳಿಸಿದರೆ, ನಾವು ಅವರಿಗೆ ಬಹಳ ಆಭಾರಿ ಆಗುವೆವು. ಮತ್ತು ಈ ಪ್ರಕಾರ ಯಾರು ಹೆಚ್ಚಿಗೆ ಮಾಹಿತಿಯನ್ನು ದೊರಕಿಸಿಕೊಡುವರೋ ಅವರಿಗೆ ತಕ್ಕ ಬಹುಮಾನಗಳು ಕೊಡಲ್ಪಡುವವು. ಪ್ರತಿಯೊಬ್ಬರು ತಮ್ಮ ಲೇಖನಗಳನ್ನು ಇದೇ ಡಿಸೆಂಬರದ ಒಳಗಾಗಿ ನಮ್ಮ ಕಡೆಗೆ ಕಳಿಸತಕ್ಕದ್ದು. ಬಹುಮಾನಗಳು ೧೯೧೨ ಜನವರಿ ಅಂತ್ಯದೊಳಗಾಗಿ ಹಂಚಲ್ಪಡುವವು.

ಫ. ಗು. ಹಳಕಟ್ಟಿ ಬಿ. ಎ, ಎಲ್‌ಎಲ್. ಬಿ., ಸೆಕ್ರೆಟರಿ,
ಲಿಂಗಾಯತ ವಿಜಾಪುರ ಜಿಲ್ಲಾ ಸಭಾ.
ತಾ|| [illegible]

ಊದಬತ್ತಿಗಳು.

16

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦ ೪-೦-೦; ೩-೦-೦; ೨-೮-೧; ೧-೪-೦; ಕಸ್ತೂರಿ ಪಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಥಾಂತೆನ್ನು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೬-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ನೋಟೀಸು.
ಜಾತಕ ಸುಧಾಸಾರ ಮಂಜರಿ.

3

ಅಯ್ಯಾ ಲೋಕಬಾಂಧವರೆ! ವಿನಯಪೂರ್ವಕವಾಗಿ ಶೃತಪಡಿಸುವದೇನಂದರೆ—ಈ ನಮ್ಮ ಭರತಖಂಡದಲ್ಲಿ ಅನೇಕಪಂಡಿತರು ಜ್ಯೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಒಂದಾದರು ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ಯಾರೂ ರಚಿಸಲಿಲ್ಲ. ಆದಪ್ರಯುಕ್ತ ನಾನು ಅನೇಕ ಪುರಾತನ ಪರಾಶರ ಗ್ರಂಥಗಳನ್ನು ಪರಿಶೋಧನಮಾಡಿ ಅಲ್ಪವಿದ್ಯದವರಿಗೂ ಕೂಡ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡಟೀಕಾ ತಾತ್ಪರ್ಯದೊಂದಿಗೆ ರಚಿಸಿ ಇರುತ್ತೇನೆ. ಸದ್ರಿ ಗ್ರಂಥದಲ್ಲಿ ಇರುವ ವಿಷಯವೇನಂದರೆ—ಯುಗಭೇದಜನ್ಮಲಗ್ನವಿಚಾರ, ಮಾನಪ್ರಮಾಣವಿಚಾರ, ಸಂದೇಹಲಗ್ನನಿವೃತ್ತಿವಿಚಾರ, ನಕ್ಷತ್ರಗಣನವಿಚಾರ, ಗ್ರಹೋಚ್ಚನೀಚವಿಷಯ, ರಾಜಲಕ್ಷಣಯೋಗ, ಭೋಗಿಯೋಗ, ಕೀರ್ತಿಯೋಗ, ಮರಣಾಂತ್ಯಸೌಖ್ಯಯೋಗ ರತ್ನಲಾಭಯೋಗ ಸುವರ್ಣಪಾತ್ರಭೋಜನಯೋಗ ಕುಬೇರಯೋಗ ತ್ರಿಲಕ್ಷಾಂತರಕೋಟ್ಯಧೀಶ್ವರಯೋಗ ಋಣಯೋಗ ಛತ್ರಾನ್ನಭಕ್ಷಣಯೋಗ ಲೋಭಿಯೋಗ ಅಂಧಕಯೋಗ ಮೂಕಯೋಗ ಗಣಿತಶಾಸ್ತ್ರಯೋಗ ತರ್ಕಶಾಸ್ತ್ರಯೋಗ ವ್ಯಾಕರಣಶಾಸ್ತ್ರಯೋಗ ಷಟ್‌ಶಾಸ್ತ್ರಯೋಗ ವೇದಶಾಸ್ತ್ರಯೋಗ ಭ್ರಾತೃವೃದ್ಧಿಯೋಗ ಭ್ರಾತೃಜಾರಯೋಗ ಪಾರಜಾತಕಯೋಗ ಕ್ಷೇತ್ರಲಾಭಯೋಗ ಕೃಷಿಲಾಭಯೋಗ ರಾಜಯೋಗ ಪುತ್ರವೃದ್ಧಿಯೋಗ ಏಕಪುತ್ರಯೋಗದ್ವಾದಶಪುತ್ರಯೋಗ ಪುತ್ರಹೀನಯೋಗ ಶತೃಯೋಗ ಶತ್ರುಹೀನಯೋಗ ಏಕಕಳತ್ರಯೋಗ ಕಳತ್ರಜಾರಯೋಗ ದ್ವಿಕಳತ್ರಯೋಗ ತ್ರಿಕಳತ್ರಯೋಗ ಸಪ್ತಕಳತ್ರಯೋಗ ದ್ವಾದಶದಾರಯೋಗ ಶತಕಳತ್ರಯೋಗ ದ್ವಿಶತಕಳತ್ರಯೋಗ ಪೂರ್ಣಾಯುರ್ಯೋಗ ಮಧ್ಯಮಾಯುರ್ಯೋಗ ಅಲ್ಪಾಯುರ್ಯೋಗ ಮೃತ್ಯುಯೋಗ ಧನವ್ಯಯಯೋಗ ತನುಭಾವ ವಿಚಾರ ಧನಭಾವವಿಚಾರ ತೃತೀಯಭಾವ ವಿಚಾರ ಚತುರ್ಥಭಾವವಿಚಾರ ಪಂಚಮಭಾವವಿಚಾರ ಷಷ್ಠಮಭಾವ ವಿಚಾರ ಸಪ್ತಮಭಾವ ವಿಚಾರ ಅಷ್ಟಮಭಾವ ವಿಚಾರ ನವಮಭಾವ ವಿಚಾರ ದಶಮಭಾವವಿಚಾರ ಏಕಾದಶಭಾವ ವಿಚಾರ ದ್ವಾದಶಭಾವ ವಿಚಾರ, ಮೇಷಾದಿಯಾಗಿ ಮೀನದವರಿಗೂ ೧೨ ಲಗ್ನಗಳ ಫಲವನ್ನು ಇದಲ್ಲದೆ ಇನ್ನೂ ಅನೇಕ ವಿಷಯಗಳನ್ನು ಈ ನೋಟೀಸಿನಲ್ಲಿ ಬರೆದು ತೋರಿಸಲು ಸಾಧ್ಯವಲ್ಲವೆಂದು ಸದರಿ ಗ್ರಂಥದಲ್ಲಿ ಇರುವ ವಿಷಯವನು ಸ್ವಲ್ಪಮಟ್ಟಿಗೆ ಸೂಚಿಸಿರುತ್ತೇನೆ.

ಜಾತಕಸುಧಾಸಾರಮಂಜರಿ ಗ್ರಂಥ ೧ ಕ್ಕೆ ೦-೧೪-೧.

ನವಗ್ರಹಗಳ ದಂಡಕವು ವಿಸ್ತಾರವಾಗಿ ತಯಾರಾಗಿರುತ್ತದೆ. ಕ್ರಯ ೧ಕ್ಕೆ ೦-೨-೦.

ಅಥವಾ ಎರಡಾಣೆ ಸ್ಟಾಂಪುಗಳನ್ನು ಕಳುಹಿದವರಿಗೆ ಕಳುಹಿಸುತ್ತೇವೆ.

ನಮ್ಮ ವಿಳಾಸ:—
ಬಳ್ಳಾರಿ ಗಣೇಶನಗುಡಿ ಬೀದಿ ಕೊಟ್ಟೂರು ಸ್ವಾಮಿಗಳ
ಮಠದ ಶಿದ್ಧಾಂತಿ ಮಲ್ಲಿಕಾರ್ಜುನ ಶಾಸ್ತ್ರಿಗಳು,
ಬಳ್ಳಾರಿ.

11

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.



ಮಿಂಚಿನ ಉಂಗುರವೂ.



ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಆದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ್,
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಬಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

12

ಲೋಕಾಮಯಾಂಕುಶ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.



೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ವಸಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರತು, ಹಲ್ಲುಗಳ ಪಾಚಿ, ಇಗರೂಡಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಾಗಬೇಕಾದದ್ದಿಲ್ಲ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. [illegible] ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಅ. ೮. ವಿರತರಿಂದ ಟಪಾಲ್ ಖರ್ಚು ೪ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ—ಶ್ರೀ [illegible]
[illegible]ಶಾಲಾ, ಮೈಸೂರು.

9 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪುಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ROSKOPF
SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡು ವಾಚ್.

MOTORREGULATOR
LEVER
SWISS MADE

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ನೋರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜ಼ನ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜ಼ನ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅತ್ಯಾವಶ್ಯಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

21

ಉತ್ತಮ ಗ್ರಂಥಗಳು.

ಶಿವಪಂಚಸ್ತವ:- ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.—ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಹಿತವಾಗಿದೆ.

ಅಡವಿಲಿಂಗಸ್ವಾಮಿಗಳು, ಹೊಸಮಠ ಮೈಸೂರು.

“ ಅಗತ್ಯ ವಿಚಾರ. ”

4

ಬೆಲೆ ೬|| ಆಣೆ. ವಿ. ಪಿ. ಯಿಂದ ೭ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ “ ಅಗತ್ಯವಿಚಾರ” ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶವೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಫಿಕೇಟ್‌ಗಳು ಇದುವರೆಗೆ ೩೨ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು ! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ :—ವೀರಭದ್ರಪ್ಪ ಆರುಬೆರಳಿನ,
ಪೋಸ್ಟ್-ಬಾಗೇವಾಡಿ, ಡಿ|| ಬೆಳಗಾಂವ.

ಉತ್ತಮ ಗ್ರಂಥಗಳು.

124

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦. ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರ ಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕಂದಂ.— ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ, ಮೈಸೂರು.

೧೯೧೧ನೇ ಇಸವಿ ಜೂನ್ ತಾ|| ೨೬ರಿಂದ ೧೯೧೧ನೇ ಜುಲೈ ತಾ|| ೨ ರವರಿಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಜ್ಯೇಷ್ಠ ಬ|| ಅಮಾವಾಸ್ಯೆಯಿಂದ ಆಷಾಢ ಶು|| ಷಷ್ಠಿವರಿಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು ತೇದಿ
26	ಸೋ	ಅ	31-41	ಮೃ	13-29	12
27	ಮಂಗ	ಪಾ	25-51	ಪು	9-20	13
28	¹ ಬುಧ	ಬಿ	20-25	ಪುಷ್ಯ	5-49	14
29	ಗುರು	ತ	14-22	ಶ್ಲೇ	2-4	15
30	² ಶುಕ್ರ	ಚೌ	10-13	ಮ	56-49	16
1	ಶನಿ	ಪಂ	6-31	ಪು	55-48	17
2	ಭಾನು	ಷ	2-49	ಉತ್ತ	55-54	18

(1) ನಂಜನಗೂಡಿನಲ್ಲಿ ಮಹಾರ್ಥಂಬೋತ್ಸವ (2) ದೇಶರಾಜೆಅರಸಿನವರ ಕುಮಾರರ ವರ್ಧಂತಿ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ✱ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಜುಲೈ ತಾರೀಖು ೩ ನೇ ಸೋಮವಾರ. [ಸಂಚಿಕೆ ೨೩

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧|| ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸುಲಭಕ್ರಯ! ಪಾತರಿಮಾಲ್ !! ಬಿಡಬೇಡಿರಿ!!!

10

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ| ೧ಕ್ಕೆ	೬	ಕಸ್ತೂರಿ ಬಿಲ್ಲೆ ತೊ| ೧ಕ್ಕೆ	೨
೨ ಅಂಬರ್‌ಬತ್ತಿ ಸೇ| ೧ಕ್ಕೆ	೪	ಜವಾಜಿ ಬಿಲ್ಲೆ ತೊ| ೧ಕ್ಕೆ	೧
ಕಸ್ತೂರಿ ಬತ್ತಿ ಸೇ| ೧ಕ್ಕೆ	೨||	ಅರಗಜ| ತೊ ಡಬ್ಬಿ ೧ಕ್ಕೆ	|
ಪುನಗಿನ ಬತ್ತಿ ಸೇ| ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ| ೧ಕ್ಕೆ	|
ಗುಲಾಬ್ ಬತ್ತಿ ಸೇ| ೧ಕ್ಕೆ	||	ಸುರಂಗಿ ಸೆಂಟ್ ಸಿ| ೧ಕ್ಕೆ	೧
ನಕ್ಷತ್ರಕಾಂತಿಬ| ಸೇ| ೧ಕ್ಕೆ	೧	ಸ್ವದೇಶಿ ಫೇ ಪೌ|ಡ| ೧ಕ್ಕೆ	|
ಕಾಶ್ಮೀರ್‌ಕೇಸ್ರಿ ತೊ| ೧ಕ್ಕೆ	೧	ಪಚ್ಚಕರ್ಪೂರ ತೊ| ೧ಕ್ಕೆ	|||

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರಕುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂದೊರೆಯದು.

ಎ. ಆರ್. ಸುಬ್ಬಾಶೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

೭೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

6

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವದು. (೩) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಶಕ್ತಿಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದ್ದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತ ವಾಗಿರುವದು. (೬) ಚಿತ್ರಕಾಪಟ್ಯ ವ್ಯಾಪಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಹಿಂದಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ [illegible] ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಮುಂತಾದ ಸುಗಂಧದ್ರವ್ಯಗಳು; ಪ್ಲೇಗು, ಕಾಲರಾ ಮುಂತಾದ ಜಾಡ್ಯವ್ಯಾಧಿಗಳಿಗೆ ಮುಖ್ಯ ಔಷಧಗಳು; ಭಾವನಕ್ಷೆ ಚಿತ್ರಮುದ್ರಾಪಟಗಳು; ಮೊದಲಾದ ಸಾಮಾನುಗಳು ನಮ್ಮಲ್ಲಿ ದೊರೆಯುತ್ತವೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

ಪಂಡಿತ ಎಲ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ
47 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಷೆ ೧ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಷೆ ೦—೪—೦., ೨೪ ಮಾತ್ರೆ ಸೀಷೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಷೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಷೆ ೦—೩—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦—೬—೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಷೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಷೆ ೦—೪—೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಷೆ ೨—೦—೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧—೦—೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦—೮—೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦—೧೨—೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರೆಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇನ್ನೂ ವಿವರವು ಬೇಕಿದ್ದವರು ಮೇಲಿನ ವಿಳಾಸಕ್ಕೆ ಬರೆಯಿರಿ.

ಇಲ್ಲಿನೋಡಿ ವಿಶೇಷಸೂಚನೆಗಳು !

8 ಕಾಶೀವಿಶ್ವೇಶ್ವರಪ್ರಸನ್ನ.



KASHI VISHWESHWAR S.N.U. & Co
BENARES CITY.

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ !

ತಾವು ನಿತ್ಯವು ಉಡುವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ ? ಅದಕ್ಕೆ ಸಂದೇಹವೇನು !

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ !!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪಟಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಖರ್ಚ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟ್ಲಾಗ್, ೪ ಪಾದಾಕಾರ್ಡ್, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರಸ್ ಕಾರ್ಡ್, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯುವ ವಿಳಾಸಕ್ಕೆ ಕಳಿಹಿಸಲಾಗುವುದು. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—
ಎಸ್. ಉಡುಪಿ ನಾರಾಯಣಾಚಾರ್ಯ ಅಂಡ್ ಕೋ
ಬನಾರಸ್‌ಸಿಟಿ ಶ್ರೀ ಕ್ಷೇತ್ರಕಾಶಿ.
S. Udipi Narayenacharya & Co.
Benares City.

ಸೌಗಂಧಿಕಾಪರಿಣಯ

—:o:—

(ಕಳೆದವಾರದಶೇಷ.)

ಎಲೈ ರಾಜನೆ! ಮತ್ತೂ ಈ ಅಶ್ವಗಳ ಚಾತುರ್ವರ್ಣ್ಯ ಲಕ್ಷಣವು ರಹಸ್ಯವಾಗಿರುವುದು. ಅದಂ ಪೇಳುವೆನು. ಬ್ರಹ್ಮಜಾತಿಯ ಅಶ್ವಲಕ್ಷಣವೆಂತೆನೆ– ಒಳ್ಳೇ ಸ್ವಭಾವದಿಂ, ಶುದ್ಧ ವ್ಯಾಪಾರದಿಂ, ಕಾಂತಿಯಿಂದೊಡಗೂಡಿ, ಲಕ್ಷ್ಮೀಕರಗಳಾಗಿ ಒಳ್ಳೇ ಮನಸ್ಸು ಧೈರ್ಯಯುಕ್ತಗಳಾಗಿ, ದೇವಗಂಧರ್ವರಿಗೆ ಯೋಗ್ಯವಾದ ಬಲವು, ವ್ಯಾಪಾರಗಳು, ಶುಭ್ರವರ್ಣವು, ಕೆಂಪುವರ್ಣವು, ಜೇನುತುಪ್ಪದಂತೆ ಪಿಂಗಳವರ್ಣವು ಸಹ ಉಳ್ಳವಾಗಿ, ಸ್ವೇದಮೂತ್ರಾದಿಗಳಲ್ಲಿ ಲಾವಂಚ, ತುಪ್ಪ, ಅರಳು ಇವುಗಳೊಡನೆ ಸಮಾನವಾದ ವಾಸನೆಯುಳ್ಳುವಾಗಿ, ಪುಷ್ಪಮಾಲೆಗಳಲ್ಲಿಯೂ, ಸುಗಂಧದಲ್ಲಿಯೂ, ಆಜ್ಯದಲ್ಲಿಯೂ ಆಸಕ್ತಿಯುಳ್ಳ ಅಶ್ವಗಳು ಬ್ರಹ್ಮಜಾತ್ಯಶ್ವಗಳು. ಬಹು ಧೈರ್ಯವು, ತೇಜಸ್ಸು, ಭಾರವಂ ಸಹಿಸೋಣವು, ಕೋಪವು, ಶೌರ್ಯವು, ಮಹಾಧ್ವನಿಯು, ಕ್ರೂರವಾದ ಸ್ವಭಾವವು, ಸ್ಥೂಲವಾದ ಶರೀರವು, ಯಕ್ಷರಿಗೆ ಯೋಗ್ಯವಾದ ಬಲವು, ವ್ಯಾಪಾರಗಳು, ಲಕ್ಷಣಗಳು ಕೂಡ ಉಳ್ಳವಾಗಿ, ಶುಭ್ರನೀಲ ಮೊದಲಾದ ಚಿತ್ರವರ್ಣದಿಂದೊಡಗೂಡಿ, ಸ್ವೇದಾದಿಗಳಲ್ಲಿ ಪುಷ್ಪಗಳೊಡನೆ ಸಮಾನವಾದ ಒಳ್ಳೇವಾಸನೆಯುಳ್ಳುವಾಗಿ, ಮಲ್ಲಿಗೇ ಹೂವಿನಂತೆಯೂ ವೈಡೂರ್ಯವಂತೆಯೂ ನೇತ್ರವುಳ್ಳುವಾಗಿ, ವ್ಯಕ್ತವಾದ ಅಂಗಗಳಿಂದೊಡಗೂಡಿ ಕಷ್ಟವಂ ಸಹಿಸುವ ಅಶ್ವಂಗಳು ಕ್ಷತ್ರಿಯಜಾತ್ಯಶ್ವಂಗಳನಿಸುವುವು. ಸ್ಥಿರವಾದ ಸ್ವಭಾವವು, ಭಾರವಂ ಸಹಿಸೋಣವು, ಗಾಳಿ ಬಿಸಲುಗಳಲ್ಲಿ ಶ್ರಮಪಡುತ, ಸಂತಾಪವಂ ಹೊಂದದೆ, ಸೌಖ್ಯದನೆಯಲ್ಲಿ ಹರ್ಷವಂ ಹೊಂದದೆ, ಮಧ್ಯಮವೇಗವುಳ್ಳುವಾಗಿ, ಕ್ರೌಂಚಪಕ್ಷಿಯ ರಕ್ಕೆಯಂತೆ ಶುಭ್ರವರ್ಣದೊಡನೆ ಕೂಡಿರುವ ಕೆಂಪುವರ್ಣವುಳ್ಳುವಾಗಿ, ತಳರುಗಳಂತಿರುವ ಕಾಂತಿಯಿಂದೊಡಗೂಡಿ, ಜಲಪಾನದಲ್ಲಿ ಅತ್ಯಾಸಕ್ತಿಯು ಸ್ವೇದಾದಿಗಳಲ್ಲಿ ಆಡುಕಪಿಗಳು, ಇವುಗಳೊಡನೆ ಸಮಾನವಾದವಾಸನೆ ಉಳ್ಳುವಾಗಿ, ರಾಕ್ಷಸರಿಗೆ ಯೋಗ್ಯವಾದ ವಾಸನೆಯುಳ್ಳುವಾಗಿ, ಜಿತೇಂದ್ರಿಯಗಳಾದ ಅಶ್ವಗಳು ವೈಶ್ಯಜಾತ್ಯಶ್ವಗಳು. ಅಶುದ್ಧವ್ಯಾಪಾರವು, ದುರ್ಲಕ್ಷಣಗಳು, ದುರ್ಗುಣಂಗಳು, ಇತರ ಜಾತ್ಯಶ್ವಂಗಳಿಂದ ಭಕ್ಷಿಸಿ ವಿಕ್ಕ ಹುರಳಿ ಹುಲ್ಲು ನೀರುಗಳಲ್ಲಿ ಆಸಕ್ತಿಯುಳ್ಳುವಾಗಿ, ರಕ್ಷಿಸುವವರಂ ಕಚ್ಚಿ ಒದೆಯುತ, ಮುರಿಯುತಲಿರುವ ಮರದಂತೆ ಧ್ವನಿಯುಳ್ಳುವಾಗಿ, ಸ್ವೇದಾದಿಗಳಲ್ಲಿ ಕಾಗೆ ಗೂಡಿನಂತೆ ವಾಸನೆಯುಳ್ಳುವಾಗಿ, ಪಿಶಾಚಗಳಿಗೆ ಯೋಗ್ಯವಾದ ಬಲವುಳ್ಳ ಅಧಮಾಶ್ವಂಗಳು ಶೂದ್ರಜಾತ್ಯಶ್ವಂಗಳು. ಈ ರೀತಿಯಾಗಿ ಅಶ್ವಜಾತಿ ಲಕ್ಷಣಗಳಂ ತಿಳಿದ ವೈದ್ಯಶ್ರೇಷ್ಠನು ಲಾಯಗಳಲ್ಲಿ ಜಾತಿಗಳಂ ವಿಂಗಡಿಸಿ, ಪ್ರತ್ಯೇಕಪ್ರತ್ಯೇಕವಾಗಿ ಆಯಾಯಾ ಜಾತಿಗಳ ಅಶ್ವಗಳಂ ಕಟ್ಟಿಸಬೇಕು. ಎಲೈ ರಾಜನೆ! ಇನ್ನುಮೇಲೆ ಅಶ್ವಗಳ ಪ್ರಕೃತಿಯಂ ಪೇಳುವೆನು. ಗ್ರೀಷ್ಮಋತುವಿನ ಅಂತದಲ್ಲಿ, ವರ್ಷಋತುವಿನ ಆದಿಯಲ್ಲಿಯೂ ನಿಸ್ಸಾರವಾದ, ಕಠಿಣವಾದ, ತೃಣ ಬಳ್ಳಿ ತರಗು ಮೊದಲಾದ ಆಹಾರದಿಂದ ಉದರಭರಣವಂ ಮಾಡುವ ಅಶ್ವಗಳು ಹೆಣ್ಣು ಕುದುರೆಗಳು ಕೂಡ ಅಧಿಕವಾದ ವಾತಪ್ರಕೃತಿಯಿಂದೊಡಗೂಡಿರುವುವು. ಈ ಕುದುರೆಗಳಿಂ ಪುಟ್ಟಿದ ಕುದುರೆಗಳು ವಾತಪ್ರಕೃತಿಗಳೆನಿಸಿಕೊಂಬುವುವು. ಈ ಕುದುರೆಗಳು ಕಠಿಣವಾದ ರೋಮವು ಯಥಾರ್ಥವಾದ ಜ್ಞಾನವು, ವಿಕಾರವು, ಚಾಂಚಲ್ಯವು ಉಳ್ಳುವಾಗಿ, ಅಶುಚಿಗಳಾಗಿ ಸರ್ವಕಾಲದಲ್ಲಿಯೂ ಜಾಗರಿರುತ, ನಿದ್ರೆಯಂ ಮಾಡುತಲಿರುವುವು. ಪಿತ್ತಪ್ರಕೃತಿಗಳು ಹೇಗೆಂದರೆ– ವರ್ಷಾಕಾಲದ ಕೊನೆಯಲ್ಲಿಯೂ, ಹಿಮಕಾಲ ಪ್ರಾರಂಭದಲ್ಲಿಯೂ ಯೌವನವಂ ವಹಿಸುವುವಾದಾಗ್ಯೂ, ಬಿಸಲಿಗೆ ಅತ್ಯಂತ ಸಂತಪ್ತಗಳಾಗುತ, ಅತ್ಯಂತವಾಗಿ ತೃಣಗಳಂ ಭಕ್ಷಿಸುತ, ಅತಿ ಪಿತ್ತಪ್ರಕೃತಿಯುಳ್ಳುವಾಗಿರುವುವು. ಈ ರೀತಿಯಲ್ಲಿರುವ ಕುದುರೆಗಳಲ್ಲಿ ಜನಿಸಿದ ಕುದುರೆಗಳು ಪಿತ್ತಪ್ರಕೃತಿಗಳೆಂದು ಹೇಳಲ್ಪಡುವುವು. ಈ ಕುದುರೆಗಳು ತೀಕ್ಷ್ಣವಾದ ಸ್ವಭಾವವು, ಶೌರ್ಯವು, ಜಲದಲ್ಲಿ ಅತ್ಯಂತ ಪ್ರೀತಿಯು, ಕಟವಾಯಿಗಳಲ್ಲಿ ಕೆಂಪುವರ್ಣವು. ಒಳ್ಳೇ ಬುದ್ಧಿಯುಳ್ಳುವಾಗಿ, ಅಧಿಕವಾಗಿ ಹುಲ್ಲು ಹುರಳಿಗಳಂ ಭಕ್ಷಿಸುತ, ಅತ್ಯಂತ ರೋಷವುಳ್ಳುವಾಗಿರುವುವು. ಶ್ಲೇಷ್ಮಪ್ರಕೃತಿಗಳು ಹೇಗೆಂದರೆ– ಶಶಿಋತುವಿನಲ್ಲಿ ಬಲವಾದ ಮಾಂಸದಿಂದೊಡಗೂಡಿ, ಸಮರ್ಥಂಗಳಾಗಿರುವುವು. ಈ ಕುದುರೆಗಳಲ್ಲಿ ಜನಿಸಿದ ಕುದುರೆಗಳು ದಪ್ಪವಾದ ಶರೀರವುಳ್ಳುವಾಗಿ, ಮಂದಸ್ವಭಾವವು, ಅಧಿಕವಾದ ಬಲವು, ಕ್ಷಮೆಯು ಉಳ್ಳುವಾಗಿ, ರೋಗದಿಂ ರಹಿತಂಗಳಾಗಿ, ಮನೋಹರವಾದ ಗಂಭೀರವಾದ ದೃಷ್ಟಿಯಿಂದೊಡಗೂಡಿರುವುವು. ಅಶ್ವಗಳ ಲಕ್ಷಣಗಳಂ ತಿಳಿದವದಿಂದ ಲಕ್ಷಣಸ್ಥಾನವು, ಶರೀರವು, ಕೂದಲುಗಳ ಬಣ್ಣವು, ನಡಗೆಯು, ಮತ್ತೂ ಬೆವರು ಮೂತ್ರಾದಿಗಳ ವಾಸನೆಯು, ಸ್ವರವು, ಕಾಂತಿಯು ಈ ಪ್ರಕಾರವಾಗಿ ಎಂಟು ಲಕ್ಷಣಗಳು ತಿಳಿಯತಕ್ಕವು. ಇವುಗಳ ಶರೀರದಲ್ಲಿ ಸಕಲ ಲಕ್ಷಣಗಳಿಗೂ, ಆಶ್ರಯವಾದಕಾರಣ ಶರೀರ ಲಕ್ಷಣವು ಹೇಳಲ್ಪಡುವುದು. ಅದೆಂತೆನೆ– ತುಟಿಗಳು ಎಲ್ಲಾ ಕಡೆಯಲ್ಲೂ ಅಶ್ವಂತ ಕೆಂಪಾಗಿದ್ದರೂ, ಚರ್ಮಗಳು ಶ್ರೇಷ್ಠಗಳಾಗಿ, ಮೃದುಗಳಾಗಿ ಸುಕ್ಕುಗಳಿಲ್ಲದೇ ಇದ್ದರೂ, ನಾಲಿಗೆಯು ಕೆಂಪಾಗಿ ಸೂಕ್ಷ್ಮವಾಗಿ ಕೃಶವಾಗಿದ್ದರೂ, ದವಡೆಗಳು ರಕ್ತವರ್ಣವಾಗಿ ಬಹಳ ಉದ್ದವಾಗಿ ವಿಸ್ತಾರವಾಗದಿದ್ದರೂ, ದಂತಗಳು ಸಮವಾಗಿ, ನುಣುಪಾಗಿ, ಮಿಂಚುತ, ಗಟ್ಟಿಯಾಗಿ ದೊಡ್ಡವಾಗಿದ್ದರೂ, ಕಣ್ಣು ಹೊಳೆಯುತ್ತ, ಮೃದುವಾದ ರೆಪ್ಪೆಗಳಿಂ ಕೂಡಿ ವಿಸ್ತಾರವಾಗಿ, ಜೇನುತುಪ್ಪದಂತೆ ಪಿಂಗಳವರ್ಣವಾಗಿ ಪ್ರಸನ್ನವಾಗಿ, ಕಪಿಂಜಲವೆಂಬ ಪಕ್ಷಿಯ ಕಣ್ಣುಗಳಂತೆಯೂ, ಹುಲ್ಲಿಗಳ ಕಣ್ಣುಗಳಂತೆಯೂ, ಟಿಟ್ಟಿಭಪಕ್ಷಿಗಳ ಕಣ್ಣುಗಳಂತೆಯೂ ಇರುವುದಾದರೂ, ಲಲಾಟವು ಒಳ್ಳೇ ಸುಳಿಯುಳ್ಳುದಾಗಿ ವಿಶಾಲವಾಗಿದ್ದರೂ, (ಸಶೇಷ.)

ಮೈಸೂರು ಸಂಸ್ಥಾನದ ಆಯಾ ವಿದ್ಯಾಭ್ಯಾಸದ ಸ್ಥಿತಿ.

(ಕಳೆದವಾರದ ಶೇಷ.)

ವ್ಯವಸಾಯದ ಪಾಠಶಾಲೆ.

ನಮ್ಮ ಸಂಸ್ಥಾನದಲ್ಲಿ ವ್ಯವಸಾಯದ ಪಾಠಶಾಲೆಯು ಬೇರೆ ಇಲ್ಲದಿದ್ದರೂ ನಾರ್ಮಲ್ ಸ್ಕೂಲಿನಲ್ಲಿ ವ್ಯವಸಾಯ ವಿಷಯವನ್ನು ಬಹಳ ಚೆನ್ನಾಗಿ ಹೇಳಿಕೊಡುವರು. ಮೈಸೂರು ಲೋವರ್ ಸೆಕೆಂಡರಿಗೆ ಹೋಗುವ ವಿದ್ಯಾರ್ಥಿಗಳು ವ್ಯವಸಾಯವನ್ನು ಐಚ್ಛಿಕಭಾಷೆಯನ್ನಾಗಿ ತೆಗೆದುಕೊಳ್ಳಬಹುದು. ಮೇಲ್ಕಂಡ ಪಾಠಶಾಲೆಗೆ ಸಂಬಂಧಿಸಿದ ಫಾರಂನ (ಮೈದಾನದ) ಲ್ಲಿ ನಮ್ಮ ದೇಶದ ತರಕಾರಿ, ಭತ್ತ, ರಾಗಿ ಮೊದಲಾದುವು ಬೆಳೆವುದನ್ನು ಹೇಳಿಕೊಡುವರು. ಈ ವ್ಯವಸಾಯದ ವಿಷಯವು ಅಭಿವೃದ್ಧಿಗೆ ಬರಲು ಒಕ್ಕಲಿಗರ ಸಂಘವು ಪ್ರಯತ್ನಿಸುತ್ತಿರುವುದು. ಇದರ ಫಲವು ನಿರೀಕ್ಷಣೀಯವಾದುದಾಗಿರುವುದು.

ಕೈಗಾರಿಕೆಯನ್ನು ಹೆಚ್ಚಿಸಲೂ ಬಾಲಕರಬುದ್ಧಿಯು ಮತ್ತಿಷ್ಟು ಸೂಕ್ಷ್ಮವಾಗಲೂ, ಈಗ "ಸ್ಲಾಯಿಡ್" ಎಂಬ ಒಂದು ವಿಧವಾದ ಕ್ರಮವನ್ನು ಪ್ರಾರಂಭಿಸಿರುವರು. ಪ್ರತಿ ಹೈಸ್ಕೂಲ್ ವಿದ್ಯಾರ್ಥಿಯೂ ವಾರಕ್ಕೊಮ್ಮೆ ೨ ಗಂಟೆಕಾಲ ಈ ಕೆಲಸವನ್ನು ಮಾಡಬೇಕು. ಇದನ್ನು ಉಪಾಧ್ಯಾಯರಿಗೆ ಕಲಿಸಲು ಬೆಂಗಳೂರು, ಚನ್ನಪಟ್ಟಣ ಮೊದಲಾದ ಸ್ಥಳಗಳಲ್ಲಿ ಪಾಠಶಾಲೆಗಳು ಏರ್ಪಟ್ಟಿವೆ.

ಇಂಜನೀರು ಪಾಠಶಾಲೆ.

ಈ ಪಾಠಶಾಲೆಯು ಮೈಸೂರಿನಲ್ಲಿ ಸ್ಥಾಪಿತವಾಗಿದೆ. ಈ ಪಾಠಶಾಲೆಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನೂ ಉತ್ತೀರ್ಣರಾಗದವರನ್ನೂ ತೆಗೆದುಕೊಳ್ಳುತ್ತಾರೆ. ಎರಡುವರ್ಷ ಕಾಲದಲ್ಲಿಯೇ ವಿದ್ಯಾರ್ಥಿಗಳನ್ನು ತರಬೇತು ಮಾಡುತ್ತಾರೆ ಬುದ್ಧಿವಂತರಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವು ಕೊಡಲ್ಪಡುವುದು. ಕಟ್ಟಡ, ಸೇತುವೆ ಮುಂತಾದುವುಗಳ ಕಟ್ಟುವಿಕೆಯನ್ನು ಕಲಿಸುತ್ತಾರೆ. ಶ್ರೀರಂಗಪಟ್ಟಣ, ಮಾರೀಕಣಿವೆ, ಮೊದಲಾದ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡುಹೋಗಿ, ಅಲ್ಲಿನ ಕೆಲಸಗಳನ್ನು ತೋರಿಸಿ, ಅದರಂತೆ ಕಟ್ಟಲು ಹೇಳಿಕೊಟ್ಟು ಅವರ ಬುದ್ಧಿವಂತಿಕೆಯನ್ನು ಹೆಚ್ಚಿಸುವರಲ್ಲದೆ ಕೆಲಸಗಾರರಾಗುವಂತೆ ಮಾಡುವರು.

ವ್ಯಾಪಾರಕ್ಕೆ ಸಹಾಯಕವಾದ ವಿದ್ಯೆಯನ್ನು ಬೋಧಿಸುವ ಪಾಠಶಾಲೆಗಳು.

ಈ ವಿಧವಾದಪಾಠಶಾಲೆಗಳು ಮೈಸೂರಿನಲ್ಲಿ ಎರಡು ಮೂರಿವೆ. ಬೆಂಗಳೂರಿನಲ್ಲಿ ಅನೇಕವಾಗಿವೆ. ಮೈಸೂರಿನಲ್ಲಿ ಸಿಟಿಟೈಪ್‌ರೈಟಿಂಗ್ ಇನ್ಸ್ಟಿಟ್ಯೂಟ್ ಎಂಬ ಒಂದು ಪಾಠಶಾಲೆಯೂ, ಹಾರ್ಡ್ವಿಕಾಲೇಜಿನಲ್ಲಿ ವೆಸ್ಲಿಯನ್ ಮಿಷನ್ನಿನವರ ಮತ್ತೊಂದು ಪಾಠಶಾಲೆಯೂ ಇರುವುವು. ಈ ಪಾಠಶಾಲೆಗಳಲ್ಲಿ ವ್ಯಾಪಾರಸ್ಥರಿಗೆ ಅನುಕೂಲವಾದ ಟೈಪ್ ರೈಟಿಂಗ್, ಷಾರ್ಟ್‌ಹ್ಯಾಂಡ್, ಲೆಖ್ಖ ಬರೆಯುವುದು ಮೊದಲಾದುವನ್ನು ಹೇಳಿಕೊಡುವರು.

ಕುರುಡಮೂಕರ ಪಾಠಶಾಲೆ.

ಮೈಸೂರು ದೇಶದಲ್ಲಿರುವ ಪಾಠಶಾಲೆಗಳಲ್ಲೆಲ್ಲಾ ಇದೇ ಪ್ರೋತ್ಸಾಹರ್ಹವಾದುದು. ಕುರುಡರಿಗೆ ಓದುವುದನ್ನೂ ಬರೆಯುವುದನ್ನೂ ಹೇಳಿಕೊಡುವರು. ಅನರ್ಹರಿಗೆ ಸಂಗೀತ, ಪಿಟೀಲ್ ಬಾರಿಸುವುದು, ಮೃದಂಗ ಬಾರಿಸುವುದು ಮೊದಲಾದುವನ್ನು ಹೇಳಿಕೊಡುವರು. ಇವನ್ನೂ ಕಲಿಯಲಾರದವರಿಗೆ, ಮೂಕರಿಗೆ, ಕಿವುಡರಿಗೆ, ನೇಯ್ಗೆಯ ಕೆಲಸಗಳನ್ನು ಹೇಳಿಕೊಡುವರು. ಕುರುಡರು, ಕಿವುಡರು ಯಾರ ಅಧೀನದಲ್ಲೂ ಇರದೆ ಸ್ವತಂತ್ರವಾಗಿ ಜೀವನವನ್ನು ಸುಖವಾಗಿ ಕಳೆಯಲು ಮಾರ್ಗವನ್ನು ತೋರಿಸಿಕೊಡುವರು. ಈ ಪಾಠಶಾಲೆಯನ್ನು ಈಗತಾನೆ ಸರ್ಕಾರದವರು ಸೇರಿಸಿಕೊಂಡರೆಂಬುದನ್ನು ತಿಳಿಸಲು, ಸಂತೋಷಪಡುವೆವು. ಕಿವುಡ ಮೂಕರಿಗೆ ಮರಗೆಲಸ, ಹೊಲಿಗೆ ಕೆಲಸ, ಚಿತ್ರಕೆಲಸವೇ ಮೊದಲಾದುವನ್ನು ಹೇಳಿಕೊಡುವರು.

ಮೇಲ್ಕಂಡ ವಿದ್ಯಾಭ್ಯಾಸಕ್ಕೆ ೧೯೦೭—೮ ನೇ ವರ್ಷಗಳಲ್ಲಿ ಸಂಸ್ಥಾನವು ವೇತನರೂಪವಾಗಿ ೩೬,೦೦೦ ರೂ. ಗಳನ್ನು ವ್ಯಯ ಮಾಡಿತು. ಇದರಲ್ಲಿ ೧೮,೦೦೦ ರೂಪಾಯಿಯು ಅಮೇರಿಕಾ ಯೂರೋಪು ಮೊದಲಾದ ಪರದೇಶಗಳಲ್ಲಿ ಎಲೆಕ್ಟ್ರಿಕ್‌ಇಂಜನೀರ್, ಮೊದಲಾದುವನ್ನು ಕಲಿಯುವವರಿಗೂ ಉಳಿದ ೨೩,೦೦೦ ರೂಪಾಯಿಗಳಲ್ಲಿ ಅರ್ಧಪಾಲು ಆಯಾ ಕಲೆಗಳನ್ನು ಕಲಿಯುವವರಿಗೂ, ಉಳಿದ ಮೊಬಲಗು ಮೈಸೂರು ದೇಶದಲಲ್ಲದೆ, ಬೊಂಬಾಯಿ, ಮದರಾಸು ಮೊದಲಾದ ಪ್ರಾಂತ್ಯಗಳಲ್ಲಿ ವಿದ್ಯಾಭ್ಯಾಸ ಮಾಡಿದವರಿಗೆ ಕೊಡಲ್ಪಟ್ಟಿರುವುದು. ೧೯೧೦–೧೧ ರಲ್ಲಿ ಇದಕ್ಕಿಂತ ಹೆಚ್ಚು ಹಣವನ್ನು ವ್ಯಯಮಾಡಿರುವರೆಂಬ ನಂಬುಗೆ ಇದೆ. ಮೈಸೂರು ಸಂಸ್ಥಾನವು ಪ್ರತಿ ವರ್ಷವೂ ಆಯಾ ವಿದ್ಯಾಭ್ಯಾಸಕ್ಕಾಗಿ ೫೦,೦೦೦ ರೂ. ಗಳನ್ನು ಖರ್ಚು ಮಾಡುವುದು. ಈ ವ್ಯಯವು ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಮಾಡುವ ಖರ್ಚಿನಲ್ಲಿ ಹದಿನಾರರಲ್ಲಿ ಒಂದುಭಾಗವಾಗಿದೆ. ನಾವು ದೂರವಾಗಿ ಆಲೋಚಿಸಿದರೆ ಪ್ರಜೆಗಳಿಂದಲೇ ಈ ವಿದ್ಯಾಭ್ಯಾಸವನ್ನು ಮತ್ತಿಷ್ಟು ಅಭಿವೃದ್ಧಿಗೆ ತರುವರೆಂಬ ನಂಬುಗೆಯು ನಮಗೆ ಸಂಪೂರ್ಣವಾಗಿರುವುದು. ಸರ್ಕಾರದವರೂ ಈ ವಿಷಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿರುವರೆಂಬುದು ಈಚೆಗೆ ಪ್ರಾರಂಭವಾಗಿರುವ ಸಂಪತ್ತನ್ನು ಅಭಿವೃದ್ಧಿ ಮಾಡುವ ಸಭೆ (ಏಕನಾಮಿಕ್ ಕಾನ್ಫರೆನ್ಸ್) ಯಿಂದ ವ್ಯಕ್ತವಾಗುವುದು.

ವಸ್ತುಪ್ರದರ್ಶನ.

ವ್ಯವಸಾಯ ಕೈಗಾರಿಕೆಗಳ ವಸ್ತುಪ್ರದರ್ಶನವು ಪ್ರತಿವರುಷವೂ ನಡೆಯುತ್ತಲಿರುವುದು. ಈ ಪ್ರದರ್ಶನದಿಂದ ಸಂಸ್ಥಾನದಲ್ಲಿ ಕೈಗಾರಿಕೆಯು ವರ್ಷವರ್ಷವೂ ಎಷ್ಟರಮಟ್ಟಿಗೆ ಅಭಿವೃದ್ಧಿಗೆ ಬರುತ್ತಲಿದೆ ಯೆಂಬುದು ತಿಳಿವುದು. ಪ್ರದರ್ಶನದಲ್ಲಿ ಅನೇಕ ರೈತರು ಉತ್ತು, ಬಿತ್ತು ತೋರಿಸುವರು. ಉತ್ತಮನಾದ ಬೇಸಾಯಗಾರನಿಗೆ ಬಹುಮಾನ ಸಿಗುವುದು. ಮಣ್ಣು ಕೆಲಸದವರೂ ತಮ್ಮ ಕೈಕೆಲಸದ ಚಮತ್ಕೃತಿಯನ್ನು ತೋರ್ಪಡಿಸುವರು. ಬುದ್ಧಿವಂತನಾದವನಿಗೆ ಬಹುಮಾನ ಸಿಗುವುದು.

ಹನುಮಾರ್.

ಅವಧಾನ.

ಪ್ರತಿ ಮನುಷ್ಯನಲ್ಲಿಯೂ ಜನ್ಮಿಸಿದಾಗಲೇ ಹಲವು ಶಕ್ತಿಗಳು ಗೂಢವಾಗಿ ಬೀಜರೂಪದಿಂದಿರುವುವು. ಅವು ಅಭ್ಯಾಸ ಬಲದಿಂದ ಕ್ರಮಕ್ರಮವಾಗಿ ಬೆಳೆಯಬೇಕಾಗಿರುವುವು. ಇಂತಹ ಶಕ್ತಿಗಳಲ್ಲಿ ಅವಧಾನವೂ ಒಂದು ಶಕ್ತಿಯಾಗಿದೆ. ಈ ಶಕ್ತಿಯು ಮನುಷ್ಯರಲ್ಲಿ ಇಲ್ಲದಿದ್ದರೆ ಪ್ರಪಂಚದ ಜ್ಞಾನವೂ ತನ್ನ ಜ್ಞಾನವೂ ಸಹ ಸರಿಯಾಗಿ ತಿಳಿಯದೆ ತಾವು ಜನ್ಮಿಸಿದುದೇ ವ್ಯರ್ಥವಾದಂತಾಗುವುದು. ಹಾಗಾದರೆ ಅಷ್ಟು ಮುಖ್ಯವಾದ ಅವಧಾನದ ವಿಷಯದಲ್ಲಿ ಪ್ರತಿಯೊಬ್ಬನೂ ವಿಚಾರ ಮಾಡುವುದು ಅತ್ಯಾವಶ್ಯಕವೇ ಆಗಿದೆಯಲ್ಲವೆ?

ಅವಧಾನದ ವಿಷಯವನ್ನು ವಿಚಾರ ಮಾಡಬೇಕಾದರೆ ಅದರ ಸ್ವಭಾವವನ್ನೂ, ಅವಶ್ಯಕತೆಯನ್ನೂ, ಅದರಿಂದ ಆಗುವ ಲಾಭಾಲಾಭ ವಿಚಾರಗಳನ್ನೂ ನಾವು ವಿಮರ್ಶಿಸಿ ನೋಡಬೇಕು. "ಅವಧಾನವೆಂದರೇನು?" ಎಂಬುದನ್ನು ತಿಳಿದಹೊರತು ಅದರ ವಿಷಯವಾಗಿ ಮುಂದುವರಿವುದು ಚೆನ್ನಲ್ಲ.

ಅವಧಾನವೆಂದರೆ ಬುದ್ಧಿ ಶಕ್ತ್ಯುತ್ತೇಜನಕ್ಕೆ ಬೇಕಾಗುವ ಇಂದ್ರಿಯಗಳನ್ನೆಲ್ಲಾ ಏಕಕಾಲದಲ್ಲಿ ಉದ್ದೇಶ ವಿಷಯದಲ್ಲಿಯೇ ನಿಲ್ಲಿಸುವುದಾಗಿದೆ. ಹೇಗೆಂದರೆ:—ಯಾವುದಾದರೊಂದು ವಿಷಯದ ಜ್ಞಾನವು ನಮಗೆ ತಿಳಿಯಬೇಕಾದರೆ ನಮಗೆ ಬುದ್ಧಿಯೇ ಸಹಾಯಮಾಡಬೇಕಾಗಿದೆ. ಬುದ್ಧಿಯು ಸರಿಯಾಗಿದ್ದಹೊರತು ನಮಗೇನೂ ತಿಳಿಯುವುದಿಲ್ಲ. ಹುಚ್ಚನಿಗೆ ಬುದ್ಧಿ ವಿಪರ್ಯಾಸ ಒದಗಿರುವುದರಿಂದಲೇ ಅವನಿಗೆ ಬುದ್ಧಿಶೂನ್ಯತೆಯೊದಗಿ ಸ್ವಭಾವಕ್ಕೆ ವಿಪರೀತವಾಗಿ ವರ್ತಿಸುತ್ತಿರುವನು. ಆ ಬುದ್ಧಿಶಕ್ತಿಯು ಉತ್ತೇಜನವಾಗಬೇಕಾದರೆ ಉದ್ದೇಶಿಸಿದ ವಸ್ತುವನ್ನು ತಕ್ಕಂತೆ ಕಣ್ಣು, ಕಿವಿ,ಮನಸ್ಸು, ಬಾಯಿ, ಮೂಗು ಮುಂತಾದುವುಗಳಿಂದ ವಿಮರ್ಶಿಸಲೇ ಬೇಕು. ಆದರೆ ಒಂದೊಂದು ಕಾಲದಲ್ಲಿ ಒಂದೊಂದು ಇಂದ್ರಿಯವನ್ನು ಉಪಯೋಗಿಸುವುದರಿಂದ ವಿಷಯಜ್ಞಾನವು ದೃಢವಾಗುವುದಿಲ್ಲ. ಯಾವ ವಿಷಯಕ್ಕೆ ಎಷ್ಟು ಇಂದ್ರಿಗಳು ಅವಶ್ಯಕವೋ ಅಷ್ಟನ್ನು ಏಕಕಾಲದಲ್ಲಿ ಆ ವಸ್ತುವಿನಲ್ಲಿ ನಿಲ್ಲಿಸಿರಬೇಕು, ಎಂದರೆ–ಪಾಠಶಾಲೆಯಲ್ಲಿ ಭೂಪಟವನ್ನು ಕಣ್ಣಿನಿಂದ ನೋಡಿದ ಕೆಲವು ಕಾಲದ ಮೇಲೆ ಅದಕ್ಕೆ ಸಂಬಂಧಿಸಿದ ವಿವರಣೆಯನ್ನು ಮನೆಯಲ್ಲಿ ಗಟ್ಟಿಯಾಗಿ ಓದಿಬಿಟ್ಟರಾಗಲೀ ಇಲ್ಲವೆ ಕೇಳಿದರಾಗಲೀ ಅಷ್ಟೇನೂ ಪ್ರಯೋಜನವಿರುವುದಿಲ್ಲ. ಆದುದರಿಂದಲೇ ಉದ್ದೇಶ ವಿಷಯದಲ್ಲಿ ಏಕಕಾಲದಲ್ಲಿಯೇ ಇಂದ್ರಿಯಗಳನ್ನು ಉಪಯೋಗಿಸಬೇಕೆಂದು ಹೇಳುವುದು.

ಮಗುವು ಹುಟ್ಟಿದಾಗ ಕಣ್ದೆರೆದೊಡನೆಯೇ ಅದರ ಕಣ್ಣಿಗೆ ಅಸ್ಪಷ್ಟವಾದ ಪ್ರಪಂಚವು ಕಾಣುವುದು; ಮನುಷ್ಯರು ಕಾಣುವರು. ಕ್ರಮಕ್ರಮವಾಗಿ ಬಗೆಬಗೆಯ ವಸ್ತುಗಳೂ, ಧ್ವನಿಗಳೂ, ಭಾಷೆಗಳೂ ಮೊದಲಾದವುಗಳೆಲ್ಲವೂ ಅದಕ್ಕೆ ತಕ್ಕ ವಿಷಯಗಳಾಗುವುವು. ಕೆಲವು ಕೆಲವು ವಿಷಯಗಳನ್ನ ಕೆಲವು ಕೆಲವು ಇಂದ್ರಿಯಗಳಿಂದಲೇ ತಿಳಿದುಕೊಳ್ಳಬೇಕಾಗಿದೆ. ಧ್ವನಿಯನ್ನು ತಿಳಿದುಕೊಳ್ಳುವ ಶಕ್ತಿಯು ಕಿವಿಗೆ ಇರುವುದೇ ಹೊರತು ಬಾಯಿಗಿರುವುದಿಲ್ಲ. ನೋಡುವ ಶಕ್ತಿಯು ಕಣ್ಣಿಗಿರುವುದೇ ಹೊರತು ಮೂಗಿಗೆ ಇಲ್ಲ. ಆದುದರಿಂದ ಯಾವ ವಿಷಯಕ್ಕೆ ಯಾವ ಇಂದ್ರಿಯವು ಅವಶ್ಯಕವೋ ಅದನ್ನು ಆ ವಿಷಯದಲ್ಲಿಯೇ ಚೆನ್ನಾಗಿ ಉಪಯೋಗಿಸುವುದು ಸಹಜವಾಗಿದೆ. ಮಗುವಿಗೆ ಇಂತಹ ಶಕ್ತಿಯು ಬೀಜರೂಪದಿಂದಿರುವುದರಿಂದಲೇ ಕ್ರಮಕ್ರಮವಾಗಿ ಲೋಕದ ವಿಷಯವನ್ನೆಲ್ಲಾ ತಕ್ಕಂತೆ ತಿಳಿಯಲು ಸಾಮರ್ಥ್ಯವನ್ನು ಪಡೆಯುವುದು. ಇಂತಹ ಶಕ್ತಿಯು ಅಭ್ಯಾಸಗೊಳಿಸದಿದ್ದರೆ ಕ್ರಮಕ್ರಮದಿಂದ ಕುಂಠಿತವಾಗಿ "ಆ ಶಕ್ತಿಯೇ ಇಲ್ಲವೋ?" ಎನ್ನುವಂತೆ ಮಾಡಿ ಬಿಡಬಹುದು. ಆದುದರಿಂದ ಅವಧಾನವನ್ನು ತಕ್ಕಂತೆ ಬೆಳೆಯಿಸಬೇಕಾದುದು ಅತ್ಯಾವಶ್ಯಕವಾಗಿರುವುದು.

ಅವಧಾನವು ಮನುಷ್ಯನಿಗೆ ಎಂತೆಂತಹ ಫಲವನ್ನು ತರಬಹುದೆಂಬುದನ್ನು ಸ್ವಲ್ಪ ವಿಚಾರಮಾಡಿದರೆ "ಉದ್ದೇಶಿಸಿದ ಕಾರ್ಯವು ಕೈಗೂಡುವುದಕ್ಕೆ ಅವಧಾನವು ಅವಶ್ಯಕವಾಗಿರುವುದು" ಎಂಬ ತತ್ವಾರ್ಥವು ಹೊರಡುವುದು. ಹೇಗೆಂದರೆ:—ಒಂದು ಗ್ರಂಥವನ್ನು ಓದುವುದಕ್ಕೆ ಉದ್ದೇಶಿಸಿದ ಮಾತ್ರದಿಂದಲೇ ಆ ಗ್ರಂಥದ ಸಂಪೂರ್ಣಜ್ಞಾನವು ದೊರೆಯುವುದಿಲ್ಲ. ಅದನ್ನು ತೆರೆದು, ಕಣ್ಣಿನಿಂದ ಚೆನ್ನಾಗಿ ನೋಡಬೇಕು. ಮನಸ್ಸನ್ನು ಅದರಲ್ಲಿಯೇ ನಿಲ್ಲಿಸಿರಬೇಕು. ಅವಶ್ಯಕವಾದರೆ ಬಾಯಿನಿಂದಲೂ ಹೇಳಬೇಕು. ಹೀಗೆ ಏಕಕಾಲದಲ್ಲಿ ತಕ್ಕ ಇಂದ್ರಿಯಗಳನ್ನು ಉಪಯೋಗಿಸಿದರೆ, ಓದಿದ ವಿಷಯವು ದೃಢವಾಗಿ ಕೇಳಿದಾಗ ಜ್ಞಾಪಕಕ್ಕೆ ಬರುವುದು. ಇದರಲ್ಲಿ ಸಂದೇಹವಿಲ್ಲ. ಹೀಗೆ ಮಾಡಿದರೆ ಆ ಪುಸ್ತಕದಿಂದ ಉಂಟಾಗಬಹುದಾದ ಫಲವನ್ನೆಲ್ಲಾ ಅವನು ನಿಜವಾಗಿಯೇ ಪಡೆದಂತಾಗುವುದು. ಹಾಗಿಲ್ಲದೆ ಕೈಯಲ್ಲಿ ಪುಸ್ತಕವನ್ನು ತೆರೆದಿಟ್ಟುಕೊಂಡು ನೆರೆಮನೆಯಲ್ಲಿ ಯಾರಾದರೂ ಸಂಗೀತವನ್ನು ಹಾಡುತ್ತಿದ್ದರೆ ಅದನ್ನು ಕೇಳುತ್ತಾ, ಒಂದು ಗಂಧದ ಬಿಲ್ಲೆಯನ್ನು ಮೂಸಿನೋಡುತ್ತಾ, ಬಾಯಿಂದ ಏನಾದರೂ ತಿಂಡಿಯನ್ನು ತಿನ್ನುತ್ತಾ ೪–೫ ಗಂಟೆಗಳ ಪರಿಯಂತ ಒಂದು ಪುಟವನ್ನೇ ನೋಡುತ್ತಿದ್ದರೂ, ಒಂದು ಪಙ್ತಿಯಾದರೂ ಅರ್ಥವಾಗದೆ ಇರುವುದು ಸಹಜವಲ್ಲವೆ? ಆದುದರಿಂದಲೇ ಯಾವ ಕೆಲಸಕ್ಕೆ ಯಾವ ಇಂದ್ರಿಯಗಳು ಅವಶ್ಯಕವೋ ಆ ಕೆಲಸಕ್ಕೆ ಆ ಇಂದ್ರಿಯಗಳನ್ನು ಉಪಯೋಗಿಸಬೇಕೇ ಹೊರತು ಇತರಕಡೆಗೆ ಮನವನ್ನು ಕೊಡಬಾರದು. ಅವಧಾನವಿಲ್ಲದೆ ನೂರಾರುಬಾರಿ ಓದುವುದಕ್ಕಿಂತಲೂ, ಅವಧಾನದಿಂದ ಒಂದೇಬಾರಿ ಓದಿದರೆ ಎಷ್ಟೋ ಪ್ರಯೋಜನವಾಗುವುದು. ಅವಧಾನವು ವಿದ್ಯಾಭ್ಯಾಸಕ್ಕೆಮಾತ್ರವೇ ಪ್ರಯೋಜನವೆಂದಲ್ಲ. ಎಲ್ಲರಿಗೂ, ಎಲ್ಲಾ ಕೆಲಸಗಳಿಗೂ ಅವಶ್ಯಕವೆ. ಒಬ್ಬ ನ್ಯಾಯಾಧಿಪತಿಯು ತನ್ನ ಮನೆಯ ಗೃಹಕೃತ್ಯದ ಆಲೋಚನೆಯನ್ನು ಮಾಡುತ್ತಾ ನ್ಯಾಯದ ತೀರ್ಪನ್ನು ಬರೆಯಲೆಳಸಿದರೆ, ಅವನ ನ್ಯಾಯವು ಸಮನ್ವಯವಾಗುವುದಿಲ್ಲ. ಗೃಹಿಣಿಯು ಅಡಿಗೆಯನ್ನು ಮಾಡುತ್ತಿರುವಾಗ ಅದರ ಮೇಲೆ ಗಮನವನ್ನಿಡದೆ, ಕೈತಪ್ಪಾಳೆಗಳಿಂದ ಸಂಗೀತವನ್ನು ಹಾಡುತ್ತ ಕುಳಿತರೂ, ಇಲ್ಲವೆ ರಂಗವಲ್ಲಿ ಮೊದಲಾದ ಚಿತ್ರಗಳನ್ನು ಬರೆಯುತ್ತ ಕುಳಿತರೂ, ಇಲ್ಲವೆ ನೆರೆಮನೆಯ ಗೃಹಿಣಿಯೊಡನೆ ಸಂಭಾಷಿಸುತ್ತ ಕುಳಿತರೂ ಆ ಅಡಿಗೆಯು ನೆಟ್ಟಗಾಗುವುದಿಲ್ಲ. ಆದುದರಿಂದ ಉದ್ದೇಶಿಸಿದ ಕೆಲಸದಲ್ಲಿಯೇ ಅವಧಾನವಿದ್ದರೆ ಆ ಕೆಲಸವು ಕೆಡುವುದಿಲ್ಲ.

ಅವಧಾನವು ಕಾಲವನ್ನು ಒದಗಿಸಿಕೊಡುವುದು.

ಪ್ರತಿಯೊಂದು ಕೆಲಸದಲ್ಲಿಯೂ ಅವಧಾನವನ್ನಿಡುವುದರಿಂದ ಆ ಕೆಲಸವು ಕೈಗೂಡಿ ಮುಂದಣ ಕೆಲಸಗಳಿಗೆ ಕಾಲವು ದೊರೆಯುವುದು. ಅರ್ಧಾರ್ಧ ಕಾರ್ಯಗಳಿಂದ ಮನಸ್ಸು ತೃಪ್ತಿಗೊಳ್ಳದೆ ಕಳವಳಗೊಂಡು "ಅಯ್ಯೋ! ಕಾಲವು ಕಳೆದುಹೋಯಿತಲ್ಲಾ! ಮುಂದೆ ಸಮಯವು ದೊರೆಯುವಂತಿಲ್ಲವಲ್ಲಾ!" ಎಂದು ಪಶ್ಚಾತ್ತಾಪಪಡುತ್ತ, ಯಾವ ಕೆಲಸದ ಫಲವೂ ಕೈಸೇರದೆಹೋಗುವುದು. ಅವಧಾನದಿಂದ ಕಾರ್ಯಗಳು ಬೇಗಬೇಗನೆ ಕೈಗೂಡುವುದರಿಂದ ಹೆಚ್ಚು ಹೆಚ್ಚು ಕೆಲಸಗಳನ್ನು ಮಾಡಲು ಮನಸ್ಸು ಉತ್ಸಾಹಗೊಂಡು ನಮಗೆ ಲಾಭವನ್ನು ಹೆಚ್ಚಾಗಿ ಒದಗಿಸಿ ಕೊಡುವುದು. ಕಳೆದ ಕಾಲದ ಒಂದು ನಿಮಿಷವನ್ನಾದರೂ ಸಂಪಾದಿಸಲು ಯಾರಿಗೂ ಶಕ್ತಿಯಿಲ್ಲದುದರಿಂದ ಅವಧಾನವಿಲ್ಲದ ಕೆಲಸಗಳಿಗೆ ಕೊಟ್ಟ ಕಾಲವೆಲ್ಲಾ ವ್ಯರ್ಥವಾಗಿ ಮನುಷ್ಯಜನ್ಮವನ್ನೇ ವ್ಯರ್ಥಗೊಳಿಸಿದಂತಾಗುವುದು. ಆದುದರಿಂದ ಅವಧಾನವಿರುವವನಿಗೆ ಕಾಲವು ಹೆಚ್ಚಾಗಿ ಮಿಗುವುದರಲ್ಲಿ ಅಡ್ಡಿಯಿಲ್ಲ.

(ಸಶೇಷ.)

ಪ್ರಜಾಪ್ರೇಮ

ಪ್ರತಾಪರಾಯರು ಮೊನ್ನೆಯ ದಿವಸ ಸಾಯಂಕಾಲ ವಿಹಾರಾರ್ಥವಾಗಿ ಹೊರಟು ಪುರದ ಬಹಿರುದ್ಯಾನವನದಲ್ಲಿ ಒಂದು ಶಿಲಾಪೀಠದ ಮೇಲೆ ಕುಳಿತುಕೊಂಡು ಯಾವುದೋ ಒಂದು ಗೃಹಕೃತ್ಯವನ್ನು ಆಲೋಚಿಸುತ್ತಿದ್ದರು. ಅಸ್ತಮಯಿಸುತ್ತಿದ್ದ ಸೂರ್ಯನ ಕಿರಣಗಳು ವೃಕ್ಷಗಳಮೇಲೂ ಪ್ರಾಸಾದಗಳ ಮೇಲೂ ಸ್ವರ್ಣಕಾಂತಿಯನ್ನು ಅಭಿಷೇಕಿಸುತ್ತಿದ್ದುವು. ಬೀಸುತ್ತಿದ್ದ ಮಂದಾನಿಲವು ಸುಗಂಧಯುಕ್ತವಾಗಿದ್ದರೂ, ಶೀತಲವಾಗಿದ್ದುದರಿಂದ ಅಷ್ಟು ಹಿತವಾಗಿರಲಿಲ್ಲ. ದಿನಚರ್ಯೆಯನ್ನು ಪೂರೈಸಿಕೊಂಡು ಬಂದು ತಮ್ಮ ತಮ್ಮ ಗೂಡುಗಳನ್ನು ಸೇರುತ್ತಿದ್ದ ಪಕ್ಷಿಗಳ ಮಧುರವಾದ ಗಾನವು ಆಹ್ಲಾದಕರವಾಗಿದ್ದಿತು. ಅಷ್ಟರಲ್ಲೇ "ಏನು ರಾಯರೆ! ಸಾವಕಾಶವಾಗಿ ಕುಳಿತುಕೊಳ್ಳೋಣವಾಯಿತು?" ಎಂಬ ಒಂದು ಶಬ್ದವು ಕೇಳಿಸಿತು. ಪ್ರತಾಪರಾಯರು ತಲೆಯೆತ್ತಿ ನೋಡಿ, "ಭಟ್ಟರಿಗೆ, ನಮಸ್ಕಾರ; ದಯಮಾಡಿ, ಕುಳಿತುಕೊಳ್ಳಿರಿ." ಎಂದು ತಮ್ಮ ಬಳಿಯಲ್ಲಿ ಸ್ಥಳವನ್ನು ತೋರಿಸಿದರು.

ಭಟ್ಟರು— ಇದೇನು. ರಾಯರೇನೋ ಬಹಳ ಯೋಚನೆ ಮಾಡುತ್ತಿದ್ದ ಹಾಗಿತ್ತು?

ರಾಯರು— ಮತ್ತೇನೂ ಇಲ್ಲ ಸ್ವಾಮಿ! ತಮಗೆ ತಿಳಿದ ಹಾಗೆ ನನ್ನ ಮಗಳಿಗೆ ನಾಳೆ ಬುಧವಾರಕ್ಕೆ ಹದಿಮೂರು ವರುಷಗಳು ತುಂಬುತ್ತವೆ. ವರನಿಗಾಗಿ ಎಲ್ಲೆಲ್ಲೋ ಹುಡುಕಿದುದಾಯಿತು. ವರಗಳೇ ಇಲ್ಲ. ಇರುವ ಒಂದೆರಡರಲ್ಲೇ ಸರಿಯಾದುದು ಸಿಕ್ಕೀತೇನೋ ಎಂದರೆ, ವಿದ್ಯಾವಿದ್ಯಕತೆ ಕೂಟಗಳು ಸರಿಬರುವುದಿಲ್ಲ, ಜಾತಕಾನು ಕೂಲವಿದ್ದರೆ ವರನು ನಿರಕ್ಷರಕುಕ್ಷಿಯಾಗಿರುತ್ತಾನೆ. ಏನುಮಾಡೋಣ.

ಭಟ್ಟರು— ಇದೇಕೆ? ನಿಮ್ಮ ಮನೆ ಹಿಂದಲಬೀದಿಯಲ್ಲಿರುವ ವಿಶ್ವಾಸರಾಯರ ಮಗ ನಿಮ್ಮ ಹುಡುಗಿಗೆ ಒಳ್ಳೇ ತಕ್ಕ ವರನಲ್ಲವೆ?

ರಾ— ಅಯ್ಯೋ, ಅಂತಹ ಅನುಕೂಲವಿದ್ದರೆ ನಾನೇಕೆ ಇಷ್ಟು ಕಷ್ಟಪಡಬೇಕು? ನಮ್ಮೆಲ್ಲರಿಗೂ ಮನಸ್ಸೇನೋ ಒಪ್ಪಿದೆ. ಆದರೆ ಅವರದು ಭಾಗವತಸಂಪ್ರದಾಯವಂತೆ. ನಮ್ಮ ಮನೆ ಹೆಂಗುಸರು ಆಗದು ಎಂದು ಹೇಳುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಭ— ನನ್ನ ಅಭಿಪ್ರಾಯವನ್ನು ಕೇಳುತ್ತೀರಾ? ನಾನೇನೋ ಒಪ್ಪುತ್ತೇನೆ. ಶಾಸ್ತ್ರವಿರುದ್ಧವೇನೂ ಕಾಣುವುದಿಲ್ಲ. ಯಾವ ಶಾಸ್ತ್ರದಲ್ಲೂ ಈ ಸಂಪ್ರದಾಯ ವಿಷಯವೇ ಹೇಳಿಲ್ಲ. ಹಾಗೆಲ್ಲಾ ನೋಡಿದರೆ ಎಲ್ಲೋ ಮುದುಕರು ಮೋಟರು ಸಿಗುತ್ತಾರೆ.

ರಾ— ಹಾಗಾದರೆ, ನಿಮ್ಮ ಮನೆಯಲ್ಲಿ ನಿಮ್ಮ ಹುಡುಗಿಯನ್ನೇಕೆ ಆ ಮುದುಕನಿಗೆ ಕೊಟ್ಟು ವಿವಾಹಮಾಡಿದಿರಿ? ನಿಮ್ಮ ಮನೆಯಲ್ಲೇ ವಿದ್ಯಾರ್ಥಿಯಾಗಿದ್ದು ಮೊನ್ನೆ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಹುಡುಗನಿಗೇಕೆ ಕೊಡಲಿಲ್ಲ?

ಭ— (ನಕ್ಕು) ರಾಯರೆ! ತಮಗೆ ತಿಳಿಯದ ವಿಷಯವೇನಿದೆ? ನಾವು 'ಭಟ್ಟರು' ಎನ್ನಿಸಿಕೊಂಡಿರುವುದರಿಂದ ಶಾಸ್ತ್ರದಲ್ಲಿ ಹೇಗಾದರೂ ಹೇಳಿರಲಿ, ನಾವು ಆಚಾರವನ್ನು ಅತಿಕ್ರಮಿಸಿ ನಡೆಯುವುದಕ್ಕಾಗುವುದಿಲ್ಲ. ಅಥವಾ ನಾವು ಹೇಳಿದರೂ ನಮ್ಮ ಮಾತನ್ನು ನಮ್ಮ ಮನೆಯ ಹೆಂಗಸರು ಸಾಗಗೊಡಿಸುವಹಾಗಿಲ್ಲ. ನಿಮ್ಮ ಮನೆಯಲ್ಲಾದರೋ ಹೆಂಗಸರು ವಿದ್ಯಾವತಿಯರು. ನಿಮಗೇನು ಬಾಧಕ?

ರಾ— ನಾವು ಹಾಗೆ ಮಾಡಿದರೆ ನೀವು ನಮ್ಮನ್ನು ಜಾತಿಯಲ್ಲಿಟ್ಟಿರುತ್ತೀರಾ?

ಭ— ತಮ್ಮಂಥವರು ಮಾಡಿದರೆ ಪ್ರತಿ ಹೇಳುವವರೇ ಇಲ್ಲ. ನಾವು ನಿಮ್ಮನ್ನೆಲ್ಲಾ ಬಿಟ್ಟು, ಹೊಟ್ಟೆಗೆ ಏನು ತಿನ್ನಬೇಕು?

ರಾ— ಹಾಗಲ್ಲ ಭಟ್ಟರೆ! ಹೊಟ್ಟೆಪಾಡಿಗಾಗಿ ಅಧರ್ಮವನ್ನು ಧರ್ಮವೆಂದು ಹೇಳಬಾರದು. ಕುಲ ಗೋತ್ರ ಎಲ್ಲ ಸರಿಯಾಗಿದ್ದು, ಮನಸ್ಸಿಗೆ ಪ್ರಶಸ್ತವಾಗಿದೆಯೆಂದು ತೋರಿದರೆ ದೇಶಾಚಾರ ಮೊದಲಾದ ವ್ಯತ್ಯಾಸಗಳನ್ನು ಗಣಿಸದೆ ಸಂಬಂಧ ಬೆಳೆಸುವುದರಲ್ಲಿ ಧರ್ಮಲೋಪವೇನಾಗುವುದು? ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣುಮಕ್ಕಳನ್ನು ಅನಾಮಧೇಯನಿಗೆ ಕೊಟ್ಟು ಆ ಹೆಣ್ಣುಮಕ್ಕಳ ಈ ಜನ್ಮದ ಸುಖವೆಂಬ ಅಮೃತಕ್ಕೆ ವಿಷವನ್ನು ಬೆರೆಸುವುದು ಅಧರ್ಮವಲ್ಲವೆ?

ಭ— ನೀವು ಹೇಳುವುದೇನೋ ಒಪ್ಪತಕ್ಕದೇ. ಇಂತಹ ಬದಲಾವಣೆಗಳನ್ನು ನಿಮ್ಮಂಥವರು ಮಾಡಿದರೆ ಸಾಗುತ್ತೆ. ನಮ್ಮನ್ನು ಕೇಳುವವರ್ಯಾರು?

ರಾ—ಹೌದು, ನೀವು ಮಾಡುವುದಿಲ್ಲ; ನಾವು ಮಾಡುವುದಕ್ಕೂ ಅಡ್ಡಿ ಮಾಡುತ್ತೀರಿ.

ಭ—ನಾವು ಏನೋ ಮಾಡಿಬಿಡುತ್ತೇವೆಂದು ನೀವು ಹೆದರಿಕೊಂಡಿದ್ದೀರಿ, ಅಷ್ಟೇ. ಹಾಗೆ ನೀವು ಮಾಡಿದ್ದಾಗ್ಯೂ ನಾವು ಮಾಡುವುದೇನು? ಒಂದೆರಡು ದಿವಸ ಗೋಳಾಡುವುದು [illegible] ನಂತರ–ರಾಯರೇ! ತಾವು ಮಾಡಿದ್ದು ಬಹಳ ಒಳ್ಳೇ ಕೆಲಸ–ಎಂದು ನಿಮ್ಮ ದಾರಿಗೆ ಬರುವುದೇ.

ರಾ—ಅದೇನೋ ನಾನುಬಲ್ಲೆ. ನಮ್ಮ ಹೆಂಗಸರಿಗೆ ನೀವೇನೋ ಮರುಳುಮಾಡಿ ಅವರು ನೀವು ಹೇಳಿದಂತೆ ಕೇಳುವಹಾಗೆ ಮಾಡಿರುತ್ತೀರಿ. ಅದರಿಂದ ನಾವೆಷ್ಟೇ ಹೇಳಿದರೂ ಅವರುಬೇರೆ ಕೇಳುವಹಾಗಿಲ್ಲ.

ಭ—ಹಾಗಾದರೆ ನಿಮ್ಮ ಮನೆ ಹೆಂಗಸರು ವಿದ್ಯಾವತಿಯರಲ್ಲವೇ?

ರಾ—ಲೋವರ್‌ಸೆಕೆಂಡರಿ ಪ್ಯಾಸು ಮಾಡಿದರೆ ವಿದ್ಯಾವತಿಯರಾದರೆಂದು ನೀವು ತಿಳಿದಿರುವಂತೆ ಕಾಣಿಸುತ್ತದೆ. ಬರೀ ಪ್ಯಾಸು ಮಾಡಿದ್ದರಿಂದೇನಾಯಿತು. ದೇಶಸ್ಥಿತಿ ತಿಳಿದಂತಾಯಿತೆ? ಧರ್ಮಾಧರ್ಮಗಳನ್ನು ವಿವೇಚನಮಾಡಿದಂತಾಯಿತೆ? ಅನೇಕಮಂದಿ ಗಂಡಸರು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುತ್ತಾರೆ. ಅವರಿಗೂ ಸಹ, ತಮಗೆ ಸರಿಯೆಂದು ತಿಳಿದ ಮಾರ್ಗದಲ್ಲಿ ತಾವು ನಡೆಯಬೇಕೇಹೊರತು ಏನಾಗುತ್ತದೋ ಎಂದು ಹೆದರದಿರಬೇಕು, ಎಂಬ ಸ್ಥಿರ ಸಂಕಲ್ಪವಿಲ್ಲವಲ್ಲಾ. ಇಂತಹ ವಿದ್ಯಾವಂತರಿಂದೇನಾಯಿತು?

ಭ—ಹಾಗಾದರೆ, ತಾವು ಈವಾಗ ಏನು ನಿಷ್ಕರ್ಷೆ ಮಾಡಿಕೊಂಡಿದ್ದೀರಿ?

ರಾ—ಬೆಂಗಳೂರಿನ ಆಚೆ ಎಲ್ಲೋ ಒಂದುಕಡೆ ಒಬ್ಬ ವರನಿದ್ದಾನಂತೆ. ನಾಳೇ ದಿವಸ ಆಫೀಸರನ್ನು ಕೇಳಿ, ಅವರು ರಜಾ ಕೊಟ್ಟರೆ, ಹೋಗಿ ನೋಡಿಕೊಂಡು ಬರುತ್ತೇನೆ. ಅನುಕೂಲವಾದರೆ ಸರಿ. ಇಲ್ಲವಾದರೆ ನಮ್ಮ ವಿಶ್ವಾಸರಾಯರ ಮಗನಿಗೆ ಕೊಟ್ಟು ವಿವಾಹ ಮಾಡುತ್ತೇನೆ.

ಭ—ಸರಿ, ಆಗಬಹುದು. ಹೀಗೆಂದು ಹೇಳಿ ಭಟ್ಟರು ಜಗ್ಗನೆದ್ದು–ಅಗೋ, ವಿಶ್ವಾಸರಾಯರು ಇತ್ತಲೇ ಬರುತ್ತಿರುವರು. ನನಗೆ ಹೊತ್ತಾಯಿತು. ಅಪ್ಪಣೆಯಾದರೆ ಹೋಗಿಬರುತ್ತೇನೆ.–ಎಂದು ಕೈಮುಗಿದು ಹೊರಟು ಹೋದರು.

ವಿಶ್ವಾಸರಾಯರು—ಏನು, ಸಾರ್. ಮ್ಯಾರೇಜ್ ವಿಚಾರದಲ್ಲಿ ಏನು ತೀರ್ಮಾನ ಮಾಡಿದಿರಿ?

ಪ್ರತಾಪರಾಯರು—ನಾಳೇ ಆಫೀಸರನ್ನು ಲೀವ್ ಕೇಳಿ ಬೆಂಗಳೂರಿಗೆ ಹೋಗಿಬಂದು, ಆಮೇಲೆ ನಿಮಗೆ ಉತ್ತರ ಕೊಡುತ್ತೇನೆ.

ವಿಶ್ವಾ—ಆಲ್‌ರೈಟ್, ನನಗೇನು ಅವಸರವಿಲ್ಲಾ. ಲೀವ್‌ಗೆ ಅಪ್ಲೈ ಮಾಡಿದ್ದೀರೋ?

ಪ್ರ—ಈವಾಗ ಗೌರ್ನಮೆಂಟಿನವರು ಲೀವ್ ಹೆಚ್ಚಾಗಿ ಕೊಡುವುದಿಲ್ಲವೆಂಬುದು ನಿಮಗೆ ತಿಳಿದಿದೆಯಷ್ಟೆ? ನಾನು ಸುಮ್ಮನೆ ಒಂದು ದಿವಸ ಪರ್ಮಿಷನ್ ತೆಗೆದುಕೊಂಡು ಹೋಗಿ ಬರುತ್ತೇನೆ.

ವಿಶ್ವಾ—ಗೌರ್ನಮೆಂಟ್ ಹಾಲಿಡೇಸುಗಳನ್ನು ಕಡಿಮೆ ಮಾಡುವ ವಿಚಾರದಲ್ಲಿ ನಿಮ್ಮ ಆಫೀಸರ ಒಪೀನಿಯನ್ನು ಏನು?

ಪ್ರ—ಕಡಿಮೆಮಾಡಬೇಕಾದ ಅವಶ್ಯಕವಿಲ್ಲ ವೆನ್ನುವದೇನೋ ಅವರ ಸ್ವಂತ ಅಭಿಪ್ರಾಯ. ಆದರೆ ಮೇಲಿನವರ ಇಷ್ಟಕ್ಕೆ ಇವರು ವಿರೋಧವಾಗಿ ಎಂದಿಗೂ ಅಭಿಪ್ರಾಯ ಕೊಡಲಾರರು.

ವಿಶ್ವಾ—ನನಗೇನೊ ಇದು ನೀಡ್‌ಲೆಸ್ಸೆಂದು ಕಾಣುತ್ತೆ. ಒಬ್ಬ ಕ್ಲಾರ್ಕು ದಿನಕ್ಕೆ ಹನ್ನೆರಡು ಪೇಪರನ್ನು ಬರೆಯುವುದಕ್ಕಾಗಿ ಇಪ್ಪತ್ತು ಬರೆದರೆ ದೇಶವು ಉತ್ತಮಸ್ಥಿತಿಗೆ ಬರುವುದೇ?

ಪ್ರ—ಬೇಸಿಗೆಕಾಲದಲ್ಲಿ ನಂದಿದುರ್ಗದಲ್ಲಿ ಸರ್ಕಾರದವರು ಹವಕ್ಕಾಗಿ ಹೋಗಿಬರುವುದು ದೇಶದ ಸಂಪತ್ತನ್ನು ಹೇಗೆ ಅಭಿವೃದ್ಧಿಗೊಳಿಸುವುದೊ ಹಾಗೆಯೇ ಇದು ಸಹಾ ಅಲ್ಲವೆ.

ವಿಶ್ವಾ—ಆ ವಿಚಾರವೇನೊ ಬೇರೆ. ಗೌರ್ನಮೆಂಟು ಆಫ್ ಇಂಡಿಯಾದವರು ಸಿಮ್ಲಾದಲ್ಲಿ ಬೇಸಿಗೆಯ ಕಾಲವನ್ನು ಕಳೆವುದು ದೇಶಕ್ಕೆ ಹಿತಕರವಾದುದೆಂದು ಪ್ರೂವ್ ಮಾಡಿದ್ದಾರೆ. ಅದರಂತೆಯೇ ಇದೂ, ವಿಶೇಷವೇನಿಲ್ಲಾ. ಆದರೆ ಈಗ ಸರ್ಕಾರದಲ್ಲಿ ಕೆಲಸಕಾರ್ಯಗಳನ್ನೂ, ಕಾಗದಪತ್ರಗಳನ್ನೂ, ಬಹಳ ಹೆಚ್ಚಿಸಿರುವುದಾಗಿ ನನಗೆ ಕಾಣುತ್ತದೆ. ಅದರಿಂದ ವರ್ಕ್ ಅರಿಯರ್ಸ್‌ನಲ್ಲಿ ಬಿದ್ದಿರಬಹುದು. ಹೆಚ್ಚು ಕೆಲಸವನ್ನು ತಪ್ಪಿಸಿದರೆ ಬಹಳ ಪ್ರಯೋಜನವಾದೀತೆಂದು ನನಗೆ ಕಾಣುತ್ತದೆ.

ಪ್ರ—ಹೆಚ್ಚು ಕೆಲಸವೆಂದರೆ ನನಗೆ ಅರ್ಥವಾಗಲಿಲ್ಲ.

ವಿಶ್ವಾ—ಒಂದು ಲೀವ್ ಅಪ್ಲಿಕೇಷನ್ ಸಾಂಕ್ಷನ್ ಆಗಬೇಕಾದರೆ, ಅದು ಎಂಟು ಕೈ ತಟಾಯಿಸಬೇಕು. ಅವರೆಲ್ಲರೂ ಅದಕ್ಕೆ ದಾಖಲೆ ಮೊದಲಾದುವನ್ನಿಡಬೇಕು. ಇಷ್ಟರ ಬದಲಾಗಿ ಕೆಳಗಿನ ಅಧಿಕಾರಿಗಳಿಗೆ ಅಲ್ಪ ಸ್ವಲ್ಪ ಈ ವಿಷಯಗಳಲ್ಲಿ ಸ್ವಾತಂತ್ರ್ಯವನ್ನು ಕೊಟ್ಟರೆ ಬಹಳ ಒಳ್ಳೆಯದಲ್ಲವೆ?

ಪ್ರ—ಈಗಿನ ನಮ್ಮ ದಿವಾನರು ಬಹಳ [illegible] ಸ್ಟ್ರಾಂಗ್ ಮ್ಯಾನ್. ಒಂದೊಂದಾಗಿ ಇವನ್ನೆಲ್ಲಾ ಸರಿಮಾಡಬಹುದು. ಈಗ [illegible] ಹೋಗೋಣ ಬನ್ನಿ.

ಮೈಸೂರ್ ಸ್ಟಾರ್.

೧೯೧೧ನೇ ಇಸವಿ ಜುಲೈ ತಾ॥ ೩ ನೇ ಸೋಮವಾರ

ನೂತನಶಕ್ತಿ ಪ್ರಾದುರ್ಭಾವ.

ಹಿಂದೂದೇಶದ ಚರಿತ್ರೆಯನ್ನು ಓದಿದರೆ ಈಚೆಗೆ ೩೦೦ ವರುಷಗಳಿಂದಲೂ ಯುದ್ಧಪ್ರಸ್ತಾಪಗಳಿಲ್ಲದಿರುವುದೇ ಮುಖ್ಯವಾದ ಅಂಶವಾಗಿ ಕಂಡುಬರುವುದು. ಮೊಗಲ್ ಚಕ್ರವರ್ತಿಯಾದ ಔರಂಗಜೇಬನ ಅಂತ್ಯಕಾಲದಲ್ಲಿ ಪ್ರಾರಂಭಿಸಿ ಸುಮಾರು ಕ್ರಿ. ಶ. ೧೮೫೮ ಕ್ಕೆ ಪರಿಸಮಾಪ್ತಿಗೊಂಡ ಒಂದೂವರೆ ಶತಮಾನದಲ್ಲಿ ನಡೆದ ಭಯಂಕರಗಳಾದ ಯುದ್ಧಗಳನ್ನೂ, ಆ ಕಾಲದಲ್ಲಿ ದೇಶದಲ್ಲಿದ್ದ ಅನಾಯಕತ್ವವನ್ನೂ, ಪ್ರಜಾಹಿಂಸೆಯನ್ನೂ ಓದಿ, ಈಚೆನ ಕಾಲದಲ್ಲಿ ಅಂದರೆ ಈ ಹಿಂದೂದೇಶದ ಸರ್ವಾಧಿಕಾರವನ್ನು ಕಂಪೆನಿಯವರು ಇಂಗ್ಲೆಂಡು ಮಹಾರಾಜ್ಞಿಯವರಿಗೆ ವಹಿಸಿದಂದಿನಿಂದ ಈ ದೇಶದಲ್ಲಿ ನೆಲಸಿರುವ ಶಾಂತಿ ಮತ್ತೂ ಸುಭಿಕ್ಷಗಳನ್ನೂ, ಜನರಲ್ಲಿ ವೃದ್ಧಿಗೊಳ್ಳುತ್ತಿರುವ ಸೌಹಾರ್ದ್ರಭಾವವನ್ನೂ ಓದಿದರೆ ಹಿಂದಣ ಕಾಲಕ್ಕೂ ಈಗಿನ ಕಾಲಕ್ಕೂ ಇರುವ ವ್ಯತ್ಯಾಸವು ಸ್ಪಷ್ಟವಾಗುವುದು. ಹೀಗೆ ಸಮಾಧಾನ ಸ್ಥಿತಿಯು ನೆಲೆಗೊಂಡುದರಿಂದಲೇ ನಮ್ಮವರು ಕೃಷಿ, ವಾಣಿಜ್ಯಾದಿಗಳಿಗೂ, ವಿದ್ಯಾಭಿವೃದ್ಧಿಗೂ ವಿಶೇಷ ಗಮನ ಕೊಡಲು ಸಾಧ್ಯವಾಯಿತು. ಇಂಡಿಯಾ ಸರ್ಕಾರದವರೂ ಸಹ ಸರ್ವಪ್ರಕಾರದಲ್ಲೂ ಜನರಿಗೆ ಹಿತವಾದ ಕಾರ್ಯಗಳಲ್ಲಿ ಪ್ರೋತ್ಸಾಹವನ್ನು ಕೊಡುತ್ತಾ ಬಂದಿರುವುದರಿಂದ ಆಸೇತುಹಿಮಾಚಲಾಂತವಾಗಿ ಅಖಂಡವಾಗಿಯೂ, ವಿಶಾಲವಾಗಿಯೂ ಪ್ರಸರಿಸುವ ಈ ಭರತಖಂಡದಲ್ಲಿ ವಾಸಿಸುವ ಪ್ರಜಾಕೋಟಿಗಳಲ್ಲಿ ದೇಶವಾತ್ಸಲ್ಯವೂ, ಏಕವಾಕ್ಯತೆಯೂ ಅಂಕುರಿಸಲು ಕಾರಣವಾಯಿತು. ಬ್ರಿಟೀಷರ ಧರ್ಮಪ್ರಭುತ್ವವಿಲ್ಲದಿದ್ದರೆ ಭಿನ್ನ ಮತಾಚಾರಗಳಿಂದಲೂ, ಅಜ್ಞಾನಾಂಧಕಾರದಿಂದಲೂ ನಾನಾ ಗುಂಪುಗಳಾಗಿ ಒಡೆದು ಹೋಗಿದ್ದ ಈ ನಮ್ಮ ದೇಶೀಯರಲ್ಲಿ ನಾವೆಲ್ಲರೂ ಒಂದು ಜನಾಂಗಕ್ಕೆ ಸೇರಿದವರೆಂಬ ಭಾವವು ಹೇಗೆ ತಾನೆ ಹುಟ್ಟಲಾಗುತಿದ್ದಿತು? ಹೀಗೆ ಇಂಗ್ಲೀಷಿನವರು ತಾವಾಗಿಯೇ ನೆಟ್ಟಿರುವ ಎಳೆ ಸಸಿಯನ್ನು ತಾವೇ ಹಾಳುಮಾಡುವರೆಂದು ಹೇಳಲಾದೀತೊ? ಎಂದಿಗೂ ಇಲ್ಲ. ನಾವು ನಮ್ಮ ಯೋಗ್ಯತಾಸ್ಥಿತಿಯನ್ನು ವೃದ್ಧಿಪಡಿಸಿಕೊಂಡಹಾಗೆಲ್ಲಾ ನಾವೂ ಸಹ ರಾಜಕಾರ್ಯನಿರ್ವಾಹದಲ್ಲಿ ಸೇರುವುದಕ್ಕೆ ಹೊಸ ಹೊಸದಾದ ಅವಕಾಶಗಳನ್ನು ಅವರು ಕಲ್ಪಿಸಿಕೊಟ್ಟಿರುವರು; ಈಗಲೂ ಕೊಡಲು ಸಿದ್ಧರಾಗಿರುವರು. ಇದನ್ನೆಲ್ಲಾ ಮರೆತು ನಾವು ಅವರಿಗೆ ದ್ರೋಹವನ್ನು ಬಯಸಿದರೆ ಜಗದೀಶನು ನಮ್ಮನ್ನು ಮೆಚ್ಚುವನೇ? ನಮಗೆ ಶ್ರೇಯಸ್ಸಾದೀತೇ? ಹೀಗಿರುವಾಗ ಈ ದೇಶದ ಜನರ ಮನೋವೃತ್ತಿಯು ಪ್ರಕೃತಕಾಲದಲ್ಲಿ ಹೇಗಿದೆಯೋ ನೋಡೋಣ.

ಇಂಡಿಯಾ ಸರ್ಕಾರದವರು ನಮಗೆ ಏರ್ಪಡಿಸಿಕೊಟ್ಟಿರುವ ವಿದ್ಯಾನಿಲಯಗಳ ಮೂಲಕವಾಗಿಯೂ, ದೇಶಾಟನೆಗೆ ಅವರು ಕಲ್ಪಿಸಿಕೊಟ್ಟಿರುವ ಮಾರ್ಗಸೌಲಭ್ಯದಿಂದಲೂ ನಮ್ಮಲ್ಲಿ ಅನೇಕರಿಗೆ ಕಣ್ಣುಬಂದಂತಾಗಿದೆ. ಲೋಕದಲ್ಲಿ ವಿಷಯಜ್ಞಾನವುಂಟಾದಮೇಲೆಯಲ್ಲವೆ ವಿವೇಕವು ಹುಟ್ಟುವುದು? ಅದರಂತೆಯೇ ಈಗತಾನೇ ಕಣ್ದೆರೆದು, ದೇಶವಾತ್ಸಲ್ಯವೆಂದರೇನು? ಸ್ವಾತಂತ್ರ್ಯವೆಂದರೇನು? ಎಂಬ ವಿಷಯಗಳನ್ನು ಕುರಿತು ಆಲೋಚಿಸಿ, ಅವನ್ನು ಅಲ್ಪಸ್ವಲ್ಪವಾಗಿ ತಿಳಿದುಕೊಳ್ಳುತ್ತಿದ್ದಾರೆ. ಇಂಥವರಲ್ಲಿ ಕೆಲವರಿಗೆ ಇನ್ನೂ ವಿವೇಕವು ಸಾಲದುದಾಗಿದೆ. ಸಾಧಾರಣವಾಗಿ ಒಬ್ಬನು ಒಂದು ಆಯುಧವನ್ನು ಉಪಯೋಗಿಸಲು ತೊಡಗಿದರೆ, ಪ್ರಥಮತಃ ಅದರಿಂದ ತನ್ನ ಕೈಯನ್ನು ಕತ್ತರಿಸಿಕೊಳ್ಳುವನು; ಇಲ್ಲದಿದ್ದರೆ ಮಾಡಬೇಕೆಂದಿರುವ ಕೆಲಸವನ್ನು ಕೆಡಿಸುವನು. ಇದೇರೀತಿಯಲ್ಲಿ ವಿವೇಕಶೂನ್ಯರಾದ ಮತ್ತೂ ಕೇವಲ ಉತ್ಸಾಹಶಾಲಿಗಳಾದ ಕೆಲಜನರು, ತಾವು ಮಾಡುತ್ತಿರುವುದೇನು? ಇದರಿಂದ ದೇಶಕ್ಕೆ ಹಿತವಾದೀತೆ? ಇಲ್ಲವೆ? ಎಂಬುದನ್ನು ಸಹ ಆಲೋಚಿಸದೆ ಕಾರ್ಯಸಾಧನೆಗೆ ಹೊರಟು ಅನೇಕ ಅನರ್ಥಗಳನ್ನುಂಟುಮಾಡಿರುವರು; ಅಲ್ಲದೆ ಹಿಂದೂಗಳು ರಾಜದ್ರೋಹಿಗಳೆಂಬ ಅಪಯಶಸ್ಸನ್ನು ತರಲು ಪ್ರಯತ್ನಿಸುತ್ತಿರುವರು. ಇಂಥವರ ಜತೆಯಲ್ಲಿ ಸೇರುವವರಾರು? ಯೌವನ ಮದದಿಂದಗರ್ವಿತರಾದ ಯುವಕರು. ಈಗ ತಮ್ಮ ದೇಶಕ್ಕಾಗಿಯೂ, ತಮ್ಮ ಜನರಿಗಾಗಿಯೂ, ತಮ್ಮ ಕೈಲಾದಷ್ಟು ಸಹಾಯವನ್ನು ಮಾಡಿ ಜನ್ಮಸಾರ್ಥಕವನ್ನು ಮಾಡಿಕೊಳ್ಳಬೇಕೆಂಬ ಅಭಿಪ್ರಾಯವು ಎಲ್ಲೆಲ್ಲಿಯೂ ಹರಡಿಕೊಂಡಿರುವುದು. ವಿದ್ಯಾರ್ಥಿಗಳಾದ ಯೌವನಸ್ಥರೂ ಸಹ ಇಂತಹ ಸದ್ಭಾವಪ್ರೇರಿತರಾಗಿ ದೇಶಹಿತಕ್ಕೋಸ್ಕರ ಎಂತಹ ಸಾಹಸ ಕಾರ್ಯಗಳನ್ನಾದರೂ ಮಾಡಲು ಸಿದ್ಧರಾಗಿರುವರು. ಇಂತಹ ನಿರ್ದುಷ್ಟವಾದ ಶಕ್ತಿ ಪರಾಕ್ರಮಗಳನ್ನು ಅವಿವೇಕಿಗಳಾದ ಕೆಲವರು ನಿಂದ್ಯವಾದ, ಮತ್ತೂ ಬಾಧಕರವಾದ ಕಾರ್ಯಗಳಲ್ಲುಪಯೋಗಿಸಿ ತಾವೂ ಕೆಟ್ಟು, ತಮ್ಮನ್ನು ನಂಬಿದ ಯುವಕರನ್ನೂ ಕೆಡಿಸಿ, ದೇಶಕ್ಕೆ ಅಹಿತವನ್ನಾಚರಿಸುತ್ತಿರುವರು. ಆದುದರಿಂದ ದೇಶಹಿತೈಷಿಗಳಾದವರೆಲ್ಲರೂ ಸೇರಿ ಯುವಕರಲ್ಲಿಯೂ, ಇತರರಲ್ಲಿಯೂ ದೇಶವಾತ್ಸಲ್ಯರೂಪವಾಗಿ ಉಕ್ಕಿಬರುತ್ತಿರುವ ಈ ನೂತನಶಕ್ತಿ ಪರಾಕ್ರಮಗಳನ್ನು ಸದ್ವಿನಿಯೋಗಮಾಡಲು ತಕ್ಕ ಉಪಾಯಗಳನ್ನು ಕಲ್ಪಿಸಿಕೊಡುವುದು ಅತ್ಯಂತಾವಶ್ಯಕವಾಗಿರುವುದಲ್ಲದೆ ಹೇಗೆ ಮಾಡಬೇಕೆಂಬುದನ್ನು ಆಯಾ ಸಮಯ ಸಂದರ್ಭಗಳನ್ನನುಸರಿಸಿ ಗೊತ್ತುಮಾಡಬೇಕಾಗಿದೆ.

ನಮ್ಮ ಹಿಂದೂದೇಶಾಭಿಮಾನಿಗಳಲ್ಲೊಬ್ಬರಾದ ಮತ್ತೂ ಬ್ರಹ್ಮಜ್ಞಾನಸಮಾಜದ ಅಧ್ಯಕ್ಷರಾದ ಶ್ರೀಮತಿ ಆನಿಬೆಸೆಂಟಮ್ಮನವರು ಈ ವಿಷಯವನ್ನು ಕುರಿತು ಆಲೋಚಿಸಿ "ಭಾರತಪುತ್ರಮಂಡಲಿ" ಎಂಬ ಒಂದು ಕೂಟವನ್ನು ಏರ್ಪಡಿಸಿರುವರು. ಯುವಕರು ಇದರಲ್ಲಿ ಸೇರಿ ಕೆಲಸ ಮಾಡತೊಡಗಿದರೆ ದೇಶಕ್ಕೆ ಶ್ರೇಯಸ್ಸಾಗುವುದು ಮತ್ತೂ ಅನರ್ಥಗಳು ಕಡಮೆಯಾಗುವುವು. ಪಾರಮಾರ್ಥಿಕ ಕಾರ್ಯಗಳಲ್ಲಿ ಯಾವಾಗಲೂ ಅಗ್ರಭಾಗವನ್ನು ವಹಿಸಲು ಸಿದ್ಧರಾಗಿರುವ ನಮ್ಮ ಶ್ರೀಮನ್ಮಹಾರಾಜರು ಈ ಕೂಟಕ್ಕೆ ಪ್ರೋತ್ಸಾಹಕರಾಗಿಯೂ, ಅಭಿಮಾನಿಗಳಾಗಿಯೂ ಇರುವರು. ಆದುದರಿಂದ ನಮ್ಮ ದೇಶದ ಯುವಕರು ಈ ಕೂಟಕ್ಕೆ ಸೇರಿಯೋ ಅಥವಾ ಮತ್ತಾವುದಾದರೂ ಒಂದು ನಿರ್ದುಷ್ಟವಾದ ಮಾರ್ಗವಾಗಿಯೋ ತಮ್ಮ ಉತ್ಸಾಹ, ಶಕ್ತಿ, ಬುದ್ಧಿ ಮೊದಲಾದವುಗಳನ್ನು ವಿನಿಯೋಗಿಸುವಂತೆ ಸರ್ವರೂ ಪ್ರಯತ್ನಪಡಬೇಕಾಗಿ ಕೋರುತ್ತೇವೆ.

ಇಂಗ್ಲೀಷು ಭಾಷಾಭಿವೃದ್ಧಿಯು.

ಈಗ ನಮ್ಮ ದೇಶದ ಸ್ಥಿತಿಯಲ್ಲಿ ವಿದ್ಯಾಭ್ಯಾಸವೆಂದರೆ ಇಂಗ್ಲೀಷು ಭಾಷಾಜ್ಞಾನವನ್ನು ಸಂಪಾದಿಸಿಕೊಂಡು ತನ್ಮೂಲಕ ಸರ್ಕಾರದಲ್ಲೋ ಶ್ರೀಮಂತರಲ್ಲೋ ಒಂದು ಉದ್ಯೋಗಕ್ಕೆ ಸೇರಿ ಜೀವನೋಪಾಯವನ್ನು ಕಲ್ಪಿಸಿಕೊಳ್ಳುವುದೆಂದು ಅರ್ಥವಾಗುವುದು. ಅದಕ್ಕೆ ಸರಿಯಾಗಿ ಸರ್ಕಾರದಲ್ಲಿ ಮುಖ್ಯವಾದ ಕಾಗದ ಪತ್ರಗಳೆಲ್ಲವೂ ಇಂಗ್ಲೀಷು ಭಾಷೆಯಲ್ಲಿರುವುದರಿಂದ ದೊಡ್ಡ ಅಧಿಕಾರಗಳಿಗೆ ಬರಬೇಕೆಂದಿರುವವರು ಆ ಭಾಷಾ ಪರಿಚಿತಿಯನ್ನು ಮಾಡಿಕೊಂಡಿರಬೇಕಾದುದು ಅತ್ಯಾವಶ್ಯಕವಾಗಿರುವುದು. ಈ ದೇಶಕ್ಕೂ, ಪಾಶ್ಚಾತ್ಯದೇಶಗಳಿಗೂ ವ್ಯಾಪಾರವು ವಿಶೇಷವಾಗಿರುವುದರಿಂದ ಈ ಭಾಷೆಗೆ ಮತ್ತಷ್ಟು ಪ್ರಾಶಸ್ತ್ಯವು ಬಂದಿರುವುದು. ಆದುದರಿಂದ ಗೌರವಕ್ಕೂ, ಪ್ರಯೋಜನಕ್ಕೂ ಆಶ್ರಯವಾಗಿರುವ ಈ ಭಾಷಾಭ್ಯಾಸವನ್ನು ಎಲ್ಲರೂ ಮಾಡತಕ್ಕದ್ದೇ ಆಗಿರುವುದು. ಆದರೆ ಅನೇಕರು ಕೇವಲ ಜೀವನೋಪಾಯಕ್ಕಾಗಿ ಇದನ್ನು ಅಭ್ಯಾಸ ಮಾಡುತ್ತಿರುವುದರಿಂದ ನಮ್ಮ ದೇಶಕ್ಕೆ ಹಲವು ಅನರ್ಥಗಳು ಪ್ರಾಪ್ತವಾಗಿರುವುವು. ಅದು ಹೇಗೆಂದರೆ:—

ಒಂದನೆಯದಾಗಿ— ಸಂಸ್ಕೃತ, ಕನ್ನಡ ಮೊದಲಾದ ಸಮಸ್ತ ದೇಶಭಾಷೆಗಳೂ ಹೀನಸ್ಥಿತಿಗೆ ಬಂದಿರುವುವು. ನಮ್ಮ ಮತವಿಷಯಗಳೂ, ಪೂರ್ವಾಚಾರಗಳೂ, ಪುರಾಣೇತಿಹಾಸಗಳೂ, ಮುಖ್ಯವಾಗಿ ನಮ್ಮ ಪೂರ್ವಿಕರ ಯಾವ ಕೆಲಸಗಳು ನಮ್ಮ ದೇಶಕ್ಕೆ ಶ್ರೇಷ್ಠತೆಯನ್ನೂ, ಗೌರವವನ್ನೂ ತಂದವೋ ಅಂತಹ ಶಿಲ್ಪಿ ಶಾಸ್ತ್ರವೇ ಮೊದಲಾದ ಸಮಸ್ತ ಶಾಸ್ತ್ರವಿಷಯಗಳೂ ನಮಗೆ ಮರೆತುಹೋಗುವ ಸ್ಥಿತಿಯು ಪ್ರಾಪ್ತವಾಗಿರುವುದು. ನಮ್ಮ ಮತವಂತೂ ಬಹಳ ಬಿಲವಾಗುತ್ತಾ ಬಂದಿತು. ಈಗ ಉಳಿದಿರುವುದು ನಾಮಮಾತ್ರವಾಗಿರುವುದು. ನಮ್ಮ ಸ್ಥಿತಿಯು ಸಾರವಾದ ಕಾಳನ್ನು ಬಿಟ್ಟು ಹೊಟ್ಟನ್ನು ಹಿಡಿದ ರೈತನ ಸ್ಥಿತಿಗೆ ಸಮನಾಗಿರುವುದು. ದೇಹಕ್ಕೆ ಚೈತನ್ಯವಿರುವಂತೆ ಈ ದೇಶಕ್ಕೆ ನಮ್ಮ ಮತವು ಚೈತನ್ಯರೂಪವಾಗಿರುವುದು. ಈಗ ನಮಗಾದರೋ ನಮ್ಮ ಮತವಿಷಯಗಳನ್ನು ಅನ್ಯಭಾಷಾಮೂಲಕವಾಗಿ ತಿಳಿಯಬೇಕಾದ ದೈನ್ಯಾವಸ್ಥೆಯು ಪ್ರಾಪ್ತವಾಗಿರುವುದು.

ಎರಡನೆಯದಾಗಿ— ಇಂಗ್ಲೀಷುಭಾಷೆಯನ್ನು ಅಲ್ಪಸ್ವಲ್ಪವಾಗಿ ಅಭ್ಯಾಸಮಾಡುವುದರಿಂದ ಸೃಷ್ಟಿಗೊಡೆಯನಾದ ಈಶ್ವರನೊಬ್ಬನಿದ್ದಾನೆಂಬ ನಂಬಿಕೆಗೆ ಒಂದು ಕುಂದುಂಟಾಗುವುದು. ಆ ಭಾಷೆಯಲ್ಲಿ ಬರೆಯಲ್ಪಟ್ಟ ಭೌತಿಕಶಾಸ್ತ್ರವೇ ಮೊದಲಾದ ಅನೇಕಶಾಸ್ತ್ರಗಳಲ್ಲಿ ಇದುವರೆಗೂ ಉದ್ಘೋಷಿಸಲ್ಪಡುತಿದ್ದ ಅಭಿಪ್ರಾಯಗಳೇ ಇಂತಹ ನಾಸ್ತಿಕವಾದಕ್ಕೆ ಆಧಾರವಾಗಿರುವುವು. ಆದರೆ ಈಚಿನ ಗ್ರಂಥಗಳಲ್ಲಿಯೂ, ಪೂರ್ವದ ತತ್ವದರ್ಶಿಗಳೂ, ಮತಬೋಧಕರೂ ಬರೆದಿರುವ ನೀತಿಶಾಸ್ತ್ರವೇ ಮೊದಲಾದ ಗ್ರಂಥಗಳಲ್ಲಿಯೂ ಈಶ್ವರನು ಇದ್ದಾನೆಂದು ಸಿದ್ಧಾಂತ ಮಾಡುವ ವಿಷಯಗಳು ಅನೇಕವಾಗಿರುವುವು. ನಮ್ಮವರು ಪಾಶ್ಚಾತ್ಯರ ಶಾಸ್ತ್ರಗ್ರಂಥಗಳನ್ನೇ ವಿಶೇಷವಾಗಿ ಓದುತ್ತಾರಾದುದರಿಂದ ದೈವಭಕ್ತಿಯು ಕಡಿಮೆಯಾಗಲು ಸಹಕಾರಿಯಾಗುವುದು. ಪಾಶ್ಚಾತ್ಯರ ಶಾಸ್ತ್ರಗಳಲ್ಲಿ ನಮ್ಮವರು ಪಂಡಿತರಾದ ಹಾಗೆಲ್ಲಾ ಸಾಧ್ಯಾಸಾಧ್ಯಗಳನ್ನು ಗಣಿಸದೆ ಸಮಸ್ತಕ್ಕೂ ಕಾರಣವನ್ನು ತಿಳಿಯಬೇಕೆಂಬ ಒಂದು ಭ್ರಾಂತಿಯು ಅವರನ್ನು ಹಿಡಿಯುವುದು. ಇಷ್ಟು ಸಾಲದುದಕ್ಕೆ ಜನರು—ನಮಗೆ ಯಾವುದಕ್ಕೆ ಕಾರಣವು ಗೊತ್ತಾಗುತ್ತದೆಯೋ ಅದೇ ಸರಿಯಾದುದು, ಸತ್ಯವಾದುದು; ಕಾರಣವನ್ನು ಹೇಳಲಾಗದುದು ಮಿಥ್ಯ—ಎಂದು ನಂಬುವವರಾಗಿರುತ್ತಾರೆ. ಆದರೆ ನಮ್ಮ ಪೂರ್ವಿಕರಿಗೆ ಗುರುಭಕ್ತಿಯು ಪರಿಪೂರ್ಣವಾಗಿದ್ದುದರಿಂದ, ಅವರ ವಾಕ್ಯದಲ್ಲಿ ಅಪನಂಬಿಕೆಗೆ ಅವಕಾಶವೇ ಅವರಿಗಿರಲಿಲ್ಲ. ಈಗಲಾದರೋ ಚಿಕ್ಕವರು ತಮ್ಮ ಹಿರಿಯರನ್ನು ಕುರಿತು ಇದಕ್ಕೆ ಕಾರಣವೇನು, ಅದಕ್ಕೆ ಕಾರಣವೇನು ಎಂದು ಪ್ರಶ್ನೆ ಮಾಡುತ್ತಾರೆ. ನಮ್ಮ ಮಹರ್ಷಿಗಳು ತಮಗಿದ್ದ ಲೋಕಾಂತರ ಜ್ಞಾನಬಲದಿಂದ ನಮಗೆ ಹೇಳಿಕೊಟ್ಟಿರುವ ಅಂಶಗಳಿಗೆ ಕಾರಣವನ್ನು ತಿಳಿಯಲು ಅಲ್ಪಬುದ್ಧಿಗಳಿಗೆ ಸಾಧ್ಯವಲ್ಲದುದರಿಂದ ಹುಡುಗರ ಪ್ರಶ್ನೆಗೆ ದೊಡ್ಡವರು ಸದುತ್ತರವನ್ನು ಕೊಡಲಾಗದಿರುವರು. ಇದರಿಂದಲು ಮತ್ತು ಆಂಗ್ಲೇಯರ ಶಾಸ್ತ್ರಗಳಲ್ಲೆಲ್ಲಾ ಪ್ರಪಂಚವು ಬರು ಬರುತ್ತಾ ಉತ್ತಮೋತ್ತಮ ಸ್ಥಿತಿಗೆ ಬರುತ್ತಿರುವುದೆಂದು ಹೇಳುತ್ತಿರುವುದರಿಂದಲೂ ನಮ್ಮ ಹಿರಿಯರಿಗಿಂತಲೂ ನಾವೇ ದೊಡ್ಡವರೆಂಬ ದುರಭಿಪ್ರಾಯವು ನಮ್ಮ ಹುಡುಗರಿಗೆ ಬಂದಿರುವುದು. ಆದುದರಿಂದಲೇ ಅವಿವೇಕಿಗಳಾದ ಅನೇಕಮಂದಿ ಯೌವನಸ್ಥರು ತಮ್ಮ ಗುರುಹಿರಿಯರ ಮಾತಿನಲ್ಲಿ ಶ್ರದ್ಧಾಭಕ್ತಿಗಳನ್ನಳಿದು ಅಕಾರ್ಯಪ್ರವರ್ತಕರಾಗಿ ದೇಶದ ಕೆಲವು ಭಾಗಗಳಲ್ಲಿ ಅನಾಯಕಸ್ಥಿತಿಗೆ ಕಾರಣಭೂತರಾಗಿರುವರು.

ಹೀಗೆಲ್ಲಾ ಇರುವುದರಿಂದ ಆಂಗ್ಲೇಯ ಭಾಷೆಯನ್ನೇ ಅಭ್ಯಾಸಿಸಬಾರದೆಂದು ನಾವು ವಾದಿಸುತ್ತೇವೆಂದು ತಿಳಿಯಕೂಡದು. ಆಂಗ್ಲೇಯ ಭಾಷೆಯು ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಹರಡಿಕೊಂಡಿರುವುದರಿಂದ ಸಮುದ್ರಕ್ಕೆ ನದಿಗಳು ಬಂದು ಸೇರುವಂತೆ ಸಮಸ್ತದೇಶಗಳ ಸ್ವಾರಸ್ಯವಾದ ವಿಷಯಗಳು ಈ ಭಾಷೆಯಲ್ಲಿ ಅಡಕಗೊಂಡಿರುವುವು. ಭಿನ್ನ ದೇಶಸ್ಥರು ತಮ್ಮ ಅಭಿಪ್ರಾಯಗಳನ್ನೂ ಭಾವಗಳನ್ನೂ ಪರಸ್ಪರ ತಿಳಿಯಪಡಿಸಲು, ಸಹಾಯಕವಾಗಿ ಇದು ಜನಾಂಗಗಳಲ್ಲಿ ಮೈತ್ರೀಭಾವವನ್ನು ವೃದ್ಧಿಗೊಳಿಸುವುದಕ್ಕೆ ಅತ್ಯಂತ ಸಹಾಯಕವಾದ ಸಲಕರಣವಾಗಿದೆ. ಆದಾಗ್ಯೂ ನಮ್ಮ ದೇಶಿಯರು ಈ ಭಾಷೆಯನ್ನು ಕಲಿಯುವಾಗ ನಾವು ಮೇಲೆ ವಿವರಿಸಿದ ದೋಷಗಳು ತಲೆದೋರದಂತೆ ತಕ್ಕ ಜಾಗರೂಕತೆಯಿಂದಿರುವುದು ಅತ್ಯಂತಾವಶ್ಯಕವಾಗಿದೆ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಪಂಚಕಲಶಯುಕ್ತವಾದ ಅಡ್ಡಪಾಲಕಿಯುತ್ಸವವು ವ್ಯಾಘ್ರನತೋಳು ಸಮೇತವಾದ ನಂದೀಧ್ವಜ, ಮಕರತೋರಣ, ಹಗಲುದೀವಟಿಗೆ, ಶ್ವೇತಛತ್ರ, ಮೋರ್ಚಾಲು ಮೊದಲಾದ ಸಮಸ್ತ ಬಿರುದುಗಳೊಡನೆ ದೊಡ್ಡ ಹಿಂಗ್ಲಾಜಿನಲ್ಲಿ ಕಳೆದ ಜೂನ್ ತಾ॥ ೩೦ ನೇ ಶುಕ್ರವಾರ ಬೆಳಿಗ್ಗೆ ೩ ಗಂಟೆಯಿಂದ ೧೨ ಗಂಟೆಯವರೆಗೆ ಅತಿ ವಿಜೃಂಭಣೆಯಿಂದ ನೆರವೇರಿತು. ಈ ಉತ್ಸವದಲ್ಲಿ ಪ್ರಾಯಶಃ ೫೦,೦೦೦ ಜನರು ಸೇರಿದ್ದರು. ಇವರಲ್ಲಿ ನಾನಾ ಜಾತಿಯವರಿದ್ದು ಫಲಪುಷ್ಪಾದಿಗಳನ್ನು ಪದೇಪದೇ ಅರ್ಪಿಸುವುದರ ಮೂಲಕ ತಮ್ಮ ಸಂತೋಷವನ್ನು ಪ್ರದರ್ಶನಪಡಿಸಿದರು.

ಒಳದೇಶದವೃತ್ತಾಂತ.

ನಂಜನಗೂಡಿನಲ್ಲಿ ಪ್ಲೇಗು ರೋಗವು ಪ್ರಾಪ್ತವಾಗಿ ಆಗಲೇ ೪-೫ ಮರಣಗಳಾದುವೆಂದು ಕೇಳುತ್ತೇವೆ.

ದಿವಾನರು ತಮ್ಮ ಪರಿವಾರದೊಡನೆ ನೆನ್ನೆಯ ಬೆಳಿಗ್ಗೆ ಮೇಲುಬಂದಿಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು.

ಜ॥ ಮತ್ತು ರೆ॥ ಸೆಕ್ರೆಟರಿ ಮ॥ ಬಾಲಸುಂದರಂ ಅಯ್ಯರ್ ರವರು ಕಳೆದ ತಾ॥ ೨೮ ರಲ್ಲಿ ತಮ್ಮ ಕುಮಾರಿಯ ವಿವಾಹವನ್ನು ಮತ್ತೂ ಕುಮಾರನ ಉಪನಯನವನ್ನು ವಿಜೃಂಭಣೆಯಿಂದ ಮಾಡಿದರು.

ಅಫಿಷಿಯೇಟಿಂಗ್ ಸೀನಿಯರ್ ಸರ್ಜನರಾದ ಮ॥ ಪಿ. ಎಸ್. ಅಚ್ಯುತರಾಯರು ಕಳೆದ ತಾ॥ ೨೩ ರಲ್ಲಿ ರಾಜಧಾನಿಗೆ ದಯಮಾಡಿಸಿದ್ದು, ತಾ॥ ೧ ರಲ್ಲಿ ಹಿಂತಿರುಗಿ ಬೆಂಗಳೂರಿಗೆ ಪ್ರಯಾಣಮಾಡಿದರು.

ರೆವಿನ್ಯೂ ಸರ್ವೆ ಡಿ॥ ಸೂಪರಿಂಟೆಂಡೆಂಟ್ ಮ॥ ಕೆ. ರಾಮಸ್ವಾಮಯ್ಯಂಗಾರ್, ಎಂ. ಎ. ಯವರು ಮತ್ತೂ ಸೆಕ್ರೆಟರಿಯಟ್ ಸೀನಿಯರ್ ಸೂಪರಿಂಟೆಂಡೆಂಟ್ ಮ॥ ಜಗನ್ನಾಥಶೆಟ್ಟರು ಕಳೆದ ತಾ॥ ೩೦ ರಲ್ಲಿ ಉದ್ಯೋಗದಿಂದ ನಿವೃತ್ತರಾದರು.

ತಿಪಟೂರು ತಾ॥ ಮಾರನಗೆರೆಯಲ್ಲಿ ನಡೆದ ಪುಟ್ಟಸಿದ್ಧಯ್ಯನ ಕೊಲೆಯ ವಿವಾದದಲ್ಲಿ ಅಪರಾಧಿಯಾಗಿದ್ದ ರಂಗನಿಗೆ ಚೀಫ್‌ಕೋರ್ಟ್ ಕೇಸನ್ನು ವಿಚಾರಣೆಯಲ್ಲಿ ಮ॥ ಶರಮಶಿವೆಯ್ಯರ್‌ರವರು ಯಾವಜ್ಜೀವ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿದರು.

ರಾಜಧಾನಿಯಲ್ಲಿ ಈ ತಿಂಗಳಿಂದ ಮುಂದಕ್ಕೆ ಮನೆ, ಅಂಗಡಿ, ನೀರು, ದೀಪ ಇವುಗಳಮೇಲಿನ ತೆರಿಗೆಗಳನ್ನು ೧ ವರ್ಷದಲ್ಲಿ ಮುಂಗಡವಾಗಿಯೇ ಎರಡು ವೇಳೆ ಎತ್ತಬೇಕೆಂದು ಗೊತ್ತಾಗಿದೆ. ಇದರಿಂದ ಬಡಜನರಿಗೆ ಕೊಂಚ ಸೌಲಭ್ಯವುಂಟಾಯಿತೆನ್ನಬಹುದು.

ತ್ಯಾಮಗೊಂಡ್ಲಿನಲ್ಲಿ ಚಿಕ್ಕಮಾಸ್ತಿ ಎಂಬುವನು ತನ್ನ ಮಗನಿಗೆ ೩ ವರ್ಷದ ಬಾಲೆಯನ್ನು ವಿವಾಹಮಾಡಿಕೊಂಡುದಕ್ಕಾಗಿ ಅವನನ್ನೂ ಪೌರೋಹಿತ್ಯ ನಡಿಸಿದ ಹನುಮಂತಭಟ್ಟನನ್ನೂ ನೆಲಮಂಗಲ ತಾ॥ ಪೋಲೀಸರು ಹಿಡಿದು ಡಿ॥ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಿರುವರು.

ಕಳೆದ ಜೂನ್ ತಾ॥ ೩೦ ರಲ್ಲಿ ರಾವ್ ಬಹದ್ದೂರ್ ರಾಜಕಾರ್ಯಪ್ರವೀಣ ಎ ರಂಗಸ್ವಾಮಿ ಅಯ್ಯಂಗಾರರು ಉದ್ಯೋಗದಿಂದ ನಿವೃತ್ತರಾದರು. ಮೊದಲನೇ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಶೆಟ್ಟರು ಆ ದಿವಸವೇ ಮೈಸೂರಿಂದ ತಂತೀಮೂಲಕ ಬಂದ ಅಪ್ಪಣೆಯ ಮೇರಿಗೆ ರೆ॥ ಕೆ॥ ರವರ ಉದ್ಯೋಗದ ಛಾರ್ಜನ್ನು ವಹಿಸಿಕೊಂಡರು.

ಮ॥ ಪಿ. ಸಂಪತ್ತಯ್ಯಂಗಾರ್, ಎಂ. ಎ., ರವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರ ಪ್ರೊಫೆಸರಾಗಿಯೂ; ತುಮಕೂರು ಹೈಸ್ಕೂಲು ಹೆಡ್ಮಾಸ್ಟರಾಗಿದ್ದ ಮೆ॥ ಎ. ಸುಬ್ರಹ್ಮಣ್ಯ ಐಯ್ಯರ್ ಬಿ. ಎ., ರವರು ಬೆಂಗಳೂರು ಹೈಸ್ಕೂಲು ಹೆಡ್ಮಾಸ್ಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಕೋಲಾರದ ಡಿ॥ ಗೆ ಸೇರಿದ ಮಾರಿಕೊಪ್ಪದಲ್ಲಿ ಕಳೆದ ತಾ॥ ೨೪ ರಲ್ಲಿ ಒಬ್ಬ ಐರೋಪ್ಯನು ತನ್ನ ಸ್ನೇಹಿತನ ಮನೆಗೆ ಹೋಗಿ ಒಂದು ಬಟ್ಟಲು ನೀರನ್ನು ಈಸಿಕೊಂಡು, ಜೇಬಿನಿಂದ ಒಂದು ಕಾಗದದ ಪೊಟ್ಟಣವನ್ನು ತೆಗೆದು ಅದರೊಳಗಿದ್ದ ಪುಡಿಯನ್ನು ನೀರಿನೊಳಗೆ ಹಾಕಿ ಕುಡಿದು ಕೊಂಚಹೊತ್ತಿನಲ್ಲೇ ಪ್ರಾಣವನ್ನು ಬಿಟ್ಟನು.

ನಂಜನಗೂಡು ಸಬ್ ಡಿವಿಜನ್ ಅ॥ ಕಮಿಷನರಾದ ಮ॥ ಸುಂದರರಾಜಯ್ಯಂಗಾರರು ಈ ತಿಂಗಳಿಂದ ಉದ್ಯೋಗದಿಂದ ನಿವೃತ್ತರಾಗಲು ಸರ್ಕಾರದಪ್ಪಣೆಯಾಗಿರುವುದು. ಸಾಗರ ಸಬ್ ಡಿವಿಜನ್ ಅ॥ ಕಮಿಷನರಾದ ಮ॥ ಎಲ್. ಕೃಷ್ಣರಾಯರು ಈ ತಾ॥ ೩ ರಲ್ಲಿ ಮ॥ ಅಯ್ಯಂಗಾರರಿಂದ ಅಧಿಕಾರವನ್ನು ವಹಿಸಿಕೊಳ್ಳುವುದಾಗರಿಯುತ್ತೇವೆ.

ಮೈಸೂರ ದೇಶದಲ್ಲಿ ೧೯೦೯ ನೇ ಸಾಲಿನಲ್ಲಿ ಸುಮಾರು ೧೪,೪೯೩ ದನಗಳು ಮೃತಪಟ್ಟಿದ್ದುವು. ಆದರೆ ೧೯೧೦ ರಲ್ಲಿ ೧೪,೦೧೫ ದನಗಳು ಮಾತ್ರ ಸತ್ತಿರುವುವು. ಹುಲಿ ಮುಂತಾದ ದುಷ್ಟಪ್ರಾಣಿಗಳಿಂದ ಈ ವರುಷ ಹೆಚ್ಚಾಗಿ ದನಗಳು ನಷ್ಟವಾಗಿದ್ದರೂ, ಒಟ್ಟು ಮರಣದಲ್ಲಿ ಹೋದವರುಷಕ್ಕಿಂತಲೂ ೪೭೮ ಕಡಿಮೆಯಾಗಿರುವುದು ಸಂತೋಷಕರವಾಗಿದೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ೧೯೦೯ ರಲ್ಲಿ ೧೮೩೦ ಇದ್ದುದು ೧೯೧೦ ರಲ್ಲಿ ೮೫೩ಕ್ಕೆ ಇಳಿದಿರುವುದು.

ರಾಜಧಾನಿಯ ನದರಬಾಗಿನಲ್ಲಿ ಹಾಲಿನಹಳ್ಳಿಗೆ ಹೋಗುವ ಮಾರ್ಗದಲ್ಲಿರುವ ಅಪ್ಪರ್ ರೆಸಿಡೆನ್ಸಿ ಬಂಗಲೆಯು ಶ್ರೀಮದ್ಯುವರಾಜರ ವಾಸಕ್ಕಾಗಿ ಲಕ್ಷಾಂತರ ರೂ. ಗಳ ವ್ಯಯದಿಂದ ಕಳೆದ ೬-೭ ತಿಂಗಳುಗಳಿಂದಲೂ ಸರಿಪಡಿಸಲ್ಪಡುತಿದ್ದು ಈಗ ಸಿದ್ಧವಾಗಿ ಚಾಮುಂಡಿ ವಿಹಾರವೆಂದು ಹೆಸರಿಡಲ್ಪಟ್ಟಿರುವುದು. ಈ ದಿವಸ ಮಧ್ಯಾಹ್ನ ೪ ಗಂಟೆಗೆ ಗೃಹಪ್ರವೇಶಕ್ಕೆ ಲಗ್ನವಿಡಲ್ಪಟ್ಟಿರುವುದು. ಮತ್ತೂ ಶ್ರೀಮದ್ಯುವರಾಜ ದಂಪತಿಗಳು ಆ ಕಾಲಕ್ಕೆ ಅರಮನೆಯಿಂದ ರಾಜಮರ್ಯಾದೆಯೊಡನೆ ಉತ್ಸವದಿಂದ ಹೊರಟು ನೂತನ ಗೃಹಪ್ರವೇಶವನ್ನು ಮಾಡುವರು.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೨೬,	೨೭,	೨೮,	೨೯,	೩೦,	೧,	೨.
ತಗಲಿದ್ದು.	೨	೪	೪	೮	೩	೧	೩
ಸತ್ತದ್ದು.	೨	೩	೧	೪	೪	೧	೨
ಒಟ್ಟು ಕೇ.	೯	೭	೪	೮	೧೦	೫	೩

ತಾ॥ ೨೦-೩-೧೯೧೧ ರಿಂದ ತಾ॥ ೨-೭-೧೯೧೧ ರ ವರೆಗೆ ಒಟ್ಟು ೧೧೯೩ ಜನರಿಗೆ ಇನಾಕ್ಯುಲೇಷನ್ ಮಾಡಲ್ಪಟ್ಟಿದೆ. ಪ್ಲೇಗು ಮರಣವು ಜೂನ್ ತಾ॥ ೧೩ ರಿಂದ ಒಂದೇ ಸಮನಾಗಿ ಆಗುತ್ತಿರುವುದು.

ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಯ ಆಲೋಚನಾಸಭೆಗೆ ಸಹಾಯಕವಾಗೇರ್ಪಟ್ಟಿರುವ ವ್ಯವಸಾಯ ವಿಷಯಕವಾದ ಸಂಘಕ್ಕೆ ಆಲೋಚನಾಸಭೆಯ ಸೆಕ್ರೆಟರಿಯವರಾದ ಅ॥ ಕಮಿಷನರ್ ಮ॥ ಕೆ. ಸುಬ್ಬರಾವ್ ಬಿ. ಎ. ಯವರೂ, ವಿದ್ಯಾವಿಷಯಕವಾದ ಸಂಘಕ್ಕೆ ಬೆಂಗಳೂರ ಹೈಸ್ಕೂಲ್ ಹೆಡ್‌ಮಾಸ್ಟರ್ ಮ॥ ಸಿ. ಕೃಷ್ಣರಾವ್ ಬಿ. ಎ. ಯವರೂ ಮತ್ತು ಕೈಗಾರಿಕೆ, ವ್ಯಾಪಾರಗಳ ವಿಷಯಕವಾದ ಸಂಘಕ್ಕೆ ಸೆಂಟ್ರಲ್ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರ ಬೋಧಕರಾದ ಮ॥ ವಿ. ಎಸ್. ಸಾಂಬಶಿವಯ್ಯರ್, ಬಿ. ಎಸ್. ಸಿ. ಎಲ್. ಸಿ. ಇ., ಯವರು ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟಿರುತ್ತಾರೆ.

ಡೆಪ್ಯುಟಿ ಕಮಿಷನರುದ್ಯೋಗದಿಂದ ನಿವೃತ್ತರಾಗಿರುವ ಮ॥ ಎಂ. ಚೆಂಗಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಮದ್ರಾಸಿನಲ್ಲಿ ಜರುಗಿದ ಆರ್ಯವೈಶ್ಯ ಮಹಾಸಭೆಗೆ ಮದ್ರಾಸಾಧಿಪತ್ಯದ ಎಲ್ಲ ಭಾಗದಿಂದಲೂ ೩೦೦ ಪ್ರತಿನಿಧಿಗಳು ಬಂದಿದ್ದರು. ಮತ್ತೂ ನಮ್ಮ ಸೀಮೆಯಿಂದಲೇ ೧೫೪ ಜನರವರೆಗೆ ವೈಶ್ಯರು ಹೋಗಿದ್ದರು. ಈ ಸಭೆಯಲ್ಲಾದ ನಿರ್ಧಾರಗಳಲ್ಲಿ ಮುಖ್ಯವಾದುದಾವುದೆಂದರೆ:— ೫ ಲಕ್ಷ ರೂಪಾಯಿಗಳ ಬಂಡವಾಳದಿಂದ ಒಂದು ಬ್ಯಾಂಕನ್ನೇರ್ಪಡಿಸಿ, ೧೦೦ ಕ್ಕೆ ೩ ರೂ. ಬಡ್ಡಿಯಮೇರೆ ವೈಶ್ಯ ಜನರಿಗೆ ಹಣವನ್ನು ಸಾಲ ಕೊಟ್ಟು ಆ ಬಡ್ಡಿ ಹಣದಲ್ಲಿ ೩ ಭಾಗವನ್ನು ಭಾಗಾದಾರರಿಗೂ, ೧ನ್ನು ವೆಚ್ಚಕ್ಕೂ ತೆಗೆದು ಉಳಿದ ೩ ಭಾಗವನ್ನು ವಿದ್ಯಾಭಿವೃದ್ಧಿಯ ಫಂಡಿಗೆ ಕೊಡತಕ್ಕದು. ಪ್ರತಿಯೊಬ್ಬ ವೈಶ್ಯನಿಗೂ ಸಾಧ್ಯವಾಗಿರುವಂತೆ ಭಾಗಾಂಶವು ೧ ರೂ. ಮೊದಲ್ಗೊಂಡು ತೆಗೆದುಕೊಳ್ಳಲ್ಪಡುವುದಾಗಿ ಗೊತ್ತಾಗಿರುವುದು.

ರಾಜಧಾನಿಯಲ್ಲಿ ಕಳೆದ ವಾರದಿಂದಲೂ ದೊಡ್ಡ ಮಳೆ ಇಲ್ಲದಿದ್ದರೂ ಮೋಡವುಮಾತ್ರ ಮುಸಿಕಿಕೊಂಡು ಆಗಾಗ್ಗೆ ಕೊಂಚ ಸೋನೆಮಾಡುತ್ತಿರುತ್ತದೆ. ಮಂಡಿ ಮತ್ತೂ ದೇವರಾಜಮೊಹಲ್ಲಗಳಲ್ಲಿ ಪ್ಲೇಗು ಮರಣಗಳಾಗುತ್ತಿವೆ. ಪ್ರಕೃತ ವಾಯುಸ್ಥಿತಿಯಿಂದ ಈ ವೇಳೆ ಪ್ಲೇಗು ರೋಗವು ಹೆಚ್ಚಬಹುದೆಂಬ ಭೀತಿಯುಂಟಾಗಿದೆ. ಈಗ್ಗೆ ೨ ನೇ ವರ್ಷದಲ್ಲಿ ಸಾವಿರಾರು ರೂಪಾಯಿಗಳನ್ನು ವ್ಯಯಮಾಡಿ ಮಕ್ಕಳಿಗೆ ಮಿಠಾಯಿಯನ್ನೂ, ದೊಡ್ಡವರಿಗೆ ದುಡ್ಡನ್ನೂ ಬಟ್ಟೆಯನ್ನೂ ಕೊಟ್ಟು ಸಾವಿರಾರು ಜನರಿಗೆ ಇನಾಕ್ಯುಲೇಷನನ್ನು ಮಾಡಿಸಿದ ಮ॥ ನೀಲಗಿರಿ ದೊಡ್ಡ ಪಾಪಣ್ಣನವರ ಕುಮಾರರು ಮದ್ದಣ್ಣನವರು ಈಗ ಪುನಃ ಮೊದಲಿನಂತೆ ಮಿಠಾಯಿ, ದುಡ್ಡು ಮತ್ತೂ ಬಟ್ಟೆಗಳನ್ನು ಜನರಿಗೆ ಕೊಟ್ಟು ಪ್ರೋತ್ಸಾಹಿಸಿ ಡಾಕ್ಟರ್ ಅನಂತರಾಮಯ್ಯಂಗಾರರ ಮೂಲಕ ಇನ್ಯಾಕ್ಯುಲೇಷನನ್ನು ಮಾಡಿಸಲಾರಂಭಿಸಿರುವರೆಂದು ತಿಳಿಯಲು ಸಂತೋಷವಾಗುತ್ತದೆ. ಈ ಧರ್ಮಿಷ್ಠರ ಮೇಲ್ಪಂಕ್ತಿಯನ್ನನುಸರಿಸಿ ಇತರ ಶ್ರೀಮಂತರೂ ತಮ್ಮ ಶಕ್ತ್ಯನುಸಾರ ದುಡ್ಡನ್ನು ವ್ಯಯಮಾಡಿ ಜನರಿಗೆ ಪ್ರೋತ್ಸಾಹವನ್ನು ಕೊಟ್ಟು ಇನಾಕ್ಯುಲೇಷನ್ ಮಾಡಿಸಿ ರೋಗವು ಹರಡದಂತೆ ಮಾಡುವವರಾಗಲೆಂದು ಇಚ್ಛಿಸುವೆವು.

ವರ್ತಮಾನ ಸಂಗ್ರಹ.

ಕಲಕತ್ತಾದಲ್ಲಿ ಒಂದು ಜೂಟಿನ ಕಾರ್ಖಾನೆಯಲ್ಲಿ ಬೆಂಕಿಬಿದ್ದು ೩,೦೦೦ ಮೂಟೆಗಳು ಸುಟ್ಟುಹೋಗಿ ೨॥ ಲಕ್ಷ ರೂ. ಗಳ ವರೆಗೆ ನಷ್ಟವಾಯಿತು.

ಜಾರ್ಜ್ ದೊರೆಗಳು ಕಿರೀಟಧಾರಣವನ್ನು ಮಾಡಿದ ಮೇಲೆ ಭರತಖಂಡದಿಂದ ಹೋಗಿರುವ ರಾಜರುಗಳಿಗೂ, ಸೈನಿಕರಿಗೂ ಬಹುಮಾನದ ಪದಕಗಳನ್ನು ದಯಪಾಲಿಸಿದರು.

ದಿಲ್ಲಿಯಲ್ಲಿ ಪ್ಲೇಗು ಶಮನವಾಗುತ್ತಿದ್ದಾಗ್ಯೂ ಅದರ ಸುತ್ತುಮುತ್ತಲೂ ಇರುವ ಸ್ಥಳಗಳಲ್ಲಿ ರೋಗವು ಇರುವುದರಿಂದರಿಂದ ದಿಲ್ಲಿಯನ್ನು ಸುಂಕಿನ ಸ್ಥಳವೆಂತಲೇ ಭಾವಿಸಬೇಕಾಗಿರುವುದು.

ಮೆ॥ ಆಷೆಯವರನ್ನು ಕೊಲೆಮಾಡಿದವರನ್ನು ಗೊತ್ತುಮಾಡುತ್ತಿರುವ ಪೊಲೀಸಿನವರು ಬೇರೆಬೇರೆ ಸ್ಥಳಗಳಿಂದ ಅನುಮಾನಾಸ್ಪದರಾದವರನ್ನು ಹಿಡಿದು ತಂದಿರುವರು. ಆ ಕೊಲೆಪಾತಕನ ಸಂಗಡವಿದ್ದವನು ಶಂಕರ ಕೃಷ್ಣ ಐಯ್ಯರೆಂದು ಗೊತ್ತಾಗಿದೆ ಇನ್ನು ಕೆಲವು ದಿವಸಗಳಲ್ಲೇ ಎಲ್ಲವೂ ಹೊರಪಡುವುದು.

ಕಳೆದ ಏಪ್ರಿಲ್ ತಿಂಗಳಲ್ಲಿ ನಡೆದ ವ್ಯವಸಾಯ ಮತ್ತೂ ಕೈಗಾರಿಕೆಗಳ ವಸ್ತುಪ್ರದರ್ಶನದಲ್ಲಿ ಹೊಲಿಗೆ ಯಂತ್ರಗಳನ್ನು ಮಾಡುವ "ಸಿಂಗರ್" ಕಂಪೆನಿಯವರಿಗೆ ಎರಡು ಚಿನ್ನದ ಪದಕಗಳು ಕೊಡಲ್ಪಟ್ಟಿರುವುವು. ಈ ಯಂತ್ರಗಳಲ್ಲಿ ಹೊಲಿಗೆ ಕೆಲಸಗಳು ಬಹಳ ಶೀಘ್ರವಾಗಿಯೂ, ಸಮರ್ಪಕವಾಗಿಯೂ ಆಗುವುದೆಂಬುದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ.

ಅಫ್ಘಾನಿಸ್ಥಾನದ ಅಮೀರರು ಪಿಶಾವರಿನಿಂದ ಖೈಬರ್ ಕಣಿವೆಯ ಮಾರ್ಗವಾಗಿ ಕಾಬೂಲಿನವರೆಗೂ ಅಂದರೆ ಸುಮಾರು ೨೦೦ ಮೈಲಿಗಳ ದೂರದವರೆಗೂ ಮೋಟಾರು ಬಂಡಿಗಳು ತಿರುಗುತ್ತಿರುವುದಕ್ಕೆ ಏರ್ಪಡಿಸಿ ಪ್ರಯಾಣಿಕರಿಗೂ ಸರ್ಕಾರದವರಿಗೂ ಅನುಕೂಲಪಡಿಸಬೇಕೆಂದು [illegible], ಬೊಂಬಾಯಿ ಮೋಟಾರು ಕಂಪೆನಿಗೆ ಸೇರಿದ ಮೆ॥ ಕ್ವೈಅರ್ಟರವರಿಗೆ ಐದುವರೆ ಲಕ್ಷ ರೂ. ಗಳು ಬಾಳುವ ಮೋಟಾರು ಬಂಡಿಗಳನ್ನು ಕಳುಹಿಸಿಕೊಡಲು ಅಪ್ಪಣೆಮಾಡಿರುವರು.

ಅಲೆಗ್ಸಾಂಡ್ರಾ ಮಹಾರಾಣಿಯವರು ಧರಿಸಿದ್ದ ಕಿರೀಟದಲ್ಲಿ "ಕೊಹಿನೂರ್" ಎಂಬ, ಚರಿತ್ರೆಯಲ್ಲಿ ಪ್ರಖ್ಯಾತಿಗೊಂಡ ಈ ದೇಶದ ವಜ್ರವೂ, ಇದರೊಂದಿಗೆ ೨೯೩೩ ಇತರ ವಜ್ರಗಳೂ ಸೇರಿದ್ದುವು. ರಾಣಿಯವರ ಇಷ್ಟದಂತೆ ಕಿರೀಟವು ಬೆಳ್ಳಿಯಿಂದ ಮಾಡಲ್ಪಟ್ಟಿದ್ದಿತು. ಆದರೂ ಈ ವಜ್ರಗಳಲ್ಲಿ ಆ ಬೆಳ್ಳಿಯು ಕಾಣಿಸುತ್ತಲೇ ಇರಲಿಲ್ಲ. ಕಿರೀಟವು ಒಟ್ಟು ತೂಕದಲ್ಲಿ ಎರಡುಸೇರಷ್ಟು ಅಥವಾ ಸುಮಾರು ೯೫ ತೊಲೆಗಳಷ್ಟಿದ್ದಿತು. ಈಗ ಮೇರಿ ಮಹಾರಾಣಿಯವರಿಗಾಗಿ ಮಾಡಿರುವ ಕಿರೀಟವು ಇನ್ನೂ ಅತಿಶಯವಾಗಿದೆ. ಇದರ ತೂಕವು ೧೯ ಔನ್ಸು ಅಥವಾ ಎರಡು ಸೇರೆಂದು ಹೇಳಬಹುದಾಗಿದೆ.

ಜಾರ್ಜ್ ಪ್ರಭು ದಂಪತಿಗಳು ಕಳೆದ ತಾ॥ ೩೦ ರ ಮಧ್ಯಾಹ್ನ ತಮ್ಮ ಮಕ್ಕಳುಗಳೊಡನೆ ಮೋಟಾರು ಬಂಡಿಯಲ್ಲಿ ಕುಳಿತು ಬಕಿಂಗ್ಹ್ಯಾಂ ಅರಮನೆಯಿಂದ ಕ್ರಿಸ್ಟಲ್ ಅರಮನೆಗೆ ದಯಮಾಡಿಸಿ ಅಲ್ಲಿ ನೆರದಿದ್ದ ಪಾಠಶಾಲೆಗೆ ಹೋಗತಕ್ಕ ಮಕ್ಕಳಿಗೆ ತಿಂಡಿಯಿಂದಲೂ, ಆಟಪಾಟದಿಂದಲೂ ಆನಂದಗೊಳಿಸಿದರು. ಆ ದಿವಸ ಕ್ರಿಸ್ಟಲ್ ಅರಮನೆಗೆ ಮಕ್ಕಳುಗಳನ್ನು ಕರೆದುಕೊಂಡು ಹೋಗಿಬರಲು ೧೦೦ ಹೆಚ್ಚುಗಟ್ಟಲೆಯ ರೈಲುಬಂಡಿಗಳು ಓಡಿಸಲ್ಪಟ್ಟುವು. ಪ್ರಭು ದಂಪತಿಗಳು ಅರಮನೆಗೆ ಚಿತ್ತೈಸಿದಾಗಲೂ, ಅಲ್ಲಿಂದ ಹೊರಟಾಗಲೂ ಮಕ್ಕಳುಗಳೆಲ್ಲರೂ ವಿಶೇಷ ಕೋಲಾಹಲ ಧ್ವನಿಯನ್ನು ಮಾಡಿ ತಮ್ಮ ಅಪಾರವಾದ ಸಂತೋಷವನ್ನು ಪ್ರದರ್ಶಿಸಿದರು.

ಇಂಡಿಯಾ ಸರಕಾರದವರು ಈ ಕೆಳಗೆ ಕಂಡ ದಿವಸಗಳನ್ನು ಪೋಸ್ಟಾಫೀಸುಗಳಲ್ಲಿ ರಜಾದಿವಸಗಳನ್ನಾಗಿ ಭಾವಿಸಿ, ನಾಳೆ ೧೯೧೨ ರಿಂದ ಆಚರಣೆಗೆತರಬೇಕೆಂದೂ ಅಪ್ಪಣೆ ಮಾಡಿರುತ್ತಾರೆ. ಮದರಾಸು, ಬರ್ಮಾಗಳನ್ನುಳಿದು ಇತರ ಸರ್ಕಲುಗಳಲ್ಲಿ—(೧) ಇತ್‌ಉಸ್ ಜುಹಾ, (೨) ಹೋಳಿ, (೩) ಜನ್ಮಾಷ್ಟಮಿ, (೪) ರಂಜಾನ್, (೫) ದಸರಾ, ಪೂಜಾ ದಿವಸ, (೬) ದೀಪಾವಳಿ ಅಥವಾ ಕಾಳೀಪೂಜೆ. ಮದ್ರಾಸು ಸರ್ಕಲುಗಳಿಗೆ—(೧) ಪೊಂಗಲ್, (೨) ಮಹಾಶಿವರಾತ್ರಿ ಅಥವಾ ತೆಲುಗರ ಯುಗಾದಿ, (೩) ತಮಿಳರ ಯುಗಾದಿ, (೪) ಆಯುಧಪೂಜೆ, (೫) ರಂಜಾನ್, (೬) ದೀಪಾವಳಿ. ಬರ್ಮಾ ಉಳಿದ ಎಲ್ಲಾ ಸರ್ಕಲುಗಳಿಗೆ— (೧) ಜನ್ಮಾಷ್ಟಮಿ, (೨) ರಂಜಾನ್, (೩) ದೀಪಾವಳಿ.

ಜಾರ್ಜ್‌ಪ್ರಭುಗಳು "ನಮ್ಮ ಬ್ರಿಟಿಷ್ ರಾಜ್ಯಾಡಳಿತಕ್ಕೊಳಪಟ್ಟ ಎಲ್ಲ ಜನಾಂಗದವರೂ ನಮ್ಮ ಕಿರೀಟಧಾರಣ ಮಹೋತ್ಸವದಿಂದ ತಮ್ಮಗಳಿಗುಂಟಾದ ಆನಂದಾತಿಶಯವನ್ನೂ, ಅಪಾರವಾದ ರಾಜಭಕ್ತಿಯನ್ನೂ ಪ್ರತ್ಯಕ್ಷದಿಂದಲೂ, ತಂತಿಯ ವಾರ್ತೆಯಿಂದಲೂ ತಂತಮ್ಮ ಸ್ಥಳಗಳಲ್ಲಿ ಉತ್ಸವಾದಿಗಳನ್ನು ನಡಿಸಿದುದರಮೂಲಕವೂ ಪ್ರದರ್ಶಿಸಿರುವರು. ಇದರಿಂದ ನಮ್ಮ ಮನಸ್ಸಿಗೆ ಅತಿಶಯವಾದ ಸಂತೋಷವುಂಟಾಗಿರುವುದಲ್ಲದೆ ಅವರ ರಾಜಭಕ್ತಿವಿಶ್ವಾಸದಲ್ಲಿ ಪೂರ್ಣ ಭರವಸೆಯು ಹೆಚ್ಚಿರುತ್ತದೆ. ನಮ್ಮ ದಂಪತಿಗಳಲ್ಲಿ ಪ್ರಜೆಗಳು ತೋರಿಸಿದ ಸಾನುಭೂತಿಯು ನಾವು ಹೊಸ ಕೋರಿಕೆಯಿಂದ ಮುಂದುವರಿಯಲು ನಮ್ಮಲ್ಲಿ ಶಕ್ತಿಯನ್ನುಂಟುಮಾಡಿರುತ್ತದೆ. ನಮಗೂ, ನಮ್ಮ ಪ್ರಜೆಗಳಿಗೂ, ನಮ್ಮ ಕಾರ್ಯಗಳಲ್ಲಿ ಎಂಥ ತೊಡರುಗಳೂ, ಕಷ್ಟಗಳೂ ಪ್ರಾಪ್ತವಾದಾಗ್ಯೂ ಕಡೆಯಲ್ಲಿ ದೈವಕೃಪೆಯಿಂದ ಸಮಸ್ತರಿಗೂ ಕ್ಷೇಮವಾಗುತ್ತದೆಂಬ ಭರವಸೆಯಿಂದ ನಾವುಭಯರೂ ಏಕೀಭವಿಸಿ ಶಾಂತತೆಯಿಂದಲೂ, ದೃಢಸಂಕಲ್ಪದಿಂದಲೂ ಮಾಡತಕ್ಕದಾಗಿದೆ. ಮತ್ತೂ ಕ್ರಿಸ್ಟಲ್ ಅರಮನೆಯಲ್ಲಿ ನೆರದಿದ್ದ ಮಕ್ಕಳುಗಳು ತಮಗುಂಟಾದ ನಿರ್ಬಂಧವನ್ನು ಸಹ ಲಕ್ಷಿಸದೆ ತಮ್ಮುಪಾಧ್ಯಾಯರುಗಳ ಸೂಚನೆಯನ್ನು ಸಮ್ಮಾನಿಸಿ ತಮ್ಮ ವಿದ್ಯಾಸಂಸ್ಥೆಗಳಿಗೆ ಕೀರ್ತಿಯನ್ನು ತರುವುದರಲ್ಲಿ ತೋರಿಸಿದ ಉತ್ಸುಕತೆಯು ತಮ್ಮ ಮತ್ತೂ ತಮ್ಮ ದೇಶದ ಅಭಿವೃದ್ಧಿಗೆ ಶುಭಸೂಚಕವಾಗಿದೆ." ಎಂದು ಸೆಕ್ರೆಟರಿಗಳ ಮೂಲಕ ಅಪ್ಪಣೆಕೊಡಿಸಿರುವರು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ಗಮನಿಸತಕ್ಕದು.

ಪ. ಪ್ರ.

ಪತ್ರವ್ಯವಹಾರ.

ನಿಜಾಮಿಲಾಖ ಚಿಡಗುಪ್ಪಿ ತಾ॥ ಪೈಕಿ ನಿಣ್ಣಿ ಗ್ರಾಮದ ಸಂಸ್ಕೃತ ಪಾಠಶಾಲೆಯ ಸ್ಥಾಪನೆ.

ಇದೇ ವಿರೋಧಿಕೃತುನಾಮ ಸಂವತ್ಸರದ ಜೇಷ್ಠ ಬಹುಳ ೧೧ ಬುಧವಾರ ರೇವತಿನಕ್ಷತ್ರ ಶೋಭನನಾಮ ಯೋಗದಲ್ಲಿ ಸುತ್ತಮುತ್ತಿನ ಗ್ರಾಮಮಂಡಳಿಯ ವೀರಶೈವರು ಮಧ್ಯಾಹ್ನ ೩ ಗಂಟೆಯ ವ್ಯಾಳ್ಯದಲ್ಲಿ ಸಭೆಯು ಸೇರಿ ಮೇಲ್ಕಂಡ ಗ್ರಾಮದ ಮಾಲಿಗೌಡ ಮುದಿವಾಳಪ್ಪನವರು ಸೂಚಿಸಿದಮೇರೆಗೆ ಸಮಸ್ತ ಶೆಟ್ಟರೂ ಶ್ರೀ ಬಸವತೀರ್ಥ ಮಠದ ಮಹಾಸ್ವಾಮಿಗಳು ಅಗ್ರಾಸನವನ್ನು ವಹಿಸಬೇಕೆಂದು ಅನುಮೋದಿಸಲೊಪ್ಪಿದಪ್ರಕಾರ ಸದರಿ ಸ್ವಾಮಿಗಳು ಅಧ್ಯಕ್ಷಸ್ಥಾನವನ್ನು ವಹಿಸಿದಮೇಲೆ ಶಾಲಾ ವಿಷಯವಾಗಿ

ಅನಂತಸುಬೋಧೆಗಳಿಂದ ಸರ್ವರಿಗೂ ಆನಂದಗೊಳಿಸಿದರು. ಅನಂತರದಲ್ಲಿ ನಾಯಿಕಲ್ಲು ಬಸವರಾಜ ಶಾಸ್ತ್ರಿಗಳು ಸ್ವಾಮಿಗಳ ಆಜ್ಞಾಪ್ರಕಾರವಾಗಿ ಲಿಂಗಧಾರಣ, ದೀಕ್ಷೆ, ವಿವಾಹ ಮೊದಲಾದ ಕಾರ್ಯಗಳು ಶಾಸ್ತ್ರೀಯಪ್ರಕಾರವಾಗಿ ವೇದೋಕ್ತಮಂತ್ರಗಳಿಂದ ಕ್ರಮತಪ್ಪದೆ ಮಾಡಿಸಬೇಕೆಂದು ಯುಕ್ತ್ಯಾಯುಕ್ತವಾಗಿ ಸರ್ವರಿಗೂ ತಿಳಿಯುವಂತೆ ಉಪನ್ಯಾಸ ಮಾಡಿದರು. ಸಭಿಕರು ಕರತಾಡನದೊಡನೆ ಅನುಮೋದನ ಕೊಟ್ಟರು. ಅನಂತರದಲ್ಲಿ ನಮ್ಮ ವೀರಶೈವ ಮತಕ್ಕೆ ಚಂದ್ರಪ್ರಾಯವಾಗಿರುವ "ಸ್ಟಾರು" ಪತ್ರಿಕೆಯು ಮತ್ತು ಗ್ರಂಥಪ್ರಕಾರ ಮಂಡಲಿಯಿಂದ ಹೊರಡುವ ಮತಗ್ರಂಥದ ಮಾಸಿಕಪುಸ್ತಕಕ್ಕೆ ಉತ್ತೇಜನ ಕೊಡಬೇಕೆಂದು ಸಮಸ್ತರಿಗೂ ತಿಳಿಸಲಾಗಿ ಮಾಲಿಗೌಡ ಮಡಿವಾಳಪ್ಪನವರು ಇನ್ನೂ ಮೊದಲಾದ ನಾಲ್ಕೈದು ಜನರು ಒಪ್ಪಿ ಆ ಕೂಡ್ಲೆ ಅಧ್ಯಕ್ಷ ಮಹಾಶಯರ ಕಡಿಗೆ "ಸ್ಟಾರ್" ಚಂದಾ ಪಾವತಿಮಾಡಿದರು. ಈ ಸಭೆಯು ಸಾಯಂಕಾಲ ೩ ಘಂಟೆ ಸಮಯವಾಗಲಾಗಿ ಸರ್ವರೂ ಕರತಾಡನದೊಡನೆ ಗಂಧ, ತಾಂಬೂಲಾದಿ ದಕ್ಷಿಣೆ ಸಮೇತವಾಗಿ ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ

ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡು.

ಮ॥ರಾ॥ ಗಳಿಂದ

ಶಿರಾಕೋಟೆ ದಾಸೇಗೌಡರ ಲಗ್ನದಲ್ಲಿ ಮುದಲೂರು ಉ॥ಪಟ್ಟದ ರುದ್ರದೇವರ ಮುಖಾಂತರ	೨-೦-೦
ದುಮ್ಮಿನಹಳ್ಳಿ ಚೆನ್ನಬಸಪ್ಪನವರ ಮಕ್ಕಳು ಬಸಪ್ಪನವರ ಲಗ್ನದಲ್ಲಿ ಸೆಟ್ಟಿ ನಂಜುಂಡಪ್ಪನವರ ಮೂಲಕ ವರನಕಡೆಯಿಂದ	೨-೦-೦
ವಧುವಿನ ಕಡೆಯಿಂದ	೧-೦-೦
ಹಾಸನದ ಶೇಣಿ ಮಹದೇವಪ್ಪನವರಿಂದ ಇವರ ತಮ್ಮಂದಿರು ಮಲ್ಲಪ್ಪನವರ ಲಗ್ನದಲ್ಲಿ ವರನ ಕಡೆಯಿಂದ	೧೫-೦-೦
ವಧುವಿನಕಡೆ ಹೊಳೆನರಸಿಪುರದ ಗೆಜ್ಜಹಳ್ಳಿ ಸಾಹುಕಾರ್ ಸಂಗಪ್ಪನವರಿಂದ ...	೮-೦-೦
ಮುಳಬಾಗಲು ಅಡಿಕೆಮಳಿಗೆ ಶರಭಣ್ಣನವರ ಮಗಳ ಲಗ್ನದಲ್ಲಿ ವಧುವಿನಕಡೆ ...	೫-೦-೦
ತರೀಕೆರೆ ಶರಭಯ್ಯನವರ ಗುರುಪಾದಪ್ಪನವರ ಮಗಳ ಲಗ್ನದಲ್ಲಿ ಮುರುಗೇಂದ್ರಪ್ಪನವರ ಮುಖೇನ	೪-೦-೦
ಹುಲಿಕೆರೆ ಪುಟ್ಟಣ್ಣನವರ ತಮ್ಮಂದಿರು ಚೆನ್ನಬಸಪ್ಪನವರ ಮಗಳ ಲಗ್ನದಲ್ಲಿ ಮುರುಗೇಂದ್ರಪ್ಪನವರಿಂದ	೫-೦-೦
ಕೊಡ್ಲಿಪೇಟೆ ಅರೆಕೆರಿ ಬಸೆಟ್ಟರ ಮೂಲಕ:—	
ಸಿಂಗ್ರಾಪುರದ ಶಾಂತವೀರಪ್ಪನವರ ಮಗಳ ಲಗ್ನದಲ್ಲಿ ೨ ರೂ., ಮರೂರು ನಂಜುಂಡಪ್ಪನವರ ಮಗಳ ಲಗ್ನದಲ್ಲಿ ೨ ರೂ., ಅರೆಕೆರಿ ಬಸೆಟ್ಟರ ಮಗಳ ಲಗ್ನದಲ್ಲಿ ೨ ರೂ., ಶಿವಪುರದ ಶಿವಲಿಂಗಪ್ಪನವರ ಮಗಳ ಲಗ್ನದಲ್ಲಿ ೨ ರೂ., ಕಲ್ಲಳ್ಳಿ ಚೆನ್ನಬಸಪ್ಪನವರ ಮಗಳ ಲಗ್ನದಲ್ಲಿ ೨ ರೂ., ಅರೆ ಅಂಬೈಸೆಟ್ಟರ ಮಗಳಲಗ್ನದಲ್ಲಿ ೨ ರೂ., ಎಲೆ ಮಲ್ಲಿಕಾರ್ಜುನಪ್ಪನವರ ಲಗ್ನದಲ್ಲಿ ೨ ರೂ., ಶಾಂತಪುರದ ಪಣ್ಣಣಪ್ಪನವರ ಲಗ್ನದಲ್ಲಿ ೨ ರೂ., ಅರೆ ಬಸಪ್ಪನವರ ಮಗಳ ಲಗ್ನದಲ್ಲಿ ೨ ರೂಪಾಯಿ.	೧೮-೦-೦
	೩೦-೦-೦
ಹಿಂದೆ ಬಂದುದು. ...	೮೧-೦-೦
೨೨-೬-೧೯೧೧	ರೂ. ೧೧೧-೦-೦

ಜಿ. ಶಾಂತವೀರಪ್ಪ, ಸೆಕ್ರಟರಿ.

ಆಳಿವೀಲದಲ್ಲಿ ಅನಂಥ ೫ ನೇ ಜಾರ್ಜ್ ಬಾದಶಹರ ಪಟ್ಟಾಭಿಷೇಕದ ಮಹೋತ್ಸವವು.

ಈ ಊರಲ್ಲಿ ಸಾರ್ವಭೌಮ ಜಾರ್ಜ್ ಸಾಹೇಬರ ಪಟ್ಟಾಭಿಷೇಕದ ಉತ್ಸವ ಮಾಡುವುದರಸಲುವಾಗಿ ಶ್ರೀಮಂತ ಶಿವಲಿಂಗರಾವ ದೇಶಮುಖರು ತಮ್ಮ ಒಟ್ಟು ಮೊಖ್ತ್ಯಾರರನ್ನು ಮೊದಲೇ ಕಳುಹಿಸಿದ್ದರು ಅದರಂತೆ ಜೂನ್ ೨೨ ನೇ ತಾ॥ ದಿವಸ ಈ ಊರ ಕನ್ನಡಶಾಲೆಯಲ್ಲಿ ದೊಡ್ಡ ಸಭೆ ನೆರೆಯಿತು. ಈ ಸಭೆಗೆ ಊರೊಳಗಿನ ಯಾವತ್ತೂ ಶೆಟ್ಟಿ ಸಾಹುಕಾರರೂ ಮತ್ತು ಪ್ರಮುಖ ರೈತರೂ, ಗ್ರಾಮಸ್ಥರೂ ಬಂದಿದ್ದರು. ಪ್ರಾತಃಕಾಲ ೮ ಘಂಟೆಗೆ ಉತ್ಸವದ ಕೆಲಸಕ್ಕೆ ಪ್ರಾರಂಭವಾಯಿತು. ಮೊದಲು ಶಾಲೆಯ ಹುಡುಗರ ದೇಹಶಕ್ತಿಯನ್ನು ಪರೀಕ್ಷೆಮಾಡುವಂಥ ಕಸರತ್ತುಗಳಾದವು. ಮತ್ತು ಇಲ್ಲಿಯ ಮಾಸ್ತರರು ಹುಡುಗರಿಂದ ಆಟ, ಕವಾಯತ ಮುಂತಾದವುಗಳನ್ನು ಮಾಡಿಸಿ ಬಂದ ಜನರಿಗೆ ಸಂತೋಷಪಡಿಸಿದರು. ಸಭೆಯ ಅಧ್ಯಕ್ಷಸ್ಥಾನವನ್ನು ಈ ಊರಲ್ಲಿ ಪ್ರಮುಖರೂ ಶಾಲೆಯ ಮೆಂಬರರೂ ಆದ ಮೆ॥ ಕಾಜಿಸಾಹೇಬರು ಸ್ವೀಕರಿಸಿದರು. ಸಭೆಯಲ್ಲಿ ಇಲ್ಲಿಯ ಶಾಲಾ ವಿದ್ಯಾರ್ಥಿಗಳು ಜಾರ್ಜ್ ಸಾಹೇಬರಮೇಲೆ ಒಂದೆರಡು ಪದಗಳನ್ನು ಬಹಳ ಚಂದವಾಗಿ ಹಾಡಿದರು. ಇಲ್ಲಿಯ ಶಾಲೆಯ ಅ॥ ಹೆಡ್‌ಮಾಸ್ಟರ್ ಭೀಮಾಜಿ ಗುಂಡೋಮುತಾಲಿಕ ಇವರು ಬಾದಶಹರ ಶಿಕ್ಷಣ, ಅವರ ದೇಶಪರ್ಯಟನ, ಹಿಂದೂಜನರಬಗ್ಗೆ ಅವರ ಪ್ರೀತಿ, ಅವರಲ್ಲಿದ್ದ ನ್ಯಾಯ ಮತ್ತು ದಯಾ ಇವುಗಳ ವಿಷಯವಾಗಿ ಬಹಳ ಸರಸ ಭಾಷಣ ಮಾಡಿದರು. ಅದರಿಂದ ಜನರಿಗೆ ಬಹಳ ಆನಂದವಾಯಿತು. ಆಮೇಲೆ ಮೆ॥ ಹನುಮಂತ ವೆಂಕಟೇಶ ಕಲ್ಲಾಳ (ದೇಶಮುಖರ ಒಟ್ಟು ಮೊಖ್ತ್ಯಾರ) ಇವರು ಲಂಡನ್ನಿನ ಉತ್ಸವದ ವರ್ಣನೆ, ಪ್ರಜೆಗಳು ಅರಸರಬಗ್ಗೆ ಮಾಡತಕ್ಕ ಕರ್ತವ್ಯ ಮುಂತಾದವುಗಳಬಗ್ಗೆ ಚೆನ್ನಾಗಿ ಭಾಷಣ ಮಾಡಿದರು. ಮತ್ತು ಶಾಲೆಯ ವಿದ್ಯಾರ್ಥಿಗಳಿಗೆ ಕೆಲವು ನೀತಿಯ ಮಾತುಗಳನ್ನು ಹೇಳಿದರು. ಅನಂತರ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದ ಮೆ॥ ಕಾಜಿ ಸಾಹೇಬರು ಶರತ್ತಿನಲ್ಲಿ ಗೆದ್ದ ಶಾಲೆಯ ವಿದ್ಯಾರ್ಥಿಗಳಿಗೆ ಅವರವರ ಯೋಗ್ಯತೆಯ ಪ್ರಕಾರ ತಮ್ಮ ಸ್ವಂತಖರ್ಚಿನಿಂದಲೇ ಇನಾಮು ಕೊಟ್ಟರು. ಇಲ್ಲಿಯ ಶ್ರೀಮಂತ ದೇಶಮುಖರು ತಮ್ಮ ಸ್ವಂತಖರ್ಚಿನಿಂದಲೇ ಯಾವತ್ತೂ ಶಾಲಾ ವಿದ್ಯಾರ್ಥಿಗಳಿಗೆ ಮಿಠಾಯಿಯನ್ನು ಹಂಚಿದರು. ಆಮೇಲೆ ಯಾವತ್ತೂ ಜನರು ೫ನೇ ಜಾರ್ಜರಬಗ್ಗೆ ರಾಷ್ಟ್ರೀಯ ಗೀತವನ್ನು ಹಾಡಿ ಅವರಿಗೆ ಸುಖಶಾಂತಿಗಳು ದೊರೆಯುವಬಗ್ಗೆ ಪರಮೇಶ್ವರನನ್ನು ಬೇಡಿಕೊಂಡರು. ಅನಂತರ ತಾಂಬೂಲ ಮುಂತಾದವುಗಳನ್ನು ಹಂಚಲ್ಪಟ್ಟು ಸಭಾ ವಿಸರ್ಜನೆಯಾಯಿತು.

ಓರ್ವ ಪ್ರೇಕ್ಷಕ.

ಆದವಾನಿ.

ಈ ತಿಂಗಳು ೨೨ ನೇ ತಾರೀಖಿನ ದಿನ ಆದವಾನಿ ಪ್ರಜೆಗಳು ಚಕ್ರವರ್ತಿಗಳ ಪಟ್ಟಾಭಿಷೇಕ ದಿನವನ್ನು ಅತಿ ಉತ್ಸಾಹದೊಡನೆ ನೆರವೇರಿಸಿದರು. ಆದಿನ ಪ್ರಾತಃಕಾಲ ಮ್ಯುನಿಸಿಪಲ್ ಆಫೀಸು ಕಟ್ಟಡದ ಮೇಲ್ಭಾಗದಲ್ಲಿ ಯೂನಿಯರ್ ಜಾಕ್ ಎತ್ತಿ ಕಟ್ಟಲ್ಪಟ್ಟಿತು. ಎಲ್ಲಾ ಮತದವರ ದೇವಾಲಯಗಳಲ್ಲಿಯೂ, ಮಸೀದಿಗಳಲ್ಲಿಯೂ ಶ್ರೇಯಃಪ್ರಾರ್ಥನೆಯು ಮಾಡಲ್ಪಟ್ಟಿತು. ಮೆ॥ ವೆಯಿಟ್ ದೊರೆಗಳ ಅಧ್ಯಕ್ಷತೆಯ ಕೆಳಗೆ ಪ್ರೊಟೆಸ್ಟಾಂಟು ಜನರು ಮ್ಯುನಿಸಿಪಲ್ ಆಫೀಸಿನಲ್ಲಿಯೂ, ರೆವರೆಂಡ್ ಫಾದರ್ ಪಿ. ರಾಯನ್ನೆನವರ ಅಧ್ಯಕ್ಷತೆಯ ಕೆಳಗೆ ರೋಮನ್ ಕ್ಯಾಥೋಲಿಕ್ ಜನರು ಮ್ಯುನಿಸಿಪಲ್ ಸೆಕ್ರೆಟರಿಗಳ ಬಂಗಲೆಯಲ್ಲಿಯೂ ಪ್ರಾರ್ಥನೆಗಳನ್ನು ಮಾಡಿದರು. ಆದಿನ ೮ ಗಂಟೆಗೆ ಮ್ಯುನಿಸಿಪಲ್ ಸ್ಕೂಲಿನ ಬಾಲಕರು, ಗೌರ್ನಮೆಂಟ್ ಹಿಂದೂ ಗರ್ಲ್‌ಸ್ಕೂಲ್ ಬಾಲಕಿಯರು, ಸರ್ಕಾರಿ ಉದ್ಯೋಗಸ್ಥರು, ವರ್ತಕರು ಮ್ಯುನಿಸಿಪಲ್ ಸ್ಕೂಲ್ ಕಟ್ಟಡದಲ್ಲಿ ಸಭೆ ಸೇರಿದರು. ಅಲ್ಲಿ ಬಾಲಕಿಯರು ಚಕ್ರವರ್ತಿಗಳ ಮೇಲೆ ಕೆಲವು ಹಾಡುಗಳನ್ನು ಹೇಳಿದರು. ಅನಂತರ ಮ್ಯುನಿಸಿಪಲ್ ಸ್ಕೂಲಿನ ಸೀನಿಯರ್ ಬಾಲಕರು ರೆಡ್‌ಯೂನಿಯರ್ ಧ್ವಜವನ್ನೂ, ಇತರ ಬಾಲಕ ಬಾಲಕಿಯರು ಇತರ ಪತಾಕೆಗಳನ್ನೂ ಹಿಡಿದು, ಬ್ಯಾಂಡು ವಾದ್ಯಸಮೇತವಾಗಿ ಈ ಪುರದ ಪ್ರಮುಖರು ಹಿಂಬಾಲಿಸಲು ಮುಖ್ಯ ಬೀದಿಗಳಲ್ಲಿ ಜಯಧ್ವನಿಗಳೊಡನೆ ಮೆರವಣಿಗೆಯನ್ನು ಮಾಡಿಕೊಂಡು ಮ್ಯುನಿಸಿಪಲ್ ಆಫೀಸಿಗೆ ತಲುಪಿದರು. ಅಲ್ಲಿ ನಮ್ಮ ತಹಸಿಲ್‌ದಾರರಾದ ಮೆ॥ ಆರ್. ವೆಂಕೋಬಾಚಾರ್ಲು ಯವರು ತೆನುಗುಭಾಷೆಯಲ್ಲಿ ಉಪನ್ಯಾಸಮಾಡಿದನಂತರ ಯೂನಿಯರ್ ಜಾಕ್‌ಗೆ ಸೆಲ್ಯೂಟ್ ಮಾಡಿ ಚಕ್ರವರ್ತಿ ಮತ್ತೂ ಚಕ್ರವರ್ತಿನಿಯವರಿಗೆ ಮೂರುಮೇಳಿ ಜಯಧ್ವನಿಮಾಡಿದರು.

ಸಾಯಂಕಾಲ ೪ ಗಂಟೆಗೆ ಸ್ಕೂಲಿನ ಬಾಲಕ ಬಾಲಕಿಯರು, ಪುರಪ್ರಮುಖರು ಮ್ಯುನಿಸಿಪಲ್ ಆಫೀಸಿನಲ್ಲಿ ಸಭೆಸೇರಿ ಮೊದಲಿನಂತೆ ಮೆರವಣಿಗೆಯಾಗಿ ವಿಕ್ಟೋರಿಯಾ ಆಸ್ಪಿಟಲ್ ರೋಡಿನ ಕಡೆ ಹೊರಟು ಆ ರೋಡಿನ ಉದ್ದಕ್ಕೂ ನೆರಳಿಗಾಗಿ ಬಾಲಕರ ಕೈಯಿಂದ ಸಾಲುಮರಗಳನ್ನು ಹಾಕಿಸಿದರು. ಅವರೆಲ್ಲರಿಗೂ ಮ್ಯುನಿಸಿಪಲ್ ಚೇರಮನ್ನರಾದ ಮೆ॥ ವೆಯಿಟ್ ದೊರೆಗಳು ಮಿಠಾಯಿಯನ್ನು ಹಂಚಿದರು. ಅಲ್ಲಿಂದ ಸಕಲರು ಮ್ಯುನಿಸಿಪಲ್ ಆಫೀಸಿಗೆ ವಾಪಸು ಬಂದನಂತರ ಅಲ್ಲಿ ಮ್ಯಾಜಿಕ್ ಲ್ಯಾಂಟರ್ನ ವಿನೋದಗಳು ತೋರಿಸಲ್ಪಟ್ಟಿತು. ಈ ಕೆಳಗೆಕಂಡ ಪ್ರಮುಖರು ಈ ಉತ್ಸವದಲ್ಲಿ ಭಾಗಿಗಳಾಗಿದ್ದರು:— ಮಿಸೆಸ್ ಹಡ್ಲಿಯು. ಆರ್. ಹೆಚ್. ವೆಯಿಟ್ ದೊರೆಗಳು, ಮ್ಯುನಿಸಿಪಲ್ ಛೇರ್ಮನ್; ಯು. ರಾಮರಾವ್, ಬಿ. ಎ., ಡೆಪ್ಯುಟಿ ಕಲೆಕ್ಟರು; ಆರ್. ವೆಂಕೋಬಾಚಾರ್ಲು ಬಿ.ಎ, ತಹಸಿಲ್‌ದಾರ್; ಇ. ಡಿ. ಫ್ರೇಸರ್; ಸಿ. ಬಿ. ಕ್ರೀತ್; ಎಸ್. ಬಾಲಾಜಿ; ಆರ್. ಎ. ಧನಪಾಲಮೊದಲಿಯಾರ್ ಮ್ಯುನಿಸಿಪಲ್ ಸೆಕ್ರೆಟರಿ; ಹಿಲಾನರ್ ಸ್ಟೇಷನ್‌ಮಾಸ್ಟರ್; ವಿ. ಸಿ. ಮಿನರ್ ಅಸಿಸ್ಟೆಂಟ್ ಸರ್ಜನ್; ಯಂ. ಸಂಜೀವಪ್ಪ; ಟಿ ರಂಗರಾವ್; ಯುನ್. ರಾಘವೇಂದ್ರರಾವ್; ರಾಜಗೋಪಾಲಾಚಾರ್ಲು; ಎಸ್. ತಂಬುನಾಯಿಡು; ದರ್ಜಿ ಮಹಮ್ಮದ್ ಹುಸೇನ್ ಸಾಹಿಬ್ ಎ. ಅದಿವೆಪ್ಪ ಇನ್ನೂ ಇತರ ಪ್ರಮುಖರು ಇದ್ದರು.

ರೈಲ್ವೆ ಸ್ಟೇಷನನ್ನು ತೋರಣಪತಾಕೆಗಳಿಂದ ಅಲಂಕರಿಸಲ್ಪಟ್ಟು ಉದಯ ಮತ್ತು ಸಾಯಂಕಾಲಗಳಲ್ಲಿ ಮೇಲ್ ಟ್ರೇನು ಬರುವ ವೇಳೆಗೆ ಬ್ಯಾಂಡುವಾದ್ಯವು ಏರ್ಪಡಿಸಲ್ಪಟ್ಟಿತ್ತು ಮ್ಯುನಿಸಿಪಲ್ ಸೆಕ್ರೆಟರಿಗಳ ಬಂಗಲೆಯು ಅಲಂಕರಿಸಲ್ಪಟ್ಟು, ಮೇಲೆ ಯೂನಿಯರ್ ಜಾಕ್ ಎತ್ತಲ್ಪಟ್ಟು, ಸಾಯಂಕಾಲದಲ್ಲಿ ದೀಪಾಲಂಕಾರವು ಮಾಡಲ್ಪಟ್ಟಿತ್ತು. ಇಲ್ಲಿನ ಪೊಲೀಸರು ಮೂವರು ಸಬ್ ಇನ್ಸ್‌ಪೆಕ್ಟರರ ಕೈಕೆಳಗೆ ಈ ಉತ್ಸವದಲ್ಲಿ ಸಹಾಯವಾಗಿದ್ದರು. ಪೋಲೀಸು ಸೂಪರಿಂಟೆಂಡೆಂಟರಾದ ಮಿ॥ ಡನ್ನಿಯು. ವಿಲ್ಲಿಯಂ ರವರು ಸಾಯಂಕಾಲದ ಉತ್ಸವದಲ್ಲಿ ಭಾಗಿಗಳಾಗಿದ್ದರು. ಈ ಶುಭಸಮಯದಲ್ಲಿ ಇಲ್ಲಿನ ಮಹಮ್ಮದೀಯರು ಅಂಜುಮನಿ ಇಸ್ಲಾಂ ಒಂದನ್ನು ಸ್ಥಾಪಿಸಿದರು. ಈ ಕೆಳಗೆಬರೆದ ಮಹಮ್ಮದೀಯ ಪ್ರಮುಖರು ಈ ಉತ್ಸವದಲ್ಲಿ ಭಾಗಿಗಳಾಗಿದ್ದರು:— ಮಿಸರ್ಸ್. ರೋಷನ್ ಮಿಯುಲ್ಲಾ ಹುಸೇನ್ ಸಾಹೇಬ್, ಸೈಯದ್ ಅಜಮತುಲ್ಲಾ ಸಾಹೇಬ್, ಕಾಜಿ ಕಾದರ್‌ಮೋದಿನ್ ಸಾಹೆಬ್, ದರ್ಜಿ ಮಹಮ್ಮದ್ ಹುಸೇನ್ ಸಾಹೆಬ್, ಮೊಹತರು ಮನ್ನೂರು ಸಾಹೇಬ್ ಇನ್ನೂ ಕೆಲವರು ಹಾಜರಿದ್ದರು.

ಬಿ. ಸಾವಳೆಪ್ಪ.

೨೦೦ ರೂಪಾಯಿಗಳ ಬಹುಮಾನವು.

ಕೈ. ವಾ. ಚನ್ನಬಸಪ್ಪಾ ಧಾರವಾಡ ಡಿ॥ ಎ॥ ಇನ್ಸ್‌ಪೆಕ್ಟರ್ ಇವರಬಗ್ಗೆ ಮಾಹಿತಿಯನ್ನು ಕಳಿಸಿಕೊಟ್ಟವರಿಗೆ ೨೦೦ ರೂ. ಗಳಲ್ಲಿ ಬಹುಮಾನಗಳು ವಿಜಾಪುರಜಿಲ್ಲಾ ಸಭೆಯಿಂದ ಹಂಚಲ್ಪಡುವುವೆಂದು ೧೯೧೧ ನೆಯ ಜನವರಿ ತಿಂಗಳಿನಲ್ಲಿ ಒಂದು ಪ್ರಕಟನಪತ್ರಿಕೆಯು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದ್ದು ತಮ್ಮ ವಾಚಕರ ನೆನಪಿನಲ್ಲಿರಬಹುದು. ಆ ಮೇರೆಗೆ ಕೆಲ ಮಹನೀಯರು ತಮಗೆ ಗೊತ್ತಿದ್ದ ಅನೇಕ ಸಂಗತಿಗಳನ್ನು ಬರೆದು ನಮ್ಮ ಕಡೆಗೆ ಈಗ ಕಳುಹಿಸಿರುವರು. ಆದರೂ ಇನ್ನೂ ಕೈಲಾಸವಾಸಿಗಳ ಬಗ್ಗೆ ಹೆಚ್ಚಿಗೆ ಮಾಹಿತಿಯನ್ನು ಸಂಗ್ರಹಿಸುವುದು ಅತ್ಯವಶ್ಯಕವದೆ. ಅದರಿಂದ ಅವರ ಗುಣಗಳು, ಅಭಿಪ್ರಾಯಗಳು, ಅಭ್ಯಾಸ, ವಿದ್ವತ್ತೆ ಮೊದಲಾದವುಗಳನ್ನು ನಿರ್ದೇಶಿಸತಕ್ಕ ಸಂಗತಿಗಳು ಯಾರಿಗಾದರೂ ಗೊತ್ತಿದ್ದಲ್ಲಿ ಅವುಗಳನ್ನು ಅವರು ನಮಗೆ ಬರೆದು ತಿಳುಹಿಸತಕ್ಕದ್ದು. ಅವೆಲ್ಲಾ ಸಂಗತಿಗಳು ಅವರ ಜತೆಗಾರರು, ಮಿತ್ರರು, ಅವರಿಂದ ಉಪಕಾರ ಹೊಂದಿದವರು ಇವರೇ ಮೊದಲಾದವರಿಗೆ ತಿಳಿಯುವ ಸಂಭವವು ಹೆಚ್ಚಿಗುಂಟು. ಅವರು ಅವುಗಳನ್ನೆಲ್ಲ ನಮಗೆ ಬರೆದು ತಿಳಿಸಿದರೆ, ನಾವು ಅವರಿಗೆ ಬಹಳ ಆಭಾರಿ ಆಗುವೆವು. ಮತ್ತು ಈ ಪ್ರಕಾರ ಯಾರು ಹೆಚ್ಚಿಗೆ ಮಾಹಿತಿಯನ್ನು ದೊರಕಿಸಿ ಕೊಡುವರೋ ಅವರಿಗೆ ತಕ್ಕ ಬಹುಮಾನಗಳು ಕೊಡಲ್ಪಡುವವು. ಪ್ರತಿಯೊಬ್ಬರು ತಮ್ಮ ಲೇಖನಗಳನ್ನು ಇದೇ ಡಿಸೆಂಬರದ ಒಳಗಾಗಿ ನಮ್ಮ ಕಡೆಗೆ ಕಳಿಸತಕ್ಕದ್ದು. ಬಹುಮಾನಗಳು ೧೯೧೨ ಜನವರಿ ಅಂತ್ಯದೊಳಗಾಗಿ ಹಂಚಲ್ಪಡುವುವು.

ಫ. ಗು. ಹಳಕಟ್ಟಿ ಬಿ. ಎ., ಎಲ್‌ಎಲ್. ಬಿ., ಸೆಕ್ರೆಟರಿ,
ಲಿಂಗಾಯತ ಬಿಜಾಪುರ ಜಿಲ್ಲಾ ಸಭಾ.
ತಾ॥ ೧೮-೬-೧೧.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!
ಗುಣವಾಗದಿದ್ದರೆ ಹಣಪರತ.
ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಡಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಳ್ಳೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್‍ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಭವಸಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ಕಳುಹಿಸುವೆವು.

ವಿಳಾಸ.
ವೈದ್ಯ ಜಿ. ಎಸ್. ಜೋಶಿ [illegible]
ಪೋಸ್ಟ್ [illegible]

ಊದಬತ್ತಿಗಳು.

17 ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಜಲ್ಲಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಶರವಾದಿಗಜಾಂಕುಶತಾರಾವಳಿ	೦-೮-೦
ಟಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಡೆನ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂಜೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ನೋಟೀಸು.
ಜಾತಕ ಸುಧಾಸಾರ ಮಂಜರಿ.

4 ಅಯ್ಯಾ ಲೋಕಬಾಂಧವರೆ! ವಿನಯಪೂರ್ವಕವಾಗಿ ಶ್ರುತಪಡಿಸುವದೇನಂದರೆ— ಈ ನಮ್ಮ ಭರತಖಂಡದಲ್ಲಿ ಅನೇಕಪಂಡಿತರು ಜ್ಯೋತಿಷಶಾಸ್ತ್ರಾಭ್ಯಾಸವಂ ಮಾಡಿ ಮರ್ಮವನ್ನು ತಿಳಿಸಲಾರದೆ ಒಂದಾದರೂ ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ಯಾರೂ ರಚಿಸಲಿಲ್ಲ. ಆದಪ್ರಯುಕ್ತ ನಾನು ಅನೇಕ ಪುರಾತನ ಪರಾಶರ ಗ್ರಂಥಗಳನ್ನು ಪರಿಶೋಧನಮಾಡಿ ಅಲ್ಪವಿದ್ಯದವರಿಗೂ ಕೂಡ ಮುಂದಾಗುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡಟೀಕಾ ತಾತ್ಪರ್ಯದೊಂದಿಗೆ ರಚಿಸಿ ಇರುತ್ತೇನೆ ಸದ್ರಿ ಗ್ರಂಥದಲ್ಲಿ ಇರುವ ವಿಷಯವೇನಂದರೆ—ಯುಗಭೇದಜನ್ಮಲಗ್ನವಿಚಾರ, ಮಾನಪ್ರಮಾಣವಿಚಾರ, ಸಂದೇಹಲಗ್ನನಿವೃತ್ತಿವಿಚಾರ, ನಕ್ಷತ್ರಗಣನವಿಚಾರ, ಗ್ರಹೋಚ್ಚನೀಚವಿಷಯ, ರಾಜಲಕ್ಷಣಯೋಗ, ಭೋಗಿಯೋಗ, ಕೀರ್ತಿಯೋಗ, ಮರಣಾಂತ್ಯಸೌಖ್ಯಯೋಗ ರತ್ನಲಾಭಯೋಗ ಸುವರ್ಣಪಾತ್ರಭೋಜನಯೋಗ ಕುಬೇರಯೋಗ ತ್ರಿಲಕ್ಷಾಂತರಕೋಟ್ಯಧೀಶ್ವರಯೋಗ ರುಣಯೋಗ ಭಿಕ್ಷಾನ್ನಭಕ್ಷಣಯೋಗ ಲೋಭಿಯೋಗ ಅಂಧಕಯೋಗ ಮೂಕಯೋಗ ಗಣಿತಶಾಸ್ತ್ರಯೋಗ ತರ್ಕಶಾಸ್ತ್ರಯೋಗ ವ್ಯಾಕರಣಶಾಸ್ತ್ರಯೋಗ ಷಟ್‌ಶಾಸ್ತ್ರಯೋಗ ವೇದಶಾಸ್ತ್ರಯೋಗ ಭ್ರಾತೃವೃದ್ಧಿಯೋಗ ಭ್ರಾತೃಜಾರಯೋಗ ಜಾರಜಾತಕಯೋಗ ಕ್ಷೇತ್ರಲಾಭಯೋಗ ಕೃಷಿಲಾಭಯೋಗ ರಾಜಯೋಗ ಪುತ್ರವೃದ್ಧಿಯೋಗ ಏಕಪುತ್ರಯೋಗದ್ವಾದಶಪುತ್ರಯೋಗ ಪುತ್ರಹೀನಯೋಗ ಶತ್ರುಯೋಗ ಶತ್ರುಹೀನಯೋಗ ಏಕಕಳತ್ರಯೋಗ ಕಳತ್ರಜಾರಯೋಗ ದ್ವಿಕಳತ್ರಯೋಗ ತ್ರಿಕಳತ್ರಯೋಗ ಸಪ್ತಕಳತ್ರಯೋಗ ದ್ವಾದಶದಾರಯೋಗ ಶತಕಳತ್ರಯೋಗ ದ್ವಿಶತಕಳತ್ರಯೋಗ ಪೂರ್ಣಾಯುರ್ಯೋಗ ಮಧ್ಯಮಾಯುರ್ಯೋಗ ಅಲ್ಪಾಯುರ್ಯೋಗ ಮೃತ್ಯುಯೋಗ ಧನಪ್ರಯಯೋಗ ತನುಭಾವ ವಿಚಾರ ಧನಭಾವವಿಚಾರ ತೃತೀಯಭಾವ ವಿಚಾರ ಚತುರ್ಥಭಾವವಿಚಾರ ಪಂಚಮಭಾವವಿಚಾರ ಷಷ್ಠಮಭಾವ ವಿಚಾರ ಸಪ್ತಮಭಾವ ವಿಚಾರ ಅಷ್ಟಮಭಾವ ವಿಚಾರ ನವಮಭಾವ ವಿಚಾರ ದಶಮಭಾವವಿಚಾರ ಏಕಾದಶಭಾವ ವಿಚಾರ ದ್ವಾದಶಭಾವ ವಿಚಾರ, ಮೇಷಾದಿಯಾಗಿ ಮೀನದವರಿಗೂ ೧೨ ಲಗ್ನಗಳ ಫಲವನ್ನು ಇದಲ್ಲದೆ ಇನ್ನೂ ಅನೇಕ ವಿಷಯಗಳನ್ನು ಈ ನೋಟೀಸಿನಲ್ಲಿ ಬರೆದು ತೋರಿಸಲು ಸಾಧ್ಯವಲ್ಲವೆಂದು ಸದರಿ ಗ್ರಂಥದಲ್ಲಿ ಇರುವ ವಿಷಯವನು ಸ್ವಲ್ಪಮಟ್ಟಿಗೆ ಸೂಚಿಸಿರುತ್ತೇನೆ.

ಜಾತಕಸುಧಾಸಾರಮಂಜರಿ ಗ್ರಂಥ ೧ ಕ್ಕೆ ೦-೧೪-೦.

ನವಗ್ರಹಗಳ ದಂಡಕವು ವಿಸ್ತಾರವಾಗಿ ತಯಾರಾಗಿರುತ್ತದೆ. ಕ್ರಯ ೧ಕ್ಕೆ ೦-೨-೦.

ಅಥವಾ ಎರಡಾಣೆ ಸ್ಟಾಂಪುಗಳನ್ನು ಕಳುಹಿದವರಿಗೆ ಕಳುಹಿಸುತ್ತೇವೆ.

ನಮ್ಮ ವಿಳಾಸ:—
ಬಳ್ಳಾರಿ ಗಣೇಶನಗುಡಿ ಬೀದಿ ಕೊಟ್ಟೂರು ಸ್ವಾಮಿಗಳ ಮಠದ ಶಿಷ್ಯ ಎಚ್. ಮಲ್ಲಿಕಾರ್ಜುನ ಶಾಸ್ತ್ರಿಗಳು,
ಬಳ್ಳಾರಿ.

12 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತುಷ್ಟು ಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಪೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

12

ಲೋಕಾನುಗ್ರಹ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪೊಸರುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರೆ, ಹಲ್ಲುಗಳ ಪಾಚಿ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. [illegible] ತರಿಸಿ ನೋಡಿ, ಅನುಭವಪತ್ರ ಔಷಧ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಅ. ೮ ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವ
ವೈದ್ಯಶಾಲಾ, ಮೈಸೂರು.

10 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬರೆರಿ.

1. ರಾಸ್ಕೊಪಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೋಟರ್‌ರೆಗ್ಯುಲೇಟರ್ ಲೀವರ್ ಜೂವೆಲ್ಡು ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಅಯುಂಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ಮೋನಿಯಾ ಸಿಲ್ವರು ಗಡಿಯಾರದ ಸರಪಣಿ,

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಯೆಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

22 ಉತ್ತಮ ಗ್ರಂಥಗಳು.

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿಧೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿಧೆ.

ವೇದಸಂಜೀವಿನಿ.—ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಧೆ.

ಪುರುಷಸೂಕ್ತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಮೇತವಾಗಿಧೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

"ಅಗತ್ಯ ವಿಚಾರ."

5

ಬೆಲೆ ೬॥ ಆಣೆ. ವಿ. ಪಿ. ಯಿಂದ ೭ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗತ್ಯವಿಚಾರ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೦ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ:—ವೀರಭದ್ರಪ್ಪ ಆರುಬೆರಳಿನ,
ಪೋಸ್ಟ್—ಬಾಗೇವಾಡಿ, ಡಿ॥ ಬೆಳಗಾಂವ.

ಉತ್ತಮ ಗ್ರಂಥಗಳು.

125

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦ ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ). ಮತವಿಷಯವೂ ಪುರಾತನಕಥೆಗಳೂಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೦ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು.

೧೯೧೧ನೇ ಇಸವಿ ಜುಲೈ ತಾ॥ ೩ ರಿಂದ ೧೯೧೧ನೇ ಜುಲೈ ತಾ॥ ೯ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಆಷಾಢ ಶು॥ ಸಪ್ತಮಿಯಿಂದ ಆಷಾಢ ಶು॥ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ತೇದಿ
3	ಸೋ	ಸ	1-49	ಹ	57-15	19
4	ಮಂಗ	ಅ	2-1	ಚಿ	60-0	20
5	ಬುಧ	ನ	3-4	ಚಿ	0-33	21
6	ಗುರು	ದ	5-1	ಸ್ವಾ	4-21	22
7	[1]ಶುಕ್ರ	ಏ	8-44	ವಿಶಾ	9-16	23
8	[2]ಶನಿ	ದ್ವಾ	12-32	ಅನು	15-4	24
9	ಭಾನು	ತ್ರ	17-22	ಜ್ಯೇ	21-28	25

(1) ಸರ್ವತ್ರ ಪ್ರಥಮೈಕಾದಶಿ, (2) ಶಯನದ್ವಾದಶಿ.

ಮೈಸೂರ್: ವೈ. ವಿರೂಪಾಕ್ಷಯ್ಯನವರಿಂದ [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ✱ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಶೈಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಜುಲೈ ತಾರೀಖು ೧೦ ನೇ ಸೋಮವಾರ. [ಸಂಚಿಕೆ ೨೮

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೪—೦.
೨ ರಿಂದ ೪ ರವರೆಗೆ ೧—೧೦—೦.

ಇದರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸುಲಭಕ್ರಯ! ಪಾತರಿಮಾಲ್!! ಬಿಡಬೇಡಿರಿ!!!

11

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ। ೧ಕ್ಕೆ	೩	ಕಸ್ತೂರಿ ಬಿಲ್ಲೆ ತೊ। ೧ಕ್ಕೆ	೨
೨ ಅಂಬರ್‌ಬತ್ತಿ ಸೇ। ೧ಕ್ಕೆ	೪	ಜವಾಜಿ ಬಿಲ್ಲೆ ತೊ। ೧ಕ್ಕೆ	೧
ಕಸ್ತೂರಿ ಬತ್ತಿ ಸೇ। ೧ಕ್ಕೆ	೨॥	ಅರಗಜ। ತೊ ಡಬ್ಬಿ ೧ಕ್ಕೆ	।
ಪುನಗಿನ ಬತ್ತಿ ಸೇ। ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ। ೧ಕ್ಕೆ	।
ಗುಲಾಬ್ ಬತ್ತಿ ಸೇ। ೧ಕ್ಕೆ	॥	ಸುರಂಗಿ ಸೆಂಟ್ ಸಿ। ೧ಕ್ಕೆ	೧
ನಕ್ಷತ್ರಕಾಂತಿಬ। ಸೇ। ೧ಕ್ಕೆ	೧	ಸ್ವದೇಶಿ ಫೇಸ್ ಪೌಡ। ೧ಕ್ಕೆ	।
ಕಾಶ್ಮೀರ್‌ಕೇಸ್ರಿ ತೊ। ೧ಕ್ಕೆ	೧	ಪಚ್ಚಕರ್ಪೂರ ತೊ। ೧ ಕ್ಕೆ	।।।

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಯೆಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರೆಯುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂದೊರೆಯದು.

ಎ. ಆರ್. ಸುಬ್ಬಾಚೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

7

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವದು. (೩) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದ್ದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತ ವಾಗಿರುವದು. (೬) ಚಿತ್ರಕಥಾ[illegible] ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭ[illegible] ತಿಳಿಯುವಂತೆ ರಚಿಸಿಧೆ. (೭) ಈಗಿನಕಾಲದ ಲೋಕ[illegible] ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಮುಂತಾದ ಸುಗಂಧದ್ರವ್ಯಗಳು; ಪ್ಲೇಗು, ಕಾಲರಾ ಮುಂತಾದ ಜಾಡ್ಯವ್ಯಾಧಿಗಳಿಗೆ ಮುಖ್ಯ ಔಷಧಗಳು; ಭಾವನಕ್ಷೆ ಚಿತ್ರಮುಂಬಾಯಿ ಪಟಗಳು; ಮೊದಲಾದ ಸಾಮಾನುಗಳು ನಮ್ಮಲ್ಲಿ ದೊರೆಯುತ್ತವೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

"ಅಗತ್ಯ ವಿಚಾರ."

6

ಬೆಲೆ ೬॥ ಆಣೆ. ವಿ. ಪಿ. ಯಿಂದ ೭ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗತ್ಯವಿಚಾರ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೦ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ:—ವೀರಭದ್ರಪ್ಪ ಆರುಬೆರಳಿನ,
ಪೋಸ್ಟ್—ಬಾಗೇವಾಡಿ, ಡಿ॥ ಬೆಳಗಾಂವ.

ಉತ್ತಮ ಗ್ರಂಥಗಳು.

126

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ). ಮತವಿಷಯವೂ ಪುರಾತನಕಥೆಗಳೂಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೦ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು.

ಇಲ್ಲಿನೋಡಿ ವಿಶೇಷಸೂಚನೆಗಳು!

9 ಕಾಶೀವಿಶ್ವೇಶ್ವರಪ್ರಸನ್ನ.



RASHI VISHWESHWAR S.N.U. & CO EENARES CITY

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವೂ ಪುಡುವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪಟಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟಲಾಗ್ ೪ ಸಾದಾಕಾರ್ಡ್, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರಸ್‌ಕಾರ್ಡ್, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯುವ ವಿಳಾಸಕ್ಕೆ ಕಳಿಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರಿಯಬೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—

ಯಸ್. ಉಡುಪಿನಾರಾಯಣಾಚಾರ್ಯ ಅಂಡ್‌ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayanacharya & Co.
Benares City.

ಸೌಗಂಧಿಕಾಪರಿಣಯ

:0:

(ಕಳೆದವಾರದ ಶೇಷ.)

ಶಿರಸ್ಸು ಬಟುವಾಗಿ ಎರಡು ಸುಳಿಗಳಿಂದಲಂಕೃತವಾಗಿದ್ದರೂ, ಕಿವಿಗಳು ಕೃಶಗಳಾಗಿ ತೀಕ್ಷ್ಣಗಳಾಗಿ ನಿಕ್ತಾಗಿದ್ದರೂ, ಹೆಕ್ಕತ್ತು ದೃಢವಾಗಿ ಚೆನ್ನಾಗಿ ಬೊಗ್ಗಿ ನೀಟವಾಗಿದ್ದರೂ, ಹೆಕ್ಕತ್ತಿನ ಕೂದಲುಗಳು ಜಡೆಗಳಲ್ಲದೆ ದೀರ್ಘಗಳಾಗಿದ್ದರೂ, ಸ್ಕಂಧಪ್ರದೇಶವು ಶುಭವಾದ ಸುಳಿಯುಳ್ಳದ್ದಾಗಿ ದೃಢವಾಗಿದ್ದರೂ, ವಕ್ಷಸ್ಥಲವು ವಿಶಾಲವಾಗಿ ನೀಟವಾಗಿದ್ದರೂ, ಕಂಕಳುಗಳು ನೀಟವಾಗಿ ಉನ್ನತವಾಗಿದ್ದರೂ, ತೊಡೆಗಳು, ತೋಳುಗಳು ಉರುಟಾಗಿ ಸಮವಾಗಿದ್ದರೂ, ಮೊಳಕಾಲುಗಳು ಚೆನ್ನಾಗಿ ವ್ಯಕ್ತವಾಗಿ ತೋರದೆ ತುಂಬಿಕೊಂಡಿದ್ದರೂ, ನಡುವಿನ ಮುಂಭಾಗಗಳು ಬಟುವಾಗಿ, ಶಿಲವಾಗಿ ಮಾಂಸವರ್ಜಿತವಾಗಿದ್ದರೂ, ಹುಬ್ಬುಗಳ ಮಧ್ಯವು ಸಮವಾಗಿ, ಸುವಾಸನೆಯಾಗಿ, ಗಂಟು, ಸುಣ್ಣ ಮೊದಲಾದ್ದು ಇಲ್ಲದೆಯಿದ್ದರೂ, ಕಾಲುಗಳ ಗೊರಸುಗಳು ಬಟುವಾಗಿ, ದೃಢವಾಗಿ, ಮಂಡೂಕಾಕಾರವಾಗಿ, ನುಣುಪಾಗಿ ಹೊಳೆಯುತ್ತಾ ವಿಸ್ತಾರಗಳಾಗಿದ್ದರೂ, ಮೊಗ್ಗಲುಗಳು ಅತ್ಯಂತ ಉನ್ನತವಾಗಿ, ದೃಢವಾಗಿ ನೀಟವಾಗಿ ಸಮವಾಗಿದ್ದರೂ, ಕಿಬ್ಬುಹೊಟ್ಟೆಯು ಜೋಲುತ ಒಳ್ಳೆ ಸುಳಿಯುಳ್ಳದ್ದಾಗಿ ಬಟುವಾಗಿದ್ದರೂ, ಬೆನ್ನು ಬಹಳ ನೀಟವಿಲ್ಲದೆ ಸಮವಾಗಿ ಸ್ವಲ್ಪ ಬಗ್ಗಿದ್ದರೂ, ನಡುವು ಬಲತು ದಪ್ಪವಾಗಿ ಒಳ್ಳೆ ಸುಳಿಯುಳ್ಳದ್ದಾಗಿದ್ದರೂ, ಹಿಂಭಾಗವು ಸ್ಥೂಲವಾಗಿದ್ದರೂ, ಬಾಲವು ಮೃದುವಾದ ದೀರ್ಘಗಳಾದ ಕೂದಲುಗಳಿಂದ ಯುಕ್ತವಾಗಿ ಯಿದ್ದರೂ, ವೃಷಣಗಳು ಸಮವಾಗಿಯೂ, ಬಟುವಾಗಿಯೂ, ಬಿಲ್ವಪತ್ರೆ ಮರದ ಕಾಯಿಗಳಿಗೆ ಸಮಾನವಾಗಿಯೂ, ಕೂದಲುಗಳು ಇಲ್ಲದೇಯಿದ್ದರೂ, ಗುಹ್ಯವೂ, ಮೇಢ್ರವೂ ಕಪ್ಪುವರ್ಣವಿಲ್ಲದೆ ಹ್ರಸ್ವವಾಗಿದ್ದರೂ, ಒಳತೊಡೆಗಳು ಬಟುವಾಗಿ, ಸಮವಾಗಿ ಸ್ವಲ್ಪ ಬಗ್ಗಿ ವಕ್ರವಿಲ್ಲದೆಯಿದ್ದರೂ ಶುಭಕರಗಳೆನಿಸುವುವು. ಈ ರೀತಿ ಗುಣಗಳಿಂದ ಯುಕ್ತವಾದ ಶರೀರಗಳುಳ್ಳ ಕುದುರೆಗಳು ಸಂಪತ್ಕರಂಗಳಾಗಿ ಒಡೆಯನಿಗೆ ಜಯವಂ, ಭೋಜ್ಞತೆಯಂ ಉಂಟುಮಾಡುವುವು. ಈ ಲಕ್ಷಣಗಳೂ, ಗುಣಗಳೂ ಇಲ್ಲದ ಕುದುರೆಗಳು ಪ್ರಶಸ್ತಗಳಲ್ಲ. ಈ ರೀತಿಯಲ್ಲೇ ಹೆಣ್ಣು ಕುದುರೆಗಳಿಗೂ ಲಕ್ಷಣಂಗಳನ್ನೋದಿ ಶುಭಾಶುಭಂಗಳಂ ತಿಳಿಯತಕ್ಕದು. ಇಂತಲ್ಲದೆ ಹೆಣ್ಣು ಕುದುರೆಗಳಿಗೆ ತುಟಿಯು, ಯೋನಿಯು ಮೃದುವಾಗಿ, ವಿಸ್ತಾರವಾಗಿ, ಚಂಚಲವಾಗದಿದ್ದರೆ ಶುಭಕರಂಗಳು. ಇನ್ನುಮೇಲೆ ಕುದುರೆಗಳ ಪ್ರಮಾಣವಂ ಪೇಳುವೆನು ಕೇಳೈ ಸುಗಂಧಮಹಾರಾಯನೆ:—ಮೂರು ಭತ್ತಗಳಂ ನೀಟವಾಗಿ ನಿಲಿಸಿದರೆ ಒಂದು ಅಂಗುಲಪ್ರಮಾಣವಾಗುವುದು. ಅಂಥಾ ಅಂಗುಲಂಗಳು ಇಪ್ಪತ್ತುನಾಲ್ಕಾದರೆ ಒಂದು ಹಸ್ತಪ್ರಮಾಣವೆನಿಸುವುದು. ಈ ಪ್ರಮಾಣದಿಂದ ಕುದುರೆಯ ಮುಖವು ಮುಪ್ಪತ್ತೆರಡು ಅಂಗುಲಗಳ ಉದ್ದವಿದ್ದರೆ ಅದು ಉತ್ತಮಾಶ್ವವೆನಿಸುವುದು. ಇದಕ್ಕೆ ಎರಡು ಅಂಗುಲಪ್ರಮಾಣ ಕಡಿಮೆಯಾದರೆ ಮಧ್ಯಮಾಶ್ವವೆನಿಸುವುದು. ಇಪ್ಪತ್ತೆಂಟು ಅಂಗುಲ ಪ್ರಮಾಣವಿದ್ದರೆ ಅಧಮಾಶ್ವವೆನಿಸುವುದು. ಅಶ್ವಗಳ ಕಂಠವು ಐವತ್ತಾರು ಅಂಗುಲ ನೀಟವಿದ್ದರೆ ಉತ್ತಮವು; ನಾಲ್ವತ್ತಾರು ಅಂಗುಲ ಪ್ರಮಾಣವಿದ್ದರೆ ಮಧ್ಯಮವು; ಮೂವತ್ತಾರು ಅಂಗುಲ ನೀಟವಿದ್ದರೆ ಅಧಮಾಶ್ವವೆನಿಸುವುದು. ಕುದುರೆಗಳ ವಕ್ಷಸ್ಥಲಗಳು, ಬೆನ್ನು, ನಡುವು ಮುಖಪ್ರಮಾಣಕ್ಕೆ ಸರಿಯಾದ ಪ್ರಮಾಣದಿಂದೊಡಗೂಡಿದ್ದರೆ ಶುಭಕರವು. ಏಳು ಅಂಗುಲ ಪ್ರಮಾಣವುಳ್ಳ ಕಿವಿಗಳೂ, ಆರು ಅಂಗುಲಪ್ರಮಾಣವುಳ್ಳ ದವಡೆಯೂ, ಸೂಕ್ಷ್ಮವಾದ ಮೊಣಕಾಲುಗಳುಳ್ಳ ಕುದುರೆಗಳು ಶುಭಕರಂಗಳು. ಕೆನ್ನೆಗಳು ವಿಸ್ತಾರವಾಗಿ ಇಪ್ಪತ್ತು ಅಂಗುಲ ಪ್ರಮಾಣ ವಿರಲು ಶುಭಪ್ರದವು. ಜಂಘಾಪ್ರದೇಶಂಗಳು ಎಪ್ಪತ್ತೆರಡು ಅಂಗುಲ ಪ್ರಮಾಣವಿದ್ದರೆ ಉತ್ತಮಾಶ್ವವೆನಿಸುವುದು. ಹದಿನೆಂಟು ಅಂಗುಲ ಪ್ರಮಾಣವಿದ್ದರೆ ಮಧ್ಯಮಾಶ್ವವೆನಿಸುವುದು. ಹದಿನಾರು ಅಂಗುಲ ಪ್ರಮಾಣವಿರಲು ಅಧಮಾಶ್ವವೆನಿಸುವುದು. ಕುದುರೆಗಳ ಕಾಲು ಗೊರಸುಗಳು ಏಳು ಅಂಗುಲ ಪ್ರಮಾಣವಿದ್ದರೆ ಉತ್ತಮಾಶ್ವವು; ಆರು ಅಂಗುಲಪ್ರಮಾಣವಿದ್ದರೆ ಮಧ್ಯಮಾಶ್ವವು; ಐದು ಅಂಗುಲ ಪ್ರಮಾಣವಿದ್ದರೆ ಅಧಮಾಶ್ವವೆನಿಸಿಕೊಂಬುವುದು. ಗೊರಸುಗಳಿಂದ ಹಿಂಗಳಿನ ಪರ್ಯಂತವಾಗಿ ಉನ್ನತದಲ್ಲಿ ನಾಲ್ಕು ಹಸ್ತಪ್ರಮಾಣವುಳ್ಳ ಅಶ್ವವು ಉತ್ತಮಾಶ್ವವು. ಮೂರುವರೆ ಹಸ್ತಪ್ರಮಾಣವುಳ್ಳ ಅಶ್ವವು ಮಧ್ಯಮವು. ಎರಡುವರೆ ಹಸ್ತಪ್ರಮಾಣವುಳ್ಳ ಅಶ್ವವು ಅಧಮವೆನಿಸಿಕೊಂಬುವುದು. ಗೊರಸುಗಳ ಕೊನೆಯಿಂದ ಬಾಲದ ಕೊನೆ ಪರ್ಯಂತವೂ ನೀಟದಲ್ಲಿ ಐದು ಹಸ್ತಪ್ರಮಾಣವುಳ್ಳ ಅಶ್ವವು ಉತ್ತಮವು. ನಾಲ್ಕು ಮೊಳ ನೀಟವುಳ್ಳ ಅಶ್ವವು ಮಧ್ಯಮವು. ಮೂರುವರೆ ಹಸ್ತಪ್ರಮಾಣವುಳ್ಳ ಅಶ್ವವು ಅಧಮವೆನಿಸಿಕೊಂಬುವುದು. ಎಲೈ ರಾಯನೆ! ಮತ್ತೂ ಈ ಅಶ್ವಜಾತಿಗಳ ವರ್ಣ ಭೇದಂಗಳಂ ಪೇಳುವೆನು—ಕುದುರೆಗಳಲ್ಲಿ ಶುಭ್ರ ವರ್ಣವು, ನೀಲವರ್ಣವು, ಕೆಂಪುಬಣ್ಣವು, ಹೊಂಬಣ್ಣವು ಈ ನಾಲ್ಕು ಬಣ್ಣಗಳು ಶುದ್ಧವರ್ಣಗಳೆನಿಸುವುವು. ಮಿಶ್ರ ವರ್ಣಂಗಳು ಅನೇಕಪ್ರಕಾರಂಗಳಾಗಿರುವುವು. ಶಂಖಕ್ಕೆ ಸಮಾನವಾದ ಕಾಂತಿಯಿಂದ ಮತ್ತೂ ಶುಭ್ರಗಳಾದ ಬಾಲವು, ರೋಮಗಳು, ಚರ್ಮವು, ಗೊರಸುಗಳು ಇವುಗಳಿಂದ ಯುಕ್ತವಾದ ಅಶ್ವವು ಬ್ರಹ್ಮಜಾತಿ ಎನಿಸುವುದು. ಈ ಬ್ರಹ್ಮಜಾತಿಯ ಅಶ್ವದಂತೆ ಶುಭ್ರವಾದ ಅಂಗವು, ಚರ್ಮದಲ್ಲಿ ಕಪ್ಪು ಬಣ್ಣವು ಉಳ್ಳ ಕುದುರೆಯು ಕರ್ತಳವೆನಿಸಿಕೊಂಬುದು. ರೋಮಗಳಲ್ಲಿ, ಬಾಲಗಳಲ್ಲಿ, ಚರ್ಮದಲ್ಲಿ, ಗೊರಸುಗಳಲ್ಲಿ ಕಪ್ಪುಬಣ್ಣವುಳ್ಳದ್ದಾಗಿ ಶೌರ್ಯಯುಕ್ತವಾದ ಕುದುರೆಯು ಶುದ್ಧಜಾತಿ ಎನಿಸಿಕೊಂಡು ಕಾಳನೆಂಬ ಹೆಸರಂ ಪಡೆದಿರುವುದು. ಕೂದಲು ಮೊದಲುಗೊಂಡು ಸಮಸ್ತಾವಯವಗಳೂ ರಕ್ತವರ್ಣಂಗಳಾಗಿ, ಕೆಂದಾವರೆಗೆ ಸಮಾನವಾದ ಕಾಂತಿಯುಳ್ಳ ಅಶ್ವವು ಕ್ಷತ್ರಜಾತಿಯೆಂದು ಪ್ರಸಿದ್ಧಿಯಂ ಪಡೆದು ಕೆಂಜಾಭನೆನಿಸಿಕೊಂಬುದು. ಹೆಕ್ಕತ್ತಿನ ಕೇಸರಗಳಲ್ಲಿಯೂ, ಶರೀರದ ರೋಮಗಳಲ್ಲಿಯೂ, ಬಾಲದ ಕೂದಲುಗಳಲ್ಲಿಯೂ ಹೊಂಬಣ್ಣವುಳ್ಳ ಅಶ್ವವು ವೈಶ್ಯಜಾತಿಯೆನಿಸಿ ಶರಭವೆಂಬ ಪ್ರಸಿದ್ಧಿಯಂ ಪಡೆದಿರುವುದು. ಸಮಸ್ತ ಶರೀರ ರೋಮಗಳಲ್ಲಿಯೂ ಶುಕ್ಲರಕ್ತ ವರ್ಣಂಗಳು ಮಿಶ್ರಂಗಳಾಗಿ ಮುಖದಲ್ಲಿಯೂ, ಕಾಲುಗಳಲ್ಲಿಯೂ, ಬಾಲಗಳಲ್ಲಿಯೂ ಕೂಡ ಕೆಂಪುಬಣ್ಣವುಳ್ಳ ಕುದುರೆಗಳು ಬೋರನೆಂದು ಹೇಳಲ್ಪಡುವುವು. ನೇತ್ರ, ಚರಣ, ಮುಖಂಗಳಲ್ಲಿ ಕಪ್ಪುವರ್ಣವುಳ್ಳವಾಗಿ ಶುಭ್ರರಕ್ತಮಿಶ್ರವಾದ ರೋಮದಿಂದೊಡಗೂಡಿದ ಕುದುರೆಗಳು ಶೂದ್ರಜಾತಿಯೆನಿಸಿ ನೀಲವೆಂಬ ಪೆಸರಂ ಪಡೆದಿರುವುವು. ಕಂಠಪ್ರದೇಶದ ರೋಮಂಗಳಲ್ಲಿ ಖಾದಿರೀ ಹೂವಿಗೆ ಸಮಾನವಾದ ಕಾಂತಿಯುಳ್ಳವಾಗಿ ಹಿಪ್ಪೇ ಮರದ ಕೊಕ್ಕಿನ ಛಾಯೆಯುಳ್ಳ ನೀಲವರ್ಣವಾದ ಕುದುರೆಯು ಮೇಘವೆಂದು ಪೇಳಲ್ಪಡುವುದು. ಒಳ್ಳೇ ಪಕ್ವವಾದ ನೇರಳೇಹಣ್ಣಿನಂತೆ ಕಾಂತಿಯುಳ್ಳ ಕುದುರೆಯು ಜಂಬ್ವಾ ಎನಿಸುವುದು. ಕೂದಲುಗಳಲ್ಲಿ, ಬಾಲಗಳಲ್ಲಿ ಸುವರ್ಣಛಾಯೆಯುಳ್ಳವಾಗಿ ರಕ್ತವರ್ಣವುಳ್ಳ ಕುದುರೆಗಳು ಹಲತವೆಂದು ಪೇಳಲ್ಪಡುವುವು. ಅತ್ತಿ ಹಣ್ಣಿನ ವರ್ಣವುಳ್ಳ ಕುದುರೆಯು ರೋಮಗಳಲ್ಲಿ, ಕೇಸರಗಳಲ್ಲಿ, ಬಾಲದ ಕೂದಲುಗಳಲ್ಲಿ, ಮೊಣಕಾಲುಗಳ ಕೆಳಗಡೆಯಲ್ಲಿ ಕಪ್ಪುವರ್ಣವುಳ್ಳವಾಗಿ ಶರೀರ ರೋಮಗಳಲ್ಲಿ ಹೊಂಬಣ್ಣವುಳ್ಳ ಕುದುರೆಗಳು ಸುಮನಸೆಂದು ಪ್ರಖ್ಯಾತವಾಗಿರುವುವು.

(ಸಶೇಷ.)

ಸ್ತ್ರೀವಿದ್ಯಾಭ್ಯಾಸ.

ಪುರುಷನು ಸ್ವಭಾವವಾಗಿ ದೃಢಕಾಯವುಳ್ಳವನಾದುದರಿಂದ ಕಷ್ಟಪಟ್ಟು ಹೊರಗಣ ಕೆಲಸಗಳನ್ನು ಮಾಡುವುದಕ್ಕೆ ಸಮರ್ಥನಾಗಿರುತ್ತಾನೆ. ಸ್ತ್ರೀಯರು ಪುರುಷರಷ್ಟು ದೃಢಾಂಗರಲ್ಲದಕಾರಣ ಅಬಲೆಯರಾಗಿ ಗೃಹಕೃತ್ಯವನ್ನು ನಡೆಸುವುದರಿಂದ ಗೃಹಿಣಿಯರೆಂದು ಹೇಳಿಸಿಕೊಳ್ಳುತ್ತಿರುವರು. ದೈವಸೃಷ್ಟಿಯಲ್ಲಿ ಹೆಣ್ಣು ಗಂಡೆಂಬ ಭೇದವು ಪ್ರತಿಪ್ರಾಣಿವರ್ಗದಲ್ಲಿಯೂ ಏರ್ಪಟ್ಟಿದೆ. ಜಗತ್ತಿನ ಕಾರ್ಯನಿರ್ವಾಹಕ್ಕೆ ಪುರುಷನಂತೆ ಸ್ತ್ರೀಯು ಅವಶ್ಯಕವಾಗಿರುವಳು. ಈ ಎರಡರಲ್ಲಿ ಯಾವುದೊಂದಿಲ್ಲದಿದ್ದರೂ ಜಗತ್ತಿನ ಹೆಸರೇ ಇಲ್ಲದಂತಾಗುವುದು. ಅದುಕಾರಣವೇ ಪತ್ನಿಯರು ಪುರುಷರಿಗೆ "ಅರ್ಧಾಂಗಿ" ಯರೆಂದು ಹೆಸರುಂಟಾಗಿರುವುದು.

ಪ್ರತಿಯೊಂದು ಕುಟುಂಬದ ಕಾರ್ಯಗಳಲ್ಲೂ ಕೆಲವನ್ನು ಪುರುಷರೂ ಕೆಲವನ್ನು ಸ್ತ್ರೀಯರೂ ಮಾಡಬೇಕಾಗಿರುವುದು. ಸ್ತ್ರೀಸಹಾಯವಿಲ್ಲದೆ ಯಾವದೊಂದು ಮನೆಯ ಕೆಲಸವಾದರೂ ನಿರಾಕ್ಷೇಪವಾಗಿ ನಡೆಯಲಾರದು. ಆದುದರಿಂದ ಪುರುಷರಂತೆ ಸ್ತ್ರೀಯರು ವಿವೇಕವುಳ್ಳವರಾಗಿರತಕ್ಕದು ಅವಶ್ಯಕವಾಗಿರುತ್ತದೆ. ಅಂತಹ ವಿವೇಕವನ್ನುಂಟುಮಾಡಲು ಸಾಧಕವಾದ ವಿದ್ಯೆಯನ್ನು ಪುರುಷರು ಮಾತ್ರ ಓದಿಕೊಂಡು ಸ್ತ್ರೀಯರು ಓದಕೂಡದೆಂದು ಹೇಳುವುದು ಅವಿಚಾರದ ಮಾತಾಗಿರುವುದು. ಪುರುಷರಲ್ಲಿ ವಿದ್ಯಾವಂತನಿಗೂ, ವಿದ್ಯಾವಿಹೀನನಿಗೂ ತಾರತಮ್ಯವಿರುವಂತೆ ಸ್ತ್ರೀಯರಲ್ಲಿಯೂ ವಿದ್ಯಾವತಿಯರಿಗೂ, ಅವಿದ್ಯಾವತಿಯರಿಗೂ ತಾರತಮ್ಯವುಂಟು. ಈ ತತ್ವವನ್ನು ತಿಳಿದಿರುವುದರಿಂದ ಪಾಶ್ಚಾತ್ಯರು ತಮ್ಮ ಹೆಂಗುಸರಿಗೆ ಗಂಡುಸರಂತೆಯೇ ವಿದ್ಯೆಯನ್ನು ಕಲಿಸಿ ಮನೆಗಳನ್ನು ಮನೋಹರವಾಗಿಟ್ಟುಕೊಂಡು, ಅವರಿಂದಾಗಬಹುದಾದ ಸಹಾಯಗಳನ್ನೆಲ್ಲಾ ಹೊಂದಿ ಸಂಸಾರ ಸುಖವನ್ನನುಭವಿಸುತ್ತಿರುವರು. ನಮ್ಮ ಹಿಂದೂಗಳಲ್ಲಾದರೋ ಗೃಹಚ್ಛಿದ್ರವಿಲ್ಲದ ಮನೆಯೇ ಅಪೂರ್ವ. ಹೀಗಾಗಿ ಅನೇಕ ಸಂಸಾರಿಗಳು ವ್ಯಸನದಿಂದ ನರಳುತ್ತಿರುವರು. ಇದಕ್ಕೆಲ್ಲಾ ಮನೆಯಲ್ಲಿರುವ ಹೆಂಗುಸರ ಅವಿವೇಕವೇ ಕಾರಣವಾಗಿರುವುದು. ಸ್ತ್ರೀಯರಿಗೆ ತಕ್ಕ ವಿದ್ಯೆಯನ್ನು ಕಲಿಸದಿರುವುದರಿಂದ ಅವರು ಮೂಢರಾಗಿರುವರು. ಅಂಥವರೊಡನೆ ಸಂಸಾರ ಮಾಡುವುದು ಕಷ್ಟವಾಗಿ "ಸಂಸಾರಂ ದುಃಖಮಯಂ" ಎಂಬ ಗಾದೆಯನ್ನು ಹುಟ್ಟಿಸಿರುವರು. ಈ ಗಾದೆಯು ನಮ್ಮಲ್ಲಿ ಸಾರ್ಥಕವಾಗುವಂತೆ ಐರೋಪ್ಯರಲ್ಲಿ ಅನ್ವಯಿಸುವುದಿಲ್ಲ. ಅವರ ಸಂಸಾರಗಳಲ್ಲಿ ಸ್ತ್ರೀ ಪುರುಷರೀರ್ವರೂ ವಿವೇಕಿಗಳಾಗಿರುವುದರಿಂದ ಸಂಸಾರವು ಸುಖಪ್ರದವಾಗಿರುವುದು. ಅದುಕಾರಣ ಅವರನ್ನು ನೋಡಿಯಾದರೂ ನಮ್ಮವರು ಸ್ತ್ರೀವಿದ್ಯಾಭ್ಯಾಸವನ್ನು ಅವಶ್ಯಕವಾಗಿ ಮಾಡಿಸಬೇಕು. ಪೂರ್ವದಲ್ಲಿ ಆರ್ಯಮಹಿಳೆಯರನೇಕರು ವಿದ್ಯಾವತಿಯರಾಗಿದ್ದುದರಿಂದಲೇ ಪತಿವ್ರತೆಯರೆನಿಸಿಕೊಂಡು ಜಗತ್ಪೂಜ್ಯರಾಗಿರುವರು. ಅವರಂತೆ ಅವಿದ್ಯಾವತಿಯರಾದವರು ಪ್ರಸಿದ್ಧರಾಗಿರುವುದು ಅಪೂರ್ವ.

ನಮ್ಮ ಜನಗಳು ಸ್ತ್ರೀವಿದ್ಯಾ ಪ್ರಾಶಸ್ತ್ಯವನ್ನರಿಯದೆ "ಹೆಂಗುಸರಿಗೆ ವಿದ್ಯೆಯನ್ನು ಕಲಿಸಿದರೆ, ಅವರು ಮನೆಗೆಲಸ ಮಾಡುವುದನ್ನು ಬಿಟ್ಟು, ಕಥೆಗಳನ್ನೋದಿಕೊಂಡು ಕಾಲಹರಣ ಮಾಡುತ್ತಾ ಪತಿಯನ್ನು ಹೀಯಾಳಿಸಿ ದಾಂಪತ್ಯಾನುಕೂಲಕ್ಕೆ ಭಂಗವನ್ನು ತರುವರು." ಎಂದು ದೋಷಾಪಾದನೆಯನ್ನು ಮಾಡುತ್ತಾರೆ. ಇದು ಶುದ್ಧತಪ್ಪು. "ಅಲ್ಪವಿದ್ಯಾ ಮಹಾಗರ್ವ" ಎಂಬ ವಚನದಂತೆ ಸ್ತ್ರೀಗೇ ಆಗಲಿ, ಪುರುಷನಿಗೇ ಆಗಲಿ ಅಲ್ಪವಿದ್ಯೆಯು ಅಹಂಕಾರವನ್ನುಂಟುಮಾಡುವುದು ಸಹಜವಾಗಿದೆ. ಸ್ವಲ್ಪ ವಿದ್ಯೆಯು ಯಾರಿಗೂ ಪ್ರಯೋಜಕವಾದುದಲ್ಲ. ಅದುಕಾರಣ ಸ್ತ್ರೀಯರನ್ನೇ ಆಗಲಿ, ಪುರುಷರನ್ನೇ ಆಗಲಿ ವಿದ್ಯಾಭ್ಯಾಸಕ್ಕೆ ಸೇರಿಸಿದಬಳಿಕ ಅವರಿಗೆ ವಿವೇಕವನ್ನು ಸಂಪಾದಿಸಿ ಕೊಡಲು ಸಾಧಕವಾಗುವಷ್ಟು ಮಟ್ಟಿಗೂ ವಿದ್ಯೆಯನ್ನು ಹೇಳಿಸಲು ಸಂಕಲ್ಪಿಸಬೇಕೇ ಹೊರತು ಅರ್ಧಾಂತಕವಾದ ವಿದ್ಯೆಯನ್ನು ಅಭ್ಯಾಸಮಾಡಿಸಬಾರದು.

ವಿದ್ಯೆಯು ಸನ್ಮಾರ್ಗಪ್ರವರ್ತನೆಗೆ ಸಾಧಕವಾಗುವಂತೆಯೇ ದುರ್ಮಾರ್ಗಪ್ರವರ್ತನೆಗೂ ಸಾಧಕವಾಗುವುದು. ಬಾವಿಯಿಂದ ಕಷ್ಟಪಟ್ಟು ಸೇದಿದ ನೀರನ್ನು ಗಡಿಗೆಯನ್ನೇ ಕೆಡಹಿ ಹಾಳ್ಮಾಡಿಕೊಳ್ಳಲೂ ಬಹುದು; ಜಾಗರೂಕನಾಗಿಟ್ಟುಕೊಂಡು ತನ್ನ ಕೆಲಸಕ್ಕುಪಯೋಗಿಸಿಕೊಳ್ಳಲೂ ಬಹುದು. ಇದು ಅವರವರ ಪ್ರಯತ್ನ ವಿಶೇಷಾನುಗುಣವಲ್ಲದೆ ವಿದ್ಯೆಗೆ ಸಂಬಂಧಪಟ್ಟ ಗುಣವೂ ಅಲ್ಲ; ದೋಷವೂ ಅಲ್ಲ. ಅದುಕಾರಣ ವಿದ್ಯಾಭ್ಯಾಸ ಮಾಡಿಸತಕ್ಕವರು ಪುರುಷರ ಕಾರ್ಯಕ್ಕೆ ಸಾಧಕವಾಗುವಂತಹ ವಿದ್ಯೆಯನ್ನು ಪುರುಷರಿಗೂ, ಪಾತಿವ್ರತ್ಯವನ್ನು ವೃದ್ಧಿಗೊಳಿಸುವುದಕ್ಕೂ, ಗೃಹಕೃತ್ಯಗಳನ್ನು ಅಚ್ಚುಗಟ್ಟಾಗಿ ಮಾಡಿಕೊಳ್ಳಲು ತಿಳಿವಳಿಕೆಯನ್ನುಂಟುಮಾಡುವುದಕ್ಕೂ, ಗುರು ಹಿರಿಯರು ದೇವತಾದಿಗಳಲ್ಲಿ ಭಕ್ತಿಯಿಂದಿರುವುದಕ್ಕೂ, ಪಾಪಭೀತಿಯನ್ನು ಪುಣ್ಯಕಾರ್ಯಾಸಕ್ತಿಯನ್ನು ವೃದ್ಧಿಪಡಿಸುವುದಕ್ಕೂ ಸಾಧಕವಾದ ವಿದ್ಯೆಯನ್ನು ಸ್ತ್ರೀಯರಿಗೂ ಅಭ್ಯಾಸ ಮಾಡಿಸಬೇಕು.

[ಸಶೇಷ]

ಅವಧಾನ.

(ಕಳೆದವಾರದ ಶೇಷ.)

ಅವಧಾನವು ಕ್ರಮಕ್ಕೆ ಉತ್ತೇಜನವು.

ಮನಸ್ಸಿಟ್ಟು ಮಾಡುವ ಕೆಲಸವು ಫಲವನ್ನು ತರುವುದರಿಂದ ಯಾವ ಯಾವ ಕೆಲಸಕ್ಕೆ ಎಷ್ಟೆಷ್ಟು ಕಾಲ ಅವಧಾನವನ್ನು ಕೊಡಬಹುದೆಂಬುದೂ, ಅದನ್ನು ಯಾವ ಯಾವ ಕಾಲದಲ್ಲಿ ಹೇಗೆ ವಿನಿಯೋಗಿಸಬೇಕೆಂಬುದೂ, ಅದಕ್ಕೆ ತಕ್ಕಂತೆ ತಾನು ಯಾವ ಯಾವ ವಿಷಯಗಳಲ್ಲಿ ಮೊದಲೇ ಜಾಗರೂಕನಾಗಿರಬೇಕೆಂಬುದೂ ವ್ಯಕ್ತವಾಗಿ ಪ್ರತಿಯೊಂದನ್ನೂ ಕ್ರಮಪಡಿಸಿಕೊಳ್ಳುವುದಕ್ಕೆ ಗಮನವೇ ಮುಖ್ಯ ಹೇತುವಾಗಿದೆ.

ಅವಧಾನವು ಇತರ ಶಕ್ತಿಗಳನ್ನು ವೃದ್ಧಿಗೊಳಿಸುವುದು.

ಒಂದು ವಿಷಯದಲ್ಲಿಟ್ಟ ಅವಧಾನವು ಅದರ ವಿಚಾರವಾಗಿ ಅನೇಕ ಊಹೆಗಳನ್ನು ಬುದ್ಧಿಗೆ ತಂದೊದಗಿಸಿ ಊಹಾಶಕ್ತಿಯನ್ನು ವೃದ್ಧಿಪಡಿಸುವುದು. ಊಹೆಗೆ ಅವಶ್ಯಕವಾದ ಅನೇಕ ವಿಷಯಗಳನ್ನು ಥಟ್ಟನೆ ಜ್ಞಾಪಕಕ್ಕೆ ತರುವುದು ಅವಧಾನವೇ ಆಗಿರುವುದರಿಂದ, ಜ್ಞಾಪಕಶಕ್ತಿಯು ವೃದ್ಧಿಗೊಇದು ಅವಶ್ಯಕವಾಗಿರಬೇಕಲ್ಲವೆ?

ಅವಧಾನವು ಆರೋಗ್ಯಕ್ಕೆ ಹೇತುವು.

ಅವಧಾನವಿಲ್ಲದೆ ಅನೇಕ ವಿಷಯಗಳನ್ನು ಅಡಿಗಡಿಗೆ ವಿಮರ್ಶಿಸುತ್ತಿದ್ದರೂ, ಒಂದೂ ಸಿದ್ಧಾಂತವಾಗಿ ತಿಳಿಯದೆ ಮನುಷ್ಯನ ಮೆದುಳು ಕಳವಳಗೊಂಡು ಶಕ್ತಿಹೀನವಾಗಿ ದೇಹಕ್ಕೆ ಅನಾರೋಗ್ಯವನ್ನುಂಟುಮಾಡುವುದು. ಮನಸ್ಸಿಗೆ ಚಿಂತೆಯೊದಗಿ ಅದರಿಂದ ಮುಂದೆ ಅವಧಾನಕ್ಕೆ ಸ್ಥಿರಪ್ರತಿಜ್ಞೆಗೊಂಡರೂ ಸಾಧ್ಯವಾಗದೆ ದುಃಖಿಸಬೇಕಾಗುವುದು. ಸರಿಯಾದ ಅವಧಾನದಲ್ಲಿ ಮೆದುಳು ಆಯಾಸವನ್ನು ಹೊಂದಿದ್ದರೂ ಫಲೋನ್ಮುಖತೆಯಿಂದ ಅದು ಹರ್ಷಗೊಂಡು ಸುಸ್ಥಿತಿಯಲ್ಲೇ ಇರುವುದು. ಅವಧಾನದಲ್ಲಿ ಫಲಾಭಾವ ಒದಗುವುದರಿಂದ, ಮೊದಲೇ ಶಕ್ತಿಗುಂದಿದ್ದ ಮೆದುಳು ಮತ್ತೆ ಮತ್ತೆ ಹೆಚ್ಚಾಗಿ ಕುಂದಲು ಅವಕಾಶವಾಗುವುದು. ಅದರಿಂದ ಕೊನೆಗೆ ಹುಚ್ಚು ಹಿಡಿಯುವುದೂ ಉಂಟು.

ಅವಧಾನವು ಅಲಸ್ಯದ ಶತ್ರುವು.

ಮನುಷ್ಯನಿಗೆ ಅಲಸ್ಯಕ್ಕಿಂತಲೂ ದೊಡ್ಡ ಶತ್ರುವಿಲ್ಲ. ಅದರೆ ಅಲಸ್ಯಕ್ಕೆ ಅವಧಾನಕ್ಕಿಂತಲೂ ದೊಡ್ಡ ಶತ್ರುವಿಲ್ಲವಾದುದರಿಂದ, ಮನುಷ್ಯನಿಗೆ ಅವಧಾನವು ಪರಮ ಮಿತ್ರನೆನಿಸಿರುವುದರಲ್ಲಿ ಲೇಶವೂ ಸಂಶಯವಿಲ್ಲ. ಸೋಮಾರಿತನದಿಂದ ಭೂಭಾರವಾಗಿ ಪಶುವಿಗಿಂತಲೂ ಕಡೆಯಾಗಿರುವ ಅಲಸನು ಯುಕ್ತವಾದ ವಿಷಯಗಳಲ್ಲಿ ಅವಧಾನವನ್ನು ಕೊಟ್ಟು ನೋಡಲಿ. ಆಗ ಅವಧಾನವು ಎಷ್ಟು ಕಷ್ಟನಷ್ಟಗಳನ್ನು ತಪ್ಪಿಸಿಬಿಡುವುದೆಂಬುದು ಅವನಿಗೆ ತಾನಾಗಿ ಗೊತ್ತಾಗುವುದು. ಆಲಸ್ಯದಿಂದ ಉದ್ದೇಶಿಸಿದ ಫಲನ್ಯೂನತೆಯು ಮಾತ್ರವೇ ಅಲ್ಲ; ಹೊಸದಾಗಿ ವಿಪತ್ಪರಂಪರೆಗಳೇ ಬರುವುದುಂಟು. ತನ್ನ ಕೆಲಸದಲ್ಲಿ ಅವಧಾನವಿಲ್ಲದೆ ಆಲಸ್ಯದಿಂದ ಇರುವ ಒಬ್ಬ ಮನುಷ್ಯನು ತನ್ನ ಅಧಿಕಾರದಿಂದ ಚ್ಯುತನಾಗುವುದು ಸಹಜವೆನಿಸಿದ್ದರೂ, ಆ ನಷ್ಟವು ಅಷ್ಟಕ್ಕೆ ಕೊನೆಗಾಣುವಂತಿಲ್ಲ. ಇಂತಹ ಅಲಸನಿಗೆ ಮುಂದೆ ಇನ್ನಾವ ಕೆಲಸವೂ ದೊರೆಯುವುದಿಲ್ಲ; ಕೊನೆಗೆ ಭಿಕ್ಷವೂ ಹುಟ್ಟುವುದಿಲ್ಲ. ಸುಖದೊಂದಿಗೆ ಗೌರವವೂ ಓಡಿಹೋಗುವುದು. ವಿಪತ್ಪರಂಪರಾ ಶೃಂಖಲಾಬದ್ಧನಾಗಿ ಕಡು ದುಗುಡಗಳಿಗೀಡಾಗಿ ಸಾಯಬೇಕಾಗುವುದು. ಆದುದರಿಂದ ಅವಧಾನವು ಆಲಸ್ಯದಿಂದೊದಗುವ ಕಷ್ಟವನ್ನೆಲ್ಲಾ ಹೋಗಲಾಡಿಸಬಲ್ಲದಲ್ಲದೆ ಸುಖವನ್ನೂ, ಕೀರ್ತಿಯನ್ನೂ ಕೊಟ್ಟು ಕಾಪಾಡುವುದು.

ಅವಧಾನವು ಪರಕ್ಕೆ ಸಹಕಾರಿಯು.

ಭಗವದ್ಧ್ಯಾನಕ್ಕೂ, ಭಗವದ್ವಿಚಾರ ಗ್ರಂಥಾವಲೋಕನೆಗೂ, ವಿಚಾರಕ್ಕೂ ದೇವರಿಗೂ ತನಗೂ ಇರುವ ಸಂಬಂಧವನ್ನು ತಿಳಿಯುವುದಕ್ಕೂ ಅವಧಾನವು ಹೆಚ್ಚಾಗಿ ಅಭ್ಯಾಸಗೊಳಿಸಲ್ಪಟ್ಟಿದ್ದರೆ, ಮನುಷ್ಯನು ತನ್ನ ಜನ್ಮ ಸಾರ್ಥಕತೆಯಿಂದ ದೇವರ ಮೆಚ್ಚಿಗೆಗೊಳಗಾಗುವನು. ಆದರೆ ಅವಧಾನ ವಿಷಯದಲ್ಲಿ ನಾವು ತಿಳಿಯಬೇಕಾದ ಕೆಲವು ಮುಖ್ಯ ವಿಷಯಗಳನ್ನು ತಿಳಿಸಿ ಇದನ್ನು ಮುಗಿಸುವುದುಚಿತವು. ಒಂದೇವಸ್ತುವಿನಲ್ಲಿ ಬಹುಕಾಲದವರೆಗೂ ಅವಧಾನವನ್ನಿಡುವುದು ಬೇಸರವೆಂದು ಕೆಲವರಾಡುವರು. ಇದು ಸರಿಯಾದ ಮಾತಾದರೂ, ಅವಧಾನವು ಅವರವರ ದೇಹಶಕ್ತಿಯನ್ನನುಸರಿಸಿ ಅದಕ್ಕೆ ತಕ್ಕಷ್ಟು ಕಾಲದವರೆಗೆಮಾತ್ರವೇ ಉಪಯೋಗಿಸಿಕೊಳ್ಳತಕ್ಕದಾಗಿದೆ. ಮಕ್ಕಳು ಒಂದೇ ವಿಷಯದಲ್ಲಿ ಅರ್ಧ ಅಥವಾ ಮುಕ್ಕಾಲು ಗಂಟೆಗಿಂತಲೂ ಹೆಚ್ಚಾಗಿ ಅವಧಾನವನ್ನಿಡಲಾರವು. ಅವುಗಳಿಗೆ ಕ್ರಮ ಕ್ರಮವಾಗಿ ಅವಧಾನ ಕಾಲವನ್ನು ಹೆಚ್ಚಿಸುತ್ತ ಬರಬೇಕು. ರೋಗಿಗಳೂ, ಚಿಂತೆಗೊಂಡವರೂ ವಿಶೇಷಕಾಲ ಅವಧಾನವನ್ನಿಡಲಾರರು. ಆದುದರಿಂದ ಅದನ್ನು ಪರಿಹಾರ ಮಾಡಲು ತಕ್ಕಷ್ಟು ಅವಧಾನವನ್ನು ಕೊಡುವುದುತ್ತಮವು. ಆದರೆ ಕ್ರಮವಾಗಿ ಆರೋಗ್ಯವಂತನಾಗಿರುವವನು ಸೋಮಾರಿತನದಿಂದ ಅವಧಾನವನ್ನು ಅಭ್ಯಾಸಮಾಡದಿದ್ದರೆ, ಮಕ್ಕಳ ಅವಧಾನಶಕ್ತಿಗಿಂತಲೂ ಅವನಶಕ್ತಿಯು ನಿಕೃಷ್ಟವೆನಿಸಲ್ಪಡುವುದು. ಅವಧಾನದಿಂದಲೇ ನಮ್ಮ ಮಹರ್ಷಿಗಳು ಚಿರಕಾಲ ತಪೋನಿಷ್ಠರಾಗಿ ಸಿದ್ಧಿಯನ್ನು ಪಡೆದರು; ಅವಧಾನದಿಂದಲೇ ಯೋಗಸಿದ್ಧಿಯನ್ನು ಪಡೆದರು; ಅವಧಾನದಿಂದಲೇ ಶಾಸ್ತ್ರ ಪುರಾಣೇತಿಹಾಸಾದಿ ಗ್ರಂಥಗಳನ್ನೂ, ಬಗೆಬಗೆಯ ವಿಷಯಗಳನ್ನೂ ವಿಮರ್ಶಿಸಿ ಬರೆಯಲು ಸಮರ್ಥರಾದರು. ಅವಧಾನದಿಂದಲೇ ಈಗಣ ಯಂತ್ರ, ತಂತ್ರಗಳೆಲ್ಲವೂ ಸಿದ್ಧಿಸಿದುವು. ಅವಧಾನದಿಂದ ಪರಿಪಕ್ವವಾದ ದೂರಾಲೋಚನೆಯಿಂದಲೇ ವಿಪತ್ಪರಂಪರೆಗಳನ್ನು ತೃಣದಂತೆ ಲಕ್ಷಿಸಿ ಸುಖದಲ್ಲಿ ಸ್ಥಿರರಾದರು. ಹೆಚ್ಚಾಗಿ ಹೇಳುವುದರಿಂದೇನು? ಅವಧಾನವು ದೇವರಿಂದ ಅನುಗ್ರಹಿಸಿದ ಒಂದು ಮುಖ್ಯವಾದ ಶಕ್ತಿಯಾಗಿದೆ. ಅದನ್ನು ಮನುಷ್ಯನು ಸಾರ್ಥಕಪಡಿಸಿಕೊಂಡರೆ, ದೇವರ ಮೆಚ್ಚುಗೆಯಾಗುವುದು. ದೈವಾನುಗ್ರಹ ಒದಗಿದವನಿಗೆ ಯಾವ ಸುಖಗಳಿಗೆತಾನೇ ಕಡೆಯಿರುವುದು? ಆದುದರಿಂದ ಎಲ್ಲರೂ ಅವಧಾನ ವಿಶಿಷ್ಟರಾಗಿ ಇಹಪರಗಳಲ್ಲಿ ಸುಖವನ್ನು ಬಯಸುವುದು ಉತ್ತಮವು.

ಆರ್. ಶ್ರೀನಿವಾಸರಾವ್.

ಕನ್ನಡ ಭೂಗೋಳ.

ಭೂಗೋಳ ಶಾಸ್ತ್ರವನ್ನು ಹುಡುಗರಿಗೆ ಹೇಳಿಕೊಡುವುದರಿಂದ ಅತ್ಯಂತ ಪ್ರಯೋಜನ ಉಂಟೆಂದು ಎಲ್ಲರೂ ಬಲ್ಲರು. ಅದರೆ ನಮ್ಮ ಮೈಸೂರು ದೇಶದಲ್ಲಿ ಅದಕ್ಕೆ ತಕ್ಕಷ್ಟು ಪ್ರೋತ್ಸಾಹವಿರುವಂತೆ ಕಾಣುವುದಿಲ್ಲ. ಏತಕ್ಕೆಂದರೆ:—ಹುಡುಗರ ವಿದ್ಯಾಭ್ಯಾಸಕ್ಕೆ ಅರ್ಹರಾದ ಉಪಾಧ್ಯಾಯರೂ, ಆರೋಗ್ಯವಾದ ಪಾಠಶಾಲೆಯೂ ಹೇಗೆ ಅವಶ್ಯಕವೋ, ಹಾಗೆಯೇ ವಿಷಯಗ್ರಹಣಕ್ಕೆ ತಕ್ಕದಾದ ಪುಸ್ತಕವೂ ಅವಶ್ಯಕವಾಗಿರುವುದು. ಇತರ ವಿಷಯಗಳಿಗೆ ಬೇಕಾದಹಾಗೆ ಕನ್ನಡದಲ್ಲಿ ಪುಸ್ತಕಗಳು ಸಿಕ್ಕುತ್ತವೆ. ಭೂಗೋಳ ಶಾಸ್ತ್ರ ವಿಚಾರದಲ್ಲಿ ಇರುವ ಕನ್ನಡಪುಸ್ತಕಗಳು [illegible] ಅಸ್ಪಷ್ಟವಾಗಿವೆ. ಇನ್ನು ಕೆಲವು ಸಂಸ್ಕೃತಭಾಷಾ ಪ್ರೌಢಿಮೆಯನ್ನು ತೋರಿಸತಕ್ಕವಾಗಿವೆ. ವಿಚಾರಣೆಯ ಕಾಲದಲ್ಲಾದರೋ ಇನ್ಸ್‌ಪೆಕ್ಟರುಗಳು ಉಪಾಧ್ಯಾಯರುಗಳನ್ನೆಲ್ಲ ಕುರಿತು—ಏನಿರಯ್ಯಾ! ನೀವು ಇನ್ನೂ ಪೂರ್ವಾಚಾರವನ್ನು ಬಿಟ್ಟಹಾಗೆ ಕಾಣುವುದಿಲ್ಲ ಎಂದು ಆಕ್ಷೇಪಿಸುತ್ತಾರೆ. ಉಪಾಧ್ಯಾಯರು ಬಾಯಿಯಲ್ಲಿ ಹೇಳಿಕೊಟ್ಟ ವಿಷಯಗಳು ಹುಡುಗರಿಗೆ ತಾತ್ಕಾಲದಲ್ಲಿ ತಿಳಿದಹಾಗೆ ಕಂಡುಬಂದರೂ, ಅವರು ಮನೆಯಲ್ಲಿ ಮನನ ಮಾಡಲು ಸರಿಯಾದ ಪುಸ್ತಕವಿಲ್ಲವಾದುದರಿಂದ ಪರೀಕ್ಷಾ ಕಾಲದಲ್ಲಿ ಎಲ್ಲವನ್ನೂ ಮರೆತುಕೊಂಡು ಉಪಾಧ್ಯಾಯರನ್ನು ಆಕ್ಷೇಪಣೆಗೆ ಗುರಿಮಾಡುತ್ತಾರೆ. ಇದನ್ನೆಲ್ಲಾ ನೋಡಿ ಯಾರಾದರೂ ಒಂದು ಪುಸ್ತಕವನ್ನು ಬರೆಯೋಣವೆಂದರೆ ಸರಕಾರದವರೇನೋ ತಾವೇ ಬರೆಸಲು ಏರ್ಪಾಡು ಮಾಡುತ್ತಿರುವುದಾಗಿಯೂ, ಅದಕ್ಕಾಗಿ ಅವರು ಕೆಲವು ನಕ್ಷೆಗಳನ್ನೂ, ಚಿತ್ರಪಟಗಳನ್ನೂ ಸಹ ಸಿದ್ಧಪಡಿಸಿಕೊಂಡಿರುವುದಾಗಿಯೂ, ಈಗ ಎರಡು ವರುಷಗಳಿಂದಲೂ ವದಂತಿ ಇದೆ ಆದುದರಿಂದ ಇತರರು ಪುಸ್ತಕ ಬರೆಯಲು ಹಿಂತೆಗೆಯುತ್ತಾರೆ. ಅಂತೂ ಇಂತೂ ಅವರೂ ಮಾಡಲಿಲ್ಲ; ಇವರೂ ಮಾಡಲಿಲ್ಲ. ಭೂಗೋಳವು ಉಪಾಧ್ಯಾಯರ ಗೋಳಿಗೆ ಕಾರಣವಾಗಿದೆ. ಈಗಲಾದರೂ ಇದಕ್ಕೆ ಸರ್ಕಾರದವರು ಗಮನಕೊಟ್ಟು ಉಪಾಧ್ಯಾಯರ ಕಷ್ಟವನ್ನು ನೀಗಿಸಿ ಬಾಲಕರಿಗೆ ಸಹಾಯ ಮಾಡ್ಯಾರೆಂದು ನಂಬುತ್ತೇನೆ.

ಉಪಾಧ್ಯಾಯ.

ವ್ಯವಸಾಯಕ ವಿಷಯಗಳು.

ಯಾವ ಹಣ್ಣಿನ ಗಿಡವನ್ನಾದರೂ ರುಚಿಯಾದ ಹಣ್ಣುಗಳನ್ನು ಕೊಡುವಂತೆ ಮಾಡಲು, ಗಿಡದ ಬುಡದ ಎರಡು ಅಡಿ ಎತ್ತರದಲ್ಲಿ ಕಿರುಬೆರಳಿನ ಅಗಲ ನಾಲ್ಕು ಅಂಗುಲ ತೂತು ಕೊರೆದು ಗಿಡದ ಆಕಾರಕ್ಕನುಗುಣವಾಗಿ ಉತ್ತಮತರದ ಪಾದರಸವನ್ನು ನಾಲ್ಕುತೊಲೆಯಷ್ಟು, ತೂತಿನಲ್ಲಿ ಸೇರಿಸಿ, ತೂತಿಗೆ ಮಣ್ಣನ್ನೂ, ಮಣ್ಣಿನ ಬಟ್ಟೆಯನ್ನೂ ಮುಚ್ಚಿ, ಗಿಡಕ್ಕೆ ಸರಿಯಾದ ಮಣ್ಣು ನೀರುಗಳನ್ನು ಕಟ್ಟಿ ಕಾಪಾಡಿದರೆ ವೃಕ್ಷವು ಉತ್ತಮವಾದ ಫಲವನ್ನು ಕೊಡುತ್ತದೆಯೆಂದು ಉ. ಕೋದಂಡರಾಮಯ್ಯರೆಂಬುವರು ತೆಲುಗುಪತ್ರಿಕೆಗೆ ಬರೆದಿರುತ್ತಾರೆ. ಪರೀಕ್ಷಿಸಲಪೇಕ್ಷಿಸುವವರು ಮೊದಲು ಒಂದು ಮರಕ್ಕೆ ಮಾತ್ರ ಈ ರೀತಿಯಾಗಿ ಮಾಡಿ ನೋಡಿ ಇದರಿಂದ ಹೆಚ್ಚು ಮತ್ತು ರುಚಿಯಾದ ಫಲವು ದೊರೆತರೆ ನಂತರ ಹೆಚ್ಚು ಫಲವೃಕ್ಷಗಳಿಗೆ ಪಾದರಸ ಪ್ರಯೋಗಮಾಡತಕ್ಕದೆಂದೂ ಬರೆದಿರುವರು.

ಸುಮಾರು ೯೪ ಮಣ ಸಕ್ಕರೆಯಾಗುವಷ್ಟು ಕಬ್ಬನ್ನು ಗಾಣವಾಡಿದರೆ ಅಷ್ಟೇ ತೂಕವಾಗುವಷ್ಟು ಕಬ್ಬಿನ ನಾರು ನಷ್ಟವಾಗುವುದು. ಇದನ್ನು ಬಿದರಿನ ನಾರಿನ ಜತೆಯಲ್ಲಿ ಸೇರಿಸಿ ತಿರಳಿನಂಥಾ ಮೃದುವಾದ ಪದಾರ್ಥವಾಗಿ ಮಾಡಿದರೆ ೯೪ ಮಣಕ್ಕೆ ೨೪ ರೂ. ಬೆಲೆಯಾಗುವುದು. ಇಂಥ ತಿರಳಿನಿಂದ ಅತ್ಯುತ್ತಮವಾದ ಕಾಗದವನ್ನು ತಯಾರುಮಾಡಬಹುದು. ಆದರೆ ಕಬ್ಬನ್ನು ಗಾಣಕ್ಕೆ ಕೊಟ್ಟಾಗ್ಗೆ ನಾರು ತುಂಡು ತುಂಡಾಗದೆ ಇರುವಂತೆ ಮಾಡುವುದು ಬಹಳ ಅಸಾಧ್ಯವಾಗಿತ್ತು. ಈಚೆಗೆ ಹೊಸದಾಗಿ ತಯಾರುಮಾಡಲ್ಪಟ್ಟ ಯಂತ್ರಗಳ ಸಹಾಯದಿಂದ ಈ ತೊಂದರೆಯನ್ನು ನಿವಾರಣೆ ಮಾಡಿಕೊಂಡಿದ್ದಾರೆ. ಯಂತ್ರದ ಸಹಾಯದಿಂದ ಕಬ್ಬಿನ ನಾರನ್ನು ತಿರಳಿನಿಂದ ಬೇರೆ ಮಾಡುತ್ತಾರೆ. ಈ ರೀತಿ ಬೇರೆ ಮಾಡಲ್ಪಟ್ಟ ನಾರಿನಿಂದಲೂ ಮತ್ತು ತಿರಳನ್ನು ಗಾಣವಾಡಿದನಂತರ ಉಳಿಯತಕ್ಕ ಹಿಂಡಿಯಿಂದಲೂ, ಕಾಗದವನ್ನು ತಯಾರು ಮಾಡುತ್ತಾರೆ. ಮೇಲ್ಕಂಡಂತೆ ತಿರುಳನ್ನೂ ನಾರನ್ನೂ ಬೇರೆಬೇರೆ ಮಾಡಿ ನಾರು ಮತ್ತು ಹಿಂಡಿಯಿಂದ ಕಾಗದವನ್ನು ತಯಾರುಮಾಡಲು ಕ್ಯೂಬಾದಲ್ಲಿ ಒಂದು ಕಾರ್ಖಾನೆಯು ಸ್ಥಾಪಿತವಾಗಿದೆ.

ಕಾಲು ಮತ್ತು ಬಾಯಿ ಜ್ವರಗಳು.

ಯಾವುದಾದರೊಂದು ಗ್ರಾಮದಲ್ಲಿ ಈ ಜಾಡ್ಯವು ತಲೆಹಾಕಿದ ಒಡನೆಯೇ ದನಗಳ ಮಾಲೀಕರು ರೋಗತಗಲಿದವುಗಳನ್ನು ಆರೋಗ್ಯವಾಗಿರುವ ದನಗಳಿಂದ ಬೇರೆಮಾಡಬೇಕು. ರೋಗತಗಲಿದ ದನಗಳು ಆರೋಗ್ಯವಾದುವುಗಳು ಮೇಯುತಕ್ಕ ಸ್ಥಳಗಳಲ್ಲಿ ಮೇಯದಂತೆಯೂ, ಅವುಗಳು ನೀರುಕುಡಿಯತಕ್ಕ ಕೆರೆಕುಂಟೆಗಳಲ್ಲಿ ನೀರು ಕುಡಿಯದಂತೆಯೂ ನೋಡಿಕೊಳ್ಳಬೇಕು ರೋಗವು ಸಾಧಾರಣವಾಗಿ ಚಳಿಗಾಲದಲ್ಲಿ ಪ್ರಾರಂಭವಾಗುವುದು. ಆದುದರಿಂದ ರಾತ್ರಿ ಕಾಲಗಳಲ್ಲಿ ದನಗಳನ್ನು ಬಹಳ ಚಳಿಯಾಗತಕ್ಕ ಸ್ಥಳಗಳಲ್ಲಿ ಕಟ್ಟಹಾಕದಂತೆ ನೋಡಿಕೊಳ್ಳಬೇಕು. ಕರೆಯುವ ಹಸುಗಳಿಗೆ ಜಾಡ್ಯತಗುಲಿದರೆ ಅವುಗಳ ಕೆಚ್ಚಲು ಮತ್ತು ಮೊಲೆಗಳಿಗೆ ಜಾಡ್ಯವು ಹರಡಿಕೊಳ್ಳುವುದರಿಂದ ಇಂಥ ಹಸುಗಳ ಹಾಲನ್ನು ಕರುಗಳಿಗೆ ಉಣ್ಣಗೊಳಿಸಬಾರದು, ಅವುಗಳಿಗೆ ಜಾಡ್ಯವಿಲ್ಲದ ಹಸುಗಳ ಆರೋಗ್ಯವಾದ ಹಾಲನ್ನು ಕುಡಿಸಬೇಕು. ಹೀಗೆ ಮಾಡದಿದ್ದರೆ ಕರುಗಳಿಗೂ ಜಾಡ್ಯತಗಲಿ ಅವುಗಳು ಬಹಳ ತೊಂದರೆಗೆ ಗುರಿಯಾಗುವುವು.

ಗ್ರಾಮದಲ್ಲಿ ಪಶುವೈದ್ಯವನ್ನು ತಿಳಿದಂಥವರಾರೂ ಇಲ್ಲದಿದ್ದರೆ ದನಗಳ ಮಾಲೀಕರು ರೋಗತಗಲಿದ ದನಗಳ ಬಾಯನ್ನು ಬೆಚ್ಚಗಿರತಕ್ಕ ನೀರಿನಲ್ಲಿ ಮೊದಲು ತೊಳೆದು ಅನಂತರದಲ್ಲಿ ೩॥ ಪಾವು ನೀರಿನಲ್ಲಿ ೧। ತೊಲ ಪಟಿಕವನ್ನು ಕರಗಿಸಿ ಆ ನೀರಿನಿಂದ ತೊಳೆಯಬೇಕು. ಈ ರೀತಿಯಾಗಿ ದಿನಕ್ಕೆ ಮೂರಾವೃತ್ತಿ ಮಾಡತಕ್ಕದು. ರೋಗತಗಲಿದ ಕಾಲಿನ ಕೊಳೆಯಲ್ಲವನ್ನು ಸಂಪೂರ್ಣವಾಗಿ ತೆಗೆದು ಬಿಸಿನೀರಿನಲ್ಲಿ ತೊಳೆಯಬೇಕು. ಅನಂತರದಲ್ಲಿ ನಾಲ್ಕುಭಾಗ ಒಳ್ಳೆಣ್ಣೆಯಲ್ಲಿ ಒಂದುಭಾಗ ಕರ್ಪೂರವನ್ನು ಕರಗಿಸಿ ಆ ತೈಲವನ್ನು ಕಾಲಿಗೆ ಸವರಬೇಕು ಈ ತೈಲವು ಇಲ್ಲದಿದ್ದರೆ ಗೊಬ್ಬಳಿ ಚಕ್ಕೆಯ ಕಷಾಯವನ್ನು ಮಾಡಿ ಅದರಿಂದ ಕಾಲನ್ನು ತೊಳೆಯಬೇಕು. ಕಾಲಿನಲ್ಲಿ ಹುಳುಗಳಿದ್ದರೆ ಮೊದಲು ಅವುಗಳನ್ನೆಲ್ಲಾ ತೆಗೆದುಹಾಕಬೇಕು. ಆಮೇಲೆ ಪಟಿಕದ ನೀರಿನಲ್ಲಿ ತೊಳೆದು ಮೇಲ್ಕಂಡ ಕರ್ಪೂರದ ಒಳ್ಳೆಣ್ಣೆಯ ತೈಲವನ್ನು ಹಚ್ಚಿ ಚೆನ್ನಾಗಿ ಬಟ್ಟೆಯನ್ನು ಸುತ್ತಿ ಅದರಮೇಲೆ ಬೇವಿನ ಸೊಪ್ಪನ್ನು ಹಾಕಿ ಕಾಯಿಸಿದ ಉಗುರು ಬೆಚ್ಚಗಿರುವ ನೀರನ್ನು ಸುರಿಯಬೇಕು. ಮೇಲ್ಕಂಡ ತೈಲವು ಇಲ್ಲದಿದ್ದರೆ ದೀಪಕ್ಕೆ ಉಪಯೋಗಿಸುವ ಸೀಮೆಯೆಣ್ಣೆಯನ್ನೇ ಉಪಯೋಗಿಸಬಹುದು.

ಸುಣ್ಣ.

ಸುಣ್ಣವು ಅತ್ಯಾವಶ್ಯಕವಾದ ಸಸ್ಯಾಹಾರಗಳಲ್ಲಿ ಒಂದಾಗಿದೆ. ಬಹಳ ಪುರಾತನ ಕಾಲದಿಂದ ಇದು ವ್ಯವಸಾಯಕ್ಕೆ ಬಹಳ ಸಹಕಾರಿಯಾಗಿದೆ. ಪೂರ್ವಕಾಲದಲ್ಲಿ ಬಹಳ ದಿನಗಳಿಗೆ ಒಂದಾವರ್ತಿ ಜಮೀನುಗಳಿಗೆ ಹೇರಳವಾಗಿ ಸುಣ್ಣವನ್ನು ಹಾಕುವುದು ವಾಡಿಕೆಯಾಗಿತ್ತು. ಆದರೆ ಹೀಗೆ ಮಾಡಿದರೆ ಒಂದೆರಡು ವರ್ಷಗಳಕಾಲ ಪೈರಿಗೆ ಸ್ವಲ್ಪ ನಷ್ಟ ಸಂಭವಿಸುವುದೆಂದು ಕಂಡುಬಂದಿದೆ. ಕೊಂಚ ಕೊಂಚ ದಿನಗಳಿಗೆ ಒಂದಾವರ್ತಿ ಸ್ವಲ್ಪ ಸ್ವಲ್ಪ ಸುಣ್ಣವನ್ನು ಜಮೀನಿಗೆ ಸೇರಿಸುವುದರಿಂದ ಬಹಳ ಹೆಚ್ಚು ಪ್ರಯೋಜನವುಂಟು.

ಜಮೀನುಗಳಲ್ಲಿ ಸುಣ್ಣವಿರುವುದರಿಂದ ಉಂಟಾಗತಕ್ಕ ಪ್ರಯೋಜನಗಳ್ಯಾವುವೆಂದರೆ :—

(೧) ಗಡುಸಾದ ಮತ್ತು ಜಿಗಟು ಜಮೀನುಗಳು ಪುಡಿಪುಡಿಯಾಗಿಯೂ ಮತ್ತು ಹೆಚ್ಚು ಒಣಗಿದ್ದಾಗಿಯೂ ಆಗುವುವು, ಹಗುರವಾದ ಮರಳು ಮತ್ತು ಜಲ್ಲಿಯಿರತಕ್ಕ ಜಮೀನುಗಳು ಗಟ್ಟಿಯಾಗುವುವು.

(೨) ಪೈರುಗಳು ಬಹಳ ಆರೋಗ್ಯವಾಗಿರುವುವು; ಮತ್ತು ಕೊಳೆ ರೋಗಗಳು ತಗಲುವುದು ಅಪರೂಪ.

(೩) ಭೂಮಿಯಲ್ಲಿರತಕ್ಕ ಸೊಪ್ಪುಗಳೂ ಮತ್ತು ಸಜೀವ ವಸ್ತುಗಳೂ ಚೆನ್ನಾಗಿ ಕೊಳೆತು ಮಣ್ಣಿನೊಡನೆ ಸೇರಿ ಸಸ್ಯಾಹಾರವಾದ ಯವಕ್ಷಾರವು ಹೇರಳವಾಗಿ ಜಮೀನಿಗೆ ಸರಬರಾಜಾಗುವುದು.

(೪) ಇತರ ವಸ್ತುಗಳೊಡನೆ ಸೇರಿರುವುದರಿಂದ ಉಪಯೋಗಕ್ಕೆ ಬಾರದೆ ಇರತಕ್ಕ ಪೊಟಾಷ್ ಮೊದಲಾದ ಸಸ್ಯಾಹಾರಗಳನ್ನು ಇತರ ವಸ್ತುಗಳ ಜೊತೆಯಿಂದ ಬೇರೆ ಮಾಡಿ ಪೈರುಗಳಿಗೆ ಆಹಾರವನ್ನು ಒದಗಿಸಿ ಕೊಡುತ್ತದೆ.

(೫) ಜಮೀನಿನಲ್ಲಿ ಸಾಕಾದಷ್ಟು ಸುಣ್ಣವು ಇಲ್ಲದಿದ್ದರೆ ಜಮೀನನ್ನು ಸಾರವತ್ತಾಗಿ ಮಾಡತಕ್ಕ ಇತರ ಪದಾರ್ಥಗಳಿಂದ ಹೊಂದಬಹುದಾದಷ್ಟು ಪ್ರಯೋಜನವನ್ನು ಹೊಂದಲು ಸಾಧ್ಯವಲ್ಲವಾದ್ದರಿಂದ ವ್ಯವಸಾಯಗಾರರು ಎಷ್ಟು ಕಷ್ಟಪಟ್ಟು ಆರಂಭವಮಾಡಿದರೂ ಹೆಚ್ಚು ಲಾಭವನ್ನು ಸಂಪಾದಿಸಲು ಆಗಲಾರದು.

ಯಾವುದಾದರೊಂದು ಜಮೀನಿನಲ್ಲಿ ನೂರು ಭಾಗಕ್ಕೆ ಒಂದು ಭಾಗಕ್ಕಿಂತ ಕಡಿಮೆ ಸುಣ್ಣವಿದ್ದರೆ ಆ ಜಮೀನಿಗೆ ಸುಣ್ಣವನ್ನು ಹಾಕುವುದರಿಂದ ತುಂಬಾ ಪ್ರಯೋಜನವುಂಟು. ಗಡುಸಾದ ಜಿಗಟು ಮತ್ತು ಜೌಗು ಜಮೀನುಗಳಿಗೆ ಸುಣ್ಣವನ್ನು ಹಾಕಬೇಕು. ಎಕರೆಗೆ ೩೦ ಮಣ ಬೇಕಾಗುವುದು. ಉಸುಬು ಜಮೀನಾದರೆ ಎಕರೆಗೆ ೧೫೦ ಮಣದವರಿವಿಗೂ ಬೇಕಾಗುವುದು. ಅನೇಕ ದಿನಗಳಿಗೊಂದಾವರ್ತಿ ಯಥೇಚ್ಛವಾಗಿ ಸುಣ್ಣವನ್ನು ಹಾಕುವುದಕ್ಕಿಂತ ಈ ರೀತಿ ೩ ತಿಂಗಳಿಗೊಂದಾವರ್ತಿ ಹಾಕುವುದು ಬಹಳ ಒಳ್ಳೇದು.

ಕೆಲವು ಜಮೀನುಗಳಲ್ಲಿ ಸುಣ್ಣವಿಲ್ಲದಿರುವುದೇ ಅವುಗಳು ನಿಸ್ಸಾರವಾಗಿರುವುದಕ್ಕೆ ಕಾರಣವಾಗಿದೆ. ಇಂಥಾ ಜಮೀನುಗಳಿಗೆ ಮೊದಲು ಸುಣ್ಣವನ್ನು ಹಾಕಿ ನಂತರ ವ್ಯವಸಾಯ ಮಾಡಬೇಕು. ಸುಣ್ಣವನ್ನು ಹಾಕದೆ ಇತರ ಗೊಬ್ಬರಗಳನ್ನು ಎಷ್ಟು ಹಾಕಿದರೂ ಪ್ರಯೋಜನವಾಗಲಾರದು. ಅಲ್ಲದೆ ಬರೀ ಸುಣ್ಣವನ್ನೇ ನಂಬಿಕೊಂಡರೂ ಪ್ರಯೋಜನವಿಲ್ಲ. ಸುಣ್ಣದ ಜೊತೆಗೆ ಇತರ ಗೊಬ್ಬರವನ್ನೂ ಹಾಕಬೇಕು. "ಗೊಬ್ಬರವಿಲ್ಲದೆ ಬರೀ ಸುಣ್ಣವು ಜಮೀನು ಮತ್ತು ರೈತ ಇಬ್ಬರನ್ನೂ ಬಡವರನ್ನಾಗಿ ಮಾಡುತ್ತದೆ?" ಎಂಬ ಗಾದೆಯನ್ನು ಎಲ್ಲರೂ ಜ್ಞಾಪಕದಲ್ಲಿಡತಕ್ಕದ್ದು.

ಮೈಸೂರ್ ಸ್ಟಾರ್.

೧೯೧೧ನೇ ಇಸವಿ ಜುಲೈ ತಾ॥ ೧೦ನೇ ಸೋಮವಾರ

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘವು.

ನಮ್ಮ ಕನ್ನಡವು ಮರಾಠಿ, ತೆಲಗು, ತಮಿಳು ಮೊದಲಾದ ಭಾಷೆಗಳಂತೆ ಒಂದು ಸ್ವತಂತ್ರಭಾಷೆಯಾಗಿದ್ದಾಗ್ಯೂ, ಆ ಭಾಷೆಗಳಭಿಮಾನಿಗಳು ಅವುಗಳಭಿವೃದ್ಧಿಗಾಗಿ ಸಂಘಗಳನ್ನೇರ್ಪಡಿಸಿಕೊಂಡು ಧನರಾಶಿಯನ್ನು ಕೂಡಿಸಿ ತನ್ಮೂಲಕ ವಿದ್ಯಾವಂತರುಗಳಿಗೆ ಪ್ರೋತ್ಸಾಹವನ್ನು ಕೊಟ್ಟು, ಪ್ರಸ್ತುತಕಾಲದ ವಿದ್ಯಾಭ್ಯಾಸಕ್ಕೆ ತಕ್ಕ ಗ್ರಂಥಗಳನ್ನು ಬರಿಸಿ ಪ್ರಕಟಿಸುತ್ತಿರುವಂಥ ಪ್ರಯತ್ನಗಳಾವುವೂ ಬಹುಕಾಲದವರೆಗೆ ಕನ್ನಡಿಗರಿಂದ ಮಾಡಲ್ಪಡದಿದ್ದ ಪ್ರಯುಕ್ತ, ಇದರ ಭಾಷಾಭಿವೃದ್ಧಿಗೆ ಅವಕಾಶವಿಲ್ಲದೆ ಇದು ಸ್ವತಂತ್ರ ಭಾಷೆಯಲ್ಲವೆಂದು ಭಾವಿಸಲ್ಪಡುವ ದುಸ್ಥಿತಿಯು ಇದಕ್ಕೆ ಪ್ರಾಪ್ತವಾಗಿದ್ದಿತು. ಆದರೆ ಬೊಂಬಾಯಾಧಿಪತ್ಯದಲ್ಲಿ ಕರ್ನಾಟಕ ಪ್ರಾಂತಕ್ಕೆ ಮುಖ್ಯಸ್ಥಳವೂ, ಮುಖ್ಯ ಕನ್ನಡದೇಶವಾದ ನಮ್ಮ ಮೈಸೂರ ಸೀಮೆಗೆ ಸಮೀಪವೂ ಆಗಿರುವ ಧಾರವಾಡದಲ್ಲಿ ಹಚ್ ರಾ॥ ಗಳಾದ ರಾಮಚಂದ್ರಹನುಮಂತ ದೇಶಪಾಂಡೆ, ಎಂ. ಎ., ಯವರು, ಬೊಂಬಾಯಿಯ ಪ್ಲೀಡರ್ ವಕೀಲರಾಗಿದ್ದು ಗತಿಸಿದ ಶಾಮರಾವ ವಿಠಲರವರು, ಧಾರ್ವಾಡದ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದು ಗತಿಸಿದ ವೆಂಕಟರಂಗೋ ಕಟ್ಟಿಯವರೇ ಮೊದಲಾದ ಕನ್ನಡಭಾಷಾಭಿಮಾನಿಗಳು ಮರಾಠಿ ಮೊದಲಾದ ಭಾಷೆಗಳಂತೆ ಕನ್ನಡ ಭಾಷೆಯನ್ನೂ ಅಭಿವೃದ್ಧಿಗೆ ತಂದು ಅದಕ್ಕುಂಟಾಗಿರುವ ಅಪಪ್ರಥೆಯನ್ನು ಹೋಗಲಾಡಿಸಬೇಕೆಂಬ ಸತ್ಸಂಕಲ್ಪದಿಂದ ಈ "ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ" ವನ್ನು ೧೮೯೦ ರಲ್ಲಿ ಸ್ಥಾಪಿಸಿದರು. ಈ ಸಂಘಕ್ಕೆ ಸಂಬಂಧಿಸಿದಂತೆ ಒಂದು ಪುಸ್ತಕ ಭಂಡಾರವೂ ಸ್ಥಾಪಿಸಲ್ಪಟ್ಟಿತು. ಈ ಪುಸ್ತಕ ಭಂಡಾರಕ್ಕೆ ಬೊಂಬಾಯಿ ಮತ್ತೂ ಮೈಸೂರ ಸರ್ಕಾರದ ವಿದ್ಯಾಶಾಖೆಯವರು ತಾವು ಪ್ರಚುರಪಡಿಸುವ ಕನ್ನಡ ಗ್ರಂಥಗಳನ್ನು ಉಚಿತವಾಗಿ ಸಹಾಯ ಮಾಡುತ್ತಿರುವರಲ್ಲದೆ, ಬೊಂಬಾಯಿ ಸರ್ಕಾರದವರು ಈ ಸಂಘದವರ ಕನ್ನಡ ಗ್ರಂಥಗಳನ್ನು ಬರಿಸುವ ಕಾರ್ಯಕ್ಕಾಗಿ ಮೊದಲು ವರ್ಷವೊಂದಕ್ಕೆ ೩೦೦ ರೂ. ಗಳನ್ನು ಕೊಡುತ್ತಿದ್ದು ಈಗ ಅದನ್ನು ೫೦೦ ರೂ. ಗಳಿಗೆ ಹೆಚ್ಚಿಸಿರುವರು. ಮತ್ತೂ ಕನ್ನಡ ಭಾಷಾಭಿಮಾನದೇವತೆಗಳಾದ ನಮ್ಮ ಶ್ರೀಮತ್ ಮಹಾರಾಜ ಕೃಷ್ಣರಾಜ ಒಡೆಯರ್, ಬಹದ್ದೂರ್‌ರವರು ಈ ವಿದ್ಯಾವರ್ಧಕ ಸಂಘದವರ ಪ್ರಾರ್ಥನೆಯಂತೆ ತಮ್ಮ ಪ್ರಿಯತಂದೆಯವರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಹೆಸರಿನಿಂದ ಸಂಘದುಪಯೋಗಕ್ಕಾಗಿ ಒಂದು ಮಂದಿರವನ್ನು ಕಟ್ಟಲು ಅಪ್ಪಣೆಯನ್ನು ಕೊಡಿಸಿರುವುದಲ್ಲದೆ ೩೦೦೦ ರೂ. ಗಳನ್ನು ದಯಪಾಲಿಸಿದರು. ಇದಲ್ಲದೆ ಅನೇಕ ಪರೋಪಕಾರಿಗಳೂ ತಮ್ಮ ಸಾನುಭೂತಿಯನ್ನು ತೋರಿಸಿರುವರು. ಮತ್ತೂ ಅನೇಕ ವಿದ್ಯಾಭಿಮಾನಿಗಳು ಆಜೀವಸಭಾಸದರಾಗಿದ್ದುಕೊಂಡು ಪ್ರತಿವರ್ಷದಲ್ಲೂ ದ್ರವ್ಯವನ್ನು ಸಹಾಯ ಮಾಡುತ್ತಿರುವರು.

ಈ ಸಂಘಕ್ಕೆ ಬೊಂಬಾಯಿ ಸರ್ಕಾರದಿಂದ ಧನಸಹಾಯವು ದೊರೆತಂದಿನಿಂದ ಈವರೆಗೆ ಈ ಸಂಘದಿಂದ ೪೯ ಗ್ರಂಥಗಳು ವಿದ್ಯಾವಂತರುಗಳಿಗೆ ಪ್ರೋತ್ಸಾಹವು ಕೊಡಲ್ಪಟ್ಟು ಬರಿಸಲ್ಪಟ್ಟಿರುತ್ತವೆ. ಇವುಗಳಲ್ಲಿ ಈವರೆಗೆ ೨೩ ಗ್ರಂಥಗಳು ಮಾತ್ರ ಪ್ರಕಟಿತವಾಗಿರುತ್ತವೆ. ಬೊಂಬಾಯಿ ಸರ್ಕಾರದವರು ಕನ್ನಡ ಪ್ರಾಥಮಿಕ ಪಾಠಶಾಲೆಗಳಲ್ಲಿ ಮರಾಠಿ ಭಾಷೆಯನ್ನು ಸೇರಿಸಬೇಕೆಂದು ಯೋಚಿಸಿದಾಗ್ಗೆ, ಈ ಸಂಘದವರು ಅನ್ಯಭಾಷೆಯನ್ನು ಕನ್ನಡಶಾಲೆಯಲ್ಲಿ ಸೇರಿಸುವುದರಿಂದ ಕನ್ನಡದೇಳಿಗೆಯು ಕಡಿಮೆಯಾಗುವುದಲ್ಲದೆ, ಭಾಷೆಯೂ ಕೆಡುವುದೆಂದು ಸರ್ಕಾರದವರಲ್ಲಿ ಬಿನ್ನವಿಸಿ ಆ ಆಲೋಚನೆಯು ಕಾರ್ಯನುಮುಖವಾಗದಂತೆಮಾಡಿದರು. ಮತ್ತೂ ಈ ಸಂಘದವರ ಸೂಚನೆಯಂತೆ ಬೊಂಬಾಯಿಯ ಸರ್ವವಿದ್ಯಾಲಯದಲ್ಲಿ ಎಂ.ಎ., ಪರೀಕ್ಷೆಗೆ ಕನ್ನಡವು ಸೇರಿಸಲ್ಪಟ್ಟಿತು. ಸಂಘದಿಂದ ಕಟ್ಟಲ್ಪಡುತ್ತಲಿರುವ ಶ್ರೀಚಾಮರಾಜೇಂದ್ರಹಾಲಿನ ಮೊದಲನೆಯಂತಸ್ತು ಮುಗಿದಿರುವುದು. ಇದಕ್ಕಾಗಿ ೧೫೫೮-೧೧-೧೧ ರೂ. ವ್ಯಯವಾಗಿರುವುದೆಂದು ಕಳೆದವರ್ಷದ ವರದಿಯಿಂದ ಗೊತ್ತಾಗುತ್ತದೆ. ಈ ಮಂದಿರದ ೨ ನೆಯಂತಸ್ತನ್ನು ಕಟ್ಟಲು ಇನ್ನೂ ೧೫,೦೦೦ ರೂ. ಬೇಕಾಗಿರುವುದರಿಂದ ಸಂಘದವರು ಮೈಸೂರ ಮತ್ತೂ ಬೊಂಬಾಯಿ ಸರ್ಕಾರದವರ ಮತ್ತೂ ಇತರರ ದ್ರವ್ಯಸಹಾಯವನ್ನು ಕೇಳಿಕೊಳ್ಳಬೇಕೆಂದಿರುವರು. ಕಳೆದವರ್ಷ ಶ್ರೀಮದ್ಯುವರಾಜರ ವಿವಾಹವು ನಡೆದಾಗ್ಗೆ ಈ ಸಂಘದವರು ಆನರಬಲ್ ರಾ॥ ಬ॥ ಶ್ರೀನಿವಾಸರಾವ್ ಕೊಪ್ಪ ಇವರನ್ನು ತಮ್ಮ ಪ್ರತಿನಿಧಿಗಳನ್ನಾಗಿ ಕಳುಹಿಸಿ ಅವರ ಮೂಲಕ ಒಂದು ವಿಜ್ಞಾಪನ ಪತ್ರಿಕೆಯನ್ನು ಒಪ್ಪಿಸಿದರು. ಕಳೆದ ವರ್ಷದ ವರದಿಯನ್ನು ನೋಡುವಲ್ಲಿ ಸರ್ಕಾರಿಯ ಗ್ರಾಂಟು ಬಡ್ಡಿ, ವರ್ಗಣಿ, ಪುಸ್ತಕ ಮಾರಾಟ ಮತ್ತೂ ಬಹುಮಾನ ಇವುಗಳಿಂದ ೮೩೪-೧೧-೧೦ ಉತ್ಪನ್ನವಾಗಿ [illegible] ವ್ಯಯವಾಗಿರುತ್ತದೆ. ಅಂದರೆ [illegible] ರೂ. ನಷ್ಟವಾಗಿರುತ್ತದೆಂದು ತಿಳಿಯಬರುತ್ತದೆ. ಈ ಸಂಘದವರು ಪ್ರತಿ ವರ್ಷದಲ್ಲೂ ಗೊತ್ತಾದ ಗ್ರಂಥಗಳಲ್ಲಿ [illegible] ಪರೀಕ್ಷೆ ಕೊಟ್ಟವರಿಗೂ, ಉತ್ತಮವಾಗಿ [illegible] ಬಹುಮಾನವನ್ನು ಕೊಡುವರು. ಕಳೆದವರ್ಷ ಗ್ರಂಥಗಳನ್ನು ಬರೆದವರಿಗೂ, ಓದಿ ಪರೀಕ್ಷೆ ಕೊಟ್ಟವರಿಗೂ ಮತ್ತೂ [illegible] ಮಾಡಿದವರಿಗೂ ರೂ. [illegible] ಬಹುಮಾನಕೊಡಲ್ಪಟ್ಟಿತು. ಈ ಪರೀಕ್ಷೆಗಾಗಿ ಮೈಸೂರ ಸರ್ಕಾರದ ವಿದ್ಯಾಶಾಖೆಯಿಂದ ಪ್ರತಿವರ್ಷದಲ್ಲೂ ಇಬ್ಬರು ಕನ್ನಡ ಪಂಡಿತರುಗಳು ಕಳುಹಲ್ಪಡುವರು. ಈ ವಿದ್ಯಾವರ್ಧಕ ಸಂಘದವರು ಹೊಸ ಪುಸ್ತಕಗಳನ್ನು ಬರಿಸಿ [illegible] ನೋಡುತ್ತಿರುವುದಲ್ಲದೆ, "ವಾಗ್ಭೂಷಣ" ವೆಂಬ ಮಾಸಿಕ ಪುಸ್ತಕವನ್ನೂ ಕಳೆದ ೧೫ ವರ್ಷಗಳಿಂದಲೂ ಪ್ರಕಟಿಸುತ್ತಿದ್ದು ಅದರಿಂದ ಕೊಂಚ ನಷ್ಟವು [illegible] ಅದರ ಚಾಲಕತ್ವವನ್ನು ಮ॥ [illegible] ಬಿ. ಎ., ಯವರಿಗೆ ವಹಿಸಿ ಕೊಟ್ಟಿರುವರು. ಅವರು ಈ ಮಾಸಿಕ ಪುಸ್ತಕದಲ್ಲಿ ಮೊದಲಿನಂತೆ ಹಳೆ ಗ್ರಂಥಗಳನ್ನು ಪ್ರಕಟಿಸದೆ ನೈತಿಕ, ಸಮಾಜಿಕ ಮೊದಲಾದ ಉಪಯುಕ್ತ ವಿಷಯಗಳನ್ನು ಬರೆದು [illegible].

ಈ ವಿದ್ಯಾವರ್ಧಕ ಸಂಘವು ಸ್ಥಾಪಿತವಾದಂದಿನಿಂದ ಅನೇಕ ವಿದ್ಯಾವಂತರುಗಳಿಗೆ ಉತ್ತೇಜನವುಂಟಾಗಿ ಅತ್ಯುಪಯುಕ್ತವಾದ ಕನ್ನಡ ಗ್ರಂಥಗಳು ಪ್ರಕಟವಾಗುವಂತಾದುದಲ್ಲದೆ, ವರ್ಷಕ್ಕೊಂದಾವರ್ತಿ ಎಲ್ಲ ಕರ್ನಾಟಕ ದೇಶದ ವಿದ್ಯಾವಂತರು ಒಂದುಕಡೆ ಸೇರಿ ಕನ್ನಡಭಾಷಾಭಿವೃದ್ಧಿಗೆ ಬಾಧಕವಾದವುಗಳನ್ನು ಕಂಡುಹಿಡಿಯಲವಕಾಶವಾಯಿತು. ಇಂಥ ಉಪಯುಕ್ತವಾದ ವಿದ್ಯಾಸಂಸ್ಥೆಗೆ ಪ್ರತಿಯೊಬ್ಬ ಕನ್ನಡಿಗನೂ ಸ್ವಭಾಷಾಪ್ರೇಮದಿಂದ ಸಹಾಯಮಾಡುವುದು ಆವಶ್ಯಕರ್ತವ್ಯವಾಗಿರುತ್ತದೆ. ಈ ಸಂಘವು ಆರಂಭವಾದ ತರುಣದಲ್ಲೂ, ಈಚೆಗೂ ಅದಕ್ಕೆ ವಿಶೇಷ ಸಹಾಯವನ್ನು ಮಾಡಿದ ಸೊಲ್ಲಾಪುರದ ಕೈಲಾಸವಾಸಿ ರಾ॥ ಬ॥ ಶ್ರೀಮಂತ ಮಲ್ಲಪ್ಪ ವಾರದ ಇವರ ಉಪಕಾರವನ್ನು ಸಂಘದವರು ಬಹುವಾಗಿ ಸ್ಮರಿಸಿ, ಅವರ ಅಕಾಲಮರಣದಿಂದ ತಮಗುಂಟಾದ ದುಃಖವನ್ನು ಪ್ರದರ್ಶಿಸಿರುವರಲ್ಲದೆ ಇಂಥ ವಿದ್ಯಾಭಿಮಾನಿಗಳ ಹೆಸರಿನಿಂದ ಪ್ರತಿವರ್ಷದಲ್ಲೂ ಈ ಸಂಘದ ಮೂಲಕ ಒಂದು ಬಹುಮಾನವು ಕೊಡಲ್ಪಡುವಂತೆ ಅವರ ಕುಟುಂಬದವರು ಮಾಡುವುದುತ್ತಮವೆಂದು ಸೂಚಿಸಿರುವರು. ಈ ಸೂಚನೆಯು ಸಾಧುವಾದುದರಿಂದ, ಶ್ರೀಮಂತರು ಆರಂಭಿಸಿದ್ದ ಧರ್ಮಕಾರ್ಯಗಳನ್ನು ಬಿಡದೆ ನಡಿಸುತ್ತಿರುವ ಅವರ ಧರ್ಮಪತ್ನಿಯವರು ಕೈ॥ ರಾ॥ ಬ॥ ಮಲ್ಲಪ್ಪನವರ ಹೆಸರಿನಿಂದ ಪ್ರತಿವರ್ಷದಲ್ಲೂ ಒಂದು ಬಹುಮಾನವು ಸಂಘದಿಂದ ಕೊಡಲ್ಪಡುವಂತೆ ತಕ್ಕೇರ್ಪಾಟನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ.

ಒಳದೇಶದವೃತ್ತಾಂತ.

ಈದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರೂ, ಯುವರಾಜರೂ ಮೋಟಾರು ಬಂಡಿಯಲ್ಲಿ ಬೆಂಗಳೂರಿಗೆ ಚಿತ್ತೈಸಿ ಅಲ್ಲಿ ೩ ವಾರಗಳ ವರೆಗಿದ್ದು ರಾಜಧಾನಿಗೆ ದಯಮಾಡಿಸುವುದಾಗಿ ಕೇಳುತ್ತೇವೆ.

ರಾಜಧಾನಿಯಲ್ಲಿ ಕಳೆದ ಶನಿವಾರದಿಂದಲೂ ಜಡಿ ಹಿಡಿದಿರುವುದಲ್ಲದೆ ಶನಿವಾರ ರಾತ್ರಿಯೂ, ನೆನ್ನೆಯ ಮಧ್ಯಾಹ್ನವೂ ದೊಡ್ಡಮಳೆಯಾಯಿತು. ಇದರಿಂದ ಜನರಿಗೆ ಬಹು ಜಿಗುಪ್ಸೆಯುಂಟಾಗಿದೆ.

ಬರುವ ತಾ॥ ೧೫-೧೬ ರಲ್ಲಿ ಬೆಂಗಳೂರಲ್ಲಿ ಎಲ್ಲ ಡಿ॥ ಗಳ ಪೊಲೀಸು ಸೂಪರಿಂಟೆಂಡೆಂಟರು ಇನ್ಸ್‌ಪೆಕ್ಟರ್ ಜನರಲ್‌ರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ತಮ್ಮ ಶಾಖೆಗೆ ಸಂಬಂಧಪಟ್ಟ ಮುಖ್ಯವಾದ ವಿಷಯಗಳನ್ನು ಕುರಿತು ಪರ್ಯಾಲೋಚಿಸುವರು.

ಕಳೆದ ದೊಡ್ಡಏಕಾದಶಿ ಶುಕ್ರವಾರ ರಾತ್ರಿ ಶ್ರೀಮಚ್ಚಾಮರಾಜೇಂದ್ರ ನಾಟಕ ಸಂಘದವರು ಸತ್ಯಹರಿಶ್ಚಂದ್ರ ನಾಟಕವನ್ನು ರಾಜಧಾನಿಯ ಟವರ್‌ಹಾಲಿನಲ್ಲಿ ಉತ್ತಮವಾಗಭಿನಯಿಸಿ ತೋರಿಸಿದರು. ಪ್ರೇಕ್ಷಕರ ಸಂಖ್ಯೆಯು ಹೆಚ್ಚಾಗಿದ್ದಿತು. ಮ॥ ಗಳಾದ ಎಂ. ಕಾಂತರಾಜಅರಸಿನವರು, ಎಚ್. ಲಿಂಗರಾಜಅರಸಿನವರು ಮೊದಲಾದ ಅರಸುಗಳು ದಯಮಾಡಿಸಿದ್ದರು.

ಕಳೆದ ಸೋಮವಾರ ರಾತ್ರಿ ೯ ಗಂಟೆ ಸಮಯದಲ್ಲಿ ಶ್ರೀಮದ್ಯುವರಾಜ ದಂಪತಿಗಳು ಸಕಲ ರಾಜಮರ್ಯಾದೆಯೊಡನೆ ಅರಮನೆಯಿಂದ ಹೊರಟು ಚಾಮುಂಡೀ ವಿಹಾರಗೃಹಪ್ರವೇಶವನ್ನು ಮಾಡಿದರು. ತತ್ಸಂಬಂಧವಾಗಿ ಕಳೆದ ತಾ॥ ೮ ರಲ್ಲಿ ಮ॥ ದಳವಾಯಿ ದೇವರಾಜ ಅರಸಿನವರೇ ಮೊದಲಾದ ಬಂಧುಗಳಿಗೆ ಚಾಮುಂಡಿ ವಿಹಾರ ಪ್ರಾಸಾದದಲ್ಲಿ ಔತಣವು ಮಾಡಿಸಲ್ಪಟ್ಟಿತು.

ನಂಜನಗೂಡು ಡಿವಿಜನ್ ಆಫೀಸ್ ಮುನ್ಷಿ ಮ॥ ಎಂ. ಆರ್. ಹನುಮಂತರಾಯರ ಹೆಸರಿನಲ್ಲಿರುವ ಮೈಸೂರ ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನ ೫೭೬ ನೇ ನಂಬರಿನ ಪ್ಯಾಸುಬುಕ್ಕು ಮಾರ್ಗದಲ್ಲಿ ಬಿದ್ದಿದ್ದುದನ್ನು ನಮ್ಮಾಫೀಸಿನ ಕೆಲಸಗಾರನು ಕಂಡು ನಮ್ಮಲ್ಲಿಗೆ ತಂದು ಕೊಟ್ಟಿರುವನು. ಆದುದರಿಂದ ಈ ಪ್ಯಾಸು ಬುಕ್ಕನ್ನು ಕಳೆದುಕೊಂಡಿರುವವರು ನಮ್ಮಲ್ಲಿಗೆ ಬಂದು ತೆಗೆದುಕೊಂಡು ಹೋಗಬಹುದು.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೩,	೪,	೫,	೬,	೭,	೮.
ತಗಲಿದ್ದು.	೭	೭	೧	೫	೬	೮
ಸತ್ತದ್ದು.	೩	೩	೪	೩	೫	೩
ಒಟ್ಟು ಮ.	೧೧	೭	೧೩	೬	೧೦	೭

ತಾ॥ ೨೦-೬-೧೯೧೧ ರಿಂದ ತಾ॥ ೮-೭-೧೯೧೧ ರ ವರೆಗೆ ಒಟ್ಟು ೨೪೫೮ ಜನರಿಗೆ ಇನಾಕ್ಯುಲೇಷನ್ ಮಾಡಲ್ಪಟ್ಟಿದೆ.

ಚಿಕ್ಕಮಗಳೂರಲ್ಲಿರುವ ಬಸವನ ಹಳ್ಳಿಯಲ್ಲಿ ಕಾಫಿ ತೋಟಗಾರರೂ, ಪ್ಲೀಡರೂ ಆಗಿದ್ದು ಗತಿಸಿದ ಗುಂಡಪ್ಪನವರ ಪತ್ನಿ ಜಾನಕಿಯಮ್ಮನೆಂಬುವರು ಕಳೆದವಾರ ತಮ್ಮ ಮನೆಯಲ್ಲಿ ಕೊಲೆಮಾಡಲ್ಪಟ್ಟರು. ಈಕೆಯು ತನಗೆ ಮಕ್ಕಳಿಲ್ಲದಿದ್ದುದರಿಂದ ತನ್ನ ಅಪಾರವಾದ ಆಸ್ತಿಯು ತನ್ನ ಗಂಡನ ದಾಯಾದಿಗೆ ತನ್ನ ಮರಣಾನಂತರ ಸೇರತಕ್ಕದೆಂದು ವಿಲ್ಲನ್ನು ಬರೆದಿದ್ದಳು. ಆಕೆಯ ಕೂಡ ಇದ್ದ ಆಕೆಯ ತಮ್ಮನನ್ನೂ, ಅದೇ ಮನೆಯಲ್ಲಿ ವಾಸವಾಗಿದ್ದ ಪೊಲೀಸು ದಫೇದಾರಿಯಿಂದ ನಿವೃತ್ತನಾಗಿರುವ ದಾಸಪ್ಪನೆಂಬುವನನ್ನೂ ಪೊಲೀಸರು ಹಿಡಿದು ವಿಚಾರಣೆಗೆ ಗುರಿಮಾಡಿರುವರು.

ಕಳೆದ ತಾ॥ ೨೮ ರಲ್ಲಿ ರಾಜಧಾನಿಯ ಗುಡ್‌ಷೆಫರ್ಡ್ ರವರ ಮಠಕ್ಕೆ ಸೇರಿದ ಕನ್ಯಾಸ್ತ್ರೀಯರು ಶ್ರೀಮನ್ಮಹಾಮಾತೃಶ್ರೀ ಯವರನ್ನು, ಮಹಾರಾಣಿಯವರನ್ನು, ಶ್ರೀಮದ್ಯುವರಾಜ ದಂಪತಿಗಳನ್ನು ಮತ್ತೆ ಕೆಲ ಅರಸು ಸ್ತ್ರೀಯರನ್ನು ತಮ್ಮ ಮಠಕ್ಕೆ ಬರಮಾಡಿಕೊಂಡು ತಮ್ಮ ಪೋಷಣೆಯಲ್ಲಿರುವ ಅನಾಥ ಮಕ್ಕಳಿಂದ ನಾಟಕ ಮೊದಲಾದ ವಿನೋದಗಳನ್ನು ಮಾಡಿಸಿ, ತಾವು ಆ ಅನಾಥ ಬಾಲಕರ ಅಭಿವೃದ್ಧಿಗಾಗಿ ಮಾಡುವ ಕಾರ್ಯಗಳನ್ನು ಕುರಿತು ಒಂದು ವಿಜ್ಞಾಪನ ಪತ್ರಿಕೆಯನ್ನೊಪ್ಪಿಸಿದರು. ಶ್ರೀಮದ್ಯುವರಾಜರು ಮಾತೃಶ್ರೀಯವರ ಪರವಾಗಿ ಅದಕ್ಕುತ್ತರವನ್ನು ಕೊಡುವಾಗ್ಗೆ ಪ್ರಪಂಚದಲ್ಲೆಲ್ಲ ಕನ್ಯಾಸ್ತ್ರೀಯರು ತಮ್ಮ ಪೋಷಣೆಗೊಳಪಟ್ಟ ಅನಾಥಮಕ್ಕಳ ಅಭಿವೃದ್ಧಿಗಾಗಿ ತಮ್ಮ ಸ್ವಸುಖವನ್ನು ತ್ಯಜಿಸಿ ಪಾಟುಪಡುತ್ತಿರುವುದು ಜಗತ್ಪ್ರಸಿದ್ಧವಾಗಿದೆ. ಮತ್ತೂ ನೀವು ಕೈಗೊಂಡಿರುವ ಈ ಸ್ತುತ್ಯವಾದ ಕಾರ್ಯವು ಸಫಲವಾಗಲಿ. ಎಂದು ಮೊದಲಾಗಿ ಕಾಲೋಚಿತವಾದ ಮಾತುಗಳನ್ನಾಡಿದರು.

ಕಳೆದ ವರ್ಷ ಇಲ್ಲಿಗೆಬಂದು ಅನೇಕ ನಾಟಕಗಳನ್ನಭಿನಯಿಸಿ ಶ್ರೀಮನ್ ಮಹಾರಾಜರವರಿಂದಲೂ, ಪುರಜನರಿಂದಲೂ ಸನ್ಮಾನಿತರಾಗಿ ಹೋಗಿದ್ದಂಥ ಶಿರಹಟ್ಟಿಯ ಶ್ರೀಲಕ್ಷ್ಮೀ ಪ್ರಾಸಾದಿಕ ನಾಟಕ ಸಂಘದವರು ಕಳೆದ ಮಂಗಳವಾರ ರಾತ್ರಿ ರಾಜಧಾನಿಯ ಟವರ್‌ಹಾಲಿನಲ್ಲಿ ಸೀತಾಸ್ವಯಂವರವನ್ನು ಅತ್ಯುತ್ತಮವಾಗಿ ಅಭಿನಯಿಸಿ ಪ್ರೇಕ್ಷಕರ ಮನಸ್ಸನ್ನಾನಂದಗೊಳಿಸಿದರು. ಇವರು ಮೊದಲಿಗಿಂತಲೂ ಈಗ ಭಾಷೆಯಲ್ಲೂ, ವೇಷದಲ್ಲೂ ವಿಶೇಷವಾಗಿ ಸುಧಾರಣೆಯನ್ನು ಹೊಂದಿ ನೂತನವಾದ ಸೀನರಿಗಳೊಡನೆ ಬಂದಿರುವರು. ಯೋಗ್ಯತಾ ಪಕ್ಷಪಾತಿಗಳಾದ ನಮ್ಮ ರಾಜಧಾನಿಯ ನಿವಾಸಿಗಳು ಅವರ ನಾಟಕಾವಲೋಕನದಿಂದ ಅವರಿಗೆ ಉತ್ತೇಜನವನ್ನು ಕೊಡುವವರಾಗಲೆಂದಿಚ್ಛೈಸುವೆವು. ಮೇಲ್ಕಂಡ ಸೀತಾಸ್ವಯಂವರ ಪ್ರಯೋಗವನ್ನೋಡಲು ಶ್ರೀ ಕಾ॥ ಮ॥ ಕಾಂತರಾಜ ಅರಸಿನವರು, ದರ್ಬಾರ್‌ಭಕ್ಷಿ ಮ॥ ಲಿಂಗರಾಜಅರಸಿನವರು, ಮರಹಮತ್‌ಭಕ್ಷಿ ಮ॥ ಚಿಕ್ಕಲಿಂಗ್ರಾಜೆ ಅರಸಿನವರು ಮೊದಲಾದ ಅರಸು ಕುಮಾರರು ದಯಮಾಡಿಸಿದ್ದರು. ಸಂಘದ ಮ್ಯಾನೇಜರು ಇವರುಗಳಿಗೆಲ್ಲ ಗಂಧ ಪುಷ್ಪಹಾರಗಳನ್ನೊಪ್ಪಿಸಿ ಮರ್ಯಾದಿಸಿದರು.

ಚಿಕ್ಕಬಳ್ಳಾಪುರದಲ್ಲಿ ಕಳೆದ ಜೂನ್ ತಾ॥ ೨೯ ರ ವರೆಗೂ ಅದರ ಹಿಂದಣ ೧೫ ದಿನಗಳಿಂದಲೂ ಒಂದು ಹನಿ ಮಳೆಯಾದರೂ ಬೀಳದೆ ತೀಕ್ಷ್ಣವಾಗಿ ಬೀಸುತ್ತಿದ್ದ ಗಾಳಿಯು ಸಹ ಮಂದವಾಗಿ ಸೆಕೆಯು ಬೇಸಿಗೆಯ ಕಾಲಕ್ಕಿನ್ನ ಅಧಿಕವಾಗಿದ್ದು ಆ ಸಾಯಂಕಾಲ ಅಕಸ್ಮಾತ್ತಾಗಿ ಮೋಡವು ಕವಿತುಕೊಂಡು ರಾತ್ರಿ ೨ ಗಂಟೆಯ ಸಮಯದಲ್ಲಿ ಮಳೆಯು ಬರಲಾರಂಭವಾಗಿ ಬೆಳಿಗ್ಗೆ ೭ ಗಂಟೆಯವರೆಗೂ ಬಿಡದೆ ೫ ಅಂಗುಲ ೩೦ ಸೆಂಟು ವರೆಗೆ ಸುರಿದಿತು. ಇಂಥ ದೊಡ್ಡ ಮಳೆಯು ಅಲ್ಲಿ ಕಳೆದ ೨೫ ವರ್ಷಗಳಲ್ಲೂ ಆಗಿರಲಿಲ್ಲವೆಂದು ಜನರು ಹೇಳುತ್ತಾರೆ. ಆ ಊರಿನ ಹೊರಗೆ ವಾಯುವ್ಯ ಮೂಲೆಯಲ್ಲಿರುವ ಮುಸ್ತೂರು ಕೆರೆಯಲ್ಲಿ ಒಂದು ಬೊಟ್ಟು ನೀರೂ ಇಲ್ಲದಿದ್ದು ಬೆಳಗಿನಜಾವ ೪ ಗಂಟೆಯೊಳಗಾಗಿ ನೀರು ತುಂಬಿ ಕೋಡಿಬಿದ್ದು ಹರಿಯಲಾರಂಭಿಸಿತು. ಮತ್ತೂ ಕೆರೆಗೆ ಮಳೆಯನೀರು ವಿಶೇಷವಾಗಿ ಬರುತ್ತಿದ್ದುದರಿಂದ ಕೆರೆಯು ಹಿಡಿಯಲಾರದೆ ಕೆರೆಯೇರಿ ಮೇಲಿಂದ ೩ ಅಡಿ ಎತ್ತರದವರೆಗೆ ದುಮುಕುತ್ತಿತ್ತು. ಇದರಿಂದ ಆ ಕೆರೆಯೇರಿಯು ಕೆಳಗಿಳಿದು ನಾ ಜಪ್ಪನವರ ಸತ್ರಕ್ಕೆ ನೀರು ವಿಪರೀತವಾಗಿ ನುಗ್ಗಿ ಕೆರೆಯಂತೆ ನಿಂತಿದ್ದಿತು. ಪ್ಲೇಗು ಹಾವಳಿಯಿಂದ ಊರನ್ನು ಬಿಟ್ಟು ಸತ್ರದೊಳಗೆ ವಾಸಮಾಡುತ್ತಿದ್ದ ಮುನಸೀಫರೂ, ಹೆಡ್ ಮಾಸ್ಟರೂ ತಾವು ಮಲಗಿದ್ದ ಹಾಸಿಗೆಗಳು ನೆನೆದುಹೋಗಿ ತಣ್ಣಗಾದುದರ ಮೇಲೆಚ್ಚತ್ತು ತಮ್ಮಮಕ್ಕಳು ಮತ್ತೂ ಹೆಂಗುಸರುಗಳನ್ನು ಎಬ್ಬಿಸಿ ಸತ್ರದಿಂದ ಹೊರಗಿನ ಪೈಳಿಗೆ ಕರೆತಂದು ನಿಂತುಕೊಂಡರು. ಬೆಳಗಾದಮೇಲೆ ಅಲ್ಲಿ ನಿಂತಿದ್ದ ನೀರು ಹರಿದುಹೋದುದನ್ನೋಡಿ ಸತ್ರದೊಳಕ್ಕೆ ಹೋಗಿ ತಮ್ಮ ಸಾಮಾನುಗಳನ್ನು ತೆಗೆದುಕೊಂಡು ಬೇರೆಕಡೆ ವಾಸಿಸಲು ಹೋದರು. ದೈವಾಧೀನದಿಂದ ಯಾರಿಗೂ ಯಾವ ನಷ್ಟವೂ ಸಂಭವಿಸಲಿಲ್ಲವು.

ರಾಜಧಾನಿಗೆ ಬಂದಿರುವ ರಷ್ಯಾದೇಶದ ಸ್ಯಾಂಡೋಯವರು ಕಳೆದ ಗುರುವಾರ ರಾತ್ರಿ ಟವರ್‌ಹಾಲಿನಲ್ಲಿ ೧೫೦ ರಿಂದ ೨೦೦೦ ಪೌಂಡು ವರೆಗೆ ತೂಕವಿರುವ ಗುಂಡುಗಳನೆತ್ತಿ ತಿರುಗಿಸುವುದು, ಇಬ್ಬರು ಮನುಷ್ಯರನ್ನು ಕಿರುಬೆರಳಿನಿಂದೆತ್ತುವುದು, ಕಬ್ಬಿಣದ ಸರಪಣಿಯನ್ನೆಳೆದು ಕೀಳುವುದು, ಕಬ್ಬಿಣದ ಸಲಾಕಿಯ ತುಂಡನ್ನು ತಮ್ಮ ತೋಳಿನ ಮೇಲೆ ಹೊಡೆದು ಬೊಗ್ಗಿಸುವುದು, ಕಬ್ಬಿಣದ ಪಟ್ಟಿಯನ್ನು ಬೊಗ್ಗಿಸಿ ತೋಳಿಗೆ ಸುತ್ತುವುದು ಮೊದಲಾದ ಅದ್ಭುತ ಅಂಗಸಾಧನೆಗಳನ್ನು ಮಾಡಿ ತಮ್ಮ ಅಪಾರವಾದ ಶಕ್ತಿಯನ್ನು ಪ್ರದರ್ಶಿಸಿದರು. ಇವರು ನೆರದಿದ್ದ ಪ್ರೇಕ್ಷಕರಲ್ಲಾರಾದರು ತಮ್ಮ ಕೂಡ ಕುಸ್ತಿಯನ್ನು ಮಾಡಲಿಷ್ಟವಿರುವವರು ಜತೆ ಕಟ್ಟಿಸಿಕೊಳ್ಳಬಹುದೆಂದೂ, ಕುಸ್ತಿಯಲ್ಲಿ ಗೆದ್ದವರಿಗೆ ಕಂಟ್ರಾಕ್ಟ್ ಮೊಬಲಗಿನಲ್ಲಿ ೨ ಭಾಗವೂ, ಸೋತವರಿಗೆ ೧ ಭಾಗವೂ ಕೊಡಲ್ಪಡುವುದೆಂದೂ ಹೇಳಿದುದರ ಮೇಲೆ ಕೆಲದಿನಗಳ ಕೆಳಗೆ ಶ್ರೀನಿವಾಸಣ್ಣನ ಗರುಡಿ ತಿಮ್ಮಯ್ಯನ ಮೇಲೆ ಕುಸ್ತಿಮಾಡಿ ಗೆದ್ದು ಬಹುಮಾನವನ್ನು ಹೊಂದಿದ ಮತ್ತೂ ಬೆಂಗಳೂರ ಮಿಠಾಯಂಗಡಿ ಮುಹಂಭಾತರ ಬಂಧುವಾದ ಕಮರಕ್ ಎಂಬ ಪೈಲ್ವಾನನು ಮುಂದೆಬಂದು ಸ್ಯಾಂಡೋಯವರ ಕೂಡ ಕುಸ್ತಿಮಾಡಲೊಪ್ಪಿ ಜತೆಯನ್ನು ಕಟ್ಟಿಸಿಕೊಂಡನು, ಈ ಕುಸ್ತಿಯಾಗುವ ದಿವಸವಿನ್ನೂ ಗೊತ್ತಾಗಿಲ್ಲವು. ಕಮರಕ್ ಪೈಲ್ವಾನಿನ ಶಕ್ತಿಯನ್ನೂ, ಸ್ಯಾಂಡೋಯವರ ಶಕ್ತಿಯನ್ನೂ ಹೋಲಿಸಿ ನೋಡಿದರೆ ಅಜಕ್ಕೂ, ಗಜಕ್ಕೂ ಹೋಲಿಸಿದಂತಿರುವುದರಿಂದ, ಕಮರಕ್ ಪೈಲ್ವಾನನು ತನ್ನ ಯುಕ್ತಿಯಿಂದ ಸ್ಯಾಂಡೋಯವರನ್ನು ಗೆಲ್ಲಬೇಕಾಗಿದೆಯೇ ಹೊರತು ಮತ್ತಾವ ವಿಧದಿಂದಲೂ ಸಾಧ್ಯವಿಲ್ಲವು. ಈ ಕುಸ್ತಿಯನ್ನೋಡಲು ಬಹು ಜನರು ಕುತೂಹಲರಾಗಿರುತ್ತಾರೆ. ಮತ್ತೂ ದ್ರವ್ಯೋತ್ಪನ್ನವೂ ಹೆಚ್ಚಾಗಿ ಆಗಬಹುದೆಂದು ತೋರುತ್ತದೆ.

ಕಾನಕಾನಹಳ್ಳಿಯಲ್ಲಿ ಕಳೆದ ವರ್ಷ ಪ್ಲೇಗು ರೋಗದುದ್ದಿಕ್ಕೆ ಊರನ್ನು ಬಿಟ್ಟು ಹೊರಗೆ ಹೋಗಿದ್ದ ಜನರು ಊರನ್ನು ಸೇರಿ ಇನ್ನೂ ನೆಟ್ಟಗೆ ೨-೩ ತಿಂಗಳಾಗಿಲ್ಲವು. ಅಷ್ಟರಲ್ಲಿ ರೋಗವು ಪುನಃ ಪೇಟೆಯಲ್ಲಿ ಆರಂಭವಾಗಿ ಆಗಲೇ ೨೫ ಮರಣಗಳಾದುವು. ಮತ್ತೂ ಅಲ್ಲಲ್ಲಿ ಇಲಿಗಳು ಸಾಯುತ್ತಿವೆ. ಇದರಿಂದ ಜನರು ಭೀತರಾಗಿರುವರಲ್ಲದೆ ಊರಹೊರಗೆ ಹೋಗಿ ಗುಡಿಸಲುಗಳನ್ನು ಹಾಕಿಕೊಂಡು ವಾಸಿಸಲು ಈಗ ಹೊಲಗಳಲ್ಲಿ ಬಿತ್ತನೆಯು ಕಾಲವಾದುದರಿಂದ ಯತ್ನವಿಲ್ಲವೆಂದು ಬಹು ಪೇಚಾಡುತ್ತಿರುವರು. ಊರಿನ ಯಾವ ಭಾಗದಲ್ಲಿ ನೋಡಿದರೂ ಕಶ್ಮಲವು ಹೆಚ್ಚಾಗಿರುವುದು. ಇದರಿಂದ ಅನಾರೋಗ್ಯಕ್ಕೆ ಅವಕಾಶವಾಗಿದೆ. ಈ ಊರಿನಲ್ಲಿ ಮ್ಯುನಿಸಿಪಾಲಿಟಿಯು ಸ್ಥಾಪಿತವಾದಾರಭ್ಯ ಬೀದಿಗಳಲ್ಲಿ ದೀಪಸ್ತಂಭಗಳು ನೆಡಲ್ಪಟ್ಟು ಕತ್ತಲೆಯ ಕಾಲದಲ್ಲಿ ದೀಪಗಳು ಹೊತ್ತಿಸಲ್ಪಡುತ್ತಿದ್ದುವು. ಆದರೆ ಈಗ ಕೆಲ ವರ್ಷಗಳಿಂದ ಒಂದು ದೀಪವಾದರೂ ಹೊತ್ತಿಸಲ್ಪಡುವುದಿಲ್ಲವಾದುದರಿಂದ ಬೀದಿಗಳಲ್ಲಿ ತತ್ರಾಪಿ ಪೇಟೆಯಿಂದ ಕೋಟೆಗೆ ಹೋಗುವ ಮಾರ್ಗದಲ್ಲಿ ತಿರುಗಾಡುವ ಜನರಿಗೆ ಅತ್ಯಂತ ತೊಂದರೆಯಾಗಿರುತ್ತದೆ. ಪೇಟೆಗೂ, ಕೋಟೆಗೂ ಮಧ್ಯೆ ಒಂದು ಫರ್ಲಾಂಗು ದೂರ ಮನೆಗಳೂ, ಅಂಗಡಿಗಳೂ ಇಲ್ಲದೆ ಮತ್ತೂ ಸಾಲುಮರಗಳ ನೆರಳಿನಿಂದ ನಕ್ಷತ್ರಗಳ ಬೆಳಕುಸಹ ಬೀಳಲವಕಾಶವಿಲ್ಲದೆ ಕಗ್ಗತ್ತಲೆಯಾಗಿರುವುದರಿಂದ ಹೆಂಗುಸರೂ, ಮಕ್ಕಳೂ ಸಾಯಂಕಾಲವಾದಮೇಲೆ ಆ ಮಾರ್ಗವಾಗಿ ತಿರುಗಾಡುವುದಕ್ಕಿಲ್ಲವಾಗಿದೆ. ಈ ರೀತಿ ದೀಪಗಳನ್ನು ಹೊತ್ತಿಸದಿರಲು ಮ್ಯುನಿಸಿಪಾಲಿಟಿಯಲ್ಲಿ ಹಣವು ಸಾಲದಿರುವುದೇ ಕಾರಣವೆಂದು ಅಧಿಕಾರಿಗಳು ಹೇಳುತ್ತಾರಂತೆ. ಇದು ನಿಶ್ಚಯವಾಗಿದ್ದಲ್ಲಿ ಶೋಚನೀಯವೇ ಸರಿ. ಜನರ ಸೌಖ್ಯಕ್ಕಾಗೇರ್ಪಟ್ಟಿರುವ ಮ್ಯುನಿಸಿಪಾಲಿಟಿಯವರು ಅತ್ಯವಶ್ಯಕವಾದ ವಿಷಯಗಳಿಗಾಗಿ ವ್ಯಯಮಾಡಬೇಕಾಗಿರುವ ಮೊಬಲಗನ್ನೊದಗಿಸಿಕೊಳ್ಳುವ ಉಪಾಯವನ್ನು ಕಂಡುಹಿಡಿಯಲಾರದಿರುವುದು ಸಖೇದಾಶ್ಚರ್ಯವಾಗಿರುತ್ತದೆ.

ವರ್ತಮಾನ ಸಂಗ್ರಹ.

ಅಲಿಘರದಲ್ಲಿ ಮಹಮ್ಮದೀಯ ಸರ್ವವಿದ್ಯಾನಿಲಯಸ್ಥಾಪನೆಗಾಗಿ ವಾಗ್ದಾನವಾಗಿರುವ [illegible] ರೂ.ಗಳಲ್ಲಿ ಈವರೆಗೆ [illegible] ರೂ. ಬಂದಿರುತ್ತವೆ.

ಸರ್ ಜಾರ್ಜ್ ಎತ್ಜ್ ರವರು ಮತ್ತೂ ಸೈಯದ್ ಅಮೀರ್ ಅಲಿಯವರು ಪ್ರಿವಿ ಕೌನ್ಸಿಲಿನ ಮೆಂಬರುಗಳಾಗಿ ಪುನಃ ನೇಮಿಸಲ್ಪಟ್ಟಿರುತ್ತಾರೆ. ಇವರಿಗೆ ೬೦೦೦ ರೂ. ಸಂಬಳವು ದೊರೆಯುವುದು.

ಕಲಕತ್ತಾದ ಪೊಲೀಸು ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಶಾಖೆಯ ಹೆಡ್ ಕಾನಸ್ಟೇಬಲಾಗಿದ್ದು ಕಳೆದ ಫೆಬ್ರುವರಿ ತಾ॥ ೨೧ ರಲ್ಲಿ ಕೊಲೆಮಾಡಲ್ಪಟ್ಟ ಶ್ರೀಶಚಂದ್ರ ಚಕ್ರವರ್ತಿಯ ತಾಯಿಗೆ ೬೦ ರೂ. ನ ವರ್ಷಾಸನವು ಸಲ್ಲತಕ್ಕದೆಂದು ಸರಕಾರದಪ್ಪಣೆಯಾಗಿರುತ್ತದೆ.

ಲಂಡನ್ನಿಗೆ ಕಿರೀಟಧಾರಣ ಮಹೋತ್ಸವಕ್ಕಾಗಿ ಭರತಖಂಡದಿಂದ ಹೋಗಿರುವ ರಾಜರುಗಳಿಗೆ ಪಾರ್ಲಿಮೆಂಟ್ ಸಭಾಸ್ತರರಾದ ಮಿ॥ ಮಾಂಟಗುರವರು ಸಭಾಮಂದಿರದಲ್ಲಿ ಔತಣವನ್ನು ಮಾಡಿಸಿದರು. ಈ ಔತಣಕ್ಕೆ ಇಂಗ್ಲೆಂಡಿನ ಮಂತ್ರಿವರ್ಯರಾದ ಮಿ॥ ಆಸ್ಕ್ವಿತ್ ಮಿ॥ ಬಾಲ್ಫರ್, ಸರ್ ಎಡ್ವರ್ಡ್ ಗ್ರೇ ಮೊದಲಾದವರು ಬಂದಿದ್ದರು.

ಭಾರತೀಯರ್ಯಾರೂ ಟ್ರಾನ್ಸವಾಲಿಗೆ ಒಬ್ಬಳಿಗಿನ್ನ ಹೆಚ್ಚಾಗಿ ಹೆಂಡತಿಯರನ್ನು ಕರೆದುಕೊಂಡು ಬರಕೂಡದೆಂದು ಸೂಪ್ರೀಂ ಕೋರ್ಟಿನ ಒಬ್ಬ ಜಡ್ಜಿಯು ತೀರ್ಮಾನಿಸಿರುತ್ತಾರೆ. ಇದರಮೇಲೆ ಅಲ್ಲಿಯ ಭಾರತೀಯರೆಲ್ಲರೂ ಭರತಖಂಡದಲ್ಲಿ ಬಹುಪತ್ನಿತ್ವವು ಸರ್ವಸಮ್ಮತವಾಗಿರುವುದರಿಂದ ಜಡ್ಜಿಯವರ ತೀರ್ಮಾನವನ್ನು ಅನುಷ್ಠಾನಕ್ಕೆ ತಾರದೆ ಹಿಂದಿನಂತೆ ನಡಿಸಿಕೊಡಬೇಕೆಂದು ಮುಷ್ಕರವಿಡಿದಿರುತ್ತಾರೆ.

ಪ್ಲೇಗಿನ ಮರಣಸಂಖ್ಯೆಯು ಶೀಘ್ರವಾಗೇರುತ್ತಿದೆ. ಕಳೆದ ತಾ॥ ೧೭ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೨೯೬೮ ಜನರಿಗೆ ಪ್ಲೇಗುತಗಲಿ ೨೪೦೪ ಜನರು ಸತ್ತರು. ಬೊಂಬಾಯಾಧಿಪತ್ಯದಲ್ಲಿ ೪೩೯; ಮದ್ರಾಸಾಧಿಪತ್ಯದಲ್ಲಿ ೧೦೦; ಬಂಗಾಳದಲ್ಲಿ ೬೦; ಸಂಯುಕ್ತಪ್ರಾಂತಗಳಲ್ಲಿ ೬; ಪಂಜಾಬಿನಲ್ಲಿ ೮೪೬; ಮತ್ತೂ ಬರ್ಮಾದಲ್ಲಿ ೧೩೫; ಈ ಪ್ರಕಾರ ಮರಣವಾಗಿರುತ್ತದೆ. ದಿಲ್ಲಿಯ ಪಟ್ಟಣದಲ್ಲೂ, ಡಿಸ್ಟ್ರಿಕ್ಟಿನಲ್ಲೂ ಪ್ಲೇಗು ಸಂಪೂರ್ಣವಾಗಿ ಅಡಗಿಹೋಗಿದೆ.

ಕಳೆದ ತಾ॥ ೨ ರ ರಾತ್ರಿ ಕಲಕತ್ತಾದಲ್ಲಿ ವಿವಾಹ ಸಂಬಂಧವಾದ ಉತ್ಸವವು ಬೀದಿಯಲ್ಲಿ ಹೋಗುತ್ತಿರುವಾಗ್ಗೆ ಕೆಲ ತುಂಟ ಮಹಮ್ಮದೀಯರು ಆ ಉತ್ಸವವನ್ನು ಮಾಡುತ್ತಿದ್ದವರ ಮೇಲೆ ಬಿದ್ದು ಚೆನ್ನಾಗಿ ಪ್ರಹರಿಸಿದರು. ಈ ಕಲಹದಲ್ಲಿ ಗಾಯವಡೆದ ೮ ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರು. ಮತ್ತೂ ಆ ತುಂಟರಲ್ಲಿ ೬ ಜನರು ಸೆರೆಹಿಡಿಯಲ್ಪಟ್ಟಿರುವರು ವಧುವಿನ ತಂದೆಯು ಆ ತುಂಟ ಜನರ ಮುಖಂಡನಿಗೆ ದಕ್ಷಿಣೆಯನ್ನು ಕೊಡಲಿಲ್ಲವಾಗಿ ಆ ತುಂಟರು ಅತ್ಯಾಚಾರವನ್ನು ನಡೆಸಿದರೆಂದು ಗೊತ್ತಾಗಿರುವುದು.

ಕಳೆದ ತಾ॥ ೪ ರಲ್ಲಿ ತಾಲಿಗಂಜ್ ಠಾಣಕ್ಕೆ ೧ ಮೈಲಿ ದೂರದಲ್ಲಿರುವ ಚೌಬರ್ಗ ಎಂಬಲ್ಲಿ ೧೮-೧೯ ಜನ ತಲೆಬಡಿಕರು ವಿಷ್ಣುಚರಣ ಮಂಡಲ ಎಂಬ ಶ್ರೀಮಂತನ ಮನೆಯ ಬಾಗಿಲನ್ನು ಬಲವಂತದಿಂದ ತೆಗೆದು ಸ್ತ್ರೀಯರಿರುವ ಕೊಠಡಿಗೆ ನುಗ್ಗುವಾಗ್ಗೆ ಆ ಮನೆಯ ಗಂಡುಸರು ಅಡ್ಡಿಮಾಡಲು ಅವರುಗಳನ್ನು ಚೆನ್ನಾಗಿ ಪ್ರಹರಿಸಿ ೩೫೦೦ ರೂ. ಬೆಲೆಯ ವರೆಗಿನ ಆಭರಣವನ್ನೂ ನಗದು ಹಣವನ್ನೂ ಅಪಹರಿಸಿಕೊಂಡು ಪಲಾಯನರಾದರು. ಈಗ ಪೊಲೀಸರು ಕಳ್ಳರ ಗುರ್ತನ್ನು ಮನೆಯವರಿಂದ ತಿಳಿದು ಅವರನ್ನು ಹುಡುಕುವುದರಲ್ಲಿದ್ದಾರೆ.

ಅಮೇರಿಕಾಕ್ಕೆ ಸೇರಿದ ನ್ಯೂಯಾರ್ಕಿನಲ್ಲಿ ೮ ಜನರು ಪಿಸ್ತೋಲುಗಳನ್ನು ಹಿಡಿದುಕೊಂಡು ರಾಯಲ್ ಹೋಟೇಲಿಗೆ ಹೋಗಿ ಕೆಲರು ಅಲ್ಲಿಯ ಆಳುಗಳ ಮೇಲೆ ಕಾವಲಿದ್ದುಕೊಂಡು ಉಳಿದವರು ಬಹು ದಿಟ್ಟತನದಿಂದ ಪೆಟ್ಟಿಗೆ ಬಾಗಿಲನ್ನು ತೆರೆದು ಒಳಗಿದ್ದ ಹಣವನ್ನು ತೆಗೆದುಕೊಂಡರು. ಅಲ್ಲಿದ್ದ ಕೆಲಸಗಾರರು ಆ ಕಳ್ಳರ ದಿಟ್ಟತನವನ್ನು ನೋಡಿ ವಿಸ್ಮಿತರಾಗಿ ಸ್ವಲ್ಪಕಾಲ ಮೌನವಾಗಿದ್ದು ಅನಂತರ ಗದ್ದಲವನ್ನು ಮಾಡಿದರು. ಅಷ್ಟರಲ್ಲಿ ಇತರರು ಬಂದು ಕಳ್ಳರನ್ನು ಹಿಡಿಯಯತ್ನಿಸಿದಾಗ್ಗೆ ಅವರು ಪಿಸ್ತೋಲನ್ನು ಹಾರಿಸಿ, ಅನೇಕರಿಗೆ ಗಾಯವನ್ನು ಮಾಡಿ ತಲೆತಪ್ಪಿಸಿಕೊಂಡು ಹೋದರು.

ಮದ್ರಾಸುಪಟ್ಟಣದ ಉತ್ತರ ದಿಗ್ಭಾಗದಲ್ಲಿ ೧ ಮೈಲಿ ಆಚೆಯಿರುವ ಕಾಲಾದಿ ಪೇಟೆಯಲ್ಲಿ ೩ ಜನ ಕಳ್ಳರು ತಿರುವೆಂಕಟಾಚಾರ್ಯರವರ ಮನೆಗೆ ಕಳೆದ ತಾ॥ ೧ ರಲ್ಲಿ ನುಗ್ಗಿ ಒಳಗಿದ್ದ ೩ ಜನ ಹೆಂಗುಸರ ಕೈಬಳೆಯನ್ನು ಬಲವಂತದಿಂದ ಕಿತ್ತುಕೊಳ್ಳಲು ಆ ಹೆಂಗುಸರು ಕೂಗಿಕೊಂಡರು ಈ ಶಬ್ದವನ್ನು ಕೇಳಿ ನೆರೆಯವರು ಸಹಾಯಕ್ಕೆ ಬರುವಷ್ಟರಲ್ಲಿ ಆ ಕಳ್ಳರು ೩೦೦ ರೂ. ಬೆಲೆ ಬಾಳುವ ಅಭರಣಗಳನ್ನಪಹರಿಸಿಕೊಂಡು ಓಡಿದರು. ಅಷ್ಟರಲ್ಲಿ ಪೊಲೀಸರು ಈ ವರ್ತಮಾನವನ್ನು ಕೇಳಿ ಬಂದು ೧೦ ವರ್ಷದ ಹುಡುಗಿಯು ಹೇಳಿದ ಗುರ್ತಿನ ಮೇಲೆ ೪ ಜನರನ್ನು ಹಿಡಿದು ಸೆರೆಯಲ್ಲಿಟ್ಟಿರುವರು.

ಕೆಲ ದಿನಗಳ ಹಿಂದೆ ದುರ್ಗಾಪುರದ ನಾಮೂಮಿಯು ಎಂಬುವನು ಕೊಡಬೇಕಾಗಿದ್ದ ಹಣಕ್ಕಾಗಿ ಹುಸೇನಲಿ ಎಂಬ ಧನವಂತನು ಅವನಮೇಲೆ ವಿವಾದವನ್ನು ಮಾಡಿ ಡಿಕ್ರಿಯನ್ನು ಪಡೆದು ನಾಮೂಮಿಯನ ಆಸ್ತಿಯನ್ನು ಜಪ್ತಿಮಾಡಿಸಲು ಕೋರ್ಟಿನ ಅಮೀನನ ಕೂಡ ಅವನ ಮನೆಗೆ ಹೋಗಿರುವಾಗ್ಗೆ, ನಾಮೂಮಿಯನು ಅವರನ್ನೋಡಿ ರೋಷಗೊಂಡು ತನ್ನ ೬ ವರ್ಷ ವಯಸ್ಸಿನ ಮಗಳನ್ನು ಕೊಂದು ತನ್ನ ಮೇಲೆ ಡಿಕ್ರಿಯನ್ನು ಪಡೆದಿದ್ದ ಹುಸೇನಲಿಯು ತನ್ನ ಮಗಳನ್ನು ಕೊಂದನೆಂದು ಪೊಲೀಸಿಗೆ ವರದಿಯನ್ನು ಮಾಡಿದನು. ಪೊಲೀಸರು ವಿಚಾರಣೆಯನ್ನು ಮಾಡುವಾಗ್ಗೆ ತಂದೆಯೇ ಕೊಲೆಯನ್ನು ಮಾಡಿದನೆಂಬುದು ಗೊತ್ತಾಗಿ ಅವನನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡಿದ್ದರು. ಈಗ ಕೊಲೆಗಡಿಕನಾದ ತಂದೆಗೆ ಮರಣದಂಡನೆಯು ವಿಧಿಸಲ್ಪಟ್ಟಿತು.

ಪ್ಯಾರಿಸ್ ಪಟ್ಟಣದಲ್ಲಿ ಡಾಕ್ಟರ್ ನ್ಯೂ ಬ್ರಾನರ್‌ರವರು ಪಾರಿವಾಳ ಪಕ್ಷಿಗಳ ಮೂಲಕ ಭಾವಚಿತ್ರವನ್ನು ತೆಗೆಯಲು ವಿಚಿತ್ರವಾದ ಒಂದು ಸಣ್ಣ ಯಂತ್ರವನ್ನು ಕಂಡುಹಿಡಿದಿರುತ್ತಾರೆ. ಈ ಯಂತ್ರದ ಪೆಟ್ಟಿಗೆಯನ್ನು ಪಾರಿವಾಳದ ಎದೆಗೆ ಕಟ್ಟಿದರೆ, ಅದು ಹಾರುವಾಗ್ಗೆ ಆ ಪೆಟ್ಟಿಗೆಯ ಬಾಗಿಲು ಅದಕ್ಕೆ ಕಟ್ಟಿರುವ ಒಂದು ರಬ್ಬರ್ ಚೆಂಡಿನ ಸಹಾಯದಿಂದ ತಾನಾಗಿ ತೆಗೆದು ಇದಿರಿಗಿರುವ ಪದಾರ್ಥಗಳ ಛಾಯೆಯು ಬಿದ್ದು ಆ ಕೂಡಲೆ ತಾನಾಗಿ ಮುಚ್ಚಿಕೊಳ್ಳುವುದು. ಈ ಛಾಯಾಗ್ರಾಹಿ ಯಂತ್ರವನ್ನು ಇನ್ನುಮೇಲೆ ಸೇನೆಯಲ್ಲುಪಯೋಗಿಸಬೇಕೆಂಬ ಆಲೋಚನೆಯು ನಡಿದಿರುವುದು. ಇನ್ನುಮೇಲೆ ಮನುಷ್ಯನ ಹಸ್ತದಿಂದಾಗಬೇಕಾದ ಕಾರ್ಯಗಳೆಲ್ಲವೂ ಯಂತ್ರಗಳ ಮೂಲಕವಾಗಿ ನಡಿದು ಮನುಷ್ಯನ ಅವಯವಗಳಿಗೆ ಕೆಲಸವೇ ಇಲ್ಲದಂತಾಗಬಹುದು!

ಭರತಖಂಡದ ಪಶ್ಚಿಮತೀರದಲ್ಲಿ ಮಳೆ ಬರಲಾರಂಭವಾಗಿ ಬೊಂಬಾಯಿನ ವರೆಗೆ ಒಳ್ಳೆಮಳೆಯಾಗಿರುತ್ತದೆ. ಇತ್ತಲಾಗಿ ಪೂರ್ವತೀರದಲ್ಲಿ ಈಶಾನ್ಯ ಮತ್ತೂ ಬರ್ಮಾ ವರೆಗೂ ಸಾಮಾನ್ಯವಾಗಿ ಚನ್ನಾಗಿ ಆಗಿರುತ್ತದೆ. ವಿಕ್ಟೋರಿಯಾ ಪಾಯಿಂಟ್, ಮೆರ್ಗಾಯಿ, ಮೌಲ್ಮೀನ್ ಮತ್ತೂ ಡೈಮೆಂಡ್ ದ್ವೀಪಗಳಲ್ಲಿ ೨ ಅಂಗುಲ; ಲಾಷಾಯಿ ಮತ್ತೂ ಚಿರಪುಂಜಿಯಲ್ಲಿ ೪ ಅಂಗುಲ; ಸಿಲ್ಚಾರದಲ್ಲಿ ೩ ಅಂಗುಲ; ದಿಬ್ರುಘರ್ ಮತ್ತೂ ಬಲಾಸೂರಿನಲ್ಲಿ ೨ ಅಂಗುಲ; ಅಮ್ರಾವತಿ ಮತ್ತೂ ರಾಯಿಪುರದಲ್ಲಿ ೧ ಅಂಗುಲ; ಜಗದಲಪುರದಲ್ಲಿ ೨ ಅಂಗುಲ; ಮಾಲೆಗಾನದಲ್ಲಿ ೮ ಅಂಗುಲ; ಬೊಂಬಾಯಿನಲ್ಲಿ ೪ ಅಂಗುಲ; ರತ್ನಗಿರಿ, ಮಾರ್ಮಗೋವಾ ಮತ್ತೂ ಮಂಗಳೂರಲ್ಲಿ ೩ ಅಂಗುಲ; ಗೋವಾದಲ್ಲಿ ೫ ಅಂಗುಲ; ಕಾರ್ವಾರ ಮತ್ತೂ ಮಛಲೀಪಟ್ಟಣದಲ್ಲಿ ೨ ಅಂಗುಲ ಈ ಪ್ರಕಾರವಾಗಿ ಮಳೆಯಾಗಿರುತ್ತದೆ. ಆದರೆ ಸಂಯುಕ್ತಪ್ರಾಂತಗಳಲ್ಲೂ, ರಜಪುಟಾನ ಮತ್ತೂ ಪಂಜಾಬಿನ ಪೂರ್ವದಿಕ್ಕಿನಲ್ಲೂ ಶಕೆಯು ಹೆಚ್ಚಾಗಿರುತ್ತದೆ. ಸಿಂದಿನಲ್ಲಿ ಮಳೆಯ ನಿರೀಕ್ಷಣೆಯು ವಿಶೇಷವಾಗಿದೆ. ಅಲಹಾಬಾದಿನಲ್ಲಿ ಬಿಸಿಲಿನ ತಾಪವು ಮಿತಿಮೀರಿ ಅನೇಕ ಜನರು ಸತ್ತರು ಮತ್ತೂ ಅಸ್ವಸ್ಥರಾಗಿರುವರು.

ಕಲಕತ್ತಾದಲ್ಲಿ ಹಾಡುಗಾರಿಕೆಯಲ್ಲಿ ಪ್ರಸಿದ್ಧಳಾಗಿದ್ದು ಸತ್ತುಹೋದ ಮಾಲ್ಕಾಜಾನಿನ ಆಸ್ತಿಯು ಆಕೆಯ ಮಗನಾದ ತನಗೆ ಬರಬೇಕೆಂದು ಷೇಕ್‌ಭಾಗಲು ಎಂಬುವನು, ಮಾಲ್ಕಾಜಾನಿನ ಮಗಳಾದ ಮತ್ತೂ ಕಲಕತ್ತಾದಲ್ಲಿ ಸಂಗೀತದಲ್ಲಿ ಬಹು ಪ್ರಖ್ಯಾತಿಯನ್ನು ಹೊಂದಿರುವ ಗೊಹರ್‌ಜಾನಳಮೇಲೆ ವಿವಾದವನ್ನು ಹೂಡಿರುವನು. "ಸಂಯುಕ್ತ ಪ್ರಾಂತಗಳಿಗೆ ಸೇರಿದ ಅಜಂಗರ್ ಡಿ॥ ನಲ್ಲಿ ನೀಲಿಯ ತೋಟಗಾರನಾಗಿದ್ದ ಹಾರ್ಡಿ ಎಂಬ ಆಂಗ್ಲೇಯನು ಬಹು ಸುಂದರಿಯಾದ ರುಕ್ಮಿಣಿಯೆಂಬ ಯುವತಿಯನ್ನು ಮೋಹಿಸಿ ಇಟ್ಟುಕೊಂಡನು. ಇವರಿಗೆ ಬೆಕ್ಕಿ ಮತ್ತೂ ಬೆಲ್ಲಾ ಎಂಬ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು. ಇವರಲ್ಲಿ ಬೆಕ್ಕಿ ಎಂಬುವಳು ಸ್ವಲ್ಪ ಕಾಲದ ಮೇಲೆ ಮಾಲ್ಕಾಜಾನ್ ಎಂದು ಕರೆಯಲ್ಪಟ್ಟು ಮಹಮ್ಮದೀಯ ಮತವನ್ನವಲಂಬಿಸಿ ಒಬ್ಬ ಮಹಮ್ಮದೀಯನನ್ನು ಮದುವೆಯಾದಳು. ಈ ಮಹಮ್ಮದೀಯನಿಗೆ ಮಾಲ್ಕಾಜಾನಿನ ಹೊಟ್ಟೆಯಲ್ಲಿ ನಾನು ಹುಟ್ಟಿದೆನಾದುದರಿಂದ ನನಗೆ ಅವಳಾಸ್ತಿಯು ಸೇರಬೇಕು." ಎಂದು ವಾದಿಯೂ, "ಮಾಲ್ಕಾಜಾನಳು ಇಂಗ್ಲೀಯಸ್ತ್ರೀಯಳಾಗಿದ್ದು, ರಾಬರ್ಟ್ ವಿಲಿಯಂ ಯೋ ಅರ್ಡ್ ಎಂಬ ಆಂಗ್ಲೇಯನನ್ನು ವಿವಾಹಮಾಡಿಕೊಂಡಳು. ಇವರಿಬ್ಬರಿಗೆ ಹುಟ್ಟಿದ ಗೊಹರ್ ಜಾನ್ ಎಂಬ ನಾನು ೧೮೭೩ ರಲ್ಲಿ ಅಲಹಾಬಾದಿನ ಮೆಥೋಡಿಸ್ಟ್ ದೇವಾಲಯದಲ್ಲಿ ನನಗೆ ಜ್ಞಾನಸ್ನಾನವಾಗಿರುವುದು. ನಾನು ಹುಟ್ಟಿದ ಕೊಂಚ ಕಾಲದಮೇಲೆ ನನ್ನ ತಂದೆಯಾದ ಯೋ ಅರ್ಡನು ನನ್ನ ತಾಯಿಯಾದ ಮಾಲ್ಕಾಜಾನಿನ ವಿವಾಹಸಂಬಂಧವನ್ನು ಕೋರ್ಟಿನ ಮೂಲಕ ನಿವೃತ್ತಿಮಾಡಿಕೊಂಡನು. ಆದರೆ ನಾನು ನನ್ನ ತಾಯಿಯ ವಶಕ್ಕೆ ಕೊಡಲ್ಪಟ್ಟುದರಿಂದ ೧೮೮೩ ರಲ್ಲಿ ನನ್ನನ್ನು ನನ್ನ ತಾಯಿಯು ಕಲಕತ್ತಾಕ್ಕೆ ಕರೆದುಕೊಂಡು ಬಂದು ನೆಲಸಿದಳು. ವಾದಿಯು ನಮ್ಮ ಮನೆಯಲ್ಲಿ ಸೇವಕನಾಗಿದ್ದುದರಿಂದ ನಮ್ಮ ತಾಯಿಯಾಸ್ತಿಯು ಅವನಿಗೆ ಸಲ್ಲತಕ್ಕದ್ದಲ್ಲವು." ಎಂದು ಪ್ರತಿವಾದಿಯೂ ವಾದಿಸುತ್ತಿರುವಳು.

ಮೈಸೂರ್ ಸ್ಟ್ಯಾರ್.

೧೯೧೧ನೇ ಇಸವಿ ಜುಲೈ ತಾ॥ ೧೦ನೇ ಸೋಮವಾರ

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘವು.

ನಮ್ಮ ಕನ್ನಡವು ಮರಾಠಿ, ತೆಲಗು, ತಮಿಳು ಮೊದಲಾದ ಭಾಷೆಗಳಂತೆ ಒಂದು ಸ್ವತಂತ್ರಭಾಷೆಯಾಗಿದ್ದಾಗ್ಯೂ, ಆ ಭಾಷೆಗಳಭಿಮಾನಿಗಳು ಅವುಗಳಭಿವೃದ್ಧಿಗಾಗಿ ಸಂಘಗಳನ್ನೇರ್ಪಡಿಸಿಕೊಂಡು ಧನರಾಶಿಯನ್ನು ಕೂಡಿಸಿ ತನ್ಮೂಲಕ ವಿದ್ಯಾವಂತರುಗಳಿಗೆ ಪ್ರೋತ್ಸಾಹವನ್ನು ಕೊಟ್ಟು, ಪ್ರಸ್ತುತ ಕಾಲದ ವಿದ್ಯಾಭ್ಯಾಸಕ್ಕೆ ತಕ್ಕ ಗ್ರಂಥಗಳನ್ನು ಬರಿಸಿ ಪ್ರಕಟಿಸುತ್ತಿರುವಂಥ ಪ್ರಯತ್ನಗಳಾವುವೂ ಬಹುಕಾಲದವರೆಗೆ ಕನ್ನಡಿಗರಿಂದ ಮಾಡಲ್ಪಡದಿದ್ದ ಪ್ರಯುಕ್ತ, ಇದರ ಭಾಷಾಭಿವೃದ್ಧಿಗೆ ಅವಕಾಶವಿಲ್ಲದೆ ಇದು ಸ್ವತಂತ್ರ ಭಾಷೆಯಲ್ಲವೆಂದು ಭಾವಿಸಲ್ಪಡುವ ದುಸ್ಥಿತಿಯು ಇದಕ್ಕೆ ಪ್ರಾಪ್ತವಾಗಿದ್ದಿತು. ಆದರೆ ಬೊಂಬಾಯಾಧಿಪತ್ಯದಲ್ಲಿ ಕರ್ನಾಟಕ ಪ್ರಾಂತಕ್ಕೆ ಮುಖ್ಯ ಸ್ಥಳವೂ, ಮುಖ್ಯ ಕನ್ನಡದೇಶವಾದ ನಮ್ಮ ಮೈಸೂರ ಸೀಮೆಗೆ ಸಮೀಪವೂ ಆಗಿರುವ ಧಾರವಾಡದಲ್ಲಿ ಪತಿ ರಾ॥ ಗಳಾದ ರಾಮಚಂದ್ರಹನುಮಂತ ದೇಶಪಾಂಡೆ, ಎಂ. ಎ., ಯವರು, ಬೊಂಬಾಯಿಯ ಹೈಕೋರ್ಟ್ ವಕೀಲರಾಗಿದ್ದು ಗತಿಸಿದ ಶಾಮರಾವ ವಿಠಲರವರು, ಧಾರ್ವಾಡದ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದು ಗತಿಸಿದ ವೆಂಕಟರಂಗೋಕಟ್ಟಿಯವರೇ ಮೊದಲಾದ ಕನ್ನಡಭಾಷಾಭಿಮಾನಿಗಳು ಮರಾಠಿ ಮೊದಲಾದ ಭಾಷೆಗಳಂತೆ ಕನ್ನಡ ಭಾಷೆಯುಕೂಡ ಅಭಿವೃದ್ಧಿಗೆ ತಂದು ಅದಕ್ಕೊಂಟಾಗಿರುವ ಅಪಖ್ಯಾತಿಯನ್ನು ಹೋಗಲಾಡಿಸಬೇಕೆಂಬ ಸತ್ಸಂಕಲ್ಪದಿಂದ ಈ "ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ" ವನ್ನು ೧೮೯೦ ರಲ್ಲಿ ಸ್ಥಾಪಿಸಿದರು. ಈ ಸಂಘಕ್ಕೆ ಸಂಬಂಧಿಸಿದಂತೆ ಒಂದು ಪುಸ್ತಕ ಭಂಡಾರವೂ ಸ್ಥಾಪಿಸಲ್ಪಟ್ಟಿತು. ಈ ಪುಸ್ತಕ ಭಂಡಾರಕ್ಕೆ ಬೊಂಬಾಯಿ ಮತ್ತೂ ಮೈಸೂರ ಸರ್ಕಾರದ ವಿದ್ಯಾಶಾಖೆಯವರು ತಾವು ಪ್ರಚುರಪಡಿಸುವ ಕನ್ನಡ ಗ್ರಂಥಗಳನ್ನು ಉಚಿತವಾಗಿ ಸಹಾಯಮಾಡುತ್ತಿರುವರಲ್ಲದೆ, ಬೊಂಬಾಯಿ ಸರ್ಕಾರದವರು ಈ ಸಂಘದವರ ಕನ್ನಡ ಗ್ರಂಥಗಳನ್ನು ಬರಿಸುವ ಕಾರ್ಯಕ್ಕಾಗಿ ಮೊದಲು ವರ್ಷವೊಂದಕ್ಕೆ ೩೦೦ ರೂ. ಗಳನ್ನು ಕೊಡುತ್ತಿದ್ದು ಈಗ ಅದನ್ನು ೫೦೦ ರೂ. ಗಳಿಗೆ ಹೆಚ್ಚಿಸಿರುವರು. ಮತ್ತೂ ಕನ್ನಡ ಭಾಷಾಭಿಮಾನದೇವತೆಗಳಾದ ನಮ್ಮ ಶ್ರೀಮನ್ ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರು ಈ ವಿದ್ಯಾವರ್ಧಕ ಸಂಘದವರ ಪ್ರಾರ್ಥನೆಯಂತೆ ತಮ್ಮ ಪ್ರಿಯತಂದೆಯವರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಹೆಸರಿನಿಂದ ಸಂಘದುಪಯೋಗಕ್ಕಾಗಿ ಒಂದು ಮಂದಿರವನ್ನು ಕಟ್ಟಲು ಅಪ್ಪಣೆಯನ್ನು ಕೊಡಿಸಿದುದಲ್ಲದೆ ೩೦೦೦ ರೂ. ಗಳನ್ನು ದಯಪಾಲಿಸಿದರು. ಇದಲ್ಲದೆ ಅನೇಕ [illegible] ತಮ್ಮ ಸಹಾನುಭೂತಿಯನ್ನು ತೋರಿಸಿರುವರು. ಮತ್ತೂ ಅನೇಕ ವಿದ್ಯಾಭಿಮಾನಿಗಳು ಆ ಜೀವಸಭಾಸದರಾಗಿದ್ದುಕೊಂಡು ಪ್ರತಿವರ್ಷದಲ್ಲೂ ದ್ರವ್ಯವನ್ನು ಸಹಾಯ ಮಾಡುತ್ತಿರುವರು.

ಈ ಸಂಘಕ್ಕೆ ಬೊಂಬಾಯಿ ಸರ್ಕಾರದಿಂದ ಧನಸಹಾಯವು ದೊರೆತಂದಿನಿಂದ ಈವರೆಗೆ ಈ ಸಂಘದಿಂದ ೪೯ ಗ್ರಂಥಗಳು ವಿದ್ಯಾವಂತರುಗಳಿಗೆ ಪ್ರೋತ್ಸಾಹವು ಕೊಡಲ್ಪಟ್ಟು ಬರಿಸಲ್ಪಟ್ಟಿರುತ್ತವೆ. ಇವುಗಳಲ್ಲಿ ಈವರೆಗೆ ೨೩ ಗ್ರಂಥಗಳು ಮಾತ್ರ ಪ್ರಕಟಿತವಾಗಿರುತ್ತವೆ. ಬೊಂಬಾಯಿ ಸರ್ಕಾರದವರು ಕನ್ನಡ ಪ್ರಾಥಮಿಕ ಪಾಠಶಾಲೆಗಳಲ್ಲಿ ಮರಾಠಿ ಭಾಷೆಯನ್ನು ಸೇರಿಸಬೇಕೆಂದು ಯೋಚಿಸಿದಾಗ್ಗೆ, ಈ ಸಂಘದವರು ಅನ್ಯಭಾಷೆಯನ್ನು ಕನ್ನಡಶಾಲೆಯಲ್ಲಿ ಸೇರಿಸುವುದರಿಂದ ಕನ್ನಡದೇಶಿಗೆಯು ಕಡಿಮೆಯಾಗುವುದಲ್ಲದೆ, ಭಾಷೆಯೂ ಕೆಡುವುದೆಂದು ಸರ್ಕಾರದವರಲ್ಲಿ ಬಿನ್ನವಿಸಿ ಆ ಆಲೋಚನೆಯು ಕಾರ್ಯಾನುಕೂಲವಾಗದಂತೆಮಾಡಿದರು. ಮತ್ತೂ ಈ ಸಂಘದವರ ಸೂಚನೆಯಂತೆ ಬೊಂಬಾಯಿಯ ಸರ್ವವಿದ್ಯಾಲಯದಲ್ಲಿ ಎಂ.ಎ., ಪರೀಕ್ಷೆಗೆ ಕನ್ನಡವು ಸೇರಿಸಲ್ಪಟ್ಟಿತು. ಸಂಘದಿಂದ ಕಟ್ಟಲ್ಪಡುತ್ತಲಿರುವ ಶ್ರೀಚಾಮರಾಜೇಂದ್ರಹಾಲಿನ ಮೊದಲನೆಯಂತಸ್ತು ಮುಗಿದಿರುವುದು. ಇದಕ್ಕಾಗಿ ೧೫೪೮-೧೧-೧೧ ರೂ. ವ್ಯಯವಾಗಿರುವುದೆಂದು ಕಳೆದವರ್ಷದ ವರದಿಯಿಂದ ಗೊತ್ತಾಗುತ್ತದೆ. ಈ ಮಂದಿರದ ೨ ನೆಯಂತಸ್ತನ್ನು ಕಟ್ಟಲು ಇನ್ನೂ ೧೫,೦೦೦ ರೂ. ಬೇಕಾಗಿರುವುದರಿಂದ ಸಂಘದವರು ಮೈಸೂರ ಮತ್ತೂ ಬೊಂಬಾಯಿ ಸರ್ಕಾರದವರ ಮತ್ತೂ ಇತರರ ದ್ರವ್ಯಸಹಾಯವನ್ನು ಕೇಳಿಕೊಳ್ಳಬೇಕೆಂದಿರುವರು. ಕಳೆದವರ್ಷ ಶ್ರೀಮದ್ಯುವರಾಜರ ವಿವಾಹವು ನಡೆದಾಗ್ಗೆ ಈ ಸಂಘದವರು ಆನರಬಲ್ ರಾ॥ ಬ॥ ಶ್ರೀನಿವಾಸರಾವ್ ಕೊಪ್ಪ ಇವರನ್ನು ತಮ್ಮ ಪ್ರತಿನಿಧಿಗಳನ್ನಾಗಿ ಕಳುಹಿಸಿ ಅವರ ಮೂಲಕ ಒಂದು ವಿಜ್ಞಾಪನ ಪತ್ರಿಕೆಯನ್ನು ಒಪ್ಪಿಸಿದರು. ಕಳೆದ ವರ್ಷದ ವರದಿಯನ್ನು ನೋಡುವಲ್ಲಿ ಸರ್ಕಾರಿಯ ಗ್ರಾಂಟು ಬಡ್ಡಿ, ವರ್ಗಣಿ, ಪುಸ್ತಕ ಮಾರಾಟ ಮತ್ತೂ ಬಹುಮಾನ ಇವುಗಳಿಂದ ೪೨೭೩-೧೧-೧೦ ಉತ್ಪನ್ನವಾಗಿ ೧೧೫೭-೧೫-೦ ವ್ಯಯವಾಗಿರುತ್ತದೆ. ಅಂದರೆ ೩೧೧೫-೧೨-೨ ರೂ. ಶಿಲ್ಕುವಾಗಿರುತ್ತದೆಂದು ತಿಳಿಯಬರುತ್ತದೆ. ಈ ಸಂಘದವರು ಪ್ರತಿ ವರ್ಷದಲ್ಲೂ ಗೊತ್ತಾದ ಗ್ರಂಥಗಳಲ್ಲಿ ಪರೀಕ್ಷೆ ಕೊಟ್ಟವರಿಗೂ, ಉತ್ತಮವಾಗಿ ಭಾಷಣಮಾಡಿದವರಿಗೂ ಬಹುಮಾನವನ್ನು ಕೊಡುವರು. ಕಳೆದವರ್ಷ ಗ್ರಂಥವನ್ನು ಬರೆದವರಿಗೂ, ಪರೀಕ್ಷೆ ಕೊಟ್ಟವರಿಗೂ ಮತ್ತು ಭಾಷಣ ಮಾಡಿದವರಿಗೂ ರೂ. ೩೩೦ ಬಹುಮಾನವಿಡಲ್ಪಟ್ಟಿತು. ಈ ಪರೀಕ್ಷೆಗಾಗಿ ಮೈಸೂರ ಸರ್ಕಾರದ ವಿದ್ಯಾಶಾಖೆಯಿಂದ ಪ್ರತಿವರ್ಷದಲ್ಲೂ ಇಬ್ಬರು ಕನ್ನಡ ಪಂಡಿತರುಗಳು ಕಳುಹಲ್ಪಡುವರು. ಈ ವಿದ್ಯಾವರ್ಧಕ ಸಂಘದವರು ಹೊಸ ಪುಸ್ತಕಗಳನ್ನು ಬರಿಸಿ ತನ್ಮೂಲಕ ಭಾಷಾಭಿವೃದ್ಧಿಯನ್ನು ಮಾಡುತ್ತಿರುವುದಲ್ಲದೆ, "ವಾಗ್ಭೂಷಣ" ವೆಂಬ ಮಾಸಿಕ ಪುಸ್ತಕವನ್ನೂ ಕಳೆದ ೧೫ ವರ್ಷಗಳಿಂದಲೂ ಪ್ರಕಟಿಸುತ್ತಿದ್ದು, ಅದರಿಂದ ಕೊಂಚ ನಷ್ಟವೇ ಸಂಭವಿಸುತ್ತಿರುವುದು. ಅದರ ಚಾಲಕತ್ವವನ್ನು ಮಿ॥ ರಾಮಚಂದ್ರ ಮುಪ್ಪಿನಮಠ, ಬಿ. ಎ., ಯವರಿಗೆ ವಹಿಸಿ ಕೊಟ್ಟಿರುವರು. ಅವರು ಈ ಮಾಸಿಕ ಪುಸ್ತಕದಲ್ಲಿ ಮೊದಲಿನಂತೆ ಹಳೇ ಗ್ರಂಥಗಳನ್ನು ಪ್ರಕಟಿಸದೆ ನೈತಿಕ, ಸಮಾಜಿಕ ಮೊದಲಾದ ಉಪಯುಕ್ತ ವಿಷಯಗಳನ್ನು ಬರೆದು ಹೆಚ್ಚು ಉಪಯೋಗಕರವಾಗಿ ಮಾಡಿರುವರು.

ಈ ವಿದ್ಯಾವರ್ಧಕ ಸಂಘವು ಸ್ಥಾಪಿತವಾದಂದಿನಿಂದ ಅನೇಕ ವಿದ್ಯಾವಂತರುಗಳಿಗೆ ಪ್ರೋತ್ಸಾಹವುಂಟಾಗಿ ಅತ್ಯುಪಯುಕ್ತವಾದ ಕನ್ನಡ ಗ್ರಂಥಗಳು ಪ್ರಕಟವಾಗುವಂತಾದುದಲ್ಲದೆ, ವರ್ಷಕ್ಕೊಂದಾವರ್ತಿ ಎಲ್ಲ ಕರ್ನಾಟಕ ದೇಶದ ವಿದ್ಯಾವಂತರು ಒಂದುಕಡೆ ಸೇರಿ ಕನ್ನಡಭಾಷಾಭಿವೃದ್ಧಿಗೆ ಸಾಧಕವಾದುಪಾಯಗಳನ್ನು ಕಂಡು ಹಿಡಿಯಲವಕಾಶವಾಯಿತು. ಇಂಥ ಅತ್ಯುಪಯುಕ್ತವಾದ ವಿದ್ಯಾಸಂಸ್ಥೆಗೆ ಪ್ರತಿಯೊಬ್ಬ ಕನ್ನಡಿಗನೂ ಸ್ವಂತಹಸ್ತಗಳಿಂದ ಸಹಾಯಮಾಡುವುದು ಆದ್ಯಕರ್ತವ್ಯವಾಗಿರುತ್ತದೆ. ಈ ಸಂಘವು ಆರಂಭವಾದ ತರುಣದಲ್ಲೂ, ಈಚೆಗೂ ಅದಕ್ಕೆ ವಿಶೇಷ ಸಹಾಯವನ್ನು ಮಾಡಿದ ಸೊಲ್ಲಾಪುರದ ಕೈಲಾಸವಾಸಿ ರಾ॥ ಬ॥ ಶ್ರೀಮಂತ ಮಲ್ಲಪ್ಪವಾರದ ಇವರ ಉಪಕಾರವನ್ನು ಸಂಘದವರು ಬಹುವಾಗಿ ಸ್ಮರಿಸಿ, ಅವರ ಅಕಾಲಮರಣದಿಂದ ತಮಗುಂಟಾದ ದುಃಖವನ್ನು ಪ್ರದರ್ಶಿಸಿರುವರಲ್ಲದೆ ಇಂಥ ವಿದ್ಯಾಭಿಮಾನಿಗಳ ಹೆಸರಿನಿಂದ ಪ್ರತಿವರ್ಷದಲ್ಲೂ ಈ ಸಂಘದ ಮೂಲಕ ಒಂದು ಬಹುಮಾನವು ಕೊಡಲ್ಪಡುವಂತೆ ಅವರ ಕುಟುಂಬದವರು ಮಾಡುವುದುತ್ತಮವೆಂದು ಸೂಚಿಸಿರುವರು. ಈ ಸೂಚನೆಯು ಸಾಧುವಾದುದರಿಂದ, ಶ್ರೀಮಂತರು ಆರಂಭಿಸಿದ್ದ ಧರ್ಮಕಾರ್ಯಗಳನ್ನು ಬಿಡದೆ ನಡಿಸುತ್ತಿರುವ ಅವರ ಧರ್ಮಪತ್ನಿಯವರು ಶ್ರೀ॥ ರಾ॥ ಬ॥ ಮಲ್ಲಪ್ಪನವರ ಹೆಸರಿನಿಂದ ಪ್ರತಿವರ್ಷದಲ್ಲೂ ಒಂದು ಬಹುಮಾನವು ಸಂಘದಿಂದ ಕೊಡಲ್ಪಡುವಂತೆ ತಕ್ಕೇರ್ಪಾಟನ್ನು ಮಾಡುವರೆಂದು ನಿರೀಕ್ಷಿಸುತ್ತೇವೆ.

ಒಳದೇಶದವೃತ್ತಾಂತ.

ಈದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರೂ, ಯುವರಾಜರೂ ಮೋಟಾರು ಬಂಡಿಯಲ್ಲಿ ಬೆಂಗಳೂರಿಗೆ ಚಿತ್ತೈಸಿ ಅಲ್ಲಿ ೩ ವಾರಗಳ ವರೆಗಿದ್ದು ರಾಜಧಾನಿಗೆ ದಯಮಾಡಿಸುವುದಾಗಿ ಕೇಳುತ್ತೇವೆ.

ರಾಜಧಾನಿಯಲ್ಲಿ ಕಳೆದ ಶನಿವಾರದಿಂದಲೂ ಜಡಿ ಹಿಡಿದಿರುವುದಲ್ಲದೆ ಶನಿವಾರ ರಾತ್ರಿಯೂ, ನೆನ್ನೆಯ ಮಧ್ಯಾಹ್ನವೂ ದೊಡ್ಡಮಳೆಯಾಯಿತು. ಇದರಿಂದ ಜನರಿಗೆ ಬಹು ಜಿಗುಪ್ಸೆಯುಂಟಾಗಿದೆ.

ಬರುವ ತಾ॥ ೧೫-೧೬ ರಲ್ಲಿ ಬೆಂಗಳೂರಲ್ಲಿ ಎಲ್ಲ ಡಿ॥ ಗಳ ಪೋಲೀಸು ಸೂಪರಿಂಟೆಂಡೆಂಟರು ಇನ್ಸ್‌ಪೆಕ್ಟರ್ ಜನರಲ್‌ರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ತಮ್ಮ ಶಾಖೆಗೆ ಸಂಬಂಧಪಟ್ಟ ಮುಖ್ಯವಾದ ವಿಷಯಗಳನ್ನು ಕುರಿತು ಪರ್ಯಾಲೋಚಿಸುವರು.

ಕಳೆದ ದೊಡ್ಡಏಕಾದಶಿ ಶುಕ್ರವಾರ ರಾತ್ರಿ ಶ್ರೀಮಚ್ಚಾಮರಾಜೇಂದ್ರ ನಾಟಕ ಸಂಘದವರು ಸತ್ಯಹರಿಶ್ಚಂದ್ರ ನಾಟಕವನ್ನು ರಾಜಧಾನಿಯ ಟರ್ವಹಾಲಿನಲ್ಲಿ ಉತ್ತಮವಾಗಭಿನಯಿಸಿ ತೋರಿಸಿದರು. ಪ್ರೇಕ್ಷಕರ ಸಂಖ್ಯೆಯು ಹೆಚ್ಚಾಗಿದ್ದಿತು. ಮ॥ ಗಳಾದ ಎಂ. ಕಾಂತರಾಜಅರಸಿನವರು, ಎಚ್. ಲಿಂಗರಾಜಅರಸಿನವರು ಮೊದಲಾದ ಅರಸುಗಳು ದಯಮಾಡಿಸಿದ್ದರು.

ಕಳೆದ ಸೋಮವಾರ ರಾತ್ರಿ ೯ ಗಂಟೆ ಸಮಯದಲ್ಲಿ ಶ್ರೀಮದ್ಯುವರಾಜ ದಂಪತಿಗಳು ಸಕಲ ರಾಜಮರ್ಯಾದೆಯೊಡನೆ ಅರಮನೆಯಿಂದ ಹೊರಟು ಚಾಮುಂಡೀ ವಿಹಾರಗೃಹಪ್ರವೇಶವನ್ನು ಮಾಡಿದರು. ತತ್ಸಂಬಂಧವಾಗಿ ಕಳೆದ ತಾ॥ ೮ ರಲ್ಲಿ ಮ॥ ದಳವಾಯಿ ದೇವರಾಜ ಅರಸಿನವರೇ ಮೊದಲಾದ ಬಂಧುಗಳಿಗೆ ಚಾಮುಂಡಿ ವಿಹಾರ ಪ್ರಾಸಾದದಲ್ಲಿ ಔತಣವು ಮಾಡಿಸಲ್ಪಟ್ಟಿತು.

ನಂಜನಗೂಡು ಡಿವಿಜನ್ ಅಫೀಸ್ ಮುನ್ಷಿ ಮ॥ ಎಂ. ಆರ್. ಹನುಮಂತರಾಯರ ಹೆಸರಿನಲ್ಲಿರುವ ಮೈಸೂರ ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನ ೫೭೮ ನೇ ನಂಬರಿನ ಪ್ಯಾಸುಬುಕ್ಕು ಮಾರ್ಗದಲ್ಲಿ ಬಿದ್ದಿದ್ದುದನ್ನು ನಮ್ಮಾಫೀಸಿನ ಕೆಲಸಗಾರನು ಕಂಡು ನಮ್ಮಲ್ಲಿಗೆ ತಂದು ಕೊಟ್ಟಿರುವನು. ಆದುದರಿಂದ ಈ ಪ್ಯಾಸು ಬುಕ್ಕನ್ನು ಕಳೆದುಕೊಂಡಿರುವವರು ನಮ್ಮಲ್ಲಿಗೆ ಬಂದು ತೆಗದುಕೊಂಡು ಹೋಗಬಹುದು.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೩,	೪,	೫,	೬,	೭,	೮.
ತಗಲಿದ್ದು.	೨	೨	೧	೫	೬	೮
ಸತ್ತದ್ದು.	೩	೩	೪	೨	೫	೩
ಒಟ್ಟು ಮ.	೧೧	೨	೧೩	೬	೧೦	೨

ತಾ॥ ೨೦-೬-೧೯೧೧ ರಿಂದ ತಾ॥ ೮-೭-೧೯೧೧ ರ ವರೆಗೆ ಒಟ್ಟು ೨೪೫೮ ಜನರಿಗೆ ಇನಾಕ್ಯುಲೇಷನ್ ಮಾಡಲ್ಪಟ್ಟಿದೆ.

ಚಿಕ್ಕಮಗಳೂರಲ್ಲಿರುವ ಬಸವನ ಹಳ್ಳಿಯಲ್ಲಿ ಕಾಫಿ ತೋಟಗಾರರೂ, ಪ್ಲೀಡರೂ ಆಗಿದ್ದು ಗತಿಸಿದ ಗುಂಡಪ್ಪನವರ ಪತ್ನಿ ಜಾನಕಿಯಮ್ಮನೆಂಬುವರು ಕಳೆದವಾರ ತಮ್ಮ ಮನೆಯಲ್ಲಿ ಕೊಲೆಮಾಡಲ್ಪಟ್ಟರು. ಈಕೆಯು ತನಗೆ ಮಕ್ಕಳಿಲ್ಲದಿದ್ದುದರಿಂದ ತನ್ನ ಅಪಾರವಾದ ಆಸ್ತಿಯು ತನ್ನ ಗಂಡನ ದಾಯಾದಿಗೆ ತನ್ನ ಮರಣಾನಂತರ ಸೇರತಕ್ಕದೆಂದು ವಿಲ್ಲನ್ನು ಬರೆದಿದ್ದಳು. ಆಕೆಯ ಕೂಡ ಇದ್ದ ಆಕೆಯ ತಮ್ಮನನ್ನೂ, ಅದೇ ಮನೆಯಲ್ಲಿ ವಾಸವಾಗಿದ್ದ ಪೋಲೀಸು ದಫೇದಾರಿಯಿಂದ ನಿವೃತ್ತನಾಗಿರುವ ದಾಸಪ್ಪನೆಂಬುವನನ್ನೂ ಪೋಲೀಸರು ಹಿಡಿದು ವಿಚಾರಣೆಗೆ ಗುರಿಮಾಡಿರುವರು.

ಕಳೆದ ತಾ॥ ೨೮ ರಲ್ಲಿ ರಾಜಧಾನಿಯ ಗುಡ್‌ಷಫರ್ಡ್‌ರವರ ಮಠಕ್ಕೆಸೇರಿದ ಕನ್ಯಾಸ್ತ್ರೀಯರು ಶ್ರೀಮನ್ಮಹಾಮಾತೃಶ್ರೀ ಯವರನ್ನು, ಮಹಾರಾಣಿಯವರನ್ನು, ಶ್ರೀಮದ್ಯುವರಾಜ ದಂಪತಿಗಳನ್ನು ಮತ್ತೆ ಕೆಲ ಅರಸು ಸ್ತ್ರೀಯರನ್ನು ತಮ್ಮ ಮಠಕ್ಕೆ ಬರಮಾಡಿಕೊಂಡು ತಮ್ಮ ಪೋಷಣೆಯಲ್ಲಿರುವ ಅನಾಥ ಮಕ್ಕಳಿಂದ ನಾಟಕ ಮೊದಲಾದ ವಿನೋದಗಳನ್ನು ಮಾಡಿಸಿ, ತಾವು ಆ ಅನಾಥ ಬಾಲಕರ ಅಭಿವೃದ್ಧಿಗಾಗಿ ಮಾಡುವ ಕಾರ್ಯಗಳನ್ನು ಕುರಿತು ಒಂದು ವಿಜ್ಞಾಪನ ಪತ್ರಿಕೆಯನ್ನೊಪ್ಪಿಸಿದರು. ಶ್ರೀಮದ್ಯುವರಾಜರು ಮಾತೃಶ್ರೀಯವರ ಪರವಾಗಿ ಅದಕ್ಕುತ್ತರವನ್ನು ಕೊಡುವಾಗ್ಗೆ ಪ್ರಪಂಚದಲ್ಲೆಲ್ಲ ಕನ್ಯಾಸ್ತ್ರೀಯರು ತಮ್ಮ ಪೋಷಣೆಗೊಳಪಟ್ಟ ಅನಾಥಮಕ್ಕಳ ಅಭಿವೃದ್ಧಿಗಾಗಿ ತಮ್ಮ ಸ್ವಸುಖವನ್ನು ತ್ಯಜಿಸಿ ಪಾಟುಪಡುತ್ತಿರುವುದು ಜಗತ್ಪ್ರಸಿದ್ಧವಾಗಿದೆ. ಮತ್ತೂ ನೀವು ಕೈಗೊಂಡಿರುವ ಈ ಸ್ತುತ್ಯವಾದ ಕಾರ್ಯವು ಸಫಲವಾಗಲಿ. ಎಂದು ಮೊದಲಾಗಿ ಕಾಲೋಚಿತವಾದ ಮಾತುಗಳನ್ನಾಡಿದರು.

ಕಳೆದ ವರ್ಷ ಇಲ್ಲಿಗೆಬಂದು ಅನೇಕ ನಾಟಕಗಳನ್ನಭಿನಯಿಸಿ ಶ್ರೀಮನ್ ಮಹಾರಾಜರವರಿಂದಲೂ, ಪುರಜನರಿಂದಲೂ ಸನ್ಮಾನಿತರಾಗಿ ಹೋಗಿದ್ದಂಥ ಶಿರಹಟ್ಟಿಯ ಶ್ರೀಲಕ್ಷ್ಮೀ ಪ್ರಾಸಾದಿಕ ನಾಟಕ ಸಂಘದವರು ಕಳೆದ ಮಂಗಳವಾರ ರಾತ್ರಿ ರಾಜಧಾನಿಯ ಟರ್ವಹಾಲಿನಲ್ಲಿ ಸೀತಾಸ್ವಯಂವರವನ್ನು ಅತ್ಯುತ್ತಮವಾಗಿ ಅಭಿನಯಿಸಿ ಪ್ರೇಕ್ಷಕರ ಮನಸ್ಸನ್ನಾನಂದಗೊಳಿಸಿದರು. ಇವರು ಮೊದಲಿಗಿಂತಲೂ ಈಗ ಭಾಷೆಯಲ್ಲೂ, ವೇಷದಲ್ಲೂ ವಿಶೇಷವಾಗಿ ಸುಧಾರಣೆಯನ್ನು ಹೊಂದಿ ನೂತನವಾದ ಸೀನರಿಗಳೊಡನೆ ಬಂದಿರುವರು. ಯೋಗ್ಯತಾ ಪಕ್ಷಪಾತಿಗಳಾದ ನಮ್ಮ ರಾಜಧಾನಿಯ ನಿವಾಸಿಗಳು ಅವರ ನಾಟಕಾವಲೋಕನದಿಂದ ಅವರಿಗೆ ಉತ್ತೇಜನವನ್ನು ಕೊಡುವವರಾಗಲೆಂದಿಚ್ಛಿಸುವೆವು. ಮೇಲ್ಕಂಡ ಸೀತಾಸ್ವಯಂವರ ಪ್ರಯೋಗವನ್ನೋಡಲು ಶ್ರೀ ಕ॥ ಮ॥ ಕಾಂತರಾಜ ಅರಸಿನವರು, ದರ್ಬಾರ್‌ಭಕ್ಷಿ ಮ॥ ಲಿಂಗರಾಜಅರಸಿನವರು, ಮರಹಮತ್‌ಭಕ್ಷಿ ಮ॥ ಚಿಕ್ಕಲಿಂಗ್ರಾಜಿ ಅರಸಿನವರು ಮೊದಲಾದ ಅರಸು ಕುಮಾರರು ದಯಮಾಡಿಸಿದ್ದರು. ಸಂಘದ ಮ್ಯಾನೇಜರು ಇವರುಗಳಿಗೆಲ್ಲ ಗಂಧ ಪುಷ್ಪಹಾರಗಳನ್ನೊಪ್ಪಿಸಿ ಮರ್ಯಾದಿಸಿದರು

ಚಿಕ್ಕಬಳ್ಳಾಪುರದಲ್ಲಿ ಕಳೆದ ಜೂನ್ ತಾ॥ ೨೯ ರ ವರೆಗೂ ಅದರ ಹಿಂದಣ ೧೫ ದಿನಗಳಿಂದಲೂ ಒಂದು ಹನಿ ಮಳೆಯಾದರೂ ಬೀಳದೆ ತೀಕ್ಷ್ಣವಾಗಿ ಬೀಸುತ್ತಿದ್ದ ಗಾಳಿಯು ಸಹ ಮಂದವಾಗಿ ಸೆಕೆಯು ಬೇಸಿಗೆಯ ಕಾಲಕ್ಕಿನ್ನ ಅಧಿಕವಾಗಿದ್ದು ಆ ಸಾಯಂಕಾಲ ಅಕಸ್ಮಾತ್ತಾಗಿ ಮೋಡವು ಕವಿತುಕೊಂಡು ರಾತ್ರಿ ೨ ಗಂಟೆಯ ಸಮಯದಲ್ಲಿ ಮಳೆಯು ಬರಲಾರಂಭವಾಗಿ ಬೆಳಿಗ್ಗೆ ೭ ಗಂಟೆಯವರೆಗೂ ಬಿಡದೆ ೫ ಅಂಗುಲ ೩೦ ಸೆಂಟು ವರೆಗೆ ಸುರಿದಿತು. ಇಂಥ ದೊಡ್ಡ ಮಳೆಯು ಅಲ್ಲಿ ಕಳೆದ ೨೫ ವರ್ಷಗಳಿಂದಲೂ ಆಗಿರಲಿಲ್ಲವೆಂದು ಜನರು ಹೇಳುತ್ತಾರೆ. ಆ ಊರಿನ ಹೊರಗೆ ವಾಯವ್ಯ ಮೂಲೆಯಲ್ಲಿರುವ ಮುಸ್ತೂರು ಕೆರೆಯಲ್ಲಿ ಒಂದು ಬೊಟ್ಟು ನೀರೂ ಇಲ್ಲದಿದ್ದು ಬೆಳಗಿನಜಾವ ೪ ಗಂಟೆಯೊಳಗಾಗಿ ನೀರು ತುಂಬಿ ಕೋಡಿಬಿದ್ದು ಹರಿಯಲಾರಂಭಿಸಿತು. ಮತ್ತೂ ಕೆರೆಗೆ ಮಳೆಯನೀರು ವಿಶೇಷವಾಗಿ ಬರುತ್ತಿದ್ದುದರಿಂದ ಕೆರೆಯು ಹಿಡಿಯಲಾರದೆ ಕೆರೆಯೇರಿ ಮೇಲಿಂದ ೭ ಅಡಿ ಎತ್ತರದವರೆಗೆ ದುಮುಕುತ್ತಿತು. ಇದರಿಂದ ಈ ಕೆರೆಯೇರಿಯ ಕೆಳಗಿರುವ ನಾಗಪ್ಪನವರ ಸತ್ರಕ್ಕೆ ನೀರು ವಿಪರೀತವಾಗಿ ನುಗ್ಗಿ ಕೆರೆಯಂತೆ ನಿಂತಿದ್ದಿತು. ಪ್ಲೇಗು ಹಾವಳಿಯಿಂದ ಊರನ್ನು ಬಿಟ್ಟು ಸತ್ರದೊಳಗೆ ವಾಸಮಾಡುತ್ತಿದ್ದ ಮುನಸೀಫರೂ, ಹೆಡ್ ಮಾಸ್ಟರೂ ತಾವು ಮಲಗಿದ್ದ ಹಾಸಿಗೆಗಳು ನೆನೆದುಹೋಗಿ ತಣ್ಣಗಾದುದರ ಮೇಲೆಚ್ಚತ್ತು ತಮ್ಮಮಕ್ಕಳು ಮತ್ತೂ ಹೆಂಗುಸರುಗಳನ್ನು ಎಳಸಿ ಸತ್ರದಿಂದ ಹೊರಗಿನ ಪೈಲಿಗೆ ಕರತಂದು ನಿಂತುಕೊಂಡರು. ಬೆಳಗಾದಮೇಲೆ ಅಲ್ಲಿ ನಿಂತಿದ್ದ ನೀರು ಹರಿದುಹೋದುದನ್ನೋಡಿ ಸತ್ರದೊಳಕ್ಕೆ ಹೋಗಿ ತಮ್ಮ ಸಾಮಾನುಗಳನ್ನು ತೆಗೆದುಕೊಂಡು ಬೇರೆಕಡೆ ವಾಸಿಸಲು ಹೋದರು. ದೈವಾಧೀನದಿಂದ ಯಾರಿಗೂ ಯಾವ ನಷ್ಟವೂ ಸಂಭವಿಸಲಿಲ್ಲವು.

ರಾಜಧಾನಿಗೆ ಬಂದಿರುವ ರಷ್ಯಾದೇಶದ ಸ್ಯಾಂಡೋಯವರು ಕಳೆದ ಗುರುವಾರ ರಾತ್ರಿ ಟರ್ವಹಾಲಿನಲ್ಲಿ ೫೦ ರಿಂದ ೨೦೦೦ ಪೌಂಡು ವರೆಗೆ ತೂಕವಿರುವ ಗುಂಡುಗಳನೆತ್ತಿ ತಿರುಗಿಸುವುದು, ಇಬ್ಬರು ಮನುಷ್ಯರನ್ನು ಕಿರುಬೆರಳಿನಿಂದೆತ್ತುವುದು, ಕಬ್ಬಿಣದ ಸರಪಣಿಯನ್ನೆಳೆದು ಕೀಳುವುದು, ಕಬ್ಬಿಣದ ಸಲಾಕಿಯ ತುಂಡನ್ನು ತಮ್ಮ ತೋಳಿನ ಮೇಲೆ ಹೊಡೆದು ಬಗ್ಗಿಸುವುದು, ಕಬ್ಬಿಣದ ಪಟ್ಟಿಯನ್ನು ಬಗ್ಗಿಸಿ ತೋಳಿಗೆ ಸುತ್ತುವುದು ಮೊದಲಾದ ಅದ್ಭುತ ಅಂಗಸಾಧನೆಗಳನ್ನು ಮಾಡಿ ತಮ್ಮ ಅಪಾರವಾದ ಶಕ್ತಿಯನ್ನು ಪ್ರದರ್ಶಿಸಿದರು. ಇವರು ನೆರದಿದ್ದ ಪ್ರೇಕ್ಷಕರಲ್ಲಾರಾದರು ತಮ್ಮ ಕೂಡ ಕುಸ್ತಿಯನ್ನು ಮಾಡಲಿಚ್ಛಿಸುವವರು ಜತೆ ಕಟ್ಟಿಸಿಕೊಳ್ಳಬಹುದೆಂದೂ, ಕುಸ್ತಿಯಲ್ಲಿ ಗೆದ್ದವರಿಗೆ ಕಂಟ್ರಾಕ್ಟಿನ ಮೊಬಲಗಿನಲ್ಲಿ ೨ ಭಾಗವೂ, ಸೋತವರಿಗೆ ೧ ಭಾಗವೂ ಕೊಡಲ್ಪಡುವುದೆಂದೂ ಹೇಳಿದುದರ ಮೇಲೆ ಕೆಲದಿನಗಳ ಕೆಳಗೆ ಶ್ರೀನಿವಾಸಣ್ಣನ ಗರುಡಿ ತಿಮ್ಮಯ್ಯನ ಮೇಲೆ ಕುಸ್ತಿಮಾಡಿ ಗೆದ್ದು ಬಹುಮಾನವನ್ನು ಹೊಂದಿದ ಮತ್ತೂ ಬೆಂಗಳೂರ ಮಿಠಾಯಿಅಂಗಡಿ ಮಹಂಛಾತರ ಬಂಧುವಾದ ಕಮರಕ್ ಎಂಬ ಪೈಲ್ವಾನನು ಮುಂದೆಬಂದು ಸ್ಯಾಂಡೋಯವರ ಕೂಡ ಕುಸ್ತಿಮಾಡಲೊಪ್ಪಿ ಜತೆಯನ್ನು ಕಟ್ಟಿಸಿಕೊಂಡನು, ಈ ಕುಸ್ತಿಯಾಗುವ ದಿವಸವಿನ್ನೂ ಗೊತ್ತಾಗಿಲ್ಲವು. ಕಮರಕ್ ಪೈಲ್ವಾನಿನ ಶಕ್ತಿಯನ್ನೂ, ಸ್ಯಾಂಡೋಯವರ ಶಕ್ತಿಯನ್ನೂ ಹೋಲಿಸಿ ನೋಡಿದಲ್ಲಿ ಅಜಕ್ಕೂ, ಗಜಕ್ಕೂ ಹೋಲಿಸಿದಂತಿರುವುದರಿಂದ, ಕಮರಕ್ ಪೈಲ್ವಾನನು ತನ್ನ ಯುಕ್ತಿಯಿಂದ ಸ್ಯಾಂಡೋಯವರನ್ನು ಗೆಲ್ಲಬೇಕಾಗಿದೆಯೇ ಹೊರತು ಮತ್ತಾವ ವಿಧದಿಂದಲೂ ಸಾಧ್ಯವಿಲ್ಲವು. ಈ ಕುಸ್ತಿಯನ್ನೋಡಲು ಬಹು ಜನರು ಕುತೂಹಲರಾಗಿರುತ್ತಾರೆ. ಮತ್ತೂ ದ್ರವ್ಯೋತ್ಪನ್ನವೂ ಹೆಚ್ಚಾಗಿ ಆಗಬಹುದೆಂದು ತೋರುತ್ತದೆ.

ಕಾನಕಾನಹಳ್ಳಿಯಲ್ಲಿ ಕಳೆದ ವರ್ಷ ಪ್ಲೇಗು ರೋಗದುದ್ದಿಶ್ಯ ಊರನ್ನು ಬಿಟ್ಟು ಹೊರಗೆ ಹೋಗಿದ್ದ ಜನರು ಊರನ್ನು ಸೇರಿ ಇನ್ನೂ ನೆಟ್ಟಗೆ ೨-೩ ತಿಂಗಳಾಗಿಲ್ಲವು. ಅಷ್ಟರಲ್ಲಿ ರೋಗವು ಪುನಃ ಪೇಟೆಯಲ್ಲಿ ಆರಂಭವಾಗಿ ಆಗಲೇ ೬-೭ ಮರಣಗಳಾದುವು. ಮತ್ತೂ ಅಲ್ಲಲ್ಲಿ ಇಲಿಗಳು ಸಾಯುತ್ತಿವೆ. ಇದರಿಂದ ಜನರು ಭೀತರಾಗಿರುವರಲ್ಲದೆ ಊರಹೊರಗೆ ಹೋಗಿ ಗುಡಿಸಲುಗಳನ್ನು ಹಾಕಿಕೊಂಡು ವಾಸಿಸಲು ಈಗ ಹೊಲಗಳಲ್ಲಿ ಬಿತ್ತನೆಯ ಕಾಲವಾದುದರಿಂದ ಯತ್ನವಿಲ್ಲವೆಂದು ಬಹು ಪೇಚಾಡುತ್ತಿರುವರು. ಊರಿನ ಯಾವ ಭಾಗದಲ್ಲಿ ನೋಡಿದರೂ ಕಶ್ಮಲವು ಹೆಚ್ಚಾಗಿರುವುದು. ಇದರಿಂದ ಅನಾರೋಗ್ಯಕ್ಕೆ ಅವಕಾಶವಾಗಿದೆ. ಈ ಊರಿನಲ್ಲಿ ಮ್ಯುನಸಿಪಾಲಿಟಿಯು ಸ್ಥಾಪಿತವಾದಾರಭ್ಯ ಬೀದಿಗಳಲ್ಲಿ ದೀಪಸ್ತಂಭಗಳು ನೆಡಲ್ಪಟ್ಟು ಕತ್ತಲೆಯ ಕಾಲದಲ್ಲಿ ದೀಪಗಳು ಹೊತ್ತಿಸಲ್ಪಡುತ್ತಿದ್ದುವು. ಆದರೆ ಈಗ ಕೆಲ ವರ್ಷಗಳಿಂದ ಒಂದು ದೀಪವಾದರೂ ಹೊತ್ತಿಸಲ್ಪಡುವುದಿಲ್ಲವಾದುದರಿಂದ ಬೀದಿಗಳಲ್ಲಿ ತತ್ರಾಪಿ ಪೇಟೆಯಿಂದ ಕೋಟೆಗೆ ಹೋಗುವ ಮಾರ್ಗದಲ್ಲಿ ತಿರುಗಾಡುವ ಜನರಿಗೆ ಅತ್ಯಂತ ತೊಂದರೆಯಾಗಿರುತ್ತದೆ. ಪೇಟೆಗೂ, ಕೋಟೆಗೂ ಮಧ್ಯೆ ಒಂದು ಫರ್ಲಾಂಗು ದೂರ ಮನೆಗಳೂ, ಅಂಗಡಿಗಳೂ ಇಲ್ಲದೆ ಮತ್ತೂ ಸಾಲುಮರಗಳ ನೆರಳಿನಿಂದ ನಕ್ಷತ್ರಗಳ ಬೆಳಕುಸಹ ಬೀಳಲವಕಾಶವಿಲ್ಲದೆ ಕಗ್ಗತ್ತಲೆಯಾಗಿರುವುದರಿಂದ ಹೆಂಗುಸರೂ, ಮಕ್ಕಳೂ ಸಾಯಂಕಾಲವಾದಮೇಲೆ ಆ ಮಾರ್ಗವಾಗಿ ತಿರುಗಾಡುವುದಕ್ಕಿಲ್ಲವಾಗಿದೆ. ಈ ರೀತಿ ದೀಪಗಳನ್ನು ಹೊತ್ತಿಸದಿರಲು ಮ್ಯುನಸಿಪಾಲಿಟಿಯಲ್ಲಿ ಹಣವು ಸಾಲದಿರುವುದೇ ಕಾರಣವೆಂದು ಅಧಿಕಾರಿಗಳು ಹೇಳುತ್ತಾರಂತೆ. ಇದು ನಿಶ್ಚಯವಾಗಿದ್ದಲ್ಲಿ ಶೋಚನೀಯವೇ ಸರಿ. ಜನರ ಸೌಖ್ಯಕ್ಕಾಗೇ ಏರ್ಪಟ್ಟಿರುವ ಮ್ಯುನಸಿಪಾಲಿಟಿಯವರು ಅತ್ಯವಶ್ಯಕವಾದ ವಿಷಯಗಳಿಗಾಗಿ ವ್ಯಯಮಾಡಬೇಕಾಗಿರುವ ಮೊಬಲಗನ್ನೊದಗಿಸಿಕೊಳ್ಳುವ ಉಪಾಯವನ್ನು ಕಂಡುಹಿಡಿಯಲಾರದಿರುವುದು ಸಖೇದಾಶ್ಚರ್ಯವಾಗಿರುತ್ತದೆ.

ವರ್ತಮಾನ ಸಂಗ್ರಹ.

ಅಲೀಘಡದಲ್ಲಿ ಮಹಮ್ಮದೀಯ ಸರ್ವವಿದ್ಯಾನಿಲಯಸ್ಥಾಪನೆಗಾಗಿ ಪ್ರಾಗ್ದಾನವಾಗಿರುವ ೨೫೫೦೦೦ ರೂ.ಗಳಲ್ಲಿ ಈವರೆಗೆ ೩೫೫೦೦೦ ರೂ. ಬಂದಿರುತ್ತದೆ.

ಸರ್ ಜಾರ್ಜ್ ಎಚ್ಜ್ ರವರು ಮತ್ತೂ ಸೈಯದ್ ಅಮೀರ್ ಆಲಿಯವರು ಪ್ರಿವಿ ಕೌನ್ಸಿಲಿನ ಮೆಂಬರುಗಳಾಗಿ ಪುನಃ ನೇಮಿಸಲ್ಪಟ್ಟಿರುತ್ತಾರೆ. ಇವರಿಗೆ ೬೦೦೦ ರೂ. ಸಂಬಳವು ದೊರೆಯುವುದು.

ಕಲಕತ್ತಾದ ಪೋಲೀಸು ಕ್ರಿಮಿನಲ್ ಇನ್ವೆಸ್ಟಿಗೇಷನ್ ಶಾಖೆಯ ಹೆಡ್ ಕಾನಸ್ಟೇಬಲಾಗಿದ್ದು ಕಳೆದ ಫೆಬ್ರವರಿ ತಾ॥ ೨೧ ರಲ್ಲಿ ಕೊಲೆಮಾಡಲ್ಪಟ್ಟ ಶ್ರೀಶಚಂದ್ರಚಕ್ರವರ್ತಿಯ ತಾಯಿಗೆ ೬೦೦ ರೂ. ನ ವರ್ಷಾಸನವು ಸಲ್ಲತಕ್ಕದೆಂದು ಸರಕಾರದಪ್ಪಣೆಯಾಗಿರುತ್ತದೆ.

ಲಂಡನ್ನಿಗೆ ಕಿರೀಟಧಾರಣ ಮಹೋತ್ಸವಕ್ಕಾಗಿ ಭರತಖಂಡದಿಂದ ಹೋಗಿರುವ ರಾಜರುಗಳಿಗೆ ಪಾರ್ಲಿಮೆಂಟ್ ಸಭಾಸ್ತಾರರಾದ ಮಿ॥ ಮಾಂಟಗುರವರು ಸಭಾಮಂದಿರದಲ್ಲಿ ಔತಣವನ್ನು ಮಾಡಿಸಿದರು. ಈ ಔತಣಕ್ಕೆ ಇಂಗ್ಲೆಂಡಿನ ಮಂತ್ರಿವರ್ಯರಾದ ಮಿ॥ ಆಸ್ಕ್ವಿತ್ ಮಿ॥ ಬಾಲ್ಫರ್, ಸರ್ ಎಡ್ವರ್ಡ್ ಗ್ರೇ ಮೊದಲಾದವರು ಬಂದಿದ್ದರು.

ಭಾರತೀಯರ್ಯಾರೂ ಟ್ರಾನ್ಸವಾಲಿಗೆ ಒಬ್ಬಳಿಗಿನ್ನ ಹೆಚ್ಚಾಗಿ ಹೆಂಡತಿಯರನ್ನು ಕರೆದುಕೊಂಡು ಬರಕೂಡದೆಂದು ಸುಪ್ರೀಂ ಕೋರ್ಟಿನ ಒಬ್ಬ ಜಡ್ಜಿಯು ತೀರ್ಮಾನಿಸಿರುತ್ತಾರೆ. ಇದರಮೇರೆ ಅಲ್ಲಿಯ ಭಾರತೀಯರೆಲ್ಲರೂ ಭರತಖಂಡದಲ್ಲಿ ಬಹುಪತ್ನಿತ್ವವು ಸರ್ವಸಮ್ಮತವಾಗಿರುವುದರಿಂದ ಜಡ್ಜಿಯವರ ತೀರ್ಮಾನವನ್ನು ಅನುಷ್ಠಾನಕ್ಕೆ ತಾರದೆ ಹಿಂದಿನಂತೆ ನಡಿಸಿಕೊಡಬೇಕೆಂದು ಮುಷ್ಕರವಿಡಿದಿರುತ್ತಾರೆ.

ಪ್ಲೇಗಿನ ಮರಣಸಂಖ್ಯೆಯು ಶೀಘ್ರವಾಗೇರುತ್ತಿದೆ. ಕಳೆದ ತಾ॥ ೧೭ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೨೯೬೮ ಜನರಿಗೆ ಪ್ಲೇಗುತಗಲಿ ೨೬೦೪ ಜನರು ಸತ್ತರು. ಬೊಂಬಾಯಾಧಿಪತ್ಯದಲ್ಲಿ ೪೩೯; ಮದ್ರಾಸಾಧಿಪತ್ಯದಲ್ಲಿ ೧೦೦; ಬಂಗಾಳದಲ್ಲಿ ೬೦; ಸಂಯುಕ್ತಪ್ರಾಂತಗಳಲ್ಲಿ ೬; ಪಂಜಾಬಿನಲ್ಲಿ ೮೪೬೦; ಮತ್ತೂ ಬರ್ಮಾದಲ್ಲಿ ೧೫೫; ಈ ಪ್ರಕಾರ ಮರಣವಾಗಿರುತ್ತದೆ. ದಿಲ್ಲಿಯ ಪಟ್ಟಣದಲ್ಲೂ, ಡಿಸ್ಟ್ರಿಕ್ಟಿನಲ್ಲೂ ಪ್ಲೇಗು ಸಂಪೂರ್ಣವಾಗಿ ಅಡಗಿಹೋಗಿದೆ.

ಕಳೆದ ತಾ॥ ೨ ರ ರಾತ್ರಿ ಕಲಕತ್ತಾದಲ್ಲಿ ವಿವಾಹ ಸಂಬಂಧವಾದ ಉತ್ಸವವು ಬೀದಿಯಲ್ಲಿ ಹೋಗುತ್ತಿರುವಾಗ್ಗೆ ಕೆಲ ತುಂಟ ಮಹಮ್ಮದೀಯರು ಆ ಉತ್ಸವವನ್ನು ಮಾಡುತ್ತಿದ್ದವರ ಮೇಲೆ ಬಿದ್ದು ಚೆನ್ನಾಗಿ ಪ್ರಹರಿಸಿದರು. ಈ ಕಲಹದಲ್ಲಿ ಗಾಯವಡೆದ ೮ ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರು. ಮತ್ತೂ ಆ ತುಂಟರಲ್ಲಿ ೬ ಜನರು ಸೆರೆಹಿಡಿಯಲ್ಪಟ್ಟಿರುವರು. ವಧುವಿನ ತಂದೆಯು ಆ ತುಂಟ ಜನರ ಮುಖಂಡನಿಗೆ ದಕ್ಷಿಣೆಯನ್ನು ಕೊಡಲಿಲ್ಲವಾಗಿ ಆ ತುಂಟರು ಅತ್ಯಾಚಾರವನ್ನು ನಡೆಸಿದರೆಂದು ಗೊತ್ತಾಗಿರುವುದು.

ಕಳೆದ ತಾ॥ ೪ ರಲ್ಲಿ ತಾಳಿಗಂಜ್ ಠಾಣಕ್ಕೆ ೧ ಮೈಲಿ ದೂರದಲ್ಲಿರುವ ಚೌಬರ್ಗ ಎಂಬಲ್ಲಿ ೧೮-೧೯ ಜನ ತಲೆಬಡಿಕರು ವಿಷ್ಣುಚರಣ ಮಂಡಲ ಎಂಬ ಶ್ರೀಮಂತನ ಮನೆಯ ಬಾಗಿಲನ್ನು ಬಲವಂತದಿಂದ ತೆಗೆದು ಸ್ತ್ರೀಯರಿರುವ ಕೊಠಡಿಗೆ ನುಗ್ಗುವಾಗ್ಗೆ ಆ ಮನೆಯ ಗಂಡುಸರು ಅಡ್ಡಿಮಾಡಲು ಅವರುಗಳನ್ನು ಚೆನ್ನಾಗಿ ಪ್ರಹರಿಸಿ ೩೫೦೦ ರೂ. ಬೆಲೆಯ ವರೆಗಿನ ಆಭರಣವನ್ನೂ ನಗದು ಹಣವನ್ನೂ ಅಪಹರಿಸಿಕೊಂಡು ಪಲಾಯನರಾದರು. ಈಗ ಪೋಲೀಸರು ಕಳ್ಳರ ಗುರ್ತನ್ನು ಮನೆಯವರಿಂದ ತಿಳಿದು ಅವರನ್ನು ಹುಡುಕುವುದರಲ್ಲಿದ್ದಾರೆ.

ಅಮೇರಿಕಾಕ್ಕೆ ಸೇರಿದ ನ್ಯೂಯಾರ್ಕಿನಲ್ಲಿ ೮ ಜನರು ಪಿಸ್ತೋಲುಗಳನ್ನು ಹಿಡಿದುಕೊಂಡು ರಾಯಲ್ ಹೋಟೇಲಿಗೆ ಹೋಗಿ ಕೆಲರು ಅಲ್ಲಿಯ ಆಳುಗಳ ಮೇಲೆ ಕಾವಲಿದ್ದುಕೊಂಡು ಉಳಿದವರು ಬಹು ದಿಟ್ಟತನದಿಂದ ಪೆಟ್ಟಿಗೆ ಬಾಗಿಲನ್ನು ತೆರೆದು ಒಳಗಿದ್ದ ಹಣವನ್ನು ತೆಗೆದುಕೊಂಡರು. ಅಲ್ಲಿದ್ದ ಕೆಲಸಗಾರರು ಆ ಕಳ್ಳರ ದಿಟ್ಟತನವನ್ನು ನೋಡಿ ವಿಸ್ಮಿತರಾಗಿ ಸ್ವಲ್ಪಕಾಲ ಮೌನವಾಗಿದ್ದು ಅನಂತರ ಗದ್ದಲವನ್ನು ಮಾಡಿದರು. ಅಷ್ಟರಲ್ಲಿ ಇತರರು ಬಂದು ಕಳ್ಳರನ್ನು ಹಿಡಿಯಯತ್ನಿಸಿದಾಗ್ಗೆ ಅವರು ಪಿಸ್ತೋಲನ್ನು ಹಾರಿಸಿ, ಅನೇಕರಿಗೆ ಗಾಯವನ್ನು ಮಾಡಿ ತಲೆತಪ್ಪಿಸಿಕೊಂಡು ಹೋದರು.

ಮದ್ರಾಸುಪಟ್ಟಣದ ಉತ್ತರ ದಿಗ್ಭಾಗದಲ್ಲಿ ೧ ಮೈಲಿ ಅಡೆಯಿರುವ ಕಾಲಾದಿ ಪೇಟೆಯಲ್ಲಿ ೩ ಜನ ಕಳ್ಳರು ತಿರುವೆಂಕಟಾಚಾರ್ಯರವರ ಮನೆಗೆ ಕಳೆದ ತಾ॥ ೧ ರಲ್ಲಿ ನುಗ್ಗಿ ಒಳಗಿದ್ದ ೩ ಜನ ಹೆಂಗುಸರ ಕೈಬಳೆಯನ್ನು ಬಲವಂತದಿಂದ ಕಿತ್ತುಕೊಳ್ಳಲು ಆ ಹೆಂಗುಸರು ಕೂಗಿಕೊಂಡರು ಈ ಶಬ್ದವನ್ನು ಕೇಳಿ ನೆರೆಯವರು ಸಹಾಯಕ್ಕೆ ಬರುವಷ್ಟರಲ್ಲಿ ಆ ಕಳ್ಳರು ೩೦೦ ರೂ. ಬೆಲೆ ಬಾಳುವ ಆಭರಣಗಳನ್ನಪಹರಿಸಿಕೊಂಡು ಓಡಿದರು. ಅಷ್ಟರಲ್ಲಿ ಪೋಲೀಸರು ಈ ವರ್ತಮಾನವನ್ನು ಕೇಳಿ ಬಂದು ೧೦ ವರ್ಷದ ಹುಡುಗಿಯು ಹೇಳಿದ ಗುರ್ತಿನ ಮೇಲೆ ೪ ಜನರನ್ನು ಹಿಡಿದು ಸೆರೆಯಲ್ಲಿಟ್ಟಿರುವರು.

ಕೆಲ ದಿನಗಳ ಕೆಳಗೆ ದುರ್ಗಾಪುರದ ನಾಮುಮಿಯ ಎಂಬುವನು ಕೊಡಬೇಕಾಗಿದ್ದ ಹಣಕ್ಕಾಗಿ ಹುಸೇನಲಿ ಎಂಬ ಧನವಂತನು ಅವನಮೇಲೆ ವಿಚಾರವನ್ನು ಮಾಡಿ ಡಿಕ್ರಿಯನ್ನು ಪಡೆದು ನಾಮುಮಿಯನ ಆಸ್ತಿಯನ್ನು ಜಪ್ತಿಮಾಡಿಸಲು ಕೋರ್ಟಿನ ಅಮೀನನ ಕೂಡ ಅವನ ಮನೆಗೆ ಹೋಗಿರುವಾಗ್ಗೆ, ನಾಮುಮಿಯನು ಅವರನ್ನೋಡಿ ರೋಷಗೊಂಡು ತನ್ನ ೬ ವರ್ಷ ವಯಸ್ಸಿನ ಮಗಳನ್ನು ಕೊಂದು ತನ್ನ ಮೇಲೆ ಡಿಕ್ರಿಯನ್ನು ಪಡೆದಿದ್ದ ಹುಸೇನಲಿಯು ತನ್ನ ಮಗಳನ್ನು ಕೊಂದನೆಂದು ಪೋಲೀಸಿಗೆ ವರದಿಯನ್ನು ಮಾಡಿದನು. ಪೋಲೀಸರು ವಿಚಾರಣೆಯನ್ನು ಮಾಡುವಾಗ್ಗೆ ತಂದೆಯೇ ಕೊಲೆಯನ್ನು ಮಾಡಿದನೆಂಬುದು ಗೊತ್ತಾಗಿ ಅವನನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡಿದ್ದರು. ಈಗ ಕೊಲೆಗಡಿಕನಾದ ತಂದೆಗೆ ಮರಣದಂಡನೆಯು ವಿಧಿಸಲ್ಪಟ್ಟಿತು.

ಪ್ಯಾರಿಸ್ ಪಟ್ಟಣದಲ್ಲಿ ಡಾಕ್ಟರ್ ನ್ಯೂ ಬ್ರಾನರ್‌ರವರು ಪಾರಿವಾಳ ಪಕ್ಷಿಗಳ ಮೂಲಕ ಛಾಯಾಚಿತ್ರವನ್ನು ತೆಗೆಯಲು ವಿಚಿತ್ರವಾದ ಒಂದು ಸಣ್ಣ ಯಂತ್ರವನ್ನು ಕಂಡುಹಿಡಿದಿರುತ್ತಾರೆ. ಈ ಯಂತ್ರದ ಪೆಟ್ಟಿಗೆಯನ್ನು ಪಾರಿವಾಳದ ಎದೆಗೆ ಕಟ್ಟಿದರೆ, ಅದು ಹಾರುವಾಗ್ಗೆ ಆ ಪೆಟ್ಟಿಗೆಯ ಬಾಗಿಲು ಅದಕ್ಕೆ ಕಟ್ಟಿರುವ ಒಂದು ರಬ್ಬರ್ ಚಂಡಿನ ಸಹಾಯದಿಂದ ತಾನಾಗಿ ತೆಗೆದು ಇದಿರಿಗಿರುವ ಪದಾರ್ಥಗಳ ಛಾಯೆಯು ಬಿದ್ದು ಆ ಕೂಡಲೆ ತಾನಾಗಿ ಮುಚ್ಚಿಕೊಳ್ಳುವುದು. ಈ ಛಾಯಾಗ್ರಾಹಿ ಯಂತ್ರವನ್ನು ಇನ್ನುಮೇಲೆ ಸೇನೆಯಲ್ಲುಪಯೋಗಿಸಬೇಕೆಂಬ ಆಲೋಚನೆಯು ನಡೆದಿರುವುದು. ಇನ್ನುಮೇಲೆ ಮನುಷ್ಯನ ಹಸ್ತದಿಂದಾಗಬೇಕಾದ ಕಾರ್ಯಗಳೆಲ್ಲವೂ ಯಂತ್ರಗಳ ಮೂಲಕವಾಗಿ ನಡೆದು ಮನುಷ್ಯನ ಅವಯವಗಳಿಗೆ ಕೆಲಸವೇ ಇಲ್ಲದಂತಾಗಬಹುದು !

ಭರತಖಂಡದ ಪಶ್ಚಿಮತೀರದಲ್ಲಿ ಮಳೆ ಬರಲಾರಂಭವಾಗಿ ಬೊಂಬಾಯಿನ ವರೆಗೆ ಒಳ್ಳೇಮಳೆಯಾಗಿರುತ್ತದೆ. ಇತ್ತಲಾಗಿ ಪೂರ್ವತೀರದಲ್ಲಿ ಈಶಾನ್ಯ ಮತ್ತೂ ಬರ್ಮಾವರೆಗೂ ಸಾಮಾನ್ಯವಾಗಿ ಚೆನ್ನಾಗಿ ಆಗಿರುತ್ತದೆ. ವಿಕ್ಟೋರಿಯಾ ಪಾಯಿಂಟ್, ಮೆರ್ಗಾಯಿ, ಮೌಲ್ಮೀನ್ ಮತ್ತೂ ಡೈಮೆಂಡ್‌ದ್ವೀಪಗಳಲ್ಲಿ ೨ ಅಂಗುಲ; ಲಾಷಾಯಿ ಮತ್ತೂ ಚಿರಪುಂಜಿಯಲ್ಲಿ ೪ ಅಂಗುಲ; ಸಿಲ್ಚಾರದಲ್ಲಿ ೩ ಅಂಗುಲ; ದಿಬ್ರುಘರ್ ಮತ್ತೂ ಬಲಾಸೂರಿನಲ್ಲಿ ೨ ಅಂಗುಲ; ಅಮ್ರಾವತಿ ಮತ್ತೂ ರಾಯಿಪುರದಲ್ಲಿ ೧ ಅಂಗುಲ; ಜಗದಲಪುರದಲ್ಲಿ ೨ ಅಂಗುಲ; ಮಾಲೆಗಾನದಲ್ಲಿ ೮ ಅಂಗುಲ; ಬೊಂಬಾಯಿನಲ್ಲಿ ೪ ಅಂಗುಲ; ರತ್ನಗಿರಿ, ಮಾರ್ಮಗೋವಾ ಮತ್ತೂ ಮಂಗಳೂರಲ್ಲಿ ೩ ಅಂಗುಲ; ಗೋಹಾದಲ್ಲಿ ೫ ಅಂಗುಲ; ಕಾರ್ವಾರ ಮತ್ತೂ ಮಛಲೀಪಟ್ಟಣದಲ್ಲ ೨ ಅಂಗುಲ ಈ ಪ್ರಕಾರವಾಗಿ ಮಳೆಯಾಗಿರುತ್ತದೆ. ಆದರೆ ಸಂಯುಕ್ತಪ್ರಾಂತಗಳಲ್ಲೂ, ರಜಪುಟಾನ ಮತ್ತೂ ಪಂಜಾಬಿನ ಪೂರ್ವದಿಕ್ಕಿನಲ್ಲೂ ಸೆಕೆಯು ಹೆಚ್ಚಾಗಿರುತ್ತದೆ. ಸಿಂಧಿನಲ್ಲಿ ಮಳೆಯ ನಿರೀಕ್ಷಣೆಯು ವಿಶೇಷವಾಗಿದೆ. ಅಲಹಾಬಾದಿನಲ್ಲಿ ಬಿಸಿಲಿನ ತಾಪವು ಮಿತಿಮೀರಿ ಅನೇಕ ಜನರು ಸತ್ತರು ಮತ್ತೂ ಅಸ್ವಸ್ಥರಾಗಿರುವರು.

ಕಲಕತ್ತಾದಲ್ಲಿ ಹಾಡುಗಾರಿಕೆಯಲ್ಲಿ ಪ್ರಸಿದ್ಧಳಾಗಿದ್ದು ಸತ್ತುಹೋದ ಮಾಲ್ಕಾಜಾನಿನ ಆಸ್ತಿಯು ಆಕೆಯ ಮಗನಾದ ತನಗೆ ಬರಬೇಕೆಂದು ಷೇಕ್ ಭಾಗಲು ಎಂಬುವನು, ಮಾಲ್ಕಾಜಾನಿನ ಮಗಳಾದ ಮತ್ತೂ ಕಲಕತ್ತಾದಲ್ಲಿ ಸಂಗೀತದಲ್ಲಿ ಬಹು ಪ್ರಖ್ಯಾತಿಯನ್ನು ಹೊಂದಿರುವ ಗೋಹರ್‌ಜಾನಳಮೇಲೆ ವಿವಾದವನ್ನು ಹೂಡಿರುವನು. "ಸಂಯುಕ್ತ ಪ್ರಾಂತಗಳಿಗೆ ಸೇರಿದ ಅಜಂಗರ್ ಡಿ॥ ನಲ್ಲಿ ನೀಲಿಯ ತೋಟಗಾರನಾಗಿದ್ದ ಹಾರ್ಡಿ ಎಂಬ ಆಂಗ್ಲೇಯನು ಬಹು ಸುಂದರಿಯಾದ ರುಕ್ಮಿಣಿಯೆಂಬ ಯುವತಿಯನ್ನು ಪೋಷಿಸಿ ಇಟ್ಟುಕೊಂಡನು. ಇವರಿಗೆ ಬೆಕ್ಕಿ ಮತ್ತೂ ಬೆಲ್ಲಾ ಎಂಬ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು. ಇವರಲ್ಲಿ ಬೆಕ್ಕಿ ಎಂಬುವಳು ಸ್ವಲ್ಪ ಕಾಲದ ಮೇಲೆ ಮಾಲ್ಕಾಜಾನ್ ಎಂದು ಕರೆಯಲ್ಪಟ್ಟು ಮಹಮ್ಮದೀಯ ಮತವನ್ನವಲಂಬಿಸಿ ಒಬ್ಬ ಮಹಮ್ಮದೀಯನನ್ನು ಮದುವೆಯಾದಳು. ಈ ಮಹಮ್ಮದೀಯನಿಗೆ ಮಾಲ್ಕಾಜಾನಿನ ಹೊಟ್ಟೆಯಲ್ಲಿ ನಾನು ಹುಟ್ಟಿದೆನಾದುದರಿಂದ ನನಗೆ ಅವಳಾಸ್ತಿಯು ಸೇರಬೇಕು." ಎಂದು ವಾದಿಯೂ, "ಮಾಲ್ಕಾಜಾನಳು ಇಂಗ್ಲೀಯಸ್ತ್ರೀಯಳಾಗಿದ್ದು, ರಾಬರ್ಟ್ ವಿಲಿಯಂ ಯೋ ಅರ್ಡ್ ಎಂಬ ಆಂಗ್ಲೇಯನನ್ನು ವಿವಾಹಮಾಡಿಕೊಂಡಳು. ಇವರಿಬ್ಬರಿಗೆ ಹುಟ್ಟಿದ ಗೋಹರ್ ಜಾನ್ ಎಂಬ ನಾನು ೧೮೭೩ ರಲ್ಲಿ ಅಲಹಾಬಾದಿನ ಮೆಥೋಡಿಸ್ಟ್ ದೇವಾಲಯದಲ್ಲಿ ನನಗೆ ಜ್ಞಾನಸ್ನಾನವಾಗಿರುವುದು. ನಾನು ಹುಟ್ಟಿದ ಕೊಂಚ ಕಾಲದಮೇಲೆ ನನ್ನ ತಂದೆಯಾದ ಯೋ ಅರ್ಡನು ನನ್ನ ತಾಯಿಯಾದ ಮಾಲ್ಕಾಜಾನಿನ ವಿವಾಹಸಂಬಂಧವನ್ನು ಕೋರ್ಟಿನ ಮೂಲಕ ನಿವೃತ್ತಿಮಾಡಿಕೊಂಡನು. ಆದರೆ ನಾನು ನನ್ನ ತಾಯಿಯ ವಶಕ್ಕೆ ಕೊಡಲ್ಪಟ್ಟುದರಿಂದ ೧೮೮೩ ರಲ್ಲಿ ನನ್ನನ್ನು ನನ್ನ ತಾಯಿಯು ಕಲಕತ್ತಾಕ್ಕೆ ಕರೆದುಕೊಂಡು ಬಂದು ನೆಲಸಿದಳು. ವಾದಿಯು ನಮ್ಮ ಮನೆಯಲ್ಲಿ ಸೇವಕನಾಗಿದ್ದುದರಿಂದ ನಮ್ಮ ತಾಯಿಯಾಸ್ತಿಯು ಅವನಿಗೆ ಸಲ್ಲತಕ್ಕದ್ದಲ್ಲವು." ಎಂದು ಪ್ರತಿವಾದಿಯೂ ವಾದಿಸುತ್ತಿರುವಳು.

ಪತ್ರವ್ಯವಹಾರ.

ಗುರುಲಿಂಗಪ್ಪ ಬಾಪುಪ್ಪ ಪಂಚನಹಾಳ ತಾ॥ ಕಚೇರಿ ಕಾರಕೂನ ಗದಗ, ಇವರು ನಮ್ಮ ಸ್ವಧರ್ಮದಲ್ಲಿ ಅಭಿಮಾನಿಗಳಾಗಿದ್ದರು. ಮತ್ತು ಧರ್ಮಸುಧಾರಣದಲ್ಲಿ ಬಹಳ ಮನಸ್ಸುಕೊಟ್ಟು ಉತ್ತೇಜನ ಕೊಡುತ್ತಿದ್ದರು. ಇವರು ಆಯಾಸ್ಥಳಗಳಲ್ಲಿ ಸಭೆಗಳನ್ನು ಕೂಡಿಸಿ, ನಮ್ಮೆಲ್ಲರ ಮತ್ತು ನಮ್ಮ ಪರಿವಾರದವರ ಅಜ್ಞಾನವನ್ನು ಹೋಗಲಾಡಿಸಿದರು. ಇಂಥಾ ಸ್ವಧರ್ಮಾಭಿಮಾನಿಗಳು ಮತ್ತು ಸದ್ಗುಣಿಗಳು ಆದ ಈ ಸತ್ಪುರುಷರು ಹೋದ [illegible] ತಿಂಗಳಲ್ಲಿ ಹಾವೇರಿ ತಾ॥ ಎತ್ತಿನಹಳ್ಳಿಯಲ್ಲಿ ಕಾಲಾಧೀನರಾಗಿ ಕೈಲಾಸವಾಸಿಗಳಾದರು. ಇವರು ಹೋದುದಕ್ಕೆ ನಮ್ಮೆಲ್ಲರಿಗೆ ದುಃಖ ಪ್ರಾಪ್ತವಾಗುತ್ತದೆ. ಅವರ್‍ಇಂಥ ಸುಜ್ಞರಿಗೆ ಪರಲೋಕದಲ್ಲಿ ದೇವರು ಶುಭವನ್ನೀಯಲೆಂದು ನಾವೆಲ್ಲರೂ ದೇವರನ್ನು ಪ್ರಾರ್ಥಿಸುವುದು ನಮ್ಮ ಕರ್ತವ್ಯವಾಗಿರುತ್ತದೆ.

ಓರ್ವ ಅಭಿಮಾನಿ.

ಶಿರಾ ಗ್ರಾಮದ ಕೋಟೆಯಲ್ಲಿ ಮ॥ ನಾಗೇಗೌಡರ ಮನೆಯಲ್ಲಿ ವಿವಾಹಲಗ್ನವು ನಡೆಯಿತು. ಈ ಲಗ್ನಕ್ಕೆ ಮಧುಗಿರಿ ಶಿರಾ ತಾ॥ ಗಳಿಂದಲೂ, ಇನ್ನೂ ಅನೇಕ ಕಡೆಯಿಂದಲೂ ಬಂಧುವರ್ಗ ಮೊದಲಾದವರು ಬಂದಿದ್ದರು. [illegible] ತಾ॥ ೪ ನೇ ಗುರುವಾರ ಶುಭಮುಹೂರ್ತದಲ್ಲಿ ವಿಧ್ಯುಕ್ತವಾಗಿ ಮದಲೂರು [illegible] ರುದ್ರದೇವರಿಂದ ಲಗ್ನವು ನೆರವೇರಿಸಲ್ಪಟ್ಟಿತು. ನಂತರ ಮ॥ ಶಿರಾಪುರಾಣದ [illegible] ನೆರವೇರಿಸಿದ್ದರು. ಕೋಡಿಗೇನಹಳ್ಳಿ ಮಠದ [illegible] ಸ್ವಾಮಿಗಳವರು [illegible]. ಮಧುಗಿರಿ ತಾ॥ [illegible] ಗ್ರಾಮದಲ್ಲಿರುವ ಮ॥ [illegible] ಉಪನ್ಯಾಸ ಮಾಡಿದ ನಂತರ ಮದಲೂರು [illegible] ರುದ್ರದೇವರು [illegible] ವೀರಶೈವ ವಿದ್ಯಾಭಿವೃದ್ಧಿಯ ವಿಷಯವಾಗಿಯೂ ಉಪನ್ಯಾಸ ಮಾಡಿದರು. [illegible] ಕೊಡಲ್ಪಟ್ಟಿತು. ನಂತರ ಈ ಗ್ರಾಮದಲ್ಲಿ ಕೆಲವು ದಿವಸಗಳಿಂದ ನಡೆಯುತ್ತಿರುವ [illegible] ವಿಚಾರವಾಗಿಯೂ, [illegible] ವಿಷಯವಾಗಿಯೂ ಮ॥ ನಾಗೇಗೌಡರು ಉಪನ್ಯಾಸಮಾಡಿದರು. ನಂತರ ಸಭಿಕರ [illegible] ಸಭೆಯು ವಿಸರ್ಜಿಸಲ್ಪಟ್ಟಿತು. ತಾ॥ ೯ನೇ ಶುಕ್ರವಾರದ [illegible] ವೀರಶೈವ ವಿದ್ಯಾವರ್ಧಕ ಸಂಘಕ್ಕೆ [illegible] ರೂ. [illegible] ಮನೆಯವರ ಮೂಲಕ ರವಾನಿಸಿರುತ್ತಾರೆ.

9-6-1911 [illegible].

ಬಾಗಲಕೋಟೆ.

ಈ ಊರ ಹವಾಮಾನವು ನೆಟ್ಟಗಿದ್ದು ರೋಗಾದಿಗಳೇನೂ ಇರುವುದಿಲ್ಲ. ಇಲ್ಲಿಗೆ ಕೊಲ್ಹಾಪುರ ನಾಟಕ ಕಂಪನಿಯವರು ಬಂದು ೧॥ ತಿಂಗಳ ಆಯಿತು. ಅತ್ಯುತ್ತಮವಾಗಿ ನಾಟಕವನ್ನು ಮಾಡುತ್ತಾ ಬಂದರು. ಇವರು ಆಡುವ ನಾಟಕಗಳಲ್ಲಿ ಶ್ರೀ ಬಸವೇಶ್ವರ ನಾಟಕವು ಬಹು ಸರಸವಾಗಿಯೂ, ಇದರಲ್ಲಿದ್ದ ವಿಷಯಗಳು ಪುರಾಣಕ್ಕನುಸರಿಸಿಯೂ ಇರುವುದರಿಂದ ಪ್ರೇಕ್ಷಕರು ಅತ್ಯಾನಂದವನ್ನು ಹೊಂದುವರು. ಆದ್ದರಿಂದ ಈ ನಾಟಕದ ಪ್ರಯೋಗಗಳು ಇಲ್ಲಿ೧೧-೧೨ ಸಾರಿ ಆದುವು. ಆದಾಗ್ಯೂ ಇನ್ನೂ ನೋಡುವ ಅಭಿಲಾಷೆಯಿಂದ ಬರುವ ಜನರ ದಾಟಿಯು ಇಷ್ಟೇ ಆಗುತ್ತದೆಂದು ಹೇಳಲಾಗದು. ಈ ಪ್ರಯೋಗವು ಪ್ರತಿ ಸೋಮವಾರ, ಬೃಹಸ್ಪತಿವಾರಗಳಲ್ಲಿ ಆಗುವುದು. ಆ ದಿವಸ ಊರದವರಿಂದ ಶ್ರೀ ಬಸವೇಶ್ವರನ ಜಾತ್ರೆಯಂತೆ ಜನರ ದಟ್ಟಣೆ ತೋರುವುದು. ಸೋಮವಾರ ಮತ್ತು ಬೃಹಸ್ಪತಿವಾರಗಳ ಸಂಜೆಯ ರೈಲ್ವೆ ಗಾಡಿಗಳಲ್ಲಿ ಆಲಮಟ್ಟಿ ಸ್ಟೇಷನಿನಿಂದಲೂ, ಅಲೂರ ಸ್ಟೇಷನಿನಿಂದಲೂ ಅತಿಶಯವಾಗಿ ಆದ ಜನರ ದಟ್ಟಣೆಯಿಂದ ಕೊಡಲಿಕ್ಕೆ ಅನುಕೂಲವಿಲ್ಲದ್ದರಿಂದ ಜನರು ಹಾದಿಬಾರಿಗಳಾಗಿ ಈ ಊರಿಗೆ ನಾಟಕ ನೋಡಲಿಕ್ಕೆ ಬರುವರು. ಅದರಂತೆ ನಾಟಕ ಬಂದಾದಕೂಡಲೆ ಬೆಳಗಿನ ಗಾಡಿಗಳು ಅಗದೀ ತುಂಬಿ ಜನರಿಗೆ ಸ್ಥಳ ಸಿಗದ ಕಾರಣ ಪುನ್ಹಾ ನಿಲ್ಲುವರು. ಕೆಲವರು ಅರ್ಧಹಾದಿಯಿಂದ ಸ್ವಗ್ರಾಮಕ್ಕೆ ಹೋಗುವರು. ಆದ್ದರಿಂದಲೇ ಈ ನಾಟಕ ಕಂಪನಿಯವರು ಇಲ್ಲಿ ಎಷ್ಟು ದಿವಸ ಇರುತ್ತಾರೆ ಇದನ್ನು ಹೇಳಲಾಗದು. ಕಾರಣ ರೇಲ್ವೆ ಟ್ರಾಫಿಕ್ ಮ್ಯಾನೇಜರರು ಸೋಮವಾರ, ಬೃಹಸ್ಪತಿವಾರ ಸಂಜೆಯ ಗಾಡಿಗಳಿಗೆ ಆಲಮಟ್ಟಿ ಮತ್ತು ಅಲೂರ ಸ್ಟೇಷನದಿಂದ ಬಾಗಲಕೋಟೆಗೆ ಬರುವ ಜನರ ಅನುಕೂಲಕ್ಕಾಗಿ ಸ್ಪೆಷಲ್ ಡಬ್ಬಿಗಳನ್ನು ಹಚ್ಚಬೇಕೆ ಹೋಗಬೇಕಾಗುತ್ತದೆ. ಹೊನ್ನೆ ಬೃಹಸ್ಪತಿವಾರ ತಾ॥ ೨೯-೬-೧೧ ದಿವಸ ಮಾಡಿ ತೋರಿಸಿದ ಶ್ರೀ ಬಸವೇಶ್ವರ ನಾಟಕಕ್ಕೆ ಹೊನ್ನಾಳಿದ ನಾಡಗೌಡರಾದ ಶ್ರೀಮಂತ ಅಪ್ಪಾಸಾಹೇಬರು ೨ ತೊಲೆಯ ಭಂಗಾರದ ಪದಕವನ್ನು ಕೊಟ್ಟರು. ಈ ಊರಿನ ಜನರು ತಮ್ಮ ಆಪ್ತೇಷ್ಟರನ್ನು ಸ್ವಗ್ರಾಮ ದೇವತೆಯ ಜಾತ್ರೆಗೆ ಕರಿಸಿದಂತೆ ಈ ನಾಟಕವನ್ನು ನೋಡಲಿಕ್ಕೆ ಕರೆಸುವರು.

ಒಬ್ಬ ಹಿತಚಿಂತಕ.

ಶ್ರೀ ವೀರಶೈವ ಮತಾಭಿವೃದ್ಧಿ ಸಭಾ, ಸಿದ್ಧರಹಳ್ಳಿ.

ಕಳೆದ ವೈಶಾಖ ಶು॥ ೧೨ (ತಾ॥ ೧೦-೫-೧೯೧೧) ಬುಧವಾರ ಮ॥ ರಾ॥ [illegible]ಪ್ಪನವರ ಮಕ್ಕಳು [illegible]ಪ್ಪನವರ ಮನೆಯಲ್ಲಿ ಮ॥ ರಾ॥ ಸದಾಶಿವಪ್ಪನವರ ಮಗಳು ಚಿ॥ ಸೌ॥ ದೇವೀರಮ್ಮನವರ ಲಗ್ನಕ್ಕಾಗಿ ನೆರೆದಿದ್ದ ಮಹಾಜನಗಳು ಕಲ್ಲುಣಿ ಮ॥ ರಾ॥ [illegible]ಪ್ಪನವರ ಮಲ್ಲಣ್ಣನವರ ಅಧ್ಯಕ್ಷತೆಯಲ್ಲಿ ನಡೆಸಿದ ಮೀಟಿಂಗಿನ ವಿವರಾ:— ಈ ವಿರೋಧಿಕೃತು ಸಂವತ್ಸರದ ವೈಶಾಖ ಶು॥ ೬ (ತಾ॥ ೪-೫-೧೯೧೧) ಗುರುವಾರ ನಡೆದಿದ್ದ ಪ್ರೊಸಿಡಿಂಗ್ಸು ಓದಲಾಯಿತು. ಸಿದ್ಧರಹಳ್ಳಿ ಶ್ರೀ ಗವಿಮಠದ ಶ್ರೀಮದ್ರಾಜಾಂತ ಸ್ವಾಮಿಗಳವರ ಅಪ್ಪಣೆಯ ಪ್ರಕಾರ [illegible] ಶಾಖ ಬ॥ ೫ ರಲ್ಲಿ ಶ್ರೀ ಮಠಕ್ಕೆ ವೇ. ಭದ್ರಪ್ಪನವರನ್ನು ಶ್ರೀ ಶ್ರೀ ರುದ್ರಸಿದ್ಧದೇವ ಸ್ವಾಮಿಗಳವರಿಗೆ ಶಿಷ್ಯರನ್ನಾಗಿ ಅಶ್ರಮಕ್ಕೆ [illegible] ನಿಶ್ಚಯಿಸಿರುವುದನ್ನು ಸದರಿ ವೇ॥ ಭದ್ರಪ್ಪನವರು ತಿಳಿದು ಈ ಆಶ್ರಮಕ್ಕೆ ಬೇಕಾದ ವಿದ್ಯಾಭ್ಯಾಸವನ್ನು ಮಾಡಿಕೊಂಡು ಬಂದನಂತರ ಆಶ್ರಮಸ್ವೀಕಾರಮಾಡುವುದಾಗಿ [illegible] ಸಭೆಯವರು ಅನುಮೋದಿಸಿ ಮುಂದೆ [illegible] ನಡೆಯಬೇಕಾದ ಆಶ್ರಮದ ವಿವಾಹವನ್ನು ನಿಲ್ಲಿಸಿದರು. ಸಿದ್ಧರಹಳ್ಳಿಯಲ್ಲಿರುವ [illegible] ನೆರೆದಿರುವ [illegible] ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಳ್ಳುವ ವಿಷಯಕ್ಕೆ ಅವಕಾಶಕೊಟ್ಟು ನನ್ನ ವಿಜ್ಞಾಪನೆಯನ್ನು ನೆರವೇರಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಸ್ವಾಮಿಗಳೇ!! ಕೈಲಾಸವಾಸಿಗಳಾದ ಮೈಸೂರು [illegible] ನಮ್ಮ ವೀರಶೈವರು ತಮ್ಮ ಮತಧರ್ಮವನ್ನು ಮರೆತು ಹಿಂದುಳಿದು ಬರುವುದನ್ನು ನೋಡಿ, ತಮ್ಮ ಸರ್ವಸ್ವವನ್ನೂ ಈ ಮತದ ಸೇವೆಗಾಗಿ ಅರ್ಪಿಸಿ ಅನೇಕರನ್ನು ಸನ್ಮಾರ್ಗಕ್ಕೆ ತಂದು ಮತದ ಪ್ರಾಕಶ್ಯಕ್ಕಾಗಿ "ಸ್ಟಾರ್" ಪತ್ರಿಕೆಯು ಮೂಲಕ ಸರ್ವರಿಗೂ ತೋರ್ಪಡಿಸುತ್ತಿದ್ದು ಸಮಾಜದ [illegible] ಈ ಮತಕ್ಕೆ ತುಂಬಾ [illegible] ಮಾಡಿದರೋ ಹಾಗೆಯೇ ಅವರು ಮತಕ್ಕೆ ಮಾಡಿದ ಉಪಕಾರವು [illegible] ಭೂಮಿಯಲ್ಲಿ ನಿಂತಿದೆ ಮುಂದೆ ಅತಿಶಯೋಕ್ತಿಯಲ್ಲವು. ಆದ್ದರಿಂದ ಅವರನ್ನು ನಾವುಗಳು ನಮ್ಮ ಪೂರ್ವಾತನರ ಸಮೂಹದಲ್ಲಿ ಒಬ್ಬರೆಂದು ಭಾವಿಸಿ ಅವರನ್ನು ಸ್ಮರಿಸುತ್ತಾ ಬಂದಲ್ಲಿ ಶಿವನು ಸಂತೋಷವುಳ್ಳವನಾಗುವನು. ಈ ವಿಷಯದಲ್ಲಿ ಆಗಮದಲ್ಲಿನ ಅನೇಕ [illegible] ಕೊಟ್ಟಿರುವುದನ್ನು ನಿಲ್ಲಿಸಿದ್ದೇನೆ. ಅಲ್ಲದೆ ಅವರ ಪ್ರಾಪ್ತವು ನಮ್ಮ ಸಮಾಜದಲ್ಲಿ ನಡೆದ [illegible] ನಮ್ಮ ಸಮಾಜದಲ್ಲಿ ನಡೆಯುವಂಥ [illegible] ನಮ್ಮ ಮತದ ಆಚಾರ್ಯ [illegible] ಆಚಾರ್ಯ ಸಂಭಾವನೆಯಂತೆ ವೈ. ವೈ. ವೀರಸಂಗಪ್ಪನವರ ಹೆಸರಿನಿಂದ ನಮ್ಮ ಭಕ್ತಸಮೂಹಕ್ಕೆ ಒಪ್ಪಿಸತಕ್ಕ ತಾಂಬೂಲಕ್ಕೆ ಹೊರತು ಒಂದು ತಾಂಬೂಲವನ್ನು ತೆಗೆದು ಅದಕ್ಕೆ ೧ ರೂ. ದಕ್ಷಿಣೆಯಾಗಿ ತೆಗೆಯಬೇಕು. ವಿವಾಹಕಾಲದಲ್ಲಿ ೧ ರೂ., ಶೋಭನದಲ್ಲಿ ೪ ಆ. ಈ ಮೇರೆ ಪಡೆವವರಿಬ್ಬರಿಂದಲೂ ವಸೂಲ್ ಮಾಡುವಂತೆ ಅಪ್ಪಣೆ ಆಗಬೇಕೆಂದು ನಾನು ಪ್ರಾರ್ಥಿಸುತ್ತೇನೆಂದು ಹೇಳಿದರು. ಇವರ ಪ್ರಾರ್ಥನೆಯನ್ನು ಚಾಮರಾಜನಗರ ತಾ॥ ಕುದೇರು ಗ್ರಾಮದಲ್ಲಿರುವ ಚೆನ್ನವೀರಪ್ಪನವರ ಮಕ್ಕಳು [illegible]ಪ್ಪನವರು ಕೊಳ್ಳೇಗಾಲದ ತಾ॥ [illegible] ರುವ ಸಿದ್ಧರಹಳ್ಳಿ ಮಾದಪ್ಪನವರ ಮಕ್ಕಳು [illegible]ಪ್ಪನವರು ಅನುಮೋದಿಸಿದರು. ಸರ್ವರೂ ಸಮ್ಮತಿಸಿದರು. ನಮ್ಮ ಸಿದ್ಧರಹಳ್ಳಿ ಗ್ರಾಮದಲ್ಲಿ ಈ ವಿಧವಾದ ವೈ. ವೀರಸಂಗಪ್ಪನವರ ಸಂಭಾವನೆಯನ್ನು ವಸೂಲ್ ಮಾಡುವುದಕ್ಕೂ, ಬಂದ ಸಂಭಾವನೆಯಲ್ಲಿ ಫಲವನ್ನು ವಿಕ್ರಯಿಸಿ ಅದನ್ನು ಮತ್ತೂ ದಕ್ಷಿಣೆಯಾಗಿ ಬಂದ ದ್ರವ್ಯವನ್ನು ಸಹಾ ಸ್ಟಾರ್ ಆಫೀಸಿಗೆ ಕಳುಹಿಸಿಕೊಟ್ಟು ಅವರಿಗೆ ತಿಳಿಸಿದುದಕ್ಕೆ ಅವರಿಂದ ರಸೀತಿ ತೆಗೆದು ಈ ಸಭೆಯವರು ಕೇಳಿದ ಕಾಲದಲ್ಲಿ ಈ ಸಂಬಂಧವಾದ ಜಮಾಖರ್ಚನ್ನು ತೋರಿಸುವುದಕ್ಕೂ ಸದರಿ ಸಿದ್ಧರಹಳ್ಳಿ ಗ್ರಾಮದಲ್ಲಿರುವ ಕೊಳ್ಳೇಗಾಲದ ಪುಟ್ಟಪ್ಪನವರಿಗೆ ಈ ಸಭೆಯವರು ವಹಿಸಿಕೊಟ್ಟಿರುವುದನ್ನು ಸದರಿ ಪುಟ್ಟಪ್ಪನವರು ಒಪ್ಪಿರುತ್ತಾರೆ. ಈ ಸಭೆಯವರು ಈರೀತಿ ತೀರ್ಮಾನಿಸಿರುವಂತೆ ಈ ದಿವಸ ವೇಲ್ಕಂಡ ಮ॥ ಸದಾಶಿವಪ್ಪನವರ ಮಗಳು ಚಿ॥ ಸೌ॥ ದೇವೀರಮ್ಮನ ಲಗ್ನದಲ್ಲಿ ಮ॥ ಸದಾಶಿವಪ್ಪನವರಿಂದ ೪ ಆ., ಮ॥ ಕಲ್ಲುಣಿ ಮಲ್ಲಣ್ಣನವರಿಂದ ೪ ಆ., ಒಟ್ಟು ಒಂದು ರೂ. ವಸೂಲು; ಫಲದ ಬಾಬತು ೩ ಪೈ ಒಟ್ಟು ೧-೦-೩ ವಸೂಲ್ ಮಾಡಿ ಮ॥ ರಾ॥ ಕೊಳ್ಳೇಗಾಲದ ಪುಟ್ಟಪ್ಪನವರ ವಶಕ್ಕೆ ಕೊಟ್ಟಿರುತ್ತೆ. ಈ ೧ ರೂ. [illegible] ಕಾಡರೆ ಒಂದಾಣೆ ಖರ್ಚು ಆಗುವುದರಿಂದ ಈ ಗ್ರಾಮದಲ್ಲಿ ಇನ್ನುಮುಂದೆ ಆಗತಕ್ಕ ಲಗ್ನಗಳಲ್ಲಿಯೂ ಕೂಡ ವಸೂಲ್ ಮಾಡಿ ಒಟ್ಟಿಗೆ ಕಳುಹಿಸಿಕೊಡಬೇಕೆಂದು ತೀರ್ಮಾನಿಸಿರುತ್ತಾರೆ. ಸಿದ್ಧರಹಳ್ಳಿ ಮ॥ ರಾ॥ ಸದಾಶಿವಪ್ಪನವರ ಮಗಳು ಚಿ॥ ರುದ್ರಮ್ಮನ ಲಗ್ನದಲ್ಲಿ ಅಂದರೆ (ತಾ॥ ೩೧-೫-೧೯೧೧ ರಲ್ಲಿ) ಚಿಟ್ಟೋ ಸದಾಶಿವಪ್ಪನವರಿಂದ ೪ ಆ., ಸಿದ್ಧರಹಳ್ಳಿ ಮ॥ ಕೊಮಾರಪ್ಪನವರಿಂದ ೪ ಆ.; ಫಲದ ಬಾಬತು ೧ ಆ., ಒಟ್ಟು ರೂ. ೦-೯-೦ ವಸೂಲಾಗಿರುತ್ತೆ. ಸಿದ್ಧರಹಳ್ಳಿ ಮ॥ ರಾ॥ ದೊಡ್ಡ ಕಾಡಪ್ಪನವರ ಮಗಳು ಚಿ॥ ಸೌ॥ ಪಾರ್ವತಮ್ಮನ ಲಗ್ನದಲ್ಲಿ ಚಿಟ್ಟೋ ಮಲ್ಲಪ್ಪನವರಿಂದ ೪ ಆ., ಮ॥ ಮಧ್ಯಾರ ಲಿಂಗಯ್ಯನ ಕುಂಡಿ ಚಂದ್ರಪ್ಪನವರಿಂದ ೪ ಆ; ಫಲದ ಬಾಬತು ೩ ಪೈ ಒಟ್ಟು ರೂ. ೦-೮-೩ ವಸೂಲಾಗಿದೆ. ತಾ॥ ೧-೬-೧೯೧೧ ರಲ್ಲಿ ಇವುಗಳನ್ನು ಸದರಿ ಪುಟ್ಟಪ್ಪನವರ ವಶಕ್ಕೆ ಕೊಟ್ಟಿರುತ್ತೆ. ಸಿದ್ಧರಹಳ್ಳಿ ಮ॥ ಚಿಕ್ಕಶೆಟ್ಟಿ ಸಿದ್ಧಬಸಪ್ಪನವರ ಮನೆ ಲಗ್ನದಲ್ಲಿ (೩-೬-೧೯೧೧ರಲ್ಲಿ) ವರನಗೃಹಪ್ರವೇಶದಲ್ಲಿ ಸದರಿಯವರಿಂದ ೪ ಆ., ಮಂಡ್ಯದಲ್ಲಿರುವ ಮ॥ ಗುರುಕಾಂತಪ್ಪನವರ ಹುಚ್ಚಣ್ಣನವರಿಂದ ೪ ಆ., ಫಲ ಪಕ್ಕೆರೆ ಬಾಬತು ೩ ಆ. ೩ ಪೈ ಒಟ್ಟು ರೂ. ೦-೧೧-೩ ವಸೂಲಾಗಿದೆ.

ತಾ॥ ೩-೬-೧೯೧೧ ರಲ್ಲಿ ಈ ಮೇಲ್ಕಂಡ ಸಭೆಯವರು ಸಭೆಗೂಡಿ ನಿರ್ಣಯಿಸಿದವಿವರ:—

ನಮ್ಮ ವೀರಶೈವ ಮತದ ಪ್ರತಿನಿಧಿಯಾಗಿ "ಸ್ಟಾರ್" ಪತ್ರಿಕೆಯು ಅನೇಕ ವರುಷಗಳಿಂದ ನಮ್ಮ ಮತಧರ್ಮವನ್ನು ಪ್ರಸಿದ್ಧಪಡಿಸುತ್ತಾ, ಇದಕ್ಕಾಗಿ ಉಂಟಾದ ಅನೇಕ ವಿಘ್ನಗಳನ್ನು ತನ್ನ ಸಾಮರ್ಥ್ಯದಿಂದ ಗೆದ್ದು, ಇದುವರೆಗೂ ನಡೆಯುತ್ತಾ ಬರುತ್ತಿರುವುದು ಸರ್ವರಿಗೂ ಸಂತೋಷದ ವಾರ್ತೆಯಾಗಿದೆ. ಆದರೆ ಪತ್ರಿಕೆಗಳು ಸಾಗಿಬರಬೇಕಾದರೆ [illegible] ಆಶ್ರಯದಿಂದಲೇ ಹೊರತು ಬೇರೆ ವಿಧದಿಂದ ಆಗಲಾರದು. ನಮ್ಮ ಭರತಖಂಡದಲ್ಲಿ ನಮ್ಮ ವೀರಶೈವ ಜನಾಂಗವು ೩೦ ಲಕ್ಷ ಇರುತ್ತದೆ. ೩೦ ಕ್ಕೆ ಒಬ್ಬರಂತೆಯಾದರೂ ಒಂದುಲಕ್ಷ ಪತ್ರಿಕೆಗಳು ಖರ್ಚಾಗಬಹುದು. ಸಾವಿರಕ್ಕೆ ಒಬ್ಬರಂತೆಯಾದರೂ ತರಿಸಿಕೊಳ್ಳುವಂತೆ ಕಾಣುವುದಿಲ್ಲ. ಇದನ್ನು ನೋಡಿದರೆ ನಮ್ಮ ಜನಾಂಗದ ಮತಾಭಿಮಾನವೆಂಬುದು ಎಷ್ಟರಮಟ್ಟಿಗೆ ಇದೆ ಎಂಬುದನ್ನು ಸರ್ವರೂ ಯೋಚಿಸತಕ್ಕದ್ದಾಗಿದೆ. ಮತ್ತು ಈ ಪತ್ರಿಕೆಯನ್ನು ತರಿಸಿಕೊಳ್ಳುವ ಮಹನೀಯರು ಚಂದಾ ಮೊಬಲಗನ್ನು ಕೊಡದೆಹೋದದ್ದರಿಂದ ವಿ. ಪಿ. ಮೂಲಕ ನಾವುಗಳು ಮಾಡಿ, ಈ ಪತ್ರಿಕೆಯು ಎಡಿಟರವರಿಗೆ ನಷ್ಟವನ್ನುಂಟುಮಾಡುತ್ತಿರುವರೆಂಬ. ಈ "ಸ್ಟಾರ್" ಆಫೀಸ್ ಎಡಿಟರವರು ಮಹಾಸಭೆಗಳಲ್ಲೂ ಮತ್ತು ಪತ್ರಿಕೆಗಳಲ್ಲೂ ಪ್ರಸಿದ್ಧಪಡಿಸುತ್ತಿರುವುದನ್ನು ನೋಡಿದರೆ ನಮ್ಮಗೆಲ್ಲಾ ಹೇಳಲಶಕ್ಯವಾದ ದುಃಖವು ಉಂಟಾಗಬಹುದು. ಆದರೆ ಈ ಪತ್ರಿಕೆಯಿಂದ ನಮ್ಮ ಜನಾಂಗಕ್ಕೆ ಉಂಟಾಗುವ ಉಪಕಾರವನ್ನೆಲ್ಲ ಹೇಳಿದರೂ ತೀರದ್ದಾಗಿದೆಯಾದುದರಿಂದ ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಹೆಂಡತಿ, ತನ್ನ ಮಕ್ಕಳು ಎಂಬ ಆಸೆಯು ಎಡೆಬಿಡದಿರುತ್ತದೆ. ಅದರಂತೆ ತನ್ನ ಮತವೆಂಬ ಅಭಿಮಾನವು ಸಾವಿರಕ್ಕೆ ಒಬ್ಬರಲ್ಲಿಯೂ ಕಾಣುವುದಿಲ್ಲ. ಮತವೆಂಬುವುದು ಮೋಕ್ಷಕ್ಕೆ ಮಾರ್ಗವಾಗಿದೆ. ಮೋಕ್ಷಾಪೇಕ್ಷೆಯು ಕರಣನಿಗಿಲ್ಲದೆ ಪಾಪಿಗೆ ಬೇಕಾಗಿರುವುದಿಲ್ಲ. ಮೋಕ್ಷಾಪೇಕ್ಷೆಯಿಂದ ಅನೇಕರು ತಮ್ಮ ಸರ್ವಸ್ವವನ್ನು ತೃಣೀಸಿದಾಗ್ಯೂ ಮತವನ್ನು ತ್ಯಜಿಸಲಿಕ್ಕಾಗಲಿಲ್ಲವೆಂಬ ಸಂಗತಿ ತಮ್ಮೆಲ್ಲರಿಗೂ ಗೊತ್ತೇ ಇರಬಹುದು. ನಮ್ಮ ಅನೇಕ ಶರಣರು ಮತದ ಪ್ರಾಕಶ್ಯಕ್ಕಾಗಿ ಅನೇಕವಾದಗಳನ್ನು ಮಾಡಿಯಿದ್ದರೆಂಬುದು ಪುರಾಣಗಳಿಂದ ತಿಳಿಯಬರುತ್ತದೆ. ಆದ್ದರಿಂದ ನಾವುಗಳೆಲ್ಲರೂ ಮತಕ್ಕಾಗಿ ಎಷ್ಟು ಸೇವೆಮಾಡಿದರೂ ತೀರದ್ದಾಗಿರುವ ಸಂಗತಿ ತಮ್ಮೆಲ್ಲರಿಗೂ ತಿಳಿಯದೆಯಿದ್ದ ಸಂಗತಿಯಲ್ಲ. ಅಥವಾ ತಾನು ಮಾಡುವುದಕ್ಕಾಗದಿದ್ದಲ್ಲಿ ಮಾಡತಕ್ಕವರಿಗೆ ಸಹಾಯವಾದರೂ ಮಾಡಿದ್ದೇಯಾದರೆ ಫಲ ಹೆಚ್ಚಾಗಿ ಬರುವುದು; ಆದಕ್ಕಾಗಿ "ಸ್ಟಾರ್" ಪತ್ರಿಕೆಯು ಯಾವಾಗ್ಗೂ ನಮ್ಮ ಮತದ ಸೇವೆಗಾಗಿಯೇ ತನ್ನ ಸರ್ವಸ್ವವನ್ನೂ ಉಪಯೋಗಿಸುತ್ತಿದೆ. ಇದಕ್ಕೆ ತಕ್ಕ ಪೋಷಣಾಕರ್ತರು ಯಾರೂ ಕಾಣಿಸುವುದಿಲ್ಲ. ಆದ್ದರಿಂದ ನಮ್ಮ ಮತದ ಪ್ರತಿಯೊಬ್ಬರೂ ಈ "ಸ್ಟಾರ್" ಪತ್ರಿಕೆಯ ಚಿರಜೀವಿತೆಗಾಗಿ ಭಾಗಿಗಳಾಗಬೇಕೆಂಬ ನನ್ನ ಬಿನ್ನಹವನ್ನು ನಮ್ಮ ವೀರಶೈವ ಬಂಧುಗಳೆಲ್ಲರೂ ಮುಂದಿಡಬೇಕೆಂತಲೂ, ಇದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂತಲೂ ಈ ಸಭೆಯವರನ್ನು ಪ್ರಾರ್ಥಿಸುತ್ತೇನೆ. ಎಂದು ಮ॥ ರಾ॥ ನರಸೀಪುರದ ಮಲ್ಲಪ್ಪನವರು ಹೇಳಿದರು. ಮ॥ ರಾ॥ ಸದಾಶಿವಪ್ಪನವರು ವರುಷ ೧ಕ್ಕೆ ಮನೆಯೊಂದಕ್ಕೆ ಒಂದಾಣೆಯಂತೆಯೂ, ಅಂಗಡಿ ೧ಕ್ಕೆ ಎರಡಾಣೆಯಂತೆಯೂ ಪ್ರತಿಯೊಬ್ಬ ವೀರಶೈವರೂ ಕೊಟ್ಟು ಈ "ಸ್ಟಾರ್" ಪತ್ರಿಕೆಯು ಚಿರಜೀವಿಯಾಗಿ ನಮ್ಮ ಮತಧರ್ಮವನ್ನು ಪ್ರಸಿದ್ಧಪಡಿಸುತ್ತಿರುವಂತೆ ಕಾಪಾಡಬೇಕೆಂದು ನಮ್ಮ ವೀರಶೈವ ಬಂಧುಗಳೆಲ್ಲರಲ್ಲಿಯೂ [illegible] ಪ್ರಾರ್ಥಿಸುತ್ತೇನೆ. ಅದರಂತೆ ನಮ್ಮ ಗ್ರಾಮದ ಸರ್ವರೂ [illegible] ಬೇಕೆಂದು ಈ ಸಭೆಯವರನ್ನು ಪ್ರಾರ್ಥಿಸುತ್ತೇನೆಂದು ಸೂಚಿಸಿದರು. ಮೇಲ್ಕಂಡ ೧-೨ ಅಣೆಯಂತೆ ಚಾಸ್ತಿ [illegible] ಸರ್ವರೂ ಕೊಟ್ಟು, ಸ್ಟಾರ್ ಪತ್ರಿಕಾ ಫಂಡು ಎಂದು ಒಂದು ಫಂಡನ್ನು ಏರ್ಪಾಡುಮಾಡಿ ಸದರಿ ಸ್ಟಾರ್ ಪತ್ರಿಕಾ ಎಡಿಟರವರಿಗೆ ವಹಿಸಬೇಕೆಂದು ಹೇಳಿದರು. ಮೇಲ್ಕಂಡ ಹೇಳಿಕೆಯನ್ನು ಮ॥ ರಾ॥ ಕೊಳ್ಳೇಗಾಲದ ಪುಟ್ಟಪ್ಪನವರು ಸರ್ವಾನುಮತದಿಂದ ಅನುಮೋದಿಸಿದರು. ಪ್ರತಿಯೊಂದು ಗ್ರಾಮದಲ್ಲಿ ಪ್ರತಿಯೊಬ್ಬರೂ ಈ ರೀತಿ ವಸೂಲ್ ಮಾಡಿ ಸ್ಟಾರ್ ಆಫೀಸಿಗೆ ಕಳುಹಿಸಿ ಕೀರ್ತಿಭಾಜನರಾಗಬೇಕೆಂದು ಈ ಸಭೆಯವರು ನಮ್ಮ ವೀರಶೈವ ಬಾಂಧವರೆಲ್ಲರನ್ನು ಬೇಡಿಕೊಳ್ಳುವುದಲ್ಲದೆ ೫ ರೂ. ಗೆ ಮೇಲ್ಪಟ್ಟು ಈ ರೀತಿಯಿಂದ ಹಣವನ್ನು ವಸೂಲ್ ಮಾಡಿ ರವಾನಿಸುವ ಕಾರ್ಯದರ್ಶಿಯ ಹೆಸರಿಗೆ ಗ್ರಾಮಕ್ಕೆ ಒಂದು ಪತ್ರಿಕೆಯನ್ನು ಕೊಡಬೇಕೆಂದು ಈ ಸಭೆಯವರು ಸ್ಟಾರ್ ಪತ್ರಿಕೆ ಎಡಿಟರವರನ್ನು ಪ್ರಾರ್ಥಿಸುತ್ತಾರೆ. ಈ ಗ್ರಾಮದ ಪಟೇಲರ ಲಗ್ನಕಾಲದಲ್ಲಿ ಕೈಲಾಸವಾಸಿ ವೈ. ವೀರಸಂಗಪ್ಪನವರ ಹೆಸರಿನಿಂದ ತೆಗೆಯುವ ದಕ್ಷಿಣೆ ತಾಂಬೂಲವನ್ನು ವಹಿಸುವ ಮ॥ ರಾ॥ ಕೊಳ್ಳೇಗಾಲದ ಪುಟ್ಟಪ್ಪನವರೇ ವಸೂಲ್ ಮಾಡುವಂತೆ ವಹಿಸಿ ಕೊಡಲ್ಪಟ್ಟಿರುತ್ತಾರೆ. ಸರ್ವರೂ ಮೇಲ್ಕಂಡ ಪ್ರಕಾರದಂತೆ ಸದರಿ ಕೊಳ್ಳೇಗಾಲದ ಪುಟ್ಟಪ್ಪನವರ ವಶಕ್ಕೆ ಕೊಟ್ಟಿರುತ್ತಾರೆ. ಈ ಮೇಲ್ಕಂಡವರಿಂದ ವಸೂಲಾದ ಮೊಬಲಗು ರೂ. ೨-೩-೩ ನೋಟ್ ಕಳುಹಿಸಿದೆ.

ಬಿ. ಮಲ್ಲಪ್ಪ, ಕಾರ್ಯದರ್ಶಿ.

[ಒಟ್ಟು ರೂ. ೩-೩-೯ ನ್ನು ವಿಶ್ವಾಸದಿಂದ ಸ್ವೀಕರಿಸುತ್ತೇವೆ.—ಸ. ಪ್ರ.]

ಜಾಹೀರಾತುಗಳು.

13

ವಿಧವಿಧವಾದ ಅಗರಬತ್ತಿಗಳು ಸೇರು ೧ಕ್ಕೆ ೧-೦-೦ [illegible]; ೩-೦-೦; ೨-೮-೦; ೧-೫-೦ ; ಕಸ್ತೂರಿ ಪಚ್ಚೆ ತೊಲಾ ೧ ಕ್ಕೆ ೧-೦-೦; ಜವಾದಿ ಗಂಧ ತೊಲಾ ೧ ಕ್ಕೆ ೧೦ ಆಣೆ; ಪಾಡಂಗ ಪೌಡ್ರು ೧ ಕ್ಕೆ ೩ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹದ ಧೂಪ ಸೇರು ೧ ಕ್ಕೆ ೪ ಆಣೆ, ಅವಶ್ಯವುಳ್ಳವರು ತರಿಸಿಕೊಳ್ಳಬಹುದು.

ಜಿ. ಎಸ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಜಗದಾದಿಗುರು ಶಂಕರಶತಾರಾಮ	೦-೪-೦
ಬಾಚರಸನ ಚರಿತ್ರೆ	೦-೫-೦
ಶರಣ್ಯಾಂಬೆ	೦-೩-೦
ಸಚಿತ್ರ ಕರ್ನಾಟಕ ಕನ್ನಡ ಮೊದಲ ಮಂಜರಿ	೦-೩-೦
ಸತೀಕ ಸಂಧ್ಯಾವ್ರತ	೦-೨-೦
ಸಚಿತ್ರ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವೀರಶೈವ ಮಂಜರಿ	೦-೨-೦
ವಸ್ತುಶಾಸ್ತ್ರ (ಮುಕ್ತಿಸಾಧನ)	೦-೨-೦
ಗುರುಶಂಕರ ದಿವ್ಯರಹಸ್ಯ	೦-೧-೦

ಅಂಚೆ ವೆಚ್ಚ ಬೇರೆ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

2 ಗುಣವಾಗದಿದ್ದರೆ ಹಣವಾಪಸ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಮೂತ್ರರೋಗಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಶಿವಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಭವಸ್ಥರ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳುಹಿಸಿದರೆ ಸರ್ವರೋಗಗಳಿನ ಕ್ಯಾಟಲಾಗ್ ಫುಕಟ ರವಾನಿಸುವೆವು.

ವಿಳಾಸ:—

ಕೃಷ್ಣಾಜಿ ಜಿ. ಎಸ್. ಜೋಶಿ ಮತ್ತು ಕಂಪನಿ,
ಪೋಸ್ಟ್, ಜಮಖಂಡಿ, ಜಿಲ್ಲಾ ದಕ್ಷಿಣ ಮರಾಠಾ.

13 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತುವನ್ನು ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು. ಮಿಂಚಿನ ಉಂಗುರವು.





ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲು ಹರಿತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಪುಂಸಕತ್ವ, ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಬಾಧೆ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ಶಿಶುವಿಗೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯು ಉಡುಗೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಹೊಂದುವಂತೆ ದೀರ್ಘವು ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಬಹಳವಾಗಲೂ ಒಂದೇ ಬೆರಳಿಗೆ ಸರಿಯಾಗುವಂತೆ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೦-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೦-೦. ಪೋಸ್ಟ್ ಖರ್ಚು ೦-೩-೦. ಒಮ್ಮೆಲೆ ೩ ವಸ್ತುಗಳನ್ನು ತರಿಸಿಕೊಳ್ಳುವವರಿಗೆ ೧ ವಸ್ತು ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ವಸ್ತುಗಳನ್ನು ತರಿಸಿಕೊಳ್ಳುವವರಿಗೆ ೨ ವಸ್ತುಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರದ ಅಳತೆಯಾಗಿ ದೋರದ ಅಳತೆ ಕಳುಹಿಸಬಹುದು. ಉಪಯೋಗದಿಂದ ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿದೆ. ವಿಲಕ್ಷಣಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕ ಬಾಲಕರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಮೂಲಕ ಕಳುಹಿಸುವೆವು.

ವಿಶಲದಾಸ ಮಾಡಗಾಂವ್ಕರ, ಮರ್ಚಂಟ್.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi. North Kanara District.

ಚಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

13

ಲೋಕಾಮೃತದ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಮುತ್ತಿನ ಭಸ್ಮ, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಧನುರ್ವಾತ, ಜ್ವರ, ಹೊಟ್ಟೆಶೂಲೆ

ಸಂಧುಗಳ ನೋವು ಮೈ ಕಾಲು ಹೊರತ (ಭಾರ), ಮೈ ನವೆ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಿಸಿಕೊಂಡು, ಯಾವಕಾಲದಲ್ಲಿಯೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ಸಣ್ಣ ಜ್ವರ, ಕೈಕೆಟ್ಟಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರುಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿ ದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರಗಳನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೩-೦.

೩. ದೃಢದಂತ ಚೂರ್ಣ—ಉಜ್ಜುತ್ತಾ ಬಂದರೆ ಪೊಸರುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕರೆತ್ತು, ಹಲ್ಲುಗಳ ಪಾಕ, ಇಗುಲೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ಸಂಧಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಕೇಳಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ರೋಗಿಗಳಿಗೆ ತರಿಸಿ ನೋಡಿ, ಅನುಭವಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಸಿದ್ಧೌಷಧ ಮೊದಲಾದವಕ್ಕೆ ಸಹಿತ ಡಬ್ಬಿ ೧ ಕ್ಕೆ ೦. ೪. ವಿರದಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ—ಶ್ರೀ ವೆಂಕಟಾಚಲ

ಕೃಷ್ಣರಾಜ, ಮೈಸೂರು.

ಪತ್ರವ್ಯವಹಾರ.

ಗುರುಲಿಂಗಪ್ಪ ಪಾಯಪ್ಪ ಸಂಚಿನಹಾಳ ತಾ॥ ಕಚೇರಿ ಕಾರಕೂನ ಗದಗ, ಇವರು ನಮ್ಮ ಸ್ವಧರ್ಮದಲ್ಲಿ ಅಭಿಮಾನಿಗಳಾಗಿದ್ದರು. ಮತ್ತು ಧರ್ಮಸುಧಾರಣದಲ್ಲಿ ಬಹಳ ಮನಸ್ಸುಕೊಟ್ಟು ಉತ್ತೇಜನ ಕೊಡುತ್ತಿದ್ದರು. ಇವರು ಆಯಾಸ್ಥಳಗಳಲ್ಲಿ ಸಭೆಗಳನ್ನು ಕೂಡಿಸಿ, ನಮ್ಮೆಲ್ಲರ ಮತ್ತು ನಮ್ಮ ಪರಿವಾರದವರ ಅಜ್ಞಾನವನ್ನು ಹೋಗಲಾಡಿಸಿದರು. ಇಂಥಾ ಸ್ವಧರ್ಮಾಭಿಮಾನಿಗಳು ಮತ್ತು ಸದ್ಗುಣಿಗಳು ಆದ ಈ ಸತ್ಪುರುಷರು ಹೋದ ಜೂನ್ ತಿಂಗಳಲ್ಲಿ ಹಾವೇರಿ ತಾ॥ ಎತ್ತಿನಹಳ್ಳಿಯಲ್ಲಿ ಕಾಲಾಧೀನರಾಗಿ ಕೈಲಾಸವಾಸಿಗಳಾದರು. ಇವರು ಹೋದುದಕ್ಕೆ ನಮ್ಮೆಲ್ಲರಿಗೆ ದುಃಖ ಪ್ರಾಪ್ತವಾಗುತ್ತದೆ. ಆದರೆ ಇಂಥ ಸುಜ್ಞರಿಗೆ ಪರಲೋಕದಲ್ಲಿ ದೇವರು ಸುಖವನ್ನೀಯಲೆಂದು ನಾವೆಲ್ಲರೂ ದೇವರನ್ನು ಪ್ರಾರ್ಥಿಸುವುದು ನಮ್ಮ ಕರ್ತವ್ಯವಾಗಿರುತ್ತದೆ.

ಓರ್ವ ಅಭಿಮಾನಿ.

ಶಿರಾ ಗ್ರಾಮದ ಕೋಟೆಯಲ್ಲಿ ಮ॥ ದಾಸೇಗೌಡರ ಮನೆಯಲ್ಲಿ ವಿವಾಹಲಗ್ನವು ನಡೆಯಿತು. ಈ ಲಗ್ನಕ್ಕೆ ಮಡಕಶಿರಾ ತಾ॥ ನಿಂದಲೂ, ಇನ್ನೂ ಅನೇಕ ಕಡೆಯಿಂದಲೂ ಬಂಧುವರ್ಗ ಮೊದಲಾದವರು ಬಂದಿದ್ದರು. ಜೂನ್ ತಾ॥ ೮ ನೇ ಗುರುವಾರ ಶುಭಮುಹೂರ್ತದಲ್ಲಿ ವಿಧ್ಯುಕ್ತವಾಗಿ ಮದಲೂರು ಊಡೇದಮಠದ ಪಟ್ಟದ ರುದ್ರದೇವರಿಂದ ಲಗ್ನವು ನಡೆಸಲ್ಪಟ್ಟಿತು. ನಂತರ ಮ॥ ಶಿರಾಪುರಾಣದ ಬಸಪ್ಪನವರು ಸಭೆಯನ್ನು ಸೇರಿಸಿದ್ದರು. ಕೋಡೀಗುಣಿ ಮಠದ ಆಚಾರಿ ರುದ್ರಯ್ಯನವರು ಆಗ್ರಾಸನವನ್ನು ವಹಿಸಿದ್ದರು. ಮಡಕಶಿರಾ ತಾ॥ ಜವನಡಿಕಿನ ಗ್ರಾಮದಲ್ಲಿರುವ ಮ॥ ಪುರಾಣದ ಚನ್ನರಾಯಪ್ಪನೆಂಬುವರು ಆಚಾರವಿಷಯವಾಗಿಯೂ, ವಿದ್ಯಾವಿಷಯವಾಗಿಯೂ ಉಪನ್ಯಾಸ ಮಾಡಿದ ನಂತರ ಮದಲೂರು ಊಡೇದಮಠದ ಪಟ್ಟದ ರುದ್ರದೇವರು ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ವೀರಶೈವ ವಿದ್ಯಾಫಂಡಿನ ವಿಷಯವಾಗಿಯೂ ಉಪನ್ಯಾಸ ಮಾಡಿದರು. ಆ ಕೂಡಲೇ ಎರಡುರೂಪಾಯಿಯು ತೆಗೆದು ಮದಲೂರು ಪಟ್ಟದ ರುದ್ರದೇವರ ವಶಕ್ಕೆ ಕೊಡಲ್ಪಟ್ಟಿತು. ನಂತರ ಈ ಗ್ರಾಮದಲ್ಲಿ ಕೆಲವು ದಿವಸಗಳಿಂದ ನಡೆಯುತ್ತಿರುವ ಮುಷ್ಟಿಫಂಡಿನ ವಿಚಾರವಾಗಿಯೂ, ಆಚಾರ ವಿಷಯವಾಗಿಯೂ ಮ॥ ದಾಸೇಗೌಡರು ಉಪನ್ಯಾಸಮಾಡಿದರು. ನಂತರ ಸಕಲರ ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ತಾ॥ ೯ನೇ ಶುಕ್ರವಾರವೇ ಬೆಂಗಳೂರು ವೀರಶೈವ ವಿದ್ಯಾವರ್ಧಕ ಫಂಡಿನ ಸೆಕ್ರೆಟರಿಗಳ ಹೆಸರಿಗೆ ಡಿಟೊ ೨ ರೂ. ಗಳನ್ನು ಮಣಿಯಾರ್ಡರ ಮೂಲಕ ರವಾನಿಸಿರುತ್ತೆ.

9-6-1911 ಚಂದಾದಾರ್.

ಬಾಗಲಕೋಟ.

ಈ ಊರ ಹವಾಮಾನವು ನೆಟ್ಟಗಿದ್ದು ರೋಗಾದಿಗಳೇನೂ ಇರುವುದಿಲ್ಲ. ಇಲ್ಲಿಗೆ ಕೊಣ್ಣೂರ ನಾಟಕ ಕಂಪೆನಿಯವರು ಬಂದು ೧॥ ತಿಂಗಳ ಲಾಗಾಯಿತು ಅತ್ಯುತ್ತಮವಾಗಿ ನಾಟಕವನ್ನು ಮಾಡುತ್ತಾ ಬಂದರು. ಇವರು ಆಡುವ ನಾಟಕಗಳಲ್ಲಿ ಶ್ರೀ ಬಸವೇಶ್ವರ ನಾಟಕವು ಬಹು ಸರಸವಾಗಿಯೂ, ಇದರಲ್ಲಿದ್ದ ವಿಷಯಗಳು ಪುರಾಣಕ್ಕನುಸರಿಸಿಯೂ ಇರುವುದರಿಂದ ಪ್ರೇಕ್ಷಕರು ಅತ್ಯಾನಂದವನ್ನು ಹೊಂದುವರು. ಆದ್ದರಿಂದ ಈ ನಾಟಕದ ಪ್ರಯೋಗಗಳು ಇಲ್ಲಿ೧೦-೧೨ ಸಾರಿ ಆದುವು. ಆದಾಗ್ಯೂ ಇನ್ನೂ ನೋಡುವ ಅಭಿಲಾಷೆಯಿಂದ ಬರುವ ಜನರ ದಾಟಿಯು ಇಷ್ಟೇ ಆಗುತ್ತದೆಂದು ಹೇಳಲಾಗದು. ಈ ಪ್ರಯೋಗವು ಪ್ರತಿ ಸೋಮವಾರ, ಬೃಹಸ್ಪತಿವಾರಗಳಲ್ಲಿ ಆಗುವುದು. ಆ ದಿವಸ ಥೇಟರದಮುಂದೆ ಶ್ರೀ ಬಸವೇಶ್ವರನ ಜಾತ್ರೆಯಂತೆ ಜನರ ದಟ್ಟಣೆ ತೋರುವುದು. ಸೋಮವಾರ ಮತ್ತು ಬೃಹಸ್ಪತಿವಾರಗಳ ಸಂಜೆಯ ರೈಲ್ವೆ ಗಾಡಿಗಳಲ್ಲಿ ಆಲಮಟ್ಟಿ ಸ್ಟೇಷನಿನಿಂದಲೂ, ಅಲೂರ ಸ್ಟೇಷನಿನಿಂದಲೂ ಅತಿಶಯವಾಗಿ ಆದ ಜನರ ದಟ್ಟಣೆಯಿಂದ ಕೊಡಲಿಕ್ಕೆ ಅನುಕೂಲವಿಲ್ಲದ್ದರಿಂದ ಜನರು ಪಾದಚಾರಿಗಳಾಗಿ ಈ ಊರಿಗೆ ನಾಟಕ ನೋಡಲಿಕ್ಕೆ ಬರುವರು. ಅದರಂತೆ ನಾಟಕ ಬಂದಾದಕೂಡಲೆ ಬೆಳಗಿನ ಗಾಡಿಗಳು ಅಗದೀ ತುಂಬಿ ಜನರಿಗೆ ಸ್ಥಳ ಸಿಗದ ಕಾರಣ ಪಸ್ತೀ ನಿಲ್ಲುವರು. ಕೆಲವರು ಅಡ್ಡಹಾದಿಯಿಂದ ಸ್ವಗ್ರಾಮಕ್ಕೆ ಹೋಗುವರು. ಆದ್ದರಿಂದಲೇ ಈ ನಾಟಕ ಕಂಪೆನಿಯವರು ಇಲ್ಲಿ ಎಷ್ಟು ದಿವಸ ಇರುತ್ತಾರೆ ಇದನ್ನು ಹೇಳಲಾಗದು. ಕಾರಣ ರೇಲ್ವೆ ಟ್ರಾಫಿಕ್ ಮ್ಯಾನೇಜರರು ಸೋಮವಾರ, ಬೃಹಸ್ಪತಿವಾರ ಸಂಜೆಯ ಗಾಡಿಗಳಿಗೆ ಆಲಮಟ್ಟಿ ಮತ್ತು ಅಲೂರ ಸ್ಟೇಷನದಿಂದ ಬಾಗಲಕೋಟೆಗೆ ಬರುವ ಜನರ ಅನುಕೂಲಕ್ಕಾಗಿ ಸ್ಪೆಷಲ್ ಡಬ್ಬಗಳನ್ನು ಹಚ್ಚಿದರೆ ಬೋಂಯಾಗುತ್ತದೆ. ಮೊನ್ನೆ ಬೃಹಸ್ಪತಿವಾರ ತಾ॥ ೨೯-೬-೧೧ ದಿವಸ ಮಾಡಿ ತೋರಿಸಿದ ಶ್ರೀ ಬಸವೇಶ್ವರ ನಾಟಕಕ್ಕೆ ಹೊನ್ಯಾಳದ ನಾಡಗೌಡರಾದ ಶ್ರೀಮಂತ ಅಪ್ಪಾಸಾಹೇಬರು ೨ ತೊಲೆಯ ಭಂಗಾರದ ಪದಕವನ್ನು ಕೊಟ್ಟರು. ಈ ಊರಿನ ಜನರು ತಮ್ಮ ಆಪ್ತೇಷ್ಟರನ್ನು ಸ್ವಗ್ರಾಮ ದೇವತೆಯ ಜಾತ್ರೆಗೆ ಕರೆಸಿದಂತೆ ಈ ನಾಟಕವನ್ನು ನೋಡಲಿಕ್ಕೆ ಕರೆಸುವರು.

ಒಬ್ಬ ಹಿತಚಿಂತಕ.

ಶ್ರೀ ವೀರಶೈವ ಮತಾಭಿವೃದ್ಧಿ ಸಭಾ, ಸಿದ್ಧರಹಳ್ಳಿ.

ಕಳೆದ ವೈಶಾಖ ಶು॥ ೧೨ (ತಾ॥ ೧೦-೫-೯೧೧) ಬುಧವಾರ ಮ॥ರಾ॥ ರುಬ್ಬಪ್ಪನವರ ಮಕ್ಕಳು ನಂಜಪ್ಪನವರ ಮನೆಯಲ್ಲಿ ಮ॥ರಾ॥ ಸದಾಶಿವಪ್ಪನವರ ಮಗಳು ಸೌ॥ ದೇವೀರಮ್ಮನವರ ಲಗ್ನಕ್ಕಾಗಿ ನೆರೆದಿದ್ದ ಮಹಾಜನಗಳು ಕಲ್ಕುಣಿ ಮ॥ ರಾ॥ ಜಂಬಪ್ಪನವರ ಮಲ್ಲಣ್ಣನವರ ಅಧ್ಯಕ್ಷತೆಯಲ್ಲಿ ನಡೆಸಿದ ಮೀಟಿಂಗಿನ ವಿವರಾ:— ಈ ವಿರೋಧಿಕೃತು ಸಂವತ್ಸರದ ವೈಶಾಖ ಶು॥ ೬ (ತಾ॥ ೪-೫-೯೧೧) ಗುರುವಾರ ನಡೆದಿದ್ದ ಪ್ರೊಸೀಡಿಂಗ್ಸ್ ಓದಲಾಯಿತು. ಸಿದ್ಧರಹಳ್ಳಿ ಶ್ರೀ ಗವಿಮಠದ ಶ್ರೀಮಹಾಂತ ಸ್ವಾಮಿಗಳವರ ಅಪ್ಪಣೆಯಪ್ರಕಾರ ಇದೇ ವೈಶಾಖ ಬ॥ ೫ ರಲ್ಲಿ ಶ್ರೀ ಮಠಕ್ಕೆ ವೇ. ಭದ್ರಪ್ಪನವರನ್ನು ಶ್ರೀ ಶ್ರೀ ರುದ್ರಶಿವಯೋಗಿ ಸ್ವಾಮಿಗಳವರಿಗೆ ಶಿಷ್ಯರನ್ನಾಗಿ ಅತ್ಯಾಶ್ರಮಕೊಡಿಸಬೇಕೆಂದು ನಿಶ್ಚಯಿಸಿರುವುದನ್ನು ಸದರಿ ವೇ॥ ಭದ್ರಪ್ಪನವರು ತಿಳಿದು ಈ ಆಶ್ರಮಕ್ಕೆ ಬೇಕಾದ ವಿದ್ಯಾಭ್ಯಾಸವನ್ನು ಮಾಡಿಕೊಂಡು ಬಂದನಂತರ ಆಶ್ರಮಸ್ವೀಕಾರಮಾಡುವುದಾಗಿ ಹೇಳಿದುದರಿಂದ ಸಭೆಯವರು ಅನುಮೋದಿಸಿ ಪಂಚಮಿಯಲ್ಲಿ ನಡೆಯಬೇಕಾದ ಆಶ್ರಮದ ಏರ್ಪಾಟನ್ನು ನಿಲ್ಲಿಸಿದರು. ಸಿದ್ಧರಹಳ್ಳಿಯಲ್ಲಿರುವ ನರಸೀಪುರದ ಮಲ್ಲಪ್ಪನಾದ ನಾನು ಇಲ್ಲಿ ನೆರೆದಿರುವ ಸಭಿಕ ಮಹಾಶಯರ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಳ್ಳುವ ವಿಷಯಕ್ಕೆ ಅವಕಾಶಕೊಟ್ಟು ನನ್ನ ವಿಜ್ಞಾಪನೆಯನ್ನು ನೆರವೇರಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಸ್ವಾಮಿಗಳೆ! ಕೈಲಾಸವಾಸಿಗಳಾದ ಮೈಸೂರು ಯಜಮಾನ ವೀರಸಂಗಪ್ಪನವರು ನಮ್ಮ ವೀರಶೈವರು ತಮ್ಮ ಮತಧರ್ಮವನ್ನು ಮರೆತು ಹಿಂದುಳಿದು ಬರುವುದನ್ನು ಯೋಚಿಸಿ, ತಮ್ಮ ಸರ್ವಸ್ವವನ್ನೂ ಈ ಮತದ ಸೇವೆಗಾಗಿ ಅರ್ಪಿಸಿ ಅನೇಕರನ್ನು ಸನ್ಮಾರ್ಗಕ್ಕೆ ತಂದು ಮತದ ಪ್ರಾಶಸ್ತ್ಯವನ್ನು ಸ್ಟಾರ್ ಪತ್ರಿಕೆಯ ಮೂಲಕ ಸರ್ವರಿಗೂ ತೋರ್ಪಡಿಸುತ್ತಿದ್ದು ಶಿವಸಾಯುಜ್ಯವನ್ನು ಹೊಂದಿ ಈ ಮತಕ್ಕೆ ತುಂಬಾ ಸಂಕಟವನ್ನುಂಟು ಮಾಡಿದರೆಂದಾಗ್ಯೂ ಅವರು ಮತಕ್ಕೆ ಮಾಡಿದ ಉಪಕಾರವು ಆ ಚಂದ್ರಾರ್ಕವಾಗಿಯೂ ಭೂಮಿಯಲ್ಲಿ ನಿಂತಿದೆಯಂದರೆ ಅತಿಶಯೋಕ್ತಿಯಲ್ಲವು. ಆದ್ದರಿಂದ ಅವರನ್ನು ನಾವುಗಳು ನಮ್ಮ ಪುರಾತನರ ಸಮೂಹದಲ್ಲಿ ಒಬ್ಬರೆಂದು ಭಾವಿಸಿ ಅವರನ್ನು ಸ್ಮರಿಸುತ್ತಾ ಬಂದಲ್ಲಿ ಶಿವನು ಸಂತೋಷಭರಿತನಾಗುವನು. ಈ ವಿಷಯದಲ್ಲಿ ಆಗಮವಚನ ಅನೇಕವಿದ್ದಾಗ್ಯೂ ಟೈಂ ಸಾಲದ್ದರಿಂದ ಅವುಗಳನ್ನೆಲ್ಲಾ ಬಿನ್ನವಿಸಿಕೊಳ್ಳುವುದನ್ನು ನಿಲ್ಲಿಸಿದ್ದೇನೆ. ಅಲ್ಲದೆ ಅವರ ಜ್ಞಾಪಕವು ನಮ್ಮ ಸಮಾಜದಲ್ಲಿ ಸರ್ವದಾ ನೆಲೆಗೊಂಡಿರುವದಕ್ಕಾಗಿ ನಮ್ಮ ಸಮಾಜದಲ್ಲಿ ನಡೆಯತಕ್ಕ ಶುಭಶೋಭನಾದಿಕಾರ್ಯಗಳಲ್ಲಿ ನಮ್ಮ ಮತದ ಆಚಾರ್ಯರಿಗೋಸ್ಕರ ತೆಗೆಯುವ ಆಚಾರ್ಯ ಸಂಭಾವನೆಯಂತೆ ಕೈ. ವೈ. ವೀರಸಂಗಪ್ಪನವರ ಹೆಸರಿನಿಂದ ನಮ್ಮ ಭಕ್ತಸಮೂಹಕ್ಕೆ ಒಪ್ಪಿಸತಕ್ಕ ತಾಂಬೂಲಕ್ಕೆ ಮೊದಲು ಒಂದು ತಾಂಬೂಲವನ್ನು ತೆಗೆದು ಅದಕ್ಕೆ ೧ ರೂ. ದಕ್ಷಿಣೆಯಾಗಿ ತೆಗೆಯಬೇಕು. ವಿವಾಹಕಾಲದಲ್ಲಿ ೧ ರೂ., ಶೋಭನದಲ್ಲಿ ೮ ಆ. ಈ ಮೇರೆ ವಧೂವರರಿಬ್ಬರಿಂದಲೂ ವಸೂಲ್ ಮಾಡುವಂತೆ ಅಪ್ಪಣೆ ಆಗಬೇಕೆಂದು ನಾನು ಪ್ರಾರ್ಥಿಸುತ್ತೇನೆಂದು ಹೇಳಿದರು. ಇವರ ಪ್ರಾರ್ಥನೆಯನ್ನು ಚಾಮರಾಜನಗರ ತಾ॥ ಕುದೇರು ಗ್ರಾಮದಲ್ಲಿರುವ ಚನ್ನವೀರಪ್ಪನವರ ಮಕ್ಕಳು ಹುಚ್ಚಪ್ಪನವರು ಕೊಳ್ಳೇಗಾಲದ ತಾ॥ ಪಾಳ್ಯದಲ್ಲಿರುವ ಸಿದ್ಧರಹಳ್ಳಿ ಮಾದಪ್ಪನವರ ಮಕ್ಕಳು ಮಲ್ಲಪ್ಪನವರು ಅನುಮೋದಿಸಿದರು. ಸರ್ವರೂ ಸಮ್ಮತಿಸಿದರು. ನಮ್ಮಿ ಸಿದ್ಧರಹಳ್ಳಿ ಗ್ರಾಮದಲ್ಲಿ ಈ ವಿಧವಾದ ವೈ. ವೀರಸಂಗಪ್ಪನವರ ಸಂಭಾವನೆಯನ್ನು ವಸೂಲ್ ಮಾಡುವುದಕ್ಕೂ, ಬಂದ ಸಂಭಾವನೆಯಲ್ಲಿ ಫಲವನ್ನು ವಿಕ್ರಯಿಸಿ ಅದನ್ನು ಮತ್ತೂ ದಕ್ಷಿಣೆಯಾಗಿ ಬಂದ ದ್ರವ್ಯವನ್ನು ಸಹಾ ಸ್ಟಾರ್ ಆಫೀಸಿಗೆ ಕಳುಹಿಸಿಕೊಟ್ಟು ಅವರಿಗೆ ತಲಪಿದುದಕ್ಕೆ ಅವರಿಂದ ರಶೀತಿ ತೆಗೆದು ಈ ಸಭೆಯವರು ಕೇಳಿದ ಕಾಲದಲ್ಲಿ ಈ ಸಂಬಂಧವಾದ ಜಮಾಖರ್ಚನ್ನು ತೋರಿಸುವುದಕ್ಕೂ ಸದರಿ ಸಿದ್ಧರಹಳ್ಳಿ ಗ್ರಾಮದಲ್ಲಿರುವ ಕೊಳ್ಳೇಗಾಲದ ಪುಟ್ಟಪ್ಪನವರಿಗೆ ಈ ಸಭೆಯವರು ವಹಿಸಿಕೊಟ್ಟಿರುವುದನ್ನು ಸದರಿ ಪುಟ್ಟಪ್ಪನವರು ಒಪ್ಪಿರುತ್ತಾರೆ. ಈ ಸಭೆಯವರು ಈರೀತಿ ತೀರ್ಮಾನಿಸಿರುವಂತೆ ಈ ದಿವಸ ಮೇಲ್ಕಂಡ ಮ॥ ಸದಾಶಿವಪ್ಪನವರ ಮಗಳು ಸೌ॥ ದೇವೀರಮ್ಮನ ಲಗ್ನದಲ್ಲಿ ಮ॥ ಸದಾಶಿವಪ್ಪನವರಿಂದ ೮ ಆ., ಮ॥ ಕಲ್ಕುಣಿ ಮಲ್ಲಣ್ಣನವರಿಂದ ೮ ಆ., ಒಟ್ಟು ಒಂದು ರೂ. ವಸೂಲು; ಫಲದ ಬಾಬತು ೩ ಪೈ ಒಟ್ಟು ೧-೦-೩ ವಸೂಲ್ ಮಾಡಿ ಮ॥ರಾ॥ ಕೊಳ್ಳೇಗಾಲದ ಪುಟ್ಟಪ್ಪನವರ ವಶಕ್ಕೆ ಕೊಟ್ಟಿರುತ್ತೆ. ಈ ೧ ರೂ. ಮನಿಯಾರ್ಡರು ಮಾಡಬೇಕಾದರೆ ಒಂದಾಣೆ ಖರ್ಚು ಆಗುವುದರಿಂದ ಈ ಗ್ರಾಮದಲ್ಲಿ ಇನ್ನುಮುಂದೆ ಆಗತಕ್ಕ ಲಗ್ನಗಳೆಲ್ಲಿಯೂ ಕೂಡ ವಸೂಲ್ ಮಾಡಿ ಒಟ್ಟಿಗೆ ಕಳುಹಿಸಿಕೊಡಬೇಕೆಂದು ತೀರ್ಮಾನಿಸಿರುತ್ತಾರೆ. ಸಿದ್ಧರಹಳ್ಳಿ ಮ॥ರಾ॥ ಸದಾಶಿವಪ್ಪನವರ ಮಗಳು ಸೌ॥ ರುದ್ರಮ್ಮನ ಲಗ್ನದಲ್ಲಿ ಅಂದರೆ (ತಾ॥ ೨೧-೫-೯೧೧ ರಲ್ಲಿ) ಡಿಟೋ ಸದಾಶಿವಪ್ಪನವರಿಂದ ೮ ಆ., ಸಿದ್ಧರಹಳ್ಳಿ ಮ॥ ಕೊಮಾರಪ್ಪನವರಿಂದ ೮ ಆ.; ಫಲದ ಬಾಬತು ೧ ಆ., ಒಟ್ಟು ರೂ. ೧-೧-೦ ವಸೂಲಾಗಿರುತ್ತೆ. ಸಿದ್ಧರಹಳ್ಳಿ ಮ॥ರಾ॥ ದೊಡ್ಡ ಕಾಡಪ್ಪನವರ ಮಗಳು ಸೌ॥ ಪಾರ್ವತಮ್ಮನ ಲಗ್ನದಲ್ಲಿ ಡಿಟೋ ಮಲ್ಲಪ್ಪನವರಿಂದ ೮ ಆ., ಮ॥ ಮದ್ದಾಗರ ಲಿಂಗಯ್ಯನ ಕುಂಡಿ ಚಂದ್ರಪ್ಪನವರಿಂದ ೮ ಆ; ಫಲದ ಬಾಬತು ೩ ಪೈ ಒಟ್ಟು ರೂ. ೧-೦-೩ ವಸೂಲಾಗಿದೆ. ತಾ॥ ೧-೫-೯೧೧ ರಲ್ಲಿ ಇವುಗಳನ್ನು ಸದರಿ ಪುಟ್ಟಪ್ಪನವರ ವಶಕ್ಕೆ ಕೊಟ್ಟಿರುತ್ತೆ. ಸಿದ್ಧರಹಳ್ಳಿ ಮ॥ ಚಿಕ್ಕಿರೆ ಸಿದ್ಧಬಸಪ್ಪನವರ ಮನೆ ಲಗ್ನದಲ್ಲಿ (೩-೩-೧೧ರಲ್ಲಿ) ವರನಗೃಹಪ್ರವೇಶದಲ್ಲಿ ಸದರಿಯವರಿಂದ ೪ ಆ., ಮಂಡ್ಯದಲ್ಲಿರುವ ಮ॥ ಗುರುಶಾಂತಪ್ಪನವರ ಹುಚ್ಚಣ್ಣನವರಿಂದ ೪ ಆಣೆ., ಫಲ ವಗೈರೆ ಬಾಬತು ೩ ಆ. ೩ ಪೈ ಒಟ್ಟು ರೂ. ೦-೧೧-೩ ವಸೂಲಾಗಿದೆ.

ತಾ॥ ೩-೬-೯೧೧ ರಲ್ಲಿ ಈ ಮೇಲ್ಕಂಡ ಸಭೆಯವರು ಸಭೆಗೂಡಿ ನಿರ್ಣಯಿಸಿದವಿವರ:—

ನಮ್ಮ ವೀರಶೈವ ಮತದ ಪ್ರತಿನಿಧಿಯಾಗಿ "ಸ್ಟಾರ್" ಪತ್ರಿಕೆಯು ಅನೇಕ ವರುಷಗಳಿಂದ ನಮ್ಮ ಮತಧರ್ಮವನ್ನು ಪ್ರಸಿದ್ಧಪಡಿಸುತ್ತಾ, ಇದಕ್ಕಾಗಿ ಉಂಟಾದ ಅನೇಕ ವಿಘ್ನಗಳನ್ನ ತನ್ನ ಸಾಮರ್ಥ್ಯದಿಂದ ಗೆದ್ದು, ಇದುವರೆಗೂ ನಡೆದುಕೊಂಡು ಬರುತ್ತಿರುವುದು ಸರ್ವರಿಗೂ ಸಂತೋಷದ ವಾರ್ತೆಯಾಗಿದೆ. ಆದರೆ ಪತ್ರಿಕೆಗಳು ಸಾರೋದ್ಧಾರವಾಗಿ ನಡೆಯಬೇಕಾದರೆ ಚಂದಾದಾರರ ಆಶ್ರಯದಿಂದಲೇ ಹೊರತು ಬೇರೆ ವಿಧದಿಂದ ಆಗಲಾರದು. ನಮ್ಮ ಭರತಖಂಡದಲ್ಲಿ ನಮ್ಮ ವೀರಶೈವ ಜನಾಂಗವು ೩೫ ಲಕ್ಷ ವಿರುತ್ತದೆ. ೩೫ ಕ್ಕೆ ಒಂದರಂತೆಯಾದರೂ ಒಂದುಲಕ್ಷ ಪತ್ರಿಕೆಗಳು ಬಿಕರಿಯಾಗಬಹುದು. ಸಾವಿರಕ್ಕೆ ಒಂದರಂತೆಯಾದರೂ ತರಿಸಿಕೊಳ್ಳುವಂತೆ ಕಾಣುವುದಿಲ್ಲ. ಇದನ್ನ ನೋಡಿದರೆ ನಮ್ಮ ಜನಾಂಗದ ಮತಾಭಿಮಾನವೆಂಬುದು ಎಷ್ಟರಮಟ್ಟಿಗೆ ಇದೆ ಎಂಬುದನ್ನು ಸರ್ವರೂ ಯೋಚಿಸತಕ್ಕದಾಗಿದೆ. ಮತ್ತು ಈ ಪತ್ರಿಕೆಯನ್ನ ತರಿಸಿಕೊಳ್ಳುವ ಮಹನೀಯರು ಚಂದಾ ಮೊಬಲಗನ್ನು ಕೊಡದೆಹೋದದ್ದರಿಂದ ವಿ. ಪಿ. ಮೂಡಿದ್ದನ್ನ ವಾಪಸು ಮಾಡಿ, ಈ ಪತ್ರಿಕೆಯ ಎಡಿಟರವರಿಗೆ ನಷ್ಟವನ್ನುಂಟುಮಾಡುತ್ತಿರುವರೆಂದು. ಈ "ಸ್ಟಾರ್" ಆಫೀಸ್ ಎಡಿಟರವರು ಮಹಾಸಭೆಗಳಲ್ಲೂ ಮತ್ತೂ ಪತ್ರಿಕೆಗಳಲ್ಲೂ ಪ್ರಸಿದ್ಧಪಡಿಸುತ್ತಿರುವುದನ್ನ ನೋಡಿದರೆ ನಮ್ಮಗಳಿಗೆಲ್ಲಾ ಹೇಳಲಸಾಧ್ಯವಾದ ದುಃಖವು ಉಂಟಾಗಬಹುದು. ಆದರೆ ಈ ಪತ್ರಿಕೆಯಿಂದ ನಮ್ಮ ಜನಾಂಗಕ್ಕೆ ಉಂಟಾಗುವ ಉಪಕಾರವನ್ನೆಷ್ಟು ಹೇಳಿದರೂ ತೀರದ್ದಾಗಿದೆಯಾದುದರಿಂದ ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಹೆಂಡತಿ, ತನ್ನ ಮಕ್ಕಳು ಎಂಬ ಆಸೆಯು ಎಡಬಿಡದಿರುತ್ತಿದೆ. ಅದರಂತೆ ತನ್ನ ಮತವೆಂಬ ಅಭಿಮಾನವು ಸಾವಿರಕ್ಕೆ ಒಬ್ಬರಲ್ಲಿಯೂ ಕಾಣುವುದಿಲ್ಲ. ಮತವೆಂಬುವುದು ಮೋಕ್ಷಕ್ಕೆ ಮಾರ್ಗವಾಗಿದೆ. ಮೋಕ್ಷಾಪೇಕ್ಷೆಯು ಶರಣನಿಗಲ್ಲದೆ ಪಾಪಿಗೆ ಬೇಕಾಗಿರುವುದಿಲ್ಲ. ಮೋಕ್ಷಾಪೇಕ್ಷೆಯಿಂದ ಅನೇಕರು ತಮ್ಮ ಸರ್ವಸ್ವವನ್ನ ತ್ಯಜಿಸಿದಾಗ್ಯೂ ಮತವನ್ನ ತ್ಯಜಿಸಲಿಕ್ಕಾಗಲಿಲ್ಲವೆಂಬ ಸಂಗತಿ ತಮ್ಮೆಲ್ಲರಿಗೂ ಗೊತ್ತೇ ಯಿರಬಹುದು ನಮ್ಮ ಅನೇಕ ಶರಣರು ಮತದ ಪ್ರಾಶಸ್ತ್ಯಕ್ಕಾಗಿ ಅನೇಕಪವಾಡಗಳನ್ನ ಮಾಡಿಯಿದ್ದರೆಂಬುದು ಪುರಾಣಗಳಿಂದ ತಿಳಿಯಬರುತ್ತದೆ. ಆದ್ದರಿಂದ ನಾವುಗಳೆಲ್ಲರೂ ಮತಕ್ಕಾಗಿ ಎಷ್ಟು ಸೇವೆಮಾಡಿದರೂ ತೀರದ್ದಾಗಿರುವ ಸಂಗತಿ ತಮ್ಮೆಲ್ಲರಿಗೂ ತಿಳಿಯದೆಯಿದ್ದ ಸಂಗತಿಯಲ್ಲ. ಅಥವಾ ತಾನು ಮಾಡುವುದಕ್ಕಾಗದಿದ್ದಲ್ಲಿ ಮಾಡತಕ್ಕವರಿಗೆ ಸಹಾಯಮಾಡಿದ್ದೇಯಾದರೆ ಫಲ ಹೆಚ್ಚಾಗಿ ಬರುವುದು; ಅದಕ್ಕಾಗಿ "ಸ್ಟಾರ್" ಪತ್ರಿಕೆಯು ಯಾವಾಗ್ಗೂ ನಮ್ಮ ಮತದ ಸೇವೆಗಾಗಿಯೇ ತನ್ನ ಸರ್ವಸ್ವವನ್ನೂ ಉಪಯೋಗಿಸುತ್ತಿದೆ. ಇದಕ್ಕೆ ತಕ್ಕ ಪ್ರೋತ್ಸಾಹಕರ್ತರು ಯಾರೂ ಕಾಣಿಸುವುದಿಲ್ಲ. ಆದ್ದರಿಂದ ನಮ್ಮ ಮತದ ಪ್ರತಿಯೊಬ್ಬರೂ ಈ "ಸ್ಟಾರ್" ಪತ್ರಿಕೆಯು ಚಿರಜೀವಿತೆಗಾಗಿ ಭಾಗಿಗಳಾಗಬೇಕೆಂಬ ನನ್ನ ಬಿನ್ನಪವನ್ನು ನಮ್ಮ ವೀರಶೈವ ಮಂಡಲಿಯೆಲ್ಲರಮುಂದಿಡಬೇಕೆಂತಲೂ, ಇದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂತಲೂ ಈ ಸಭೆಯವರನ್ನ ಪ್ರಾರ್ಥಿಸುತ್ತೇನೆ. ಎಂದು ಮ॥ ರಾ॥ ನರಸೀಪುರದ ಮಲ್ಲಪ್ಪನವರು ಹೇಳಿದರು. ಮ॥ ರಾ॥ ಸದಾಶಿವಪ್ಪನವರು ವರುಷ ೧ಕ್ಕೆ ಮನೆಯೊಂದಕ್ಕೆ ಒಂದಾಣೆಯಂತೆಯೂ, ಅಂಗಡಿ ೧ಕ್ಕೆ ಎರಡಾಣೆಯಂತೆಯೂ ಪ್ರತಿಯೊಬ್ಬ ವೀರಶೈವರೂ ಕೊಟ್ಟು ಈ "ಸ್ಟಾರ್" ಪತ್ರಿಕೆಯು ಚಿರಜೀವಿಯಾಗಿ ನಮ್ಮ ಮತಧರ್ಮವನ್ನ ಪ್ರಸಿದ್ಧಪಡಿಸುತ್ತಿರುವಂತೆ ಕಾಪಾಡಬೇಕೆಂದು ನಮ್ಮ ವೀರಶೈವ ಮಂಡಲಿಯೆಲ್ಲಕ್ಕೂ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಅದರಂತೆ ನಮ್ಮ ಗ್ರಾಮದ ಸರ್ವರೂ ದಯಪಾಲಿಸಬೇಕೆಂದು ಈ ಸಭೆಯವರನ್ನು ಪ್ರಾರ್ಥಿಸುತ್ತೇನೆಂದು ಸೂಚಿಸಿದರು. ಮೇಲ್ಕಂಡ ೧-೨ ಆಣೆಗಿಂತ ಜಾಸ್ತಿಯಾಗಿದ್ದಾದರೂ ಸರ್ವರೂ ಕೊಟ್ಟು, ಸ್ಟಾರ್ ಪತ್ರಿಕಾ ಫಂಡು ಎಂದು ಒಂದು ಫಂಡನ್ನ ಏರ್ಪಾಡುಮಾಡಿ ಸದರಿ ಸ್ಟಾರ್ ಪತ್ರಿಕಾ ಎಡಿಟರವರಿಗೆ ವಹಿಸಬೇಕೆಂದು ಹೇಳಿದರು. ಮೇಲ್ಕಂಡ ಹೇಳಿಕೆಯನ್ನು ಮ॥ರಾ॥ ಕೊಳ್ಳೇಗಾಲದ ಪುಟ್ಟಪ್ಪನವರು ಸರ್ವಾನುಮತದಿಂದ ಅನುಮೋದಿಸಿದರು. ಪ್ರತಿಯೊಂದು ಗ್ರಾಮದಲ್ಲಿ ಪ್ರತಿಯೊಬ್ಬರೂ ಈ ರೀತಿ ವಸೂಲ್ ಮಾಡಿ ಸ್ಟಾರ್ ಆಫೀಸಿಗೆ ಕಳುಹಿಸಿ ಕೀರ್ತಿಭಾಜನರಾಗಬೇಕೆಂದು ಈ ಸಭೆಯವರು ನಮ್ಮ ವೀರಶೈವ ಬಾಂಧವರೆಲ್ಲರನ್ನು ಬೇಡಿಕೊಳ್ಳುವುದಲ್ಲದೆ ೫ ರೂ. ಗೆ ಮೇಲ್ಪಟ್ಟು ಈ ರೀತಿಯಿಂದ ಹಣವನ್ನು ವಸೂಲ್ ಮಾಡಿ ರವಾನಿಸುವ ಕಾರ್ಯದರ್ಶಿಯ ಹೆಸರಿಗೆ ಗ್ರಾಮಕ್ಕೆ ಒಂದು ಪತ್ರಿಕೆಯನ್ನು ಕೊಡಬೇಕೆಂದು ಈ ಸಭೆಯವರು ಸ್ಟಾರ್ ಪತ್ರಿಕೆ ಎಡಿಟರವರನ್ನು ಪ್ರಾರ್ಥಿಸುತ್ತಾರೆ. ಈ ಗ್ರಾಮದ ವಸೂಲನ್ನ ಲಗ್ನಕಾಲದಲ್ಲಿ ಕೈಲಾಸವಾಸಿ ವೈ. ವೀರಸಂಗಪ್ಪನವರ ಹೆಸರಿನಿಂದ ತೆಗೆಯುವ ದಕ್ಷಿಣೆ ತಾಂಬೂಲವನ್ನು ವಹಿಸುವ ಮ॥ರಾ॥ ಕೊಳ್ಳೇಗಾಲದ ಪುಟ್ಟಪ್ಪನವರೇ ವಸೂಲ್ ಮಾಡುವಂತೆ ವಹಿಸಿ ಕೊಡಲ್ಪಟ್ಟಿರುತ್ತಾರೆ. ಸರ್ವರೂ ಮೇಲ್ಕಂಡ ಏರ್ಪಾಟಿನಂತೆ ಸದರಿ ಕೊಳ್ಳೇಗಾಲದ ಪುಟ್ಟಪ್ಪನವರ ವಶಕ್ಕೆ ಕೊಟ್ಟಿರುತ್ತಾರೆ. ಈ ಮೇಲ್ಕಂಡಮೇರೆ ವಸೂಲಾದ ಮೊಬಲಗು ರೂ. ೨-೩-೩ ಮಾತ್ರ ಕಳುಹಿಸಿದೆ.

ನ॥ ಮಲ್ಲಪ್ಪ, ಕಾರ್ಯದರ್ಶಿ.

[ಒಟ್ಟು ರೂ. ೩-೩-೯ ನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ.—ಪ. ಪ್ರ.]

ಊದಬತ್ತಿಗಳು.

18

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಪಲ್ಲಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕೆರಸ್ವಾಂಚಿನ್ಸ್	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೬-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

2 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ಶ್ರೀಕೃಷ್ಣ ಜಿ. ಎಸ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನಹಟ್ಟಿ, ಜಿ॥ [illegible]

13 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.

ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ ಖರ್ಚು ೦-೪-೦. ಒಮ್ಮೆಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಪ್ರಕರ, ಮರ್ಚಂಟ್.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

13

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ

ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ, ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೮-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪೊಸರುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರೆತ, ಹಲ್ಲುಗಳ ಪಾಚಿ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಯೋಗಕ್ಷೇಮ ೩ ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧. ಗಿಡ್ಡ ಮೊದಲಾದವಕ್ಕೆ ಸಹರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ—ಶ್ರೀ [illegible]
[illegible]

11 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ ! ! !

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಫಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ROSKOPF
SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೊಟೊರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

MOTORREGULATOR
LEVER
SWISSMADE

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚೆಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚೆನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ಮೋನಿಯಾ ಸಿಲ್ವರು ಗಡಿಯಾರದ ಸರಪಣಿ,

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ ! ಬಹುಮಾನ ! ! ಬಹುಮಾನ ! ! !

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜ಼ನ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜ಼ನ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

---

23 ಉತ್ತಮ ಗ್ರಂಥಗಳು.

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.—ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಭುಜಂಗಸೂತ್ರಂ.—ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಂಡಿತ ಎಸ್. ಗರಳಪುರಿ ಇವ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
48 ಮೈಸೂರು.

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೧-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರದಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಹಿಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕೆ ಬರೆಯಿರಿ.

೧೯೧೧ನೇ ಇಸವಿ ಜುಲೈ ತಾ॥ ೧೦ರಿಂದ ೧೯೧೧ನೇ ಜುಲೈ ತಾ॥ ೧೬ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಆಷಾಢ ಶು॥ ಚತುರ್ದಶಿಯಿಂದ ಆಷಾಢ ಬ॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿ ಕ ತೇದಿ
10	¹ಸೋ	ಚ	22-27	ಮೂ	28-6	26
11	ಮಂಗ	ಪೌ	27-15	ಪೂಷಾ	34-24	27
12	ಬುಧ	ಪಾ	31-34	ಉಷಾ	40-14	28
13	ಗುರು	ಬಿ	35-2	ಶ್ರ	44-49	29
14	ಶುಕ್ರ	ತ	37-27	ಧ	48-3	30
15	ಶನಿ	ಚೌ	38-39	ಶ	51-12	31
16	²ಭಾನು	ಪಂ	37-39	ಪೂಭಾ	52-22	1

(1) ಜ್ಯೋತಿರ್ಮಹೇಶ್ವರ ವ್ರತಂ, (2) ಟೀಕಾಚಾರ್ಯರ ಪುಣ್ಯದಿನ.

ಮೈಸೂರ್ : ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಜುಲೈ ತಾರೀಖು ೧೭ ನೇ ಸೋಮವಾರ. [ಸಂಚಿಕೆ ೨೯

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರಿಗೆ ೧-೧೦-೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸುಲಭಕ್ರಯ! ಖಾತರಿಮಾಲ್ !! ಬಿಡಬೇಡಿರಿ!!!
12

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನುಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ। ೧ಕ್ಕೆ	೬	ಕಸ್ತೂರಿ ಬಿಲ್ಲೆ ತೊ। ೧ಕ್ಕೆ	೨
೨ ಅಂಬರ್‌ಬತ್ತಿ ಸೇ। ೧ಕ್ಕೆ	೪	ಜವಾಜಿ ಬಿಲ್ಲೆ ತೊ। ೧ಕ್ಕೆ	೧
ಕಸ್ತೂರಿ ಬತ್ತಿ ಸೇ। ೧ಕ್ಕೆ	೨॥	ಅರಗಜ। ತೊ ಡಬ್ಬಿ ೧ಕ್ಕೆ	।
ಮುನಗಿನ ಬತ್ತಿ ಸೇ। ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ। ೧ಕ್ಕೆ	।
ಗುಲಾಬ್ ಬತ್ತಿ ಸೇ। ೧ಕ್ಕೆ	॥	ಸುರಂಗಿ ಸೆಂಟ್ ಸಿ। ೧ಕ್ಕೆ	೧
ನಕ್ಷತ್ರಕಾಂತಿಬ। ಸೇ। ೧ಕ್ಕೆ	೧	ಸ್ವದೇಶಿ ಘೆ ಪೌಡ। ೧ಕ್ಕೆ	।
ಕಾಶ್ಮೀರ್‌ಕೇಸ್ರಿ ತೊ। ೧ಕ್ಕೆ	೧	ಪಚ್ಚಕರ್ಪೂರ ತೊ। ೧ಕ್ಕೆ	।॥

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮಿಷನ್ ದೊರೆಕುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂದೊರೆಯದು.

ಎ. ಆರ್. ಸುಬ್ಬಾಚೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

---

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

8

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪)ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬)ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ [illegible] ಅನುಕೂಲವಾದ ಪುಣ್ಯಕಥೆಗಳಿವೆ. (೮) ಕಥಾಸಂದರ್ಭಾನುಸಾರ ಭಾವನಷ್ಟೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ, ಪ್ಲೇಗು ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಮುದ್ರಾಪಟಗಳು; ದೊರೆಯುತ್ತವೆ.

(ಪಟ್ಟಿ) ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

“ಅಗತ್ಯ ವಿಚಾರ.”

7

ಬೆಲೆ ೬॥ ಆಣೆ. ವಿ. ಪಿ. ಯಿಂದ ೭ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿವಿಚಾರಿಸತಕ್ಕದ್ದಾಗಿರುವದರಿಂದಲೇ “ಅಗತ್ಯವಿಚಾರ”ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೨ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು ! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ :—ವೀರಭದ್ರಪ್ಪಾ ಆರುಬೆರಳಿನ,
ಪೋಸ್ಟ್-ಬಾಗೇವಾಡಿ, ಡಿ॥ ಬೆಳಗಾಂವ.

ಉತ್ತಮ ಗ್ರಂಥಗಳು.

127

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.
ಶಂಕರಲಿಂಗಕದಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು.

ಇಲ್ಲನೋಡಿ ವಿಶೇಷಸೂಚನೆಗಳು !

10 ಕಾಶೀವಿಶ್ವೇಶ್ವರಪ್ರಸನ್ನ.



ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ !

ತಾವು ನಿತ್ಯವು ಉಡುವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ ? ಅದಕ್ಕೆ ಸಂದೇಹವೇನು !

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ !!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೀಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟಿ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪಟಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಭಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟ್ಲಾಗ್ ೪ ಸೋಡಾಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರಸ್‌ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯಿಸುವ ವಿಳಾಸಕ್ಕೆ ಕಳಿಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—

ಎಸ್. ಉಡುಪಿನಾರಾಯಣಾಚಾರ್ಯ ಅಂಡ್‌ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.
S. Udipi Narayanacharya & Co.
Benares City.

11 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ ! ! ಬಿಡಬೇಡಿರಿ ! ! !

ಪ್ರತಿ ವಾಚಿಗೆ ೪ ವರುಷಗಳು ಗ್ಯಾರಂಟ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೋಪಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ROSKOPF
SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೋಟರ್ರೆಗ್ಯುಲೇಟರ್ ಲೀವರ್ ಜೂವೆಲ್ಡು ವಾಚ್.

MOTORREGULATOR
LEVER
SWISS MADE

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವವಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಲ್ಬೋನೀರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ ! ಬಹುಮಾನ ! ! ಬಹುಮಾನ ! ! !

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

23 ಉತ್ತಮ ಗ್ರಂಥಗಳು.

ಶಿವಪಾಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಅಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.—ಬೆಲೆ ವಿ. ಪಿ. ಯಿಂದ ೧೦ ಅಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರಾತನಸೂಕ್ತಿ.—ಬೆಲೆ ವಿ. ಪಿ. ಯಿಂದ ೪ ಅಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಂಡಿತ ಎಸ್. ಗರಳಪುರಿ ಇವ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ

48 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೩-೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.
ಅಜೀರ್ಣದಮಾತ್ರೆ.— ೪೦ ಮಾತ್ರೆ ಸೀಸೆ ೦-೧೨-೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕೆ ಬರೆಯಿರಿ.

೧೯೧೧ನೇ ಇಸವಿ ಜುಲೈ ತಾ॥ ೧೦ರಿಂದ ೧೯೧೧ನೇ ಜುಲೈ ತಾ॥ ೧೬ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಆಷಾಢ ಶು॥ ಚತುರ್ದಶಿಯಿಂದ ಆಷಾಢ ಬ॥ ಪಂಚಮಿವರಿಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿ ಕ ತೇದಿ
10	¹ಸೋ	ಚ	22-27	ಮೂ	28-6	26
11	ಮಂಗ	ಪೌ	27-15	ಪೂಷಾ	34-24	27
12	ಬುಧ	ಪಾ	31-34	ಉಷಾ	40-14	28
13	ಗುರು	ಬ	35-2	ಶ್ರ	44-49	29
14	ಶುಕ್ರ	ತ	37-27	ಧ	48-3	30
15	ಶನಿ	ಚೌ	38-39	ಶ	51-13	31
16	²ಭಾನು	ಪಂ	37-39	ಪೂಭಾ	52-22	1

(1) ಜ್ಯೋತಿರ್ಮಹೇಶ್ವರ ವ್ರತಂ, (2) ಟೀಕಾಚಾರ್ಯರ ಪುಣ್ಯದಿನ.

ಮೈಸೂರ್ : ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಅಚ್ಚುಹಾಕಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ✷ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೮] ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಜುಲೈ ತಾರೀಖು ೧೭ ನೇ ಸೋಮವಾರ. [ಸಂಚಿಕೆ ೨೯

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರಿಗೆ ೧-೧೦-೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಸುಲಭಕ್ರಯ! ಪಾತರಿಮಾಲ್ !! ಬಿಡಬೇಡಿರಿ!!!
12

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನಪನ್ನಪಡೆದ ಊದಬತ್ತಿಗಳು.

ನಂ.	ರೂ.		ರೂ.
೧ ಅಂಬರ್‌ಬತ್ತಿ ಸೇ॥ ೧ಕ್ಕೆ	೬	ಕಸ್ತೂರಿ ಬಿಲ್ಲೆ ತೊ॥ ೧ಕ್ಕೆ	೨
೨ ಅಂಬರ್‌ಬತ್ತಿ ಸೇ॥ ೧ಕ್ಕೆ	೪	ಜವಾಜಿ ಬಿಲ್ಲೆ ತೊ॥ ೧ಕ್ಕೆ	೧
ಕಸ್ತೂರಿ ಬತ್ತಿ ಸೇ॥ ೧ಕ್ಕೆ	೨॥	ಅರಗಜ। ತೊ ದಬ್ಬಿ ೧ಕ್ಕೆ	।
ಮನಗಿನ ಬತ್ತಿ ಸೇ॥ ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ ೧ಕ್ಕೆ	।
ಗುಲಾಬ್ ಬತ್ತಿ ಸೇ॥ ೧ಕ್ಕೆ	॥	ಸುರಂಗಿ ಸೆಂಟ್ ಸಿ ೧ಕ್ಕೆ	೧
ನಕ್ಷತ್ರಕಾಂತಿಬ॥ ಸೇ॥ ೧ಕ್ಕೆ	೧	ಸ್ವದೇಶಿ ಫೆ ಪೌ ಡ॥ ೧ಕ್ಕೆ	।
ಕಾಶ್ಮೀರ್‌ಕೇಸ್ರಿ ತೊ॥ ೧ಕ್ಕೆ	೧	ಪಚ್ಚಕರ್ಪೂರ ತೊ॥ ೧ ಕ್ಕೆ	॥।

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರ್‌ಗಳೂ, ಊದಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಅನುಕೂಲವಾದ ಕಮೀಷನ್ ದೊರೆಕುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂದೊರೆಯದು.

ಎಂ. ಆರ್. ಸುಬ್ಬಾಚೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ ಮೈಸೂರು.

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

8

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪)ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಶೋಧನಾಕಾಲಕ್ಕೆ ಅನುಕೂಲವಾದ ಪುಸ್ತಕವಾಗಿದೆ.

(೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ, ಪ್ಲೇಗು ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಮುದ್ರಾಪಟಗಳು; ದೊರೆಯುತ್ತವೆ.

(ಪಟ್ಟಿ) ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ.

"ಅಗತ್ಯವಿಚಾರ."

7

ಬೆಲೆ ೪॥ ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗತ್ಯವಿಚಾರ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೨ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ :—ವೀರಭದ್ರಪ್ಪಾ ಆರುಬೆರಳನ,
ಪೋಸ್ಟ್-ಬಾಗೇವಾಡಿ, ಜಿ॥ ಬೆಳಗಾಂವ.

ಉತ್ತಮ ಗ್ರಂಥಗಳು.

127

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೬-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಅಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಅಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಅಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಅಣೆ.

ಶಂಕರಲಿಂಗಶತಂ.— ೧ ಅಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಲಿ, ಮೈಸೂರು.

ಇಲ್ಲಿನೋಡಿ ವಿಶೇಷಸೂಚನೆಗಳು !

10 ಕಾಶೀವಿಶ್ವೇಶ್ವರಪ್ರಸನ್ನ.

RASHI VISHWESHWAR
S.N.U. & Co
BENARES CITY

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ !

ತಾವು ನಿತ್ಯವು ಉಡುವಮಡಿ ಯಾವದು? ಕಾಶಿಪಟ್ಟೆ ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ ? ಅದಕ್ಕೆ ಸಂದೇಹವೇನು !

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ !!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆ ಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪಟಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟ್ಲಾಗ್ ೪ ಸಾದಾ ಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರಸ್‌ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯಿಸುವ ವಿಳಾಸಕ್ಕೆ ಕಳಿಹಿಸಲಾದೀತು. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—

ಎಸ್. ಉಡುಪಿನಾರಾಯಣಾಚಾರ್ಯ ಅಂಡ್‌ಕೋ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayanacharya & Co.
Benares City.

ಸೌಗಂಧಿಕಾಪರಿಣಯ

:o:

(ಕಳೆದವಾರದಶೇಷ.)

ಶರೀರವೆಲ್ಲವೂ, ಒಂದು ಕಿವಿಯೂ ಶುದ್ಧ ಶುಭ್ರವರ್ಣವುಳ್ಳವಾಗಿ ಮತ್ತೊಂದು ಕಿವಿಯು ಕಪ್ಪಾಗಿದ್ದರೆ ಆ ಕುದುರೆಯು ಅಶ್ವಮೇಧಯಾಗಕ್ಕೆ ಯೋಗ್ಯವಾಗಿ ಶ್ಯಾಮೈಕಕರ್ಣವೆಂದು ಹೇಳಲ್ಪಡುವದು. ನಾಲ್ಕು ಕಾಲುಗಳು ಶುಭ್ರವಾಗಿ ಮುಖದ ಮಧ್ಯದಲ್ಲಿಯೂ ಶುಭ್ರವಾದ ಕುದುರೆಗಳು ಸರ್ವ್ವಾ ಕಲ್ಯಾಣಪ್ರದವಾಗಿ ಪಂಚಕಲ್ಯಾಣವೆನಿಸಿಕೊಳ್ಳುವವು. ಮುಖದಲ್ಲಿಯೂ, ಬಾಲದಲ್ಲಿಯೂ, ಜೆಕ್ಕತ್ತಿನ ಕೇಸರಗಳಲ್ಲಿಯೂ ಎದೆಯಲ್ಲಿಯೂ, ನಾಲ್ಕು ಪಾದಗಳಲ್ಲಿಯೂ ಶುಭ್ರವರ್ಣವಾಗಿ, ಮಿಕ್ಕ ಅಂಗಗಳಲ್ಲಿ ಯಾವ ವರ್ಣಗಳಿಂದ ಯುಕ್ತವಾದಾಗ್ಯೂ ಆ ಅಶ್ವವು ಅಷ್ಟಮಂಗಳವೆಂಬ ಹೆಸರಂ ಪಡೆದು ಶ್ಲಾಘ್ಯವಾಗಿರುವದು. ನೇರಳೇಹಣ್ಣಿಗೆ ಸಮಾನವಾದ ವರ್ಣವುಳ್ಳದ್ದಾಗಿ, ಮುಖದಲ್ಲಿ ಚಂದ್ರಾಕೃತಿಯಾದ ಶುಭ್ರವರ್ಣವೂ, ನಾಲ್ಕು ಪಾದಗಳಲ್ಲಿ ಶುಭ್ರವರ್ಣವೂ ಉಳ್ಳ ಕುದುರೆಯು ಮಲ್ಲಿಕಾಕ್ಷವೆಂಬ ಹೆಸರುಳ್ಳುದಾಗಿ ಬಹು ಪೂಜ್ಯವಾಗಿರುವುದು. ನಾಲ್ಕು ಕಾಲುಗಳಲ್ಲಾಗಲೀ, ಎರಡು ಕಾಲುಗಳಲ್ಲಾಗಲೀ ಶುಭ್ರವರ್ಣವುಳ್ಳುವಾಗಿ, ಮುಖದಲ್ಲಿ ಪುಂಡ್ರಾಕಾರವಾದ, ಶುಭ್ರವಾದ ರೇಖೆಯುಳ್ಳ ಅಶ್ವವು ಧೌತಪಾದವೆಂದು ಪ್ರಸಿದ್ಧವಾಗಿ ಪ್ರಶಸ್ತವಾದುದೆಂದು ತಿಳಿಯತಕ್ಕದು. ಪ್ರತಿಸ್ಥಾನಗಳಲ್ಲಿಯೂ ವಿಶಾಲಗಳಾದ, ಶುಭ್ರಗಳಾದ ಪಟ್ಟೆಗಳಿಂದ ಪ್ರಕಾಶಿಸುವ ಕುದುರೆಯು, ಆ ವರ್ಣದಿಂದೊಡಗೂಡಿದ್ದಾಗ್ಯೂ ಆ ಕುದುರೆಯು ಹಲಾಭವೆಂದು ಪ್ರಸಿದ್ಧಿಯಂ ಪಡೆದಿರುವದು. ಉಭಯಪಾರ್ಶ್ವಗಳಲ್ಲಿಯೂ ಶುಭ್ರಗಳಾದ ಬಿಂದುಸಮೂಹಗಳಿಂದ ವಿಚಿತ್ರವಾದ ಕುದುರೆಯು ಯಾವವರ್ಣದಿಂದ ಯುಕ್ತವಾದಾಗ್ಯೂ ಕರಂಜವೆಂದು ಹೇಳಲ್ಪಡುವದು. ಶುಭ್ರವರ್ಣವುಳ್ಳ ಕುದುರೆಯು ಎಲ್ಲಾ ಕಡೆಯಲ್ಲೂ ಸ್ಥೂಲಗಳಾಗಿಯೂ, ಸೂಕ್ಷ್ಮಂಗಳಾಗಿಯೂ ಕಪ್ಪುಬಿಂದುಗಳು ಕಾಣುವುದೋ ಆ ಕುದುರೆಯು ಜಿಂಬಕವೆಂದು ಹೇಳಲ್ಪಡುವದು. ಒಂದು ಬಣ್ಣದಿಂದಲಾದರೂ, ಬಹು ವರ್ಣಂಗಳಿಂದಲಾದರೂ ಕೂಡಿರುವ ಕುದುರೆಗೆ ಕರ್ಣಗಳು ಮನೋಹರಗಳಾಗಿ ಪ್ರಕಾಶಿಸುವದೋ ಆ ಕುದುರೆಯು ದುಷ್ಟವರ್ಣದಿಂ ಪುಟ್ಟುವ ದೋಷಂಗಳಂ ಪರಿಹರಿಸುವದು. ಯಾವಕುದುರೆಗೆ ಶರೀರವು ಶುಭ್ರವಾಗಿ ನಾಲ್ಕುಕಾಲುಗಳು ಮಾತ್ರ ಕಪ್ಪಾಗಿರುವದೊ ಆ ಕುದುರೆಯು ಪ್ರತ್ಯಕ್ಷವಾದ ಯಮದೂತನೆಂದು ಹೇಳಲ್ಪಡುವದು. ಅದ್ದರಿಂದ ಅಂಥಾ ಕುದುರೆಯು ಸರ್ವ್ವಪ್ರಕಾರದಲ್ಲಿಯೂ ತ್ಯಜಿಸತಕ್ಕದು. ಕುದುರೆಗಳು ಶಿರಸ್ಸಿನಲ್ಲಾದರೂ, ಬಾಲದಲ್ಲಾದರೂ ನಿಂದಿತವಾದ ವರ್ಣವುಳ್ಳದ್ದಾದರೆ ಅವನ್ನು ತ್ಯಜಿಸತಕ್ಕದು. ಯಾವ ಕುದುರೆಗೆ ಸರ್ವಾವಯವಂಗಳು ಒಂದು ವರ್ಣವಾಗಿ, ಮುಖಮಾತ್ರದಲ್ಲಿ ಬೇರೆ ಬಣ್ಣವಿದ್ದಾಗ್ಯೂ, ಬಾಲದಲ್ಲಾದರು ಬೇರೇ ಬಣ್ಣವಿದ್ದಾಗ್ಯೂ ಆ ಕುದುರೆಯು ತ್ಯಜಿಸಲ್ಪಡತಕ್ಕದು. ಹೀನದಂತ, ಅಧಿಕದಂತ, ಕರಾಳೀ, ಕೃಷ್ಣತಾಲುಕ, ಉದ್ದಾಲ, ಮುಸಲೀ, ಶೃಂಗೀ ಎಂಬ ಸಂಜ್ಞೆಯುಳ್ಳ ಏಳುಪ್ರಕಾರವಾದ ಅಶ್ವಗಳು ತಮ್ಮಂ ರಕ್ಷಿಸುವ ಒಡೆಯನಿಗೆ ಅಪಕಾರವನ್ನೆಣಿಸುತ ಸ್ವಾಮಿದ್ರೋಹಗಳೆನಿಸಿಕೊಳ್ಳುವುವು. ಈ ಅಶ್ವಗಳು ತ್ಯಜಿಸಲ್ಪಡತಕ್ಕವು ಇವುಗಳ ಲಕ್ಷಣಗಳಂ ಪೇಳುವೆನು. ಮತ್ತಂ ವ್ಯಾಘ್ರಾಭ, ಸ್ತನಿ, ದ್ವಿಖುರ, ಕಕುಂದಿ, ಏಕಾಂಡ ಜಾತಾಂಡವೆಂಬುದಾಗಿ ಹೆಸರುಳ್ಳ ಕುದುರೆಗಳು ದುಷ್ಟಾಶ್ವಗಳೆನಿಸಿಕೊಳ್ಳುವುವು. ಇವುಗಳ ಲಕ್ಷಣಂಗಳಂ ಪೇಳ್ವೆನು. ಕುದುರೆಗಳಿಗೆ ಸ್ವಾಭಾವಿಕವಾಗಿ ಮುಂಭಾಗದೋಳ್ ತುಟಿಗಳ ಸಮೀಪದಲ್ಲಿ ಆರುಹಲ್ಲುಗಳಿರುವವು. ಆರು ಹಲ್ಲುಗಳಿಗೆ ಒಂದು ಕಡಮೆಯಾಗಿ ಐದು ದಂತಗಳಿದ್ದಾಗ್ಯೂ ಅದು ಹೀನದಂತವೆನಿಸಿಕೊಳ್ಳುವದು. ಆರು ದಂತಗಳಿಗೆ ಒಂದು ಹೆಚ್ಚಾಗಿ ಏಳು ದಂತಗಳು ಇದ್ದಾಗ್ಯೂ, ಆ ಕುದುರೆಯು ಅಧಿಕದಂತವೆನಿಸಿಕೊಳ್ಳುವದು. ಯಾವ ಕುದುರೆಯ ಮೇಲು ಹಲ್ಲುಗಳು, ಕೆಳಗಿನ ಹಲ್ಲುಗಳಿಂದ ಕಡಿಯಲ್ಪಡುವವೊ, ಅದು ಕರಾಳೀ ಎನಿಸಿಕೊಳ್ಳುವದು. ಕುದುರೆಯ ದವಡೆಗಳು ಕೃಷ್ಣವರ್ಣವಾಗಿದ್ದರೆ ಅ ಕುದುರೆಯು ಕೃಷ್ಣತಾಲುಕವೆನಿಸಿಕೊಳ್ಳುವುದು. ಯಾವ ಕುದುರೆಯ ಮೇಲಿನ ಹಲ್ಲುಗಳಿಂದ ಕೆಳಗಿನ ಹಲ್ಲುಗಳು ಮುಚ್ಚಲ್ಪಡುವವೋ ಅದು ಉದ್ದಾಲವೆನಿಸಿಕೊಳ್ಳುವುದು. ಒಂದು ಪಾದಮಾತ್ರವೇ ಶುಭ್ರವಾಗಿ ಪುಷ್ಪಹೀನವಾದ ಅಶ್ವವು ಮುಸಲೀ ಎನಿಸಿಕೊಳ್ಳುವದು. ಕರ್ಣಪ್ರದೇಶದಲ್ಲಿ, ಕೀಲಿನಲ್ಲಿ ಸುಳಿಯುಳ್ಳ ಅಶ್ವವು ಶೃಂಗೀಯೆನಿಸಿಕೊಳ್ಳುವುದು. ಹುಲಿಯ ಬಣ್ಣವುಳ್ಳ ಅಶ್ವವು ವ್ಯಾಘ್ರಾಭವೆನಿಸಿಕೊಳ್ಳುವುದು. ಸ್ತನಗಳಿಂದ ಕೂಡಿರುವ ಅಶ್ವವು ಸ್ತನೀಯೆನಿಸಿಕೊಳ್ಳುವದು. ಹಸುಗಳ ಗೊರಸಿನಂತೆ ಎರಡು ಗೊರಸುಗಳುಳ್ಳ ಅಶ್ವವು ದ್ವಿಖುರವೆನಿಸಿಕೊಳ್ಳುವದು. ಕುದುರೆಯ ಹಿರಳು ಬಹುವಾಗಿ ದಪ್ಪವಾಗಿದ್ದರೆ ಅದು ಕಕುಂದೀ ಎನಿಸಿಕೊಳ್ಳುವದು. ಜೋಲುತಲಿರುವ ಒಂದೇ ಅಂಡವುಳ್ಳ ಅಶ್ವವು ಏಕಾಂಡವೆನಿಸಿಕೊಳ್ಳುವುದು. ಅಂಡಗಳು ಕೋಶಯುಕ್ತಂಗಳಾದರೆ ಆ ಅಶ್ವವು ಜಾತಾಂಡವೆನಿಸಿಕೊಂಬುದು. ಭಸ್ಮದಂತೆ ಬಣ್ಣವುಳ್ಳಕುದುರೆಯೂ ವಕ್ರವಾದ ಬಾಲವುಳ್ಳಕುದುರೆಯೂ, ಕೃಷ್ಣವರ್ಣವುಳ್ಳ ಕುದುರೆಯೂ ತ್ಯಜಿಸಲ್ಪಡತಕ್ಕವು. ಈ ದುಷ್ಟಾಶ್ವಗಳು ಸಂರಕ್ಷಿಸುವ ಒಡೆಯನಿಗೆ ಹಿತವಂ ಅಪೇಕ್ಷಿಸುವದಿಲ್ಲ. ಅಚ್ಚ ಕಪ್ಪು ಕುದುರೆಯು ದುಷ್ಟಾಶ್ವವೆನಿಸಿಕೊಳ್ಳುವುದು. ಶುದ್ಧಶ್ವೇತವರ್ಣದ ಕುದುರೆಯು ಬಹು ಪೂಜ್ಯವಾದುದು. ಇನ್ನು ಈ ಅಶ್ವಜಾತಿಗಳ ಛಾಯಾಪ್ರಭೇದಗಳಂ ಪೇಳುವೆನು. ಬಹು ವರ್ಣಂಗಳಿಂದ ಮನೋಹರವಾದ ಸ್ಥಿರವಾದ ಮಿಂಚಿನಂತೆ ಹೊಳೆಯುತಲಿರುವ ಛಾಯೆಯು ಪೃಥ್ವೀಸಂಬಂಧ ಛಾಯೆ ಎನಿಸುವುದು. ವರ್ಷಾಕಾಲದ ಮೇಘದಲ್ಲಿರುವ ಕಾಂತಿಯಂತೆಯೂ ಜಲದ ಕಾಂತಿಯಂತೆ ಇರುವ ಛಾಯೆಯೂ ವರುಣಸಂಬಂಧಿ ಛಾಯೆ ಎನಿಸಿಕೊಳ್ಳುವುದು. ಸುವರ್ಣದ ಕಾಂತಿಯಂತೆಯೂ ತಳಿರುಗಳ ಕಾಂತಿಯಂತೆಯೂ ಇರುವ ಛಾಯೆಗಳು ಅಗ್ನಿಸಂಬಂಧಿಛಾಯೆ ಎನಿಸಿಕೊಳ್ಳುವುದು. ಬಹು ವಿಧವಾಗಿ ಭಿನ್ನಭಿನ್ನವಾದ ಛಾಯೆಯು, ಅಂತರಿಕ್ಷಸಂಬಂಧಿ ಛಾಯೆ ಎನಿಸಿಕೊಳ್ಳುವುದು. ಎಲೈ ರಾಯನೆ! ಇನ್ನು ಅಶ್ವಗಳ ಗತಿಭೇದಂಗಳಂ ಪೇಳುವೆನು. ಸಿಂಹದಂತೆಯು, ಹುಲಿಯಂತೆಯು, ಆನೆಯಂತೆಯು, ಹಂಸೆಯಂತೆಯು, ನವಿಲಿನಂತೆಯು, ಶರಭದಂತೆಯು, ವೃಷಭದಂತೆಯು, ಮುಂಗಿಸಿಯಂತೆಯು ಮತ್ತೂ ಒಂಟೆಯಂತೆಯು ನಡೆಯುಳ್ಳ ಕುದುರೆಗಳು ಒಡೆಯನಿಗೆ ಸಂಪದಭಿವೃದ್ಧಿಯಂ ಕೊಡುವವು. ವಕ್ರವಾಗಿಯು, ವಿಷಮವಾಗಿಯು ಎಡವುತಲು, ಮುಗ್ಗರಿಸುತಲು, ಚಮತ್ಕಾರವಿಲ್ಲದೆ ವಿಕೃತಗತಿಯುಳ್ಳ ಕುದುರೆಗಳು ಶ್ರೇಷ್ಠಾಶ್ವಗಳಲ್ಲಿ ಸೇರಿದವೆ ಆದಾಗ್ಯೂ ಗತಿಗಳಿಂದ ವಕ್ರಗಳಾದರೆ ಪ್ರಶಸ್ತಗಳಲ್ಲವೆಂದು ಪೇಳ್ವರು. ಇನ್ನು ಕುದುರೆಗಳ ಗಂಧಭೇದಂಗಳಂ ಪೇಳುವೆನು. ಕಣ್ಣುಗಳಲ್ಲಿ ಕಿವಿಗಳಲ್ಲಿ ಮುಖದಲ್ಲಿ ಮೂಗಿನಹೊಳ್ಳೆಗಳಲ್ಲಿ, ಬೆವರಿನಲ್ಲಿ ಮತ್ತು ಮೂತ್ರಪುರೀಷಂಗಳಲ್ಲಿ ಅತ್ತಿಯಹೂವಿನಂತೆ ಕೇದಗೆ ಹೂವಿನಂತೆ, ಮೊಲ್ಲೆಹೂವಿನಂತೆ, ಬಿಲ್ವಪುಷ್ಪದಂತೆ, ತುಪ್ಪದಂತೆ ಮತ್ತು ಹಸುವಿನಹಾಲಿನಂತೆ ವಾಸನೆಯುಳ್ಳ ಕುದುರೆಗಳು ಸುಗಂಧಯುಕ್ತಗಳೆನಿಸಿಕೊಂಬುವವು. ಇವುಗಳಿಗೆ ಸಮಾನವಲ್ಲದೆ ದುರ್ಗಂಧವುಳ್ಳ ಕುದುರೆಗಳು ದುರ್ಗಂಧಯುಕ್ತಗಳೆನಿಸಿಕೊಳ್ಳುವವು. ಇನ್ನು ಕುದುರೆಗಳ ಸ್ವರಭೇದನಂ ಪೇಳುವೆನು. ಯಾವ ಅಶ್ವಗಳು ವೀಣಾವೇಣುಮೃದಂಗ ಭೇರಿಧ್ವನಿಗಳೊಡನೆ ಮತ್ತೂ ಗಜ ಕ್ರೌಂಚಪಕ್ಷಿ, ಶಂಖ, ಸಿಂಹ, ವ್ಯಾಘ್ರಗಳ ಧ್ವನಿಗಳೊಡನೆ ಸಮಾನವಾದ ಧ್ವನಿಯುಳ್ಳವೋ ಆ ಅಶ್ವಗಳು ಶುಭಕರಂಗಳಾಗಿರುವವು. ಯಾವ ಅಶ್ವಗಳು ಮಟಕುಮಟಕಾಗಿ ಸೂಕ್ಷ್ಮವಾಗಿ ಗದ್ಗದವಾಗಿ ಕಠಿಣವಾಗಿ ಅಪಸ್ವರವಾಗಿ ಪರಾಡೊಪ್ಪ) ಮೊಹಲಾದ್ದಕ್ಕೆ ಸಮಾನವಾಗಿರುವ ಧ್ವನಿಯುಳ್ಳವೊ ಆ ಕುದುರೆಗಳು ಶುಭಕರಂಗಳಲ್ಲ ಮತ್ತೂ ಆ ಕುದುರೆಗಳು ತಮ್ಮ ಸ್ವಾಮಿಯ ಐಶ್ವರ್ಯವಂ ಅಪಹರಿಸುವವು.

[ಸಶೇಷ]

ಸ್ತ್ರೀವಿದ್ಯಾಭ್ಯಾಸ.

(ಕಳೆದವಾರದ ಶೇಷ.)

ವಿದ್ಯಾವತಿಯಳಾದ ಸ್ತ್ರೀಯು ಪತಿಯ ಆಜ್ಞೆಗೆ ಈಷತ್ತಾದರೂ ವಿರಾರಿ ನಡೆಯದೆ, ಆತನ ಮನಸ್ಸನ್ನು ತಿಳಿದು ವರ್ತಿಸುತ್ತಾ ಗೃಹಕೃತ್ಯವನ್ನು ಲೇಶವೂ ಆಯಾಸವಿಲ್ಲದಂತೆ ಹಸನ್ಮುಖಿಯಾಗಿ ವಿಶ್ವಾಸದಿಂದ ಕೆಲಸ ಮಾಡಿಕೊಂಡು ಹೋಗುವಳು. ಮತ್ತೂ ಆರೋಗ್ಯವಿಧಿಗನುಸಾರವಾಗಿ ಮನೆಯವರನ್ನು ತಕ್ಕ ಆಹಾರಾದಿಗಳಿಂದ ಉಪಚರಿಸುತ್ತ ಮಕ್ಕಳ ಶರೀರದ ಸ್ಥಿತಿಯನ್ನು ಎಚ್ಚರದಿಂದ ನೋಡಿಕೊಂಡು, ಮತ್ತಾವ ತೊಂದರೆಯೂ ಇಲ್ಲದಂತೆ ಗೃಹಕೃತ್ಯವನ್ನು ನೆರವೇರಿಸುವಳು. ಅಂತಹ ಪತ್ನಿಯು ಇರುವ ಮನೆಯು ಹೊರಗೆ ಕೆಲಸಮಾಡಿ ಬಂದ ಪತಿಗೆ ಸಕಲಾಯಾಸವನ್ನೂ ಪರಿಹರಿಸಿ, ಆಪ್ಯಾಯನಗೊಳಿಸುವ ಉಪವನದಂತೆ ಹಿತಕರವಾಗಿರುವುದು. ಮೂರ್ಖಳಾದ ಪತ್ನಿಯು ಸೇರಿರುವ ಮನೆಯಾದರೋ ಹೊರಗಣಿಂದ ದಣಿದು ಬಂದ ಗಂಡನಿಗೆ ಮೊರೆಯುತ್ತಿರುವ ವಿಷಸರ್ಪದ ಹುತ್ತದಂತೆಯೂ, ಗರ್ಜಿಸುತ್ತಿರುವ ಈದಹುಲಿಯ ಗುಹೆಯಂತೆಯೂ ತೋರುತ್ತಿರುವುದು. ವಿದ್ಯಾಹೀನೆಯರಾದ ಸ್ತ್ರೀಯರು ತಮ್ಮ ಮೂರ್ಖತನದಿಂದ ಮಕ್ಕಳುಮರಿಗಳನ್ನು ಹೊಡೆಯುತ್ತ, ಸದಾ ಮೋರೆಯನ್ನು ಗಂಟುಹಾಕಿಕೊಂಡು ಯಾವುದೊಂದು ಸಣ್ಣವಿಷಯಕ್ಕೂ ರಗಳೆಯನ್ನು ಮಾಡುವರು. ಕೇಳಿದುದನ್ನು ತಂದು ಕೊಡದಿದ್ದರೆ ಅತ್ತು ಪರಿಪರಿಯಾಗಿ ಗಂಡಂದಿರನ್ನು ಸಂಕಟಪಡಿಸಿ ಇದರಿಂದ ಅನೇಕರಿಗೆ ಸಂಸಾರವು ಹೇಯವಾಗಿ ತೋರುತ್ತಿರುವುದು.

ಇದಲ್ಲದೆ ಸ್ತ್ರೀಯು ವಿದ್ಯಾವತಿಯರಾಗುವುದರಿಂದ ನಿರತಿಶಯವಾದ ಮತ್ತೊಂದು ಫಲವಿಹುದು. ಅದೇನೆಂದರೆ— ಗಿಡವು ಬಲಿತಮೇಲೆ ಅದನ್ನು ಬಗ್ಗಿಸುವುದಕ್ಕಿಂತ ಎಳೆಯದಾಗಿರುವಾಗ ಸುಲಭವಾಗಿ ಬಗ್ಗಿಸುವಂತೆ, ತಮ್ಮ ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ತಿದ್ದುವುದಕ್ಕೆ ಬಾಲ್ಯಾಯುವು ಬಹು ತಕ್ಕ ವಯಸ್ಸಾಗಿರುವುದು. ಆಗ ಮಕ್ಕಳು ತಂದೆಯಬಳಿಯಲ್ಲಿರುವುದಕ್ಕಿಂತಲೂ ತಾಯಿಯಬಳಿಯಲ್ಲಿರುವುದೇ ಹೆಚ್ಚು. ಆ ಕಾಲದಲ್ಲಿ ತಾಯಿಯು ವಿದ್ಯಾವತಿಯಾಗಿಯೂ, ವಿವೇಕಿನಿಯಾಗಿಯೂ ಇದ್ದರೆ ಮುಂದೆ ವೃದ್ಧಿಗೆ ಬರುವ ಮಕ್ಕಳನ್ನು ಚಿಕ್ಕಂದಿನಿಂದಲೂ ಒಳ್ಳೇಗುಣ ನಡತೆಯುಳ್ಳವುಗಳಾಗುವಂತೆ ತಿದ್ದುವಳು. ಇದು ಸಂಸಾರದಲ್ಲಿ ಸ್ತ್ರೀಯರಿಂದಾಗಬಹುದಾದ ಬಹು ಬೆಲೆಯುಳ್ಳ ಬೆಳಕಾಗಿರುವುದು. ಅದುಕಾರಣ ಸಂಸಾರದಲ್ಲಿ ಸೌಖ್ಯವೂ, ಜನಮಂಡಲಿಯಲ್ಲಿ ಸನ್ಮಾರ್ಗಪ್ರವರ್ತನೆಯೂ ಹೆಚ್ಚಬೇಕೆಂದಪೇಕ್ಷಿಸುವವರು ಅಗತ್ಯವಾಗಿ ಸ್ತ್ರೀವಿದ್ಯಾಭ್ಯಾಸವನ್ನು ಮಾಡಿಸಬೇಕು.

ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ಕೆಲವರಿಗಿರುವ ವಿಚಿತ್ರವಾದ ಅಭಿಪ್ರಾಯವನ್ನು ನೋಡಿದರೆ, ಅಜ್ಞಾನವು ಧರ್ಮಾಚರಣೆಗೆ ಮುಖ್ಯವಾದ ಆಧಾರವೆಂದು ಅವರು ನಂಬಿರುವಂತೆ ಕಾಣಬರುತ್ತಿದೆ. ಹೆಂಗುಸರ ಅಜ್ಞಾನಕ್ಕೂ, ಅವರ ಧರ್ಮಾಚರಣೆಗೂ ಸಂಬಂಧವೇಯಿಲ್ಲ. ಆದರೂ ಕೆಲ ಜನರು ಜ್ಞಾನಪ್ರಾಚುರ್ಯದಿಂದ ಕೇಡುಂಟಾಗುವುದೆಂದು ಭ್ರಾಂತಿಗೊಂಡಿದ್ದಾರೆ. ಅದುಕಾರಣ ಜ್ಞಾನದೀಪವು ಯಾರ ಹೃದಯದಲ್ಲಿಯೂ ಪ್ರಕಾಶವಾಗಿ ಉರಿಯಕೂಡದೆಂತಲೂ, ಹೆಂಗುಸರು ಆ ದೀಪದ ಬೆಳಕಿಗೆ ಸಾಧ್ಯವಾದಷ್ಟು ದೂರದಲ್ಲಿರಬೇಕೆಂತಲೂ ಅಭಿಪ್ರಾಯಪಡುತ್ತಾರೆ. ಸ್ತ್ರೀಪುರುಷರೆಲ್ಲರೂ ನೀತಿಮಾರ್ಗದಲ್ಲಿಯೇ ನಡೆಯಬೇಕೆಂಬ ಉದ್ದೇಶದಿಂದ ಮಾಡಲ್ಪಟ್ಟಿರುವ ನಿಬಂಧನೆಗಳೆಲ್ಲ ಜನಗಳಿಗೆ ಮಹೋಪಕಾರಗಳಾಗಿವೆ ಎಂಬುದನ್ನು ಯಾರುತಾನೆ ಅರಿಯರು. ಈ ನಿಬಂಧನೆಗಳನ್ನು ವಿವೇಕವೆಂಬ ವೃಕ್ಷದ ಸುಗಂಧಕುಸುಮಗಳೆಂದು ಹೇಳಬಹುದು. ಅವು ಕಗ್ಗತ್ತಲೆಯಲ್ಲಿ ಚನ್ನಾಗಿ ಅರಳಲಾರವು. ವಿದ್ಯಾಭ್ಯಾಸದಿಂದ ಉಂಟಾಗುವ ಜ್ಞಾನವು ಜನರಲ್ಲಿ ವಿವೇಕವನ್ನು ಹುಟ್ಟಿಸಿ ಧೈರ್ಯ ಸ್ಥೈರ್ಯ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ ಆದರೆ ಸಾಮರ್ಥ್ಯವಿರುವ ಕಡೆಯಲ್ಲೆಲ್ಲಾ ಯಾವಾಗಲಾದರೂ ಅದರ ದುರುಪಯೋಗದಿಂದ ಕೇಡುಂಟಾಗಬಹುದಾದಕಾರಣ ಹೆಂಗುಸರಿಗೆ ವಿದ್ಯಾಭ್ಯಾಸವನ್ನೇ ಮಾಡಿಸಕೂಡದೆಂದು ಕೆಲವರು ಹೇಳುತ್ತಾರೆ. "ಎಂದಾದರೂ ಸಾವುಬರುವುದಾದ್ದರಿಂದ ಲೋಕದಲ್ಲಿ ಆರ್ಜನೆಯನ್ನು ಮಾಡಿ ಸುಖಿಸಲೇಕೂಡದು" ಎಂದು ಎಣಿಸುವವರಿಗೂ ಇವರಿಗೂ ಏನೂ ವ್ಯತ್ಯಾಸ ಕಾಣುವುದಿಲ್ಲ. ವಾಚಕರೆ! ಇದು ಹುಚ್ಚುಮಾತಲ್ಲವೆ? ತೆಂಗಿನ ಮರವನ್ನು ಹತ್ತುವವನು ಯಾವಾಗಲಾದರೂ ಅಕಸ್ಮಾತ್ತಾಗಿ ಕೆಳಗೆ ಬೀಳಬಹುದೆಂದು ಯೋಚಿಸಿ ಮರವನ್ನು ಹತ್ತಿ ಕಾಯನ್ನು ಕೀಳಲೇಬಾರದೆ? ದುರ್ಜನರಿಗೆ ವಿದ್ಯೆಯು ದೊರೆಯುವುದು ಹುಚ್ಚನಕೈಗೆ ಕತ್ತಿ ಸಿಕ್ಕಿದಹಾಗಾಗಬಹುದು. ಪರಂತು ಸಜ್ಜನರಿಗೆ ವಿದ್ಯಾಪ್ರಾಪ್ತಿಯಾಗುವುದು ಉತ್ತಮನಾದ ಅರಸನಿಗೆ ಉದಾರನಾದ ಮಂತ್ರಿಯು ದೊರೆತಂತೆ ಆಗುವುದರಲ್ಲಿ ಸಂಶಯವಿಲ್ಲ. ಮತ್ತು ವಿದ್ಯಾಜ್ಞಾನವು ಅಧರ್ಮಕ್ಕೆ ಪ್ರೇರಕವಾಗುವಪಕ್ಷದಲ್ಲಿ, ತಾಯಿಯ ಹಾಲು ಮಕ್ಕಳಿಗೆ ವಿಷವಾಗಬಹುದು. ಅದುಕಾರಣ ವಿದ್ಯಾಭ್ಯಾಸವು ಹೆಂಗುಸರಿಗೆ ಹಾನಿಕರವೆಂದು ಹೇಳುವುದು ಮೂಢತನವೇ ಸರಿ. ಆದ್ದರಿಂದ ಸರ್ವರೂ ಸ್ತ್ರೀವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವನ್ನೀಯಲೆಂದು ಕೋರುವ

ಸ್ತ್ರೀವಿದ್ಯಾಭಿಮಾನಿ.

(Adopted from a series of articles appearing in the "Dawn of Calcutta," Post box 353, with kind permission.)

THE STATE OF THE TECHNICAL EDUCATION IN BARODA STATE.

ಬರೋಡಾ ಸಂಸ್ಥಾನದ ಕುಶಲಕಲಾಸ್ಥಿತಿ.

ಭರತಖಂಡದ ಸಂಸ್ಥಾನಗಳೆಲ್ಲೆಲ್ಲಾ ಬರೋಡಾ ಸಂಸ್ಥಾನವೇ ಅತ್ಯಂತ ಅಭಿವೃದ್ಧಿಯಲ್ಲಿದೆಯೆನ್ನಬಹುದು. ಉಚ್ಚ ವಿದ್ಯಾಭ್ಯಾಸವನ್ನು ಮಾಡಬೇಕೆಂಬ ವಿದ್ಯಾರ್ಥಿಗಳಿಗೆ ಮಧ್ಯಪ್ರದೇಶದಲ್ಲಿ ಸ್ಥಾಪಿಸಿರುವ 'ಕಲಾಭವನ' ದಲ್ಲಿ ಅವಕಾಶ ಕೊಡುವರು. ಈ ಪಾಠಶಾಲೆಯು ಭರತವರ್ಷದಲ್ಲೆಲ್ಲಾ ದೊಡ್ಡದಾಗಿರುವುದಲ್ಲದೆ, ದಿನೇದಿನೇ ಅಭಿವೃದ್ಧಿಸ್ಥಿತಿಗೂ ಬರುತ್ತಲಿದೆ. ಈ ಪಾಠಶಾಲೆಯಲ್ಲಿ ಅಭ್ಯಾಸಮಾಡಿ ಪಾರಂಗತರಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೊಟ್ಟು ಸಂಸ್ಥಾನದ ಹೊರಭಾಗದಲ್ಲಿರುವ ಪಾಠಶಾಲೆಗಳಿಗೂ, ಪರದೇಶಗಳಿಗೂ ಕಳುಹಿಸುವರು. ಮಧ್ಯ ತರಗತಿಗೆ ಸೇರಿದ ಜನಗಳ ಉಪಯೋಗಾರ್ಥವಾಗಿ ಕೈಗಾರಿಕೆ ಪಾಠಶಾಲೆಗಳೂ ಇವೆ. ಅನಾಥಾಲಯಗಳಲ್ಲೂ, ಕಾಡಿನಲ್ಲಿರುವ ಗಿಡಮೂಲಿಕೆಗಳನ್ನೂ, ಅವುಗಳ ಗುಣಾವಗುಣಗಳನ್ನೂ ಬೋಧಿಸುವ ಪಾಠಶಾಲೆಗಳೂ ಇವೆ. ಮತ್ತು ವ್ಯವಸಾಯವನ್ನು ಬೋಧಿಸುವ ಪಾಠಶಾಲೆಗಳೂ ಕೆಲವು ಫಾರಂಗಳೂ ಇವೆ.

ಕಲಾಭವನ.

ಕಲಾಭವನವು ಇಪ್ಪತ್ತು ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿತು. ಆಗ ಸ್ಥಾಪಿಸಿದ ಶಾಖೆಗಳಲ್ಲಿ [illegible] ಶಾಖೆಯು ೧೯೦೯ ರಲ್ಲಿ ತೆಗೆಯಲ್ಪಟ್ಟಿತು. ೧೯೧೧ ನೇ ವರ್ಷದಲ್ಲಿ ೬ ಶಾಖೆಗಳನ್ನೊಳಗೊಂಡಿದ್ದಿತು. (೧) ಯಂತ್ರೋಪಕರಣ ಕೆಲಸ, (೨) ಶಿಲ್ಪಿಶಾಸ್ತ್ರ ಕೆಲಸ, (೩) ಬಣ್ಣಕೊಡುವ ಕೆಲಸ, (೪) ಕೌಶಲ್ಯಕೆಲಸ, (೫) ನೆಯ್ಗೆಯ ಕೆಲಸ, (೬) ವ್ಯಾಪಾರ ಸಹಾಯಕ ವಿದ್ಯಾಭ್ಯಾಸ. ೧೯೧೦ ರಲ್ಲಿ ಪ್ರಾಯಶಃ ೬೦೦ ವಿದ್ಯಾರ್ಥಿಗಳಿದ್ದರೆಂದು ತಿಳಿದು ಬಂದಿರುವುದು. ಸರಾಸರಿ ೨೦೦ ವಿದ್ಯಾರ್ಥಿಗಳು ಪ್ರತಿವರ್ಷವೂ ಪಾಠಶಾಲೆಯಿಂದ ಉತ್ತೀರ್ಣರಾಗುತ್ತಲಿರುವರು. ಕಲಾಭವನವು ಸಾಧಾರಣವಾದುದಲ್ಲ. ಇದು ಭರತವರ್ಷದ ಆಶ್ರಿತ ಸಂಸ್ಥಾನಗಳಲ್ಲಿರುವ ಕಲಾಶಾಲೆಗಳಲ್ಲೆಲ್ಲಾ ದೊಡ್ಡದೆಂದು ಮೊದಲೇ ಹೇಳಿರುವೆವು. ಆದುದರಿಂದ ನಾವು ಈ ಭವನದ ವಿಷಯದಲ್ಲಿ ಒಂದು ಸಣ್ಣ ಉಪನ್ಯಾಸವನ್ನು ಬರೆಯಲು ಉದ್ಯುಕ್ತರಾಗಿರುವೆವು. ಈ ಪಾಠಶಾಲೆಯಲ್ಲಿರುವ ವಿದ್ಯಾರ್ಥಿಗಳು ಗುಜರಾತ್ ಮೊದಲಾದ ಆಶ್ರಿತ ಸಂಸ್ಥಾನಗಳಿಗೆ ಸೇರಿರುವರು. ಈ ನಿಲಯವು ದಿನೇದಿನೆ ಬಹಳ ಅಭಿವೃದ್ಧಿಸ್ಥಿತಿಗೆ ಬರುತ್ತಲಿರುವುದು. ಈ ನಿಲಯದಲ್ಲಿ ವಿದ್ಯಾಭ್ಯಾಸ ಮಾಡಿ ಉತ್ತೀರ್ಣರಾದ ಅನೇಕರು ಕಾರ್ಯಾಲಯಗಳನ್ನು ಸ್ವಂತವಾಗಿ ನಿರ್ವಹಿಸುವಷ್ಟು ಸಮರ್ಥರಾಗಿರುವರು.

ಕಲಾಭವನದ ಶಾಖಾಶಾಲೆಗಳು.

೧೯೦೭ ನೇ ವರ್ಷದಲ್ಲಿ ಮೂರು ಶಾಲೆಗಳಿದ್ದುವು. ನವಸಾರಿಯಲ್ಲಿ ಒಂದೂ, ಪಾಡ್ರದಲ್ಲಿ ಮತ್ತೊಂದೂ, ಅಮರೇಲಿಯಲ್ಲಿ ಇನ್ನೊಂದೂ ಅಂತು ಮೂರು ಪಾಠಶಾಲೆಗಳಿದ್ದುವು. ಮಿಸ್ತ್ರಿ ಮತ್ತು ಇಂಜನೀಯರ್‌ಗೆ ವಿದ್ಯಾರ್ಥಿಗಳನ್ನು ತಯಾರುಮಾಡಲು ಹೊಸದಾಗಿ ನವಸಾರಿಯಲ್ಲಿ 'ತಾತಾ ಕಲಾಶಾಲೆ' ಎಂಬ ಹೊಸ ಪಾಠಶಾಲೆಯು ಸ್ಥಾಪಿತವಾಗಿದೆ. ಇದು ಇನ್ನೂ ಕಲಾಭವನಕ್ಕೆ ಸೇರಿದುದಲ್ಲವಾದರೂ ಸೇರತಕ್ಕದಾಗಿದೆ. ಕಲಾಭವನದ ಉಪಶಾಲೆಗಳಲ್ಲಿ ಬಣ್ಣ ಕೊಡುವುದನ್ನೂ, ಬಟ್ಟೆ ಒಗೆಯುವುದನ್ನೂ, ಮರಗೆಲಸವನ್ನು ಮಾಡುವುದೇ ಮೊದಲಾದುವುಗಳನ್ನೂ ಹೇಳಿಕೊಡುವರು. ೧೯೦೭ ರಲ್ಲಿ ೧೦೦ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದರೆಂದೂ ೫೦ ವಿದ್ಯಾರ್ಥಿಗಳು ಉತ್ತೀರ್ಣರಾದರೆಂದೂ ತಿಳಿದುಬಂದಿದೆ.

ಶಿಲ್ಪಿಗಾರರ ಕುಶಲಶಾಲೆ.

ಪಂಚಾಲರ ಒಂದು ತರಗತಿಯು ಕಲಾಭವನದಲ್ಲಿಯೇ ಇರುವುದು. ಇದು ಪ್ರತಿ ಸಾಯಂಕಾಲವೂ ನಡೆವುದು. ಈ ತರಗತಿಯಲ್ಲಿ ಕುಶಲ ವಿದ್ಯಾಭ್ಯಾಸಕ್ಕೆ ಅನುಕೂಲವಾದ ಮರಗೆಲಸ, ಮಿಸ್ತ್ರಿಕೆಲಸ, ಅಕ್ಕಸಾಲಿಗರ ಚಿನ್ನಬೆಳ್ಳಿಯ ಕೆಲಸ, ಕಮ್ಮಾರಕೆಲಸ, ಕುಂಬಾರಕೆಲಸವೇ ಮೊದಲಾದುವನ್ನು ಹೇಳಿಕೊಡುವರು. ಈ ತರಗತಿಯ ವಿದ್ಯಾರ್ಥಿಗಳು ಹಗಲೆಲ್ಲಾ ತಮ್ಮ ಕಾಲವನ್ನು ತಮ್ಮತಮ್ಮ ಕೆಲಸದಲ್ಲಿ ಕಳೆದು ಸಾಯಂಕಾಲ ಶಾಲೆಗೆ ಬರುವರು. ಮರಗೆಲಸ ಮಾಡುವವರ ಸಂಖ್ಯೆಯು ಹೆಚ್ಚಿರುವಕಾರಣ ಅದಕ್ಕಾಗಿ ೧೯೦೭ ನೇ ವರ್ಷದಿಂದ ಹೊಸ ತರಗತಿಯೊಂದು ಸ್ಥಾಪಿತವಾಗಿದೆ ೧೯೦೯ ನೆ ವರ್ಷದ ಅಂತ್ಯದಲ್ಲಿ ೧೫ ಮಂದಿ ಮರಗೆಲಸದವರೂ, ೭ ಮಂದಿ ಮರವನ್ನು ಹದಮಾಡಿ ಕೆಲಸಕ್ಕೆ ಸಿದ್ಧಮಾಡುವವರೂ, ೩ ಜನ ಕಮ್ಮಾರರೂ, ೧೧ ಮಂದಿ ಗಾರೆಕೆಲಸದವರೂ, ಒಬ್ಬ ಕ್ಷೌರಕನೂ, ೪ ಮಂದಿ ಕಾರ್ವರೂ (ಒಂದು ಸಂಗತ) ೩ ಜನ ಕುಂಬಾರರೂ, ೪ ಮಂದಿ ಇತರ ಜಾತಿಯವರೂ ಇದ್ದರು. ಶಿಲ್ಪಗರಿಗೆ ಮೇಲ್ಕಂಡ ವಿದ್ಯೆಯನ್ನು ಕಲಿಸುವರಲ್ಲದೆ ಓದುವುದು, ಬರೆವುದು, ಚಿತ್ರಬರೆವುದು, ಲೆಕ್ಕಿಸುವುದು ಮೊದಲಾದುವನ್ನು ತಕ್ಕಷ್ಟು ಕಲಿಸುವರು.

ಕಾಡುಜನರ ಪಾಠಶಾಲೆ.

"ಧಂಕೆ" ರೆಂಬುದೊಂದು ಕಾಡುಜನರ ಗುಂಪಿಗಾಗಿ ಸ್ಥಾಪಿಸಿರುವ ನಾಲ್ಕು ಪಾಠಶಾಲೆಗಳಲ್ಲಿ ಎರಡು ಶಾಲೆಗಳು ಸೊಂಗಡದಲ್ಲಿಯೂ, ಒಂದು ಮಯುರದಲ್ಲಿಯೂ, ಮತ್ತೊಂದು ಮಹುವಾದಲ್ಲಿಯೂ ಇವೆ. ಈ ಪಾಠಶಾಲೆಗಳಲ್ಲಿ ಕಳೆದ ವರ್ಷ ೩೫೦ ವಿದ್ಯಾರ್ಥಿಗಳಿದ್ದರೆಂದು ತಿಳಿದುಬಂದಿದೆ. ಈ ಪಾಠಶಾಲೆಗಳಲ್ಲಿ ಸೊಂಗಡ ಮತ್ತು ಮಯುರ ಎಂಬ ಸ್ಥಳಗಳಲ್ಲಿರುವುದರಲ್ಲಿ ಭೂಮಿ (ಫಾರಂ) ಯು ಇರುವುದು. ಈ ಭೂಮಿಯಲ್ಲಿ ಮೇಲ್ಕಂಡ ಕಾಡು ಜನರಿಗೆ ವ್ಯವಸಾಯವನ್ನು ಹೇಳಿಕೊಡುವರು. ಪೌರ್ವಾತ್ಯರ ಮತ್ತು ಪಾಶ್ಚಿಮಾತ್ಯರ ಪದ್ಧತಿಗನುಸಾರವಾಗಿ ವ್ಯವಸಾಯ ವಿದ್ಯೆಯನ್ನು ಹೇಳಿಕೊಡುವರು. ಮರಗೆಲಸವೂ ಇದಕ್ಕೆ ಸೇರಿದ ಮತ್ತೊಂದು ವಿಷಯವಾಗಿದೆ. ಈ ಪಾಠಶಾಲೆಗಳಲ್ಲಿ ಮರಗೆಲಸವನ್ನು ಬೋಧಿಸುವುದರಿಂದ ವ್ಯವಸಾಯದಲ್ಲಿ ಮುರಿದ ಅಥವ ಕೆಟ್ಟುಹೋದ ಆಯುಧಗಳನ್ನು ಬೇಸಾಯಗಾರರೇ ಸರಿಮಾಡಿಕೊಳ್ಳಲು ಅನುಕೂಲಿಸುವುದು. ಆಯುಧವು ಮುರಿದುಹೋದಾಗಲೆಲ್ಲಾ ಮರಗೆಲಸದವರ ಬಳಿಗೆ ಹೋಗಿ ಅವರ ಸಮಯವನ್ನು ಕಾದು, ದುಡ್ಡುಕೊಟ್ಟು ಸರಿಮಾಡಿಸಿಕೊಂಡು ಬರುವ ತೊಂದರೆಯು ಇದರಿಂದ ದೂರವಾಗುವುದು. ಈ ಪಾಠಶಾಲೆಯಲ್ಲಿರುವ ವಿದ್ಯಾರ್ಥಿನಿಯರಿಗೆ [illegible] ಹೇಳಿಕೊಡುವರು. [illegible] ವರನ್ನು ಭೂಮಿಯ ಕೆಲಸದಲ್ಲಿ ಸಹಾಯಮಾಡಲು ಕಳುಹಿಸುವರು. ಈ ಪಾಠಶಾಲೆಗಳಲ್ಲಿ ಓದುವವರಿಗೆ ಅನ್ನಾಹಾರಾದಿಗಳನ್ನು ಸರ್ಕಾರದವರೇ ಒದಗಿಸಿಕೊಡುವರು ೧೯೦೭ ನೇ ವರ್ಷದಲ್ಲಿ ಸೊಂಗಡದ ಶಾಲೆಯಿಂದ ೩೫ ವಿದ್ಯಾರ್ಥಿಗಳೂ, ಮಯುರದ ಪಾಠಶಾಲೆಯಿಂದ ೯೫ ವಿದ್ಯಾರ್ಥಿಗಳೂ ಪರೀಕ್ಷೆಗೆ ಹೋಗಿದ್ದು ಅವರಲ್ಲಿ ೫೩ ಮತ್ತು ೭೯ ರಂತೆ ತೇರ್ಗಡೆಯಾದರು.

ಅನಾಥಾಲಯಗಳಲ್ಲಿ ಕುಶಲವಿದ್ಯಾಭಿವೃದ್ಧಿ.

ಮೇಲೆ ಹೇಳಿದ ಅನ್ನಾಹಾರಗಳನ್ನೂ, ವಿದ್ಯೆಯನ್ನೂ ಕೊಡುವ ಶಾಲೆಗೆ ಸೇರಿದ್ದಾಗಿ ಸೊಂಗಡದಲ್ಲಿ ಒಂದು ಅನಾಥಾಲಯವೂ, ಅಮರೇಲಿಯಲ್ಲಿ ಒಂದು ಅನಾಥಾಲಯವೂ ಇರುವುವು. ಈ ಆಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಲಿರುವ ಅನಾಥರು ನೂರಾರುಮಂದಿ ಇರುವರು. ತಮ್ಮ ಆಹಾರವನ್ನು ತಾವು ಸಂಪಾದಿಸಿಕೊಳ್ಳುವಷ್ಟು ಶಕ್ತಿಯನ್ನು ಪಡೆದನಂತರ ಅನಾಥಾಲಯವನ್ನು ಬಿಟ್ಟುಬಿಡುವರು. ಅವರು ತಮ್ಮ ಜೀವನವನ್ನು ಕಳೆಯಲು ಯೋಗ್ಯವಾದ ಕೆಲಸವನ್ನು ಎಲ್ಲಾದರೂ ಸಂಪಾದಿಸಿಕೊಳ್ಳುವರು. ಈ ಅನಾಥಾಲಯಗಳಲ್ಲಿ ಹೇಳಿಕೊಡುವ ವಿದ್ಯೆಗಳಲ್ಲಿ ಮುಖ್ಯವಾದುವುಗಳಾವುವೆಂದರೆ:—(೧) ದರ್ಜಿಯ ಕೆಲಸ, (೨) ಮರಗೆಲಸ, (೩) ನೇಯ್ಗೆಯ ಕೆಲಸ, (೪) ಮೋಚಿ ಕೆಲಸ, (೫) ಕೈಹೊಲಿಗೆ ಕೆಲಸ, (೬) ಚಿತ್ರ ಕೆಲಸ.

ಪಟೇಲರಿಗೆ ಕುಶಲವಿದ್ಯೆಯನ್ನು ಹೇಳಿಕೊಡುವ ಶಾಲೆ.

ಅಮರೇಲಿಯಲ್ಲೇ ಇವರದೊಂದು ಪಾಠಶಾಲೆಯಿರುವುದು. ಈ ಪಾಠಶಾಲೆಯಲ್ಲಿ ಪಟೇಲರ ಮಕ್ಕಳಿಗೆ ಮುಂದಕ್ಕೆ ಅಭಿವೃದ್ಧಿಯಾಗುವಂತಹ ವ್ಯವಸಾಯಕ್ಕೆ ಸಂಬಂಧಪಟ್ಟ ವಿದ್ಯೆಯನ್ನು ಕಲಿಸುವರು. ಈ ಪಾಠಶಾಲೆಯಲ್ಲಿ ಪಟೇಲರ ಹುಡುಗರಾದರೆ ಯಾವವಿಧವಾದ ರುಸುಂ ಕೊಡಬೇಕಾಗಿಲ್ಲ. ಸರ್ಕಾರದವರೇ ಅನ್ನಾಹಾರಾದಿಗಳನ್ನು ಕೊಟ್ಟು ಕೆಲಸವನ್ನು ಹೇಳಿಕೊಡುವರು. ಈ ಪಾಠಶಾಲೆಗಳಲ್ಲಿ ೧೯೧೦ ರಲ್ಲಿ ಸುಮಾರು ೫೦ ಹುಡುಗರಿದ್ದರು. ಅವರಿಗೆ ವ್ಯವಸಾಯವನ್ನು ಬಾಯಿನಲ್ಲಿ ಬೋಧಿಸುವರಲ್ಲದೆ ಕೈಲಿ ಕೆಲಸ ಮಾಡುವುದನ್ನೂ ಹೇಳಿಕೊಡುವರು. ರೆವಿನ್ಯು, ಸಿವಿಲ್, ವೈದ್ಯ ಗಳಲ್ಲಿ ಸ್ವಲ್ಪ ಜ್ಞಾನವೂ, ಸರ್ವೆ ಕೆಲಸಗಳಲ್ಲಿ ಸ್ವಲ್ಪ ಜ್ಞಾನವೂ, ದೇಶಭಾಷೆಯ ೬ ನೇ ಪುಸ್ತಕವನ್ನು ಓದುವಷ್ಟು ಭಾಷಾಜ್ಞಾನವೂ ಉಂಟಾಗುವಂತೆ ಪಾಠ ಹೇಳಿಕೊಡುವರು. ಇತರ ವಿದ್ಯಾರ್ಥಿಗಳು ತಿಂಗಳಿಗೆ ೫ ರೂ. ರುಸುಂ ಕೊಡಬೇಕು.

ಕಿಂಡರ್‌ಗಾರ್ಟನ್ ವಿದ್ಯಾಭ್ಯಾಸದ ಶಾಲೆ.

ಈ ಮೇಲೆ ಕಂಡ ಶಾಲೆಗಳು ಆರಿವೆ. ಬರೋಡಾ ಸಂಸ್ಥಾನದಲ್ಲಿ ಕಿಂಡರ್‌ಗಾರ್ಟನ್ ಕ್ರಮದಿಂದ ಹೇಳಿಕೊಡುವುದು ಸಾಧಾರಣ ವಿದ್ಯಾಭ್ಯಾಸದಂತೆಯೇ ಆಗಿದೆ. ಮಣ್ಣಿನಲ್ಲಿ ಮಾದರಿಗಾಗಿ ಸಾಮಾನುಗಳನ್ನು ಮಾಡುವುದನ್ನೂ, ಚಿತ್ರ ಬರೆವುದನ್ನೂ, ಸ್ವಲ್ಪ ಮರಗೆಲಸವನ್ನೂ ಹೇಳಿಕೊಡುವರು. ೧೯೦೯ ನೇ ವರ್ಷಾಂತ್ಯದಲ್ಲಿ ಈ ವಿದ್ಯಾಭ್ಯಾಸವನ್ನು ಪಡೆಯುತ್ತಲಿದ್ದವರ ಸಂಖ್ಯೆಯು ೧೬,೨೦೦ ಆಗಿತ್ತು. ಇವರಲ್ಲಿ ೭೧೨ ಮಂದಿ ಪರೀಕ್ಷೆಗೆ ಹೋಗಿದ್ದು ೬೭೩ ಜನ ತೇರ್ಗಡೆಯಾದರು. ಇದರಿಂದ ಬಹು ಪ್ರಯೋಜನವುಂಟೆಂದು ನಾವು ಹೇಳಬೇಕಾಗಿಲ್ಲ. ಇದರಿಂದಾಗುವ ಪ್ರಯೋಜನವನ್ನು ಸರ್ಕಾರದವರು ತಿಳಿದು ಪ್ರತಿಯೊಂದು ಮುನಿಸಿಪಾಲಿಟಿಯಿಂದಲೂ ಒಂದೊಂದು ಕಿಂಡರ್‌ಗಾರ್ಟನ್ ಕ್ರಮದಿಂದ ಬೋಧಿಸುವ ಪಾಠಶಾಲೆಯನ್ನು ಸ್ಥಾಪಿಸಿರುವರು. ಈ ವಿಧವಾದ ಬೋಧನೆಯು ಹೆಚ್ಚುತ್ತಲಿರುವುದರಿಂದ, ಬರೋಡಾ ದೇಶದ ಬಾಲಕರ ವಿದ್ಯಾಭ್ಯಾಸವು ಅತ್ಯಂತ ಉನ್ನತಸ್ಥಿತಿಯಲ್ಲಿರುವುದು. ಈ ಪಾಠವನ್ನು ಕಲಿಸಲು ಉಪಾಧ್ಯಾಯರನ್ನು ಸರ್ಕಾರದವರೇ ಒದಗಿಸುವರು. ಪ್ರತಿಯೊಂದು ಪಾಠಶಾಲೆಗೂ "Paradise of Child-hood" ಶೈಶವದ ಸ್ವರ್ಗವೆಂಬ ಪುಸ್ತಕವನ್ನು ಮಾತೃಭಾಷೆಗೆ ಪರಿವರ್ತಿಸಿ ಒದಗಿಸಿರುವರು. ಇದಲ್ಲವೆ ಮಾತೃಭಾಷಾಭಿಮಾನವು!

[ಸಶೇಷ]

ಬಹು ದುಡ್ಡನ್ನು ವ್ಯಯಮಾಡಿಸಿದ ಬೆಕ್ಕು.

ಸೂರತ್ತಿನಲ್ಲಿ ಒಬ್ಬ ಶ್ರೀಮಂತ ನವಾಬನು ಒಂದು ಬೆಕ್ಕನ್ನು ಬಹು ಮುದ್ದಾಗಿ ಸಾಕಿಕೊಂಡಿದ್ದನು. ಇದು ರಾತ್ರಿ ವೇಳೆಯಲ್ಲಿ ನೆರೆಮನೆಗಳ ಹೆಂಚಿನಮೇಲೆ ಹತ್ತಿ ಕಾಲವನ್ನು ಕಳೆದುಕೊಂಡು ಬರುತ್ತಿದ್ದಿತಲ್ಲದೆ, ಪಾರ್ಸಿಜನಗಳ ಅಡಿಗೆಯ ಮನೆಗೆ ನುಗ್ಗಿ ಅಲ್ಲಿಯ ಪದಾರ್ಥಗಳನ್ನು ಹುಡಾಹುಡಿ ಮಾಡಿಕೊಂಡು ಬರುತಿದ್ದಿತು. ಪ್ರಾಯಶವಾಗಿ ಪಾರ್ಸಿ ಜನಗಳಿಗೆ ಬೆಕ್ಕು ಸೇರದು. ಇದರಮೇಲೆ ಪಾರ್ಸಿ ಜನರು ಆ ಬೆಕ್ಕು ತಮ್ಮ ಮನೆಗೆ ಬಾರದಂತೆ ತಡೆಮಾಡಬೇಕೆಂದು ನವಾಬನಿಗೆ ಎಷ್ಟು ವಿನಯದಿಂದ ಹೇಳಿ ಕಳುಹಿದಾಗ್ಯೂ ನವಾಬನು ಅಲಕ್ಷ್ಯದಿಂದಿದ್ದನು. ಹೀಗೆ ಆ ಬೆಕ್ಕು ನೆರೆಮನೆಗಳಿಗೆ ನುಗ್ಗಿ ಹಾವಳಿಯನ್ನುಂಟುಮಾಡುತ್ತಿರುವಲ್ಲಿ ಈ ನವಾಬನ ಬಂಗಲೆಯ ಪಕ್ಕದಮನೆಯ ಪಾರ್ಸಿಯು ಅದನ್ನು ಒಂದುರಾತ್ರಿ ಕೋಣೆಯಲ್ಲಿ ಹಿಡಿದು ಕಟ್ಟುಹಾಕಿದ್ದನು. ಅದು ಹೇಗೋ ಬಿಡಿಸಿಕೊಂಡು ಕಿಟಕಿಯಿಂದ ದುಮುಕಿ ಹೊರಗೆ ತಪ್ಪಿಸಿಕೊಂಡು ಹೊರಟುಹೋಗಿದ್ದಿತು. ಆ ಪಾರ್ಸಿಯು ಆ ಬೆಕ್ಕು ತಮ್ಮಗಳ ಮನೆಗೆ ಬಾರದಂತೆ ನೋಡಿಕೊಳ್ಳದಿದ್ದಲ್ಲಿ ಅದು ಪ್ರಾಣದಿಂದುಳಿಯುವುದಿಲ್ಲವೆಂದು ನವಾಬನಿಗೆ ಹೇಳಿ ಕಳುಹಿದನು. ಆದರೆ ನವಾಬನು ತನ್ನ ಬೆಕ್ಕನ್ನು ಯಾರೂ ಮುಟ್ಟಕೂಡದೆಂದು ಆ ಪಾರ್ಸಿಯವನಿಗೆ ಪ್ರತಿಯಾಗಿ ಹೇಳಿ ಕಳುಹಿದನು. ಹೀಗೆ ಆ ಬೆಕ್ಕು ಆ ಪಾರ್ಸಿಯ ಮನೆಗೆ ಪ್ರತಿರಾತ್ರಿಯಲ್ಲೂ ಬಂದು ಹಾವಳಿಯನ್ನು ಮಾಡುತ್ತಿದ್ದುದನ್ನು ಆ ಮನೆಯವನು ನೋಡಿ ಸಹಿಸಲಾರದೆ, ಒಂದುರಾತ್ರಿ ಅದನ್ನು ಹಿಡಿದು ಒಂದು ಚೀಲದೊಳಗೆ ಹಾಕಿ ಅದನ್ನು ತನ್ನ ಮನೆಯ ಮಾಡಿನಿಂದ ಆ ನವಾಬನ ಬಂಗಲೆಯ ಉದ್ಯಾನಕ್ಕೆ ಬಿಸಾಡಿದನು. ಆ ನವಾಬನ ಆಳುಗಳು ಚೀಲದೊಳಗೆ ಬೆಕ್ಕು ಅರಚಿಕೊಳ್ಳುತ್ತಿದ್ದುದನ್ನು ಕೇಳಿ, ಅದನ್ನು ಚೀಲದಿಂದಾಚೆಗೆ ತೆಗೆದು ನೆರೆಮನೆಯ ಪಾರ್ಸಿಯು ಮಾಡಿದ ಕೃತ್ಯವನ್ನು ನವಾಬನಿಗೆ ತಿಳುಹಿದರು. ಇದರಮೇಲೆ ನವಾಬನು ತನ್ನ ಬೆಕ್ಕನ್ನು ಇನ್ನುಮೇಲೆ ಮುಟ್ಟಿದುದಾದರೆ ಬಹಳ ಅಪಾಯ ಸಂಭವಿಸುತ್ತದೆಂದು ಆ ಪಾರ್ಸಿಯವನಿಗೆ ಹೇಳಿ ಕಳುಹಲು, ಅವನು ಅದಕ್ಕೆ ಹೆದರದೆ ಪ್ರತಿಯಾಗಿ ಹೇಳಿ ಕಳುಹಿದನು. ಇದರಿಂದ ಪರಸ್ಪರ ಮನಸ್ತಾಪವು ಅಭಿವೃದ್ಧಿಯಾಗಿ ಕಲಹಕ್ಕಾರಂಭವಾಯಿತು. ಇಷ್ಟರಲ್ಲಿ ಆ ಬೆಕ್ಕು ಮಾಯವಾಗಲು ನವಾಬನಿಗೆ ಆ ಪಾರ್ಸಿಯಮೇಲೆ ಅನುಮಾನ ಹುಟ್ಟಿತು ಮತ್ತೂ ನವಾಬನ ಆಳುಗಳು ಆ ಪಾರ್ಸಿಯು ತಮ್ಮ ಬೆಕ್ಕನ್ನು ನದಿಯಲ್ಲಿ ಬಿಸಾಡಿರಬಹುದೆಂದು ನವಾಬನಿಗೆ ತಿಳುಹಿದರು. ನವಾಬನ ಕೋಪಕ್ಕೆ ಪಾರವಿಲ್ಲದಂತಾಯಿತು ಮತ್ತೂ ಮಾರನೆಯದಿನದಿಂದ ಅವನ ಆಳುಗಳಿಗೂ ಪಾರ್ಸಿಯ ಆಳುಗಳಿಗೂ ಬಡಿದಾಟಕ್ಕಾರಂಭವಾಯಿತು. ನವಾಬನು ತನ್ನ ಬಂಗಲೆಗೆ ಸೇರಿದ ಸ್ಥಳದಲ್ಲಿ ಪಾರ್ಸಿಯು ತಿರುಗಾಡಲು ಮಾರ್ಗವನ್ನು ಮಾಡಿಕೊಂಡಿದ್ದನೆಂದು ಕೋರ್ಟಿನಲ್ಲಿ ವಿವಾದವನ್ನು ಹೂಡಿದನು. ಅತ್ತಲಾಗಿ ಪಾರ್ಸಿಯು ತನ್ನ ಮನೆಗೆ ಸೇರಿದ ಸ್ಥಳವನ್ನು ಆ ನವಾಬನು ಅಕ್ರಮದಿಂದ ತನ್ನ ಬಂಗಲೆಗೆ ಸೇರಿಸಿಕೊಂಡಿದ್ದನೆಂದೂ ಇದಿರು ವಿವಾದವನ್ನು ಹೂಡಿದನು. ಹೀಗೆ ಪಾರ್ಸಿಯಮೇಲೆ ನವಾಬನೂ, ನವಾಬನಮೇಲೆ ಪಾರ್ಸಿಯೂ ಒಂದರಮೇಲೊಂದು ವಿವಾದಗಳನ್ನು ಹೂಡಿದುದರಿಂದ, ಉಭಯರಿಗೂ ಲಕ್ಷಾಂತರ ರೂಪಾಯಿಗಳು ನಷ್ಟವಾಯಿತು. ಈ ನಡುವೆ ಒಂದು ರಾತ್ರಿ ನವಾಬನು ತನ್ನ ಮಲಗುವ ಮನೆಯಲ್ಲಿ ಮಲಗಿರುವಾಗ್ಗೆ ಏನೋ ಶಬ್ದವಾದುದರಿಂದೆಚ್ಚೆತ್ತು ದೀಪವನ್ನು ಹೊತ್ತಿಸಿ ನೋಡುವಲ್ಲಿ, ತಾನು ಮುದ್ದಾಗಿ ಸಾಕುತ್ತಿದ್ದ ಬೆಕ್ಕು ಬಂದು ಶಬ್ದಮಾಡುತ್ತಿದ್ದಿತೆಂದು ಗೊತ್ತಾಯಿತು. ಈ ಬೆಕ್ಕು ನವಾಬನದೃಷ್ಟಿಗೆ ಬೀಳದಂತೆ ತಪ್ಪಿಸಿಕೊಂಡು ಎಲ್ಲೋ ಸಂಚರಿಸಲು ಹೋಗಿದ್ದುದರಿಂದ, ಅವನಿಗೂ ಅವನ ನೆರೆಯ ಪಾರ್ಸಿಯವನಿಗೂ ಬದ್ಧದ್ವೇಷವುಂಟಾಗಿ ಲಕ್ಷಾಂತರ ರೂಪಾಯಿಗಳು ನಷ್ಟವಾಯಿತು. ಹೀಗೆ ಅಲ್ಪವಿಷಯಗಳಿಗಾಗಿ ವ್ಯಾಜ್ಯಮಾಡಿ ತಮ್ಮ ಆಸ್ತಿಯನ್ನು ಹಾಳುಮಾಡಿಕೊಳ್ಳುತ್ತಿರುವವರು ನಮ್ಮ ಭರತಖಂಡದಲ್ಲಿ ಹೇರಳವಾಗಿರುವರು.

ಮೈಸೂರ್ ಗೆಜೆಟಿ ಸಂಗ್ರಹ.

ಬೆಂಗಳೂರ ಸಿಟಿ ಮ್ಯಾಜಿಸ್ಟ್ರೇಟ್ ಮತ್ತೂ ಅ॥ ಕ॥ ಮೆ॥ ಬಿ. ವೆಂಕೋಬರಾವ್ ಬಿ. ಎ., ಯವರು ೧೯೧೧ ನೇ ಜುಲೈ ತಾ॥ ೧೦ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೧೫ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಸ॥ ಅ॥ ಸರ್ಜನ್ ಮೆ॥ ಜಿ. ವಿ. ನಾಸ್ಕರೆನ್ಹಾಸರವರಿಗೆ ೧೯೧೧ ನೇ ಆಗಸ್ಟ್ ತಾ॥ ೨ ರಿಂದ ಅಥವಾ ಅವರುಪಯೋಗಿಸಿಕೊಳ್ಳುವಂದಿನಿಂದ ೩ ತಿಂಗಳ ಪ್ರಿವಿಲೇಜ್ ರಜದೊಡನೆ ಮತ್ತೆ ೩ ತಿಂಗಳ ರಜವು ಕೊಡಲ್ಪಟ್ಟಿರುವುದರಿಂದ ಇವರು ಬರುವವರೆಗೆ ಸ॥ ಅ॥ ಸರ್ಜನ್ ಮೆ॥ ಎಚ್. ಎಸ್. ನಂಜುಂಡಯ್ಯನವರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಮತ್ತೂ ಟ್ರಾನ್ಸ್‌ಪೋರ್ಟ್ ಕೋರಿನ ಮೆಡಿಕಲ್ ಛಾರ್ಜಿನಲ್ಲಿರತಕ್ಕದು.

ಜ॥ ಮತ್ತೂ ರೆ॥ ಶಾಖೆಗಳ ಅಂಡರ್ ಸೆಕ್ರೆಟರಿ ಮೆ॥ ಬಿ. ರಾಮಸ್ವಾಮಯ್ಯ, ಬಿ. ಎ., ಬಿ. ಎಲ್., ರವರಿಗೆ ಅವರುಪಯೋಗಿಸಿಕೊಳ್ಳುವ ಲಾಗಾಯತು ೧ ತಿಂಗಳು ಮತ್ತು ೨೦ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವಪ್ರಯುಕ್ತ ಅವರು ಬರುವವರೆಗೆ ಜ॥ ಮತ್ತೂ ರೆ॥ ಸೆಕ್ರೆಟರಿಯಟ್ಟಿನ ರಿಜಿಸ್ಟ್ರಾರಾದ ಮೆ॥ ಬಿ. ನಾರಾಯಣಸ್ವಾಮಯ್ಯಂಗಾರ್, ಬಿ. ಎ., ಬಿ. ಎಲ್., ರವರು ಬಿ. ಷೆಡ್ಯೂಲ್ ೫ ನೇ ತರಗತಿ ಅಫಿಷಿಂಗ್ ಅ॥ ಕಮೀಷನರಾಗಿ ನೇಮಿಸಲ್ಪಟ್ಟು ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ ಜ॥ ಮತ್ತೂ ರೆ॥ ಸೆಕ್ರೆಟರಿಯಟ್ಟಿನ ಸೂಪರಿಂಟೆಂಡೆಂಟ್ ಮೆ॥ ಬಿ. ಪಿ. ಲಕ್ಷ್ಮಣರಾಯರು ಅಫಿಷಿಂಗ್ ರಿಜಿಸ್ಟ್ರಾರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಕಂಟ್ರೋಲರಾಫೀಸ್ ಅ॥ ಕ॥ ಮೆ॥ ಎಲ್. [illegible] ಬಿ. ಎ., ಯವರು ಬಿ. ಷೆಡ್ಯೂಲ್ ೫ ನೇ [illegible]

ನರಿಂದ ೪ ನೇ ತಾ॥ ಗೆ ೧೯೧೧ ನೇ ಮೇ ತಾ॥ ೨೩ ರಿಂದ ಹೆಚ್ಚಿಸಲ್ಪಟ್ಟಿರುತ್ತಾರೆ.

ಅಮಲ್ದಾರರುಗಳಾದ ಮೆ॥ ಪಿ. ಸುಬ್ಬರಾವ್, ಬಿ. ಎ., ಬಿ. ಎಲ್., ಯವರು ದೇವನಹಳ್ಳಿಯಿಂದ ಕೊಪ್ಪ ತಾ॥ ಗೂ, ಆಕ್ಟಿಂಗ್ ಅಮಲ್ದಾರ್ ಮೆ॥ ಕೆ. ನಾರಣಯ್ಯರ್ ರವರು ದೇವನಹಳ್ಳಿ ತಾ॥ ಗೂ, ಮೆ॥ ಪಿ. ಗೋಪಾಲಾಚಾರ್ರು ರಜಾದಿಂದ ಬಂದಮೇಲೆ ಚಿಂತಾಮಣಿ ತಾ॥ ಗೂ, ಚಿಂತಾಮಣಿ ತಾ॥ ಆಕ್ಟಿಂಗ್ ಅಮಲ್ದಾರ್ ಮೆ॥ ಬಿ. ಲಿಂಗಯ್ಯನವರು ಡೆಪ್ಯುಟಿ ಅಮಲ್ದಾರರಾಗಿ ಕ್ಲೋಸ್‌ಪೇಟೆಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಜುಲೈ ತಾ॥ ೧೭ ನೇ ಸೋಮವಾರ.

ಬಾಲವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ಮಾಡಿಸುವುದು.

ದೇಶದ ಸಂಪದಭಿವೃದ್ಧಿಗೆ ವಿದ್ಯಾಭಿವೃದ್ಧಿಯೇ ಕಾರಣವೆಂಬುದಕ್ಕೆ ಪಾಶ್ಚಾತ್ಯರಾಷ್ಟ್ರಗಳೇ ದೃಷ್ಟಾಂತಗಳಾಗಿರುವುವು. ಆ ರಾಷ್ಟ್ರಗಳಲ್ಲಿ ವರ್ತಕರು, ಬೇಸಾಯಗಾರರು ಕೈಗಾರಿಕೆಯವರು ಮೊದಲಾದವರು ವಿದ್ಯಾಭ್ಯಾಸಂಗವನ್ನು ಮಾಡಿ, ತಮ್ಮ ಕಸಬುಗಳಲ್ಲಿ ನೈಪುಣ್ಯವನ್ನು ಸಂಪಾದಿಸಿ ಕಾಲಕ್ಕೆ ತಕ್ಕಹಾಗೆ ಮಾರ್ಪಾಟುಗಳನ್ನು ಮಾಡಿಕೊಂಡು ಲಕ್ಷ್ಮೀಪುತ್ರರಾಗಿ ಬಾಳುತ್ತಿರುವುದನ್ನು ಎಲ್ಲರೂ ಬಲ್ಲರು. ಅಷ್ಟು ಭೂಯಿಷ್ಠವಾದ ನಮ್ಮ ಭರತಖಂಡದಲ್ಲಾದರೋ ಆದ್ಯಂತದಿಂದಲೂ ವಿದ್ಯಾಭ್ಯಾಸಂಗವನ್ನು ಮಾಡುತ್ತಿರುವ ಕೆಲ ಪಂಗಡದವರುಮಾತ್ರ ಪ್ರಾಚೀನ ವಿದ್ಯಾಭ್ಯಾಸವನ್ನು ಮಾಡುತ್ತಿರುವರೇ ಹೊರತು, ಭಾರತ ಪ್ರಜೆಗಳಲ್ಲಿ ಬಹುಭಾಗದವರಾದ ಮತ್ತು ಬೇಸಾಯದಿಂದಲೂ, ಕೈಕಸಬಿನಿಂದಲೂ ಜೀವಿಸುವ ಪಂಗಡದವರು ವಿದ್ಯಾಗಂಧವನ್ನೇ ಅರಿಯದೆ ಪುರಾತನ ಪದ್ಧತಿಯನ್ನನುಸರಿಸಿ ತಮ್ಮ ಕಸಬುಗಳನ್ನು ಮಾಡಿಕೊಂಡು ತಾತ್ಕಾಲಿಕ ಜೀವನವನ್ನು ಬಹು ಕಷ್ಟದಿಂದ ನಿರ್ವಹಿಸಿಕೊಂಡು ಹೋಗುತ್ತಿರುವರು. ಹೀಗೆ ಮೂಢಪದ್ಧತಿಯನ್ನನುಸರಿಸಿ ಉದರಂಭರಣವನ್ನು ಮಾಡಿಕೊಳ್ಳುತ್ತಿರುವ ಜನರು, ನೂತನ ಯಂತ್ರಸಾಧನಗಳಿಂದ ಎಲ್ಲ ಕಸಬುಗಳನ್ನು ಬಹು ಸುಲಭವಾಗಿ ಮಾಡಿ ಮನುಷ್ಯನಿಗೆ ಬೇಕಾದ ಸಮಸ್ತ ಪದಾರ್ಥಗಳನ್ನೊದಗಿಸಿಕೊಡುತ್ತಿರುವವರ ಕೂಡ ಸ್ಪರ್ಧಿಸುವುದು ಅಸಂಭವವೇಸರಿ. ಮತ್ತು ಪ್ರತಿಯೊಂದು ಕಸಬಿನವರೂ ವಿದ್ಯಾವಂತರಾಗಿ ಕಾಲಕ್ಕೆ ತಕ್ಕಂಥ ಯಂತ್ರಸಹಾಯದಿಂದ ತಮ್ಮ ವೃತ್ತಿಯನ್ನು ಅಭಿವೃದ್ಧಿಗೊಳಿಸಿಕೊಂಡ ಹೊರತು ಈ ಭರತಖಂಡವು ಎಂದಿಗೂ ಅಭಿವೃದ್ಧಿಯಾಗಲಾರದು. ಅದುಕಾರಣವೇ ಪ್ರತಿಯೊಬ್ಬ ಭಾರತೀಯನೂ ವಿದ್ಯಾವಂತನಾಗುವಂತೆ ಮಾಡಬೇಕು. ಇದಕ್ಕಾಗಿ ಬಾಲವಿದ್ಯಾಭ್ಯಾಸವನ್ನು ನಿರ್ಬಂಧದಿಂದ ಮಾಡಿಸಿದುದೇಯಾದರೆ, ಮುಂದೆ ಪ್ರೌಢವಿದ್ಯಾಭ್ಯಾಸವನ್ನು ಮಾಡಲು ಅವರಿಗನುಕೂಲವಾಗುವುದು. ಆನರಬಲ್ ಗೋಖಲೆಯವರು ಬಾಲವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ಮಾಡಿಸುವುದರ ಅವಶ್ಯಕತೆಯನ್ನು ಕುರಿತು ವೈಸರಾಯರ ನಿಯಮನಿರ್ಮಾಣ ಸಭೆಯಲ್ಲಿ ಬಹು ಸಾಮರ್ಥ್ಯದಿಂದ ಪ್ರತಿಪಾದಿಸಿ, ತತ್ಸಂಬಂಧವಾದ ವಿಧಿಯ ಸ್ವರೂಪನಿರೂಪಣವನ್ನು ಮಾಡಿ ಅದನ್ನು ಅನುಷ್ಠಾನಕ್ಕೆ ತರಬೇಕೆಂದು ಪ್ರಾರ್ಥಿಸಿರುವರು. ಈ ವಿಧಿಯು ಸಮಗ್ರವಾಗಿ ಈ "ಸ್ಟಾರ್" ಪತ್ರಿಕೆಯ ಹಿಂದಿನ ಸಂಚಿಕೆಯೊಂದರಲ್ಲಿ ಪ್ರಕಟಿತವಾಗಿರುವುದು.

ಆ॥ ಗೋಖಲೆಯವರ ವಿಧಿಯನ್ನು ಅನುಷ್ಠಾನಕ್ಕೆ ತರುವ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ಅಧೀನ ಸರ್ಕಾರಗಳ, ಮ್ಯುನಿಸಿಪಲ್ ಮತ್ತು ಲೋಕಲ್ ಬೋರ್ಡುಗಳ ಸರ್ವಕಲಾನಿಲಯಗಳ ಮತ್ತು ಇತರರ ಅಭಿಮತವನ್ನು ಕೇಳಿರುವರು. ಇದಕ್ಕೆ ಉತ್ತರವನ್ನು ಕೊಡುವಲ್ಲಿ ಕೆಲರು ವಿದ್ಯೆಯನ್ನು ಬಲಾತ್ಕಾರದಿಂದ ಮಾಡಿಸುವುದರಿಂದಲಾದರೂ ಪಂಚಮರು ಮೊದಲಾದ ಹಿಂದುಳಿದ ಜನರು ವಿದ್ಯಾವಂತರಾಗಿ ತನ್ಮೂಲಕ ಅಭಿವೃದ್ಧಿಯನ್ನು ಹೊಂದುವರಲ್ಲದೆ ದೇಶಾಭ್ಯುದಯವೂ ಆಗುವುದಾದುದರಿಂದ, ಈ ವಿಧಿಯನ್ನು ಆಚರಣೆಗೆ ತರಬೇಕೆಂದು ಹೇಳಿರುವರು. ವಿದ್ಯೆಯನ್ನು ಪ್ರತಿಯೊಬ್ಬರೂ ಕಲಿಯಲೇ ಬೇಕೆಂದು ನಿರ್ಬಂಧಪಡಿಸುವುದಾದರೆ, ಈಗಿರುವ ಪಾಠಶಾಲೆಗಳ ಸಂಖ್ಯೆಯನ್ನು ಇನ್ನೂ ೩-೪ ರಷ್ಟು ಹೆಚ್ಚಿಸಬೇಕಾಗುವುದಲ್ಲದೆ, ಈಗ ವಿದ್ಯಾಭ್ಯಾಸಕ್ಕಾಗಿ ಪ್ರತಿವರ್ಷವೂ ವ್ಯಯವಾಗುತ್ತಿರುವ ೩ ಕೋಟಿ ರೂಪಾಯಿಗಳನ್ನು ಇನ್ನೂ ಹೆಚ್ಚಿಸಬೇಕಾಗುತ್ತದೆ. ಆದರೆ ಭರತಖಂಡದಲ್ಲಿ ಈಗ ಹೆಚ್ಚಿರುವ ಅರಾಜಕ ಪ್ರವರ್ತನವನ್ನು ಅಡಗಿಸಲು ಪೋಲೀಸು ಶಾಖೆಯನ್ನು ಅಭಿವೃದ್ಧಿಗೊಳಿಸಬೇಕಾಗಿ ಬಂದುದರಿಂದ, ಈ ಶಾಖೆಗಾಗಿ ಮೊದಲು ವ್ಯಯವಾಗುತ್ತಿದ್ದ ೩ ಕೋಟಿ ರೂ. ಗಳನ್ನು ೬ ಕೋಟಿಗೆ ಹೆಚ್ಚಿಸಬೇಕಾಯಿತು. ಅಲ್ಲದೆ ಭರತಖಂಡದೊಳಗೂ, ಹೊರಗೂ ಇರುವ ಸೇನೆಯ ಪೋಷಣೆಗಾಗಿ ಪ್ರತಿವರ್ಷದಲ್ಲೂ ೩೦ ಕೋಟಿ ರೂ. ಗಳ ವರೆಗೆ ವ್ಯಯವಾಗುತ್ತಿರುವುದು. ಮತ್ತು ಚೈನಾದೇಶಕ್ಕೆ ಭರತಖಂಡದಿಂದ ವಿಕ್ರಯಿಸಲ್ಪಡುತ್ತಿರುವ ಅಫೀಮು ಕಡಿಮೆಯಾದುದರಿಂದ, ರಾಜಾದಾಯದಲ್ಲಿ ಬಹು ಕಡಿಮೆಯಾಗಿರುವುದು. ಈ ಕಾರಣಗಳಿಂದ ಸರ್ಕಾರದವರು ಬಲಾತ್ಕಾರದಿಂದ ಮಾಡಿಸಲ್ಪಡುವ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ವ್ಯಯವನ್ನು ಮಾಡಲವಕಾಶವಿಲ್ಲವು. ಮೆ॥ ಗೋಖಲೆಯವರು ಸೂಚಿಸುವಂತೆ ಪ್ರಜೆಗಳಮೇಲೆ ಒಂದು ವಿಧವಾದ ಕಂದಾಯವನ್ನು ಹಾಕಿ ಅದರುತ್ಪನ್ನದಿಂದ ಈ ವಿದ್ಯಾಭ್ಯಾಸಕ್ರಮಕ್ಕೆ ತಗಲುವ ವೆಚ್ಚವನ್ನು ನಿರ್ವಹಿಸುವಂತೆ ಮಾಡುವುದಾದರೆ, ಈಗಲೇ ತೆರುತ್ತಿರುವ ಕಂದಾಯವು ಹೆಚ್ಚೆಂದು ಗೊಣಗುಟ್ಟುತ್ತಿರುವ ರೈತರು ಇನ್ನೂ ಹೆಚ್ಚಾಗಿ ಕೊಡುವರೆಂಬುದು ಅಸಂಗತವು. ಮತ್ತು ರೈತರು ತಮ್ಮ ಬೇಸಾಯ ಕೆಲಸದಲ್ಲಿ ನೆರವಾಗುವ ಮಕ್ಕಳನ್ನು ವಿದ್ಯಾಭ್ಯಾಸಂಗಕ್ಕೆ ಬಿಟ್ಟುಕೊಡಲು ಸಮ್ಮತಿಸಲಾರರು; ಒಂದುವೇಳೆ ಸಮ್ಮತಿಸಿದರೂ ಈ ಬಾಲವಿದ್ಯಾಭ್ಯಾಸದಿಂದ ಅವರು ತಮ್ಮ ಕಸಬನ್ನಭಿವೃದ್ಧಿಗೊಳಿಸಲಾರರು. ಅನುಕಾರಣ ಈ ವಿಧಿಯನ್ನು ಅನುಷ್ಠಾನಕ್ಕೆ ತರಕೂಡದೆಂದು ಮತ್ತೆ ಕೆಲರು ವಾದಿಸುತ್ತಿರುವರು.

ಬಲಾತ್ಕಾರದಿಂದ ಬಾಲವಿದ್ಯಾಭ್ಯಾಸವನ್ನು ಮಾಡಿಸಬೇಕೆಂಬ ಬಗೆಗೆ ಆ॥ ಗೋಖಲೆಯವರು ಕೌನ್ಸಿಲ್ ಮೆಂಬರುಗಳ ಪರ್ಯಾಲೋಚನೆಗೆ ತಂದಿರುವ ವಿಧಿಯನ್ನು ಆಚರಣೆಗೆ ತರುವ ವಿಚಾರದಲ್ಲಿ ಅನುಕೂಲ ಪ್ರತಿಕೂಲ ಚರ್ಚೆಗಳು ಮೇಲೆ ಹೇಳಿದ ರೀತಿಯಲ್ಲಿ ನಡೆಯುತ್ತಿವೆ. ಬಾಲವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ಮಾಡಿಸುವುದು ಅವಶ್ಯಕವೆಂದು ಸರ್ಕಾರದವರು ಬಲ್ಲವರಾಗಿದ್ದರೂ, ಅದಕ್ಕಾಗಿ ಹೆಚ್ಚು ವೆಚ್ಚವನ್ನು ಮಾಡಲು ದುಡ್ಡಿನ ಅಭಾವವನ್ನು ತೋರಿಸುತ್ತಿರುವುದರಿಂದ, ಈ ವೆಚ್ಚಕ್ಕೆ ತಕ್ಕ ಮಾರ್ಗವನ್ನು ಪ್ರಜೆಗಳು ತಾವಾಗಿ ತೋರಿಸಿಕೊಟ್ಟ ಹೊರತು, ಈ ವಿಧಿಯು ಅನುಷ್ಠಾನಕ್ಕೆ ಬರುವಂತೆ ತೋರಲಿಲ್ಲವು. ಅದುಕಾರಣ ಪ್ರಜೆಗಳು ತಥಾಪಿ ಅವರಲ್ಲು ಸಂಪನ್ನರಾದವರು ಈಗ ತಾವು ಕೊಡುತ್ತಿರುವ ಕಂದಾಯದ ಜತೆಗೆ ಇನ್ನೂ ಕೊಂಚ ಹೆಚ್ಚು ಕಂದಾಯವನ್ನು ಕೊಡಲು ಸಮ್ಮತಿಸಿಯಾದರೂ ತಮ್ಮ ದೇಶದ ಸಂಪದಭಿವೃದ್ಧಿಗೆ ಕಾರಣಭೂತವಾದ ಈ ಬಾಲವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ಮಾಡಿಸುವ ವಿಧಿಯನ್ನು ಅನುಷ್ಠಾನಕ್ಕೆ ತರುವಂತೆ ಮಾಡಿಕೊಳ್ಳುವವರಾಗಲೆಂದು ನಾವು ಇಚ್ಛೆಸುತ್ತೇವೆ.

ಮೈಸೂರು ಸರ್ಕಾರದವರ ಮೆಚ್ಚಿಗೆ.

ರೆವಿನ್ಯೂ ಕಮೀಷನರುದ್ಯೋಗದಿಂದ ನಿವೃತ್ತರಾದ ರಾಜಕಾರ್ಯಪ್ರವೀಣ ಮೆ॥ ಎ. ರಂಗಸ್ವಾಮಯ್ಯಂಗಾರ್ ರಾವ್‌ಬಹದ್ದೂರ್ ರವರ ಉದ್ಯೋಗ ನಿರ್ವಾಹಶಕ್ತಿಯ ವಿಚಾರದಲ್ಲಿ ನಮ್ಮ ಸರ್ಕಾರದವರು ತಮ್ಮ ಮೆಚ್ಚಿಗೆಯನ್ನು ಈ ಪ್ರಕಾರವಾಗಿ ಕಳೆದ ತಾ॥ ೧೭ ರ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ:—

ಮೆ॥ ರಂಗಸ್ವಾಮಯ್ಯಂಗಾರರು ಸರ್ಕಾರಿಯುದ್ಯೋಗಕ್ಕೆ ಸೇರಿ ೩೩ ವರ್ಷಗಳ ಮೇಲಾಯಿತು. ಇವರು ಈ ದೀರ್ಘಕಾಲಾವಧಿಯಲ್ಲಿ ಜುಡಿಷಿಯಲ್, ಅಕೌಂಟ್, ಪೊಲೀಸು ಮತ್ತು ರೆವಿನ್ಯೂ ಶಾಖೆಗಳಲ್ಲಿ ಕೆಲಸ ಮಾಡಿ ೧೮೭೮ ನೇ ಏಪ್ರಿಲ್ ತಾ॥ ೧ ರಿಂದ ಒಂದೇಸಮನಾಗಿ ಕಂಟ್ರೋಲರು, ಡೆಪ್ಯುಟಿ ಕಮೀಷನರು, ಪೊಲೀಸು ಇ॥ ಜನರಲ್, ಚೀಫ್‌ಕೋರ್ಟಿನ ಜಡ್ಜರು ಮತ್ತು ರೆವಿನ್ಯೂ ಕಮೀಷನರು ಆಗಿದ್ದು ಉನ್ನತವೂ, ಮುಖ್ಯವೂ ಆದ ಅಧಿಕಾರಗಳನ್ನು ವಹಿಸಿದ್ದರು. ಈ ಉದ್ಯೋಗಗಳಲ್ಲದೆ ಆಗಾಗ್ಗೆ ಮಹತ್ತಾದ ಕೆಲಸಗಳಮೇಲೆ ನೇಮಿಸಲ್ಪಟ್ಟಿರುವರಲ್ಲದೆ ಕಳೆದ ೪ ವರ್ಷಗಳಿಂದಲೂ ನಿಯಮನಿರ್ಮಾಣ ಸಭಾಸ್ತರರಾಗಿರುವರು.

ಮೆ॥ ರಂಗಸ್ವಾಮಯ್ಯಂಗಾರರ ಉದ್ಯೋಗ ವಿಚಾರವನ್ನು ಬರೆದಿಡುವುದು ಅವರ ಚಾತುರ್ಯ, ಶಕ್ತಿ ಮತ್ತು ಕಾರ್ಯಾಸಕ್ತಿ ಇವುಗಳನ್ನು ನಿಸ್ಸಂದೇಹವಾಗಿ ನಿದರ್ಶಿಸತಕ್ಕದ್ದಾಗಿರುತ್ತದೆ. ಸರ್ಕಾರದವರು ಇವರನ್ನು ಅನೇಕ ಸಂದರ್ಭಗಳಲ್ಲಿ ವಂದಿಸಿರುವರು. ಮತ್ತು ಇವರಿಗೆ ಶ್ರೀಮನ್ಮಹಾರಾಜರು ದಯಾಪೂರಿತರಾಗಿ ೧೯೦೩ನೇ ದಸರಾ ಮಹೋತ್ಸವದ ದರ್ಬಾರಿನಲ್ಲಿ ಯೋಗ್ಯವಾದ ಕಿಲ್ಲತ್ತುಗಳೊಡನೆ ರಾಜಕಾರ್ಯಪ್ರವೀಣ ಎಂಬ ಪ್ರಶಸ್ತಿಯನ್ನೂ, ಈಚೆಗೆ ಇಂಡಿಯಾ ಸರ್ಕಾರದವರು ರಾವ್ ಬಹದ್ದೂರ್ ಪ್ರಶಸ್ತಿಯನ್ನೂ ದಯಪಾಲಿಸಿದರು.

ಮೆ॥ ರಂಗಸ್ವಾಮಯ್ಯಂಗಾರರು ಈ ಪ್ರಕಾರವಾಗಿ ಪೂರ್ಣಕಾಲಾವಧಿ ಅಧಿಕಾರದಲ್ಲಿದ್ದು ಮರ್ಯಾದೆಯನ್ನು ಪಡೆದುಕೊಂಡು ನಿವೃತ್ತಿಯನ್ನು ಹೊಂದಲು ಶ್ರೀಮನ್ಮಹಾರಾಜರವರು ಅನುಜ್ಞೆಯನ್ನೀಯುವಾಗ್ಗೆ, ಇವರು ದೀರ್ಘಾಯುಷ್ಮಂತರಾಗಿದ್ದು ಉದ್ಯೋಗನಿವೃತ್ತಿ ಸುಖವನ್ನನುಭವಿಸಲೆಂದೂ, ಸಂಸ್ಥಾನಾಭಿವೃದ್ಧಿಯ ವಿಚಾರಗಳಲ್ಲಿ ಮೆ॥ ರಂಗಸ್ವಾಮಯ್ಯಂಗಾರರ ಸಹಾಯವನ್ನೂ, ಆಲೋಚನೆಯನ್ನೂ ತಾವು ತೆಗೆದುಕೊಳ್ಳಲಾಗುವುದೆಂದೂ ಅಪ್ಪಣೆ ಕೊಡಿಸಿರುತ್ತಾರೆ.

LECTURE.

Mr. R. N. Iyengar, Bar-At-Law, will deliver a lecture on "*Some impressions of Egypt*" in the Rangacharlu Memorial Hall Mysore, on Tuesday the 18th inst., at 6–30 P. M.

Sirdar M. Kantaraj Urs, B. A., has kindly consented to preside. The public are cordially invited to attend.

ಒಳದೇಶದವೃತ್ತಾಂತ.

ಬೆಂಗಳೂರು ಪೇಟೆಯಲ್ಲಿ ಪ್ಲೇಗುರೋಗವು ಆರಂಭವಾಗಿ ಅಲ್ಲಲ್ಲಿ ಇಲಿಗಳು ಸಾಯುತ್ತಿವೆ. ಮತ್ತು ಆಗಲೇ ೪-೫ ಮರಣಗಳಾದುವು.

ಬೆಂಗಳೂರಲ್ಲಿ ಬರುವ ಆಗಸ್ಟ್ ತಾ॥ ೨ ಮತ್ತು ೩ರಲ್ಲಿ ಕುದುರೆಗಳ ಪ್ರದರ್ಶನವೂ, ತಾ॥ ೪ ರಲ್ಲಿ ಪುಷ್ಪಪ್ರದರ್ಶನವೂ ನಡೆಯುವುವು.

ಚನ್ನಪಟ್ಟಣದಲ್ಲಿ ಈ ವರೆಗೆ ಅನಿತ್ಯವಾಗಿಡಲ್ಪಟ್ಟಿದ್ದ ಮ್ಯುನಿಸಿಪಾಲಿಟಿಯು ಈ ಜುಲೈ ತಾ॥ ೧ ರಿಂದ ಸ್ಥಿರಗೊಳಿಸಲ್ಪಟ್ಟಿರುತ್ತದೆ.

ರಾಜಧಾನಿಗೆ ಬಂದು ಅಂಗಸಾಧನೆಯಲ್ಲಿ ಅದ್ಭುತ ಶಕ್ತಿಯನ್ನು ಪ್ರದರ್ಶಿಸುತ್ತಿರುವ ರಷ್ಯನ್ ಸ್ಯಾಂಡೋಯವರ ಕೂಡ ಹರನಾಮಸಿಂಗ್ ಎಂಬ ಪೈಲ್ವಾನನು ಪಂದ್ಯವನ್ನು ಕಟ್ಟಿಕೊಂಡು ನೆನ್ನೆಯ ಸಾಯಂಕಾಲ ಜಗನ್ಮೋಹನ ಪ್ರಾಸಾದದಲ್ಲಿ ಕುಸ್ತಿಯನ್ನು ಮಾಡುವುದಾಗಿ ಗೊತ್ತಾಗಿದ್ದಿತು.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೯,	೧೦,	೧೧,	೧೨,	೧೩,	೧೪,	೧೫.
ತಗಲಿದ್ದು.	೪	೫	೧೧	೩	೩	೬	೬
ಸತ್ತದ್ದು.	೫	೪	೬	೪	೧	೨	೬
ಒಟ್ಟು ಮ.	೧೧	೮	೧೨	೯	೯	೮	೧೦

ತಾ॥ ೨೦-೬-೧೯೧೧ ರಿಂದ ತಾ॥ ೧೫-೭-೧೯೧೧ ರ ವರೆಗೆ ಒಟ್ಟು ೮೩೯೧ ಜನರಿಗೆ ಇನಾಕ್ಯುಲೇಷನ್ ಮಾಡಲ್ಪಟ್ಟಿದೆ.

ಮೈಸೂರ ಸರ್ಕಾರದ ಸೇವಿಂಗ್ಸ್ ಬ್ಯಾಂಕಿನಲ್ಲಿ ೧೯೦೯-೧೦ ರಲ್ಲಿ ಹಣವನ್ನು ಹಾಕಿದ್ದವರ ಸಂಖ್ಯೆಯು ೨೫,೧೮೯ ರಿಂದ ೨೫,೮೯೪ ಹೆಚ್ಚಿತು. ಆದರೆ ಹಾಕಿದ ಮೊಬಲಗುಮಾತ್ರ ರೂ. ೩೬,೨೨,೪೩೦ ರಿಂದ ರೂ. ೩೪,೭೫,೩೧೧ ಕ್ಕೆ ಇಳಿದಿತು. ಹೀಗೆ ಮೊಬಲಗು ಕಡಿಮೆಯಾಗಲು ೧೯೦೮-೦೯ ನೇ ವರ್ಷದ ಕಡೆಯಭಾಗದಲ್ಲಿ ಕ್ಷಾಮವು ಪ್ರಾಪ್ತವಾಗಿದ್ದುದೇ ಕಾರಣವೆಂದು ಕಂಟ್ರೋಲರಭಿಪ್ರಾಯಪಟ್ಟಿರುತ್ತಾರೆ.

ಕಳೆದ ತಾ॥ ೧೫ ರ ಮಧ್ಯಾಹ್ನ ರಾಜಧಾನಿಯ ಟೌನ್‌ಹಾಲಿನಬಳಿ ಬೈಸಿಕಲ್ಲಿನಮೇಲೆ ಕುಳಿತು ಸವಾರಿಯನ್ನು ಮಾಡುತ್ತಿದ್ದ ಒಬ್ಬ ದರ್ಜಿಯ ಹುಡುಗನು ದಾಯತಪ್ಪಿ ಕೆಳಗೆ ಬಿದ್ದು ಅವನ ಕೈ ಬಂಡಿಯ ಕೆಳಗೆ ಸಿಕ್ಕಿ ಮೂಳೆಯು ಮುರಿದುಹೋಯಿತು. ಆ ಕೂಡಲೆ ಟೌನ್‌ಹಾಲಿನೊಳಗಿದ್ದ ಮ್ಯುನಿಸಿಪಾಲಿಟಿಯ ಕೆಲಸಗಾರರು ಬಂದು ಅವನ ಕೈಗೆ ಬಿದಿರು ದಬ್ಬೆಗಳನ್ನು ಬಿಗಿದು ಕಟ್ಟಿ ಅವನ ಸಂಬಂಧಿಗಳಿಗೆ ವರ್ತಮಾನವನ್ನು ಕೊಡಲು ಅವರು ಬಂದು ಅವನನ್ನು ಆಸ್ಪತ್ರೆಗೆ ಸಾಗಿಸಿದರು. ಕೆಲ ಹುಡುಗರು ತಾವು ಬೀಳುವುದನ್ನು ಸಹ ಲೆಕ್ಕಿಸದೆ ಮನಸ್ವೀ ಓಡಿಸುತ್ತಿರುವರು. ಅಂಥವರಿಗೆಲ್ಲ ಇದು ಒಳ್ಳೆ ಎಚ್ಚರಿಕೆಯಾಗಿರುವುದು.

ಮೈಸೂರ ನಿಯಮನಿರ್ಮಾಣ ಸಭೆಗೆ ಸರ್ಕಾರಿಯಧಿಕಾರಿಗಳಲ್ಲಿ ಪೊಲೀಸು ಇ॥ ಜನರಲ್ ಮೆ॥ ಡಿ. ದೇವರಾಜ ಅರಸಿನವರು, ರೆವಿನ್ಯೂ ಸರ್ವೆ ಸೂಪರಿಂಟೆಂಡೆಂಟ್ ರಾವ್ ಬಹದ್ದೂರ್ ಶಾಮರಾಯರು, ಕೋಲಾರದ ಡಿ॥ ಕಮೀಷನರ್ ಮೆ॥ ಸಿ. ಶ್ರೀಕಂಠೇಶ್ವರಯ್ಯರ್‌ರವರು, ಗೌರ್ನಮೆಂಟ್ ಅಡ್ವೋಕೇಟ್ ಮೆ॥ ಸಿ. ದೊರೆಸ್ವಾಮಯ್ಯರ್ ಅವರು, ಅನುದ್ಯೋಗಿಕರಲ್ಲಿ-ಕೌನ್ಸಿಲರಾಗಿದ್ದ ರಾಜಮಂತ್ರಪ್ರವೀಣ ಮೆ॥ ಸಿ. ಶ್ರೀನಿವಾಸಯ್ಯಂಗಾರರು, ರೆವಿನ್ಯೂ ಕಮೀಷನರಾಗಿದ್ದ ರಾಜಕಾರ್ಯಪ್ರವೀಣ ರಾ॥ ಬ॥ ಮೆ॥ ಎ. ರಂಗಸ್ವಾಮಯ್ಯಂಗಾರರು, ಸೀನಿಯರ್ ಅ॥ ಕ॥ ರಾ॥ ಡಿ॥ ಮೆ॥ ಸಯ್ಯದ್ ಅಮೀರ್ ಹುಸೇನಲಿ ಯವರು, ಮೈಸೂರ ಅಡ್ವೋಕೇಟ್ ಮೆ॥ ಎಂ. ಸಿ. ರಂಗಯ್ಯಂಗಾರರು ಇಂತಿಷ್ಟು ಜನರು ಮೆಂಬರುಗಳಾಗಿ ಈ ತಾ॥ ೨೦ ರಿಂದ ನೇಮಿಸಲ್ಪಟ್ಟಿರುತ್ತಾರೆ.

ಜಾರ್ಜ್ ಪ್ಯಾಟರ್‌ಸನರವರಿಂದ ರಚಿತವಾದ ಭರತಖಂಡದ ಭೂವಿವರಣೆಯ ಮೊದಲನೆಯ ಭಾಗ (Geography of India by Patterson Part I.) ಕ್ರಯ

೧೦ ಅಣೆ; ಭರತಖಂಡದ ಭೂವಿವರಣೆ (Geography of India) ಕ್ರಯ ರೂ. ೧; ವಿದ್ಯಾರ್ಥಿಯ ಭೂವಿವರಣೆಯ ಕೈಪಿಡಿ (Student's Hand-book of Geography) ಕ್ರಯ ರೂ. ೧-೮-೦ ಈ ಮೂರು ಪುಸ್ತಕಗಳನ್ನು ರಾಜಧಾನಿಯ ಕ್ರಿಶ್ಚಿಯನ್ ಲಿಟರೇಚರ್ (ಸಿ. ಎಲ್. ಎಸ್.) ಬುಕ್ ಡಿಪೋ ಯವರಿಂದ ವಿಶ್ವಾಸಪೂರ್ವಕವಾಗಿ ಸ್ವೀಕರಿಸಿದೆವು. ಈ ಪುಸ್ತಕಗಳು ಚಿತ್ರಪಟಗಳ ಯುಕ್ತವಾಗಿ ಸರ್ವಕಲಾನಿಲಯದವರು ಮಾಡಿರುವ ಪಾಠಪ್ರವಚನಾಕ್ರಮ ಸುಧಾರಣೆಯನ್ನನುಸರಿಸಿ ಬರೆಯಲ್ಪಟ್ಟಿರುವುದರಿಂದ ಕಾಲೇಜಿನಲ್ಲೂ, ಸ್ಕೂಲಿನಲ್ಲೂ ಓದುವ ವಿದ್ಯಾರ್ಥಿಗಳಿಗೂ, ಉಪಾಧ್ಯಾಯರುಗಳಿಗೂ ಬಹು ಪ್ರಯೋಜನಕರವಾಗಿರುತ್ತವೆ. ಅಪೇಕ್ಷಿತರು ಮೇಲ್ಕಂಡ ಪುಸ್ತಕಗಳನ್ನು ಸಿ. ಎಲ್. ಎಸ್. ಬುಕ್ ಡಿಪೋಗೆ ಬರೆದು ತರಿಸಿಕೊಳ್ಳಬಹುದು.

ಬೆಂಗಳೂರು ಸಿಟಿ ಪೋಲೀಸಿನಲ್ಲಿ ೩ ನೇ ತ॥ ಕಾನಸ್ಟೇಬಲಾಗಿರುವ ಮುಹಮ್ಮದ್ ಸೈದುದ್ದೀನ್ ಎಂಬುವನು ಶ್ರೀಮನ್ಮಹಾರಾಜರವರು ಮೋಟಾರು ಬಂಡಿಯಲ್ಲಿ ಸವಾರಿಮಾಡುತ್ತಿರುವಾಗ್ಗೆ ಬಂಡಿಯಬಳಿ ನಿಂತು ತನ್ನ ವಿಷಯವನ್ನೆಲ್ಲ ನಿವೇದಿಸಿಕೊಳ್ಳಲು, ಮಹಾರಾಜರವರು ಕನಿಕರಪಟ್ಟು ಅವನ ವಿಷಯಕವಾದ ಕಾಗದಪತ್ರಗಳನ್ನು ದಿವಾನರಲ್ಲಿಗೆ ಕಳುಹಿಸಿಕೊಟ್ಟರು. ಅದರಮೇಲೆ ಆ ಕಾನಸ್ಟೇಬಲು ಕಳೆದ ಸೋಮವಾರ ದಿವಾನರನ್ನು ಕಾಣಲು, ಅವರು ಅವನಿಗೆ ಆಸನವನ್ನು ಕೊಟ್ಟು ಕುಳ್ಳಿರಿಸಿ ಅವನ ಪೂರ್ವೋತ್ತರ ಸಂಗತಿಯನ್ನೆಲ್ಲ ವಿಚಾರಿಸುವಷ್ಟರಲ್ಲಿ, ಆತನು 'ತನ್ನ ಪೂರ್ವಿಕರು ಮೈಸೂರ ಸೇನೆಯಲ್ಲಿ ದೊಡ್ಡ ಉದ್ಯೋಗಗಳನ್ನು ಮಾಡಿ ಪ್ರಸಿದ್ಧಿಯಾಗಿದ್ದು ಒಳ್ಳೇ ಆಸ್ತಿಗಳನ್ನನುಭವಿಸುತ್ತಿದ್ದರು.' ಎಂದು ಮೊದಲಾಗಿ ಹೇಳಿದನು. ಇಂಪೀರಿಯಲ್ ಲ್ಯಾನ್ಸರ್ಸಿನಲ್ಲಿ ಜಮಾದಾರಿಯುದ್ಯೋಗವು ಕೊಡಲ್ಪಡುತ್ತದೆಂದು ಮೊದಲು ಹೇಳಿದಾಗ್ಗೆ ಕುದುರೆಯ ಸವಾರಿಯು ಬರುವುದಿಲ್ಲವಾದ ಪ್ರಯುಕ್ತ ಬೇಡವೆಂದು ಹೇಳಿ ಮತ್ತಾವುದಾದರೊಂದು ಉದ್ಯೋಗವನ್ನು ಕೊಡುವಂತೆ ದಿವಾನರನ್ನು ಪ್ರಾರ್ಥಿಸಿಕೊಂಡನು.

ರಾಜಧಾನಿಯ ಮಂಡಿ ಮೊಹಲ್ಲಾದಲ್ಲಿ ಒಬ್ಬ ಹೆಂಗುಸಿಗೆ ಪ್ಲೇಗು ತಗಲಿ ಕೈಕಾಲುಗಳೆಲ್ಲವೂ ತಣ್ಣಗಾಗಿ ನಾಡಿಯಾಡುವುದು ನಿಂತುಹೋಗಲು, ಆಕೆಯು ಸತ್ತುಹೋದಳೆಂದು ಮನೆಯವರು ತಿಳಿದು ರೋದನಮಾಡಿ ಶವವನ್ನು ಸಾಗಿಸಲು ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುತ್ತಿರುವಷ್ಟರಲ್ಲಿ, ಆಕೆಯು ಕೈಕಾಲುಗಳನ್ನಾಡಿಸಿ ಮೇಲೆ ಹೊದ್ದಿಸಿದ್ದ ಬಟ್ಟೆಯನ್ನು ತೆಗೆದುದನ್ನು ಹತ್ತಿರವಿದ್ದವರು ನೋಡಿ ಹೆದರಿ ದೂರ ಹೋದರು. ಆಕೆಯು ಅವರನ್ನು ಹತ್ತಿರಕ್ಕೆ ಕರೆದು ನೀರನ್ನು ತರಿಸಿಕೊಂಡು ಕುಡಿದು, ತನ್ನನ್ನು ಯಾರೋ ನಾಲ್ಕು ಜನರು ಬಂದು ಯಮಪಟ್ಟಣಕ್ಕೆ ಕರೆದುಕೊಂಡು ಹೋಗಿದ್ದರು, ಅಲ್ಲಿಯವರು ನನ್ನನ್ನೋಡಿ "ಇವಳನ್ನೇಕೆ ಕರೆದುಕೊಂಡು ಬಂದಿರಿ? ಇವಳನ್ನು ಕಳುಹಿಸಿಬಿಟ್ಟು ಇವಳ ಮನೆಯಲ್ಲಿರುವ ಬೇರೆ ಇಬ್ಬರನ್ನು ಕರೆದುಕೊಂಡು ಬರುತಕ್ಕದೆಂದು ಹೇಳಿ ಕಳುಹಿದರು" ಎಂದು ಹೇಳಿದಳಂತೆ! ಈಕೆಯು ಈಗ ಬದುಕಿರುವಳು. ಆದರೆ ಅವಳು ಹೇಳಿದ ಪ್ರಕಾರ ಅದೇ ಮನೆಯಲ್ಲಿ ಇಬ್ಬರು ಪ್ಲೇಗುರೋಗದಿಂದ ಸತ್ತರು. ಎಂದು ಜನರು ಹೇಳುತ್ತಾ ಆಶ್ಚರ್ಯಪಡುತ್ತಿದ್ದಾರೆ. ಮನುಷ್ಯನಿಗೆ ಪ್ರಾಣ ಹೋಯಿತೆಂದು ತಿಳಿದಕೂಡಲೆ ನಿಕ್ಷೇಪ ಅಥವಾ ಖನನ ಮಾಡಲು ಸಾಗಿಸದೆ ೧-೨ ಗಂಟೆಯ ಕಾಲ ನಿರೀಕ್ಷಿಸಬೇಕೆಂದು ವೈದ್ಯರು ಹೇಳುವುದು ಮೇಲೆ ಹೇಳಿದ ಕಾರಣಕ್ಕಾಗಿಯೆ.

ರಾಜಧಾನಿಯಲ್ಲಿರುವ ಬಸಮ್ಮಯ್ಯನವರ ಧರ್ಮಫಂಡಿನಿಂದ ಕೆಲ ವೀರಶೈವ ವಿದ್ಯಾರ್ಥಿಗಳಿಗೆ ಪ್ರತಿತಿಂಗಳಲ್ಲೂ ವೇತನವು ಸಲ್ಲುವಂತೆ ಏರ್ಪಾಡು ಮಾಡಲ್ಪಟ್ಟಿರುವುದಷ್ಟೆ. ಆದರೆ ಈಚೆಗೆ ೧ ವರುಷದಿಂದಲೂ ವೇತನವು ಅಕಸ್ಮಾತ್ತಾಗಿ ಕೊಡಲ್ಪಡದೆ ನಿಲ್ಲಿಸಲ್ಪಟ್ಟಿರುವುದರಿಂದ ಈ ವೇತನವನ್ನೇ ನಂಬಿಕೊಂಡು ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬಹು ತೊಂದರೆಯಾಗಿದೆಯೆಂತಲೂ, ಈ ಫಂಡಿನ ಮೇಲ್ವಿಚಾರಣಾ ಸಂಘದ ಸೆಕ್ರೆಟರಿಯವರನ್ನು ಎಷ್ಟು ವಿಧವಾಗಿ ಪ್ರಾರ್ಥಿಸಿಕೊಂಡಾಗ್ಯೂ ಅವರು ಏನೊಂದುತ್ತರವನ್ನು ಸಹ ಕೊಡುವುದಿಲ್ಲವೆಂತಲೂ ವೇತನವನ್ನು ಪಡೆಯುತ್ತಿದ್ದ ಕೆಲ ವಿದ್ಯಾರ್ಥಿಗಳು ನಮ್ಮಲ್ಲಿಗೆ ಬರೆದುಕೊಂಡಿರುವರಲ್ಲದೆ, ಈ ಪತ್ರಿಕೆಯ ದ್ವಾರಾ ತಮ್ಮಗಳಿಗುಂಟಾಗಿರುವ ತೊಂದರೆಯನ್ನು ಸೆಕ್ರೆಟರಿಯವರ ಗಮನಕ್ಕೆ ತರಬೇಕೆಂದು ನಮ್ಮನ್ನು ಪ್ರಾರ್ಥಿಸಿಕೊಂಡಿರುತ್ತಾರೆ. ಅದುಕಾರಣ ಬಸಮ್ಮಯ್ಯನವರ ಫಂಡಿನ ಸೆಕ್ರೆಟರಿಗಳಾದ ಮೆ॥ ಅತ್ತಿಗೋಡು ಬಸಪ್ಪನವರು ಈ ಬಡ ವಿದ್ಯಾರ್ಥಿಗಳ ಪ್ರಾರ್ಥನೆಯನ್ನು ತಮ್ಮ ಮನಸ್ಸಿಗೆ ತಂದುಕೊಂಡು ಅದಷ್ಟು ತ್ವರೆಯಿಂದ ವಿದ್ಯಾರ್ಥಿಗಳಿಗೆ ಈ ವರೆಗೆ ಸಲ್ಲಬೇಕಾಗಿರುವ ವೇತನದ ಮೊಬಲಗನ್ನು ಕೊಟ್ಟು ಇನ್ನುಮೇಲೆ ಪ್ರತಿತಿಂಗಳಲ್ಲೂ ತಪ್ಪದೆ ಕ್ರಮವಾಗಿ ಸಲ್ಲುವ ಹಾಗೆ ಏರ್ಪಾಡುಮಾಡುವರೆಂದು ನಂಬುತ್ತೇವೆ. ಮೆ॥ ಅತ್ತಿಗೋಡು ಬಸಪ್ಪನವರು ಒಳ್ಳೇ ಧರ್ಮಬುದ್ಧಿಯುಳ್ಳವರೂ, ವಿದ್ಯಾಭಿಮಾನಿಗಳೂ ಆಗಿರುವುದರಿಂದ, ಈ ವಿಚಾರದಲ್ಲಿ ಅವರಿಗೆ ವಿಶೇಷವಾಗಿ ಹೇಳಬೇಕಾದುದಿಲ್ಲವು.

ವರ್ತಮಾನ ಸಂಗ್ರಹ.

ಅಮೇರಿಕಾದಲ್ಲಿ ಬಿಸಿಲಿನ ತಾಪವು ಸಹಿಸಲಶಕ್ಯವಾಗಿ ಮುಖ್ಯ ಪಟ್ಟಣಗಳಲ್ಲಿ ಅನೇಕಜನರು ಸತ್ತಿರುತ್ತಾರೆ.

ಹರದಾಯಿಯ ಕಲೆಕ್ಟರಾದ ಆನರಬಲ್ ಪಂಡಿತ ಜ್ವಾಲಾಪ್ರಸಾದರವರು ನೈನಿಟಾಲಿನಲ್ಲಿ ಪಂಚತ್ವವನ್ನೈದಿದರು.

ಹಿಂದೆ ಈಜಿಪ್ಟಿನ ಮಂತ್ರಿಯಾಗಿದ್ದ ರಿಯಾಜ್‌ಪಾಷಾನ ಸೆಕ್ರೆಟರಿಗಳಲ್ಲೊಬ್ಬನು ಕೈರೋ ಪಟ್ಟಣದಲ್ಲಿ ತನ್ನ ಯಜಮಾನನ ಮರಣವಾರ್ತೆಯ ತಂತಿಯನ್ನೋದುತ್ತಿದ್ದಹಾಗೆಯೇ ಮೂರ್ಛಿತನಾಗಿ ಸತ್ತನು.

ಅಮೇರಿಕಾದಲ್ಲಿ ಬಾಸ್ಟನಿಗೆ ಹೋಗುತ್ತಿದ್ದ ರೈಲ್ವೆ ಬಂಡಿಯ ಇಂಜನನ್ನೂ ಪ್ರಯಾಣಿಕರ ೫ ಬಂಡಿಗಳೂ ಕಂಬಿಯನ್ನು ಬಿಟ್ಟು ದೂರ ಉರುಳಿ ಒಡೆದುಹೋಗಿ ನುಚ್ಚುನೂರಾದುವು. ಇದರಿಂದ ೧೨ ಜನರು ಸತ್ತು ೮೫ ಜನರು ಪೆಟ್ಟನ್ನು ತಿಂದರು.

ಬುಡಪೆಸ್ಟಿನಲ್ಲಿ ಭೂಕಂಪನವಾಗಿ ಒಂದು ಬೀದಿಯು ೩೫ ಅಡಿ ಆಳ ಮತ್ತು ೬೦ ಅಡಿ ಉದ್ದ ಕುಸಿದುಹೋಗಿ ನೀರು ನೆಲಕ್ಕುಕ್ಕಿ ಬೀದಿಯಲ್ಲೆಲ್ಲಾ ನೀರು ಹರಿಯುವಹಾಗೆ ನಿಂತುಕೊಂಡು ತಿರುಗಾಡುವ ಅನೇಕ ಬಂಡಿಗಳು ಆ ಕೂಪಕ್ಕೆ ಬಿದ್ದು ಕುದುರೆಗಳು ಮುಳುಗಿಹೋದುವು.

ಈಗ್ಗೆ ಕೆಲ ದಿನಗಳ ಕೆಳಗೆ ಭೂಮಿಯನ್ನಗೆಯುತ್ತಿರುವಾಗ್ಗೆ ಒಂದು ಪ್ರಾಣಿಯ ಮೂಳೆಯು ದೊರೆತಿತು. ಅದರ ಹಿಂಗಾಲಿನ ತೊಡೆಯ ಮೂಳೆಯು ೬ ಅಡಿ ೨ ಅಂಗುಲವೂ, ಮುಂಗಾಲಿನ ತೊಡೆಯ ಮೂಳೆಯು ೬ ಅಡಿ ೧೦ ಅಂಗುಲವೂ ಇರುವುವು. ಇದರಿಂದ ಆ ಪ್ರಾಣಿಯು ಜೀವಿಸಿರುವಾಗ್ಗೆ ೩೩ ಅಡಿ ಇದ್ದಿತೆಂದೂಹಿಸಲ್ಪಟ್ಟಿದೆ.

ಢಾಕಾ ಡಿಸ್ಟ್ರಿಕ್ಟಿನಲ್ಲಿ ಮುನಷಿಗಂಜ್ ಡಿವಿಜನ್ನಿಗೆ ಸೇರಿದ ಸೋನಾರಂಗ ಎಂಬ ಗ್ರಾಮದಲ್ಲಿ ಕಳೆದ ಮಂಗಳವಾರ ರಾತ್ರಿ ಕೆಲ ಜನರು ಕಾಳೀವಿನೋದ ಚಕ್ರವರ್ತಿಯ ಮನೆಗೆ ನುಗ್ಗಿ ಅವನಿಗೆ ಪ್ರಾಣಾಪಾಯವನ್ನುಂಟುಮಾಡಿ ಅಲ್ಲಿಂದ ಪೋಲೀಸು ದಫೇದಾರನ ಮನೆಗೆ ನುಗ್ಗಿ ಅಲ್ಲಿ ದಫೇದಾರನನ್ನೂ, ಅವನ ತಮ್ಮನನ್ನೂ ಹೊಡೆದು ಕೊಂದುಹಾಕಿದರು.

ಕಳೆದ ತಾ॥ ೮ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲಿ ಒಟ್ಟು ೩೫೩೯ ಜನರಿಗೆ ಪ್ಲೇಗು ತಗಲಿ ೧೯೭೮ ಜನರು ಸತ್ತರು. ಇದರಲ್ಲಿ ಪಂಜಾಬಿನಲ್ಲಿ ೩೨; ಬೊಂಬಾಯಾಧಿಪತ್ಯದಲ್ಲಿ ೫೯೭; ಮದ್ರಾಸಾಧಿಪತ್ಯದಲ್ಲಿ ೧೧೨; ಬಂಗಾಳದಲ್ಲಿ ೫೬; ಸಂಯುಕ್ತ ಪ್ರಾಂತಗಳಲ್ಲಿ ೫೮; ಬರ್ಮಾದಲ್ಲಿ ೪೭; ಮಧ್ಯಪ್ರಾಂತಗಳಲ್ಲಿ ೪ ಈ ಪ್ರಕಾರವಾಗಿ ಮರಣಗಳಾಗಿರುತ್ತವೆ.

ಚಿದಂಬರದ ಮ್ಯುನಿಸಿಪಲ್ ಛೇರ್‌ಮನ್ನರಾದ ಮೆ॥ ಎಲ್. ಎಂ. ಆರ್. ರಾಮಸ್ವಾಮಿ ಚೆಟ್ಟಿಯರು ಆ ಊರಿನ ಆರೋಗ್ಯಾಭಿವೃದ್ಧಿಗಾಗಿ ವಿಶೇಷ ಶ್ರಮವನ್ನು ತೆಗೆದುಕೊಳ್ಳುತ್ತಿರುವರಲ್ಲದೆ ಅಲ್ಲಿಯ ಜನರು ಕುಡಿಯುವ ನೀರನ್ನೊದಗಿಸುವ ಕಾರ್ಯಕ್ಕಾಗಿ ೧ ಲಕ್ಷ ರೂ. ಯನ್ನು ಉಚಿತವಾಗಿ ಕೊಟ್ಟಿರುವರು. ಮತ್ತು ಬಚ್ಚಲುಗಳನ್ನು ಕಟ್ಟಲು ಕಲ್ಲುಗಳನ್ನು ಕೊಡಿಸಿರುವರು

ಜಾರ್ಜ್ ದಂಪತಿಗಳು ಅರ್ಲ್‌ಷಾಫ್ಟ್ಸ್‌ಬರಿ ಯವರಿಗೂ, ವೈಕೌಂಟ್ ಕಿಚನರಿಗೂ ಸೆಂಟ್‌ಪೆಟ್ರಿಕ್ಕಿನ ನೈಟ್ಸ್ ಎಂಬ ಪ್ರಶಸ್ತಿಯನ್ನು ಕೊಡಲು ಡಬ್ಲಿನ್ನಿಗೆ ದಯಮಾಡಿಸಿದ್ದವೇಳೆಯಲ್ಲಿ ಲಾರ್ಡ್ ಇವೆಯಾಗ್ ಎಂಬುವರು ಡಬ್ಲಿನ್ ಆಸ್ಪತ್ರೆಯ ಮತ್ತು ನ್ಯೂಕಾಸಲಿನ ಕ್ಷಯರೋಗ ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ಹಂಚಿಕೊಡಲು ೩೫,೦೦೦ ರೂ. ಗಳನ್ನು ದೊರೆಗಳ ವಶಕ್ಕೆ ಕೊಟ್ಟರು.

ಬಂಗಾಳದಲ್ಲಿ ಎರಡು ಕುಟುಂಬದವರಿಗೆ ಒಂದು ಮಾವಿನಮರದ ಸ್ವಾಮಿತ್ವದ ವಿಚಾರದಲ್ಲಿ ಮನಸ್ತಾಪ ಹುಟ್ಟಿ ಕಡೆಗೆ ಅದು ಪ್ರಬಲಿಸಿ ಪರಸ್ಪರ ಬಡಿದಾಟವಾಗಿ ೧೨ ಜನರು ಸತ್ತರು. ಮತ್ತು ಪೋಲೀಸರು ಬಂದು ಗುಂಡನ್ನು ಹಾರಿಸಿ ಕಲಹವನ್ನು ನಿಲ್ಲಿಸಬೇಕಾಯಿತು. ಈ ಮಾವಿನ ಮರದ ವ್ಯಾಜ್ಯವು ಸಿವಿಲ್ ಕೋರ್ಟಿಗೆ ಹೋಗಿ ಉಭಯಪಕ್ಷದವರಿಗೂ ೫೦,೦೦೦ ರೂ ಗಳ ವರೆಗೆ ವ್ಯಯವಾಯಿತು.

ಬ್ರಿಟಿಷ್ ಸರ್ಕಾರದ ಪರವಾಗಿ ಬಲೂಚಿಸ್ತಾನದಲ್ಲಿ ಕೆಲಸಮಾಡುತ್ತಿದ್ದು ೧೯೦೯ ರಲ್ಲಾದ ಭೂಕಂಪನದಲ್ಲಿ ಸತ್ತುಹೋದ ರಾಯಬಹದ್ದೂರ್ ದಿವಾನ್ ಉತ್ತಮಚಂದರವರ ಕುಟುಂಬಕ್ಕೆ ೫೦೦೦ ರೂ. ಬಹುಮಾನವು ಸಲ್ಲುತಕ್ಕದ್ದೆಂದೂ, ಅವರ ಹಿರೇಮಗನ ಜೀವಾವಧಿ ಜಮರುಡ್ ನಾಲೆಯ ಕೆಳಗಿರುವ ಅವರ ೩೦೦ ಎಕರೆ ಭೂಮಿಯ ಕಂದಾಯವನ್ನು ಮನ್ನಿಸತಕ್ಕದ್ದೆಂದೂ ಸ್ಟೇಟ್ ಸೆಕ್ರೆಟರಿಯವರಪ್ಪಣೆ ಮಾಡಿರುತ್ತಾರೆ.

ತಿನ್ನವೆಲ್ಲಿಯ ಕಲೆಕ್ಟರಾಗಿದ್ದ ಆಷೆಯವರ ಕೊಲೆಯ ಸಂಚಿಗೆ ಸಂಬಂಧಪಟ್ಟವರನ್ನು ಪೋಲೀಸರು ಗೊತ್ತುಮಾಡುತ್ತಿರುವುದರಲ್ಲಿ ಈಗ ಕಲಕತ್ತಾದಲ್ಲಿ ಗೋವಿಂದ ನಾರಾಯಣ ದುಭಾಯಿ ಎಂಬ ಹೆಸರನ್ನಿಟ್ಟುಕೊಂಡಿದ್ದ ನೀಲಕಂಠಯ್ಯರ್ ಎಂಬುವನು ಹಿಡಿಯಲ್ಪಟ್ಟಿರುವನಲ್ಲದೆ, ಈವರೆಗೆ ೧೪ ಜನರು ಸೆರೆ ಹಿಡಿಯಲ್ಪಟ್ಟಿರುತ್ತಾರೆ. ಬೊಂಬಾಯಿನಲ್ಲಿ ಸೆರೆ ಹಿಡಿಯಲ್ಪಟ್ಟ ಶಿವರಾಮಕೃಷ್ಣಯ್ಯರ್ ಎಂಬುವನು ತಿನ್ನವೆಲ್ಲಿಗೆ ತರಲ್ಪಟ್ಟು ಕಾರಾಗೃಹದಲ್ಲಿಡಲ್ಪಟ್ಟಿರುವನು.

ಗೈಬಂಧದಲ್ಲಿರುವ ಕಾರಾಗೃಹದಲ್ಲಿ ಬಹು ನೀಚಕೃತ್ಯ ಮಾಡಿದುದಕ್ಕಾಗಿ ಶಿಕ್ಷೆಯನ್ನನುಭವಿಸುತ್ತಿದ್ದ ಬಂದಿಯು ಬಂಧನದಿಂದ ತಪ್ಪಿಸಿಕೊಂಡು ಹೋಗುವ ಪ್ರಯತ್ನದಲ್ಲಿ ಕಾವಲುಗಾರರ ಕೂಡ ಕಾದಾಡಿದುದರಮೇಲೆ, ಮೇಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ವಿಚಾರಣೆಯ ಕಾಲದಲ್ಲಿ ಕಾವಲುಗಾರರಕೂಡ ಹೊಡೆದಾಡಿ ಕಡೆಗೆ ಮ್ಯಾಜಿಸ್ಟ್ರೇಟರ ಕಡೆಗೆ ಜೋಡನ್ನು ಬಿಸಾಡಿದನು. ಇದಕ್ಕಾಗಿ ಮ್ಯಾಜಿಸ್ಟ್ರೇಟರು ಕಠಿಣತರವಾದ ಶಿಕ್ಷೆಯನ್ನು ವಿಧಿಸಿ ಕೂಚ್‌ಬಿಹಾರಿನ ಕಾರಾಗೃಹಕ್ಕೆ ಕಳುಹಿಸಿಕೊಟ್ಟರು. ಅವನು ಅಲ್ಲಿ ಒಂದು ಕೊಂಬಿನ ಸಹಾಯದಿಂದ ರಾತ್ರಿವೇಳೆಯಲ್ಲಿ ಗೋಡೆಯನ್ನು ಹತ್ತಿ ಹೊರಗಡೆ ದುಮುಕಿ ತಪ್ಪಿಸಿಕೊಂಡು ಹೊರಟುಹೋಗಿರುವನು.

ಇಂಗ್ಲೆಂಡಿಗೆ ಕಿರೀಟಧಾರಣ ಮಹೋತ್ಸವಕ್ಕಾಗಿ ಹೋಗಿದ್ದ ಜೋಧಪುರದ ರೀಜಂಟರಾದ ಮೇಜರ್ ಜನರಲ್ ಸರ್ ಪ್ರತಾಪಸಿಂಗ್ ರವರು, ಇದಾರಿನ ಮಹಾರಾಜ ದೌಲತಸಿಂಗ್ ರವರು, ಪಲಿಂಗಿಯ ಮಹಾರಾಜ ಥಾಕೂರ್ ಪ್ರತಾಪಸಿಂಗ್‌ರು, ರಾವ್‌ಬಹದ್ದೂರ್ ಇಂದಿರರಾಯಸಿಂಗ್, ಥಾಕೂರ್ ದಳಪತಿಸಿಂಗ್ ರವರು ಭರತಖಂಡಕ್ಕೆ ಹಿಂತಿರುಗಿ ಕಳೆದ ತಾ॥ ೧೪ ರಲ್ಲಿ ಬಂದರು. ಜೋಧಪುರದ ರೀಜಂಟರು ಬೊಂಬಾಯಿಯಲ್ಲಿ ಹಡಗನ್ನಿಳಿಯುತಲೆ ಅನೇಕ ದೇಶೀಯ ದೊಡ್ಡಮನುಷ್ಯರು ಇದಿರ್ಗೊಂಡು ವಿಜ್ಞಾಪನ ಪತ್ರಿಕೆಗಳನ್ನೊಪ್ಪಿಸಿ ಮನ್ನಿಸಿದರು. ರೀಜಂಟರವರು ಎಲ್ಲರನ್ನೂ ವಂದಿಸಿ ತಾಜಮಹಲ್ ಹೋಟಲಿಗೆ ಹೋಗಿ ಅಲ್ಲಿ ವಿಶ್ರಮಿಸಿಕೊಂಡು ಮಾರನೆಯ ಬೆಳಿಗ್ಗೆ ಜೋಧಪುರಕ್ಕೆ ಪ್ರಯಾಣಮಾಡಿದರು.

ವಾಯವ್ಯ ಮೂಲೆಪ್ರಾಂತದ ಜನಸಂಖ್ಯೆಯು ೨,೧೯೬,೯೩೩ ಎಂದು ಗೊತ್ತಾಗಿದೆ. ೧೯೦೧ ರಲ್ಲಿದ್ದುದಕ್ಕಿಂತ ಈಗ ೧೦೦ ರಲ್ಲಿ ೮ ರಂತೆ ಹೆಚ್ಚಿರುತ್ತದೆ. ಮತ್ತು ಒಟ್ಟು ಸಂಖ್ಯೆಯಲ್ಲಿ ೧೦೦ ಕ್ಕೆ ೯೩ ರಂತೆ ಮಹಮ್ಮದೀಯರಿರುವರು. ಬರೋಡಾ ಸಂಸ್ಥಾನದ ಜನಸಂಖ್ಯೆಯು ೨,೦೩೨,೭೯೮ ಅಂದರೆ ೧೯೦೧ ರಲ್ಲಿದ್ದುದಕ್ಕಿಂತ ೧೦೦ ಕ್ಕೆ ೪ ರಂತೆ ಹೆಚ್ಚಿರುತ್ತದೆ. ಹಿಂದೂಗಳು ೧೦೦ ಕ್ಕೆ ೧೧ ರಂತೆ ಹೆಚ್ಚಿರುತ್ತಾರೆ. ಆದರೆ ಮಹಮ್ಮದೀಯರು ೧೦೦ ಕ್ಕೆ ೨.೫ ರಂತೆ ಮತ್ತು ಜೈನರು ೧೦೦ಕ್ಕೆ ೧೧ ರಂತೆ ಕಡಿಮೆಯಾಗಿರುತ್ತಾರೆ. ಟ್ರಾವಂಕೂರ್ ಸಂಸ್ಥಾನದ ಪ್ರಜಾಸಂಖ್ಯೆಯು ೩,೪೨೮,೯೭೫ ಆಗಿರುತ್ತದೆ. ಅಂದರೆ ೧೯೦೧ ರಲ್ಲಿದ್ದುದಕ್ಕಿಂತ ೧೦೦ ಕ್ಕೆ ೧೬ ರಂತೆ ಹೆಚ್ಚಿರುತ್ತದೆ. ಕ್ರೈಸ್ತರು ೧೦೦ ಕ್ಕೆ ೩೦ ರಂತೆಯೂ, ಮಹಮ್ಮದೀಯರು ೯ ರಂತೆಯೂ, ಹಿಂದೂಗಳು ೧೨ ರಂತೆಯೂ ಹೆಚ್ಚಿರುತ್ತಾರೆ. ಪ್ರತಿ ೧೦೦ ಜನರಲ್ಲಿ ಹಿಂದೂಗಳು ೬೭ ರಂತೆಯೂ, ಕ್ರೈಸ್ತರು ೨೩ ರಂತೆಯೂ, ಮಹಮ್ಮದೀಯರು ೭ ರಂತೆಯೂ ಇರುವರು. ಕೊಚ್ಚಿ ಸಂಸ್ಥಾನದ ಪ್ರಜಾಸಂಖ್ಯೆಯು ೯೧೮,೧೧೦. ೧೯೦೧ ರಲ್ಲಿದ್ದುದಕ್ಕಿಂತ ೧೦೦ ಕ್ಕೆ ೧೫ ರಂತೆ ಹೆಚ್ಚಿರುತ್ತದೆ. ಕ್ರೈಸ್ತರೂ, ಮಹಮ್ಮದೀಯರೂ ೧೦೦ ಕ್ಕೆ ೧೭ ರಂತೆಯೂ, ಹಿಂದೂಗಳು ೧೧ ರಂತೆಯೂ ಹೆಚ್ಚಿದ್ದಾರೆ. ಕ್ರೈಸ್ತರೊಬ್ಬರೇ ಒಟ್ಟು ಜನಸಂಖ್ಯೆಯಲ್ಲಿ ಕಾಲುಭಾಗವಿದ್ದಾರೆ.

ಅಮೇರಿಕಾದಲ್ಲಿ ಔಷ್ಣ್ಯವು ಹಿಂದೆ ಎಂದೂ ಆಗದಿದ್ದಷ್ಟು ಅಧಿಕವಾಗಿರುವುದರಿಂದ ಅಗ್ನಿಯನಾಹುತವು ವಿಶೇಷವಾಗಿ ಆಗುತ್ತಿದೆ. ಉತ್ತರ ಮಿಚಿಗನ್ ಮತ್ತು ಆಂಟಿರಿಯೋ ಎಂಬಲ್ಲಿ ಕಾಡುಗಳು ಹೊತ್ತಿಕೊಂಡುರಿಯುತ್ತಿವೆ. ಇದರಿಂದ ಅನೇಕ ಗ್ರಾಮಗಳೂ, ಪಟ್ಟಣಗಳೂ ಸುಟ್ಟು ಭಸ್ಮವಾಗಿ ೫೦೦ ಜನರು ಸತ್ತಿರುವುದಾಗಿ ತಿಳಿದುಬಂದಿದೆ. ಈ ಸುಟ್ಟುಹೋದ ಸ್ಥಳಗಳಲ್ಲಿ ಬಹು ಜನರು ವಾಸವಾಗಿದ್ದುದರಿಂದ ಅನೇಕರು ಹತರಾಗಿರಬಹುದೆಂದೂಹಿಸಲ್ಪಟ್ಟಿರುತ್ತದೆ. ಉತ್ತರ ಆಂಟಿರಿಯೋ ರೈಲು ಮಾರ್ಗದಲ್ಲಿ ೨೦೦ ಮೈಲಿ ವಿಸ್ತೀರ್ಣದವರೆಗೆ ಅಗ್ನಿಯ ಜ್ವಾಲೆಯು ವ್ಯಾಪಿಸಿಕೊಂಡು, ಚಿನ್ನದ ಗಣಿಗಳಿಗೆ ಸೇರಿದ ೨ ಪಟ್ಟಣಗಳೂ, ಗಣಿಗಳೂ ಹಾಳಾಗಿರುವುವು. ಈ ಗಣಿಗಳಲ್ಲಿದ್ದವರಲ್ಲಿ ೧೨ ಜನರು ಸತ್ತರು. ನೂರಾರುಜನರು ಈ ಅಗ್ನಿಗೆ ಹೆದರಿ ಸರೋವರಗಳಲ್ಲೂ, ನದಿಗಳಲ್ಲೂ ಸೇರಿಕೊಂಡಿರುವರು. ಜ್ವಾಲೆಗೆ ಸಿಕ್ಕಿ ಸುಟ್ಟುಹೋದವರು ರೈಲ್ವೆ ಬಂಡಿಗಳಲ್ಲಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಲ್ಪಡುತ್ತಿರುವರು. ಈ ಅಗ್ನಿಜ್ವಾಲೆಯಿಂದ ಕಾಡುಗಳೂ, ಊರುಗಳೂ ಹೊತ್ತಿಕೊಂಡು ಹೊಗೆಯು ಆಕಾಶವನ್ನು ಆವರಿಸಿ ಸೂರ್ಯನ ಬೆಳಕು ಬೀಳಗೊಡದೆ ಕತ್ತಲೆಯನ್ನು ಮಾಡಿರುವುದು. ಆಂಟಿರಿಯೋಗೆ ಸೇರಿದ ಪಾರ್ಕ್ಯುಪೈನ್ ಎಂಬ ಕಾಡಿಗೆ ಬೆಂಕಿಬಿದ್ದು ೩೦೦-೪೦೦ ಜನರು ಹತರಾದರೆಂದು ವರ್ತಮಾನವಿದೆ.

[illegible]

[illegible]

[illegible]

[illegible]

[illegible]

LECTURE.

Mr. R. N. Iyengar, Bar-At-Law, will deliver a lecture on "*Some impressions of Egypt*" in the Rangacharlu Memorial Hall Mysore, on Tuesday the 18th inst. at 6-30 p. m.

Sirdar M. Kantaraj Urs, B. A., has kindly consented to preside. The public are cordially invited to attend.

[illegible]

[illegible]

[illegible] (Geography of India) [illegible] Student's Hand-book of Geography [illegible]

[illegible]

[illegible]

[illegible] phy of India by [illegible]

ಪತ್ರವ್ಯವಹಾರ.

ಅನಂತಪುರದ ಡಿ॥ ಗುತ್ತಿ ತಾ॥ ಪೈಕಿ ನಿಂಬಗಲ್ಲು ಗ್ರಾಮದ ಸಂಸ್ಕೃತ ಪಾಠಶಾಲಾ ಸ್ಥಾಪನೆ.

ಇದೇ ವಿರೋಧಿಕೃನ್ನಾಮ ಸಂ॥ ಜೇಷ್ಠ ಬ॥ ೧೦ ಬುಧವಾರ ರೇವತೀ ನಕ್ಷತ್ರ ಶೋಭನನಾಮಯೋಗದಲ್ಲಿ ಈ ಗ್ರಾಮದ ವೀರಶೈವ ಮಂಡಳಿ ಯಾವತ್ತು ಸಾಯಂಕಾಲ ೩ ಗಂಟೆಗೆ ಸಭೆಯು ಸೇರಿ ಮೇಲ್ಕಂಡ ಗ್ರಾಮದ ವಿರಕ್ತಮಠದ ಚನ್ನವೀರಸ್ವಾಮಿಗಳ ಆಜ್ಞಾಪ್ರಕಾರವಾಗಿ ಸರ್ವರೂ ಸಂತೋಷಪಟ್ಟು ನಮ್ಮ ಪ್ರಾಂತದಲ್ಲಿ ವೀರಶೈವರಿಗೆ ವಿದ್ಯಾಭಿವೃದ್ಧಿಗಾಗಿ ಕೇವಲ ನ್ಯೂನತೆಯಾಗಿತ್ತು; ಈಗ್ಗೆ ತಮ್ಮಿಂದಲೆ ಸರ್ವ ವೀರಶೈವ ವಿದ್ಯಾರ್ಥಿಗಳಿಗೂ ಸಂಸ್ಕೃತ, ಕನ್ನಡ, ಜೋತಿಷ ಈ ವಿದ್ಯಗಳು ನೆಲೆಗೊಳ್ಳುವುದರಿಂದ ನಮಗೆ ಕೇವಲ ಆನಂದವಾಗಿದೆ. ಎಂದು ಸರ್ವ ಸಭಿಕರೂ ಕರತಾಡನದೊಡನೆ ಅನುಮೋದನಕೊಟ್ಟರು.

ಪಾಠಶಾಲಾಧ್ಯಕ್ಷರು— ನಿ॥ಪ್ರ॥ಮ॥ ಚನ್ನವೀರ ಸ್ವಾಮಿಗಳು. ಪಾಠಶಾಲಾಕಾರ್ಯದರ್ಶಿಗಳು—ತಾಡಕೆರೆ ಪಟಂಗೆಪ್ಪ, ಡಿ. ಅಯ್ಯಪ್ಪ, ನ॥ ಮ॥ ಸದಾಶಿವಯ್ಯ, ಪು॥ ಮ॥ ಪು॥ ನಿರಂಜನಯ್ಯ, ಬೂದಗವಿ ದೊಡ್ಡಗುರುಸಿದ್ದಪ್ಪ, ಪ॥ ಮ॥ ಚನ್ನವೀರಯ್ಯ, ದೇಸಾಯಿ ರಾಚಪ್ಪ, ಪಾ॥ ಪಂಪಣ್ಣಪ್ಪ, ಪಾ॥ ಸಣ್ಣನಗೌಡ, ಕೋರಿ ಬಸವಪ್ಪ. ವೇ॥ ಮ॥ ವ॥ ಶಾ॥

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು

ಮ॥ ರಾ॥ ನಗದ

ಶಿರಾದಲ್ಲಿರುವ ತಿಪ್ಪೆ ಬಸಪ್ಪನವರ ಕುಮಾರ ತಪ್ಪನವರ ಮಗಳ ಲಗ್ನದಲ್ಲಿ ಮದಲೂರು ಊ॥ ಪಟ್ಟದ ರುದ್ರದೇವರ ಹಸ್ತಾ	೨-೦-೦
ಶಿರಾ ತಾ॥ ಜಾನಕಲ್ಲು ಬಸಪ್ಪನವರ ಲಗ್ನದಲ್ಲಿ ಫಾರೆಸ್ಟರ್ ಜಿ. ಸಿದ್ಧಲಿಂಗಯ್ಯನವರ ಹಸ್ತಾ	೩-೦-೦
ಗುಬ್ಬಿ ಯಜಮಾನ್ ರೇವಣ್ಣನವರಿಂದ:— ಶಿವರಾತ್ರೆ ಮಲ್ಲಿಕಾರ್ಜುನಪ್ಪನವರ ಲಗ್ನದಲ್ಲಿ ೪-೦-೦; ಮಿಠಾಯಿ ಚನ್ನಬಸವಯ್ಯನವರ ಲಗ್ನದಲ್ಲಿ ೨-೦-೦; ನಾಗಪ್ಪ ಅಡಿವಮ್ಮನ ಲಗ್ನದಲ್ಲಿ ೨-೦-೦; ಅಮ್ಮನಗಟ್ಟದ ರಾಚಪ್ಪನವರ ಮೊಮ್ಮಗಳು ಗೌರಮ್ಮನ ಲಗ್ನದಲ್ಲಿ ೨-೦-೦.	೧೦-೦-೦
ಕಾನಕಾನಹಳ್ಳಿ ಪುರಶಿವಯ್ಯನವರಿಂದ ಬೆಣ್ಣೆ ಮಲ್ಲಪ್ಪನವರ ನಾಗಪ್ಪನವರ ಲಗ್ನದಲ್ಲಿ	೪-೦-೦
ದಂಡಿನ ಶಿವರದ ಪೇಟೆ ಶಟ್ಟರು ಹುಚ್ಚಪ್ಪನವರಿಂದ ಸದರಿ ಊರಿನಲ್ಲಿ ಲಗ್ನಗಳಿಗಾಗಿ ವಸೂಲಾದ್ದು (ಪೆಸರುಪಟ್ಟಿ ಬಂದಿಲ್ಲ.)	೨೨-೦-೦
ಜಮಾ ...	೪೧-೦-೦
ಹಿಂದೆ ಬಂದಿರುವುದು ...	೧೪೧-೦-೦
ಒಟ್ಟು ...	೧೮೨-೦-೦

ಜಿ. ಶಾಂತವೀರಪ್ಪ, ಸೆಕ್ರೆಟರಿ.

ಶ್ರೀಮತ್ಸಾಕ್ಷಾದ್ರಂಭಾಪುರೀ ವೀರಸಿಂಹಾಸನಸ್ಥ ಮಹಾಸ್ವಾಮಿನಾಂ ಸನ್ನಿಧಿ—ಅಧಿಕಾರಸ್ಥಾನಕ್ಕೆ—

ಸನ್ ೧೯೧೧ ನೇ ಇಸವಿ ಮೇ ತಾ॥ ೧ ರಲ್ಲು ತೀರ್ಥಹಳ್ಳಿ ಮಳಲಿ ಮಠದ ಮೊಕ್ಕಾಮಿನಲ್ಲಿ ಈ ಕೆಳಗೆ ರುಜುಹಾಕಿರುವವರು ಬರೆಸಿ ಒಪ್ಪಿಸಿದ ಮುಚ್ಚಳಿಕೆ ಅದಾಗಿ— ಋತುಮತಿಯಾದ ಕನ್ನೆಯನ್ನು ಲಗ್ನಮಾಡಿಕೊಡದೆ ೨-೩ ವರ್ಷ ಇಟ್ಟುಕೊಂಡರೆ ದಂಡತೆರಲು ಬದ್ಧರಾಗಿರಬೇಕಾದೀತಾಗಿ ವಗೈರೆ ಸನ್ ೧೮೮೨ ನೇ ಸಾಲಿನಲ್ಲಿ ಲೇಟ್ ಶ್ರೀ॥ ॥ ಸನ್ನಿಧಾನದಿಂದ ಸಾದರಾಗಿರುವ ಸರ್ಕ್ಯುಲರ್ ನಂತೆ ನಡದು, ಈಗ ಹಾಲಿ ನಡಿಯದೆ ತಪ್ಪಿ ಋತುಮತಿಯಾದ ೨-೩ ವರ್ಷದ ಕನ್ನೆಯನ್ನು ಲಗ್ನಮಾಡಿಕೊಡದೆ ಇಟ್ಟುಕೊಂಡಿರುವುದಾಗಿ ಸನ್ನಿಧಿಯಲ್ಲಿ ತಿಳಿವಳಿಕೆಗೆ ಬಂದಿರುವುದರಿಂದ ಈ ಸಂವತ್ಸರದ ಜೇಷ್ಠ ಬ॥ ೩೦ ರೊಳಗಾಗಿ ಅಂಥಾ ೨ ವರ್ಷದ ಹಿಂದೆ ಋತುಮತಿಯಾದ ಕನ್ನೆಯನ್ನು ಲಗ್ನಮಾಡಿ ಕೊಡುತ್ತೇವೆ. ತಪ್ಪಿದರೆ ಅಂಥಾ ಕನ್ಯಾ ಇಟ್ಟುಕೊಂಡಿರುವವರು ಬೆಂಗಳೂರು ಶ್ರೀಮದ್ವೀರಶೈವ ವಿದ್ಯಾವರ್ಧಕ ಫಂಡಿಗೆ ೧೦೦ ರೂ. ಗಳನ್ನು ದಂಡಕೊಡುತ್ತೇವೆ. ಹಾಗೆ ದಂಡವನ್ನು ಕೊಡದಿದ್ದಲ್ಲಿ ಸಂಸ್ಥಾನದಿಂದ ವಿಧಿಸುವ ಆಜ್ಞೆಗೂ ಅಪರಾಧಕ್ಕೂ ಗುರಿಯಾಗಲು ಒಪ್ಪಿದ್ದೇವೆ. ಮತ್ತೂ ಹಣವನ್ನು ತೆಗೆದುಕೊಂಡು ಕನ್ನೆಯನ್ನು ಕೊಟ್ಟ ಸಂಗತಿಯು ಸನ್ನಿಧಿಗೆ ತಿಳಿದುಬಂದಲ್ಲಿ ಅಂಥವರು ಕೂಡ ಮೇಲ್ಕಂಡ ಸಭೆಗೆ ೧೦೦ ರೂ. ದಂಡವನ್ನು ತೆರಲು ಬದ್ಧರಾಗಿದ್ದೇವೆ. ಇದಕ್ಕೆ ತಪ್ಪಿದರೆ ಸಂಸ್ಥಾನದಿಂದ ಸಾದರಾಗುವ ಆಜ್ಞೆಗೂ ಅಪರಾಧಕ್ಕೂ ಗುರಿಯಾಗಲು ಕಬೂಲಿದ್ದೇವೆಂದು ಬರಿಸಿ ಒಪ್ಪಿಸಿದ ಮುಚ್ಚಳಿಕೆ ಸಹಿ.— ಭಂಗ್ಸದ ಶಿವಪ್ಪನ ರುಜು, ತ್ಯಾರಂದೂರ ಅಯ್ಯಪ್ಪನ ರುಜು, ಅರಗದ ಮಹಾಂತಿನಮಳದ ದಾಸನಗೆದ್ದೆ ಶಿ॥ ಕೊಟ್ರಯ್ಯನ ರುಜು, ಬೀಸಿನ ನಾಗಪ್ಪಗೌಡನ ರುಜು. ಈ ರೀತಿಯಾಗಿ ೫೮ ಜನರ ರುಜುಮಾಡಲ್ಪಟ್ಟಿರುತ್ತದೆ.

ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಜಯದೇವಮುರಘರಾಜೇಂದ್ರ ಮಹಾಸ್ವಾಮಿಗಳ ದೇಶಸಂಚಾರ.

ತಾ॥ ೧೩-೬-೧೯೧೧ ರಲ್ಲಿ ಮಹಾಸ್ವಾಮಿಯು ಕಲ್ಲಿ ಗ್ರಾಮದಿಂದ ಪ್ರಯಾಣಮಾಡಿ ಚಿಕ್ಕೋಡಿ ತಾ॥ ನಿಪ್ಪಾಣಿಗೆ ದಯಮಾಡಿಸಿ ಪೂರ್ವಾಹ್ನ ೯ ಗಂಟೆ ಲಾಗಾಯಿತು ೧೨ ರವರಿಗೂ ಅಡ್ಡಪಾಲಕಿ ಮೊದಲಾದ ಸಕಲ ಬಿರುದಾವಳಿಸಮೇತ ಮಹೋತ್ಸವವನ್ನು ಪೂರೈಸಿ ಇಲ್ಲಿಗೆ ಮೊಕ್ಕಾಂಗಳಾಗಿ ನಿತ್ಯವೈತೆ ತಾ॥ ೨೨-೬-೧೧ ರಲ್ಲಿ ಇಂಗ್ಲೆಂಡ್ ರಾಜಧಾನಿಯಾದ ಲಂಡನ್ ಪಟ್ಟಣದಲ್ಲಿ ಸಾರ್ವಭೌಮ ಪಂಚಮ ಜಾರ್ಜ್ ಬಾದಶಹರಿಗೆ ಕಿರೀಟಧಾರಣ ಮಹೋತ್ಸವವು ನಡೆದುದರಿಂದ ಸಹಾನುಭೂತಿ, ರಾಜನಿಷ್ಠಾ ಪ್ರದರ್ಶನಾರ್ಥವಾಗಿ ನಿಪ್ಪಾಣಿಯಲ್ಲಿರುವ ಮಹಾದೇವರ ರಮ್ಯವಾದ ವಿಶಾಲಭವನದಲ್ಲಿ ಸಭೆಯು ಸೇರಿಸಲ್ಪಟ್ಟು, ಶ್ರೀ ಮಹಾಸ್ವಾಮಿಗಳು ನಮ್ಮ ದಯಾಳು ಆಂಗ್ಲ ಸರಕಾರದವರು ಪ್ರೀತಿಯಿಂದಲೂ, ನ್ಯಾಯದಿಂದಲೂ, ನಿಷ್ಪಕ್ಷಪಾತದಿಂದಲೂ ಎಲ್ಲಾ ಪ್ರಜೆಗಳನ್ನೂ ಪುತ್ರನಿರ್ವಿಶೇಷವಾಗಿ ಪರಿಪಾಲಿಸುವುದರಿಂದ ಪರಮೇಶ್ವರನಲ್ಲಿ ಯಾದೃಶಗುಣಂಗಳುಂಟೋ ತಾದೃಶ ಗುಣಂಗಳು ಇವರಲ್ಲಿಯೂ ಕಂಡುಬರುವುದರಿಂದ "ರಾಜಾ ಪ್ರತ್ಯಕ್ಷದೇವತಾ" ಎಂಬ ಶಾಸ್ತ್ರವಚನವನ್ನು ದೃಷ್ಟಾಂತಮೂಲಕ ಸಿದ್ಧಪಡಿಸಿದ್ದಲ್ಲದೆ, ಪ್ರಜೆಗಳೆಲ್ಲರಿಗೂ ರಾಜನಿಷ್ಠೆಯುಂಟಾಗುವಂತೆಯೂ, ಸ್ವಧರ್ಮ ಶ್ರದ್ಧಾಭಕ್ತಿ ಸದಾಚಾರಗಳಲ್ಲಿ ಅಭಿರುಚಿಯುಂಟಾಗುವಂತೆಯೂ ಬೋಧಿಸಿ, ಉಪನ್ಯಾಸಕ ವಿ॥ ವಾಲಿ ಇವರು ರಾಜನಿಷ್ಠಾಪರವಾಗಿ ಉತ್ತಮವಾದ ಭಾಷಣ ಮಾಡಿದುದರಿಂದ ಅವರಿಗೆ ಬಕ್ಷೀಸು ಕೊಡಿಸಿ, ಪತನ್ಮಹೋತ್ಸವಾನಂದ ಪ್ರದರ್ಶಕವಾದ ತಾರು ಬೊಂಬಾಯಿ ಅಧಿಪತ್ಯದ ಗೌರ್ನರ್ ಸಾಹೇಬರಿಗೆ ಕಳುಹಿಸಿ, ಬಡಜನಗಳಿಗೆ ಅನ್ನ ವಸ್ತ್ರಗಳನ್ನೂ, ವಿದ್ಯಾರ್ಥಿ ಪ್ರಮುಖಬಾಲಕರಿಗೆ ಪೇಡಾ, ಬತಾಸ್, ಚುರಮರಿಗಳನ್ನೂ ಹಂಚಿಸಿ ಘನವನ್ನೈದಿದ ಶ್ರೀಮದ್ ದಯಾಳು ಪಂಚಮ ಜಾರ್ಜ್ ಬಾದಶಹರಿಗೆ ಶ್ರೀ ಮುರಘೇಶನು ಸ್ಥಿರತರಾಯುರಾರೋಗ್ಯೈಶ್ವರ್ಯ ಪುತ್ರಪೌತ್ರ ಕಲತ್ರ ಸಂಪತ್ಸುಖಸಂವೃದ್ಧಿಗಳನ್ನಿತ್ತು ಪರಿಪಾಲಿಸಲೆಂತಲೂ, ಈ ಮಹಾಪ್ರಭುಗಳ ಆಳಿಕೆಯು ಭರತಖಂಡದಲ್ಲಿ ಶಾಶ್ವತವಾಗಿ ನೆಲೆಗೊಳ್ಳಲೆಂತಲೂ ಹರಸಿದಮೇಲೆ ಜಯಜಯ ಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಅನಂತರ ತಾ॥ ೨೩-೬-೧೧ ರಲ್ಲಿ ಶ್ರೀಮನ್ಮಹಾಸ್ವಾಮಿಗಳು ಪೂರ್ವೋಕ್ತಸ್ಥಲದಲ್ಲಿಯೇ ಸಭೆಯನ್ನೆರಿಸಿ, ಮದ್ರಾಸ್ ಅಧಿಪತ್ಯಕ್ಕೆ ಸೇರಿದ ತಿನವೆಲ್ಲಿ ಜಿಲ್ಲೆಯ ಮೆಜಿಸ್ಟ್ರೇಟ್ ಕಲೆಕ್ಟರ್ ಸಾಹೇಬರನ್ನು ಕೊಂದ ದುರಾತ್ಮನಿಗೆ ಧಿಕ್ಕಾರವಿರಲಿ ಎಂಬ ನಿಷೇಧಪ್ರದರ್ಶನವನ್ನು ಮಾಡಿ ಸಭೆಯು ವಿಸರ್ಜಿಸಲ್ಪಟ್ಟಿತು. ಬಳಿಕ ನಿಪ್ಪಾಣಿಯಿಂದ ತಾ॥ ೨೯-೬-೧೧ ರಲ್ಲಿ ಹೊರಟು ತಾ॥ ೩೦ ಕ್ಕೆ ಕೊಲ್ಲಾಪುರ ಇಲಾಖಾ ಪೇಟಾ ಗಡ ಹಿಂಗ್ಲಾಜ ಶಹರಕ್ಕೆ ದಯಮಾಡಿಸಿ ಪ್ರಾತಃಕಾಲ ೮ ಗಂಟೆ ಲಾಗಾಯಿತು ೧೨ ಗಂಟೆ ವರೆಗೂ ಪಂಚಕಲಸಶೋಭಿತ ಅಡ್ಡಪಾಲಕಿ, ಶ್ವೇತಛತ್ರ, ಹಗಲುದೀವಟಿಗೆ, ಮೋರ್ಚಲು, ವ್ಯಾಸನತೋಳುಯುಕ್ತವಾದ ನಂದೀಧ್ವಜ, ನಾಯಿಮರಾತಬ್, ಮಕರತೋರಣ ಮುಂತಾದ ಎಲ್ಲಾ ಬಿರುದಾವಳಿ ವಿಹಿತವಾಗಿ ಉತ್ಸವವು ಪೂರೈಸಲು ಸುರಗಿ ಮಠದಲ್ಲಿ ನೆರದ ಸಭೆಯಲ್ಲಿ ಇಲ್ಲಿನ ಪ್ರಸಿದ್ಧ ವಕೀಲ ಶಿವರುದ್ರಪ್ಪಾ ಕೋರಿ ಇವರು ಬ್ರಿಟಿಷ್ ಗೌರ್ನಮೆಂಟಿನ ಮತ್ತು ಕರವೀರ ಸರಕಾರದ ಆಭಾರ ಮಾನಿಸಲ್ಪಟ್ಟು ಅನಂತರ ಆನಂದಪ್ರದರ್ಶಕವಾದ ತಾರು ಶ್ರೀಮತ್ ಶಾಹು ಛತ್ರಪತಿ ಕೊಲ್ಲಾಪುರ ಮಹಾರಾಜರಿಗೂ ಮತ್ತು ಮುಖ್ಯ ಮುಖ್ಯ ಸ್ಥಳಗಳಿಗೂ ಕಳುಹಲ್ಪಟ್ಟವು. ಇಲ್ಲಿ ಇನ್ನೂ ೩ ಮೊಕ್ಕಾಂಗಳಾಗಿ ಇಲ್ಲಿಂದ ಮಹಾಸ್ವಾಮಿಯು ಬಾಗಲಕೋಟಿ ಪ್ರಾಂತಕ್ಕೆ ಚಿತ್ತೈಸುತ್ತಿ. ಸದರಿ ಗಡಹಿಂಗ್ಲಾಜ ಶಹರದಲ್ಲಾದ ಅತ್ಯಾನಂದಪ್ರದಾಯಕ ಮಹೋತ್ಸವ ಸಂಬಂಧದ ಫೋಟೋಗಳನ್ನು ತರಿಸಿ ನೋಡಿದಲ್ಲಿ ಸರ್ವರಿಗೂ ವಿಶೇಷ ಆನಂದವಾಗುವುದಾದಕಾರಣ, ಕೊಲ್ಲಾಪುರ ಪ್ರೊಫೆಸರ್ ಜಿ. ವ್ಹಿ. ಜೋರಿಗೆ ಇವರಿಂದ ಸದರಿ ಫೋಟೋಗಳನ್ನು ತರಿಸಿ ನೋಡಿ ಸಮಸ್ತರೂ ಸಂತೋಷಪಡಬೇಕೆಂದು ಸೂಚಿಸುವ

ಓರ್ವ ಪ್ರತ್ಯಕ್ಷದರ್ಶಿ.

ಸಾವಳಗಿ ಸಂಸ್ಥಾನ ಜಮಖಂಡಿ.

ಹವೆಯಲ್ಲಿ ತಂಪು ಹೆಚ್ಚಿದೆ. ಮಳೆಯು ಪ್ರಾರಂಭವಾಗಿರುತ್ತದೆ. ರೋಗಾದಿಗಳೇನೂ ಇಲ್ಲ. ಇಲ್ಲಿ ತಾ॥ ೨೨-೬-೧೧ ದಿವಸ ಶ್ರೀ ಸೋಮೇಶ್ವರ ದೇವಾಲಯದ ಪಟಾಂಗಣದಲ್ಲಿ ಶ್ರೀಮನ್ಮಹಾರಾಜಾಧಿರಾಜ "ಕೇಸರ್-ಇ-ಹಿಂದ್" ಪಂಚಮ ಜಾರ್ಜ್ ಬಾದಶಹರ ಕಿರೀಟಧಾರಣ ಸಮಾರಂಭಕ್ಕಾಗಿ ಮೆ॥ ರಾ॥ ಸಾ॥ ತ್ರಿಂಬಕನಾರಾಯಣಕೋಳೆ ಮಾಮಲೇದಾರ ಸಾಹೇಬ ತಾ॥ ಸಾವಳಗಿ ಇವರ ಅಧ್ಯಕ್ಷತೆಯ ಕೆಳಗೆ ಪುರನಿವಾಸಿಗಳ ದೊಡ್ಡ ಸಭೆಯು ನೆರೆದಿತ್ತು. ಸಭಾಮಧ್ಯದಲ್ಲಿ ಟೇಬಲದ ಮೇಲೆ ಬಾದಶಹ, ಬಾದಶಹನಿಯವರ ಭಾವಚಿತ್ರವನ್ನಿಟ್ಟು ಪುಷ್ಪಮಾಲಿಗೆಗಳಿಂದ ಅಲಂಕರಿಸಿತ್ತು. ಭಜನಪೂಜಾದಿಗಳು ಬಹು ಭಕ್ತಿಯಿಂದ ಸಾಗಿದುವು. ರಾ॥ರಾ॥ ಅಡವೆಪ್ಪ ಬಸವಪ್ಪ ಮುಧೋಳ ಹೆಡ್ಮಾಸ್ಟರರವರು ಬಾದಶಹರ ಚರಿತ್ರವನ್ನು ಸರಸವಾದ ವಾಣಿಯಿಂದ ಕನ್ನಡದಲ್ಲಿಯೂ ಮಹಾರಾಷ್ಟ್ರದಲ್ಲಿಯೂ ವರ್ಣಿಸಿದರು. ಸಮಯೋಚಿತ ಸ್ವಕೃತ ಮಹಾರಾಷ್ಟ್ರ ಕವಿತೆಗಳನ್ನೂ, ರಾಜಗೀತವನ್ನೂ ವಿದ್ಯಾರ್ಥಿಗಳ ಮುಖದಿಂದ ಸರಸವಾಗಿ ಅನ್ನಿಸಿದರು. ಆಗ ಯಾವತ್ತು ಜನರು ಎದ್ದು ನಿಂತು ಉತ್ಥಾಪನವನ್ನು ಕೊಟ್ಟರು. ಅಧ್ಯಕ್ಷಸಾಹೇಬರೂ ಬಾದಶಹ ರಾಣಿಯವರ ಗುಣಾತಿಶಯಗಳನ್ನು ಮರಾಠಿಯಲ್ಲಿ ಸರಸವಾಗಿ ಬಣ್ಣಿಸಿದರು. ಸಭೆಯು ಒಳ್ಳೇ ವಿಜೃಂಭಣೆಯಿಂದ ಸಾಗಿತು. ಕಡೆಗೆ ತಾಂಬೂಲ ಅತ್ತರ ಗುಲಾಬಾದಿಗಳಾಗಿ ಬಾದಶಹ ಬಾದಶಹಿನಿಯವರ ನಾಮದಿಂದ ತ್ರಿವಾರ ಜಯಘೋಷವಾಗಿ ಸಭೆಯು ವಿಸರ್ಜನಗೊಂಡಿತು. ಇದರಂತೆ ಇಲ್ಲಿಯ ಭವ್ಯವಾದ ಶಾಲಾಮಂದಿರದಲ್ಲಿಯೂ ಸಭೆಗೂಡಿ ಬಾದಶಹ ಮಹಾರಾಣಿಯವರ ಆಯುರಾರೋಗ್ಯಾಭಿವೃದ್ಧಿಯನ್ನೂ ಕಲ್ಯಾಣವನ್ನೂ ಚಿಂತಿಸಿ ಬಾಲಕರಿಗೆ ಮಿಠಾಯಿಯನ್ನೂ ಹಂಚಿದರು. ಸನ್ಮಾನಿತರ ಸನ್ಮಾನ:— ಇಲ್ಲಿಯ ಮಹಾರಾಷ್ಟ್ರ ಶಾಲಾ ಹೆಡ್ಮಾಸ್ತರರಾದ ಮ॥ ರಾ॥ರಾ॥ ಅಡಿವೆಪ್ಪ ಬಸಪ್ಪ ಮುಧೋಳ ಇವರಿಗೆ ಪೆನ್ಷನವಾದ ನಿಮಿತ್ತ ಪುರನಿವಾಸಿಗಳೆಲ್ಲರೂ ಕೂಡಿ ಕಳೆದ ತಾ॥ ೩೦ ರಲ್ಲಿ ಪಾನಸುಪಾರಿ ಮಾಡಿದರು. ರಾ॥ಸಾ॥ ಮಾಮಲೆದಾರ ಸಾಹೇಬರ ಅಧ್ಯಕ್ಷತೆಯಲ್ಲಿ ವಿಸ್ತೀರ್ಣವಾದ ಶಾಲಾಮಂದಿರದಲ್ಲಿ ದೊಡ್ಡ ಸಭೆಯು ಕೂಡಿತ್ತು. ಸಭೆಗೆ ಪುರನಿವಾಸಿಗಳೆಲ್ಲರೂ ಬಂದಿದ್ದರು. ಅಂತ್ಯಜರೂ ಸಹ ಹಾಜರಿದ್ದರು. ಬಂಗಲೆಯ ವಿಸ್ತೀರ್ಣವು ಸಾಲದೆಹೋಗಿ ಪಟಾಂಗಣದಲ್ಲಿ ಸಹ ಬಹುಜನರು ಕುಂತಿದ್ದರು. ಇವರು ಈ ಪ್ರಾಂತಕ್ಕೇ ಹೆಸರ್ಹೊಂದಿದ ಶಿಕ್ಷಕರಾಗಿಯೂ, ವಿದ್ಯದಲ್ಲಿ ಹಿಮ್ಮೆಟ್ಟಿದ ಎಲ್ಲ ಜಾತಿಯವರನ್ನು ಮುಂದೆ ತರುವುದರಲ್ಲಿ ಒಳ್ಳೇ ಧುರೀಣರಾಗಿಯೂ ಇದ್ದುದರಿಂದ ಇವರ ವಿಯೋಗಕಾಲಕ್ಕೆ ಎಲ್ಲಜಾತಿಯವರೂ ಕಣ್ಣೀರು ಸುರಿಸಿದರು. ಇವರ ಕೈಕೆಳಗೆ ಎಷ್ಟೋ ವಿದ್ಯಾರ್ಥಿಗಳು ತಯಾರಾಗಿರುತ್ತಾರೆ. ಇವರ ವಿದ್ಯಾರ್ಥಿಗಳಲ್ಲೇ ಎಷ್ಟೋ ಜನರು ಈ ಸಂಸ್ಥಾನದಲ್ಲಿ ನೌಕರರಾಗಿರುವರು. ಎಷ್ಟೋ ಜನ ಮಾಸ್ತರರಿರುವರು. ಇವರು ತಮ್ಮ ವೀರಶೈವ ಮತೋದ್ಧಾರಕ್ಕಾಗಿ ಹಗಲಿರುಳೂ ಯತ್ನಿಸುವರು. ಇವರಿಗೆ ಇಲ್ಲಿ "ಷಡ್ಗ್ರಾಮ ವಿದ್ಯಾಜನಕ" ರೆಂಬ ಬಿರುದುಂಟು. ಈ ತಾಲ್ಲೂಕಿನ ಬಹುತೇಕ ಹಳ್ಳಿಯ ಮಾಸ್ತರರು ಇವರ ವಿದ್ಯಾರ್ಥಿಗಳಾಗಿರುತ್ತಾರೆ. ಅಧ್ಯಕ್ಷರಾದ ರಾ॥ಸಾ॥ ಮಾಮಲೆದಾರ ಸಾಹೇಬರು ಇವರ ವಿದ್ವತ್ತೆಯನ್ನೂ ಸತತೋದ್ಯೋಗವನ್ನೂ, ಶಿಕ್ಷಣಾಸಕ್ತಿಯನ್ನೂ ಸರಸವಾಗಿ ವರ್ಣಿಸಿದರು. ಇವರ ಕೈಯಿಂದ ಬಾಲಕರಿಗೆ ಮಿಠಾಯಿಯು ಹಂಚಿದರು. ಆ ಕಾಲಕ್ಕೆ ಎಲ್ಲ ವಿದ್ಯಾರ್ಥಿಗಳು ಮಿಠಾಯಿಯನ್ನು ತೆಗೆದುಕೊಳ್ಳದೆ ತಮ್ಮ ಪರಮಪ್ರಿಯ ಗುರುಗಳ ಮುಖವನ್ನು ನೋಡಿ ಕಣ್ಣೀರು ಸುರಿಸಹತ್ತಿದರು. ಅದರಿಂದ ಯಾವತ್ತೂ ನೆರೆದ ಜನರಿಗೂ ದುಃಖವೆನಿಸಿತು. ಅಧ್ಯಕ್ಷಸಾಹೇಬರು ಸಮಾಧಾನವನ್ನು ಹೇಳಿ ವಿದ್ಯಾರ್ಥಿಗಳ ಕೈಯಿಂದ ಎಲೆಯಡಿಕೆಯನ್ನು ಮಾಸ್ತರರಿಗೆ ಕೊಡಿಸಿ ಪರಮದಯಾಳುಗಳಾದ ಶ್ರೀಮಂತ ಪರಶುರಾಮರಾವ ಭಾವುಸಾಹೇಬ ಮಹಾರಾಜ ಸರಕಾರ ಜಮಖಂಡಿ ಇವರು ಹೆಸರಿನಿಂದ ತ್ರಿವಾರ ಜಯಘೋಷವನ್ನು ಮಾಡಿಸಿದರು. ಆಮೇಲೆ ೧ ನೇ ಅ॥ ಮಾಸ್ತರರಾದ ಕಲ್ಯಾಣಯಶವಂತ ಸಾನೆಯವರು ಅಧ್ಯಕ್ಷ ಸಾಹೇಬರ ಆಭಾರವನ್ನು ಮನ್ನಿಸಿ ಅವರ ಅಪ್ಪಣೆಯ ಮೇರೆಗೆ ಸಭಾವಿಸರ್ಜನ ಮಾಡಿಸಿದರು. ಇಂಥ ಸಭೆಯು ಇಲ್ಲಿ ನೆರೆದುದು ಅಪೂರ್ವವು. ಈ ಮಾಸ್ತರರು ಇಲ್ಲಿಗೆ ಬಂದು ಸುಮಾರು ೩-೪ ವರ್ಷಗಳಾದುವು. ಈ ಕಾಲಾವಧಿಯಲ್ಲಿ ಈ ಊರ ಶಾಲೆಯು ಮುಮ್ಮಡಿಯಾಗಿ ಬೆಳೆಯಿತು. ಮೊದಲು ಇಬ್ಬರು ಮಾಸ್ತರರು ೫೦-೬೦ ಹುಡುಗರು ೪-೫ ಇಯತ್ತೆಗಳೂ ಇದ್ದುವು. ಇವರು ಬಂದಂದಿನಿಂದ ಶಾಲೆಯು ಬೆಳೆಯುತ್ತ ಬೆಳೆಯುತ್ತ ಈಗ ೫ ಜನ ಮಾಸ್ತರರೂ, ೭ ಇಯತ್ತೆಗಳೂ, ೧೩೫ ವಿದ್ಯಾರ್ಥಿಗಳೂ ಇದ್ದು, ಪ್ರತಿವರ್ಷ ಹುಡುಗರು ಮುಲ್ಕಿ ಪರೀಕ್ಷೆಗೆ ವಿಜಾಪುರ ಸೆಂಟರಕ್ಕೆ ಹೋಗುತ್ತಿರುತ್ತಾರೆ. ಆದರೆ ಪ್ರಾಂತಿಕ ಭಾಷೆಯೂ ಪರೀಕ್ಷಾ ಸೆಂಟರದ ಭಾಷೆಯೂ ಕನ್ನಡವಿದ್ದು ಇಲ್ಲಿಯ ಶಾಲೆಯು ಮಹಾರಾಷ್ಟ್ರಭಾಷೆಯಲ್ಲಿರುವುದರಿಂದ ವಿದ್ಯಾರ್ಥಿಗಳಿಗೆ ಪಾಸಾಗಬೇಕಾದರೆ ಬಹಳ ಶ್ರಮವಾಗುತ್ತದೆ. ಅಸ್ತು. ಇವರ ಪಶ್ಚಾತ್ತಾದರೂ [illegible] ಈ ಶಾಲೆಯು ಬೆಳೆಯಲೆಂದು ಚಿಂತಿಸಿ ಈ ಲೇಖನವನ್ನು ಮುಗಿಸುತ್ತೇನೆ.

ಓರ್ವ ಸಂಚಾರಕ.

ಊದಬತ್ತಿಗಳು.

9

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦ ೨-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೨ ಅಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಅಣೆ; ಧೂಪದ ಗಟ್ಟಿ ೧ಕ್ಕೆ ೨ ಅಣೆ. ಬಾಲಗ್ರಹಧೂಪ ಡಬ್ಬಿ ೧ ಕ್ಕೆ ೮ ಅಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಬಹುಮಾನ! ಸುಸಮಯ!!

ಸೌದಾಮಿನಿ.

ಶೃಂಗಾರಾದಿ ರಸಭರಿತವಾಗಿಯೂ, ಧರ್ಮನೀತಿ ಬೋಧಕವಾಗಿಯೂ ಇರುವ ಮನೋಹರವಾದೀಪುಸ್ತಕದ ಬೆಲೆ ೦-೩-೬ ಅಣೆ. ಗೌರೀಹಬ್ಬ ದೊಳಗಾಗಿ ತರಿಸುವ "ಸ್ಟಾರ್" ಚಂದಾದಾರರಿಗೆ ಐದಾಣೆ ಮಾತ್ರ. ಗ್ರಾಹಕರಿಗೆ ಒಂದಾಣೆಯ ಪುಸ್ತಕ ಒಂದು ಬಹುಮಾನ ಅಂಚೆವೆಚ್ಚ ಬೇರೆ "ಸಾಹಸಿಕೆ" ಮನೋಹರವಾದ ನಾವಿಲ್ ೦-೨-೬.

ವಿಳಾಸ:— ಸಿ. ವಿ. ಶಾಸ್ತ್ರಿ ಚಾಮರಾಜನಗರ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

3 ಗುಣವಾಗದಿದ್ದರೆ ಹಣವಾಪಸ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ವಿ. ಪಿ. ೪ ಆಣೆ ಬೇರೆ. ಅನುಭವಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನ್ನಡಾ.

೭೦ ಕಥೆಗಳು. ಸಚಿತ್ರ. ೩೧೨ ಪುಟಗಳು

ಸಚಿತ್ರ ಶುಕಸಪ್ತತಿಕಥೆ.

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕೀಕ ವ್ಯವಹಾರ ಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುತ್ತದೆ. (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಇದು ಅಲ್ಲದೆ ಇನ್ನೂ ಇತರವಿಧವಾದ ಕಥೆಗಳು ಕಾವ್ಯಗಳು ಪುರಾಣಗಳು ಮುಂತಾದ ಪುಸ್ತಕಗಳು ಸಹ ನಮ್ಮಲ್ಲಿ ದೊರೆಯುತ್ತೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇನೆ.

ನಮ್ಮ ವಿಳಾಸ:— ಎಂ. ಆರ್., ಕೃಷ್ಣಸ್ವಾಮಿಶೆಟ್ಟಿ ಕಂಪೆನಿ. ನಂ॥ ಗೋವಿಂದಪ್ಪನಾಯಕ್ ಸ್ಟ್ರೀಟ್ ಮದ್ರಾಸು.

14

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೆಂಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ವ್ಯಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯುವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಮೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾತಗಾಂವಕರ, ಮರ್ಚಂಟ.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಹಾ,
Post Bilgi. North Kanara District.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

14

೧. ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರಗಳನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಷ್ಣತ್ವಾ ಬಂದರೆ ಪೆಂಡೆಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರೆತ, ಹಲ್ಲುಗಳ ಪಾಚಿ, ಇಗರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವುಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಹೇಬಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯು [illegible] ತರಿಸಿ ನೋಡಿ, ಅನುಭವಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ [illegible] ಮೊದಲಾದವಕ್ಕೆ ಸದರಿವ ಡಬ್ಬಿ ೧ ಕ್ಕೆ [illegible] ವಿರಳದಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮ [illegible]
ವೈದ್ಯಶಾಲಾ, ಮೈಸೂರು.

ಪತ್ರವ್ಯವಹಾರ.

ಅನಂತಪುರದ ಡಿ॥ ಗುತ್ತಿ ತಾ॥ ಪೈಕಿ ನಿಂಬಗಲ್ಲು ಗ್ರಾಮದ ಸಂಸ್ಕೃತ ಪಾಠಶಾಲಾ ಸ್ಥಾಪನೆ.

ಇದೇ ವಿರೋಧಿಕೃನ್ನಾಮ ಸಂ॥ ಜೇಷ್ಠ ಬ॥ ೧೦ ಬುಧವಾರ ರೇವತೀ ನಕ್ಷತ್ರ ಶೋಭನನಾಮಯೋಗದಲ್ಲಿ ಈ ಗ್ರಾಮದ ವೀರಶೈವ ಮಂಡಳಿ ಯಾವತ್ತು ಸಾಯಂಕಾಲ ೩ ಗಂಟೆಗೆ ಸಭೆಯು ಸೇರಿ ಮೇಲ್ಕಂಡ ಗ್ರಾಮದ ವಿರಕ್ತಮಠದ ಚೆನ್ನವೀರಸ್ವಾಮಿಗಳ ಆಜ್ಞಾಪ್ರಕಾರವಾಗಿ ಸರ್ವರೂ ಸಂತೋಷಪಟ್ಟು ನಮ್ಮ ಪ್ರಾಂತದಲ್ಲಿ ವೀರಶೈವರಿಗೆ ವಿದ್ಯಾಭಿವೃದ್ಧಿಯು ಕೇವಲ ನ್ಯೂನತೆಯಾಗಿತ್ತು; ಈಗ್ಗೆ ತನ್ನಿಮ್ಮಿಂದಲೆ ಸರ್ವ ವೀರಶೈವ ವಿದ್ಯಾರ್ಥಿಗಳಿಗೂ ಸಂಸ್ಕೃತ, ಕನ್ನಡ, ಜೋತಿಷ. ಈ ವಿದ್ಯೆಗಳು ನೆಲೆಗೊಳ್ಳುವುದರಿಂದ ನಮಗೆ ಕೇವಲ ಆನಂದವಾಗಿದೆ. ಎಂದು ಸರ್ವ ಸಭಿಕರೂ ಕರತಾಡನದೊಡನೆ ಅನುಮೋದನಕೊಟ್ಟರು.

ಪಾಠಶಾಲಾಧ್ಯಕ್ಷರು— ನಿ॥ ವಿ॥ ಮ॥ ಚೆನ್ನವೀರ ಸ್ವಾಮಿಗಳು. ಪಾಠಶಾಲಾಕಾರ್ಯದರ್ಶಿಗಳು— ತಾವರೆಕೆರೆ ಪಟೇಂಗಪ್ಪ, ಡಿ. ಅಯ್ಯಪ್ಪ, ನ॥ ಮ॥ ಸದಾಶಿವಯ್ಯ, ಘಂ॥ ಮ॥ ವೀ॥ ನಿರಂಜನಯ್ಯ, ಬೂದಗವಿ ದೊಡ್ಡಗುರುಸಿದ್ಧಪ್ಪ, ಚಿ॥ ಮ॥ ಚೆನ್ನವೀರಯ್ಯ, ದೇಸಾಯಿ ರಾಚಪ್ಪ, ಪಾ॥ ಬಸವಣ್ಣೆಪ್ಪ, ಪಾ॥ ಸಣ್ಣನಗೌಡ, ಕೋರಿ ಬಸವಪ್ಪ. ನಿ॥ ಮ॥ ವಿ॥ ಕಾ॥

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು.

ಮಾ॥ ರಾ॥ ಗಳಾದ

ಶಿರಾದಲ್ಲಿರುವ ತಿಪ್ಪೆ ಬಸಪ್ಪನವರ ಹನುಮಂತಪ್ಪನವರ ಮಗಳ ಲಗ್ನದಲ್ಲಿ ಮಂದಲೂರು ಉ॥ ಪಟ್ಟದ ರುದ್ರದೇವರ ಹಸ್ತಾ	೨-೦-೦
ಶಿರಾ ತಾ॥ ಜಾನಕಲ್ಲು ಬಸಪ್ಪನವರ ಲಗ್ನದಲ್ಲಿ ಫಾರೆಸ್ಟರ್ ಜಿ. ಸಿದ್ಧಲಿಂಗಯ್ಯನವರ ಹಸ್ತಾ	೩-೦-೦
ಗುಬ್ಬಿ ಯಜಮಾನ್ ರೇವಣನವರಿಂದ:— ಶಿವರಾತ್ರೆ ಮಲ್ಲಿಕಾರ್ಜುನಪ್ಪನವರ ಲಗ್ನದಲ್ಲಿ ೪-೦-೦; ಮಿಠಾಯಿ ಚೆನ್ನಬಸವಯ್ಯನವರ ಲಗ್ನದಲ್ಲಿ ೨-೦-೦; ನಾಗಪ್ಪ ಅಡಿವೆಪ್ಪನ ಲಗ್ನದಲ್ಲಿ ೨-೦-೧; ಅಮ್ಮನಗಟ್ಟದ ರಾಚಪ್ಪನವರ ಮೊಮ್ಮಗಳು ಗೌರಮ್ಮನ ಲಗ್ನದಲ್ಲಿ ೨-೦-೦.	೧೦-೦-೦
ಕಾನಕಾನಹಳ್ಳಿ ಪರಶಿವಯ್ಯನವರಿಂದ ಬೆಣ್ಣೆ ಮಲ್ಲಪ್ಪನವರ ನಾಗಪ್ಪನವರ ಲಗ್ನದಲ್ಲಿ	೪-೦-೦
ಬಿಂಡಿನ ಶಿವರದ ಪೇಟೆ ಶೆಟ್ಟರು ಹುಚ್ಚಪ್ಪನವರಿಂದ ಸದರಿ ಊರಿನಲ್ಲಿ ಲಗ್ನಗಳಿಗಾಗಿ ವಸೂಲಾದ್ದು (ಹೆಸರುಪಟ್ಟಿ ಬಂದಿಲ್ಲ.)	೨೨-೦-೦
ಜಮ್ಲಾ ...	೪೧-೦-೦
ಹಿಂದೆ ಬಂದಿರುವುದು ...	೧೪೧-೦-೦
ಒಟ್ಟು ...	೧೮೨-೦-೦

ಜಿ. ಶಾಂತವೀರಪ್ಪ, ಸೆಕ್ರೆಟರಿ.

ಶ್ರೀಮತ್ಸಕ್ಷಾದ್ರಂಭಾಪುರೀ ವೀರಸಿಂಹಾಸನಸ್ಯ ಮಹಾಸ್ವಾಮಿನಾಂ ಸನ್ನಿಧಿ—ಅಧಿಕಾರಸ್ಥಾನಕ್ಕೆ—

ಸನ್ ೧೯೧೧ ನೇ ಇಸವಿ ಮೇ ತಾ॥ ೧ ರಲ್ಲು ತೀರ್ಥಹಳ್ಳಿ ಮಳಲಿ ಮಠದ ಮೊಕ್ಕಾಮಿನಲ್ಲಿ ಈ ಕೆಳಗೆ ರುಜುಹಾಕಿರುವವರು ಬರೆಸಿ ಒಪ್ಪಿಸಿದ ಮುಚ್ಚಳಿಕೆ ಅದಾಗಿ— ಋತುಮತಿಯಾದ ಕನ್ಯೆಯನ್ನು ಲಗ್ನಮಾಡಿಕೊಡದೆ ೨-೩ ವರ್ಷ ಇಟ್ಟುಕೊಂಡರೆ ದಂಡತೆರಲು ಬದ್ಧರಾಗಿರಬೇಕಾಬೀತಾಗಿ ವಗೈರೆ ಸನ್ ೧೮೮೨ ನೇ ಸಾಲಿನಲ್ಲಿ ಲೇಟ್ ಶ್ರೀ॥ ॥ ಸನ್ನಿಧಾನದಿಂದ ಸಾದರಾಗಿರುವ ಸರ್ಕ್ಯುಲರ್ ನಂತೆ ನಡದು, ಈಗ ಹಾಲಿ ನಡಿಯದೆ ತಪ್ಪಿ ಋತುಮತಿಯಾದ ೨-೩ ವರ್ಷದ ಕನ್ಯೆಯನ್ನು ಲಗ್ನಮಾಡಿಕೊಡದೆ ಇಟ್ಟುಕೊಂಡಿರುವುದಾಗಿ ಸನ್ನಿಧಿಯಲ್ಲಿ ತಿಳುವಳಿಕೆಗೆ ಬಂದಿರುವುದರಿಂದ ಈ ಸಂವತ್ಸರದ ಜ್ಯೇಷ್ಠ ಬ॥ ೩೦ ರೊಳಗಾಗಿ ಅಂಥಾ ೨ ವರ್ಷದ ಹಿಂದೆ ಋತುಮತಿಯಾದ ಕನ್ಯೆಯನ್ನು ಲಗ್ನಮಾಡಿ ಕೊಡುತ್ತೇವೆ. ತಪ್ಪಿದರೆ ಅಂಥಾ ಕನ್ಯಾ ಇಟ್ಟುಕೊಂಡಿರುವವರು ಬೆಂಗಳೂರು ಶ್ರೀಮದ್ವೀರಶೈವ ವಿದ್ಯಾವರ್ಧಕ ಫಂಡಿಗೆ ೧೦೦ ರೂ. ಗಳನ್ನು ದಂಡಕೊಡುತ್ತೇವೆ. ಹಾಗೆ ದಂಡವನ್ನು ಕೊಡದಿದ್ದಲ್ಲಿ ಸಂಸ್ಥಾನದಿಂದ ವಿಧಿಸುವ ಆಜ್ಞೆಗೂ ಅಪರಾಧಕ್ಕೂ ಗುರಿಯಾಗಲು ಒಪ್ಪಿದ್ದೇವೆ. ಮತ್ತೂ ಹಣವನ್ನು ತೆಗೆದುಕೊಂಡು ಕನ್ಯೆಯನ್ನು ಕೊಟ್ಟ ಸಂಗತಿಯು ಸನ್ನಿಧಿಗೆ ತಿಳಿದುಬಂದಲ್ಲಿ ಅಂಥವರು ಕೂಡ ಮೇಲ್ಕಂಡ ಸಭೆಗೆ ೧೦೦ ರೂ. ದಂಡವನ್ನು ತೆರಲು ಬದ್ಧರಾಗಿದ್ದೇವೆ. ಇದಕ್ಕೆ ತಪ್ಪಿದರೆ ಸಂಸ್ಥಾನದಿಂದ ಸಾದರಾಗುವ ಆಜ್ಞೆಗೂ ಅಪರಾಧಕ್ಕೂ ಗುರಿಯಾಗಲು ಕಬೂಲಿದ್ದೇವೆಂದು ಬರೆಸಿ ಒಪ್ಪಿಸಿದ ಮುಚ್ಚಳಿಕೆ ಸಹಿ.— ಭಂಡ್ಸದ ಶಿವಪ್ಪನ ರುಜು, ತ್ಯಾರಂದೂರ ಅಯ್ಯಪ್ಪನ ರುಜು, ಅರಗದ ಮಹಾಂತಿನಮಠದ ದಾಸನಗದ್ದೆ ಶಿ॥ ಕೊಟ್ರಯ್ಯನ ರುಜು, ಬೀಶಿನ ನಾಗಪ್ಪಗೌಡನ ರುಜು. ಈ ರೀತಿಯಾಗಿ ೪೮ ಜನರ ರುಜುಮಾಡಲ್ಪಟ್ಟಿರುತ್ತದೆ.

ಶ್ರೀಮನ್ಮಹಾರಾಜನಿರಂಜನ ಜಗದ್ಗುರು ಜಯದೇವಮುರಘರಾಜೇಂದ್ರ ಮಹಾಸ್ವಾಮಿಗಳ ದೇಶಸಂಚಾರ.

ತಾ॥ ೧೭-೬-೧೯೧೧ ರಲ್ಲಿ ಮಹಾಸ್ವಾಮಿಯು ಕಲ್ಲಿಗ್ರಾಮದಿಂದ ಪ್ರಯಾಣಮಾಡಿ ಚಿಕ್ಕೋಡಿ ತಾ॥ ನಿಪ್ಪಾಣಿಗೆ ದಯಮಾಡಿಸಿ ಪೂರ್ವಾಹ್ನ ೯ ಗಂಟೆ ಲಾಗಾಯಿತು ೧೨ ರವರಿಗೂ ಅಡ್ಡಪಾಲಕಿ ಮೊದಲಾದ ಸಕಲ ಬಿರುದಾವಳಿ ಸಮೇತ ಮಹೋತ್ಸವವನ್ನು ಪೂರೈಸಿ ಇಲ್ಲಿಗೆ ಮೊಕ್ಕಾಂಗಳಾಗಿ ನಿತ್ಯಮಧ್ಯೆ ತಾ॥ ೨೨-೬-೧೧ ರಲ್ಲಿ ಇಂಗ್ಲೆಂಡ್ ರಾಜಧಾನಿಯಾದ ಲಂಡನ್ ಪಟ್ಟಣದಲ್ಲಿ ಸಾರ್ವಭೌಮ ಪಂಚಮ ಜಾರ್ಜ್ ಬಾದಶಹರಿಗೆ ಕಿರೀಟಧಾರಣ ಮಹೋತ್ಸವವು ನಡೆದುದರಿಂದ ಸಹಾನುಭೂತಿ, ರಾಜನಿಷ್ಠಾ ಪ್ರದರ್ಶನಾರ್ಥವಾಗಿ ನಿಪಾಣಿಯಲ್ಲಿರುವ ಮಹಾದೇವರ ರಮ್ಯವಾದ ವಿಶಾಲಭವನದಲ್ಲಿ ಸಭೆಯು ಸೇರಿಸಲ್ಪಟ್ಟು, ಶ್ರೀ ಮಹಾಸ್ವಾಮಿಗಳು ನಮ್ಮ ದಯಾಳು ಆಂಗ್ಲ ಸರಕಾರದವರು ಪ್ರೀತಿಯಿಂದಲೂ, ನ್ಯಾಯದಿಂದಲೂ, ನಿಷ್ಪಕ್ಷಪಾತದಿಂದಲೂ ಎಲ್ಲಾ ಪ್ರಜೆಗಳನ್ನೂ ಪುತ್ರನಿರ್ವಿಶೇಷವಾಗಿ ಪರಿಪಾಲಿಸುವುದರಿಂದ ಪರಮೇಶ್ವರನಲ್ಲಿ ಯಾದೃಶಗುಣಂಗಳುಂಟೋ ತಾದೃಶ ಗುಣಂಗಳು ಇವರಲ್ಲಿಯೂ ಕಂಡುಬರುವುದರಿಂದ “ರಾಜಾ ಪ್ರತ್ಯಕ್ಷದೇವತಾ” ಎಂಬ ಶಾಸ್ತ್ರವಚನವನ್ನು ವ್ಯಾಖ್ಯಾನಮೂಲಕ ಸಿದ್ಧಪಡಿಸಿದ್ದಲ್ಲದೆ, ಪ್ರಜೆಗಳೆಲ್ಲರಿಗೂ ರಾಜನಿಷ್ಠೆಯುಂಟಾಗುವಂತೆಯೂ, ಸ್ವಧರ್ಮ ಶ್ರದ್ಧಾಭಕ್ತಿ ಸದಾಚಾರಗಳಲ್ಲಿ ಅಭಿರುಚಿಯುಂಟಾಗುವಂತೆಯೂ ಬೋಧಿಸಿ, ಉಪನ್ಯಾಸಕ ವಿ॥ ವಾಳ್ವೆ ಇವರು ರಾಜನಿಷ್ಠಾಪರವಾಗಿ ಉತ್ತಮವಾದ ಭಾಷಣ ಮಾಡಿದುದರಿಂದ ಅವರಿಗೆ ಬಕ್ಷೀಸು ಕೊಡಿಸಿ, ಏತನ್ಮಹೋತ್ಸವಾನಂದ ಪ್ರದರ್ಶಕವಾದ ತಾರು ಬೊಂಬಾಯಿ ಆಧಿಪತ್ಯದ ಗೌರ್ನರ್ ಸಾಹೇಬರಿಗೆ ಕಳುಹಿಸಿ, ಬಡಜನಗಳಿಗೆ ಅನ್ನ ವಸ್ತ್ರಗಳನ್ನೂ, ವಿದ್ಯಾರ್ಥಿ ಪ್ರಮುಖಬಾಲಕರಿಗೆ ಫೇಡಾ, ಬತಾಸ್, ಚುರಮುರಿಗಳನ್ನೂ ಹಂಚಿಸಿ ಭುವನಸ್ಥೈರ್ಯದ ಶ್ರೀಮನ್ ದಯಾಳು ಪಂಚಮ ಜಾರ್ಜ್ ಬಾದಶಹರಿಗೆ ಶ್ರೀ ಮುರಘೇಶನು ಸ್ಥಿರತರಾಯುರಾರೋಗ್ಯೈಶ್ವರ್ಯ ಪುತ್ರಪೌತ್ರ ಕಲತ್ರ ಸಂಪತ್ಸುಖಸಂವೃದ್ಧಿಗಳನ್ನಿತ್ತು ಪರಿಪಾಲಿಸಲೆಂತಲೂ, ಈ ಮಹಾಪ್ರಭುಗಳ ಆಳಿಕೆಯು ಭರತಖಂಡದಲ್ಲಿ ಶಾಶ್ವತವಾಗಿ ನೆಲೆಗೊಳ್ಳಲೆಂತಲೂ ಹರಸಿದಮೇಲೆ ಜಯಜಯ ಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಅನಂತರ ತಾ॥ ೨೪-೬-೧೧ ರಲ್ಲಿ ಶ್ರೀಮನ್ಮಹಾಸ್ವಾಮಿಗಳು ಪೂರ್ವೋಕ್ತಸ್ಥಲದಲ್ಲಿಯೇ ಸಭೆಯನ್ನೆರಿಸಿ, ಮದ್ರಾಸ್ ಆಧಿಪತ್ಯಕ್ಕೆ ಸೇರಿದ ತಿನವೆಲ್ಲಿ ಜಿಲ್ಲೆಯ ಮೆಜಿಸ್ಟ್ರೇಟ್ ಕಲೆಕ್ಟರ್ ಸಾಹೇಬರನ್ನು ಕೊಂದ ದುರಾತ್ಮನಿಗೆ ಧಿಕ್ಕಾರವಿರಲಿ ಎಂದು ನಿಷೇಧಪ್ರದರ್ಶನವನ್ನು ಮಾಡಿ ಸಭೆಯು ವಿಸರ್ಜಿಸಲ್ಪಟ್ಟಿತು. ಬಳಿಕ ನಿಪಾಣಿಯಿಂದ ತಾ॥ ೨೯-೬-೧೧ ರಲ್ಲಿ ಹೊರಟು ತಾ॥ ೩೦ ಕ್ಕೆ ಕೊಲ್ಲಾಪುರ ಇಲಾಖಾ ಪೇಠಾ ಗಡ ಹಿಂಗ್ಲಾಜ ಶಹರಕ್ಕೆ ದಯಮಾಡಿಸಿ ಪ್ರಾತಃಕಾಲ ೮ ಗಂಟೆ ಲಾಗಾಯಿತು ೧೨ ಗಂಟೆ ವರೆಗೂ ಪಂಚಕಲಸಶೋಭಿತ ಅಡ್ಡಪಾಲಕಿ, ಶ್ವೇತಛತ್ರ, ಹಗಲುದೀವಟಿಗೆ, ಮೋರ್ಚಾಲು, ವ್ಯಾಸನತೋಳುಯುಕ್ತವಾದ ನಂದೀಧ್ವಜ, ಮಾಯಿಮರಾತಬ್, ಮಕರತೋರಣ ಮುಂತಾದ ಎಲ್ಲಾ ಬಿರುದಾವಳಿ ಮಿಳಿತವಾಗಿ ಉತ್ಸವವು ಪೂರೈಸಲು ಸುರಗಿ ಮಠದಲ್ಲಿ ನೆರದ ಸಭೆಯಲ್ಲಿ ಇಲ್ಲಿನ ಪ್ರಸಿದ್ಧ ವಕೀಲ ಶಿವರುದ್ರಪ್ಪಾ ಕೋರಿ ಇವರು ಬ್ರಿಟಿಷ್ ಗೌರ್ನಮೆಂಟಿನ ಮತ್ತು ಕರವೀರ ಸರಕಾರದ ಆಭಾರ ಮಾನಿಸಲ್ಪಟ್ಟು ಅನಂತರ ಆನಂದಪ್ರದರ್ಶಕವಾದ ತಾರು ಶ್ರೀಮನ್ ಶಾಹು ಛತ್ರಪತಿ ಕೊಲ್ಲಾಪುರ ಮಹಾರಾಜರಿಗೂ ಮತ್ತು ಮುಖ್ಯ ಮುಖ್ಯ ಸ್ಥಳಗಳಿಗೂ ಕಳುಹಲ್ಪಟ್ಟವು. ಇಲ್ಲಿ ಇನ್ನೂ ೩ ಮೊಕ್ಕಾಂಗಳಾಗಿ ಇಲ್ಲಿಂದ ಮಹಾಸ್ವಾಮಿಯು ಬಾಗಲಕೋಟೆ ಪ್ರಾಂತಕ್ಕೆ ಚಿತ್ತೈಸುತ್ತೆ. ಸದರಿ ಗಡಹಿಂಗ್ಲಾಜ ಶಹರದಲ್ಲಾದ ಅತ್ಯಾನಂದಪ್ರದಾಯಕ ಮಹೋತ್ಸವ ಸಂಬಂಧದ ಫೋಟೋಗಳನ್ನು ತರಿಸಿ ನೋಡಿದಲ್ಲಿ ಸರ್ವರಿಗೂ ವಿಶೇಷ ಆನಂದವಾಗುವುದಾದಕಾರಣ, ಕೊಲ್ಲಾಪುರ ಪ್ರೊಫೆಸರ್ ಜಿ. ವ್ಹಿ. ಜೇರಿಗೆ ಇವರಿಂದ ಸದರಿ ಫೋಟೋಗಳನ್ನು ತರಿಸಿ ನೋಡಿ ಸಮಸ್ತರೂ ಸಂತೋಷಬಡಬೇಕೆಂದು ಸೂಚಿಸುವ

ಓರ್ವ ಪ್ರತ್ಯಕ್ಷದರ್ಶಿ.

ಸಾವಳಗಿ ಸಂಸ್ಥಾನ ಜಮಖಂಡಿ.

ಹವೆಯಲ್ಲಿ ತಂಪು ಹೆಚ್ಚಿದೆ. ಮಳೆಯು ಪ್ರಾರಂಭವಾಗಿರುತ್ತದೆ. ರೋಗಾದಿಗಳೇನೂ ಇಲ್ಲ. ಇಲ್ಲಿ ತಾ॥ ೨೨-೬-೧೧ ದಿವಸ ಶ್ರೀ ಸೋಮೇಶ್ವರ ದೇವಾಲಯದ ಪಟಾಂಗಣದಲ್ಲಿ ಶ್ರೀಮನ್ಮಹಾರಾಜಾಧಿರಾಜ “ಕೇಸರ್-ಇ-ಹಿಂದ್” ಪಂಚಮ ಜಾರ್ಜ್ ಬಾದಶಹರ ಕಿರೀಟಧಾರಣ ಸಮಾರಂಭಕ್ಕಾಗಿ ಮೆ॥ ರಾ॥ ಸಾ॥ ತ್ರಿಂಬಕನಾರಾಯಣಪಾಳೆ ಮಾಮಲೆದಾರ ಸಾಹೇಬ ತಾ॥ ಸಾವಳಗಿ ಇವರ ಅಧ್ಯಕ್ಷತೆಯ ಕೆಳಗೆ ಪುರನಿವಾಸಿಗಳ ದೊಡ್ಡ ಸಭೆಯು ನೆರೆದಿತ್ತು. ಸಭಾಮಧ್ಯದಲ್ಲಿ ಟೇಬಲದ ಮೇಲೆ ಬಾದಶಹ, ಬಾದಶಹನಿಯವರ ಭಾವಚಿತ್ರವನ್ನಿಟ್ಟು ಪುಷ್ಪಮಾಲೆಗಳಿಂದ ಅಲಂಕರಿಸಿತ್ತು. ಭಜನಪೂಜಾದಿಗಳು ಬಹು ಭಕ್ತಿಯಿಂದ ಸಾಗಿದುವು. ರಾ॥ ರಾ॥ ಅಡಿವೆಪ್ಪ ಬಸವಪ್ಪ ಮುಧೋಳ ಹೆಡ್ಮಾಸ್ತರರವರು ಬಾದಶಹರ ಚರಿತ್ರವನ್ನು ಸರಸವಾದ ವಾಣಿಯಿಂದ ಕನ್ನಡದಲ್ಲಿಯೂ ಮಹಾರಾಷ್ಟ್ರದಲ್ಲಿಯೂ ವರ್ಣಿಸಿದರು. ಸಮಯೋಚಿತ ಸ್ವಕೃತ ಮಹಾರಾಷ್ಟ್ರ ಕವಿತೆಗಳನ್ನೂ, ರಾಜಗೀತವನ್ನೂ ವಿದ್ಯಾರ್ಥಿಗಳ ಮುಖದಿಂದ ಸರಸವಾಗಿ ಅನ್ನಿಸಿದರು. ಆಗ ಯಾವತ್ತು ಜನರು ಎದ್ದುನಿಂತು ಉತ್ಥಾಪನವನ್ನು ಕೊಟ್ಟರು. ಅಧ್ಯಕ್ಷಸಾಹೇಬರೂ ಬಾದಶಹ ರಾಣಿಯವರ ಗುಣಾತಿಶಯಗಳನ್ನು ಮರಾಠಿಯಲ್ಲಿ ಸರಸವಾಗಿ ಬಣ್ಣಿಸಿದರು. ಸಭೆಯು ಒಳ್ಳೇ ವಿಜೃಂಭಣೆಯಿಂದ ಸಾಗಿತು. ಕಡೆಗೆ ತಾಂಬೂಲ ಅತ್ತರ ಗುಲಾಬಾದಿಗಳಾಗಿ ಬಾದಶಹ ಬಾದಶಾಹಿನಿಯವರ ನಾಮದಿಂದ ತ್ರಿವಾರ ಜಯಘೋಷವಾಗಿ ಸಭೆಯು ವಿಸರ್ಜನಹೊಂದಿತು. ಇದರಂತೆ ಇಲ್ಲಿಯ ಭವ್ಯವಾದ ಶಾಲಾಮಂದಿರದಲ್ಲಿಯೂ ಸಭೆಗೂಡಿ ಬಾದಶಹ ಮಹಾರಾಣಿಯವರ ಆಯುರಾರೋಗ್ಯಾಭಿವೃದ್ಧಿಯನ್ನೂ ಕಲ್ಯಾಣವನ್ನೂ ಚಿಂತಿಸಿ ಬಾಲಕರಿಗೆ ಮಿಠಾಯಿಯನ್ನೂ ಹಂಚಿದರು. ಸನ್ಮಾನಿತರ ಸನ್ಮಾನ:— ಇಲ್ಲಿಯ ಮಹಾರಾಷ್ಟ್ರಶಾಲಾ ಹೆಡ್ಮಾಸ್ತರರಾದ ಮ॥ ರಾ॥ ರಾ॥ ಅಡಿವೆಪ್ಪ ಬಸಪ್ಪ ಮುಧೋಳ ಇವರಿಗೆ ಪೆನಷನವಾದ ನಿಮಿತ್ತ ಪುರನಿವಾಸಿಗಳೆಲ್ಲರೂ ಕೂಡಿ ಕಳೆದ ತಾ॥ ೩೦ ರಲ್ಲಿ ಪಾನಸುಪಾರಿ ಮಾಡಿದರು. ರಾ॥ಸಾ॥ ಮಾಮಲೆದಾರ ಸಾಹೇಬರ ಅಧ್ಯಕ್ಷತೆಯಲ್ಲಿ ವಿಸ್ತೀರ್ಣವಾದ ಶಾಲಾಮಂದಿರದಲ್ಲಿ ದೊಡ್ಡ ಸಭೆಯು ಕೂಡಿತ್ತು. ಸಭೆಗೆ ಪುರನಿವಾಸಿಗಳೆಲ್ಲರೂ ಬಂದಿದ್ದರು. ಅಂತ್ಯಜರೂ ಸಹ ಹಾಜರಿದ್ದರು. ಬಂಗಲೆಯ ವಿಸ್ತೀರ್ಣವು ಸಾಲದೆಹೋಗಿ ಪಟಾಂಗಣದಲ್ಲಿ ಸಹ ಬಹುಜನರು ಕುಂತಿದ್ದರು. ಇವರು ಈ ಪ್ರಾಂತಕ್ಕೇ ಹೆಸರೊಂದಿದ ಶಿಕ್ಷಕರಾಗಿಯೂ, ವಿದ್ಯದಲ್ಲಿ ಹಿಮ್ಮೆಟ್ಟಿದ ಎಲ್ಲ ಜಾತಿಯವರನ್ನು ಮುಂದೆ ತರುವುದರಲ್ಲಿ ಒಳ್ಳೇ ಧುರೀಣರಾಗಿಯೂ ಇದ್ದುದರಿಂದ ಇವರ ವಿಯೋಗಕಾಲಕ್ಕೆ ಎಲ್ಲಜಾತಿಯವರೂ ಕಣ್ಣೀರು ಸುರಿಸಿದರು. ಇವರ ಕೈಕೆಳಗೆ ಎಷ್ಟೋ ವಿದ್ಯಾರ್ಥಿಗಳು ತಯಾರಾಗಿರುತ್ತಾರೆ. ಇವರ ವಿದ್ಯಾರ್ಥಿಗಳಲ್ಲೀ ಎಷ್ಟೋ ಜನರು ಈ ಸಂಸ್ಥಾನದಲ್ಲಿ ನೌಕರರಾಗಿರುವರು. ಎಷ್ಟೋ ಜನ ಮಾಸ್ತರರಿರುವರು. ಇವರು ತಮ್ಮ ವೀರಶೈವ ಮತೋದ್ಧಾರಕ್ಕಾಗಿ ಹಗಲಿರುಳೂ ಯತ್ನಿಸುವರು. ಇವರಿಗೆ ಇಲ್ಲಿ “ಷಡ್ಗ್ರಾಮ ವಿದ್ಯಾಜನಕ” ರೆಂಬ ಬಿರುದುಂಟು. ಈ ತಾಲ್ಲೂಕಿನ ಬಹುತೇಕ ಹಳ್ಳಿಯ ಮಾಸ್ತರರು ಇವರ ವಿದ್ಯಾರ್ಥಿಗಳಾಗಿರುತ್ತಾರೆ. ಅಧ್ಯಕ್ಷರಾದ ರಾ॥ಸಾ॥ ಮಾಮಲೆದಾರ ಸಾಹೇಬರು ಇವರ ವಿದ್ವತ್ತೆಯನ್ನೂ ಸತತೋದ್ಯೋಗವನ್ನೂ, ಶಿಕ್ಷಣಾಸಕ್ತಿಯನ್ನೂ ಸರಸವಾಗಿ ವರ್ಣಿಸಿದರು. ಇವರ ಕೈಯಿಂದ ಬಾಲಕರಿಗೆ ಮಿಠಾಯಿಯು ಹಂಚಿದರು. ಆ ಕಾಲಕ್ಕೆ ಎಲ್ಲ ವಿದ್ಯಾರ್ಥಿಗಳು ಮಿಠಾಯಿಯನ್ನು ತೆಗೆದುಕೊಳ್ಳದೆ ತಮ್ಮ ಪರಮಪ್ರಿಯ ಗುರುಗಳ ಮುಖವನ್ನು ನೋಡಿ ಕಣ್ಣೀರು ಸುರಿಸಹತ್ತಿದರು. ಅದರಿಂದ ಯಾವತ್ತೂ ನೆರೆದ ಜನರಿಗೂ ದುಃಖವೆನಿಸಿತು. ಅಧ್ಯಕ್ಷ ಸಾಹೇಬರು ಸಮಾಧಾನವನ್ನು ಹೇಳಿ ವಿದ್ಯಾರ್ಥಿಗಳ ಕೈಯಿಂದ ಎಲೆಯಡಿಕೆಯನ್ನು ಮಾಸ್ತರರಿಗೆ ಕೊಡಿಸಿ ಪರಮದಯಾಳುಗಳಾದ ಶ್ರೀಮಂತ ಪರಶುರಾಮರಾವ ಭಾವು ಸಾಹೇಬ ಮಹಾರಾಜ ಸರಕಾರ ಜಮಖಂಡಿ ಇವರು ಹೆಸರಿನಿಂದ ತ್ರಿವಾರ ಜಯಘೋಷವನ್ನು ಮಾಡಿಸಿದರು. ಆಮೇಲೆ ೧ ನೇ ಅ॥ ಮಾಸ್ತರರಾದ ಕಲ್ಯಾಣಯಶವಂತ ಸಾನೆಯವರು ಅಧ್ಯಕ್ಷ ಸಾಹೇಬರ ಆಭಾರವನ್ನು ಮನ್ನಿಸಿ ಅವರ ಅಪ್ಪಣೆಯ ಮೇರೆಗೆ ಸಭಾವಿಸರ್ಜನ ಮಾಡಿಸಿದರು. ಇಂಥ ಸಭೆಯು ಇಲ್ಲಿ ನೆರೆದುದು ಅಪೂರ್ವವು. ಈ ಮಾಸ್ತರರು ಇಲ್ಲಿಗೆ ಬಂದು ಸುಮಾರು ೩-೪ ವರ್ಷಗಳಾದುವು. ಈ ಕಾಲಾವಧಿಯಲ್ಲಿ ಈ ಊರ ಶಾಲೆಯು ಮುಮ್ಮಡಿಯಾಗಿ ಬೆಳೆಯಿತು. ಮೊದಲು ಇಬ್ಬರು ಮಾಸ್ತರರು ೫೦-೬೦ ಹುಡುಗರು ೩-೪ ಇಯತ್ತೆಗಳೂ ಇದ್ದುವು. ಇವರು ಬಂದಂದಿನಿಂದ ಶಾಲೆಯು ಬೆಳೆಯುತ್ತ ಬೆಳೆಯುತ್ತ ಈಗ ೪ ಜನ ಮಾಸ್ತರರೂ, ೭ ಇಯತ್ತೆಗಳೂ, ೧೭೪ ವಿದ್ಯಾರ್ಥಿಗಳೂ ಇದ್ದು, ಪ್ರತಿವರ್ಷ ಹುಡುಗರು ಮುಲ್ಕಿ ಪರೀಕ್ಷೆಗೆ ವಿಜಾಪೂರ ಸೆಂಟರಕ್ಕೆ ಹೋಗುತ್ತಿರುತ್ತಾರೆ. ಆದರೆ ಪ್ರಾಂತಿಕ ಭಾಷೆಯೂ, ಪರೀಕ್ಷಾ ಸೆಂಟರದ ಭಾಷೆಯೂ ಕನ್ನಡವಿದ್ದು ಇಲ್ಲಿಯ ಶಾಲೆಯು ಮಹಾರಾಷ್ಟ್ರಭಾಷೆಯಲ್ಲಿರುವುದರಿಂದ ವಿದ್ಯಾರ್ಥಿಗಳಿಗೆ ಪಾಸಾಗಬೇಕಾದರೆ ಬಹಳ ಶ್ರಮವಾಗುತ್ತಿದೆ. ಅಸ್ತು. ಇವರ ಪಶ್ಚಾತ್ತಾದರೂ ಈಗಿನಂತೆ ಈ ಶಾಲೆಯು ಬೆಳೆಯಲೆಂದು ಚಿಂತಿಸಿ ಈ ಲೇಖನವನ್ನು ಮುಗಿಸುತ್ತೇನೆ.

ಓರ್ವ [illegible]

ಊದಬತ್ತಿಗಳು.

9

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦; ೨-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಬಹುಮಾನ! ಸುಸಮಯ!!

ಸೌದಾಮಿನಿ.

ಶೃಂಗಾರಾದಿ ರಸಭರಿತವಾಗಿಯೂ, ಧರ್ಮನೀತಿ ಬೋಧಕವಾಗಿಯೂ ಇರುವ ಮನೋಹರವಾದ ಪುಸ್ತಕದ ಬೆಲೆ ೦-೩-೩ ಆಣೆ. ಗೌರೀಹಬ್ಬದೊಳಗಾಗಿ ತರಿಸುವ “ಸ್ಟಾರ್” ಚಂದಾದಾರರಿಗೆ ಎರಡಾಣೆ ಮಾತ್ರ. ಗ್ರಾಹಕರಿಗೆ ಒಂದಾಣೆಯ ಪುಸ್ತಕ ಒಂದು ಬಹುಮಾನ ಅಂಚೆವೆಚ್ಚ ಬೇರೆ “ಸಾಹಸಿಕೆ” ಮನೋಹರವಾದ ನಾವಿಲ್ ೦-೨-೬.

ವಿಳಾಸ:— ಸಿ. ವಿ. ಶಾಸ್ತ್ರಿ, ಚಾಮರಾಜನಗರ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

3 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಭವಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ.

---

೩೦ ಕಥೆಗಳು. ಸಚಿತ್ರ. ೩೧೨ ಪುಟಗಳು

ಸಚಿತ್ರ ಶುಕಸಪ್ತತಿಕಥೆ.

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವುದು. (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಇದು ಅಲ್ಲದೆ ಇನ್ನೂ ಇತರವಿಧವಾದ ಕಥೆಗಳು ಕಾವ್ಯಗಳು ಪುರಾಣಗಳು ಮುಂತಾದ ಪುಸ್ತಕಗಳು ಸಹ ನಮ್ಮಲ್ಲಿ ದೊರೆಯುತ್ತೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ನಮ್ಮವಿಳಾಸ:— ಎಂ. ಆರ್., ಕೃಷ್ಣಸ್ವಾಮಿಶೆಟ್ಟಿ ಕಂಪೆನಿ. ೧೫೪ ಗೋವಿಂದಪ್ಪನಾಯಕ್ ಬೀದಿ ಮದ್ರಾಸು.

---

14 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ.

ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಯಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾತಗಾಂವ್ಕರ, ಮರ್ಚಂಟ್.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi. North Kanara District.

ಪಾಳ್ಯದ ವೆಂಕಟಾಚಲ ಪಂಡಿತರ ಪ್ರಸಿದ್ಧೌಷಧಗಳು.

14

ಲೋಕಾಮಯಹರ ಕಸ್ತೂರಿ ಮಾತ್ರೆ.— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ, ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರಗಳನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪುಂಡುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರತ್ಯ, ಹಲ್ಲುಗಳ ಪಾಚಿ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. [illegible] ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗಿದ್ದೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಅ. ೮. ವಿರಳದಿಂದ ಟಪಾಲ್ ಖರ್ಚು ೪ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ [illegible]
[illegible] ವೈದ್ಯಶಾಲಾ, ಮೈಸೂರು.

12 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರುಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪುಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ROSKOPF SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 2-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ· 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೋಟರ್‌ರೆಗ್ಯುಲೇಟರ್ ಲೀವರ್ ಜೂವೆಲ್ಡು ವಾಚ್.

MOTORREGULATOR
LEVER
SWISS MADE

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚೆಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಷ್ಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ಮೋನಿಯಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಛಾರ್ಜು ರೂ· 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:— ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:— ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣಾ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

24 ಉತ್ತಮ ಗ್ರಂಥಗಳು.

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.— ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.— ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮೆಸಿ, ದೊಡ್ಡ ಗಡಿಯಾರದ ಚೌಕ
49 ಮೈಸೂರು.

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೩-೦.

ಮಲಶೋಧನ ವಟಿಕಾ.— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೧ನೇ ಇಸವಿ ಜುಲೈ ತಾ॥ ೧೭ರಿಂದ ೧೯೧೧ನೇ ಜುಲೈ ತಾ॥ ೨೩ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಆಷಾಢ ಬ॥ ಷಷ್ಠಿಯಿಂದ ಆಷಾಢ ಬ॥ ದ್ವಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ ತೇದಿ
17	¹ಸೋ	ಷ	36-53	ಉತ್ತ	52-19	2
18	²ಮಂಗ	ಸ	34-26	ರೇ	51-4	3
19	ಬುಧ	ಅ	29-19	ಶ್ವಿ	48-17	4
20	ಗುರು	ನ	24-37	ಭ	45-47	5
21	³ಶುಕ್ರ	ದ	19-3	ಕೃ	42-17	6
22	ಶನಿ	ಏ	13-26	ರೋ	38-12	7
23	³ಭಾನು	ದ್ವಾ	7-22	ಮೃ	34-21	8

(1) ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿ ಉತ್ಸವ
(2) ಚಾಮುಂಡೇಶ್ವರೀ ಜನ್ಮೋತ್ಸವ, ಆದಿಶುಕ್ರವಾರ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸೆ ೧೯೧೧ ನೇ ಇಸವಿ ಜುಲೈ ತಾರೀಖು ೨೪ ನೇ ಸೋಮವಾರ. [ಸಂಚಿಕೆ ೩೦

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಡೆನ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರಿಗೆ ೧-೧೦-೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

9

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪)ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮)ಕಥಾಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದದಿಲ್ಲೆ, ಪ್ಲೇಗ್, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಪಟಗಳು; ದೊರೆಯುತ್ತವೆ.

(ಕ್ಯಾಟಲಾಗ್) ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ— ಬಿಜಾಪುರ್‌ಕರ್ ಕಂಪೆನಿ, ಬೆಂಗಳೂರು ಸಿಟಿ.

ಊದಬತ್ತಿಗಳು.

20

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦ ; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

"ಅಗತ್ಯ ವಿಚಾರ."

8

ಬೆಲೆ ೪॥ ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗತ್ಯವಿಚಾರ"ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೨ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು ! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ :— ವೀರಭದ್ರಪ್ಪ ಆರುಬೆರಳನ,
ಪೋಸ್ಟ್— ಬಾಗೇವಾಡಿ. ಡಿ॥ ಬೆಳಗಾಂವ.

ಉತ್ತಮ ಗ್ರಂಥಗಳು.

128

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.
ಶಂಕರಲಿಂಗಶತಕಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕರ ಮಂಡಳಿ, ಮೈಸೂರು.

ಇಲ್ಲಿನೋಡಿ ವಿಶೇಷಸೂಚನೆಗಳು !

11 ಕಾಶೀವಿಶ್ವೇಶ್ವರಪ್ರಸನ್ನ.

KASHI VISHWESHWAR S.N.U. & Co BENARES CITY

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ !

ತಾವು ನಿತ್ಯವು ಪುಡುವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ಸ್ಟೈಲ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು !

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ !!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪದಗಳು, ವಗೈರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟ್ಯಾಂಪು ಕಳಿಹಿಸಿದಲ್ಲಿ, ೧ ಕ್ಯಾಟಲಾಗ್ ೪ ಸಾದಾ ಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರಸ್ ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯಿಸುವ ವಿಳಾಸಕ್ಕೆ ಕಳಿಹಿಸಲಾಗುತ್ತದೆ. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಕ್ಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—
ಯಸ್. ಉಡುಪಿನಾರಾಯಣಾಚಾರ್ಯ ಅಂಡ್ ಕೊಂ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.
S. Udipi Narayanacharya & Co.
Benares City.

ಸೌಗಂಧಿಕಾಪರಿಣಯ.

:0:

(ಕಳೆದವಾರದಶೇಷ.)

ಮತ್ತೂ ಉತ್ತಮ ಮಧ್ಯಮವು ಹೇಳಲ್ಪಡುವುವು. ಬ್ರಹ್ಮ, ರುದ್ರ, ಇಂದ್ರ, ಕುಬೇರ, ಯಮ, ಗಂಧರ್ವ, ವರುಣ ಇವರುಗಳಿಗೆ ಯೋಗ್ಯವಾದ ಸ್ವಭಾವವುಳ್ಳವಾಗಿ, ದೇವಸತ್ವಗಳೆಂದು ಪ್ರಸಿದ್ಧಂಗಳಾದ ಅಶ್ವಗಳು ಉತ್ತಮಾಶ್ವಂಗಳು. ರಾಕ್ಷಸಾಸುರ ಪಿಶಾಚ ಪಿತೃದೇವತೆಗಳು, ಸರ್ಪಗಳು, ಪಕ್ಷಿಗಳು ಇವುಗಳ ಸ್ವಭಾವವುಳ್ಳವಾಗಿ, ಹೀನಸತ್ವಗಳೆಂದು ಪ್ರಸಿದ್ಧಗಳಾದ ಅಶ್ವಗಳು ಮಧ್ಯಮಾಶ್ವಗಳು. ದೇವಸತ್ವ, ಹೀನಸತ್ವಗಳ ಲಕ್ಷಣಗಳಂ ಪೇಳುವೆನು.– ಶುಭ್ರಾದಿ ವರ್ಣಗಳು, ಶುಚಿವಾದ ಸುಳಿಗಳು, ಮೃದುವಾದ ಸ್ವರಗಳು, ಶುಭವಾದ ಗಮನವು ಇವುಗಳಿಂ ಕೂಡಿ, ಒಳ್ಳೇ ಸ್ವಭಾವವುಳ್ಳವಾಗಿ, ಸ್ವೇದಾದಿಗಳಲ್ಲಿ ಸುಗಂಧವುಳ್ಳವಾಗಿ, ಶುಚಿತ್ವ, ಸದಾಚಾರ, ಸತ್ಕುಲಪ್ರಸೂತಿ ವಿನಯಗಳಿಂ ಕೂಡಿದ ಅಶ್ವಗಳು ದೇವಸತ್ವಗಳು. ಗಂಧರ್ವರು, ರಾಕ್ಷಸರು, ಋಷಿಗಳು, ಯತಿಗಳು ಇವರಿಗೆ ಯೋಗ್ಯವಾದ ಸ್ವಭಾವವುಳ್ಳವಾಗಿರುವುವು ಪ್ರಶಸ್ತಂಗಳು. ಅಶುಚಿಯಲ್ಲಿಯೂ ಕಲಹದಲ್ಲಿಯೂ ಆಸಕ್ತಂಗಳಾದ ಅಶ್ವಗಳು ಹೀನಸತ್ವಂಗಳು. ಎಲೈ ಸುಗಂಧರಾಯನೆ! ಈವರೆಗೆ ಅಶ್ವಗಳ ಜಾತಿ ಮೊದಲಾಗಿ ಸ್ವಭಾವವವರೆಗೂ ವಿಶಿಷ್ಟವೂ ವಿಶದವಾಗಿ ಹೇಳಲ್ಪಟ್ಟಿತು. ಇನ್ನುಮೇಲೆ ಈ ಕುದುರೆಗಳಲ್ಲಿರುವ ಸುಳಿಗಳ ವಿವರಗಳಂ, ಇದರಿಂದಾಗುವ ಶುಭಾಶುಭ ಫಲಂಗಳಂ ಕೂಡ ಪೇಳುವೆನು. ಸಾವಧಾನವಾಗಿ ಕೇಳುವವನಾಗು.– ಗರ್ಭಸ್ಥವಾಗಿ ಶಿಶುವಾಗಿರುವ ಅಶ್ವಗಳ ರೋಮಗಳಂ ಗರ್ಭದಲ್ಲಿ ಅತಿವೇಗದಿಂ ಸಂಚರಿಸುವ ವಾಯುವು ಚಕ್ರಾಕಾರವಾಗಿ ಸುತ್ತಿಸುವುದು. ಇವೇ ಅಶ್ವಂಗಳಲ್ಲಿ ವರ್ತಂಗಳಾಗುವುವು. ಈ ಸುಳಿಗಳಿಗೆ ಆವರ್ತವೆಂದೂ, ಶತಪದೀಯೆಂದೂ, ಶುಕ್ತಿಯೆಂದೂ, ಅವಲೀಢವೆಂದೂ, ಪಾದುಕವೆಂದೂ, ಪಾದುಕಾರ್ಧವೆಂದೂ, ಸಮೂಹವೆಂದೂ ಮುಕುಳವೆಂದೂ ಈ ಎಂಟು ವಿಧವಾದ ಹೆಸರು ಉಂಟಾಗಿ ಆ ಯಾ ಆಕಾರಜಲದಲ್ಲಿರುವ ಸುಳಿಗಳಿಗೆ ಸಮಾನವಾದ ಆಕಾರವುಳ್ಳದ್ದಾಗಿರುವುದೋ, ಆ ಸುಳಿಯು ಆವರ್ತವೆನಿಸಿಕೊಳ್ಳುವುದು. ಜರಿಗೆ ಸಮಾನವಾದದ್ದು ಶತಪದಿಯೆನಿಸುವುದು. ಕಪ್ಪೇಚಿಪ್ಪಿಗೆ ಸಮಾನವಾದ ಸುಳಿಯು ಶುಕ್ತಿಯೆನಿಸಿಕೊಳ್ಳುವುದು. (ಕರುವಿನಿಂದ ನೆಕ್ಕಲ್ಪಟ್ಟ ಹಸುವಿನ ಶರೀರದ ರೋಮಗಳಂತಿರುವ ಸುಳಿಯು ಅವಲೀಢವೆನಿಸಿಕೊಳ್ಳುವುದು. ಪಾವಿಗೆ ಸಮಾನವಾದ ಸುಳಿಯು ಪಾದುಕವೆನಿಸಿಕೊಳ್ಳುವುದು. ಅರ್ಧಪಾದುಕೆಗೆ ಸಮಾನವಾದ ಸುಳಿಯು ಪಾದುಕಾರ್ಧವೆನಿಸಿಕೊಳ್ಳುವುದು. ಹುವ್ವಿನ ಮೊಗ್ಗುಗಳಿಗೆ ಸಮಾನವಾದ ಸುಳಿಯು ಮುಕುಳವೆನ್ನಿಸಿಕೊಳ್ಳುವುದು. ಈ ಸುಳಿಗಳಲ್ಲಿ ಎರಡಾಗಲಿ, ಅನೇಕಗಳಾಗಲಿ ಒಟ್ಟಿಗೆ ಗುಂಪಾಗಿ ಕೂಡಿದ್ದರೆ ಆ ಸುಳಿಯು ಸಮೂಹವೆನಿಸಿಕೊಳ್ಳುವುದು. ಈ ಆವರ್ತಾದಿ ಸುಳಿಗಳಿಗಿಂತಲೂ ಇತರಗಳಾದ ಸುಳಿಗಳು ಕಾಣಲ್ಪಟ್ಟರೆ, ಆ ಸುಳಿಗಳಿಗೂ ಕೂಡ ಸ್ಥಾನವಿಶೇಷಂಗಳಿಂದಲೂ, ಆಕಾರಂಗಳಿಂದಲೂ ಶುಭಾಶುಭಫಲಂಗಳುಂಟಾಗುವುವು. ಇವುಗಳ ಪ್ರಮಾಣಂಗಳಂ ಪೇಳುವೆನು.– ಆವರ್ತವೆಂಬ ಸುಳಿಯು ಅಂಗುಳ ತ್ರಿಭಾಗದಲ್ಲಿ ಒಂದುಭಾಗದ ಪ್ರಮಾಣವುಳ್ಳದ್ದು. ಶತಪದೀ ಎಂಬ ಸುಳಿಯು ಒಂದೂವರೆ ಅಂಗುಲ ಪ್ರಮಾಣವುಳ್ಳದ್ದು. ಶಕ್ತೀ ಎಂಬ ಸುಳಿಯು ಮೂರುವರೆ ಅಂಗುಲ ಪ್ರಮಾಣವುಳ್ಳದ್ದು. ಅವಲೀಢವೆಂಬ ಸುಳಿಯು ಅಂಗುಲತ್ರಯಪರಿಮಿತವಾಗಿರುವುದು. ಮುಕುಳವೆಂಬ ಸುಳಿಯು ಅಂಗುಲದ ನಾಲ್ಕುಭಾಗದಲ್ಲೊಂದುಭಾಗ ಪ್ರಮಾಣವುಳ್ಳದ್ದು. ಪಾದುಕವೆಂಬ ಸುಳಿಯು ಹನ್ನೆರಡು ಎವೆಗಳಿಗೆ ಸಪ್ರಮಾಣವುಳ್ಳದ್ದು. ಪಾದುಕಾರ್ಧವೆಂಬ ಸುಳಿಯು ಆರು ಎವೆಗಳಿಗೆ ಸಮಾನವಾಗಿರುವುದು. ಸಮೂಹವೆಂಬ ಸುಳಿಯು ಅರ್ಧಾಂಗುಲ ಪ್ರಮಾಣವುಳ್ಳುವಾಗಿರುವುದು. ಈ ರೀತಿ ಅಶ್ವಗಳ ದೇಹದಲ್ಲಿ ಪುಟ್ಟಿರುವ ಸುಳಿಗಳು ತಮ್ಮತಮ್ಮ ಸ್ಥಾನಗಳಲ್ಲಿ ಈ ಲಕ್ಷಣಗಳಿಂದ ಯುಕ್ತಗಳಾಗಿ ಸ್ಫುಟಗಳಾಗಿ ಪ್ರದಕ್ಷಿಣಾಕಾರಂಗಳಾಗಿದ್ದರೆ ಆ ಸುಳಿಗಳು ರಕ್ಷಕರಿಗೆ ಶುಭವಂ ಕೊಡುವುವು. ಸ್ಥಾನಚ್ಯುತವೆಂದೂ, ವಿವರ್ಣವೆಂದೂ, ದುಸ್ಥಿತವೆಂದೂ, ತಿರ್ಯಗಾಯತವೆಂದೂ, ವಿನ್ಯಸ್ತವೆಂದೂ, ವಿನಿಗೂಢವೆಂದೂ ಛಿನ್ನಾಕಾರವೆಂದೂ, ಚಿಮವೆಂದೂ, ಮಹತ್ತೆಂದೂ ವಾಮಭಾಗದಲ್ಲಿ ಪ್ರದಕ್ಷಿಣಾಕಾರವಾದುದು. ದಕ್ಷಿಣಭಾಗದಲ್ಲಿ ಅಪಸವ್ಯವಾದ ಸುಳಿಯುಕೂಡ ನಿಷಿದ್ಧಂಗಳೆಂದು ಹೇಳಲ್ಪಡುವುವು. ಇವು ಅಶುಭವಂ ಕೊಡುವುವು. ಇವುಗಳಲ್ಲಿ ಯಾವ ಸುಳಿಯು ಇರತಕ್ಕ ಸ್ಥಾನವಂ ಬಿಟ್ಟು ಹೊರಬಿದ್ದಾಗಿರುವುದೋ ಆ ಸುಳಿಯು ಸ್ಥಾನಚ್ಯುತವೆನಿಸಿಕೊಳ್ಳುವುದು. ಯಾವ ಸುಳಿಯು ಸ್ವಲ್ಪಕಾಣುತ ಚೆನ್ನಾಗಿ ಕಾಣದೆ ಇರುವುದೋ, ಅದು ದುಸ್ಥವೆನಿಸಿಕೊಳ್ಳುವುದು. ಇವುಗಳಿಂದ ರಕ್ಷಕನಿಗೆ ವ್ಯಸನವುಂಟಾಗುವುದು. ಸುಳಿಯು ಅರ್ಧವಾಗಿ ಉದ್ದವಾಗಿದ್ದರೆ ರಾಜ್ಯಹಾನಿಭಯವುಂಟಾಗುವುದು. ವಿವರ್ಣಂಗಳಾಗಿ, ವಿಷಮಂಗಳಾಗಿ, ಸ್ಥೂಲಂಗಳಾಗಿ, ಉನ್ನತಂಗಳಾಗಿ, ಸವ್ಯಾಪಸವ್ಯಂಗಳಾಗಿ, ಚಿತ್ರವರ್ಣಂಗಳಾದ ಕೂದಲುಗಳಿಂದ ಅತ್ಯಂತ ಗುಂಪಾದಂತಿರುವ ಸುಳಿಯು ವಿನ್ಯಸ್ತವೆನಿಸಿಕೊಳ್ಳುವುದು. ಆ ಸುಳಿಯು ರಕ್ಷಣೆಯಂ ಮಾಡುವವರ ಆಯುಸ್ಸಂ ಧನವಂ ಸಹಾ ಅಪಹರಿಸುವುದು. ಯಾವ ಸುಳಿಯ ಸ್ಥಿತಿಯು ಕಾಣಲ್ಪಡುವುದಿಲ್ಲವೋ ಅದು ವಿನಿಗೂಢವೆನಿಸಿಕೊಳ್ಳುವುದು. ಆ ಸುಳಿಯಿಂದ ರಕ್ಷಕನು ಮೂಢನಾಗುವನು. ರೋಮಗಳಲ್ಲಿ ಇಬ್ಭಾಗವಾಗಿರುವ ಸುಳಿಯು ಛಿನ್ನಾಕಾರವೆನಿಸಿಕೊಳ್ಳುವುದು. ಆ ಸುಳಿಯು ಶೀಘ್ರವಾಗಿ ತನ್ನ ಸ್ವಾಮಿಗೆ ಶಿರಚ್ಛೇದವಂ ಉಂಟುಮಾಡುವುದು. ಸ್ವಲ್ಪಪ್ರಮಾಣವುಳ್ಳ ಸುಳಿಯು ಚಿಮವೆನಿಸಿಕೊಳ್ಳುವುದು ಅದು ಸ್ವಾಮಿಯ ಬಲವಂ ಅಪಹರಿಸುವುದು. ಯಾವ ಸುಳಿಯು ಅಧಿಕಪ್ರಮಾಣವಾಗಿರುವುದೋ ಅದು ಮಹತ್ತೆನಿಸಿಕೊಳ್ಳುವುದು. ಅದು ಸ್ವಾಮಿಗೆ ವ್ಯಸನವಂ ಕೊಡುವುದು. ವಾಮಭಾಗದಲ್ಲಿ ಪ್ರದಕ್ಷಿಣವಾಗಿರುವ ಸುಳಿಯೂ, ದಕ್ಷಿಣಭಾಗದಲ್ಲಿ ಅಪ್ರದಕ್ಷಿಣವಾಗಿರುವ ಸುಳಿಯೂ ಕೂಡ ಸ್ವಾಮಿಗೆ ಸ್ಥಾನಭ್ರಂಶವಂ ಶತ್ರುವೃದ್ಧಿಯಂ ಕೂಡ ಉಂಟುಮಾಡುವುದು. ನಿಷಿದ್ಧಸ್ಥಾನಂಗಳಲ್ಲಿ ನಿಂದಿತಂಗಳಾದ ಸುಳಿಗಳು ಅತಿ ಕಷ್ಟವಂ ಕೊಡುವುವು. ಉತ್ಕೃಷ್ಟಸ್ಥಾನಂಗಳಲ್ಲಿ ಪ್ರಶಸ್ತಂಗಳಾದ ಸುಳಿಗಳು ಸಂಪೂರ್ಣಫಲಂಗಳಂ ಕೊಡುವುವು. ಪ್ರಶಸ್ತಂಗಳಾದ ಸ್ಥಾನಂಗಳಲ್ಲಿರುವ ನಿಂದಿತಂಗಳಾದ ಸುಳಿಗಳೂ ನಿಂದಿತವಾದ ಸ್ಥಾನಂಗಳಲ್ಲಿರುವ ಪ್ರಶಸ್ತವಾದ ಸುಳಿಗಳೂ ಶುಭಾಶುಭಮಿಶ್ರಫಲಗಳಂ ಕೊಡುವುವು. ಶುಭಾಶುಭಮಿಶ್ರವಾದ ಸುಳಿಗಳಲ್ಲಿ ಯಾವುದು ಅಧಿಕವಾಗಿ ಕಾಣುವುದೋ ಅದಂ ಅನುಸರಿಸಿ ಫಲವಂ ತಿಳಿಯಬೇಕೆಂದು ಪೂರ್ವ ವಿದ್ವಾಂಸರು ಪೇಳುವರು. ಇನ್ನು ದಶಧ್ರುವಗಳ ವಿವರವಂ ಪೇಳುವೆನು. ದಶಧ್ರುವವೆಂಬ ಆವರ್ತ ಹತ್ತುಪ್ರಕಾರವಾಗಿರುವುದು. ಸ್ವಸ್ಥಾನಂಗಳಲ್ಲಿರುವುವೂ, ಸ್ಥಾನವಂ ಬಿಟ್ಟಿರುವುವೂ ಸಹಿತವಾಗಿ ನಿರೂಪಿಸಲ್ಪಡುತಲಿವೆ.– ಮುಸುಡಿಯ ಸಮೀಪದಲ್ಲಿ ಒಂದು ಸುಳಿಯೂ, ಲಲಾಟದಲ್ಲಿ ಒಂದು ಸುಳಿಯೂ, ಶಿರಸ್ಸಿನಲ್ಲಿ ಎರಡು ಸುಳಿಯೂ, ಎದೆಯಲ್ಲಿ ಎರಡು ಸುಳಿಯೂ, ಒಂದೊಂದು ಪಾರ್ಶ್ವದಲ್ಲಿ ಒಂದೊಂದು ಸುಳಿಗಳೂ, ಕಿಬ್ಬೊಟ್ಟೆಯ ಉಭಯಪಾರ್ಶ್ವದಲ್ಲಿ ಎರಡು ಸುಳಿಗಳೂ ಈ ಸ್ಥಾನಗಳ ಸುಳಿಗಳೇ ದಶಧ್ರುವಗಳೆನಿಸಿಕೊಳ್ಳುವುವು. ಮುಖದಲ್ಲಿ ದಕ್ಷಿಣಭಾಗವನ್ನಾದರೂ, ಮಧ್ಯಮಭಾಗವನ್ನಾದರೂ ಅಶ್ರಯಿಸಿ ಪ್ರದಕ್ಷಿಣಾಕಾರಗಳಾಗಿ ಎರಡು ಸುಳಿಗಳಿದ್ದರೆ ಧನಸೌಭಾಗ್ಯವುಂಟಾಗುವುದು. ಅಪಾನಸ್ಥಾನದಲ್ಲಿ ವಾಮಭಾಗವನ್ನಾಶ್ರಯಿಸಿರುವ ಸುಳಿಯು ಧನನಾಶಕವಾಗುವುದು. ಹುಬ್ಬುಗಳ ಕೊನೆಯಲ್ಲಾದರೂ, ಮಧ್ಯದಲ್ಲಿ ದಕ್ಷಿಣಭಾಗದಲ್ಲಿ ಊರ್ಧ್ವಭಾಗದಲ್ಲಾದರೂ ಇರುವ ಸುಳಿಯು ಧನವಂ ಅಪಹರಿಸುವುದು.

(ಸಶೇಷ.)

ಗ್ರಾಮದ ಪಂಚಾಯಿತಿ ಸಂಘ.

ದೇವರ ದಯದಿಂದ ಇಂಗ್ಲೀಷರು ನಮ್ಮನ್ನು ಆಳುವುದಕ್ಕೆ ಪ್ರಾರಂಭವಾದ ಲಾಗಾಯ್ತು, ಮುಖ್ಯವಾಗಿ ಕಳೆದ ಸುಮಾರು ನೂರುವರುಷಗಳಿಂದೀಚೆಗೆ ನಮ್ಮ ದೇಶದಲ್ಲೆಲ್ಲಾ ಶಾಂತತೆಯು ನೆಲೆಗೊಂಡಿದೆ. ನಮ್ಮ ಪೂರ್ವಿಕರಿಗಿದ್ದಂತೆ ನಮಗೆ ಕಳ್ಳಕಾಕರ ಭಯವಿಲ್ಲ. ಹೊರದೇಶದಿಂದ ಬರತಕ್ಕ ಶತ್ರುಗಳ ಭಯವಿಲ್ಲ. ಇಂಥಾ ಯಾವ ತೊಂದರೆಗೂ ಅವಕಾಶವಿಲ್ಲದಂತೆ ದಯಾಳುಗಳಾದ ಇಂಗ್ಲೀಷು ಸರ್ಕಾರದವರು ನಮ್ಮನ್ನು ಕಾಪಾಡುವ ಭಾರವನ್ನು ವಹಿಸಿಕೊಂಡಿದ್ದಾರೆ. ಆದುದರಿಂದ ನಮ್ಮ ಕೆಲಸಗಳಿಗೆ ಮುಖ್ಯವಾಗಿ ನಮ್ಮ ಏಳಿಗೆಗೆ ಬೇಕಾದ ಕೆಲಸಗಳನ್ನೆಲ್ಲಾ ಮಾಡಿಕೊಳ್ಳುವುದಕ್ಕೆ ನಮಗೆ ಒಳ್ಳೇ ಅವಕಾಶವು ದೊರೆತಿರುವುದು. ಆತ್ಮ ವಿಚಾರದಲ್ಲೂ ಮತ್ತು ಸಮಾಜದ ಏಳಿಗೆ ವಿಷಯದಲ್ಲೂ ನಾವುಗಳು ನಡುಕಟ್ಟಿ ನಿಂತು ಕೆಲಸಮಾಡಬೇಕಾದುದು ಈಗಲ್ಲದೆ ಮತ್ತಾವಾಗ? ಈಗಲೇ ಅಭಿವೃದ್ಧಿ ಹೊಂದಲು ಕೆಲಸಮಾಡಲು ಬೇಕಾದ ಸಾಮಗ್ರಿಗಳೂ, ಮತ್ತು ಉತ್ಸಾಹದಿಂದ ಕೆಲಸಮಾಡತಕ್ಕವರೂ ಎಲ್ಲರೂ ಸಿದ್ಧರಾಗಿರುವರು. ಆದರೆ ಇದಕ್ಕೆ ಒಂದು ದೊಡ್ಡ ಅಡಚಣೆಯು ಬಂದೊದಗಿರುವುದು. ಅದಾವುದೆಂದರೆ– ವ್ಯವಹಾರಮಾಡುವುದು. ಧನವಂತರೂ, ವಿದ್ಯಾವಂತರೂ, ಮೂಢರಾದ ರೈತರೂ ಮತ್ತೂ ವ್ಯಾಪಾರಗಾರರೂ ಎಲ್ಲರೂ ಅಲ್ಪವಿಷಯಗಳಿಗೆಲ್ಲಾ ಕೋರ್ಟು ಕಚೇರಿ ಹತ್ತಿ ಕೈಯಲ್ಲಿದ್ದ ಬಂಡವಾಳವನ್ನೆಲ್ಲಾ ಕಳೆದುಕೊಂಡು ಸಾಲಗಾರರಾಗಿ ಮನೆ ಹಾಳುಮಾಡಿಕೊಂಡಿರುವುದನ್ನು ಯಾರುತಾನೇ ನೋಡಿಲ್ಲ? ಪಿತ್ರಾರ್ಜಿತವಾದ ಆಸ್ತಿಯ ಹಂಚಿಕೆಯ ವಿಷಯದಲ್ಲಿ ಅಣ್ಣತಮ್ಮಂದಿರೂ ಮತ್ತು ತಂದೆ ಮಕ್ಕಳೂ ವಿವಾದಮಾಡಿ ಕೋರ್ಟಿಗೆ ಹೋಗಿ ಆಸ್ತಿಯನ್ನೆಲ್ಲಾ ಹಾಳುಮಾಡಿಕೊಂಡು ಜತೆಗೆ ಸಾಲವನ್ನು ಮಾಡಿ ಉಣ್ಣುವುದಕ್ಕೆ ಅನ್ನವೂ, ಉಡುವುದಕ್ಕೆ ಬಟ್ಟೆಯೂ ಇಲ್ಲದೆ ನಿರ್ಗತಿಕರಾಗಿರುವುದನ್ನು ಕಣ್ಣಾರ ನೋಡಿದ್ದೇನೆ. ಬಡ ರೈತರೂ ಇದೇ ರೀತಿಯಲ್ಲಿ ವಿವಾದಕ್ಕೆ ಕೈಹಾಕಿ ಮಳೆಬೆಳೆಗಳು ಚೆನ್ನಾಗಿ ಆದ ಸುಭಿಕ್ಷ ಕಾಲದಲ್ಲಿ ಕೂಡಿಟ್ಟ ಹಣಕಾಸುಗಳನ್ನು ಕಳೆದುಕೊಂಡು ತಮಗೆ ಸರಿಸಮಾನರಾಗಿದ್ದ ಪರ ಜನಗಳಲ್ಲಿ ಜೀತಮಾಡುತ್ತಿರುವರು. ಈ ಗಂಡಾಂತರವನ್ನು ನಿವಾರಣೆ ಮಾಡುವುದಕ್ಕಾಗಿ ಸರ್ಕಾರದವರು ಆಗಾಗ್ಗೆ ಬಹಳ ಪ್ರಯತ್ನಪಟ್ಟಿರುವರು. ಆದರೆ ಪ್ರಜೆಗಳು ಇದನ್ನು ಮನಸ್ಸಿಗೆ ತಂದುಕೊಂಡು ಸರ್ಕಾರದವರೊಡನೆ ಕಲೆತು ಕೆಲಸಮಾಡದೆ ಇದ್ದ ಕಾರಣ ಸರ್ಕಾರದವರ ಪ್ರಯತ್ನವೆಲ್ಲಾ ವ್ಯರ್ಥವಾದವು. ಆದರೂ ಸರ್ಕಾರದವರು ಧೈರ್ಯಗುಂದದೆ ಈ ವಿಷಯದಲ್ಲಿ ತುಂಬಾ ಮುತುವರ್ಜಿಯಿಂದ ಅನೇಕ ಕೆಲಸಗಳನ್ನು ಮಾಡುತ್ತಿರುವರು. ಇವುಗಳಲ್ಲಿ, ಪೂರ್ವದಲ್ಲಿ ನಮ್ಮ ಹಳ್ಳಿಗಳಲ್ಲೆಲ್ಲಾ ಪ್ರಚಾರದಲ್ಲಿದ್ದು ಈಚೆಗೆ ನಮ್ಮಿಂದ ತ್ಯಜಿಸಲ್ಪಟ್ಟಿದ್ದ ಗ್ರಾಮಪಂಚಾಯಿತಿ ಸಂಘಗಳನ್ನು ಏರ್ಪಾಟು ಮಾಡುವುದು ಒಂದಾಗಿದೆ. ಇಂಥ ಸಂಘಗಳನ್ನು ಸ್ಥಾಪಿಸಲು ಈ ಕೆಳಗೆ ಸೂಚಿಸತಕ್ಕ ಕೆಲವು ಸಲಹೆಗಳು ಬಹಳ ಸಹಾಯಕರವಾಗಿವೆ:—

(೧) ಪ್ರತಿಗ್ರಾಮದಲ್ಲಿಯೂ ಗ್ರಾಮಪಂಚಾಯಿತಿ ಸಭೆ (Village Arbitration Board) ಎಂಬುದಾಗಿ ಒಂದು ಸಭೆಯಿರತಕ್ಕದ್ದು. ಪ್ರತಿಸಭೆಯಲ್ಲಿಯೂ ಮೂವರಿಗೆ ಕಡಿಮೆಯಿಲ್ಲದೆ ಏಳು ಜನಗಳಿಗಿಂತ ಜಾಸ್ತಿಯಿಲ್ಲದೆ ಮೆಂಬರುಗಳು ಇರಬೇಕು. ವರ್ಷಕ್ಕೆ ಒಂದಾವೃತ್ತಿ ಗ್ರಾಮಸ್ಥರೆಲ್ಲರೂ ಸಭೆಸೇರಿ ಈ ಮೆಂಬರುಗಳನ್ನು ಚುನಾಯಿಸತಕ್ಕದ್ದು. ಪಂಚಾಯಿತರಿಂದ ತೀರ್ಮಾನಿಸಲ್ಪಡಬಹುದಾದ ಗ್ರಾಮದ ಕೆಲವು ಸಿವಿಲ್ ಮೊಕದ್ದಮ್ಮೆಗಳನ್ನು ಪಂಚಾಯಿತರು ಇತ್ಯರ್ಥ ಮಾಡತಕ್ಕದ್ದು. ಪಂಚಾಯಿತರು ಮೇಲ್ಕಂಡಂತೆ ತೀರ್ಮಾನಿಸಿದ ಮೊಕದ್ದಮೆಗಳ ಕಕ್ಷಿಗಾರರ ಹೆಸರು, ವ್ಯಾಜ್ಯದ ಸ್ವಭಾವ, ತೀರ್ಮಾನದ ಸಾರಾಂಶ ಮತ್ತು ತಾರೀಕುಗಳನ್ನು ತೋರಿಸತಕ್ಕ ಒಂದು ರಿಜಿಸ್ಟರನ್ನು ಇಟ್ಟಿರತಕ್ಕದು.

(೨) ಕಕ್ಷಿಗಾರರು ಮೊಕದ್ದಮೆಗಳನ್ನು ಪಂಚಾಯಿತರ ವಿಚಾರಣೆಗೆ ಒಳಪಡಿಸಿ ಅವರುಗಳ ತೀರ್ಮಾನದಂತೆ ನಡೆದುಕೊಳ್ಳಲು ಒಪ್ಪಿದ್ದಕ್ಕೆ ಅವರುಗಳ ರುಜು ಅಥವಾ ಹೆಬ್ಬೆಟ್ಟಿನ ಗುರ್ತನ್ನು ರಿಜಿಸ್ಟರಿನಲ್ಲಿ ಹಾಕಿಸುವುದು ಒಳ್ಳೇದು. ಇದಕ್ಕೆ ಪಂಚಾಯಿತಿಯ ರಿಜಿಸ್ಟರೆಂದು ಹೇಳಬಹುದು. ಇಂಥ ರಿಜಿಸ್ಟರುಗಳನ್ನು ಸರಿಯಾದ ರೀತಿಯಲ್ಲಿಟ್ಟಿದ್ದರೆ ಬಹಳ ಉಪಯೋಗಕ್ಕೆ ಬರುವವೆಂಬುವುದರಲ್ಲಿ ಸಂಶಯವಿಲ್ಲ. ಈ ರಿಜಿಸ್ಟರುಗಳನ್ನು ಸರ್ಕಾರಿ ಅಧಿಕಾರಿಗಳು ತಾವು ಅಪೇಕ್ಷೆಪಟ್ಟಾಗಲೆಲ್ಲಾ ತನಿಖೆ ಮಾಡಬಹುದು. ಮತ್ತು ಅವಶ್ಯಬಿದ್ದಾಗಲೆಲ್ಲಾ ಕೋರ್ಟುಗಳಲ್ಲಿ ಹಾಜರ್ಮಾಡಬಹುದು. ಗ್ರಾಮದಲ್ಲಿ ವಿವಾದಕ್ಕೆ ಆಸ್ಪದವಿಲ್ಲದಂತೆ ಪ್ರತಿಯೊಬ್ಬ ಮೆಂಬರರೂ ಮೊಟ್ಟಮೊದಲು ಜನಗಳಿಗೆ ಬೋಧನೆಮಾಡಬೇಕು. ಹಾಗೆ ವಿವಾದವನ್ನು ನಿಲ್ಲಿಸಲು ಸಾಧ್ಯವಲ್ಲದೆ ಹೋದರೆ ವಿವಾದಗಾರರು ತಮ್ಮ ಜಗಳವನ್ನು ಪಂಚಾಯಿತರ ತೀರ್ಮಾನಕ್ಕೆ ಹಾಕಿ ಅವರ ತೀರ್ಮಾನಕ್ಕೆ ಒಪ್ಪುವಂತೆ ಮಾಡಬೇಕು.

(೩) ಈ ವಿಷಯದಲ್ಲಿ ಮುತುವರ್ಜಿ ವಹಿಸಿ ಕೆಲಸಮಾಡತಕ್ಕ ದೊಡ್ಡಮನುಷ್ಯರೆಲ್ಲರೂ ಸೇರಿ ಡಿಸ್ಟ್ರಿಕ್ಟು ಮತ್ತು ಸಬ್ ಡಿವಿಜನ್ ಕಚೇರಿಗಳು ಇರತಕ್ಕ ಸ್ಥಳಗಳಲ್ಲೆಲ್ಲಾ ಒಂದೊಂದು ಎಡ್ವೈಸರೀ ಕೌನ್ಸಿಲ್ (Advisory Council) ಗಳನ್ನು ಸ್ಥಾಪಿಸಬೇಕು. ಇಂಥ ಪ್ರತಿಸಂಘಕ್ಕೂ ಒಬ್ಬ ಪ್ರಸಿಡೆಂಟೂ, ಒಬ್ಬ ವೈಸ್‌ಪ್ರೆಸಿಡೆಂಟೂ, ಒಬ್ಬ ಸೆಕ್ರಿಟರಿಯೂ ಮತ್ತು ಅವಶ್ಯಕವಿದ್ದಷ್ಟು ಜನ ಅಸಿಸ್ಟೆಂಟ್ ಸೆಕ್ರಿಟರಿಗಳೂ ಚುನಾಯಿಸಲ್ಪಡತಕ್ಕದು.

(೪) ಸ್ಥಳೀಕನಾಗಿಯೂ, ಎಲ್ಲರ ಗೌರವಕ್ಕೆ ಪಾತ್ರನಾಗಿಯೂ, ನಂಬಿಕಸ್ಥನಾಗಿಯೂ, ಇಂಥ ಘನವಾದ ಉದ್ದೇಶವನ್ನು ಸಫಲಗೊಳಿಸಲು ಬಹಳ ಕಷ್ಟಪಟ್ಟು ಕೆಲಸಮಾಡತಕ್ಕವನಾಗಿಯೂ ಇರುವವನನ್ನೇ ಪ್ರಸಿಡೆಂಟರಾಗಿ ಚುನಾಯಿಸಬೇಕು. ಇಂಥ ಪ್ರಸಿಡೆಂಟರು ತಮ್ಮಂತೆಯೇ ಸ್ಥಳೀಕರೂ, ಗೌರವಸ್ಥರೂ ಮತ್ತೂ ಪ್ರಾಮಾಣಿಕರೂ ಆದ ಇತರರು ಕೆಲವರನ್ನು ತಮಗೆ ಸಹಾಯಕರನ್ನಾಗಿ ನೇಮಕಮಾಡಿಕೊಳ್ಳಬಹುದು.

(೫) ಗ್ರಾಮಪಂಚಾಯಿತಿಯ ಮೆಂಬರುಗಳೂ ಮತ್ತು ಡಿಸ್ಟ್ರಿಕ್ಟು ಮತ್ತು ಸಬ್ ಡಿವಿಜನ್ ಕೌನ್ಸಿಲ್‌ಗಳ ಪ್ರಸಿಡೆಂಟರೇ ಮೊದಲಾದವರುಗಳೂ, ತಮ್ಮಲ್ಲಿ ವಿಚಾರಣೆಗೆ ಬಂದ ಮೊಕದ್ದಮೆಗಳನ್ನೆಲ್ಲಾ ಸ್ವಲ್ಪವೂ ಪಕ್ಷಪಾತ ಅಥವಾ ಅನ್ಯಾಯವಾಯಿತೆಂದು ಜನಗಳು ಆಡಿಕೊಳ್ಳುವುದಕ್ಕೆ ಮಾರ್ಗಕೊಡದೆ ಮನಸ್ಸಾಕ್ಷಿಯಾಗಿ ಜನಗಳೂ ಮತ್ತೂ ದೇವರೂ ಮೆಚ್ಚುವಂತೆ ತೀರ್ಮಾನಿಸಬೇಕೆಂದು ಅರಿತವರಾಗಿರಬೇಕು. ಸಂಘದ ಉದ್ದೇಶವನ್ನು ಸಾರ್ಥಕಗೊಳಿಸುವುದಕೋಸ್ಕರವಾಗಿ ಮಾಡಬೇಕಾದ ಕೆಲಸಗಳಲ್ಲೆಲ್ಲಾ ಪ್ರಸಿಡೆಂಟರು, ಡಿಸ್ಟ್ರಿಕ್ಟು ಮತ್ತು ಸಬ್ ಡಿವಿಜನ್ ಆಫೀಸರು ಮತ್ತೂ ಇತರ ಸರಕಾರೀ ಅಧಿಕಾರಿಗಳ ಬುದ್ಧಿವಾದವನ್ನೂ ಮತ್ತೂ ಸಹಾಯವನ್ನೂ ಕೇಳಿ ಪಡೆಯಬಹುದು. ಜನಗಳಿಗೆ ಈ ವಿಷಯದಲ್ಲಿ ತಿಳುವಳಿಕೆಯನ್ನುಂಟುಮಾಡಿ ಈ ಸಂಘಗಳನ್ನು ಪ್ರೋತ್ಸಾಹಗೊಳಿಸುವುದಕ್ಕೂ, ಸಂಘಗಳ ಅಧಿಕೃತದಲ್ಲಿ ಯಾವುದಾದರೂ ತೊಂದರೆ ಬಿದ್ದರೆ ಅದನ್ನು ತಿದ್ದುವುದಕ್ಕೂ, ಸ್ಥಳೀಕರ ಸ್ಥಳೀಕ ಸಂಘಾಧಿಕಾರಿಗಳು ಅಧಿಕಾರಿಗಳನ್ನು ಕೊಳಲೂರು ನಡೆಸಬೇಕು. ಡಿಸ್ಟ್ರಿಕ್ಟು ಮತ್ತೂ ಸಬ್ ಡಿವಿಜನ್ ಆಫೀಸರುಗಳು ಗ್ರಾಮಪಂಚಾಯಿತಿ ಸಭೆಗಳನ್ನು ತನಿಖೆಮಾಡಿ ತಮಗೆ ಬೇಕಾದ ಪ್ರೋತ್ಸಾಹವನ್ನು ಕೊಡಬೇಕೆಂದು ಉಪದೇಶಕರು ಕೇಳಿಕೊಳ್ಳಬಹುದು. ಗ್ರಾಮಪಂಚಾಯಿತರ ಹೇಳಿಕೆಯಂತೆ ಕೆಲಸಮಾಡಬೇಕೆಂದೂ ಮತ್ತೂ ಪಂಚಾಯಿತರನ್ನು ಗೌರವದಿಂದ ಕಾಣಬೇಕೆಂದೂ ಸರ್ಕಾರದವರು ಪೋಲೀಸು ಅಧಿಕಾರಿಗಳಿಗೆ ಅಪ್ಪಣೆಮಾಡಬಹುದು.

ಮೇಲ್ಕಂಡ ಸಲಹೆಗಳಿಗನುಸಾರವಾಗಿ ನಮ್ಮ ಸೀಮೆಯ ಪ್ರತಿಗ್ರಾಮಗಳಲ್ಲೂ ಗ್ರಾಮಪಂಚಾಯಿತಿ ಸಭೆಗಳು ಸ್ಥಾಪಿತವಾಗಿ, ಈಗಿನಂತೆ ಜನಗಳು ಅಲ್ಪ ವಿಷಯಗಳಿಗೆಲ್ಲಾ ಕೋರ್ಟು ಕಚೇರಿಗಳಲ್ಲಿ ಹೋರಾಡಿ ನಷ್ಟಹೊಂದುವದು ನಿಂತು ದೇಶಕ್ಕೆ ಕ್ಷೇಮವೂ, ಪ್ರಜೆಗಳಿಗೆ ನೆಮ್ಮದಿಯೂ ಉಂಟಾಗಲೆಂದು ಪ್ರತಿಯೊಬ್ಬ ಧರ್ಮಿಷ್ಠನಾದ ದೇಶಾಭಿಮಾನಿಯೂ ಹಾರೈಸುತ್ತಾನೆ.

ಕಾಲು ಮತ್ತು ಬಾಯಿಜ್ವರ.

ಕಳೆದ ಸಂಚಿಕೆಯಲ್ಲಿ ದನಗಳ ಕಾಲು ಮತ್ತು ಬಾಯಿಜ್ವರಗಳ ವಿಷಯವಾಗಿ ಕೆಲವು ಸಂಗತಿಗಳನ್ನು ಪ್ರಚುರಪಡಿಸಿತ್ತಷ್ಟೆ. ಅದರ ಜತೆಗೆ ಹೊಸಾಂಗಾಬಾದಿನ ಪಶುವೈದ್ಯರಾದ ಮೆ॥ ಡಿ. ಎಂ. ಸ್ವಾಮಿಯೆಂಬುವರಿಂದ ಬರೆಯಲ್ಪಟ್ಟ ಮತ್ತೆ ಕೆಲವು ಹೊಸ ಸಂಗತಿಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿರುತ್ತೇವೆ.

ಕಾಲು ಮತ್ತೂ ಬಾಯಿ ಜ್ವರಗಳಿಂದ ದನಗಳು ಸಾಯುವುದು ಬಹಳ ಕಡಿಮೆಯೆಂಬುವುದೇನೋ ನಿಜ. ಆದರೆ ಇದು ಅಂಟುಜಾಡ್ಯವೆಂಬುವುದರಲ್ಲಿ ಸಂಶಯವಿಲ್ಲ. ಜ್ವರವು ಬಾಯಿನಲ್ಲಾಗಲಿ ಅಥವಾ ಕಾಲಿನಲ್ಲಾಗಲಿ ಗುಳ್ಳೆ ಗುಳ್ಳೆಯಾಗಿ ನೊರೆ ಹೊರಡುವುದೇ ಈ ರೋಗದ ಚಿಹ್ನೆಯಾಗಿದೆ. ಯಾವುದಾದರೊಂದು ದನಕ್ಕೆ ಒಂದಾವೃತ್ತಿ ಈ ರೋಗವು ತಗಲಿದರೆ, ಮುಂದೆ ಅಂದರೆ ಅದು ಸಾಯುವವರಿವಿಗೂ ಪದೇಪದೇ ಈ ರೋಗವು ತಗಲುತ್ತಲೇ ಇರುವುದು.

ದನಗಳಿಗೆ ಈ ರೋಗವು ತಗಲಿದರೆ ಅವು ನಡುಗುತ್ತಲಿರುವುವು; ಕೂದಲುಗಳೆಲ್ಲಾ ಎದ್ದು ನಿಂತುಕೊಳ್ಳುವುವು; ಬಾಯಿ ಬಿಸಿಯಾಗುವುದು; ಬಾಯಿಯಿಂದ ಜೊಲ್ಲು ಸುರಿಯುವುದು; ನಾಲಿಗೆಯು ಅಂಗಳಿಗೆ ಅಂಟಿಬಿಡುವುದು; ಬಾಯಿಯಲ್ಲೂ ಮತ್ತು ಒಸಡಿನಲ್ಲೂ ಹುಣ್ಣಾಗುವುದು ಮತ್ತು ದನವು ಮೇವನ್ನು ಮುಟ್ಟುವುದಿಲ್ಲ. ಕೆಲವು ವೇಳೆ ಬಾಯಿಜ್ವರವೂ, ಇನ್ನುಕೆಲವು ವೇಳೆ ಕಾಲು ಜ್ವರವೂ ಮತ್ತೆ ಕೆಲವು ವೇಳೆ ಬಾಯಿ ಮತ್ತು ಕಾಲು ಎರಡು ಜ್ವರವೂ ಬರುವುದುಂಟು. ಕರೆಯುವಹಸುಗಳಿಗೆ ಕೆಚ್ಚಲು ಊದಿಕೊಳ್ಳುವುದು.

ದನಗಳಿಗೆ ಈ ಖಾಯಿಲೆ ಬಂದರೆ ಕೆಲವರು ದೊಡ್ಡರೋಗವೆಂದು ತಪ್ಪು ತಿಳುವಳಿಕೆಯಿಂದ ಚಿಕಿತ್ಸೆ ಮಾಡುವರು. ಆದರೆ ದೊಡ್ಡರೋಗ ತಗಲಿದರೆ ಜೋರಾದ ಜ್ವರವೂ ಮತ್ತು ಉಬ್ಬಟವೂ ಪ್ರಾರಂಭವಾಗುವುದು. ದೊಡ್ಡ ರೋಗವಾದರೆ ಸಣ್ಣಸಣ್ಣ ಹುಣ್ಣುಗಳಾಗುವುವು. ಕಾಲು ಅಥವಾ ಬಾಯಿಜ್ವರವಾದರೆ ಧಪ್ಪದಪ್ಪ ಹುಣ್ಣುಗಳಾಗುವುವು. ಅಲ್ಲದೆ ದೊಡ್ಡರೋಗಬಂದರೆ ದನಗಳು ವಿಶೇಷವಾಗಿ ಸಾಯುವುವು.

ರೋಗವು ಹಬ್ಬುವುದಕ್ಕೆ ಆಸ್ಪದ ಕೊಡದೆ ಕೊಟ್ಟಿಗೆಯನ್ನು ತೊಳೆಯಬೇಕು. ದನಗಳನ್ನು ನೆರಳಾದ ಮತ್ತು ಚೆನ್ನಾಗಿ ವಾಯು ಸಂಚಾರವಿರತಕ್ಕ ಕೊಟ್ಟಿಗೆಗಳಲ್ಲಿ ಕಟ್ಟಿಹಾಕಬೇಕು. ರೋಗತಗುಲಿದ ಎತ್ತುಗಳ ಕೈಲಿ ಕೆಲಸಮಾಡಿಸಿದರೆ ಗೊರಸುಗಳು ಕಳಚಿ ಬಿದ್ದುಹೋಗುವುದರಿಂದ ಅಂಥ ಎತ್ತುಗಳಿಂದ ಕೆಲಸಮಾಡಿಸಬಾರದು. ಹಸುಗಳನ್ನು ಕರೆಯುವಾಗ ರೋಗತಗುಲಿದ ದನಗಳನ್ನು ಕರೆದವರು ಆರೋಗ್ಯವಾಗಿರುವ ದನಗಳನ್ನು ಕರೆಯಬಾರದು. ರೋಗ ತಗುಲಿದ ದನಗಳ ಹಾಲನ್ನು ಕುಡಿದರೆ ಮನುಷ್ಯರಿಗೂ ಖಾಯಿಲೆ ಬರುವುದು. ಆದುದರಿಂದ ಅಂಥ ಹಾಲನ್ನು ಜನಗಳು ಕುಡಿಯಕೂಡದು. ಹಾಗೆ ಉಪಯೋಗಿಸಲೇಬೇಕಾದರೆ ಕಾಯಿಸಿ ಉಪಯೋಗಿಸಿಕೊಳ್ಳುವುದು.

ಖಾಯಿಲೆ ಬಂದಮೊದಲು ಅರ್ಧಸೇರು ಒಳ್ಳೆಣ್ಣೆ ಅಥವಾ ಸೀಮೆ ಅಗಸೆ ಬಿತ್ತದ ಎಣ್ಣೆಯನ್ನು ಕುಡಿಸಬೇಕು. ಗೊಬ್ಬಳಿ ತೊಗಟೆಯ ಕಷಾಯ ಅಥವಾ ಪಟಿಕದ ನೀರಿನಿಂದ ಬಾಯಿಯ ಹುಣ್ಣನ್ನು ತೊಳೆಯಬೇಕು. ಆ ಮೇಲೆ ಒಂದುಭಾಗ ಬಿಳಿಗಾರಕ್ಕೆ ನಾಲ್ಕುಭಾಗ ಜೇನುತುಪ್ಪವನು ಸೇರಿಸಿ ಬಾಯಿಯ ಹುಣ್ಣುಗಳಿಗೆ ಸವರಬೇಕು. ಅಕ್ಕಿ ಗಂಜಿ, ಹಸಿ ಹುಲ್ಲು ಮೊದಲಾದ ಆಹಾರವನ್ನು ಮಿತವಾಗಿ ತಿನ್ನಿಸಬೇಕು. ಕಾಲಿನ ಹುಣ್ಣುಗಳನ್ನು ಬೇವಿನ ಸೊಪ್ಪಿನ ಕಷಾಯದಿಂದ ತೊಳೆಯಬೇಕು. ಅನಂತರದಲ್ಲಿ ೨ ಪಟಾಕಿ ಸುಣ್ಣವನ್ನೂ ೨ ತೊಲೆ ಇಜ್ಜಲನ್ನೂ ೧ ತೊಲೆ ಮೈಲುತ್ತುತ್ತವನ್ನೂ ಮತ್ತೂ ೧ ತೊಲೆ ಗುಗ್ಗಳವನ್ನೂ ಸೇರಿಸಿ ಪುಡಿಮಾಡಿ ಅದನ್ನು ಕಾಲಿನಮೇಲೆ ಉದುರಿಸಿ ಬಟ್ಟೆಯನ್ನು ಸುತ್ತಬೇಕು.

ಒಂದುಪಾವು ಬೆಲ್ಲವನ್ನು ಅರುಪಾವು ನೀರಿನಲ್ಲಿ ಕರಗಿಸಿ ಕುಡಿಸಿದರೆ ಬಹಳ ಗುಣಹೋಗುವುದೆಂದು ಕೆಲವು ಹಳ್ಳಿಗಾರರು ಹೇಳುತ್ತಾರೆ. ಬಾಯಿಯಲ್ಲಿ ಹುಣ್ಣಾದರೆ ಬದನೆಕಾಯಿಯನ್ನು ಬೇಯಿಸಿ ಹಸನಾದ ಬೆಣ್ಣೆಯನ್ನು ಸೇರಿಸಿ ತಿನ್ನಿಸಿದರೆ ಹುಣ್ಣುಗಳು ವಾಸಿಯಾಗುತ್ತವೆಯೆಂದು ಹೇಳುವರು. ಕಾಲಿನಲ್ಲಿ ಹುಣ್ಣುಗಳಾದರೆ, ಕೊಳೆಯುತ್ತಿರುವ ಏಣುಗಳನ್ನು ಕಿಮಿಚಿದರೆ ಹೊರಡತಕ್ಕ ನೀರನ್ನು ಕಾಲಿಗೆ ಹಾಕಿದರೆ ವಾಸಿಯಾಗುವುದೆಂದೂ ಹೇಳುವರು.

ಕಬ್ಬಿನಹಾಲನ್ನು ಕಾಯಿಸುವಾಗ ಸಿಕ್ಕುವ ನೊರೆ.

ಬೆಲ್ಲವನ್ನು ತಯಾರುಮಾಡತಕ್ಕಬಗ್ಗೆ ಕಬ್ಬಿನ ಹಾಲನ್ನು ಕೊಪ್ಪರಿಗೆಗಳಲ್ಲಿ ಕಾಯಿಸುವುದು ಈ ದೇಶದ ಪದ್ಧತಿಯಷ್ಟೆ. ಆದರೆ ಹೀಗೆ ಹಾಲನ್ನು ಕಾಯಿಸುವಾಗ್ಗೆ ಮೇಲೆ ಬರತಕ್ಕ ನೊರೆ (ಕೆನೆ) ಯು ಉಪಯೋಗಕ್ಕೆ ಬಾರದೆ ವ್ಯರ್ಥವಾಗಿ ಹೋಗುವುದು. ಸುಮಾರು ೪೦ ಮಣ ಹಾಲನ್ನು ಕಾಯಿಸಿದರೆ ಸ್ವಲ್ಪ ಹೆಚ್ಚು ಕಡಿಮೆ ೨ ಮಣ ನೊರೆಯು ವ್ಯರ್ಥವಾಗುವುದು. ಆದರೆ ನೊರೆಯನ್ನು ಬಟ್ಟೆಯಲ್ಲಾಗಲಿ ಅಥವ ಮಂದರಿಯಲ್ಲಾಗಲಿ ಹಾಕಿ ಶೋಧಿಸಿದರೆ ೧ ಮಣವನ್ನಾದರೂ ಉಳಿಸಿಕೊಳ್ಳಬಹುದೆಂದು ಗೊತ್ತುಮಾಡಿರುವರು. ಈಚೆಗೆ ಉಳಿದ ಮತ್ತೊಂದು ಮಣವನ್ನೂ ಸಹ ವ್ಯರ್ಥವಾಗಿ ಬಿಸಾಡದೆ ದನಗಳಿಗೆ ಮೇವಾಗಿ ಉಪಯೋಗಿಸಬಹುದೆಂದು ತಿಳಿಯಬಂದಿದೆ. ಶೋಧಿಸಿದಮೇಲೆ ನಿಂತ ನೊರೆಗೆ ಸರಾಸರಿ ನೀರನ್ನು ಮಿಶ್ರಮಾಡಿ ಒಂದು ಕೊಪ್ಪರಿಕೆಯಲ್ಲಿ ಹಾಕಿ ಕಾಯಿಸಬೇಕು. ಹಳೇದಾಗಿರತಕ್ಕ ಕೆಲಸಕ್ಕೆ ಬಾರದ ಕೊಪ್ಪರಿಕೆಯನ್ನಾದರೂ ಉಪಯೋಗಿಸಬಹುದು. ಇದು ಕೊಪ್ಪರಿಕೆಯಲ್ಲಿ ಕುದಿಯಲು ಆರಂಭವಾದೊಡನೆಯೇ ಚನ್ನಾಗಿ ಪುಡಿಪುಡಿಯಾಗಿರತಕ್ಕ ಕಬ್ಬಿನ ಹಿಂಡಿಯನ್ನು ಮುಂಚೆ ಹಾಕಿದ್ದ ನೊರೆಯ ನಾಲ್ಕರಲ್ಲಿ ಒಂದುಭಾಗದಷ್ಟು ಬೆರಸಿ, ಉರಿಯನ್ನು ತೆಗೆದು ಅದಿಗೆಯು ಸುಮಾರಾಗಿ ಆರುವತನಕ ಚನ್ನಾಗಿ ತೊಳಸುತ್ತಿರಬೇಕು. ಅನಂತರದಲ್ಲಿ ಗಟ್ಟಿಯಾದ ನೆಲದಮೇಲೆ ಬಿಸಲಿನಲ್ಲಿ ಹರಡಿ ಚನ್ನಾಗಿ ಒಣಗಿಸಬೇಕು. ಈ ರೀತಿಯಲ್ಲಿ ತಯಾರಿಸಲ್ಪಟ್ಟ ಮೇವು ಬಹಳ ಪುಷ್ಟಿಕರವಾದ್ದಾಗಿಯೂ ಮತ್ತೂ ಸುಲಭವಾಗಿ ಅರಗತಕ್ಕದಾಗಿಯೂ ಇದೆ. ದಿನ ೧ಕ್ಕೆ ೧ ದನಕ್ಕೆ ಬೆಳಗ್ಗೆ ೭ ಸೇರು ಮತ್ತು ಸಾಯಂಕಾಲ ೭ ಸೇರಿನಂತೆ ೧೪ ಸೇರುಗಳು ಬೇಕಾಗುವುದು. ಒಂದು ಅದಿಗೆಯಲ್ಲಿ ಸಿಕ್ಕುವ ನೊರೆಯಿಂದ ತಯಾರುಮಾಡಲ್ಪಟ್ಟ ಮೇವು ಆ ಅದಿಗೆಗೆ ಬೇಕಾಗುವಷ್ಟು ಹಾಲನ್ನು ಸರಬರಾಜು ಮಾಡಲು ಗಾಣವನ್ನು ಎಳೆಯತಕ್ಕ ಎತ್ತುಗಳಿಗೆಲ್ಲಾ ಸಾಕಾಗುವುದು. ಮತ್ತು ಈ ಮೇವನ್ನು ತಿನ್ನತಕ್ಕ ದನಗಳಿಗೆ ಇತರವಿಧವಾದ ಹಿಂಡಿಯನ್ನು ಹಾಕಬೇಕಾದ ಅವಶ್ಯಕವಿಲ್ಲ. ಯಂತ್ರಗಳ ಸಹಾಯದಿಂದ ಬೆಲ್ಲವನ್ನು ತಯಾರುಮಾಡತಕ್ಕವರಾದರೋ ಮೇಲ್ಕಂಡ ಮೇವನ್ನು ತಯಾರಿಸಿ ದನಗಳಿಗೆ ತಿನ್ನಿಸಬಹುದು. ಇಲ್ಲದಿದ್ದರೆ ಮಾರಿ ದುಡ್ಡುಮಾಡಬಹುದು. ೪೨ ಮಣ ಇಂಥಾ ಮೇವನ್ನು ತಯಾರುಮಾಡಬೇಕಾದರೆ ೧೨ ಅಣೆ ಮಾತ್ರ ಖರ್ಚಾಗುವುದು. ಆದರೆ ರೂಪಾಯಿಗೆ ೪ ಮಣದಂತೆ ಮಾರಿದಾಗ್ಯೂ ೧೦ ರೂಪಾಯಿ ಬರುವುದು. ಇದನ್ನು ದನಗಳಿಗೆ ತಿನ್ನಿಸಿದರೆ ಏನೂ ಕೆಡಕಾಗುವುದಿಲ್ಲ; ಆದರೆ ಇದು ಚನ್ನಾಗಿ ಒಣಗಿರಬೇಕು. ಇದನ್ನು ಮಳೆಗಾಲದವರಿವಿಗೂ ಇಟ್ಟಿದ್ದರೆ ತೇವ ಹತ್ತುವುದರಿಂದ ದನಗಳು ತಿನ್ನುವುದಿಲ್ಲ. ಒಂದು ರಾಸಿಗೆ ಒಂದಾವರ್ತಿ ೭ ಅಥವಾ ೮ ಸೇರಿಗಿಂತ ಜಾಸ್ತಿಯಾಗಿ ತಿನ್ನಿಸಕೂಡದು.

ಕೆ. ಗೆ.

ಲಂಘನಂ ಪರಮೌಷಧಂ.

ಈ ಕಾಲದಲ್ಲಿ ಆರೋಗ್ಯವಿಚಾರವಾಗಿ ಪ್ರತಿಯೊಬ್ಬರೂ ಎಷ್ಟು ಜಾಗರೂಕರಾಗಿರಬೇಕೊ, ಆಹಾರವಿಚಾರದಲ್ಲೂ ಅಷ್ಟು ಜಾಗರೂಕರಾಗಿರಬೇಕಾದುದು ಅತ್ಯಾವಶ್ಯಕವು. ಅವರವರ ದೇಹಪ್ರಕೃತಿಗನುಸಾರವಾಗಿ ಆಹಾರವನ್ನು ಮಿತಿಯಿಂದ ತೆಗೆದುಕೊಂಡಲ್ಲಿ ಯಾವ ರೋಗವೂ ಪ್ರಾಪ್ತವಾಗುವುದಿಲ್ಲ. ಈ ವಿಚಾರದಲ್ಲಿ ಅಮೇರಿಕಾದ ಅಪ್ಟನ್ ಸಿಂಕ್ಲೇರ್ ಎಂಬುವರು ಸ್ವಾನುಭವದಿಂದ ಬರೆಯುವುದೇನಂದರೆ:—

ನಾನು ನನ್ನಾಯುಷ್ಯನಲ್ಲಿ ೨೪ ವರ್ಷಕಾಲ ಅಸ್ವಸ್ಥನಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದಿದೆನು; ಅನೇಕ ವೈದ್ಯರನ್ನು ಮನೆಗೆ ಬರಮಾಡಿಕೊಂಡು ಔಷಧವನ್ನು ಸೇವಿಸಿದೆನು; ಇದಲ್ಲದೆ ಸಮರ್ಥರಾದ ಮತ್ತೂ ವಿಧವಿಧವಾದ ವೈದ್ಯರುಗಳಕೂಡ ಆಲೋಚಿಸಿದೆನು ಮತ್ತೂ ಆರೋಗ್ಯಕರವಾದ ಸ್ಥಳಗಳಿಗೆ ಹೋಗಿದ್ದು ಬಂದೆನು. ಇದರಿಂದ ೩೦,೦೦೦ ರೂ. ಗಳು ವ್ಯಯವಾಯಿತು. ಆದರೂ ನನಗೂ ನನ್ನ ಕುಟುಂಬಕ್ಕೂ ಆರೋಗ್ಯವುಂಟಾಗಲಿಲ್ಲ. ನನ್ನಂತೆ ರೋಗಿಷ್ಠರಾದ ನನ್ನ ಹೆಂಡತಿಯು ನಾಲ್ಕಾವೃತ್ತಿ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡಳು, ಮತ್ತೂ ನನ್ನ ಚಿಕ್ಕಮಗನು ಆರುವೇಳೆ ಸಾಯುವುದರಲ್ಲಿದ್ದನು. ಈ ರೀತಿಯಾಗಿ ನಮ್ಮಗಳಿಗೆ ಯಾವ ಔಷಧಸೇವನೆಯೂ, ಆರೋಗ್ಯಸ್ಥಳವಾಸವೂ ಪ್ರಯೋಜನಕರವಾಗಲಿಲ್ಲವಾಗಿ, ಈ ಮಾರ್ಗವನ್ನು ಬಿಟ್ಟು ಕ್ಲಿಪ್ತಕಾಲದಲ್ಲಿ ಉಪವಾಸವಿರಲಾರಂಭಿಸಿದಮೇಲೆ ನಮ್ಮಗಳಿಗೆ ಬಹುಕಾಲದಿಂದಲೂ ಇದ್ದ ಅನಾರೋಗ್ಯವೆಲ್ಲವೂ ನಿರ್ಮೂಲವಾಗಿ ಈಗ ದೃಢಕಾಯರಾದೆವು. ಈಗ ನನ್ನ ಶರೀರತೂಕವು ೧೦೦ಕ್ಕೆ ೨೪ ರಂತೆ ಹೆಚ್ಚಿರುತ್ತದೆ. ಮತ್ತೂ ನನ್ನ ಭಾವಚಿತ್ರವನ್ನೋಡಿದವರೆಲ್ಲ ಬಹುಮಾನವನ್ನು ಹೊಂದುವುದಕ್ಕಾಗಿ ವ್ಯಾಯಾಮವನ್ನು ಬಳಸತಕ್ಕವರ ಭಾವಚಿತ್ರವೆಂದು ಭ್ರಾಂತಿಸಿರುವರು.

ಗ್ರಂಥವಿಮರ್ಶೆ.

ವಿರಕ್ತಳಾದ ಸೌದಾಮಿನಿ.

ಇದು ಚಾಮರಾಜನಗರದ ಸಂಸ್ಕೃತ ಪಾಠಶಾಲಾಧ್ಯಾಪಕರಾದ ಮ॥ ವೆಂಕಟರಮಣ ಶಾಸ್ತ್ರಿಗಳಿಂದ ರಚಿಸಲ್ಪಟ್ಟಿರುವುದು. ಲೋಕದಲ್ಲಿ ಸಾಮಾನ್ಯವಾಗಿ ಸ್ತ್ರೀಯರು ತಿಳಿಯಬೇಕಾಗಿರುವ ಧರ್ಮನೀತಿಗಳೂ, ಮನುಷ್ಯಸಾಮಾನ್ಯಕ್ಕೆ ಸಂಭವಿಸುವ ಸುಖದುಃಖಗಳೂ ಮತ್ತೆ ಕೆಲ ಲೋಕಾನುಭವ ವಿಷಯಗಳೂ ಚೆನ್ನಾಗಿ ವಿವರಿಸಲ್ಪಟ್ಟಿವೆ. ಇದರ ಬೆಲೆ ೦–೩–೩ ಆಣೆ ಇದು ಗ್ರಂಥಕರ್ತರಲ್ಲಿ ದೊರೆಯುವುದು.

ಯಜುಶ್ಶಾಖಾ ಕಾಲತ್ರಯ ಸಂಧ್ಯಾವಂದನ.

ಇದು ಮೈಸೂರ ಸರ್ಕಲ್ ಡೇಪಿ ಇನ್ಸ್‌ಪೆಕ್ಟರ್ ಮ॥ ರಾಮಕೃಷ್ಣರಾಯರಿಂದ ಯಜುಶ್ಶಾಖಾ ವೈಷ್ಣವಬಾಲಕರುಪಯೋಗಾರ್ಥವಾಗಿ ರಚಿಸಲ್ಪಟ್ಟಿರುವುದು. ಮ॥ ಕೃಷ್ಣರಾಯರು ಈ ಸಂಧ್ಯಾವಂದನವನ್ನು ದ್ವೈತಸಿದ್ಧಾಂತಾನುಸಾರವಾಗಿ ಅರ್ಥಸಮೇತ ಪ್ರಚಾರಮಾಡಬೇಕೆಂದಿರುವರು. ಸರ್ಕಾರಿಯಧಿಕಾರಿಗಳು ನಿವೃತ್ತಿ ಸುಖವನ್ನನುಭವಿಸುವಾಗ್ಗೆ ಹೀಗೆ ಪ್ರಯೋಜನಯುಕ್ತ ಕಾರ್ಯಗಳನ್ನು ಮಾಡಿ ಸತ್ಕಾಲಕ್ಷೇಪವನ್ನು ಮಾಡುವುದು ಸ್ತುತ್ಯವೇ ಸರಿ. ಈ ಪುಸ್ತಕದ ಬೆಲೆ ೨ ಆಣೆ. ಇದು ಮೈಸೂರು ವಾಣೀವಿಲಾಸ ಬುಕ್‌ಡಿಪೊ ಪ್ರೊಪ್ರೈಟರ್ ಬಿ. ಎ. ವೆಂಕಟಾಚೆಲಂ ಸೆಟ್ಟರಲ್ಲಿ ದೊರೆಯುತ್ತದೆ.

ಜರ್ಮನ ಸಾಮ್ರಾಜ್ಯ.

ಇದು ಮೈಸೂರ ಗೌರ್ನಮೆಂಟ್ ನಾರ್ಮಲ್ ಸ್ಕೂಲಿನ ಸಹೋಪಾಧ್ಯಾಯರಾದ ಮ॥ ಜಿ. ಕೃಷ್ಣಶಾಸ್ತ್ರಿಗಳಿಂದ ರಚಿಸಲ್ಪಟ್ಟಿರುವುದು. ಇದರಲ್ಲಿ ಜರ್ಮನ ದೇಶದ ವಿಸ್ತೀರ್ಣ, ವಾಯುಗುಣ, ಜನಸಂಖ್ಯೆ, ಅಲ್ಲಿಯ ಜನರ ನಡೆನುಡಿ ವಿದ್ಯಾಭ್ಯಾಸಕ್ರಮ, ಅವರ ಕಸಬು, ರಾಜ್ಯಭಾರಕ್ರಮ, ದೇಶೋನ್ನತಿಯ ಕಾರ್ಯಗಳು ಮೊದಲಾದ ವಿಷಯಗಳು ಸಮಗ್ರವಾಗಿ ತಿಳಿಗನ್ನಡದಲ್ಲಿ ಬರೆಯಲ್ಪಟ್ಟಿವೆ. ೪೦–೫೦ ವರ್ಷಗಳಿಂದೀಚೆಗೆ ಜಗತ್ತಿಗೇ ವಿಸ್ಮಯವನ್ನುಂಟುಮಾಡುವಷ್ಟು ಉನ್ನತಸ್ಥಿತಿಗೆ ಬಂದಿರುವ ಜರ್ಮನ ರಾಜ್ಯ ವಿಚಾರವನ್ನು ತಿಳಿಯಲಪೇಕ್ಷಿಸುವ ಕನ್ನಡಿಗರಿಗೆ ಈ ಪುಸ್ತಕವು ಬಹುಪ್ರಯೋಜನಕರವಾಗಿದೆ. ಇದು ಕ್ರೌನ್ ಅಷ್ಟಪತ್ರದಾಕೃತಿಯಲ್ಲಿ ಸ್ಫುಟಾಕ್ಷರಗಳಿಂದ ಅಂದವಾಗಿ ಮುದ್ರಿಸಲ್ಪಟ್ಟಿರುತ್ತದೆ. ಇದರ ಬೆಲೆ ೬ ಆಣೆ. ಇದು ಮೈಸೂರ ಜನರಲ್ ಏಜನ್ಸಿಯಲ್ಲಿ ದೊರೆಯುವುದು.

ಕಿಂಡರ್‌ಗಾರ್ಟನ ಕ್ರಮದಲ್ಲಿ ಮಕ್ಕಳ ವಿದ್ಯಾಭ್ಯಾಸ.

ಮೈಸೂರ ಗೌರ್ನಮೆಂಟ್ ನಾರ್ಮಲ್‌ಸ್ಕೂಲಿನ ಸಹೋಪಾಧ್ಯಾಯರಾದ ಮ॥ ಎಂ. ವೆಂಕಟಸುಬ್ಬಯ್ಯ, ಬಿ.ಎ., ಯವರು, ಮಕ್ಕಳುಗಳಿಗೆ ಕಿಂಡರ್‌ಗಾರ್ಟನ ರೀತ್ಯಾ ವಿದ್ಯಾಭ್ಯಾಸವನ್ನು ಮಾಡಿಸುವ ಕ್ರಮವನ್ನು ಈ ಸಂಸ್ಥಾನದ ಉಪಾಧ್ಯಾಯರುಗಳಿಗೆ ತಿಳುಹಲು ಸರ್ಕಾರದವರು ಸೀಮೆಯಿಂದ ಕರೆಸಿದ್ದ ಕಿಂಡರ್‌ಗಾರ್ಟನ ರೀತ್ಯಾ ಬೋಧಿಸುವುದರಲ್ಲಿ ಒಳ್ಳೇ ಪ್ರಸಿದ್ಧರಾಗಿದ್ದ ಮಿಸ್. ಲ್ಯಾಟರ್ ಎಂಬಾಕೆಯವರ ಉಪನ್ಯಾಸಗಳನ್ನು ಕನ್ನಡದಲ್ಲಿ ಪರಿವರ್ತಿಸಿ ಹೇಳಲು ನೇಮಿಸಲ್ಪಟ್ಟಿದ್ದುದರಿಂದ ಈ ಬೋಧನ ಕ್ರಮದಲ್ಲಿ ವಿಶೇಷ ಪರಿಶ್ರಮವನ್ನು ಹೊಂದಿದವರಾಗಿಯೂ, ಈಗ ನಾರ್ಮಲ್‌ಸ್ಕೂಲಿಗೆ ಸಂಬಂಧಪಟ್ಟ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿ ಮಕ್ಕಳಿಗೆ ಕಿಂಡರ್‌ಗಾರ್ಟನ ಕ್ರಮವನ್ನನುಸರಿಸಿ ವಿದ್ಯಾಭ್ಯಾಸವನ್ನು ಮಾಡಿಸತಕ್ಕವರಾಗಿಯೂ ಇರುವುದರ ಮೂಲಕ ತಮಗುಂಟಾದ ವಿಶೇಷಾನುಭವದಿಂದಲೂ, ಈ ವಿದ್ಯಾಭ್ಯಾಸದ ಕ್ರಮದಮೇಲೆ ಇಂಗ್ಲಿಭಾಷೆಯಲ್ಲಿ ಬರೆಯಲ್ಪಟ್ಟಿರುವ ಪ್ರಸಿದ್ಧಗ್ರಂಥಗಳಲ್ಲಿನ ವಿಷಯ ಸಂಗ್ರಹದಿಂದಲೂ, ಮಕ್ಕಳ ವಿದ್ಯಾಭ್ಯಾಸದಲ್ಲಾಸಕ್ತರಾದ ಉಪಾಧ್ಯಾಯರುಗಳ ಸಹಾಯಾರ್ಥವಾಗಿ ಈ ಪುಸ್ತಕವನ್ನು ಅಚ್ಚಗನ್ನಡದಲ್ಲಿ ಬಹುಲಲಿತವಾಗಿ ಬರೆದಿರುವರು. ಮಕ್ಕಳಿಗೆ ಬೋಧಿಸುವಾಗ್ಗೆ ಉಪಯೋಗಿಸಲ್ಪಡುವ ಪದಾರ್ಥಗಳ ಮತ್ತೂ ಅವನ್ನು ರಚಿಸುವ ಕ್ರಮಗಳನ್ನು ತೋರಿಸುವ ಬಹು ಸುಂದರವಾದ ೫೪ ಚಿತ್ರಪಟಗಳು ಕೊಡಲ್ಪಟ್ಟಿರುವುವು. ಮಕ್ಕಳಿಗೆ ಕಿಂಡರ್‌ಗಾರ್ಟನ ಕ್ರಮವನ್ನನುಸರಿಸಿ ವಿದ್ಯಾಭ್ಯಾಸವನ್ನು ಮಾಡಿಸಲಿಚ್ಛಿಸುವವರಿಗೆ ಈ ಪುಸ್ತಕವು ಬಹು ಪ್ರಯೋಜನಕರವಾಗಿರುವುದೆನ್ನುವುದರಲ್ಲಿ ಸಂದೇಹವಿಲ್ಲವು. ಈ ಪುಸ್ತಕವು ಡೆಮ್ಮಿ ಅಷ್ಟಪತ್ರದಾಕೃತಿಯಲ್ಲಿ ಸ್ವಚ್ಛವಾದ ಕಾಗದದಮೇಲೆ ಮುದ್ದಾದ ಅಕ್ಷರಗಳಿಂದ ಮೈಸೂರ ಗೌರ್ಮೆಂಟ್ ಪ್ರೆಸ್ಸಿನಲ್ಲಿ ನೇತ್ರಾನಂದಕರವಾಗಿ ಅಚ್ಚುಹಾಕಲ್ಪಟ್ಟಿರುವುದು.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಜುಲೈ ತಾ|| ೨೪ ನೇ ಸೋಮವಾರ.

ಮೈಸೂರ ಪೋಲೀಸ್ ಶಾಖೆಯು.

ಈ ಶಾಖೆಯ ೧೯೦೯–೧೦ ರ ವರದಿಯು ಈಗತಾನೇ ಪ್ರಕಟವಾಗಿದೆ. ನಮ್ಮ ಸರ್ಕಾರದ ಎಲ್ಲ ಶಾಖೆಗಳ ವರದಿಯೂ ಆಯಾ ವರ್ಷವು ಕಳೆದಕೂಡಲೇ ಪ್ರಕಟವಾಗದೆ ಒಂದು ವರ್ಷ ಕಳೆದ ಮೇಲೆ ಪ್ರಕಟವಾಗುವುದು ರೂಢಿಯಲ್ಲಿರುವುದರಿಂದ, ನಮ್ಮ ಹಸ್ತಗತವಾಗಿರುವ ಈ ವರದಿಯು ಇಷ್ಟು ನಿರವಕಾಶವಾಗಿ ಪ್ರಕಟವಾದುದರ ಕಾರಣವನ್ನು ಕೇಳಬೇಕಾದುದಿಲ್ಲವು. ಈ ವರ್ಷದಲ್ಲಿ ಒಟ್ಟು ೧೪೫೩ ಅಪರಾಧಗಳು ನಡೆದಿರುತ್ತವೆ. ಆದರೆ ಇದರ ಹಿಂದಣ ವರ್ಷದಲ್ಲಿ ೧೫೮೬೩ ಅಪರಾಧಗಳು ನಡೆದಿದ್ದುವು. ೧೯೦೮–೦೯ ರಲ್ಲಿ ಅಪರಾಧಗಳು ಹೆಚ್ಚಿದ್ದುದಕ್ಕೆ ಆ ವರ್ಷದಲ್ಲಿ ಕ್ಷಾಮವು ಪ್ರಾಪ್ತವಾಗಿದ್ದುದೇ ಕಾರಣವೆಂದು ಹೇಳಬಹುದು. ಆದರೆ ೧೯೦೯–೧೦ ರಲ್ಲಿ ಕಾಲಸ್ಥಿತಿಯು ಅನುಕೂಲವಾಗಿದ್ದುದರಿಂದ, ಪದಾರ್ಥಗಳ ಸಂಬಂಧವಾದ ಅಪರಾಧಗಳು ಕಡಿಮೆಯಾಗಬೇಕಾಗಿ ನಿರೀಕ್ಷಿಸಲ್ಪಟ್ಟಿದ್ದಾಗ್ಯೂ, ೧೯೦೭–೦೮ ರಲ್ಲಾಗಿದ್ದುದಕ್ಕಿಂತ ಹೆಚ್ಚಾಗಿರುವುದು. ಈ ವರ್ಷದಲ್ಲಿ ೫೧ ಕೊಲೆಗಳಾದುವು. ಇದರ ಹಿಂದಿನ ವರ್ಷದಲ್ಲಿ ೬೩ ಕೊಲೆಯಾಗಿದ್ದಿತು. ಆಕಸ್ಮಿಕ ಮೊದಲಾದ ಕಾರಣಗಳಿಂದ ೨೫೩ ದುರ್ಮರಣಗಳಾಗಿರುವುವು. ಇವುಗಳ ಸ್ವಭಾವವನ್ನು ಇ|| ಜನರಲ್‌ರವರು ಸರಿಯಾಗಿ ತಿಳುಹಲಿಲ್ಲವೆಂದು ಸರ್ಕಾರದವರಭಿಪ್ರಾಯಪಟ್ಟಿರುತ್ತಾರೆ. ನೀಚವಾದ ಅಪರಾಧಗಳಲ್ಲಿ ಸ್ಮೃತಿತಪ್ಪುವಂಥ ವಿಷಧವನ್ನು ಕೊಟ್ಟಿರುವ ಅಪರಾಧಗಳು ೧೫ ಇರುತ್ತವೆ. ಈ ವರ್ಷದಲ್ಲಿ ದನಗಳ ಕಳವು ಹೆಚ್ಚಾಗಿ ನಡೆದಿರುತ್ತದೆ. ಮುಖ್ಯವಾಗಿ ಈ ಪ್ರಾಣಿಗಳ ಚರ್ಮದಾಸೆಯಿಂದ ಈ ವಿಧವಾದ ಅಪರಾಧಗಳು ನಡೆಯುವುದರಿಂದ ತೊಗಲಿನ ವ್ಯಾಪಾರ ಸಂಬಂಧವಾಗಿ ಕೆಲ ನಿರ್ಬಂಧವನ್ನು ಕಲ್ಪಿಸಬೇಕೆಂದು ಇ|| ಜನರಲ್‌ರವರು ಸೂಚಿಸಿರುವುದರಮೇಲೆ, "ಇತರವಿಧವಾದ ತೊಂದರೆ ಇಲ್ಲದಹಾಗೆ ತಕ್ಕುಪಾಯವನ್ನು ಕಲ್ಪಿಸುವುದು ಕಷ್ಟತರವಾದುದರಿಂದ, ಪೋಲೀಸರು ದನಗಳ ಕಳ್ಳತನವು ನಡಿಯದಂತೆ ನೋಡಿಕೊಳ್ಳಲೂ, ಕಳ್ಳತನವಾದಲ್ಲಿ ಅದನ್ನು ಕಂಡುಹಿಡಿಯಲೂ ತಕ್ಕ ಎಚ್ಚರಿಕೆಯಿಂದಿರುವಂತೆ ಇ|| ಜನರಲ್ ರವರು ಮಾಡತಕ್ಕದ್ದು." ಎಂದು ಸರ್ಕಾರದವರು ಪ್ರಾರ್ಥಿಸಿರುತ್ತಾರಲ್ಲದೆ, ಈ ವಿಚಾರದಲ್ಲಿ ಗ್ರಾಮ ಪೋಲೀಸರ ಸಹಾಯವು ಅತ್ಯವಶ್ಯಕವಾದುದೆಂದೂ, ಡಿ|| ಮ್ಯಾಜಿಸ್ಟ್ರೇಟರು ಈ ಅಪರಾಧಗಳನ್ನು ಮಾಡಿದವರಿಗೆ ಕಠಿಣತರವಾದ ಶಿಕ್ಷೆಯು ವಿಧಿಸಲ್ಪಡಲು ತಕ್ಕೇರ್ಪಾಟನ್ನು ಮಾಡಬೇಕೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಈ ವರ್ಷದಲ್ಲಿ ಕಳವಾದ ೧೨೮೬೮ ರೂ. ಗಳ ಬೆಲೆಯ ಪದಾರ್ಥಗಳಲ್ಲಿ ೫೧೩೫ ರೂ. ಬೆಲೆಯ ಪದಾರ್ಥಗಳು ಪೋಲೀಸರಿಂದ ಬರಮಾಡಲ್ಪಟ್ಟುವು. ಕಳೆದ ೩ ವರ್ಷಗಳಿಂದಲೂ ಪದಾರ್ಥಗಳ ಕಳವು ಒಂದೇ ಸಮವಾಗಿ ಹೆಚ್ಚುತ್ತಿರುವುದರಿಂದ, ಇದು ಕಡಿಮೆಯಾಗಲು ತಕ್ಕೇರ್ಪಾಟನ್ನಿಡಬೇಕೆಂದು ಸರ್ಕಾರದವರು ತಿಳಿಸಿರುತ್ತಾರೆ. ಈ ವರ್ಷದಲ್ಲಿ ಅಂಥ ಪ್ರಬಲವಾದ ಸುಲಿಗೆಯೇನೂ ನಡಿಯಲಿಲ್ಲವು. ಆದರೆ ೧೯೦೯ ನೇ ಅಕ್ಟೋಬರ್ ತಾ|| ೩ ರಲ್ಲಿ ಕೋಲಾರದಿಂದ ಬೌರಿಂಗ್‌ಪೇಟೆಗೆ ಅಂಚೆಯನ್ನು ತೆಗೆದುಕೊಂಡು ಹೋಗುತ್ತಿದ್ದ ಜಟಕಾಬಂಡಿಯನ್ನು ಕೆಲ ಸುಲಿಗೆಯವರು ಮುತ್ತಿಗೆಹಾಕಿ ಒಳಗಿದ್ದ ಪ್ರಯಾಣಿಕರನ್ನೂ, ಬಂಡಿಯನ್ನು ಹೊಡೆಯುವವನನ್ನೂ ಪ್ರಹರಿಸಿ ಅಂಚೆಯ ಚೀಲವನ್ನು ಅಪಹರಿಸಿಕೊಂಡು ಹೋದರು. ತಾ|| ೩೦ ರಲ್ಲಿ ಅಂಚೆಯ ಚೀಲಗಳು ಕೃತ್ಯ ನಡೆದ ಸ್ಥಳದಿಂದ ೧ ಫರ್ಲಾಂಗು ದೂರದಲ್ಲಿರುವ ಒಂದು ಹೊಲದಲ್ಲಿ ಬಿಸಾಡಲ್ಪಟ್ಟಿದ್ದುದು ದೊರೆಯಿತು. ಕಳುವಾಗಿದ್ದ ನೋಟುಗಳನೇಕವು ಸಿಕ್ಕಿದುವು, ಮತ್ತೂ ಪೋಲೀಸರು ಹಿಡಿದಿದ್ದ ೧೦ ಜನ ಅಪರಾಧಿಗಳಲ್ಲಿ ೫ ಜನರು ಸೆಷನ್ಸ್ ವಿಚಾರಣೆಗೆ ಗುರಿಮಾಡಲ್ಪಟ್ಟು ಉಳಿದವರು ಬಿಡಲ್ಪಟ್ಟರು. ಆ ೫ ಜನರಿಗೆ ಶಿಕ್ಷೆಯು ವಿಧಿಸಲ್ಪಟ್ಟಿತು. ಈ ವರ್ಷದಲ್ಲಿ ಸುಳ್ಳು ಸಾಕ್ಷಿಯನ್ನಿತ್ತ ಇಬ್ಬರಿಗೆ ಶಿಕ್ಷೆಯು ವಿಧಿಸಲ್ಪಟ್ಟಿತು. ಬಾಲ್ಯವಿವಾಹವನ್ನು ಮಾಡಿದ ಅಪರಾಧಕ್ಕೆ ಪೋಲೀಸರಿಂದ ಗುರಿಮಾಡಲ್ಪಟ್ಟಿದ್ದ ೧೨ ಜನರಲ್ಲಿ ೮ ಜನರಿಗೆ ಶಿಕ್ಷೆಯಾಯಿತು.

ಒಟ್ಟು ಶಾಖೆಯಲ್ಲಿ ೯೩೧ ಜನ ಅಧಿಕಾರಿಗಳೂ, ೫,೦೬೫ ಜನ ಕಾನ್ಸ್ಟೇಬಲುಗಳೂ ಇದ್ದರು. ಇದರ ಹಿಂದಿನ ವರ್ಷದಲ್ಲಿ ಅವರ ಸಂಖ್ಯೆಯು ೯೫೫ ಮತ್ತೂ ೫,೧೦೯ ಇದ್ದಿತು. ಹೊಸದಾಗಿ ೨೪ ಸಬ್ ಇನ್ಸ್‌ಪೆಕ್ಟರುಗಳೂ, ಜಮೇದಾರರೂ ನೇಮಿಸಲ್ಪಟ್ಟು, ೨೯ ದಫೇದಾರರೂ, ೨೫ ಕಾನ್ಸ್ಟೇಬಲುಗಳೂ ಕಡಿಮೆಮಾಡಲ್ಪಟ್ಟರು. ಈ ಶಾಖೆಗಾಗಿ ಒಟ್ಟು ೯,೯೫,೯೫೪ ರೂ. ವ್ಯಯವಾಗಿರುವುದು. ಇದರ ಹಿಂದಣ ವರ್ಷದಲ್ಲಿ ೧೦೯೮೧೫ ರೂ. ವ್ಯಯವಾಗಿದ್ದಿತು. ಒಬ್ಬ ದಫೇದಾರ ಮತ್ತೂ ೭೯ ಕಾನಸ್ಟೇಬಲುಗಳು ಮ್ಯಾಜಿಸ್ಟ್ರೇಟರಿಂದ ಶಿಕ್ಷೆವಿಧಿಸಲ್ಪಟ್ಟರು. ಒಬ್ಬಧಿಕಾರಿಯೂ ೧೦೩ ಜನರೂ ಕೆಲಸದಿಂದ ನಿವೃತ್ತಿಗೊಳಿಸಲ್ಪಟ್ಟರು, ಮತ್ತೂ ೨೦೬ ಅಧಿಕಾರಿಗಳೂ, ೧೯೬೫ ಜನರೂ ಕೆಳಗಿನ ತರಗತಿಗಿಳಿಸಲ್ಪಟ್ಟರು. ಒಳ್ಳೇ ನಡತೆಗಾಗಿಯೂ, ಸಾಹಸ ಕಾರ್ಯಕ್ಕಾಗಿಯೂ ಅಧಿಕಾರಿಗಳು ಸೇರಿ ೬೮ ಜನರು ಉದ್ಯೋಗಾಭಿವೃದ್ಧಿಗೊಳಿಸಲ್ಪಟ್ಟು ಮತ್ತೂ ೩೫೫ ಜನರು ಹಣವನ್ನು ಕೊಡಲ್ಪಟ್ಟು ಬಹುಮಾನಿಸಲ್ಪಟ್ಟರು. ಅನುಮಾನಾಸ್ಪದರಾದ ಜನರು ಇರುವ ಮತ್ತೂ ಹೋಗುವ ಸ್ಥಳ ಮೊದಲಾದುವುಗಳನ್ನು ಕಂಡುಹಿಡಿದು ಅವರ ಮೇಲೆ ತಕ್ಕ ಎಚ್ಚರಿಕೆಯಿಂದಿರಲು ಏರ್ಪಟ್ಟಿರುವ ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಶಾಖೆಯಲ್ಲಿ ೨ ಇನ್ಸ್‌ಪೆಕ್ಟರೂ, ೨ ಜಮೇದಾರರೂ ಮತ್ತೂ ೬ ಕಾನಸ್ಟೇಬಲುಗಳೂ ಇರುವರು. ಈ ಶಾಖೆಯು ಇನ್ನೊಂದು ವರ್ಷಕಾಲ ಇರುವಂತೆ ಅಪ್ಪಣೆಯಾಗಿರುತ್ತದೆ. ಮೈಸೂರು ಮತ್ತೂ ಬೆಂಗಳೂರು ಪಟ್ಟಣಗಳ ಹೊರತು ಸಂಸ್ಥಾನದ ಎಲ್ಲ ಕಡೆಯೂ ಆಚರಣೆಯಲ್ಲಿರುವ ಇನ್‌ವೆಸ್ಟಿಗೇಷನ್ ಸೆಂಟರ್‌ಸ್ಕೀಂ ಏರ್ಪಾಟಿನಿಂದ ಪ್ರಬಲವಾದಪರಾಧಗಳನ್ನು ಕೂಡಲೆ ಕಂಡುಹಿಡಿಯಲು ಅವಕಾಶವಿಲ್ಲದೆ, ಮುಖ್ಯವಾದ ನಿದರ್ಶನಗಳನ್ನು ಕಳೆದುಕೊಳ್ಳಲವಕಾಶವಾಗಿರುತ್ತದೆಂದು ಪ್ರಜಾಪ್ರತಿನಿಧಿ ಸಭೆಯಲ್ಲಿ ದೂರು ಬಂದಿರುವುದರಿಂದ, ಇ|| ಜನರಲ್‌ರವರು ಈ ವಿಚಾರದಲ್ಲಿ ತಕ್ಕ ಗಮನವನ್ನು ಕೊಟ್ಟು ಮುಂದಿನ ವರದಿಯಲ್ಲಿ ತಮ್ಮಭಿಪ್ರಾಯವನ್ನು ತಿಳುಹತಕ್ಕದು. ಎಂದು ಸರ್ಕಾರದವರು ಅಪೇಕ್ಷಿಸಿರುತ್ತಾರೆ. ೧೯೦೯ನೇ ನವಂಬರಿನಲ್ಲಿ ವೈಸ್ರಾಯರು ಈ ಸೀಮೆಗೆ ದಯಮಾಡಿಸಿದ್ದ ಸಂದರ್ಭದಲ್ಲೂ, ೧೯೧೦ ನೇ ಮಾರ್ಚಿಯಲ್ಲಿ ಶ್ರವಣಬೆಳಗೊಳದಲ್ಲಿ ನಡೆದ ಮಸ್ತಕಾಭಿಷೇಕ ಕಾಲದಲ್ಲೂ, ೧೯೧೦ ನೇ ಜೂನ್ ತಿಂಗಳಲ್ಲಿ ರಾಜಧಾನಿಯಲ್ಲಿ ಜರಗಿದ ಶ್ರೀಮದ್ಯುವರಾಜರ ವಿವಾಹಮಹೋತ್ಸವದಲ್ಲೂ ಜನರು ವಿಶೇಷವಾಗಿ ಸೇರಿರುವಾಗ್ಗೆ ಪೋಲೀಸರು ಬಹು ಸಮರ್ಥತೆಯಿಂದ ಕೆಲಸವನ್ನು ನಿರ್ವಹಿಸಿದುದಕ್ಕಾಗಿ ಸರ್ಕಾರದವರು ತಮ್ಮ ಮೆಚ್ಚಿಗೆಯನ್ನು ತಿಳಿಸಿರುತ್ತಾರೆ.

"ಪೋಲೀಸು ಶಾಖೆಯು ಉದ್ಯೋಗಕ್ಕೆ ಉತ್ತಮರನ್ನು ಸೇರಿಸಬೇಕೆಂಬಭಿಪ್ರಾಯದಿಂದ ಈ ವರ್ಷದಲ್ಲಿ ೩ ಜನ ಗ್ರಾಜ್ಯುಯೇಟ್‌ಗಳನ್ನು ಇನ್ಸ್‌ಪೆಕ್ಟರನ್ನಾಗಿಯೂ, ಇಬ್ಬರು ಗ್ರಾಜ್ಯುಯೇಟುಗಳನ್ನೂ, ಇಬ್ಬರು ಎಫ್. ಎ., ಮತ್ತಿಬ್ಬರು ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟಿರುವವರನ್ನೂ ೨ ನೇ ತರಗತಿ ಜಮಾದಾರರನ್ನಾಗಿಯೂ ನೇಮಿಸಿದುದಾಯಿತು. ಪೋಲೀಸು ಟ್ರೇನಿಂಗ್ ಸ್ಕೂಲಿನಲ್ಲಿ ಓದುತ್ತಿರುವವರಲ್ಲಿ ಮೆಟ್ರಿಕ್ಯುಲೇಷನ್ ಮತ್ತೂ ಎಫ್. ಎ., ಪರೀಕ್ಷೆ ಕೊಟ್ಟಿರುವವರೇ ಹೆಚ್ಚಾಗಿರುವರು. ಇದರಿಂದ ಈ ಶಾಖೆಗೆ ವಿದ್ಯಾವಂತರಾದ ಯುವಕರು ಸೇರಲು ಹೆಚ್ಚು ಕುತೂಹಲ ವಿರುವುವಾಗಿ ಕಂಡುಬರುತ್ತದೆ. ಅದುಕಾರಣ ಮೆಟ್ರಿಕ್ಯುಲೇಷನ್ ಮತ್ತೂ ಅದರಮೇಲ್ಪಟ್ಟ ಪರೀಕ್ಷೆ ಕೊಟ್ಟಿರುವವರನ್ನು ಕೆಲಸಕ್ಕೆ ಸೇರಿಸಬೇಕೆಂದು ವಿಧಿಯು ಮಾಡಲ್ಪಟ್ಟಿರುವುದು. ಕಾನೆಸ್ಟಬಲ್ ಕೆಲಸಕ್ಕೆ ಕೀಳುಜಾತಿಯ ಜನರೇ ಹೆಚ್ಚಾಗಿ ಸೇರತಕ್ಕವರಾದುದರಿಂದ, ಬಹಳ ಕೆಲಸಗಳು ಖಾಲಿಯಾಗಿ ಬಿದ್ದಿರುವುವು. ಇದಕ್ಕೆ ಸೂಪರಿಂಟೆಂಡೆಂಟರುಗಳು ಸರಿಯಾದ ಜನರನ್ನು ಆರಿಸುವಲ್ಲಿ ತಕ್ಕ ಗಮನವನ್ನು ಕೊಡದೆ ಇರುವುದು ಉತ್ತಮರು ಸೇರದಿರಲೂ, ಕಾನೆಸ್ಟಬಲರುಗಳ ಸಂಬಳವು ಕಡಿಮೆಯಾದುದರಿಂದ ಅನೇಕ ಕೆಲಸಗಳು ಖಾಲಿ ಬಿದ್ದಿರಲೂ ಕಾರಣವಾಗಿದೆ. ಈ ನ್ಯೂನತೆಯನ್ನು ಹೋಗಲಾಡಿಸಬೇಕೆಂಬುದರಮೇಲೆ ಈಗ ಕೆಲಸದಮೇಲಿರುವ ಕಾನೆಸ್ಟಬಲುಗಳಿಗೆ ಉತ್ತಮವಾದ ಶಿಕ್ಷೆಯನ್ನು ಕೊಡಲು ಮತ್ತೂ ಉತ್ತಮರಾದ ಜನರನ್ನು ಸ್ಕೂಲಿಗೆ ಸೇರಿಸಲು ಅನುಕೂಲವಾಗುವಂತೆ ಬೆಂಗಳೂರಲ್ಲಿ ಒಂದು ಸೆಂಟ್ರಲ್ ಟ್ರೇನಿಂಗ್ ಸ್ಕೂಲನ್ನು ಸ್ಥಾಪಿಸಬೇಕೆಂದೂ, ಸರ್ಕಾರಕ್ಕೆ ಸೂಚಿಸಿರುತ್ತೆ. ಮತ್ತೂ ಕಾನೆಸ್ಟಬಲುಗಳ ಸಂಬಳವನ್ನು ಹೆಚ್ಚಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂದಿರುತ್ತೇನೆ." ಎಂದು ಇ|| ಜನರಲ್ ರವರು ಬರೆದಿರುತ್ತಾರೆ. ಮತ್ತೂ ಮ|| ಎಲ್. ಕೃಷ್ಣರಾಯರು, ಮ|| ಟಿ. ಎಫ್. ವಿಕ್ಕರ್ಸ್ಟರವರೂ ೨೦ ವರ್ಷಕಾಲ ಈ ಶಾಖೆಯಲ್ಲಿ ಒಳ್ಳೇ ಕೆಲಸವನ್ನು ಮಾಡಿದುದಕ್ಕಾಗಿ ತಮ್ಮ ಮೆಚ್ಚಿಗೆಯನ್ನು ಪ್ರದರ್ಶಿಸಿರುವರಲ್ಲದೆ ಮ|| ಗಳಾದ ಬಿ. ಎಸ್. ರಾಣೋಜಿರಾಯರೂ, ಬಿ. ರಾಮಸ್ವಾಮಯ್ಯನವರೂ, ಮ|| ಎಸ್. ಎಂ. ಪಿಚರ್ಸ್‌ರವರೂ ಸಮರ್ಥತೆಯಿಂದ ಕೆಲಸವನ್ನು ನಿರ್ವಹಿಸಿರುತ್ತಾರೆಂದು ತಿಳಿಸಿರುತ್ತಾರೆ.

ಪ್ರಜೆಗಳ ಮಾನ, ಪ್ರಾಣ ಮತ್ತೂ ಧನ ಇವುಗಳನ್ನು ಕಾಯುವುದಕ್ಕಾಗಿಯೇ ಪೋಲೀಸು ಶಾಖೆ ಏರ್ಪಟ್ಟಿರುವುದೆಂಬುದನ್ನೆಲ್ಲರೂ ಬಲ್ಲರು. ಇಂಥ ಉತ್ತರವಾದಿತ್ವವನ್ನು ವಹಿಸಿರುವ ಶಾಖೆಯಲ್ಲಿ ಕೆಲಸಮಾಡತಕ್ಕವರು ನಿಸ್ಪೃಹರೂ, ಪಾಪಭೀತಿಯುಳ್ಳವರೂ, ಧೈರ್ಯಶಾಲಿಗಳೂ, ವಿದ್ಯಾವಂತರೂ ಆಗಿರಬೇಕು. ಈ ಗುಣಯುಕ್ತರು ಒಳ್ಳೇ ತರಗತಿಯ ಜನರಲ್ಲಿ ವಿನಹಾ ಸಾಮಾನ್ಯರಲ್ಲಿ ದೊರೆಯುವುದಿಲ್ಲವು. ಅಂಥವರು ಈ ಉದ್ಯೋಗಕ್ಕೆ ಬರಬೇಕಾದರೆ ಅವರಿಗೆ ತಕ್ಕ ಸಂಬಳವು ಕೊಡಲ್ಪಡಬೇಕು. ಹಾಗಲ್ಲದಿದ್ದರೆ ಇ|| ಜನರಲ್‌ರವರು ಹೇಳಿರುವಂತೆ ಈಗ ದೊರೆಯುವ ಅಲ್ಪ ಸಂಬಳಕ್ಕೆ ಬರತಕ್ಕವರು ಯಾವ ನೀಚಕೃತ್ಯವನ್ನಾದರೂ ಮಾಡಲು ಸಿದ್ಧರಾಗಿರುವ ಮತ್ತೂ ಬೇರೆ ಜೀವನೋಪಾಯಕ್ಕೆ ಅವಕಾಶವಿಲ್ಲದ ಸಾಮಾನ್ಯಜನರಾಗಿರುವರು. ಇವರೂ ತಮಗೆ ಬರುವ ಸಂಬಳವು ಸಾಲದುದರಿಂದ ಇತರರು ಕಳ್ಳತನ ಮಾಡದಂತೆ ಎಚ್ಚರದಿಂದ ನೋಡಿಕೊಳ್ಳುವುದಕ್ಕೆ ಬದಲಾಗಿ ತಾವೇ ಆ ಕೆಲಸವನ್ನು ಮಾಡುವರು, ಅಥವಾ ಮಾಡುವವರಿಗೆ ಸಹಾಯಕರಾಗುವರು. ಹೀಗೆ ಜನರ ರಕ್ಷಣೆಗಾಗಿರುವವರೇ ಕಂಟಕಪ್ರಾಯರಾದಮೇಲೆ ಅವರಿದ್ದು ಪ್ರಯೋಜನವೇನು? ಅದುಕಾರಣ ಸರ್ಕಾರದವರು ಇತರ ಎಲ್ಲ ಶಾಖೆಗಳಿಗಿಂತಲೂ ಪ್ರಜೆಗಳಿಗೆ ಅತ್ಯವಶ್ಯಕವಾದ ಈ ಶಾಖೆಗೆ ಹೆಚ್ಚು ಗಮನವನ್ನು ಕೊಟ್ಟು ಇನ್ನು ಮುಂದಾದರೂ ನಿಸ್ಪೃಹರಾದ ಜನರನ್ನು ಸೇರಿಸಿ ಈ ಶಾಖೆಯನ್ನು ಉತ್ತಮವಾಗಿಯೂ, ಪ್ರಜೋಪಕಾರಿಯಾಗಿಯೂ ಮಾಡುವರೆಂದು ನಿರೀಕ್ಷಿಸುತ್ತೇವೆ.

ಕಾವೇರೀನದಿಯ ಪ್ರವಾಹವು.

ಕಳೆದ ತಾ|| ೧೬ ರಿಂದ ೪–೫ ದಿನಗಳವರೆಗೆ ಒಂದು ನಿಮಿಷವೂ ವಿರಾಮವಿಲ್ಲದಂತೆ ಮಳೆಯು ಈ ಪ್ರಾಂತದಲ್ಲಿ ಸುರಿದಿತಷ್ಟೆ. ಕೊಡಗಿನಲ್ಲಿ ಇದಕ್ಕಿಂತಲೂ ಅತಿಶಯವಾಗಿ ಮಳೆಯಾದುದರಿಂದ ಕಳೆದ ತಾ|| ೧೯ ರಲ್ಲಿ ಕಾವೇರೀ ನದಿಯಲ್ಲಿ ಪ್ರವಾಹವು ಮಿತಿಮೀರಿ ಬಂದಿತು. ಇಂಥ ಪ್ರವಾಹವು ಕಳೆದ ೪೦–೫೦ ವರ್ಷಗಳಿಂದಲೂ ಬಂದಿರಲಿಲ್ಲವೆಂದು ವೃದ್ಧರು ಹೇಳುತ್ತಾರೆ. ನದಿಯು ಪ್ರವಹಿಸತಕ್ಕ ಕೆಲ ಸ್ಥಳಗಳಲ್ಲಿ ಅಂದರೆ ಯಡತೊರೆಯಲ್ಲಿ ನೀರು ಊರೊಳಗೆ ಮಹಮ್ಮದೀಯರು ವಾಸಿಸುವ ಬೀದಿಗೆ ನುಗ್ಗಿ ೨೦–೩೦ ಮನೆಗಳವರೆಗೆ ನಾಶವಾದುವು. ಪ್ರವಾಹವು ಮಿತಿಮೀರಿಬರುವುದನ್ನು ಕಂಡು ಜನರು ತಂತಮ್ಮ ಮನೆಗಳ ಬಾಗಿಲನ್ನು ಮುಚ್ಚಿ ಭದ್ರಪಡಿಸಿಕೊಂಡು ಊರಹೊರಗೆ ಎತ್ತರವಾದ ಸ್ಥಳಕ್ಕೆ ಹೋಗಿ ನಿಂತುಕೊಂಡಿದ್ದು ಪ್ರವಾಹವು ಕಡಿಮೆಯಾದಮೇಲೆ ಊರೊಳಗೆ ಬಂದರೆಂದು ಕೇಳುತ್ತೇವೆ. ಮೈಸೂರಿಗೆ ಬರತಕ್ಕ ಮಾರ್ಗದಲ್ಲಿ ೪–೫ ಅಡಿ ನೀರು ನಿಂತಿದ್ದು ಬಂಡಿಗಳು ತಿರುಗಾಡಲಿಕ್ಕಿಲ್ಲವಾಗಿತ್ತಂತೆ. ಪ್ರವಾಹವು ಶ್ರೀರಂಗಪಟ್ಟಣದ ಹತ್ತಿರ ೨೫–೨೬ ಅಡಿ ಎತ್ತರದವರೆಗೂ ಬಂದಿದ್ದು ಕಿರಂಗೂರು ಸೇತುವೆಯ ಮೇಲೆ ಹರದಿತು. ಇದರಿಂದ ಸೇತುವೆಯ ಉಭಯಪಾರ್ಶ್ವಗಳಲ್ಲೂ ಕಟ್ಟಿರುವ ನಡುವಿನ ಮಟ್ಟದ ಗೋಡೆಗಳು ಶ್ರೀರಂಗಪಟ್ಟಣದ ಕಡೆ ೨–೩ ಗಜದವರೆಗೂ, ಕಿರಂಗೂರ ಕಡೆ ೬–೭ ಗಜದವರೆಗೂ ಬಿದ್ದುಹೋಗಿವೆ. ಮತ್ತೂ ಶ್ರೀರಂಗಪಟ್ಟಣದ ಕಡೆ ಸೇತುವೆಯ ಹತ್ತಿರ ಬಂಗಾರದೊಡ್ಡಿ ಕಾಲುವೆಯ ಮಗ್ಗುಲಲ್ಲಿರುವ ಮಾರ್ಗದಲ್ಲಿ ಅರ್ಧ ಫರ್ಲಾಂಗಿನವರೆಗೂ ಕಲ್ಲೂ ಮಣ್ಣೂ ಕೊಚ್ಚಿಹೋಗಿ ಹಳ್ಳಬಿದ್ದಿರುತ್ತದೆ. ಶ್ರೀರಂಗಪಟ್ಟಣದ ಕೋಟೆಯ ಪಕ್ಕದಲ್ಲಿ ಪೂರ್ವ ದಿಕ್ಕಿಗಿರುವ ಮಂಟಪಗಳೆಲ್ಲ ನೀರಿನಲ್ಲಿ ಮುಳುಗಿ ಹೋಗಿದ್ದುವು. ಇನ್ನು ೧ ಅಡಿ ನೀರು ಹೆಚ್ಚಾಗಿ ಬಂದಿದ್ದಲ್ಲಿ ಊರೊಳಗೆ ನುಗ್ಗಿ ಅನರ್ಥವಾಗುತ್ತಿದ್ದಿತೆಂದು ಜನರು ಹೇಳುತ್ತಾರೆ. ತಿರಮಕೂಡ್ಲು ನರಸೀಪುರದಲ್ಲಿ ಪ್ರವಾಹವು ತಾಲ್ಲೋಕು ಕಚೇರಿಯೊಳಗೂ, ತಗ್ಗು ಪ್ರದೇಶದಲ್ಲಿದ್ದ ಮನೆಗಳಿಗೂ ನುಗ್ಗಿದ್ದು ಜನರಿಗೆ ಪ್ರಾಣಭಯವನ್ನುಂಟುಮಾಡಿದ್ದಿತು. ನಂಜನಗೂಡಿನಲ್ಲಿ ಕಪಿಲಾನದಿಯ ಪ್ರವಾಹವೂ ಮಿತಿಮೀರಿ ಬಂದು ದಡದಲ್ಲಿರುವ ಮಂಟಪದೇವಸ್ಥಾನಗಳೆಲ್ಲ ಮುಳುಗಿಹೋಗಿದ್ದಿತು. ನೀರು ಗಾಳೀಕೆರೆ ವೀಧಿಯಲ್ಲೂ ಶ್ರೀಕಂಠೇಶ್ವರ ದೇವಸ್ಥಾನದ ವರೆಗೂ ನುಗ್ಗಿದ್ದಿತು. ಶಿವಪಾದಸ್ವಾಮಿಗಳು ತಾವು ದಡದಲ್ಲಿ ಕಟ್ಟಿಸಿರುವ ಶ್ರೀ ಚಾಮುಂಡೇಶ್ವರೀ ದೇವಾಲಯವು ನೀರಿನೊಳಗೆ ಮುಳುಗಿಹೋಗಲು ತಾವು ಆ ದೇವಸ್ಥಾನದ ಗೋಪುರದ ಶಿಖರದ ಮೇಲೆ ಹೋಗಿ ಕುಳಿತುಕೊಂಡು ಜನರು ಎಷ್ಟು ಪ್ರಾರ್ಥಿಸಿದಾಗ್ಯೂ ಕೆಳಗಿಳಿಯದೆ ಅಲ್ಲೇ ೩–೪ ದಿನಗಳವರೆಗೂ ಇದ್ದರು. ಆನೆಯಮೇಲೆ ಹಾಲೂ, ಹಣ್ಣೂ, ಸಕ್ಕರೆಯೂ ಅವರ ಫಲಹಾರಕ್ಕಾಗಿ ತೆಗೆದುಕೊಂಡುಹೋಗಿ ಕೊಡಲ್ಪಡುತಿದ್ದುವು. ಇಂಥ ಪ್ರವಾಹವು ಕಳೆದ ೪೦–೫೦ ವರ್ಷಗಳಿಂದಲೂ ಬಂದಿರಲಿಲ್ಲವೆಂದು ಆಯುಸ್ಥರವರು ಹೇಳುತ್ತಾರೆ. ಶ್ರೀಮನ್ಮಹಾಮಾತೃಶ್ರೀಯವರೂ, ಮಹಾರಾಣಿಯವರು ಮೊದಲಾದ ರಾಣೀವಾಸದವರು ಮೋಟಾರು ಬಂಡಿಗಳಲ್ಲಿ ಕಳೆದ ಗುರುವಾರದಿಂದ ೩–೫ ಬಾರಿ ಶ್ರೀರಂಗಪಟ್ಟಣಕ್ಕೆ ದಯಮಾಡಿಸಿದ್ದು ಪ್ರವಾಹವನ್ನು ಪರಾಂಬರಿಸಿಕೊಂಡು ಬಂದರು. ಡಿ|| ಕಮಿಷನರು ಶ್ರೀರಂಗಪಟ್ಟಣ, ತಿರಮಕೂಡ್ಲು ನರಸೀಪುರ ಮತ್ತೂ ನಂಜನಗೂಡು ಈ ಸ್ಥಳಗಳಿಗೆ ಹೋಗಿದ್ದು ಪ್ರವಾಹವನ್ನು ನೋಡಿಕೊಂಡು ಬಂದರು. ರಾಜಧಾನಿಯಿಂದ ಸಾವಿರಾರು ಜನರು ಗುರುವಾರದಿಂದ ೨–೩ ದಿನಗಳವರೆಗೆ ಬಂಡಿಗಳಲ್ಲಾಗಿ

ಶ್ರೀರಂಗಪಟ್ಟಣಕ್ಕೆ ರೈಲು ಬಂಡಿಯಲ್ಲೂ, ಕುದುರೆಗಳ ಮತ್ತೂ ಎತ್ತುಗಳ ಬಂಡಿಗಳಲ್ಲೂ ಹೋಗಿ ಕಾವೇರಿ ನದಿಯ ಸ್ನಾನ ಪೂಜಾದಿಗಳನ್ನು ತೀರಿಸಿಕೊಂಡು ಮತ್ತೂ ಬಿದ್ದುಹೋದ ಸೇತುವೆಯನ್ನು ನೋಡಿಕೊಂಡು ಬರುತ್ತಿದ್ದರು. ಹೀಗೆ ರೈಲು ಬಂಡಿಯಲ್ಲಿ ಜನಸ್ತೋಮವು ಹೆಚ್ಚಾದುದರಿಂದ ಶುಕ್ರವಾರ ಮತ್ತೂ ಶನಿವಾರ ದಿವಸಗಳಲ್ಲಿ ಬೆಳಗ್ಗೆ ಹೋಗತಕ್ಕ ನಿತ್ಯಗಟ್ಟಲೆಯ ೨ ಬಂಡಿಗಳಲ್ಲದೆ ೨ ಹೆಚ್ಚುಗಟ್ಟಲೆಯ ಬಂಡಿಗಳನ್ನು ಬಿಟ್ಟರು. ಪಶ್ಚಿಮವಾಹಿನಿ ಮತ್ತೂ ಶ್ರೀರಂಗಪಟ್ಟಣದ ಯಾವ ಭಾಗದಲ್ಲಿ ನೋಡಿದರೂ ರಾಜಧಾನಿಯ ಜನರೇ ಕಣ್ಣಿಗೆ ಬೀಳುತ್ತಿದ್ದರು. ಶಿವಮೊಗ್ಗೆಯಲ್ಲಿ ತುಂಗಭದ್ರಾನದಿಯ ಪ್ರವಾಹವೂ ವಿಪರೀತವಾಗಿ ಬಂದು ಒಬ್ಬ ಬ್ರಾಹ್ಮಣ ಹುಡುಗಿಯು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದಂತೆ ಕೇಳುತ್ತೇವೆ. ಇನ್ನಾವ ಅನಾಹುತವು ನಡೆದಿರುವುದೆಂಬ ಬಗೆಗೆ ಇನ್ನೂ ವರ್ತಮಾನವು ಬಂದಿಲ್ಲವು.

ಭರತಖಂಡದ ಕಲಿಭೀಮ.

ಕಲಿಭೀಮನೆಂದು ಹೆಸರ್ಗೊಂಡಿರುವ ಕೋಡಿ ರಾಮಮೂರ್ತಿನಾಯಿಡುಯವರು ತಮ್ಮ ಅದ್ಭುತವಾದ ಅಂಗಸಾಧಕಗಳನ್ನು ಮದ್ರಾಸು ಬೊಂಬಾಯಿ ಮತ್ತೂ ಕಲಕತ್ತಾ ಪಟ್ಟಣಗಳಲ್ಲಿ ಪ್ರದರ್ಶಿಸಿ, ಭಾರತ ಮತ್ತೂ ಆಂಗ್ಲಜನರಿಗೆ ವಿಸ್ಮಯವನ್ನುಂಟುಮಾಡಿ ಪ್ರಸಿದ್ಧಿಯನ್ನು ಹೊಂದಿ ಈಗ ತಮ್ಮ ಅಸಮ ಸಾಹಸವನ್ನು ಯೂರೋಪ್ಯದೇಶದಲ್ಲಿ ಪ್ರದರ್ಶಿಸಲು ಹೊರಟು ಶ್ರೀ ಜಾರ್ಜ್ ಚಕ್ರವರ್ತಿ ದಂಪತಿಗಳ ಕಿರೀಟಧಾರಣ ಮಹೋತ್ಸವ ಸಮಯದಲ್ಲಿ ಅಂದರೆ ಕಳೆದ ಜೂನ್ ತಾ|| ೨೦ ರಲ್ಲಿ ಲಂಡನ್ ಪಟ್ಟಣದಲ್ಲಿ ಕೆಲ ಜನರಿದಿರಿಗೆ ಮಾತ್ರ ತಮ್ಮ ಸಾಧಕಗಳನ್ನು ಮಾಡಿ ತೋರಿಸಿದರು. ಈ ಮೂರ್ತಿಯವರು ಕೆಲ ವರ್ಷಗಳ ಕೆಳಗೆ ಈ ಸಾಧಕಗಳನ್ನು ಅಭ್ಯಾಸಮಾಡಿ ಈಗಿನ ಪ್ರಭುದಂಪತಿಗಳು ೧೯೦೬ ರಲ್ಲಿ ಯುವರಾಜ ದಂಪತಿಗಳಾಗಿ ಮದ್ರಾಸಿಗೆ ಚಿತ್ತೈಸಿದ್ದಾಗ್ಗೆ ಅವರ ಸಮಕ್ಷಮದಲ್ಲಿ ತಮ್ಮ ಸಾಧಕಗಳನ್ನು ಪ್ರದರ್ಶಿಸಿ ಸತ್ಕಾರಕ ಸಂಘದವರಿಂದ ಒಂದು ಭಂಗಾರದ ಪದಕವನ್ನು ಪಡೆದರಲ್ಲದೆ ಹಿಂದೆ ವೈಸ್ರಾಯರಾಗಿದ್ದ ಲಾರ್ಡ್ ಮಿಂಟೋಯವರಿಂದಲೂ ಮದ್ರಾಸಿನ ಗೌರ್ನರಾಗಿದ್ದ ಲಾರ್ಡ್ ಆಂಫಿಲ್‌ರವರಿಂದಲೂ ಬಹುಮಾನಪದಕಗಳನ್ನು ಪಡೆದಿರುವರು. ಮತ್ತೂ ತಮ್ಮ ಅದ್ಭುತಶಕ್ತಿಯನ್ನು ಇಂಗ್ಲೇಂಡ್ ದೇಶದಲ್ಲಿ ಪ್ರದರ್ಶಿಸಬೇಕೆಂದು ಲಾರ್ಡ್ ಆಂಫಿಲ್‌ರವರು ಸೂಚಿಸಿದ್ದುದರ ಮೇಲೆ ಈಗ ಲಂಡನ್ನಿಗೆ ಹೋಗಿರುವರು.

ಇವರು ಪ್ರದರ್ಶಿಸುವ ಅದ್ಭುತ ಸಾಧಕಗಳಲ್ಲಿ ಮುಖ್ಯವಾದುವುಗಳಾವುವೆಂದರೆ:— ೩ ಟನ್ನು (ಟನ್ನು ಒಂದಕ್ಕೆ ೪ ಖಂಡಿ ಅಥವಾ ೨೮೦ ರಾತಲು) ತೂಕವುಳ್ಳ ಆನೆಯನ್ನು ತಮ್ಮ ಎದೆಯಮೇಲೆ ನಡಿಸಿಕೊಳ್ಳುವುದು (ಅವರೆದೆಯಮೇಲೆ ಅರ್ಧಚಂದ್ರಾಕೃತಿಯುಳ್ಳ ಮರದ ತುಂಡು ಮಡಗಲ್ಪಡುವುದು. ಆನೆಯು ಆ ಮರದ ತುಂಡಿನ ಮೇಲೆ ಹತ್ತಿ ತನ್ನ ಭಾರವನ್ನೆಲ್ಲ ಬಿಟ್ಟು ನಡಿಯುವುದು;) ಇದೇ ರೀತಿಯಲ್ಲಿ ಎದೆಯಮೇಲೆ ಹಲಿಗೆಗಳನ್ನು ಮಡಗಿಸಿಕೊಂಡು ೧೪–೧೫ ಜನರು ಕುಳಿತಿರುವ ಬಂಡಿಯನ್ನು ತಮ್ಮ ಮೇಲೆ ಎಳೆಸುವುದು; ಮುಖಕೆಳಗಾಗಿ ಮಲಗಿಕೊಂಡು ಬೆನ್ನಿನಮೇಲೆ ೨೦೦೦ ಪೌಂಡು ತೂಕವುಳ್ಳ ಒಂದು ಕಲ್ಲನ್ನು ಮಡಗಿಸಿಕೊಂಡು ಅದನ್ನು ಕೈಗಳಿಂದ ಮುಟ್ಟದೆ ಹಾಗೆಯೇ ಬಿಸಾಡುವಷ್ಟು ಸಣ್ಣದಾಗುವವರೆಗೂ ಸುತ್ತಿಗೆಗಳಿಂದ ಹೊಡಿಸಿ ಚೂರುಮಾಡಿಸುವುದು; ತಮ್ಮ ಎದೆಯನ್ನು ಅಗಲಮಾಡಿ ತೋರಿಸುವುದು ಮತ್ತೂ ಬಹು ಚಮತ್ಕಾರದಿಂದ ಕಬ್ಬಿನದ ಸರಪಳಿಯನ್ನು ಕಿತ್ತುಬಿಡುವುದು; ಬಹು ವೇಗದಿಂದೋಡುತ್ತಿರುವ ಮೋಟಾರು ಬಂಡಿಯನ್ನು ಕೈಯಿಂದ ಹಿಡಿದು ಥಟ್ಟನೆ ನಿಲ್ಲಿಸಿಬಿಡುವುದು. ಈ ಅಮಾನುಷ ಸಾಧಕಗಳನ್ನು ಇಷ್ಟರಲ್ಲೇ ಇಂಗ್ಲೇಂಡಿನಲ್ಲಿ ಬಹಿರಂಗವಾಗಿ ಪ್ರದರ್ಶಿಸಿ ತಮ್ಮ ದೇಶದ ಸ್ಯಾಂಡೊ ಬಹುಬಲಾಢ್ಯನೆಂದು ತಿಳಿದಿರುವ ಪಾಶ್ಚಾತ್ಯರಿಗೆಲ್ಲ ವಿಸ್ಮಯವನ್ನುಂಟುಮಾಡಿ ಅಪಾರವಾದ ಬಹುಮಾನಗಳನ್ನುಹೊಂದಿ ಭರತಖಂಡಕ್ಕೂ ಕೀರ್ತಿಪ್ರತಿಷ್ಠೆಯನ್ನು ತರುವರೆಂದು ನಿರೀಕ್ಷಿಸಲ್ಪಟ್ಟಿದೆ.

ಒಳದೇಶದವೃತ್ತಾಂತ.

ಮೈಸೂರ ಜನರಲ್ ಆಸ್ಪತ್ರೆಯ ಕೆಲಸದಲ್ಲಿದ್ದ ಡಾ|| ಟಿ. ಎಸ್. ಸಿದ್ದಪ್ಪನವರು ರಾಜಧಾನಿಯಲ್ಲಿ ಇನಾಕ್ಯುಲೇಷನ್ ಮಾಡಲು ನೇಮಿಸಲ್ಪಟ್ಟಿರುತ್ತಾರೆ.

ಬೆಂಗಳೂರ ಸಿಟಿ ಮ್ಯಾಜಿಸ್ಟ್ರೇಟರಾದ ಮ|| ಬಿ. ವೆಂಕೋಬರಾವ್, ಬಿ. ಎ., ಯವರು ನಂಜನಗೂಡು ಸಬ್ ಡಿವಿಷನ್ ಛಾರ್ಜಿನಲ್ಲಿರಲು ನೇಮಿಸಲ್ಪಟ್ಟಿರುತ್ತಾರೆ.

ತಿರುಮಕೂಡ್ಲು ನರಸೀಪುರ ತಾ|| ಅಮಲ್ದಾರ್ ಮ|| ಎಸ್. ವೆಂಕಟರಮಣಸ್ವಾಮಿಯವರಿಗೆ ಕೊಡಲ್ಪಟ್ಟಿದ್ದ ೧೫ ದಿನಗಳ ರಜವು ಇನ್ನೂ ೧೫ ದಿನಗಳಿಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಅಮಲ್ದಾರ್ ಮ|| ಪಿ. ಸುಬ್ಬರಾವ್, ಬಿ.ಎ., ಬಿ.ಎಲ್., ರವರು ಕೊಪ್ಪ ತಾ|| ಗೆ ಬದಲು ತರೀಕೆರೆ ತಾ|| ಗೂ, ಅ|| ಅಮಲ್ದಾರ್ ಮ|| ವಾಸುದೇವರಾವ್, ಬಿ. ಎ., ಯವರು ತರೀಕೆರೆಯಿಂದ ಕೊಪ್ಪ ತಾ|| ಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಪೋಲೀಸು ಕಾನ್ಫರೆನ್ಸಿಗಾಗಿ ಬೆಂಗಳೂರಿಗೆ ಬಂದಿದ್ದ ಡಿ|| ಸೂಪರಿಂಟೆಂಡೆಂಟರುಗಳನ್ನು ಇ|| ಜನರಲ್ ಮ|| ದೇವರಾಜ ಅರಸಿನವರು ಕಳೆದ ತಾ|| ೧೯ ರ ಸಾಯಂಕಾಲ ತಮ್ಮ ಬಂಗಲೆಗೆ ಬರಮಾಡಿಕೊಂಡು ಅವರಿಗೆ ಅಲ್ಪಾಹಾರವನ್ನು ಮಾಡಿಸಿದರು.

ರೆವಿನ್ಯೂ ಕಮಿಷನರುದ್ಯೋಗದಿಂದ ನಿವೃತ್ತರಾಗಿರುವ ರಾಜಕಾರ್ಯಪ್ರವೀಣ ರಾ|| ಬ|| ಮ|| ಎಂ. ರಂಗಸ್ವಾಮಯ್ಯಂಗಾರರು ಮೈಸೂರ ದೇಶದ ಸಂಪದಭಿವೃದ್ಧಿಯ ಸಂಘದ ಮೆಂಬರರಾಗಿ ೧೯೧೧ ನೇ ಜುಲೈ ತಾ|| ೧ ರಿಂದ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೧೬,	೧೭,	೧೮,	೧೯,	೨೦,	೨೧,	೨೨
ತಗಲಿದ್ದು.	೫	೨	೬	೪	೩	೫	೩
ಸತ್ತದ್ದು.	೬	೧	೪	೩	೩	೪	೩
ಒಟ್ಟು ಮ.	೩	೫	೯	೯	೧೧	೬	೧೦

ಕಳೆದ ತಾ|| ೧೬ ರಲ್ಲಿ ರಾಜಧಾನಿಯ ಜಗನ್ಮೋಹನ ಪ್ರಾಸಾದದಲ್ಲಾದ ಕುಸ್ತಿಯ ಪಂದ್ಯದಲ್ಲಿ ರಷ್ಯಾಸ್ಟ್ಯಾಂಕೋಯವರು ಹರನಾಮಸಿಂಗನನ್ನು ಕೊಂಚ ಹೊತ್ತಿನಲ್ಲಿ ತಮ್ಮ ಭುಜಬಲದಿಂದ ಕೆಳಗೆ ಕೆಡವಿ ಅವನಹೊಟ್ಟೆಯ ಮೇಲುಗಡೆಗೆ ತಾವು ಬಂದು ಬಿಟ್ಟರು. ಹರನಾಮಸಿಂಗನು ಎರಡನೇಯ ಮೇಳೆ ಕುಸ್ತಿಮಾಡಲು ಧೈರ್ಯವಿಲ್ಲದೆ ಹೋಯಿತು.

ನೆಲಮಂಗಲ ತಾ|| ಮಣ್ಣೆ ಗ್ರಾಮದ ಚಿಕ್ಕಮಾಸ್ತಿಯೆಂಬುವನು ಕಳೆದ ಜೂನ್ ತಾ|| ೨೬ ರಲ್ಲಿ ತನ್ನ ಮಗನಿಗೆ ೩ || ವರ್ಷದ ಹುಡುಗಿಯನ್ನು ತಂದು ವಿವಾಹ ಮಾಡಿದುದಕ್ಕಾಗಿ ಅವನಿಗೆ ೧೦ ರೂ. ದಂಡವನ್ನೂ, ಈ ವಿವಾಹದಲ್ಲಿ ಪೌರೋಹಿತ್ಯವನ್ನು ಮಾಡಿಸಿದ ಹನುಮಂತ ಭಟ್ಟನಿಗೆ ೫ ರೂ. ದಂಡವನ್ನೂ ಬೆಂಗಳೂರ ಡಿ|| ಮ್ಯಾಜಿಸ್ಟ್ರೇಟರು ವಿಧಿಸಿದರು.

ಕಳೆದ ತಾ|| ೧೬ ರಲ್ಲಿ ಶ್ರೀರಂಗಪಟ್ಟಣದಲ್ಲಿ ಶ್ರೀ ರಂಗನಾಥಸ್ವಾಮಿಯ ಹೆಸರಿನಿಂದ ಒಂದು ಪರಸ್ಪರಸಹಾಯ ಸಂಘವು ಸ್ಥಾಪಿಸಲ್ಪಟ್ಟಿತು. ಡೆ|| ಕ|| ಮ|| ಕಾಂತರಾಜ ಅರಸಿನವರು ಮೋಟಾರು ಬಂಡಿಯಲ್ಲಿ ಆ ದಿವಸ ಬೆಳಗ್ಗೆ ಶ್ರೀರಂಗಪಟ್ಟಣಕ್ಕೆ ದಯಮಾಡಿಸಿ ಸಂಘದ ಆರಂಭೋತ್ಸವವನ್ನು ನಡೆಸಿ ಸಾಯಂಕಾಲದವರೆಗೂ ದರಿಯಾದವಲತ್ತು ಉದ್ಯಾನದಲ್ಲಿದ್ದು ಭೋಜನಾದಿಗಳನ್ನು ತೀರಿಸಿಕೊಂಡು ಮ|| ರಾ|| ಗಳಾದ ವೀಣೆ ಶೇಷಣ್ಣನವರು ಮತ್ತೂ ಸುಬ್ಬಣ್ಣನವರು ನುಡಿಸಿದ ವೀಣಾ ನಾದದಿಂದ ತೃಪ್ತರಾಗಿ ಆ ರಾತ್ರಿ ೮ ಗಂಟೆಗೆ ರಾಜಧಾನಿಗೆ ಹಿಂತಿರುಗಿದಯಮಾಡಿಸಿದರು.

ಹೊಸೂರಿನಲ್ಲಿ ಕಳೆದ ೪ ವರ್ಷಗಳಿಂದಲೂ ಪ್ಲೇಗುರೋಗದ ಹಾವಳಿಯು ಇಲ್ಲದಿದ್ದು ಈಗ ಪುನಹ ಆರಂಭವಾಗಿ ಆಗಲೇ ೩೦ ರವರೆಗೆ ಮರಣವಾಯಿತು. ಈ ಜಾಡ್ಯವು ಇತರಕಡೆಗೆ ಹರಡದಂತೆ ಅನೇಕ ಕಡೆಗಳಲ್ಲಿ ಪ್ರಯಾಣಿಕರಿಗೆ ಪ್ಯಾಸ್‌ಪೋರ್ಟನ್ನು ಕೊಡಲೇರ್ಪಡಿಸಿ ಶುಚಿಯನ್ನು ಮಾಡತಕ್ಕ ಜನರ ಸಂಖ್ಯೆಯನ್ನು ಹೆಚ್ಚಿಸಿರುವರು. ಹೀಗಿದ್ದರೂ ಈ ತಾ|| ಗೆ ಸೇರಿದ ಕೆಲ ಗ್ರಾಮಗಳಿಗೆ ರೋಗವು ಹರಡಿರುವುದು. ಧರ್ಮಪುರಿಯಿಂದ ರಾಯಕೋಟೆ ಮತ್ತೂ ಹೊಸೂರು ಮಾರ್ಗವಾಗಿ ಕೆಲಮಂಗಲಕ್ಕೂ ಅಲ್ಲಿಂದ ಸೇನೆಯ ಕುದುರೆಗಳನ್ನು ಸಾಕುತ್ತಿರುವ ಮುತ್ತಿಗಿರಿಗೂ ಹಾಕಲ್ಪಡುವ ರೈಲು ಮಾರ್ಗವು ಈಗ ಹೊಸೂರವರೆಗೆ ಮುಗಿದಿರುತ್ತದೆ. ಪ್ರಾಯಶಃ ಇನ್ನು ೧ ವರ್ಷದಲ್ಲಿ ಕೆಲಸವೆಲ್ಲವೂ ಪೂರೈಸಿ ಬಂಡಿಗಳು ನಡಿಸಲ್ಪಡಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಬೆಂಗಳೂರಲ್ಲಿ ಕಳೆದ ಗುರುವಾರ ಸಾಯಂಕಾಲ ೧ ನೇ ಕೌನ್ಸಿಲರ್ ಮ|| ಕೆ. ಪಿ. ಪುಟ್ಟಣ್ಣಶೆಟ್ಟರ ಎರಡು ಕುದುರೆಯ ಬಂಡಿಯು ಅವರನ್ನು ಮನೆಗೆ ಕರೆದುಕೊಂಡು ಹೋಗಲು ಪಬ್ಲಿಕ್ ಆಫೀಸ್ ಕಟ್ಟಡದ ಹೊರಗಡೆ ನಿಂತಿರುವಾಗ್ಗೆ ಅಲ್ಲಿಗೆ ಸರ್ಕಾರಿಯ ಮೋಟಾರು ಬಂಡಿಯು ಬಂದು ಥಟ್ಟನೆ ನಿಂತುಕೊಂಡಿತು. ಆಗ ಕುದುರೆಗಳು ಬೆದರಿ ಓಡಿದವು. ಬಂಡಿಯು ವಿದ್ಯುಲ್ಲತೆಯ ದೀಪದ ಕಂಭಕ್ಕೆ ತಗಲಿ ಅದರ ಮೂಕಿಯು ಮುರಿದುಹೋಗಲು ಒಂದು ಕುದುರೆಯು ಬಂಧನದಿಂದ ಬಿಡಿಸಿಕೊಂಡೋಡಿತು. ಮತ್ತೊಂದು ಬಂಡಿಯನ್ನೆಳೆದುಕೊಂಡು ಕೊಂಚದೂರ ಹೋಗುವಷ್ಟರಲ್ಲಿ ಬಂಡಿಯನ್ನು ಹೊಡೆಯುವವರು ಹಿಡಿದು ನಿಲ್ಲಿಸಿದರು. ಮತ್ತೂ ಓಡಿಹೋಗಿದ್ದ ಕುದುರೆಯನ್ನು ಹಿಡಿದುಕೊಂಡು ಬಂದರು. ಅಷ್ಟರಲ್ಲಿ ಮ|| ಶೆಟ್ಟರು ಬಂದು ಬಂಡಿಯನ್ನು ಹೊಡೆಯುವವರಿಗೆ ಅಪಾಯವೇನೂ ಆಗದಿದ್ದುದಕ್ಕಾಗಿ ಸಂತೋಷಪಟ್ಟು ಬೇರೆ ಬಂಡಿಯಲ್ಲಿ ಕುಳಿತು ಮನೆಗೆ ತೆರಳಿದರು.

ವರ್ತಮಾನ ಸಂಗ್ರಹ.

ಬರುವ ಸಾರ್ವಜನಿಕ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಲು ಮ|| ರಾಮ್ಸೆ ಮೆಕ್‌ಡೊನಾಲ್ಡ್‌ಯವರನ್ನು ಪ್ರಾರ್ಥಿಸಬೇಕೆಂದು ಪ್ರಾಂತಿಕಸಭೆಯವರು ಯೋಚಿಸಿರುತ್ತಾರೆ.

ಸ್ವದೇಶೀ ವಿಚಾರವಾಗಿ ಉಪನ್ಯಾಸಗಳನ್ನು ಮಾಡುವುದಕ್ಕೆ ಲಿಯಾಕತ್ ಹುಸೇನನು ಕ್ಲುಪ್ತಕಾಲಾನಂತರ ಸಭೆಯನ್ನು ಸೇರಿಸಕೂಡದೆಂದು ಚೀಫ್ ಮ್ಯಾಜಿಸ್ಟ್ರೇಟರು ಮಾಡಿದ್ದ ಅಪ್ಪಣೆಯನ್ನುಲ್ಲಂಘಿಸಿದ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿರುವನು.

ಬೊಂಬಾಯಿನಲ್ಲಿ ೩ ವಾರಗಳ ಕೆಳಗೆ ಒಂದೇಸಮವಾಗಿ ೫ ದಿನಗಳ ವರೆಗೆ ದೊಡ್ಡಮಳೆಯಾಯಿತು. ಅಲ್ಲಿಂದೀಚೆಗೆ ಬಿಸಿಲು ಅತ್ಯಂತ ಹೆಚ್ಚಾಗಿರುತ್ತದೆ. ಇಷ್ಟರಲ್ಲೇ ಮಳೆಯು ಬಾರದಿದ್ದಲ್ಲಿ ಕ್ಷಾಮವು ಪ್ರಾಪ್ತವಾಗುವುದೆಂದು ನಿರೀಕ್ಷಿಸಲ್ಪಟ್ಟಿದೆ. ಕೂಡಲೆ ಮಳೆಯು ಬರುವುದಕ್ಕಾಗಿ ಯಾಗವನು ಮಾಡಿಸಬೇಕೆಂದು ಅಲ್ಲಿಯ ವರ್ತಕರೆಲ್ಲರೂ ಚಂದಾಹಣವನ್ನು ಕೂಡಿಸುತ್ತಿರುವರು.

ಕಳೆದ ತಾ|| ೧೫ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೧೫೩೨ ಜನರಿಗೆ ಪ್ಲೇಗುರೋಗವು ತಗಲಿ ೧೧೯೯ ಜನರು ಸತ್ತರು. ಇವರಲ್ಲಿ ಬೊಂಬಾಯಾಧಿಪತ್ಯದಲ್ಲಿ ೩೦೯; ಮದ್ರಾಸಾಧಿಪತ್ಯದಲ್ಲಿ ೫೯; ಬಂಗಾಳಾದಲ್ಲಿ ೩೧; ಸಂಯುಕ್ತಪ್ರಾಂತಗಳಲ್ಲಿ ೫೫; ಪಂಜಾಬಿನಲ್ಲಿ ೧೨೦; ಬರ್ಮಾದಲ್ಲಿ ೧೩೦; ಮಧ್ಯಪ್ರಾಂತಗಳಲ್ಲಿ ೪ ಮತ್ತೂ ಮೈಸೂರುಸೀಮೆಯಲ್ಲಿ ೩೧೯ ಈ ಪ್ರಕಾರ ಮರಣಗಳಾಗಿರುತ್ತವೆ.

ಕಳೆದ ತಾ|| ೨೧ ರ ರಾತ್ರಿ ಬೆಂಗಳೂರಿಂದ ಮದ್ರಾಸಿಗೆ ಹೊರಟ ರೈಲುಬಂಡಿಯು ಶೋಲಿಂಗರ್ ಸ್ಟೇಷನನ್ನು ಬಿಟ್ಟು ಹೋಗುವಾಗ್ಗೆ ೧೫ ವರ್ಷ ವಯಸ್ಸಿನ ಒಬ್ಬ ಹಿಂದೂ ಹೆಂಗುಸು ತನ್ನ ಪಕ್ಕದಲ್ಲಿದ್ದ ಜನರಿಗೆ ಸ್ಥಳವನ್ನು ಕೊಡುವುದಕ್ಕಾಗಿ ತಾನು ಎದ್ದು ನಿಂತುಕೊಂಡು ಬಾಗಿಲನ್ನೊರಗಿಕೊಂಡು ನಿದ್ದೆಮಾಡುತ್ತಿರುವಾಗ್ಗೆ ಬಂಡಿಯ ಅದರುವಿಕೆಗೆ ಬಂಡಿಯಿಂದ ಹೊರಗೆ ಬಿದ್ದುಬಿಟ್ಟು ಮೂರ್ಛೆತಳೆದಳು. ಆಕೂಡಲೆ ಬಂಡಿಯನ್ನಿಲ್ಲಿಸಿ ಆಕೆಯನ್ನೆತ್ತಿ ಬಂಡಿಯೊಳಗೆ ಹಾಕಿಕೊಂಡುಬಂದು ಮದ್ರಾಸಿನ ಜನರಲ್ ಆಸ್ಪತ್ರೆಗೊಯ್ಯಲ್ಪಟ್ಟಳು. ಆಕೆಗಿನ್ನೂ ಸ್ಮೃತಿಯು ಬಂದಿಲ್ಲವಂತೆ. ಪ್ರಾಯಶಃ ಅಪಾಯಸ್ಥಿತಿಗೆ ಮುಟ್ಟಿ ಬಿದ್ದಿರಬಹುದು.

೧೭೩೫ ರಲ್ಲಿ ಜರ್ಮನಿಯ ಚಕ್ರವರ್ತಿಯಿಂದ ಜನರಲ್ ಮ್ಯೂನಿಕ್ ಎಂಬಾತನಿಗೆ ೬,೫೯,೦೦೦ ರೂಪಾಯಿಯೂ, ಅಪಾರವಾದ ಭೂಮಿಯೂ ಕೊಡಲ್ಪಟ್ಟಿದ್ದಿತು. ಆದರೆ ಜನರಲ್ ಮ್ಯೂನಿಕ್ಕನು ರಷ್ಯಾ ರಾಜ್ಯದಲ್ಲಿ ಕೆಲಸಕ್ಕೆ ಸೇರಿದ್ದ ಅನಂತರ ೨೦ ವರ್ಷಗಳ ವರೆಗೆ ಸೀಮಾಂತ ಶಿಕ್ಷೆಯನ್ನು ವಿಧಿಸಲ್ಪಟ್ಟು ಸೈಬೀರಿಯಾಕ್ಕೆ ಕಳುಹಲ್ಪಟ್ಟಿದ್ದುದರಿಂದ ಚಕ್ರವರ್ತಿಯು ದಯಪಾಲಿಸಿದ್ದ ಹಣವಾಗಲಿ, ಭೂಮಿಯಾಗಲಿ ದೊರೆಯಲಿಲ್ಲವು. ಈಗ ಅವನ ಸಂತತಿಯವರಾದ ಇಬ್ಬರು ತಮ್ಮ ಹಿರಿಯರಿಗೆ ಬರಬೇಕಾಗಿದ್ದ ಆಸ್ತಿಯ ಬೆಲೆಯೂ ೩,೫೯,೦೦೦ ರೂಪಾಯಿ ಮತ್ತೂ ಅದಕ್ಕೆ ಈವರೆಗೆ ಆಗಿರುವ ಬಡ್ಡಿಯೂ ಸೇರಿ ೬,೦೦,೦೦,೦೦೦ ರೂಪಾಯಿಗಳು ಈಗಿನ ಜರ್ಮನ್ ಚಕ್ರವರ್ತಿಯವರಾದ ಕೇಸರ್ ರವರಿಂದ ಬರಬೇಕೆಂದು ಕೋರ್ಟಿನಲ್ಲಿ ವಿವಾದವನ್ನು ಹೂಡಿರುತ್ತಾರೆ.

ಕಳೆದ ತಾ|| ೧೬ ರಲ್ಲಿ ಕಲಕತ್ತಾದಲ್ಲಿ ಇಬ್ಬರು ಪೋಲೀಸರು ಒಂದು ಹಸುವನ್ನು ಕದ್ದಿಟ್ಟುಕೊಂಡಿದ್ದ ಇಬ್ಬರು ಕಟುಕರನ್ನು ಸೆರೆ ಹಿಡಿದಿರುವಾಗ್ಗೆ ಇತರ ೨೫ ಜನ ಮಹಮ್ಮದೀಯ ಕಟುಕರು ಅವರನ್ನು ಬಿಡಿಸಿಕೊಳ್ಳ ಎತ್ನಿಸಿ ಆ ಪೋಲೀಸರ ಮೇಲೆಬಿದ್ದು ಅವರನ್ನು ಚೆನ್ನಾಗಿ ಪ್ರಹರಿಸಲು, ಒಬ್ಬ ಪೋಲೀಸಿನವನು ಬೀದಿಗೋಡಿಬಂದು ಒಂದು ಹಾಲುಗೆತ್ತಿ ಮಾರುವ ಅಂಗಡಿಯೊಳಗೆ ಹೋಗಿ ರಕ್ತವನ್ನು ಕಾರುತ್ತ ಬಿದ್ದುಕೊಂಡನು, ಮತ್ತೊಬ್ಬನು ನೆರೆಯ ಮಸೀದಿಯೊಳಗೆ ನುಗ್ಗಿ ಆ ಕಟುಕರೊಳಗೆ ಬಾರದಂತೆ ಹೊರಬಾಗಿಲನ್ನು ಭದ್ರವಾಗಿ ಮುಚ್ಚಿಕೊಂಡನು. ಆದರೆ ರೌದ್ರಾವತಾರವನ್ನು ತಾಳಿದ್ದ ಆ ಕಟುಕರು ಮಸೀದಿಯ ಬಾಗಿಲನ್ನೊಡೆದು ಒಳಗೆನುಗ್ಗಿ ಆ ಕಾನಸ್ಟಬಲನ್ನು ಹಿಡಿದು ಪ್ರಾಣಹೋಗುವವರೆಗೂ ಪ್ರಹರಿಸುತ್ತಿರುವಷ್ಟರಲ್ಲಿ ಆ ಮಸೀದಿಯಲ್ಲಿದ್ದ ಜನರು ಬಂದು ಆ ಪೋಲೀಸಿನವನನ್ನು ಬಿಡಿಸಿಕೊಂಡು ಆ ಕಟುಕರನ್ನು ಹೊರಗೆ ನೂಕಿಬಿಟ್ಟರು. ಈ ವಿಷಯವು ಪೋಲೀಸು ಠಾಣಕ್ಕೆ ತಿಳಿದು ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಬರುವಷ್ಟರಲ್ಲಿ ಆ ದೊಂಬಿಯ ಜನರು ಪಲಾಯನರಾಗಿದ್ದರು. ಪೆಟ್ಟನ್ನು ತಿಂದ ಇಬ್ಬರು ಪೋಲೀಸರು ಆಸ್ಪತ್ರೆಯಲ್ಲಿ ಅಪಾಯಸ್ಥಿತಿಯಲ್ಲಿರುವರು. ಅನುಮಾನದಮೇಲೆ ಕೆಲ ಕಟುಕರು ಸೆರೆ ಹಿಡಿಯಲ್ಪಟ್ಟಿರುವರು.

ಪತ್ರವ್ಯವಹಾರ.

ವೀರಶೈವರ ವಿದ್ಯಾಭಿವೃದ್ಧಿ.

ಈ ವರ್ಷದಲ್ಲಿ ಅಂದರೆ ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ [illegible]

ಕೆ. ರುದ್ರಪ್ಪನವರು, ಇಂಟರ್‌ಮೀಡಿಯಟ್ ಪರೀಕ್ಷೆಯಲ್ಲಿ ಚೆನ್ನಪಟ್ಟಣದ ಮ|| ಗುರಿಕಾರ್ ಪರಮಶಿವಯ್ಯನವರು, ಮತ್ತು ಮೇ ತಿಂಗಳಲ್ಲಿ ನಡೆದ ಮೈಸೂರ್ ಲೋಕಲ್ ಸರ್ವಿಸ್ ಅಕೌಂಟ್ಸ್ ಹೈಯರ್ ಪರೀಕ್ಷೆಯಲ್ಲಿ ಮ|| ಪೋಲೀಸ್ ಇನ್ಸ್‌ಪೆಕ್ಟರ್ ಜಿ. ಶಾಂತವೀರಪ್ಪ ಬಿ. ಎ., ಯವರು, ಸಿವಿಲ್ ಹೈಯರ್ ಪರೀಕ್ಷೆಯಲ್ಲಿ ಲೇಂವರ್ ಮ|| ಕೆ. ವೀರಣ್ಣನವರು, ಕ್ರಿಮಿನಲ್ ಹೈಯರ್ ಪರೀಕ್ಷೆಯಲ್ಲಿ ತುಮಕೂರು ಪೋರ್‌ಸೀಪ್ ಕೋರ್ಟ್ ಕ್ಲಾರ್ಕ್ ಜಿ. ಕೆ. ಗುರುಸಿಂಗಾರ್ಯರು ಉತ್ತೀರ್ಣರಾಗಿರುವರೆಂಬ ಆನಂದವಾರ್ತೆಯನ್ನು ಈ ವಾರದ ಸ್ಟಾರ್ ಪತ್ರದಲ್ಲಿ ತಿಳಿಯುವುದರ ಮೂಲಕ ವೀರಶೈವ ಜನಾಂಗಕ್ಕೆ ಸಂತೋಷವನ್ನುಂಟುಮಾಡಿ, ನಮ್ಮ ವೀರಶೈವ ತರುಣರು ಶೀಘ್ರವಾಗಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಸಮಾಜ ಸುಧಾರಣೆಗೆ ಉತ್ಸಾಹವನ್ನುಂಟು ಮಾಡಬೇಕಾಗಿ ಪ್ರಾರ್ಥಿಸುತ್ತೇನೆ. ವಿದ್ಯಾಭಿಮಾನಿ.

ರಾಯಚೂರ ಸಂಸ್ಕೃತ ಪಾಠಶಾಲಾಧ್ಯಾಪಕ ಚಂತಕಲ್ಲು ಶಿವಾಮಣಿ ಮಠದ ವೇ|| ಬಸವರಾಜ ಶಾಸ್ತ್ರಿಗಳು ೩-೪ ದಿನಗಳವರೆಗೆ ಅಸ್ವಸ್ಥರಾಗಿದ್ದು ಆಷಾಢ ಬ|| ೨ ಗುರುವಾರ ಕೈಲಾಸವಾಸಿಗಳಾದರೆಂದು ತಿಳಿಸಲು ಅತ್ಯಂತ ದುಃಖವಾಗುತ್ತದೆ. ಇವರು ತಮ್ಮ ತಂದೆಯವರಾದ ಶ್ರೀ ವಿರೂಪಾಕ್ಷ ಶಾಸ್ತ್ರಿಗಳಂತೆ ಸಂಸ್ಕೃತದಲ್ಲಿ ಒಳ್ಳೇ ಪಂಡಿತರಾಗಿದ್ದು, ಈ ಪ್ರಾಂತದಲ್ಲಿ ಪ್ರಸಿದ್ಧರಾಗಿದ್ದರು. ಇವರಿಗೆ ಅವಸಾನಕಾಲದಲ್ಲಿ ೩೦ ವರ್ಷಗಳುಮಾತ್ರವಾಗಿದ್ದಿತು. ಈ ಶಾಸ್ತ್ರಿಗಳು ರಾಯಚೂರ ವೀರಶೈವ ನಿವಾಸಿಗಳಿಗೆ ಬೋಧಿಸಿ ಒಂದು ಸಂಸ್ಕೃತ ಪಾಠಶಾಲೆಯನ್ನು ೮ ವರ್ಷಗಳ ಕೆಳಗೆ ಸ್ಥಾಪನೆಯನ್ನು ಮಾಡಿಸಿ ತದಾರಭ್ಯ ಅಧ್ಯಾಪಕರಾಗಿದ್ದರು. ಇವರಲ್ಲಿ ವ್ಯಾಸಂಗಮಾಡಿದ ವಿದ್ಯಾರ್ಥಿಗಳಲ್ಲಿ ೩-೪ ಜನರು ಒಳ್ಳೇ ವಿದ್ಯಾವಂತರಾಗಿರುವರು. ಈ ಶಾಸ್ತ್ರಿಗಳಿಗೆ ಸಂಸ್ಕೃತದಲ್ಲಿ ಕವಿತೆಯನ್ನು ಮಾಡುವ ಶಕ್ತಿಯು ಚನ್ನಾಗಿದ್ದಿತು. ಇವರು ಬಳ್ಳಾರಿಯ ಕೈ|| ಸಕ್ಕರೆ ಕರಡಪ್ಪನವರ ಜೀವ ಚರಿತ್ರೆಯನ್ನು ರಚಿಸಿರುವರು. ಇವರಿಗೆ ಚಿಕ್ಕವಯಸ್ಸಿನ ಪತ್ನಿಯೂ, ೩ ತಿಂಗಳ ಗಂಡು ಮಗುವೂ ಇರುವವು. ಬಹು ಶಾಂತಸ್ವಭಾವದವರೂ, ಸರಸಿಗಳೂ, ಪ್ರಜಾನುರಾಗಿಗಳೂ ಆದ ಇವರ ಅಕಾಲಮರಣದಿಂದ ರಾಯಿಚೂರಿನಲ್ಲೂ, ಇವರನ್ನು ಕಂಡು ಕೇಳಿರುವ ಇತರ ಕಡೆಯಲ್ಲೂ ಆಬಾಲವೃದ್ಧರಾದಿಯಾಗಿ ಪ್ರತಿಯೊಬ್ಬರೂ ದುಃಖಸಾಗರದಲ್ಲಿ ಮುಳುಗಿರುವಾಗ್ಗೆ ಇನ್ನು ಅವರ ಚಿಕ್ಕವಯಸ್ಸಿನ ಧರ್ಮಪತ್ನಿಯವರ ದುಃಖವನ್ನಿಷ್ಟೆಂದು ಹೇಳತೀರದು. ಶವಸಂಸ್ಕಾರವು ಬಹು ವಿಜೃಂಭಣೆಯಿಂದ ವಿಧ್ಯುಕ್ತವಾಗಿ ನಡಿಸಲ್ಪಟ್ಟಿತು. ಶಾಸ್ತ್ರಿಗಳ ಆತ್ಮಕ್ಕೆ ಶಾಂತಿಯೂ, ಇವರ ಬಾಲ ಪುತ್ರನಿಗೆ ದೀರ್ಘಾಯುರಾರೋಗ್ಯವೂ, ಇವರ ಪತ್ನಿಯವರಿಗೆ ದುಃಖವನ್ನು ಸೈಸಲು ಸ್ಥೈರ್ಯವೂ ಉಂಟಾಗಲೆಂದು ಪ್ರಾರ್ಥಿಸುವ, ಓರ್ವ ಅಭಿಮಾನಿ.

ಧಾರವಾಡ ಜಿಲ್ಲಾ ರಾಣಿಬೆನ್ನೂರ ತಾ|| ಪೈಕಿ ಬ್ಯಾಡಿಗಿಯು ದಕ್ಷಿಣ ಕರ್ನಾಟಕದಲ್ಲಿ ವ್ಯಾಪಾರದಶೆಯಿಂದ ಪ್ರಸಿದ್ಧವಾದದ್ದು ತಮ್ಮಗಳಿಗೆಲ್ಲ ಗೊತ್ತಾಗಿದ್ದ ಸಂಗತಿಯೇ ಅದೆ. ಸದರಿ ಬ್ಯಾಡಿಗಿಯ ಪ್ರಸಿದ್ಧವ್ಯಾಪಾರಸ್ಥರಾದ ಮ|| ರಾ|| ಕರಿಯಪ್ಪ ಚನ್ನಬಸಪ್ಪ ಅಂಕಲಕೋಟಿ ಇವರು ರೇಲ್ವೆಯವರಕಡೆಯಿಂದ ಖಟಪಟ್‌ಮಾಡಿ, ಬ್ಯಾಡಿಗಿ ಊರಲ್ಲಿ ಔಟ್‌ಏಜನ್ಸಿಯ ಕಂಟ್ರಾಕ್ಟ ಮಾಡಿಕೊಂಡು ಆ ಕೆಲಸ ನಡೆಸುವ ಬಗ್ಗೆ ೨೧,೦೦೦ ರೂ. ಗಳನ್ನು ಖರ್ಚುಮಾಡಿ ಒಂದು ಟ್ರ್ಯಾಕ್ಸನ್ನ ಇಂಜನ್ ಗಾಡಿಯನ್ನು ಹಾಗೂ ನಾಲ್ಕು ವಾಗೀನುಗಳನ್ನು ತಂದು ಕೆಲಸ ನಡಿಸಲಿಕ್ಕೆ ಪ್ರಾರಂಭ ಮಾಡಿಧಾರೆ. ಈಗ ಎಷ್ಟೋ ಮಾಲು ಔಟ್ ಏಜನ್ಸಿಯಿಂದಲೇ ರವಾನೆಯಾಗುತ್ತಿದೆ. ನಾನು ಬಹಳ ದಿವಸದಿಂದಲೂ ಬ್ಯಾಡಿಗಿಗೆ ವ್ಯಾಪಾರದದಶೆಯಿಂದ ಹೋಗುತ್ತಿರುತ್ತೇನೆ. ಔಟ್ ಏಜಂನ್ಸಿಯಿಂದ ಮಾಲು ರವಾನೆಯಾದರೆ ವ್ಯಾಪಾರಸ್ಥರಿಗೆ ಬಹಳ ಅನುಕೂಲ. ಹಾಗೂ ಫಾಯಿದೇ ಶೇರ ಕೆಲಸವಿರುವುದೆಂದು ನನ್ನ ಅನುಭವದಿಂದ ಕಂಡುಬಂದ ಸಂಗತಿಯನ್ನು ನಾನು ಕೆಳಗೆ ಬರದು ತಿಳುಹಿಸುತ್ತೇನೆ:—(೧) ಔಟ್ ಏಜನ್ಸಿಯಿಂದ ಬಂದ ಮಾಲು ಅಂಗಡಿಗಳು ಹರಿಯದೇ ಮಾಲು ಕಳುವಾಗಿ ಅಥವಾ ಬೇರೆ ಯಾವತರದಿಂದಲೂ ಲುಕಸಾನಾಗದೆ, ಮೊದಲಿನಕ್ಕಿಂತಲೂ ಸುರಕ್ಷಿತವಾಗಿ ಬಂದು ಮುಟ್ಟುತ್ತಿರುತ್ತಿವೆ. ಪ್ರತಿಯೊಬ್ಬ ವ್ಯಾಪಾರಸ್ಥರು ಔಟ್ ಏಜನ್ಸಿಯ ಮಾಲು ಸುರಕ್ಷಿತವಾಗಿ ಬರುತ್ತಿವೆಯೆಂದು ಹೇಳುತ್ತಿರುವರು. (೨) ಔಟ್ ಏಜನ್ಸಿಯಲ್ಲೇ (ಬ್ಯಾಡಗಿಯ) ಊರಲ್ಲೇ ರೇಲ್ವೆ ರಶೀತಿಯಾಗುವುದರಿಂದ ಆ ಮಾಲಿನಮೇಲೆ ರೇಲ್ವೆಯವರು ವಿಶೇಷ ಕಾಳಜಿಮಾಡಿ ಮೊದಲೇ ಆ ಮಾಲನ್ನು ವಾಗೀನಿಗೆ ಹಾಕಬೇಕೆಂದು ಆರ್ಡರ್ ಮಾಡಿರುತ್ತಾರೆ. ಆದುದರಿಂದ ಆ ಮಾಲು ಲುಕಸಾನಾಗದೆ ನಮಗೆ ಸುರಕ್ಷಿತವಾಗಿ ತೀರ್ವ ಬರುತ್ತವೆ. (೩) ಊರೊಳಗೆ ರಶೀತಿ ವೇಳ್ಯಕ್ಕೆ ಸರಿಯಾಗಿ ಸಿಗುವುದರಿಂದ ಬಹಳ ಅನುಕೂಲವಾಗಿ ಕೆಲಸ ನಡಿಯುತ್ತಿದೆ. ಇದೂಅಲ್ಲದೆ ಇನ್ನೂ ನಮಗೆ ಎಷ್ಟೋ ಅಡಚಣೆಗಳು ದೂರವಾಗಿರುವುವು. ಹಾಗೂ ನಮಗೆ ಬರಬರುತ್ತ ಇದರಿಂದ ಪುಷ್ಕಳ ಫಾಯಿದೆಯಾಗುತ್ತಿರುವುದು. ಈ ಕೆಲಸವು ಬಹಳ ಖಟಪಟಿ ಹಾಗೂ ಮಹತ್ವದ ಕೆಲಸವಾಗಿರುತ್ತದೆ. ನಮ್ಮ ಕರ್ನಾಟಕದಲ್ಲಿ ಯಾವ ಜನಾಂಗದವರೂ ಇಂಥಾ ಇಂಜನ್ ಗಾಡಿ ತರಿಸಿ ಯಾರೂ ಕೆಲಸವನ್ನಡಿಸಿರಲಿಲ್ಲ. ಆದರೆ ಈಗ ಮ|| ಅಂಕಲಕೋಟಿಯವರು ಅಖಂಡ ಧೈರ್ಯಮಾಡಿ ಈ ಕೆಲಸ ನಡಿಸಿರುವುದರಿಂದ ನಮ್ಮ ವೀರಶೈವ ಸಮಾಜಕ್ಕೆ ಭೂಷಣ ಹಾಗೂ ಸಂತೋಷವೇ ಸರಿ. ಆದರೆ ಎಲ್ಲ ಜನರೂ ಇವರಿಗೆ ಎಲ್ಲತರದಿಂದಲೂ ಸಹಾಯಮಾಡಿ ಇವರ ಕೆಲಸಕ್ಕೆ ಹೆಚ್ಚಾಗಿ ಪ್ರೋತ್ಸಾಹಪಡಿಸಿದರೆ ಮುಂದೆ ಇಂಥ ಮಹತ್ವದ ಕೆಲಸಗಳು ನಮ್ಮ ವೀರಶೈವ ಸಮಾಜದಲ್ಲಿ ಕ್ರಮೇಣ ಹೆಚ್ಚಾಗಬಹುದು.

ಓರ್ವ ಪ್ರೇಕ್ಷಕ.

ಬಾಗಲಕೋಟೆ ತಾ|| ಗಲಗಲಿ ಗ್ರಾಮದ ಶ್ರೀ ಕಾಶೀಮಠದಲ್ಲಿ ನಡೆದ ಸತ್ಕಾರ್ಯಗಳು.

ಈ ಊರಲ್ಲಿ ಈ ಮಠವು ಸ್ಥಾಪಿಸಲ್ಪಟ್ಟು ಸುಮಾರು ೨೦೪ ವರ್ಷಗಳಾಗಿರುವುವು. ಸದರಿ ಮಠದ ಸ್ವಾಮಿಗಳು ಗಲಗಲ ದೇಸಾಯರವರ ಗುರುಗಳು. ಈ ಮಠದ ಮೂಲಸ್ವಾಮಿಗಳವರು ಪುಣೆ ಪಟ್ಟಣದಲ್ಲಿ ವಾಸಿಸುತ್ತಿದ್ದರು. ಪುಣೆಯಲ್ಲಿ ಅವರ ಮಠವು ಈಗೂ ಉಂಟು. ಪೇಶ್ವೆಯವರ ರಾಜ್ಯವಾಳಿಕೆಯ ಕಾಲದಲ್ಲಿ ಇಲ್ಲಿಯ ದೇಸಾಯರು ಯಾವುದೋ ಒಂದು ಕಾರಣದಿಂದ ಪುಣೆ ಪಟ್ಟಣದಲ್ಲಿ ಇರುತ್ತಿದ್ದಾಗ್ಗೆ, ಈ ಮಠದ ಮೂಲಸ್ವಾಮಿಗಳವರಿಂದ ಅವರಿಗೆ ಮಹದುಪಕಾರವು ಸಂಭವಿಸಿದ್ದರಿಂದ ಸದರಿ ಸ್ವಾಮಿಗಳನ್ನು ಅವರು ಆಗ್ರಹಪೂರ್ವಕವಾಗಿ ಇಲ್ಲಿಗೆ ಕರೆದುಕೊಂಡು ಬಂದು ಅವರಿಗೆ ಮಠ, ಮಾನ್ಯಗಳನ್ನು ಮಾಡಿಕೊಟ್ಟಿರುವರು. ಈ ಮಠದಲ್ಲಿ ಶ್ರೀ ವಿಶ್ವೇಶ್ವರ ದೇವಾಲಯವು ಬಹು ರಮಣೀಯವಾದದ್ದುಂಟು. ಇಲ್ಲಿಯ ವಿಶ್ವೇಶ್ವರನ ಮೂರ್ತಿಯು ತದ್ರೂಪವಾಗಿ ಕಾಶಿಯಲ್ಲಿರುವ ಮೂರ್ತಿಯಂತೆಯೇ ಇದೆ. ಅಂದರೆ ಕೂರ್ಮಾಕಾರದ ಗದ್ದಿಗೆಯಲ್ಲಿ ಲಿಂಗೋತ್ಪತ್ತಿಯಿದ್ದು, ಬಲಭಾಗದಲ್ಲಿ ಗಣಪತಿಯೂ, ಎಡಭಾಗದಲ್ಲಿ ಷಣ್ಮುಖನೂ, ಹಿಂಭಾಗದಲ್ಲಿ ವೀರಭದ್ರನೂ, ಮುಂಭಾಗದಲ್ಲಿ ಬಸವೇಶ್ವರನೂ ಇದ್ದಾರೆ. ವಿಶ್ವೇಶ್ವರನ ಮೂರ್ತಿಯನ್ನು ಕಾಶಿಯಿಂದಲೇ ತಂದು ಸ್ಥಾಪಿಸಿರುವುದರಿಂದಲೂ, ಸದರೀ ಮಠದ ಮೂಲಸ್ವಾಮಿಗಳವರು ಕೆಲವು ದಿವಸ ಕಾಶಿಯಲ್ಲಿ ವಾಸವಾಗಿದ್ದುದರಿಂದಲೂ ಈ ಮಠಕ್ಕೆ ಕಾಶೀಮಠವೆಂಬ ಅಭಿದಾನವು ಪ್ರಾಪ್ತವಾಗಿದೆ. ಈ ಮಠದಲ್ಲಿದ್ದ ಈಗಿನ ಸ್ವಾಮಿಗಳಾದ ಶ್ರೀ ಶಿವಲಿಂಗದೇವರಾದರೂ ಧರ್ಮಾಚರಣೆ, ವೈದ್ಯ ಮುಂತಾದ ವಿಷಯಗಳಲ್ಲಿ ಬಲಿಷ್ಠರಾಗಿರುವರಲ್ಲದೆ ಯಾವಾಗಲೂ ಪರೋಪಕಾರದಲ್ಲಿಯೇ ಪ್ರವರ್ತಿಸುತ್ತಿರುವರು. ತಮ್ಮ ಮಠದ ಸಂಬಂಧದಿಂದ ಬಂದ ಉತ್ಪನ್ನವನ್ನು ದುರ್ವ್ಯಯಮಾಡದೆ ಅದರಿಂದ ಎರಡುವರುಷಕ್ಕೊಮ್ಮೆ ಸಹಸ್ರಾವಧಿ ಜನ ಮಾಹೇಶ್ವರರನ್ನು ಭೋಜನ ಮುಂತಾದುದರಿಂದ ತೃಪ್ತಿಪಡಿಸುತ್ತಿರುವರು. ಅದರಂತೆಯೇ ಈ ವರುಷವಾದರೂ ಕೆಲವು ಸತ್ಕಾರ್ಯಗಳನ್ನು ನೆರವೇರಿಸಿದರು. ಕಳೆದ ವೈಶಾಖ ವದ್ಯ ದ್ವಿತೀಯಾ ಸೋಮವಾರದ ದಿವಸ ಬೇರೆ ಬೇರೆ ಊರಲ್ಲಿದ್ದ ಬಡಮಾಹೇಶ್ವರರ ಪುತ್ರರನ್ನು ಬರಮಾಡಿಸಿಕೊಂಡು ಅವರ ಅಯ್ಯಾಚಾರವನ್ನು ವಿಧ್ಯುಕ್ತವಾಗಿ ಧರ್ಮಾರ್ಥ ನೆರವೇರಿಸಿಕೊಟ್ಟರು. ಮತ್ತು ತೃತೀಯಾ ಮಂಗಳವಾರದ ದಿವಸ ಮುಂಜಾನೆ ೧೦೮ ಜನ ಮಾಹೇಶ್ವರರ ಕನ್ಯೆ ಮುತ್ತೈದೆಯರಿಗೆ ಸೀರೆ, ಕುಪ್ಪಸ, ಕಂಕಣ ಮುಂತಾದುವುಗಳನ್ನು ಕೊಟ್ಟು ವಿಧ್ಯುಕ್ತವಾಗಿ ಅವರ ಉಡಿಯನ್ನು ತುಂಬಿ ಪೂಜಿಸಿದರು. ಮಂಗಳವಾರದಿಂದ ಮುಂದೆ ೨ ದಿವಸಗಳವರೆಗೆ ಸಹಸ್ರಾವಧಿ ಮಾಹೇಶ್ವರರ ಅನ್ನ ಸಂತರ್ಪಣೆಯು ಮಾಡಲ್ಪಟ್ಟಿತು. ಈ ಎಲ್ಲ ಕಾರ್ಯಗಳೂ ಸಮಾಧಾನಕರವಾಗಿ, ಸಾಂಗವಾಗಿ ಎಲ್ಲರಿಗೂ ಸಂತೋಷವನ್ನುಂಟುಮಾಡಿದುವು. ನಿರಪೇಕ್ಷೆ ಬುದ್ಧಿಯಿಂದ ತಮ್ಮ ಉತ್ಪನ್ನವೆಲ್ಲವನ್ನೂ ಇಂಥ ಸತ್ಕಾರ್ಯಗಳಲ್ಲಿ ವಿನಿಯೋಗಿಸುವುದು ಸಾಮಾನ್ಯ ಮಾತಲ್ಲ. ಇದು ಅವರಿಗೆ ಶ್ರೇಯಸ್ಕರವಾದುದೇ ಸರಿ. ಸರಿಯಾಗಿ ಉತ್ಪನ್ನವುಳ್ಳಂಥಾ ಉಳಿದ ಭಕ್ತಮಾಹೇಶ್ವರರೆಲ್ಲರೂ ತಮ್ಮ ಹಣವನ್ನು ಸತ್ಕಾರ್ಯದಲ್ಲಿ ವಿನಿಯೋಗಿಸಿ ಸಮಾಜ ಹಿತವನ್ನುಂಟುಮಾಡಿ ತಾವು ಇಹಪರ ಸೌಖ್ಯಗಳನ್ನು ಸಾಧಿಸಿಕೊಳ್ಳಲೆಂದು ಅಪೇಕ್ಷಿಸುವ,

ಓರ್ವ ಪ್ರತ್ಯಕ್ಷದರ್ಶಿ.

ಬೀರೂರು ಮಹೋತ್ಸವ.

ಪುತ್ರನಿರ್ವಿಶೇಷದಿಂದ ನಮ್ಮನ್ನಾಳುವ ಶ್ರೀಮನ್ಮಹಾರಾಜಾಧಿರಾಜ ಶ್ರೀ ಕೃಷ್ಣರಾಜ ಒಡೆಯರ್ ಜಿ. ಸಿ. ಐ. ಇ. ಇವರ ನಿಷ್ಕಂಟಕ ಪರಿಪಾಲನೆಯಲ್ಲಿ ಕೃಷಿ, ವಾಣಿಜ್ಯಾದಿ ವ್ಯವಹಾರಗಳಿಂದ ಸಂಪತ್ತನ್ನು ಪಡೆದು ಸಾಹುಕಾರರೆಂದು ಪ್ರಸಿದ್ಧರೆನಿಸಿದ ಶ್ರೀಮಂತ ಬೀರೂರ ಪಶ್ರಿ ಚೆಣಿ ರುದ್ರಪ್ಪಯ್ಯನವರ ಸಹೋದರರಾದ ವೀರಪ್ಪಯ್ಯನವರು ನಾಲ್ಕಾರು ವರ್ಷಗಳಿಂದಲೂ ವಿಶೇಷ ದ್ರವ್ಯ ವ್ಯಯದಿಂದ ಕಟ್ಟಿಸಿದ ತಮ್ಮ ನಿವಾಸೋಚಿತ ನೂತನ ಮಂದಿರದ ಪ್ರವೇಶ ಮಹೋತ್ಸವಕ್ಕೆ ಅನೇಕಕಡೆಯಿಂದ ಇಷ್ಟಮಿತ್ರ ಬಂಧು ಜನಗಳನ್ನು ಮತ್ತು ವಿದ್ವಜ್ಜನರನ್ನು ಹಾಗೂ ರಾಜಕೀಯ ಪುರುಷ ವಿಶೇಷರನ್ನು ಅಲ್ಲದೆ ಪೂಜ್ಯಪಾದ್ಯರೆನಿಸಿದ ಆಚಾರ್ಯ ಪೀಠದವರನ್ನು ಅತ್ಯಂತಾನಂದ ಸಂಭ್ರಮದಿಂದ ದಯಮಾಡಿಸಿಕೊಂಡುಬಂದು ತಮ್ಮ ಸಂಪದ್ವೈಭವಕ್ಕನುಕೂಲವಾಗಿ ಅಭಿನವಭವನವಂ ಪ್ರವೇಶಿಸಿ ಅಲ್ಲಿ ಇಹಪರ ಸುಖಸಾಧಕಗಳಾದ ಷೋಡಶ ದಾನಗಳನ್ನೂ ಏಕಾದಶ ರುದ್ರ ಪೂಜಾಮಹೋತ್ಸವವನ್ನೂ ನೆರವೇರಿಸಿ ಯಾವಾಗ್ಯೂ ನಿಜಕೀರ್ತಿಯು ಭೂಭಾಗದಲ್ಲಿರುವಂತೆ ಮಾಡುವುದಕ್ಕೆ ಯಾವುದಾದರೂ ಅತ್ಯುತ್ತಮ ಧರ್ಮಕಾರ್ಯವನ್ನೆಸಗುತ್ತೇನೆಂಬ ತಮ್ಮ ಸುಭಾಷಣೆಗಳಿಂದ ಸತ್ಕಾರ್ಯಕ್ಕೆ ಅರ್ಹರಾಗಿ ದಯಮಾಡಿಸಿದ ಮಹಾಶಯರನ್ನು ಆನಂದಪಡಿಸಿ ಗಂಧ ಪುಷ್ಪ ತಾಂಬೂಲಾದಿಗಳನ್ನಿತ್ತು ಸರ್ವರ ದಯಾರಸವನ್ನು ಪ್ರಾರ್ಥಿಸಿಕೊಳ್ಳೋಣವೆಂಬ ನಿರತಿಶಯವಾಂಛಾಯುಕ್ತರಾದಾಗ್ಯೂ ಪ್ರವೇಶಮಹೋತ್ಸವಕ್ಕಿಂತಲೂ ಪೂರ್ವದಲ್ಲಿ ಒದಗಿದ ಇತರಕಾರ್ಯಗಳಿಂದುಂಟಾದ ವ್ಯಾಕುಲ ಪ್ರತಿಬಂಧಕದಿಂದ ಸಂಕಲ್ಪಕಾರ್ಯಗಳಿಗೆ ಅವಕಾಶ ಒದಗದೆ ಕೇವಲ ಸುಮೂರ್ತದಲ್ಲಿ ಪ್ರವೇಶಮಾಡಿರೆಂಬ ಗುರುಜನಾನುಗ್ರಹ ವಚನದಿಂದ ವಿರೋಧಿಕೃತು ಸಂವತ್ಸರದ ವೈಶಾಖ ಶು|| ೧೩ ಗುರುವಾರ ದಿವಾ ಕ್ಲೃಪ್ತಕಾಲದಲ್ಲಿ ನೂತನ ಗೃಹವನ್ನು ಪ್ರವೇಶಿಸಿದರು.

ತಥಾಪಿ ಸಿದ್ಧಸಂಕಲ್ಪರಾದ ಶ್ರೀಮಂತ ವೀರಪ್ಪಯ್ಯನವರು ತಮ್ಮ ಸಂಕಲ್ಪಗಳಂತೆ ನೂತನ ಗೃಹಪ್ರವೇಶ ಸಮಯದಲ್ಲಿ ನೆರವೇರಿಸಲು ಉಚಿತಗಳಾದ ಕಾರ್ಯಗಳು ಅನುಕೂಲಿಸಲಿಲ್ಲವೆಂದು ಚಿಂತಿಸಿ, ಆ ಕಾರ್ಯಗಳನ್ನು ಜ್ಯೇಷ್ಠ ಬ|| ೧೦ ಮೊದಲುಗೊಂಡು ಜ್ಯೇಷ್ಠ ಬ|| ಅಮಾವಾಸ್ಯೆ ಪರಿಯಂತರಕ್ಕೂ ಮೃಷ್ಟಾನ್ನಭೋಜನದಿಂದ ಪ್ರಾಯಶಃ ೫-೬ ಸಹಸ್ರ ಜನಗಳಿಗೆ ತೃಪ್ತಿಗೊಳಿಸಿದರು. ತೃಪ್ತಿಗೊಳಿಸಿದ ಭೂಮಿಯಲ್ಲಾ ಘೃತತುಲ್ಯವಾಗಿತ್ತು. ದಾನಾರ್ಹರಾದವರಿಗೆ ವಿಶೇಷ ದಾನವನ್ನಿತ್ತರಲ್ಲದೆ ನಮ್ಮಗಳನ್ನು ಪರಮಾನುರಾಗದಿಂದ ಪರಿಪಾಲಿಸುತ್ತಿರುವ ಅಪ್ರತಿಹತ ಪರಾಕ್ರಮಪ್ರತಾಪೌದಾರ್ಯ ಗಾಂಭೀರ್ಯ ಸಂಪತ್ಸಾಗರ ಜಾರ್ಜ ಸಾರ್ವಭೌಮರವರ ಕಿರೀಟಧಾರಣ ಮಹೋತ್ಸವದ ದಿವಸ ಶ್ರೀಮಂತರು ತಮ್ಮ ಜ್ಯೇಷ್ಠಭ್ರಾತೃಗಳಾದ ಕೈ|| ರುದ್ರಪ್ಪಯ್ಯನವರು ಧರ್ಮಾರ್ಥವಾಗಿ ಕಟ್ಟಿಸಿ ಮೈಸೂರು ಗೌರ್ನಮೆಂಟಿಗೆ ಒಪ್ಪಿಸಿದ ಇಂಗ್ಲೀಷು ಸ್ಕೂಲಿನಲ್ಲಿ ಇಂಗ್ಲೀಷು ವಿದ್ಯಾರ್ಥಿಗಳಿಗೂ, ಕನ್ನಡ ವಿದ್ಯಾರ್ಥಿಗಳಿಗೂ ಡಾಕ್ಟರ್ ನಂಜುಂಡಯ್ಯನವರೂ, ಶ್ರೀಯುತ ಎ. ಎಂ. ಶಿವಲಿಂಗಪ್ಪಯ್ಯನವರೂ, ದಾವಣಗೆರೆ ತಿ|| ಮ|| ರುದ್ರಯ್ಯನವರೂ, ಮ|| ಗಳಾದ ಯಡೇಹಳ್ಳಿ ಶಾಂತಪ್ಪಶೆಟ್ಟರೂ, ಸಣ್ಣಂಗಿ ಪರ್ವತಪ್ಪನವರೂ, ಮಾನ್ಯರಾದ ದೊಡ್ಡಮನೆ ವೀರಣ್ಣನವರೂ, ಮರಿಯಣ್ಣನವರೂ, ನಂಜಪ್ಪನವರೂ, ಮಾನನೀಯರಾದ ಖರೀದಿ ಲಿಂಗಪ್ಪನವರೂ, ಆದರಣೀಯರಾದ ಶಿವಮೊಗ್ಗಾ ಕಾಡಪ್ಪನವರ ಚಂದಪ್ಪನವರೂ ಇವರೇ ಮೊದಲಾದ ಮಹಾಜನರ ಸಮ್ಮುಖದಲ್ಲಿ ಬಹುಮಾನವನ್ನಿತ್ತು ಮಿಠಾವಸ್ತುಗಳನ್ನು ಹಂಚಿ ನೆರದೀ ಸಭಿಕರಿಗೆಲ್ಲಾ ಗಂಧಮಾಲ್ಯಗಳಿಂದ ಸತ್ಕರಿಸಿ, ನಮ್ಮನ್ನು ಪುತ್ರನಿರ್ವಿಶೇಷದಿಂದ ಕಾಪಾಡುವ ಇಂತ್ಯಾ ಚಕ್ರವರ್ತಿಗಳವರ ಕಿರೀಟಧಾರಣ ಮಹೋತ್ಸವ ವೈಭವ ಶ್ರವಣದಿಂದುಂಟಾದ ಆನಂದವಿಶೇಷವನ್ನು ಈ ವಿಧವಾಗಿ ಪ್ರಕಾಶನಂಗೈದಿರುತ್ತೇನೆಂತಲೂ ಮತ್ತು ನಮ್ಮ ಚಕ್ರವರ್ತಿಗಳಿಗೂ ನಮ್ಮ ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರ ವಡೆಯರವರಿಗೂ, ಇವರ ಬಂಧುವರ್ಗಕ್ಕೂ, ಇವರ ಪ್ರಜೆಗಳಿಗೂ ಸರ್ವಶಕ್ತ ಶ್ರೀ ಸಾಂಬಶಿವನು ಆಯುರಾರೋಗ್ಯ ನಿಷ್ಕಂಟಕ ಪ್ರಭುತ್ವ ಸಂಮೃದ್ಧಿಯನ್ನು ಇತ್ತು ಪೊರೆಯಲೆಂತಲೂ, ಈ ವಿದ್ಯಾರ್ಥಿಗಳೆಲ್ಲರೂ ವಿದ್ಯಾವಿನೀತರಾಗಿ ರಾಜಭಕ್ತಿಯುಳ್ಳವರಾಗಿ ವಿವೇಕ ತತ್ಪರರಾಗಿರಬೇಕೆಂತಲೂ, ಮುಖ್ಯತಃ ವಿದ್ಯಾವೈದುಷ್ಯಕ್ಕೆ ನ್ಯೂನತೆ ಒದಗಿರುವುದರಿಂದ ಅದನ್ನು ಪರಿಹಾರ ಮಾಡುವುದಕ್ಕೋಸ್ಕರ ತಕ್ಕ ಉಪಾಯಗಳನ್ನು ಮಾಡಬೇಕೆಂತಲೂ ಇವೇ ಮೊದಲಾದ ತಾತ್ಪರ್ಯ ಪ್ರಧಾನಕೋಪನ್ಯಾಸಗಳಿಂದ ಸರ್ವರನ್ನೂ ಸಂತೋಷಪಡಿಸಿದರು. ತದನಂತರ ಸಂತುಷ್ಟರಾದ ಈ ಮಹಾಶಯರೆಲ್ಲರೂ ಅನುಮೋದಿಸಿ ಕರತಾಡನಂಗೈದರು.

ಇದಲ್ಲದೆ ತಾವು ಮಾಡಿದ ಉಪನ್ಯಾಸವಿಷಯಗಳು ಸಾರ್ಥಕವಾಗಲೆಂಬಭಿಪ್ರಾಯದಿಂದ ಕಳೆದ ಅಮಾವಾಸ್ಯೆ ದಿವಸ ಸಕಲ ಜನಾಂಗದವರಿಂದಲೂ, ನಾನಾಭೇದದಿಂದ ಉಪಾಸ್ಯಗಳಾದ ಸಮಸ್ತ ದೇವತೆಗಳನ್ನೂ ಗಜತುರಗ ಪಾಲಕಿ ಮುಂತಾದವುಗಳಲ್ಲಿ ಅತ್ಯಂತ ಮನೋಹರವಾಗಿ ಅಲಂಕರಿಸಿ, ಛತ್ರ ಚಾಮರ, ಮಕರತೋರಣ, ಆಪ್ತಾಗಿರಿ ಪ್ರಭೃತಿಗಳಿಂದಲೂ, ಭೋರ್ಗರೆಯುವ ವಾದ್ಯವಿಶೇಷಗಳಿಂದಲೂ, ಸೂರ್ಯಮಂಡಲದಂತೆ ತೋರುವ ದೀಪವಿಶೇಷಗಳಿಂದಲೂ, ಅಸಂಖ್ಯಾಕವಾದ ಪ್ರೇಕ್ಷಕ ಸಮೂಹದಿಂದಲೂ, ತೋರಣ, ರಂಗವಲ್ಲಿ ರಂಭಾಸ್ತಂಭಗಳಿಂದಲಂಕೃತವಾದ ಸಕಲ ವೀದಿಗಳಲ್ಲಿ ಬಹು ಮಂಜುಲವಾಗಿ ಮಹೋತ್ಸವವನ್ನು ನೆರವೇರಿಸಿದರು. ತದನಂತರ ಈ ಮಹಾಕಾರ್ಯಕ್ಕೆ ಆಗಮನಮಾಡಿದ ಮಹಾಜನರೆಲ್ಲರನ್ನೂ ಬಹುಮಾನಗೊಳಿಸಿ ಕಳುಹಿಸಿ, ಸಂತುಷ್ಟರಾಗಿರುವ ಈ ಪುಣ್ಯಪುರುಷರಿಗೂ, ಇವರ ಕುಟುಂಬದವರಿಗೂ, ಶಂಭುವು ದಾನೌದಾರ್ಯಾಯುರಾರೋಗ್ಯ ಸಂಪತ್ತಿಯನ್ನಭಿವರ್ಧಿಸಿ ರಕ್ಷಿಸಲೆಂದು ಪ್ರಾರ್ಥಿಸುವ

ಓರ್ವ ಪ್ರತ್ಯಕ್ಷದರ್ಶಿ.

ಬಹುಮಾನ! ಸುಸಮಯ!!

ಸೌದಾಮನಿ.

2

ಶೃಂಗಾರಾದಿ ರಸಭರಿತವಾಗಿಯೂ, ಧರ್ಮನೀತಿ ಭೋಧಕವಾಗಿಯೂ ಇರುವ ಮನೋಹರವಾದೀಪುಸ್ತಕದ ಬೆಲೆ ೦-೩-೬ ಅಣೆ. ಗೌರೀಹಬ್ಬ ದೊಳಗಾಗಿ ತರಿಸುವ "ಸ್ಟಾರ್" ಚಂದಾದಾರರಿಗೆ ವಿದಾಣೆ ಮಾತ್ರ. ಗ್ರಾಹಕರಿಗೆ ಒಂದಾಣೆಯ ಪುಸ್ತಕ ಒಂದು ಬಹುಮಾನ ಅಂಚೆವೆಚ್ಚ ಬೇರೆ "ಸಾಹಸಿಕೆ" ಮನೋಹರವಾದ ನಾವಿಲ್ ೦-೨-೬.

ವಿಳಾಸ:— ಸಿ. ವಿ. ಶಾಸ್ತ್ರಿ ಚಾಮರಾಜನಗರ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

4 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೫ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ ಬನವಾಸಿ. ಜಿಲ್ಲ ಉತ್ತರಕನಡಾ.

೭೦ ಕಥೆಗಳು. ಸಚಿತ್ರ. ೫೧೦ ಪುಟಗಳು.

ಸಚಿತ್ರಶುಕಸಪ್ತತಿಕಥೆ.

2

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕೀಕ ವ್ಯವಹಾರ ಜ್ಞಾನವನ್ನು ಭೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವುದು. (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿಧೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಇದು ಅಲ್ಲದೆ ಇನ್ನೂ ಇತರವಿಧವಾದ ಕಥೆಗಳು ಕಾವ್ಯಗಳು ಪುರಾಣಗಳು ಮುಂತಾದ ಪುಸ್ತಕಗಳು ಸಹ ನಮ್ಮಲ್ಲಿ ದೊರಿಯುತ್ತೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇನೆ.

ನಮ್ಮ ವಿಳಾಸ.— ಎಂ. ಆರ್., ಕೃಷ್ಣಸ್ವಾಮಿಶೆಟ್ಟಿ
ಆಚಿನಿ ಸ್ಟ್ರೀಟ್ ಗೋವಿಂದಪ್ಪನಾಯಕ್ ಬೀದಿ ಮದ್ರಾಸು.

15 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತುವ್ಯ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ ಖರ್ಚು ೦-೪-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳ್ತೆ ಕಳುಹಿಸಬಹುದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕ ಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ.
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳ.

15

ಲೋಕಾಮಯಹರ ಕಸ್ತೂರಿ. ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊದತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೫ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೫ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾಹನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪೂಸರುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರತ್ತು, ಹಲ್ಲುಗಳ ಪಾಚಿ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ಸಂದಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಮ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. [illegible] ೫ ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗಿಷ್ಟಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೦-೮ ವಿವರದಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ವಿಷ್ಟೃತಿಸಿದರು ವಿಳಾಸಗಳ [illegible] ವಾಗಿರಿ. ನಮ್ಮ ವಿಳಾಸ—ಶ್ರೀ [illegible]
[illegible]

18 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಫಸಿಸ್ಟಂ ಪೇಟಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 2-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೊಟರೆಗ್ಯುಲೇಟರ್ ಲೀವರ್ ಜೂವೆಲ್ಡು ವಾಚ್.



ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಪ್ಪೋರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡರ್ಜ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡರ್ಜ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಯೆಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

25 **ಉತ್ತಮ ಗ್ರಂಥಗಳು.**

ಶಿವಪಂಚಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.—ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಂಡಿತ ಎಸ್. ಗರಳಪುರಿ ಅವರ

ಓರಿಯಂಟಲ್ ಫಾರ್ಮೆಸಿ, ದೊಡ್ಡಗಡಿಯಾರದ ಚೌಕ

50 ಮೈಸೂರು.

ಗೋರೋಜನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಷೆ ೧ಕ್ಕೆ ಕ್ರಯ ೦—೪—೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಷೆ ೦—೪—೦, ೨೪ ಮಾತ್ರೆ ಸೀಷೆ ೦—೮—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಷೆ ೧—೦—೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦—೪—೦. ತೊಲೆ ೧ ಕ್ಕೆ ೧—೮—೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಷೆ ೦—೪—೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೮—೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪—೦—೦. ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಷೆ ೦—೩—೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಷೆ ೦—೮—೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಷೆ ೦—೪—೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಷೆ ೨—೦—೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಷೆ ೧—೦—೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಷೆ ೦—೮—೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಷೆ ೦—೧೨—೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೧ನೇ ಇಸವಿ ಜುಲೈ ತಾ|| ೨೪ ರಿಂದ ೧೯೧೧ನೇ ಜುಲೈ ತಾ|| ೩೦ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಅಷಾಢ ಬ|| ತ್ರಯೋದಶಿಯಿಂದ ಶ್ರಾವಣ ಶು|| ಪಂಚಮಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕಾ ತೇದಿ
24	ಸೋ	ತ್ರ	1-8	ಉಪರಿ	53-46	9
25	ಮಂಗ	ಅಮಾ	49-28	ಪುನ	25-26	10
26	ಬುಧ	ಪಾ	43-56	ಪುಷ್ಯ	22-14	11
27	ಗುರು	ಬಿ	39-2	ಶ್ಲೇ	19-16	12
28	¹ಶುಕ್ರ	ತ	53-19	ಮ	17-7	13
29	²ಶನಿ	ಚೌ	32-31	ಪು	15-52	14
30	³ಭಾನು	ಪಂ	30-51	ಉತ್ತ	15-45	15

(1) ಆದಿಶುಕ್ರವಾರ, ಸಂಪದ್ಗೌರಿವ್ರತಂ. (2) ನಾಗರಚತುರ್ಥಿ, ಶ್ರಾವಣಶನಿವಾರ. (3) ಗರುಡಪಂಚಮಿ.

ಮೈಸೂರ್: ಶ್ರೀ. [illegible] ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 124

ಮೈಸೂರ್ ✵ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲಪಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋತ್ಸವಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸನ್ ೧೯೧೧ ನೇ ಇಸವಿ ಜುಲೈ ತಾರೀಖು ೩೧ ನೇ ಸೋಮವಾರ. [ಸಂಚಿಕೆ ೩೧

ಬಸವ ಸಮಿತಿ

ಮೈಸೂರ್ ಸ್ಟಾರ್‌ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಥಾಂತೆನ್ನು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ಕ್ಕೆ ೧|| ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

10

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿಪಥನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪)ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮)ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ, ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಪಟಗಳು; ದೊರೆಯುತ್ತವೆ.

(ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ.—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಊದಬತ್ತಿಗಳು.

21

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ; ಧೂಪದ ಗಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

"ಅಗತ್ಯ ವಿಚಾರ."

9

ಬೆಲೆ ೬|| ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗತ್ಯವಿಚಾರ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೨ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖಚಾರ್ಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ:—ವೀರಭದ್ರಪ್ಪಾ ಆಲುಬಿರಳಿನ,
ಪೋಸ್ಟ್-ಬಾಗೇವಾಡಿ, ಡಿ|| ಬೆಳಗಾಂವ.

ಉತ್ತಮ ಗ್ರಂಥಗಳು.

129

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦ ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.— ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.— (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.— ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.— ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.— ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.— (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಶತಕಂ.— ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ, ಮೈಸೂರು.

ಇಲ್ಲಿನೋಡಿ ವಿಶೇಷಸೂಚನಗಳು!

12 ಕಾಶೀವಿಶ್ವೇಶ್ವರಪ್ರಸನ್ನ.



RASHI VISHWESHWAR S.N.U. & Co BENARES CITY

ಅಗ್ಗವಾದಮಾಲುಗಳು—ದೇಶಾಭಿಮಾನಿಗಳೇ ಗಮನಿಸಿರಿ!

ತಾವು ನಿತ್ಯವು ಧರಿಸುವಮಡಿ ಯಾವದು? ಕಾಶಿಪಟ್ಟು ಅಲ್ಲವೇ? ಲೋಕದಲ್ಲಿ ಪ್ರಸಿದ್ಧಹೊಂದಿರುವ ಮಡಿಯಾವದು? ಕಾಶೀಪಟ್ಟೆ.

ಮತ್ತು ಜರೀಕೆಲಸಗಳಲ್ಲಿಯೂ ನೈಸ್‌ಆಗಿಯೂ ನೋಡುವದಕ್ಕೆ ಮನೋರಂಜನವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೇ? ಅದಕ್ಕೆ ಸಂದೇಹವೇನು!

ಹಾಗಾದಲ್ಲಿ ಬೇಗನೆ ತರಿಸಿಕೊಳ್ಳಿರಿ! ಬಿಡಬೇಡಿರಿ!!

ನಮ್ಮಲ್ಲಿ ಮಾರಲ್ಪಡುವ ಸಾಮಾನುಗಳ ವಿವರ:— ರೇಷ್ಮೆ ಪಟ್ಟೇಮಡಿ, ಕಾಶ್ಮೀರಶಾಲು, ಜರಿ ಬನಾರಸ್ ರೇಷ್ಮೆಸೀರೆ, ಜರಿ ರೇಷ್ಮೆಕಣಗಳು, ರುದ್ರಾಕ್ಷಿಸರಗಳು ಇದರಲ್ಲಿ ೩ ಮುಖ ದಿಂದ, ೧೪ ಮುಖದ ವರೆಗೆ ಉತ್ತಮವಾಗಿ ಇರುವುದು. ಮತ್ತು ಪೂಜಾಸಾಮಾನುಗಳು, ಜಗನ್ನಾಥ ಜಾಗಟೆ, ಸ್ಫಟಿಕಸರ, ಬಾಣಲಿಂಗ, ಉತ್ತಮವಾದ ನೇಪಾಳಕಸ್ತೂರಿಯು, ಇನ್ನೂ ಅನೇಕತರದ ಪದಗಳು, ವಸ್ತ್ರೆ ಬನಾರಸ್‌ನಲ್ಲಿ ಎಲ್ಲಾರಿಗಿಂತಲೂ, ಸಹಜರೀತಿ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ಮಾಲುಗಳನ್ನೂ ಕಳುಹಿಸುವೆವು. ಈ ಮಾಲುಗಳ ಕ್ರಯದ ವಿವರ ತಿಳಿಯಬೇಕಾದಲ್ಲಿ ಫಕ್ತ ಪೋಸ್ಟ್ ಛಾರ್ಜಿಗೆ ಅರ್ಧಾಣೆ ಸ್ಟಾಂಪು ಕಳಿಹಿಸಿದಲ್ಲಿ, ೧ ಕ್ಯಾಟ್ಲಾಗ್ ೪ ಸಾದಾಕಾರ್ಡು, ೨ ಕಾಶೀವಿಶ್ವೇಶ್ವರಪಟ ೨ ನಮ್ಮ ಕಂಪೆನಿ ಅಡ್ರಸ್‌ಕಾರ್ಡು, ಇವುಗಳನ್ನೂ ಇನಾಮಾಗಿ ತಾವು ಬರದು ತಿಳಿಯಿರುವ ವಿಳಾಸಕ್ಕೆ ಕಳಿಹಿಸಲಾಗುತ್ತದೆ. ವಿಳಾಸವನ್ನು ಚೆನ್ನಾಗಿ ಬರಿಯದೇಯಿದ್ದಲ್ಲಿ ಆ ಪತ್ರಿಕೆ ನಿಗಾ ಕೊಡಲಾರೆವು.

ನಮ್ಮ ವಿಳಾಸ:—
ಯಸ್. ಉಡುಪಿನಾರಾಯಣಾಚಾರ್ಯ ಅಂಡ್‌ಕೊ
ಬನಾರಸ್‌ಸಿಟಿ, ಶ್ರೀ ಕ್ಷೇತ್ರಕಾಶಿ.

S. Udipi Narayanacharya & Co.
Benares City.

ಸೌಗಂಧಿಕಾಪರಿಣಯ

—:o:—

(ಕಳೆದವಾರದಶೇಷ.)

ಹಣೆಯ ಕೊನೆಯಲ್ಲಿ ಪ್ರದಕ್ಷಿಣಾಕಾರವಾಗಿ, ಧ್ರುವವೆಂಬ ಸುಳಿಯು ಯಾವ ಕುದುರೆಗೆ ಇರುವದೊ ಆ ಕುದುರೆಯು ದೀರ್ಘಾಯುಸ್ಸು ಉಳ್ಳದ್ದಾಗಿ ಸ್ವಾಮಿಗೆ ಸುಖಾಭಿವೃದ್ಧಿಯಂ ಉಂಟುಮಾಡುವುದು. ಯಾವ ಕುದುರೆಗೆ ಹಣೆಯ ಮಧ್ಯದಲ್ಲಿ ಧ್ರುವವೆಂಬ ಸುಳಿ ಇರುವದೋ ಆ ಅಶ್ವವು ಮಧ್ಯಮಾಯುಸ್ಸು ಉಳ್ಳದು. ಹುಬ್ಬುಗಳ ಮಧ್ಯದಲ್ಲಿ, ಹಣೆಯಲ್ಲಾದರೂ ವಾಮಭಾಗವನ್ನಾಶ್ರಯಿಸಿ ಧ್ರುವವೆಂಬ ಸುಳಿಯು ಇದ್ದರೆ ಆ ಕುದುರೆಯು ಅಲ್ಪಾಯುಸ್ಸು ಉಳ್ಳದ್ದಾಗಿ ಅನರ್ಥಂ ಉಂಟುಮಾಡುವುದು. ಯಾವ ಅಶ್ವದ ಮಸ್ತಕದಲ್ಲಿರುವದ್ಧ್ರುವಗಳೆಂಬ ಸುಳಿಗಳು ವಿಷಮಗಳಾಗಿರುವವೋ ಆ ಅಶ್ವವು ಎಂಟುವರ್ಷ ಜೀವಿಸುವುದು ಮತ್ತೂ ಸ್ವಾಮಿಗೆ ಧನನಾಶವಾಗುವುದು. ಅಶ್ವಗಳ ಮಸ್ತಕ್ಯಗಳೆಂಬ ಸುಳಿಗಳು ವಿನ್ಯಸ್ತವೆಂಬ ಸುಳಿಯು ಆಕಾರವಂ ವಹಿಸಿ, ಕಿವಿಗಳ ಮಧ್ಯದಲ್ಲಿರುವದಾದರೆ ಆ ಕುದುರೆಯು ಅಲ್ಪಾಯುಸ್ಸು ಉಳ್ಳದ್ದಾಗಿ ಸೌಖ್ಯವಂ ಧನವಂ ಕೂಡ ಅಪಹರಿಸುವುದು. ಯಾವ ಕುದುರೆಗೆ ಮಸ್ತಕ್ಯಗಳೆಂಬ ಸುಳಿಗಳು, ಶುಕ್ತಿಎಂಬ ಸುಳಿಯು ಆಕಾರಕ್ಕೆ ಸಮಾನಂಗಳಾಗಿ ಸ್ಥಾನವಂ ಬಿಟ್ಟು, ಕೇಶಗಳ ಅಂತ್ಯಭಾಗವಂ ಆಶ್ರಯಿಸಿ ಇರುವವೊ ಆ ಅಶ್ವವು ಸುಖವಂ ಅಪೇಕ್ಷಿಸುವ ಜನರಿಂದ ತ್ಯಜಿಸಲ್ಪಡತಕ್ಕದ್ದು. ಯಾವ ಕುದುರೆಗಳಿಗೆ ಮಸ್ತಕ್ಯಗಳೆಂಬ ಸುಳಿಗಳು ಪ್ರದಕ್ಷಿಣಾಕಾರಗಳಾಗಿ, ಸಮಪ್ರದೇಶದಲ್ಲಿರುವುವೊ ಆ ಅಶ್ವಗಳು ಸ್ವಾಮಿಗೆ ಧನವೃದ್ಧಿಯಂ, ವಂಶವೃದ್ಧಿಯಂ ಕೂಡ ಉಂಟುಮಾಡುವುವು. ಅಶ್ವದ ಎದೆಯೊಳ್ ದಕ್ಷಿಣಭಾಗದಲ್ಲಿ ಆವರ್ತವೆಂಬ ಸುಳಿಯಾದರೂ, ಶುಕ್ತಿಯೆಂಬ ಸುಳಿಯಾದರೂ ಇದ್ದರೆ, ಆಅಶ್ವವು ಪ್ರಶಸ್ತವಾಗಿ ಧನಧಾನ್ಯವಂ ಉಂಟುಮಾಡುವುದು ಅಶ್ವಗಳ ಉಭಯಪಾರ್ಶ್ವಗಳಲ್ಲಿಯೂ ಸುಳಿಗಳು ಸ್ವಸ್ಥಾನಗಳಲ್ಲಿದ್ದರೆ, ಆ ಸುಳಿಗಳು ಪ್ರಶಸ್ತಗಳೆನಿಸಿಕೊಳ್ಳುವುವು. ಅಶ್ವಗಳ ಕಿಬ್ಬೊಟ್ಟೆಯ ಉಭಯ ಪಾರ್ಶ್ವಗಳಲ್ಲಿಯೂ ಇರುವ ಧ್ರುವವೆಂಬ ಸುಳಿಗಳು ಎರಡು ಒಂದೇ ಬಳಿಯಲ್ಲಿ ಕೂಡಿರುವುದಾದರೆ, ಆ ಅಶ್ವವು ಅಲ್ಪಾಯುಸ್ಸು ಉಳ್ಳುದಾಗಿ ಶುಭಾರ್ಥಿಗಳಾದವರಿಂ ತ್ಯಜಿಸಲ್ಪಡತಕ್ಕದು. ಯಾವ ಅಶ್ವಕ್ಕೆ ಧ್ರುವಸುಳಿಯು ರೋಮರಹಿತವಾಗಿರುವುದೋ, ಆ ಅಶ್ವವು ಅಲ್ಪಾಯುಸ್ಸು ಉಳ್ಳುದಾದುದರಿಂ ಶುಭಕರವಲ್ಲ. ಈ ಪರಿಯಾಗಿ ಸ್ವಸ್ಥಾನಗಳಲ್ಲಿಯೂ, ಸ್ಥಾನವಂಬಿಟ್ಟು ಹೊರಚ್ಚಾಗಿಯೂ ಇರುವ ಧ್ರುವಗಳೆಂಬ ಹತ್ತು ಸುಳಿಗಳು ನಿರೂಪಿಸಲ್ಪಟ್ಟವು. ಮತ್ತೂ ಮುಖಾದಿ ಸ್ಥಾನಗಳಲ್ಲಿ ಧ್ರುವಸುಳಿಯು ಇಲ್ಲದಿದ್ದರೆ ಆ ಫಲವಂ ಪೇಳುವೆನು. ಮೇಲಣತುಟಿಯ ಸಮೀಪದಲ್ಲಿ ಸುಳಿ ಇಲ್ಲದ ಅಶ್ವವು ತನ್ನ ಸ್ವಾಮಿಯಂ ಕೊಲ್ಲುವುದು. ಲಲಾಟದಲ್ಲಿ ವಿಹಿತವಾದ ಸುಳಿ ಇಲ್ಲದ ಅಶ್ವವು ಸ್ವಾಮಿಗೆ ಮಹತ್ತಾದ ಮೋಹವಂ ಉಂಟುಮಾಡುವುದು. ಮಸ್ತಕ್ಯವೆಂಬ ಸುಳಿಯಿಂದ ರಹಿತವಾದ ಕುದುರೆಯು ಸ್ವಾಮಿಗೆ ಶಿರೋರೋಗವಂ ಉಂಟುಮಾಡುವುದು. ಈ ಅಶ್ವವು ಮುಂದಕೀ ಎಂದು ಪೇಳಲ್ಪಡುವುದು. ಹಿರಳಿನಲ್ಲಿ ಸುಳಿಯುಳ್ಳ ಕುದುರೆಯೊಳ್ ಯಾವ ದೋಷಗಳುಂಟೊ ಆ ದೋಷಗಳು ಶೃಂಗಉಳ್ಳ ಕುದುರೆಯಲ್ಲಿಯೂ ಪೇಳಲ್ಪಡುವುವು. ಹಿರಳಿನಮುಂಭಾಗದೊಳ್ ಸುಳಿಯುಳ್ಳ ಅಶ್ವದಲ್ಲಿ ಯಾವ ದೋಷಗಳಿರುವವೋ ಆ ದೋಷಗಳು ಆಸನಸ್ಥಾನದಲ್ಲಿ ಸುಳಿಯುಳ್ಳ ಅಶ್ವಗಳಲ್ಲಿಯೂ ಪೇಳಲ್ಪಡುವುವು. ಹೃದಯದಲ್ಲಿ ಸುಳಿಉಳ್ಳ ಅಶ್ವದಲ್ಲಿ ಯಾವ ದೋಷಂಗಳುಂಟೊ ಆ ದೋಷಂಗಳು ಮಸ್ತಕದಲ್ಲಿ ಸುಳಿ ಇಲ್ಲದೇಇರುವ ಅಶ್ವಂಗಳಲ್ಲಿಯೂ ಉಂಟಾಗುವುವು. ವಕ್ಷಸ್ಥಳದಲ್ಲಿ ಉಚಿತವಾದ ಸುಳಿ ಇಲ್ಲದೇಇರುವ ಅಶ್ವವು ತನ್ನ ಸ್ವಾಮಿಯ ಪುತ್ರರಂ ಕೊಲ್ಲುವುದು. ಪಾರ್ಶ್ವಗಳಲ್ಲಿ ಪುಟ್ಟುವ ಆವರ್ತಗಳಿಂದ ರಹಿತವಾದ ಅಶ್ವವು ಉದರರೋಗವೃದ್ಧಿಯಂ ಉಂಟುಮಾಡುವುದು. ಕಿಬ್ಬೊಟ್ಟೆಯ ಉಭಯ ಪಾರ್ಶ್ವಗಳಲ್ಲಿಯೂ ಇರತಕ್ಕ ಧ್ರುವವೆಂಬ ಸುಳಿಗಳಿಂದ ರಹಿತವಾದ ಅಶ್ವವು ತನ್ನ ಸ್ವಾಮಿಗೆ ನಾಶವಂ ಉಂಟುಮಾಡುವುದು. ಈರೀತಿ ದಶಧ್ರುವಗಳಿಂದ ರಹಿತಗಳಾದ ಅಶ್ವಗಳಿಗೆ ಪ್ರತ್ಯೇಕಪ್ರತ್ಯೇಕವಾಗಿ ಫಲವು ಪೇಳಲ್ಪಟ್ಟಿತು. ಇನ್ನು ಅಶುಭಕರಗಳಾದ ಅಶ್ವಗಳಿಂದುಂಟಾಗುವ ಫಲವು ಹೇಳಲ್ಪಡುವುದು. ಅಶ್ವದ ಮೇಲಣತುಟಿಯಲ್ಲಿ ಪುಟ್ಟಿದ ಸುಳಿಯು ಸ್ವಾಮಿಗೆ ಮಾತೃಹಾನಿಯಂ ಉಂಟುಮಾಡುವುದು. ಮುಖಕ್ಕೆ ಮೇಲೆ ದಕ್ಷಿಣಭಾಗದಲ್ಲಿರುವ ಸುಳಿಯು ಸ್ವಾಮಿಗೆ ಮಿತ್ರನಾಶಕರವಾಗುವುದು. ಅಶ್ವಗಳ ಅಧರೋಷ್ಠಗಳಲ್ಲಿ, ಗಲ್ಲದಲ್ಲಿ, ಮುಖದಲ್ಲಿ, ನಾಸಿಕದಲ್ಲಿ, ಕಪೋಲಗಳಲ್ಲಿ ಸುಳಿಗಳಿದ್ದರೆ, ಆ ಅಶ್ವವು ಸ್ವಾಮಿಗೆ ನಾಶವಂ ಉಂಟುಮಾಡುವುದು. ನಾಸಿಕಾಗ್ರಪ್ರದೇಶದಲ್ಲಿ ಹುಟ್ಟಿರುವ ಎರಡು ಸುಳಿಗಳು ಜೀವನವಂ ಅಪಹರಿಸುವುವು. ಕಣ್ಣೀರು ಬೀಳುವ ಸ್ಥಾನಗಳಲ್ಲಿ ಹುಟ್ಟಿರುವ ಎರಡು ಸುಳಿಗಳು ತನ್ನ ಸ್ವಾಮಿಯ ಕಣ್ಣುಗಳಿಂದ ದುಃಖಾಶ್ರುವಂ ಬೀಳಿಸುವುವು. ಕಣ್ಣೀರುಬೀಳುವ ಮಾರ್ಗಗಳಲ್ಲಿ ಪುಟ್ಟಿರುವ ಸುಳಿಗಳೆರಡು ನೇತ್ರರೋಗವಂ ಉಂಟುಮಾಡುವುವು. ಭ್ರೂಮಧ್ಯದಲ್ಲಿರುವ ಸುಳಿಗಳೆರಡು ಶತ್ರುವೃದ್ಧಿಕರಗಳಾಗುವುವು. ಕಪೋಲ ಮೂಲದಲ್ಲಿಯೂ, ಕಪೋಲಗಳಲ್ಲಿಯೂ ಇರುವ ಎರಡು ಸುಳಿಗಳೂ, ಹೆಕ್ಕತ್ತಿನಲ್ಲಿರುವ ಎರಡು ಸುಳಿಗಳು ಕೂಡ ಸ್ವಾಮಿಗೆ ರೋಗೋಪದ್ರವಗಳಾಗುವುವು. ಕೇಸರಗಳಲ್ಲಿ ಕಕ್ಷಪ್ರದೇಶಗಳಲ್ಲಿ, ಮಧ್ಯದಲ್ಲಿ, ಕಪೋಲಗಳಲ್ಲಿ, ಹೆಗಲಿನಲ್ಲಿ ಸಹ ಇರುವ ಎರಡು ಸುಳಿಗಳೂ ಮತ್ತೂ ಮೂಗುಗಳ ಪಾರ್ಶ್ವದ ಹಳ್ಳಗಳಲ್ಲಿಯೂ, ಕಿವಿಗಳ ಕೊನೆಯಲ್ಲಿಯೂ ಪುಟ್ಟಿರುವ ಎರಡು ಸುಳಿಗಳೂ ಸ್ವಾಮಿಗೆ ಅರ್ಥಹಾನಿಕರಗಳಾಗುವುವು. ಕಂಠದಲ್ಲಿರುವ ಎರಡು ಸುಳಿಗಳು ಯುದ್ಧದಲ್ಲಿ ಸ್ವಾಮಿನಾಶವನ್ನುಂಟುಮಾಡುವುವು. ಕಂಠದಲ್ಲಿ ಒಂದೇ ಸುಳಿಯಿದ್ದರೆ ಸಿಡಿಲಿನಿಂದ ಭಯವುಂಟಾಗುವುದು. ಕಂಠಮೂಲಪ್ರದೇಶದಲ್ಲಿರುವ ಎರಡು ಸುಳಿಗಳು ಸ್ವಾಮಿಗೆ ಅಲ್ಪಾಯುಸ್ಸಂ ಕೊಡುವುವು ಬೆನ್ನಿನಲ್ಲಿ ಎರಡು ಸುಳಿಗಳಿದ್ದರೆ ಆ ಕುದುರೆಯು ಸ್ವಾಮಿಗೆ ಸಂಹಾರಕರವಾದುದು. ಹಿರಳಿನಲ್ಲಿರುವ ಒಂದು ಸುಳಿಯು ಸರ್ವವನ್ನಾಶವಮಾಡುವುದು. ಆದ್ದರಿಂದ ಈ ಅಶ್ವವಂ ತ್ಯಜಿಸಿ ಶಾಂತಿಯಂ ಮಾಡಬೇಕು. ಹಿರಳಿನ ಸಮೀಪದಲ್ಲಿ ಸುಳಿಯುಳ್ಳ ಅಶ್ವಕ್ಕೆ ಸ್ವಾಮಿಯಾದವನು ಯುದ್ಧದಲ್ಲಿ ಕಾಗೆಗಳಿಂದ ಭಕ್ಷಿಸಲ್ಪಡುವನು. ಆಸನಸ್ಥಾನದಲ್ಲಿ ಸುಳಿಯುಳ್ಳ ಕುದುರೆಯು ತನ್ನ ಸ್ವಾಮಿಯಂ ಶೂಲದಿಂ ಕೊಲ್ಲಿಸುವುದು. ಭುಜಗಳ ಮಧ್ಯದಲ್ಲಿ ಎಡದ ಕಡೆಯೊಳಿರುವ ಸುಳಿಗಳೆರಡು ಯುದ್ಧದಲ್ಲಿ ತನ್ನ ಸ್ವಾಮಿಯಂ ಕೊಲ್ಲುವುದು. ಭುಜಾಗ್ರದಲ್ಲಿರುವ ಸುಳಿಯು ಶತ್ರುಸಂಹಾರಕವಾದ್ದು. ಪುಚ್ಛದೊಳಿರುವ ಸುಳಿಯು ಪರಾಜಯವಂ ಕೊಡುವುದು. ಮಂಡಿಯ ಸಮೀಪದಲ್ಲಿ ಮೇಲಣ ಭಾಗದೊಳಿರುವ ಸುಳಿಗಳೆರಡು ಅರ್ಥವಂ ಅಪಹರಿಸುವುದು. ಮಂಡಿಯಲ್ಲಿರುವ ಸುಳಿಗಳೆರಡು ಸ್ವಾಮಿಗೆ ನಾಶವಂ ಕೊಡುವುದು. ಜಂಘಾಪ್ರದೇಶದಲ್ಲಿರುವ ಸುಳಿಗಳೆರಡು ಸ್ವಾಮಿಗೆ ಬಂಧನವಂ ಕೊಡುವುದು. ಕಣ್ಣುಗಳ ಕುಣಿಕೆಗಳಲ್ಲಿಯೂ, ಕಡೆಗಣ್ಣುಗಳಲ್ಲಿಯೂ ಇರುವ ಸುಳಿಗಳೆರಡು ಸ್ವಾಮಿಯಂ ಸಂಹರಿಸುವುದು.

ಸಶೇಷ.

(Adopted from a series of articles appearing in the "Dawn of Calcutta," Post box 353, with kind permission.)

THE STATE OF THE TECHNICAL EDUCATION IN BARODA STATE.

ಬರೋಡಾ ಸಂಸ್ಥಾನದ ಕುಶಲಕಲಾಸ್ಥಿತಿ.

(ಕಳೆದವಾರದ ಶೇಷ.)

ವ್ಯವಸಾಯದ ವಿದ್ಯಾಭ್ಯಾಸ.

ವ್ಯವಸಾಯ ವಿದ್ಯೆಯನ್ನು ಬೋಧಿಸಲು ನಾವು ಮೊದಲೇ ಹೇಳಿದ ಪಾಠಶಾಲೆಯಲ್ಲದೆ ಬರೋಡಾದಲ್ಲಿ ಒಂದು ಉಚ್ಚಶಾಲೆಯೂ, "ಬರೋಡಾಸಂಸ್ಥಾನದ ಮಾದರೀಭೂಮಿ" ಎಂಬ ಹೆಸರಿನಿಂದ ಒಂದು ಫಾರಮೂ ಇರುವುದು. ವಿದ್ಯಾರ್ಥಿಗಳಿಗೆ ಪಾಠಶಾಲೆಯಲ್ಲಿ ಪುಸ್ತಕವಿದ್ಯೆಯನ್ನೂ, ಬೈಲಿನಲ್ಲಿ ಕೆಲಸಮಾಡುವ ರೀತಿಯನ್ನೂ ಹೇಳಿಕೊಡುವರು. ದೊಡ್ಡತರಗತಿಯಲ್ಲಿ ಓದುವವರಿಗೆ ವಿದ್ಯಾರ್ಥಿವೇತನವು ಕೊಡಲ್ಪಡುವುದು. ಈ ವಿದ್ಯಾಶಾಲೆಯಲ್ಲಿ ಕಲಿತವರು ಒಳ್ಳೇ ಬೇಸಾಯಗಾರರಾಗುವರೆಂಬುದರಲ್ಲಿ ಸಂದೇಹವಿಲ್ಲ. ೧೯೦೮ ರಲ್ಲಿ ೧೩ ಮಂದಿ ಕೆಳಗಿನ ತರಗತಿಯಲ್ಲಿಯೂ, ೫ ಮಂದಿ ಮೇಲಿನ ತರಗತಿಯಲ್ಲಿಯೂ ಓದುತ್ತಿದ್ದರು. ನಾವು ಹಿಂದೆಹೇಳಿದ ಕಾಡುಜನರ ಪಾಠಶಾಲೆಯಲ್ಲಿ ಕಲಿತು ಮುಗಿಸಿದವರು ಈ ಉಚ್ಚಶಾಲೆಗೆ ಬಂದು ಓದಬಹುದು. ಕಾಡುಜನಕ್ಕೆ ವ್ಯವಸಾಯವೇ ವಂಶಪಾರಂಪರ್ಯವಾಗಿ ಬಂದ ವಿದ್ಯೆಯಾದುದರಿಂದ, ಅವರಿಗೆ ಅದನ್ನು ಹೇಳಿಕೊಟ್ಟರೆ ಬಹಳ ಉಪಯೋಗವುಂಟೆಂದು ಹೇಳಿಕೊಡುವರು. ಪ್ರತಿವರ್ಷವೂ ಸರಾಸರಿ ೧೦೦ ರಲ್ಲಿ ೪೦-೪೫ ಜನ ವಿದ್ಯಾರ್ಥಿಗಳು ಪ್ರತಿಪಾಠಶಾಲೆಯಿಂದಲೂ ತೇರ್ಗಡೆಯಾಗುವರು. ಬರೋಡಾ ಮಾದರೀ ಫಾರಂನಲ್ಲಿ ವ್ಯವಸಾಯವೊಂದನ್ನೇ ಅಲ್ಲದೆ, ರೇಷ್ಮೆ ಹುಳುವನ್ನು ಸಾಕುವಿಕೆ, ರೇಷ್ಮೆಯನ್ನು ತೆಗೆಯುವ ಕ್ರಮ, ಚಿಕಿತ್ಸೆ ಮುಂತಾದುವನ್ನು ಹೇಳಿಕೊಡುವರು. ಮೇಲಿಕಂಡವುಗಳಲ್ಲದೆ ಪ್ರಯಾಣಮಾಡುತ್ತ, ದೇಶದ ಹವಾ ಬೆಳೆ ನೀರುಗಳನ್ನು ಪರೀಕ್ಷಿಸಿ ಕಾಲಕ್ಕೆ ತಕ್ಕಂತೆ ವ್ಯವಸಾಯಮಾಡುವುದನ್ನು ಬೋಧಿಸುವ ಉಪನ್ಯಾಸಕರೂ ಇರುವರು. ಇವರು ಬೋಧಿಸುವುದೊಂದಲ್ಲದೆ ವ್ಯವಸಾಯವನ್ನೂ ಮಾಡಿ ತೋರಿಸುವರು. ಸೀಮೆಯ ನೇಗಿಲು, ಬಿತ್ತನೆಯಂತ್ರ, ಕುಯ್ಯುವ ಯಂತ್ರಗಳನ್ನು ಉಪಯೋಗಿಸುವ ರೀತಿಯನ್ನು ಹೇಳಿಕೊಡುವರು.

ಬಂದಿ (ಖೈದಿ) ಗಳಿಗೆ ಕುಶಲವಿದ್ಯಾಭ್ಯಾಸವನ್ನು ಮಾಡಿಸುವುದು.

೧೬ ರಿಂದ ೨೧ ವಯಸ್ಸಿನಲ್ಲಿ ಅಪರಾಧಮಾಡಿ ಬಂದಿಗಳಾಗಿರುವವರಿಗೆ ಅವರ ಅಮೂಲ್ಯವಾದ ಕಾಲವನ್ನು ವ್ಯರ್ಥಗೊಳಿಸುವುದಾಗಲಿ, ಅಥವಾ ಸರ್ಕಾರದವರು ಕೆಲಸ ಕಲಿತು ಕೊಳ್ಳತಕ್ಕದ್ದಾಗಲಿ ಸರ್ಕಾರದವರ ಮನಸ್ಸಿನಲ್ಲಿಲ್ಲವಾದ್ದ ಕಾರಣ, ಇಂಥವರಿಗೆ ಕೈಗಾರಿಕೆ ವಿದ್ಯೆಯನ್ನು ಕಲಿಸುವರು. ಬರೋಡಾದಲ್ಲಿ ಸೆಂಟ್ರಲ್ ಜೈಲಿನಲ್ಲಿರುವ ಬಂದಿಗಳಿಗೆ ಗ್ರೇಟ್ ಬ್ರಿಟನವರು ಬಂದಿಗಳಿಗೆ ವಿದ್ಯಾಭ್ಯಾಸವನ್ನು ಮಾಡಿಸುವ ರೀತಿಯಲ್ಲಿ ಕಲಿಸುವರು. ಬಂದಿಗಳನ್ನು ಸರ್ಕಾರದ ಕಾರ್ಯಾಲಯಗಳಲ್ಲಿ ಕೆಲಸಕ್ಕೆ ನೇಮಿಸುವರು. ಅವರು ಬುದ್ಧಿವಂತರಾಗಿದ್ದು ಉತ್ತಮಸ್ಥಿತಿಗೆ ಬರುವರೆಂಬ ನಂಬುಗೆಯು ಅಧಿಕಾರಿಗಳಿಗುಂಟಾದರೆ, ಅಂತಹ ಬಂದಿಗಳನ್ನು ಬಿಡುವಾಗ ಅವರಿಗೆ ಹತ್ತು ರೂಪಾಯಿಗೆ ಮೇಲ್ಪಟ್ಟ ಬಹುಮಾನವನ್ನು ಕೊಡುವರು. ಈ ದ್ರವ್ಯವು ಅವರ ಜೀವನಕ್ಕೆ ಸಹಾಯವಾಗುವುದು. ಬಂದಿಗಳನ್ನು ಬಿಟ್ಟನಂತರ ಅವರನ್ನು ಜಾಗ್ರತೆಯಾಗಿ ನೋಡಿಕೊಳ್ಳಲು ಸರಿಯಾದ ಪೋಷಕರು ಇಲ್ಲದಿದ್ದರೆ ಸರ್ಕಾರದವರೇ ಅವರಿಗೆ ಜೀವನವನ್ನು ಕಲ್ಪಿಸಿಕೊಡುವರು. ಇದರಿಂದ ಬಂದಿಗಳ ಸಂಖ್ಯೆಯು ಕಡಿಮೆಯಾಗುವುದೆಂಬುದರಲ್ಲಿ ಸಂಶಯವಿಲ್ಲ.

ಬರೋಡೆಯ ಸರ್ವವಸ್ತುಪ್ರದರ್ಶನಶಾಲೆಯು.
(ಮ್ಯೂಜಿಯಂ.)

ಸಂಸ್ಥಾನದ ಪ್ರತಿಯೊಂದು ತಾಲ್ಲೋಕು ಪಾಠಶಾಲೆಗೂ, ಅದಕ್ಕೆ ಸಂಬಂಧಪಟ್ಟಂತೆ ಒಂದು ಮ್ಯೂಜಿಯಂ ಇರುವುದು. ಅದರಲ್ಲಿ ಮಾದರಿಯ ವಸ್ತುಗಳೂ, ಮಾದರಿಯ ಚಿತ್ರಗಳೂ ಇವೆ. ಈ ಪದಾರ್ಥಗಳು ಪಾಠಹೇಳುವಾಗ ಮಾದರಿಗಾಗಿ ಉಪಯೋಗಿಸಲ್ಪಡುವುವು. ಕಾಲೇಜು ವಿದ್ಯಾರ್ಥಿಗಳು ಉತ್ತಮವಾದ ಪದಾರ್ಥಗಳನ್ನು ಸಂಗ್ರಹಿಸಿ ತಾವು ಅದರಿಂದ ಕಲಿಯಬೇಕಾದುದನ್ನು ಕಲಿತು, ತಾಲ್ಲೋಕು ಮ್ಯೂಜಿಯಂಗಳಿಗೆ ಕಳುಹಿಸುವರು. ಕಲಾಭವನದ ಸ್ತ್ರೀಯರ ಕಾಲೇಜಿನ ವಿದ್ಯಾರ್ಥಿನಿಗಳು ಮ್ಯೂಜಿಯಂಗಳಿಗೆ ಬಾರದೆ ಇರರು. ತಾಲ್ಲೋಕು ಪಾಠಶಾಲೆಗಳ ವಿದ್ಯಾರ್ಥಿಗಳು ಪ್ರತಿವಾರವೂ ತಮ್ಮ ಉಪಾಧ್ಯಾಯರೊಡನೆ ಈ ಮ್ಯೂಜಿಯಂಗೆ ಬರುವರು. ಉಪಾಧ್ಯಾಯರು ಅಲ್ಲಿ ಅವರಿಗೆ ಅವಶ್ಯಕವಾದುದನ್ನು ಹೇಳಿಕೊಡುವರೆಂಬುದನ್ನು ನಾವು ಹೇಳಬೇಕಾಗಿಲ್ಲ.

ಉಚ್ಚ ವಿದ್ಯಾಭ್ಯಾಸಕ್ಕೆ ಹೋಗುವ ವಿದ್ಯಾರ್ಥಿಗಳು.

ಉಚ್ಚ ವಿದ್ಯಾಭ್ಯಾಸಕ್ಕೆ ಪ್ರತಿವರ್ಷವೂ ಅನೇಕ ವಿದ್ಯಾರ್ಥಿಗಳನ್ನು ಲಂಡನ್ ಮೊದಲಾದ ಪರದೇಶಗಳಿಗೂ ಬೊಂಬಾಯಿ ಮೊದಲಾದ ದೊಡ್ಡ ಪಟ್ಟಣಗಳಿಗೂ ವಿದ್ಯಾರ್ಥಿವೇತನವನ್ನು ಕೊಟ್ಟು ಕಳುಹಿಸುವರು. ೧೯೦೮ ರಲ್ಲಿ ನಾಲ್ಕು ವಿದ್ಯಾರ್ಥಿಗಳು ಲಂಡನ್ನಿಗೆ ಕಳುಹಲ್ಪಟ್ಟಿದ್ದರು. ಅಲ್ಲದೆ ಇಬ್ಬರು ಪದವೀ ಧರರು (ಬಿ. ಎ. ಪ್ಯಾಸ್ ಮಾಡಿದವರು) ಪರದೇಶಕ್ಕೆ ವಿಮರ್ಷ ಸಂಬಂಧವಾದುದನ್ನು ಕಲಿಯಲು ಕಳುಹಲ್ಪಟ್ಟಿದ್ದರು. ಪ್ರತಿವರ್ಷವೂ ಆರು ವಿದ್ಯಾರ್ಥಿಗಳು ಇಂತ್ಯಾದಲ್ಲೇ ಇತರಸ್ಥಳಗಳಲ್ಲಿರುವ ವಿದ್ಯಾನಿಲಯಗಳಿಗೆ ಕಳುಹಲ್ಪಡುವರು.

ಸಂಸ್ಥಾನದ ವ್ಯಯ.

೧೯೦೮ ರಲ್ಲಿ ಬರೋಡೆಯಲ್ಲಿರುವ ಕಲಾಭವನ, ಪಾಡರಾ, ನವಸಾರಿ, ಅಮರಾಲಿಗಳಲ್ಲಿರುವ ಪಾಠಶಾಲೆಗಳಿಗಾಗಿ ಆದ ವ್ಯಯವು ೭೦,೦೦೦ ರೂ. ಗಳು. ೧೯೦೭ ರಲ್ಲಿ ೫೫,೦೦೦ ರೂ. ಗಳಾದುವು. ಅಂತು ಕಲಾಭವನದಲ್ಲಿರುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಸರಾಸರಿ ೪೭ ರೂ. ಬೀಳುವುದು. ೧೯೦೮ ರಲ್ಲಿ ಕಾಡು ಜನರಿಗಾಗಿ ಇರುವ ವಿದ್ಯಾನಿಲಯಗಳಿಗಾಗಿ ೨೧,೦೦೦ ರೂ. ಗಳು ವ್ಯಯವಾದುವು. ಸಂಗೋಡ ಮತ್ತೂ ಅಮರಾಲಿಗಳಲ್ಲಿರುವ ಪಾಠಶಾಲೆಗಳಿಗಾಗಿ ೭,೮೦೦ ರೂ. ವ್ಯಯವಾಯಿತು ಸಂಸ್ಥಾನಗಳಲಿರುವ ಮ್ಯೂಜಿಯಂಗಳನ್ನು ಸರಿಯಾಗಿ ಇಡಲು ೨೬೦೦೦ ರೂ. ಗಳೂ, ಅನ್ಯದೇಶಗಳಿಗೆ ಕಳುಹಿಸಲ್ಪಟ್ಟವರಿಗಾಗಿ ೧೩,೦೦೦ ರೂ. ಗಳೂ ವ್ಯಯವಾಯಿತು. ಸಂಸ್ಥಾನವು ಸ್ವಲ್ಪ ಹೆಚ್ಚು ಕಡಿಮೆ ೧½ ಲಕ್ಷ ರೂ. ಗಳನ್ನು ಕುಶಲ ಕೆಲಸಗಳಿಗಾಗಿ ವ್ಯಯಮಾಡುವುದು. ಸಂಸ್ಥಾನವು ತನ್ನ ದೇಶದ ಜನಗಳ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುವ ಹಣದಲ್ಲಿ ಇದು ಎಂಟನೆಯ ಒಂದುಭಾಗವಾಗುವುದು. ಬರೋಡಾ ಸಂಸ್ಥಾನದ ಕುಶಲಕಲೆಯ ಸ್ಥಿತಿಯು ತೃಪ್ತಿಕರವಾದುದಾಗಿಯೂ, ಅಭಿವೃದ್ಧಿಸ್ಥಿತಿಕರವಾದುದಾಗಿಯೂ ಇರುವುದೆಂಬುದರಲ್ಲಿ ಸಂದೇಹವಿಲ್ಲ. ಭರತಖಂಡದ ಆಶ್ರಿತಸಂಸ್ಥಾನಗಳಲ್ಲಿನ ಕುಶಲಕಲೆಯೊಡನೆ ಬರೋಡಾ ಸಂಸ್ಥಾನದ ಕುಶಲಕಲೆಯನ್ನು ಹೋಲಿಸಿ ನೋಡಿದರೆ, ಬರೋಡಾ ಸಂಸ್ಥಾನವೇ ಪ್ರಥಮಸ್ಥಳವನ್ನುಳ್ಳುದಾಗಿರುವದೆಂಬುದರಲ್ಲಿ ಸಂಶಯವಿಲ್ಲ. ಈ ಅಭಿವೃದ್ಧಿಯು ಭಾರತವರ್ಷದ ಭವಿಷ್ಯತ್ತಿನ ಏಳಿಗೆಯನ್ನು ಸೂಚಿಸುತ್ತಲಿರುವದೆಂಬುದು ನಿರಾಕ್ಷೇಪವಾದುದು. ಬರೋಡಾದೇಶವು ಅಲ್ಲಿದ್ದ ದಿವಂಗತ ರೋಮೇಶಚಂದ್ರದತ್ತರಂತಹ ಭಾರತೀಯ ಬುದ್ಧಿಶಾಲಿಗಳೂ, ವಿದ್ಯಾವಂತರೂ ಆದ ಮಂತ್ರಿಶ್ರೇಷ್ಠರಿಂದಲೂ ದೂರಾಲೋಚನಪರರೂ, ಬುದ್ಧಿವಂತರೂ, ವಿದ್ಯಾವಂತರೂ ಶಕ್ತಿವಂತರೂ, ಧೈರ್ಯಶಾಲಿಗಳೂ ಆದ ಮಹಾರಾಜರ ಪ್ರೋತ್ಸಾಹದಿಂದಲೂ ಅಭಿವೃದ್ಧಿಸ್ಥಿತಿಗೆ ಬಂದಿರುವುದಲ್ಲದೆ ದಿನೇ ದಿನೇ ವೃದ್ಧಿಯಾಗುತ್ತಿರುವುದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಸಮಾಪ್ತಿ.

ಇಂಡಿಯಾದೇಶದ ಸಕ್ಕರೆ ಕೈಗಾರಿಕೆ.

ಪೂರ್ವದಲ್ಲಿ ಹೊರ ದೇಶಗಳಿಗೆ ಬೇಕಾದಷ್ಟು ಸಕ್ಕರೆಯನ್ನು ಕಳುಹಿಸಿಕೊಡುತ್ತಿದ್ದ ಇಂಡಿಯಾದೇಶವು ಈಗ ಇಲ್ಲಿನ ಉಪಯೋಗಕ್ಕೆ ಬೇಕಾಗುವ ಸಕ್ಕರೆಯನ್ನು ಹೊರದೇಶಗಳಿಂದ ತರಿಸಿಕೊಳ್ಳುವಂಥಾದ್ದು ಬಹಳ ಆಶ್ಚರ್ಯವೇಸರಿ, ಅದರೆ ಸಕ್ಕರೆಯನ್ನು ತಯಾರು ಮಾಡತಕ್ಕ ಇತರ ದೇಶಗಳಲ್ಲಿ ಈ ಕೈಗಾರಿಕೆಯು ಬಹಳವಟ್ಟಿಗೆ ಅಭಿವೃದ್ಧಿಗೊಳಿಸಲ್ಪಟ್ಟಿರತಕ್ಕದ್ದು ಇದಕ್ಕೆ ಕಾರಣವೆಂದು ಹೇಳಬೇಕು. ಸಾಲಿಯಾನ ಸುಮಾರು ೧೦ ಕೋಟಿ ರೂಪಾಯಿ ಬೆಲೆ ಬಾಳುವಷ್ಟು ಸಕ್ಕರೆಯು ಹೊರದೇಶಗಳಿಂದ ಅಂದರೆ ಮುಖ್ಯವಾಗಿ ಜಾವಾ, ಮಾರಿಷಸ್, ಆಸ್ಟ್ರಿಯಾ ಮತ್ತು ಜರ್ಮನಿ ದೇಶಗಳಿಂದ ಇಲ್ಲಿಗೆ ರಫ್ತಾಗುತ್ತಿದೆ. ಮೇಲ್ಕಂಡ ದೇಶಗಳಲ್ಲಿ ಹೊಸ ಕ್ರಮಗಳಿಗನುಸಾರವಾಗಿ ಕಬ್ಬನ್ನು ಬೆಳೆದು ಬಹಳ ಸ್ವಚ್ಛವಾದ ಸಕ್ಕರೆಯನ್ನು ತಯಾರು ಮಾಡುವುದೇ ಆ ದೇಶಗಳ ಸಕ್ಕರೆಯೇ ಇಲ್ಲಿ ಮಾರಾಟವಾಗುವುದಕ್ಕೆ ಕಾರಣವಾಗಿದೆ. ಆ ದೇಶದಲ್ಲಿ ಸಕ್ಕರೆಯನ್ನು ತಯಾರು ಮಾಡತಕ್ಕ ವಿಧಾನಗಳನ್ನೂ ಮತ್ತೂ ಈ ದೇಶದ ವಿಧಾನಗಳನ್ನೂ ಹೋಲಿಸಿ ನೋಡಿದರೆ ಇಲ್ಲಿನ ಸಕ್ಕರೆ ಕೈಗಾರಿಕೆಯ ಕ್ಷೀಣಗತಿಗೆ ಕಾರಣವು ಗೊತ್ತಾಗಿದೆ. ಅಮೇರಿಕಾ ದೇಶದವರು ಹಾವಾಯ್, ಫಿಲಿಪ್ಪೈನ್, ಕ್ಯೂಬಾ ಮೊದಲಾದ ಸ್ಥಳಗಳಲ್ಲಿ ತಮಗೆ ಬೇಕಾದಷ್ಟು ಸಕ್ಕರೆಯನ್ನು ತಯಾರು ಮಾಡಲು ಕಬ್ಬಿನ ಬೆಳೆಗೆ ಹೆಚ್ಚು ಗಮನ ಕೊಟ್ಟದ್ದರಿಂದ ಜಾವಾ ಮತ್ತು ಸುಮಾತ್ರಾ ದ್ವೀಪದ ಸಕ್ಕರೆಗೆ ಅಮೇರಿಕಾ ದೇಶದಲ್ಲಿ ಮಾರಾಟವು ಕಡಿಮೆಯಾಗಿ ಇಂಡಿಯಾ ದೇಶದಲ್ಲಿ ಮಾರಾಟವಾಗುವುದು ಹೆಚ್ಚಾಯಿತು. ಈಚೆಗೆ ಜಪಾನ್ ದೇಶದವರೂ ಸಹ ಫಾರ್ಮೋಸಾದಲ್ಲಿ ಸಕ್ಕರೆ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಲು ಬೇಕಾದ ಕೆಲಸಗಳನ್ನು ನಡಿಸುತ್ತಿದಾರೆ. ಇದರಿಂದ ಇನ್ನು ಸ್ವಲ್ಪಕಾಲದಲ್ಲೇ ಜಪಾನಿನಲ್ಲಿ ಜಾವಾದ್ವೀಪದ ಸಕ್ಕರೆಮಾರಾಟವು ನಿಂತುಹೋಗುವುದು ಮಾತ್ರವಲ್ಲದೆ, ಜಪಾನಿನ ಸಕ್ಕರೆಯು ಇಂಡಿಯಾ ದೇಶಕ್ಕೂ ಸಹ ರಫ್ತಾಗಬಹುದೆಂದು ಕಾಣುತ್ತದೆ. ಆದ್ದರಿಂದ ಇಂಡಿಯಾ ದೇಶೀಯರು ಇನ್ನೂ ಕಣ್ಣುಮುಚ್ಚಿಕೊಂಡಿರುವುದರಿಂದ ದೊಡ್ಡ ಅನಾಹುತಕ್ಕೆ ಕಾರಣವಾಗುವುದು. ಈಗಲಾದರೂ ಎಚ್ಚೆತ್ತುಕೊಂಡು ಒಂದೇ ಮನಸ್ಸಿನಿಂದ ಕೆಲಸಮಾಡಿ ಇಲ್ಲಿನ ಕೈಗಾರಿಕೆಯನ್ನು ಅಭಿವೃದ್ಧಿಗೊಳಿಸಿ ಹೊರಗಿನಿಂದ ಇಲ್ಲಿಗೆ ಸಕ್ಕರೆಯು ರಫ್ತಾಗುವುದನ್ನು ನಿಲ್ಲಿಸಲು ಪ್ರಯತ್ನಪಡಬೇಕು. ಹಾಗಿಲ್ಲದಿದ್ದರೆ ಹೊರಗಿನಿಂದ ಸಕ್ಕರೆಯು ಬರುವುದು ಬಹಳ ಹೆಚ್ಚಿ ಇಲ್ಲಿನ ಸಕ್ಕರೆ ಕೈಗಾರಿಕೆಯು ಸಂಪೂರ್ಣವಾಗಿ ನಾಶವಾಗುವುದು.

ಈ ದೇಶದ ಉಪಯೋಗಕ್ಕೆ ಇಲ್ಲೇ ತಯಾರಾಗತಕ್ಕ ಬೆಲ್ಲ ಮತ್ತು ಸಕ್ಕರೆ ಸೇರಿ ೫೦ ಕೋಟಿ ಮಣವೂ ಹೊರಗಿನಿಂದ ತರಿಸತಕ್ಕ ೫ ಕೋಟಿ ಮಣ ಸಕ್ಕರೆಯೂ ಬೇಕಾಗುವುದು. ಪ್ರಪಂಚದಲ್ಲೆಲ್ಲಾ ಕಬ್ಬು ವಿಶೇಷವಾಗಿ ಬೆಳೆಯತಕ್ಕದ್ದು ಇಂಡಿಯಾ ದೇಶದಲ್ಲಿಯೇ. ಸುಮಾರು ೨,೫೦,೦೦,೦೦೦ ಎಕರೆ ಜಮೀನಿನಲ್ಲಿ ಕಬ್ಬನ್ನು ಬೆಳೆಯುವರು. ನಮ್ಮ ದೇಶವು ಶಖೆಯ ದೇಶವಾಗಿದೆ. ಇಲ್ಲಿಗೆ ಸಕ್ಕರೆಯು ಬಹಳ ಉಪಯೋಗಕರವಾದ ಮತ್ತು ಮೈಗೆ ಒಗ್ಗತಕ್ಕಂಥಾ ಆಹಾರ ಪದಾರ್ಥವಾಗಿದೆ; ಮತ್ತು ಇಲ್ಲಿನ ಪ್ರಜಾಸಂಖ್ಯೆಯು ಬಹಳ ಹೆಚ್ಚಾಗಿರುವುದರಿಂದ ಸಕ್ಕರೆಗೆ ಬಹಳ ಮಾರಾಟವಿದೆ ಎಂಬುದರಲ್ಲಿ ಸಂಶಯವೇಯಿಲ್ಲ. ಇದಲ್ಲದೆ ಸಕ್ಕರೆ ತಯಾರಿಗೆ ಬೇಕಾದ ಕಬ್ಬು ಬಹಳ ಹೇರಳವಾಗಿ ಬೆಳೆಯುತ್ತದೆ; ತಯಾರಾದ ಸಕ್ಕರೆಗೆ ಸುತ್ತಮುತ್ತಲಿನ ನೆರೆ ದೇಶಗಳಲ್ಲಿ ಮಾರಾಟವಿದೆ. ಇದನ್ನೆಲ್ಲಾ ನೋಡಿದರೆ ಇಲ್ಲಿಗೆ ಬೇಕಾದಷ್ಟು ಸಕ್ಕರೆಯನ್ನು ಇಲ್ಲೇ ತಯಾರುಮಾಡದೆ ಇಲ್ಲಿಗೆ ಸಾಗಿಸುವುದಕ್ಕೆ ಬಾಡಿಗೆ ಮೊದಲಾದುವುಗಳಿಗೆ ಹೆಚ್ಚು ಹಣ ಖರ್ಚುಮಾಡಿ ಹೊರಗಿನ ದೂರದೇಶಗಳಿಂದ ಇಲ್ಲಿಗೆ ಸಕ್ಕರೆಯನ್ನು ತರಿಸಿ ನಮ್ಮ ದೇಶದ ಸಕ್ಕರೆ ಕೈಗಾರಿಕೆಯನ್ನು ಕ್ಷೀಣದೆಶೆಗೆ ತರಲು ಕಾರಣವೇನೂ ಕಂಡುಬರುವುದಿಲ್ಲ.

ಕಬ್ಬಿನಿಂದಲೇ ಇಲ್ಲಿನ ಉಪಯೋಗಕ್ಕೆ ಸಾಕಾದಷ್ಟು ಸಕ್ಕರೆಯನ್ನು ತಯಾರುಮಾಡದೆ ಇರುವುದಕ್ಕೆ ಕಾರಣವೇನೆಂಬುದನ್ನು ವಿಚಾರಮಾಡೋಣ. ಈ ವಿಚಾರದಲ್ಲಿ ಇಂಡಿಯಾ ದೇಶದಲ್ಲಿ ಸಕ್ಕರೆಯು ಯಾವರೀತಿಯಲ್ಲಿ ಉಪಯೋಗಿಸಲ್ಪಡುವುದೆಂಬುದನ್ನು ತಿಳಿದುಕೊಳ್ಳುವುದರಿಂದ ಬಹಳ ಪ್ರಯೋಜನವುಂಟು. ಇಲ್ಲಿ ವರುಷಕ್ಕೆ ಸುಮಾರು ೭೮ ಕೋಟಿ ಮಣ ಕಬ್ಬಿನ ಬೆಳೆಯಾಗುವುದು. ಇದರಲ್ಲಿ ಸ್ವಲ್ಪಭಾಗವನ್ನು ತಿಂದೇ ಪೂರೈಸುವರು. ಇನ್ನೂ ಸ್ವಲ್ಪಭಾಗವು ಪೂರ್ವಕಾಲದ ಮರದ ಗಾಣಗಳಲ್ಲಿ ಗಾಣವಾಡಲ್ಪಟ್ಟು ರಸದಿಂದ ಬೆಲ್ಲವು ತಯಾರು ಮಾಡಲ್ಪಡುವುದು ಮತ್ತು ಉಳಿದ ಬಹಳ ಸ್ವಲ್ಪಭಾಗಮಾತ್ರ ಸಕ್ಕರೆ ತಯಾರುಮಾಡುವುದಕ್ಕಾಗಿ ಉಪಯೋಗಿಸಲ್ಪಡುವುದು ಬೆಲ್ಲವು ಸಕ್ಕರೆಗಿಂತ ರುಚಿಯಾಗಿಯೂ, ಅಗ್ಗವಾಗಿಯೂ ಮತ್ತು ಪುಷ್ಟಿಕರವಾಗಿಯೂ ಇರುವುದರಿಂದ ಜನಗಳು ಸಕ್ಕರೆಗೆ ಬದಲಾಗಿ ಬೆಲ್ಲವನ್ನೇ ಹೆಚ್ಚಾಗಿ ಉಪಯೋಗಿಸುವರು. ವರ್ಷಕ್ಕೆ ತಲೆಗೆ ಸರಾಸರಿ ೭.೭ ಸೇರು ಸಕ್ಕರೆಯೂ, ೧೩ ಸೇರು ಬೆಲ್ಲವೂ ಬೇಕಾಗುವುದು. ಈ ಪೈಕಿ ೭ ಸೇರು ಸಕ್ಕರೆಯು ಹೊರಗಿನಿಂದ ಸರಬರಾಜಾಗುತ್ತಿದೆ. ಆದ್ದರಿಂದ ಬೆಲ್ಲವನ್ನು ತಯಾರುಮಾಡಲು ಖರ್ಚು ಬಹಳ ಕಡಿಮೆಯಾದಾಗ್ಯೂ ಸಕ್ಕರೆಗಿಂತ ಬೆಲ್ಲಕ್ಕೆ ಹೆಚ್ಚು ಬೆಲೆ ಸಿಕ್ಕುವುದು. ಹ್ಯಾಗೆಂದರೆ— ೩॥ ಮಣ ಬೆಲ್ಲಕ್ಕೆ ರೂ. ೬ ಖರೀದಿಯಾಗುವುದು; ಮತ್ತು ೩॥ ಮಣ ಸಕ್ಕರೆಗೆ ೭-೮-೦ ಖರೀದಿಯಾಗುವುದು. ಅಂದರೆ ೩॥ ಮಣ ಸಕ್ಕರೆಗೂ ಮತ್ತು ಬೆಲ್ಲಕ್ಕೂ ರೂ. ೧-೮-೦ ವ್ಯತ್ಯಾಸವಾಯಿತು ಬೆಲ್ಲದಿಂದ ೩॥ ಮಣ ಸಕ್ಕರೆಯನ್ನು ತಯಾರುಮಾಡಲು ರೂ. ೧-೮-೦ ಸಾಕಾಗುವುದಿಲ್ಲ. ಇದಕ್ಕೆ ಬದಲಾಗಿ ಕಬ್ಬಿನ ಹಾಲಿನಿಂದಲೇ ಸಕ್ಕರೆಯನ್ನು ತಯಾರು ಮಾಡಿದರೆ ಬೆಲ್ಲವನ್ನು ತಯಾರು ಮಾಡುವುದರಿಂದ ಬರುವಷ್ಟು ನರವಾನವೂ ಬರುವುದಿಲ್ಲ. ಹ್ಯಾಗೆಂದರೆ, ಹತ್ತು ರೂಪಾಯಿ ಬಾಳುವ ೯೫ ಮಣ ಕಬ್ಬಿನ ಹಾಲಿನಿಂದ ಬೆಲ್ಲವನ್ನು ತಯಾರು ಮಾಡಿದರೆ ರೂ. ೧೭-೮-೦ ಸಿಕ್ಕುವುದು; ಸಕ್ಕರೆಯನ್ನು ತಯಾರುಮಾಡಿದರೆ ರೂ ೭-೮-೦ ನ ಸಕ್ಕರೆಯೂ ರೂ. ೫ ನ ಕಾಕಂಬಿಯೂ ಸಿಕ್ಕುವುದು. ಅಂದರೆ ಸಕ್ಕರೆ ತಯಾರುಮಾಡುವುದರಿಂದ ೧ ರೂ. ನಷ್ಟವಾದಂತಾಯಿತು. ಅಂತೂ ಬೆಲ್ಲವನ್ನು ತಯಾರು ಮಾಡುವುದಕ್ಕೆ ಬದಲಾಗಿ ಸಕ್ಕರೆಯನ್ನು ತಯಾರು ಮಾಡುವುದು ನಷ್ಟವೆಂಬುವುದರಲ್ಲಿ ಸಂಶಯವೇಯಿಲ್ಲ.

ರೆ. ಗೆ.

ಫಲಹಾರ.

ದ್ರಾಕ್ಷೇಹಣ್ಣು ಮಲಯುಜ್ವರವನ್ನೂ, ಬಾದಾಮಿಯು ದುರ್ಬಲವಾದ ನರಗಳನ್ನೂ, ನಿಂಬೆಹಣ್ಣು ಗಂಡಮಾಲೆಯನ್ನೂ ಗುಣಪಡಿಸುತ್ತವೆ. ನೀರಿನ ಸಮೀಪದಲ್ಲಿ ಬಳೆಯುವ ಒಂದುವಿಧವಾದ ಗಾಟಿನ ವಾಸನೆಯುಳ್ಳ ಬಳ್ಳಿಯು (ವಾಟರ್‌ಕ್ರೆಸ್) ಶ್ವಾಸಕೋಶ ಸಂಬಂಧವಾದ ರೋಗವನ್ನು ಗುಣಪಡಿಸುತ್ತದೆ ಚಪ್ಪರದ ಬದನೇಕಾಯಿಯು ರಕ್ತಶುದ್ಧಿಯನ್ನು ಮಾಡುವುದು. ಬ್ರೆಜಿಲ್‌ದೇಶದ (ಕಡಲೆ) ಕಾಯಿ ನಲ್ಲಿ ಯವಕ್ಷಾರಜನಕ ವಾಯುಗುಣವಿರುವುದರಿಂದ ಕೆಲ ದೇಹಪ್ರಕೃತಿಯಲ್ಲಿ ಶಕ್ತಿಯನ್ನು ವರ್ಧಿಸುವುದು. ಸೇಬಿನಹಣ್ಣಿನಲ್ಲಿ ಗಂಧಕದಂತ ಒಂದು ಧಾತು ಇರುವುದರಿಂದ ಅದರ ಸೇವನೆಯಿಂದ ಮೆದುಳಿನ ಮತ್ತೂ ನರಗಳ ಶಕ್ತಿಯು ಹೆಚ್ಚುವುದು. ಅನನಸ್ಸು ಜೀರ್ಣಶಕ್ತಿಯನ್ನು ಹೆಚ್ಚಿಸುವುದಲ್ಲದೆ ಗಂಟಲನೋವನ್ನು ಗುಣಪಡಿಸುವುದು. ಕಿತ್ತಲೆಯ ಹಣ್ಣು ಯಕೃತ್ತು (ಲೀವರ್) ಸಂಬಂಧವಾದ ರೋಗವನ್ನು ಗುಣಪಡಿಸುವುದು ವಿಲಾಯತಿಯ ಹಕ್ಕರಿಕೆ ಪಲ್ಯದ ಮತ್ತೂ ನಿಂಬೇಹಣ್ಣಿನ ರಸವು ಕಾಮಾಲೆ ಅಥವ ಅರಸಿನಮುಂಡಿಗೆರೋಗಕ್ಕೆ ಒಳ್ಳೇ ಔಷಧವು.

ಮಹಮ್ಮದೀಯರ ನಾಣ್ಯವು.

ಪಷ್ಯಾ ರಾಜ್ಯದ ಷಾಹನಾದ ಮುಲಾಯಿ ಆಫಿದನು ತನ್ನ ದೇಶದ ಬೆಳ್ಳಿ ನಾಣ್ಯಗಳಮೇಲೆ ತನ್ನ ಭಾವದ ಬೊಂಬೆಯನ್ನು ಹಾಕಿ ಅಚ್ಚುಮಾಡುವಂತೆ ಟಂಕಶಾಲೆಗೆ ಆಜ್ಞೆಮಾಡಿರುತ್ತಾನೆ. ಇದು ತಮ್ಮ ಖುರಾನಿಗೆ ವಿರುದ್ಧವಾದುದರಿಂದ ಧರ್ಮನಿಷ್ಠರಾದ ಅನೇಕ ಮಹಮ್ಮದೀಯರಾಜರುಗಳು ತಮ್ಮ ರಾಜ್ಯದ ನಾಣ್ಯಗಳಮೇಲೆ ಯಾವದೊಂದು ಬೊಂಬೆಯನ್ನೂ ಹಾಕಿಸದೆ ಅಚ್ಚುಮಾಡಿಸುತ್ತಿದ್ದರು. ಆದರೆ ಖುರಾನಿಗೆ ವಿರುದ್ಧವಾಗಿ ಘಜನಿ ಮಹಮ್ಮದನುಮಾತ್ರ ತನ್ನ ನಾಣ್ಯಗಳಮೇಲೆ ಒಂದು ಗೂಳಿಯ ಮತ್ತೂ ಒಬ್ಬ ಕುದುರೆಸ್ವಾರನ ಬೊಂಬೆಗಳನ್ನು ಅಚ್ಚು ಹಾಕಿಸುತ್ತಿದ್ದನು; ಅಕಬರ್ ಚಕ್ರವರ್ತಿಯು ತನ್ನ ಶಯ್ಯಾಗೃಹ, ಸಭಾಂಗಣ ಮೊದಲಾದ ಸ್ಥಳಗಳಲ್ಲಿ ಭಾವಚಿತ್ರಗಳಿಂದಲಂಕರಿಸುತ್ತಿದ್ದನು; ಜಹಾಂಗೀರನಾದರೋ ತನ್ನ ಬಂಗಾರದ ನಾಣ್ಯಗಳಮೇಲೆ ತಾನು ಸಿಂಹಾಸನದಮೇಲೆ ಕಾಲಿನಮೇಲೆ ಕಾಲನ್ನು ಅಡ್ಡಲಾಗಿ ಹಾಕಿಕೊಂಡು ಕೈಲಿ ಗೋಳಾಕಾರದ ಪಾತ್ರೆಯನ್ನು ಹಿಡಿದುಕೊಂಡು ಕುಳಿತಿರುವಂತೆ ಪ್ರತಿಮೆಯನ್ನು ಹಾಕಿಸಿದ್ದನು. ಭರತಖಂಡವನ್ನಾಳಿದ ಮಹಮ್ಮದೀಯ ರಾಜರುಗಳು ಮತ್ತಾರೂ ಇವನಂತೆ ತಮ್ಮ ಸ್ವಂತ ಪ್ರತಿಮೆಗಳನ್ನುಪಯೋಗಿಸಿರಲಿಲ್ಲ. ಅವರಂಗಜೇಬನಾದರೋ ಖುರಾನಿಗೆ ವಿರುದ್ಧವಾದ ಯಾವುದಾದರೊಂದು ಪ್ರತಿಮೆ ಮೊದಲಾದುದನ್ನು ನಾಣ್ಯಗಳಮೇಲೆ ಉಪಯೋಗಿಸಿರಲಿಲ್ಲವು.

ಒಬ್ಬ ಬಡ ಹುಡುಗಿಗೆ ಐಶ್ವರ್ಯವು ಬಂದುದು.

ಹಂಗೇರಿಯಾಕ್ಕೆ ಸೇರಿದ ಒಂದು ಸಣ್ಣ ಊರಿನಲ್ಲಿ ಒಬ್ಬ ಬಹು ಬಡಹುಡುಗಿಯು ಜೋಡುಮಾರುವ ಅಂಗಡಿಯಲ್ಲಿ ಅಲ್ಪ ಸಂಬಳದಮೇಲೆ ಕೆಲಸವನ್ನು ಮಾಡಿಕೊಂಡಿದ್ದಳು. ಒಂದುದಿವಸ ಹೆನ್ಸಿಕ್ಸಾನಿ ಎಂಬ ಒಬ್ಬ ವಯಸ್ಸಾದ ಬ್ರಹ್ಮಚಾರಿಯು ಆ ಜೋಡಿನಂಗಡಿಗೆ ಬಂದು ಜೋಡನ್ನು ನೋಡುತ್ತಿರುವಾಗ್ಗೆ ಆ ಹುಡುಗಿಯನ್ನು ಕಂಡು ಅವಳ ಪೂರ್ವೋತ್ತರವನ್ನು ವಿಚಾರಿಸಿ, ಅವಳಿಗೆ ಅಲ್ಪ ಸಂಬಳವು ದೊರೆಯುವುದಕ್ಕಾಗಿ ತುಂಬಾ ಕನಿಕರಪಟ್ಟು ಹೊರಟುಹೋದನು. ಅತನು ಈಚೆಗೆ ಒಂದುದಿವಸ ಅದೇ ಅಂಗಡಿಗೆ ಬಂದು ಆ ಬಡ ಹುಡುಗಿಯನ್ನು ಕುರಿತು—ನಿನ್ನನ್ನು ನನ್ನಾಸ್ತಿಗೆಲ್ಲಾ ಬಾಧ್ಯಳನ್ನಾಗಿ ಮಾಡಬೇಕೆಂದಿರುತ್ತೇನೆಂದು ಹೇಳಲು, ಆ ಹುಡುಗಿಯು ಅವನು ಧರಿಸಿರುವ ಅಸಹ್ಯವಾದ ಉಡುಪನ್ನೋಡಿ ಬಡವನೆಂದು ತಿಳಿದು ನಕ್ಕುಬಿಟ್ಟಳು. ಆಗ ಆ ಬ್ರಹ್ಮಚಾರಿಯು ಬರೆಯುವ ಕಡ್ಡಿಯನ್ನು ತೆಗೆದುಕೊಂಡು ಒಂದು ಕಾಗದದಮೇಲೆ ತನ್ನಾಸ್ತಿಯೆಲ್ಲವೂ ತನ್ನ ಮರಣಾನಂತರ ಆ ಬಡ ಹುಡುಗಿಗೆ ಸಲ್ಲತಕ್ಕದೆಂದು ಬರೆದು ಆ ವಿಲ್ಲಿಗೆ ಇಬ್ಬರು ಸಾಕ್ಷಿಗಳ ಹಸ್ತಾಕ್ಷರವನ್ನು ಬರೆಸಿ ಆ ಹುಡುಗಿಯ ಜೇಬಿನಲ್ಲಿ ಕಾಗದವನ್ನಿಟ್ಟು ಹೊರಟ ಹೋದನು. ಇವನು ಅಲ್ಲಿಂದ ಹೊರಗೆ ಹೊರಟ ಕೊಂಚ ಹೊತ್ತಿನಮೇಲೆ ಮಾರ್ಗದಲ್ಲಿ ಇದಿರಿಗೆ ಬರುತ್ತಿದ್ದ ಮೋಟಾರು ಬಂಡಿಗೆ ಸಿಕ್ಕದಹಾಗೆ ತಪ್ಪಿಸಿಕೊಳ್ಳಲು ಹಾರಿದಾಗ್ಗೆ ಉಸುರಾಡುವುದು ನಿಂತುಹೋಗಿ ಕೂಡಲೆ ಸತ್ತುಬಿದ್ದನು. ಆ ಮರಣೆಯುಬೆಳಿಗ್ಗೆ ಅವನ ೩,೯೦,೦೦೦ ರೂ. ಬೆಲೆಯಾಸ್ತಿಯು ಆ ಬಡಹುಡುಗಿಯ ಪಾಲಾಯಿತು. ದೇವರ ಕೃಪೆಯುಂಟಾದರೆ ಐಶ್ವರ್ಯವು ಅನಿರೀಕ್ಷಿತವಾಗಿ ಬರುವುದೆನ್ನುವುದಕ್ಕೆ ಇದು ಒಳ್ಳೇ ದೃಷ್ಟಾಂತವಲ್ಲವೆ?

ನಾನಕ್ ಗುರುವಿನ ಚರಿತ್ರೆಯು.

ಈತನ ಜನ್ಮಸ್ಥಲವು ಪಂಜಾಬುದೇಶವು. ಈತನು ಒಳ್ಳೇ ಭಗವದ್ಭಕ್ತನಾಗಿದ್ದು ಮತೋದ್ಧಾರವನ್ನು ಮಾಡಿ ಮಹನೀಯನೆಂದು ಪ್ರಸಿದ್ಧನಾಗಿದ್ದನು. ಈತನ ಕಾಲದಲ್ಲಿ ಪಂಜಾಬು ದೇಶವು ಮಹಮ್ಮದೀಯ ರಾಜರುಗಳಾಧೀನಕ್ಕೊಳಪಟ್ಟಿದ್ದು, ಎಲ್ಲಿನೋಡಿದರೂ ಮಸೀದಿಗಳ ಮಯವಾಗಿದ್ದುದರಿಂದ, ಈ ನಾನಕ್ಕನು ರಾವಲ್‌ಪಿಂಡಿಯಲ್ಲಿ ಬಹುದ್ರವ್ಯವ್ಯಯವನ್ನು ಮಾಡಿ ಒಂದು ವಿಷ್ಣು ದೇವಾಲಯವನ್ನು ಸ್ಥಾಪಿಸಿದನು. ಆಗ ಮಹಮ್ಮದೀಯರಿಗೆ ಈ ದೇವಸ್ಥಾನಸ್ಥಾಪನೆಯಿಂದ ರೋಷವುಂಟಾಗಿ ದೇವಾಲಯವನ್ನು ನಾಶಮಾಡ ಯತ್ನಿಸಿದುದನ್ನು ನಾನಕ್ಕನು ಅರಿತು ಅದಕ್ಕೆ ಮೊದಲೇ ತಾನಾಗಿ ಆ ವಿಷ್ಣು ದೇವಾಲಯವನ್ನು ಕಿತ್ತುಹಾಕಿಸಿ ಆ ಸ್ಥಳದಲ್ಲಿ ಒಂದು ಮಸೀದಿಯನ್ನು ಬಹು ದುಡ್ಡು ವ್ಯಯದಿಂದ ಕಟ್ಟಿಸಿದನು. ಹೀಗೆ ನಾನಕ್ಕನು ಮೊದಲು ವಿಷ್ಣು ದೇವಾಲಯವನ್ನು ಕಟ್ಟಿಸಿ ಅನಂತರ ಅದನ್ನು ತೆಗೆದುಬಿಟ್ಟು ಆ ಸ್ಥಳದಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದುದನ್ನೋಡಿ ಹಿಂದೂಗಳು ನಿಂದಿಸಲಾರಂಭಿಸಿದರು. ನಾನಕ್ಕನು ಈ ನಿಂದೆಯನ್ನು ಕೇಳಿ ಆ ಮಸೀದಿಯನ್ನು ಒಡೆದುಬಿಟ್ಟು ಆ ಸ್ಥಳದಲ್ಲಿ ಜಾತಿ ಮತಭೇದವಿಲ್ಲದೆ ಎಲ್ಲರಿಗೂ ಸಮವಾಗಿರುವಂತೆ ಒಂದು ಉದ್ಯಾನವನ್ನು ನಿರ್ಮಿಸಿದನು. ಆಗ ಇವನ ಶಿಷ್ಯರು ಮುಂತಾದವರು ಈ ನಾನಕ್ಕನಿಗೆ ಹುಚ್ಚು ಹಿಡಿದಿರಬೇಕು; ಹಾಗಲ್ಲದಿದ್ದರೆ ಈತನು ಹೀಗೆ ಇದ್ದ ಹಣವನ್ನೆಲ್ಲಾ ಹಾಳುಮಾಡಿಕೊಳ್ಳುತ್ತಿದ್ದನೆ! ಎಂದಂದುಕೊಂಡು, ನಾನಕ್ಕನನ್ನು ಕುರಿತು ಏನಯ್ಯಾ! ನೀನು ಮೊದಲು ದೇವಾಲಯವನ್ನು ಕಟ್ಟಿಸಿ ಅದನ್ನು ಹಾಳುಮಾಡಿ ಅನಂತರ ಮಸೀದಿಯನ್ನು ಕಟ್ಟಿಸಿ ಈಗ ಅದನ್ನು ತೆಗದುಬಿಟ್ಟು ಉದ್ಯಾನವನ್ನು ನಿರ್ಮಿಸಿ ನಿನ್ನ ಆಸ್ತಿಯನ್ನೆಲ್ಲಾ ಹಾಳುಮಾಡಿಕೊಳ್ಳಬಹುದೆ? ಎಂದು ಕೇಳಲು, ನಾನಕ್ಕನು ಅವರೆಲ್ಲರನ್ನೂ ಕುರಿತು, "ಅಯ್ಯಾ! ಲೋಕದಲ್ಲಿ ಭಗವಂತನನ್ನು ಕೆಲರು ಶಿವನೆಂದೂ ಮತ್ತೆ ಕೆಲರು ವಿಷ್ಣುವೆಂದೂ, ಬೇರೆ ಕೆಲರು ಆದಿಶಕ್ತಿಯೆಂದೂ ಭಾವಿಸಿ ಆರಾಧಿಸುವರು. ಅನೇಕರು ಸೂರ್ಯನೇ ಭಗವಂತನೆಂದು ಪೂಜಿಸುವರು. ಅದುಕಾರಣ ಸಮಸ್ತರಿಗೂ ಸಂತೋಷವಾಗುವುದಕ್ಕಾಗಿ ನಾನು ಈರೀತಿ ಮಾಡಿದೆನು." ಎಂದುತ್ತರವನ್ನು ಕೊಟ್ಟನು ಆಗ ಜನರು ಈತನು ಫಕೀರನೂ ಅಲ್ಲ, ಬೈರಾಗಿಯೂ ಅಲ್ಲ, ಆದರೆ ಸತ್ವಗುಣಸಂಪನ್ನನು ಎಂದು ಭಾವಿಸಿಕೊಂಡರು. ಮಹಮ್ಮದೀಯರು ಈ ನಾನಕ್ಕನ ವರ್ತನವನ್ನೋಡಿ, ಈತನು ಜನ್ಮತಃ ಮಹಮ್ಮದೀಯನಾಗಿದ್ದು ಎಲ್ಲೋ ಸಂಗದೋಷದಿಂದ ಹೀಗೆ ಜಾತಿಭ್ರಷ್ಟನಾಗಿರಬೇಕು. ಅದುಕಾರಣ ಇವನನ್ನು ಪುನಃ ಮಹಮ್ಮದೀಯ ಮತಕ್ಕೆ ಸೇರಿಸಿಕೊಳ್ಳಬೇಕೆಂದು ಆಲೋಚಿಸಿ, ಈ ವಿಷಯವನ್ನು ತಮ್ಮ ದೊರೆಗೆ ತಿಳುಹಿದರು. ಅದರಮೇಲೆ ಆ ದೊರೆಯು—"ನೀನು ಸ್ವಮತ ಧರ್ಮವನ್ನು ಬಿಟ್ಟು ಅನ್ಯಮತವನ್ನವಲಂಬಿಸಲು, ಆ ಅನ್ಯಮತದಲ್ಲಿ ಅಂಥ ವಿಶೇಷವೇನಿರುವುದು? ಸತ್ಯವು ಎಲ್ಲ ಮತಗಳಿಗೂ ಮೂಲವಾದುದರಿಂದ ನಿನ್ನ ಸ್ವಮತವಾದ ಮಹಮ್ಮದೀಯ ಮತಕ್ಕೆ ಪುನಃ ಬರಬೇಕೆಂದು ನಾನು ಅಪ್ಪಣೆಮಾಡಿರುವುದಾಗಿ ನಾನಕ್ಕನಿಗೆ ತಿಳುಹಿ ಅವನನ್ನು ಕರೆದುಕೊಂಡು ಬರಬೇಕು" ಎಂದು ಸೇವಕರಿಗಾಜ್ಞಾಪಿಸಿದನು. ಆ ಸೇವಕರು ಈ ವಿಷಯವನ್ನು ನಾನಕನಿಗೆ ತಿಳುಹಲು, ನಾನಕನು "ಭಾಂಡಗಳ ಸ್ವರೂಪವು ಬೇರೆಬೇರೆಯಾಗಿದ್ದಾಗ್ಯೂ ಅವುಗಳಿಗುಪಯೋಗಿಸಿರುವ ಮಣ್ಣು ಒಂದೇಯಾಗಿರುವಂತೆಯೂ, ಆಭರಣಗಳು ನಾನಾತೆರನಾಗಿದ್ದರೂ ಅವುಗಳಿಗುಪಯೋಗಿಸಲ್ಪಟ್ಟಿರುವ ಬಂಗಾರವೊಂದೆಯಾಗಿರುವಂತೆಯೂ, [illegible] ತೋರಿಕೆಯಂತೆ ಭಗವಂತನನ್ನು ವಿಧವಿಧವಾಗಿ ಭಾವಿ

ಅರಾಧಿಸಿದಾಗ್ಯೂ ವಿಶ್ವವ್ಯಾಪಕನಾದ ಈಶ್ವರನೊಬ್ಬನೇ ಯಾಗಿರುವನು." ಎಂಬ ಭಾವಗರ್ಭಿತವಾದ ಶ್ಲೋಕವನ್ನು ಆ ಸೇವಕರಮೂಲಕ ಹೇಳಿ ಕಳುಹಿದನು. ಸಶೇಷ.

„ಮೈಸೂರ್ ಸ್ಟಾರ್" ಪತ್ರಿಕೆಯ ೧೯೧೦ ನೇ ವರ್ಷದ ಡಿಸೆಂಬರ್ ತಾ॥ ೧೯ ರ ಸಂಚಿಕೆಯಲ್ಲಿ ಜಪದಕಟ್ಟೆ ಮಠದ ವಿಷಯಕವಾದ ಪತ್ರವ್ಯಾವಹಾರಿಕ ಲೇಖನದಲ್ಲಿ ನೀಲಕಂಠಸ್ವಾಮಿಗಳ ಮಠದ ಮೇಲಾಗಲಿ, ಮಠಾಧಿಪತಿಗಳ ಮೇಲಾಗಲಿ ಯಾವ ದೋಷಾರೋಪಣೆಯೂ ಮಾಡಲ್ಪಟ್ಟಿರುವುದಿಲ್ಲ ಮತ್ತೂ ಆ ರೀತಿ ದೋಷಾರೋಪಣೆ ಮಾಡಬೇಕೆಂಬುದ್ದೇಶವೂ ಲೇಖಕರಿಗಿರಲಿಲ್ಲ.— ಸ. ಪ್ರ.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಜುಲೈ ತಾ॥ ೩೧ ನೇ ಸೋಮವಾರ.

ಆನರಬಲ್ ಗೋಖಲೆಯವರು.

ಆ॥ ಗೋಪಾಲಕೃಷ್ಣ ಗೋಖಲೆಯವರು ಕಳೆದ ತಾ॥ ೨೨ ರ ಬೆಳಿಗ್ಗೆ ಪೂನಾದಿಂದ ಮದ್ರಾಸಿಗೆ ದಯಮಾಡಿಸಿದರು. ಸೆಂಟ್ರಲ್ ಸ್ಟೇಷನ್‌ಬಳಿ ಆ॥ ಟಿ. ವಿ. ಶೇಷಗಿರಿ ಅಯ್ಯರ್‌ರವರು, ದಿವಾನ್ ಬಹದ್ದೂರ್ ಕೆ. ನಾರಾಯಣರಾಯರು, ಮೆ॥ ಯಾಕೊಬ್ ಹರ್ಸೇರವರು, ಮೆ॥ ಸಿ. ಎಸ್. ಶ್ರೀನಿವಾಸಶಾಸ್ತ್ರಿಯವರು ಮೊದಲಾದ ದೊಡ್ಡಮನುಷ್ಯರುಗಳು ಇದಿರ್ಗೊಂಡು ಮರ್ಯಾದಾಪುರಸ್ಸರವಾಗಿ ಸ್ವಾಗತವನ್ನು ಮಾಡಿದರು. ಮತ್ತೂ ಅಲ್ಲಿ ನೆರೆದಿದ್ದ ವಿದ್ಯಾರ್ಥಿಗಳೇ ಮೊದಲಾದವರು ಜಯಘೋಷವನ್ನು ಮಾಡಿದರು. ಅನಂತರ ಗೋಖಲೆಯವರು ಗಾಡಿಯಾರೂಢರಾಗಿ ತಿರುವಲ್ ಕೇಣಿಗೆ ದಯಮಾಡಿಸಿ ಭರತಖಂಡದ ಸೇವಾಸಂಘದವರ ಮಂದಿರದಲ್ಲಿ ಇಳಿದುಕೊಂಡರು. ಅದೇ ಸಾಯಂಕಾಲ ವಿಕ್ಟೋರಿಯಾ ಪಬ್ಲಿಕ್ ಹಾಲಿನಲ್ಲಿ ಆ॥ ಗೋಖಲೆಯವರು ಬಾಲವಿದ್ಯಾಭ್ಯಾಸವನ್ನು ಬಲಾತ್ಕಾರದಿಂದ ಮಾಡಿಸುವ ವಿಚಾರದಲ್ಲಿ ಮಾಡಿರುವ ಬಿಲ್ಲನ್ನು ಅನುಷ್ಠಾನಕ್ಕೆ ತರಲು ಒಂದು ಶಾಸನವನ್ನು ಮಾಡುವ ವಿಚಾರದಲ್ಲಿ ಪ್ರಜೆಗಳ ಸಮ್ಮತಿಯನ್ನು ತೆಗೆದುಕೊಳ್ಳತಕ್ಕ ಬಗೆಗೆ ಸರ್ ಎಸ್. ಸುಬ್ರಹ್ಮಣ್ಯಯ್ಯರ್‌ರವರ ಅಧ್ಯಕ್ಷತೆಯಿಂದ ಒಂದು ದೊಡ್ಡ ಸಭೆಯು ಸೇರಿದ್ದಿತು. ಆಗ ಆ॥ ಗೋಖಲೆಯವರು ತಾವು ವೈಸ್ರಾಯರ ನಿಯಮನಿರ್ಮಾಣಸಭೆಯವರ ಪರ್ಯಾಲೋಚನೆಗಾಗಿಟ್ಟಿರುವ ಬಿಲ್ಲಿನ ಅವಶ್ಯಕತೆಯನ್ನು ಕುರಿತು ಯುಕ್ತಿಯುಕ್ತವಾದ ಒಂದು ಭಾಷಣವನ್ನು ಮಾಡಿದರು. ಅದರ ಮುಖ್ಯಾಂಶವೇನೆಂದರೆ:— ನಮ್ಮ ದೇಶೀಯರ ನೈತಿಕ ಮತ್ತೂ ಸಾಂಪತ್ತಿಕ ಸ್ಥಿತಿಯು ನೆಟ್ಟಗಾಗಬೇಕಾದರೆ, ಸಾರ್ವತ್ರಿಕ ವಿದ್ಯಾಭ್ಯಾಸವು ಅತ್ಯಂತಾವಶ್ಯಕವಾಗಿದೆ. ದಾರಿದ್ರ್ಯ, ಅರಿಷ್ಟ, ಕೊಳಕುತನ ಮತ್ತೂ ವ್ಯಾಧಿ ಇವುಗಳೆಲ್ಲಾವುದನ್ನು ಹೋಗಲಾಡಿಸಬೇಕಾದರೂ, ಮೊದಲು ಜನರ ಮೌಢ್ಯವನ್ನು ಹೋಗಲಾಡಿಸಿ, ಅವರಿಗೆ ವಿದ್ಯಾಭ್ಯಾಸದ ಪ್ರಯೋಜನವನ್ನುಂಟು ಮಾಡಿಕೊಡತಕ್ಕದು ಅತ್ಯವಶ್ಯಕವು. ಕೆಲಸಗಾರನ ಸಂಪಾದನೆಯ ಶಕ್ತಿಯು ಹೆಚ್ಚಬೇಕಾದಲ್ಲಿ, ರೈತನು ಬಲಿಷ್ಠನಾಗಿ ಬೆಳೆದು ತನಗೆ ಹಣವನ್ನು ಸಾಲಕೊಡತಕ್ಕವರ ಕೂಡ ಎಚ್ಚರಿಕೆಯಿಂದ ನಡೆದುಕೊಳ್ಳುವಂತಾಗಬೇಕಾದಲ್ಲಿ ಮತ್ತೂ ಆರೋಗ್ಯದಿಂದುಂಟಾಗತಕ್ಕ ಪ್ರಯೋಜನವನ್ನು ತಿಳಿದುಕೊಳ್ಳಬೇಕಾದಲ್ಲಿ ಅವನಿಗೆ ವಿದ್ಯೆಯ ಮೂಲವನ್ನು ತಿಳುಹಿಕೊಡತಕ್ಕದು ಅದಿಕರ್ತವ್ಯವು. ವಿದ್ಯೆಯ ವಿನಹಾ ಯಾವುದನ್ನೂ ಸಾಧಿಸಲಾಗುವುದಿಲ್ಲ. ಈ ವಿದ್ಯೆಯು ಜನರ ನೈತಿಕ ಮತ್ತೂ ಸಾಂಪತ್ತಿಕ ಸ್ಥಿತಿಯಭಿವೃದ್ಧಿಗೆ ಕಾರಣವೆಂಬುದನ್ನೂ ಪ್ರಪಂಚದಲ್ಲಿ ನಮ್ಮ ಭರತಖಂಡದ ವಿನಹಾ ಇತರ ಎಲ್ಲ ಸರ್ಕಾರದವರೂ, ಪ್ರಜೆಗಳೂ ತಿಳಿದಿರುತ್ತಾರೆ. ಇಂಥ ವಿದ್ಯಾಪ್ರಯೋಜನವನ್ನು ಬ್ರಿಟಿಷ್ ಸರ್ಕಾರದಾಡಳಿತಕ್ಕೊಳಪಟ್ಟ ಭಾರತೀಯರು ಹೊಂದಬೇಕೆಂದು ಬಾಲವಿದ್ಯಾಭ್ಯಾಸವನ್ನು ಬಲವಂತದಿಂದ ಮಾಡಿಸಲು ಒಂದು ಬಿಲ್ಲನ್ನು ಸಿದ್ಧಗೊಳಿಸಿ ಇಂಡ್ಯಾ ಸರ್ಕಾರದವರ ಅನುಮೋದನೆಗಿಟ್ಟಿರುತ್ತೇನೆ. ಬಲವಂತದಿಂದ ಬಾಲವಿದ್ಯಾಭ್ಯಾಸವನ್ನು ಮಾಡಿಸುವ ಕ್ರಮವನ್ನು ಅನುಕೂಲವಾದ ಸ್ಥಳಗಳಲ್ಲಿ ಆಚರಣೆಗೆ ಮೊದಲು ತಂದು ಅನಂತರ ಕಾಲಕ್ರಮೇಣ ಆಯಾ ಸ್ಥಳಗಳ ಅನುಕೂಲಸ್ಥಿತಿಯನ್ನು ತಿಳಿದು ಇತರಕಡೆ ಆಚರಣೆಗೆ ತರಬೇಕಲ್ಲದೆ ಏಕಕಾಲದಲ್ಲಿ ತರಲು ಸಾಧ್ಯವಲ್ಲವು. ಬರೋಡಾ ಮಹಾರಾಜರವರು ತಮ್ಮ ರಾಜ್ಯದ ಒಂದು ತಾಲ್ಲೋಕಿನಲ್ಲಿ ಬಹುಕಾಲ ಈ ವಿದ್ಯಾಭ್ಯಾಸ ಕ್ರಮವನ್ನು ಅನುಸರಿಸಿ ನೋಡಿ, ಅದು ಅಲ್ಲಿ ಅನುಕೂಲವಾಗಿ ಕಂಡುಬರಲು ಈಚೆಗೆ ಸರ್ವತ್ರ ಆಚರಣೆಗೆ ತಂದರು. ಐರ್ಲೆಂಡಿನಲ್ಲಿ ಇದೇ ಪ್ರಕಾರ ಮಾಡಿದರು. ಅದರೆ ಸ್ಕಾಟ್‌ಲೆಂಡ್ ಮೊಲ್ಪ ಮತ್ತೂ ಇಂಗ್ಲೆಂಡಿನಲ್ಲಿ ಬಾಲವಿದ್ಯಾಭ್ಯಾಸವನ್ನು ಬಲವಂತದಿಂದ ಮಾಡಿಸುವ ಕಾಲನಿರೀಕ್ಷಣೆಯಲ್ಲದೆ ಒಂದೇಆವೃತ್ತಿ ಸರ್ವತ್ರ ಆಚರಣೆಗೆ ತರಲ್ಪಟ್ಟಿತು. ಐರ್ಲೆಂಡಿನಲ್ಲಿ ಅನುಕೂಲವರಿತು ಮ್ಯುನಿಸಿಪಲ್ ಮತ್ತೂ ಲೋಕಲ್ ಬೋರ್ಡಿನವರು ಆಚರಣೆಗೆ ತರುವ ಅಧಿಕಾರವು ಕೊಡಲ್ಪಟ್ಟಿತು ಮತ್ತೂ ಸರ್ಕಾರದವರು ಇದಕ್ಕಾಗತಕ್ಕ ವ್ಯಯದಲ್ಲಿ ಕೆಲಭಾಗವನ್ನು ವಹಿಸಿಕೊಳ್ಳಲೊಪ್ಪಿಕೊಂಡರು. ನಾವಾದರೂ ಐರ್ಲೆಂಡಿನ ಮೇಲುಪಂಙ್ತಿಯನ್ನನುಸರಿಸಿ ಯಾವ್ಯಾವ ಕಾಲದಲ್ಲಿ ಯಾವ್ಯಾವ ಸ್ಥಳದಲ್ಲಿ ಅನುಕೂಲವೋ ಆಯಾಕಾಲದಲ್ಲಿ ಆಯಾ ಸ್ಥಳಗಳಲ್ಲಿ ಅನುಷ್ಠಾನಕ್ಕೆ ತರುವುದುತ್ತಮವು. ಸ್ವದೇಶೀಯರಿಂದ ಕೂಡಿದ ಮ್ಯುನಿಸಿಪಲ್ ಮತ್ತು ಡಿ॥ಲೋ॥ ಬೋರ್ಡಿನವರುತಮ್ಮ ಸ್ಥಳದ ಸ್ಥಿತಿಗತಿಯನ್ನು ಚೆನ್ನಾಗಿ ತಿಳಿದವರಾದುದರಿಂದ, ಅವರು ಬಲವಂತದಿಂದ ವಿದ್ಯಾಭ್ಯಾಸ ಮಾಡಿಸುವುದನ್ನು ಆರಂಭಿಸಲು ಸಾಧ್ಯವಿರುವಂತೆ ಅನ್ಯದೇಶೀಯರಿಂದ ಕೂಡಿದ ಸರ್ಕಾರದವರಿಗೆ ಸಾಧ್ಯವಿಲ್ಲವು. ಒಂದುವೇಳೆ ಅವರು ಆ ಕಾರ್ಯಕ್ಕುದ್ಯುಕ್ತರಾದರೆ, ಮೊದಲು ಜನರಲ್ಲಿ ಅಪ್ರೀತಿಯನ್ನು ಸಂಪಾದಿಸಬೇಕಾಗುತ್ತದೆ, ಅಲ್ಲದೆ ಇದಕ್ಕಾಗಿ ತಗಲುವ ವೆಚ್ಚವನ್ನು ಅವರು ವಹಿಸಬೇಕಾದರೆ ಮುಖ್ಯ ಸರ್ಕಾರದ ಅನುಮತಿಯನ್ನು ಪಡೆಯಬೇಕಾಗುವುದರಿಂದ, ಈ ಕಾರ್ಯಾರಂಭಕ್ಕೆ ಬಹುಕಾಲ ನಿರೀಕ್ಷಣೆ ಮಾಡಬೇಕಾಗುತ್ತದೆ. ಅದುಕಾರಣ ಮ್ಯುನಿಸಿಪಾಲಿಟಿಯವರೂ, ಡಿ॥ ಮತ್ತೂ ಲೋ॥ ಬೋರ್ಡಿನವರೂ ಈ ಕಾರ್ಯವನ್ನು ಮೊದಲು ಆರಂಭಿಸಬೇಕಾಗಿರುತ್ತದೆ. ಈ ಬಾಲವಿದ್ಯಾಭ್ಯಾಸವನ್ನಭಿವೃದ್ಧಿಗೊಳಿಸಬೇಕಾದರೆ ಹೆಚ್ಚು ದುಡ್ಡನ್ನು ವ್ಯಯಮಾಡಬೇಕು. ಇದಕ್ಕಾಗಿ ಮ್ಯುನಿಸಿಪಾಲಿಟಿಯವರೂ ಡಿ॥ ಮತ್ತೂ ಲೋ॥ ಬೋರ್ಡಿನವರೂ ದ್ರವ್ಯಾನುಕೂಲವಿಲ್ಲದಿದ್ದರೆ, ಒಂದು ವಿಧವಾದ ಕಂದಾಯವನ್ನು ಹೆಚ್ಚಿಸಬಹುದು. ಹೀಗೆ ಕಂದಾಯವನ್ನು ಹೆಚ್ಚಿಸಲು ಮ್ಯುನಿಸಿಪಾಲಿಟಿಯವರಿಗೆ ಅಧಿಕಾರವಿರುವುದು. ಆದರೆ ಡಿ॥ ಮತ್ತೂ ಲೋ॥ ಬೋರ್ಡಿನವರು ಮಾತ್ರ ಸರ್ಕಾರದಪ್ಪಣೆಯನ್ನು ಪಡೆಯಬೇಕಾಗುವುದು. ಪ್ರಜಾಸಂಖ್ಯೆಯಲ್ಲಿ ೧೦೦ಕ್ಕೆ ೩೩ ರಂತೆ ಮಕ್ಕಳು ಪಾಠಶಾಲೆಗೆ ಹೋಗುತ್ತಿರುವ ಸ್ಥಳಗಳಲ್ಲಿ ಮಾತ್ರ ಬಲವಂತದಿಂದ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂದು ಬಿಲ್ಲಿನಲ್ಲಿ ಹೇಳಲ್ಪಟ್ಟಿರುವುದರಿಂದ, ಎಲ್ಲೋ ಸ್ವಲ್ಪ ಡಿ॥ ಬೋರ್ಡಿನವರು ಹೆಚ್ಚು ಕಂದಾಯನ್ನು ವಿಧಿಸಬೇಕಾಗಿ ಬರುವುದು. ಮುಖ್ಯವಾಗಿ ಮ್ಯುನಿಸಿಪಾಲಿಟಿಯವರು ಈ ಕ್ರಮವನ್ನು ಆಚರಣೆಗೆ ತರಬೇಕೆಂಬುದು ನನ್ನಭಿಪ್ರಾಯವು.

೧೦ ರೂಪಾಯಿನೊಳಗೆ ವರಮಾನವುಳ್ಳವರ ಮಕ್ಕಳಿಗೆ ಉಚಿತವಾಗಿ ವಿದ್ಯೆಯನ್ನು ಹೇಳಬೇಕೆಂದು ಬಿಲ್ಲಿನಲ್ಲಿರುತ್ತದೆ. ಆದರೆ ಸರ್ವತ್ರ ಬಾಲವಿದ್ಯಾಭ್ಯಾಸವನ್ನು ಉಚಿತವಾಗೇಕೆ ಮಾಡಿಸಬಾರದೆಂದು ಕೆಲರಾಕ್ಷೇಪಿಸುತ್ತಾರೆ. ಕಳೆದ ವರ್ಷ ವೈಸ್ರಾಯರ ನಿಯಮನಿರ್ಮಾಣ ಸಭೆಯಲ್ಲಿ, ವಿದ್ಯಾಭ್ಯಾಸವನ್ನು ಬಲವಂತದಿಂದ ಮಾಡಿಸುವುದಾದರೆ ಅದನ್ನು ಉಚಿತವಾಗಿ ಮಾಡಿಸಬೇಕೆಂದು ನಾನು ಚರ್ಚಿಸಿದೆನು. ಮುಖ್ಯ ಸರ್ಕಾರದವರು ಉಚಿತವಾಗಿ ವಿದ್ಯಾಭ್ಯಾಸ ಮಾಡಿಸುವ ವಿಚಾರದಲ್ಲಿ ಅಧೀನ ಸರ್ಕಾರದವರ ಅನುಮತಿಯನ್ನು ಕೇಳಿದ್ದರು ಮತ್ತೂ ಇಂಗ್ಲೆಂಡಿನಲ್ಲಿ ಸರಳಹೃದಯರಾದ ರಾಜಕಾರ್ಯವಿಶಾರದರೂ ಅನುಕೂಲವಾದ ಅಭಿಪ್ರಾಯವನ್ನು ಕೊಟ್ಟಿದ್ದರು ಅಲ್ಲದೆ ಸರ್ಕಾರದಲ್ಲೂ ಬಹು ಹಣವು ಮಿಕ್ಕಿದ್ದಿತು. ಈ ಕಾರಣದಿಂದ ವಿದ್ಯೆಯು ಉಚಿತವಾಗಿ ಕಲಿಸಲ್ಪಡುವ ಏರ್ಪಾಟಾಗಬಹುದೆಂಬ ಭರವಸೆಯಿದ್ದಿತು. ಆದರೆ ಈಚೆಗೆ ಕಳೆದ ೩ ವರ್ಷದಿಂದ ಕಾಲಸ್ಥಿತಿಯು ಬದಲಾಯಿಸಿ ದುಡ್ಡಿನ ಕೊರತೆಯು ಹೆಚ್ಚಾದುದರಿಂದಲೂ, ಅಧೀನ ಸರ್ಕಾರದವರು ಈ ವಿಚಾರದಲ್ಲಿ ಪ್ರತಿಕೂಲವಾದಭಿಪ್ರಾಯವನ್ನು ಕೊಟ್ಟುದರಿಂದಲೂ ಆ ಯೋಚನೆಯು ಅಷ್ಟಕ್ಕೇ ನಿಂತಿತು. ಇಂಗ್ಲೆಂಡಿನಲ್ಲಿ ವಿದ್ಯೆಯು ಬಲವಂತದಿಂದ ಕಲಿಸಲ್ಪಡುವಂತಾದ ೨೦ ವರ್ಷಗಳು ಕಳೆದಮೇಲೆ ಸ್ಕೂಲ್ ಫೀ ತಪ್ಪಿಸಲ್ಪಟ್ಟಿತು. ಜರ್ಮನಿನಲ್ಲಿ ೧೮೭೦ ರಲ್ಲಿ ಬಲವಂತದಿಂದ ವಿದ್ಯೆಯು ಕಲಿಸಲ್ಪಡುವಂತಾದಾಗ್ಯೂ, ಇನ್ನೂ ಸ್ಕೂಲ್ ಫೀಯು ತಪ್ಪಿಸಲ್ಪಟ್ಟಿಲ್ಲವು. ಅದುಕಾರಣ ನಾವು ಮೊದಲು ವಿದ್ಯೆಯನ್ನು ಬಲವಂತದಿಂದ ಕಲಿಸಲು ಪ್ರಯತ್ನಿಸೋಣ ಮತ್ತೂ ಬಡವರಿಗೆ ಸ್ಕೂಲ್‌ಫೀಯನ್ನು ತಪ್ಪಿಸಿಬಿಡೋಣ. ಅನಂತರ ದ್ರವ್ಯಾನುಕೂಲವಾದಂತೆ ಎಲ್ಲರಿಗೂ ಸ್ಕೂಲ್‌ಫೀಯನ್ನು ತಪ್ಪಿಸಿಬಿಡೋಣ. ಈ ವಿದ್ಯಾಭ್ಯಾಸಕ್ಕಾಗಿ ಜನರಮೇಲೆ ಒಂದು ಕಂದಾಯವನ್ನು ವಿಧಿಸಿ ಹುಡುಗರಿಂದಲೂ ಸ್ಕೂಲ್ ಫೀಯನ್ನು ತೆಗೆದುಕೊಳ್ಳುವುದರಿಂದ ಭಾರವು ಹೆಚ್ಚಾಗುತ್ತಾದಪ್ರಯುಕ್ತ ಮ್ಯುನಿಸಿಪಾಲಿಟಿಯವರು ಸ್ವಲ್ಪ ಕಂದಾಯವನ್ನು ಹಾಕಿ ತಿಂಗಳಿಗೆ ೩೦ ರೂ. ಮೇಲೆ ವರಮಾನವುಳ್ಳವರ ಮಕ್ಕಳಿಂದ ಸ್ಕೂಲ್ ಫೀಯನ್ನು ತೆಗೆದುಕೊಳ್ಳಬಹುದು.

ಬಲವಂತದಿಂದ ವಿದ್ಯಾಭ್ಯಾಸಮಾಡಿಸುವ ಕಾಲವು ಇನ್ನೂ ಬಂದಿಲ್ಲವೆಂದು ಕೆಲರು ವಾದಿಸುವರು. ನಾನಾದರೋ ಅಂಥ ಕಾಲವು ಈಗ ಬಂದಿರುವುದಲ್ಲದೆ, ಇದು ಬಹುದಿವಸಗಳ ಪೂರ್ವವೇ ಮಾಡಬೇಕಾಗಿದ್ದಿತೆಂದು ಹೇಳುವೆನು. ಭರತಖಂಡದಲ್ಲಿ ಒಂದು ಆಶ್ರಿತ ಸಂಸ್ಥಾನವಾದ ಬರೋಡಾದಲ್ಲಿ ಸಾರ್ವತ್ರಿಕವಾಗಿ ವಿದ್ಯಾಭ್ಯಾಸವು ಬಲವಂತದಿಂದ ಮಾಡಿಸಲ್ಪಡುತ್ತಿರುವಾಗ್ಗೆ, ಬ್ರಿಟಿಷ್ ಸರ್ಕಾರದಾಡಳಿತಕ್ಕೊಳಪಟ್ಟಿರುವ ಭಾರತೀಯರಿಗನುಕೂಲಿಸುವಂತೆ ವಿದ್ಯೆಯನ್ನು ಬಲವಂತದಿಂದ ಏಕೆಮಾಡಿಸಬಾರದು? ಮತ್ತೂ ಈ ಜನರು ಬರೋಡಾ ದೇಶದವರಿಗಿಂತಲೂ ಹಿಂದುಳಿದಿರುವರೆ? ಸಿಲೋನಿನ ಬಹುಭಾಗ ಪ್ರಜೆಗಳು ತಮಿಳುಭಾಷೆಯವರಾಗಿರುತ್ತಾರೆ. ಅಲ್ಲಿಯ ಮೂರನೇ ಒಂದುಭಾಗದ ಪ್ರದೇಶದಲ್ಲಿ ವಿದ್ಯೆಯು ಬಲವಂತದಿಂದ ಮಾಡಿಸಲ್ಪಡುವುದು. ಹಾಗಾದರೆ ಮದ್ರಾಸಾಧಿಪತ್ಯದ ವಿಶೇಷ ತಮಿಳುಜನರು ಸಿಲೋನಿನವರಿಗಿಂತಲೂ ಕಡಿಮೆಯಾಗಿರುವರೆ? ಫಿಲಫೈನ್ ದ್ವೀಪದಲ್ಲಿ ಎಲ್ಲ ಮ್ಯುನಿಸಿಪಾಲಿಟಿಯವರೂ ಯಾವುದೊಂದು ಶಾಸನವಿಲ್ಲದೆ ತಾವಾಗಿ ಬಾಲವಿದ್ಯೆಯನ್ನು ಬಲವಂತದಿಂದ ಮಾಡಿಸುತ್ತಿರುವರು. ಹಾಗಾದರೆ ನಾವು ಆ ಫಿಲಫೈನ್ ದ್ವೀಪದ ಜನರಿಗಿಂತಲೂ ಕಡಿಮೆಯಾದೆವಲ್ಲವೆ? ಆರ್ಯರ ಸಂತತಿಯವರಾದ ನಮಗೆ ಬಲವಂತದಿಂದ ವಿದ್ಯಾಭ್ಯಾಸಮಾಡಿಸುವುದು ಸರಿಬೀಳದೆ ಹೋದಮೇಲೆ, ಅದು ಆ ಫಿಲಫೈನ್ ದ್ವೀಪದ ಬಾಲಕಬಾಲಿಕೆಯರಿಗೆ ಹೇಗೆ ಅನುಕೂಲಿಸಿತು? ಬಾಲವಿದ್ಯಾಭ್ಯಾಸವನ್ನು ಬಲವಂತದಿಂದ ಮಾಡಿಸುವುದಾದರೆ ಅಷ್ಟೊಂದು ಪಾಠಶಾಲೆಗಳನ್ನಿಡಿಸಲು ಸ್ಥಳವನ್ನೂ, ಬೋಧಕರನ್ನೂ ಎಲ್ಲಿ ಒದಗಿಸುವುದೆಂದು ಕೆಲರಾಕ್ಷೇಪಿಸುವರು. ಇಂಗ್ಲೆಂಡಿನಲ್ಲೂ ಜಪಾನಿನಲ್ಲೂ ಬಲವಂತದಿಂದ ವಿದ್ಯಾಭ್ಯಾಸಮಾಡಿಸಲುಪಕ್ರಮಿಸಿದಾಗಲೂ ಇದೇ ವಿಧವಾದ ಆಕ್ಷೇಪಗಳು ಮಾಡಲ್ಪಟ್ಟುವು. ಜಪಾನಿನಲ್ಲಿ ಹೊಸದಾಗಿ ಕಟ್ಟಡಗಳನ್ನು ಕಟ್ಟಲೆತ್ನಿಸದೆ ಪಡಸಾಲೆಗಳ ಮೇಲೆ ಮಾಡುತ್ತಿದ್ದರು. ಜರ್ಮನ್ ಚಕ್ರವರ್ತಿಯು ೧೮೭೦ರಲ್ಲಿ ಈ ಕ್ರಮವನ್ನಾಚರಣೆಗೆ ತರುವಾಗ್ಗೆ „ಯಾವ ಗ್ರಾಮದಲ್ಲೂ ಒಂದು ಕುಟುಂಬವಾಗಲಿ ಒಬ್ಬ ಮನುಷ್ಯನಾಗಲಿ ಅವಿದ್ಯಾವಂತನಾಗಿರಕೂಡದು." ಎಂದು ಅಪ್ಪಣೆ ಕೊಡಿಸಿದನು. ಅದು ೩೦ ವರ್ಷದೊಳಗೆ ನಿದರ್ಶನಕ್ಕೆ ಬಂದಿತು. ಅದುಕಾರಣ ನಾವು ಬೋಧನಕ್ರಮವನ್ನರಿತ ಉಪಾಧ್ಯಾಯರುಗಳು ಮತ್ತೂ ಸ್ಥಳವು ಇಲ್ಲವೆಂದು ಗುಣುಗುಟ್ಟದೆ ಸದ್ಯಕ್ಕೆ ದೊರೆಯುವ ಬೋಧಕರಿಂದಲೇ ಪಡಸಾಲೆಗಳ ಮೇಲೆ ಪಾಠಶಾಲೆಗಳನ್ನು ನಡಿಸೋಣ. ಸರ್ಕಾರದವರು ಇದಕ್ಕಾಗಿ ತಗಲುವ ವ್ಯಯದಲ್ಲಿ ಮೂರನೇ ಎರಡು ಭಾಗವನ್ನು ವಹಿಸಿಕೊಳ್ಳುವಂತೆ ಮತ್ತೂ ಕಿರೀಟಧಾರಣ ಮಹೋತ್ಸವಕ್ಕಾಗಿ ಚಕ್ರವರ್ತಿದಂಪತಿಗಳು ಭರತಖಂಡಕ್ಕೆ ಆಗಮಿಸಿದುದರ ಜ್ಞಾಪಕಾರ್ಥವಾಗಿ ಈ ಬಿಲ್ಲನ್ನು ಅನುಷ್ಠಾನಕ್ಕೆ ತರುವಂತೆ ಇಂಡಿಯಾ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳಬೇಕಾಗಿದೆ.

ಆ॥ ಗೋಖಲೆಯವರು ತಮ್ಮ ಸ್ವದೇಶಬಾಂಧವರ ಏಳಿಗೆಗೆ ವಿದ್ಯಾಭಿವೃದ್ಧಿಯೇ ಮೂಲವಾಗಿರುವುದರಿಂದ, ಬಾಲವಿದ್ಯಾಭ್ಯಾಸವು ಬಲವಂತದಿಂದ ಮಾಡಿಸಲ್ಪಡುವುದಕ್ಕಾಗಿ ಒಂದು ಶಾಸನವನ್ನು ಮಾಡಿಸಬೇಕೆಂದು ಬಹು ಸಾಹಸಪಡುತ್ತಿರುವರು. ಇವರ ಪ್ರಯತ್ನವು ನಿರಪೇಕ್ಷೆಯಾಬುದ್ಧಿಯಿಂದ ಪರರ ಹಿತಾರ್ಥಕ್ಕಾಗಿ ಮಾಡಲ್ಪಡುತ್ತಿರುವುದರಿಂದ ಭಾರತಮಾತೆಯು ತನ್ನ ಮಕ್ಕಳ ಪುರೋಭಿವೃದ್ಧಿಯ ಮೇಲಿನ ಅಭಿಮಾನವಿಶೇಷದಿಂದ ಸಫಲವಾಗುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಮೈಸೂರ ದೇಶದ ಸಂಪದಭಿವೃದ್ಧಿಯನ್ನುಗೊಳಿಸುವ ಆಲೋಚನಾ ಸಭೆಯವರು ೧೯೧೧–೧೨ ನೇ ವರ್ಷದಲ್ಲಿ ೩ ಮುಖ್ಯ ಸಂಘಗಳನ್ನೇರ್ಪಡಿಸಿ ಅವಕ್ಕೆ ಈ ಕೆಳಗೆ ಕಂಡ ದೊಡ್ಡಮನುಷ್ಯರುಗಳನ್ನು ಮೆಂಬರುಗಳನ್ನಾಗಿ ಮಾಡಿರುವರು:—

ವಿದ್ಯಾವಿಷಯಕವಾದ ಸಂಘಕ್ಕೆ–ಚೇರ್ಮನ್ನರು ೨ ನೇ ಕೌನ್ಸಿಲರ್ ಮೆ॥ ಎಚ್. ವಿ. ನಂಜುಂಡಯ್ಯನವರು. ಮೆಂಬರುಗಳು– ಮೆಸರ್ಸ್. ವಿದ್ಯಾಭ್ಯಾಸದ ಇ॥ ಜನರಲ್ ಜೆ. ವೀರ್‌ರವರು ಡೆ॥ ಕಮಿಷನರು ಎಂ. ಕಾಂತರಾಜ ಅರಸ್‌ನವರು ಜ॥ ಮತ್ತೂ ರೆ॥ ಸೆಕ್ರೆಟರಿ ಬಾಲಸುಂದರಂ ಅಯ್ಯರ್‌ರವರು, ಶಿವಮೊಗ್ಗೆಯ ಅಡ್ವೊಕೇಟ್ ಎಸ್. ಆರ್. ಬಾಲಕೃಷ್ಣರಾಯರು, ಡೆ॥ ಕ॥ ಎಂ. ಶಾಮರಾಯರು, ಸೆಂಟ್ರಲ್ ಕಾಲೇಜಿನ ಪದಾರ್ಥ ವಿಜ್ಞಾನ ಶಾಸ್ತ್ರಬೋಧಕರಾದ ಇ. ಪಿ. ಮೆಟ್ಕಾಫ್‌ರವರು, ಡಿ॥ ಜಡ್ಜರು ಹಂಸಾಹುರ್ಸೇರವರು, ಮಹಾರಾಜಾ ಕಾಲೇಜು ಸಹಾಯೋಪಾಧ್ಯಾಯರಾದ ಸಿ. ಆರ್. ರಡ್ಡಿಯವರು, ಸ್ಕೂಲಿನ ಡಿ॥ ಇನ್ಸ್‌ಪೆಕ್ಟರ್ ಕೆಲಸದಿಂದ ನಿವೃತ್ತರಾಗಿರುವ ಎಸ್. ರಂಗಾಚಾರರು. ಸೆಕ್ರೆಟರಿಗಳು– ಸಿ. ಕೃಷ್ಣರಾಯರು.

ವ್ಯವಸಾಯದ ವಿಷಯಕವಾದ ಸಂಘಕ್ಕೆ— ಚೇರ್ಮನ್ನರು– ೧ ನೇ ಕೌನ್ಸಿಲರ್ ಮೆ॥ ಕೆ. ಪಿ. ಪುಟ್ಟಣ್ಣಚೆಟ್ಟರು. ಮೆಂಬರುಗಳು– ಮೆಸರ್ಸ್. ರೆ॥ ಕಮಿಷನರಾಗಿದ್ದ ರಾವ್ ಬಹದ್ದೂರ್ ಎ. ರಂಗಸ್ವಾಮಿಯ್ಯಂಗಾರರು, ಕೃಷಿಶಾಸ್ತ್ರಜ್ಞರಾದ ಡಾ॥ ಕೋಲ್ಮನ್‌ರವರು, ಸರ್ಕಾರಿ ತೋ ಗಳ ಸೂಪರಿಂಟೆಂಡೆಂಟರು ಜಿ. ಎಚ್. ಕ್ರಂಬಿಗಲ್‌ರವರು, ಅಡ್ವೊಕೇಟ್ ಡಿ. ವೆಂಕಟರಾಮಯ್ಯನವರು, ಉರು ಳ್ಳಿ ಜಮೀನ್ದಾರರು ಎ. ಕೃಷ್ಣಯ್ಯಂಗಾರರು, ಒಕ್ಕ ಗರ ಸಂಘದ ಸೆಕ್ರೆಟರಿ ಕೆ. ಎಚ್. ರಾಮಯ್ಯನವರು, ಚಿಕ್ಕಮಗಳೂರಿನ ಕಾಫಿ ತೋಟಗಾರರಾದ ಸಿ. ಶ್ರೀನಿವಾಸರಾಯರು, ಅ॥ ಕಮಿಷನರಾಗಿದ್ದ ಬಾದಾಮಿ ಕೃಷ್ಣರಾಯರು, ಪರಸ್ಪರ ಸಹಾಯ ಸಂಘದ ರೆಜಿಸ್ಟ್ರಾರರು. ಸೆಕ್ರೆಟರಿ– ಮೆ॥ ಕೆ. ಸುಬ್ಬರಾಯರು.

ಕೈಗಾರಿಕೆ ಮತ್ತೂ ವ್ಯಾಪಾರ ವಿಷಯಕವಾದ ಸಂಘಕ್ಕೆ— ಚೇರ್‌ಮನ್ನರು– ಮೆ॥ ಚೇಫ್ ಇಂಜನಿಯರ್ ಎಂ. ವಿಶ್ವೇಶ್ವರಯ್ಯನವರು. ಮೆಂಬರುಗಳು– ಮೆಸರ್ಸ್. ಕಾಡುಗಳ ಕನ್ಸರ್ವೇಟರ್ ರಾ॥ ಬ॥ ಮುತ್ತಣ್ಣನವರು, ಕೌನ್ಸಿಲರಾಗಿದ್ದ ಸಿ. ಶ್ರೀನಿವಾಸಯ್ಯಂಗಾರರು, ಭೂಗರ್ಭಶೋಧಕರು, ಪರಸ್ಪರ ಸಹಾಯಸಂಘದ ರೆಜಿಸ್ಟ್ರಾರರು, ಮಾಗಡಿ ಕರ್ಣಿಕ ಕೃಷ್ಣಮೂರ್ತಿರಾಯರು, ಬೆಂಗಳೂರ ಕಾರ್ಟ್ ಉಲ್ಲ್ ಮತ್ತೂ ರೇಷ್ಮೆ ಕಾರ್ಯಾಲಯದ ಮ್ಯಾನೇಜಿಂಗ್ ಡೈರೆಕ್ಟರ್ ಚೇಂಬರ್ಸ್‌ರವರು, ಖಾನ್ ಬಹದ್ದೂರ್ ಹಾಜಿ ಇಸ್ಮಾಯಿಲ್ ಸೇಟ್‌ರವರು, ಚೇಫ್ ಇಂಜನಿಯರ ಅಸಿಸ್ಟೆಂಟರು ವಿ. ರಂಗಸ್ವಾಮಯ್ಯಂಗಾರರು, ಬೆಂಗಳೂರು ಸಾಹುಕಾರ್ ಮಂಡಿ ಹರಿಯಣ್ಣನವರು. ಸೆಕ್ರೆಟರಿ– ವಿ. ಎಸ್. ಸಾಂಬಶಿವಯ್ಯರ್‌ರವರು.

ಒಳದೇಶದ ವೃತ್ತಾಂತ.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೨೩,	೨೪,	೨೫,	೨೬,	೨೭,	೨೮,	೨೯
ತಗಲಿದ್ದು.	೨	೬	೬	೫	೧೦	೬	೦
ಸತ್ತದ್ದು.	೩	೨	೧	೪	೫	೭	೧
ಒಟ್ಟು ಮ.	೯	೭	೧೨	೮	೯	೧೪	೮

ಕಳೆದ ತಾ॥ ೨೨ ರ ಬೆಳಿಗ್ಗೆ ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ಮಿತಪರಿವಾರದೊಡನೆ ಮೋಟಾರು ಬಂಡಿಯಲ್ಲಿ ಮಾರಿಕಣಿವೆಗೆ ದಯಮಾಡಿಸಿ ಅಲ್ಲಿ ಆ ದಿವಸವೆಲ್ಲ ಚೇಫ್ ಇಂಜನಿಯರ್ ಮೆ॥ ವಿಶ್ವೇಶ್ವರಯ್ಯನವರ ಆತಿಥ್ಯದಲ್ಲಿದ್ದು, ಕೆರೆಯನ್ನು ಪರಾಮರಿಸಿಕೊಂಡು ಮಾರನೆಯ ಬೆಳಿಗ್ಗೆ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು.

ಕಳೆದ ವಾರದ „ಮೈಸೂರ್ ಸ್ಟಾರ್" ಪತ್ರಿಕೆಯಲ್ಲಿ ಮೈಸೂರ ಪೊಲೀಸ್ ಶಾಖೆಯ ವರದಿಯ ವಿಚಾರಕವಾದ ಅಗ್ರ ಲೇಖನದಲ್ಲಿ „ಹಾಗಲ್ಲವಿದ್ದರೆ ಇ॥ ಜನರಲ್‌ರವರು ಹೇಳಿರುವಂತೆ ಈಗ ದೊರೆಯುವ ಅಲ್ಪಸಂಬಳಕ್ಕೆ ಬರತಕ್ಕವರು ಯಾವ ನೀಚಕಾರ್ಯವನ್ನಾದರೂ ಮಾಡಲು ಸಿದ್ಧರಾಗಿರುವರು." ಎಂಬ ವಾಕ್ಯದಲ್ಲಿ „ಇ॥ ಜನರಲ್‌ರವರು ಹೇಳಿರುವಂತೆ" ಎಂಬ ಶಬ್ದಗಳು ಹಸ್ತದೋಷದಿಂದ ಪ್ರಯೋಗಿಸಲ್ಪಟ್ಟಿರುವುದಕ್ಕಾಗಿ ನಾವು ವಿಷಾದಿಸುತ್ತೇವೆ.

ಕಳೆದ ತಾ॥ ೨೮ ರ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಬೆಂಗಳೂರಿಂದ ಮೋಟಾರು ಬಂಡಿಯಲ್ಲಿ ಪ್ರಯಾಣಮಾಡಿ ಕುಣಿಗಲ್ಲು, ನೆಲ್ಲಿಗೆರೆ, ನಾಗಮಂಗಲ ಮತ್ತೂ ಬಿರೋತೆ ಮಾರ್ಗವಾಗಿ ಶ್ರೀರಂಗಪಟ್ಟಣಕ್ಕೆ ದಯಮಾಡಿಸಿ ಅಲ್ಲಿ ಕಾವೇರಿ ನದಿಯ ಪ್ರವಾಹದಿಂದ ವೆಲಿಸ್ಲಿ ಸೇತುವೆಯ ಕಟಕಟಿಯು ಬಿದ್ದುಹೋಗಿರುವ ಭಾಗವನ್ನುಪರಾಮರ್ಶಿಸಿಕೊಂಡು ಸಾಯಂಕಾಲ ರಾಜಧಾನಿಯನ್ನು ತಲುಪಿದರು. ಮತ್ತೂ ಬರುವ ಆಗಸ್ಟ್ ತಾ॥ ೨ ರಲ್ಲಿ ನೀಲಗಿರಿಗೆ ದಯಮಾಡಿಸುವವರಾಗಿರುವರು.

ಕಳೆದ ತಾ॥ ೧೬ ಲ್ಲಿ ರಾಮನಾಥಪುರದಿಂದ ೧ ಮೈಲಿ ದೂರದಲ್ಲಿರುವ ಕೊಡ್ಲೂರಿನ ಚಿಕ್ಕೇಗೌಡನೆಂಬುವನು ಇಬ್ಬರು ಸ್ನೇಹಿತರೊಡನೆ ತನ್ನ ಗದ್ದೆಗೆ ನೀರು ಹತ್ತುವುದನ್ನೋಡಿಕೊಂಡು ಹಿಂತಿರುಗಿ ಮನೆಗೆ ಬರುವಾಗ್ಗೆ ದಾರಿಯಲ್ಲಿ ದೊಡ್ಡ ಮಳೆಯು ಬರಲು ಒಂದು ಮರದ ನೆರಳಿನಲ್ಲಿ ನಿಂತುಕೊಂಡರು. ಆಗ ಸಿಡಿಲು ಬಂದು ಅವರು ನಿಂತಿದ್ದ ಮರಕ್ಕೆ ಹೊಡೆದಿತು. ಇದರಿಂದ ಚಿಕ್ಕೇಗೌಡನು ಸತ್ತನು; ಉಳಿದಿಬ್ಬರು ಮೂರ್ಛಿತರಾಗಿ ಬಿದ್ದರು. ಅಷ್ಟರಲ್ಲಿ ಇತರರು ಬಂದು ಅವರನ್ನು ಆಸ್ಪತ್ರೆಗೆ ಚಿಕಿತ್ಸೆಗಾಗಿ ಸಾಗಿಸಿದರು

ತಿರಮಕೂಡ್ಲು ನರಸೀಪುರ ಮತ್ತೂ ಮಳವಳ್ಳಿ ತಾ॥ಗಳಲ್ಲಿ ಕಾವೇರಿ ನದಿಯ ದಡಗಳಮೇಲಿರುವ ಅನೇಕ ಗ್ರಾಮಗಳು ಕಳೆದ ಪ್ರವಾಹದಲ್ಲಿ ಕೊಚ್ಚಿಹೋಗಿ ಅನೇಕರಿಗೆ ನಿಲ್ಲಲು ನೆರಳೂ, ತಿನ್ನಲು ಧಾನ್ಯವೂ ಇಲ್ಲದಂತಾಗಿದೆ ಮತ್ತೂ ಅನೇಕ ದನಕರುಗಳೂ ನಾಶವಾದುವು. ಶಿವನಸಮುದ್ರದ ಸೇತುವೆಯಮೇಲೆ ನೀರು ಹರಿದು ಸೇತುವೆಯು ಅಪಾಯವಾಗಿದೆ. ಮಳವಳ್ಳಿ ತಾ॥ ಅಮಲ್ದಾರರು ಮತ್ತು ಲಿಂಗೋಪಂತ್ ಬಾದಾಮಿಯವರು ೪–೫ ದಿನಗಳ ವರೆಗೆ ಪೂರಿಗಾಲದ ಹತ್ತಿರ ವಾಸಮಾಡಿಕೊಂಡಿದ್ದು ಪ್ರಾಣವನ್ನುಳಿಸಿಕೊಳ್ಳುವುದಕ್ಕಾಗಿ ಮರಗಳಮೇಲೂ, ದೇವಸ್ಥಾನಗಳಮೇಲೂ ಹತ್ತಿ ಕುಳಿತಿದ್ದವರನ್ನು ಜನರ ಮೂಲಕ ಕೆಳಗಿಳಿಸಿದರು. ಮತ್ತೂ ೧೦–೧೧ ಬಂಡಿಗಳ ರಾಗಿಯನ್ನೂ, ಬಟ್ಟೆಗಳನ್ನೂ ಕೊಡಿಸಿ ವಿಪನ್ನರಾದವರಿಗೆ ಕೊಡಿಸಿದರು. ಅಲ್ಲದೆ ಅವರು ಗುಡಿಸಲುಗಳನ್ನು ಕಟ್ಟಿಕೊಳ್ಳಲು ಬೇಕಾದ ಸಾಮಗ್ರಿಗಳನ್ನೊದಗಿಸಿಕೊಟ್ಟರು. ಅಮಲ್ದಾರರು ಆ ಕಾಲದಲ್ಲಷ್ಟು ಪ್ರಯತ್ನಪಡದಿದ್ದರೆ ಬಹು ಪ್ರಾಣನಷ್ಟವಾಗುತ್ತಿದ್ದಿತೆನ್ನುವುದರಲ್ಲಿ ಸಂದೇಹವಿಲ್ಲ.

ಬರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಡುವುದಕ್ಕಾಗಿ ಬೆಂಗಳೂರ ಡಿ॥ ನಿಂದ ಕಳುಹಲ್ಪಟ್ಟಿರುವ ವಿಷಯಗಳಲ್ಲಿ ಮುಖ್ಯವಾದವುಗಳಾವುವೆಂದರೆ:—ವೃತ್ತಪತ್ರಿಕೆಯ ಸ್ವತಂತ್ರ ನಿರೋಧಕ ವಿಧಿಯನ್ನು ತಪ್ಪಿಸಿಬಿಡತಕ್ಕದು; ಸಂಸ್ಥಾನದ ವ್ಯಯದಲ್ಲಿ ಕಡಿಮೆಮಾಡಲೇರ್ಪಟ್ಟಿರುವ ಸಂಘಕ್ಕೆ (ರಿಟ್ರೆಂಚ್‌ಮೆಂಟ್ ಕಮಿಟಿಗೆ) ಅನಾದ್ಯೋಗಿಕರಲ್ಲಿ ಕೆಲ ಪ್ರಮುಖರನ್ನು ಮೆಂಬರುಗಳನ್ನಾಗಾರಿಸುವುದು; ಕಸುಬಿನ ಮೇಲೆ ಕಂದಾಯವನ್ನು ಹಾಕುವುದು; ಇನಾಮದಾರರು ತಮ್ಮ ಭೂಮಿಯಲ್ಲಿರತಕ್ಕ ಈಚಲು ಮರಗಳಿಂದಿಳಿಸಲ್ಪಡುವ ಹೆಂಡದುತ್ಪನ್ನವನ್ನು ಅವರೇ ಅನುಭವಿಸಲು ಮತ್ತೂ ಮರ ಒಂದಕ್ಕೆ ೪ ಆಣೆಯ ಕಂದಾಯವನ್ನು ವಿಧಿಸಲು ಅಧಿಕಾರವನ್ನು ಕೊಡುವುದು: ಅಧಿಕಾರಿಗಳಿಗೆ ಪ್ರತಿ ತಿಂಗಳೂ ಬರತಕ್ಕ ಸಂಬಳವಲ್ಲದೆ ಹೊರಗೆ ಸಂಚಾರ ಹೊರಟಾಗ ದಾರಿಯ ವೆಚ್ಚವು ಕಡಿಮೆಮಾಡತಕ್ಕದು; ಅಮಲ್ದಾರರುಗಳನ್ನು ಡಿ॥ ಬೋರ್ಡ್ ಮೆಂಬರುಗಳನ್ನಾಗಿ ಮಾಡತಕ್ಕದು ಅನಾವಶ್ಯಕವು; ಪ್ರಜಾಪ್ರತಿನಿಧಿಗಳನ್ನಾರಿಸತಕ್ಕ ಕಾಲದಲ್ಲಿ ಅ॥ ಕಮಿಷನರುಗಳೂ, ಅಮಲ್ದಾರರುಗಳು ಇರಕೂಡದು; ಮತ್ತೂ ನೀತಿಪಾಠಗಳನ್ನು ವಿದ್ಯಾರ್ಥಿಗಳು ಓದಿಯೇ ತೀರಬೇಕೆಂದು ನಿರ್ಬಂಧಪಡಿಸತಕ್ಕದು.

ವರ್ತಮಾನ ಸಂಗ್ರಹ.

ಬಲೇರಿಯಾದ ದಕ್ಷಿಣ ಪ್ರದೇಶದಲ್ಲಿರುವ ತರಕಾರಿ ಮತ್ತೂ ಹಣ್ಣಿನ ತೋಪುಗಳು ನದಿಗಳ ಪ್ರವಾಹದಿಂದ ಹಾಳಾಗಿ ೬,೦೦,೦೦,೦೦೦ ರೂ. ವರೆಗೆ ನಷ್ಟವಾಗಿರುತ್ತದೆ.

ಚಕ್ರವರ್ತಿ ದಂಪತಿಗಳು ದಿಲ್ಲಿಯ ದರ್ಬಾರನ್ನು ತೀರಿಸಿಕೊಂಡು ಕಲಕತ್ತಾಕ್ಕೆ ದಯಮಾಡಿಸಿದ ವೇಳೆಯಲ್ಲಿ ಮದ್ದಿನ ವಿನೋದವನ್ನು ನಡೆಸಲು ಸೀಮೆಯ ಕಂಪೆನಿಗೆ ೧೫೦೦೦ ರೂ. ಗೆ ಕಂಟ್ರಾಕ್ಟು ಕೊಡಲ್ಪಟ್ಟಿರುವುದು.

ಚೈನಾದಲ್ಲಿ ನದಿಗಳ ಪ್ರವಾಹವು ವಿಪರೀತವಾಗಿಬಂದು ಇಚೆಂಗ್ ಡಿಸ್ಟ್ರಿಕ್ಟು ಸಮುದ್ರಮಧ್ಯದಲ್ಲಿರುವ ದ್ವೀಪದಂತೆ ಕಾಣಿಸಿಕೊಳ್ಳುತ್ತಿದೆ. ಅನೇಕ ಗ್ರಾಮಗಳೂ ಸಾವಿರಾರು ಎಕರೆ ಪ್ರದೇಶದ ಬೆಳೆಯೂ ನಷ್ಟವಾದುವು.

ಭರತಖಂಡದಿಂದ ಸೀಮೆಗೆ ಹೋಗಿರತಕ್ಕ ಕ್ರಿಕೆಟ್ ಚೆಂಡಿನಾಟದವರು ಅಲ್ಲಿ ಈವರೆಗೆ ೬ ಪಂಗಡದವರ ಕೂಡ ಆಟವಾಡಿ ಎರಡುಪಂಗಡದವರನ್ನು ಜೋಲಿಸಿರುವರು. ಇವರು ಇನ್ನು ಮುಂದೆ ಹೀಗೆಯೇ ಜಯಪ್ರದವನ್ನು ಹೊಂದುವರೆಂದು ನಿರೀಕ್ಷಿಸಲ್ಪಟ್ಟಿದೆ.

ಭರತಖಂಡದಿಂದ ಸೀಮೆಗೆ ಹೋಗಿರತಕ್ಕ (ಕ್ರಿಕೆಟ್) ಚೆಂಡಿನಾಟದವರು ಅಲ್ಲಿ ಈವರೆಗೆ ೬ ಪಂಗಡದವರಕೂಡ ಆಟವಾಡಿ ಎರಡು ಪಂಗಡದವರನ್ನು ಸೋಲಿಸಿರುವರು. ಇವರು ಇನ್ನು ಮುಂದೆ ಹೀಗೆಯೇ ಜಯಪ್ರದವನ್ನು ಹೊಂದುವರೆಂದು ನಿರೀಕ್ಷಿಸಲ್ಪಟ್ಟಿದೆ.

ಹಿಂದೂ ಸರ್ವ ವಿದ್ಯಾನಿಲಯವನ್ನು ಸ್ಥಾಪಿಸಿ ನಡಿಸಿಕೊಂಡು ಬರಲು ೧ ಕೋಟಿ ರೂಪಾಯಿಗಳು ಬೇಕಾಗುವುದರಿಂದ ರಾಜರುಗಳು, ಭೂಸ್ವಾಮಿಗಳು, ಪದವೀಧರರು ಮೊದಲಾದ ಧರ್ಮಬುದ್ಧಿಯುಳ್ಳವರು ದ್ರವ್ಯಸಹಾಯ ಮಾಡಬೇಕೆಂದು ಆನರಬಲ್ ಪಂಡಿತ ಮದನಮೋಹನ ಮಾಳವಿಯರವರು ಪ್ರಾರ್ಥಿಸಿರುತ್ತಾರೆ.

ಬೊಂಬಾಯಾಧಿಪತ್ಯದಲ್ಲಿ ಅನೇಕಕಡೆ ಮಳೆಯಿಲ್ಲದೆ ನಿಂತಿರುವ ಪೈರು ಒಣಗುತ್ತಿದೆ. ಇಷ್ಟರಲ್ಲೇ ಮಳೆಯು ಬಾರದಿದ್ದಲ್ಲಿ ಕ್ಷಾಮ ಪ್ರಾಪ್ತವಾಗುವುದೆಂದು ಜನರು ಬಹುಭೀತರಾಗಿರುತ್ತಾರೆ. ಬೊಂಬಾಯಿ ಪಟ್ಟಣದಲ್ಲಿ ವರ್ತಕರು ಚಂದಾ ಹಣವನ್ನು ಕೂಡಿಸಿ ಮಳೆ ಬರಲು ಬ್ರಾಹ್ಮಣರ ಮೂಲಕ ಋಷ್ಯಶೃಂಗದ ಪ್ರತಿಮೆಯನ್ನು ಮಾಡಿಸಿದರು. ಇಷ್ಟರಲ್ಲೇ ಮಳೆ ಬಂದಾಗ್ಯೂ ಅನೇಕ ಕಡೆಗಳಲ್ಲಿ ಪುನಃ ಬೀಜವನ್ನು ಬಿತ್ತಬೇಕಾಗಿರುವುದು. ಸರ್ಕಾರದವರು ಪ್ರತಿದಿವಸವೂ ಪ್ರತಿಯೊಂದು ಸ್ಥಳದ ವರ್ತಮಾನವನ್ನು ತರಿಸಿಕೊಳ್ಳುತ್ತಿರುವರಲ್ಲದೆ ಕ್ಷಾಮನಿವಾರಣಾ ಕಾರ್ಯವನ್ನಡಿಸಲು ಆಲೋಚಿಸುತ್ತಿರುವರು.

ಜೀಲಂ ಡಿ॥ ಗೆ ಸೇರಿದ ಒಂದು ಗ್ರಾಮದಲ್ಲಿ ಚೌಧ್ರಿ ಹವಿಬ್‌ಖಾನ್ ಎಂಬ ಶ್ರೀಮಂತನು ಇಬ್ಬರು ಸೇವಕರೊಡನೆ ತನ್ನ ವಾಸಸ್ಥಳದ ಸಮೀಪದಲ್ಲಿರುವ ಒಂದು ಕೊಳದಲ್ಲಿ ಸ್ನಾನವನ್ನು ಮಾಡಲು ಹೋಗಿದ್ದಾಗ್ಗೆ ಕೆಲ ತಲೆಬಡಿಕರು ಆ ಶ್ರೀಮಂತನನ್ನೂ, ಅವನ ಇಬ್ಬರು ಸೇವಕರನ್ನೂ ಗುಂಡಿನಿಂದ ಹೊಡೆದು ಕೊಂದುಬಿಟ್ಟು ಆ ಶ್ರೀಮಂತನ ಮನೆಗೆ ನುಗ್ಗಿ ಒಳಗಿದ್ದ ಪದಾರ್ಥಗಳನ್ನೆಲ್ಲ ಸೂರೆಮಾಡಿಕೊಂಡು ಮನೆಗೆ ಬೆಂಕಿಯನ್ನು ಹೊತ್ತಿಸಿ ಪಲಾಯನವಾದರು. ಆ ಮನೆಯೊಳಗಿದ್ದ ಹೆಂಗಸರು ಹೇಗೋ ಪ್ರಾಣಸಹಿತ ತಪ್ಪಿಸಿಕೊಂಡು ಹೊರಗೆ ಬಂದುಬಿಟ್ಟಿದ್ದರು. ಪೋಲೀಸರು ಆ ತಲೆಬಡಿಕರನ್ನು ಹಿಡಿಯಯತ್ನಿಸಿದ್ದಾರೆ.

ಬ್ರಹ್ಮಪುತ್ರ ನದಿಯಲ್ಲಿ ಪ್ರವಾಹವು ವಿಪರೀತವಾಗಿ ಬಂದು ಅಸ್ಸಾಮಿಗೆ ಸೇರಿದ ಗೌಲಪುರವು ನೀರಿನಲ್ಲಿ ಮುಳುಗಿರುವುದರಿಂದ ಗುಡಿಸಲುಗಳೂ, ಚಿಕ್ಕ ಮನೆಗಳೂ, ದೊಡ್ಡ ಕಟ್ಟಡಗಳೂ ನಾಶವಾಗಿ ಬಡವರ ಮತ್ತೂ ಮಧ್ಯ ತರಗತಿಯ ಜನರ ಕಷ್ಟವನ್ನು ಹೇಳತೀರದು. ಇವರಲ್ಲನೇಕರಿಗೆ ಒಂದು ದಿವಸದಲ್ಲಿ ಒಪ್ಪತ್ತಿನ ಅನ್ನ ಸಿಕ್ಕುವುದೂ ದುರ್ಲಭವಾಗಿದೆ. ಮುಖ್ಯ ಮಾರ್ಗದಲ್ಲೊಂದುಭಾಗವು ನೀರಿನ ಹೊಡತದಿಂದ ಕೊಚ್ಚಿಹೋಗಿರುವುದು. ಆ ಭಾಗದಲ್ಲಿದ್ದ ಜನರು ಹೆದರಿ ತಮ್ಮಾಸ್ತಿಯನ್ನೆಲ್ಲ ಮನೆಯಲ್ಲೇ ಬಿಟ್ಟು ಮೂಟೆಗಳನ್ನು ಕಟ್ಟಿಕೊಂಡು ಬೇರೆಕಡೆ ಓಡಿಹೋದರು. ಮನೆಯನ್ನು ಕಳೆದುಕೊಂಡಿರುವ ಜನರು ರಾತ್ರಿವೇಳೆಯಲ್ಲಿ ಅಂಗಡಿಬೀದಿಗಳಲ್ಲೂ, ಮಾರ್ಗಗಳಲ್ಲೂ ಇದ್ದುಕೊಂಡು ಕಾಲವನ್ನು ಕಳೆಯುವರು.

ದಿಲ್ಲಿಯಲ್ಲಿ ನಡಿಯುವ ಕಿರೀಟಧಾರಣ ಮಹೋತ್ಸವ ಸಂದರ್ಭವನ್ನು ಭರತಖಂಡದ ಪ್ರತಿಯೊಂದು ಪಟ್ಟಣ ಮತ್ತೂ ಗ್ರಾಮವಾಸಿಗಳು ತಿಳಿಯುವುದಕ್ಕಾಗಿ ಯಾವುಪಾಯವು ಕಲ್ಪಿಸಲ್ಪಡಬೇಕೆಂಬ ವಿಚಾರದಲ್ಲಿ ಜಿಜ್ಞಾಸವು ನಡಿಯುತ್ತಿದೆ. ಕೆಲರು ಬಂದಿಗಳನ್ನು ಬಿಟ್ಟುಬಿಡಬೇಕೆಂದೂ, ಮತ್ತೆಕೆಲರು ಆದಾಯ ತೆರಿಗೆಗಿರತಕ್ಕ ಪರಿಮಿತಿಯನ್ನು ಹೆಚ್ಚಿಸಬೇಕೆಂದೂ, ಬೇರೆಕೆಲರು ಸರ್ವತ್ರ ಬಾಲವಿದ್ಯಾಭ್ಯಾಸವನ್ನು ಆಚರಣೆಗೆ ತರಬೇಕೆಂದೂ ಹೀಗೆ ನಾನಾವಿಧವಾಗಿ ಸೂಚಿಸುತ್ತಿರುವರು. ಆದರೆ „ಇಂಗ್ಲೀಷ್‌ಮನ್" ಪತ್ರಿಕೆಯು ಡಿಸೆಂಬರ್ ತಾ॥ ೨೦ ರಲ್ಲಿ ಭರತಖಂಡದಲ್ಲಿರುವ ೪,೦೦,೦೦೦ ಗ್ರಾಮಗಳಲ್ಲೆಲ್ಲ ಸಣ್ಣ ಸಣ್ಣ ದರ್ಬಾರುಗಳನ್ನು ನಡಿಸಿ, ಚಕ್ರವರ್ತಿಯವರ ವರದಾನರೂಪವಾದ ಭಾಷಣವು ಸಂಕ್ಷೇಪವಾಗಿ ಆಯಾ ದೇಶ ಭಾಷೆಯಲ್ಲಿ ಸ್ಥಳೀಯಾಧಿಕಾರಿಗಳಿಂದೋದಲ್ಪಡತಕ್ಕದು ಅತ್ಯುತ್ತಮವಾದ ಕಾರ್ಯವೆಂದು ಸೂಚಿಸಿರುತ್ತದೆ.

ಸ್ವಿಟ್ಜರ್ಲೆಂಡಿಗೆ ಸೇರಿದ ಜಿನೀವಾದಲ್ಲಿ ಒಂದು ಕಾಗೆಯು ಲಾ ಕೋರ್ಟಿನೊಳಗೆ ಗೂಡನ್ನು ಮಾಡಿಕೊಂಡು ಜಡ್ಜಿಯು ವಿವಾದಗಳನ್ನು ವಿಚಾರಿಸುತ್ತಿರುವಾಗ್ಗೆ ನಿರ್ಭಯದಿಂದ ಕಿಟಿಕಿಯಿಂದ ಒಳಕ್ಕೆ ಕುಪ್ಪಳಿಸುತ ಬಂದು ಜಡ್ಜಿಯವರ ಮತ್ತೂ ವಕೀಲರುಗಳ ಮುಂದಿರುವ ಮೇಜುಗಳಮೇಲೆ ಬಂದು ಕುಳಿತುಕೊಂಡು ಹೋಗುತಿದ್ದಿತು. ಇದನ್ನು ಜಡ್ಜಿಯಾಗಲಿ, ಲಾಯರುಗಳಾಗಲಿ ನೋಡಿಕೊಂಡು ಸುಮ್ಮನೆ ಇರುತ್ತಿದ್ದರಲ್ಲದೆ ಅದರಿಸಿ ಓಡಿಸುತ್ತಿರಲಿಲ್ಲ. ಈಚೆಗೆ ಈ ಕಾಗೆಯು ಜಡ್ಜಿಯವರ ಮೇಜಿನಮೇಲಿಡಲ್ಪಡುವ ಶಾಯಿಕುಡಿಕೆಯನ್ನು ಉರುಳಿಸಿ ಶಾಯಿಯನ್ನು ಚೆಲ್ಲಿಬಿಡುತ ಬಂದುದಲ್ಲದೆ ಒಂದು ದಿವಸ ಬಹು ಮುಖ್ಯವಾದ ಕಾಗದ ಪತ್ರಗಳಮೇಲೆ ಶಾಯಿಯನ್ನು ಚೆಲ್ಲಿ ಅವುಗಳನ್ನು ಹಾಳುಮಾಡಿಬಿಡಲು, ಜಡ್ಜಿಯು ಕುಪಿತನಾಗಿ ಈ ಕಾಗೆಯನ್ನು ಹಿಡಿದು ಒಂದು ಪಂಜರದಲ್ಲಿ ಕೂಡುವಂತೆ ಪೋಲೀಸರಿಗೆ ಆಜ್ಞೆಮಾಡಿದನು. ಪಾಪ! ಸ್ವೇಚ್ಛೆಯಾಗಿ ವಿಹರಿಸಿಕೊಂಡಿದ್ದ ಪ್ರಾಣಿಗೆ ಒಳ್ಳೇ ನಿರ್ಬಂಧವು ಪ್ರಾಪ್ತವಾಯಿತು.

ಸೀತಪೂರ್ ಸಬ್‌ಡಿವಿಜನ್ನಿಗೆ ಸೇರಿದ ನಾನ್ಪರದ ಭೂಸ್ವಾಮಿಗೆ ಸೇರಿದ ಬ್ರಹರ್ವ ಎಂಬ ಗ್ರಾಮದಲ್ಲಿ ಮಹಮ್ಮದೀಯರು ಗೋವಧೆಯನ್ನು ಮಾಡುವ ಸ್ವಾತಂತ್ರ್ಯವು ತಮಗುಂಟೆಂದೂ, ಹಿಂದೂಗಳು ಮಾಡಕೂಡದೆಂದೂ ಕೆಲ ಕಾಲದಿಂದ ಪರಸ್ಪರ ವಿವಾದವು ಹುಟ್ಟಿ ಕಡೆಗೆ ಮಹಮ್ಮದೀಯರು ಗೋವಧೆಯನ್ನು ಮಾಡಲು ತಮಗಿರುವ ಅಧಿಕಾರವನ್ನು ಸ್ಥಾಪಿಸಿಕೊಳ್ಳಬೇಕೆಂದು ಕೋರ್ಟಿನಲ್ಲಿ ವಿವಾದವನ್ನು ಹೂಡಿರುವರು. ಈ ಮಧ್ಯೆ ಮಹಮ್ಮದೀಯರು ಕಳೆದ ತಾ॥ ೨೧ ರಲ್ಲಿ ತಾವು ಗೋವಧೆಯನ್ನು ಮಾಡುತ್ತೇವೆಂದು ಗ್ರಾಮದಲ್ಲಿ ಸಾರಿದರು. ಇದನ್ನು ಕೇಳಿ ಕೆಲ ಹಿಂದೂಗಳು ಗೋವಧೆಯನ್ನು ನಿರೋಧಿಸುವುದಕ್ಕಾಗಿ ಬರಲು ಮಹಮ್ಮದೀಯರು ಅವರನ್ನು ತಮಗನುಕೂಲವಾದ ಸ್ಥಳಕ್ಕೆ ಕರೆದುಕೊಂಡುಹೋಗಿ ಆಯುಧಗಳಿಂದ ಚೆನ್ನಾಗಿ ಪ್ರಹರಿಸಿದರು. ಇದರಿಂದ ಆ ಸ್ಥಳದಲ್ಲೇ ೪ ಜನ ಹಿಂದೂಗಳು ಸತ್ತುಬಿದ್ದರು, ಮತ್ತೊಬ್ಬನು ಪ್ರಾಣಾಪಾಯವನ್ನು ಹೊಂದಿ ಆಸ್ಪತ್ರೆಗೆ ಸಾಗಿಸಲ್ಪಟ್ಟನು. ಸಬ್‌ಡಿವಿಜನ್ ಆಫೀಸರು ಈ ಸಮಾಚಾರವನ್ನು ಕೇಳಿ ಕೂಡಲೆ ಕೃತ್ಯ ನಡೆದ ಸ್ಥಳಕ್ಕೆ ಬಂದು ೧೧ ಜನ ಮಹಮ್ಮದೀಯರನ್ನು ಸೆರೆ ಹಿಡಿದರು. ಆ ಗ್ರಾಮದ ಮಹಮ್ಮದೀಯರೆಲ್ಲರೂ ಗ್ರಾಮವನ್ನು ಬಿಟ್ಟು ಓಡಿಹೋಗಿರುವರು.

ಪತ್ರವ್ಯವಹಾರ.

ದೇಶಾಭಿಮಾನಿಗಳಾದ ಮೈಸೂರು ಸ್ಟಾರ್ ಪತ್ರಿಕಾಕರ್ತರೆ! ನೀವು ನಮ್ಮ ದೇಶೀಯ ಜನಗಳ ಹಿತೇಚ್ಛೆಯಿಂದ ನಿರಂತರವಾಗಿ ಕೆಲಸಮಾಡುತ್ತಾ ಸರ್ಕಾರದ [illegible]ಕಗಳನ್ನು ಪ್ರಜೆಗಳಿಗೂ, ಪ್ರಜೆಗಳ ಕುಂದು ಕೊರತೆಗ

ಸ್ನ ನಮ್ಮ ಘನ ಹೊಂದಿದ ಸರ್ಕಾರಕ್ಕೂ ತಿಳಿಯಪಡಿಸಿರುತ್ತಾ ಪರೋಪಕಾರಿಗಳಾಗಿರುವ ಕಾರಣ ಈ ಉಪಕಾರಸ್ಮರಣೆಯಿಂದ ನಿಮಗೆ ಕೃತಜ್ಞತೆಯುಳ್ಳವರಾಗಿರುವುದು ಸ್ತುತಿಗಳ ಕರ್ತವ್ಯವಾಗಿರುವ ಕಾರಣ ನನ್ನ ಪ್ರಿಯಪುತ್ರನ ವಿವಾಹ ಮಹೋತ್ಸವ ಜ್ಞಾಪಕ ಸೂಚಕವಾಗಿ ತಮ್ಮ ಧರ್ಮಘಂಡಿಗೆ ಫಲಪುಷ್ಪ ತಾಂಬೂಲಗಳ ರೂಪಕವಾಗಿ ಈ ಅಲ್ಪ ಸಂಭಾವನೆಯನ್ನು ಕಳುಹಿಸಿರುತ್ತೇನೆ. ತಾವು ದಯಮಾಡಿ ಇದನ್ನು ಪ್ರೀತಿಯಿಂದ ಅಂಗೀಕರಿಸಬೇಕೆಂದು ಕೋರುತ್ತೇನೆ.

ತಮ್ಮ ಪ್ರಿಯ ವಿಶ್ವಾಸಿ.
ಹಾಸನದ ಸಾಹುಕಾರ್ ಆ॥ ಬಸೆಟ್ಟಪ್ಪ.

[ಈ ಪೊಬಲಗನ್ನು ನಾವು ವಂದನಾಪೂರ್ವಕವಾಗಿ ಸ್ವೀಕರಿಸಿರುವೆವು.— ಪ. ಪ್ರ.]

ವೀರಶೈವ ಶಿವಯೋಗಮಂದಿರ ಕಮಿಟಿಯವರ ಕಡೆಯಿಂದ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ:— ಜನರು ಈ ಮಂದಿರಕ್ಕೆ ಮನಿಯಾರ್ಡರು ಮೂಲಕ ಭಕ್ತಿಯಿಂದ ಕಾಣಿಕೆ ಕಳುಹಿಸುತ್ತಿದ್ದು, ಹಣವು ಯಾರಿಗೆ ಮುಟ್ಟತಕ್ಕದ್ದು ಇದನ್ನು ಸರಿಯಾಗಿ ಬರೆಯದೆ ಇರುವುದರಿಂದ ಪೋಸ್ಟ್ ಖಾತೇದವರು ಆಕ್ಷೇಪಿಸಿ ಮನಿಯಾರ್ಡರುಗಳನ್ನು ವಾಪಸುಮಾಡುತ್ತಾರೆ. ಮತ್ತೂ ಮಂದಿರದಲ್ಲೇ ಕೆಲವು ಸಾರೆ ಸ್ವಾಮಿಗಳೇ ಇರುತ್ತಿರುವುದರಿಂದ, ಅವರಿಗೆ ಸಹಿಮಾಡಿ ಹಣ ತೆಗೆದುಕೊಳ್ಳಲಿಕ್ಕೆ ತೊಂದರೆಯಾಗುತ್ತದೆ. ಮೇಲಾಗಿ ಅದು ಅರಣ್ಯವಾದುದರಿಂದ ಹೆಚ್ಚಿಗೆ ಹಣ ಇಡಲಿಕ್ಕೆ ಅನುಕೂಲವಿಲ್ಲ. ಆದ್ದರಿಂದ ಶಿವಯೋಗಮಂದಿರಕ್ಕೆ ಹಣ ಕಳುಹಿಸುವವರು ಶಿವಯೋಗಮಂದಿರದ ಖಜಾನದಾರರಾದ ಮ॥ರಾ॥ರಾ॥ ದೊಡ್ಡಪ್ಪ ಬಸಪ್ಪ ಅಣ್ಣಾ ನಾಗರಾಳ ಮುಕ್ಕಾಮ ಬಾಗಲಕೋಟ ಇವರ ಕಡೆಗೆ ಕಳುಹಿಸಬೇಕು. ಅವರ ಕಡೆಯಿಂದ ಹಣ ಮುಟ್ಟಿದ ಬಗ್ಗೆ ಕೂಡಲೆ ಛಾಪಿ ಪಾವತಿಗಳು ರವಾನಿಸಲ್ಪಡುವುವು.

ಸೆಕ್ರೆಟರಿ, ವೀರಶೈವ ಶಿವಯೋಗಮಂದಿರ.

ಗ್ರಂಥಾವಲೋಕನಾಭಿರುಚಿ.

ಪುಸ್ತಕಗಳು ನಮ್ಮೆಲ್ಲರಿಗೆ ಅಮೂಲ್ಯ ವಸ್ತುಗಳಾಗಿರುತ್ತವೆ. ಮುತ್ತು ಹವಳ ಮುತ್ತು ವಜ್ರಗಳಿಗಿಂತ ಜ್ಞಾನದ ಬೆಲೆಯು ಹೆಚ್ಚಿನದು. ಚೊಕ್ಕ ಸುವರ್ಣವನ್ನು ಪ್ರಯಾಸಪಟ್ಟು ಅರ್ಜಿಸುವುದಕ್ಕಿಂತ ತಿಳುವಳಿಕೆಯು (ಜ್ಞಾನವ)ನ್ನು ಸಂಪಾದಿಸುವುದು ಸನ್ಮಾರ್ಗಕ್ಕೆ ಪಾತ್ರವಾದ ಮಾರ್ಗವಿರುವುದು. ಹಣದಿಂದ ನಾವು ಸೌಖ್ಯಗಳಲ್ಲಿದ್ದು ದುಂದುಗಾರರಾಗುತ್ತೇವೆ. ಆದರೆ ಧನವು ಜ್ಞಾನದಿಂದ ಲಭಿಸುವ ನಿಜಪರಮಾನಂದವನ್ನು ನಮಗೆ ಉಂಟುಮಾಡಿಕೊಡುವುದಿಲ್ಲ. ದ್ರವ್ಯವು (ಲಕ್ಷ್ಮಿಯು) ಕಮಲಕುಸುಮದ ದಳದಮೇಲೆ ಬಿದ್ದಿರುವ ಮತ್ತೂ ಮುತ್ತಿನೋಪಾದಿಯಲ್ಲಿ ರಾರಾಜಿಸುವ ಕ್ಷೀರಬಿಂದುವಿನಂತೆ ಚಂಚಲವಿರುತ್ತದೆ. ಇದು ಒಬ್ಬನನ್ನೇ ಆಶ್ರಯಿಸಿಕೊಂಡು ಬಹಳ ದಿವಸಗಳ ವರೆಗೆ ಇರುವುದಿಲ್ಲೆಂಬುದು ಅನುಭವಸಿದ್ಧವಾದ ಸಂಗತಿಯು ಇರುತ್ತದೆ. ವೇಶ್ಯಾನಾರಿಯಂತೆ ಈಹೊತ್ತು ಒಬ್ಬನನ್ನೂ ಮತ್ತೂ ನಾಳೆಯು ದಿವಸ ಅನ್ಯರನ್ನೂ ಅದು ಭಜಿಸುತ್ತದೆ. ಆದರೆ ವಿದ್ಯೆಯು ನಮ್ಮ ಒಡಲೊಳಗೆ ಚಿರಕಾಲವಾಗಿ ವಾಸಮಾಡಿಕೊಂಡಿರುತ್ತದೆ. ಸಂಪತ್ತಿನಂತೆ ಅದಲು ಬದಲುಗಳಿಗೆ ಅದು ಗುರಿಯಾಗುವುದಿಲ್ಲ. ವಿಶೇಷವಾದ ಸಂಗತಿಯೇನೆಂದರೆ— ಧನಿಕರು ಚಿಂತೆ ಹಂಬಲಿಕೆಗಳೆಂಬ ಮಹಾವ್ಯಾಧಿಯಿಂದ ಸರ್ವಸಾಧಾರಣವಾಗಿ ಬಾಧಿತರಾಗಿರುತ್ತಾರೆ. ಹಣವನ್ನು ಗಳಿಸುವುದೂ ಮತ್ತು ರಕ್ಷಿಸುವುದೂ ಬಹಳ ಪ್ರಯಾಸಕಾರಕವಾಗಿರುತ್ತದೆ. ಈ ಎರಡು ಕಾರ್ಯಗಳನ್ನು ಸಿದ್ಧಿಗೊಯ್ಯಲು ಸತತವಾಗಿ ನಾವು ಜಾಗ್ರತರಾಗಿರಬೇಕಾಗುತ್ತದೆ. ಎಳ್ಳಷ್ಟಾದರೂ ನಾವು ಅಲಕ್ಷಿಸಿದರೆ ಹಣವು ಕಂಡುಕಾಣದಹಾಗೆ ನಮ್ಮ ಕೈಯನ್ನು ಬಿಡುತ್ತದೆ. ಆದುದರಿಂದ ಐಶ್ವರ್ಯವಂತರು ಕ್ವಚಿತವಾಗಿಯೇ ಮಾನಸಿಕ ಶಾಂತತೆಯನ್ನು ಉಪಭೋಗಿಸಬಲ್ಲರು. ಆದರೆ ಜ್ಞಾನದ ಪ್ರತಿಫಲಗಳು ಶಾಂತತೆಯೂ ತಾಳ್ಮೆಯೂ ಮತ್ತೂ ವಿನಯಪ್ರಾಪ್ತಿಯೂ ಇವೇ ಮುಂತಾದ ಸದ್ಗುಣಗಳಿರುತ್ತವೆ. ನಮ್ಮ ಸ್ವಭಾವದಮೇಲೆ ದುಷ್ಪರಿಣಾಮವನ್ನು ಹಣವು ಮೇಲಿಂದಮೇಲೆ ಉಂಟುಮಾಡುತ್ತದೆಂದು ನಾವು ಎಂದೂ ಮರೆಯಬಾರದು. ಹಣವು ಗರ್ವಕ್ಕೆ, ಆಲಸ್ಯಕ್ಕೆ ಮತ್ತೂ ವಿಷಯಾಸಕ್ತಿಗೆ ಕಾರಣಭೂತವಾಗಿರುವುದರಿಂದ ಈ ತ್ರಿವರ್ಗ ದುರ್ಗುಣಗಳು ಮನುಷ್ಯನನ್ನು ಅವನತಸ್ಥಿತಿಯಲ್ಲಿ ಇಡುತ್ತವೆ ಎಂಬುದಿಷ್ಟೇ ಅಲ್ಲ, ಆದರೆ ಅವನನ್ನು ದುರ್ಮರಣಕ್ಕೆ ಎಳೆದೊಯ್ಯುತ್ತವೆ. ಇದಕ್ಕೆಲ್ಲ ವಿಪರೀತವಾಗಿ ಜ್ಞಾನವು (ವಿದ್ಯೆಯು) ಮನುಷ್ಯನ ಜನ್ಮವನ್ನು ಗೌರವಪಡಿಸುತ್ತದೆ. ಅದರಿಂದ ಉದಾರಮನಸ್ಸಿನವರು ಆಗುತ್ತೇವೆ. ಇತಿಹಾಸ ಮತ್ತೂ ಪುರಾಣಗಳಲ್ಲಿ ವರ್ಣಿಸಿದ ದೊಡ್ಡ ಜನರ ಆಚರಣೆಗಳಂತೆ ವರ್ತಿಸಲಿಕ್ಕೆ ಜ್ಞಾನವು ಕ್ರಮೇಣ ನಮ್ಮ ಮನಸ್ಸನ್ನು ಒಲಿಸುತ್ತದೆ. ಸವಿಯುದಷ್ಟು ಜಣಕ ಬಲಹಿಂದ ಅಸಾಧ್ಯವಾದ ಸೃಷ್ಟಿಯ ಚಮತ್ಕಾರಗಳನ್ನು ಮತ್ತೂ ರಹಸ್ಯಗಳನ್ನು ತಿಳಿದುಕೊಂಡು ಬಹು ಸೂಕ್ಷ್ಮರೀತಿಯಿಂದ ಪರೀಕ್ಷಿಸಲಿಕ್ಕೆ ಜ್ಞಾನದಿಂದಲೇ ನಾವು ಯೋಗ್ಯರಾಗುತ್ತೇವೆ.

ಸಶೇಷ.

ಗೋದುಬಾಯಿಕೋ ಅಡಿವೆಪ್ಪ ಲೋಣಿ,
ಚೆಪ್ ಎ॥ ಗರ್ಲ್ ಸ್ಕೂಲ ಅಥಣಿ.

ಮಹಾವಿವಾಹ ವೈಭವ.

ಸಿಬ್ಯಾಸನವುರೀ ಪರಾಭಿಧಾನವಾದ ಈ ಹಾಸನ ನಗರ ನಿವಾಸಿಗಳಾದ ವೇದಮಾನ್ಯರೂ, ರಾಜಮಾನ್ಯರೂ, ಸಭಾಮಾನ್ಯರೂ ಆದ ಲಕ್ಷಾಧಿಪತಿಗಳು ಆಲೂರು ಸೀಳ್ಳನ ಮಲ್ಲಶೆಟ್ಟರವರ ಕುಮಾರ ಕಂಠೀರವರಾದ ಬಸಪ್ಪಶೆಟ್ಟರವರ ಜ್ಯೇಷ್ಠಪುತ್ರರು ಚಿ॥ ರಾ॥ ಶ್ರೀಕಂಠಪ್ಪನೆಂಬ ವರಶ್ರೇಷ್ಠರಿಗೆ ಚಿತ್ರದುರ್ಗದ ಡಿ॥ ಗುತ್ತಿದ ರಂಗವ್ವನಹಳ್ಳಿಯಲ್ಲಿರುವ ದೇವಮಾನ್ಯ, ರಾಜಮಾನ್ಯ, ಸಭಾಮಾನ್ಯರುಗಳಾದ ಸಾಹುಕಾರ್ ಉರುಕೊಂಡೆ ದೊಡ್ಡಮರಿಗಪ್ಪನವರ ಪುತ್ರಸಂಜಾತರಾದ ಕರಿಬಸಪ್ಪನವರ ಪುತ್ರಿ ಚಿ॥ ಸೌ॥ ಕು॥ ಕುಂ॥ ಶೋಭಿತೆಯಾದ ಗೌರಮ್ಮನೆಂಬ ವಧುಮಣಿಯನ್ನು ತಂದುಕೊಂಡು, ಇದೇ ಸಂ॥ ಜ್ಯೇಷ್ಠ ಶು॥ ೯ ಸೋಮವಾರ (೫-೬-೧೧) ಕಟಕಲಗ್ನ ಶುಭ ಮುಹೂರ್ತದಲ್ಲಿ, ನಂಜರಾಬಾದು ಪಂಚಾಂಗ ಕರ್ತರಾದ ಬ್ರಹ್ಮಶ್ರೀ ಪಯನೂರು ಸಿದ್ಧಾಂತಿಗಳು ಪಿ. ಕೆ. ರಾಮಶಾಸ್ತ್ರಿಗಳೆಂಬ ಜ್ಯೋತಿಶ್ಶಾಸ್ತ್ರ ಪಾರಂಗತ ವಿದ್ವನ್ಮಣಿಗಳ ನಿಯಮಿತಪ್ರಕಾರ ಭಗವದನುಗ್ರಹಪೂರ್ವಕವಾದ ವಿವಾಹ ಮಹೋತ್ಸವವು, ವಧೂಮಣಿ ಗೃಹಾವರಣ ನಿರ್ಮಿತವಾದ ವಿಚಿತ್ರಾಲಂಕಾರ ರಂಜಿತ ದಿವ್ಯಮಂಟಪದಲ್ಲಿ ಸ್ವಮತ ಧರ್ಮಶಾಸ್ತ್ರೋಕ್ತಪ್ರಕಾರ, ತುಮಕೂರು ವೇ॥ ರುದ್ರಪ್ಪಶಾಸ್ತ್ರಿಗಳವರ ಪೌರೋಹಿತ್ಯದಲ್ಲಿ ಅತ್ಯಂತ ವೈಭವವಿಜೃಂಭಣೆಗಳಿಂದ ಸಾಂಗವಾಗಿ ನೆರವೇರಿತು ಹೀಗೆ ಸಂಭ್ರಮದಿಂದ ವಿವಾಹಿತರಾದ ವಧೂವರರಿಗೆ ಈ ಮಹೋತ್ಸವಕಾಲದಲ್ಲಿ ಕನ್ನಿಕಾ ಮಾತಾಪಿತೃಗಳು ಮತ್ತೂ ಉಭಯ ಪಕ್ಷದ ಬಂಧು ಬಳಗಗಳು ಇವರುಗಳಿಂದ ಅಮೂಲ್ಯಗಳಾದ ನವರತ್ನಾಭರಣಗಳೂ, ವಿಚಿತ್ರ ವಸ್ತ್ರಾದಿಗಳೂ, ಸಪ್ರಾಂಗ ಪೂರ್ವಕ ಧಾರಾದತ್ತವಾಗಿ ಬಹುಮಾನಿಸಲ್ಪಟ್ಟುವು. ಈ ವಿತರಣೆಯೂ, ಧಾರಾಳವೂ, ಅಷ್ಟಿಷ್ಟೆಂದು ವರ್ಣಿಸಲಳವಾಗಿರಲಿಲ್ಲ. ಇಷ್ಟುಮಾತ್ರವಲ್ಲದೆ ಈ ಶುಭಕಾರ್ಯವು ನಡೆದ ಗುತ್ತಿದ ರಂಗವ್ವನ ಹಳ್ಳಿಯಲ್ಲಿಯೂ ತದನಂತರ ನಮ್ಮ ಜನಾಭಿಮಾನಿಗಳೂ, ಶ್ರೀಮಂತರೂ ಆದ ಮ॥ ಬಸಪ್ಪಶೆಟ್ಟರವರು ನೂತನ ದಂಪತಿಗಳು ಮತ್ತೂ ನಂಟರಿಷ್ಟರೊಂದಿಗೆ ಬಹು ಅಟ್ಟಹಾಸದಿಂದ ಸ್ವನಿವಾಸಸ್ಥಳವಾದ ಈ ಹಾಸನ ನಗರಕ್ಕೆ ಹಿಂತಿರುಗಿ ಪ್ರಯಾಣಮಾಡಿ, ಬರುತ್ತಾ ಮಾರ್ಗದಲ್ಲಿ ಚಿತ್ರದುರ್ಗದ ಶ್ರೀಮಜ್ಜಗದ್ಗುರು ಶ್ರೀ ಮುರುಘರಾಜೇಂದ್ರ ಮಠ ಮೊದಲುಗೊಂಡು ಸ್ವಸ್ಥಳ ತಲಪುವ ವರೆಗೂ ಅಲ್ಲಲ್ಲಿ ನಿಲ್ಲುತ್ತಾ ಬಂದ ಬಿಡಾರ ಸ್ಥಳಗಳಲ್ಲಿಯೂ ಮತ್ತೂ ಸ್ವಸ್ಥಳ ಸೇರಿದಮೇಲೆ ಇಲ್ಲಿಯೂ ಅಯಾ ಸ್ಥಳಗಳಲ್ಲಿ, ಆಯಾ ಕಾಲಗಳಲ್ಲಿ ನಂಟರಿಷ್ಟರು, ಬಂಧುಮಿತ್ರರು, ಅಧಿಕಾರಿಗಳು ಅಧೀನಸ್ಥರು, ಬಡವರು ಬಲ್ಲಿದರು, ಶ್ರೇಷ್ಠರು, ಕನಿಷ್ಠರು ಎಂಬಿವೇ ಮುಂತಾದ ಸಂಬಂಧ, ಜಾತಿ, ಕುಲಗಳ ತಾರತಮ್ಯವೇ ಇಲ್ಲದೆ, ಎಲ್ಲರೂ ತಮ್ಮ ಸ್ವಗೃಹಕೃತ್ಯಕ್ಕೇ ಸೇರಿದವರೆಂಬ ಸರ್ವತ್ರ ಸಮಭಾವದೊಡನೆ ಅವರವರಿಗುಚಿತವಾದ ಭೋಜನಾದಿ ಅತಿಥಿ ಸತ್ಕಾರಗಳೂ, ಉಡುಗೆರೆಯುತ್ಸವಗಳೂ ಅತ್ಯಂತ ಮರ್ಯಾದಾಪುರಸ್ಸರವಾಗಿ ನಡೆಯಿಸಲ್ಪಟ್ಟುವು. ಕಳೆದ ತಾ॥ ೧೦ ನೇ ಸೋಮವಾರ ಇಲ್ಲಿನ ವೀರಶೈವ ಗುರುಗಳಾದ ಜೇವರಗಿಹಳ್ಳಿ ಮಠದ ವೇ॥ ಶ್ರೀ ಶಾಂತವೀರಸ್ವಾಮಿಗಳು ಗೌರವ ಪೂರ್ವಕ ದಯಮಾಡಿ ಈ ದಂಪತಿಗಳನ್ನು ಆಶೀರ್ವದಿಸಿ ಅನುಗ್ರಹಮಾಡಿದರು. ಮತ್ತೂ ಚಿರಂಜೀವಿ ಸೌಭಾಗ್ಯವತಿಗಳೂ, ನವಯೌವನ ವಿಜೃಂಭಿತರೂ ಆದ ನೂತನ ದಂಪತಿಗಳು ಐಶ್ವರ್ಯಶ್ವಯಿಂದ ಕೂಡಿದ ಪುಷ್ಪಮಂಟಪ ಸದೃಶವಾದ ಗಾಡಿಯಲ್ಲಿ ದಿವ್ಯವಸ್ತ್ರ ವಿಭೂಷಣಗಳಿಂದಲಂಕೃತರಾಗಿ ಕುಳ್ಳಿರಿಸಲ್ಪಟ್ಟು, ಅಮೋಘವಾದ ಮೆರವಣಿಗೆಯೂ, ಈ ಸ್ಥಳದಲ್ಲಿರುವ ವಿಶಿಷ್ಟಮತದವರ ದೇವರುಗಳಿಗೆ ತತ್ತದುಚಿತರೀತ್ಯಾ ಪೂಜಾಮಹೋತ್ಸವಾದಿಗಳೂ ಸಹ ಬಹು ಅಟ್ಟಹಾಸದಿಂದಲೂ, ವಿಶೇಷಾದರದಿಂದಲೂ, ವಿಚಿತ್ರವಾದ್ಯಘೋಷ, ವೇಶ್ಯಾನರ್ತನ ಅಪೂರ್ವ ಬಾಣಬಿರುಸುಗಳು ಮೊದಲಾದ ವೈಖರಿ ಸಹಿತ ನಡೆಸಲ್ಪಟ್ಟುವು. ಸಶೇಷ.

ಕಡೂರು ತಾಲ್ಲೋಕು ಹೊಗರೇಹಳ್ಳಿ ಸ್ಕೂಲ್ಮಾಸ್ಟರ್ ಮ॥ ರಾ॥ ಎಚ್. ಬಸವಯ್ಯನವರಿಗೆ ಡಿಟೋ ತಾ॥ ಪಿಳ್ಳೇನಹಳ್ಳಿ ವೇ॥ ಮಠದ ಪುಟ್ಟಬಸವಯ್ಯನವರ ಕುಮಾರಿಯನ್ನು ಕೊಟ್ಟು ವೈಶಾಖ ಬ॥ ೧೧ (೨೮-೫-೧೧) ಬುಧವಾರ ಕ್ರಮವಾಗಿ ವಿಧಿಪ್ರಕಾರ ವಿವಾಹನಡೆಯಿತು. ಅಗ್ಗೆ ಮ॥ ರಾ॥ ಪಿಳ್ಳೇನಹಳ್ಳಿ ಸ್ಕೂಲ್ಮಾಸ್ಟರ್ ಚೆನ್ನಬಸವಯ್ಯನವರು, ಚನ್ನಾಪುರದ ಪಟೇಲ್ ಮ॥ ರಾ॥ ಗಿರೀಗೌಡರವರ ಪ್ರಮುಖತೆಯಲ್ಲಿ ಒಂದು ಸಭೆಯನ್ನು ಸೇರಿಸಿ “ಮೈಸೂರು ಸ್ಟಾರ್” ಪತ್ರಿಕೆಯಿಂದ ವೀರಶೈವ ಸಮಾಜಕ್ಕುಂಟಾಗುತ್ತಿರುವ ಅ[illegible]ಶಯವಾದ ಉಪಕಾರವನ್ನೂ, ಇದಕ್ಕೆ ಕೆಲ ಚಂದಾದಾರ[illegible]ದುಂಟಾಗುತ್ತಿರುವ ನಷ್ಟ ಕಷ್ಟಗಳನ್ನೂ ಸಂಕ್ಷೇಪವಾಗಿ [illegible]ಳಿಸಿ, “ಸ್ಟಾರ್” ಪತ್ರಿಕೆಗೆ ಸಹಾಯಮಾಡಲು ಈ ಕೆಳಗೆ [illegible]ಡಂತೆ ಒಂದು ಭಾಷಣವನ್ನು ಮಾಡಿದರು. ಈ ಭಾಷಣದ [illegible]ಖ್ಯಾಂಶವೇನೆಂದರೆ:— “ಅನೇಕ ಮತಗಳನ್ನೊಳಗೊಂಡಿರುವ ಈ ಭರತಖಂಡವು ಸ್ವಮತಭಕ್ತಿ ಸುಧಾರಣೆಯಲ್ಲಿ ಎಷ್ಟರಮಟ್ಟಿನ ಕಷ್ಟ ನಷ್ಟಗಳನ್ನು ಅನುಭವಿಸಿರುವುದೆಂಬ ಸಂಗತಿಯು ಚರಿತ್ರೆಯನ್ನೋದಿರುವ ಪ್ರತಿಯೊಬ್ಬರಿಗೂ ತಿಳಿದಿರಬಹುದು. ಇಂಥಾ ಮತಗಳಲ್ಲಿ ವೀರಶೈವ ಮತವೂ ಒಂದಾಗಿದೆ. ಇದೂ ಕೂಡ ಇತರ ಮತಗಳಂತೆ ಎಷ್ಟೋ ಕಷ್ಟಗಳನ್ನು ಅನುಭವಿಸಬೇಕಾಗಿ ಬಂದರೂ, ಆಗಿನ ಮಹಾಪುರುಷರು ಅಂಥ ಕಷ್ಟ ನಷ್ಟಗಳಿಗೆ ಅಂಜದೆ ಮತೋದ್ಧಾರ ಮಾಡಿರುವರಲ್ಲದೆ, ಹೇರಳವಾಗಿ ಮತಗ್ರಂಥಗಳನ್ನೂ ರಚಿಸಿ ಮತಸುಧಾರಣೆಯನ್ನು ಮಾಡಿ ನಮ್ಮ ವಂದನೆಗಳಿಗೆ ಪಾತ್ರರಾಗಿರುವರು. ಆದರೆ ಹಿಂದೆ ನಾವುಗಳು ಎಂದೂ ಕಂಡು ಕೇಳದಿದ್ದ ಸುಖಕಾಲವು ಭಗವಂತನಿಂದ ಈಗ ನಮಗೆ ಅನುಗ್ರಹಿಸಲ್ಪಟ್ಟಿದ್ದಾಗ್ಯೂ, ನಾವುಗಳು ಮುಂದುವರಿಯಲು ಸೋಮಾರಿಗಳಾಗಿ ಸ್ವೋದರಂಭರಣಪರಾಯಣರಾಗಿರುವೆವು. ಅಂದಮೇಲೆ ನಮ್ಮ ಪೂರ್ವಿಕರಿಗೂ, ನಮಗೂ ಎಷ್ಟರಮಟ್ಟಿನ ಅಂತರವಿರುವುದೆಂಬುದನ್ನು ತಾವೇ ಯೋಚಿಸಬೇಕಾಗಿದೆ. ಇದಕ್ಕೆ ಕಾರಣವನ್ನು ಮೈಸೂರು ದೇಶದ ವಿದ್ಯಾಭಿವೃದ್ಧಿ ಫಂಡು, ನಾವು ಯೋಚನೆಮಾಡುವುದಕ್ಕೆ ಮುಂಚಿತವಾಗಿಯೇ ನಮ್ಮ ಮನಸ್ಸಿಗೆ ಸೂಚನೆಯನ್ನು ಕೊಡುತ್ತಿದೆ. ಸದ್ಯಃಕಾಲದಲ್ಲಿ ರಾಜಕೀಯ, ಸಾಮಾಜಿಕ, ನೈತಿಕಸುಧಾರಣೆಯಲ್ಲಿ ಮತಬಾಂಧವರನ್ನು ಪ್ರಾಪ್ತಸ್ಥಿತಿಗೆ ತರಲು “ಸ್ಟಾರ್” ಪತ್ರವು ಚಂದಾದಾರರ ಪ್ರೋತ್ಸಾಹವಿಲ್ಲದೆ ಎಷ್ಟೋ ಕಷ್ಟನಷ್ಟಗಳನ್ನು ಅನುಭವಿಸುತ್ತಿರುವುದು. ಈ ವಿಷಯವನ್ನು ಚಂದಾದಾರರಿಗೂ, ಶ್ರೀ ಮಠಗಳ ಮುಖ್ಯಪೀಠಸ್ಥರಿಗೂ “ಸ್ಟಾರ್” ಪತ್ರವು ಎಷ್ಟೋಸಾರಿ ವಿಜ್ಞಾಪಿಸಿಕೊಂಡಿರುವುದು. ಆದರೆ ಇಂಥಾ ವಿಜ್ಞಾಪನೆಯು ಇದುವರೆಗೂ ಅರಣ್ಯರೋದನವಾಗಿ ಪರಿಣಮಿಸಿರುವುದು. ಈ ವಿಷಯಕ್ಕಾಗಿ ನಾವು ಎಷ್ಟು ಪಶ್ಚಾತ್ತಾಪಪಟ್ಟರೂ ತೀರದ್ದಾಗಿದೆ. “ಸ್ಟಾರ್” ಪತ್ರವು ಏಷಕ ಸಂಘದವರಿಂದ ನಡೆಸಲ್ಪಡುತ್ತಿರುವ ವಾರ್ತಾಪತ್ರಿಕೆಗಳಂತೆ ನಿರಾತಂಕವಾಗಿ ನಡೆದುಕೊಂಡುಹೋಗಲು “ಸ್ಟಾರ್” ಫಂಡೊಂದನ್ನು ಏರ್ಪಡಿಸಬೇಕಾಗಿ ಈ ಹಿಂದೆ ಒಬ್ಬಿಬ್ಬ ಮತೀಯ ಮಹಾಶಯರಿಂದ ಸೂಚನೆಯು ತರಲ್ಪಟ್ಟಾಗ್ಯೂ, ಮತದ ದುರ್ದೈವವಶಾತ್ ಈ ಸೂಚನೆಯು ಯಾರಿಂದಲೂ ಅನುಮೋದಿಸಲ್ಪಡಲಿಲ್ಲ. ಈಗಲಾದರೂ ನಾವುಗಳು “ಸ್ಟಾರ್” ಪತ್ರದ ಅಭಿವೃದ್ಧಿಗೆ ಒಂದು ಫಂಡನ್ನು ಏರ್ಪಡಿಸಿ, ಅದಕ್ಕೆ ಮತಸುಧಾರಣೆಗೆ ತಮ್ಮ ತನುಮನಧನಗಳನ್ನು ಅರ್ಪಿಸಿದ ಮತ್ತು “ಸ್ಟಾರ್” ಪತ್ರದ ಮೂಲಕರ್ತೃಗಳಾದ ಕೈ॥ ವೀರಸಂಗಪ್ಪನವರ ಸ್ಮಾರಕ ಫಂಡೆಂಬುದಾಗಿ ಹೆಸರಿಟ್ಟು ಒಂದು ಧನರಾಸಿಯನ್ನು ಶೇಖರಿಸುವುದರಿಂದ “ಸ್ಟಾರ್” ಪತ್ರವು ಸುಲಲಿತವಾಗಿ ನಡೆಯುವುದಲ್ಲದೆ, ಮುಂದಿನ ಧರ್ಮಕರ್ತೃಗಳಿಗೆ ಇದು ಮಾರ್ಗದರ್ಶಕವಾಗಿರುವುದು. ಇದಕ್ಕಾಗಿ ನಾನು ಈಗಲೆ ಹತ್ತು ರೂ. ಗಳ ಚಂದಾ ಕೊಡಲು ಸಿದ್ಧನಾಗಿದ್ದೇನೆ. ಈ ವಿಷಯದಲ್ಲಿ ಇಲ್ಲಿ ಸೇರಿರುವ ತಾವುಗಳು ಶಕ್ತಿವಂಚನೆಯಿಲ್ಲದೆ ಸಹಾಯಮಾಡುವುದಲ್ಲದೆ, ತಮ್ಮ ಮಿತ್ರಬಾಂಧವರಿಂದಲೂ ಸಾಧ್ಯವಾದಮಟ್ಟಿಗೂ ಸಹಾಯಮಾಡಿಸುವಿರೆಂದು ನಂಬಿದ್ದೇನೆ.” ಈ ರೀತಿಯಾಗಿ ಬಹು ಸ್ವಾರಸ್ಯವಾದ ಭಾಷಣವನ್ನು ಮಾಡಿ ಆಗಲೇ ೧೦ ರೂ. ಗಳನ್ನು ಸಭಾ ಪ್ರಮುಖರ ವಶಕ್ಕೆ ಕೊಟ್ಟುಬಿಟ್ಟರು. ಈ ಸೂಚನೆಯನ್ನು ಸಭಿಕರೆಲ್ಲರೂ ಅನುಮೋದಿಸಿ ಈ ಕೆಳಗೆ ಕಂಡಂತೆ ಫಂಡು ನಗದು ವಸೂಲಾಯಿತು.

ಮ॥ ರಾ॥ ಗಳಾದ ಸಭಾ ಪ್ರಮುಖರಾದ ಚನ್ನಾಪುರದ ಪಟೇಲ್ ಗಿರೀಗೌಡರಿಂದ ೧೦-೦-೦; ವರನಕಡೆಯಿಂದ ೧೦-೦-೦; ವಧುವಿನ ತಂದೆಯವರಾದ ವೇ॥ ಪುಟ್ಟಬಸವಯ್ಯನವರಿಂದ ೫-೦-೦; ವರನಕಡೆ ಮುಖ್ಯ ಕರ್ತೃಗಳಾದ ಬೆರೂರು ಶಿವಪುರದ ವೀರಪ್ಪನವರಿಂದ ೫-೦-೦; ಈರೀತಿ ೩೦ ರೂ. ಗಳು ನಗದು ವಸೂಲಾಗಿ ಪ್ರಮುಖರಲ್ಲಿ ಡಿಪಾಜಿಟ್ ಇಡಲ್ಪಟ್ಟಿತು. ಅನಂತರ ಚಿಕ್ಕಪಟ್ಟಣಗೆರೆ ಸಣ್ಣ ಕೆಲ್ಲಪ್ಪಗೌಡರಿಂದ ೧೦-೦-೦; ಸರಸ್ವತೀಪುರದ ಅಂಗಡಿ ಶಿವರುದ್ರಸೆಟ್ಟರಿಂದ ೫-೦-೦ ಈ ರೀತಿ ವಾಗ್ದಾನವಾಗಿರುವುದು. ಈ ಫಂಡಿಗೆ ಸದ್ಯಕ್ಕೆ ಚನ್ನಾಪುರದ ಪಟೇಲ್ ಗಿರೀಗೌಡರವರು ಮುಖ್ಯಸ್ಥರಾಗಿಯೂ, ಪಿಳ್ಳೇನಹಳ್ಳಿ ಸ್ಕೂಲ್ಮಾಸ್ಟರ್ ಚನ್ನಬಸಪ್ಪನವರು ಸೆಕ್ರೆಟರಿಗಳಾಗಿಯೂ, ಹೊಗರೇಹಳ್ಳಿ ಸ್ಕೂಲ್ ಮಾಸ್ಟರ್ ಎಚ್. ಬಸವಯ್ಯನವರು ಜಾಯಿಂಟ್ ಸೆಕ್ರೆಟರಿಗಳಾಗಿಯೂ, ಸಣ್ಣ ಕೆಲ್ಲಪ್ಪಗೌಡರು ಟ್ರಿಜರರಾಗಿಯೂ ನಿಯಮಿಸಲ್ಪಟ್ಟಿರುವರಲ್ಲದೆ, ಇದರ ಮುಂದಿನ ಅಭಿವೃದ್ಧಿಗೆ ಮತಬಾಂಧವರ ತಕ್ಕ ಸಲಹೆಗಳನ್ನು ಈ ಮೂಲಕ ಕೋರುತ್ತೇ. ಅನಂತರ ಸಭಾ ಪ್ರಮುಖರು ಎದ್ದುನಿಂತು ಪ್ರತಿಯೊಬ್ಬ ವೀರಶೈವರೂ ಈ ಫಂಡಿಗೆ ಯಥೋಚಿತವಾದ ಸಹಾಯವನ್ನು ಮಾಡಿ ಕೀರ್ತಿಭಾಜನರಾಗಬೇಕೆಂದು ಕೆಲವು ವಿಷಯಗಳನ್ನು ತಿಳಿಸಿದರು. ಅನಂತರ ಕೈ॥ ವೀರಸಂಗಪ್ಪನವರಿಗೆ ಅಗ್ರತಾಂಬೂಲವು ತೆಗೆಯಲ್ಪಟ್ಟು ನೆರದ ಸಭಿಕರಿಗೆಲ್ಲರಿಗೂ ಗಂಧ ಪುಷ್ಪ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟುವು. ಅನಂತರ ಸಭೆಯು ಮುಕ್ತಾಯವಾಯಿತು.

ಓರ್ವ ಪ್ರತ್ಯಕ್ಷದರ್ಶಿ.

ಸರ್ವರೂ ನೋಡಿ.

ಪದ್ಮಾವತಿ ಕಥೆ, ವೀರಶೈವಮತವಿಷಯಸಾರ, ಷಟ್ಸ್ಥಲ ಚಿಂತಾರತ್ನ— ಇವುಗಳಲ್ಲಿ ಒಂದೊಂದಕ್ಕೆ ಅರ್ಧಾಣೆಯ ಲೇಬಲ್ ಕಳಿಸಿದರೆ ಸುಮ್ಮನೆ ಕಳಿಸಲ್ಪಡುತ್ತೆ.

ವಿಳಾಸ:— ಹರಿಗೆ ಬಸವಲಿಂಗಪ್ಪ,
ಅರಳೆಪೇಟೆ, ಬೆಂಗಳೂರು ಸಿಟಿ.

ಬಹುಮಾನ ! ಸುಸಮಯ !!

ಸೌದಾಮನಿ.

3

ಶೃಂಗಾರಾದಿ ರಸಭರಿತವಾಗಿಯೂ, ಧರ್ಮನೀತಿ ಬೋಧಕವಾಗಿಯೂ ಇರುವ ಮನೋಹರವಾದೀಪುಸ್ತಕದ ಬೆಲೆ ೦-೬-೬ ಅಣೆ. ಗೌರೀಹಬ್ಬ ದೊಳಗಾಗಿ ತರಿಸುವ “ಸ್ಟಾರ್” ಚಂದಾದಾರರಿಗೆ ಐದಾಣೆ ಮಾತ್ರ. ಗ್ರಾಹಕರಿಗೆ ಒಂದಾಣೆಯ ಪುಸ್ತಕ ಒಂದು ಬಹುಮಾನ ಅಂಚೆವೆಚ್ಚ ಬೇರೆ “ಸಾಹಸಿಕೆ” ಮನೋಹರವಾದ ನಾವಿಲ್ ೦-೨-೬.

ವಿಳಾಸ:— ಸಿ ವಿ. ಶಾಸ್ತ್ರಿ, ಚಾಮರಾಜನಗರ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

5 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನ್ನಡ.

೭೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಸಚಿತ್ರಶುಕಸಪ್ತತಿಕಥೆ.

3

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವುದು. (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಇದು ಅಲ್ಲದೆ ಇನ್ನೂ ಇತರವಿಧವಾದ ಕಥೆಗಳು ಕಾವ್ಯಗಳು ಪುರಾಣಗಳು ಮುಂತಾದ ಪುಸ್ತಕಗಳು ಸಹ ನಮ್ಮಲ್ಲಿ ದೊರೆಯುತ್ತೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ನಮ್ಮ ವಿಳಾಸ:— ಎಂ. ಆರ್., ಕೃಷ್ಣಸ್ವಾಮಿಶೆಟ್ಟಿ ಕಂಪೆನಿ ೧೨೪ ಗೋವಿಂದಪ್ಪನಾಯಕ್ ಬೀದಿ ಮದ್ರಾಸು.

16 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ !!!

ಮಿಂಚಿನ ಪದಕವು. ಮಿಂಚಿನ ಉಂಗುರವು.



ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಷ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಮೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ್.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

16

೧. ಲೋಕಾಮಂಯಜರ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ

ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟನೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪೊಸಡುಬಾವು, ಹಲ್ಲುಗಳೆಲ್ಲಾಡುವದು, ಹಲ್ಲುಕೊರತ, ಹಲ್ಲುಗಳ ಪಾಚೆ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ಸಂಧಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯು ಜ್ಞ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ೫. ೮. ವಿರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮ ಕೃಷ್ಣರಾಜ ಮೈಸೂರು

14 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ರವೆಯು ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪಸಿಸ್ಟಂ ಪೇಟಂಟ್ ಲೀವರ್ ಜುವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕೆಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೋಟರ್‌ರೆಗ್ಯುಲೇಟರ್ ಲೀವರ್ ಜುವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ನೋನಿಯಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಛಾರ್ಜು ರೂ. 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೭೦ ಸಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

26

ಉತ್ತಮ ಗ್ರಂಥಗಳು.

ಶಿವಪಂಚಸ್ತವ:- ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.-ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.-ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.-ಬೆಲೆ ವಿ. ಪಿ. ಯಿಂದ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಂಡಿತ ಎಸ್. ಗರಳಪುರಿ ಇವ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ

51 ಮೈಸೂರು.

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚ ಕರ್ಪೂರಮಾತ್ರೆ— ಇದರಿಂದ ಗರ್ಭವೆಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೧ನೇ ಇಸವಿ ಜುಲೈ ತಾ॥ ೩೧ ರಿಂದ ೧೯೧೧ ನೇ ಅಗಸ್ಟ ತಾ॥ ೬ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಶ್ರಾವಣ ಶು॥ ಷಷ್ಠಿಯಿಂದ ಶ್ರಾವಣ ಶು॥ ದ್ವಾದಶಿವರಿಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕ್ಯ ತೇದಿ
31	ಸೋ	ಷ	30-31	ಹಸ್ತ	17-51	16
1	[1]ಮಂಗ	ಸ	31-15	ಚಿತ್ರ	19-7	17
2	ಬುಧ	ಅ	33-25	ಸ್ವಾ	22-42	18
3	ಗುರು	ನ	36-41	ವಿಶಾ	27-22	19
4	[2]ಶುಕ್ರ	ದ	40-53	ನೂ	32-19	20
5	[3]ಶನಿ	ಏ	45-45	ಜ್ಯೆ	39-15	21
6	ಭಾನು	ದ್ವಾ	50-55	ಮೂ	45-46	26

(1) ಮಂಗಳಗೌರಿವ್ರತಂ, (2) ಆದಿಶುಕ್ರವಾರಂ (3) ಶ್ರಾವಣಶನಿವಾರಂ.

ಮೈಸೂರ್ : ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ✶ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಅಗಸ್ಟ ತಾರೀಖು ೭ ನೇ ಸೋಮವಾರ. [ಸಂಚಿಕೆ ೩೧

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೧
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಡೆನ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೮-೦
ಸಟೀಕನಂದೀವ್ರತ	೦-೯-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರಿಗೆ ೧-೧೦-೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ಕ್ಕೆ ॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

---

೭೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

11

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪)ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮)ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಮುದ್ರಾಪಟಗಳು; ದೊರೆಯುತ್ತವೆ.

(ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ಊದಬತ್ತಿಗಳು.

22

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೧; ೨-೮-೦; ೧-೪-೦ ; ಕಸ್ತೂರಿ ಬಿಲ್ಲೆ ತೊಲಾ ೧ಕ್ಕೆ ೧-೦-೦; ಹಸಿ ಗಂಧ ತೊಲಾ ೧ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ಕ್ಕೆ ೪ ಆಣೆ; ಧೂಪದ ಸಟ್ಟಿ ೧ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

"ಅಗತ್ಯ ವಿಚಾರ."

10

ಬೆಲೆ ೪॥ ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗತ್ಯವಿಚಾರ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೭ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೭೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ :—ವೀರಭದ್ರಪ್ಪ ಅರಬೆರಳಿನ,
ಪೋಸ್ಟ್-ಬಾಗೇವಾಡಿ. ಡಿ॥ ಬೆಳಗಾಂವ.

ಉತ್ತಮ ಗ್ರಂಥಗಳು.

150

ಬಸವರಾಜವಿಜಯಂ.- ಬೆಲೆ ವಿ. ಪಿ. ಯಿಂದ ೧-೮-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.- ೧-೮-೦. ಇದು ವಚನರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ.- ೧-೩-೦. ಸವ್ಯಾಖ್ಯಾನ. ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ.- (೧ನೆಯಪ್ರಕರಣ) ೧-೩-೦. ಕರ್ಣಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರಚರಿತ್ರೆ. ಮತವಿಷಯವೂ ಪುರಾತನಕಥೆಗಳೂ ಸೇರಿವೆ.

ಸೌಂದರ ಪುರಾಣ ೧-೩-೦. ಲಲಿತವಾದ ಕವಿತೆ. ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ.

ತತ್ತ್ವಪ್ರಕಾಶಿಕಾ.- ೬ ಆಣೆ. ತಾತ್ಪರ್ಯಸಮೇತವಾಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ.

ಸ್ತುತಿಮುಕ್ತಾವಳಿ.- ೬ ಆಣೆ. ಪಾಲ್ಕುರಿಕೆಸೋಮಾರಾಧ್ಯರಿಂದ ರಚಿತವಾದ ಬಸವೇಶ್ವರಪಂಚಪ್ರಕಾರ ಗದ್ಯಗಳು. ಷಟ್ಸ್ಥಲಾಷ್ಟಾವರಣದ ರಗಳೆಗಳೂ ಇವೆ.

ಸಟೀಕ ದೀಕ್ಷಾವಿಧಿ.- ೧೨ ಆಣೆ. ಪ್ರಾಣಾಯಾಮನ್ಯಾಸಾದಿ ವಿಶೇಷವಿಷಯಗರ್ಭಿತವಾಗಿದೆ.

ರಕ್ಷಾಶತಕಂ.- (ಹರೀಶ್ವರರಚಿತಂ) ೨ ಆಣೆ.

ಶಂಕರಲಿಂಗಕೆದಂ.- ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕ ಮಂಡಳಿ, ಮೈಸೂರು.

ಸರ್ವರೂ ನೋಡಿ.

ಪದ್ಮಾವತಿ ಕಥೆ, ವೀರಶೈವಮತವಿಷಯಸಾರ, ಷಟ್ಸ್ಥಲ ಚಿಂತಾರತ್ನ-- ಇವುಗಳಲ್ಲಿ ಒಂದೊಂದಕ್ಕೆ ಅರ್ಧಾಣೆಯ ಲೇಬಲ್ ಕಳಿಸಿದರೆ ಸುಮ್ಮನೆ ಕಳಿಸಲ್ಪಡುತ್ತೆ.

ವಿಳಾಸ:— ಜೀರಿಗೆ ಬಸವಲಿಂಗಪ್ಪ,
ಅರಳೆಪೇಟೆ, ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

6 ಗುಣವಾಗದಿದ್ದರೆ ಹಣವರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕರ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ.

೭೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಸಚಿತ್ರ ಶುಕಸಪ್ತತಿಕಥೆ.

4

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕೀಕ ವ್ಯವಹಾರಜ್ಞಾನವನ್ನು ಬೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವುದು. (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಇದು ಅಲ್ಲದೆ ಇನ್ನೂ ಇತರವಿಧವಾದ ಕಥೆಗಳು ಕಾವ್ಯಗಳು ಪುರಾಣಗಳು ಮುಂತಾದ ಪುಸ್ತಕಗಳು ಸಹ ನಮ್ಮಲ್ಲಿ ದೊರಿಯುತ್ತೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ನಮ್ಮವಿಳಾಸ:— ಎಂ. ಆರ್., ಕೃಷ್ಣಸ್ವಾಮಿಶೆಟ್ಟಿ ಕಂಪನಿ ೧೫೫ ಗೋವಿಂದಪ್ಪನಾಯಕ್ ಬೀದಿ ಮದ್ರಾಸು.

ಸೌಗಂಧಿಕಾಪರಿಣಯ.

:o:

(ಕಳೆದವಾರದಶೇಷ.)

ಹಿಮ್ಮಡಿಗಳಲ್ಲಿರುವ ಸುಳಿಗಳೆರಡು ಸ್ವಾಮಿಗೆ ನಾಶಕರಗಳಾಗುವುವು. ರೋಮಾಂತಗಳಲ್ಲಿರುವ ಸುಳಿಗಳೆರಡು ಸ್ವಾಮಿಯಂ ಸಂಹರಿಸುವುವು. ಪಾರ್ಶ್ವಗಳಲ್ಲಿಯೂ, ಶಿರಸ್ಸಿನಲ್ಲಿಯೂ ಪುಟ್ಟಿರುವ ಸುಳಿಗಳೆರಡು ಕ್ಲೇಶವನ್ನುಂಟುಮಾಡುವುವು. ಎದೆಯಲ್ಲಿ ಸುಳಿಯುಳ್ಳ ಕುದುರೆಯು ಸ್ವಾಮಿಯಂ ಯಮಪಟ್ಟಣವನ್ನೈದಿಸುವುದು. ಗಂಡಸ್ಥಳದಲ್ಲಿಯೂ, ಪಾರ್ಶ್ವದಲ್ಲಿಯೂ ಪುಟ್ಟಿರುವ ಎರಡು ಸುಳಿಗಳು ಸ್ವಾಮಿಯಂ ನಾಶಗೊಳಿಸುವುವು. ಹಿರಳಿನಲ್ಲಿಯೂ, ಬೆನ್ನಿನಲ್ಲಿಯೂ ಎರಡು ಸುಳಿಗಳಿದ್ದರೆ, ಅವು ವಂಶಸಹಿತವಾಗಿ ಸ್ವಾಮಿಯಂ ಸಂಹರಿಸುವುವು. ತುಟಿಗಳಲ್ಲಿ, ನಾಭಿಸ್ಥಾನದಲ್ಲಿ, ಮೂತ್ರಕೋಶದಲ್ಲಿ, ಗುದಸ್ಥಾನದಲ್ಲಿ ಪುಟ್ಟಿರುವ ಸುಳಿಗಳೆರಡು ರೋಗಪ್ರದಗಳಾಗುವುವು. ವೃಷಣದಲ್ಲಿ ಪುಟ್ಟಿದ ಸುಳಿಗಳೆರಡು ತಮ್ಮ ಸ್ವಾಮಿಯ ಪುತ್ರರಿಗೆ ಅಲ್ಪಾಯುಸ್ಸಂ ಕೊಡುವುವು. ಗತ್ತದಲ್ಲಿ ಪುಟ್ಟಿರುವ ಸುಳಿಗಳೆರಡು ಸ್ವಾಮಿಗೆ ದ್ರೋಹವನ್ನೆಣಿಸುವುವು. ಬಾಲದ ಬುಡದಲ್ಲಿರುವ ಸುಳಿಗಳೆರಡು ಸ್ವಾಮಿಗೆ ಮೂಲನಾಶವಂ ಮಾಡುವುದು. ರೋಮಗಳಲ್ಲಿ ಪುಟ್ಟಿರುವ ಸುಳಿಗಳೂ, ಶಿರಸ್ಸಿನಲ್ಲಿ ಪುಟ್ಟಿರುವ ಸುಳಿಗಳೂ ಸ್ವಾಮಿನಾಶವಂ ಮಾಡುವುವು. ಪುಚ್ಛದಂಡದಲ್ಲಿರುವ ಸುಳಿಯು ಸ್ವಾಮಿಗೆ ಶತ್ರುಗಳಿಂದ ಪರಾಜಯವಂ ಉಂಟುಮಾಡುವುದು. ಶಿಶ್ನಸ್ಥಾನದಲ್ಲಿ, ಗುದಸ್ಥಾನದಲ್ಲಿ ಸಹಾ ಪುಟ್ಟಿರುವ ಸುಳಿಗಳು ಸ್ವಾಮಿಗೆ ಉದರರೋಗವನ್ನೀವುವು. ಅಂಡುಗಳಲ್ಲಿ ವೃಷಣಗಳಲ್ಲಿ ಪುಟ್ಟಿರುವ ಸುಳಿಗಳೆರಡು ಸ್ವಾಮಿದ್ರೋಹಕರಂಗಳಾಗುವುವು. ಕಪೋಲಮೂಲಂಗಳಲ್ಲಿರುವ ಸುಳಿಗಳೆರಡೂ, ಖುರದಲ್ಲಿರುವ ಸುಳಿಗಳೆರಡೂ ದುಃಖಪ್ರದಂಗಳಾಗುವುವು. ಇನ್ನುಮೇಲೆ ಶುಭಕರಂಗಳಾದ ಆವರ್ತನಾಮಂಗಳು ನಿರೂಪಿಸಲ್ಪಡುವುವು. ಕಟವಾಯುಗಳಲ್ಲಿ ಪುಟ್ಟಿರುವ ಆವರ್ತಗಳೆಂಬ ಸುಳಿಗಳೆರಡು ಸ್ವಾಮಿಗೆ ಜಯವೃದ್ಧಿಯಂ ಮಾಡುವುವು. ಪ್ರದಕ್ಷಿಣಾಕಾರವಾಗಿ, ಜತೆಯಾಗಿ ಲಲಾಟದಲ್ಲಿ ಪುಟ್ಟಿರುವ ಆವರ್ತಂಗಳೆರಡು ಶುಭಕರಂಗಳಾಗುವುವು. ಪ್ರದಕ್ಷಿಣಾಕಾರವಾಗಿ ಲಲಾಟದಲ್ಲಿ ಮೂರು ಸುಳಿಗಳುಳ್ಳ ಅಶ್ವದ ಸ್ವಾಮಿಯು ಆಹಿತಾಗ್ನಿಯಾಗಿ ಶತ್ರುಗಳನ್ನಿಗ್ರಹಿಸುವನು. ಲಲಾಟದಲ್ಲಿ ಪುಟ್ಟಿರುವ ಮೂರು ಸುಳಿಗಳುಳ್ಳ ಪಟ್ಟಿಯು ಊರ್ಧ್ವಮುಖವಾಗಿ ಹೋಗಿದ್ದರೆ, ಆ ಪಟ್ಟಿಯು ನಿಶ್ರೇಣಿಎಂಬ ಹೆಸರುಳ್ಳದ್ದು. ಇದರಿಂದೊಡಗೂಡಿದ ಕುದುರೆಯ ಒಡೆಯನು ಶತ್ರುವಂ ಜಯಿಸುವನು. ಯಾವ ಅಶ್ವಕ್ಕೆ ಲಲಾಟದಲ್ಲಿ ನಾಲ್ಕು ದಿಕ್ಕುಗಳಲ್ಲಿ ವ್ಯಾಪಿಸಿಕೊಂಡಿರುವ ಪ್ರದಕ್ಷಿಣಾಕಾರಗಳಾದ ಸುಳಿಗಳಿರುವವೋ ಆ ಅಶ್ವವು ಚತುರಂತವೆಂಬ ನಾಮವುಳ್ಳದ್ದಾಗಿ ಸ್ವಾಮಿಗೆ ಶತ್ರುನಾಶವಂ ಮಾಡಿ, ಐಶ್ವರ್ಯವೃದ್ಧಿಯಂ ಹೊಂದಿಸುವುದು. ಪುಷ್ಪಗಳ ಮೊಗ್ಗಿನ ಆಕಾರವುಳ್ಳವಾಗಿ ಕಡೆಗಣ್ಣಿನ ಪ್ರದೇಶದಲ್ಲಿ ಪುಟ್ಟಿರುವ ಸುಳಿಗಳೆರಡು ಜಯಪ್ರದಗಳಾಗುವುವು. ಪ್ರದಕ್ಷಿಣಾಕಾರಗಳಾಗಿ, ಪ್ರಮಾಣಯುಕ್ತಗಳಾಗಿ ಕಣ್ಣುಕಣಿಕೆಗಳಲ್ಲಿ ಪುಟ್ಟಿರುವ ಸುಳಿಯು ಶುಭಪ್ರದವಾಗುವುದು. ಕರ್ಣಮೂಲದಲ್ಲಿ ಪುಟ್ಟಿರುವ ಸುಳಿಗಳೆರಡು ವೃಷಭವೆಂಬ ನಾಮಧೇಯವುಳ್ಳವೆಂದು ತಿಳಿಯತಕ್ಕದು. ಇವೆರಡು ಸ್ವಾಮಿಗೆ ಜಯವಂ, ಧನವಂ, ಭೂಷಣವಂ ಕೂಡ ಕೊಡುವುವು. ಗೋಮಾಳದಲ್ಲಿರುವ ಸುಳಿಯು ದೇವಮಣಿ ಎನಿಸಿಕೊಂಡು ಸ್ವಾಮಿಗೆ ಶುಭವಂ ಕೊಡುವುದು. ಆ ದೇವಮಣಿ ಎಂಬ ಸುಳಿಯು ಸ್ವಾಮಿಯ ಶರೀರದಲ್ಲಿ ಪೂರ್ವದಿಂದಿರುವ ಅಶುಭಗಳಂ ಪರಿಹರಿಸಿ ಜಯವಂ, ಧನವಂ ಕೂಡ ಕೊಡುವುದು. ಯಾವ ಅಶ್ವಗಳಿಗೆ ಚಕ್ರಾಕಾರವಾಗಿ ಸುಳಿಗಳು ಕಂಠನಾಳವನ್ನಾಶ್ರಯಿಸಿರುವುವೋ, ಆ ಅಶ್ವವು ಚಕ್ರಕಿಯೆಂಬ ನಾಮವುಳ್ಳದ್ದಾಗಿ ಶತ್ರುಕ್ಷಯಂಕರವಾಗುವುದು. ಕಂಠದಲ್ಲಿರುವ ರೋಚಮಾನವೆಂಬ ಸುಳಿಯು ಸ್ವಾಮಿಗೆ ಜಯವಂ, ಮಿತ್ರರಂ, ಧನವಂ ಕೊಡುವುದು. ಯಾವ ಅಶ್ವಕ್ಕೆ ಶುಕ್ತಿಗಳೆಂಬ ಎರಡು ಸುಳಿಗಳು ವಿಸ್ತಾರವಾಗಿ ಕಂಠದಲ್ಲಿರುವುವೋ ಅದರ ಸ್ವಾಮಿಯು ಶೀಘ್ರವಾಗಿ ಶತ್ರುವಂ ಜಯಿಸಿ ಭೂಪತಿಯಾಗುವನು. ಕೇಶಾಂತ್ಯದಲ್ಲಿ ದಕ್ಷಿಣಭಾಗದೊಳ್ ಪುಟ್ಟಿರುವ ಶುಕ್ತಿಎಂಬ ಸುಳಿಯು ಮಾನಪ್ರದವಾಗುವುದು. ವಾಮಭಾಗದಲ್ಲಿ ವಿಸ್ತಾರವಾಗಿರುವ ಶುಕ್ತಿಎಂಬ ಸುಳಿಯು ಶುಭಾರೋಗ್ಯಂಗಳಂ ಕೊಡುವುದು. ಅಶ್ವಗಳಿಗೆ ವಕ್ಷಸ್ಸಿನೊಳ್ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಸುಳಿಗಳಿದ್ದರೆ, ಆ ಅಶ್ವಗಳು ತಮ್ಮ ಸ್ವಾಮಿಯು ಶತ್ರುಗಳಂ ಯುದ್ಧದಲ್ಲಿ ಜಯಿಸುವುದಾಗಿ ಸಂಪತ್ಕರಗಳಾಗುವುವು. ಯಾವ ಅಶ್ವಕ್ಕೆ ಪ್ರದಕ್ಷಿಣಾಕಾರವಾಗಿ ನಾಲ್ಕುಸುಳಿಗಳು ವಕ್ಷಸ್ಸಿನಲ್ಲಿರುವವೋ ರೋಚನಾ ಎಂಬ ಸುಳಿಯು ಕಂಠದಲ್ಲಿರುವುದೊ, ಆ ಅಶ್ವವು ಶ್ರೀವೃಕ್ಷವೆನಿಸಿಕೊಂಬುದು. ಈ ಕುದುರೆಯು ತನ್ನ ಸ್ವಾಮಿಗೆ ಇಷ್ಟಾರ್ಥಪ್ರದವಾಗುವುದು. ಯಾವ ಅಶ್ವಕ್ಕೆ ವಕ್ಷಸ್ಥಳದಲ್ಲಿ ಶುಕ್ತಿಗಳೆಂಬ ಊರ್ಧ್ವಮುಖಗಳಾಗಿರುವ ಸುಳಿಗಳಿರುವವೋ, ಆ ಅಶ್ವದಿಂ ಅರಸುಗಳು ಯುದ್ಧದಲ್ಲಿ ಶತ್ರುಗಳಂ ಜಯಿಸುವರು. ಯಾವ ಅಶ್ವಕ್ಕೆ ಭುಜಸ್ಥಾನದಲ್ಲಿ ಎರಡು ಸುಳಿಗಳು ಪುಟ್ಟಿರುವವೋ, ಆ ಅಶ್ವವು ಅಂಗಾದೀ ಎನಿಸಿಕೊಂಡು ಸ್ವಾಮಿಗೆ ಭೂಷಣಪ್ರದವಾಗುವುದು. ಮತ್ತೂ ಯಾವ ಅಶ್ವಕ್ಕೆ ಕಿಬ್ಬೊಟ್ಟೆಯ ಮೇಲುಭಾಗದಲ್ಲಿ ಎರಡು ಸುಳಿಗಳಿರುವವೋ, ಆ ಅಶ್ವವು ಮೇಖಲೀ ಎಂದು ತಿಳಿಯತಕ್ಕದ್ದು. ಈ ಅಶ್ವವು ಸ್ವಾಮಿಗೆ ಧನಧಾನ್ಯವೃದ್ಧಿಯಂ ಉಂಟುಮಾಡುವುದು. ಅಶ್ವಗಳಿಗೆ ವಕ್ಷಸ್ಸಿನಲ್ಲಿಯೂ, ಲಲಾಟಸ್ಥಾನದಲ್ಲಿಯೂ, ಬಿಲ್ವವೃಕ್ಷವು, ಸ್ವಸ್ತಿಕವು, ಕಮಲವು, ಧ್ವಜವು, ಕವಚವು, ಗದೆಯು, ಶಂಖವು, ಚಕ್ರವು, ಖಡ್ಗವು, ಧನುವು, ನಂದ್ಯಾವರ್ತವು, ಅರ್ಧಚಂದ್ರಾಕೃತಿಯು, ಪೂರ್ಣಚಂದ್ರಾಕೃತಿಯುಳ್ಳ ಸುಳಿಯು, ಉನ್ನತವಾದ ಪತಾಕವು, ವಜ್ರವು, ಮತ್ಸ್ಯವು, ಅಂಕುಶವು, ವ್ಯಜನವು, ಹೂಜಿಯು—ಇವುಗಳಿಗೆ ಸಮಾನವಾದ ಸುಳಿಗಳಿದ್ದರೆ ಅವು ಶುಭಫಲಪ್ರದಂಗಳಾಗುವುವು. ಈ ರೀತಿಯಲ್ಲಿ ಅಶ್ವಗಳ ಶರೀರದಲ್ಲಿರುವ ಸುಳಿಗಳ ಲಕ್ಷಣವೂ, ಫಲಗಳೂ ಹೇಳಲ್ಪಟ್ಟವು. ಇನ್ನು ಅಶ್ವಗಳ ವಯಸ್ಸಂ ತಿಳಿಯುವುದಕ್ಕೆ ಮುಖ್ಯಲಕ್ಷಣವಾದ ದಂತಗಳ ಉತ್ಪತ್ತಿಕ್ರಮವಂ ಪೇಳುವೆನು, ಕುದುರೆ ಮರಿಗಳು ಶುಭ್ರಗಳಾದ ಆರು ಹಲ್ಲುಗಳಿಂದೊಡಗೂಡಿ ಪುಟ್ಟುವುವು. ಆ ಅಶ್ವಶಿಶುವಿಗೆ ಕ್ರಮವಾಗಿ ಆ ಆರು ಹಲ್ಲುಗಳೇ ಎಣ್ಣೆಗೆಂಪಾದರೆ ಎರಡು ವರುಷವೆಂದು ತಿಳಿಯತಕ್ಕದ್ದು. ಈ ಆರು ಹಲ್ಲುಗಳು ಬೀಳುವಕಾಲದಲ್ಲಿ ಮೂರು ವರುಷವೆಂದು, ಕೆಲವು ಹುಟ್ಟಿ ಕೆಲವು ಹುಟ್ಟದೆ ಇರುವ ಕಾಲದಲ್ಲಿ ನಾಲ್ಕು ವರುಷವೆಂದು, ಆರು ಹಲ್ಲುಗಳು ಸಮಗ್ರವಾಗಿ ಹುಟ್ಟಿದರೆ ಐದು ವರುಷವೆಂದು ತಿಳಿಯತಕ್ಕದ್ದು. ಈ ಕ್ರಮವಾಗಿ ಮೂರು ಮೂರು ವರುಷಕ್ಕೆ ಒಂದೊಂದು ಚಿಹ್ನೆಯು ಹುಟ್ಟುವುದು. ಕಾಳಿಕಾ, ಹರಿಣಿ, ಶುಕ್ಲಾ, ಕಾಚಾ, ಮಾಕ್ಷಿಕಿ, ಶಂಖಾ, ಉಲೂಖಲಾ, ಚಲನ, ಅವಪಾತ ಎಂಬ ಈ ಚಿಹ್ನೆಗಳು ಆರನೇಯ ವರುಷದಿಂದ ಮೂವತ್ತೆರಡು ವರುಷ ಪರ್ಯಂತವು ಮೂರು ಮೂರು ವರುಷಕ್ಕೆ ಒಂದೊಂದಾಗಿ ದಂತಗಳಲ್ಲಿ ಕಾಣಲ್ಪಡುವುವು. ಈ ಚಿಹ್ನೆಗಳಲ್ಲಿ ಆರನೇ ವರುಷದಿಂದ ಎಂಟು ವರುಷದವರಿಗು ಕಾಳಿಕಾ ಎಂಬ ಚಿಹ್ನೆಯು ಕಪ್ಪಾಗಿ, ಅಡ್ಡವಾಗಿ ರೇಖಾಕಾರವಾಗಿರುವುದು. ಒಂಭತ್ತು ವರುಷದಿಂದ ಹನ್ನೊಂದುವರುಷದ ವರಿಗೂ ಹರಿಣೀ ಎಂಬ ಚಿಹ್ನೆಯು ಅಡ್ಡವಾಗಿ, ಯವಾಕಾರವಾಗಿ ಹೊಂಬಣ್ಣನಾಗಿರುವುದು. ಹನ್ನೆರಡು ವರುಷದಿಂದ ಹದಿನಾಲ್ಕು ವರುಷದವರಿಗೂ ಶುಕ್ಲಾ ಎಂಬ ಚಿಹ್ನೆಯು ಹಸುವಿನ ಹಾಲಿನಂತೆ ವರ್ಣವುಳ್ಳದ್ದಾಗಿ, ಯವಾಕಾರ ಪ್ರಮಾಣವುಳ್ಳದ್ದಾಗಿ ಇರುವುದು. ಸಶೇಷ.

ಸಿಲೋನಿನಲ್ಲಿ ಈ ದೇಶದ ಕೂಲಿಗಳ ಗೋಳಾಟ.

ಕಳೆದ ಜುಲೈತಿಂಗಳ ತಾ॥ ೧೯ ರಲ್ಲಿ ಈ ತಿಪಟೂರು ಕೆರೆಯಬಳಿ ಬಹಳ ಕೃಶರಾಗಿದ್ದ ಹೆಂಗುಸರೂ, ಗಂಡುಸರೂ, ಮಕ್ಕಳೂ ಸೇರಿ ೧೭ ಜನಗಳುಳ್ಳ ಗುಂಪೊಂದು ಬಂದಿಳಿದಿತ್ತು. ಈ ಜನರು ಕ್ಷಯರೋಗಪೀಡಿತರಂತೆ ಕಾಣಿಸಿಕೊಳ್ಳುತ್ತಿರಲು, ಆಶ್ಚರ್ಯಪಟ್ಟ ನಾನು ಮತ್ತೂ ಇಲ್ಲಿಯ ವರ್ತಕ ಮಹನೀಯರು ಅವರ ಬಳಿಗೆ ಹೋಗಿ ವಿಚಾರಿಸಿದ್ದರಲ್ಲಿ, ಅವರು ಸಿಲೋನಿಗೆ ಹೋಗಿ ಬಂದವರೆಂದು ತಿಳಿಯಬಂತು. ಅಲ್ಲಿನ ಸಮಸ್ತ ವಿಷಯಗಳನ್ನು ಕೇಳಿ ತಿಳಿದು, ಸಿಲೋನಿಗೆ ಹೋಗಿ ಜೀವನವನ್ನು ಸಂಪಾದಿಸಬೇಕೆಂದಿರುವ ಬಡಜನರು ತಿಳಿದು ಎಚ್ಚರದಿಂದಿರಲೆಂಬ ಅಭಿಲಾಷೆಯಿಂದ ಈ ಕೆಳಗೆ ಸಂಕ್ಷೇಪವಾಗಿ ಬರೆದಿರುತ್ತೇನೆ. ಆದಕಾರಣ ಈ ಲೇಖನವನ್ನು ತಾವು ದಯವಿಟ್ಟು ತಮ್ಮ ಘನವಾದ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥನೆ.

ಈ ಜನರ ಸ್ಥಳವಾದ ದಾವಣಗೆರೆ ಪ್ರಾಂತಕ್ಕೆ ಈಗ್ಗೆ ೨ ವರ್ಷಗಳ ಹಿಂದೆ ಸಿಲೋನ್ ಲೇಬರ್ ಕಮಿಷನರವರ ಕಡೆಯಿಂದ ಒಬ್ಬ ಮೇಸ್ತ್ರಿಯು ಬಂದು, ಸಿಲೋನಿನಲ್ಲಿ ದಿನವೊಂದಕ್ಕೆ ಪ್ರತಿಯೊಬ್ಬ ಗಂಡುಸಿಗೆ ರೂ. ೧-೮-೦ ಯಂತೆಯೂ, ಹೆಂಗುಸಿಗೆ ರೂ. ೧ ರಂತೆಯೂ ಕೂಲಿಯನ್ನು ಕೊಡಿಸುವುದಲ್ಲದೆ, ಇಲ್ಲಿಂದ ಅಲ್ಲಿಗೆ ದಾರಿಯ ಮತ್ತೂ ಊಟದ ವೆಚ್ಚವನ್ನು ಸಹಾ ಕೊಡಿಸುತ್ತೇನೆಂದು ಮೊದಲಾದ ಆಶೆಯ ಮಾತುಗಳಿಂದ ಮರುಳುಗೊಳಿಸಿ, ಸುಮಾರು ೩೦ ಮಂದಿಗಳಿಗೆ ಒಬ್ಬೊಬ್ಬನಿಗೆ ೨ ರೂ. ಯಿಂದ ೫ ರೂ. ವರೆಗೆ ಮುಂಗಡವಾಗಿ ಹಣವನ್ನು ಕೊಟ್ಟು ಕರೆದುಕೊಂಡು ಹೋಗಿ ತಿರುಚನಾಪಲ್ಲಿಯಲ್ಲಿರುವ ಸಿಲೋನ್ ಲೇಬರ್ ಕಮಿಷನರವರ ವಶ ಮಾಡಿದನು. ಅವರು ಅಲ್ಲಿಂದ ತುತ್ತುಕುಡಿಮಾರ್ಗವಾಗಿ ಹಡಗಿನ ಮೇಲೆ ಕೊಲಂಬೋಕ್ಕೆ ಸಾಗಿಸಿ, ಅಲ್ಲಿಂದ ರೈಲ್ ಮಾರ್ಗವಾಗಿ ಸಿಲೋನಿನಲ್ಲಿ ಗೊತ್ತಾದ ಸ್ಥಳಕ್ಕೆ ಕರೆದುಕೊಂಡು ಹೋಗಿಬಿಟ್ಟರು. ಈ ಜನಗಳಿಂದ ಅಲ್ಲಿ ಶಕ್ತಿಗೆ ಮೀರಿದಷ್ಟು ಕೆಲಸಮಾಡಿಸುತ್ತಾ ದಿನವೊಂದಕ್ಕೆ ಪ್ರತಿಯೊಬ್ಬನಿಗೂ ಆಹಾರಕ್ಕಾಗಿ ೩ ಪಾವು ಅಕ್ಕಿಯನ್ನೂ, ೧ ದುಡ್ಡನ್ನೂ ಮಾತ್ರ ಕೊಡುತ್ತಿದ್ದರಲ್ಲದೆ ಇವರಿಗೆ ಯಾವ ವಿಧವಾದ ಕೂಲಿಯನ್ನೂ ಕೊಡುತ್ತಿರಲಿಲ್ಲವಂತೆ. ಒಂದೇಸಾರಿ (ಬಟ್ಟಗೆ) ಕೂಲಿ ಸಿಕ್ಕಬಹುದೆಂಬ ಆಶೆಯಿಂದ ಈ ಜನರು ಕೆಲಸಮಾಡುತ್ತಾ ಒಂದು ವರ್ಷಕಾಲ ಕಳೆದನಂತರ ಕೂಲಿ ಕೇಳುವಲ್ಲಿ—"ಓಹೋ! ಇನ್ನೂ ನಿಮಗೆ ಗೊತ್ತಿಲ್ಲವೋ? ನಿಮ್ಮ ಸ್ಥಳದಿಂದ ಇಲ್ಲಿಗೆ ಬಂದುದಕ್ಕೆ ಖರ್ಚಾಗಿರುವ ಮೊಬಲಗಿನಲ್ಲಿ ಅರ್ಧವೂ ಪೂರ್ತಿಯಾಗಿ ತೀರಲಿಲ್ಲ. ಅಲ್ಲದೆ ನಿಮ್ಮನ್ನು ಕರೆದುಕೊಂಡು ಬಂದ ಮೇಸ್ತ್ರಿಗಳು ನಿಮ್ಮಿಂದ ತೆಗೆದುಕೊಂಡಿರುವ ಸಾವಿರಾರು ರೂ. ಗಳನ್ನು, ನಿಮ್ಮಿಂದ ಕೆಲಸಮಾಡಿಸಿ, ಉತ್ತಾರಪಾಕಿಕೊಳ್ಳಬೇಕೆಂದು 'ನಮ್ಮ ವಶಕ್ಕೆ ನಿಮ್ಮನ್ನು ಬಿಟ್ಟುಹೋಗಿರುತ್ತಾರೆ' ಕೆಲಸಮಾಡಿ ತೀರಿಸಿದನಂತರ ಕೂಲಿ ದೊರೆಯುತ್ತೆ." ಎಂದು ಹೇಳುತ್ತಾ ಇವರನ್ನು ತೋಟದ ಹೊರಗೆ ಹೋಗಲಿಕ್ಕಿಲ್ಲದಂತೆ ಇವರ ಮೇಲೆ ಕಾವಲನ್ನು ಇಟ್ಟಿದ್ದರಂತೆ. ಅಲ್ಲಿನ ಆಹಾರವು ಇವರಿಗೆ ಸರಿಹೋಗದೆಯೂ ಮತ್ತೂ ಅಲ್ಲಿನ ಹವಾ ಇವರಿಗೆ ಒಗ್ಗದೆಯೂ ಇವರಲ್ಲಿ ೩೫-೪೦ ಜನಗಳು ಇಲ್ಲಿಂದ ಹೋದ ಸ್ವಲ್ಪ ದಿವಸಗಳಲ್ಲಿಯೇ ಸಿಲೋನ್ ಮೃತ್ಯುವಿನ ಪಾಲಾದರಂತೆ. ಇದರಿಂದ ತೋಟಕ್ಕೆ ಬಳ್ಳೇ ಗೊಬ್ಬರವಾಯಿತೆಂದು ತೋಟದ ಪುಣ್ಯಾತ್ಮರು ಸಮಾಧಾನ ಹೇಳುತ್ತಿದ್ದರಂತೆ. ಹೀಗೆ ಎರಡುವರ್ಷಗಳ ವರೆಗೂ ಕಷ್ಟವನ್ನು ಅನುಭವಿಸುತ್ತಾ ದಿಕ್ಕುತೋರದವರಾಗಿದ್ದರಂತೆ. ಅಯ್ಯೋ! ಅಲ್ಲಿನ ಮಹನೀಯರು ತಮ್ಮ ಸ್ವಪ್ರಯೋಜನಕ್ಕಾಗಿ ಇವರಿಗೆ ಇಷ್ಟೊಂದು ಕಷ್ಟವನ್ನುಂಟುಮಾಡಿದುದನ್ನೋಡಿದರೆ, ಅವರು ಎಷ್ಟರಮಟ್ಟಿನ ಮೃದುಮನಸ್ಕರೆಂದು ಪ್ರತಿಯೊಬ್ಬ ವಾಚಕರಿಗೂ ಗೊತ್ತಾಗದಿರಲಾರದು. ಪಾಪ! ಇವರ ತಪ್ಪೇನು? ಧನದಾಸೆಯು ಬಹುಕೆಟ್ಟದು. ಬಡತನವೆಂಬುದು ದುಡ್ಡಿನಾಸೆಗೆ ಜಾಗ್ರತೆ ವಶರನ್ನಾಗಿ ಮಾಡಿ, ಇಂಥ ಅನ್ಯದೇಶದ ಜನಗಳ ಮಾತಿಗೆ ಮರುಳಾಗಿ ತಕ್ಕ ಶಿಕ್ಷೆಯನ್ನು ಅನುಭವಿಸುವಂತೆ ಮಾಡುವುದು. ಈ ಮೇಲ್ಕಂಡ ಕೂಲಿಗಳು ಕೊನೆಗೆ ಆಶಾಭಂಗರಾಗಿ ಇನ್ನು ಸ್ವಲ್ಪ ದಿನಗಳಿದ್ದರೆ ನಾವು ಸತ್ತುಹೋಗುವುದೇ ಸರಿಯೆಂದು ಊಹಿಸಿ, ಉಪಾಯಾಂತರದಿಂದ ಒಬ್ಬ ದೊಡ್ಡಮನುಷ್ಯರ ಸಹಾಯವನ್ನು ಹೊಂದಿ ಕೊಲಂಬೋಕ್ಕೆ ತಪ್ಪಿಸಿಕೊಂಡು ಬಂದು, ಅಲ್ಲಿ ದಯಾಳುವಾದ ಒಬ್ಬ ಕಂಟ್ರಾಕ್ಟರಲ್ಲಿ ೩ ತಿಂಗಳಕಾಲ ಕೆಲಸಮಾಡಿ ತಮ್ಮ ಸಮಾಚಾರವನ್ನೆಲ್ಲಾ ಅವರಿಗೆ ತಿಳಿಸಿ, ಅವರ ಕರುಣಕ್ಕೆ ಪಾತ್ರರಾಗಿ ಅವರ ಸಹಾಯದಿಂದ ಹಡಗು ಹತ್ತಿ ತೂತ್ತುಕ್ಕುಡಿಯಲ್ಲಿ ಇಳಿದು ಅಲ್ಲಿಂದ ದಾರಿಯುದ್ದಕ್ಕೂ ತಿರುಪೆಯನ್ನೆತ್ತಿ ಜೀವಿಸುತ್ತಾ ೩ ತಿಂಗಳಿಗೆ ತಿಪ್ಟೂರನ್ನು ಸೇರಿರುತ್ತಾರೆ. ಅನಂತರ ಇಲ್ಲಿಯ ವರ್ತಕ ಮಹನೀಯರ ಸಹಾಯದಿಂದ ಈ ಊರು ಮಾರ್ಗವಾಗಿ ದಾವಣಗೆರೆಗೆ ಹೋದರು. ಬಹುಶಃ ಅವರು ಸ್ಥಳ ತಲಪುದರೊಳಗಾಗಿ ಅವರ ಪೈಕಿ ೬-೫ ಜನಗಳು ಸತ್ತುಹೋಗುವರೆಂಬುವಷ್ಟು ಹೀನಸ್ಥಿತಿಯಲ್ಲಿದ್ದರು. ಇಲ್ಲಿಂದ ಹೋದ ೩೦ ಜನರಲ್ಲಿ ೧೭ ಜನಗಳು ಮಾತ್ರ ತೂರಾಡುತ್ತಾ ಪ್ರಾಣಮಾತ್ರವನ್ನುಳಿಸಿಕೊಂಡು ಹಿಂತಿರುಗಿ ಬಂದಂತಾಯ್ತು. ಇಲ್ಲಿನ ವರ್ತಕ ಮಹನೀಯರು ಇವರಿಗೆ ಸಹಾಯಮಾಡಿದ್ದು ಮಾತ್ರವೇ ಅಲ್ಲದೆ ಈ ಊರಲ್ಲೂ ಸದರಿ ಆಫೀಸು ಸ್ಥಾಪಿಸಿರುವ ಸಿಲೋನ್ ಲೇಬರ್ ಕಮಿಷನರವರ ಕಡೆ ಏಜಂಟರಾಗಿ ಇಲ್ಲಿ ಜನಗಳನ್ನು ಕೂಡಿಸಲಿಕ್ಕೆ ಬಂದಿರುವ ಯೂರೋಪಿಯನ್ ಸಾಹೇಬರಿಗೆ ಈ ಕೂಲಿಗಳ ಪರಿಚಯ ಮಾಡಿಸಿ, ಇವರಿಗೆ ಉಂಟಾಗಿದ್ದ ತೊಂದರೆಗಳನ್ನು ತಿಳಿಸಿದ್ದರಮೇಲೆ, ಅವರು ಮೇಲಕ್ಕೆ ಬರೆದು ವಿಚಾರಿಸುತ್ತೇವೆಂದು ಹೇಳಿ ಅವರುಗಳ ಫೋಟೋ ತೆಗೆದುಕೊಂಡು ಸಮಾಧಾನಪಡಿಸಿದರೆಂದು ಕೇಳುತ್ತೇನೆ.

ಈ ಊರಲ್ಲಿಯೂ ಅಕ್ಕಿ ಪೇಟೆಯಲ್ಲಿ ಸಿಲೋನ್ ಕಂಪೆನಿಯವರು ಒಂದು ಮನೆ ಬಾಡಿಗೆಗೆ ಪಡೆದು 'ಸಿಲೋನ್ ಲೇಬರ್ ಕಮಿಷನ್' ಎಂದು ಹೊರಗಡೆ ಬೋರ್ಡು ಹಾಕಿ ತಿಳುವಳಿಕೆಯಿಲ್ಲದ ಜನಗಳಿಗೆ ತಕ್ಕ ಮೇಸ್ತ್ರಿಗಳಿಂದ ಬೋಧಿಸುತ್ತಾ ಜನಗಳನ್ನು ಕೂಡಿಸುತ್ತಲಿರುವರು. ಇನ್ನಾದರೂ ನಮ್ಮ ಜನರು ಈ ಜನರ ಮೋಸದ ಮಾತಿಗೆ ಮರುಳಾಗದೆ ಜಾಗರೂಕರಾಗಿರತಕ್ಕದು ಅವರ ಕರ್ತವ್ಯವಾಗಿರುತ್ತದೆ. ನಮ್ಮ ದೇಶದ ಜನರಿಗೆ ಅಲ್ಲಿನ ವಾಯುಗುಣವು ಅನುಕೂಲಿಸುವುದಿಲ್ಲವೆಂಬುದು ಮೇಲ್ಕಂಡ ಕೂಲಿ ಜನರ ಸ್ಥಿತಿಯನ್ನು ನೋಡಿದವರಿಗೆ ಗೊತ್ತಾಗಿರಬಹುದು. ಇದನ್ನೆಲ್ಲ ನೋಡಿದರೆ ಹಿಂದೆ ಗುಲಾಮರನ್ನು ಮಾರುತ್ತಿದ್ದ ಪದ್ಧತಿಯು ಜ್ಞಾಪಕಕ್ಕೆ ಬರುತ್ತದೆ. ದಯಾಳುಗಳಾದ ಆಂಗ್ಲೇಯರ ರಾಜ್ಯಭಾರವು ನೆಲೆಗೊಂಡಮೇಲೆ ಈ ಪದ್ಧತಿಯು ನಿಂತುಹೋಗಿರುವುದು. ಆದರೆ ಈಚೆಗೆ ಈ ಸಿಲೋನ್ ವಿಷಯವನ್ನು ಕೇಳಿದರೆ, ಇದೊಂದು ವಿಧವಾದ ಗುಲಾಮರ ಪದ್ಧತಿಯು ಆಚರಣೆಗೆ ಬಂದಿರುವಹಾಗೆ ತೋರುತ್ತದೆ. ಅದು ಹೇಗಾದರೂ ಇರಲಿ. ನಮ್ಮ ಇಂಡಿಯಾ ಸರ್ಕಾರದವರು ಮತ್ತೂ ನಮ್ಮ ಸರ್ಕಾರದವರು ಸಹ ನಮ್ಮ ದೇಶದಿಂದ ಕೂಲಿಗಳನ್ನು ಅನ್ಯದೇಶಕ್ಕೆ ತೆಗೆದುಕೊಂಡು ಹೋಗದಂತೆ ಏರ್ಪಡಿಸಬೇಕಲ್ಲದೆ, ನಮ್ಮ ಘನವನ್ನು ಹೊಂದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಬಡಜನಗಳ ವಿಷಯದಲ್ಲಿ ಪ್ರೇಮ ಅಭಿಮಾನವಿಟ್ಟು ಮೈಸೂರ್ ದೇಶದ ಕೂಲಿಗಳ ವಿಷಯದಲ್ಲಿ ಸದರಿ ಏರ್ಪಾಟನ್ನು ಮಾಡಿಸಿಕೊಡಬೇಕಾಗಿ ಕೋರುವುದಲ್ಲದೆ, ಈ ಸಾರಿ ನಡೆಯುವ ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು ಮತ್ತೂ ಸಂಪದಭಿವೃದ್ಧಿ ಸಭೆಯ ಮಹಾಜನಗಳು ಸಹ ಈ ವಿಷಯದಲ್ಲಿ ಪ್ರಜೆಗಳ ಪರವಾಗಿ ಚರ್ಚಿಸಿ, ಸಿಲೋನಿನವರು ಮೈಸೂರು ಸೀಮೆಯಿಂದ ಜನರನ್ನು ಕೆಲಸಕ್ಕಾಗಿ ಕರೆದುಕೊಂಡು ಹೋಗದಂತೆ ಮಾಡಿಸುವ ಭಾರವನ್ನು ಖಂಡಿತವಾಗಿಯೂ ವಹಿಸಬೇಕೆಂದು ಈ ಮೂಲಕ ಪ್ರಾರ್ಥಿಸುವ ಬಡಕೂಲಿಗಳ ಹಿತಚಿಂತಕ

ಬಿ. ಬೋರೇಗೌಡ,
ಸ್ಕೂಲ್ಮಾಸ್ಟರ್, ತಿಪಟೂರು.

ವ್ಯವಸಾಯಕವಿಷಯಗಳು.

ಅಹಮದಾಬಾದ್, ಸತಾರಾ ಡಿಸ್ಟ್ರಿಕ್ಟಿನಲ್ಲಿರುವ ಕರಡ್ ಮತ್ತು ಬೆಲ್ಗಾಂನಲ್ಲಿ ದೀಪದ ಕಡ್ಡಿಯ ಕೈಗಾರಿಕೆಯು ದಿನೇದಿನೇ ಬಹಳ ಅಭಿವೃದ್ಧಿಯಾಗುತ್ತಿದೆ. ಬೆಲ್ಗಾಂನಲ್ಲಿ ಬಡಬಗ್ಗರು ವಿಶೇಷವಾಗಿ ಕೊಳ್ಳತಕ್ಕ ಗಂಧಕದ ದೀಪದ ಕಡ್ಡಿಗಳನ್ನು ಬಹಳವಾಗಿ ತಯಾರು ಮಾಡುವದಕ್ಕಾಗಿ ಬಂಡವಾಳವನ್ನು ಜಾಸ್ತಿ ಮಾಡುತ್ತಲೂ, ಮತ್ತು ಕಾರ್ಖಾನೆಯ ಕಟ್ಟಡವನ್ನು ಬತಾಯಿಸುತ್ತಲೂ ಇರುವರು.

ಕಳೆದ ಹತ್ತುವರ್ಷಗಳ ಕಾಲದಲ್ಲಿ ಆಹಾರ ಪದಾರ್ಥಗಳ ಖರೀದಿಯು ಶೇಕಡ ೩೧ ರಷ್ಟು ಹೆಚ್ಚಿದೆ; ಆದರೆ ಬೆಲ್ಲದ ಖರೀದಿಯು ಶೇಕಡ ೭ ರಷ್ಟು ಮಾತ್ರ ಏರಿದೆ. ಹೊರದೇಶಗಳಿಂದ ಬರತಕ್ಕ ಸಕ್ಕರೆ ಖರೀದಿಯಾದರೋ ಶೇಕಡ ೨೫ ರಷ್ಟು ಕಡಿಮೆಯಾಗಿದೆ. ಇದನ್ನು ನೋಡಿದರೆ ಬೆಲ್ಲದ ಧಾರಣೆಯು ಇತರ ಆಹಾರ ಜಿನಸುಗಳ ಧಾರಣೆಯಂತೆ ಏರದೆ ಇರುವದಕ್ಕೂ ಮತ್ತು ಇಲ್ಲಿನ ಸಕ್ಕರೆಯ ಕೈಗಾರಿಕೆಯು ಅಭಿವೃದ್ಧಿ ಯಾಗದಿರುವದಕ್ಕೂ ಹೊರದೇಶದ ಸಕ್ಕರೆಯ ಕಡಿಮೆ ಖರೀದಿಯೇ ಕಾರಣವೆಂದು ಧಾರಾಳವಾಗಿ ಹೇಳಬಹುದು.

ಕರಿ ಇರುವೆಗಳು ಹಣ್ಣಿನ ಗಿಡಗಳ ಬೇರಿನ ಸುತ್ತಲೂ ಗೂಡು ಕಟ್ಟಿಕೊಂಡು ಮಣ್ಣನ್ನೆಲ್ಲಾ ಮೇಲಕ್ಕೆ ತೆಗೆದುಹಾಕುವದರಿಂದ ದೊಡ್ಡ ಗಾಳಿ ಮಳೆ ಸಂಗ್ರಹದಲ್ಲಿ ಗಿಡಗಳು ಬುಡ ಸಹಿತ ಬಿದ್ದುಹೋಗುವವು. ಆದ್ದರಿಂದ ಇವುಗಳು ಗಿಡಗಳ ಬೇರಿನ ಹತ್ತಿರದಲ್ಲಿ ವಾಸಮಾಡಲು ಅವಕಾಶ ಕೊಡಬಾರದು. ಅವುಗಳನ್ನು ಈ ಕೆಳಗೆ ನಮೂದಿಸುವ ಯಾವದಾದರೊಂದು ರೀತಿಯಲ್ಲಿ ನಾಶಮಾಡಬಹುದು.

(೧) ಬೇಸಿಗೆಯಲ್ಲಿ ಸುಣ್ಣದ ಹುಡಿಯನ್ನು ಮರಗಳ ಬೇರಿನ ಸುತ್ತಲೂ ಚನ್ನಾಗಿ ಎರಚಿದರೆ ಇರುವೆಗಳು ಆ ಸ್ಥಳವನ್ನು ಬಿಟ್ಟು ಹೋಗುವವು. (೨) ಇರುವೆಗಳು ಸಂಚಾರ ಮಾಡುವ ದಾರಿಯಲ್ಲಿ, ಒಂದು ಭಾಗ ರಸಕರ್ಪೂರದ ಜತೆಗೆ ೧೦ ಭಾಗ ನುಣ್ಣಗಿರುವ ಬಿಳಿ ಸಕ್ಕರೆಯನ್ನು ಸೇರಿಸಿ, ಗುಡ್ಡೆ ಗುಡ್ಡೆಯಾಗಿ ಹಾಕಿದರೆ ಇರುವೆಗಳು ಇವುಗಳನ್ನು ತಿಂದು ಸಾಯುವವು. (೩) ಒಂದು ಭಾಗ ಸೀಮೆಯೆಣ್ಣೆಗೆ ಅರಭಾಗ ಸಾಬೂನು ಕದಡಿದ ನೀರನ್ನು ಬೆರಸಿ ಇರುವೆ ಗೂಡುಗಳಿಗೆ ಸುರಿದರೆ ಕೆಲವು ದಿನಗಳಲ್ಲಿ ಇರುವೆಗಳೆಲ್ಲಾ ಓಡಿಹೋಗುವವು. (೪) ಅನ್ನ ಭೇದಿಯನ್ನು ನೀರಿನಲ್ಲಿ ಹೇರಳವಾಗಿ ಹಾಕಿ ಕರಗಿಸಿ ಆ ನೀರನ್ನು ಇರುವೆಗಳ ಗೂಡಿಗೆ ಸುರಿದರೆ ಇರುವೆಗಳೆಲ್ಲಾ ಸಾಯುವವು.

ಕಬ್ಬನ್ನು ಕೊರೆಯುತಕ್ಕ ಹುಳುಗಳು.

ಕಬ್ಬಿನ ಪೈರು ಇನ್ನೂ ಚಿಕ್ಕದಾಗಿರುವಾಗ್ಗೆಯೇ ಅಲ್ಲಲ್ಲಿ ಒಂದೊಂದು ಪೈರಿನ ಮಧ್ಯಭಾಗದ ಸುಳಿಯು ಬತ್ತಿಹೋಗಿರುವದನ್ನು ಅನೇಕರು ನೋಡಿರಬಹುದು. ಇದನ್ನು ಸುಳಿರೋಗವೆಂದು ಕರೆಯುವರು. ಪೈರಿಗೆ ಇದರಿಂದ ಬಹಳ ನಷ್ಟವಾಗುವುದು. ದಕ್ಷಿಣ ಇಂಡಿಯಾದಲ್ಲಿ ಎರಡು ಜಾತಿಯ ಹುಳುಗಳಿಂದ ಈ ರೀತಿಯಾಗುವದು. ಇವೆರಡು ಜಾತಿಯ ಹುಳುಗಳಲ್ಲಿ ಒಂದು ಬಹಳ ನಷ್ಟವನ್ನುಂಟುಮಾಡುತ್ತಿರುವುದು. ಇದು ಎಳೆದಾದ ಕಬ್ಬಿನ ಸುಳಿ ಮತ್ತು ಜಲ್ಲಿಗಳಲ್ಲೂ, ಜೋಳ ಮತ್ತು ಮುಸುಕಿನಜೋಳದ ದಂಟಿನಲ್ಲೂ ಸೇರಿಕೊಂಡು ವಾಸಮಾಡುತ್ತದೆ. ಇನ್ನೊಂದು ಜಾತಿಯ ಹುಳುವು ಬಿಳುಪಾಗಿರುವದು. ಇದು ದೊಡ್ಡದಾಗಿ ಬಲಿತಿರತಕ್ಕ ಕಬ್ಬಿನ ಸುಳಿಯನ್ನೂ ಕೂಡ ನಾಶಮಾಡುವದು. ಚಿಟ್ಟೆಗಳು ಕಬ್ಬಿನ ಗರಿಗಳ ಮೇಲೆ ಸಾಲಾಗಿ ಅಥವಾ ಗುಂಪುಗುಂಪಾಗಿ ಮೊಟ್ಟೆಗಳನ್ನು ಇಡುವವು. ಈ ಮೊಟ್ಟೆಗಳು ಒಡೆದು ಕಂಬಳಿ ಹುಳುಗಳ ಆಕಾರವುಳ್ಳ ಹುಳುಗಳು ಹೊರಗೆ ಬರುವವು. ಈ ಹುಳುಗಳು ಅಲ್ಲಿಂದ ಎಳೆದಾದ ಸುಳಿಗಳಲ್ಲಿ ತೂತು ಕೊರೆದುಕೊಂಡು ಒಳಗೆ ಸೇರಿ ಮೃದುವಾದ ಗರಿಗಳನ್ನೆಲ್ಲಾ ತಿಂದು ಬಿಡುವವು. ಇದರಿಂದ ಮಧ್ಯದ ಗರಿಗಳು ಬಾಡಿ ಕ್ರಮೇಣ ಒಣಗಿ ಹೋಗುವವು. ತೊಗಟೆಯಲ್ಲಿ ಹೊಟ್ಟೆತುಂಬಾ ಆಹಾರವನ್ನು ತಿಂದನಂತರ ಸುಮಾರು ಹತ್ತುದಿನಗಳೊಳಗಾಗಿ ಇವುಗಳು ರೆಕ್ಕೆಯುಳ್ಳ ಚಿಟ್ಟೆಗಳಾಗಿ ಹೊರಗೆ ಹಾರುತ್ತವೆ. ಸ್ವಲ್ಪ ಕಾಲದಲ್ಲಿ ಈ ಚಿಟ್ಟೆಗಳು ಮೊಟ್ಟೆ ಯಿಡುವದಕ್ಕೆ ಆರಂಭಮಾಡುವವು.

ನಿವಾರಣೋಪಾಯಗಳು:— (೧) ಸುಳಿಯು ಒಣಗಿ ಹೋಗುವವರಿವಿಗೂ ಹುಳುವು ಪೈರನ್ನು ಮುತ್ತಿಗುವದು ಗೊತ್ತಾಗುವುದಿಲ್ಲ. ಆಗ್ಗೆ ಇವುಗಳನ್ನು ನಾಶಮಾಡುವದಕ್ಕೆ ಆಗುವದೇಇಲ್ಲ. ಆದರೆ ರೋಗವು ಹಬ್ಬುವದಕ್ಕೆ ಆಸ್ಪದ ಕೊಡದಂತೆ ಮಾಡಬಹುದು. ಹುಳುಗಳು ಒಣಗಿಹೋದ ಸುಳಿಯಲ್ಲಿಯೇ ಇದ್ದರೆ ಸ್ವಲ್ಪ ಕಾಲದ ಮೇಲೆ ಇವು ಚಿಟ್ಟೆಗಳಾಗಿ ಹೊರಗೆಬಂದು ಹೊಸ ಮೊಟ್ಟೆಗಳನ್ನು ಹಾಕುವದರಿಂದ ಇದರಿಂದ ಹುಟ್ಟತಕ್ಕ ಹುಳುಗಳು ಉಳಿದ ಹೊಸ ಸುಳಿಗಳನ್ನು ನಾಶಮಾಡಲು ಅವಕಾಶವಾಗುವದು. ಆದ್ದರಿಂದ ರೋಗತಗಲಿದ ಜಮೀನುಗಳಲ್ಲಿ ಒಣಗಿಹೋದ ಸುಳಿಗಳನ್ನೆಲ್ಲಾ ಆರಿಸಿ ಹುಳುಗಳು ಜತೆಯಲ್ಲಿರುವಂತೆ ಕತ್ತರಿಸಿ ಸುಟ್ಟುಬಿಟ್ಟರೆ ಇವುಗಳಿಂದ ಉಂಟಾಗತಕ್ಕ ನಷ್ಟವು ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗುವದು.

(೨) ಮುಸುಕಿನ ಜೋಳವೂ ಮತ್ತು ಜೋಳವೂ ಕಬ್ಬಿಗಿಂತ ಜಾಗ್ರತೆಯಾಗಿ ಬೆಳೆಯುವದರಿಂದ ಈ ಹುಳುಗಳು ಕಬ್ಬಿಗಿಂತಲೂ ಹೆಚ್ಚಾಗಿ ಜೋಳ ಮತ್ತು ಮುಸುಕಿನಜೋಳದ ಪೈರುಗಳನ್ನು ಮುತ್ತುವವು. ಆದ್ದರಿಂದ ಕಬ್ಬನ್ನು ನೆಡುವುದಕ್ಕೆ ಸ್ವಲ್ಪ ದಿನಗಳಿಗೆ ಮುಂಚೆ ಕೆಲವು ಸಾಲು ಮೆಕ್ಕೆ ಜೋಳವನ್ನು ನೆಟ್ಟರೆ ಕಬ್ಬುಗರಿ ಹೊರಡುವ ಹೊತ್ತಿಗೆ ಜೋಳವು ದೊಡ್ಡದಾಗಿ ಬೆಳೆದಿರುವದು. ಚಿಟ್ಟೆಗಳು ಕಬ್ಬನ್ನು ಬಿಟ್ಟು ಜೋಳದ ಪೈರಿನಮೇಲೆ ಮೊದಲು ಮೊಟ್ಟೆಗಳನ್ನಿಡುವವು. ಇದರಿಂದ ಕಬ್ಬಿಗೆ ತೊಂದರೆ ತಪ್ಪುವದು. ಕಬ್ಬನ್ನು ನೆಟ್ಟ ಸುಮಾರು ಆರುವಾರಗಳ ಹೊತ್ತಿಗೆ ಜೋಳದ ಪೈರುಗಳನ್ನೆಲ್ಲಾ ಕಿತ್ತು ದನಗಳಿಗೆ ತಿನ್ನಿಸಬೇಕು. ಇಲ್ಲವೆ ಸುಟ್ಟುಬಿಡಬೇಕು. ಹುಳುಗಳು ಚಿಟ್ಟೆಗಳಾಗಿ ಹಾರಿಹೋಗುವವರಿವಿಗೂ ಅವಕಾಶ ಕೊಡಬಾರದು. ಕೆ. ಸಿ.

ಮೈಸೂರು ಸೀಮೆಯಲ್ಲಿ ದನಕರುಗಳ ಗಣತಿಯು.

ಈ ಸೀಮೆಯಲ್ಲಿ ಬೇಸಾಯಕ್ಕುಪಯೋಗವಾಗುವ ಎತ್ತು, ಎಮ್ಮೆ, ಕೋಣ, ಹಸು, ಕುರಿ, ಬಂಡಿ ಮೊದಲಾದುವುಗಳ ಸಂಖ್ಯೆಯ ಹೆಚ್ಚು ಕಡಿಮೆಯನ್ನು ತಿಳಿಯಲು, ೫ ವರ್ಷಗಳಿಗೊಂದಾವೃತ್ತಿ ಗಣತಿಯು ಮಾಡಲ್ಪಡಬೇಕೆಂದು ಗೊತ್ತಾಗಿ, ೧೮೯೯ ರಲ್ಲಿ ಆರಂಭಿಸಲ್ಪಟ್ಟಿತು. ಅಂದಿನಿಂದ ೩ ವೇಳೆ ಗಣತಿಯಾಗಿರುತ್ತದೆ. ಈ ವರ್ಷ ಗಣತಿಯಾದುದರಲ್ಲಿ

ಗೂಳಿಗಳು ಮತ್ತೂ ಎತ್ತುಗಳು	೧೬೩೧೮೩೧
ಹಸುಗಳು	೧೫೮೧೩೭೧
ಕೋಣಗಳು	೮೯೫೧೧೦
ಎಮ್ಮೆಗಳು	೪೩೪೩೩೦
ಇವುಗಳ ಕರುಗಳು	೧೨೩೮೩೩೮
ಕುರಿಗಳು	೨೩೩೮೧೯೯
ಆಡುಗಳು	೧೩೬೨೦೩೬
ಕುದುರೆ ಮತ್ತೂ ಟಾಕಣಾಗಳು ...	೨೦೬೪೩
ಹಾಸರಕತ್ತೆ ಮತ್ತೂ ಕತ್ತೆಗಳು ...	೫೯೦೩೮
ನೇಗಲುಗಳು	೮೨೯೦೩೧
ಬಂಡಿಗಳು	೨೩೩೯೩೩

ಇರುವುದಾಗಿ ಗೊತ್ತಾಗಿರುವುದು. ಈ ಲೆಖ್ಖದಲ್ಲಿ ೫೩ ಬಂಟಿಗಳು ಸೇರಿಸಲ್ಪಟ್ಟಿವೆ. ಆದರೆ ಅವು ಎಲ್ಲಾದರು ಬೇಸಾಯಕಾರ್ಯಕ್ಕುಪಯೋಗಿಸಲ್ಪಡುತ್ತವೆಯೆಂಬುದು ಮಾತ್ರ ತಿಳುಹಲ್ಪಟ್ಟಿಲ್ಲವು. ಈ ಗಣತಿಯ ಕಾರ್ಯವು ಆರಂಭವಾದಂದಿನಿಂದ ಮೇಲೆ ಹೇಳಿದ ಪ್ರಾಣಿಗಳ ಸಂಖ್ಯೆಯು ಹೆಚ್ಚುವುದರಲ್ಲೇ ಇದೆ. ಬಂಡಿಯ ಸಂಖ್ಯೆಯಲ್ಲಿ ನೂರಕ್ಕೆ ೩.೨೦ ರಂತೆ ಹೆಚ್ಚಿರುತ್ತದಲ್ಲದೆ ಆಡುಗಳ ಸಂಖ್ಯೆಯೂ ಹೆಚ್ಚಿರುತ್ತದೆ.

ನಾನಕ್ ಗುರುವಿನ ಚರಿತ್ರೆಯು.

(ಕಳೆದವಾರದ ಶೇಷ.)

ಆ ಸೇವಕರು ಅನೇಪ್ರಕಾರ ದೊರೆಗೆ ಹೋಗಿ ಅರಿಕೆಯನ್ನು ಮಾಡಲು, ದೊರೆಯು ನಾನು ಬರಬೇಕೆಂದು ಹೇಳಿ ಕಳುಹಿಸಿದಾಗ್ಯೂ ನಾನಕನು ಬರಲಿಲ್ಲವೆ? ಎಂದು ಕೋಪಿತನಾಗಿ ನೂರಾರು ಭಟರನ್ನು ಕರೆದು ಆ ನಾನಕನನ್ನು ಹಿಡಿದುಕೊಂಡು ಬರುವುದೆಂದಾಜ್ಞಾಪಿಸಿದನು. ಆ ಭಟರುಗಳು ದೊರೆಯಾಜ್ಞೆಯಪ್ರಕಾರ ನಾನಕನ ಮಠಕ್ಕೆ ನುಗ್ಗಿ ಒಳಗೆ ದೇವರ ಭಜನೆಯನ್ನು ಮಾಡುತ ಕುಳಿತಿದ್ದ ನಾನಕನನ್ನು ಹಿಂಗಟ್ಟುಮುರಿಯನ್ನು ಕಟ್ಟುತ್ತಿರುವಾಗ್ಗೆ, ನಾನಕನು ತನಗೆ ಪ್ರಾಪ್ತವಾಗಿರುವ ಈ ಬಾಧೆಯನ್ನು ಪರಿಹರಿಸಬೇಕೆಂದು ದೇವರನ್ನು ಪ್ರಾರ್ಥಿಸಿಕೊಳ್ಳಲು, ಅಕ್ಷಣವೇ ಸಾವಿರಾರು ಭಟರುತ್ಪನ್ನರಾಗಿ ಆ ರಾಜಭಟರನ್ನು ಸಂಹಾರಮಾಡತೊಡಗಿದರು. ಆಗ ಹೆದರಾಗುಳಿದ ರಾಜಭಟರು ರಾಜನಲ್ಲಿಗೆ ಓಡಿಹೋಗಿ ನಡೆದ ವೃತ್ತಾಂತವನ್ನು ಅರಿಕೆಮಾಡಲು, ರಾಜನು—'ನಾನಕನು ಸಾಮಾನ್ಯಮನುಷ್ಯನಲ್ಲ; ಮಹಾ ದೈವಭಕ್ತನು ಮತ್ತೂ ಮಹಿಮನು' ಎಂದು ದಿಗಿಲು ಬಿದ್ದು ನಾನಕನ ಬಳಿಗೋಡಿಬಂದು ಅವನ ಪಾದಗಳ ಮೇಲೆ ಬಿದ್ದು, ತಾನು ಮಾಡಿದುದು ಸರ್ವಾಪರಾಧವಾಯಿತು; ತನ್ನನ್ನು ರಕ್ಷಿಸಬೇಕೆಂದು ಬೇಡಿಕೊಂಡನು. ಆಗ ನಾನಕನು ದೊರೆಯನ್ನು ಕ್ಷಮಿಸಿ ಕಳುಹಿಸಿಕೊಟ್ಟನು.

ಈ ನಾನಕ್ ಗುರುವು ಮಕ್ಕಾದಲ್ಲಿರುವ ಶ್ರೀಕೃಷ್ಣ ವಿಗ್ರಹ ದರ್ಶನವನ್ನು ಮಾಡಿಕೊಂಡು ಬರಲು, ತನ್ನ ಇಬ್ಬರು ಶಿಷ್ಯರೊಡನೆ ಹೊರಟು ಮಧ್ಯಮಾರ್ಗದಲ್ಲಿ ಒಂದು ಕಡೆ ಇಳಿದು ಕೊಂಚ ವಿಶ್ರಮಿಸಿಕೊಂಡು ಮುಂದೆ ಹೊರಟು ಒಂದು ನದೀ ತೀರಕ್ಕೆ ಬಂದರು. ಆ ನದಿಯಲ್ಲಿ ಪ್ರವಾಹವು ಪೂರ್ಣವಾಗಿದ್ದುದರಿಂದ, ನಾನಕನು ದೇವರ ನಾಮಸ್ಮರಣೆಯನ್ನು ಮಾಡಿ ನೀರಿನಮೇಲೆ ಸರಾಗವಾಗಿ ನಡೆದುಕೊಂಡು ಹೋಗಿ ಆಚೆ ತೀರವನ್ನು ಸೇರಿದನು. ಆದರೆ ಆ ಶಿಷ್ಯರು ಗುರುವನ್ನು ಹಿಂಬಾಲಿಸದೆ ಹೋಗಲು, ನಾನಕನು ಶಿಷ್ಯರನ್ನು ಕುರಿತು, ನೀವು ಗುರುವಿನ ನಾಮಸ್ಮರಣೆಯನ್ನು ಮಾಡಿದುದಾದರೆ, ಅದರ ಬಲದಿಂದ ನದಿಯನ್ನು ದಾಟುವಿರೆಂದು ಉಪದೇಶಿಸಲು, ಅವರು ಅದೇ ಪ್ರಕಾರ ಗುರುವಿನ ನಾಮೋಚ್ಚಾರಣೆಯನ್ನು ಮಾಡುತ ನದಿಯನ್ನು ದಾಟಿ ದಡವನ್ನು ಸೇರಿದರು. ನಾನಕನು ತನ್ನ ಶಿಷ್ಯರೊಡಗೂಡಿ ಪ್ರಯಾಣಮಾಡಿ ಮಕ್ಕಾದ ಹೊರಪ್ರದೇಶದಲ್ಲಿ ಬಂದು ನಿಂತನು. ಹಿಂದೂಗಳು ಮಕ್ಕಾ ಊರಿನೊಳಗೆ ಪ್ರವೇಶಿಸಲು ಅವಕಾಶವಿಲ್ಲದಿದ್ದುದರಿಂದ, ನಾನಕನು ಮಹಮ್ಮದೀಯರಿಗೆ ಗೋಚರವಾಗದಂತೆ ತನ್ನ ಶಿಷ್ಯರ ಸಮೇತ ಊರಿನೊಳಗೆ ಪ್ರವೇಶಿಸಿ, ಶ್ರೀಕೃಷ್ಣ ವಿಗ್ರಹವನ್ನು ನಾಶಮಾಡಿ ಭೂಮಿಯೊಳಗೆ ಹಾಕಿ, ಅದರಮೇಲೆ ಕಲ್ಲುಮುಳ್ಳುಗಳನ್ನೆಳೆದು ಮುಚ್ಚಿದ್ದ ಸ್ಥಳಕ್ಕೆ ಬಂದು ಸೇರಿದನು. ಆ ಸ್ಥಳದಲ್ಲಿ ಒಬ್ಬ ಮುಜಾವರನು ಇವರನ್ನೋಡಿ, ನೀವು ಯಾರು? ಊರೊಳಗೆ ಹೇಗೆ ಪ್ರವೇಶಮಾಡಿದಿರಿ? ಎಂದು ಕೇಳಲು, ನಾನಕನು ನಿನ್ನನ್ನೂ, ನನ್ನನ್ನೂ, ಈ ಜಗತ್ತನ್ನೂ ಸೃಷ್ಟಿಸಿದ ಮತ್ತೂ ಈ ಕಲ್ಲುಮುಳ್ಳುಗಳ ಕೆಳಗಿರುವ ಭಗವಂತನ ದರ್ಶನಮಾಡುವುದಕ್ಕಾಗಿ ಬಂದಿರುವೆವು ಎಂದು ಉತ್ತರವನ್ನು ಕೊಟ್ಟನು. ಹಾಗಾದರೆ ನಿನ್ನ ದೇವರನ್ನು ತೋರಿಸಿಕೊಡು ಎಂದು ಮುಜಾವರನು ನಾನಕನನ್ನು ಕೇಳಲು, ನಾನಕನು ಭಗವಂತನ ದರ್ಶನವನ್ನು ಮಾಡಿಸುತ್ತೇನೆಂದು ಹೇಳಿ, ನಾನಾವಿಧವಾಗಿ ಆ ಭಗವಂತನನ್ನು ಪ್ರಾರ್ಥಿಸಲು, ಭಕ್ತಪರಾಧೀನನಾದ ಭಗವಂತನು ಮಹಾತ್ಮನಾದ ನಾನಕನ ಪ್ರಾರ್ಥನೆಗೆ ಮೆಚ್ಚಿ, ಆ ಕಲ್ಲುಮುಳ್ಳುಗಳಿಂದ ಮುಚ್ಚಲ್ಪಟ್ಟಿದ್ದ ಹಳ್ಳದಿಂದ ಹೊರಗೆ ಬಿಜಯಮಾಡಿದನು. ಆಗ ಮುಜಾವರನು ಆಶ್ಚರ್ಯಪಟ್ಟು ಊರಿನವರೆಲ್ಲರಿಗೂ ಈ ಪರಮಾಶ್ಚರ್ಯ ಸಂಗತಿಯನ್ನು ಪ್ರಕಟಪಡಿಸಿದನು. ಮಕ್ಕಾದ ಮಹಮ್ಮದೀಯರೆಲ್ಲರೂ ಇದನ್ನು ಕೇಳಿ ಆ ಸ್ಥಳಕ್ಕೆ ಬಂದು, ಭಗವಂತನು ಪ್ರತ್ಯಕ್ಷನಾಗಿರುವುದನ್ನೋಡಿ ನಾನಕನ ಮಹಿಮೆಯನ್ನು ಕೊಂಡಾಡಿದರು. ನಾನಕನು ಭಗವಂತನು ಈ ಸ್ಥಳದಲ್ಲಿರುವುದನ್ನು ನೀವೆಲ್ಲರೂ ನೋಡಿದಿರಿ; ಇನ್ನಮೇಲೆ ಈ ರೀತಿ ಹಿಂದೂಗಳು ಬಂದು ನೋಡಲು ಅಡ್ಡಿಮಾಡಬೇಡಿರೆಂದು ಮಹಮ್ಮದೀಯರಿಗೆ ಹೇಳಿ ತನ್ನ ಸ್ವಸ್ಥಳವನ್ನು ಕುರಿತು ಶಿಷ್ಯರ ಸಮೇತ ಹೊರಟನು. ಮಧ್ಯಮಾರ್ಗದಲ್ಲಿ ಪರಿವಾರಸಮೇತನಾದ ಒಬ್ಬ ರಾಜನು ನದಿಯನ್ನು ದಾಟಲಿಕ್ಕಿಲ್ಲದೆ ಕಣ್ಣುಬಾಯಿಯನ್ನು ಬಿಡುತಲಿದ್ದುದನ್ನು ನಾನಕನುಕಂಡು, ಪುಷ್ಪಕವಿಮಾನದಂತೆ ಕಾಗದದಿಂದ ಒಂದು ದೋಣಿಯನ್ನು ಮಾಡಿ ಅದರಲ್ಲಿ ಪರಿವಾರಸಮೇತನಾದ ರಾಜನನ್ನು ಕುಳ್ಳಿರಿಸಿಕೊಂಡು ನದಿಯನ್ನು ದಾಟಿ ಆಚೆ ದಡವನ್ನು ಸೇರಿ ಅಲ್ಲಿ ಅವರನ್ನು ಬಿಟ್ಟು, ತಾನು ಅಲ್ಲಿಂದ ಪೂನಾಕ್ಕೆ ಹೊರಟು ಅಲ್ಲಿ ಗೋರಕ ಗುರುವಿನ ದರ್ಶನವನ್ನು ತೆಗೆದುಕೊಂಡನು. ಆಗ ಗೋರಕನು ಹರಿದ್ವಾರದಲ್ಲಿರುವ ಸಾಧುಗಳಿಗೆ ಭೋಜನವನ್ನು ಮಾಡಿಸಬೇಕಾಗಿದೆಯೆಂದು ನಾನಕನಿಗೆ ತಿಳುಹಲು, ನಾನಕನು— ನೀವು ಮುಂದಾಗಿ ಅಲ್ಲಿಗೆ ದಯಮಾಡಿಸಿ; ನಾನು ತಮ್ಮ ಹಿಂದೆಯೇ ಬಂದು ನಾಲ್ಕು ಸಾವಿರ ಸಾಧುಗಳಿಗೆ ಸಮಾರಾಧನೆಯನ್ನು ಮಾಡಿಸುವೆನೆಂದು ಹೇಳಿದನು. ಗೋರಕನು ಅಂತರಿಕ್ಷಮಾರ್ಗದಲ್ಲಿ ಹರಿದ್ವಾರಕ್ಕೆ ಹೊರಟನು. ಇತ್ತಲಾಗಿ ನಾನಕನು ನಿಮಿಷಮಾತ್ರದಲ್ಲಿ ಹರಿದ್ವಾರವನ್ನು ಸೇರಿ, ಸಾಧುಗಳಿಗೆ ಭೋಜನವನ್ನು ಮಾಡಿಸಿ, ಭಜನಾತತ್ಪರನಾಗಿರುವಷ್ಟರಲ್ಲಿ, ಗೋರಕನು ಹರಿದ್ವಾರಕ್ಕೆ ಬಂದು ನಾನಕನ ಈ ಅದ್ಭುತಕಾರ್ಯವನ್ನು ನೋಡಿ ಪರಮಾಶ್ಚರ್ಯಪಟ್ಟು, ಆತನನ್ನು ನಾನಾವಿಧವಾಗಿ ಕೊಂಡಾಡಿದನು. ಭಗವಂತನ ಕೃಪೆಯನ್ನು ಸಂಪಾದಿಸಿದವರಿಗೆ ಎಂಥ ಕಾರ್ಯವೂ ಅಸಾಧ್ಯವಲ್ಲವೆಂಬುದು ಮಹಾತ್ಮನಾದ ಈ ನಾನಕ್ ಗುರುವಿನ ಚರಿತ್ರೆಯಿಂದ ಗೊತ್ತಾಗುತ್ತದೆ.

ಜರ್ಮನಿಯ ಚಕ್ರವರ್ತಿಯವರಾದ ಕೇಸರ್‌ರವರಿಗೆ ಅವರ ರಾಜಮನೆತನಕ್ಕೆ ಸೇರಿದ ಅರಮನೆ ಮೊದಲಾದ ಕಟ್ಟಡಗಳಲ್ಲದೆ ಖರ್ಚಿಗೆ ವರ್ಷ ಒಂದರಲ್ಲಿ ೧,೨೦,೦೦,೦೦೦ ರೂ. ಬೆಲೆಬಾಳುವ ಸ್ವಂತ ಜಮೀನುಗಳಿವೆ.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಅಗಸ್ಟ್ ತಾ॥ ೭ ನೇ ಸೋಮವಾರ.

ಗತಿಸಿದ ಮಿ॥ ಜಾರ್ಜ್ ವೀರ್, ಎಂ. ಎ., ಎಫ್. ಎಂ. ಯು., ಯವರು.

ಮೈಸೂರ್ ಸೀಮೆಯ ವಿದ್ಯಾಭ್ಯಾಸದ ಶಾಖೆಯ ಇನ್ಸ್‌ಪೆಕ್ಟರ್ ಜನರಲ್‌ರವರಾಗಿದ್ದ ಮಿ॥ ಜಿ. ವೀರ್‌ಸಾಹೇಬರವರು ಕಳೆದ ತಾ॥ ೨೮ ರ ಮಧ್ಯಾನ್ಹದವರೆಗೂ ಯಾವುದೊಂದು ರೋಗವೂ ಇಲ್ಲದೆ ಕ್ಷೇಮವಾಗಿದ್ದರು. ಆದರೆ ಆ ಸಾಯಂಕಾಲ ಇದ್ದಕ್ಕಿದ್ದ ಹಾಗೆ ಅವರಿಗೆ ಜ್ವರವು ಕಾಣಿಸಿಕೊಂಡು ಮಾರನೆಯ ದಿನ ಪ್ರಬಲವಾಯಿತು. ಆ ಕೂಡಲೇ ರೆಸಿಡೆನ್ಸಿ ಸರ್ಜನ್ನಾದ ಕ್ಯಾಪ್ಟನ್ ಸ್ಟ್ಯಾಂಡೇಜ್‌ರವರು ಬಂದು ಪರೀಕ್ಷಿಸಿ ಔಷಧೋಪಚಾರವನ್ನು ಮಾಡಿದಾಗ್ಯೂ, ಜ್ವರವು ಕಡಿಮೆಯಾಗದೆ ಮತ್ತಷ್ಟು ಹೆಚ್ಚುತ್ತ ನಾಲಗೆಯ ಮೇಲೆ ದೋಷವು ಕಾಣಿಸಿಕೊಂಡಿತು. ಮಿ॥ ವೀರ್‌ರವರಿಗೆ ತಮ್ಮ ಸತ್ನೀಪುತ್ರಾದಿಗಳನ್ನು ನೋಡಬೇಕೆಂಬ ಅಪೇಕ್ಷೆಯು ಬಹುವಾಗಿ ಅವರುಗಳು ಸೀಮೆಯಲ್ಲಿರುವುದರಿಂದ ಯತ್ನವಿಲ್ಲವಾಗಿ ಬಹು ವ್ಯಾಕುಲಪಟ್ಟರಂತೆ. ವೈದ್ಯರುಗಳು ತಮ್ಮ ಬುದ್ಧಿ ಶಕ್ತಿಯನ್ನೆಲ್ಲ ಉಪಯೋಗಿಸಿ ಚಿಕಿತ್ಸೆ ಮಾಡಿದಾಗ್ಯೂ, ವ್ಯಾಧಿಯು ಗುಣವಾಗದೆ ಮಿ॥ ವೀರ್‌ರವರು ಕಳೆದ ಸೋಮವಾರ ಸಾಯಂಕಾಲ ತಾವು ವಾಸವಾಗಿದ್ದ ರಿಂಗ್ ಉಡ್ ಎಂಬ ಬಂಗಲೆಯಲ್ಲಿ ಪಂಚತ್ವವನ್ನೈದಿದರೆಂಬ ಅತ್ಯಂತ ದುಃಖವಾರ್ತೆಯನ್ನು ಕೇಳಿ ಮೈಸೂರ ಸೀಮೆಯೇ ವ್ಯಸನಪಡುತ್ತದೆ. ಮಿ॥ ವೀರ್‌ರವರ ಅವಸಾನಕಾಲದಲ್ಲಿ ಅವರ ಪತ್ನೀ ಪುತ್ರಾದಿಗಳು ಸಮೀಪದಲ್ಲಿರಲಿಲ್ಲವಾಗಿ, ಅವರುಗಳ ವ್ಯಸನಕ್ಕೆ ಪಾರವೇ ಇಲ್ಲವಾಗಿದೆ. ಶವಸಂಸ್ಕಾರವು ಮಾರನೆಯ ದಿನ ಸಾಯಂಕಾಲ ೫॥ ಗಂಟೆಗೆ ನಡೆಯಿತು. ಆ ಕಾಲದಲ್ಲಿ ಬ್ರಿಟಿಷ್ ರೆಸಿಡೆಂಟರು, ಸೆಂಟ್ರಲ್ ಕಾಲೇಜಿನ ಮುಖ್ಯೋಪಾಧ್ಯಾಯರಾದ ಮಿ॥ ಟೇಟ್‌ರವರು, ರಾ॥ ಬ॥ ಮುತ್ತಣ್ಣನವರು, ೨ ನೇ ಕೌನ್ಸಿಲರ್ ಮ॥ ಹೆಚ್. ವಿ. ನಂಜುಂಡಯ್ಯನವರು ಸೀನಿಯರ್ ಸರ್ಜನ್ ಮ॥ ಅಚ್ಯುತರಾಯರು, ಡಾ॥ ಆರ್ಮುಗಂ ಮೊದಲಿಯಾರರು, ಮೈಸೂರ ಮಹಾರಾಜಾ ಕಾಲೇಜಿನ ಮುಖ್ಯೋಪಾಧ್ಯಾಯರಾದ ಮಿ॥ ಡನ್ನ್ಯಾಂರವರು ಮೊದಲಾದ ಐರೋಪ್ಯ ಮತ್ತೂ ಹಿಂದೂ ದೊಡ್ಡ ಮನುಷ್ಯರುಗಳು, ವಿದ್ಯಾರ್ಥಿಗಳು, ಇ॥ ಜನರಲ್‌ರವರ ಆಫೀಸಿನ ಉದ್ಯೋಗಸ್ಥರು ಮೊದಲಾದ ದೊಡ್ಡ ಮನುಷ್ಯರು ಬಂದಿದ್ದರು. ಅನೇಕ ಐರೋಪ್ಯರು, ದಿವಾನರು ಮೊದಲಾದವರಿಂದ ಸುಂದರವಾದ ಹೂಮಾಲೆಗಳು ಕಳುಹಲ್ಪಟ್ಟಿದ್ದುವು. ಇವರಿಗೆ ಅವಸಾನಕಾಲದಲ್ಲಿ ೪೯ ವರ್ಷ ವಯಸ್ಸಾಗಿದ್ದಿತು.

ಮಿ॥ ವೀರ್‌ರವರು ಸ್ಕಾಟ್ಲೆಂಡಿನಲ್ಲಿ ೧೮೬೨ ರಲ್ಲಿ ಜನಿಸಿ ಗ್ಲಾಸ್ಗೋ ಪಟ್ಟಣದಲ್ಲಿ ವಿದ್ಯಾಭ್ಯಾಸಂಗವನ್ನು ಮಾಡಿ ಅಲ್ಲಿಯ ಸರ್ವವಿದ್ಯಾನಿಲಯದಲ್ಲಿ ಎಂ. ಎ., ಪ್ರಶಸ್ತಿಯನ್ನು ಪಡೆದು, ಅಲ್ಲಿಂದ ಕೇಂಬ್ರಿಡ್ಜಿಗೆ ಹೋಗಿ ಅಲ್ಲಿ ೧೮೮೬ ರಲ್ಲಿ ಗಣಿತಶಾಸ್ತ್ರ ಪರೀಕ್ಷೆಯಲ್ಲಿ ಬಹು ಉನ್ನತವಾಗಿ ತೇರ್ಗಡೆಯನ್ನು ಹೊಂದಿದರು. ಅಲ್ಲಿಂದ ಗ್ಲಾಸ್ಗೋ ಪಟ್ಟಣಕ್ಕೆ ಹಿಂತಿರುಗಿ ಬಂದು, ಅಲ್ಲಿಯ ವಿದ್ಯಾಶಾಲೆಯಲ್ಲಿ ನಾಲ್ಕು ವರ್ಷಕಾಲ ಗಣಿತಶಾಸ್ತ್ರ ಬೋಧಕರಿಗೆ ಸಹಾಯಕರಾಗಿದ್ದರು ೧೮೯೦ ರಲ್ಲಿ ಮಿ॥ ಹೆಚ್. ಜೆ. ಭಾಭಾಯವರು ಮೈಸೂರ ಮಹಾರಾಜಾ ಕಾಲೇಜಿನ ಮುಖ್ಯೋಪಾಧ್ಯಾಯಸ್ಥಾನವನ್ನು ಬಿಟ್ಟು ವಿದ್ಯಾಭ್ಯಾಸದ ಶಾಖೆಯ ಇ॥ ಜನರಲ್‌ರವರಾಗಿ ಹೋದುದರಿಂದ, ಮಿ॥ ವೀರ್‌ರವರು ಮೈಸೂರ ಮಹಾರಾಜಾ ಕಾಲೇಜಿನ ಮುಖ್ಯೋಪಾಧ್ಯಾಯರಾಗಿ ಕರೆಸಲ್ಪಟ್ಟರು. ಇವರು ಅಂದಿನಿಂದ ಕಳೆದ ೨ ವರ್ಷಗಳ ವರೆಗೆ ಮಹಾರಾಜಾ ಕಾಲೇಜಿನ ಮುಖ್ಯೋಪಾಧ್ಯಾಯರಾಗಿದ್ದು, ಆ ಕಾಲೇಜನ್ನು ಫಸ್ಟ್‌ಗ್ರೇಡ್ ಕಾಲೇಜನ್ನಾಗಿ ಮಾಡಿ ಈಗಿನ ಅತ್ಯುನ್ನತಸ್ಥಿತಿಗೆ ತಂದರು, ಮತ್ತು ೧-೨ ವೇಳೆ ಮಿ॥ ಭಾಭಾ ಸಾಹೇಬರವರು ರಜದಮೇಲೆ ಹೋಗಿರುವಾಗ್ಗೆ ಇ॥ ಜನರಲ್‌ರವರ ಕೆಲಸವನ್ನು ಬದಲು ನೋಡುತ್ತಿದ್ದರು. ಮಿ॥ ಹೆಚ್. ಜೆ. ಭಾಭಾಯವರು ಕಳೆದ ೧೯೦೯ ರಲ್ಲಿ ಉದ್ಯೋಗದಿಂದ ನಿವೃತ್ತರಾಗಲು, ಮಿ॥ ವೀರ್‌ರವರು ವಿದ್ಯಾಭ್ಯಾಸದ ಶಾಖೆಯ ಇ॥ ಜನರಲ್‌ರವರಾಗಿ ನೇಮಿಸಲ್ಪಟ್ಟರು. ಇವರು ಈ ವಿದ್ಯಾಶಾಖೆಯನ್ನು ಅತ್ಯುತ್ತಮಸ್ಥಿತಿಗೆ ತರಲು ಬೇಕಾದ ಪ್ರಯತ್ನವನ್ನೆಲ್ಲ ಮಾಡಿದ್ದರು. ಇಂಥ ವಿದ್ಯಾಭಿಮಾನಿಗಳನ್ನು ಇಷ್ಟು ಶೀಘ್ರವಾಗಿ ಕಳೆದುಕೊಂಡುದು ಈ ದೇಶೀಯರ ದುರದೃಷ್ಟವೆಂದು ಹೇಳಬೇಕಾಗಿದೆ. ಇವರಂಥ ಸತ್ಯಸಂಧತೆ, ಕಾರ್ಯಾಸಕ್ತಿ, ಮಿತಭಾಷೆ ಮತ್ತೂ ನಿಸ್ಪೃಹತ್ವವುಂತಾದ ಸದ್ಗುಣಗಳುಳ್ಳವರು ದೊರೆಯುವುದು ಕಷ್ಟವಾದುದರಿಂದ, ನಮ್ಮ ಸರ್ಕಾರದವರಿಗೆ ಮಿ॥ ವೀರ್‌ರವರ ಅಕಾಲಮರಣದಿಂದ ದೊಡ್ಡ ನಷ್ಟವು ಸಂಭವಿಸಿತೆಂದರೆ ಅತಿಶಯೋಕ್ತಿಯೆನಿಸದು. ಮೈಸೂರ ಸರ್ಕಾರದವರು ಮಿ॥ ವೀರ್‌ರವರ ಮರಣದಿಂದ ತಮಗುಂಟಾದ ಅಪಾರವಾದ ದುಃಖವನ್ನು ಪ್ರದರ್ಶಿಸಿ, ಮಾರನೆಯ ದಿನ ವಿದ್ಯಾಭ್ಯಾಸದ ಶಾಖೆಯ ಇ॥ ಜನರಲ್‌ರವರ ಆಫೀಸೂ ಸಂಸ್ಥಾನದ ಎಲ್ಲ ಕಾಲೇಜುಗಳೂ, ಪಾಠಶಾಲೆಗಳೂ ಅವರ ಜ್ಞಾಪಕಾರ್ಥವಾಗಿ ಮುಚ್ಚಲ್ಪಡತಕ್ಕದೆಂದು ಅಪ್ಪಣೆಯನ್ನು ಮಾಡಿದರು. ಕಳೆದ ಮಂಗಳವಾರ ಟವರ್‌ಹಾಲಿನಲ್ಲಿ ರಾಜಧಾನಿಯ ದೊಡ್ಡಮನುಷ್ಯರುಗಳು ಸರದಾರ್ ಎಂ. ಕಾಂತರಾಜ ಅರಸಿನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಮಿ॥ ವೀರ್‌ರವರ ಅಕಸ್ಮಾತ್ತಾದ ಮರಣದಿಂದ ರಾಜಧಾನಿಯ ನಿವಾಸಿಗಳಿಗುಂಟಾದ ದುಃಖವನ್ನು ಪ್ರದರ್ಶಿಸಿದುದಲ್ಲದೆ ಅವರ ಗುಣಕಥನವನ್ನು ಮಾಡಿ, ಸೀಮೆಯಲ್ಲಿರುವ ಅವರ ಪತ್ನೀಪುತ್ರಾದಿಗಳಿಗೆ ತಮ್ಮ ಅನುತಾಪವನ್ನು ತಿಳುಪಬೇಕೆಂದು ನಿರ್ಧರಿಸಿದರು. ಅದೇರೀತಿ ಮಹಾರಾಜಾ ಕಾಲೇಜಿನಲ್ಲಿ ಮಿ॥ ವೀರ್‌ರವರ ಕೈಕೆಳಗೆ ವ್ಯಾಸಂಗಮಾಡಿದವರೂ ಕೆಲಸಮಾಡಿದವರೂ ಸಭೆ ಸೇರಿ, ತಮ್ಮಗಳಿಗೆ ಅವರ ಮರಣದಿಂದುಂಟಾದ ದುಃಖವನ್ನು ಪ್ರದರ್ಶಿಸಿ, ತಮ್ಮ ಪರಿತಾಪವನ್ನು ತಂತಿಯಮೂಲಕ ಅವರ ಪತ್ನಿಯವರಿಗೆ ತಿಳುಹಿದರು. ಬೆಂಗಳೂರಲ್ಲೂ ಕಳೆದ ಬುಧವಾರ ಮಿ॥ ಟೇಟ್‌ರವರ ಅಧ್ಯಕ್ಷತೆಯಲ್ಲಿ ಪುರಜನರು ಸಭೆ ಸೇರಿದ್ದು ದುಃಖಪ್ರದರ್ಶನವನ್ನು ಮಾಡಿದರು. ಗತಿಸಿದ ಮಿ॥ ವೀರ್‌ರವರ ಆತ್ಮಕ್ಕೆ ಶಾಂತಿಯನ್ನೂ, ಅವರ ವಿಯೋಗ ದುಃಖಸಾಗರದಲ್ಲಿ ಮುಳುಗಿರುವ ಅವರ ಪತ್ನೀಪುತ್ರಾದಿಗಳಿಗೆ ಮನಶ್ಶಾಂತಿಯನ್ನೂ ಉಂಟುಮಾಡಲೆಂದು ಆ ಭಗವಂತನನ್ನು ಪ್ರಾರ್ಥಿಸುತ್ತೇವೆ.

ವೇಷಧಾರಿಗಳಾದ ಸಾಧುಗಳು.

ಇಬ್ಬರು ಮೋಸಗಾರರು ಸಾಧುಗಳ ವೇಷವನ್ನು ಹಾಕಿಕೊಂಡು ಕಳೆದ ಜುಲೈ ತಾ॥ ೨೧ ರಲ್ಲಿ ಚೆನ್ನಪಟ್ಟಣಕ್ಕೆ ಬಂದು ಒಬ್ಬ ವೀರಶೈವ ದೊಡ್ಡಮನುಷ್ಯರ ಮನೆಯ ಪಡಸಾಲೆಯಮೇಲೆ ಕುಳಿತುಕೊಂಡು, ಆ ಮನೆಯ ೧೭—೧೮ ವರ್ಷ ವಯಸ್ಸಿನ ಯುವಕನ ಪರಿಚಯವನ್ನು ಮಾಡಿಕೊಂಡು, ಭೂಗರ್ಭಿತವಾಗಿರುವ ದ್ರವ್ಯವನ್ನು ಬರಮಾಡುವುದು, ತಾಂಬ್ರ ಭಸ್ಮಮಾಡುವುದು ಮೊದಲಾದ ವಿದ್ಯೆಗಳು ತಮಗೆ ಬರುವುವೆಂದೂ, ಆ ಮನೆಯಲ್ಲಿ ಭೂಮಿಯೊಳಗೆ ಹೂಳಲ್ಪಟ್ಟಿರುವ ಅಪಾರ ದ್ರವ್ಯವನ್ನು ಬರಮಾಡಿಕೊಡುತ್ತೇವೆಂದೂ ಆತನಿಗೆ ಆಸೆಯನ್ನು ಹುಟ್ಟಿಸಿ, ೩-೪ ದಿನಗಳ ವರೆಗೆ ಆ ಮನೆಯವರ ಪೋಷಣೆಯಿಂದ ಪಡಸಾಲೆಯಮೇಲೆ ವಾಸಿಸಿಕೊಂಡಿದ್ದರು. ತಾ॥ ೨೪ ರಲ್ಲಿ ಆ ಮನೆಯ ಯುವಕನಿಂದ ೫೦ ರೂ. ಗಳನ್ನೂ, ೨ ಹೊಸ ವಸ್ತ್ರಗಳನ್ನೂ, ಹಣ್ಣುಕಾಯಿ ಕುಂಕುಮ ಮೊದಲಾದ ಪೂಜಾ ಸಾಮಗ್ರಿಗಳನ್ನೂ ತರಿಸಿಕೊಂಡು, ಆ ದಿವಸ ಮಧ್ಯರಾತ್ರಿಯಲ್ಲಿ ಆ ಮನೆಯ ಒಂದು ಕೊಠಡಿಯೊಳಗೆ ನೆಲದಲ್ಲಿ ಚಿಕ್ಕ ಗುಂಡಿಯನ್ನು ತೆಗೆದು ಅದನ್ನು ಪೂಜೆಮಾಡಿ ಮತ್ತೂ ೫೦ ರೂ. ಗಳನ್ನು ಕಟ್ಟಿರುವ ಅರಿಶಿನದ ಗಂಟನ್ನೂ ಪೂಜೆಮಾಡಿ, ಅದನ್ನು ಆ ಗುಂಡಿಯೊಳಗೆ ಆ ಮನೆಯ ಯುವಕನ ಕೈಯಿಂದಲೇ ಇಡಿಸಿ ೩-೪ ಸಣ್ಣ ಕಲ್ಲುಗಳನ್ನು ತೆಗೆದುಕೊಳ್ಳುವಂತೆ ಆ ಮನೆಯ ಯುವಕನಿಗೆ ಹೇಳಿ, ಆತನು ಅವನ್ನು ತೆಗೆದುಕೊಳ್ಳಲು ಬೇರೆ ಕಡೆ ತಿರುಗಿದಾಕ್ಷಣವೇ ರೂ. ಗಳ ಗಂಟನ್ನು ತೆಗೆದುಕೊಂಡು ತಾವು ೫೦ ಅರ್ಧಾಣೆಯ ತಾಂಬ್ರದ ಬಿಲ್ಲೆಗಳನ್ನು ಕಟ್ಟಿದ್ದ ಮತ್ತೊಂದು ಅರಶಿನದ ಗಂಟನ್ನು ಗುಂಡಿಯೊಳಗೆ ಮಡಗಿ ಆತನ ಕೈಯಿಂದಲೇ ಗುಂಡಿಯನ್ನು ಮುಚ್ಚಿಸಿಬಿಟ್ಟು, ನೀರಿನ ಸಮೀಪದಲ್ಲಿ ಬೇರೆ ದೇವತೆಯನ್ನು ಪೂಜೆಮಾಡಿ ಮಾರನೆಯ ಬೆಳಗ್ಗೆ ಬಂದು ಗುಂಡಿಯನ್ನು ತೆಗೆದು ಎಲ್ಲ ಕಡೆಯಿಂದಲೂ ಬಂದು ಸೇರಿರುವ ನಿಧಿಯನ್ನು ತೆಗೆದುಕೊಡುತ್ತೇವೆಂದು ಹೇಳಿ ಹೊರಟು ಹೋದರು. ಮಾರನೆಯ ಬೆಳಗ್ಗೆ ಆ ಮನೆಯಾತನು ಆ ಸಾಧುಗಳ ಆಗಮನವನ್ನೇ ಇದಿರುನೋಡುತ್ತ ಮನೆಯ ಹೊರಗಡೆ ಸುಳಿದಾಡುತ್ತಿರುವಾಗ್ಗೆ, ಅವರ ಪಕ್ಕದ ಮನೆಯ ವೈದ್ಯರೊಬ್ಬರು "ಆ ಸಾಧುಗಳೆಲ್ಲಿ? ಅವರು ತಾಂಬ್ರ ಭಸ್ಮವನ್ನು ಮಾಡುತ್ತೇವೆಂದು ಹೇಳಿ ನೆನ್ನೆಯ ದಿನ ಒಬ್ಬ ದರ್ಜಿಯವನಿಂದ ೫೦ ಅರ್ಧಾಣೆಯ ತಾಂಬ್ರದ ಬಿಲ್ಲೆಗಳನ್ನು ತೆಗದುಕೊಂಡು ಬಂದರು." ಎಂದು ಹೇಳಲು, ಆ ಯುವಕನಿಗೆ ಅನುಮಾನವುಂಟಾಗಿ ಆ ಕೂಡಲೆ ಮನೆಯೊಳಗೆ ಹೋಗಿ ಗುಣಿಯಲ್ಲಿ ಹೂಳಿದ್ದ ಗಂಟನ್ನು ಬಿಚ್ಚಿ ನೋಡುವಲ್ಲಿ, ರೂಪಾಯಿಗಳಿಗೆ ಬದಲಾಗಿ ೫೦ ಅರ್ಧಾಣೆಗಳಿರುವುದನ್ನು ಕಂಡು ದಿಗಿಲು ಬಿದ್ದು ಆ ಕೂಡಲೇ ಊರಿನಲ್ಲೆಲ್ಲ ಆ ಮೋಸಗಾರರನ್ನೆಷ್ಟು ಹುಡುಕಿದಾಗ್ಯೂ ಸಿಕ್ಕಲಿಲ್ಲವಾಗಿ, ಆಕ್ಷಣವೇ ಬೈಸಿಕಲ್ಲಿನಮೇಲೆ ಕ್ಲೋಸ್‌ಪೇಟೆಗೆ ಹೋಗಿ ಅಲ್ಲಿಯ ಪೊಲೀಸರಿಗೂ, ತನ್ನ ಸ್ನೇಹಿತರಿಗೂ ನಡೆದ ವೃತ್ತಾಂತವನ್ನೆಲ್ಲ ಹೇಳಿ, ಅವರ ಗುರ್ತನ್ನು ಸಹ ಕೊಟ್ಟು ಬಂದನು. ಆತನ ಸ್ನೇಹಿತರು ಆ ಮೋಸಗಾರರನ್ನು ಅಂಗಡಿಬೀದಿಯಲ್ಲಿ ಹುಡುಕುತ್ತಿರುವಾಗ್ಗೆ, ಆ ಮೋಸಗಾರರು ಒಂದು ಅಂಗಡಿಯಲ್ಲಿ ಅಫೀಮನ್ನು ತೆಗೆದುಕೊಳ್ಳುತ್ತಿದ್ದುದನ್ನು ಕಂಡು, ಆ ಕೂಡಲೇ ಪೊಲೀಸರಿಗೆ ತಿಳುಹಿಸಿ ಸೆರೆ ಹಿಡಿಸಿದರು. ಅಲ್ಲಿಯ ಪೊಲೀಸರು ನಿಜಸ್ಥಿತಿಯನ್ನು ಮೋಸಗಾರರಿಂದ ಹೊರಡಿಸಿ, ಹಣವನ್ನು ಕಳೆದುಕೊಂಡ ಯುವಕನಿಗೆ ಖರ್ಚುಹೋನವನ್ನು ಕೊಟ್ಟರು. ಆತನು ಬಂದು ಅವರೇ ಮೋಸಮಾಡಿದವರೆಂದು ಹೇಳಿದುದರ ಮೇಲೆ, ಅವರನ್ನು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದರು. ಅವರ: ಅಪಹರಿಸಿದ್ದ ೫೦ ರೂ. ಗಳು ವ್ಯಯಮಾಡಲ್ಪಡದೆ ಅವರಲ್ಲೇ ಇದ್ದುದರಿಂದ ಮ್ಯಾಜಿಸ್ಟ್ರೇಟರು ಅದನ್ನು ಆ ಯುವಕನಿಗೆ ಕೊಡಿಸಿದರು. ಎಂದು ಒಬ್ಬ ಚಂದಾದಾರರು ತಿಳಿಸಿರುತ್ತಾರೆ.

ರಿಲೀಫ್ ಫಂಡು.

ಕಳೆದ ಜುಲೈ ತಿಂಗಳಲ್ಲಿ ಕಾವೇರೀ ಮತ್ತೂ ಕಪಿಲಾ ನದಿಗಳಲ್ಲಿ ಪ್ರವಾಹವು ಮಿತಿಮೀರಿ ಬಂದು ಯಡತೊರೆ, ಶ್ರೀರಂಗಪಟ್ಟಣ, ಮಳವಳ್ಳಿ, ತಿರುಮಕೂಡ್ಲು ನರಸೀಪುರ ಮತ್ತೂ ನಂಜನಗೂಡು ತಾಲ್ಲೋಕುಗಳಲ್ಲಿ ಪ್ರಾಯಶಃ ೮೦೦ ಮನೆಗಳು ನಾಶವಾಗಿ ೩-೪ ಸಾವಿರ ಬಡಜನರಿಗೆ ನಿಲ್ಲಲು ನೆರಳೂ, ತಿನ್ನಲು ಧಾನ್ಯವೂ ಇಲ್ಲದಂತಾಗಿ ಬಹು ಕಷ್ಟಪಡುತ್ತಿದ್ದಾರೆ. ಈ ವಿಪನ್ನರಿಗೆ ನೆರಳನ್ನೂ, ಆಹಾರವನ್ನೂ ಕಲ್ಪಿಸಿಕೊಡಲು ಒಂದು ಫಂಡನ್ನು ಏರ್ಪಡಿಸಬೇಕೆಂಬುದ್ದೇಶದಿಂದ ಕಳೆದ ಮಂಗಳವಾರ ಸಾಯಂಕಾಲ ರಾಜಧಾನಿಯ ಟವರ್ ಹಾಲಿನಲ್ಲಿ ಡೆ॥ ಕ॥ ಎಂ. ಕಾಂತರಾಜ ಅರಸಿನವರ ಅಧ್ಯಕ್ಷತೆಯಲ್ಲಿ ಪುರಜನರ ಸಭೆಯೊಂದು ಸೇರಿದ್ದಿತು. ಆಗ ಅಧ್ಯಕ್ಷರು ಕಾವೇರೀ ಮತ್ತೂ ಕಪಿಲಾ ನದಿಗಳ ಪ್ರವಾಹದಿಂದ ಬಡಜನರಿಗೆ ಪ್ರಾಪ್ತವಾಗಿರುವ ಕಷ್ಟನಷ್ಟಗಳನ್ನೂ, ರಿಲೀಫ್ ಫಂಡನ್ನು ಸ್ಥಾಪಿಸಬೇಕಾದ ಆವಶ್ಯಕತೆಯನ್ನೂ ಚೆನ್ನಾಗಿ ವಿವರಿಸಿ ಹೇಳಿ ಸಭಿಕರ ಮನಸ್ಸು ಕರಗುವಂತೆ ಮಾಡಿದುದಲ್ಲದೆ, ಈ ರಿಲೀಫ್ ಫಂಡಿಗೆ ಶ್ರೀಮನ್ಮಹಾರಾಜರವರು ಶ್ರೀಮದ್ಯುವರಾಜರವರು ಮತ್ತೂ ಮಹಾಮಾತೃಶ್ರೀಯವರು ಪ್ರತಿಯೊಬ್ಬರೂ ೫೦೦ ರೂ. ಗಳನ್ನೂ ದಿವಾನರು ೨೦೦ ರೂ. ಗಳನ್ನೂ, ಸರ್ಕಾರದವರು ೨೦೦೦ ರೂ. ಗಳನ್ನೂ ದಯಪಾಲಿಸಿರುವುದಾಗಿ ಅಪ್ಪಣೆಯನ್ನು ಕೊಡಿಸಿದರು. ಆ ಕೂಡಲೆ ಸಭೆಯಲ್ಲಿ ೯೦೦ ರೂ. ಗಳ ವರೆಗೆ ಚಂದಾಹಣವು ವಾಗ್ದಾನಮಾಡಲ್ಪಟ್ಟಿತು. ರಾಜಧಾನಿಯ ಎಲ್ಲ ಜಾತಿಯ ಜನರಿಂದಲೂ ಚಂದಾಹಣವನ್ನೆತ್ತಲು ಒಂದು ಕಮಿಟಿಯು ಆಗಲೇ ಏರ್ಪಡಿಸಲ್ಪಟ್ಟಿತು. ಮತ್ತೂ ಈ ಫಂಡಿಗೆ ಸಹಾಯಮಾಡಲು ಬೆಂಗಳೂರಿನವರನ್ನೂ ಪ್ರಾರ್ಥಿಸಬೇಕೆಂದು ನಿರ್ಧರವಾಯಿತು.

ಪ್ರವಾಹದ ಅನಾಹುತದಿಂದ ವಿಪನ್ನರಾಗಿರುವವರಲ್ಲಿ ಅನೇಕರು ಅಂಗೈಯಗಲದ ಭೂಮಿಯೂ ಇಲ್ಲದವರಾಗಿ ಕೂಲಿನಾಲಿ ಮಾಡಿ ಅಹನ್ಯಹನಿ ಕಾಲಕ್ಷೇಪಮಾಡುತ್ತಿರುವವರೇ ವಿಶೇಷವಾಗಿರುವುದರಿಂದ, ಅಂಥವರ ವಾಸಕ್ಕೂ ಜೀವನಕ್ಕೂ ಸಹಾಯಮಾಡುವುದು ಭೂತದಯೆ ಪಶ್ಚಾತ್ತಾಪವುಳ್ಳ ಪ್ರತಿಯೊಬ್ಬ ಮನುಷ್ಯನ ಧರ್ಮವಾಗಿರುತ್ತದೆ. ಅದುಕಾರಣ ಪ್ರತಿಯೊಬ್ಬ ಗಂಡಸೂ, ಹೆಂಗಸೂ ತಂತಮ್ಮ ಶಕ್ತ್ಯನುಸಾರ ನಿರ್ವಂಚನೆಯಿಂದ ಈ ರಿಲೀಫ್ ಫಂಡಿಗೆ ಧನಸಹಾಯವನ್ನು ಮಾಡಿ ವಿಪನ್ನರನ್ನುದ್ಧಾರಮಾಡಿದ ಪುಣ್ಯವನ್ನು ತಮ್ಮ ಪಾಲಿಗೆ ತಂದುಕೊಳ್ಳುವವರಾಗಲೆಂದು ಕೋರುತ್ತೇವೆ.

ಶ್ರೀಮದ್ಯುವರಾಜರವರು ಉದ್ಯೋಗತತ್ಪರರಾದುದು.

ಈ ದೇಶದ ಪ್ರಜೆಗಳನ್ನು ಪುತ್ರನಿರ್ವಿಶೇಷದಿಂದ ಪರಿಪಾಲಿಸುತ್ತಿರುವ ನಮ್ಮ ಶ್ರೀಮನ್ಮಹಾರಾಜರವರ ಸಹೋದರರಾದ ಶ್ರೀಮದ್ಯುವರಾಜ ಕಂಠೀರವ ನರಸರಾಜ ಒಡೆಯರ್‌ರವರು ಮೈಸೂರ ಸೀಮೆಯ ಮಿಲ್ಟರಿ ಸೆಕ್ರೆಟರಿಯವರಾಗಿ ನೇಮಿಸಲ್ಪಟ್ಟಿರುವರೆಂಬ ಸುವಾರ್ತೆಯನ್ನು ತಿಳುಹಲು ನಮಗೆ ಅತ್ಯಾನಂದವಾಗುತ್ತದೆ ಶ್ರೀಮದ್ಯುವರಾಜರವರು ಹಿಂದೆ ಒಂದು ಸಂದರ್ಭದಲ್ಲಿ ತಮಗೊಪ್ಪಿಸಲ್ಪಟ್ಟ ವಿಜ್ಞಾಪನಪತ್ರಿಕೆಗೆ ಉತ್ತರವನ್ನು ಕೊಡುವಾಗ್ಗೆ, ರಾಜ್ಯಭಾರನಿರ್ವಾಹದಲ್ಲಿ ಶ್ರೀಮನ್ಮಹಾರಾಜರವರಿಗೆ ತಾವು ನೆರವಾಗುವುದಾಗಿಯೂ, ತಮ್ಮ ಮಾತೃಭೂಮಿಯ ಸೇವೆಯನ್ನು ಮಾಡುವುದಾಗಿಯೂ ಅಪ್ಪಣೆಯನ್ನು ಕೊಡಿಸಿದ್ದುದನ್ನು ಈಗ ಸೈನ್ಯಶಾಖೆಯ ಆಧಿಪತ್ಯವನ್ನು ವಹಿಸುವುದರ ಮೂಲಕ ಸಾರ್ಥಕಮಾಡಿದುದು ಅತ್ಯಂತ ಸ್ತೋತ್ರಾರ್ಹವಾಗಿದೆ. ಇದು ರಾಜ್ಯಾಂಗದಲ್ಲಿ ಬಹು ಮುಖ್ಯವೂ, ಉತ್ತರವಾದಿಯೂ ಆಗಿದ್ದಾಗ್ಯೂ, ಪ್ರಕೃತದಲ್ಲಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಆಶ್ರಯಸಂಸ್ಥಾನಗಳೊಳಗೆ ಅಷ್ಟು ಉಪಯೋಗಿಯಾದುದಲ್ಲವಾಗಿದೆ. ಆದರೂ ಶ್ರೀಮದ್ಯುವರಾಜರು ಈ ಸೈನ್ಯಶಾಖೋದ್ಯೋಗದಲ್ಲಿ ಪರಿಶ್ರಮಮಾಡಿಕೊಳ್ಳುವುದು ಅತ್ಯಾವಶ್ಯಕವಾದುದೇ ಸರಿ. ಇದರಂತೆ ದೇಶಾಭಿವೃದ್ಧಿಗೆ ಸಾಧಕವಾದ ಮುಖ್ಯೋದ್ಯೋಗಗಳನ್ನು ಕೈಕೊಂಡು ಶ್ರೀಮನ್ಮಹಾರಾಜರವರಿಗೆ ಕೀರ್ತಿಯನ್ನೂ, ಸಂತೋಷವನ್ನೂ ಪ್ರಜೆಗಳಿಗೆ ಕ್ಷೇಮವನ್ನೂ ಉಂಟುಮಾಡುವವರಾಗಲೆಂದು ಹಾರೈಸುತ್ತೇವೆ. ಈಗ ಮಿಲ್ಟರಿ ಸೆಕ್ರೆಟರಿಯವರಾಗಿರುವ ಕ॥ ಜೋನ್ಸ್‌ರವರು ಬರುವ ೧೯೧೨ನೆ ಜನವರಿ ತಿಂಗಳಲ್ಲಿ ನಿವೃತ್ತರಾಗುತ್ತಾರಾದುದರಿಂದ, ಶ್ರೀಮದ್ಯುವರಾಜರು ಆವರೆಗೆ ಈ ಸೈನ್ಯಶಾಖೆಗೆ ಸಂಬಂಧಪಟ್ಟ ವಿಷಯಗಳನ್ನು ಕ॥ ಜೋನ್ಸ್‌ನವರಿಂದ ಪರಿಚಯಮಾಡಿಕೊಳ್ಳುತ್ತಿದ್ದು ಅವರು ನಿವೃತ್ತಿಯಾದನಂತರ ಸೆಕ್ರೆಟರಿಯ ಸ್ಥಾನವನ್ನಲಂಕರಿಸುವರು.

ಒಳದೇಶದ ವೃತ್ತಾಂತ.

ಕಾಡುಗಳ ಕನ್ಸರ್ವೇಟರ್ ರಾ॥ ಬ॥ ಮುತ್ತಣ್ಣನವರು ನಿಯಮನಿರ್ಮಾಣಸಭೆಯ ಮೆಂಬರಾಗಿ ನೇಮಿಸಲ್ಪಟ್ಟಿರುವರು.

ಕೋಲಾರದ ಡೆ॥ ಕಮೀಷನರ್ ಮ॥ ಶ್ರೀಕಂಠೇಶ್ವರಯ್ಯರ್‌ರವರು ೧೫ ದಿನಗಳ ಪ್ರಿವಿಲೇಜ್ ರಜವನ್ನಪೇಕ್ಷಿಸಿರುತ್ತಾರೆ.

ಕಳೆದ ತಾ॥ ೨ ರಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಸೆಕ್ರೆಟರಿಗಳೊಡನೆ ಮೋಟಾರು ಬಂಡಿಯಲ್ಲಿ ಉದಕಮಂಡಲಕ್ಕೆ ಚಿತ್ತೈಸಿದರು. ಪ್ರಾಯಶಃ ಮುಂದಿನವಾರದಲ್ಲಿ ಹಿಂತಿರುಗಿ ದಯಮಾಡಿಸುವವರಾಗಿರುವರು.

ಬೆಂಗಳೂರ ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದ ಮ॥ ಸಿ. ಎಸ್. ದೊರಸಾಮಯ್ಯರ್‌ರವರು ಗೌರ್ನವೆಂಟ್ ಅಡ್ವೋಕೇಟರಾಗಿ ನೇಮಿಸಲ್ಪಟ್ಟುದರಿಂದ, ಅಡ್ವೋಕೇಟ್ ಮ॥ ಎಸ್. ರಂಗಣ್ಣನವರು ಮೂರುವರ್ಷಕಾಲದವರೆಗೆ ಪಬ್ಲಿಕ್ ಪ್ರಾಸೆಕ್ಯೂಟರಾಗಿ ನೇಮಿಸಲ್ಪಟ್ಟಿರುವರು.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೩೦,	೩೧,	೧,	೨,	೩,	೪,	೫.
ತಗಲಿದ್ದು.	೮	೩	೮	೩	೯	೫	೧೦
ಸತ್ತದ್ದು.	೪	೮	೨	೫	೮	೫	೮
ಒಟ್ಟು ಮೆ.	೧೦	೧೩	೧೧	೧೪	೧೫	೮	೧೪

ಶ್ರೀಮತ್ ಮಹಾರಾಜರವರು ದಿಲ್ಲಿಯ ದರ್ಬಾರಿಗೆ ದಯಮಾಡಿಸಿದ ವೇಳೆಯಲ್ಲಿ ರೈಲುಬಂಡಿಗಳ ಮತ್ತೂ ವಾಸಸ್ಥಳದ ಬಾಡಿಗೆಗಾಗಿಯೂ, ಊಟದ ವೆಚ್ಚಕ್ಕಾಗಿಯೂ ಮೋಟಾರು ಬಂಡಿಗಳನ್ನು ಕೊಳ್ಳುವುದಕ್ಕಾಗಿಯೂ ಸರ್ಕಾರದವರು ೩॥ ಲಕ್ಷ ರೂಪಾಯಿಗಳನ್ನು ಕೊಡಲಪ್ಪಣೆಮಾಡಿರುತ್ತಾರೆ.

ಹುಜೂರು ಸೆಕ್ರೆಟರಿ ಮ॥ ಪಿ. ರಾಘವೇಂದ್ರರಾಯರ ತಮ್ಮಂದಿರಾದ ಮತ್ತೂ ಬೆಂಗಳೂರು ವೈದ್ಯುತ ಶಾಖೆಯ ಕೆಲಸಗಾರರಲ್ಲೊಬ್ಬರಾದ ಮ॥ ಆರ್. ಕೆ. ಮೂರ್ತಿಯವರು ವೈದ್ಯುತ ವಿದ್ಯಾಭ್ಯಾಸವನ್ನು ಮಾಡಲು ಕಳೆದ ತಾ॥ ೨೯ ರಲ್ಲಿ ಬೊಂಬಾಯಿನಿಂದ ಹಡಗನ್ನು ಹತ್ತಿ ಸೀಮೆಗೆ ಪ್ರಯಾಣಮಾಡಿದರು.

ವಿದ್ಯಾಭ್ಯಾಸದ ಶಾಖೆಯ ಇನ್ಸ್‌ಪೆಕ್ಟರ್ ಜನರಲ್ ಉದ್ಯೋಗಕ್ಕೆ ಬೆಂಗಳೂರ ಸೆಂಟ್ರಲ್ ಕಾಲೇಜಿನ ಮುಖ್ಯೋಪಾಧ್ಯಾಯರಾದ ಮಿ॥ ಟೇಟ್, ಎಂ. ಎ., ಯವರಾಗಲಿ ಅಥವಾ ತುಮಕೂರ ಡೆ॥ ಕಮೀಷನರಾಗಿರುವ ಮ॥ ಎಂ. ಶ್ಯಾಮರಾವ್, ಎಂ. ಎ., ಯವರಾಗಲಿ ನೇಮಿಸಲ್ಪಡಬಹುದೆಂದು ಕೆಲ ಪತ್ರಿಕೆಗಳು ಹೇಳುತ್ತವೆ.

ಕಳೆದ ತಿಂಗಳ ತಾ॥ ೧೮ ರಲ್ಲಿ ಕೋಲಾರದ ಚಿನ್ನದ ಗಣಿಯಲ್ಲಿ ಕಲ್ಲು ಸಿಡಿದೋ ಅಥವಾ ಮತ್ತಾವಕಾರಣದಿಂದಲೋ ಅಪಾಯವು ಸಂಭವಿಸಿ ಕೆಲಸಮಾಡುತ್ತಿದ್ದವರಲ್ಲಿ ೨ ಜನರು ಸತ್ತರು. ಮತ್ತೂ ೬ ಜನರು ಘೋರಾ ಪೆಟ್ಟನ್ನು ತಿಂದು ಆಸ್ಪತ್ರೆಯ ಚಿಕಿತ್ಸೆಯಲ್ಲಿರುವರು. ಇವರಲ್ಲದೆ ಬೇರೆ ೫ ಜನರಿಗೆ ಸಾಧಾರಣ ಪೆಟ್ಟು ಬಿದ್ದಿರುತ್ತದೆ.

ಕಳೆದ ಶುಕ್ರವಾರ ಬೆಂಗಳೂರಲ್ಲಿ, ಟ್ವೆಂಟಿಯತ್ ಡೆಕ್ಕನ್ ಹಾರ್ಸ್ ಎಂಬ ಸೇನೆಯ ಪಂಗಡಕ್ಕೆ ಸೇರಿದ ನಾಯಿಕ್ ಅಹಮದ್ ಬಕ್ಷ್ ಎಂಬಾತನು ಕುದುರೆ ಸ್ವಾರಿಯನ್ನು ಮಾಡುತ್ತ ನೆಲದೊಳಗೆ ಹೂತಿರುವ ಗೂಟವನ್ನು ಭರ್ಜಿಯಿಂದ ತಿವಿದು ಮೇಲಕ್ಕೆ ತೆಗೆಯುವ ಪ್ರಯತ್ನದಲ್ಲಿ ತಲೆಕೆಳಗಾಗಿ ಬಿದ್ದು ತಲೆಯ ಬುರುಡೆಯೊಡೆದುಹೋಗಿ ಕೂಡಲೆ ಸತ್ತುಹೋದನು.

ಚಿತ್ರದುರ್ಗ ಡಿ॥ ಹರಿಹರ, ದಾವಣಗೆರೆ ಮತ್ತೂ ಹೊಸದುರ್ಗ ಈ ಸ್ಥಳಗಳಲ್ಲಿ ಇಲಿಗಳು ವಿಶೇಷವಾಗಿ ಸಾಯುತ್ತಿರುವುದರಿಂದ, ಈ ವೇಳೆ ಪ್ಲೇಗುರೋಗವು ಶೀಘ್ರವಾಗಾರಂಭವಾಗಬಹುದೆಂಬ ಭೀತಿಯು ಅಲ್ಲಿಯಜನರಿಗೆ ವಿಶೇಷವಾಗಿರುತ್ತದೆ. ಈ ಡಿಸ್ಟ್ರಿಕ್ಟಿನ ಅನೇಕಕಡೆ ಮಳೆಯಿಲ್ಲದೆ ಹೊಲಗಳೆಲ್ಲ ಪಾಳುಬಿದ್ದಿವೆ. ಮತ್ತೂ ಕೆಲ ಬಿತ್ತಿದ ಹೊಲಗಳಲ್ಲಿ ಮೊಳಕೆಯೊಣಗಿದೆ. ದನವಿನ ಮೇವಿಗೆ ತುಂಬಾ ತೊಂದರೆಯಾಗಿರುತ್ತದೆ.

ಚಿಂತಾಮಣಿ ಪೊಲೀಸು ಇನ್ಸ್‌ಪೆಕ್ಟರ್ ಮ॥ ಮರಿಯಪ್ಪನವರು ಕೃತ್ರಿಮನಾಣ್ಯಗಳನ್ನು ಮಾಡುವ ಅಚ್ಚು ಮೊದಲಾದ ಸಾಮಗ್ರಿಗಳನ್ನೂ, ೧೨ ಕೃತ್ರಿಮನಾಣ್ಯಗಳನ್ನೂ ಇಟ್ಟುಕೊಂಡಿದ್ದ ವೆಂಕಟಪ್ಪನೆಂಬುವವನನ್ನು ಹಿಡಿದು ಬೆಂಗಳೂರು ಡಿ॥ ಸೆಷನ್ಸ್ ಜಡ್ಜಿ ಮ॥ ಬಿ. ನಾಗಪ್ಪನವರಲ್ಲಿ ವಿಚಾರಣೆಗೆ ಗುರಿಮಾಡಿದ್ದರು. ಜಡ್ಜರು ಕಳೆದ ತಾ॥ ೩೧ ರಲ್ಲಿ ಅಪರಾಧಿಗೆ ೫ ವರ್ಷಗಳ ಕಠಿಣ ಕಾರಾಗೃಹವಾಸ ಶಿಕ್ಷೆಯನ್ನು ಮತ್ತೂ ೫೦ ರೂ. ಗಳನ್ನು ಕೊಡಲು ತಪ್ಪಿದಲ್ಲಿ ಇನ್ನೂ ೬ ತಿಂಗಳ ಕಠಿಣಕಾರಾಗೃಹವಾಸ ಶಿಕ್ಷೆಯನ್ನು ಅನುಭವಿಸತಕ್ಕದೆಂದು ತೀರ್ಮಾನಿಸಿ, ಇನ್ಸ್‌ಪೆಕ್ಟರ್ ಮ॥ ಮರಿಯಪ್ಪನವರು ತಾಮಸವಿಲ್ಲದೆ ಈ ಕೃತ್ಯವನ್ನು ಕಂಡುಹಿಡಿದುದಕ್ಕಾಗಿ ಅವರನ್ನು ಶ್ಲಾಘಿಸಿರುತ್ತಾರೆ.

ರಾಜಧಾನಿಯಲ್ಲಿ ಕಳೆದ ತಾ॥ ೩ ರ ಸಾಯಂಕಾಲ ಷರೀಫ್ ಮತ್ತೂ ಚೆನ್ನಯ್ಯ ಎಂಬ ಯುವಕರಿಬ್ಬರು ಬೈಸಿಕಲ್ಲು ಸ್ವಾರಿಯಲ್ಲಿ ತಮ್ಮಿಬ್ಬರಲ್ಲಾರು ಮುಂದಾಗಿ ಬರುವರೋ ಅವನಿಗೆ ಹಿಂದುಳಿದವನು ೨೫ ರೂ. ಗಳನ್ನು ಕೊಡತಕ್ಕದೆಂದು ಒಪ್ಪಂದಮಾಡಿಕೊಂಡು, ಕಾರಂಜಿ ಕೆರೆಯ ಹತ್ತರವಿರುವ ಕುದುರೆಯ ಲಾಯದ ಬಂಗಲೆಯ ಸುತ್ತಲೂ ಇರುವ ಮಾರ್ಗದಲ್ಲಿ ಸ್ವಾರಿಯನ್ನು ಮಾಡಲು ಸೇರಿದ್ದರು. ಇವರಿಬ್ಬರಲ್ಲಿ ಇಂಥವನೇ ಗೆಲ್ಲುತ್ತಾನೆಂದು ಬೇರೆ ಜನರು ೫೦೦—೬೦೦ ರೂ. ಗಳ ವರೆಗೆ ಪಂದ್ಯವನ್ನು ಕಟ್ಟಿಕೊಂಡಿದ್ದರು. ಈ ವಿನೋದವನ್ನೋಡಲು ೫೦೦-೬೦೦ ಜನರಿಗಿಂತ ಹೆಚ್ಚಾಗಿಯೇ ಸೇರಿದ್ದರು. ಈ ಬೈಸಿಕಲ್ಲು ಸ್ವಾರರು ಮುಂದಾಗಿ ಪೊಲೀಸರ ಅಪ್ಪಣೆಯನ್ನೂ, ಅವರ ಸಹಾಯವನ್ನೂ ಪಡೆದುಕೊಂಡಿರಲಿಲ್ಲವಾಗಿ, ನಜರಬಾದು ಪೊಲೀಸು ಠಾಣದ ಪೊಲೀಸಿನವರು ಬಂದು ಬೈಸಿಕಲ್ಲು ಪಂದ್ಯವನ್ನು ನಿಲ್ಲಿಸಿಬಿಟ್ಟು, ಜನರ ಗುಂಪನ್ನು ಚದರಿಸಿ ಬಿಟ್ಟರು. ಆ ದಿವಸ ಪೊಲೀಸರು ಮುಂಜಾಗರೂಕತೆಯಿಂದಿದ್ದು ಪಂದ್ಯವು ನಡೆಯದಂತೆ ಅಡ್ಡಿಪಡಿಸದಿದ್ದಲ್ಲಿ, ಗೆಲವು ಸೋಲಿನ ವಿಚಾರದಲ್ಲಿ ಕಲಹವುಂಟಾಗಿ ವಿಶೇಷ ಅನರ್ಥವಾಗುತ್ತಿದ್ದಿತೆಂದು ಒಬ್ಬ ಪ್ರೇಕ್ಷಕರು ತಿಳಿಸುತ್ತಾರೆ.

ನೆನ್ನೆಯ ದಿನ ಬೆಳಗಿನ ಝಾವದ (೨-೫ ಗಂಟೆಯ) ಸಮಯದಲ್ಲಿ ಒಂದು ಕಾಲು ಕುಂಟನಾದವನೊಬ್ಬನು ರಾಜಧಾನಿಯ ಕೋಟೆಯೊಳಗಿರುವ ಡೆ॥ ಕ॥ ಎಂ. ಕಾಂತರಾಜ ಅರಸಿನವರ ಮನೆಯ ಎರಡನೇ ಅಂತಸ್ತಿಗೆ ಹೇಗೋ ಪ್ರವೇಶಿಸಿ, ಮ॥ ಕಾಂತರಾಜ ಅರಸಿನವರೂ, ಅವರ ಸೋದರಳಿಯಂದರಾದ ಮ॥ ಬಾಳರಾಜ ಅರಸಿನವರೂ ಮಲಗಿದ್ದ ಕೊಠಡಿಯ ಬಾಗಲು ಭದ್ರಪಡಿಸಿದ್ದಾಗ್ಯೂ, ಅದನ್ನು ಹೇಗೋ ತೆಗೆದು ಒಳಗೆ ಹೋಗಿ ಮ॥ ಬಾಳರಾಜ ಅರಸಿನವರು ಮಲಗಿದ್ದ ಹಾಸಿಗೆಯ ಮೇಲೆ ಕುಳಿತುಕೊಂಡಿದ್ದನು. ಅವರು ಎಚ್ಚತ್ತು ಇವನನ್ನೋಡಿ ದಿಗಿಲುಬಿದ್ದು ಕೂಗಿಕೊಂಡರು. ಅಷ್ಟರಲ್ಲಿ ಮ॥ ಕಾಂತರಾಜ ಅರಸಿನವರೂ ಎಚ್ಚೆತ್ತು ಆಳುಗಳನ್ನು ಕೂಗಿದರು. ಈ ಕುಂಟನು ಆಳುಗಳು ಬರುವಷ್ಟರಲ್ಲಿ ಸ್ತ್ರೀಯರು ಮಲಗುವ ಮನೆಗೆ ನುಗ್ಗಿ ಯತ್ನಿಸಲು ಅಲ್ಲಿದ್ದವರೆಲ್ಲರೂ ದಿಗಿಲುಬಿದ್ದು ಕೂಗಿಕೊಳ್ಳಲು, ಗಾರ್ಡಿಯರು ಬಂದು ಅವನನ್ನು ಹಿಡಿದುಕೊಂಡು ಆಳುಗಳ ವಶಮಾಡಿದರು. ಅವನು ಈಗ ಪೊಲೀಸರ ವಿಚಾರಣೆಯಲ್ಲಿರುವನು. ಮನೆಯೊಳಗೆ ಹೇಗೆ ಮತ್ತೂ ಏತಕ್ಕಾಗಿ ಪ್ರವೇಶಮಾಡಿದೆ? ಎಂದು ಕೇಳುವಲ್ಲಿ, ನನಗೇನೂ ತಿಳಿಯದು; ಮನೆಯನ್ನೋಡಲು ಹೋಗಿದ್ದೆನು ಎಂದು ಹೇಳುತ್ತಾನಂತೆ. ಸಿಪಾಯಿಗಳು, ಪೊಲೀಸಿನವರು, ಓಲೆಕಾರರು ಮೊದಲಾದವರು ತಲಬಾಗಲಿನಲ್ಲೂ, ಒಳಗೂ ಕಾವಲಿದ್ದಾಗ್ಯೂ, ಆ ಕುಂಟನು ಮನೆಯೊಳಗೆ [illegible] ಮಲಗಿಕೊಳ್ಳುವ ಕೊಠಡಿಯೊಳಗೆ ಪ್ರವೇಶಮಾಡಿದುದು ಆಶ್ಚರ್ಯವಾಗಿರುವುದಲ್ಲದೆ, ಆ ಕಾವಲುಗಾರರು ಎಷ್ಟರಮಟ್ಟಿಗೆ ಎಚ್ಚರವಾಗಿದ್ದರೆಂಬುದು ವ್ಯಕ್ತವಾಗುತ್ತದೆ.

ವರ್ತಮಾನ ಸಂಗ್ರಹ.

ಬೊಂಬಾಯಿನಲ್ಲೂ, ಅದರ ನೆರೆ ಡಿಸ್ಟ್ರಿಕ್ಟುಗಳಲ್ಲೂ ಮಳೆಯು ವಿಶೇಷವಾಗಿ ಆಗುತ್ತಿದೆ. ಆದರೆ ಗುಜರಾತಿನಲ್ಲಿ ಮಾತ್ರ ಮಳೆಯಿಲ್ಲದೆ ಜನರ ಆಹಾಕಾರವು ಬಹಳವಾಗಿದೆ.

ಪ್ಯಾರಿಸ್ ಪಟ್ಟಣದಲ್ಲಿ ಒಬ್ಬ ಕೋಟ್ಯಾಧೀಶ್ವರನಾದ ಪರೋಪಕಾರಿಯು ಮಾರ್ಗದಲ್ಲಿ ಬರುತ್ತಿರುವಾಗ್ಗೆ ಒಂದು ಮೋಟಾರು ಬಂಡಿಗೆ ಸಿಕ್ಕಿ ಪ್ರಾಣಾಪಾಯವನ್ನು ಹೊಂದಿ ಆಸ್ಪತ್ರೆಗೆ ಸಾಗಿಸಲ್ಪಟ್ಟ ಕೊಂಚ ಹೊತ್ತಿನಲ್ಲಿ ಸತ್ತುಹೋದನು.

ರಷ್ಯಾ ರಾಜ್ಯದ ಆಗ್ನೇಯಭಾಗದಲ್ಲಿ ಬೆಳೆಯಾಗದೆ ಕ್ಷಾಮವು ಪ್ರಾಪ್ತವಾಗಿರುವುದರಿಂದ, ರಷ್ಯಾ ಸರ್ಕಾರದವರು ವಿಪನ್ನರಾದವರಿಗೆ ಧಾನ್ಯವನ್ನು ಅಗಲುಕ್ರಯಕ್ಕೆ ನೀಡಲು ಮತ್ತೂ ಕ್ಷಾಮನಿವಾರಣಾ ಕಾರ್ಯಗಳನ್ನಾರಂಭಿಸಲು ನಿರ್ಧರಿಸಿರುವರು.

ಪನಾಮಾಕ್ಕೆ ಆಗ್ನೇಯದಿಕ್ಕಿನಲ್ಲಿ ೫೦೦ ಮೈಲಿ ಆಚೆಯಿರುವ ಕಾಕೆಸ್ ದ್ವೀಪದಲ್ಲಿ ೩೦೦೦೦೦೦೦ ರೂಪಾಯಿಗಳು ಕಳೆದ ಶತಮಾನದ ಆದಿಭಾಗದಲ್ಲಿ ಸಮುದ್ರದ ಮೇಲಿನ ಕಳ್ಳರಿಂದ ಭೂಮಿಯಲ್ಲಿ ಹೂಳಲ್ಪಟ್ಟಿದೆಯೆಂದು ಅದನ್ನು ಹುಡುಕಲು ಅಮೇರಿಕಾದ ಸಂಯುಕ್ತ ಸಂಸ್ಥಾನದಿಂದ ಕೆಲ ಜನರು ಹೊರಟಿರುತ್ತಾರೆ.

ತುರ್ಕಿಯ ಸುಲ್ತಾನನಾಗಿದ್ದು ಪದಭ್ರಷ್ಟನಾದ ಅಬ್ದುಲ್ ಹಾಮಿದನಿಗೆ ಸಂಬಂಧಪಟ್ಟ ಆಭರಣಗಳು ವಿಕ್ರಯಿಸಲ್ಪಡುವುದಕ್ಕಾಗಿ ಪ್ಯಾರಿಸ್ ಪಟ್ಟಣಕ್ಕೆ ಕಳುಹಲ್ಪಟ್ಟಿರುವುವು. ಇವುಗಳಿಂದಾಗುವ ಉತ್ಪನ್ನವು ತುರ್ಕಿ ರಾಜ್ಯದುಪಯೋಗಕ್ಕಾಗಿ ಕಟ್ಟಲ್ಪಡುತ್ತಿರುವ ಡ್ರೆಡ್‌ನಾಟ್ ಎಂಬ ಯುದ್ಧದ ಹಡಗಿಗಾಗಿ ಉಪಯೋಗಿಸಲ್ಪಡುವುದಂತೆ.

ಆಸ್ಟ್ರಿಯಾ ರಾಜ್ಯದಲ್ಲಿ ಗ್ಯಾಲಿಸಿಯಾಕ್ಕೆ ಸೇರಿದ ಗಾರ್ಟ್‌ಕೆಚ್ ಎಂಬಲ್ಲಿ ಒಬ್ಬ ರೈತನ ಹೆಂಡತಿಯು ಕಳೆದ ಜುಲೈ ತಾ॥ ೧೪ ರಲ್ಲಿ ಆವೇಶಬಂದವಳಾಗಿ ಒಲೆಗೆ ಬೆಂಕಿಯನ್ನು ಹೊತ್ತಿಸಿ ಅದು ಕೆಂಪಗೆ ಕಾದಿರುವಾಗ್ಗೆ ತನ್ನ ಬಟ್ಟೆಯನ್ನು ತೆಗೆದುಬಿಟ್ಟು ನಿರ್ವಾಣದಿಂದ ಬೆಂಕಿಯೊಳಗೆ ಬಿದ್ದುಬಿಟ್ಟಳು. ಅವಳ ಗಂಡನೂ, ಮಕ್ಕಳೂ ಬೆಂಕಿಯನ್ನು ತೆಗೆದು ನೋಡುವಾಗ್ಗೆ ಅವಳ ಶರೀರವು ಸುಟ್ಟು ಇದ್ದಲಾಗಿದ್ದುದು ಕಂಡುಬಂದಿತು.

ವಿದ್ಯಾವಿಷಯಕವಾದ ಬೋರ್ಡಿನ ಪ್ರೆಸಿಡೆಂಟರು ಪಾಠಶಾಲೆಗಳಿಗೆ ಹೋಗತಕ್ಕಂಥ ೨೧,೦೧,೦೦೦ ಲಕ್ಷ ಮಕ್ಕಳುಗಳನ್ನು ವೈದ್ಯರಿಂದ ಪರೀಕ್ಷೆ ಮಾಡಿಸಿದುದರಲ್ಲಿ ೧೦೦ ರಲ್ಲಿ ೧೦ ರಂತೆ ದೃಷ್ಟಿಕಡಿಮೆಯುಳ್ಳವರಾಗಿರುವವರೂ, ೧೦೦ ರಲ್ಲಿ ೨೦ ರಿಂದ ೬೦ ರ ವರೆಗೆ ಪ್ರಬಲವಾದ ಹಲ್ಲಿನ ಬಾಧೆಯುಳ್ಳವರೂ, ೧೦೦ ರಲ್ಲಿ ೩೦ ರಿಂದ ೫೦ ರ ವರೆಗೆ ಶ್ರವಣಶಕ್ತಿ ಕಡಿಮೆಯಾಗಿರುವವರೂ, ೧೦೦ ರಲ್ಲಿ ೧ ರಿಂದ ೪ ರ ವರೆಗೆ ಕರುಳಿನಮೇಲೆ ಹುಣ್ಣಾಗಿರುವವರೂ, ೧೦೦ ರಲ್ಲಿ ೧೦ ರಂತೆ ಶ್ವಾಸಕೋಶ ಸಂಬಂಧವಾದ ರೋಗವುಳ್ಳವರೂ ಇರುವುದಾಗಿ ಕಂಡುಬಂದಿರುವುದೆಂದು ತಿಳಿಸಿರುತ್ತಾರೆ.

ದಿಲ್ಲಿಯಲ್ಲಿ ಕಿರೀಟಧಾರಣ ಮಹೋತ್ಸವವು ನಡೆಯುವ ಕಾಲದಲ್ಲಿ ವರ್ತಕರು ಆಹಾರ ಪದಾರ್ಥಗಳ ಬೆಲೆಯನ್ನು ಮಿತಿಮೀರಿ ಹೆಚ್ಚಿಸಿಬಿಡುವರೆಂಬ ಶಂಕೆಯಿಂದ, ದರ್ಬಾರು ಸಮಿತಿಯವರು ಒಂದು ದೊಡ್ಡ ಮಾರ್ಕೆಟ್ಟನ್ನು ಕಟ್ಟಿಸಿರುತ್ತಾರೆ. ಮತ್ತೂ ಪದಾರ್ಥಗಳ ಬೆಲೆಯನ್ನು ಗೊತ್ತುಮಾಡಿ ಅವುಗಳ ಮಾರಾಟದ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳಲು ಒಬ್ಬ ಸೂಪರಿಂಟೆಂಡೆಂಟರನ್ನು ನೇಮಿಸಿರುತ್ತಾರೆ. ಈ ಮಾರ್ಕೆಟ್ಟಿನೊಳಗೆ ವ್ಯಾಪಾರಮಾಡತಕ್ಕವರು ಸೂಪರಿಂಟೆಂಡೆಂಟರು ಗೊತ್ತುಮಾಡುವ ಬೆಲೆಗೇನೇ ತರಕಾರಿ, ಧಾನ್ಯ, ಮಾಂಸ ಮೊದಲಾದ ಪದಾರ್ಥಗಳನ್ನು ಮಾರಬೇಕೆಂದು ನಿರ್ಧರವಾಗಿರುತ್ತದೆ.

ರಷ್ಯಾದೇಶದ ೧೬-೧೭ ವರ್ಷ ವಯಸ್ಸಿನ ಒಬ್ಬ ಬಹು ಸುಂದರಳಾದ ಯುವತಿಗೆ ಯೋಗ್ಯವಾದ ಜೀವನೋಪಾಯವನ್ನು ಕಲ್ಪಿಸಿಕೊಡುತ್ತೇನೆಂದು ಒಬ್ಬ ಮನುಷ್ಯನು ಭರವಸವನ್ನು ಕೊಟ್ಟು ಆಕೆಯನ್ನು ಅಪಹರಿಸಿಕೊಂಡು ಬಂದು ಪೋರ್ಟ್‌ಸೈಡಿನಲ್ಲಿ ಅನಾಥಳನ್ನಾಗಿ ಬಿಟ್ಟು ಹೋಗಲು, ಆ ಸುಂದರಿಯು ಅಲ್ಲಿಂದ ಬೊಂಬಾಯಿಗೆ ಬಂದಳು. ಅಲ್ಲಿ ದೇಹವನ್ನು ವಿಕ್ರಯಿಸಿಕೊಂಡು ಜೀವಿಸುವವಳೊಬ್ಬಳು ಆ ಯುವತಿಯನ್ನು ಉಪಾಯಾಂತರದಿಂದ ತನ್ನ ವಶಮಾಡಿಕೊಂಡು ನೀಚವೃತ್ತಿಗಾಗಿ ಕಲಕತ್ತಾಕ್ಕೆ ಕರೆದುಕೊಂಡುಬಂದಳು. ಅಲ್ಲಿ ಆ ಹುಡುಗಿಯು ಆ ಕೃತ್ಯಕ್ಕೊಡಂಬಡದೆ ಪೊಲೀಸ್ ಕಮೀಷನರಲ್ಲಿಗೆ ಹೋಗಿ ನಡೆದ ವೃತ್ತಾಂತವನ್ನೆಲ್ಲ ತಿಳಿಸಲು, ಅವರು ಆ ಯುವತಿಯನ್ನು ೧೪ ದಿನಗಳೊಳಗಾಗಿ ಅವಳ ಸ್ವಸ್ಥಳಕ್ಕೆ ಕಳುಹಲ್ಪಡತಕ್ಕದೆಂದು ಅಪ್ಪಣೆಮಾಡಿದರು.

ಪೀರ್‌ಭಾಗೆಲು ಎಂಬುವನು ತಾನು ಕಲಕತ್ತಾದಲ್ಲಿ ಪ್ರಸಿದ್ಧ ಗಾಯಕಿಯಾಗಿದ್ದ ಮಾಲ್ಕಾಜಾನಿನ ಮಗನಾದುದರಿಂದ, ಅವಳಾಸ್ತಿಯು ತನಗೆ ಸೇರಬೇಕೆಂದು ಈಗ ಕಲ್ಕತ್ತಾದಲ್ಲಿ ಬಹು ಪ್ರಸಿದ್ಧ ಗಾಯಕಿಯಾಗಿರುವ ಮಾಲ್ಕಾಜಾನಿನ ಮಗಳು ಗೋಹರ್‌ಜಾನಿನ ಮೇಲೆ ಕಲಕತ್ತಾ ಹೈಕೋರ್ಟಿನಲ್ಲಿ ವಿವಾದವನ್ನು ಮಾಡಿದ್ದನು. ಮಾಲ್ಕಾಜಾನಿನ ಹೊಟ್ಟೆಯಲ್ಲಿ ಷೇಕ್ ವಜೀರ್ ಎಂಬುವನಿಗೆ ಹುಟ್ಟಿದನೆಂಬ ಅವನ ಹೇಳಿಕೆಯು ಅಸಿದ್ಧವೆಂದೂ, ಪ್ರತಿವಾದಿಯಾದ ಗೋಹರ್‌ಜಾನಳು ಅಲಹಾಬಾದಿನ ಕ್ರೈಸ್ತ ದೇವಸ್ಥಾನದಲ್ಲಿ ವಿಧ್ಯುಕ್ತವಾಗಿ ರಾಬರ್ಟ್ ವಿಲಿಯಂ ಯಿವಾರ್ಡ್ ಎಂಬ ಐರೋಪ್ಯನನ್ನು ವಿವಾಹಮಾಡಿಕೊಂಡಿದ್ದ ಕ್ರೈಸ್ತ ಮತಸ್ಥಳಾದ ವಿಕ್ಟೋರಿಯಾ ಹೆಮಿಂಗ್ಸ್ ಎಂಬಾಕೆಯ ಹೊಟ್ಟೆಯಲ್ಲಿ ತಾನು ಹುಟ್ಟಿದವಳು, ತನ್ನ ತಾಯಿಯಾದ ವಿಕ್ಟೋರಿಯಾ ಹೆಮಿಂಗ್ಸಿಗೂ, ತಂದೆಯಾದ ಯಿವಾರ್ಡಿಗೂ ವಿವಾಹಸಂಬಂಧ ವಿಮೋಚನೆಯಾಗಿ ತಾನೂ, ತನ್ನ ತಾಯಿಯೂ ಕಲಕತ್ತಾಕ್ಕೆ ಹೋದಮೇಲೆ, ತನ್ನ ತಾಯಿಯು ಮಾಲ್ಕಾಜಾನ್ ಎಂದು ತನ್ನ ಹೆಸರನ್ನು ಬದಲಾಯಿಸಿಕೊಂಡಳು, ಮತ್ತೂ ವಾದಿಯು ತಮ್ಮ ಮನೆಯಲ್ಲಿದ್ದ ಗೌಡಿಯ ಮಗನು ಎಂಬ ಅವಳ ಹೇಳಿಕೆಯು ಸಿದ್ಧವಾದುದೆಂದೂ ಜಡ್ಜರು ತೀರ್ಮಾನಿಸಿ ವಾದಿಯ ವಿವಾದವನ್ನು ತಳ್ಳುಪಡಿ ಮಾಡಿದರು.

ಅಯೋಧ್ಯದ ಒಬ್ಬ ಮಹನ್ನಡೀಯನು ಕೆಲ ದಿನಗಳ ಕೆಳಗೆ ಮಾಲ್ದಾ ಎಂಬಲ್ಲಿಗೆ ಬಂದು ಚೌಧುರಿ ಜಮೀನ್‌ದಾರರ ಗಜಶಾಲೆಯಲ್ಲಿ ಒಂದು ವಾರದವರೆಗಿದ್ದು ಕಳೆದ ಜುಲೈ ತಾ॥ ೨೦ ರ ಮಧ್ಯರಾತ್ರಿಯಲ್ಲಿ ಒಂದು ಹೆಣ್ಣಾನೆಯನ್ನು ತೆಗೆದುಕೊಂಡು ಗಜಶಾಲೆಯನ್ನು ಬಿಟ್ಟು ಜನರು ತಿರುಗಾಡದ ಮಾರ್ಗದಲ್ಲಿ ಹೊರಟು ಗಂಗಾನದಿಯ ದಡದಮೇಲಿರುವ ಕಾಳಿಯಚೌಕವೆಂಬೂರಿಗೆ ಬಂದನು. ಅಲ್ಲಿ ಕೇಳಿದವರಿಗೆ ಆ ಆನೆಯು ಮುರುಷಿದಾಬಾದಿನ ನವಾಬರದು; ರಾಜಮಹಲ್ಲಿನಲ್ಲಿರುವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರನ್ನು ಕರೆದುಕೊಂಡು ಹೋಗಲು ಬೇಕಾಗಿದೆಯೆಂದು ಹೇಳಿ [illegible]

ಜನರಿಂದಲೂ, ಪೋಲೀಸಿನವರಿಂದಲೂ ಬೇಕಾದ ಸಹಾಯವನ್ನು ಹೊಂದಿದನು. ಆನೆಯು ಕಳುವಿನ ವಿಚಾರವು ಜಮೀನ್ದಾರರಿಗೆ ತಿಳಿದು, ಆ ಆನೆಯ ಮಾಹುತನನ್ನೂ, ಪಾಲ್ಕಾದ ಪೋಲೀಸಿನವರನ್ನೂ ಅದನ್ನು ಹುಡುಕಲು ಕಳುಹಿಸಿಕೊಟ್ಟರು. ಅವರು ಆ ಆನೆಯ ಹೆಜ್ಜೆಯ ಗುರ್ತನ್ನು ಹಿಡಿದು ಬಂದು ಆ ಕಳ್ಳನು ಗಂಗಾನದಿಯನ್ನು ದಾಟುವಷ್ಟರಲ್ಲಿ ಅವನನ್ನು ಆನೆಯ ಸಮೇತ ಹಿಡಿದುಕೊಂಡು ಬಂದು ಪಾಲ್ಕಾದ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದರು.

ಕಲಕತ್ತಾದ ೨ ನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಒಬ್ಬ ೨೪ ವರ್ಷ ವಯಸ್ಸಿನ ಯುವತಿಯು ತನ್ನ ಗಂಡನು ತನ್ನ ಜೀವನಕ್ಕೆ ಕೊಡದೆ ನಿರಾಕರಿಸಿಬಿಟ್ಟಿದ್ದಾನಾದುದರಿಂದ ಜೀವನಾಂಶವನ್ನು ಕೊಡಿಸಬೇಕೆಂದು ಫಿರ್ಯಾದನ್ನು ಮಾಡಿರುವಳು. ಮ್ಯಾಜಿಸ್ಟ್ರೇಟರು ವಿಚಾರಣೆಯಾದಿನ ಅಪರಾಧಿಯನ್ನು ಕೂಗಿಸುವಲ್ಲಿ, ಅವನು ಬಹಳ ಹೊತ್ತಿನ ವರೆಗೆ ಬರಲೇ ಇಲ್ಲವು. ಅಷ್ಟರಲ್ಲಿ ಅಲ್ಲಿದ್ದ ಪೋಲೀಸಿನವನು ಕೋರ್ಟಿನ ಹೊರಗಡೆ ಸುಳಿದಾಡುತ್ತಿದ್ದ ೧೨ ವರ್ಷ ವಯಸ್ಸಿನ ಒಬ್ಬ ಹುಡುಗನನ್ನು ಹಿಡಿದುಕೊಂಡುಬಂದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ, ಇವನೇ ಅಪರಾಧಿಯೆಂದು ಹೇಳಿದನು. ಮ್ಯಾಜಿಸ್ಟ್ರೇಟರು ಅವನನ್ನೋಡಿ ಇಷ್ಟು ಚಿಕ್ಕ ಹುಡುಗನು ೨೪ ವರ್ಷ ವಯಸ್ಸಿನ ಹೆಂಗುಸಿನ ಗಂಡನೆಂಬುದು ಆಭಾಸವು ಮತ್ತೂ ನಾನು ಇದನ್ನೊಂಬುವುದಿಲ್ಲವೆಂದು ಹೇಳಲು, ಫಿರ್ಯಾದಿಕತೆಯ ಲಾಯರು—ಫಿರ್ಯಾದಿಯನ್ನು ಶಾಸ್ತ್ರೋಕ್ತವಾಗಿ ವಿವಾಹ ಮಾಡಿಕೊಂಡ ಗಂಡನಿವನೇ. ಇವನಿಗೆ ಬೇಕಾದಷ್ಟು ಆಸ್ತಿ ಇದ್ದಾಗ್ಯೂ ಹೆಂಡತಿಗೆ ಜೀವನಕ್ಕೆ ಕೊಡುವುದಿಲ್ಲ ಎಂದು ವಾದಿಸಲು, ಮ್ಯಾಜಿಸ್ಟ್ರೇಟರು ಅಪ್ರಾಪ್ತವಯಸ್ಕನಾದ ಅಪರಾಧಿಯು ಜೀವನಕ್ಕೆ ಕೊಡುವಂತೆ ಹೇಗೆ ವಿಧಿಸುವುದೆಂದು ಸಂಶಯಪಟ್ಟರು. ಆಗ ಫಿರ್ಯಾದಿಯ ವಕೀಲನು ಅದಕ್ಕೆ ತಕ್ಕಾಧಾರವನ್ನು ತೋರಿಸಿಕೊಡಲು ಮುಂದಿನ ವಿಚಾರಣೆಗಿಡಲ್ಪಟ್ಟಿತು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ಗಮನಿಸತಕ್ಕದ್ದು. ಪ. ಪ್ರ.

ಪತ್ರವ್ಯವಹಾರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು.
ಮ॥ ರಾ॥ ಗಳಾದ

ಬೆಳ್ಳಾವಿ ಜಿ. ಚನ್ನಪ್ಪನವರಿಂದ ಗಟ್ಟಿ ಅದಿವಪ್ಪನ ಮದುವೆಯಲ್ಲಿ	೯—೦—೦
ಈಚನೂರು ಗುರುದೇವಣ್ಣನವರ ಮಕ್ಕಳು ಸಿದ್ಧಪ್ಪನವರ ಮದುವೆಯಲ್ಲಿ	೭—೦—೦
ಸುತ್ತೆಕೋಟೆ ಗರ್ಜನ ಮಲ್ಲಯ್ಯನವರಿಂದ ಫಂಡಿಗೆ ವಾಗ್ದಾನಮಾಡಿದ್ದುದಕ್ಕಾಗಿ	೪೦—೦—೦
ಬೇಲೂರು ದೇಶದ ಸೆಟ್ಟರು ಸಾಂಬಯ್ಯನವರಿಂದ … …	೧೦—೮—೦
ಆಲ್ದೂರು ಮಲ್ಲಸೆಟ್ಟರ ಬಸೆಟ್ಟರ ಮಕ್ಕಳ ಲಗ್ನದಲ್ಲಿ (ಹಾಸನ) …	೧೦—೮—೦
ಒಟ್ಟು …	೭೭—೦—೦
ಹಿಂದೆ ಬಂದಿರುವುದು …	೧೮೨—೦—೦
ಒಟ್ಟು …	೨೫೯—೦—೦

ಜಿ. ಶಾಂತವೀರಪ್ಪ, ಸೆಕ್ರೆಟರಿ.

ಮಳವಳ್ಳಿ ತಾ॥ ಬೆಳಕವಾಡಿ ಶ್ರೀ ಜಗನ್ಮೋಹನ ರಂಗನಾಥಸ್ವಾಮಿ ಪರಸ್ಪರ ಸಹಾಯಸಂಘ (ಅನ್ ಲಿಮಿಟೆಡ್.)

ಈ ಸಂಘದ ಜನರಲ್ ಮೀಟಿಂಗು ಮಳವಳ್ಳಿ ತಾ॥ ಸಬ್ ರಿಜಿಸ್ಟ್ರಾರ್, ಮ॥ ರಾ॥ ಲಕ್ಷ್ಮೀಕಾಂತಯ್ಯಂಗಾರ್, ಬಿ. ಎ., ಯವರು, ಮೈಸೂರು ಡಿ॥ ಕೋ॥ ಆ॥ ಸೊಸೈಟಿಗಳ ಇನ್ಸ್ಪೆಕ್ಟರ್ ಮ॥ ರಾ॥ ಪುಟ್ಟಸೋಮಯ್ಯ, ಬಿ. ಎ., ಯವರು ಮತ್ತೂ ಮಳವಳ್ಳಿ ತಾ॥ ಶಿರಸ್ತೇದಾರ್ ಮ॥ರಾ॥ ರಾಮಚಂದ್ರಯ್ಯನವರು ಇವರುಗಳ ಯಜಮಾನ್ಯದಿಂದ ಈ ಊರ, ಸ್ಕೂಲ್ ಕಟ್ಟಡದಲ್ಲಿ ತಾ॥ ೨೩-೭-೧೧ ರಲ್ಲಿ ನೆರವೇರಿಸಲ್ಪಟ್ಟಿತು. ಸ್ಕೂಲ್ ಕಟ್ಟಡವು ತಳಿರುತೋರಣಗಳಿಂದಲೂ, ಕದಳೀ ಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟು, ಮೆಂಬರುಗಳಿಂದಲೂ, ೧೦೩ ಮಂದಿ ಪ್ರೇಕ್ಷಕರಿಂದಲೂ ತುಂಬಿತುಳುಕುತ್ತಿತ್ತು. ಸಭಿಕರ ಕೋರಿಕೆಯ ಮೇರೆ ಜಮೀನ್ದಾರ್ ಮ॥ರಾ॥ ಅಶ್ವತ್ಥನಾರಣಯ್ಯನವರು ಅಗ್ರಾಸನವನ್ನು ವಹಿಸಿದರು. ಈ ಸ್ಕೂಲ್ ಹೆಡ್ಮಾಸ್ಟರ್ ಮತ್ತೂ ಈ ಸಂಘದ ಆ॥ ಸೆಕ್ರೆಟರಿಗಳಾದ ಮ॥ ಜಿ. ರಾಮಯ್ಯನವರು ೧೯೧೦-೧೧ ನೇ ಸಾಲಿನ ಸಂಘದ ಆಡಳಿತದ ರಿಪೋರ್ಟನ್ನು ಬಹು ಸ್ವಾರಸ್ಯವಾಗಿ ತಯಾರ್ಮಾಡಿ ಓದಿದರು. ೧೯೧೦—೧೧ ನೇ ಸಾಲಿನ ಕಾರ್ಯನಿರ್ವಾಹಕ ಸಂಘದವರೇ ೧೯೧೧—೧೨ ನೇ ಸಾಲಿಗೂ ಕಾರ್ಯನಿರ್ವಾಹಕರಾಗಿರಬೇಕೆಂದು ತೀರ್ಮಾನಿಸಲಾಯಿತು. ಸೆಕ್ರೆಟರಿಗಳಾದ ಮ॥ರಾ॥ ನಾರಣಪ್ಪನವರು ಈ ಸಂಘದ ಆಫೀಸಿಗೆ ಒಂದು ಆಲಯವನ್ನು ಉಚಿತವಾಗಿ ಕೊಟ್ಟಿರುವುದಕ್ಕಾಗಿಯೂ, ಮ॥ರಾ॥ ಶ್ಯಾ॥ ನಂಜುಂಡಯ್ಯನವರು, ಟ್ರೆಜರರ್ ಮ॥ರಾ॥ ರಂಗಯ್ಯನವರು, ಏಜಂಟ್ ಮ॥ ರಾ॥ ಹಲಗಪ್ಪನವರು ಮುಂತಾದವರು ಈ ಸಂಘದ ಕೆಲಸಗಳಲ್ಲಿ ನಿರತರಾಗಿ ತಮ್ಮಗಳಿಗೆ ಮಾಡಿದ ಸಹಾಯಕ್ಕಾಗಿಯೂ ಸಭಿಕರು ಅವರುಗಳಿಗೆ ವಂದನೆಗಳನ್ನು ಸಮರ್ಪಿಸಿದರು. ಈ ಸಂಘದ ಕಾರ್ಯಗಳನ್ನು ಅಕ್ಕರೆಯಿಂದಲೂ, ವಿಚಕ್ಷಣೆಯಿಂದಲೂ ನಡೆಸುತ್ತಿರುವ ಆ॥ ಸೆಕ್ರೆಟರಿ ಮ॥ ರಾ॥ ಜಿ. ರಾಮಯ್ಯನವರಿಗೆ ಸಭಿಕರು ಒಂದು ಬೆಳ್ಳಿ ಬಟ್ಟಲನ್ನು ಕೋ-ಆ॥ ಸೊಸೈಟಿಗಳ ಇನ್ಸ್ಪೆಕ್ಟರವರ ಹಸ್ತದಿಂದ ಬಹುಮಾನವಾಗಿ ಕೊಡಿಸಿದರು. ಅನೇಕ ಬುದ್ಧಿವಾದಗಳನ್ನು ಹೇಳಿ ಈ ಸಂಘವನ್ನು ಸ್ಥಾಪಿಸಿ ಅದರ ಪುರೋಭಿವೃದ್ಧಿಯಲ್ಲಿ ನಿರತರಾಗಿರುವ ಸಬ್ ರಿಜಿಸ್ಟ್ರಾರ್ ಮ॥ ರಾ॥ ಲಕ್ಷ್ಮೀಕಾಂತಯ್ಯಂಗಾರ್, ಬಿ. ಎ, ಯವರಿಗೂ ಕೋ-ಆ॥ ಸೊಸೈಟಿಗಳ ಇನ್ಸ್ಪೆಕ್ಟರ್ ಮ॥ರಾ॥ ಪುಟ್ಟಸೋಮಯ್ಯ, ಬಿ. ಎ, ಯವರಿಗೂ, ಶಿರಸ್ತೇದಾರ್ ಮ॥ ರಾಮಚಂದ್ರಯ್ಯನವರಿಗೂ ಸಭಿಕರು ವಂದನೆಯನ್ನರ್ಪಿಸಿದರು. ಸಭಾಧ್ಯಕ್ಷರು ಸಮಯೋಚಿತ ವಾಕ್ಯಗಳಿಂದ ಸಭಿಕರನ್ನು ಸನ್ಮಾನಿಸಿದರು. ನಮ್ಮಗಳಿಗೆ ಇಂತಹ ಮಹದುಪಕಾರವನ್ನು ಕಲ್ಪಿಸಿಕೊಟ್ಟಿರುವ ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರಿಗೆ ಆಯುರಾರೋಗ್ಯಭಾಗ್ಯವನ್ನೀಯಲೆಂದು ಸರ್ವರೂ ಭಗವಂತರನ್ನು ಪ್ರಾರ್ಥಿಸಿದನಂತರ ಗಂಧಪುಷ್ಪ ತಾಂಬೂಲಗಳು ವಿನಿಯೋಗಿಸಲ್ಪಟ್ಟು ಜಯಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರೇಕ್ಷಕ.

ಧಾರವಾಡ ಜಿಲ್ಹಾ ಹಾನಗಲ್ಲ ತಾಲ್ಲೋಕು ಪೇಟ ಆಲೂರು ಗ್ರಾಮದಲ್ಲಿ ತಾ॥ ೭-೬-೧೯೧೧ ಈ ದಿವಸ ವೀರಶೈವ ವಾಚನಮಂದಿರದ ೪ ನೇ ವರ್ಧಂತಿ ವಾರ್ಷಿಕೋತ್ಸವವು ಶ್ರೀ ವೀರಭದ್ರದೇವಾಲಯದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಬಾಳೆ ತಳಿರುತೋರಣಗಳಿಂದ ಅಲಂಕರಿಸಿದ ಸಭಾಮಂಟಪದ ಮುಖ್ಯಭಾಗದಲ್ಲಿ ವೀರಶೈವ ಸತ್ಪುರುಷ ಮಾಲಿಕ ಶ್ರೀಮಂತ ರಾವಸಾಹೇಬ ಶಿರಸಂಗಿಕರ ಶ್ರೀಮಂತ ಅಪ್ಪಾಸಾಹೇಬ ವಾರದ ಇವರ ಭಾವಚಿತ್ರಗಳು ಪ್ರೇಕ್ಷಕರ ದೃಷ್ಟಿಯನ್ನು ಆಕರ್ಷಿಸುವಂತೆ ಪುಷ್ಪಹಾರಗಳಿಂದ ಕಂಗೊಳಿಸುತ್ತಿದ್ದುವು. ಇಂಥ ಮಂಗಳಕರವಾದ ಸಭೆಗೆ ಸುರಳೇಶ್ವರದ ಮ॥ ರಾ॥ ಶಿಂಧೂರ ವೀರಭದ್ರಪ್ಪನವರು ಅಧ್ಯಕ್ಷರಾಗಿದ್ದರು. ಈ ಸಮ್ಮೇಲನಕ್ಕೆ ಶ್ರೀ ಹೊಳೆ ಹೊನ್ನೂರು ಪಟ್ಟಾಧ್ಯಕ್ಷರು, ಶ್ರೀ ಹಾನಗಲ್ಲ ಅರಳೆಲಿ ಮಠದ ಚರಮೂರ್ತಿಗಳು, ವೇ॥ ಬಸವಲಿಂಗ ಶಾಸ್ತ್ರಿಗಳು ಸುಣ್ಣಕಲ್ಲ ಬಿದರಿ, ವೇ॥ ಬಸವಾರಾಧ್ಯರು, ಶೇಷಗಿರಿ ಶಿ॥ ಮುರಿಗಯ್ಯನವರು, ಹಾನಗಲ್ಲ ಮತ್ತೂ ನಮ್ಮ ಗ್ರಾಮದ ಎಲ್ಲ ಗುರುವರ್ಗದ ವೈದಿಕ ವೃಂದವು ಹಾಗೂ ಆಲೂರ ಇಂಗ್ಲೀಷ ಸ್ಕೂಲ ಪ್ರೆಸಿಡೆಂಟರಾದ ಶ್ರೀಯುತ ಮ॥ ರಾ॥ ಚನಬಸಪ್ಪ ಸೆಟ್ಟರು ಕುರುಬಗೊಂಡದ ದೇವೀಹೊಸೂರ ವ ಇಂಗ್ಲೀಷ ಸ್ಕೂಲಮಾಸ್ತರ, ರಾಯಪ್ಪಾ ಸವಣೂರ ವ ಅಸಿಸ್ಟೆಂಟ ಮಾಸ್ತರ ಭೀಮನಗೌಡರ ಧಾರವಾಡ, ಬ್ಯಾಡಗಿ ಶ್ರೀಯುತ ಉಡಾಸಿ ಗುರುಪಾದಪ್ಪಾ ವ ವಾಲಿ ಕುರುವತ್ತೆಪ್ಪಸೆಟ್ಟರು ವ ಬಸಪ್ಪ ಮಾಸ್ತರು, ಶ್ರೀಯುತ ದಾವಣಗೇರಿ ಮಂಜಪ್ಪ ಹರ್ಡೀಕರ, ಶ್ರೀಯುತ ಮಡಿವಾಳಪ್ಪನವರು ಶ್ರೀಯುತ ಇಸಳೂರು ಮ॥ರಾ॥ ವೀರಪ್ಪಾ ಉಪ್ಪಿನ, ವಿರಕಪ್ಪ ಬಂಕವಳ್ಳಿ ವ ಬಸವಣ್ಣೆಪ್ಪನವರು ವ ಗದಿಗೆಪ್ಪನವರು, ಗುದ್ದದ ಮಡೂರ ಶ್ರೀ॥ ರಾ॥ ವೀರನಗೌಡರು ಪಾಟೀಲ ಸಂಪಳಿ, ಶ್ರೀಯುತ ಚಿಕ್ಕೇರ ಹೊಸಳ್ಳಿ ತಿಪ್ಪನಗೌಡರು ಪಾಟೀಲ, ಶ್ರೀಯುತ ಚಿಕ್ಕಾಂಶಿ ರುದ್ರಗೌಡರು ಪಾಟೀಲ ಇನ್ನುಳಿದ ಹಾನಗಲ್ಲ ತಾ॥ ಪ್ರಮುಖಮಂಡಳಿಯು ಆಗಮಿಸಿದ್ದಲ್ಲದೆ, ಸ್ವಗ್ರಾಮದ ಪುಢಾರಿ ಸಮೂಹವು ಕೂಡಿತ್ತು. ಈ ಪ್ರಕಾರ ಜನಸಮೂಹದಿಂದ ಒಳ್ಳೇ ವಿರಾಜಮಾನವಾಗಿತ್ತು. ಈ ವೇಳೆ ಹೇಳಿದ ಮೇರಿಗೆ ಮುಂಜಾನೆ ೭ ಗಂಟೆಗೆ ಸರಿಯಾಗಿ ಸಭೆಯ ಕೆಲಸವು ಪ್ರಾರಂಭವಾಯಿತು. ಅನಂತರ ವಾರ್ಷಿಕ ರಿಪೋರ್ಟ್, ವಾಚನಾಲಯದ ಉಪಯೋಗ ಈ ವಿಷಯದ ಮೇಲೆ ಸ್ವಾಗತಸಂಘದ ಅಧ್ಯಕ್ಷರಾದ ಮ॥ ಸಿದ್ಧಪ್ಪಾ ಸಿಂಧೂರ ಇವರ ಉಪನ್ಯಾಸ ನಡೆದು ಗಾಯನ ತಾಂಬೂಲ ಸಮಾರಂಭದೊಡನೆ ಈ ಮಂದಿರದ ವಾರ್ಷಿಕ ೪ ನೇ ವರ್ಧಂತಿ ಉತ್ಸವವು ಸಮಾಪ್ತಮಾಡಲ್ಪಟ್ಟಿತು. ತಾ॥ ೭-೬-೧೯೧೧ ರ ದಿನ ಸಬ್‌ಜೆಕ್ಟ್ ಕಮಿಟಿಯಲ್ಲಿ ನೇಮಿಸಿದಂತೆ ಶ್ರೀ ವಿರಕ್ತಮಠದೊಳಗೆ ಶ್ರೀ ನಿರಂಜನ ಅಡವಿಸ್ವಾಮಿಗಳ ಸನ್ನಿಧಿಯಲ್ಲಿ ತಾರೀಖು ೮ ರ ಮಧ್ಯಾಹ್ನ ೨ ಗಂಟೆಗೆ ಸರಿಯಾಗಿ ಸಭೆಯು ಕೂಡಿತು. ಪ್ರಾರಂಭದಲ್ಲಿ ಶ್ರೀಮಂತ ಅಪ್ಪಾಸಾಹೇಬ ವಾರದ ಇವರು ಮರಣಹೊಂದಿದ್ದಕ್ಕೆ ಸಮಾಜಕ್ಕಾದ ಅಪಾರವಾದ ದುಃಖಪ್ರದರ್ಶನಮಾಡಿ ಇವರ ಚರಿತ್ರವನ್ನು ಶ್ರೀಯುತ ಚನಬಸಪ್ಪ ಬೆಲ್ಲದ ಇವರು ಓದಿದನಂತರ ಆ ಕೂಡಲೇ ಅವರ ಪತ್ನಿ ಶ್ರೀಮತಿ ಗೌರಾಬಾಯಿಯವರಿಗೆ ತಂತಿಯ ಮೂಲಕ ತಿಳಿಸಲ್ಪಟ್ಟಿತು. ಅನಂತರ ವಾಚನಾಲಯದ ಅವಶ್ಯಕತೆ ಈ ವಿಷಯದ ಮೇಲೆ ಮಂಜಪ್ಪಾ ಹರ್ಡೀಕರ ಇವರು ಮಾತನಾಡಿದರು. ತರುವಾಯ ಆಂಗ್ಲಭಾಷಾಭಿವೃದ್ಧಿ ವ ವಿದ್ಯಾಶಾಂತತೆ ಈ ವಿಷಯಗಳ ಮೇಲೆ ಕ್ರಮವಾಗಿ ಮ॥ ವೀರಪ್ಪಾ ಉಪ್ಪಿನ, ರಾಯಪ್ಪಾ ಮಾಸ್ತರ ಸವಣೂರ ಇವರ ಪತಿಯಿಂದ ಚನವೀರಪ್ಪ ಸೆಟ್ಟರು ವ ಪುಟ್ಟಪ್ಪ ಸಮಸಿಗಿ ಇವರು ಉಪನ್ಯಾಸಿಸಿದರು. ಅನಂತರ ಅಷ್ಟಾವರಣದ ಮಹಿಮೆ ನಿತ್ಯಾಚಾರ ನಿರೂಪಣ- ಇದರಮೇಲೆ ವೇ॥ ಬಸವಾರಾಧ್ಯರು ಶೇಷಗಿರಿ ಇವರೂ, ಆಮೇಲೆ ವೇ॥ ಬಸವಲಿಂಗ ಶಾಸ್ತ್ರಿಗಳು ಸುಣ್ಣಕಲ್ಲ ಬಿದರಿ ಇವರು ಸ್ವಗೋತ್ರದಲ್ಲಿ ಶರೀರ ಸಂಬಂಧ ಮಾಡಬಾರದು ಎಂಬುದಕ್ಕೆ ಪ್ರಮಾಣ ವ ಮಾಡಿದರೆ ಅದರಿಂದಾಗುವ ಹಾನಿ, ಭಕ್ತಮಾಹೇಶ್ವರರು ತಮ್ಮತಮ್ಮ ಗೋತ್ರಸೂತ್ರಗಳನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಲೇಬೇಕು ಮತ್ತೂ ನಿತ್ಯಾಚಾರ ನಿರೂಪಣ ಈ ವಿಷಯದಮೇಲೆ ಉಪನ್ಯಾಸ ನಡೆದನಂತರ ಸದರಿ ಶಾಸ್ತ್ರಿಗಳವರು ೧ ನೇ ಧರ್ಮೋತ್ತೇಜಕ ಸಭೆಯ ಠರಾವುಗಳನ್ನು ಪ್ರತಿಯೊಬ್ಬರೂ ತಂತಮ್ಮ ಗ್ರಾಮಗಳಲ್ಲಿ ಅಮಲಿನಲ್ಲಿ ತರಬೇಕೆಂಬುದಾಗಿ ಸಭೆಯಲ್ಲಿ ನೆರೆದ ಜನರ ಮನಸ್ಸಿಗೆ ಬಿಂಬಿಸುವಂತೆ ಹೇಳಿದರು. ಆಮೇಲೆ ಈ ಊರಲ್ಲಿ ತಾ॥ ೮-೮-೯೧೧ ರ ದಿವಸ ವೀರಶೈವರಿಂದ ಸ್ಥಾಪಿಸಲ್ಪಟ್ಟ ಇಂಗ್ಲೀಷ ಸ್ಕೂಲಿನ ವಿಚಾರ ನಡೆಸಲ್ಪಟ್ಟಿತು. ಅನಂತರ ಚಚಡಿ ದೇಸಾಯರ ಕಾರಭಾರಿ ವೇ॥ ಮುರಿಗಯ್ಯನವರು ಈ ಸಭೆಯ ಉತ್ತೇಜನದ ಬಗ್ಗೆ ಪ್ರೋತ್ಸಾಹಕೊಟ್ಟು ಎಲ್ಲ ಸಭೆಯ ಪತಿಯಿಂದ ಆಭಾರಮನ್ನಿಸಿದರು. ತರುವಾಯ ವೀರಶೈವಮತದ ಜೀರ್ಣೋದ್ಧಾರ ಗ್ರಂಥಗಳನ್ನು ಪ್ರಚಾರ ಪಡಿಸುವ ವೇ॥ ಎಮ್. ಆರ್. ಕರಿಬಸವ ಶಾಸ್ತ್ರಿಗಳಿಗೂ ಮತ್ತೂ ನಮ್ಮ ಮತಕ್ಕೆ ನಕ್ಷತ್ರದಂತಿರುವ ಸ್ಟಾರ್ ಪತ್ರಿಕಾ ಕರ್ತರಿಗೂ ಈ ಸಭೆಯ ಪತಿಯಿಂದ ಆಭಾರ ಸೂಚನೆಗಳು ಹೇಳಲ್ಪಟ್ಟುವು. ಅನಂತರ ಶ್ರೀ ಸ್ವಾಮಿಗಳ ಆಜ್ಞೆ ಮೇರೆಗೆ ಸಭೆಯ ಕೆಲಸವು ಜಯ ಜಯಕಾರ ಧ್ವನಿಯಿಂದ ವಿಸರ್ಜನೆಯಾಯಿತು.

ಓರ್ವ ಚಂದಾದಾರ.

ಮಹಾ ವಿವಾಹ ವೈಭವ.

(ಕಳೆದವಾರದಶೇಷ.)

ಇವರೆಲ್ಲರ ದಿವ್ಯಾನುಗ್ರಹವೂ, ಆಶೀರ್ವಾದವೂ ಈ ವಧೂವರರಮೇಲೆ ನಿರಂತರವಾಗಿರಲಿ. ಕಡೆಯಲ್ಲಿ ಈದಿನ ಈ ಸ್ಥಳದ ಎಲ್ಲಾ ಸ್ಕೂಲ್‌ಗಳ ಬಾಲಕ ಬಾಲಕಿಯರಿಗೂ, ಉಪಾಧ್ಯಾಯರುಗಳಿಗೂ, ಫಲಪುಷ್ಪ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟುವು. ಈ ಮಹನೀಯರವರ ಕುಲ ಗುರುಗಳಾದ ಬಳ್ಳಾರಿ ಜಿಲ್ಲ ಅದ್ವಾನಿ ತಾ॥ ನಂದಾವಾರದ ಮಠದ ವೇದಮೂರ್ತಿಗಳಾದ ಶಿದ್ದಒಡೆಯರ ಬಸವಪ್ಪದೇವರೂ ಕುಲದೇವರಾದ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿಯೂ ಸಹ ಅಪರಿಮಿತ ಭಕ್ತಿಭಾವದೊಡನೆ ಅರ್ಚಿತರಾಗಿ ವಿಶೇಷಕಾಣಿಕೆಯನ್ನು ಅಂಗೀಕರಿಸಿದರು. ಒಟ್ಟಾಗಿ ಹೇಳಿದರೆ— ಈ ಶ್ರೀಮಂತರವರ, ಈ ಸಾತ್ವಿಕಶಿರೋಮಣಿಗಳ, ಈ ನಿಷ್ಪಕ್ಷಪಾತಿಗಳ, ಈ ಸರ್ವಜನಹಿತೈಷಿಗಳ, ಮತ್ತು ಈ ಈಶ್ವರಭಕ್ತಭರಿತರವರ ಈ ವಿವಾಹವ್ಯಾಜದ್ವಾರಾ ನಡೆಯಿಸಲ್ಪಟ್ಟ, ತಾ॥ ೨೪-೪-೧೧ ನೇ ಗುರುವಾರದಾರಭ್ಯ ಇಂದಿನ ಪರ್ಯಂತ ಅಂದರೆ, ಒಂದೂಮುಕ್ಕಾಲು ತಿಂಗಳು ಕಾಲದ ವರೆಗಿನ ಮಹೌದಾರ್ಯ ಪರಂಪರೆಯಲ್ಲಿ, ಸ್ವಮತದವರೂ ಬ್ರಾಹ್ಮಣಾದಿ ಚಂಡಾಲಪರ್ಯಂತ ಸಕಲಮತದವರು, ಸಕಲಾಧಿಕಾರಿಗಳು, ಅಧೀನಸ್ಥರುಗಳೂ, ವಿದ್ವಾಂಸರೂ, ಜ್ಯೋತಿಷ್ಕರೂ, ಮಹಮ್ಮದೀಯ ಮೌಲ್ವಿಗಳು, ಗಾಯಕರು, ಇತರ ಯಾಚಕರು, ಭಿಕ್ಷುಕರು, ಫಕೀರರು, ಅನಾಥಬಾಲ—ಬಾಲೆಯರು ಸ್ತ್ರೀಯರು, ಇಂಗ್ಲಿಷ್ ಮತ್ತು ಕರ್ನಾಟಕ ವಿಶಿಷ್ಟವಾದ್ಯಗಾರರು, ನಟವಿಟಗಾಯಕವೇಶ್ಯಾ ಜನರು, ಬಾಣ ಬಿರಸು ಮೊದಲಾದ ವಿವಿಧ ಕಸಬುದಾರರು ಮುಂತಾಗಿ ಈ ಸ್ಥಳನಿವಾಸಿಗಳಾದ ಸಕಲರೂ ಸತ್ಕರಿಸಲ್ಪಟ್ಟು ಆನಂದದಿಂದ ಸಂತೃಪ್ತರಾದರು. ಇದಲ್ಲವೆ ಮಹನೀಯ ಗುಣ! ಇದಲ್ಲವೆ ಮಹೌದಾರ್ಯ ಗುಣ! ಇದೇಅಲ್ಲವೆ ಶ್ರೀಮಂತರ ಲಕ್ಷಾಧಿಪತಿಗಳ ಮಹೋನ್ನತಗುಣದ ಘನತೆ!

ಈ ದೃಶ ಶ್ರೇಷ್ಠ ಸುಗುಣಾತಿಶಯವನ್ನೇ ಈ ಕೆಳಗಿನ ಶ್ಲೋಕಗಳು ವ್ಯಕ್ತಪಡಿಸಿ, ಮಹಾತ್ಮರ ಗುಣಲಕ್ಷಣಗಳನ್ನು ಕೊಂಡಾಡುತ್ತಲಿವೆ. ನೋಡಿ.—

ಗುಣಿಗಣಗಣನಾರಂಭೇ ನಪತತಿ ಕಠಿನೀ ಸಸಂಭ್ರಮಾ
ಯಸ್ಯ। ತೇನಾಂಬಾಯದಿ ಸುತಿನೀ ವದ! ಬಂಧ್ಯಾ ಕೀ
ದೃಶೀ ಭವತಿ? ॥೧॥ ಅಯಂ ನಿಜಃ ಪರೋವೇತಿ ಗಣನಾ
ಲಘುಚೇತಸಾಂ। ಉದಾರಚರಿತಾನಾಂತು ವಸುಧೈ
ವ ಕುಟುಂಬಕಂ ॥೨॥ [illegible]

ಬುಧರಬಿರಸಂಗಂ ಮಹಾದೇವಪೂಜಾಮುದಿತಸ್ವಾಂ
ತಂ ದಯಾಂಭೋನಿಧಿ ಸಕಲಜನಾಹ್ಲಾದಕೃತ್ಯಂ ಪ್ರ
ತಾಪಾಸ್ಪದಮುದ್ಯದ್ಧೈರ್ಯವಂತಂ ನಿಪುಣತಿಲಕಮಿಂತ್ರೀ
ಬಸೆಟ್ಟ್ಯಾಖ್ಯದಾತಂ ಮದನಾಕಾರಂ ವಿನೋದಂಬಡೆ
ದೊಸೆದೆಸೆದಂ ಮಲ್ಲಸೆಟ್ಟ್ಯಾತ್ಮಜಾತಂ ॥೩॥

ಈ ಸುಗುಣ ಶಿರೋಮಣಿಗಳು ನಮ್ಮ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿಸಭೆಗೂ, ಈ ನಗರದ ಮ್ಯುನಸಿಪಾಲಿಟಿಗೂ ಮೆಂಬರಾಗಿರುವರು. ಇದಲ್ಲದೆ ವೀರಶೈವ ಮಹಾಸಭೆಯಲ್ಲಿಯೂ ಗೌರವಿತ ಸದಸ್ಯರಾಗಿರುತ್ತಾರೆ. ಮತ್ತೂ ಈ ಶ್ರೀಮಂತರವರು ನಮ್ಮ ಗೌರ್ನಮೆಂಟಿನಲ್ಲಿ ಒಂದು ಲಕ್ಷ ರೂ. ಗಳ ವರೆಗೂ ಇಟ್ಟಿರುತ್ತಾರೆ. ಈ ಮಹನೀಯರವರ ತಂದೆಯವರೂ ಕೂಡ ೨೦ ವರ್ಷಗಳಿಗೆ ಮೇಲ್ಪಟ್ಟು, ಮೇಲೆ ಹೇಳಿದಂತೆ ಮೆಂಬರ್‌ಸ್ಥಾನಾಪನ್ನರಾಗಿದ್ದು, ಕಾರ್ಯನಿರ್ವಾಹಮಾಡಿ ಈಗ ವಿಶ್ರಾಂತಸುಖದಲ್ಲಿರುವರು. ಈ ಕಾರಣಗಳಿಂದಲೇ ಈ ಲೇಖನದ ಆದಿಯಲ್ಲಿ ವಿವರಿಸಿರುವಂತೆ, ಇವರು ರಾಜಮಾನ್ಯರೂ, ಸಭಾಮಾನ್ಯರೂ, ಈ ಉಭಯಸಂಬಂಧದ್ವಾರಾ ದೇವಮಾನ್ಯರೂ ಆಗಿದ್ದಾರೆಂದು ಹೇಳಿರುವುದರಲ್ಲಿ ಅತಿಶಯೋಕ್ತಿಯಾಗಲಿ, ಉತ್ಪ್ರೇಕ್ಷೆಯಾಗಲಿ ಕಾಣುವುದಿಲ್ಲ. ಒಬ್ಬ ಮಹಾರಾಜರವರು ನಡೆಸಬಹುದಾದಷ್ಟು ವೈಭವ ಮತ್ತೂ ವಿಜೃಂಭಣೆಗಳಿಂದ ೮-೩ ದಿನಗಳಲ್ಲಿ ಮುಗಿಸಬಹುದಾದ ಒಂದು ವಿವಾಹ ಮಹೋತ್ಸವವನ್ನು ಅತಿ ದೀರ್ಘಕಾಲ ಅಂದರೆ ಮೇಲೆ ಹೇಳಿದಂತೆ ೧॥ ತಿಂಗಳು ವರೆಗೆ ನಿತ್ಯೋತ್ಸವವಾಗಿ ನಡೆಯಿಸಿದ್ದಕ್ಕೆ ಶ್ರೀಮಂತರಾದ ನಮ್ಮ ಈ ಮ॥ರಾ॥ ಬಸಪ್ಪಸೆಟ್ಟರವರ ಭಾವನವರಾಗಿಯೂ ಮದವಣಿಗರು ಚಿ॥ ಶ್ರೀಕಂಠಪ್ಪನವರ ಸೋದರಮಾವನವರಾಗಿಯೂ ಇರುವ ಮ॥ರಾ॥ ವಾಲಿ ಸಿದ್ದಪ್ಪನವರೆಂಬ ಕುಶಲಬುದ್ಧಿಯೂ, ಲೌಕಿಕ ವೈದಿಕಜ್ಞಾನಸಂಪನ್ನತೆಯೂ ಉಳ್ಳ ಮುಖ್ಯ ಸಚಿವರ ವಿತರಣಪೂರ್ವಕವಾದ ಕಾರ್ಯದಕ್ಷತೆಯೇ ಮೂಲಕಾರಣವಾಗಿರುತ್ತದೆ. ಈ ಮಹನೀಯರವರ ಪ್ರಜಾರಂಜಕವಾದ ಸುಪ್ರೇರಣೆಯಿಂದಲೇ ಮೇಲೆ ಹೇಳಿದ ಶ್ರೀಮಂತರವರು ಅನಾಥರೂ, ದರಿದ್ರರೂ ಆದ ಬಾಲಕರ ವಿದ್ಯಾಭ್ಯಾಸ ಮತ್ತೂ ಅವರ ಮುಂದಿನ ಜೀವನೋಪಾಯಗಳಿಗೆ ಅನುಕೂಲವಾಗಿರುವಂತೆ ಈ ನಗರದಲ್ಲಿ ಕುಶಲವಿದ್ಯೆ ಮತ್ತು ಕೈಗಾರಿಕೆಗಳನ್ನು ಕಲಿಸುವ ಧರ್ಮದ ಪಾಠಶಾಲೆಯೊಂದನ್ನು ಈ ವಿವಾಹಮಹೋತ್ಸವ ಜ್ಞಾಪಕವು ಕೇವಲ ಪರೋಪಕಾರ ರೂಪದಲ್ಲಿ ಆಚಂದ್ರಾರ್ಕಸ್ಥಾಯಿಯಾಗಿ ನೆಲೆಗೊಂಡಿರುವಂತೆ ಏರ್ಪಡಿಸುವರೆಂಬ ಶುಭವರ್ತಮಾನವಿದೆ. ಈ ವಾರ್ತೆಯು ಶೀಘ್ರದಲ್ಲಿಯೇ ಕಾರ್ಯರೂಪದಲ್ಲಿ ಸ್ಥಾಪಿತವಾಗಿ ಈ ಲಕ್ಷಾಧೀಶರ ಪಾರಮಾರ್ಥಿಕ ಕೀರ್ತಿಯನ್ನು ಇನ್ನೂ ಹೆಚ್ಚಾಗಿ ಪ್ರಕಾಶಪಡಿಸುತ್ತಾ ಬರಲೆಂದು ಭಗವತ್ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ. ಈ ನೂತನ ದಂಪತಿಗಳಿಗೂ, ಮಹದೌದಾರ್ಯರಾದ ಇವರ ಮಾತಾಪಿತೃಗಳಿಗೂ, ಧಾರ್ಮಿಕಗುಣನಿಷ್ಠರಾದ ಅವರ ಮಾತಾಪಿತೃಗಳಿಗೂ, ಇವರ ಮುಖ್ಯ ಸಚಿವರಾದ ಮ॥ ರಾ॥ ವಾಲಿ ಸಿದ್ದಯ್ಯನವರಿಗೂ, ಇತರ ಬಂಧುವರ್ಗಕ್ಕೆಲ್ಲಕ್ಕೂ ಪರಮಕೃಪಾನಿಧಿಯಾದ ಜಗದೀಶನು ದೀರ್ಘಾಯುರಾರೋಗ್ಯೈಶ್ವರ್ಯಾದಿ ಸಕಲ ಸೌಭಾಗ್ಯ ಪರಂಪರೆಗಳನ್ನಿತ್ತು ಇತೋಪ್ಯತಿಶಯ ಪರೋಪಕಾರ ಕಾರ್ಯತತ್ಪರರಾಗಿ ಬಾಳುತ್ತಿರುವಂತೆ ದಿವ್ಯಾನುಗ್ರಹವನ್ನು ಕರುಣಿಸಲೆಂದು ಈ ಮಹಾತ್ಮರ ಸುಗುಣಾನುಭವಿಗಳೆಲ್ಲರೂ ವಿನೀತರಾಗಿ ಬೇಡಿಕೊಳ್ಳುತ್ತಾರೆ.

ಇಲ್ಲಿ ಇವರ ಅನನ್ಯಾದೃಶವಾದ ಇನ್ನೊಂದು ಮಹನೀಯ ಗುಣವನ್ನು ಪ್ರಶಂಸಿಸದೆ ಬಿಡುವುದು ಧರ್ಮವಲ್ಲ. ಅದೇನಂದರೆ—ಧನಿಕರನೇಕರು ತಮ್ಮನ್ನು ಸರ್ಕಾರದವರೂ ಜನರೂ, ಮೆಚ್ಚಲಿ! ಎಂಬ ಅಭಿಪ್ರಾಯದಿಂದ ಬಹು ಡಾಂಭಿಕರಾಗಿ ತಮ್ಮ ತಮ್ಮ ಸಾಧಾರಣ ಕಾರ್ಯದಕ್ಷತೆಯನ್ನು ಪತ್ರಿಕಾದಿ ನಾನಾ ಮೂಲಕ ಬಹು ವಿಶೇಷವಾದುದೋ? ಎಂಬಂತೆ ಪ್ರಕಟಪಡಿಸಿಕೊಳ್ಳುತ್ತಿರುವುದು ವಾಡಿಕೆಯಾಗಿದೆ. ಈ ಶ್ರೀಮಂತರವರಾದರೋ! "ತುಂಬಿದಕೊಡ ತುಳುಕುವುದಿಲ್ಲ" ಎಂಬ ನಾಣ್ಣುಡಿಯಂತೆ, ತಾವು ಲಕ್ಷಾಧಿಪತಿಗಳಾಗಿದ್ದರೂ, ಇದುವರೆಗೆ ಕೆಲವು ಸತ್ಕಾರ್ಯಗಳನ್ನು ಮಾಡಿದ್ದರೂ, ಇದೆಲ್ಲಾ ಪಾರಮಾರ್ಥಿಕದ್ದಾಗಿ, "ದೇವರು ಕೊಟ್ಟಿರುವುದು ದೇವರಿಗೇ ಸೇರಿದೆ, ನನ್ನದೇನೂ ಇಲ್ಲ" ವೆಂಬ ಭಾವದೊಡನೆ ಗುಪ್ತವಾಗಿಯೇ ಇಟ್ಟುಕೊಳ್ಳುತ್ತಾ ಬಂದಿದ್ದಾರೆ. ಈಗಲೂ ಈ ಲೇಖನಪ್ರಸ್ತಾಪವು, ಇವರ ಕಿವಿಗೆ ಬೀಳದಂತೆ "ನಹಿ ಕಸ್ತೂರಿಕಾಮೋದ ಶಪಥೇನ ನಿವಾರ್ಯತೆ" ಎಂಬ ರೀತಿಯಲ್ಲಿ ತಾನಾಗಿಯೇ ಪ್ರತ್ಯಕ್ಷಾನುಭವಿಯಾದವನೊಬ್ಬನಿಂದ, ಈ ಅತ್ಯುತ್ಕೃಷ್ಟವಾದ ಮಾದರಿಯನ್ನೇ ಎಲ್ಲಾ ಐಶ್ವರ್ಯವಂತರೂ, ಅಧಿಕಾರಿಗಳೂ ಇತರರೂ ಸಹ ಅನುಸರಿಸುತ್ತಾ ಬರುವವರಾಗಲಿ! ಎಂಬ ಉದ್ದೇಶಪೂರ್ವಕವಾಗಿ ಬರೆಯಲ್ಪಟ್ಟಿದೆ. ಭಗವಂತನ ಈ ಘನವಾದ ಪ್ರೇರಣೆಯೇ ಸರ್ವತ್ರ ಉಂಟಾಗಲೆಂದು ಹಾರೈಸುತ್ತೇನೆ.

ಪ್ರತ್ಯಕ್ಷದರ್ಶಿ.

17 **ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.**

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. **ಮಿಂಚಿನ ಉಂಗುರವೂ.**

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೩-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಧಗಾಂವ್ಕರ, ಮರ್ಚಂಟ.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಹಾ,
Post Bilgi, North Kanara District.

ಶಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

17

ಲೋಕಾಮುಂಜರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿ ವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೪-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪೊಸರುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರತು, ಹಲ್ಲುಗಳ ಪಾಚಿ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲಿ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಯೋಗ್ಯತೆಯು ಜ್ಞಾ ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಅ. ೮. ಪರದರಿಂದ ಟಪಾಲ್ ಖರ್ಚು ೪ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮಚಂದ್ರ
ವೈದ್ಯಶಾಲಾ, ಮೈಸೂರು.

ಜನರಿಂದಲೂ, ಪೋಲೀಸಿನವರಿಂದಲೂ ಬೇಕಾದ ಸಹಾಯವನ್ನು ಹೊಂದಿದನು. ಆನೆಯು ಕಳುವಿನ ವಿಚಾರವು ಜಮೀನ್ದಾರರಿಗೆ ತಿಳಿದು, ಆ ಆನೆಯ ಮಾಹುತನನ್ನೂ, ಮಾಲ್ಡಾದ ಪೋಲೀಸಿನವರನ್ನೂ ಅದನ್ನು ಹುಡುಕಲು ಕಳುಹಿಸಿಕೊಟ್ಟರು. ಅವರು ಆ ಆನೆಯ ಹೆಜ್ಜೆಯ ಗುರ್ತನ್ನು ಹಿಡಿದು ಬಂದು ಆ ಕಳ್ಳನು ಗಂಗಾನದಿಯನ್ನು ದಾಟುವಷ್ಟರಲ್ಲಿ ಅವನನ್ನು ಆನೆಯ ಸಮೇತ ಹಿಡಿದುಕೊಂಡು ಬಂದು ಮಾಲ್ಡಾದ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದರು.

ಕಲಕತ್ತಾದ ೨ ನೇ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಒಬ್ಬ ೨೪ ವರ್ಷ ವಯಸ್ಸಿನ ಯುವತಿಯು ತನ್ನ ಗಂಡನು ತನ್ನ ಜೀವನಕ್ಕೆ ಕೊಡದೆ ನಿರಾಕರಿಸಿಬಿಟ್ಟಿದ್ದಾನಾದುದರಿಂದ ಜೀವನಾಂಶವನ್ನು ಕೊಡಿಸಬೇಕೆಂದು ಫಿರ್ಯಾದನ್ನು ಮಾಡಿರುವಳು. ಮ್ಯಾಜಿಸ್ಟ್ರೇಟರು ವಿಚಾರಣೆಯದಿನ ಅಪರಾಧಿಯನ್ನು ಕೂಗಿಸುವಲ್ಲಿ, ಅವನು ಬಹಳ ಹೊತ್ತಿನವರೆಗೆ ಬರಲೇಯಿಲ್ಲವು. ಅಷ್ಟರಲ್ಲಿ ಅಲ್ಲಿದ್ದ ಪೋಲೀಸಿನವನು ಕೋರ್ಟಿನ ಹೊರಗಡೆ ಸುಳಿದಾಡುತ್ತಿದ್ದ ೧೬ ವರ್ಷ ವಯಸ್ಸಿನ ಒಬ್ಬ ಹುಡುಗನನ್ನು ಹಿಡಿದುಕೊಂಡುಬಂದು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿ, ಇವನೇ ಅಪರಾಧಿಯೆಂದು ಹೇಳಿದನು. ಮ್ಯಾಜಿಸ್ಟ್ರೇಟರು ಅವನನ್ನೋಡಿ ಇಷ್ಟು ಚಿಕ್ಕ ಹುಡುಗನು ೨೪ ವರ್ಷ ವಯಸ್ಸಿನ ಹೆಂಗುಸಿನ ಗಂಡನೆಂಬುದು ಆಭಾಸವು ಮತ್ತೂ ನಾನು ಇದನ್ನು ನಂಬುವುದಿಲ್ಲವೆಂದು ಹೇಳಲು, ಫಿರ್ಯಾದಿಕತೆಯ ಲಾಯರು—ಫಿರ್ಯಾದಿಯನ್ನು ಶಾಸ್ತ್ರೋಕ್ತವಾಗಿ ವಿವಾಹ ಮಾಡಿಕೊಂಡ ಗಂಡನಿವನೇ. ಇವನಿಗೆ ಬೇಕಾದಷ್ಟು ಆಸ್ತಿ ಇದ್ದಾಗ್ಯೂ ಹೆಂಡತಿಗೆ ಜೀವನಕ್ಕೆ ಕೊಡುವುದಿಲ್ಲ ಎಂದು ವಾದಿಸಲು, ಮ್ಯಾಜಿಸ್ಟ್ರೇಟರು ಅಪ್ರಾಪ್ತವಯಸ್ಕನಾದ ಅಪರಾಧಿಯು ಜೀವನಕ್ಕೆ ಕೊಡುವಂತೆ ಹೇಗೆ ವಿಧಿಸುವುದೆಂದು ಸಂಶಯಪಟ್ಟರು. ಆಗ ಫಿರ್ಯಾದಿಯ ವಕೀಲನು ಅದಕ್ಕೆ ತಕ್ಕಾಧಾರವನ್ನು ತೋರಿಸಿಕೊಡಲು ಮುಂದಿನ ವಿಚಾರಣೆಗಿಡಲ್ಪಟ್ಟಿತು.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ಗಮನಿಸತಕ್ಕದ್ದು. ಪ. ಪ್ರ.

ಪತ್ರವ್ಯವಹಾರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡು.

ಮ॥ ರಾ॥ ಗಳಾದ

ಬೆಳ್ಳಾವಿ ಜಿ. ಚನ್ನಪ್ಪನವರಿಂದ ಗಟ್ಟಿ ಅದಿವಪ್ಪನ ಮದುವೆಯಲ್ಲಿ	೮—೦—೦
ಈಚನೂರು ಗುರುರೇವಣ್ಣನವರ ಮಕ್ಕಳು ಸಿದ್ದಪ್ಪನವರ ಮದುವೆಯಲ್ಲಿ	೩—೦—೦
ಸುತ್ತಿಕೋಟೆ ಗರ್ಜನ ಮಲ್ಲಯ್ಯನವರಿಂದ ಫಂಡಿಗೆ ವಾಗ್ದಾನಮಾಡಿದ್ದುದಕ್ಕಾಗಿ	೪೦—೦—೦
ಬೇಲೂರು ದೇಶದ ಸೆಟ್ಟರು ಸೋಂಬಯ್ಯನವರಿಂದ	೧೦—೦—೦
ಆಲ್ದೂರು ಮಲ್ಲಶೆಟ್ಟರ ಬಸೆಟ್ಟರ ಮಕ್ಕಳ ಲಗ್ನದಲ್ಲಿ (ಹಾಸನ) ...	೧೦—೦—೦
ಒಟ್ಟು ...	೭೧—೦—೦
ಹಿಂದೆ ಬಂದಿರುವುದು ...	೧೭೮—೦—೦
ಒಟ್ಟು ...	೨೪೯—೦—೦

ಜಿ. ಶಾಂತವೀರಪ್ಪ, ಸೆಕ್ರಟರಿ.

ಮಳವಳ್ಳಿ ತಾ॥ ಬೆಳಕವಾಡಿ ಶ್ರೀ ಜಗನ್ಮೋಹನ ರಂಗನಾಥಸ್ವಾಮಿ ಪರಸ್ಪರ ಸಹಾಯಸಂಘ (ಅನ್ ಲಿಮಿಟೆಡ್.)

ಈ ಸಂಘದ ಜನರಲ್ ಮೀಟಿಂಗು ಮಳವಳ್ಳಿ ತಾ॥ ಸಬ್ ರಿಜಿಸ್ಟ್ರಾರ್, ಮ॥ ರಾ॥ ಲಕ್ಷ್ಮೀಕಾಂತಯ್ಯಂಗಾರ್, ಬಿ. ಎ., ಯವರು, ಮೈಸೂರು ಡಿ॥ ಕೊ॥ ಆ॥ ಸೊಸೈಟಿಗಳ ಇನ್ಸ್ಪೆಕ್ಟರ್ ಮ॥ ರಾ॥ ಪುಟ್ಟಸೋಮಯ್ಯ, ಬಿ. ಎ., ಯವರು ಮತ್ತೂ ಮಳವಳ್ಳಿ ತಾ॥ ಶಿರಸ್ತೆದಾರ್ ಮ॥ರಾ॥ ರಾಮಚಂದ್ರಯ್ಯನವರು ಇವರುಗಳ ಯಾಜಮಾನ್ಯದಿಂದ ಈ ಊರ ಸ್ಕೂಲ್ ಕಟ್ಟಡದಲ್ಲಿ ತಾ॥ ೨೩-೭-೧೧ ರಲ್ಲಿ ನೆರವೇರಿಸಲ್ಪಟ್ಟಿತು. ಸ್ಕೂಲ್ ಕಟ್ಟಡವು ತಳಿರ್ತೋರಣಗಳಿಂದಲೂ, ಕದಳೀ ಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟು, ಮೆಂಬರುಗಳಿಂದಲೂ, ೧೦೩ ಮಂದಿ ಪ್ರೇಕ್ಷಕರಿಂದಲೂ ತುಂಬಿತುಳುಕುತ್ತಿತ್ತು. ಸಭಿಕರ ಕೋರಿಕೆಯ ಮೇರೆ ಜಮೀನ್ದಾರ್ ಮ॥ರಾ॥ ಅಶ್ವತ್ಥನಾರಣಯ್ಯನವರು ಅಗ್ರಾಸನವನ್ನು ವಹಿಸಿದರು. ಈ ಸ್ಕೂಲ್ ಹೆಡ್ಮಾಸ್ಟರ್ ಮತ್ತೂ ಈ ಸಂಘದ ಆ॥ ಸೆಕ್ರಟರಿಗಳಾದ ಮ॥ ಜಿ. ರಾಮಯ್ಯನವರು ೧೯೧೦-೧೧ ನೇ ಸಾಲಿನ ಸಂಘದ ಆಡಳಿತದ ರಿಪೋರ್ಟನ್ನು ಬಹು ಸ್ವಾರಸ್ಯವಾಗಿ ತಯಾರ್ಮಾಡಿ ಓದಿದರು. ೧೯೧೦–೧೧ ನೇ ಸಾಲಿನ ಕಾರ್ಯನಿರ್ವಾಹಕ ಸಂಘದವರೇ ೧೯೧೧–೧೨ ನೇ ಸಾಲಿಗೂ ಕಾರ್ಯನಿರ್ವಾಹಕರಾಗಿರಬೇಕೆಂದು ತೀರ್ಮಾನಿಸಲಾಯಿತು. ಸೆಕ್ರಟರಿಗಳಾದ ಮ॥ರಾ॥ ನಾರಣಪ್ಪನವರು ಈ ಸಂಘದ ಆಫೀಸಿಗೆ ಒಂದು ಆಲಯವನ್ನು ಉಚಿತವಾಗಿ ಕೊಟ್ಟಿರುವುದಕ್ಕಾಗಿಯೂ, ಮ॥ರಾ॥ ಶ್ಯಾ॥ ನಂಜುಂಡಯ್ಯನವರು, ಟ್ರೆಜರರ್ ಮ॥ರಾ॥ ರಂಗಯ್ಯನವರು, ಏಜಂಟ್ ಮ॥ ರಾ॥ ಹಲಗಪ್ಪನವರು ಮುಂತಾದವರು ಈ ಸಂಘದ ಕೆಲಸಗಳಲ್ಲಿ ನಿರತರಾಗಿ ತಮ್ಮಗಳಿಗೆ ಮಾಡಿದ ಸಹಾಯಕ್ಕಾಗಿಯೂ ಸಭಿಕರು ಅವರುಗಳಿಗೆ ವಂದನೆಗಳನ್ನು ಸಮರ್ಪಿಸಿದರು. ಈ ಸಂಘದ ಕಾರ್ಯಗಳನ್ನು ಅಕ್ಕರೆಯಿಂದಲೂ, ವಿಚಕ್ಷಣೆಯಿಂದಲೂ ನಡೆಸುತ್ತಿರುವ ಆ॥ ಸೆಕ್ರಟರಿ ಮ॥ ರಾ॥ ಜಿ. ರಾಮಯ್ಯನವರಿಗೆ ಸಭಿಕರು ಒಂದು ಬೆಳ್ಳಿ ಬಟ್ಟಲನ್ನು ಕೋ-ಆ॥ ಸೊಸೈಟಿಗಳ ಇನ್ಸ್ಪೆಕ್ಟರವರ ಹಸ್ತದಿಂದ ಬಹುಮಾನವಾಗಿ ಕೊಡಿಸಿದರು. ಅನೇಕ ಬುದ್ಧಿವಾದಗಳನ್ನು ಹೇಳಿ ಈ ಸಂಘವನ್ನು ಸ್ಥಾಪಿಸಿ ಅದರ ಪುರೋಭಿವೃದ್ಧಿಯಲ್ಲಿ ನಿರತರಾಗಿರುವ ಸಬ್ ರಿಜಿಸ್ಟ್ರಾರ್ ಮ॥ ರಾ॥ ಲಕ್ಷ್ಮೀಕಾಂತಯ್ಯಂಗಾರ್, ಬಿ. ಎ, ಯವರಿಗೂ ಕೋ-ಆ॥ ಸೊಸೈಟಿಗಳ ಇನ್ಸ್ಪೆಕ್ಟರ್ ಮ॥ರಾ॥ ಪುಟ್ಟಸೋಮಯ್ಯ, ಬಿ. ಎ, ಯವರಿಗೂ, ಶಿರಸ್ತೆದಾರ್ ಮ॥ ರಾಮಚಂದ್ರಯ್ಯನವರಿಗೂ ಸಭಿಕರು ವಂದನೆಯನ್ನರ್ಪಿಸಿದರು. ಸಭಾಧ್ಯಕ್ಷರು ಸಮಯೋಚಿತ ವಾಕ್ಯಗಳಿಂದ ಸಭಿಕರನ್ನು ಸನ್ಮಾನಿಸಿದರು. ನಮ್ಮಗಳಿಗೆ ಇಂತಹ ಮಹದುಪಕಾರವನ್ನು ಕಲ್ಪಿಸಿಕೊಟ್ಟಿರುವ ಶ್ರೀಮನ್ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರಿಗೆ ಆಯುರಾರೋಗ್ಯಭಾಗ್ಯವನ್ನೀಯಲೆಂದು ಸರ್ವರೂ ಭಗವಂತನನ್ನು ಪ್ರಾರ್ಥಿಸಿದನಂತರ ಗಂಧಪುಷ್ಪ ತಾಂಬೂಲಗಳು ವಿನಿಯೋಗಿಸಲ್ಪಟ್ಟು ಜಯಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರೇಕ್ಷಕ.

ಧಾರವಾಡ ಜಿಲ್ಲಾ ಹಾನಗಲ್ಲ ತಾಲ್ಲೋಕು ಪೇಟೆ ಆಲೂರು ಗ್ರಾಮದಲ್ಲಿ ತಾ॥ ೭-೬-೧೯೧೧ ಈ ದಿವಸ ವೀರಶೈವ ವಾಚನಮಂದಿರದ ೪ ನೇ ವರ್ಧಂತಿ ವಾರ್ಷಿಕೋತ್ಸವವು ಶ್ರೀ ವೀರಭದ್ರದೇವಾಲಯದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಬಾಳೆ ತಳಿರುತೋರಣಗಳಿಂದ ಅಲಂಕರಿಸಿದ ಸಭಾಮಂಟಪದ ಮುಖ್ಯಭಾಗದಲ್ಲಿ ವೀರಶೈವ ಸತ್ಪುರುಷ ಮಾಲಿಕ ಶ್ರೀಮಂತ ರಾವಸಾಹೇಬ ಶಿಂಗಸಂಗಿಕರ ಶ್ರೀಮಂತ ಅಪ್ಪಾಸಾಹೇಬ ವಾರದ ಇವರ ಭಾವಚಿತ್ರಗಳು ಪ್ರೇಕ್ಷಕರ ದೃಷ್ಟಿಯನ್ನು ಆಕರ್ಷಿಸುವಂತೆ ಪುಷ್ಪಹಾರಗಳಿಂದ ಕಂಗೊಳಿಸುತ್ತಿದ್ದುವು. ಇಂಥ ಮಂಗಳಕರವಾದ ಸಭೆಗೆ ಸುರಳೇಶ್ವರದ ಮ॥ ರಾ॥ ಶಿಂಧೂರ ವೀರಭದ್ರಪ್ಪನವರು ಅಧ್ಯಕ್ಷರಾಗಿದ್ದರು. ಈ ಸಮ್ಮೇಲನಕ್ಕೆ ಶ್ರೀ ಹೊಳೆ ಹೊನ್ನೂರು ಪಟ್ಟಾಧ್ಯಕ್ಷರು, ಶ್ರೀ ಹಾನಗಲ್ಲ ಅರಳೆಲಿಮಠದ ಚರಮೂರ್ತಿಗಳು, ವೇ॥ ಬಸವಲಿಂಗ ಶಾಸ್ತ್ರಿಗಳು ಸುಣ್ಣಕಲ್ಲ ಬಿದರಿ, ವೇ॥ ಬಸವಾರಾಧ್ಯರು, ಶೇಷಗಿರಿ ಶಿ॥ ಮುರಿಗಯ್ಯನವರು, ಹಾನಗಲ್ಲ ಮತ್ತೂ ನಮ್ಮ ಗ್ರಾಮದ ಎಲ್ಲ ಗುರುವರ್ಗದ ವೈದಿಕ ವೃಂದವು ಹಾಗೂ ಆಲೂರ ಇಂಗ್ಲೀಷ ಸ್ಕೂಲ ಪ್ರೆಸಿಡೆಂಟರಾದ ಶ್ರೀಯುತ ಮ॥ ರಾ॥ ಚನಬಸಪ್ಪ ಸೆಟ್ಟರು ಕುರುಬಗೊಂಡದ ದೇವೀಹೊಸೂರ ವ ಇಂಗ್ಲೀಷ ಸ್ಕೂಲಮಾಸ್ತರ, ರಾಯಪ್ಪಾ ಸವಣೂರ ವ ಅಸಿಸ್ಟೆಂಟ ಮಾಸ್ತರ ಭೀಮನಗೌಡರ ಧಾರವಾಡ, ಬ್ಯಾಡಿಗಿ ಶ್ರೀಯುತ ಉಪಾಸಿ ಗುರುಪಾದಪ್ಪಾ ವ ವಾಲಿ ಕುರುವತ್ತೆಪ್ಪಸೆಟ್ಟರು ವ ಬಸಪ್ಪ ಮಾಸ್ತರು, ಶ್ರೀಯುತ ದಾವಣಗೇರಿ ಮಂಜಪ್ಪ ಹರ್ಡೆಕರ, ಶ್ರೀಯುತ ಮಡಿವಾಳಪ್ಪನವರು ಶ್ರೀಯುತ ಇಸಳೂರು ಮ॥ರಾ॥ ವೀರಪ್ಪಾ ಉಪ್ಪಿನ, ವಿರಕಪ್ಪ ಬಂಕವಳ್ಳಿ ವ ಬಸವಣ್ಣೆಪ್ಪನವರು ವ ಗದಿಗೆಪ್ಪನವರು, ಗುತ್ತಲದ ಮೂಡೂರ ಶ್ರೀ॥ ರಾ॥ ವೀರನಗೌಡರು ಪಾಟೀಲ ಸಂಮಸಿ, ಶ್ರೀಯುತ ಚಿಕ್ಕೇರ ಹೊಸಳ್ಳಿ ತಿಪ್ಪನಗೌಡರು ಪಾಟೀಲ, ಶ್ರೀಯುತ ಚಿಕ್ಕಾಂಶಿ ರುದ್ರಗೌಡರು ಪಾಟೀಲ ಇನ್ನುಳಿದ ಹಾನಗಲ್ಲ ತಾ॥ ಪ್ರಮುಖಮಂಡಳಿಯು ಆಗಮಿಸಿದ್ದಲ್ಲದೆ, ಸ್ವಗ್ರಾಮದ ಪುಢಾರಿ ಸಮೂಹವು ಕೂಡಿತ್ತು. ಈ ಪ್ರಕಾರ ಜನಸಮೂಹದಿಂದ ಒಳ್ಳೇ ವಿರಾಜಮಾನವಾಗಿತ್ತು. ಈ ಮೇಲೆ ಹೇಳಿದ ಮೇರಿಗೆ ಮುಂಜಾನೆ ೭ ಗಂಟೆಗೆ ಸರಿಯಾಗಿ ಸಭೆಯ ಕೆಲಸವು ಪ್ರಾರಂಭವಾಯಿತು. ಅನಂತರ ವಾರ್ಷಿಕ ರಿಪೋರ್ಟ, ವಾಚನಾಲಯದ ಉಪಯೋಗ ಈ ವಿಷಯದ ಮೇಲೆ ಸ್ವಾಗತಸಂಘದ ಅಧ್ಯಕ್ಷರಾದ ಮ॥ ಸಿದ್ದಪ್ಪಾ ಸಿಂಧೂರ ಇವರ ಉಪನ್ಯಾಸ ನಡೆದು ಗಾಯನ ತಾಂಬೂಲ ಸಮಾರಂಭದೊಡನೆ ಈ ಮಂದಿರದ ವಾರ್ಷಿಕ ೪ ನೇ ವರ್ಧಂತಿಉತ್ಸವವು ಸಮಾಪ್ತಮಾಡಲ್ಪಟ್ಟಿತು. ತಾ॥ ೭-೬-೧೯೧೧ ರ ದಿನ ಸಬ್ಜೆಕ್ಟ್ ಕಮಿಟಿಯಲ್ಲಿ ನೇಮಿಸಿದಂತೆ ಶ್ರೀ ವಿರಕ್ತಮಠದೊಳಗೆ ಶ್ರೀ ನಿರಂಜನ ಅಧಿವಿಸ್ವಾಮಿಗಳ ಸನ್ನಿಧಿಯಲ್ಲಿ ತಾರೀಖು ೮ ರ ಮಧ್ಯಾನ್ಹ ೭ ಗಂಟೆಗೆ ಸರಿಯಾಗಿ ಸಭೆಯು ಕೂಡಿತು. ಪ್ರಾರಂಭದಲ್ಲಿ ಶ್ರೀಮಂತ ಅಪ್ಪಾಸಾಹೇಬ ವಾರದ ಇವರು ಮರಣಹೊಂದಿದ್ದಕ್ಕೆ ಸಮಾಜಕ್ಕಾದ ಅಪಾರವಾದ ದುಃಖಪ್ರದರ್ಶನಮಾಡಿ ಇವರ ಚರಿತ್ರವನ್ನು ಶ್ರೀಯುತ ಚನಬಸಪ್ಪ ಬೆಲ್ಲದ ಇವರು ಓದಿದನಂತರ ಆ ಕೂಡಲೇ ಅವರ ಪತ್ನಿ ಶ್ರೀಮತಿ ಗೌರಾಬಾಯಿಯವರಿಗೆ ತಂತಿಯ ಮೂಲಕ ತಿಳಿಸಲ್ಪಟ್ಟಿತು. ಅನಂತರ ವಾಚನಾಲಯದ ಅವಶ್ಯಕತೆ ಈ ವಿಷಯದ ಮೇಲೆ ಮಂಜಪ್ಪಾ ಹರ್ಡೇಕರ ಇವರು ಮಾತಾಡಿದರು. ತರುವಾಯ ಆಂಗ್ಲಭಾಷಾಭಿವೃದ್ಧಿ ವ ವಿದ್ಯಾಶಾಂತತೆ ಈ ವಿಷಯಗಳ ಮೇಲೆ ಕ್ರಮವಾಗಿ ಮ॥ ವೀರಪ್ಪಾ ಉಪ್ಪಿನ, ರಾಯಪ್ಪಾ ಮಾಸ್ತರ ಸವಣೂರ ಇವರ ವತಿಯಿಂದ ಚನವೀರಪ್ಪ ಸೆಟ್ಟರು ವ ಪುಟ್ಟಪ್ಪ ಸಮಸಿಗಿ ಇವರು ಉಪನ್ಯಾಸಿಸಿದರು. ಅನಂತರ ಅಷ್ಟಾವರಣದ ಮಹಿಮೆ ನಿತ್ಯಾಚಾರ ನಿರೂಪಣ- ಇದರಮೇಲೆ ವೇ॥ ಬಸವಾರಾಧ್ಯರು ಶೇಷಗಿರಿ ಇವರೂ, ಆಮೇಲೆ ವೇ॥ ಬಸವಲಿಂಗ ಶಾಸ್ತ್ರಿಗಳು ಸುಣ್ಣಕಲ್ಲ ಬಿದರಿ ಇವರು ಸ್ವಗೋತ್ರದಲ್ಲಿ ಶರೀರ ಸಂಬಂಧ ಮಾಡಬಾರದು ಎಂಬುದಕ್ಕೆ ಪ್ರಮಾಣ ವ ಮಾಡಿದರೆ ಅದರಿಂದಾಗುವ ಹಾನಿ, ಭಕ್ತಮಾಹೇಶ್ವರರು ತಮ್ಮತಮ್ಮ ಗೋತ್ರಸೂತ್ರಗಳನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಲೇಬೇಕು ಮತ್ತೂ ನಿತ್ಯಾಚಾರ ನಿರೂಪಣ ಈ ವಿಷಯದಮೇಲೆ ಉಪನ್ಯಾಸ ನಡೆದನಂತರ ಸದರಿ ಶಾಸ್ತ್ರಿಗಳವರು ೧ ನೇ ಧರ್ಮೋತ್ತೇಜಕ ಸಭೆಯ ಠರಾವುಗಳನ್ನು ಪ್ರತಿಯೊಬ್ಬರೂ ತಂತಮ್ಮ ಗ್ರಾಮಗಳಲ್ಲಿ ಅಮಲಿನಲ್ಲಿ ತರಬೇಕೆಂಬುದಾಗಿ ಸಭೆಯಲ್ಲಿ ನೆರೆದ ಜನರ ಮನಸ್ಸಿಗೆ ಬಿಂಬಿಸುವಂತೆ ಹೇಳಿದರು. ಆಮೇಲೆ ಈ ಊರಲ್ಲಿ ತಾ॥ ೮-೮-೧೯೧೧ ರ ದಿವಸ ವೀರಶೈವರಿಂದ ಸ್ಥಾಪಿಸಲ್ಪಟ್ಟ ಇಂಗ್ಲೀಷ ಸ್ಕೂಲಿನ ವಿಚಾರ ನಡೆಸಲ್ಪಟ್ಟಿತು. ಅನಂತರ ಚಚಡಿ ದೇಸಾಯರ ಕಾರಭಾರಿ ವೇ॥ ಮುರಿಗಯ್ಯನವರು ಈ ಸಭೆಯ ಉತ್ತೇಜನದ ಬಗ್ಗೆ ಪ್ರೋತ್ಸಾಹಕೊಟ್ಟು ಎಲ್ಲ ಸಭೆಯ ವತಿಯಿಂದ ಆಭಾರಮನ್ನಿಸಿದರು. ತರುವಾಯ ವೀರಶೈವ ಮತದ ಜೀರ್ಣೋದ್ಧಾರ ಗ್ರಂಥಗಳನ್ನು ಪ್ರಚಾರ ಪಡಿಸುವ ವೇ॥ ಯಮ್. ಆರ್. ಕರಿಬಸವ ಶಾಸ್ತ್ರಿಗಳಿಗೂ ಮತ್ತೂ ನಮ್ಮ ಮತಕ್ಕೆ ನಕ್ಷತ್ರದಂತಿರುವ ಸ್ಟಾರ್ ಪತ್ರಿಕಾ ಕರ್ತರಿಗೂ ಈ ಸಭೆಯ ವತಿಯಿಂದ ಆಭಾರ ಸೂಚನೆಗಳು ಹೇಳಲ್ಪಟ್ಟುವು. ಅನಂತರ ಶ್ರೀ ಸ್ವಾಮಿಗಳ ಆಜ್ಞೆ ಮೇರೆಗೆ ಸಭೆಯ ಕೆಲಸವು ಜಯ ಜಯಕಾರ ಧ್ವನಿಯಿಂದ ವಿಸರ್ಜನೆಯಾಯಿತು.

ಓರ್ವ ಚಂದಾದಾರ.

ಮಹಾವಿವಾಹ ವೈಭವ.

(ಕಳೆದವಾರದಶೇಷ.)

ಇವರೆಲ್ಲರ ದಿವ್ಯಾನುಗ್ರಹವೂ, ಆಶೀರ್ವಾದವೂ ಈ ವಧೂವರರಮೇಲೆ ನಿರಂತರವಾಗಿರಲಿ. ಕಡೆಯಲ್ಲಿ ಈದಿನ ಈ ಸ್ಥಳದ ಎಲ್ಲಾ ಸ್ಕೂಲ್‌ಗಳ ಬಾಲಕ ಬಾಲಕಿಯರಿಗೂ, ಉಪಾಧ್ಯಾಯರುಗಳಿಗೂ, ಫಲಪುಷ್ಪ ತಾಂಬೂಲಾದಿಗಳು ವಿನಿಯೋಗಿಸಲ್ಪಟ್ಟುವು. ಈ ಮಹನೀಯರವರ ಕುಲ ಗುರುಗಳಾದ ಬಳ್ಳಾರಿ ಜಿಲ್ಲ ಅದ್ವಾನಿ ತಾ॥ ನಂದಾವಾರದ ಮಠದ ವೇದಮೂರ್ತಿಗಳಾದ ಶಿದ್ಧಒಡೆಯರ ಬಸವಪ್ಪದೇವರೂ ಕುಲದೇವರಾದ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿಯೂ ಸಹ ಅಪರಿಮಿತ ಭಕ್ತಿಭಾವದೊಡನೆ ಅರ್ಚಿತರಾಗಿ ವಿಶೇಷ ಕಾಣಿಕೆಯನ್ನು ಅಂಗೀಕರಿಸಿದರು. ಒಟ್ಟಾಗಿ ಹೇಳಿದರೆ– ಈ ಶ್ರೀಮಂತರವರ, ಈ ಸಾತ್ವಿಕಶಿರೋಮಣಿಗಳ, ಈ ನಿಷ್ಪಕ್ಷಪಾತಿಗಳ, ಈ ಸರ್ವಜನಹಿತೈಷಿಗಳ, ಮತ್ತು ಈ ಈಶ್ವರಭಕ್ತಭರಿತರವರ ಈ ವಿವಾಹವ್ಯಾಜದ್ವಾರಾ ನಡೆಯಿಸಲ್ಪಟ್ಟ, ತಾ॥ ೨೪-೪-೧೧ ನೇ ಗುರುವಾರದಾರಭ್ಯ ಇಂದಿನ ಪರ್ಯಂತ ಅಂದರೆ, ಒಂದೂಮುಕ್ಕಾಲು ತಿಂಗಳು ಕಾಲದ ವರೆಗಿನ ಮಹೌದಾರ್ಯ ಪರಂಪರೆಯಲ್ಲಿ, ಸ್ವಮತದವರೂ ಬ್ರಾಹ್ಮಣಾದಿ ಚಂಡಾಲಪರ್ಯಂತ ಸಕಲಮತದವರು, ಸಕಲಾಧಿಕಾರಿಗಳು, ಅಧೀನಸ್ಥರುಗಳೂ, ವಿದ್ವಾಂಸರೂ, ಜ್ಯೋತಿಷ್ಕರೂ, ಮಹಮ್ಮದೀಯ ಮೌಲ್ವಿಗಳು, ಗಾಯಕರು, ಇತರ ಯಾಚಕರು, ಭಿಕ್ಷುಕರು, ಫಕೀರರು, ಅನಾಥಬಾಲ–ಬಾಲೆಯರು ಸ್ತ್ರೀಯರು, ಇಂಗ್ಲೀಷ್ ಮತ್ತು ಕರ್ನಾಟಕ ವಿಶಿಷ್ಟವಾದ್ಯಗಾರರು, ನಟುವ[illegible]ಗಾಯಕವೇಶ್ಯಾ ಜನರು, ಬಾಣ ಬಿರಸು ಮೊದಲಾದ ವಿವಿಧ ಕಸಬುದಾರರು ಮುಂತಾಗಿ ಈ ಸ್ಥಳನಿವಾಸಿಗಳಾದ ಸಕಲರೂ ಸತ್ಕರಿಸಲ್ಪಟ್ಟು ಆನಂದದಿಂದ ಸಂತೃಪ್ತರಾದರು. ಇದಲ್ಲವೆ ಮಹನೀಯ ಗುಣ! ಇದಲ್ಲವೆ ಮಹೌದಾರ್ಯ ಗುಣ! ಇದೇಅಲ್ಲವೆ ಶ್ರೀಮಂತರ ಲಕ್ಷಾಧಿಪತಿಗಳ ಮಹೋನ್ನತಗುಣದ ಘನತೆ!

ಈ ದೃಢ ಶ್ರೇಷ್ಠ ಸುಗುಣಾತಿಶಯವನ್ನೇ ಈ ಕೆಳಗಿನ ಶ್ಲೋಕಗಳು ವ್ಯಕ್ತಪಡಿಸಿ, ಮಹಾತ್ಮರ ಗುಣಲಕ್ಷಣಗಳನ್ನು ಕೊಂಡಾಡುತ್ತಲಿವೆ. ನೋಡಿ.—

ಗುಣಿಗಣಗಣನಾರಂಭೆ ನಪತತಿ ಕಠಿನೀ ಸಸಂಭ್ರಮಾ ಯಸ್ಯ । ತೇನಾಂಬಾ ಯದಿ ಸುತಿನೀ ವದ! ಬಂಧ್ಯಾ ಕೀದೃಶೀ ಭವತಿ? ॥೧॥ ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಂ । ಉದಾರಚರಿತಾನಾಂ ತು ವಸುಧೈವ ಕುಟುಂಬಕಂ ॥೨॥ [illegible]

ಬುಧರುಚಿರಸಂಗಂ ಮಹಾದೇವಪೂಜಾಮುದಿತಸ್ವಾಂತಂ ದಯಾಂಭೋನಿಧಿ ಸಕಲಜನಾಹ್ಲಾದಕೃತ್ಯಂ ಪ್ರತಾಪಾಸ್ಪದನುದ್ಯದ್ಧೈರ್ಯವಂತಂ ನಿಪುಣತಿಲಕಮಿಂತೀ ಬಸೆಟ್ಟಾಖ್ಯಂ ಖ್ಯಾತಂ ಮದನಾಕಾರಂ ವಿನೋದಂಬಡೆ ದೊಸೆದೆಸೆದಂ ಮಲ್ಲಸೆಟ್ಟ್ಯಾತ್ಮಜಾತಂ ॥೩॥

ಈ ಸುಗುಣ ಶಿರೋಮಣಿಗಳು ನಮ್ಮ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿಸಭೆಗೂ, ಈ ನಗರದ ಮ್ಯುನಸಿಪಾಲಿಟಿಗೂ ಮೆಂಬರಾಗಿರುವರು. ಇದಲ್ಲದೆ ವೀರಶೈವ ಮಹಾಸಭೆಯಲ್ಲಿಯೂ ಗೌರವಿತ ಸದಸ್ಯರಾಗಿರುತ್ತಾರೆ. ಮತ್ತೂ ಈ ಶ್ರೀಮಂತರವರು ನಮ್ಮ ಗೌರ್ನಮೆಂಟಿನಲ್ಲಿ ಒಂದು ಲಕ್ಷ ರೂ. ಗಳ ವರೆಗೂ ಇಟ್ಟಿರುತ್ತಾರೆ ಈ ಮಹನೀಯರವರ ತಂದೆಯವರೂ ಕೂಡ ೨೦ ವರ್ಷಗಳಿಗೆ ಮೇಲ್ಪಟ್ಟು, ಮೇಲೆ ಹೇಳಿದಂತೆ ಮೆಂಬರ್‌ಸ್ಥಾನಾಪನ್ನರಾಗಿದ್ದು, ಕಾರ್ಯನಿರ್ವಾಹಮಾಡಿ ಈಗ ವಿಶ್ರಾಂತಸುಖದಲ್ಲಿರುವರು. ಈ ಕಾರಣಗಳಿಂದಲೇ ಈ ಲೇಖನದ ಆದಿಯಲ್ಲಿ ವಿವರಿಸಿರುವಂತೆ, ಇವರು ರಾಜಮಾನ್ಯರೂ, ಸಭಾಮಾನ್ಯರೂ, ಈ ಉಭಯಸಂಬಂಧದ್ವಾರಾ ದೇವಮಾನ್ಯರೂ ಆಗಿದ್ದಾರೆಂದು ಹೇಳಿರುವುದರಲ್ಲಿ ಅತಿಶಯೋಕ್ತಿಯಾಗಲಿ, ಉತ್ಪ್ರೇಕ್ಷೆಯಾಗಲಿ ಕಾಣುವುದಿಲ್ಲ. ಒಬ್ಬ ಮಹಾರಾಜರವರು ನಡೆಸಬಹುದಾದಷ್ಟು ವೈಭವ ಮತ್ತೂ ವಿಜೃಂಭಣೆಗಳಿಂದ ೮-೬ ದಿನಗಳಲ್ಲಿ ಮುಗಿಸಬಹುದಾದ ಒಂದು ವಿವಾಹ ಮಹೋತ್ಸವವನ್ನು ಅತಿ ದೀರ್ಘಕಾಲ ಅಂದರೆ ಮೇಲೆ ಹೇಳಿದಂತೆ ೧॥ ತಿಂಗಳು ವರೆಗೆ ನಿತ್ಯೋತ್ಸವವಾಗಿ ನಡೆಯಿಸಿದ್ದಕ್ಕೆ ಶ್ರೀಮಂತರಾದ ನಮ್ಮ ಈ ಮ॥ರಾ॥ ಬಸಪ್ಪಸೆಟ್ಟರವರ ಭಾವನವರಾಗಿಯೂ ಮದವಣಿಗರು ಚಿ॥ ಶ್ರೀಕಂಠಪ್ಪನವರ ಸೋದರಮಾವನವರಾಗಿಯೂ ಇರುವ ಮ॥ರಾ॥ ವಾಲಿ ಸಿದ್ದಪ್ಪನವರೆಂಬ ಕುಶಲಬುದ್ಧಿಯೂ, ಲೌಕಿಕ ವೈದಿಕಜ್ಞಾನಸಂಪನ್ನತೆಯೂ ಉಳ್ಳ ಮುಖ್ಯ ಸಚಿವರ ವಿತರಣಪೂರ್ವಕವಾದ ಕಾರ್ಯದಕ್ಷತೆಯೇ ಮೂಲಕಾರಣವಾಗಿರುತ್ತದೆ. ಈ ಮಹನೀಯರವರ ಪ್ರಜಾರಂಜಕವಾದ ಸುಪ್ರೇರಣೆಯಿಂದಲೇ ಮೇಲೆ ಹೇಳಿದ ಶ್ರೀಮಂತರವರು ಅನಾಥರೂ, ದರಿದ್ರರೂ ಆದ ಬಾಲಕರ ವಿದ್ಯಾಭ್ಯಾಸ ಮತ್ತೂ ಅವರ ಮುಂದಿನ ಜೀವನೋಪಾಯಗಳಿಗೆ ಅನುಕೂಲವಾಗಿರುವಂತೆ ಈ ನಗರದಲ್ಲಿ ಕುಶಲವಿದ್ಯೆ ಮತ್ತು ಕೈಗಾರಿಕೆಗಳನ್ನು ಕಲಿಸುವ ಧರ್ಮದ ಶಾಲೆಯೊಂದನ್ನು ಈ ವಿವಾಹಮಹೋತ್ಸವ ಜ್ಞಾಪಕವು ಕೇವಲ ಪರೋಪಕಾರ ರೂಪದಲ್ಲಿ ಆಚಂದ್ರಾರ್ಕಸ್ಥಾಯಿಯಾಗಿ ನೆಲೆಗೊಂಡಿರುವಂತೆ ಏರ್ಪಡಿಸುವರೆಂಬ ಶುಭವರ್ತಮಾನವಿದೆ. ಈ ವಾರ್ತೆಯು ಶೀಘ್ರದಲ್ಲಿಯೇ ಕಾರ್ಯರೂಪದಲ್ಲಿ ಸ್ಥಾಪಿತವಾಗಿ ಈ ಲಕ್ಷಾಧೀಶರ ಪಾರಮಾರ್ಥಿಕ ಕೀರ್ತಿಯನ್ನು ಇನ್ನೂ ಹೆಚ್ಚಾಗಿ ಪ್ರಕಾಶಪಡಿಸುತ್ತಾ ಬರಲೆಂದು ಭಗವತ್ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ. ಈ ನೂತನ ದಂಪತಿಗಳಿಗೂ, ಮಹದೌದಾರಿಗಳಾದ ಇವರ ಮಾತಾಪಿತೃಗಳಿಗೂ, ಧಾರ್ಮಿಕಗುಣವಿಶಿಷ್ಟರಾದ ಅವರ ಮಾತಾಪಿತೃಗಳಿಗೂ, ಇವರ ಮುಖ್ಯ ಸಚಿವರಾದ ಮ॥ ರಾ॥ ವಾಲಿ ಸಿದ್ದಯ್ಯನವರಿಗೂ, ಇತರ ಬಂಧುವರ್ಗಕ್ಕೆಲ್ಲಕ್ಕೂ ಪರಮಕೃಪಾನಿಧಿಯಾದ ಜಗದೀಶನು ದೀರ್ಘಾಯುರಾರೋಗ್ಯೈಶ್ವರ್ಯಾದಿ ಸಕಲ ಸೌಭಾಗ್ಯ ಪರಂಪರೆಗಳನ್ನಿತ್ತು ಇತೋಪ್ಯತಿಶಯ ಪರೋಪಕಾರ ಕಾರ್ಯತತ್ಪರರಾಗಿ ಬಾಳುತ್ತಿರುವಂತೆ ದಿವ್ಯಾನುಗ್ರಹವನ್ನು ಕರುಣಿಸಲೆಂದು ಈ ಮಹಾತ್ಮರ ಸುಗುಣಾನುಭವಿಗಳೆಲ್ಲರೂ ವಿನೀತರಾಗಿ ಬೇಡಿಕೊಳ್ಳುತ್ತಾರೆ.

ಇಲ್ಲಿ ಇವರ ಅನ್ಯಾದೃಶವಾದ ಇನ್ನೊಂದು ಮಹನೀಯ ಗುಣವನ್ನು ಪ್ರಶಂಸಿಸದೆ ಬಿಡುವುದು ಧರ್ಮವಲ್ಲ. ಅದೇನಂದರೆ—ಧನಿಕರನೇಕರು ತಮ್ಮನ್ನು ಸರ್ಕಾರದವರೂ ಜನರೂ, ಮೆಚ್ಚಲಿ! ಎಂಬ ಅಭಿಪ್ರಾಯದಿಂದ ಬಹು ಡಾಂಭಿಕರಾಗಿ ತಮ್ಮ ತಮ್ಮ ಸಾಧಾರಣ ಕಾರ್ಯದಕ್ಷತೆಯನ್ನು ಪತ್ರಿಕಾದಿ ನಾನಾ ಮೂಲಕ ಬಹು ವಿಶೇಷವಾದುದೋ? ಎಂಬಂತೆ ಪ್ರಕಟಪಡಿಸಿಕೊಳ್ಳುತ್ತಿರುವುದು ವಾಡಿಕೆಯಾಗಿದೆ. ಈ ಶ್ರೀಮಂತರವರಾದರೋ! « ತುಂಬಿದಕೊಡ ತುಳುಕುವುದಿಲ್ಲ" ಎಂಬ ನಾಣ್ನುಡಿಯಂತೆ, ತಾವು ಲಕ್ಷಾಧಿಪತಿಗಳಾಗಿದ್ದರೂ, ಇದುವರೆಗೆ ಕೆಲವು ಸತ್ಕಾರ್ಯಗಳನ್ನು ಮಾಡಿದ್ದರೂ, ಇದೆಲ್ಲಾ ಪಾರಮಾರ್ಥಿಕದ್ದಾಗಿ, « ದೇವರು ಕೊಟ್ಟಿರುವುದು ದೇವರಿಗೇ ಸೇರಿದೆ, ನನ್ನದೇನೂ ಇಲ್ಲ" ವೆಂಬ ಭಾವದೊಡನೆ ಗುಪ್ತವಾಗಿಯೇ ಇಟ್ಟುಕೊಳ್ಳುತ್ತಾ ಬಂದಿದ್ದಾರೆ. ಈಗಲೂ ಈ ಲೇಖನಪ್ರಸ್ತಾಪವು, ಇವರ ಕಿವಿಗೆ ಬೀಳದಂತೆ « ನಹಿ ಕಸ್ತೂರಿಕಾಮೋದ ಶಪಥೇನ ನಿವಾರ್ಯತೇ" ಎಂಬ ರೀತಿಯಲ್ಲಿ ತಾನಾಗಿಯೇ ಪ್ರತ್ಯಕ್ಷಾನುಭವಿಯಾದವನೊಬ್ಬನಿಂದ, ಈ ಅತ್ಯುತ್ಕೃಷ್ಟವಾದ ಮಾದರಿಯನ್ನೇ ಎಲ್ಲಾ ಐಶ್ವರ್ಯವಂತರೂ, ಅಧಿಕಾರಿಗಳೂ ಇತರರೂ ಸಹ ಅನುಸರಿಸುತ್ತಾ ಬರುವವರಾಗಲಿ! ಎಂಬ ಉದ್ದೇಶಪೂರ್ವಕವಾಗಿ ಬರೆಯಲ್ಪಟ್ಟಿದೆ. ಭಗವಂತನ ಈ ಘನವಾದ ಪ್ರೇರಣೆಯೇ ಸರ್ವತ್ರ ಉಂಟಾಗಲೆಂದು ಹಾರೈಸುತ್ತೇನೆ.

ಪ್ರತ್ಯಕ್ಷದರ್ಶಿ.

17 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.





ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೩-೦. ಒಮ್ಮೇಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ್.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

17

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲೆ ಸಂದುಗಳ ನೋವು ಮೈ ಕಾಲು ಜೋತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ; ೪ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೮ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೮-೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಮೊಸರುಬಾವು, ಹಲ್ಲುಗಳಲ್ಲಾಡುವದು, ಹಲ್ಲುಕೊರತು, ಹಲ್ಲುಗಳ ಪಾಚೆ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಆ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಯೋಗಕ್ಷೇಮವುಳ್ಳ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗೆಡ್ಡೆ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಅ. ೮. ವೆರಡರಿಂದ ಟಪಾಲ್ ಖರ್ಚು ೪ ಆಣೆ ಮಾತ್ರ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮ ವೈದ್ಯಶಾಲಾ, ಮೈಸೂರು.

15 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ ! ! ಬಿಡಬೇಡಿರಿ ! ! !

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬರೆರಿ.

1. ರಾಸ್ಕೊಪಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 2-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡು ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ಮೋನಿಯಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ ! ಬಹುಮಾನ ! ! ಬಹುಮಾನ ! ! !

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರೆ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟ್ಯಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೫೦ ಶಿಂಗಣ್ಣನ್ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

27

ಉತ್ತಮ ಗ್ರಂಥಗಳು.

ಶಿವಪಂಚಸ್ತವ:- ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.-ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.-ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.-ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಮೇತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ
52 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೪೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦., ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚ ಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.
ದಂತಶುದ್ಧಿ ಚೂರ್ನ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೧ನೇ ಇಸವಿ ಅಗಸ್ಟ ತಾ॥ ೭ ರಿಂದ ೧೯೧೧ ನೇ ಅಗಸ್ಟ ತಾ॥ ೧೩ ರವರೆಗೆ ಸಲ್ಲುವ ಶಾಲಿವಾಹನ ಶಕೆ ೧೮೩೩ ನೇ ವಿರೋಧಿಕೃತು ಸಂವತ್ಸರದ ಶ್ರಾವಣ ಶು॥ ತ್ರಯೋದಶಿಯಿಂದ ಶ್ರಾವಣ ಬ॥ ತದಿಗೆವರಿಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕ್ಯಾ ತೇದಿ
7	ಸೋ	ತ್ರ	55-59	ಪೂಷಾ	52-25	16
8	[1] ಮಂಗ	ಚ	60-0	ವೃಷಾ	58-32	17
9	[2] ಬುಧ	ಚ	0-9	ಶ್ರ	60-0	1
10	ಗುರು	ಪಾ	8-30	ಶ್ರ	8-4	19
11	[3] ಶುಕ್ರ	ಬಾ	5-39	ಧ	6-:8	20
12	[4] ಶನಿ	ಬಿ	6-45	ಶ್ತ	9-37	21
13	ಭಾನು	ತ	6-28	ಪೂಭಾ	45-46	22

(1) ಮಂಗಳಗೌರಿವ್ರತಂ, (2) ಋಗ್ಯಜುರುಪಾಕರ್ (3) ಆದಿಶುಕ್ರವಾರಂ. (4) ಶ್ರಾವಣಶನಿವಾರೇ, ಶ್ರೀರಗದಲ್ಲಿ ಇರಪಿತ್ತ್ಯಾಂಬಿರಕ್ ಉತ್ಸವ.

ಮೈಸೂರ್ : ವೈ. ವಿರೂಪಾಕ್ಷಯ್ಯನವರಿಂದ ಶ್ರ ಪ್ರೆಸ್ಸಿನಲ್ಲಿ ಮುದ್ರಿಸಿಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ☸ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಕ್ಷಕೃತಾವತಾರಾ ಪಕ್ಷ್ಯಜ್ಞನ ಹೃತ್ತಮೋಹರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲಸತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಕೆಯಿಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ ಸ್ಟಾರ ಸರ್ ೧೯೧೧ ನೇ ಇಸವಿ ಅಗಸ್ಟ ತಾರೀಖು ೧೪ ನೇ ಸೋಮವಾರ. [ಸಂಚಿಕೆ ೩೩

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂತೆನ್ಸ	೦-೩-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦-೧೪-೦.
೨ ರಿಂದ ೪ ರವರಿಗೆ ೧-೧೦-೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

---

೭೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

12

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪)ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮)ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ, ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಮುಖಾಪಟಗಳು; ದೊರೆಯುತ್ತವೆ.

(ಕ್ಯಾ)ಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ.—ವಿಜಯಕೇಸರಿ ಕಂಪೆನಿ, ಬೆಂಗಳೂರು ಸಿಟಿ.

ಊದಬತ್ತಿಗಳು.

23

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೨-೦; ೫-೦-೦; ೩-೦-೧; ೨-೮-೦; ೧-೪-೦ ; ಕಸ್ತೂರಿ ಜಲ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

'ಅಗತ್ಯ ವಿಚಾರ."

11

ಬೆಲೆ ೪॥ ಆಣೆ. ವಿ. ಪಿ. ಯಿಂದ ೭ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ " ಅಗತ್ಯವಿಚಾರ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೨ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ :—ವೀರಭದ್ರಪ್ಪಾ ಆರುಬೆರಳನ,
ಪೋಸ್ಟ್-ಬಾಗೇವಾಡಿ, ಡಿ॥ ಬೆಳಗಾಂವ.

ಉತ್ತಮ ಗ್ರಂಥಗಳು.

1

ಬಸವರಾಜವಿಜಯಂ.-ಬೆಲೆ ವಿ. ಪಿ. ಯಿಂದ ೧-೪-೧. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.- ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.- ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.- ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.- ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.- ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.- ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ- ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.- ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ ೬ ಆಣೆ.

ರಕ್ಷಾಶತಕಂ.- ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.- ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕ ಮಂಡಲಿ, ಮೈಸೂರು.

ಸರ್ವರೂ ನೋಡಿ.

ಪದ್ಮಾವತಿ ಕಥೆ, ವೀರಶೈವಮತವಿಷಯಸಾರ, ಷಟ್ಸ್ಥಲ ಚಿಂತಾರತ್ನ-- ಇವುಗಳಲ್ಲಿ ಒಂದೊಂದಕ್ಕೆ ಅರ್ಧಾಣೆಯ ಲೇಬಲ್ ಕಳಿಸಿದರೆ ಸುಮ್ಮನೆ ಕಳಿಸಲ್ಪಡುತ್ತೆ.

ವಿಳಾಸ: — ಜೀರಿಗೆ ಬಸವಲಿಂಗಪ್ಪ,
ಅರಳೆಪೇಟೆ, ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

7 ಗುಣವಾಗದಿದ್ದರೆ ಹಣವರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷದದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ-
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

---

೭೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಸಚಿತ್ರ ಶುಕಸಪ್ತತಿಕಥೆ.

5

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ಭೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವುದು. (೩) ಸ್ತ್ರೀಪಾತಿವೃತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಇದು ಅಲ್ಲದೆ ಇನ್ನೂ ಇತರವಿಧವಾದ ಕಥೆಗಳು ಕಾವ್ಯಗಳು ಪುರಾಣಗಳು ಮುಂತಾದ ಪುಸ್ತಕಗಳು ಸಹ ನಮ್ಮಲ್ಲಿ ದೊರೆಯುತ್ತೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ನಮ್ಮವಿಳಾಸ:— ಎಂ. ಆರ್., ಕೃಷ್ಣಸ್ವಾಮಿ [illegible] ಕಂಪೆನಿ ೧೫ನೇ ಗೋವಿಂದಪ್ಪನಾಯಕ್ ಬೀದಿ [illegible]

ಸೌಗಂಧಿಕಾಪರಿಣಯ.

:o:

(ಕಳೆದವಾರದಶೇಷ.)

ಹದಿನೈದನೇ ವರುಷದಿಂದ ಹದಿನೇಳನೇ ವರುಷದ ವರೆಗೂ ಕಾಚಾಯೆಂಬ ಚಿಹ್ನೆಯು ಗಾಜಿನಂತೆ ನೀಲವರ್ಣವುಳ್ಳುದಾಗಿ, ಹಾರಕದ ಅಕ್ಕಿಯ ಆಕಾರವುಳ್ಳುದಾಗಿರುವುದು. ಹದಿನೆಂಟನೇ ವರುಷದಿಂದ ಇಪ್ಪತ್ತುವರುಷದ ವರೆಗೂ ಮಾಕ್ಷಿಕೀಯೆಂಬ ಚಿಹ್ನೆಯು ನೊಣದಂತೆ ಕಪ್ಪಾಗಿ ಹಾರಕದ ಅಕ್ಕಿಯ ಆಕಾರವಂ ಪಡೆದಿರುವುದು. ಇಪ್ಪತ್ತೊಂದನೇ ವರುಷದಿಂದ ೨೩ ನೇ ವರುಷದ ವರೆಗೆ ಶಂಖವೆಂಬ ಚಿಹ್ನೆಯು ಶಂಖದಂತೆ ಶುಭ್ರವಾಗಿ ಹಾರಕದ ಅಕ್ಕಿಯ ಆಕೃತಿಯಂ ಪಡೆದಿರುವುದು. ಇಪ್ಪತ್ತನಾಲ್ಕು ವರುಷದಿಂದ ಇಪ್ಪತ್ತಾರು ವರುಷದ ವರೆಗೂ ಉಲೂಖವೆಂಬ ಚಿಹ್ನೆಯು ದಂತಗಳು ಬೀಳುವುದಕ್ಕೆ ಸೂಚಕವಾಗಿ ಹಲ್ಲುಗಳ ಮಧ್ಯದಲ್ಲಿ ರಂಧ್ರರೂಪದಿಂ ಕಾಣುವುದು. ಇಪ್ಪತ್ತೇಳನೇ ವರುಷದಿಂದ ಇಪ್ಪತ್ತೊಂಭತ್ತು ವರುಷದ ವರೆಗೂ ಚಲನವೆಂಬ ಚಿಹ್ನೆಯು ಉಂಟಾಗಿ, ಹಲ್ಲುಗಳು ಅಲ್ಲಾಡುವುವು. ಮುವ್ವತ್ತನೇ ವರುಷದಿಂದ ಮುವ್ವತ್ತೆರಡು ವರುಷದ ವರೆಗೂ ಅವಪಾತವೆಂಬ ಚಿಹ್ನೆಯುಂಟಾಗಿ, ಹಲ್ಲುಗಳು ಬಿದ್ದುಹೋಗುವುವು. ಈ ರೀತಿಯಲ್ಲಿ ಮುವ್ವತ್ತೆರಡು ವರ್ಷಂಗಳೇ ಅಶ್ವಂಗಳಿಗೆ ಪರಮಾಯುಸ್ಸೆಂದು ತಿಳಿಯತಕ್ಕದು. ಯಾವ ಅಶ್ವಗಳಿಗೆ ಕಿವಿಯ ಕೊನೆಯಭಾಗವು ಹಿಡಿಸಲ್ಪಟ್ಟರೆ ಚಂದ್ರದಂತೆ ಕೆಂಪಾದ ರಕ್ತವು ಶೀಘ್ರದಿಂ ಕಾಣುವುದೋ, ಆ ಕುದುರೆಗಳು ಬಹುಕಾಲ ಜೀವಿಸುತ ಚಿರಜೀವಿಗಳೆನಿಸಿಕೊಳ್ಳುವುವು. ಇನ್ನುಮೇಲೆ ಕುದುರೆಗಳ ಆಯುಸ್ಸಂ ಅರಿವದಂ ಪೇಳುವೆನು. ಮನುಷ್ಯರ ಹಸ್ತಗಳಲ್ಲಿರುವ ರೇಖೆಗಳು ಅವರವರ ಆಯುಸ್ಸನ್ನೆಂತು ಸೂಚಿಸುವುವೋ ಆ ರೀತಿ ಕುದುರೆಗಳ ಮುಖದಲ್ಲಿರುವ ರೇಖೆಗಳು ಆಯಾಯ ಕುದುರೆಗಳ ಆಯುಸ್ಸಂ ಸೂಚಿಸುವುವು. ಯಾವ ಅಶ್ವಕ್ಕೆ ಮುಸುಡಿಯ ಮಧ್ಯದಲ್ಲಿ ಊರ್ಧ್ವಮುಖವಾಗಿ ರೇಖೆಯು ಪುಟ್ಟಿರುವುದೋ, ಆ ಅಶ್ವವು ಬಾಲ್ಯದಲ್ಲೇ ಒಂದು ವರುಷದೊಳಗೆ ಮುಖರೋಗದಿಂ ಮರಣವಂ ಹೊಂದುವುದು. ಅಂಗುಲಪ್ರಮಾಣವಾಗಿ ಅಂಥಾ ರೇಖೆಗಳೆರಡು ಮುಸುಡಿಯಲ್ಲಿ ಕಾಣಲ್ಪಟ್ಟರೆ, ಆ ಅಶ್ವವು ಜಿಹ್ವಾಸ್ತಂಭವೆಂಬ ರೋಗದಿಂದ ಎರಡನೇವರ್ಷದಲ್ಲಿ ಮೃತವಾಗುವುದು. ಅಂಥಾ ರೇಖೆಗಳೆರಡು ಮುಸುಡಿಯಲ್ಲಿ ಅಡ್ಡವಾಗಿರುವುವಾದರೆ, ಆ ಅಶ್ವವು ಧನುರ್ಗ್ರಹಣರೋಗದಿಂ ಪೀಡಿತವಾಗಿ ಮೂರನೇ ವರ್ಷದಲ್ಲಿ ಮೃತಿಯನ್ನೈದುವುದು. ಅಂಥಾ ರೇಖೆಗಳೆರಡು ಅಶ್ವದ ಮುಸುಡಿಯಲ್ಲಿ ಚೆನ್ನಾಗಿ ಬಗ್ಗಿಕೊಂಡಿದ್ದರೆ, ಆ ಅಶ್ವವು ಗ್ರಹವೆಂಬ ಭಯಂಕರವಾದ ರೋಗದಿಂ ನಾಲ್ಕನೇ ವರುಷದಲ್ಲಿ ಮೃತವಾಗುವುದು. ಯಾವ ಅಶ್ವಕ್ಕೆ ಊರ್ಧ್ವಮುಖವಾಗಿ ಬಗ್ಗಿರುವ ಕೊನೆಯುಳ್ಳ ರೇಖೆಯು ಮುಸುಡಿಯೊಳ್ ವಾಮಭಾಗದಲ್ಲಿ ಕಾಣಿಪುದೋ, ಆ ಅಶ್ವವಂ ಮೃಗಜಂಭವೆಂಬ ರೋಗವು ಐದನೇ ವರುಷದಲ್ಲಿ ಕೊಲ್ಲುವುದು. ಯಾವ ಅಶ್ವದ ಮುಸುಡಿಯಲ್ಲಿ ಅಂಗುಳಪ್ರಮಾಣಪರಿಮಿತವಾದ ಊರ್ಧ್ವ ಮುಖವಾದ ರೇಖೆಯು ಇರುವುದೋ, ಆ ಅಶ್ವವು ಆರನೇ ವರುಷದಲ್ಲಿ ನಾನಾವಿಧ ರೋಗದಿಂ ನಾಶವನ್ನೈದುವುದು. ಯಾವ ಅಶ್ವದ ಮುಸುಡಿಯಲ್ಲಿ ಅರ್ಧಾಂಗುಲ ವಿಸ್ತಾರವಾದ ರೇಖೆಯು ಮಧ್ಯಭಾಗದಲ್ಲಿ ಉನ್ನತವಾಗಿರುವುದೋ ಆ ಅಶ್ವವನ್ನು ಏಳನೇ ವರುಷದಲ್ಲಿ ಭಯಂಕರವಾದ ಘನೀಯೆಂಬ ರೋಗವು ಕೊಲ್ಲುವುದು. ಯಾವ ಅಶ್ವದ ಮುಸುಡಿಯಲ್ಲಿ ಅಂಗುಳತ್ರಯ ಪರಿಮಿತವಾದ ರೇಖೆಯು ಪುಟ್ಟಿರುವುದೋ, ಆ ಅಶ್ವವು ಎಂಟನೇ ವರುಷದಲ್ಲಿ ಜ್ವರದಿಂದ ಪೀಡಿತವಾಗಿ ಮೃತವಾಗುವುದು. ಯಾವ ಅಶ್ವದ ಮುಸುಡಿಯಲ್ಲಿ ರೇಖೆಯು ಋಜುವಾಗಿ, ಮಧ್ಯಭಾಗದಲ್ಲಿ ಸ್ಥೂಲವಾಗಿ ಒಂದು ಕಾಣುವುದೋ, ಆ ಕುದುರೆಯು ಒಂಭತ್ತನೇ ವರುಷದಲ್ಲಿಯೂ, ಎರಡು ರೇಖೆಯುಳ್ಳ ಕುದುರೆಯು ಹತ್ತನೇ ವರುಷದಲ್ಲಿಯೂ ಮೃತವಾಗುವುದು. ಯಾವ ಅಶ್ವದ ಮುಸುಡಿಯು ಮಧ್ಯದೊಳ್ ಎರಡು ಅಂಗುಲ ವಿಸ್ತಾರವುಳ್ಳ ಊರ್ಧ್ವಮುಖವಾದ ರೇಖೆಯಿರುವುದೋ, ಆ ಅಶ್ವವು ಹನ್ನೆರಡನೇ ವರುಷದಲ್ಲಿ ರೂಕ್ಷಾವರ್ತವೆಂಬ ರೋಗದಿಂ ನಾಶವನ್ನೈದುವುದು. ಯಾವ ಅಶ್ವದ ಮುಸುಡಿಯು ಮೇಲುಗಡೆಯಲ್ಲಿ ಧಪ್ಪವಾಗಿ ಉದ್ದವಾದ ರೇಖೆಯಿರುವುದೋ, ಆ ಅಶ್ವವು ಹದಿಮೂರನೇ ವರುಷದಲ್ಲಿ ಶ್ವಾಸರೋಗದಿಂ ಮೃತಿಯನ್ನೈದುವುದು. ಯಾವ ಅಶ್ವದ ಮುಸುಡಿಯಲ್ಲಿ ಅಡ್ಡವಾಗಿಯೂ, ಊರ್ಧ್ವವಾಗಿಯೂ, ಕಾಕಪಾದದಂತೆ ಎರಡು ರೇಖೆಗಳಿರುವುದೋ, ಆ ಅಶ್ವವು ರೋಗದಿಂ ಹದಿನಾಲ್ಕನೇ ವರ್ಷದಲ್ಲಿ ಮೃತವಾಗುವುದು. ಯಾವ ಅಶ್ವದ ಮುಸುಡಿಯಲ್ಲಿ ಎರಡು ರೇಖೆಗಳಿರುವುದೋ, ಆ ಕುದುರೆಯು ಹದಿನೈದನೇ ವರುಷದಲ್ಲಿ ಮಾರ್ಗದಲ್ಲಿ ಸಂಚರಿಸುತ ಭಯಪೀಡಿತವಾಗಿ ಮೃತಿಯನ್ನೈದುವುದು. ಶುಭ್ರವರ್ಣವುಳ್ಳ ಅಶ್ವಕ್ಕೆ ಒಂದು ರೇಖೆ ಕಾಣಲ್ಪಡುತ್ತಿದ್ದರೆ ಆ ಅಶ್ವವು ಹದಿನಾರನೇ ವರುಷದಲ್ಲಿ ವಾತರೋಗದಿಂದ ಮೃತವಾಗುವುದು. ಕೃಷ್ಣವರ್ಣವುಳ್ಳ ಅಶ್ವಕ್ಕೆ ಮುಸುಡಿಗಿಂತಲೂ ಸ್ವಲ್ಪ ಮೇಲುಗಡೆಯಲ್ಲಿ ರೇಖೆಯಿದ್ದರೆ, ಆ ಕುದುರೆಯು ಹದಿನೇಳನೇ ವರುಷದಲ್ಲಿ ಮೃತಿಯನ್ನೈದುವುದು. ಶತಾ ಅಶ್ವದ ಮುಸುಡಿಯಲ್ಲಿ ಯೂಪಸ್ತಂಭದಂತೆಯೂ, ಕಾಕೋಭಿತವಾದ ವೃಕ್ಷದಂತೆಯೂ ಒಂದು ರೇಖೆ ಇದ್ದರೆ ಆ ಅಶ್ವವು ಹದಿನೆಂಟನೇ ವರುಷದಲ್ಲಿ, ಜಲದಲ್ಲಿ ಮುಳುಗಿ ಮೃತಿಯನ್ನೈದುವುದು. ಯಾವ ಕುದುರೆಗೆ ಮುಸುಡಿಯ ಮಧ್ಯದಲ್ಲಿ ಕಪಿಲವರ್ಣವುಳ್ಳ ರೇಖೆಯು ಕಾಣಲ್ಪಡುವುದೋ ಆ ಅಶ್ವವು ಹತ್ತೊಂಬತ್ತನೇ ವರುಷದಲ್ಲಿ ವಿಷದಿಂ ಮೃತವಾಗುವುದು. ಇನ್ನುಮೇಲೆ ಅಶ್ವಗಳ ಪೂರ್ಣಾಯುರ್ಲಕ್ಷಣಗಳಂ ಪೇಳುವೆನು.— ಯಾವ ಅಶ್ವದ ಮುಸುಡಿಯು ಹೋಮಸಾಧನವಾದ ಸೃಕ್ಕಿನಂತಿರುವ ರೇಖೆಯಿಂದಲೂ, ಸ್ವಸ್ತಿಕದಿಂದಲೂ, ನಂದ್ಯಾವರ್ತದಿಂದಲೂ, ವರ್ಧಮಾನವೆಂಬ ರೇಖೆಯಿಂದಲೂ, ಬಿಲ್ವವೃಕ್ಷದಂತಿರುವ ರೇಖೆಯಿಂದಲೂ, ಕೂಡಿರುವುದೋ ಆ ಅಶ್ವವು ಮುವ್ವತ್ತುವರುಷ ಜೀವಿಸುವುದಾಗಿ ಕ್ರಿಮಿಕೋಷ್ಠವೆಂಬ ರೋಗದಿಂ ಮೃತಿಯನ್ನೈದುವುದು. (ಸಶೇಷ.)

Adopted from the "Dawn of Calcutta" Post box 363, with kind permission.

ಕಲಾಭವನ.

ಮೈಸೂರು, ಹೈದರಾಬಾದು, ತಿರುವಾಂಕೂರು, ಭಾವನಗರ, ಗ್ವಾಲಿಯರ್, ಕೊಲ್ಲಾಪುರ, ಮಿರಜಿ ಮೊದಲಾದ ಸಂಸ್ಥಾನಗಳು ಕುಶಲಕಲೆಗಾಗಿ ಸಂಸ್ಥಾನದ ಉತ್ಪತ್ತಿಯಲ್ಲಿ ತಕ್ಕಂತೆ ವ್ಯಯಮಾಡುತ್ತಿದ್ದಗ್ಯೂ, ಬದೋಡಾ ಸಂಸ್ಥಾನದಲ್ಲಿರುವ ಕಲಾಭವನವೇ ಶ್ರೇಷ್ಠತೆಯನ್ನು ಪಡೆದಿರುವುದು. ಬುದ್ಧಿಶಾಲಿಗಳಾದ ಮಹಾರಾಜರವರು ತಮ್ಮ ಸಂಸ್ಥಾನದ ಪ್ರಜೆಗಳಿಗೆ ಕುಶಲಕಲೆಯನ್ನು ಕಲಿಸಿ, ತನ್ಮೂಲಕ ದೇಶವನ್ನು ಅಭಿವೃದ್ಧಿಗೆ ತರಬೇಕೆಂದು ಈ ಕಲಾಭವನವನ್ನು ೧೮೯೦ ರಲ್ಲಿ ಸ್ಥಾಪಿಸಿದರು. ಕಲಾಭವನವೊಂದರಿಂದಲೇ ಕಲೆಯು ಅಭಿವೃದ್ಧಿಗೆ ಬರುವುದಿಲ್ಲವೆಂದು ತಿಳಿದು, ಇದು ಸ್ಥಾಪಿತವಾದ ಕೆಲಕಾಲದಲ್ಲೇ ಕೆಲ "ಡಿಸ್ಟ್ರಿಕ್ಟ್ ಕಲಾಶಾಲೆ" ಗಳನ್ನು ಸ್ಥಾಪಿಸಿದರು. ಈ ಡಿ॥ ಕಲಾಶಾಲೆಗಳು ಮೂರು ಅಥವಾ ನಾಲ್ಕುವರುಷಕ್ಕೊಮ್ಮೆ ಒಂದು ಡಿ॥ ನಿಂದ ಮತ್ತೊಂದಕ್ಕೆ ವರ್ಗಾಯಿಸಲ್ಪಡುವುವು. ಈ ಕಲಾಭವನದಿಂದಲೂ, ಇತರ ಶಾಲೆಗಳಿಂದಲೂ, ಬದೋಡೆಯಲ್ಲಿ ಅನೇಕರು ಕಲಾನಿಪುಣರಾದರೆನ್ನಬಹುದು. ಸುಮಾರು ಇಪ್ಪತ್ತು ವರ್ಷಗಳಿಂಚೀಚೆಗೆ ಬದೋಡೆಯಲ್ಲಿ ಅಭಿವೃದ್ಧಿಸ್ಥಿತಿಗೆ ಬಂದಿರುವ ಕುಶಲ ಕಲೆಯನ್ನು ನೋಡಿದರೆ ಆಶ್ಚರ್ಯವಾಗುವುದು. ಅರಳೆಯಿಂದ ದಾರವನ್ನು ಮಾಡಿ ನೆಯ್ಯುವವು ೩; ಅರಳೆಯಿಂದ ಬೀಜವನ್ನು ತೆಗೆಯುವವು ೬೦; ಅಗಳೆಯನ್ನು ಗಂಟುಕಟ್ಟುವವು ೯ ಈ ಮೇರೆ ಕಾರ್ಖಾನೆಗಳು ಪ್ರತ್ಯೇಕ ಪ್ರತ್ಯೇಕವಾಗಿವೆ. ಮತ್ತೂ ಹಿಟ್ಟುಮಾಡುವ, ಬಣ್ಣ ಕೊಡುವ, ಎಣ್ಣೆ ತೆಗೆಯುವ ಕಾರ್ಖಾನೆಗಳು ಐದೈದೂ, ಹತ್ತಿಕಾಳಿನಿಂದ ಎಣ್ಣೆ ತೆಗೆಯುವ ಕಾರ್ಖಾನೆಗಳು ಎರಡೂ ಇವೆ. ಅಲ್ಲದೆ ಭತ್ತವನ್ನು ಕುಟ್ಟುವ, ಸಕ್ಕರೆ ಮಾಡುವ, ಕ್ರೋಮ್ ಚಕ್ಕಳದಂತೆ ಚಕ್ಕಳವನ್ನು ಹದಮಾಡುವ, ಹಗ್ಗ ಹೊಸೆಯುವ, ಗರಗಸದಿಂದ ಕುಯ್ಯುವ, ಬೀಜಗಳಿಂದ ಮಿಠಾಯನ್ನು ಮಾಡುವ ಕಾರ್ಖಾನೆಗಳು ಪ್ರತ್ಯೇಕಪ್ರತ್ಯೇಕವಾಗಿವೆ. ಈ ಕಾರ್ಖಾನೆಗಳೆಲ್ಲವೂ ಸಾಧಾರಣವಾಗಿ ಹಬೆಯ ಯಂತ್ರಗಳಿಂದಲೇ ನಡೆಯುತ್ತಿರುವುವು. ಅನೇಕ ಬ್ಯಾಂಕುಗಳೂ, ಟ್ರಾಂವೆ ಕಂಪೆನಿಗಳೂ, ರೈಲು ಕಂಪೆನಿಗಳೂ ಸ್ಥಾಪಿತವಾಗಿ ಕಾರ್ಯವನ್ನು ನಿರ್ವಹಿಸುತ್ತಿವೆ.

ಕಲಾಭವನದ ಉಪಯೋಗವು ಬದೋಡಾ ಸಂಸ್ಥಾನಕ್ಕೆ ಮಾತ್ರವಲ್ಲ. ಇತರ ಸಂಸ್ಥಾನಗಳಿಗೆ ಸೇರಿದವರೂ ಇಲ್ಲಿ ವಿದ್ಯೆಯನ್ನು ಕಲಿತಿರುವರು ಮತ್ತೂ ಕಲಿಯುವರು. ೧೯೦೮ ರಲ್ಲಿ ಕಲಾಭವನವು ೫೩೦ ವಿದ್ಯಾರ್ಥಿಗಳನ್ನೊಳಗೊಂಡಿದ್ದಿತು ಅವರಲ್ಲಿ ೩೯೯ ವಿದ್ಯಾರ್ಥಿಗಳು ಮಾತ್ರ ಬದೋಡಾ ಸಂಸ್ಥಾನಕ್ಕೆ ಸೇರಿದವರು. ಉಳಿದ ೧೩೧ ವಿದ್ಯಾರ್ಥಿಗಳಲ್ಲಿ ೫೩ ಮಂದಿ ಗುಜರಾತ್, ಖ್ಯಾತಿವಾಡ ಮೊದಲಾದ ಆಶ್ರಿತ ಸಂಸ್ಥಾನಗಳಿಗೂ, ೧೨ ಮಂದಿ ಬೊಂಬಾಯಿಸಂಸ್ಥಾನಕ್ಕೂ, ೧೩ ಮಂದಿ ಮಧ್ಯಪ್ರಾಂತಕ್ಕೂ ಸೇರಿದವರಾಗಿರುವರಲ್ಲದೆ, ಇಬ್ಬರು ಬಂಗಾಳಾದಿಂದಲೂ, ಒಬ್ಬನು ಪಂಜಾಬಿನಿಂದಲೂ, ಒಬ್ಬನು ಮದ್ರಾಸಿನಿಂದಲೂ ಬಂದು ಕಲಾಭ್ಯಾಸವನ್ನು ಮಾಡುತ್ತಿದ್ದರು. ಇದರಿಂದಲೇ ಕಲಾಭವನವು ಇತರ ಸಂಸ್ಥಾನಗಳಲ್ಲಿರುವ ಕಲಾಶಾಲೆಗಳಿಗಿಂತಲೂ ಉತ್ತಮವಾದುದೆಂದು ಹೇಳಿರುವುದು. ಈ ರೀತಿಯಾಗಿ ಕಲಾಭವನವು ಭಾರತಮಾತೆಯನ್ನು ಎಷ್ಟರಮಟ್ಟಿಗೆ ಸೇವಿಸುತ್ತಿರುವದೆಂಬುದನ್ನು ವಾಚಕರೇ ಊಹಿಸಬಹುದು.

ಕಲಾಭವನವು ಸ್ಥಾಪಿತವಾದಾಗ ಶ್ರೀಯುತ ಮಹಾರಾಜರವರು ಪ್ರೊಫೆಸರ್ ಕೆ. ಟಿ. ಗಜ್ಜರವರನ್ನು ಮೇಲ್ವಿಚಾರಣೆಗಾಗಿ ಗೊತ್ತುಮಾಡಿದರು. ಆ ಗಜ್ಜರವರು ಇಲ್ಲಿ ೬ ವರ್ಷಕಾಲ ಕೆಲಸದಲ್ಲಿದ್ದು ಬ್ರಷ್ ಮಾಡುವುದು, ಗುಂಡಿ ಮಾಡುವುದು, ಸ್ಟೀಲ್ ಮುಳ್ಳುಮಾಡುವುದೇ ಮೊದಲಾದ ಸಣ್ಣಕಲೆಗಳನ್ನು ಹೇಳಿಕೊಡಲು ಪ್ರಯತ್ನಪಟ್ಟರು. ವಿದ್ಯಾರ್ಥಿಗಳಿಗೆ ಸಣ್ಣಸಣ್ಣ ಕಲೆಗಳಲ್ಲಿ ಅಭಿರುಚಿಯಿಲ್ಲದಿದ್ದರೂ ಅವುಗಳಲ್ಲಿಯೂ ಅಭಿರುಚಿ ಹುಟ್ಟಿ ಆ ಕಲೆಗಳೂ ಅಭಿವೃದ್ಧಿಸ್ಥಿತಿಯನ್ನು ಹೊಂದಿವೆ.

ಕೆಲ ದೇಶಭಾಷಾ ವಿದ್ಯಾಭ್ಯಾಸವೂ ಕಲಾಭವನಕ್ಕೆ ಸೇರಿದುದಾಗಿದ್ದಿತು, ಆದರೆ ಅದಕ್ಕಾಗಿ ಈಗ ಬೇರೆ ಕಾಲೇಜು ಇದೆ. ಪ್ರೊ॥ ಗಜ್ಜರು ಮಾತೃಭಾಷೆಯಾದ ಗುಜರಾತನ್ನು ಅಭಿವೃದ್ಧಿಸ್ಥಿತಿಗೆ ತರಬೇಕೆಂದೂ, ಗುಜರಾತಿನಲ್ಲಿ ಅನೇಕ ಕಲಾಸಂಬಂಧವೂ, ತತ್ವಶಾಸ್ತ್ರ ಸಂಬಂಧವೂ ಆದ ಪುಸ್ತಕಗಳನ್ನು ಪ್ರಕಟಿಸಬೇಕೆಂದೂ "ಧ್ನರ್ಯ ಮಂಜೂಷಾ ಮಾಲೆ" ಎಂಬ ಹೆಸರಿನಿಂದ ಪುಸ್ತಕಗಳನ್ನು ಪ್ರಕಟಿಸಲು ಆರಂಭಿಸಿದರು. ಈಗ ಅಲ್ಲಲ್ಲಿ ಉದ್ಭವವಾಗಿ ಅಭಿವೃದ್ಧಿಸ್ಥಿತಿಗೆ ಬರುತ್ತಿರುವ ಬಣ್ಣವನ್ನು ಕೊಡುವ ದೊಡ್ಡ ಚಿಕ್ಕ ಕಾರ್ಖಾನೆಗಳು ೨೦ ವರ್ಷಗಳ ಹಿಂದೆ ಇರಲೇ ಇಲ್ಲ. ಈ ದೊಡ್ಡ ಚಿಕ್ಕ ಕಾರ್ಖಾನೆಗಳೂ ಕಲಾಭವನದಲ್ಲಿ ತಯಾರಾದವರಿಂದಲೇ ಸ್ಥಾಪಿತವಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಪ್ರೊ॥ ಗಜ್ಜರಿಗೆ ತತ್ವಶಾಸ್ತ್ರದಲ್ಲಿ ಅದ್ವಿತೀಯವಾದ ಪಾಂಡಿತ್ಯವಿದ್ದಿತು. ಗಜ್ಜರು ಜರ್ಮನಿಯಿಂದ ಬಣ್ಣಕೊಡುವ ವಿದ್ಯೆಯನ್ನು ಹೇಳಿಕೊಡಲು ಬಂದಿದ್ದ ಇಬ್ಬರು ವಿದ್ವಾಂಸರೊಡನೆ ಸೇರಿ, ವಿಷಯಗಳನ್ನು ವಿದ್ಯಾರ್ಥಿಗಳಿಗೆ ಚೆನ್ನಾಗಿ ತಿಳಿಸಿದರು. ತತ್ವಶಾಸ್ತ್ರಕ್ಕನುಸಾರವಾಗಿ ಬಣ್ಣಗಳನ್ನು ಮಿಶ್ರಮಾಡಿ ಬಣ್ಣವನ್ನು ಕೊಡುವ ವಿದ್ಯೆಯನ್ನು ಭಾರತಭೂಮಿಗೆ ತಂದವರೇ ಈ ಮಹಾಶಯರೆನ್ನಬಹುದು. ಗಜ್ಜರವರು ಈ ಶಾಲೆಯನ್ನು ಬಿಟ್ಟನಂತರ ಮಿ॥ ರಾಜೀಬಾಯಿ ಎಂ. ಪಟೇಲ್ ಎಂಬುವರು ಆ ಸ್ಥಾನಕ್ಕೆ ಬಂದರು ಇವರು ಬಹುದೂರಾಲೋಚನಾಪರರು. ಇವರು ಅನೇಕ ಏರ್ಪಾಡುಗಳನ್ನು ಮಾಡಿದರು. ಆ ಏರ್ಪಾಡುಗಳಿಂದಲೇ ಕಲಾಭವನವು ಸದ್ಯದಲ್ಲಿ ಇಷ್ಟು ಅಭಿವೃದ್ಧಿಸ್ಥಿತಿಯಲ್ಲಿದೆಯೆನ್ನಬಹುದು. ಕಲಾಭವನದಲ್ಲಿ ಮುಖತಃ ಬೋಧಿಸುವುದು ಮಾತ್ರವಲ್ಲದೆ. ಅವುಗಳನ್ನು ಕಾರ್ಯತಃ ಮಾಡಿ ಅನುಭವಮಾಡಿಕೊಡುವರು. ಉಪನ್ಯಾಸಕ್ಕೂ, ವಿದ್ಯಾಭ್ಯಾಸಕ್ಕೂ ಕೆಲಸದ ಕಾಲದಲ್ಲಿ ಮೂರನೆಯ ಒಂದು ಭಾಗವು ಮಾತ್ರ ಬೇಕಾಗುವುದು. ಉಪದೇಶವು ದೇಶಭಾಷೆಯಾದ ಗುಜರಾತಿನಲ್ಲಿಯೇ ನಡೆಯುವುದು. ಇದನ್ನು ಯೋಚಿಸಿದರೆ, ಮಹಾರಾಜರು ಸರ್ವಸಾಮಾನ್ಯವಾಗಿ ಸಕಲರಿಗೂ ಕುಶಲಕಲೆಗಳು ತಿಳಿದು, ಸ್ವಭಾಷಾಭಿವೃದ್ಧಿಯಾಗಿ ದೇಶೋನ್ನತಿಗೆ ಹೇತುವಾಗುವುದೆಂಬ ಅಭಿಪ್ರಾಯದಿಂದಲೇ ಮಾಡಿರುವರೆಂಬುದಕ್ಕೆ ಸಂಶಯವಿಲ್ಲ. ಗುಜರಾತಿಯನ್ನು ತಿಳಿಯದವರಿಗೆ ಅವರವರ ದೇಶಭಾಷೆಯಲ್ಲಿಯೇ ತಿಳಿಯುವಂತೆ ಮರಾಠಿ, ಹಿಂದಿ, ಇಂಗ್ಲೀಷ್ ಗಳಲ್ಲಿ ಹೇಳಿಕೊಡಲು ತಕ್ಕ ಏರ್ಪಾಟನ್ನು ಮಾಡಿರುವರು. ೧೯೦೯ ನೇ ಜುಲೈ ೩೧ ರಲ್ಲಿ ಕಲಾಭವನವು ೨೬ ಜನ ಉಪಾಧ್ಯಾಯರನ್ನೊಳಗೊಂಡಿದ್ದಿತು. ಮಿ॥ ಪೋರಾ, ಬಿ. ಎ., ಎ. ಎಂ. ಐ. ಸಿ. ಇ., ಯವರು ಮುಖ್ಯೋಪಾಧ್ಯಾಯರಾಗಿದ್ದರು. ಈ ವಿದ್ಯಾಗುರುಗಳಲ್ಲಿ ಅಭ್ಯಾಸಮಾಡಿದ ಅನೇಕರು ಈಗ ಅನೇಕ ಕಾರ್ಯಾಲಯಗಳನ್ನು ನಿರ್ವಹಿಸಿಕೊಂಡು ಹೋಗುತ್ತಿರುವರು.

ಇತರ ಪಾಠಶಾಲೆಗಳಲ್ಲಿ ಮೂರುವರ್ಷ ಅಭ್ಯಾಸಮಾಡಿ ಕಲಾಭವನದಲ್ಲಿ ನಡೆಯುವ ಪರೀಕ್ಷೆಗೆ ಹಾಜರಾಗಬಹುದು. ಪ್ರಾಯಶಃ ಲಂಡನ್ ಮೊದಲಾದ ಪರದೇಶಗಳಿಗೆ ಹೋಗಿ ಬಂದವರನ್ನೇ ಪರೀಕ್ಷಕರನ್ನಾಗಿ ನಿಯಮಿಸುವರು. ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಎಲ್. ಎಂ. ಟಿ., ಎಲ್. ಸಿ. ಟಿ., ಮೊದಲಾದ ಬಿರುದುಗಳನ್ನು ಕೊಡುವರು. ಈ ಪರೀಕ್ಷೆಗಳಲ್ಲದೆ, ಇನ್ನೂ ಉಚ್ಚ ಪರೀಕ್ಷೆಗಳೂ ನಡೆಯುವುವು. ಕಲಾಭವನದಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳು ಬೊಂಬಾಯಿ ಸರ್ಕಾರದವರಿಂದ ನಡೆಯುವ ಅನೇಕ ಪರೀಕ್ಷೆಗಳಿಗೆ ಹೋಗಬಹುದು. ೧೯೦೮ ನೇ ಆಗಸ್ಟು ಮೊದಲನೇ ತೇದಿಯ ದಿನ ಬೊಂಬಾಯಿ ಜೆ. ಜೆ. ಶಾಲೆಯಲ್ಲಿ ನಡೆದ ಪರೀಕ್ಷೆಗೆ ಕಲಾಭವನದಿಂದ ೧೧೧ ವಿದ್ಯಾರ್ಥಿಗಳು ಹೋಗಿದ್ದರು. ಇವರಲ್ಲಿ ೩೧ ಮಂದಿಗೆ ಯೋಗ್ಯತಾಪತ್ರಿಕೆಗಳು ಪ್ರಾಪ್ತವಾದುವು. ಸಂಸ್ಥಾನದಲ್ಲಿರುವ ವಾಟರ್‌ಸಪ್ಲೈ ಡಿಪಾರ್ಟ್‌ಮೆಂಟ್, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಇಂಜನಿಯರಿಂಗ್ ಡಿಪಾರ್ಟ್‌ಮೆಂಟುಗಳಿಗೆ ಬೇಕಾಗುವ ಎಲ್ಲ ಸಾಮಗ್ರಿಗಳನ್ನೂ ಕಲಾಭವನವೇ ಒದಗಿಸುವುದು. ತತ್ವಶಾಸ್ತ್ರಕ್ಕೆ ಬೇಕಾದ ವಸ್ತುಗಳೂ, ಬಣ್ಣವನ್ನು ಕೊಡಲು ಬೇಕಾಗುವ ವಸ್ತುಗಳೂ ಕಲಾಭವನದಲ್ಲಿ ಸಾಕಷ್ಟಿವೆ. ಅಲ್ಲದೆ, ಈಗ ಕಲಾಭವನಕ್ಕೆ ಸೇರಿದ ಒಂದು ಪುಸ್ತಕ ಭಾಂಡಾಗಾರವೂ, ವಾಚನಾಲಯವೂ ಸ್ಥಾಪಿತವಾಗಿವೆ. ವಾಚನಾಲಯಕ್ಕೆ ಅನೇಕ ಕುಶಲ ಕಲೆಯನ್ನು ಬೋಧಿಸುವ ಮರಾಠಿ, ಗುಜರಾತಿ, ಇಂಗ್ಲೀಷ್ ಪತ್ರಿಕೆಗಳು ಬರುವುವು. ಪುಸ್ತಕಾಲಯಕ್ಕೆ ಪ್ರತಿವರ್ಷವೂ ಅನೇಕ ಉಪಯುಕ್ತವಾದ ಪುಸ್ತಕಗಳು ಸೇರಿಸಲ್ಪಡುತ್ತಿರುವುವು.

ಕೆಲವು [illegible] ವಿದ್ಯಾರ್ಥಿಗಳು [illegible] ಸಮೀಪದಲ್ಲೇ ಇರುವ ಬೊಂಬಾಯಿ ಅಲಹಾಬಾದ್ ಮೊದಲಾದ ದೊಡ್ಡ ಪ್ರದೇಶಗಳಿಗೆ ಹೋಗಿ ಅಲ್ಲಿರುವ ಕಾರ್ಯಾಲಯಗಳನ್ನು ನೋಡಿ, ಅನೇಕ ವಿಷಯಗಳನ್ನು ಸಂಗ್ರಹಿಸುವರು. ವಿದ್ಯಾರ್ಥಿಗಳು ಪರದೇಶಗಳಿಗೆ ಇಂತಹ ವಿದ್ಯಾಭಿವೃದ್ಧಿಯನ್ನು ಮಾಡಿಕೊಳ್ಳಲು ಹೋದರೆ, ಸರಕಾರದವರು ಅವರ ಖರ್ಚಿನಲ್ಲಿ ಒಂದು ಭಾಗವನ್ನು ಕೊಡುವರು. (ಸಶೇಷ.)

ಕಾವೇರೀ ಪ್ರವಾಹದಿಂದ ಮೈಸೂರು ದೇಶದಲ್ಲಿ ಉಂಟಾದ ಅಪಾರವಾದ ನಷ್ಟ.

ಸಹಾಯಕ್ಕಾಗಿ ವಿಜ್ಞಾಪನೆ.

ಕಳೆದ ಜುಲೈ ೧೯ ರಿಂದ ೨೨ ರವರೆಗೆ ಪಶ್ಚಿಮ ಘಟ್ಟಗಳಲ್ಲಿ ಬಿಡದೇ ಸುರಿದ ವಿಶೇಷವಾದ ಮಳೆಯಿಂದ ಹುಚ್ಚುಹೊಳೆ ಬಂದು ಎಂದಿಗಿಂತಲೂ ಹೆಚ್ಚಾಗಿ ಪ್ರವಹಿಸಿತು. ಈ ಪ್ರವಾಹವು ಅನೇಕ ಕಡೆಗಳಲ್ಲಿ ದಡಗಳ ಮೇಲೆ ನುಗ್ಗಿದುದರಿಂದ ಕೆಲವೆಡೆಗಳಲ್ಲಿ ಹಳ್ಳಿಗಳೇ ಸಂಪೂರ್ಣವಾಗಿ ನಾಶವಾದುವು; ಬೇರೆ ಕಡೆಗಳಲ್ಲಿ ನೂರಾರು ಮನೆಗಳು ಕುಸಿದು ಬಿದ್ದುವು. ಅನೇಕ ಜನರ ಆಸ್ತಿಯೆಲ್ಲಾ ನದಿಯ ಪಾಲಾಯಿತು.

ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರ್ ಸಾಹೇಬರೂ ಇತರ ಸರ್ಕಾರಿ ಉದ್ಯೋಗಸ್ಥರೂ ಅನಾಹುತ ಸಂಭವಿಸಿದ ಸ್ಥಳಗಳಿಗೆ ಒಡನೆಯೇ ಹೋಗಿ ವಿಚಾರಿಸಿದುದರಲ್ಲಿ ಯಡತೊರೆ, ಹುಳವಳ್ಳಿ, ಅದರೊಳಗಾಗಿ ತಿರುಮಕೂಡ್ಲು ನರಸೀಪುರ ಈ ತಾಲ್ಲೋಕುಗಳಲ್ಲಿ ಜನರು ವಿಶೇಷ ನಷ್ಟಪಟ್ಟರೂ, ಭಗವಂತನ ಅನುಗ್ರಹದಿಂದ ಪ್ರಾಣಹಾನಿಯಾವುದೂ ಆಗಲಿಲ್ಲವೆಂದು ತಿಳಿಯಬಂದಿತು.

ಅನರ್ಥಸಂಭವಿಸಿದ ಪ್ರದೇಶಗಳಿಂದ ವರ್ತಮಾನವು ಬಂದಕೂಡಲೆ ಮೈಸೂರು ಜನರು ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಆಗಸ್ಟು ೧ ನೆಯ ತಾ॥ ನಲ್ಲಿ ಸಭೆ ಸೇರಿದರು. ಈ ಸಭೆಯ ಅಗ್ರಾಸನವನ್ನು ಡೆಪ್ಯುಟಿ ಕಮಿಷನರ್ ಸಾ॥ ರವರೇ ವಹಿಸಿದ್ದರು. ಪ್ರವಾಹದಿಂದ ೯೧೧ ಮನೆಗಳು ನಾಶವಾದುವೆಂತಲೂ ೬,೦೦೦ ಪ್ರಜೆಗಳು ಮನೆಮಠಗಳನ್ನು ಕಳೆದುಕೊಂಡು ಕಷ್ಟಪಡುತ್ತಿದ್ದಾರೆಂತಲೂ ತಿಳಿಯಬಂದಿತು. ಕೂಡಿಸಿಟ್ಟ ದವಸಧಾನ್ಯಗಳನ್ನೂ ಸಾಮಾನುಗಳನ್ನೂ ಕಳೆದುಕೊಂಡವರಲ್ಲಿ ಅನೇಕರು ಕೂಲಿಯಿಂದ ಜೀವಿಸುವ ಬಡಜನರು. ಸುಮಾರು ಅರ್ಧ ಲಕ್ಷ ರೂಪಾಯಿ ವರೆಗೆ ಒಟ್ಟು ನಷ್ಟ ಸಂಭವಿಸಿರುವುದು. ಇಂಥಾ ಕಷ್ಟಕಾಲದಲ್ಲಿ ಸ್ಥಳವಂದಿಗರೇನೋ ನಿರ್ಗತಿಕರಾದ ಜನರಿಗೆ ಅನ್ನೋದಕವನ್ನು ಕೊಟ್ಟು ಕಾಪಾಡಿರುತ್ತಾರೆ. ಆದರೆ ಮನೆಗಳನ್ನು ಕಟ್ಟಿಸಿ, ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಡುವುದು ಅವರಿಂದ ಸಾಧ್ಯವಾದುದಲ್ಲ ಎಂಬುದನ್ನು ತಿಳಿದು ಮೇಲೆಕಂಡ ಸಭೆಯವರು ಸಹಾಯಾರ್ಥವಾಗಿ ಸಂಸ್ಥಾನಾವಳಿ ಚಂದಾ ಎತ್ತುವ ಉದ್ದೇಶ, ಎಲ್ಲಾ ಪಂಗಡದ ಪ್ರತಿನಿಧಿಗಳುಳ್ಳ ಒಂದು ಕಮಿಟಿಯನ್ನು ಗೊತ್ತುಮಾಡಿದರು.

ಈ ಕಮಿಟಿಯವರು ಆಗಸ್ಟ್ ೩ ನೆಯ ತಾ॥ ನಲ್ಲಿ ಸೇರಿ, ಕೇವಲ ನಿರ್ಗತಿಕರಾದವರಿಗೆ ಸಹಾಯಮಾಡಲು ಕನಿಷ್ಟಪಕ್ಷ ೩೦,೦೦೦ ರೂಪಾಯಿ ಬೇಕಾಗಿದೆ ಎಂದು ನಿರ್ಧರಿಸಿರುವರು. ಇದಕ್ಕಾಗಿ ಮೈಸೂರು ಸರ್ಕಾರದವರು ೨,೦೦೦ ರೂ. ಯನ್ನು ಕೊಟ್ಟಿರುವರಲ್ಲದೆ, ಇನ್ನು ಮುಂದೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಹಾಯವಾಗುವಂತೆ ತಕ್ಕಾವಿ ಸಾಲವನ್ನೂ ಮರಮುಟ್ಟುಗಳನ್ನೂ ಕುಷ್ ಖರೀದಿಗೆ ಪ್ರಾಯಶಃ ಕೊಡುವರು. ಶ್ರೀಮನ್ ಮಹಾರಾಜರವರೂ ಶ್ರೀಮನ್ಯುವರಾಜರವರೂ ಮಹಾಮಾತೃಶ್ರೀ ವಾಣಿವಿಲಾಸಸನ್ನಿಧಾನದವರೂ ಸಹಾ ೧,೫೦೦ ರೂ. ಯನ್ನು ದಯಪಾಲಿಸಿರುವರು; ಮತ್ತು ನಮ್ಮ ದಿವಾನ್ ಸಾಹೇಬರವರು ೨೦೦ ರೂ. ಯನ್ನು ಕೊಟ್ಟಿರುತ್ತಾರೆ.

ಅನಾಹುತವು ನಡೆದ ಗ್ರಾಮಗಳಲ್ಲಿರುವ ಮುಖಂಡರ ಸಹಾಯವನ್ನು ಪಡೆದು ಸರ್ಕಾರಿ ಉದ್ಯೋಗಸ್ಥರು ಚಂದಾ ಮೊಬಲಗನ್ನು ನಷ್ಟಪಟ್ಟ ಜನರ ತಾರತಮ್ಯವರಿತು ವಿಚಕ್ಷಣೆಯಿಂದ ವಿನಿಯೋಗಿಸುವರು. ಧರ್ಮಾರ್ಥವಾಗಿ ಮಾಡಿದ ಸಹಾಯದ್ರವ್ಯವು ಎಷ್ಟು ಅಲ್ಪವಾಗಿದ್ದರೂ ಕಮಿಟಿಯ ಮೆಂಬರುಗಳಲ್ಲಿ ಯಾರಾದರೂ ಅದನ್ನು ಪ್ರೀತಿ ಪುರಸ್ಸರವಾಗಿ ತೆಗೆದುಕೊಂಡು, ಈ ಫಂಡಿನ ಕಾರ್ಯದರ್ಶಿಗಳು, ಖಜಾನ್ಜಿಯವರೂ ಅದ್ಯ ಮೈಸೂರು ಸಿಟಿ ಮ್ಯುನಿಸಿಪಾಲಿಟಿ ವೈಸ್ ಪ್ರೆಸಿಡೆಂಟ್ ಮಿ॥ ಎಂ. ಜಿ. ಕೃಷ್ಣಸ್ವಾಮಿ ರಾಯರವರಿಗೆ ತಲಪಿಸುವುದು.

ಜನಸಾಧಾರಣ ಬಹು ಕಷ್ಟಪಡುತ್ತಿರುವರು. ಅವರಿಗೆ ಸಹಾಯವು ಅತ್ಯವಶ್ಯಕವಾದುದರಿಂದ, ಈ ವಿಜ್ಞಾಪನೆಯನ್ನು ಅಂಗೀಕರಿಸಿ, ಬೇಗನೆ ಸಹಾಯಮಾಡಿದಲ್ಲಿ ಪಾ [illegible] ಹಣವನ್ನು ಮನಿಯಾರ್ಡರ್ ಅಥವಾ ಹುಂಡಿ ಮೂಲಕ ಕಳುಹಿಸುವವರು ಕಾರ್ಯದರ್ಶಿಗಳ ಹೆಸರಿಗೆ ಸೀದಾ ಕಳುಹಿಸಬೇಕು.

ಮೈಸೂರ್, ಎಂ. ಕಾಂತರಾಜ ಅರಸ್,
ಆಗಸ್ಟ್ ೩, ೧೯೧೧ ರಿಲೀಫ್ ಕಮಿಟಿಯ ಅಧ್ಯಕ್ಷರು.

ಕಾವೇರಿ ಮತ್ತೂ ಕಪಿನಿ ಹೊಳೆಗಳ ಪ್ರವಾಹದಿಂದ ಹುಳವಳ್ಳಿ ಮತ್ತೂ ತಿರುಮಕೂಡಲು ನರಸೀಪುರ ತಾಲ್ಲೋಕುಗಳಲ್ಲಿ ಮನೆ ಮಠಗಳನ್ನು ಕಳೆದುಕೊಂಡಿರತಕ್ಕ ಬಡಬಗ್ಗರಿಗೆ ಸಹಾಯಮಾಡಲು ಕೆಳಗೆ ನಮೂದಿಸಿರುವ ಮಹನೀಯರು ಚಂದಾ ಹಣವನ್ನು ವಸೂಲು ಮಾಡಲು ನೇಮಿಸಲ್ಪಟ್ಟಿರುತ್ತಾರೆ:—

ಮೆ॥ ಗಳಾದ (೧) ಸಾಹುಕಾರ್ ಬಸಮಯ್ಯನವರು (೨) ಸಾಹುಕಾರ್ ಜೆ. ಕೆ. ನರಸಿಹ್ಮಯ್ಯನವರ, (೩) ಸಾಹುಕಾರ್ ಮೊಗಣ್ಣನವರು, (೪) ಮೀರ್ ನೈಜಾಮುದ್ದೀನ್ ಅಲ್ಲಿಖಾನ್ ಸಾಹೇಬರು, (೫) ಪಾದ್ರಿಗಳಾದ ಘನ ಗಲಿಫೊರ್ಡ್ ಸಾಹೇಬರು, (೬) ಎಸ್. ಶ್ರೀಕಂಠಯ್ಯನವರು, (೭) ಎಂ. ಸಿ. ರಂಗಯ್ಯಂಗಾರ್ಯರು, (೮) ಅನಂತರಾಜಯ್ಯನವರು, (೯) ವೆಂಕಟಕೃಷ್ಣಯ್ಯನವರು, (೧೦) ದರ್ವೇಷ್‌ಪೀರ್ ಸಾಹೇಬರು, (೧೧) ಮಹಮ್ಮದ್ ಜಾಫರ್ ಸಾಹೇಬರು (೧೨) ಅಂಬಳೆ ಅಣ್ಣಯ್ಯಪಂಡಿತರು, (೧೩) ತಿರುವೆಂಗಡ ಮೊದಲಿಯಾರರು, (೧೪) ಸೆಟ್ಟಾಜಿರಾಯರು, (೧೫) ಜಹಗೀರ್‌ದಾರ್ ಮಾದಪ್ಪನವರು, (೧೬) ಸಾಹುಕಾರ್ ದೊಡ್ಡಯ್ಯನವರು, (೧೭) ಸಾಹುಕಾರ್ ಮಾದಪ್ಪನವರು, (೧೮) ಅಕ್ಕಿ ವ್ಯಾಪಾರದ ಗೋವಿಂದಪ್ಪನವರು.

ಉತ್ತಮವಾದ ಹತ್ತಿಯನ್ನು ಬೆಳೆದು ವಿಶೇಷ ಲಾಭವನ್ನು ಹೊಂದುವ ಪ್ರಯತ್ನವು.

ನಮ್ಮ ಮೈಸೂರು ಸೀಮೆಯ ರೈತರು ತಮ್ಮ ಹಿರಿಯರ ಕಾಲದಿಂದ ನಡೆದು ಬಂದುದನ್ನು ಬಿಡಬಾರದೆಂಬ ಅಭಿಪ್ರಾಯದಿಂದ ಸಾಮಾನ್ಯತರವಾದ ಬೆಳಸನ್ನು ಮಾಡಿ, ಅಲ್ಪವಾದ ಆದಾಯವನ್ನು ಹೊಂದುತ್ತಿದ್ದಾರೆಯೇ ಹೊರತು ಧಾರವಾಡ ಮೊದಲಾದ ಪ್ರಾಂತಗಳ ರೈತಜನರಂತೆ ಬಹು ಬೆಲೆ ಬಾಳುವ ಉತ್ತಮತರವಾದ ಹತ್ತಿಯನ್ನು ಬೆಳೆದು ವಿಶೇಷ ಲಾಭವನ್ನು ಹೊಂದಬೇಕೆಂಬ ಪ್ರಯತ್ನವನ್ನು ಮಾಡದಿರುವುದು ಈ ದೇಶದ ರೈತರ ಹೀನಸ್ಥಿತಿಗೆ ಕಾರಣವಾಗಿದೆ. ಆದಕಾರಣ ನಾನು ಆದಾಯಕರವಾದ ಹತ್ತಿಯ ಬೆಳೆಯನ್ನು ಕಳೆದ ಆರುವರ್ಷಗಳಿಂದಲೂ ಮಾಡಿಸುತ್ತಿರುವುದರಿಂದ, ನನಗುಂಟಾಗಿರುವ ಅನುಭವವನ್ನು ಇತರ ರೈತರ ತಿಳಿವಿಕೆಗಾಗಿ ಇಲ್ಲಿ ಕೊಟ್ಟಿರುತ್ತೇನೆ. ಮತ್ತೂ ಅವರು ಈ ಕ್ರಮದಂತೆ ಬೆಳೆಯನ್ನಿಟ್ಟು ಪರೀಕ್ಷಿಸಿ ತಮಗೆ ಲಾಭಕರವಾಗಿ ಕಂಡುಬಂದಲ್ಲಿ, ಅದನ್ನೇ ಅಭಿವೃದ್ಧಿಪಡಿಸುವ ಪ್ರಯತ್ನವನ್ನು ಮಾಡುವವರಾಗಬೇಕೆಂದು ಕೋರುತ್ತೇನೆ. ಬ್ರೋಚ್ ಹತ್ತಿಯ ಬೆಳೆಯನ್ನಿಟ್ಟು ನೋಡಿದುದರಲ್ಲಿ, ಗಿಡಗಳು ಚೆನ್ನಾಗಿ ಬೆಳೆದು, ಹೂಕಾಯಿ ಹೇರಳವಾಗಿ ಬಿಟ್ಟು, ಹತ್ತಿಯು ಎಕರೆ ಒಂದಕ್ಕೆ ೧೫ ರಿಂದ ೨೦ ಮಣಗಳವರೆಗುತ್ಪನ್ನವಾಗುತ್ತದೆ. ಈ ಬ್ರೋಚ್ ಹತ್ತಿಯ ಬೀಜವನ್ನು ಶ್ರಾವಣ ಶುದ್ಧ ೧೫ ರೊಳಗೆ ಅಂದರೆ ಹಿರೇ ಪುಷ್ಯ ಅಥವಾ ಚಿಕ್ಕಪುಷ್ಯ ಮಳೆಯಲ್ಲಿ ಬಿತ್ತಬೇಕು. ಇದರ ಕೂಡ ನವಣೆ ಮೊದಲಾದ ಯಾವ ಧಾನ್ಯವನ್ನೂ ಮಿಶ್ರಮಾಡದೆ ಬರೀ ಹತ್ತಿಯ ಬೀಜವನ್ನೇ ಬಿತ್ತಿ, ಗಿಡಗಳು ಒಂದು ಅಡಿ ಎತ್ತರ ಬೆಳೆದಮೇಲೆ ಕೂಲಿ ಆಳುಗಳನ್ನು ಬಿಟ್ಟು, ಒಂದು ಗಜ ಉದ್ದವಿರುವ ಕೋಲುಗಳಿಂದ ಗಿಡಗಳ ತುದಿಯಮೇಲೆ ಹೊಡಿಸಿದರೆ ತುದಿಯು ಕತ್ತರಿಸಿ ಬಿದ್ದು ಗಿಡದ ಬುಡದಲ್ಲಿ ಚಿಗುರು ಕವಲುಗಳು ಯಥೇಚ್ಛವಾಗಿ ಹೊರಟು, ಗಿಡವು ಕೋಮಲವಾಗಿ ಬೆಳೆದು ಹೂಕಾಯಿಗಳು ಅಪಾರವಾಗಿ ಬಿಡುತ್ತವೆ. ದೊಡ್ಡ ಹತ್ತಿಯನ್ನು ಬೆಳೆಯುವುದರಿಂದ ಸಣ್ಣ ಹತ್ತಿಯನ್ನು ಬೆಳೆಯುವುದಕ್ಕಿಂತ ವಿಶೇಷ ಆದಾಯವುಂಟು. ಆದರೆ ನಮ್ಮ ದೇಶೀಯರಿಗೆ ಈ ದೊಡ್ಡ ಹತ್ತಿಯನ್ನು ಬೆಳೆಯತಕ್ಕ ರೀತಿಯೇ ತಿಳಿಯದು. ಈ ದೊಡ್ಡ ಹತ್ತಿಯ ಬೆಳಸಿನಲ್ಲಿ ಮುಂಗಾರು ಹತ್ತಿಯೆಂತಲೂ ಮತ್ತೂ ಹಿಂಗಾರು ಹತ್ತಿಯೆಂತಲೂ ಎರಡು ವಿಧವುಂಟು. ಇದರಲ್ಲಿ ಆಷಾಢ ಮಾಸಾರಂಭದಿಂದ ಕಡೆಯವರೆಗೆ ಅರಿದ್ರಾ ಮತ್ತೂ ಪುನರ್ವಸು ಮಳೆಗಳಲ್ಲಿ ಬಿತ್ತಲ್ಪಡತಕ್ಕದು ಮುಂಗಾರು ಹತ್ತಿಯೆಂತಲೂ, ಭಾದ್ರಪದ ಮಾಸಾರಂಭದಿಂದ ಕಡೆಯವರೆಗೆ ಮಖ ಮತ್ತೂ ಹುಬ್ಬ ಮಳೆಗಳಲ್ಲಿ ಬಿತ್ತಲ್ಪಡತಕ್ಕದು ಹಿಂಗಾರು ಹತ್ತಿಯೆಂತಲೂ ಹೇಳುತ್ತಾರೆ. ನಮ್ಮ ದೇಶದಲ್ಲಿ ಅರಿದ್ರಾ ಮತ್ತೂ ಪುನರ್ವಸು ಮಳೆಗಳಲ್ಲಿ ಹತ್ತಿಯನ್ನು ಬಿತ್ತುವ ವಾಡಿಕೆಯು ವಿಶೇಷವಾಗಿದೆ. ಆದರೆ ಉತ್ತರದೇಶದಲ್ಲಿ ಅಂದರೆ ಧಾರವಾಡ ಮೊದಲಾದ ಪ್ರಾಂತಗಳಲ್ಲಿ ಮಖ ಮತ್ತೂ ಹುಬ್ಬ ಈ ಮಳೆಗಳಲ್ಲಿ ಬಿತ್ತುತ್ತಾರೆ. ಇದರಿಂದ ಗಿಡಗಳಿಗೆ ರೋಗಾದಿಗಳು ತಗಲದೆ, ಗಿಡಗಳು ಚೆನ್ನಾಗಿ ಬೆಳೆದು ವಿಶೇಷ ಹತ್ತಿಯನ್ನು ಬಿಡುತ್ತವೆ. ಈ ಪ [illegible] ನುಸರಿಸುತ್ತಿದ್ದಾರೆ. ಆಷಾಢಮಾಸದಲ್ಲಿ ಬಿತ್ತಿದರೆ, ವಾಯುಗುಣದಿಂದ ಗಿಡಗಳಿಗೆ ರೋಗವು ತಗಲಿ ಹತ್ತಿಯಕಾಯಿಗಳು ಸರಿಯಾಗಿ ಬಾಯಿಬಿಡದೆ, ಇಕರ್ಲೆ ಲೋಳೆಯಾಗಿ ಹತ್ತಿಯು ಸುಮಾರಾಗಿ ಬರುತ್ತದೆ. ಭಾದ್ರಪದ ಮಾಸದಲ್ಲಿ ಬಿತ್ತಿದ ಗಿಡಗಳು ಕೆಟ್ಟ ಗಾಳಿಗೆ ಸಿಕ್ಕಿ ರೋಗಾದಿಗಳಿಂದ ಪೀಡಿತವಾಗದೆ ಮಂದವಾಗಿ ಬೀಸುವ ಪಡುವಣ ಗಾಳಿಗೆ ಕಾಯಿ ದಪ್ಪವಾಗಿ ಬೆಳೆದು ಚೆನ್ನಾಗಿ ಬಾಯಿಬಿಟ್ಟು, ಅದರಿಂದ ಶುಭ್ರತರವಾದ ಹತ್ತಿಯು ಹೊರಡುತ್ತದೆ. ಆದುದರಿಂದ ನಮ್ಮ ದೇಶದ ರೈತರು ಭಾದ್ರಪದ ಮಾಸದಲ್ಲಿ ಬಿತ್ತುವ ಪ್ರಯತ್ನವನ್ನು ಮಾಡಬೇಕು. ಈ ಹತ್ತಿಯು ಎಕರೆ ಒಂದಕ್ಕೆ ಹೊಲದ (ಕುಷ್ಕಿ ಜಮೀನಿನ) ಲ್ಲಿ ೨೦ ರಿಂದ ೨೫ ಮಣಗಳ ವರೆಗೂ, ಗದ್ದೆಯ (ತರೀಜಮೀನಿನ) ಲ್ಲಿ ೪೦ ಮಣಗಳ ವರೆಗೂ ಉತ್ಪನ್ನವಾಗುತ್ತದೆ. ಈ ಬ್ರೋಚ್ ಹತ್ತಿಗಿಂತಲೂ ಕಾಂಬೋಡಿಯಾ ಹತ್ತಿಯು ಬಹು ಶ್ರೇಷ್ಠವಾದುದು. ಮತ್ತೂ ಅದರ ಬೆಳಸು ಬಹು ಲಾಭಕರವಾದುದು. ಈ ಕಾಂಬೋಡಿಯಾ ಹತ್ತಿಯನ್ನು ಕಳೆದವರ್ಷ ನಾನು ಬೆಳೆದು ಪರೀಕ್ಷಿಸಿದುದರಲ್ಲಿ, ಹೊಲದಲ್ಲಿ ಎಕರೆಯೊಂದಕ್ಕೆ ೩೦ ಮಣಗಳ ವರೆಗೂ ಗದ್ದೆಯಲ್ಲಿ ೪೦-೫೦ ಮಣಗಳ ವರೆಗೂ ಸಾಧಾರಣವಾಗಿ ಹತ್ತಿಯು ಬೆಳೆಯುವುದೆಂದು ಗೊತ್ತಾಯಿತು. ಹತ್ತಿಯ ಬೀಜವನ್ನು ಶ್ರಾವಣಮಾಸದಿಂದ ಭಾದ್ರಪದ ಮಾಸದೊಳಗಾಗಿ ಬಿತ್ತಬೇಕು.

ಬೇರೆಬೇರೆ ಹತ್ತಿಯಿಂದ ೪೮ ಸೇರಿನ ಮಣ ೧ ಕ್ಕೆ ಇಳಿಯತಕ್ಕ ಅರಳೆಯ ಮತ್ತೂ ಅದರ ಬೆಲೆಯ ವಿವರ:—

೧ ಬ್ರೋಚ್ ಹತ್ತಿ ೪೮ ಸೇರಿಗೆ ೧೩ ಸೇರು ಅರಳೆ ಬರುತ್ತದೆ. ಕ್ರಯ ರೂ. ೩.

೨. ಮುಂಗಾರಿನ ದೊಡ್ಡಹತ್ತಿ ೪೮ ಸೇರಿಗೆ ೧೪ ಸೇರು ಅರಳೆ ಬರುತ್ತದೆ. ಕ್ರಯ ರೂ. ೭॥=

೩. ಹಿಂಗಾರು ದೊಡ್ಡ ಹತ್ತಿ ೪೮ ಸೇರಿಗೆ ೧೫ ಸೇರು ಅರಳೆ ಬರುತ್ತದೆ. ಕ್ರಯ ರೂ. ೭॥।—

೪. ಕಾಂಬೋಡಿಯಾ ಹತ್ತಿ ೪೮ ಸೇರಿಗೆ ೧೮ ಸೇರು ಅರಳೆ ಬರುತ್ತದೆ. ಕ್ರಯ ರೂ. ೩॥=

ಇಂಥ ಬೆಲೆ ಬರತಕ್ಕ ಹತ್ತಿಯನ್ನು ನಮ್ಮ ಸೀಮೆಯ ರೈತರು ಬೆಳೆಯದೆ ಪೂರ್ವಕಾಲದಿಂದಲೂ ರೂಢಿಯಲ್ಲಿರುವ ಜವಾರಿ ಹತ್ತಿ—ಸಣ್ಣಹತ್ತಿ ಬೆಳಸನ್ನು ಮಾಡುತ್ತಾರೆ. ಈ ಹತ್ತಿ ೪೮ ಸೇರಿಗೆ ೧೧, ೧೨, ೧೩ ಸೇರು ಅರಳೆ ಬರುತ್ತದೆ. ಇದರ ಕ್ರಯ ೭। ರೂ. ಆಗುತ್ತದೆ. ಇದನ್ನು ತಿಳಿದು ಅನೇಕರು ಆದಾಯಕಡಿಮೆಯಾದ ಸಣ್ಣ ಹತ್ತಿಯನ್ನು ಬೆಳೆಯುವುದನ್ನು ಬಿಟ್ಟು, ಆದಾಯಕರವಾದ ಹತ್ತಿಯನ್ನು ಬೆಳೆಯಲು ಉತ್ತಮವಾದ ಬೀಜಗಳನ್ನು ಹುಡುಕುತ್ತಿದ್ದಾರೆ. ದಾವಣಗೆರೆ ಮತ್ತೂ ಜಗಲೂರು ತಾಲ್ಲೋಕುಗಳಲ್ಲಿ ಸಾಧ್ಯವಾದ ಮಟ್ಟಿಗೂ ದೊಡ್ಡ ಹತ್ತಿಯನ್ನು ಬೆಳೆಯುವ ಪ್ರಯತ್ನವು ನಡೆದಿರುತ್ತದೆ. ಇದರಂತೆ ಹಿರಿಯೂರು ತಾಲ್ಲೋಕಿನಲ್ಲಿ ಹತ್ತಿಯನ್ನು ಬೆಳೆಯತಕ್ಕವರು ಇನ್ನು ಮುಂದೆ ದೊಡ್ಡ ಹತ್ತಿಯನ್ನು ಬೆಳೆಯತಕ್ಕ ಪ್ರಯತ್ನವನ್ನು ಮಾಡುತ್ತಾರೆಂದು ನಿರೀಕ್ಷಿಸುತ್ತೇನೆ.

ಹಿರಿಯೂರು, ಚಿತ್ರದುರ್ಗ ಮತ್ತೂ ಜಗಲೂರು ತಾಲ್ಲೋಕುಗಳ ರೈತರು ದೊಡ್ಡ ಹತ್ತಿಯ ಬೀಜವನ್ನು ಬಿತ್ತುವ ಕಾಲವು ಮಿಂಚಿಹೋಯಿತೆಂದು ಹೇಳುವರು. ಇದು ಶುದ್ಧ ತಪ್ಪು. ಏಕೆಂದರೆ— ಭಾದ್ರಪದಮಾಸಾರಂಭದಿಂದ ಕಡೆಯವರೆಗೆ ಮಖ ಮತ್ತೂ ಹುಬ್ಬ ಮಳೆಗಳು ಮುಗಿಯುವ ವರೆಗೂ ದೊಡ್ಡಹತ್ತಿಯ ಬೀಜವನ್ನು ಬಿತ್ತಲು ಒಳ್ಳೇ ಬೆದೆಯ ಕಾಲವಾಗಿರುತ್ತದಲ್ಲದೆ, ಕಾಂಬೋಡಿಯಾ ಹತ್ತಿಯ ಬೀಜವನ್ನೂ ಬಿತ್ತಲು ಒಳ್ಳೇ ಬೆದೆಯಾಗಿರುತ್ತದೆ. ಈ ವರ್ಷದಲ್ಲಿ ದಾವಣಗೆರೆ ತಾಲ್ಲೋಕಿನಲ್ಲಿ ಕೆಲ ರೈತರು ಕಾಂಬೋಡಿಯಾ ಹತ್ತಿಯಬೀಜವನ್ನು ಬಿತ್ತಿರುತ್ತಾರಾದುದರಿಂದ ಮುಂದಣವರ್ಷ ಇದರ ಬೀಜವು ತಕ್ಕಮಟ್ಟಿಗೆ ದೊರೆಯುತ್ತದೆ. ಅಪೇಕ್ಷಿಸುವವರಿಗೆ ಸಾಧ್ಯವಾದ ಮಟ್ಟಿಗೆ ಕಳುಹಲ್ಪಡುತ್ತದೆ. ಈ ಕಾಂಬೋಡಿಯಾ ಹತ್ತಿಯ ಬೆಳಸು ಚೆನ್ನಾಗಿ ಆಗಿ ಹತ್ತಿಯು ವಿಶೇಷವಾಗುತ್ಪನ್ನವಾಗಿ ಬೆಲೆಯು ಹೆಚ್ಚಾಗಿ ದೊರೆಯುವುದರಿಂದ, ನಮ್ಮ ದೇಶದಲ್ಲಿ ಹತ್ತಿಯನ್ನು ಬೆಳೆಯತಕ್ಕ ರೈತರು ಇನ್ನು ಮುಂದೆ ಈ ಕಾಂಬೋಡಿಯಾ ಹತ್ತಿಯನ್ನೇ ವಿಶೇಷವಾಗಿ ಬೆಳೆಯುತ್ತ ಬಂದಲ್ಲಿ ತಾವೂ ಐಶ್ವರ್ಯವಂತರಾಗುವುದಲ್ಲದೆ, ಈ ದೇಶವೂ ಎರಡನೆಯ ಅಮೇರಿಕವೆಂದೆನ್ನಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲವು. ಕಾಂಬೋಡಿಯಾ ಹತ್ತಿಯನ್ನು ಬೆಳೆಯತಕ್ಕವರು ಎಕರೆಯೊಂದಕ್ಕೆ ಹತ್ತು ಬಂಡಿ ಗೊಬ್ಬರವನ್ನು ಭೂಮಿಗೆ ಹಾಕಿ ಚೆನ್ನಾಗಿ ಉಳ್ಮೆ ಹೊಡೆದು, ಹರಗಿ ಬೀಜವನ್ನು ಬಿತ್ತಬೇಕು. ಅನಂತರ ಹುಲ್ಲು ಬೆಳೆಯದಂತೆ ಕಳೆಯನ್ನು ಕಿತ್ತು ಹೂವು ಕಾಯಾಗುವವರೆಗೂ ಹತ್ತು ದಿವಸಗಳಿಗೊಂದಾವೃತ್ತಿಯಂತೆ ಗಿಡಗಳ ಮಧ್ಯದಲ್ಲಿ ಹರಗುತ್ತಾ ಇರಬೇಕು.

ತಾ. ಸಿದ್ದಪ್ಪನಹಳ್ಳಿ ಚೆನ್ನಬಸಪ್ಪ ರುದ್ರಪ್ಪ
ಹತ್ತಿ ಅರಳೆ ವ್ಯಾಪಾರ ಕಮಿಷನ್
ಏಜೆಂಟ್.

ಮೈಸೂರ್ ಸ್ಟಾರ್

೧೯೧೧ ನೇ ಇಸವಿ ಆಗಸ್ಟ್ ತಾ॥ ೧೪ ನೇ ಸೋಮವಾರ

ಬ್ರಿಟಿಷ್ ಪಾರ್ಲಿಮೆಂಟ್ ಸಭಾಸ್ಥಾನದಲ್ಲಿ ವೈಮನಸ್ಯವು

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯು ೧೨೯೫ ನೇಯ ಇಸವಿಯಲ್ಲಿ ಒಂದನೇಯ ಎಡ್ವರ್ಡ್ ದೊರೆಗಳಿಂದ ಸ್ಥಾಪಿಸಲ್ಪಟ್ಟು ಹೌಸ್ ಆಫ್ ಲಾರ್ಡ್ಸ್ ಮತ್ತು ಹೌಸ್ ಆಫ್ ಕಾಮನ್ಸ್ ಎಂದು ಎರಡುಭಾಗವಾಗಿ ಮಾಡಲ್ಪಟ್ಟಿತು. ಲಾರ್ಡ್ಸ್ ಸಭೆಗೆ ದೊಡ್ಡಮನೆತನದವರೂ, ಕಾಮನ್ಸ್ ಸಭೆಗೆ ಜನರ ಪ್ರತಿನಿಧಿಗಳಾಗಿ ಆರಿಸಲ್ಪಟ್ಟವರೂ ಮೆಂಬರುಗಳಾಗಿರುವರು. ಮೊದಲನೇಯ ಸಭೆಯ ಮೆಂಬರುಗಳು ಆಗಾಗ್ಗೆ ಬದಲಾಯಿಸಲ್ಪಡುವುದಿಲ್ಲ. ಆದರೆ ೨ ನೇಯ ಸಭೆಯ ಮೆಂಬರುಗಳ ಮತವು ಗೆಲ್ಲದೆ ಹೋದಾಗ ಆ ಸಭೆಯು ವಿಸರ್ಜಿಸಲ್ಪಟ್ಟು, ಹೊಸದಾಗಿ ಮೆಂಬರುಗಳು ಜನರಿಂದ ಆರಿಸಲ್ಪಡುವರು. ಈ ಬ್ರಿಟಿಷ್ ಜನರಲ್ಲಿ ಲಿಬರಲ್ಸ್, ಮೊಡರೇಟ್ಸ್, ಯೂನಿಯನಿಸ್ಟ್ಸ್, ಲೇಬರೈಟ್ಸ್ ಮೊದಲಾದ ಪಕ್ಷಗಳಿರುವುವು. ಈ ಪಕ್ಷಗಳಲ್ಲಿ ಯಾವ ಪಕ್ಷದ ಜನರು ಹೆಚ್ಚಾಗಿ ಕಾಮನ್ಸ್ ಸಭೆಯ ಮೆಂಬರುಗಳಾಗಿ ಬರುವರೋ, ಆ ಪಕ್ಷದ ಮುಖಂಡರೇ ಪ್ರಾಯಶಃ ಮುಖ್ಯಮಂತ್ರಿಪದವಿಗೆ ಬರುವರು. ಈ ಗ್ರೇಟ್ ಬ್ರಿಟನ್ ರಾಜ್ಯವು ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ದೇಶಗಳನ್ನೊಳಗೊಂಡಿದೆ. ಈ ಮೂರು ದೇಶಗಳಿಗೂ ಮೊದಲು ಪ್ರತ್ಯೇಕಪ್ರತ್ಯೇಕವಾದ ಪಾರ್ಲಿಮೆಂಟ್ ಸಭೆಯಿದ್ದಿತು. ೧೭೦೭ ರಲ್ಲಿ ಸ್ಕಾಟ್ಲೆಂಡ್ ದೇಶದ ಪಾರ್ಲಿಮೆಂಟು ಇಂಗ್ಲೆಂಡ್ ದೇಶದ ಪಾರ್ಲಿಮೆಂಟಿನ ಕೂಡ ಸಮಾಗತವಾಯಿತು. ಸ್ಕಾಟ್ಲೆಂಡಿನವರ ಪಕ್ಷವಾಗಿ ಇಂಗ್ಲೀಷ್ ಪಾರ್ಲಿಮೆಂಟಿನ ಲಾರ್ಡ್ಸ್ ಸಭೆಯಲ್ಲಿ ೧೬ ಜನರೂ, ಕಾಮನ್ಸ್ ಸಭೆಯಲ್ಲಿ ೪೫ ಜನರೂ ಇರುವಂತೆ ಗೊತ್ತಾಯಿತು. ಐರ್ಲೆಂಡು ದೇಶದ ಪಾರ್ಲಿಮೆಂಟು ಪ್ರತ್ಯೇಕವಾಗಿದ್ದರೂ ಇಂಗ್ಲೀಷ್ ಪಾರ್ಲಿಮೆಂಟ್ ಸಭೆಗಳ ಸಮ್ಮತಿಯಿಲ್ಲದೆ ಯಾವಕಾರ್ಯವನ್ನೂ ಮಾಡಲಿಕ್ಕೆ ಅಧಿಕಾರವಿಲ್ಲದೆ ಇದ್ದು, ೧೭೮೨ ರಲ್ಲಿ ಆ ಅಧಿಕಾರವು ಕೊಡಲ್ಪಟ್ಟಿತು. ಆದರೆ ಆ ದೇಶದ ಮುಖ್ಯಾಧಿಕಾರಿಗಳನ್ನು ತಾವು ಸ್ವತಂತ್ರಿಸಿ ನೇಮಿಸುವ ಅಧಿಕಾರವಿಲ್ಲದೆ, ಅಲ್ಲಿಯ ಕೆಲಸಕಾರ್ಯಗಳು ಸುಲಲಿತವಾಗಿ ನಡೆಯಲು ತೊಂದರೆಯಾಗಿದ್ದುದರ ಮೇಲೆ, ೧೮೦೧ ರಲ್ಲಿ ಇಂಗ್ಲೀಷ್ ಪಾರ್ಲಿಮೆಂಟಿನ ಕೂಡ ಸಮಾಗಮಮಾಡಲ್ಪಟ್ಟು, ಐರ್ಲೆಂಡಿನ ಪಕ್ಷವಾಗಿ ೧೦೦ ಜನ ಕಾಮನ್ಸು ಮತ್ತು [illegible] ಜನ ಲಾರ್ಡ್ಸ್ ಇರಬೇಕೆಂದು ಗೊತ್ತುಮಾಡಲ್ಪಟ್ಟಿತು. ಈ ಏರ್ಪಾಟು ಐರಿಷ್ ಜನರಲ್ಲನೇಕರಿಗೊಡಂಬಡದೆ, ತಾವು ಪ್ರತ್ಯೇಕವಾಗೊಂದು ಪಾರ್ಲಿಮೆಂಟನ್ನು ಏರ್ಪಡಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕೆಂದು ಹೋರಾಡುತ್ತಿರುವರು. ಹಿಂದೆ ಇಂಗ್ಲೆಂಡಿನ ಮುಖ್ಯಮಂತ್ರಿಗಳಾಗಿದ್ದ ಆ ಪ್ರಸಿದ್ಧ ಗ್ಲಾಡ್‌ಸ್ಟನ್ನರವರು ಐರಿಷ್ ಜನರಿಗೆ ಅವರಿಷ್ಟ ಪ್ರಕಾರ ಪ್ರತ್ಯೇಕವಾದ ಪಾರ್ಲಿಮೆಂಟನ್ನು ಕೊಡಿಸಬೇಕೆಂದು ಸಾಹಸಪಟ್ಟಾಗ್ಯೂ, ಪಾರ್ಲಿಮೆಂಟ್ ಮೆಂಬರುಗಳಲ್ಲಿ ಬಹುಮಂದಿಗಳೊಪ್ಪದೆ ಹೋಗಿ ತಮ್ಮ ಸಂಕಲ್ಪವು ನಡೆಯದೆ ಹೋದುದರಿಂದ ಮಂತ್ರಿಪದವಿಯಿಂದ ನಿವೃತ್ತರಾದರು. ಈಗ ಮುಖ್ಯಮಂತ್ರಿಗಳಾಗಿರುವ ಮಿ॥ ಆಸ್ಕ್ವಿತ್ ರವರೂ, ಅವರ ಪಕ್ಷದ ಪಾರ್ಲಿಮೆಂಟ್ ಮೆಂಬರುಗಳೂ ಐರಿಷ್ ಜನರಿಗೆ ಪ್ರತ್ಯೇಕವಾದ ಪಾರ್ಲಿಮೆಂಟನ್ನು ಕೊಡಿಸಬೇಕೆಂದು ಪ್ರಯತ್ನಿಸುತ್ತಿರುವರು. ಆದರೆ ಲಾರ್ಡ್ಸ್ ಸಭಿಕರಲ್ಲಿ ಅನೇಕರು ಇದಕ್ಕೆ ವಿರುದ್ಧರಾಗಿರುವರು. ಈ ಕಾರಣದಿಂದಲೂ, ಕಾಮನ್ಸ್ ಸಭಿಕರು ಸಿದ್ಧಪಡಿಸಿದ ಬಿಲ್ಲುಗಳಿಗೆ ಲಾರ್ಡ್ಸ್ ಸಭಿಕರು ತಮ್ಮ ಸಮ್ಮತಿಯನ್ನು ಕೊಡದೆ ೧-೨ ವರ್ಷಗಳ ವರೆಗೆ ಕಾಲಹರಣಮಾಡುತ್ತ ಬಂದಿರುವುದರಿಂದಲೂ, ಲಾರ್ಡ್ಸ್ ಮತ್ತು ಕಾಮನ್ಸ್ ಸಭಿಕರಲ್ಲಿ ಪರಸ್ಪರ ವೈಮನಸ್ಯವು ಅಭಿವೃದ್ಧಿಯಾಗಿ, ಲಾರ್ಡ್ಸ್ ಸಭಿಕರು ಕಾಮನ್ಸ್ ಸಭಿಕರಿಗೆ ಸ್ವಾತಂತ್ರ್ಯವನ್ನು ಕೊಡಕೂಡದೆಂದೂ, ಕಾಮನ್ಸ್ ಸಭಿಕರಲ್ಲಿ ಕೆಲವರು ತಮ್ಮ ಸಭೆಯವರೊಪ್ಪಿ ಸಿದ್ಧಪಡಿಸಿದ ಬಿಲ್ಲುಗಳಿಗೆ ಲಾರ್ಡ್ಸ್ ಸಭಿಕರ ಸಮ್ಮತಿಯನ್ನು ಕೇಳುವ ಪದ್ಧತಿಯನ್ನು ತಪ್ಪಿಸಬೇಕೆಂದೂ, ಮತ್ತೆಕೆಲರು ಲಾರ್ಡ್ಸ್ ಸಭಿಕರೇ ಅವಶ್ಯಕವಿಲ್ಲವೆಂದೂ, ಬೇರೆ ಕೆಲರು ಲಾರ್ಡ್ಸ್ ಸಭಿಕರ ಸಂಖ್ಯೆಯನ್ನು ಹೆಚ್ಚಿಸಿ, ತಮ್ಮ ಮತವನ್ನನುಮೋದಿಸತಕ್ಕ ಲಾರ್ಡುಗಳನ್ನು ಮೆಂಬರುಗಳನ್ನಾಗಿ ಸೇರಿಸಬೇಕೆಂದೂ ಅಭಿಪ್ರಾಯಪಡುತ್ತಿರುವರು. ಮುಖ್ಯಮಂತ್ರಿಗಳಾದ ಆಸ್ಕ್ವಿತ್‌ರವರಾದರೂ ಹೋಂ ರೂಲು ಬಿಲ್ಲು ಮೊದಲಾದುವುಗಳಿಗೆ ಲಾರ್ಡ್ಸ್ ಸಭಿಕರು ಸಮ್ಮತಿಯನ್ನು ಕೊಡದಿದ್ದರೆ, ಲಾರ್ಡ್ಸ್ ಸಭೆಯ ಮೆಂಬರುಗಳ ಸಂಖ್ಯೆಯನ್ನು ಹೆಚ್ಚಿಸಿ ತಮ್ಮ ಪಕ್ಷದ ಲಾರ್ಡ್ಸ್‌ಗಳನ್ನು ಸೇರಿಸುತ್ತೇವೆಂದು ಪಾರ್ಲಿಮೆಂಟ್ ಸಭೆಯಲ್ಲಿ ಬಹು ಧೋರಣೆಯಿಂದ ಹೇಳುತ್ತಿರುವರಲ್ಲದೆ, ದೊರೆಗಳಿಗೂ ಪ್ರಕೃತ ಸ್ಥಿತಿಯನ್ನು ತಿಳುಹಿಸಿ ಅವರೂ ಸಮ್ಮತಿಸಿರುವಂತೆ ತಿಳಿಸಿರುತ್ತಾರೆ. ಲಾರ್ಡ್ ಲ್ಯಾನ್ಸ್‌ಡೌನ್ ಮೊದಲಾದ ಹೌಸ್ ಆಫ್ ಲಾರ್ಡ್ಸ್ ಮೆಂಬರುಗಳು ಮಂತ್ರಿಗಳ ವಿರುದ್ಧಪಕ್ಷವಾಗಿ ನಿಂತಿರುವರು. ಈ ಉಭಯ ಸಭಿಕರ ವಾಗ್ವಾದದ ಹೋರಾಟಗಳನ್ನು ನೋಡಿದರೆ, ಪರಸ್ಪರ ವೈಮನಸ್ಯವು ಇನ್ನೂ ಪ್ರಬಲಿಸಬಹುದೆಂದು ತೋರುತ್ತದೆ.

ಕೈ॥ ಶ್ರೀಮಂತ ಪಿ. ಎನ್. ಪೂರ್ಣಯ್ಯನವರು.

ಪ್ರಸಿದ್ಧರಾದ ದಿವಾನ್ ಪೂರ್ಣಯ್ಯನವರ ಮೊಮ್ಮಕ್ಕಳೂ, ಈಗ ದಿವಾನ್ ಪದವಿಯಿಂದ ನಿವೃತ್ತರಾಗಿರುವ ಯಳಂದೂರು ಜಹಗೀರ್ದಾರ್ ಶ್ರೀಮಂತ ಪಿ. ಎನ್. ಕೃಷ್ಣಮೂರ್ತಿ, ಕೆ.ಸಿ.ಐ.ಇ., ಯವರ ಸಹೋದರರೂ ಆದ ಮತ್ತು ಎಕ್ಸೈಜ್ ಕಮಿಷನರ ಪದವಿಯಿಂದ ನಿವೃತ್ತರಾಗಿದ್ದ ಮಿ॥ ಪಿ. ಎನ್. ಪೂರ್ಣಯ್ಯನವರು ಕಳೆದ ಬುಧವಾರ ಮಧ್ಯಾಹ್ನ ಊಟಮಾಡುತ್ತಿರುವಾಗ್ಗೆ ಅಕಸ್ಮಾತ್ತಾಗಿ ಪಾರ್ಶ್ವವಾಯುರೋಗಗ್ರಸ್ತರಾಗಿ ಸ್ಮೃತಿತಪ್ಪಿ, ವೈದ್ಯರು ಎಷ್ಟು ಚಿಕಿತ್ಸೆಯನ್ನು ಮಾಡಿದಾಗ್ಯೂ ಗುಣವನ್ನು ಹೊಂದದೆ ಕಳೆದ ಗುರುವಾರ ಸಾಯಂಕಾಲ ತಮ್ಮ ಸ್ವಗೃಹವಾದ ಪೂರ್ಣಪ್ರಾಸಾದದಲ್ಲಿ ಪರಲೋಕಯಾತ್ರೆಯನ್ನು ಮಾಡಿದರೆಂದು ತಿಳುಹಲು ಖೇದವಾಗುತ್ತದೆ. ಈ ಶ್ರೀಮಂತರಿಗೆ ಈ ಜಾಡ್ಯವು ಆಗಾಗ್ಗೆ ಬರುತ್ತಿದ್ದು ಗುಣವಾಗುತ್ತಿದ್ದಿತಂತೆ. ಆದರೆ ಈ ವೇಳೆ ಮಾತ್ರ ರೋಗವು ಪ್ರಾಪ್ತವಾದ ಕೂಡಲೇ ಸ್ಮೃತಿಯು ತಪ್ಪಿದುದರಿಂದ ವೈದ್ಯರ ಚಿಕಿತ್ಸೆಯು ಸಾರ್ಥಕವಾಗಿ ಗುಣವಾಗಲು ಅವಕಾಶವಿಲ್ಲದೆ ಹೋಯಿತು. ಇವರು ಅಸ್ವಸ್ಥರಾದ ೩೮ ಗಂಟೆಯೊಳಗೆ ಮರಣವನ್ನು ಹೊಂದಿದುದರಿಂದ, ಅನೇಕರು ಇವರ ಆಕಸ್ಮಿಕ ಮರಣವಾರ್ತೆಯನ್ನು ಕೇಳಿ ಮೊದಲು ನಂಬದೆ ಹೋದರು. ಮೃತಶರೀರವು ಬೆಂಗಳೂರ ಲಾಲ್‌ಬಾಗಿನ ಸಮೀಪದಲ್ಲಿರುವ ಅವರ ಉದ್ಯಾನದಲ್ಲಿ ಸಂಸ್ಕರಿಸಲ್ಪಟ್ಟಿತು. ಈ ಕಾಲದಲ್ಲಿ ದಿವಾನ್ ಪದವಿಯಿಂದ ನಿವೃತ್ತರಾಗಿರುವ ಮಿ॥ ವಿ. ಪಿ. ಮಾಧವರಾವ್, ಸಿ. ಐ. ಇ., ಯವರು, ಸರ್ವೆ ಸೂಪರಿಂಟೆಂಡೆಂಟ್ ಮಿ॥ ದೇಶಮುಖ ಶಾಮರಾಯರು, ಹಿಂದೆ ಡೆ॥ ಕಮಿಷನರಾಗಿದ್ದ ಮಿ॥ ಎಸ್. ನಾರಾಯಣರಾಯರು, ಡಿ॥ ಚೀಫ್ ಇಂಜನಿಯರಾಗಿದ್ದ ಮ॥ ವೈ. ಶ್ರೀನಿವಾಸರಾಯರು, ಮಿ॥ ಗಳಾದ ಕೆ. ಜಿ. ಶಾಮಣ್ಣನವರು, ಎಲ್ ಕೃಷ್ಣರಾಯರು ಡಾಕ್ಟರ್ ರಾಘವೇಂದ್ರರಾಯರು ಮೊದಲಾದ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು.

ಕೈ॥ ಪೂರ್ಣಯ್ಯನವರಿಗೆ ಒಬ್ಬ ಹೆಂಡತಿಯೂ, ಇಬ್ಬರು ಗಂಡುಮಕ್ಕಳೂ, ನಾಲ್ಕು ಹೆಣ್ಣುಮಕ್ಕಳೂ ಇರುವರು. ಇವರು ೧೮೫೧ ನೇ ಅಕ್ಟೋಬರ್ ತಾ॥ ೨೫ ರಲ್ಲಿ ಜನಿಸಿ, ತಮ್ಮ ಸಹೋದರರ ಕೂಡ ಇಂಗ್ಲೀಷ್ ವಿದ್ಯಾಭ್ಯಾಸವನ್ನು ಮಾಡಿ, ೧೮೭೦ ರಲ್ಲಿ, ಬಿ. ಎ., ಪ್ರಶಸ್ತಿಯನ್ನು ಪಡೆದು ಮೈಸೂರ ಸಂಸ್ಥಾನವಾಡಳಿತವನ್ನು ಚೀಫ್ ಕಮಿಷನರು ನೋಡುತ್ತಿರುವಾಗ್ಗೆ ಅಂದರೆ ೧೮೭೩ ರಲ್ಲಿ ಅಟಾಚಿಯಾಗಿ ಸರ್ಕಾರದುದ್ಯೋಗಕ್ಕೆ ಸೇರಿದರು. ಅದೇ ವರ್ಷದಲ್ಲಿ ಅಸಿಸ್ಟೆಂಟ್ ಕಮಿಷನರಾಗಿ ಮಾಡಲ್ಪಟ್ಟು ಅಲ್ಲಿಂದ ಕ್ರಮವಾಗಿ ಅಭಿವೃದ್ಧಿಯನ್ನು ಹೊಂದಿ ಮೈಸೂರು, ಫ್ರೆಂಚ್‌ರಾಕ್ಸ್, ಕೋಲಾರ ಈ ಸ್ಥಳಗಳಲ್ಲಿ ಟ್ರಜರಿ, ಪೋಲೀಸು, ಅ॥ ಕಮಿಷನರ ಕೋರ್ಟು ಮೊದಲಾದ ಅಧಿಕಾರಗಳನ್ನು ನಿರ್ವಹಿಸಿ ೧೮೮೭ರಲ್ಲಿ ಹಾಸನದ ಡೆ॥ ಕಮಿಷನರಾಗಿ ನಿಯಮಿಸಲ್ಪಟ್ಟು ಅಲ್ಲಿಂದ ೧ ನೇಯ ತರಗತಿಯವರೆಗಭಿವೃದ್ಧಿಯನ್ನು ಹೊಂದಿ, ೧೮೯೫ ರಲ್ಲಿ ಬೆಂಗಳೂರ ಡೆ॥ ಕಮಿಷನರಾಗಿದ್ದು ೧೮೯೬ ರಲ್ಲಿ ಎಕ್ಸೈಜ್ ಕಮಿಷನರಾಗಿ ನಿಯಮಿಸಲ್ಪಟ್ಟರು. ಅದೇ ವರ್ಷ ಕೊಂಚಕಾಲ ವಿದ್ಯಾಭ್ಯಾಸದ ಇ॥ ಜನರಲ್‌ರವರುದ್ಯೋಗವನ್ನೂ ತಮ್ಮ ಕೆಲಸದೊಡನೆ ನೋಡಿದರು. ಈ ಎಕ್ಸೈಜ್ ಕಮಿಷನರುದ್ಯೋಗವಲ್ಲದೆ, ೧೮೯೦ ರಲ್ಲಿ ರೆಜಿಸ್ಟ್ರೇಷನ್ನಿನ ಇನ್ಸ್‌ಪೆಕ್ಟರ್ ಜನರಲ್‌ರವರಾಗಿಯೂ, ಕಂಪೆನಿಗಳ ರೆಜಿಸ್ಟ್ರಾರರಾಗಿಯೂ ನಿಯಮಿಸಲ್ಪಟ್ಟರು. ಈ ಉದ್ಯೋಗಗಳಲ್ಲಿ ೧೯೦೭ನೇಯ ಜೂ॥ ವರೆಗೂ ಇದ್ದು ನಿವೃತ್ತಿಯ ಸುಖವನ್ನು ಹೊಂದಿದರು. ಆಗ ಇವರ ಸ್ಥಾನಕ್ಕೆ ಮಿ॥ ಎಚ್. ಎಚ್. ಸ್ಪಾರ್ಕ್ಸ್‌ರವರು ನೇಮಿಸಲ್ಪಟ್ಟರು.

ಕೈ॥ ಪೂರ್ಣಯ್ಯನವರು ಅಗರ್ಭಶ್ರೀಮಂತರೂ, ಜಹಗೀರ್ದಾರರೂ, ಪ್ರಸಿದ್ಧಿಯನ್ನು ಹೊಂದಿದ ದಿವಾನ್ ಪೂರ್ಣಯ್ಯನವರ ಮೊಮ್ಮಕ್ಕಳೂ ಆಗಿದ್ದಾಗ್ಯೂ, ನಿಗರ್ವಶಿರೋಮಣಿಗಳು, ಶಾಂತಸ್ವಭಾವದವರು, ಕಾರ್ಯದಕ್ಷರು ಮತ್ತು ಪೂರ್ಣ ಸ್ವದೇಶಾಭಿಮಾನಿಗಳೂ ಆಗಿದ್ದರು. ಇಂತಹ ಗುಣಾಢ್ಯರನ್ನು ಕಳೆದುಕೊಂಡುದಕ್ಕಾಗಿ ಈ ದೇಶೀಯರು ತುಂಬ ವಿಷಾದಿಸುತ್ತಾರೆ. ಕೈ॥ ಪೂರ್ಣಯ್ಯನವರಿಂದ ಸ್ಥಾಪಿಸಲ್ಪಟ್ಟು ಅಭಿವೃದ್ಧಿಸ್ಥಿತಿಗೆ ತರಲ್ಪಟ್ಟ ಎಕ್ಸೈಜ್ ಸ್ಕೂಲುಗಳು ಅವರಜ್ಞಾಪಕಾರ್ಥವಾಗಿ ಒಂದುದಿವಸ ಮುಚ್ಚಲ್ಪಟ್ಟಿದ್ದವು. ಮೃತರ ಆತ್ಮಕ್ಕೆ ಶಾಂತಿಯನ್ನೂ, ಅವರ [illegible]ಕ್ಕೀಡಾಗಿರುವ ಅವರ ಅಣ್ಣಂದಿರಾದ ಸರ್ ಪಿ. ಎನ್. ಕೃಷ್ಣಮೂರ್ತಿಯವರಿಗು ಮತ್ತು ಅವರ ಕುಟುಂಬಕ್ಕು ದುಃಖಶಮನವನ್ನೂ ಉಂಟುಮಾಡಲೆಂದು ನಾವು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಬರೋಡಾ ಮಹಾರಾಜರ ಕುವರಿಯ ವಿವಾಹವಿಚಾರ.

ಬರೋಡಾ ಮಹಾರಾಜರವರು ತಮ್ಮ ಕುವರಿ ಇಂದಿರಾದೇವಿಯವರನ್ನು ಗ್ವಾಲಿಯರ್ ಮಹಾರಾಜಾ ಸಿಂಧ್ಯಾಯವರಿಗೆ ಕೊಟ್ಟು ವಿವಾಹವನ್ನು ಮಾಡಬೇಕೆಂದು ಸಂಕಲ್ಪಿಸಿರುವರು. ಈ ಸಿಂಧ್ಯಾಮಹಾರಾಜರನ್ನು ಬರೋಡಾ ಮಹಾರಾಜ ದಂಪತಿಗಳು ದಿಲ್ಲಿ ಹೋಟಲಿಗೆ ಬರಮಾಡಿಕೊಂಡು ದಿವ್ಯವಾದ ಔತಣವನ್ನು ಮಾಡಿಸಿದರು. ಈ ರಾಜೌತಣಕ್ಕೆ ಬಿಕನೀರು ಮಹಾರಾಜರು, ಇಂದೂರಿನ ಮಹಾರಾಜ ಹೋಲ್ಕರ್‌ರವರು, ಕೂಚ್ ಬಿಹಾರ್ ಮಹಾರಾಣಿಯವರು, ನಭಸಂಸ್ಥಾನದ ರಾಜದಂಪತಿಗಳು, ಮೌರ್ವೀ ಠಾಕೂರರವರು, ಮದ್ರಾಸ್ ಹೈಕೋರ್ಟು ಜಡ್ಜ್ ಶಂಕರನಾಯರ್‌ರವರು, ಮಿ॥ ಬಿಲ್ಗ್ರಾಮಿಯವರು ಮೊದಲಾದ ಪ್ರಮುಖರು ದಯಮಾಡಿಸಿದ್ದು ವಧೂವರರನ್ನು ವಿಶೇಷವಾಗಿ ಅಭಿನಂದಿಸಿದರು. ಸಮಾಜ ಸುಧಾರಣೆಯಲ್ಲಿ ಪ್ರಮುಖರಾದ ಬರೋಡಾ ಮಹಾರಾಜರವರು “ ನಮ್ಮ ಭರತಖಂಡದಲ್ಲಿ ರೂಢಿಯಲ್ಲಿರುವ ಬಹುಪತ್ನೀತ್ವವು ಅಸಂಗತವೆಂದೂ ಈ ದುಷ್ಟಪದ್ಧತಿಯನ್ನು ಆದಷ್ಟು ಪ್ರಯತ್ನವಿಶೇಷದಿಂದ ತಪ್ಪಿಸಬೇಕೆಂದೂ ” ಉಪನ್ಯಾಸಗಳನ್ನು ಮಾಡಿ, ಈಗ ಒಬ್ಬ ಪತ್ನಿಯುಳ್ಳ ಗ್ವಾಲಿಯರ್ ಮಹಾರಾಜರವರಿಗೆ ತಮ್ಮ ಮುದ್ದುಕುವರಿಯನ್ನು ಕೊಟ್ಟು ಮದುವೆಮಾಡುವುದು ಸರ್ವಥಾ ಯುಕ್ತವಲ್ಲವೆಂದೂ, ಇವರು ನುಡಿದಂತೆ ನಡೆಯತಕ್ಕವರಲ್ಲವೆಂದೂ ಅನೇಕ ಪತ್ರಿಕೆಗಳೂ ಜನರೂ ಆಕ್ಷೇಪಿಸುತ್ತಿರುವರು. ಆದರೆ ರಾಜಕಾರ್ಯ ನಿಪುಣರೂ, ಬಹು ಆಲೋಚನಾಪರರೂ, ಕುಶಲಮತಿಗಳೂ ಎಂದು ಜಗದ್ವಿಖ್ಯಾತರಾಗಿರುವ ಬರೋಡಾ ಮಹಾರಾಜರವರು ಈ ವಿವಾಹ ಸಂಬಂಧದಿಂದ ಉಭಯಸಂಸ್ಥಾನಗಳ ಪರಸ್ಪರ ಪ್ರೀತಿಯು ಹೆಚ್ಚಿ, ಸುಖಸಂಪತ್ತುಂಟಾಗುತ್ತದೆಂಬ ದೂರಾಲೋಚನೆಯಿಂದ ಈ ಸಂಕಲ್ಪವನ್ನು ಮಾಡಿರಬಹುದಲ್ಲದೆ, ಧೋರಣೆಯಿಂದಾಗಲಿ, ಅಥವಾ ಅವಿಚಾರದಿಂದಾಗಲಿ ಮಾಡಿ ನುಡಿದಂತೆ ನಡೆಯುವವರಲ್ಲವೆಂಬ ಜನರ ನಿಂದೆಗೆ ವೃಥಾ ಗುರಿಯಾಗತಕ್ಕವರಲ್ಲವೆಂದು ನಾವು ಹೇಳಬಲ್ಲೆವು.

ತಿರಮಕೂಡ್ಲು ನರಸೀಪುರ ಮೊದಲಾದ ತಾ॥ ಗಳಲ್ಲಿ ನದಿಗಳ ಪ್ರವಾಹದಿಂದ ಮನೆಯನ್ನೂ, ಕೂಡಿಸಿಟ್ಟಿದ್ದ ಧಾನ್ಯವನ್ನೂ ಕಳೆದುಕೊಂಡು ನಷ್ಟಪಡುತ್ತಿರುವ ಜನರ ಸಹಾಯಾರ್ಥವಾಗಿ ರಾಜಧಾನಿಯ ಸರ್ಕಾರಿಯಧಿಕಾರಿಗಳೂ ಪ್ರಮುಖ ಮನುಷ್ಯರೂ ಏರ್ಪಡಿಸಿರುವ ರಿಲೀಫ್ ಫಂಡಿಗೆ ಪ್ರಾಣಿಮಾತ್ರದಲ್ಲಿ ದಯಾಪರರಾದ ಪುಣ್ಯಾತ್ಮರು ತಮಗೆ ತೋಚಿದಷ್ಟು ದ್ರವ್ಯಸಹಾಯವನ್ನು ಮಾಡಬೇಕೆಂದು ಅಪೇಕ್ಷಿಸಿ ಪ್ರಕಟಿಸಿರುವ ಪತ್ರಿಕೆಯು ಮತ್ತೊಂದು ಕಡೆ ಮುದ್ರಿಸಲ್ಪಟ್ಟಿರುತ್ತದೆ. ನದಿಯ ಪ್ರವಾಹದ ಅನಾಹುತಕ್ಕೆ ಸಿಕ್ಕಿ ಆಹಾರಕ್ಕೂ, ವಾಸಕ್ಕೂ ಮಾರ್ಗವಿಲ್ಲದೆ ಕಷ್ಟಪಡುತ್ತಿರುವ ಸ್ವದೇಶಬಾಂಧವರಿಗೆ ಈ ಕಾಲದಲ್ಲಿ ಪ್ರತಿಯೊಬ್ಬರೂ ತಮ್ಮ ಶಕ್ತಿಮೀರಿ ದ್ರವ್ಯಸಹಾಯ ಮಾಡುವುದರಿಂದ ಸಾವಿರಾರು ರೂಪಾಯಿಗಳನ್ನು ವ್ಯಯಮಾಡಿ ಸತ್ರದೇವಸ್ಥಾನ ಮೊದಲಾದ ಧರ್ಮಕಾರ್ಯಗಳನ್ನು ಮಾಡುವುದರಿಂದುಂಟಾಗುವ ಫಲಕ್ಕಿಂತಲೂ ಅಧಿಕವಾದ ಪುಣ್ಯಪ್ರಾಪ್ತಿಯಾಗುತ್ತದೆನ್ನುವುದರಲ್ಲಿ ಸಂದೇಹವಿಲ್ಲವು. ಮತ್ತು ಇದಕ್ಕಿಂತಲೂ ಸತ್ಪಾತ್ರವಾದ ದಾನವು ಬೇರೊಂದಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಅದುಕಾರಣ ಬಡವರೂ, ಬಲ್ಲಿದರೂ ಎಂಬ ತಾರತಮ್ಯವಿಲ್ಲದೆ ಪ್ರತಿಯೊಬ್ಬರೂ ತಂತಮ್ಮ ಶಕ್ತ್ಯನುಸಾರ ದ್ರವ್ಯಸಹಾಯ ಮಾಡುವರೆಂದು ನಾವು ನಿರೀಕ್ಷಿಸುತ್ತೇವೆ. ನಮ್ಮ ಪತ್ರಿಕಾವಾಚಕರಲ್ಲಾರಾದರೂ ದಯಮಾಡಿ ನಮ್ಮಲ್ಲಿಗೆ ಚಂದಾ ಹಣವನ್ನು ಕಳುಹಿಸಿ ಕೊಟ್ಟಲ್ಲಿ, ನಾವು ಅದನ್ನು ವಂದನಾಪೂರ್ವಕವಾಗಿ ಸ್ವೀಕರಿಸಿ, ಫಂಡಿನ ಸೆಕ್ರೆಟರಿಯವರಿಗೆ ತಲುಪಿಸುತ್ತೇವಲ್ಲದೆ ಅವರ ಹೆಸರುಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸುತ್ತೇವೆ.

ಮೈಸೂರ ದೇಶದ ಸಂಪದಭಿವೃದ್ಧಿಗಾಗಿ ಏರ್ಪಟ್ಟಿರುವ ವ್ಯವಸಾಯಾಭಿವೃದ್ಧಿಯ ಸಂಘದವರು.— ಈ ದೇಶದಲ್ಲಿ ಹತ್ತಿ, ಹಿಪ್ಪಲಿ ನೇರಳೆ, ಕಾಫಿ, ಏಲಕ್ಕಿ, ಎಳ್ಳು, ಹರಳು, ನೆಲಗಡಲೆ, ರಬ್ಬರು ಮೊದಲಾದುವುಗಳ ಬೆಳಸು ಈಗ ಯಾವಸ್ಥಿತಿಯಲ್ಲಿರುವುದು ಮತ್ತು ಅವುಗಳಲ್ಲಿ ಎಷ್ಟು ತರಹ ಬೆಳೆಯಲ್ಪಡುವುದು; ಈ ಬೆಳೆಯನ್ನು ಮಾಡತಕ್ಕ ರೈತರಿಗೆ ಅವುಗಳ ಅಭಿವೃದ್ಧಿಗಾಗಿ ಯಾವಸಹಾಯವು ಬೇಕಾಗಿರುವುದು, ಎಷ್ಟು [illegible] ಕಬ್ಬುಬೆಳೆಯಲ್ಪಡುವುದು, ಅದು [illegible] ಉತ್ಪನ್ನವಾಗುವುದು; [illegible] ಯುವುದು ಮೊದಲಾದ ಸಂದರ್ಭಗಳನ್ನೂ, ಪರೀಕ್ಷಾರ್ಥವಾಗಿ ಕೊಂಚ ಭೂಮಿಯನ್ನು ಕೊಟ್ಟಲ್ಲಿ ಬೇಸಾಯವನ್ನು ಮಾಡಿ ಅದರ ಫಲಿತಾಂಶವನ್ನು ತಿಳುಹಲು ಆಸಕ್ತರಾಗಿರುವ ಮತ್ತು ಉತ್ತಮತರವಾದ ಬಿತ್ತನೆಯ ಬೀಜಗಳನ್ನಾಗಲಿ, ಬೇಸಾಯ ಮುಟ್ಟುಗಳನ್ನಾಗಲಿ ಪರೀಕ್ಷಾರ್ಥವಾಗಪೇಕ್ಷಿಸುವ ರೈತರ ಹೆಸರುಗಳನ್ನೂ ಈ ಸೀಮೆಯ ಪ್ರಮುಖ ರೈತರುಗಳೂ, ವ್ಯವಸಾಯಸಂಘದವರೂ ಮತ್ತು ಡಿಸ್ಟ್ರಿಕ್ಟ್ ಕಮಿಟಿಯವರೂ ಇಂಗ್ಲೀಷಿನಲ್ಲಾಗಲಿ ಕನ್ನಡದಲ್ಲಾಗಲಿ ಬರೆದು ಈ ವ್ಯವಸಾಯ ಸಂಘದ ಸೆಕ್ರೆಟರಿಯವರಾದ ಮಿ॥ ಕೆ. ಸುಬ್ಬರಾವ್, ಬಿ. ಎ., ಯವರಿಗೆ ಬರೆದು ತಿಳುಹತಕ್ಕದೆಂದು ಪ್ರಕಟಿಸಿರುತ್ತಾರೆ.

ಬೆಂಗಳೂರ ರಾ॥ ಬ॥ ತೋಟದಪ್ಪನವರ ಸತ್ರದ ಕಾರ್ಯನಿರ್ವಾಹಕ ಸಂಘದವರು ಕಳೆದ ತಾ॥ ೫ ರಲ್ಲಿ ಸತ್ರದ ಕಟ್ಟಡದಲ್ಲಿ ಸಭೆ ಸೇರಿದ್ದು, ಈ ವರ್ಷದಲ್ಲಿ ೨೦ ವಿದ್ಯಾರ್ಥಿಗಳಿಗೆ ಮಾತ್ರ ಭೋಜನಕ್ಕೇರ್ಪಡಿಸತಕ್ಕದೆಂದು ನಿರ್ಧರಿಸಿರುವುದಾಗಿ ಕೇಳುತ್ತೇವೆ. ವಿದ್ಯಾರ್ಥಿಗಳುಪಯೋಗಾರ್ಥವಾಗಿ ಧರ್ಮಕರ್ತರು ಸರ್ಕಾರಿಯ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿರುವ ಫಂಡಿನಿಂದ ಬರತಕ್ಕ ಉತ್ಪತ್ತಿಯು ಹೆಚ್ಚಾಗಿರುವ ಪಕ್ಷದಲ್ಲಿ ೨೦ ವಿದ್ಯಾರ್ಥಿಗಳಿಗಿಂತಲೂ ಹೆಚ್ಚಾಗಿ ಭೋಜನಕ್ಕೇರ್ಪಡಿಸಬಹುದಲ್ಲವೆ? ಈ ಸತ್ರದಲ್ಲಿ ವಿದ್ಯಾರ್ಥಿಗಳ ಭೋಜನದೇರ್ಪಾಡು ಸಮರ್ಪಕವಾಗಿಲ್ಲವೆಂತಲೂ, ಯಾವ ವಿದ್ಯಾರ್ಥಿಯಾದರೂ ಅಸ್ವಸ್ಥನಾದರೆ, ಆತನನ್ನು ಯಾರೂ ಉಪಚರಿಸುವುದಿಲ್ಲವೆಂತಲೂ ಕೇಳುತ್ತೇವೆ. ಇದು ನಿಜವಾಗಿದ್ದಲ್ಲಿ ಧರ್ಮಫಂಡಿನ ಸೆಕ್ರೆಟರಿಗಳು ಕೂಡಲೆ ಗಮನಕೊಟ್ಟು ಇತಃಪರ ವಿದ್ಯಾರ್ಥಿಗಳಿಗೆ ಭೋಜನವು ಕ್ರಮವಾಗಿ ಮತ್ತು ಪಾಠಶಾಲೆಯ ಹೊತ್ತಿಗೆ ಸರಿಯಾಗಿ ನಡೆಯುವಂತೆಯೂ, ಅಸ್ವಸ್ಥರಾದ ವಿದ್ಯಾರ್ಥಿಗಳನ್ನು ಉಪಚರಿಸುವಂತೆಯೂ ತಕ್ಕೇರ್ಪಾಟನ್ನಿಡುವರೆಂದು ನಿರೀಕ್ಷಿಸುತ್ತೇವೆ.

ಒಳದೇಶದವೃತ್ತಾಂತ.

ಈ ಸಂಚಿಕೆಯಲ್ಲಿ ಗರ್ಭಿತವಾಗಿರುವ ಬೆಳಗಾವಿನ ಶ್ರೀ ಮಹಾವೀರ ಮುದ್ರಾಲಯದ ಜೈನಧರ್ಮಗ್ರಂಥಗಳ ಸಂಬಂಧವಾದ ಪ್ರಸಿದ್ಧಪತ್ರಿಕೆಯನ್ನು ವಾಚಕರು ಗಮನಿಸಬೇಕಾಗಿ ಕೋರುತ್ತೇವೆ.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೬,	೭,	೮,	೯,	೧೦,	೧೧,	೧೨.
ತಗಲಿದ್ದು.	೮	೫	೧	೫	೪	೨	೪
ಸತ್ತದ್ದು.	೮	೭	೧	೬	೨	೧	೫
ಒಟ್ಟು ಮ.	೯	೮	೬	೧೨	೬	೯	೧೨

ಕಳೆದ ತಾ॥ ೫ ರಲ್ಲಿ ಬೆಂಗಳೂರಿಂದ ಪೂನಾಕ್ಕೆ ಹೋಗುತ್ತಿದ್ದ ರೈಲ್ವೆ ಬಂಡಿಯ ಇಂಜನ್ನಿಗೆ ಅರಸೀಕೆರೆ ಸಮೀಪದಲ್ಲಿ ಒಬ್ಬ ಮುದುಕಿಯು ಹೇಗೋ ಸಿಕ್ಕಿ ಹತಳಾದಳು. ಈ ಸಂದರ್ಭವು ಯಾರಿಗೂ ಗೊತ್ತಾಗಿರಲಿಲ್ಲವು. ಆದರೆ ಕೊನೆ ಹಳ್ಳಿಗೆ ಹೋಗುತ್ತಿದ್ದ ಸಾಮಾನು ಬಂಡಿಯನ್ನು ನಡೆಯಿಸುವವನು ಇದನ್ನು ಕಂಡು ತಿಳುಹಿದನಂತೆ.

ದಿವ್ಯಜ್ಞಾನ ಸಮಾಜಕ್ಕೆ ಸೇರಿದ ಮಿ॥ ಎನ್. ಟಿ. ಬ್ರೂಕ್ಸ್‌ರವರು ರಾಜಧಾನಿಗೆ ಬಂದು ಇಲ್ಲಿಯ ದಿವ್ಯಜ್ಞಾನ ಸಮಾಜದವರ ಆತಿಥ್ಯದಲ್ಲಿದ್ದುಕೊಂಡು ಕಳೆದ ತಾ॥ ೭ ರಿಂದ ಟೌನ್‌ಹಾಲಿನಲ್ಲಿ ಭಗವದ್ಗೀತೆಯ ಮೇಲೆ ೭ ಉಪನ್ಯಾಸಗಳನ್ನು ಮಾಡಿದರು. ಇವರ ವಾಗ್ಝರಿಯೂ, ಪಾಂಡಿತ್ಯವೂ ಬೋಧನಾಶಕ್ತಿಯೂ ಚೆನ್ನಾಗಿರುವುವು.

ಕೋಲಾರದ ಗಣಿಗಳಲ್ಲೊಂದಾದ ಚಾಂಪಿಯನ್ ರೀಫ್ ಎಂಬ ಗಣಿಯಲ್ಲಿ ಕಳೆದವಾರ ಕೆಲಸಗಾರರು ಒಂದು ತೊಟ್ಟಿಲಲ್ಲಿ ಕುಳಿತು ಗಣಿಯೊಳಕ್ಕಿಳಿಯುವಾಗ್ಗೆ ಆ ತೊಟ್ಟಿಲಿಗೆ ಕಟ್ಟಿದ್ದ ಸರಪಳಿಯು ಕಿತ್ತುಹೋಗಿ ಆ ತೊಟ್ಟಿಲು ೧೫೦೦ ಅಡಿಗಳ ಕೆಳಗೆ ಬಿದ್ದು ಹೋಗಿ ಅದರೊಳಗಿದ್ದವರಲ್ಲಿ ಅನೇಕರು ಸತ್ತುಹೋದುದಾಗಿ ವರ್ತಮಾನ ಬಂದಿರುತ್ತದೆ.

ಕೊಡಗಿನ ಪೋಲೀಸ್ ಇನ್ಸ್‌ಪೆಕ್ಟರ್ ನಂಜಪ್ಪನೆಂಬುವರು ಪೋಲೀಸಿನವರಿಗೆ ಉಡುಪುಗಳನ್ನು ಮಾಡಿಕೊಟ್ಟ ಕಂಪೆನಿಯವರಿಗೆ ಕೊಡಬೇಕಾಗಿದ್ದ ೪೦೦೦ ರೂ. ಗಳನ್ನು ಸ್ವಂತಕ್ಕುಪಯೋಗಿಸಿಕೊಂಡು ಸೂಪರಿಂಟೆಂಡೆಂಟರು ಕೇಳಿದಾಗ ಕಂಪೆನಿಯವರಿಗೆ ಕೊಟ್ಟೆನೆಂದು ಹೇಳಿದುದರ ಮೇಲೆ ಅವನ ಮೋಸಕೃತ್ಯವು ಹೊರಬಿದ್ದಿತು. ಸೂಪರಿಂಟೆಂಡೆಂಟರು ನಂಜಪ್ಪನನ್ನು ಹಿಡಿದು ಸೆರೆಯಲ್ಲಿಟ್ಟಿರುವರು. ಸೆರೆಮನೆಯೊಳಗೆ ಹೋಗುವಾಗ್ಗೆ ಅತನಿಗೆ ಜ್ಞಾನತಪ್ಪಿಹೋಗಿದ್ದಿತಂತೆ.

ಈಗ ಚೀಫ್ ಕೋರ್ಟಿಗೆ ಸೇರಿಸಲ್ಪಟ್ಟಿರುವ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟು ಈ ತಾ॥ ೨೧ ರಿಂದ ಬೆಂಗಳೂರಿನಲ್ಲಿ ಪೂರ್ವದಂತೆ ಪ್ರತ್ಯೇಕವಾಗಿ ಆರಂಭಿಸಲ್ಪಡತಕ್ಕದೆಂದೂ, ಬೆಂಗಳೂರು, ಕೋಲಾರ ಮತ್ತು ತುಮಕೂರು ಈ ಡಿಸ್ಟ್ರಿಕ್ಟುಗಳ ಸಿವಿಲ್ ಮತ್ತು ಕ್ರಿಮಿನಲ್ಲು ವಿಚಾರ [illegible] ಪರಿಮಿತಿಯಿಲ್ಲದ ಸಿವಿಲ್ ವಿವಾದವನ್ನು ಹಿಡಿಯುವ ಅಧಿಕಾರವು ಸಬಾರ್ಡಿನೇಟ್ ಜಡ್ಜರಿಂದ ತಪ್ಪಿಸಲ್ಪಟ್ಟು ಈ ಡಿಸ್ಟ್ರಿಕ್ಟ್ ಕೋರ್ಟಿಗೆ ಕೊಡಲ್ಪಟ್ಟಿದೆಯೆಂದೂ ಅಪ್ಪಣೆ ಮಾಡಿರುತ್ತಾರೆ

ಚೆನ್ನಪಟ್ಟಣದಲ್ಲಿ ಕಳೆದ ತಾ॥ ೨೮ ರಲ್ಲಿ ವೀರಶೈವ ಯುವಕರೊಬ್ಬರಿಗೆ ಅಪಾರ ನಿಧಿಯನ್ನು ಬರಮಾಡಿಕೊಡುತ್ತೇನೆಂದು ಆಸೆಯನ್ನು ಹುಟ್ಟಿಸಿ, ೫೦ ರೂ. ಗಳಿಗೆ ಮೋಸಪಡಿಸಿಹೋಗಿದ್ದ ವೇಷಧಾರಿಗಳಾದ ಸಾಧುಗಳಿಬ್ಬರು ಕ್ಲೋಸ್‌ಪೇಟೆ ಸಬ್ ಡಿವಿಜ್ನ ಅ॥ ಕಮಿಷನರ್ ಮ್ಯಾಜಿಸ್ಟ್ರೇಟರ ವಿಚಾರಣೆಯಲ್ಲಿ, ಅವರಲ್ಲೊಬ್ಬನು ನೆಲ್ಲೂರಿನವನೆಂದೂ ತನ್ನ ಹೆಸರು ರತ್ನಸೆಟ್ಟಿ ಉರುಫ್ ಸೀತಾರಾಂ ಎಂದೂ ಮತ್ತೊಬ್ಬನು ಉತ್ತರ ಆರ್ಕಾಟಿನ ಕಡೆಯವನೆಂದೂ, ತನ್ನ ಹೆಸರು ಗತ್ತಂ ಸೀತಾರಾಮನೆಂದೂ ಹೇಳಿ, ತಾವು ಮೋಸಕೃತ್ಯವನ್ನು ಮಾಡಿದುದುಂಟೆಂದೊಪ್ಪಿಕೊಂಡುದರ ಮೇಲೆ ಅವರಲ್ಲೊಬ್ಬನು ೨ ವರ್ಷಗಳ, ಮತ್ತೊಬ್ಬನು ೧೮ ತಿಂಗಳ ಕಠಿಣಕಾರಾಗೃಹವಾಸ ಶಿಕ್ಷೆಗೆ ಗುರಿಯಾದರು

ಪ್ರತಿವರ್ಷ ಮಹಾನವಮಿಯ ಕಾಲದಲ್ಲಿ ಶ್ರೀಮನ್ಮಹಾರಾಜರವರು ಅರಮನೆಯ ಸಭಾಂಗಣದಲ್ಲಿ ಸಿಂಹಾಸನಾರೂಢರಾಗಿ ಒಡ್ಡೋಲಗದಲ್ಲಿರುವಾಗ್ಗೆ, ಹೊರಗಡೆ ಮಲ್ಲ ಕಾಳಗವು (ಕುಸ್ತಿಯು) ನೆಲದಮೇಲಾಗುವುದರಿಂದ ಸಜ್ಜೆಯಲ್ಲಿರುವ ಪ್ರೇಕ್ಷಕರಿಗೂ, ಕೆಳಗಡೆ ಕುದುರೆ ಮೊದಲಾದ ಸೇನೆಯ ಹಿಂಭಾಗದಲ್ಲಿ ನಿಂತಿರುವ ಜನಸಮೂಹಕ್ಕೂ ಕಾಣಬರುವುದಿಲ್ಲವಾದ ಪ್ರಯುಕ್ತ ದೂರದಲ್ಲಿರುವವರಿಗೆ ಕಾಣುವ ಹಾಗೆ ಭೂಮಟ್ಟದಿಂದ ೪ ಅಡಿ ಎತ್ತರದಮೇಲೆ ಕಬ್ಬಿಣದ ಜಗತಿಯನ್ನು ಕಟ್ಟಲೇರ್ಪಾಟಾಗಿರುತ್ತದೆ. ಇದಕ್ಕೆ ೪೦೦೦ ಸಾವಿರ ರೂ. ಗಳು ಮುಟ್ಟಬಹುದೆಂದೂ, ಬರುವ ಮಹಾನವಮಿಯೊಳಗೆ ಜಗತಿಯು ಸಿದ್ಧವಾಗಬಹುದೆಂದೂ ನಿರೀಕ್ಷಿಸಲ್ಪಟ್ಟಿರುವುದಲ್ಲದೆ, ಯಾವ ಸ್ಥಳಕ್ಕೆ ಬೇಕಿದ್ದರೂ ಸರಾಗವಾಗಿ ಸಾಗಿಸಲ್ಪಡುವಂತೆ ನಿರ್ಮಿಸಲ್ಪಡತಕ್ಕದಾಗಿದೆ.

ವರ್ತಮಾನ ಸಂಗ್ರಹ.

ಲೋಕದಲ್ಲಿರತಕ್ಕ ಸ್ತ್ರೀಯರುಗಳೆಲ್ಲೆಲ್ಲ ಅಮೇರಿಕಾದ ನ್ಯೂಯಾರ್ಕು ನಿವಾಸಿಯಾದ ಹೆಟ್ಟಿಗ್ರೀನ್ ಎಂಬಾಕೆಯು ಅದ್ವಿತೀಯ ಧನವಂತಳು.

ಚಕ್ರವರ್ತಿ ದಂಪತಿಗಳು ಕಿರೀಟಧಾರಣ ಮಹೋತ್ಸವಕ್ಕಾಗಿ ಭರತಖಂಡಕ್ಕೆ ಬಂದು ಹೋಗುವುದರ ವೆಚ್ಚವು ೧೮೦೦೦೦೦ ರೂ. ಗಳಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ರೈಲು ಬಂಡಿಗಳು ೧ ಗಂಟೆಗೆ ೧೦೦ ಮೈಲಿ ನಡೆಯುವ ಉಪಾಯವನ್ನು ವಾರ್ನರ್ ಎಂಬ ಶಿಲ್ಪಿಯು ಕಂಡುಹಿಡಿದಿರುವನು. ಬಂಡಿಗಳು ಇಷ್ಟು ವೇಗವಾಗಿ ಹೋದರೂ ಪ್ರಯಾಣಿಕರು ಕೊಂಚವೂ ಅಲುಗದೆ ಓದಲೂ, ಬರೆಯಲೂ ಆಗಬಹುದಂತೆ.

ಕಳೆದ ತಾ॥ ೬ ರಲ್ಲಿ ಸುಂದರಬಾಳ್ಯಕ್ಕೂ, ಕೊಪ್ಪವಿಗ್ಗೂ ಮಧ್ಯೆ ೨೦ ಜನ ಕಳ್ಳರು ಮುಖಕ್ಕೆ ಮಸಿಯನ್ನು ಬಳಿದುಕೊಂಡು ಪ್ರಯಾಣಿಕರ ಮೇಲೆ ಬಿದ್ದು ಅವರನ್ನು ಬೆನ್ನಾಗಿ ಪ್ರಹರಿಸಿ, ಅವರಲ್ಲಿದ್ದುದನ್ನೆಲ್ಲ ಕಸುಕೊಂಡು ಹೋದರು. ಪೋಲೀಸರು ಕಳ್ಳರನ್ನು ಹಿಡಿಯಯತ್ನಿಸಿದ್ದಾರೆ.

ಪ್ರಪಂಚದ ೧೫೦ ಕೋಟಿ ಜನರಲ್ಲಿ ಕ್ರೈಸ್ತರು ೫೩೪೯೪೦೦೦೦, ಮಹಮ್ಮದೀಯರು ೧೭೫೨೯೦೦೦೦, ಯಹೂದ್ಯರು ೧೧೦೬೦೦೦೦, ಬೌದ್ಧರು ೧೨೦೦೦೦೦೦೦, ಹಿಂದೂಗಳು ೨೧೦೦೦೦೦೦೦ ಮತ್ತು ಕಂಫ್ಯೂಷಿಯು ಎಂಬ ಮತದವರು ೩೦೦೦೦೦೦೦೦ ಜನವಿರುತ್ತಾರೆಂದು ಡಾಕ್ಟರ್ ಜೆಲ್ಲರ್ ಎಂಬಾತನು ಬರೆದಿರುವ ಜನರ ಗಣತಿಯ ಪುಸ್ತಕದಿಂದ ಗೊತ್ತಾಗುತ್ತದೆ.

ಬರ್ಲಿನ್ ಪಟ್ಟಣದಲ್ಲಿ ಇಬ್ಬರು ಕಳ್ಳರು ಒಂದು ಮನೆಗೆ ಕನ್ನವನ್ನಿಕ್ಕುವಾಗ್ಗೆ ಇಬ್ಬರು ಪೋಲೀಸರು ಕಂಡು ಗುಂಡನು ಹೊಡೆದರು. ಆ ಕಳ್ಳರೂ ಪೋಲೀಸರ ಮೇಲೆ ಗುಂಡನ್ನು ಹಾರಿಸಿದರು. ಈ ಪರಸ್ಪರ ಯುದ್ಧದಲ್ಲಿ ಒಬ್ಬ ಪೋಲೀಸಿನವನು ಗುಂಡೇಟನ್ನು ತಿಂದು ಸತ್ತನು. ಮತ್ತು ಒಬ್ಬ ಕಳ್ಳನು ಆತ್ಮಹತ್ಯೆಯನ್ನು ಮಾಡಿಕೊಂಡನು. ಉಳಿದ ಕಳ್ಳನು ಈಗ ಪೋಲೀಸರ ಸೆರೆಯಲ್ಲಿರುತ್ತಾನೆ.

ಬರ್ಮಾದ ಒಂದು ಹಳ್ಳಿಯಲ್ಲಿ ಒಬ್ಬ ವೃದ್ಧನಾದ ರೈತನು ದನಗಳನ್ನು ಮೇಯಿಸಲು ಹೊಡೆದುಕೊಂಡು ಹೋಗುತ್ತಿರುವಾಗ್ಗೆ ಒಂದು ಹೆಣ್ಣುಹುಲಿಯು ಅಕಸ್ಮಾತ್ತಾಗಿ ಬಂದು ಅವನ ಕತ್ತಿನಮೇಲೆ ಹಾರಿತು. ಆದರೆ ಆ ರೈತನು ಬಹು ಚಮತ್ಕಾರದಿಂದ ತಪ್ಪಿಸಿಕೊಂಡು ಊರಿನವರನ್ನು ಕೂಗಿಕೊಳ್ಳಲು, ಆರುಜನರು ದೊಣ್ಣೆ ಭರ್ಜಿ ಮೊದಲಾದವುಗಳನ್ನು ಹಿಡಿದುಕೊಂಡು ಬಂದು ಆ ಹುಲಿಯನ್ನು ಕೊಂದರು.

ಭೂಪಾಲಿನ ಬೇಗಂರವರು ಲಂಡನ್ನಿನಲ್ಲಿ ಕಿರೀಟಧಾರಣ ಮಹೋತ್ಸವವನ್ನು ನೋಡಿಕೊಂಡು ಮಕ್ಕಾಕ್ಕೆ ಪ್ರಯಾಣ ಮಾಡಿರುತ್ತಾರೆ. ಮಧ್ಯೆ ತುರ್ಕಿಯಲ್ಲಿ ಸುಲ್ತಾನನು ಇವರನ್ನು [illegible] ಬರಮಾಡಿಕೊಂಡು ಸತ್ಕರಿಸಿ ಮರ್ಯಾದಿಸಿದನು. ಈ ಬೇಗಂರವರು ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಈಚೆಗಾದ ಅಗ್ನಿಯ ಅನಾಹುತದಿಂದ ವಿಪನ್ನರಾದವರ ಸಹಾಯಾರ್ಥವಾಗೇರ್ಪಟ್ಟಿರುವ ಫಂಡಿಗೆ ೫ ಸಾವಿರ ರೂ.ಗಳನ್ನು ಕೊಟ್ಟರು.

ಜರ್ಮನಿಯ ವೈದ್ಯರು ವಿದ್ಯುಚ್ಛಕ್ತಿಯ ಸಹಾಯದಿಂದ ಕಣ್ಣು ಮತ್ತು ಮೂಗು ಇಲ್ಲದವರಿಗೆ ಹೊಸದಾಗಿ ಕಣ್ಣು ಮತ್ತು ಮೂಗುಗಳನ್ನು ಅಂಟಿಸಿಯೂ, ಡೊಂಕಾಗಿರುವ ಅವಯವಗಳನ್ನು ಸರಿಪಡಿಸಿಯೂ ದೇಹದ ವಿಕಾರವನ್ನು ಹೋಗಲಾಡಿಸುವರು. ಅಂಗವಿಕಲತೆಯಿಂದ ತಮ್ಮನ್ನು ವರಿಸತಕ್ಕವರೇ ಇಲ್ಲದೆ ಅವಿವಾಹಿತರಾಗಿ ತಮ್ಮ ದುರ್ದೈವವನ್ನು ನಿಂದಿಸುತ್ತಿದ್ದ ಸ್ತ್ರೀಪುರುಷರು ಈ ವಿಧವಾದ ಚಿಕಿತ್ಸೆಯಿಂದ ಸುರೂಪಿಗಳಾಗಿ ವಿವಾಹವನ್ನು ಮಾಡಿಕೊಂಡು ಸುಖದಿಂದ ಬಾಳುತ್ತಿರುವರಂತೆ !

ಅಮೇರಿಕಾಕ್ಕೆ ಸೇರಿದ ನ್ಯೂಯಾರ್ಕಿನಲ್ಲಿ ಗ್ರೀನ್ ಎಂಬ ಶ್ರೀಮಂತಳೊಬ್ಬಳು ಸ್ವಲ್ಪಕಾಲದ ಕೆಳಗೆ ಸತ್ತುಹೋದಳು ಆಕೆಯ ಐಶ್ವರ್ಯವು ೧೮ ಕೋಟಿ ರೂಪಾಯಿಗಳ ವರೆಗಿದ್ದು ಇದರಿಂದ ಆಕೆಗೆ ನಿತ್ಯದಲ್ಲೂ ೭೦,೦೦೦ ರೂ. ಗಳುತ್ಪತ್ತಿಯಾಗುತ್ತಿದ್ದಿತು. ಇಷ್ಟೊಂದು ಅಪಾರವಾದ ಐಶ್ವರ್ಯವಿದ್ದಾಗ್ಯೂ, ಆಕೆಯು ನಿತ್ಯದಲ್ಲೂ ತನ್ನ ಹೊಟ್ಟೆ-ಬಟ್ಟೆ ಮೊದಲಾದುದಕ್ಕಾಗಿ ೪॥ ರೂ. ಗಿಂತಲೂ ಹೆಚ್ಚಾಗಿ ವ್ಯಯಮಾಡುತ್ತಿರಲಿಲ್ಲವಂತೆ ಅವಳು ಧನವನ್ನು ಗಳಿಸುವ ಪುಣ್ಯವನ್ನು ಕೇಳಿಕೊಂಡು ಬಂದಿದ್ದಳಲ್ಲದೆ ಅದನ್ನು ಅನುಭವಿಸಲು ಕೇಳಿಕೊಂಡು ಬಂದಿರಲಿಲ್ಲವು.

ಈಗ ಪಾಶ್ಚಾತ್ಯದೇಶಗಳಲ್ಲಿ ಸಂಚರಿಸುತ್ತಿರುವ ಭೂಪಾಲಿನ ಬೇಗಂರವರು ಕಳೆದ ಜುಲೈ ತಾ॥ ೧೬ ರಲ್ಲಿ ಪ್ಯಾರಿಸ್ ಪಟ್ಟಣದಿಂದ ಜಿನೀವಾ ಪಟ್ಟಣಕ್ಕೆ ಬಂದು ರೈಲ್ವೆ ಸ್ಟೇಷನ್ನಿನಲ್ಲಿ ಬಂಡಿಯನ್ನಿಳಿಯುವಾಗ್ಗೆ ಅವರ ೨೮ ಜನ ಪರಿವಾರದವರನ್ನೂ, ೮೦ ಪೆಟ್ಟಿಗೆಗಳನ್ನೂ ಜನರು ನೋಡಿ ಆಶ್ಚರ್ಯದಿಂದ ಪ್ಲಾಟ್‌ಫಾರಮ್ಮಿನ ಮೇಲೆ ಗುಂಪುಕೂಡಲು, ಬೇಗಂರವರು ಗುಂಪುಕೂಡಿರುವ ಜನರೆಲ್ಲರೂ ಹೋದಹೊರತು, ತಾವು ರೈಲುಬಂಡಿಯಿಂದ ಹೊರಗಿಳಿದು ಬರುವುದಿಲ್ಲವೆಂದು ಹೇಳಿ ನಿಂತಮೇಲೆ ಇತರಬಂಡಿಗಳು ಬರಲು ಮಾರ್ಗವಿಲ್ಲದಂತೆ ಇವರ ಬಂಡಿಯು ಅಡಚಣೆಯಾಗಿ ನಿಂತಿದ್ದುದರಿಂದ ಜಗತಿಯಮೇಲಿದ್ದ ಜನರೆಲ್ಲರೂ ಹೊರಗೆ ಕಳುಹಲ್ಪಟ್ಟರು. ಆಗ ಬೇಗಂರವರು ಸ್ಥಳೀಯಾಧಿಕಾರಿಗಳನ್ನು ಸಹ ನೋಡದೆ ಮೋಟಾರು ಬಂಡಿಯಲ್ಲಿ ತಮ್ಮ ಪರಿವಾರ ಸಮೇತ ಹೋಟಲಿಗೆ ಹೋದರು.

ಬೊಂಬಾಯಿನಲ್ಲಿ ಈಗ್ಗೆ ಕೆಲ ದಿನಗಳ ಹಿಂದೆ ಒಬ್ಬ ಮಹಮ್ಮದೀಯ ಶ್ರೀಮಂತನ ಮನೆಯಲ್ಲಿ ೬೦೦೦ ರೂ. ಬೆಲೆಯ ಆಭರಣಗಳನ್ನಪಹರಿಸಿಕೊಂಡು ಹೋಗಿದ್ದ ಮಹಮ್ಮದೀಯ ಯುವಕನನ್ನು ಪೋಲೀಸರು ಸೂರತ್ತಿನಲ್ಲಿ ಹಿಡಿದು ಶೋಧಿಸುವಲ್ಲಿ ೩೦೦೦ ರೂ. ಗಳ ಆಭರಣಗಳು ದೊರೆತವು ಅಲ್ಲಿಂದ ಅವನನ್ನು ಬೊಂಬಾಯಿಗೆ ಕರೆತಂದು ಆ ಶ್ರೀಮಂತನಿಗೆ ಆಭರಣಗಳನ್ನು ತೋರಿಸುವಲ್ಲಿ ಅವನು ಅವು ತನ್ನವೆಂದು ಗುರ್ತಿಸಿದುದರ ಮೇಲೆ ಉಳಿದಾಭರಣಗಳನ್ನು ಅಹಮದಾಬಾದಿನಲ್ಲಿ ಒಬ್ಬ ಸ್ನೇಹಿತನಲ್ಲಿಟ್ಟಿದ್ದೇನೆಂದು ಆ ಕಳ್ಳನು ಪೋಲೀಸರಿಗೆ ಹೇಳಿ, ರೈಲು ಬಂಡಿಯಲ್ಲಿ ಪೋಲೀಸು ಕಾವಲಿನವರ ಕೂಡ ಪ್ರಯಾಣಮಾಡುತ್ತ, ಅವರು ಮಲಗಿ ನಿದ್ರೆಹೋಗುತ್ತಿರುವಾಗ್ಗೆ ತನ್ನ ಕೈ ಕೋಳವನ್ನು ಕಿತ್ತುಹಾಕಿ ಬಂಡಿಯಲ್ಲಿರುವ ಅಪಾಯ ಸೂಚಕವಾದ ಸರಪಳಿಯನ್ನೆಳೆದು ಬಂಡಿಯನ್ನು ನಿಲ್ಲಿಸಿ ಬಂಡಿಯಿಂದ ಹೊರಗೆ ದುಮಿಕಿ ಪಲಾಯನವಾದನು.

ಕೊಲ್ಲಾಪುರದ ಶ್ರೀ ಶಂಕರಾಚಾರ್ಯರು, ವೇದಾಂತ ವಿಷಯ ಸಾರವನ್ನು ಪಾಶ್ಚಾತ್ಯ ಮತ್ತು ಪೌರಸ್ತ್ಯ ದೇಶಗಳಲ್ಲಿ ವಿಶೇಷ ಪ್ರಚಾರಕ್ಕೆ ತಂದು ಉಭಯ ದೇಶೀಯರ ಅಭಿಪ್ರಾಯದ ಏಕಮತ್ಯವನ್ನು ಅಭಿವೃದ್ಧಿಗೊಳಿಸಿದ ಮಿ॥ ಮಪ್ಪೆಲ್ ಎಂಬುವರಿಗೆ “ ವೇದಾಂತ ಭೂಷಣ ” ಎಂಬ ಪ್ರಶಸ್ತಿಯನ್ನು ಕೊಟ್ಟಿರುವರು. ಈ ಬಿರುದಾಂಕ ಸೂಚಕವಾದ ಪತ್ರಿಕೆಯನ್ನೂ, ಶಾಲನ್ನೂ ಮಿ॥ ಮಪ್ಪೆಲ್‌ರವರಿಗೆ ಕೊಟ್ಟು ಬರಲು ಸ್ವಾಮಿಗಳಿಂದ ಕಳುಹಲ್ಪಟ್ಟ ಕೊಲ್ಲಾಪುರ ಸಂಸ್ಥಾನದ ಮೆಡಿಕಲ್ ಆಫೀಸರ್ ಡಾ॥ ಪೇಠ್ಕರ್‌ರವರು ಬರ್ಮಿಂಗ್ಹ್ಯಾಮಿಗೆ ಹೋಗಿ ಅಲ್ಲಿ ಒಂದು ಸಭೆಯನ್ನು ಸೇರಿಸಿ, ವೇದಾಂತ ವಿಷಯಕವಾದುಪನ್ಯಾಸವನ್ನು ಮಾಡಿದ ನಂತರ ಮಿ॥ ಮಪ್ಪೆಲ್‌ರವರ ಪಾಂಡಿತ್ಯಕ್ಕೆ ಮೆಚ್ಚಿ ಶ್ರೀಗಳವರು ಬಿರುದನ್ನು ದಯಪಾಲಿಸಿರುವರೆಂದು ಸಭಿಕರಿಗೆ ತಿಳುಹಿಸಿ ತಾವು ತಂದಿದ್ದ ಸನ್ನದನ್ನೂ, ಶಾಲನ್ನೂ ಒಪ್ಪಿಸಿದರು. ಈ ಸಭೆಯಲ್ಲಿ ಡಾ॥ ಪೇಠ್ಕರ್‌ರವರ ಪತ್ನಿಯವರೂ ವೇದಾಂತವಿಷಯದಲ್ಲಿ ಚೆನ್ನಾಗಿ ಪ್ರಸ್ತಾಪಿಸಿದರು.

ಪತ್ರವ್ಯವಹಾರ.

ಶ್ರೀಮದ್ರಂಭಾಪುರೀ ಜಗದ್ಗುರು ಪೀಠೋತ್ಸವದಲ್ಲಿ ನಡೆದ ಸಭಾರಂಭ.

[illegible]

ಬಿಲ್ವಾರ್ಚನೆಯೂ, ವಿಧಿವತ್ತಾಗಿ ನಡೆಯಿಸಲ್ಪಟ್ಟು ೨೦೦-೩೦೦ ಜನಗಳವರೆಗೆ ಸಂತರ್ಪಣೆಯೂ, ತಾ॥ ೬ ರವಿವಾರ ಶ್ರೀಮನ್ಮಹಾಸನ್ನಿಧಾನದಲ್ಲಿ ರುದ್ರಾಭಿಷೇಕ ಮಹಾಪೂಜೆಯೂ ಬಹು ವಿಜೃಂಭಣೆಯಿಂದ ನಡೆದು ಈ ದಿನವೂ ವಿಶೇಷವಾಗಿ ಸಂತರ್ಪಣೆಯು ನಡೆಯಿಸಲ್ಪಟ್ಟಿತು. ೭ ಚಂದ್ರವಾರ ಶಿವೈಕ್ಯರಾದ ಆಚಾರ್ಯಸ್ವಾಮಿಗಳವರ ಗದ್ದುಗೆಗಳಲ್ಲಿ ರುದ್ರಾಧ್ಯಾಯನವು ನಡೆಯಿಸಲ್ಪಟ್ಟಿತು. ಈ ಮಹಾಕಾರ್ಯಕ್ಕೆ ಶ್ರೀಮದ್ವೀರಮೂರ್ತಿಗಳಾದ ಆನೂರು ಮ॥ ಚರಂತರು ಮೂಡಗೆರೆ ಮ॥ ಚರಮೂರ್ತಿಗಳು, ಮಳಲಯೊಳೆ ಮ॥ ಪಟ್ಟದದೇವರು, ಉತೆದ ಮ॥ ಚರಮೂರ್ತಿಗಳು, ದುಮ್ಮನಹಳ್ಳಿ ಮ॥ ಪಟ್ಟದದೇವರು, ಮತ್ತೂರು ಮ॥ ಪಟ್ಟದದೇವರು ಮ॥ರಾ॥ ಈಸೂರು ಸಾ॥ ರಾಚವಳ್ಳಿ ವೀರಪ್ಪಸೆಟ್ಟರು, ಯಡೇಹಳ್ಳಿ ಸಾ॥ ಇಂಗಳಗೊಂದಿ ವೀರಪ್ಪಸೆಟ್ಟರು, ಶಾಖಿಸ್ಕೂಲ್ ಮಾಸ್ಟರ್ ಆಲ್ದೂರು ವೀರಪ್ಪನವರು, ಶಾಖಿಪ್ಲಾಂಟರ್ ಕೆಳಗೂರು ಮ॥ ವೀರಪ್ಪನವರು, ಆಲ್ದೂರು ಹಳೇಬೀಡು ಸಾ॥ ಮಲ್ಲಪ್ಪಸೆಟ್ಟರು, ಡಿ. ಬಿಗದೇನಹಳ್ಳಿ ಪುಟ್ಟಣ್ಣಸೆಟ್ಟರು, ಫಲ್ಗುಣಿ ಮ॥ ಮಂಜಪ್ಪನವರು, ಉಂಬಳೆ ಬೈಲು ಮ॥ ನವಿಲೆಪ್ಪನವರು, ವೇ॥ ನಂದಿ ಉದ್ಭಾನಭಿಕ್ಷಾವರ್ತಿಗಳು, ಶಿಕಾರಿಪುರದ ತಾ॥ ಇಲಾಖೆ ಬೂದೆಯ್ಯನವರು, ಚಿಕ್ಕಮಗಳೂರು ತಾ॥ ನಂಜುಂಡಯ್ಯನವರು, ಕೊಪ್ಪದ ತಾ॥ ಇ॥ ರುದ್ರಯ್ಯನವರು ಬೇಲೂರು ತಾ॥ ಇ॥ ಬಸವಯ್ಯನವರು ಇನ್ನೂ ಮುಂತಾದ ಅನೇಕ ಜನ ದೊಡ್ಡಮನುಷ್ಯರು ೩೦೦ ಜನಗಳ ಮೇಲೆ ಸೇರಿದ್ದು, ಆದಿನ ಭೋಜನಾನಂತರ ೪ ಗಂಟೆಯಿಂದ ರಾತ್ರಿ ೯ ಗಂಟೆಯ ವರೆಗೆ ಶ್ರೀಮಜ್ಜಗದ್ಗುರು ಮಹಾಸ್ವಾಮಿಗಳವರ ಸ್ವಾರಿಯು ಅಲಂಕರಿಸಲ್ಪಟ್ಟಿದ್ದ ಸಿಂಹಾಸನವನ್ನಾರೋಹಣಮಾಡಿದ ನಂತರ ಮೇಲ್ಕಂಡ ಮಹನೀಯರುಗಳು ಸಭಾಲಂಕಾರಮಾಡಿದ ಬಳಿಕ ಈ ಶ್ರಾವಣಮಾಸದಲ್ಲಿ ಪ್ರತಿನಿತ್ಯವೂ ನಡೆಯುತ್ತಿರುವ ರೇವಣಸಾಂಗತ್ಯವೆಂಬ ರೇಣುಕ ಚರಿತ್ರೆಯು ಈ ಮೂರು ದಿನಗಳಲ್ಲಿಯೂ ವೇ॥ ನಂದಿ ಮ॥ ಉದ್ಭಾನ ಭಿಕ್ಷಾವೃತ್ತಿಗಳಿಂದ ಮಹದ್ವೈಖರಿಯಿಂದ ನಡೆಯಿಸಲ್ಪಟ್ಟು ಅನಂತರ ಜಗದ್ಗುರು ಮಹಾಸ್ವಾಮಿಗಳವರು ಶ್ರೀಮದ್ವೀರಶೈವ ವಿದ್ಯಾವರ್ಧಕ ಸಂಘದ ಮ॥ ರಾ॥ ಸೆಕ್ರೆಟರಿಗಳವರಿಂದ ಶ್ರೀಮನ್ಮಹಾಸನ್ನಿಧಿಗೆ ಕೃತಪಡಿಸಿಕೊಂಡ ವಿಜ್ಞಾಪನಪತ್ರಿಕೆಯನ್ನು ಸಂಸ್ಥಾನದ ಅಧಿಕಾರಿಗಳಿಂದ ಪ್ರಚುರಪಡಿಸಿ, ತತ್ಸಂಬಂಧವಾದ ಫಂಡಿಗೆ ದೇಶಮುಖ್ಯ ಇರತಕ್ಕ ಶ್ರೀಮಂತರು ಮೊದಲಾಗಿ ವೀರಶೈವ ಜನಾಂಗದವರು ತಂತಮ್ಮ ಶಕ್ತಿಮೀರಿ ಚಂದಾಕೊಡಬೇಕೆಂದು ಶ್ರೀಮುಖವನ್ನು ದಯಪಾಲಿಸಿ, ಚಂದಾಹಣವನ್ನು ಶೇಖರಗೊಳಿಸಬೇಕೆಂಬ ಸೆಕ್ರೆಟರಿಗಳವರ ಮನಸ್ಸಂತೋಷಪಡಿಸಬೇಕೆಂಬ ಚಿತ್ತಾನಂದವಿರೋಣದರಿಂದ ಹಾಲಿ ಇರತಕ್ಕ ಸರ್ವರು ನಿಮ್ಮನಿಮ್ಮಯೋಗ್ಯತಾನುಸಾರ ಸದರಿ ಫಂಡಿಗೆ ಸಹಾಯಮಾಡಬೇಕಾಗಿ ಬಹು ಆದರಪೂರ್ವಕವಾಗಿ ಅಪ್ಪಣೆಕೊಡಿಸಿದುದಕ್ಕೆ ಎಲ್ಲರೂ ಕರತಾಡನವಂ ಮಾಡಿದರು. ಅನಂತರ ಶ್ರೀ ಸಂಸ್ಥಾನದ ಅಧಿಕಾರಿಗಳಾದ ಮ॥ ಮುರಿಗೆಪ್ಪನವರು ನಮ್ಮ ವೀರಶೈವ ಮತದಲ್ಲಿ ಸ್ಟಾರ್ ಪತ್ರಿಕೆಯು ಮತವಿಷಯಗಳನ್ನು ಪ್ರಶಂಸೆಗೊಳಿಸುತ್ತಿದ್ದರೂ ಈ ಆಫೀಸಿಗೆ ದ್ರವ್ಯಸಹಾಯವಿಲ್ಲದೆ ಇರೋಣದರಿಂದ ನಮ್ಮ ವೀರಶೈವ ಮಹನೀಯರೆಲ್ಲರೂ ಕೊಂಚಕೊಂಚ ಈ ಪತ್ರಿಕೆಗೂ ಸಹಾಯಮಾಡಿದರೆ ಇನ್ನೂ ಅಭಿವೃದ್ಧಿಗೆ ಬರುತ್ತಾಗಿ ಆಲೋಚಿಸಿದುದರಿಂದ ಹಾಲಿ ಕೂಡಿರತಕ್ಕ ಮಹನೀಯರೆಲ್ಲರೂ ಯಥೋಚಿತವಾಗಿ ಮಾಡಿದ ಸಹಾಯದ್ರವ್ಯದ ಐದು ರೂಪಾಯಿಗಳನ್ನು ಸ್ಟಾರಾಫೀಸಿಗೆ ಕಳುಹಿಸಲು ಸದರಿ ಮುರಿಗೆಪ್ಪನವರ ವಶಮಾಡಲ್ಪಟ್ಟಿತು. ತದನಂತರ ಗ್ರಾಮೋಫೋನ್ ಎಂಬ ಹಾಡುಗಾರಿಕೆಯೂ ಒಂದು ಗಂಟೆಯಕಾಲ ಕ್ಯಾವೆಂಡನಹಳ್ಳಿ ಮ॥ ಸಂಸ್ಥಾನದ ಇಲಾಖೆ ಗುರುಸಿದ್ಧಾರಾಧ್ಯರಿಂದ ನಡೆಯಿಸಲ್ಪಟ್ಟಿತು. ಈ ಗಾನಸ್ವಾರಸ್ಯಕ್ಕೆ ಸಭೆಯವರೆಲ್ಲರೂ ಆನಂದಪರವಶರಾದರು. ಅನಂತರ ಸಭಿಕರಿಗೆ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟು, ಸಭಾವಿಸರ್ಜನೆಯಾಗುವ ಕಾಲಕ್ಕೆ ಈಸೂರು ಗ್ರಾಮದ ಭಾವಿ ಸಿದ್ಧಲಿಂಗಣ್ಣನೆಂಬ ಮುಗ್ಧರು ನಾಣ್ನುಡಿಯಿಂದ ಸಭಾಸಮ್ಮುಖದಲ್ಲಿ ಕೃತಗೊಳಿಸಿದುದೇನೆಂದರೆ— ನಗರದ ದೊರೆಗಳ ಕಾಲದಲ್ಲಿ ಚೆನ್ನಮ್ಮಾಜಿ ಎಂಬುವರಿಗೆ ಸಂಸ್ಥಾನದವರು ಮುದ್ರೆ ಹಾಕಿಸಿದುದರಿಂದ ಸಂಸ್ಥಾನದಲ್ಲಿದ್ದ ಬಲಮುರಿ ಶಂಖ, ಒಂಟಿಗಣ್ಣಿನ ಬೆತ್ತ, ಮುತ್ತಿನ ಗದ್ದುಗೆ ಮುಂತಾದುವುಗಳನ್ನು ದೊರೆಗಳು ಕಸುಕೊಂಡು ಶೃಂಗೇರಿ ಮಠದವರಿಗೆ ಕೊಟ್ಟರೆಂದು ಜನಗಳು ಹೇಳುತ್ತಾರೆ. ಇದು ನಿಜವೋ ಸುಳ್ಳೋ ಅಪ್ಪಣೆಯಾಗಬೇಕೆಂದು ಕೇಳಿಕೊಂಡರು. ಇದಕ್ಕೆ ಸಭೆಯಲ್ಲಿದ್ದ ವೇ॥ ಉತೇದ ಮಠದ ಚರಮೂರ್ತಿಗಳು ಹೇಳಿದುದೇನೆಂದರೆ— ಈ ಸಮಾಚಾರವು ನೀವು ಹೇಳಿದಂತೆ ಅಲ್ಲ. ಆಗ್ಗೆ ಈ ಬಾಳೇಹೊನ್ನೂರೆಂಬುದು ದೊಡ್ಡ ಪಟ್ಟಣವಾಗಿದ್ದಿತು. ಈ ಪಟ್ಟಣದ ಬಾಳ್ವೇದಲ್ಲಿರುವ ಭದ್ರಾನದೀತೀರದಲ್ಲಿ ನಗರದ ಮಹಾರಾಜರವರ ಅರಮನೆಯೂ, ಕೋಟೆಯೂ ಸಹ ಇತ್ತು. ಈ ಅರಮನೆಗೆ ದೊರೆಗಳೂ, ಜನಾನಾದವರೂ ಸಹ ಆಗಾಗ್ಗೆ ರಾಜಧಾನಿಯಿಂದ ಬಂದು ಹತ್ತೆಂಟು ದಿನಗಳು ಇದ್ದು, ಭದ್ರಾನದಿಯಲ್ಲಿ ಸ್ನಾನಮಾಡಿ ಶ್ರೀಸನ್ನಿಧಿಯಲ್ಲಿ ಗುರುದೇವತಾ ದರ್ಶನಮಾಡಿಕೊಂಡು ಹೋಗುವ ಪದ್ಧತಿಯಿದ್ದಿತು. ಇದರಂತೆ ಒಂದಾವೃತ್ತಿ ರಾಜಕುವರಿಯವರಾದ ಚೆನ್ನಮ್ಮಾಜಿಯವರು ಮಂತ್ರಿ ಪರಿವಾರಗಳ ಸಮೇತ ಈ ಬಾಳೆಹೊನ್ನೂರಿಗೆ ಬಂದು ತಮ್ಮ ಅರಮನೆಯಲ್ಲಿದ್ದು ಎಂದಿನಂತೆ ಶ್ರೀಮಠಕ್ಕೆ ಬಂದು ಗುರುದೇವತಾದರ್ಶನಮಾಡಿಕೊಂಡು ಅರಮನೆಗೆ ಹೋದನಂತರ ತಮ್ಮ ಆಪ್ತಮಂತ್ರಿಗಳಲ್ಲಿ ತಾವು ಸಂಸ್ಥಾನದ ಸ್ವಾಮಿಗಳನ್ನು ವಿವಾಹಮಾಡಿಕೊಳ್ಳಬೇಕೆಂದು ಇಚ್ಛೆಯಿದೆ; ಸ್ವಾಮಿಗಳನ್ನು ಒಡಂಬಡಿಸಿ ಈ ಕಾರ್ಯವಮಾಡಬೇಕೆಂದು ಹೇಳಿ ಶ್ರೀಗಳವರಲ್ಲಿಗೆ ಕಳುಹಿಸಿದುದರ ಮೇಲೆ, ಸದರಿ ಮಂತ್ರಿಗಳು ಸ್ವಾಮಿಸನ್ನಿಧಿಗೆ ಬಂದು ತಮ್ಮ ರಾಜಪುತ್ರಿಯ ಅಭಿಪ್ರಾಯವನ್ನು ಅರಿಕೆ ಪಡಿಸಲು, ವಿನೋದಕ್ಕಾಗಿ ಈ ಮಂತ್ರಿಯು ಈ ರೀತಿ ಹೇಳುತ್ತಿರಬಹುದೆಂಬಭಿಪ್ರಾಯವನ್ನು ಗ್ರಹಿಸಿ, ನಿಮ್ಮ ಸಂತೋಷ ಬಂದರೆ ಯಾಕಾಗಬಾರದೆಂದು ವಿನೋದಾರ್ಥವಾಗಪ್ಪಣೆ ಕೊಡಿಸಿದ್ದೇ ನಿಜವೆಂದು ಗ್ರಹಿಸಿ, ಅಮ್ಮಾಜಿಯವರಿಗೆ ವರ್ದಿಮಾಡಲು ಬಹು ಸಂತೋಷದಿಂದ ಒಡನೆ ಲಗ್ನನಿಶ್ಚಯಿಸಿಕೊಂಡು ಬರುವಂತೆ ಆಜ್ಞಾಪಿಸಿದರು. ಮಂತ್ರಿಗಳು ಪುನಹ ಶ್ರೀಗಳವರ ಸನ್ನಿಧಾನಕ್ಕೆ ಬಂದು ಮುಹೂರ್ತಯಾವಾಗ ನಡಿಯಬೇಕೆಂಬುದನ್ನು ನಿಶ್ಚಯಿಸಿಕೊಂಡು ಬರಬೇಕೆಂದು ಬಹು ಸಂಭ್ರಮದಿಂದ ಅಪ್ಪಣೆಯಾಗಿದೆ. ಪ್ರಯುಕ್ತ ಲಗ್ನನಿಶ್ಚಯಿಸಬೇಕೆಂದು ಕೃತಪಡಿಸಿದುದಕ್ಕೆ ಏನಯ್ಯ! ನಾವು ಯತಿಗಳು ನಮಗೆ ಲಗ್ನವೆಂದರೇನು? ವಿನೋದಕ್ಕಾಗಿ ನೀನು ಅರಿಕೆ ಮಾಡಿಸಿದೆ ಎಂದು ಪರಿಹಾಸವಾಗಿ ಆಗಲೆಂದಮಾತ್ರಕ್ಕೆ ನಿಶ್ಚಯವೆಂದೂಹಿಸಿ ಈ ರೀತಿ ಹೇಳುವುದು ಯಾವನ್ಯಾಯವೆಂದು ಒಪ್ಪದೆ ಹೋದಸಂಗತಿ ಪುನಹ ರಾಜಕುವರಿಯರಿಗೆ ತಿಳಿಸಲು ತಮ್ಮ ಆಶಾಭಂಗವಾಯ್ತಲ್ಲಾ ಇದಕ್ಕೆ ತಕ್ಕ ಪ್ರತೀಕಾರವನ್ನ ಮಾಡಬೇಕು. ನಾನು ಹೇಳಿದಂತೆ ನಮ್ಮ ತಂದೆಯವರಲ್ಲಿ ನೀನು ತಿಳುಹಿಸಬೇಕೆಂದು ಆ ಮಂತ್ರಿಗಳಿಂದ ಭಾಷೆ ತೆಗೆದುಕೊಂಡು ರಾಜಧಾನಿಗೆ ಹೋಗಿ ತಮ್ಮ ತಂದೆಗಳಾದ ಮಹಾರಾಜರ ಇದಿರಿಗೆ ಕಣ್ಣೀರನ್ನು ಸುರಿಸುತ್ತಾ ಮಹಾಸಂಕಟವನ್ನು ಅನುಭವಿಸಿದವಳೋ ಪಾಡಿಯಲ್ಲಿ ನಟಿಸಲು, ಅಹಾ! ಇದೇನದ್ಭುತವೆಂದು ಮಹಾರಾಜರು ಕೇಳಿದುದಕ್ಕೆ ಸಿಂಹಾಸನದಲ್ಲಿರುವ ಸ್ವಾಮಿಗಳು ನಾನು ಮುದ್ರೆಕೊಣೆ ಹೊಕ್ಕೆಳೆಂದು ಆ ಒಡನೆ ತಮ್ಮ ಶಿಷ್ಯರಿಂದ ನನ್ನನ್ನು ಹಿಡಿಸಿ ಮುದ್ರೆ ಹಾಕಿಸಿಬಿಟ್ಟರೆಂದು ಹೇಳೋಣ, ರಾಜರು ನಿಜವೆಂದು ಗ್ರಹಿಸಿ ಆ ಒಡನೆ ಆಗ್ರಹಪೂರ್ವಕವಾಗಿ ತಾವು ಸಂಸ್ಥಾನಕ್ಕೆ ಬಿಟ್ಟಿದ್ದ ದಾನಪಾಸದ ತಾಲ್ಲೂಕು ಸರ್ವ ಇನಾಮನ್ನು ಜಪ್ತಿಮಾಡಿಸಿ ಮಠವನ್ನು ಲೂಟಿಮಾಡುವಂತೆ ಆಜ್ಞಾಪಿಸಿದುದರಮೇಲೆ ರಾಜಸೈನ್ಯವು ಬಂದು ಮಠಕ್ಕೆ ಮುತ್ತಿಗೆಹಾಕಲು ಕೆಲವುದಿನ ಸಾಧ್ಯವಾಗದುದರಿಂದ ಮಠದ ಹುಟ್ಟಾಳು ಒಬ್ಬ ಹೊಲೆಯನ ಪರೀಕ್ಷೆಮಾಡಿಕೊಂಡು ತಮಗೆ ಮಠದೊಳಗೆ ಪ್ರವೇಶಮಾಡಲು ಸಾಧ್ಯವಾಗದಿರುವ ಸಂಗತಿಯನ್ನು ಕೇಳಲಾಗಿ ಮಠಕ್ಕೆ ಬರುವ ಜಲಪಸತಿಯನ್ನು ತಪ್ಪಿಸಿದರೆ ನಿಮಗೆ ಸಾಧ್ಯವಾಗುತ್ತೆಂಬ ಮರ್ಮವನ್ನು ತಿಳಿದುಕೊಂಡು ಮಠಕ್ಕೆ ಬರುತ್ತಿದ್ದ ನೀರನ್ನು ಬಂದುಮಾಡಿದುದರಿಂದ ಮಠದಲ್ಲಿದ್ದ ಶಿಷ್ಯಜನಗಳು ಹೊರಬೀಳಬೇಕಾಯ್ತು. ಇದನ್ನು ಸ್ವಾಮಿಗಳು ತಿಳಿದಕೂಡಲೇ ಒಬ್ಬ ಶಿಷ್ಯನ ಸಮೇತ ಗೋಪ್ಯದ್ವಾರದಿಂದ ಹೊರಟು ಪಾರಾದರು. ರಾಜಸೈನ್ಯವು ಮಠವನ್ನು ಲೂಟಿಮಾಡಿಕೊಂಡು ನೀನು ಮೇಲೆ ಹೇಳಿದ ಸಾಮಾನು ಭೂಚಕ್ರದ ಕೊಡೆ ಮೊದಲಾದುವನ್ನು ತೆಗೆದುಕೊಂಡು ಮಠಕ್ಕೆ ಬೆಂಕಿಹೊತ್ತಿಸಿ ಹೊರಟುಹೋಗಿ, ತೆಗೆದುಕೊಂಡು ಹೋದ ಸಾಮಾನುಗಳನ್ನು ರಾಜರಿಗೊಪ್ಪಿಸಿ, ನಡೆದ ಸಂಗತಿಯನ್ನು ತಿಳಿಸಿದ್ದಕ್ಕೆ ಸಂತೋಷದಿಂದ ತಂದ ವಸ್ತುಗಳನ್ನು ತೆಗೆದುಕೊಂಡು ರಾಜಕಾರ್ಯನಿರತನಾಗಿರಲು, ಗುರುಸ್ವತ್ತುಗಳುಪಟಳವು ರಾಜರಿಗೆ ದಿನೇದಿನೇ ಹೆಚ್ಚುತ್ತ ಬಂದು, ಬಹು ತೊಂದರೆಗಳು ಸಂಭವಿಸಿದುದರಿಂದಲೂ, ಸ್ವಪ್ನಾವಸ್ಥೆಯಲ್ಲಿಯೂ ಈ ಅಸಂಗತಗಳನ್ನು ತಿಳಿದುಕೊಂಡು ಮೇಲ್ಕಂಡ ಮಠದ ಸ್ವತ್ತುಗಳನ್ನು ಉಜ್ಜಯಿನಿ ಪರ್ವತಪೀಠಗಳವರಿಗಾದರೂ ಒಪ್ಪಿಸಲು ಕಳುಹಿಸಿದ್ದಕ್ಕೆ ನಮ್ಮ ಸರಿ ಬಾಜು ಪೀಠದ ಪದಾರ್ಥಗಳಾಗಿರುವದರಿಂದ ಅಲ್ಲಿನ ಸ್ವತ್ತುಗಳಿಗೆ ಸಲ್ಲಬೇಕಲ್ಲದೆ ತಾವು ಗ್ರಹಿಸುವುದಿಲ್ಲವೆಂದು ತಿರಸ್ಕರಿಸಿದ್ದರಿಂದ ಈ ವಸ್ತುಗಳು ನಮ್ಮಲ್ಲಿರೋಣದರಿಂದಲ್ಲವೆ ನಮಗೆ ಬಾಧೆಯೆಂದು ತಿಳಿದು, ರಾಜಧಾನಿಗೆ ಸಮೀಪವಾದ ಅಗ್ರಹಾರದೋರ್ವ ಭಟ್ಟರಿಗೆ ಆ ಸಾಮಾನುಗಳನ್ನು ಕೊಟ್ಟಾಗ್ಯೂ ಉಪಹತಿಯು ಶಮನವಾಗದೆ ಹೋದುದರಿಂದ ತಮ್ಮ ಪುತ್ರಿಯು ಸಂಸ್ಥಾನಕ್ಕೆ ಹೋಗಿದ್ದಾಗ್ಗೆ ನಡೆದ ನಿಜಾಂಶವೇನಿರಬಹುದೆಂದು ಪುತ್ರಿಯೊಂದಿಗೆ ಹೋಗಿದ್ದ ಮಂತ್ರಿಯಿಂದ ನಿಜಾಂಶವನ್ನು ತಿಳಿದವನಾಗಿ, ಅಯ್ಯೋ! ನಾನು ಗುರುದ್ರೋಹಿಯಾದೆನಲ್ಲಾ. ಆಗಲೇ ಈ ನಿಶ್ಚಯವನ್ನು ತಿಳಿಯದೆ ಕೆಟ್ಟೆನಲ್ಲಾ, ಎಂದು ಬಹು ದುಃಖದಿಂದ ಸ್ವಾಮಿಗಳೆಲ್ಲಿರುವರೋ ಎಂದು ಗೊತ್ತುಮಾಡಲಾಗಿ ಇಲ್ಲಿಗೆ ಸಮೀಪವಾಗಿ ಬಿಳಿಕೆ ಎಂಬ ಗ್ರಾಮದಲ್ಲಿ ಭಕ್ತರ ಪಾಲನೆಯಲ್ಲಿದ್ದ ಶ್ರೀಗಳವರ ಸನ್ನಿಧಿಗೆ ತಾವೇ ಬಂದು ತಮ್ಮಪರಾಧವನ್ನು ಮನ್ನಿಸಬೇಕೆಂದು ಬಹುತರ ಪ್ರಾರ್ಥನೆ ಮಾಡಿಕೊಂಡು, ಶ್ರೀಗಳವರಿಗೆ ಒಡಂಬಡಿಸಿ ಹಾಳಿ ಇರುವ ಮಠವನ್ನು ಹೊಸದಾಗಿ ಕಟ್ಟಿಸಿಕೊಟ್ಟು, ಗುರುಕಟಾಕ್ಷಕ್ಕೆ ಪಾತ್ರರಾದರೆಂದು ನಡೆದ ನಿಜಾಂಶವನ್ನು ಅಪ್ಪಣೆ ಕೊಡಿಸಿದ್ದಕ್ಕೆ ನೆರೆದಿದ್ದ ಸಭಿಕರೆಲ್ಲರೂ ಆಶ್ಚರ್ಯಾನಂದವನ್ನು ಹೊಂದಿ, ಪೀಠದಮಹತ್ತಿನಿಂದ ಅನೃತವು ಸತ್ಯವಾದೀತೆ? ಎಂದು ಹೇಳುತ್ತಾ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಪ್ರತ್ಯಕ್ಷದರ್ಶಿ.

ದಾವಣಗೆರೆ

ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಮೃತ್ಯುಂಜಯಸ್ವಾಮಿಗಳವರು ಇಲ್ಲಿಯ ವಿರಕ್ತಮಠದಲ್ಲಿ ಶ್ರಾವಣಮಾಸದಲ್ಲಿ ಪ್ರತಿ ಸೋಮವಾರ ಉಪನ್ಯಾಸ ಜರುಗಬೇಕೆಂದು ಆಜ್ಞಾಪಿಸಿದಂತೆ ಕಳೆದ ಜುಲೈ ತಾ॥ ೩೧ ನೇ ಸೋಮವಾರ ಜರಗಿದ ಸಭೆಯಲ್ಲಿ ನಡೆದ ವಿಷಯವೇನೆಂದರೆ— ನಿಯಮಿಸಲ್ಪಟ್ಟ ಕಾಲಕ್ಕೆ ಪುರಪ್ರಮುಖರೆಲ್ಲ ಸೇರಲು ಸಾಯಂಕಾಲ ೪ ಗಂಟೆಗೆ ಸರಿಯಾಗಿ ಸಭೆಯ ಕಾರ್ಯವು ಪ್ರಾರಂಭವಾಯಿತು. ಆರಂಭದಲ್ಲಿ ವೇ॥ ಚಂದ್ರಶೇಖರ ಶಾಸ್ತ್ರಿಗಳವರು ಸಭೆಯ ಅಗ್ರಾಸನವನ್ನು ಶ್ರೀಗಳವರೇ ವಹಿಸಬೇಕೆಂದು ಪ್ರಾರ್ಥಿಸಿಕೊಳ್ಳಲು, ಸಭೆಯವರ ಪರವಾಗಿ ಮ॥ ರಾ॥ ಹರ್ಡೀಕರ್ ಮಂಜಪ್ಪನವರು ಅನುಮೋದಿಸಿದರು. ಅನಂತರ ಕರತಾಡನದ ಗರ್ಜನೆಯಲ್ಲಿ ಶ್ರೀಗಳವರು ಅಗ್ರಾಸನವನ್ನು ವಹಿಸಿ ಉಪನ್ಯಾಸಮಾಡಲು ಅಪ್ಪಣೆಮಾಡಿದರು. ಆಗ ಮ॥ ರಾ॥ ನಾಜಿ ಹೆಡ್ಮಾಸ್ಟರಾದ ಗುರುಶಾಂತಪ್ಪನವರು ಗೃಹಶಿಕ್ಷಣವೆಂಬ ವಿಷಯದಮೇಲೆ ಉಪನ್ಯಾಸಮಾಡಿದರು. ಅದರ ಸಾರಾಂಶವೇನೆಂದರೆ— ತಾಯಿತಂದೆಗಳೇ ಗೃಹಶಿಕ್ಷಕರೆಂತಲೂ, ಅವರಲ್ಲಿಯೂ ತಾಯಿಯೇ ಆದ್ಯ ಶಿಕ್ಷಕಳೆಂತಲೂ ‘ನಾಸ್ತಿಮಾತೃಸಮೋಗುರುಃ’ ಎಂಬ ಆರ್ಯೋಕ್ತಿಯಿಂದಲೂ ಇನ್ನೂ ಅನಂತ ಶಾಸ್ತ್ರಾಧಾರಗಳಿಂದಲೂ ದೃಢೀಕರಿಸಿ, ಛತ್ರಪತಿ ಶಿವಾಜಿ ಮಹಾರಾಜರೇ ಮೊದಲಾದ ಲೋಕನಾಯಕರು ತಾಯಿಯ ಹಿತೋಪದೇಶದಿಂದಲೇ ಅಂತಹ ಉನ್ನತಸ್ಥಿತಿಗೆ ಬಂದರೆಂದು ಅನೇಕ ದೃಷ್ಟಾಂತಗಳಿಂದ ಸ್ಥಿರಗೊಳಿಸಿದರು. ಆದಪ್ರಯುಕ್ತ ತಾಯಿಯು ಸುಶಿಕ್ಷಿತಳಾಗಿದ್ದರೆ ಮಕ್ಕಳೂ ಸುಶೀಲರಾಗುತಾರೆಂಬುದರಲ್ಲಿ ಸಂದೇಹವೇ ಇಲ್ಲ. “ತಾಯಿಯಂತೆ ಮಕ್ಕಳು; ನೂಲಿನಂತೆ ಸೀರೆ” ಎಂಬ ನಾಣ್ನುಡಿಯೇ ಇದಕ್ಕೆ ದೃಷ್ಟಾಂತವಾಗಿದೆ. ಪ್ರತಿಯೊಂದು ಪದಾರ್ಥಗಳು ಕೋಮಲವಾಗಿರುವಾಗ ಯಾವ ವಿಧವಾಗಿಯಾದರೂ ಅವುಗಳನ್ನು ಮಾಡಲು ಹೇಗೆ ಸಾಧ್ಯವೋ ಅದರಂತೆಯೇ ಮಕ್ಕಳ ಬುದ್ಧಿಯು ಕೋಮಲವಾಗಿರುವಾಗ ಅವರನ್ನು ಎಂತಹ ಸ್ಥಿತಿಗಾದರೂ ತರುವುದು ಕಷ್ಟವಲ್ಲ. ನಾವು ಯಾವ ವಿಧವಾದ ಬೀಜವನ್ನು ಬಿತ್ತುತ್ತೇವೆಯೋ ಆ ವಿಧವಾದ ಅಂಕುರವಾಗುವಂತೆ ಮಕ್ಕಳ ಹೃದಯವೆಂಬ ಹಸನಾದ ಭೂಮಿಯಲ್ಲಿ ತಾಯಿತಂದೆಗಳು ಯಾವ ವಿಧವಾದ ಉಪದೇಶವೆಂಬ ಬೀಜವನ್ನು ಬಿತ್ತುತ್ತಾರೋ ಅದೇ ತರಹದ ಕ್ರಿಯಾರೂಪವಾದ ಅಂಕುರವು ಉಂಟಾಗುತ್ತವೆ. ಅಂದಮೇಲೆ ಫಲವುಮಾತ್ರ ಬೇರೆ ವಿಧವಾಗಿ ಹೇಗೆತಾನೇ ಬರುವುದು? ಆದಪ್ರಯುಕ್ತ ಮಕ್ಕಳ ಪುರೋವೃದ್ಧಿಗೆ ತಾಯಿತಂದೆಗಳೇ ಮುಖ್ಯಕಾರಣರಾಗಿರುತ್ತಾರೆ. ಇದನ್ನರಿಯದೆ ಅನೇಕ ಜನಗಳು ತಮ್ಮ ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಪ್ರೀತಿಯಿಂದ ಬೈಯುವುದನ್ನೂ, ಒದೆಯುವುದನ್ನೂ ಇನ್ನೂ ಅನೇಕ ವಿಧವಾದ ದುರಾಚಾರಗಳನ್ನು ಕಲಿಸುತ್ತಾರೆ. ಅಲ್ಲದೆ ಆ ಮಕ್ಕಳ ಸಮುಖದಲ್ಲಿಯೇ ಅನೇಕ ಅವಾಚ್ಯ ಶಬ್ದಗಳಿಂದ ಮಾತನಾಡುತ್ತಿರುತ್ತಾರೆ. ಮತ್ತೂ ಬೀಡಿ, ನಶ್ಯಾದಿ ದುಶ್ಚಟಗಳನ್ನು ಕೈಕೊಂಡಿರುತ್ತಾರೆ. ಇದರಿಂದ ಈ ತಾಯಿತಂದೆಗಳ ಕ್ರಿಯೆಗಳೇ ಮಕ್ಕಳಲ್ಲಿ ಸ್ಥಿರವಾಗುತ್ತವೆ. ಇದು ತುಂಬಾ ಹಾನಿಕರವಾದುದು. ಮಕ್ಕಳಿಗೆ ಪ್ರಾತಃಕಾಲದಲ್ಲಿಯೇ ತಂಗಳ ಆಹಾರವನ್ನು ಹಾಕಿ ಪಾಠಶಾಲೆಗೆ ಕಳುಹಿಸುವುದರಿಂದ ಆರೋಗ್ಯಕ್ಕೆ ಭಂಗಬರುವುದಲ್ಲದೆ ಸದಾಚಾರಕ್ಕೆ ತುಂಬಾ ಹಾನಿಯುಂಟಾಗುತ್ತದೆ. ಸ್ನಾನಪೂಜೆ ಮಾಡದೆ ಊಟಮಾಡಬಾರದೆಂಬ ಧರ್ಮದ ಕಟ್ಟಳೆಯು ಈ ತರಹದ ಪರಿಪಾಟದಿಂದ ಸಡಿಲಾಗುತ್ತದೆ. ಆದಪ್ರಯುಕ್ತ ಪ್ರತಿಯೊಬ್ಬರೂ ತಮ್ಮ ಮಕ್ಕಳನ್ನು ತಮ್ಮ ಸಂಗಡಲೇ ಸ್ನಾನಮಾಡಿಸಿ, ಊಟಕ್ಕೆ ಕುಳ್ಳಿರಿಸಿಕೊಳ್ಳಬೇಕು. ಯಾವ ತಂದೆತಾಯಿಗಳು ಮಕ್ಕಳಿಗೆ ಈ ವಿಧವಾದ ಗೃಹಶಿಕ್ಷಣವನ್ನು ಕೊಡುವುದಿಲ್ಲವೋ ಅವರೇ ಆ ಮಕ್ಕಳಿಗೆ ವೈರಿಗಳೆಂದು ಹೇಳಲು ಯಾವ ಅಡ್ಡಂತರವೂ ಇಲ್ಲ. ಕೇವಲ ಶಿಕ್ಷಣವನ್ನು ಕೊಟ್ಟರೆ ತಾಯಿತಂದೆಗಳ ಕರ್ತವ್ಯವು ಪೂರ್ತಿಸಿದಂತಾಗಲಿಲ್ಲ. ಅವರ ಉಡುಪಿನ ಕಡೆಗೂ, ನಿರ್ಮಲತ್ವದ ಕಡೆಗೂ, ಆರೋಗ್ಯದ ಕಡೆಗೂ ತುಂಬಾ ಗಮನವಿಡಬೇಕು. ಇಲ್ಲದಿದ್ದರೆ ಅವರಿಂದ [illegible] [illegible] ಮಕ್ಕಳು ಸ್ವಬುದ್ಧಿಯುಳ್ಳವರಾದರೆ ಅವರಮೇಲೆ ವಿಶೇಷ ಲಕ್ಷ್ಯವಿಡುವುದತ್ಯಾವಶ್ಯಕವು. ಇಲ್ಲದಿದ್ದರೆ ಅನೇಕ ಕಾಲದಿಂದ ಕೊಟ್ಟ ಶಿಕ್ಷಣವೆಲ್ಲ ನಿಮಿಷಾರ್ಧದಲ್ಲಿಯೇ ನಾಶವಾಗುವುದು. ಮಕ್ಕಳ ಬುದ್ಧಿಯನ್ನು ನಾಶಮಾಡುವಂತ ಭಯಂಕರವಾದ ವೈರಿಯಾವುದೆಂದರೆ— ಸಹವಾಸವು. ಮಕ್ಕಳು ಯಾವಜನಗಳ ಸಹವಾಸದಲ್ಲಿರುತಾರೆಂಬುದನ್ನು ತುಂಬಾ ಗಮನದಲ್ಲಿಡತಕ್ಕದು. ಸಹವಾಸದ ಪ್ರಭಾವದಿಂದಲೇ, ಈ ಜಗತ್ತಿನಲ್ಲಿ ಸಕಲ ಗುಣಗಳೂ ಹಬ್ಬಿಗೊಂಡಿರುತ್ತವೆ. ಆದುದರಿಂದಲೇ “ಸಂಸರ್ಗಜಾ ದೋಷಗುಣಾ ಭವಂತಿ.” ಎಂದು ಆರ್ಯರು ಹೇಳಿರುತ್ತಾರೆ. ಆದಪ್ರಯುಕ್ತ ಪ್ರತಿಯೊಬ್ಬರೂ ತಮ್ಮ ಮಕ್ಕಳು ಸತ್ಸಂಗದಲ್ಲಿರುವಂತೆ ಪ್ರಯತ್ನಿಸಬೇಕಾದುದು ಅತ್ಯಾವಶ್ಯಕವು ಎಂಬುದಾಗಿ ೧॥ ಗಂಟೆಯ ವರೆಗೂ ಅನೇಕ ದೃಷ್ಟಾಂತಗಳಿಂದ ಯುಕ್ತಿಯುಕ್ತವಾಗಿ ಜನಗಳ ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸುವಂತೆ ಉಪದೇಶ ಮಾಡಿದರು.

ಅನಂತರ ವೇ॥ ಚಂದ್ರಶೇಖರಶಾಸ್ತ್ರಿಗಳವರು ಇದೇ ವಿಷಯವನ್ನು ಅನೇಕ ಆಧಾರಗಳಿಂದ ಪುಷ್ಟೀಕರಿಸಿದರು. ಆಮೇಲೆ ಅಧ್ಯಕ್ಷರು ಉಪನ್ಯಾಸಕರು ಹೇಳಿದ ವಿಷಯಗಳನ್ನೆಲ್ಲ ಚೆನ್ನಾಗಿ ಗಮನದಲ್ಲಿಟ್ಟುಕೊಂಡು ಆಚರಣೆಯಲ್ಲಿ ತರಬೇಕೆಂದು ಅಪ್ಪಣೆ ಮಾಡಿದರು. ಕೊನೆಗೆ ಬರುವ ಸೋಮವಾರ ಮ॥ರಾ॥ ಮಾಗಾನಹಳ್ಳಿ ಸಂಗಪ್ಪನವರು ಆಚಾರ ಎಂಬ ವಿಷಯಕ್ಕೆ ಉಪನ್ಯಾಸಮಾಡತಕ್ಕವರಾಗಿರುತ್ತಾರೆಂತಲೂ, ಆ ಕಾಲಕ್ಕೆ ತಾವುಗಳೆಲ್ಲ ದಯಮಾಡಿಸಬೇಕೆಂತಲೂ, ಮ॥ರಾ॥ ಹರ್ಡೀಕರ್ ಮಂಜಪ್ಪನವರು ಸಭಿಕರಿಗೆ ಅರಿಕೆಮಾಡಿಕೊಂಡನಂತರ ಸಭಾವಿಸರ್ಜನೆಯಾಯಿತು. ಸಭಿಕರೆಲ್ಲರು ಪ್ರತಿದಿನ ಸಾಯಂಕಾಲ ೬ ಗಂಟೆಗೆ ಶ್ರೀ ವಿರಕ್ತ ಮಠದಲ್ಲಿಯೇ ಪ್ರಾರಂಭವಾಗತಕ್ಕ ಭಜನೆಯನ್ನು ಪೂರೈಸಿಕೊಂಡು ವೇ॥ ಚಂದ್ರಶೇಖರ ಶಾಸ್ತ್ರಿಗಳವರಿಂದ ಹೇಳಲ್ಪಡುವ ವೀರಶೈವಾಮೃತ ಪುರಾಣಶ್ರವಣಕ್ಕಾಗಿ ತೆರಳಿದರು.

ಪ್ರತ್ಯಕ್ಷದರ್ಶಿ.

ನೋಟೀಸು.

ಮೈಸೂರು ಕೃಷ್ಣರಾಜಮೊಹಲ್ಲಾ ಹಳೇಅಗ್ರಹಾರದಲ್ಲಿ ಇರುವ ನಂಜನಗೂಡು ನಂಜುಂಡೈಯ್ಯನವರ ಮಗಳು ನೀಲಮ್ಮನೆಂಬುವಳು ಈ ಕೆಳಗೆ ರುಜುಮಾಡುವ ನನಗೆ ಸೊಸೆಯಾಗಬೇಕು ಈಕೆಯು ಜೀವನಾಂಶಕ್ಕಾಗಿ ಮಳವಳ್ಳಿ ತಾ॥ ಶಿವನಸಮುದ್ರದ ಜಹಗೀರಿ ಬೆಳಕವಾಡಿಗ್ರಾಮಕ್ಕೆ ಸೇರಿದ ಸರ್ವೆ ನಂಬರು ೩೩೩ ನೇ ತರೀ ಜಮೀನನ್ನು ಕೊಟ್ಟಿರುತ್ತೇನೆ. ಈ ಜಮೀನಿನಲ್ಲಿ ಮೇಲ್ಕಂಡ ನೀಲಮ್ಮನಿಗೆ ಜೀವಮಾನವಿರುವವರಿಗೂ ಫಸಲು ಅನುಭವಿಸತಕ್ಕ ಹಕ್ಕು ಇರುತ್ತದೆಯೇ ಹೊರತು ಪರಾಧೀನವಗೈರೆ ಮಾಡಲು ಹಕ್ಕು ಇರುವದಿಲ್ಲ ಈ ಜಮೀನು ಅಲ್ಲದೆ ಈಕೆಯ ವಶಕ್ಕೆ ೧೦೦೦ ರೂಪಾಯಿ ಬಾಳತಕ್ಕ ನಗಗಳನ್ನು ಮತ್ತು ನಗದು ಮೊಬಲಗನ್ನು ಸಹಾ ಕೊಟ್ಟಿರುತ್ತೇನೆ. ಈಕೆಯು ತನ್ನವರಾದ ಇತರರ ದುರ್ಭೋದನೆಗೆ ಒಳಪಟ್ಟು ನನಗೆ ಮೋಸಮಾಡಬೇಕೆಂಬ ವುದ್ದೇಶದಿಂದ ಸದರಿ ಚರ ಸ್ಥಿರ ಆಸ್ತಿಗಳನ್ನು ಕಲಲ್ಮಾಡುತ್ತಾಳೆಂದು ನನಗೆ ವರ್ತಮಾನ ಬಂದಿದೆ. ಹಾಗೆ ಈಕೆಯಿಂದ ಯಾರಾದರೂ ಮೇಲ್ಕಂಡ ಜಮೀನನ್ನು ಯಾವ ವಿಧದಿಂದಲಾದರೂ ಹೊಂದಿದಲ್ಲಿ ಅಂಥಾವರಾಧಿನಗಳಿಗೆ ನಾನು ಜವಾಬದಾರನಾಗುವದಿಲ್ಲವೆಂದು ಈಮೂಲಕ ತಿಳಿಸಿ ಇರುತ್ತೇನೆ.

ಮೈಸೂರು
ತಾ॥ ೭ ನೇ ಅಗಸ್ಟು
೧೯೧೧ನೇ ಇಸವಿ. } ರುಜು ವಿಟಾಯಿಚೆಂದ್ರಪ್ಪ.

ಎಷ್ಟು ರೊಕ್ಕ ಖರ್ಚುಮಾಡಿದರೂ ಇಂಥಾ ಸಮಯವು ಸಿಕ್ಕುವುದುಂಟೆ?

ಮಕ್ಕಳಫಲ ಆಗುವುದಕ್ಕೆ ಅನುಭವಖಾತ್ರಿಯಾದ ಮಹಾ ಔಷಧ. ಪ್ರಪಂಚದಲ್ಲಿ ಅನೇಕ ಸ್ತ್ರೀಯರಿಗೆ ರೋಗದಿಂದ ಗರ್ಭಕೋಶದಲ್ಲಿ ಕ್ರಿಮಿಗಳು ಹುಟ್ಟಿ ವೃದ್ಧಿಯಾಗಿ ಗರ್ಭವನ್ನು ಧರಿಸುವುದಕ್ಕೆ ಪ್ರತಿಬಂಧಕಮಾಡಿ, ಮಕ್ಕಳಾಗದೆ ತುಂಬಾ ವ್ಯಥೆಪಡುತ್ತಿರುವರು ಇದಕ್ಕೆ ನಾವು ಸ್ತ್ರೀಗರ್ಭಶಾಸ್ತ್ರ ಮುಂತಾದ ಶೋಧನೆಯಿಂದ ಅಪೂರ್ವ ವನಸ್ಪತಿಗಳನ್ನು ತಂದು ಅನುಭವದಿಂದ ಖಾತ್ರಿಯಾದ ಔಷಧವನ್ನು ತಯಾರುಮಾಡಿರುತ್ತೇವೆ. ಇದರ ಸೇವನೆಯಿಂದ ಗರ್ಭಕೋಶದಲ್ಲಿರುವ ಕ್ರಿಮಿಗಳು ನಾಶವಾಗಿ ಸ್ತ್ರೀಯರಿಗೆ ಉಂಟಾಗುವ ರೋಗ ನಿವಾರಣೆಯಾಗಿ ಗರ್ಭವನ್ನು ಧರಿಸಿ ವೃದ್ಧಿಯಾಗಿ ಖಂಡಿತ ಮಕ್ಕಳಾಗುತ್ತವೆ. ಇದು ಎಷ್ಟೋ ಅನುಭವಕ್ಕೆ ಬಂದಿರುವುದು. ತಕ್ಷಣ ತರಿಸಿ ಪರೀಕ್ಷಿಸಬೇಕೆಂದು ನಮ್ಮ ಅನೇಕ ಸವಿನಯ ಪ್ರಾರ್ಥನೆಗಳು. ಡಬ್ಬಿ ಸಂಗಡ ಅನುಪಾನಪತ್ರಿಕೆಯನ್ನು ಕಳಿಸುತ್ತೇವೆ. ಸದರಿ ಔಷಧ ಕ್ರಯ ಡಬ್ಬಿ ೧ ಕ್ಕೆ ಕ್ರಯ ರೂ. ೩—೦—೦.

ವಿಳಾಸ— ಡಾ. ಪುಟ್ಟಯ್ಯಾ ಪ್ರಾಕ್ಟೀಷನರ
ಹರಪನಹಳ್ಳಿ, ಬಳ್ಳಾರಿ ಜಿಲ್ಲಾ.

18 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೀಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು. ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲಾಡುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧—೨—೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೨—೦. ಪೋಸ್ಟ್ ಖರ್ಚು ೦—೪—೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಪೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ರಕರ, ಮರ್ಚಂಟ್.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಪಾಳ್ಯದ ವೆಂಕಟಾಚಲ ಪಂಡಿತರ ಔಷಧಗಳು.

18

ಲೋಕಾಮಯಾಪಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೨. ಭಾವನಾ ಜೀರಕ ರಸಾಯನ.—ಪಿತ್ತವನ್ನೂ, ಪಿತ್ತದಿಂದುಂಟಾದ ಮನೋವಿಕಾರವನ್ನೂ, ವಾಂತಿ, ತಲೆ ತಿರಗಲು, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದುರುಬ್ಬಸ, ಮೈಕೈಭಾರ, ಮೈಯೆಲ್ಲಾ ಚುಚ್ಚಿದಂತಾಗುವದು, ನಿತ್ರಾಣ, ಬಾಯಿ ಕಹಿ ಅಥವಾ ಸಿಹಿ, ಉಪ್ಪು ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧—೪—೦.

೩. ದೃಢದಂತ ಚೂರ್ಣ.—ಉಜ್ಜುತ್ತಾ ಬಂದರೆ ಪೊಸರುಬಾವು, ಹಲ್ಲುಗಳೆಲ್ಲಾಡುವದು, ಹಲ್ಲುಕೊರತ್ತು, ಹಲ್ಲುಗಳ ಪಾಚಿ, ಇಗುರೂದಿ ಜೊಲ್ಲುಸುರಿಸುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿನಾತ, ಕ್ರಿಮಿದಂತ ಶೂಲೆ, ತಣ್ಣೀರು ಗಾಳಿ ಇವಕ್ಕೆ ಜುಮ್ಮೆನ್ನುವುದು—ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆಯು ಬೇಡ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ರಿಂದ ಮೊದಲಾಗಿ ವಲ್ಲೆ ಸವರುವ ಡಬ್ಬಿ ೧ ಕ್ಕೆ ಅ. ೯. ವಿವರದಿಂದ ಟಪಾಲ್ ಖರ್ಚು ೩ ಆಣೆ ಮಾತ್ರ.

ವಿಶ್ವ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮ ವೈದ್ಯಶಾಲಾ, ಮೈಸೂರು

16 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ !! ಬಿಡಬೇಡಿರಿ !!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ ನೇದು ರೂ. 3-8-0 ಮಾತ್ರ!! ೩ ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೋಪ್ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ROSKOPF SYSTEM
PATENT
SWISS MADE

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕರಿಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ತೋರುವ ಸಹಾ ಇರುತ್ತದೆ. ಇತರ ಕಂಪನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. [illegible]-8-0 ರ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವೆ.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ರೈಲ್ವೆರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

MOTORREGULATOR
LEVER
SWISS MADE

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ತೋರುವ ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.

ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು, ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ನೋರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಛಾರ್ಜು ರೂ. 0-4-0.

ಬಹುಮಾನ ! ಬಹುಮಾನ !! ಬಹುಮಾನ !!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜ಼ನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜ಼ನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

28

ಉತ್ತಮ ಗ್ರಂಥಗಳು.

ಶಿವಪಂಚಿಸ್ತವ:— ಬೆಲೆ ವಿ. ಪಿ. ಯಿಂದ ೧-೪-೦ ಸಂಸ್ಕೃತವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ. ಸ್ವಲ್ಪಪ್ರತಿಗಳುಮಾತ್ರ ಉಳಿದಿರುತ್ತವೆ. ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆಕೊಡಲ್ಪಡುತ್ತದೆ.

ವೀರಶೈವ ಷಟ್ಸ್ಥಲಸಿದ್ಧಾಂತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರ ವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕಷಟ್ಪದಿರೂಪವಾಗಿದೆ.

ವೇದಸಂಜೀವಿನಿ.—ಬೆಲೆ ವಿ. ಪಿ. ಯಿಂದ ೧೦ ಆಣೆ. ಕನ್ನಡವಾಕ್ಯಗ್ರಂಥವು. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ.—ಬೆಲೆ ವಿ. ಪಿ. ಯಿಂದ ೪ ಆಣೆ. ನಿರಂಜನಜಂಗಮಪರವಾದ ಕನ್ನಡಟೀಕಾಸಹಿತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಂಡಿತ ಎಸ್. ಗರಳಪುರಿ ಇವ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ

51 ಮೈಸೂರು.

ಗೋರೋಚನ ಮಾತ್ರೆ.— ೧-೨ ಮಾತ್ರೆಗಳನ್ನು ದ್ವಕೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತ ೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವ ಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯು ಟಾಗುವುದು. ೧೦ ಮಾತ್ರೆ ಸೀಸೆ ೦-೪-೦, ೨೫ ಮಾ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂ ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧-೦-೦

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊ ದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದ ತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚ ಕರ್ಪೂರಮಾತ್ರೆ.— ಇದರಿಂದ ಗರ್ಭವೆಟ್ಟಿಯು ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತ ಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹಳ ಖಾ ರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೦ ದಿನಗ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧-೨ ಮಾತ್ರೆಗಳನ್ನು ಸೇವಿಸು ಪುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತ ೨೫ ಮಾತ್ರೆ ಸೀಸೆ ೦-೩-

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆ ದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦-೮-

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋ ಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨-೦-
ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-
ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-
ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೦-
ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೨-

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬ ಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸು ಲಭಕ್ರಯಕ್ಕೆ ದೊರಕುವವು. ಟಪಾಲು ಖರ್ಚನ್ನು ಅಲ ಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೧ನೇ ಇಸವಿ ಅಗಸ್ಟ್ ತಾ॥ ೧೪ ರಿಂದ ೧೯೧೧ ನೇ ಅ ಗಸ್ಟ್ ತಾ॥ ೨೦ ರವರೆಗೆ ಸಲ್ಲುವ ಶಾಲಿವಾಹನ ಶಕೆ ೧೮ ನೇ ವಿರೋಧಿಕೃತು ಸಂವತ್ಸರದ ಶ್ರಾವಣ ಬ॥ ಚ ಯಿಂದ ಶ್ರಾವಣ ಬ॥ ಏಕಾದಶಿವರಿಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ಕ್ಯಾ ತೇದಿ
14	ಸೋ	ಚ	4-58	ವೃ	11-14	30
15	¹ಮಂಗ	ಪಂ	2-17	ಪುಪರಿ	57-0	31
16	ಬುಧ	ಸ	54-33	ಕ್ಷಿ	8-20	32
17	ಗುರು	ಅ	40-12	ಭ	5-36	1
18	ಶುಕ್ರ	ನಾ	43-25	ಕೃ	2-10	2
19	²ಶನಿ	ದ	38-31	ಮೃ	54-22	3
20	³ಭಾನು	ಏ	31-59	ಪ್ರ	50-0	4

(1) ಮಂಗಳಗೌರಿವ್ರತಂ, (2) ಶ್ರಾವಣಶನಿವಾರ (3) ಸರ್ವತ್ರೈಕಾದಶಿ.

ಮೈಸೂರ್ : ಶ್ರೀ. ವಿರೂಪಾಕ್ಷಯ್ಯನವರಿಂದ ಶ್ರೀ
ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124

ಮೈಸೂರ್ ✱ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತಿ ಕೇಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಅಗಸ್ಟ ತಾರೀಖು ೨೧ ನೇ ಸೋಮವಾರ. [ಸಂಚಿಕೆ ೩೪

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂಡೆನ್ಸು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೩-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

"ಅಗತ್ಯ ವಿಚಾರ."

12

ಬೆಲೆ ೪॥ ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗತ್ಯವಿಚಾರ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೦ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ :—ವೀರಭದ್ರಪ್ಪಾ ಅರುಬೆರಳಿನ,
ಪೋಸ್ಟ್—ಬಾಗೇವಾಡಿ. ಡಿ॥ ಬೆಳಗಾಂವ.

ವಾಳ್ಯದ ವಂಕಟಾಚಲ ಪಂಡಿತರ ಸಿದ್ಧೌಷಧಗಳು.

19

ಲೋಕಾಮೃತಪರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಛಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ. ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ಕ. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕ ಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗಿನ್ನಿ ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಶ್ಯಾನಿಟರಿ
ಇನ್ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ವಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

1

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ—ಬೆಲೆ ವಿ. ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣಿಯಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ:— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ ಪಂಚಾಚಾರವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಹಿತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಸಚಿತ್ರ ಶುಕಸಪ್ತತಿಕಥೆ.

6

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಸ್ಥೈರ್ಯ ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ಭೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವುದು. (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನೆಕ್ಕೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಇದು ಅಲ್ಲದೆ ಇನ್ನೂ ಇತರವಿಧವಾದ ಕಥೆಗಳು ಕಾವ್ಯಗಳು ಪುರಾಣಗಳು ಮುಂತಾದ ಪುಸ್ತಕಗಳು ಸಹ ನಮ್ಮಲ್ಲಿ ದೊರೆಯುತ್ತೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ನಮ್ಮವಿಳಾಸ:— ಎಂ. ಆರ್., ಕೃಷ್ಣಸ್ವಾಮಿಶೆಟ್ಟಿ ಕಂಪೆನಿ ೧೫ ಗೋವಿಂದಪ್ಪನಾಯಕ್ ಬೀದಿ ಮದ್ರಾಸು.

ಉತ್ತಮ ಗ್ರಂಥಗಳು.

2

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ ೬ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಶಾಸ್ತ್ರೀ,
ಗ್ರಂಥಪ್ರಕಾಶಕರ ಸಂಘ, ಮೈಸೂರು.

ಸೌಗಂಧಿಕಾಪರಿಣಯ.

:o:

(ಕಳೆದವಾರದಶೇಷ.)

ಯಾವ ಅಶ್ವದ ಮುಸುಡಿಯಲ್ಲಿ ಚಕ್ರಚಿಹ್ನೆಯಾದರೂ, ಪದ್ಮಚಿಹ್ನೆಯಾದರೂ ಕಾಣಲ್ಪಡುವುದೋ ಆ ಅಶ್ವವು ಮುಪ್ಪತ್ತೊಂದನೇ ವರುಷದಲ್ಲಿ ಮೃತಿಯನ್ನೈದುವುದು. ಯಾವ ಅಶ್ವದ ಮುಸುಡಿಯಲ್ಲಿ ಅರ್ಧಚಂದ್ರನಿಗೆ ಸಮಾನವಾದ ಚಿಹ್ನೆಯಾಗಲಿ, ಸೂರ್ಯನಿಗೆಸಮಾನವಾದ ಚಿಹ್ನೆಯಾಗಲಿ ಇರುವುದೋ ಆ ಅಶ್ವವು ಮುಪ್ಪತ್ತೆರಡನೇ ವರುಷದಲ್ಲಿ ಮೃತಿಯನ್ನೈದುವುದು. ಇನ್ನು ಅಶ್ವಗಳ ಚೇಷ್ಟೆಗಳಿಂದ ಸ್ವಾಮಿಗೆ ಉಂಟಾಗುವ ಶುಭಾಶುಭಫಲಂಗಳಂ ಪೇಳ್ವೆನು.- ಅಶ್ವವು ರಾತ್ರಿಯಲ್ಲಿ ಮಲಗಿದ್ದು ಎದ್ದು ಊರ್ಧ್ವಮುಖವಾಗಿ ನೋಡಿ, ಧ್ವನಿಯಂ ಗೈದು ಗೊರಸುಗಳಿಂದ ಭೂಮಿಯಂ ಬಗೆದರೆ, ಆ ಅಶ್ವವು ಸ್ವಾಮಿಗೆ ಜಯವನ್ನುಂಟುಮಾಡುವುದು. ಯಾವ ಕುದುರೆಯು ಮಲಗಿದ್ದು ಎದ್ದು ಒಂದಾವೃತ್ತಿ ಮೂತ್ರವನ್ನಾಗಲಿ, ಪುರೀಷವನ್ನಾಗಲಿ, ಕಣ್ಣುಗಳಲ್ಲಿ ಬಾಷ್ಪಜಲವನ್ನಾಗಲಿ ಬಿಡುವುದೋ, ಆ ಅಶ್ವವು ಸ್ವಾಮಿಗೆ ಐಶ್ವರ್ಯವನ್ನುಂಟುಮಾಡುವುದು. ಯಾವ ಕುದುರೆಯು ರಾತ್ರಿಯ ಕೊನೆಯಲ್ಲಿ ಅಕಾರಣವಾಗಿ ಧ್ವನಿಯಂ ಮಾಡುವುದೋ, ಆ ಕುದುರೆಯು ಪರರಾಯರ ದಂಡು ಬರುವುದೆಂದು ಸೂಚಿಸುವುದು. ಕುದುರೆಯ ಪುಚ್ಛವು ರೋಮಾಂಚಯುಕ್ತವಾಗಿದ್ದಲ್ಲಿ, ಆ ಅಶ್ವದ ಒಡೆಯನಿಗೆ ಗ್ರಾಮಾಂತರದ ಪ್ರಯಾಣವುಂಟಾಗುವುದು. ಯಾವ ಕುದುರೆಯ ಪುಚ್ಛದಲ್ಲಿ ರಾತ್ರಿಯ ಕೊನೆಯೊಳ್ ಅಗ್ನಿಕಣಗಳಿರುವಂತೆ ಕಾಣುವುದೋ, ಆ ಕುದುರೆಯು ಪ್ರಯಾಣವಂ ತೆರಳುವ ಒಡೆಯನಿಗೆ ನಾಶವಂ ಕೊಡುವುದು. ಕುದುರೆಯು ಎಡಪಾದದಿಂದ ಭೂಮಿಯಂ ಬಗೆಯುತ, ದೀನವಾದ ಮನಸ್ಸುಳ್ಳುದಾಗಿ ಧ್ವನಿಮಾಡುವುದೋ ಆ ಕುದುರೆಯು ಒಡೆಯನಿಗೆ ಪರಾಜಯವನ್ನುಂಟುಮಾಡುವುದು. ಯಾವ ಕುದುರೆಯು ಮೂತ್ರಪುರೀಷಗಳನ್ನು ಎಂದಿನಂತೆ ಬಿಡದೆ ತಡೆದುಬಿಡುತ್ತ ದೀನವಾದ ಮನಸುಳ್ಳುದಾಗಿ ಕಣ್ಣುಗಳಲ್ಲಿ ಜಲಧಾರೆಯಂ ಬಿಡುವುದೋ, ಅದು ಅರಸಿಗೆ ಅಪಜಯವಂ ಕೊಡುವುದು. ಯಾವ ಕುದುರೆಯ ಧ್ವನಿಯು ದುಃಖಪಡುವ ಜನರ ಧ್ವನಿಯಂತೆ ದೀರ್ಘವಾಗಿ ದೀನಭಾವದಿಂದೊಡಗೂಡಿರುವುದೋ, ಆ ಕುದುರೆಯು ಒಡೆಯನಿಗೆ ಅಶುಭವಂ ಮಾಡುವುದು. ಯಾವ ಕುದುರೆಯು ಉಚಿತವಾದ ಗ್ರಾಸವು ಇದಿರಿಗೆ ಇದ್ದಾಗ್ಯೂ ಆ ಗ್ರಾಸದಲ್ಲಿ ಆಸಕ್ತಿಯಿಲ್ಲದೆ ಮುಖದಿಂದ ಧೂಳಿಗಳನ್ನಾದರೂ ಅಯೋಗ್ಯವಾದ ಬಾಡಿದ ತೃಣಕಾಷ್ಠಗಳನ್ನಾದರೂ ಗ್ರಹಿಸುತ ಧ್ವನಿಯಂ ಗೈವುದೊ ಆ ಕುದುರೆಯು ತನ್ನ ಒಡೆಯನಿಗೆ ಭಯವನ್ನುಂಟುಮಾಡುವುದು. ಎಲೈ ಸುಗಂಧ ಮಹಾರಾಯನೆ! ಇನ್ನುಮೇಲೆ ಈ ಕುದುರೆಗಳು ಯಾವ ದೇಶದಲ್ಲಿ ಪುಟ್ಟಿ ಯಾವ ಲಕ್ಷಣಂಗಳಂ ಪಡೆದಿರುವುವೋ ಆ ಯಾದೇಶದ ಭೇದಂಗಳಂ, ಆಯಾ ದೇಶಂಗಳಲ್ಲಿ ಪುಟ್ಟಿದ ಕುದುರೆಗಳ ಲಕ್ಷಣಂಗಳಂ ಕೂಡ ಪೇಳುವೆನು. ಸಾವಧಾನದಿಂ ಕೇಳುವವನಾಗು. ಕಾಂಬೋಜ, ಬಾಹ್ಲಿಕ, ವನಾಯುಜ, ಅರಟ್ಟ, ಗಾಂಧಾರ, ಚಾಂಪೇಯ, ಸಿಂಧು, ತೈತಿಲ, ಪಾಟಲೀಪುತ್ರ, ಪೇಚಕ, ಉಪಪೇಚಕ, ಕುಲಜ, ಉಪಕುಲಜ, ತ್ರಿಗರ್ತ, ಅರ್ಜುನ, ಸಾವಿತ್ರ, ಯೌಧೇಯ, ಯಾವಂತಿ, ಯವನ, ಹ್ರಸ್ವಯವನ, ಭಾವ, ವಿಷಮ, ಕಂದರ, ಪಶ್ಚ್ಮೃತ, ಅವಂತಿ, ಔರಸ, ಕಾಶ್ಮೀರ, ಸಕಾನಕ, ಪರ್ವತ, ದಕ್ಷಿಣಸಮುದ್ರ, ಉತ್ತರಸಮುದ್ರ, ನಾದೇಯ, ದ್ವೀಪ್ಯ, ಕೇಕಯ, ಅಪರಾಂತ, ಪರಂತಕ, ಸೌರ, ಗರದ, ಸೈಂಧಿಕ, ಕ್ಷುದ್ರಕ, ಆವರ್ತಕ, ಕಳಿಂಗ, ಮೌಕುಲ, ಐರಾವತ, ವನವಾಸಿ, ತ್ರಿಲಿಂಗ, ಕ್ರೌಂಧನ, ಸುರಾಷ್ಟ್ರ, ಉಪಾವೃತ್ತ, ಸಾಲ್ವ, ಕುರು, ಪಾಂಚಾಲ, ವಾಭಲ, ಆಭೀರ ಈ ಪೆಸರುಗಳುಳ್ಳ ದೇಶಗಳಲ್ಲಿ ಜನಿಸಿದ ಅಶ್ವಗಳ ಕುಲಗಳು ಐವತ್ತುನಾಲ್ಕು ಪ್ರಕಾರಗಳಾಗಿರುವುವು. ಇವುಗಳಲ್ಲಿ ಕಾಂಭೋಜ ದೇಶದ ಕುದುರೆಗಳು ಮಹಾಬಲವು, ವೇಗವು, ವಿಶಾಲವಾದ ಹಣೆಯು, ಜಘನವು, ಕತ್ತು, ಎದೆಯು, ಉದ್ದವಾದ ಕಂಠವು, ಮುಖವು, ಕಿರಿದಾದ ಅಂಡಗಳು, ಮೇಢ್ರವು, ಆಸನವು, ಚೆನ್ನಾಗಿ ದೀರ್ಘಗಳಾದ ಕಾಲುಗಳು, ಛಿದ್ರಯಾದ ಗೊರಸುಗಳು, ವೈಡೂರ್ಯದಂತಿರುವ ನೇತ್ರಂಗಳು, ಶ್ವೇತವರ್ಣವು, ಕೆಂಪುವರ್ಣವು, ಕಪ್ಪುವರ್ಣವಿಲ್ಲದೇ ಇರೋಣವು, ಮಿಶ್ರವರ್ಣವಿಲ್ಲದೇ ಇರೋಣವು, ಹ್ರಸ್ವವಾದ ಬಾಲವು, ಮೃದುಗಳಾದ ರೋಮಂಗಳು, ಕಿರಿದಾದ ಬೆನ್ನು ಇನ್ನೂ ಮನೋಹರವಾದ ಸರ್ವಾಂಗಗಳುಳ್ಳವಾಗಿ, ಸರ್ವಲಕ್ಷಣಗಳಿಂದೊಡಗೂಡಿ, ಸ್ವಾಮಿಯ ಮನೋನುಗುಣ್ಯವಾಗಿ ಸ್ವಾಧೀನದಲ್ಲಿರುವವಾಗಿ ಮತ್ತೂ ಪರ್ಣಳವಾದ ಮೊಣಕಾಲು, ತೊಡೆಗಳುಳ್ಳವಾಗಿ, ಕೃಶವಾದ ಬಾಲವು, ಮೊಳೆಗಳಂತೆ ನಿಂತಿರುವ ಕಿವಿಗಳುಳ್ಳವಾಗಿ, ದಪ್ಪವಾದ ಹೊಟ್ಟೆಯು, ಒಳ್ಳೇ ಗೋಣವು ಉಳ್ಳವಾಗಿ ಮತ್ತೊಂದುಕುದುರೆಯನ್ನಾಗಲಿ, ಅಥವಾ ಹೆಣ್ಣುಕುದುರೆಯನ್ನಾಗಲಿ ಕಂಡು ಹುಂಕಾರವಂ ಮಾಡುತ, ಸುಖದಿಂ ಸಂಚಾರವಂ ಮಾಡುತ, ಸರ್ವದಾ ಲಕ್ಷಳವಿಗೆ ಹಿತವನ್ನೇ ಅಪೇಕ್ಷಿಸುವ ಈ ಕುದುರೆಗಳು ಕಾಂಭೋಜದೇಶದಲ್ಲಿ ಹುಟ್ಟಿದ್ದೆಂದು ಪ್ರಸಿದ್ಧಂಗಳಾಗಿರುವುವು. ಬಾಹ್ಲೀಕ ದೇಶದಲ್ಲಿ ಪುಟ್ಟಿದ ಕುದುರೆಗಳು ಕಾಂಭೋಜದೇಶದ ಕುದುರೆಗಳಿಗೆ ಸಮಾನವಾದ ಅಂಗಪ್ರತ್ಯಂಗಸೌಷ್ಠವವು, ವರ್ಣವು, ಆಕೃತಿಯು ಉಳ್ಳವಾಗಿ, ದೀರ್ಘಗಳಾದ ಪಾದಗಳು, ವಿಸ್ತಾರವಾದ ದೀರ್ಘವಾದ ಬೆನ್ನು, ಶೌರ್ಯವು, ಸ್ವಭಾವವು, ವಿಶಾಲವಾದ ನೇತ್ರಗಳು ದೀರ್ಘವಾದ ಕಂಠವು, ಮುಖವು, ಜೇನುತುಪ್ಪದಂತಿರುವ ವರ್ಣವು, ದೈನ್ಯವಿಲ್ಲದೆ ಸರ್ವದಾ ಕೋಪವುಳ್ಳ ಸ್ವಭಾವವು, ದಂತಗಳಂ ಕಡಿಯೋಣವು ಉಳ್ಳವಾಗಿ, ಕಾಂಭೋಜದೇಶದ ಕುದುರೆಗಳಿಗೆ ಸ್ವಲ್ಪ ಹ್ರಸ್ವವಾದ ಸೌಷ್ಠವವು, ನೀಚವು ಉಳ್ಳವಾಗಿ, ಮಹಾಶಂಕಿತಪಡಲ್ಲಾದರೂ, ಕೆಳಗೆ ಬಿದ್ದ ಒಡೆಯನಂ ಬಿಟ್ಟು ಹೋಗದೆ ಇರುವ ಈ ಕುದುರೆಗಳು ಬಾಹ್ಲೀಕದೇಶದಲ್ಲಿ ಪುಟ್ಟಿದ ಕುದುರೆಗಳೆಂದು ಪ್ರಸಿದ್ಧಗಳಾಗಿರುವುವು. ಶರೀರಲಾಘವವು, ಅತಿ ಚಂಡವಾದ ವೇಗವು, ಚಪಲಸ್ವಭಾವವು, ದೈನ್ಯವಿಲ್ಲದೇ ಇರೋಣವು, ದೀರ್ಘವಾದ ದುಂಡಾದ ಸ್ವರಾವಯವಂಗಳು, ಏಕರೂಪಂಗಳಾದ ಶೋಭನಂಗಳಾದ ನೇತ್ರಂಗಳು, ಹ್ರಸ್ವಂಗಳಾದ ಅಂಡಮೇಢ್ರಂಗಳು, ಗೂಟದಂತೆ ನಿಂತಿರುವ ಕಿವಿಗಳುಳ್ಳುವಾಗಿ, ಕಾಂಭೋಜದೇಶದ ಕುದುರೆಗಳಿಗೆ ಮಧ್ಯಮಪ್ರಮಾಣವುಳ್ಳುವಾಗಿ ಶರೀರದ ಪೂರ್ವಾರ್ಧದಲ್ಲಿ ಉನ್ನತಂಗಳಾಗಿ, ಬಗ್ಗಿದ ಹೆಗಲುಗಳು, ಅಧಿಕವಾದ ಕಾಯಬಲವು, ದೃಢವಾದ ಗೊರಸುಗಳ ಸಮಾಪದ ಹಿಮ್ಮಡಿಗಳು, ಸ್ಥೂಲವಾದ ಪಾದಗಳು, ವಯೋನುರೂಪವಾದ ನಾನಾವರ್ಣ ವಿಶೇಷಂಗಳು, ಅಂಡದ ಸಮಾಪದಲ್ಲಿ ವಿಸ್ತಾರವು, ದೀರ್ಘವಾದ ಶರೀರವು, ಮೇಘದಂತೆ ಗಂಭೀರವಾದ ಧ್ವನಿಯುಳ್ಳ ಕುದುರೆಗಳು ವನಾಯುಜದೇಶದಲ್ಲಿ ಪುಟ್ಟಿದವೆಂದು ತಿಳಿಯತಕ್ಕದ್ದು. ಹ್ರಸ್ವವಾದ ಬೆನ್ನು, ಶೋಭನವಾದ ಮುಖವು, ಸೂಕ್ಷ್ಮವಾದ ಬಾಲವು, ಮಂಗಳಕರವಾದ ನೇತ್ರಗಳು, ಉನ್ನತವಾಗಿ ಸ್ಥೂಲವಾದ ಪೂರ್ವಕಾಯವು, ಮೃದುವಾದ ನುಣುಪಾದ ರೋಮಗಳು ಸಿಲುಪಾದ, ಹ್ರಸ್ವವಾದ ಗೂಟದಂತೆ ನಿಂತಿರುವ ಕಿವಿಗಳು, ದೃಢಗಳಾದ ಹರಡುಗಳೊಡಗೂಡಿದ ಪಾದಗಳು, ವಿಶೇಷವಾಗಿ ಕೆಂಪುಕೂಡಿದ ನಾನಾವರ್ಣವು ಮತ್ತೂ ಹಸುರು ಕೂಡಿದ ನಾನಾವರ್ಣವು, ಅಧಿಕವಾದ ವೇಗವು, ಅತ್ಯಂತ ಪರಾಕ್ರಮವು ಉಳ್ಳುವಾಗಿ ಮುಗ್ಗರಿಸುವುದು ಮೊದಲಾದ ದುರ್ಗುಣಗಳಿಂದ ರಹಿತಂಗಳಾದ ಅಶ್ವಗಳು ಅರಟ್ಟದೇಶೋತ್ಪನ್ನವೆಂದು ಹೇಳಲ್ಪಡುವುವು. ಕರೀ ಕೋಳಿಗಳಂತೆಯೂ, ಕೃಷ್ಣಸಾರಂಗಗಳಂತೆಯೂ, ಶ್ಯಾಮ ಧೂಮ್ರ ಮೊದಲಾದ ಚಿತ್ರವರ್ಣವುಳ್ಳುವಾಗಿ, ಸಮವಾಗಿ ತುಂಬಿದ ಅಂಗಗಳು, ದೃಢವಾಗಿ ವಿಷಮವಾದ ಶರೀರದ ಉತ್ತರಾರ್ಧವು, ಚಂಡಸ್ವಭಾವವು, ಮಂಡಲಾಕಾರವಾದ, ದಪ್ಪವಾದ ಜೆಕ್ಕತ್ತಿನ ಕೇಸರಂಗಳು ಉಳ್ಳುವಾಗಿ, ಸ್ವಲ್ಪ ಕೃಶವಾಗಿ, ದೀರ್ಘವಾದ ಮುಖವುಳ್ಳ ಅಶ್ವಂಗಳು ಗಾಂಧಾರದೇಶೋತ್ಪನ್ನಂಗಳೆಂದು ತಿಳಿಯತಕ್ಕದು. (ಸಶೇಷ)

Adapted from the "Dawn of Calcutta" Post box 363, with kind permission.

ಕಲಾಭವನ.

(ಕಳೆದವಾರದಶೇಷ.)

ಇದರಿಂದ ವಿದ್ಯಾರ್ಥಿಗಳಿಗೆ ಉತ್ಸಾಹವೂ ಆಸಕ್ತಿಯೂ ಹೆಚ್ಚುವುದು. ಕಲಾಭವನದಲ್ಲಿ ವಿದ್ಯಾಭ್ಯಾಸವನ್ನು ಮಾಡಬೇಕೆಂಬುವ ವಿದ್ಯಾರ್ಥಿಗಳಿಗೆ ವ್ಯಯವೂ ಕಡಮೆ. ನೇಯಿಗೆಯ ತರಗತಿಗೆ ಕೊಡುವ ೧-೮-೦ ರೂಪಾಯಿ ವರ್ಷಾಶನವು ಹೆಸರಿಗೆ ಮಾತ್ರವಾದುದೆನ್ನಬಹುದು. ಯಂತ್ರೋಪಕರಣವೇ ಮೊದಲಾದತರಗತಿಗಳಿಗೆ ವರ್ಷಾಶನವು ಇಪ್ಪತ್ತನಾಲ್ಕು ಇಪ್ಪತ್ತೈದು ರೂಪಾಯಿ ಇರುವುದು. ಬರೋಡಾ ಹೈಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳು ವ್ಯಾಪಾರಕಲೆಯನ್ನು ಕಲಿಯಬೇಕಾದರೆ ತಿಂಗಳಿಗೆ ೧-೮-೦ ರೂಪಾಯನ್ನು ಮಾತ್ರ ಕೊಡಬೇಕು. ವಿದ್ಯಾರ್ಥಿಗಳಿಗೆ ಪುಸ್ತಕವೇ ಮೊದಲಾದ ಪದಾರ್ಥಗಳಿಗೆ ವರ್ಷಕ್ಕೆ ಇಪ್ಪತ್ತರಿಂದ ಮೂವತ್ತು ರೂಪಾಯಿಗಳ ವರೆಗೆ ಬೇಕಾಗುವುದು. ಬರೋಡೆಯಲ್ಲಿ ಊಟದ ವ್ಯಯವು ಇತರಕಡೆಗಳಲ್ಲಿದ್ದರೆ ಹದಿನೈದು, ಇಪ್ಪತ್ತು ರೂಪಾಯಿಗಳಾಗಬಹುದು. ಆದರೆ, ಕಲಾಭವನದ ವಿದ್ಯಾರ್ಥಿನಿಲಯದಲ್ಲಿದ್ದರೆ ಏಳು ಅಥವಾ ಎಂಟು ರೂಪಾಯಿಗಳಲ್ಲಿ ಆಗುವುದು. ಅಂತು ಸರಾಸರಿ ಒಬ್ಬ ವಿದ್ಯಾರ್ಥಿಗೆ ತಿಂಗಳಿಗೆ ಹನ್ನೆರಡು ಅಥವಾ ಹದಿಮೂರು ರೂಪಾಯಿಗಳಾದರೆ ಸಾಕು. ಅದೇ ವಿದ್ಯಾರ್ಥಿಯು ಬೊಂಬಾಯಿನಲ್ಲಿದ್ದು ವಿದ್ಯಾಭ್ಯಾಸ ಮಾಡಬೇಕಾದರೆ, ಇಪ್ಪತ್ತು ಅಥವಾ ಇಪ್ಪತ್ತೈದು ರೂಪಾಯಿಗಳಿಗೆ ಕಡಮೆಯಾಗುವುದಿಲ್ಲ.

ಕಲಾಭವನದಲ್ಲಿ ಅಭ್ಯಾಸ ಮಾಡುವವರಿಗೆ ಆಗುವ ವ್ಯಯವು ಬಹಳ ಕಡಮೆಯಾಗಿರುವುದಲ್ಲದೆ ಅನೇಕ ವಿದ್ಯಾರ್ಥಿ ವೇತನಗಳೂ ಇವೆ. ೧೦ ರೂಪಾಯಿನ ಹನ್ನೊಂದು ವಿದ್ಯಾರ್ಥಿ ವೇತನಗಳಿವೆ. ಮತ್ತು ಲಂಬಾಡಿ ಸಂಸ್ಥಾನದವರೂ ಕಾರಸ್ಪತ್ ಸಭೆಯವರೂ, ಜೈನ್ ಅಸೋಸಿಯೇಷನ್‌ರವರೂ ವಿದ್ಯಾರ್ಥಿ ವೇತನಗಳಿಗಾಗಿ ಸಹಾಯಮಾಡುವರು. ದಿವಾನ್ ಬಹದ್ದೂರ್ ಆರ್. ವಿ. ಧಮನಾಸ್ಕರ್‌ರವರ ಜ್ಞಾಪಕಾರ್ಥವಾಗಿರುವ ವೇತನವು ಬರೋಡೆಯವರಿಗೆ ಮಾತ್ರ ಕೊಡಲ್ಪಡುವುದು. ಅಲ್ಲದೆ ಪರೀಕ್ಷೆಯಲ್ಲಿ ಪ್ರಥಮಸ್ಥಳವನ್ನೂ, ದ್ವಿತೀಯಸ್ಥಳವನ್ನೂ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಮೆಡಲು (ಪದಕ) ಗಳು ಕೊಡಲ್ಪಡುವುವು. ಕಲಾಭವನಕ್ಕೆ ಸೇರಬೇಕಾದವರಿಗೆ ಒಂದು ಪ್ರವೇಶ ಪರೀಕ್ಷೆಯು ನಡಿಸಲ್ಪಡುವುದು. ಆ ಪರೀಕ್ಷೆಗೆ ಹಾಜರಾಗತಕ್ಕವರಿಗೆ ದೇಶಭಾಷೆಯ ಆರನೇ ಪುಸ್ತಕವನ್ನು ಓದುವ ಜ್ಞಾನವಿರಬೇಕು. ಇಲ್ಲವೆ ಇಂಗ್ಲೀಷಿನಲ್ಲಿ ಜ್ಞಾನವಿರಬೇಕು. ಹಾಜರಾಗಲು ಒಂದು ರೂಪಾಯಿ ರುಸುಂ ಕೊಡಬೇಕು. ೧೯೦೮ ರಲ್ಲಿ ೨೫೯ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ ೪೯ ಮಂದಿ ಮಾತ್ರ ಅರ್ಹರಾದವರೆಂದು ಉಚ್ಚತರಗತಿಗೆ ಸೇರಿಸಿಕೊಳ್ಳಲ್ಪಟ್ಟರು. ಉಳಿದವರು ಇತರ ಭಾಗಗಳಿಗೆ ಸೇರಿಸಿಕೊಳ್ಳಲ್ಪಟ್ಟರು.

ಕಲಾಭವನಕ್ಕೂ, ಇತರ ಮೂರು ಶಾಖೆಗಳಿಗೂ ತಗಲುವ ಖರ್ಚು ೬೦,೦೦೦ ದಿಂದ ೮೦,೦೦೦ ರೂ. ಗಳು. ಇಲ್ಲಿ ನಮ್ಮ ವಾಚಕರು ಈ ವ್ಯಯವು ಬರೀ ಪಾಠಶಾಲೆಯನ್ನು ಸರಿಯಾಗಿಡಲು ತಗಲುವ ಖರ್ಚೆಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕು. ಕಲಾಭವನದಲ್ಲಿರುವ ಯಂತ್ರೋಪಕರಣಗಳಿಗಾಗಿ ಸರ್ಕಾರದವರು ಏನನ್ನೂ ವ್ಯಯಮಾಡಬೇಕಾಗಿಲ್ಲ. ಏಕೆಂದರೆ-ಪಾಠಶಾಲೆಯಲ್ಲಿರುವ ಯಂತ್ರಗಳ ಸಹಾಯದಿಂದ ೧೦,೦೦೦ ರೂ. ಗಳ ವರೆಗೂ ಉತ್ಪತ್ತಿಯಾಗುವುದು. ಸರ್ಕಾರದವರು ೧೯೦೯ ನೇ ವರ್ಷದಲ್ಲಿ ಮಾತ್ರ ೪೧,೦೦೦ ರೂ. ಗಳನ್ನು ಕಲಾಭವನದ ಕಾರ್ಯಾಲಯಕ್ಕಾಗಿ ವ್ಯಯಮಾಡಿರುವರು. ಇದರಲ್ಲಿ ೨೦,೦೦೦ ರೂ. ಕಾರ್ಯಾಲಯವನ್ನು ದೊಡ್ಡದುಮಾಡಲೂ, ೨೦,೦೦೦ ರೂ. ಒಂದು ಯಂತ್ರಕ್ಕೂ, ೧೦೦೦ ವಾಚನಾಲಯಕ್ಕೂ ವ್ಯಯವಾಗಿದೆ.

ಕಲಾಭವನದಿಂದ ಅನೇಕ ಸಾಮಗ್ರಿಗಳು ಪರಸ್ಥಳದಲ್ಲಿ ನಡೆಯುವ ಪ್ರದರ್ಶನಗಳಿಗೆ ಕಳುಹಲ್ಪಡುವುವು. ಇದುವರೆಗೆ ಕಲಾಭವನಕ್ಕೆ ಬಂದಿರುವ ಆರು ಭಂಗಾರದ ಪದಕಗಳೂ, ಎಂಟು ಬೆಳ್ಳಿಯ ಪದಕಗಳೂ, ಮೂರು ಕಂಚಿನ ಪದಕಗಳೂ, ಮೂರು ಅಮೋಘವಾದ ಯೋಗ್ಯತಾಪತ್ರಿಕೆಗಳೂ ಕಲಾಭವನವು ಎಷ್ಟು ಉಚ್ಚಸ್ಥಿತಿಯಲ್ಲಿದೆ ಎಂಬುದನ್ನು ವ್ಯಕ್ತಗೊಳಿಸುವುದು. ಇದರಿಂದ ಕಲಾಭವನಕ್ಕೆ ಭರತಖಂಡದಲ್ಲಿ ಮಾತ್ರವಲ್ಲದೆ ಇತರ ಪ್ರದೇಶಗಳಲ್ಲಿ ಸಹಾ ಎಷ್ಟು ಪ್ರಾಶಸ್ತ್ಯವಿದೆಯೆಂಬುದು ನಮ್ಮವಾಚಕರಿಗೆ ವ್ಯಕ್ತವಾಗದಿರಲಾರದು.

ಕಲಾಭವನದ ಯಂತ್ರೋಪಕರಣಗಳ ತರಗತಿಯವರು "ಸ್ಟೀಮ್ ಅಂತ್ ಸ್ಟೀಮ್ ಎಂಜನ್" "ಮಿಲ್ ಎಂಜನ್ ಬಾಯಿಲರ್" ಭಾಗ ೧ ರಿಂದ ೩ ರವರೆಗೆ ಪುಸ್ತಕಗಳನ್ನೂ, ಬಣ್ಣ ಕೊಡುವುದನ್ನು ಕಲಿಯುವ ವಿದ್ಯಾರ್ಥಿಗಳು "ಬಣ್ಣವನ್ನು ಕೊಡುವ ತತ್ವಶಾಸ್ತ್ರ" ಅರಳೆಯ ನೆಯ್ಗೆಗೂ ಉಣ್ಣೆಯ ನೆಯ್ಗೆಗೂ ಇರುವ ತಾರತಮ್ಯ" ಎಂಬ ಪುಸ್ತಕಗಳನ್ನೂ ಓದಬೇಕು. ಈ ಪುಸ್ತಕಗಳೆಲ್ಲವೂ ದೇಶಭಾಷೆಯಾದ ಗುಜರಾತಿಗೆ ಪರಿವರ್ತಿಸಲ್ಪಟ್ಟಿವೆ. ಕಲಾಭವನಕ್ಕೆ, ಕಲಾಶಾಲೆಗೆ, ತತ್ವಶಾಸ್ತ್ರಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ದೇಶಭಾಷೆಗೆ ತರ್ಜುಮೆ ಮಾಡಿಸಿರುವುದರಿಂದಲೇ ಶ್ರೀಮಾನ್ ಮಹಾರಾಜರವರಿಗಿರುವ ದೇಶಭಾಷಾಭಿಮಾನವು ವ್ಯಕ್ತವಾಗುವುದು.

ಇಂಗ್ಲೆಂಡ್, ಅಮೇರಿಕಾ, ಆಸ್ಟ್ರೇಲಿಯಾ ಮೊದಲಾದ ಪ್ರದೇಶಗಳಿಂದ ಬಂದ ಬಹುಮಂದಿ ಕಲಾನಿಪುಣರು ಕಲಾಭವನವನ್ನು ನೋಡಿ ತೃಪ್ತಿಪಟ್ಟು, ಅತ್ಯಮೋಘವಾದ ಯೋಗ್ಯತಾ ಪತ್ರಿಕೆಗಳನ್ನು ಕೊಟ್ಟಿರುವರು ಅವನ್ನು ಇಲ್ಲಿ ಸ್ಥಳ ಸಂಕೋಚದಿಂದ ಬರೆಯಲಾರದಾದಕಾರಣ ವಾಚಕರ ಕ್ಷಮೆಯನ್ನು ಬೇಡುವೆವು.

ಹನುಮಾನ್.

ಹಳ್ಳಿಯ ಗೌಡ.

ವಾಚಕರೆ! "ನಾನೇನು ಹಳ್ಳಿಯ ಗೌಡನೊ?" ಎಂದು ದಿಟ್ಟತನದಿಂದ ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುವ ಆಧುನಿಕ, ನಾಗರಿಕ, ಮಹಾಶಯನಾವನನ್ನಾದರೂ ತಾವು ಕಂಡು ಕೇಳಿರುವಿರೇನು? ಯಾರ ನಡೆನುಡಿಗಳಲ್ಲಿ ವಿದೇಶೀಯರ ಪರಿಪಾಟ್ಯವಿಲ್ಲವೋ, ಯಾರು ಬಾರಿಬಾರಿಗೂ ಬದಲಾಯಿಸಲ್ಪಡುವ ನವೀನ ನ್ಯಾಯ ನಿಬಂಧನೆಗಳನ್ನರಿಯರೋ ಹೊಡೆದರೂ ಹೊಡೆಯಿಸಿಕೊಳ್ಳುವಷ್ಟು ತಾಳ್ಮೆಯುಳ್ಳವರೋ, ಪಟ್ಟಣಗಳಿಗೆ ದೂರವಾಗಿ ಆಡಂಬರವಿಲ್ಲದ ಸಾಮಾನ್ಯ ಕುಟೀರಗಳಲ್ಲಿ ವಾಸಮಾಡುವವರೋ ಅವರೆಲ್ಲರೂ ಹಳ್ಳಿಯ ಗೌಡರೆಂದು ನವನಾಗರಿಕರಿಂದ ನಿರ್ಣಯಿಸಲ್ಪಟ್ಟಿರುವರು. ಅವರ ಸಂಭಾಷಣೆಯು ಸುಶಿಕ್ಷಿತರಿಗೆ ಸಮ್ಮತಿಸದು. ಸಭೆಯಲ್ಲಿ ವ್ಯಂಗ್ಯೋಕ್ತಿಗಳನ್ನೂ, ವಕ್ರೋಕ್ತಿಗಳನ್ನೂ ಆಡಿ ಅವರನ್ನು ಅಣ್ಣಗೆಳೆಯುವವರು [illegible] ದರೆ ಕತ್ತಿಗೆಗೆ ಕೈಕೊಟ್ಟು ತಳ್ಳಿಸಿಡುವವರು ವಿದೇಶೀಯರ ಬ್ಯೂಟಿಯಂತೆ ನಿಬದ್ಧರಾಗಿರುವ ನವನಾಗರಿಕರು ಸ್ವದೇಶೀಯರ ಧರ್ಮಸೂಕ್ಷ್ಮವನ್ನು ಮರೆತಿದ್ದಾರೆಂದು ನಿರ್ಬೋಧನಾದ ಗೌಡನು ತಿಳಿಯುವ ಬಗೆ ಹೇಗೆ?

ಒರಟಾದ ಅವನ ಶರೀರವು ಮಲಿನವಾಗಿ ನೇತ್ರಾನಂದಕರವಾಗಿಲ್ಲ. ಅದರೇನು? ಅವನಮನಸ್ಸು ನಿರ್ಮಲವಾಗಿಲ್ಲವೇನು? ಅವನ ಗ್ರಾಮ್ಯಭಾಷೆಯು ಕಿವಿಗಿಂಪಾಗಿಲ್ಲ. ಆದರೇನು? ವಾತ್ಸಲ್ಯಪೂರಿತವಾಗಿಲ್ಲವೆ? ಉಡುಗೆ ತೊಡುಗೆಗಳು ಅಂದವಾಗಿಲ್ಲ. ಆದರೂ ಅವು ಈವರೆಗೂ ಹಲವುಮಂದಿ ದೇಶೀಯರಾದ ಕೆಲಸಗಾರರನ್ನು ಅರ್ಧಜೀವಿತಾವಸ್ಥೆಯಲ್ಲಿಯಾದರೂ ಉಳಿಸಿಲ್ಲವೆ? ಹಾ! ಗುಣಗ್ರಹಣತತ್ಪರರಾದ ಆರ್ಯಮಹರ್ಷಿಗಳ ಪವಿತ್ರಕುಲೋತ್ಪನ್ನರೇ ನಾವಲ್ಲವೆ? ಗ್ರಾಮಿಣನು ಯಾರನ್ನೂ ನಿಷ್ಕಾರಣವಾಗಿ ನಿಂದಿಸನು. ಎಲ್ಲರನ್ನೂ ಅಪ್ಪ! ಅಣ್ಣ! ಎಂದು ಆದರದಿಂದ ಕರೆಯುವನು. ಅಜನ್ಮದ್ವೇಷವೂ, ದುಂದುವೆಚ್ಚವೂ ಅವನಿಗೆ ತಿಳಿಯದು. ಪಾಪಕೃತ್ಯವನ್ನು ಅತಿಯಾಗಿ ಆಚರಿಸನು. ಅಧಿಕಾರಿಗಳನ್ನು ತಾಯಿತಂದೆಗಳೆಂದು ತಿಳಿದಿರುವನು ಬ್ರಾಹ್ಮಣರನ್ನು ಗುರುಹಿರಿಯರೆಂದು ಭಾವಿಸಿರುವನು. ಗೌಡನಿಗೆ ಗ್ರಾಮದೇವತೆಯಲ್ಲಿರುವ ಭಕ್ತಿಯನ್ನು ಪಂಡಿತಶ್ರೇಷ್ಠರ ತತ್ವಮಯವಾದ ಜೀವನದಲ್ಲಿಯೂ ನಾವು ಕಾಣೆವು. ಆದಾಯಕ್ಕನುಗುಣವಾದ ವೆಚ್ಚವೂ, ದೊರೆತಷ್ಟರಲ್ಲಿ ಸಂತುಷ್ಟಿಯೂ ಅವನಲ್ಲಿ ನೆಲೆಯಾಗಿರುವುವು. ಬಂದ ಕಷ್ಟಗಳೆಲ್ಲವೂ ದೈವೇಚ್ಛೆಯೆಂದು ಭಾವಿಸಿ, ನಿಯತವಾದ ಮಾರ್ಗದಲ್ಲಿ ಲೋಕಯಾತ್ರೆಯನ್ನು ಸಾಗಿಸುವವನು ಸದ್ಯದಲ್ಲಿ ಹಳ್ಳಿಯಗೌಡನಲ್ಲದೆ ಮತ್ತಾರು?

ಅವನ ಅಲ್ಪವಾದ ಆದಾಯವೇ ರಾಜ್ಯದ ಮತ್ತೂ ರಾಜನ ಕೋಶಪೂರಣಕ್ಕೆ ಮುಖ್ಯಹೇತುವಲ್ಲವೆ? ಮತವೆಂಬ ಬಂಧನದಿಂದ ಬಂಧಿಸಲ್ಪಟ್ಟ ಮಾನವಜಾತಿಗೆ ಒಂದೇಒಂದು ಕುರುಹಾದ ನೀತಿಯನ್ನು ಅಸ್ತವ್ಯಸ್ತವಾಗಿಯಾದರೂ ಇವನಲ್ಲಿ ಮಾತ್ರ ಈಗಲೂ ಕಾಣಬಹುದು. ಮಕ್ಕಳು ತಂದೆಗೆ ವಿಧೇಯರಾಗಿ ಅವನ ವೃತ್ತಿಗೆ ಬಾಲ್ಯದಿಂದಲೂ ಸಹಾಯಕರಾಗಿರುವರು. ಗೃಹಿಣಿಯು ಬಿಡುವಾದಾಗಲೆಲ್ಲ ಗಂಡನಿಗೆ ನೆರವಾಗುವಳು. ಎಲ್ಲರೂ ಚಿರಕಾಲವೂ ಕುಟುಂಬದಲ್ಲಿ ಲಕ್ಷ್ಯವನ್ನಿಟ್ಟಿರುವರು; ಉದ್ಯೋಗಪರರಾಗಿರುವರು. ಸ್ವಾರ್ಥತೆಗೆ ವಶರಾಗಿ ಸಮಾಜದ ನಿಯಮವನ್ನುಲ್ಲಂಘಿಸರು. ಹೀಗಿರುವಲ್ಲಿ ಆ ಕುಟುಂಬವೇ ಭೂಸ್ವರ್ಗವಲ್ಲದೆ ಮತ್ತೇನು? ಆ ಸಮಾಜವೇ ದೇಶಕ್ಕೆ ಬಲಭುಜವಲ್ಲವೆ? ಸರ್ಕಾರವು ಇಂತಹ ಕೃಷಿಕನಿಗೆ ಎಷ್ಟೋ ಸಹಾಯಗಳನ್ನು ಇನ್ನೂ ಮಾಡಬೇಕಾಗಿರುವುದು. ಮತ್ತೊಬ್ಬರ ಮೆಚ್ಚುಗೆಯನ್ನು ಅಷ್ಟೊಂದು ಪ್ರಾಮುಖ್ಯವಾಗಿ ಎಣಿಸಬಾರದೆಂದೂ, ಅವರಿಗೋಸ್ಕರ ಯಾವ ಕೆಲಸವನ್ನೂ ಮಾಡಬಾರದೆಂದೂ ಹೇಳಿದ್ದರೆ ನಾವು ನಮ್ಮ ಕರ್ತವ್ಯವನ್ನು ಸಮರ್ಪಕವಾಗಿ ಮಾಡಿದಂತಾಗುವುದಿಲ್ಲ. ಇಂಗ್ಲಿಷ್ ನೇಗಲನ್ನೇ ತರಿಸಿ ಉಪಯೋಗಿಸಬೇಕೆಂದು ದೊಡ್ಡದೊಡ್ಡ ಗ್ರಂಥಗಳನ್ನು ಬರೆಯುವುದಕ್ಕಿಂತ ಆಳವಾಗಿ ಉಳುವುದರ ಉಪಯೋಗವನ್ನೂ, ಉದ್ದೇಶವನ್ನೂ ತಿಳಿಸಿ, ನಾಡನೇಗಲಿನ ಗುಳವನ್ನು ಸ್ವಲ್ಪ ದೊಡ್ಡದಾಗಿ ಮಾಡಿಸಿದರೆ, ಎಷ್ಟೋ ಸಹಾಯವನ್ನು ಮಾಡಿದಂತೆ ಆಗುತ್ತಿದ್ದಿತು.

ಸುಶಿಕ್ಷಿತರನ್ನು ನಾವು ನವನಾಗರೀಕರೆಂದು ಕರೆಯುವೆವು. ಏಕೆಂದರೆ-ಪ್ರಾಚೀನ ನಾಗರೀಕತೆಯಲ್ಲಿ ಕೇವಲ ಉಡುಗೆ ತೊಡುಗೆಗಳ ಡಂಭವೂ, ಮಾತಿನ ಆಡಂಬರವೂ, ಟಕ್ಕೂ ಇರಲಿಲ್ಲ. ಭವ್ಯವಾದ ಮಂದಿರಗಳನ್ನೂ, ಮನೋಹರವಾದ ಉದ್ಯಾನಗಳನ್ನೂ, ಯಂತ್ರವಿಶೇಷಗಳನ್ನೂ ನಾಗರೀಕತೆಯ ಕುರುಹುಗಳೆಂದು ಆರ್ಯಸಂತಾನರು ಭಾವಿಸಿರಲಿಲ್ಲ. ದೇವದುರ್ಲಭವಾದ ಆ ಸಹನೆಯೂ, ಪರಹಿತಪೂರ್ವಕವಾದ ಆ ಜೀವನವೂ, ಶ್ರಮಸಹಿಷ್ಣುತೆಯೂ ನಾಗರೀಕತೆಯ ನಿಜವಾದ ಕುರುಹುಗಳೆಂದು ಭಾವಿಸಿದ್ದರು. ಯಾವನ ಜೀವನದಿಂದ ಪರರಿಗೆ ಎಷ್ಟುಮಟ್ಟಿಗೆ ಹಿಂಸೆಯಾಗುವುದಿಲ್ಲವೋ ಅಷ್ಟುಮಟ್ಟಿಗೆ ನಾಗರೀಕನೆಂದು ಗಣ್ಯನಾಗಿದ್ದನು. ಅನ್ಯಥಾ ಜೀವಿಸುವವನನ್ನು ಮಾನವರಲ್ಲಿ ಗಣಿಸುವುದು ಪ್ರಾಚೀನ ನಾಗರೀಕತೆಯಲ್ಲಿರಲಿಲ್ಲ.

ದೇಶಬಾಂಧವರೆ! ನಮ್ಮ ದೇಶದ ದಾರಿದ್ರ್ಯವನ್ನು ದೂರೀಕರಿಸಬೇಕಾದರೆ, ನಾವೆಲ್ಲರೂ ಗೌಡರಾಗಬೇಕು. ನಮ್ಮನಮ್ಮ ವ್ಯಾಜ್ಯಗಳನ್ನು ನಾವುನಾವು ತೀರ್ಪುಮಾಡಿಕೊಳ್ಳಬೇಕು. ಉಡುಗೆಗಳಲ್ಲಿ ನಾಜೋಕನ್ನು ಬಿಟ್ಟು ಒರಟಾದ ಬಟ್ಟೆಗಳನ್ನಾದರೂ ಉಟ್ಟು ಅರ್ಧಜೀವದಿಂದಿರುವ ನಮ್ಮ ನೆಯ್ಗಾರರಿಗೆ ನೆರವಾಗಬೇಕು. ನಾವು ಆತ್ಮಾವಲಂಬನೆಯನ್ನು ಕಲಿತು ಉದ್ಯೋಗಪರರಾಗಿ ನಮ್ಮ ಚೀಲವನ್ನು ಮತ್ತೊಬ್ಬರ ಗೂಟಕ್ಕೆ ನೇತುಹಾಕುವುದನ್ನು ಬಿಡಬೇಕು. ಇಷ್ಟು ಹೇಳಲೇನು? ಪ್ರಿಯಸಹೋದರರೆ! ಧನಾದಿ ಸಂಪಾದನೆಯಂತೆ ಅಗ್ರಪಂಕ್ತಿಯರಾಗದೆ, [illegible] ಅಂದಿಗೆ ನಮ್ಮ ಅಭ್ಯುದಯವು [illegible].

ಸಿ. ಜಿ.

ದೆಹಲಿ ದರ್ಬಾರು.

ಇಂಡಿಯಾ ಗೌರ್ನಮೆಂಟಿನ ಇಸ್ತಿಹಾರ್ನಾಮೆಯು.

ಕಳೆದ ೧೧ ನೇ ತಾ॥ ಶುಕ್ರವಾರ ಇಂಡಿಯಾ ಗೌರ್ನಮೆಂಟಿನವರು ದೆಹಲಿ ದರ್ಬಾರಿನ ವಿಷಯದಲ್ಲಿ ಒಂದು ಇಸ್ತಿಹಾರನ್ನು ಪ್ರಕಟಪಮಾಡಿ, ಹಿಂದುಸ್ಥಾನದ ಎಲ್ಲ ಪ್ರಾಂತ್ಯಗಳಿಗೂ ಅದನ್ನು ವಿಸ್ತರಿಸಬೇಕೆಂದು ಅಪ್ಪಣೆ ಕೊಡಿಸಿರುತ್ತಾರೆ. ಅದರ ಮುಖ್ಯಾಂಶಗಳನ್ನು ವಾಚಕರ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸುವೆವು.

ಮಹಾರಾಜಾ ಚಕ್ರವರ್ತಿಯವರು ೧೯೧೧ ನೆಯ ಡಿಸೆಂಬರ್ ತಾ॥ ೧೨ ರಲ್ಲಿ ದೆಹಲಿ ಪಟ್ಟಣದಲ್ಲಿ ಕಿರೀಟಧಾರಣೆಯ ದರ್ಬಾರನ್ನು ನಡೆಯಿಸುವುದಾಗಿ ಅಪ್ಪಣೆ ಕೊಡಿಸಿರುತ್ತಾರೆ. ಅವರು ಬೊಂಬಾಯಿಗೂ, ಕಲ್ಕತ್ತೆಗೂ ಸಾಕ್ಷಾತ್ತಾಗಿ ದಯಮಾಡುವುದರಿಂದ ಆ ಪಟ್ಟಣಗಳಲ್ಲಿ ಅವರು ಚಿತ್ತೈಸಿದಾಗ್ಗೆ ವಿಶೇಷವಾದ ಸಂತೋಷೋತ್ಸವಗಳು ನಡೆಯುವಂತೆ ಏರ್ಪಾಟಾಗಿರುವುದು. ಹಿಂದುಸ್ಥಾನದಲ್ಲಿ ಇತರ ಎಲ್ಲ ಪ್ರಾಂತ್ಯಗಳಲ್ಲೂ ಕಿರೀಟಧಾರಣೆಯ ದಿವಸ ಸಾರ್ವತ್ರಿಕವಾದ ಸಂಭ್ರಮಕಾರ್ಯಗಳು ಜರುಗತಕ್ಕದೆಂದು ಈ ಮೂಲಕ ಪ್ರಕಟಪಮಾಡಲಾಗಿದೆ.

ಪಬ್ಲಿಕ್ ರಜಾ ದಿನಗಳು.

ಚಕ್ರವರ್ತಿ ಸಾರ್ವಭೌಮರವರು ಮಹಾರಾಜ್ಞೀರವರ ಸಮೇತ ಅತ್ಯಹಾಸದಿಂದ ಡಿಸೆಂಬರ್ ತಾ॥ ೭ ನೆಯ ಗುರುವಾರ ದೆಹಲಿ ಪಟ್ಟಣವನ್ನು ಪ್ರವೇಶಮಾಡುವುದರಿಂದ ಆ ದಿನವೂ, ದೆಹಲಿ ಪಟ್ಟಣದಲ್ಲಿ ಡಿಸೆಂಬರ್ ತಾ॥ ೧೨ ನೆಯ ಮಂಗಳವಾರ ಕಿರೀಟಧಾರಣೆಯ ದರ್ಬಾರು ನಡೆಯುವುದರಿಂದ ಆ ದಿನವೂ ಹಿಂದುಸ್ಥಾನದಲ್ಲೆಲ್ಲಾ ರಜದದಿನಗಳಾಗಿರತಕ್ಕದ್ದು. ಹಿಂದೂಸ್ಥಾನದ ಎಲ್ಲಾ ಲೋಕಲ್ ಗೌರ್ನಮೆಂಟುಗಳಿಂದಲೂ ಅಧಿಕಾರಿಗಳೂ, ಮಹನೀಯರೂ, ಪ್ರಜಾಪ್ರತಿನಿಧಿಗಳೂ ದೆಹಲಿಗೆ ಬರುತ್ತಾರಾದುದರಿಂದ ಇಂಡಿಯಾ ಗೌರ್ನಮೆಂಟಿನ ಸಮಸ್ತ ಆಫೀಸುಗಳೂ, ಲೋಕಲ್ ಗೌರ್ನಮೆಂಟುಗಳ ಎಲ್ಲಾ ಆಫೀಸುಗಳೂ ತಾ॥ ೭ ರಿಂದ ತಾ॥ ೧೧ ರವರೆಗೆ ಮುಚ್ಚಲ್ಪಡತಕ್ಕದ್ದು. ಅಂದರೆ ತಾ॥ ೭ ರಿಂದ ತಾ॥ ೧೨ ರ ವರೆಗೆ (ಉಭಯ ದಿನಗಳೂ ಸೇರಿ) ಆರು ದಿನಗಳ ರಜಾ ಇರಬೇಕು. ಆದರೆ ವರ್ತಕಮಂಡಲಿಯವರ ಕೆಲಸಕಾರ್ಯಗಳಿಗೆ ಆಟಂಕವಾಗದಂತೆ ಅದಕ್ಕೆ ಸಂಬಂಧಪಟ್ಟ ನೌಕರರುಗಳಿಗೆ ರಜಾ ಇರುವುದಿಲ್ಲ. (ಹಿಂದುಸ್ಥಾನದ ಸಾಮಂತರಾಜರುಗಳು ತಮ್ಮತಮ್ಮ ಸಂಸ್ಥಾನಗಳಲ್ಲಿ ಯಾವಯಾವ ದಿನ ರಜಾಕೊಡುವರೆಂಬ ಭಾಗವು ಅವರು ಪ್ರಕಟಮಾಡುವ ಇಸ್ತಿಹಾರ್ನಾಮೆಗಳಿಂದ ಗೊತ್ತಾಗಬೇಕಾಗಿದೆ.)

ಚಕ್ರವರ್ತಿಯವರ ಪ್ರಸಿದ್ಧಪತ್ರಿಕೆಯು.

ಮಹಾರಾಜಾ ಚಕ್ರವರ್ತಿಯವರು ಕಿರೀಟಧಾರಣೆಯ ಉತ್ಸವವನ್ನು ಆಚರಿಸುವುದಕ್ಕಾಗಿ ದಯಮಾಡುವಂತೆ ಅಪ್ಪಣೆ ಕೊಡಿಸಿರುವುದು ಹಿಂದುಸ್ಥಾನಕ್ಕೆ ವಿಶೇಷ ಶುಭಸೂಚಕವಾಗಿರುತ್ತದೆ. ದೆಹಲಿ ಪಟ್ಟಣದಲ್ಲಿ ಕಿರೀಟಧಾರಣೆಯ ದರ್ಬಾರು ನಡೆಯುವ ಗಳಿಗೆಯಲ್ಲಿ ಹಿಂದುಸ್ಥಾನದ ಪ್ರತಿಯೊಂದು ಅಧಿಪತ್ಯ, ಡಿಸ್ಟ್ರಿಕ್ಟ್, ತಾಲ್ಲೂಕು, ಹೋಬಳಿ ಮುಖ್ಯಮುಖ್ಯ ಗ್ರಾಮಗಳಲ್ಲೂ ಸಂಭ್ರಮವೂ, ಅತ್ಯಹಾಸವೂ ಆದ ದರ್ಬಾರುಗಳನ್ನು ನಡೆಯಿಸಬೇಕು. ಸಾಧ್ಯವಾಗುವ ಮಟ್ಟಿಗೂ ಪ್ರತಿ ಒಂದು ಗ್ರಾಮದಲ್ಲೂ ಈ ದರ್ಬಾರು ನಡೆಯುವಂತೆ ಸ್ಥಳಾಧಿಕಾರಿಗಳು ಏರ್ಪಾಟು ಮಾಡಬೇಕು. ಡಿಸ್ಟ್ರಿಕ್ಟ್ ಮತ್ತು ಸಬ್ ಡಿವಿಜನ್ ಹೆಡ್ ಕ್ವಾರ್ಟರುಗಳಲ್ಲಿ ನಡೆಯುವ ಆ ದರ್ಬಾರಿನಲ್ಲಿ ಮುಖ್ಯಾಧಿಕಾರಿಯೇ ಅಗ್ರಾಸನವನ್ನು ವಹಿಸಿ, ಮಹಾರಾಜಾ ಚಕ್ರವರ್ತಿಯವರ ಪ್ರಸಿದ್ಧಪತ್ರಿಕೆಯನ್ನು ಸಭಿಕರಿಗೆಲ್ಲಾ ಇಂಗ್ಲೀಷಿನಲ್ಲೂ ದೇಶಭಾಷೆಯಲ್ಲೂ ಓದಿ ಹೇಳಬೇಕು. ಗ್ರಾಮಾಂತರಗಳಲ್ಲಿ ನಡೆಯತಕ್ಕ ದರ್ಬಾರುಗಳಲ್ಲಿ ಗ್ರಾಮಾಧಿಕಾರಿಯು ದೇಶಭಾಷೆಯಲ್ಲೇ ಆ ಪತ್ರಿಕೆಯನ್ನು ಓದಿ ಹೇಳತಕ್ಕದ್ದು.

ಈ ಪ್ರಕಾರ ದರ್ಬಾರುಗಳಲ್ಲಿ ಸಭೆಯ ಅಗ್ರಾಸನವನ್ನು ವಹಿಸಿ ಮಹಾರಾಜಾ ಚಕ್ರವರ್ತಿಯವರ ಪ್ರಸಿದ್ಧಪತ್ರಿಯನ್ನು ಓದತಕ್ಕ ಅಧಿಕಾರಿಗಳಿಗೆಲ್ಲಾ ಚಕ್ರವರ್ತಿಯವರ ಭಾವಚಿತ್ರವ (ತಸ್ವೀರ) ನ್ನು ಇಂಡಿಯಾ ಗೌರ್ನಮೆಂಟಿನವರು ಮೊದಲೇ ಕಳುಹಿಸಿಕೊಡುವಂತೆ ತೀರ್ಮಾನಮಾಡಿದಾರೆ. ಅವರು ಸಭೆಯಲ್ಲಿ ಆ ಚಿತ್ರವನ್ನು ಎಲ್ಲರಿಗೂ ಕಾಣಬರುವಂತೆ ಪ್ರಕಾಶಪಡಿಸುತ್ತಾ ಪ್ರಸಿದ್ಧಪತ್ರಿಕೆಯನ್ನು ಓದಿ ಹೇಳಬೇಕು.

ಆಯಾ ಸ್ಥಳಗಳಲ್ಲಿರುವಂತಹ ದೇಶೀಯ ಅಧಿಕಾರಿಗಳಿಗಾಗಲಿ, ಪ್ರಜಾಪಕ್ಷದ ದೊಡ್ಡಮನುಷ್ಯರಿಗಾಗಲಿ ಮಹಾರಾಜಾ ಚಕ್ರವರ್ತಿಯವರು ದೆಹಲಿ ದರ್ಬಾರಿನ ಜ್ಞಾಪಕಾರ್ಥವಾಗಿ ಬಿರುದುಗಳೇನಾದರೂ ದಯಪಾಲಿಸಿರುವ ಪಕ್ಷದಲ್ಲಿ ಅಂತಹ ಬಿರುದುಗಳನ್ನೂ ಆಯಾ ಪ್ರಸಿದ್ಧಪತ್ರಿಕೆಯ ಜತೆಯಲ್ಲೇ ಓದಿ ಹೇಳತಕ್ಕದ್ದು. ಆ ಬಿರುದುಗಳನ್ನು ಇಂಡಿಯಾ ಗೌರ್ನಮೆಂಟಿನವರು ಮುಂದಾಗಿಯೇ ಆಯಾ ಸ್ಥಳಾಧಿಕಾರಿಗೆ ತಿಳಿಯಪಡಿಸುತ್ತಾರೆ.

ತೋಪುಗಳು.

ಮೇಲ್ಕಂಡಪ್ರಕಾರ ದರ್ಬಾರುಗಳು ಎಲ್ಲಾ ಪ್ರದೇಶಗಳಲ್ಲೂ ನಡೆದು ಪ್ರಸಿದ್ಧಪತ್ರಿಕೆಯನ್ನು ಓದುವ ಸಮಯದಲ್ಲಿ ಸಾಧ್ಯವಾಗುವ ಸ್ಥಳಗಳಲ್ಲೆಲ್ಲಾ ಗೌರವಾರ್ಥವಾದ ೧೦೧ ತೋಪುಗಳನ್ನು ಹಾರಿಸಬೇಕು.

ದೀಪೋತ್ಸವಗಳು.

ದರ್ಬಾರ್ ನಡೆಯುವ ಡಿಸೆಂಬರ್ ೧೨ ನೆಯ ತಾ॥ ಸಾಯಂಕಾಲ ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲೂ ಡಿಸ್ಟ್ರಿಕ್ಟ್ ಕಚೇರಿ, ಕೋರ್ಟುಗಳು, ಪೋಸ್ಟ್ ಮತ್ತು ಟೆಲಿಗ್ರಾಫ್ ಆಫೀಸುಗಳು ಈ ಮೊದಲಾದ ಸರ್ಕಾರಿ ಕಟ್ಟಡಗಳ ಮೇಲೆಲ್ಲಾ ದೀಪೋತ್ಸವವನ್ನು ಮಾಡಬೇಕು. ಇತರ ದೊಡ್ಡದೊಡ್ಡ ಕಟ್ಟಡಗಳ ಮೇಲೂ ಬಂಗಲಿ ಮನೆ ಅಂಗಡಿಗಳ ಮೇಲೂ ದೀಪೋತ್ಸವವನ್ನು ನಡೆಯಿಸುವಂತೆ ಪ್ರಜೆಗಳ ಮುಖಂಡರಿಗೂ, ಬೇರೆಬೇರೆ ಸ್ಥಳೀಯ ದೊಡ್ಡಮನುಷ್ಯರಿಗೂ ವರ್ತಕ ಜನಗಳಿಗೂ ತಿಳಿಸಿ ಪ್ರೋತ್ಸಾಹಪಡಿಸಬೇಕು.

ಇತರ ಸಂತೋಷೋತ್ಸವಗಳು.

ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣ ಮಹೋತ್ಸವವು ಈ ದೇಶದ ಎಲ್ಲಾ ಕಡೆಗಳಲ್ಲೂ ಜನಜನಿತವಾಗಿ ಮೆರೆಯುವಂತೆ ಎಲ್ಲಾ ಕೋಮುಗಳ ಪ್ರಜೆಗಳೂ ತಮ್ಮಲ್ಲಿರುವ ರಾಜಭಕ್ತಿಯನ್ನು ಸಾಕ್ಷಾತ್ತಾಗಿಯೂ ಅಪರಿಮಿತವಾಗಿಯೂ ಪ್ರಕಾಶಪಡಿಸುವುದಕ್ಕೆ ನಾನಾ ಸಂಭ್ರಮಕಾರ್ಯಗಳನ್ನು ಆ ದಿನ ನಡೆಯಿಸದೆ ಇರಲಾರರೆಂದು ಗೌರ್ನರ್ ಜನರಲ್‌ರವರು ಸಂಪೂರ್ಣವಾಗಿ ನಂಬಿರುತ್ತಾರೆ. ಆ ದಿನ ವಿಶೇಷೋತ್ಸವದ ಉದ್ದಿಶ್ಯ ಎಲ್ಲಾ ಕಡೆಗಳಲ್ಲೂ ಬಡಬಗ್ಗರಿಗೆ ಸುಖಭೋಜನಮಾಡಿಸುವುದು, ಸ್ಕೂಲ್ ಬಾಲಕರಿಂದ ಜಂಬಾನಾ ಆಟಗಳನ್ನು ಆಡಿಸುವುದು, ಬಾಣಬಿರುಸುಗಳನ್ನು ಹಚ್ಚುವುದು ಇವೇ ಮೊದಲಾದ ಕಾರ್ಯಗಳನ್ನು ನಡೆಯಿಸಬಹುದಾಗಿದೆ. ಹೇಗೂ ಈ ಅಪೂರ್ವವಾದ ಉತ್ಸವವನ್ನು ಬಡವರೂ ಭಾಗ್ಯವಂತರೂ, ಚಿಕ್ಕವರೂ, ದೊಡ್ಡವರೂ ಏಕರೀತಿಯಾಗಿ ಈ ರಾಷ್ಟ್ರದಲ್ಲೆಲ್ಲಾ ಉತ್ಸಾಹಪೂರ್ವಕವಾಗಿ ಅನುಭೋಗಿಸುವುದಕ್ಕೆ ಸಹಕಾರಿಗಳಾದ ಏರ್ಪಾಡುಗಳನ್ನೆಲ್ಲಾ ಅಧಿಕಾರಿಗಳೂ, ಪ್ರಜೆಗಳ ಮುಖಂಡರೂ ಏಕೀಭವಿಸಿ ನಡೆಯಿಸುತ್ತಾರೆಂದು ನಿರೀಕ್ಷಿಸಲ್ಪಟ್ಟಿದೆ.

ವೈ. ಪ.

ಮೈಸೂರ್ ಗೆಜೆಟಿ ಸಂಗ್ರಹ.

ನಂಜನಗೂಡಿಗೆ ವರ್ಗಮಾಡಲ್ಪಟ್ಟಿರುವ ಅ॥ ಕಮಿಷನರ್ ಮೆ॥ ಬಿ. ವೆಂಕೋಬರಾಯರಿಗೆ ಕೊಡಲ್ಪಟ್ಟಿರುವ ೧೫ ದಿನಗಳ ಪ್ರಿವಿಲೇಜ್ ರಜವು ೧ ತಿಂಗಳು ಮತ್ತೂ ೨೮ ದಿನಗಳಿಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಚಿತ್ರಕಲ್ ದುರ್ಗದ ಡಿ॥ ಟ್ರೆಜರಿ ಛಾರ್ಜಿನಲ್ಲಿರುವ ಪ್ರೊಬೇಷನರಿ ಅ॥ ಕಮಿಷನರ್ ಮೆ॥ ಟಿ. ಜಿ. ರಾಮಯ್ಯರ್‌ರವರು ೨ ನೆಯತರಗತಿಯ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮೆ॥ ೧. ನಂಜಪ್ಪ, ಎಂ. ಬಿ., ಅಂಡ್ ಸಿ. ಎಂ, ರವರು ೧೯೧೧ ನೆಯ ಜೂನ್ ತಾ॥ ೨೧ ರಿಂದ ೩ ನೆಯ ತ॥ ಯಿಂದ ೨ ನೆಯ ತ॥ ಸಬ್ ಅ॥ ಸರ್ಜನರಾಗಿ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಅಸಿಸ್ಟೆಂಟ್ ಸರ್ಜನ್ ಮೆ॥ ಬಿ. ಮಹಮ್ಮದ್ ಉಸ್ಮಾನ್ ರವರು ೧೯೧೧ ನೆಯ ಜುಲೈ ತಾ॥ ೪ ರ ಆರಭ್ಯ ೨ ನೆಯ ತ॥ ಯಿಂದ ೧ ನೆಯ ತ॥ ಗೆ ಹೆಚ್ಚಿಸಲ್ಪಟ್ಟಿರುತ್ತಾರೆ.

ಅಸಿಸ್ಟೆಂಟ್ ಸರ್ಜನ್ ಮೆ॥ ಪಿ. ಎಸ್. ಡೇವಿಡ್‌ರವರು ೧೯೧೧ ನೆಯ ಜುಲೈ ತಾ॥ ೪ ರ ಆರಭ್ಯ ೨ ನೆಯ ತ॥ ಇಂದ ೧ ನೆಯ ತ॥ ಗೆ ಹೆಚ್ಚಿಸಲ್ಪಟ್ಟಿರುತ್ತಾರೆ.

ಮೆ॥ ಟಿ. ರಾಯಲು ಸೆಟ್ಟರು ೧೯೧೧ನೆಯ ಜೂನ್ ತಾ॥ ೧ ರಿಂದ ಅ॥ ಕಮಿಷನರ್ ಬಿ. ಷೆಡ್ಯೂಲು ೩ ನೆಯ ತ॥ ಯಿಂದ ೨ ನೆಯ ತ॥ ಗೆ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಮುನಸೀಫರುಗಳಾದ ಮೆ॥ ಎಂ. ಎಲ್. ಶ್ರೀಕಂಠೇಶ್ವರಗೌಡ, ಬಿ. ಎ., ಬಿ. ಎಲ್., ರವರು ಕೋಲಾರದಿಂದ ಶಿವಮೊಗ್ಗೆಗೂ, ಮೆ॥ ಎಂ. ನರಸಪ್ಪಯ್ಯ, ಬಿ. ಎ., ಬಿ. ಎಲ್., ರವರು ಶಿವಮೊಗ್ಗೆಯಿಂದ ಕೋಲಾರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ. ಇವರುಗಳು ಕೆಲಸದಮೇಲೆ ಕೂಡಲೆ ಹೋಗತಕ್ಕದು.

ಯಳಂದೂರು ಜಹಗೀರಿಯ ಆಕ್ಟಿಂಗ್ ಅಮಲ್ದಾರರಾಗಿಯೂ, ೩ ನೆಯ ತ॥ ಮ್ಯಾಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುವ ಮೆ॥ ಎಂ. ವಾಸುದೇವರಾಯರು ೧೯೧೨ ನೆಯ ಜೂನ್ ತಿಂಗಳ ಕಡೆಯವರೆಗೆ ಅಥವಾ ಮತ್ತೊಂದಪ್ಪಣೆಯಾಗುವವರೆಗೆ ಯಳಂದೂರು ಜಹಗೀರಿಯ ಆಕ್ಟಿಂಗ್ ಅಮಲ್ದಾರರಾಗಿರತಕ್ಕದು.

ತುರುವೆಕೆರೆಯ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಮೆ॥ ಟಿ. ಸ್ವಾಮಿನಾಥಶಾಸ್ತ್ರಿಯವರು ತಮ್ಮ ಕೆಲಸದೊಡನೆ ತಿಪಟೂರು ತಾ॥ ಅಮಲ್ದಾರರ ಕೆಲಸವನ್ನು ತಿಪಟೂರಿನಲ್ಲಿ ವಹಿಸಿಕೊಂಡು ನೋಡತಕ್ಕದ್ದು.

ವಾಚಕರಿಗೆ ಸೂಚನೆ.

ಶ್ರೀಗಣೇಶನ ಹಬ್ಬದುದ್ದಿಕ್ಕೆ ಪದ್ಧತಿಯ ಪ್ರಕಾರ ತಾ॥ ೨೮ ರ "ಮೈಸೂರ್ ಸ್ಟಾರ್" ಪತ್ರಿಕೆಯು ಹೊರಡುವುದಿಲ್ಲವು.

ಮೈಸೂರ್ ಸ್ಟಾರ್.

೧೯೧೧ ನೇ ಇಸವಿ ಆಗಸ್ಟ್ ತಾ॥ ೨೧ ನೇ ಸೋಮವಾರ.

ಬ್ರಿಟನ್ನಿನಲ್ಲಿ ಕೆಲಸಗಾರರ ಧಾಂದಲೆ.

ಪ್ರಾಯಿಕವಾಗಿ ಜನರು ವ್ಯವಸಾಯ, ವ್ಯಾಪಾರ, ಕಾರ್ಯಾಲಯಮೊದಲಾದುವುಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ಆಳುಗಳಿಂದ ಮಾಡಿಸಿ, ಅವುಗಳ ಉತ್ಪನ್ನದಲ್ಲಿ ಅವರುಗಳಿಗೆ ಅಲ್ಪಸ್ವಲ್ಪ ಕೂಲಿಯನ್ನು ಕೊಟ್ಟು ಉಳಿದುದನ್ನೆಲ್ಲ ತಾವೇ ಅನುಭವಿಸುವುದು ಈ ದೇಶದಲ್ಲಿ ವಾಡಿಕೆಯಾಗಿರುವಂತೆ ಗ್ರೇಟ್ ಬ್ರಿಟನ್ನಿನಲ್ಲೂ ಇದ್ದಿತು. ಆದರೆ ಈಚೆಗೆ ಅಲ್ಲಿ ನಾಗರಿಕತೆಯೂ ಹೆಚ್ಚಿದಹಾಗೆಲ್ಲ ಜನರ ಸ್ವಾತಂತ್ರ್ಯವೂ, ಅನುಕೂಲ್ಯವೂ ಹೆಚ್ಚುತ್ತಿರುವುವು. ಅಲ್ಲಿಯ ಕೆಲಸಗಾರರಿಗೆ ವಿಶೇಷ ಸೌಕರ್ಯವನ್ನುಂಟುಮಾಡಿ ಕೊಡಬೇಕೆಂಬುದರ ಮೇಲೆ ೧೮೯೩ ರಲ್ಲಿ ಮಿ॥ ಕೀರ್ ಹಾರ್ಡಿಯವರ ಪ್ರಾಮುಖ್ಯತೆಯಿಂದ "ಇಂಡಿಪೆಂಡೆಂಟ್ ಲೇಬರ್ ಪಾರ್ಟಿ" ಎಂದು ಒಂದು ಸಂಘವೇರ್ಪಟ್ಟಿತು. ಭೂಮಿಯೂ, ಧನವೂ ಒಬ್ಬೊಬ್ಬರ ಸೊತ್ತಾಗಿರದೆ ಎಲ್ಲ ಜನರಿಗೂ ಸೇರಿದ್ದು ಅವರ ಕ್ಷೇಮಕ್ಕುಪಯೋಗವಾಗಿರುವಂತೆ ಮಾಡಬೇಕೆಂಬುದೇ ಈ ಸಂಘದ ಮುಖ್ಯೋದ್ದೇಶವಾಗಿರುವುದು. ಕೂಲಿಯವರಿಂದ ಒಂದು ವಾರದಲ್ಲಿ ೪೮ ಗಂಟೆಗಳಿಗಿಂತಲೂ ಹೆಚ್ಚಾಗಿ ಕೆಲಸಮಾಡಿಸದಂತೆಯೂ, ಸರ್ಕಾರದ ವೆಚ್ಚದಿಂದ ಸಮರ್ಥರಾದ ಪ್ರಾಯಸ್ಥರಿಗೆ ಗಣನೀಯವಾದ ಟ್ರೇಡ್ ಯೂನಿಯನ್ನಿನವರು ಗೊತ್ತುಮಾಡಿರುವ ದರದಂತೆ ಕೂಲಿಯ ಕೆಲಸವನ್ನೊದಗಿಸಿಕೊಡುವುದಕ್ಕಾಗಿಯೂ, ಸರ್ವಕಲಾಶಾಲೆಗಳಲ್ಲೂ ಕೂಡ ಕೂಲಿಯ ಜನರಿಗೆ ಉಚಿತವಾಗಿ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕಾಗಿಯೂ ಮತ್ತೂ ತಮ್ಮಲ್ಲಿ ಸಮರ್ಥರಾದವರನ್ನು ಪಾರ್ಲಿಮೆಂಟು ಮೆಂಬರರನ್ನಾಗಿ ಆರಿಸುವುದಕ್ಕಾಗಿಯೂ ಶಾಸನವನ್ನು ಮಾಡಬೇಕೆಂದು ಈ ಲೇಬರ್ ಪಾರ್ಟಿಯವರು ಅಪೇಕ್ಷಿಸುತ್ತಿರುವರು. ಕೆಲಸವನ್ನು ಮಾಡಿರುವವರು ಏರ್ಪಡಿಸಿಕೊಂಡಿರುವ ಟ್ರೇಡ್ ಯೂನಿಯನ್ನಿನವರಕೂಡ ೧೯೦೦ ರಲ್ಲಿ ಈ ಲೇಬರ್ ಪಾರ್ಟಿಯವರು ಸೇರಿ "ಲೇಬರ್ ರಿಪ್ರಜೆಂಟೇಷನ್ ಕಮಿಟಿ" ಯು (ಕೂಲಿಯ ಜನರ ಪ್ರತಿನಿಧಿಗಳ ಸಂಘವ) ನ್ನು ಮಾಡಿಕೊಂಡರು. ಈ ಸಂಘಕ್ಕೆ ಕ್ರಮೇಣ ಸಹಾಯಕರ ಸಂಖ್ಯೆಯೂ ಹೆಚ್ಚಿ, ೧೯೦೬ ರಲ್ಲಿ ಈ ಸಂಘದಿಂದ ೨೯ ಪ್ರತಿನಿಧಿಗಳು ಪಾರ್ಲಿಮೆಂಟ್ ಸಭಾಸ್ತರರಾಗಿ ಆರಿಸಲ್ಪಟ್ಟರು. ಲೇಬರ್ ಪಾರ್ಟಿ ಮತ್ತೂ ಟ್ರೇಡ್ ಯೂನಿಯನ್ ಎಂಬುವುಗಳಲ್ಲದೆ ಸೋಷಿಯಲಿಜಂ ಎಂದು ಒಂದು ಪಕ್ಷವಿರುತ್ತದೆ. ಈ ಪಕ್ಷದವರು— "ಐಶ್ವರ್ಯವು ಕಷ್ಟಪಡುವುದರಿಂದುತ್ಪನ್ನವಾಗುವುದು. ಅದುಕಾರಣ ಅಂತಹ ಉತ್ಪನ್ನವು ಕಷ್ಟಪಡುವ ಕೆಲಸಗಾರರಿಗೆ ಸೇರಬೇಕು." ಎಂದು ವಾದಿಸುವರು. ಅಂದರೆ ಹಡಗು, ರೈಲು, ಕಾರ್ಯಾಲಯ ಮೊದಲಾದುವುಗಳನ್ನಿಟ್ಟುಕೊಂಡು ಬೇಕಾದಷ್ಟು ದ್ರವ್ಯಸಂಪಾದನೆಯನ್ನು ಮಾಡಿರುವವರ ಐಶ್ವರ್ಯವೆಲ್ಲವೂ ಅಲ್ಪವಾದಕೂಲಿಯನ್ನು ತೆಗೆದುಕೊಂಡು ದುಡಿದ ಕೆಲಸಗಾರರ ಕಷ್ಟಾರ್ಜಿತವಾಗಿರುವುದರಿಂದ, ಅದು ಆ ಕಷ್ಟಪಟ್ಟವರಿಗೂ ಸೇರಬೇಕಲ್ಲದೆ ಕೆಲಸವನ್ನು ಮಾಡಿಸಿಕೊಂಡವರಿಗೆ ಮಾತ್ರ ಸೇರತಕ್ಕದು ನ್ಯಾಯವಲ್ಲವೆಂಬುದು ಅವರ ತಾತ್ಪರ್ಯವು. ಇವರೂ ಮೇಲ್ಕಂಡ ಪಕ್ಷದವರ ಕೂಡ ಸೇರಿ ಕೂಲಿಯ ಜನರ ಸ್ಥಿತಿಯನ್ನುತ್ತಮಪಡಿಸಲು ಹೋರಾಡುತ್ತಿರುವರು.

ಕೆಲಸಗಾರರು ತಾವು ನಿತ್ಯದಲ್ಲೂ ಕೆಲಸಮಾಡತಕ್ಕ ಅವಧಿಯನ್ನು ತಮ್ಮಿಂದ ಕೆಲಸವನ್ನು ಮಾಡಿಸತಕ್ಕವರು ಕಡಿಮೆಮಾಡಿ ಗೊತ್ತುಕಾಲಕ್ಕಿಂತ ಹೆಚ್ಚಾಗಿ ಮಾಡಿದ ಕೆಲಸಕ್ಕೆ ಹೆಚ್ಚು ಕೂಲಿಯನ್ನು ಕೊಡಬೇಕೆಂದು ಹಟಹಿಡಿದು, ಹಾಗೆ ತಮ್ಮ ಪ್ರಾರ್ಥನೆಯು ನಡಿಸಲ್ಪಡದಿದ್ದಲ್ಲಿ ದಂಗೆಯೇಳಲು ಒಂದು ಕಮಿಟಿಯನ್ನು ಈ ತಾ॥ ೫ ರಲ್ಲಿ ಏರ್ಪಡಿಸಿಕೊಂಡರು ಮತ್ತೂ ಅದೇದಿವಸ ಲಂಡನ್ ಪಟ್ಟಣದಲ್ಲಿ ಹಡಗಿನ ಸಾಮಗ್ರಿಗಳ ಕೋಠಿಗಳಲ್ಲಿ ಕೆಲಸಮಾಡುವ ೨೦ ಸಾವಿರ ಜನರು ಕೆಲಸಕ್ಕೆ ಬಾರದೆ ನಿಂತುಬಿಟ್ಟರು. ಈ ದಂಗೆಕೋರರು ಬೀದಿಗಳಲ್ಲಿ ಸಾಮಗ್ರಿಗಳ ಬಂಡಿಗಳು ಹೋಗದಂತೆ ಅಡ್ಡಿಮಾಡಿದರು. ರೈಲ್ವೆಯ ಕೆಲಸಗಾರರಲ್ಲೂ ಗೊಂದಲವುಂಟಾಗಿ ಹಣ್ಣು ಮೊದಲಾದ ಆಹಾರಪದಾರ್ಥಗಳು ಸಾಗಿಸಲ್ಪಡದಿದ್ದರಿಂದ ಜನರ ಆಹಾರಕ್ಕೆ ಬಹು ತೊಂದರೆಯುಂಟಾಯಿತು. ಮಾಂಸ ಮತ್ತೂ ಮೀನುಗಳನ್ನು ಸಾಗಿಸತಕ್ಕವರು ಕೆಲಸಕ್ಕೆ ಹೋಗದೆ ನಿಂತರು. ಇದರಿಂದ ಲಂಡನ್ ಪಟ್ಟಣದ ಪೋರ್ಟುಗಳಿಗೆ ಹೊಸದಾಗಿ ಆಹಾರ ಪದಾರ್ಥಗಳು ಬಾರದೆ ಹೋದುದರಿಂದ, ಶೇಖರಿಸಿದ್ದುದೆಲ್ಲವೂ ಮುಗಿದುಹೋಗಿ ಕ್ಷಾಮವು ಪ್ರಾಪ್ತವಾಗಬಹುದೆಂಬ ಭಯವುಂಟಾಯಿತು. ರೇವಿನಲ್ಲಿ ಹಣ್ಣು ಮೊದಲಾದ ಆಹಾರಪದಾರ್ಥಗಳು ಸಾಗಿಸಲ್ಪಡಲಿಕ್ಕಿಲ್ಲದೆ ಕೊಳೆಯುತ್ತಿದ್ದುವಲ್ಲದೆ, ಪದಾರ್ಥಗಳು ತುಂಬಲ್ಪಟ್ಟಿದ್ದ ೧೫೦ ಹಡಗುಗಳು ಹಾಗೆಯೇ ನಿಂತಿದ್ದುವು. ಸೀಮೆಯೆಣ್ಣೆಯಿಲ್ಲದೆ ಮೊಟಾರು ಮತ್ತೂ ಟ್ರಾಂ ಬಂಡಿಗಳು ಬೀದಿಗಳಲ್ಲಿ ತಿರುಗಾಡಲಿಲ್ಲವಾಯಿತು. ಪೋಲೀಸು ಕಾವಲಿನಿಂದ ಆಹಾರಪದಾರ್ಥಗಳು ತರಲ್ಪಟ್ಟು ಮಾರಲ್ಪಟ್ಟುವು. ಆಹಾರಪದಾರ್ಥಗಳನ್ನು ರೇವಿನಿಂದ ತಂದು ಜನರಿಗೆ ಹಂಚಲು ೨೦,೦೦೦ ಸೈನಿಕರು ಸಿದ್ಧರಾಗಿದ್ದರು. ದಂಗೆಯ ಕಮಿಟಿಯವರು ನಿತ್ಯದಲ್ಲೂ ಸಭೆ ಸೇರಿ ಮುಂದೆ ದಂಗೆ ಮಾಡಬೇಕಾದ ಕ್ರಮವನ್ನು ಕುರಿತು ಆಲೋಚಿಸುತ್ತಿದ್ದರು. ತಾ॥ ೧೧ ರಲ್ಲಿ ಲಂಡನ್ ನಗರದಲ್ಲಿ ೪೦೦೦ ಜನ ರೈಲ್ವೆಯ ಕೆಲಸಗಾರರು ದಂಗೆಯೆದ್ದರು. ಈ ದಂಗೆಕೋರರು ತಾ॥ ೧೪ ರಲ್ಲಿ ಒಂದು ಪೋಲೀಸು ಠಾಣದ ಬಾಗಿಲನ್ನೊಡೆದು ಒಳನುಗ್ಗುವಾಗ್ಗೆ, ಪೋಲೀಸರು ಅವರನ್ನು ತಡೆದು ನಿಲ್ಲಿಸಿದರು. ಈ ಗದ್ದಲದಲ್ಲಿ ಅನೇಕ ಪೋಲೀಸರಿಗೆ ಪೆಟ್ಟುಬಿದ್ದಿತು. ಮತ್ತೂ ಒಬ್ಬ ಪೋಲೀಸು ಸೂಪರಿಂಟೆಂಡೆಂಟಿನ ಕಾಲೂ ಮತ್ತೊಬ್ಬ ಕಾನಸ್ಟೇಬಲಿನ ದವಡೆಯೂ ಮುರಿದುಹೋದುವು. ಮತ್ತೊಂದು ಬೀದಿಯಲ್ಲಿ ದಂಗೆಕೋರರು ಸೈನಿಕರನ್ನು ಕಲ್ಲಿನಿಂದ ಹೊಡೆದು ಇಬ್ಬರಿಗೆ ಗಾಯಮಾಡಿದರು. ಲಿವರ್ ಪೂಲಿನಲ್ಲೂ ದಂಗೆಯು ಇನ್ನೂ ವಿಶೇಷವಾಗಿದ್ದು ಅಂಗಡಿಗಳು ಸೂರೆಮಾಡಲ್ಪಟ್ಟು, ಪೋಲೀಸರು ಕಲ್ಲಿನಿಂದ ಹೊಡೆಯಲ್ಪಟ್ಟರು. ಇಲ್ಲಿ ೧,೦೦,೦೦೦ ರೈಲ್ವೆಯ ಕೆಲಸಗಾರರು ಕೆಲಸಕ್ಕೆ ಹೋಗದೆ ನಿಂತುಬಿಟ್ಟು ಪೋಲೀಸರಿಗೂ, ಅವರಿಗೂ ಬಡಿದಾಟವಾಗಿ ದಂಗೆಯವರು ಕಲ್ಲುಗಳು, ಮರದ ತುಂಡುಗಳು ಮತ್ತೂ ಶೀಸೆಗಳು ಇವುಗಳಿಂದ ಪೋಲೀಸರನ್ನು ಹೊಡೆದು ವಿಮುಖರನ್ನಾಗಿ ಮಾಡಿದರು. ಆಗ ಮ್ಯಾಜಿಸ್ಟ್ರೇಟರು ಬಂದು ಸೈನಿಕರನ್ನು ಸಾಲಾಗಿ ನಿಲ್ಲಿಸಿ, ಗುಂಡನ್ನು ಹೊಡೆಯಲಪ್ಪಣೆಯನ್ನು ಕೊಡಲು, ಉಭಯರಿಗೂ ಮಧ್ಯರಾತ್ರಿಯವರೆಗೂ ಕದನವಾಯಿತು. ಯಾವ ಆಸ್ಪತ್ರೆಯಲ್ಲೂ ಗಾಯಪಡೆದವರೇ ತುಂಬಿರುವರು. ಮ್ಯಾಂಚೆಸ್ಟರ್ ಮತ್ತೂ ಗ್ಲ್ಯಾಸ್ಗೋ ಪಟ್ಟಣಗಳಲ್ಲೂ ಇದೇ ರೀತಿ ಕೆಲಸಗಾರರು ದಂಗೆಯೆದ್ದು, ಎಲ್ಲ ಕೆಲಸವೂ ನಿಂತುಹೋಗಿ ಸೈನಿಕರಿಗೂ ದಂಗೆಯವರಿಗೂ ಬಡಿದಾಟವಾಯಿತು. ಲಂಡನ್ ಪಟ್ಟಣದಲ್ಲಿ ದಂಗೆಯನ್ನಡಗಿಸುವುದಕ್ಕಾಗಿ ೫೦೦೦೦ ಸೈನಿಕರು ಸಿದ್ಧಪಡಿಸಲ್ಪಟ್ಟಿರುವರು. ಮತ್ತೂ ಲಿವರ್ ಪೂಲ್ ರೇವಿನಲ್ಲಿ ಯುದ್ಧದ ಹಡಗು ಬಂದು ನಿಂತಿರುವುದು. ದಂಗೆಯು ಇನ್ನೂ ಹೆಚ್ಚುವುದರಲ್ಲಿದೆಯೇ ಹೊರತು ಕಡಿಮೆಯಾಗಿಲ್ಲವು. ಕೆಲಸಗಾರರು ಹೀಗೆ ದಂಗೆಯೆದ್ದಿರುವುದರಿಂದ ಲಂಡನ್, ಲಿವರ್ ಪೂಲ್, ಮ್ಯಾಂಚೆಸ್ಟರ್ ಮತ್ತೂ ಗ್ಲ್ಯಾಸ್ಗೋ ಪಟ್ಟಣಗಳಲ್ಲಿ ವ್ಯಾಪಾರವು ನಿಂತುಹೋಗಿ, ಜನರಿಗೆ ಆಹಾರ ಪದಾರ್ಥಗಳು ದೊರೆಯದೆ ರೈಲು, ಟ್ರಾಂ ಮತ್ತೂ ಮೊಟಾರು ಬಂಡಿಗಳು ನಡೆಯಲು ಬಹು ತೊಂದರೆಯಾಗಿರುವುದು. ಪ್ರಕೃತ ವಿದ್ಯಮಾನವನ್ನು ನೋಡುವಲ್ಲಿ, ಕೆಲಸಗಾರರು ತಮ್ಮ ಕೆಲಸದವಧಿಯನ್ನು ಕಡಿಮೆಮಾಡಿ ಕೂಲಿಯನ್ನು ಹೆಚ್ಚಿಸಿಕೊಟ್ಟಹೊರತು ಶಾಂತಮನಸ್ಕರಾಗಿ ಉದ್ಯೋಗದಮೇಲೆ ಹೋಗುವಂತೆ ತೋರುವುದಿಲ್ಲವು. ಆದರೆ ಸರ್ಕಾರದವರೇನೋ ದಂಗೆಯನ್ನಡಗಿಸಲು ತಕ್ಕ ಸೇನಾ ಸನ್ನಾಹವನ್ನೂ, ಜನರಿಗೆ ಆಹಾರಪದಾರ್ಥಗಳು ಸರಿಯಾಗಿ ದೊರೆಯಲು ತಕ್ಕೇರ್ಪಾಟನ್ನೂ ಮಾಡುತ್ತಿರುವರು. ಪಾರ್ಲಿಮೆಂಟ್ ಸಭೆಯಲ್ಲಿ ಈ ದಂಗೆಯ ವಿಚಾರವು ಚರ್ಚೆಗೆ ಬಂದು ಕೆಲಸಗಾರರ ಪ್ರತಿನಿಧಿಗಳಾದ ಮೆಂಬರುಗಳು—ಪೋಲೀಸರೂ, ಸೈನಿಕರೂ ದಂಗೆಯನ್ನಡಗಿಸುವ ಪ್ರಯತ್ನದಲ್ಲಿ ಬಹು ಕ್ರೂರವಾಗಿ ವರ್ತಿಸಿರುತ್ತಾರೆಂದು ತಿಳಿಸಿದರು. ರಾಮ್ಸೆ ಮೆಕ್ಡೊನಾಲ್ಡ್ ರವರು "ಪೋಲೀಸರ ವರ್ತನವನ್ನು ಕೇಳಿ ನನ್ನ ರಕ್ತವು ಕಾದು ಕುದಿಯುತ್ತದೆ. ಒಬ್ಬ ಅಧಿಕಾರಿಯು ಒಬ್ಬ ದಂಗೆಯವನ ತಲೆಗೆ ಗುರಿಕಟ್ಟಿ ಗುಂಡನ್ನು ಹೊಡೆದನಂತೆ. ಅದು ನಿಜವಾಗಿದ್ದಲ್ಲಿ ಅವನು ಮರಣದಂಡನೆಗೆ ಗುರಿಮಾಡಲ್ಪಡಬೇಕು." ಎಂದು ಹೇಳಿದರು. ಚರ್ಚಿಲ್ ರವರು— "ಜನರ ಜೀವನಾಧಾರವಾದ ಯಂತ್ರಸಾಮಗ್ರಿಗಳು ನಾಶಮಾಡಲ್ಪಡತಕ್ಕ ಸಂದರ್ಭದಲ್ಲಿ ಸರ್ಕಾರದವರು ಅಂತಹ ಕೃತ್ಯವನ್ನು ಅಣಗಿಸಲು ಪ್ರಯತ್ನಿಸದೆ ಬಿಡುವುದಿಲ್ಲ." ಎಂದು ಹೇಳಿದರು.

ಒಳದೇಶದ ವೃತ್ತಾಂತ.

ಶ್ರೀಮನ್ಮಹಾರಾಜರವರ ಸ್ವಾರಿಯು ಗಣೇಶನ ಹಬ್ಬಕ್ಕಾಗಿ ರಾಜಧಾನಿಗೆ ಚಿತ್ತೈಸುವುದಿಲ್ಲವೆಂದು ಕೇಳುತ್ತೇವೆ.

ಕಪೂರ್ಥಲಾ ಮಹಾರಾಜರವರು ಈ ದಿವಸ ಬೆಂಗಳೂರಿಗೆ ಬಂದು ಶ್ರೀಮದ್ಯುವರಾಜರ ಕೂಡ ೧೫ ದಿನಗಳವರೆಗೆ ಅರಮನೆಯಲ್ಲಿದ್ದು ಹೋಗುವವರಾಗಿರುವರು.

ಹುಜೂರು ಸೆಕ್ರಟರಿ ಮಿ॥ ಪಿ. ರಾಘವೇಂದ್ರರಾಯರು ಕಾರ್ಯಾರ್ಥವಾಗಿ ಕಳೆದ ಭಾನುವಾರ ಬೆಂಗಳೂರಿಗೆ ಬಂದಿದ್ದು ಹಿಂತಿರುಗಿ ಊಟಕಮಂಡಲಕ್ಕೆ ದಯಮಾಡಿಸಿದರು.

ಮಿ॥ ನರಸಿಂಗರಾವ್ ಪೂರ್ಣಯ್ಯನವರು ರಜವನ್ನು ಪಡೆದುಕೊಂಡಿರುವುದರಿಂದ, ಅವರು ಬರುವವರೆಗೆ ಚೀಫ್ ಕೋರ್ಟ್ ಡಿ॥ ರಿಜಿಸ್ಟ್ರಾರ್ ಮಿ॥ ಬಿ. ಬಸವಾರಾಧ್ಯರು ತುಮಕೂರ ಡಿ॥ ಟ್ರೆಜರಿ ಛಾರ್ಜಿನಲ್ಲಿರಲು ಆಕ್ಟಿಂಗ್ ಕಮಿಷನರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೧೪,	೧೫,	೧೬,	೧೭,	೧೮,	೧೯,	೨೦,
ತಗಲಿದ್ದು.	೪	೬	೮	೫	೪	೧	೪
ಸತ್ತದ್ದು.	೫	೬	೧	೫	೧	೧	೪
ಒಟ್ಟು ಮ.	೯	೧೨	೯	೧೦	೫	೨	೮

ರಾಜಧಾನಿಯ ಅಡ್ವೋಕೇಟ್ ಮತ್ತೂ ಲೆ॥ ಕೌನ್ಸಿಲ್ ಮೆಂಬರಾಗಿರುವ ಮಿ॥ ಎಂ. ರಂಗಯ್ಯಂಗಾರರ ಕುಮಾರರು ಬ್ಯಾರಿಸ್ಟರ್ ಮಿ॥ ನರಸಿಂಹಯ್ಯಂಗಾರರು ಮೈಸೂರು ಸೀಮೆಯಲ್ಲಿ ವಕೀಲತನವನ್ನು ನಡೆಯಿಸಲು ಚೀಫ್ ಕೋರ್ಟಿನವರಪ್ಪಣೆಯನ್ನು ಬೆಂಗಳೂರ ಬ್ಯಾರಿಸ್ಟರ್ ಮಿ॥ ಲಾರೆನ್ಸ್ ರವರ ಮೂಲಕ ಪ್ರಾರ್ಥಿಸಿ ಪಡೆದುಕೊಂಡಿರುತ್ತಾರೆ.

ಅಸಿಸ್ಟೆಂಟ್ ಕಮಿಷನರುಗಳಾದ ಮಿ॥ ಶಿರ್ಸಿ ಅನಂದರಾಯರು ಚಿಕ್ಕಬಳ್ಳಾಪುರದ ಸಬ್ ಡಿವಿಜನ್ನಿನಿಂದ ರೆವಿನ್ಯೂ ಕಮಿಷನರಾಫೀಸಿಗೂ, ಮಿ॥ ಹೆಬ್ಲಿಕರ್ ರವರು ಮೈಸೂರ ಸಬ್ ಡಿವಿಜನ್ನಿನಿಂದ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ನಿಗೂ, ಮಿ॥ ಎ. ಮಾಧವರಾಯರು ತುಮಕೂರ ಡಿವಿಜನ್ನಿನಿಂದ ಮೈಸೂರ ಸಬ್ ಡಿವಿಜನ್ನಿಗೂ, ಮಿ॥ ಸಯ್ಯದ್ ಟ್ಯಾಜ್ ಪೀರಾನ್ ರವರು ಗುಬ್ಬಿಯ ಸಬ್ ಡಿವಿಜನ್ನಿಗೂ ಮಿ॥ ನರಸಿಂಗರಾವ್ ಪೂರ್ಣಯ್ಯನವರು ಹಾಸನದಿಂದ ತುಮಕೂರ ಡಿ॥ ಟ್ರೆಜರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಶಿವನಸಮುದ್ರದ ಗೌರ್ನಮೆಂಟ್ ಎ. ವಿ. ಸ್ಕೂಲ್ ಅ॥ ಮಾಸ್ಟರ್ ಮ॥ ಎ. ಎಸ್. ಸುಬ್ಬಾಜೋಯಿಸರು ಮಕ್ಕಳಿಗೆ ಚಿತ್ರಗಳನ್ನು ತೋರಿಸಿ ಸುಲಭವಾಗಿ ಅಕ್ಷರಾಭ್ಯಾಸವನ್ನು ಮಾಡಿಸಲನುಕೂಲವಾಗುವಂತೆ ಸಚಿತ್ರ ಕರ್ಣಾಟಕ ವರ್ಣಬೋಧೆಯನ್ನು ಒಂದೇ ವಿಧವಾದ ಕಪ್ಪುಶಾಯಿಯಲ್ಲಿ ಅಚ್ಚುಮಾಡಿಸಿ, ಅದರ ಪ್ರತಿಯೊಂದನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುತ್ತಾರೆ. ಸಚಿತ್ರವರ್ಣಬೋಧೆಯ ಪಟವು ಗೋಟಿಗೆ ನೇತುಹಾಕಲ್ಪಡಲನುಕೂಲಿಸುವಂತೆ ಒಂದು ದೊಡ್ಡ ಕಾಗದದ ಒಂದೇ ಕಡೆ ಅಚ್ಚುಮಾಡಲ್ಪಟ್ಟಿರುತ್ತದೆ. ಇದರ ಬೆಲೆ ಪ್ರತಿಯೊಂದಕ್ಕೆ ೪ ಅಣೆ.

ಕಳೆದ ಸೋಮವಾರ ಸಾಯಂಕಾಲ ಬೆಂಗಳೂರಲ್ಲಿ ೨ನೆಯ ಕೌನ್ಸಿಲರ್ ಮ॥ ನಂಜುಂಡಯ್ಯನವರ ಮಕ್ಕಳು ಕುದುರೆಯಬಂಡಿಯಲ್ಲಿ ಕುಳಿತುಪಾಠಶಾಲೆಯಿಂದ ಮನೆಗೆ ಹಿಂತಿರುಗಿ ಬರುತ್ತಿರುವಾಗ್ಗೆ, ದಿವಾನರು ಮ॥ ಅನಂದರಾಯರ ಬಂಗಲೆಯ ಹತ್ತಿರ ಸೆಕ್ರಟರಿಯಟ್ಟಿನ ಮೊಟಾರು ಬಂಡಿಯು ದಿವಾನರ ಬಂಗಲೆಯೊಳಗೆ ಪ್ರವೇಶಿಸುವಾಗ ಕುದುರೆಯ ಬಂಡಿಗೆ ತಾಕು ಬಡಿದುದರಿಂದ, ಕುದುರೆಯ ಮುಂಗಾಲುಗಳಿಗೆ ಪೂರಾ ಪೆಟ್ಟು ಬಿದ್ದಿತು. ಆದರೆ ಒಳಗಿದ್ದ ಮಕ್ಕಳಿಗೆ ದೈವಾಧೀನದಿಂದ ಏನೊಂದಪಾಯವಿಲ್ಲದೆ ಅವರು ಸುರಕ್ಷಿತರಾಗಿದ್ದು ಮತ್ತೊಂದು ಬಂಡಿಯಲ್ಲಿ ಕುಳಿತು ತಮ್ಮ ಮನೆಯನ್ನು ಸೇರಿದರು.

ರಾಜಧಾನಿಯಲ್ಲಿ ಪ್ಲೇಗು ಉಲ್ಬಣವಾಗುವ ಸ್ಥಿತಿಯಲ್ಲಿದೆ. ಸರ್ಕಾರದವರು ಜನರಿಗೆ ಇನಾಕ್ಯುಲೇಷನ್ ಮಾಡಿಸಲು ವೈದ್ಯರುಗಳನ್ನು ನೇಮಿಸಿ ದೊಡ್ಡವರಿಗೆ ೪ ಅಣೆಯನ್ನು ಚಿಕ್ಕವರಿಗೆ ೨ ಅಣೆಯಂತೆ ದುಡ್ಡನ್ನು ಕೊಟ್ಟು ಪ್ರೋತ್ಸಾಹಿಸಿದಾಗ್ಯೂ ಹೆಚ್ಚು ಜನರು ಹಾಕಿಸಿಕೊಳ್ಳದಿರುವುದಕ್ಕಾಗಿ ವಿಷಾದಿಸಬೇಕಾಗಿದೆ. ಶೀತಗಾಳಿ ಬೀಸುತ್ತಾ ಜನರ ಆರೋಗ್ಯವು ಕೆಡಲು ಹೇತುವಾಗಿರುವುದು. ಮಳೆಯು ಬಾರದೆ ತೆನೆಗೆ ಬಂದಿದ್ದ ಜೋಳದಪೈರು ಒಣಗಿ ಹೋದುದರಿಂದ ತೆನೆಸಹಿತ ಕೊಯಿದು ತಂದು ಮಾರುತ್ತಿದ್ದಾರೆ. ನೆನ್ನೆಯ ಸಾಯಂಕಾಲ ರಾಜಧಾನಿಯಲ್ಲಿ ಕೊಂಚ ಮಳೆಯಾಯಿತು. ಇದರಂತೆ ಎಲ್ಲ ಕಡೆಯೂ ಆಗಿದ್ದಲ್ಲಿ ಒಣಗುತ್ತಿರುವ ಪೈರುಗಳಿಗೆ ಬಹು ಉಪಯೋಗವಾಗುವುದು.

ದಿವಾನರಾದ ಮ॥ ಟಿ. ಅನಂದರಾಯರ ಕಣ್ಣುಬೇನೆಯ ವಿಚಾರದಲ್ಲಿ ಒಬ್ಬ ಪತ್ರವ್ಯವಹಾರಕರು ಮದರಾಸಿನ "ಇಂಡಿಯನ್ ಪೇಟ್ರಿಯಟ್" ಎಂಬ ಆಂಗ್ಲಭಾಷಾಪತ್ರಿಕೆಯಲ್ಲಿ ಬರೆದಿರುವುದೇನೆಂದರೆ:—ಹಿಂದೆ ದಿವಾನರಾಗಿದ್ದ ಲೈ॥ ಸರ್ ಶೇಷಾದ್ರಿ ಅಯ್ಯರ್ ರವರು ೧೯೦೦ ರಲ್ಲಿ ಅಸ್ವಸ್ಥರಾಗಿದ್ದಾಗ್ಗೆ ಕಾಗದ ಪತ್ರಗಳನ್ನೋದಿ ಅವುಗಳಿಗೆ ರುಜುವನ್ನು ಮಾಡಲು ನೇತ್ರದೃಷ್ಟಿಯು ಚೆನ್ನಾಗಿದ್ದುದರಿಂದ ಕೊಂಚಕಾಲವೂ ವಿಶ್ರಾಂತಿಯನ್ನು ತೆಗೆದುಕೊಳ್ಳಲಪೇಕ್ಷಿಸದಿದ್ದಾಗ್ಯೂ, ಆಗ್ಗೆ ರೆಸಿಡೆಂಟರಾಗಿದ್ದ ಸರ್ ಡೊನಾಲ್ಡ್ ರಾಬರ್ಟ್ಸನ್ನರವರು ಅಯ್ಯರ ಅಸಮರ್ಥವಾದ ಕಾರ್ಯನಿರ್ವಾಹಕತ್ವವನ್ನು ಕುರಿತು ಆಕ್ಷೇಪಿಸಿ ರಜವನ್ನು ತೆಗೆದುಕೊಳ್ಳಬೇಕೆಂದು ನಿರ್ಬಂಧಪಡಿಸಿದರು. ಅಯ್ಯರವರು ಅದೇಪ್ರಕಾರ ರಜವನ್ನು ತೆಗೆದುಕೊಂಡು ಪುನಃ ಕೆಲಸಕ್ಕೆ ಬಾರದೆ ಹಾಗೆಯೇ ಉದ್ಯೋಗದಿಂದ ನಿವೃತ್ತರಾದರು.

ಪೋಲೀಸು ಇನ್ಸ್ಪೆಕ್ಟರುಗಳಾದ ಮಿ॥ ಎಸ್. ಎ. ಶ್ರೀನಿವಾಸರಾಯರು ಹೆಡ್ ಕ್ವಾರ್ಟರ್ ಇನ್ಸ್ಪೆಕ್ಟರಾಗಿ ಹಿಕೋಟೆಗೂ, ಮಿ॥ ಭೋಗಯ್ಯನವರು ಹೊಳೇ ನರಸೀಪುರದಿಂದ ರಾಜಧಾನಿಗೂ, ಮಿ॥ ಅನಂತರಾಮಯ್ಯಂಗಾರ್ಯರವರು ತರೀಕೆರೆಯಿಂದ ಹೊಳೆ ನರಸೀಪುರಕ್ಕೂ, ಮಿ॥ ಫೈಜ್ ಹುಸೇನರವರು ದಾವಣಗೆರೆಯಿಂದ ತರೀಕೆರೆಗೂ, ಮಿ॥ ದುಗ್ಗಯ್ಯನವರು ಚೆನ್ನಗಿರಿಯಿಂದ ದಾವಣಗೆರೆಗೂ, ಮಿ॥ ತಿರುಮಲರಾಯರು ಚಿಕ್ಕಮಗಳೂರಿಂದ ಚೆನ್ನಗಿರಿಗೂ, ಮಿ॥ ಕೆ. ರಾಮಚಂದ್ರರಾಯರು ಚಿಕ್ಕಮಗಳೂರಿಂದ ರಾಜಧಾನಿಗೂ, ಪೋಲೀಸು ಸ್ಕೂಲಿನಲ್ಲಿ ವ್ಯಾಸಂಗಮಾಡುವ ಮಿ॥ ಎ. ಶ್ರೀನಿವಾಸಯ್ಯಂಗಾರರು ಹೆಡ್ ಕ್ವಾರ್ಟರು ಇನ್ಸ್ಪೆಕ್ಟರಾಗಿ ಕಡೂರಿಗೂ, ಮಿ॥ ಕೇಶವರಾಯರು ಪೋಲೀಸು ಸ್ಕೂಲಿನಿಂದ ಹೆ॥ ಕ್ವಾ॥ ಇನ್ಸ್ಪೆಕ್ಟರಾಗಿ ಹಾಸನಕ್ಕೂ, ಮಿ॥ ಸಿ. ಎಸ್. ಕೃಷ್ಣಮೂರ್ತಿರಾಯರು ಚೆನ್ನಪಟ್ಟಣದಿಂದ ಹಾಸನ ತಾಲ್ಲೋಕಿಗೂ ವರ್ಗಾಯಿಸಲ್ಪಟ್ಟಿರುವರು.

ಯಳಂದೂರಿನ ನಿವಾಸಿಗಳು ತಮ್ಮ ಜಹಗೀರ್ದಾರರ ತಮ್ಮಂದಿರಾದ ಕೈ॥ ಪೂರ್ಣಯ್ಯನವರ ಮರಣವಾರ್ತೆಯನ್ನು ಕೇಳಿ ವಿಶೇಷವಾಗಿ ವ್ಯಸನಪಟ್ಟರಲ್ಲದೆ, ತಾ॥ ೧೬ ರಲ್ಲಿ ಒಂದು ಸಭೆಯನ್ನು ಅಮಲ್ದಾರರ ಅಧ್ಯಕ್ಷತೆಯಲ್ಲಿ ಸೇರಿಸಿ ಜಹಗೀರ್ದಾರರ ಸಹೋದರರು ಸರ್ಕಾರಿಯುದ್ಯೋಗದಲ್ಲಿ ಬಹುಕಾಲನಿರತರಾಗಿದ್ದ ಪ್ರಯುಕ್ತ, ಜಹಗೀರಿಯಭಿವೃದ್ಧಿಯ ಕಡೆಗೆ ಲಕ್ಷ್ಯವನ್ನು ಕೊಡಯತ್ನವಿಲ್ಲವಾಗಿದ್ದುದರಿಂದ ಬಹು ಹೀನಸ್ಥಿತಿಗೆ ಬಂದಿದ್ದ ತಮ್ಮ ತಾಲ್ಲೋಕನ್ನು ಅಭಿವೃದ್ಧಿಗೆ ತರಲು ವಿಶೇಷ ಶ್ರದ್ಧೆಯನ್ನು ವಹಿಸಿದ್ದ ಕೈ॥ ಪೂರ್ಣಯ್ಯನವರ ಆಕಸ್ಮಿಕ ಮರಣದಿಂದ ತಮಗುಂಟಾದ ಅಪಾರ ನಷ್ಟವನ್ನೂ, ದುಃಖವನ್ನೂ ಪ್ರದರ್ಶಿಸಿ ಜಹಗೀರ್ದಾರರಾದ ಸರ್ ಕೃಷ್ಣಮೂರ್ತಿಯವರಿಗೆ ಬಲಭುಜವಾಗಿದ್ದ ಸಹೋದರರ ವಿಯೋಗದುಃಖಪ್ರಾಪ್ತಿಗಾಗಿ ತಮ್ಮಗಳ ಅನುತಾಪವನ್ನು ತಿಳುಹಬೇಕೆಂದು ನಿರ್ಧರಿಸಿದರು. ಅದೇಪ್ರಕಾರ ಅವರಲ್ಲಿ ಪ್ರಮುಖರಾದವರು ಬೆಂಗಳೂರಿಗೆ ಹೋಗಿ ಸರ್ ಕೃಷ್ಣಮೂರ್ತಿಯವರನ್ನು ಕಂಡು ತಮ್ಮನುತಾಪವನ್ನು ತಿಳುಹಿಸಿ ಬಂದರು.

ರಾಜಧಾನಿಯ ಕೋಟೆಯಲ್ಲಿರುವ ಪೋಲೀಸ್ ಇ॥ ಜನರಲ್ ಮಿ॥ ಡಿ. ದೇವರಾಜ ಅರಸಿನವರ ಮನೆಯಲ್ಲಿ ಕಾವಲಿದ್ದ ಒಬ್ಬ ಪೋಲೀಸಿನವನು ಒಂದು ಪೆಟ್ಟಿಗೆಯನ್ನು ಅಪಹರಿಸಿದನೆಂದೂ, ಅವನು ಏನುಕಾರಣದಿಂದಲೋ ವಿಚಾರಣೆಗೆ ಗುರಿಮಾಡಲ್ಪಡದೆ ಬಿಡಲ್ಪಟ್ಟನೆಂದೂ ವದಂತಿಯಿದೆ. ಇದು ನಿಜವಾಗಿದ್ದ ಪಕ್ಷದಲ್ಲಿ ವಿಷಾದಕರವೇ ಸರಿ. ಜನರ ಮಾನಪ್ರಾಣ ಮತ್ತೂ ಧನವನ್ನು ರಕ್ಷಿಸುವುದಕ್ಕಾಗಿರುವ ಪೋಲೀಸರೇ "ಬೇಲಿಯೆದ್ದು ಹೊಲವನ್ನು ಮೇಯುವಂತೆ" ಕೃತ್ಯವನ್ನು ಮಾಡುವುದಾದರೆ, ಇನ್ನು ಚೋರವೃತ್ತಿಯಲ್ಲೇ ಇರುವವರನ್ನು ತಡೆಯುವವರಾರು? ಮತ್ತೂ ಈ ಪೋಲೀಸು ಶಾಖೆಯ ಮುಖ್ಯಾಧಿಕಾರಿಗಳ ಮನೆಯಲ್ಲೇ ಇಂತಹ ಕೃತ್ಯವನ್ನು ಮಾಡಿದವರು ಇನ್ನು ಬೀಟು ಹೋಗುವ ಕಡೆ ಇಂತಹ ಕೃತ್ಯವನ್ನು ಮಾಡದೆ ಇರುವರೆಂಬ ಭರವಸೆಯು ಎಲ್ಲಿಂದ ಬಂದೀತು? ಒಬ್ಬ ಪೋಲೀಸಾಳು ಮಾಡಿದ ಕೃತ್ಯವು ಆ ಶಾಖೆಗೇ ಕಳಂಕವನ್ನು ತರುವುದಾದುದರಿಂದ, ಇ॥ ಜ॥ ರವರ ಮನೆಯ ಕಾವಲಿನಲ್ಲಿದ್ದ ಪೋಲೀಸಾಳು ಚೋರಕೃತ್ಯವನ್ನು ನಡಿಯಿಸಿರುವುದು ನಿಶ್ಚಯವಾಗಿದ್ದಲ್ಲಿ, ಮೇಲ್ಪಟ್ಟಧಿಕಾರಿಗಳು ಅವನನ್ನು ಹಿಡಿದು ತಕ್ಕ ವಿಚಾರಣೆಯಿಂದ ಶಿಕ್ಷೆಗೆ ಗುರಿಮಾಡಿ ಇತರ ಉದ್ಯೋಗಿಗಳಿಗೆ ಎಚ್ಚರಿಕೆಯನ್ನುಂಟುಮಾಡುವರಾಗಲೆಂದು ಕೋರುತ್ತೇವೆ.

ಕಳೆದ ತಾ॥ ೧೮ ರ ರಾತ್ರಿ ರಾಜಧಾನಿಯ ಟವನ್ ಹಾಲಿನಲ್ಲಿ ಶ್ರೀಮನ್ಮಹಾರಾಜರವರ ನಾಟಕಸಂಘದವರು ಮಂದಾರವಲ್ಲೀ ಪರಿಣಯವನ್ನು ಬಹು ಶ್ಲಾಘ್ಯವಾಗಿ ಅಭಿನಯಿಸಿ ತೋರಿಸಿದರು. ಇವರಲ್ಲಿ ಪ್ರತಿಯೊಬ್ಬರೂ ತಂತಮ್ಮ ಪಾತ್ರವನ್ನು ಚೆನ್ನಾಗಭಿನಯಿಸಿದರು. ರಾಜಕಿರೀಟಿ ಪಾತ್ರವನ್ನು ವಹಿಸಿದ್ದ ಮಿ॥ ರಾಚಪ್ಪನವರ ಮಂಜುಳಸ್ವರವೂ ಹಾಡುಗಾರಿಕೆಯೂ ಕರ್ಣಾನಂದಕರವಾಗಿದ್ದು ಪ್ರೇಕ್ಷಕರ ತಲೆಯನ್ನು ತೂಗಿಸುತ್ತಿದ್ದಿತು. ಆದರೂ ಅವರ ಶಾರೀರವು ಸ್ತ್ರೀಶಾರೀರಕ್ಕನುಗುಣವಾಗಿರುವುದರಿಂದ, ಅವರು ಪುರುಷ ವೇಷಕ್ಕಿಂತ ಸ್ತ್ರೀವೇಷಕ್ಕೆ ಚೆನ್ನಾಗೊಪ್ಪುವರು. ಈ ಕಥಾನಾಯಿಕೆಯಾದ ಮಂದಾರವಲ್ಲಿಯ ಪಾತ್ರವು ಬಹು ಮುಖ್ಯವಾದುದರಿಂದ ಮತ್ತೂ ಆಕೆಯು ಗಂಧರ್ವಸ್ತ್ರೀ ಯಾದುದರಿಂದ ಆ ಪಾತ್ರವನ್ನು ಉತ್ತಮವಾಗಿ ಅಭಿನಯಿಸತಕ್ಕ ಮತ್ತೂ ಇಂಪಾಗಿ ಹಾಡತಕ್ಕವರೇ ವಹಿಸುವುದುತ್ತಮವೆಂದು ಸೂಚಿಸುವೆವು. ಆ ರಾತ್ರಿ ತೋರಿಸಲ್ಪಟ್ಟ ಜಲಪ್ರಪಾತವೂ, ಕಾಳಿಯ ಪ್ರತ್ಯಕ್ಷತೆಯೂ ಪ್ರೇಕ್ಷಕರಿಗೆ ವಿಸ್ಮಯವನ್ನುಂಟುಮಾಡಿದುವು. ಈ ಸುಧಾರಣೆಯೆಲ್ಲವೂ ಈ ಸಂಘದ ಮೇಲ್ವಿಚಾರಕರಾದ ಸರದಾರ್ ಗೋಪಾಲರಾಜ ಅರಸಿನವರ ಸಂಪೂರ್ಣವಾದ ಆಸಕ್ತಿಯೇ ಕಾರಣವಾಗಿದೆ. ಇವರ ಆಸಕ್ತಿಯು ಸ್ಥಿರವಾಗಿದ್ದಲ್ಲಿ ಈ ನಾಟಕ ಸಂಘವು ಬೊಂಬಾಯಿಯಲ್ಲಿ ಮುಖ್ಯವೆನಿಸಿಕೊಂಡಿರುವ ನಾಟಕಸಂಘಗಳಿಗೆ ಸಮಾನವೆಂದೆನಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲವು. ಈ ಸಂಘದವರು ಬರುವ ಸೆಪ್ಟಂಬರ್ ತಿಂಗಳಲ್ಲಿ ವೀರಸಿಂಹಚರಿತ್ರೆಯನ್ನು ಅಭಿನಯಿಸಿ ತೋರಿಸಿ ಅದರಿಂದುತ್ಪನ್ನವಾಗುವ ಹಣವನ್ನು ರಿಲೀಫ್ ಫಂಡಿಗೆ ಕೊಡಲು ವಾಗ್ದಾನಮಾಡಿರುತ್ತಾರೆ. ಇದು ಅವರಿಗೆ ಭೂಷಣವೇ ಸರಿ.

ದಾವಣಗೆರೆಯ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಿಂದ ಸುಲಿಗೆಯನ್ನು ಮಾಡಿದ ಅಪರಾಧಕ್ಕಾಗಿ ಸೆಷನ್ಸ್ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದ ೩ ಜನ ಕೊರಚರನ್ನು ಒಬ್ಬ ಪೋಲೀಸ್ ದಫೇದಾರನೂ, ೫ ಜನ ಕಾನಸ್ಟೇಬಲುಗಳೂ ಮದ್ದುಗುಂಡುಗಳನ್ನು ತೆಗೆದುಕೊಂಡು ಚಿತ್ರಕಲ್ ದುರ್ಗಕ್ಕೆ ಕರೆದುಕೊಂಡು ಹೋಗುವಾಗ್ಗೆ ಭರ್ಮಸಾಗರದಲ್ಲಿ ತಂಗಿ ಬುತ್ತಿಯನ್ನವನ್ನು ತಿಂದು, ಪುನಃ ಹೊರಡುವ ಸಮಯದಲ್ಲಿ ದಫೇದಾರನು "ನನಗೇತಕ್ಕೋ ಆಯಾಸವಾಗಿದೆಯಾದುದರಿಂದ ನಾನು ಈಗ ನಿಮ್ಮ ಕೂಡ ನಡೆಯಲಾರೆ. ನೀವು ಕಳ್ಳರನ್ನು ಕರೆದುಕೊಂಡು ವಿಜಾಪುರಕ್ಕೆ ಹೋಗಿ ಅಲ್ಲಿ ಈ ರಾತ್ರಿ ತಂಗಿರಿ. ನಾನು ಮಾರನೆಯ ಬೆಳಗ್ಗೆ ಬಂದು ನಿಮ್ಮನ್ನು ಸೇರುತ್ತೇನೆ." ಎಂದು ಹೇಳಿದನು. ಆ ೫ ಜನ ಕಾನಸ್ಟೇಬಲುಗಳು ಅದೇಪ್ರಕಾರ ೩ ಜನ ಕಳ್ಳರನ್ನು ಕರೆದುಕೊಂಡು ಹೋಗುತ ವಿಜಾಪುರದಿಂದ ೩ ಮೈಲಿ ಈಚೆಗೆ ಆ ಕಳ್ಳರು ನೀರನ್ನು ಕುಡಿಯಬೇಕೆಂದು ಹೇಳಲು ಪೋಲೀಸಿನವರು ಕಳ್ಳರ ಕೈಕೋಳಗಳನ್ನು ಬಿಚ್ಚಿದರು. ಆ ಕಳ್ಳರು ನೀರನ್ನು ಕುಡಿದಮೇಲೆ ಪೋಲೀಸರ ಮೇಲೆ ಬಿದ್ದು ಪ್ರಹರಿಸಿ ಕಾಲಿಗೆ ಬುದ್ಧಿಯನ್ನು ಹೇಳಿದರು. ಮಾರನೆಯ ಬೆಳಗ್ಗೆ ದಫೇದಾರನು ವಿಜಾಪುರಕ್ಕೆ ಬಂದು ನೋಡುವಲ್ಲಿ ಕಳ್ಳರು ಪಲಾಯನರಾಗಿದ್ದರು. ಕಳ್ಳರನ್ನು ಬಿಟ್ಟ ಅಪರಾಧಕ್ಕಾಗಿ ದಾವಣಗೆರೆ ಅ॥ ಕ॥ ಮ್ಯಾಜಿಸ್ಟ್ರೇಟರು ದಫೇದಾರನಿಗೆ ೨ ತಿಂಗಳ ಸಾಧಾರಣ ಕಾರಾಗೃಹವಾಸದ ಶಿಕ್ಷೆಯನ್ನೂ ೨೦ ರೂ. ದಂಡವನ್ನೂ, ಉಳಿದ ೫ ಕಾನಸ್ಟೇಬಲುಗಳಿಗೆ ಪ್ರತಿಯೊಬ್ಬನಿಗೂ ಒಂದು ತಿಂಗಳ ಸಾಧಾರಣ ಕಾರಾಗೃಹವಾಸ ಶಿಕ್ಷೆಯನ್ನೂ ಮತ್ತೂ ೧೦ ರೂ. ದಂಡವನ್ನೂ ವಿಧಿಸಿದ್ದರು. ಇದರಮೇಲೆ ಶಿವಮೊಗ್ಗೆಯ ಸೆಷನ್ಸ್ ಜಡ್ಜರಲ್ಲಿ ಅಪೀಲಾಗಿ ದಫೇದಾರನೊಬ್ಬನುಮಾತ್ರ ನಿರ್ದೋಷಿಯೆಂದು ಬಿಡಲ್ಪಡಲು ಸರ್ಕಾರದವರು ಚೀಫ್ ಕೋರ್ಟಿಗೆ ಅಪೀಲನ್ನು ಮಾಡಿರುವಲ್ಲಿ, ದಫೇದಾರನು ತಪ್ಪಿತಸ್ಥನೆಂದೇ ನಿರ್ಧರವಾಗಿ ಹಿಂದೆ ವಿಧಿಸಲ್ಪಟ್ಟಿದ್ದ ಶಿಕ್ಷೆಗೆ ಗುರಿಮಾಡಲ್ಪಟ್ಟನು.

ವರ್ತಮಾನ ಸಂಗ್ರಹ.

ಮಹಮ್ಮದಾಬಾದಿನ ರಾಜರು ಮಹಮ್ಮದೀಯರ ಸರ್ವಕಲಾಶಾಲೆಯ ಸ್ಥಾಪನೆಯ ಫಂಡಿಗೆ ೧ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು.

ಕಳೆದ ಏಪ್ರಿಲ್ ತಾ॥ ೧ ರಿಂದ ಈ ಅಗಸ್ಟ್ ೫ ರ ವರೆಗೆ ಭರತಖಂಡದ ಎಲ್ಲ ಲೋಹಮಾರ್ಗದ ಬಂಡಿಗಳಿಂದ ೧೮೪೪೩೫೬ ರೂ. ಉತ್ಪತ್ತಿಯಾಗಿರುತ್ತದೆ.

ಭೂಪಾಲಿನ ಬೇಗಂರವರು ಸ್ವಿಟ್ಜರ್ಲೆಂಡಿಗೆ ಹೋಗಿದ್ದಾಗ್ಗೆ ತಮ್ಮ ಪ್ರಜೆಗಳುಪಯೋಗಾರ್ಥವಾಗಿ ೪೦೦೨ ಬೆಳ್ಳಿಯ ಮತ್ತು ಭಂಗಾರದ ಗಡಿಯಾರಗಳನ್ನು ಕೊಂಡುಕೊಂಡರು.

ಜಲಾಲಾಬಾದಿನ ಒಂದು ಅಂಗಡಿಯಬೀದಿಗೆ ಬೆಂಕಿಯು ಬಿದ್ದು ೨೦ ಅಂಗಡಿ ಮನೆಗಳು ಸುಟ್ಟು ಭಸ್ಮವಾದುವು. ಅಷ್ಟರಲ್ಲಿ ಸೈನಿಕರು ಬಂದು ಸಾಹಸದಿಂದ ಬೆಂಕಿಯನ್ನಾರಿಸಿದರು.

ತುರ್ಕಿಯ ಸುಲ್ತಾನನು ಭೂಪಾಲಿನ ಬೇಗಂರವರಿಗೆ ಜ್ಞಾಪಕಾರ್ಥವಾಗಿ ಭಂಗಾರದಿಂದ ಕೆಲಸಮಾಡಲ್ಪಟ್ಟಿರುವ ಒಂದು ಕೈಗನ್ನಡಿಯನ್ನೂ ಅಮೋಘವಾದ ರೇಷ್ಮೆಯ ಜಂಖಾನಾಗಳನ್ನೂ ಬಹುಮಾನಿಸಿದನು.

ಸ್ಪೇನ್ ರಾಜ್ಯದಲ್ಲಿ ಕಳೆದ ಜುಲೈ ತಾ॥ ೨೬ ರಲ್ಲಿ ಅತಿ ದೊಡ್ಡ ಮಳೆಯು ಬಂದು ಪ್ರಪಂಚದ ಸುಂದರವಾದ ಕಟ್ಟಡಗಳಲ್ಲೊಂದಾದ ಪ್ರಸಿದ್ಧ ದೇವಸ್ಥಾನಕ್ಕೆ ಸಿಡಿಲು ಬಡಿದು ಕಟ್ಟಡವು ಕೊಂಚ ಶಿಥಿಲವಾಗಿರುವುದು.

ಬರುವ ಡಿಸೆಂಬರಿನಲ್ಲಿ ಜರಗುವ ಭರತಖಂಡದ ಸಾರ್ವಜನಿಕ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿರುವ ಮಿ॥ ರಾಮ್ಸೆ ಮೆಕ್ಡೊನಾಲ್ಡ್ ರವರು ಡಿಸೆಂಬರ್ ತಾ॥ ೧ ರಲ್ಲಿ ಭರತಖಂಡಕ್ಕೆ ಪ್ರಯಾಣಮಾಡುವರು.

ಚೈನಾಕ್ಕೆ ಸೇರಿದ ಅನ್ಹೋಯಿ ಪ್ರಾಂತದಲ್ಲಿ ನದಿಗಳ ಪ್ರವಾಹವು ವಿಪರೀತವಾಗಿ ಬಂದು ೨೫೦೦೦ ಎಕರೆ ಭೂಮಿಯಲ್ಲಿಟ್ಟಿದ್ದ ಬತ್ತದ ಬೆಳೆಯು ನಾಶವಾಯಿತು. ಈ ಪ್ರವಾಹದ ಅನಾಹುತದಿಂದ ೫ ಲಕ್ಷ ಜನರು ನಿರ್ಗತಿಕರಾಗಿರುವರು.

ಕಿರೀಟಧಾರಣ ಮಹೋತ್ಸವ ಸಮಯದಲ್ಲಿ ಡಿಲ್ಲಿ ಪಟ್ಟಣದ ಮಾರ್ಗಗಳಲ್ಲಿ ಜನರೂ, ಮೊಟಾರು, ರೈಲು ಮೊದಲಾದ ಬಂಡಿಗಳೂ ತಿರುಗಾಡುವಾಗ ಧೂಳೇಳದಿರುವುದಕ್ಕಾಗಿ ೫೦ ಮೈಲಿ ವಿಸ್ತೀರ್ಣದ ವರೆಗೆ ಎಣ್ಣೆಯನ್ನು ಚಿಮುಕಿಸಬೇಕೆಂದು ನಿರ್ಧರಿಸಲಾಗಿರುವುದು.

ಜರ್ಮನಿಯ ಚಕ್ರವರ್ತಿಯವರು ಈ ತಿಂಗಳಲ್ಲೂ ಮುಂದಿನ ತಿಂಗಳಲ್ಲೂ ತಮ್ಮ ಸೇನೆಯನ್ನು ಪರಾಮರಿಸುವರು. ಆ ಕಾಲದಲ್ಲಿ ಚಕ್ರವರ್ತಿನಿಯವರೂ, ಯುವರಾಣಿಯವರೂ ಕರ್ನಲ್ ಉಡುಪುಗಳನ್ನು ಧರಿಸಿಕೊಂಡು ಸೇನಾನಾಯಕತ್ವವನ್ನು ವಹಿಸುವರು.

ಮಹಮ್ಮದೀಯರ ಯಾತ್ರಾಸ್ಥಳಗಳಾದ ಮೆಕ್ಕಾಕ್ಕೆ ಮತ್ತೂ ಮದೀನಾಕ್ಕೆ ಹೋಗಿ ಬರುವ ಪ್ರತಿಯೊಬ್ಬ ಹಾಜಿಯು ೩ ರೂಪಾಯಿಗಳನ್ನು ಕೊಟ್ಟು ಪ್ಯಾಸ್ ಪೋರ್ಟ್ ನ್ನು ತೆಗೆದುಕೊಳ್ಳಬೇಕೆಂದು ತುರ್ಕಿಯ ಸರ್ಕಾರದವರು ವಿಧಿಸಿರುವುದನ್ನು ತಪ್ಪಿಸಲು ಅವರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಬೊಂಬಾಯಿಯ ಮಹಮ್ಮದೀಯರು ಸಭೆ ಸೇರಿ ನಿರ್ಧರಿಸಿದರು.

ಎರಡನೆಯ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೩೦೫೪ ಜನರಿಗೆ ಪ್ಲೇಗು ರೋಗವು ತಗಲಿ ೨೪೮೪ ಜನರು ಸತ್ತರು. ಇವರಲ್ಲಿ ಬೊಂಬಾಯಿಯಾಧಿಪತ್ಯದಲ್ಲಿ ಬಹಳ ಹೆಚ್ಚಾಗಿ ಎಂದರೆ ೧೬೩೨; ಮದ್ರಾಸಿನಾಧಿಪತ್ಯದಲ್ಲಿ ೨೦೩; ಬಂಗಾಳದಲ್ಲಿ ೩೮; ಸಂಯುಕ್ತಪ್ರಾಂತಗಳಲ್ಲಿ ೧೩; ಪಂಜಾಬಿನಲ್ಲಿ ೨೪; ಬರ್ಮಾದಲ್ಲಿ ೫೮; ಮಧ್ಯಪ್ರಾಂತಗಳಲ್ಲಿ ೧೭; ಮೈಸೂರು ಸೀಮೆಯಲ್ಲಿ ೪೩೩ ಮತ್ತೂ ಹೈದರಾಬಾದಿನಲ್ಲಿ ೧೦೫ ಈ ಪ್ರಕಾರ ಮರಣಗಳಾಗಿರುತ್ತವೆ.

ರಷ್ಯಾದ ಒಂದು ಹಳ್ಳಿಯಲ್ಲಿ ಮಳೆಯು ಬಾರದೆ ನಿಂತಿದ್ದ ಪೈರುಗಳೆಲ್ಲವೂ ಒಣಗುತ್ತಿದ್ದಮೇಲೆ ಆ ಗ್ರಾಮದ ಕನ್ನೆಯರೂ ವಿಧವೆಯರೂ, ವಿಶೇಷ ಮದ್ಯಪಾನದಿಂದ ಕೆಲ ದಿನಗಳ ಕೆಳಗೆ ಸತ್ತುಹೋಗಿದ್ದ ಒಬ್ಬ ಮದ್ಯಪಾಯಿಯ ಸಮಾಧಿಯಮೇಲೆ ನೀರನ್ನು ಸುರಿದರೆ ಮಳೆಯು ಬರುತ್ತದೆಂಬ ನಂಬುಗೆಯಿಂದ ಸಾವಿರಾರು ಕೊಡಗಳ ನೀರನ್ನು ಬಾವಿಯಿಂದ ಸೇದಿ ತಂದು ಹುಯಿದರು. ಮತ್ತೂ ಇದರ ನೆರೆ ಗ್ರಾಮದಲ್ಲಿ ಮಳೆಯನ್ನು ಬರಿಸುವುದಕ್ಕೋಸ್ಕರ ಒಬ್ಬ ವೃದ್ಧ ಮಾಟಗಾತಿಯನ್ನು ನೀರಿನಲ್ಲಿ ಮುಣುಗಿಸಿ ಎತ್ತಿಸಿದರಂತೆ. ಈ ಮೂಢಭಕ್ತಿಯು ಯಾವದೇಶದಲ್ಲಿ ತಾನೇ ತಪ್ಪಿರುವುದು?

ಪುದುಚೇರಿಯಲ್ಲಿ ರೋಮನ್ ಕೆಥೋಲಿಕ್ ಅನಾಥಾಲಯದಲ್ಲಿ ೨೫ ವರ್ಷ ವಯಸ್ಸಿನ ಒಬ್ಬ ಯುವತಿಯು ತಲೆಯ ನೋವಿನಿಂದ ಬಹು ವ್ಯಥೆಪಡುತ್ತಿರುವಲ್ಲಿ, ಆ ಅನಾಥಾಲಯದ ಕನ್ಯಾಸ್ತ್ರೀಯರಲ್ಲೊಬ್ಬಾಕೆಯು ಹಿಂದೆ ಯಾವಾಗಲೋ ಹೊಟ್ಟೆಗೆ ಕೊಡುವ ಔಷಧವನ್ನಿಟ್ಟಿದ್ದ ಸೀಸೆಯಲ್ಲಿ ಈಚೆಗೆ ಕಾರ್ಬಾಲಿಕ್ ದ್ರಾವಕವಿರುವುದನ್ನರಿಯದೆ ಪುದಿಯ ಕೂಡ ಸೇರಿಸಿ ಆ ಯುವತಿಗೆ ಕೊಟ್ಟಳು. ಆಕೆಯು ೧—೨ ಬೊಟ್ಟುಗಳನ್ನು ಬಾಯಲ್ಲಿ ಹಾಕಿಕೊಂಡು ರುಚಿಯನ್ನೋಡಿ ಹೀಗೇಕೆ ಇದೆಯೆಂದು ಹೇಳಲು, ಆ ಕನ್ಯಾಸ್ತ್ರೀಯು, ಆ ಔಷಧವು ಕುಡಿಯಲಿಕ್ಕೆ ರುಚಿಯಾಗಿಲ್ಲದಿದ್ದರೂ ನಿನ್ನ ರೋಗವನ್ನು ಖಂಡಿತವಾಗಿ ಗುಣಪಡಿಸುತ್ತದೆಯೆಂದು ನಾನಾವಿಧವಾಗಿ ಭರವಸೆಯನ್ನು ಕೊಟ್ಟು ಕುಡಿಸಿಬಿಟ್ಟಳು. ಆ ಯುವತಿಯು ಕುಡಿದ ಕೊಂಚಹೊತ್ತಿನಲ್ಲಿ ಬಹು ಸಂಕಟಪಡಲಾರಂಭಿಸಲು ಕನ್ಯಾಸ್ತ್ರೀಯು ಆ ಸೀಸೆಯಲ್ಲಿ ದ್ರಾವಕವಿದ್ದುದನ್ನು ತಾನು ಕಾಣದೆಕೊಟ್ಟು ಅಚಾತುರ್ಯವುಂಟಾಯಿತೆಂದು ಬಹುಚಿಂತಿಸಿ ಆ ಕೂಡಲೇ ವೈದ್ಯರನ್ನು ಕರೆಯಿಸಿ, ನಾನಾವಿಧವಾದ ಚಿಕಿತ್ಸೆಯನ್ನು ಮಾಡಿಸಿದಾಗ್ಯೂ ಆಕೆಯು ಬದುಕದೆ ಸತ್ತುಹೋದಳು. ಅದುಕಾರಣ ಔಷಧೋಪಚಾರವನ್ನು ಮಾಡತಕ್ಕವರು ಯಾವಾಗಲೂ ಬಹು ಜಾಗರೂಕರಾಗಿರಬೇಕು.

ನದಿಗಳ ಪ್ರವಾಹದ ಅನಾಹುತದಿಂದ ವಿಪನ್ನರಾದವರ ಸಹಾಯಾರ್ಥವಾಗಿ ರಾಜಧಾನಿಯಲ್ಲೇರ್ಪಟ್ಟಿರುವ ಫಂಡಿಗಾಗಿ "ಮೈಸೂರ್ ಸ್ಟಾರ್" ಆಫೀಸಿಗೆ ಚಂದಾದ್ರವ್ಯವು ಬಂದಿರುವುದರ ವಿವರ:—

ಮ॥ ಗಳಾದ	ರೂ. ಅ. ಪೈ.
" ವೈ. ವಿರೂಪಾಕ್ಷಯ್ಯನವರಿಂದ	೬—೦—೦
" ಲಿಂಗಣ್ಣ ಅಂಡ್ ಸನ್ಸ್ ಯವರಿಂದ	೨—೦—೦
" ಒಬ್ಬ ದಯಾಳುಗಳಿಂದ	೨—೦—೦
" ಸಿಟಿ ಹಾಲ್ ಸುಬ್ಬರಾವ್ ಯವರಿಂದ	೨—೦—೦
" ಮಳಿಗೆ ನರಸಣ್ಣ ಬಾಪಣ್ಣನವರಿಂದ	೨—೦—೦
" ಜನರಲ್ ಏಜನ್ಸಿ ಎಲ್. ರಾಮಚಂದ್ರರಾಯರಿಂದ	೨—೦—೦
" ಎಚ್. ಜಿ. ಸಿದ್ದಲಿಂಗಪ್ಪ ಅಂಡ್ ಕಂಪೆನಿಯವರಿಂದ	೨—೦—೦
" ಕೊಹಿನೂರ್ ಪ್ರೆಸ್ ಪ್ರೊ॥ ವೆಂಕಪ್ಪಯ್ಯನವರಿಂದ	೧—೦—೦
ಒಟ್ಟು	೧೯—೦—೦

ಈ ಮೊಬಲಗನ್ನು ನಾವು ವಿಶ್ವಾಸಪೂರ್ವಕವಾಗಿ [illegible] ರಿಲೀಫ್ ಫಂಡಿನ ಸೆಕ್ರೆಟರಿಯವರಿಗೆ ಕಳುಹಿಸಿರುತ್ತೇವೆ.

ವ್ಯವಸಾಯಕ ವಿಷಯಗಳು.

ಕಿರಬೂಜದ ಹಣ್ಣಿನ ಸಿಪ್ಪೆಯನ್ನು ನೆರಳಿನಲ್ಲಿ ಒಣಗಿಸಿ ಸಣ್ಣಗೆ ಪುಡಿಮಾಡಿ ಕುದಿಯುತ್ತಿರುವ ಹಾಲಿನ ಮೇಲುಗಡೆಯಲ್ಲಿ ಉದುರಿಸಿದರೆ ಸ್ವಲ್ಪ ಹೆಚ್ಚು ಕಡಿಮೆ ಒಂದು ಅಂಗುಲ ದಪ್ಪನಾಗಿ ಕೆನೆ ಕಟ್ಟುತ್ತದೆ. ಈ ಕೆನೆಯನ್ನು ತೆಗೆದುಕೊಂಡು ಪುನಃ ಮೇಲ್ಕಂಡ ಪುಡಿಯನ್ನು ಹಾಕಿದರೆ ಮತ್ತೊಂದಾವೃತ್ತಿ ಅಷ್ಟೇ ಮಂದವಾಗಿ ಕೆನೆಗಟ್ಟುವುದು.

ಇನಾಂ, ಬಾಯಂಗುತ್ತಾ ಮತ್ತು ಜೋಡಿ ಗ್ರಾಮಗಳ ಜಮೀನುಗಳಲ್ಲಿರತಕ್ಕ ಗಂಧದ ಮರಗಳಿಗಾಗಿ ಸರ್ಕಾರದಿಂದ ಸಲ್ಲತಕ್ಕ ರುಸುಮನ್ನು ಖಡೀಂ ಹಿಡುವಳಿದಾರರ ಜಮೀನಿನಲ್ಲಿರತಕ್ಕ ಮರಗಳಿಗಾಗಿ ಖಡೀಂ ಹಿಡುವಳಿದಾರರಿಗೂ ಉಳಿದ ಇನಾಂ ಜಮೀನುಗಳಲ್ಲಿರುವವುಗಳಿಗಾಗಿ ಇನಾಂದಾರರಿಗೂ ಪಾವತಿ ಮಾಡಬೇಕೆಂದು ಸರ್ಕಾರದವರು ತೀರ್ಮಾನಿಸಿದ್ದಾರೆ.

ರೈತರು ಈಚೆಗೆ ವರ್ಷಂಪ್ರತಿಯಲ್ಲೂ ಸೆಣಬಿನ ಪೈರನ್ನು ವಿಶೇಷವಾಗಿ ಹಸುರು ಗೊಬ್ಬರಕ್ಕಾಗಿ ಉಪಯೋಗಿಸುತ್ತಿರುವರು. ಇದು ಆರೇಳು ವಾರಗಳಲ್ಲಿ ಆರೇಳು ಅಡಿಗಳ ಎತ್ತರವಾಗಿ ಬೆಳೆಯುವುದಲ್ಲದೆ ಇದರಲ್ಲಿ ಸೊಪ್ಪು ಬಹಳ ಸೊಂಪಾಗಿ ಆಗುವುದು. ಇದನ್ನು ಜಮೀನುಗಳಲ್ಲಿ ತುಳಿದು ಉತ್ತರೆ ಭತ್ತದ ಪೈರಿಗೆ ಒಳ್ಳೇ ಗೊಬ್ಬರವಾಗಿ ಉತ್ಪತ್ತಿಯು ಬಹಳ ಜಾಸ್ತಿಯಾಗುವುದು.

ತಿರುಚನಾಪಳ್ಳಿಯಲ್ಲಿರುವ ಡೆಪ್ಯುಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ರವರ ಬಳಿಯಲ್ಲಿ ಹಸರು ಗೊಬ್ಬರಕ್ಕಾಗಿ ಉಪಯೋಗಿಸಲ್ಪಡುವ ಅನೇಕ ತರಹ ಪೈರುಗಳ ಬಿತ್ತನೆ ಬೀಜಗಳು ಯಥೇಚ್ಛವಾಗಿರುವುವು. ತಮ್ಮ ತರೀ ಜಮೀನುಗಳಲ್ಲಿ ಹಸರು ಗೊಬ್ಬರಕ್ಕಾಗಿ ಪೈರುಗಳನ್ನು ಬೆಳೆಸಲು ಅಪೇಕ್ಷೆ ಇರುವವರೆಲ್ಲರೂ ಅವರಿಗೆ ಬರೆದು ಬಿತ್ತಗಳನ್ನು ತರಿಸಿಕೊಳ್ಳಬಹುದು.

ಅಮೇರಿಕಾದೇಶದ ನ್ಯೂಯಾರ್ಕ್ ರಾಜ್ಯದ, ಬೆನ್ನಾಂಗೋ ಡಿಸ್ಟ್ರಿಕ್ಟಿಗೆ ಸೇರಿದ ಕರ್‌ಬೌರ್ನ ಎಂಬ ಗ್ರಾಮದಲ್ಲಿ ಪ್ರಪಂಚದ ಹಸುಗಳಲ್ಲೆಲ್ಲಾ ಬಹಳ ಹೆಚ್ಚಾಗಿ ಹಾಲು ಕರೆಯತಕ್ಕ ಹಸುವಿದೆ. ಇದರ ಹೆಸರು ಡಿಕಾಲ್ ಕ್ವೀನ್ ಪಾಲ್ಕಾ II. ಇದು ದಿನಕ್ಕೆ ೫ ಮಣ ಹಾಲು ಕೊಡುತ್ತದೆ ಮತ್ತು ಒಂದು ವಾರದ ಹಾಲಿನಲ್ಲಿ ಸುಮಾರು ೧॥ ಮಣ ಬೆಣ್ಣೆ ಸಿಕ್ಕುವುದು. ಈ ಹಸುವಿನ ಸುಮಾರು ೧ ತಿಂಗಳು ವಯಸ್ಸಿನ ಒಂದು ಹೋರಿಗರುವನ್ನು ೭,೫೦೦ ರೂಪಾಯಿಗಳಿಗೆ ಅದರ ಮಾಲೀಕನು ಮಾರಲು ಒಪ್ಪಲಿಲ್ಲವಂತೆ. ೧೫ ಸಾವಿರ ರೂಪಾಯಿಗಳಿಗೆ ಕಡಿಮೆಯಾಗಿ ಆ ಕರುವನ್ನು ವಿಕ್ರಯಿಸಲಾರನೆಂದು ಹೇಳುವರು. ಕೆ. ಗೆ.

ಪತ್ರವ್ಯವಹಾರ.

ಪ್ರಸಿದ್ಧ ಪೈಲ್ವಾನರ ಜಂಗೀ ಕುಸ್ತಿಗಳು

ಧಾರವಾಡಜಿಲ್ಲಾ ಗದಗ ತಾ॥ ಪೈಕಿ ಮುಳಗುಂದದಲ್ಲಿ ಮುರಿಗೆಪ್ಪಾ ಕೆಂಭಾವಿ ಇವರ ಥೇಟರಿನಲ್ಲಿ ಭಾದ್ರಪದ ಶು॥ ೭ ಯಿಂದ ೧೧ ವರೆಗೆ ನಡೆಯುತ್ತವೆ. ಈ ವರೆಗೆ ೨೦ ಜತೆಯಾಗಿರುವುವು. ಆ ಮಿತಿಗೆ ಬಂದಂಥ ಪೈಲ್ವಾನರ ಕುಸ್ತಿ ಮಾಡಿಸಲ್ಪಟ್ಟು ಬಹುಮಾನಗಳು ಕೊಡಲ್ಪಡುವುವು.

ಮ್ಯಾನೇಜರ್ ಮುರಿಗೆಪ್ಪ, ಕೆಂಭಾವಿ

ದಾವಣಗೆರೆ.

ಕಳೆದ ತಾ॥ ೬ ನೇಯ ಸೋಮವಾರದ ದಿನ ಸಾಯಂಕಾಲ ಶ್ರೀ ಬಕ್ಕೇಶ್ವರ ದೇವಸ್ಥಾನದಲ್ಲಿ ವೇ॥ ತೆಲಗಿಮಠದ ಚಂದ್ರಶೇಖರಶಾಸ್ತ್ರಿಗಳವರು ಪ್ರತಿದಿನದಂತೆ ಪುರಾಣವನ್ನು ಪೂರೈಸಿ, ಉಪನ್ಯಾಸಕರಾದ ಮ॥ ರಾ॥ ಮಾಗಾನಹಳ್ಳಿ ಸಂಗಪ್ಪನವರು ಕೆಲವು ಅಪರಿಹಾರ್ಯ ಕಾರಣದಿಂದ ಬಾರದ ಪ್ರಯುಕ್ತ ಸದರಿ ವೇ॥ ಚಂದ್ರಶೇಖರಶಾಸ್ತ್ರಿಗಳವರೇ "ಆಚಾರ" ಎಂಬ ವಿಷಯದಮೇಲೆ ಉಪನ್ಯಾಸಮಾಡಿದರು. ಅದರಸಾರಾಂಶವೇನೆಂದರೆ– ಈ ವೀರಶೈವ ಮತವು ಪೂರ್ವದಲ್ಲಿ ತನ್ನ ನೈಜವಾದ ಆಚಾರಧರ್ಮಗಳನ್ನು ಬಿಡದೆ ಈಚೆಗೆ ಕಾರಣಾಂತರಗಳಿಂದಲೂ, ಈ ಮತದ ಗುರುಪರಂಪರೆಯವರು ತಮಗೆ ಸಾಕಾದಷ್ಟು ವೈದಿಕ ವಿದ್ಯಾಪಾಂಡಿತ್ಯವು ಸಂಪಾದಿಸಿ ಶಿಷ್ಯ ಸಮುದಾಯವನ್ನು ಉಪದೇಶದ ಬಲದಿಂದ ಸದಾಚಾರಸಂಪನ್ನರನ್ನಾಗಿ ಮಾಡುತ್ತ ಬಾರದಿರುವುದರಿಂದಲೂ ನೈಜವಾದ ಆಚಾರಗಳು ಅಳಿದುಹೋದವು. ಧರ್ಮಾಚಾರಗಳನ್ನು ಸರಿಪಡಿಸುವುದು ಧರ್ಮಗುರುಗಳ ಮುಖ್ಯಕರ್ತವ್ಯವಾಗಿರುವುದು. ಇಂತಹ ಮುಖ್ಯಕರ್ಮದಿಂದ ಧರ್ಮಗುರುಗಳು ವಿಮುಖರಾದುದರಿಂದ ಈ ಜನಾಂಗದವರು ವಿಧ್ಯುಕ್ತವಾದ ಆಹ್ನಿಕ ಆಚಾರಗಳನ್ನು ಬಿಟ್ಟು ಅನವಶ್ಯಕಾನುಕೃತಗಳಾದ ಆಚಾರಗಳನ್ನು ಹಿಡಿದು ಸರಿಬಿದ್ದುದೆಲ್ಲಾ ಸದಾಚಾರವೆಂದು ತಿಳಿದು, ನಿರಂಕುಶರಾಗಿ ನಡೆಯುತ್ತ ಬಂದುದರಿಂದಲೇ ಅನೇಕ ವಿಧವಾದ ಅನಾಚಾರಗಳು ತಲೆದೋರಿರುತ್ತವೆ. ಈ ಮತದ ಆಶ್ರಮಾನುಸಾರವಾಗಿ ಆಚಾರಗಳು ಏಕರೂಪತೆಯನ್ನು ಹೊಂದಲು ಮತಗ್ರಂಥಗಳನ್ನು ಪಂಡಿತರ ಸಹಾಯದಿಂದ ಪರಿಶೋಧಿಸಿ ಅದರಲ್ಲಿ ಹೊರಡುವ ಧರ್ಮಸಾರವನ್ನು ನ್ಯೂನಾತಿರೇಕಗಳು ತೋರದ ಹಾಗೆ ಏಕಮುಖವಾಗಿ ಸರಿಪಡಿಸಿ, ಗ್ರಾಮಗ್ರಾಮಾಂತರಗಳಲ್ಲಿ ಉಪದೇಶಕರ ಸಹಾಯದಿಂದಲೂ, ಸಣ್ಣ ಸಣ್ಣ ಪುಸ್ತಕಗಳ ರೂಪದಿಂದಲೂ, ಪ್ರಚುರಗೊಳಿಸಿ ಅದರಂತೆ ಸರ್ವ ಕಡೆಗೂ ಅನುಷ್ಠಾನದಲ್ಲಿದೆಯೋ ಇಲ್ಲವೇ ಎಂಬುದಕ್ಕೆ ಜಿಲ್ಲಾ, ತಾಲ್ಲೋಕುಗಳಲ್ಲಿ ಮೇಲಾಧಿಕಾರಿಗಳನ್ನು ನಿಯಮಿಸತಕ್ಕದು ಮಹಾಸಂಸ್ಥಾನಗಳ ಆದ್ಯ ಕರ್ತವ್ಯಗಳಾಗಿರುತ್ತವೆ. ಇಂತಹ ಮಹಾ ಸನ್ನಿಧಿಯಿಂದಾಗದೆ ಅಧಿಕಾರಶಕ್ತಿಯಿಲ್ಲದವರು ಮಾಡಿದ ಕಟ್ಟಳೆಯು ರಚನಾಮಾತ್ರವಲ್ಲದೆ, ಅದು ಜಾರಿಗೆ ಬರುವುದು ಅಸಾಧ್ಯವು. ಜನ್ಮಾದಿಯಿಂದ ಅಂತ್ಯದವರೆಗೂ ಜರಗತಕ್ಕ ಸಂಸ್ಕಾರಾದಿ ಕ್ರಿಯೆಗಳು ವಿಧ್ಯುಕ್ತವಾಗಿ ನಡೆಯಲು, ಈ ತರಹದ ಪ್ರಯತ್ನವು ಅತ್ಯಾವಶ್ಯಕವು. ಮೊದಲು ಒಂದು ದೇಶದವರು ಮತ್ತೊಂದು ದೇಶದವರೊಡನೆ ಸೇರುವುದೇ ಕಷ್ಟವಾಗಿದ್ದುದರಿಂದ ಒಂದು ಕಡೆಯ ನಡೆನುಡಿಗಳು ಮತ್ತೊಂದು ಕಡೆಗೆ ಪ್ರಸರಿಸುವುದಕ್ಕೆ ಕಷ್ಟವಾಗಿದ್ದಿತು. ಆದುದರಿಂದಲೇ ತಮತಮಗೆ ತೋಚಿದಂತೆ ಆಚರಿಸುತ್ತ ಬಂದರು. ಆದರೆ ಪ್ರಕೃತ ಉಂಟಾಗಿರುವ ಸೌಕರ್ಯದಿಂದ ಎಷ್ಟೋ ದೂರದಲ್ಲಿದ್ದ ನಾವುಗಳೆಲ್ಲ ಒಂದು ಕಡೆಯಲ್ಲಿ ಸೇರಿ ನಮ್ಮ ಆಚಾರಾದಿ ಕ್ರಿಯೆಗಳನ್ನೆಲ್ಲ ಏಕರೂಪವಾಗಿ ಮಾಡಿಕೊಳ್ಳಲು ತುಂಬಾ ಅವಕಾಶವುಂಟಾಗಿದೆ. ಇಂತಹ ಸಮಯವನ್ನು ಕಳೆದುಕೊಳ್ಳಬಾರದೆಂಬುದಾಗಿಯೇ ಅನೇಕ ಶಾಸ್ತ್ರಾಧಾರಗಳಿಂದಲೂ, ದೃಷ್ಟಾಂತಗಳಿಂದಲೂ ಜನಗಳ ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸುವಂತೆ ಉಪನ್ಯಾಸಮಾಡಿದನಂತರ ಸಭಾ ವಿಸರ್ಜನೆಯಾಯಿತು.

ಪ್ರತ್ಯಕ್ಷದರ್ಶಿ.

ನಿಜಾಂ ಇಲಾಖ ಕುರುಕೋಟಿ.

ಈ ಗ್ರಾಮದ ಪಾಠಶಾಲೆಯು ಅವಿಚ್ಛಿನ್ನವಾಗಿ ಜರುಗುವುದಕ್ಕೆ ಒಂದು ಕಾರ್ಯನಿರ್ವಾಹಕ ಸಂಘವು ನೇಮಿಸಲ್ಪಟ್ಟು ತಕ್ಕ ಠರಾವುಗಳು ಕೂಡ ಏರ್ಪಾಟಾಗಿ ಪ್ರಕೃತದಲ್ಲಿ ಸಾಗಿರುವ ಕಾರ್ಯಗಳ ವಿವರ— ಕಳೆದ ಆಷಾಢ ಬ॥ ೧೨ ದಿವಸ ಅಂಕಲಿಗಿ ವೀರಶೈವರ ಅನುಮತಿಯಂತೆ ಸದರಿ ಕಮಿಟಿಗೆ ಸೇರಿದ ಶ್ರೀಮನ್ನಿರಂಜನ ಮೂರ್ತಿಗಳಾದ ಬಸವತೀರ್ಥಮಠದ ಬಸವಣ್ಣಪ್ಪ ಸ್ವಾಮಿಗಳು, ನಿ॥ಮಿ॥ಮ॥ ಮಲ್ಲಯ್ಯನವರು, ಮ॥ ಗಳಾದ ಗುಂಡಪ್ಪನವರ ಬಸಪ್ಪನವರು ಬಸವಣ್ಣನವರ ಗಿರಿಯಪ್ಪನವರು, ಸಲಗರದ ಬಸವಣ್ಣನವರು, ಪೋಲೀಸು ಗೌಡ ಶಿವಮೂರ್ತೆಪ್ಪನವರು, ಮಂಟಾಳ ವೀರಭದ್ರಪ್ಪನವರು ಇವರೇ ಮೊದಲಾಗಿ ಇನ್ನುಳಿದ ಕೆಲಕೆಲ ಮಹಾಜನಗಳು ಸದರಿ ಗ್ರಾಮಕ್ಕೆ ದಯಮಾಡಿಸುತ್ತಲೇ ಇವರ ಮಾರ್ಗವನ್ನೇ ನಿರೀಕ್ಷಿಸುತ್ತಿದ್ದ ಪುರನಿವಾಸಿಗಳು ದಂಡಪ್ರಣಾಮಗಳಿಂದ ಬಹಳ ಮನ್ನಣೆಯಂ ಗೈದುದಲ್ಲದೆ ಮಹಾಸ್ವಾಮಿಗಳವರಿಗೆ ದಿವ್ಯ ಅಗ್ರಾಸನವನ್ನಿತ್ತು ಆಶೀರ್ವಾದಗಳನ್ನು ಪಡೆಯಲು ಕೂಡಲೆ ಚರಮೂರ್ತಿಗಳ ಮಠದಲ್ಲಿ ಮೂರು ಗಂಟೆಗೆ ದೊಡ್ಡ ಸಭೆಯು ಕೂಡಿತು. ಮೊದಲು ರಾಜಶೇಖರನೆಂಬೋರ್ವ ವಿದ್ಯಾರ್ಥಿಯಿಂದ ರಾಜಶೇಖರಸ್ತವನವು ಮಾಡಲ್ಪಟ್ಟಿತು. ಅನಂತರ ವೇ॥ ಗುರುಸುಣಗಿ ಹೊಸಮಠದ ಶರಣಯ್ಯ ಮಾಸ್ತರ ಇವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ಮ॥ ಆಲಗೂಡ ಕುಲಕರ್ಣಿ ಮಧ್ವರಾಯರವರೇ ವಹಿಸಬೇಕೆಂದು ಸೂಚಿಸಲಾಗಿ ಸರ್ವಾನುಮತಿಯಿಂದ ಶ್ರೀಗಳವರ ಅಪ್ಪಣೆಯನ್ನು ಪಡೆದು ಸಭಿಕರ ಕೋಲಾಹಲಧ್ವನಿಯೊಡನೆ ಅಧ್ಯಕ್ಷಸ್ಥಾನವನ್ನು ವಹಿಸಿ, ಯಾವತ್ತು ವೀರಶೈವ ಮಂಡಲಿಯವರು ನನಗೆ ಕೊಟ್ಟಿರುವ ಈ ಮರ್ಯಾದೆಯು ನನ್ನ ಮರಣಾಂತ್ಯದ ವರೆಗೂ ಸ್ಮರಿಸಲಾರದೆ ಇರುವವನಲ್ಲ, ಮತ್ತೂ ನನ್ನ ಕೈಲಾದ ಮಟ್ಟಿಗೆ ಸಹಾಯವನ್ನಾದರೂ ಮಾಡದೆ ಬಿಡುವವನಲ್ಲ ಎಂದು ಮೊದಲಾಗಿ ಭಾಷಣಮಾಡಿದಮೇಲೆ ಚನ್ನಬಸವ ಮರಿದೇವರು ಭಕ್ತಿವಿಷಯದಲ್ಲಿ ಬಹು ರಸವತ್ತಾಗಿ ಭಾಷಣಮಾಡಿದರು. ಅನಂತರ ಪಾಠಶಾಲಾಧ್ಯಾಪಕರಾದ ವೇ॥ ಯಾತಗಿರಿ ಬಸವಣ್ಣಪ್ಪ ಶಾಸ್ತ್ರಿಗಳು ಮೇಲ್ಕಂಡ ವಿದ್ಯಾಭಿವೃದ್ಧಿಯ ಫಂಡಿಗೋಸ್ಕರ ಯಾವತ್ತು ವೀರಶೈವರು ಪ್ರತಿವರ್ಷದಲ್ಲಿಯೂ ಮನೆಗೆ ಒಂದು ರೂಪಾಯಿಯಂತೆಯೂ ಶುಭಕಾರ್ಯಗಳಾದ ವಿವಾಹಮಹೋತ್ಸವದಲ್ಲಿ ವಧೂವರರಿಂದ ಕೂಡಿ ೨ ರೂ. ಗಳಂತೆಯೂ, ನಿಜೇಕ ಪ್ರಸ್ತದಲ್ಲಿ ಒಂದು ರೂಪಾಯಿಯಂತೆಯೂ ಮತ್ತೂ ಪ್ರತಿನಿತ್ಯದಲ್ಲೂ ಮುಷ್ಟಿಫಂಡಿನ ಸಹಾಯವು ಕ್ರಮತಪ್ಪದೆ ನಡಿಸಬೇಕೆಂತಲೂ ಇದಕ್ಕೆ ತಕ್ಕ ಮೆಂಬರರನ್ನು ಚುನಾಯಿಸಬೇಕೆಂತಲೂ ಈ ಠರಾವಿಗೆ ವಿರುದ್ಧವಾಗಿ ನಡೆದವರನ್ನು ಸದರಿ ಸಂಘದವರು ತಿರಸ್ಕರಿಸಬೇಕೆಂತಲೂ ಅತಿ ಸರಸವಾಗಿ ಭಾಷಣಮಾಡಿದರು. ಆ ಕೂಡಲೆ ಗ್ರಾಮಾಧಿಕಾರಿಯಾದ ಪೋ॥ ಹುಲ್ಲಪ್ಪಗೌಡರು ಅನುಮೋದನವಿತ್ತುದಲ್ಲದೆ ಸದರಿ ಫಂಡಿನ ಪತ್ರಿಕೆಯು ಮುಟ್ಟುವವರೆಗೂ ಮಠಪತಿಯವರು ತಾಂಬೂಲ ದಕ್ಷಿಣಾದಿಗಳನ್ನು ತೆಗೆದುಕೊಳ್ಳಲಾಗದೆಂದು ನಿರ್ಧರಿಸಿದರು. ಕೂಡಲೆ ಮೇಲ್ಕಂಡ ಠರಾವಿಗೆ ೩೫ ಜನಗಳು ತಮ್ಮ ಸ್ವಹಸ್ತದಿಂದ ಸಹಿಮಾಡಿದರು. ಅಷ್ಟೊತ್ತಿಗೆ ಸಾಯಂಕಾಲ ೬ ಗಂಟೆ ಸಮಯವಾಗಲಾಗಿ ಗಂಧಪುಷ್ಪತಾಂಬೂಲಾದಿಗಳ ವಿನಿಯೋಗವಾಗಲು ಶಿವನಾಮೋಚ್ಚಾರಣದಿಂದ ಸಭೆಯು ಪೂರೈಸಿತು. ಮಾರನೆಯ ದಿನ ಅಂದರೆ ಆಷಾಢ ಬ॥ ೧೩ ದಿವಸ ತೊಂಡುಕಲ್ಲು ಮಾಲೀಗೌಡ ನಾಗಪ್ಪನವರ ಭವ್ಯವಾದ ಭವನದಲ್ಲಿ ವೇ॥ ಹಿ॥ ಮ॥ ಮಡಿವಾಳಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ನೆರೆಯಲಾಗಿ ವಿದ್ಯಾರ್ಥಿಯಾದ ಹುಬ್ಬನಾಬಾದು ವಿರೂಪಾಕ್ಷ ಮರಿದೇವರು ವಿದ್ಯಾವಿಷಯವಾಗಿ ತಕ್ಕ ಶ್ಲೋಕಗಳನ್ನು ಹೇಳಿದರು. ಆಮೇಲೆ ಸದರಿ ಶಾಸ್ತ್ರಿಗಳು ಪರೋಪಕಾರ ವಿಷಯ ವ ಕಮಿಟಿಯ ಠರಾವು ಮತ್ತೂ ಈ ಸ್ಟಾರ್ ಪತ್ರಿಕೆಯಿಂದುಂಟಾಗುವ ಲಾಭ ಇವುಗಳನ್ನು ಹೇಳಿದಾಕ್ಷಣವೆ ಸದರಿ ಮಾಲಿ ಗೌಡರು ಸ್ಟಾರ್ ಪತ್ರವನ್ನು ತರಿಸುವುದಕ್ಕೆ ಒಪ್ಪಿ ಆ ಕೂಡಲೆ ಚಂದಾ ಹಣವನ್ನು ಪಾವತಿಮಾಡಿದರು. ಮೇಲ್ಕಂಡ ಠರಾವಿಗೆ ಇಪ್ಪತ್ತು ಜನಗಳು ಸಹಿಕೊಡಲು ಶ್ರೀಗಳವರಿಗೆ ನೀರಾಜನವನ್ನು ಅರ್ಪಿಸಿ ಸಭೆಯು ಮುಕ್ತಾಯವಾಯಿತು. ಮತ್ತು ಮೂರನೆಯ ದಿವಸ ಯಕ್ಕಂಚೆ ಗ್ರಾಮದಲ್ಲಿ ಪೋಲೀಸಿ ಗೌಡ ರೇವಪ್ಪನವರ ಅಧ್ಯಕ್ಷತೆಯಲ್ಲಿ ಸಭೆಕೂಡಿ ಮಠ ಮಠಪತಿಯವರು ಭಕ್ತರಿಗೆ ಯಾವಾಗಲೂ ಆಚಾರ ವಿಷಯಗಳನ್ನು ಬೋಧಿಸುತ್ತಲೇ ಇರಬೇಕೆಂದೂ, ಹೀಗೆ ಬೋಧಿಸಲು ಅಯೋಗ್ಯರಾದವರಿಗೆ ಕೊಡುವ ಆಶ್ರಯವು ಅಜ್ಞಾನವೆಂಬ ಪೈರಿಗೆ ನೀರುಹುಯ್ದು ಬೆಳಸಿದಂತೆ ಆಗುವುದು ಎಂದೂ, ನಮ್ಮ ಮತಸ್ವರೂಪವನ್ನು ತಿಳಿಸಿಕೊಡುವಲ್ಲಿ ಕನ್ನಡಿ ಸ್ವರೂಪವಾಗಿರುವ ಮೈಸೂರ್ ಸ್ಟಾರ್ ಪತ್ರಿಕೆಯು ಪ್ರತಿಯೊಂದು ಗ್ರಾಮಕ್ಕೆ ಒಂದರಂತೆಯಾದರೂ ತರಿಸಲ್ಪಡಬೇಕು ಎಂದೂ ಬೋಧಿಸಲ್ಪಟ್ಟಿತು. ಕೂಡಲೆ ಸದರಿ ಪೋಲೀಸಿಗೌಡರು ಪತ್ರಿಕಾ ಚಂದಾಹಣವನ್ನೊಪ್ಪಿಸಿದರು. ಸದರಿ ಠರಾವಿಗೆ ಅನುಮೋದನವನ್ನಿತ್ತು ಇಪ್ಪತ್ತೆರಡು ಜನಗಳು ಸಹಿಕೊಡಲು ಸಭೆಯು ವಿಸರ್ಜಿಸಲ್ಪಟ್ಟಿತು. ಮತ್ತೂ ಆ॥ ಬ॥ ೩೦ ದಿವಸ ಸಿರಗಾಪೂರದಲ್ಲಿ ಮಾಲಿಗೌಡ ಶರಣಪ್ಪನವರ ಮನೋಹರವಾದ ಮಂದಿರದಲ್ಲಿ ವೇ॥ ಮ. ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ವಿದ್ಯಾರ್ಥಿಗಳು ವೇದಾಧ್ಯಯನ ಮಾಡಿದನಂತರ ನಾಲ್ಕು ಜನ ವಿದ್ಯಾರ್ಥಿಗಳ ಭಾಷಣವು ಮತ್ತೂ ಭಕ್ತ್ಯಾಧಿಕ್ಯದ ಸಪ್ರಮಾಣಗಳು ಬೋಧಿಸಿ ಮೇಲ್ಕಂಡ ಠರಾವಿಗೆ ೨೦ ಜನಗಳ ಸಹಿಗಳಾದವು. ಶ್ರಾವಣ ಶು॥ ೩ ದಿವಸ ವಿದ್ವನ್ಮಣಿಗಳಾದ ವೇ॥ ತೆಲಕೂರು ರುದ್ರಮುನಿಯಪ್ಪನವರು ವಿದ್ಯಾರ್ಥಿ ಕುರುಕೋಟಿ ಪಾಠಶಾಲೆಗೆ ಬಿಜಯಂಗೈಸಿ ಸರ್ವ ವಿದ್ಯಾರ್ಥಿಗಳ ಪರೀಕ್ಷೆಯನ್ನು ತೆಗೆದುಕೊಂಡರು. ಮತ್ತೂ ಮಹಾ ಶ್ರೀಗಳವರ ಪಾದಪೂಜೆಯು ರುದ್ರಾಭಿಷೇಕದೊಡನೆ ಜರಗಿರುವುದಲ್ಲದೆ ಸದರಿ ಪಾಠಶಾಲಾಧ್ಯಾಪಕರಿಂದ ಶಿವಪುರಾಣಶ್ರವಣವಾದರೂ ಪ್ರತಿನಿತ್ಯದಲ್ಲಿ ಬಹು ವಿಜೃಂಭಣೆಯಿಂದ ಜರುಗಿರುತ್ತದೆ.

ಓರ್ವ ಪ್ರತ್ಯಕ್ಷದರ್ಶಿ.

ತುಂಕೂರು ತಾ॥ ಗೂಳೂರು ಸ॥ ಬಾಣಾವಾರ.

ಶ್ರೀಮನ್ಮಹಾರಾಜಾ ಸರ್ಕಾರದವರು ನಮ್ಮ ಸೀಮೆಯ ಬಾಲಕ ಬಾಲಿಕೆಯರು ವಿದ್ಯಾವಂತರಾಗಲು ಅನೇಕ ಪಾಠಶಾಲೆಗಳನ್ನೇರ್ಪಡಿಸಿ ತುಂಬಾ ಅನುಕೂಲವನ್ನು ಕಲ್ಪಿಸಿ ತಕ್ಕ ಸಹಾಯವನ್ನು ದಯಪಾಲಿಸಿರುತ್ತಾರೆ. ಇಷ್ಟು ಅನುಕೂಲವಾಗಿ ಪ್ರೋತ್ಸಾಹವೂ ಸಹಾಯವೂ ಸಹಾ ಒದಗಿದರೂ ಕೂಡ ವಿಲೇಜು ಸ್ಕೂಲುಗಳಲ್ಲಿ ತಕ್ಕ ವಿದ್ಯಾಭಿವೃದ್ಧಿ ಇಲ್ಲದ್ದರಿಂದಲೂ, ಅಂತಹ ವಿಲೇಜು ಸ್ಕೂಲುಗಳಿಗೆ ಬಂದು ವಿದ್ಯಾಭ್ಯಾಸಂಗಮಾಡಲು ದೂರ ಫಾಸಲೆಯಲ್ಲಿರತಕ್ಕ ಸಣ್ಣಸಣ್ಣ ಗ್ರಾಮಗಳಲ್ಲಿ ಎಂದರೆ (ಹೆ) ಗವರ್ನ್ಮೆಂಟು ಸ್ಕೂಲು ಓರ್ಪ ಮಾಡಲು ಅನುಕೂಲವಿಲ್ಲದ ಸ್ಥಳಗಳಲ್ಲಿ ಆಯಾಯ ಗ್ರಾಮಸ್ಥರಿಂದ ಏರ್ಪಡಿಸಿರುವ ಇನ್ನಿತೊಂದೆ ಏರ್ಪಡತಕ್ಕ ವಿಶಿಷ್ಟ ಪ್ರೈವೇಟು ಸ್ಕೂಲುಗಳನ್ನು ದಯಾಳುಗಳಾದ ಸರ್ಕಾರದವರು ತಮ್ಮ ನೋಟೀಸಿಗೆ ತೆಗೆದುಕೊಂಡು ಅಂಥ ಸ್ಕೂಲುಗಳನ್ನೂ ಗ್ರ್ಯಾಂಟು ಲಿಸ್ಟಿಗಾದರೂ ಸೇರಿಸಿಕೊಂಡು ಸದಾ ಸ್ಕೂಲುಗಳಲ್ಲಿ ಕೆಲಸಮಾಡತಕ್ಕ ಉಪಾಧ್ಯಾಯರಿಗೆ ವಿಲೇಜು ಗವರ್ನ್ಮೆಂಟು ಸ್ಕೂಲಿನಲ್ಲಿ ಒಬ್ಬ ಉಪಾಧ್ಯಾಯರಿಗೆ ಕೊಡತಕ್ಕ ಸಂಬಳದಲ್ಲಿ ಅರ್ಧ ಹಣವನ್ನಾದರೂ ದಯಪಾಲಿಸಿ ಸದರಿಯವರ ಜೀವನೋಪಾಯವು ಸರಿಯಾಗಿ ನಡೆಯುವಂತೆ ಮಾಡಿದಲ್ಲಿ ಅನೇಕ ಸಣ್ಣಸಣ್ಣ ಗ್ರಾಮಗಳ ಬಾಲಕ ಬಾಲಿಕೆಯರು ವಿದ್ಯಾವಂತರಾಗಲು ನಮ್ಮ ಮಹಾಪ್ರಭುಗಳು ತುಂಬಾ ಸಲಿಕಲೆಯನ್ನು ದಯಪಾಲಿಸಿದಂತೆ ಆಗುತ್ತೆಂದು ನಂಬಿ ಬಿನ್ನೈಸಿಕೊಳ್ಳುತ್ತೇನೆ.

ಈ ಪ್ರಾಂತದಲ್ಲಿ ಈಗ ಸುಮಾರು ೨-೩ ತಿಂಗಳಿಂದಲೂ ಗಾಯಿತ್ತು ಸಂತರಾಂ ಮಳೆ ಇಲ್ಲದೆ ಬೇಸಾಯದ ಕೆಲಸವು ಸರಿಯಾಗಿ ಜರಗದೆ ಸರ್ವರೂ ಈಶ್ವರಸ್ತೋತ್ರವನ್ನು ಮಾಡುತ್ತಲೂ, ಅನೇಕ ಕಡೆ ಜಂಗಮ ಸಂತರ್ಪಣೆಗಳನ್ನು ಸಗುತ್ತಲೂ ಆಕಾಶವನ್ನೇ ಇದರು ನೋಡುತ್ತಿರುತ್ತಾರೆ. ಆಕಾಶವಾದರೂ ಬೆಟ್ಟದಷ್ಟು ವಾಗ್ದಾನಮಾಡಿ ಬೆಟ್ಟನಷ್ಟು ತೋರಿಸಿಕೊಂಡ ಹಾಗೆ ಎಂಬ ಗಾದೆಗೆ ಅನುಸಾರವಾಗಿ ಪಶ್ಚಿಮ ಒಕ್ಕಿನಿಂದ ಅದ್ಭುತಾಕಾರವಾಗಿ ಬಂದ ಮೋಡವು ಸಹಿಸಲಶಕ್ಯವಾದ ಶೀತವಾದ ಗಾಳಿಯೊಡನೆ ಮೇಘಾಡಂಬರವನ್ನು ಮಾತ್ರ ಜನರಕಣ್ಣಿಗೆ ತೋರುತ್ತ ಕೂಡಲೇ ಪೂರ್ವದಿಕ್ಕಿಗೆ ಅದೃಶ್ಯವಾಗುತ್ತೆ. ಇದನ್ನೆಲ್ಲಾ ನೋಡಿದರೆ ಅನೇಕ ಜೋತಿಷ್ಕರು ಪಂಚಾಂಗದಮೂಲಕ ಪ್ರಸಿದ್ಧಪಡಿಸಿರತಕ್ಕ ಯೋಗಗಳು ಕೂಡ ಲಭಿಸವೆ "ಪ್ರಾತಃಕಾಲೇತುಷಾವೃಷ್ಟಿ ಮಧ್ಯಾಹ್ನೇಮೇಘಾಡಂಬರೆ । ಸಂಧ್ಯಾಕಾಲೇನಿರ್ಮಲಾಕಾಶೆ ತ್ರಿಕಾಲೆ ಕ್ಷಾಮಮಾತಂಬರೆ" ಎಂಬ ಶ್ಲೋಕಾನುರೀತಿಯಾಗಿ ಪೂರ್ವದಲ್ಲಿ ಒದಗಿದ್ದ ಕ್ಷಾಮವೇ ಪುನಃ ತಲೆದೋರುವಂತೆ ತೋರುತ್ತದೆ. ಅಲ್ಲದೆ ಈ ಪ್ರಾಂತ್ಯದಲ್ಲಿ ಜನರಿಗೆ ತುಂಬಾ ಪ್ಲೇಗಿನ ಉಪದ್ರವು ಅವಿರತವಾಗಿ ಇರುವದಲ್ಲದೆ ದನಗಳಿಗೂ ಕೂಡ ಅಪಮೃತ್ಯುವಿಗೆ ಆಸಕ್ತಿ ಕಾರಣವೆಂಬಂತೆ ಚಪ್ಪೆರೋಗ ಹಂದೀರೋಗ ಪ್ಲೇಗ್ ಮೊದಲಾದ ದುರ್ಜಾಡ್ಯಗಳು ತಗಲಿಕೊಂಡು ಅನೇಕ ದನಗಳನ್ನೂ ಜನಗಳನ್ನು ಸಹ ಆ ಹುತಿಯನ್ನು ತೆಗದು ಕೊಳ್ಳುತ್ತಾ ಇವೆ. ಇದನ್ನು ಜಗತ್ಕರ್ತನಾದ ಈಶ್ವರನು ಶಮನಮಾಡಬೇಕೆ ಹೊರತು ಮತ್ಯಾವ ಚಿಕಿತ್ಸೆಯಿಂದಲೂ ಜನ ಮತ್ತು ಜಾನ್ವಾರುಗಳ ದುಃಖ ಶಮನವನ್ನು ಮಾಡಲು ಅಸಾಧ್ಯವಾದ್ದರಿಂದ ಸರ್ವರೂ ನಿರಂತರದಲ್ಲೂ ತಮಗುಂಟಾಗಿರುವ ಅಮೋಘವಾದ ಪೆಸನವನ್ನು ಪರಿಹಾರಮಾಡತಕ್ಕ ಜಗದೀಶನನ್ನು ಪ್ರಾರ್ಥಿಸಬೇಕೆಂದು ಕೋರುತ್ತೇನೆ.

ಪ್ರಜಾಭಿಮಾನಿ.

ನೋಟೀಸು.

ಮೈಸೂರು ಕೃಷ್ಣರಾಜಮೊಹಲ್ಲಾ ಹಳೇಅಗ್ರಹಾರದಲ್ಲಿ ಇರುವ ನಂಜನಗೂಡು ನಂಜುಂಡೈಯ್ಯನವರ ಮಗಳು ನೀಲಮ್ಮನೆಂಬುವಳು ಈ ಕೆಳಗೆ ರುಜುಮಾಡುವ ನನಗೆ ಸೊಸೆಯಾಗಬೇಕು ಈಕೆಯ ಜೀವನಾಂಶಕ್ಕಾಗಿ ಮಳವಳ್ಳಿ ತಾ॥ ಶಿವನಸಮುದ್ರದ ಜಹಗೀರಿ ಬೆಳಕವಾಡಿಗ್ರಾಮಕ್ಕೆ ಸೇರಿದ ಸರ್ವೆ ನಂಬರು ೩೭೩ ನೇ ತರೀ ಜಮೀನನ್ನು ಕೊಟ್ಟಿರುತ್ತೇನೆ. ಈ ಜಮೀನಿನಲ್ಲಿ ಮೇಲ್ಕಂಡ ನೀಲಮ್ಮನಿಗೆ ಜೀವಮಾನವಿರುವವರೆಗೂ ಫಸಲು ಅನುಭವಿಸತಕ್ಕ ಹಕ್ಕು ಇರುತ್ತದೆಯೇ ಹೊರತು ಪರಾಧೀನವಗೈರೆ ಮಾಡಲು ಹಕ್ಕು ಇರುವದಿಲ್ಲ. ಈ ಜಮೀನ್ ಅಲ್ಲದೆ ಈಕೆಯ ವಶಕ್ಕೆ ೧೦೦೦ ರೂಪಾಯಿ ಬಾಳತಕ್ಕ ನಗಗಳನ್ನು ಮತ್ತು ನಗದು ಮೊಬಲಗನ್ನು ಸಹಾ ಕೊಟ್ಟಿರುತ್ತೇನೆ. ಈಕೆಯು ತನ್ನವರಾದ ಇತರರ ದುರ್ಬೋಧನೆಗೆ ವಳಪಟ್ಟು ನನಗೆ ಮೋಸಮಾಡಬೇಕೆಂಬ ದುರ್ದ್ದೇಶದಿಂದ ಸದರಿ ಚರ ಸ್ಥಿರ ಆಸ್ತಿಗಳನ್ನು ಕಲಲ್ಮ್ಮಡುತ್ತಾಳೆಂದು ನನಗೆ ವರ್ತಮಾನ ಬಂದಿದೆ. ಹಾಗೆ ಈಕೆಯಿಂದ ಯಾರಾದರೂ ಮೇಲ್ಕಂಡ ಜಮೀನನ್ನು ಯಾವ ವಿಧದಿಂದಲಾದರೂ ಹೊಂದಿದಲ್ಲಿ ಅಂಥಾಪಾಧಿನಗಳಿಗೆ ನಾನು ಜವಾಬದಾರನಾಗುವದಿಲ್ಲವೆಂದು ಈಮೂಲಕ ತಿಳಿಸಿ ಇರುತ್ತೇನೆ.

ಮೈಸೂರು
ತಾ॥ ೭ ನೇ ಆಗಸ್ಟು
೧೯೧೧ನೇ ಇಸವಿ } ರುಜು ಮಿಟಾಯಿಚಂದ್ರಪ್ಪ.

ಎಷ್ಟು ರೊಕ್ಕ ಖರ್ಚುಮಾಡಿದರೂ ಇಂಥಾ ಸಮಯವು ಸಿಕ್ಕುವುದುಂಟೆ?

ಮಕ್ಕಳಫಲ ಆಗುವುದಕ್ಕೆ ಅನುಭವಖಾತ್ರಿಯಾದ ಮಹಾ ಔಷಧ. ಪ್ರಪಂಚದಲ್ಲಿ ಅನೇಕ ಸ್ತ್ರೀಯರಿಗೆ ರೋಗದಿಂದ ಗರ್ಭಕೋಶದಲ್ಲಿ ಕ್ರಿಮಿಗಳು ಹುಟ್ಟಿ ವೃದ್ಧಿಯಾಗಿ ಗರ್ಭವನ್ನು ಧರಿಸುವುದಕ್ಕೆ ಪ್ರತಿಬಂಧಕಮಾಡಿ, ಮಕ್ಕಳಾಗದೆ ತುಂಬಾ ವ್ಯಥೆಪಡುತ್ತಿರುವರು ಇದಕ್ಕೆ ನಾವು ಸ್ತ್ರೀಗರ್ಭಶಾಸ್ತ್ರ ಮುಂತಾದ ಶೋಧನೆಯಿಂದ ಅಪೂರ್ವ ವನಸ್ಪತಿಗಳನ್ನು ತಂದು ಅನುಭವದಿಂದ ಖಾತ್ರಿಯಾದ ಔಷಧವನ್ನು ತಯಾರುಮಾಡಿರುತ್ತೇವೆ. ಇದರ ಸೇವನೆಯಿಂದ ಗರ್ಭಕೋಶದಲ್ಲಿರುವ ಕ್ರಿಮಿಗಳು ನಾಶವಾಗಿ ಸ್ತ್ರೀಯರಿಗೆ ಉಂಟಾಗುವ ರೋಗ ನಿವಾರಣೆಯಾಗಿ ಗರ್ಭವನ್ನು ಧರಿಸಿ ಪುಷ್ಟಿಯಾಗಿ ಬಂದಿತ ಮಕ್ಕಳಾಗುತ್ತವೆ. ಇದು ಎಷ್ಟೋ ಅನುಭವಕ್ಕೆ ಬಂದಿರುವುದು. ತಕ್ಷಣ ತರಿಸಿ ಪರೀಕ್ಷಿಸಬೇಕೆಂದು ನಮ್ಮ ಅನೇಕ ಸವಿನಯ ಪ್ರಾರ್ಥನೆಗಳು. ಡಬ್ಬಿ ಸಂಗಡ ಅನುಪಾನಪತ್ರಿಕೆಯನ್ನು ಕಳಿಸುತ್ತೇವೆ. ಸದರಿ ಔಷಧ ಕ್ರಯ ಡಬ್ಬಿ ೧ ಕ್ಕೆ ಕ್ರಯ ರೂ. ೩—೦—೦.

ವಿಳಾಸ— ರಾ. ಪುಟ್ಟಯ್ಯ ಬ್ರದರ್ಸ್ ಹೆಟಿ
ಹರಪನಹಳ್ಳಿ, ಬಳ್ಳಾರಿ ಜಿಲ್ಲಾ.

19 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು.

ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೭-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ ಖರ್ಚು ೦-೪-೦. ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚು ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳ್ತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾಂವ್ಕರ, ಮರ್ಚಂಟ.
ಪೋಸ್ಟ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District.

ಊದಬತ್ತಿಗಳು.

24

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಡಿಬ್ಬಿ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗಿ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ಇಮ್ಮಡಿಯಾಗಿ ದರವು ಬೀಳುವುದು.

ಸರ್ವರೂ ನೋಡಿ.

ಪದ್ಮಾವತಿ ಕಥೆ, ವೀರಶೈವಮತವಿಷಯಸಾರ, ಬಿಲ್ವಫಲ ಚಿಂತಾರತ್ನ-- ಇವುಗಳಲ್ಲಿ ಒಂದೊಂದಕ್ಕೆ ಅರ್ಧಾಣೆಯ ಲೇಬಲ್ ಕಳಿಸಿದರೆ ಸುಮ್ಮನೆ ಕಳಿಸಲ್ಪಡುತ್ತೆ.

ವಿಳಾಸ:— ಜ ರಿಗೆ ಬಸವಲಿಂಗಪ್ಪ,
ಅರಳೆಪೇಟೆ, ಬೆಂಗಳೂರು ಸಿಟಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

8 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಆಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್‍ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ಕಳುಹಿಸುವೆವು.

ವಿಳಾಸ–
ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ [illegible]

18

ಶುಕಸಪ್ತತಿಕಥೆಗಳು.

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪)ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿಧೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿಧೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮)ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ, ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಟಿಸಿ.

---

17 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ ! ಸುಲಭ ಕ್ರಯ ! ! ಬಿಡಬೇಡಿರಿ ! ! !

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟ ಕೊಡುವೆವು.

೧ ನೇದು ರೂ. 2-8-0 ಮಾತ್ರ!! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೋಪ್‌ಸಿಸ್ಟಂ ಪೇಟಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕ್ಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ. 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೈಟರ್‌ರ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.



ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪು ವಾಚೆಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ಕೋಲಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಚಾರ್ಜು ರೂ. 0-4-0.

ಬಹುಮಾನ ! ಬಹುಮಾನ ! ! ಬಹುಮಾನ ! ! !

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜ಼ನ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜ಼ನ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರುಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಅರ್ಧರೂಪಾಯಿ) ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಸಿಂಗಣ್ಣನ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು.

ಪಂಡಿತ ಎಸ್. ಗರಳಪುರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ ಮೈಸೂರು.

54

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦-೮೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦-೪-೦.

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೪-೦. ತೊಲೆ ೧ಕ್ಕೆ ೧-೮-೦.

ಪಚ್ಚಕರ್ಪೂರಮಾತ್ರೆ.— ಇದರಿಂದ ಗರ್ಭಪಿಟ್ಟಿಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೬ ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೫ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦-೬-೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-೦

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-೦.

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-೦.

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-೦.

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-೦.

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸಕ್ಕೆ ಬರೆಯಿರಿ.

೧೯೧೧ನೇ ಇಸವಿ ಅಗಸ್ಟ್ ತಾ|| ೨೧ ರಿಂದ ೧೯೧೧ ನೇ ಆಗಸ್ಟ್ ತಾ|| ೨೭ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಶ್ರಾವಣ ಬ|| ದ್ವಾದಶಿಯಿಂದ ಭಾದ್ರಪದ ಶು|| ತದಿಗೆವರಿಗಿನ ಪಂಚಾಂಗ

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ರಾ ತೇದಿ
21	ಸೋ	ದ್ವಾ	25-54	ಪು	45-55	5
22	[1] ಮಂಗ	ತ್ರ	19-6	ಪುಷ್ಯ	42-11	6
23	ಬುಧ	ಚ	13-50	ಶ್ಲೇ	39-2	7
24	ಗುರು	ಅ	9-12	ಮಖ	36-43	8
25	ಶುಕ್ರ	ಪಾ	5-26	ಹು	35-14	9
26	[2] ಶನಿ	ಬಿ	2-40	ಉತ್ತರೆ	35-27	10
27	[3] ಭಾನು	ತ	1-1	ಹಸ್ತ	35-20	11

(1) ಮಂಗಳಗೌರಿವ್ರತಂ, (2) ಸಾಮಗೋಪಾಕರ್ಮ ಸ್ವರ್ಣಗೌರೀವ್ರತಂ, (3) ಸಿದ್ಧಿವಿನಾಯಕವ್ರತಂ.

ಮೈಸೂರ್ : ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿಪ್ರಕಟಿಸಲ್ಪಟ್ಟಿತು.

REGISTERED NO. M. 194

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನ ಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಕೆಯಂ ಸದಾಪ್ರೊಕೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಸೆಪ್ಟಂಬರ್ ತಾರೀಖು ೪ ನೇ ಸೋಮವಾರ. [ಸಂಚಿಕೆ ೩೬

೭೦ ಕಥೆಗಳು. ಸಚಿತ್ರ. ೪೧೨ ಪುಟಗಳು.

ಶುಕಸಪ್ತತಿಕಥೆಗಳು.

14

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪)ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿಧೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿಧೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮)ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ, ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಟಿಸಿ.

ಶಾಸ್ತ್ರೀಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

20

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇಶೂಲಿ ಸಂದುಗಳ ನೋವು ಮೈ ಕಾಲು ಹೊರತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಿಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಮಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ಕ್ಕೆ ರೂ. ೧ ಗೆದ್ದೆ ಮೊದಲಾದವಕ್ಕೆ ಸವರುವ ಡಬ್ಬಿ ೧ಕ್ಕೆ ಅ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್‌ಸ್ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ಪಾರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

3

ಉತ್ತಮ ಗ್ರಂಥಗಳು.

ಶಿವಸ್ತವಶಿರೋಮಣಿ—ಬೆಲೆ ವಿ. ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿಧೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಅವರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ ಪಂಚಾಚಾರವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ಶಿವಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿಧೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಹಿತವಾಗಿಧೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

---

೭೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಸಚಿತ್ರಶುಕಸಪ್ತತಿಕಥೆ.

7

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಸ್ಥೈರ್ಯ ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕೀಕ ವ್ಯವಹಾರ ಜ್ಞಾನವನ್ನು ಭೋಧಿಸುತ್ತದೆ. (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವುದು. (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತಸ್ತ್ರೀಪುರುಷರೂ, ಬಾಲಕ ಬಾಲಕಿಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಶುಕಮಹರ್ಷಿಗಳು ವೇದಶಾಸ್ತ್ರಸಮ್ಮತವಾಗಿ ಬೋಧಿಸಿದ ಸಕಲಕರ್ಮಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದು. (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾ ಚಮತ್ಕಾರ ಶೋಭಿತವಾಗಿ ಪಂಡಿತ ಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿಧೆ. (೭) ಈಗಿನಕಾಲದ ಲೋಕಾನುಭವಕ್ಕೆ ಅನುಸಾರವಾಗಿ ಪುಣ್ಯಕಥೆಗಳನ್ನು ಹೇಳಿರುತ್ತದೆ. (೮) ಅಲ್ಲಲ್ಲಿ ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಕ್ರಯ ಪ್ರತಿ ೧ಕ್ಕೆ ರೂ. ೧-೮-೦ ಅಂಚೆ ಹಾಸಲು ಬೇರೆ.

ಇದು ಅಲ್ಲದೆ ಇನ್ನೂ ಇತರವಿಧವಾದ ಕಥೆಗಳು ಕಾವ್ಯಗಳು ಪುರಾಣಗಳು ಮುಂತಾದ ಪುಸ್ತಕಗಳು ಸಹ ನಮ್ಮಲ್ಲಿ ದೊರಿಯುತ್ತೆ.

ಕ್ಯಾಟಲಾಗು (ಪಟ್ಟಿಗೆ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ನಮ್ಮವಿಳಾಸ:— ಎಂ. ಆರ್., ಕೃಷ್ಣಸ್ವಾಮಿಶೆಟ್ಟಿ ಕಂಪೆನಿ ೧೨೫ ಗೋವಿಂದಪ್ಪನಾಯಕ್ ಬೀಗಿ ಮದ್ರಾಸು.

ಉತ್ತಮ ಗ್ರಂಥಗಳು.

3

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವೀರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬಿಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಶತಕಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ—ಪ್ರತಿ ತಿಂಗಳ್ಗೂ ೪೦ ಪುಟಗಳು ಬರುವವು. ವಾರ್ಷಿಕ ಚಂದಾ ೨-೮-೦.

ಎಸ್. ಆರ್. [illegible],
ಗ್ರಂಥಪ್ರಕಾಶಕ [illegible]

ಸೌಗಂಧಿಕಾಪರಿಣಯ.

:o:

(ಕಳೆದವಾರದಶೇಷ.)

ಮಂಡಲಾಕಾರವಾದ ಹೆಗಲು, ಬೆನ್ನು, ಸ್ವೇದಾದಿಗಳಲ್ಲಿ ಸುಗಂಧವು, ಹುಲ್ಲಿಯ ಕರುವಿನಂತೆ ಅತಿ ಚಪಲಂಗಳಾದ ಜಂಘೆಗಳು, ಸ್ವಲ್ಪ ಕೃಶಂಗಳಾದ ಅವಯವಗಳು, ಅತ್ಯಂತ ಪರಾಕ್ರಮವು, ಕಾಯಬಲವು, ವೇಗವು, ಮೃದುವಾಗಿ ನುಣುಪಾದ ರೋಮಗಳು, ಸ್ಥೂಲಂಗಳಾದ ನೇತ್ರಂಗಳು, ದೃಢಂಗಳಾದ ಪಾದಗಳು, ಶರದುಗಳುಳ್ಳವಾಗಿ, ಕ್ರಮವಾಗಿ ತುಂಬಿಕೊಂಡಿರುವ ಅಂಗಗಳುಳ್ಳ ಕುದುರೆಗಳು ಬಾಂಹೀಯದೇಶೋತ್ಪನ್ನವೆನಿಸಿಕೊಂಬುವುವು. ಸ್ಥಿರವಾದ ಪಾದಗಳು, ವಿಸ್ತಾರವುಳ್ಳ ನಿತಂಬಗಳು, ದೀರ್ಘವಾದ ಕಂಠವು, ಮುಖವು ಸ್ಥೂಲಗಳಾದ ನೇತ್ರಗಳು, ಸೂಕ್ಷ್ಮಗಳಾದ ಮೃದುಗಳಾದ ಹೆಕ್ಕತ್ತಿನ ಕೇಸರಂಗಳು, ಗೂಟದಂತೆ ನಿಂತಿರುವ ಕಿವಿಗಳು, ಅತಿ ದೀರ್ಘವಾಗಿ ದಪ್ಪವಾದ ದೇಹವು, ಅಧಿಕವಾದ ಶ್ವಾಸಗಳು, ಮೃದುವಾಗಿ ವಿಸ್ತಾರವಾದ ಕಟವಾಯಿ, ತುಟಿಗಳು, ಲಂಬಂಗಳಾದ ಅಂಡಂಗಳು, ಮೇಢ್ರವೂ ಉಳ್ಳ ಅಶ್ವವು ಸಿಂಧುದೇಶದಲ್ಲಿ ಪುಟ್ಟಿದುದೆನ್ನಿಸಿಕೊಳ್ಳುವುವು. ಸ್ಥೂಲವಾದ ಕಂಠವು, ದವಡೆಯು, ಬಾಲವು, ಹೆಕ್ಕತ್ತಿನ ಕೇಸರಂಗಳು ಮೇಢ್ರವು, ಅಂಡಗಳು, ವಿಸ್ತಾರಗಳಾದ ನೇತ್ರಗಳು ಮೇಲಕ್ಕಾಗಿ ಬಗ್ಗಿದ ಕಂಠವು, ಅತ್ಯಂತ ದೇಹಲಾಘವವು, ದೃಢಗಳಾದ ಪಾದಗಳು, ಹರಡುಗಳು, ವಿಸ್ತಾರವಾದ ಹಣೆಯು ಎದೆಯು, ಕಟಿಪಶ್ಚಾದ್ಭಾಗವು ಉಳ್ಳುವಾಗಿ, ಅತ್ಯಂತ ಕಾಯಬಲವೇಗಯುಕ್ತಂಗಳಾಗಿ, ವಿಶೇಷವಾದ ಭಾರದಿಂದಲೂ ಬಹುದೂರಮಾರ್ಗ ಸಂಚಾರದಿಂದಲೂ, ಸ್ವಲ್ಪವಾದರೂ ಶ್ರಮವಂ ಹೊಂದದೇ ಕ್ಷುತ್ಪಿಪಾಸಾರಹಿತಂಗಳಾಗಿರುವ ಕುದುರೆಗಳು ತೈತಿಲದೇಶೋತ್ಪನ್ನಗಳು. ಶೋಭನವಾದ ಅಂಗಪ್ರತ್ಯಂಗಸೌಷ್ಠವವು, ದುಷ್ಟವಾದ ವ್ಯಾಪಾರವು ಶ್ಯಾಮವರ್ಣವು, ವಿಸ್ತಾರವಾದ ಎದೆಯು, ಗೂಟದಂತೆ ಚಲಿಸದಿರುವ ಕಿವಿಗಳು, ವ್ಯಕ್ತವಾದ ಮುಖವು, ವಿಸ್ತಾರಗಳಾದ ಜಘನಗಳು, ದೀರ್ಘವಾದ ವಿಸ್ತಾರವಾದ ಕಂಠವು, ಗುಪ್ತಗಳಾದ ಭುಜಗಂಧಿಗಳು, ಉನ್ನತಂಗಳಾದ ಭುಜಶಿರಸ್ಸುಗಳು, ವಿಸ್ತಾರವಾದ ಬೆನ್ನು, ಬಟುವಾದ ಮೊಣಕಾಲುಗಳು, ಹ್ರಸ್ವಗಳಾದ ಹರಡುಗಳು, ಬಾಲವು, ಸೂಕ್ಷ್ಮವಾದ ಮಧ್ಯಪ್ರದೇಶವು, ಆಕಾರಕ್ಕೆ ಸರಿಯಾದ ಹೊಟ್ಟೆಯು, ಅತ್ಯಂತ ರೋಮಗಳು ತುಂಬಿಕೊಂಡಿರುವ ಅವಯವಗಳು ಅನೇಕವರ್ಣಗಳಾದ ನರಗಳು ಉಳ್ಳುವಾಗಿ, ಅತಿ ಸಾಧುಗಳಾಗಿ, ಸರ್ವದಾ ಒಂದೇ ರೀತಿಯುಳ್ಳ ವಿಚಿತ್ರಗಳಾದ ಅಶ್ವಗಳು ಪಾಟಲೀಪುತ್ರದೇಶದಲ್ಲಿ ಪುಟ್ಟಿದುವೆಂದರಿವುದು. ಮೃದುವಾದ ಬೆನ್ನು, ಚಪಲವು [illegible] ಅಲ್ಲದೆ ಮಧ್ಯಮವಾದ ಸ್ವಭಾವವು, ಮಧ್ಯಮವಾದ ಪರಾಕ್ರಮವು, ಬಲವು, ವೇಗವು ಉಳ್ಳ ಕುದುರೆಗಳು ಮೋಚಕದೇಶದಲ್ಲಿ ಜನಿಸಿದುವೆಂದರಿವುದು. ದಪ್ಪವಾದ ಬಾಲವು, ಹೆಕ್ಕತ್ತಿನ ಕೇಸರಂಗಳು, ಮೃದುವಾದ ಅಂಗಗಳು, ದುರ್ಬಲವಾದ ಗೊರಸುಗಳು, ಕೃಶವಾದ ದೇಹವು ಶೋಭನವಾದ ಹರಡುಗಳು, ಉನ್ನತವಾಗಿರುವ ಶಿರಸ್ಸು ಕಂಠಗಳು, ಕಿರಿದಾದ ಎದೆಯು ಉಳ್ಳುದಾಗಿ, ಹ್ರಸ್ವಂಗಳಾಗಿ ಮುಖದಲ್ಲಿ ಲಕ್ಷಣರಹಿತಂಗಳಾಗಿ, ನೇತ್ರದಲ್ಲಿ ವೈರೂಪ್ಯವಂ ಪಡೆದಿರುವ ಕುದುರೆಗಳು ಉಪಮೋಚಕದೇಶದೊಳ್ ಪುಟ್ಟಿದುವೆಂದರಿವುದು. ದೀರ್ಘವಾದಬೆನ್ನುಕತ್ತು, ಹ್ರಸ್ವವಾದ ಮೇಢ್ರವು, ಅಂಡಗಳು, ವರ್ತುಳವಾದ ವಿಸ್ತಾರವಾದ ಮುಖವು, ಶೋಭನವಾದ ಹರಡುಗಳು, ದೀರ್ಘವಾದ ಬಾಲವು ಕೇಸರಗಳು, ಸೂಕ್ಷ್ಮವಾದ ರೋಮವು, ಚರ್ಮವು, ಕಿರಿದಾದ ಎದೆಯು ಉಳ್ಳ ಕುದುರೆಗಳು, ಕುಲಜದೇಶೋತ್ಪನ್ನ ಕುದುರೆಗಳು. ಕೃಶವಾದ ಕತ್ತು, ತೊಡೆಗಳು ಹರಡುಗಳು, ಹೆಕ್ಕತ್ತಿನಲ್ಲಿ ದೀರ್ಘವಾದ ಕೇಸರಂಗಳು, ಸ್ವಲ್ಪ ವಿಸ್ತಾರವುಳ್ಳ ಶರೀರವು, ಸ್ವಲ್ಪ ಬಲವು, ಪರಾಕ್ರಮವು ಉಳ್ಳುವಾಗಿ, ಗಿಡ್ಡಾದ ಶರೀರವುಳ್ಳುವಾಗಿ, ಮೊದಲು ಹೇಳಿದ ಕುಲಜದೇಶದ ಕುದುರೆಗಳಿಗೆ ಸಮಾನಗಳಾದ ಚೇಷ್ಟೆಗಳುಳ್ಳುವಾಗಿ, ಕಠಿನಸ್ವಭಾವಗಳಾದ ಕುದುರೆಗಳು ಉಪಕುಲಜದೇಶದಲ್ಲಿ ಪುಟ್ಟಿದುವೆಂದರಿವುದು. ಮೃದುವಾದ ಸ್ವಭಾವವು, ಹ್ರಸ್ವವಾದ ಕತ್ತು, ವಿಸ್ತಾರವಾದ ಎದೆಯು, ಹೆಕ್ಕತ್ತಿನಲ್ಲಿ ವಕ್ರಗಳಾದ ಕೇಸರಂಗಳು, ಮೇಲದ ರೋಮಂಗಳಂತಿರುವ ರೋಮಗಳು, ಕ್ರೋಧವುಳ್ಳ ಸ್ವಭಾವವು, ಬಲವು ಉಳ್ಳುವಾಗಿ, ಬೋಲದ ಕೋರೆದಾಡೆಯಂತೆ ಕೋರೆದಂತಗಳುಳ್ಳುವಾಗಿ, ಭೂಮಿಯಲ್ಲಿ ದೃಢವಾಗಿ ಗೊರಸುಗಳನ್ನಿರಿಸುವ ಕುದುರೆಗಳು ತ್ರಿಗರ್ತದೇಶೋತ್ಪನ್ನಗಳೆಂದರಿವುದು. ವಿಸ್ತಾರವಾದ ಎದೆಯು, ಕತ್ತು, ದೃಢವಾದ ಕೇಸರಂಗಳು, ನೇತ್ರಂಗಳು, ಶೋಭನವಾದ ಮುಖವು, ಹರಡುಗಳು, ಉದ್ದವಾಗಿ ಜೋಲುವ ಅಂಡಗಳು, ಕೃಷ್ಣವರ್ಣವನ್ನನುಸರಿಸಿದ ನಾನಾವರ್ಣಂಗಳು, ಕ್ರೂರವಾದ ಸ್ವಭಾವವು, ಅಧಿಕವಾದ ಬಲವು ಉಳ್ಳ ಕುದುರೆಗಳು ಅರ್ಜುನದೇಶೋತ್ಪನ್ನಂಗಳು, ಹ್ರಸ್ವವಾದ ಬೆನ್ನು, ವಿಸ್ತಾರವಾದ ಜಘನವು, ದೃಢವಾದ [illegible], ರೋಮವು, ವಕ್ರವಾದ ಮುಖವು, ದೀರ್ಘವಾದ ಹೆಗಲಿನ ಕೇಸರಂಗಳು, ಮೃದುವಾದ ಅಂಗವು, ಶೋಭನವಾದ ನೇತ್ರಂಗಳು, ದಪ್ಪವಾದ ಪಾದಗಳು, ವಿಸ್ತಾರವಾದ ಎದೆಯು, ಬಾಲವು ಉಳ್ಳುವಾಗಿ, ಸ್ವೇದಾದಿಗಳಲ್ಲಿ ಸುಗಂಧವುಳ್ಳ ಕುದುರೆಗಳು ಸಾವಿತ್ರೀ ದೇಶದಲ್ಲಿ ಜನಿಸಿದುವೆಂದರಿವುದು. ಹ್ರಸ್ವವಾದ ಕರ್ಣಗಳು, ಓಷ್ಠಗಳು ಉಳ್ಳುವಾಗಿ, ಪರಾಕ್ರಮವು, ಬಲವು, ವರ್ತುಳವಾದ, ವಿಸ್ತಾರವಾದ, ಉನ್ನತವಾದ ಕತ್ತು, ಗುಂಡಾಗಿರುವ ಬೆನ್ನು, ತೊಡೆಗಳು ಗೊರಸುಗಳು, ಮುಖವು, ಸ್ವಲ್ಪ ಪಿಂಗಳವರ್ಣವು, ಸೂಕ್ಷ್ಮವಾದ ಚರ್ಮವು, ರೋಮಗಳು ಉಳ್ಳುವಾಗಿ, ಅಂಗಪ್ರತ್ಯಂಗಗಳೊಳ್ ವಿಶದವಾಗಿ ಕಾಣುತ, ಮಾರ್ಗವಂ ನಡೆಯುವುದರಲ್ಲಿಯೂ, ಭಾರವಂ ವಹಿಸುವುದರಲ್ಲಿಯೂ, ಅತಿ ವೇಗಶಕ್ತಿಯುಕ್ತಂಗಳಾದ ಅಶ್ವಗಳು ಯೌಧೇಯದೇಶದಲ್ಲಿ ಜನಿಸಿದುವೆಂದರಿವುದು. ಯಾವಂತೀ ದೇಶದಲ್ಲಿ ಪುಟ್ಟಿದ ಕುದುರೆಗಳು ಇದೇ ಲಕ್ಷಣಗಳಿಂ ಕೂಡಿರುವುವು. ಶೋಭನವಾದ ಹಣೆಯು, ನೇತ್ರಂಗಳು, ಅಂಗಗಳು, ಕೃಶವಾದ ಬೆನ್ನು, ವಿಸ್ತಾರವಾದ ವರ್ತುಳವಾದ ಮುಖವು, ಸೂಕ್ಷ್ಮವಾದ ಚರ್ಮವು, ರೋಮವು, ಗೂಟದಂತಿರುವ ಕಿವಿಗಳು, ಶೀಘ್ರವಾದ ನಡೆಗಳು, ಶೋಭನವಾದ ಜಘನವು, ಎದೆಯು, ತುಂಬಿಕೊಂಡಿರುವ ಶರೀರವು, ಒಳ್ಳೆಯಬುದ್ಧಿಯು, ವಿಚಿತ್ರವಾದ ವರ್ಣಗಳು, ಮನೋಹರಗಳಾದ ಬಲಯುಕ್ತಗಳಾದ ಗೊರಸುಗಳು ಉಳ್ಳುವಾಗಿ ದೃಢಚಿತ್ತವುಳ್ಳ ಕುದುರೆಗಳು ಯವನದೇಶೋತ್ಪನ್ನಂಗಳು. ಬಲವು, ಮನೋಹರವಾದ ವರ್ಣವು, ಗೊರಸುಗಳು, ಶೋಭನವಾದ ರೋಮಗಳು, ಕೇಸರಗಳು, ಬಾಲದ ಕೂದಲುಗಳು, ಒಳ್ಳೆಯ ಬುದ್ಧಿಯು, ಕ್ರೀಡಾಸಕ್ತಿಯು, ಕಠಿಣವಾದ ಸ್ವಭಾವವು ಉಳ್ಳುವಾಗಿ, ಮೈತುಂಬಿಕೊಂಡು ಸ್ವಭಾವದಿಂದಲೇ ಹ್ರಸ್ವಗಳಾದ ಕುದುರೆಗಳು ಹ್ರಸ್ವಯವನದೇಶೋತ್ಪನ್ನಂಗಳೆಂದರಿವುದು. ಅಧಿಕವಾದ ಬಲವು, ವೇಗವು, ದಪ್ಪವಾದ ಅಂಗಗಳು, ಭಾರವಂ ವಹಿಸೋಣವು, ಮಾರ್ಗನಡೆಯುವುದರಲ್ಲಿ ಕ್ಲೇಶವಂ ಸಹಿಸೋಣವು ವಿಸ್ತಾರವಾದ ಎದೆಯು, ಹೊಟ್ಟೆಯು ದೃಢವಾದ ಬುದ್ಧಿಯು ಚಿತ್ರವರ್ಣವು ದಪ್ಪವಾದ ದೃಢವಾದ ಜಘನವು ಪಾದಂಗಳು, ಗೊರಸುಗಳು ಉಳ್ಳುವಾಗಿ ಕತ್ತಿಗಳಂತೆ ತೋರುವ ಅಶ್ವಂಗಳು, ಭಾರದೇಶೋದ್ಭವಂಗಳು. ಸೂಕ್ಷ್ಮವಾದ ಕೇಶಂಗಳು, ಕೃಶವಾದ ಹೊಟ್ಟೆಯು, ವರ್ತುಳವಾದ ಮಧ್ಯಪ್ರದೇಶವು, ವಿಸ್ತಾರವಾದ ಎದೆಯು, ಶೀಘ್ರವಾದ ನಡೆಯು ಉಳ್ಳುವಾಗಿ, ಹೊಂಬಣ್ಣವಾಗಲಿ ಶ್ವೇತವರ್ಣವಾಗಲಿ ಉಳ್ಳ ಒಳ್ಳೆಯರೋಮಂಗಳಿಂದ ಯುಕ್ತಂಗಳಾದ ಅಶ್ವಗಳು ವಿಷಮದೇಶದಲ್ಲಿ ಜನಿಸಿದುವೆಂದರಿವುದು. ಚೆನ್ನಾಗಿ ಮೈ ತುಂಬಿಕೊಂಡು, ದೃಢವಾದ ಪಾದಗಳು, ಶೋಭನಂಗಳಾದ ಗೊರಸುಗಳು, ಸ್ಥೂಲವಾದ ಚರ್ಮವು, ರೋಮಗಳು, ಕೇಸರಗಳು ಉಳ್ಳ ಒಳ್ಳೆಯ ಸ್ವಭಾವಗಳಿಂದ ಯುಕ್ತವಾದ ಕುದುರೆಗಳು ಕಂದರದೇಶದೊಳ್ ಪುಟ್ಟಿದುವೆಂದರಿವುದು.

(ಸಶೇಷ.)

ಸದ್ವ್ಯಯವು.

ಹುಟ್ಟಿದ ಮನುಷ್ಯನು ಸಾಯುವುದು ಸಿದ್ಧವಷ್ಟೆ? ಮಾನವನು ಮರಣಾಧೀನನೇ ಹೊರತು ಸ್ವತಂತ್ರನಲ್ಲ. ನರನೇ ಮರಣದಧೀನನಾಗಿರುವಾಗ ಅವನಲ್ಲಿರುವುವು ಸ್ವತಂತ್ರವಾದುವುಗಳೆ? ಇದಂತಿರಲಿ. “ಜನನದೊಡನೆ ಮರಣವು ಸಿದ್ಧವಾಗಿದೆ. ಮಾನವನು ಈ ಪ್ರಪಂಚದಲ್ಲಿ ಏಕೆ ಹುಟ್ಟಬೇಕು? ಹುಟ್ಟದಿರುವುದೇ ಲೇಸಲ್ಲವೆ?” ಎಂದು ಪ್ರಶ್ನೆಮಾಡಬಹುದು. ಹಾಗಲ್ಲ. ಮನುಷ್ಯನು ಇಹದಲ್ಲಿ ಹುಟ್ಟಿ ದೇವರಿಂದ ನಿಯಮಿಸಲ್ಪಟ್ಟಿರುವ ಕೆಲಸಗಳನ್ನು ಮಾಡಿದರೇ ಮನುಷ್ಯನೆಂದೆನ್ನಿಸಿಕೊಳ್ಳುವನು. ಇಲ್ಲವಾದರೆ ಅವನು ಪಶು, ಪಕ್ಷಿ, ಮೃಗ, ತೃಣಾದಿಗಳಿಗಿಂತಲೂ ಕಡೆ. ಮನುಷ್ಯನು ಮೃತನಾದಾಗ್ಗೆ, ಅವನೊಡನೆ ಅವನು ಮಾಡಿದ ಪಾಪಪುಣ್ಯಗಳೆರಡೇ ಹೋಗುವುವೇ ಹೊರತು ಉಳಿದುವೆಲ್ಲ ಇಲ್ಲೇ ಉಳಿಯುವುವು. ಈ ಜಡದೇಹವೂ ಇಲ್ಲಿಯೇ ನಿಲ್ಲುವುದು. ಇಲ್ಲಿ ಹುಟ್ಟಿದ ಜಡದೇಹಕ್ಕೆ ಇಲ್ಲಿಯೇ ನಾಶವಲ್ಲವೆ? ಹುಟ್ಟಿದವನಿಗೆ ಹೇಗೆ ಮರಣವು ಸಿದ್ಧವೋ ಹಾಗೆಯೇ ನಾವು ಇಲ್ಲಿ ಗಳಿಸಿದ ಧನವಿದ್ಯೆಗಳಿಗೆ ಇಲ್ಲಿಯೇ ವ್ಯಯವು ಸಿದ್ಧವು. ನಾವು ಹಣವನ್ನು ವ್ಯಯಮಾಡದೆ ಕಾಸಿಗೆ ಕಾಸನ್ನು ಸೇರಿಸಿ ಸಾವಿರಾರು ರೂಪಾಯಿಗಳನ್ನು ಕೂಡಿಡಬಹುದು. ನಮಗೆ ಬರುವ ವಿದ್ಯೆಯನ್ನು ಅನ್ಯರಿಗೆ ಹೇಳಿಕೊಡದೆ ನಮ್ಮಲ್ಲಿಯೇ ಇಟ್ಟುಕೊಂಡಿರಬಹುದು. ಬಡವರಿಗೆ ಭಿಕ್ಷವನ್ನಿಡದೆ ಕ್ಷುತ್ಪೀಡಿತರಾದ ಅತಿಥಿಗಳಿಗೆ ಆಹಾರವನ್ನು ಕೊಡದೆ, ಮಾತೃದೇಶಕ್ಕೂ, ಭ್ರಾತೃಜನಾಂಗಕ್ಕೂ ಯಾವ ವಿಧವಾದ ಉಪಕಾರವನ್ನೂ ಮಾಡದೆ, ಅನ್ಯರ ಗೃಹಾರಾಮಾದಿಗಳನ್ನು ನಿರ್ಮೂಲಮಾಡಿ ಅನ್ಯರಿಗೆ ಕೆಡುಕ[illegible] ತನ್ನ ಕರ್ತವ್ಯಕರ್ಮವೆಂದು ಭಾವಿಸಿ, ಇತರರ ಬಡತನವೇ ತನ್ನ ಸುಖಸಂಪತ್ತೆಂದು ತಿಳಿದ ನರಾಧಮನಿಗೆ ಅದರ ಪರಿಣಾಮವೇನಾಗುವುದೆಂಬುದು ತಿಳಿವುದೆ? ನಾವೆಷ್ಟು ವಿಧವಾಗಿ ಹಣವನ್ನು ಕೂಡಿಟ್ಟರೂ, ಅದು ಶಾಶ್ವತವಾಗಿ ನಿಲ್ಲುವುದಿಲ್ಲ. ಕೂಡಿಟ್ಟ ಹಣವನ್ನು ಎಂದಾದರೊಂದುದಿನ ಗಳಿಸಿದವನ ಮಗನೋ, ಮೊಮ್ಮಗನೋ, ಮರಿಮಗನೋ ನಾಶಮಾಡುವನು. ಹಣವು ಶಾಶ್ವತವಾಗಿ ನಿಲ್ಲುವುದಿಲ್ಲವೆಂಬುದು ಖಂಡಿತ. ನಾಲ್ಕೈದು ವರ್ಷಗಳ ಹಿಂದೆ ಲಕ್ಷಾಧಿಕಾರಿಯಾಗಿದ್ದು, ರಾಜಗೃಹತುಲ್ಯವಾದ ಭವನದಲ್ಲಿ ಸತೀಸುತರೊಡನೆ ಸಂತಸದಿಂದ ವಾಸಿಸುತ್ತಲಿದ್ದವನು ಇಂದು ಭಿಕ್ಷಾಪಾತ್ರೆಯನ್ನು ಹಿಡಿದು ಅಸ್ಥಿಚರ್ಮ ಶರೀರನಾಗಿ ಮನೆಮನೆಯ ಬಾಗಿಲಿಗೂ ಅಲೆಯುವುದನ್ನು ಈ ಚಿತ್ರವಿಚಿತ್ರವಾದ ಪ್ರಕೃತಿದೇವಿಯ ಉದರದಲ್ಲಿ ನೋಡುವೆವು. ಅಂತೆಯೇ ಇಂದು ಭಿಕ್ಷುಕನಾಗಿರುವವನನ್ನು ಇನ್ನು ಕೆಲಕಾಲದಲ್ಲಿ ಭಾಗ್ಯವಂತನೆಂದು ಭಾವಿಸಬಹುದಲ್ಲವೆ? ಈ ಕಾರಣಗಳಿಂದಲೇ ನಮ್ಮ ಹಿರಿಯರು ಧನವನ್ನು ಚಂಚಲಲಕ್ಷ್ಮಿಯೆಂದು ಕರೆದಿರುವರು. ಅದುದರಿಂದಲೇ ಸೋಮೇಶ್ವರ ಕವಿಯು “ಬಡವಂ ಬಲ್ಲಿದನಾಗನೇ?” ಎಂದು ಹೇಳಿರುವನು.

“ದುಡ್ಡಿದ್ದವನೇ ದೊಡ್ಡಪ್ಪ” ಎಂಬ ಗಾದೆಯು ನಿಜವಾದುದು. ದುಡ್ಡು ಎಲ್ಲರಿಗೂ ಬೇಕಾದವಸ್ತು. ತೊಟ್ಟಿಲಲ್ಲಿರುವ ಕೂಸಿಗೂ, ಸಮಾಧಿಯಲ್ಲಿ ಒಂದು ಕಾಲಿಟ್ಟಿರುವ ವೃದ್ಧನಿಗೂ, ದೊಡ್ಡ ಸಂಸಾರದಲ್ಲಿ ಬಿದ್ದೊದ್ದಾಡುವ ಗೃಹಸ್ಥನಿಗೂ, ಸರ್ವಸಂಗಪರಿತ್ಯಾಗಿಯೆನಿಸಿಕೊಳ್ಳುವ ಸನ್ಯಾಸಿಗೂ ಹಣವೇ ದೇವರೆಂದು ಭಾವಿಸುವ ಕೃಪಣನಿಗೂ, ಹಣವನ್ನು ನೀರಿನಂತೆ ವ್ಯಯಮಾಡುವ ದುಂದುಗಾರನಿಗೂ ಹಣವು ಬೇಕಾದುದೆಂದು ಹೇಳಬಹುದು.

“ಇಹದಲ್ಲೇ ದೊರಕಿ ಇಹದಲ್ಲೇ ನಿಲ್ಲುವ ಹಣವಿದ್ಯೆಗಳನ್ನು ಏಕೆ ಗಳಿಸಬೇಕು? ಅದರಿಂದಾಗುವ ಫಲವೇನು?” ಎಂದು ಪ್ರಶ್ನಿಸಬಹುದು. ಹಣ ವಿದ್ಯೆಗಳು ಇಹದಲ್ಲಿಯೇ ನಿಂತರೂ ಅವುಗಳಿಂದ ಇಹದಲ್ಲಿ ಸೌಖ್ಯವನ್ನೂ, ಪರದಲ್ಲಿ ಸದ್ಗತಿಯನ್ನೂ ಪಡೆಯಬಹುದು. ಹಣವಂತರೆಲ್ಲರೂ ಇಹದಲ್ಲಿ ಸೌಖ್ಯವನ್ನೂ, ಪರದಲ್ಲಿ ಸದ್ಗತಿಯನ್ನೂ ಹೊಂದುವರೊ? ಇಲ್ಲ. ಗಳಿಸಿದ ಹಣವನ್ನೂ, ವಿದ್ಯೆಯನ್ನೂ ಯಾರು ಸದ್ವಿನಿಯೋಗಮಾಡುವರೋ ಅವರು ಸುಖ ಸದ್ಗತಿಗಳನ್ನು ಪಡೆಯುವುದರಲ್ಲಿ ಸಂಶಯವಿಲ್ಲ. ‘ಹಣವಿಲ್ಲದವನು ಹೆಣ’ ಎಂಬ ನಾಣ್ಣುಡಿಯು ನಿಜವಾದುದು. ಹಣವಿಲ್ಲದವನನ್ನು ಯಾರೂ ಗಣನೆಗೆ ತಾರರು. ಅದರಲ್ಲಿಯೂ ಈ ಕಾಲದಲ್ಲಿ ಹಣವೇ ಮುಖ್ಯವಾದುದು. ಎಲ್ಲಾ ಗುಣಗಳೂ ಹಣವನ್ನೇ ಆಶ್ರಯಿಸಿರುವುವು. ಅದುದರಿಂದ ಪ್ರತಿಯೊಬ್ಬನೂ ಹಣವನ್ನೂ ವಿದ್ಯೆಯನ್ನೂ ಗಳಿಸಬೇಕು. ದ್ರವ್ಯ ವಿದ್ಯೆಗಳೆರಡೂ ಒಂದೆಡೆಯಲ್ಲಿ ಸೇರಿದರೆ ನವರತ್ನಖಚಿತವಾದ ಆಭರಣದಂತೆ ಪ್ರಕಾಶಿಸುವುವು. ಮೊದಲು ಸದ್ವ್ಯಯವೆಂದರೇನೆಂಬುದನ್ನು ವಿಚಾರಮಾಡೋಣ. ಶೇಖರಿಸಿದ ಹಣವನ್ನಾಗಲಿ, ವಿದ್ಯೆಯನ್ನಾಗಲಿ ನ್ಯಾಯವಾದ ಮಾರ್ಗದಲ್ಲಿ ವ್ಯಯಮಾಡುವುದೆಂದರ್ಥ. ಗಳಿಸಿದ ಹಣಕ್ಕೆ ದಾನಮಾಡುವುದೊಂದು ಮಾರ್ಗವೆಂದೂ, ಭೋಗಿಸುವುದು ಮತ್ತೊಂದು ಮಾರ್ಗವೆಂದೂ, ನಾಶಮಾಡುವುದು ಇನ್ನೊಂದುದಾರಿಯೆಂದೂ ಹಿರಿಯರು ಹೇಳಿರುವರು. ಪರರ ಉಪಯೋಗಕ್ಕಾಗಿ ಪ್ರತಿಫಲವನ್ನಪೇಕ್ಷಿಸದೆ ಕೊಟ್ಟುಬಿಡುವುದು ದಾನವು. ಪ್ರತಿಯನ್ನಪೇಕ್ಷಿಸಿ ಮಾಡಿದ ಕಾರ್ಯವು ಉಪಕಾರಕ್ಕೆ ಸೇರುವುದಿಲ್ಲ. ಅದರೆ ಪ್ರತಿಯನ್ನಪೇಕ್ಷಿಸುವಿಕೆಯು ಸದ್ವ್ಯಯಕ್ಕೂ ಸೇರುವುದಿಲ್ಲವೊ? ಸೇರುವುದಿಲ್ಲ. ಬಿರುದುಗಳಿಗೂ, ಜನಗಳು ಧರ್ಮಿಷ್ಠನೆಂದನ್ನಲೆಂದೂ ಮಾಡುವ ವ್ಯಯವು ಸದ್ವ್ಯಯಕ್ಕೆ ಸೇರುವುದಿಲ್ಲ. ತಕ್ಕಂತೆ ಸತ್ಪಾತ್ರದಲ್ಲಿ ವಿನಿಯೋಗಿಸಲ್ಪಟ್ಟ ಹೊರತೂ ಸಾರ್ಥಕವೆನಿಸಲಾರದು. ಮನುಷ್ಯನು ಇಹದಲ್ಲಿ ಸುಖಪಡಬೇಕು. ಜೀವವಿರುವವರೆಗೂ ದೇಹಸಂರಕ್ಷಣೆಗಾಗಿ ಹಣವನ್ನು ವ್ಯಯಮಾಡಬೇಕು. ನ್ಯಾಯವಾಗಿ ಎಷ್ಟು ಹಣದಿಂದ ಜೀವನವನ್ನು ಸುಖವಾಗಿ ಕಳೆಯಬಹುದೋ ಅಷ್ಟುಮಾತ್ರ ಸದ್ವ್ಯಯಕ್ಕೆ ಸೇರುವುದು. ಮಾನವನು ಸಂಸಾರವನ್ನು ಹೂಡಿ ಅದನ್ನು ಚೆನ್ನಾಗಿ ನಿರ್ವಹಿಸಿಕೊಂಡು ಹೋಗಬೇಕಾದುದು ನ್ಯಾಯವು. ಸಂಸಾರಕ್ಕೆ ಬೇಕಾದುದಕ್ಕಿಂತ ಹೆಚ್ಚಾಗಿ ಮಾಡುವ ಧನವ್ಯಯವು ಸದ್ವ್ಯಯವೆನಿಸಲಾರದು. ಸುಖಪಡಬೇಕೆಂದು ಮಾದಕದ್ರವ್ಯಗಳಿಗೆ ಹಾಕುವ ಹಣವು ಸದ್ವ್ಯಯವೆನಿಸಲಾರದು. ಏಕೆಂದರೆ— ಅದು ಹಣವನ್ನು ವ್ಯಯಮಾಡುವ ಸರಿಯಾದ ಮಾರ್ಗವಲ್ಲ. ಸುಖಪಡುವೆನೆಂದು ಜೂಜಾಡಿ ಕಳೆದ ಧನವು ಸದ್ವ್ಯಯವೆನಿಸಲಾರದು. ಇದುವರೆಗೆ ಜೂಜಾಡಿ, ಕೆಡದು ಸುಖವಾಗಿ ಬಾಳಿದವರಾರೂ ಇಲ್ಲ. ನಾಟಕಾದಿಗಳನ್ನು ನೋಡಲು ಕಳೆದ ಹಣವು, ತಕ್ಕ ಫಲವನ್ನು ತರುವುದಾದರೆ, ಸದ್ವ್ಯಯದ ಪಂಗಡಕ್ಕೆ ಸೇರುವುದೇ ವಿನಾಹ ಇಲ್ಲವಾದರೆ ಇಲ್ಲ. ಇದಕ್ಕೂ ಸಹ ವ್ಯಯವು ಮಿತವಾಗಿರಬೇಕು. ಬರೀ ನಾಟಕಗಳನ್ನು ನೋಡಲು ಸಾವಿರಾರು ರೂಪಾಯಿಗಳನ್ನು ಕಳೆದುಕೊಂಡು ಅನೇಕ ರೋಗಾದಿಗಳಿಗೆ ಆಶ್ರಯಭೂತರಾಗಿರುವ ಅನೇಕ ಮಹಾಶಯರನ್ನು ನಾವು ಇಂದು ನೋಡುತ್ತಿರುವೆವು. ಗಳಿಸಿದ ಹಣವನ್ನು ನ್ಯಾಯವಾದ ಮಾರ್ಗದಲ್ಲಿ ಪ್ರತಿಯೊಬ್ಬನೂ ವ್ಯಯಮಾಡಬೇಕು. ಸರಿಯಾದ ದಾನಭೋಗಗಳಿಗೆ ಸೇರದುದೆಲ್ಲಾ ನಾಶವರ್ಗಕ್ಕೆ ಸೇರಿದುದೆನ್ನಬಹುದು. ಮನುಷ್ಯನು ಕೂಡಿಟ್ಟ ಹಣವನ್ನು ವಿವಾಹ, ಉಪನಯನ, ಮಾತಾಪಿತೃಗಳ ಶ್ರಾದ್ಧಗಳಲ್ಲಿ ಸರಿಯಾಗಿ ವಿನಿಯೋಗಿಸಬೇಕೆಂದು ಹೇಳುವರು. ಈ ಆಧಾರದ ಮೇಲೆಯೇ ಕೆಲವರು ಮೇಲ್ಕಂಡ ಸಮಯಗಳಲ್ಲಿ ಹಣವನ್ನು ನೀರಿನಂತೆ ಖರ್ಚುಮಾಡುವರು. ಇದನ್ನೇನೋ ನಾವು ಸದ್ವ್ಯಯವೆಂದು ಹೇಳಲಾರೆವು. ವ್ಯಯಮಾಡುವ ಹಣವು ಹತ್ತುಜನಕ್ಕೆ ಉಪಯೋಗವಾಗಬೇಕು. ಅದು ಪ್ರತಿಫಲವನ್ನಪೇಕ್ಷಿಸತಕ್ಕದಾಗಿರಬಾರದು. ಅವಶ್ಯಕವಿದ್ದಷ್ಟನ್ನೇ ವ್ಯಯಮಾಡಬೇಕು.

(ಸಶೇಷ.)

ಈರೀ ರೇಷ್ಮೆ.

ಬೊಂಬಾಯಿ ಸಂಸ್ಥಾನದಲ್ಲಿ ರೈತರೇ ಮೊದಲಾದ ಜನಗಳು ಈರೀ ರೇಷ್ಮೆಯನ್ನು ಬೆಳೆಯುತ್ತಾರೆ. ಈ ರೇಷ್ಮೆಯ ಹುಳುಗಳಿಗೆ ಹರಳೆಲೆಯನ್ನು ಹಾಕುತ್ತಾರೆ. ಏಪ್ರಿಲ್ ಮೇ ತಿಂಗಳುಗಳಲ್ಲಿ ಈ ಹುಳುಗಳು ವಿಶೇಷ ವೃದ್ಧಿಗೆ ಬರುವುದಿಲ್ಲ. ಬಾಕೀ ತಿಂಗಳುಗಳಲ್ಲಿ ಹರಳೆಲೆಯು ಬೆಳೆಯುವ ಸ್ಥಳಗಳಲ್ಲಿ ಇವು ವಿಶೇಷ ವೃದ್ಧಿಗೆ ಬರುತ್ತವೆ. ಈ ಗಿಡದಿಂದ ಎಲೆಗಳನ್ನು ಕಿತ್ತು ರೇಷ್ಮೆ ಹುಳುಗಳಿಗೆ ಹಾಕುತ್ತಲಿರುತ್ತಾರೆ. ಪುನಃ ಅದೇ ಗಿಡಗಳಲ್ಲಿ ಎಲೆಗಳು ಬಿಡುತ್ತಲಿರುತ್ತವೆ. ಬಿಹಾರಿನಲ್ಲಿ ಒಂದೆಕರೆಯ ಖುಷ್ಕಿ ಜಮೀನಿನಲ್ಲಿ ೩೦೦೦ ಪೌನು ಎಲೆಯೂ, ೮೦೦ ಪೌನು ಹರಳುಬೀಜವೂ ಬೆಳೆಯಲ್ಪಡುವುವು. ಹರಳುಗಿಡಗಳು ಅನೇಕಜಾತಿಯವುಗಳಾಗಿರುತ್ತವೆ. ಎಲ್ಲಾ ಜಾತಿಯ ಎಲೆಗಳನ್ನು ಈ ಹುಳುಗಳು ತಿನ್ನುತ್ತವೆ. ಒಂದುವರ್ಷಕ್ಕೆ ಏಳೆಂಟಾವೃತ್ತಿ ಈ ಹುಳುಗಳನ್ನು ಸಾಕಬಹುದು. ಒಂದೆಕರೆಯ ಜಮೀನಿನಲ್ಲಿ ಬೆಳೆಯುತಕ್ಕ ಹರಳೆಲೆಯು ಒಂದೂವರೆ ಲಕ್ಷ ಹುಳುಗಳಿಗೆ ಸಾಕಾಗುತ್ತದೆ. ಈ ಹುಳುಗಳನ್ನು ರೇಷ್ಮೆಗೋಸ್ಕರ ಕೊಲ್ಲತಕ್ಕ ಆವಶ್ಯಕವಿಲ್ಲ. ಅವುಗಳೇ ರೇಷ್ಮೆಯು ಹೋಗದ ಹಾಗೆ ದಾರಿಮಾಡಿಕೊಂಡು ಈಚೆಗೆ ಬರುತ್ತವೆ. ಒಂದು ಎಕರೆಯಲ್ಲಿ ಬೆಳೆಯುತಕ್ಕ ಹರಳೆಲೆಯಿಂದ ೪೪ ಪೌನು ರೇಷ್ಮೆಯನ್ನು ಕೊಡುವಷ್ಟು ಹುಳುಗಳು ಸಾಕಲ್ಪಡುವುವು. ಬಿಹಾರು ದೇಶದಲ್ಲಿ ಎಕರೆ ಒಂದಕ್ಕೆ ಹರಳನ್ನು ಹಾಕಿದವರು ಎರಡುನೂರು ರೂಪಾಯಿಗಳನ್ನು ಸಂಪಾದಿಸುವರು. ಹುಳುವು ಈಚೆಗೆ ಬಂದಮೇಲೆ ರೇಷ್ಮೆಯನ್ನು ಕುದಿಯುವ ನೀರಿಗೆ ಹಾಕಿ ಒಣಗಿಸಿ ನೂಲನ್ನು ಹತ್ತಿಯನೂಲಿನಂತೆ ರಾಟೆಯಿಂದ ನೂಲುವರು. ಅದಕ್ಕೆ ಬಣ್ಣವನ್ನು ಹಾಕಿ ನೇಗೆಯ ಕೆಲಸಕ್ಕೆ ಉಪಯೋಗಿಸಿಕೊಳ್ಳುವರು. ಈ ರೀತಿಯಲ್ಲಿ ಮಾಡಲ್ಪಟ್ಟ ಬಟ್ಟೆಯು ಗಜಕ್ಕೆ ಎರಡೂವರೆ ರೂಪಾಯಿ ಮೊದಲ್ಗೊಂಡು ಅಯಿದು ರೂಪಾಯಿವರೆಗೂ ಗಿರಾಕಿಯನ್ನು ಹೊಂದುವುದು. ಈ ರೇಷ್ಮೆಬಟ್ಟೆಯು ಬಹಳ ಬಾಳಿಕೆ ಬರುವುದು. ಉಪಯೋಗಿಸಿ ತೊಳೆದ ಹಾಗೆಲ್ಲಾ ಇದರ ರಂಗು ಹೆಚ್ಚುವುದು. ಬೊಂಬಾಯಿ ಪಟ್ಟಣದಲ್ಲಿ ಈ ರೇಷ್ಮೆ ಬಟ್ಟೆಗಳಿಗೆ ಗಿರಾಕಿಯು ಬಹಳವಾಗಿರುವುದು. ಈ ರೇಷ್ಮೆ ಹುಳುಗಳ ಬೀಜವು ಬರೋಡಾಪಟ್ಟಣದ ಶೆರಿಕಲ್ಚರ್ ಸೂಪರಿಂಟೆಂಡೆಂಟರವರ ಬಳಿಯಲ್ಲಿಯೂ, ಬೊಂಬಾಯಿ ವ್ಯವಸಾಯದ ಇಲಾಖೆಯಲ್ಲಿಯೂ ದೊರೆಯುವುದು. ಆದರೆ ಈ ಬೀಜಗಳನ್ನು ತರುವುದಕ್ಕೆ ಮುಂಚೆಯೇ ಈ ಹುಳುಗಳಿಗೆ ಆಹಾರರೂಪವಾದ ಹರಳೆಲೆಗಳನ್ನು ಸಿದ್ಧಮಾಡಿಕೊಂಡಿರಬೇಕು. ಪ್ರತಿ ಒಂದು ಹುಳುವು ಒಂದಾವೃತ್ತಿಗೆ ೨೦೦ ಮೊಟ್ಟೆಗಳನ್ನು ಇಡುವುದು. ೫೦೦ ಹುಳುಗಳನ್ನು ತಂದರೆ ಅವುಗಳು ಶೀಘ್ರದಲ್ಲಿಯೇ ಬೇಕಾದಷ್ಟು ಮೊಟ್ಟೆಗಳನ್ನು ಇಕ್ಕುವುವು. ಈ ಮೊಟ್ಟೆಗಳು ೮ ದಿವಸಗಳಲ್ಲಿ ಹುಳುಗಳಾಗುವುವು. ಈ ಹುಳುಗಳು ೨೦ ನಿಮಿಷಗಳು ಹರಳೆಲೆಯನ್ನು ತಿನ್ನುವುವು. ಅನಂತರ ೧೫ ದಿವಸಗಳು ರೇಷ್ಮೆಯಿಂದ ಗೂಡನ್ನು ಕಟ್ಟಿಕೊಳ್ಳುವುವು. ೫ ದಿವಸಗಳೊಳಗಾಗಿ ಸದರೀ ಗೂಡಿನಿಂದ ರೇಷ್ಮೆ ತೆಗೆದುಕೊಳ್ಳುವುದಕ್ಕೆ ಅವಕಾಶವಾಗುವುದು. ಬೇಸಿಗೆಯ ಕಾಲದಲ್ಲಿ ಮೂವತ್ತೈದು ದಿವಸಗಳಲ್ಲಿಯೇ ಈ ಕೆಲಸ ನಡೆಯುವುದು. ಈ ಹುಳುಗಳ ಬೀಜಗಳನ್ನು ಟಪ್ಪಾಲ್ ದ್ವಾರ ತರಿಸಿಕೊಳ್ಳಬಹುದು. ಒಂದು ತಟ್ಟೆಯಲ್ಲಿ ಬಟ್ಟೆಯನ್ನು ಹರವಿ ಇದರ ಮೊಟ್ಟೆಗಳನ್ನು ಇಡುವರು. ಇವುಗಳು ಬೂದು ಬಣ್ಣವಾದ ಕೂಡಲೇ ಹರಳೆಲೆಯಿಂದ ಅವುಗಳನ್ನು ಮುಚ್ಚುವರು. ಮೊಟ್ಟೆಒಡೆದು ಹುಳುಗಳು ಈಚೆಗೆ ಬಂದಕೂಡಲೇ ಎಲೆಗಳನ್ನು ತೆಗೆದು ಆ ಹುಳುಗಳನ್ನು ಇನ್ನೊಂದು ತಟ್ಟೆಗೆ ಹೋಗುವಂತೆ ಮಾಡಿ ಅವುಗಳ ಆಹಾರಕ್ಕಾಗಿ ಹರಳೆಲೆಯ ಚಿಗುರನ್ನು ಹಾಕುವರು. ದಿನಕ್ಕೆ ಮೂರಾವೃತ್ತಿ ಇದಕ್ಕೆ ಆಹಾರವು ಹಾಕಲ್ಪಡುವುದು. ಹುಳುಗಳು ದೊಡ್ಡವುಗಳಾದ ಮೇಲೆ ರಾತ್ರಿಯ ವೇಳೆ ಇನ್ನೊಂದಾವೃತ್ತಿ ಆಹಾರವು ಸಾಲದೆಂದು ತಿಳಿದುಕೊಂಡು ಆಹಾರವನ್ನು ಕೊಡಬೇಕು. ಇವುಗಳು ಚೆನ್ನಾಗಿ ಬೆಳೆದಮೇಲೆ ಆಹಾರವನ್ನು ತಿನ್ನುವುದಿಲ್ಲ. ರೇಷ್ಮೆಯನ್ನು ನೂಲುವುದಕ್ಕೆ ಆಗ ಉಪಕ್ರಮವಾಗುತ್ತದೆ. ಆಗ ಅವುಗಳನ್ನು ಒಣಗಿದ ಎಲೆಗಳನ್ನು ಹಾಕಿರುವ ಕುಕ್ಕೆಗಳಿಗೆ ತುಂಬಿ ಒಂದು ಕತ್ತಲೆಯಲ್ಲಿಟ್ಟಿರಬೇಕು. ಒಂದು ವಾರವಾದಮೇಲೆ ಅವುಗಳನ್ನೆಲ್ಲಾ ತೆಗೆದು [illegible] ಹುಳುಗಳು ಹೊರಕ್ಕೆ ಬರುತ್ತವೆ. ಆ ಹುಳುಗಳನ್ನೆಲ್ಲಾ ಜಮಾಯಿಸಿ ಒಂದು ಕುಕ್ಕೆಯಲ್ಲಿಡುವರು. ಆಗ ಗಂಡು ಹುಳುಗಳೂ ಹೆಣ್ಣು ಹುಳುಗಳೂ ಸೇರಿಕೊಳ್ಳುವುವು. ೨೪ ಗಂಟೆಗಳಾದ ಮೇಲೆ ಹೆಣ್ಣು ಹುಳುಗಳನ್ನು ಆರಿಸಿ ಒಂದು ಕುಕ್ಕೆಗೆ ತುಂಬುವರು. ಅಲ್ಲಿ ಅವುಗಳು ಮೊಟ್ಟೆಗಳನ್ನು ಹಾಕುವುವು. ಆ ಮೊಟ್ಟೆಗಳನ್ನು ಜಮಾಯಿಸಿಕೊಂಡು ಎಷ್ಟು ಮೊಟ್ಟೆಗಳಿಗೆ ಆಹಾರವು ದೊರೆಯುವುದೋ ಅಷ್ಟನ್ನು ಉಪಯೋಗಿಸಿಕೊಳ್ಳುವರು. ಮೊದಲನೇಯ ರಾತ್ರಿ ಹಾಕಲ್ಪಟ್ಟ ಮೊಟ್ಟೆಗಳು ಅತ್ಯುತ್ಕೃಷ್ಟವಾದುವುಗಳೆಂದು ಭಾವಿಸಲ್ಪಟ್ಟಿವೆ. ರೇಷ್ಮೆ ನೂಲುವುದಕ್ಕೆ ಹುಳುಗಳು ಈಚೆಗೆ ಬಂದಕೂಡಲೇ ಅದರ ಗೂಡನ್ನು ತೆಗೆದುಕೊಂಡು ಬಟ್ಟೆಯಲ್ಲಿ ಕಟ್ಟಿ ಕುದಿಯುವ ನೀರಿಗೆ ಒಂದುಪಾವು ಸೋಡಾವನ್ನು ಹಾಕಿ ಅದರೊಳಕ್ಕೆ ಈ ಗೂಡುಗಳ ಗಂಟನ್ನು ಹಾಕುವರು. ಅದು ಒಂದುಗಂಟೆ ಕುದಿದಮೇಲೆ ಅದನ್ನು ತೆಗೆದು ರಾಟೆಗೆ ಕೊಟ್ಟರೆ ನೂಲು ಸುಲಭವಾಗಿ ಬರುವುದು. ಯಾವ ಕಾಲದಲ್ಲಿ ಹರಳೆಲೆಯ ಗಿಡಗಳು ಚೆನ್ನಾಗಿ ಬೆಳೆಯುವುವೊ ಆಗ ಈ ರೇಷ್ಮೆಯು ಬೆಳೆಯುವುದಕ್ಕೆ ಸರಿಯಾದ ಕಾಲವೆಂದು ಭಾವಿಸಬೇಕು. ಇತರವಿಧವಾದ ರೇಷ್ಮೆಗಳಿಗಿಂತ ಈ ರೇಷ್ಮೆಯು ಅತ್ಯುತ್ತಮವಾದುದು. ಈ ಕೆಲಸವು ಸುಲಭ. ಹೆಂಗಸರೂ ಮಕ್ಕಳೂ ಕೂಡ ಈ ರೀತಿಯಲ್ಲಿ ರೇಷ್ಮೆಯನ್ನು ಉತ್ಪತ್ತಿಮಾಡಬಹುದು. ರೇಷ್ಮೆ ಹುಳುಗಳನ್ನು ಕೊಲ್ಲತಕ್ಕ ಆವಶ್ಯಕವಿಲ್ಲ. ಆ ಹುಳುಗಳು ರೇಷ್ಮೆಯನ್ನು ನಿರ್ಮಾಣಮಾಡಿ ಪುನಃ ಮೊಟ್ಟೆಗಳನ್ನು ಹಾಕುವಂತೆ ಮಾಡಲ್ಪಡಬಹುದು. ಇದಕ್ಕೆ ಖರ್ಚು ವಿಶೇಷವಾಗಿರುವುದಿಲ್ಲ. ಬಂಡವಾಳ ವಿಶೇಷವಾಗಿ ಬೇಕಾಗಿಲ್ಲ. ಬುದ್ಧಿಶಾಲಿಗಳಾದ ರೈತರು ತಮ್ಮ ಗಮನವನ್ನು ಇದಕ್ಕೆಕೊಡುವುದು ಲಾಭಕರವಾದುದು.

ಸಾಧ್ವಿ.

ದಿಲ್ಲಿ ದರ್ಬಾರಿನ ಏರ್ಪಾಡು.

ಚಕ್ರವರ್ತಿ ದಂಪತಿಗಳು ಡಿಸೆಂಬರ್ ತಾ॥ ೭ ರಲ್ಲಿ ದಿಲ್ಲಿಯ ಕೋಟೆಯ ಹತ್ತಿರವಿರುವ ಸಲಿಂಗಾರ್ ರೈಲ್ವೆ ಸ್ಟೇಷನ್ನಿನಲ್ಲಿ ಬಂದಿಳಿಯುವರು. ಅಲ್ಲಿಗೆ ೨ ದಿನಗಳ ಪೂರ್ವವೇ ಬಂದಿರುವ ವೈಸ್ರಾಯ್ ದಂಪತಿಗಳು, ಗೌರ್ನರುಗಳು, ಕಮ್ಯಾಂಡರ್ ಇನ್‌ಚೀಫರು, ಸಂಸ್ಥಾನಾಧಿಕಾರಿಗಳು, ವೈಸ್ರಾಯರ ಎಕ್ಸಿಕ್ಯೂಟಿವ್ ಕೌನ್ಸಿಲ್ ಮೆಂಬರುಗಳು, ದೊಡ್ಡದೊಡ್ಡ ಸರ್ಕಾರಿಯ ಸಿವಿಲ್ ಮತ್ತೂ ಮಿಲ್ಟೆರಿ ಅಧಿಕಾರಿಗಳು, ಇತರ ಪ್ರಮುಖರು ಸ್ಟೇಷನ್ನಿನಲ್ಲಿ ನಿರೀಕ್ಷಿಸಿಕೊಂಡಿದ್ದು ಚಕ್ರವರ್ತಿದಂಪತಿಗಳನ್ನು ಮರ್ಯಾದಾಪುರಸ್ಸರವಾಗಿ ಇದಿರ್ಗೊಳ್ಳುವರು. ಅನಂತರ ದೊಡ್ಡ ಉದ್ಯೋಗಸ್ಥರ ಪರಿಚಯವು ಚಕ್ರವರ್ತಿಯವರಿಗೆ ವೈಸ್ರಾಯರಿಂದ ಮಾಡಿಸಲ್ಪಟ್ಟು ಚಕ್ರವರ್ತಿ ದಂಪತಿಗಳು ಕೋಟೆಯೊಳಗೇರ್ಪಡಿಸಿರುವ ಗುಡಾರಕ್ಕೆ ದಯಮಾಡಿರುವರು. ಅಲ್ಲಿ ದೇಶೀಯ ಸಂಸ್ಥಾನಾಧೀಶ್ವರರ ಪರಿಚಯವು ಚಕ್ರವರ್ತಿಯವರಿಗೆ ಮಾಡಿಸಲ್ಪಟ್ಟಮೇಲೆ ಕೋಟೆಯಿಂದ ಉತ್ಸವಪೂರ್ವಕವಾಗಿ ತಮ್ಮ ಬಿಡಾರಕ್ಕೆ ಚಿತ್ತೈಸುವಾಗ್ಗೆ ಮಾರ್ಗದಲ್ಲಿ ಬ್ರಿಟಿಷ್ ಇಂಡ್ಯಾ ಪ್ರತಿನಿಧಿಗಳ ಮನ್ನಣೆಯನ್ನು ಕೈಗೊಂಡು ವೈಸ್‌ರಾಯರ ನಿಯಮನಿರ್ಮಾಣಸಭೆಯ ವೈಸ್ ಪ್ರೆಸಿಡೆಂಟರೊಪ್ಪಿಸುವ ವಿಜ್ಞಾಪನಾಪತ್ರಿಕೆಯನ್ನು ಸ್ವೀಕರಿಸಿ, ತಮ್ಮ ಬಿಡಾರವನ್ನು ಸೇರುವರು. ಈ ಉತ್ಸವದಲ್ಲಿ ಮೊದಲು ಗೌರ್ನರುಗಳು, ಲೆಫ್ಟನೆಂಟ್ ಗೌರ್ನರುಗಳು, ಮಧ್ಯಪರಗಣದ ಚೀಫ್ ಕಮಿಷನರು ಹೊರಡುವರು. ಇವರ ಹಿಂದೆ ಚಕ್ರವರ್ತಿ ದಂಪತಿಗಳು, ಅವರ ಹಿಂಗಡೆ ದೇಶೀಯ ಸಂಸ್ಥಾನಾಧೀಶರುಗಳು ಹೊರಡುವರು. ಈ ಉತ್ಸವವನ್ನು ಪುರುಷರೂ, ಸ್ತ್ರೀಯರೂ, ಮಕ್ಕಳೂ ಮಾರ್ಗಗಳಲ್ಲಿ ನಿಂತು ಚೆನ್ನಾಗಿ ನೋಡಲು ಅಲ್ಲಲ್ಲೆ ತಕ್ಕ ಸ್ಥಳಾನುಕೂಲವೇರ್ಪಡಿಸಲ್ಪಡುವುದು. ತಾ॥ ೭, ೮ ಮತ್ತೂ ೯ ರ ಬೆಳಗ್ಗೆ ದೇಶೀಯ ಸಂಸ್ಥಾನಾಧೀಶ್ವರರು ಮೊದಲಾದವರು ಚಕ್ರವರ್ತಿಯವರ ದರ್ಶನವನ್ನು ತೆಗೆದುಕೊಳ್ಳುವರು. ತಾ॥ ೯ ರ ಮಧ್ಯಾಹ್ನದಲ್ಲಿ ಚಕ್ರವರ್ತಿಯವರು “ಆಲ್ ಇಂಡ್ಯಾ ಕಿಂಗ್ ಎಡ್ವರ್ಡ್ ಮೆಮೋರಿಯಲ್” ನ ಮಹೋತ್ಸವವನ್ನು ಜರುಗಿಸುವರು. ತಾ॥ ೧೦ ನೆಯ ಭಾನುವಾರದ ದಿವಸ ದೇವರ ಪ್ರಾರ್ಥನೆಯಲ್ಲಿ ನಿರತರಾಗಿರುವರು. ತಾ॥ ೧೧ ರ ಬೆಳಗ್ಗೆ ಚಕ್ರವರ್ತಿಯವರು ಸೇನೆಗಳಿಗೆ ಧ್ವಜಗಳನ್ನು ಬಹುಮಾನಿಸುವರು. ಮತ್ತೂ ಆ ಮಧ್ಯಾಹ್ನ ನಡೆಯುವ ಪೋಲೋಪಂದ್ಯದ ಆಟವನ್ನು ಪರಾಮರಿಸಲು ದಯಮಾಡಿಸುವರು. ತಾ॥ ೧೨ ರಲ್ಲಿ ದರ್ಬಾರು ಜರುಗುವುದು. ಆ ಮಧ್ಯಾಹ್ನ ಹಾಕಿ ಟೋರ್ನಮೆಂಟೂ ಸಾಯಂತರ ರಾಜಗೌತಣವೂ ಅನಂತರ ಚಕ್ರವರ್ತಿಯವರ ಗುಡಾರದಲ್ಲಿ ಸ್ವಾಗತವೂ ಜರುಗುವುವು. ತಾ॥ ೧೩ ರಲ್ಲಿ ಭರತಖಂಡದ ಸೇನೆಯ ವಾಲಂಟಿಯರ್ ಅಧಿಕಾರಿಗಳಿಗೂ, ದೇಶೀಯ ಅಧಿಕಾರಿಗಳಿಗೂ ಸ್ವಾಗತವು ಸಾಯಂಕಾಲ ಗಾರ್ಡನ್ ಪಾರ್ಟೀಯು ನಡೆಯುವುವು. ಮತ್ತೂ ಆ ದಿನ ರಾತ್ರಿ ಕೋಟೆ ಮೊದಲಾದ ಸ್ಥಳಗಳಲ್ಲಿ ದೀಪೋತ್ಸವವು ಆಗುವುದು. ಬಡಬಗ್ಗರಿಗೆ ಅನ್ನದಾನವು ಮಾಡಲ್ಪಡುವುದು. ತಾ॥ ೧೪ ರಲ್ಲಿ ಸೇನೆಯ ಪರಾಮರಿಕೆಯೂ, ತಾ॥ ೧೫ ರಲ್ಲಿ ಸೈನಿಕರ ಪಂದ್ಯವೂ ಜರುಗುವುವು ತಾ॥ ೧೬ ನೇಯ ಶನಿವಾರದ ದಿವಸ ಚಕ್ರವರ್ತಿಯವರು ನೇಪಾಳಕ್ಕೂ, ಚಕ್ರವರ್ತಿನಿಯವರು ಆಗ್ರಾಕ್ಕೂ ದಯಮಾಡಿಸುವರು. ಮತ್ತೂ ವೈಸ್ರಾಯ್ ದಂಪತಿಗಳು ಬೇದಾರಖಂಡಕ್ಕೆ (ಡೇರಾಡೋನಿಗೆ) ಹೊರಡುವರು.

ಮೈಸೂರ್ ಗೆಜೆಟ ಸಂಗ್ರಹ.

ಕೋಲಾರ ಡಿಸ್ಟ್ರಿಕ್ಟ್ ಡೆ॥ ಕಮಿಷನರ್ ಮೆ॥ ಪಿ. ಶ್ರೀಕಂಠೇಶ್ವರಯ್ಯರ್, ಬಿ. ಎ., ಬಿ. ಎಲ್., ರವರಿಗೆ ಅವರು ಪಯೋಗಿಸಿಕೊಳ್ಳುವಾರಭ್ಯ ೧॥ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವುದರಿಂದ, ಸೀನಿಯರ್ ಅ॥ ಕಮಿಷನರ್ ಮತ್ತೂ ಕೋಲಾರದ ಗೋಲ್ಡ್‌ಫೀಲ್ಡ್ಸಿನ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಮೆ॥ ಪಿ. ಎಫ್. ಬೌರಿಂಗ್‌ರವರು ಕೋಲಾರ ಡಿ॥ ಡೆ॥ ಕ॥ ಮತ್ತೂ ಡಿ॥ ಮ್ಯಾಜಿಸ್ಟ್ರೇಟರಾಗಿಯೂ ಮಾಲೂರು ಸಬ್ ಡಿವಿಜನ್ನಿನ ಅ॥ ಕಮಿಷನರ್ ಮತ್ತೂ ೧ ನೇ ಕ॥ ಮ್ಯಾಜಿಸ್ಟ್ರೇಟರಾದ ಮೆ॥ ಟಿ. ಇ. ಜಯರಾಮಯ್ಯರ್, ಬಿ. ಎ., ಬಿ. ಎಲ್., ರವರು ಕೋಲಾರ ಗೋಲ್ಡ್‌ಫೀಲ್ಡ್ಸಿನ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ, ಕೋಲಾರ ಡಿ॥ ಟ್ರೆಜರಿ ಅ॥ ಕಮಿಷನರ್ ಮೆ॥ ಎ. ವೇದಾಂತ ದೇಶಿಗಮಯ್ಯಂಗಾರರು ಮಾಲೂರು ಸಬ್ ಡಿವಿಜನ ಛಾರ್ಜಿನಲ್ಲು ಮತ್ತೂ ಪ್ರೊಬೇಷನರಿ ಅ॥ ಕಮಿಷನರ್ ಮೆ॥ ಬಿ. ಟಿ. ಕೇಶವಯ್ಯಂಗಾರ್, ಬಿ. ಎ., ಯವರು ಕೋಲಾರ ಡಿ॥ ಟ್ರಜರಿ ಛಾರ್ಜಿನಲ್ಲು ನೇಮಿಸಲ್ಪಟ್ಟಿರುತ್ತಾರೆ.

ಚಿತ್ರದುರ್ಗ ಡಿ॥ ಡೆ॥ ಕಮಿಷನರ್ ಮೆ॥ ಕೆ. ಚಾಂಡಿಯವರಿಗೆ ಕೊಟ್ಟಿದ್ದ ಒಂದು ಪಕ್ಷದ ರಜವು ೧೯೧೧ ನೆಯ ಸೆಪ್ಟಂಬರ್ ತಾ॥ ೧೧ ರ ವರೆಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಮೆ॥ ಕೆ. ಕೃಷ್ಣಯ್ಯರ್ ರವರು ಇನ್ನೂ ಚಿತ್ರಕಲ್‌ದುರ್ಗ ಡಿ॥ ಡೆ॥ ಕಮಿಷನರಾಗಿರಬೇಕಾಗಿರುವ ಪ್ರಯುಕ್ತ ಬೆಂಗಳೂರ ಸಿಟಿ ಮ್ಯಾಜಿಸ್ಟ್ರೇಟ್ ಮೆ॥ ಸಿ. ರಂಗನಾಥರಾವ್ ಸಾಹಿಬ್, ಬಿ. ಎ., ಬಿ. ಎಲ್., ರವರು ಚಿತ್ರಕಲ್‌ದುರ್ಗ ಡಿ॥ ದಾವಣಗೆರೆ ಸಬ್ ಡಿವಿಜನ ಛಾರ್ಜಿಗೂ ಮೆ॥ ಎಲ್. ಕೃಷ್ಣರಾಯರು ರಜದಿಂದ ಉದ್ಯೋಗದಮೇಲೆ ಬರಮಾಡಲ್ಪಟ್ಟು ಸಿಟಿ ಮ್ಯಾಜಿಸ್ಟ್ರೇಟರಾಗಿ ಬೆಂಗಳೂರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ. ಮೆ॥ ಆರ್, ನಾನಾಸ್ವಾಮಿರಾಯರು ಮೆ॥ ರಂಗನಾಥರಾವ್ ಸಾಹಿಬ್ ರವರಿಂದ ಬಿಡುಗಡೆ ಮಾಡಲ್ಪಟ್ಟ ಕೂಡಲೆ ಚಿತ್ರಕಲ್‌ದುರ್ಗ ಡಿ॥ ಟ್ರಜರಿ ಛಾರ್ಜನ್ನು ವಹಿಸತಕ್ಕದ್ದು.

ಸಬ್ ರಿಜಿಸ್ಟ್ರಾರುಗಳಾದ ಮೆಸರ್ಸ್. ಜಿ. ಎಸ್. ಚೆನ್ನಮಲ್ಲಪ್ಪನವರು ಮಾಗಡಿಯಿಂದ ಕ್ಲೋಸ್‌ಪೇಟೆಗೂ, ಎ. ಕೃಷ್ಣರಾಯರು ಚಿಕ್ಕಬಳ್ಳಾಪುರದಿಂದ ಮಾಗಡಿಗೂ, ಎ. ನರಸಿಂಹಯ್ಯಂಗಾರರು ತುಮಕೂರಿಂದ ಮಂಜರಾಬಾದಿಗೂ, ವಿ. ಎಸ್. ವೆಂಕಟರಮಣಯ್ಯರ್‌ರವರು ಮಂಜರಾಬಾದಿನಿಂದ ತುಮಕೂರಿಗೂ, ಎಂ. ಶ್ರೀನಿವಾಸಮೂರ್ತಿಯವರು ಕ್ಲೋಸ್ ಪೇಟೆಯಿಂದ ಚಿಕ್ಕಬಳ್ಳಾಪುರಕ್ಕೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಅಮಲ್ದಾರರುಗಳಾದ ಮೆಸರ್ಸ್. ಎ. ರಂಗರಾಜುರು ಸಿ. ಕೃಷ್ಣಂನಾಯಡುರವರು ಮತ್ತೂ ಬಿ. ಕೃಷ್ಣಸಿಂಗ್‌ರವರು ೨ ನೆಯ ತರಗತಿಯಿಂದ ೧ ನೆಯ ತ॥ ಗೂ, ಬಿ. ಕೇಸರಸಿಂಗ್‌ರವರು, ಎಸ್. ವೆಂಕಟರಮಣ ಶಾಸ್ತ್ರಿಯವರು ಅಬ್ದುಲ್ ಹಕೀಂರವರು ಮತ್ತೂ ಸಿ. ಮಾಚಯ್ಯನವರು ೩ ನೆಯ ತ॥ ಯಿಂದ ೨ ನೆಯ ತ॥ ಗೂ; ಕೆ. ಹನುಮಂತರಾಯರು, ಗುಲಾಂ ಮಹಮ್ಮದ್ ಬೇಗ್‌ಯವರು, ಜಿ. ನಾರಾಯಣರಾಯರು, ಷೇಕ್ ಅಬ್ದುಲ್ಲಯವರು, ಸಿ. ಆರ್. ನಾರಾಯಣಸ್ವಾಮಿ ಮೊದಲಿಯಾರರು, ಮತ್ತೂ ಕೆ. ಕೇಶವಾಚಾರ್‌ರವರು ೪ ನೆಯ ತ॥ ಯಿಂದ ೩ ನೆಯ ತ॥ ಗೂ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತಾರೆ.

ಅಮಲ್ದಾರರುಗಳಾದ ಮೆಸರ್ಸ್. ಲಿಂಗೋಪಂತ್ ಬಾದಾಮಿಯವರು, ಟಿ. ಅಬ್ದುಲ್‌ಖಾದರ್‌ಯವರು ಟಿ. ಹನುಮಂತರಾಯರು, ಎಸ್. ಧರ್ಮರಾಯರು, ಬಿ. ಕೃಷ್ಣರಾಯರು, ಜಿ. ಮುರುಡಪ್ಪನವರು, ಎಚ್. ಬಸವರಾಜ ಅರಸಿನವರು, ಎಂ. ಎಸ್. ಹಯಗ್ರೀವರಾಯರು, ಮಹಮ್ಮದ್ ಸಯ್ಯದ್ ಷರೀಫ್‌ರವರು ಟಿ. ಸೀತಾರಾಮಯ್ಯನವರು, ಕೆ. ನಾರಣಯ್ಯರ್‌ರವರು ಕೆ. ನರಸಿಂಹಯ್ಯಂಗಾರರು ಮತ್ತೂ ಆರ್. ಸುಂದರರಾಯರು ೧೯೧೧ ನೆಯ ಜುಲೈ ತಾ॥ ೧ ರಿಂದ ೪ ನೆಯ ತರಗತಿಯಲ್ಲಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ಮೆ॥ ಜಸ್ಟಿಸ್ ಎಸ್. ಇಚ್‌ಮೈ, ಸಿ. ಎಸ್. ಐ., ಯವರು ಚೀಫ್ ಜಸ್ಟಿಸ ಉದ್ಯೋಗವನ್ನು ಮೆ॥ ಜಸ್ಟಿಸ್ ಪಿ. ಎಸ್. ಕೃಷ್ಣರಾವ್, ರಾವ್ ಬಹದ್ದೂರ್‌ರವರಿಂದ ೧೯೧೧ ನೆಯ ಆಗಸ್ಟ್ ತಾ॥ ೨೧ ರ ಅಪರಾಹ್ನದಲ್ಲಿ ವಹಿಸಿಕೊಂಡರು.

ಮೈಸೂರ್ ಸ್ಟಾರ್.

೧೯೧೧ನೆಯ ಇಸವಿ ಸೆಪ್ಟಂಬರ್ ತಾ॥ ೪ ನೇ ಸೋಮವಾರ

ಹೈದರಾಬಾದಿನ ನೈಜಾಂರವರ ಮರಣವು.

ಅಸಫ್‌ಜು, ಮುಜಫರ್-ಉಲ್-ಮಮಾಲಿಕ್, ರಸ್ತುಂ-ಇ-ದೌರಾನ್, ಅರಸ್ತು-ಇ-ಜುಮಾನ್, ನೈಜಾಂ-ಉಲ್-ಮುಲ್ಕ್, ನವಾಬ್ ಮೀರ್ ಸರ್ ಮಹಬೂಬ್ ಅಲಿ, ಖಾನ್ ಬಹದ್ದೂರ್, ಜಿ. ಸಿ. ಎಸ್. ಐ, ಬಿರುದಾಂಕಿತರಾದ ಹೈದರಾಬಾದಿನ ನೈಜಾಂರವರು ಅರೋಗ್ಯದೃಢಕಾಯರಾಗಿದ್ದು ಕಳೆದ ತಾ॥ ೨೮ ರಲ್ಲಿ ಅಕಸ್ಮಾತ್ತಾಗಿ ಪಾರ್ಶ್ವವಾಯುರೋಗಗ್ರಸ್ತರಾಗಿ ಸ್ಮೃತಿಯು ತಪ್ಪಿ, ರೆಸಿಡೆನ್ಸಿ ಸರ್ಜನರಾದ ಡಾಕ್ಟರ್ ಲೇಕ್ ಬ್ರಾಕ್ಮನ್‌ರವರು ಬಹು ಸಾಹಸಪಟ್ಟು ಚಿಕಿತ್ಸೆಯನ್ನು ಮಾಡಿದಾಗ್ಯೂ ಗುಣವನ್ನು ಹೊಂದದೆ ಮಾರನೆಯ ಬೆಳಿಗ್ಗೆ ಅಂದರೆ ತಾ॥ ೨೯ ನೆಯ ಮಂಗಳವಾರ ಬೆಳಿಗ್ಗೆ ೧೧॥ ಗಂಟೆಯಲ್ಲಿ ಪಂಚತ್ವವನ್ನೈದಿದರೆಂದು ತಿಳಿಸಲು ಅತ್ಯಂತ ಖೇದವಾಗುತ್ತದೆ. ಇವರಿಗೆ ಮರಣಕಾಲದಲ್ಲಿ ೨೦ ದಿನಗಳ ಕಡಿಮೆ ೪೬ ವರ್ಷಗಳ ವಯಸ್ಸಾಗಿದ್ದಿತು.

ಮೊಗಲ್ ಚಕ್ರವರ್ತಿಯಾದ ಔರಂಗಜೇಬನ ಆಳ್ವಿಕೆಯಲ್ಲಿ ಮುಖ್ಯಾಧಿಕಾರಗಳನ್ನು ವಹಿಸಿದ್ದ ನೈಜಾಂ-ಉಲ್-ಮುಲ್ಕ್ ಎಂಬುವನು ಔರಂಗಜೇಬನ ಕಾಲಾನಂತರ ಬಂದ ಬಹದ್ದೂರ್ ಷಾ ಮೊದಲಾದವರ ಆಳ್ವಿಕೆಯಲ್ಲಿ ಡೆಕನ್ನಿನ ಸುಬೇದಾರನಾಗಿದ್ದು ಮೊಗಲರ ಆಳ್ವಿಕೆಯನ್ನು ಕೊನೆಗಾಣಿಸಲು ಬಹು ಸಾಹಸಪಟ್ಟು, ಮಹಮ್ಮದ್ ಷಹನ ಕಾಲದಲ್ಲಿ ಎಂದರೆ ೧೭೨೪ ರಲ್ಲಿ ಹೈದರಾಬಾದು ಸಂಸ್ಥಾನವನ್ನು ಸ್ವಂತವಾಗಿ ಸ್ಥಾಪಿಸಿದನು. ಚಿನ್ ಕುಲ್ಚಿ ಖಾನ್ ಎಂದು ಆತನ ಮೊದಲಿನ ಹೆಸರು. ಆತನಿಗೆ ಕ್ರಮೇಣ ಅಸಫ್‌ಜ ಎಂದರೆ ಮಂತ್ರಿಯೆಂಬ ಪ್ರಶಸ್ತಿಯೂ, ಅನಂತರ ನೈಜಾಂ-ಉಲ್-ಮುಲ್ಕ್ ಅಂದರೆ ದೇಶದಾಡಳಿತವನ್ನು ಸರಿಪಡಿಸುವವನು ಎಂಬ ಪ್ರಶಸ್ತಿಯೂ ಲಭ್ಯವಾಗಿ ಅಂದಿನಿಂದ ಅವನ ವಂಶೀಕರೆಲ್ಲರೂ ನೈಜಾಂ ಎಂದು ಕರೆಯಲ್ಪಡುತ್ತಿರುವರು. ಈಗ ಗತಿಸಿದ ನೈಜಾಂರವರು ಮೂಲಪುರುಷನಿಂದ ೮ ನೆಯ ತಲೆಯವರು. ಇವರು ೧೮೬೬ ನೆಯ ಆಗಸ್ಟ್ ತಾ॥ ೧೮ ರಲ್ಲಿ ಜನಿಸಿ ತಮ್ಮ ೩ ನೆಯ ವರ್ಷದ ವಯಸ್ಸಿನಲ್ಲಿ ತಮ್ಮ ತಂದೆಯು ಕಾಲವಾಗಲು, ೧೮೬೯ ನೆಯ ಫೆಬ್ರುವರಿ ತಿಂಗಳಲ್ಲಿ ಪಟ್ಟಾಭಿಷಿಕ್ತರಾದರು. ೧೬ ವರ್ಷಕಾಲ ಹೈದರಾಬಾದು ಸಂಸ್ಥಾನದ ಮಂತ್ರಿಪದವಿಯಲ್ಲಿದ್ದ ಒಂದನೆಯ ಸರ್ ಸಾಲಾರ್ ಜಂಗ್‌ರವರು ಬಾಲನೈಜಾಂರವರ ರೀಜೆಂಟರಾಗಿದ್ದು, ಅವರಿಗೆ ವಿದ್ಯಾಬುದ್ಧಿಯನ್ನು ಕಲಿಸಿ, ರಾಜಕಾರ್ಯನಿರ್ವಾಹಕಶಕ್ತಿಯನ್ನುಂಟುಮಾಡಿ ೧೮೮೪ ನೆಯ ಫೆಬ್ರುವರಿಯಲ್ಲಿ ಕಾಲವಾದರು. ಆಗ ಲಾರ್ಡ್ ರಿಪನ್ ವೈಸ್ರಾಯರಿಂದ ಈ ನೈಜಾಂರವರಿಗೆ ಸಂಪೂರ್ಣವಾದ ರಾಜ್ಯಾಧಿಕಾರವು ವಹಿಸಲ್ಪಟ್ಟು, ಜಿ. ಸಿ. ಎಸ್. ಐ., ಪ್ರಶಸ್ತಿಯು ಸಹ ಕೊಡಲ್ಪಟ್ಟಿತು. ನೈಜಾಂರವರು ತಮಗೆ ಗಾರ್ಡಿಯನ್ನಾಗಿದ್ದ ಸಾಲಾರ್ ಜಂಗ್‌ರವರ ಮಗನನ್ನು ತಮ್ಮ ಮಂತ್ರಿಯನ್ನಾಗಿ ನೇಮಿಸಿಕೊಂಡು ತಮ್ಮುಭಯರಿಗೂ ರಾಜ್ಯಾಡಳಿತದಲ್ಲಿ ಅನುಭವವು ಸಾಲದಿದ್ದುದರಿಂದ, ಸಮರ್ಥರಾದ ಅಧಿಕಾರಿಗಳ ಸಹಾಯದೊಡನೆ ರಾಜ್ಯಾಡಳಿತವನ್ನು ನಡೆಯಿಸುತ್ತಿದ್ದು, ತಮಗೂ ಮಂತ್ರಿಗೂ ಪರಸ್ಪರ ಮನಸ್ತಾಪವು ಹುಟ್ಟಿ, ಪ್ರಭುಪಕ್ಷ ಮತ್ತೂ ಮಂತ್ರಿಪಕ್ಷವೆಂದು ಎರಡು ಪಕ್ಷಗಳು ಏರ್ಪಟ್ಟು ರಾಜ್ಯಾಡಳಿತವು ಸರಿಯಾಗಿ ನಡೆಯದೆ ಹೋಗಲು, ಆ ಮಂತ್ರಿಯನ್ನು ಉದ್ಯೋಗದಿಂದ ನಿವೃತ್ತಿಗೊಳಿಸಿ ೧೮೮೮ ರಲ್ಲಿ ಆಡಳಿತವನ್ನು ತಾವೇ ಪ್ರತ್ಯಕ್ಷವಾಗಿ ನೋಡಲುಪಕ್ರಮಿಸಿದರು.

ಹೈದರಾಬಾದು ಸಂಸ್ಥಾನವು ೮೨೬೯೮ ಚದರಮೈಲಿ ವಿಸ್ತೀರ್ಣವೂ, ೧೧೧೪೧೧೪೨ ಪ್ರಜಾಸಂಖ್ಯೆಯೂ ಉಳ್ಳುದಾಗಿದ್ದು, ಇತರ ದೇಶೀಯ ಸಂಸ್ಥಾನಗಳಲ್ಲೆಲ್ಲ ಪ್ರಥಮಸ್ಥಾನವನ್ನು ಹೊಂದಿರುವುದು. ನೈಜಾಂರವರು ಇಂತಹ ದೊಡ್ಡ ಸಂಸ್ಥಾನದ ಆಡಳಿತವನ್ನು ತಮ್ಮ ಬುದ್ಧಿಶಕ್ತಿಯಿಂದ ನಡೆಯಿಸುತ ಮತ್ತೂ ತಮ್ಮ ಪ್ರಜೆಗಳಲ್ಲಿ ಹಿಂದೂ ಮಹಮ್ಮದೀಯರೆಂಬ ಜಾತಿಭೇದವನ್ನೆಣಿಸದೆ, ಅಕ್ಬರ್ ಚಕ್ರವರ್ತಿಯಂತೆ ಸಮಸ್ತರನ್ನೂ ಸಮದೃಷ್ಟಿಯಿಂದ ಪಾಲಿಸುತ, ವಿದ್ಯೆ, ಕಲಾಕೌಶಲ್ಯಾದಿಗಳಿಗೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟು ತಮ್ಮ ರಾಜ್ಯವನ್ನು ಬಹು ಉನ್ನತಸ್ಥಿತಿಗೆ ತಂದು, ಪ್ರತಿವರ್ಷವೂ ಆದಾಯವು ೩॥ ಕೋಟಿ ರೂಪಾಯಿಗಳ ಮೇಲೆಯೇ ಬರುವಂತೆ ಮಾಡಿದರು. ಇವರಿಗೆ ಬ್ರಿಟಿಷ್ ರಾಜರಲ್ಲಿ ಅಚಂಚಲವಾದ ಮತ್ತೂ ಅಪಾರವಾದ ಭಕ್ತಿವಿಶ್ವಾಸವು ಇದ್ದಿತೆಂಬುದಕ್ಕೆ ಅನೇಕ ದೃಷ್ಟಾಂತಗಳಿರುವುವು. ಅವುಗಳಲ್ಲಿ ೧೮೮೭ ರಲ್ಲಿ ರಷ್ಯನರು ಭರತಖಂಡದ ಪಶ್ಚಿಮೋತ್ತರ ಎಲ್ಲೆ ಕಟ್ಟಿನ ಮಾರ್ಗವಾಗಿ ನುಗ್ಗಿ ಬರೆಂಬ ಭಯವುಂಟಾಗಿದ್ದ ಸಂದರ್ಭದಲ್ಲಿ ಎಲ್ಲೆ ಕಟ್ಟಿನ ಸಂರಕ್ಷಣಾರ್ಥವಾಗಿ ನೈಜಾಂರವರು ೩೦ ಲಕ್ಷ ರೂಪಾಯಿಗಳನ್ನು ಕೊಡುವುದಲ್ಲದೆ, ಅವಶ್ಯಕ ಬಿದ್ದಲ್ಲಿ ಆಯುಧಪಾಣಿಗಳಾಗಿ ಯುದ್ಧಕ್ಕೆ ಬರಲು ಸಿದ್ಧರಾಗಿದ್ದೇವೆಂದು ಆಗ್ಗೆ ವೈಸ್ರಾಯರಾಗಿದ್ದ ಲಾರ್ಡ್ ಡಫರಿನ್‌ರವರಿಗೆ ಬರೆದು ತಿಳಿಸಿದ್ದುದು ಮತ್ತೂ ತಮ್ಮ ಆಯುಧವನ್ನು, ಕೋಶವನ್ನೂ, ಚಕ್ರವರ್ತಿಗಳ ವಶಮಾಡಲು ಸಿದ್ಧರಾಗಿದ್ದೇವೆಂದು ಅನೇಕ ಭಾಷಣಗಳಲ್ಲಿ ಬಹಿರಂಗವಾಗಿ ಹೇಳಿದುದೂ ಪ್ರಬಲವಾದ ನಿದರ್ಶನಗಳಾಗಿವೆ. ಈಗ್ಗೆ ೨ ವರ್ಷಗಳ ಕೆಳಗೆ ಲಾರ್ಡ್ ಮಿಂಟೋಯವರಿಗೂ, ನೈಜಾಂರವರಿಗೂ ಅರಾಜಕಪ್ರವೃತ್ತಿಯನ್ನು ನಿಗ್ರಹಿಸುವ ವಿಚಾರವಾಗಿ ಪತ್ರವ್ಯವಹಾರವು ನಡೆಯುತಕ್ಕ ಸಂದರ್ಭದಲ್ಲಿ, ನೈಜಾಂರವರು "ಈ ಕೃತ್ಯವನ್ನಣಗಿಸುವುದರಲ್ಲಿ ಬ್ರಿಟಿಷ್ ಪ್ರಭುಗಳಿಗೆ ಬೇಕಾದ ಸಹಾಯವನ್ನು ಮಾಡಲು ಸಿದ್ಧನಾಗಿರುವೆನು ಆದರೆ ನನ್ನ ಪ್ರಜೆಗಳು ಖಂಡಿತವಾಗಿ ತೃಪ್ತರು, ಶಾಂತರು ಮತ್ತೂ ನ್ಯಾಯಬದ್ಧರು ಆಗಿರುವರು ಈ ಉಪಕಾರಕ್ಕಾಗಿ ನಾನು ನನ್ನ ಪೂರ್ವಿಕರನ್ನು ವಂದಿಸುತ್ತೇನೆ ಅವರು ತಮ್ಮ ಪ್ರಜೆಗಳಲ್ಲಿ ಜಾತಿ ಮಾತ್ಸರ್ಯವನ್ನು ತೋರಿಸದೆ ಹಿಂದೂಗಳು, ಮಹಮ್ಮದೀಯರು, ಐರೋಪ್ಯರು ಮತ್ತೂ ಪಾರ್ಸಿಗಳು ಇವರುಗಳಿಗೆ ಸಮನಾಗಿ ಸರ್ಕಾರಿಯುದ್ಯೋಗಗಳನ್ನು ಕೊಟ್ಟು ಅವರಲ್ಲಿ ಪೂರ್ಣವಾದ ನಂಬುಗೆಯನ್ನಿಟ್ಟಿದ್ದರು. ಕಳೆದ ಶತಮಾನದ ಆದಿಭಾಗದಲ್ಲಿ ರಾಜ ಚಂದೂಲಾಲ ಎಂಬುವರು ೫೦ ವರ್ಷಗಳಿಗಿಂತ ಹೆಚ್ಚಾಗಿ ಹೈದರಾಬಾದು ಸಂಸ್ಥಾನದ ಮಂತ್ರಿಯಾಗಿದ್ದರು. ಮತ್ತೂ ಇಬ್ಬರು ಹಿಂದೂಗಳು ರಿಕಾರ್ಡು ಕೀಪರುಗಳಾಗಿದ್ದರು. ಈಗಲೂ ಅವರ ಸಂತತಿಯವರು ನಮ್ಮ ಹಿರಿಯರು ಕೊಟ್ಟಿರುವ ಜಹಗೀರುಗಳನ್ನೂ, ಮರ್ಯಾದೆಯನ್ನೂ ಅನುಭವಿಸುತ್ತಿರುವರು. ಈ ಪದ್ಧತಿಯನ್ನೇ ನಾನೂ ಅನುಸರಿಸಿ ನಡೆಯುತ್ತಿರುವೆನು. ಈಗ ನನ್ನ ಮಂತ್ರಿಯಾಗಿರುವವರೂ ಒಬ್ಬ ಹಿಂದುವೇ: ರೆವಿನ್ಯು ಮತ್ತೂ ಪೋಲೀಸು ಶಾಖೆಗಳ ಮುಖ್ಯೋದ್ಯೋಗಗಳಲ್ಲಿ ಐರೋಪ್ಯರಿರುವರು. ನಾನು ಸುನ್ನಿ ಪ್ರಭೇದದವನಾಗಿದ್ದಾಗ್ಯೂ, ಷಿಯ್ಯ, ಅರಾಬ್ ಮತ್ತೂ ಇತರ ಮಹಮ್ಮದೀಯ ಪ್ರಭೇದದವರಿಗೆ ದೊಡ್ಡ ಅಧಿಕಾರಗಳನ್ನು ಕೊಟ್ಟಿರುವೆನು. ಹಿಂದೂಗಳಲ್ಲಿ ಎಲ್ಲ ಜಾತಿಯವರೂ ನನ್ನ ಸರ್ಕಾರದ ಒಳ್ಳೆಯ ಉದ್ಯೋಗಗಳಲ್ಲಿ ನೇಮಿಸಲ್ಪಟ್ಟಿರುವರು. ಇಬ್ಬರು ಪಾರ್ಸಿಗಳು ಡಿವಿಜನ್ ಕಮಿಷನರುಗಳಾಗಿರುವರು. ಈ ವಿಧವಾದ ರಾಜನೀತಿಕ್ರಮದಿಂದ ನನ್ನ ರಾಜ್ಯವು ಸುಖಸಮಾಧಾನದಿಂದಿರುವುದು." ಎಂದು ತಿಳಿಸಿರುವರು. ಹೈದರಾಬಾದು ರಾಜಧಾನಿಯ ಸಮೀಪದಲ್ಲಿ ಪ್ರವಹಿಸುವ ಮೂಸಿ ನದಿಯಲ್ಲಿ ೧೯೦೮ ರಲ್ಲಿ ಪ್ರವಾಹವು ಮಿತಿಮೀರಿ ಬಂದು, ಕೇರಿಗಳ ಮೇಲೆ ಹರಿದು ಅನೇಕ ಮನೆಮಠಗಳೂ, ಸಾವಿರಾರು ಪ್ರಾಣಗಳೂ ನಷ್ಟವಾದುದನ್ನು ನೈಜಾಂರವರು ಅಫ್‌ಜುಲ್‌ಗಂಜ್ ದ್ವಾರದ ಬಳಿ ಬಂದು ನಿಂತುಕೊಂಡು ನೋಡಿ ಕನಿಕರಪಟ್ಟು, ತಮ್ಮ ಕಣ್ಣುಗಳಿಂದ ಜಲಧಾರೆಯನ್ನು ಸುರಿಸಿದರು. ಈ ಮೇಲ್ಕಂಡೆರಡು ಉದಾಹರಣೆಗಳಿಂದ ನೈಜಾಂರವರಿಗೆ ತಮ್ಮ ಪ್ರಜೆಗಳಲ್ಲಿ ಅಸಾಧಾರಣವಾದ ನಿಷ್ಪಕ್ಷಪಾತತೆಯೂ, ನಿಸರ್ಗವಾದ ದಯೆಯೂ ಮತ್ತೂ ಪಶ್ಚಾತ್ತಾಪವೂ ಇದ್ದುದೆಂಬುದು ಸ್ಪಷ್ಟವಾಗುತ್ತದೆ. ಪ್ರಜೆಗಳ ಕಷ್ಟಸುಖವನ್ನು ಅರಿತು, ಅವರನ್ನು ಪುತ್ರನಿರ್ವಿಶೇಷದಿಂದ ಪರಿಪಾಲಿಸುವುದೇ ಮುಖ್ಯ ರಾಜಧರ್ಮವೂ ಮತ್ತೂ ನೀತಿಯೂ ಆಗಿರುವುದೆಂದು ತಿಳಿದುಕೊಂಡು ನಡೆಯುತ್ತಿದ್ದ ನೈಜಾಂರವರಿಗೆ ಅನಿರೀಕ್ಷಿತವಾದ ವ್ಯಾಧಿಯು ಪ್ರಾಪ್ತವಾಗಿ ಅಕಾಲಮರಣವುಂಟಾದುದಕ್ಕಾಗಿ ಅವರ ಪ್ರಜೆಗಳಲ್ಲದೆ ಇತರರೂ ಬಹುವಾಗಿ ಚಿಂತಿಸುವರು. ನೈಜಾಮರವರ ಕಳೇಬರವು ಮಂಗಳವಾರ ರಾತ್ರಿ ವಿಶೇಷ ಉತ್ಸವದೊಡನೆ ಮಕ್ಕಾಮಸೀದಿಗೆ ತೆಗೆದುಕೊಂಡು ಹೋಗಲ್ಪಟ್ಟು ಅವರ ತಂದೆಯವರ ಸಮಾಧಿಯ ಬಳಿ ನಿಕ್ಷೇಪಮಾಡಲ್ಪಟ್ಟಿತು. ಆ ದಿವಸ ಹೈದರಾಬಾದಿನ ಜನರೆಲ್ಲರೂ ದುಃಖಸಾಗರದಲ್ಲಿ ಮುಳುಗಿದ್ದರು. ಚಕ್ರವರ್ತಿಗಳು, ವೈಸ್ರಾಯರು, ದೇಶೀಯ ರಾಜರುಗಳು ಮೊದಲಾದವರಿಂದ ವ್ಯಸನ ಸೂಚಕವಾದ ತಂತಿಯ ಮೂಲಕ ದುಃಖಪ್ರದರ್ಶನವು ಮಾಡಲ್ಪಟ್ಟಿತು. ಕಳೆದ ತಾ॥ ೨೯ ರಲ್ಲಿ ಆ ಸಂಸ್ಥಾನದ ಎಲ್ಲ ಕಛೇರಿಗಳೂ ಅಂಗಡಿಗಳೂ ಮುಚ್ಚಲ್ಪಟ್ಟಿದ್ದುವು. ಮೈಸೂರು ಸೀಮೆಯಲ್ಲೂ ಎಲ್ಲ ಕಛೇರಿಗಳೂ, ಪಾಠಶಾಲೆಗಳೂ ಕಳೆದ ತಾ॥ ೩೦ ರಲ್ಲಿ ಮುಚ್ಚಲ್ಪಟ್ಟಿದ್ದುವು.

ನೈಜಾಂರವರಿಗೆ ೩ ಜನ ಮಕ್ಕಳಿರುವರು. ಇವರಲ್ಲಿ ಜ್ಯೇಷ್ಠರಾದ ೨೫ ವರ್ಷ ವಯಸ್ಸಿನ ಮೀರ್ ಉಸ್ಮಾನ್ ಅಲಿ ಖಾನ್ ಬಹದ್ದೂರ್‌ರವರು ತಾ॥ ೨೯ ರ ಮಧ್ಯಾಹ್ನವೇ ಸಿಂಹಾಸನಾರೋಹಣವನ್ನು ಮಾಡಿದರು. ಇವರಿಗೆ ತಮ್ಮ ತಂದೆಯವರಿಗಿದ್ದ ಸರ್ವಾಧಿಕಾರವು ಕೊಡಲ್ಪಟ್ಟಿರುವುದು. ಕಳೆದ ತಾ॥ ೩೦ ರ ಸಾಯಂಕಾಲ ಬ್ರಿಟಿಷ್ ರೆಸಿಡೆಂಟರು ಮುಚ್ಚಿ ಬೇಗಂ ಪೇಟೆ ಎಂಬ ರಾಜಭವನದಲ್ಲಿ ಒಂದು ಸಭೆಯನ್ನು ಸೇರಿಸಿ ಅಲ್ಲಿಗೆ ಹೊಸ ನೈಜಾಮರವರನ್ನು ಬರಮಾಡಿಕೊಂಡು ಅವರ ತಂದೆಯವರ ಅಕಾಲಮರಣಕ್ಕಾಗಿ ಇಂಡಿಯಾ ಸರ್ಕಾರಕ್ಕುಂಟಾದ ದುಃಖವನ್ನು ಪ್ರದರ್ಶಿಸಿ, "ನೀವು ನಿಮ್ಮ ತಂದೆಯವರ ಸ್ಥಾನವನ್ನಲಂಕರಿಸಿರುವುದನ್ನು ಇಂಡಿಯಾ ಗೌರ್ನಮೆಂಟಿನವರು ಸಮ್ಮತಿಸಿರುತ್ತಾರೆ. ಇದಕ್ಕಾಗಿ ನಾನು ನಿಮ್ಮನ್ನು ಅಭಿವಂದಿಸುತ್ತೇನೆ" ಎಂದು ಹೇಳಿದರು. ನೈಜಾಮರವರು ಪ್ರತ್ಯುತ್ತರವನ್ನು ಹೇಳುವಾಗ್ಗೆ ಚಕ್ರವರ್ತಿಗಳೂ, ವೈಸ್ರಾಯರೂ ದುಃಖಸೂಚಕವಾದ ತಂತಿಯ ವಾರ್ತೆಗಳನ್ನು ಕಳುಹಿಸಿಕೊಟ್ಟಿರುವುದಕ್ಕಾಗಿ ಅವರುಗಳಿಗೆ ತಮ್ಮ ವಂದನೆಗಳನ್ನು ತಿಳುಹಿಸಬೇಕೆಂದೂ, ತಾವು ತಮ್ಮ ತಂದೆಯವರ ಮಾರ್ಗವನ್ನೇ ಅನುಸರಿಸಿ ತಮ್ಮ ದೇಶಕ್ಕೂ, ಪ್ರಜೆಗಳಿಗೂ ಒಳ್ಳೆಯದನ್ನು ಮಾಡಲು ಸಾಹಸಪಡುತ್ತೇನೆಂದೂ ಮತ್ತೂ ಯಾವಾಗಲೂ ಬ್ರಿಟಿಷ್‌ರಾಜರಿಗೆ ವಿಧೇಯರಾಗಿರುತ್ತೇವೆಂದೂ ವಾಗ್ದಾನಮಾಡಿಹೇಳಿದರು.

ಬರೋಡಾ ದೇಶದ ಪ್ರೆಸ್ ಆಕ್ಟ್.

ಬರೋಡಾ ಸಂಸ್ಥಾನದಲ್ಲಿ ವೃತ್ತ ಪತ್ರಿಕೆಗಳ ಸ್ವಾತಂತ್ರ್ಯವನ್ನು ನಿರೋಧಿಸತಕ್ಕ ವಿಧಿಯನ್ನು ಅನುಷ್ಠಾನಕ್ಕೆ ತರುವುದರ ಸಾಧಕಬಾಧಕಗಳನ್ನು ಕುರಿತು ಆಲೋಚಿಸಲು ಏರ್ಪಟ್ಟಿದ್ದ ಸಭೆಯಲ್ಲಿ ಆ ವಿಚಾರವು ಚರ್ಚೆಗೆ ತರಲ್ಪಟ್ಟಾಗ, ೫ ಜನ ಮೆಂಬರುಗಳು ಏಕವಾಕ್ಯತೆಯಿಂದ ಈ ಸಂಸ್ಥಾನದಲ್ಲಿ ಈ ಶಾಸನವನ್ನು ನಿರ್ಮಾಣಮಾಡಬೇಕಾದ ಅವಶ್ಯಕತೆಯಿಲ್ಲವೆಂದು ಪ್ರತಿಭಟಿಸಿ ಹೇಳಿದರು. ಈ ಚರ್ಚೆಯ ಕಡೆಯಲ್ಲಿ ಸಂಸ್ಥಾನದ ದಿವಾನಗಿರಿಯನ್ನು ಬದಲು ನೋಡುತ್ತಿರುವ ಮು॥ ಬಿ. ಎಲ್. ಗುಪ್ತರವರು— "ಬರೋಡಾ ಸಂಸ್ಥಾನವು ಬ್ರಿಟಿಷ್ ಸರ್ಕಾರದ ಪ್ರೇಮ್ಯಕ್ಕೊಳಪಟ್ಟಿರುವುದರಿಂದ, ಈ ಸಂಸ್ಥಾನವು ಅದಕ್ಕೆ ಸಹಾಯಕವಾಗಿರುವುದು ಅವಶ್ಯಕವಾಗಿರುತ್ತದೆ. ಈ ಶಾಸನದ ರಚನೆಯು ಬ್ರಿಟಿಷ್ ಸರ್ಕಾರದವರು ಮಾಡಿರತಕ್ಕ ಶಾಸನದ ರಚನಾಕ್ರಮಕ್ಕಿಂತಲೂ ಸೌಮ್ಯವಾಗಿರುವುದು. ಬರೋಡಾ ದೇಶೀಯರಲ್ಲದವರು ಈ ದೇಶದಲ್ಲಿ ಪತ್ರಿಕೆಗಳನ್ನು ಹೊರಡಿಸ ಯತ್ನಿಸಿದಲ್ಲಿ, ಅವರುಮಾತ್ರ ಜಾಮೀನನ್ನು ಕೊಡಬೇಕೆಂದೂ, ಬರೋಡಾ ದೇಶೀಯರು ಪತ್ರಿಕೆಗಳನ್ನು ಗೌರವದಿಂದ ನಡೆಸಿಕೊಂಡು ಹೋಗುತ್ತೇವೆಂಬ ಬಗೆಗೆ ಒಂದು ಪತ್ರವನ್ನು ಮಾತ್ರ ಬರೆದುಕೊಡಬೇಕೆಂದೂ ವಿಧಿಯಲ್ಲಿ ಹೇಳಲ್ಪಟ್ಟಿರುವುದು. ಪತ್ರಿಕೆಯನ್ನು ರಿಜಿಸ್ಟರು ಮಾಡಿಸುವಾಗ್ಗೆ ಪತ್ರವನ್ನು ಬರೆದುಕೊಡುವ ಕ್ರಮವು ಯಾವಾಗಲೂ ವಾಡಿಕೆಯಲ್ಲಿರುವುದರಿಂದ, ಈ ನಿರೋಧಕವಿಧಿಯ ಪ್ರಕಾರ ಬೇರೆಪತ್ರವನ್ನು ಬರೆದುಕೊಡುವುದೇನೂ ಹೊಸಕ್ರಮವಲ್ಲವು." ಎಂದು ಸಮಾಧಾನವನ್ನು ಹೇಳಿದುದಲ್ಲದೆ, ಈ ವಿಧಿಯು ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಅನುಷ್ಠಾನಕ್ಕೆ ತರಲ್ಪಡುವುದೇ ವಿನಹ ಇತರ ಸಂದರ್ಭದಲ್ಲಿ ಕ್ರೂರವಾಗಾಚರಿಸಲ್ಪಡುವುದಿಲ್ಲವೆಂದು ಭರವಸವನ್ನು ಕೊಟ್ಟರು.

ತಿದ್ಯಗ್ಗಾಂದೋಳಿಕೋತ್ಸವವು.

ಶ್ರೀಮಜ್ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರು ಬಿಜಾಪುರ ಡಿ॥ ಸಲಾದ್ಗಿಯ ವೀರಶೈವ ಭಕ್ತರ ಪ್ರಾರ್ಥನೆಯನ್ನು ಅಂಗೀಕರಿಸಿ, ಕಳೆದ ತಾ॥ ೧ ರಲ್ಲಿ ಪಂಚಕಳಶಯುಕ್ತವಾದ ಅಡ್ಡಪಾಲಕಿಯಲ್ಲಿ ಮಂಡಿಸಿ ಮಕರತೋರಣ, ಶ್ವೇತಛತ್ರ, ಹಗಲುದೀವಟಿಗೆ ಮೊದಲಾದ ಬಿರುದಾವಳಿಗಳೊಡನೆ ಉತ್ಸವಗೊಂಡು ಸಲಾದ್ಗಿ ಪುರಪ್ರವೇಶವನ್ನು ಮಾಡಿದರು. ಈ ಉತ್ಸವ ವೈಭವವನ್ನು ನೋಡಲು, ಸ್ಥಳಪರಸ್ಥಳದ ಸಾವಿರಾರು ಜನರು ನೆರೆದಿದ್ದರು. ಮಹಾಸ್ವಾಮಿಗಳು ಇಲ್ಲಿ ೮-೧೦ ದಿನಗಳವರೆಗಿದ್ದು ಭಕ್ತರು ಮಾಡುವ ಪಾದಪೂಜೆಯನ್ನು ಪೂರೈಸಿಕೊಂಡು ಅನಂತರ ಬಾಗಲಕೋಟೆಗೆ ದಯಮಾಡಿಸುವವರಾಗಿರುವರು.

ಒಳದೇಶದವೃತ್ತಾಂತ.

ಮೈಸೂರ ಶಾಸನನಿರ್ಮಾಣ ಸಭೆಯು ಈ ತಾ॥ ೧೧ ರಲ್ಲಿ ಬೆಂಗಳೂರ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಸೇರುವುದು.

ಬೆಳಗಿಯಲ್ಲಿ ಪ್ರಸಿದ್ಧ ರಾಜವೈದ್ಯರಿಂದ ಸ್ಥಾಪಿತವಾಗಿರುವ ಕರ್ನಾಟಕ ವಿಷಧಾಲಯದ ಪ್ರಸಿದ್ಧ ಪತ್ರಿಕೆಯು ಈ ಸಂಚಿಕೆಯಲ್ಲಿ ಗರ್ಭೀಕರಿಸಲ್ಪಟ್ಟಿರುತ್ತದೆ. ವಾಚಕರು ದಯವಿಟ್ಟು ಅತ್ತಕಡೆ ಗಮನಿಸಬೇಕಾಗಿ ಕೋರುವೆವು.

ಶ್ರೀಮನ್ಮಹಾರಾಜರವರು ಶ್ರೀ ಗಣೇಶನ ಹಬ್ಬಕ್ಕಾಗಿ ಕಳೆದ ತಾ॥ ೨೪ ರಲ್ಲಿ ಉದಕಮಂಡಲದಿಂದ ರಾಜಧಾನಿಗೆ ದಯಮಾಡಿಸಿದ್ದು ಪುನಃ ತಾ॥ ೨೮ ರಲ್ಲಿ ಉದಕಮಂಡಲಕ್ಕೆ ಮೋಟಾರು ಬಂಡಿಯಲ್ಲಿ ಚಿತ್ತೈಸಿದರು.

ಕೋಲಾರದ ಗೋಲ್ಡ್ ಫೀಲ್ಡ್ಸಿನ ಮುನಿಸೀಫರಾದ ಮೆ॥ ಟಿ. ಎಸ್. ಎ. ಡಿಕ್ರೂಜ್‌ರವರು ಕೆಲಕಾಲದಿಂದ ಕ್ಷಯರೋಗ ಪೀಡಿತರಾಗಿದ್ದು ಕಳೆದವಾರ ಗತಿಸಿದರೆಂದು ತಿಳಿಸಲು ವಿಷಾದವಾಗುತ್ತದೆ. ಇವರಿಗೆ ಒಬ್ಬ ಹೆಂಡತಿಯೂ, ೪ ಜನ ಗಂಡುಮಕ್ಕಳೂ ಇರುವರು.

ರಾಜಧಾನಿಯಲ್ಲಿ ಪ್ಲೇಗುತಗಲಿ ಮರಣವಾದುದು:—

ತಾರೀಖು	೨೭,	೨೮,	೨೯,	೩೦,	೩೧,	೧,	೨.
ರೋಗಹಿಡಿದುದು	೩	೮	೭	೩	೮	೬	೯
ಸತ್ತುದು	೨	೫	೭	೧	೪	೪	೪
ಉಳಿದದ್ದು	೩	೧೧	೧೨	೬	೯	೭	೭

ರಾಜಧಾನಿಯಲ್ಲೇರ್ಪಟ್ಟಿರುವ ಪ್ರವಾಹದ ರಿಲೀಫ್ ಫಂಡಿಗಾಗಿ ಹಾಸನದ ಡಿಸ್ಟ್ರಿಕ್ಟ್ ಫೋರೆಸ್ಟ್ ಕ್ಲಾರ್ಕ್ ಮ॥ ಎಂ. ಬಿ. ಚೆನ್ನಪ್ಪನವರು ೨ ರೂ. ಗಳನ್ನೂ, ನೆಲಮಂಗಲ ತಾ॥ ಕುಂತಕಲ್ಲು ಸ್ಕೂಲಿನ ಬಾಲಕರುಗಳು ೧೦ ಆಣೆಗಳನ್ನೂ ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುವರು. ನಾವು ಈ ಮೊಬಲಗನ್ನು ವಿಶ್ವಾಸದಿಂದ ಸ್ವೀಕರಿಸಿ, ಫಂಡಿನ ಸೆಕ್ರೆಟರಿಯವರಲ್ಲಿಗೆ ತಲುಪಿಸಿರುವೆವು.

ಗೋರಿಬಿದನೂರು ತಾ॥ ತೊಂಡೆಭಾವಿಯಲ್ಲಿ ಒಬ್ಬ ಮಹಮ್ಮದೀಯ ಹುಡುಗಿಯನ್ನು ಅವಳ ಗಂಡನು ಮತ್ತೂ ಅತ್ತೆಯು ಕೊಂದುಹಾಕಿ, ಶವವನ್ನು ಹೊತ್ತಿಸುವಾಗ್ಗೆ ಅವಳ ಬಟ್ಟೆಯು ಹೊತ್ತಿಕೊಂಡು ಬೆಂಕಿಯಲ್ಲಿ ಸುಟ್ಟುಹೋಗಿ ಸತ್ತಳೆಂದು ಸುದ್ದಿಯನ್ನು ಹುಟ್ಟಿಸಿದ್ದರು. ಆದ್ದ್ ಪೋಲೀಸರಿಗೆ ಆ ಹುಡುಗಿಯ ಗಂಡ ಮತ್ತೂ ಅವನ ತಾಯಿಯ ಮೇಲೆ ಅನುಮಾನ ಹುಟ್ಟಿ ಅವರನ್ನು ದೊಡ್ಡಬಳ್ಳಾಪುರದಲ್ಲಿ ಹಿಡಿದು ಸೆರೆಯಲ್ಲಿಟ್ಟು ವಿಚಾರಣೆ ನಡೆಸುತ್ತಿರುವರು.

ಕಳೆದ ಆಗಸ್ಟ್ ತಾ॥ ೨೧ ರ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ರಾಜಧಾನಿಯ ಕೋಟೆಯಲ್ಲಿರುವ ಪೋಲೀಸು ಇ॥ ಜ॥ ಮ॥ ಡಿ. ದೇವರಾಜ ಅರಸಿನವರ ಮನೆಯಲ್ಲಿ ಕಾವಲಿದ್ದ ಒಬ್ಬ ಪೋಲಿಸಿನವನು ಒಂದು ಪೆಟ್ಟಿಗೆಯನ್ನು ಅಪಹರಿಸಿದನೆಂದೂ, ಅವನು ವಿಚಾರಣೆಗೆ ಗುರಿಮಾಡಲ್ಪಡದೆ ಬಿಡಲ್ಪಟ್ಟನೆಂದೂ ವದಂತಿ ಇರುವುದಾಗಿ ಪ್ರಕಟಿಸಲ್ಪಟ್ಟಿದ್ದಿತು. ಈ ವದಂತಿಯು ಶುದ್ಧಾಂಗವಾಗಿ ಸುಳ್ಳೆಂದು ಮೈಸೂರ ಡಿ॥ ಪೋಲೀಸು ಸೂಪರಿಂಟೆಂಡೆಂಟರು ನಮಗೆ ಬರೆದು ತಿಳಿಸಿರುತ್ತಾರೆ.

ಕಳೆದ ಆಗಸ್ಟ್ ತಾ॥ ೨೪ ರಲ್ಲಿ ಶ್ಯಾನುರಾವ್ ಎಂಬೊಬ್ಬ ಬ್ರಾಹ್ಮಣ ಹುಡುಗನು ರಾಜಧಾನಿಯ ಜಗನ್ಮೋಹನ ಪ್ರಾಸಾದದ ಬಳಿ ಇರುವ ಡೆಲ್ಲಿ ಸಾಹೇಬರ ಷಾಪಿಗೆ ಹೋಗಿ ಪದಾರ್ಥಗಳನ್ನು ನೋಡುತ್ತಿದ್ದು ಒಂದು ಸಣ್ಣ ಗಡಿಯಾರವನ್ನು ಅಪಹರಿಸಿದುದನ್ನು ಅಂಗಡಿಯವರು ಕಂಡು, ಅವನನ್ನು ಹಿಡಿದು ಬೆದರಿಸಿ ಕೇಳುವಲ್ಲಿ, ಹಿಂದೆ ಅದೇ ಅಂಗಡಿಯಲ್ಲಿ ಅಪಹರಿಸಿದ್ದ ಮತ್ತೊಂದು ಗಡಿಯಾರವನ್ನು ತೆಗೆದುಕೊಟ್ಟನಲ್ಲದೆ ತಾನು ಸಬ್‌ಜಡ್ಜ್ ಮ॥ ಡಿ. ಎಂ. ನರಸಿಂಗರಾಯರ ಸಂಬಂಧಿಯೆಂದು ಹೇಳಿದನೆಂದೂ, ಅವನು ದೇವರಾಜ ಪೋಲೀಸರ ವಶಮಾಡಲ್ಪಟ್ಟನೆಂದೂ ಕೇಳುತ್ತೇವೆ.

ಕಳೆದ ಸೋಮವಾರ ಮಧ್ಯಾಹ್ನ ಕರ್ಪೂರ್ಥಲ ಮಹಾರಾಜರವರು ಬೆಂಗಳೂರ ಪಬ್ಲಿಕ್ ಆಫೀಸುಗಳನ್ನು ನೋಡಲು ಬಂದಾಗ್ಗೆ ದಿವಾನರು, ಕೌನ್ಸಿಲರುಗಳು ಮತ್ತೂ ಸೆಕ್ರೆಟರಿಯವರು ದ್ವಾರದಲ್ಲಿ ಇದಿರ್ಗೊಂಡು ಒಳಗೆ ಕರೆದುಕೊಂಡು ಹೋದರು. ಮಹಾರಾಜರು ದಿವಾನರ ಮತ್ತು ಕಂಟ್ರೋಲರ ಆಫೀಸುಗಳನ್ನು ನೋಡಿಕೊಂಡು ಚೀಫ್ ಕೋರ್ಟಿಗೆ ಬಂದರು. ಆಗ ಚೀಫ್ ಜಡ್ಜರು ಅವರನ್ನು ಮರ್ಯಾದಿಸಿ ಒಳಗೆ ಕರೆದುಕೊಂಡು ಹೋದರು. ಅಲ್ಲಿ ಅವರು ಜಡ್ಜರ ಕೂಡ ಕೊಂಚಕಾಲ ಮಾತನಾಡಿ ಅಲ್ಲಿಂದ ಹೊರಟು ಸೆಕ್ರಿಟೇರಿಯಟ್ ಮತ್ತೂ ಚೀಫ್ ಇಂಜನಿಯರ್ ಆಫೀಸುಗಳನ್ನು ಪರಾಮರಿಸಿಕೊಂಡು ತೆರಳಿದರು.

ಚೆನ್ನಪಟ್ಟಣದ ತಾಲ್ಲೋಕಿಗೆ ಸೇರಿದ ಅನೇಕ ಗ್ರಾಮಗಳಲ್ಲಿ ಈಗ್ಗೆ ಕೆಲ ತಿಂಗಳಿಂದಲೂ ಪ್ಲೇಗುರೋಗವು ವ್ಯಾಪಿಸಿ ಕೊಂಚ ಜನರು ಸತ್ತರು. ಮತ್ತೂ ಮೊಟ್ಟಮೊದಲು ಗ್ರಾಮವನ್ನು ಬಿಟ್ಟಿದ್ದವರು ರೋಗವು ಶಮನವಾದುದರಿಂದ ಈಗೀಗ ಗ್ರಾಮವನ್ನು ಸೇರುತ್ತಿರುವರು. ಚೆನ್ನಪಟ್ಟಣದ ಕುನ್ನೀರುಕಟ್ಟೆಯ ಸಮೀಪದಲ್ಲಿ ಒಬ್ಬ ಶಿವಾಚಾರದ ಹುಡುಗನಿಗೂ ಮತ್ತೊಬ್ಬ ಸಾತಾನಿಯವನಿಗೂ ಕಳೆದವಾರ ಪ್ಲೇಗು ತಗಲಿ ಶಿವಾಚಾರದ ಹುಡುಗನು ಸತ್ತುಹೋದನು. ಈ ಚೆನ್ನಪಟ್ಟಣದ ಪೇಟೆಯ ಜನರು ಕಳೆದವರ್ಷ ಪ್ರಾಪ್ತವಾಗಿದ್ದ ಪ್ಲೇಗಿನ ಬೇನೆಯಿಂದ ಊರುಹೊರಗಿದ್ದು ಬಹು ಕಷ್ಟನಷ್ಟಗಳನ್ನನುಭವಿಸಿ ಊರನ್ನು ಸೇರಿ ಇನ್ನೂ ೫-೬ ತಿಂಗಳು ಆಗುವುದರೊಳಗಾಗಿ ಮರಳಿ ರೋಗವು ತಲೆಹಾಕಿರುವುದರಿಂದ ಬಹು ಭೀತಿಪಟ್ಟು ತಲ್ಲಣಿಸುತ್ತಿರುವರು. ಇಷ್ಟು ಭಯಗ್ರಸ್ತರಾದ್ದರೂ ಇನಾಕ್ಯುಲೇಷನ್ ಮಾಡಿಸಿಕೊಳ್ಳಲು ಮನಸ್ಸು ಮಾಡದಿರುವುದೂ, ರೋಗವು ಉಲ್ಬಣವಾಗಿ ಅನೇಕ ಪ್ರಾಣನಷ್ಟವಾಗುವವರೆಗೂ ಊರನ್ನು ಬಿಡದಿರುವುದೂ ಅವರ ದೌರ್ಭಾಗ್ಯವೆಂತಲೇ ಹೇಳಬೇಕಾಗಿದೆ. ಅದುಕಾರಣ ಸರ್ಕಾರದವರು ಜನರೆಲ್ಲರೂ ಇನಾಕ್ಯುಲೇಷನ್ ಮಾಡಿಸಿಕೊಳ್ಳುವಂತಾಗಲಿ, ಅಥವಾ ಕೂಡಲೆ ಊರನ್ನು ಬಿಟ್ಟು ಹೊರಗೆ ವಾಸಮಾಡುವಂತಾಗಲಿ ಪ್ರಯತ್ನಿಸುವುದು ಅತ್ಯಾವಶ್ಯಕವು.

ರಾಜಧಾನಿಯಲ್ಲಿ ಕೆಲದಿನಗಳ ಕೆಳಗೆ ಷರೀಫ್ ಮತ್ತೂ ಚೆನ್ನಪ್ಪ ಎಂಬ ಯುವಕರು ಬಂಡ್ಯಮೇಲೆ ಬೈಸಿಕಲ್ಲು ಹತ್ತಿ ಯನ್ನು ಮೂಡೆಯುತ್ತಿಸಿದಾಗ್ಗೆ, ಪೋಲೀಸರು ಅವಕಾಶವನ್ನು ಕೊಡಲಿಲ್ಲವೆಂದು ಹಿಂದೆ ತಿಳಿಸಿದ್ದೆವಷ್ಟೆ. ಈ ಯುವಕರಿಬ್ಬರೂ ಭಗ್ನಮನೋರಥರಾಗಿ ಹಿಂತಿರುಗಿ ಬರುವಾಗ್ಗೆ ಇವರಲ್ಲಿ ಚೆನ್ನಪ್ಪ ಉರುಫ್ ಲಕ್ಷ್ಮಣ ಮೊದಲಿಯಾರ್ ಎಂಬವನು ದೊಡ್ಡಪೇಟೆಯಲ್ಲಿ ದೊಡ್ಡ ಪೋಲೀಸು ಠಾಣದ ಕಡೆಯಿಂದ ಅತ್ಯಂತ ವೇಗವಾಗಿ ಬಂಡಿಯನ್ನೋಡಿಸಿಕೊಂಡು ಬಂದು ಭಕ್ತಿ ನರಸಪ್ಪನವರ ಮನೆಯ ಇದಿರಿಗೆ ಒಬ್ಬ ಹುಡುಗನಿಗೆ ತಾಕುಬಡಿಸಿ ಅವನನ್ನು ನೆಲದಮೇಲೆ ಕೆಡಹಿ, ತಾನೂ ಅವನ ಮೇಲೆ ಬಿದ್ದು ಅವನ ಮುಖಕ್ಕೆ ಪೂರಾಪೆಟ್ಟನ್ನುಂಟುಮಾಡಿ, ಕೂಡಲೆ ಬಂಡಿಯಮೇಲೆ ಹತ್ತಿಕೊಂಡು ಪೋಲೀಸಿನವರ ಕೈಗೆ ಸಿಕ್ಕದಂತೆ ತಪ್ಪಿಸಿಕೊಂಡುಹೋಗುತ್ತಿದ್ದನು ಅಷ್ಟರಲ್ಲಿ ಪೋಲೀಸಿನವನು ಓಡಿಬಂದು ಅವನನ್ನು ಹಿಡಿದು ಪೋಲೀಸುಠಾಣಕ್ಕೆ ಕರೆದುಕೊಂಡು ಹೋದನು. ಅಲ್ಲಿ ಅವನ ಮತ್ತೂ ಪೆಟ್ಟನ್ನು ತಿಂದವನ ವಾಙ್ಮೂಲವನ್ನು ತೆಗೆದುಕೊಂಡು ಚೆನ್ನಪ್ಪನನ್ನು ಸಿಟಿ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದ್ದರು. ಮ್ಯಾಜಿಸ್ಟ್ರೇಟರು ಆತನಿಗೆ ೩೦ ರೂ. ದಂಡವನ್ನು ವಿಧಿಸಿ, ಆ ಹಣದಲ್ಲಿ ೨೫ ರೂ. ಗಳನ್ನು ಪೆಟ್ಟನ್ನು ತಿಂದವನಿಗೆ ಪರಿಹಾರದ್ರವ್ಯವಾಗಿ ಕೊಡಿಸಿದರು. ಹೆಡ್‌ಕಾನ್‌ಸ್ಟೇಬಲ್ ಮ॥ ಕೊಂಡಪ್ಪನವರು ಅನಾಹುತವನ್ನು ನಡೆಸಿದವನನ್ನು ಹಿಡಿದು ಶಿಕ್ಷೆಗೆ ಗುರಿಮಾಡಿಸಿ, ಪೋಲೀಸರ ಭೀತಿ ಸಹ ಇಲ್ಲದೆ ಬೀದಿಗಳಲ್ಲಿ ನಿರ್ಲಕ್ಷ್ಯದಿಂದ ಬೈಸಿಕಲ್ಲುಗಳನ್ನೋಡಿಸುವ ತುಂಟ ಹುಡುಗರಿಗೆಲ್ಲ ಒಳ್ಳೆಯ ಎಚ್ಚರಿಕೆಯನ್ನುಂಟುಮಾಡಿದುದಕ್ಕಾಗಿ ನಾವು ಸಂತೋಷಿಸುತ್ತೇವೆ.

ಬರುವ ಡಿಸೆಂಬರ್ ತಿಂಗಳಲ್ಲಿ ಚಕ್ರವರ್ತಿದಂಪತಿಗಳು ಡಿಲ್ಲಿಗೆ ದಯಮಾಡಿಸಿದಾಗ ಅಲ್ಲಿ ನಡೆಯುವ ದರ್ಬಾರು ಮುಂತಾದ ಮಹೋತ್ಸವಗಳನ್ನು ನೋಡಬಿಚ್ಛಿಸುವ (ಆಹ್ವಾನಪತ್ರಿಕೆಯನ್ನು ಪಡೆಯದೆ ಇರತಕ್ಕ) ಮೈಸೂರ ಸೀಮೆಯವರು ನಮ್ಮ ಗೌರ್ನಮೆಂಟ್ ಜನರಲ್ ಮತ್ತೂ ರೆವಿನ್ಯೂ ಸೆಕ್ರೆಟರಿಯವರಿಗೂ, ಬೆಂಗಳೂರ ದಂಡಿನವರು ಮತ್ತೂ ಕೊಡಗಿನವರು ದಂಡಿನ ಡಿ॥ ಮ್ಯಾಜಿಸ್ಟ್ರೇಟರು ಮತ್ತೂ ಕೊಡಗಿನ ಕಮಿಷನರು ಇವರವರಿಗೂ ೧೯೧೧ ನೆಯ ಸೆಪ್ಟಂಬರ್ ತಾ॥ ೫ ರೊಳಗೆ ಬರೆದು ಪ್ರವೇಶ ಟಿಕೆಟ್ಟನ್ನೂ, ಅಪ್ಪಣೆಯನ್ನೂ ಪಡೆಯಬಹುದೆಂದು ಸರಕಾರದವರು ಪ್ರಸಿದ್ಧಪಡಿಸಿರುತ್ತಾರೆ. ಹೀಗೆ ಆಹ್ವಾನವನ್ನು ಪಡೆಯದೆ ಪ್ರವೇಶ ಟಿಕೆಟ್ಟನ್ನು ಪಡೆದು ಹೋಗುವವರು ಈ ಮುಂದೆ ಹೇಳುವ ಅಂಶಗಳನ್ನು ಗಮನಿಸತಕ್ಕದು. ಗೋಳಾಕೃತಿಯ ಮಂಟಪದಲ್ಲಿ ದರ್ಬಾರು ನಡೆಯುವುದು. ಈ ಮಂಟಪದೊಳಗೆ ಆಹ್ವಾನಪತ್ರಿಕೆಯನ್ನು ಪಡೆದಿರತಕ್ಕಂತಹವರೆಲ್ಲರಿಗಾಗಿ ಒಂದು ಸ್ಥಳವೂ, ಪತ್ರಿಕೆಯಿಲ್ಲದಿರತಕ್ಕ ಪ್ರೇಕ್ಷಕ ಜನರಿಗಾಗಿ ಮತ್ತೊಂದು ಸ್ಥಳವೂ ಈ ಪ್ರಕಾರ ಎರಡು ಸ್ಥಳಗಳು ಪ್ರತ್ಯೇಕವಾಗಿ ವಿಂಗಡಿಸಲ್ಪಟ್ಟಿವೆ. ಸಾಮಾನ್ಯ ಪ್ರೇಕ್ಷಕ ಜನರಿಗಾಗಿ ಕಾದಿರಿಸಲ್ಪಟ್ಟಿರುವ ಭಾಗದಲ್ಲಿ ಅಧೀನ ಸರ್ಕಾರದವರಿಂದಲೂ, ಪೊಲಿಟಿಕಲ್ ಆಫೀಸರುಗಳಿಂದಲೂ, ದೇಶೀಯ ಸಂಸ್ಥಾನಗಳಿಂದಲೂ ಪ್ರವೇಶ ಟಿಕೆಟ್ಟನ್ನು ಪಡೆದಿರತಕ್ಕಂಥ ಜನರಿಗಾಗಿ ಸ್ಥಳವು ಕಾದಿಡಲ್ಪಡುವುದು. ಆದರೆ ಅವರು ತಾವು ಕುಳಿತುಕೊಳ್ಳಲು ಮಡಿಸುವ ಕುರ್ಚಿಗಳನ್ನು ತಮ್ಮ ಕೂಡ ತರಬೇಕಾಗಿರುತ್ತದೆ. ಎಂದು ಸರ್ಕಾರದವರು ಪ್ರಸಿದ್ಧಪಡಿಸಿರುತ್ತಾರೆ. ಈ ಅಭೂತಪೂರ್ವವಾದ ಮಹೋತ್ಸವವನ್ನು ನೋಡಿ ಕಣ್ಣಿನ ಹಬ್ಬವನ್ನು ತೀರಿಸಿಕೊಂಡು ಬರಬಿಚ್ಛಿಸುವಂತಹ ಉಪವನ್ನರು ಕಾಲಹರಣಮಾಡದೆ ಕೂಡಲೆ ಮೇಲ್ಕಂಡಧಿಕಾರಿಗಳಿಗೆ ಬರೆದು ಟಿಕೆಟ್ಟನ್ನು ಪಡೆಯುವವರಾಗಲೆಂದು ಸೂಚಿಸುತ್ತೇವೆ.

ವರ್ತಮಾನ ಸಂಗ್ರಹ.

೧೯೧೧ ನೆಯ ಆಗಸ್ಟ್ ತಾ॥ ೧೯ ರ ವರೆಗೆ ಭರತಖಂಡದ ಎಲ್ಲ ಲೋಹಮಾರ್ಗಗಳಿಂದ ೧೯೩೩೬೩೩೯೬ ರೂ. ಗಳುತ್ಪತ್ತಿಯಾಗಿದೆ.

ಲಂಡನ್ ನಗರದಲ್ಲಿ ಪ್ರಸಿದ್ಧ ಪುಸ್ತಕವ್ಯಾಪಾರಿಗಳಲ್ಲೊಬ್ಬರಾದ ವಾರ್ಡ್‌ಲಾಕ್ ಕಂಪೆನಿಯ ಕಟ್ಟಡಕ್ಕೆ ಬೆಂಕಿಬಿದ್ದು ಜ್ವಾಲೆಯು ೧೦೦ ಅಡಿ ಎತ್ತರದ ವರೆಗೆ ಹೊರಟಿದ್ದಿತು, ಮತ್ತೂ ಆ ರಾತ್ರಿ ಲಂಡನ್‌ನಗರದಲ್ಲಿ ದೀಪೋತ್ಸವವು ನಡೆದಂತಿದ್ದಿತು ಇದರಿಂದ ಸಾವಿರಾರು ಪುಸ್ತಕಗಳುನಾಶವಾದುವು.

ಬೆಲ್ಜಿಯಂ ದೇಶದಲ್ಲೂ ಅಹಾರಪದಾರ್ಥಗಳ ಬೆಲೆಯು ಹೆಚ್ಚಿರುವುದರಿಂದ ಜನರು ದಂಗೆಯೆದ್ದಿರುತ್ತಾರೆ. ಹಾಟ್ ಮಾಲ್ ಎಂಬಸ್ಥಳದಲ್ಲಿ ೩೦೦೦ ಹೆಂಗಸರು ಹಾಲುಮಾರುವವರನ್ನೂ, ವೈತರನ್ನೂ ಹೊಡೆದು ಅವರು ಬೆಲೆಯನ್ನು ಹೆಚ್ಚಿಸಿರುವುದಕ್ಕಾಗಿ ಅವರನ್ನು ನಿಂದಿಸಲು, ಅವರು ಮೋಟಾರು ಬಂಡಿಗಳಲ್ಲಿ ಕುಳಿತು ತಲೆಯನ್ನು ತಪ್ಪಿಸಿಕೊಂಡು ಹೋದರು.

ಕಳೆದ ಆಗಸ್ಟ್ ತಾ॥ ೨೬ ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲಾ ಒಟ್ಟು ೫೯೮೩ ಜನರಿಗೆ ಪ್ಲೇಗುತಗಲಿ ೪೪೫೭ ಜನರು ಸತ್ತರು. ಇವರಲ್ಲಿ ಬೊಂಬಾಯಾಧಿಪತ್ಯದ ೩೬೧೩; ಮದ್ರಾಸಾಧಿಪತ್ಯದಲ್ಲಿ ೩೬೩; ಬಂಗಾಳದಲ್ಲಿ ೧೩ ; ಸಂಯುಕ್ತಪ್ರಾಂತಗಳಲ್ಲಿ ೧೧ ; ಪಂಜಾಬಿನಲ್ಲಿ ೨, ಬರ್ಮಾದಲ್ಲಿ ೩೦; ಮಧ್ಯಪ್ರಾಂತಗಳಲ್ಲಿ ೧೬೮; ಮೈಸೂರು ಸಂಸ್ಥಾನದಲ್ಲಿ ೬೩೩ ; ಮಧ್ಯಹಿಂದೂಸ್ಥಾನದಲ್ಲಿ ೩೪ ಮತ್ತೂ ಹೈದರಾಬಾದು ಸೀಮೆಯಲ್ಲಿ ೪೯ ಈ ಪ್ರಕಾರ ಮರಣವಾಗಿರುತ್ತದೆ.

ಅಫ್ಘಾನಿಸ್ಥಾನದ ಪೂರ್ವದಿಕ್ಕಿನಲ್ಲಿ ಆಹಾರ ಪದಾರ್ಥಗಳ ಬೆಲೆಯು ಹೆಚ್ಚುತ್ತಿರುವುದರಿಂದ, ಜನರು ಕಾಬೂಲಿನಿಂದ ಗೋಧಿಯನ್ನು ತುಂಬಿಕೊಂಡು ಬರುವ ವರ್ತಕರ ಮೇಲೆ ಬಿದ್ದು ಸೂರೆಮಾಡುತ್ತಿರುವರು. ಆಹಾರಪದಾರ್ಥಗಳ ಕೊರತೆಯು ಹೆಚ್ಚುತ್ತಿರುವುದರಿಂದ, ಅಮೀರರು ಕಾಬೂಲಿನಿಂದ ಗೋಧಿಯನ್ನು ಹೊರಗೆ ಕಳುಹದಂತೆ ಅಡ್ಡಿಮಾಡುವ ಸಂಭವವಿರುವುದು.

ಭರತಖಂಡದ ಕೆಲ ಭಾಗಗಳಲ್ಲಿ ಅನಾವೃಷ್ಟಿಯೂ, ದುರ್ಭಿಕ್ಷವೂ ಉಂಟಾಗಿರುವ ಪ್ರಯುಕ್ತ, ಡಿಲ್ಲಿಯ ದರ್ಬಾರಿಗಾಗಿ ವಿಶೇಷ ದ್ರವ್ಯವ್ಯಯವನ್ನು ಮಾಡತಕ್ಕದ್ದಲ್ಲವೆಂದು ಪಾರ್ಲಿಮೆಂಟ್ ಸಭೆಯಲ್ಲೂ, ವೃತ್ತಪತ್ರಿಕೆಗಳಲ್ಲೂ ಚರ್ಚೆಯು ನಡೆಯುತ್ತಿದ್ದುದರ ವೇಳೆ, ಡಿಲ್ಲಿಯಲ್ಲಿ ದರ್ಬಾರು ನಿಲ್ಲಿಸಲ್ಪಡುವುದೆಂದು ಒಂದು ವದಂತಿಯು ಹುಟ್ಟಿದ್ದಿತು. ಆದರೆ ಈಚೆಗೆ ಬಂದ ತಂತಿಯ ವರ್ತಮಾನದಿಂದ ಚಕ್ರವರ್ತಿಯವರು ವ್ಯಯವನ್ನು ಕಡಿಮೆಮಾಡುವುದಕ್ಕಾಗಿ ದರ್ಬಾರು ಕಾಲದಲ್ಲಿ ನಡೆಯಲು ಗೊತ್ತಾಗಿದ್ದ ಮತ್ತೂ ಹೆಚ್ಚು ವೆಚ್ಚಕ್ಕಾಸ್ಪದವಾಗಿದ್ದ ಅನೇಕ ಸಂದರ್ಭಗಳನ್ನು ಕಡಿಮೆಮಾಡಬೇಕೆಂದು ಮತ್ತೂ ಉತ್ಸವಕ್ಕಾಗಿ ಬರತಕ್ಕ ಸೈನಿಕರ ಸಂಖ್ಯೆಯು ಬಹು ಮಿತವಾಗಿರಬೇಕೆಂದು ಅಪ್ಪಣೆ ಮಾಡಿರುವುದಾಗಿ ಗೊತ್ತಾಗುತ್ತದೆ. ಇದರಿಂದ ದರ್ಬಾರು ನಿಲ್ಲಿಸಲ್ಪಡುವುದಿಲ್ಲವೆಂದು ವ್ಯಕ್ತವಾಗುವುದು.

ಬರೋಡಾ ಸಂಸ್ಥಾನದ ಗಾಯಕವಾಡ ಮಹಾರಾಜರು ತಮ್ಮ ಪುತ್ರಿಯಾದ ಸೌ॥ ಇಂದಿರಾದೇವಿಯವರನ್ನು ಗ್ವಾಲಿಯರ್ ಸಂಸ್ಥಾನದ ಮಹಾರಾಜ ಸಿಂಧ್ಯಾಯವರಿಗೆ ಕೊಟ್ಟು ವಿವಾಹವನ್ನು ಮಾಡಲು ನಿಶ್ಚಯಿಸಿರುವರಷ್ಟೆ. ಈ ಗ್ವಾಲಿಯರ್ ಮಹಾರಾಜರು ತಮಗನುರೂಪಳಾದ ಈ ನೂತನ ವಧುವಿಗೆ ವಿವಾಹಕಾಲದಲ್ಲಿ ಬಹುಮಾನಿಸಲು ೪ ಲಕ್ಷ ರೂಪಾಯಿಗಳಿಗೆ ಅಮೋಘವಾದ ವಜ್ರಗಳನ್ನು ಸೀಮೆಯಲ್ಲಿ ಕೊಂಡುಕೊಂಡು ಒಂದು ಕಂಠಹಾರವನ್ನು ಮಾಡಿಸುತ್ತಿರುವರು. ಚಕ್ರವರ್ತಿ ದಂಪತಿಗಳು ಡಿಲ್ಲಿಯ ದರ್ಬಾರಿಗಾಗಿ ಭರತಖಂಡಕ್ಕೆ ಬಂದು ಡಿಲ್ಲಿಗೆ ಹೋಗುವ ಮಾರ್ಗದಲ್ಲಿ ಬರೋಡಾ ದೇಶವನ್ನು ಡಿಸೆಂಬರ್ ತಾ॥ ೨೪ ರಲ್ಲಿ ಹಾದು ಹೋಗುವುದರಿಂದ, ಆ ದಿವಸವೇ ವಿವಾಹವು ನಡೆಯಲು ಲಗ್ನವನ್ನು ನಿಶ್ಚೈಸಿ, ಚಕ್ರವರ್ತಿ ದಂಪತಿಗಳು ಬರೋಡೆಯಲ್ಲಿಳಿದು ವಿವಾಹ ಮಹೋತ್ಸವನನ್ನು ಪರಾಮರಿಸಿಕೊಂಡು ದಯಮಾಡಿಸುವಂತೆ ಬರೋಡಾ ಮಹಾರಾಜರವರು ಪ್ರಾರ್ಥಿಸಿಕೊಂಡಿರುವರೆಂದು ಒಂದು ಸುದ್ದಿಯು ಹುಟ್ಟಿದ್ದಿತು. ಆದರೆ ಈಗಿನ ವರ್ತಮಾನದಿಂದ ಚಕ್ರವರ್ತಿ ದಂಪತಿಗಳು ವಿವಾಹಕ್ಕೆ ದಯಮಾಡಿಸುವ ಸುದ್ದಿಯು ನಿರಾಧಾರವಾದುದೆಂದು ಗೊತ್ತಾಗುತ್ತದೆ. ಮಹಾರಾಜ ಸಿಂಧ್ಯಾಯವರ ಮಾತೃಶ್ರೀಯವರು ಡಿಲ್ಲಿಯ ದರ್ಬಾರ್ ಮಹೋತ್ಸವದ ಗದ್ದಲದಲ್ಲಿ ವಿವಾಹವು ನಡೆಯುತಕ್ಕುದು ತಮಗೆ ಸಮ್ಮತವಲ್ಲವಾದುದರಿಂದ, ನವಂಬರ್ ತಾ॥ ೨ ರಲ್ಲಿ ನಡೆಯಬೇಕೆಂದು ಆಸ್ಟ್ರಿಯಾದಲ್ಲಿರುವ ಗಾಯಕವಾಡ ಮಹಾರಾಜರಿಗೂ, ಜರ್ಮನಿಯಲ್ಲಿರುವ ಅವರ ಪತ್ನಿಯವರಿಗೂ ತಂತಿಯ ಮೂಲಕ ತಿಳಿಸಿರುತ್ತಾರೆ.

ಪತ್ರವ್ಯವಹಾರ.

ಎಲ್ಲಾ ಉಪಾಧ್ಯಾಯರಿಗೆ ವಿಜ್ಞಾಪನೆ.

ಮೈಸೂರು ಡಿ॥ ನಲ್ಲಿ ಪ್ರವಾಹಗಳ ಬೇನೆಯಿಂದ ಬಹಳ ಜನ ಸ್ವದೇಶಬಾಂಧವರಿಗೆ ಹಾನಿಯುಂಟಾದುದನ್ನೂ ತಮ್ಮ ಶಕ್ತ್ಯನುಸಾರ ದೇಶೀಯರು ಸಹಾಯಮಾಡಬೇಕೆಂದು ಇರುವುದನ್ನೂ ಈ ಪತ್ರದಲ್ಲಿ ಓದಿನೋಡಿ ನಮ್ಮ ಸ್ಕೂಲಿನಲ್ಲಿ ಬಾಲಕರಿಗೆ ಒಂದು ಕೋಟಿ ನೀತಿಗಳನ್ನು ತಿಳಿಸಿ ಪರೋಪಕಾರವಂ ಮಾಡಬೇಕೆಂದು ಬೋಧಿಸುವುದಕ್ಕಿಂತ ಈ ಸಂಗತಿಯನ್ನು ತಿಳಿಸಿ ಈ ಸವನ್ನೈದಿದ ನಮ್ಮ ಸರ್ಕಾರದವರು ಧರ್ಮಬೋಧೆಮಾಡಿರಬೇಕೆಂದು ವಿಧಿಸಿರುವ ಆಜ್ಞೆಯು ಎಷ್ಟರಮಟ್ಟಿಗೆ ಫಲಕಾರಿಯಾಗಿದೆಯೆಂಬುದನ್ನು ತಿಳಿಯಬೇಕೆಂದು ಆಲೋಚಿಸಿದೆನು. ನೆನ್ನೆಯ ದಿನ ಬೆಳಿಗ್ಗೆ ಮಕ್ಕಳಿಗೆ ಹೃದಯಂಗಮವಾಗುವಂತೆ ಮೇಲಿನ ಸಂಗತಿಯನ್ನು ಬೋಧಿಸಿ ಕಷ್ಟಪಡುವ ಪ್ರಾಣಿಗಳಿಗೆ ಅದರಲ್ಲೂ ಮಾನವರಿಗೆ ಹಾಗೂ ಸ್ವದೇಶೀಯರಿಗೆ ಅಂಥಾದ್ದರಲ್ಲೂ ನಿಮ್ಮಂಥ ಮಕ್ಕಳಿಗೆ ಒದಗಿರುವ ಕಷ್ಟಪರಿಹಾರಕ್ಕೆ ನೀವುಗಳು ಸಂಪಾದನೆಯುಳ್ಳವರಲ್ಲದಾದರೂ, ನಿಮ್ಮ ಜನನೀ ಜನಕರು ಕೊಡುವ ನಿಮ್ಮ ಅಲ್ಪ ದ್ರವ್ಯವನ್ನು ಬಿಡದೆ ಸಹಾಯಮಾಡುವಿರಾ? ಎಂದು ಪ್ರಶ್ನಿಸಲು, ಸುಮಾರು ೫೦ ಮಂದಿ ಬಾಲಕರು ಗದ್ಗದ ಕಂಠದಿಂದ ಏಕವಾಕ್ಯತೆಯಿಂದ ಒಂದು ಕಾಸು ಮಾತ್ರ ಅದ ಕಾಣಿಕೆಯನ್ನೀಯಬೇಕೆಂದು ಬೇಡಿ, ಸ್ವಲ್ಪಹೊತ್ತಿಗೆ ಮುಖ್ಯೋ

ಚಿತ ದ್ರವ್ಯವನ್ನು ತಂದು ನೀಡಿ, ಮಕ್ಕಳಾದ ನಮ್ಮಿಂದ ಒದಗಿದ ಈ ಅಲ್ಪ ದ್ರವ್ಯವು ವಿಪನ್ನರಾದ ಮಕ್ಕಳ ಸಹಾಯಕ್ಕೆ ವಿನಿಯೋಗಿಸುವಂತೆ ಮಾಡಿಸಬೇಕಾಗಿ ಬೇಡಿಕೊಂಡದ್ದಕ್ಕೆ ಬಹಳ ಹರ್ಷಿತನಾಗಿ ನಿಮ್ಮ ಕೋರಿಕೆಯನ್ನು ಈಶನು ನೆರವೇರಿಸುವನೆಂದು ತಿಳಿಸಿ, ಆ ಕೂಡಲೆ ಸದರಿ ಮೊಬಲಗನ್ನು ಸ್ಟಾರ್ ಪತ್ರದ ಯಜಮಾನರಿಗೆ ಮನಿಯಾರ್ಡರ್ ಮಾಡಿದೆನು. ಸರ್ಕಾರದವರ ಉದ್ದೇಶವು ನೆರವೇರಿತೆಂದು ಮಕ್ಕಳ ಈ ಕರ್ತವ್ಯದಿಂದ ವಾಚಕರೆಲ್ಲರೂ ಭಾವಿಸಿ ಹರ್ಷಪಡಬಹುದೆಂದು ನಂಬುತ್ತೇನೆ. ಎಲ್ಲಾ ಮಾಸ್ತರುಗಳೂ, ಸ್ವದೇಶಬಾಂಧವರಿಗೆ ಒದಗಿದ ಹಾನಿಯನ್ನು ತಂತಮ್ಮ ಸ್ಕೂಲುಗಳಲ್ಲಿ ಮಕ್ಕಳಿಗೆ ತಿಳಿಸಿ, ಅವರಿಗೆ ಸಹಾಯಮಾಡಬೇಕೆಂಬ ಪ್ರಾಣಿಮಾತ್ರಕ್ಕೆ ಸಹಜವಾದ ಗುಣವನ್ನು ಮಕ್ಕಳಲ್ಲಿ ಅಭಿವೃದ್ಧಿಪಡಿಸಿ ಸರ್ಕಾರದವರ ಉದ್ದೇಶವನ್ನು ಸಾರ್ಥಕ ಮಾಡುವ ತಮ್ಮ ಕರ್ತವ್ಯದ ಮೂಲಕ ಸ್ವದೇಶದ ಬಾಂಧವರಿಗೆ ಸಹಾಯಮಾಡಿ ಪುಣ್ಯಕೀರ್ತಿಗಳನ್ನು ಪಡೆಯಬೇಕಾಗಿ ನನ್ನ ಸವಿನಯಪ್ರಾರ್ಥನೆ. ಇದೇ ಸತ್ಸಹಾಯ; ಇದೇ ಆನಂದ; ಇದೇ ಪುಣ್ಯ; ಇದೇ ಭಗವತ್ಪೂಜೆ.

ಎ. ನಾರಣಪ್ಪ, ಹೆಡ್ಮಾಸ್ಟರ್, ಸೀತಕಲ್ಲು

ಶ್ರೀ ಗಿರಿರಾಜ ಕೂರ್ಮ್ಯಸಿಂಹಾಸನಾಧೀಶ್ವರ ಜಗದ್ಗುರು ಚರಪಟ್ಟಾಧ್ಯಕ್ಷ ಶ್ರೀಗುರು ವೀರಭಿಕ್ಷಾವರ್ತಿ ರಾಜದೇಶೀಕೇಂದ್ರ ಮಹಾಸ್ವಾಮಿಯವರ ದೇಶಸಂಚಾರ—

ಸದರಿ ಮಹಾಸ್ವಾಮಿಯವರ ಸ್ವಾರಿಯು ತಾರೀಖು ೧೯-೮-೧೯೧೧ ನೇ ಭಾನುವಾರ ಸಂಸ್ಥಾನ ಸೊಂಡೂರು ರಾಜಧಾನಿಯಿಂದ ಸಕಲ ಭಕ್ತಾದಿಗಳಿಂದ ಕಳುಹಿಸಿಕೊಂಡು ಸಾಯಂಕಾಲಕ್ಕೆ ಬಳ್ಳಾರಿ ತಾ|| ಕುಡತಿನಿ ಗ್ರಾಮಕ್ಕೆ ಚಿತ್ತೈಸಿತು. ಆ ಗ್ರಾಮದ ಮಠಸ್ಥರು, ಗೌಡರು ಮುಂತಾದ ಸಮಸ್ತ ಭಕ್ತಾವಳಿಗಳು ತಳಿರು ತೋರಣಾದಿಗಳಿಂದ ಗ್ರಾಮವನ್ನು ಶೃಂಗರಿಸಿ, ಮಹಾಸ್ವಾಮಿಯವರನ್ನು ಇಸ್ತಿಕಬಾಲ್ ಸಮೇತ ಪುರಬಹಿರ್ಭಾಗದಲ್ಲಿ ಇದಿರ್ಗೊಂಡು ಫಲಪುಷ್ಪವನ್ನು ಒಪ್ಪಿಸಿದರು. ಸ್ವಾರಿಯು ಎಲ್ಲಾ ಅಜಬ್ಬಾಬುಗಳ ಸಮೇತ ಅನೇಕ ವಾದ್ಯವೈಭವದಿಂದ ಸಾಯಂಕಾಲ ೯ ಗಂಟೆಗೆ ಪುರಪ್ರವೇಶಮಾಡಿದನಂತರ ವಿರಕ್ತಮಠದಲ್ಲಿ ಅದುವರೆಗೆ ರಮ್ಯವಾಗಿ ರಚಿಸಿದ್ದ ದಿವ್ಯ ಸಿಂಹಾಸನಾರೋಹಣವನ್ನು ಮಾಡಿದನಂತರ ಸರ್ವರೂ ಭಕ್ತಿಯಿಂದ ಸಾಲಾಗಿ ನಿಂತು ಮಂಗಲವನ್ನು ಮಾಡಿ ಜಯಜಯಧ್ವನಿಯಿಂದ ಶ್ರೀ ಮಹಾಸ್ವಾಮಿಯವರ ಅಪ್ಪಣೆಯನ್ನು ಪಡೆದು ತಂತಮ್ಮ ಮನೆಗಳಿಗೆ ತೆರಳಿದರು. ಈ ಗ್ರಾಮದ ಮಠದ ವಿರುಪಯ್ಯನವರು, ಮಠದ ಕಟ್ಟಯ್ಯನವರು, ಪಾಟೀಲ್ ದೊಡ್ಡನಗೌಡರು, ಚಿತ್ತವಾಡ್ಗಿ ಗಂಡೆಪ್ಪನವರು, ಸಾಹುಕಾರ್ ವೀರಭದ್ರಪ್ಪನವರು, ಸಾಹುಕಾರ್ ದೊಡ್ಡಮಲ್ಲೇಶಪ್ಪನವರು ಮುಂತಾದ ಪ್ರಮುಖರು ಸರಬರಾಯಿ ವಗೈರೆ ಸಿದ್ಧಪಡಿಸಿರುವುದಾಗಿ ಅರಿಕೆಮಾಡಿ ಅಪ್ಪಣೆ ಪಡೆದು ಹೋದರು. ಮಾರನೆಯ ದಿವಸ ಪದ್ಧತಿಪ್ರಕಾರ ಗ್ರಾಮದ ಎಲ್ಲಾ ದೈವದವರು ಸನ್ನಿಧಾನಕ್ಕೆ ಬಂದು ತಮ್ಮ ಗ್ರಾಮದಲ್ಲಿರುವ ಸೈನಸ್ವಾಮಿ ಮಠಕ್ಕೆ ತದ್ವಂಶೀಭೂತರಾದ ಹರಪನಹಳ್ಳಿ ತಾ|| ಅರಸೀಕೆರೆಯಲ್ಲಿರುವ ಕುಡತನಿ ಸೈನಸ್ವಾಮಿ ಮಠದ ಪತ್ರೆಪ್ಪನವರ ಕುಮಾರ ಸೈನಪ್ಪಯ್ಯನೆಂಬ ವಟುವಿಗೆ ಪಟ್ಟಾಧಿಕಾರವನ್ನು ಆ ಮಠದ ಸಂಪ್ರದಾಯಪ್ರಕಾರ ಮಾಡಿಕೊಳ್ಳುವುದಕ್ಕೆ ಹುಕುಂ ಆಗಬೇಕೆಂತ ಮಹಜರು ಬಿನ್ನವತ್ತಲೆ ಮೂಲಕ ಶೃತಪಡಿಸಿದ್ದನ್ನು ಚಿತ್ತವೊಪ್ಪಿ ನಿಮ್ಮ ಸರ್ವಸಮ್ಮತಿಪ್ರಕಾರ ಮಾಮೂಲ್ ಪದ್ಧತಿಯಂತೆ ಆಗಬಹುದೆಂತ ಹುಕುಂ ದಯಪಾಲಿಸಿದುದನ್ನು ಸರ್ವರೂ ಶಿರಸಾವಹಿಸಿ ತಾ|| ೨೩-೮-೧೯೧೧ ನೇ ಬುಧವಾರಕ್ಕೆ ಆಗಬೇಕೆಂದು ನಿರ್ಧರಮಾಡಿ ಆ ತಾರೀಖಿಗೆ ಸರಿಯಾಗಿ ಎಲ್ಲಾ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಕಾರ್ಯಾರಂಭಮಾಡಿದರು. ಈ ಕಾರ್ಯಕ್ಕೆ ಜಂಗಮರ ಹೊಸಹಳ್ಳಿ ಶ್ರೀ ಪಟ್ಟದದೇವರು ಕೋಳೂರು ಶ್ರೀ ಪಟ್ಟದ ದೇವರು, ಜೇರ್ಕಹಳ್ಳಿ ಶ್ರೀ ಪಟ್ಟದ ದೇವರು, ಹರಿಸಮುದ್ರದ ಶ್ರೀ ಪಟ್ಟದದೇವರು ಇನ್ನೂ ಅನೇಕ ಮಠ ಮಹಂತಿನವರು ದಯಮಾಡಿಸಿದ್ದರು. ಮೇಲ್ಕಂಡ ವಟುವಿಗೆ ವಿಧಿಪ್ರಕಾರ ಪಟ್ಟಾಭಿಷೇಕವನ್ನು ಸದರಿ ತಾರೀಖಿನಲ್ಲಿ ನೆರವೇರಿಸಿ ಶ್ರೀ ಸೈನಸ್ವಾಮಿಯೆಂಬ ಅಭಿಧಾನವನ್ನಿಟ್ಟು, ಅನೇಕ ವಾದ್ಯಘೋಷದಿಂದ ಗ್ರಾಮದ ಎಲ್ಲಾ ಬೀದಿಗಳಲ್ಲಿಯೂ ಉತ್ಸವವನ್ನು ಮಾಡಿಕೊಂಡು ಶ್ರೀ ಮಹಾಸ್ವಾಮಿಯವರ ಸನ್ನಿಧಾನಕ್ಕೆ ಬಂದು ಫಲತಾಂಬೂಲಾದಿಗಳನ್ನು ಸಮರ್ಪಿಸಿ, ಸಾಷ್ಟಾಂಗಪ್ರಣಾಮಮಾಡಿ ಮಹಾಸನ್ನಿಧಾನದಿಂದ ಪೂರ್ಣ ಆಶೀರ್ವಾದವಂ ದಯಪಾಲಿಸಬೇಕೆಂದು ಸರ್ವರೂ ಪ್ರಾರ್ಥಿಸಿದ ಪ್ರಕಾರ ಸದರಿ ಪಟ್ಟಾಭಿಷಿಕ್ತ ವಟುವಿಗೆ ವೇದೋಕ್ತ ಆಶೀರ್ವಚನವನ್ನು ಅಪ್ಪಣೆಕೊಡಿಸಿ ಆಶ್ರಮಧರ್ಮಗಳನ್ನು ಬೋಧಿಸಿ ಯೋಗ್ಯರೀತಿಯಿಂದ ನಡೆದು ಭಕ್ತರಿಗೆಲ್ಲಾ ಧರ್ಮ ಸುಧಾರಣೆಯನ್ನು ಮಾಡುತ್ತಿರಬೇಕೆಂದು ಅಪ್ಪಣೆ ಆದುದನ್ನು ಶಿರಸಾವಹಿಸುತ್ತೇವೆಂದು ಹೇಳಿಕೊಂಡರು. ಅನಂತರ ಸಂಸ್ಥಾನದ ಕಾರ್ಭಾರಿ ಐ. ಸ. ಬಿ. ಲಿಂಗನಗೌಡರವರು ವೀರಶೈವ ಮತೋಪಕಾರಿಯಾಗಿರುವ ಮೈಸೂರು ಸ್ಟಾರ್ ಪತ್ರಿಕೆಯ ಉತ್ತೇಜನಕ್ಕಾಗಿ ಈ ಕಾರ್ಯದರ್ಶಿಗಳಾದವರು ಸಹಾಯವನ್ನು ಮಾಡಬೇಕೆಂದು ಸೂಚಿಸಿದ ಪ್ರಕಾರ ಸರ್ವರೂ ಅನುಮೋದನಮಾಡಿದರು. ಅನಂತರ ಜಯನಮಃ ಪಾರ್ವತೀಪತೇ ಹರಹರಮಹಾದೇವ ಎಂಬ ಶಬ್ದದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ಮರುದಿವಸ ೨-೩ ಸಹಸ್ರ ಜನಗಳ ಸಂತರ್ಪಣೆಯು ಜರುಗಿತು.

ಪ್ರತ್ಯಕ್ಷದರ್ಶಿ.

ಬೆಳಗಾಂವ ಜಿಲ್ಲೆಯ ಸಮಸ್ತ ವೀರಶೈವ ವಿರಕ್ತಮಹಾಸ್ವಾಮಿಗಳಿಗೂ, ಸಿಂಹಾಸನಾಧಿಪತಿಗಳಿಗೂ ಮತ್ತೂ ವೀರಶೈವ ಬಾಂಧವರಿಗೂ ಸವಿನಯ ವಿನಂತಿಯು.

ಶ್ರೀಮದ್ವೀರಶೈವ ಮಹಾಸಭೆಗಳು ಈವರೆಗೆ ಧಾರವಾಡ, ಬೆಂಗಳೂರು, ಸೊಲ್ಲಾಪುರ, ಬಾಗಲಕೋಟೆ, ಮತ್ತೂ ಬಳ್ಳಾರಿ ಪಟ್ಟಣಗಳಲ್ಲಿ ಶ್ರೀಮನ್ನಿರಂಜನ ಶ್ರೀ ಹಾನಗಲ್ ಕುಮಾರಸ್ವಾಮಿಗಳ ಪ್ರೇರಣೆಯಿಂದಲೂ, ನಮ್ಮ ಸಮಾಜದ ಪ್ರಮುಖ ವಿಭೂತಿಗಳ ಸಹಾನುಭೂತಿ ಪ್ರಯತ್ನಗಳಿಂದಲೂ ಸುಲಲಿತವಾಗಿ ಸಾಗಿಬಂದು ನಮ್ಮ ಸಮಾಜವನ್ನು ಜಾಗ್ರತೆ ಪಡಿಸಿದ್ದಕ್ಕೆ ಪ್ರತಿಯೊಬ್ಬ ವೀರಶೈವನೆಂಬ ಅಭಿಮಾನಿಗೆ ಆನಂದವಾಗದೆ ಇರಲಾರದು. ಇದರಂತೆ ಕೆಲವು ಅನಿವಾರ್ಯಕಾರಣಗಳಿಂದ ಹೋದವರ್ಷ ಮಹಾಸಭೆಯು ಕೂಡದೆ ಸ್ಟ್ಯಾಂಡಿಂಗ್ ಕಮಿಟಿಯ ಸಭಾಸದರು ವಿಜಾಪುರದಲ್ಲಿ ಕೂಡಿ ಕೆಲವು ಸಮಾಜದ ಏಳ್ಗೆಯನ್ನು ಕುರಿತು ಆಪ್ತಾಲೋಚನಮಾಡಿ ಅಲ್ಲಿ ಸರ್ವಾನುಮತದಿಂದ ಪಾಸಾಗಿರುವ ವಿಷಯಗಳನ್ನು ಆಕಾಲಕ್ಕೆ ನಮ್ಮ ಸಮಾಜದ ಏಳ್ಗೆಯನ್ನು ಹಗಲಿರುಳು ಬಯಸಿ, ಆ ಕಾರ್ಯದಲ್ಲಿ ಸ್ವಂತನಷ್ಟಕ್ಕೆ ಈಡಾಗಿ ಹಿಡಿದ ಕಾರ್ಯವನ್ನು ಈಡೇರಿಸುವುದಕ್ಕೆ ಕಂಕಣಬದ್ಧವಾಗಿ ನಿಂತಿರುವ ನಮ್ಮ ಮೈಸೂರ್ ಸ್ಟಾರ್ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿರುವುದನ್ನು ಅದರ ಯಾವತ್ತು ಪೋಷಕರೂ, ಹಿತಚಿಂತಕರೂ ಓದಿದ್ದು ನೆನಪಿನಲ್ಲಿರಬಹುದು. ಆದುದರಿಂದ ಈ ಮಹಾಸಭೆಯನ್ನು ಹಿಂದುಗೆಡವದೆ ಪ್ರತಿವರ್ಷ ಕೂಡಿಸುವುದು ಧರ್ಮಾಭಿಮಾನಿಗಳ ಆದ್ಯಕರ್ತವ್ಯವಾಗಿದೆ ಯೆಂದು ಬೇರೆ ಹೇಳುವ ಪ್ರಯೋಜನವಿಲ್ಲ. ಆದಾಗ್ಯೂ ಸಖೇದಾಶ್ಚರ್ಯಪಡುವ ಸಂಗತಿ ಯಾವುದೆಂದರೆ— ಈ ವರ್ಷ ಸಭೆಯನ್ನು ಎಲ್ಲಿ ನೆರೆಯಿಸಬೇಕೆಂಬುವ ಬಗ್ಗೆ ಇನ್ನು ಈವರೆಗೆ ಯಾವ ಸೂಚನೆಯೂ ಪ್ರಮುಖರಿಂದ ಬಾರದೆ ಮೌನಧಾರಣವಾಗಿರುವುದನ್ನು ಅವಲೋಕಿಸಿದರೆ ಬಲು ಖೇದಪಡದೆ ಇರಲಾಗದು. ಹಾಗೂ ಆರಂಭ ಶೂರತ್ವದ ವಿಶೇಷಣಕ್ಕೆ ಮಾತ್ರ ಪಾತ್ರರಾಗುವ ಭೀತಿ ಬರುವುದು. ಪ್ರಯುಕ್ತ ನಮ್ಮ ಬೆಳಗಾಂವ ಜಿಲ್ಲೆಯ ಮಹಾ ಮಹಾ ವಿರಕ್ತಸ್ವಾಮಿಗಳೂ, ಸಿಂಹಾಸನಾಧಿಪತಿಗಳೂ, ವೀರಶೈವ ಮಹಾಶಯರೂ, ಶೆಟ್ಟಿ ಸಾಹುಕಾರರು ಇದರ ಕಡೆಗೆ ಕಪೆಮಾಡಿ ಈಹೊತ್ತಿನವರೆಗೂ ತಮ್ಮ ಜಿಲ್ಲೆಯಲ್ಲಿ ಈ ಮಹಾಸಭೆ ಕೂಡದೆ ಇರುವುದನ್ನು ಇದರಿಂದ ಈ ಜಿಲ್ಲೆಯ ವೀರಶೈವ ಮಹಾಶಯರು ಧರ್ಮ ಹಾಗೂ ಸಮಾಜ ಸುಧಾರಣೆಯಲ್ಲಿ ಎಷ್ಟು ಹಿಂದುಳಿದಿರುವರೆಂಬ ಅಪವಾದವನ್ನು ತಮ್ಮ ನೆರಳಿಗೆ ಸಹಾ ಬರಕೊಡದಂತೆ, ಬೆಳಗಾವಿಯ ಪ್ರಮುಖರು ತಮ್ಮ ಜಿಲ್ಲೆಯ ತಾಲ್ಲೋಕಿನೊಳಗಿನ ಪ್ರಮುಖ ಅಭಿಮಾನಿಗಳನ್ನು ಬರಮಾಡಿಕೊಂಡು ಒಂದು ಸಭೆಯನ್ನು ಕೂಡಿಸಿ ಇದರಬಗ್ಗೆ ಸಾಧಕಬಾಧಕ ವಿಷಯಗಳ ಚರ್ಚೆ ಮಾಡಿ ತಮ್ಮಲ್ಲಿ ಈ ವರ್ಷ ಡಿಸೆಂಬರ ತಿಂಗಳಲ್ಲಿ ಶ್ರೀಮದ್ವೀರಶೈವ ಮಹಾಸಭೆಯು ಜರುಗಿಸಬೇಕೆಂಬದಾಗಿ ಶ್ರೀಮನ್ನಿರಂಜನ ಹಾನಗಲ್ ಕುಮಾರಸ್ವಾಮಿಗಳ ಅಡಿದಾವರೆಗಳಿಗೂ, ಸ್ಟ್ಯಾಂಡಿಂಗ್ ಕಮಿಟಿಯ ಚೇರ್ಮನ್ ರಾ|| ಬಾ|| ಶಾಂತವೀರಪ್ಪಾ ಅಣ್ಣಾ ಮೆಣಸಿನಕಾಯಿ ಧಾರವಾಡ ಇವರ ಕಡೆಗೂ ಪತ್ರಮುಖದ್ವಾರದಿಂದಾಗಲೀ, ಅಥವಾ ಬೆಳಗಾಂವಿಯ ಮುಖಂಡರ ಮುಖಾಂತರವಾಗಲಿ ವಿನಂತಿ ಮಾಡಿಕೊಂಡು ಅವರ ಒಪ್ಪಿಗೆಯನ್ನು ಪಡೆದು ಶೀಘ್ರವೇ ಸ್ಟಾರ್ ಪತ್ರದ ದ್ವಾರಾ ಸರ್ವ ವೀರಶೈವ ವೃಂದಕ್ಕೆ ತಮ್ಮ ಮತಾಭಿಮಾನವನ್ನು ತೋರ್ಪಡಿಸಬೇಕೆಂದು ವಿನಯದಿಂದ ಬೇಡಿಕೊಳ್ಳುವೆನು. ಹಾಗೂ ಈಶಕೃಪೆಯಿಂದ ಬೆಳಗಾಂವಿಯಲ್ಲಿ ಇನ್ನುವರೆಗೆ ಈ ವರ್ಷ ಪ್ಲೇಗಿನ ಹಾವಳಿಯೂ ಇಲ್ಲ. ಹಾಗೂ ಡಿಸೆಂಬರ ಕಾಲದ ಚಳಿಗಾಲವು ಬೆಳಗಾಂವಿಯಲ್ಲಿ ಬಲು ಆರೋಗ್ಯಕರವಿರುವುದು. ಇದಕ್ಕೆ ಬಡವರ ಮಹಾಬಲೇಶ್ವರವೆಂದು ಅನುಭವಶಾಲಿಗಳು ಅನ್ನುವರು. ಇಲ್ಲಿ ಡಮ್ಮಿಗಳ ಅನುಕೂಲತೆಯೂ, ನೀರಿನ ವಿಪುಲತೆಯೂ ಆ ಕಾಲದಲ್ಲಿ ಬಹು ಚೆನ್ನಾಗಿರುವುದು.

ಈ ಎಲ್ಲಾ ವಿಷಯಗಳನ್ನು ಮನಸ್ಸಿಗೆ ತಂದರೆ ಸಭೆಯನ್ನು ಬೆಳಗಾವಿಯಲ್ಲಿ ಈ ವರ್ಷ ಕೂಡಿಸಬೇಕು. ಅಂತೆ ಅಲ್ಲಿಯ ಮುಂದಾಳುಗಳು ಮನಸ್ಸಿನಲ್ಲಿ ತಂದರೆ ಸಾಕು. ಮುಂದಿನ ಯಾವತ್ತು ಕಾರ್ಯಗಳು ಅಗದೀ ಸುಲಭರೀತಿಯಿಂದ ಆಗುವಂತಿವೆ. ಈ ವಿಷಯವು ಮನಸ್ಸಿಗೆ ಬಂದಬರಿಗೆ ಅವರವರ ಶಕ್ತಿಗಳೂ ಅಥವಾ [illegible] ಕೈಗಳೂ ಸಹಾ ಅಗದೀ ಸಮೀಪವೇ ಆಗುವವು. ಇದರ ಅನುಭವವು ಅನೇಕರಿಗೆ ಇರಬಹುದು. ಸಾರಾಂಶ ಇದಕ್ಕೆ ಬೆಳಗಾವಿಯ ವೀರಶೈವರೂ, ಹಾಗು ಆ ಜಿಲ್ಹೆಗೆ ಒಳಗಾಗಿರುವ ತಾಲ್ಲೋಕಿನವರೂ ದೊಡ್ಡ ದೊಡ್ಡ ಗ್ರಾಮದವರೂ ದಯವಿಟ್ಟು ಧರ್ಮದ ಕೆಲಸವೆಂದು ಲಕ್ಷಕ್ಕೆ ತಂದು ತೀವ್ರ ಈ ವಿಚಾರವನ್ನು ಕೃತಿಯಲ್ಲಿ ತರಬೇಕೆಂದು ಹಾರೈಸುವೆನು. ಯಾಕೆಂದರೆ– ಸಭೆಯ ಕಾಲವು ತೀರ ಸಮೀಪಿಸುತ್ತ ಬಂದದೆ. ಬಾಕಿ ಸಮಾಜಗಳ ಸುಧಾರಣೆಯ ಕಡೆಗೆ ನಮ್ಮವರು ತುಸು ಲಕ್ಷ್ಯಕೊಟ್ಟಲ್ಲಿ ನಾವು ಎಷ್ಟು ಹಿಂದೆ ಮತ್ತು ಹ್ಯಾಗೆ ಉಳಿದೆವು. ಇದು ಒಮ್ಮೆಲೆ ಮನಸ್ಸಿನಲ್ಲಿ ಬಂದು ದಿಗಿಲುಹುಟ್ಟಿಸಿ ನಮ್ಮ ಕರ್ತವ್ಯಪರಾಙ್ಮುಖತೆಯ ಬಗ್ಗೆ ನಾಚಿ ತಲೆಬಾಗಿಸಬೇಕಾಗುವುದು. ಗುರುಗಳೇ! ಸ್ವಾಮಿಗಳೇ!! ಬಾಂಧವರೇ!!! ಈ ವಿಷಯವನ್ನು ತೀವ್ರ ಗಮನಿಸಿ ಸಂತೋಷಕರವಾದ ಸುದ್ದಿಯನ್ನು ಈ ನಮ್ಮ ಪ್ರಿಯ ಸ್ಟಾರಪತ್ರದ್ವಾರ ತಿಳುಹಿಸಬೇಕೆಂದು ವಿನಯದಿಂದ ಮಾರ್ಗಪ್ರತೀಕ್ಷೆಮಾಡುತ್ತಿರುವ ನಿಮ್ಮ

ಒಬ್ಬ ವೀರಶೈವ ಮತಾಭಿಮಾನಿ.

ದಾವಣಗೆರೆ.

ಕಳೆದ ಸೋಮವಾರ (ತಾ|| ೧೪-೮-೧೯೧೧) ದಿವಸ ಶ್ರೀ ಬಕ್ಕೇಶ್ವರ ದೇವಸ್ಥಾನದಲ್ಲಿ ತೆಲಗಿಮಠದ ಶ್ರೀ|| ವೇ|| ಚಂದ್ರಶೇಖರ ಶಾಸ್ತ್ರಿಗಳವರು 'ನೀತಿ' ಯ ವಿಷಯಕ್ಕೆ ಒಂದು ಉಪನ್ಯಾಸವನ್ನು ಮಾಡಿದರು. ಇದರ ಸಾರಾಂಶವೇನೆಂದರೆ– "ಮನುಷ್ಯಪ್ರಾಣಿಯು ತನ್ನ ಮನುಷ್ಯತ್ವವನ್ನು ಸಾಧಿಸಿಕೊಳ್ಳಲಿಕ್ಕೆ ವಿದ್ಯೆಯ ವಿನಾ ಸಾಧನವಿಲ್ಲ. ಇಂತಹ ಸಾಧನವನ್ನು ಸಂಪಾದಿಸಿಕೊಳ್ಳದೆ ಅನಂತಜನಗಳು ದುಃಖದಿಂದ ಬಳಲುತ್ತಿರುವರು. ಕಾಳಿದಾಸ ಮಹಾಕವಿಯು ಹೇಳಿದಂತೆ ಚಿಕ್ಕಂದಿನಲ್ಲಿ ಹೆಬ್ಬಳ್ಳನಷ್ಟು ಚಿಕ್ಕದಾದ ನಾಲಗೆಗೆ ವಿದ್ಯಾಭ್ಯಾಸಮಾಡುವ ಉದ್ಯೋಗವನ್ನು ಹಚ್ಚದೆ ಅದನ್ನು ಕೇವಲ ಷಡ್ರಸಗಳಿಂದಲೇ ಬಳೆಯಿಸಿ ಕೊನೆಗೆ ಮನುಷ್ಯತ್ವವನ್ನೇ ನಾಶಮಾಡಿಕೊಳ್ಳುವ ಜನಗಳ ಮೌಢ್ಯವನ್ನು ನೋಡಿ ಎಷ್ಟು ಚಿಂತಿಸಿದರೂ ಸಾಲದುದಾಗಿದೆ. ಯಾವುದೊಂದು ಭಾಷೆಯಲ್ಲಿ ಪಾಂಡಿತ್ಯವನ್ನು ಸಂಪಾದಿಸುವುದು ವಿದ್ಯೆಯಲ್ಲ. ಕಾಮಕ್ರೋಧಾದಿಗಳನ್ನು ಯಾವುದು ಜಯಿಸುವುದೋ ಅದೇ ವಿದ್ಯೆಯೆಂದು ಭಾವಿಸಬೇಕು. ನವದ್ವಾರಗಳುಳ್ಳ ಈ ಶರೀರವೆಂಬ ಪಟ್ಟಣವನ್ನಾಳುವ ಜೀವಾತ್ಮನಾದ ರಾಜನಿಗೆ ಕಾಮಕ್ರೋಧಾದಿ ಷಡ್ವೈರಿಗಳು ಬಾರಿಬಾರಿಗೂ ಮುತ್ತಿಗೆಯನ್ನು ಹಾಕುವುದರಿಂದ ಶರೀರವೆಂಬ ಪಟ್ಟಣದಲ್ಲಿ ಅನಾಯಕತ್ವವುಂಟಾಗಿ, ಶೀಘ್ರದಲ್ಲಿಯೇ ನಾಶವಾಗುತ್ತಿದೆ. ಜನಗಳು ಬ್ರಹ್ಮಚರ್ಯದ ಘನತೆಯನ್ನರಿಯದೆ ವಿಷಯಾತುರರಾಗಿ ಮೃತ್ಯುವಿನ ಬಾಯಿಗೆ ತುತ್ತಾಗುತ್ತಿರುವುದನ್ನು ನೋಡಿರಿ. ಅನೇಕ ಜನಗಳು ಏಕಪತ್ನೀವ್ರತದ ಶ್ರೇಷ್ಠವನ್ನರಿಯದೆ ಕಾಮಾಂಧರಾಗಿ ತನುಮನಧನಗಳನ್ನು ಕಳೆದುಕೊಂಡು ಕೊನೆಗೆ ಕುಲವನ್ನೂ, ಸ್ಥಳವನ್ನೂ ಸಹ ತ್ಯಾಜ್ಯಮಾಡುತ್ತಿರುವರು. ಈ ಕಾಲದ ಜನಗಳು ಪ್ರಾಯಶಃ ಅಲ್ಪಾಯುಗಳೂ, ಅಬಲರೂ, ಅಲ್ಪಮತಿಗಳೂ ಆಗುವುದಕ್ಕೆ ಈ ಕಾಮನೆಂಬ ಪ್ರಥಮವೈರಿಯು ಸ್ವೇಚ್ಛಾಪರನಾಗಿರುವುದೇ ಮುಖ್ಯ ಕಾರಣವು. ಕ್ರೋಧವು ಎಂತಹ ಮಹಾಪಾಪಕ್ಕೀಡುಮಾಡುತ್ತಿದೆಯೆಂಬುದನ್ನು ವಿವರಿಸಿ ಹೇಳಬೇಕಾದುದಿಲ್ಲ. ಇದರಿಂದಾಗತಕ್ಕ ಅನಾಹುತಗಳನ್ನು ನೀವು ಅಡಿಗಡಿಗೆ ನೋಡುತ್ತಿರುವಿರಿ. ಅನಂತ ಜನಗಳು ಕೇವಲ ಸ್ವಾರ್ಥಸಾಧುಗಳಾಗಿ ಪರಹಿತದ ಕಡೆಗೆ ತಿಲಾಂಶವಾದರೂ ಗಮನಿಸದೆ ಅಸತ್ಯ, ಮೋಸ, ದುರಾಚಾರಗಳಿಂದಾದರೂ ಧನವನ್ನು ಸಂಪಾದಿಸುವುದೇ ಮನುಷ್ಯಜನ್ಮದ ಸಾರ್ಥಕ್ಯವೆಂದರಿತು ಕೇವಲ ತಮ್ಮ ಕುಟುಂಬದ ವೃದ್ಧಿಗಾಗಿಯೇ ಹಗಲಿರುಳು ಶ್ರಮಪಡುತ್ತಿರುವರೇ ವಿನಾ ಸಮಾಜ ಸೇವೆಗಾಗಲಿ, ಸತ್ಕಾರ್ಯಗಳಿಗಾಗಲಿ ತಮ್ಮ ತನುಮನಧನಗಳನ್ನು ತಿಲಾಂಶವಾದರೂ ವ್ಯಯಮಾಡದೆ ಸಕಲವನ್ನೂ ಇಲ್ಲಿಯೇ ಬಿಟ್ಟು, ಒಂದು ದಿನ ಅಪಕೀರ್ತಿಯನ್ನೇ ಮಾತ್ರ ಹೊತ್ತುಕೊಂಡು ಹೋಗುತ್ತಾರೆ. ಮದದಿಂದ ಎಂತೆಂತಹ ಭೂಪತಿಗಳೂ, ಶಾಸ್ತ್ರಜ್ಞರೂ ಅಧೋಗತಿಗೆ ಹೋಗಿರುತ್ತಾರೆಂಬುದು ತಮಗೆ ತಿಳಿದ ವಿಷಯವೇ ಆಗಿದೆ. ಆದಾಗ್ಯೂ ಅಹಂಕಾರದಿಂದ ಅನೇಕ ಜನಗಳು ಮದೋನ್ಮತ್ತರಾಗಿ ಗುರುಹಿರಿಯರನ್ನೂ ತಂದೆತಾಯಿಗಳನ್ನೂ ಜರಿಯುತ್ತ ವಿನಯ ಭಯಭಕ್ತಿಗಳಿಲ್ಲದೆ ನಿರಂಕುಶರಾಗಿ ಮೆರೆಯುತ್ತಿರುವರು. ನಮ್ಮ ಜನಗಳಲ್ಲಿ ಮತ್ಸರವು ಅತ್ಯಧಿಕವಾಗಿದೆ. ಪರಸ್ಪರ ಸಹಾಯಮಾಡುವುದು ಮನುಷ್ಯತ್ವದ ಲಕ್ಷಣವು. ಸಹಾಯಮಾಡದಿದ್ದಾಗ್ಯೂ ಅನ್ಯರ ಉನ್ನತಿಗೆ ವಿಘ್ನ ಮಾಡದಿದ್ದರೆ ಸಾಕು. ಇದೇ ಮಹಾಭಾಗ್ಯವೆಂದು ತಿಳಿಯಬೇಕು. ಮತ್ಸರವು ಕೇವಲ ಒಂದು ಸಮಾಜದಲ್ಲಿಯೇ ಇರುತ್ತಿಲ್ಲ. ಈ ದೇಶದ ಪ್ರತಿಯೊಂದು ಸಮಾಜಗಳಲ್ಲಿಯೂ ಈ ಮತ್ಸರವು ತುಂಬಿ ತುಳುಕಿ ಪರಸ್ಪರ ಸಮಾಜಗಳ ಅಭಿವೃದ್ಧಿಗೆ ಸಹ ಪ್ರತಿಬಂಧಪಡಿಸುತ್ತಿರುವುದು. ಧಾರ್ಮಿಕ [illegible] ಸಂಬಂಧಿಯಿಂದ ಮತ್ಸರಗಳು ವೃದ್ಧಿಗೊಳ್ಳುತ್ತಿವೆ. ಸುಶಿಕ್ಷಿತರೆಂದು ಹೇಳಿಕೊಳ್ಳುವ ಸಮಾಜದವರೇ ಈ ಮತ್ಸರಕ್ಕೆ ಅಧೀನರಾಗಿರುವಾಗ ಇತರ ಜನಾಂಗಗಳ ವಿಷಯವೇಕೆ? ನಾಯಿಗಳಂತೆ ಪರಸ್ಪರ ಸಮಾಜದವರು ಮತ್ಸರದಿಂದ ದುಷ್ಕಾರ್ಯಪ್ರವೃತ್ತರಾಗಿ ಅನ್ಯರ ಉನ್ನತಿಯನ್ನು ಕುಂಠಿತಮಾಡಿ, ತಾವೂ ಅಧೋಗತಿಗೆ ಹೋಗುವುದು ಮನುಷ್ಯಧರ್ಮವಲ್ಲ. ಮನುಷ್ಯರಾದಮೇಲೆ ಹೀನಪ್ರಾಣಿಯಾದ ಕಾಗೆಯಷ್ಟಾದರೂ ಬಂಧುತ್ವವಿರಬಾರದೆ? ಪುಷ್ಪದತ್ತಕವಿಯು ಹೇಳಿದಂತೆ ಅಸಂಖ್ಯನದಿಗಳು ಅಸಂಖ್ಯಮಾರ್ಗದಿಂದ ಹರಿದಾಗ್ಯೂ, ಹೇಗೆ ಕೊನೆಗೆ ಸಮುದ್ರವನ್ನೇ ಸೇರುತ್ತವೆಯೋ ಅದರಂತೆಯೇ ಅನೇಕ ಮತಗಳು ಅನೇಕ ಆಚಾರದಿಂದ ಆಚರಿಸಿದಾಗ್ಯೂ ಕೊನೆಗೆ ಆ ಜಗದ್ರಕ್ಷಕನಲ್ಲಿಯೇ ಸೇರುತ್ತವೆ. ಕೆಲವು ಸುಲಭದಿಂದ ಶೀಘ್ರವಾಗಿ ಸೇರಬಹುದು. ಮತ್ತೆ ಕೆಲವು ಕಷ್ಟದಿಂದ ನಿಧಾನವಾಗಿ ಸೇರಬಹುದು. ಇದಕ್ಕಾಗಿ ಮತ್ಸರವೇಕೆ? ಮುಖ್ಯವಾಗಿ ಬೆಂಕಿಯು ಹೇಗೆ ತನ್ನ ಆಶ್ರಯವಾದ ವಸ್ತುವನ್ನು ಆರಂಭದಲ್ಲಿ ಸುಟ್ಟು ಕೊನೆಗೆ ತಾನೂ ನಾಶವಾಗುತ್ತದೆಯೋ, ಅದರಂತೆಯೇ ಈ ಷಡ್ವೈರಿಗಳು ತಮಗೆ ಆಶ್ರಯವಾದ ಶರೀರವನ್ನು ಸುಟ್ಟು ಕೊನೆಗೆ ತಾವೂ ನಾಶವಾಗುತ್ತವೆ. ಅದಪ್ರಯುಕ್ತ ಇವುಗಳನ್ನು ಆದಷ್ಟು ಅಧೀನದಲ್ಲಿಟ್ಟುಕೊಳ್ಳುವುದು ಹಿತಕರವು." ಎಂಬುದಾಗಿ ಒಂದು ಗಂಟೆಯ ವರೆಗೂ ಸುಶ್ರಾವ್ಯವಾಗಿ ಅನೇಕ ದೃಷ್ಟಾಂತಗಳಿಂದಲೂ, ಶಾಸ್ತ್ರಾಧಾರಗಳಿಂದಲೂ ಉಪದೇಶಮಾಡಿದನಂತರ ಸಭಾವಿಸರ್ಜನೆಯಾಯಿತು

ಪ್ರತ್ಯಕ್ಷದರ್ಶಿ.

3

ನೋಟೀಸು.

ಮೈಸೂರು ಕೃಷ್ಣರಾಜಮೊಹಲ್ಲಾ ಹಳೇಅಗ್ರಹಾರದಲ್ಲಿ ಇರುವ ನಂಜನಗೂಡು ನಂಜುಂಡಯ್ಯನವರ ಮಗಳು ನೀಲಮ್ಮನೆಂಬುವಳು ಈ ಕೆಳಗೆ ರುಜುಮಾಡುವ ನನಗೆ ಸೊಸೆಯಾಗಬೇಕು. ಈಕೆಯ ಜೀವನಾಂಶಕ್ಕಾಗಿ ಮಳವಳ್ಳಿ ತಾ|| ಶಿವನಸಮುದ್ರದ ಜಹಗೀರಿ ಬೆಳಕವಾಡಿಗ್ರಾಮಕ್ಕೆ ಸೇರಿದ ಸರ್ವೆ ನಂಬರು ೭೭ ನೇ ತರೀ ಜಮೀನನ್ನು ಕೊಟ್ಟಿರುತ್ತೇನೆ. ಈ ಜಮೀನಿನಲ್ಲಿ ಮೇಲ್ಕಂಡ ನೀಲಮ್ಮನಿಗೆ ಜೀವಮಾನವಿರುವವರೆಗೂ ಫಸಲು ಅನುಭವಿಸತಕ್ಕ ಹಕ್ಕು ಇರುತ್ತದೆಯೇ ಹೊರತು ಪರಾಧೀನವಗೈರೆ ಮಾಡಲು ಹಕ್ಕು ಇರುವದಿಲ್ಲ ಈ ಜಮೀನು ಅಲ್ಲದೆ ಈಕೆಯ ವಶಕ್ಕೆ ೧೦೦೦ ರೂಪಾಯಿ ಬಾಳತಕ್ಕ ನಗಗಳನ್ನು ಮತ್ತು ನಗದು ಮೊಬಲಗನ್ನು ಸಹಾ ಕೊಟ್ಟಿರುತ್ತೇನೆ. ಈಕೆಯು ತನ್ನವರಾದ ಇತರರ ದುರ್ಬೋಧನೆಗೆ ಒಳಪಟ್ಟು ನನಗೆ ಮೋಸಮಾಡಬೇಕೆಂಬ ವುದ್ದಿಶ್ಯದಿಂದ ಸದರಿ ಚರ ಸ್ಥಿರ ಆಸ್ತಿಗಳನ್ನು ಕಲಲ್ಮಾಡುತ್ತಾಳೆಂದು ನನಗೆ ವರ್ತಮಾನ ಬಂದಿದೆ. ಹಾಗೆ ಈಕೆಯಿಂದ ಯಾರಾದರೂ ಮೇಲ್ಕಂಡ ಜಮೀನನ್ನು ಯಾವ ವಿಧದಿಂದಲಾದರೂ ಹೊಂದಿದಲ್ಲಿ ಅಂಥಾಪರಾಧೀನಗಳಿಗೆ ನಾನು ಜವಾಬದಾರನಾಗುವದಿಲ್ಲವೆಂದು ಈಮೂಲಕ ತಿಳಿಸಿ ಇರುತ್ತೇನೆ.

ಮೈಸೂರು
ತಾ|| ೭ ನೇ ಆಗಸ್ಟು
೧೯೧೧ನೇ ಇಸವಿ. } ರುಜು ವಿಟಾಯಿಚೆಂದ್ರಪ್ಪ.

ಎಲ್ಲರಿಗೂ ಬೇಕಾದ ಪುಸ್ತಕಗಳು.

(೧) ಜರ್ಮ ಸಾಮ್ರಾಜ್ಯ ೦-೫-೦ ರಷ್ಯಾ ಜರ್ಮ ಯುದ್ಧಗಳಲ್ಲಿ ಪ್ರಸಿದ್ಧವಾದ ಜರ್ಮ ರಾಜ್ಯದ ವಿಷಯ ಆಶ್ಚರ್ಯಕರವೂ ವಿನೋದಕರವೂ ಆದ ಉತ್ತಮಸಂಗತಿಗಳೂ, ಸುಂದರವಾದ ಒಂದು ನಕ್ಷೆಯೂ ಉಂಟು, ಅಲ್ಲಿನ ಜನಗಳ ಕುಲ, ಶೀಲ, ಪದ್ಧತಿ, ಉಡುಪು, ಆಹಾರ, ಮನೆ, ಮದುವೆ, ನಾಟಕ, ಮತ, ವಿದ್ಯಾಭ್ಯಾಸ, ರಾಜ್ಯಭಾರ, ಯುದ್ಧ, ಪಾರ್ಲಿಮೆಂಟ್, ಪೋಲೀಸ್, ವ್ಯವಸಾಯ, ಉದ್ಯಾನ ಕೈಗಾರಿಕೆ, ವ್ಯಾಪಾರ, ದೊಡ್ಡಪಟ್ಟಣಗಳು, ಆ ರಾಜ್ಯವು ವೃದ್ಧಿಗೆ ಬಂದ ಬಗೆ, ಸಮ್ರಾಟರು ತಿಳಿಯಬೇಕಾದ ಅಂಶ ಇಂತಹವನ್ನೆಲ್ಲ ಚೆನ್ನಾಗಿ ಕೊಟ್ಟಿದೆ.

(೨) ಉತ್ಮತ್ತೆ ೦-೨-೫ ಮನೋಹರವಾದ ಬಂಗಾಳಿ (ನಾವಲ್) ಕಥೆ. ಒಬ್ಬ ಪತಿವ್ರತೆಯು ಅವಳಾರಕ್ಕೆ ಉಪಕಾರ ಮಾಡಬೇಕೆಂದೂ ಬಹಳ ಸಾಹಸ ಮಾಡುವಳು. ಗಂಗೆ ಚಂಡಮಾರುತ ಇಂತಹವನ್ನೆಲ್ಲ ಚೆನ್ನಾಗಿ ವರ್ಣಿಸಿದೆ.

(೩) ಕಿಂಡರ್ ಗಾರ್ಡನ್ ಕಥೆಗಳು. ೦-೧೦-೦ ವಿನೋದಕರವಾದ ಕಥೆಗಳಿಂದಲೇ ಸಣ್ಣ ಮಕ್ಕಳಿಗೂ ದೊಡ್ಡ ವಿಷಯಗಳನ್ನು ತಿಳಿಸಬಹುದು. ತಾಯ್ತಂದೆಗಳಿಗೂ ಸ್ಕೂಲ್ ಮಾಸ್ತರಿಗೂ ಅತ್ಯಾವಶ್ಯಕ ಮೈಸೂರು ಸರ್ಕಾರದವರೂ ಮೆಚ್ಚಿದ್ದಾರೆ.

(೪) ಬೋಧನಕ್ರಮಸಂಗ್ರಹ ೦-೧-೬ ಮಾಸ್ತರು ಓದಬೇಕು. ಸ್ಕೂಲು ಕೆಲಸವನ್ನು ಹೇಗೆನಡೆಸಬೇಕು. ಎಂಬುದನ್ನೆಲ್ಲ ತಿಳಿಸುತ್ತದೆ.

ಅಂಚೆಯವೆಚ್ಚ ಬೇರೆ.

ಎ. ಕೃಷ್ಣಶಾಸ್ತ್ರಿ,) ಆ ಹೆಡ್ ನಾರ್ಮಲ್ ಸ್ಕೂಲ್
ಮೈಸೂರು. ಮತ್ತು
ಜನರಲ್ ಪ್ರೆಸ್ಸ್ ಮೈಸೂರು.

---

21 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು

ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ

ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರನಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು.

ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಷರತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೆಲೆ ೫ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೆಲೆ ೧೦ ನಗಗಳನ್ನು ತರಿಸಿಕೊಳ್ಳುವವರಿಗೆ ೨ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯುವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರ್ಷದ ಕೆಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಡಗಾವ್ಕರ, ಮರ್ಚಂಟ್.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ,
Post Bilgi, North Kanara District

ಮೈಸೂರ್ ಸ್ಟಾರ್ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಚಾರುಶೀಲೆ ಚರಿತ್ರೆ	೦-೫-೦
ಕರಸ್ಪಾಂತೆನ್ನು	೦-೪-೦
ಸಟೀಕಕರ್ನಾಟಕಶಬ್ದಮಂಜರಿ	೦-೪-೦
ಸಟೀಕನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿನಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು.

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.
೨ ರಿಂದ ೪ ರವರಿಗೆ ೧—೧೦—೦.
ಇದರಂತೆ ಮುಂದೆಪ್ರತಿನಾಲ್ಕುಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೨ ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಅನುಕೂಲವಾಗಿ [illegible] ಕೊಡಲ್ಪಡುವುದು. [illegible] ಪ್ರಕಟನೆಗಳಿಗಾದರೆ [illegible]

ಊದಬತ್ತಿಗಳು.

26

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೬ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಡಬ್ಬಿ ೧ ಕ್ಕೆ ೮ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

10 ಗುಣವಾಗದಿದ್ದರೆ ಹಣಪರತ.

ಮದನೋದ್ಭವಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ [illegible] ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಳ್ಳೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. [illegible] ಅಂಚೆ ಖ. ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು [illegible] ಕಳುಹಿಸುವೆವು. ಅರ್ಧಾಣೆ [illegible]

ವಿಳಾಸ—

[illegible] ಜಿ. ಎಲ್. ಜೋಶಿ ಮತ್ತು ಕಂಪನಿ.
[illegible]

"ಅಗತ್ಯ ವಿಚಾರ."

18

ಬೆಲೆ ೪॥ ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ "ಅಗತ್ಯವಿಚಾರ"ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೦ ಬಂದಿರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವವು. ಅಪೇಕ್ಷೆಗಾರರು ತೀವ್ರ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ :—ವೀರಭದ್ರಪ್ಪ ಆರುಬೆರಳನ, ಪೋಸ್ಟ್-ಬಾಗೇವಾಡಿ. ಡಿ॥ ಬೆಳಗಾಂವ.

18 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟ ಕೊಡುವೆವು.

೧ ನೇದು ರೂ. 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಫಸಿಸ್ಟಂ ಪೇಟಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರಿಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕೆಂಪಿನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2-8-0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ. ನಮ್ಮಲ್ಲಿ ತರ್ಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು.

ಕ್ರಯ ರೂ· 2-8-0 ವಿ. ಪಿ. ಪಿ. ಛಾರ್ಜು 0-4-0.

2. ಮೈಟರೆಗ್ಯುಲೇಟರ್ ಲೀವರ್ ಜೂವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಫ್ ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸು ಡೋಮು ಸಹಾ ಇರುತ್ತವೆ.

MOTORREGULATOR
LEVER
SWISS MADE

ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0.

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು.

ಕ್ರಯ ರೂ. 6-0-0 ವಿ. ಪಿ. ಪಿ. ಛಾರ್ಜು ರೂ. 0-6-0.

ಅಮ್ನೋರಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ. 0-8-0 ವಿ. ಪಿ. ಪಿ. ಛಾರ್ಜು ರೂ· 0-4-0.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಟಪಾಲ್ ಛಾರ್ಜು ಇನಾಮು:— ಒಂದೇ ನಮೂನೆಯಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ. 1-0-0 (ಒಂದು ರೂಪಾಯನ್ನು) ಮಣಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 0-8-0 (ಎಂಟಾಣೆ) ಪೋಸ್ಟೇಜು ಸ್ಟ್ಯಾಂಪನ್ನು ಕಳುಹಿಸಬೇಕು. ಇಲ್ಲದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,
ನಂಬರ್ ೨೦ ಶಿಂಗಣ್ಣ ಬೀದಿ, ವಾಲ್‌ಟಾಕ್ಸ್ ರೋಡು ಮದ್ರಾಸು.

ಪಂಡಿತ ಎಸ್. ಗರಳಪುರಿ ಇ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ

55 ಮೈಸೂರು.

ಗೋರೋಚನ ಮಾತ್ರೆ.— ೧೨ ಮಾತ್ರೆಗಳನ್ನು ಜ್ವರ, ಅಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸು ೩೦-೪೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪

ಜ್ವರದಮಾತ್ರೆ.— ಇದರ ಸೇವನೆಯಿಂದ ಎಲ್ಲಾ ಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿ ಟಾಗುವುದು. ೧೨ ಮಾತ್ರೆ ಸೀಸೆ ೦-೪-೦, ೨೪ ಸೀಸೆ ೦-೮-೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳು ಇದು ಅಮೃತಕ್ಕೆ ಸಮಾನ.೪೮ ಮಾತ್ರೆ ಸೀಸೆ ೧-೦

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇ ದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ತೆಯೇ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ೦-೪-೦. ತೊಲೆ ೧ ಕ್ಕೆ ೧-೮-೦.

ಪಚ್ಚ ಕರ್ಪೂರಮಾತ್ರೆ.— ಇದರಿಂದ ಗರ್ಭವಿಟ್ಟ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ಮಾತ್ರೆ ಸೀಸೆ ೦-೪-೦.

ಅರ್ಶೋಹರ ರಸಾಯನ.— ಮೂಲವ್ಯಾಧಿ ಪೀ ಗೆ ಇದು ಸಂಜೀವನ. ಸೇರಿನ ಡಬ್ಬಿ ೧-೮-೦.

ಶ್ರೀಖಂಡಲೇಹ್ಯ.— ಮೇಹಜಾಡ್ಯಗಳಲ್ಲಿ ಬಹುಳ ರಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೨ ದಿನ ಔಷಧಿ ೨-೦-೦.

ಸುಖಭೇದಿ ಮಾತ್ರೆ.— ೧೨ ಮಾತ್ರೆಗಳನ್ನು ಸೇ ವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತ ೨೪ ಮಾತ್ರೆ ಸೀಸೆ ೦-೩

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವ ಮಲವಿಸರ್ಜನೆಯಾಗುತ್ತೆ. ೩೨ ಮಾತ್ರೆ ಸೀಸೆ ೦-೮-

ಕಸ್ತೂರಿಮಾತ್ರೆ.— ತಾಂಬೂಲದೊಡನೆ ಉಪಯೋ ಸತಕ್ಕದು. ೩೦೦ ಮಾತ್ರೆ ಸೀಸೆ ೦-೪-೦.

ಪುರುಷ ಸಂಜೀವಿನಿ.— ೩೨ ಮಾತ್ರೆ ಸೀಸೆ ೨-೦-

ಕಾಲರಾ ಮಾತ್ರೆ.— ೩೦ ಮಾತ್ರೆ ಸೀಸೆ ೧-೦-

ಕೆಮ್ಮಿನಮಾತ್ರೆ.— ೩೦ ಮಾತ್ರೆ ಸೀಸೆ ೦-೮-

ಅಜೀರ್ಣದಮಾತ್ರೆ.— ೫೦ ಮಾತ್ರೆ ಸೀಸೆ ೦-೧೨-

ದಂತಶುದ್ಧಿ ಚೂರ್ಣ.— ಡಬ್ಬಿ ೧ಕ್ಕೆ ೦-೩-

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅ ಹಿದಾ ಕೊಡಬೇಕು. ಇಷ್ಟವುಳ್ಳವರು ಮೇಲಿನ ವಿಳಾಸ ಬರೆಯಿರಿ.

೧೯೧೧ನೇ ಇಸವಿ ಸೆಪ್ಟೆಂಬರ್ ತಾ॥ ೪ ರಿಂದ ೧೯೧೧ ಸೆಪ್ಟೆಂಬರ್ ತಾ॥ ೧೦ ರವರೆಗೆ ಸಲ್ಲುವ ಶಾಲಿವಾಹನ ೧೮೩೩ ನೇ ವಿರೋಧಿಕೃತು ಸಂವತ್ಸರದ ಭಾದ್ರಪದ ಏಕಾದಶಿಯಿಂದ ಭಾದ್ರಪದ ಬ॥ ಬಿದಿಗೆವರಿಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ನಾ ತೀ
4	¹ಸೋ	ಏ	25-27	ಪೂಷಾ	10- 5	19
5	²ಮಂಗ	ದ್ವಾ	30-13	ಉತ್ತ್ರಷಾ	16- 6	20
6	ಬುಧ	ತ್ರ	33-47	ಶ್ರವಣ	21-19	21
7	³ಗುರು	ಚ	36-25	ಧನಿಷ್ಠ	25-26	22
8	⁴ಶುಕ್ರ	ಹು	37-35	ಶತ್ತ ಭಿಷ	29-22	23
9	⁵ಶನಿ	ಪಾ	37-21	ಪೂಭಾ	30-10	24
10	ಭಾನು	ಬಿ	36-1	ಉತ್ತಭಾ	30-39	25

(1) ಸರ್ವತ್ರೈಕಾದಶಿ, (2) ಪರಿವರ್ತನದ್ವಾದಶಿ (3) ಅನಂತಪದ್ಮನಾಭವ್ರತಂ (4) ಉಮಾಮಹೇಶ್ವರವ್ರತಂ (5) ಅಪರಪಕ್ಷಾರಂಭಃ.

ಮೈಸೂರ್ : ಶ್ರೀ. ವಿರೂಪಾಕ್ಷಪ್ಪನವರ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.

REGISTERED NO M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷಿಜ್ಞನ ಪ್ರತ್ಯುಷೋಹರಾಜೇಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಸಂಪುಟ ೨೪] ಮೈಸೂರ್ ಸ್ಟಾರ್ ಸರ್ ೧೯೧೧ ನೇ ಇಸವಿ ಸೆಪ್ಟೆಂಬರ್ ತಾರೀಖು ೧೧ ನೇ ಸೋಮವಾರ. [ಸಂಚಿಕೆ ೩೩

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು.

ಶುಕಸಪ್ತತಿ ಕಥೆಗಳು.

15

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ (೮) ಕಥಾಸಂದರ್ಭಾನುಸಾರ ಭಾವನಕ್ಷೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೮-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಮುದ್ರಾಪಟಗಳು; ದೊರೆಯುತ್ತವೆ. (ಪಟ್ಟಿ) ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ

ಶಾಸ್ತ್ರದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

21

ಲೋಕಾಮೃತಪರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡತ (ಭಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುತಃಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

೪. ಪ್ಲೇಗಿನೌಷಧ.—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ಮಿಕ್ಕಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ಹೊಗಳಿಕೆಯಲ್ಲ. ತರಿಸಿ ನೋಡಿ, ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕುಪ್ಪಿ ೧ ಕ್ಕೆ ರೂ. ೧ ಗಿಲ್ಟು ಮೊದಲಾದವಕ್ಕೆ ಸವರುವ ಡಬ್ಬಿ ೧ ಕ್ಕೆ ಅ. ೮. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ.

(ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ
ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ.

(ಸೈ) ಲಕ್ಷ್ಮಣರಾಯರು, ವರ್ಕ್ ಓವರ್ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಘವವೈದ್ಯಶಾಲಾ,
ಮೈಸೂರು.

ಉತ್ತಮ ಗ್ರಂಥಗಳು.

3

ಶಿವಸ್ತವಶಿರೋಮಣಿ—ಬೆಲೆ ವಿ. ಪಿ. ೪ ಆಣೆ. ಇದು ಉತ್ತಮವಾದ ಸ್ತೋತ್ರವು. ಕನ್ನಡಟಿಪ್ಪಣದಿಂದ ಕೂಡಿದೆ.

ಶಿವಮಾನ್ಯಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ.— ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಅವರ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ ಪಂಚಾಚಾರವಿಚಾರ, ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ಶಿವಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಸೂಕ್ತಂ— ಬೆಲೆ ವಿ. ಪಿ. ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಹಿತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

2 ಎಲ್ಲರಿಗೂ ಬೇಕಾದ ಪುಸ್ತಕಗಳು.

(೧) ಜಪಾನ್ ಸಾಮ್ರಾಜ್ಯ ೦-೩-೦ ರಷ್ಯಾ ಜಪಾನ್ ಯುದ್ಧಗಳಲ್ಲಿ ಪ್ರಸಿದ್ಧವಾದ ಜಪಾನ್ ರಾಜ್ಯದ ವಿಷಯ ಆಶ್ಚರ್ಯಕರವೂ ವಿನೋದಕರವೂ ಆದ ಉತ್ತಮಸಂಗತಿಗಳೂ, ಸುಂದರವಾದ ಒಂದು ನಕ್ಷೆಯೂ ಉಂಟು, ಅಲ್ಲಿನ ಜನರ ಕುಲ, ಶೀಲ, ಪದ್ಧತಿ, ಉಡುಪು, ಆಹಾರ, ಮನೆ, ಮದುವೆ, ನಾಟಕ, ಮತ, ವಿದ್ಯಾಭ್ಯಾಸ, ರಾಜ್ಯಭಾರ, ಯುದ್ಧ, ಪಾರ್ಲಿಮೆಂಟ್, ಪೋಲೀಸ್, ವ್ಯವಸಾಯ, ಉದ್ಯಾನ ಕೈಗಾರಿಕೆ, ವ್ಯಾಪಾರ, ದೊಡ್ಡಪಟ್ಟಣಗಳು, ಆ ರಾಜ್ಯವು ವೃದ್ಧಿಗೆ ಬಂದ ಬಗೆ, ನಮ್ಮವರು ತಿಳಿಯಬೇಕಾದ ಅಂಶ ಇಂತಹವನ್ನೆಲ್ಲ ಚೆನ್ನಾಗಿ ಕೊಟ್ಟಿದೆ.

(೨) ಉನ್ಮತ್ತೆ ೦-೨-೩ ಮನೋಹರವಾದ ಬಂಗಾಳಿ (ನಾವಲ್) ಕಥೆ. ಒಬ್ಬ ಪತಿವ್ರತೆಯು ಅಪಕಾರಕ್ಕೆ ಉಪಕಾರ ಮಾಡಬೇಕೆಂದೂ ಬಹಳ ಸಾಹಸ ಮಾಡುವಳು. ಗಂಗೆ ಚಂಡಮಾರುತ ಇಂತಹವನ್ನೆಲ್ಲ ಚೆನ್ನಾಗಿ ವರ್ಣಿಸಿದೆ.

(೩) ಕಿಂಡರ್ ಗಾರ್ಟನ್ ಕಥೆಗಳು. ೦-೧೦-೦ ವಿನೋದಕರವಾದ ಕಥೆಗಳಿಂದಲೇ ಸಣ್ಣ ಮಕ್ಕಳಿಗೂ ದೊಡ್ಡವಿಷಯಗಳನ್ನು ತಿಳಿಸಬಹುದು. ತಾಯ್ತಂದೆಗಳಿಗೂ ಸ್ಕೂಲ್‌ಮಾಸ್ಟರಿಗೂ ಅತ್ಯಾವಶ್ಯಕ ಮೈಸೂರು ಸರ್ಕಾರದವರೂ ಮೆಚ್ಚಿದಾರೆ.

(೪) ಬೋಧನಕ್ರಮಸಂಗ್ರಹ ೦-೧-೩ ಮಾಸ್ಟರು ಹೇಗಿರಬೇಕು. ಸ್ಕೂಲು ಕೆಲಸವನ್ನು ಹೇಗೆ ನಡೆಸಬೇಕು. ಎಂಬುದನ್ನೆಲ್ಲ ತಿಳಿಸುತ್ತದೆ. ಅಂಚೆಯವೆಚ್ಚ ಬೇರೆ.

ಜಿ. ಕೃಷ್ಣಶಾಸ್ತ್ರಿ, ಅ॥ ಮಾ॥ ನಾರ್ಮಲ್ ಸ್ಕೂಲ್
ಮೈಸೂರು. ಮತ್ತು
ಜನರಲ್ ಏಜನ್ಸಿ ಮೈಸೂರು.

ಉತ್ತಮ ಗ್ರಂಥಗಳು.

4

ಬಸವರಾಜವಿಜಯಂ.— ಬೆಲೆ ವಿ. ಪಿ. ಯಿಂದ ೧-೪-೦. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ.— ೧-೮-೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ.— ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧-೩-೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ.— ೧-೩-೦. ವಿರಶೈವ ಮತಸ್ವರೂಪವೂ-ತದ್ಧರ್ಮವೂ ಚೆನ್ನಾಗಿ ವಿಮರ್ಶಿಸಲ್ಪಟ್ಟಿವೆ. (ಸವ್ಯಾಖ್ಯಾನ.)

ಸೌಂದರ ಪುರಾಣಂ.— ೧-೩-೦. ಸೌಂದರ ನಂಬ್ಯಣ್ಣನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಶ್ಲಾಘ್ಯವಾದ ಷಟ್ಪದಿಕಾವ್ಯ.

ಸಟೀಕ ತತ್ವಪ್ರಕಾಶಿಕಾ.— ೬ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ.— ಜ್ಞಾನದೀಕ್ಷೆಗಳ ಲಕ್ಷಣವೂ, ಮೋಕ್ಷವು ದೀಕ್ಷೈಕಲಭ್ಯವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿವೆ. ಬೆಲೆ ೬ ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. ಬೆಲೆ ೧೨ ಆಣೆ.

ಸ್ತುತಿ ಮುಕ್ತಾವಳಿ.— ಬಸವೇಶ ಪಂಚಪ್ರಕಾರ ಗದ್ಯಾದಿಗಳಿವೆ. ೬ ಆಣೆ.

ರಕ್ಷಾಶತಕಂ.— ೨ ಆಣೆ. ಶಂಕರಲಿಂಗ ಕಂದಂ ೧ ಆಣೆ.

ವೀರಶೈವ ಗ್ರಂಥಪ್ರಕಾಶಿಕಾ.— ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ-ಪ್ರತಿ ತಿಂಗಳಲ್ಲೂ ೪೦ ಪುಟಗಳು ಬರುವವು. ವರ್ಷದ ಚಂದಾ ೨-೮-೦.

ಎಸ್. ಆರ್. ಕರಿಬಸವಸ್ವಾಮಿ,
ಗ್ರಂಥಪ್ರಕಾಶಕ ಕಂಪನಿ, ಮೈಸೂರು.

ಸೌಗಂಧಿಕಾಪರಿಣಯ.

(ಕಳೆದ ವಾರದ ಶೇಷ.)

ತೇಜಸ್ವಿಯಂತೆ ಬಗ್ಗಿರುವ ಕತ್ತು, ಹ್ರಸ್ವಂಗಳಾದ ಅಂಗಗಳು ಗೊರಸುಗಳು, ಶರೀರದ ಉತ್ತರಾರ್ಧಕ್ಕೆ ಸಮಾನವಾದ ಅಂಗಗಳು, ಪೂರ್ವಾರ್ಧದಲ್ಲಿ ಗಟ್ಟಿಯಾದ ಅಂಗಗಳು, ಕೃಶವಾದ ಹೊಟ್ಟೆಯು ಉಳ್ಳುವಾಗಿ, ಅಗಲಾದ ಅಂಗಗಳಲ್ಲಿ ಮೈತುಂಬಿಕೊಂಡು ಒಳ್ಳೆಯ ಸ್ವಭಾವವುಳ್ಳ ಕುದುರೆಗಳು ಬರ್ಬರದೇಶದೊಳ್ ಪುಟ್ಟಿದುವೆಂದರಿವುದು. ಸ್ಥೂಲವಾದ ಅವಯವಗಳು, ದೃಢವಾದ ಗೊರಸುಗಳು, ಕೆಂಪುವರ್ಣವು ಬಲವು, ವರ್ತುಳವಾದ ಮಧ್ಯಪ್ರದೇಶವು, ವಿಸ್ತಾರವಾದ ಎದೆಯು ಉಳ್ಳುವಾಗಿ ಮೈತುಂಬಿಕೊಂಡಿರುವ ಅಶ್ವಗಳು ಪಂಚೀದೇಶೋತ್ಪನ್ನಂಗಳು. ಸೂಕ್ಷ್ಮವಾದ ರೋಮಗಳು ದಪ್ಪವಾದ ಜಘನವು, ಎದೆಯು, ಗಟ್ಟಿಯಾದ ಪಾದಗಳು, ದಪ್ಪವಾದ ಮೊಣಕಾಲುಗಳು, ಪರಾಕ್ರಮವು ಉಳ್ಳುವಾಗಿ ಶ್ವೇತವರ್ಣವನ್ನು ಸೇರಿಸಿದ ಚಿತ್ರವರ್ಣವುಳ್ಳ ಕುದುರೆಗಳು ಕೇರಳದೇಶದೊಳ್ ಪುಟ್ಟಿದುವೆಂದರಿವುದು. ಚೆನ್ನಾಗಿ ತುಂಬಿದ ಶರೀರವು, ದಪ್ಪವಾಗಿ ವಿಸ್ತಾರವಾದ ಹಣೆಯು ಅಧಿಕವಾದ ಪರಾಕ್ರಮವು, ನೆಟ್ಟಗೆ ನಿಂತಿರುವ ಕರ್ಣಂಗಳು, ಶೋಭಿತವಾದ ರೋಮವು, ಸೂಕ್ಷ್ಮವಾದ ಚರ್ಮವು, ಉಷ್ಟ್ರದಂತೆ ವಿಸ್ತಾರವಾದ ಮುಖವು, ದೃಢವಾದ ಅಂಗಗಳು, ಪಾದಗಳು, ಶೌರ್ಯವಾದ ಸ್ವಭಾವವು, ಕೆಂಪುವರ್ಣದಿಂ ಮಿಶ್ರವಾದ ಚಿತ್ರವರ್ಣವು ಉಳ್ಳುವಾಗಿ ಮನಸ್ವಿಗಳಾದ ಕುದುರೆಗಳು ಕಾಶ್ಮೀರದೇಶಸಂಜಾತಂಗಳು. ಫಲತೃಣಗಳಿಂದ ಸಂಪೂರ್ಣವಾದ ಸಿಂಧುವೆಂಬ ಮಹಾನದಿಯ ತೀರಗಳು ಸೈಂಧವಕಗಳೆನಿಸಿಕೊಳ್ಳುವುವು. ಪೂರ್ವಕಾಯದಲ್ಲಿ ಅತ್ಯುನ್ನತವಾಗಿ, ಪಶ್ಚಾರ್ಧಕಾಯದಲ್ಲಿ ಸ್ವಲ್ಪ ಉನ್ನತವಾಗಿ ಸ್ವಲ್ಪ ವಿಸ್ತಾರವುಳ್ಳ ಕತ್ತು, ದೀರ್ಘಗಳಾದ ಕೇಸರಗಳು ಸ್ವಲ್ಪ ವರ್ತುಳವಾದ ಮುಖವು, ದೀರ್ಘಗಳಾದ ಅವಯವಂಗಳು, ಉದ್ದವಾದ ಪಾದಂಗಳು, ಹೊಟ್ಟೆಯು, ತುಂಬಿದ ಶರೀರವುಳ್ಳುವಾಗಿ, ಮತ್ತೊಂದು ಕುದುರೆಯನ್ನಾಗಲಿ, ಹೆಣ್ಣು ಕುದುರೆಯನ್ನಾಗಲಿ ಕಂಡು ಗಂಭೀರವಾಗಿ ಧ್ವನಿಗೈವ ಕುದುರೆಗಳು ಸೈಂಧವಕದೇಶದೊಳು ಪುಟ್ಟಿದುವುಗಳು. ಶೋಭಿತವಾದ ಕಂಠವು, ವಿಸ್ತಾರವಾದ ಜಘನವು, ವಕ್ಷಸ್ಥಲವು ಗಳಿತವಾದ ಬೆನ್ನು, ಶರೀರವು, ದೀರ್ಘವಾದ ಬಾಲವು, ಕೇಸರಗಳು ಅಧಿಕವಾದ ವೇಗವು, ಬಲವು, ಧೈರ್ಯವು, ದೃಢವಾದ ಪಾದಗಳು ಉಳ್ಳುವಾಗಿ ಸಕಲ ಕಾರ್ಯಂಗಳಲ್ಲಿಯೂ ಮುಂದುವರಿದು ಪೋಗುವ ಅಶ್ವಂಗಳು ಪರ್ವತದೇಶದೊಳ್ ಪುಟ್ಟಿದುವೆಂದರಿವುದು. ದೀರ್ಘವಾದ ಬಾಲಗಳು, ಕೇಸರಂಗಳು, ವಿಸ್ತಾರವಾದ ಕಿವಿಯು, ಅತ್ಯಂತವೇಗವು, ದುಷ್ಟವಾದ ಸ್ವಭಾವವು, ವ್ಯಾಪಾರವು, ದೃಢವಾದ ಪಾದಗಳು, ಗೊರಸುಗಳು, ಜೇನುತುಪ್ಪದಂತೆ ವರ್ಣವು ಮತ್ತು ಹಸುರು ವರ್ಣದಿಂ ಕೂಡಿದ ಚಿತ್ರವರ್ಣವೂ ಉಳ್ಳುವಾಗಿ, ಸಕಲ ಕಾರ್ಯಗಳಲ್ಲಿಯೂ ಸಮರ್ಥನಾದ ಸಾದಿಯಿಂದಲೂ ಸ್ವಾಧೀನಂಗಳನ್ನಾಗಿ ಮಾಡಲಶಕ್ಯಗಳಾದ ಕುದುರೆಗಳು ದಕ್ಷಿಣಸಮುದ್ರೋತ್ತರಸಮುದ್ರಗಳೆಂಬ ದೇಶಂಗಳಲ್ಲಿ ಜನಿಸಿದುವೆಂದರಿವುದು. ಚಿತ್ರಸ್ಥೆಯೆಂಬ ನದಿಯು ಮತ್ತು ಸರಸ್ವತೀಯೆಂಬ ನದಿಯ ತೀರಂಗಳೊಳಿರುವ ದೇಶಂಗಳು ನಾದೇಯಂಗಳೆನಿಸಿಕೊಳ್ಳುವುವು. ಈರಾವತೀ ಯೆಂಬ ನದಿಯು, ವಿಪಾಶಾಯೆಂಬ ನದಿಯು ಮತ್ತು ಶತದ್ರುಯೆಂಬ ನದಿಯ ಮಧ್ಯದಲ್ಲಿರುವ ದ್ವೀಪಗಳು ಕೂಡ ನಾದೇಯಂಗಳೆನಿಸಿಕೊಳ್ಳುವುವು. ನದೀ ತೀರದಲ್ಲಿ ಪುಟ್ಟಿದ ಕುದುರೆಗಳು ನಾದೇಯಂಗಳೆಂಬುವಾಗಿಯೂ, ದ್ವೀಪಂಗಳಲ್ಲಿ ಪುಟ್ಟಿದ ಕುದುರೆಗಳು ದ್ವೈಪ್ಯಂಗಳೆಂಬುವಾಗಿಯೂ ಹೇಳಲ್ಪಡುವುವು. ಈ ಕುದುರೆಗಳು ಶುಭಕರಂಗಳಾದ ಲಕ್ಷಣಗಳಿಂದಲೂ, ದೀರ್ಘವಾದ ಕತ್ತಿನಿಂದಲೂ, ಯುಕ್ತವಾದ ಮುಖವುಳ್ಳುವಾಗಿ ಶೋಭಿತವಾದ ಬಾಲಗಳು, ಜಘನಪ್ರದೇಶಂಗಳು, ಮಂಗಳಕರವಾದ ರೆಪ್ಪೆಗಳು ಉಳ್ಳುವಾಗಿರುವುವು, ವಿಸ್ತಾರವಾದ ಮುಖವು, ಮೂಗುಗಳು, ದೀರ್ಘವಾದ ಕಂಠವು, ದಪ್ಪವಾದ ಶ್ವಾಸವು, ಅತಿ ದೀರ್ಘಂಗಳಾದ ಬಾಹುಗಳು, ಕೇಸರಗಳು, ದೃಢವಾದ ಮಂಗಳಕರವಾದ ಪಾದಗಳು ಉಳ್ಳುವಾಗಿ ಮೈತುಂಬಿಕೊಂಡಿರುವ ಕುದುರೆಗಳು ಕೇಕಯದೇಶದೊಳ್ ಪುಟ್ಟಿದುವೆಂದರಿವುದು. ವಿಶಾಲವಾದ ಭುಜಶಿರಸ್ಸುಗಳು, ಅಧಿಕವಾದ ಬಲವು, ಬಟುವಾದ ಕಂಠವು, ಹುಬ್ಬುಗಳ ಮಧ್ಯಪ್ರದೇಶವು, ತೊಡೆಗಳು, ಹೊಟ್ಟೆಯು, ಸ್ಥೂಲಗಳಾದ ಅಂಡಗಳು, ಜೋಲುವ ಕಿವಿಗಳು, ಅಂಡಗಳ ಸಮೀಪದಲ್ಲಿ ವಿಸ್ತಾರವುಳ್ಳುವಾಗಿ ಸ್ಥಿರಸ್ವಭಾವದಿಂದೊಡಗೂಡಿದ ಕುದುರೆಗಳು ಅಪರಾಂತದೇಶದಲ್ಲಿ ಪುಟ್ಟಿದುವೆಂದರಿವುದು. ದೀರ್ಘವಾದ ಕತ್ತು, ಮುಖವು, ಹುಲಿಯ ಹೊಟ್ಟೆಯಂತೆ ಸ್ವಲ್ಪವಾದ ಹೊಟ್ಟೆಯು, ಬೆನ್ನು, ಕಿವಿಗಳು, ಮೋರೆಯು ದೃಢವಾದ ಪಾದಂಗಳು, ವಿಸ್ತಾರವಾದ ವಕ್ಷಸ್ಸು, ಜಘನಪ್ರದೇಶವು, ಉಳ್ಳುವಾಗಿ ಕ್ರೂರಸ್ವಭಾವಗಳಾದ ಪರಾಕ್ರಮಶಾಲಿಗಳಾದ ಅಶ್ವಗಳು [illegible]ದೇಶದಲ್ಲಿ ಜನಿಸಿದುವೆಂದರಿವುದು. ಸ್ವಲ್ಪವಾದ ದೇಹ, ದೃಢವಾದ ಕಾಲು, ಅತಿ ಶೀಘ್ರವಾದ ನಡೆಯುಳ್ಳ ನಾಲ್ಕು ಪಾದಂಗಳಿಂದ ನರ್ತನವಂ ಮಾಡುವಂತಿರುವ, ಸಮವಾಗಿ ತುಂಬಿರುವ ಶರೀರವುಳ್ಳುವಾಗಿ, ಪ್ರಕಾರದಿಂದತಿಶೀಘ್ರಗಮನವಂ ಹೊಂದುತ, ಮದಿಸಿಕ್ಷಮಾಯುಕ್ತಂಗಳಾದ ಅಶ್ವಗಳು ಸೌವೀರದೇಶದೊಳ್ಪುಟ್ಟಿದುವೆಂದರಿವುದು. ಹ್ರಸ್ವವಾದ ಪಕ್ಕಡಗಳು, ಹುಬ್ಬುಗಳ ಮಧ್ಯವು ವಿಸ್ತಾರವಾದ ಹೊಟ್ಟೆ ಶಿರಸ್ಸು, ಕಂಠಪ್ರದೇಶವು, ದೃಢವಾದ ಪಾದಗಳು ಹ್ರಸ್ವವಾದ ನೇತ್ರಗಳು, ಬೆನ್ನು, ಪಾದಗಳು ಉಳ್ಳುವಾಗಿ ಮಂದಬುದ್ಧಿಗಳಾದ ಅಶ್ವಗಳು ದರದದೇಶದಲ್ಲಿ ಜನಿಸಿದುವೆಂದರಿವುದು. ಸ್ಥೂಲವಾದ ಪಾದಗಳು, ರೋಮಗಳು ಚರ್ಮವು, ವಿಸ್ತಾರವಾದ ದೇಹವು, ಅಧಿಕವಾದ ಬಲವು, ವೇಗವು, ಸ್ಥೂಲವಾದ ಹೊಟ್ಟೆಯು, ಮೊಣಕಾಲುಗಳುಳ್ಳುವಾಗಿರುವ ಕುದುರೆಗಳು ಸೈಂಧವದೇಶದಲ್ಲಿ ಪುಟ್ಟಿದುವೆಂದರಿವುದು. ವಿಸ್ತಾರವಾದ ಪಕ್ಕಡಗಳು, ಆಸನವು, ಪೂರ್ವಾರ್ಧದಲ್ಲಿ ವಿಸ್ತಾರವು ದೃಷ್ಟಿಪ್ರಿಯವಾದ ದೇಹಕಾಂತಿಯು, ಲಂಬವಾದ ತುಟಿಯು, ಕಿವಿಗಳು, ಹ್ರಸ್ವವಾದ ಕಂಠವು ಉಳ್ಳುವಾಗಿ, ಅತಿರೋಷದಿಂದ ಕೆಂಪೇರಿದ ಕಣ್ಣುಗಳುಳ್ಳ ಕುದುರೆಗಳು ಮಾಳವವೆಂಬ ಕ್ಷುದ್ರದೇಶದಲ್ಲಿ ಜನಿಸಿ ಕ್ಷುದ್ರಕಗಳೆನಿಸಿಕೊಳ್ಳುವುವು ದೀರ್ಘಗಳಾದ ಕರ್ಣಗಳು, ಗಂಭೀರವಾದ ಧ್ವನಿಯು, ವಿಸ್ತಾರವಾದ ಶರೀರವು, ಕೋಮಲವಾದ ಕಂಠಪ್ರದೇಶವು, ವಿಸ್ತಾರವಾದ ಪಕ್ಕಡಗಳು, ಎದೆಯು, ಸ್ವಲ್ಪ ಬಗ್ಗಿರುವ ಮುಖವು, ದೃಢವಾದ ಉಭಯಪಾರ್ಶ್ವಗಳು, ದೀರ್ಘಗಳಾದ ಕೇಶಗಳು, ಮಧ್ಯಮ ಶರೀರಬಲವು ಉಳ್ಳುವಾಗಿ ಕಠಿನಪ್ರಕೃತಿಯಿಲ್ಲದೇ ಇರುವ ಕುದುರೆಗಳು ದಕ್ಷಿಣದೇಶದಲ್ಲಿ ಪುಟ್ಟಿ ಆವರ್ತಗಳೆಂದು ಪ್ರಸಿದ್ಧಿಯಂ ಪಡೆದಿರುವುವು. ಸ್ಥೂಲಗಳಾದ ಪಾದಗಳು, ದೀರ್ಘಗಳಾದ ಕರ್ಣಗಳು, ದೃಢವಾದ ಗೊರಸುಗಳು, ದೀರ್ಘವಾಗಿ ಮಂಡಲಾಕಾರವಾದ ಕಂಠವು, ಸ್ವಲ್ಪ ಬಗ್ಗಿರುವ ಮುಖವು, ಲಂಬವಾದ ಅಂಡಗಳು, ಮೇಢ್ರವು, ಸ್ವಲ್ಪ ಬಲವು ಉಳ್ಳ ಕುದುರೆಗಳು ಕಳಿಂಗದೇಶದೊಳ್ ಜನಿಸಿದುವೆಂದರಿವುದು. ಸ್ಥೂಲವಾದ ರೋಮಗಳು, ದುರ್ಬುದ್ಧಿಯು ಕೋಪಸ್ವಭಾವವು, ಹ್ರಸ್ವವಾದ ಬೆನ್ನು, ಅಂಗಗಳು, ಜಘನಗಳು, ದಪ್ಪವಾದ ಹರಡುಗಳು, ಮೊಣಕಾಲುಗಳು ಮಂದವಾದ ಬುದ್ಧಿಯು, ಸ್ವಲ್ಪವಾದ ಬಲವು, ವಿಸ್ತಾರವಾದ ಆಸನವು ಉಳ್ಳುವಾಗಿ ಅಧೈರ್ಯದಿಂದ ಉತ್ಸಾಹರಹಿತಂಗಳಾದ ಕುದುರೆಗಳು ಮಾಳಕುಲದೇಶದಲ್ಲಿ ಪುಟ್ಟಿದುವುವೆಂದರಿವುದು. ಸ್ಥೂಲಗಳಾದ ರೋಮಗಳು, ಅಸ್ಥಿಗಳು, ಬಾಲವು, ಸ್ವಲ್ಪ ಬಲವು, ಶುಭ್ರವರ್ಣವನ್ನನುಸರಿಸಿದ ನಾನಾ ಬಣ್ಣವು, ವಿಷಮಗಳಾದ ಅಂಗಗಳು, ದೃಢವಾದ ಗೊರಸುಗಳು, ಸ್ಥೂಲವಾದ ಚರ್ಮವು ಉಳ್ಳ ಕುದುರೆಗಳು ಐರಾವತದೇಶದಲ್ಲಿ ಪುಟ್ಟಿದ ಐರಾವತಕುಲದಲ್ಲಿ ಜನಿಸಿದುವೆಂದರಿವುದು. (ಸಶೇಷ.)

ಸದ್ವ್ಯಯ.

ಕಳೆದ ವಾರದ ಶೇಷ.

ವಿದ್ಯೆಗಾಗಿಯೂ ಯಶಸ್ಸಿಗಾಗಿಯೂ ವ್ಯಯಮಾಡಿದ ಧನವು ಸದ್ವ್ಯಯಕ್ಕೆ ಸೇರಿದುದೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ ವಿದ್ಯೆಯಿಂದ ಇಹಪರಗಳಲ್ಲಿ ಸುಖವುಂಟು. ಕೀರ್ತಿಯನ್ನು ಪಡೆಯಬೇಕಾದರೆ ನೂರಾರು, ಸಾವಿರಾರು ಲಕ್ಷಾಂತರ ಮಂದಿಗೆ ಉಪಕಾರವನ್ನು ಮಾಡಬೇಕು. ಇಂತಹ ಪರೋಪಕಾರದಿಂದ ಕೀರ್ತಿಯು ಶಾಶ್ವತವಾಗಿ ನಿಲ್ಲುವುದೇ ವಿನಾ ಮತ್ತೆ ಬೇರೆಯಿಲ್ಲ. ಯಾವವೇಳೆಯಲ್ಲಿ ಏತಕ್ಕೆ ಎಷ್ಟು ಹಣವನ್ನು ವ್ಯಯ ಮಾಡಬೇಕೆಂಬುದನ್ನು ವಿಚಾರಮಾಡಿ ವ್ಯಯ ಮಾಡಬೇಕು. ಹಾಗೆ ಮಾಡುವುದು ಸದ್ವ್ಯಯದಲ್ಲಿ ಮೊದಲನೆಯ ತರಗತಿಗೆ ಸೇರಿದುದು. ಏಕೆಂದರೆ, ಮಿತವ್ಯಯವು ಸದ್ವ್ಯಯಕ್ಕೆ ಮೊದಲನೆಯ ಮೆಟ್ಟಲು. ಕೆಲವರು ಜೂಜು, ಕುಡಿತ, ತಿಂಡಿ ಮೊದಲಾದುವುಗಳಿಗೆ ಹಿಂದು ಮುಂದು ನೋಡದೆ ಹಣವನ್ನು ಕಳೆಯುವರು. ಇದು ಮೊದಲನೆಯ ತಪ್ಪು.

ಮನುಷ್ಯನು ಜ್ಞಾನಾರ್ಜನೆಗಾಗಿ ವಿದ್ಯೆಯನ್ನು ಕಲಿಯಬೇಕು. ಪ್ರಪಂಚ ವ್ಯವಹಾರದಲ್ಲಿರುವವನಿಗೆ ಮುಖ್ಯವಾಗಿ ಇಹಲೋಕಕ್ಕೆ ಸಂಬಂಧವಾದ ವಿದ್ಯೆ, ಪರಲೋಕಕ್ಕೆ ಸಂಬಂಧವಾದ ವಿದ್ಯೆಗಳೆಂಬೆರಡು ವಿದ್ಯೆಗಳಭ್ಯಾಸವು ಅತ್ಯಾವಶ್ಯಕವು. ವ್ಯಾಪಾರಸ್ಥನು ಗಣಿತ ವಿದ್ಯೆಯನ್ನು ಸುಳ್ಳುಲೆಕ್ಕ ಅನೇಕರಿಗೆ ಮೋಸಮಾಡುವುದರಲ್ಲುಪಯೋಗಿಸಿದರೆ ಅದು ವಿದ್ಯೆಗೆ ಸದ್ವಿನಿಯೋಗವೆನಿಸಲಾರದು. ಅನೇಕ ಪುಸ್ತಕಗಳನ್ನು ಓದಿ ಅಸದೃಶಪಾಂಡಿತ್ಯವನ್ನು ಸಂಪಾದಿಸಿ ಅನ್ಯರ ದೋಷಾನ್ವೇಷಣದಲ್ಲಿಯೇ ನಿರತನಾದರೆ, ಅದು ವಿದ್ಯೆಯನ್ನು ವ್ಯಯ ಮಾಡುವ ಸರಿಯಾದ ಮಾರ್ಗವಲ್ಲ. ತನ್ನ ಪಾಂಡಿತ್ಯವನ್ನು ಮತ್ತೊಬ್ಬನಿಗೆ ಬೋಧಿಸಿ ಅವನನ್ನೂ ಪಂಡಿತನನ್ನಾಗಿ ಮಾಡಿದರೆ, ಅದು ವಿದ್ಯೆಗೆ ಸದ್ವಿನಿಯೋಗವೇ ಸರಿ. ಪ್ರತಿಫಲಾಕಾಂಕ್ಷೆಯಿಂದ ಅನ್ಯರನ್ನು ಸ್ತುತಿಸುವುದರಲ್ಲಿ ಪಾಂಡಿತ್ಯವನ್ನು ಉಪಯೋಗಿಸಿದರೆ ಅದು ನ್ಯಾಯವಾದ ಮಾರ್ಗದಲ್ಲಿ ಪಾಂಡಿತ್ಯವನ್ನು ಉಪಯೋಗಿಸಿದಂತಾಗುವುದಿಲ್ಲ. ತನ್ನ ಪಾಂಡಿತ್ಯವು ತನ್ನಲ್ಲೇ ಲಯವಾದರೆ ಫಲವೇನು? ತನ್ನ ಪಾಂಡಿತ್ಯದಿಂದ ಅನ್ಯರಿಗೆ ಪ್ರಯೋಜನವನ್ನುಂಟುಮಾಡುವವನೇ ಧನ್ಯನು! ಅವನೇ ಮಾಡುವ ವಿನಿಯೋಗವೇ ವಿದ್ಯಾಸದ್ವಿನಿಯೋಗವು !!

ಪರಕ್ಕೆ ಸಾಧಕವಾದ ದೈವಜ್ಞಾನ ವಿದ್ಯೆಯನ್ನು [illegible]ವನೇ [illegible] ಈ ವಿದ್ಯೆಯನ್ನು ಚೆನ್ನಾಗಿ [illegible]ವ್ಯಾಸಮಾಡಿ ಸದ್ವಿನಿಯೋಗ ಮಾಡುವವರು ವಿರಳ. ಯಾರು ಚೆನ್ನಾಗಿ ಅಭ್ಯಾಸಿಸಿ ಸದ್ವಿನಿಯೋಗ ಮಾಡುವರೋ ಅವರು ಮಹನೀಯರೆನಿಸಿಕೊಳ್ಳುವರು. ಸಕಲ ವಿಧವಾದ ಜ್ಞಾನವನ್ನು ಆರ್ಜಿಸಿ ಅರ್ಥಿಗೆ ಬೋಧಿಸುವುದು ಸದ್ವಿನಿಯೋಗಕ್ಕೆ ಸೇರಲಾರದು. ತಮಗೆ ಸರಿಯಾದ ಜ್ಞಾನವಿಲ್ಲದಿದ್ದರೂ, ಅನ್ಯರಿಗೆ ಬೋಧಿಸತೊಡಗಿ ಅವರ[illegible]ವ ಅಲ್ಪ ಸ್ವಲ್ಪ ಜ್ಞಾನವನ್ನೂ ನಾಶಮಾಡುವುದು ವಿದ್ಯೆಯ ದುರ್ವಿನಿಯೋಗದ ಮೊದಲನೆಯ ತರಗತಿಗೆ ಸೇರಿದುದು.

ದ್ರವ್ಯದ ಸದ್ವ್ಯಯದಿಂದ ಮಿತವ್ಯಯವನ್ನು ಕಲಿಯಬಹುದು. ಮಿತವ್ಯಯದಿಂದ ಹಣವನ್ನು ಗಳಿಸಬಹುದು. ಮಿತವ್ಯಯ ಮಾಡುವವನಿಗೆ ಸಂಪಾದನೆಯು ಅಧಿಕವಾಗುವುದೆಂಬುದನ್ನು ನಾವು ಅನುಭವದಿಂದ ಹೇಳಬಲ್ಲೆವು. ಸತ್ಕಾರ್ಯಕ್ಕಾಗಿ ದ್ರವ್ಯವನ್ನು ವ್ಯಯ ಮಾಡುವವನಿಗೆ ದೇವರು ಸಹಾಯ ಮಾಡುವನೆಂಬುದರಲ್ಲಿ ಸಂದೇಹವಿಲ್ಲ ಇಷ್ಟು ಮಾತ್ರವಲ್ಲ. ಸದ್ವ್ಯಯದಿಂದ ಇಹದಲ್ಲಿ ಕೀರ್ತಿಯೂ, ಪರದಲ್ಲಿ ಸದ್ಗತಿಯೂ ದೊರೆಯುವುದು. ವಿದ್ಯಾಸದ್ವ್ಯಯವು ಶಿಷ್ಯಾರ್ಜನೆಗೂ, ಮನ್ವಾದಿಗಳಂತೆ ಆಚಂದ್ರಾರ್ಕವಾದ ಕೀರ್ತಿಯನ್ನೂ ಪಡೆವುದಕ್ಕೂ, ನಾರದಾದಿ ಮುನಿಗಳಂತೆ ಸದ್ಗತಿಯನ್ನು ಪಡೆವುದಕ್ಕೂ ಮೂಲವಾದುದೆಂದು ಧಾರಾಳವಾಗಿ ಹೇಳಬಹುದು. ಆದುದರಿಂದ, ಸುಖಸಂಪತ್ತುಗಳನ್ನೊದಗಿಸುವ ವಿದ್ಯಾಬುದ್ಧಿಗಳ ಸದ್ವ್ಯಯಮಾರ್ಗವನ್ನು ಪ್ರತಿ ಮಾನವನಿಗೂ ತೋರೆಂದು ಜಗದೀಶನನ್ನು ಅನನ್ಯಭಾವದಿಂದ ಪ್ರಾರ್ಥಿಸುವೆವು. ಹನುಮಾನ್.

ವ್ಯವಸಾಯಕ ವಿಷಯಗಳು.

ತುಬಟಕ್ಕೆ ಹೆಚ್ಚು ಬೆಲೆಯು ಸಿಕ್ಕದೆ ಕಡಿಮೆ ಬೆಲೆಯು ಸಿಕ್ಕುವುದಕ್ಕೆ ತುಬಟವು ಪೆಡಸಾಗಿರುವುದೇ ಕಾರಣವು. ಕುರಿಗಳು ನೆಲದಮೇಲೆ ಮಲಗಿರುವಾಗ್ಗೆ ಧೂಳಿನ ಜತೆಯಲ್ಲಿರುವ ಸುಣ್ಣವು ತುಬಟಕ್ಕೆ ಸೇರುವುದರಿಂದ ಅದು ಈ ರೀತಿ ಪೆಡಸಾಗುವುದು. ಆದುದರಿಂದ ಕುರಿಗಳನ್ನು ಕೊನೆಯಪಕ್ಷ ತಿಂಗಳಿಗೊಂದುಸಲವೂ, ತುಬಟವನ್ನು ಕತ್ತರಿಸುವುದಕ್ಕೆ ಮುಂಚೆ ಯರಡಾವೃತ್ತಿಯೂ ಸೀಗೆಯಕಾಯನ್ನು ಹಾಕಿ ಉಜ್ಜಿ ತೊಳೆಯಬೇಕು. ಹೀಗೆ ಮಾಡಿದರೆ ತುಬಟವು ಹಸನಾಗುವುದಲ್ಲದೆ ಈಗಿಗಿಂತಲೂ ಸೇಕಡ ೨೫ ರಷ್ಟು ಹೆಚ್ಚು ಬೆಲೆ ಸಿಕ್ಕುವುದು.

ಕಬ್ಬಿನ ಪೈರಿನಲ್ಲಿ ಸೂಲಂಗಿ ಬಿಡುವುದು ಕಬ್ಬು ಬಲಿತು ಉಪಯೋಗಿಸಲ್ಪಡುವುದಕ್ಕೆ ಹದವಾದ ಗುರುತೆಂಬದಾಗಿ ಸಾಧಾರಣವಾಗಿ ವ್ಯವಸಾಯಗಾರರೆಲ್ಲರೂ ತಿಳಿದುಕೊಂಡಿರುವರು. ಆದರೆ ಮದರಾಸು ವ್ಯವಸಾಯದ ಇಲಾಖೆಯವರು ಪರೀಕ್ಷಿಸಿ ನೋಡಿರುವುದರಲ್ಲಿ ೧೯೦೯ ನೆಯ ಇಸವಿ ಮೇ ತಿಂಗಳಿನಲ್ಲಿ ನೆಡಲ್ಪಟ್ಟ ಕಬ್ಬು ನವಂಬರು ತಿಂಗಳಲ್ಲಿ ಹೂವು ಬಿಡಲು ಪ್ರಾರಂಭವಾದಾಗ್ಯೂ ೧೯೧೦ನೆಯ ಇಸವಿ ಫೆಬ್ರವರಿ ತಿಂಗಳ ವರೆಗೂ ಪೈರಿನಲ್ಲಿ ರಸವು ಹೆಚ್ಚುತ್ತಿದ್ದಿತು. ಅದರಿಂದ ಕಬ್ಬಿನಲ್ಲಿ ಹೂವು ಬಿಡುವುದಕ್ಕೂ ಮತ್ತು ಕಬ್ಬು ಗಾಣವಾಡಲ್ಪಡುವುದಕ್ಕೆ ಹದವಾಗುವದಕ್ಕೂ ಏನೂ ಸಂಬಂಧವಿಲ್ಲವೆಂದು ಇದರಿಂದ ಸ್ಪಷ್ಟವಾಗಿ ತಿಳಿಯುವುದು.

ಇನ್ನು ಸ್ವಲ್ಪ ಕಾಲದಲ್ಲಿಯೇ ಮರದ ನಾರಿನಿಂದ ಬಟ್ಟೆಗಳನ್ನು ತಯಾರು ಮಾಡಬಹುದೆಂದು ಅಮೇರಿಕಾ ದೇಶಸ್ಥರು ಹೇಳುವರು. ಆ ದೇಶದಲ್ಲಿ ಸಿಕ್ಕತಕ್ಕ ಒಂದು ಜಾತಿಯ ಮರ (Spruce Wood) ದಿಂದ ನಾರನ್ನು ತೆಗೆಯಬಹುದಂತೆ. ಈ ನಾರಿನಿಂದ ಬಟ್ಟೆಯನ್ನು ತಯಾರು ಮಾಡಿ ಬಹಳ ಅಗ್ಗವಾಗಿ ಮಾರಬಹುದಾದುದರಿಂದ ಇನ್ನು ಮುಂದೆ ದರಿದ್ರನಾದವನಿಗೂ ಹೆಚ್ಚು ದುಡ್ಡು ಖರ್ಚಿಲ್ಲದೆ ಧರಿಸಲು ಯೋಗ್ಯವಾದ ಬಟ್ಟೆಯು ಸಿಕ್ಕುವುದಂತೆ. ಈ ನಾರಿನಿಂದ ಮಾಡಲ್ಪಟ್ಟ ಬಹಳ ಹಸನಾದ ಬಟ್ಟೆಯು ಬಿಳಿಯ ಹತ್ತಿಗಿಂತಲೂ ಅಗ್ಗವಂತೆ. ಇದರಲ್ಲಿ ನಾನಾ ಬಣ್ಣದ ಬಟ್ಟೆಗಳನ್ನು ಮಾಡಬಹುದೆಂತಲೂ ಬಣ್ಣವು ಸ್ವಲ್ಪವೂ ಕಡಿಮೆಯಾಗುವುದಿಲ್ಲವೆಂತಲೂ, ಮತ್ತು ಇದು ಬಹುಕಾಲ ಬಾಳಿಕೆ ಬರುವದಲ್ಲದೆ, ಬೆಂಕಿಯಲ್ಲಿ ಉರಿಯುವುದಿಲ್ಲವೆಂತಲೂ ಹೇಳುವರು.

ಇಂಡಿಯಾ ದೇಶದಲ್ಲಿ ಗಿಡಗಳನ್ನು ಮಣ್ಣಿನ ಕುಂಡಗಳಲ್ಲಿ ನೆಡುವುದು ಬಹಳ ರೂಢಿಯಲ್ಲಿದೆಯಷ್ಟೆ. ಹೀಗೆ ಮಾಡುವುದರಿಂದ ಅವಶ್ಯಕ ಬಿದ್ದಾಗಲೆಲ್ಲಾ ಗಿಡವನ್ನು ಹೊರಗೆ ತೆಗೆದು ಹೊಸ ಮಣ್ಣನ್ನು ಹಾಕಿ ಗಿಡವನ್ನು ಪುನಃ ನೆಡುವುದಕ್ಕೂ ಮತ್ತು ನೀರು ಹಾಕುವುದಕ್ಕೂ ಬಹಳ ಅನುಕೂಲವುಂಟು. ಗಿಡವನ್ನು ನೆಡುವುದಕ್ಕೆ ಮುಂಚೆ ಕುಂಡಗಳ ಅಡಿಯಲ್ಲಿ ನೀರು ಬಸಿದು ಹೋಗಲು ಮಾಡಿರುವ ತೂತುಗಳು ಮುಚ್ಚಿಹೋಗದಂತೆ ನೋಡಿಕೊಳ್ಳಬೇಕು. ತೂತುಗಳ ಮೇಲೆ ಕೆಲವು ಬಕರೆ ಚೂರುಗಳನ್ನು ಮುಚ್ಚಿ ಅದರಮೇಲೆ ಸುಮಾರು ೨ ಅಂಗುಲದವರೆಗೆ ಸಣ್ಣ ಸಣ್ಣ ಕಲ್ಲುಗಳನ್ನು ತುಂಬಬೇಕು. ಅನಂತರದಲ್ಲಿ ಕಲ್ಲುಗಳ ಮೇಲೆ ಮರಳನ್ನಾಗಲಿ ಅಥವಾ ಹಗ್ಗದ ಚೂರುಗಳನ್ನಾಗಲಿ ಹಾಕಬೇಕು. ಅದರಮೇಲೆ ಮರಳು, ಕೆಮ್ಮಣ್ಣು ಮತ್ತು ಗೊಬ್ಬರ ಮೊದಲಾದುವುಗಳನ್ನು ಮಿಶ್ರಮಾಡಿ ಕುಂಡವನ್ನು ಭರ್ತಿ ಮಾಡಬೇಕು. ಗಿಡವು ಚೆನ್ನಾಗಿ ನಿಂತಮೇಲೆ, ನೀರು ಹಾಕುವಾಗ್ಗೆ ಮಣ್ಣು ಕೊಚ್ಚಿ ಹೋಗದಿರುವುದಕ್ಕಾಗಿ ಸಣ್ಣ ಸಣ್ಣ ಕಲ್ಲುಗಳನ್ನು ಮಣ್ಣಿನ ಮೇಲೆ ಹಾಕಬೇಕು.

ಬಂಬಾರಾ ನೆಲಗಡಲೆ ಕಾಯಿನ ವ್ಯವಸಾಯವು ಸಮಸ್ತ ವಿಷಯದಲ್ಲೂ ಸಾಧಾರಣವಾದ ನಮ್ಮ ನೆಲಗಡಲೆಕಾಯಿನ ವ್ಯವಸಾಯದಂತೆಯೇ ಇರುವುದು. ಆದರೆ ಇದರಲ್ಲಿ ಕಾಯಿಯು ಗಿಡದ ತಾಯಿ ಬೇರಿನ ಸುತ್ತಲೂ ಭೂಮಿಗೆ ಬಹಳ ಮೇಲ್ಭಾಗದಲ್ಲಿಯೇ ಬಿಡುವುದರಿಂದ ಇದನ್ನು ಕೇಬಿ ಮಾಡುವುದು ಬಹಳ ಸುಲಭವು. ಗಿಡಗಳನ್ನು ಕಿತ್ತರೆ ಕಾಯಿಗಳೆಲ್ಲವೂ ಮೇಲಕ್ಕೆ ಬರುವುವು. ಕಾಯಿಯು ಸಾಧಾರಣವಾದ ನೆಲಗಡಲೆಕಾಯಿಗಿಂತ ಸ್ವಲ್ಪ ಮೊಟಕಾಗಿರುತ್ತದೆ. ಮತ್ತು ಒಂದೊಂದು ಕಾಯಿನಲ್ಲಿ ಒಂದೊಂದು ಕಾಳು ಮಾತ್ರ ಇರುವುದು. ಇದನ್ನು ಜನಗಳು ತಿನ್ನಬಹುದು; ದನಗಳಿಗೆ ತಿನ್ನಿಸಬಹುದು ಮತ್ತು ಇದರ ಸೊಪ್ಪನ್ನು ದನಗಳಿಗೆ ಮೇವಾಗಿ ಹಾಕಬಹುದು, ಇಲ್ಲವೆ ಹಸಿರು ಗೊಬ್ಬರವಾಗಿ ಉಪಯೋಗಿಸಬಹುದು. ಬಲಿತ ಕಾಳನ್ನು ಬೀಸಿದರೆ ಬಹು ಬಿಳುಪಾದ ಹಿಟ್ಟಾಗುವುದು. ಈ ಹಿಟ್ಟಿನಿಂದ ಉತ್ತಮವಾದ ಅಹಾರ ಪದಾರ್ಥಗಳನ್ನು ತಯಾರು ಮಾಡುವರು. ನೆಲಗಡಲೆಕಾಯನ್ನು ಕಟಾವು ಮಾಡಿ ಕೇಬಿ ಮಾಡುವುದಕ್ಕೆ ಬಹಳ ಖರ್ಚು ತಗಲುವುದರಿಂದ, ಇದರ ವ್ಯವಸಾಯವು ಬಹಳ ಅಭಿವೃದ್ಧಿಯಲ್ಲಿಲ್ಲ. ಆದರೆ ಬೊಂಬಾರ ನೆಲಗಡಲೆ ಕಾಯಿನ ಕೊಯಿಲಿಗೆ ಹೆಚ್ಚು ತಗಲುವದಿಲ್ಲವಾದುದರಿಂದ, ರೈತರು ಇದನ್ನು ಬೆಳೆಯುವುದರಿಂದ ತುಂಬಾ ಖರ್ಚನ್ನೂ ಮತ್ತು ತೊಂದರೆಯನ್ನೂ ಕಡಿಮೆ ಮಾಡಿಕೊಳ್ಳಬಹುದು.

ಕ್ಯಾಂಬೋಡಿಯಾ ಹತ್ತಿಯನ್ನು ಬೆಳೆಯುವುದು ಇತರ ಹತ್ತಿಗಳನ್ನು ಬೆಳೆಯುವುದಕ್ಕಿಂತಲೂ ಹೆಚ್ಚು ಅನಾಯಾಸಕರವೆಂಬುವುದು ನಿರ್ಧರಿಸಲ್ಪಟ್ಟಿದೆ ಎಕರೆಗೆ ಸರಾಸರಿ ಒಂದು ಖಂಡಗ ಹತ್ತಿಯನ್ನು ಬೆಳೆಯಬಹುದು, ಮತ್ತು ಇದಕ್ಕೆ ೨೦೦ ರೂಪಾಯಿ ಖರೀದಿ ಸಿಕ್ಕುವುದು. ಈ ಹತ್ತಿಯು ಇತರ ಹತ್ತಿಗಳಿಗಿಂತಲೂ ಶುಭ್ರವಾಗಿಯೂ ಮತ್ತು ಮೃದುವಾಗಿಯೂ ಇರುವುದು. ಇದು ವರುಷಕ್ಕೊಂದು ಬೆಳೆಯಾದುದರಿಂದ ಒಂದು ವರುಷಕ್ಕಿಂತಲೂ ಜಾಸ್ತಿ ಕಾಲ ಇರುವಂತಹ ಬೆಳೆಗಳಂತೆ ಹುಳುಗಳ ಕಾಟಕ್ಕೆ ಗುರಿಯಾಗುವುದಿಲ್ಲ. ಸಾಧಾರಣವಾದ ನಮ್ಮ ದೇಶದ ಹತ್ತಿಗಳನ್ನು ಬಿತ್ತನೆ ಮಾಡುವ ಕಾಲದಲ್ಲೇ ಇದನ್ನೂ ಬಿತ್ತನೆ ಮಾಡಿದರೆ ಎರಡೂ ಒಂದೇ ಕಾಲದಲ್ಲಿ ಕಟಾವಿಗೆ ಬರುವುವು. ಅಲ್ಲದೆ ಇದಕ್ಕೆ ನೀರು ಹಾಯಿಸಬೇಕಾದ ಆವಶ್ಯಕವಿಲ್ಲ ಮತ್ತು ಇಲ್ಲಿನ ಹತ್ತಿಗಳನ್ನು ಬೆಳೆಯತಕ್ಕ ಸಾಧಾರಣವಾದ ಜಮೀನುಗಳಲ್ಲಿ ಇದು ಬಹಳ ಜೋರಾಗಿ ಬೆಳೆಯುವುದು. ಇದಕ್ಕೆ ಖರೀದಿಯು ಬಹಳ ಹೆಚ್ಚಾದುದರಿಂದ ಹೊಟ್ಟೆಗಿಲ್ಲದೆ ಕಷ್ಟಪಡುವ ಬಡರೈತರಿಗೆ ಇದನ್ನು ಬೆಳೆಯುವುದರಿಂದ ಬಹಳ ಪ್ರಯೋಜನವುಂಟೆಂದು ಹೇಳಬೇಕಾದುದೇನಿಲ್ಲ. ಈ ಹತ್ತಿಯಲ್ಲಿ ಎಳೆಯು ಕೂಡ ಬಹಳ ಉದ್ದವಾಗಿ ಬರುವುದು. ಇದನ್ನು ತಮ್ಮ ಜಮೀನುಗಳಲ್ಲಿ ಬೆಳೆಯಲು ಅಪೇಕ್ಷೆಯುಳ್ಳ ರೈತರು ಮುಸಲೀಪಟಾಂ ಜಲಾಲಾ ಪೇಟೆ ಮಂಗಳಾಲ ಎಸ್ಟೇಟಿನ ಫಾರಂ ಸೂಪರಿಂಟೆಂಡೆಂಟರಾದ ಮೆ|| ಪಿ. ವೆಂಕೈಯನವರಿಗೆ ಬರೆದುಕೊಂಡರೆ ಒಂದು ಎಕರೆ ವಿಸ್ತೀರ್ಣದಲ್ಲಿ ಬೆಳೆಮಾಡಲು ಬೇಕಾಗುವಷ್ಟು ಬೀಜವನ್ನು ೩ ರೂಪಾಯಿಗಳಿಗೆ ಕಳುಹಿಸಿಕೊಡುವರು.

ಕೆ. ಗ.

ಉದ್ಯೋಗ.

ಸಕಲ ಭೂಮಂಡಲವನ್ನು ರಕ್ಷಿಸತಕ್ಕ ದೇವರು ಲೋಕೋಪಕಾರಕ್ಕಾಗಿಯೇ ಸಮಸ್ತ ಪದಾರ್ಥಗಳನ್ನು ಸೃಷ್ಟಿಸಿದ್ದಾಗ್ಯೂ, ಅವುಗಳನ್ನು ನಮ್ಮ ಉಪಯೋಗಕ್ಕೆ ತಿರುಗಿಸಿಕೊಳ್ಳಬೇಕಾದರೆ, ನಾವು ಬುದ್ಧೀಂದ್ರಿಯಾದಿಗಳ ಶ್ರಮವನ್ನು ವಹಿಸುವುದಕ್ಕೆ ಅವಶ್ಯಕವಾಗಿ ಮಾಡಿರುತ್ತಾನೆ ಯಾವ ಪದಾರ್ಥವೇ ಆಗಲಿ ಸ್ವಭಾವಸ್ಥಿತಿಯಲ್ಲಿರುವಾಗ ಅದು ನಮ್ಮ ಉಪಯೋಗಕ್ಕೆ ಬರಲಾರದು. ಮೊದಲು ನಾವು ಅದನ್ನು ರೂಪಾಂತರಗೊಳಿಸಬೇಕಾಗುವುದು. ಇದನ್ನೋಡಿದರೆ ಪ್ರತಿಯೊಂದು ಪ್ರಾಣಿಯೂ ದೇಹಾದಿಶ್ರಮವನ್ನು ವಹಿಸಬೇಕೆಂಬುದು ಭಗವತ್ಸಂಕಲ್ಪವೆಂಬದಾಗಿ ಸ್ಪಷ್ಟವಾಗುತ್ತದೆ. ಯಾವ ಪ್ರಾಣಿಯೇ ಆಗಲಿ ಉದ್ಯೋಗತತ್ಪರವಾಗದಿದ್ದರೆ ಸುಖಪಡಲಾರದು. ತಥಾಪಿ ಪಶುಪಕ್ಷ್ಯಾದಿಗಳೆಲ್ಲಕ್ಕಿಂತಲೂ ಜ್ಞಾನಾಧಿಕನಾದ ಮನುಷ್ಯನಾದರೋ ತನ್ನ ಉತ್ತಮ ಜನ್ಮಕ್ಕೆ ತಕ್ಕಂತೆ ದೇಹಾದಿಶ್ರಮವನ್ನು ವಹಿಸಿ ಉದ್ಯೋಗತತ್ಪರನಾಗದಿದ್ದರೆ, ಅವನ ಪುರುಷತ್ವಂ ಸಾರ್ಥಕವೆನಿಸುವುದಿಲ್ಲ. “ಉದ್ಯೋಗಂ ಪುರುಷಲಕ್ಷಣಂ” ಎಂಬ ವಾಕ್ಯವು ಇದಕ್ಕಾಗಿಯೇ ಹುಟ್ಟಿರುವುದು. ಜಗತ್ತಿನಲ್ಲಿ ಉದ್ಯೋಗತತ್ಪರರಾದ ಪ್ರಜೆಗಳಿಂದ ಕೂಡಿರುವ ದೇಶವು ಏಳ್ಗೆಯನ್ನೈದುತ್ತಲೂ, ನಿರುದ್ಯೋಗಿಗಳು ಹೆಚ್ಚಾದ ದೇಶವು ಬಡವಾಗುತ್ತಲೂ ಬರುತ್ತಿರುವುವು. ವಾಚಕರೆ! ಈ ನಮ್ಮ ಹಿಂದೂ ದೇಶದಲ್ಲಿ ಉದ್ಯೋಗತತ್ಪರರ ಸಂಖ್ಯೆಯು ಕಡಿಮೆಯಾಗುತ್ತಲೂ, ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚಾಗುತ್ತಲೂ ಬಂದುದರಿಂದಲೇ ಈ ದೇಶದ ಐಶ್ವರ್ಯವೆಲ್ಲವೂ ಪರರಪಾಲಾಗಿ ದಿನೇದಿನೇ ಕ್ಷೀಣಗತಿಗೆ ಬರುವಂತಾಯಿತು. ದೇವರು ಕೊಟ್ಟಿರುವ ಕೈಕಾಲುಗಳು ಗಟ್ಟಿಯಾಗಿದ್ದಾಗ್ಯೂ ಶ್ರಮಪಟ್ಟು ಧನವನ್ನಾರ್ಜಿಸಿ ಸುಖಿಸುವುದನ್ನು ಬಿಟ್ಟು ಪರರ ಅರ್ಜನೆಗೆ ಕೈಯೊಡ್ಡಿಕೊಂಡು ಅಧಮವಾದ ಯಾಚನಾವೃತ್ತಿಯಿಂದ ಜೀವಿಸುವವರು ಹೆಚ್ಚಿದಷ್ಟೂ ಭೂಮಿಗೆ ಭಾರವಲ್ಲದೆ, ಅಂತಹರಿಂದ ಜಗತ್ತಿಗೆ ಯಾವ ಫಲವೂ ಇಲ್ಲ.

ನಿರುದ್ಯೋಗಿಯಾದವನಲ್ಲಿ ಬಡತನವು ಬೇರೂರುವುದು ಸ್ವಭಾವವಾಗಿದೆ. ಹಾಗೆ ಬಡತನವು ನೆಲಸಿದ ಮೇಲೆ ಹೊಟ್ಟೆಪಾಡಿಗಾಗಿ ಮಾಡಬಾರದ ಕೆಲಸಗಳನ್ನಾದರೂ ಮಾಡುವುದಕ್ಕೆ ಮನಸ್ಸನ್ನು ಕೊಡಬೇಕಾಗುತ್ತದೆ. ಅದರಿಂದ ನೆರೆಹೊರೆಯವರಲ್ಲಿ ಅಪಮಾನವೂ, ನಾನಾ ವಿಧವಾದ ಕಷ್ಟಗಳೂ ಸಂಭವಿಸುತ್ತವೆ. ಉದ್ಯೋಗಿಯಾದವರೋ ತಾವು ಪ್ರಯಾಸಪಟ್ಟು ಸಂಪಾದಿಸಿದುದನ್ನು ತಾವೂ ಸುಖವಾಗಿ ತಿಂದು, ತಮಗೆ ನಂಬಿದವರನ್ನೂ ಸುಖಪಡಿಸಿ ಸರ್ವರಲ್ಲೂ ಗೌರವವನ್ನು ಪಡೆದು ನಿಶ್ಚಿಂತನಾಗಿರುವನು. ಮತ್ತೂ ಉದ್ಯೋಗತತ್ಪರನಿಗೆ ತನ್ನ ಕಾರ್ಯ ನಿರ್ವಾಹದಲ್ಲಿಯೇ ಆತುರವಿರುವುದರಿಂದ, ಇತರ ದುಷ್ಕೃತ್ಯದಲ್ಲಿ ಅವನ ಮನಸ್ಸು ಪ್ರವರ್ತಿಸುವುದಕ್ಕೆ ಮಾರ್ಗವೇ ಇರುವುದಿಲ್ಲ. ಅದುಕಾರಣ ಅವನು ಪುಣ್ಯಶರೀರಿಯಾಗಿಯೇ ಇರುವನು. ನಿರುದ್ಯೋಗಿಯಾದರೋ ಮಾಡುವುದಕ್ಕೆ ಕೆಲಸವಿಲ್ಲದೆ ಕಪಟತಂತ್ರಗಳಲ್ಲಿಯೂ, ಪರರಿಗೆ ಕೇಡುಗಳನ್ನೊಡ್ಡುವುದರಲ್ಲಿಯೂ, ದ್ಯೂತಾದಿ ದುಷ್ಕೃತ್ಯಗಳಲ್ಲಿಯೂ, ಪ್ರವರ್ತಿಸುತ್ತ ಕಾಲಯಾಪನೆ ಮಾಡಿ ಪಾಪಿಷ್ಠನಾಗುವನು. ಆದುದರಿಂದ ಉದ್ಯೋಗವು ಇಹಪರವೆರಡಕ್ಕೂ ಸಾಧಕವಾದುದೆಂದು ತಿಳಿಯಬೇಕಾಗಿದೆ.

ಲೋಕದಲ್ಲಿ ದಾನಮಾಡುವುದು ಪುಣ್ಯಸಂಪಾದಕವೆಂಬ ಶಾಸ್ತ್ರವಚನವನ್ನು ಸರಿಯಾಗಿ ಗ್ರಹಿಸದ, ಅನೇಕರು ಕಾಲೇಂದ್ರಿಯಪಾಟವ ಶಕ್ತರಾದವರಾಗಿಯೂ ಸಹ ದಾನಪಾತ್ರರನ್ನು ಹೆಚ್ಚಿಸುತ್ತಾ ಬಂದ್ದು, ಅವರು ನಿರಾಯಾಸವಾಗಿ ದೊರೆಯುವ ಈ ದಾನವನ್ನು ನಂಬಿ ದೇಹವನ್ನಲುಗಿಸದೆ ಹೊಟ್ಟೆಹೊರೆದುಕೊಳ್ಳುತ್ತಾ ಸೋಂಬೇರಿಗಳಾಗುವುದಕ್ಕೆ ಮಾರ್ಗವಾಯಿತು. ಜನಗಳಲ್ಲಿ ಉದ್ಯೋಗತತ್ಪರತೆಯನ್ನು ಕೆಡಿಸುವುದಕ್ಕೆ ಈ ಜನಗಳೇ ಸ್ವಲ್ಪಮಟ್ಟಿಗೆ ಕಾರಣಭೂತರೆಂದು ಹೇಳಬಹುದು. ದಾನಧರ್ಮಗಳಿಗೆ ಕುಂಟರು, ಕುರುಡರು ಮೊದಲಾದ ಅಂಗವಿಹೀನರೇ ಪಾತ್ರರೆಂಬುದನ್ನು ತಿಳಿದುಕೊಳ್ಳುತ್ತಾ ಬಂದರೆ, ದಿನೇ ದಿನೇ ಲೋಕದಲ್ಲಿ ನಿರುದ್ಯೋಗಿಗಳಿಗೆ ಪ್ರೋತ್ಸಾಹವು ತಪ್ಪಿ, ಉದ್ಯೋಗದ ಕಡೆ ಅವರು ಕಣ್ಣನ್ನು ತೆರೆಯಬೇಕಾಗುವುದು.

ಅಯ್ಯಾ ಪ್ರಿಯವಾಚಕರೆ! ಮತ್ತೆ ಕೆಲರು ತಮ್ಮ ಹಿರಿಯರು ಗಳಿಸಿಟ್ಟಿರುವ ಸಂಪತ್ತು ತಮಗೆ ಹೇರಳವಾಗಿರುವಾಗ ತಾವೇಕೆ ಶ್ರಮಪಡಬೇಕೆಂದು ಮೈಯನ್ನಲ್ಲಾಡಿಸದೆ ಕುಂತು ಕಾಲಹರಣಮಾಡುತ್ತಿರುವರು. ಹೀಗೆ ದೇಹಶ್ರಮಾದಿಗಳನ್ನು ಪಡೆದಿರುವುದೇ ಸುಖವೆಂದು ಅವರು ಭಾವಿಸಿದ್ದರೂ, ನಿಜವಾಗಿಯೂ ಅದೊಂದು ವಿಧವಾದ ರೋಗವಲ್ಲದೆ ಸುಖವಲ್ಲ. ಯಾಕೆಂದರೆ, ಹೀಗೆ ಕುಳಿತು ದೇಹವನ್ನು ಬೆಳೆಸುತ್ತಿರುವ ಶ್ರೀಮಂತರುಗಳಲ್ಲಿ ಅನೇಕರು ಆರೋಗ್ಯಭಾಗ್ಯಗಳನ್ನು ಕಳೆದುಕೊಂಡವರಾಗಿರುವರು. ಯಾವಾಗಲೂ ಕಷ್ಟಪಟ್ಟು ಒಂದೊಂದು ಉದ್ಯೋಗದಲ್ಲಿ ಸಿಕ್ಕಿರುವವರಾದರೋ ಆರೋಗ್ಯದೃಢಕಾಯರಾಗಿಯೂ, ಸುಖಿಗಳಾಗಿಯೂ ಇರುವರು. ಆದುದರಿಂದ ಸ್ವದೇಶಬಾಂಧವರು ಇಹಪರಸುಖವೆರಡಕ್ಕೂ ಉದ್ಯೋಗವೇ ಮುಖ್ಯಸಾಧನವೆಂದು ತಿಳಿಯುವವರಾಗಲೆಂದು ಕೋರುವ

ಉದ್ಯೋಗಾಭಿಮಾನಿ
ಶೆಟ್ಟರ ಕಲಿವೀರಪ್ಪ, ಬಿಳಿಬೋಳು.

ಬೊಂಬಾಯಿಯಲ್ಲಿ ಆನಂದಾಬಾಯಿ ಎಂಬುವಳು ಕೆಲದಿನಗಳ ಕೆಳಗೆ ಗಿರ್ಗಾಂರೋಡಿನಲ್ಲಿ ಒಂದು ಪಠಾರದಲ್ಲಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಬಾಳ ಅಣ್ಣಾಜಿ ಮತ್ತು ಬಾಗುಸೇಟು ಎಂಬುವರ ಕೂಡ ವಾಸಮಾಡುತ್ತಿದ್ದಳು. ಈ ಆನಂದಬಾಯಿಯು ಮೈತುಂಬಾ ಒಡವೆಗಳನ್ನಿಟ್ಟುಕೊಂಡು ಅದೇ ಪಠಾರದಲ್ಲಿ ವಾಸಮಾಡಿಕೊಂಡಿದ್ದ ಒಬ್ಬ ಮಾರ್ವಾಡಿಯ ಅಂಗಡಿಗೆ ಆಗಾಗ್ಗೆ ಹೋಗಿ ನೋಟುಗಳನ್ನು ಮುರಿಸಿಕೊಂಡು ಬರುತ್ತಿದ್ದಳು. ಕಳೆದ ತಿಂಗಳ ತಾ|| ೨೩ ರಲ್ಲಿ ಆ ಮಾರ್ವಾಡಿಯಂಗಡಿಗೆ ಎಂದಿನಂತೆ ಆಭರಣಗಳನ್ನು ಧರಿಸಿಕೊಂಡು ಹೋಗಿ ತಾನಿಟ್ಟಿರುವ ನಗಗಳನ್ನು ಅವನಿಗೆ ತೋರಿಸಿ, ಅವುಗಳನ್ನು ಒತ್ತೆ ಇಟ್ಟುಕೊಂಡು ೩೦೦ ರೂಪಾಯಿಗಳನ್ನು ಕೊಡಿಯೆಂದು ಕೇಳಿದಳು. ಆ ಮಾರ್ವಾಡಿಯು ಆ ನಗಗಳನ್ನೆಲ್ಲ ಚೆನ್ನಾಗಿ ಪರೀಕ್ಷಿಸಿ, ಅವು ನಿಜವಾದ ಬಂಗಾರವೆಂದು ನಿರ್ಧರಿಸಿಕೊಂಡು ಈಗ ಕೈಯಲ್ಲಿ ಹಣವಿಲ್ಲದಿರುವ ಪ್ರಯುಕ್ತ ಇನ್ನು ಕೊಂಚಹೊತ್ತು ಬಿಟ್ಟುಕೊಂಡು ಬಂದಲ್ಲಿ ಹಣವನ್ನು ಕೊಡುತ್ತೇನೆಂದು ಹೇಳಿದನು. ಆಕೆಯು ಅದೇಪ್ರಕಾರ ೧—೨ ಗಂಟೆಯನ್ನು ಬಿಟ್ಟುಕೊಂಡು ಬಂದಳು. ಮಾರ್ವಾಡಿಯು ತಾನು ಮೊದಲು ಪರೀಕ್ಷಿಸಿದ್ದ ನಗಗಳೇ ಎಂದು ಪರೀಕ್ಷಿಸಿ ಅವುಗಳನ್ನಿಟ್ಟುಕೊಂಡು ಹಣವನ್ನು ಕೊಟ್ಟು ಕಳುಹಿದನು. ಅವಳು ಹೋದ ಸ್ವಲ್ಪ ಹೊತ್ತಿನಲ್ಲಿ ಮತ್ತೊಬ್ಬ ಮಾರ್ವಾಡಿಯು ಬಂದು ಆ ನಗಗಳನ್ನು ನೋಡಿ, ಅವು ಚಿನ್ನದ ಗಿಲೀಟುಮಾಡಿದ ಹಿತ್ತಾಳೆಯ ನಗವೆಂದು ಹೇಳಲು ಅವನು ಬಿಗಿಲಬಿದ್ದು ಆಕೆಯು ವಾಸಮಾಡುತ್ತಿದ್ದ ಮನೆಗೆ ಬಂದು ನೋಡುವಲ್ಲಿ ಆ ಹೆಂಗಸು ಮತ್ತು ಗಂಡಸರಿಬ್ಬರು ಕಾಣಬರಲಿಲ್ಲವಾಗಿ ಕೂಡಲೆ ಅವರನ್ನು ಹುಡುಕಲು ಓಡಿಬರುತ್ತಿರುವಾಗ್ಗೆ ಒಂದು ಬಂಡಿಗೆ ಆ ಮೂವರು ಪದಾರ್ಥಗಳನ್ನು ತುಂಬುತ್ತಿರುವುದನ್ನು ಕಂಡು ಕೂಗಿಕೊಂಡನು. ಆಗ ಪೋಲೀಸರು ಬಂದು ಅವರನ್ನು ಹಿಡಿದು ಸೆರೆಯಲ್ಲಿಟ್ಟು ವಿಚಾರಣೆ ಮಾಡುತ್ತಿರುವರು ಈ ಮೂರು ಜನರು ವರ್ತಕರಿಗೆ ವಾಸ್ತವವಾದ ನಗಗಳನ್ನು ಮೊದಲು ತೋರಿಸಿ ಬುದ್ಧಿಯು ತಪ್ಪೆಂದು ಹೇಳಿ ಹೊರಟು ಬಂದು ತನ್ನ ಗಂಟಿನೊಳಗಿಟ್ಟಿರುವ ಗಿಲೀಟಿನ ನಗಗಳನ್ನು ಹೊರಗೆ ತೆಗೆದುಕೊಂಡು ಕೊಂಚಹೊತ್ತು ಬಿಟ್ಟು ಪುನಃ ಬಂದು ಅವನ್ನಿಟ್ಟು ಹಣವನ್ನು ತೆಗೆದುಕೊಂಡು ಹೋಗುತ್ತಿದ್ದರು. ಈ ಪ್ರಕಾರ ಇದುವರೆಗೆ ಅನೇಕ ಮಾರ್ವಾಡಿ ವರ್ತಕರಿಗೆ ಮೋಸಪಡಿಸಿ ೨೦೦೦ ರೂಪಾಯಿಗಳನ್ನು ಸಂಪಾದಿಸಿದ್ದರು.

ಮೈಸೂರ್ ಗೆಜೆಟ್ ಸಂಗ್ರಹ.

ಕುಣಿಗಲ್ ತಾ|| ಅಮಲ್ದಾರ್ ಮೆ|| ಎಚ್. ಪಿ. ಗಂಗಾಧರಪ್ಪ ಬಿ. ಎ. ಯವರಿಗೆ ೧೯೧೧ ನೆಯ ಸೆಪ್ಟೆಂಬರ್ ತಾ|| ೧ ರಿಂದ ೨ ತಿಂಗಳು ಮತ್ತು ೨೦ ದಿವಸಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವ ಪ್ರಯುಕ್ತ ಮೆ|| ಗಂಗಾಧರಪ್ಪನವರು ೧೯೧೧ ನೆಯ ಆಗಸ್ಟ್ ತಿಂಗಳಲ್ಲಿ ಸರ್ವೆ ಟ್ರೇನಿಂಗಿಗೆ ಹೋಗಿದ್ದಾಗ್ಗೆ ಬದಲು ನೋಡುತ್ತಿದ್ದ ಕುಣಿಗಲ್ಲಿನ ಸಬ್ ರಿಜಿಸ್ಟ್ರಾರ್ ಮೆ|| ಬಿ. ಅನಂತಾಚಾರ್ಯರು ಕುಣಿಗಲ್ ತಾ|| ಅಮಲ್ದಾರರಾಗಿಯೂ, ೨ ನೆಯ ತಾ|| ಮ್ಯಾಜಿಸ್ಟ್ರೇಟರಾಗಿಯೂ ಬದಲು ನೋಡುತ್ತಿರುವರು.

ಮೈಸೂರ ಸೀಮೆಯ ಸೆನ್ಸಸ್ ಸೂಪರಿಂಟೆಂಡೆಂಟರಿಗೆ ಅಸಿಸ್ಟೆಂಟರಾದ ಮೆ|| ಎ. ಮೃತ್ಯುಂಜಯ ಅಯ್ಯರ್ ಬಿ. ಎ., ಯವರಿಗೆ ಕೊಡಲ್ಪಟ್ಟಿದ್ದ ೩ ತಿಂಗಳ ರಜವು ಇನ್ನೂ ೩ ವಾರಗಳಿಗೆ ಹೆಚ್ಚಿಸಲ್ಪಟ್ಟಿರುತ್ತದೆ. ಮೊದಲು ಅಪ್ಪಣೆಯಾಗಿರುವ ಬದಲು ಏರ್ಪಾಟು ನಡೆದುಕೊಂಡು ಬರುವುದು.

೧೯೧೧ ನೆಯ ತಾ|| ಸೆಪ್ಟೆಂಬರ್ ತಾ|| ೩ ರಲ್ಲಿ ಉದ್ಯೋಗದಿಂದ ನಿವೃತ್ತರಾಗಲಪ್ಪಣೆಮಾಡಲ್ಪಟ್ಟಿರುವ ಮೆ|| ಸದಾಶಿವಂಪಿಳ್ಳೆಯವರ ಬದಲು ಚಿತ್ರಕಲ್ ದುರ್ಗ ಡಿ|| ಆಕ್ಟಿಂಗ್ ಶಿರಸ್ತೇದಾರ್ ಮೆ|| ಕೆ. ವೇದಾಂತಯ್ಯಂಗಾರ್, ಬಿ. ಎ., ಯವರು ಪಗಲೂರು ತಾ|| ಆಕ್ಟಿಂಗ್ ಅಮಲ್ದಾರರಾಗಿಯೂ ೩ ನೆಯ ತಾ|| ಮ್ಯಾಜಿಸ್ಟ್ರೇಟರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಮಂಡ್ಯ ತಾ|| ಆಕ್ಟಿಂಗ್ ಅಮಲ್ದಾರ್ ಮತ್ತು ೩ ನೆಯ ತಾ|| ಮ್ಯಾಜಿಸ್ಟ್ರೇಟ್ ಮೆ|| ಸಿ. ರಾಮಚಂದ್ರರಾವ್, ಬಿ. ಎ., ಬಿ. ಎಲ್., ರವರು ಆ ತಾಲ್ಲೋಕು ಛಾರ್ಜಿನಲ್ಲಿರುವವರಿಗೂ ಅನಿತ್ಯವಾಗಿ ೨ ನೆಯ ತಾ|| ಮ್ಯಾಜಿಸ್ಟ್ರೇಟರಾಗಿರತಕ್ಕದು

ಮೆ|| ಸಿ. ರಾಮರಾಯರು ಸ್ಪೆಷಲ್ ಮ್ಯಾಜಿಸ್ಟ್ರೇಟರುದ್ಯೋಗವನ್ನು ಪರಿತ್ಯಜಿಸಿರುತ್ತಾರಾದ ಪ್ರಯುಕ್ತ, ಅಮಲ್ದಾರುದ್ಯೋಗದಿಂದ ನಿವೃತ್ತರಾಗಿರುವ ಮೆ|| ಟಿ. ವೆಂಕಟರಾಮಯ್ಯನವರು ಬೆಂಗಳೂರ ಪಟ್ಟಣದ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ಗುಬ್ಬಿ ಸಬ್ ಡಿವಿಜನ್ನಿನ ಅ|| ಕಮಿಷನರ್ ಮತ್ತು ೨ ನೆಯ ತಾ|| ಮ್ಯಾಜಿಸ್ಟ್ರೇಟರಾದ ಮೆ|| ಎ. ಕೆ. ಸಯ್ಯದ್ ಟಾಜ್ ಪೀರಾನ್, ಬಿ. ಎ., ಯವರು ೧ ನೆಯ ತಾ|| ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟು ಸಾಕ್ಷಿಗಳ ಹೇಳಿಕೆಯನ್ನು ಇಂಗ್ಲೀಷ್ ಭಾಷೆಯಲ್ಲಿ ತಮ್ಮ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳುವಂತೆ ಅಪ್ಪಣೆಮಾಡಲ್ಪಟ್ಟಿರುತ್ತಾರೆ.

ಚಿಕ್ಕಮಗಳೂರಿನ ಆಕ್ಟಿಂಗ್ ಅಮಲ್ದಾರರಾದ ಮೆ|| ಭೀಮರಾಯರು ಕೊಪ್ಪ ತಾ|| ಆಕ್ಟಿಂಗ್ ಅಮಲ್ದಾರರಾಗಿಯೂ, ಚೆನ್ನಪಟ್ಟಣ ತಾ|| ಆಕ್ಟಿಂಗ್ ಅಮಲ್ದಾರ್ ಮೆ|| ಎ. ಗೋಪಾಲಯ್ಯಂಗಾರ್, ಬಿ. ಎ., ಯವರು ಚಿಕ್ಕಮಗಳೂರಿನ ಆಕ್ಟಿಂಗ್ ಅಮಲ್ದಾರರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಮೈಸೂರ್ ಸ್ಟಾರ್

೧೯೧೧ ನೆಯ ಇಸವಿ ಸೆಪ್ಟಂಬರ್ ತಾ|| ೧೧ ನೇ ಸೋಮವಾರ

ಮೈಸೂರ ಸಂಸ್ಥಾನದ ೧೯೧೧-೧೨ ರ ಆಯವ್ಯಯವು.

ಸಂಸ್ಥಾನದ ಅರ್ಥಶಾಖೆಯ ಸೆಕ್ರೆಟರಿಗಳಾದ ಮ|| ಜಿ. ಎಸ್. ಚಕ್ರವರ್ತಿಯವರು ನಡೆಯುವ ೧೯೧೧-೧೨ ನೆಯ ವರ್ಷದ ಆಯವ್ಯಯದ ಲೆಕ್ಕವನ್ನು ಸಿದ್ಧಗೊಳಿಸಿ ಅದಕ್ಕೆ ಶ್ರೀಮನ್ಮಹಾರಾಜರವರ ಅಂಗೀಕಾರವನ್ನು ಪಡೆದು, ಕಳೆದ ತಾ|| ೬ ನೆಯ ಬುಧವಾರದ ಗೆಜಿಟ್ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ.

೧೯೧೧-೧೨ ರಲ್ಲಿ ಸಂಸ್ಥಾನದಲ್ಲಿ ಒಟ್ಟು ೨,೩೪,೮೦,೦೦೦ ರೂ. ಆಯವೂ, ೨,೩೮,೬೯,೦೦೦ ರೂ. ವ್ಯಯವೂ ಆಗಿ ೩,೮೯,೦೦೦ ರೂ. ಕಡಿಮೆಬರುವುದೆಂದು ನಿರೀಕ್ಷಿಸಲ್ಪಟ್ಟಿದೆ. ಹಿಂದಣ ವರ್ಷದಂತೆ ಒಟ್ಟು ಆಯದಲ್ಲಿ ವ್ಯಯವಾದುದು ಹೋಗುತ ಹಣವು ಮಿಗುವುದಕ್ಕೆ ಬದಲಾಗಿ ಈ ವರ್ಷದಲ್ಲಿ ಹೀಗೆ ವ್ಯಯವೇ ಜಾಸ್ತಿಯಾಗಲು, ಕೆಲ ಆವಶ್ಯಕವಾದ ಸಂದರ್ಭಗಳಲ್ಲಿ ಹೆಚ್ಚು ವ್ಯಯಕ್ಕೆ ಅವಕಾಶವನ್ನುಂಟುಮಾಡಬೇಕಾಗಿ ಬಂದುದೇ ಕಾರಣವೆಂದೂ ಮತ್ತೂ ಈ ಸಂದರ್ಭದಲ್ಲಿ ಆಯವ್ಯಯವನ್ನು ಸಮವಾಗುವಂತೆ ಮಾಡಲುತಾವು ಅಸಮರ್ಥರಾದುದರಿಂದ ಸಂಸ್ಥಾನದ ಉತ್ಪತ್ತಿಯ ಅಭಿವೃದ್ಧಿಗೆ ಅವಕಾಶವು ತಪ್ಪಿರುವುದೆಂದು ತಿಳಿಯಬಾರದೆಂದೂ ಸೆಕ್ರೆಟರಿಯವರು ತಿಳಿಸಿರುತ್ತಾರೆ. ಡಿಲ್ಲಿಯಲ್ಲಿ ನಡೆಯುವ ಕಿರೀಟಧಾರಣ ಮಹೋತ್ಸವ ಸಂಬಂಧವಾಗಿಯೂ, ಈಗ ಈ ಸೀಮೆಯ ಸಂಪದಭಿವೃದ್ಧಿಗಾಗಿ ಏರ್ಪಡಿಸಲ್ಪಟ್ಟಿರುವ ಸಂಘಗಳಿಗೆ ಸಂಬಂಧಪಟ್ಟ ಕಾರ್ಯಗಳಿಗಾಗಿಯೂ ಮಾಡಬೇಕಾಗಿರುವ ವ್ಯಯವೇ ಹೆಚ್ಚು ವೆಚ್ಚಕ್ಕೆ ಅವಕಾಶವಾಯಿತೆಂಬುದು ಅವರಭಿಪ್ರಾಯವಾಗಿರುವುದು. ಈ ವರ್ಷದ ಆಯವ್ಯಯಕ್ಕೂ ಹಿಂದಣ ಎರಡು ವರ್ಷಗಳ ಆಯವ್ಯಯಕ್ಕೂ ಇರುವ ವ್ಯತ್ಯಾಸವನ್ನು ತೋರಿಸುವುದಕ್ಕಾಗಿ ೧೯೦೯-೧೦ ಮತ್ತೂ ೧೯೧೦-೧೧ ರ ಲೆಕ್ಕಗಳನ್ನು ಸಂಕ್ಷೇಪವಾಗಿ ಈ ಪಟ್ಟಿಯಲ್ಲಿ ಕೊಟ್ಟಿರುವರು

೧೯೦೯-೧೦ ರಲ್ಲಿ ೨,೩೨,೯೬,೦೦೦ ರೂ. ಆಯವೂ, ೨,೩೨,೬೮,೦೦೦ ರೂ. ವ್ಯಯವೂ ಆಗಿ ೨೮,೦೦೦ ರೂ. ಮಿಗುವುದೆಂದು ಆದಿಭಾಗದಲ್ಲಿ ನಿರೀಕ್ಷಿಸಲ್ಪಟ್ಟಿದ್ದು ಕಡೆಯಲ್ಲಿ ೨೧,೩೬,೦೦೦ ರೂ. ಹೆಚ್ಚಾಗುಳಿದಿತು. ಹೀಗೆ ಹೆಚ್ಚು ಉಳಿಯಲು ಕಾವೇರಿಯ ವೈದ್ಯುತಶಕ್ತಿ ಶಾಖೆಯಲ್ಲಿ ೬೯೯೦೦೦ ರೂ. ಮಿಕ್ಕದುದೇ ಕಾರಣವಾಗಿರುತ್ತದೆ.

೧೯೧೦-೧೧ ರಲ್ಲಿ ೨,೧೦,೯೮,೦೦೦ ರೂ. ಆಯವೂ, ೨,೦೯,೬೯,೦೦೦ ರೂ. ವ್ಯಯವೂ ಆಗಿ ೧,೨೯,೦೦೦ ರೂ. ಉಳಿಯುವುದೆಂದು ಮೊದಲು ನಿರೀಕ್ಷಿಸಲ್ಪಟ್ಟಿದ್ದು ಕಡೆಯಲ್ಲಿ ೨,೩೧,೦೩,೦೦೦ ರೂ. ಆಯವೂ, ೨,೧೧,೮೦,೦೦೦ ರೂ. ವ್ಯಯವೂ ಆಗಿ ೧೯,೨೩,೦೦೦ ರೂ. ಉಳಿದಿತು. ಎಂದರೆ ನಿರೀಕ್ಷಿತವಾಗಿದ್ದುದಕ್ಕಿಂತ ೧೭,೯೪,೦೦೦ ರೂ. ಹೆಚ್ಚಾಗುಳಿದಿತು. ಹೀಗೆ ಆಯವು ಹೆಚ್ಚಿದುದಕ್ಕೆ ಭೂಕಂದಾಯದಲ್ಲಿ ೩,೬೦,೦೦೦ ಕಾಡಿನಲ್ಲಿ ೩,೭೩,೦೦೦, ಮಾದಕ ಪದಾರ್ಥಗಳಲ್ಲಿ ೧,೪೯,೦೦೦ ಚಿನ್ನದ ಗಣಿಗಳಲ್ಲಿ ೩,೪೮,೦೦೦ ಬಡ್ಡಿಯಲ್ಲಿ ೧,೩೪,೦೦೦ ಮರಹನ್ಮತ್ತುಕೆಲಸಗಳಲ್ಲಿ ೧,೩೭,೦೦೦ ರೂ. ಗಳು ಹೆಚ್ಚು ಉತ್ಪತ್ತಿಯಾದುದೇ ಕಾರಣವಾಗಿದೆ. ಈ ಸಂವತ್ಸರದಲ್ಲಿ ಕಾಲಸ್ಥಿತಿಯು ಅನುಕೂಲವಾಗಿದ್ದ ಪ್ರಯುಕ್ತ ೧೯೦೮-೦೯ ರಲ್ಲಿ ಎತ್ತದೆ ನಿಲ್ಲಿಸಲ್ಪಟ್ಟಿದ್ದ ಕಂದಾಯವನ್ನು ಹೆಚ್ಚಾಗಿ ಬರಮಾಡಿಕೊಳ್ಳಲನುಕೂಲವಾಯಿತು. ಇದರಂತೆ ೧೯೧೧-೧೨ ರಲ್ಲೂ ಮತ್ತೂ ಅದರ ಮುಂದಕ್ಕೂ ಕಾಲಸ್ಥಿತಿಯು ಅನುಕೂಲವಾಗಿ ನಡೆದುಕೊಂಡು ಬರುವ ಪಕ್ಷದಲ್ಲಿ, ಈಗ ನಿಂತಿರುವ ಬಾಕಿ ಹಣದಲ್ಲಿ ಪ್ರತಿವರ್ಷದಲ್ಲೂ ಒಂದೊಂದು ಭಾಗವನ್ನಾಗಿತ್ತಿ ಬಹುವಾಗಿ ಕಡಿಮೆಮಾಡಬಹುದೆಂದು ಸೆಕ್ರೆಟರಿಯವರು ತಿಳಿಸಿರುತ್ತಾರೆ. ಈ ಸಂವತ್ಸರದಲ್ಲಿ ಗಂಧದ ಮರದ ಮಾರಾಟವು ಹಿಂದಣ ಎರಡುವರ್ಷಗಳಿಗಿಂತಲೂ ಚೆನ್ನಾಗಿ ನಡೆದುದರಿಂದ, ಕಾಡಿನಶಾಖೆಯುತ್ಪತ್ತಿಯು ಹೆಚ್ಚಿರುವುದು. ಈ ಸಂವತ್ಸರದಲ್ಲಿ ಮಾದಕಪದಾರ್ಥವಾದ ಸಾರಾಯಿಯ ಮಾದಕಶಕ್ತಿಯನ್ನು ಕಡಿಮೆಮಾಡಿದುದಲ್ಲದೆ, ಅದರ ಬೆಲೆಯನ್ನು ಕಡಿಮೆಮಾಡಿದುದರಿಂದ ಉತ್ಪತ್ತಿಯು ಕಡಿಮೆಯಾಗುವುದೆಂದು ನಿರೀಕ್ಷಿಸಲ್ಪಟ್ಟಿದ್ದಿತು, ಆದರೆ ಕಡೆಯಲ್ಲಿ ಆ ನಿರೀಕ್ಷಣೆಗಿಂತ ೧,೪೯,೦೦೦ ರೂ. ಹೆಚ್ಚಾಗುತ್ಪತ್ತಿಯಾಯಿತು. ಚಿನ್ನದ ಗಣಿಗಳ ಕಂಪೆನಿಯವರು ಹೆಚ್ಚು ರಾಜಾದಾಯವನ್ನು ಕೊಡಲೊಪ್ಪಿರುವುದರಿಂದ, ಅದರುತ್ಪತ್ತಿಯೂ ಹೆಚ್ಚಾಗಿರುವುದು. ಅರಮನೆಗೆ ವಿಕ್ರಯಿಸಲ್ಪಟ್ಟ ಸರ್ಕಾರಿ ಕಟ್ಟಡಗಳುತ್ಪತ್ತಿಯೂ, ಸಿಲೇದಾರರ ಮತ್ತೂ ಸಿಪಾಯಿಗಳ ಸಾಲ್ಗೇರಿಗಳಿಗಾಗಿ ತೆಗೆದಿಡಲ್ಪಟ್ಟಿದ್ದ ೮೧,೦೦೦ ರೂ. ಗಳು ಮರಹನ್ಮತ್ತು ಶಾಖೆಗೆ ಜಮೆಸಲ್ಪಟ್ಟುದರಿಂದ, ಆ ಶಾಖೆಯುತ್ಪತ್ತಿಯು ಹೆಚ್ಚಲವಕಾಶವಾಯಿತು. ಆದರೆ ಲೋಹಮಾರ್ಗದುತ್ಪತ್ತಿಯು ಮಾತ್ರ ನಿರೀಕ್ಷಿತವಾಗಿದ್ದುದಕ್ಕಿಂತ ೪೩ ಸಾವಿರ ರೂ. ಕಡಿಮೆಯಾಗಿದ್ದಿತು. ಜನರು ಹೆಚ್ಚಾಗಿ ಪ್ರಯಾಣವನ್ನು ಮಾಡಲು ವಿಶೇಷ ಸಂದರ್ಭಗಳೇನೂ ನಡೆಯದಿದ್ದುದರಿಂದಲೂ, ಈ ವರ್ಷದಲ್ಲಿ ಸಂಸ್ಥಾನದ ಬಹುಭಾಗದಲ್ಲಿ ಪ್ಲೇಗುರೋಗವು ಪ್ರಾಪ್ತವಾಗಿದ್ದುದರಿಂದಲೂ, ಕೋಲಾರದ ಗಣಿಗಳಿಗೆ ಕಲ್ಲಿದ್ದಲು ಬಹು ಕಡಿಮೆಯಾಗಿಯೂ, ಶಿವಮೊಗ್ಗೆಯ ಗಣಿಗಳಿಂದ ಮ್ಯಾಂಗನೀಸು ಲೋಹವು ಕಡಿಮೆಯಾಗಿಯೂ ಸಾಗಿಸಲ್ಪಟ್ಟುದರಿಂದಲೂ ಲೋಹಮಾರ್ಗದುತ್ಪತ್ತಿಯು ಕಡಿಮೆಯಾಗಬೇಕಾಗಿ ಬಂದಿತು. ವೈದ್ಯುತಶಕ್ತಿಯ ೧೩,೭೩,೦೦೦ ರೂ. ಉತ್ಪತ್ತಿಯು ಮತ್ತೂ ೮,೨೭,೦೦೦ ರೂ. ವ್ಯಯವೂ ಮೇಲೆ ಹೇಳಿದ ಆಯವ್ಯಯದ ಕೂಡ ಸೇರಿಸಲ್ಪಡುವುದರಿಂದ ಈ ವರ್ಷದ ಒಟ್ಟು ಆಯವು ೨,೩೬,೭೯,೦೦೦ ರೂ. ಮತ್ತೂ ವ್ಯಯವು ೨,೨೦,೪೭,೦೦೦ ರೂ. ಗಳಾಗಿ ೨೪,೩೨,೦೦೦ ರೂ. ಉಳಿಯುವುದು.

೧೯೧೧-೧೨ ರಲ್ಲಿ ಭೂಕಂದಾಯದಿಂದ ೧,೨೦,೦೦,೦೦೦ ಕಾಡಿನುತ್ಪತ್ತಿಯಿಂದ ೧೮,೩೦,೦೦೦ ಲೋಹಮಾರ್ಗಗಳಿಂದ ೧೦,೪೧,೦೦೦ ರೂ. ಗಳು ಬರಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಹರಿಹರದಿಂದ ಮೈಸೂರವರೆಗೆ ಆಗುವ ೧೦೦ ಮೈಲಿ ದೂರದವರೆಗೆ ೬೦ ಪೌಂಡ್ ತೂಕದ ಕಂಬಿಗಳನ್ನು ಹಾಕಲು ೩೧,೦೦೦, ಸಿಂಷಾ ನದಿಗೆ ಕಬ್ಬಿಣದ ಸೇತುವೆಯನ್ನು ಕಟ್ಟಲು ೧,೩೪,೦೦೦, ಮೈಸೂರ ಸ್ಟೇಷನ್ನಿನ ಪ್ಲಾಟ್‌ಫಾರಮ್ಮಿಗೆ ಮೇಲುಹೊದ್ದಿಕೆಯನ್ನು ಹಾಕಲು ೨,೨೦೦, ಮೈಸೂರು ಸ್ಟೇಷನ್ ಪಕ್ಕಗಳಲ್ಲಿ ಮರವನ್ನು ನಿಲ್ಲಿಸುವುದಕ್ಕಾಗಿ ೧೨,೦೦೦, ಮೇಲೆ ಹೊದ್ದಿಸಲ್ಪಟ್ಟ ೬೮ ವಾಗನ್ನುಗಳಿಗೆ ೩೦,೦೦೦, ಮೂರನೆ ತರಗತಿಯ ಪ್ರಯಾಣಿಕರ ಬಂಡಿಗಳಲ್ಲಿ ವ್ಯಾಕ್ಯುಂಬ್ರೇಕನ್ನು ಮಡಗಿ ಪ್ರತಿಯೊಂದು ಬಂಡಿಗೂ ಸಂಬಂಧಿಸುವುದಕ್ಕಾಗಿ ೬೦೦೦, ಮೂರನೆಯ ತರಗತಿಯ ೪ ಬಂಡಿಗಳು ಮತ್ತೂ ೧ ಬ್ರೇಕಿರುವುದಕ್ಕೆ ಸಹ ೬೧,೬೦೦ ಒಟ್ಟು ೨,೯೨೦೦೦ ರೂ. ಗಳು ವ್ಯಯಮಾಡಲ್ಪಡತಕ್ಕವಾಗಿರುವುದು. ಸರ್ಕಾರಿಯ ಇಂಗ್ಲೀಷ್ ಸ್ಕೂಲುಗಳಲ್ಲಿ ಪುಸ್ತಕಭಂಡಾರಗಳಿಗಾಗಿಯೂ ಭೌತಿಕ ಮತ್ತೂ ವಸ್ತುನಿರ್ಣಯಶಾಸ್ತ್ರ ಬೋಧನೆಗೆ ಆವಶ್ಯಕವಾದ ಯಂತ್ರೋಪಕರಣಗಳಿಗಾಗಿಯೂ, ಮೈಸೂರ ನಾರ್ಮಲ್ ಸ್ಕೂಲಿನಲ್ಲಿ ಇಂಗ್ಲೀಷ್ ಸ್ಕೂಲುಗಳ ಉಪಾಧ್ಯಾಯರುಗಳಿಗೆ ಬೋಧನ ಕ್ರಮವನ್ನು ಹೇಳಿಕೊಡಲು ಇಂಗ್ಲೀಷ್ ತರಗತಿಯನ್ನು ಆರಂಭಿಸುವುದಕ್ಕಾಗಿಯೂ, ಮೈಸೂರಮಹಾರಾಜಾ ಕಾಲೇಜಿಗೆ ಅವಶ್ಯಕವಾದ ಪುಸ್ತಕಗಳನ್ನು ಮತ್ತೂ ಕುರ್ಚಿ ಬೆಂಚು ಮೊದಲಾದ ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕಾಗಿಯೂ, ರಾಬರ್ಟ್‌ಸನ್ ಪೇಟೆಯಲ್ಲಿ ಹೆರಿಗೆಯಾಸ್ಪತ್ರೆಯನ್ನು ಕಟ್ಟಲು, ಮೈಸೂರ ಸೀಮೆಯಲ್ಲಿ ಹಾಲನ್ನು ಕೊಡುವ ಹಸುಗಳಭಿವೃದ್ಧಿಯ ಉಪಾಯವನ್ನು ಕಂಡುಹಿಡಿಯಲು ಗೊತ್ತುಮಾಡಲ್ಪಟ್ಟಿರುವ ಕಮಿಟಿಯವರು ವ್ಯಯಮಾಡಲು, ಹೆಬ್ಬಾಳದಲ್ಲಿರುವ ಮಾದರಿಯಹೊಲವನ್ನು ಹೆಚ್ಚಿಸಲು, ಭತ್ತದ ಮತ್ತೂ ಜೋಳದ ಪೈರುಗಳಿಗೆ ಬೀಳುವ ಹುಳುಗಳ ನಿವಾರಣೋಪಾಯವನ್ನು ಕಂಡುಹಿಡಿಯಲು, ಪರಸ್ಪರ ಸಹಾಯಕ ಸಂಬಂಧವಾದ ಮಾಸಿಕ ಪುಸ್ತಕವನ್ನು ಹೊರಡಿಸಲು ವ್ಯಯವಾಗಬೇಕಾಗಿರುವ ಹಣವು ಗೊತ್ತುಮಾಡಲ್ಪಟ್ಟಿರುತ್ತದೆ. ಮರಹಮತ್ತು ಕೆಲಸಗಳಿಗಾಗಿ ೩೦ ಲಕ್ಷ ರೂ. ಗಳು ಗೊತ್ತುಮಾಡಲ್ಪಟ್ಟಿರುತ್ತವೆ. ಈ ಹಣದಿಂದ ಮಾಡಲ್ಪಡುವ ಮುಖ್ಯ ಕಾರ್ಯಗಳಲ್ಲಿ ಬೆಂಗಳೂರಲ್ಲಿ ೩,೪೦,೦೦೦ ರೂ. ಗಳನ್ನೂ, ಹಾಸನದಲ್ಲಿ ೨೦,೦೦೦ ರೂ. ಮುಟ್ಟಸಿ ಹೈಸ್ಕೂಲುಗಳನ್ನು ಕಟ್ಟಿಸುವುದು ಬೆಂಗಳೂರಿಂದ ಮೈಸೂರಿಗೆ ೧೨,೦೦೦ ರೂ. ವ್ಯಯದಿಂದ ಟೆಲಿಫೋನ್ ತಂತಿಯನ್ನು ಹಾಕುವುದು, ೪೦,೦೦೦ ರೂ. ಯಿಂದ ಗತಿಸಿದ ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರ ಪ್ರತಿಮೆಯ ಮೇಲ್ಭಾಗದಲ್ಲಿ ಅಮೃತಶಿಲೆಯಿಂದ ಛತ್ರವನ್ನು ನಿರ್ಮಿಸುವುದು ಮುಖ್ಯವಾದುವುಗಳೂ. ಲೋಕಲ್ ಫಂಡಿನಲ್ಲಿ ಗ್ರಾಮದ ಪಾಠಶಾಲೆಗಳಿಗಾಗಿ ೪೦,೦೦೦ ರೂ. ವ್ಯಯಮಾಡಲ್ಪಡುವುದು.

೧೯೧೧ ನೆಯ ಜುಲೈ ತಾ|| ೧ ರಲ್ಲಿ ಸಂಸ್ಥಾನದ ಖಜಾನೆಗಳಲ್ಲಿ ಮತ್ತೂ ಭರತಖಂಡದಲ್ಲೂ, ಇಂಗ್ಲೆಂಡಿನಲ್ಲೂ ಇರುವ ಬ್ಯಾಂಕುಗಳಲ್ಲಿ ೩೪,೩೮,೬೩೪ ರೂ. ಇದ್ದಿತು ಮತ್ತೂ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ ಅಡ್ವಾನ್ಸು ಮೊದಲಾದುದು ಸೇರಿ ೧೯೧೨ ನೆಯ ಜುಲೈ ತಾ|| ೧ ರಲ್ಲಿ ೮೦,೨೩,೦೦೦ ರೂ. ಬಾಕಿ ಇರುವುದಾಗಿ ನಿರೀಕ್ಷಿಸಲ್ಪಟ್ಟಿದೆ. ಕ್ಷಾಮನಿವಾರಣ ಫಂಡಿಗೆ ೨,೦೦,೦೦೦, ಸಂಸ್ಥಾನದ ಸಾಲವನ್ನು ತೀರಿಸಲು ಏರ್ಪಟ್ಟಿರುವ ಫಂಡಿಗೆ ೧,೫೩,೦೦೦ ಮತ್ತೂ ವೈದ್ಯುತಶಕ್ತಿಯ ಡಿಪ್ರಿಸಿಯೇಷನ್ ಫಂಡಿಗೆ ೨,೫೮,೦೦೦ ರೂ. ಗಳು ಸೇರಿಸಲ್ಪಟ್ಟಿರುವುದು ಮೇಲೆ ಕೊಟ್ಟಿರುವ ಒಟ್ಟು ವ್ಯಯದಲ್ಲಿ ಸೇರಿರುತ್ತದೆ.

ಈ ಸಂವತ್ಸರದಲ್ಲಿ ಆಯಕ್ಕಿಂತಲೂ ವ್ಯಯವು ಹೆಚ್ಚಾಗಿ ೩,೮೯,೦೦೦ ರೂ. ವರೆಗೆ ಕಡಿಮೆ ಬರಲು ಕಾರಣವು ಮೊದಲೇ ಹೇಳಲ್ಪಟ್ಟಿರುತ್ತದೆ. ಅರ್ಥಶಾಖೆಯ ಸೆಕ್ರೆಟರಿಯವರು ೧೯೧೧-೧೨ ರಲ್ಲಿ ಮಳೆ ಬೆಳೆಯು ಚೆನ್ನಾಗಿ ನಡೆಯುವುದೆಂಬ ನಿರೀಕ್ಷಣೆಯಿಂದ ಕಳೆದವರ್ಷದ ಲೆಕ್ಕವನ್ನನುಸರಿಸಿ ಈ ವರ್ಷದ ಲೆಕ್ಕವನ್ನು ಸಿದ್ಧಪಡಿಸಿರುವರು. ದೈವಾನುಗ್ರಹದಿಂದ ಅವರ ನಿರೀಕ್ಷಣೆಯಂತೆ ಎಲ್ಲವೂ ಸುಭಿಕ್ಷವಾಗಿದ್ದರೆ ಸರಿ, ಇಲ್ಲದಿದ್ದಲ್ಲಿ ಆಯವು ಕಡಿಮೆಯಾಗಿ ವ್ಯಯವು ವಿಪರೀತವಾಗಿ ಹೆಚ್ಚಿ ಹಿಂದಣ ಸಂವತ್ಸರಗಳಿಂದಲೂ ಕೂಡಿಟ್ಟಿರುವ ಹಣವನ್ನು ಮುಗಿಸಬೇಕಾಗುತ್ತದೆ. ಆದರೆ ಅಂತಹ ದುಷ್ಕಾಲವು ಮಾತ್ರ ಪ್ರಾಪ್ತವಾಗಬಾರದೆಂದು ಪ್ರತಿಯೊಬ್ಬರೂ ಹಾರೈಸುತ್ತಿದ್ದರೂ, ಪ್ರಕೃತದಲ್ಲಿ ಸಂಸ್ಥಾನದ ಬಹುಭಾಗದಲ್ಲೂ, ಜೋರಗೂ ಸುತರಾಂ ಮಳೆಯಿಲ್ಲದೆ ನಿಂತಿರುವ ಪೈರು ಒಣಗುತ್ತ ದನಕರುಗಳು ಕುಡಿಯುವ ನೀರಿಗೂ, ತಿನ್ನುವ ಮೇವಿಗೂ ಅಭಾವವಾಗಿ, ದಿನಸಿಯ ಧಾರಣೆಯು ಪ್ರತಿನಿತ್ಯದಲ್ಲೂ ಏರುತ್ತಿರುವುದರಿಂದ, ಎಲ್ಲರ ಮನಸ್ಸಿನಲ್ಲೂ ಭಯೋತ್ಪಾತವಾಗಿದೆ. ಸಂಸ್ಥಾನದ ಸಂಪದಭಿವೃದ್ಧಿಗೆ ಕಾರಣವಾದ ಬೇಸಾಯ ಕೈಗಾರಿಕೆ ಮೊದಲಾದ ಕಾರ್ಯಗಳಿಗೂ, ಸಂಸ್ಥಾನದ ಬಹುಭಾಗದಲ್ಲಿ ಹರಡಿಕೊಂಡು ವಿಶೇಷ ಪ್ರಾಣನಷ್ಟವನ್ನುಂಟುಮಾಡುತ್ತಿರುವ ಪ್ಲೇಗುಪದ್ರವ ನಿವಾರಣೋಪಾಯಕ್ಕಾಗಿಯೂ ಈಗ ಗೊತ್ತುಮಾಡಿರುವ ಹಣಕ್ಕಿಂತ ಇನ್ನೂ ಹೆಚ್ಚು ಹಣದ ವ್ಯಯಕ್ಕೆ ಅವಕಾಶವನ್ನುಂಟುಮಾಡಬೇಕಾಗಿದ್ದುದು ಅತ್ಯಾವಶ್ಯಕವಾಗಿದ್ದಿತು. ಸಂಸ್ಥಾನದ ಆಯವ್ಯಯದ ಲೆಕ್ಕದ ಪಟ್ಟಿಯು ಮುಂದಣ ಪ್ರಜಾಪ್ರತಿನಿಧಿಸಭೆಯು ಕೂಡುವುದಕ್ಕೆ ೧ ತಿಂಗಳ ಮೊದಲೇ ಪ್ರಕಟಿಸಲ್ಪಟ್ಟಿರುವ ಪ್ರಯುಕ್ತ ಇದರಲ್ಲಿರುವ ಅಂಶಗಳನ್ನು ಪ್ರತಿನಿಧಿಗಳು ಚೆನ್ನಾಗಿ ಮನದಟ್ಟುಮಾಡಿಕೊಂಡು ಇದರಲ್ಲಿ ಏನಾದರೂ ಹೆಚ್ಚು ಕಡಿಮೆಯ ಸಂದರ್ಭಗಳಿದ್ದರೆ, ಅವುಗಳನ್ನು ಸಭೆಯಲ್ಲಿ ಚರ್ಚಿಸಿ ಸರ್ಕಾರದವರ ಗಮನಕ್ಕೆ ತರುವವರಾಗಲೆಂದು ಇಚ್ಛಿಸುತ್ತೇವೆ.

ಹೊಸದಾಗಿ ನಿಯಮಿತರಾದ ಪ್ರೊಬೇಷನರುಗಳು.

ಮ|| ರಾ|| ಗಳಾದ ಎಚ್. ಎಂ. ಕೃಷ್ಣಸ್ವಾಮಿ, ಬಿ. ಎ., ಬಿ. ಎಲ್., ಎ. ಮಾಧವಯ್ಯಂಗಾರ್ ಬಿ. ಎ., ಟಿ. ವಿ. ಈಶ್ವರಂ, ಬಿ. ಎ., ಪಿ. ಎಸ್., ಪೂರ್ಣಯ್ಯ, ಬಿ. ಎ., ಜಿ. ಮಲ್ಲಿಕಾರ್ಜುನಯ್ಯ ಬಿ. ಎ, ಮ|| ಅಬ್ದುಲ್ ಅಜೀಜ್, ಬಿ. ಎ, ಮತ್ತೂ ಅಬ್ದುಲ್‌ಹಕ್ ಬಿ. ಎ., ಇವರುಗಳು ತಿಂಗಳೊಂದಕ್ಕೆ ೭೫ ರೂ. ಗಳ ಸಂಬಳದಮೇಲೆ ಪ್ರೊಬೇಷನರುಗಳಾಗಿ ನಿಯಮಿಸಲ್ಪಟ್ಟು, ಜುಡಿಷಿಯಲ್ ಕೆಲಸವನ್ನು ಕಲಿಯಲು ಮ|| ಕೃಷ್ಣಸ್ವಾಮಿಯವರು ಚೀಫ್‌ಕೋರ್ಟಿಗೂ, ರೆವಿನ್ಯೂ ಕೆಲಸವನ್ನು ಕಲಿಯಲು ಮ|| ಮಾಧವಯ್ಯಂಗಾರ್ ಮತ್ತೂ ಮ|| ಈಶ್ವರಂಯವರು ಬೆಂಗಳೂರ ಡಿ|| ಗೂ, ಮ|| ಪಿ. ಎಸ್ ಪೂರ್ಣಯ್ಯನವರು ತುಮಕೂರ ಡಿ|| ಗೂ, ಮ|| ಅಬ್ದುಲ್ ಹಕ್‌ರವರು ಕೋಲಾರ ಡಿ|| ಗೂ, ಮ|| ಜಿ. ಮಲ್ಲಿಕಾರ್ಜುನಯ್ಯ ಮತ್ತೂ ಮ|| ಅಬ್ದುಲ್ ಅಜೀಜ್‌ರವರುಗಳು ಮೈಸೂರ ಡಿ|| ಗೂ ಹಾಕಲ್ಪಟ್ಟಿರುತ್ತಾರೆ. ಇವರುಗಳು ಈ ಲಾಗಾಯಿತು ೨ ವರ್ಷಗಳ ಕಾಲದಲ್ಲಿ ಲೋಕಲ್ ಟೆಸ್ಟುಗಳ ಪರೀಕ್ಷೆಗಳನ್ನು ಕೊಟ್ಟಲ್ಲಿ ಅಮಲ್ದಾರರು ಅಥವಾ ಡಿ|| ಅಮಲ್ದಾರರುಗಳಾಗಿ ನಿಯಮಿಸಲ್ಪಡುವರು. ಈ ಪ್ರೊಬೇಷನರುಗಳಲ್ಲಿ ಮ|| ಎಚ್. ಎಂ. ಕೃಷ್ಣಸ್ವಾಮಿಯವರು ಮೈಸೂರ ಡಿ|| ಎಕ್ಸೈಜ್ ಅ|| ಕಮಿಷನರಾದ ಮ|| ಎಚ್. ಸೀತಾರಾಮಯ್ಯನವರ ಮಕ್ಕಳು; ಎ. ಮಾಧವಯ್ಯಂಗಾರರು ಮೈಸೂರ ಸರ್ಕಾರದಲ್ಲಿ ಡಿ|| ಕಮಿಷನರು, ಚೀಫ್ ಕೋರ್ಟ್ ಜಡ್ಜರು ಮತ್ತೂ ರೆವಿನ್ಯೂ ಕಮಿಷನರು ಈ ದೊಡ್ಡ ಅಧಿಕಾರಗಳನ್ನು ಮಾಡಿ ನಿವೃತ್ತಿಸುಖವನ್ನನುಭವಿಸುತ್ತಿರುವ ರಾಜಕಾರ್ಯಪ್ರವೀಣ ಮ|| ಎ. ರಂಗಸ್ವಾಮಯ್ಯಂಗಾರ್ ರಾವ್ ಬಹದ್ದೂರ್‌ರವರ ಮಕ್ಕಳು; ಟಿ. ವಿ. ಈಶ್ವರಂಯವರು, ಪ್ರಸಿದ್ಧ ಡಾಕ್ಟರರಾದ ಟಿ. ವಿ. ಅಮುರ್ಗಂ ಮೊದಲಿಯಾರರ ಕುಮಾರರು; ಪಿ. ಎಸ್. ಪೂರ್ಣಯ್ಯನವರು ರಾಜಧಾನಿಯ ಟವುನ್ ಮ್ಯಾಜಿಸ್ಟ್ರೇಟರಾದ ಮ|| ಪಿ. ಶ್ರೀನಿವಾಸರಾಯರ ಮಕ್ಕಳು; ಜಿ. ಮಲ್ಲಿಕಾರ್ಜುನಯ್ಯನವರು ಕೈ|| ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರರವರ ಕಾಲದಲ್ಲಿ ಅರಮನೆಯ ಗುರುಕಾರರಾಗಿದ್ದು ರಾಜಕಾರ್ಯವನ್ನು ವಿಶೇಷ ದಕ್ಷತೆಯಿಂದ ನಿರ್ವಹಿಸಿ ಪ್ರಭುಗಳ ಪ್ರೀತಿಗೆ ಪಾತ್ರರಾಗಿದ್ದ ಚೆನ್ನಪಟ್ಟಣದ ಮಲುವಣ್ಣನವರ ಮುಮ್ಮಕ್ಕಳು; ಮತ್ತಿಬ್ಬರು ಸರ್ಕಾರದ ಪ್ರೋತ್ಸಾಹಕ್ಕೆ ಪಾತ್ರರಾದ ಮಹಮ್ಮದೀಯ ಮತಸ್ಥರು. ಹೀಗೆ ಬ್ರಾಹ್ಮಣರಲ್ಲೂ ಬ್ರಾಹ್ಮಣೇತರರಲ್ಲೂ ದೊಡ್ಡ ಮನೆತನದವರಾಗಿಯೂ, ವಿದ್ಯಾವಂತರಾಗಿಯೂ, ಸರ್ಕಾರದ ಪ್ರೋತ್ಸಾಹಕ್ಕೆ ಅರ್ಹರಾಗಿಯೂ ಇರುವವರನ್ನು ಶ್ರೀಮನ್ಮಹಾರಾಜರವರು ಆರಿಸಿ ನಿಯಮಿಸಿದುದಕ್ಕಾಗಿ ಪ್ರಜೆಗಳೆಲ್ಲರೂ ಪ್ರಭುಗಳ ನಿಷ್ಪಕ್ಷಪಾತ ಬುದ್ಧಿಯನ್ನು ಕೊಂಡಾಡುತ್ತಿರುವರು. ವರ್ಧಿಷ್ಣುಗಳಾದ ಈ ಪ್ರೊಬೇಷನರುಗಳು ಕ್ಲುಪ್ತವಾಗಿರುವ ಕಾಲದಲ್ಲಿ ಕಾರ್ಯದನುಭವವನ್ನು ಮಾಡಿಕೊಂಡು ಮತ್ತೂ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಮುನಸೀಫ್ ಮತ್ತೂ ಅಮಲ್ದಾರ್ [illegible] ಗಳನ್ನು ಪಡೆದು ಅಭಿವೃದ್ಧಿಗೆ ಬರುವುದಲ್ಲದೆ ತಮ್ಮನ್ನು ನಿಯಮಿಸಿದ ಶ್ರೀಮನ್ಮಹಾರಾಜರವರ [illegible] ಸಾರ್ಥಕಪಡಿಸುವವರಾಗಲೆಂದು ಇಚ್ಛಿಸುತ್ತೇವೆ.

ಒಳದೇಶದ ವೃತ್ತಾಂತ.

[illegible] ಜನರಲ್‌ರವರು ಕಳೆದ ತಾ|| ೯ ರ ಸಾಯಂಕಾಲ ಬೆಂಗಳೂರಿಂದ ರಾಜಧಾನಿಗೆ ದಯಮಾಡಿಸಿದರು.

ಶ್ರೀಮನ್ಮಹಾರಾಜರ ದರ್ಶನಕ್ಕಾಗಿ ದಿವಾನರೂ ಕಳೆದ ತಾ|| ೯ ರ ಮೇಲುಬಂಡಿಯಲ್ಲಿ ರಾಜಧಾಧಾನಿಗೆ ಬಂದರು, ಮತ್ತೂ ನಾಳೆಯ ದಿನ ಹಿಂತಿರುಗಿ ಬೆಂಗಳೂರಿಗೆ ದಯಮಾಡಿಸುವವರಾಗಿರುವರು.

ರಾಜಧಾನಿಯ ಕಾರಂಜಿ ಕೆರೆಯ ಬಳಿ ಕುದುರೆಯ ಪಂದ್ಯವು ನಡೆಯುವ ಸ್ಥಳದಲ್ಲಿ ಬರುವ ಅಕ್ಟೋಬರ್ ತಾ|| ೪ ಮತ್ತೂ ೬ ರಲ್ಲಿ ಕುದುರೆ, ನಾಯಿ, ಬೆಕ್ಕು ಮೊದಲಾದ ಪ್ರಾಣಿಗಳ ಪ್ರದರ್ಶನವು ನಡೆಯುವುದು.

ರಾಜಧಾನಿಯಲ್ಲಿ ದಸರಾ ಮಹೋತ್ಸವಕಾಲದಲ್ಲಿ ಪ್ರತಿವರ್ಷವೂ ನಡೆಯುವ ವ್ಯವಸಾಯ ಮತ್ತೂ ಕೈಗಾರಿಕೆಯ ವಸ್ತುಪ್ರದರ್ಶನವು ಈ ತಾ|| ೨೪ ರಲ್ಲಿ ಆರಂಭವಾಗಿ ಬರುವ ಅಕ್ಟೋಬರ್ ೧೪ ರ ವರೆಗೂ ನಡೆಯುವುದು.

ರಾಜಧಾನಿಯ ಸಂಗೀತ ವಿದ್ವಾನ್ ಮ|| ಬಿ ಕೃಷ್ಣಪ್ಪನವರು ತಮ್ಮ ಶಿಷ್ಯರಾದ ಮ|| ರಾಚಪ್ಪನವರ ಸಮೇತ ಮದ್ರಾಸಿನಲ್ಲಿ ನಡೆದ ಕೃಷ್ಣಜಯಂತಿಗೆ ಹೋಗಿದ್ದು ಅಲ್ಲಿ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿ ವಿಶೇಷ ಬಹುಮಾನವನ್ನು ಪಡೆದು ಬಂದರೆಂದು ಕೇಳಿ ಸಂತೋಷಿಸುತ್ತೇವೆ.

ಶ್ರೀಮನ್ಮಹಾರಾಜರವರು ಕಳೆದ ತಾ|| ೬ ರ ಸಾಯಂಕಾಲ ರಾಜಧಾನಿಗೆ ದಯಮಾಡಿಸಿ ತಾ|| ೯ ರಲ್ಲಿ ಪಿತೃಪಕ್ಷವನ್ನು ನೆರವೇರಿಸಿದರು. ನಾಳೆಯದಿನ ಅರಮನೆಯಲ್ಲಿಟ್ಟಿರುವ ಶ್ರೀ ಗಣಪತಿಯ ಖಾಸಾಚರಣೆಯನ್ನು ಮುಗಿಸಿಕೊಂಡು ಪ್ರಾಯಶಃ ನಾಳೆಯದಿನ ಉದಕಮಂಡಲಕ್ಕೆ ದಯಮಾಡಿಸುವರು.

ಈಗ್ಗೆ ಕೆಲದಿನಗಳ ಕೆಳಗೆ ರಾಜಧಾನಿಯ ಕೋಟೆಯೊಳಗಿರುವ ಡಿ|| ಕ|| ಮ|| ಕಾಂತರಾಜ ಅರಸಿನವರ ಪ್ರಾಸಾದದ ಮೊಗದಮೇಲಿರುವ ಅವರು ಮಲಗುವ ಮನೆಗೆ ನುಗ್ಗಿದ್ದ ಕಳ್ಳನು ಟವುನ್ ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದು ೨ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲ್ಪಟ್ಟನು.

ಕಳೆದ ತಾ|| ೯ ರ ರಾತ್ರಿ ರಾಜಧಾನಿಯ ಟವುನ್‌ಹಾಲಿನಲ್ಲಿ ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಂಘದವರು ವೀರಸಿಂಹಚರಿತ್ರೆಯನ್ನು ಅಭಿನಯಿಸಿ ಆ ರಾತ್ರಿ ಬಂದುತ್ಪನ್ನವನ್ನೆಲ್ಲ ಕಾವೇರಿನದಿಯ ಪ್ರವಾಹದಿಂದ ವಿಪನ್ನರಾದವರ ಸಹಾಯಾರ್ಥವಾಗೇರ್ಪಟ್ಟಿರುವ ಫಂಡಿಗೊಪ್ಪಿಸಿದರೆಂದು ತಿಳಿಸಲು ಹರ್ಷವಾಗುತ್ತದೆ.

ಮೈಸೂರ ದೇಶದ ಸಂಪದಭಿವೃದ್ಧಿಯಾಲೋಚನಾ ಸಭೆಯು ಈ ತಿಂಗಳ ತಾ|| ೩೦ ರಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸು ಕಟ್ಟಡದಲ್ಲಿ ಜರಗುವುದು. ಸಭಾಕಾಲದಲ್ಲಿ ಏನಾದರೂ ಸೂಚನೆಗಳನ್ನು ಕೊಡಬೇಕೆಂದಪೇಕ್ಷಿಸುವ ಮೆಂಬರುಗಳು ಅವನ್ನು ಮುಂದಾಗಿ ಬರೆದು ಈ ತಾ|| ೨೦ ರೊಳಗೆ ಸಭೆಯ ಸೆಕ್ರೆಟರಿಯವರಲ್ಲಿಗೆ ಕಳುಹಬೇಕಾಗಿ ಸೂಚಿಸಲ್ಪಟ್ಟಿರುತ್ತಾರೆ.

ರಾಜಧಾನಿಯ ಮ|| ಎಸ್. ಸುಬ್ಬರಾವ್, ಬಿ.ಎ., ಎಂ. ಬಿ., ಸಿ. ಎಂ., ಯವರು ಡಿ. ಪಿ. ಎಚ್ ಮತ್ತೂ ಎಲ್. ಆರ್. ಸಿ. ಪಿ. ಪರೀಕ್ಷೆಗಳಿಗೋದಲು ಸರ್ಕಾರದಿಂದ ವೇತನವನ್ನು ಪಡೆದು, ಸೀಮೆಗೆ ಹೋಗಿ ಅಲ್ಲಿ ಆ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪ್ರಶಸ್ತಿಯನ್ನು ಪಡೆದು ಕಳೆದ ತಾ|| ೮ ರಲ್ಲಿ ಬೊಂಬಾಯಿಗೆ ಬಂದರು, ಮತ್ತೂ ಇನ್ನ ೨-೩ ದಿನಗಳಲ್ಲಿ ರಾಜಧಾನಿಗೆ ಬರುವವರಾಗಿರುವರು.

ಈ ತಿಂಗಳ ತಾ|| ೨೬ ಮತ್ತೂ ೨೭ ರಲ್ಲಿ ರಾಜಧಾನಿಯ ಟವುನ್‌ಹಾಲಿನಲ್ಲಿ ಸಂಸ್ಥಾನದ ಪರಸ್ಪರ ಸಹಾಯಕ ಸಂಘಗಳ ಮಹಾಸಭೆಯೊಂದು ಜರುಗುವುದು. ಆಗ್ಗೆ ಪರಸ್ಪರ ಸಹಾಯಕ ಸಂಘಗಳಿಂದ ಬರತಕ್ಕ ಪ್ರತಿನಿಧಿಗಳಿಂದಲೂ ಇತರ ಅಭಿಮಾನಶಾಲಿಗಳಿಂದಲೂ ಈ ಸಂಘಗಳ ಪುರೋವೃದ್ಧಿಯ ವಿಚಾರವಾಗಿ ಚರ್ಚೆಗಳೂ, ಉಪನ್ಯಾಸಗಳೂ ನಡೆಯಿಸಲ್ಪಟ್ಟು ಕೆಲ ನಿರ್ಧಾರಗಳು ಮಾಡಲ್ಪಡುವುವು.

ದಿವಾನಪದವಿಯಿಂದ ನಿವೃತ್ತರಾಗಿರುವ ಸರ್ ಪಿ.ಎನ್. ಕೃಷ್ಣಮೂರ್ತಿಯವರಿಗೆ ಈಗ್ಗೆ ಕೆಲ ತಿಂಗಳಿಂದಲೂ ವಾಯುರೋಗಪ್ರಾಪ್ತರಾಗಿದ್ದು ಸ್ವಲ್ಪ ದಿನಗಳಿಂದೀಚೆಗೆ ಶೋಭೆಯು ಕಾಣಿಸಿಕೊಂಡು ಶರೀರವು ಗಳಿತ ಬಂದಿರುವುದಲ್ಲದೆ ಅವರ ಸಹೋದರರ ಅಕಾಲಮರಣದಿಂದ ಅವರಿಗೆ ವಿಶೇಷ ವ್ಯಸನವು ಪ್ರಾಪ್ತವಾಗಿ ಅವರ ದೇಹಕ್ಕೆ ಪ್ರಾಣಾಯಾಸವುಂಟಾಗಿರುವುದು. ಡಾಕ್ಟರ್ ನಂಜುಂಡರಾಯರು ಮದ್ರಾಸಿನಿಂದ ಬಂದು ಚಿಕಿತ್ಸೆಯನ್ನು ಮಾಡುತ್ತಿರುವರು. ಸ್ವದೇಶಾಭಿಮಾನಿಗಳಾದ ಈ ಶ್ರೀಮಂತರಿಗೆ ಪರಮೇಶ್ವರನು ಆರೋಗ್ಯವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ರಾಜಧಾನಿಯಲ್ಲಿರುವ ಮಜ್ಲೀ ಷೆರಿಫ್ ಉಲ್ ಮುಸಲಮೀನಿ ಎಂಬ ಮಹಮ್ಮದೀಯ ಸಂಘದವರು ಕಳೆದ ತಾ|| ೧ ರಲ್ಲಿ ಸಭೆ ಸೇರಿದ್ದು ಹೈದರಾಬಾದಿನ ನೈಜಾಂ ಅಸಫ್‌ಜಾ ಬಹದ್ದೂರ್, ಜಿ. ಸಿ. ಎಸ್. ಐ., ಯವರ ಅಕಾಲಮರಣದಿಂದ ರಾಜಧಾನಿಯ ಮಹಮ್ಮದೀಯರುಗಳಿಗುಂಟಾದ ಅಪಾರ ದುಃಖವನ್ನು ಪ್ರದರ್ಶಿಸಿ, ತಮ್ಮ ಸಂತಾಪವನ್ನು ಅವರ ಕುಮಾರರಾದ ಈಗಣ ನೈಜಾಂ ರವರಿಗೂ, ಅವರ ಕುಟುಂಬಕ್ಕೂ ಸಂಘದ ಅಧ್ಯಕ್ಷರಾದ ಪೊಲೀಸು ಸೂಪರಿಂಟೆಂಡೆಂಟ್ ಉದ್ಯೋಗದಿಂದ ನಿವೃತ್ತರಾಗಿರುವ ಮ|| ಮಹಮ್ಮದ್ ಜಾಫರ್ ಸಾಹೇಬರ ಮೂಲಕ ತಂತಿಯಿಂದ ತಿಳುಹಿದರು.

ಅಸಿಸ್ಟೆಂಟ್ ಕಮಿಷನರುದ್ಯೋಗದಿಂದ ನಿವೃತ್ತರಾಗಿದ್ದ ರಾಜಧಾನಿಯ ರೈಲ್ವೆ ಸ್ಟೇಷನ್ ಬಳಿ ಜೀವಣ್ಣರಾಯನ ಕಟ್ಟೆಯೊಳಗೆ ಭತ್ತವನ್ನು ಕುಟ್ಟುವ ಯಂತ್ರವನ್ನಿಡಿಸಿದ್ದ ಮ|| ಕೆ. ಶ್ರೀಕಂಠಯ್ಯನವರು ಕಳೆದವಾರ ಪ್ಲೇಗುರೋಗಗ್ರಸ್ತರಾಗಿ ಕಾಲವಾದರು. ಇವರು ಯಂತ್ರಕ್ಕಾಗಿಯೂ ಅದರ ಕಟ್ಟಡಕ್ಕಾಗಿಯೂ ತಮ್ಮ ಸ್ವಂತವಾಗಿ ೨೦-೨೪ ಸಾವಿರ ರೂ ಗಳನ್ನು ಹಾಕಿದ್ದುದಲ್ಲದೆ ಇನ್ನೊಬ್ಬಿಬ್ಬರನ್ನು ಪಾಲಿಗೆ ಸೇರಿಸಿಕೊಂಡಿದ್ದರು. ಇವರು ಬಹು ಸಾಹಸಮಾಡಿ ಅಮೇರಿಕಾದಿಂದಲೇ ಯಂತ್ರವನ್ನು ತರಿಸಿ ವಿಶೇಷ ಶ್ರಮವನ್ನು ತೆಗೆದುಕೊಂಡು ಅದಕ್ಕಾಗಿ ಒಂದು ಕಟ್ಟಡವನ್ನು ಕಟ್ಟಿಸಿ ಅದರಲ್ಲಿ ಯಂತ್ರವನ್ನು ಜೋಡಿಸಿ, ಕಾರ್ಯಕ್ಕೆ ಪಕ್ರಮ ಮಾಡುವಲ್ಲಿ ಮೃತ್ಯುವಿನ ಪಾಲಾದರು.

ರಾಜಧಾನಿಯಲ್ಲಿ ಛಳಿಯು ವಿಪರೀತವಾಗಿ ಬೀಸುತ್ತಿದ್ದರೂ, ರಾತ್ರಿಯವೇಳೆ ಶಕೆಯನ್ನು ಸಹಿಸಲಶಕ್ಯವಾಗಿದೆ. ಮೋಡವೇನೋ ಆಗಾಗ್ಗೆ ಆಡುತ್ತಿದ್ದು ನಾಲ್ಕಾರು ಹನಿಗಳುದುರಿ ಹಾಗೆಯೇ ಮಾಯವಾಗುತ್ತಿದೆ. ರಾಗಿಯ ಪೈರನ್ನಿಟ್ಟಿರುವ ರೈತರುಗಳು ಆಕಾಶವನ್ನೇ ನೋಡುತ್ತಿದ್ದಾರೆ ಈಗ ೨-೩ ದಿನಗಳಿಂದಲೂ ಅಕ್ಕಿಯು ರೈಲು ಬಂಡಿಯಲ್ಲಿ ಸಾಗುತ್ತಿರುವುದರಿಂದ ಅಕ್ಕಿ, ರಾಗಿಯ ಬೆಲೆಯು ಪಲ್ಲ ೧ ಕ್ಕೆ ಒಂದೆರಡು ರೂ. ಗಳಂತೆ ಹೆಚ್ಚಿರುತ್ತದೆ. ಮತ್ತೂ ಮುಂದೆ ಇನ್ನೂ ಹೆಚ್ಚುವುದರಲ್ಲಿದೆ. ಇದರಂತೆ ಸಂಸ್ಥಾನದ ಎಲ್ಲ ಕಡೆಯೂ ಮಳೆಯು ಬಾರದೆ ನಿಂತಿರುವ ಪೈರು ಒಣಗುತ್ತಿರುವುದಲ್ಲದೆ, ಕೆರೆಕುಂಟೆಗಳಲ್ಲಿ ನೀರಿಲ್ಲದೆ ದನಕರುಗಳ ಮೇವಿಗೂ, ನೀರಿಗೂ ಬಹು ತೊಂದರೆಯಾಗಿದೆ. ರೈತಜನರು ಕಬ್ಬಕ್ಕಿಯಂತೆ ಬಾಯಿಬಿಡುತ್ತ ಇನ್ನು ೩-೪ ದಿನಗಳಲ್ಲಿ ಮಳೆಯು ಬಂದು ಒಣಗುತ್ತಿರುವ ಪೈರು ಚೇತರಿಸಿಕೊಳ್ಳುವಂತಾಗದಿದ್ದರೆ, ಕ್ಷಾಮವು ಪ್ರಾಪ್ತವಾಗುವುದು ನಿಶ್ಚಯವೆಂದು ದಿಗಿಲುಬಿದ್ದಿರುತ್ತಾರೆ. "ದುರ್ಭಿಕ್ಷದಲ್ಲಿ ಅಧಿಕಮಾಸ" ವೆಂಬ ಗಾದೆಗನುಸಾರವಾಗಿ ಜನರು ಕುಡಿಯುವ ನೀರಿಗೂ, ತಿನ್ನುವ ಅನ್ನಕ್ಕೂ ತಪಿಸುತ್ತಿರುವಾಗ ಪ್ಲೇಗುರೋಗವು ಸಂಸ್ಥಾನದ ಬಹುಕಡೆಯಲ್ಲಿ ಪ್ರಾಪ್ತವಾಗಿ ಜನರನ್ನು ಆಹುತಿಗೊಳ್ಳುತ್ತಿದೆ. ರಾಜಧಾನಿಯಲ್ಲಿ ಪ್ಲೇಗು ಸರ್ವತ್ರ ಹರಡಿಕೊಂಡು ನಿತ್ಯದಲ್ಲೂ ೧೦-೧೨ ಜನರವರೆಗೆ ಸಾಯುತ್ತಿದ್ದಾರೆ.

ವರ್ತಮಾನ ಸಂಗ್ರಹ.

ಬೆಲ್ಜಿಯಂನಲ್ಲೂ, ಜರ್ಮನಿಯ ದಕ್ಷಿಣಭಾಗದಲ್ಲೂ ಭೂಕಂಪವಾಗಿ ಅನೇಕ ಮನೆಗಳು ನಾಶವಾದುವು.

ಕಳೆದ ಆಗಸ್ಟ್ ತಿಂಗಳಲ್ಲಿ ದಿಲ್ಲಿ ಪಟ್ಟಣದಲ್ಲೂ, ನೆರೆಯ ಪ್ರದೇಶದಲ್ಲೂ ೯೦,೦೦೦ ಇಲಿಗಳು ಕೊಲ್ಲಲ್ಪಟ್ಟುವು.

ಚೈನಾರಾಜ್ಯದ ಕೆಲ ಭಾಗದಲ್ಲಿ ಕ್ಷಾಮವು ಪ್ರಾಪ್ತವಾಗಿ ಜನರು ಹೊಟ್ಟೆಗಿಲ್ಲದೆ ದಂಗೆನಿಂದು ಅನರ್ಥವನ್ನು ಮಾಡುತ್ತಿಸಿರುತ್ತಾರೆ.

ಫ್ರಾನ್ಸ್ ದೇಶದಲ್ಲಿ ಜನರು ಹುಟ್ಟುವುದರ ದರವು ಕಡಿಮೆಯಾಗಿರುವುದರಿಂದ ಅಲ್ಲಿಯ ಸೇನೆಯಲ್ಲಿ ೧೯೧೨ ರಲ್ಲಿ ೧೦,೦೦೦ ಕಡಿಮೆ ತೋರುವುದೆಂದು ನಿರೀಕ್ಷಿಸಲ್ಪಟ್ಟಿದೆ.

ಈಗ ಸೀಮೆಯಲ್ಲಿರುವ ಕೂಚ್ ಬಿಹಾರ್ ಮಹಾರಾಜರು ಅಸ್ವಸ್ಥರಾಗಿ ವಿಶೇಷ ಅಪಾಯಸ್ಥಿತಿಯಲ್ಲಿದ್ದರು. ಆದರೆ ಈಗ ಅವರಿಗೆ ಕೊಂಚಗುಣಮುಖವಾಗಿರುತ್ತದೆಂದು ವರ್ತಮಾನವು ಬಂದಿರುತ್ತದೆ.

ಭರತಖಂಡದಲ್ಲಿ ಬರುವ ಅಕ್ಟೋಬರ್ ತಾ|| ೧ ರಿಂದ ನೋಟುಗಳು ಪೂರ್ತಿಯಾಗಾಗಲಿ ಅಥವಾ ಅರ್ಧವಾಗಾಗಲಿ ಇನ್ಶೂರ್ ಮಾಡಲ್ಪಟ್ಟ ಹೊರತು ಅಂಚೆಯಲ್ಲಿ ಕಳುಹಲ್ಪಡಕೂಡದೆಂದು ವಿಧಾಯಕವಾಗಿರುತ್ತದೆ.

ಈಗ ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವ ೧೭೮ ಭಾರತೀಯರಲ್ಲಿ ೬೦ ಹಿಂದೂಗಳು, ೩೩ ಮಹಮ್ಮದೀಯರು ಮತ್ತೂ ೨೧ ಸಿಕ್ಕರು ಇರುವರು. ಇವರಲ್ಲಿ ೭೪ ಜನರು ಬ್ಯಾರಿಸ್ಟರ್, ೨೦ ಇಂಜನಿಯರಿಂಗ್ ಮತ್ತೂ ೧೩ ವೈದ್ಯಪರೀಕ್ಷೆಗಳಿಗೋದುತ್ತಿರುವರು.

ಫ್ರಾನ್ಸಿನಲ್ಲಿ ಆಹಾರಪದಾರ್ಥಗಳ ಬೆಲೆಯು ಹೆಚ್ಚಿರುವುದರಿಂದ ಅಲ್ಲಿಗೆ ಸೇರಿದ ನಟಿನ್ಸ್ ಎಂಬಲ್ಲಿ ನಾಲ್ಕುನೂರು ಜನರು ದೊಂಬಿಯೆದ್ದು ಕಾರ್ಖಾನೆಗಳಿಗೆ ನುಗ್ಗಿ ನಾಶಪಡಿಸಯತ್ನಿಸಿದಾಗ್ಗೆ ಅವರಿಗೂ, ಪೋಲೀಸರಿಗೂ ಬಡಿದಾಟವಾಗಿ ಉಭಯಪಕ್ಷದಲ್ಲೂ ೩೦ ಜನರ ವರೆಗೆ ಮಡಿದರು. ಮತ್ತೂ ೭೪ ಜನರು ಗಾಯವಡೆದರು.

ಬ್ರಿಟಿಷ್ ದೇಶದಲ್ಲೆಲ್ಲ ಆಹಾರಪದಾರ್ಥಗಳ ಬೆಲೆಯು ಹೆಚ್ಚಿರುವುದರಿಂದ ಕೆಲಸಗಾರರು ತಮ್ಮ ಕೂಲಿಯನ್ನು ಹೆಚ್ಚಿಸಿಕೊಟ್ಟಹೊರತು ಕೆಲಸಕ್ಕೆ ಬರುವುದಿಲ್ಲವೆಂದು ಮುಷ್ಕರಮಾಡುತ್ತಿರುವರು. ಇದಕ್ಕೆ ತಕ್ಕ ಪರಿಹಾರವು ಕೊಡಲೆ ಕಲ್ಪಿಸಲ್ಪಡದೆ ಹೋದಲ್ಲಿ ಕೂಲಿಗಾರರ ಧಾಂಧಲೆಯು ವಿಪರೀತವಾಗಿ ಅಲ್ಲಿಯ ಸ್ಥಿತಿಯು ಬಹು ಶೋಚನೀಯಾವಸ್ಥೆಗೆ ಬರಬಹುದೆಂದು ತೋರುತ್ತದೆ.

ಶಾಸನಾನುಸಾರವಾದ ಪರ್ಷ್ಯಾರಾಜ್ಯಾಡಳಿತದ ಮೇಲೆ ದೂರುಮಾಡಿದ ಸರದಾರ್ ಅರ್ಷರ್ ಎಂಬುವನಿಗೆ ಮರಣದಂಡನೆಯು ವಿಧಿಸಲ್ಪಟ್ಟಿತು. ಇದರವೇಳೆ ಇವನು ಪ್ರಾಣದಾನವನ್ನು ಮಾಡಬೇಕೆಂದು ಷಾನಿಗೆ ಬಿನ್ನೈಸಿಕೊಂಡಿದ್ದು, ಅದೂ ತಿರಸ್ಕೃತವಾಗಿ ಗುಂಡಿನಿಂದ ಹೊಡೆದು ಕೊಲ್ಲಲ್ಪಡತಕ್ಕದೆಂದು ನಿರ್ಧರವಾಯಿತು. ಈ ರಾಜದ್ರೋಹಿಯು ಕಣ್ಣನ್ನು ಕಟ್ಟಿಸಿಕೊಂಡು ಗುಂಡಿನಿಂದ ಹೊಡೆಯಿಸಿಕೊಳ್ಳಲು ಸಮ್ಮತಿಸದೆ, ತೋಳುಗಳನ್ನು ಕಟ್ಟಿಕೊಂಡು ಗುಂಡು ಹೊಡೆಯುವವರಿಗೆ ಅಭಿಮುಖನಾಗಿ ನಿಂತುಕೊಂಡು ಗುಂಡಿನೇಟನ್ನು ತಿಂದು ಸತ್ತನು.

ಆಸ್ಟ್ರೇಲಿಯಾದಲ್ಲಿ ದೊಡ್ಡ ವರ್ತಕನಾದ ದೋಸ್ಟ್ ಮಹಮ್ಮದ್ ಎಂಬ ಶ್ರೀಮಂತನು ಸ್ವಲ್ಪದಿನಗಳ ಕೆಳಗೆ ಕೊಂದುಹಾಕಲ್ಪಟ್ಟನು. ಆತನ ಹೆಂಡತಿಯು ತನ್ನ ೨ ವರ್ಷದಿಂದ ೧೩ ವರ್ಷಗಳ ವಯಸ್ಸಿನ ವರೆಗಿರುವ ೪ ಮಕ್ಕಳನ್ನು ಕರೆದುಕೊಂಡು ಭರತಖಂಡದಲ್ಲಿರುವ ತನ್ನ ಬಂಧುಗಳನ್ನೋಡುವುದಕ್ಕಾಗಿ ಬರುತ್ತಿರುವಾಗ್ಗೆ ಆಸ್ಟ್ರೇಲಿಯಾದಲ್ಲೂ, ಕರಾಚಿಯಲ್ಲೂ ಅವಳ ಗಂಡನು ಸಂಪಾದಿಸಿದ್ದ ಅಪಾರವಾದ ಆಸ್ತಿಯು ಅವಳ ಕೈಗೆ ಸೇರಬಾರದೆಂಬುದರ ಮೇಲೆ ಕರಾಚಿಯಲ್ಲಿ ಆಕೆಯು ಕೊಂದುಹಾಕಲ್ಪಡಲು, ಅಲ್ಲಿಯ ಡಿ|| ಮ್ಯಾಜಿಸ್ಟ್ರೇಟರು ಅವಳ ಮಕ್ಕಳನ್ನು ಪೊಲೀಸರು ಆಸ್ಟ್ರೇಲಿಯಾಕ್ಕೆ ಕರೆದುಕೊಂಡು ಹೋಗಿ ಅವುಗಳ ಪಿತಾಮಹರ ವಶಮಾಡುವಂತೆ ಅಪ್ಪಣೆ ಮಾಡಿರುವರು. ಪೊಲೀಸರು ಆ ಮಕ್ಕಳನ್ನು ಯಾರೂ ಅಪಹರಿಸಿಕೊಂಡು ಹೋಗದಂತೆ ಅಥವಾ ಕೊಂದುಹಾಕದಂತೆ ಎಚ್ಚರಿಕೆಯಿಂದ ನೋಡಿಕೊಂಡಿರುವರು.

ಚೈನಾಕ್ಕೂ ತಿಬೆಟ್ಟಿಗೂ, ಮಧ್ಯೆ ಇರುವ ಚೈನಾದ ಎಲ್ಲೆಕಟ್ಟು ಪ್ರಾಂತವಾದ ಪೋ ಎಂಬಲ್ಲಿಯ ಜನರು ಬಹು ಒರಟು ಮತ್ತೂ ಕ್ರೂರ ಸ್ವಭಾವದವರು. ಚೈನಾದವರು ಈ ಜನರನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ವಿಶೇಷ ತೊಂದರೆಯನ್ನನುಭವಿಸುತ್ತಿರುವರು. ಈಚೆಗೆ ಉಭಯರಿಗೂ ಬಡಿದಾಟವಾಗಿ ಚೈನಾದವರ ಕಡೆಯ ನೂರಾರು ಸೈನಿಕರು ಮಡಿದರು. ಮತ್ತೂ ಈ ಸೈನಿಕರು ಆ ಕಾಡುಜನರು ಕೊಡುವ ತೊಂದರೆಯನ್ನು ಸಹಿಸಲಾರದೆ ಅವರಕೂಡ ಕದನಮಾಡಲು ತಿರಸ್ಕರಿಸಿ ತಮ್ಮ ಪ್ರಾಣವನ್ನುಳಿಸಿಕೊಳ್ಳಲು ರಣರಂಗವನ್ನು ಬಿಟ್ಟೋಡಿರುವರು. ತಿಬೆಟ್ಟಿನ ಲಾಮಾಗಳು ಅವತಾರಪುರುಷರೆಂದು ಪೋವಿನ ಕಾಡುಜನರು ತಿಳಿದುಕೊಂಡಿರುವುದರಿಂದ ಅವರು ಬಂದು ಚೈನಾದವರ ಕೂಡ ಕಾದಾಡಬೇಡಿರೆಂದು ಹೇಳಿದುದೇಯಾದರೆ ಅವರು ಸುಮ್ಮನಾಗುವರಾದಪ್ರಯುಕ್ತ ಇಬ್ಬರು ಲಾಮಾಗಳನ್ನು ಅಲ್ಲಿಗೆ ಕಳುಹಿಸಿಕೊಡಬೇಕೆಂದು ಲಾಸಾದಲ್ಲಿರುವ ಚೈನಾದ ರಾಯಭಾರಿಯು ತಿಬೆಟ್ಟಿನ ರೀಜಂಟರಿಗೆ ಬರೆದುಕೊಂಡಿರುತ್ತಾನೆ.

ಕಳೆದ ತಾ|| ೩೧ ರ ಸಾಯಂಕಾಲದಲ್ಲಿ ಕಲಕತ್ತಾದಲ್ಲಿ ೩ ಜನ ಬೆಂಗಾಲಿಯ ಯುವಕರು ಒಂದು ಕುದುರೆಯ ಬಂಡಿಯಲ್ಲಿ ಕುಳಿತು ವಿಹರಿಸಿಕೊಂಡು ಬರುತ್ತಿರುವಾಗ್ಗೆ ಮದ್ಯಪಾನಮಾಡಿದ್ದ ೩ ಜನ ಸೋಲ್ಜರುಗಳು ಆ ಬಂಡಿಯ ಸಮೀಪಕ್ಕೆ ಬಂದು ಹೊಗೆಯ ಬತ್ತಿಯನ್ನು ಕೊಡಿ ಎಂದು ಬಹು ಧೋರಣೆಯಿಂದ ಕೇಳಲು, ಬಂಡಿಯೊಳಗೆ ಕುಳಿತಿದ್ದವರಲ್ಲೊಬ್ಬನು ಕೋಪಗೊಂಡು ಕೊಡುವುದಿಲ್ಲವೆಂದು ಹೇಳಿದನು. ಆ ಸೋಲ್ಜರುಗಳು ಬೇಗ ಅವನನ್ನು ಬಂಡಿಯಿಂದ ಹೊರಕ್ಕೆಳೆದುಕೊಂಡು ಚೆನ್ನಾಗಿ ಪ್ರಹರಿಸಿದಾಗ ಬಂಡಿಯೊಳಗಿದ್ದ ಉಳಿದಿಬ್ಬರೂ ಅವನ ಸಹಾಯಕ್ಕೆ ಓಡಿಬಂದರು. ಆ ಸೋಲ್ಜರುಗಳು ೩ ಜನ ಯುವಕರನ್ನು ಮೈಮುರಿಯ ಹೊಡೆದು ಅವರಲ್ಲೊಬ್ಬನಿಗೆ ಪ್ರಾಣಾಪಾಯವನ್ನುಂಟುಮಾಡಿದರು. ಬಂಡಿಯವನು ಕಾಲಿಗೆ ಬುದ್ಧಿಯನ್ನು ಹೇಳಿದನು. ಅಷ್ಟರಲ್ಲಿ ಮಾರ್ಗದಲ್ಲಿ ಹೋಗುತ್ತಿದ್ದ ೩ ಜನರು ಬಂದು ಆ ಸೋಲ್ಜರುಗಳಿಗೆ ಪೆಟ್ಟನ್ನು ಹಾಕಲು ಅವರು ಯುವಕರನ್ನು ಬಿಟ್ಟೋಡಿದರು. ಪೆಟ್ಟನ್ನು ತಿಂದ ಯುವಕರು ಬೇರೆಯವರ ಸಹಾಯದಿಂದ ಬಂಡಿಯಲ್ಲಿ ಕುಳಿತು ಮೇಲ್ಪಟ್ಟ ಅಧಿಕಾರಿಗೆ ಹೇಳಲು ಕೋಟೆಯೊಳಕ್ಕೆ ಹೋಗುತ್ತಿರುವಾಗ್ಗೆ ಆ ತುಂಟ ಸೋಲ್ಜರುಗಳು ಅವರಲ್ಲಿಗೆ ಬಂದು ನೀವು ಮೂರುಮಂದಿ ಸುಮ್ಮನೆ ಮನೆಗೆ ಹೋಗದೆ ಹೋದಲ್ಲಿ ಬಲಿಹಾಕುತ್ತೇವೆಂದು ಹೆದರಿಸಿದಾಗ್ಯೂ ಅವರು ಮೇಲಿನ ಅಧಿಕಾರಿಗೆ ತಿಳಿಸಿದರು. ಈಗ ಅಧಿಕಾರಿಗಳಲ್ಲಿ ಅದರ ವಿಚಾರಣೆಯು ನಡೆಯುತ್ತಿದೆ.

ಪತ್ರವ್ಯವಹಾರ.

ಪರಮಾಶ್ಚರ್ಯವಾದ ಸಂಗತಿ.

ಕೊಯಮುತ್ತೂರು ಜಿಲ್ಲಾ ಕೊಳ್ಳೆಗಾಲ ತಾ॥ ಶಿವನಸಮುದ್ರದ ಪಶ್ಚಿಮೋತ್ತರದಿಗೆ ಸೇರಿರುವ ಸತ್ಯಗಾಲವೆಂಬ ಗ್ರಾಮದ ಬಳಿ ಅಂದರೆ ಸತ್ಯಗಾಲದಿಂದ ಶಿವನಸಮುದ್ರಕ್ಕೆ ಬರುವ ಮಾರ್ಗಕ್ಕೆ ಉತ್ತರದ ಕಡೆಯಲ್ಲಿ ಗಾಣಿಗರ ಕೋಣೆಸೆಟ್ಟಿಯೆಂಬುವನು ಸುಮಾರು ನೂರು ವರ್ಷಕ್ಕೆ ಹಿಂದೆ ಒಂದು ಕಟ್ಟೆಯನ್ನು ಕಟ್ಟಿಸಿದ್ದನು. ಈ ಕಟ್ಟೆಯಲ್ಲಿ ಬಹು ಕಾಲದಿಂದಲೂ ಒಳ್ಳೆಯ ಮಳೆಗಾಲವಾದರೂ ಸಹ ನೀರು ನಿಲ್ಲದೇ ಇದ್ದದ್ದು ಮತ್ತು ಕಳೆದ ತಾ॥ ೨೦-೬-೧೧ ರಲ್ಲಿ ಕಾವೇರೀ ಪ್ರವಾಹವು ವಿಪರೀತವಾಗಿ ಬಂದಿದ್ದಾಗಲೂ ನೀರು ಬಾರದೇ ಇದ್ದದ್ದು ತಾ॥ ೩೦-೮-೧೧ ರ ರಾತ್ರಿಯಲ್ಲಿ ಗಂಗಾಭವಾನಿಯುದ್ಭವಿಸಿ, ಪಕ್ಕದಲ್ಲಿರುವ ಹೊರಗುಗಟ್ಟೆಯಲ್ಲಿ ನೀರು ತುಂಬಿ ನಂತರ ಕೆರೆಯಲ್ಲಿ ಬಂದಿತು ನೀರು ಬಂದು ದಿನೇ ದಿನೇ ನೀರು ಸ್ವಚ್ಛವಾಗಿಯೂ, ಮೇಲಕ್ಕೆ ಉಕ್ಕುತ್ತಲೂ ಇದೆ. ಈ ಪರ್ಯಂತ ಆ ತಾರೀಖಿನವರೆಗೂ, ಮಳೆಯಿಲ್ಲದ ಕಾಲದಲ್ಲಿ ಈ ಪ್ರಕಾರ ನೀರು ಬಂದಿರುವುದನ್ನು ಅನೇಕ ಜನಗಳು ಹೋಗಿ ನೋಡಿಕೊಂಡು ಆಶ್ಚರ್ಯಪಟ್ಟು ಬರುತ್ತಿದ್ದಾರೆ. ಅಲ್ಲದೆ ಕೊಳ್ಳೇಗಾಲದ ಡೆಪ್ಯುಟಿ ಕಲೆಕ್ಟರವರು ಸಹ ಬಂದು ಪರಾಮರಿಸಿಕೊಂಡು ಹೋಗಿರುತ್ತಾರೆ. ಇದು ಬಹಳ ಆಶ್ಚರ್ಯವಲ್ಲವೆ? ತಾ॥ ೨ ರ ರಾತ್ರಿ ಇಲ್ಲಿ ಚೆನ್ನಾಗಿ ಮಳೆಯಾಯಿತು.

ಜವಳಿ ಮತ್ತು ಚಿಲ್ಲರೆ ಅಂಗಡಿ
ಗು॥ ಪುಟ್ಟಸೊನ್ನಪ್ಪ, ಬೆಳಕವಾಡಿ.

ಶ್ರೀಮದಷ್ಟೈಶ್ವರ್ಯ ಸಂಪನ್ನನಾದ ಪರಮೇಶ್ವರನ ಕೃಪೆಯಿಂದ ಸುಮಾರು ೧॥ ತಿಂಗಳಿಂದಲೂ ವೇ॥ ಗುಬ್ಬಿ ವೀರಪ್ಪಶಾಸ್ತ್ರಿಗಳವರು ಈ ಗುಂಡಲು ತಾಲ್ಲೋಕಿಗೆ ದಯಮಾಡಿಸಿ, ಶ್ರೀ ನಿರಂಜನ ಪ್ರಭು ಮಹಾಗುರು ಮಠದ ಸ್ವಾಮಿಗಳವರ ಕಟಾಕ್ಷಕ್ಕೂ, ಮ॥ರಾ॥ ಗಳಾದ ಎರೆಯೂರು ಪುಟ್ಟಬಸಪ್ಪನವರ ಮಲ್ಲಪ್ಪನವರು, ದೊಮ್ಮಲಾಪುರದ ಹುಲುಗಪ್ಪನವರು, ಕೆಬ್ಬಳ್ಳಿ ಬಸಪ್ಪನವರು, ಮಣೀನಪುರದ ಪಾಟೇಲ್ ಸುಬ್ಬಣ್ಣನವರು ಈ ಮತಾಭಿಮಾನಿಗಳ ಅಭಿಮಾನಕ್ಕೂ ಪಾತ್ರರಾಗಿ ಸಮಸ್ತ ಮತಸ್ಥರೂ ಸಂತೋಷಪಡುವಂತೆ ನಮ್ಮ ಪ್ರದೇಶದಲ್ಲಿ ಕೆಲವು ದಿನಗಳಿಂದಲೂ ಶಿವಕಥಾ ನಡಿಸಿದರು. ಸಕಲ ಮಾತೋಣದಲ್ಲಿ ಮತಶ್ರೇಷ್ಠತ್ವವನ್ನೂ ಮತಸ್ಥರು ನಡೆಯುವ ಆಚಾರವಿಚಾರ ವಿಷಯಗಳನ್ನೂ ಬಹು ಸರಸವಾಗಿ ಶಾಸ್ತ್ರಸಿದ್ಧಿಯನ್ನನುಸರಿಸಿ ಬೋಧಿಸುತ್ತಿರುವರಲ್ಲದೆ ಮೈಸೂರು ಸ್ಟಾರಿನಿಂದ ಮತಕ್ಕುಂಟಾಗತಕ್ಕ ಪ್ರಯೋಜನಗಳನ್ನೂ ಅಂಥ ಉಪಯುಕ್ತವಾದ ಸ್ಟಾರಿನ ವೃದ್ಧಿಗಾಗಿ ರಿಲೀಫ್ ಫಂಡನ್ನು ವೃದ್ಧಿಪಡಿಸುವ ವಿಷಯದಲ್ಲಿ ಉಪನ್ಯಾಸವನ್ನೂ ಮಾಡುತ್ತ ಬಹು ಜನಾಂಗದ ಪ್ರೀತಿಗೆ ಸಂಪೂರ್ಣ ಪಾತ್ರರಾಗಿ ಇರುವ ಸಂತೋಷವನ್ನು ವರ್ಣಿಸಲು ನಾ ಸಮರ್ಥನು. ಪರಂತು ಕುರುಡನಿಗೆ ಕಣ್ಣು ಬಂದಂತೆ ಇವರ ಸದ್ಬೋಧೆಯಿಂದ ಮತತತ್ವವೂ ಶಿವಸರ್ವೋತ್ಕರ್ಷತೆಯೂ ಈ ಪ್ರದೇಶದ ವೀರಶೈವ ಜನಾಂಗದವರಿಗೆ ಅವಗಾಹನೆಯಾಗಿ ಆನಂದಿಸುತ್ತಿರುವರು ಇವರ ಸುಪುತ್ರರಾದ ಶಿವರುದ್ರಾರಾಧ್ಯರೆಂಬುವರು ಬಾಯಲ್ಲಿ ವಿಜಾತೀಯವಾದ ತಾಳವರಸೆಗಳಿಂದ ತಬಲಾಬಾರಿಸಿದ್ದನ್ನು ಸಹ ಸರ್ವರೂ ನೋಡಿ ಮಹದಾನಂದಪಟ್ಟರು. ಇಂಥ ಮತಾಭಿಮಾನಿಶಾಲಿಗಳಿಗೆ ಸಾಕ್ಷಾತ್ಪರಮೇಶ್ವರನು ದೀರ್ಘಾಯುರಾರೋಗ್ಯಾದಿ ಸಕಲ ಭಾಗ್ಯವನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುವ ಸ್ಟಾರ್ ಚಂದಾದಾರ್ ಒಡೆಯನಪುರದ ವೀರಶೈವ ಮತಸೇವಕ

ಕೊಂಗಳ್ಳಪ್ಪಾ.

ಶ್ರೀ ಬಸವೇಶ್ವರ ದೇವರ ಜಯಂತಿಮಹೋತ್ಸವವು.

ಶ್ರೀಮತ್ಕುಮಾರಸ್ವಾಮಿಗಳವರು ಹಾನಗಲ್ಲ ಇವರ ಆಶೀರ್ವಾದಬಲದಿಂದ ಧಾರವಾಡ ಡಿ॥ ಹಾನಗಲ್ಲ ತಾ॥ ಬಮ್ಮನಹಳ್ಳಿ ಗ್ರಾಮದಲ್ಲಿ ಸಕಲ ವೀರಶೈವರೂ ಶ್ರೀ ಬಸವೇಶ್ವರ ದೇವರ ಜಯಂತಿ ಮಹೋತ್ಸವವು ಇದೇ ಶ್ರಾವಣವದ್ಯ ೧೪ ಬುಧವಾರದ ದಿವಸ ನಡೆಯಿಸಲ್ಪಟ್ಟಿತು. ಈ ಮಹಾಪುರುಷನ ಜಯಂತಿ ಹಬ್ಬವನ್ನು ಪ್ರತಿವರ್ಷಶ್ರಾವಣ ವದ್ಯ ೧೪ ದಿವಸವೇ ಮಾಡಬೇಕೆಂಬುವುದನ್ನು ಗ್ರಂಥಪರಿಶೋಧನೆಯಿಂದ ಆಧಾರ ತೆಗೆದು ನಮ್ಮ ವೀರಶೈವ ಬಂಧುಗಳಲ್ಲಿ ಒಬ್ಬರಾದ ಅಮರಾವತಿಯಲ್ಲಿ ಪ್ರತಿವಾರವೂ ಹೊರಡಿಸುತ್ತಿರುವ ವೀರಶೈವ ಸಂಜೀವಿನಿ ಎಂಬ ವರ್ತಮಾನಪತ್ರಕರ್ತರು ತಿಳಿಸಿದುದರಿಂದ ಅವರ ಮಹದುಪಕಾರವನ್ನು ತಲೆಯಲ್ಲಿ ಅಂತು ನಮ್ಮ ಗ್ರಾಮದಲ್ಲಿ ಸದರಿ ಉತ್ಸವವನ್ನು ನಡೆಸುವವರಾದೆವು. ಈ ಮಹೋತ್ಸವದ ದಿವಸ ಈ ನಮ್ಮ ಇಡೀಗ್ರಾಮವನ್ನು ತಳಿರುತೋರಣಗಳ ಅಲಂಕಾರದಿಂದಲೂ ಮತ್ತು ಕದಳೀ ಸ್ತಂಭಗಳಿಂದಲೂ ವಿವಿಧರೀತಿಗಳನ್ನೆಲ್ಲಾ ಶೃಂಗರಿಸಿ, ಸಕಲ ವೀರಶೈವರೂ ತಂತಮ್ಮ ಮನೆಗಳಲ್ಲಿ ಗಣಸಂತರ್ಪಣೆಯನ್ನು ಮಾಡಿ, ಮಧ್ಯಾಹ್ನದ ೨ ಗಂಟೆಯಾದನಂತರ ಪಲ್ಲಕ್ಕಿಯನ್ನು ಶೃಂಗರಿಸಿ ಅದರಲ್ಲಿ ಶ್ರೀ ಬಸವೇಶ್ವರ ದೇವರ ಮೂರ್ತಿಯನ್ನು ಮತ್ತು ಆತನ ಮಹಾ ಪುರಾಣವನ್ನು ಇರಿಸಿ, ನಗಾರಿ, ಚವಂತ್ರಿ ಕರಡಿ ಮುಂತಾದ ವಾದ್ಯಗಳ ವಿಜೃಂಭಣೆಯಿಂದಲೂ, ಮತ್ತು ಮಂಗಳಪಾಠಕರ ಶಿವಭಜನೆಯ ಘೋಷದಿಂದಲೂ ಮೆರವಣಿಗೆಯನ್ನು ಮಾಡಿ. ಇಡೀ ಗ್ರಾಮನ ತುಂಬಾ ಸಕ್ಕರೆಯನ್ನು ಹಂಚಿ, ನಮ್ಮ ಗ್ರಾಮದ ವಿರಕ್ತಮಠಕ್ಕೆ ಮೆರವಣಿಗೆಯೊಡನೆ ಹೋಗಿ ಅನಂತರ ಸದರಿ ಮಹಾಪುರಾಣವನ್ನು ನಮ್ಮ ವಿರಕ್ತಮಠದ ಶ್ರೀ ಕುಮಾರಸ್ವಾಮಿಗಳವರಿಂದ ೨-೩ ತಾಸು ರಾತ್ರಿಯವರೆಗೂ ಓದಿಸಿ ಶ್ರವಣಮಾಡಿಕೊಂಡು ಮಂಗಲವನ್ನು ಮಾಡಿ ಸರ್ವರೂ ಸದರಿ ಶ್ರೀಗಳವರ ಆಶೀರ್ವಾದವನ್ನು ಪಡೆದು ತಂತಮ್ಮ ಮನೆಗಳಿಗೆ ತೆರಳಿದರು. ನಮ್ಮಲ್ಲಿ ಇದೇ ಶ್ರಾವಣ ಶು॥ ೫ ಯಿಂದ ಶ್ರೀ ಬಸವೇಶ್ವರದೇವರ ಮಹಾ ಪುರಾಣವನ್ನು ನಮ್ಮ ಶ್ರೀಗಳವರಿಂದಲೇ ನಡೆಸಿರುವುದರಿಂದಲೂ ಅಷ್ಟರಲ್ಲಿ ಸದರ ವೀರಶೈವ ಸಂಜೀವಿನಿ ಪತ್ರಕರ್ತರು ಸದರಿ ಉತ್ಸವವನ್ನು ಮಾಡಬೇಕೆಂತ ಬರೆದುದರಿಂದಲೂ ನಾವು ಪರಮಾನಂದದೊಡನೆ ಈ ಮಹೋತ್ಸವವನ್ನು ನಡೆಸಿದೆವು. ಆದರೆ ಇದರಂತೆ ಪ್ರತಿವರ್ಷ ಶ್ರಾವಣ ವದ್ಯ ೧೪ ದಿವಸ ನಮ್ಮ ಸಕಲ ವೀರಶೈವರು ಇಡೀ ಜಗತ್ತಿನ ತುಂಬಾ ಸದರಿ ಮಹೋತ್ಸವವನ್ನು ನಡೆಯಿಸುವಂತೆ ಜಗತ್ಕರ್ತನಾದ ಶ್ರೀ ಶಂಕರನು ಸರ್ವರಿಗೂ ಪ್ರೇರಣೆಯನ್ನೀಯುವನಾಗಲೆಂದು ನಾವು ನಿರಂತರದಲ್ಲಿಯೂ ಬೇಡಿಕೊಳ್ಳುತ್ತೇವೆ.

ಮತಾಭಿಮಾನಿ.

ಶ್ರೀ ಬಸವೇಶ್ವರ ಜಯಂತಿ, ವಿಜಾಪುರ.

ಮಿತಿ ಶ್ರಾವಣ ವದ್ಯ ೧೪ ದಿವಸ ಶ್ರೀ ಬಸವೇಶ್ವರ ಜನ್ಮೋತ್ಸವ ಸಮಾರಂಭವು ಮಹಾರಾಷ್ಟ್ರಭಾಗದಲ್ಲಿ ಅತಿ ವಿಜೃಂಭಣೆಯಿಂದ ಜರಗುವ ಬಗ್ಗೆ ಅಮರಾವತಿಯ ವೀರಶೈವ ಸಂಜೀವಿನಿ ಪತ್ರಕರ್ತರು ತಮ್ಮ ವರ್ತಮಾನ ಪತ್ರದಲ್ಲಿ ಪ್ರಸಿದ್ಧಪಡಿಸಿದಂತೆ, ಈ ಊರಲ್ಲಿ ಪರಮ ಪೂಜ್ಯ ವಿದ್ವಾಂಸರಾದ ವೇ॥ ಮಾ॥ ಸೋಲಾಪೂರ ಕುಂಟೋಜಿ ಮಠಾಧ್ಯಕ್ಷ ಚನವೀರಸ್ವಾಮಿಗಳು ಮತ್ತು ಮಹಾಸಭಾ ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರರಾದ ರಾ॥ ಶಿವಶಂಕರಪ್ಪಾ ಅಣ್ಣಾಜೇರಿಗೆ ಇವರುಗಳ ಸಾಹಸದಿಂದ ಶ್ರೀ ಬಸವೇಶ್ವರ ಜಯಂತಿಯುತ್ಸವವು ಒಳ್ಳೆಯ ಸಮಾರಂಭದೊಡನೆ ಜರುಗಿತು ಈ ದಿವಸ ಯಾವತ್ತು ವೀರಶೈವರು ದೊಡ್ಡ ಹಬ್ಬವೆಂದು ಭಾವಿಸಿ ತಂತಮ್ಮ ಮನೆಗಳನ್ನು ಚೆನ್ನಾಗಿ ಶೃಂಗರಿಸಿ ಯಾವತ್ತು ಸ್ತ್ರೀಪುರುಷರು ಕೂಡಿಕೊಂಡು ಶಿವಕಥಾ, ಶಿವಕೀರ್ತನೆ, ಶಿವಭಜನೆ, ಜಂಗಮಾರ್ಚನೆ ಮೊದಲಾದ ಕ್ರಿಯಾದಿಗಳನ್ನು ಮಧ್ಯಾಹ್ನದವರೆಗೂ ಆನಂದದೊಡನೆ ಜರುಗಿಸಿ, ಅನಂತರ ವಸ್ತ್ರಾಭರಣಗಳಿಂದ ಸುಶೋಭಿತರಾಗಿ ಸಾಯಂಕಾಲದಲ್ಲಿ ದೀಪೋತ್ಸವಸಮಾರಂಭವನ್ನು ತಂತಮ್ಮ ಮನೆಗಳ ಮುಂದೆ ಮಾಡಿ ಬಸವೇಶ್ವರನಾಮ ಪಾರಾಯಣದಲ್ಲಿ ನಿಮಗ್ನರಾಗಿದ್ದರು. ವರ್ತಕರು ತಂತಮ್ಮ ಅಂಗಡಿಗಳನ್ನು ದೀಪಾವಳಿಯ ಹಬ್ಬದಿನದಂತೆ ಚಿತ್ರವಿಚಿತ್ರ ವಸ್ತುಗಳಿಂದ ಅಲಂಕರಿಸಿ ದೀಪೋತ್ಸವಮಾಡಿದ್ದರು. ಇದಲ್ಲದೆ ಶ್ರೀ ಬಸವೇಶ್ವರ ಮಹಾರಾಜಕಿ ಜಯ್ ಎಂತಲೂ ಶ್ರೀ ಬಸವೇಶ್ವರ ಪ್ರಸನ್ನ ಎಂತಲೂ ಹಲಗೆಗಳ ಮೇಲೆ ಬರೆದು ಅವನ್ನು ಅಂಗಡಿಯ ಮೇಲ್ಭಾಗದಲ್ಲಿ ಕಟ್ಟಿದ್ದರು. ಇಲ್ಲಿಯ ಪ್ರಸಿದ್ಧ ಗ್ರಾಮದೈವವಾದ ಶ್ರೀ ಸಿದ್ಧರಾಮೇಶ್ವರ ದೇವಾಲಯವನ್ನು ಪತಾಕೆ ತಳಿರ್ತೋರಣಗಳಿಂದಲೂ, ತರತರದ ದೀವಿಗೆಗಳಿಂದಲೂ ಶೃಂಗರಿಸಿ ಅಲ್ಲಿಗೆ ಶ್ರೀ ಬಸವೇಶ್ವರಪುರಾಣವನ್ನು ಪೇಟಿಪೇಟಿಗಳಲ್ಲಿ ಮೆರವಣಿಗೆಯಿಂದ ಮದ್ದುಬಾಣಗಳು ಹಾರಿಸುತ್ತ ಸುವಾದ್ಯದ ಸಂಭ್ರಮದಿಂದ ಯಾವತ್ತು ಸಮುದಾಯದೊಡನೆ ಬಂದು ಯಾವತ್ತು ಜನಮುಖದಿಂದ ಬಸವೇಶ್ವರ ನಾಮದ ಜಯಘೋಷದಿಂದ ಪುರಾಣವು ಮಂಟಪಪ್ರವೇಶಿಸಿದ ಮೇಲೆ ಸದರಿ ಸ್ವಾಮಿಗಳವರು ಪುರಾಣರೂಪದಿಂದ ಬಸವೇಶ್ವರನ ಮಹತ್ವವನ್ನು ತಿಳಿಸಿ ಯಾವತ್ತು ಜನರ ಮನಸ್ಸನ್ನಾನಂದಗೊಳಿಸಿದರು. ಅನಂತರ ಸಿದ್ಧರಾಮಪ್ಪಾ ಅಣ್ಣಾಜೇರಿಗೆ ಇವರು ಬಸವೇಶ್ವರನು ವೀರಶೈವ ಸುಧಾರಕನಲ್ಲದೆ ಧರ್ಮಸಂಸ್ಥಾಪಕನಲ್ಲವೆಂದು ಶಾಸ್ತ್ರಾಧಾರದಿಂದ ಸಿದ್ಧಮಾಡಿ ತಿಳಿಸಿದರು. ಅನಂತರ ಜೇರಿಗೆ ಇವರು ಸಂಕ್ಷಿಪ್ತದಲ್ಲಿ ಬಸವೇಶ್ವರನ ಚರಿತ್ರವನ್ನು ಹೇಳಿ ಮರಾಠ ಪ್ರಾಂತದ ಪುಢಾರಿಗಳಾದ ಶೇ॥ ಬಾಮಣಗಾಂವಕರ ಇವರು ಮಾಡತಕ್ಕ ಧರ್ಮದ ಸಾಹಸದ ಬಗ್ಗೆ ಮತ್ತು ಇಲ್ಲಿಯ ಯಾವತ್ತರು ಈ ಹಬ್ಬವನ್ನು ಚೆನ್ನಾಗಿ ಜರಗಿಸಿದ ಬಗ್ಗೆ ಅಭಾರವನ್ನು ಮಾನಿಸಿ ಇದೇ ಪ್ರಕಾರ ದರವರುಷಕ್ಕೆ ಈ ಸಮಾರಂಭವನ್ನು ಜರುಗಿಸುವುದೆಂದು ಭಾಷಣವನ್ನು ಮಾಡಲು ಶ್ರೀ ಚನ್ನಪ್ಪಾಲೆಯಿಂದ ಅಭಿವಚನವನ್ನು ಕೊಟ್ಟು ಮಂಗಲಾರತಿಯನ್ನು ಮಾಡಿ ಸಮಾರಂಭವು ಸಾಂಗೋಪಾಂಗವಾಯಿತು.

ಧರ್ಮಾಭಿಮಾನಿ.

ದಾವಣಗೆರೆ

ಶ್ರಾವಣಮಾಸದ ಸೋಮವಾರಗಳಲ್ಲಿ ಜರುಗಬೇಕಾದ ಉಪನ್ಯಾಸವು ಕಳೆದ ಸೋಮವಾರ ತಾ॥ ೨೮-೮-೧೧ ನೇಯ ದಿನ ಪ್ಲೇಗಿನ ಪ್ರಯುಕ್ತ ಜನಗಳೆಲ್ಲ ಊರ್ಹೊರಗಿರುವುದರಿಂದ ಜನಗಳ ಅನುಕೂಲಕ್ಕಾಗಿ ಶ್ರೀ ಬೋಗಿವೀರಭದ್ರಯ್ಯನವರ ಮನೆಯಲ್ಲಿ ಜರುಗಿಸಲ್ಪಟ್ಟಿತು. ೩ ಗಂಟೆಗೆ ಸರಿಯಾಗಿ ಅಧ್ಯಕ್ಷರು ಕರತಾಡನದ ಗರ್ಜನೆಯಲ್ಲಿ ಆಸ್ಥಾಸನವನ್ನು ಗ್ರಹಿಸಿದನಂತರ ಉಪನ್ಯಾಸಕರಾದ ಮ॥ ರಾ॥ ಹರ್ಡೀಕರ್ ಮಂಜಪ್ಪನವರು "ಸಮಾಜಸೇವೆ" ಎಂಬ ವಿಷಯಕ್ಕೆ ಉಪನ್ಯಾಸ ಮಾಡಲಾರಂಭಿಸಿದರು ಇವರು ಮಾಡಿದ ಉಪನ್ಯಾಸದ ಸಾರಾಂಶವೇನೆಂದರೆ— ವೀರಶೈವ ಸಮಾಜವು ಹಿಂದುಳಿದಿದೆಂಬುದಕ್ಕೆ ಈ ಸಮಾಜದ ಪ್ರಮುಖರು ಸಮಾಜೋದ್ಧಾರಕ್ಕಾಗಿ ಪ್ರಯತ್ನಿಸುತ್ತಿರುವುದೇ ದೃಷ್ಟಾಂತವಾಗಿದೆ. ಬಹುಕಾಲದಿಂದಲೂ, ಜೈನ, ಮುಸಲ್ಮಾನ್, ಬ್ರಾಹ್ಮಣಾದಿ ಮತೀಯರಿಂದ ಈ ಸಮಾಜದೇಳ್ಗೆಗೆ ವಿಘ್ನಗಳು ಬಾರಿಬಾರಿಗೆ ಬರುತ್ತಿದ್ದವು. ಚಂದ್ರನು ಉದಯಿಸಿದೊಡನೆ ಸಕಲ ಪ್ರಾಣಿಗಳಿಗೂ ಅತ್ಯಾನಂದವಾಗಿ ಹೃತ್ಕಮಲವು ಅರಳಿದಾಗ್ಯೂ ಹೇಗೆ ಕಮಲವು ತನ್ನ ದುರಾದೃಷ್ಟದಿಂದ ಅರಳುವುದಿಲ್ಲವೋ, ಅದರಂತೆಯೇ ಈ ಇಪ್ಪತ್ತನೆಯ ಶತಮಾನದಲ್ಲಿ ಆಂಗ್ಲೇಯರ ಶಾಂತಪ್ರಭುತ್ವವೆಂಬ ಚಂದ್ರನು ಷೋಡಶಕಳಾಭರಿತನಾಗಿ ಉದಯಿಸಿದ್ದರಿಂದ ಅನಂತ ಸಮಾಜಗಳು ಆನಂದದಿಂದ ತಮ್ಮ ತಮ್ಮ ಉನ್ನತಿಯನ್ನು ಮಾಡಿಕೊಳ್ಳುತ್ತಿದ್ದಾಗ್ಯೂ ಈ ನಮ್ಮ ವೀರಶೈವ ಸಮಾಜವು ಮಾತ್ರ ಈ ಸ್ಥಿತಿಯಲ್ಲಿರತಕ್ಕದ್ದು ದುರಾದೃಷ್ಟವೆಂದೇ ಭಾವಿಸಬೇಕಾಗಿದೆ! ಸಮಾಜಕ್ಕೆ ಬಂದ ಸಂಕಟವನ್ನು ತಮಗೆ ಹೇಳದ ವಿನಹ ತಿಳಿಯಲಾರದು. ಇಂತಹ ಸಂಕಟದಿಂದ ನಾವುಗಳು ಪಾರಾಗುವುದಕ್ಕೆ ಯಾವ ಯಾವ ಏರ್ಪಾಟುಗಳನ್ನು ಮಾಡಬೇಕೆಂಬುದು ಅತ್ಯಂತ ಘನವಾದ ವಿಷಯವಾಗಿದೆ. ಪ್ರತಿಯೊಬ್ಬರೂ ತನು ತಮಗೆ ತೋಚಿದ ವಿಷಯಗಳನ್ನು ಬಹಿರಂಗವಾಗಿ ಹೇಳುವುದು ಉತ್ತಮವು ಜಗತ್ತಿನಲ್ಲಿ ತೋರುವ ಉನ್ನತಿಯು ಪ್ರತಿಯೊಬ್ಬರ ಉಪದೇಶದ ಫಲವಾಗಿದೆ ಎಂಬುದನ್ನು ಗಮನದಲ್ಲಿಡಿರಿ. ಕೈಲಾಸವಾಸಿಗಳಾದ ಗಿಲಗಂಚಿಯವರು, ವೀರಸಂಗಪ್ಪನವರು, ಸಿರಸಂಗಿಯವರು, ವಾರದ ಮಲ್ಲಪ್ಪನವರು ಲಿಂಗೈಕ್ಯರಾದುದರಿಂದ ನಮ್ಮ ಸಮಾಜವು ಎಂತಹ ಸಂಕಟಕ್ಕೀಡಾಗಿದೆಯೆಂಬುದನ್ನು ಹೇಳಲಸದಳವು. ಈ ಸಮಾಜವೆಂಬ ಹಡಗನ್ನು ನಡೆಯಿಸುವವರಿಲ್ಲವಾಯಿತು ಪರಮತೀಯರ ದ್ವೇಷಾಸೂಯೆಗಳೆಂಬ ಬಿರುಗಾಳಿಗೆ ಈ ಹಡಗು ಸಿಕ್ಕಿದೆ. ಈ ಮತದಲ್ಲಿ ತಾವು ಜನ್ಮವೆತ್ತಿದುದರಿಂದ ಈ ಸಮಾಜವೆಂಬ ಹಡಗು ಮುಳುಗದಂತೆ ಮಾಡುವುದು ತಮ್ಮ ಕರ್ತವ್ಯವಲ್ಲವೆ? ಮತ್ತು ತಮ್ಮ ಜನ್ಮಸಾರ್ಥಕತೆಗೆ ಇದು ಸಮಯವಲ್ಲವೆ? ಬಂಧುಗಳೆ! ಇಂತಹ ಶಾಂತಸಮಯವು ತಮಗೆ ಖಂಡಿತವಾಗಿ ದೊರೆಯಲಾರದು. ತಾವು ಕೇವಲ ಕುಟುಂಬ ವೃದ್ಧಿಯಲ್ಲಿಯೇ ಮತ್ತು ಧನಾರ್ಜನೆಯಲ್ಲಿಯೇ ಆಸಕ್ತರಾಗಿರುವುದು ತುಂಬಾ ಶೋಚನೀಯವಾದ ಸಂಗತಿಯು ಸಮಾಜದ ಕಡೆಗೆ ತಾವು ಬಹು ನಿರ್ಲಕ್ಷ್ಯೆಯಿಂದಿರುತ್ತೀರಿ. ತುಂಗಭದ್ರಾ ನದಿಯ ಉತ್ತರಪ್ರದೇಶದಲ್ಲಿರತಕ್ಕ ನಮ್ಮ ಬಂಧುಗಳಷ್ಟು ಸಹ ತಾವು ಸಮಾಜದ ವಿಷಯಕ್ಕೆ ಗಮನಿಸುವದಿಲ್ಲ ಜೈನ ಮುಸಲ್ಮಾನಾದಿ ಪರಮತೀಯರ ಹಾವಳಿಯಲ್ಲಿ ಸಹ ಪ್ರಾಣಕ್ಕಿಂತಲೂ, ಧರ್ಮವೇ ಶ್ರೇಷ್ಠವೆಂದು ತಿಳಿದು ಎಂತಹ ಘೋರ ವಿಪತ್ತುಗಳನ್ನನುಭವಿಸಿ, ಯಾವ ವೀರಶೈವ ಮತತತ್ವಗಳನ್ನು ಪೂರ್ವಿಕರು ಕಾಪಿಟ್ಟಿರುತ್ತಾರೆಯೋ ಅಂತಹ ಧರ್ಮದ ಶ್ರೇಷ್ಠತತ್ವಗಳು ನಾಶವಾಗುತ್ತಿದ್ದಾಗ್ಯೂ ತಮಗೆ ಸ್ವಲ್ಪವಾದರೂ ದುಃಖವಾಗುವುದಿಲ್ಲವೆ? ನೀವು ಶ್ರಮದಿಂದ ಸಂಪಾದಿಸಿದ ಧನದಲ್ಲಿ ಒಂದು ಕಾಸನ್ನಾದರೂ ಅನ್ಯರು ವ್ಯಯಮಾಡಿದರೆ ಹೇಗೆ ದುಃಖವಾಗುತ್ತದೆಯೋ ಅದರಂತೆಯೇ ಪ್ರಾಚೀನರು ಕಾದಿಟ್ಟ ಧರ್ಮವು ದಿನೇ ದಿನೇ ಕ್ಷೀಣಿಸುತ್ತಿರುವುದನ್ನು ನೋಡಿ ಅತ್ತಕಡೆಗೆ ಗಮನಿಸುವುದು ತಮ್ಮಗಳ ಕರ್ತವ್ಯವಲ್ಲವೆ? ಧನದ ವಿಷಯದಲ್ಲಿ ತಮಗೆ ಎಷ್ಟು ಪ್ರೀತಿಯೂ, ಭಕ್ತಿಯೂ, ಆಸಕ್ತಿಯೂ ಇದೆಯೋ ಅದರಂತೆಯೇ ಧರ್ಮದ ವಿಷಯದಲ್ಲಿಯೂ ಇರದ ವಿನಹ ಸಮಾಜೋನ್ನತಿಯಾಗಲಾರದು. ನಮ್ಮ ಸಮಾಜೋದ್ಧಾರಕರಲ್ಲಿ ಎರಡು ವಿಧವಾದ ಅಭಿಪ್ರಾಯಗಳಿವೆ. ಕೆಲವರು ವೈದಿಕರು ಸುಶಿಕ್ಷಿತರಾದರೆ ನಮ್ಮ ಸಮಾಜವು ಉನ್ನತಾವಸ್ಥೆಗೆ ಬರುತ್ತದೆಂತಲೂ, ಮತ್ತೆ ಕೆಲವರು ಲೌಕಿಕರು ಸುಧಾರಿಸಿದರೆ, ಸಮಾಜವು ಶೀಘ್ರವಾಗಿ ಸುಸ್ಥಿತಿಗೆ ಬರುವುದೆಂತಲೂ ಪ್ರತಿಪಾದಿಸುತ್ತ ಆ ವಿಧವಾಗಿ ಬೇರೆಬೇರೆ ಪಕ್ಷಗಳು ಸಹ ಜರುಗುತ್ತಿರುವುವು. ಈ ವಾದದಲ್ಲಿ ಪ್ರವೇಶಿಸುವುದಕ್ಕೆ ನನಗೆ ಇಷ್ಟವಿಲ್ಲದಿದ್ದಾಗ್ಯೂ ಒಬ್ಬರು ಉಂಡರೆ ಎಂತು ಎಲ್ಲರಿಗೂ ಹೊಟ್ಟೆ ತುಂಬುವುದೋ ಅಂತು ಈ ವಾದದ ಅರ್ಥವಾಗುತ್ತದೆ.

[illegible]

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಜಗದ್ಗುರು, ಚರಪಟ್ಟಾಧ್ಯಕ್ಷ ಶ್ರೀಗುರು ವೀರಭಿಕ್ಷಾವೃತ್ತಿ ರಾಜದೇಶಿಕೇಂದ್ರ ಮಹಾಸ್ವಾಮಿಯವರ ದೇಶಸಂಚಾರ—

ಮಹಾಸ್ವಾಮಿಯವರ ಸ್ವಾರಿಯು ತಾ॥ ೧೬-೧೧ ರಲ್ಲಿ ಕೊಡ್ಲಿಗಿ ತಾ॥ ಕಂಚೋಬನಹಳ್ಳಿ ಮಠದಿಂದ ಪ್ರಯಾಣ ಮಾಡಿ ತಾ॥ ೨ಕ್ಕೆ ಇದೇ ತಾ॥ ಭಂಡ್ರಿಗ್ರಾಮಕ್ಕೆ ದಯಮಾಡಿಸಿತು. ಆ ಗ್ರಾಮದ ಮಠದ ಮೂರ್ತಿಗಳೂ ಸಮಸ್ತವೀರಶೈವ ಮಹಾಜನಂಗಳೂ ತಮ್ಮ ಗ್ರಾಮವನ್ನು ತಳಿರುತೋರಣಾದಿಗಳಿಂದಲಂಕರಿಸಿ ಇತ್ತಕಡೆಲ್ ಸಮೇತ ಇದಿರುಗೊಂಡು ಸಕಲ ಅಜಬಾಬುಗಳ ಸಮೇತ ಪುರಪ್ರವೇಶಮಾಡಿಸಿ ರಮ್ಯವಾಗಿ ರಚಿಸಿದ್ದ ಸಿಂಹಾಸನವನ್ನು ಆರೋಹಣಮಾಡಿಸಿ ಸರಬರಾಯಿ ಮೊದಲಾದ ಸಲಕರಣೆಗಳನ್ನು ಸಿದ್ಧಪಡಿಸಿರುವುದಾಗಿ ಸನ್ನಿಧಿಗೆ ಅರಿಕೆಮಾಡಿ ಅಪ್ಪಣೆಪಡೆದು ತಂತಮ್ಮ ಮನೆಗಳಿಗೆ ತೆರಳಿದರು. ಮರುದಿನ ಮೊದಲ್ಗೊಂಡು ತಾ॥ ೨೩ ರ ವರೆಗೂ, ನೆರೆಗ್ರಾಮಗಳವರು ತಮ್ಮ ಕಾಣಿಕೆಗಳನ್ನು ಸಲ್ಲಿಸಿ, ಆಶೀರ್ವಾದಕ್ಕೆ ಪಾತ್ರರಾಗಿ ಅಪ್ಪಣೆಯನ್ನು ಪಡೆದು ಹೋದರು. ತಾ॥ ೨೩ ರಲ್ಲಿ ಭಂಡ್ರಿ ಮೊಕ್ಕಾಂ ಬಿಟ್ಟು ಸಂಸ್ಥಾನ ಸೊಂಡೂರು ರಾಜಧಾನಿ ಮೊಕ್ಕಾಂಗೋಸ್ಕರ ಸ್ವಾರಿಯು ಚಿತ್ತೈಸುವ ಮಾರ್ಗದಲ್ಲಿ ಕಣಿವೆಹಳ್ಳಿ ಶಾಹುಕಾರ್ ಚಿಕ್ಕಿ ಕರಿಬಸಪ್ಪನವರು ಮುಂತಾದ ವೀರಶೈವ ಮಹಾಜನಗಳ ಪ್ರಾರ್ಥನೆಯಂತೆ ಶ್ರೀಮಹಾಸ್ವಾಮಿಯವರು ಬಹಳ ವಿಜೃಂಭಣೆಯಿಂದ ಅವರ ಗೃಹಕ್ಕೆ ಚಿತ್ತೈಸಿ, ಅವರು ಮಾಡಿದ ಪಾದಪೂಜೆ ಮೊದಲಾದ ಸೇವಾಸತ್ಕಾರಗಳನ್ನು ಯಥಾಶಕ್ತಿ ಬಿನ್ನಹ ಕಾಣಿಕೆಯನ್ನು ಸಲ್ಲಿಸಿಕೊಂಡು ಅವರ ಆಬಾಲವೃದ್ಧರಿಗೆ ದರ್ಶನಾಶೀರ್ವಾದಗಳನ್ನು ದಯಪಾಲಿಸಿ, ಮರುದಿವಸ ಉದಯಲಿಂಗಾರ್ಚನೆಯನ್ನು ತೀರಿಸಿಕೊಂಡು ತಾ॥ ೨೮ ರ ಸಾಯಂಕಾಲ ೬ ಗಂಟೆಯ ಸಮಯಕ್ಕೆ ಸಂಸ್ಥಾನ ಸೊಂಡೂರು ಪುರ ಬಹಿರ್ದ್ವಾರಕ್ಕೆ ಚಿತ್ತೈಸುವಷ್ಟರೊಳಗೆ ಈ ಗ್ರಾಮದ ೮ ಜನ ಮಠದ ಮೂರ್ತಿಗಳು ಇತರ ಮಹೇಶ್ವರರು, ಪುರಪ್ರಮುಖರು ಇತರ ದೊಡ್ಡ ಮನುಷ್ಯರುಗಳು ಸಹ ಇತ್ತಕಡೆಲ್ ಸಮೇತ ಇದಿರ್ಗೊಂಡು ಮಹಾಸ್ವಾರಿಯನ್ನು ಪುರಪ್ರವೇಶಮಾಡಿಸುವಾಗ್ಗೆ ೨-೩ ಸಾವಿರ ಜನಗಳ ಸಂದಣಿಯು ನೆರೆದಿತ್ತು. ಅನೇಕ ವಾದ್ಯಘೋಷದಿಂದಲೂ, ಬಿರುದನ್ನು ಹೊಗಳುವ ಪಾಠಕರಿಂದಲೂ, ಸ್ವಾರಿಯು ಕಣಿವೆಹಳ್ಳಿ ರೋಡಿನಿಂದ ಹೊರಟು ಅರಮನೆಯ ಮುಂಭಾಗದಲ್ಲಿ ಬಂದು ದೊಡ್ಡಪೇಟೆಯ ಮಾರ್ಗವಾಗಿ ವಿರಕ್ತಮಠಕ್ಕೆ ದಯಮಾಡಿಸಿದಮೇಲೆ ಆ ಮಠದಲ್ಲಿ ಅದುವರೆಗೆ ಶೃಂಗರಿಸಿದ್ದ ದಿವ್ಯಸಿಂಹಾಸನಾರೋಹಣಮಾಡಿದಮೇಲೆ ಸಮಸ್ತ ಭಕ್ತಮಾಹೇಶ್ವರರುಗಳು ತಮ್ಮ ಮನೆಗಳಿಗೆ ಅಪ್ಪಣೆ ಪಡೆದು ತೆರಳಿದರು. ಮಾರನೆಯ ದಿವಸ ಸೊಂಡೂರು ಸಂಸ್ಥಾನಕ್ಕೆ ಸೇರಿದ ಎಲ್ಲ ಗ್ರಾಮಗಳ ಭಕ್ತಾದಿಗಳು ಬಂದು ತಮ್ಮ ತಮ್ಮ ಕಾಣಿಕೆಗಳನ್ನು ಒಪ್ಪಿಸಿ ಸಂಸ್ಥಾನದ ಪದ್ಧತಿಯು ಮೇರೆಗೆ ಸರಬರಾಯಿ ವಗೈರೆ ಸಲ್ಲಿಸಿದರು. ಸಂಸ್ಥಾನ ಸೊಂಡೂರು ಕಸಬಾದವರು ಅದೇ ಮೇರೆಗೆ ಕಾಣಿಕೆಯನ್ನೊಪ್ಪಿಸಿದರು. ತಾ॥ ೨೮ ರಲ್ಲಿ ಈ ಸೊಂಡೂರು ಸಂಸ್ಥಾನದ ಮ॥ ರಾ॥ ರಾವ್ ಸಾಹೇಬ್ ದಿವಾನ್ ಬಹದೂರ್ ಟಿ. ಕೋದಂಡರಾಮನಾಯಿಡುಯವರು ಶ್ರೀ ಸನ್ನಿಧಿಯ ದರ್ಶನಾರ್ಥವಾಗಿ ದಯಮಾಡಿಸಲು ಶ್ರೀ ಮಹಾಸ್ವಾಮಿಯವರು ಅವರನ್ನು ಸನ್ಮಾನಪೂರ್ವಕವಾಗಿ ಬರಮಾಡಿಕೊಂಡು ಕುಶಲಪ್ರಶ್ನೆಗಳಾದನಂತರ ಶ್ರೀ ಸಂಸ್ಥಾನದ ಏಜಂಟ್ ವಿ. ಯಂ. ಪಟ್ಟದದೇವರು ತಾವು ರಚಿಸಿದ್ದ ಕಂದಪದ್ಯಗಳನ್ನು ವಿಜ್ಞಾಪನಪತ್ರಿಕೆಯಮೂಲಕ ಸಮರ್ಪಿಸಿದ್ದನ್ನು ದಿವಾನ್ ಬಹದ್ದೂರರವರು ಪ್ರೀತಿಪೂರ್ವಕವಾಗಿ ಅಂಗೀಕರಿಸಿದರು. ಅನಂತರ ಸಂಸ್ಥಾನದ ದರ್ಬಾರು ಜ. ಸ. ಬಿ. ಲಿಂಗನಗೌಡರು ವ್ಯವಸಾಯ, ವಿದ್ಯಾ, ಆರೋಗ್ಯ ಮುಂತಾದ ವಿಷಯಗಳನ್ನು ಕುರಿತು ಉಪನ್ಯಾಸಮಾಡಿದರು. ಶ್ರೀ ಸ್ವಾಮಿಯವರು ಕಾರ್ತಿಕೆಯ ಕ್ಷೇತ್ರದರ್ಶನಕ್ಕಾಗಿ ಸ್ವಾರಿಯು ಬೆಳೆಯುವುದಾಗಿ ಸೂಚಿಸಿದ್ದಕ್ಕೆ ದಿವಾನ್ ಬಹದ್ದೂರ್ ರವರು ಅಲ್ಲಿನ ಪಾರುಪತ್ತೇಗಾರರಿಗೆ ಹುಕ್ಕುಂ ಮಾಡುವುದಾಗಿ ಅಪ್ಪಣೆಕೊಡಿಸಿದರು. ಸಾಯಂಕಾಲ ೫ ಗಂಟೆಗೆ ಸಭೆಯು ವಿಸರ್ಜಿಸಲ್ಪಟ್ಟಿತು. ತಾ॥ ೨೯, ೩೦ ರಲ್ಲಿ ಸೊಂಡೂರು ಪುರನಿವಾಸಿಗಳಾದ ಮ॥ ಸಾಹುಕಾರ್ ಏಕಪ್ಪ ಬಸವಪ್ಪನವರು ಮ॥ ಸಾಹುಕಾರ್ ಅಂಕಮನಾಳು ನಾಗಪ್ಪನವರು ಶ್ರೀ ಸನ್ನಿಧಿಗೆ ಬಿನ್ನಹಮಾಡಿ ತಮ್ಮ ಮನೆಗಳಿಗೆ ಭಿಕ್ಷಮಾಡಿಸಿಕೊಂಡು ಪಾದಪೂಜೆಯನ್ನು ಮಾಡಿ ಯಥಾಶಕ್ತಿ ಕಾಣಿಕೆಯನ್ನು ಸಲ್ಲಿಸಿ ಫಲಾಶೀರ್ವಾದಕ್ಕೆ ಪಾತ್ರರಾದರು. ತಾ॥ ೩೦ ಕ್ಕೆ ಶ್ರೀ ಕಾರ್ತಿಕೆಯ ಕ್ಷೇತ್ರದರ್ಶನಕ್ಕಾಗಿ ಸ್ವಾರಿಯು ಬೆಳೆಯಿತು. ಅಲ್ಲಿ ಮ॥ ರಾ॥ ಪಾರುಪತ್ತೇಗಾರ್ ರಾಮಣ್ಣನವರು ಶ್ರೀಗಳವರನ್ನು ವಿಶ್ವಾಸಪೂರ್ವಕವಾಗಿ ಕರೆದುಕೊಂಡು ಹೋಗಿ ದೇವರ ದರ್ಶನಮಾಡಿಸಿ ಆ ಕ್ಷೇತ್ರದಲ್ಲಿರುವ ತೀರ್ಥ ಮೊದಲಾದ ವಿಶೇಷಗಳನ್ನು ಅವಲೋಕನಮಾಡಿಸಿದರು. ದಿವಾನ್ ಬಹದ್ದೂರ್ ರವರ ಹುಕುಂ ಪ್ರಕಾರ ಸಕಲ ಸಾಮಗ್ರಿಗಳು ಅಣಿಮಾಡಿಟ್ಟಿದ್ದವು. ಶ್ರೀಗಳವರು ಆ ದಿವಸ ಅಲ್ಲೇ ಮೊಕ್ಕಾಂ ಮಾಡಿದ್ದು ಮರುದಿವಸ ಉದಯಲಿಂಗಾರ್ಚನೆಯನ್ನು ತೀರಿಸಿಕೊಂಡು ಪುನಃ ಸೊಂಡೂರು ಪಟ್ಟಣಕ್ಕೆ ಚಿತ್ತೈಸಿದರು. ತಾ॥ ೩-೮-೧೧ ರ ದಿವಸ ಸಂಸ್ಥಾನ ಸೊಂಡೂರು ಕಸಬಾ ಮೊದಲುಹಂತಿನ ವೀರಶೈವಮಹಾಜನಗಳು ತಮ್ಮ ಕಾಣಿಕೆಯನ್ನು ಸಲ್ಲಿಸಿದನಂತರ ಸಂಸ್ಥಾನ ಸೊಂಡೂರು ಹಿರೇಮಠದ ಪಟ್ಟಾಧಿಕಾರವನ್ನು ಸದರಿ ಹಿರೇಮಠದ ಬಸವಯ್ಯನವರ ಕುಮಾರರಾದ ಬಸವಾರಾಧ್ಯರೆಂಬ ವಟುವಿಗೆ ಮಾಡುವುದಕ್ಕೆ ಅಪ್ಪಣೆಯಾಗಬೇಕೆಂದು ಬಿನ್ನಹಪತ್ರದ್ವಾರಾ ಶ್ರುತಪಡಿಸಿಕೊಂಡದ್ದಕ್ಕೆ ಚಿತ್ತವೊಪ್ಪಿ ಸದರಿ ವಟುವನ್ನು ಸನ್ನಿಧಿಯ ಪ್ರತ್ಯಕ್ಷದಲ್ಲಿ ಬರಮಾಡಿಕೊಂಡು ಕುಲಶೀಲ ಸದ್ವ್ಯಾಸಂಗ ವಿದ್ಯಾವಿನಯಾದಿಗಳನ್ನು ಪರೀಕ್ಷಿಸಿ, ಸದರಿ ಹಿರೇಮಠದ ಪಟ್ಟಾಧಿಕಾರವನ್ನು ವಿಧ್ಯುಕ್ತವಾಗಿ ಕೊಡಿಸಿ, ಶ್ರೀ ಬಸವರಾಜದೇವರೆಂಬ ಅಭಿದಾನವನ್ನಿಟ್ಟು, ಅವರಿಂದ ಸಲ್ಲಿಸಲ್ಪಟ್ಟ ಸೇವಾಸತ್ಕಾರಗಳನ್ನು ಸ್ವೀಕರಿಸಿ ೨೦೦-೩೦೦ ಜನ ಭಕ್ತಮಾಹೇಶ್ವರರ ಸಂತರ್ಪಣೆಯನ್ನು ಮಾಡಿಸಿದರು. ಈ ಮಹಾಸ್ವಾಮಿಯವರು ಆಚಾರಶೀಲರು, ವಿದ್ಯಾಭಿಮಾನಿಗಳು ಆಗಿರುವುದಲ್ಲದೆ ತಮ್ಮ ಸ್ವಸಂಪಾದನೆಗಳೆಲ್ಲವೂ ಭಕ್ತರ ಪರಿಪಾಲನಾರ್ಥವಾಗಿದೆಯೆಂದು ಭಾವಿಸಿರುತ್ತಾರಲ್ಲದೆ ಅನ್ಯಥಾ ಇಲ್ಲ. ಇದರ ದೃಷ್ಟಾಂತಕ್ಕಾಗಿ ಸಂಸ್ಥಾನದಲ್ಲಿ ಜ್ಯೋತಿಷ ಸಂಸ್ಕೃತ ಅಭ್ಯಾಸಕ್ಕಾಗಿ ಕೆಲ ವಟುಗಳನ್ನು ಇಟ್ಟುಕೊಂಡು ಖುದ್ದು ಅಭ್ಯಾಸವನ್ನು ಮಾಡಿಸುತ್ತಾರೆ. ಹಿಂದೆ ಯಾರಿಗೂ ಆಗದೆ ಇದ್ದ ರಾಜಸನ್ಮಾನವು ಈ ಮಹಾಸ್ವಾಮಿಯವರಿಗೆ ಈ ಸೊಂಡೂರು ಸಂಸ್ಥಾನದಲ್ಲಿ ಆಗಿರುವುದಕ್ಕೂ, ಕೇವಲ ನಿಷ್ಪಕ್ಷಪಾತಿಗಳಾದ ನಮ್ಮ ಮ॥ರಾ॥ ದಿವಾನ್ ಬಹದ್ದೂರ್ ರವರು ಈ ಸ್ವಾಮಿಗಳವರಿಗೆ ಮಾನ್ಯಮಾಡಿದಕ್ಕಾಗಿ ವೀರಶೈವರೆಲ್ಲರೂ ಅವರಿಗೆ ಕೃತಜ್ಞರಾಗಿರಬೇಕಾದದ್ದು ಅತಿಶಯವಲ್ಲ. ಜಗದಾಚಾರ್ಯಪೀಠಗಳ ಮಹಾಸ್ವಾಮಿಗಳಾದವರೆಲ್ಲರೂ ಈ ಮಹಾಸ್ವಾಮಿಗಳ ಪ್ರವೃತ್ತಿಯನ್ನನುಸರಿಸುತ್ತಾ ಹೋದರೆ ವೀರಶೈವ ಜನಾಂಗದವರಲ್ಲಿ ಧರ್ಮಸುಧಾರಣೆಯು ಶೀಘ್ರದಲ್ಲಾಗುವುದೆಂದು ಹಾರೈಸುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ

ಊದಬತ್ತಿಗಳು.

27

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦ ೪-೦-೦; ೩-೦-೧; ೨-೮-೦; ೧-೪-೦; ಕಸ್ತೂರಿ ಬತ್ತಿ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೨ ಅಣೆ; ದಶಾಂಗ ಪೌಂಡು ೧ ಕ್ಕೆ ೪ ಅಣೆ; ಧೂಪದ ಗಟ್ಟಿ ೧ ಕ್ಕೆ ೨ ಅಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಅಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

11 ಗುಣವಾಗದಿದ್ದರೆ ಹಣಪರತ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಮಿ ಆತಿಶಕ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ ರೂ. ಒಮ್ಮೆಗೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು ಟ. ಖ. ೪ ಅಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ–

ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

22 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವೂ. ಮಿಂಚಿನ ಉಂಗುರವೂ.

ರಕ್ತ ಕೆಟ್ಟದ್ದರಿಂದಲುಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಷ್ಟನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೪-೦. ಒಮ್ಮೇಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಹೆಚ್ಚು ಕಳುಹಿಸುವೆವು. ಒಮ್ಮೇಲೆ ೧೨ ನನಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಹೆಚ್ಚಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗುವೆ. ವೈಲಕ್ಷಣ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೩ ವರ್ಷದ ಒಳಗಿನ ಚಿಕ್ಕಪ್ರಾಯದವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಹಾಪಾತ್ರಕರ, ಮರ್ಚಂಟ.
ಪೋಸ್ಟ್ ಬಿಳಗಿ, ಉತ್ತರ ಕಾನಡಾ ಜಿಲ್ಲಾ
Post Bilgi North Kanara District